REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸಂ ೧೯೦೯ ನೇ ಇಸವಿ ಜನವರಿ ತಾರೀಖು ೭ ನೇ ಗುರುವಾರ. ಸಂಚಿಕೆ ೭೨

ಶಾಸ್ತ್ರದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16-47

೧ ಲೋಕಾಮೃತವೆಂಬ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಚಿನ್ನದ ಭಸ್ಮ, ಬೆಳ್ಳಿಯ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬಹು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಎಕ್ಕಿಳಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಚಿತವಾಗಿ ಗುಣಪಡಿಸುತ್ತವೆ.

[illegible] ಹಾಲಿನೊಡನೆ ಅಥವಾ ಹಾಗೆ ಉಪಯೋಗಿಸುತ್ತಿದ್ದರೆ ದೇಹ ಪುಷ್ಟಿ ಸುವಾಸನೆಯಾಗಿರುತ್ತದೆ. ಎಂತಹ ಆಯಾಸವನ್ನೂ [illegible], [illegible] ಕಾಯಿಲೆಗೂ ಪಾರಿ ಕೊಡದೆ, [illegible] ಬದಲಾವಣೆಯನ್ನು ನಿರಿಪಡಿಸಿ, ರಕ್ತವನ್ನೂ ಮಾಂಸವನ್ನೂ ತೆಗೆದು ಬುದ್ಧಿವಾಡಿ ವೃದ್ಧಿಪಡಿಸುವ [illegible] ಮಕ್ಕಳ ಎಳ್ಳ, ಜ್ವರ ಕುಕ್ಕಜ್ವರ, [illegible] ಗುಣಪಡಿಸುತ್ತವೆ.

ಇವನ್ನು [illegible] ಸೊಂಟಿಗೆ ಗುಣ [illegible]

ಅನುಪಾನವು [illegible]

[illegible] ಮಾತ್ರೆಗಳು ಕುಪ್ಪಿಗೆ [illegible] ಕುಪ್ಪಿಗೆ ೧ ಕುಪ್ಪಿ ಹೆಚ್ಚು [illegible]

ವಿಳಾಸ—ಶಾಸ್ತ್ರದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ. 64-23



[illegible] ಜ್ವರ [illegible] ಎಂಬ [illegible] ಜ್ವರಗಳನ್ನು [illegible]

ಚಿತ್ರದುರ್ಗದ [illegible] ಮರಾಮತ್ [illegible] ವೆಂಕಟಪತಿ ಅಯ್ಯಂಗಾರು—[illegible] ವಿಷಮಜ್ವರ [illegible] ಕೊಟ್ಟ [illegible] ಬಹು [illegible] ಔಷಧದಿಂದ ಅನೇಕ ಮಂದಿ [illegible] ಜನಗಳು [illegible] ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—[illegible] ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಬಿಡಲಾಗುವದು.

ಡಮ್ಬೆಲ್ ಕರ್ಪೂರ

Dumbell Carpoor

ಈ ಔಷಧವು ಅಜೀರ್ಣ, ನೀರ್‌ಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ಕಾಲರಾ ಮುಂತಾದ ಹೊಟ್ಟೆ ನೋವುಗಳು—ಮುಂತಾದ ಕೈಲಲ್ಲಿ ಮಹಾ [illegible] ಗುಣಕೊಡುವದು. ಇದು ಹೆಂಗಸರು ತಿಂಗಳ [illegible] ಜೊತೆಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ವರೆವು ,, ಜ್ವರಹರಿ " ಎಂಬ ಔಷಧ [illegible] ಸೀಸೆಗಳಲ್ಲಿ ದೊರಕುವದು.

[illegible] ಅಸಿಸ್ಟೆಂಟ್ ಸರ್ಜನ್ [illegible]—[illegible] ಹಾಸ್ಪಿಟಲ್ [illegible] ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ [illegible] ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ [illegible] ಕೊಟ್ಟು ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು [illegible] ಔಷಧವೆಂತ ಬರೆದಿದ್ದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, [illegible] ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. [illegible] ಕೆಳಗಿನ ವಿಳಾಸದಲ್ಲಿ ವಿಶೇಷ —

ಬಟ್ಟಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

BASEL MISSION WEAVING ESTABLISHMENT, 59-23

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಬಟ್ಟೆ)

ನೆಯ್ಯುವ ಕಾರಖಾನೆಯಲ್ಲಿ

ನಾನಾ ವಿಧದ (ಮಿಕ್ಸ್) ಟ್ವೀಡ್ ನಮೂನೆಯ ಕೋಟು ಇಜಾರುಗಳ ಚೆಕ್ ಬಟ್ಟೆಗಳೂ ಹಂಟಿಂಗ್ ಯಾನೆ ಶಿಕಾರಿ ಬಟ್ಟೆಗಳೂ ಶರ್ಟಿಂಗ್ ಯಾನೆ ಕಮೀಜಿನ ಬಟ್ಟೆಗಳೂ ಬೇರೆ ಇತರ ಬಟ್ಟೆಗಳೂ, ಟೇಬ್ಲ್ ಕ್ಲೋತ್ ಯಾನೆ ಮೇಜುವಸ್ತ್ರಗಳೂ, ಟುವಾಲು ವಸ್ತ್ರಗಳೂ ಸ್ನಾನಕ್ಕಾಗಿ ತಯಾರಿಸಲ್ಪಟ್ಟು ಬಣ್ಣ ಹೋಗದಂಥವುಗಳೂ ಬಾಳಿಕೆ ಬರುವಂಥವುಗಳೂ ವ್ಯಾಪಾರಕ್ಕೆ ತಯಾರಿರುತ್ತವೆ.

ಒಳ್ಳೇ ಕಮಿಶನ್—ರೂಪಾಯಿ ೧೦೦ ರ ಮೇಲೆ ವಸ್ತುಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾಗುತ್ತದೆ. ಹೆಚ್ಚಿನ ವಿವರ ಮುದ್ದಾಂ ಯಾ ಕಾಗದ ಮೂಲಕ ತಿಳುಕೊಳ್ಳಬಹುದು.

ನಮೂನೆ ಯಾ ಮಾದರಿಗಳು :—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು.

ವಿಶೇಷ ಲಕ್ಷ್ಯ ಸತಕ್ಕದ್ದು :—ಈ ನಮ್ಮ ವಸ್ತುಗಳಿಗೆ ಇಲ್ಲಿ ಕಾಣಿರುವ "ಟ್ರೇಡ್ ಮಾರ್ಕ್" ಎಂಬ ವ್ಯಾಪಾರಗುರುತು ಇರುವ ಲೇಬಲ್ ಯಾನೆ ಚೀಟು ಹಚ್ಚಿರುತ್ತದೆ. ಈ ಗುರುತು ಚೀಟುಗಳು ಇಲ್ಲದವುಗಳೆಲ್ಲಾ ಕಾಜಿ ಮಿಶ್ಯನ ವಸ್ತುಗಳಲ್ಲವೆಂದು ತಿಳಿಯತಕ್ಕದ್ದು.

ಶರ್ತ :—ನಗದಾಗಿ ಇಲ್ಲವೆ ವಸ್ತುಗಳು ವಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾಗಿದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯಸತಕ್ಕದ್ದು.

☞ ಈ "ಟ್ರೇಡ್ ಮಾರ್ಕ್"ನ್ನಾಗಲೀ, ನಾವು "ಕೋಪಿರೈಟ್" ಪಡೆದಿರುವ ಲೇಬಿಲುಗಳನ್ನಾಗಲೀ, ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ವಸ್ತುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ—BASEL MISSION WEAVING ESTABLISHMENT,
MANGALORE S. CANARA.

AMRUTANJAN DEPOT, 16 OAK-LANE, BOMBAY. [17-16]

ಅಮೃತಾಂಜನ್ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಅಬಲುಗಂಟ್ಲುನೋವು, ಎದೆಶೀತ, ಛಾಯ, ಚಳುಮು, ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತಿಳಿಯಲು ಯೋಗ್ಯವಾದ ಸಂಗತಿಯಾಗಿರುತ್ತದೆ. ಇದು ಚರ್ಮದ ಮೂಲಕ ಪ್ರಾಂತವನ್ನು ಪ್ರವೇಶಿಸಿ, ಕೋಳುಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ. ಬಾಟ್ಲಿ ಒಂದರ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೪—೦ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಕಡಾ ಇನಾಮು. ಆರ್ ಆರ್ ಗಂಗೋಲಿ 1 ನೇ ಕ್ಲಾಸ್ ಸಬ್ ಜಡ್ಜ್ ಕಾರವಾರ,—ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅನುಕೂಲವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ.

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ.

ಗಜಕರ್ಣದ ಮುಲಾಮು.

ಮೂರು ನಾಲ್ಕು ತಾಗಿಸುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವದು. ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦—೩—೦, ವಿ. ಪಿ. ಖರ್ಚು ೦—೪—೦

ದಂತಮಂಜನ—ಡಬ್ಬಿ ೨ ಆಣೆ. ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ, ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ, ಹಲ್ಲುಗಳು ಘಟ್ಟಿಯಾಗುತ್ತವೆ, ಹಲ್ಲುಗಳು ಬೆಳ್ಳಗಾಗುತ್ತವೆ.

ಕಜ್ಜಿ ಮುಲಾಮು—ಡಬ್ಬಿ ೧ ಕ್ಕೆ ಕಿಮ್ಮತು ೩ ಆಣೆ

ಕೇಶವರ್ಧನಿ—ಚಳೋ ಪರಿಮಳ ಉಳ್ಳದ್ದು

ಕೇಶವರ್ಧನಿ—ಮನಶುದ್ಧಿ ಮಾಡುವದು

ಕೇಶವರ್ಧನಿ—ಕೂದಲನ್ನು ನಯಮಾಡುವದು. ಬಾಟ್ಲಿ ಒಂದರ ಕಿಮ್ಮತು ರೂ ೧—೦—೦

ವಜ್ರಗುಟಿಕ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಸುಮಾರಿಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸುಂದರೀ ತೈಲ—ಮೋರೆಯ ಮೊಡವೆಗಳಿಗೆ	೦—೮—೦
ತಾಂಬೂಲ ಗುಟಿಕೆ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಬೇಳುಕಡಿತದ ಮದ್ದು ಚೇಳುಕಡಿತಕ್ಕೆ	೦—೮—೦
ಜುಲಾಬು ನೂಕ್ತ—ಜುಲಾಬಿಗೆ	೦—೮—೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ," ಮುಂಬಯಿ.

ಇಲ್ಲಿ ನೋಡಿ.

11

ತುಮಕೂರು ಡಿಸ್ಟ್ರಿಕ್ಟ್ ಇಲಾಖೆಯಲ್ಲಿ ಯೂರೋಪಿಯನ್ನರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ಲಿನಿಂದ ತಯಾರಾಗುತ್ತವೆ. ಕ್ರಯ —೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆಯ ವರೆಗೆ ೧ ಡಜ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ಶೇಕಡ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವದು. ಈಗತಾನೇ ಇಂಗ್ಲಿಷ್ ಉಲ್ಲಿನಾದವು ಬಂದಿವೆ. ಬೇಕಾದ ತರಹ ಟೋಪಿಗಳನ್ನು ದಯಾರಿಸಿ ಕಳುಹಿಸಲ್ಪಡುವವು. ವಿಳಾಸ — ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಡಿಸ್ಟ್ರಿಕ್ಟ್ ಇಲಾಖೆ, ತುಮಕೂರು.

ಕಟ್ಟಡದ ಹರಾಜು ಇಸ್ತಿಹಾರು.

100 3

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟು 1903–04ನೇ ಇಸವಿ ಇನ್ಸಾಲ್ವೆನ್ಸಿ 111ನೇ ನಂಬರಿನಲ್ಲಿ ಕೋರ್ಟಿನಿಂದ ನೇಮಕರಾದ ಇವರಡಿ ರುಜೂ ಮಾಡಿರುವ ರಿಸೀವರು ಅಡಿ‌ದಾರನ ಬಾಬತು ಕೆಳಗೆ ಷೆಡ್ಯೂಲಿನಲ್ಲಿ ವಿವರಿಸುವ ಕಟ್ಟಡವನ್ನು ಇದುವರಿಗೆ ಏರಪಟ್ಟಿ ಇರಬಹುದಾದ ಎಲ್ಲಾ ಜವಾಬ್ದಾರಿಗಳನ್ನೂ ವಿನಾಯಿಸಿ (Free of encumbrance) 1909ನೇ ಇಸವಿ ಜನವರಿ 10ನೇ ಭಾನುವಾರ ಪ್ರಾತಃಕಾಲ 11 ರಿಂದ 5 ಗಂಟೆ ವರೆಗೂ ಮೈಸೂರಿನಲ್ಲಿ ಕಟ್ಟಡದ ಬಳಿ ಬಹಿರಂಗವಾಗಿ ಹರಾಜು ಮಾಡಿಸುತ್ತಾರೆ. ಖರೀದಿದಾರರು ಹೆಸರಿಗೆ ಸ್ವತ್ತು ಬಿಡಲ್ಪಡುತ್ತದೆ. ಹರಾಜಿನಲ್ಲಿ ಕೂಗಿದವರು ಬೀಟು ಕ್ರಯದಾನ ಐದನೆ ಭಾಗವನ್ನು ಸ್ಥಳದಲ್ಲಿಯೇ ಸೇಕಡ 25 ರೂಪಾಯಿನಂತೆ ಪಾವತಿಮಾಡಬೇಕಲ್ಲದೆ ಪೂರಾ ಮೊಬಲಗನ್ನು 15 ದಿನಗಳಲ್ಲಿ ಪಾವತಿ ಮಾಡತಕ್ಕದ್ದು.

(ಸ್ಹಿ) ಎ. ಜಿ. ಲಕ್ಷ್ಮೀನರಸಿಂಹಯ್ಯಂಗಾರ್, ರಿಸೀವರ್.

ಷೆಡ್ಯೂಲು

[illegible]

(ಸ್ಹಿ) ಎ. ಜಿ. ಲಕ್ಷ್ಮೀನರಸಿಂಹಯ್ಯಂಗಾರ್, ರಿಸೀವರ್.

ತಾ ಕ ಕಟ್ಟಡವನ್ನು ಜರೂರಿ ಇದ್ದರೆ ತಾರೀಖು ಬರುವ ಮುಂಚೆ ಕೊಳ್ಳುವವರು ಹೋಗಿ ನೋಡಬಹುದು.

ಇದುವರೆಗೆ ಯಾರೂ ಪ್ರಕಟಿಸದಂತಾ ಪುಸ್ತಕ!!!

10 1

"ಬ್ರಹ್ಮಚರ್ಯ" ಎಂಬ ಮಹಾಗ್ರಂಥ.

ಇದು ಇಂಗ್ಲಿಷ್ ಭಾಷೆಯಲ್ಲಿ ಲೋಕಪ್ರಸಿದ್ಧವಾದ ಪುಸ್ತಕ. ಈಗ ಇದನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿರುವೆವು. ಈ ಮಹಾಗ್ರಂಥವನ್ನು ಯೌವನಸ್ಥರೂ ಬಾಲವೃದ್ಧರೂ ಓದಿ ತಿಳಿದುಕೊಳ್ಳಬೇಕು. ಅನೇಕ ಹುಡುಗರು ಹಸ್ತಪ್ರಯೋಗಾದಿ ಮರೆಮಾಚ ಭಯಂಕರವಾದ ದುರಭ್ಯಾಸಗಳಿಗೊಳಗಾಗಿ ಕೆಟ್ಟುಹೋಗಿರುತ್ತಾರೆ. ಅವರ ದುಷ್ಪ್ರವರ್ತನೆಗಳಿಗೆ ಬುದ್ಧಿವೈಕಲ್ಯವೇ ಕಾರಣವಾಗಿರುತ್ತದೆ.

ಈ ಉತ್ಕೃಷ್ಟವಾದ ಪುಸ್ತಕವನ್ನು ಇನ್ನೂ ಹೆಚ್ಚಾಗಿ ವಿವರಿಸಿ ತಿಳಿಸುವುದಕ್ಕೆ ಇಲ್ಲಿ ಸ್ಥಳಸಾಲದು. ಅದರ ಅಂತರ್ಗತವಾಗಿರುವ ಅಧ್ಯಾಯಗಳನ್ನು ಇಲ್ಲಿ ತಿಳಿಸುವೆವು. ಜೀವೋತ್ಪತ್ತಿಯ ಪ್ರಾರಂಭವು, ಆದರ ಶಕ್ತಿಯು ... ದಗಳ ಜೀವೋತ್ಪನ್ನವಾಗುವಿಕೆ, ಪ್ರಾಣಿಗಳಲ್ಲುಂಟಾಗುವ ಜೀವೋತ್ಪತ್ತಿಯು, ಮನುಷ್ಯಸಂತಾನವು, ಅದು ಉತ್ಪತ್ತಿಯಾಗುವ ರೀತಿಯು, ಹುಡುಗರಲ್ಲಿರುವ ದುಶ್ಚೇಷ್ಟೆಗಳು, ಅಂಗಗಳು ಕೆಡುವಿಕೆ, "ಹುಡುಗರ ದುಶ್ಚೇಷ್ಟೆಗಳಿಂದಾಗುವ ನಾನಾ ಕೇಡುಗಳು" "ಹುಡುಗರು ತಮ್ಮ ದೇಹಗಳನು ಶುದ್ಧತೆ ಪುಷ್ಟಿ ಬಲಪ್ರಾಣಗಳಲ್ಲಿ ಕಾಪಾಡುವದಕ್ಕೆ ಸೂತ್ರಗಳು" "ಹುಡುಗರು ತಾವು ಕಳಕೊಂಡ ದೇಹಬಲಶಕ್ತಿಗಳನ್ನು ತಿರಿಗಿ ಸಂಪಾದಿಸುವ ವಿಧಾನವು" "ಹುಡುಗರು ಪ್ರಾಯಕ್ಕೆ ಬರುವ ಕಾಲವು. ಈ ಕಾಲದಲ್ಲಿ ಗಮನಿಸತಕ್ಕ ವಿಷಯಗಳು" "ಹುಡುಗರು ಪ್ರಾಯಕ್ಕೆ ಬರುವಕಾಲ, ಈ ಕಾಲದಲ್ಲಿ ಉಂಟಾಗುವ ಬದಲಾವಣೆಗಳು"

ಇಂಥಾ ಉತ್ಕೃಷ್ಟವಾದ ಪುಸ್ತಕವನ್ನು ಎಲ್ಲರೂ ಕೊಂಡು ತಮ್ಮ ಮನೆಗಳಲ್ಲಿ ಇಡಬೇಕು. ಇದರ ಕ್ರಯ ಮೂರಾಣೆ. ವಿ. ಪಿ. ಮೂಲಕ ತರಿಸಿಕೊಂಡರೆ ಐದಾಣೆಗಳಾಗುವವು.

ವಿಳಾಸ —ಮ್ಯಾನೇಜರ್, ಸಿ. ಎಲ್. ಎಸ್.
ಬುಕ್ ಡಿಪೋ ಮೈಸೂರು.

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೈನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



11

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ಸಾಂಕ್ರಾಮಿಕ ಉಪದ್ರ, ಕಾಲುಗಳ ನೋವು, ಹೊಟ್ಟೆಯ ನಾನಾ ತರದ ರೋಗಗಳು—ಈ ರೋಗಗಳೆಲ್ಲಾ ವಾಸಿಮಾಡುವುದರಲ್ಲಿ ಈ ಪರಮ ಉಪಯುಕ್ತವಾದ ಔಷಧವು ಒಬ್ಬನ ಜೀವವನ್ನು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜಾ ಪಕಡಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ನೋವನ್ನೂ ನಿಲ್ಲಿಸಿಬಿಡುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವಸಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲಿಯೂ ವಿಕ್ರಯವಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ರೆಜಿಸ್ಟರ್ ಆದ ಹಾಯರು ಬೇಕಾಗಿದೆ

105

[illegible]

ಮದ್ರಾಸ್ ಸಾಹುಕಾರ್ ಪೇಟೆ, ಟಿ. ಡಿ. ರಾಮಸ್ವಾಮಿ ಶೆಟ್ಟಿರವರ ಕಂಪನಿಯಲ್ಲಿ

99

[illegible]



ಬೇಕಾದವರು ತಮ್ಮ ಅಡ್ರೆಸ್ಸು ತಿಳಿಸಿ ರೂ 10 ಮುಂಗಡವಾಗಿ ಕಳುಹಿಸಿದರೆ ವಿ. ಪಿ. ಮೂಲಕ ರವಾನಿಸಲ್ಪಡುತ್ತೆ. ವಿಶೇಷ ಮಾಹಿತಿ ಬೇಕಾದವರು ಕಂಪನಿಯ ಪಾಂಪ್ಲೆಟ್ ಮೂಲಕ ವಿಳಾಸದಾರಿಂದ ತಿಳಿದುಕೊಳ್ಳಬಹುದು.

ಮಕ್ಕಳ ಹಿತಕಾರಿ

SCOTT'S EMULSION

(ಸ್ಕಾಟ್ಸ್ ಇಮಲ್ಷನ್)

6–1

ಎಂಬ ಸುವಿನಾ ಮೀನಿನ ಕೋಡ್ ತೈಲದ ಔಷಧವು ಹಸುಳೆ ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನು ಪುಷ್ಟವಾಗಿ ಬೆಳೆಸುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯವಾಗಿಸುತ್ತದೆ. ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಕ್ರಮೋಕಡೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕ್ರಯವಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

JUST RECEIVED! JUST RECEIVED!!

Stead's Books for the Bairns

Illustrated. New Numbers.

STEAD'S PENNY POPULAR TALES. Sixty four [illegible]

[illegible]

CHRISTMAS AND NEW YEAR CARDS AND CALENDARS FOR 1909

Apply: The Manager, C. L. S. Book Depot, Mysore City.

ಶ್ರೀ ಕ್ರಾಂಬೂಲಿ

51 14

ಇವನ್ನು ... ವಿವರ ... ಗುಳಿಗೆ

[illegible]

[illegible]

... ಗೋವಿಂದಶೆಟ್ಟಿ,
ಬೆಂಗಳೂರು ... ಮೆಡಿಕಲ್ ಹಾಲ್ ಪ್ರೊಪ್ರೈಟರ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11

ಬಳ್ಳೀ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ತಯಾರಾಗುತ್ತಿರುವ ಟೋಪಿಗಳ ಪಾಲೆಲ್ಲಾ ಬೇಕಾದಷ್ಟು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ. (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಮೇಲೆಲ್ಲಾ ನೆಟಿಗೆ ಹಿತ್ತಾಳೆಯಿಂದಲೇ ಬರುವದು. (೨) ಟೋಪಿಗಳನ್ನು ಚೆನ್ನಾಗಿ ನಾವೇ ನಿಂತು ಚೆನ್ನಾಗಿ ಶಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ ಚೆನ್ನಾಗಿ ಹೊಲಿದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ, ಕೆಂಪು, ಕಪ್ಪು, ಹಿರಕೆ, ಕಾಪಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ.

ಕೆತ್ತನೆ ಚಿತ್ರಯುಕ್ತ ಟೋಪಿಗಳು ೧ ರೂ ೮ ಆ, ೨ ರೂ.

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ.

ಉಲ್ಲಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ.

ಕಡುಗೆಂಪು ಟೋಪಿ, ಸೂಫಿಯ ಮೇಲುಹೊದಿಕೆ, ಆರ್ಥ ಮೇಜುಹೊದಿಕೆ ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ವೃತ್ತಾಂತ ಪತ್ರಿಕೆ.

:೦:———

೧೯೦೯ ನೇ ಇಸವಿ ಜನವರಿ ತಾ|| ೭ ನೇ ಗುರುವಾರ.

ಅನ್ಯೋನ್ಯಸಹಾಯಕ ಸಂಘವು.

ಮೈಸೂರು ಗವರ್ನ್‌ಮೆಂಟ್ ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರ್ ಮೆ|| ಎಂ. ಶಾಮರಾಯರವರು ಸೆಂಟ್ರಲ್ ಬ್ಯಾಂಕ್ ಎಂಬ ಒಂದು ಪರಸ್ಪರ ಸಹಾಯಕ ನಿಧಿಯನ್ನು ಸ್ಥಾಪಿಸಬೇಕಾದದ್ದು ಅವಶ್ಯವೆಂದು ಪ್ರಕಟಿಸಿರುತ್ತಾರೆ. ಋಣಗಾರರಾಗಿಯೂ ಪರಋಣದಲ್ಲಿ ವಿವೇಕಿಗಳಾಗಿಯೂ ಇರುವಂಥಾ ದೇಶೀಯ ದೊಡ್ಡ ಮನುಷ್ಯರು ಮೆ|| ಶಾಮರಾಯರ ಹಿತಚಿಂತನೆಯನ್ನು ಆಲಿಸಿ, ಈ ಬ್ಯಾಂಕನ್ನು ಸ್ಥಾಪಿಸಬೇಕಾಗಿದೆ. ಈ ಸಂಸ್ಥಾನದಲ್ಲಿ ಆಗಲೇ ಕೆಲವು ಅನ್ಯೋನ್ಯ ಸಹಾಯಕ ಸಂಘಗಳು ಸ್ಥಾಪಿಸಲ್ಪಟ್ಟು ನಡಿಯುತ್ತಿರುವವು. ಆದರೆ ಈ ಸಂಘಗಳಿಗೆ ತಕ್ಕಮಟ್ಟಿಗೆ ಮೂಲಧನವನ್ನು ಒದಗಿಸಿಕೊಡುವುದಕ್ಕೆ ಸದ್ಯದಲ್ಲಿ ಮಾರ್ಗವಿಲ್ಲವಾಗಿದೆ. "ಗವರ್ನ್‌ಮೆಂಟಿನವರು ಅವುಗಳಿಗೆ ಅಡ್ವಾನ್ಸು ಹಣವನ್ನು ಕೊಡಲಿ" ಎಂದು ಸುಲಭವಾಗಿ ಹೇಳಬಹುದು. ಆದರೆ ಗವರ್ನ್‌ಮೆಂಟಿನವರು ಇದಕ್ಕೆ ಮೊದಲೇ ವ್ಯವಸಾಯದ ಬ್ಯಾಂಕುಗಳನ್ನು ಮಾಡಿದ್ದೂ, ಅವುಗಳಿಗೆ ಬಹಳ ಹಣವನ್ನು ಸಾಲಕೊಟ್ಟದ್ದೂ, ಆ ಹಣವು ವಾಪಸು ಬಾರದೆ ಅವರು ನಾನಾ ಏರ್ಪಾಡುಗಳನ್ನು ಮಾಡುತ್ತಿರುವುದೂ ಎಲ್ಲರಿಗೂ ತಿಳಿದೇ ಇದೆ. ಮತ್ತು ಪ್ರಜೆಗಳು ಗವರ್ನ್‌ಮೆಂಟಿನವರೇ ಪ್ರತಿ ಒಂದು ಕೆಲಸವನ್ನೂ ಮಾಡಬೇಕೆಂದು ನಿರೀಕ್ಷಿಸುವುದು ಸಹಜವಾದುದ್ದಲ್ಲ. ಪ್ರಜೆಗಳಲ್ಲಿ ಸ್ವಾವಲಂಬರಾಗಿಯೂ ಪರಾರ್ಥಿಗಳಾಗಿಯೂ ಇರುವಂಥವರು ಸರ್ಕಾರದವರಿಗೆ ಬೆಂಬಲಕೊಡುತ್ತಾ ದೇಶವನ್ನು ಅಭಿವೃದ್ಧಿಗೆ ತರಬೇಕಾಗಿದೆ. ಇಂಥಾ ಪರಸ್ಪರ ಸಹಾಯಕ ಸಂಘಗಳನ್ನು ಎರಡು ರೀತಿಯಲ್ಲಿ ನಡಿಸಿದರೆ ಈ ಸಂಸ್ಥಾನದಲ್ಲಿ ಫಲಕಾರಿಯಾಗುವುದು.

(೧) **ರೈತರ ಪರಸ್ಪರ ಸಹಾಯಕ ಸಂಘಗಳು ಆಗಬೇಕು.** ರೈತರು ತಮ್ಮ ಜಮೀನುಗಳ ಬೆಲೆಯ ಆಧಾರದ ಮೇಲೆ ಈ ಸಂಘಗಳಿಂದ ತಮಗೆ ಅವಶ್ಯವಾಗಿರುವಂಥಾ ಬೀಜಕ್ಕೂ, ವ್ಯವಸಾಯ ಸಾಧನಗಳಿಗೂ, ಗೋಕರಾವುಗಳೂ, ಭಾವಿ ಮುಂತಾದ ಕೆಲಸಗಳಿಗೂ ಸಾಲವನ್ನು ಪಡೆದುಕೊಳ್ಳಬಹುದಾಗಿದೆ.

(೨) **ಕಸಬುದಾರರ ಸಂಘಗಳು ಆಗಬೇಕು.** ನೆಯ್ಗೆ, ಮಗ್ಗ ಮೊದಲಾದ ಕಸಬುಗಳನ್ನು ನಡಿಸತಕ್ಕವರು ಇಂಥಾ ಸಂಘಗಳನ್ನು ಏರ್ಪಡಿಸಿಕೊಳ್ಳಬೇಕು. ಅವರ ಕಸಬಿಗೆ ಬೇಕಾಗುವ ಪದಾರ್ಥಗಳನ್ನೂ ಮುಟ್ಟುಗಳನ್ನೂ ಕೊಂಡುಕೊಳ್ಳುವುದಕ್ಕೆ ಅವರು ಈ ಸಂಘಗಳಿಂದ ಸಾಲವನ್ನು ಪಡೆದುಕೊಳ್ಳಬಹುದು.

ಇಂಥಾ ಸಂಘಗಳಿಂದ ಪ್ರಜೆಗಳಿಗೆ ಮೂರು ವಿಧದಲ್ಲಿ ಪ್ರಯೋಜನವುಂಟಾಗಿಂದರೆ—

(೧) ಸಂಘಗಳಲ್ಲಿ ಮೆಂಬರಾಗಿರತಕ್ಕವರಿಗೆ ಸಂಘದಿಂದ ಸಾಲವು ಬಹಳ ಸುಲಭ ದರದ ಬಡ್ಡಿಗೆ ದೊರಕುವುದು. ಮೂಲಧನವು ಹೆಚ್ಚುತ್ತಾ ಬಂದ ಹಾಗೆಲ್ಲಾ ಮೆಂಬರುಗಳ ಕಸಬು ಕೂಡ ಅಭಿವೃದ್ಧಿಯಾಗುತ್ತದೆ.

(೨) ಕಸಬುದಾರರು ಸಾಹುಕಾರರ ಬಳಿಗೆ ಹೋಗಿ ದುಬಾರಿ ಬಡ್ಡಿ ಕೊಟ್ಟು ಸಾಲ ತರುವುದು ತಪ್ಪುತ್ತದೆ. ಈ ದುಬಾರಿ ಬಡ್ಡಿಯ ದೆಸೆಯಿಂದ ಅನೇಕಾನೇಕ ರೈತರು ತಮ್ಮ ಜಮೀನುಗಳನ್ನೂ ಇತರ ಕಸಬುದಾರರು ತಮ್ಮ ಆಸ್ತಿಪಾಸ್ತಿ ಮನೆಮಾರನ್ನೂ ಕಳೆದುಕೊಂಡು ನಿರ್ಗತಿಕರಾಗಿರುತ್ತಾರೆ.

(೩) ಸಂಘಗಳಿಗೆ ಸಾಲಗಾರರು ಕೊಡಬೇಕಾಗುವ ಬಡ್ಡಿಯು ಬಹಳ ಸ್ವಲ್ಪ. ಈ ಬಡ್ಡಿಯೂ ಕೂಡ ಅನ್ಯರಿಗೆ ಹೋಗದೆ, ಸಂಘದಲ್ಲಿ ಮೆಂಬರುಗಳಾಗಿ ಸೇರಿಕೊಂಡಿರತಕ್ಕ ಕಸಬುದಾರರಿಗೇನೇ ತಮ್ಮ ಷೇರು ಹಣದ ಮೇಲಣ ಬಡ್ಡಿಯ ರೂಪದಲ್ಲಿ ವಾಪಸು ಸಾಲವಾಗುತ್ತದೆ.

ಇಷ್ಟೆಲ್ಲಾ ಅನುಕೂಲವಾಗಬೇಕಾದರೆ ಈ ಸಂಸ್ಥಾನದಲ್ಲಿ ಒಂದು ದೊಡ್ಡ ಬ್ಯಾಂಕು ಏರ್ಪಾಡಾಗಬೇಕು. ಈ ಬ್ಯಾಂಕಿನವರು ಜನರಿಗೆ ಸಾಲ ಕೊಡಲೇ ಕೂಡದು. ಸಂಸ್ಥಾನದ ಎಲ್ಲಾ ಭಾಗಗಳಲ್ಲಿ ಸ್ಥಾಪನೆಯಾಗಿರುವ ಮತ್ತು ಮುಂದೆ ಸ್ಥಾಪಿಸಲ್ಪಡುವ ಮೇಲ್ಕಂಡಂಥಾ ಪರಸ್ಪರ ಸಹಾಯಕ ಸಂಘಗಳು ಮಾತ್ರ ಈ ದೊಡ್ಡ ಬ್ಯಾಂಕಿನಿಂದ ಸಾಲ ಪಡೆದುಕೊಳ್ಳುವಂತಾಗಬೇಕು. ಈ ಸಾಲದ ಮೇಲಣ ಬಡ್ಡಿಯ ದರವು ಸುಲಭವಾದದ್ದಾಗಿರಬೇಕು. ಇಂಥಾ ದೊಡ್ಡ ಬ್ಯಾಂಕಿಗೆ ಪ್ರಜಾ ಸತ್ಪುರುಷರೂ ಧನವಂತರೂ ಸತ್ಯವಂತರೂ ಆದ ಮಹನೀಯರೇ ತಮ್ಮ ಹಣವನ್ನು ಮೂಲಧನವಾಗಿ ಕೊಟ್ಟು ಬ್ಯಾಂಕಿನ ಕಾರುಬಾರುಗಳನ್ನು ತಾವೇ ನೋಡಿಕೊಳ್ಳುತ್ತಾ ಬರಬೇಕಾಗಿದೆ. ಗವರ್ನ್‌ಮೆಂಟಿನವರೂ ಇದಕ್ಕೆ ಸ್ವಲ್ಪ ಹಣವನ್ನು ಸಾಲವಾಗಿ ಕೊಡಬಹುದು. ಆದರೆ ಸರ್ಕಾರದವರೇ ರಾಜಾದಾಯವನ್ನು ಉಪಯೋಗಿಸಿ ಇಂಥಾ ಬ್ಯಾಂಕನ್ನಿಟ್ಟು ನಡಿಸುವುದು ಎಷ್ಟುಮಾತ್ರಕ್ಕೂ ಹಿತಕರವಾಗಿರಲಾರದು.

ಪರರ ಶ್ರೇಯಸ್ಸನ್ನು ಕೋರುವಂಥಾ ಪುಣ್ಯಶಾಲಿಗಳಾದ ಪ್ರಜಾಪ್ರಮುಖರು ಇಂಥಾ ದೊಡ್ಡ ಬ್ಯಾಂಕನ್ನು ಸ್ಥಾಪಿಸಿ, ಬಹಳ ಜಾಗರೂಕತೆಯಿಂದಲೂ ತುಂಬಾ ವಿವೇಕಪೂರ್ವಕವಾಗಿಯೂ ನಡಿಸುತ್ತಾ ಬರಬೇಕಾಗಿದೆ. ಮದರಾಸ್ ಪಟ್ಟಣದಲ್ಲಿ ಈಚೇ ವಾರ ನಡೆದ ಹಿಂದುಸ್ಥಾನದ ಕೈಗಾರಿಕೆಗಳ ಪ್ರೋತ್ಸಾಹಕ ಸಮಾಜದಲ್ಲಿ ಸರ್ ವಿಠಲದಾಸ್ ಥ್ಯಾಕರ್ಸೆಯವರೂ ಮೆ|| ಸಮಾಲ್ದಾಸ್ ಯವರೂ ಇಂಥಾ ಸೆಂಟ್ರಲ್ ಬ್ಯಾಂಕಿನ ಏರ್ಪಾಡಿನ ವಿಚಾರವನ್ನು ಕುರಿತು ಸೂಚಿಸಿ ವಿವರವಾಗಿ ಉಪನ್ಯಾಸ ಮಾಡಿದರು. ಇದರ ಮೇಲೆ ಮೆ|| ಎಂ. ಶಾಮರಾಯರು ಅಂಥಾ ಒಂದು ಬ್ಯಾಂಕು ನಮ್ಮ ಸಂಸ್ಥಾನದಲ್ಲೂ ಏರ್ಪಾಡಾಗಬೇಕೆಂದು ಸೂಚಿಸಿದಾರೆ. ಪ್ರಜೆಗಳ ಮುಖಂಡರು ಈ ವಿಚಾರವನ್ನು ಆಲೋಚನೆ ಮಾಡಿ, ಅಂಥಾ ಒಂದು ದೊಡ್ಡ ಬ್ಯಾಂಕನ್ನು ಸ್ಥಾಪಿಸಿ ನಡಿಸುತ್ತಾ ಬರುವರೆಂದು ನಂಬಿ ಹಾರೈಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ನಾಳೆ ಬೆಂಗಳೂರು ಪಬ್ಲಿಕ್ ಆಫೀಸಿನಲ್ಲಿ ನ್ಯಾಯವಿಧಾಯಕ ಸಭೆಯು ನಡೆಯುವುದಾಗಿದೆ.

* * *

ಶ್ರೀಮನ್ಮಹಾರಾಜರವರು ಜಸ್ಮರಿಸ್ತ್ರೀ ಬೆಂಗಳೂರಿಗೆ ಚಿತ್ತೈಸಿ ಕೆಲವು ದಿನ ಇದ್ದು ಮದರಾಸಿಗೆ ದಯಮಾಡುವರೆಂದು ತಿಳಿಯುವುದು.

* * *

ರಾಜಧಾನಿಯ ಜಿ. ಟಿ. ಎ ಪ್ರೆಸ್ ಎಂಬ ಪ್ರಿಂಟಿಂಗ್ ಆಫೀಸಿನವರು ಹೊಸ ವರುಷದ ಕ್ಯಾಲೆಂಡರನ್ನು ಸುಂದರವಾಗಿ ರಚಿಸಿ ನಮಗೆ ಕಳುಹಿಸಿರುವರು.

* * *

ಚೆನ್ನಗಿರಿ ತಾಲ್ಲೂಕು ಚಿಕ್ಕ ಗಂಗೂರಿನಲ್ಲಿ ಒಂದು ಹಸುವು ೩ ಹೋರಿ ಕರುಗಳನ್ನೂ ೨ ಹೆಂಗರುಗಳನ್ನೂ ಈದಿದೆ ಎಂದೂ, ಆದರೆ ಕರುಗಳು ಸತ್ತು ಹೋದುವೆಂದೂ ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ.

* * *

ಇಲ್ಲಿ ಕಳೆದ ವಾರವೆಲ್ಲಾ ಸುಮಾರಾಗಿ ಮೋಡಹಾಕಿಕೊಂಡು ೨-೩ ದಿನ ಮಳೆಯೂ ಆಯಿತು. ಚಳಿಯು ಹೋಗಿ ಪ್ರಜಾ ಆರೋಗ್ಯವು ಬಹಳ ಚೆನ್ನಾಗಿರುವುದು. ಧಾರಣೆವಾಸಿಗಳು ಅಲ್ಪಸ್ವಲ್ಪ ಮಾತ್ರ ಇಳಿದಿರುತ್ತವೆ.

* * *

ಥಿಯೊಸಾಫಿಕಲ್ ಸಂಘದ ಪ್ರೆಸಿಡೆಂಟ್ ಮತ್ತು ಕಾಶೀ ಪಟ್ಟಣದ ಹಿಂದೂ ಸೆಂಟ್ರಲ್ ಕಾಲೇಜಿನ ಅಧ್ಯಕ್ಷೆಯರಾಗಿರುವ ಮಿಸೆಸ್ ಬೆಸೆಂಟ್ ಅಮ್ಮಾಳೆಯು ಬೆಂಗಳೂರಿಗೆ ಬಂದು ಒಂದೆರಡು ಉಪನ್ಯಾಸಗಳನ್ನು ಮಾಡುವವರಾಗಿದಾರೆ.

* * *

ಬೆಂಗಳೂರು ಚಾಮರಾಜಪೇಟೆಯ ಬಡಾವಣೆಯಲ್ಲಿ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿಗಾಗಿ ಒಂದು ಹೊಸ ಕಟ್ಟಡವನ್ನು ಕಟ್ಟುವರು. ಕೋಟೆಯಲ್ಲಿರುವ ಕಟ್ಟಡದಲ್ಲಿ ಹೆಂಗಸರ ಆಸ್ಪತ್ರೆಯನ್ನು ಮಾಡುವರು. ಇದಕ್ಕೆಲ್ಲಾ ಸರ್ಕಾರದವರು ೪೯,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ. ಕಾಮಗಾರಿಯು ಕೂಡಲೇ ಪ್ರಾರಂಭವಾಗುವುದೆಂದು ಕೇಳುತ್ತೇವೆ.

* * *

ರಾಜಧಾನಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಸರ್ಕಾರಿ ಆಯುರ್ವೇದ ಕಾಲೇಜಿನಲ್ಲಿ ಓದುವುದಕ್ಕೆ ೮೫ ಜನ ವಿದ್ಯಾರ್ಥಿಗಳು ಉಮೇದುವಾರರಾಗಿ ಅರ್ಜಿ ಬರೆದುಕೊಂಡರು. ಪರೀಕ್ಷೆಗೆ ೫ ಪೈಕಿ ೪೮ ಜನರು ಹಾಜರಾದವರಲ್ಲಿ ೧೩ ಮಂದಿ ತೇರ್ಗಡೆಹೊಂದಿದರು. ಗವರ್ನ್‌ಮೆಂಟಿನವರು ೧೦ ಮಂದಿಗೆ ವೇತನಗಳನ್ನು ಸ್ಯಾಂಕ್ಷನ್ ಮಾಡಿದಾರೆ. ಜನವರಿಯು ಪ್ರಾರಂಭವಾಗಿ ಪಾಠ ಪ್ರವಚನಗಳು ನಡೆಯುತ್ತವೆ.

* * *

ನಾಳೆ ಬೆಳಿಗ್ಗೆ ೯ ಗಂಟೆಗೆ ಸ್ಪೆಷಲ್ ರೈಲಿನಲ್ಲಿ ಮಹಾರಾಣಿ ಯುವರಾಣಿಯವರೇ ಮೊದಲಾದವರೆಲ್ಲಾ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿ, ರಾತ್ರಿ ಅಲ್ಲಿಂದ ರೈಲು ಹತ್ತಿ ಮದರಾಸಿಗೆ ಪ್ರಯಾಣಮಾಡುವರು. ಅವರಿಗೆಲ್ಲಾ ಮದರಾಸಿನಲ್ಲಿರುವ ಟೂಕರ್ಸ್ ಗಾರ್ಡನ್ ಎಂಬ ಬಂಗಲೆಯಲ್ಲಿ ಬಿಡಾರವನ್ನು ಏರ್ಪಾಡುಮಾಡಿದಾರೆ. ಅವರು ಅಲ್ಲಿ ೫-೬ ವಾರಗಳ ತನಕ ಇದ್ದು ವಾಪಸು ಬರುವರೆಂದು ಕೇಳುತ್ತೇವೆ.

* * *

ರಾಜಧಾನಿಯಲ್ಲಿ ತಯಾರಾಗುತ್ತಿರುವ ಹೊಸ ಅರಮನೆಯು ಅನೇಕವಾಗಿ ಜನ್ನ ಎತ್ತಾಳಿಯಲ್ಲಿ ತಯಾರಾಗುತ್ತಿರುವವರು ವಿಜಯನಗರಕ್ಕೆ ಸೇರಿದ ಬಸವನಗುಡಿ ಪಟ್ಟಣದಲ್ಲಿ ಕಟ್ಟಡಗಳನ್ನು ಮಾಡಿದಾರೆ. ಎರಡು ಕಂಬಗಳ ಮೂರು ಟನ್ ಭಾರವುಳ್ಳವಾಗಿಯೂ, ೧೨೫ ಚದರಡಿ ಅಗಲವಾಗಿಯೂ, ಅನೇಕ ಸುಂದರ ಚಿತ್ರಗಳಿಂದ ಕೂಡಿದ್ದಾಗಿಯೂ ಇರುತ್ತವೆ. ಅವು ರಾಜಧಾನಿಗೆ ಬಂದ ಮೇಲೆ ಅವರ ಮೇಲೆ ಚಿನ್ನದ ಮುಲಾಮು ಮಾಡಿಸಬಹುದೆಂದು ಕಾಣುತ್ತದೆ.

* * *

ಕಳೆದ ತಾ. ೨೯, ೩೯, ೩೦ ರಲ್ಲಿ ನಾಲ್ಕನೇ ಪ್ರಾಂತೀಯ ಮಹಾ ಸಭೆಯು ಬಾಗಲಕೋಟೆಯಲ್ಲಿ ನಡಿಸಲ್ಪಟ್ಟಿತು. ಪ್ರತಿನಿಧಿಗಳೂ, ಯುವಕರೂ, ಪ್ರಮುಖರೂ, ಪ್ರೇಕ್ಷಕರೂ ಸುಮಾರು ೫,೦೦೦ ವರೆಗೆ ಹಾಜರಾಗಿದ್ದರು. ರಿಸೆಪ್ಷನ್ ಕಮಿಟಿಯ ಅಧ್ಯಕ್ಷರಾದ ಮೆ|| ಘಟಿಬಸಪ್ಪನವರು ಸಭಿಕರಿಗೆ ಸುಸ್ವಾಗತವನ್ನು ಬಯಸಿ ಭಾಷಣ ಮಾಡಿದರು. ತರುವಾಯ ಸಭಿಕರ ಏಕವಾಕ್ಯತೆಯಿಂದ ಸಭಾಧ್ಯಕ್ಷರಾಗಿ ನೇಮಕವಾದ ಶ್ರೀಮಂತ ಬಂಟನೂರು ದೇಸಾಯಿ ಯವರು ಅಗ್ರಾಸನವನ್ನು ವಹಿಸಿ, ಸ್ವದೇಶೀಯ ವಿದ್ಯಾಭಿವರ್ಧನೆಗೂ ಆಚಾರ ವ್ಯವಹಾರಗಳ ಪರಿಷ್ಕಾರಕ್ಕೂ ಎತ್ತರವಾದ ಮತ್ತು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಸಭೆಯ ಕಾರ್ಯಗಳು ಸಾಂಗವಾಗಿ ನೆರವೇರಿ ಮುಕ್ತಾಯವಾದವು.

* * *

ಶ್ರೀವರ್ಸ್ ಯುವರಾಜರವರು ಪರಿವಾರಸಹಿತ ಕಳೆದ ತಾ. ೨೯ನೇ ಮಂಗಳವಾರ ಟ್ಯೂಟಿಕಾರಿನ್ ಪಟ್ಟಣವನ್ನು ತಲುಪಿದರು. ಪೋರ್ಟ್ ಸಬ್ ಜಡ್ಜ್ ಮೆ|| ಕೆ. ರಾಮಚಂದ್ರರಾಯರು ಅವರನ್ನು ಎದುರುಗೊಂಡು, ಟ್ಯುಟಿಕಾರಿನವರ ಜಮೀನ್ದಾರರ ಗಾಡಿಯಲ್ಲಿ ಕೂಡಿಸಿ ಕರೆದುಕೊಂಡುಹೋಗಿ ಸತ್ಕಾರಮಾಡಿದರು. ಯುವರಾಜರವರು ಆ ದಿನ ಸಾಯಂಕಾಲ ಸಿಲೋನ್ ದ್ವೀಪದ ಕೊಲಂಬೋ ಪಟ್ಟಣವನ್ನು ಕುರಿತು ಪ್ರಯಾಣ ಬೆಳಸಿ, ಅಲ್ಲಿ ಅವರಿಗಾಗಿ ಕಾದಿದ್ದ ಅವಾಮಾರೂ ಎಂಬ ಜಪಾನ್ ಜಹಜನ್ನು ಹತ್ತಿ ಜಪಾನ್ ರಾಜ್ಯವನ್ನು ಕುರಿತು ತೆರಳಿದರು. ಅವರು ದಾರಿಯ ಉದ್ದಕ್ಕೂ ಅಲ್ಲಲ್ಲಿ ತಂಗುತ್ತಾ ಸಾವಕಾಶವಾಗಿ ಅಂದರೆ ಸುಮಾರು ೨೧ ದಿನಗಳಲ್ಲಿ ಜಪಾನ್ ರಾಜ್ಯವನ್ನು ತಲುಪುವವರಾಗಿದಾರೆ.

* * *

ರಾಜಧಾನಿಯಲ್ಲಿ ಪ್ಲಾಮುನಿಸಿಪಾಲಿಟಿಯ ಸಬ್ ಕಮಿಟಿ ಮೆಂಬರುಗಳು ಕಳೆದ ತಾ. ೩ರಲ್ಲಿ ಸಭೆಸೇರಿ ತೀರ್ಮಾನ ಮಾಡಿದ್ದೇನೆಂದರೆ.—ರೂಪಾಯಿಗೆ ೧೩ ಸೇರಿನಂತೆ ರಾಗಿ ಬಿಕರಿ ಮಾಡಬೇಕೆಂದು ನಿರ್ಧರವಾಯಿತು. ಮೆ|| ಗಳಾದ ಸಾಹುಕಾರ್ ಚನ್ನಣ್ಣನವರೂ, ಮರಿಯಣ್ಣನವರೂ, ಚಿಕ್ಕ ವೀರಣ್ಣನವರೂ ದೇವರಾಜ ಮೊಹಲ್ಲೆಯಲ್ಲೂ, ಮೆ|| ಗಳಾದ ಸಾ|| ಗೋವಿಂದಪ್ಪನವರೂ, ಇಸೂಫ್ ಅಲ್ಲಿ ಖಾನ್ ಸಾಹೇಬರೂ, ಬಾಲಾರಾಂಶಿಂಗರೂ ಮಂಡಿ ಮೊಹಲ್ಲೆಯಲ್ಲೂ, ರೂಪಾಯಿಗೆ ೭ ಸೇರಿನಂತೆ ಅಕ್ಕಿ ಬಿಕರಿ ಮಾಡಿದ್ದಕ್ಕಾಗಿ ಅವರನ್ನು ವಂದಿಸಲಾಯಿತು. ಸಾ|| ಮೆ|| ಚಿಕ್ಕವೀರಣ್ಣನವರಿಗೆ ಜನಸಿ ಬಿಕರಿ ಬಗ್ಗೆ ಒಂದು ಸಾವಿರ ರೂಪಾಯಿ ವರೆಗೆ ಅಡ್ವಾನ್ಸು ಕೊಡಬೇಕೆಂದು ತೀರ್ಮಾನವಾಯಿತು. ಅತ್ಯರಾಗಿ ರಾಜಧಾನಿಯ ಹಳೇ ಅಗ್ರಹಾರದಲ್ಲಿ ಬಡವರಿಗೆ ರಾಗಿಯನ್ನು ಕೊಂಡು ಅಗ್ಗವಾಗಿ ಬಿಕರಿ ಮಾಡುವ ಕೆಲಸವನ್ನು ಮೆ|| ಕುಮಾರಸ್ವಾಮಿಯವರು ವಹಿಸಿಕೊಂಡು ನಡಿಸುತ್ತಾ ಬಂದಿದಾರೆ. ಇವರ ಸಹಾಯಕ್ಕೆ ಇನ್ನು ಕೆಲವು ವರ್ತಕ ಮಹನೀಯರೂ ಬೆಂಬಲವಾಗಿ ನಿಂತಿರುವರು.

ತಾಲ್ಲೋಕು ವರ್ತಮಾನಗಳು.

ಚಾಮರಾಜನಗರ.—ಕಳೆದ ವಾರದ ಪತ್ರಿಕೆಯಲ್ಲಿ ನಂಜನಗೂಡಿನಿಂದ ಈರೋಡಿಗೆ ರೈಲ್ ರಸ್ತೆ ಹಾಕುವದಕ್ಕೆ ಏರ್ಪಾಡು ಮಾಡಿರುತ್ತಾರೆಂದು ಪ್ರಕಟಿಸಿರುವದನ್ನು ನೋಡಿ ಈ ಪ್ರಾಂತ್ಯದ ಜನರೆಲ್ಲಾ ತುಂಬಾ ಸಂತೋಷಪಡುತ್ತಾರೆ.—ಈ ತಾಲ್ಲೋಕಿಗೆ ಸೇರಿದ ಹೆಬ್ಬಸೂರದಲ್ಲಿಯೂ ಕೆಬ್ಬೆಪುರದಲ್ಲಿಯೂ ಎರಡು ಕೊಲೆಗಳು ನಡೆದು ವಿಚಾರಣೆಯಲ್ಲಿವೆ. ಕೆಲವು ಅಪರಾಧಿಗಳು ಸಿಕ್ಕಿದಾರೆಂತಲೂ ಇನ್ನು ಕೆಲವರು ಸಿಕ್ಕಿಲ್ಲವೆಂತಲೂ ವರ್ತಮಾನ ಕೇಳುತ್ತೇವೆ. ಇದಕ್ಕಾಗಿ ನಮ್ಮ ಪೊಲೀಸ್ ಸೂಪರಿಂಟೆಂಡೆಂಟ್ ಸಾಹೇಬರು ಇಲ್ಲಿಗೆ ದಯಮಾಡಿದ್ದರು.—ತಾ. ೨೫ ನೇ ಶುಕ್ರವಾರ ಇಲ್ಲಿ ಒಂದು ಹದ ಮಳೆಯಾಯಿತು. ಇಲ್ಲಿನ ಚಾಮರಾಜೇಶ್ವರ ಸ್ವಾಮಿಯವರ ದೇವಸ್ಥಾನಕ್ಕೆ ನಂಜನಗೂಡಿನಿಂದ ವರ್ಗವಾಗಿ ಬಂದಿರುವ ಪೇಷ್ಕಾರ್ರ ಮನೆಯಲ್ಲಿ ತಾ. ೨೫ನೇ ಶುಕ್ರವಾರ ರಾತ್ರಿ ಮನೆಬಾಗಿಲಲ್ಲಿಟ್ಟಿದ್ದ ಸುಮಾರು ೩—೪ ಮಣುವಿನ ಹಿತ್ತಾಳೆ ಹಂಡೆಯ ತುಂಬಾ ನಾಗಳ ಬೇರನ್ನು ತುಂಬಿ ನೀರು ಹಾಕಿ ಇಟ್ಟಿದ್ದದ್ದನ್ನು ಯಾರೋ ಕಳ್ಳರು ತೆಗೆದುಕೊಂಡು ಹೋದರೆಂತಲೂ, ನಂಜನಗೂಡಿನಿಂದ ಇಲ್ಲಿಗೆ ಬರುವ ಜನವರಿ ಪ್ರಾರಂಭದಿಂದ ಮೋಟಾರ್ ಗಾಡಿಯನ್ನು ಪ್ರಯಾಣಿಕರಿಗಾಗಿ ಬಿಡುತ್ತಾರೆಂತಲೂ ವರ್ತಮಾನವಿದೆ.

ಬೌರಿಂಗುಪೇಟೆ.—ಈ ಊರಿನ ಬಟ್ರಿಕ್ ರೋಡು ಎಂಬ ಬೀದಿಯಲ್ಲಿ ಮನೆ ಮಾಡಿಕೊಂಡಿರುವ ಗೋಪಾಲರಾಯರ ಮನೆಯ ಬೀಗವನ್ನು ಚೋರಿ ಬೀಗದ ಕೈಯಿಂದ ಕಳೆದ ೨೩ ನೇ ತಾ. ನಲ್ಲಿ ಹಗಲು ಸುಮಾರು ೧೦—೧೧ ಗಂಟೆ ವೇಳೆಯಲ್ಲಿ ತೆಗೆದು ಬಟ್ಟೆ ಬರೆ ಮುಂತಾದವುಗಳನ್ನು ಕಳುವು ಮಾಡಿರುತ್ತಾರೆ. ಜನ ಸಂಚಾರವುಳ್ಳ ರಾಜ ಬೀದಿಯಲ್ಲಿ ಹಗಲುವೇಳೆಯಲ್ಲಿಯೇ ಈ ಗತಿಯಾಯಿತು! ಸದರೀ ಸಂಗತಿಯನ್ನು ಕಳಕೊಂಡವರು ಪೊಲೀಸಿಗೆ ರಿಪೋರ್ಟು ಮಾಡಿರುತ್ತಾರೆ.—ನೇರಿನ ಕ್ಯಾಂಪಿನ ದೆಸೆಯಿಂದ ಒಬ್ಬ ಮುಸಲ್ಮಾನ್ ಧನವಂತನು ತಮಗೆ ಸೇರಿದ ಊರು ಭೂಮಿಯಲ್ಲಿ ಒಂದು ನೆಲಮಾಳಿಗೆಯನ್ನು ಅಗೆಸುತ್ತಿದ್ದರು. ಭಾವಿಯು ೫ ಆಳು ಮಟ್ಟ ಇಳಿದಿದೆ. ಇನ್ನೂ ನೀರು ಬೀಳಲಿಲ್ಲ. ಕೆಳಗೆ ಕಲ್ಲು ಸಿಕ್ಕಿದೆ. ಇಂಥಾ ಭಾವಿಯಲ್ಲಿ ಒಬ್ಬ ಮುಸಲ್ಮಾನ್ ಪೇಪರ್ ಕೇಕದಾರರ ಸುಮಾರು ೧೨—೧೪ ವರುಷದ ಹುಡುಗನು ಬಿದ್ದು ಬಲಗೈಯ ಮುಂಗೈ ಮತ್ತು ಸೊಂಟದ ಮಧ್ಯಭಾಗದ ಎಲುವು ಮುರಿದುಹೋಯಿತು. ಬಿದ್ದ ಹುಡುಗನನ್ನು ಯಾರೂ ಕಾಣದೆ ಅವನು ತನ್ನಷ್ಟಕ್ಕೆ ತಾನೇ ಹತ್ತಿ ಬರಲು ಪ್ರಯತ್ನಿಸಿ ಮತ್ತೆ ಮತ್ತೆ ಬಿದ್ದು ಕಡೆಗೆ ಹತ್ತಿ ರಕ್ತವಾಗಿ ಮನೆಗೆ ಬಂದಾಗ ಮನೆಯವರಿಗೆ ಸಂಗತಿ ತಿಳಿಯಿತು. ಅಪಾಯ ಸಂಭವಿಸದಂತೆ ಭಾವಿಯ ಸುತ್ತಲು ಭದ್ರಪಡಿಸುವುದು ಉತ್ತಮ.—ಈ ಊರಿನ ಎಂ. ಇ. ಮಿಷನ್ ಬಟ್ರಿಕ್ ಧೊರೆಸಾನಮ್ಮನವರು ಇಂಗ್ಲೀಷ್ ಸಂಡೇ ಸ್ಕೂಲು ಮಕ್ಕಳಿಂದ ಹಾಡಿಕೆ, ಸಂಭಾಷಣೆಗಳನ್ನೂ ಹಾಡಿಸಿ, ವಿಧವಿಧವಾದ ಪುಸ್ತಕ, ಬೊಂಬೆ, ಆಟದ ಸಾಮಾನುಗಳನ್ನು ಕೊಟ್ಟರು. ೨೫ನೇ ತಾ. ಸದರೀ ಧೊರೆಸಾನಮ್ಮನವರು ದೇಶೀಯ ಕ್ರೈಸ್ತ ಮಕ್ಕಳಿಗೆ "ಕ್ರಿಸ್‌ಮಸ್ ಟ್ರೀ" ಎಂಬ ಮರವನ್ನು ಇಟ್ಟು ಬೊಂಬೆ, ಟೋಪಿ, ಆಟದ ಸಾಮಾನುಗಳನ್ನೂ ಮಿಠಾಯಿಯನ್ನೂ ಹಂಚಿದರು. ಅವರು ೨೮ ನೇ ತಾ. ಅವರ ಡೇ ಸ್ಕೂಲುಗಳಿಗೆ ಕೊಟ್ಟ ಬಹುಮಾನಗಳು ಅತಿ ಪ್ರೋತ್ಸಾಹಕವಾದವುಗಳು. ಆ ಸ್ಕೂಲುಗಳ ಬಾಲಕ ಬಾಲಕಿಯರು ಅನೇಕರು ಬಡವರಾದ್ದರಿಂದ ಬಾಲಕರಿಗೆ ಈ ಕ್ಷಾಮ ಕಾಲಕ್ಕೆ ಅನುಗುಣವಾಗಿ ಅಂಗಿಗಳಿಗಾಗಿ ಬಟ್ಟೆ, ಟೋಪಿಗಳನ್ನೂ ಆಟದ ಸಾಮಾನುಗಳನ್ನೂ, ಬಾಲಿಕೆಯರಿಗೆ ಬೊಂಬೆ, ಕುಪ್ಪಸಗಳನ್ನೂ, ಮತ್ತು ಎಲ್ಲರಿಗೂ ಮಿಠಾಯಿ ಹಣ್ಣು ಫಲಾಹಾರಗಳನ್ನೂ ಹಂಚಿದರು.

ವರ್ತಮಾನಸಾರಾಂಶ.

ವಿಜಾಪುರ ಮತ್ತು ಧಾರವಾಡ ಡಿಸ್ಟ್ರಿಕ್ಟುಗಳಲ್ಲಿ ಕ್ಷಾಮ ಪ್ರಾಪ್ತವಾಗಿ ಕಳೆದ ವಾರ ೩೩,೦೦೦ ಪ್ರಜೆಗಳು ಸರ್ಕಾರದವರ ರಿಲೀಫ್ ಕಾಮಗಾರಿಗಳಲ್ಲಿ ಜೀವಿಸುತ್ತಿದ್ದರು.

* * *

ಕಲ್ಕತ್ತಾ ಪಟ್ಟಣದ ಕೋಹಿನೂರ್ ನಾಟಕಶಾಲೆಯಲ್ಲಿ ಪೊಲೀಸಿನವರು ಕಳೆದ ಶನಿವಾರ ರಾತ್ರಿ ನುಗ್ಗಿ "ಪಂಜಾಬ್ ಗೌರವ" ಎಂಬ ನಾಟಕವನ್ನು ಕಂಪನಿಯವರು ಆಡದಂತೆ ನಿಲ್ಲಿಸಿಬಿಟ್ಟರು.

* * *

ಇಟಲಿ ರಾಜ್ಯದಲ್ಲಿ ಭೂಕಂಪ ಪ್ರಾಪ್ತವಾಗಿ ಎರಡು ಪಟ್ಟಣಗಳು ನಾಶಹೊಂದಿದ್ದರಿಂದ ಅಲ್ಲಿನ ಜನರ ಕಷ್ಟಪರಿಹಾರಕ್ಕೆ ಕಲ್ಕತ್ತೆಯಲ್ಲಿ ವೈಸ್‌ರಾಯಿಯವರೂ, ಮದರಾಸಿನಲ್ಲಿ ಗವರ್ನರವರೂ ಸಭೆಗಳನ್ನು ನಡಿಸಿ ಧನಸಹಾಯ ಫಂಡನ್ನು ಕೂಡಿಸ ಲಾರಂಭಿಸಿದಾರೆ.

* * *

ಹಿಂದೂಸ್ಥಾನವು ಇಂಗ್ಲೀಷ್ ಗವರ್ನ್‌ಮೆಂಟಿನವರ ಆಳ್ವಿಕೆಗೆ ಬಂದು ಐವತ್ತು ವರುಷಗಳಾದದ್ದರ ಜ್ಞಾಪಕಾರ್ಥವಾಗಿ ಹಿಂದೂಸ್ಥಾನದ ಸಮಸ್ತ ಇಲಾಖೆಗಳಲ್ಲೂ ೫೦ ರೂಪಾಯಿಗಿಂತ ಹೀನವೆ ಇರುವ ಎಲ್ಲಾ ತಲಬುದಾರರಿಗೂ ಒಂದು ವಾರದ ಸಂಬಳವನ್ನು ಇನಾಮಾಗಿ ಕೊಡತಕ್ಕದ್ದೆಂದು ಇಂಡಿಯಾ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದಾರೆ.

* * *

ಕಳೆದ ಭಾನುವಾರ ಮಧ್ಯಾಹ್ನ ಕಲ್ಕತ್ತಾ ಪಟ್ಟಣದ ಚಿತ್ಪೂರ್ ಕಾರ್ಖಾನೆಯ ಮಹಮ್ಮದೀಯ ಕೂಲಿಯವರು ತಮ್ಮ ಮಸೀದಿಯಲ್ಲಿ ಬಕರೀದ್ ಹಬ್ಬಕ್ಕಾಗಿ ಗೋವುಗಳನ್ನು ಕೊಂದರೆಂದು ಹಿಂದುಗಳು ಅವರ ಮೇಲೆ ಬಿದ್ದು ದೊಂಬಿ ಕಲಹ ಮಾಡಿದರು. ಸೈನಿಕರು ಹೋಗಿ ಗುಂಡು ಹೊಡೆದು ದೊಂಬಿಯನ್ನು ಚದರಿಸಬೇಕಾಯಿತು. ಸುಮಾರು ನಾಲ್ವತ್ತು ಜನರು ಗಾಯಪಟ್ಟು ಆಸ್ಪತ್ರೆಗೆ ಸಾಗಿಸಲ್ಪಟ್ಟರು. ವಿಚಾರಣೆ ನಡೆಯುತ್ತಿದೆ.

ಭೂಕಂಪ, ಸಮುದ್ರ ಉಕ್ಕೋಣ.

ಅಪರಿಮಿತ ಕಷ್ಟನಷ್ಟಗಳೂ ಅಪಾರ ಪ್ರಾಣಹಾನಿಯೂ.

ಯೂರೋಪ್ ಖಂಡಕ್ಕೆ ಸೇರಿ ಮೆಡಿಟರೇನಿಯನ್ ಸಮುದ್ರದೊಳಗೆ ಚಾಚಿಕೊಂಡಿರುವ ಇಟಲಿ ಎಂಬ ಅರ್ಧದ್ವೀಪರಾಜ್ಯದ ದಕ್ಷಿಣ ಭಾಗದಲ್ಲಿ ಸಿಸಿಲಿ ಎಂಬ ದ್ವೀಪವಿರುವುದು. ಈ ದ್ವೀಪದ ಸಮುದ್ರ ತೀರದಲ್ಲಿ ಮೆಸ್ಸೀನಾ ಎಂಬ ಸುಂದರವಾದ ಪಟ್ಟಣವೂ, ಇಲ್ಲಿಂದ ಎಂಟು ಮೈಲಿ ದೂರ ಜಲಮಾರ್ಗವನ್ನು ಹಿಡಿದು ಹೋದರೆ ಇಟಲಿ ದಕ್ಷಿಣ ಪ್ರಾಂತ್ಯದ ಸಮುದ್ರತೀರದಲ್ಲಿ ರೆಗ್ಗಿಯೋ ಡಿ ಕೆಲೇಬ್ರಿಯಾ ಎಂಬ ಇನ್ನೊಂದು ಮಹಾ ನಗರವೂ ಉಂಟು. ಇವೆರಡು ಪಟ್ಟಣಗಳೂ ಭೂಕಂಪದ ಪೆಸಿಯಿಂದಲೂ ಸಮುದ್ರದ ಅಲೆಗಳು ಹೊರಳಿಯೂ ಕಳೆದ ವಾರ ನಾಶವಾಗಿರುತ್ತವೆ. ಮೊದಲನೇ ಪಟ್ಟಣದಲ್ಲಿ ಸುಮಾರು ೧,೫೦,೦೦೦ ಪ್ರಜೆಗಳಿದ್ದರು, ಎರಡನೆಯದರಲ್ಲಿ ೪೦,೦೦೦ ಪ್ರಜೆಗಳಿದ್ದರು. ಇವೆರಡು ಪಟ್ಟಣಗಳಿಂದಲೂ ಆ ಅನಿರೀಕ್ಷಿತವಾದ ಅನಾಹುತದ ಬೆಸಿಯಿಂದ ೨,೦೧,೦೦೦ ಜನರು ಮೃತರಾದರೆಂಬ ಬಹು ದುಃಖಕರವಾದ ಸುದ್ದಿ ಬಂದಿದೆ. ಇದರ ವೃತ್ತಾಂತವನ್ನೆಲ್ಲಾ ಆಯಾ ದಿನ ಬಂದಿರುವ ತಂತೀ ವರ್ತಮಾನಗಳ ಮೂಲಕ ಕೆಳಗೆ ವಿವರಿಸಿರುತ್ತೇವೆ.

ಈ ವಿಧವಾದ ಅನಾಹುತವು ಆ ಪಟ್ಟಣಗಳಿಗೆ ಪ್ರಾಪ್ತವಾದದ್ದು ಇದೇ ಮೊದಲಿಂದು ಭಾವಿಸಬಾರದು. ಕಳೆದ ೧೭೮೩ನೇ ಇಸವಿಯಲ್ಲಿ ಭೂಕಂಪವಾಗ್ಯವಾಗಿ ರೆಗ್ಗಿಯೋ ಪಟ್ಟಣವು ಸಂಪೂರ್ಣವಾಗಿಯೂ, ಮೆಸ್ಸೀನಾ ಪಟ್ಟಣದ ಕೆಲವು ಭಾಗಗಳೂ ನಾಶಹೊಂದಿದವು. ಆ ಅನಾಹುತದಲ್ಲಿ ಉಳಿದುಳಿದ ಕಟ್ಟಡಗಳು ಕೆಲವೇ ಉಳಿದವು. ಇದಲ್ಲದೆ ೧೮೫೪ರಲ್ಲಿ ಸಮುದ್ರವು ಉಕ್ಕಿ ಹೊರಳಿ ಮೆಸ್ಸೀನಾದಲ್ಲಿ ಅನಾಹುತವಾಗಿರುತ್ತದೆ.

ತಂತೀ ವರ್ತಮಾನಗಳು.

ಡಿಸೆಂಬರ್ ತಾ. ೨೮ ನೇ ಸೋಮವಾರ.

ಯೂರೋಪ್ ಖಂಡದ ದಕ್ಷಿಣ ಪ್ರಾಂತ್ಯದಲ್ಲಿ ಇಟಲಿ ಎಂಬ ರಾಜ್ಯವಿರುವುದು. ಅದರ ದಕ್ಷಿಣ ವಿಭಾಗವಾದ ಕೆಲೇಬ್ರಿಯಾದಲ್ಲೂ, ಅಲ್ಲಿಂದ ದಕ್ಷಿಣಕ್ಕೆ ಸಮುದ್ರದ ಮಧ್ಯೆ ಇರುವ ಸಿಸಿಲಿ ದ್ವೀಪದಲ್ಲೂ ಭಯಂಕರವಾದ ಭೂಕಂಪವು ಪ್ರಾಪ್ತವಾಯಿತು. ಮತ್ತು ಸಿಸಿಲಿಯಲ್ಲಿ ಸಮುದ್ರದ ಅಲೆಗಳು ಅಪಾರವಾಗಿ ಎದ್ದು ಆ ದ್ವೀಪದೊಳಕ್ಕೆ ಉರುಳಿ ಮನೆ ಮಠಗಳೂ ದೇವಾಲಯಗಳೂ ಕಳಚಿ ಬಿದ್ದವು. ಅನೇಕರು ಪ್ರಾಣ ಕಳೆದುಕೊಂಡರು. ಅಪರಿಮಿತವಾದ ಆಸ್ತಿಪಾಸ್ತಿಗಳು ನಾಶವಾದವು.

ನಿನ್ನೆ ೫ ಭೂಮಿಯು ೩೦ ೪೦ ಸೆಕೆಂಡು ಸುಮಾರು ಅರ್ಧನಿಮಿಷಗಳ ತನಕ ಬಲವಾಗಿ ಕಂಪಿಸಿತು. ಅದರಿಂದ ತಂತೀ ವರ್ತಮಾನಗಳು ಊರಿಂದೂರಿಗೆ ಹೋಗಿ ಬರುವುದಕ್ಕೆ ಅಡ್ಡಿಯುಂಟಾಯಿತು. ಹಲವು ಡಿಸ್ಟ್ರಿಕ್ಟುಗಳಲ್ಲಿ ಏನಾಗಿದೆ ಎಂಬುದು ಗೊತ್ತಾಗಲಿಲ್ಲ. ಆದರೆ ಸಿಸಿಲಿ ದ್ವೀಪದಲ್ಲೇ ಅಪಾರವಾದ ಕಷ್ಟನಷ್ಟಗಳು ಪ್ರಾಪ್ತವಾದಂತೆ ತಿಳಿದು ಬಂದಿದೆ. ಕೆಲೇಬ್ರಿಯಾ ವಿಭಾಗಕ್ಕೆ ಸೇರಿದ ಅನೇಕ ಪಟ್ಟಣಗಳಲ್ಲಿ ಬಹು ವಿಸ್ತಾರವಾದ ಪ್ರದೇಶದೊಳಗೆ ನಷ್ಟವಾಗಿದೆ. ಅಪಾರವಾದ ಪ್ರಾಣನಷ್ಟವಾಗಿರುವುದು ಸಿಸಿಲಿ ದ್ವೀಪದ ಮುಖ್ಯ ತೀರಪಟ್ಟಣವಾದ ಮೆಸ್ಸೀನಾ ನಗರಕ್ಕೆ ಅಪಾರವಾದ ನಷ್ಟವುಂಟಾಗಿದೆ. ಸಿಸಿಲಿಯಲ್ಲಿ ಎಟ್ನಾ ಎಂಬ ಜ್ವಾಲಾಮುಖಿಯ ಹತ್ತಿರ ಇರುವ ಕೆಟೇನಿಯಾ ಎಂಬ ಪಟ್ಟಣದ ತೀರದಲ್ಲಿ ಸಮುದ್ರದ ಅಲೆಗಳು ಎದ್ದು ಹೊರಳಿ ಅನೇಕ ಹಡಗುಗಳನ್ನು ಮುಳುಗಿಸಿದವು. ಇದಲ್ಲದೆ ಭೂಮಿಯು ಉದ್ದಕ್ಕೂ ಕುಸಿದು ಹೋದದ್ದರಿಂದ ರೈಲ್ ಮಾರ್ಗಗಳು ಕೆಟ್ಟುಹೋಗಿವೆ.

ಡಿಸೆಂಬರ್ ತಾ. ೨೯ ನೇ ಮಂಗಳವಾರ

ಭೂಕಂಪದ ಸಂಗಡಲೇ ಸಮುದ್ರದ ಅಲೆಗಳು ಮೂವತ್ತು ಅಡಿಗಳ ಎತ್ತರಕ್ಕೆ ಎದ್ದು ಬಂದು ಉರುಳಿ ಮೆಸ್ಸೀನಾ ಪಟ್ಟಣದಲ್ಲೂ, ರೆಗ್ಗಿಯೋ ಡಿ ಕೆಲೇಬ್ರಿಯಾ ಪಟ್ಟಣದಲ್ಲೂ, ಈ ಪಟ್ಟಣಗಳ ತೀರಗಳಲ್ಲೂ ನೀರು ಹೊರಳಿ ಅನೇಕ ಪ್ರಜೆಗಳು ನಾಶಹೊಂದಿದರು. ಕೆಲವು ಸಾವಿರ ಜನರೇ ನಾಶಹೊಂದಿದರೆಂದು ವರ್ತಮಾನವಿದೆ. ಟೆಲಿಗ್ರಾಫ್ ಮತ್ತು ಟೆಲಿಫೋನ್ ತಂತಿಗಳು ಕಿತ್ತು ಬಿದ್ದವು. ಇಟಲಿಯ ದಕ್ಷಿಣ ಭಾಗದಲ್ಲಿ ಭಾರೀ ಪಟ್ಟಣವಾದ ನೇಪಲ್ಸ್ ನಗರದಿಂದ ಮೆಸ್ಸೀನಾಕ್ಕೆ ಕೆಲವು ಹಡಗುಗಳನ್ನು ರವಾನೆ ಮಾಡಿದಾರೆ. ಮೆಸ್ಸೀನಾ ಪಟ್ಟಣದಲ್ಲಿ ಬಹು ಕಠಿಣವಾಗಿ ಭೂಮಿಯು ಕಂಪಿಸಿತು.

ಮೆಸ್ಸೀನಾ ಪಟ್ಟಣಕ್ಕೆ ಪಟ್ಟಣವೇ ಹಾಳುಬಿದ್ದಿತು. ದೇಶಾಟನೆಗಾಗಿ ಹೋಗಿದ್ದ ತೊಂಬತ್ತು ಮಂದಿ ಅನ್ಯದೇಶಸ್ಥರು ಮೃತಪಟ್ಟರೆಂದೂ, ಟೌನ್ ಹಾಲ್, ವರ್ತಕರ ಮಂಡಿ, ಪೋಸ್ಟ್ ಆಫೀಸ್, ಸೈನಿಕರ ಬ್ಯಾರಕ್ ಮನೆಗಳು ಸಂಪೂರ್ಣವಾಗಿ ನಾಶವಾದವೆಂದೂ ಅಲ್ಲಿಂದ ತಪ್ಪಿಸಿಕೊಂಡು ಬಂದವರು ತಿಳಿಸಿದಾರೆ. ಮೆಸ್ಸೀನಾ ಜಲಸಂಧಿಯ ಉಭಯ ಸಮುದ್ರತೀರದಲ್ಲಿದ್ದ ಅನೇಕಾನೇಕ ಗ್ರಾಮಗಳು ಹಾಳಾದವು.

ಮೆಸ್ಸೀನಾದಲ್ಲಿ ೫೦,೦೦೦ ಪ್ರಜೆಗಳು ಮೃತಪಟ್ಟರೆಂದು ಗವರ್ನ್‌ಮೆಂಟಿಗೆ ವರ್ತಮಾನ ಬಂದಿದೆ. ಕಡೆಯಲ್ಲಿ ಬೆಂಕಿ ಹುಟ್ಟಿ ಎಲ್ಲಾ ಹತ್ತಿಕೊಂಡು ಸಮೂಲವಾಗಿ ಸುಟ್ಟುಹೋಯಿತು. ಗಾಲ್ಮಿಯಲ್ಲಿ ೧,೦೦೦ ಕ್ಕಿಂತಲೂ ಹೆಚ್ಚು ಪ್ರಜೆಗಳೂ, ಪಾಲ್ಮಿಯಲ್ಲಿ ೫೦೦ ಪ್ರಜೆಗಳೂ ಸತ್ತುಹೋದರು. ಒಟ್ಟು ೭೫,೦೦೦ ಪ್ರಜೆಗಳು ಲಯವಾಗಿರಬೇಕೆಂದು ಅಂದಾಜು ಕಟ್ಟಿದಾರೆ. ಈಚೆಗೆ ಅಪಾರವಾದ ಮತ್ತು ಭಾರೀ ಮಳೆಗಳು ಸುರಿಯಲಾರಂಭವಾಗಿ ಕಷ್ಟನಷ್ಟಗಳು ಅಪರಿಮಿತವಾದವು. ದೇಶಾಟನೆಗಾಗಿ ಹೋಗಿದ್ದ ಅನೇಕ ಇಂಗ್ಲೀಷರೂ ಜರ್ಮನಿಯವರೂ ಈ ಅನಾಹುತದಲ್ಲಿ ಸಿಕ್ಕಿ ಲಯವಾದರು.

ಸಮುದ್ರದಿಂದ ಎದ್ದು ಬಡಿದ ಅಲೆಗಳು ವಾಪಸು ಸಮುದ್ರಕ್ಕೆ ಹೋಗುವಾಗ್ಗೆ ತನ್ನ ಜೊತೆಯಲ್ಲಿ ಹೆಣಗಳನ್ನೂ, ಕಟ್ಟಡಗಳ ಸಾಮಾನುಗಳನ್ನೂ, ಸರಕುಗಳನ್ನೂ ಕೊಚ್ಚಿಕೊಂಡು ಹೋಗಿ ಮೆಸ್ಸೀನಾ ಜಲಸಂಧಿಯು ತುಂಬಾ ಹರಡಿರುತ್ತದೆ. ಮೊದಲಿದ್ದ ಸಮುದ್ರತೀರವು ಬದಲಾಗಿ, ಈಗ ಬೇರೊಂದು ಆಕಾರವನ್ನು ಹೊಂದಿರುವುದು.

ಮೆಸ್ಸೀನಾದಿಂದ ತಪ್ಪಿಸಿಕೊಂಡು ಗಾಬರಿಯಿಂದ ಕೆಟೇನಿಯಾಗೆ ಬರುತ್ತಿರುವ ಪ್ರಜೆಗಳನ್ನು ನೋಡುವುದು ಬಹು ದುಃಖಕರವಾಗಿದೆ. ಚಿತ್ತಲಾಗಿಯೂ, ದಿಕ್ಕಿಲ್ಲದವರಾಗಿಯೂ ಭೀತಿಯುಕ್ತರಾಗಿಯೂ ಇರುವರು. ನಿನ್ನೆ ಬೆಳಗಿನ ಝಾಮದ ೫ ಗಂಟೆ ಹೊತ್ತಿನಲ್ಲಿ ಎಲ್ಲರೂ ಹಾಸಿಗೆಗಳ ಮೇಲೆ ಮಲಗಿರುವಾಗ್ಗೆ ಮನೆ ಮಠಗಳು ಬಹಳ ಜೋರಾಗಿ ಓಲಾಡಲಾರಂಭವಾಯಿತು. ಪ್ರಜೆಗಳು ಗಾಬರಿಬಿದ್ದು ಹೊರಕ್ಕೆ ಓಡಿಬಂದರು. ಅನೇಕರು ಉಪ್ಪರಿಗೆಗಳಿಂದ ಹಾರಿ ಕೆಳಕ್ಕೆ ಬಿದ್ದರು. ಜನರ ಗುಂಪು ತಂಡತಂಡವಾಗಿ ಬೀದಿಗಳಲ್ಲಿ ತುಂಬಿಕೊಂಡು, ದಡ್ ಭಡ್ ಎಂದು ಮುರಿದು ಬೀಳುವ ಮನೆ ಮಠಗಳನ್ನು ನೋಡುತ್ತಾ, ದೇಹದ ಮೇಲೆ ಸ್ಮರಣೆಯಿಲ್ಲದೆ ನುಗ್ಗಿ ಹೋಗುವಲ್ಲಿ ಅನೇಕರು ಕಟ್ಟಡಗಳ ಗೋಡೆ ಕಂಭಗಳ ಕೆಳಗೆ ಸಿಕ್ಕಿ ಹತರಾದರು. ಸಮುದ್ರತೀರದಲ್ಲಿ ಒಂದು ಅಲೆಯು ಛಾಕ್ಷನೋವಾದಿಯಲ್ಲಿ ಎದ್ದು ೩೦೦ ಗಜಗಳ ದೂರ ತೀರದ ಮೇಲೆ ಹೊರಳಿ ಎಲ್ಲವನ್ನೂ ನಾಶಮಾಡಿ ಕೊಚ್ಚಿಕೊಂಡು ಹೋಯಿತು. ತರುವಾಯ ವಿನಾಶಕರವಾದ ಬೆಂಕಿಯು ಹುಟ್ಟಿ ಎಲ್ಲವನ್ನೂ ದಹಿಸಿಬಿಟ್ಟಿತು. ಇಂಥಾದ್ದರಲ್ಲಿ ಕಳ್ಳರು ಸೂರೆ ಮಾಡಲಾರಂಭಿಸಿದರು. ಆದರೆ ಸೈನಿಕರು ಅವರ ಮೇಲೆ ಗುಂಡುಗಳನ್ನು ಹೊಡೆದು ಕೊಳ್ಳೆಯನ್ನು ನಿಲ್ಲಿಸಿದರು.

ಇಂಗ್ಲೀಷರ ಮತ್ತು ರಷ್ಯಾದವರ ಹಡಗುಗಳೂ ಜಹಜುಗಳೂ ಕಷ್ಟನಿವಾರಣೆಗೆ ಸಲಕರಣೆಗಳನ್ನು ಒದಗಿಸಿಕೊಂಡು ಸೈರಾಕ್ಯೂಸ್ ಮತ್ತು ಅಗಸ್ಟಾ ಎಂಬ ತೀರಪಟ್ಟಣಗಳಿಂದ ಮೆಸ್ಸೀನಾಗೆ ಪ್ರಯಾಣಮಾಡಿರುತ್ತವೆ. ಇದಲ್ಲದೆ ಆ ಪ್ರಾಂತ್ಯದ ತೀರಪಟ್ಟಣಗಳಲ್ಲಿದ್ದ ಇಟಲಿ, ಜರ್ಮನಿ ರಾಜ್ಯಗಳ ಜಹಜುಗಳೂ ಆ ಪಟ್ಟಣಕ್ಕೆ ಕಳುಹಲ್ಪಟ್ಟವು.

ಆ ಸಾಯಂಕಾಲವೇ ಇಟಲಿಯ ದೊರೆಯವರಾದ ಇಮ್ಯಾನುಯೇಲ್ ಯವರೂ ರಾಣಿಯವರಾದ ಹೆಲೀನಾ ಯವರೂ ಭೂಕಂಪವಾದ ಸ್ಥಳವನ್ನು ಕುರಿತು ಪ್ರಯಾಣಮಾಡಿದರು.

ರೆಗ್ಗಿಯೋ ಪಟ್ಟಣದಲ್ಲಿ ಅರ್ಧಪಾಲು ಧ್ವಂಸವಾಯಿತು; ಉಳಿದಿರುವ ಅರ್ಧಭಾಗವೆಲ್ಲಾ ಹಾಳು ಬಿದ್ದಿರುತ್ತದೆ.

ಇಟಲಿ ದೊರೆಯವರು ಕಷ್ಟಪರಿಹಾರಕ ಫಂಡಿಗೆ ೧,೫೦,೦೦೦ ರೂಪಾಯಿ ಕಳುಹಿಸಿದರು. ಲಂಡನ್ ಪಟ್ಟಣದಲ್ಲೂ ಅಮೇರಿಕದಲ್ಲೂ ಇದಕ್ಕಾಗಿ ಫಂಡುಗಳನ್ನು ಪ್ರಾರಂಭಿಸಿ ಚಂದಾ ಕೂಡಿಸುತ್ತಿದಾರೆ.

ಡಿಸೆಂಬರ್ ತಾ. ೩೦ ನೇ ಬುಧವಾರ

ಸಿಸಿಲಿ ದ್ವೀಪದಲ್ಲಿ ೭೦,೦೦೦ ಜನರೂ, ಕೆಲೇಬ್ರಿಯಾದಲ್ಲಿ ೩೦,೦೦೦ ಜನರೂ ಮೃತಪಟ್ಟರೆಂದು ಅಂದಾಜು ಮಾಡಲ್ಪಟ್ಟಿದೆ.

ರೆಗ್ಗಿಯೋ ಪಟ್ಟಣದಲ್ಲಿ ಅನೇಕ ಸಿರಂಗಿಗಳನ್ನು ಒಂದೇ ಸಲ ಹಾರಿಸಿದಂತೆ ದಬ್ಬದಾಗಿ ಭೂಮಿಯು ಬಾಯಿಬಿಟ್ಟಿತೆಂದು, ಒಂದು ಭಾಗವನ್ನೆಲ್ಲಾ ನುಂಗಿಬಿಟ್ಟಿತು. ಒಡನೆಯೇ ಸಮುದ್ರವು ಭೂಮಿಯ ಮೇಲೆ ಹೊರಳಿ ಎಲ್ಲವನ್ನೂ ಮುಳುಗಿಸಿತು. ಕೆಲೇಬ್ರಿಯದ ಪ್ರಜೆಗಳು ಪರ್ವತ ಬೆಟ್ಟ ಗುಡ್ಡಗಳನ್ನು ಹತ್ತಿಹೋಗಿ ಗುಹೆಗಳೊಳಗೂ ಕಲ್ಲುಗಳ ಪೊಟ್ಟರೆಗಳೊಳಗೂ ಸೇರಿಕೊಂಡಿದಾರೆ. ಮೆಸ್ಸೀನಾದಲ್ಲಿ ಬೆಂಕಿಯನ್ನು ಆರಿಸಿದ್ದಾಯಿತು.

ಈ ವರ್ತಮಾನವು ಇಟಲಿ ರಾಜ್ಯದಲ್ಲೆಲ್ಲಾ ದುಃಖವನ್ನುಂಟುಮಾಡಿದೆ. ನ್ಯಾಯಸ್ಥಾನಗಳೂ ನಾಟಕಶಾಲೆಗಳೂ ಮುಚ್ಚಲ್ಪಟ್ಟಿವೆ. ಸಹಾಯಕ ಜನರನ್ನು ಗುಂಪುಗುಂಪಾಗಿ ರೈಲಿನ ಆ ಪ್ರಾಂತ್ಯಕ್ಕೆ ಕಳುಹಿಸುತ್ತಿದಾರೆ.

ಸಿಸ್ಟ್ ಪಾಲ್ಮೋನ ಪಟ್ಟಣದಲ್ಲಿ ಭೂಕಂಪವು ಸ್ಪಷ್ಟವಾಗಿ ಪ್ರಜೆಗಳಲ್ಲೆಲ್ಲಾ ಅಪಾರವಾದ ಗಾಬರಿಯನ್ನುಂಟುಮಾಡಿತು.

ಅನೇಕಾನೇಕ ಸೈನಿಕರನ್ನೂ ಆಹಾರ ಬಟ್ಟೆಬರೆ ಮುಂತಾದದ್ದನ್ನು ಕೊಟ್ಟು ಭೂಕಂಪವಾದ ಸ್ಥಳಕ್ಕೆ ಕಳುಹಿಸಿರುತ್ತಾರೆ. ಮೆಸ್ಸೀನಾದಲ್ಲಿದ್ದ ೧೪೦ ಪೋಸ್ಟ್ ನೌಕರರಲ್ಲಿ ೬ ಮಂದಿ ಮಾತ್ರ ಬದುಕಿಕೊಂಡಿದಾರೆ. ಮೆಸ್ಸೀನಾ ಪಟ್ಟಣಕ್ಕೆ ಪಟ್ಟಣವೇ ನಾಶವಾಗಿದೆ. ಕಳ್ಳಕಾಕರು ನುಗ್ಗಿ ಎಲ್ಲಾ ದೋಚಿಕೊಂಡು ಹೋಗುವರು. ರೋಮ್ ನಗರದಿಂದ ಅಯೋನಿಯನ್ ದ್ವೀಪಗಳಿಗೆ ಸಮುದ್ರದೊಳಗೆ ಹಾಕಿದ್ದ ವರ್ತಮಾನದ ತಂತಿಗಳು ಕೂಡ ಭೂಕಂಪದ ಪೆಸಿಯಿಂದ ಕಿತ್ತುಹೋಗಿವೆ. ವಿಸ್ಟ್ಯುಲಾದವರ ಎಂದು ಯುದ್ಧದ ಜಹಜು ಮೆಸ್ಸೀನಾದಿಂದ ೪೦೦ ಮಂದಿ ಗಾಯಪಟ್ಟವರನ್ನು ಕೂರಿಸಿಕೊಂಡು ನೇಪಲ್ಸಿಗೆ ತಂದುಬಿಟ್ಟಿತು. ರೆಗ್ಗಿಯೋದಲ್ಲಿ ಭೂಕಂಪನ ಬಹಳ ಬಲವಾಗಿ ಪ್ರಾಪ್ತವಾದದ್ದರಿಂದ ನಮಗಾ ಪಟ್ಟಣವು ಅನಾಮಧೇಯವಾಗಿ ಕುಸಿದುಹೋಯಿತು. ಸಮುದ್ರದ ಅಲೆಯು ಊರೊಳಕ್ಕೆ ಹೊರಳಿ ನಾಶಮಾಡಿತು. ಕೆಲವು ಬೆಟ್ಟಗಳ ಮೇಲಿದ್ದ ಕಟ್ಟಡಗಳು ಉಳಿಕೊಂಡಿವೆ. ಮಹಾ ಸುಂದರವಾದ ದೇವಾಲಯವೂ ವಿದ್ಯಾಶಾಲೆಯೂ ವಿದ್ಯಾರ್ಥಿಗಳ ಸಹಿತ ನಾಶಹೊಂದಿದವು. ಬ್ಯಾರಕ್ ಮನೆಗಳು ಹೊರಳಿಕೊಂಡು ಒಳಗಿದ್ದ ನೂರಾರು ಜನ ಸೈನಿಕರು ಹತರಾದರು. ಇತರ ಸಣ್ಣ ಸಣ್ಣ ಪಟ್ಟಣಗಳ ಪಾಡೂ ಇದಕ್ಕಿಂತ ಇನ್ನೂ ದುಃಖಕರವಾಗಿದೆ.

ಇಂಗ್ಲೆಂಡಿನಲ್ಲಿ ಈ ಧರ್ಮ ಫಂಡಿಗೆ ೪೫,೦೦೦ ರೂಪಾಯಿಯೂ, ಅಮೇರಿಕದಲ್ಲಿ ೬೦,೦೦೦ ರೂಪಾಯಿಯೂ ಮೊದಲನೆಯ ದಿನವೇ ವಸೂಲಾಯಿತು.

ಡಿಸೆಂಬರ್ ತಾ. ೩೧ ನೇ ಗುರುವಾರ

ಇಟಲಿಯ ದೊರೆಯೂ ರಾಣಿಯೂ ಮೆಸ್ಸೀನಾವನ್ನು ತಲಪಿದರು. ಗೋಳಾಡುವ ಸಾವಿರಾರು ಪ್ರಜೆಗಳು ಅವರನ್ನು ಮುತ್ತಿಕೊಂಡು, ತಮ್ಮ ಕಷ್ಟವನ್ನು ತೋಡಿಕೊಂಡು ತಮ್ಮನ್ನು ಸಂರಕ್ಷಿಸಬೇಕೆಂದು ಮೊರೆಯಿಡುತ್ತಿದಾರೆ. ದೊರೆಯವರೂ ಸೈನಿಕರ ಕೂಡ ಜನರನ್ನು ಕಟ್ಟಡಗಳ ಮಧ್ಯದಿಂದ ಬಿಡಿಸುತ್ತಿದಾರೆ. ಬಿದ್ದ ಗೋಡೆ ಮನೆಗಳ ಕೆಳಗಡೆ ಸಿಕ್ಕಿಕೊಂಡು ಕೊರಗುತ್ತಿರುವವರ ಆರ್ತಧ್ವನಿಗಳೂ, ಸತ್ತವರ ಶವಗಳಿಂದ ಹೊರಡುವ ದುರ್ಗಂಧವೂ ಅಪಾರವಾಗಿವೆ. ರಾಣಿಯವರು ಗಾಯಪಟ್ಟವರನ್ನು ಜಹಜುಗಳಲ್ಲಿರುವ ಆಸ್ಪತ್ರೆಗಳಿಗೆ ಸಾಗಿಸುವವರಿಗೆ ಸಹಾಯಮಾಡುತ್ತಿದಾರೆ. ಮೆಸ್ಸೀನಾದಲ್ಲಿ ೧೫,೦೦೦ ಪ್ರಜೆಗಳೂ, ರೆಗ್ಗಿಯೋದಲ್ಲಿ ೪,೦೦೦ ಪ್ರಜೆಗಳೂ ಮಾತ್ರ ಉಳಿಕೊಂಡಿರುವರು. ಸಮುದ್ರದ ಕಡೆಯಿಂದ ರೆಗ್ಗಿಯೋ ಪಟ್ಟಣಕ್ಕೆ ಪ್ರವೇಶಿಸುವುದು ಅಸಾಧ್ಯವಾಗಿದೆ. ಬಿದ್ದ ಕಟ್ಟಡಗಳೂ ಸಾಮಾನುಗಳೂ ರಾಶಿರಾಶಿಗಳಾಗಿ ಕಾಣುವವು. ಒಳಭಾಗದಲ್ಲಿ ಹನ್ನೊಂದು ಮೈಲಿ ದೂರ ಭೂಮಿಯು ಅಲ್ಲಲ್ಲಿ ಬಿರುಕುಗಳಾಗಿ ಬಾಯಿಬಿಟ್ಟುಕೊಂಡಿದೆ. ಇನ್ನು ಕೆಲವು ಕಡೆ ಭೂಮಿಯು ಕುಸಿದುಹೋಗಿದೆ. ಇದರಿಂದ ಪಟ್ಟಣದ ಆಕಾರವೇ ಬದಲಾಯಿಸಿಹೋಗಿರುವುದು. ಅಲ್ಲಿಂದ ಸಾಗಿಸಿರುವ ಮತ್ತು ಮುಂದೆ ಸಾಗಿಸುವ ಸಾವಿರಾರು ಪ್ರಜೆಗಳಿಗೆ ನೇಪಲ್ಸಿನಲ್ಲಿ ಸ್ಥಳವಸತಿಯೇ ಸಾಲದು. ಬ್ರಿಟಿಷ್ ಮತ್ತು ರಷ್ಯಾ ನಾವೆಗಳ ಸೈನಿಕರು ಮೊದಲು ಆ ಸ್ಥಳದೊಳಗೆ ಪ್ರವೇಶಿಸಿ ಬಹು ಸರಾಕ್ರಮದಿಂದ ಸಹಾಯಕಾರ್ಯಗಳನ್ನು ಪ್ರಾರಂಭಿಸಿ ನಡಿಸುತ್ತಾ ಬಂದಿದಾರೆ. ರೆಗ್ಗಿಯೋದಿಂದ ಉತ್ತರಕ್ಕೆ ೩೧ ಮೈಲಿಯಲ್ಲಿರುವ ಪಾಲ್ಮಿ ಪಟ್ಟಣದಲ್ಲಿ ಮೂರರಲ್ಲಿ ಎರಡು ಭಾಗ ನಾಶಹೊಂದಿತು. ದೊರೆಯವರು ರೆಗ್ಗಿಯೋದಲ್ಲಿ ಜನರ ಅವರ ಯೋಗಕ್ಷೇಮವನ್ನು ನೋಡಿಕೊಂಡು, ಇಂಗ್ಲಿಷ್ ಸಿಪಾಯಿಗಳ ಉಪಕಾರವನ್ನು ಕೊಂಡಾಡಿದರು. ಹದಿನಾಲ್ಕು ಮಂದಿ ಡಾಕ್ಟರುಗಳು ಮೆಸ್ಸೀನಾಗೆ ಮಾಲ್ಟಾ ದ್ವೀಪದಿಂದ ಹೋಗಿದಾರೆ. ಸುಟ್ಟುಹೋದ ಮತ್ತು ಗಾಯಪಟ್ಟ ಸಾವಿರಾರು ಪ್ರಜೆಗಳು ಜಹಜುಗಳಲ್ಲಿ ಬಂದು ನೇಪಲ್ಸನ್ನು ಸೇರುತ್ತಿದಾರೆ. ಇವರಲ್ಲಿ ಅನೇಕರು ದಾರಿಯಲ್ಲೇ ಸತ್ತುಹೋದರು. ಇದುವರೆಗೆ ಗೊತ್ತಾಗಿರುವುದರಲ್ಲಿ ಒಟ್ಟು ೨,೦೧,೦೦೦ ಪ್ರಜೆಗಳು ಮೃತಪಟ್ಟಿರುತ್ತಾರೆ. ಸಿಲಾಯತಿ ಧರ್ಮಫಂಡಿಗೆ ಒಂದೂವರೆ ಲಕ್ಷ ರೂಪಾಯಿ ಚಂದಾ ಕೂಡಿದೆ.

ಜನವರಿ ತಾ. ೧ ನೇ ಶುಕ್ರವಾರ

ಮೆಸ್ಸೀನಾದಲ್ಲಿ ಬುಧವಾರ ರಾತ್ರಿ ಮೂರು ಸಲ ಭೂಮಿಯು ಕಂಪಿಸಿತು. ಗಾಯಪಟ್ಟವರನ್ನು ಹಡಗುಗಳಲ್ಲಿ ಭರ್ತಿಮಾಡಿ ನೇಪಲ್ಸಿಗೆ ಕಳೆಸುತ್ತಿದಾರೆ. ಸಿಲಾಯತಿಯ ದೊರೆಯವರು ಧರ್ಮ ಫಂಡಿಗೆ ೭೫,೦೦೦ ರೂಪಾಯಿಯನ್ನೂ, ರಾಣಿಯವರು ೪೦,೦೦೦ ರೂಪಾಯಿಯನ್ನೂ, ಪ್ರಿನ್ಸ್ ಆಫ್ ವೇಲ್ಸ್‌ರವರು ೪೫,೦೦೦ ರೂಪಾಯಿಯನ್ನೂ ಕೊಟ್ಟರು. ಫ್ರೆಂಚ್ ಸರಕಾರದವರೂ ಒಂದು ಧರ್ಮ ಫಂಡನ್ನು ಎತ್ತಲಾರಂಭಿಸಿದಾರೆ. ಅದಕ್ಕೆ ಪ್ರೆಸಿಡೆಂಟ್ ಫ್ಯಾಲಿಯರ್ಸ್ ಯವರು ೧೫,೦೦೦ ರೂಪಾಯಿಯನ್ನೂ, ಫ್ರಾನ್ಸಿನ ಬ್ಯಾಂಕಿನವರು ೬೦,೦೦೦ ರೂಪಾಯಿಯನ್ನೂ ಚಂದಾ ಕೊಟ್ಟರು. ಕ್ಯಾನಡಾ ಗವರ್ನ್‌ಮೆಂಟಿನವರು ೩,೦೦,೦೦೦ ರೂಪಾಯಿ ಕೊಟ್ಟಿದಾರೆ. ಅಮೇರಿಕದ ಸಂಸ್ಥಾನಗಳಲ್ಲಿ ಲಕ್ಷಾಂತರ ರೂಪಾಯಿ ಚಂದಾ ಕೂಡುತ್ತಿದೆ. ಅಮೇರಿಕದ ಗವರ್ನ್‌ಮೆಂಟಿನವರೂ ಕೆಲವು ದ್ರವ್ಯವನ್ನು ಈ ಧರ್ಮ ಫಂಡಿಗೆ ಸ್ಯಾಂಕ್ಷನ್ ಮಾಡುವವರಾಗಿದಾರೆ. ಅರ್ಜೆಂಟೈನ್ ಸರಕಾರದವರು ೧೫,೦೦೦ ರೂಪಾಯಿ ಕಳುಹಿಸಿದರು. ಕಷ್ಟನಷ್ಟಗಳಿಗೆ ಗುರಿಯಾದ ಪ್ರಜೆಗಳ ಅನ್ನಬಟ್ಟೆಗೋಸ್ಕರ ಮಾಲ್ಟಾದಿಂದಲೂ ಅಮೇರಿಕದಿಂದಲೂ ಆಹಾರವನ್ನೂ, ಬಟ್ಟೆ ಕಂಬಳಿಗಳನ್ನೂ, ಡೇರೆಗಳನ್ನೂ ಜಹಜುಗಳ ಮೂಲಕ ತುಂಬಿ ಕಳುಹಿಸುತ್ತಿದಾರೆ.

ಭೂಕಂಪ ಸಂಭವಿಸಿದ ಪ್ರದೇಶದಲ್ಲಿ ಕಳ್ಳರು ಸೂರೆಗೊಳ್ಳುತ್ತಿದಾರೆ. ಆಹಾರವನ್ನು ಕಂಡ ಒಡನೆಯೇ ಹೊಟ್ಟೆಗಿಲ್ಲದ ಪ್ರಜೆಗಳು ಕಾದಾಡಿ ಕಿತ್ತುಕೊಳ್ಳುವರು. ಸರಕಾರದವರು ಮೆಸ್ಸೀನಾದಲ್ಲಿ ಯುದ್ಧಕಾಲದ ಶಾಸನ ಜಾರಿಗೆ ತಂದರು. ಹೆಣಗಳ ಮೈಮೇಲಿರುವ ಒಡವೆಗಳನ್ನೆಲ್ಲಾ ದೋಚಿಕೊಳ್ಳುತ್ತಿದ್ದ ಕಳ್ಳರನ್ನು ಗುಂಡು ಹೊಡೆದು ಕೊಂದರು. ಹೀಗೆ ಮೃತಪಟ್ಟವರು ೫೦ ಮಂದಿ. ನಾಯಿಗಳೂ ಹದ್ದು ಪಕ್ಷಿಗಳೂ ಹೆಣಗಳನ್ನು ಕಿತ್ತು ತಿನ್ನುತ್ತಿವೆ. ಲಿಪರೀ ದ್ವೀಪಗಳಲ್ಲಿ ಭೂಕಂಪವಾಗಿ ಗೋಡೆಗಳೆಲ್ಲಾ ಬಿರುಕುಬಿಟ್ಟವು. ಆದರೆ ಯಾರೂ ಮೃತಪಡಲಿಲ್ಲ.

ಸಾಂಘ ಪರಿಷ್ಕಾರ ಸಭೆಯ ಮಹಾ ಸಭೆಯು.

೨೨ನೇ ವಾರ್ಷಿಕ ಮಹಾ ಸಭೆಯ ವೃತ್ತಾಂತವು.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಗಳನ್ನು ಪ್ರತಿವರುಷ ಕೂಡಿಸುವ ಮದರಾಸಿನಲ್ಲಿ ಬಹು ಕಷ್ಟವಾಗಿ ಹೋಗಿದ್ದ ಹಿಂದೂ ಜನಗಳ ಬುದ್ಧಿ ಸಾಧನಗಳನ್ನು ಕಾಪಾಡಿ ಮತ್ತು ಈ ಭಾಗದಲ್ಲಿ ನಡೆಯುತ್ತಿರುವ ಸಾಂಘಿಕ ಪರಿಷ್ಕಾರ ಸಭೆಯು ಕಳೆದ ೨೮ ನೇ ತಾ ಸೋಮವಾರ ಬೆಳಗ್ಗೆ ಮದರಾಸ್ ಪಟ್ಟಣದ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಭವನದಲ್ಲಿ ನಡೆಯಿತು. ಈ ಸಮಾಜವನ್ನು ನಡೆಸುವುದಕ್ಕೆ ಹಿಂದೂಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ಪ್ರತಿನಿಧಿಗಳು ಬಂದು ಸಭೆಯೊಂದರಲ್ಲಿ ಹಾಜರಾಗಿದ್ದರು. ರಿಸೆಪ್ಷನ್ ಕಮಿಟಿಯ ಪ್ರೆಸಿಡೆಂಟರಾದ ಗೋದಾವರಿ ಪಟ್ಟಣದ ಮಿ॥ ಕೆ. ವೀರೇಶಲಿಂಗಂ ಪಂತಲು ಯವರು ಸಭಿಕರಿಗೆಲ್ಲಾ ಸ್ವಾಗತವನ್ನು ಬಯಸಿ ಹಿಂದೂ ರಾಜ್ಯಗಳ ನವನಾಗರಿಕತೆಯೂ, ಹೊಸ ಸುಖಸಾಧನಗಳೂ ಈ ದೇಶಕ್ಕೆ ಪ್ರವೇಶವಾದವೆ. ಅವುಗಳ ಕೂಡ ಬಂದಿರುವ ಕುರುಕುತನವೇ ಮೊದಲಾದ ಕೆಲವು ದುರಾಚಾರಗಳನ್ನು ನಮ್ಮ ಜನರನ್ನು ದುರ್ಮಾರ್ಗಪ್ರವರ್ತಕರನ್ನಾಗಿ ಮಾಡಿ ಹಾಳು ಮಾಡುತ್ತಲೂ ಬಂದಿರುತ್ತವೆ. ಮದ್ಯಪಾನವು ಈ ರಾಜ್ಯದಲ್ಲಿ ದಿನೇ ದಿನೇ ವೃದ್ಧಿ ಹೊಂದುತ್ತಿರುವುದು. ಮದ್ಯಗಳ ಸುಂಕವನ್ನು ವಸೂಲ್‌ಮಾಡುವ ಹೆಚ್ಚು ಸಹಾಯಕ್ಕೆಂದು ಸರಕಾರದವರು ಏರ್ಪಡಿಸಿರುವ ಕಂಟ್ರಾಕ್ಟ್ ಪದ್ಧತಿಯು ಹೆಚ್ಚು ಜನರನ್ನು ಕುಡುಕರನ್ನಾಗಿ ಮಾಡುವುದಕ್ಕೆ ಅವಕಾಶವಾಗಿದೆ. ಜನ್ಮಗ್ರಾಮಗಳಲ್ಲಿ ಬಾಲಕರಿಗೆ ಈ ದುರಭ್ಯಾಸದ ಹಾನಿ ವಿಷಯವನ್ನು ತಿಳಿಸಿಕೊಡಲು ಮಾರ್ಗವಿಲ್ಲ. ಜನರು ತಿಳುವಳಿಕೆ ಸಾಲದೆ ಕುಡುಕುತನಕ್ಕೆ ಬಿದ್ದು, ಅದೂ ನಾಗರಿಕತೆಯ ಲಕ್ಷಣವೆಂದು ಎಣಿಸುವ ಹಾಗಾಗಿದೆ. ಈ ಕುಡುಕುತನವು ಪ್ರವೇಶಿಸಿ ವೃದ್ಧಿ ಹೊಂದಿದಂಥ ಯಾವ ರಾಜ್ಯವೂ ಉಳಿಯಲಿಲ್ಲ. ಇದರ ದೆಸೆಯಿಂದ ಅನೇಕ ಪ್ರಾಚೀನ ಜನರೂ ದೊರೆತನಗಳೂ ಹಾಳಾಗಿರುತ್ತವೆ. ಆದಕಾರಣ ಇಂಥಾ ದುರಭ್ಯಾಸವು ನಮ್ಮ ದೇಶದಲ್ಲಿ ಪ್ರಬಲಿಸದಂತೆ ಪ್ರಜಾನಾಯಕರು ತಮ್ಮ ಕೈಲಾದಷ್ಟನ್ನೆಲ್ಲಾ ಮಾಡುತ್ತಾ ಬರಬೇಕಾಗಿದೆ ಎಂಬೀ ರೀತಿಯಾಗಿ ಹೇಳಿ ಕುಳಿತುಕೊಂಡರು.

ಬೊಂಬಾಯಿನ ಮಿ॥ ನಟರಾಜನ್ ಯವರು ಈ ಸಮಾಜಕ್ಕೆ ಪೂನಾ ಪಟ್ಟಣದ ರೆವ್. ಆರ್. ಮಕ್ನಿಕಾಲ್ ಯವರು ಪ್ರೆಸಿಡೆಂಟರಾಗಬೇಕೆಂದು ಸೂಚಿಸಿ, ಅವರ ಪ್ರಜಾವಾತ್ಸಲ್ಯಾದಿ ಗುಣಗಳನ್ನು ಕುರಿತು ಪ್ರಶಂಸೆ ಮಾಡಿದರು. ಇದೇ ಅರ್ಥಕ್ಕೆ ಅಲಹಾಬಾದಿನ ಪಂಡಿತ ಮದನಮೋಹನ ಮಾಲವೀಯರವರೂ, ಮದರಾಸಿನ ದಿವಾನ್‌ಬಹದ್ದೂರ್ ಎಂ. ಆದಿನಾರಾಯಣಯ್ಯ ನವರೂ ಉಪನ್ಯಾಸ ಮಾಡಿದ ಬಳಿಕ ಸಮಾಜದವರು ಅದರಂತೆ ಸಮ್ಮತಿಸಿದರು. ಸಭಿಕರ ಅಭಿಪ್ರಾಯಾನುಸಾರ ರೆವ್. ಆರ್. ಮಕ್ನಿಕಾಲ್ ಯವರು ಆಗ್ರಾಸನವನ್ನು ವಹಿಸಿ, ಕುಡುಕುತನದಿಂದಾಗುವ ಕಷ್ಟ ದುಃಖ ನಷ್ಟಗಳನ್ನು ಕುರಿತೂ, ಅದನ್ನು ತಡೆಯುವುದಕ್ಕೆ ಈ ಸಮಾಜದವರೂ ದೇಶವತ್ಸಲರಾದ ಇತರರೂ ಮಾಡಬೇಕಾಗಿರುವ ಕಾರ್ಯಗಳನ್ನು ಕುರಿತೂ ಉಪನ್ಯಾಸ ಮಾಡಿದರು. ಕಡೆಗೆ ಈ ಸಮಾಜದಲ್ಲಿ ಚರ್ಚಿಸಿ ತೀರ್ಮಾನವಾದ ವಿಷಯಗಳ್ಯಾವವೆಂದರೆ

ಗವರ್ನ್‌ಮೆಂಟಿನವರು ಯಾವ ಪ್ರದೇಶದಲ್ಲಾಗಲಿ ಮದ್ಯದ ಅಂಗಡಿಯನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ಅಲ್ಲಿನ ಪ್ರಜೆಗಳ ಬಹುಮತಿಯನ್ನು ಪಡೆಯಬೇಕು. ಪ್ರಜೆಗಳು ಅಗತ್ಯವಿಲ್ಲವೆಂದ ಕಡೆ ಅಂಥಾ ಅಂಗಡಿಗಳನ್ನು ಇಡಬಾರದು. ಈ ಭಾಗದಲ್ಲಿ ಮ್ಯುನಿಸಿಪಲ್ ಮೆಂಬರುಗಳ ಅಭಿಪ್ರಾಯಗಳಿಗೆ ಹೆಚ್ಚು ಗೌರವವನ್ನು ಕೊಡಬೇಕು. ಈಗ ಅಂಗಡಿಗಳನ್ನು ಹರಾಜು ಹಾಕುವ ಕ್ರಮವು ಕುಡುಕುತನವನ್ನು ಹೆಚ್ಚಿಸುತ್ತಿರುವುದರಿಂದ ಸರಕಾರದವರು ಬೇರೊಂದು ಕ್ರಮವನ್ನು ರೂಢಿಗೆ ತರಬೇಕು. ಅಫೀಮು ಗಾಂಜಾ ಮುಂತಾದ ಮತ್ತ ಪದಾರ್ಥಗಳನ್ನು ವಿಕ್ರಯ ಮಾಡುವ ವಿಷಯದಲ್ಲಿ ಸಿಲೋನ್ ದ್ವೀಪದ ಕ್ರಮಗಳನ್ನು ರೂಢಿಸಬೇಕು. ಈಗಿರುವ ಅಂಗಡಿಗಳ ಸಂಖ್ಯೆಯನ್ನು ಬಹಳ ಮಟ್ಟಿಗೆ ಕಡಮೆ ಮಾಡಬೇಕು. ಈ ರಾಷ್ಟ್ರದಲ್ಲಿರುವ ಮಠಗಳ ಅಧಿಕಾರಿಗಳೂ, ಬೇರೆ ಬೇರೆ ಸಂಘಗಳವರೂ ಕುಡುಕುತನವನ್ನು ಅಡಗಿಸುವುದಕ್ಕೆ ತಮ್ಮ ಅಧಿಕಾರ ಬುದ್ಧಿ ಕುಶಲತೆಯನ್ನು ವಿನಿಯೋಗಿಸಬೇಕು.

ಮುಂದಿನ ವರುಷ ಸರ್ ಬಾಲಚಂದ್ರ ಕೃಷ್ಣರವರೂ, ಮಿ॥ ಡಿ. ಡಿ. ಗಿಲ್ಡರ್ ಯವರೂ ಈ ಸಮಾಜದ ಸೆಕ್ರೆಟರಿಗಳಾಗಿರತಕ್ಕದ್ದೆಂದು ನಿಷ್ಕರ್ಷೆಯಾಗಿ ಈ ವರುಷದ ಸಮಾಜವು ಬರಖಾಸ್ತು ಮಾಡಲ್ಪಟ್ಟಿತು.

ಹಿಂದುಸ್ಥಾನದ ಏಕದೇವಾರಾಧಿಕರ ಸಮಾಜವು

ಕಳೆದ ೨೭ನೇ ತಾ ಭಾನುವಾರ ಸಾಯಂಕಾಲ ಹಿಂದುಸ್ಥಾನದ ಏಕದೇವಾರಾಧಕರ ಸಮಾಜವು ಮದರಾಸ್ ಪಟ್ಟಣದ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಬಂಗಲೆಯಲ್ಲಿ ಪ್ರಾರಂಭವಾಗಿ ಎರಡು ದಿನ ನಡೆಯಿತು. ಮಂಗಳೂರಿನ ಮಿ॥ ಯು ರುಕ್ಕುನಾಥೈಯನವರು ಪ್ರತಿನಿಧಿಗಳಿಗೆ ಸುಸ್ವಾಗತವನ್ನು ಬಯಸಿ ಈ ಸಭಿಕರನ್ನು ಕುರಿತು ಹೇಳಿದ ಮುಖ್ಯ ವಿಚಾರವೇನೆಂದರೆ — ಪೂರ್ವಕಾಲದಲ್ಲಿ ಈ ರಾಷ್ಟ್ರದಲ್ಲಿ ಪ್ರಚಾರದಲ್ಲಿದ್ದಂಥಾ ಭಕ್ತಿಮಾರ್ಗಗಳನ್ನು ಈಗ ಪ್ರಜೆಗಳಲ್ಲಿ ಹರಡಬೇಕೆಂಬುವುದು ನಮ್ಮ ಉದ್ದೇಶವು. ಪೂರ್ವಕಾಲದ ಭಕ್ತಿಭಾವನೆಯೂ, ಭಕ್ತಿಪೂರಿತವಾದ ಪರೋಪಕಾರ ಕಾರ್ಯಗಳೂ ಈಗ ನಮ್ಮ ಜನರಲ್ಲಿ ಸ್ವಲ್ಪವಾದರೂ ಕಾಣಿಸುವುದಿಲ್ಲ. ಇವೆರಡನ್ನೂ ಜನರಲ್ಲಿ ಪ್ರತಿದಿನದ ಆಚರಣೆಯಲ್ಲಿ ಕಾಣಿಸುವಂತೆ ಅವರಿಗೆ ಮನಸ್ಸಿನೊಳಗೂ ಹೊರಗೂ ಸಕಲರೂ ರೂಢಿಯಲ್ಲಿಟ್ಟುಕೊಳ್ಳುವಂತೆ ಅವರಿಗೆ ಬೋಧನೆ ಮಾಡುತ್ತದೆ ಈ ಏಕದೇವಾರಾಧಕ (ಬ್ರಹ್ಮ) ಸಮಾಜದವರ ಉದ್ದೇಶವು ಸಾಧನೆಯೂ ಆಗಿದೆ. ಆದಿಯಲ್ಲಿ ಕೇಶವ ಚಂದ್ರಸೇನರವರು ಈ ಉದ್ದೇಶವನ್ನಿಟ್ಟುಕೊಂಡು ಬ್ರಹ್ಮಸಮಾಜವೆಂಬ ಸಂಘವನ್ನು ಸ್ಥಾಪಿಸಿ ಅದನ್ನು ಪ್ರಚಾರಕ್ಕೆ ತಂದು ಅನೇಕಾನೇಕರನ್ನು ಸದ್ಭಕ್ತಿ ಸನ್ಮಾರ್ಗಗಳಿಗೆ ತಿರುಗಿಸಿದರು. ಈ ಸಂಘದ ವಿಷ್ಣುರಂದೆ ಪ್ರತಾಪ ಚಂದ್ರ ಮುಜುಂದಾರ್, ಗುರುಗೋವಿಂದರಾಯ, ಬಾಬು ಅಮೃತಲಾಲ್ ಬೋಸ್, ಈ ಮೊದಲಾದವರು ಎಲ್ಲಾ ಪ್ರಾಂತ್ಯಗಳಲ್ಲೂ ಸಂಚಾರ ಮಾಡುತ್ತಾ, ಆ ಮಾರ್ಗದ ತತ್ವಗಳನ್ನು ಬೋಧ ಮಾಡುತ್ತಾ ಬಂದರು. ಆದರೆ ಇಟಿಗೆ ಕುಂಠಿತವಾಗಿ ಆ ಸಮಾಜ ಒಡೆದು ಬೇರೆ ಬೇರೆ ಸಂಗಡ ಸಂಘಗಳಾಗಿ, ಆ ಬೋಧನಾ ಕಾರ್ಯವು ತಟಸ್ಥಭಾವವನ್ನು ಅವಲಂಬಿಸಿತು. ಈಗ ಎಲ್ಲಾ ಕಡೆಗಳಲ್ಲೂ ಈ ಸಮಾಜದ ಶಾಖೆಗಳನ್ನು ಸ್ಥಾಪಿಸಿ, ಬೋಧಕರನ್ನು ತಯಾರಿಸುವಾದಿ, ಸಕಲ ಪ್ರಜೆಗಳೂ ಎಲ್ಲಾ ಭಾಗಗಳಲ್ಲೂ ಉತ್ತಮೋತ್ತಮರಾಗುವಂತೆ ಬುದ್ಧಿ ವಿವೇಕ ವಿದ್ಯಾದಿಗಳನ್ನು ಕಲಿಸಬೇಕಾಗಿದೆ ಎಂಬುದು.

ಬಾಬು ಅವಿನಾಶಚಂದ್ರ ಮುಜುಂದಾರರವರು ಈ ಸಮಾಜದ ಅಧ್ಯಕ್ಷರು ಸ್ವಾಗತ ಉಪನ್ಯಾಸವನ್ನು ಮಾಡಿದರು. ಇವರು ತಿಳಿಸಿದ್ದೇನೆಂದರೆ ಸಕಲ ಪ್ರಜೆಗಳ ನಮ್ಮ ಸಹೋದರ ವರ್ಗಕ್ಕೆ ಸೇರಿರುತ್ತಾರೆ. ನಾವು ಅವರಲ್ಲಿ ಜಾತಿ ಮತ ಕುಲ ಗೋತ್ರಾದಿಗಳನ್ನು ಗಣಿಸಿ ನಡೆಯುವುದಿಲ್ಲ. ಈ ಸಂಘವು ಬಹಳ ದೊಡ್ಡದು. ಅವರಲ್ಲಿ ಸಂಘಗಳೂ ಪ್ರತಿಷ್ಠಿತರೂ ತಮ್ಮ ತಮ್ಮ ಸ್ಥಾನಗಳನ್ನು ಪಡೆದರು. ರಾಜಾ ರಾಮಮೋಹನರಾಯರವರು ಈ ಮತವನ್ನು ಸ್ಥಾಪಿಸಿ ಪ್ರಚಾರಕ್ಕೆ ತಂದರು. ಆಗ ಬಂದುಗಳು ಅನೇಕರನ್ನು ಸೇರಿಸಿ ಅಧಿಕಾರಕ್ಕೆ ಗುರಿಯಾದರು. ಈ ಗುಡಿಸುವವರೂ ನಮ್ಮ ಸಹೋದರರೆಂದು ನೋಡುವುದು ನಮ್ಮ ಕರ್ತವ್ಯ ವರ್ಗಕ್ಕೆ ಸೇರಿದವನೆಂದೂ ಹೇಳುವುದಕ್ಕೆ ನಾವು ನಾಚಿಕೊಳ್ಳುವುದಿಲ್ಲ. ಆತನು ನಮ್ಮ ಗಣನೆಯಲ್ಲಿಲ್ಲ ಸಹೋದರ ಭಾವವನ್ನು ಸ್ಥಾಪಿಸಬೇಕಾದರೆ ನಾವು ಅವರ ಬಡತನವನ್ನು ತಪ್ಪಿಸಬೇಕು. ಈ ಆತಂಕದಿಂದ ಸ್ತ್ರೀಜನರಲ್ಲಿ ಬಹಳ ಕೆಡುಕನ್ನುಂಟುಮಾಡಿದೆ. ಸಕಲ ಮತಸ್ಥರೂ ಅದನ್ನು ಅಂಗೀಕರಿಸಬೇಕು. ಹೇಗೆಂದರೆ — ನಾನು, ನನ್ನ ಅಬ್ಬೆ, ನನ್ನ ಪತ್ನಿ, ನನ್ನ ಮನಸ್ಸು ಎಂಬಿವುಗಳನ್ನು ಬಿಟ್ಟುಕೊಂಡರೆ ಆಗ ಮಹಾಪುರುಷರಾಗಿ ಸಕಲರನ್ನೂ ನಮ್ಮ ಸಹೋದರರೆಂದು ಭಾವಿಸುವವು. ಈ ಧರ್ಮಗಳ ಬೇರೆ ಬೇರೆ ನಂಬಿಕೆಗಳ ಅಭಿವೃದ್ಧಿಗೆ ಬರಲು ಅವರೆಲ್ಲರೂ ದೇವರ ಮಕ್ಕಳೆಂದು ಸಲ್ಲಿಸಿ ಉದಯ ಮಾಡಬೇಕೆಂಬುದೇ ಅವರ ಪರಮ ಶ್ರೇಷ್ಠ ಕರ್ತವ್ಯವು. ನಮ್ಮಲ್ಲಿರುವ ಕುಟುಂಬಗಳನ್ನೆಲ್ಲಾ ಸರಿಪಡಿಸಿಕೊಳ್ಳದೆ ಕಣ್ಣುಮುಚ್ಚಿಕೊಂಡು ಇರುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ ಎಂಬುದೆ.

ಎರಡನೆಯ ದಿನ ಮತ್ತೆ ಈ ಸಮಾಜವು ಸೇರಿತು. ಬಾಬು ಅವಿನಾಶಚಂದ್ರ ಮುಜುಂದಾರರು ಅಗ್ರಾಸನವನ್ನಲಂಕರಿಸಿದರು. ಶ್ರೀ ದೇವೇಂದ್ರನಾಥ ಸೇನ್ ಸಹೋದರರು ನಾಯಕ ಎಂಬಾತನು ಸಭಿಕರಿಗೆ ಅವರ ಕರ್ತವ್ಯಾಂಶಗಳನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಸ್ತ್ರೀಯರನ್ನು ಮನೆಯಲ್ಲಿ ವಿದ್ಯಾವತಿಯರನ್ನಾಗಿ ಮಾಡಲು ಸರ್ವಶಕ್ತರು ಕೃಪೆ ಮಾಡುವರು. ಬಾಲ್ಯವಿವಾಹಗಳು ಬೀಳುವುದು, ಇದರ ಅನೇಕ ಕಾರಣಗಳನ್ನು ಪಾಲಿಸುವುದು, ರಾಜ್ಯದ ವಿಷಯದಲ್ಲಿಯೂ ಪ್ರಜೆಗಳಲ್ಲಿ ನಿಂತು ಬರೀ ಉಪನ್ಯಾಸಗಳನ್ನು ಮಾಡುವುದರಿಂದ ಫಲವೇನು? ಸ್ತ್ರೀಯರ ಪ್ರತಿ ಬಟ್ಟೆ ಪುರುಷರೂ ನಡೆಯುವುದಕ್ಕಿಂತ ನಡೆದೇ ತೋರಿಸಲಿ. ಸ್ತ್ರೀಯರನ್ನು ಮೇಲಕ್ಕೆತ್ತಿದರೆ ಈ ರಾಷ್ಟ್ರವು ಹೇಗೆ ತಾನೇ ಕೆಳಗಿಳಿಯುವುದು? ಅವರಿಗೆ ಸ್ವಾತಂತ್ರ್ಯವನ್ನು ಕೊಡಬೇಕು. ಮನೆಯಲ್ಲಿರುವವರಿಗೆ ಸ್ವಾತಂತ್ರ್ಯಗಳನ್ನು ಕೊಡದೆ ಹೊರಗಿನದನ್ನು ಗವರ್ನ್‌ಮೆಂಟಿನವರು ರಾಜ್ಯಭಾರದಲ್ಲಿ ಸ್ವಾತಂತ್ರ್ಯ ಕೊಡಲಿಲ್ಲವೆಂದು ಕೇಳುವುದು ಯಾವ ಧರ್ಮ? ಭಕ್ತಿಯು ದೇವನಿಗೆ ಸೇರಿಟ್ಟಾಗುವುದಾದರೂ, ಇತರ ವಿಚಾರವಾದ ಸ್ವಾತಂತ್ರ್ಯಾದಿಗಳ ಅಧಿಕಾರಗಳೂ ಅಪೇಕ್ಷಿತವಾಗಿರುವಲ್ಲಿ ಇವುಗಳಿಗಿಂತ ಎಷ್ಟೋ ಶ್ರೇಷ್ಠವಾದ ಸದ್ಭಕ್ತಿ ಸದಾಚಾರ ಸದ್ಗುಣಗಳನ್ನು ಯಾಕೆ ಅಪೇಕ್ಷಿಸಬಾರದು? ಕೊಟ್ಟರಾದ ಪಿ ನೀ ರೀತಿ ಉಪನ್ಯಾಸ ಮಾಡಿದರು. ತರುವಾಯ ಬಾಬು ಶೇಕನ್ ಬಾನರ್ಜಿಯವರು ಭಾಷಣಮಾಡಿದರಲ್ಲಿ ತಿಳಿಯಿಸಿದ್ದೇನೆಂದರೆ — ಮೊದಲು ನಾವು ನಮ್ಮನ್ನು ಮನೆಗಳ ಕಡೆಗೆ ನಮ್ಮ ದೃಷ್ಟಿಯನ್ನು ತಿರುಗಿಸಿ, ಅಲ್ಲಿನ ಕಾರುಬಾರುಗಳನ್ನು ಕ್ರಮಪಡಿಸಿಕೊಳ್ಳಬೇಕಾಗಿದೆ. ನಮ್ಮ ಮನೆಗಳೊಳಗಿನಿಂದಲೇ ತಿಳುವಳಿಕೆಯನ್ನು ಪಡೆದವರಾಗಿಲ್ಲದೆ ಹೋದರೆ ನಾವು ಹೇಳುವ ಉಪದೇಶವನ್ನು ಅವರು ಅನುಮೋದಿಸುವ ಅಡ್ಡಿ ಆತಂಕಗಳನ್ನು ತಂದಿಕ್ಕುವರು. ಆದರೆ ಆ ಉಪದೇಶವು ಅವಶ್ಯವೆಂದೂ ಅದು ಸಹಜವಾದದ್ದೆಂದೂ ನಾವು ನಿಶ್ಚಯವಾಡಿಕೊಂಡಿರುವ ಪಕ್ಷದಲ್ಲಿ ಅವರ ಅಡಚಣೆಯನ್ನು ನಾವು ಲಕ್ಷ್ಯವಾಡದೆ ಕೂಡದು. ಹಿಂದುಗಳು ತಮ್ಮ ಭಕ್ತಿ ಆಚಾರ ವ್ಯವಹಾರಗಳಲ್ಲಿ ಅವಶ್ಯವಾದ ತಿದ್ದುಪಾಟನ್ನು ಮೊದಲು ಮಾಡಿಕೊಳ್ಳಬೇಕಾದದ್ದು ತುಂಬಾ ಅಪೇಕ್ಷಣೀಯವಾಗಿದೆ ಎಂಬ ರೀತಿ ಹೇಳಿದರು.

ತರುವಾಯ ಈ ಸಮಾಜವು ಮುಕ್ತಾಯವಾದಲ್ಪಟ್ಟಿತು.

ಆರ್ಯಮಹಿಳೆಯರ ಪರಿಷತ್ತು.

ಕಳೆದ ತಾ. ೩೦ನೇ ಬುಧವಾರ ಮದರಾಸ್ ಪಟ್ಟಣದ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಬಂಗಲೆಯಲ್ಲಿ ಹಿಂದುಸ್ಥಾನದ ಆರ್ಯಮಹಿಳೆಯರ ಮಹಾ ಸಭೆಯು ಜರುಗಿತು. ವಿಜಯನಗರಪಟ್ಟಣದ ಶ್ರೀ ಮಹಾರಾಣಿ ಗಜಪತಿ ರಾವ್ ಯವರು ಸಭೆಯ ಅಗ್ರಾಸನವನ್ನು ವಹಿಸಿದರು. ಸಭೆಯಲ್ಲಿ ಸುಮಾರು ೮೦೦ ಮಂದಿ ಆರ್ಯ ಸ್ತ್ರೀಯರೂ, ೪೦ ಮಂದಿ ಇಂಗ್ಲಿಷ್ ದೊರೆಸಾನಿಯರೂ, ೧೩ ಮಂದಿ ಮಹಮದೀಯ ವಿದ್ಯಾವತಿಯರೂ ಹಾಜರಾಗಿದ್ದರು. ಕೆಲವು ಬಾಲಿಕೆಯರು ಸಂಸ್ಕೃತದಲ್ಲಿ ಸುಸ್ವಾಗತದ ಸೂಚಕವಾದ ಸಂಗೀತವನ್ನು ಹಾಡಿದರು. ತರುವಾಯ ಭಗವತ್ ಪ್ರಾರ್ಥನೆ ಜರುಗಿತು. ಅನಂತರ ಅಗ್ರಾಸನದಿಂದ ಎದ್ದು ವಿಜಯಪಟ್ಟಣದ ಮಹಾರಾಣಿಯವರು ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಅವರು ಹೇಳಿದ ಮುಖ್ಯ ಭಾಗಗಳೇನೆಂದರೆ — ಹಿಂದುಸ್ಥಾನದ ಸ್ತ್ರೀಯರಲ್ಲಿ ಪರಸ್ಪರವಾದ ಪ್ರೀತಿ ವಿಶ್ವಾಸಗಳನ್ನು ಹುಟ್ಟಿಸಿ ಹೆಚ್ಚು ಮಾಡಬೇಕು. ಸ್ತ್ರೀಯರು ಈಗ್ಗಿಂತಲೂ ಉತ್ತಮಸ್ಥಿತಿಗೆ ಬರಬೇಕಾಗಿದೆ. ಇದಕ್ಕೆಲ್ಲಾ ವಿದ್ಯಾಭ್ಯಾಸವೇ ಮುಖ್ಯ ಸಾಧನವು. ಈಚೆಗೆ ಸ್ತ್ರೀ ವಿದ್ಯಾಭ್ಯಾಸವು ಎಲ್ಲೆಲ್ಲೂ ಪ್ರೋತ್ಸಾಹಗೊಂಡು ಹರಡುತ್ತಿರುವುದು. ಸ್ತ್ರೀಯರೂ ಮುಂದಾಳುಗಳಾಗಿ ಈ ಕೆಲಸದಲ್ಲಿ ಪ್ರವರ್ತಿಸುತ್ತಾ ಬಂದಿರುವುದು ತುಂಬಾ ಸಂತೋಷಕರವಾಗಿದೆ. ವಿದ್ಯೆಯಿಂದ ಸಕಲ ಇಷ್ಟಾರ್ಥಗಳೂ ಪ್ರಾಪ್ತವಾಗುವವು. ಅಜ್ಞಾನವೆಂಬ ಕಗ್ಗತ್ತಲು ತೊಲಗುವುದು. ಸ್ತ್ರೀಯರಿಗೆ ಆರೋಗ್ಯ ವಿಷಯವನ್ನೂ ಮಕ್ಕಳ ಪಾಲನೆಯನ್ನೂ ಚೆನ್ನಾಗಿ ಕಲಿಸಬೇಕು. ಹುಡುಗಿಯು ಯೌವನಸ್ಥೆಯಾದಾಗ ಮನೆಯ ಗಂಡನ, ಮಕ್ಕಳ ಆರೋಗ್ಯಭಾಗ್ಯವನ್ನು ಕಾಪಾಡತಕ್ಕವಳಾಗಿದ್ದಾಳೆ. ಗೃಹಕೃತ್ಯವನ್ನು ನಡೆಸುವಾಗ್ಗೆ ಅವಳು ಅನಾವಶ್ಯವಾಗಿ ದುಂದು ವೆಚ್ಚ ಮಾಡದಂತೆ ಮಿತವ್ಯಯ ಮಾಡಿ ಸಂಸಾರವನ್ನು ನಾಜೂಕಾಗಿ ನಡೆಸಿಕೊಂಡು ಹೋಗುವ ಮಾರ್ಗವನ್ನು ಕಲಿಸಬೇಕು. ಮನೆಯಲ್ಲಿ ನಡೆಯುವ ಆಚಾರ ವ್ಯವಹಾರಗಳನ್ನು ತಿದ್ದಿಕೊಳ್ಳುವಂತೆಯೂ ಬುದ್ಧಿ ಕಲಿಸಬೇಕು. ವಿನಾಕಾರಣದಲ್ಲಿ ಕನ್ಯಾಶುಲ್ಕ ವರದಕ್ಷಿಣೆಗಳನ್ನು ಕೊಟ್ಟು ತೆಗೆದುಕೊಳ್ಳುವುದು ಮಹಾ ಪಾತಕವೆಂದು ಚಿಕ್ಕಂದಿನಿಂದಲೂ ಮಕ್ಕಳಿಗೆ ಬೋಧಿಸಬೇಕು. ಸ್ತ್ರೀಯರು ಮನೆಗಳಲ್ಲಿ ದಿನವೂ ದೇವರ ಪೂಜೆ ಪ್ರಾರ್ಥನಾದಿಗಳನ್ನು ನಡೆಸುವುದಲ್ಲದೆ, ೩೦ ಕೋಟಿ ದಿನಕ್ಕೊಂದಾವರ್ತಿ ಕೋಟಿ ಸೇರಿ ರೂಪಾಯಿ ಭಾರತಾದಿ ಸದ್ಗ್ರಂಥಗಳನ್ನು ಓದಿಯೂ, ಓದಿಸಿಯೂ ಕೇಳುತ್ತಿರಬೇಕು ಎಂಬುದೇ.

ಇತರ ಸ್ತ್ರೀಯರು ಉಪನ್ಯಾಸಗಳನ್ನು ಮಾಡಿದರು. ಬೆಂಗಳೂರು ಮಿಸೆಸ್ ಗೋಪಾಲಚಾರ್ಯರು ಶ್ರೀನಿವಾಸ ಮಂದಿರದ ಸ್ತ್ರೀ ಸಮಾಜದ ಕೆಲಸಗಳನ್ನೂ, ಮೈಸೂರು ಸೌ॥ ಶ್ರೀರಂಗಮ್ಮನವರು ಅನೇಕ ಸಂಚಾರವನ್ನೂ, ಕಡಲೂರು ರುಕ್ಮಿಣಿಅಮ್ಮನವರು ವಿಧವಾ ವಿವಾಹಗಳನ್ನೂ, ಗುಂಟೂರಿನ ಭಾರತಿ ಸವಿತ್ರಿ ಅಮ್ಮನವರು ಬಾಲಕಿಯರ ವಿದ್ಯಾಭ್ಯಾಸವನ್ನೂ, ಸೌ॥ ಲಕ್ಷ್ಮಮ್ಮನವರು ಸ್ತ್ರೀ ವಿದ್ಯಾಭ್ಯಾಸವನ್ನೂ, ವೆಂಕಟರತ್ನಮ್ಮನವರು ಬಾಲಿಕಾ ಪಾಠಶಾಲೆಗಳು ಅವಶ್ಯವೆಂಬುದನ್ನೂ, ಚಿನ್ನಮ್ಮನವರು ಸ್ತ್ರೀ ಧರ್ಮವನ್ನೂ, ಪಂಡಿತಾ ಅಚಲಾಂಬ ಅಮ್ಮನವರು ಬಾಲಕಿಯರ ವಿವಾಹ ವಯಸ್ಸನ್ನು ಹೆಚ್ಚಿಸಬೇಕೆಂಬುದನ್ನೂ, ಮಿಸೆಸ್ ಸರೋಜಿನಿ ನಾಯ್ಡು ಯವರು ಮದರಾಸಿನಲ್ಲಿ ಹಿಂದೂ ಬಾಲಿಕೆಯರಿಗೆ ಒಂದು ಹೈಸ್ಕೂಲಿನ ಆವಶ್ಯಕತೆಯನ್ನೂ, ಮಿಸೆಸ್ ಪಟ್ಟಾಭಿ ರಾಮಯ್ಯರು ಕೈಗಾರಿಕೆ ವಿದ್ಯಾಭ್ಯಾಸವನ್ನೂ, ಮುದ್ದುಲಕ್ಷ್ಮಮ್ಮನವರು ಹಿಂದೂ ಸ್ತ್ರೀಯರು ಹಿಂದೂ ಧರ್ಮಗಳು ಎಂಬುದನ್ನೂ, ಮಿಸೆಸ್ ಕಾಶೀಬಾಯಿ ದೇವಧರ ಯವರು ವಿವಾಹ ಖರ್ಚುಗಳನ್ನೂ, ಮಿಸೆಸ್ ಸಾಂಬಮೂರ್ತಿ ರಾಯರು ಮಕ್ಕಳ ವಿದ್ಯಾಭ್ಯಾಸವನ್ನೂ, ಆರ್. ಎಸ್. ಸುಬ್ಬಲಕ್ಷ್ಮಮ್ಮನವರು ವಿದ್ಯಾಭ್ಯಾಸವನ್ನೂ, ಮಿಸೆಸ್ ರಾಜಾರಾಯರು ಗೃಹ ವಿದ್ಯಾಭ್ಯಾಸವನ್ನೂ, ಮಿಸೆಸ್ ಲಕ್ಷ್ಮೀನಾರಾಯಣರು ಸ್ತ್ರೀ ಧರ್ಮವನ್ನೂ, ವಿ. ಬಂಗಾರಮ್ಮನವರು ನಮ್ಮ ಮೇಲಿರುವ ಸ್ತ್ರೀಯರಿಗೆ ಇಂಗ್ಲಿಷ್ ಅವಶ್ಯವೇ ಎಂಬುದನ್ನೂ, ಸೌ॥ ರುಕ್ಮಿಣಿಅಮ್ಮನವರು ಸ್ತ್ರೀಯರಿಗೆ ಇಂಗ್ಲಿಷ್ ಅವಶ್ಯವೇ ಎಂಬುದನ್ನೂ, ಮಿಸೆಸ್ ಕೆ ಬಲರಾಮ ಅಯ್ಯರವರು ಬಾಲಿಕೆಯರ ವಿದ್ಯಾಭ್ಯಾಸವನ್ನೂ, ಎಸ್ ಶಿವಕಾಮವಲ್ಲಮ್ಮನವರು ದಾನಗಳೇ ಹಣಗಳು ಅವಶ್ಯವೆಂಬುದನ್ನೂ, ಇಂಗ್ಲಿಷ್, ತೆಲುಗು, ತಮಿಳು, ಮಲೆಯಾಳಿ, ಕನ್ನಡ, ಹಿಂದುಸ್ಥಾನಿ, ಮರಾಟಿ ಭಾಷೆಗಳಲ್ಲಿ ಉಪನ್ಯಾಸಗಳನ್ನು ಮಾಡಿದರು.

ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀ ಸಮಾಜದ ಕಾರ್ಯದರ್ಶಿಯಿಂದ ಮಾಡಿದ ಉಪನ್ಯಾಸದ ಕೆಲವು ಭಾಗಗಳನ್ನು ಇಲ್ಲಿ ಸೂಚಿಸುತ್ತೇವೆ — ಈ ಕಾಲದಲ್ಲಿ ವಿದ್ಯಾಭ್ಯಾಸ ಪ್ರಸಂಗವು ಎಲ್ಲೆಲ್ಲೂ ಜರುಗುತ್ತಿರುವುದಲ್ಲವೇ? ನಮಗೆ ವಿದ್ಯೆಯು ಅನೇಕ ವಿಧವಾಗಿ ಯೋಚಿಸಿ ನೋಡಿದಾಗ್ಯೂ ಅನಾವಶ್ಯಕವೆಂದು ತೋರುವುದಿಲ್ಲ. ಗಂಡಸರಿಗೆ ವಿದ್ಯೆಯು ಎಷ್ಟು ಅವಶ್ಯಕವೋ ಅದಕ್ಕಿಂತಲೂ ನೂರು ಪಾಲು ಅಧಿಕವಾಗಿಯೇ ನಮಗೆ ಅವಶ್ಯಕವಾಗಿದೆ. ಮನುಷ್ಯ ಸಾಮಾನ್ಯರಿಗೆ ವಿದ್ಯೆಯು ಅವಶ್ಯಕವು. ಅದರಲ್ಲಿಯೂ ಹೆಂಗಸರಿಗೆ ಅತ್ಯಾವಶ್ಯಕವೆಂಬುದನ್ನು ನಾನು ಬೇರೆ ಹೇಳಬೇಕಾಗಿಲ್ಲ. ಮನುಷ್ಯರನ್ನು ಚಿಕ್ಕಂದಿನಿಂದಲೂ ಹೆಂಗಸರು ಬೆಳೆಸಿ, ಪೋಷಿಸಿ, ವಿದ್ಯೆ ಕಲಿಸಿ, ದೊಡ್ಡವರನ್ನಾಗಿ ಮಾಡಿ ಲೋಕವ್ಯವಹಾರಗಳಿಗೆ ಅರ್ಹರನ್ನಾಗಿ ಮಾಡತಕ್ಕವರು. ಇಂಥಾ ಹೆಂಗಸರಿಗೆ ವಿದ್ಯೆಯೇ ಇಲ್ಲದಿರುವದರಿಂದ ಏನಕ್ಕೆ ಎಷ್ಟು ನಷ್ಟವೋ ನೀವೇ ಯೋಚಿಸಬಹುದು. ವಿದ್ಯೆ ಕಲಿಯುತ್ತಿರುವದರಿಂದ ಮೌಢ್ಯವು ಹೋಗುವುದು. ಅಯುಕ್ತವಾದ ಭೀತಿಗಳು ವೃದ್ಧಿಹೊಂದವು. ಮನಸ್ಸಿಗೆ ಉದಾರವು ಉಂಟಾಗುವುದಲ್ಲದೆ, ಪ್ರಪಂಚದ ನಡವಳಿಕೆಗಳನ್ನು ತಿಳಿದುಕೊಳ್ಳುವುದಕ್ಕೆ ಸಹಕಾರಿಯಾಗುವುದು. ಮತ್ತು ಅಹಂಕಾರವನ್ನು ತಗ್ಗಿಸುವುದು. ಇವೇ ಮೊದಲಾದ ಪ್ರಯೋಜನಗಳನ್ನು ಹೊಂದುವುದಕ್ಕೆ ವಿದ್ಯೆಯೇ ಪ್ರಧಾನ ಕಾರಣವೆಂದು ವರ್ಣಿಸಬಹುದು. ಈ ಉಪಯೋಗಗಳನ್ನು ಪಡೆಯುವುದಕ್ಕೆ ನಾನೂ ಮತ್ತು ನನ್ನ ಸ್ನೇಹಿತೆಯರಲ್ಲಿ ಕೆಲವರೂ ಶ್ರೀನಿವಾಸ ಮಂದಿರದ ಆಶ್ರಯದಲ್ಲಿ "ಸ್ತ್ರೀ ಸಮಾಜ" ಎಂದು ಹೆಸರುಳ್ಳ ಒಂದು ಹೆಂಗಸರ ಪಾಠಶಾಲೆಯನ್ನು ಈಗ್ಗೆ ಇಪ್ಪತ್ತು ತಿಂಗಳ ಹಿಂದೆ ಏರ್ಪಡಿಸಿದೆವು. ಹೀಗೆ ಏರ್ಪಾಡು ಮಾಡಿದ್ದರಲ್ಲಿ ನಮ್ಮಲ್ಲಿ ಸಹೋದರೀ ಭಾವವೂ, ಏಕಮನಸ್ಸೂ, ಪರಸ್ಪರ ಸ್ನೇಹವೂ ಮತ್ತು ವಿಶ್ವಾಸವೂ ದೊರಕಬೇಕೆಂಬುದೇ ಈ ಶಾಲೆಯ ಮುಖ್ಯೋದ್ದೇಶವಾಗಿ ತೀರ್ಮಾನಿಸಿದೆವು. ಈ ಶಾಲೆಗೆ ಪುರುಷರ ಪ್ರವೇಶವನ್ನು ನಿರೋಧಿಸಿರುತ್ತೇವೆ. ಮತ್ತು ಚಾತುರ್ವರ್ಣದವರೂ ಇದರ ಪ್ರಯೋಜನಗಳನ್ನು ಹೊಂದಬಹುದೆಂಬುದಾಗಿ ತೀರ್ಮಾನಿಸಿರುವವು. ಕೊಂಚವುಟ್ಟಿಗೆ ಈ ಪ್ರಯತ್ನವು ಸಾರ್ಥಕವಾಗಿರುವುದಕ್ಕೆ ನಾವುಗಳೆಲ್ಲರೂ ಇಲ್ಲಿಗೆ ಬಂದಿರುವುದೇ ದೃಷ್ಟಾಂತವಾಗಿರುವುದು. ಕಳೆದ ಇಪ್ಪತ್ತು ತಿಂಗಳ ಅನುಭವದಿಂದ ಈ ಪ್ರಯತ್ನವು ಸರ್ವತ್ರ ಸಮ್ಮತಿಯನ್ನು ಹೊಂದಿರುವುದೆಂದು ಹೇಳಲವಶ್ಯಕವಿಲ್ಲ. ಈ ಶಾಲೆಗೆ ಕೆಲವರು ವಿರೋಧಿಗಳೂ ಇರುವರು. ಅವರಲ್ಲಿ ಕೆಲವು ಪುರುಷ ಶ್ರೇಷ್ಠರು ಓದಿದವರಾದಾಗ್ಯೂ ವಿರೋಧವನ್ನು ಪ್ರಕಾಶಪಡಿಸುತ್ತಿರುವದರಿಂದ ನಾನು ಬಹು ಆಶ್ಚರ್ಯಪಡುತ್ತೇನೆ. ನಂತರ ಕೆಲವು ಪುರುಷರು ಇಂಗ್ಲಿಷನ್ನು ಕಲಿತು ವಿದ್ಯಾಶಾಲಾ ಶಾಲೆಗಳಲ್ಲಿ ಹೆಸರು ಮತ್ತು ಬಹುಮಾನಗಳನ್ನು ಹೊಂದಿರುವರು. ಇವರು ಕೇಳಗಡ ಹೊಂದಿದಾಗ್ಗೆ ಅಬಲರಿಗೆ ಸಹಾಯ ಮಾಡುತ್ತೇವೆಂದು ಕೊಟ್ಟ ವಾಗ್ದಾನವನ್ನು ಸರ್ಥಕಪಡಿಸದಿದ್ದದ್ದಾಗಿ ತುಂಬಾ ಚಿಂತನಡುತ್ತೇನೆ. ಹೀಗೆಯೇ ವಿದ್ಯೆ ಕಲಿತ ನಾರೀಮಣಿಯರು ಕೆಲವರು ವಿದ್ಯೆ ತಿಳಿಯದ ನಮ್ಮನ್ನು ಅಸಡ್ಡೆ ಮಾಡುತ್ತಿರುವುದಕ್ಕಾಗಿ, ಇನ್ನೂ ವಿಶೇಷವಾಗಿ ಚಿಂತಿಸುತ್ತೇನೆ. ಇದು ವಿದ್ಯೆಗೆ ಪ್ರಯೋಜನವೇ ಎಂಬ ಅಂಶವನ್ನು ತಾವೇ ಯೋಚಿಸಬೇಕು. ಹೀಗಿದ್ದಾಗ್ಗೂ ಪ್ರಯತ್ನಪಟ್ಟ ಉದ್ಯೋಗವನ್ನು ಬಿಟ್ಟುಬಿಡುವುದು ಯೋಗ್ಯವಲ್ಲವೆಂದು ಯೋಚಿಸಿ ಇತರರ ನಗೆ ಪರಿಹಾಸ್ಯ ಕುತ್ಸಿತವಾದಗಳನ್ನೂ, ಕ್ಷುದ್ರ ಮಾತುಗಳನ್ನೂ ಗಮನಿಸದೆ ನಾನೂ ನನ್ನ ಸ್ನೇಹಿತೆಯರು ಕೆಲವರೂ ದೃಢಚಿತ್ತರಾಗಿ ಈ ಕಾರ್ಯದಿಂದ ನಮ್ಮ ಸ್ತ್ರೀಯರಿಗೆ ಸಂಭವಿಸುವ ಪ್ರಯೋಜನವೇ ಅಧಿಕವಾದದ್ದೆಂದು ಯೋಚಿಸಿ ಹೆಚ್ಚಾದ ಆಕ್ಕರೆಯಿಂದ ಸಾಹಸಪಡುತ್ತಿದೇವೆ. ಇದಕ್ಕೆ ಪುರುಷರೂ ಅವರ ಪತ್ನಿಯರೂ ಮತ್ತು ಇರುವರಿಗೂ ಹಿಂದೆ ನಿಂತಿರುವವರೂ ಸಹಾಯ ಮಾಡುವುದರಿಂದ ಸ್ತ್ರೀಯರಿಗೆ ಹೆಚ್ಚಾದ ಲಾಭವು ಉಂಟಾಗುವುದರಲ್ಲಿ ಸಂದೇಹವಿಲ್ಲ."

ಸಭೆಯಲ್ಲಿ ಫಲೋಪಹಾರಗಳು ವಿನಿಯೋಗವಾದ ಮೇಲೆ ಮಂಗಳವನ್ನು ಹಾಡಿ ಪರಿಷತ್ತನ್ನು ಮುಕ್ತಾಯಮಾಡಿದರು.

ಕಸಬುಗಳನ್ನು ಪ್ರೋತ್ಸಾಹಿಸುವ ರಾಷ್ಟ್ರಕೂಟವು.

ನಾಲ್ಕನೆಯ ವಾರ್ಷಿಕ ಸಭೆಯು.

ಮದರಾಸ್ ಪಟ್ಟಣದ ಮೌಂಟ್ ರೋಡ್‌ನಲ್ಲಿ ನ್ಯಾಷನಲ್ ಕಾಂಗ್ರೆಸ್ ಮಹಾಸಭೆಗಾಗಿ ಕಟ್ಟಲ್ಪಟ್ಟ ದಿವ್ಯವಾದ ಮಂದಿರದಲ್ಲಿ ಕಸಬುಗಳನ್ನು ಪ್ರೋತ್ಸಾಹಿಸುವ ಸಮಾಜವು ಕಳೆದ ೨೯ನೇ ತಾ ದಿವಸ ಮಧ್ಯಾಹ್ನ ಪ್ರಾರಂಭವಾಯಿತು. ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ದೇಶೀಯ ಕಸಬುಗಳ ಅಭಿವೃದ್ಧಿ ಪಡಿಸಬೇಕೆಂಬುದರಲ್ಲಿ ಉತ್ಸಾಹಶೀಲರಾದಂಥಾ ದೊಡ್ಡ ಮನುಷ್ಯರು ನೂರಾರುಮಂದಿ ಆ ದಿನ ಸಭೆಯನ್ನಲಂಕರಿಸಿದ್ದರು. ಮದರಾಸ್ ಗವರ್ನರಾದ ಸರ್ ಆರ್ಥರ್ ಲಾಲಿಯವರು ಪತ್ನೀಸಹಿತ ದಯಮಾಡಿ, ದೇಶೀಯ ದೊಡ್ಡ ಮನುಷ್ಯರಿಂದ ಮರ್ಯಾದೆ ಹೊಂದಿ ಸಭೆಯ ಅಗ್ರಪೀಠವನ್ನಲಂಕರಿಸಿದರು. ರಿಸೆಪ್ಷನ್ ಕಮಿಟಿಯ ಪ್ರೆಸಿಡೆಂಟರಾದ ದಿವಾನ್ ಬಹದೂರ್ ಪಿ. ರಾಜರತ್ನಮೊದಲಿಯಾರ್, ಸಿ ಐ ಇ ಯವರು ಸಭಾಕಾರ್ಯವನ್ನಾರಂಭಿಸಿ, ಸಭೆಗೆ ದಯಮಾಡಿದ್ದ ಸರಿಗ್ಗೆ ಸುಸ್ವಾಗತವನ್ನು ಬಯಸಿ, ಹಿಂದುಸ್ಥಾನದ ಕಸಬುಗಳ ಸ್ಥಿತಿಗತಿಗಳನ್ನೂ ಈ ಸಮಾಜದವರು ಅವುಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಇದುವರೆಗೆ ನಡೆಸಿರುವ ಕಾರ್ಯಭಾಗಗಳನ್ನೂ ಮದರಾಸ್ ಗವರ್ನ್‌ಮೆಂಟಿನವರು ಈ ಭಾಗದಲ್ಲಿ ಮಾಡಿರುವ ಮತ್ತು ಮಾಡುತ್ತಿರುವ ಪ್ರೋತ್ಸಾಹಕ ಕಾರ್ಯಗಳನ್ನೂ ಕುರಿತು ಉಪನ್ಯಾಸಮಾಡಿ, ಕಡೆಯಲ್ಲಿ ಸಭಿಕರನ್ನು ಕುರಿತು ಹೇಳಿದ್ದೇನೆಂದರೆ. ದಿವಾನ್ ಬಹದೂರ್ ರಘುನಾಥರಾಯರು ಹೇಳಿರುವ ಶ್ರೇಷ್ಠವಾಕ್ಯಗಳನ್ನು ನಾವುಗಳೆಲ್ಲಾ ಸ್ಮರಣೆಯಲ್ಲಿಟ್ಟುಕೊಳ್ಳಬೇಕಾಗಿದೆ. ನಾವೆಲ್ಲರು ಜನರು ಅವರಂತೆ ಕಾರ್ಯಭಾಗ ನಡೆಸಲು ಸಾಹಸಪಡುತ್ತಾ ಬರದಿದ್ದರೆ ನಮ್ಮ ದೇಶಕ್ಕೆ ಶ್ರೇಯಸ್ಸುಂಟಾಗುವುದಿಲ್ಲ. ಅವರ ಆ ಶ್ರೇಷ್ಠ ವಾಕ್ಯಗಳು — "ನಿರ್ಮಲ ಸ್ವಭಾವ ನಡೆನುಡಿ, ಬುದ್ಧಿ ಕುಶಲತೆ, ಪಾಂಡಿತ್ಯ, ಯೋಗ್ಯತೆ, ಅನುಭವ, ನಿರಾಲಸ್ಯ, ದೃಢ ರಾಜಭಕ್ತಿ, ಪಾಪಭೀತಿ, ತಮ್ಮ ಸಹೋದರ ವರ್ಗದವರನ್ನು ಪ್ರೀತಿಸುವುದರಲ್ಲೂ ಅವರ ಕಷ್ಟಸುಖಗಳಲ್ಲಿ ತಮ್ಮ ಕಷ್ಟಸುಖಗಳೆಂದು ಭಾವಿಸುವುದರಲ್ಲೂ ದೃಢವಾದ ಪ್ರತಿಜ್ಞೆ, ಈ ಗುಣಗಳನ್ನುಳ್ಳಂಥಾ ಜನರು ನಮಗೆ ಈಗ ಬೇಕಾಗಿರುವರು. ನಾವೆಲ್ಲಾ ಇಂಥಾ ಸಂಕಲ್ಪವನ್ನು ಮಾಡಿಕೊಂಡು ನಮ್ಮ ಜನ್ಮಭೂಮಿಯನ್ನು ಮಹೋನ್ನತಸ್ಥಿತಿಯುಕ್ತವಾದುದನ್ನಾಗಿ ಮಾಡೋಣ" ಎಂಬುದೇ.

ಕೊಲ್ಲೆಂಗೋಡು ರಾಜರವರು ಸಭಿಕರನ್ನು ಕುರಿತು ಈ ಸಮಾಜವನ್ನು ರಾವ್ ಬಹದೂರ್ ಆರ್. ಎನ್. ಮುಧೋಳ್ಕರ್ ಯವರು ಸಭಾನಾಯಕರಾಗಿದ್ದು ಜರುಗಿಸಬೇಕೆಂದು ಸೂಚಿಸಿ ಉಪನ್ಯಾಸಮಾಡಿದರು. ಸರ್ ಚಾಲಚಂದ್ರ ಕೃಷ್ಣರವರು ಅದನ್ನು ಅನುಮೋದಿಸಿ, ಶ್ರೀ ಮುಧೋಳ್ಕರ್ ಯವರ ಸ್ವದೇಶವಾತ್ಸಲ್ಯಾತಿಶಯವನ್ನೂ, ಬೀರಾರಿನಲ್ಲಿ ಅವರು ಕಸಬುಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಪಟ್ಟಿರುವ ಶ್ರಮವನ್ನೂ ವಿವರಿಸಿದರು. ಸಮಾಜದವರು ಏಕವಾಕ್ಯತೆಯಿಂದ ಒಪ್ಪಿಕೊಂಡರು. ಶ್ರೀ ಮುಧೋಳ್ಕರ್ ಯವರು ಅಗ್ರಾಸನವನ್ನು ವಹಿಸಿ ಬಹು ಸ್ವಾರಸ್ಯವಾದ ಉಪನ್ಯಾಸಮಾಡಿ, ಕಡೆಯಲ್ಲಿ ತಿಳಿಸಿದ್ದೇನೆಂದರೆ— ಈ ರಾಷ್ಟ್ರದ ಕಸಬುಗಳು ಅಭಿವೃದ್ಧಿ ಹೊಂದಬೇಕಾದರೆ ಪ್ರತಿ ಒಂದು ಆಫೀಸು ಪತ್ರದಲ್ಲೂ ಕಸಬುಗಳ ಪರಿಶೋಧನೆಗಾಗಿ ೩ ರ ಲಾಗಾಯಿತು ೧೦ ಮಂದಿಯವರೆಗೆ ಮೆಂಬರುಗಳನ್ನುಳ್ಳ ಒಂದೊಂದು ಕಮಿಟಿ ಏರ್ಪಡಬೇಕು ಮತ್ತು ಅವರಲ್ಲಿ ಅರೆವಾಸಿ ದೇಶೀಯ ಮೆಂಬರುಗಳಾಗಿರಬೇಕು. ಇವರು ಆಯಾ ಆಫೀಸು ಪತ್ರದಲ್ಲಿರುವ ಕಸಬುಗಳನ್ನೆಲ್ಲಾ ಪಟ್ಟಿಮಾಡಿ, ಈಗಿರುವವುಗಳನ್ನು ಅಭಿವೃದ್ಧಿ ಮಾಡುವುದಕ್ಕೂ, ನಶಿಸಿ ಹೋಗಿರುವವುಗಳನ್ನು ಮತ್ತೆ ಪ್ರಾರಂಭಿಸುವುದಕ್ಕೂ, ನೂತನವಾದವುಗಳನ್ನು ಕಲಿಸಿ ಪ್ರಾರಂಭಿಸುವುದಕ್ಕೂ ಅನುಕೂಲಿಸುವಂಥಾ ಸಲಹೆಗಳನ್ನು ಬರೆದಿಟ್ಟು, ಅಪೇಕ್ಷಿಸುವವರಿಗೆಲ್ಲಾ ಆಗಿಂದಾಗ್ಗೆ ಎಲ್ಲಾ ವಿಧವಾದ ತಿಳುವಳಿಕೆಯನ್ನೂ ಕೊಡುತ್ತಾ ಬರಬೇಕಾಗಿದೆ. ಹೀಗೆ ಮಾಡಿದಲ್ಲಿ ಜನರು ಬಂಡವಾಳವನ್ನು ಧೈರ್ಯವಾಗಿ ಹಾಕಿ ಕೆಲಸಮಾಡಲು ಸಹಾಯವಾಗುತ್ತದೆ. ನಾವು ಅಭಿವೃದ್ಧಿಗೆ ಒರುವ ಮಾರ್ಗವು ನಮ್ಮತ್ತಲೇ ಇರುವುದು. ಸಾಮರ್ಥ್ಯ, ಕುಶಲಬುದ್ಧಿ, ಶಾಂತಚಿತ್ತ ಮನೋಭಾವ ಜಾಣತನಗಳು, ಸದ್ಗುಣ ಸಚ್ಚರಿತ್ರಾದಿಗಳು, ಇವುಗಳನ್ನೆಲ್ಲಾ ನಾವು ಪಡೆದು ಕಾರ್ಯಭಾಗ ನಡೆಸುತ್ತಾ ಬಂದಲ್ಲಿ ನಾವೂ ನಮ್ಮ ರಾಷ್ಟ್ರವೂ ಭಾಗ್ಯಶಾಲಿಗಳಾಗಿ ಅನ್ಯರಲ್ಲಿ ಗಣ್ಯತೆಯನ್ನು ಸಂಪಾದಿಸಿಕೊಳ್ಳುತ್ತೇವೆ. ಅನ್ಯದೇಶೀಯರು ಕುಶಲಮತಿಗಳಾಗಿಯೂ, ಜಾಣತನಸ್ಥರಾಗಿಯೂ, ಸಾಹಸಪರರಾಗಿಯೂ ಇರೋದರಿಂದಲೇ ಅವರು ತಯಾರುಮಾಡುವ ವಸ್ತು ವಿಶೇಷಗಳು ಹೇರಳವಾಗಿ ನಮ್ಮ ದೇಶಕ್ಕೆ ಬಂದು, ಇಲ್ಲಿನ ವಸ್ತುಗಳಿಗಿಂತ ಅಗ್ಗವಾಗಿ ವಿಕ್ರಯಿಸಲ್ಪಡುತ್ತವೆ. ಆದಕಾರಣ ನಾವೂ ಅವರಂತೆಯೇ ಕುಶಲಮತಿಗಳಾಗಬೇಕು, ಜಾಣತನಸ್ಥರಾಗಬೇಕು, ಮತ್ತು ಸಾಹಸಪರರಾಗಬೇಕು ಎಂಬುದೇ.

ಪ್ರೆಸಿಡೆಂಟರು ಉಪನ್ಯಾಸವನ್ನು ಪೂರೈಸಿ ಕುಳಿತುಕೊಂಡ ಮೇಲೆ ಕಳೆದ ವರುಷದ ಮಹಾ ಸಭೆಯ ಪ್ರೆಸಿಡೆಂಟರಾಗಿದ್ದ ದಿವಾನ್ ಬಹದೂರ್ ಅಂಬಾಲಾಲ್ ಸಕರ್‌ಲಾಲ್ ದೇಸಾಯಿ ಯವರು ಕಳೆದ ವರುಷದ ರಿಪೋರ್ಟನ್ನು ಓದಿ ಸಭೆಗೆ ಒಪ್ಪಿಸಿದರು. ಸರ್. ವಿ. ಡಿ. ಥ್ಯಾಕರ್ಸೆಯವರು ಹಿಂದುಸ್ಥಾನದಲ್ಲಿ ಸಾರ್ವತ್ರಿಕವಾಗಿ ಅನ್ವಯಿಸುವಂಥಾ ಒಂದು ಕಂಪನಿಯನ್ನು ಏರ್ಪಾಡು ಮಾಡಿದೆ ಎಂತಲೂ, ಈ ಕಂಪನಿಯ ಮೂಲಧನದಿಂದ ಬಹು ದೊಡ್ಡದಾದ ಕಾರ್ಖಾನೆಯನ್ನು ಸ್ಥಾಪಿಸಿ, ಅದರಲ್ಲಿ ದೀಪದ ಕಡ್ಡಿಗಳನ್ನು ತಯಾರುಮಾಡಿ ಬೆಲೆಯಾಗುತ್ತದೆ ಮಾಡಿದೆ ಎಂತಲೂ, ಬೊಂಬಾಯಿಯಲ್ಲಿ ಒಂದು ದೇಶೀಯ

ಬ್ಯಾಂಕಿನಲ್ಲಿ ೬೫ ಲಕ್ಷ ಮೂಲಧನ ಕೂಡಿಸಿ ಲೇವಾದೇವಿ ಮಾಡಿದ್ದರಲ್ಲಿ ಹೋದವರುಷ ೯ ಲಕ್ಷ ರೂಪಾಯಿ ಲಾಭಸಂಪಾದನೆಯಾಗಿದೆ ಎಂತಲೂ ತಿಳಿಸಿದರು. ತರುವಾಯ ಪೂನಾ ಫರ್ಗುಸನ್ ವಿದ್ಯಾಶಾಲೆಯ ಪ್ರೊಫೆಸರಾದ ಮ. ವಿ. ಬಿ. ಕಾಳೆಯವರೂ, ಬೆಂಗಳೂರು ಶಾಸ್ತ್ರಶೋಧನಾ ವಿದ್ಯಾಶಾಲೆಯ ಡೈರೆಕ್ಟರಾದ ಡಾ|| ಮಾರಿಸ್ ಡಬ್ಲು ಟ್ರಾವರ್ಸ್ ಯವರೂ, ಜಬ್ಬಲ್‌ಪುರದ ಸೆಟ್ಲ್‌ಮೆಂಟ್ ಆಫಿಸರ್ ಮ|| ಎಚ್ ಕ್ರಾಸ್ತ್‌ವೇಟ್ ಯವರೂ, ಮದರಾಸ್ ಅಧಿಪತ್ಯದ ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರ್ ಮ|| ಆರ್ ರಾಮಚಂದ್ರರಾಯರೂ, ಮೈಸೂರು ಸಂಸ್ಥಾನದ ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರ್ ಮ|| ಎ. ಶಾಮರಾಯರೂ, ಇನ್ನೂ ಬಹುಮಂದಿ ದೊಡ್ಡ ಮನುಷ್ಯರೂ ನಾನಾ ಕಸಬುದಾರಿಗಳ ವಿಷಯವನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸಗಳನ್ನು ಮಾಡಿದರು.

ಎರಡನೆಯ ದಿನದ ಸಭೆಯು.

ಎರಡನೇ ದಿನ ಸಭೆಯು ಮತ್ತೆ ಸೇರಿತು. ಪ್ರೆಸಿಡೆಂಟರೂ ಬಹುಮಂದಿ ಪ್ರತಿನಿಧಿಗಳೂ ದೊಡ್ಡ ಮನುಷ್ಯರೂ ಹಾಜರಾಗಿದ್ದರು. ಹಿಂದುಸ್ಥಾನದ ಪ್ರತಿ ಅಧಿಪತ್ಯದೊಳಗೂ ಒಂದೊಂದು ಹೊಸ ಇಲಾಖೆಯು ಏರ್ಪಾಡಾಗಬೇಕೆಂತಲೂ, ಈ ಇಲಾಖೆಯವರು ಕಸಬುಗಳನ್ನು ಅಭಿವೃದ್ಧಿಗೆ ತರುವ ವಿಚಾರವನ್ನು ಕುರಿತು ಪರಿಶೋಧನೆಮಾಡಿ ಪ್ರಜೆಗಳಿಗೂ ಸರ್ಕಾರಕ್ಕೂ ತಿಳಿಸುತ್ತಾ ಬರುವಂತಾಗಬೇಕೆಂತಲೂ ಬೊಂಬಾಯಿನ ಮ|| ವಾಚಾಯವರೂ, ಮದರಾಸಿನ ಮ|| ಜಿ. ಶ್ರೀನಿವಾಸರಾಯರೂ, ಬೊಂಬಾಯಿನ ಮ|| ಆರ್ ಎನ್ ಮಹಾಜನ್‌ಯವರೂ ಉಪನ್ಯಾಸಗಳನ್ನು ಮಾಡಿದರು. ಗವರನ್‌ಮೆಂಟಿನವರು ಹಿಂದುಸ್ಥಾನದ ಮುಖ್ಯ ಪಟ್ಟಣಗಳಲ್ಲಿ ಕಸಬುಗಳನ್ನು ಕಲಿಸುವ ವಿದ್ಯಾಶಾಲೆಗಳನ್ನು ಸ್ಥಾಪಿಸಿ ನಡಿಸಬೇಕೆಂದು ಅಲಹಾಬಾದಿನ ಪಂಡಿತ ಮದನಮೋಹನ ಮಾಲವ್ಯಯವರೂ ಬೊಂಬಾಯಿನ ಮ|| ಜಿ. ಕೆ. ಪಾರೇಖ್‌ಯವರೂ ಮದರಾಸಿನ ಮ|| ಟಿ. ರಂಗಾಚಾರ್ಯರೂ, ಲಾಹೋರಿನ ಲಾಲಾ ಧರ್ಮದಾಸ ಸೂರಿಯವರೂ ಉಪನ್ಯಾಸ ಮಾಡಿದರು. ವ್ಯಾಪಾರವಿದ್ಯೆಯನ್ನು ಕಲಿಸಿಕೊಡುವುದಕ್ಕೆ ವಿದ್ಯಾಶಾಲೆಗಳನ್ನು ಸರ್ಕಾರದವರು ಇಡಿಸಿ, ತೇರ್ಗಡೆಹೊಂದಿದವರಿಗೆ ಸರ್ಟಿಫಿಕೇಟುಗಳನ್ನು ಕೊಡಿಸಬೇಕೆಂದು ಮದರಾಸಿನ ಮ|| ಕೆ. ಸುಬ್ರಹ್ಮಣ್ಯಯ್ಯನವರೂ, ಬೊಂಬಾಯಿನ ಮ|| ಡಿ. ಜಿ. ದಾಳ್ವಿಯವರೂ, ಪ್ರೊಫೆಸರ್ ಲೀಸ್ ಸ್ಮಿತ್ ಯವರೂ ಭಾಷಣ ಮಾಡಿದರು. ಸ್ವದೇಶೀ ವಿಚಾರವು ಈಚೆಗೆ ಎಲ್ಲೆಲ್ಲೂ ಹರಡಿಕೊಂಡು ಪ್ರಜೆಗಳಿಂದ ಪೋಷಣೆಯೊಂದುತ್ತಾ ಬಂದಿರುವುದು ತುಂಬಾ ಸಂತೋಷಕರವಾಗಿದೆ ಎಂತಲೂ ಪ್ರಜೆಗಳು ಒಗ್ಗಟ್ಟಾಗಿ ಪರಸ್ಪರ ಸಹಾಯಕ ಕಂಪನಿಗಳನ್ನು ಏರ್ಪಡಿಸಿಕೊಂಡು ಗಣಿಗಳ ಕೆಲಸವನ್ನು ಪ್ರಾರಂಭಿಸಬೇಕಾಗಿದೆ ಎಂತಲೂ, ಕಾರ್ಖಾನೆಗಳನ್ನು ಸ್ಥಾಪಿಸಿ ನಡಿಸಬೇಕೆಂತಲೂ ಬೊಂಬಾಯಿನ ಸರ್ ವಿಠಲದಾಸ್ ಥ್ಯಾಕರ್ಸೆಯವರೂ ಶಿವಪುರ ಕಾಲೇಜಿನ ಪ್ರೊಫೆಸರ್ ಹಿಂಟ್ಸ್‌ರವರೂ, ಮದರಾಸಿನ ಮ|| ಜಿ. ಸುಬ್ರಹ್ಮಣ್ಯಯ್ಯನವರೂ, ಬೊಂಬಾಯಿನ ಮ|| ಎಚ್ ಎಸ್ ದೀಕ್ಷಿತರವರೂ ಉಪನ್ಯಾಸ ಮಾಡಿದರು. ವ್ಯವಸಾಯವನ್ನು ಅಭಿವೃದ್ಧಿಮಾಡುವುದಕ್ಕೆ ಗವರನ್‌ಮೆಂಟಿನವರು ಬ್ಯಾಂಕುಗಳನ್ನು ಇಡಬೇಕೆಂಬ ಅರ್ಥಕ್ಕೆ ಬೊಂಬಾಯಿನ ಮ|| ಲಾಲುಭಾಯಿ ಸಾಮಲದಾಸ್ ಯವರೂ ಸೂರತ್ತಿನ ರಾವ್ ಬಹದೂರ್ ಮುಂಚುಭಾಯಿ ಜಿ. ದೇಸಾಯಿಯವರೂ, ಮದರಾಸಿನ ರಾವ್ ಬಹದೂರ್ ವಿ. ಕೆ. ರಾಮಾನುಜಾಚಾರ್ಯರೂ ಭಾಷಣಗಳನ್ನು ಮಾಡಿದರು. ಹಿಂದುಸ್ಥಾನದ ನೆಯ್ಗೆ ಕಾರ್ಖಾನೆಗಳಲ್ಲಿ ತಯಾರಾಗುವ ಸರಕುಗಳಿಗೆ ಸರ್ಕಾರದವರು ಹಾಕಿರುವ ಅನ್ಯಾಯವೂ ಅನಾವಶ್ಯಕವೂ ಆದ ಸುಂಕವನ್ನು ತೆಗೆದುಹಾಕಬೇಕೆಂಬದಾಗಿ ಬೊಂಬಾಯಿನ ಮ|| ವಿ. ಠಾಕರ್‌ಸಿಯವರೂ, ಲಾಹೋರಿನ ಮ|| ರಾಮಭಜದತ್ತ ಚೌಧರಿಯವರೂ ಭಾಷಣಮಾಡಿದರು. ಹಿಂದುಸ್ಥಾನದಲ್ಲಿ ರೈಲ್ವೇ ಇಲಾಖೆಯವರು ಸಾಮಾನು ಸಾಗಿಸುವುದಕ್ಕೆ ಹಾಕಿರುವ ದರಗಳು ಅನ್ಯದೇಶಗಳಲ್ಲಿ ರುವುದಕ್ಕಿಂತ ಹೆಚ್ಚಾಗಿರುವ ಕಾರಣದಿಂದ ಸ್ವದೇಶೀ ಸರಕು ಪ್ರಚಾರಕ್ಕೆ ಬಹಳ ತುಂಬಾ ಅಡ್ಡಿಯಾಗಿದೆ ಎಂತಲೂ, ಆ ದರಗಳನ್ನು ಕಡಮೆಮಾಡಬೇಕೆಂತಲೂ ದಿವಾನ್ ಬಹದೂರ್ ಅಂಬಾಲಾಲ್ ಸಕರ್‌ಲಾಲ್ ದೇಸಾಯಿಯವರೂ, ಅಕೋಲಾದ ರಾವ್ ಬಹದೂರ್ ದೇವರಾವ್ ವಿನಾಯಕರವರೂ ಉಪನ್ಯಾಸ ಮಾಡಿದರು. ತರುವಾಯ ಮುಂದಿನ ವರುಷ ಈ ಸಭೆಗೆ ರಾವ್ ಬಹದೂರ್ ಆರ್ ಎನ್ ಮುಧೋಲ್ಕರ್ ಯವರು ಜನರಲ್ ಸೆಕ್ರೆಟರಿಯಾಗಿಯೂ, ಮ|| ಸಿ. ವೈ. ಚಿಂತಾಮಣಿಯವರು ಅಸಿಸ್ಟೆಂಟ್ ಸೆಕ್ರೆಟರಿಯಾಗಿಯೂ ಇರತಕ್ಕದ್ದೆಂದು ಚುನಾಯಿಸಲ್ಪಟ್ಟರು.

ಕಡೆಯಲ್ಲಿ ಪ್ರೆಸಿಡೆಂಟರು ಸಭಿಕರನ್ನೂ ಪ್ರತಿನಿಧಿಗಳನ್ನೂ ಕುರಿತು— ನಾವುಗಳೆಲ್ಲಾ ನಮ್ಮ ಮಾತೃಭೂಮಿಯನ್ನು ಅಭಿವೃದ್ಧಿಗೆ ತರುವುದಕ್ಕೆ ಪ್ರತಿಬಂಧವಿಲ್ಲದೆ ಕಾರ್ಯಸಾಧನೆ ಮಾಡಬೇಕೆಂಬದಾಗಿ ಹೇಳಿ ಈ ಸಲದ ಸಭೆಯು ಇಷ್ಟು ತೃಪ್ತಿಕರವಾಗಿ ನಡಿಯುವುದಕ್ಕೆ ದಿವಾನ್ ಬಹದೂರ್ ಪಿ. ರಾಜರತ್ನ ಮೊದಲಿಯಾರರೂ, ಮ|| ಎಸ್ ಪಟ್ಟಾಭಿರಾಮ ರಾಯರೂ, ಮ|| ಲಕ್ಷ್ಮೀನರಸು ನಾಯ್ಡುಯವರೂ ತುಂಬಾ ಶ್ರಮಪಟ್ಟಿರುತ್ತಾರೆಂದು ಅವರಿಗೆ ಸಭೆಯ ವಂದನೆಗಳನ್ನು ಸಮರ್ಪಿಸಿ, ಈ ವರುಷದ ಸಮಾಜವನ್ನು ಬರಖಾಸ್ತು ಮಾಡಿದರು.

ಹಿಂದುಸ್ಥಾನದ ರಾಷ್ಟ್ರೀಯ ಮಹಾ ಸಭೆಯು.

ಕಳೆದ ೨೮ ನೇ ತಾ. ಸೋಮವಾರ ಮಧ್ಯಾಹ್ನ ಹಿಂದುಸ್ಥಾನದ ಇಪ್ಪತ್ತನಾಲ್ಕನೇ ರಾಷ್ಟ್ರೀಯ ಮಹಾ ಸಭೆಯು (ನ್ಯಾಷನಲ್ ಕಾಂಗ್ರೆಸ್) ಮದರಾಸ್ ಪಟ್ಟಣದ ಮೌಂಟ್ ರೋಡಿನಲ್ಲಿ ಹೊಸದಾಗಿ ಏರ್ಪಾಡಾಗಿದ್ದ ದಿವ್ಯವಾದ ಭವನದಲ್ಲಿ ಪ್ರಾರಂಭವಾಗಿ ಮೂರುದಿನ ಜರುಗಿತು. ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ಸುಮಾರು ೬೫೦ ಮಂದಿ ಪ್ರತಿನಿಧಿಗಳೂ, ಸುಮಾರು ೧೦೦೦ ವಿಶ್ವಕರ್ಮಂತರೂ ಸಭಾಮಂದಿರವನ್ನು ಅಲಂಕರಿಸಿದ್ದರು. ಪ್ರತಿನಿಧಿಗಳ ಪೈಕಿ ೪೦೦ ಮಂದಿ ಮದರಾಸ್ ಅಧಿಪತ್ಯದವರು. ಬೊಂಬಾಯಿ ಅಧಿಪತ್ಯದವರು ೫೦ ಮಂದಿ, ಬೇರಾರ್ ೧೭, ಮಧ್ಯಪ್ರಾಂತ್ಯಗಳು ೨, ಬರ್ಮಾ ೪, ನುಜಫರ್‌ಪುರ ೧, ಸಂಯುಕ್ತ ಅಧಿಪತ್ಯಗಳು ೧೩, ಬಂಗಾಳಾ ೨೫, ಪಂಜಾಬ್ ೧೦. ಈ ಪ್ರತಿನಿಧಿಗಳಲ್ಲಿ ಮಿರಾಸೆದಾರರು, ಜಮೀನ್ದಾರರು, ಲಾಯರುಗಳು, ವರ್ತಕರು, ಬ್ಯಾಂಕರು (ಲೇವಾದೇವಿ ಮಾಡತಕ್ಕವರು) ಗಳು, ಉಪಾಧ್ಯಾಯರು, ಇನ್ನೂ ಇತರ ಕಸಬುಗಳನ್ನು ಅವಲಂಬಿಸಿದವರಾಗಿದ್ದರು. ಈ ಸಲ ಸಭ್ಯ (ಮಾಡರೇಟ್) ಪಕ್ಷದವರಿಗೆ ಮಾತ್ರವೇ ಸಮಾಜಕ್ಕೆ ಪ್ರತಿನಿಧಿಗಳಾಗಿ ಬರಬೇಕೆಂಬ ನಿರ್ಬಂಧವಿದ್ದದ್ದರಿಂದಲೂ, ಇತರರು ತಲಾ ೧೦ ರೂಪಾಯಿ ಕೊಟ್ಟು ಟಿಕೆಟ್ ಪಡೆದು ಹೋಗಬೇಕೆಂಬ ಏರ್ಪಾಡಾಗಿದ್ದದ್ದರಿಂದಲೂ ಸಭೆಯಲ್ಲಿ ಹಿಂದಿನ ವರುಷಗಳಲ್ಲಿ ಹೋದಷ್ಟು ಜನರು ಈ ಸಲ ಸೇರಿರಲಿಲ್ಲ. ಹಲವು ಮಂದಿ ಸ್ತ್ರೀಯರೂ ಸಭೆಯಲ್ಲಿ ಹಾಜರಾಗಿದ್ದರು. ಈ ಮಹಾ ಸಭೆಯಲ್ಲಿ ಕ್ರಮವನ್ನು ಕಾಪಾಡುವುದಕ್ಕೂ ಉಸ್ತುವಾರಿ ನೋಡಿಕೊಳ್ಳುವುದಕ್ಕೂ ದೇಶ ಸೇವಕರು ನಿಷ್ಟಪ್ಪಟ್ಟಿದ್ದರು.

"ದೇವರು ಮಹಾರಾಜನನ್ನು ಪಾಲಿಸಲಿ" ಎಂಬ ಪದ್ಯವನ್ನೂ "ವಂದೇ ಮಾತರಂ" ಕೀರ್ತನೆಯನ್ನೂ ಹಾಡಿ ಸಭೆಯು ಪ್ರಾರಂಭವಾದಾಗ ರಿಸೆಪ್ಷನ್ ಕಮಿಟಿಯ ಪ್ರೆಸಿಡೆಂಟರಾದ ದಿವಾನ್ ಬಹದೂರ್ ಕೆ. ಕೃಷ್ಣಸ್ವಾಮಿ ಐಯರ್, ಸಿ. ಐ. ಇ. ಯವರು ಸಭಾಸದರಿಗೆ ಸುಸ್ವಾಗತವನ್ನು ಬಯಸಿ ಉಪನ್ಯಾಸ ಮಾಡಿದರು. ಅದರಲ್ಲಿ ಕಂಡುಬರುವ ಮುಖ್ಯ ವಿಚಾರಗಳೇನೆಂದರೆ —ಮಾತೃಭೂಮಿಯನ್ನು ಉದ್ಧಾರಮಾಡುವುದಕ್ಕಾಗಿ ಈ ರಾಷ್ಟ್ರ ಕೂಟವು ಸೇರಿರುತ್ತದೆ. ಈ ಕೂಟವು ಯಾವದೊಂದು ಗಲಭೆಯೂ ಇಲ್ಲದೆ ಸಾರ್ಥಕವಾಗಿ ನೆರವೇರಲೆಂದು ಪ್ರಾರ್ಥಿಸುತ್ತೇನೆ. ದೇಶವತ್ಸಲರೂ, ಕುಶಲಮತಿಗಳೂ ಆದ ಈ ಸಭಾಸದರು ದೇಶಾಭಿವೃದ್ಧಿಗೆ ಸಹಕಾರಿಗಳಾದ ಸಲಿಕೆಗಳನ್ನು ಕುರಿತು ರಾಜಭಕ್ತಿಪೂರಿತರಾಗಿ ಪರ್ಯಾಲೋಚಿಸಿ ಪ್ರಜಾಪಾಲಕರಾದ ಇಂಗ್ಲಿಷ್ ಗವರ್ನ್‌ಮೆಂಟಿನವರಿಗೆ ತಮ್ಮ ತೀರ್ಮಾನಗಳನ್ನು ಅರಿಕೆ ಮಾಡುವಂತಾಗಲಿ. ಸ್ಟೇಟ್ ಸೆಕ್ರೆಟರಿಯವರೂ ಹಿಂದುಸ್ಥಾನದ ವೈಸ್‌ರಾಯಿಯವರೂ ಕಾಲಾನುಗುಣ್ಯವಾಗಿಯೂ ಪ್ರಜೆಗಳ ಯೋಗ್ಯತೆಗನುಸಾರವಾಗಿಯೂ ರಾಜ್ಯಭಾರ ಕ್ರಮದಲ್ಲಿ ಕೆಲವು ಶಿಸ್ತುಗಳನ್ನೂ ಬದಲಾವಣೆಗಳನ್ನೂ ಸೂಚಿಸುವವರಾಗಿದ್ದಾರೆ. ಈ ಭಾಗದಲ್ಲಿ ಈ ರಾಷ್ಟ್ರ ಕೂಟವು ಆ ಮಹನೀಯರನ್ನು ಕೃತಜ್ಞತಾಪೂರ್ವಕವಾಗಿ ವಂದಿಸುವುದು. ರಾಜದ್ರೋಹವನ್ನು ಅಡಗಿಸುವುದಕ್ಕೆ ಗವರ್ನ್‌ಮೆಂಟಿನವರು ಹೊಸ ಕಾನೂನುಗಳನ್ನು ಮಾಡಬೇಕಾಯಿತಲ್ಲಾ ಎಂದು ವಿಷಾದಪಟ್ಟರೂ, ಈ ಮಹಾ ಸಭೆಯವರು ಅವುಗಳನ್ನು ಒಪ್ಪಿಕೊಳ್ಳುತ್ತಾರೆ. ತಮ್ಮ ಕೊರತೆಗಳನ್ನೂ ಇಂಗಿತಗಳನ್ನೂ ಪಾಲಕರಲ್ಲಿ ಅರಿಕೆಮಾಡುತ್ತಾ ಬರುವುದೇ ಪ್ರಜೆಗಳ ಧರ್ಮವಾಗಿರುತ್ತದೆ. ಈ ಧರ್ಮವನ್ನು ಬಿಟ್ಟು ಅನ್ಯ ಮಾರ್ಗಗಳಲ್ಲಿ ನಡೆದುಕೊಳ್ಳುವುದು ಪ್ರಜೆಗಳಿಗೆ ಎಂದಿಗೂ ಶ್ರೇಯಸ್ಕರವಾಗಲಾರದು. ಈ ರಾಷ್ಟ್ರ ಸಮಾಜದ ನಿರ್ಬಂಧನೆಯಲ್ಲಿ ಕೆಲವು ಹಿತಕರವಾದ ಬದಲಾವಣೆಗಳನ್ನು ಮಾಡಿದ್ದೂ, ಈ ಕ್ರಮವನ್ನನುಸರಿಸಿ ಈ ವರುಷದ ಸಭೆಯನ್ನು ಸೇರಿಸಿದ್ದೂ ಎಷ್ಟೋ ಉತ್ತಮವಾಯಿತು. ತೀವ್ರ (ಎಕ್ಸ್‌ಟ್ರೀಮಿಸ್ಟ್) ಪಕ್ಷದವರು ಈ ಸಭೆಯಿಂದ ದೂರೀಕರಿಸಲ್ಪಟ್ಟರು. ಇದು ಈ ಸಭೆಯ ಪುರೋವೃದ್ಧಿಗೆ ಅನುಕೂಲವಾಯಿತು. ಈಗ ಹಿಂದುಸ್ಥಾನದಲ್ಲಿ ಪ್ರಜೆಗಳ ಮನಸ್ಸು ಚಂಚಲವಾಗಿ ಅಸಮಾಧಾನಪಡುತ್ತಾ ಇರುವುದಕ್ಕೆ ಕಾರಣಗಳುಂಟು. ಪ್ರಜಾಸಂಖ್ಯೆಯು ಹೆಚ್ಚಿ ದೇಶೀಯ ಕಸಬುಗಳೂ ಕಲಾಕೌಶಲ್ಯಗಳೂ ಕ್ಷೀಣವಾಗಿ ಆಹಾರ ದಿನಸುಗಳು ಬಹಳ ಪ್ರಿಯವಾಗಿ [illegible] ಕಸಬುಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಗವರ್ನ್‌ಮೆಂಟಿನವರು ಮಾಡುತ್ತಿರುವ ಏರ್ಪಾಡುಗಳು ಏನೂ ಸಾಲದಾಗಿಲ್ಲ. ಅನ್ಯ ದೇಶಗಳಿಗೆ ಹೋಗಿ ನೆಲಸೋಣವೆಂದರೆ ಅಲ್ಲಿ ಇವರನ್ನು ಬಿಡುವುದಿಲ್ಲ. ಬಿಗಿಸಲ್ಪಡುತ್ತಿದೆ. ಇದಕ್ಕೂ ಇವರ ನಿಸ್ಸತ್ತ್ವಗೂ ಸರ್ಕಾರದವರೇ ಕಾರಣರೆಂದು ಪ್ರಜೆಗಳು ತಿಳಿದು ಚಿಂತಿಸುತ್ತಾರೆ. ಆದರೆ ರಾಜದ್ರೋಹಿಗಳಾಗಿ ದಂಗೆಯೇಳುವುದಾಗಲಿ, ಕೊಲೆ ಪಾತಕಗಳನ್ನು ನಡೆಸುವುದಾಗಲಿ ಇಲ್ಲಿನ ಪ್ರಜೆಗಳ ಸ್ವಭಾವಕ್ಕೆ ವಿರೋಧವಾಗಿದೆ. ಇಂಗ್ಲಿಷ್ ಗವರ್ನ್‌ಮೆಂಟು ಶಾಶ್ವತವಾಗಿರಬೇಕೆಂಬುವುದೂ ಅವರ ಆಶ್ರಯದಲ್ಲೂ ಪೋಷಣೆಯಲ್ಲೂ ಇದ್ದುಕೊಂಡು ಅಭಿವೃದ್ಧಿಗೆ ಬರಬೇಕೆಂಬುವುದೂ ಪ್ರಜಾಕೋಟಿಗಳ ಯಥಾರ್ಥವಾದ ಅಭಿಮತವಾಗಿರುತ್ತದೆ ಎಂಬುದೆ.

ಪ್ರೆಸಿಡೆಂಟರ ಭಾಷಣವು

ನವಾಬ್ ಸೈಯದ್ ಮಹಮದ್ ಯವರೂ, ರಾವ್ ಬಹದೂರ್ ಆರ್ ಎನ್ ಮುಧೋಲ್ಕರ್ ಯವರೂ, ಸರ್ ಬಾಲಚಂದ್ರ ಕೃಷ್ಣರವರೂ ಉಪನ್ಯಾಸ ಮಾಡಿ, ಡಾ|| ರಾಸ್ ಬಿಹಾರಿ ಘೋಷ್ ಯವರನ್ನು ಈ ವರುಷ ಈ ರಾಷ್ಟ್ರ ಕೂಟಕ್ಕೆ ಪ್ರೆಸಿಡೆಂಟರನ್ನಾಗಿ ಚುನಾಯಿಸಬೇಕೆಂದು ಸೂಚಿಸಿದರು. ಸಭೆಯವರೆಲ್ಲಾ ಏಕವಾಕ್ಯತೆಯಿಂದ ಒಪ್ಪಿಕೊಂಡರು. ಮ|| ಡಿ. ಇ. ವಾಚಾ ಯವರು ಎದ್ದು ನಿಂತು ಹಲವು ದೊಡ್ಡ ಮನುಷ್ಯರಿಂದಲೂ ದೇಶವತ್ಸಲರಿಂದಲೂ ಬಂದಿದ್ದ ತಂತಿ ವರ್ತಮಾನಗಳನ್ನೂ ಕಾಗದಗಳನ್ನೂ ಸಭಿಕರಿಗೆ ಓದಿ ಹೇಳಿದರು. ಸಭಿಕರೆಲ್ಲಾ ದೀರ್ಘವಾದ ಹರ್ಷಧ್ವನಿಗಳನ್ನು ಮಾಡುತ್ತಿರುವಲ್ಲಿ ಸಭಾಧ್ಯಕ್ಷರಾದ ಡಾ|| ರಾಸ್ ಬಿಹಾರಿ ಘೋಷ್ ಯವರು ತಮ್ಮ ಸ್ಥಾನದಿಂದ ಎದ್ದು ಸಭಾಸದರನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಅವರು ತಿಳಿಸಿದ ಮುಖ್ಯಾಭಿಪ್ರಾಯಗಳೇನೆಂದರೆ —

ಕಳೆದ ವರುಷ ಸೂರತ್ತಿನಲ್ಲಿ ಉಂಟಾದ ಎರಡು ಪಕ್ಷಗಳ ಬೇಧದಿಂದ ಈ ವರುಷ ಈ ರಾಷ್ಟ್ರ ಸಭೆಯು ಕೂಡುವುದೇ ಸಂದೇಹವಾಗಿದ್ದಿತು. ದೇವರ ದಯೆಯಿಂದ ಎಲ್ಲಾ ವಿಧದ ಅನಿವಾರ್ಯಗಳೂ ಅಡಚಣೆಗಳೂ ನಿವಾರಣೆಯಾಗಿ ಈ ಸಭೆ ನಡಿಯುವಂತಾಯಿತು. ಇದಕ್ಕಾಗಿ ನಾವುಗಳೆಲ್ಲಾ ತುಂಬಾ ಆನಂದಪಡುತ್ತೇವೆ. ಈ ಸಭೆಯು ಚಿರಕಾಲ ಪ್ರಜೆಗಳಿಗೂ ಪ್ರಜಾಪಾಲಕರಿಗೂ ಶ್ರೇಯಸ್ಕರವಾದ ಮಾರ್ಗಗಳಲ್ಲಿ ಕಾರ್ಯಸಾಧನೆ ಮಾಡುತ್ತಾ ಬರಲೆಂದು ಹಾರೈಸುತ್ತೇವೆ. ಗವರ್ನ್‌ಮೆಂಟಿನವರು ಕೃಪೆಯಿಟ್ಟು ಈ ರಾಷ್ಟ್ರದ ಪ್ರಜೆಗಳಿಗೆ ಹೆಚ್ಚು ಸ್ವಾತಂತ್ರ್ಯಗಳನ್ನು ವಹಿಸುವರೆಂದು ಮೊನ್ನೆ ತಾನೇ ಅಪ್ಪಣೆಕೊಟ್ಟಿರುವರು. ಇಲ್ಲಿಂದ ಮುಂದೆ ಹಿಂದುಸ್ಥಾನದ ಚರಿತ್ರೆಯು ಬೇರಾಗುವುದು. ವಿಕ್ಟೋರಿಯಾ ಮಹಾರಾಜ್ಞೀಯವರಿಂದ ದಯಾಪೂರ್ವಕವಾಗಿ ಕಳೆದ ೧೮೫೮ ರಲ್ಲಿ ಕೊಡೋಣವಾದ ಪ್ರಜಾಪ್ರೇಮಯುಕ್ತವಾದ ಇಸ್ತಿಹಾರನಾಮೆಯನ್ನು ಕರುಣಾದ್ರ್ರ ಹೃದಯರಾದ ಚಕ್ರವರ್ತಿ ಸಾರ್ವಭೌಮರವರು ಅನುಮೋದಿಸಿ ಅದನ್ನು ನೆರವೇರಿಸುವುದಾಗಿ ಇಸ್ತಿಹಾರನಾಮೆಯನ್ನು ಕಳೆದ ನೋವೆಂಬರ್ ೧ ರಲ್ಲಿ ದಯಪಾಲಿಸಿರುವುದಕ್ಕಾಗಿಯೂ, ಈ ವಾಗ್ದಾನವನ್ನು ನೆರವೇರಿಸುವ ಅರ್ಥದಲ್ಲಿ ಈಗ ಹೊಸ ಶಿಸ್ತುಗಳನ್ನೂ ಬದಲಾವಣೆಗಳನ್ನೂ ಮಾಡಿರುವುದಕ್ಕಾಗಿಯೂ ಈ ರಾಷ್ಟ್ರದ ಸಕಲ ಪ್ರಜೆಗಳ ಪರವಾಗಿ ಆ ಮಹನೀಯರನ್ನು ರಾಜಭಕ್ತಿಪುರಸ್ಸರವಾಗಿ ವಂದಿಸುತ್ತೇನೆ. ತರುವಾಯ ಹಿಂದುಸ್ಥಾನದ ಭವಿಷ್ಯತ್ತಿನ ಸ್ಥಿತಿಗತಿ, ಈಗ ತೋರುತ್ತಿರುವ ಅತೃಪ್ತಿ ಅಸಮಾಧಾನಗಳು, ರಾಜದ್ರೋಹ ಕ್ರೂರಕೃತ್ಯಾದಿಗಳನ್ನು ಅಡಗಿಸುವುದಕ್ಕೆ ಗವರ್ನ್‌ಮೆಂಟಿನವರು ಮಾಡಬೇಕಾಗಿ ಬಂದ ಹೊಸ ಕಾನೂನುಗಳು, ರಾಜದ್ರೋಹಮಾಡಿದವರೆಂದು ಪತ್ರಿಕಾ ಎಡಿಟರುಗಳನ್ನೂ ಉಪನ್ಯಾಸಕರನ್ನೂ ಹಿಡಿದು ದೆಯಾರ್ಸ್ಟ್ ಮಾಡುತ್ತಿರುವುದು, ಕಳೆದ ೧೮೧೮ ನೇ ಇಸವಿಯ ಕಾನೂನ್ ಪ್ರಕಾರ ದೇಶವತ್ಸಲರನ್ನು ಹಿಡಿದು ಗಡೀಪಾರು ಮಾಡಿರುವುದು, ಬಂಗಾಳಾ ಅಧಿಪತ್ಯವನ್ನು ವಿಭಜಿಸಿಮಾಡಿದ್ದು, ಈ ಮೊದಲಾದ ವಿಚಾರಗಳನ್ನು ಕುರಿತು ಭಾಷಣ ಮಾಡಿದರು.

ತಾ. ೨೯ ನೇ ಮಂಗಳವಾರ ಮತ್ತೆ ರಾಷ್ಟ್ರಕೂಟವು ಸೇರಿತು. ಡಾ|| ರಾಸ್ ಬಿಹಾರಿ ಘೋಷ್ ಯವರು ಸಭೆಯ ಅಗ್ರಸ್ಥಾನವನ್ನು ವಹಿಸಿದರು. ಮೆಂಬರುಗಳೂ ಪ್ರೇಕ್ಷಕರೂ ಹಾಜರಾಗಿದ್ದರು. ಮೊದಲು ಸಭಿಕರೆಲ್ಲಾ ಏಕವಾಕ್ಯತೆಯಿಂದ ಚಕ್ರವರ್ತಿಯವರಿಗೆ ಅವರು ದಯಪಾಲಿಸಿದ ಇಸ್ತಿಹಾರನಾಮೆಗಾಗಿ ರಾಜಭಕ್ತಿಸೂಚಕವಾದ ವಂದನೆಗಳನ್ನು ಸಮರ್ಪಿಸಬೇಕೆಂದು ತೀರ್ಮಾನ ಮಾಡಿದರು. ಅನಂತರ ಸಭಿಕರು ಚರ್ಚಿಸಿ ತೀರ್ಮಾನಮಾಡಿದ ವಿಷಯಗಳಾವುವೆಂದರೆ —

(೧) ಗವರ್ನ್‌ಮೆಂಟಿನವರು ಹಿಂದುಸ್ಥಾನದ ಪ್ರಜೆಗಳಿಗೆ ಹೆಚ್ಚು ಸ್ವಾತಂತ್ರ್ಯಗಳನ್ನು ದಯಪಾಲಿಸಿದ್ದಕ್ಕಾಗಿ ಬ್ರಿಟಿಷ್ ಗವರ್ನ್‌ಮೆಂಟಿನವರನ್ನೂ ಲಾರ್ಡ್ ಮಾರ್ಲೀಯವರನ್ನೂ ಲಾರ್ಡ್ ಮಿಂಟೋಯವರನ್ನೂ ಕೃತಜ್ಞತೆಯಿಂದ ವಂದಿಸಬೇಕೆಂದು ತೀರ್ಮಾನಮಾಡಿದರು. (೨) ಚಕ್ರವರ್ತಿ ಸಾರ್ವಭೌಮರವರ ಹಿಂದುಸ್ಥಾನದ ಸಭ್ಯ ಪ್ರಜೆಗಳು ಕೊಲೆ, ರಾಜದ್ರೋಹ, ಕ್ರೂರಕೃತ್ಯಾದಿಗಳನ್ನು ಮಾಡುವರು. ಅತಿ ಹೇಯವಾದ ಕೃತ್ಯಗಳೆಂದು ಬಹಿಷ್ಕರಿಸುವರು. (೩) ಜಡ್ಜಿಗಳಿಗೆ ಪೋಲೀಸ್ ಅಧಿಕಾರಗಳನ್ನು ತೆಗೆದು ಹಾಕಬೇಕು. ಇದು ಪರಿಕ್ಷಾರ್ಥವಾಗಿ ಬಂಗಾಳಾದಲ್ಲಿ ರೂಢಿಗೆ ತರಲ್ಪಟ್ಟಿದೆ. ಮ್ಯಾಜಿಸ್ಟ್ರೇಟರು ಪೋಲೀಸಿನ ಮೇಲೆ ಅಧಿಕಾರ ನಡಿಸೋಣದರಿಂದ ನ್ಯಾಯಸಿಕ್ಕುವುದು ಕಷ್ಟ. ಹಿಂದುಸ್ಥಾನದಲ್ಲೆಲ್ಲಾ ಮ್ಯಾಜಿಸ್ಟ್ರೇಟರಿಗೆ ಪೋಲೀಸ್ ಅಧಿಕಾರಿಗಳ ಮೇಲೆ ಯಾವ ವಿಧವಾದ ಅಧಿಕಾರವೂ ಇರದಂತೆ ಮಾಡಬೇಕು. (೪) ಹಿಂದುಸ್ಥಾನದ ಸೈನ್ಯದಲ್ಲಿ ದೇಶೀಯ ಜನರಿಗೆ ಅವರು ಎಷ್ಟು ಪರಾಕ್ರಮಿಗಳಾಗಿದ್ದರೂ ಹುದ್ದೆಗಳನ್ನು ಕೊಡುವುದಿಲ್ಲ. ಇದನ್ನು ಇನ್ನು ಮೇಲಾದರೂ ದಯಪಾಲಿಸಬೇಕು. (೫) ಸಮಸ್ತ ವಿಧವಾದ ಅಪರಾಧಗಳನ್ನು ಶಿಕ್ಷಿಸುವುದಕ್ಕೂ ಹಿಂದುಸ್ಥಾನದಲ್ಲಿ ಕಾನೂನುಗಳುಂಟು. ಉಂಟು ಅಪರಾಧವೇನೆಂದು ಹೇಳದೆ, ವಿಚಾರಣೆಮಾಡಿಸದೆ ಜನರನ್ನು ಹಿಡಿದು ಗಡೀಪಾರು ಮಾಡುವಂಥಾ ಹಳೇ ಕಾನೂನನ್ನು ರದ್ದು ಮಾಡಬೇಕು. ಈ ಬಂಗಾಳದಿಂದ ಗಡೀಪಾರಾಗಿರುವವರನ್ನು ವಾಪಸು ಕರಸಬೇಕು, ಇಲ್ಲವೇ ಅವರ ಮೇಲೆ ಬಂದಿರುವ ಅಪರಾಧ ಇಂಥಾದ್ದು ಎಂದು ಅವರಿಗೆ ತಿಳಿಸಿ ಅವರನ್ನು ನ್ಯಾಯವಿಚಾರಣೆ ಮಾಡಬೇಕು. (೬) ಈಗ ಗವರ್ನ್‌ಮೆಂಟಿನವರು ಹೊಸದಾಗಿ ಪಾಸ್ ಮಾಡಿ ಜಾರಿಯಲ್ಲಿ ತಂದಿರುವಂಥಾ ಕಠಿಣತರವಾದ ಕಾನೂನುಗಳನ್ನು ಕೆಲವು ಕಾಲವಾದ ನಂತರ ವಜಾಮಾಡಬೇಕು. (೭) ಮಧ್ಯಪ್ರಾಂತ್ಯ ಮತ್ತು ಬೇರಾರ್ ಎಂಬ ವಿಭಾಗದಲ್ಲಿ ಇತರ ಅಧಿಪತ್ಯಗಳಲ್ಲಿರುವಂತೆ ಒಂದು ಮುಂತ್ರಾಲೋಚನಾ ಸಭೆಯನ್ನು ಸ್ಥಾಪಿಸಿಕೊಡಬೇಕು. (೮) ಈಗ ಹಲವು ವರುಷಗಳಿಂದ ದಿನಸಿಗಳ ಧಾರಣೆಗಳು ಬಹಳ ಹೆಚ್ಚಿರೋಣದರಿಂದ ಅನೇಕಾನೇಕ ಪ್ರಜೆಗಳು ಜೀವನಕ್ಕೆ ಬಹಳ ಕಷ್ಟಪಡುತ್ತಿದ್ದಾರೆ. ಹೀಗೆ ಧಾರಣೆಗಳು ಹೆಚ್ಚುತ್ತಾ ಬರುವುದಕ್ಕೆ ಕಾರಣಗಳೇನೆಂಬುದನ್ನು ಕುರಿತು ಗವರ್ನ್‌ಮೆಂಟಿನವರು ಕ್ರಮವಾಗಿ ತನಿಖೆ ನಡಿಸಬೇಕೆಂತಲೂ, ಅದಕ್ಕೆ ಪರಿಹಾರಗಳನ್ನು ಕೂಡಲೇ ಕಲ್ಪಿಸಬೇಕೆಂತಲೂ ಪ್ರಾರ್ಥನೆ. (೯) ಬಂಗಾಳಾ ಅಧಿಪತ್ಯವನ್ನು ವಿಭಾಗಮಾಡಿರುವುದನ್ನು ರದ್ದುಮಾಡಿಕೊಡಬೇಕು. ಇಲ್ಲವೇ, ಬಂಗಾಳಾ ಪ್ರಜೆಗಳೆಲ್ಲಾ ಒಂದೇ ಅಧಿಪತ್ಯಕ್ಕೆ ಸೇರುವಂತೆ ಏರ್ಪಾಡು ಮಾಡಿಕೊಡಬೇಕು. (೧೦) ಹಿಂದುಸ್ಥಾನದ ಪ್ರಜೆಗಳು ಇಂಗ್ಲಿಷ್ ಸಾಮ್ರಾಜ್ಯಗಳಲ್ಲಿ ನೆಲ್ಲಾ ವಿಯಾಗಿರುವಂತೆ ಅಲ್ಲಿನವರು ಅವರನ್ನು ಕಟ್ಟುಕಟ್ಟಳೆಗೆ ಗುರಿಮಾಡಿದ್ದಾರೆ. ಇದನ್ನು ತಪ್ಪಿಸಿಕೊಡಬೇಕು. (೧೧) ಸ್ವದೇಶೀ ವಿಚಾರವನ್ನು ಈ ರಾಷ್ಟ್ರದ ಸಕಲ ಪ್ರಜೆಗಳೂ ಪ್ರೋತ್ಸಾಹ ಪಡಿಸಬೇಕು. ಇದರಿಂದ ಇಲ್ಲಿನ ಕಸಬುಗಳು ಅಭಿವೃದ್ಧಿಯಾಗಲು ಸಹಾಯವಾಗುತ್ತದೆ. ಅನ್ಯದೇಶದ ಸರಕು ಅಗ್ಗವಾಗಿದ್ದರೂ ಸ್ವಲ್ಪ ತಗ್ಗಿದ ದೇಶೀಯ ಪದಾರ್ಥಗಳನ್ನೇ ಸಾಧ್ಯವಾಗುವ ಮಟ್ಟಿಗೂ ಎಲ್ಲರೂ ಕೊಂಡು ಉಪಯೋಗಿಸಬೇಕು. (೧೨) ಹಿಂದುಸ್ಥಾನದ ಆದಾಯದಲ್ಲಿ ವಿದ್ಯಾ ಇಲಾಖೆಗೆ ಇನ್ನೂ ಪ್ರತಿ ವರುಷವೂ ೭೫ ಲಕ್ಷ ರೂಪಾಯಿ ಜಾಸ್ತಿ ವಿನಿಯೋಗಿಸಬೇಕೆಂದು ಮಿಲ್ ಮಂತ್ರಿ ಗವರನ್‌ಮೆಂಟಿನವರು ಕಳುಹಿಸಿರುವ ಶಿಫಾರಸನ್ನು ಅನುಮೋದಿಸುತ್ತಾರೆ. ಈ ಹಣವನ್ನು ಸಾರ್ವಜನಿಕ ವಿದ್ಯೆಗೆ ವಿನಿಯೋಗಿಸಬೇಕು. (೧೩) ಹಿಂದುಸ್ಥಾನದ ಎಲ್ಲಾ ಕಡೆಗಳಲ್ಲಿ ಬಾಲವಿದ್ಯಾಭ್ಯಾಸ (ಪ್ರೈಮರಿ ವಿದ್ಯೆ)ಯನ್ನು ಫೀಜು ತೆಗೆದುಕೊಳ್ಳದೆ ನಡಿಸುವಂತೆ ಹುಕುಂ ಕೊಡಬೇಕು. ಕ್ರಮೇಣ ಈ ವಿದ್ಯೆಯನ್ನು ಬಲಾತ್ಕಾರದಿಂದ ಸಕಲ ಪ್ರಜೆಗಳಿಗೂ ಕಲಿಸಬೇಕು. ಬೆಂಗಳೂರು ಮತ್ತು ಮೈಸೂರು ವಿದ್ಯಾಶಾಲೆಗಳಿಗೆ ಗವರನ್‌ಮೆಂಟಿನವರು ಇನ್ನೂ ಹೆಚ್ಚು ಹಣವನ್ನು ಗ್ರ್ಯಾಂಟ್ ಮಾಡಬೇಕು. ಅದರಲ್ಲೂ ಹಿಂದೆಬಿದ್ದಿರುವ ಕೆಲವು ವರ್ಗಗಳ ಪ್ರಜೆಗಳಿಗೆ ವಿಶೇಷವಾದ ಪ್ರೋತ್ಸಾಹಗಳನ್ನು ಕಲ್ಪಿಸಬೇಕು. ಆಯಾ ಅಧಿಪತ್ಯಕ್ಕೆ ಅನುಗುಣವಾದ ಕಸಬುಗಳನ್ನು ಅಭಿವೃದ್ಧಿಮಾಡುವುದಕ್ಕೆ ಹಲವು ಕಸಬುದಾರಿ ಪಾಠಶಾಲೆಗಳನ್ನೂ ಕಲಾಶಾಲೆಗಳನ್ನೂ ಸ್ಥಾಪಿಸಬೇಕು. ಹಿಂದುಸ್ಥಾನದ ವಿದ್ಯೆಯನ್ನು ಈ ರಾಷ್ಟ್ರದಲ್ಲಿ ಪ್ರಚಾರ ಮಾಡುವ ಭಾಗದಲ್ಲಿ ದೇಶೀಯ ಮುಖಂಡರ ಅಭಿಪ್ರಾಯಕ್ಕೆ ಪ್ರಾಶಸ್ತ್ಯವನ್ನು ವಿಶೇಷವಾಗಿ ಕೊಡುವ ಹಾಗೆ ಬೇಕು. (೧೪) ಹಿಂದುಸ್ಥಾನವು ವ್ಯವಸಾಯ ಶೀಮೆಯಾಗಿದೆ. ವ್ಯವಸಾಯವು ಅಭಿವೃದ್ಧಿ ಹೊಂದಬೇಕಾದರೆ ಕಂದಾಯಗಳನ್ನು ಈಗಿನಂತೆ ಆಗಾಗ್ಗೆ ಹೆಚ್ಚಿಸುತ್ತಾ ಇದ್ದರೆ ಆಗಲಾರದು. ಖಾಯಂ ಕಂದಾಯವನ್ನು ರಿವಾಜು ಮಾಡುವುದೆ ಕ್ಷೇಮವಾದೀತು. ಬಂಗಾಳಾದಲ್ಲಿ ಈ ಶಿಸ್ತು ನಡಿಯುತ್ತಿದೆ. ಇದೇ ಶಿಸ್ತನ್ನು ಇತರ ಅಧಿಪತ್ಯಗಳಲ್ಲೂ ನಡಿಸುವುದಕ್ಕಾಗದಿದ್ದರೆ ಈಗಿನ ೩೦ ವರುಷದ ಸರ್ವೆ ಕಟ್ಟನ್ನು ೬೦ ವರ್ಷಕ್ಕೊಂದು ಸಲ ನಡಿಯುವಂತಾದರೂ ಮಾಡಿಕೊಡಬೇಕು.

ಇವೇ ಮೊದಲಾದ ತೀರ್ಮಾನಗಳನ್ನು ಮಾಡಿ ಅನಂತರ ಈ ರಾಷ್ಟ್ರ ಕೂಟವು ಬರಖಾಸ್ತು ಮಾಡಲ್ಪಟ್ಟಿತು.

ಮುಂದಿನ ವರುಷದ ಕಾಂಗ್ರೆಸ್ ಕಮಿಟಿಗೆ ಮ|| ಡಿ. ಇ. ವಾಚಾಯವರೂ ಮ|| ಗೋಖಲೇ ಯವರೂ ಜನರಲ್ ಸೆಕ್ರೆಟರಿಗಳಾಗಿರಬೇಕೆಂದು ಚುನಾಯಿಸಿ ಗೊತ್ತುಮಾಡಿದರು.

ಮುಂದಿನ ವರುಷದ ಮಹಾ ಸಭೆಯು.

ಪಂಜಾಬ್ ಅಧಿಪತ್ಯದ ಪ್ರತಿನಿಧಿಗಳ ಪರವಾಗಿ ಲಾಲಾ ಹರಿಕಿಷನ್ ಲಾಲಾ ಯವರು ಸಭಿಕರನ್ನು ಕುರಿತು— ಈ ಮಹಾ ಸಭೆಯು ನಮ್ಮ ಅಧಿಪತ್ಯದಲ್ಲಿ ನಡೆದು ಒಂಬತ್ತು ವರುಷಗಳಾದವೆಂತಲೂ, ೧೯೦೯ನೇ ಡಿಸೆಂಬರಿನಲ್ಲಿ ನಡಿಯುವ ಈ ರಾಷ್ಟ್ರ ಸಭೆಯು ಲಾಹೋರ್ ಪಟ್ಟಣದಲ್ಲಿ ಜರುಗುವಂತೆ ಸಮ್ಮತಿಪಡಬೇಕೆಂತಲೂ ಕೇಳಿಕೊಂಡರು. ಸಭೆಯ ಪ್ರತಿನಿಧಿಗಳೆಲ್ಲಾ ಏಕವಾಕ್ಯತೆಯಿಂದ ಹಾಗೇ ಆಗಲೆಂದು ಒಪ್ಪಿ, ಮುಂದಿನ ವರುಷದ ಕಾಂಗ್ರೆಸ್ ಸಭೆಯು ಲಾಹೋರಿನಲ್ಲಿ ನಡಿಯಬೇಕೆಂದು ತೀರ್ಮಾನ ಮಾಡಿದರು.

ಕಡೆಯಲ್ಲಿ ಸಭಿಕರೆಲ್ಲಾ ಚಕ್ರವರ್ತಿ ಸಾರ್ವಭೌಮರವರಿಗೂ, ಲಾರ್ಡ್ ಮಾರ್ಲೀ ಯವರಿಗೂ, ಲಾರ್ಡ್ ಮಿಂಟೋ ಯವರಿಗೂ ಜಯವಾಗಲೆಂದೂ ಚಿರಾಯುರಾರೋಗ್ಯಾದಿಗಳು ಲಭಿಸಲೆಂದೂ ಏಕವಾಕ್ಯತೆಯಿಂದ ಜಯಘೋಷ ಮಾಡಿ, ಚದರಿಹೋದರು.

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳುಹಿಸಬೇಕು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲ ಇದುಂಟೆವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್ಪಾಂಡೆನ್ಸ್

ಸೀಟಿನ ಕಷ್ಟ, ಭಾವಿಯು ಅರೆಕೆಲಸ.

ಅಯ್ಯಾ,

ಅರಸೀಕೆರೆ ತಾಲ್ಲೂಕು ಸಾತನಗೆರೆ ಗ್ರಾಮದಲ್ಲಿ ಕ್ಷಾಮದ ದೆಸೆಯಿಂದ ನೀರಿಗೆ ಬಹಳ ಅನಾನುಕೂಲ ಪಡುತ್ತಾ ಇದ್ದೇವೆ ಈಗ ಸುಮಾರು ೩ ೪ ವರ್ಷದಿಂದ ಈ ಗ್ರಾಮದ ಕೆರೆ ದುರಸ್ತು ಮಾಡಿಸಿಕೊಡಬೇಕೆಂದು ೧೦ ೧೨ ಅರ್ಜಿಗಳು ಬರೆದುಕೊಂಡರೂ ಸರ್ಕಾರದವರು ಇದುವರೆಗೂ ಚಿತ್ತಕ್ಕೆ ತರಲಿಲ್ಲ ಈ ಬಹಳ ನೀರಿನ ಕಷ್ಟವಾದ್ದರಿಂದ ನಮ್ಮ ಅರಸೀಕೆರೆ ತಾಲ್ಲೂಕಿನಲ್ಲಿ ದೊಡ್ಡ ಅಮಲ್ದಾರ್ರು ನಮ್ಮಗಳ ಅನಾನುಕೂಲತೆಯನ್ನು ನೋಡಿ ಒಂದು ಭಾವಿಗೆ ಪ್ಲಾನ್ ಕೊಟ್ಟು ಮಟ್ಟಿ ಕಾಮಗಾರಿ ಗ್ರಾಮಸ್ಥರು ಮಾಡಿಸಿದರೆ ಕಲ್ಲು ಕಾಮಗಾರಿ ಸರ್ಕಾರದಿಂದ ಮಾಡಿಸಿಕೊಡುತ್ತೇವೆಂದು ಬಡವರಾದ ನಮ್ಮ ಮೇಲೆ ಬಹಳ ದಯಾಳುವಿನಿಂದ ಅಪ್ಪಣೆ ನಡೆಸಿದ್ದರು ಅದರಂತೆ ಮಟ್ಟಿ ಕಾಮಗಾರಿ ಮಾಡಿಸಿ ಬಹು ದಿನಗಳು ಕಳೆಯುತ್ತ ಈಗಿರುವ ಅಮಲ್ದಾರರು ಜಮಾಬಂದಿಗೆ ಬಂದು ಇದರ ಕಲ್ಲು ಕಾಮಗಾರಿ ಮಾಡಿಸಿಕೊಡುತ್ತೇವೆಂದು ಹೋದವರು ಈ ವರೆಗೂ ಇದರ ಗಮನ ಕೊಡಲಿಲ್ಲ ಇದನ್ನು ಜಾಗ್ರತೆಯಾಗಿ ಮಾಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ

ಗ್ರಾಮಸ್ಥ.

ಕಣ್ವಪುರದಲ್ಲಿ ಅನ್ನದಾನ

ಅಯ್ಯಾ,

ಎಲ್ಲಾ ದಾನಗಳಲ್ಲಿ ಯೂ ಅನ್ನದಾನವು ಸರ್ವೋತ್ಕೃಷ್ಟವಾದುದೆಂದು ಎಲ್ಲರೂ ತಿಳಿದೇ ಇರುವುದಷ್ಟೆ ತನ್ನಾಸ್ತಿ ಈ ಕ್ಷಾಮಕಾಲದಲ್ಲಿ ದಿಕ್ಕಿಲ್ಲದಿರುವ ಅನೇಕರು ಕ್ಷುತ್ಪೀಡೆ ಯಿಂದ ಸಾಯುತ್ತಿರುವಾಗ ಅವರನ್ನು ಆದರಿಸಿ ಅನ್ನದಾನ ಮಾಡುವುದಕ್ಕಿಂತ ಬೇರೆ ಪುಣ್ಯಕಾರ್ಯ ಇರುವುದು ಬೇರೊಂದಿಲ್ಲ ಶ್ರೀರಂಗಪಟ್ಟಣದಲ್ಲಿ ನಡೆಯುವ ಉತ್ಸವ ಸಮಯದಲ್ಲಿ ಪ್ರತಿ ವರ್ಷವೂ ಇದೇ ರೀತಿ ಅನ್ನದಾನ ಮಾಡುತ್ತಿರುವರು ಈಗ ಕಲಿಯುಗದಲ್ಲಿ ಸಹ ಇಂಥ ಸತ್ಕಾರ್ಯಗಳು ನಡೆಯುವುದು ಸ್ವಲ್ಪ ಮುಂದೆ ಕಾಣುವದಿಲ್ಲ ಸಾವಿರಾರು ಮಂದಿ ಬಡವರಿಗೆ ದೊಡ್ಡ ಸಮಾರಾಧನೆ ಮಾಡಿಸಿದರು ಈ ಜನವರಿ ೪ ನೇ ತಾರೀಖು ಸೋಮವಾರ ಇಲ್ಲಿನ ಭಾರಿ ವರ್ತಕರಾದ ಮ ಕೃಷ್ಣಯ್ಯ ಶೆಟ್ಟರು ತಮ್ಮ ಸ್ವಂತ ಖರ್ಚಿನಿಂದ ಸುಮಾರು ಸಾವಿರ ಜನಕ್ಕೆ ಊಟ ಹಾಕಿಸಿದರು ಹಸಿವಿನಿಂದ ಪೀಡಿತರಾದವರಿಗೆ ಯುಕ್ತವಾಗಿ ಅನ್ನದಾನ ಮಾಡಿದುದಲ್ಲದೆ, ಬಟ್ಟೆಗೆ ಗತಿಯಿಲ್ಲದೆ ಚಳಿಯಿಂದ ಕಷ್ಟಪಡುವ ಅನೇಕ ದೀನರಿಗೆ ವಸ್ತ್ರದಾನವನ್ನೂ ಸಹಾ ಮಾಡಿರುತ್ತಾರೆ ಈ ಮಹನೀಯರು ಈ ಪ್ರಾಂತ್ಯದ ಸಮಾರಾಧನೆಯೊಂದೇ ಅಲ್ಲದೆ ಇನ್ನೂ ಅನೇಕ ತರವಾದ ಧರ್ಮ ಕೆಲಸಗಳನ್ನು ಮಾಡಿ ಇಲ್ಲಿನ ಅನೇಕ ದರಿದ್ರರ ಜೀವನೋಪಾಯಕ್ಕೆ ಆಧಾರವಾಗಿದ್ದಾರೆ ಇವರುಗಳ ಮೇಲ್ಪಂಕ್ತಿಯನ್ನು ಇತರ ಮಹನೀಯರು ಗಳೂ ಅನುಸರಿಸುವರೆಂದು ಹಾರೈಸುತ್ತೇನೆ

ಒಬ್ಬ ಪ್ರೇಕ್ಷಕ ದರ್ಶಿ

ಬೆಂಕಿಯಿಂದಾದ ನಷ್ಟವು

ಅಯ್ಯಾ,

ಗೊರೂರು ತಾಲ್ಲೂಕು ನ್ಯಾಯಾಧಿಗೆ ಸೇರಿದ ಬಾರಂಬಾಡಿ ಎಂಬ ಗ್ರಾಮದಲ್ಲಿ ಡಿಸೆಂಬರು ತಾ ೧೯ ನೇ ದಿನವಾದದ ಒಂದ ರಾತ್ರಿ ಸುಮಾರು ೧೨ ಘಂಟೆ ಹೊತ್ತಿನಲ್ಲಿ ಯಾರೋ ಅಕಸ್ಮಾತ್ತಾಗಿ ಬೆಂಕಿ ಹಾಕಿ ಓಡಿಹೋದರೆಂದು ಕೇಳುತ್ತೇನೆ ಆ ದಿನವಾದರೋ ಆ ಗ್ರಾಮದ ಸಾಹುಕಾರರುಗಳೆಲ್ಲಾ ತಾಳೂರೆಂಬ ಸಂತೆಗೆ ವ್ಯಾಪಾರಕ್ಕಾಗಿ ಹೋಗಿ ವ್ಯಾಪಾರದ ಉದ್ದಿಶ್ಯವಾಗಿ ಅಲೆದು ನಿದ್ರೆ ಹೋಗುತ್ತಿದ್ದರು ಆ ಸಮಯವನ್ನು ನೋಡಿಕೊಂಡಿದ್ದ ಯಾರೋ ಈ ಕೃತ್ಯವನ್ನು ನಡಿಸಿದ್ದರಿಂದ ಬಾರಂಬಾಡಿಯೆಲ್ಲಾ ಸಂಪೂರ್ಣವಾಗಿ ಸುಟ್ಟು ಬೂದಿಯಾಯಿತು ಇದನ್ನು ನೋಡಿ ತುಂಬಾ ಚಿಂತೆಯಾಗಿದೆ ಬಾರಂಬಾಡಿಯಲ್ಲಾ ದರೋ ೪ ಚಿಲ್ಲರೆ ಅ ಗಡಿಗಳೂ, ೧ ಎಣ್ಣೆಯ ಅಂಗಡಿಯೂ, ೧ ಸಾರಾಯದ ಅಂಗಡಿಯೂ, ೧ ಕಂಬಳಿ ಅಂಗಡಿಯೂ, ಬಾಕಿ ಫಲಹಾರ ಮಾರುವ ಅಂಗಡಿ ೧, ಹಿರಿಯರಾದ ಕೊಲೆಗಾರರ ಮನೆಯು ೮, ಇವೆಲ್ಲಾ ಸುಟ್ಟು ಬೂದಿಯಾಗಿವೆ

ಚಿಲ್ಲರೆ ಅಂಗಡಿಯವ್ರಿದ್ದರೆ ಸುಮಾರು ೬೦ ಮೂಟೆ ಅಕ್ಕಿಯೂ, ೪೦ ಮೂಟೆ ರಾಗಿಯೂ, ಅನೇಕ ಚಿಲ್ಲರೆ ಸಾಮಾನುಗಳೂ, ಜವಳಿಯೂ ಸಹಾ ಸುಟ್ಟು ನಾಶವಾದವು ಬಾರಂಬಾಡಿಯು ಚಿಕ್ಕ ಗ್ರಾಮವಾದರೂ ಕಾಫಿತೋಟದ ಕೆಲಸ ಮಾಡುವ ಕೂಲಿ ಆಳುಗಳು ೧,೮೦೦ ಜನರ ವರೆಗೂ ಇರುವದರಿಂದ ಇವರಿಗೆ ಜೀವನಕ್ಕೆ ಇಲ್ಲದೆ ಕಷ್ಟಪಡಬೇಕಾಗಿರುತ್ತೆ ಅಂಗಡಿ ಸಾಹುಕಾರರ ಲೆಕ್ಕದ ಮೇಲೆ ಇದು ಸುಮಾರು ೩,೦೦೦ ರೂಪಾಯಿನ ಮಾಲುಗಳು ನಷ್ಟವಾಗಿರುತ್ತವೆ ಅಲ್ಪಸ್ವಲ್ಪ ಸಾಮಾನು ಮಾತ್ರ ಬೆಂಕಿ ಹತ್ತುವದಕ್ಕೆ ಮುನ್ನವಾಗಿ ಉಳಿಸಿಕೊಂಡರು

ಸಿ ಮ ಮ

ಗ್ರಾಂಟು ಸ್ಕೂಲು ಉಪಾಧ್ಯಾಯರ ಕಷ್ಟವು.

ಅಯ್ಯಾ,

ದಯವಿಟ್ಟು ಈ ಲೇಖನಕ್ಕೆ ತಮ್ಮ ಪತ್ರಿಕೆಯಲ್ಲಿ ಸ್ವಲ್ಪ ಸ್ಥಳಕೊಟ್ಟು ಇವರ ಕಷ್ಟ ನಿವಾರಣೆಗೆ ಸಹಾಯ ಮಾಡಬೇಕಾಗಿ ಬೇಡುತ್ತೇನೆ

ಉಪಾಧ್ಯಾಯರೆಂಬುವ ಹೆಸರು ಸರ್ಕಾರಿ ಪಾಠಶಾಲೆಗಳಲ್ಲಿ ಬೋಧನೆ ಮಾಡುವವರಿಗೆ ಮಾತ್ರವೋ ? ಅಥವಾ, ಸರ್ಕಾರದವರಿಂದ ಸಹಾಯ ಹೊಂದಿದ ಪಾಠಶಾಲೆಗಳ ನೌಕರರಿಗೂ ಈ ಹೆಸರು ಸಲ್ಲಬಹುದೋ ? ಹಾಗೆ ಅವರಿಗೂ ಉಪಾಧ್ಯಾಯರೆಂಬುವ ಹೆಸರು ಸಲ್ಲುವ ಪಕ್ಷದಲ್ಲಿ ಇವರ ಕಷ್ಟವು ಏಕೆ ತಿಳಿಯಲ್ಪಡಲಿಲ್ಲ ? ಇವರು ಮಾಡುವ ಬೋಧನೆಗೂ ಸರ್ಕಾರಿ ಪಾಠಶಾಲಾ ಉಪಾಧ್ಯಾಯರ ಬೋಧನೆಗೂ ಏನಾದರೂ ವ್ಯತ್ಯಾಸಗಳಿರುವವೇ ? ಹಾಗೆ ಇಲ್ಲದೆ ಪಕ್ಷದಲ್ಲಿ ಇವರ ಕಷ್ಟವು ಮಾತ್ರ ಸರ್ಕಾರದವರು ಗಮನಿಸಬೇಕಾದ್ದು ತುಂಬಾ ವಿಷಾದಿಸಬೇಕಾಗಿದೆ. ನಾಗರೀಕತೆಯುಳ್ಳ ದೇಶಗಳಲ್ಲಿ ಚೀನಾದೇಶವು ಒಂದು ಮುಖ್ಯವಾದದ್ದೆಂದು ಗಣಿಸಲ್ಪಟ್ಟಿದೆ ಈ ದೇಶದವರು ತಮ್ಮ ಚಕ್ರವರ್ತಿಯನ್ನು ತಾಯಿ ತಂದೆ ಎಂದೂ ದೇವಾಂಶ ಪುರುಷರೆಂದೂ ಭಾವಿಸುತ್ತಿರುವರು ಇದು ಸತ್ಯವಾದ ಮತ್ತು ಶ್ಲಾಘ್ಯವಾದ ಅಭಿಪ್ರಾಯವೇ ಸರಿ ಮಕ್ಕಳು ತಮ್ಮ ದುಃಖಗಳನ್ನೂ ಕೊರತೆಗಳನ್ನೂ ತಮ್ಮ ತಮ್ಮ ತಾಯಿ ತಂದೆಗಳಲ್ಲಿ ಹೇಳಿಕೊಳ್ಳತಕ್ಕದ್ದು ಯುಕ್ತವಾದದ್ದಾದರೂ, ತಾಯಿ ತಂದೆಗಳು ಮಕ್ಕಳಿಂದ ಸಹಾಯವು ಅಪೇಕ್ಷಿಸ್ಪಡುವುದಕ್ಕೆ ಮುಂಚೆಯೇ ತಾವು ಮಾಡಬೇಕಾದ ಸಹಾಯಗಳನ್ನು ಮಾಡತಕ್ಕದ್ದು ಅವರ ಕರ್ತವ್ಯವಾಗಿರುವುದಲ್ಲವೇ ? ಈ ರೀತಿಯಾಗಿ ಸರ್ಕಾರದವರು ತಮ್ಮ ಪ್ರಜೆಗಳನ್ನು ವಿದ್ಯೆ ಬುದ್ಧಿಗಳಲ್ಲಿ ಬೆಳಸತಕ್ಕದ್ದು ಸರ್ಕಾರದವರ ಕರ್ತವ್ಯವಲ್ಲವೇ ? ವಿದ್ಯಾವಂತನಾದ ಮಗನು ತನ್ನ ತಾಯಿ ತಂದೆಗಳಿಂದ ವಿಧಿಸಲ್ಪಡುವ ಕಟ್ಟಳೆಗಳನ್ನು ಸುಲಭವಾಗಿ ತಿಳಿಕೊಂಡು ನಡೆಸುವುದರಿಂದ ಅವರ ಸಂತೋಷವು ಎಷ್ಟುಮಟ್ಟಿಗೆ ನಡೆಯೋ ವಾಚಕಮಹಾಶಯರೇ ಊಹಿಸಲಿ. ಹಾಗೆಯೇ ವಿದ್ಯಾವಂತರಾದ ಪ್ರಜೆಗಳು ತಮ್ಮನ್ನಾಳುವವರ ವಿಷಯದಲ್ಲಿ ಹ್ಯಾಗೆ ? ಯಾವ ರೀತಿಯಲ್ಲಿ ? ನಡೆದುಕೊಳ್ಳಬೇಕೆಂಬುವುದನ್ನು ಅರಿತವರಾಗಿ ರಾಜಭಕ್ತಿಯುತರಾಗಿ ನಡೆಯುವರಲ್ಲವೇ ? ಇದಕ್ಕೋಸ್ಕರವಾಗಿಯೇ ಜರ್ಮನ್ ಚಕ್ರಾಧೀಶ್ವರನು ತನ್ನ ರಾಜ್ಯದಲ್ಲಿನ ಸಮಸ್ತ ಪ್ರಜೆಗಳೂ ವಿದ್ಯಾವಂತರಾಗಬೇಕೆಂದು ಒಂದು ಕಾನೂನನ್ನು ಜಾರಿಯಲ್ಲಿ ತಂದಿರುತ್ತದಿಲ್ಲವೇ ? ಹಾಗೆಯೆ ನಮ್ಮ ಮೈಸೂರು ಸರ್ಕಾರದವರು ತಮ್ಮ ಪ್ರಜೆಗಳೂ ವಿದ್ಯಾವಂತರಾಗಬೇಕೆಂದು ಯೋಚಿಸಿ ಅನೇಕ ಪಾಠಶಾಲೆಗಳ ಸ್ಥಾಪಿಸಿರುವರು ಆದರೆ ಮೈಸೂರು ಸರ್ಕಾರದವರ ಈ ಭಾರದಲ್ಲಿ ಕೊಂಚ ಅಂಶವನ್ನು ತಾವು ವಹಿಸಿಕೊಂಡು ಮೈಸೂರು ಸರ್ಕಾರದವರ ಅಭಿವೃದ್ಧಿಯನ್ನು ಹಾರೈಸುತ್ತಿರುವವರು ಯಾರು ? ಗ್ರಾಂಟ್ ಸ್ಕೂಲುಗಳ ಮ್ಯಾನೇಜರುಗಳೇ ಸರ್ಕಾರದವರು ತಮ್ಮ ಆಳ್ವಿಕೆಗೆ ಒಳಪಟ್ಟ ಸ್ಕೂಲುಗಳ ಉಪಾಧ್ಯಾಯರ ಸಂಕಟವನ್ನು ಮಾತ್ರ ತಪ್ಪಿಸಿ, ಸರ್ಕಾರದವರ ಮತ್ತು ಗ್ರಾಂಟ್ ಸ್ಕೂಲುಗಳ ಮ್ಯಾನೇಜರ್ರ ಆಳ್ವಿಕೆಗೊಳಪಟ್ಟ ಉಪಾಧ್ಯಾಯರ ವಿಷಯದಲಿ ಈ ವರೆಗೂ ಯೋಚಿಸದೆ ನಟಿಸದಾಗಿರುವುದನ್ನು ನೋಡಿದರೆ ಇವರು ವಿ ಭಾಗಗಳೆಂದು ಯೋಚಿಸಬೇಕಾಗಿದೆ

ಇಬ್ಬರ ಆಳ್ವಿಕೆಗೊಳಪಟ್ಟ ಈ ಉಪಾಧ್ಯಾಯರು ಕಷ್ಟಪಟ್ಟು ಕೆಲಸ ಮಾಡಿ ವಲ್ಲಾ ಗುಸ್ತಿಲ್ ಸರ್ಕಾರಿ ಸ್ಕೂಲುಗಳಿಂದ ಬಿಡುಗಡೆ ಹೊಂದಿದವರಾಗಿ ಜೀವನೋಪಾಯಕ್ಕೆ ಮಾರ್ಗವಿಲ್ಲದೆ ಬಹು ಹೇಯಿಕ್ಕೆ ಈಡಾಗುತ್ತಿರುವ ಅಂಶವು ಸರ್ಕಾರದವರ ಗಮನಕ್ಕೆ ಯಾಕೆ ಬಾರದೆ ತಪ್ಪಿ ಹೋಗಿದೆಯೋ ಈ ವಿಷಯವನ್ನು ಮದ್ರಾಸ್ ಗವರ್ನರವರು ಯೋಚಿಸಿ ಈ ವಿಷಯದಲ್ಲಿ ಸರ್ಕಾರದವರು ಗ್ರಾಂಟ್ ಸ್ಕೂಲುಗಳ ಮ್ಯಾನೇಜರವರು ಯೋಚಿಸಿ ಒಂದು ಏರ್ಪಾಡನ್ನು ಮಾಡತಕ್ಕದ್ದು ಅವಶ್ಯವೆಂದು ಅಭಿಪ್ರಾಯಪಟ್ಟರು ಈ ಕ್ಷಾಮ ಕಾಲದಲ್ಲಿ ೫ ೬ ೭ ೮ ರೂಪಾಯಿ ಸಂಬಳದಿಂದ ಗ್ರಾಂಟ್ ಸ್ಕೂಲ್ ಉಪಾಧ್ಯಾಯರು ಹ್ಯಾಗೆ ಜೀವಿಸತಕ್ಕದ್ದು ? ಮೈಸೂರು ಸರ್ಕಾರದವರು ಗ್ರಾಂಟ್ ಸ್ಕೂಲ್ ಮ್ಯಾನೇಜರುಗಳಿಗೆ ತಕ್ಕಷ್ಟು ರೆವಿಗೆ ಸಹಾಯವನ್ನು ಕೊಟ್ಟು ಈ ಬಡವರುಗಳ ಕಷ್ಟವನ್ನು ಯಾಕೆ ಹೋಗಲಾಡಿಸಬಾರದು ಒಂದು ಕಲ್ಲಿಗೆ ಸುಣ್ಣ ಮತ್ತೊಂದು ಕಲ್ಲಿಗೆ ಬೆಣ್ಣೆಯನ್ನು ಹಚ್ಚಿದರೆ ಶರೀರವು ಸ್ವಸ್ಥವಿರುವುದೇ ಒಬ್ಬ ಸಭಿಕರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಗ್ರಾಂಟ್ ಸ್ಕೂಲ್ ಉಪಾಧ್ಯಾಯರುಗಳು ಪ್ರಾವಿಡೆಂಟ್ ಫಂಡ್ ಗೆ ಪಾವತಿಗಳು ಅವಶ್ಯಕ ಕೊಡಬೇಕೆಂದು ದಿವಾನ್ ಸಾಹೇಬ್ ಬಹದ್ದೂರರವರನ್ನು ಕೇಳಿದಾಗ್ಗ ಸಭಿಕರು ಅದಕ್ಕೆ ಗಮನ ಕೊಡದೆ ಹೋದದ್ದು ತುಂಬಾ ವ್ಯಸನಕರವೂ ದುಃಖಕರವೂ ಆದ ಸಂಗತಿಯಾಗಿದೆ ಆದರಿಂದ ಈಗಲಾದರೂ ಗ್ರಾಂಟ್ ಸ್ಕೂಲ್ ಉಪಾಧ್ಯಾಯರ ಕಷ್ಟವನ್ನು ಮೈಸೂರು ಸರ್ಕಾರದವರು ಕಣ್ಣು ತೆರೆದು ನೋಡುವರೆಂದು ಹಾರೈಸುತ್ತೇನೆ

ಟಿ ಗು ಚ ಬ

NOTICE.

91

The Commercial School attached to Hardwicke College, Mysore, will re open on January 11th, 1909

For Prospectus of Classes apply to the Principal

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

48-1

ತಲೆನೋವು, ವಾಯುನೋವು, ಸೆಳತ, ಗಂಟಿನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಯಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದದ್ದರಿಂದಲೇ ಇದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಇದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಒಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್,

೩೭, ಪೇದಮಲ್ಲೆಯ್ಯ ಬೀದಿ, ವೇಪೇರಿ, ಮದರಾಸ್.

ಹೊಸ ಪ್ರಕಟನೆಗಳು

ವ್ಯವಹಾರಜ್ಞಾನೀಯ—ಪುಟಗಳು ೫೮೫. ಹಿಂದೂ ಮಹಮದೀಯರುಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಈ ಪುಸ್ತಕ ಕ್ರಯ ವಿ ಪಿ. ಸೇರಿ ೧ ರೂ ೧೨ ಆಣೆ. [40-37]

ಕನ್ನಡ ಲಾ ರಿಪೋರ್ಟ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ ವರ್ಷದ ಚಂದಾ ರೂ. ೧—೦—೦ ಮುಂಗಡ, ಯಾ, ವಿ ಪಿ ಬಿಡಿಪತ್ರಿಕೆ ೧ ಕ್ಕೆ ೦—೩—೦

ಇವುಗಳನ್ನಪೇಕ್ಷಿಸುವವರು—ಎಂ ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, (೯೦) ೨ ನೇ ರೋಡ್, ಚಾಮರಾಜ ಪೇಟೆ, ಬೆಂಗಳೂರು ಸಿಟಿ—ಈ ವಿಳಾಸಕ್ಕೆ ಬರೆಯುವುದು

ನೋಡಿರಿ. "ಪ್ರೋತ್ಸಾಹಕೊಡಿರಿ" ತರಿಸಿರಿ.

98-7

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತಿದೇವೆ. ೫,೦೦೦ ಹಾರ್ಸ್ ಟೋಪಿ ಹೊಲಿಯುವ (ಪೇರುವಾ) ಸುಪೀರಿಯರ್ ಉಲ್ಲನ್.

ರ ಅಡಿಗಳಿರುವ ಪೇರುವಾ ಉಲ್ಲನ್ ಬಂಡಲ್ ೧ ಕ್ಕೆ ರೂ. ೩ ೦-೦

೧೦ ಟೋಪಿಯಾಗುವ ಸುಪೀರಿಯರ್ ಉಲ್ಲನ್ ಬಂಡಲ್ ೧ ಕ್ಕೆ ರೂ. ೩ ೭ ೦

೧ ಟೋಪಿ ಉಲ್ಲನ್ ದಾರಕ್ಕೆ (ಸುಪೀರಿಯರ್) ರೂ ೦-೮-೦

ಹಾರ್ಸ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ ಕ್ಕೆ ೦-೨ ೦, ೦-೧-೬

(ಪೇರುವಾ) ಉಲ್ಲನ್ ದಾರದಲ್ಲಿ ತಯಾರಾದ ಟೋಪಿ ಡಜನ್ ಗೆ ರೂ ೧೮-೦-೦

ಪೇರುವಾ ಎಂಬ ಉಲ್ಲನ್ ದಾರಗಳು ನಮಗಾಗಿಯೇ ತರಿಸಿದ್ದರಿಂದ ಬೇರೆಲ್ಲಿಯೂ ದೊರೆಯದು ಈ ಉಲ್ಲನ್ ದಾರಕ್ಕೆ ಗಿರಾಕಿಗಳು ಜಾಸ್ತಿ ಇರುವದರಿಂದ ಒಂದು ಬಂಡಲ್ ಆದರೂ ಪೇರುವಾ ಉಲ್ಲನ್ ತರಿಸಿ ನೋಡಿರಿ

ಈಗ ನಮ್ಮಲ್ಲಿ ಬೇರೆ ಒಂದು ಡಿಪಾರ್ಟ್‌ಮೆಂಟು ಓಪನ್ ಮಾಡಿದೇವೆ. ಅಂದರೆ ಮಂಗಳೂರಲ್ಲಿ ದೊರೆಯುವ ಸಾಮಾನುಗಳು ಪರಸ್ಥಳದವರಿಗೆ ಯಾವದು ಬೇಕಾದರೂ ಚವಳಿಯಿಂದ ಪಡೆದು ಪರಸ್ಥಳದವರಿಗೆ ಕಳುಹಿಸುವದೇ ಕೇಳಿದಾ ಕಮಿಷನ್ ರೂ ೩ ೪ ೦ ಪರಸ್ಥಳದವರಿಗೆ ವಿ ಪಿ ಯಿಂದಲೂ ರವಾನಿಸುತ್ತೇವೆ ಕೆಟಲಾಗನ್ನು ಕೇಳಿದವರಿಗೆ ರವಾನಿಸುತ್ತೇವೆ ನಮ್ಮ ವಿಳಾಸ —

ಪಿ ಉಲ್ಲನ್ ಮಾರ್ಟ್, ಮಂಗಳೂರು.

೧೯೦೯ ನೇ ಲೋಯರ್ ಸೆಕಂಡರಿ ಕ|| ಟೆಕ್ಸ್ಟ್ ನೋಟ್ಸ್.

81

ಜನವರಿ ೧೦ ಕ್ಕೆ ಸಿದ್ಧ. ಕ್ರಯ ೭ ಆಣೆ.

ನಮ್ಮ ನೋಟ್ಸು ಉತ್ತಮವೋ ! ಇತರರ ನೋಟ್ಸು ಉತ್ತಮವೋ !

ವ್ಯಕ್ತವೇ ಆಗಿದೆ ಮುಂದೆಯೂ ವ್ಯಕ್ತವಾಗುತ್ತೆ

ಜಾಹೀರಾತುಗಳಿಗೆ ಮರುಳಾಗಬೇಡವೆಂದು ಎಚ್ಚರಿಸುತ್ತೇವೆ

ನಮ್ಮ ನೋಟ್ಸು ಬೇಕಾದ್ದರೆ ನಮಗೆ ಬರೆಯಿರಿ ಅಥವಾ ಇತರ ಡಿಪೋಗಳಿಗೆ ಬರೆಯಬೇಕಾದರೆ ನಮ್ಮ ಹೆಸರನ್ನು ಕಾಣಿಸಿ ಬರೆಯಿರಿ ಯಾಕೆಂದರೆ—ಇತರರ ನೋಟ್ಸನ್ನು ಕಳುಹಿಸಿಬಿಟ್ಟಾರು

“ಕನ್ನಡ” ಎಂಬ ಮಾಸಪತ್ರಿಕೆಯನ್ನು ಹೊರಡಿಸುವೆವು ಇದರಲ್ಲಿ ಲೋಯರ್ ಸೆಕಂಡರಿ ಪ್ರಶ್ನೆಗಳಿಗೆ ಉತ್ತರಗಳೂ, ಹೈಸ್ಕೂಲುಗಳ ಕ್ವಾರ್ಟರ್ಲಿ ಪರೀಕ್ಷೆಯ ಪ್ರಶ್ನೆಗಳೂ, ಉಪಾಧ್ಯಾಯರಿಗೂ ಇತರರಿಗೂ ಉಪಯುಕ್ತವಾದ ವಿಷಯಗಳೂ, ಶಬ್ದಮಣಿದರ್ಪಣದ ನೋಟ್ಸ್, ಟಿಪ್ಪಣಿಯೊಡನೆ ಶುದ್ಧವಾಗಿ ಕನ್ನಡ ಭಾರತ (ಪದ್ಯಕಾವ್ಯ) ವೂ ಪ್ರಕಟಿಸಲ್ಪಡುವವು ಇದಕ್ಕೆ ವಾರ್ಷಿಕ ಚಂದಾ ರೂ ೧ ೧೨ ೦

ಫೆಬ್ರವರಿ ೧೪ ರ ಒಳಗಾಗಿ ಚಂದಾದಾರರಾಗತಕ್ಕವರಿಗೆ ನಮ್ಮ ಲೋಯರ್ ಸೆಕಂಡರಿ ನೋಟ್ಸನ್ನು ಬಹುಮಾನವಾಗಿ ಕೊಡುವೆವು ಚಂದಾ ಹಣಕ್ಕೆ ೧ ನೇ ಸಂಚಿಕೆಯನ್ನು ವಿ ಪಿ ಮಾಡುವೆವು

ಎಂ ಆರ್ ವೆಂಕಟಸುಬ್ಬಾಚಾರ್ಯ,

ಸುಬೋಧಗ್ರಂಥಾಲಯ, ಮೈಸೂರು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ತೆಗೆದು ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೆಂದರೆ—ಬೆನ್ನಿನಲ್ಲಿ ಛಳುಕು ; ನಿದ್ರೆಯಿಲ್ಲದೆ ಇರುವುದು , ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು , ಬಡವೆ ಬಾಯಾರಿಕೆ , ಬಳಲಿಕೆ , ಎದೆ ತಲ್ಲಣಿಸುವುದು , ತಲೆನೋವು , ಗಾಬರಿ , ಕಣ್ಣು ಮೊಬ್ಬು , ಚಳಿ ತಿರುಗುವಿಕೆ , ಮೈನೋವು ಕೀಲುನೋವು , ಮರವು , ನಿಶ್ಶಕ್ತಿ , ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೇಂದ್ರಿಯದ ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಹಿಂಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-19]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಸುವುವು.



ರೂ. ೨—೦—೦ , ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಿ ಅಂಗಡಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಫೋಸ್ಟರ್, ೨೦, ಪಿ ಒ. ಬಾಕ್ಸ್ ಬೊಂಬಾಯಿ—ಇವರಿಗೆ ಬರೆಯುವುದು

ನರಳುವ ಹೆಂಗಸರಿಗೆಲ್ಲಾ

7-1

ಪೆರೂನಾದಿಂದ ಪ್ರಯೋಜನವಾಗುವುದು.

ಅನೇಕ ಸ್ತ್ರೀಯರು ಪೆರೂನಾ ಸೇವನೆಯಿಂದ ತಮ್ಮ ಮುಖ ಸೌಂದರ್ಯವನ್ನು ದೀರ್ಘಕಾಲ ಕಾಪಾಡಿಕೊಂಡಿದ್ದಾರೆ. ಸೌಂದರ್ಯವಾಗಿರಬೇಕಾದರೆ ಶರೀರವನ್ನು ಒಳಗೂ ಹೊರಗೂ ನಿರ್ಮಲವಾಗಿಟ್ಟುಕೊಂಡಿರಬೇಕು. ಪೆರೂನಾವು ಮುಖದ ಚರ್ಮವನ್ನು ನಿರ್ಮಲವಾಗಿಡಬಲ್ಲದು; ಸುಖವೂ ಕಾಂತಿಯೂ ಮುಖದಲ್ಲಿ ಉಕ್ಕೇರಿಸುವುದು.

MME. LEO GABOURG

MRS. JAMES GOLLOHER

DLLE. MARIE L. MEUNIER

ಪಕ್ಕೆಯ ನೋವು.

ಮಿಸೆಸ್ ಜೂಲಿಯಾ ಬ್ರಾಕ್ಸ್‌ಟನ್, ಆಷ್ಟೋನ್ಲಾ, ಪೆನ್ಸಿಲ್ವೇನಿಯಾ, ಯು. ಎಸ್. ಎ., ಈಕೆ ಬರೆಯುವುದು:—

“ಪೆರೂನಾದಿಂದ ನನ್ನ ಎದೆಯಲ್ಲೂ ಪಕ್ಕೆಯಲ್ಲೂ ಇದ್ದ ಬಾಧೆಯು ನಿವಾರಣೆಯಾಯಿತು. ಒಂದು ವರುಷದ ಕೆಳಗೆ ನಾನು ಈಗಲೋ ಆಗಲೋ ಸಾಯುವ ಹಾಗಿದ್ದೆನು. ಬೆಳಗಿನ ಝಾಮದ ೩ ಗಂಟೆ ಹೊತ್ತಿನಲ್ಲಿ ಕೆಲವು ವೇಳೆ ಡಾಕ್ಟರನ್ನು ಕರೆಸಿದ್ದಾಯಿತು. ಈಗ ದೇವರ ದಯೆಯಿಂದ ನಾನು ಡಾಕ್ಟರಿಗೆ ಹೇಳಿಕಳುಹಿಸುವುದು ಅಗತ್ಯವಿಲ್ಲ.

“ನೀವು ಹೇಳಿದ ಪ್ರಕಾರ ನಾನು ಪೆರೂನಾ ಸೇವಿಸುತ್ತಾ ಬಂದಾರಭ್ಯ ನಾನು ಸುಖವಾಗಿ ನನ್ನ ಮನೆಯ ಕೆಲಸಗಳನ್ನು ಸರಿಯಾಗಿ ಮಾಡಿಕೊಂಡು ಹೋಗುತ್ತೇನೆ.

“ಪೆರೂನಾದಲ್ಲಿ ನನಗಿರುವಷ್ಟು ಭರವಸವು ಪ್ರಪಂಚದಲ್ಲಿ ಇನ್ಯಾವ ಪದಾರ್ಥದ ಮೇಲೂ ಇಲ್ಲ. ಅದು ನನಗೆ ವಾಸಿಮಾಡಿದೆ. ಅದು ಇತರರಿಗೂ ಗುಣಕೊಟ್ಟೀತೆಂದು ನಾನು ಬಲ್ಲೆನು.”

ನನ್ನ ಸಹೋದರಿಯು ಪೆರೂನಾ ಉಪಯೋಗಿಸೆಂದು ನನಗೆ ಹೇಳಿದಳು. ನಾನು ನಿಮ್ಮ ಔಷಧವನ್ನು ಸೇವಿಸಿದೆನು. ಬೇಗನೆ ನನಗೆ ಆಹಾರ ರುಚಿಸುವಂತಾಯಿತು. ನನಗೆ ಶಕ್ತಿಯೂ ಮಾಂಸವೂ ವೃದ್ಧಿಯಾಗಿ ಪೂರ್ಣಾರೋಗ್ಯದಿಂದಿರುತ್ತೇನೆ. ನಿಮ್ಮ ಔಷಧವು ನನಗೆ ತುಂಬಾ ಪ್ರಯೋಜನವಾಯಿತು. ಅದಕ್ಕಾಗಿ ವಂದಿಸುವೆನು. ಹೀಗೆ ಹೇಳುವವರ್‍ಯಾರಂದರೆ:—

ಮಿಸ್ ಜೂಲಿಯಾ ಬಟ್ಲರ್,

ಆಸ್ಲಟನ್, ವಿಸ್ಕಾನ್ಸಿನ್, ಯು. ಎಸ್. ಎ.

ಗುಣವಾದದ್ದಕ್ಕೆ ಕೃತಜ್ಞತೆಯು.

ಮೇಂ. ಲಿಯೊ. ಗೇಬರ್ಗ್, ೨೧೫ ರೂ ಅರಾಗೊ, ಸೆಂಟ್ ಸಾವ್ಯೂರ್, ಕ್ವಿಬೆಕ್, ಕ್ಯಾನಡಾ, ಈಕೆ ಬರೆಯುವುದು:—

“ನೀವು ನನಗೆ ಬುದ್ಧಿ ಹೇಳಿದ್ದಕ್ಕಾಗಿ ನಿಮ್ಮನ್ನು ತುಂಬಾ ವಂದಿಸುವೆನು. ನಿಜವಾಗಿಯೂ ನಾನು ಬಹಳ ಚೆನ್ನಾಗಿ ಆರೋಗ್ಯದಲ್ಲಿದ್ದೇನೆ. ನಾನು ಮೊದಲಿನವಳೇ ಅಲ್ಲವೆಂದು ನನಗೆ ತೋರುವಂತಾಗಿದೆ.

“ನನ್ನ ಸ್ನೇಹಿತೆಯರಲ್ಲಿ ಕೆಲವರು ಶೀತದಿಂದ ನರಳಿದರು. ಪೆರೂನಾವನ್ನು ಸೇವಿಸಿ ಆರೋಗ್ಯದೊಂದಿರುತ್ತಾರೆ. ನನಗೇನೋ ಬಹು ಬೇಗನೆ ತೃಪ್ತಿಕರವಾಗಿ ವಾಸಿಯಾಗಿದೆ.”

ಮಲಕೋಶಕ್ಕೆ ಹಿಡಿದ ಶೀತವು.

ಮಿಸೆಸ್ ಮ್ಯಾಗ್ಗಿ ಡರ್ಬಿನ್, ೧೩೩೨ ಉತ್ತರ ಬೀದಿ, ಲಿಟಲ್‌ರಾಕ್, ಆರ್ಕನ್ಸಾಸ್, ಯು. ಎಸ್. ಎ., ಈಕೆ ಬರೆಯುವುದು:—

“ನನಗೆ ಐದು ವರುಷಗಳಿಂದ ಕೆಟ್ಟರೋಗ ಹಿಡಿದು ನರಳುತ್ತಿದ್ದೆನು. ಕಂಡು ಕೇಳಿದ ಔಷಧವನ್ನೆಲ್ಲಾ ಸೇವಿಸಿದೆನು. ಯಾವುದರಿಂದಲೂ ನನಗೆ ವಾಸಿಯಾಗಲಿಲ್ಲ. ಕೆಲವು ಡಾಕ್ಟರುಗಳು ನನ್ನ ಮಲಮೂತ್ರಕೋಶದಲ್ಲಿ ಶೀತವುಂಟಾಗಿ ಅದು ಕ್ಷಯವಾಗುತ್ತಿದೆ ಎಂದು ಹೇಳಿದರು. ಒಬ್ಬ ಡಾಕ್ಟರು ನನ್ನ ರೋಗವನ್ನು ವಾಸಿಮಾಡುತ್ತೇನೆಂದು ಹೇಳಿದನು. ಅವನು ಕೊಟ್ಟ ಔಷಧವನ್ನು ಎರಡು ತಿಂಗಳು ಸೇವಿಸಿದರೂ ಅದರಿಂದ ನನಗೆ ಸ್ವಲ್ಪವೂ ಅನುಕೂಲವಾಗಲಿಲ್ಲ.

“ನನ್ನ ಸ್ನೇಹಿತೆಯೊಬ್ಬಳು ಪೆರೂನಾ ಸೇವಿಸಿ ನೋಡೆಂದು ನನಗೆ ಹೇಳಿದಳು. ಸೇವಿಸುತ್ತಾ ಬಂದೆನು. ಎರಡು ಬಾಟ್ಲು ಔಷಧ ಸೇವಿಸುವಷ್ಟರಲ್ಲೇ ನನಗೆ ಗುಣವಾಗುವಂತೆ ತೋರಿತು. ಹಾಗೇ ಅದನ್ನು ಬಿಡದೆ ಸೇವಿಸುತ್ತಾ ಬಂದೆನು. ಈಗ ಸಂಪೂರ್ಣ ಗುಣಹೊಂದಿ ಆರೋಗ್ಯವಾಗಿದ್ದೇನೆ.

“ಪೆರೂನಾದಿಂದ ನನಗೆ ಎಷ್ಟು ಪ್ರಯೋಜನವಾಯಿತೆಂದು ತಿಳಿಯಬೇಕಾದವರು ನನಗೆ ಬರೆದಲ್ಲಿ ಕೂಡಲೇ ನಾನು ಜವಾಬು ಕೊಡುವೆನು.”

ಮಾಂಸವೂ ಶಕ್ತಿಯೂ ಹೆಚ್ಚಾದವು.

ಮಿಸೆಸ್ ಕಾರ್ಡೀಯಾ ಬ್ರೌನ್, ಆರ್. ಎಫ್. ಡಿ. ನಂ. ೪, ರಾಜರ್ಸ್‌ವಿಲ್ಲೆ, ಟೆನ್., ಯು. ಎಸ್. ಎ., ಈಕೆ ಬರೆಯುವುದು:—

“ನನ್ನ ನೆತ್ತಿಗೆ ಶೀತ ಹಿಡಿದಿತ್ತು. ಹತ್ತು ವರುಷ ಕಾಲ ಅದರ ಬಾಧೆಯಿಂದ ನರಳಿದೆನು. ನಾನಾ ಬಗೆಯ ಔಷಧಗಳನ್ನು ಸೇವಿಸಿದಾಗ್ಯೂ ನನಗೆ ವಾಸಿಯಾಗಲಿಲ್ಲ.

“ಕಡೆಯಲ್ಲಿ ಒಂದು ಬಾಟ್ಲು ಪೆರೂನಾ ಕೊಂಡು, ಸೇವಿಸಲಾರಂಭಿಸಿದ ಒಡನೆಯೇ ನನಗೆ ವಾಸಿಯಾಗುವಂತೆ ಕಂಡಿತು. ನಾನು ತುಂಬಾ ಕೃಶವಾಗಿದ್ದೆನು. ಬಹಳ ಬಲಕುಂದಿತ್ತು. ಬಾಯಿಗೆ ರುಚಿ ಇರಲಿಲ್ಲ; ಗಂಟಲಿನಲ್ಲಿ ಭಾರವಾಗಿತ್ತು, ನುಂಗುವುದಕ್ಕಾಗುತ್ತಿರಲಿಲ್ಲ. ಎಲ್ಲಾ ವಿಷಯಗಳಲ್ಲೂ ಬಹಳ ನಿತ್ರಾಣವಾಗಿತ್ತು. ಆದರೆ ಈ ಪೆರೂನಾವನ್ನು ಸೇವಿಸುತ್ತಾ ಬಂದ ಹಾಗೆಲ್ಲಾ ಬಲವೂ ಮಾಂಸಖಂಡಗಳೂ ಹೆಚ್ಚುತ್ತಾ ಬಂದವು.”

ಶೀತಹಿಡಿದು ನನ್ನ ಬಾಳೇ ದುಃಖಕರವಾಯಿತು.

ಡಲ್. ಮೇರಿ ಎಲ್. ಮೆಯುನೀರ್, ೯೧೩ ಓಂಟೇರಿಯೊ ಬೀದಿ, ಮಾಂಟ್ರೀಲ್, ಕ್ಯಾನಡಾ, ಈಕೆ ಬರೆಯುವುದು:— “ನನಗಿದ್ದ ಶೈತ್ಯರೋಗವು ಪೆರೂನಾದಿಂದ ವಾಸಿಯಾಯಿತೆಂದು ಸಂತೋಷವಾಗಿ ಹೇಳುತ್ತೇನೆ. ಆ ರೋಗವು ನನ್ನ ಬಾಳನ್ನು ದುಃಖಕರವಾಗಿ ಮಾಡಿತ್ತು. ಅದರಲ್ಲೂ ಬೇಗಿನ ಹೊತ್ತು ಬಹಳ ಅನುಭವಿಸಿದೆನು. ಕೆಮ್ಮಿ ಕೆಮ್ಮಿ ಶ್ಲೇಷ್ಮವನ್ನು ಉಗುಳಿ ಗಂಟಲನ್ನೂ ಶ್ವಾಸಕೋಶವನ್ನೂ ಸರಿಗಗಮಾಡಿಕೊಂಡ ಮೇಲೆ ಇತರ ಕೆಲಸಗಳನ್ನು ನಾಡಬೇಕಾಗಿತ್ತು. ಈ ಔಷಧವು ನನಗೆ ಬೇಗನೆ ವಾಸಿಮಾಡಿತು. ಈ ಭಯಂಕರವಾದ ರೋಗದಿಂದ ನರಳುವವರಿಗೆಲ್ಲಾ ಈ ಔಷಧವನ್ನು ಸೇವಿಸಬೇಕೆಂದು ಬಹು ವಿಶೇಷವಾಗಿ ಶಿಫಾರಸು ಮಾಡುತ್ತೇನೆ.”

ತಲೆನೋವೂ ವಾಂತಿಯೂ.

ಮಿಸ್ ನೆಲ್ಲಿ ಇ. ಬೊಗಾರ್ಡಸ್, ಆರ್. ಎಫ್. ಡಿ. ೨೧, ವೆಸ್ಟ್ ಫೀಲ್ಡ್, ನ್ಯೂಯಾರ್ಕ್, ಯು. ಎಸ್. ಎ., ಈಕೆ ಬರೆಯುವುದು:—

“ನಾನು ತಲೆನೋವು ವಾಂತಿರೋಗಗಳಿಂದ ಬಹಳ ಶ್ರಮಪಟ್ಟು ಅನುಭವಿಸಿದವಳು. ಈಗ ಅವು ನನಗೆ ಸಂಪೂರ್ಣವಾಗಿ ವಾಸಿಯಾದವು. ಈಗ ನನಗಿರುವಷ್ಟು ಆರೋಗ್ಯವು ಹತ್ತು ವರುಷಗಳಿಂದ ಇರಲಿಲ್ಲ. ರೋಗ ಅನುಭವಿಸುವವರಿಗೆಲ್ಲಾ ಪೆರೂನಾ, ಮನಾಲಿನ್ ಎಂಬೀ ಔಷಧಗಳನ್ನು ಸೇವಿಸಬೆಂದು ಶಿಫಾರಸು ಮಾಡುತ್ತೇನೆ. ಮತ್ತು ದೇವರು ಡಾ॥ ಹಾರ್ಟ್‌ಮೆನ್‌ರನ್ನೂ ಅವರ ಅದ್ಭುತ ಔಷಧಗಳನ್ನೂ ಆಶೀರ್ವದಿಸಲಿ ಎನ್ನುವೆನು.”

ಕೆಮ್ಮಲೂ ಶೈತ್ಯವೂ

ಮಿಸೆಸ್ ಹೆನ್ರಿ ಮಾರ್ಟಿನ್, ಆರ್. ಎಫ್. ಡಿ. ನಂ. ೧, ಲಾಮಾಟಿ, ಐಯೊವಾ, ಯು. ಎಸ್. ಎ., ಈಕೆ ಬರೆಯುವುದು:— “ಶೀತ ರೋಗ ಪೀಡಿತರೆಲ್ಲಾ ಪೆರೂನಾವನ್ನು ಸೇವಿಸಲಿ ಎಂದು ಶಿಫಾರಸು ಮಾಡುತ್ತೇನೆ. ಮಕ್ಕಳಲ್ಲಿ ಹುಟ್ಟುವ ಶೀತರೋಗಗಳಿಗೂ ಕೆಮ್ಮಲಿಗೂ ಇದು ಉತ್ತಮವಾದ ಔಷಧವೆಂದು ನಾನು ಅನುಭವದಿಂದ ಹೇಳುತ್ತೇನೆ.”

ಅಂತರ್ಗತವಾದ ಶೀತವು.

“ಮಿಸೆಸ್ ಜೇಂಸ್ ಗಾಲೊಹರ್, ನಾರ್ಫಕ್, ಓಂಟೇರಿಯೋ, ಕ್ಯಾನಡಾ, ಈಕೆ ಬರೆಯುವುದು:— “ನನಗೆ ಅಂತರ್ಗತವಾದ ಶೀತ ಹಿಡಿದು ಎರಡು ವರುಷ ಅನುಭವಿಸಿದೆನು. ಶೀತ ಕಾಲದಲ್ಲಿ ಬೆನ್ನೂ ಪಕ್ಕೆಗಳೂ ನೋಯುತ್ತಿದ್ದದ್ದರಿಂದ ಮನೆ ಕೆಲಸಗಳನ್ನು ಮಾಡಲಾರದೆ ಇದ್ದೆನು. ಇದಲ್ಲದೆ ಬೇಗ ಅದನ್ನು ನಿವಾರಣೆ ಮಾಡಿಕೊಳ್ಳದೆ ಹೋದರೆ ನಾನು ಬದುಕುವುದಿಲ್ಲವೆಂದು ಶಂಕೆಪಡುತ್ತಿದ್ದೆನು. ನನ್ನ ಹಾಗೇ ರೋಗದಲ್ಲಿ ನರಳುತ್ತಿದ್ದವರಿಗೆ ಪೆರೂನಾದಿಂದ ವಾಸಿಯಾಯಿತೆಂದು ತಿಳಿದು, ನಾನೂ ಅದನ್ನು ಸೇವಿಸಿ ನೋಡೋಣವೆಂದು ಗೊತ್ತುಮಾಡಿಕೊಂಡೆನು. ಒಂದು ಬಾಟ್ಲು ಔಷಧವನ್ನು ಸೇವಿಸುವಷ್ಟರಲ್ಲೇ ನನ್ನ ಶರೀರಸ್ಥಿತಿಯು ಬದಲಾವಣೆ ಹೊಂದಿತು. ಐದು ಬಾಟ್ಲುಗಳನ್ನು ಸೇವಿಸಿದೆನು. ಈಗ ನಾನು ಸಂಪೂರ್ಣ ಗುಣಹೊಂದಿರುತ್ತೇನೆ. ಅದನ್ನು ನನಗೆ ತೋರಿಸಿಕೊಟ್ಟದ್ದಕ್ಕಾಗಿ ಡಾ॥ ಹಾರ್ಟ್‌ಮೆನ್‌ರವರನ್ನು ವಂದಿಸುತ್ತೇನೆ.”

ಪೆರೂನಾ ಉಪಯೋಗಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಉಪಯೋಗಿಸುತ್ತೇವೆ. ಕ್ರಯ ಮುಂತಾದ್ದೂ ಇವರಿಂದಲೇ ತಿಳಿಯಬಹುದು.

ವಿಳಾಸ:— ಹಿಂದೂಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

4—12—1908 ರಿಂದ 11—12—1908 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	6	7	0	0
ಮೈಸೂರು ,,	4	3	0	0
ಬೆಂಗಳೂರು ಡಿಸ್ಟ್ರಿಕ್ಟು	12	9	0	0
ಮೈಸೂರು ,,	92	60	0	0
ಕೋಲಾರ್ ,,	6	3	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	9	8	0	0
ಹಾಸನ ,,	20	10	0	0
ಚಿತ್ರದುರ್ಗ ,,	1	1	0	1
ಕಡೂರ್ ,,	13	9	0	0
ಶಿವಮೊಗ್ಗಾ ,,	0	0	0	0
• ಸಂಖ್ಯೆ ಕಾಣೆಸಿಲ್ಲ. ಒಟ್ಟು	163	110	0	1

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಪುಷ್ಯ ಬಹುಳ ಪಾಡ್ಯಮಿ ಗುರುವಾರದಿಂದ ಪುಷ್ಯ ಬಹುಳ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೯ ನೇ ಜನವರಿ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶೇಡಿ ಧನು ಮಾಸ
7	ಗುರು	ಪಾಡ್ಯಮಿ	31-35	ಪು	18-12	24
8	ಶುಕ್ರ ‡	ಬಿದಿಗೆ	34-58	ಪು	22-46	25
9	ಶನಿವಾ	ತದಿಗೆ	39-9	ಶ್ಲೆ	28-18	26
10	ರವಿವಾ ;;	ಚೌತಿ	44-24	ಮ	34-24	27
11	ಚಂದ್ರ	ಪಂಚಮಿ	49-49	ಪು	40-52	28
12	ಕುಜ §	ಷಷ್ಟಿ	55-20	ಉ	47-10	29
13	ಬುಧ •	ಸಪ್ತಮಿ	60-0	ಹ	53-23	30

‡ ಉತ್ಪಾತಯೋಗ, ಮೂಗೂರು ತ್ರಿಪುರಸುಂದರೀ ರಥೋತ್ಸವ.

;; ಮೂಗೂರು ಚಿಗರು ಕಡಿಯುವುದು.

§ ಭೋಗ್ಯೋತ್ಸವ.

• ೧೫ ಘಳಿಗೆಯ ಮೇಲೆ ಉತ್ತರಾಯಣ ಪುಣ್ಯಕಾಲ.

ಪೇಟೇ ಧಾರಣೆ.

ದಿನಸಿ.			ಮೈಸೂರು.	ಬೆಂಗಳೂರು.
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ		ರೂ.	೧೭-೮-೦	೧೯-೮-೦
ಕೆಂಬೂತ ಅಕ್ಕಿ ಅವಲ್	...	...	೧೭-೧೨-೦	೧೮-೮-೦
,, ಮುಯಂ	...	...	೧೭-೮-೦	೧೮-೦-೦
ಜಾಪಾನ್ಯ ಅಕ್ಕಿ	...	...	೧೭-೪-೦	೧೯-೮-೦
ಸಣ್ಣಕ್ಕಿ ಅವಲ್	...	...	೧೯-೦-೦	೨೦-೮-೦
,, ಮುಯಂ	...	...	೧೮-೮-೦	೧೯-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	...	...	೧೯-೮-೦	೧೯-೦-೦
,, ಮುಯಂ	...	...	೧೯-೦-೦	೧೮-೦-೦
ಹೈಕ್ ರಾಗಿ ಪಲ್ಲಾ ೧ಕ್ಕೆ	...	...	೯-೧೨-೦	೧೦-೦-೦
ಕಾರ್ರಾಗಿ	...	...	೯-೮-೦	೯-೦-೦
ಜೋಳ	...	...	೯-೮-೦	೧೦-೦-೦
ಹಲಸಂದೆ ಪಲ್ಲಾ ೧ಕ್ಕೆ	...	...	೧೪-೦-೦	೧೩-೮-೦
ಬಿಳೀ ಅವರೆ	...	...	೧೩-೪-೦	೧೪-೮-೦
ಹೆಸರು	...	...	೧೩-೦-೦	೧೪-೦-೦
ಉದ್ದು	...	...	೧೪-೪-೦	೧೫-೦-೦
ಕಡಲೆ	...	...	೧೮-೦-೦	೧೯-೫-೦
ಎಳ್ಳು ಸೇ. ೧೨೨ಕ್ಕೆ	...	...	೨೧-೭-೦	೨೦-೦-೦
ಹುರುಳಿ	...	...	೧೦-೧೩-೦	೧೦-೪-೦
ಹರಳು ೧೨೨ ಸೇರಿಗೆ	...	...	೧೦-೦-೦	೧೦-೦-೦
ಸೀಗೇಕಾಯಿ ಮಣ ೧ಕ್ಕೆ	...	...	೧-೮-೦	೧-೬-೦
ಮೆಣಸಿನಕಾಯಿ	...	...	೬-೦-೦	೩-೮-೦
,, ಮುಯಂ	...	...	೫-೮-೦	೩-೪-೦
ಬೆಲ್ಲ ದೊಡ್ಡ ಅಚ್ಚು	...	...	೬-೦-೦	ಮ ೨-೦-೦
ಒಳ್ಳೆಣ್ಣೆ ಮಣ ೧ಕ್ಕೆ	...	...	೫-೧೩-೦	೬-೦-೦
ಹರಳೆಣ್ಣೆ ,,	...	...	೪-೮-೦	೪-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	...	...	೭-೦-೦	೬-೪-೦
ಉಪ್ಪು ,,	...	...	೬-೦-೦	೫-೫-೦
ಹುಣಸೇ ಹಣ್ಣು	...	...	೧-೮-೦	೧-೪-೦
,, ಹಳೇದು	...	...	೧-೬-೦	೧-೪-೦
ತುಪ್ಪ ಮಣ ೧ಕ್ಕೆ	...	...	೧೪-೫-೦	೧೫-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	...	...	೫-೦-೦	೪-೦-೦
ತೆಂಗಿನಕಾಯಿ ೧೦೦ಕ್ಕೆ	...	...	೪-೮-೦	೪-೮-೦
ಅಳಲೇಕಾಯಿ ಮಣ ೧ಕ್ಕೆ	...	...	೦-೧೦-೦	೦-೧೩-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	...	...	೦-೧೯-೦	೦-೧೪-೦
ಚಿನ್ನ (ಪೌನ್) ಕೆಂಪು	...	...	೧೫-೬-೦	೧೫-೫-೦
,, ,, ಪಸಿಮೆ	...	...	೧೫-೧೪-೦	೧೫-೭-೦
,, ,, ಗಟ್ಟಿ ತೊಲ ೧ಕ್ಕೆ	...	...	೨೪-೧೦-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	...	...	೬೭-೦-೦	೬೧-೦-೦

Printed and Published by the Rev. E. W. Thompson, M. A., Proprietor and Manager, Wesleyan Mission Press, Mysore. 7/1/1909.

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ರೂಪಾಯಿ — ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು. — ಕ್ರಯ ೧ ರೂಪಾಯಿ

ಸಂಪುಟ ೨೨ ಮೈಸೂರು—ಸನ್ ೧೯೧೯ ನೇ ಇಸವಿ ಜನವರಿ ತಾರೀಖು ೧೬ನೇ ಗುರುವಾರ. ಸಂಚಿಕೆ ೩೩

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

16-48



೧ ಲೋಕಾಮಯಹರ ಕಸ್ತೂರೀ ಮಾತ್ರೆ — ಈ ಮಾತ್ರೆಗಳನ್ನು ಕೇಸರ ಪುಷ್ಪ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ ಚಳಿಜ್ವರ, ಜ್ವರ, ಹೊಟ್ಟೆನೋವು, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾವು), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನಿಗಟ ನಿಶ್ಶಕ್ತಿ, ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ನಿಂಶ್ಚಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸುತ್ತ ದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹನಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಪುಷ್ಟಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಸೂತಿಕಾಶೂಲೆ, ಮಕ್ಕಳ ಎಳವು, ಜ್ವರ, ಹಳ್ಳಜ್ವರ, ಕೃತ್ರಮಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ನಿಂಶ್ಚಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ರೂಪ್ಯ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ವೈದ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ

64-24



ಇದು ಸಾಧಾರಣ ಜ್ವರ, ಚಳೀಜ್ವರ ಮಲೇರಿಜ್ವರ, ಪಿತ್ತಜ್ವರ ಶೀತ ಜ್ವರ ವಾತಜ್ವರ, ಚಳಿಬಿಡಿಸುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ ಚಳ್ಳಕೆರೆಯಲ್ಲಿರುವ ಮುಜರಾಯಿ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಂ ಟಿ ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡಜನ್ನಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲಿ ನಿಮ್ಮ ಔಷಧದಿಂದ ಅನೇಕ ಮಂದಿ ಜ್ವರಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಯಿಲೆ ಬಿದ್ದಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡಜನ್ನಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ಡಜನ್ ೧—೮ ರೂ, ೩ ರೂ ೩—೧೨ ಆ, ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓಮುಂಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ ಸಾಧಾರಣ ಹೊಟ್ಟೆ ಕಳೆಯುವದು, ಈ ಶೀತಭೇದಿ ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ಔಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೊಗಸದು ಶಿಂಗ ಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ,, ಜ್ವರಹರಿ " ಎಂಬ ಔಷಧ ದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ ಎವರು—ಡೆಸ್ಸಿಯ ಓಮುಂಕರ್ಪೂರವನ್ನು ನಾನೂ ನನ್ನ ತಾಪೀದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಕೆಲವು ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಸ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಔಷಧ ಸಾಪುಗಳಲ್ಲೂ, ಔ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇಲ್ಲದೆ ಕೆಳಗಿನ ವಿಳಾಸದುಬ್ರಲ್ಲಿ ವಿಶೇಷ —

ಅಯ್ಯನವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

AMRUTANJAN DEPOT, 16 OAK-LANE, BOMBAY. [17-47]

ಅಮೃತಾಂಜನ ಡಿಪ್ಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಅಬಲುಗಂಟಲುನೋವು, ಎದೆನೋವು, ಭಾವು, ಚುಮುಮು, ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತೀವ್ರಲು ಯೋಗ್ಯವಾದ ಸಂಗತಿಯಾಗಿರುತ್ತದೆ ಇದು ಚರ್ಮದ ಮೂಲಕ ಮಾಂಸವನ್ನು ಪ್ರವೇಶಿಸಿ, ಕೊಳಕು ಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ ಬಾಟ್ಲಿ ಒಂದರ ಕಿಮ್ಮತ್ತು ೦—೮—೦ ಪೋಸ್ಟು ಖರ್ಚು ೦—೪—೦ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಕಪ್ ಇನಾಮು ಆರ್ ಆರ್ ಗಂಗೋಲಿ I ನೇ ಕ್ಲಾಸ್ ಸಬ್ ಜಡ್ಜ್ ಕಾರವಾರ,—ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ.

ಗಜಕರ್ಣದ ಮುಲಾಮು.

ಮೂರು ಸಾರಿ ಹಚ್ಚುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಡಬ್ಬಿ ೧ಕ್ಕೆ ೦—೬—೦ ವಿ ಪಿ ಖರ್ಚು ೦—೪—೦

ದಂತಮಂಜನ—ಡಬ್ಬಿ ೨ ಆಣೆ ಹಲ್ಲುಗಳಿಂದ ಬರುವ ರಕ್ತ ನಿಲ್ಲುತ್ತದೆ, ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ, ಹಲ್ಲುಗಳು ಘಟ್ಟಿಯಾಗುತ್ತವೆ, ಹಲ್ಲುಗಳು ಬೆಳ್ಳಗಾಗುತ್ತವೆ

ಕಜ್ಜಿ ಮುಲಾಮು—ಡಬ್ಬಿ ೧ಕ್ಕೆ ಕಿಮ್ಮತ್ತು ೩ ಆಣೆ

ಕೇಶವರ್ಧಿನಿ—ಚಲೋ ಪರಿಮಳ ಉಳ್ಳದ್ದು

ಕೇಶವರ್ಧಿನಿ—ಮನಶುದ್ಧಿ ಮಾಡುವದು

ಕೇಶವರ್ಧಿನಿ—ಕೂದಲನ್ನು ನಯಮಾಡುವದು ಬಾಟ್ಲಿ ಒಂದರ ಕಿಮ್ಮತ್ತು ರೂ ೧—೦—೦

ವಜ್ರಗುಟಿಕೆ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಕುಮಾರಿಗುಟಿಕೆ—ಹೆಂಗಸರ ಹೊಟ್ಟೆನೋವಿಗೆ	೧—೨—೦
ಸುಂದರೀ ತೈಲ—ಮೋರೆಯ ಮುದ ಡಾಗಳಿಗೆ	೦—೮—೦
ತಾಂಬೂಲ ಗುಟಿಕೆ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೨
ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಚೇಳುಕಡಿತದ ಮದ್ದು ಚೇಳುಕಡಿತಕ್ಕೆ	೦—೮—೦
ಜುಲಾಬು ಮಾತ್ರೆ—ಜುಲಾಬಿಗೆ	೦—೨—೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಳಾಸ —ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು, ಫೋರ್ಟು, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

12

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ನಿಂಶ್ಚಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದಷ್ಟು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನಿಂದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದ, ಕೆಂಪು, ಕಪ್ಪು, ಬಿಳಕ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ , ೧ ರೂ ೪ ಆ

ಕಪ್ಪು ಚುಕ್ಕೆಯುಳ್ಳ ಟೋಪಿಗಳು ೧ ರೂ ೮ ಆ , ೨ ರೂ

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ ,

ಕೂಸುಗಳ ಟೋಪಿ, ಸೂಟಿನ ಮೇಜೋಡು, ಅರ್ಧ ಮೇಜೋಡು, ಕೈತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಲಾ ಪ್ರಕಟನೆಗಳು

ವ್ಯವಹಾರನಿರ್ಣಯ—ಪುಟಗಳು ೫೦೫ ಹಿಂದೂ ಮಹಮ್ಮದೀಯ ಭಾಗಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂ ೧೨ ಆಣೆ [40 38]

ಕನ್ನಡ ಲಾ ರಿಪೋರ್ಟರ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸ ಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ ವರ್ಷದ ಚಂದಾ ರೂ ೧—೦—೦ ಮುಂಗಡ, ಯಾ, ವಿ ಪಿ ಬಿಡಿಪತ್ರಿಕೆ ೧ ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು—,, ಎಂ ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, (೯೦) ೨ ನೇ ರೋಡ್, ಚಾಮರಾಜ ಪೇಟೆ, ಬೆಂಗಳೂರು ಸಿಟಿ — ಈ ವಿಳಾಸಕ್ಕೆ ಬರೆಯುವುದು

ನೋಡಿರಿ "ಪ್ರೋತ್ಸಾಹಕೊಡಿರಿ" ಹರಿಸಿರಿ

98 8

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ ೫,೨೦೦ ಹಾಸನ ಟೋಪಿ ಹೊಲಿಯುವ (ಪೇರುವಾ) ಸುಪೀರಿಯರ್ ಉಲ್ಲನ್

೮ ಔನ್ಸಿರುವ ಪೇರುವಾ ಉಲನ್ ಬಂಡಲ್ ೧ ಕ್ಕೆ ರೂ ೨-೦-೦

೧೦ ಟೋಪಿಯಾಗುವ ಸುಪೀರಿಯಲ್ ಉಲನ್ ಬಂಡಲ್ ೧ ಕ್ಕೆ ರೂ ೩ ೬-೦

೧ ಟೋಪಿ ಉಲನ್ ದಾರಕ್ಕೆ (ಸುಪೀರಿಯರ್) ರೂ ೦ ೫-೦

ಹಾಸನ ಟೋಪಿ ಹಾಕುವ ಕೊಕ್ಕೆ ಸೂಜಿ ೧ ಕ್ಕೆ ೦-೨ ೦ , ೦ ೧-೬

(ಪೇರುವಾ) ಉಲನ್ ದಾರದಲ್ಲಿ ತಯಾರಾದ ಟೋಪಿ ಡಜನ್‌ಗೆ ರೂ ೧೮-೦-೦

ಪೇರುವಾ ಎಂಬ ಉಲನ್ ದಾರಗಳು ನಮಗಾಗಿಯೇ ತರಿಸಿದ್ದರಿಂದ ಬೇರೆಲ್ಲಿಯೂ ದೊರಿಯದು ಈ ಉಲನ್ ದಾರಕ್ಕೆ ಗಿರಾಕಿಗಳು ಜಾಸ್ತಿ ಇರುವದರಿಂದ ಒಂದು ಬಂಡಲ್ ಆದರೂ ಪೇರುವಾ ಉಲನ್ ತರಿಸಿ ನೋಡಿರಿ

ಈಗ ನಮ್ಮಲ್ಲಿ ಬೇರೆ ಒಂದು ಡಿಪಾರ್ಟ್‌ಮೆಂಟು ಓಪನ್ ಮಾಡಿದೇವೆ. ಅಂದರೆ ಮಂಗಳೂರಲ್ಲಿ ದೊರೆಯುವ ಸಾಮಾನುಗಳು ಪರಸ್ಥಳದವರಿಗೆ ಯಾವದು ಬೇಕಾದರೂ ಟಪಾಲಿನಿಂದ ಪಡೆದು ಪರಸ್ಥಳದವರಿಗೆ ಕಳುಹಿಸುವೆವು ಕಮಿಶನ್ ರೂ ೩ ೪-೦ ಪರಸ್ಥಳದವರಿಗೆ ವಿ ಪಿ ಯಿಂದಲೂ ರವಾನಿಸುತ್ತೇವೆ ಕೆಟಲಾಗನ್ನು ಕೇಳುವವರಿಗೆ ರವಾನಿಸುತ್ತೇವೆ ನಮ್ಮ ವಿಳಾಸ —

ದಿ ಉಲನ್ ಮಾರ್ಟ್, ಮಂಗಳೂರು

ಶ್ರೀ ತಾಂಬೂಲ

41 15

ಇದನ್ನು ಓದಿ ! ಬಿಡಬೇಡಿ !! ಗುಣನೋಡಿ !!!

ಲೋಕದಲ್ಲಿ ಅನೇಕರು ಇಂಥಾ ತಾಂಬೂಲದ ಮಾತ್ರೆಗಳನ್ನು ಮಾಡಿ ಮಾರುತ್ತಿದ್ದಾರೆ ಆದರೆ ಸ್ವಲ್ಪ ಪರೀಕ್ಷಿಸಿ ನೋಡಿ ತಾಂಬೂಲದೊಂದಿಗೆ



೧—೨ ಮಾತ್ರೆ ಸೇವಿಸುತ್ತ ಬಂದರೆ ಮುಖದ ದವಡೆಯಿನ ದುರ್ಗಂಧ ನಾಶವಾಗುತ್ತೆ ರಕ್ತಶುದ್ಧಿ, ಜೀರ್ಣಶಕ್ತಿ, ಮೇಧಾಶಕ್ತಿ ಉಂಟಾಗುತ್ತೆ ವಾತ ಶೀತ ಸಂಬಂಧ ದೋಷಗಳು ನಿವಾರಣೆಯಾಗುತ್ತೆ ವಿದ್ಯಾರ್ಥಿಗಳಿಗೆ ಆಲಸ್ಯವಿಲ್ಲದಂತೆ ಸ್ಮರಣಶಕ್ತಿ ಉಂಟಾಗುವಂತೆ ಯಾವಾಗಲೂ ಉತ್ಸಾಹ ಉಲ್ಲಾಸ ಸ್ಫೂರ್ತಿವನ್ನುಂಟುಮಾಡುತ್ತೆ ಭೇದಿ, ಜ್ವರ, ನೆಗಡಿ, ಕೆಮ್ಮು ಮುಂತಾದ್ದಕ್ಕೆ ೧—೪ ಮಾತ್ರೆಗಳಂತೆ ಕೊಟ್ಟರೆ ಕೂಡ್ಲೆ ಗುಣಕಾಣುವುದು ಈ ವರಿಗೆ ಸಾವಿರಾರು ಜನರಿಗೆ ಅನುಭವಸಿದ್ಧವಾಗಿದೆ ಮಕ್ಕಳಿರುವ ಮನೆಗಳಲ್ಲಿ ಅವಶ್ಯ ಇದನ್ನು ಇಡಬೇಕು ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ ಆರು ಸೀಸೆಗೆ ಒಂದು ಜಾಸ್ತಿ ೮ ಸೀಸೆ ವರಿಗೆ ವಿ ಪಿ ಛಾರ್ಜು ೫ ಆಣೆ ನಮ್ಮ ವಿಳಾಸ —

ಸಾಹುಕಾರ್ ನಾಗಪ್ಪ ತಕ್ಷಣ ಪರಿಹಾರ ಡಬ್ಬಿ ೧ಕ್ಕೆ ೦—೧೨—೦

ವಿ. ವಸವಪ್ಪ ಶೆಟ್ಟಿ, ...
ಬೆಂಗಳೂರು ಸಿಟಿ ... ಮೆಡಿಕಲ್ ಪ್ರಾಕ್ಟೀಷನರ್

ಕ್ಲೆಮೆಂಟರ ಪ್ಯಾಚೆಸ್ ಬಾಂ ತೈಲವು

19 11

ತಲೆನೋವು, ನೀಯುನೋವು, ಸೆಳತ ಗಂಟ್ಲುನೋವು, ಪಾರ್ಶ್ವವಾಯು ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂಧುಕಟ್ಟುಗಳ ನೋವು, ಚೇಳು ಕಡಿದ ನೋವು ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ಜೀವನಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷಿಸಿನೋಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ನೂತನದಿಂದ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ... ಆದ ಕಾರಣ ಅದನ್ನು ಅಷ್ಟು ಹೆಚ್ಚಾಗಿ ... ಎಲ್ಲರೂ ... ಈ ... ಓಂ ... ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ... ವೈದ್ಯರೂ ಬಳಸುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,
೩೨, ವೇದನಾಯಕಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಇದುವರಿಗೆ ಯಾರೂ ಪ್ರಕಟಿಸದಂತಾ ಪುಸ್ತಕ!!!

10 3

“ಬ್ರಹ್ಮಚರ್ಯ” ವೆಂಬ ಮರ್ಮಶಾಸ್ತ್ರ.

ಇದು ಇಂಗ್ಲೀಷ್ ಭಾಷೆಯಲ್ಲಿ ಲೋಕಪ್ರಸಿದ್ಧವಾದ ಪುಸ್ತಕ ಈಗ ಇದನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿರುವೆವು ಈ ಮರ್ಮಶಾಸ್ತ್ರವನ್ನು ಯೌವನಸ್ಥರೂ ಬಾಲವೃದ್ಧರೂ ಓದಿ ತಿಳಿದುಕೊಳ್ಳಬೇಕು ಅನೇಕ ಹುಡುಗರು ಹಸ್ತಪ್ರಯೋಗವೇ ಮೊದಲಾದ ಭಯಂಕರವಾದ ದುರಭ್ಯಾಸಗಳಿಗೊಳಗಾಗಿ ಕೆಟ್ಟುಹೋಗಿರುತ್ತಾರೆ ಅವರ ದುಷ್ಪ್ರವರ್ತನೆಗಳಿಗೆ ಅವರ ಮೌಢ್ಯವೇ ಕಾರಣವಾಗಿರುತ್ತದೆ

ಈ ಉತ್ಕೃಷ್ಟವಾದ ಪುಸ್ತಕವನ್ನು ಇನ್ನೂ ಹೆಚ್ಚಾಗಿ ವಿವರಿಸಿ ತಿಳಿಸುವುದಕ್ಕೆ ಇಲ್ಲಿ ಸ್ಥಳಸಾಲದು ಆದರೆ ಇದರಲ್ಲಿ ಅಡಕವಾಗಿರುವ ಅಧ್ಯಾಯಗಳನ್ನು ಇಲ್ಲಿ ತಿಳಿಸುವೆವು. “ಜೀವೋತ್ಪತ್ತಿಯ ಪ್ರಾರಂಭವು, ಅದರ ಶಕ್ತಿಯು” “ಸಸ್ಯಾದಿಗಳ ಜೀವೋತ್ಪನ್ನವಾಗುವಿಕೆ” “ಪ್ರಾಣಿಗಳಲ್ಲುಂಟಾಗುವ ಜೀವೋತ್ಪತ್ತಿಯು” “ಮನುಷ್ಯಸಂತಾನವು, ಇದು ಉತ್ಪತ್ತಿಯಾಗುವ ರೀತಿಯು” “ಹುಡುಗರಲ್ಲಿರುವ ಮರ್ಮೇಂದ್ರಿಯಗಳು, ಅಂಗಗಳು ಕೆಡುವ ರೀತಿ” “ಹುಡುಗರ ಮರ್ಮೇಂದ್ರಿಯಗಳಿಂದಾಗುವ ನಾನಾ ಕೇಡುಗಳು” “ಹುಡುಗರು ತಮ್ಮ ದೇಹಗಳನ್ನು ಶುದ್ಧತೆ ಪುಷ್ಟಿ ಬಲತ್ರಾಣಗಳಲ್ಲಿ ಕಾಪಾಡುವದಕ್ಕೆ ಸೂತ್ರಗಳು” “ಹುಡುಗರು ತಾವು ಕಳಕೊಂಡ ದೇಹಬಲಶಕ್ತಿಗಳನ್ನು ತಿರಿಗಿ ಸಂಪಾದಿಸುವ ವಿಧಾನವು” “ಹುಡುಗರು ಪ್ರಾಯಕ್ಕೆ ಬರುವ ಕಾಲವು ಈ ಕಾಲದಲ್ಲಿ ಗಮನಿಸತಕ್ಕ ವಿಷಯಗಳು” “ಹುಡುಗರು ಪ್ರಾಯಕ್ಕೆ ಬರುವಕಾಲ, ಈ ಕಾಲದಲ್ಲಿ ಉಂಟಾಗುವ ಬದಲಾವಣೆಗಳು”

ಇಂಥಾ ಉತ್ಕೃಷ್ಟವಾದ ಪುಸ್ತಕವನ್ನು ಎಲ್ಲರೂ ಕೊಂಡು ತಮ್ಮ ಮನೆಗಳಲ್ಲಿ ಇಡಬೇಕು ಇದರ ಕ್ರಯ ಮೂರಾಣೆ ವಿ ಪಿ ಮೂಲಕ ತರಿಸಿಕೊಂಡರೆ ಐದಾಣೆಗಾಗುವವು

ವಿಳಾಸ—ಮ್ಯಾನೇಜರ್, ಸಿ ಎಲ್ ಎಸ್.
ಬುಕ್ ಡಿಪೋ ಮೈಸೂರು.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು



12

... ಕೆಮ್ಮು, ಗಂಟ್ಲು ಗೊರೆಸ್ಸುವುದು, ಹುಡಿಗೆಮ್ಮು ... ಎಲ್ಲಾ ... ಶೀತ ಗಂಟ್ಲಿನಲ್ಲಿ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಉಲಕ್ಷ್ಯ ಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯ ಎಂಬ ಅತಿ ಕಠಿಣವಾದ ... ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಶೀಘ್ರವಾಗಿ ನಿವಾರಣೆಮಾಡುತ್ತದೆ ಉಸುರು ಹುಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತವೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಮಾಡಬಲ್ಲದು ಕೆಮ್ಮನ್ನು ಶಮನವಮಾಡಿ, ನೀವು ಸುಖವಾಗಿ ನಿದ್ರೆ ಮಾಡುವಾಗ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದ ತಯಾರಾಗಿದೆ

ಎಲ್ಲೆಲ್ಲೂ ವಿಕ್ರಯವಾಗುವುದು | ಸಣ್ಣ ಸೀಸೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !

21

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಸ್ ಬಟ್ಟೆಗಳು ಸ್ವದೇಶ ... ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂಥವುಗಳಾಗಿವೆ ಬಣ್ಣವು ಹೋಗುವದಿಲ್ಲ ಕ್ರಯವು ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರು, ಈ ಬಟ್ಟೆಗಳನ್ನು ತರಿಸಿ ನೋಡಿ ... ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ... ಆಣೆಯಿಂದ ... ಆಣೆ ವರಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ದೊರಕುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,
ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು

ಮದರಾಸ್ ಸಾಹುಕಾರ್ ಪೇಟೆ, ಟಿ. ಎಂ. ರಾಮಯ್ಯ ಶೆಟ್ಟರ ಕಂಪನಿಯಲ್ಲಿ

19 7

ತಯಾರಾಗುವ ಕಬ್ಬಿಣದ ಪೆಟ್ಟಿಗೆಗಳು ಅಥವಾ ಟ್ರಿಜರಿಗಳು ಈ ಕೆಳಗಿನ ದರದ ಮಾರಾಟಕ್ಕೆ ಸಿದ್ಧವಾಗಿವೆ ಬ್ರಾಂಚ್ ಆಫೀಸ್ ಬೆಂಗಳೂರು ನಗರ್ತರಪೇಟೆಯಲ್ಲೂ ಸಿಕ್ಕುವದು



ಬೇಕಾದವರು ತಮ್ಮ ಅಡ್ರೆಸ್ಸು ತಿಳಿಸಿ ರೂ 10 ಮುಂಗಡವಾಗಿ ಕಳುಹಿಸಿದರೆ ವಿ ಪಿ ಮೂಲಕ ರವಾನಿಸಲ್ಪಡುತ್ತೆ ವಿಶೇಷ ಮಾಹಿತಿ ಬೇಕಾದವರು ಕಾಗದದ ಮುಖಾಂತರ ಮೇಲ್ಕಂಡ ವಿಳಾಸದಾರರಿಂದ ತಿಳಿದುಕೊಳ್ಳಬಹುದು.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 6-2

(ಸ್ಕಾಟ್ಸ್ ಇಮಲ್ ಷನ್)

ಘಟ್ಟ ಶರೀರವುಳ್ಳವರ್ಯಾರೂ ಪ್ಲೇಗ್, ಮಹಾಮಾರಿರೋಗ ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ಹಗಲಿ ಹಿಡಿಯುತ್ತದೆ



ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್ ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಚಿಹ್ನೆ ಪಟ್ಟಿ ನೋಡುಕೊಳ್ಳಿ

೧೯೦೯ನೇ ... ಸಂಬಂಧ ...

111

ಮಹಾರಾಜಾಕಾಲೇಜು ಕನ್ನಡ ಪಂಡಿತರು ಮೈ ಸಿ ಆರ್ ಶಂಭುಶಾಸ್ತ್ರಿಗಳವರಿಂದ ಪರಿಷ್ಕರಿಸಲ್ಪಟ್ಟಿದು ಕ್ರಯ ಪ್ರತಿ ೧ಕ್ಕೆ ೦ ೪ ೦, ೧೦೦ಕ್ಕೆ ೧ ... ಪುಸ್ತಕದ ... ಪ್ರತಿ ೧ಕ್ಕೆ ... ೦, ೫ಕ್ಕೆ ೧ ... ಮಿನರ್ ನಾಗಪುಸ್ತಕ ಚಂದಾ ವರ್ಷಕ್ಕೆ ೧ ೪ ೦, ನೋಟ್ಸು ... ಹೇತು ಸಂಗತಿಗಳಾಗಿ ... ಪತ್ರಿಕೆಯನ್ನು ನೋಡಿ ವಿಳಾಸ—
... ಮ್ಯಾನೇಜರ್ ... ಮಿನರ್ ಆಫೀಸ್, ಮೈಸೂರು

ಕನ್ನಡ ಸಂಗೀತ ಪುಸ್ತಕಗಳು

11

... ಮತ್ತು ಎಲ್ಲಾ ... ಉಳಿಯುವವಲ್ಲದೆ ಬಾಲಕರ ಮನೋರಂಜನವಾಗುವಂತಿವೆ, ಕ್ರಯ ಒಂದಕ್ಕೆ ೩ ಆಣೆ ... ಆಣೆ ... ೧೨ ಪ್ರತಿಗೆ ... ೨೦೦ ವಿಳಾಸ—
ಎಕ್ ಜಗನ್ನಾಥರಾವ ಗೋಖಲೆ ಮುಂಡಗೋದ ಉತ್ತರ ಕನ್ನಡ ಜಿಲ್ಲಾ.

JUST RECEIVED! JUST RECEIVED!!

Stead's Books for the Bairns

illustrated New Numbers

STEAD'S PENNY POPULAR TALES ...
... 24 numbers

A VERY NICE SELECTION OF 12

CHRISTMAS AND NEW YEAR CARDS AND CALENDARS FOR 1909.

Apply The Manager, C L S Book Depot Mysore City

ಇಲ್ಲಿ ನೋಡಿ.

ತುಮಕೂರು ಮಿಷನ್ ಶಾಲೆಯಲ್ಲಿ ಯೂರೋಪಿಯನ್ನರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ... ದರದಿಂದ ತಯಾರಾಗುತ್ತವೆ ಕ್ರಯ ೧೨ ಆಣೆ ಮೊದಲ್ಗೊಂಡು ... ೧೨ ಆಣೆಯ ವರಿಗೆ ... ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ... ಡಿಸ್ಕೌಂಟ್ ಕೊಡಲ್ಪಡುವದು. ಈಗತಾನೇ ಇಂಗ್ಲಿಷ್ ಉಲ್ ಬಂದಿದೆ ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಲ್ಪಡುವುವು ವಿಳಾಸ —
ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಮಿಷನ್ ... ತುಮಕೂರು

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ ಕ್ರಯ ಒಂದಾಣೆ

೧೯೦೯ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಮೈಸೂರು ಹೊಸ ಅರಮನೆಯ ಆನೆಬಾಗಿಲು, ಮೈಸೂರು ಪಬ್ಲಿಕ್ ಆಫೀಸ್ ಕಟ್ಟಡ, ಮೈಸೂರು ಜೂಬಿಲಿ ಹಾಲ್ ಕಟ್ಟಡ, ನೀಲಗಿರಿಗೆ ಹೋಗುವ ರೈಲ್ ಮಾರ್ಗವು, ಮತ್ತು ದೇವರಾಯದುರ್ಗ ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ—ಇದೇ ಜನವರಿ ಆಖೈರಿನೊಳಗಾಗಿ ‘ವೃತ್ತಾಂತ ಪತ್ರಿಕೆ’ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ. ಕೂಡ್ಲೆ ಬರೆಯಿರಿ. ವಿಳಾಸ—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ವೃತ್ತಾಂತ ಪತ್ರಿಕೆ.

೧೯೦೯ ನೇ ಇಸವಿ ಜನವರಿ ತಾ|| ೧೪ ನೇ ಗುರುವಾರ

ಕಿರಿಯರ ವಿಷಯದಲ್ಲಿ ಹಿರಿಯರ ಕರ್ತವ್ಯವು.

ಮಿಸೆಸ್ ಬೆಸೆಂಟರು ಕಳೆದ ಮಂಗಳವಾರ ಬೆಳಿಗ್ಗೆ ರಾಜಧಾನಿಗೆ ಬಂದು, ದಿವಾನರವರ ಬಂಗಲೆಯಲ್ಲಿ ವಿದ್ಯಾರ್ಥಿಗಳಿಗೆ ಸದ್ಬೋಧನೆಯನ್ನು ಮಾಡಿದರು. ಮಧ್ಯಾಹ್ನ ಬಾಲಿಕರ ಶ್ರೇಯೋಭಿವೃದ್ಧಿಗೆ ಸಹಾಯಕವಾದ ಒಂದು ಸಂಘವನ್ನು ಪ್ರಾರಂಭಿಸಿ, ಸಾಯಂಕಾಲ ಟೌನ್ ಹಾಲಿನಲ್ಲಿ ಉಪನ್ಯಾಸ ಮಾಡಿದರು. ರೆವಿನ್ಯೂ ಕಮಿಷನರರೂ, ಡೆಪ್ಯುಟಿ ಕಮಿಷನರರೂ, ಸೆಷನ್ಸ್ ಜಡ್ಜರೂ, ಈ ಮೊದಲಾದ ಸರ್ಕಾರಿ ದೊಡ್ಡ ಮನುಷ್ಯರೂ, ಅಧಿಕಾರಿಗಳೂ, ಯೂರೋಪಿಯನ್ ಸರ್ದಾರರೂ, ದೊರೆಸಾನಿಗಳೂ, ವಿದ್ಯಾರ್ಥಿಗಳೂ, ವಿದ್ಯಾವತಿಯರಾದ ಸ್ತ್ರೀಯರೂ ಹಾಜರಾಗಿದ್ದು, ಉಪನ್ಯಾಸವನ್ನು ಕೇಳಿ ಸಂತೋಷಪಟ್ಟರು. ಹಿರಿಯರಾದವರು ಕಿರಿಯರ ವಿಷಯದಲ್ಲಿ ಹ್ಯಾಗೆ ನಡೆದುಕೊಳ್ಳಬೇಕು, ಹಿರಿಯರ ಜವಾಬ್ದಾರಿಯು ಎಷ್ಟು ಮಾತ್ರದ್ದು, ಇವರು ತಮ್ಮ ನಡೆನುಡಿ ಆಚಾರಗಳಿಂದ ಕಿರಿಯರನ್ನು ಯಾವ ರೀತಿ ಅಭಿವೃದ್ಧಿಗೆ ತರಬಹುದು, ಅವರು ಬಾಲಕ ಬಾಲಿಕೆಯರನ್ನು ಯಾವ ಕ್ರಮದಲ್ಲಿ ಸಚ್ಚರಿತ್ರರನ್ನಾಗಿ ಬೆಳೆಸಬಹುದು ಎಂಬೀ ವಿಷಯಗಳನ್ನು ಕುರಿತು ಮಿಸೆಸ್ ಬೆಸೆಂಟರು ಉಪನ್ಯಾಸ ಮಾಡಿದರು. ಹಿರಿಯರು ಎಂಬ ಮಾತಿನಲ್ಲಿ ಆಳುವವರೂ, ತಂದೆ ತಾಯಿಗಳೂ, ಉಪಾಧ್ಯಾಯರೂ, ವರ್ತಮಾನಪತ್ರಿಕೆಗಳನ್ನು ನಡೆಸತಕ್ಕವರೂ, ಉಪನ್ಯಾಸಗಳನ್ನು ಮಾಡತಕ್ಕವರೂ ಸೇರಿರುತ್ತಾರೆಂದು ಸೂಚಿಸಿ, ಈಗ ವಿದ್ಯಾರ್ಥಿಗಳಾಗಿದ್ದರೂ ಮುಂದೆ ಪ್ರಜೆಗಳಾಗಿ ಬೆಳೆಯುವ ಬಾಲಕರನ್ನೂ ಗೃಹಿಣಿಗಳಾಗುವ ಬಾಲಿಕೆಯರನ್ನೂ ಮನೆಯಲ್ಲಿ ಮಾತಾಪಿತೃಗಳೂ, ಹೊರಗಡೆ ಉಪಾಧ್ಯಾಯರೂ ಸತ್ಪಥದಲ್ಲಿಟ್ಟು ಬೆಳೆಸಬೇಕಾದದ್ದು ಪರಮಾವಶ್ಯವೆಂದು ತಿಳಿಸಿದರು. ಚಿಕ್ಕಮಗು ಬಾಲ್ಯದಿಂದಲೂ ದೈವಭಕ್ತಿ ರಾಜಭಕ್ತಿ ಸಮ್ಯಮನಯಾದಿ ಸದ್ಗುಣ ಸಚ್ಚರಿತ್ರಗಳನ್ನು ಕಲಿಸಬೇಕಾದದ್ದೂ, ಇದಕ್ಕೆ ಅನುಕೂಲವಾದ ಏರ್ಪಾಡುಗಳನ್ನು ಮಾಡಿ ಸಹಾಯಸಂಪತ್ತುಗಳನ್ನೊದಗಿಸಬೇಕಾದದ್ದೂ ಪ್ರಜಾಪಾಲಕರ ಕರ್ತವ್ಯಾಂಶವಾಗಿರುತ್ತದೆಂದು ಹೇಳಿ, ಮೈಸೂರು ಗವರ್ನಮೆಂಟಿನವರು ಈ ವಿಧವಾದ ಶಿಕ್ಷಣವನ್ನು ಪಾಠಶಾಲೆಗಳಲ್ಲಿ ಮಾಡಿಸುವುದಕ್ಕೆ ಪ್ರಾರಂಭಿಸಿರುವುದನ್ನು ಅಕೆ ಬಹಳವಾಗಿ ಕೊಂಡಾಡಿದರು.

ವರ್ತಮಾನ ಪತ್ರಿಕೆಗಳನ್ನು ನಡಿಸತಕ್ಕವರ ಜವಾಬ್ದಾರಿಯೂ, ಸಭೆಗಳಲ್ಲಿ ಎದ್ದುನಿಂತು ಉಪನ್ಯಾಸಮಾಡತಕ್ಕವರ ಜವಾಬ್ದಾರಿಯೂ ಅಪಾರವಾಗಿರುತ್ತದೆ. ಪತ್ರಿಕೆಗಳಲ್ಲಿ ಬರೆಯತಕ್ಕ ವಿಷಯಗಳನ್ನು ಕುರಿತು ಎಡಿಟರುಗಳು ಮೊದಲೇ ಬಹಳ ದೀರ್ಘವಾಗಿ ಆಲೋಚನೆಮಾಡಿ, ಜನಸಾಮಾನ್ಯಕ್ಕೂ ದೇಶೋನ್ನತಿಗೂ ಹಿತಕಾರಿಯಾಗುವಂಥಾ ಸಂಗತಿಗಳನ್ನು ವಿಮರ್ಶೆಯಿಂದ ಪ್ರಕಟಿಸಬೇಕಾಗಿದೆ. ಜನರ ಮನಸ್ಸನ್ನು ಕೆಡಿಸುವಂಥಾ ಮತ್ತು ದೇಶೋನ್ನತಿಗೆ ಸಹಕಾರಿಯಾಗದಂಥಾ ವಿಷಯಗಳನ್ನು ಕುರಿತು ಪ್ರಸ್ತಾಪಮಾಡೋಣದರಿಂದ ಬಹಳ ಕೆಡುಕಾಗುತ್ತದೆ. ಹಿಂದೂಸ್ಥಾನದಲ್ಲಿ ಪ್ರಜೆಗಳ ಮನಸ್ಸು ಕೆಡುವುದಕ್ಕೆ ಮತ್ತು ಈಗ ಕಟ್ಟಿರುವಂಥಾ ಘಟನೆಗಳನ್ನುಳ್ಳ ವರ್ತಮಾನ ಪತ್ರಿಕೆಗಳೇ ಕಾರಣಗಳೆಂದು ಧಾರಾಳವಾಗಿ ಹೇಳಬಹುದು. ಉಪನ್ಯಾಸಮಾಡುವವರು ಮಧ್ಯಾರ್ಥವಾದ ದೇಶವತ್ಸಲರಾಗಿಯೂ, ಬಹಳ ವಾಕ್ಚಾತುರ್ಯದಿಂದಲೂ ದೂರದೃಷ್ಟಿಯಿಂದಲೂ ಕೂಡಿದವರಾಗಿಯೂ, ವಿಷಯಜ್ಞಾನವುಳ್ಳವರಾಗಿಯೂ, ಪರಮಭಾಗವತರಾಗಿಯೂ ಇರಬೇಕು. ಇಲ್ಲವಾದರೆ ಅವರ ಉಪನ್ಯಾಸಗಳನ್ನು ಕೇಳತಕ್ಕ ಅನುಭವ, ಪೂರ್ವಾಪರಗಳ ಪರಿಜ್ಞಾನವಿಲ್ಲದ ಯೌವನಸ್ಥರು ದುರ್ಮಾರ್ಗಗಳಿಗೆ ಪ್ರವೇಶಿಸುವುದಕ್ಕೆ ಕೇವಲ ಅವರುಗಳೇ ಕಾರಣರಾಗುತ್ತಾರೆ. ಇಂಥಾ ಅನುಭವಿಗಳೂ ಪೂರ್ವಾಪರಜ್ಞಾನವುಳ್ಳವರೂ ಅಲ್ಲದ ಉಪನ್ಯಾಸಕರು ಮಾಡುತ್ತಾ ಬಂದ ಉಪನ್ಯಾಸಗಳ ಬಲೆಯಿಂದಲೂ, ತಿಳಿವಳಿಕೆ ಸಾಲದ ಎಡಿಟರುಗಳು ಬರೆದ ಲೇಖನಗಳ ಬಲೆಯಿಂದಲೂ ಉತ್ತರ ದೇಶದಲ್ಲಿ ಈಚೆಗೆ ನಾನಾ ಕ್ರೂರತರವಾದ ಮಹತ್ಕೃತ್ಯಗಳೂ, ರಾಜದ್ರೋಹಗಳೂ, ಅಕೃತ್ಯಗಳೂ ನಡೆದಿರುತ್ತವೆ. ಆದಕಾರಣ ಪತ್ರಿಕಾಕರ್ತರೂ ಉಪನ್ಯಾಸಕರೂ ಈ ರಾಷ್ಟ್ರದಲ್ಲಿ ಬಹಳ ಎಚ್ಚರಿಕೆಯುಳ್ಳವರಾಗಿರಬೇಕು. ಯಾತಕ್ಕೆಂದರೆ ಲೇಖನಿಯು ನಾಲಿಗೆಯಂತೆಯೇ ಬಹು ತೀಕ್ಷ್ಣವಾದ ಕತ್ತಿಯೋಪಾದಿಯಲ್ಲಿರುವುದು.

ಮಿಸೆಸ್ ಬೆಸೆಂಟರು ನಮ್ಮ ಮೈಸೂರು ಪ್ರಜೆಗಳಿಗೂ ಪ್ರಜಾಪಾಲಕರಿಗೂ ಈ ರೀತಿಯಾದ ಹಿತವಾದವನ್ನು ಹೇಳಿದ್ದಕ್ಕಾಗಿ ತುಂಬಾ ಸಂತೋಷಪಡುತ್ತೇವೆ. ಹಿರಿಯರ ವರ್ಗಕ್ಕೆ ಸೇರಿದ ತಂದೆ ತಾಯಿಗಳೂ ಉಪಾಧ್ಯಾಯರೂ ಗವರ್ನಮೆಂಟಿನವರೂ ಅಕೆ ತಿಳಿಸಿದ ಪ್ರಕಾರ ಗಂಡು ಹೆಣ್ಣು ಮಕ್ಕಳನ್ನು ಸತ್ ಶಿಕ್ಷಣದಲ್ಲಿ ಬೆಳೆಸಿ, ದೇಶೋನ್ನತಿಗೆ ಸಹಕಾರಿಗಳಾಗಬೇಕೆಂದು ನಿರೀಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ರಜಾಪಡೆದು ಸೀಮೆಗೆ ಹೋಗಿದ್ದ ಮಿಸ್ ಪ್ಯಾಲಿತಾರ್ಪ್ ಯವರು ವಾಪಸು ಬಂದು ರಾಜಧಾನಿಯ ಮಹಾರಾಣಿಯವರ ಕಾಲೇಜಿನ ಲೇಡಿ ಸೂಪರಿಂಟೆಂಡೆಂಟ್ ಕೆಲಸದ ಚಾರ್ಜನ್ನು ವಹಿಸಿಕೊಂಡರು.

ಮೈಸೂರು ಸಂಸ್ಥಾನದ ೧೯೦೭-೦೮ನೇ ಸಾಲಿನ ಆಳ್ವಿಕೆ, ಆಯವ್ಯಯ, ಸ್ಥಿತಿಗತಿಗಳನ್ನು ಕುರಿತ ರಿಪೋರ್ಟನ್ನು ಗವರ್ನಮೆಂಟಿನವರು ತಯಾರುಮಾಡಿ ಒಂದು ಪ್ರತಿಯನ್ನು ಈ ವಾರ ನಮ್ಮಲ್ಲಿಗೆ ಕಳುಹಿಸಿರುತ್ತಾರೆ.

ರಾಜಧಾನಿಯ ಕೋರ್ಟಿಯಲ್ಲಿ ಮೂರು ಕಳುವುಗಳು ನಡೆದವು. ಪೋಲೀಸಿನವರು ಆ ಮೂರರಲ್ಲೂ ಕಳ್ಳರನ್ನೂ ಮಾಲುಗಳನ್ನೂ ಪತ್ತೆಮಾಡಿದರು. ಕಳ್ಳರಿಗೆ ೧, ೩, ೬ ತಿಂಗಳಂತೆ ಕಠಿಣ ಸಜಾ ಅಪರಾಧಿಗಳಿಗೆ ವಿಧಿಸಲ್ಪಟ್ಟಿತು.

೧೯೦೯ ನೇ ವರುಷದ “ವೃತ್ತಾಂತ ಪತ್ರಿಕೆ” ಕ್ಯಾಲೆಂಡರನ್ನು ಈ ಸಂಚಿಕೆಯೊಡನೆ ನಮ್ಮ ಖಾಯಂ ಚಂದಾದಾರರಿಗೆಲ್ಲಾ ಉಚಿತವಾಗಿ ಕಳುಹಿಸಿರುತ್ತೇವೆ. ಈ ಜನವರಿ ತಿಂಗಳು ಮುಗಿಯುವುದರೊಳಗಾಗಿ ಚಂದಾದಾರರಾಗತಕ್ಕವರಿಗೂ ಒಂದು ಪ್ರತಿಯನ್ನು ಕಳುಹಿಸಬಹುದು.

ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ಕೆಲವರು ಸೇರಿ ಒಂದು ಸಂಸಾರದವರಿಗೆ ಕಷ್ಟನಷ್ಟಗಳನ್ನುಂಟುಮಾಡಿದಾರೆಂದು ಮುಂತಾಗಿ ಒಬ್ಬ ಬಾತ್ಮೀದಾರರು ನಮಗೆ ಬರೆದಿರುತ್ತಾರೆ. ಅವರು ತಮ್ಮ ಕಷ್ಟನಷ್ಟಗಳನ್ನು ಕುರಿತು ಅಲ್ಲಿನ ಪೋಲೀಸ್ ಮತ್ತು ಮ್ಯಾಜಿಸ್ಟ್ರೇಟರುಗಳಿಗೆ ಬರೆದುಕೊಂಡಲ್ಲಿ ಅವರು ತಕ್ಕ ಬಂದೋಬಸ್ತು ಮಾಡ್ತಾರೆನ್ನುವುದಕ್ಕೆ ಸಂಶಯವಿಲ್ಲ.

ಪರಸ್ಪರ ಸಹಾಯಕ ಸಂಘಗಳ ಪ್ರಯೋಜನವನ್ನು ಹೆಚ್ಚಿಸುವುದಕ್ಕಾಗಿ ಆ ಸಂಘಗಳ ಹಣವನ್ನು ಸೆಕ್ರೆಟರಿ, ಟ್ರೆಜರರ್ ಅಥವಾ ಮ್ಯಾನೆಜರುಗಳು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಡಿಪಾಜಿಟ್ಟು ಇಟ್ಟುಕೊಳ್ಳಬಹುದೆಂದು ಇಂಡಿಯಾ ಗವರನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿರುತ್ತಾರೆ.

ತುಮಕೂರು ಹೈ ಸ್ಕೂಲ್ ಹೆಡ್ ಮಾಸ್ಟರಾಗಿದ್ದು ಸರ್ಕಲ್ ಇನ್ಸ್‌ಪೆಕ್ಟರಾದ ಮೆ|| ಸಿ. ಕೃಷ್ಣರಾಯರನ್ನು ಸರ್ಕಾರದವರು ಬೆಂಗಳೂರು ಸಿಟಿ ಮ್ಯುನಿಸಿಪಲ್ ಹೈ ಸ್ಕೂಲಿನ ಹೆಡ್ ಮಾಸ್ಟರ್ ಕೆಲಸಕ್ಕೆ ನೇಮಕಮಾಡಿ, ಮೈಸೂರು ಕಾಲೇಜಿನಲ್ಲಿರುವ ಮೆ|| ವೆಂಕಟಸಾಮಿ ನಾಯ್ಡುಯವರನ್ನು ಸರ್ಕಲ್ ಇನ್ಸ್‌ಪೆಕ್ಟರಾಗಿ ವರ್ಗಮಾಡಿದಾರೆ.

ಬಡಕೋರೆ ತಾಲ್ಲೂಕು ಬುಂಬನ ಕಟ್ಟೆಯಲ್ಲಿ ಶ್ರೀರಾಮ ದೇವರ ರಥೋತ್ಸವದ ಕಾಲದಲ್ಲಿ ಅಂದರೆ ನಾಳೆಯಿಂದ ಮೂರು ದಿನಗಳ ತನಕ ಸರ್ಕಾರದವರು ಗೋಶಾಲೆಗಳ ಪ್ರದರ್ಶನವನ್ನು ನಡಿಸುವವರಾಗಿದಾರೆ. ಉತ್ಕೃಷ್ಟವಾದ ದನಗಳನ್ನು ಸಾಕಿದವರಿಗೆ ೩೦೦ ರೂಪಾಯಿ ತನಕ ಬಹುಮಾನಗಳನ್ನೂ ಸರ್ಟಿಫಿಕೇಟುಗಳನ್ನೂ ಕೊಡಿಸುವರು.

ಮುಂದಿನ ತಿಂಗಳು ತಾ ೪ ನೇ ಗುರುವಾರ ಸಾಯಂಕಾಲ ಬೆಂಗಳೂರು ಲಾಲ್ ಬಾಗ್ ಎಂಬ ಉದ್ಯಾನವನದಲ್ಲಿ ಫಲಪುಷ್ಪಾದಿಗಳ ಪ್ರದರ್ಶನೋತ್ಸವವು ನಡೆಯುವುದು. ಉತ್ಕೃಷ್ಟವಾದ ಪ್ರದರ್ಶನ ವಸ್ತುಗಳಿಗೆ ಮೂರು ಚಿನ್ನದ ಮೆಡಲನ್ನೂ, ಒಂದು ಬೆಳ್ಳಿಯ ಮೆಡಲನ್ನೂ, ಒಂದು ಕಂಚಿನ ಮೆಡಲನ್ನೂ ೪೮೦ ರೂಪಾಯಿಗಳನ್ನೂ ಬಹುಮಾನವಾಗಿ ಹಂಚಿಕೊಡುವರು.

ಕಳೆದ ಶುಕ್ರವಾರ ಬೆಳಿಗ್ಗೆ ಸುಮಾರು ೧೦ ಗಂಟೆಗೆ ಶ್ರೀಮನ್ ಮಹಾರಾಜರವರು ಮೋಟಾರ್ ಗಾಡಿಯಲ್ಲಿ ರಾಜಧಾನಿಯಿಂದ ಪ್ರಯಾಣಮಾಡಿ, ಮಧ್ಯಾಹ್ನ ಸುಮಾರು ೨ ಗಂಟೆಯ ಹೊತ್ತಿಗೆ ಬೆಂಗಳೂರನ್ನು ಸುಖವಾಗಿ ಸೇರಿದರು. ಇಲ್ಲೂ ಬೆಂಗಳೂರಿನಲ್ಲೂ ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಅವರು ಕೆಲವು ದಿನ ಅಲ್ಲಿದ್ದು ತರುವಾಯ ಮದರಾಸಿಗೆ ದಯಮಾಡುವವರಾಗಿದಾರೆಂದು ಕೇಳುತ್ತೇವೆ.

ದಿವಾನರವರ ಪತ್ನೀರವರು ಮಿಸೆಸ್ ಬೆಸೆಂಟ್ ಎಂಬ ಪ್ರಸಿದ್ಧ ಸ್ತ್ರೀಯನ್ನು ಬೆಂಗಳೂರಿನಲ್ಲಿ ತಮ್ಮ ಬಂಗಲೆಗೆ ಕಳೆದ ವಾರ ಕರೆದು, ಅವರಿಗೆ ಔತಣವನ್ನು ಮಾಡಿದರು. ಆಗ್ಗೆ ಬೆಂಗಳೂರಿನ ಸುಮಾರು ೫೦೦ ಮಂದಿ ಸ್ತ್ರೀಯರು ಬಂಗಲೆಯಲ್ಲಿ ಹಾಜರಾಗಿದ್ದರು. ಮಿಸೆಸ್ ಬೆಸೆಂಟರು ಸ್ತ್ರೀಧರ್ಮವನ್ನು ಕುರಿತು ಅವರಿಗೆಲ್ಲಾ ಬಹು ಸ್ವಾರಸ್ಯವಾದ ಉಪನ್ಯಾಸಮಾಡಿದರು. ಅವರು ಆಗ ಇಂಗ್ಲೀಷಿನಲ್ಲಿ ಹೇಳಿದ್ದನ್ನು ಸೌ|| ರುಕ್ಮಿಣಮ್ಮನವರು ಕನ್ನಡದಲ್ಲಿ ವಿವರಿಸಿ ಹೇಳಿದರು.

ಕಳೆದ ವಾರ ಬೆಂಗಳೂರಿನಲ್ಲಿ ನಡೆದ ವೆಸ್ಲಿಯನ್ ಮಿಷನ್ ಸಂಘದ ವಾರ್ಷಿಕ ಸಭೆಯಲ್ಲಿ ಯೂರೋಪಿಯನ್ ಮಿಷನರಿಗಳ ವರ್ಗಾವರ್ಗಿಯು ಮುಂದೆ ಹೇಳುವಂತೆ ಮಾಡಲ್ಪಟ್ಟಿದೆ.—ರೆವ್ ಫಾಂಸೆಟ್‌ರವರು ಮೈಸೂರಿನಿಂದ ಗುಬ್ಬಿಗೆ, ರೆವ್. ಟ್ರವೆಲ್ಲ್ಯಯವರು ಗುಬ್ಬಿಯಿಂದ ಬೆಂಗಳೂರಿಗೆ, ರೆವ್. ಬ್ಲ್ಯಾಕ್‌ಬರ್ನ್ ಯವರು ಬೆಂಗಳೂರಿನಿಂದ ಶಿವಮೊಗ್ಗೆಗೆ, ರೆವ್ ಗಲ್ಲಿಫರ್ಡ್ ಯವರು ಮದರಾಸಿನಿಂದ ಮೈಸೂರಿಗೆ, ರೆವ್ ಸ್ಪೆನ್ಸರ್‌ಯವರು ಸೀಮೆಯಿಂದ ಬಂದ ಮೇಲೆ ಹಾಸನಕ್ಕೆ.

ಕಳೆದ ಜೂಲೈ ತಿಂಗಳಲ್ಲಿ ರಾಜಧಾನಿಯಲ್ಲಿ ನಡೆದ ಮೈಸೂರು ಸಂಸ್ಥಾನದ ಆರ್ಯ ವೈಶ್ಯ ಮಹಾ ಸಭೆಯ ರಿಪೋರ್ಟನ್ನು ಸೆಕ್ರೆಟರಿಯವರು ಕನ್ನಡದಲ್ಲೂ ತೆಲುಗಿನಲ್ಲೂ ಚನ್ನಾಗಿ ಅಚ್ಚು ಹಾಕಿಸಿ ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿಕೊಟ್ಟಿದಾರೆ. ವೈಶ್ಯ ಮಂಡಲಿಯವರೆಲ್ಲಾ ಈ ರಿಪೋರ್ಟನ್ನು ತರಿಸಿ, ಸಭೆಯಲ್ಲಿ ನಡೆದ ವ್ಯವಹಾರಗಳನ್ನೆಲ್ಲಾ ತಿಳಿದುಕೊಂಡಾರೆಂದು ನಿರೀಕ್ಷಿಸುತ್ತೇವೆ. ಇದರಿಂದ ಸಭೆಯ ಪುರೋಭಿವೃದ್ಧಿಗೆ ತುಂಬಾ ಸಹಾಯವಾದೀತೆನ್ನುವುದಕ್ಕೆ ಸಂದೇಹವಿಲ್ಲ.

ಕಳೆದ ಶುಕ್ರವಾರ ಬೆಳಿಗ್ಗೆ ಬ್ರಿಟಿಷ್ ರೆಸಿಡೆಂಟರಾದ ಮೆ|| ಎಸ್. ಎಂ. ಫ್ರೇಸರ್ ಯವರೂ ಅವರ ಅಸಿಸ್ಟೆಂಟರೂ ಬೆಂಗಳೂರಿಂದ ರಾಜಧಾನಿಗೆ ದಯಮಾಡಿ ಭೋಜನಾನಂತರ ಅಂದರೆ ಸುಮಾರು ೧೧|| ಗಂಟೆಗೆ ಮೋಟಾರ್ ಗಾಡಿಯಲ್ಲಿ ಮಡಿಕೇರಿಯ ಕಡೆ ಪ್ರಯಾಣ ಮಾಡಿದರು. ಎರಡು ವೇಳೆಯೂ ಗೌರವಾರ್ಥವಾದ ೧೩ ತೋಪುಗಳು ಹಾರಿಸಲ್ಪಟ್ಟವು. ಆ ದಿನ ಬೆಳಿಗ್ಗೆ ಅವರೂ ಶ್ರೀಮನ್ ಮಹಾರಾಜರವರೂ ಖಾಸ್ ಬಂಗಲೆಯಲ್ಲಿ ಕಲೆತು ಸ್ವಲ್ಪ ಹೊತ್ತು ಸಂಭಾಷಣೆಮಾಡುತ್ತಿದ್ದರೆಂದು ತಿಳಿದು ಬರುತ್ತದೆ.

ರಾಜಧಾನಿಯ ಕೋಟೆಯ ಆವರಣದಲ್ಲಿರುವ ಮನೆಗಳನ್ನು ಒಡೆದು, ಸೊಗಸಾದ ರಸ್ತೆಗಳನ್ನು ಹಾಕಿ, ನೇತ್ರಾನಂದಕರವಾದ ಉದ್ಯಾನವನಗಳನ್ನು ಮಾಡುವುದಕ್ಕೆ ಗವರನ್‌ಮೆಂಟಿನವರು ೬,೧೩,೬೦೦ ರೂಪಾಯಿನ ಅಂದಾಜು ಪಟ್ಟಿಯನ್ನು ಸ್ಯಾಂಕ್ಷನ್ ಮಾಡಿದಾರೆ. ಮೊದಲು ಕೋಟೆ ಗೋಡೆಯ ಒಳಭಾಗದಲ್ಲಿ ಸುತ್ತಲೂ ೬೦ ಅಡಿ ರಸ್ತೆಯನ್ನು ಹಾಕುವುದಕ್ಕಾಗಿ ಮನೆಗಳನ್ನು ಈ ವರುಷ ಜೂನ್ ಆಖೈರಿನೊಳಗಾಗಿ ಒಡೆದುಹಾಕುವರು. ಇದಕ್ಕಾಗಿ ಟ್ರಸ್ಟ್ ಬೋರ್ಡಿನವರು ೮೦,೦೦೦ ರೂಪಾಯಿ ಖರ್ಚುಮಾಡುವವರಾಗಿದಾರೆ.

ಕಳೆದ ವಾರದ ಪತ್ರಿಕೆಯಲ್ಲಿ ಜನವರಿ ಪ್ರಾರಂಭದಿಂದ ಮೋಟಾರ್ ಬಂಡಿಯನ್ನು ಬಿಡುತ್ತಾರಾಗಿ ಸೂಚಿಸಿ, ನಿಮ್ಮ ಬಾತ್ಮೀದಾರರು ಬರೆದಿರುವುದನ್ನು ವಿಚಾರಿಸಿ ನೋಡಿದ್ದಾಯಿತು. ಮೋಟಾರ್ ಗಾಡಿಯನ್ನು ಸಧ್ಯ ಬಿಡುವಂತೆ ಕಂಡು ಬರುವುದಿಲ್ಲ. ಕೆಲವು ಕಾಲದಿಂದ ನಿಂತಿದ್ದ ಕಮಲಯ್ಯನವರ ಗಾಡಿಯನ್ನು ಪುನಃ ಬಿಡಲು ಪ್ರಾರಂಭಿಸಬೇಕೆಂತ ಇಲ್ಲಿನ ಕೆಲವರು ಯೋಚಿಸಿರುವುದಾಗಿ ತಿಳಿಯಬರುತ್ತೆ. ಇದು ಪ್ರಸಿದ್ಧಿಹೊಂದಿದ್ದೂ ಮೋಟಾರ್‌ಗಿಂತ ಅತಿ ವೇಗವಾದದ್ದೂ ಆಗಿರುತ್ತದೆ ಎಂದು ಚಾಮರಾಜನಗರದ ಒಬ್ಬ ಬಾತ್ಮೀದಾರರು ಬರೆದಿದಾರೆ.

ಕಳೆದ ವಾರ ನಮ್ಮಲ್ಲಿಗೆ ಬಂದಿರುವ ೧೯೦೯ ನೇ ವರುಷದ ಕ್ಯಾಲೆಂಡರುಗಳ್ಯಾವವೆಂದರೆ —ಮೈಸೂರು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್ಸಿನ ಸೂಪರಿಂಟೆಂಡೆಂಟರೂ, ಬೆಂಗಳೂರು ಸಿಟಿ ಚಿನ್ನ ಬೆಳ್ಳಿ ನಗಗಳ ವ್ಯಾಪಾರಿಗಳಾದ ಮೆಸ್ಸರ್ಸ್ ವಿ. ಜಿ. ಕುಪ್ಪಯ್ಯ ಚೆಟ್ಟಿ ಎಂಡ್ ಕಂಪನಿಯವರೂ, ಬೆಂಗಳೂರು ಸಿಟಿ ಮೆಡಿಕಲ್ ಹಾಲ್‌ನವರೂ, ಬೆಂಗಳೂರು ಸಿಟಿ ಮೆಸ್ಸರ್ಸ್. ಎಲ್. ಎ. ಪೌವೆಲ್ ಎಂಡ್ ಕಂಪನಿಯವರೂ, ಬೆಂಗಳೂರು ಚಿಕ್ಕ ಪೇಟೆ ಮೆಸ್ಸರ್ಸ್ ಎಚ್. ಎಲ್. ರಾವ್ ಎಂಡ್ ಬ್ರದರ್ಸ್ ಯವರೂ, ಮೈಸೂರು ಸಿಟಿ ಕ್ರೌನ್ ಪ್ರೆಸ್ಸಿನ ಪ್ರೊಪ್ರೈಟರ್ ಮೆ|| ಎಂ. ನಾರಾಯಣಸ್ವಾಮೈಯಂಗಾರ್ರವರೂ ಗೋಡೆಗೆ ತಗಲಿ ಹಾಕುವಂಥಾ ಚಿತ್ರಸಹಿತವಾದ ಬಹು ನೇತ್ರಾನಂದಕರವಾದ ಕ್ಯಾಲೆಂಡರುಗಳನ್ನು ಕಳುಹಿಸಿರುತ್ತಾರೆ.

ಕಳೆದ ಶುಕ್ರವಾರ ಬೆಳಿಗ್ಗೆ ಸುಮಾರು ೧೦ ಗಂಟೆಗೆ ಮಹಾಮಾತೃಶ್ರೀಯವರೂ ಶ್ರೀಮನ್ ಮಹಾರಾಣಿಯವರೂ ಜನಾನಾ ಪರಿವಾರ ಸಹಿತ ಸ್ಪೆಷಲ್ ರೈಲಿನಲ್ಲಿ ರಾಜಧಾನಿಯಿಂದ ಹೊರಟು ಬೆಂಗಳೂರನ್ನು ತಲಪಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಅವರೆಲ್ಲಾ ಆ ರಾತ್ರಿಯೇ ಮದರಾಸ್ ರೈಲನ್ನು ಹತ್ತಿ ಮರುದಿನ ಬೆಳಿಗ್ಗೆ ಅಲ್ಲಿ ಇಳಿದರು. ಮದರಾಸ್ ಸೆಂಟ್ರಲ್ ಸ್ಟೇಷನ್‌ನಲ್ಲಿ ಬನಾತುಗಳನ್ನು ಹಾಸಿ, ದೊರೆಸಾನಿಗಳೂ ದೊಡ್ಡ ಅಧಿಕಾರಸ್ಥರ ಪತ್ನೀರುಗಳೂ ಕಾದಿದ್ದು, ಅವರನ್ನು ಸನ್ಮಾನಪೂರ್ವಕವಾಗಿ ಎದುರುಗೊಂಡರು. ಅವರೆಲ್ಲಾ ಜನಾನಾ ಗಾಡಿಗಳಲ್ಲಿ ಹೊರಟು ಅಲ್ಲಿರುವ ಟಾಕರ್ ಗಾರ್ಡನ್ ಎಂಬ ಬಂಗಲೆಯನ್ನು ಸುಖವಾಗಿ ಸೇರಿದರು. ಗೌರವಾರ್ಥವಾದ ತೋಪುಗಳು ಅಲ್ಲಿ ಹಾರಿಸಲ್ಪಟ್ಟವು. ಆ ಕ್ಯಾಂಪಿನ ಛಾರ್ಜನ್ನು ದರ್ಬಾರ್ ಭಕ್ಷಿ ಮೆ|| ಲಿಂಗರಾಜೇ ಅರಸಿನವರು ವಹಿಸಿರುತ್ತಾರೆ.

ಕಳೆದ ಭಾನುವಾರ ಬೆಳಿಗ್ಗೆ ರಾಜಧಾನಿಯಲ್ಲಿ ಅರಮನೆಗೆ ಸೇರಿದ ಒಂದು ಆನೆಯನ್ನು ಅದರ ಮಾವಟಿಗನು ದೊಡ್ಡ ಕೆರೆಗೆ ನಡಿಸಿಕೊಂಡು ಹೋಗಿ, ಒಳಗೆರೆಯಲ್ಲಿ ಕಟ್ಟಿರುವ ಒಂದು ಬನಾತದ ಬಾವಿಯ ರಸ್ತೆಯನ್ನು ಆನೆಯಿಂದ ದಮ್ಮಸ್ಸು ಮಾಡಿಸುತ್ತಿದ್ದಾಗ ಶಿವಸಮುದ್ರದಿಂದ ರಾಜಧಾನಿಗೆ ಹಾಕಿರುವ ವಿದ್ಯುಚ್ಛಕ್ತಿಯ ತಂತಿಗಳಲ್ಲಿ ಒಂದು ತಂತಿಯನ್ನು ಆ ಮಾವಟಿಗನು ಆನೆಯ ಮೇಲಿದ್ದ ಹಾಗೇ ಕೈಯಿಂದ ಹಿಡಿದುಕೊಂಡನು. ಶಕ್ತಿಯು ತಂತಿಯಲ್ಲಿ ಬಹಳ ಸ್ವಲ್ಪವೇ ಇದ್ದ ಕಾರಣ ಅವನ ಕೈ ಸುಟ್ಟುಹೋಯಿತು. ಮತ್ತು ಆನೆಯ ಕುಂಭಸ್ಥಳಕ್ಕೂ ತಂತಿಯು ತಗಲಿದ್ದರಿಂದ ಅದಕ್ಕೆ ಉರಿಯುಂಟಾಗಿ ಕಿರಿಚಿಕೊಂಡು ಬಿದ್ದು ಬಿಟ್ಟಿತು. ಸ್ವಲ್ಪ ಹೊತ್ತಿನ ಮೇಲೆ ಅದು ಗಾಬರಿಯಿಂದ ಸ್ಪೀಡಿಯಾಗಿ ಹೊರಟು ಕರ್ಜನ್ ಪಾರ್ಕಿನಲ್ಲಿ ಕಟ್ಟಿರುವ ವಿದ್ಯುಚ್ಛಕ್ತಿಯ ಸ್ಟೇಷನ್ ಮುಂದೆ ಬಂದು ಅಲ್ಲಿ ನಿಂತಿದ್ದ ಒಂದು ಗಾಡಿಯನ್ನು ಮುರಿದು ಹಾಕಿತು. ಅಷ್ಟರೊಳಗಾಗಿ ಕುಮ್ಕಿ ಆನೆಗಳನ್ನು ತಂದು ಅದನ್ನು ಸಮಾಧಾನಪಡಿಸಿ, ಕರೆದುಕೊಂಡು ಹೋದರು. ಕೈ ಸುಟ್ಟುಕೊಂಡ ಮಾವಟಿಗನನ್ನು ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಅವನಿಗೆ ವಾಸಿಯಾಗುತ್ತೆಂದು ಕೇಳುತ್ತೇವೆ. ಹಗಲಿನಲ್ಲಾಗಲಿ ರಾತ್ರಿಯಲ್ಲಾಗಲಿ ಯಾರೂ ಈ ವಿದ್ಯುಚ್ಛಕ್ತಿಯ ತಂತಿಗಳನ್ನು ಯಾವ ವಿಧದಲ್ಲೂ ಮುಟ್ಟದಂತೆ ಜನರೆಲ್ಲಾ ಬಹಳ ಜಾಗರೂಕರಾಗಿರಬೇಕು. ಅತ್ತಲಾಗಿ, ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆಯಲ್ಲಿ ಕಳೆದ ವಾರ ಕೆಲವು ನೌಕರರಿಗೆ ಆಕಸ್ಮಾತ್ತಾಗಿ ಶಕ್ತಿಯು ತಗಲಿ ಗಾಯಪಟ್ಟು ಚಿಕಿತ್ಸೆಹೊಂದುತ್ತಿರುವಂತೆ ತಿಳಿದು ಬಂದಿದೆ.

ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗ ಡಿಸ್ಟ್ರಿಕ್ಟ್ ಖಜಾನೆಯ ಅ|| ಕಮಿಷನರಾದ ಮೆ|| ಎ. ಮೃತ್ಯುಂಜಯ ಐಯರವರಿಗೆ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ನಾಗಮಂಗಲದ ತಾಲ್ಲೂಕ್ ಶಿರಸ್ತೆದಾರ್ ಎಚ್. ಶ್ರೀನಿವಾಸರಾಯರಿಗೆ ಹಂಗಾಮಿಯಾಗಿ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಮೈಸೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಪ್ರೊ|| ಅ|| ಕಮಿಷನರ್ ಮೆ|| ಎಸ್. ಪಿ. ರಾಜಗೋಪಾಲಾಚಾರ್ರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಮುಂದೆ ಹೇಳುವ ಸಬ್ ರೆಜಿಸ್ಟ್ರಾರ್ರುಗಳ ವರ್ಗಾವರ್ಗಿಯನ್ನು ಹುಕುಂ ಮಾಡಿದೆ —(೧) ಎಲ್. ನಾರಾಯಣರಾಯರು—ಬೌರಿಂಗ್ ಪೇಟೆಯಿಂದ ಹಾಸನಕ್ಕೆ, (೨) ಎಸ್. ರಾಮಸ್ವಾಮಿ ಶಾಸ್ತ್ರಿಯವರು—ಹಾಸನದಿಂದ ಬೌರಿಂಗ್ ಪೇಟೆಗೆ.

ಪ್ರೊ|| ಅ|| ಕಮಿಷನರ್ ಮೆ|| ಎಸ್. ಪಿ. ರಾಜಗೋಪಾಲಾಚಾರ್ರನ್ನು ಮೈಸೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ ವರ್ಗಮಾಡಿದೆ.

ಈಗ ಡಿಟೋ ಖಜಾನೆಯ ಛಾರ್ಜಿನಲ್ಲಿರುವ ಪ್ರೊ|| ಅ|| ಕಮಿಷನರ್ ಮೆ|| ಜಿ. ಬಿ. ಹುಬ್ಳೀಕರ್ ಯವರು ಮೈಸೂರಿನಲ್ಲಿ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸತಕ್ಕದ್ದು.

ಮೆ|| ಕೆ. ಕೃಷ್ಣ ಐಯರವರು ರಜದ ಮೇಲಿರುವಾಗ್ಗೆ ಅ|| ಕಂಟ್ರೋಲರ್ ಮೆ|| ಬಿ. ಶ್ರೀನಿವಾಸೈಯಂಗಾರ್ರು ಹುಜೂರು ಖಜಾನೆಯ ಛಾರ್ಜನ್ನು ವಹಿಸತಕ್ಕದ್ದು.

ಪ್ರೊ|| ಅ|| ಕಮಿಷನರ್ ಮೆ|| ಸಿ. ರಂಗನಾಥರಾವ್ ಸಾಹೆಬ್ ಯವರನ್ನು ಶಿವಮೊಗ್ಗ ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ. ಕಡೂರಿನಲ್ಲಿ ಛಾರ್ಜು ಕೊಟ್ಟ ತರುವಾಯ ಅಲ್ಲಿಗೆ ಹೋಗತಕ್ಕದ್ದು.

ಮೆ|| ಗಳಾದ ಬಿ. ಬಾಲಾಜಿರಾವ್, ಬಿ. ಎಲ್. ವೆಂಕಟರಾಮೈಯ ಇವರನ್ನು ೧೯೦೮ನೇ ಜೂಲೈ ತಾ. ೧ ರಿಂದ ಮೈಸೂರು ಭೂಗರ್ಭ ಶೋಧನಾ ಇಲಾಖೆಯಲ್ಲಿ ಇನ್ಸ್‌ಪೆಕ್ಟರುಗಳಾಗಿ ನೇಮಕ ಮಾಡಿದೆ.

ಪರ್ಷಿಯಾ ರಾಜ್ಯದಲ್ಲಿ ಗಲಭೆಗಳು

ತಂತೀ ವರ್ತಮಾನಗಳು.

ಈಚೆಗೆ ಪರ್ಷಿಯಾ ರಾಜ್ಯದಲ್ಲಿ ಸುಲ್ತಾನರವರು ಪಾರ್ಲಿಮೆಂಟು ಸಭೆಯನ್ನು ವಜಾಮಾಡಿ, ಪ್ರಜೆಗಳಲ್ಲಿ ಮುಖಂಡರಾದ ೫೦ ಮಂದಿಯನ್ನು ಚುನಾಯಿಸಿ ಒಂದು ಸಭೆಯನ್ನು ಮಾಡಿಕೊಂಡು, ಅವರ ಅಭಿಪ್ರಾಯಾನುಸಾರವಾಗಿ ರಾಜ್ಯಭಾರ ನಡಿಸುತ್ತೇನೆಂದು ತಿಳಿಸಿಬಿಟ್ಟರು. ಇದು ಅಲ್ಲಿನ ಪ್ರಜೆಗಳಿಗೆ ಹಿತಕರವಾಗಲಿಲ್ಲ. ಪರರಾಜ್ಯಗಳ ರಾಯಭಾರಿಗಳು ಕೂಡ ಸುಲ್ತಾನರವರಿಗೆ ಪಾರ್ಲಿಮೆಂಟನ್ನು ಪ್ರಾರಂಭಿಸಬೇಕೆಂದು ವಿವೇಕ ಹೇಳಿದರು. ಅವರು ಅದಕ್ಕೆ ಸಮ್ಮತಿಪಡದೆ ಇರುತ್ತಾರೆ. ಪ್ರಜೆಗಳು ಸುಲ್ತಾನರವರ ಸ್ವೇಚ್ಛೆಯಾದ ಕಾರುಬಾರುಗಳನ್ನು ಹತೋಟಿಗೆ ತಂದಿಡಬೇಕೆಂದು, ಧಾಂಧಲೆಗಳನ್ನು ನಡಿಸುತ್ತಾ ಬಂದಿದ್ದಾರೆ. ಈ ವಿಷಯದಲ್ಲಿ ಅಲ್ಲಿಂದ ಬಂದಿರುವ ತಂತೀ ವರ್ತಮಾನಗಳೇನೆಂದರೆ.—

ಜನವರಿ ತಾ. ೧ನೇ ಶುಕ್ರವಾರ

ಪರ್ಷಿಯಾ ರಾಜ್ಯದಲ್ಲಿ ಉಂಟಾಗಿರುವ ಗಲಭೆಯನ್ನು ನಿವಾರಣೆಮಾಡುವ ವಿಷಯದಲ್ಲಿ ಬಿಲಾಯಿತಿ ಗವರ್ನ್‌ಮೆಂಟಿನವರೂ ರಷ್ಯಾದವರೂ ಏಕೀಭವಿಸಿ ಪರಸ್ಪರ ಕಾಗದಪತ್ರಗಳನ್ನು ನಡಿಸುತ್ತಿದ್ದಾರೆ.

ಜನವರಿ ತಾ. ೩ನೇ ಭಾನುವಾರ

ಇಸ್ಪಹಾನ್ ನಗರದಲ್ಲಿ ಬಹಳ ಗಲಭೆಯುಂಟಾಗಿದೆ. ಬಾಖ್ತಿಯಾರಿ ಸಂತಾನದವರು ಪಟ್ಟಣವನ್ನು ಲೂಟಿಮಾಡುತ್ತಿದ್ದಾರೆ. ಬಹು ಕಠಿಣವಾದ ಯುದ್ಧಗಳು ನಡೆದವು. ಅನೇಕ ಜನರು ಪ್ರಾಣ ಕಳೆದುಕೊಂಡರು. ಪ್ರಜಾ ನೆಮ್ಮದಿಗೆ ಕುಂದಕವುಂಟಾಗಿದೆ.

ಜನವರಿ ತಾ. ೪ನೇ ಸೋಮವಾರ

ಪರ್ಷಿಯಾ ಸೈನಿಕರು ಇಸ್ಪಹಾನ್‌ನಲ್ಲಿ ಬಾಖ್ತಿಯಾರಿ ಜನರ ಮೇಲೆ ಯುದ್ಧ ಮಾಡಿ ಪಟ್ಟಣವನ್ನು ಲೂಟಿಮಾಡಿದರು. ಗವರ್ನರವರೂ ಸರ್ಕಾರಿ ಅಧಿಕಾರಿಗಳೂ ಎಲ್ಲಾ ತಪ್ಪಿಸಿಕೊಂಡು ಓಡಿಹೋಗಿ ಇಂಗ್ಲಿಷ್ ರಾಯಭಾರಿಯ ಆಶ್ರಯದಲ್ಲಿ ಸೇರಿಕೊಂಡರು.

ಇಂಗ್ಲಿಷ್ ಮತ್ತು ರಷ್ಯಾ ರಾಯಭಾರಿಗಳು ತಮ್ಮ ಆಶ್ರಯ ಮತ್ತು ಪೋಷಣೆಗೆ ಒಳಪಟ್ಟ ಪ್ರಜೆಗಳಿಗೆ ಕಷ್ಟನಷ್ಟಗಳು ಸಂಭವಿಸಿದ ಪಕ್ಷದಲ್ಲಿ ಅದಕ್ಕೆಲ್ಲಾ ಅವರು ಗವರ್ನ್‌ಮೆಂಟಿನವರನ್ನು ಜವಾಬ್ದಾರರನ್ನಾಗಿ ಎಣಿಸುವರೆಂದು ತಿಳಿಸಿರುತ್ತಾರೆ.

ಗೋರ್ಗಾನ್ ಎಂಬ ಸ್ಥಳದಲ್ಲಿ ಪ್ರಜಾ ಪಕ್ಷದವರಿಗೂ ಸರ್ಕಾರದ ಸೈನಿಕರಿಗೂ ಕಠಿಣ ಯುದ್ಧವಾಯಿತು. ಪ್ರಜಾ ಪಕ್ಷದವರು ಸೋತು ಹೋದರು. ಮಲಾಯರ್ ಪ್ರಾಂತ್ಯದ ಗವರ್ನರವರು ಸೈನ್ಯವನ್ನು ತೆಗೆದುಕೊಂಡು ಟೆಬ್ರಿಸ್ ಪಟ್ಟಣದ ಕಡೆ ನುಗ್ಗಿ ಹೋಗುತ್ತಿದ್ದಾರೆ.

ಜನವರಿ ತಾ. ೫ನೇ ಮಂಗಳವಾರ

ಇಸ್ಪಹಾನ್‌ನಲ್ಲಿ ಇನ್ನೂ ಆಗಾಗ್ಗೆ ಯುದ್ಧಗಳು ನಡೆಯುತ್ತಲೇ ಇವೆ. ಇತರ ಪ್ರಜೆಗಳು ಬಾಖ್ತಿಯಾರಿ ಜನರಿಗೆ ಸಹಾಯಕರಾಗಿ ಹೋಗಿ ಸೇರಿಕೊಂಡರು. ಇವರು ಸರ್ಕಾರದ ಆಯುಧಶಾಲೆಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಇವರ ಮುಖಂಡನು ತಾನೇ ಗವರ್ನರೆಂದು ಸಾರಿಸಿರುತ್ತಾನೆ. ಸರ್ಕಾರದ ಸೈನಿಕರು ಹೋಗಿ ಇಂಗ್ಲಿಷ್ ರಾಯಭಾರಿಯ ಆಶ್ರಯದಲ್ಲಿ ಸೇರಿಕೊಂಡಿರುವರು.

ಒಂದು ಹೊಸ ನೇಯ್ಗೆ ಕಾರ್ಖಾನೆಯು

ಪುಷ್ಪಗಿರಿಯಲ್ಲಿ ಪ್ರಾರಂಭವಾದದ್ದು.

ಇದೇ ಜನವರಿ ೨ನೇ ತಾ. ಶನಿವಾರ ಸಾಯಂಕಾಲ ಕೊಚ್ಚಿ ಸಂಸ್ಥಾನಕ್ಕೆ ಸೇರಿದ ತ್ರಿಚೂರಿನ ಬಳಿ ಪುಷ್ಪಗಿರಿ ಎಂಬ ಗ್ರಾಮದಲ್ಲಿ ಕೊಚ್ಚಿ ಸಂಸ್ಥಾನದ ದಿವಾನ್‌ರಾದ ಮೆ|| ಎ. ಆರ್. ಬ್ಯಾನರ್ಜೀ, ಐ. ಸಿ. ಎಸ್. ಯವರು ಒಂದು ನೇಯ್ಗೆ ಕಾರ್ಖಾನೆಯ ಪ್ರವೇಶ ಉತ್ಸವವನ್ನು ನೆರವೇರಿಸಿದರು. ಆಗ್ಗೆ ಆ ಕಾರ್ಖಾನೆ ಕಟ್ಟಡವನ್ನು ನೇತ್ರಾನಂದಕರವಾಗಿ ಅಲಂಕರಿಸಿದ್ದರು. ಸರ್ಕಾರಿ ಅಧಿಕಾರಿಗಳೂ, ಪ್ರಜೆಗಳ ಮುಖಂಡರೂ, ವರ್ತಕಮಂಡಲಿಯ ಪ್ರಮುಖರೂ ಬಹು ಮಂದಿ ಸಭಾಮಂದಿರದಲ್ಲಿ ಹಾಜರಾಗಿದ್ದರು. ಮದರಾಸ್ ಪಟ್ಟಣದಲ್ಲಿ ಛಾರಿ ವಕೀಲರಾಗಿರುವ ಮೆ|| ಬಿ. ಆರ್. ರಾಮಚಂದ್ರ ಐಯರವರು ಈ ಕಾರ್ಖಾನೆಯ ಮಾಲೀಕರಾಗಿಯೂ, ಅವರ ಬಂಧುವಾದ ಮೆ|| ಬಲರಾಮ ಐಯರವರು ಅದರ ಮ್ಯಾನೇಜರರಾಗಿಯೂ ಇರುತ್ತಾರೆ. ಈ ಮ್ಯಾನೇಜರವರು ಸಭಾನಾಯಕರನ್ನೂ ಸಭಾಸದರನ್ನೂ ಕುರಿತು ಈ ಕಾರ್ಖಾನೆಯ ವಿಷಯವಾಗಿ ತಿಳಿಸಿದ ಮುಖ್ಯ ಸಂಗತಿಗಳೇನಂದರೆ.—

ನಾನು ನಾಗರಕೋಯಿಲ್ ಪಟ್ಟಣಕ್ಕೆ ಹೋಗಿ ನೇಯ್ಗೆ ಕಸಬನ್ನು ಸ್ವತಃ ಕಲಿತುಕೊಂಡಿದ್ದೇನೆ. ನೂಲಿಗೆ ಬಣ್ಣ ಹಾಕುವುದನ್ನು ತಿಳಿದುಕೊಂಡು ಬರುವುದಕ್ಕೆ ಬಟ್ಟೆಬರೆಗಳು ವಿಶೇಷವಾಗಿ ತಯಾರಾಗುವಂಥಾ ಮಧುರೆ ಮೊದಲಾದ ಸ್ಥಳಗಳಿಗೆ ಹೋಗಿ ಬಂದಿರುವೆನು. ಸ್ವದೇಶೀ ಕಸಬುಗಳನ್ನು ಅಭಿವೃದ್ಧಿಗೆ ತರಬೇಕೆಂಬುವುದೊಂದೇ ನನ್ನ ಮುಖ್ಯ ಉದ್ದೇಶವಾಗಿದೆ. ಇದಕ್ಕಾಗಿಯೇ ನಾನು ಈ ಕಾರ್ಖಾನೆಯನ್ನು ಸ್ಥಾಪಿಸಿರುವೆನು. ಈ ಕಾರ್ಖಾನೆಯಲ್ಲಿ ಸದ್ಯ ೪೫ ಜನರು ನೇಯ್ಗೆಯ ಕಸಬನ್ನು ನಡಿಸುತ್ತಾರೆ. ಇವರು ಒಂದೇ ಜಾತಿಯವರಲ್ಲ. ಅವರಲ್ಲಿ ನಾಯರರು, ಚಾಲಿಯರು, ತೀಯರರು, ಮಹಮ್ಮದೀಯರು, ಹೆಂಗಸರು ಗಂಡಸರು ಮಕ್ಕಳ ಸಹಿತವಾಗಿ ಕೆಲಸ ಮಾಡುವವರಾಗಿದ್ದಾರೆ. ಕಸಬುಗಳನ್ನು ಪ್ರೋತ್ಸಾಹಪಡಿಸುವುದರಲ್ಲಿ ಉತ್ಸಾಹಶೀಲರಾಗಿರುವ ನಮ್ಮ ದಿವಾನರವರು ಈ ಕಾರ್ಖಾನೆಗೆ ಬೇಕಾಗುವ ಸಹಾಯ ಸಂಪತ್ತುಗಳನ್ನು ಒದಗಿಸಿಕೊಡುತ್ತಾ ಬಂದಿದ್ದಾರೆ. ಈ ಸ್ಥಳದಲ್ಲಿ ತಯಾರಾಗುವ ಬಟ್ಟೆಗಳಿಗೆ ವಿಶೇಷ ಗಿರಾಕಿಯಾದದರಿಂದ ಈ ಕಾರ್ಖಾನೆಯು ವಿಸ್ತರಿಸಲಾಯಿತು. ಹಿಂದುಸ್ಥಾನವು ಸತ್ಯದಲ್ಲಿ ದರಿದ್ರ ಸೀಮೆಯಾಗಿದೆ. ಪರದೇಶಗಳಿಂದ ೪೮ ಕೋಟಿ ರೂಪಾಯಿನಷ್ಟು ಬಟ್ಟೆಗಳು ಈ ದೇಶಕ್ಕೆ ಬಂದು ಖರ್ಚು ಆಗುತ್ತಲಿವೆ. ನಮ್ಮ ದೇಶೀಯರು ಈ ಕಸಬಿಗೆ ದೃಷ್ಟಿ ಕೊಡುವುದಾದರೆ ನಮ್ಮ ಸೀಮೆಯ ದಾರಿದ್ರ್ಯವು ಬಹುಮಟ್ಟಿಗೆ ನೀಗಿಹೋದೀತು. ಲಾಳ ಮಗ್ಗಗಳ ಫಲ ಪ್ರಯೋಜನಾದಿಗಳನ್ನು ನಮ್ಮ ದೇಶದ ನೇಯ್ಗೆಯವರಿಗೆ ಕಲಿಸಿಕೊಟ್ಟ ಪಕ್ಷಕ್ಕೆ ಅವರು ಬೇಗನೆ ಅದನ್ನೇ ಉಪಯೋಗಿಸುವಂತಾದೀತೆನ್ನುವುದಕ್ಕೆ ಸಂಶಯವಿಲ್ಲ. ಸಮಸ್ತ ಪ್ರಜೆಗಳೂ ಇಲ್ಲಿಂದ ಮುಂದಕ್ಕೆ ನಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಬಟ್ಟೆಗಳನ್ನೇ ಕೊಂಡು ಉಪಯೋಗಿಸಬೇಕೆಂತಲೂ ಸರ್ಕಾರಕ್ಕೆ ಬೇಕಾಗುವ ಬಟ್ಟೆಗಳನ್ನೆಲ್ಲಾ ಅವರು ಇಲ್ಲಿಂದಲೇ ಕೊಂಡು ತರಿಸಿಕೊಳ್ಳುವಂತಾಗಬೇಕೆಂತಲೂ ಪ್ರಾರ್ಥಿಸುತ್ತೇನೆ ಎಂಬುದೇ.

ತರುವಾಯ ದಿವಾನ್‌ರವರು ಆ ಕಾರ್ಖಾನೆಯನ್ನು ಪ್ರತಿಷ್ಠೆ ಮಾಡಿ ಸಭಿಕರನ್ನು ಕುರಿತು ತಿಳಿಸಿದ ವಿಚಾರವೇನೆಂದರೆ.—

ನಾನು ಈ ಸಂಸ್ಥಾನದಲ್ಲಿ ವ್ಯವಸಾಯವನ್ನೂ ಕೈಗಾರಿಕೆಗಳನ್ನೂ ಅಭಿವೃದ್ಧಿಗೆ ತರಬೇಕೆಂಬುವುದರಲ್ಲಿ ತುಂಬಾ ಕುತೂಹಲಪಡುತ್ತೇನೆ. ನಾನು ಎಷ್ಟೋರಿನಲ್ಲಿ ಇದ್ದಾಗ್ಗೆ (ಈ ಸ್ಥಳವು ಜಂಖಾನಗಳಿಗೆ ಪ್ರಖ್ಯಾತವಾಗಿದೆ) ಅಲ್ಲಿನ ನೇಯ್ಗೆಯವರಿಗೆ ಲಾಳ ಮಗ್ಗಗಳನ್ನು ಉಪಯೋಗಿಸುವಂತೆ ಪ್ರೋತ್ಸಾಹಪಡಿಸಿದೆನು. ಅವರು ಈಗ ಆ ಮಗ್ಗವನ್ನೇ ಉಪಯೋಗಿಸುತ್ತಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ. ವಿದ್ಯಾರ್ಥಿಗಳು ಸರ್ಕಾರಿ ನೌಕರಿಗಳಿಗೆ ಆಸೆಪಡಬಾರದು, ಸ್ವಾವಲಂಬನೆಯನ್ನು ಅನುಸರಿಸಬೇಕು. ಇಷ್ಟಪಟ್ಟು ಸ್ವತಃ ಜೀವನಮಾಡುವುದನ್ನು ಕಲಿತರೆ ತಮಗೂ ತಮ್ಮ ರಾಷ್ಟ್ರಕ್ಕೂ ಫಲದಾಯಕವಾಗುವುದರಲ್ಲಿ ಸಂಶಯವಿಲ್ಲ. ಇಂಥಾ ಸಂದರ್ಭಗಳಲ್ಲಿ ಸರ್ಕಾರದವರೂ ತಕ್ಕಮಟ್ಟಿಗೆ ಪ್ರೋತ್ಸಾಹಕೊಟ್ಟು, ಕಸಬುಗಳನ್ನು ಅಭಿವೃದ್ಧಿಗೆ ತರಬೇಕಾಗಿದೆ. ಪ್ರಜೆಗಳು ಸಾಹಸವಂತರಾಗಬೇಕು. ಈ ಕೆಲಸಗಳಿಗೆ ವಿದ್ಯಾವಂತರು ಮುಂದಾಳುಗಳಾಗಿ ನಿಂತು ಪರಸ್ಪರ ಸಹಾಯವಾಗಬೇಕಾಗಿದೆ. ಸರ್ಕಾರದವರು ಈ ಸಂಸ್ಥಾನದಲ್ಲಿ ವ್ಯವಸಾಯವನ್ನೂ ಕಸಬುಗಳನ್ನೂ ಅಭಿವೃದ್ಧಿಪಡಿಸುವವರಾಗಿದ್ದಾರೆ. ಇದಕ್ಕೋಸ್ಕರ ಅವರು ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡಬೇಕೆಂದಿರುವರು. ಮೆ|| ರಾಮಚಂದ್ರ ಐಯರವರು ಈ ಕಾರ್ಖಾನೆಗಳನ್ನು ಸ್ಥಾಪಿಸಿದ್ದರಿಂದ ಈ ಸಂಸ್ಥಾನಕ್ಕೆ ತುಂಬಾ ಪ್ರಯೋಜನವಾಯಿತೆಂದು ಧಾರಾಳವಾಗಿ ಹೇಳುತ್ತೇನೆ. ಈ ಕಾರ್ಖಾನೆಯ ಮ್ಯಾನೇಜರಾದರೋ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿದ್ದರೂ ಸರ್ಕಾರಿ ನೌಕರಿಯ ಮೇಲೆ ಆಸೆಯನ್ನು ತೊರೆದು ಕಸಬನ್ನು ಅಭಿವೃದ್ಧಿಗೆ ತರುವುದರಲ್ಲಿ ಉದ್ಯುಕ್ತರಾಗಿರುವುದು ಇನ್ನೂ ಸ್ತೋತ್ರಾರ್ಹವಾದದ್ದು. ಇವರು ಈ ಭಾಗದಲ್ಲಿ, [illegible] ಲಾಳ ಮಗ್ಗಗಳನ್ನು ಹಾಕಿಕೊಟ್ಟಿರುವರು. ಈ ಕಾರ್ಖಾನೆಗೆ ಸರ್ಕಾರದವರಿಂದ ಆಗಬೇಕಾಗಿರುವ ಸಹಾಯ ಸಂಪತ್ತುಗಳನ್ನೆಲ್ಲಾ ಒದಗಿಸಿಕೊಡುತ್ತಾ ಬಂದಾರೆನ್ನುವುದಕ್ಕೆ ಸಂಶಯವಿಲ್ಲ ಎಂಬುದೇ.

ಕಡೆಯಲ್ಲಿ ಸಭಿಕರು ಅಗ್ರಾಸನಾಧಿಪತಿಗಳನ್ನು ವಂದಿಸಿದರು. ಸೀಬೇ ಹಣ್ಣು, ಹೂವು, ಅಡಿಕೆಲೆಗಳನ್ನು ಹಂಚಿದ ಮೇಲೆ ಸಭೆಯು ಜಯಘೋಷಪೂರ್ವಕವಾಗಿ ಮುಕ್ತಾಯಕ್ಕೆ ತರಲ್ಪಟ್ಟಿತು.

ವಿದ್ಯಾವರ್ಧಕ ಸಂಘವು

ಈ ಸಭೆಯು ಇದೇ ಜನವರಿ ೩ನೇ ತಾ. ರವಿವಾರ ೩ ಗಂಟೆಗೆ ಆನೇಕಲ್ ತಾಲ್ಲೂಕು ಸರ್ಜಾಪುರದ ಎ. ವಿ. ಸ್ಕೂಲಿನಲ್ಲಿ ಪ್ರಾರಂಭವಾಯಿತು. ಈ ಸಭೆಗೆ ಬೆಂಗಳೂರು ಡಿಸ್ಟ್ರಿಕ್ಟು ಕನ್ನಡ ಸ್ಕೂಲುಗಳ ಇನ್ಸ್‌ಪೆಕ್ಟರ್ ಮೆ|| ಅನಂತಸುಬ್ಬರಾಯರೂ, ಸಂಘದ ಮೆಂಬರುಗಳಾಗಬೇಕಾದ ಆನೇಕಲ್ಲು, ಬೆಂಗಳೂರು, ಹೊಸಕೋಟೆ ತಾಲ್ಲೂಕುಗಳಲ್ಲಿನ ಬಹುಮಂದಿ ಸ್ಕೂಲ್ ಮಾಸ್ತರುಗಳೂ, ದೇವಸಂದ್ರದಲ್ಲಿರುವ ಲಂಡನ್ ಮಿಷನ್ ಉಪದೇಶಿಗಳಾದ ಮೆ|| ಪಾಲ್‌ರವರೂ, ಅಲ್ಲಿಯ ಮಿಷನ್ ಸ್ಕೂಲ್ ಹೆಡ್ ಮಾಸ್ಟರ್ ಮೆ|| ವಿಶ್ವನಾಥಯ್ಯನವರೂ, ಪುರವಾಸಿಗಳಾದ ಅನೇಕ ದೊಡ್ಡ ಮನುಷ್ಯರೂ, ಅಭಿಮಾನಿಗಳೂ ದಯಮಾಡಿಸಿದ್ದರು. ಮೆ|| ಅನಂತಸುಬ್ಬರಾಯರನ್ನು ವಾದ್ಯ ಘೋಷಗಳೊಡನೆ ಸಂಘದ ಮಂದಿರಕ್ಕೆ ಕರೆತಂದ ತರುವಾಯ ಎಲ್ಲರ ಪ್ರಾರ್ಥನೆಯಂತೆ ಅವರು ಅಗ್ರಾಸನವನ್ನು ವಹಿಸಿದರು. ಅವರಿಗೆ ಸುಸ್ವಾಗತವನ್ನು ಬಯಸಿ ಬಾಲಕರು ಹಾಡಿದರು. ದೇವರ ಪ್ರಾರ್ಥನೆಯೂ ಶ್ರೀ ಮಹಾರಾಜರವರ ಶ್ರೇಯಃ ಪ್ರಾರ್ಥನೆಯೂ ಗಾನಮಾಡಲ್ಪಟ್ಟವು. ಸರ್ಜಾಪುರದ ಎ. ವಿ. ಸ್ಕೂಲ್ ಹೆಡ್ ಮಾಸ್ತರಾದ ಮೆ|| ಎಸ್. ಸಭಾಪತಯ್ಯನವರು ಸಂಘದ ಉದ್ದೇಶವನ್ನು ಕುರಿತು ಸೂಚನೆ ಮಾಡಿದರು. ಅದೇ ಸ್ಕೂಲ ಅ|| ಮಾಸ್ಟರ್ ಮೆ|| ವೆಂಕಟಸುಬ್ಬಯ್ಯನವರು ಸದ್ವರ್ತನದ ವಿಷಯವಾಗಿ ರಸವತ್ತಾದ ಉಪನ್ಯಾಸ ಮಾಡಿದರು. ಇದು ಮುಗಿದ ತರುವಾಯ ಸಂಘದ ಕಾರ್ಯಗಳು ವಿಮರ್ಶಿಸಲ್ಪಟ್ಟು, ರೆಸಲ್ಯೂಷನ್ ಆಗಿ, ಈ ಸಂಘಕ್ಕೆ - ಸರ್ಜಾಪುರದ ಉಪಾಧ್ಯಾಯರ ಸಂಘ - ಎಂದು ನಾಮಕರಣವಾಯಿತು. ಅಲ್ಲಿಯ ಎ. ವಿ. ಸ್ಕೂಲ್ ಹೆಡ್ ಮಾಸ್ಟರೇ ಸೆಕ್ರೆಟರಿಯಾಗಿಯೂ, ಅ|| ಮಾ|| ಮೆ|| ವೆಂಕಟಸುಬ್ಬಯ್ಯನವರು ಅವರ ಸಹಾಯಕರಾಗಿಯೂ ಇರುವಂತೆ ಗೊತ್ತಾಯಿತು. ಸಭೆಯವರೆಲ್ಲರೂ ಗೀತವಾದ್ಯಗಳ ಆನಂದವನ್ನು ಅನುಭವಿಸಿ, ಗ್ರಾಮೋಫೋನ್ ಎಂಬುವುದರಿಂದ ಸಕಲ ಜನರ ಮನಸ್ಸೂ ಸಂತುಷ್ಟವಾಗಿದ್ದಿತು.

ಅಗ್ರಾಸನಾಧಿಪತಿಗಳು ಭಾಷಣಮಾಡಿದ್ದೇನೆಂದರೆ.—ಈ ಉಪಾಧ್ಯಾಯರ ಸಂಘದಿಂದ ವಿದ್ಯಾಭ್ಯಾಸದ ವಿಷಯದಲ್ಲಿರುವ ಹಿಂದಿನ ಪದ್ಧತಿಗಳೆಲ್ಲವೂ ಹೋಗಿ ಹೊಸ ಪದ್ಧತಿಯು ಆಚರಣೆಗೆ ಬರುವುದು. ಇದರಿಂದ ಬಾಲವಿದ್ಯಾಭ್ಯಾಸವು ತುಂಬಾ ವೃದ್ಧಿಗೆ ಬರುವುದು. ವಿದ್ಯೆಯ ಜೊತೆಗೆ ಸದ್ವರ್ತನವನ್ನು ಸಾಧ್ಯವಾದ ಮಟ್ಟಿಗೂ ಕಲ್ಪಿಸುತ್ತಾ ಬಂದರೆ ಸರ್ಕಾರದವರಿಗೆ ಪಾಠಶಾಲೆಗಳನ್ನು ಏರ್ಪಡಿಸುವುದರಲ್ಲಿರುವ ಕೋರಿಕೆಯು ಸಂಪೂರ್ಣವಾಗಿ ಕೈಗೂಡುವುದು. ಮುಂದೆ ವಿದ್ಯಾಭ್ಯಾಸದ ಜೊತೆಗೆ ನಡತೆಯನ್ನೂ ಬೋಧಿಸಬೇಕೆಂದು ನಮ್ಮ ಸರ್ಕಾರದವರು ಅಪ್ಪಣೆ ಮಾಡುವವರಾಗಿದ್ದಾರೆ. ಈಗಿನಿಂದಲೂ ಉಪಾಧ್ಯಾಯರುಗಳೆಲ್ಲರೂ ನಡತೆಯ ವಿಷಯದಲ್ಲಿ ಹೆಚ್ಚು ಗಮನವನ್ನು ಕೊಡಬೇಕು. ಬಾಲಕರು ರಾಜಭಕ್ತಿ ಗುರುಭಕ್ತಿಗಳಲ್ಲಿ ನಿಷ್ಠಾಸಂಪನ್ನರಾದರೆ ಆಗ ವಿದ್ಯಾಭ್ಯಾಸದ ಫಲವೂ ಸರ್ಕಾರದವರ ಆಸೆಯೂ ಸಂಪೂರ್ಣವಾಗಿ ನೆರವೇರಿದಂತಾಗುವುದು. ಸದ್ವರ್ತನದ ವಿಷಯವಾಗಿ ಪಂಡಿತ ವೆಂಕಟಸುಬ್ಬಯ್ಯನವರು ಹೇಳಿದ ಮೇರೆಗೆ ಸಕಲರಿಗೂ ಸದಾಚರಣೆ ಮುಖ್ಯವು. ಮನೋವಾಕ್ಕಾಯ ಕರ್ಮಗಳಲ್ಲಿ ಒಂದೇ ಸಮನಾಗಿ ಸದಭಿಪ್ರಾಯವನ್ನಿಟ್ಟುಕೊಂಡು ಕೆಲಸವನ್ನು ನ್ಯಾಯವಾದ ಮಾರ್ಗದಲ್ಲಿ ಮಾಡಬೇಕು ಎಂಬುವುದು ಸುಸ್ಪಷ್ಟವಾಗಿರುವುದು. ಉಪಾಧ್ಯಾಯರೆಲ್ಲರೂ ತಾವು ಸದ್ವರ್ತನವನ್ನು ಕೈಕೊಂಡು, ಬಾಲಕರಿಗೆ ಧರ್ಮಮಾರ್ಗವನ್ನು ಪ್ರವೇಶಿಸಿ ವಿದ್ಯಾಭ್ಯಾಸದ ಪ್ರಯೋಜನವನ್ನು ಸಾರ್ಥಕಗೊಳಿಸಬೇಕಾದದ್ದು ಬಹು ಮುಖ್ಯವು. ಈ ಸಂಘವು ತಿಂಗಳಿಗೊಂದಾವರ್ತಿ ಸಂಘದವರು ಗೊತ್ತುಮಾಡುವ ಅನುಕೂಲವಾದ ಸ್ಥಳದಲ್ಲಿ ನಡೆಯಿಸಲ್ಪಟ್ಟು, ನೀತಿ ವಿಷಯಕವಾದ ಒಂದು ಉಪನ್ಯಾಸವೂ, ಅರ್ಧ ಗಂಟೆಯ ಪಾಠನಿದರ್ಶನವೂ ನಡೆಯಿಸಲ್ಪಡಬೇಕಾಗಿರುವುದು. ಹತ್ತು ಮಂದಿ ಮಾಸ್ತರುಗಳ ಗುಂಪಿನಲ್ಲಿ ನಿರ್ಭಯವಾಗಿ ಪಾಠಹೇಳುವ ಶಕ್ತಿಯನ್ನು ಹೊಂದಿದ ಬಳಿಕ ಎಷ್ಟುಮಂದಿ ಬಾಲಕರಿದ್ದರೂ ಪಾಠ ಹೇಳಲು ಹಿಂಜರಿಯುವುದಿಲ್ಲ. ಮಾಸ್ತರೆಲ್ಲರೂ ಏಕಮತ್ಯದಿಂದಿದ್ದುಕೊಂಡು ತಮಗೆ ತಿಳಿಯದುದನ್ನು ಅನ್ಯರ ಸಹಾಯದಿಂದಾಗಲೀ ಪುಸ್ತಕ ಸಹಾಯದಿಂದಾಗಲೀ ತಿಳಿದುಕೊಂಡು, ತಾವು ಮಾಡುವ ಕೆಲಸವನ್ನು ಮನಃಪೂರ್ವಕವಾಗಿ ಮಾಡಿ, ಬಾಲಕರು ಅವಶ್ಯಕವಾಗಿ ಕಲಿಯಬೇಕಾದ, ನಾನು ಸ್ವಲ್ಪ ಮುಂಚೆಯೇ ಸೂಚಿಸಿದ, ರಾಜಭಕ್ತಿ ಗುರುಭಕ್ತಿಗಳನ್ನು ಅವರಲ್ಲಿ ಹೆಚ್ಚಿಸಿ, ಸದ್ವರ್ತನದ ಮೂಲಕ ದೇಶೋನ್ನತಿಯ ಕಾರ್ಯದಲ್ಲಿ ಉದ್ಯುಕ್ತರಾಗಿ ದೇಶಾಭಿಮಾನಿಗಳೆನಿಸುವಂತೆ ಮಾಡಿದರೆ ನೀವುಗಳೆಲ್ಲರೂ ಕೃತಕೃತ್ಯರಾಗಿ ಯಶಸ್ಸನ್ನು ಹೊಂದುವಿರಿ. ಪ್ರತಿ ಉಪಾಧ್ಯಾಯರೂ ಸಾಧ್ಯವಾದ ಮಟ್ಟಿಗೂ ಹೊಸ ಪುಸ್ತಕಗಳನ್ನು ಓದಿ ಹೆಚ್ಚು ಸಂಗತಿಯನ್ನು ತಿಳಿದು ಬಾಲಕರ ಬೋಧನೆಯಲ್ಲಿ ವಿಷಯವನ್ನು ಹೆಚ್ಚಿಸಬೇಕಾದದ್ದು. ಅನುಕೂಲ ವಿದ್ಯಾರ್ಥಿಗಳ ಮನೋನುಗುಣವಾಗಿ ಬೋಧನಾ ಕ್ರಮವನ್ನು ಅನುಕೂಲಿಸಬೇಕು. ಇಷ್ಟರಿಂದ ಈ ಸಂಘವು ಚಿರಸ್ಥಾಯಿಯಾಗಿರುವುದಲ್ಲದೆ, ಈ ಸಂಘದ ಮೆಂಬರುಗಳು ಅದರ ಉದ್ದೇಶಕ್ಕನುಸಾರವಾಗಿ ಕಾರ್ಯನಿರ್ವಾಹಕ್ಕೆ ಅವಶ್ಯಕವಾದ ದೇಹಾರೋಗ್ಯ, ಧೈರ್ಯ, ಉಲ್ಲಾಸ, ಆಸಕ್ತಿಗಳನ್ನು ಉಳ್ಳವರಾಗಬೇಕೆಂದು ಹಾರೈಸುವೆನು ಎಂಬುದೇ.

ಅನಂತರ ಗಾನದೊಡನೆಯೂ, ವಾದ್ಯಘೋಷದೊಡನೆಯೂ, ಮಹಾರಾಜರವರ ಶ್ರೇಯಃಪ್ರಾರ್ಥನೆಯು ನಡಿಸಲ್ಪಟ್ಟಿತು. ಸಂಘದ ತೀರ್ಮಾನವನ್ನು ಅ|| ವ|| ಸ್ಕೂಲ್ ಮೆ|| ಸಿ. ಅಪ್ಪಾಜಿಶಾಸ್ತ್ರಿಗಳು ಓದಿ ಹೇಳಿದ್ದನ್ನು ಎಲ್ಲರೂ ಒಪ್ಪಿದರು. ಸಂಘದ ಮೆಂಬರುಗಳಾಗತಕ್ಕವರ ಪಟ್ಟಿಯು ಬರೆದುಕೊಳ್ಳಲ್ಪಟ್ಟಿತು. ಗ್ರಾಮಸ್ಥರ ಪರವಾಗಿ ಈ ಊರಿನ ಜಹಗೀರ್ದಾರ್ ಮೆ|| ಎಸ್. ಟಿ. ವಾಸುದೇವರಾಯರು ಸಭೆಯು ಸೇರಿದುದರಿಂದ ಉಂಟಾದ ಸಂತೋಷವನ್ನು ಸೂಚಿಸಿದರು. ಮುಂದಿನ ಮೀಟಿಂಗು ಬರುವ ಅಂದರೆ ಫೆಬ್ರುವರಿ ತಿಂಗಳಲ್ಲಿ ನಡಿಸಲ್ಪಡುವುದು ಎಂದು ತೀರ್ಮಾನವಾಯಿತು. ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟು ಮಂಗಳದ ಹಾಡಿನೊಡನೆ ಸಭೆಯು ಮುಕ್ತಾಯವಾಯಿತು.

ಸಂಘಾಭಿಮಾನಿ.

ಭೂಕಂಪ ಸಮುದ್ರ ಉಕ್ಕೋಣ.

ಈಚೆಗೆ ಬಂದಿರುವ ತಂತೀ ವರ್ತಮಾನಗಳು.

ಜನವರಿ ತಾ. ೨ನೇ ಶನಿವಾರ

ಭೂಕಂಪಕ್ಕೆ ಸಿಕ್ಕಿದವರ ಕಷ್ಟ ಪರಿಹಾರಕ್ಕಾಗಿ ಟರ್ಕೀ ಸುಲ್ತಾನರು [illegible] ರೂಪಾಯನ್ನೂ [illegible] ಹೆಸರ್ ಎಂಬ ಜಹಜು ಆ ಪ್ರಾಂತ್ಯದ ಬಂದರಿನಲ್ಲಿ ಈ ಅನಾಹುತದ ಸುದ್ದಿಯನ್ನು ಕೇಳಿ, ಕಷ್ಟಕ್ಕೆ ಗುರಿಯಾದ ಜನ ಮಂದಿಯನ್ನು ಹತ್ತಿಸಿಕೊಂಡು ಬಹು ದೂರದ ಸ್ಥಳಕ್ಕೆ ತಂದುಬಿಟ್ಟಿತು.

[illegible] ನಾದಲ್ಲೂ ರೆಗಿಯೋ ನಗರದಲ್ಲೂ [illegible] ವರ್ತಮಾನವು ತುಂಬಾ ಅಸಾಧ್ಯವಾದದ್ದನ್ನು ನೋಡಿ, ದೋಣಿಯವರು ಹಡಗುಗಳಲ್ಲಿ ಆಹಾರ ಪದಾರ್ಥಗಳನ್ನು ತುಂಬಿ ಕಳುಹಿಸಬೇಕೆಂದು ತಂತೀ ವರ್ತಮಾನ ಕೊಟ್ಟಿದ್ದಾರೆ. ಪ್ರಾಣವುಳಿದು ಸಿಕ್ಕುವ ಜನರನ್ನು ಹುಡುಕಿ ಹೊರಕ್ಕೆ ತರುತ್ತಿದ್ದಾರೆ. ಬದುಕಿರುವವರು ಯಾರೂ ಇಲ್ಲವೆಂದು ಗೊತ್ತಾದ ಒಡನೆಯೇ ಆ ಪ್ರದೇಶಕ್ಕೆಲ್ಲಾ ಸುಣ್ಣವನ್ನೂ ವಿಷದ ದ್ರಾವಕಾದಿಗಳನ್ನೂ ಸುರಿಸಿ ಆರು ತಿಂಗಳ ಕಾಲ ಆ ಕಡೆ ಯಾರೂ ಹೋಗದಂತೆ ಕಟ್ಟು ಮಾಡುವರೆಂದು ತಿಳಿಯುವುದು. ಸತ್ತ ಶವಗಳನ್ನೆಲ್ಲಾ ರಾಶಿರಾಶಿಯಾಗಿ ಗುಡ್ಡೆ ಮಾಡುತ್ತಾ, ಅವುಗಳ ಮೇಲೆ ಸುಣ್ಣವನ್ನು ಸುರಿಸುತ್ತಾ, ಅನಂತರ ಅವನ್ನು ಮೋಟಾರುಗಳಲ್ಲಿ ತುಂಬಿ [illegible] ಸಮುದ್ರದೊಳಕ್ಕೆ ಸುರಿಸುತ್ತಾ ಬಂದಿದ್ದಾರೆ. [illegible] ಸಂಪೂರ್ಣವಾಗಿ [illegible] ಊರನ್ನು ಕಟ್ಟಬೇಕೆಂದು [illegible] ದೊಡ್ಡ ಮನುಷ್ಯರು ಸೂಚಿಸುವರು.

ಜನವರಿ ತಾ. ೩ನೇ ಭಾನುವಾರ

ಇಟಲಿಯ ದೊರೆ [illegible] ರಾಜಧಾನಿಯಾದ ರೋಮ್ ನಗರಕ್ಕೆ ತಿರುಗಿದರು. ಭೂಕಂಪದ ಕಷ್ಟನಿವಾರಣೆಗಾಗಿ ಇಟಲಿ ಗವರ್ನ್‌ಮೆಂಟಿನವರು ೨ ಕೋಟಿ ದ್ರವ್ಯವನ್ನು ವಿನಿಯೋಗಿಸುವವರಾಗಿದ್ದಾರೆ. [illegible] ಫಂಡಿಗೆ ಲಂಡನ್ ಪಟ್ಟಣದಲ್ಲಿ ೫,೧೦,೦೦೦ ರೂಪಾಯಿ ಚಂದಾ ಕೂಡಿದೆ. ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟ್‌ರವರು ತಮ್ಮ ಗವರ್ನ್‌ಮೆಂಟಿನಿಂದ ೧೫,೦೦,೦೦೦ ರೂಪಾಯಿ ಕಳುಹಿಸಿದರು. [illegible] ಅಮೇರಿಕಕ್ಕೆ [illegible] ಎರಡು ಹಡಗುಗಳ ಆಹಾರ ಸಾಮಗ್ರಿಗಳನ್ನು ಇಟಲಿ ರಾಜ್ಯಕ್ಕೆ ಕಳುಹಿಸುವಂತೆ ಅಪ್ಪಣೆಯಾಯಿತು. ಪೋಪ್ [illegible] ಎಲ್ಲಾ ಕಡೆಗಳಲ್ಲೂ ಚಂದಾ ಎತ್ತಬೇಕೆಂದು ಕೇಳಿಕೊಂಡಿದ್ದಾರೆ.

ಜನವರಿ ತಾ. ೪ನೇ ಸೋಮವಾರ

ಮೆಸ್ಸೀನಾದಲ್ಲಿ ಅನಾಹುತವಾದ ಹೊಗೆಯು ದೆಸೆಯಿಂದ ಹಗಲೇ ರಾತ್ರಿಯಾಗಿಯೂ ಉರಿಯುವ ಜ್ವಾಲೆಗಳಿಂದ ರಾತ್ರಿಯೇ ಹಗಲಾಗಿಯೂ ಕಾಣುತ್ತಿದೆ. ಕತ್ತಲೇ ಕವಿದಿರೋದರಿಂದ ಕಳ್ಳರು ನುಗ್ಗಿ ನಗನಾಣ್ಯಗಳನ್ನು ಅಪಹರಿಸುವುದಕ್ಕೆ ಅನುಕೂಲವಾಗಿದೆ. ಬಹಳ ದ್ರವ್ಯವನ್ನು ಎತ್ತಿಕೊಂಡು ಹೋಗುತ್ತಿದ್ದ ಕೆಲವು ಕಳ್ಳರನ್ನು ದಸ್ತಗಿರಿ ಮಾಡಿದರು. ಮೆಸ್ಸೀನಾದ [illegible] ಬಹು ದುಃಖಿತರಾಗಿರುತ್ತಾರೆ. ಆಹಾರವೂ ನೀರೂ ಏನೂ ಸಾಲದೆ ಹೋಗಿವೆ. [illegible] ಭಾಗಗಳು ರೋಗಜನಕವಾಗುವವು. ಬದುಕಿಕೊಂಡಿರುವವರು ಬೈಲು ಪ್ರದೇಶಗಳಲ್ಲಿ [illegible] ಇದರಿಂದ ಅವರಿಗೆ ಶ್ವಾಸಕೋಶದ ರೋಗಗಳು ಪ್ರಾಪ್ತವಾಗಿವೆ. [illegible] ಎಂದು ಜನರು ಹಡಗುಗಳನ್ನು ಹತ್ತುವುದರಲ್ಲಿ ಮೇಲೆಬಿದ್ದು ಅನೇಕರು ಸಮುದ್ರದಲ್ಲಿ ಮುಳುಗಿಕೊಂಡರು. ಮೆಸ್ಸೀನಾ [illegible] ಆಕ್ರಮಣ [illegible] ಇಂಗ್ಲಿಷ್ [illegible] ಇಂಗ್ಲಿಷ್ ಹಡಗಿನ ಸೈನಿಕರು ಬಹು ಪರಾಕ್ರಮದಿಂದ [illegible] ಕಾರ್ಯಗಳನ್ನು ಮಾಡಿದ್ದಕ್ಕಾಗಿ ಅವರನ್ನು ಚಕ್ರವರ್ತಿ ಸರ್ಕಾರದವರು [illegible] ಕಲ್ಕತ್ತೆಯವರು ಒಂದು ಆಸ್ಪತ್ರೆಯನ್ನು ಸಿದ್ಧಪಡಿಸಿ ಮೆಸ್ಸೀನಾಕ್ಕೆ ಕಳುಹಿಸಿದರು.

ಲಂಡನ್ ಪಟ್ಟಣದಲ್ಲಿ ಧರ್ಮದ [illegible] ನಿಧಿಗೆ ೬,೦೦,೦೦೦ ರೂಪಾಯಿ ವಸೂಲಾಗಿದೆ. ಆಸ್ಟ್ರೇಲಿಯ ಗವರ್ನ್‌ಮೆಂಟಿನವರು ೧೫,೦೦೦ ರೂಪಾಯನ್ನು,

...ಕಾರ್ನೆಗಿ ಎಂಬ ಕೋಟ್ಯಾಧೀಶ್ವರನು ೩೦,೦೦೦ ರೂಪಾಯನ್ನೂ, ಅಮೇರಿಕದ ಗವರ್ನ್‌ಮೆಂಟಿನವರು ೫,೦೦,೦೦೦ ದ್ರವ್ಯವನ್ನೂ, ಅಮೇರಿಕದ ಪರೋಪಕಾರ ಸ್ತ್ರೀ ಸಂಘದವರು ೧೧,೭೯,೦೦೦ ರೂಪಾಯನ್ನೂ ಚಂದಾ ಕಳುಹಿಸಿರುತ್ತಾರೆ

ಜನವರಿ ತಾ ೫ ನೇ ಮಂಗಳವಾರ.

ಮೆಸ್ಸೀನಾದಲ್ಲಿ ಇಂಗ್ಲಿಷ್ ಪ್ರಜೆಗಳ ಗುರುವಾಗಿದ್ದ ರೆವ್ ಹೂಲೆಟ್ ಎಂಬವರೂ ಅವರ ಹೆಂಡತಿಯೂ ನಾಲ್ಕರು ಮಕ್ಕಳೂ ಭೂಕಂಪದಲ್ಲಿ ಸಿಕ್ಕಿ ಸತ್ತರು ಭಾನುವಾರ ಬೆಳಿಗ್ಗೆ ಮೆಸ್ಸೀನಾದಲ್ಲಿ ಮತ್ತೆ ಕಠಿಣವಾಗಿ ೫ ಸಲ ಭೂಕಂಪವಾಯಿತು ಜಲಸಂಧಿಯಲ್ಲಿದ್ದ ಒಂದು ಹಡಗು ಅಕಸ್ಮಾತ್ತಾಗಿ ಪ್ರಬಲವಾದ ನೀರಿನ ಸುಳಿಯಿಂದ ಕಿತ್ತು ಬಡಿದುಕೊಂಡು ಹೋಯಿತು ಅದರಿಂದ ಅಲ್ಲಿ ಸಂಚರಿಸುವ ಹಡಗುಗಳು ಬಹಳ ಜಾಗರೂಕತೆಯಿಂದ ಇರಬೇಕೆಂದು ನೋಟೀಸ್ ಕೊಟ್ಟಿದ್ದಾರೆ ಕಲಬ್ರಿಯಲ್ಲೂ ಸಿಸಿಲಿಯಲ್ಲೂ ಪ್ರಜೆಗಳ ಕಷ್ಟಪರಿಹಾರವು ಬಹಳ ಅಸಾಧ್ಯವಾಗಿದೆ ರಸ್ತೆಗಳು ಅಲ್ಲಲ್ಲಿ ಕುಸಿದು ಕೆಟ್ಟಿರುವುದರಿಂದ ಸಂಚಾರಮಾಡುವುದು ಸಾಧ್ಯವಿಲ್ಲ ಪ್ರಜೆಗಳು ಆಹಾರವಿಲ್ಲದೆ ಬಹಳ ದುಃಖಿತರಾಗಿದ್ದಾರೆ

ಜನವರಿ ತಾ ೬ ನೇ ಬುಧವಾರ

ಮೆಸ್ಸೀನಾ ಪಟ್ಟಣದ ಬಿದ್ದುಹೋದ ಕಟ್ಟಡಗಳ ನಡುವಿನಿಂದ ಇದುವರೆಗೆ ೩,೧೨೦ ಜನರನ್ನು ಹೊರಕ್ಕೆ ತೆಗೆದುಕೊಂಡು ಬಂದದ್ದಾಯಿತು ಸಿಸ್ಲಿಯೂ ೧೫ ಜನರನ್ನು ಪ್ರಾಣಸಹಿತ ಬಿಡಿಸಿಕೊಂಡು ಬಂದರು ೨,೦೦೦ ಹೆಣಗಳನ್ನು ೬,೩ ಕಡೆ ದಫನ್ ಮಾಡಿದ್ದಾಯಿತು

ಜನವರಿ ತಾ ೭ ನೇ ಗುರುವಾರ

ಮೆಸ್ಸೀನಾ ಪಟ್ಟಣದ ನಾಲ್ಕು ಸಮೀಪಗಳಲ್ಲಿ ಗವರ್ನ್‌ಮೆಂಟ್ ಕಾವಲುಗಾರರನ್ನು ನಡಿಸಿ, ಆ ಪಟ್ಟಣವು ಬರಿದಾದ ಪಾಳುಭೂಮಿಯಾಗಿ ಉಳಿದರೆ ಮತ್ತೆ ಕಟ್ಟುವ ವಿಚಾರ ಮಾಡಬೇಕೆಂದು ತೀರ್ಮಾನಿಸಿದರು ಉಳಿದಿರುವ ಜನರನ್ನು ಹುಡುಕುವುದು ಇನ್ನೂ ನಿಲ್ಲಿಸಲಿಲ್ಲ ನಿನ್ನೆ ಮೂರು ಜನರನ್ನು ಜೀವಸಹಿತ ಬದುಕಿಸಿಕೊಂಡು ಬಂದರು

ಆಸ್ಟ್ರೇಲಿಯಾ ಗವರ್ನ್‌ಮೆಂಟಿನವರು ೧,೮೦,೦೦೦ ರೂಪಾಯನ್ನೂ ... ಕೊಡಿಸಿದರು ಮತ್ತೆ ೧೦ ಲಕ್ಷ ದ್ರವ್ಯವನ್ನೂ ಚಂದಾ ಕೊಟ್ಟಿದ್ದಾರೆ ... ಪಟ್ಟಣದ ಮರ್ಚೆಂಟರಿಂದ ೧೦,೫೯,೦೦೦ ರೂಪಾಯಿ ಕೂಡಿತು

ನಿನ್ನೆ ಕಲಬ್ರಿಯಾದಲ್ಲೂ ಮೆಸ್ಸೀನಾದಲ್ಲೂ ಬಹು ಕಠಿಣವಾದ ಭೂಕಂಪಗಳಾದವು

ಇದುವರೆಗೆ ೧೫೦ ನಗರಗಳಲ್ಲಿ ಈ ಭೂಕಂಪದ ದೆಸೆಯಿಂದ ಮೃತಪಟ್ಟವರು ೨,೩೦,೦೦೦ ಪ್ರಜೆಗಳಿಗಿಂತ ಕಡಮೆ ಇಲ್ಲವೆಂದು ಕಂಡುಬಂದಿದೆ

ಜನವರಿ ತಾ ೮ ನೇ ಶುಕ್ರವಾರ

ಇಟಲಿ ರಾಜ್ಯದ ವೃತ್ತಾಂತ ಪತ್ರಗಳು ತಮ್ಮ ಕಷ್ಟದ ಸಮಯದಲ್ಲಿ ಅಗಾಧವಾದ ಸಹಾಯವನ್ನು ಕುರಿತು ಬಹು ಮನಃಪೂರ್ವಕ ಪ್ರಶಂಸೆ ಮಾಡಿ, ಸಹಾಯ ಮಾಡಿದವರ ಮತ್ತು ದಾನಮಾಡಿದವರ ಪ್ರೀತಿ ಸಂತಾಪಗಳನ್ನು ಬಹಳವಾಗಿ ಕೊಂಡಾಡಿದ್ದಲ್ಲದೆ ಪರರಾಷ್ಟ್ರಗಳವರು ಸಂತಾಪಯುಕ್ತರಾಗಿ ಕಷ್ಟಪರಿಹಾರಾರ್ಥವಾಗಿ ದ್ರವ್ಯವನ್ನು ಕಳುಹಿಸಿ ಸಹಾಯಮಾಡಿದ್ದಕ್ಕಾಗಿ ಎಲ್ಲರಿಗೂ ವಂದನೆಗಳನ್ನು ಸಮರ್ಪಿಸಿದರು

ಮೆಸ್ಸೀನಾ ಮತ್ತು ರೆಗ್ಗಿಯೋ ನಗರಗಳನ್ನು ಪುನಃ ಕಟ್ಟಬೇಕೆಂದು ... ೩ ಎರಡ್ ಗವರ್ನ್‌ಮೆಂಟಿನವರು ಕಷ್ಟಪರಿಹಾರಾರ್ಥವಾದ ಕಾರ್ಯಗಳನ್ನು ನಡೆಸುವುದಕ್ಕೆ ಒಂದು ಶಾಸನವನ್ನು ಜಾರಿಗೆ ತರಬೇಕೆಂದು ... ಸಭೆಯಲ್ಲಿ ಸೂಚಿಸಿದರು

ಇಂಡಿಯಾ ದೇಶದ ವೃತ್ತಾಂತಗಳು.

ಹಿಂದೂಸ್ಥಾನದಲ್ಲೆಲ್ಲಾ ಕಳೆದ ವಾರ ೧,೪೪೧ ಜನರು ಪ್ಲೇಗ್ ಉಪದ್ರವಕ್ಕೆ ಈಡಾಗಿರುತ್ತಾರೆ

ಕಲ್ಕತ್ತೆಯ ಬಳಿ ನಾಕೋಲ್‌ಡಂಗಾ ಎಂಬ ಸ್ಥಳದಲ್ಲಿ ಸೂರಾ ಎಂಬ ... ಕಾರ್ಖಾನೆಗೆ ಬೆಂಕಿ ಬಿದ್ದು ೫೦,೦೦೦ ರೂಪಾಯಿನ ಸಾಮಾನುಗಳು ಸುಟ್ಟುಹೋದವು

... ಪುರದಲ್ಲಿ ದಾಮೋದರದಾಸನೆಂಬ ಹಿಂದೂ ಡಾಕ್ಟರು ಮಿಸ್ ಎಂ ... ಎಂಬ ಸ್ತ್ರೀ ಡಾಕ್ಟರನ್ನು ವರಿಸಿ, ಹಿಂದೂಮತ ರೀತಿಯಾಗಿ ವಿವಾಹ ಮಾಡಿಕೊಂಡರು

ಕಲ್ಕತ್ತೆಯಲ್ಲಿ ಮಹಮ್ಮದೀಯರಿಗೂ ಹಿಂದೂಗಳಿಗೂ ಬಕರೀದ್ ಹಬ್ಬದ ಸಮಯ ... ಜಗಳದಲ್ಲಿ ಪೋಲೀಸಿನವರು ೩೮ ಮಂದಿಯನ್ನು ಹಿಡಿದು ... ಮಾಡುತ್ತಿದ್ದಾರೆ.

... ಪಟ್ಟಣವನ್ನು ಎಲ್ಲಾ ಭಾಗಗಳಲ್ಲೂ ಚೊಕ್ಕಟಮಾಡಿ ಅಭಿವೃದ್ಧಿಪಡಿಸುವ ಕಾರ್ಯಗಳಿಗೆ ಅಲ್ಲಿನ ಮ್ಯುನಿಸಿಪಾಲಿಟಿಯವರು ೨೭ ಲಕ್ಷ ರೂಪಾಯಿ ವಿನಿಯೋಗಿಸುವವರಾಗಿದ್ದಾರೆ

ಹಿಂದೂಸ್ಥಾನದಲ್ಲಿ ಅನಾಥಜನರುಗಳು ಈಚೆಗೆ ತುಂಬಾ ಪ್ರಿಯವಾಗಿರುವ ... ಕುರಿತು ಇಂಡಿಯಾ ಗವರ್ನ್‌ಮೆಂಟಿನವರು ... ಬೇಕೆಂದು ಆಲೋಚಿಸುತ್ತಿದ್ದಾರೆ

... ಅಧಿಪತ್ಯದಲ್ಲಿ ಅಫೀಮನ್ನು ಸೇವಿಸತಕ್ಕವರೆಲ್ಲಾ ಸರ್ಕಾರದವರಿಗೆ ತಮ್ಮ ಹೆಸರುಗಳನ್ನು ಬರೆಯಿಸಬೇಕೆಂಬುದಾಗಿ ಬರುತ್ತಿರುವ ... ಜಾರಿಗೆ ತರಬೇಕೆಂದು ಯೋಚಿಸುತ್ತಿದ್ದಾರೆ

ಕಲ್ಕತ್ತಾ ಪಟ್ಟಣದಲ್ಲಿ ಬಿ ಕೃಷ್ಣದತ್ತನೆಂಬ ದೊಡ್ಡ ಮನುಷ್ಯನು ... ಇಲ್ಲದೆ ಎರಡು ಬಂದೂಕುಗಳನ್ನು ಇಟ್ಟುಕೊಂಡಿದ್ದನೆಂದು ಹೇಳಿ, ... ೧೦೦ ರೂಪಾಯಿ ಜುಲ್ಮಾನೆ ಹಾಕಿದರು

ಮದರಾಸ್ ಪಟ್ಟಣದಲ್ಲಿ ದಿವಾನರಾಗಿ ಸಹಾ ಶಿಕ್ಷೆಯನ್ನನುಭವಿಸಿ ಬಿಡುಗಡೆ ಹೊಂದಿದ ಸರ್ ಜಾರ್ಜ್ ಅರ್ಬತ್‌ನಾಟ್ ಯವರು ಕಳೆದ ವಾರ ಬೊಂಬಾಯಿನಲ್ಲಿ ಹಡಗು ಹತ್ತಿ ಸೀಮೆಗೆ ಪ್ರಯಾಣ ಮಾಡಿದರು

ಬರುವ ಫೆಬ್ರವರಿ ತಾ ೧೦ ರಲ್ಲಿ ವೈಸ್‌ರಾಯಿಯವರು ಕಲ್ಕತ್ತೆಯಿಂದ ಹೊರಟು ಕೂಚ್ ಬಿಹಾರ್ ಮಹಾರಾಜರವರ ಸಂಗಡ ಅಸ್ಸಾಂ ಪ್ರಾಂತ್ಯದಲ್ಲಿ ೧೫ ದಿನಗಳ ತನಕ ಸಂಚಾರ ಮಾಡಿಕೊಂಡು ಬರುವವರಾಗಿದ್ದಾರೆ

ಕಲ್ಕತ್ತಾ ಪಟ್ಟಣದ ಹತ್ತಿರ ಉತ್ತರ ಪಾರಾದಲ್ಲಿ ಸನ್ಯಾಸಿಗಳಾಗಿದ್ದ ಲಲಿತ ಕುಮಾರ ಗಂಗೂಲಿ, ಕುಮಾರ ನಂದ ಎಂಬ ಇಬ್ಬರು ಬಂಗಾಳಿಗಳನ್ನು ಅವರು ರಾಜದ್ರೋಹಿಗಳೆಂದು ತಿಳಿದದ್ದರಿಂದ ದಸ್ತಗಿರಿ ಮಾಡಿದರು

ಇಟಲೀ ರಾಜ್ಯದಲ್ಲಿ ಭೂಕಂಪಕ್ಕೆ ಸಿಕ್ಕಿದವರ ಕಷ್ಟಪರಿಹಾರಕ್ಕೋಸ್ಕರ ಹಿಂದೂಸ್ಥಾನದಲ್ಲೂ ಅಂದರೆ ಕಲ್ಕತ್ತೆ, ಬೊಂಬಾಯಿ, ಮದರಾಸ್ ಪಟ್ಟಣಗಳಲ್ಲಿ ಧರ್ಮಕಥೆ ಫಂಡುಗಳನ್ನು ಏರ್ಪಡಿಸಿ ಚಂದಾ ಕೂಡಿಸುತ್ತಿದ್ದಾರೆ

ಪಂಜಾಬ್ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರಾದ ಸರ್ ಲೂಯಿ ಡೇನ್ ರವರು ಕಳೆದ ತಾ ೬ ನೇ ಬುಧವಾರ ಮಾಲೇರ್ ಕೋಟ್ಲಾ ಸಂಸ್ಥಾನದಲ್ಲಿ ನವಾಬರಿಗೆ ಪಟ್ಟವನ್ನು ಕಟ್ಟಿ, ಅವರ ಅತಿಶಯವಾದ ಆತಿಥ್ಯಗಳನ್ನು ಸ್ವೀಕರಿಸಿ ಬಂದರು

ಬುಂದೇಲ್ ಖಂಡ್ ಪ್ರಾಂತ್ಯಕ್ಕೆ ಸೇರಿದ ಧಾತಿಯಾ ಸಂಸ್ಥಾನದಲ್ಲಿ ಕಳೆದ ವಾರ ರೆಸಿಡೆಂಟರವರು ಮಹಾರಾಜರವರಿಗೆ ಸಂಸ್ಥಾನದ ಅಧಿಕಾರವನ್ನು ವಹಿಸಿ ಬಂದರೆಂದೂ, ಉತ್ಸವಗಳೂ ಔತಣಗಳೂ ದಾನಧರ್ಮಗಳೂ ಅಪಾರವಾಗಿ ನಡೆದವೆಂದೂ ತಂತೀ ವರ್ತಮಾನ ಬಂದಿದೆ

ಹಿಂದೂಸ್ಥಾನಕ್ಕೆ ಮಿ ವಿನ್‌ಸ್ಟನ್ ಚರ್ಚಿಲ್ ಎಂಬ ಪಾರ್ಲಿಮೆಂಟ್ ಮೆಂಬರು ವೈಸ್‌ರಾಯರಾಗಿ ನೇಮಕವಾಗುವರೆಂತಲೂ, ಇವರು ಸಹಾ ಒಪ್ಪಿಕೊಳ್ಳುವಂತೆ ಕಾಣುತ್ತದೆಂತಲೂ, ಇವರು ಬಾರದಿದ್ದಲ್ಲಿ ಲಾರ್ಡ್ ಲೂಕನ್ ರವರು ನೇಮಕವಾಗಬಹುದೆಂತಲೂ ಪ್ರಕಟವಾಗಿದೆ

ಕಲ್ಕತ್ತಾ ಪಟ್ಟಣದಲ್ಲಿ ಪ್ರಿಸ್ಟ್‌ ಆಫೀಸ್ ನೌಕರನಾದ ರಾಮಸಿಂಗ್ ಎಂಬವನು ರಿಜಿಸ್ಟರ್ ಕಾಗದಗಳಲ್ಲಿ ರುವ ನೋಟುಗಳನ್ನು ಅಪಹರಿಸುತ್ತಾ ಇದ್ದನೆಂದೂ, ಜನಗಳು ತಮ್ಮ ನೋಟುಗಳನ್ನು ಕಳೆದುಕೊಂಡಿದ್ದಾರೆಂದೂ ತಿಳಿದು ಬಂದದ್ದರಿಂದ ಪೋಲೀಸಿನವರು ಅವನನ್ನು ದಸ್ತಗಿರಿ ಮಾಡಿದರು

ಬಂಗಾಳ ಅಧಿಪತ್ಯದ ಪೂರ್ವ ಪಟ್ಟಣದಲ್ಲಿದ್ದ ಐದು ಸಮಿತಿಗಳನ್ನು ಗವರ್ನ್‌ಮೆಂಟಿನವರು ಮುಚ್ಚಿಸಿಬಿಟ್ಟರು ಇವುಗಳಿಂದ ಪ್ರಜಾ ನೆಮ್ಮದಿಗೆ ಭಂಗ ಬರುವುದೆಂದೂ, ಇವು ಅಕ್ರಮ ಕೂಟಗಳೆಂದೂ ಸರ್ಕಾರದವರು ಇಟ್ಟವೆ ಈ ಸಮಿತಿಗಳು ಢಕ್ಕಾ ಬ್ಯಾರಿಸಾಲ್, ಫರೀದ್ ಪುರ, ಮೈಮನ್‌ಸಿಂಗ್ ಪಟ್ಟಣಗಳಲ್ಲಿ ಪ್ರಧಾನವಾಗಿ ನಡೆಯುತ್ತಿದ್ದವು

ಕಲ್ಕತ್ತಾ ಪಟ್ಟಣದಲ್ಲಿ ಪೋಲೀಸಿನವರು ಚರಣಚಂದ್ರರಾಯ ಎಂಬ ಬಂಗಾಳಿ ದೊಡ್ಡ ಮನುಷ್ಯನು ರಾಜದ್ರೋಹ ಸಂಬಂಧದ ಗುಂಪಿಗೆ ಸೇರಿದ್ದನೆಂದು ಪೋಲೀಸಿನವರು ಅವನನ್ನು ದಸ್ತಗಿರಿ ಮಾಡಿದರು. ಕಳೆದ ವಾರ ಈ ಮೊಕದ್ದಮೆಯನ್ನು ಪೋಲೀಸಿನವರು ವಾಪಸು ತೆಗೆದುಕೊಂಡು, ಮ್ಯಾಜಿಸ್ಟ್ರೇಟರ ಅಪ್ಪಣೆಯಂತೆ ಅವನನ್ನು ಬಿಡುಗಡೆ ಮಾಡಿದ್ದಾರೆ

ವಾಲ್ಟೇರ್ ಪುರದ ಮಿ ಪೀತಾಂಬರರಾವು ಪಟ್ಟಾಭಿರಾಯ ಮಹಾಶಯ ಎಂಬ ಪ್ರೈಸ್ ದೊಡ್ಡ ಮನುಷ್ಯನು ೨೫,೦೦೦ ರೂಪಾಯಿ ಧರ್ಮದ ಫಂಡನ್ನು ಏರ್ಪಡಿಸಿದನು ಈ ಹಣದಲ್ಲಿ ಮೌಲ್ವಿ ಬರ್ಗಾಕಮಿಟಿಯವರು ಪ್ರೈಸ್ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡಬೇಕೆಂತಲೂ, ವರುಷಕ್ಕೆ ಒಬ್ಬನಂತೆ ಪ್ರೈಸ್ ಯೌವನಸ್ಥನನ್ನು ಇಂಗ್ಲೆಂಡಿಗೆ ವೇತನ ಕೊಟ್ಟು ಕಳುಹಿಸಿ ಕಸಬು ವಿದ್ಯೆಯನ್ನು ಕಲಿಸಬೇಕೆಂತಲೂ ಏರ್ಪಡಿಸಿರುತ್ತಾನೆ

ಸಿಂಧ್ಯಾ ಮಹಾರಾಜರವರು ಹಿಂದೂಸ್ಥಾನದ ಮಹಾರಾಜಾ ಚಕ್ರವರ್ತಿಯವರೂ ಚಕ್ರವರ್ತಿನಿಯರೂ ಹಿಂದೂಸ್ಥಾನದ ರಾಜರುಗಳಿಗೂ ಪ್ರಜೆಗಳಿಗೂ ಕಳೆದ ನವೆಂಬರ್ ತಾ ೧ ರಲ್ಲಿ ಬರೆಯಿಸಿದ ಸಂದೇಶವನ್ನು ದೇಶಭಾಷೆಗೆ ಭಾಷಾಂತರ ಮಾಡಿ ಕಲ್ಕತ್ತೆಯಲ್ಲಿ ... ರಚನೆಗಳನ್ನು ತಯಾರು ಮಾಡಿರುತ್ತಾರೆ ಈ ಯಂತ್ರದ ಮೂಲಕ ಯಾವ ದೇಶದವರೂ ಯಾವ ಭಾಷೆಯವರಾದರೂ ಆ ಇಸ್ತಿಹಾರವನ್ನು ಕೇಳಿ ತಿಳಿದುಕೊಳ್ಳಬಹುದಾಯಿತು

ಪ್ರಿನ್ಸ್ ಆಫ್ ವೇಲ್ಸ್ ರವರು ಬೊಂಬಾಯಿಗೆ ಬಂದಿದ್ದಾಗ ಅಲ್ಲಿನ ಪ್ರಜೆಯರೆಲ್ಲಾ ಸೇರಿ, ಅವರ ಪಟ್ಟಾಭಿಷೇಕದ ಸ್ಮರಣಾರ್ಥವಾಗಿ ಬಹು ಬೆಲೆಯುಳ್ಳ ಬಹುಮಾನವನ್ನು ಒಪ್ಪಿಸಿದರಷ್ಟೆ ಇದಕ್ಕಾಗಿ ಕೂಡಿಸಿದ್ದ ಹಣದಲ್ಲಿ ಕೆಲವು ಭಾಗ ಉಳಿದಿದ್ದದ್ದರಿಂದ ಇದನ್ನು ವಿನಿಯೋಗಿಸಿ ಒಂದು ... ನ್ನು ಕಟ್ಟುತ್ತಾರೆ ಈ ಕಟ್ಟಡದಲ್ಲಿ ಒಂದು ಸ್ತ್ರೀ ಸಂಘವನ್ನು ... ಮಾಡಿದರು ಅಲ್ಲಿ ಎಲ್ಲಾ ಮತಗಳ ಸ್ತ್ರೀಯರೂ ಮಂಗಳಾಚಾರ ... ನಾನಾ ವಿಹಾರಗಳನ್ನು ಅನುಭೋಗಿಸುವರು

ತಿರುನೆಲ್ವೆಲಿಯಲ್ಲಿ ಇಬ್ಬರು ಹುಡುಗರು ಎಲ್ಲಿಯೋ ... ಸಿಕೊಂಡು ಹೋದರೆಂದೂ, ಅವರನ್ನು ಘಾತುಕರು ಕೊಂದುಬಿಟ್ಟರೆಂದೂ ಬಹಳ ಗಲಭೆಯುಂಟಾಗಿತ್ತು. ಆದರೆ ಅವರಿಬ್ಬರ ಶವಗಳೂ ಒಂದು ದೊಡ್ಡ ಪೆಟ್ಟಿಗೆಯಲ್ಲಿ ಸಿಕ್ಕಿದವು ಅವರು ವಿನೋದ ಯೋಚನೆಯಿಂದ ಆ ಪೆಟ್ಟಿಗೆಯೊಳಗೆ ಹೋದರೆಂತಲೂ, ಅದರ ಬಾಗಿಲು ಭದ್ರವಾಗಿ ಮುಚ್ಚಿಕೊಂಡಿತೆಂತಲೂ, ಅವರು ಅದನ್ನು ತೆರೆಯುವುದಕ್ಕಾಗದೆ, ಒಳಗೇ ಎಷ್ಟು ಕೂಗಿದರೂ ಹೊರಕ್ಕೆ ಕೇಳಬಾರದೆ ಉಸಿರುಕಟ್ಟಿ ಸತ್ತುಹೋದರೆಂತಲೂ ಪ್ರಕಟವಾಗಿದೆ

ಮುಂದಿನ ತಿಂಗಳ ಪ್ರಾರಂಭದಲ್ಲಿ ಮೊಹರಂ ಹಬ್ಬವು ಮಹಮ್ಮದೀಯರಲ್ಲಿ ಪ್ರಾರಂಭವಾಗುತ್ತದೆ ಬೊಂಬಾಯಿನಲ್ಲಿ ಆ ಹಬ್ಬದ ಕಾಲದಲ್ಲಿ ಜಗಳ ಕದನಗಳೂ ಇತರ ವಿಧವಾದ ಗಲಭೆಗಳೂ ಆಗದಂತೆ ಮೊದಲೇ ಏರ್ಪಾಡು ಮಾಡುವುದಕ್ಕೋಸ್ಕರ ಬೊಂಬಾಯಿನ ಗವರ್ನರವರು ಕಳೆದ ವಾರ ಅಲ್ಲಿನ ಮಹಮ್ಮದೀಯ ಮುಖಂಡರುಗಳನ್ನು ಕರೆಸಿಕೊಂಡು ಅವರಿಗೆ ವಿವೇಕವನ್ನು ಹೇಳಿದ್ದಲ್ಲದೆ, ಅದಕ್ಕಾಗಿ ಅವರಲ್ಲೇ ಒಂದು ಕಮಿಟಿಯನ್ನು ಏರ್ಪಡಿಸಿ, ಈ ಕಮಿಟಿಗೆ ಮಿ| ಜೆ ಎಚ್ ದುಬಾಷ್ ರವರು ಮುಖಂಡರಾಗಿರುವಂತೆ ಗೊತ್ತು ಮಾಡಿದ್ದಾರೆ

ಬೊಂಬಾಯಿ ಅಧಿಪತ್ಯದಲ್ಲಿ ಸ್ತ್ರೀ ವಿದ್ಯಾಭ್ಯಾಸವನ್ನೂ ಹಿಂದೂಗಳ ಆಚಾರ ವ್ಯವಹಾರಗಳನ್ನೂ ಕ್ರಮಪಡಿಸುವ ಪರೋಪಕಾರಕ ಕಾರ್ಯಗಳಲ್ಲಿಯೇ ತಮ್ಮ ಜೀವಮಾನವನ್ನೆಲ್ಲಾ ಕಳೆಯುತ್ತಾ ಬಂದು, ಹಿಂದೂಸ್ಥಾನದಲ್ಲೆಲ್ಲಾ ಕೀರ್ತಿಯನ್ನು ಸಂಪಾದಿಸಿಕೊಂಡಿರುವ ಮಿ| ಮಲಬಾರಿಯವರಿಗೆ ಕಳೆದ ವರುಷ ವೈಸ್‌ರಾಯಿಯವರು ಕೆ. ಸಿ ಎಸ್ ಐ ಎಂಬ ಬಿರುದನ್ನು ಕೊಡಬೇಕೆಂದಿರುವುದಾಗಿಯೂ, ಅದನ್ನು ಸ್ವೀಕರಿಸುವಿರಾ ಎಂತಲೂ ಬರೆದು ಕೇಳಿದರು ಅದಕ್ಕೆ ಆ ದೊಡ್ಡ ಮನುಷ್ಯರು ಅಂಥಾ ಬಿರುದು ತಮಗೆ ಅವಶ್ಯವಿಲ್ಲವೆಂದು ಪ್ರತ್ಯುತ್ತರವನ್ನು ಕಳುಹಿಸಿದರು ಅದರ ಮೇಲೆ ವೈಸ್‌ರಾಯಿಯವರು ಕೈಸರಿ ಹಿಂದ್ ಎಂಬ ಚಿನ್ನದ ಮೆಡಲನ್ನು ಕೊಡಿಸುವಂತೆ ಚಕ್ರವರ್ತಿಯವರಿಗೆ ಶಿಫಾರಸು ಮಾಡಿ, ಕೊಡಿಸಿದರು.

ಹೈದರಾಬಾದಿನಲ್ಲಿ ಪ್ರವಾಹದ ದೆಸೆಯಿಂದ ಆದ ಅನಾಹುತದಲ್ಲಿ ವಿಕ್ಟೋರಿಯಾ ಮೆಮೋರಿಯಲ್ ಆಸ್ಪತ್ರೆಯ ಬಳಿ ೩೫೦ ಹೆಣಗಳು ಸಿಕ್ಕಿದ್ದನ್ನು ಸಾಗಿಸಿ ದೊಡ್ಡ ಹಳ್ಳಗಳಲ್ಲಿ ಸುರಿದು ಮಣ್ಣು ಮುಚ್ಚಿದರು ೯೫೭ ಮೂಗು ಪ್ರಾಣಿಗಳ ಶವಗಳು ಸಿಕ್ಕಿದ್ದನ್ನು ಒಟ್ಟು ಸುರಿಸಿ ಸುಡಿಸಿಬಿಟ್ಟರು ಭಾರಿ ಭಾರೀ ಬಂಡಿಗಳಲ್ಲಿ ಮುಚ್ಚಿಹೋದದ್ದು ಆ ಮಣ್ಣನ್ನು ತೆಗೆಸುವಲ್ಲಿ ಬೆಲೆಯುಳ್ಳ ೩,೧೦,೭ ನಗಗಳು ಸಿಕ್ಕಿದ್ದನ್ನು ಪೋಲೀಸಿನವರ ವಶಕ್ಕೆ ಒಪ್ಪಿಸಿರುತ್ತಾರೆ ಈಚೆಗೆ ಹೆಲ್ತ್ ಆಫೀಸರವರು ಮರ ಕೆಳಕ್ಕೆಗೆ ಹೋಗಿ, ಅಲ್ಲಿ ವರ್ತಕರು ಬಿಕರಿ ಮಾಡುತ್ತಿದ್ದ ಮುಗ್ಗಲಾದ ದವಸಗಳನ್ನೆಲ್ಲಾ ಅಂದರೆ ೧೫—೨೦ ಸಾವಿರ ಮಣಗಳನ್ನು ಸುಡಿಸಿರುತ್ತಾರೆ ಅಲ್ಲಿನ ರಿಲೀಫ್ ಫಂಡಿಗೆ ೨,೦೮,೫೪೦ ರೂಪಾಯಿ ಚಂದಾ ವಸೂಲಾಗಿದೆ

ತಿರುನೆಲ್ವೇಲಿಯ ಸಮೀಪದಲ್ಲಿ ತಿರುಚೆಂದೂರಿನ ಶ್ರೀ ಸುಬ್ರಹ್ಮಣ್ಯಸ್ವಾಮಿಯ ದೇವಾಲಯದೊಳಕ್ಕೆ ಯಾರೋ ನುಗ್ಗಿ ಗರ್ಭಗುಡಿಯೊಳಗಣ ಮೂಲ ಶಿಲಾ ಲಿಂಗವನ್ನು ಚೂರು ಚೂರಾಗಿ ಒಡೆದಿರುತ್ತಾರೆಂದೂ, ಅದು ಮೂರು ಶತಮಾನಗಳಿಂದಲೂ ಬಹಳ ಪ್ರಸಿದ್ಧಿ ಹೊಂದಿದ್ದ ದೇವಸ್ಥಾನವಾದದ್ದರಿಂದ ಬಹು ಜನ ಭಕ್ತಾದಿಗಳು ಮರುಗುತ್ತಿದ್ದಾರೆಂದೂ, ಈ ದುಷ್ಟ ಕೃತ್ಯವು ಆ ಪ್ರಾಂತ್ಯದ ಪ್ರಜೆಗಳಿಗೆಲ್ಲಾ ತುಂಬಾ ವ್ಯಥೆಯನ್ನು ಉಂಟುಮಾಡಿದೆ ಎಂದೂ ತಿಳಿದುಬರುತ್ತದೆ ಕೆಲವರು ಹೇಳುವುದೇನೆಂದರೆ, ಯಾವನೋ ಒಬ್ಬ ಭಕ್ತನು ತನ್ನ ಇಷ್ಟಾರ್ಥದ ಸಿದ್ಧಿಗೋಸ್ಕರ ಆ ಲಿಂಗವನ್ನು ೯೦ ದಿನಗಳ ತನಕ ಪೂಜೆ ಮಾಡಿ, ಕಡೆಯಲ್ಲಿ ತನ್ನ ಉದ್ದೇಶವು ನೆರವೇರದೆ ಹೋದದ್ದನ್ನು ಕಂಡು, ಸಿಟ್ಟಿನಿಂದ ಅದನ್ನು ಒಡೆದುಹಾಕಿ ತನ್ನ ಹಗೆಯನ್ನು ತೀರಿಸಿಕೊಂಡನು ಎಂಬುದೇ

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರುವ ಬಾತ್ಮೀಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ಉಪಯೋಗಕ್ಕೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮೀಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮೀದಾರರು ಹೇಳುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಓರ್ವ ಪ್ರತ್ಯಕ್ಷದರ್ಶಿ, ಬೆಂಗಳೂರು —ನಿಮ್ಮ ಹೆಸರು ವಿಳಾಸವನ್ನು ತಿಳಿಸಿಲ್ಲ

ಮಹಾಭಿಮಾನಿ, ಚನ್ನಪಟ್ಟಣ —ಪ್ರಕಟಿಸಲಾರೆವು

ಕರೆಸ್‌ಪಾಂಡೆನ್ಸ್.

ಸಿರಾ ತಾಲ್ಲೂಕು ಬುಕ್ಕಾಪಟ್ಟಣದ ಕಷ್ಟದಸೆಯು

ಅಯ್ಯಾ,

ಈ ಗ್ರಾಮವು ಅನೇಕ ಗ್ರಾಮಗಳನ್ನೊಳಗೊಂಡಿರುವ ತಾಲ್ಲೂಕು ಪ್ರಕೃತಿ ಬಹಳ ನಿಮ್ನವಾಗಿದೆ ಮಳೆಯನ್ನೇ ನಂಬಿಕೊಂಡಿರುವ ಪ್ರಾಂತ್ಯಗಳಲ್ಲಿ ಒಂದು ವರ್ಷ ಮಳೆ ಬಾರದೆ ಹೋದರೆ ಕ್ಷಾಮವು ಸಂಭವಿಸುವುದು ಸ್ವಾಭಾವಿಕವಾಗಿರುವಲ್ಲಿ ೨—೩ ವರ್ಷಗಳಿಂದಲೂ ಸರಿಯಾಗಿ ಮಳೆ ಬಾರದೆ ಇಲ್ಲಿನ ಜನ ಜಾನುವಾರುಗಳ ಸ್ಥಿತಿಯು ಕೇವಲ ಶೋಚನೀಯವಾಗಿದೆ ಧಾರಣೆವಾಸಿಗಳು ಭಯಾಪಾರಿಗಿರುತ್ತವೆ ಹಾಗಾದರೂ ಕೊಂಡು ತಿನ್ನಲು ಕೈಯಲ್ಲಿ ಕಾಸಿಲ್ಲದೆ ಅನೇಕ ಜನಗಳು ತೊಂದರೆಪಡುತ್ತಲಿದ್ದಾರೆ. ಇಂಥಾದ್ದರಲ್ಲಿ ಕಂದಾಯದ ಕಾಲವು ಸಮೀಪಿಸುತ್ತಾ ಬಂತು ಪ್ರಜೆಗಳು ಏನು ತಾನೇ ಮಾಡ್ಯಾರು ದವಸಗಳಾದರೂ ವಿಕ್ರಯ ಮಾಡ್ಯಾರೇ. ತೆಗೆದುಕೊಳ್ಳುವರೇ ಇಲ್ಲ ಸಾಲ ಕೊಡುವವರು ಮೊದಲೇ ಇಲ್ಲ ಜಾನುವಾರುಗಳಿಗೆ ಮಾತ್ರ ನಮ್ಮ ಹಜರತ್ ದಿವಾನ್ ಸಾಹೇಬರವರ ಆಗಮನಾನಂತರ ಈಚೆಗೆ ದಯಾಳುಗಳಾದ ಫಾರೆಸ್ಟ್ ಇಲಾಖೆಯವರು ತಮ್ಮ ಫಾರೆಸ್ಟುಗಳ ಕೆಲವೆಡೆಗಳಲ್ಲಿ ಮಾಡಿರುವ ಒಂದೆರಡು ವಿಲಾಧಾರಗಳಿಂದ ನೀರು ಕುಡಿದು, ಮೇವಿಲ್ಲದೆ ನಿರ್ಜೀವಗಳಾಗಿರುತ್ತವೆ ಜನಗಳಾದರೋ ಹೊಟ್ಟೆಗೆ ತುತ್ತಿಗೆ ಗಂಜಿ ಸಹಾ ಇಲ್ಲದೆ. ಕತ್ತಾಳೆ ಗೆಡ್ಡೆ, ಈಚಲು ಕುಣಿಕಲ ಗೆಡ್ಡೆ, ದ್ವಾವರಾಕೆ ಸೊಪ್ಪು ಮೊದಲಾದವುಗಳನ್ನು ತಿಂದು ಜೀವವನ್ನುಳಿಸಿಕೊಳ್ಳುತ್ತಿದ್ದಾರೆ ನೀರಿನ ವಿಷಯವಂತು ಹೇಳತೀರದು ಅನೇಕ ಗ್ರಾಮಗಳಲ್ಲಿ ನೀರಿನ ಹೆಸರೇ ಇಲ್ಲ. ೧—೩ ಮೈಲಿ ದೂರದಿಂದ ಕುಡಿಯುವುದಕ್ಕೆ ಮಾತ್ರ ಕೊಂಡ ನೀರು ತಂದುಕೊಳ್ಳುತ್ತಿದ್ದಾರೆ ಬುಕ್ಕಾಪಟ್ಟಣ ಗ್ರಾಮದಲ್ಲಿ ಯಾದರೋ ಎಷ್ಟು ಭಾವಿಗಳಿದ್ದಾಗ್ಯೂ ನೀರಿಲ್ಲದೆ, ಯಾವ ಕಾಲದಲ್ಲೋ ಕಟ್ಟಿಸಿದ್ದಾದ ಕೆರೆಗೆ ನೆಂಬುವನು ಕೆಗಿಸಿರುವ ಭಾವಿಯಿಂದ ಎಲ್ಲಾ ಜನಗಳೂ ನೀರಾಧಾರ

...ಗಿದೆ ಈ ಭಾವಿಯು ಬಳಿ ನೀರಿಗೆ ಜನರ ಗಲಭೆಯು ಆಗುತ್ತಯಲ್ಲದೆ ಹಗಲಿರು ... ನಿಮಿಷ ಮಾತ್ರವೂ ಘಟಸತ್ತಿಲ್ಲದ ಭಾವಿ ಬಳಿ ಆಗತಕ್ಕ ಗದ್ದಲವನ್ನು ಮ್ಯುನಿಸಿ ...ಲಿಟಿಯವರು ತಪ್ಪಿಸ್ಯಾರೆಂತ ನಿರೀಕ್ಷಿಸುತ್ತೇನೆ ರಾತ್ರಿ ವೇಳೆ ಹೆಂಗಸರು ...ಕ್ಕಳು ಒಬ್ಬೊಬ್ಬರೇ ಕತ್ತಲಲ್ಲಿ ನೀರು ಸೇದುತ್ತಾರೆ ಅಲ್ಲಿ ದೀಪವಿಲ್ಲದ್ದ ...ದ ಅಪಾಯಗಳು ಸಂಭವಿಸಬಹುದು [ಅಲ್ಲಿ ಕೂಡ ಒಂದು ಲಾಂದ್ರ ...ನ್ನು ಇಡಿಸದೆ ಇರುವದು ತುಂಬಾ ಶೋಚನೀಯವಾಗಿದೆ ಮುಂದೆ ಜಾಗ್ರತೆ ...ಇಸ್ಯಾರೆಂದು ನಾಬಿದೇನೆ

...ಥಾನವನ್ನು ಹೊಂದಿದ ನಮ್ಮ ಸಂಸ್ಥಾನದ ಶ್ರೀಮಾನ್ ದಿವಾನ್ ... ...ವರು ಮತ್ತು ನಮ್ಮ ಹವರಸ್ ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಸಾಹೇಬರ ...ರೇ ಮೊದಲಾದವರ ಸವಾರಿಯು ಕಳೆದ ಮಾಹೆ ...ಲ್ಲಿ ... ...ಯಲ್ಲಿ ಪ್ರಜೆಗಳು ಬರೆಮಕೊಂಡಿದ್ದ ಅರ್ಜಿ ತೆಗೆದುಕೊಂಡು ಅಹವಾಲು ...ನ್ನು ಕರುಣದಿಂದ ವಿಚಾರಿಸಿ ಕೊಡಲಿ ಅಹವಾಲುಗಳನ್ನು ಪಂಚಾಗುತ್ತೇ ...ಂದು ವಾಗ್ದಾನಮಾಡಿ ಚಿತ್ತೈಸಿದರು ಪ್ರಜೆಗಳಾದರೋ ಶೀಘ್ರ ಕಷ್ಟಗಳನ್ನು ...ಪ್ರದಲ್ಲಿಯೇ ಮಹಾಸ್ವಾಮಿಯವರು ಪರಿಹರಿಸಿಕೊಡುವರೆಂಬ ನಿರೀಕ್ಷೆ...ಯಲ್ಲಿರುತ್ತಾರೆ

ಈಗ್ಗೆ ನಮ್ಮ ಗೌರ್ನಮೆಂಟಿನವರು ಬಾಕ್ಸ್ ಪಟ್ಟಿನ ಕೆರೆಗೆ ಸಿಂಗದಹಳ್ಳಿ ತೂರೆಯನ್ನು ತಿರುಗಿಸಿ ಪ್ರಜೆಗಳಿಗೆ ಕೂಲಿ ಸಿಕ್ಕುವಂತೆ ಮಾಡಿಸಿಕೊಟ್ಟಿರೆ ಗೆಡ್ಡೆ ಗೆಣಸುಗಳನ್ನು ತಿಂದು ಜೀವಿಸುತ್ತಿರುವ ಪ್ರಜೆಗಳು ಬದುಕಿಕೊಳ್ಳುವರಲ್ಲದೆ, ಈ ತೂರೆಯನ್ನು ಈ ಕೆರೆಗೆ ಬರುವಂತೆ ಮಾಡಿದ ಪಕ್ಷದಲ್ಲಿ ಯಾವ ಕಾಲದಲ್ಲೂ ಹೋಗದೆ ಇರುತ್ತೆ ಇಂಥಾ ಮಹಾ ಮಳೆಯಲ್ಲಿ ...ಅಪರ ಸಂಪೂರ್ಣ ಪ್ರವಾಹ ಮೊದಲೆ ಆ ತೂರೆ ಹರಿದು ಹೋಗುತ್ತೆ ಆ ತೂರೆಯ ನೀರು ಇನ್ಯಾವ ಕೆರೆಗೂ ಆಶ್ರಯವಿಲ್ಲದೆ, ಹಳ್ಳ ಬಿದ್ದು ಸಮುದ್ರಕ್ಕೆ ಹೋಗಿ ಸೇರುತ್ತೆ ಇಂಥಾ ತೂರೆಯನ್ನು ತಿರುಗಿಸಿಕೊಡುವ ಸಂದರ್ಭದಲ್ಲಿ ಗೌರ್ನಮೆಂಟಿಗೆ ನಷ್ಟವೇನೂ ಆಗುವುದಿಲ್ಲ ಇನ್ನೂ ಬೇರೇ ಜಾಗ್ರತೆಯಾಗುವುದರಲ್ಲಿ ಯಾವ ನಷ್ಟವಿಲ್ಲ ಆದ್ದರಿಂದ ಸರ್ಕಾರದವರು ಬೇಗನೆ ಈ ಕೆಲಸ ಮಾಡಿಸಿ ಬಡ ಪ್ರಾಣಿಗಳನ್ನು ಕಾಪಾಡುತ್ತಾರೆಂದು ನಂಬಿದ್ದೇನೆ

ಪ್ರಜಾ ಹಿತಚಿಂತಕ

ತೀರ್ಥಹಳ್ಳಿ ತಾಲ್ಲೂಕು ಸಾರ್ವಜನಿಕ ವಿಷಯಗಳು

ಆಗುಂಬೆ

ಈ ಪ್ರಾಂತ್ಯ ಪೈರೆಲ್ಲಾ ಕಟಾವಾಗುತ್ತಾ ಬಂದು ಪೈರು ಸಾಧಾರಣ ಉತ್ತಮವಾಗಿರುವುದರಿಂದ ಜನಗಳು ಬೆಳೆಯನ್ನು ಕಣಕ್ಕೆ ತಂದು ಒಕ್ಕುವ ಸಮಯಕ್ಕೆ ಸರಿಯಾಗಿ ಮೋಡವಾಗಿ ಗುಡುಗು ಮಿಂಚು ಮೊದಲಾದವುಗಳೊಡಗೂಡಿದ ಮಳೆಯಾಗಿ ಕೆಲವು ಕಡೆ ಸಾಧಾರಣ ಕೆಲವು ಕಡೆ ಗದ್ದೆಗಳೆಲ್ಲಾ ತುಂಬುವ ಹಾಗೂ ಮಳೆ ಬಂದಿರುತ್ತೆ ಇದರಿಂದ ಒಕ್ಕಲು ಮಾಡುವದಕ್ಕೆ ಕಷ್ಟ ಉಳುವುದಕ್ಕೆ ಅನುಕೂಲ ಈ ರೀತಿಯಾಗಿದೆ ಈ ವರುಷ ಅಕ್ಕಿಯ ಧಾರಣೆಯು ಬಹಳ ಕನಿಷ್ಠ ಸ್ಥಿತಿಯಲ್ಲಿದೆ ಇದು ಶೀಘ್ರದಲ್ಲಿ ಕಡಿಮೆಯಾಗುವದೇ ಕಾರಣವೆಂತ ಕಾಣುತ್ತೆ ಸ್ಥಳನಿವಾಸಿಗಳು ಅಕ್ಕಿ ರೂಪಾಯಿಗೆ ೮ ಸೇರು, ರಾಗಿ ೧೦ ಸೇರು, ತೊಗರಿ ಬೇಳೆ ೪ ಸೇರು ಈ ಪ್ರಕಾರ ಮಾರಾಟವಿದೆ —ಕಳೆದ ತಾರೀಖು ೬ ನೇ ಸಾಯಂಕಾಲ ಸುಮಾರು ೭ ಘಂಟೆ ಸಮಯದಲ್ಲಿ ಯಾರೋ ಒಬ್ಬ ಬಿಕ್ಷಗಾರನು ಮೂಗರವಳ್ಳಿ ಕಡೆಯಿಂದ ಶಾಲೂರಿಗೆ ಬರುವ ವೇಳೆಯಲ್ಲಿ ಯಾರೋ ಇಬ್ಬರು ... ಅವನನ್ನು ಹಿಡಿದು ಅವನ ಹತ್ತಿರ ಇದ್ದ ... ತರಿಗೆ, ೧ ಸೇರು ಅಕ್ಕಿ ... ಸೇರು ... ... ಬಿಕ್ಷಗಾರನು ಫಿರ್ಯಾದು ಮಾಡುತ್ತೇನೆಂದು ಪುನಃ ಹಿಂದಕ್ಕೆ ಹೋಗಿ ಕೋಣಂದೂರು ಪಟೇಲ ಸಿದ್ದಪ್ಪಗೌಡರವರ ಮನೆಯಲ್ಲಿ ಬಹಳ ಕತ್ತಲಾದ್ದರಿಂದಲೋ ಅಥವಾ ಮೇಲ್ಕಂಡ ಆ ದುಷ್ಟರು ಪುನಃ ಹಿಂಸೆಕೊಟ್ಟಾರೆಂಬ ಭಯದಿಂದಲೋ ಪಟೇಲರಿಗೆ ತಿಳಿಸಿ ಬೇಗ್ಗೆ ಅವರ ಅಪ್ಪಣೆಯನ್ನು ಪಡೆದು ಮೂಗರವಳ್ಳಿ ಪೋಲೀಸ್ ಸ್ಟೇಷನ್ನಿಗೆ ಹೋಗಿ ಫಿರ್ಯಾದು ಬರೆಯಿಸುವ ಸಮಯದಲ್ಲಿ ಅಲ್ಲಿನ ಕೆಲವು ಜನರು ಸೇರಿ ಮಾಲನ್ನು ತೆಗೆದುಕೊಂಡು ಹೋದ ಇಬ್ಬರು ಅಸಾಮಿಗಳನ್ನು ಕರಸಿ ಅವರಿಗೆ ಮಾನಭಂಗವನ್ನು ಮಾಡಿ ಪೆಟ್ಟು ತಿಂದ ಬಿಕ್ಷಗಾರನನ್ನು ಸಮಾಧಾನ ಪಡಿಸಿ ಆ ಮಾಲನ್ನೆಲ್ಲಾ ವಾಪಸು ಕೊಡಿಸಿದರೆಂತಲೂ ವರ್ತಮಾನ ಕೇಳಿ ಆ ಭಿಕ್ಷಗಾರನಿಗೆ ನ್ಯಾಯವಾಗಿ ಮಾಲನ್ನು ಕೊಡಿಸಿದ್ದರಿಂದ ಸಂತೋಷಪಟ್ಟೆವು ಆದರೆ ಒಂಟಿಗರಾಗಿ ರಸ್ತೆ ಮೇಲೆ ಹೋಕಾಸುಗಳನ್ನು ... ವೇಳೆಯಲ್ಲಿ ಮೇಲ್ಕಂಡಂಥಾ ದುಷ್ಟರು ಯಾರಿಗಾದರೂ ಮೋಸಮಾಡದೆ ಬಿಡರೆಂದು ಎಲ್ಲರೂ ವ್ಯಸನಪಡುತ್ತಾರೆ

ಯಾತ್ರಿದಾರ

ತಾಲ್ಲೋಕು ವರ್ತಮಾನಗಳು

ಅರಸೀಕೆರೆ —ಈ ಊರಲ್ಲಿ ಕಳೆದ ವಾರ ೩ ದಿನಗಳು ಸ್ವಲ್ಪ ಜಡಿಮಳೆ ಆಯಿತು ಧಾರಣೆವಾಸಿಗಳು ಕೊಂಚ ಮಾತ್ರ ಇಳಿತರಕ್ಕೆ ಬಂದಿವೆ —ಕಾಫಿ ಕಟ್ಟೆ ಮುಸಾಫರಖಾನೆಯಲ್ಲಿ ಹಿಂದುಗಳಿಗೂ ಮಹಮದೀಯರಿಗೂ ಕ್ರೈಸ್ತರಿಗೂ ತಕ್ಕ ಅಡಿಗೆ ಸ್ಥಳವಿದ್ದಾಗ್ಯೂ ಕಳೆದ ಡಿಸೆಂಬರಿನಲ್ಲಿ ಅಲ್ಲಿಗೆ ಹೋಗಿದ್ದ ಮೂವರು ಕ್ರೈಸ್ತರನ್ನು ಅಲ್ಲಿದ್ದ ಅರಸೀಕೆರೆ ಪೋಲೀಸ್ ಇನ್ಸ್ಪೆಕ್ಟರು ಅಡ್ಡಿ ಮಾಡಿದರು ಈ ವಿಷಯವನ್ನು ಸ್ಥಳಿಕ ಅಮಲ್ದಾರ್ರಲ್ಲೂ ...ಜನಿಯರ್ ಆಫೀಸರಲ್ಲೂ ತಿಳಿಸಿ ವಿಚಾರಿಸಿದ್ದಾಗ್ಗೆ ಅವರು ಅಂಥ ನಿರ್ಬಂಧವಿರುವದಿಲ್ಲವೆಂದು ಸ್ಪಷ್ಟವಾಗಿ ತಿಳಿಸುತ್ತಾರೆ ಸರ್ಕಾರದವರು ದಯವಿಟ್ಟು ಕಟ್ಟಿಸಿರುವ ಮುಸಾಫರ ಬಂಗ್ಲೆಯಲ್ಲಿ ಕ್ರೈಸ್ತರಿಗೆ ಅಡಿಗೆ ಸ್ಥಳವಿದ್ದಾಗ್ಯೂ ಇಲ್ಲವೆಂತ ಪೋ. ಇನ್ಸ್ಪೆಕ್ಟರವರು ತಿಳಿಸುವದೂ ಮತ್ತು ಅವರಿಗೆ ಸಂಬಂಧವಿರದ ವಿಷಯದಲ್ಲಿ ಪ್ರವೇಶಿಸಿರುವದೂ ತುಂಬಾ ಆಶ್ಚರ್ಯವಾಗಿದೆ —ಈ ಊರಿನ ಬಾವಿಗಳು ಬಾಗಿಹೋಗುತ್ತಿರುವದರಿಂದ ಪ್ರತಿ ಒಬ್ಬರೂ ತಮ್ಮ ಭಾವಿಗಳನ್ನು ಆಳವಾಗಿ ಅಗಿಸುತ್ತಿದಾರೆ ಮತ್ತು ಸರ್ಕಾರದವರು ದಯವಿಟ್ಟು ನೀರಿನ ನಲ್ಲಿಗಳನ್ನು ಇಡಿಸುತ್ತಾ, ನೀರಿಗೆ ಕ್ಷಾಮ ಬಾರದಂತೆ ಮಾಡುವದು ತುಂಬಾ ಕರುಣೆಯಾಗಿದೆ ಅಲ್ಲದೆ ರೈಲ್ವೆ ರಸ್ತೆಯಲ್ಲಿ ಜನೋಪಕಾರಕ್ಕಾಗಿ ಬಹು ಭಾರಿಯಾದ ಭಾವಿಯನ್ನು ಕಟ್ಟಿಸುತ್ತಿದಾರೆ ಈ ಊರಿನ ದೊಡ್ಡಹುರುಳೀ ಭಾವಿಯು ನೀರು ಕೆಡುತ್ತಾ ಇದೆ —ನಮ್ಮ ಅಮಲ್ದಾರರೂ ಡಾಕ್ಟರೂ ಬಹು ಮುತುವರ್ಜಿಯಿಂದ ಜನರಿಗೆ ಸಹಾಯ ಕೊಡುತ್ತಿರುವದು ಅನುದಕರವಾಗಿದೆ ಆದರೆ ಕಟೆರಾ ಇರುವ ಗಲ್ಲಿಗಳನ್ನೂ ಹೊಲಸೆಯಾದ ಸ್ಥಳಗಳನ್ನೂ ಅವರು ದಯವಿಟ್ಟು ಪರಾಂಬರಿಸುವದಕ್ಕೆ ಗಮನ ಕೊಡುತ್ತಾರೆಂದು ನಿರೀಕ್ಷಿಸಬೇಕಾಗಿದೆ

ಮಂಡ್ಯ —ಈಗ್ಗೆ ಇಲ್ಲಿ ಎರಡು ವಾರಗಳ ಹಿಂದೆ ಮೂರು ದಿನದ ವರಿಗೂ ಜಡಿಮಳೆ ಹಿಡಿದಿತ್ತು ಒಣಗಿಹೋದ ಕೆರೆಗಳಿಗೆಲ್ಲಾ ಸ್ವಲ್ಪ ನೀರು ಬಂದಿತು ಧಾರಣೆವಾಸಿಗಳು ಇನ್ನೂ ಇಳಿತರವಾಗಿಲ್ಲ —ಕಳೆದ ತಿಂಗಳಲ್ಲಿ ಇಲ್ಲಿನ ಅಮಲ್ದಾರ್ರವರು ಸುತ್ತುಮುತ್ತಲು ಇರುವಂಥಾ ಗ್ರಾಮಗಳಲ್ಲಿ ಪ್ರಜೆಗಳಿಗೆ ಕಾಲಕ್ಕೆ ಮಳೆ ಬಾರದೆ ಕ್ಷಾಮವು ತಲೆದೋರಿದೆ ಎಂದು ತಿಳಿದು, ಬಡಬಗ್ಗರಿಗೆ ಪ್ರಯೋಜನವುಂಟಾಗುವ ಹಾಗೆ ಟ್ರಾವಲರ್ಸ್ ಬಂಗ್ಲೆಯಲ್ಲಿ ಎರಡು ಮೀಟಿಂಗುಗಳನ್ನು ನಡಿಸಿ, ಅಲ್ಲಿಗೆ ಈ ತಾಲ್ಲೋಕಿನ ಮಹಾ ಜನರನ್ನೂ ಮ್ಯುನಿಸಿಪಲ್ ಮೆಂಬರುಗಳನ್ನೂ ಸರ್ಕಾರಿ ಉದ್ಯೋಗಸ್ಥರನ್ನೂ ಕರಸಿಕೊಂಡು ಅವರೊಡನೆ ಈ ವಿಷಯವನ್ನು ಚರ್ಚಿಸಿ ಒಂದು ಫಂಡನ್ನು ಸಪ್ಲಕ್ಕೆ ಏರ್ಪಡಿಸಿ, ರಾಗಿ ರೂಪಾಯಿಗೆ ೧೧—೧೨ ಸೇರು ಮಾರುವ ಹಾಗೆ ಮಹಾನೀಯರಾದ ಮ ಅಮಣಪ್ಪನವರು ... ದಯವಿಟ್ಟು ಏರ್ಪಾಟು ಮಾಡಿರುತ್ತಾರೆ —ಅಲ್ಲದೆ ನಮ್ಮ ಅಮಲ್ದಾರ್ರವರು ಇಲ್ಲಿನ ಪ್ರಜೆಗಳು ನೀರಿನ ವಿಷಯದಲ್ಲಿ ಬಹಳ ಕಷ್ಟಪಡುತ್ತಾರೆಂದು ತಿಳಿದು ಮಿಡ್ಲ್ ಇಂಗ್ಲಿಷ್ ಸ್ಕೂಲಿನ ಎದುರಿಗೆ ಸರ್ಕಾರದಿಂದ ಒಂದು ಭಾವಿಯನ್ನು ಕಟ್ಟಿಸುತ್ತಾರೆ ಇದು ಅನೇಕರಿಗೆ ಪ್ರಯೋಜನಕರವಾಗಿರುತ್ತದೆ ಎನ್ನುವುದಕ್ಕೆ ಸಂದೇಹವಿಲ್ಲ ಈ ಕಾಲದಲ್ಲಿ ಅವರು ಪ್ರಜೆಗಳಿಗೆ ಮಾಡುವ ಉಪಕಾರಗಳು ಬಹಳ ಸ್ತೋತ್ರಾರ್ಹವಾಗಿರುವವು —ಇಲ್ಲಿ ಕಳ್ಳತನಗಳು ದಿನೇ ದಿನೇ ಹೆಚ್ಚುತ್ತಾ ಬಂದಿವೆ ಕಳೆದ ಮಂಗಳವಾರ ರಾತ್ರಿ ಇಲ್ಲಿನ ರೈಲ್ವೆ ಅ. ಸ್ಟೇಷನ್ ಮಾಸ್ಟರ್ ಮ॥ ಶ್ರೀನಿವಾಸಯ್ಯಂಗಾರ್ರವರ ಒಂದು ಒಳ್ಳೇ ಸೆಲ್ಲೆರು ಮತ್ತು ಒಂದು ಚರುವೂ ಕಳುವಾಗಿರುತ್ತವೆ ಅದಲ್ಲದೆ ದೊಡ್ಡಪೇಟೆಯಲ್ಲಿ ಒಬ್ಬ ವರ್ತಕನ ವಸ್ತ್ರಗಳು ಸಹಾ ಕಳುವಾದವು ಈ ವರಿಗೂ ಇನ್ನೂ ಪತ್ತೆಯಾಗಿಲ್ಲ ಪೋಲೀಸ್ ಇನ್ಸ್ಪೆಕ್ಟರವರು ಇದಕ್ಕೆ ಗಮನಕೊಡುವರೆಂದು ನಂಬುತ್ತೇನೆ

ತಂತ್ರೀ ವರ್ತಮಾನ ಸಾರವು.

ಅನ್ಯದೇಶವಾರ್ತೆಗಳು

ತುರ್ಕಿ ಮತ್ತು ಆಸ್ಟ್ರಿಯಾ ರಾಜ್ಯಗಳ ಮನಸ್ತಾಪವು

ಲಂಡನ್, ಜನವರಿ ತಾ ೧೨ ನೇ ಭಾನುವಾರ —ಆಸ್ಟ್ರಿಯಾ ಗವರ್ನ್‌ಮೆಂಟಿನವರು ತುರ್ಕಿ ರಾಜ್ಯಕ್ಕೆ ಸೇರಿದ ಬಾಸ್ನಿಯಾ ಹರ್ಜಗೋವಿನಾ ಎಂಬೀ ಆಧಿಪತ್ಯಗಳನ್ನು ತಮ್ಮ ಅಳ್ವಿಕೆಗೆ ತೆಗೆದುಕೊಂಡು, ಅವುಗಳಿಗೆ ಪ್ರತಿಯಾಗಿ ತುರ್ಕಿ ಗವರ್ನ್‌ಮೆಂಟಿಗೆ ೨೫ ಲಕ್ಷ ಪೌಂಡುಗಳನ್ನು ಕೊಡುತ್ತೇವೆಂದೂ, ಇದಕ್ಕೆ ಸಮ್ಮತಿಸಬೇಕೆಂದೂ ತಿಳಿಸಿದಾರೆ ಆಸ್ಟ್ರಿಯಾದವರ ಈ ಸಲಹೆಯನ್ನು ತುರ್ಕಿ ರಾಜ್ಯದ ಮುಖ್ಯ ಅಧಿಕಾರಿಗಳು ಸರಿಯಾದ ಪ್ರತಿಫಲವೆಂದು ಸಮ್ಮತಿಪಡುವಂತೆ ಕಾಣುತ್ತೆ ಇದರಿಂದ ಇವೆರಡು ಆಧಿಪತ್ಯಗಳ ವಿಷಯದಲ್ಲೂ ಆವೆರಡು ರಾಜ್ಯಗಳಿಗೂ ಉಂಟಾಗಿರುವ ಮನಸ್ತಾಪಗಳು ಇಷ್ಟಕ್ಕೇ ಪರಿಹಾರವಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ

ಕ್ರೀಟ ದ್ವೀಪವನ್ನು ಗ್ರೀಸಿಗೆ ಸೇರಿಸಿಕೊಳ್ಳುವುದು

ಲಂಡನ್, ಜನವರಿ ತಾ ೯ ನೇ ಶನಿವಾರ —ಕಾನ್‌ಸ್ಟಾಂಟಿನೋಪಲ್ ನಗರದಲ್ಲಿ ಸುಮಾರು ೧೨,೦೦೦ ಜನ ತುರ್ಕಿಯವರು ಸಭೆ ಸೇರಿ ಕ್ರೀಟಿ ದ್ವೀಪವನ್ನು ಗ್ರೀಸ್ ರಾಜ್ಯಕ್ಕೆ ಸೇರಿಸಕೂಡದೆಂದು ತೀರ್ಮಾನವಾಡಿ, ಈ ವಿಚಾರವನ್ನು ಯೂರೋಪಿನ ರಾಜ್ಯಗಳಿಗೆಲ್ಲಾ ತಿಳಿಸಿ ಅವರಿಂದ ಇತ್ಯರ್ಥ ಮಾಡಿಸಬೇಕೆಂದು ತುರ್ಕಿ ಗವರ್ನ್‌ಮೆಂಟಿಗೆ ಅರಿಕೆಮಾಡಿದರು ಇದನ್ನು ಕೇಳಿ ತುರ್ಕಿಯ ಮುಖ್ಯ ವಜೀರರು ಕ್ರೀಟ ದ್ವೀಪವು ಪೂರ್ವದಿಂದಲೂ ತುರ್ಕಿಯ ವಶಿಯಲ್ಲಿದ್ದದ್ದರಿಂದಲೂ, ಈ ವಿಷಯವನ್ನು ಇತರ ರಾಜಾಧಿಪತಿಗಳಿಗೆ ತಿಳಿಸುತ್ತೇವೆಂತಲೂ ಜವಾಬು ಕೊಟ್ಟಿದಾರೆ

ಪರ್ಷಿಯಾ ರಾಜ್ಯದ ಗಲಭೆಯು

ಲಂಡನ್ ಜನವರಿ ತಾ ೯ ನೇ ಶನಿವಾರ —ಪರ್ಷಿಯಾ ಸುಲ್ತಾನರವರು ತಮ್ಮ ರಾಜ್ಯದಲ್ಲಿ ಪಾರ್ಲಿಮೆಂಟ್ ಸಭೆಗಳನ್ನು ಏರ್ಪಡಿಸಿದ್ದನ್ನು ಕೇಳಿ ಪರ್ಷಿಯಾ ರಾಜ್ಯದ ಪ್ರಜೆಗಳು ತುಂಬಾ ಸಂತೋಷಪಟ್ಟು ತಮ್ಮ ಸಂತೋಷವನ್ನು ತುರ್ಕಿ ಸುಲ್ತಾನರಿಗೆ ತಿಳಿಸಿದರು ಸುಲ್ತಾನರವರು ಪರ್ಷಿಯಾಕ್ಕೆ ಕ್ಷೇಮ ... ಸಂತೋಷಗಳ ... ಸುಲ್ತಾನರಿಗೆ ಜವಾಬು ಕೊಟ್ಟಿದಾರೆ

ಲಂಡನ್ ಜನವರಿ ತಾ ೧೦ ನೇ ಭಾನುವಾರ —ಟಬ್ರಿಜ್ ಪಟ್ಟಣದ ಹೊರಪ್ರದೇಶದಲ್ಲಿ ಪ್ರಜಾಪಕ್ಷದವರೂ ಸುಲ್ತಾನರ ಕಡೆಯ ಸೈನಿಕರೂ ಕಾದಾಡುವ ಸ್ಥಿತಿಯಲ್ಲಿದಾರೆ ಸೈನಿಕರು ಪ್ರಜಾಪಕ್ಷದವರನ್ನು ...ರೂದ್ ಎಂಬ ಗ್ರಾಮದಿಂದ ಹಿಮ್ಮೆಟ್ಟಿಸಿ ಓಡಿಸಿರುತ್ತಾರೆ

ಇಟಲಿ ರಾಜ್ಯದಲ್ಲಿ ಭೂಕಂಪವು

ಲಂಡನ್ ಜನವರಿ ತಾ ೧೦ ನೇ ಭಾನುವಾರ —ಮೆಸ್ಸೀನಾಪಟ್ಟಣದ ಪಾಳುನಿವೇಶಗಳೊಳಗಿಂದ ತಾ ೭ ರಲ್ಲಿ ೬ ಜನರನ್ನು ಪ್ರಾಣಸಹಿತ ಕಂಡು ಬಿಡಿಸಿ ಹೊರಕ್ಕೆ ಕರೆದುತಂದಿದಾರೆ

ಲಂಡನ್ ಜನವರಿ ತಾ ೧೧ ನೇ ಸೋಮವಾರ —ಸೆಸ್ಸಿ ಮೆಸ್ಸೀನಾದಲ್ಲಿ ಜವಸಹಿತ ಒಬ್ಬ ಕಟುಕರವನನ್ನು ಕಂಡು ಹೊರಕ್ಕೆ ಕರೆದುಕೊಂಡುಬಂದರು ಇವನೂ, ಇವನ ಹೆಂಡತಿ ಮಕ್ಕಳೂ ಒಂದು ಕಟ್ಟಡದೊಳಗೆ ಸಿಕ್ಕಿಕೊಂಡರು ಅವನು ತನ್ನ ಹೆಂಡತಿ ಮಕ್ಕಳು ಹೊಟ್ಟೆಗಿಲ್ಲದೆ ಕುಟುಕುಜೀವನಾಗಿ ಕಡೆಗೆ ಮೃತಪಟ್ಟದ್ದನ್ನು ಕಣ್ಣಾರ ಎದುರಿಗಿದ್ದು ನೋಡುತ್ತಲೇ ಇದ್ದನು

ಇಂಗ್ಲೀಷ್ ಮಿಲಿಟರಿ ಆಸ್ಪತ್ರೆ

ರೆಗ್ಗಿಯೋಪಟ್ಟಣದಲ್ಲಿ ಇಂಗ್ಲಿಷರು ಏರ್ಪಡಿಸಿರುವ ಮಿಲ್ಟರಿ ಆಸ್ಪತ್ರೆಯನ್ನು ನೋಡಿಕೊಂಡು ಬರುವುದಕ್ಕೋಸ್ಕರ ಏಳನೇ ಎಡ್ವರ್ಡ್ ದೊರೆಯವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್ ಯವರು ಪ್ರಯಾಣಮಾಡಿದಾರೆ

ಕಷ್ಟನಿವಾರಣೆಯ ಕೆಲಸಗಳು

ಕಷ್ಟ ಪರಿಹಾರಾರ್ಥವಾದ ಕಾರ್ಯಗಳನ್ನು ಮಾಡಿಸಬೇಕೆಂದು ಇಟಲಿ ಗವರ್ನ್‌ಮೆಂಟ್, ೩ ... ಸ್ಯಾಂಕ್ಷನ್ ಮಾಡಿದಾರೆ ಈಗ ಹಾಕಿರುವ ತೆರಿಗೆಗಳ ಪೈಕಿ ಕೆಲವನ್ನು ೩ ... ವರ್ಷಗಳ ತನಕ ಐದನೇ ಒಂದುಪಾಲು ಹೆಚ್ಚಿಸಬೇಕೆಂದೂ, ಹೆಚ್ಚು ದ್ರವ್ಯವನ್ನು ರಿಲೀಫ್ ಕೆಲಸಗಳಿಗೆ ವಿನಿಯೋಗಿಸಬೇಕೆಂದೂ, ಭೂಕಂಪ ವ್ಯಾಪ್ತವಾದ ಪ್ರದೇಶದಲ್ಲಿ ಬೇವಾರಸಾದ ಆಸ್ತಿಪಾಸ್ತಿಗಳನ್ನೆಲ್ಲಾ ಅನಾಥರ ಪೋಷಣೆಗೂ ಬಡಬಗ್ಗರ ಜೀವನಕ್ಕೂ ವಿನಿಯೋಗಿಸಬೇಕೆಂದೂ ತೀರ್ಮಾನಮಾಡಿದಾರೆ

ಕಲ್ಕತ್ತಾ, ತಾ ೧೨ ನೇ ಭಾನುವಾರ —ಮೆಸ್ಸೀನಾ ಭೂಕಂಪದ ರಿಲೀಫ್ ಫಂಡಿಗಾಗಿ ಹಿಂದುಸ್ಥಾನದ ಸಮಸ್ತ ಸೈನ್ಯದಿಂದಲೂ ಚಂದಾ ಕೂಡಿಸಿ ಕಳುಹಿಸಬೇಕೆಂದು ಸರ್ವ ಸೇನಾಪತಿಯಾದ ಲಾರ್ಡ್ ಕಿಚ್ನರ್ ಯವರು ಹುಕುಂ ಕೊಟ್ಟಿದಾರೆ

ಸಿಕಂದರಾಬಾದ್, ತಾ ೧೧ ನೇ ಸೋಮವಾರ —ಇಟಲಿ ರಿಲೀಫ್ ಫಂಡಿಗೆ ಹೈದರಾಬಾದ್ ನೈಜಾಮರವರು ೩,೫೦೦ ರೂಪಾಯಿ ಚಂದಾವನ್ನು ಕಳುಹಿಸಿಕೊಟ್ಟಿದಾರೆ

ದೊರೆಯವರೂ ಹಿಂದುಸ್ಥಾನವೂ.

ಲಂಡನ್, ಜನವರಿ ತಾ ೧೧ ನೇ ಸೋಮವಾರ —ಎಡ್ವರ್ಡ್ ಚಕ್ರವರ್ತಿಯವರು ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಯವರನ್ನು ನೆನ್ನೆಯ ದಿನ ಅರಮನೆಗೆ ಕರೆಸಿಕೊಂಡು, ಹಿಂದುಸ್ಥಾನದ ವಿಷಯಗಳನ್ನು ಕುರಿತು ಅವರ ಕೂಡ ಬಹಳ ಹೊತ್ತು ಸಂಭಾಷಣೆ ಮಾಡಿದರು

ಫ್ರಾನ್ಸಿನಲ್ಲಿ ಗಲ್ಲಿಗೆ ಹಾಕುವುದು

ಲಂಡನ್, ಜನವರಿ ತಾ ೧೧ ನೇ ಸೋಮವಾರ —ಫ್ರಾನ್ಸ್ ರಾಜ್ಯದ ಮಂತ್ರಿಸಭೆಯವರು ಕೊಲೆಗಾರರಿಗೆ ಮರಣದಂಡನೆಯನ್ನು ವಿಧಿಸಬೇಕೆಂದು ತೀರ್ಮಾನಮಾಡಿದ್ದಕ್ಕೆ ಸರಿಯಾಗಿ ಈಗ ನಾಲ್ಕುರು ಕೊಲೆಪಾತಕರು ಆ ಶಿಕ್ಷೆಯನ್ನು ಎದುರುನೋಡುತ್ತಿದಾರೆ ಅನೇಕ ವರುಷಗಳಿಂದ ಮರಣದಂಡನೆಯು ಅಲ್ಲಿ ವಿಧಿಸಲ್ಪಟ್ಟಿರಲಿಲ್ಲ

ಸ್ವಿಟ್ಜರ್ಲಾಂಡಿನಲ್ಲಿ ಅನಾಹುತವು

ಲಂಡನ್, ಜನವರಿ ತಾ ೧೧ ನೇ ಸೋಮವಾರ —... ದಕ್ಕೆ ಸೇರಿದ ಸ್ವಿಟ್ಜರ್ಲಾಂಡಿನಲ್ಲಿ ನಾಕ್ಸ್ ಎಂಬ ಸ್ಥಳದೊಳಗೆ ಒಂದು ದೇವಾಲಯದ ಮೇಲ್ಛಾವಣಿಯು ಅಕಸ್ಮಾತ್ತಾಗಿ ಕುಸಿದು ಬಿದ್ದು ೩೧ ಜನರು ... ಕೆಳಗೆ ಸಿಕ್ಕು ಮೃತಪಟ್ಟರು ೫೦ ಜನರಿಗೆ ಗಾಯಗಳಾಗಿವೆ

ಚೀನಾಯಲ್ಲಿ ಒಬ್ಬ ಇಂಗ್ಲೀಷನು ಕೊಲ್ಲಲ್ಪಟ್ಟನು

ಲಂಡನ್ ಜನವರಿ ತಾ ೧೦ ನೇ ಭಾನುವಾರ —ಚೀನಾ ರಾಜ್ಯದ ಸಿಂಜೀ ಚುವಾನ್ ಪ್ರಾಂತ್ಯದಲ್ಲಿ ಶಿಕಾರಿಮಾಡುತ್ತಿದ್ದ ಬ್ರೂಕ್ ಎಂಬೊಬ್ಬ ಇಂಗ್ಲೀಷನನ್ನು ಯಾರೋ ಕೊಂದುಹಾಕಿದರೆಂದು ಪೀಕಿಂಗಿನಿಂದ ಸಮಾಚಾರ ಬಂದಿದೆ

ಗಣೀಕಾರ್ಮಿಕರ ಗಲಭೆಯು

ಲಂಡನ್, ಜನವರಿ ತಾ ೧೧ ನೇ ಸೋಮವಾರ —ಆಸ್ಟ್ರೇಲಿಯಾ ದ್ವೀಪದಲ್ಲಿ ನ್ಯೂ ಸೌತ ವೇಲ್ಸ್ ಆಧಿಪತ್ಯಕ್ಕೆ ಸೇರಿದ ಬ್ರೋಕನ್ ಹಿಲ್ ಎಂಬ ಗಣಿಯಲ್ಲಿ ಕೂಲೀ ಜನರು ಗಲಭೆ ಮಾಡಿದರು ೩೦ ಜನರನ್ನು ದಸ್ತಗಿರಿ ಮಾಡಿರುತ್ತಾರೆ

ಹಿಂದುಸ್ಥಾನದ ವಾರ್ತೆಗಳು

ವೈಸ್‌ರಾಯಿಯವರು.

ಕಲ್ಕತ್ತಾ, ಜನವರಿ ತಾ ೯ ನೇ ಶನಿವಾರ —ಕಲ್ಕತ್ತಾ ಮ್ಯೂಸಿಯಂನ ಒಡಾವೆಗೂಡಿದ ಭಾಗವನ್ನು ವೈಸ್‌ರಾಯಿಯವರು ಈ ದಿನ ಆಗಮಿಸಿ ಪ್ರತಿಷ್ಠೆ ಮಾಡಿದರು

ರಾಜದ್ರೋಹದ ಮೊಕದ್ದಮೆ.

ಬ್ಯಾರಿಸಾಲ್ ಪಟ್ಟಣದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಬಾಬು ... ಮೊಜುಂದಾರ್ ಎಂಬಾತನಿಗೂ ಬಾಬು ... ಚಂದ್ರಮುಖರ್ಜಿ ಎಂಬಾತನಿಗೂ ಇವರು ರಾಜದ್ರೋಹಕರವಾದ ಬರವಣಿಗೆಗಳನ್ನು ಬರೆದು ಪ್ರಕಟಿಸಿದ್ದಕ್ಕಾಗಿ ಶಿಕ್ಷೆ ವಿಧಿಸಿದರು ಮೊದಲನೇ ಅಪರಾಧಿಗೆ ೧೮ ತಿಂಗಳ ಕಠಿಣಸಜಾ ... ರೂಪಾಯಿ ಜುಲ್ಮಾನೆಯೂ ಎರಡನೇ ಅಪರಾಧಿಗೆ ೬ ತಿಂಗಳ ಕಠಿಣಸಜಾ ವಿಧಿಸಲಾಯಿತು

ವಿದೇಶೀ ಸರಕನ್ನು ಬಿಕರಿಮಾಡದಂತೆ ವರ್ತಕರನ್ನು ಹೆದರಿಸುತ್ತಿದ್ದದ್ದಾಗಿ ಬಾಬು ರಾಮಚಂದ್ರ ಸೇನನನ್ನು ಹಿಡಿದು ಮ್ಯಾಜಿಸ್ಟ್ರೇಟರು ... ೩ ವರುಷ ಕಠಿಣಸಜಾ ವಿಧಿಸಿದರು

ಕಾಶ್ಮೀರದ ಮಹಾರಾಜರವರ

ಕಲ್ಕತ್ತಾ ಜನವರಿ ತಾ ೧೦ ನೇ ಭಾನುವಾರ —ಕಾಶ್ಮೀರ ಸಂಸ್ಥಾನದ ಶ್ರೀಮನ್ಮಹಾರಾಜರವರು ತಮ್ಮ ಪ್ರೈವೇಟ್ ಸೆಕ್ರೆಟರಿ ಸರ್ ... ಯಂಗ್‌ಹಸ್ಬೆಂಡ್ ಯವರ ಸಹಿತ ಇಷ್ಟರಲ್ಲೇ ಕಲ್ಕತ್ತೆಗೆ ದಯಮಾಡುವರಿದಾರೆ

ಟುಟಿಕೋರಿನ್ನಲ್ಲಿ ಮೂವರು ಬಂಗಾಳಿಗಳು

ಕಲ್ಕತ್ತಾ ಜನವರಿ ತಾ ೧೧ ನೇ ಸೋಮವಾರ —ಟುಟಿಕೋರಿನ್ನಲ್ಲಿ ದಸ್ತಗಿರಿಮಾಡಿದ್ದ ಮೂವರು ಬಂಗಾಳಿ ಯುವಕರನ್ನೂ ಅಲ್ಲಿನ ಮ್ಯಾಜಿಸ್ಟ್ರೇಟರು ಬಿಡುಗಡೆ ಮಾಡಿದರು ಇವರು ಪೀಠದಿಯಾಗೆ ... ಬಿಟ್ಟು ವಾಪಸು ಕಲ್ಕತ್ತೆಗೆ ಬರುವವರಾಗಿದಾರೆ

ಹಿಂದುಸ್ಥಾನದ ಸರ್ವಮತಗಳ ಸಮಾಜವು

ಈ ತಿಂಗಳ ಅಂತ್ಯಭಾಗದಲ್ಲಿ ಕಲ್ಕತ್ತೆಯಲ್ಲಿ ಹಿಂದುಸ್ಥಾನದ ಸರ್ವಮತಗಳ ಪ್ರತಿನಿಧಿಗಳೂ ಸೇರಿ ಒಂದು ಮಹಾ ಸಭೆಯನ್ನು ನಡಿಸುವವರಾಗಿದಾರೆ ಈ ಸಭೆಯಲ್ಲಿ ಹಿಂದು ಬೌದ್ಧ, ಜೈನ ಶಂಕರೀಯ, ವೈಷ್ಣವ, ಶೈವ, ಸಿಕ್ಖ, ಬ್ರಾಹ್ಮೋ, ಆರ್ಯಸಮಾಜ ಥಿಯಾಸಫಿ, ಕ್ರೈಸ್ತ ಮಹಮದೀಯ, ಪಾರ್ಸಿ ಯಹೂದ್ಯ ಈ ಮೊದಲಾದ ಮತತತ್ವಗಳನ್ನು ಕುರಿತು ಉಪನ್ಯಾಸಗಳು ಆಯಾ ಮತಾವಲಂಬಿಗಳಾದ ಪಂಡಿತೋತ್ತಮರು ಬರೆದುತಂದು ಓದುವರು

ಬೊಂಬಾಯಿಯಲ್ಲಿ ಬೆಂಕಿಯ ಅನಾಹುತವು

ಬೊಂಬಾಯಿ ಜನವರಿ ತಾ ೧೦ ನೇ ಭಾನುವಾರ —ಬೊಂಬಾಯಿ ಹೊರಪ್ರಾಂತ್ಯದಲ್ಲಿರುವ ಗೋರೆಗಾಂವ್ ಎಂಬ ಗ್ರಾಮದಲ್ಲಿ ಶನಿವಾರ ... ಬೆಂಕಿಯ ಅನಾಹುತವಾಯಿತು ೧೨೦ ಬಡಬಗ್ಗರ ಮನೆಗಳು ... ಸಂಪೂರ್ಣವಾಗಿ ಸುಟ್ಟುಹೋದವು ೬೦೦ ಜನರು ಸರ್ವಸ್ವವನ್ನೂ ಕಳೆದುಕೊಂಡು ಅನಾಥರಾದರು ದೇವರ ದಯೆಯಿಂದ ಪ್ರಾಣನಷ್ಟ ಸಂಭವಿಸಲಿಲ್ಲ

ಸಿಯಾಂ ಮಹಾರಾಜರವರು

ರಂಗೂನ್ ಜನವರಿ ತಾ ೯ ನೇ ಶನಿವಾರ —ಸಿಯಾಂ ಮಹಾರಾಜರವರು ಇಲ್ಲಿಗೆ ದಯಮಾಡಿದಾರೆ ಇವರು ಸೋಮವಾರ ಕಲ್ಕತ್ತೆಗೆ ಪ್ರಯಾಣ ಬೆಳಸುವರು

ಈ ದಿನ ಸ್ಟೇಷನ್ ಎಂಬ ಸ್ಥಳದಲ್ಲಿ ಯಣ್ಣೆ ಕಾರ್ಖಾನೆಗೆ ಬೆಂಕಿ ಉರಿಯುತ್ತಿದೆ ಎಷ್ಟು ನಷ್ಟವಾಗುವುದೋ ಮುಂದೆ ತಿಳಿಯಬೇಕು

ಕರ್ಕಿ ಆಯುಧಶಾಲೆಯಲ್ಲಿ ಅನಾಹುತವು

ಪೂನಾ, ಜನವರಿ ತಾ ೧೧ ನೇ ಸೋಮವಾರ —ಕರ್ಕಿ ... ಸರ್ಕಾರಿ ಮದ್ದಿನ ಕಾರ್ಖಾನೆಯಲ್ಲಿ ಮದ್ದು ಹತ್ತಿಕೊಂಡು ನಾಲ್ಕರಿಗೆ ಗಾಯಗಳಾದವು ಇವರೊಬ್ಬನ ಶರೀರ ಸುಟ್ಟು ಗಾಢವಾಗಿ ಮೃತಪಟ್ಟನು ಅಧಿಕಾರಿಗಳು ಇದರ ಪೂರ್ವೋತ್ತರವನ್ನು ತನಿಖೆಮಾಡಲಾರಂಭಿಸಿದಾರೆ.

ಪ್ರೆಸಿಡೆನ್ಸಿ [illegible] ವಿದ್ಯಾ [illegible] ಸಭೆಯು

ಕಳೆದ ತಿಂಗಳು ೨೩—೨೪ ರಲ್ಲಿ ಬಿಜಾಪುರದ ಜಿಲ್ಲೆ ದೇವನಹಳ್ಳಿ ಎಂಬ ಗ್ರಾಮದಲ್ಲಿ ೮೦೦೦ ಜನರ ಸಭೆ ಸೇರಿತ್ತು. ಈ ಸಭೆಗೆ ಸುಪ್ರಸಿದ್ಧರಾದ ಶ್ರೀಯುತ [illegible] ರಾಮಲಿಂಗ ರೆಡ್ಡಿ ಎಂ ಎ ಯವರು ಪ್ರೆಸಿಡೆಂಟರಾಗಿದ್ದರು. ಮಹಾರಾಷ್ಟ್ರದ ಜಿಲ್ಲೆಗಳಲ್ಲಿನ ರೆಡ್ಡಿ ದೊಡ್ಡ ಮನುಷ್ಯರೆಲ್ಲಾ ದಯ ಮಾಡಿದ್ದರು ಮತ್ತು ಬೆಂಗಳೂರು ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿ ಪ್ಲೀಡರ್ [illegible] ರಾಮಯ್ಯ, ಬಿ ಎ ಯವರು, ಒಕ್ಕಲಿಗರ ಪತ್ರಿಕಾ ಎಡಿಟರ್ [illegible] ಪುಟ್ಟಯ್ಯ, ಬಿ ಎ ಯವರು, ಚಿತ್ರದುರ್ಗದಲ್ಲಿ ರೆಡ್ಡಿ ಜನರಿಂದ ಸ್ಥಾಪಿಸಲ್ಪಟ್ಟ ಬೋರ್ಡಿಂಗ್ ಸ್ಕೂಲಿನ ಸ್ಟೂಡೆಂಟ್ಸ್ ಹೋಂ [illegible] ಸುಪರಿಂಟೆಂಡೆಂಟರು ಯವರು, ಆ ಸ್ಟೂಡೆಂಟ್ಸ್ ಹೋಮಿನ ವಿದ್ಯಾರ್ಥಿಗಳು, ಚಿತ್ರದುರ್ಗದ [illegible] ಮುನ್ಸಿಪಲ್ [illegible] ಜ [illegible] ಯವರು, ಶ್ರೀಯುತ [illegible] ಮುಂತಾದವರು [illegible] ಹಳ್ಳಿ [illegible] ಸಾಹುಕಾರ [illegible] ರೆಡ್ಡಿ ದೊಡ್ಡ ಮನುಷ್ಯರು ಬಂದಿದ್ದರು. ಹೆಂಗಸರು ಗಂಡಸರು ಸೇರಿ ಸುಮಾರು ೭೦೦೦ ಜನರ ಮೇಲ್ಪಟ್ಟು [illegible] ತರಗತಿ [illegible] ದೇವನ [illegible] ಪಕ್ಕದಲ್ಲಿ ಪ್ರವಹಿಸುವ [illegible] ನದೀತೀರದಲ್ಲಿ ಸಭೆಯು ನಡೆದು [illegible] ಹಾಕಲ್ಪಟ್ಟಿತ್ತು. ಆ ಗ್ರಾಮದಲ್ಲಿ [illegible] ಪ್ರೆಸಿಡೆಂಟರ ಮುಂತಾದ ಮಹನೀಯರ ವಸತಿಗಾಗಿ [illegible] ಇತರೇಯವರಿಗೆಲ್ಲಾ [illegible] ನಗರದ [illegible] ದೊರೆ [illegible] ವಿನ [illegible] ದೇವನಹಳ್ಳಿ ಗ್ರಾಮಕ್ಕೆ ಜನ [illegible] ಈ ಗ್ರಾಮಕ್ಕೆ [illegible] ಕೋಟೆ [illegible] ದೂರವಾದುದರಿಂದ ಸಭೆಗೆ ಬರತಕ್ಕ ದೊಡ್ಡ ಮನುಷ್ಯರಿಗೋಸ್ಕರ [illegible] ಗಾಡಿಗಳು [illegible] ಗಾಡಿಗಳು [illegible] ದೇವನಹಳ್ಳಿಯ [illegible] ಪಟೇಲರು ತಮ್ಮನಗೌಡ [illegible] ಭೀಮನಗೌಡ [illegible] ಗೌಡ [illegible] ಜನರ [illegible] ಮೂರು ದಿವಸ ಭಕ್ಷ್ಯ ಭೋಜನ ದಿನಗಳಲ್ಲಿ [illegible] ಮಾಡಿಸಿದರು. [illegible] ಜನಾಂಗವಾಗಿದ್ದರಿಂದ [illegible] ಮಾಡಿಸಿದರು.

೨೩ನೇ ತಾರೀಖು ಬೆಳಗ್ಗೆ ೧೧ ಘಂಟೆಗೆ ಪ್ರೆಸಿಡೆಂಟರು ಮತ್ತು ರಾಮ [illegible] ರೆಡ್ಡಿಯವರು [illegible] ಸಭೆಗೆ [illegible] ಗಂಡಸರು ಹುಡುಗರು ಸೇರಿ [illegible] ಪ್ರಸಿಡೆಂಟರು [illegible] ಸುವಾಸಿನಿಯರು [illegible] ಕಳಶಂಗಳನ್ನು ಹಿಡಿದುಕೊಂಡು ಆರತಿ ಎತ್ತಿ [illegible] ಚಿತ್ರದುರ್ಗದಿಂದ ಬಂದಿದ್ದ ಸ್ಟೂಡೆಂಟ್ಸ್ ಹೋಮಿನ ವಿದ್ಯಾರ್ಥಿಗಳು ಪ್ರಾರ್ಥನ [illegible] ಪ್ರೆಸಿಡೆಂಟರು ಎದ್ದು ಇಂಗ್ಲೀಷಿನಲ್ಲಿ [illegible] ಸಭಾ [illegible] ಕನ್ನಡ ಭಾಷೆಯಲ್ಲಿ ಅನುವಾದಿಸಿದರು [illegible] ಪುಸ್ತಕ [illegible] ಕನ್ನಡದಲ್ಲಿ [illegible] ಪುಟ್ಟಯ್ಯನವರಿಂದ [illegible] ಅನಂತರ ಮೈಸೂರು [illegible] ನರಸಿಂ [illegible] ರೆಡ್ಡಿ ಜನಾಂಗ [illegible] ಬಿ ಎ ಪರೀಕ್ಷೆಯಲ್ಲಿ [illegible] ಹಳ್ಳಿಗಳಲ್ಲಿಯೇ ನಿಂತು ವ್ಯವಸಾಯ [illegible] ಪಟ್ಟಣಗಳಲ್ಲಿ [illegible] ಕೊರತೆಯನ್ನು ನೀಗಲು [illegible] ವರ್ಷ [illegible] ಬಿಟ್ಟಿರುವ [illegible] ರೂಪಾಯಿ ಚಂದಾ [illegible] ರೂಪಾಯಿ ವಸೂಲಾಯಿತು. ಆ ಹಣದ ಬಡ್ಡಿಯಲ್ಲಿ ಒಬ್ಬ [illegible] ಅನುಕೂಲವಾಗಿದ್ದು ಮುಂತಾದ ವಿಷಯದ [illegible] ಜನಾಂಗದಲ್ಲಿ ಬಿ ಎ ಪರೀಕ್ಷೆಗೆ [illegible] ಪಟ್ಟಣಗಳಲ್ಲಿ [illegible] ವಿದ್ಯಾರ್ಥಿಗಳ [illegible] ಕಷ್ಟ [illegible] ಜನಾಂಗದ ವಿದ್ಯಾರ್ಥಿಗಳಿಗೆ [illegible] ಕಲ್ಪಿಸಿಕೊಡತಕ್ಕದ್ದೆಂಬ [illegible] ಹುಟ್ಟಿಸಿತು.

ಅನಂತರ ಮೈಸೂರ ಎಚ್ ರಾಮಯ್ಯನವರು ಎದ್ದು ವಿದ್ಯಾ ವಿಷಯದಲ್ಲಿ ಮೈಸೂರು [illegible] ಬೆಂಗಳೂರು [illegible] ಒಕ್ಕಲಿಗರು ಸೇರಿ ಒಕ್ಕಲಿಗರ ಸಂಘವನ್ನು ಸ್ಥಾಪಿಸಿದ್ದು ಇದಕ್ಕೆ ಶ್ರೀಮನ್ಮಹಾರಾಜಾ ಸಾಹೇಬರವರು ಮತ್ತು ದಿವಾನರವರ ಕೃಪಾ ದೃಷ್ಟಿ ಇರುವುದು, ವಿದ್ಯಾ ವಿಷಯವು ಗುರುಗಳ ವಿಷಯವು, ಈ ಜನಾಂಗದಲ್ಲಿ ಸ್ತ್ರೀಯರೂ ಪುರುಷರೂ ಕೂಡ ವಿದ್ಯಾವಂತರಾಗುವ ತನಕ ಅವರ ವೃದ್ಧಿ [illegible] ಈ ಜನಾಂಗದ ಏಳಿಗೆ [illegible] ಸರಸವಾಗಿಯೂ, ಗಂಭೀರವಾಗಿಯೂ, ಆನಂದಕರವಾಗಿಯೂ ಉಪನ್ಯಾಸ ಮಾಡಿದರು ಮತ್ತು ಈ ಜನರ [illegible] ಸಭೆಗಳನ್ನೂ ಕುರಿತು [illegible] ಸಂ [illegible] ತರುವಾಯ ಬೊಂಬಾಯಿ ಗೌರ್ನರವರಿಗೆ ಬ್ರಿಟಿಷ್ ಚಕ್ರಾಧಿಪತ್ಯದ ಭರತಖಂಡದಲ್ಲಿ ಎಲ್ಲಾ ಜನಾಂಗದವರೂ ಉಂಟಾಗಿರುವ ಮತ ಸ್ವಾತಂತ್ರ್ಯವೇ, ದೇಶಾಭಿಮಾನ, ವಿದ್ಯಾಭಿವೃದ್ಧಿ, ಇತ್ಯಾದಿ ಉಪಕಾರ ಸ್ಮರಣೆಗೆ [illegible] ರಾಜಭಕ್ತಿಯುತ್ತರಾದ ತಮ್ಮ ಸಂತೋಷವನ್ನೂ ಮತ್ತು ಗೌರ್ನರವರಿಗೆ [illegible] ಶ್ರೀಮನ್ಮ [illegible] ಒಕ್ಕಲಿಗರ ಸಂಘವನ್ನು ಸ್ಥಾಪಿಸಿದ್ದಕ್ಕೆ ಕೃತಜ್ಞತೆ [illegible] ತಮ್ಮ ಸಂತೋಷವನ್ನೂ ತಂತೀ [illegible] ಸಭೆಗಳೆಲ್ಲರೂ ಒಪ್ಪಿದನಂತರ ಆ ದಿವಸದ ಸಭೆಯು ಬರಖಾಸ್ತಾಯಿತು.

[illegible] ಘಂಟೆಗೆ [illegible] ಮೊದಲು [illegible] ವಿವಿಧ [illegible] ಜನರು ಸೇರಿದರು. ವ್ಯವಸಾಯಕ ವಿಷಯವೂ ವಿದ್ಯಾ ವಿಷಯವೂ, ಸ್ಟೂಡೆಂಟ್ಸ್ ಹೋಮುಗಳಿಂದ ಉಂಟಾಗುವ ಫಲಿತಾಂಶವನ್ನು ಕುರಿತು ಮೈ|| ತಿಮ್ಮನಗೌಡ [illegible] ವೆಲ್ಲಯನರು, ಸಿದ್ದನಗೌಡ ಮುಂತಾದವರು ಒಬ್ಬೊಬ್ಬರಾಗಿ ಎದ್ದು ಉಪನ್ಯಾಸಮಾಡಿದರು. ಅನಂತರ ಮೈ [illegible] ಪಟೇಲರನ್ನ [illegible] ಸ್ಟೂಡೆಂಟ್ಸ್ ಹೋಂ ಕಟ್ಟಡವನ್ನು ಹೊಸದಾಗಿ ಕಟ್ಟುವವರೆಗೂ ಧಾರ್ವಾಡದಲ್ಲಿ ಸ್ಟೂಡೆಂಟ್ಸ್ ಹೋಮಿಗಾಗಿ ತಮ್ಮ ಮನೆಯನ್ನು ಬಿಟ್ಟುಕೊಡುವುದಾಗಿಯೂ, ಸ್ಟೂಡೆಂಟ್ಸ್ ಹೋಮಿನ ಕಟ್ಟಡಕ್ಕಾಗಿಯೂ, ಈ ಜನಾಂಗದ ಬಡ ವಿದ್ಯಾರ್ಥಿಗಳ ವೇತನಕ್ಕಾಗಿಯೂ ಫಂಡು ಸೇರಲು ಗ್ರಾಮಾಂತರಗಳ ಮೇಲೆ ಸರ್ಕೀಟು ಹೊರಡಲು ತಾವು ಒಂದು ತಿಂಗಳು ಧರ್ಮಾರ್ಥಕರಾಗಿ ಕೆಲಸಮಾಡುತ್ತೇವೆಂತಲೂ ಹೇಳಿದರು.

ಬೆಳಗಾಂ [illegible] ಜನ ವಿದ್ಯಾಭಿಮಾನಿಗಳು ಒಟ್ಟುಗೂಡಿ ಎದ್ದು ತಾವುಗಳು ಒಂದೊಂದು ತಿಂಗಳು ಮತಾಭಿವೃದ್ಧಿಯ ಈ ಸೇವೆಗಾಗಿ ಧರ್ಮಾರ್ಥಕರಾಗಿ ಹೊರಡುತ್ತೇವೆಂತಲೂ ವಾಗ್ದಾನ ಮಾಡಿದರು.

ಅಗ್ರಾಸನಾಧಿಪತಿಗಳು ಎದ್ದು ಇಂಗ್ಲೀಷಿನಲ್ಲಿ ರೆಡ್ಡಿ ಜನರಿಗೆ ಬಹಳ ಸ್ವಾರಸ್ಯವಾಗಿ [illegible] ಸಭಾರಂಜಕನಾಗಿ ಅತಿಚತುರರಾಗಿದ್ದ ಪೂನಾ ಕಾಲೇಜಿನ ಬಿ ಎ ಕ್ಲಾಸಿನಲ್ಲಿ ಓದುತ್ತಿರುವ ಶ್ರೀಯುತ ಕೃಷ್ಣರೆಡ್ಡಿ ಸಲವಡಿ ಯವರು ಕನ್ನಡದಲ್ಲಿ ತಪ್ಪಿಲ್ಲದೆ ಹೊರಡಿಸಿದ್ದು, ಮತ್ತು ಆತನು ಜನರಲ್ಲಿ [illegible] ಪ್ರೀತಿ ವಿಶ್ವಾಸಾದಿ ಸುಗುಣಗಳೂ, ಚಟುವಟಿಕೆಯೂ ಸಭಾಸದರಿಗೆ ಅತ್ಯಾನಂದಕರವಾಗಿತ್ತು. ಅನಂತರ ಚಿತ್ರದುರ್ಗದಿಂದ ಬಂದಿದ್ದ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಮಾಸ್ಟರ್ ಮ ಬಿ ಭೀಮರಾಜಯ್ಯನವರು ಅಗ್ರಾಸನಾಧಿಪತಿಗಳಿಗೂ ಮತ್ತು ಸಭೆಯ ಶ್ರೇಯಸ್ಸಾಧಕನೆಯು ಮಂಗಳವನ್ನು ಸಂಗೀತದಲ್ಲಿ ಹಾಡಿದರು. ಚಿತ್ರದುರ್ಗದ ಆರ್ಯ [illegible] ಸ್ಟೂಡೆಂಟ್ಸ್ ಹೋಮಿನ ವಿದ್ಯಾರ್ಥಿ, [illegible] ಸಂಘದ ಶ್ರೇಯೋಭಿವೃದ್ಧಿಯನ್ನು ಕುರಿತು ಪದ್ಯರೂಪವಾಗಿ ಹೇಳಿದನಂತರ ಸಭಾಸದರೆಲ್ಲರೂ ಎದ್ದು ಭಗವಂತನು ನಮ್ಮ ಮೈಸೂರು ಶ್ರೀಮನ್ಮಹಾರಾಜರವರಿಗೂ [illegible] ದೀರ್ಘಾಯುರಾರೋಗ್ಯಾಯುಶ್ಚರ್ಯಗಳನ್ನಿಯಬೇಕಾಗಿ ಜಯಘೋಷದಿಂದ ಸಭಾ ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ

ವಿದೇಶ ವರ್ತಮಾನಗಳು

ಕುರ್ಕಿ ಸುಲ್ತಾನರವರು ತಮ್ಮ ಸ್ವಂತ ಆದಾಯವನ್ನು ಎಂದರ ೩೦ ಕೋಟಿ ರೂಪಾಯಿಗಳನ್ನು ಇಂಗ್ಲೆಂಡಿನ ಬ್ಯಾಂಕಿನಲ್ಲಿ ಇಟ್ಟಿದ್ದಾರೆ

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ [illegible] ನಗರದ ಸಮುದ್ರ ತೀರದಲ್ಲಿ ಎರಡು ಹಡಗುಗಳು ಬಡಿದಾಡಿದ್ದರಲ್ಲಿ ಒಂದು ಮುಳುಗಿ ಹದಿನಾರು ಮಂದಿ ಮೃತಪಟ್ಟರು

ಟರ್ಕಿ ಗವರ್ನ್ಮೆಂಟಿನವರು ತಮ್ಮ ಸ್ವಂತ ಉಪಯೋಗಕ್ಕಾಗಿ ೨೦೦೦ ಕುದುರೆ ಜೀನುಗಳನ್ನು ತಯಾರುಮಾಡಿ ಕಳುಹಿಸುವಂತೆ ಇಂಗ್ಲಿಷ್ ಕಂಪನಿಯವರಿಗೆ ಕಂಟ್ರಾಕ್ಟು ವಹಿಸಿದ್ದಾರೆ

ಲಾರ್ಡ್ ಕಿಚನರವರು ಆಫ್ರಿಕದ ಹೈಕಮೀಷನರ್ ಪದವಿಗೆ ಅಪ್ಪಿಕಕ್ಕೆ [illegible] ಅಲ್ಲಿಗೆ ಹೋದರು. ಆವರ ಬಳಿ [illegible] ಬಹಳ ಜನ [illegible] ಇದ್ದಾರೆಂದು ತಿಳಿದು ಬಂದಿದೆ

ವಿಲ್ಹೆಲ್ಮ್ ಎಂಬ ಜರ್ಮನ ಚಕ್ರವರ್ತಿಯವರೂ ಮಹಾರಾಜ್ಞಿ ಯವರೂ ಪಟ್ಟದ ಬರೀ ತಿಂಗಳ ಎರಡನೇ ವಾರದಲ್ಲಿ ಜರ್ಮನಿ ರಾಜ್ಯದ ರಾಜಧಾನಿಯಾದ ಬರ್ಲಿನ್ ಪಟ್ಟಣಕ್ಕೆ ದಯಮಾಡುವರೆಂದು ಪ್ರಕಟವಾಗಿದೆ.

ಟರ್ಕಿ ರಾಜಧಾನಿಯಾದ ಕಾನ್‍ಸ್ಟಾಂಟಿನೋಪಲ್ ಪಟ್ಟಣದಲ್ಲಿ ಸರ್ಕಾರದವರು ನಾಯಿಗಳನ್ನೆಲ್ಲಾ ಹಿಡಿಸಿ, ಮಾರ್ಮೋರಾ ಸಮುದ್ರದ ದ್ವೀಪಗಳಿಗೆ ರವಾನೆ ಮಾಡಿ, ಅಲ್ಲಿ ಸಾಯುವವರೆಗೂ ಅವುಗಳನ್ನು ಸಾಕುತ್ತಿರಬೇಕೆಂದು ಏರ್ಪಾಡು ಮಾಡುವವರಾಗಿದ್ದಾರೆ

ಚೀನಾ ರಾಜ್ಯಕ್ಕೆ ಸೇರಿದ ಮ [illegible] ನಗರದಲ್ಲಿ ಪ್ರಜೆಗಳು ಚೀನಾ ಗವರ್ನ್ಮೆಂಟಿನ ಮೇಲೆ ತಿರುಗಿಬಿದ್ದಿದ್ದಾರೆ. ೧೦೦೦ ಚೀನಾ ಸೈನಿಕರು ಅವರ ಮೇಲೆ ಯುದ್ಧ ಮಾಡುತ್ತಿರುವರು. ಇವರಿಗೆ ಜಯವಾಯಿತೆಂದೂ, ಸೋಲಾಯಿತೆಂದೂ ಸುದ್ದಿ ಸರಿಯಾಗಿ ಇನ್ನೂ ಬಾರದೆ ಇದೆ

ಬ್ರಾಡ್‍ಸ್ಟ್ರೀಟಿನಿಂದ ಹೊರಡಿಸಲ್ಪಟ್ಟ ೧೫ ಮಂದಿ ವಿದ್ಯಾವಂತರಾದ ಹಿಂದೂಗಳು ಮತ್ತೆ ಅಲ್ಲಿಗೆ ಹೋದರು. ಇವರನ್ನು ಅಲ್ಲಿನ ಸರ್ಕಾರದವರು ಹಿಡಿದು ಜುಲ್ಮಾನೆ ಹಾಕಿದರು. ಅವರು ಜುಲ್ಮಾನೆ ಕೊಡುವುದಿಲ್ಲವೆಂದು ಹಟ ಹಿಡಿದು ಬಂದೀಖಾನೆಗೆ ಹೋದರು. ಈಗ ಅವರೆಲ್ಲಾ ಅಪೀಲ್ ಮಾಡಿಕೊಂಡಿದ್ದಾರೆ

ಫ್ರಾನ್ಸ್ ಸಂಸ್ಥಾನದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲಿ ನಾಲ್ಕು ವಿಮಾನಗಳನ್ನು ತಯಾರುಮಾಡುತ್ತಿದ್ದಾರೆ. ಊರಿಂದೂರಿಗೆ ಜನರು ಹೋಗಿ ಬರುವಂತೆ ಈ ವಿಮಾನಗಳ ಟಪ್ಪಾಲ್ ಜಾಂಗಿ ಬರುವುದು. ಇದಕ್ಕಾಗಿ ಕೆಲವು ಸ್ಥಳಗಳಲ್ಲಿ ಸ್ಟೇಷನ್‍ಗಳನ್ನು ಕಟ್ಟಿಸುತ್ತಿರುವರು. ಇದು ಋಜುವಾಗಿ ಯೂ ಕೆಲವು ದಿನಗಳಲ್ಲೇ ಜಾರಿಗೆ ಬರುತ್ತದೆಂದು ಅಲ್ಲಿನ ಪತ್ರಿಕೆಯು ತಿಳಿಸುತ್ತದೆ

ಜರ್ಮನ ಚಕ್ರವರ್ತಿಯವರಿಗೆ ೫೦ ಬಂಗಲೆಗಳು ಸೇರಿರುತ್ತವೆ. ಅವುಗಳನ್ನೆಲ್ಲಾ ಸರಿಯಾಗಿ ನೋಡಿಕೊಳ್ಳುವುದು ಬಲು ಹಣ ವ್ಯಯವೆಂದು ಚಕ್ರವರ್ತಿಯವರು ಯೋಚಿಸಿ, ಅವುಗಳ ಪೈಕಿ ಭಾರಿಯಾದ ಐದು ಬಂಗಲೆಗಳನ್ನು ಬಿಕರಿ ಮಾಡಿ, ಅರಮನೆಯ ಖರ್ಚನ್ನು ಕಡಿಮೆಮಾಡಬೇಕೆಂದೂ, ರಾಜಾಡಳಿತದಲ್ಲಿ ತಮ್ಮ ಖರ್ಚಿಗೆ ತೆಗೆದುಕೊಳ್ಳುವ ಹಣವನ್ನು ಹೆಚ್ಚಿಸತಕ್ಕದ್ದೆಂದೂ ಗೊತ್ತು ಮಾಡಿದ್ದಾರೆ

ಮೊರೊಕ್ಕೋ ಪಂಗಡ [illegible] ಕ್ರೀಟ್ ಎಂಬ ದ್ವೀಪವನ್ನು ಗ್ರೀಸ್ ರಾಜ್ಯದವರು ತಮ್ಮ ಆಳ್ವಿಕೆಗೆ ಸೇರಿಸಿಕೊಳ್ಳಕೂಡದೆಂದು ಟರ್ಕಿ ರಾಜಧಾನಿಯಲ್ಲಿ ಒಂದು ದೊಡ್ಡ ಸಭೆ ನಡೆದು, ಹಾಗೆ ಸೇರಿಸಿಕೊಳ್ಳುವುದಾದರೆ ಟರ್ಕಿಯವರು ಗ್ರೀಸ್ ದೇಶದ ಯಾವ ಸರಕನ್ನೂ ಕೊಂಡುಕೊಳ್ಳಬಾರದೆಂದು ತೀರ್ಮಾನ ಮಾಡಿದ್ದಾರೆ. ಸಭಾಸದರಲ್ಲಿ ೫೦,೦೦೦ ಪ್ರಜೆಗಳು ಸಹಿ ಹಾಕಿ, ಇದೇ ಅರ್ಥಕ್ಕೆ ಒಪ್ಪಿಕೊಂಡಿರುವರು

ಅಮೇರಿಕದಲ್ಲಿ ಮುಖ್ಯ ನಗರವಾದ ನ್ಯೂಯಾರ್ಕ್ ಎಂಬ ಮಹಾ ಪಟ್ಟಣದಲ್ಲಿ ಕಳೆದ ಗುರುವಾರ ರಾತ್ರಿ ಭಾರಿ ಭಾರೀ ವರ್ತಕರ ಮಂಡಿಗಳಿಗೆ ಮೂರು ಕಡೆ ಬೆಂಕಿ ಬಿದ್ದಿತು. ಟೀ ಸೊಪ್ಪನ್ನು ವಿಕ್ರಯ ಮಾಡುವ ಪ್ರಸಿದ್ಧ ಲಿಪ್ಟನ್ ಎಂಬ ವರ್ತಕನ ಮಂಡಿಯೂ ಉರಿಯಿತು. ಬೆಂಕಿಯನ್ನಾರಿಸುವುದಕ್ಕೆ ೪೫ ಯಂತ್ರಗಳನ್ನು ತಂದಿದ್ದರು. ಒಟ್ಟು ೩೭,೫೦,೦೦೦ ರೂಪಾಯಿನ ಸರಕು ಸುಟ್ಟು ಹೋಯಿತು

ರಷ್ಯಾ ರಾಜ್ಯದ ಚಕ್ರವರ್ತಿಯವರಾಗಿದ್ದ ಜಾರ್ ಅಲೆಗ್ಸಾಂಡರರ ಆಳ್ವಿಕೆಯಲ್ಲಿ ಅವರು ಪ್ಯಾರಿಸ್ ನಗರದಿಂದ ೩೦ ಲಕ್ಷ ರೂಪಾಯಿ ಕ್ರಯಕೊಟ್ಟು, ಪ್ರಾಚೀನ ಕಾಲದ ೪೦೦ ಪದಾರ್ಥಗಳನ್ನು ಕೊಂಡು ತಂದು, ತಮ್ಮ ರಾಜಧಾನಿಯಾದ ಸೇಂಟ್ ಪೀಟರ್ಸ್ ಬರ್ಗಿನಲ್ಲಿರುವ ಭಾರೀ ತಮಾಷಿ ಬಂಗಲೆಯಲ್ಲಿ ಇಟ್ಟಿದ್ದರು. ಈಗ ಆ ಪದಾರ್ಥಗಳನ್ನೆಲ್ಲಾ ಯಾರೋ ಕಳವುಮಾಡಿಕೊಂಡು ಹೋಗಿ, ಅವುಗಳ ನಕ್ಲ್‍ಗಳನ್ನು ಮಾಡಿ ಅಲ್ಲಿ ಇಟ್ಟಿರುತ್ತಾರೆ. ಇದು ಕಳೆದ ವಾರ [illegible] ಆ ಪದಾರ್ಥಗಳನ್ನು ಪತ್ತೆಮಾಡುವವರಾಗಿದ್ದಾರೆ

ಏಷ್ಯಾ ಖಂಡದಲ್ಲಿ ತುರ್ಕಿ ರಾಜ್ಯಭಾರಕ್ಕೆ ಸೇರಿರುವ ಮೋಸೂಲ್ ಎಂಬ ಪಟ್ಟಣದಲ್ಲಿ ಒಬ್ಬ ಮುಸಲ್ಮಾನನು ಸ್ತ್ರೀಯರನ್ನು ಮಾನಭಂಗಪಡಿಸಿದನೆಂದು ಹೇಳಿ ಪ್ರಜೆಗಳು ಅವನನ್ನು ಹಿಡಿದು ಬಂಧನದಲ್ಲಿ ಹಾಕಿದರು. ಆದರೆ ಅವನ ಸಹಪಾಠಿಗಳಾದ ಇತರ ಸೈನಿಕರು ನುಗ್ಗಿ ಸೆರೆಯಿಂದ ಅವನನ್ನು ಬಿಡಿಸಿಕೊಂಡು ಪಟ್ಟಣದ ಬೀದಿಗಳಲ್ಲೆಲ್ಲಾ ಧಾಂದಲೆ ಮಾಡಿ ಲೂಟಿಮಾಡುತ್ತಾ ಬಂದರು. ಪೋಲೀಸರು ಮುಂದೆ ಬಂದದ್ದನ್ನು, ಅಲ್ಲಿನ ಸಂರಕ್ಷಕ ಸೇರಿದವರನ್ನೂ, ಆತನ ಸೇವಕರುಗಳನ್ನು ಕೊಂದುಬಿಟ್ಟರು. ತರುವಾಯ ಕರೀನವಾದ ಕಲಹ ನಡೆಯಿತು. ಪ್ರತಿಕಾರದಲ್ಲಿ ಪ್ರಜೆಗಳಲ್ಲಿ ೩೦ ಮಂದಿ ಕೊಲೆಯಾದರು. ಅನೇಕರಿಗೆ ಗಾಯಗಳಾಗಿವೆ. ಈ ದಂಗೆಯನ್ನು ಅಡಗಿಸುವುದಕ್ಕೆ ಸರ್ಕಾರದವರು ಗವರ್ನ್ಮೆಂಟ್ ಪಟ್ಟಣದಿಂದ ಐದು ಸಹಸ್ರ ಸೈನಿಕರನ್ನು ಅಲ್ಲಿಗೆ ಕಳುಹಿಸಿದ್ದಾರೆ

ಗುಮಾಸ್ತರು ಬೇಕಾಗಿದೆ.

12 1

ತಿಂಗಳಿಗೆ 15 ರೂಪಾಯಿ ಸಂಬಳ

ಇಂಗ್ಲೀಷು, ಕನ್ನಡ ಮತ್ತು ಮಹಾರಾಷ್ಟ್ರ, ಈ ಭಾಷೆಗಳಲ್ಲಿ ಚನ್ನಾಗಿ ಪರಿಶ್ರಮವುಳ್ಳವರಾಗಿರಬೇಕು. ಅಪೇಕ್ಷೆಯುಳ್ಳವರು ಬಂದು ಮುಖತಃ ಬಹುದು ಅಥವಾ ಕಾಗದ ಮುಖೇನ ತಿಳಿಸಬಹುದು. ನಮ್ಮ ವಿಳಾಸ —

ಪಾರ್ಶ್ವದ ವೆಂಕಟಾಚಲಪಂಡಿತ, ಶ್ರೀರಾಘವ ವೈದ್ಯಶಾಲಾ, ಮೈಸೂರು

ರೆಜಿಸ್ಟ್ರೇಷನ್ ಲಾಯರು ಬೇಕೋ ?

105 3

ವಿತರ್ಕಕ್ಕೆ ಆಸ್ಪದವಾಗುವುದಿಲ್ಲ ! ಓಹೋ, ಸರಿಸರಿ !

ದಂಡ ತೆತ್ತು ಬರಿಗೈಮಾಡಿಕೊಳ್ಳುವುದಕ್ಕೋ ?

[illegible] ಪ್ರಕಾಶಿತ ಪುಸ್ತಕಕ್ಕೆ [illegible] ಲಾಯರು ಬೇಕೇ ? ತಕ್ಷಣ ಒರೆದುಕೊಂಡವರಿಗೆ [illegible] ೧—೦—೦ ಸಿಗುವುದು. ವಿಳಾಸ —

ಎಂ ಕೃಷ್ಣಮೂರ್ತಿರಾವ್, ರೆಜಿಸ್ಟ್ರೇಷನ್ ಕ್ಲಾರ್ಕ್, ಹೊಸಕೋಟೆ ತಾಲ್ಲೂಕ್

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ಕೇಳಿದಾಗ—ಎಂದರೆ, ನಿನಗೆ ಯಾವ ರೋಗ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲ ಪ್ರವೃತ್ತಿಯಾಗಿ ನಿನಗೆ ಮೈ

(೧೫ ಆನೆ ಬುಡ್ಡಿ ಪರಿಗೂಡ)

ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಒಳಗೆ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧಕ್ಕರ್ಧಕ್ಕೆ ಮೂಲ ಕಾರಣವಾಗಿರುತ್ತದೆ. ಮಲಬಂಧದಿಂದ ರೋಗಗಳೇ ಉಂಟಾಗುವವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ಹೆಬ್ಬಿದಿಸುವುದು, ತಲೆಸುತ್ತುವಿಕೆ, ತಲೆನೋವು, ಹೊಟ್ಟೆಯುಬ್ಬರ, ಮೂಳೆಗಳ ಕಟ್ಟು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು. ಇಂಗೆಯೇ ಏಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‍ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಕರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಸುಚಿಯಾಗಿಯೂ ಹಿತವಾಗಿಯೂ ಇಟ್ಟು ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು

[69-20]

ಬೆಲೆ ೪ ಆನೆ, ೮ ಆನೆ ಮತ್ತು ೧೫ ಆನೆ ೧೫ ಆನೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆನೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುತ್ತವೆ. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್ ಕಂ. ೬. ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುವು

ನರಳುವ ಹೆಂಗಸರಿಗೆಲ್ಲಾ

72

ಪೆರೂನಾದಿಂದ ಪ್ರಯೋಜನ ವಾಗುವುದು.

ಅನೇಕ ಸ್ತ್ರೀಯರು ಪೆರೂನಾ ಸೇವನೆಯಿಂದ ತಮ್ಮ ಮುಖ ಸೌಂದರ್ಯವನ್ನು ದೀರ್ಘಕಾಲ ಕಾಪಾಡಿಕೊಂಡಿದ್ದಾರೆ ಸ ಂದರ್ಯವಾಗಿರುವ ಕಾಂತಿ ಶರೀರವನ್ನು ಒಳಗು ಹೊರಗೂ ನಿರ್ಮಲವಾಗಿಟ್ಟುಕೊಂಡಿರಬೇಕು ಪೆರೂನಾವು ಜೀರ್ಣದ ಮಾರ್ಗವನ್ನು ನಿರ್ಮಲವಾಗಿಡುವುದು ನುಣುಪು ಕಾಂತಿಯೂ ಮುಖದಲ್ಲಿ ಉಕ್ಕಿಸುವುದು

MME LEO GABOURG

MRS JAMES GOLLOHER

DLLE. MARIE L MEUNIER

ಪಕ್ಕೆಯ ನೋವು

ಮಿಸೆಸ್ ಜೂಲಿಯಾ [illegible] ಯು ಎಸ್ ಎ ಈಕೆ ಬರೆಯುವುದು —

ಪೆರೂನಾ ದಿಂದ ನನ್ನ ಎಡಬದಿಯಲ್ಲಿ ಪಕ್ಕೆ [illegible] ಇದ್ದ ಬಾಧೆ [illegible] [illegible] ಒಂದು ವರುಷದ [illegible] ಈ ಗಿ [illegible] ನೋವು [illegible] ಪಕ್ಕೆ ತಾಕಿ ನನ್ನು ಕರೆಸಿದ್ದಾಯಿತು ಈಗ ನನ ದಿನ ದಿಂದ ನಾನು ವಾಕರಿಕೆ ಪಡುತ್ತಿರುವುದು ಅಗತ್ಯ ವಿಲ್ಲ

[illegible] ಹೇಳಿದ ಪ್ರಕಾರ ನಾನು ಪೆರೂನಾ ಸೇವಿಸುತ್ತಾ ಬಂದಿದ್ದಲ್ಲದೆ ನಾನು ಸುಖವಾಗಿ ನನ್ನ [illegible] ಕೆಲಸಗಳನ್ನು [illegible] ಮಾಡಿಕೊಂಡು ಹೋಗುತ್ತೇನೆ

ಪೆರೂನಾವು ನನಗಿರುವಷ್ಟು ಭರವಸವ್ವ ಪ್ರಪಂಚದಲ್ಲಿ ಇನ ವ ಸದ ಔಷಧವೊಂದೂ ಇಲ್ಲ ಅದು ನನಗೆ [illegible] ಉಪಕಾರವಾಗಿ [illegible] [illegible]

ಸ್ನೇಹಿತರು ನನ್ನ ಬಾಳೇ ದುಃಖಕರವಾಯಿತು

ಡಲ್ ಮೇರಿ [illegible] [illegible] ಓಂಟಾರಿಯೊ ಬಿ ವಿ ಮಾಂಟ್ರಿಯಲ್ ಕಾನಡಾ ಈಕೆ ಬರೆಯುವುದು — [illegible] ಕೃತ್ಸರೋಗವು ಪೆರೂನಾದಿಂದ [illegible] ಯಿತೆಂದು ನ ತೋಷವಾಗಿ ಹೇಳುತ್ತೇನೆ ಆ ರೋಗವು ನನ್ನ [illegible] ದುಃಖಕರವಾಗಿ ಮಾಡಿತ್ತು ಅದರಲ್ಲೂ ಮಾಗಿನ ಹೊತ್ತು ಬಹಳ ಅನುಭವಿಸಿದೆನು ಕೆಮ್ಮು ಕೆಲು ಶ್ಲೇಷ್ಮವನ್ನು ಉಗುಳಿಗೆ [illegible] ಕಾ ಸಕೊಡವನ್ನು ಸರಿಗೆ ಗಮಾಡಿಕೊಂಡನು [illegible] ಕೆಲಸಗಳನ್ನು ಮ ದಲೇ [illegible] ಈ ಔಷಧವು ನನಗೆ [illegible] ತು ಈ ಭಯಂಕರವಾದ ರೋಗದಿಂದ ನರಳುವವರಿಗೆಲ್ಲಾ ಈ ಔಷಧವನ್ನು ಸೇವಿಸೆಂದು ಬಹು ವಿಶೇಷವಾಗಿ ಶಿಫಾರಸು ಮಾಡುತ್ತೇನೆ

ತಲೆನೋವೂ ವಾಂತಿಯೂ

ಮಿಸ್ [illegible] [illegible] ಯು ಎಸ್ ಎ ಈಕೆ ಬರೆಯುವುದು —

ನಾನು ತಲೆನೋವು ವಾಂತಿರೋಗಗಳಿಂದ ಬಹಳ ಕ್ರಮವಿಟ್ಟು ಅನುಭವಿಸಿದೆನು [illegible] ನನಗೆ ಸಂಪೂರ್ಣವಾಗಿ [illegible] ಆರೋಗ್ಯವು ಹತ್ತು ವರುಷದಿಂದ [illegible] ಅನುಭವಿಸುವವರಿಗೆಲ್ಲಾ ಪೆರೂನಾ [illegible] ಮತ್ತು [illegible] ಅವರ ಅನುತ [illegible] ಎನ್ನುವೆನು

ಕೆಮ್ಮಲೂ ಕ್ಷೈಕ್ಯವೂ

ಮಿಸೆಸ್ [illegible] ಯು ಎಸ್ ಎ ಈಕೆ ಬರೆಯುವುದು — [illegible] ಪೆರೂನಾವನ್ನು [illegible] ತ್ತೇನೆ ಮಕ್ಕಳಲ್ಲಿ [illegible] ಕೆಮ್ಮಲಿಗೂ ಇದು ಉತ್ತಮವಾದ ಔಷಧ [illegible] ಅನುಭವದಿಂದ ಹೇಳುತ್ತೇನೆ

ಅಂತರ್ಗತವಾದ ಶೀತವು

ಮಿಸೆಸ್ ಜೆ [illegible] ಓಂಟ ರಿಯೊ ಕ್ಯಾನಡಾ ಈಕೆ ಬರೆಯುವುದು — ನನಗೆ ಅಂತರ್ಗತವಾದ ಶೀತ ಹಿಡಿದು ಎರಡು ವರುಷ ಅನುಭವಿಸಿದೆನು ಶೀತ ಕಾಲದಲ್ಲಿ ಬೆನ್ನೂ ಪಕ್ಕೆಗಳೂ ನೋಯುತ್ತಿದ್ದದ್ದರಿಂದ ಮನೆ ಕೆಲಸಗಳನ್ನು ಮಾಡಲಾರದೆ ಇದ್ದೆನು ಇದಲ್ಲದೆ [illegible] ಗ ಅದನ್ನು [illegible] ಮಾಡಿಕೊಳ್ಳದೆ ಹೋದರೆ ನಾನು ಏಳುಕೊಳ್ಳುವುದಿಲ್ಲವೆಂದು ಶಂಕೆಪಡುತ್ತಿದ್ದೆನು ನನ್ನ ಹಾಗೇ ರೋಗದಲ್ಲಿ ನರಳುತ್ತಿದ್ದ ಪರರಿಗೆ ಪೆರೂನಾದಿಂದ ಗುಣವಾಯಿತೆಂದು ತಿಳಿದು ನಾನೂ ಅದನ್ನು ಸೇವಿಸಿ ನೋಡೋಣವೆಂದು ಗೊತ್ತುಮಾಡಿಕೊಂಡೆನು ಒಂದು ಬುಟ್ಟಿ ಔಷಧವನ್ನು ಸೇವಿಸು ವಷ್ಟರಲ್ಲಿ ನನ್ನ ಶರೀರ [illegible] ಬದಲಾಗಿ ಹೋಯಿತು ಎರಡು ಬಾಟ್ಲಿಗಳನ್ನು ಸೇವಿಸಿದೆನು ಈಗ ನಾನು [illegible] ಗುಣಹೊಂದಿರುತ್ತೇನೆ ಆದ್ದರಿಂದ ನನಗೆ [illegible] ಪೆರೂನಾ ಕಂಪೆನಿಯವರಿಗೆ [illegible] ವಂದಿಸುತ್ತೇನೆ

ನನ್ನ ಸಹೋದರಿಯು ಪೆರೂನಾ ಉಪಯೋಗಿಸೆಂದು ನನಗೆ ಹೇಳಿದಳು ನಾನು ನಿಮ್ಮ ಔಷಧವನ್ನು ಸೇವಿಸಿದೆನು ಬೇಗನೆ ನನಗೆ ಆಹಾರ ರುಚಿಸುವಂತಾಯಿತು ನನಗೆ ಶಕ್ತಿಯೂ ಮಾಂಸವೂ ವೃದ್ಧಿಯಾಗಿ ಪೂರ್ಣಾರೋಗ್ಯದಿಂದಿರುತ್ತೇನೆ ನಿಮ್ಮ ಔಷಧವು ನನಗೆ ತುಂಬಾ ಪ್ರಯೋಜನವಾಯಿತು ಅದಕ್ಕಾಗಿ ವಂದಿಸುವೆನು ಹೀಗೆ ಹೇಳಿದವರ್ಯಾರೆಂದರೆ —

ಮಿಸ್ ಜೂಲಿಯಾ ಒಟ್ಲರ್,

ಆಪ್ಲಟನ್, ವಿಸ್ಕಾನ್ಸಿನ್ ಯು ಎಸ್ ಎ

ಗುಣವಾದದ್ದಕ್ಕೆ ಕೃತಜ್ಞತೆಯು

ಮೇ ಲಿಯೊ ಗೇಬರ್ಗ [illegible] ಸೆಂಟ್ ಸಾವೂರ್ ಕ್ವಿಬೆಕ್ ಕ್ಯಾನಡಾ ಈಕೆ ಬರೆಯುವುದು —

[illegible] ನನಗೆ ಬಹಳ [illegible] ತುಂಬಾ [illegible] ನಿಜವಾಗಿಯೂ [illegible] [illegible] ನಾನು ಮೊದಲಿನವಳೇ ಆಲವೆಂದು ನನಗೆ ತೋರುವಂತಾಗಿದೆ

[illegible] ಕೆಲವು [illegible] ಪೆರೂನಾವನ್ನು [illegible] ಕೊಡುತ್ತಾರೆ ನನಗೆ [illegible] ವಾಗಿ [illegible]

ಮಲಕೋಶಕ್ಕೆ ಹಿಡಿದ ಶೀತವು

ಮಿಸೆಸ್ [illegible] ಉತ್ತರ [illegible] ಯು ಎಸ್ ಎ ಈಕೆ ಬರೆಯುವುದು —

ನನಗೆ ಐದು ವರುಷಗಳಿಂದ ಕೆಟ್ಟ ರೋಗ ಹಿಡಿದು ನರಳುತ್ತಿದ್ದೆನು ಕಂಡು ಕೇಳಿದ ಔಷಧವನ್ನೆಲ್ಲಾ ಸೇವಿಸಿದೆನು [illegible] ನನಗೆ [illegible] ಕೆಲವು ವೈದ್ಯರುಗಳು ನನ್ನ ಮಲಮೂತ್ರಕೋಶದಲ್ಲಿ ಶೀತವು ಹಿಡಿದಿದೆ ಎಂದು ಹೇಳಿದರು ಬಹಳ ಡಾಕ್ಟರುಗಳು ನನ್ನ ರೋಗವನ್ನು [illegible] ಅವರು ಕೊಟ್ಟ ಔಷಧವನ್ನು [illegible] ಅನುಕೂಲವಾಗಲಿಲ್ಲ

[illegible] ಪೆರೂನಾ [illegible] ವಿಸುತ್ತಾ ಬಂದೆ [illegible] ಔಷಧ ಸೇವಿಸುವ [illegible] ತೋರಿತು ಹಾಗೆ ಅದನ್ನು [illegible] ಈಗ [illegible] ಗುಣಹೊಂದಿ [illegible]

ಪೆರೂನಾದಿಂದ [illegible] ವಾಯಿತೆಂದು [illegible] ಸಾರಿದರು ನನಗೆ [illegible] ಕೂಡದೆಂದು ನಾನು ಹಾಗೂ ಹೇಳುವೆನು

ಮಾಂಸವೂ ಶಕ್ತಿಯೂ ಹೆಚ್ಚಾದವು

ಮಿಸೆಸ್ [illegible] ಆರ್ ಎಫ್ ಡಿ ನಂ ೪ [illegible] ಯು ಎಸ್ ಎ ಈಕೆ ಬರೆಯುವುದು —

[illegible] ನನ್ನ ನೆತ್ತಿಗೆ ಶೀತ ಹಿಡಿದಿತ್ತು ಹತ್ತು ವರುಷ ಕಾಲ ಅದರ [illegible] ಭಯದಿಂದ ನರಳಿದೆನು ನಾನು ಬಗೆಯ ಔಷಧಗಳನ್ನು ಸೇವಿಸಿದಾಗ್ಯೂ ನನಗೆ ವಾಸಿಯಾಗಲಿಲ್ಲ

ಕಡೆಯಲ್ಲಿ ಒಂದು ಬಾಟ್ಲಿ ಪೆರೂನಾ ಕೊಂಡು ಸೇವಿಸಲಾರಂಭಿಸಿದ ಒಡನೆಯೇ ನನಗೆ [illegible] ಗುಣವಂತೆ ಕಂಡಿತು ನಾನು ತುಂಬಾ ಕೃಶವಾಗಿದ್ದೆನು ಬಹಳ ಬಳಲಿಕೊಂಡಿದ್ದೆ ಹಾಯಿಗೆ ರುಚಿ ಇರಲಿಲ್ಲ ಗ [illegible] ಜೀರ್ಣವಾಗುತ್ತಿದ್ದಿಲ್ಲ ನುಂಗು ವುದಕ್ಕಾಗುತ್ತಿರಲಿಲ್ಲ ಎಲ್ಲಾ ವಿಷಯಗಳಲ್ಲಿ ಬಹಳ ನಿಶ್ಶಕ್ತಳಾಗಿದ್ದೆನು ಆದರೆ ಈ ಪೆರೂನಾವನ್ನು ಸೇವಿಸುತ್ತಾ ಬಂದ ಹಾಗೆಲ್ಲಾ ಬಲವೂ ಮಾಂಸವೂ ದಿನದಿನಕ್ಕೆ ಹೆಚ್ಚುತ್ತಾ ಬಂದವು

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದ್ದೂ ಇವರಿಂದಲೇ ತಿಳಿಯಬಹುದು

ವಿಳಾಸ — ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ :—

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್ ಕಾಲರಾ ಸ್ಥಿತಿ

11—12—1908 ರಿಂದ 15—12—1908 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	7	[illegible]	0	0
ಮೈಸೂರು ,,	11	9	0	0
ಬೆಂಗಳೂರು ಡಿಸ್ಟ್ರಿಕ್ಟು	10	10	0	0
ಮೈಸೂರು	[illegible]4	[illegible]6	0	0
ಕೋಲಾರ್ ,,	18	13	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	9	[illegible]	0	0
ಹಾಸನ	32	13	0	0
ಚಿತ್ರದುರ್ಗ ,,	6	5	1	1
ಕಡೂರ್	8	9	0	0
ಶಿವಮೊಗ್ಗಾ ,,	0	0	0	0
* ಸಂಖ್ಯೆ ಕೂಡಿಸಿಲ್ಲ ಜುಮ್ಲಾ	145	128	1	1

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಪುಷ್ಯ ಬಹುಳ ಸಪ್ತಮಿ ಗುರುವಾರದಿಂದ ಪುಷ್ಯ ಬಹುಳ ತ್ರಯೋದಶಿ ಬುಧವಾರ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ
14	ಗುರು	ಸಪ್ತಮಿ	0 [illegible]	ಚಿತ್ತ	[illegible]8 10	2
15	ಶುಕ್ರ	ಅಷ್ಟಮಿ	4 10	ಸ್ವಾತಿ	10 0	3
16	ಶನಿವಾರ	ನವಮಿ	7 10	ವಿಶಾಖ	2 38	4
17	ರವಿವಾರ	ದಶಮಿ	8 [illegible]	ಅನೂರಾಧ	[illegible]	5
18	ಚಂದ್ರ	ಏಕಾದಶಿ	9 29	ಜ್ಯೇಷ್ಠ	[illegible] 1[illegible]	6
19	ಕುಜ	ದ್ವಾದಶಿ	[illegible]	ಮೂಲ	7 10	7
20	ಬುಧ	ತ್ರಯೋದಶಿ	[illegible]	ಪೂರ್ವಾಷಾಢ	[illegible] 5	8

* ಶ್ರೀರಂಗಪಟ್ಟಣದಲ್ಲಿ ರಂಗನಾಥ ರಥ [illegible] ಬನಶಂಕರಿ [illegible] ರಥ [illegible] ಪ್ರದೋಷ

ಪೇಟೇ ಧಾರಣೆ

ವಿವರ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲ ೧ಕ್ಕೆ	ರೂ	[illegible]	[illegible]
ಕೆಂಪು ಬತ್ತ ಅವಲಕ್ಕಿ		[illegible]	[illegible]
ಮು [illegible]		[illegible]	[illegible]
[illegible] ಅಕ್ಕಿ		[illegible]	[illegible]
ಸಣ್ಣ [illegible] ಅವರೆ		[illegible]	[illegible]
ಮು [illegible]		[illegible]	[illegible]
ತೊಗರಿ ಬೇಳೆ ಪಲ್ಲ ೧ಕ್ಕೆ		[illegible]	[illegible]
ಮು [illegible]		[illegible]	[illegible]
ಹೈನ್ ರಾಗಿ ಪಲ್ಲ ೧ಕ್ಕೆ		[illegible]	[illegible]
ನವಣೆ [illegible]		[illegible]	[illegible]
ಜೋಳ		[illegible]	[illegible]
ಹುರುಳಿ [illegible] ಪಲ್ಲ ೧ಕ್ಕೆ		[illegible]	[illegible]
ಎಳ್ಳು ಅವರೆ		[illegible]	[illegible]
ಹೆಸರು		[illegible]	[illegible]
ಉದ್ದು		[illegible]	[illegible]
ಕಡಲೆ		[illegible]	[illegible]
ಎಳ್ಳು [illegible] ೧ಕ್ಕೆ		[illegible]	[illegible]
ಹುಚ್ಚೆಳ್ಳು		[illegible]	[illegible]
ಹರಳು [illegible]		[illegible]	[illegible]
ಕಂಗೇಕಾಯಿ [illegible] ೧ಕ್ಕೆ		[illegible]	[illegible]
ಮೆಣಸಿನಕಾಯಿ		[illegible]	[illegible]
ಮು [illegible]		[illegible]	[illegible]
ಬೆಲ್ಲ ದೊಡ್ಡ ಅಚ್ಚು		[illegible]	[illegible]
ಒಳ್ಳೆ [illegible] ೧ಕ್ಕೆ		[illegible]	[illegible]
ಹರಳೆಣ್ಣೆ		[illegible]	[illegible]
ಕೊತ್ತುಂಬರಿ ಪಲ್ಲ ೧ಕ್ಕೆ		[illegible]	[illegible]
ಉಪ್ಪು		[illegible]	[illegible]
ಹುಣಸೇ ಹಣ್ಣು		[illegible]	[illegible]
ಹಳೆ [illegible]		[illegible]	[illegible]
ತುಪ್ಪ ಮಣ ೧ಕ್ಕೆ		[illegible]	[illegible]
[illegible] ೧ಕ್ಕೆ		[illegible]	[illegible]
ತೆಂಗಿನಕಾಯಿ [illegible] ಕ್ಕೆ		[illegible]	[illegible]
ಅಳಲೇಕಾಯಿ ಮಣ ೧ಕ್ಕೆ		[illegible]	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ		[illegible]	[illegible]
ಚಿನ್ನ (ಪ್ರಾ) ತೊಲ		[illegible]	[illegible]
,, ,, ಪವನು		[illegible]	[illegible]
,, ,, ಗಟ್ಟಿ ತೊಲ ೧ಕ್ಕೆ		[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		[illegible]	[illegible]

Printed and Published by the Rev E W THOMPSON M A Proprietor and Manager Wesleyan Mission Press Mysore. 14/1/1909

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು

ಸಂಪುಟ ೨೨ ಮೈಸೂರು—ಸರ್ ೧೯೧೫ ನೇ ಇಸವಿ ಜನವರಿ ತಾರೀಖು ೨೧ ನೇ ಗುರುವಾರ. ಸಂಚಿಕೆ ೩೪

ಶಾಸ್ತ್ರೀಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

16-19

೧ ಲೋಕಾಮಯಹರ ಕಸ್ತೂರೀ ಮಾತ್ರೆ — ಈ ಮಾತ್ರೆಗಳನ್ನು

ಭಸ್ಮ, ಚಿನ್ನದ ರೇಖು ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ ಜ್ವರ ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು ನಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧನಾಡಿ ವೃದ್ಧಿಪಡಿಸುತ್ತದೆ ಸ್ತ್ರೀ ಯರ ಬುತುಶೂಲೆ, ಮಕ್ಕಳ ಎಳವು, ಜ್ವರ, ಕ್ಷಯ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪಟ್ಟಿ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ — ಶಾಸ್ತ್ರೀಯ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ

64 25



ಈ ಸಾಧಾರಣ ಜ್ವರ ಚಳೀಜ್ವರ ಮರೇಜ್ವರ ಪಿತ್ತಜ್ವರ ಶೀತಜ್ವರ ವಾತಜ್ವರ, ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಓವರ್ಸಿಯರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿತೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಜ್ವರಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದ್ದಾರೆ

ಕ್ರಯ — ಸೀಸೆ ೧ ಕ್ಕೆ ೬ ಆಣೆ ೧ ರೂ ೧—೮ ರೂ ರೂ ೩—೧೨ ೪ ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವೆಚ್ಚ ಬಿಡಲಾಗುವದು

ಓಮಂ ಕರ್ಪೂರ

ಈ ಔಷಧವು ಅಜೀರ್ಣ ಶಿಶುಗಳ ಹೊಟ್ಟೆ ಕಳೆಯುವದು, ವಾಂತಿಭೇದಿ ನಾನಾತರದ ಹೊಟ್ಟೆನೋವುಗಳು—ಮುಂತಾದ ಕ್ಕೆಲ್ಲಾ ಮಹತ್ತಾಗಿ ಪರಿಣಮಿಸಿ ಕೂಡಲೇ ಗುಣಕೊಡುವವು. ಇದು ಹೆಂಗಸರು ತಿಂಗಳ ಬಾಧೆ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯವೂ ದರವೂ, ಜ್ವರಹರಿ ಎಂಬ ಔಷಧ ಹೇಗೋ ಸೀಸೆಗಳಲ್ಲಿ ದೊರಕುವದು

ಕೆಡಸದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮ ಓಮಂ ಕರ್ಪೂರವನ್ನು ನಾನೂ ನನ್ನ ತಮ್ಮಂದಿರೂ ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಉಪಯೋಗಿಸಿ ಕೊಟ್ಟು ಕೂಡಲೇ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇಲ್ಲದಿದ್ದರೆ ಕೆಳಗಿನ ವಿಳಾಸದಲ್ಲಿ ವಿಚಾರಿಸಿ —

ಕೃಷ್ಣಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕೆಂಡ್ ಬೀಚ್ ಲೈನ್, ಮದರಾಸ್.

AMRUTANJAN DEPOT, 16 OAK-LANE, BOMBAY. [17-48]

ಅಮೃತಾಂಜನ್ ಡಿಪ್ಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಅಬಲುಗಂಟ್ಲು ನೋವು, ಎದೆನೋವು, ಘಾಯ, ಚಳುಮು, ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತಿಳಿಯಲು ಯೋಗ್ಯವಾದ ಸಂಗತಿಯಾಗಿರುತ್ತದೆ ಇದು ಚರ್ಮದ ಮೂಲಕ ಮಾಂಸವನ್ನು ಪ್ರವೇಶಿಸಿ, ಕೊಳಕು ಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ ಬಾಟ್ಲಿ ಒಂದರ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೪—೦ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಕಪ್ ಇನಾಮು ಆರ್ ಆರ್ ಗಂಗೋಲಿ ೧ ನೇ ಕ್ಲಾಸ್ ಸಬ್ ಜಡ್ಜ್ ಬಾರವಾರ, — ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಡಬ್ಬಿಗೆ ೦—೬—೦ ವಿ ಪಿ ಖರ್ಚು ೦—೪—೦

ದಂತಮಂಜನ—ಡಬ್ಬಿ ೨ ಆಣೆ ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ, ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಹಲ್ಲುಗಳು ಬೆಳ್ಳಗಾಗುತ್ತವೆ

ಕಜ್ಜಿ ಮುಲಾಮು—ಡಬ್ಬಿ ೧ ಕ್ಕೆ ಕಿಮ್ಮತು ೬ ಆಣೆ.

ಕೇಶವರ್ಧಿನಿ—ಚಲೋ ಪರಿಮಳ ಉಳ್ಳದ್ದು

ಕೇಶವರ್ಧಿನಿ—ಮನಶುದ್ಧಿ ಮಾಡುವದು

ಕೇಶವರ್ಧಿನಿ—ಕೂದಲನ್ನು ನಯಮಾಡುವದು ಬಾಟ್ಲಿ ಒಂದರ ಕಿಮ್ಮತು ರೂ ೧—೦—೦

ವಜ್ರಗುಟಿಕೆ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಸುಮಾರಿಗುಟಿಕೆ—ಹೆಂಗಸರ ಹೊಟ್ಟೆನೋವಿಗೆ	೧—೨—೦
ಸುಂದರೀ ತೈಲ—ಮೋರೆಯ ಮುದ ಕಾಗಳಿಗೆ	೦—೫—೦
ತಾಂಬೂಲ ಗುಟಿಕೆ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಬೇಳುಕಡಿತದ ಮದ್ದು ಚೇಳುಕಡಿತಕ್ಕೆ	೦—೮—೨
ಜುಲಾಬು ಮಾತ್ರೆ—ಜುಲಾಬಿಗೆ	೦—೮—೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಳಾಸ — ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು, ಫೋರ್ಟು, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 2

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೀವೇ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ ೧ ರೂ ೪ ಆ

ಕೇಶಿಕೆ ಚುಕ್ಕಿಯುಳ್ಳ ಟೋಪಿಗಳು ೧ ರೂ ೮ ಆ ೨ ರೂ

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಹುಡುಗರ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು, ಕೈಚೀಲ ಮತ್ತು, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂತವರಿಗೆ ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನ ಟೋಪಿ, ಕಾರ್ಖಾನೆ, ಹಾಸನ

ಲಾ ಪ್ರಕಟನೆಗಳು

ವ್ಯವಹಾರನಿರ್ಣಯ—ಘಟಗಳು ೫೬೫ ಹಿಂದೂ ಮಹಮದೀಯ ಲಾಗಳು, ೨೯ ಖಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ ಕ್ರಯ ವಿ ಪಿ ಸೇರಿ ೧ ರೂ ೧೨ ಆಣೆ [40 39]

ಕನ್ನಡ ಲಾ ರಿಪೋರ್ಟ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ ವರ್ಷದ ಚಂದಾ ರೂ ೧—೦—೦ ಮುಂಗಡ, ಯಾ, ವಿ ಪಿ ಬಿಡಿಪತ್ರಿಕೆ ೧ ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು— ಎ ಮಲ್ಲಾರಾಯರು ಫಸ್ಟ್ ಗ್ರೇಡ್ ಪ್ಲೀಡರ್, (೯೦) ೨ ನೇ ರೋಡ್ ಚಾಮರಾಜ ಪೇಟೆ, ಬೆಂಗಳೂರು ಸಿಟಿ — ಈ ವಿಳಾಸಕ್ಕೆ ಬರೆಯುವುದು

ನೋಡಿರಿ 'ಪ್ರೋತ್ಸಾಹಕೊಡಿರಿ' ತರಿಸಿರಿ

98 9

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ ೫,೦೦೦ ಹಾಸನ ಟೋಪಿ ಹೊಲೆಯುವ (ಪೇರುಮಾ) ಸುಪಿರಿಯರ್ ಉಲನ್

೮ ಅಡಿಗಳಿರುವ ಪೇರುಮಾ ಉಲನ್ ಬಂಡಲ್ ೧ ಕ್ಕೆ ರೂ ೩ ೦ ೨

೧೨ ಟೋಪಿಯಾಗುವ ಸುಪೀರಿಯಲ್ ಉಲನ್ ಬಂಡಲ್ ೧ ಕ್ಕೆ ರೂ ೩ ೭ ೨

೧ ಟೋಪಿ ಉಲನ್ ದಾರಕ್ಕೆ (ಸುಪೀರಿಯರ್) ರೂ ೦ ೫ ೦

ಹಾಸನ ಟೋಪಿ ಹಾಕುವ ಕೊಕ್ಕೆ ಸೂಜಿ ೧ ಕ್ಕೆ ೦ ೨ ೦ ೦ ೧ ೬

(ಪೇರುವಾ) ಉಲನ್ ದಾರದಲ್ಲಿ ತಯಾರಾದ ಟೋಪಿ ಡಜನ್‌ಗೆ ರೂ ೧೫ ೦

ಪೇರುಮಾ ಎಂಬ ಉಲನ್ ದಾರಗಳು ನಮಗಾಗಿಯೇ ತರಿಸಿದ್ದರಿಂದ ಬೇರೆಲ್ಲಿಯೂ ದೊರೆಯದು ಈ ಉಲನ್ ದಾರಕ್ಕೆ ಗಿರಾಕಿಗಳು ಜಾಸ್ತಿ ಇರುವದರಿಂದ ಒಂದು ಬಂಡಲ್ ಆದರೂ ಪೇರುಮಾ ಉಲನ್ ತರಿಸಿ ನೋಡಿರಿ

ಈಗ ನಮ್ಮಲ್ಲಿ ಬೇರೆ ಒಂದು ಡಿಪಾರ್ಟ್‌ಮೆಂಟು ಓಪನ್ ಮಾಡಿದ್ದೇವೆ ಅಂದರೆ ಮಂಗಳೂರಲ್ಲಿ ದೊರೆಯುವ ಸಾಮಾನುಗಳು ಪರಸ್ಥಳದವರಿಗೆ ಯಾವದು ಬೇಕಾದರೂ ಚವಕಯಿಂದ ಪಡೆದು ಪರಸ್ಥಳದವರಿಗೆ ಕಳುಹಿಸುವದೇ ಕಮಿಶನ್ ರೂ ೩ ೪ ೦ ಪರಸ್ಥಳದವರಿಗೆ ವಿ ಪಿ ಯಿಂದಲೂ ರವಾನಿಸುತ್ತೇವೆ ಕೆಟಲಾಗನ್ನು ಕೇಳಿದವರಿಗೆ ರವಾನಿಸುತ್ತೇವೆ ನಮ್ಮ ವಿಳಾಸ —

ದಿ ಉಲನ್ ಮಾರ್ಟ್, ಮಂಗಳೂರು

ಗುಮಾಸ್ತರು ಬೇಕಾಗಿದೆ.

12 2

ತಿಂಗಳಿಗೆ 16 ರೂಪಾಯಿ ಸಂಬಳ.

ಇಂಗ್ಲೀಷು ಕನ್ನಡ ಮತ್ತು ಮಹಾರಾಷ್ಟ್ರ, ಈ ಭಾಷೆಗಳಲ್ಲಿ ಚನ್ನಾಗಿ ಪರಿಶ್ರಮವುಳ್ಳವರಾಗಿರಬೇಕು ಅಪೇಕ್ಷೆಯುಳ್ಳವರು ಬಂದು ನಾಟಕಸಾದ ಬಹುದು, ಅಥವಾ ಕಾಗದ ಮುಖೇನ ತಿಳಿಸಬಹುದು ನಮ್ಮ ವಿಳಾಸ —

ಚಾಕ್ಷದ ವೆಂಕಟಾಚಲಪಂಡಿತ ಶ್ರೀಸೀತಾರಾಘವ ವೈದ್ಯಶಾಲಾ, ಮೈಸೂರು

ಟೀಚರು ಬೇಕು

16 1

ಕೊಳ್ಳೇಗಾಲದಲ್ಲಿ ಬಾಲಕಾಭಿವೃದ್ಧಿಯಾಗಿರುವ ಮಹಮ್ಮದೀಯರ ಉರ್ದು ಶಾಲೆಗೆ ಡ್ರಿಲ್ ಮತ್ತು ಜಿಮ್ನಾಸ್ಟಿಕ್ ಇವುಗಳನ್ನು ಪ್ರೊಫೆಸರ್ ಕರ್ತರಾಗಿ ಮೈಸೂರು ಅಪ್ಪರ್ ಸಕೆಂಡರಿಯಲ್ಲಿ ಉರ್ದು ಭಾಷೆಯಿಂದಲಾಗಲಿ ಮದ್ರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್‌ಗೆ ದಿಟೋ ಭಾಷೆಯನ್ನು ತೆಗೆದುಕೊಂಡಾಗಲಿ, ತೇರ್ಗಡೆ ಹೊಂದಿರುವ ಉರ್ದು ಭಾಷೆಯನ್ನು ಹೇಳಿಕೊಡತಕ್ಕ ಒಬ್ಬ ಹೆಡ್ ಮಾಸ್ತರು ಬೇಕಾಗಿರುತ್ತೆ ಈ ಉಪಾಧ್ಯಾಯರಿಗೆ ೧೫ ರೂಪಾಯಿ ಮಾಸವೇತನವು ಕೊಡಲ್ಪಡುವುದು ಮುಂದೆ ಸ್ವಲ್ಪ ಕಾಲದಲ್ಲಿ ಈ ಪಾಠಶಾಲೆಯನ್ನು ಸರ್ಕಾರದವರ ಪೋಷಣೆಗೆ ಒಪ್ಪಿಸಬೇಕೆಂದಿರುತ್ತೆ ಆಗ್ಗೆ ಸರ್ಕಾರಿಯಾಗಿ ವೇತನವು ದೊರೆಯುವುದರಿಂದ ಉಪಾಧ್ಯಾಯರಿಗೆ ಇನ್ನೂ ಸೌಕರ್ಯವಿರುವುದು ಎಂಬುದರಲ್ಲಿ ಸಂದೇಹವಿಲ್ಲ ಈ ಮೇಲ್ಕಂಡ ಯೋಗ್ಯತೆಯುಳ್ಳವರು ತಮ್ಮ ಸರ್ಟಿಫಿಕೇಟುಗಳನ್ನೂ ಇತರ ಯೋಗ್ಯತಾ ಪತ್ರಿಕೆಗಳನ್ನೂ ಅಥವ ಅವುಗಳ ನಕಲುಗಳನ್ನು ಅಪ್ಲಿಕೇಷನ್ ಸಮೇತ ಕೊಳ್ಳೇಗಾಲದ ಅಹಮ್ಮದಿಯಾ ಅನುಮನ್ ಸೆಕ್ರೆಟರಿ ಯವರ ವಿಳಾಸಕ್ಕೆ ಈ ೧೯೦೯ನೆ ವ ಮಾರ್ಚಿ ಒಂದರೊಳಗಾಗಿ ಕಳುಹಿಸತಕ್ಕದ್ದು ಮಾರ್ಚಿ ೧ನೆ ತಾರೀಖಿನ ಅನುಮನ್ ಮೀಟಿಂಗಿನಲ್ಲಿ ಚುನಾಯಿಸಲ್ಪಟ್ಟವರಿಗೆ ಕೆಲಸಕ್ಕೆ ನೇಮಕವಾಡಲ್ಪಡುವದು

16—1—1909 ಮಹಮ್ಮದ್ ಪೀರಾಂದರ್ ಪ್ರೆಸಿಡೆಂಟ್

ಅಹಮ್ಮದಿಯಾ ಅನುಮನ್ ಕೊಳ್ಳೇಗಾಲ

ಜ್ವರಸುಧಾ

51 16

ಒಂದು ಬಾಟ್ಲು ಕ್ರಯ ೮ ಆಣೆ — ವಿ ಪಿ ಖರ್ಚು ಬೇರೆ

ಪ್ರತಿದಿನ ಬರುವ ಜ್ವರ ದಿನ ಬಿಟ್ಟು ದಿನ ಬರುವ ಜ್ವರ ಚಳಿಜ್ವರ ಪ್ಲೇಗ್ ಜ್ವರ ಮುಂತಾದ ನಾನಾ ವಿಧ ಜ್ವರಗಳನ್ನು ನಿವಾರಿಸುವ ಇದರ ವಿನಹ ಬೇರೆ ಔಷಧಿ ಇಲ್ಲವೆಂದು ಅನುಭವಸ್ಥರಾದ ಡಾಕ್ಟರುಗಳು ಹೇಳುತ್ತಲಿದ್ದಾರೆ ... ಕೈಕಾಲು ನೋವು ಮುಂತಾದವುಗಳನ್ನು ... ಕ್ಕೆ ಹಾರಿಸುವುದು ಸುಧಾ ಎಂದರೆ ಅಮೃತವನ್ನು ... ಜ್ವರ ಅಂಟುವುದಿಲ್ಲವೋ ... ಉಂಟಾಗುವ ... ಎರುವ ... ಹೆಚ್ಚು ...

ದೇವನಹಳ್ಳಿ ಟೌನ್ ಬೆಂಗಳೂರು ಡಿಸ್ಟ್ರಿಕ್ಟ್

ಬಿ ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟೀಷನರ್

ಇದುವರೆಗೆ ಯಾರೂ ಪ್ರಕಟಿಸದಂತಹ ಪುಸ್ತಕ !!!

10 3

"ಬ್ರಹ್ಮಚರ್ಯ" ಎಂಬ ಮರ್ಮಶಾಸ್ತ್ರ

ಇದು ಇಂಗ್ಲೀಷ್ ಭಾಷೆಯಲ್ಲಿ ಬಹು ಪ್ರಸಿದ್ಧವಾದ ಪುಸ್ತಕ ಈಗ ಇದನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿರುವೆವು ಈ ಮರ್ಮಶಾಸ್ತ್ರವನ್ನು ಬಾಲ ವೃದ್ಧರು ಆಬಾಲವೃದ್ಧರೂ ಓದಿ ತಿಳಿದುಕೊಳ್ಳಬೇಕು ಅನೇಕ ಹುಡುಗರು ಹಸ್ತಪ್ರಯೋಗ ಮೊದಲಾದ ಭಯಂಕರವಾದ ದುರಭ್ಯಾಸಗಳೊಳಗಾಗಿ ಕೆಟ್ಟು ಹೋಗುತ್ತಾರೆ ಅವರ ದುಸ್ವಪ್ನವರ್ತನೆಗಳಿಗೆ ಏನೇ ವೈದ್ಯವೇ ಕಾರಣವಾಗಿರುತ್ತದೆ

ಈ ಉತ್ಕೃಷ್ಟವಾದ ಪುಸ್ತಕವನ್ನು ಇನ್ನೂ ವಿವರವಾಗಿ ತಿಳಿಸುವ ದಕ್ಕೆ ಇಲ್ಲಿ ಸ್ಥಳ ಸಾಲದು ಅದರ ಇದರಲ್ಲಿ ಅಡಕವಾಗಿರುವ ಅಧ್ಯಾಯಗಳನ್ನು ಇಲ್ಲಿ ತಿಳಿಸುವೆವು ಜೀವೋತ್ಪತ್ತಿಯ ಪ್ರಾರಂಭವು, ಅದರ ಶಕ್ತಿಯು - ಸಸ್ಯಾದಿಗಳ ಜೀವೋತ್ಪನ್ನವಾಗುವಿಕೆ - ಪ್ರಾಣಿಗಳಲ್ಲುಂಟಾಗುವ ಜೀವೋತ್ಪತ್ತಿಯು - ಮನುಷ್ಯಸಂತಾನವು, ಇದು ಉತ್ಪತ್ತಿಯಾಗುವ ರೀತಿಯು ಹುಡುಗರಲ್ಲಿರುವ ದುಶ್ಚೇಷ್ಟೆಗಳು, ಅಂಗಗಳು ಕೆಡುವ ರೀತಿ ಹುಡುಗರ ದುಶ್ಚೇಷ್ಟೆಗಳಿಂದಾಗುವ ನಾನಾ ಕೇಡುಗಳು ಹುಡುಗರು ತಮ್ಮ ದೇಹಗಳನ್ನು ಪದ್ಧತಿ ಪ್ರಕಾರ ಬಲ ತ್ಯಾಗಗಳನ್ನು ಕಾಪಾಡುವದಕ್ಕೆ ಸೂತ್ರಗಳು - ಹುಡುಗರು ತಾವು ತಳೆಕೊಂಡ ದೇಹ ಬಲ ಶಕ್ತಿಗಳನ್ನು ತಿರಿಗಿ ಸಂಪಾದಿಸುವ ವಿಧಾನವು - ಹುಡುಗರು ಪ್ರಾಯಕ್ಕೆ ಬರುವ ಕಾಲವು ಈ ಕಾಲದಲ್ಲಿ ಗಮನಿಸತಕ್ಕ ವಿಷಯಗಳು - ಹುಡುಗರು ಪ್ರಾಯಕ್ಕೆ ಬರುವ ಕಾಲ ಈ ಕಾಲದಲ್ಲಿ ಉಂಟಾಗುವ ಬದಲಾವಣೆಗಳು

ಇಂಥಾ ಉತ್ಕೃಷ್ಟವಾದ ಪುಸ್ತಕವನ್ನು ಎಲ್ಲರೂ ಕೊಂಡು ತಮ್ಮ ಮನೆಗಳಲ್ಲಿ ಇಡಬೇಕು ಇದರ ಕ್ರಯ ಮೂರಾಣೆ ವಿ ಪಿ ಮೂಲಕ ತರಿಸಿಕೊಂಡರೆ ವಿದಾಗೆಗೆಯಾಗುವುದು

ವಿಳಾಸ —ಮ್ಯಾನೇಜರ್ ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

43



ಬೆನ್ನೆಲುಬಿನ ನೋವು ಪಕ್ಕೆಗಳಲ್ಲಿ ಆಗುವ ನೋವು ಕೀಲುಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕದಗಳ ನೋವು ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಂಟುಗಟ್ಟುವುದು, ಊದಿಕೊಳ್ಳುವುದು, ಕೆಂಪಾಗಿ ಕಾಣುವುದು ಬಾಧೆ ಮೈದಣಿವು ಇರುವುದು ವಿಶ್ರಾಂತಿ ಕೊಡದೆ ಇರುವುದು ಎದ್ದ ಹತ್ತದೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೆ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಆದ್ದರಿಂದ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಕೇವಲ ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದರೆ ಏನೂ ಅಲ್ಲ

ಇದು ಎಲ್ಲೆಲ್ಲೂ ವಿಕ್ರಯವಾಗುವುದು | ಸಣ್ಣ ಶೀಸೆಗೆ ೧ ರೂಪಾಯಿ | ದೊಡ್ಡ ಶೀಸೆಗೆ ೨ ರೂಪಾಯಿ

ಇಲ್ಲಿ ನೋಡಿ.

1

ಹುವ ಕೂರು ಬಜಾರ್ ಕಲಾಸಿಪಾಳ್ಯದ ಜಾರೆರೋಪಿ ಷಾಪ ಮೋಲ್ಟಿಬಾ ದಿನದಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ ದಾರದಿಂದ ತಯಾರಾಗುತ್ತವೆ ಕ್ರಯ ... ಆಗ ಮೊದಲ್ಗೊಂಡು ... ರೂ ಆಗಬಹುದು ... ಟೋಪಿಗಳನ್ನು ಕೊಳ್ಳುವವರಿಗೆ ... ಡೆಲಿವರಿ ಕಳುಹಿಸಲ್ಪಡುವುದು ಈಗಲಾಸೇ ಇಂಗ್ಲಿಷ್ ಉಲ್ ದಿಂದಲೂ ಎಂಥಾ ವಿಶಾಲ ತರಹ ಟೋಪಿಗಳನ್ನು ತರಿಸಿ ಕಳುಹಿಸಲ್ಪಡುವು ವಿಳಾಸ — ವ್ಯಾಸ ಜನ್ ಹಾಸನದ ಟೋಪಿ ಕಾರ್ಖಾನೆ ಬಜಾರ್ ಕಲಾಸಿ ತುಮಕೂರು

ಕ್ಲಿಮೆಂಟ್ಸ್ ಮ್ಯಾಜಿಕ್ ಎಂಬ ತೈಲವು

18 1

ತಲೆನೋವು ವಾಯುನೋವು ಸೆಳೆತ ಗಂಟುನೋವು, ವಾತ ಕಫಾದಿ ನಾನಾ ವಿಧ ವಾಯುರೋಗಗಳು ಶೀತರೋಗಗಳು, ಮೈನೋವು, ಕೀಲುಗಳ ಸಂದುಕಟ್ಟುಗಳ ನೋವು ... ಹಲ್ಲುನೋವು —ಇವುಗಳಿಗೆ ಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಯಿಂದ ... ವಾಸಿಯಾಗುತ್ತದೆ ಈ ಔಷಧವನ್ನು ... ಪರೀಕ್ಷೆಮಾಡಿ ... ಎಲ್ಲಾ ವ್ಯಾಧಿಗಳನ್ನೂ ನಾಶಮಾಡುವುದರಲ್ಲಿ ಈ ಔಷಧವು ... ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷಿಸಿ ... ತಪ್ಪದೆ ಇಟ್ಟಿರ ಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಕಾರಣವನ್ನು ಹಿಡಿದು ಅದರ ಹುಟ್ಟನ್ನೇ ನಾಶಮಾಡುತ್ತದೆ

ಕ್ರಯ ಶೀಸೆ ಒಂದಕ್ಕೆ ೧ ಆಣೆ ... ಅಥವಾ ... ಒಂದೇ ಸಲ ತರಿಸಿಕೊಳ್ಳುವವರಿಗೆ ... ಖರ್ಚು ... ಈ ತೈಲವನ್ನು ಎಲ್ಲಾ ನ್ಯಾಯವಾದಿಗಳೂ ವೈದ್ಯರು ಶಿಫಾರಸು ಮಾಡುತ್ತಾರೆ ಮುಖ್ಯ ಏಜೆಂಟರ ವಿಳಾಸ—

ಎಸ್ ಪೀಟರ್ಸ್,

೩೩, ವೇದಮುಲ್ಟಿಪಿಳ್ಳೆ ಬೀದಿ ಪೇಟೆ, ಮದರಾಸ್.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವುದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಹಟಮಾಡುವುದು ಸ್ವಭಾವವಾಗಿದ್ದು

ಆಹಾರದ ರುಚಿ ಕಡಿಮೆ ಯುಳ್ಳವರಾಗಿದ್ದಾರೆಂದು ಕಂಡ ಕೂಡಲೆ

SCOTT'S EMULSION. 6 3

(ಸ್ಕಾಟ್ಸ್ ಇಮಲ್ಷನ್)

ಎಂಬ ಔಷಧವನ್ನು ಕೊಡಬೇಕು

ಈ ಮೀನುಮನುಷ್ಯ ಇರುವ ಚಿಹ್ನೆಯನ್ನೇ ಕೊಂಡುಕೊಳ್ಳಿ

ಹಾಲಿನಲ್ಲಿ ಕಲಸಿ ಕೊಟ್ಟರೂ ಸರಿ ಕೊಟ್ಟ ಕೂಡಲೆ ದೊಡ್ಡ ವ್ಯತ್ಯಾಸ ತೋರುವುದು

ಅದು ಸಂತೋಷವೂ ಆನಂದವೂ ಪಡುವರಾಗಿ ಆಹಾರದ ರುಚಿ ಹೊಂದಿ ಸುಖವಾಗಿ ಬೆಳೆಯುವುದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ವ್ಯಾಪಾರಿಗಳಲ್ಲೂ ಸಿಕ್ಕುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

೧೯೦೯ನೇ ಜೋವರ್ ಸ್ಟಾಂಡರ್ಡ್ ಕನ್ನಡ ಸ್ಕೂಲ್ಸ್

11 3

ಮಹಾರಾಜಾ ಕಾಲೇಜು ಕನ್ನಡ ಪಂಡಿತರು ಮ|| ರಾ|| ಆರ್ ರಂಗಸ್ವಾಮಿ ಗಳವರಿಂದ ಪರಿಷ್ಕರಿಸಲ್ಪಟ್ಟಿದು ... ಕ್ಕೆ ... ಕ್ಕೆ ... ಕನ್ನಡ ಪುಸ್ತಕ ... ವರ್ಷಕ್ಕೆ ... ನಾಗಿ ... ಮಾರಲ್ಪಡುತ್ತವೆ ... ಪುಸ್ತಕಗಳಿಗಾಗಿ ಪ್ರೈಸ್ ಲಿಸ್ಟನ್ನು ತರಿಸಿಕೊಳ್ಳಿ ವಿಳಾಸ— ಶೆಟ್ಟಿಹಳ್ಳಿ ಪ್ರಾವಿಜನ್ ... ಮೈಸೂರು

ಲೋನ್ ಸ್ ಚರಿತ್ರೆ, ಭೂಗೋಳ

14 1

ಈ ಎರಡು ಚರಿತ್ರೆ ಮತ್ತು ಭೂಗೋಳವು ಜನರಲ್ ಎಂಬ ಪುಸ್ತಕಗಳು ಇವುಗಳಲ್ಲಿ ... ಪರೀಕ್ಷೆಗಳಿಗೆ ... ಎಲ್ಲಾ ಮುಖ್ಯಾಂಶಗಳೂ ... ಅವುಗಳನ್ನು ... ಪ್ರಶ್ನೆಗಳಿಗೆ ... ಮುಖ್ಯವಾಗಿ ತೇರ್ಗಡೆ ಹೊಂದುವುದಲ್ಲದೆ ... ಸಕೆಂಡರಿಯಲ್ಲಿ ... ಚರಿತ್ರೆ ... ಭೂಗೋಳ ... ಕಳುಹಿಸಲಾಗುವುದು

ಚರಿತ್ರೆ ನೋಟ್ಸ್ ಕ್ರಯ ೮ ... ಭೂಗೋಳ ನೋಟ್ಸ್ ಕ್ರಯ ೧೦ ... ಎರಡು ಪುಸ್ತಕಗಳನ್ನು ಒಟ್ಟಾಗಿ ... ತರಿಸಿದರೆ ... ಗುತ್ತೆ ನಮ್ಮ ವಿಳಾಸ —

... ರಂಗಪ್ಪ ಹೆಡ್ ಮಾಸ್ತರ್ ವೆಸ್ಲಿಯನ್ ಮಿಷನ್ ಸ್ಕೂಲ್ ಬಾಯ್ಸ್ ಸ್ಕೂಲ್ ...

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

... ಈಗ ನಾನಾ ತರಹದ ... ಬಟ್ಟೆ ... ಕಾಟನ್ ... ಟೋಪಿಗಳು ... ಈ ಬಟ್ಟೆಗಳನ್ನು ... ಆಗ್ಗೆ ಈ ಬಟ್ಟೆಗಳ ಪ್ರಯೋಜನ ... ಗೊತ್ತಾಗುವುದು ... ಬೆಲೆ ... ಟೋಪಿಗಳು ಕೂಡ ನಮ್ಮಲ್ಲಿ ... ಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ ಕ್ರಯ ಒಂದಾಣೆ

೧೯೦೯ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಮೈಸೂರು ಹೊಸ ಅರಮನೆಯ ಮುಂಭಾಗಿಲು ಮೈಸೂರು ಪಬ್ಲಿಕ್ ಆಫೀಸ್ ಕಟ್ಟಡ ಮೈಸೂರು ಜೂಬಿಲಿ ಹಾಲ್ ಕಟ್ಟಡ ನೀಲಗಿರಿಗೆ ಹೋಗುವ ರೈಲ್ ಮಾರ್ಗವು, ಮತ್ತು ದೇವರಾಯದುರ್ಗ ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ—ಇದೇ ಜನವರಿ ಮಾರ್ಚಿ ಒಳಗಾಗಿ ವೃತ್ತಾಂತ ಪತ್ರಿಕೆಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಕಸಟ್ಟೆ ಕೊಡುವೆವು ಅನಂತರ ಹಣಕೊಟ್ಟರೂ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಕೂಡಲೆ ಬರೆಯಿರಿ ವಿಳಾಸ—

ಮ್ಯಾನೇಜರ್ ವೃತ್ತಾಂತ ಪತ್ರಿಕೆ ಮೈಸೂರು

ವೃತ್ತಾಂತ ಪತ್ರಿಕೆ.

೧.—

ಶಕೆ ೧೮೩೦ ನೇ ಇಸವಿ ಜನವರಿ ತಾ. ೨೧ ನೇ ಗುರುವಾರ

ಕ್ಷಾಮನಿವಾರಣೆಯ ಕಾರ್ಯಗಳು.

ಬೇಸಿಗೇ ಕಾಲವು ಸಮೀಪಿಸುತ್ತಿರುವದು ಮೈಸೂರು ಸಂಸ್ಥಾನದಲ್ಲಿ ಕಾಲಸ್ಥಿತಿಯು ಇನ್ನೂ ಚೆನ್ನಾಗಲಿಲ್ಲ. ಕಳೆದ ಡಿಸೆಂಬರ್ ತಿಂಗಳಲ್ಲಿ ಬಂದ ಮಳೆಗಳಿಂದ ಹಲವು ಸ್ಥಳಗಳಲ್ಲಿ ದನಗಳ ಹುಲ್ಲಿನ ಸಂಗಿಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಯಿತು. ಆದರೆ ಪ್ರಜೆಗಳ ಕಷ್ಟಸ್ಥಿತಿಯನ್ನು ಅದು ಕಡಮೆಮಾಡಲು ಸಾಧ್ಯವಾಗಲಿಲ್ಲ. ಈ ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಜೀವನ ನಡೆಯುವುದು ಕಷ್ಟವಾಗಿರುತ್ತದೆ. ಅದರಲ್ಲೂ ತುಮಕೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳಿಗೆ ಈ ಡಿಸೆಂಬರಿನ ಮಳೆಯೂ ಕೂಡ ಬಗೆದೆ ಜನರ ಕಷ್ಟವನ್ನು ಜಾಸ್ತಿ ಹೆಚ್ಚಿಸಿರುತ್ತದೆ. ಕಳೆದ ಎರಡು ತಿಂಗಳಿಂದಲೂ ಗವರ್ನ್‌ಮೆಂಟಿನವರು ಪ್ರಜೆಗಳ ಕಷ್ಟನಿವಾರಣೆಗಾಗಿ ನಾನಾತರದ ಹುಕುಮುಗಳನ್ನು ಕೊಟ್ಟಿರುವರು ಸಂಸ್ಥಾನದಲ್ಲಿರುವ ಸಮಸ್ತ ಸರ್ಕಾರಿ ಸಣ್ಣ ನೌಕರರುಗಳಿಗೂ ಕ್ಷಾಮದ ಅಲೋವೆನ್ಸನ್ನು ಸ್ಯಾಂಕ್ಷನ್ ಮಾಡಿದರು. ಗ್ರಾಮಾಧಿಕಾರಿಗಳು ಅಂದರೆ ಪಟೇಲ್ ಶಾನುಭೋಗರಿಗೆ ಅವರ ಪೋಟಿಗೀ ಬಾಬಿನಲ್ಲಿ ಅಡ್ವಾನ್ಸು ಕೊಡಬಹುದೆಂದು ಹುಕುಂ ಕೊಟ್ಟಿದಾರೆ. ನೇಯ್ಗೇ ಮೊದಲಾದ ಕಸಬುಗಳನ್ನು ನಡಿಸುವಂಥವರಿಗೆ ಅಡ್ವಾನ್ಸು ಕೊಡುವುದಕ್ಕೆ ೨೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದರು. ತತ್ಕಾಲಾಗಿ ಮಾಫಿ ಸಾಗುವಳಿಮಾಡುವುದಕ್ಕೂ ಕೆರೆ ಭಾವಿಗಳನ್ನು ತೋಡಿಕೊಳ್ಳುವುದಕ್ಕೂ ಇತರ ವಿಧವಾಗಿ ವ್ಯವಸಾಯಗಾರರಿಗೆ ಸಹಾಯಮಾಡುವುದಕ್ಕೂ ಮೂರು ನಾಲ್ಕು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುವರು. ಇಷ್ಟೇ ಅಲ್ಲ; ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಕೆರೆಕಟ್ಟೆಗಳನ್ನು ದುರಸ್ತು ಮಾಡುವಂತೆ ಹುಕುಂ ಕೊಟ್ಟು ರಿಲೀಫ್ ಕಾಮಗಾರಿಯನ್ನು ಪ್ರಾರಂಭಿಸಿರುತ್ತಾರೆ. ಇದಲ್ಲದೆ ಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಲ್ಲೂ ನಿರ್ಗತಿಕರಾಗಿಯೂ, ಕೆಲಸ ಮಾಡಲಾರದವರಾಗಿಯೂ ಇರುವಂಥಾ ಮುದಿ ಮುದುಕಿಗಳಿಗೂ ಘೋಷಾ ಸ್ತ್ರೀಯರೇ ಮೊದಲಾದವರಿಗೂ ಜೀವನಕ್ಕೆ ಅನುಕೂಲಮಾಡಿಕೊಡಬೇಕೆಂದು ಡೆಪ್ಯುಟಿ ಕಮಿಷನರುಗಳಿಗೆಲ್ಲಾ ಹುಕುಂ ಕೊಟ್ಟಿರುತ್ತಾರೆ.

ಪ್ರಜೆಗಳಿಗೆ ಈ ಕಷ್ಟದೆಸೆಯು ನಿವಾರಣೆಯಾಗಬೇಕಾದರೆ ಸರ್ಕಾರಿ ಅಧಿಕಾರಿಗಳು ವಿವೇಕಪೂರ್ವಕವಾದ ಏರ್ಪಾಡುಗಳನ್ನು ಮಾಡಿ, ಮುತುವರ್ಜಿಯಿಂದ ಮೇಲ್ವಿಚಾರಣೆ ನೋಡಿಕೊಳ್ಳಬೇಕಾದದ್ದು ಪರಮಾವಶ್ಯವಾಗಿರುತ್ತದೆ. ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿರುವ ಹಣವನ್ನು ವಿನಿಯೋಗಿಸುವ ಭಾಗದಲ್ಲಿ ಡಿಸ್ಟ್ರಿಕ್ಟಿನ ಮತ್ತು ತಾಲ್ಲೂಕಿನ ಅಧಿಕಾರಿಗಳು ಕರುಣಾರ್ದ್ರಹೃದಯರಾಗಿಯೂ ಸ್ವತಂತ್ರರಾಗಿಯೂ ನಡೆಯದಿದ್ದಲ್ಲಿ ಗವರ್ನ್‌ಮೆಂಟಿನವರ ಉದ್ದೇಶವು ಸಾರ್ಥಕವಾಗಲಾರದು.

ನೀತಿ ಅಥವಾ ನ್ಯಾಯ

ಮನುಷ್ಯರು ಮೆಚ್ಚತಕ್ಕ ಶೀಲಸ್ವಭಾವಗಳಲ್ಲಿ ನೀತಿಯ ಗುಣವು ಪ್ರಾಧಾನ್ಯವಾದುದು. ಪ್ರಾಮಾಣಿಕತೆಗೂ ನೀತಿಗೂ ಯಾವ ವ್ಯತ್ಯಾಸವೂ ಇರುವುದಿಲ್ಲ. ನೀತಿಯನ್ನರಿತಿರುವ ಮನುಷ್ಯನು ಯಾವ ವ್ಯಾಜ್ಯದಲ್ಲಾದರೂ ನ್ಯಾಯಾನ್ಯಾಯಗಳನ್ನರಿತು ಮಾತನಾಡುವನು. ಯೋಗ್ಯವಾದ ನಡತೆಗೆ ಮೆಚ್ಚಿಗೆಯನ್ನೂ ಅಯೋಗ್ಯವಾದುದಕ್ಕೆ ದಂಡನೆಯನ್ನೂ ನೀತಿಪರನು ಸಲ್ಲಿಸುವನು.

ಸರ್ಕಾರದ ಉದ್ಯೋಗದಲ್ಲಿರುವ ನ್ಯಾಯಾಧೀಶರೇ ಮೊದಲಾದವರು ನೀತಿಯ ಗುಣವನ್ನು ಅತ್ಯಾವಶ್ಯಕವಾಗಿ ಪಡೆದಿರಬೇಕು. ಅವರಲ್ಲಿ ಇಂಥಾ ಗುಣವಿಲ್ಲದಿದ್ದರೆ ಯೋಗ್ಯರೂ ನಿರಪರಾಧಿಗಳೂ ಮ್ಯಾಗಿತನೇ ಬದುಕಬಹುದು.

ನ್ಯಾಯಾಧೀಶರು ಮಾತ್ರವಲ್ಲದೆ ಸಾಧಾರಣ ಜನರೂ ಕೂಡ ಈ ನೀತಿಯ ಗುಣವನ್ನು ಹೆಚ್ಚಾಗಿ ಪಡೆದಿರಬೇಕು. ಯಾವ ವಿಷಯದಲ್ಲಾದರೂ ಜನರು ಚೆನ್ನಾಗಿ ಯೋಚಿಸಿ ಮಾತನಾಡಬೇಕೇ ಹೊರತು ತಮ್ಮ ಇಷ್ಟ ಬಂದಹಾಗೆ ಮಾತನಾಡುವುದು ಯೋಗ್ಯವಲ್ಲವು. ತಮಗಿಷ್ಟವಿಲ್ಲದವರನ್ನು ದೂಷಿಸುವುದೂ ತಮಗಿಷ್ಟರಿರುವವರನ್ನು ಶ್ಲಾಘಿಸುವುದೂ ಜನರಲ್ಲಿ ರೂಢಿಯಾಗಿರುತ್ತದಷ್ಟೆ. ಇಂಥಾ ಸ್ವಭಾವವು ದೇಶೋನ್ನತಿಗೆ ಹಾನಿಕರವೇ ಹೊರತು ಮತ್ತೇನೂ ಅಲ್ಲ. ಯಾವ ಜನಾಂಗದವರು ನೀತಿಪರರಾಗಿರುತ್ತಾರೋ ಅವರೇ ಅಭ್ಯುದಯಕ್ಕೆ ಬರುವವರಾಗಿರುತ್ತಾರೆ. ಅವರೇ ಸಮರ್ಥರು.

ನೀತಿಯ ಗುಣವು ಇಷ್ಟು ವಿಶೇಷವಾಗಿರುವಲ್ಲಿ ನಾವು ಅದನ್ನು ಪಡೆದುಕೊಳ್ಳುವ ವಿಧಾನವಾವುದು? ಪ್ರಕೃತಾ ನಾವು ಒಂದು ಸಂಗತಿಯನ್ನು ಬಹು ವಿಶೇಷವಾಗಿ ಯೋಚಿಸಬೇಕಾಗಿದೆ. ಅದೇನೆಂದರೆ ದೇವರು ನೀತಿಪರನಾಗಿರುತ್ತಾನೆಯೆ? ನಮ್ಮನ್ನು ಸೃಷ್ಟಿಸಿದ ಭಗವಂತನು ನ್ಯಾಯಾನ್ಯಾಯಗಳನ್ನರಿತು ಧರ್ಮವಾದುದನ್ನೇ ಸಾಧಿಸತಕ್ಕವನೆಂದು ನಾವು ತಿಳಿದುಕೊಳ್ಳಬೇಕು. ಕ್ರೈಸ್ತಮತದ ವೇದಗ್ರಂಥದಲ್ಲಿ ಈ ರೀತಿಯಾಗಿ ಬರೆದಿರುವುದು — "ಲೋಕೇಶನಾದ ದೇವರು ಜಗದಾದಿಯಿಂದ ಜಗದಂತ್ಯದವರೆವಿಗೂ ತನ್ನ ಸೃಷ್ಟಿಗಳಾದ ಮನುಷ್ಯರನ್ನು ಪಾಲಿಸುತ್ತಿರುವನು. ಆತನ ಅಧಿಕಾರವು ನ್ಯಾಯಕ್ಕಾಗಿ ಸ್ಥಾಪಿಸಲ್ಪಟ್ಟಿರುತ್ತದೆ. ಆತನೊಬ್ಬನೇ ಭೂಲೋಕಕ್ಕೆ ನ್ಯಾಯತೀರಿಸುವವನು. ಆತನ ನ್ಯಾಯ ತೀರ್ಪಿನಲ್ಲಿ ಯಾವ ವಿಧವಾದ ಪಕ್ಷಪಾತವೂ ಇರುವುದಿಲ್ಲ. ದಿಕ್ಕಿಲ್ಲದವರಿಗೆ ಆತನು ದುರ್ಗದೋಪಾದಿಯಲ್ಲಿರುತ್ತಾನೆ. ಕಷ್ಟಕಾಲಗಳಲ್ಲಿ ಆತನು ತನ್ನ ಭಕ್ತರಿಗೆ ಆಶ್ರಯಸ್ಥಾನವಾಗಿರುವನು." ಆದ್ದರಿಂದ ದೇವರು ಪರಮನ್ಯಾಯಾಧಿಪತಿಯೆಂದು ಕಂಡುಬರುತ್ತದಲ್ಲವೇ? "ಆತನೊಬ್ಬನೇ ನ್ಯಾಯಾಧೀಶನಾಗಿರುತ್ತಾನೆ. ಆತನನ್ನು ಯಾರೂ ವಂಚಿಸಲಾರರು. ಆತನಿಗೆ ಮರೆಯಾಗಿರುವ ಗುಟ್ಟು ಯಾವುದೂ ಇಲ್ಲ. ಆತನ ಪವಿತ್ರನೇತ್ರಗಳು ಎಲ್ಲವನ್ನೂ ನೋಡುತ್ತವೆ.

ನೀವು ಮಾಡತಕ್ಕ ಕೆಲಸವನ್ನು ನೋಡಿಕೊಳ್ಳಿರಿ ಯಾಕಂದರೆ ನೀವು ಮಾಡುವುದು ಮನುಷ್ಯರಿಗೋಸ್ಕರವಲ್ಲ, ನ್ಯಾಯತೀರಿಸುವ ಕಾರ್ಯದಲ್ಲಿ ನಿಮ್ಮ ಸಂಗಡ ಇರುವ ದೇವರಿಗೋಸ್ಕರ ನ್ಯಾಯತೀರಿಸುತ್ತೀರಿ. ಆದಕಾರಣ ದೇವರ ಭಯವು ನಿಮ್ಮ ಮೇಲೆ ಇರಲಿ. ನೀವು ಜಾಗರೂಕರಾಗಿದ್ದು ಕೆಲಸವನ್ನು ನಡಿಸಿರಿ. ಯಾಕಂದರೆ ದೇವರ ಬಳಿಯಲ್ಲಿ ಅನ್ಯಾಯವಾದರೂ ಮುಖದಾಕ್ಷಿಣ್ಯವಾದರೂ ಲಂಚ ತೆಗೆದುಕೊಳ್ಳುವುದಾದರೂ ಇಲ್ಲ." ಅನೇಕ ಶತಮಾನಗಳ ಹಿಂದೆ ಬದುಕಿದ್ದ ಒಬ್ಬ ಮಹಾ ಪುರುಷನು ತನ್ನ ದೇಶದವರ ಗುಣ ನಡತೆಗಳನ್ನು ನೋಡಿ ಅವರು ಆಚರಿಸುತ್ತಿದ್ದ ಧೂಪಾರತಿಗಳಿಂದಲೂ ಬಲಿಗಳಿಂದಲೂ ಕಾಣಿಕೆಗಳಿಂದಲೂ ಯಾವ ಪ್ರಯೋಜನವಾದರೂ ಆಗುವದಿಲ್ಲವೆಂದು ತಿಳಿಸಿದನು. ಯಾಕಂದರೆ ಅವರು ಕೆಟ್ಟವರಾಗಿದ್ದರು. ಅವರ ನಡತೆಯು ದೇವರಿಗೆ ಅಸಹ್ಯವಾಗಿದ್ದಿತು. ಅವರ ಆಚಾರವು ಯೋಗ್ಯವಾದ ನಡತೆಯಿಂದ ಕೂಡಿಲ್ಲದೇಹೋದರೆ ಅದರಿಂದ ಯಾವ ಪ್ರಯೋಜನವಾದರೂ ಆಗುವುದಿಲ್ಲವೆಂದು ಆತನು ಖಂಡಿತವಾಗಿ ತಿಳಿಸಿದನು. ಆತನು ದೇವರು ಈ ರೀತಿಯಾಗಿ ಅಪ್ಪಣೆಕೊಡುತ್ತಾನೆಂದು ತಿಳಿಸುತ್ತಾನೆ— "ಇನ್ನು ವ್ಯರ್ಥವಾದ ಕಾಣಿಕೆಗಳನ್ನು ತರಬೇಡಿರಿ. ಧೂಪವು ನನಗೆ ಅಸಹ್ಯವಾಗಿದೆ. ಅಮಾವಾಸೆ, ಸಬ್ಬತು, ಸಭೆಯ ಕೂಟಗಳನ್ನು ನಾನು ಸಹಿಸೆನು, ನಿಮ್ಮ ಅಮವಾಸೆಗಳನ್ನೂ ನಿಮ್ಮ ಹಬ್ಬಗಳನ್ನೂ ನನ್ನ ಪ್ರಾಣವು ಹಗೆಮಾಡುತ್ತದೆ. ಅವು ನನಗೆ ಭಾರವಾಗಿವೆ. ಅವುಗಳನ್ನು ಸಹಿಸಿಕೊಂಡು ದಣಿದಿದ್ದೇನೆ. ನೀವು ನಿಮ್ಮ ಕೈಗಳನ್ನು ನನ್ನ ಕಡೆಗೆ ನೀಡಲು ನನ್ನ ಕಣ್ಣುಗಳನ್ನು ನಿಮಗೆ ಮರೆಮಾಡುವೆನು. ನೀವು ಬಹಳ ಪ್ರಾರ್ಥನೆಮಾಡಿದರೂ, ನಾನು ಕೇಳುವವನಲ್ಲ. ನಿಮ್ಮ ಕೈಗಳು ಕೊಲೆಪಾತಕದಿಂದ ತುಂಬಿರುವೆ. ಪಾವನರಾಗಿರಿ, ನಿರ್ಮಲಮಾಡಿಕೊಳ್ಳಿರಿ, ನಿಮ್ಮ ಕ್ರಿಯೆಗಳ ಕೆಟ್ಟತನವನ್ನು ನನ್ನ ಕಣ್ಣುಗಳ ಮುಂದಿನಿಂದ ತೊಲಗಿಸಿರಿ, ಕೆಟ್ಟದ್ದನ್ನು ನಿಲ್ಲಿಸಿಬಿಡಿರಿ, ಒಳ್ಳೆಯದನ್ನು ಮಾಡ ಕಲಿತುಕೊಳ್ಳಿರಿ, ನ್ಯಾಯವನ್ನು ಹುಡುಕಿರಿ, ಕುಗ್ಗಿದವನನ್ನು ಆದರಿಸಿರಿ, ದಿಕ್ಕಿಲ್ಲದವರಿಗೆ ನ್ಯಾಯತೀರಿಸಿರಿ, ವಿಧವೆಯ ವ್ಯಾಜ್ಯವನ್ನು ನಡಿಸಿರಿ."

ದೇವರು ನೀತಿಪರನಾಗಿರುತ್ತಾನೆಂಬ ನಂಬಿಕೆಯೇ ಮನುಷ್ಯರೊಳಗಿರುವ ನೀತಿಗೆ ಕಾರಣಭೂತವಾಗಿರುತ್ತದೆ. ಯಾರು ದೇವರು ನಿರ್ಗುಣನಾಗಿದ್ದುಕೊಂಡು ನ್ಯಾಯಾನ್ಯಾಯಗಳ ತಿಳುವಳಿಕೆಗೆ ಮೀರಿದವನಾಗಿದ್ದಾನೆಂದಾಗಲೀ ಅಥವಾ ದೇವರು ಅನ್ಯಾಯ ನಡಿಸುವುದಕ್ಕೂ ಹಿಂತೆಗೆಯುವವನಲ್ಲವೆಂದಾಗಲಿ ಭಾವಿಸುತ್ತಾನೋ ಅಂಥವನು ನೀತಿವಂತನಾಗಿ ನಡೆಯುವದಿಲ್ಲ. ಆದ್ದರಿಂದ ಮನುಷ್ಯರು ದೇವರ ವಿಷಯವಾಗಿ ಕಲ್ಪಿಸಿರುವ ಎಲ್ಲಾ ವಿಧವಾದ ಅಬದ್ಧಗಳನ್ನು ತ್ಯಜಿಸುವುದು ಧರ್ಮವಾಗಿದೆ. ಪ್ರತಿಯೊಬ್ಬನ ಕೆಲಸವನ್ನು ನೋಡಿ ಪಕ್ಷಪಾತವಿಲ್ಲದೆ ತೀರ್ಪು ಮಾಡುವಾತನಾದ ನಮ್ಮ ಪರಲೋಕ ಭಗವಂತನನ್ನು ನಾವೆಲ್ಲರೂ ಪ್ರೀತಿಸಿ ಆರಾಧಿಸುವುದು ನಮ್ಮ ಕರ್ತವ್ಯವಾಗಿರುತ್ತದೆ.

ಬಹುದೇಶದ ವೃತ್ತಾಂತಗಳು.

ಶ್ರೀ ವೇಲ್ಸ್ ಯುವರಾಜರವರು ಪರಿವಾರ ಸಹಿತ ಕಳೆದ ಸೋಮವಾರ ಬೆಳಗಿನ ಝಾಮದಲ್ಲಿ ಜಪಾನ್ ರಾಜ್ಯವನ್ನು ಕ್ಷೇಮವಾಗಿ ಸೇರಿದರೆಂದು ಅಲ್ಲಿಂದ ತಂತೀ ವರ್ತಮಾನ ಬಂದಿದೆ.

ಶ್ರೀಮನ್ಮಹಾರಾಜರವರು ಇಷ್ಟರಲ್ಲೇ ಬೆಂಗಳೂರಿನಿಂದ ಹೊರಟು ಕೆಲವು ಡಿಸ್ಟ್ರಿಕ್ಟುಗಳ ಮೇಲೆ ಸಂಚಾರಮಾಡಿಕೊಂಡು ಬಂದು, ಮದರಾಸಿಗೆ ಪ್ರಯಾಣಮಾಡುವರೆಂದು ಕೇಳುತ್ತೇವೆ.

ಶಿವಮೊಗ್ಗಾ ತಾಲ್ಲೂಕಿಗೆ ಸೇರಿದ ಸಿದ್ಧಾರ್ಥ ಹಳ್ಳಿಯ ಮ್ಯಾಂಗನೀಸ್ ಗಣಿಯಲ್ಲಿ ಮೇಲಣ ಮಣ್ಣು ಕುಸಿದುಬಿದ್ದು ಸುಮಾರು ಎಂಟು ಮಂದಿ ಕೂಲಿಯಾಳುಗಳು ಪ್ರಾಣಕಳೆದುಕೊಂಡರೆಂದು ತಿಳಿಯುವುದು.

ಸೀನಿಯರ್ ಅ. ಕಮಿಷನರ್ ಮಿ. ಕೆ. ಚಾಂಡಿಯವರು ಹೈದರಾಬಾದ್ ಸಂಸ್ಥಾನದಲ್ಲಿ ಐದು ವರುಷ ಕಾಲ ಸ್ಪೆಷಲ್ ಸರ್ವೆ ಸೆಟ್ಲ್‌ಮೆಂಟ್ ಆಫೀಸರಾಗಿ ಕೆಲಸ ಮಾಡಿ ವಾಪಸು ಬರುವವರಾಗಿದಾರೆಂದು ಪ್ರಕಟವಾಗಿದೆ.

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯಲ್ಲಿ ವಿದ್ಯುಚ್ಛಕ್ತಿಯ ದೀಪವು ಹತ್ತಿಕೊಳ್ಳುವದರಲ್ಲಿ ಒಂದು ಘಂಟೆಹೊತ್ತು ತಡವಾಯಿತು. ಶಿವಸಮುದ್ರದಿಂದ ಶಕ್ತಿಯು ಬರುವ ಸ್ವಲ್ಪ ಅಡಚಣೆಯಾಗಿತ್ತು.

ನಮ್ಮ ಮಹಾಮಾತೃಶ್ರೀ ಯವರು ಕಳೆದ ಶುಕ್ರವಾರ ಸಾಯಂಕಾಲ ಮದರಾಸ್ ಪಟ್ಟಣದಲ್ಲಿ ಗವರ್ನರವರ ಬಂಗಲೆಗೆ ದಯಮಾಡಿ, ಅವರ ಪತ್ನೀಯವರ ಕೂಡ ಕೆಲಕಾಲ ಸಂಭಾಷಣೆ ಮಾಡಿಕೊಂಡು ಬಂದರೆಂದು ತಿಳಿದು ಬಂದಿದೆ.

ಕಳೆದ ವರುಷ ಬೆಂಗಳೂರು ಸರ್ಕಾರಿ ಪೋಲೀಸ್ ಸ್ಕೂಲಿನಲ್ಲಿ ತರಬೇತಾದ ವಿದ್ಯಾರ್ಥಿಗಳ ಪೈಕಿ ಇನ್‌ಸ್ಪೆಕ್ಟರ್ ಪರೀಕ್ಷೆಯಲ್ಲಿ ೧೧ ಮಂದಿಯೂ, ಸ್ಟೇಷನ್ ಹೌಸ್ ಆಫೀಸರ್ ಪರೀಕ್ಷೆಯಲ್ಲಿ ೩೯ ಮಂದಿಯೂ ತೇರ್ಗಡೆಹೊಂದಿರುತ್ತಾರೆ.

ತಿಪಟೂರು ತಾಲ್ಲೂಕು ಕಾಡನೂರು ಮೊಬಿನಕೆರೆ ಗ್ರಾಮದಲ್ಲಿದ್ದ ಮುದ್ದೇಗೌಡನ ಮಗ ಸಿದ್ದೇಗೌಡನೆಂಬುವನು ಮನೆ ಬಿಟ್ಟು ಹೋಗಿ ಮೂರು ವರುಷಗಳಾದವೆಂತಲೂ ಇದುವರೆಗೆ ಪತ್ತೆ ಆಗಲಿಲ್ಲವೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಈಚೆಗೆ ಶಿವಮೊಗ್ಗಾ ಟೌನಿನಲ್ಲಿ ಚಿರತೆಗಳು ಸಂಚರಿಸುತ್ತಾ ಪ್ರಜೆಗಳಿಗೆ ತುಂಬಾ ಗಾಬರಿಯನ್ನುಂಟುಮಾಡಿರುತ್ತವ. ಫಾರೆಸ್ಟ್ ಸೂಪರಿಂಟೆಂಡರಾದ ಮೆ|| ಆರ್ ಫ್ರಾನ್ಸಿಸ್ ರವರು ಎರಡು ಚಿರತೆಗಳನ್ನು ತಮ್ಮ ಬಂಗಲೆಯ ಬಳಿ ಗುಂಡಿನಿಂದ ಹೊಡೆದು ಕೊಂದಿರುತ್ತಾರೆ.

ರಾಜಧಾನಿಯ ಕೋಟೆ ಹೂವಿನಂಗಡಿ ಬೀದಿಯಲ್ಲಿರುವ ಸ್ವದೇಶೀ ಸ್ಟೋರ್ [illegible]

ಪ್ರತಿಯನ್ನು ಕಳುಹಿಸಿ ಕೊಟ್ಟಿದಾರೆ. ಇದರಲ್ಲಿ ಹಬ್ಬಗಳೂ ಸರ್ಕಾರಿ ರಜಾ ದಿನಗಳೂ ಪ್ರಿಂಟಾಗಿರುತ್ತವೆ.

ಅರಮನೆ ಕರೋಹಟ್ಟಿಯಲ್ಲಿ ದನಗಳ ಪಿಡುಗುರೋಗವು ವ್ಯಾಪ್ತವಾಗಿ ೪೦—೫೦ ರಾಸುಗಳು ಸಾಯುತ್ತಿವೆ. ಪಶುವೈದ್ಯದ ಇನ್‌ಸ್ಪೆಕ್ಟರ್ ಮೆ|| ಎಸ್. ನರಸಿಂಹಯ್ಯಂಗಾರ್ಯರು ಬಂದು ರೋಗ ತಗಲಿದ ದನಗಳನ್ನು ನೋಡಿ ಚಿಕಿತ್ಸೆಯನ್ನು ಹೇಳಿಕೊಟ್ಟು ವಾಪಸು ಹೋದರು. ಈ ರೋಗದ ದೆಸೆಯಿಂದ ರಾಜಧಾನಿಯಲ್ಲಿ ಹಲವು ರಾಸುಗಳು ಕಾಲವಾದವು.

ಬೆಂಗಳೂರಿನಲ್ಲಿರುವ ಗವರ್ನ್‌ಮೆಂಟ್ ಕಾಲೇಜಿಯೇಟ್ ಪಾಠಶಾಲೆಯಲ್ಲಿ ಈ ಸಲ ೫೧ ಮಂದಿ ತೇರ್ಗಡೆಹೊಂದಿರುತ್ತಾರೆಂದೂ, ಮೆ|| ಗಳಾದ ಶ್ರೀ ಕೃಷ್ಣಯ್ಯಂಗಾರ್ಯ, ವೈ. ಶ್ರೀನಿವಾಸರಾಯರು, ಎನ್. ಶ್ರೀ ಕೃಷ್ಣಯ್ಯಂಗಾರ್ಯ, ಶ್ರೀ ರಾಮಸ್ವಾಮಿ ಐಯ್ಯಂಗಾರ್ಯ, ಎಂ. ಜಿ. ರಂಗಯ್ಯನವರು ಆ ವಿದ್ಯಾರ್ಥಿಗಳನ್ನು ಪರೀಕ್ಷೆ ಮಾಡಿದರೆಂದೂ ರೆವಿನ್ಯೂ ಕಮಿಷನರವರು ತಿಳಿಸಿದಾರೆ.

ಶ್ರೀ ರಾಮಕೃಷ್ಣ ಮಿಷನ್ನಿನ ಒಂದು ಶಾಖೆಯು ಬೆಂಗಳೂರು ಬಸವನಗುಡಿಯಲ್ಲಿ ಕಟ್ಟಿ ಸಿದ್ಧವಾಯಿತು. ಅದನ್ನು ಪ್ರತಿಷ್ಠೆ ಮಾಡುವುದಕ್ಕೆ ಆ ಮಿಷನ್ನಿನ ಪ್ರೆಸಿಡೆಂಟರಾದ ಬ್ರಹ್ಮಾನಂದ ಸ್ವಾಮಿಯವರು ನೆನ್ನೆ ಬೆಂಗಳೂರಿಗೆ ಬರುವವರಾಗಿದ್ದರು. ದಿವಾನ್ ಮೆ|| ಮಾಧವರಾಯರು ಅವರಿಗೆ ಸುಸ್ವಾಗತವನ್ನು ಬಯಸಿ, ಆ ಮಠವನ್ನು ಆ ಸ್ವಾಮಿಯವರಿಗೆ ವಹಿಸುವಂತೆ ಏರ್ಪಾಡಾಗಿತ್ತು.

ಹೈದರಾಬಾದ್ ಸಂಸ್ಥಾನದ ರೆಸಿಡೆಂಟರವರಿಂದ ನಮಗೆ ಬರೆದುಬಂದಿರುವ ಕಾಗದದ ಅಭಿಪ್ರಾಯವೇನೆಂದರೆ,—ಹೈದರಾಬಾದಿನಲ್ಲಿ ಪ್ರವಾಹದ ದೆಸೆಯಿಂದಾದ ಕಷ್ಟನಿವಾರಣಾರ್ಥವಾಗಿ ಮಧುಗಿರಿ ತಾಲ್ಲೂಕಿನ ಗ್ರಾಮಾಂತರದ ಪ್ರಜೆಗಳು ಕೂಡಿಸಿ ಕಳುಹಿಸಿಕೊಟ್ಟಿರುವ ರೂ. ೬೯—೯—೦ ಯನ್ನು ಬ್ರಿಟಿಷ್ ರೆಸಿಡೆಂಟರವರು ಸಂತೋಷದಿಂದ ಅಂಗೀಕರಿಸಿ ಅವರನ್ನೆಲ್ಲಾ ವಂದಿಸಿರುತ್ತಾರೆ ಎಂಬುದೇ.

ಈ ಸಂಸ್ಥಾನದ ಕಂಟ್ರೋಲರಾದ ಮೆ|| ಜಿ. ಎಸ್. ಚಕ್ರವರ್ತಿಯವರು ಕಳೆದ ವಾರ ರಾಜಧಾನಿಗೆ ಬಂದು, ಲೇಟ್ ಸರ್ ಶೇಷಾದ್ರಿ ಐಯರವರ ಬಂಗಲೆಯಲ್ಲಿ ೬-೭ ದಿನ ಇದ್ದು, ಅಲ್ಲಿನ ಅರಮನೆ ಮೊದಲಾದ ಎಲ್ಲಾ ಭಾಗಗಳನ್ನೂ ನೋಡಿಕೊಂಡು, ಮೊನ್ನೆ ಸೋಮವಾರ ಮೈಸೂರು ಡಿಸ್ಟ್ರಿಕ್ಟ್ ಖಜಾನೆಯನ್ನು ತನಿಖೆ ಮಾಡಿದರು. ಅವರು ನೆನ್ನೆ ಬೆಂಗಳೂರಿಗೆ ಪ್ರಯಾಣ ಮಾಡುವವರಾಗಿದ್ದರು.

ಕುಲೀನ್‌ಪೇಟೆ ಸಬ್ ಡಿವಿಜನ್ ಆಫೀಸರಾಗಿದ್ದ ಮೆ|| ಟಿ. ಚೊಕ್ಕಣ್ಣನವರನ್ನು ಬೆಂಗಳೂರಿಗೆ ವರ್ಗಮಾಡಿದ್ದು ಅಲ್ಲಿನ ಪ್ರಜೆಗಳಲ್ಲಿ ವಿಷಾದವುಂಟಾಗಿ, ಅವರನ್ನು ಕುಲೀನ್ ಪೇಟೆಯಲ್ಲೇ ಇಟ್ಟಿರಬೇಕೆಂದು ಪ್ರಜೆಗಳ ಮುಖಂಡರು ಗವರನ್‌ಮೆಂಟಿನವರನ್ನು ಪ್ರಾರ್ಥಿಸಿಕೊಳ್ಳುವವರಾಗಿದಾರೆ. ಇದಕ್ಕಾಗಿ ಕೆಲವರು ಅಲ್ಲಿಂದ ಬೆಂಗಳೂರಿಗೆ ಹೋಗಿ ದಿವಾನ್‌ರವರನ್ನು ಕಂಡು ಬರುವುದರಲ್ಲಿರುವಂತೆ ಕೇಳುತ್ತೇವೆ.

ಚಾಮರಾಜ ನಗರದ ತೊರೆಯರ ಬೀದಿಯಲ್ಲಿ ಶಂಕರಿ ಎಂಬೊಬ್ಬ ಹೆಂಗಸನ್ನು ಮಲಗಿದ್ದಾಗ್ಗೆ ಯಾರೋ ಖೂನ್ ಮಾಡಿದರು. ಮೂಗು ಬಾಯಿ ಕಿವಿಗಳಿಂದ ರಕ್ತವು ಅಪಾರವಾಗಿ ಹರಿಯುತ್ತಿದ್ದದ್ದನ್ನು ನೋಡಿ ನೆರೆಹೊರೆಯವರು ಕೂಡಲೆ ಪೋಲೀಸಿಗೆ ವರ್ತಮಾನ ಕೊಟ್ಟರು. ಪೋಲೀಸಿನವರು ಬರುತ್ತಾ ಆತ್ಮಹತ್ಯ ಮಾಡಿಕೊಳ್ಳಲು ಕೊಳಕ್ಕೆ ಬಿದ್ದಿದ್ದ ಹುಚ್ಚಪ್ಪನೆಂಬೊಬ್ಬ ಲಿಂಗಾಯತರವನನ್ನು ಹಿಡಿದು ತನಿಖೆಮಾಡುತ್ತಿರುವರು ಎಂದು ಒಬ್ಬ ಬಾತ್ಮಿದಾರರು ಬರೆಯುತಾರೆ.

ಪೂರ್ವದಲ್ಲಿ ಮದರಾಸ್ ಗವರ್ನರವರ ಪ್ರೈವೆಟ್ ಸೆಕ್ರೆಟರಿಯಾಗಿದ್ದು ಪೆನ್ಷನ್ ಪಡೆದು ಈಗ ವಿಲಾಯಿತಿಯಲ್ಲಿರುವ ಮಿ. ಎಚ್. ಎ. ಸ್ಟುಯರ್ಟ್‌ರವರು ನಮ್ಮ ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಕೆಲಸಕ್ಕೆ ನೇಮಕವಾದರೆಂತಲೂ, ಇವರು ಮುಂದಿನ ತಿಂಗಳಲ್ಲಿ ಸೀಮೆಯಿಂದ ಬಂದು ಕೆಲಸದ ಮೇಲೆ ಹಾಜರಾಗುವರೆಂತಲೂ ತಿಳಿದು ಬಂದಿತ್ತು. ಈಚೆಗೆ ಡಾಕ್ಟರುಗಳು ಅವರನ್ನು ಹಿಂದುಸ್ಥಾನಕ್ಕೆ ಹೋಗಕೂಡದೆಂದು ಹೇಳಿರುವುದರಿಂದ ಅವರು ಬರುವ ಹಾಗಿಲ್ಲವೆಂದು ಮದರಾಸಿನ ಒಂದು ಪತ್ರಿಕೆಯು ತಿಳಿಸುತ್ತದೆ.

ಬೆಂಗಳೂರು ಅರಳೀ ಪೇಟೆ ಸುಬ್ರಹ್ಮಣ್ಯಸ್ವಾಮಿ ಬೀದಿಯಲ್ಲಿ ಸುಬ್ರಮಣ್ಯನವರ ಮನೆಯೊಳಗೆ ಸುಮಾರು ೫೦೦ ರೂಪಾಯಿನ ಸಗನಾಣ್ಯಗಳು ಕಳುವಾದವು. ಮೈಸೂರು ದೇವರಾಜ ಮೊಹಲ್ಲಾ ಶಿವಾಚಾರದ ಒಸವಣ್ಣನವರ ಮನೆಯಲ್ಲಿ ಸುಮಾರು ೪೫೦ ರೂಪಾಯಿನ ಒಡವೆಗಳು ಕಳುವಾಗಿರುತ್ತವೆ. ಇದಲ್ಲದೆ ಬಿ. ಸಿದ್ದಪ್ಪನೆಂಬಾತನು ಸೋಸಲೆಯ ಬಳಿ ಬರುತ್ತಿರುವಾಗ ಕಳ್ಳರು ಬಿದ್ದು ಸುಮಾರು ೧೬೦ ರೂಪಾಯಿನ ಒಡವೆಗಳನ್ನು ಕಿತ್ತುಕೊಂಡರೆಂತಲೂ, ಇದನ್ನು ಪತ್ತೆಮಾಡಿಕೊಡುವವರಿಗೆ ಆತನು ೨೦ ರೂಪಾಯಿ ಬಹುಮಾನ ಕೊಡುವುದಕ್ಕೆ ಒಪ್ಪಿರುವುದಾಗಿಯೂ ತಿಳಿಯುವುದು.

ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆಯಲ್ಲಿ ಕಳೆದ ೧೦ ನೇ ತಾ. ಭಾನುವಾರ ಮಧ್ಯಾಹ್ನ ಏನೋ ಅಜಾಗರೂಕತೆ ನಡೆದು, ಸೂಪರಿಂಟೆಂಡೆಂಟ್ ಮೆ|| ಹಾಬಲ್ ಯವರಿಗೂ ಅವರ ಅಸಿಸ್ಟೆಂಟರಾದ ಮೆ|| ಪಸ್ಟ್ರನ್, ಮೆ ಸಾಡ್ಲರ್ ಎಂಬ ಇಬ್ಬರಿಗೂ, ಒಬ್ಬ ದೇಶೀಯ ಕೆಲಸಗಾರನಿಗೂ ವಿದ್ಯುಚ್ಛಕ್ತಿಯು ಬಡಿದು ಗಾಯಗಳಾದವು. ಅಲ್ಲಿಂದ ಬೆಂಗಳೂರಿಗೆ ಟೆಲಿಫೋನ್ ಮೂಲಕ ಈ ಸುದ್ದಿ ತಿಳಿದಕೂಡಲೇ ಸೀನಿಯರ್ ಸರ್ಜನ್ ಕರ್ನಲ್ ಸ್ಮಿತ್ ರವರೂ ಮಿ. ಎ. ಸಿ. ಕಾರ್ಲ್‌ಬರ್ಗ್ ಎಂಬ ವಿದ್ಯುಚ್ಛಕ್ತಿಯ ಇಲಾಖಾ ಅಧಿಕಾರಿಯೂ ಶಿವಸಮುದ್ರಕ್ಕೆ ಮೋಟಾರ್ ಗಾಡಿಯಲ್ಲಿ ಹೋಗಿ ಗಾಯ ಪಟ್ಟವರಿಗೆ ಚಿಕಿತ್ಸೆ ನಡೆಯುವಂತೆಯೂ, ಕಾರ್ಖಾನೆಯ ಕೆಲಸಕ್ಕೆ ಅಡಚಣೆಯಾಗದಂತೆಯೂ ಏರ್ಪಾಡುಮಾಡಿದರು. ಗಾಯಪಟ್ಟವರ ಹಾನಿಕೆ ಅಷ್ಟೇನೂ

ಇಟಲಿ ದೇಶದ ಭೂಕಂಪವು.

ಕಳೆದ ವಾರ ಬಂದಿರುವ ತಂತೀ ವರ್ತಮಾನಗಳು.

ಜನವರಿ, ತಾ. ೧೧ನೇ ಸೋಮವಾರ —ನೆನ್ನೆ ಮೆಸ್ಸೀನಾದಲ್ಲಿ ಮತ್ತೊಂದು ಸಲ ಭೂಕಂಪವಾಯಿತು ಸಮುದ್ರಕ್ಕೆ ಅಡ್ಡಲಾಗಿ ಹಾಕಿರುವ ಅಡ್ಡಗಟ್ಟೆಯಲ್ಲಿ ಕೆಲವು ಭಾಗ ಬಿದ್ದು ಹೋಗಿದೆ ಈ ಬಿರುಸಾದ ಗಾಳಿಯು ಪ್ರಾಪ್ತವಾಗಿ ಹಂಗಾಮಿಯಾದ ಶತ್ರುಗಳ ಮೋಲ್ಗಾವಣೆಗಳೆಲ್ಲಾ ಕಳಚಿಬಿದ್ದವು ಹಿಂದೆ ಬಿದ್ದುಹೋಗಿದ್ದ ಮನೆಗಳನ್ನು ಶೋಧಿಸಿದಾಗ ಒಬ್ಬ ಹೆಂಗಸೂ ಒಂದು ಮಗುವೂ ಜೀವಸಹಿತ ಸಿಕ್ಕಿದರು ಅವರು ಜೀವಶವಗಳಾಗಿದ್ದರು ಇವರನ್ನು ಆರೈಕೆಮಾಡುತ್ತಿದಾರೆ

ಈ ಭೂಕಂಪದ ಕಷ್ಟನಿವಾರಣೆಗೆ ಫ್ರೆಂಚ್ ಗವರ್ನ್ಮೆಂಟಿನವರು ಸರ್ಕಾರದಿಂದ ೪೦ ಲಕ್ಷ ರೂಪಾಯಿ ಕೊಡಬೇಕೆಂದು ತೀರ್ಮಾನಮಾಡಿದಾರೆ.

ಇಟಲಿ ರಾಜ್ಯದ ಮಂತ್ರಿಗಳ ಸಭೆಯಲ್ಲಿ ಕಟೂನಿಯಾ ಡಿಸ್ಟ್ರಿಕ್ಟಿನ ಅಧಿಕಾರಿಯಾದ ಸೇನಾರ್ ಫೆಲಿಸ್ ಯವರು ಮೆಸ್ಸೀನಾದಲ್ಲಿ ಯುದ್ಧ ಕಾಲದ ಕಾನೂನನ್ನು ಜಾರಿಗೆ ತಂದದ್ದು ಸರಿಯಲ್ಲವೆಂದು ಬಹು ಕಠಿಣವಾಗಿ ಆಕ್ಷೇಪಣೆ ಮಾಡಿದರು ಮತ್ತು ರಿಲೀಫ್ ಕೆಲಸಗಳನ್ನು ಮಿಲಿಟೆರಿ ಇಲಾಖೆಯವರಿಗೆ ಬದಲಾಗಿ ಪ್ರಜೆಗಳ ಮುಖಂಡರಿಗೆ ವಹಿಸಿದ್ದರೆ ಎಷ್ಟೋ ತೃಪ್ತಿಕರವಾಗಿ ನಡೆಯುತ್ತಿತ್ತೆಂತಲೂ, ಇನ್ನೂ ೨೦,೦೦೦ ಜನರು ಬದುಕಿಕೊಳ್ಳುತ್ತಿದ್ದರೆಂತಲೂ, ಮತ್ತೆ ಇವರು ಹುಕುಂ ಕೊಟ್ಟು, ಸೋಜರುಗಳ ಪರೋಪಕಾರ ಕೆಲಸಗಳನ್ನು ಕೆಡಿಸಿಬಿಟ್ಟರೆಂತಲೂ ಆಕ್ಷೇಪಣೆ ಮಾಡಿದರು ಇದಕ್ಕೆ ಮಂತ್ರಿಶ್ರೇಷ್ಠರು ಸಮಾಧಾನ ಹೇಳಿ, ಭೂಕಂಪವಾದ ಪ್ರದೇಶಗಳಲ್ಲಿ ಅನೇಕಾನೇಕರು ಬಹಳವಾಗಿ ಕೊಳ್ಳೆ ಹೊಡೆಯುತ್ತಾ ಬಂದದ್ದರಿಂದ ಅದನ್ನು ನಿಲ್ಲಿಸುವುದಕ್ಕೆ ಯುದ್ಧಕಾಲದ ಕಠಿಣತರವಾದ ಕಾನೂನು ಜಾರಿಗೆ ತರಬೇಕಾಯಿತೆಂದು ತಿಳಿಸಿದರು

ಜನವರಿ, ತಾ ೧೨ನೇ ಮಂಗಳವಾರ.—ರೆಗ್ಗಿಯೋ ಪಟ್ಟಣದ ಪಾಳು ನಿವೇಶನಗಳೊಳಗಿಂದ ಮೂರು ವರುಷದ ಒಂದು ಮಗುವನ್ನು ಜೀವ ಸಹಿತ ಬಿಡಿಸಿಕೊಂಡು ಬಂದರು ಮೆಸ್ಸೀನಾ ಪಟ್ಟಣವು ಮತ್ತೆ ಕಳೆ ಕಳಸಲಾರಂಭವಾಯಿತು ನಿಂಬೆ ಕಿತ್ತಳೆ ಹಣ್ಣುಗಳನ್ನು ಯಥಾಪ್ರಕಾರ ಅಲ್ಲಿಂದ ರಫ್ತುಮಾಡುವರು. ಹಾಲು, ತರಕಾರಿ, ಹಣ್ಣು ಹಂಪಲು ಮೊದಲಾದ ಆಹಾರ ಪದಾರ್ಥಗಳನ್ನು ಬೀದಿಗಳ ಮೇಲೆ ಕೂಗಿ ಬಿಕರಿ ಮಾಡುವುದೂ, ಜನಸಿ ಮೊದಲಾದ ವಸ್ತುಗಳ ಅಂಗಡಿಗಳನ್ನು ವರ್ತಕರು ಇಟ್ಟು ಮಾರಾಟ ಮಾಡುವುದೂ, ಹೋಟೇಲುಗಳಲ್ಲಿ ಭೋಜನಾದಿಗಳು ನಡೆಯುವುದೂ ಪ್ರಾರಂಭವಾಗಿವೆ

ಯೂರೋಪ್ಪಿನ ದಕ್ಷಿಣಭಾಗಗಳಲ್ಲಿ ಭೂಕಂಪವು.

ಜನವರಿ, ತಾ ೧೩ನೇ ಬುಧವಾರ.—ಈ ದಿನ ಬೆಳಗಿನ ಝಾಮದ ೩ ಗಂಟೆ ಸಮಯದಲ್ಲಿ ಇಟಲಿ ರಾಜ್ಯಕ್ಕೆ ಸೇರಿದ ಜಿನೋವಾ ಪಟ್ಟಣದಲ್ಲಿ ಭೂಮಿಯು ಜೋರಾಗಿ ಅಲ್ಲಾಡಿತು ಇದಲ್ಲದೆ ಪೀಡ್‌ಮಾಂಟ್ ಮತ್ತು ವೆನ್ನಿಸ್ ನಗರಗಳಲ್ಲೂ ಭೂಕಂಪವಾಯಿತು ಪಾಡುವಾ, ಫ್ಲಾರೆನ್ಸ್ ಮತ್ತು ವೆನ್ನಿಸ್ ಪಟ್ಟಣಗಳಲ್ಲಿ ಬಹಳ ಜೋರಾಗಿ ಭೂಮಿ ನಡುಗಿದ್ದರಿಂದ ಅನೇಕ ಮನೆಗಳೂ ಕಟ್ಟಡಗಳೂ ಬಿರುಕುಬಿಟ್ಟವು ಪ್ರಜೆಗಳು ಕಂಪಿಸಿ ಗಾಬರಿಯಿಂದ ಮನೆಗಳನ್ನು ಬಿಟ್ಟು ಬೈಲಿಗೆ ಬಂದುಬಿಟ್ಟರು ಇಮೋಲಾ ಪಟ್ಟಣದಲ್ಲಿ ಜನರು ಗಾಬರಿಬಿದ್ದು ಮೈದಾನಗಳಲ್ಲಿ ವಾಸಮಾಡುತ್ತಿದಾರೆ

ಜನವರಿ, ತಾ ೧೪ನೇ ಗುರುವಾರ —ನೆನ್ನೆ ಬೆಳಿಗ್ಗೆ ಆಸ್ಟ್ರಿಯಾ ರಾಜ್ಯದ ದಕ್ಷಿಣ ಪ್ರಾಂತ್ಯಗಳಲ್ಲೆಲ್ಲಾ ವಾರಸ್ಟೋಡಿನಿಂದ ಟ್ರಿಯೆಸ್ಟ್ ತನಕ ಉದ್ದಕ್ಕೂ ಭೂಕಂಪವುಂಟಾಯಿತು

ಭೂಕಂಪವುಂಟಾದ ರಾತ್ರಿ, ಬೊಲೋಗ್ನಾ ನಗರದಲ್ಲಿ ಬಹು ದುಃಖಕರವಾದ ಸಂಗತಿಗಳು ನಡೆದವು ಪ್ರಜೆಗಳು ನಿದ್ರೆಹೋಗುತ್ತಿದ್ದ ಮಕ್ಕಳನ್ನು ಎತ್ತಿಕೊಂಡು, ಆಸ್ತಿಪಾಸ್ತಿಗಳನ್ನು ಹೊತ್ತುಕೊಂಡು, ಗಾಬರಿಯಿಂದ ಮನೆ ಮಠಗಳನ್ನು ಬಿಟ್ಟು ಬೀದಿಗಳಿಗೆ ಹೋಗಿ ನಿಂತುಬಿಟ್ಟರು ಆಸ್ಪತ್ರೆಗಳೊಳಗೆ ರೋಗಿಗಳು ತಮ್ಮ ಹಾಸಿಗೆ ಮಂಚಗಳನ್ನು ಬಿಟ್ಟು ಓಡಿಹೋಗಲು ಬಹಳ ಸಾಹಸಮಾಡಿದರು ಬಂದೀಖಾನೆಗಳೊಳಗಿದ್ದ ಖೈದಿಗಳು ಸತ್ತುಹೋಗುತ್ತೇವೆಂದೂ ಬಿಡಿಸಿಕೊಳ್ಳಬೇಕೆಂದೂ ಕೂಗಿಕೊಂಡರು

ಮತಾಧಿಪತಿಯಾದ ಪೋಪ್ ಗುರುಗಳು ಇಟಲಿ ರಾಜ್ಯದಲ್ಲಿರುವ ಸಮಸ್ತ ದೇವಾಲಯಗಳಲ್ಲೂ ದೇವರನ್ನು ಕುರಿತು ಪ್ರಾರ್ಥನೆ ಮಾಡಿ, ಈ ಭೂಕಂಪವನ್ನು ನಿಲ್ಲಿಸುವಂತೆ ಬೇಡಿಕೊಳ್ಳಬೇಕೆಂಬದಾಗಿ ಶ್ರೀಮುಖವನ್ನು ಕಳುಹಿಸಿದಾರೆ.

ಇಟಲಿಯ ಭೂಕಂಪದ ರಿಲೀಫ್ ಫಂಡಿಗೆ ಚೀನಾ ಗವರ್ನ್ಮೆಂಟಿನವರು ತಮ್ಮ ಖಜಾನೆಯಿಂದ ೫೦,೦೦೦ ದ್ರವ್ಯವನ್ನು ಕಳುಹಿಸಿಕೊಡಬೇಕೆಂದು ಸ್ಯಾಂಕ್ಷನ್ ಮಾಡಿರುತ್ತಾರೆ.

ಬ್ರಿಟಿಷ್ ರಾಜ್ಯದ ಚಕ್ರವರ್ತಿ ಸಾರ್ವಭೌಮರವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್ ಯವರು ಇಟಲಿ ರಾಜ್ಯದಲ್ಲಿ ಭೂಕಂಪವಾದ ಪ್ರದೇಶಗಳನ್ನೆಲ್ಲಾ ನೋಡಿಕೊಂಡು ಮಾಲ್ಟಾ ದ್ವೀಪಕ್ಕೆ ಬಂದು ಸೇರಿದರು. ಮೆಸ್ಸೀನಾದಲ್ಲಿ ಮನುಷ್ಯನ ಊಹೆಗೆ ಮೀರುವಷ್ಟು ಅನಾಹುತವೂ ಪ್ರಾಣನಷ್ಟವೂ ಆಗಿ ನೋಡುವವರಿಗೆ ಅಪಾರವಾದ ದುಃಖವನ್ನುಂಟುಮಾಡಿದೆ. ಡ್ಯೂಕರವರು ಕಷ್ಟಪಡುತ್ತಿದ್ದವರಿಗೆ ದ್ರವ್ಯ ಸಹಾಯ ಮಾಡಿದರು ಭೂಮಿಯನ್ನು ಅಗೆದು ಶೋಧನೆ ಮಾಡುತ್ತಿದ್ದ ಸೈನಿಕರನ್ನು ಕಂಡು ಅವರ ಕೂಡ ಸಂಭಾಷಣೆ ಮಾಡಿ ಷ್ಟಲ್ಲದೆ ನಯವಿನಯವಾಗಿ ಅವರಿಗೆ ಪ್ರೋತ್ಸಾಹಪಡಿಸಿ, ಉತ್ಸಾಹದಿಂದ ಪರೋಪಕಾರವನ್ನು ಮಾಡಬೇಕೆಂದು ಹೇಳಿದರು

ಇಂಗ್ಲಿಷ್ ಹಡಗುಗಳಿಗೆ ಸೈನ್ಯಾಧಿಪತಿಯಾದ ಅಡ್ಮಿರಲ್ ಸ್ಪೆರ್ರಿಯವರನ್ನು ಇಟಲಿ ದೊರೆಯವರು ಬರಮಾಡಿಕೊಂಡು ಅವರಿಗೆ ಭೇಟಿಕೊಟ್ಟು, ಭೂಕಂಪದ ಅನಾಹುತದಲ್ಲಿ ಇಂಗ್ಲಿಷ್ ಹಡಗಿನ ಸೈನಿಕರು ಮಾಡಿದ ಸಹಾಯಾದಿಗಳನ್ನು ಕೊಂಡಾಡಿ ವಂದಿಸಿರುತ್ತಾರೆ

ಜನವರಿ, ತಾ. ೧೫ನೇ ಶುಕ್ರವಾರ.—ಲಂಡನ್ ಪಟ್ಟಣದಲ್ಲಿ ಏರ್ಪಡಿಸಿರುವ ಇಟಲಿ ಭೂಕಂಪದ ರಿಲೀಫ್ ಫಂಡಿಗೆ ೧೫ ಲಕ್ಷ ರೂಪಾಯಿ ಚಂದಾ ವಸೂಲಾಗಿದೆ

ಜನವರಿ, ತಾ ೧೬ನೇ ಶನಿವಾರ —ಮೆಸ್ಸೀನಾದಲ್ಲಿ ಬಿದ್ದುಹೋಗಿರುವ ಮನೆಗಳ ಪಾಳುನಿವೇಶನಗಳ ಒಳಭಾಗದಿಂದ ನೆನ್ನೆ ಒಬ್ಬ ಹುಡುಗನನ್ನೂ ಇಬ್ಬರು ಹುಡುಗಿಯರನ್ನೂ ಜೀವಸಹಿತ ಬಿಡಿಸಿ ದಡಕ್ಕೆ ಕರೆದುಕೊಂಡು ಬಂದರು.

ರೈತರಿಗೆ ಉಪಯುಕ್ತವಾದ ವಿಷಯಗಳು.

ಉಳುವ ಕ್ರಮವು.

ಜಮೀನನ್ನು ಉಳುಮೆ ಮಾಡುವುದೊಂದೇ ಅಲ್ಲದೆ ಅದರಲ್ಲಿನ ಕಳೆ ಕಿತ್ತು ಹಾಕಲಾಗಿಯೂ ಮತ್ತು ಮೇಲ್ಮಣ್ಣು ಪುಡಿಯಾಗಿಯೂ ಇರುವಂತೆ ಮಾಡುವುದು ಬಹಳ ಮುಖ್ಯವಾದದ್ದು ಭೂಮಿಯಲ್ಲಿ ತನುವು ಆರಿಹೋಗದ ರೀತಿ ಮೇಲ್ಗಡೆ ಕೊಟ್ಟಿಗೆ ಕಸ, ಸೊಪ್ಪು, ಎಲೆ, ಹುಲ್ಲು ಮುಂತಾದವುಗಳನ್ನು ಭೂಮಿಯ ಮೇಲೆ ಹಾಕುವುದೂ ಅತ್ಯವಶ್ಯಕ

ದನಗಳ ಪ್ರದರ್ಶನವು.

ಸನ್ ೧೯೦೯ನೇ ಇಸವಿ ಮಾರ್ಚಿ ಮಾಹೆ ೨೩ನೇ ತಾರೀಖಿನಲ್ಲಿ ಪ್ರಾರಂಭವಾಗಿ ಒಂದು ವಾರದ ವರೆಗೂ ಶಿವಮೊಗ್ಗಾ ತಾಲ್ಲೂಕು ಕೂಡ್ಲಿಯಲ್ಲಿ ನಡೆಯುವ ಶ್ರೀ ಸಂಗಮೇಶ್ವರ ರಥೋತ್ಸವ ಕಾಲದಲ್ಲಿ ಒಂದು ದನಗಳ ಪ್ರದರ್ಶನವು ನಡೆಯುತ್ತದೆ. ಪ್ರದರ್ಶನದಲ್ಲಿ ಉತ್ತಮವೆಂದು ತೀರ್ಮಾನ ಹೊಂದಿದ ರಾಸುಗಳಿಗೆ ೧೦ ರೂಪಾಯಿನಿಂದ ೨೦ ರೂಪಾಯಿ ವರೆಗೂ ದರ್ಜೇವಾರು ೭ ಬಹುಮಾನಗಳು ಕೊಡಲ್ಪಡುತ್ತವಲ್ಲದೆ ಯೋಗ್ಯತಾ ಪತ್ರಗಳು ಸಹ ದೊರೆಯುವವು. ಜಾನುವಾರುಗಳನ್ನು ಪ್ರದರ್ಶನಮಾಡಲು ಇಷ್ಟವುಳ್ಳವರು ಶಿವಮೊಗ್ಗಾ ತಾಲ್ಲೂಕು ಅಮಲ್ದಾರ್ರವರಿಗೆ ಆಗಲಿ ಅಥವಾ ಅವರಿಂದ ನೇಮಕವಾದಲ್ಪಟ್ಟ ಇತರ ನೌಕರರಿಗೆ ಆಗಲಿ ಪ್ರದರ್ಶನ ಶುರುವಾಗುವುದಕ್ಕೆ ಒಂದು ದಿವಸಕ್ಕೆ ಕಮ್ಮಿ ಇಲ್ಲದೆ ಅವಕಾಶವಿರುವಂತೆ ಬರೆದು ತಮ್ಮ ದನದ ಜಾನುವಾರು ತಪಶೀಲು ದಾಖಲ್ಮಾಡಿಸಿಕೊಳ್ಳಬೇಕು ಕೂಡ್ಲಿ ಜಾತ್ರೆಗೆ ಬಹಳ ಜನಗಳು ಮತ್ತು ಜಾನುವಾರು ಸೇರುವುದರಿಂದ ವ್ಯಾಪಾರ ಬಹಳ ಚೆನ್ನಾಗಿ ನಡೆಯುತ್ತವೆ. ಈ ಬಾಗದಲ್ಲಿ ಇನ್ನೂ ಹೆಚ್ಚು ಸಂಗತಿಗಳನ್ನು ತಿಳಿಯಲಪೇಕ್ಷಿಸುವವರು ಶಿವಮೊಗ್ಗಾ ತಾಲ್ಲೂಕು ಅಮಲ್ದಾರ್ರಿಗೆ ನೇರಾ ಬರೆದುಕೊಳ್ಳಬಹುದು

ಪೈರುಗಳಿಗೆ ಬೀಳುವ ಹುಳುಗಳು.

ತರಕಾರಿ ಗಿಡಗಳಿಗೆ ಬೀಳುವ ಹೇನಿಗೆ ಚಿಮ್ಮಿ ಎಣ್ಣೆ ಮತ್ತು ಸಾಬೂನುಗಳಿಂದ ಮಾಡುವ ನೀರಿನ ಪರಿಹಾರದ ವಿಷಯದಲ್ಲಿ ಮೈಸೂರು ನಾರ್ಮಲ್ ಸ್ಕೂಲ್ ಹೆಡ್ ಮಾಸ್ಟರ್ ಮೆ ॥ ಕೆ ನರಸಿಂಹಯ್ಯಂಗಾರ್ರವರು ಅವರ ಅನುಭವವನ್ನು ಬರೆದಿರುವುದೇನೆಂದರೆ —

ಸಸ್ಯಗಳ ಎಲೆಗಳಿಗೆ ತಗುಲುವ ಹೇನನ್ನು ಮೈಸೂರು ಡಿಸ್ಟ್ರಿಕ್ಟಿನಲ್ಲಿ ನೊರಜು ಎಂತಲೂ, ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಹೇಡೆ ಎಂತಲೂ ಕರೆಯುವರು ಇದು ಅನೇಕ ಬೆಳೆಗಳಿಗೆ ತಗುಲುತ್ತದೆ. ಮುಂದು ತಗುಲುವುದಕ್ಕೆ ಪ್ರಾರಂಭವಾದ ಮೇಲೆ ಸ್ವಲ್ಪ ಕಾಲದಲ್ಲಿಯೇ ಹೆಚ್ಚಾಗಿ ಅಭಿವೃದ್ಧಿಹೊಂದಿ ಪೈರನ್ನು ನಾಶಪಡಿಸುತ್ತದೆ ಇದು ತಗಲಿದ ಎಲೆಗಳು ಮುದುರಿಕೊಂಡು ಗಿಡದ ಅಭಿವೃದ್ಧಿಗೆ ತಡೆಯುಂಟಾಗುವುದರಿಂದ ಫಲ ಬಹಳ ಕಡಮೆಯಾಗುತ್ತದೆ. ಆದರೆ ಫಸಲು ಎಷ್ಟು ಭಾಗ ಕಡಮೆಯಾಗುತ್ತದೆಂಬ ಅಂಶವು ವಿಶದವಾಗಿ ಗೊತ್ತಿಲ್ಲ, ನಷ್ಟವೇನೋ ಬಹಳ ಹೆಚ್ಚು. ತರಕಾರಿ ಪೈರುಗಳಲ್ಲಿ ಸೌತೆ, ಬದನೆ, ಚಪ್ಪರದ ಅವರೆ, ಕೋಸು, ನವಿಲುಕೋಸು, ಇವುಗಳಿಗೆ ತಗುಲುವುದನ್ನು ಎಲ್ಲರೂ ತಿಳಿದಿರುವರು ಹೊಲಗಳಲ್ಲಿ ಬೆಳೆಯುವ ಪೈರುಗಳಲ್ಲಿ ಮುಖ್ಯವಾಗಿ ಹೆಸರು, ಅಲಸಂದೆ, ಉದ್ದು, ಹತ್ತಿ, ಇವುಗಳಿಗೂ ತಗುಲುತ್ತವೆ. ಇನ್ನೂ ಅನೇಕ ಪೈರುಗಳಿಗೆ ತಗುಲುವುದುಂಟು ಆರಂಭಗಾರರು ತಾವು ಬೆಳೆಮಾಡುತ್ತಿರುವ ಪೈರನ್ನು ಪ್ರತಿನಿತ್ಯವೂ ಚೆನ್ನಾಗಿ ನೋಡುತ್ತಿರುವುದು ಮತ್ತು ಪೈರುಗಳಿಗೆ ರೋಗಾದಿಗಳು ತಗಲಿವೆ ಇಲ್ಲ ಎಂಬುದನ್ನು ಪರೀಕ್ಷಿಸುತ್ತಿರುವುದು ಬಹಳ ಆವಶ್ಯಕ ಹೇಗೆಂದರೆ, ನೊರಜು ತಗುಲಿದ್ದು ಒಡನೆಯೇ ಗೊತ್ತಾದರೆ ಆಗ ಅದನ್ನು ಸುಲಭದಲ್ಲಿ ಹೋಗಲಾಡಿಸಬಹುದು. ಬಹಳ ದಿವಸಗಳಾದಮೇಲೆ ಗೊತ್ತಾದರೆ ಅದನ್ನು ಹೋಗಲಾಡಿಸುವುದು ಕಷ್ಟ ನಷ್ಟವೂ ಹೆಚ್ಚು

ಹಿತ್ತಲಲ್ಲಿ ಬೆಳೆಯುವ ತರಕಾರಿ ಪೈರುಗಳಿಗೆ ನೊರಜು ತಗಲಿದ ಪಕ್ಷದಲ್ಲಿ ಬೂದಿಯನ್ನು ಎರಚುವ ವಾಡಿಕೆ ಎಲ್ಲರಿಗೂ ಗೊತ್ತಿದೆ ಇದರಿಂದ ಅಷ್ಟು ಪ್ರಯೋಜನ ಉಂಟಾಗುವ ಹಾಗೆ ತಿಳಿದುಬರುವುದಿಲ್ಲ ಸೀಮೆ ಎಣ್ಣೆ, ಚಿಮ್ಮಿ ಎಣ್ಣೆ, ಮತ್ತು ಸಾಬೂನಿನ ನೀರನ್ನಾಗಲಿ, ಹೊಗೆಸೊಪ್ಪು ಮತ್ತು ಸಾಬೂನಿನ ನೀರನ್ನಾಗಲಿ ಉಪಯೋಗಿಸಬಹುದು

ಸೀಮೆ ಎಣ್ಣೆ ನೀರನ್ನು ತರಕಾರಿ ಪೈರುಗಳಿಗೆ ಎಲ್ಲಾ ಸಂದರ್ಭದಲ್ಲಿಯೂ ಉಪಯೋಗಿಸಬಾರದು. ಏಕೆಂದರೆ, ಎಣ್ಣೆಯ ವಾಸನೆ ಇದ್ದೇ ಇರುತ್ತದೆ ಇದಲ್ಲದೆ ಇದನ್ನು ಬಹಳ ಜಾಗರೂಕತೆಯಿಂದ ಮಾಡಬೇಕು. ಇಲ್ಲವಾದರೆ ಸಾಬೂನಿನ ಜತೆಯಲ್ಲಿ ಬೆರೆಯದ ಎಣ್ಣೆಯ ಅಂಶವು ನಿಲ್ಲುವುದರಿಂದ ಅದು ಬಿದ್ದ ಕಡೆ ಗಿಡದ ಎಲೆಗಳು ಸುಟ್ಟು ಹೋಗುತ್ತವೆ ತರಕಾರಿ ಗಿಡಗಳು ಕಾಯಿಬಿಡದೆ ಬಹಳ ಎಳಸಾಗಿರುವಾಗ ಇದನ್ನು ಉಪಯೋಗಿಸಬಹುದು ಹೊಲದ ಪೈರುಗಳಿಗೂ ಉಪಯೋಗಿಸಬಹುದು ಹೊಗೆಸೊಪ್ಪು ಮತ್ತು ಸಾಬೂನಿನ ನೀರಾದರೆ ಎಲ್ಲಾ ಸಂದರ್ಭದಲ್ಲಿಯೂ ತರಕಾರೀ ಪೈರುಗಳಿಗೆ ಅತ್ಯುತ್ತಮ. ಮೈಸೂರು ಗವರ್ನಮೆಂಟ್ ಸಾಗುವಳಿ ತೋಟದಲ್ಲಿ ಇದನ್ನು ಉಪಯೋಗಿಸುವ ವಾಡಿಕೆ ಇದೆ ಒಂದು ಅಥವಾ ಎರಡಾವರ್ತಿ ಹೊಗೆಸೊಪ್ಪಿನ ನೀರನ್ನು ಹಾಕಿದರೆ ನೊರಜೆಲ್ಲಾ ನಾಶವಾಗುವುದು. ಪೈರನ್ನು ನೋಡಿಕೊಳ್ಳುತ್ತಿದ್ದು ಆಗಾಗ್ಗೆ ಇದನ್ನು ಉಪಯೋಗಿಸುತ್ತಾ ಇದ್ದ ಪಕ್ಷದಲ್ಲಿ ನೊರಜಿನಿಂದ ಸ್ವಲ್ಪವೂ ನಷ್ಟ ಸಂಭವಿಸುವುದಿಲ್ಲ ಎಲೆಗಳ ಹಿಂಭಾಗದಲ್ಲಿ ಇವು ತಗುಲುತ್ತವೆಯಾದುದರಿಂದ ಆ ಭಾಗದ ಮೇಲೆ ಹೊಗೆಸೊಪ್ಪಿನ ನೀರಿನಲ್ಲಿ ಬ್ರಷ್, ಅಥವಾ ಹಂಚಕಡ್ಡಿಗಳ ಕಂತೆಗಳನ್ನು ಅದ್ದಿ ನೀರನ್ನು ಚೆನ್ನಾಗಿ ಚಿಮುಕಿಸಬಹುದು ಆ ನೀರನ್ನು ಸುರಿದೂ ತೊಳೆಯಬಹುದು. ಹೀಗೆ ಮಾಡಿದರೆ ನೀರು ಬಹಳ ನಷ್ಟವಾಗುತ್ತದೆ. ಹೊಗೆಸೊಪ್ಪಿನ ನೀರನ್ನಾಗಲಿ, ಇತರ ವಿಧವಾದ ಔಷಧಗಳನ್ನಾಗಲಿ ಗಿಡಗಳ ಮೇಲೆ ಅತ್ಯಂತ ಸೂಕ್ಷ್ಮವಾದ ಹನಿಗಳಾಗಿ ಹಾಕಿದರೆ ಖರ್ಚು ಕಡಮೆ. ಮತ್ತು ಹುಳುಗಳೂ ಸಾಯುತ್ತವೆ. ಇದಕ್ಕಾಗಿ ಅನೇಕ ಯಂತ್ರಗಳು ಇವೆ. ಈ ಯಂತ್ರವನ್ನು ಸ್ಪ್ರೇಯರ್ ಎಂದು ಕರೆಯುವರು. ಇವುಗಳಲ್ಲಿ ಟಿನ್ನಿನಿಂದ ಮಾಡಿದ ಸಣ್ಣ ಸ್ಪ್ರೇಯರನ್ನು (ಚಿಮುಕಿಸುವ ಚೀಕೋಳವೆಯನ್ನು) ತರಕಾರಿ ಕೈತೋಟ ಮಾಡುವವರು ಸುಲಭವಾಗಿ ಕೊಂಡುಕೊಳ್ಳಬಹುದು. ಇದರ ಕ್ರಯ ಎರಡು ರೂಪಾಯಿ ಮಾತ್ರ ಆಗುತ್ತದೆ ದೊಡ್ಡ ದೊಡ್ಡ ಹೊಲಗಳಿಗೂ ತೋಟಗಳಿಗೂ ಸುಲಭವಾಗಿ ಉಪಯೋಗಿಸುವಂಥಾ ದೊಡ್ಡ ಯಂತ್ರಗಳು ೮೦—೩೦ ರೂಪಾಯಿಗಳಿಗೆ ಸಿಕ್ಕುವವು.

ಸೀಮೆ ಎಣ್ಣೆ ಮತ್ತು ಸಾಬೂನಿನ ನೀರನ್ನು ಮಾಡುವುದು ಹ್ಯಾಗೆಂದರೆ, ಅರ್ಧ ಪೌಂಡು ಬಾರ್ ಸಾಬೂನನ್ನು ತೆಳ್ಳಗಿರುವ ಸಣ್ಣ ಸಣ್ಣ ಚೂರಾಗಿ ಕೊಯಿದು ೧½ ಪೌಂಡು ನೀರಿನಲ್ಲಿ ಚೆನ್ನಾಗಿ ಅರ್ಧಘಂಟೆ ಕಾಲದ ವರಿವಿಗೆ ಕುದಿಸಿ ಕರಗಿಸುವುದು. ಅನಂತರ ಉರಿಯನ್ನು ತೆಗೆದು ೧½ ಪೌಂಡು ಸೀಮೆ ಎಣ್ಣೆಯನ್ನು ಸ್ವಲ್ಪ ಸ್ವಲ್ಪವಾಗಿ ಹಾಕುತ್ತಾ, ಚೆನ್ನಾಗಿ ಬೆರೆಯುವ ಹಾಗೆ ಎಣ್ಣೆಯು ಗುರ್ತು ಕಾಣದಂತೆ ಕಲಕುವುದು ಉರಿ ಇದ್ದರೆ ಸೀಮೆ ಎಣ್ಣೆ ಹತ್ತಿಕೊಳ್ಳಬಹುದು ಇದು ಸರಿಯಾಗಿ ಆದ ಪಕ್ಷದಲ್ಲಿ ಎಣ್ಣೆಯ ಅಂಶವಿಲ್ಲದೆ ಎಲ್ಲವೂ ಹಾಲಿನಂತೆ ಬೆಳ್ಳಗಾಗುತ್ತದೆ. ಈ ದ್ರಾವಕವನ್ನು ಒಂದು ಸೀಸೆಯಲ್ಲಿ ತುಂಬಿಟ್ಟು, ಉಪಯೋಗಿಸುವಾಗ ಅಳತೆಯ ೭ ರಿಂದ ೧೧ ಪಾಲು ವರಿವಿಗೂ ನೀರನ್ನು ಬೆರೆಸಿ ಉಪಯೋಗಿಸಬೇಕು ನೀರು ಬೆರಸದ ಉಪಯೋಗಿಸಬಾರದು ಹೊಗೆಸೊಪ್ಪು ಮತ್ತು ಸಾಬೂನಿನ ನೀರನ್ನು ಮಾಡುವುದು ಹ್ಯಾಗೆಂದರೆ, ೧½ ಪೌಂಡು ತೂಕ ನೀರಿನಲ್ಲಿ ೨ ಪೌಂಡು ತೂಕ ಹೊಗೆಸೊಪ್ಪನ್ನು ೨೪ ಘಂಟೆಗಳ ಕಾಲ ನೆನೆಹಾಕುವುದು ; ಅಥವಾ ಅರ್ಧ ಘಂಟೆ ಕಾಲ ಬೇಯಿಸುವುದು, ಆ ಮೇಲೆ ಅರ್ಧ ಪೌಂಡು ಬಾರ್ ಸೋಪನ್ನು ಹಾಕಿ ಕರಗಿಸುವುದು ಇದನ್ನು ತೆಗೆದಿಟ್ಟುಕೊಂಡು ಉಪಯೋಗಿಸುವಾಗ ೭ ಪಾಲು ತಣ್ಣೀರು ಬೆರಸಬೇಕು ಬಾರ್ ಸಾಬೂನು ಷಾಪುಗಳಲ್ಲಿ ಒಂದಕ್ಕೆ ೩—೪ ಆಣೆಗೆ ಸಿಕ್ಕುತ್ತದೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಸಂಘಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್ಪಾಂಡೆನ್ಸ್.

ಹೊನ್ನಾಳಿ ತಾಲ್ಲೂಕು ಶಿಂಗಟಗೆರೆ ವಿಷಯ

ಅಯ್ಯಾ,

ಈ ಗ್ರಾಮದಲ್ಲಿ ಸುಮಾರು ೧೫—೨೦ ದಿವಸಗಳಿಂದ ಕಬ್ಬಿನ ಆಲೆಗಳು ಆಡುತ್ತಿವೆ ಈ ಆಲೆಮನೆಗಳಿಗೆ ಯಾರಾದರೂ ಹೋಗಿ ಕಬ್ಬು ಕೊಡುವುದೂ, ಅಲ್ಲಿ ಕೆಲಸ ಮಾಡುವವರಿಗೆ ಬೆಲ್ಲದ ಅಚ್ಚು ಮತ್ತು ಎರಡು ಕಬ್ಬಿನ ಕೋಲುಗಳು ಕೊಡುವದೂ ಪದ್ಧತಿ ಇದೇ ಮಾಹೆ ೧೫ನೇ ತಾ ಮಂಗಳವಾರ ಈ ಗ್ರಾಮದ ವಸಿಗ ಪ್ರಹ್ಲಾದನು ಎಂಬುವನು ಇದೇ ಗ್ರಾಮದ ಗಮಕಾರ ಕೆಂಪ ತಿಮ್ಮನ್ನನ ಆಲೆಮನೆಗೆ ಹೋದನು ಅಲ್ಲಿ ಕೆಲಸ ಮಾಡುತ್ತಿದ್ದವರು ಇವನಿಗೆ ಕಬ್ಬಿನ ಕೋಲು ಕೊಡಲು ಅವುಗಳನ್ನು ಕೈಯಲ್ಲಿ ಹಿಡಿದುಕೊಂಡಿರುವದನ್ನು ಕಂಡು ಆಲೆಮನೆ ಮಾಡಿಸುವವರು ತಿವಿದು ಹೊಡೆದರು ತಲೆಯ ಸ್ವಲ್ಪ ಭಾಗ ಒಡೆದು ಮೈ ಮೇಲೆಲ್ಲಾ ರಕ್ತವಾಗಿ ಮ್ಯಮರೆತಿದ್ದ ದನ್ನು ನೋಡಿ, ಅವನ ಕಡೆಯವರು ಬಂದು ಚೇತರಿಸಿದರು ಪ್ರಾಣಭಯವಿಲ್ಲ ಪೆಟ್ಟು ಬಲವಾಗಿ ಬಿದ್ದಿರುತ್ತೆ ಈ ವಿಷಯ ಪೋಲೀಸಿನವರಿಗೆ ರಿಪೋರ್ಟಾಗಿದೆ.

ಪ್ರತ್ಯಕ್ಷದರ್ಶಿ

ಗೋವಿಂದಪುರದ ತಾಲ್ಲೂಕು ಉಪ್ಪರಹಳ್ಳಿ ನೀರಿನ ಕಷ್ಟ

ಅಯ್ಯಾ,

ಈ ಕ್ಷಾಮಕಾಲದಲ್ಲಿ ದಿಕ್ಕಿಲ್ಲದವರಲ್ಲಿ ಅನೇಕರು ಕ್ಷುತ್ತಿನಿಂದ ಸಾಯುತ್ತಿರುವುದು ವೇದ್ಯವೇ ಇದೆ ಈ ಗ್ರಾಮದಲ್ಲಿ ನೀರು ಕುಡಿದಾದರೂ ಹಸಿವನ್ನು ತೀರಿಸಿಕೊಳ್ಳೋಣವೆಂದರೆ ತತ್ರಾಪಿ ಅದಕ್ಕೂ ಕೂಡ ಅನುಕೂಲವಿಲ್ಲ ಈ ಗ್ರಾಮದಲ್ಲಿರುವ ಒಂದೆರಡು ಬಾವಿಗಳಲ್ಲಿಯೂ ನೀರಿಲ್ಲದೆ ಇರೋಣವರಿವ ಈ ಬಾವಿಗಳ ಬಳಿಯಲ್ಲಿ ಪ್ರತಿ ನಿತ್ಯವೂ ಜನಗಳು ಕಾದೇ ಇರುತ್ತಾರೆ ಹೀಗಿರುವಲ್ಲಿ ಮನೆಗೆ ಒಂದು ಕೊಡ ನೀರೂ ಸಹ ಸಿಕ್ಕುವುದು ದುಸ್ತರವಾಗಿರುತ್ತೆ. ನಮ್ಮಗಳ ಪಾಡೇ ಹೀಗಿರುವಲ್ಲಿ ದನಗಳ ಗೋಳು ಹೇಳಬೇಕಾದ್ದೇ ಇಲ್ಲ ಗ್ರಾಮವಾಸಿಗಳು ಒಂದು ಬಾವಿಯನ್ನು ಅಗೆದು ದುರಸ್ತಿ ಮಾಡಬೇಕೆಂದೂ, ಸರ್ಕಾರದಿಂದ ಕಲ್ಲು ಕಾಮಗಾರಿ ಮಾಡಿಸಿಕೊಡಲು ಸಹಾಯ ಮಾಡಬೇಕೆಂಬದಾಗಿಯೂ ಅನೇಕ ಅರ್ಜಿಗಳ ಮೂಲಕ ತಾಲ್ಲೂಕು ಅಮಲ್ದಾರ್ರವರಿಗೆ ಅರಿಕೆಮಾಡಿಕೊಂಡರೂ ಅಲ್ಲದೆ ರೂಬರೂ ಅರ್ಜಿಯನ್ನು ಕೊಟ್ಟು ಹೇಳಿಕೊಂಡದ್ದರ ಮೇಲೆ ಅದಕ್ಕೆ ಅನುಮೋದಿಸಿದರು. ಆದ್ದರಿಂದ ಈ ವಿಷಯದಲ್ಲಿ ನಮ್ಮ ಅಮಲ್ದಾರ್ರು ಮನಸ್ಸಿಗೆ ತಂದುಕೊಂಡು, ಕ್ಷಿಪ್ರದಲ್ಲಿಯೇ ಜನಗಳ ನೀರಿನ ಕಷ್ಟವನ್ನು ನಿವಾರಣೆ ಮಾಡಿಯಾರೆಂದು ಹಾರೈಸುತ್ತೇವೆ ಈ ಕಾಮಗಾರಿಗಾಗಿ ರೈತರು ತಮ್ಮಿಂದಾದಷ್ಟಿಗೆ ಕುಮ್ಮಕ್ಕು ಮಾಡುವುದರಲ್ಲಿ ಸಂದೇಹವಿಲ್ಲ

ಗ್ರಾಮವಾಸಿ

ಕುಮಟ್ಟೂರಿನ ಕಷ್ಟ ದೆಸೆಯು.

ಅಯ್ಯಾ,

ಅನೇಕ ವಾರಗಳಿಂದ ಈ ಊರಿನ ಸಂಗತಿಗಳು ಈ ಘನವಾದ ಪತ್ರಿಕೆಯಿಂದೆ ಹೊರಪಡಲಿಲ್ಲವೆಂದು ಚಂದಾದಾರರೂ ವಾಚಕರೂ ಬಹು ಚಿಂತಾಕ್ರಾಂತರಾಗಿರುತ್ತಾರೆ ಈ ಊರು ಕ್ಷಾಮದಿಂದ ಪೀಡಿತವಾಗಿರುವುದರಿಂದ ಇಲ್ಲಿನ ಬಡ ಜನರ ಸ್ಥಿತಿಯನ್ನು ವಿವರಿಸಲಶಕ್ಯವು ಈ ಊರಿನ ಮಂಡಿಗಳಿಗೆ ಪ್ರತಿ ದಿನವಲ್ಲೂ ೪೦—೬೦ ಗಾಡಿಗಳ ದಿನಸಿಯು ಬಂದು ಬಿಕರಿ ಆಗುತ್ತಿತ್ತು ಈಗ ಒಂದು ಗಾಡಿ ದಿನಸಿಯೂ ಬರುವುದಿಲ್ಲ ಟೋಲ್ ಗೇಟಿನವರು ಮಿಟ ಮಿಟನೆ ಕಣ್ಣು ಬಿಡುತ್ತಾರೆ ಮಂಡಿಯ ವರ್ತಕರು ನಿರುದ್ಯೋಗಿಗಳಾಗಿ ವರ್ತಮಾನ ಪತ್ರಿಕೆಗಳ ಆಗಮನವನ್ನು ಬಹು ಆದರದಿಂದ ನಿರೀಕ್ಷಿಸುತ್ತಾರೆ. ಬಡ ಜನರು ಕೂಲಿಯಿಂದ ಜೀವಿಸೋಣವೆಂದು ಪ್ರಯತ್ನಪಟ್ಟಾಗ್ಯೂ ಕೂಲಿ ದೊರೆಯುವುದೇ ಕಷ್ಟವಾಗಿರುತ್ತೆ. ಕುಮಟ್ಟೂರಿಗೆ ಬಹಳ ಸಮೀಪ ಗ್ರಾಮಗಳಾದ ಗೂಳೆದಹ ಗೂಳೇಹರವಿ ಮತ್ತು ಉಪ್ಪಾರಹಳ್ಳಿ ಈ ಗ್ರಾಮಗಳಲ್ಲಿ ಪ್ಲೇಗ್ ರೋಗವು ತನ್ನ ಪ್ರಾಬಲ್ಯವನ್ನು ಮುಂದುವರಿಸುತ್ತಿದೆ ಹೊರಪೇಟೆಯಲ್ಲಿನ ಕೆಲವು ಮಂದಿ ಧರ್ಮಿಷ್ಠರು ಚಂದಾ ಹಾಕಿ ಕುರುಡರು, ಕುಂಟರು, ಬಲಹೀನರು, ಅನಾಥರಿಗೆ ರಾಗಿಯ ಮುದ್ದೆ ರುಚಿಕರವಾದ ಸಾರು ಸಹ ಪ್ರತಿದಿನವೂ ಹಾಕುತ್ತಾ ಎರಡು ತಿಂಗಳಿಂದಲೂ ನಡೆಯಿಸಿಕೊಂಡು ಬಂದಿರುತ್ತಾರೆ. ಮ್ಯು ॥ ವಾಸಪ್ಪಶೆಟ್ಟರೂ ಮೆ ॥ ಶಿವಣ್ಣನವರೂ ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಈ ಕಾರ್ಯವನ್ನು ಬಹು ಮುತುವರ್ಜಿಯಿಂದ ನಡೆಯಿಸುತ್ತಾ ಬಂದಿರುತ್ತಾರೆ ✱

ಮಿಷ್ಟರ್ಯನ್ನು ಅನುಸರಿಸಿ ಕೊಡಿಸುತ್ತಿರುವ ಧರ್ಮ ಸತ್ರವನ್ನು ಮತ್ತೆ ಕೆಲವು ಮಂದಿ ಧರ್ಮಾತ್ಮರು ಸ್ಥಾಪಿಸಿ ನಡೆಯಿಸುತ್ತಾ ಬಂದಿರುತ್ತಾರೆ ಈ ಕಾರ್ಯಕ್ಕೆ ಪ್ರತಿಯೊಬ್ಬರೂ ಸಹಾಯವಾಗಬೇಕಾಗಿ ಬೇಡುತ್ತೇನೆ

ಚಿತ್ರದುರ್ಗ ಸಂಸ್ಥಾನದ ಮುನೀಂದ್ರ ಸ್ವಾಮಿಗಳು ಬಹಳ ವರ್ಷದಿಂದ ಬಡವರಿಗೆ ದಯೆಮಾಡುವರೆಂದು ಭಕ್ತರು ಚಪ್ಪರಗಳನ್ನು ಕಟ್ಟಿಸಿರುವುದು ಪ್ರಸಿದ್ಧಿ ಹೊಂದಿದ ಹೊಸಪೇಟೆ ಹಕೀಂ ಮೆ॥ ಗುಲಾಂ ಮುಹಮ್ಮದ್ ಸಾಹೇಬರವರು ಬಹಳ ಕಾಲದಿಂದ ಧರ್ಮಾರ್ಥವಾಗಿ ರೋಗಿಗಳಿಗೆ ಔಷಧಿಗಳನ್ನು ಕೊಟ್ಟು ಗುಣಪಡಿಸುತ್ತಾ ಬಂದಿರುತ್ತಾರೆ ಈ ಊರಿಗೆ ಒಂದು ದೊಡ್ಡ ಔಷಧಾಲಯವು ಬೇಕೆಂದು ಸರಕಾರದವರಿಂದಲೂ ವ್ಯಾಪಾರಸ್ಥರಿಂದಲೂ ಸರ್ಕಾರದವರನ್ನು ಬಹು ಜನಗಳು ಪ್ರಾರ್ಥಿಸಿಕೊಂಡರು ಹಜರತ್ ಡೆಪ್ಯುಟಿ ಕಮಿಷನರ್ ಸಾಹೇಬರವರು ಈ ಸಂಗತಿಗಳನ್ನು ಚೆನ್ನಾಗಿ ತಿಳಿದವರಾಗಿ ಗವರ್ನಮೆಂಟಿಗೆ ಶಿಫಾರಸು ಮಾಡಿರುವುದಾಗಿ ವರ್ತಮಾನ ಕೇಳಿ, ಗವರ್ನಮೆಂಟಿನವರು ಶೀಘ್ರವಾಗಿ ದಯಪಾಲಿಸ್ಯಾರೆಂದು ಹಾರೈಸುತ್ತೇನೆ

ಪ್ರತ್ಯಕ್ಷದರ್ಶೀ

ಭರತಖಂಡದ ದುಃಸ್ಥಿತಿ

ಅಯ್ಯಾ,

ಸ್ವದೇಶಿ, ಸ್ವರಾಜ್ಯದ ಚಳುವಳಿಯು ಕಾಂಗ್ರೆಸ್ ಮಹಾ ಮಂಡಲವನ್ನೆಲ್ಲಾ ವ್ಯಾಪಿಸಿ ಇಂಡಿಯಾ ದೇಶದ ಮತ್ತು ಇತರ ಪಾಶ್ಚಾತ್ಯ ದೇಶಗಳ ಐಕ್ಯಮತವನ್ನು ಹಾಳುಮಾಡಿ ಬಹು ಭಯಂಕರವಾಗಿ ಪರಿಣಮಿಸಿತು ಆಯಾ ಪ್ರಮುಖರಾದ ಭಾರತೀಯರೆಲ್ಲರಿಗೂ ಕಾರಾಗೃಹವಾಸವೇ ಮೊದಲಾದ ಕ್ರೂರ ಶಿಕ್ಷೆಗಳು ವಿಧಿಸಲ್ಪಟ್ಟವು ಭಾರತೀಯರ ಈ ಬಗೆಯ ಆರಂಭ ಶೂರತ್ವವು ಹೀಗೆ ಪರಿಣಮಿಸಿತೇ ಕೈಲಾಗದ ಕೆಲಸವನು ಸಾಧಿಸಲುಜ್ಜುಗಿಸಿದ ಭಾರತೀಯರೇ, ಹಿಂದೆ ಸೂರ್ಯ ಮನಾರ ರಾತ್ರಿ ಮೋಯಿನ್ ಹಾಲಿನಲ್ಲಿ ಆ ಮಿಸೆಸ್ ಬೆಸೆಂಟ್ ಅವರು ತಿಳಿಸುವ ಭಾಷಣದಲ್ಲಿ ಒರಿಯುವ ಕರ್ತವ್ಯ ಪಾಲಿಸುವುದರ ಬಗ್ಗೆ ಆಗಿ ಅಪ್ಪಣೆಕೊಡಿಸಿದ ಹಿತೋಕ್ತಿಯನ್ನು ಸ್ಮರಿಸಿಕೊಳ್ಳಿ ಇನ್ನು ಮುಂದೆ ಸುಜ್ಞಾನವಂತರಾಗಿ ರಾಜಕೀಯ ವಿದ್ವಾಂಸರನ್ನು ಬಿಟ್ಟು ತಮ್ಮ ಜೀವನವನ್ನು ಕೈಗಾರಿಕೆ ವ್ಯವಸಾಯ ಮತ್ತು ವಾಣಿಜ್ಯದ ಕಡೆಗೆ ತಂದು ಕೈಗಾರಿಕೆಗಳಲ್ಲಿ ಸಾಹಸಪಟ್ಟರೆ ಶ್ರೇಯಸ್ಕರವಾದ ದೇಶಸೇವೆಯನ್ನು ಮಾಡಿದಂತಾಗುವುದು ಮೈಸೂರು ದೇಶದ ಸುಸ್ಥಿತಿ ತಪ್ಪಿದ ಕಾಲವು ಬಾಲಕರು ಕೂಡ— ಒಂದು ಗಾಳಿ ಮತ್ತು ಪೂನಾ ದೇಶಸ್ಥರ ವರ್ತಮಾನಪತ್ರಿಕೆಗಳಿಂದ ಕೇಳುತ್ತಿರುವುದಾಗಿ ತಿಳಿಯುತ್ತದೆ ಅರಾಜಕತ್ವವು ನಮ್ಮ ಆಪತ್ತಿಗೆ ಅನುಗುಣವಾದ ಪ್ರಾಯಶ್ಚಿತ್ತವು ಸವಿಸ್ತಾರವಾಗಿರುತ್ತದೆ ನಮ್ಮ ದೇಶದ ಪ್ರಕೃತ ವಿಷಯವನ್ನು ಕುರಿತು ಆಲೋಚಿಸುವುದಾದರೆ ನಾವೆಲ್ಲಾ ಸ್ವಾತಂತ್ರ್ಯ ಅಧಿಕಾರಗಳಿಗೆ ಪಾತ್ರರಾಗಿಯೂ ಅರ್ಹರಲ್ಲ ನಮ್ಮಲ್ಲಿ ಎಷ್ಟೋ ಜಾತಿ ಉಪಜಾತಿಗಳು ಐಕ್ಯಮತ್ಯವೆಂಬ ಎಲೆಯೇ ಇಲ್ಲ ಕೆಲಸಕ್ಕೆ ಬಾರದ ಸ್ವಲ್ಪ ಮನಸೆ ಮನಸ್ತಾಪ ಮುಖ್ಯವಾದ ಕಲಹಗಳಲ್ಲಿ ವ್ಯಗ್ರರಾಗಿ ಕೆಡುತ್ತಿರುವೆವು ಇಂತವರಿಗೆ ಸ್ವರಾಜ್ಯದ ಮಾತೇ ನಮ್ಮ ಜನಗಳಲ್ಲಿ ಮುಖ್ಯವಾಗಿ ಬಾಲು ಜನಕ್ಕೆ ಸರಸ್ವತಿ ಒಲಿಯುವುದೇ ಗೊತ್ತಿಲ್ಲ

ಅಸ್ಸಿಸಿಯ ನ್ಯಾಷನಲ್ ಕಾಂಗ್ರೆಸ್ ಸಭೆಯ ಒಳತೇಯರಲ್ಲಿ ಎಷ್ಟರಮಟ್ಟಿಗೆ ಏಕಮತ್ಯವಿರುವುದೆಂಬ ವಿಚಾರವನ್ನು ಹಿಂದಿನ ಕಾಂಗ್ರೆಸ್‌ನ ಮುಖಂಡರು ಎರಡು ಪಂಗಡಗಳಾಗಿ ವಿಭಾಗಿಸಲ್ಪಟ್ಟಿತು ಧರೆತದಿಂದ ಮುಸಲ್ಮಾನರಾಗಿ ಪ್ರಾವರದ ದೊಡ್ಡ ಮನುಷ್ಯರಲ್ಲಿಯೇ ಸ್ವತಂತ್ರ ಬುದ್ಧಿಯಿಲ್ಲ ಬಾ ಸಾಧಾರಣರಾದ ಮೃಗಳ ಪಡೆನು ಕಪಟವೆ ವ್ಯಾಪಾರ ಮತ್ತು ಕಾರ್ಖಾನೆಗಳಲ್ಲಿ ಸಟಿಗದಲ್ಲಿರುವವರು ಏಟು ಹ್ಯಾಗಾದರು ವಾಸಸ್ಥರಿಗೆ ಇಷ್ಟು ಕೆಲಸಕ್ಕೆ ಭಿನ್ನ ಬಗೆಗಳೂ ಪ್ರಮಾದ್ಯ ಬಗೆಗಳೂ ಎಷ್ಟಿಲ್ಲ ಇದಕ್ಕೆ ದೃಷ್ಟಾಂತವಾಗಿ ಈ ಊರಿಗೆ ೧೨ ಮೈಲು ದೂರದಲ್ಲಿ ಸುಮಾರು ಒಂದು ಮೈಲಿ ದೂರದಲ್ಲಿ ಬಗ್ಗಲಿಯೆಂಬ ಒಂದು ಗ್ರಾಮವಿದೆ ಅಲ್ಲಿ ಒಬ್ಬ ಪಾರ್ಟೆಸಿಯನ್ ಮಿಷನರಿಯು ಈಗ್ಗೆ ಸುಮಾರು ೧೫ ವರ್ಷಗಳಿಂದಲೂ ವ್ಯವಸಾಯ ಮಾಡಿಸಿ ಕೊಂಡು ವಾಸವಾಗಿರುತ್ತಾರೆ ಅವರಿಗೆ ಮಿ ಹವರೋ ಎಂದು ನಾಮಾಂಕಿತ ಅವರಿಗೆ ಸುಮಾರು ೧೦೦ ಎಕರೆ ಜಮೀನ್ ಇದೆ ಅದಕ್ಕಾಗಿ ಅವರು ಸುಮಾರು ೩೦ ರೂಪಾಯಿ ಕಂದಾಯ ಕೊಡುತ್ತಾರೆ ಅವರು ಬಹಳ ದೊಡ್ಡ ಮತ್ತು ಗೌರವಯುಕ್ತವಾದ ವಂಶೀಯರಾಗಿದ್ದಾರೆ ಇಲ್ಲಿನ ಐಶ್ವರ್ಯವಂತರಾದಿಯಾಗಿ ಬಡವರ ವರೆಗೂ ಅವರು ಚೆನ್ನಾಗಿ ಪರಿಚಯಸ್ಥರಾಗಿದ್ದಾರೆ ಅದರಲ್ಲಿ ಕೆಲವು ವ್ಯವಸಾಯಸಂಬಂಧವಾದ ಉಪಯುಕ್ತವಾದ ಹಸ್ತಿನ ಬೇಸಾಯಕ್ಕೆ ಯಂತ್ರಗಳಿವೆ ಅವರು ಕೇವಲ ಸ್ವಲ್ಪ ಬಂಡವಾಳದಿಂದ ಹೆಚ್ಚಾದ ಆದಾಯವನ್ನು ಸಂಪಾದಿಸತಕ್ಕ ಯುಕ್ತಿಮಾರ್ಗಗಳನ್ನು ಬಲ್ಲವರಾಗಿದ್ದಾರೆ ಜಂಗಮರ ಒಳಗೆ ಆಜಾನುಬಾಹು ಗ್ರಾಮಸ್ಥರಾದ ಬೇಸಾಯಗಾರರು ಆಗಾಗ್ಗೆ ಹೋಗಿ ದರ್ಶನ ತೆಗೆದುಕೊಂಡು ಕೆಲವು ಉಪಯುಕ್ತವಾದ ವಿಷಯಗಳನು ಗ್ರಹಿಸಿ ಅದರಂತೆ ನಡೆದರೆ ಬಹಳ ಲಾಭಕರ ನಮ್ಮವರು ಒಬ್ಬೊಬ್ಬರಾಗಿ ಆ ಯಂತ್ರಗಳನ್ನು ಕೊಂಡು ಅದರಿಂದ ವ್ಯವಸಾಯ ನಡಿಸಲು ಸಾಧ್ಯವಾಗದೆಹೋದರೆ ನಾಲ್ಕಾರು ಜನ ಒಟ್ಟಾಗಿ ಸೇರಿ ಉಪಯುಕ್ತವಾದ ಯಂತ್ರಗಳನ್ನು ತರಿಸಿ ಬೇಸಾಯಮಾಡಿದರೆ ಸ್ವಲ್ಪ ಶ್ರಮೆಯಿಂದ ಅಪಾರವಾದ ಆದಾಯವನ್ನು ಸಂಪಾದಿಸಬಹುದು ಮಿ॥ ಹವರೋಯವರು ಬಹಳ ತಾಳ್ಮೆಯುಳ್ಳವರಾಗಿಯೂ, ಕರುಣಾಳುಗಳಾಗಿಯೂ, ಮತ್ತು ಸಾಧಾರಣ ಸ್ವಭಾವವುಳ್ಳವರಾಗಿಯೂ ಇದ್ದಾರೆ ಅವರಿಗೆ ನಮ್ಮ ಜನಗಳಲ್ಲೂ ಇಡೀ ಬೇಸಾಯಗಾರರಲ್ಲಿಯೂ ತುಂಬಾ ವಿಶ್ವಾಸ ನಾನೇ ಖುದ್ದಾಗಿ ಅವರ ನಿವಾಸಸ್ಥಾನಕ್ಕೆ ಹೋಗಿನೋಡಿದ್ದೇನೆ ಬಹಳ ವಿಶಾಲವಾಗಿದೆ ಅವರು ದಂಪತಿಗಳಿಬ್ಬರೂ ಸಂತತೋದ್ಯೋಗಿಗಳಾಗಿಯೂ ಕೇವಲ ದಯಾಪರರಾಗಿಯೂ ಇದ್ದಾರೆ ಇಂತವರನ್ನು ಮುಂದಿಟ್ಟುಕೊಂಡು ನಮ್ಮವರೆಲ್ಲಾ ಸೇರಿ ಇಲ್ಲಿ ಒಂದು ವ್ಯವಸಾಯ ಸಂಬಂಧವಾದ ಸಂಘವನ್ನೋ, ಇನ್ನೂ ಅವಶ್ಯಕವಾದ ಸಂಘಗಳನ್ನೋ ಸ್ಥಾಪಿಸಿ ಆ ಮೂಲಕ ತಾವು ಸುಜ್ಞಾನವಂತರಾಗಿ ಮುಂದಿನ ಜನಾಂಗವನ್ನೂ ತಿಳಿವಳಿಕೆ ಉಳ್ಳವರನ್ನಾಗಿ ಮಾಡಿದರೆ ಆಗ ಅದೇ ದೇಶಾಭಿಮಾನವೆನಿಸುವುದು ಅದ್ದರಿಂದ ಸ್ವರಾಜ್ಯಕ್ಕಾಗಿ ಬಡಿದಾಡುವ ಭಾರತೀಯರೇ! ಕತ್ತಲೆ ಸೇರಿಕೊಂಡಿರುವ ನಿಮ್ಮ ಭ್ರಾತೃವೃಂದವನ್ನು ಬೆಳಕಿಗೆ ತಂದು ಅವರನ್ನು ಸುಶಿಕ್ಷಿತರನ್ನಾಗಿ ಮಾಡಿ ತಮ್ಮ ಮುಂದೆ ಅತ್ಯಂತ ಉಪಯುಕ್ತವಾದ ವಸ್ತುವಿನ ಬೆಲೆಯನ್ನು ತಿಳಿಯದವರೊಂದಿಗೆ ಸ್ವರಾಜ್ಯವನ್ನು ಹೇಗೆತಾನೇ ಸಾಧಿಸಬಹುದು? ಈ ಘನವನ್ನು ಹೊಂದಿದ ಸರ್ಕಾರದವರು ಮಿ॥ ಹವರೋ ಸಾಹೇಬರನ್ನು ಮ್ಯುನಿಸಿಪಲ್ ಮೆಂಬರಾಗಿ ಚುನಾಯಿಸಿದರೆ ನಾವೆಲ್ಲಾ ಸರ್ಕಾರದವರಿಗೆ ತುಂಬಾ ಕೃತಜ್ಞರಾಗಿರುತ್ತೇವೆ ಹೇ ಭ್ರಾತೃವೃಂದ! “ಆಲಸ್ಯಮಮೃತಂ ವಿಷಂ” ಆದ್ದರಿಂದ ತಮ್ಮ ದೀರ್ಘನಿದ್ರೆಯಿಂದ ಎಚ್ಚೆತ್ತು ಪ್ರಪಂಚದ ಕಡೆ ದೃಷ್ಟಿಸಿನೋಡಿ ಎಚ್ಚೆತ್ತುಕೊಳ್ಳಿ

ದೇಶಾಭಿಮಾನಿ

ಇಂಡಿಯಾ ದೇಶದ ವೃತ್ತಾಂತಗಳು

ಕಲ್ಕತ್ತಾ ಪಟ್ಟಣದಲ್ಲಿ ಮತಗಳ ಸಮಾಜವು ಈ ತಿಂಗಳ ಅಂತ್ಯಭಾಗದಲ್ಲಿ ನಡಿಯುವಂತೆ ಮುಂದಕ್ಕೆ ಹಾಕಲ್ಪಟ್ಟಿದೆ

ಪಟಿಯಾಲ ರಾಜ್ಯದ ಭೂಕಂಪದ ಫಂಡಿಗೆ ಸಿಲೋನ್ ಗವರ್ನಮೆಂಟಿನವರು ೩೦ ಸಾವಿರ ರೂಪಾಯಿ ಧರ್ಮಸಹಾಯ ಮಾಡಬೇಕೆಂದು ಸ್ಯಾಂಕ್ಷನ್ ಮಾಡಿದರು

ಕರ್ಕಿ ಪಟ್ಟಣದ ಆಯುಧಗಳ ತಯಾರಿ ಕಾರ್ಖಾನೆಯಲ್ಲಿ ಅನಾಹುತ ನಡೆದು ಗಾಯಪಟ್ಟ ೫ ಮಂದಿಯ ಪೈಕಿ ಕಳೆದ ವಾರ ಒಬ್ಬನು ತೀರಿಹೋದನು

ಇಂದೋರ್ ಸಂಸ್ಥಾನದ ಹೋಳ್ಕರ್ ಮಹಾರಾಜರವರು ಇಂಪೀರಿಯಲ್ ಕ್ಯಾಡೆಟ್ ಕೋರ್ ಎಂಬ ರಾಜಕುಮಾರರುಗಳ ಸೈನ್ಯಕ್ಕೆ ಸೇರಿ, ಆರು ತಿಂಗಳ ವರೆಗೆ ಶಿಕ್ಷೆಹೊಂದುವರೆಂದು ವರ್ತಮಾನವಿದೆ

ಸೋಲಾಪುರದಲ್ಲಿ ಮುಹಮ್ಮದೀಯರ ಖಬರಸ್ಥಾನದ ಗೋಡೆಯನ್ನು ಕಲೆಕ್ಟರು ಹುಕುಂ ಕೊಟ್ಟು ಬಡಿಸಿ ಹಾಕಿದರು ಇದರಿಂದ ಅಲ್ಲಿನ ಮುಸಲ್ಮಾನ್ ಪ್ರಜೆಗಳಲ್ಲಿ ಸ್ವಲ್ಪ ಅಸಮಾಧಾನ ಉಂಟಾಗಿರುವಂತೆ ತಿಳಿದುಬಂದಿದೆ

ಹಿಂದುಸ್ಥಾನದ ವೈಸ್ರಾಯಿಯವರಾಗಿದ್ದ ಲಾರ್ಡ್ ಕರ್ಜನವರು ಈ ರಾಷ್ಟ್ರದ ಪೂರ್ವೋತ್ತರವನ್ನು ಕುರಿತು ಒಂದು ಪುಸ್ತಕವನ್ನು ಬರೆದಿರುತ್ತಾರೆ ಈ ಪುಸ್ತಕವು ಇನ್ನು ೩—೪ ತಿಂಗಳೊಳಗಾಗಿ ಪ್ರಚಾರಕ್ಕೆ ಬರುವುದು

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಸಿರಾಜಪುರದಲ್ಲಿ ಹಿಂದುಗಳು ಮುಹಮ್ಮದೀಯರನ್ನು ಹಿಂಗಿ ವಾಕರಿಸಿ ರೇಗಿಸಿದ ಪಕ್ಷದಲ್ಲಿ ಅವರನ್ನು ಹಿಡಿದು ಶಿಕ್ಷಿಸುತ್ತೇವೆಂದು ಅಲ್ಲಿನ ಸಬ್ ಡಿವಿಷನ್ ಆಫೀಸರವರು ಇಸ್ತಿಹಾರು ಹಾಕಿಸಿರುತ್ತಾರೆ

ಲಾಹೋರ್ ಪಟ್ಟಣದಲ್ಲಿ ಪಾಲನಪೇಸ ಎಂಬೊಬ್ಬ ಐಶ್ವರ್ಯವಂತನಾದ ಹಿಂದುವು ತನ್ನ ೩೮ ಲಕ್ಷ ರೂಪಾಯಿನ ಆಸ್ತಿಯನ್ನೆಲ್ಲಾ ಆ ಪಟ್ಟಣದಲ್ಲಿರುವ ವಿದ್ಯಾಶಾಲೆಗಳೂ ಬಾಲಿಕಾ ಪಾಠಶಾಲೆಗಳಿಗೂ, ಅನಾಥಶಾಲೆಗೂ ಧರ್ಮ ಮಾಡಿರುತ್ತಾನೆ

ಇಂಡಿಯಾ ಸರ್ಕಾರದಿಂದ ಅಮೀರಿಗೆ ಸಲ್ಲುವ ವಾರ್ಷಿಕ ಪೊಗದಿ ಹಣದ ಪೈಕಿ ಬಹಳ ಭಾಗವನ್ನು ಅಫ್ಘಾನಿಸ್ಥಾನದ ಅಮೀರರು ಪಿಶಾವರ್ ಪಟ್ಟಣದಿಂದ ಖರೀದಿಸಿಕೊಂಡಂತೆಯೂ ಅದು ಜಲಾಲಾಬಾದಿನ ಮೂಲಕ ಸಾಗಿಹೋಯಿತೆಂದೂ ತಿಳಿದುಬಂದಿದೆ

ಮೀರತ್ ಪಟ್ಟಣದ ಬಂದೀಖಾನೆಯೊಳಗೆ ಗಡಿಪಾರು ಶಿಕ್ಷೆಯನ್ನು ಅನುಭವಿಸುತ್ತಿರುವ ಸತೀಶ ಚಂದ್ರ ಚಟರ್ಜಿ ಎಂಬಾತನು ಅಲ್ಲಿಂದ ಬಾರೀಸಲಿನಲ್ಲಿರುವ ತನ್ನ ಸ್ನೇಹಿತನವರಿಗೆ - ನಗೆ ಇಲ್ಲಿ ಎಲ್ಲಾ ಅನುಕೂಲವಾಗಿದೆ ಎಂದು ಕಾಗದವನ್ನು ಬರೆದಿದ್ದಾನೆ

ಕಲ್ಕತ್ತೆಯ ಬಳಿ ತಿತ್ತಗೂರ್ ಕಾರ್ಖಾನೆಯ ಹಿಂದೂ ಮುಹಮ್ಮದೀಯ ಕೂಲೀಕಾರರು ಒಬ್ಬರ ಮೇಲೊಬ್ಬರು ಬಿದ್ದು ಜಗಳ ಮಾಡಿದ ಮೊಕದ್ದಮೆಯು ಸರ್ಕಾರದವರು ೧೩ ಮಂದಿ ಮುಹಮ್ಮದೀಯರಿಗೆ ತಲಾ ೩ ೪ ೫ ರೂಪಾಯಿ ಜುಲ್ಮಾನೆ ವಿಧಿಸಿದ್ದಾರೆ

ಕಲ್ಕತ್ತಾ ಪಟ್ಟಣದಲ್ಲಿ “ಮಾತೃಪೂಜಾ” ಎಂಬ ರಾಜದ್ರೋಹಕರವಾದ ಬರವಣಿಗೆಗಳನ್ನುಳ್ಳ ಪುಸ್ತಕವನ್ನು ಅಚ್ಚುಹಾಕಿ ಕೊಟ್ಟದ್ದಕ್ಕಾಗಿ ಸರ್ಕಾರದವರು ಅಚ್ಚಿನ ಕಾರ್ಖಾನೆಯ ಮುಖಂಡನ ಮೇಲೆ ಮೊಕದ್ದಮೆ ಮಾಡಿ ಸದ್ಯ ಅವನನ್ನು ೫,೦೦೦ ರೂಪಾಯಿ ಜಾಮೀನ್ ತೆಗೆದುಕೊಂಡು ಬಿಟ್ಟಿರುವರು

ಬರ್ದ್ವಾನ್ ಪಟ್ಟಣದಲ್ಲಿ ರಮೇಶ ಚಂದ್ರಸರಕಾರ, ನಾರಾಯಣ ಚಂದ್ರ ದೇವ, ಹೃಷೀಕೇಶ ಮುಖರ್ಜಿ ಎಂಬ ಮೂರು ಮಂದಿಯೂ ಲೈಸನ್ಸ್ ಇಲ್ಲದೆ ತಮ್ಮ ಬಳಿಯಲ್ಲಿ ಪಿಸ್ತೂಲಿಗೆ ಹಾಕುವ ಮದ್ದುಗುಂಡನ್ನು ಇಟ್ಟುಕೊಂಡಿದ್ದದ್ದರಿಂದ ಪ್ರತಿ ಒಬ್ಬನಿಗೂ ಎರಡು ವರುಷ ಕಠಿಣ ಸಜಾ ವಿಧಿಸಿರುತ್ತಾರೆ

ಕಲ್ಕತ್ತಾ ಪಟ್ಟಣದಲ್ಲಿ ಶರಚ್ಚಂದ್ರ ಮುಖರ್ಜಿ ಎಂಬಾತನು “ಪಂಥ” ಎಂಬ ಪುಸ್ತಕವನ್ನು ಬರೆದು ಅದರಲ್ಲಿ ರಾಜದ್ರೋಹಕರವಾದ ವಿಚಾರಗಳನ್ನು ಪ್ರಸ್ತಾಪಮಾಡಿ ಜನರಿಗೆ ಸರ್ಕಾರದವರಮೇಲೆ ದ್ವೇಷಾಸೂಯೆಗಳನ್ನು ಕಲ್ಪಿಸಿದನೆಂದು ಅವನ ಮೇಲೆ ಮೊಕದ್ದಮೆ ಬಂದಿದೆ ಈಗ ಅವನನ್ನು ೫,೦೦೦ ರೂಪಾಯಿ ಜಾಮೀನು ತೆಗೆದುಕೊಂಡು ಬಿಟ್ಟಿದಾರೆ

ಮುಂದಿನ ತಿಂಗಳು ಎರಡನೇ ವಾರದಲ್ಲಿ ಕೊಚ್ಚಿ ಸಂಸ್ಥಾನಕ್ಕೆ ಸೇರಿದ ತ್ರಿಚೂರಿನ ಬಳಿ ವೈಯೂರಿನಲ್ಲಿ ವ್ಯವಸಾಯಾಭಿವೃದ್ಧಿಗೆ ಸಹಕಾರಿಗಳಾದ ವಸ್ತುಗಳ ಪ್ರದರ್ಶನವೂ ಗೋಕಾಯಿಗಳ ಪ್ರದರ್ಶನವೂ ನಡಿಯುವವೆಂದೂ, ಅಪೇಕ್ಷೆಯುಳ್ಳವರು ಅಲ್ಲಿಗೆ ವಸ್ತುಗಳನ್ನು ಕಳುಹಿಸಿ ಪ್ರದರ್ಶನ ಮಾಡಬಹುದೆಂದೂ ಅಲ್ಲಿನ ಸರ್ಕಾರದವರು ಪ್ರಕಟ ಮಾಡಿರುತ್ತಾರೆ

ಬಂಗಾಳಾ ಆಧಿಪತ್ಯದಲ್ಲಿ ಮಧುಪುರದಿಂದ ಝರಿಝರಿ ಎಂಬ ಸ್ಟೇಷನ್‌ಗೆ ಬೆಳಗಿನ ಝಾಮದಲ್ಲಿ ಹೋಗುತ್ತಿದ್ದ ರೈಲ್‌ಗಾಡಿಗೆ ಯಾರೋ ಹೊರಗಡೆಯಿಂದ ಪಿಸ್ತೂಲು ಪಾಮರ್ಗಿ ಹೊಡೆದರು ಗೋಲಿಯು ಒಂದು ಗಾಡಿಯ ಕಿಟಕಿಗೆ ಒಡಿದು ಕನ್ನಡಿಗಳು ಒಡೆದು ಹೋದವು ಯಾರಿಗೂ ಅಪಾಯವಾಗಲಿಲ್ಲ ಸರ್ಕಾರದವರು ಅಪರಾಧಿಗಳನ್ನು ತಲಾಷ್ ಮಾಡುತ್ತಿದಾರೆ

ಮಹಮೂದಾಬಾದಿನ ರಾಜರಿಗೆ ಕೆ ಸಿ ಐ ಇ ಎಂಬ ಬಿರುದನ್ನು ದಯಪಾಲಿಸಿದ್ದಕ್ಕಾಗಿ ಲಖ್ನೋ ಪಟ್ಟಣದಲ್ಲಿ ಉಮರಾವರೂ, ರಾಜವಂಶೀಕರೂ, ನವಾಬರುಗಳೂ, ತಾಲೂಕ್ದಾರರೂ, ಪ್ರಮುಖರೂ, ವಿದ್ಯಾವಂತರೂ ಸಾವಿರಾರು ಮಂದಿ ಸೇರಿ ಚಕ್ರವರ್ತಿ ಸಾರ್ವಭೌಮರವರಿಗೆ ರಾಜಭಕ್ತಿಪೂರ್ವಕವಾದ ವಂದನೆಗಳನ್ನು ಸಮರ್ಪಿಸಬೇಕೆಂದು ತೀರ್ಮಾನಮಾಡಿದರು

ಪಾಲ್ಘಾಟು ಜಿಲ್ಲೆಗೆ ಸೇರಿದ ಕೊಲ್ಲೆಂಗೋಡು ಪಟ್ಟಣದಲ್ಲಿ ಮಲಬಾರ್ ಪ್ರಾಂತ್ಯದ ಆಯುರ್ವೇದ ವೈದ್ಯಪಂಡಿತರ ಸಮಾಜವು ಈ ತಿಂಗಳ ಅಂತ್ಯಭಾಗದಲ್ಲಿ ನಡಿಯುವುದಾಗಿದೆ ಈ ಸಲ ವೈದ್ಯಪ್ರದರ್ಶನವು ನಡಿಯುವುದಿಲ್ಲ ಮೆ॥ ಮಹದೇವರಾಜರವರು ರಿಸೆಪ್ಷನ್ ಕಮಿಟಿಯ ಪ್ರೆಸಿಡೆಂಟರಾಗಿ ಆ ವೈದ್ಯ ಪಂಡಿತರ ಸಭೆಯಲ್ಲಿ ಪ್ರಾರಂಭದ ಉಪನ್ಯಾಸವನ್ನು ಮಾಡುವವರಾಗಿದಾರೆ

ಕೊಚ್ಚಿ ಸಂಸ್ಥಾನಕ್ಕೆ ಸೇರಿದ ತ್ರಿಚೂರಿನಲ್ಲಿ ವಿಕ್ಟೋರಿಯಾ ಜೂಬಿಲಿ ಗರಲ್ಸ್ ಸ್ಕೂಲಿನಲ್ಲಿ ಉಪಾಧ್ಯಾಯಿನಿಯರನ್ನು ತರಪೇತು ಮಾಡುವುದಕ್ಕೆ ಪ್ರತ್ಯೇಕವಾದ ತರಗತಿಯನ್ನು ಪ್ರಾರಂಭಿಸಿದಾರೆ ಹೀಗೆ ತರಪೇತಾಗತಕ್ಕ ಸ್ತ್ರೀಯರಿಗೆ ಸರ್ಕಾರದಿಂದ ವೇತನಗಳನ್ನು ಕೊಡುವುದಲ್ಲದೆ, ತೇರ್ಗಡೆ ಹೊಂದಿದವರಿಗೆ ಉಪಾಧ್ಯಾಯಿನಿಯರ ಸ್ಥಳವನ್ನು ಒದಗಿಸಿ ಕೊಡುವುದಾಗಿ ತಿಳಿಸಿರುವರು

ವೈಸ್ರಾಯಿಯವರು ಕೂಚ್ ಬೇಹಾರ ಸಂಸ್ಥಾನದ ಜಂಗಲುಗಳಲ್ಲಿ ಬೇಟೆಯ ಮಹೋತ್ಸವ ಮುಗಿಸಿದ್ದರಿಂದ ರೈಲ್ ಸ್ಟೇಷನಿಂದ ಜಂಗಲಿನೊಳಕ್ಕೆ ಅಂದರೆ ೫೦ ಮೈಲಿ ದೂರ ಮೋಟಾರ್ ಗಾಡಿಗಳು ಹೋಗಿ ಬರುವಂತೆ ೧೪ ಅಡಿ ಅಗಲವಾದ ರಸ್ತೆಯನ್ನು ಮಾಡಿಸುತ್ತಿದಾರೆ ಆ ಜಂಗಲುಗಳಲ್ಲಿ ಹುಲಿ ಕರಡಿ ಗೇಂಡ ಕೋಣ ಮೊದಲಾದ ದೊಡ್ಡ ಮೃಗಗಳು ಬಹಳವಾಗಿರುತ್ತವೆಂದು ವರ್ತಮಾನವಿದೆ

ಡಾರ್ಜಿಲಿಂಗ್ ಪಟ್ಟಣದ ಹತ್ತಿರ ಇಬ್ಬರು ಇಂಗ್ಲಿಷ್ ಸಿಪಾಯಿಗಳು ಬೇಟೆಯಾಡುತ್ತಿರುವಲ್ಲಿ ಅವರ ಒಂದು ಬಂದೂಕಿನ ಗೋಲಿಯು ಒಬ್ಬ ದೇಶೀಯನಿಗೆ ತಗಲಿ ಮೃತಪಟ್ಟನು ಅವರಿಬ್ಬರ ಮೇಲೂ ಮೊಕದ್ದಮೆ ಆಯಿತು ಹೈ ಕೋರ್ಟು ಜಡ್ಜಿಯವರು ತನಿಖೆಮಾಡಿ ಅಜಾಗರೂಕತೆಯಿಂದ ಈ ಕೊಲೆ ಸಂಭವಿಸಿತೆಂದು ಹೇಳಿ ಅವರಿಬ್ಬರಿಗೂ ತಲಾ ೫೦ ರೂಪಾಯಿ ಜುಲ್ಮಾನೆ ಅಥವಾ ಮೂರುವಾರಗಳ ಕಠಿಣಸಜಾ ಅನುಭವಿಸಬೇಕು ಎಂಬ ಶಿಕ್ಷೆಯನ್ನು ವಿಧಿಸಿದರು

ಹಿಂದುಸ್ಥಾನದ ವಾಯುವ್ಯ ಸರಹದ್ದಿನಲ್ಲಿರುವ ಕೊಹಾಟ್ ಎಂಬ ರಾಜ್ಯದ ಸೈನ್ಯದಲ್ಲಿದ್ದ ಅಬ್ದುಲ್ ಖಲೀಲ್ ಎಂಬೊಬ್ಬ ಸಿಪಾಯಿಯು ಕಳೆದ ಅಕ್ಟೋಬರಿನಲ್ಲಿ ಸೈನ್ಯದಿಂದ ತಪ್ಪಿಸಿಕೊಂಡು ಹೋಗಿದ್ದನು ತನ್ನ ಬಳಿ ಇದ್ದ ಬಂದೂಕನ್ನೂ ಮದ್ದುಗುಂಡನ್ನೂ ವಾಪಸು ಕೊಡದೆ ಇದ್ದದ್ದರಿಂದ ಅವನನ್ನು ಸರ್ಕಾರದವರು ತಲಾಷ್‌ಮಾಡಿ ಹಿಡಿದರು ಈಗ ಅವನಿಗೆ ಸೈನ್ಯದ ಕಾನೂನ್ ಪ್ರಕಾರ ದರ್ಯಾಪ್ತು ನಡೆದು ೧೦ ವರುಷದ ದ್ವೀಪಾಂತರ ಶಿಕ್ಷೆ ವಿಧಿಸಲ್ಪಟ್ಟಿತು

ರಂಗೂನ್ ಪಟ್ಟಣದ ವರ್ತಕರ ಪೇಟೆಯಲ್ಲಿ ಕಳೆದ ವಾರ ಒಂದು ದಿವಸ ದ್ವಿತೀಯ ಗುಂಡು ರಾಶಿ ತುಂಬಿದ ಗಾಡಿಯನ್ನು ಬಿಟ್ಟುಹೋದರು ಪ್ರಜೆಗಳು ಚೆಲ್ಲಾಪಿಲ್ಲಿಯಾಗಿ ಕೂಗಿಕೊಂಡು ಓಡಿಹೋದರು ಪೋಲೀಸ್ ಅಧಿಕಾರಿಗಳೂ ಮ್ಯಾಜಿಸ್ಟ್ರೇಟರೂ ಹಾಜರಾಗಿ ಆ ಸಿಡಿಮದ್ದಿನ ಗುಂಡು ಅಲ್ಲಿ ಹಾರುವುದಕ್ಕೆ ಕಾರಣ ಮುಂತಾದದ್ದನ್ನು ಕುರಿತು ತನಿಖೆಮಾಡುತ್ತಿದಾರೆ ಅದನ್ನು ಯಾರು ತಂದು ಯಾವ ಉದ್ದೇಶದಿಂದ ನಡುಪೇಟೆಯಲ್ಲಿ ಹಾಕಿಸಿದರೋ ಇನ್ನೂ ಗೋಚರಪಡಲಿಲ್ಲ

ಕಳೆದ ವಾರ ಪೂನಾ ಪಟ್ಟಣದಲ್ಲಿ ಸೈನಿಕರಿಗೂ ವರ್ತಕರಿಗೂ ಮಾರಾಮಾರಿ ನಡಿಯಿತು ಸೈನಿಕರು ಅಂಗಡಿಗಳಿಗೆ ನುಗ್ಗಿ ದವಸ ಧಾನ್ಯಾದಿಗಳನ್ನು ಲೂಟಿ ಮಾಡಿದ್ದಲ್ಲದೆ ಸಾಹುಕಾರರನ್ನು ಹಿಡಿದು ಚೆನ್ನಾಗಿ ಹೊಡೆದರು ವರ್ತಕರೂ ಕೂಡ ತಮ್ಮ ಕೈಗೆ ಸಿಕ್ಕಿದ್ದನ್ನು ತೆಗೆದುಕೊಂಡು ಸಿಪಾಯಿಗಳ ಮೇಲೆ ಬಿದ್ದು ಹೊಡೆದಾಡಿದರು ಅಷ್ಟರಲ್ಲೇ ಪೋಲೀಸಿನವರೂ ಅಧಿಕಾರಿಗಳೂ ಬಂದು ಕಲಹವನ್ನು ನಿಲ್ಲಿಸಿ ದೊಂಬಿಯನ್ನು ಚದರಿಸಿ ಗಾಯಪಟ್ಟವರನ್ನು ಆಸ್ಪತ್ರೆಗೆ ಸಾಗಿಸಿದರು ಈಗ ಪಟ್ಟಣದಲ್ಲಿ ಎಲ್ಲ ನೆಮ್ಮದಿಯಾಗಿದೆ

ರೋಗ ಬಂದ ಮೇಲೆ ಔಷಧಕ್ಕೆ ಅಲೆದಾಡುವುದಕ್ಕಿಂತಲೂ ರೋಗ ಬಾರದಂತೆ ಮೊದಲೇ ಎಚ್ಚರಿಕೆಯಾಗಿರುವುದು ಸರ್ವೋತ್ತಮ ಈ ಮಾತನ್ನು ಪ್ರಜೆಗಳು ಎಳೆಮಗುವಿನಲ್ಲಿ ಮೊದಲನೇ ಸಲವು ಸುಮಾರು ೧೫ ವರುಷವಾದಾಗ ಒಂದು ಸಲವೂ, ೩೦ನೇ ವಯಸ್ಸಿನಲ್ಲಿ ಒಂದು ಸಲವೂ ಅಂತೂ ಮೂರಾವರ್ತಿ ಸಿಡುಬು ಹಾಕಿಸಿಕೊಳ್ಳಬೇಕೆಂಬುದನ್ನೂ ಹೆಲ್ತ್ ಆಫೀಸರವರು ಮದರಾಸ್ ಪಟ್ಟಣದ ಸಕಲ ಪ್ರಜೆಗಳಿಗೂ ತಿಳಿಯಪಡಿಸಿ, ಕೇಳಿದವರ ಮನೆಗಳಿಗೆ ಸಿಡುಬು ಹಾಕುವವರನ್ನು ಕಳುಹಿಸಿಕೊಡುತ್ತೇವೆಂದು ಪ್ರಕಟಮಾಡಿದಾರೆ

ಮಿಡ್ನಾಪೂರ್ ವಿದ್ಯಾಶಾಲೆಯಲ್ಲಿ ಶಾಸ್ತ್ರಬೋಧಕರಾದ ಬಾಬು ತಾರಕೇಶ್ವರ ಭಟ್ಟಾಚಾರ್ಯರವರು ತಂತಿವರ್ತಮಾನವನ್ನು ಈಗ್ಗಿಂತಲೂ ಅತಿ ಜಾಗ್ರತೆಯಾಗಿಯೂ ಬಹು ಸ್ಪಷ್ಟವಾಗಿಯೂ ಕಳುಹಿಸುವಂಥಾ ಹೊಸ ಮಾರ್ಗವನ್ನು ಕಂಡುಹಿಡಿದಿದಾರೆ ಅವರು ಹೇಳುವ ಪ್ರಕಾರ ಒಂದು ಊರಿನಲ್ಲಿ ಕೊಡುವ ವರ್ತಮಾನವು ಇನ್ನೊಂದು ಊರಿನಲ್ಲಿ ಅಕ್ಷರಶಃ ತಾನಾಗಿಯೇ ಬರೆದು ಬರುವುದು ಇಂಥಾ ನೂತನಮಾರ್ಗವನ್ನು ಪ್ರಚಾರಕ್ಕೆ ತಂದರೆ ಈಗಲ್ಲದಲ್ಲಿ ಟೆಲಿಗ್ರಾಫ್ ಇಲಾಖೆಯ ಸಿಬ್ಬಂದಿ ಖರ್ಚು ಅರೆವಾಸಿ ಕಡಮೆಯಾಗುವುದೆಂದು ತಿಳಿದುಬಂದಿದೆ

ಕಳೆದ ವಾರ ಪಂಜಾಬ್, ರಾಜಪುಟಾನಾ ಮತ್ತು ಸಂಯುಕ್ತ ಆಧಿಪತ್ಯಗಳಲ್ಲಿ ಸ್ವಲ್ಪಮಾತ್ರ ಮಳೆ ಆಯಿತು ಆದರೆ ಉತ್ತರದೇಶದಲ್ಲೆಲ್ಲಾ ಎಲ್ಲರೂ ಮಳೆಯನ್ನು ನಿರೀಕ್ಷಿಸುತ್ತಿದಾರೆ ಬಿಹಾರದಲ್ಲಿ ಮಳೆ ಇಲ್ಲದೆ ಜನರು ಬಹಳ

ಕಷ್ಟಪಡುವರು ಗವರ್ನ್‌ಮೆಂಟಿನವರ ಘೋಷಣೆಯಲ್ಲಿ ಇಪ್ಪತ್ತೆರಡು ಸಾವಿರ ಪ್ರಜೆಗಳು ಸೇರಿಕೊಂಡಿದ್ದಾರೆ, ಅಂದರೆ, ಬಂಗಾಳಾದಲ್ಲಿ ೧೮,೦೦೦ ಪ್ರಜೆಗಳೂ, ಮಧ್ಯಪ್ರಾಂತ್ಯಗಳಲ್ಲಿ ೧,೫೦೦ ಜನರೂ, ಪೂರ್ವಬಂಗಾಳಾ ಮತ್ತು ಆಸ್ಸಾಂ ಪ್ರಾಂತ್ಯದಲ್ಲಿ ೨,೨೦೦ ಜನರೂ ರಿಲೀಫ್ ಕಾಮಗಾರಿಗಳನ್ನು ಮಾಡುತ್ತಿರುವರು

ಡೆಹಲಿ ಪಟ್ಟಣದಲ್ಲಿ ಹೊಲಗಿತ್ತಿಯರನ್ನು ತರಬೇತು ಮಾಡುವುದಕ್ಕೆ ಇಷ್ಟರಲ್ಲೇ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸುವರು ಎಲ್ಲಾ ಜಾತಿಯ ಸ್ತ್ರೀಯರೂ ಅಲ್ಲಿ ಸೇರಿ ಆ ವಿದ್ಯೆಯನ್ನು ಕಲಿತುಕೊಳ್ಳಬಹುದೆಂದು ಏರ್ಪಾಡು ಮಾಡಿದ್ದಾರೆ ಖೈರ್‌ಪುರದ ಅವಿವಾಹಿತ ಮಹಾರಾಜರವರೂ, ಮಾಲೇರ್‌ಕೋಟ್ಲಾ ನವಾಬರವರೂ ಈ ವಿದ್ಯಾಶಾಲೆಯ ಪೋಷಕರಾಗಿ ನಿಂತಿರುವರು ಈ ಪಾಠಶಾಲೆಯ ಮೂಲಧನಕ್ಕೆ ಈಗ ೪೦,೦೦೦ ರೂಪಾಯಿ ವಸೂಲಾಗಿವೆ ಮುಂದೆ ಇನ್ನೂ ಹೆಚ್ಚು ಹಣ ಕೊಡುವುದರಲ್ಲಿದೆ ಪಂಜಾಬ್ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರವರ ಪತ್ನೀಯವರು ಈ ಪಾಠಶಾಲೆಯನ್ನು ಪ್ರತಿಷ್ಠೆ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ

ಕೊಲ್ಹಾಪುರ ಸಂಸ್ಥಾನದಲ್ಲಿ ವಿನಾಯಕ ನಾರಾಯಣ ಜೋಷಿ, ವಿಷ್ಣು ಗೋವಿಂದ ಬಿಜಾಪುರಕರ್, ವಾಮನ ಬಲವಂತ್ ಜೋಷಿ, ಈ ಮೂರು ಮಂದಿಯೂ "ವಿಶ್ವವೃತ್ತ" ಎಂಬ ಪತ್ರಿಕೆಯಲ್ಲಿ ರಾಜದ್ರೋಹಕರವಾದ ಸಂಗತಿಗಳನ್ನು ಬರೆದು ಪ್ರಕಟಮಾಡಿದರೆಂದು ಅವರನ್ನು ಸೆಷನ್ ವಿಚಾರಣೆಗೆ ಗುರಿಮಾಡಿದ್ದಾರೆ ಎರಡನೇ ಅಪರಾಧಿಯಾದ ಬಿಜಾಪುರಕರ್ ಎಂಬವರು ಎಂ ಎ ಪರೀಕ್ಷೆ ಕೊಟ್ಟವರು ಹತ್ತು ವರುಷದ ಹಿಂದೆ ಕೊಲ್ಹಾಪುರ ಸಂಸ್ಥಾನದ ರಾಜಾರಾಂ ಕಾಲೇಜಿನಲ್ಲಿ ಉಪಾಧ್ಯಾಯರಾಗಿದ್ದರು ಇವರು ಆ ಕೆಲಸ ಬಿಟ್ಟು ಮೂರು ವರುಷವಾಯಿತು ಅಂದಿನಿಂದ ಅವರು ಸಮರ್ಥ ವಿದ್ಯಾಲಯವೆಂಬ ಪಾಠಶಾಲೆಯನ್ನು ಪ್ರಾರಂಭಿಸಿ ಬಾಲಕರನ್ನು ತರಬೇತು ಮಾಡುತ್ತಿದ್ದದ್ದಲ್ಲದೆ "ವಿಶ್ವವೃತ್ತ" ವೆಂಬ ಮರಾಠಿ ಭಾಷೆಯ ಮಾಸಿಕ ಪತ್ರಿಕೆಯನ್ನು ನಡೆಸುತ್ತಾ ಬಂದಿದ್ದರು

ಕಳೆದ ವಾರ ಪೂನಾ ಪಟ್ಟಣದಲ್ಲಿ ಆಗಾಖಾನ್‌ರವರ ಬಂಗಲೆಯ ಬಾಗಿಲಲ್ಲಿ ರಾತ್ರಿ ಸುಮಾರು ೧೧॥ ಘಂಟೆ ಹೊತ್ತಿನಲ್ಲಿ ಒಂದು ಸಿಡಿಮದ್ದಿನ ಗುಂಡು ಮಹಾ ಶಬ್ದದೊಡನೆ ಹಾರಿತು ಅದರ ಪೂರ್ವೋತ್ತರವೇನೆಂದರೆ ಆ ರಾತ್ರಿ ಅಬ್ದುಲ್ ಟೋಟೂ ಎಂಬೊಬ್ಬ ಮಹಮದೀಯನು ರೈಲ್ ಸ್ಟೇಷನ್‌ನಿಂದ ಬರುತ್ತಿರುವಾಗ್ಗೆ ಆ ಬಂಗಲೆಯ ಬಾಗಿಲ ಮುಂದೆ ಬಿದ್ದಿದ್ದ ಒಂದು ಉಂಡೆಯನ್ನು ಕಂಡು ಅದು ತೆಂಗಿನಕಾಯಿ ಎಂದು ಊಹಿಸಿ ಬಿಚ್ಚಿನೋಡಿ ಒಡೆಯುವುದಕ್ಕೆ ಹೋದಾಗ ಅದು ಬಹಳ ಶಬ್ದದೊಡನೆ ಹಾರಿ ಅವನ ಬಲಗೈ ಚೂರು ಚೂರಾಯಿತು ದಾರಿಗರು ಅವನನ್ನು ಆಸ್ಪತ್ರೆಗೆ ತಂದು ಹಾಕಿದರು ಅಲ್ಲಿ ಅವನಿಗೆ ಚಿಕಿತ್ಸೆ ನಡೆಯುತ್ತಿದೆ ಇತ್ತಲಾಗಿ ಆ ಸಿಡಿಮದ್ದಿನ ಗುಂಡನ್ನು ಅಲ್ಲಿ ಯಾರು ಯಾತಕ್ಕೋಸ್ಕರ ಹಾಕಿದ್ದರೆಂಬ ವಿಚಾರವನ್ನು ಸರ್ಕಾರದವರು ತನಿಖೆ ಮಾಡಿಸುತ್ತಿದ್ದಾರೆ

ಮಹಮದೀಯರು ಹಾಕಿಕೊಳ್ಳುವ ಟೋಪಿಗಳು ಆಸ್ಟ್ರಿಯಾ ರಾಜ್ಯದ ಕಾರ್ಖಾನೆಗಳಲ್ಲಿ ತಯಾರಾಗಿ ಹಿಂದುಸ್ಥಾನಕ್ಕೆ ಬಂದು ಬಿಕರಿಯಾಗುತ್ತವೆ ಪ್ರತಿ ವರುಷವೂ ಕೆಲವು ಸಾವಿರ ರೂಪಾಯಿಗಳನ್ನು ಮಹಮದೀಯರು ಈ ಟೋಪಿಗಳಿಗೆ ಖರ್ಚು ಮಾಡುವರು ಈಚೆಗೆ ತುರ್ಕಿಯವರಿಗೂ ಆಸ್ಟ್ರಿಯಾದವರಿಗೂ ಎರಡು ಡಿಸ್ಟ್ರಿಕ್ಟುಗಳ ಹಕ್ಕುದಾರಿಯ ವಿಷಯದಲ್ಲಿ ಮನಸ್ತಾಪಗಳುಂಟಾದವೆಂತಲೂ, ತುರ್ಕಿಯವರು ಆಸ್ಟ್ರಿಯಾದಿಂದ ತಯಾರಾಗಿ ಬರುವ ಯಾವ ಪದಾರ್ಥವನ್ನೂ ಕೊಂಡು ಉಪಯೋಗಿಸಕೂಡದೆಂದು ಕಟ್ಟುಮಾಡಿಕೊಂಡಿದ್ದಾರೆಂತಲೂ, ಬಂಗಾಳಾ ಅಧಿಪತ್ಯಕ್ಕೆ ಈ ಮನಸ್ತಾಪದ ಸುದ್ದಿ ತಲಪಿ ಅಲ್ಲಿನ ಮಹಮದೀಯರೆಲ್ಲಾ ಆ ಟೋಪಿಗಳನ್ನು ಉಪಯೋಗಿಸದೆ ರುಮಾಲುಗಳನ್ನೇ ಕಟ್ಟಿಕೊಳ್ಳಲಾರಂಭಿಸಿದ್ದಾರೆಂತಲೂ ವಾಚಕರಿಗೆ ತಿಳಿಸಿರುತ್ತೇವಷ್ಟೆ ಈಗ ಅಂಥಾ ಟೋಪಿಗಳನ್ನೇ ಸಾವಿರಗಟ್ಟಲೆ ತಯಾರುಮಾಡುವುದಕ್ಕೆ ಲಾಹೋರ್ ಪಟ್ಟಣದಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಮುಸಲ್ಮಾನ್ ದೊಡ್ಡ ಮನುಷ್ಯರು ಗೊತ್ತು ಮಾಡಿದ್ದಾರೆ ಇದಕ್ಕಾಗಿ ಎರಡೂವರೆ ಲಕ್ಷ ರೂಪಾಯಿನ ಒಂದು ಫಂಡನ್ನು ಪ್ರಾರಂಭಿಸಿ, ಷೇರ್ ಒಂದಕ್ಕೆ ೨೫ ರೂಪಾಯಿನಂತೆ ಕೂಡಿಸುತ್ತಿರುವರು ೧೦,೦೦೦ ಷೇರುಗಳು ಬಿಕರಿ ಆದ ಒಡನೆಯೇ ಕಾರ್ಖಾನೆಯು ಪ್ರಾರಂಭಿಸಲ್ಪಡುವುದು

ಕಲ್ಕತ್ತೆಯಲ್ಲಿ ಕಳೆದ ವಾರ ಮಕ್ಕಳ ಸಂರಕ್ಷಣಾರ್ಥವಾದ ಕೂಟದ ಸಭೆಯು ಜರುಗಿತು ಆಗ ಆ ಸಭೆಯಲ್ಲಿ ಸರ್ ಚಾರ್ಲ್ಸ್ ಅಲ್ಲೆನ್‌ರವರು ತಿಳಿಸಿದ್ದೇನೆಂದರೆ ಈ ಮಹಾ ಪಟ್ಟಣದಲ್ಲಿ ದೇಹವಿಕ್ರಯಮಾಡಿ ಜೀವಿಸುವವರ ಮನೆಗಳಲ್ಲಿ ಸಾವಿರಾರು ಹೆಣ್ಣು ಮಕ್ಕಳು ಇರುತ್ತಾರೆ ಇವರಲ್ಲಿ ಕಂದೆತಾಯಿಗಳಿಲ್ಲದವರೇ ಬಹಳ ಇಂಥಾ ನಿರ್ಗತಿಕರಾದ ಮಕ್ಕಳನ್ನು ಹೀನ ಸಮಾಧಾಯಕ್ಕೆ ಪ್ರಯೋಗ ಮಾಡುವುದನ್ನು ತಪ್ಪಿಸಬೇಕು ತಂದೆತಾಯಿಗಳಾಗಲಿ ಪೋಷಕರಾಗಲಿ ಇಲ್ಲದೆ ಹತ್ತು ವರುಷ ವಯಸ್ಸಿನೊಳಗಿರುವ ಹೆಣ್ಣು ಮಕ್ಕಳನ್ನು ಈ ಕೂಟದವರು ಗುಮಾನಿ ಇಟ್ಟು ಪತ್ತೆಮಾಡಿ ದುಷ್ಟ ಸ್ತ್ರೀಯರ ವಶದಿಂದ ಬಲಾತ್ಕಾರವಾಗಿಯಾದರೂ ತಪ್ಪಿಸಿ, ಬೇರೆ ಕಡೆ ಇಟ್ಟು ಪೋಷಣೆ ಮಾಡಬೇಕಾಗಿದೆ ಈ ವಿಚಾರವು ಎಂದೂ ಮಹನೀಯರಿಗೆ ತಿಳಿದಿಲ್ಲವೆಂದು ಊಹಿಸುತ್ತೇನೆ ಹಾಗೆ ತಿಳಿದಿದ್ದರೆ ಅದರ ಪರಿಹಾರಕ್ಕೆ ತಕ್ಕ ಏರ್ಪಾಡನ್ನು ಮಾಡದೆ ಇರುತ್ತಿರಲಿಲ್ಲ ಈ ಸಂಗತಿಯನ್ನು ಗವರ್ನ್‌ಮೆಂಟಿಗೆ ಪ್ರಜೆಗಳ ಮುಖಾಂತರ ತಕ್ಕ ರೀತಿಯಲ್ಲಿ ಅರಿಕೆಮಾಡಿಕೊಂಡ ಪಕ್ಷದಲ್ಲಿ ಅವರು ಕಾನೂನ್ ಮಾಡಿಕೊಟ್ಟಾರೆನ್ನುವುದಕ್ಕೆ ಸಂಶಯವಿಲ್ಲ ದೇಶವತ್ಸಲರು ಈ ವಿಷಯವನ್ನು ಕುರಿತು ವಿಚಾರಿಸಿ ಕೊಟ್ಟನೆ ಮಾಡಿ, ಜಾಗ್ರತೆಯಿಂದ ಕಾರ್ಯಭಾಗ ನಡಿಸ್ಯಾರೆಂದು ಪ್ರಾರ್ಥಿಸುತ್ತೇನೆ ಎಂಬುದೇ ಇಂಥಾ ಏರ್ಪಾಡು ಈ ರಾಷ್ಟ್ರದ ಪ್ರತಿ ಒಂದು ದೊಡ್ಡ ಪಟ್ಟಣದಲ್ಲೂ ಮೊದಲು ಪ್ರಾರಂಭವಾದರೆ ದುರ್ನೀತಿಯು ಕಡೆಗಂಡೀತೆಂದು ತೋರುತ್ತದಾಗಿದೆ

ವಿದೇಶ ವರ್ತಮಾನಗಳು

ಹಂಗೇರಿ ರಾಜ್ಯಕ್ಕೆ ಸೇರಿದ ನೆಜ್‌ಷ್ಟ್ರಾಂ ಎಂಬ ಗಣಿಯಲ್ಲಿ ಬೆಂಕಿ ಹುಟ್ಟಿ ಬಹು ಭಯಂಕರವಾದ ಶಬ್ದದೊಡನೆ ಹಾರಿತು [illegible]

ಚೀನಾರಾಜ್ಯಕ್ಕೆ ಹೋಗುತ್ತಿದ್ದ ಒಂದು ಇಂಗ್ಲೀಷ್ ಜಹಜು ಸಿಂಗಪುರದ ಬಳಿ ಮತ್ತೊಂದು ಜಹಜಿಗೆ ಬಡಿದು ಅದನ್ನು ಮುಳುಗಿಸಿ ಬಿಟ್ಟಿತು ಅದರಲ್ಲಿದ್ದ ಏಳು ಮಂದಿ ದೇಶೀಯರು ಮೃತಪಟ್ಟರು

ತುರ್ಕಿರಾಜ್ಯದವರು ತಮ್ಮ ಭೂಸೈನ್ಯವನ್ನು ತರಬೇತು ಮಾಡುವುದಕ್ಕೆ ಜರ್ಮನಿಯ ಯುದ್ಧೋದ್ಯೋಗಸ್ಥರನ್ನೂ, ಸಮುದ್ರ ಸೈನ್ಯದ ತರಬೇತಿಗೆ ಇಂಗ್ಲೀಷ್ ಯುದ್ಧೋದ್ಯೋಗಸ್ಥರನ್ನೂ ನೇಮಕಮಾಡಿಕೊಂಡಿದ್ದಾರೆ

ತುರ್ಕಿ ರಾಜ್ಯದ ಸಮುದ್ರ ಸೇನೆಯ ಹತ್ತುಮಂದಿ ಯುದ್ಧೋದ್ಯೋಗಸ್ಥರೂ ಸುಲ್ತಾನರವರ ಒಬ್ಬ ಕುಮಾರನೂ ಅಮೇರಿಕದ ನಾವೆಯ ಸೈನ್ಯದಲ್ಲಿ ಸೇರಿ ತರಬೇತಿಗಾಗಿ ಬರುವುದಕ್ಕೆ ಅಮೇರಿಕಕ್ಕೆ ಪ್ರಯಾಣಮಾಡಿದರು

ಅಮೇರಿಕಕ್ಕೆ ಸೇರಿದ ಪಶ್ಚಿಮವರ್ಜೀನಿಯಾ ಡಿಸ್ಟ್ರಿಕ್ಟಿನಲ್ಲಿ ಬ್ಲೂಫೀಲ್ಡ್ಸ್ ಎಂಬ ಸ್ಥಳದ ಗಣಿಗಳೊಳಗೆ ಕಳೆದ ವಾರ ಅಕಸ್ಮಾತ್ತಾಗಿ ಕೆಲಸಮಾಡುತ್ತಿದ್ದ ನಾಲ್ವತ್ತು ಜನರು ಗವಿಯೊಳಗೆ ಸಿಕ್ಕಿಹೋಗಿದ್ದಾರೆ ಅವರು ಬದುಕಿಬರುವರೆಂಬ ಆಸೆಯಿಲ್ಲ

ದಕ್ಷಿಣ ಆಫ್ರಿಕಕ್ಕೆ ಸೇರಿದ ಜೋಹಾನಸ್‌ಬರ್ಗ್‌ನ ಒಂದು ಗಣಿಯಲ್ಲಿ ಚೀನಾ ಕೂಲಿಯವನೊಬ್ಬನು ಅಜಾಗರೂಕನಾಗಿ ಬೆಂಕಿ ಹತ್ತಿಸಿದ್ದರಿಂದ ಗಣಿಯಲ್ಲಿ ಬೆಂಕಿ ಹಬ್ಬಿ ಅನಾಹುತವಾಯಿತು ಆರು ಮಂದಿ ಮೃತಪಟ್ಟರು ಇಪ್ಪತ್ತನಾಲ್ಕು ಜನರಿಗೆ ಗಾಯಗಳಾದವು

ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳ ಗವರ್ನ್‌ಮೆಂಟಿಗೂ ವೆನಿಜುವೇಲಾ ಗವರ್ನ್‌ಮೆಂಟಿಗೂ ಉಂಟಾಗಿರುವ ಮನಸ್ತಾಪವನ್ನು ಹೇಗ್ ಪಟ್ಟಣದ ಪಂಚಾಯಿತಿ ಕೋರ್ಟಿನ ಸಲ್ಲಿಗೆ ತಿಳಿಸಿ ಅವರ ತೀರ್ಮಾನದಂತೆ ನಡೆಯಕೊಳ್ಳುವುದಾಗಿ ಸಮ್ಮತಿಪಟ್ಟಿರುವರು

ಅಂತರಿಕ್ಷದಲ್ಲಿ ಸಂಚರಿಸುವ ವಿಮಾನಗಳನ್ನು ತಯಾರುಮಾಡುವವರೆಲ್ಲಾ ಕಳೆದ ಸೋಮವಾರ ಲಂಡನ್ ಪಟ್ಟಣದಲ್ಲಿ ಸೇರಿ ಒಂದು ಸಭೆಯನ್ನು ನಡೆಸಿದರು ವಿಮಾನ ಸಂಚಾರದಲ್ಲಿ ಪ್ರಾಪ್ತವಾಗಬಹುದಾದ ಅಪಾಯಗಳನ್ನು ಕುರಿತು ಚರ್ಚೆಮಾಡಿ, ಆ ಅಪಾಯಗಳ ನಿವಾರಣೆಗೆ ಅವಶ್ಯವಾದ ಕಾನೂನುಗಳನ್ನು ಮಾಡಿ ಜಾರಿಗೆ ತರುವವರಾಗಿದ್ದರು

ಫ್ರಾನ್ಸ್ ಸಂಸ್ಥಾನದಲ್ಲಿ ನಾಲ್ಕರು ಕೊಲೆಪಾತಕಿಗಳನ್ನು ಕಳೆದ ವಾರ ಬೆಥೂನ್ ಎಂಬ ಪಟ್ಟಣದ ನಡುವೆ ಸಾವಿರಾರು ಪ್ರಜೆಗಳ ಎದುರಿಗೆ ಗಲ್ಲಿಗೆ ಹಾಕಿಸಿದರು ಆ ಸಂಸ್ಥಾನದಲ್ಲಿ ಕೊಲೆಗಳೇ ಅಪರೂಪ ಈಚೆಗೆ ಕ್ರೂರಿಗಳು ಕೊಲೆಪಾತಕವನ್ನು ನಡಿಸಲಾರಂಭಿಸಿದ್ದರಿಂದ ಕಾನೂನ್ ಮಾಡಿ, ಅಂಥವರನ್ನು ಗಲ್ಲಿಗೆ ಹಾಕುವುದು ರೂಢಿಗೆ ತರಬೇಕಾಯಿತು

ಚೀನಾರಾಜ್ಯದಲ್ಲಿ ಹೆಣ್ಣುಮಕ್ಕಳು ತಮ್ಮ ಶರೀರಕೂದಲನ್ನು ಮುಚ್ಚಿದ ಕಡೆಗೆ ತೆಗೆದುಕೊಂಡು ಉದ್ದವಾದ ಜಡೆ ಹೆಣೆದು ಬಿಟ್ಟುಕೊಳ್ಳುವುದು ಪದ್ಧತಿಯಾಗಿದೆ ಈ ಪದ್ಧತಿಯನ್ನು ನಿಲ್ಲಿಸಿಬಿಡಬೇಕೆಂದು ಅಲ್ಲಿನ ಮಂತ್ರಿಯವರು ಇಸ್ತಿಹಾರುಹಾಕಿ, ನಿಲ್ಲಿಸಿರುತ್ತಾರೆ ಅಲ್ಲಿನ ಪೂರ್ವಾಚಾರಗಳು ಹೀಗೆಯೇ ಒಂದಾಗಿ ಕ್ರಮಪಡುತ್ತಾ ಬಂದಿರುವವು

ಜೀವಾಚಕ್ರಾಧಿಪತ್ಯದ ಚಕ್ರವರ್ತಿಯವರೂ ಅವರ ಮಾತೃಶ್ರೀಯವರೂ ಕಾಲವಾದದ್ದಷ್ಟೆ ಅವರಿಬ್ಬರ ಉತ್ತರಕ್ರಿಯಾದಿಗಳಿಗೂ ೧೫ ಲಕ್ಷ ರೂಪಾಯಿನ ತನಕ ಖರ್ಚಾಯಿತು ಖಜಾನೆಯಲ್ಲಿ ಹಣವಿಲ್ಲದೆಹೋದದ್ದರಿಂದ ಹಣವನ್ನು ಕೂಡಿಸಿ ಕಳುಹಿಸಬೇಕೆಂದು ಮಂತ್ರಿಯವರು ಬೇರೆ ಬೇರೆ ಅಧಿಪತ್ಯಗಳ ಗವರ್ನರುಗಳಿಗೂ ವೈಸ್‌ರಾಯಿಯವರಿಗೂ ತಾಕೀತುಗಳನ್ನು ಕೊಟ್ಟಿದ್ದಾರೆ

ಚೀನಾ ರಾಜ್ಯಕ್ಕೆ ಸೇರಿದ ಕ್ಯಾಂಟನ್ ನಗರದ ಒಂದು ದೇವಸ್ಥಾನದೊಳಗೆ ಒಂದು ಹುಲಿಯು ಸೇರಿಕೊಂಡಿತ್ತು ನೂರಾರು ಜನರು ಸೇರಿದರೂ ಅದು ಸಿಕ್ಕದೆ ತಪ್ಪಿಸಿಕೊಂಡೇ ಹೋಯಿತು ೬—೭ ಜನರು ಅದರಿಂದ ಕಡಿಸಿಕೊಂಡು ಗಾಯಪಟ್ಟರು ಕಡೆಗೆ ಶೂರನಾದ ಒಬ್ಬ ಚೀನೆಯವನು ಅದರ ಮೇಲೆ ಹಾರಿ ಕುಳಿತುಕೊಂಡು ಅದರ ಬಾಯಿಗೆ ಗುಂಡು ಹೊಡೆದು ಕೊಂದು ಹಾಕಿದನು

ಉತ್ತರ ಅಮೇರಿಕಕ್ಕೆ ಸೇರಿದ ಸೀಟಲ್ ವೆಲ್ಲಿಂಗ್ಟನ್ ಟಾಕೋಮಾ, ವಾಂಕೂವರ್, ವಿಕ್ಟೋರಿಯಾ ಬ್ರಿಟಿಷ್ ಕೊಲಂಬಿಯಾ, ಈ ಮೊದಲಾದ ಪ್ರಾಂತ್ಯಗಳಲ್ಲಿ ಕಳೆದ ಸೋಮವಾರ ಮಧ್ಯಾಹ್ನವೂ ಸಾಯಂಕಾಲವೂ ಎರಡಾವರ್ತಿ ಬಹಳ ಬಲವಾಗಿ ಭೂಕಂಪವಾಯಿತು ಪ್ರಜೆಗಳು ಗಾಬರಿಬಿದ್ದು ಕಂಪಿಸುತ್ತಾ ಮನೆ ಮಠಗಳನ್ನೆಲ್ಲಾ ಬಿಟ್ಟು ಓಡಿಹೋದರು ದೇವರದಯದಿಂದ ಪ್ರಾಣನಷ್ಟವೇನೂ ಸಂಭವಿಸಲಿಲ್ಲ

ಫಿಲಿಪ್ಪೈನ್ ದ್ವೀಪ ಸಮುದಾಯಕ್ಕೆ ಸೇರಿದ ಒಫಾರ್ ಎಂಬ ದ್ವೀಪದಲ್ಲಿ ತಯಾರಾಗುವ ಸಕ್ಕರೆಯು ಜಪಾನ್ ರಾಜ್ಯಕ್ಕೆ ಬಹಳವಾಗಿ ಸಾಗುತ್ತಿದೆ ಇದರ ಮೇಲೆ ಜಪಾನಿನವರು ಸುಂಕವನ್ನು ಹಾಕಿರುವರು ಈ ಸಕ್ಕರೆಯನ್ನು ತರಿಸುವವರು ಕೆಲವು ಕಾಲದಿಂದ ಸರ್ಕಾರಕ್ಕೆ ಮೋಸಮಾಡಿ ಸುಂಕಕೊಡದೆ ಇದ್ದದ್ದು ಪತ್ತೆ ಆಯಿತು ಜಪಾನ್‌ನವರು ಇದನ್ನು ನೋಡಿ ಗುಮಾನಿ ಇಟ್ಟಿದ್ದು ಒಂದೇ ಸಲ ೨೫,೦೦೦ ಮೂಟೆಗಳ ಸಕ್ಕರೆಯನ್ನು ಹಿಡಿದು ಕಿತ್ತಿಟ್ಟುಕೊಂಡು ತನಿಖೆಮಾಡುತ್ತಿದ್ದಾರೆ

ಆಫ್ರಿಕಾಖಂಡಕ್ಕೆ ಸೇರಿದ ಸೊಮಾಲಿಲ್ಯಾಂಡಿನಲ್ಲಿ ಮುಲ್ಲಾ ಎಂಬೊಬ್ಬ ಮುಖಂಡನು ದಂಗೆಯೆದ್ದು ೨೦,೦೦೦ ಒಂಟೆಗಳನ್ನು ಲೂಟಿಮಾಡಿದ್ದಲ್ಲದೆ ಇಂಗ್ಲಿಷರ ಪಕ್ಷದಲ್ಲಿರುವ ಅನೇಕ ಸ್ವದೇಶಿಗಳನ್ನು ಕೊಂದುಹಾಕಿರುತ್ತಾನೆ ಆಫ್ರಿಕದ [illegible]

ಯನ್ನು ಅಡಗಿಸುವುದಕ್ಕೆ ಇಂಗ್ಲಿಷರು ಸೈನ್ಯವನ್ನು ಕಳುಹಿಸಬೇಕೆಂದು ಆಲೋಚನೆಮಾಡುತ್ತಿರುವರು

ಸ್ವೀಡನ್ ರಾಜ್ಯಕ್ಕೆ ಸೇರಿದ ಬಿಲಾವ್ಲಿಯಲ್ಲಿ ಒಬ್ಬನು ಒಬ್ಬ ಹೆಂಗಸನ್ನು ಪ್ರೀತಿಸುತ್ತಿದ್ದು ಅವಳನ್ನೇ ಮದುವೆ ಮಾಡಿಕೊಳ್ಳುತ್ತೇನೆಂದು ಭರವಸೆ ಕೊಟ್ಟು ಕಡೆಗೆ ಅವಳನ್ನು ಮೋಸಪಡಿಸಿದನು ಅವಳು ಅವನನ್ನು ಕೊಂದೇ ಹಾಕಿದಳು ಈ ಕೊಲೆಯು ನ್ಯಾಯವಾದದ್ದೆಂದು ಹೇಳಿ ಅಲ್ಲಿನ ೧೦,೦೦೦ ಹೆಂಗಸರು ಅವಳಿಗೆ ಬೆಂಬಲವಾಗಿ ನಿಂತರು ಸರ್ಕಾರದವರು ಆ ೧೦ ಸಾವಿರ ಸ್ತ್ರೀಯರ ಮೇಲೆ ಮೊಕದ್ದಮೆ ತಂದರು ಕಡೆಗೆ ಮ್ಯಾಜಿಸ್ಟ್ರೇಟರು ಅವರನ್ನೆಲ್ಲಾ ಖುಲಾಸೆ ಮಾಡಿ ಬಿಟ್ಟರು ಈ ಸಂಗತಿಯು ಆ ಪ್ರಾಂತ್ಯದಲ್ಲಿ ತುಂಬಾ ಗಲಭೆಯನ್ನುಂಟುಮಾಡಿದೆ

ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯಾ ಡಿಸ್ಟ್ರಿಕ್ಟಿನ ನ್ಯಾಯವಿಧಾಯಕ ಸಭೆಯವರು ಏಷ್ಯಾಖಂಡದ ಜನಗಳನ್ನು ಅಲ್ಲಿಗೆ ಬಾರದಂತೆ ತಡೆಯುವುದಕ್ಕೆ ಕಠಿಣತರವಾದ ಕಾನೂನ್ ಮಾಡಿಕೊಂಡಿರುವುದು ಬಹು ಕೇಡುಂಟಾಗುವುದೆಂದು ಅಲ್ಲಿನ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ತಿಳಿಸಿದಾರೆ ಆ ಕಾನೂನ್‌ಗಳ ಪ್ರಕಾರ ಜಪಾನ್‌ನವರನ್ನು ಅಲ್ಲಿನ ಸ್ಕೂಲುಗಳಿಗೆ ಸೇರಿಸುವುದಿಲ್ಲ ಚೀನೆಯವರನ್ನೂ ಜಪಾನ್‌ನವರನ್ನೂ ಪ್ರತ್ಯೇಕವಾದ ಪ್ರದೇಶದಲ್ಲಿ ವಾಸಮಾಡಬೇಕೆಂದು ನಿರ್ಬಂಧಪಡಿಸುತ್ತಾರೆ ಇನ್ನೂ ಕೆಲವು ಕಠಿಣತರವಾದ ಆಜ್ಞೆಗಳನ್ನು ಕಲ್ಪಿಸಿರುವರು

ಚೀನಾ ಗವರ್ನ್‌ಮೆಂಟಿನವರು ಒಂದು ಅಧಿಪತ್ಯದ ವೈಸ್‌ರಾಯಿ ಪದವಿಯಲ್ಲಿದ್ದ ಯುವಾನ್‌ಶಿಕಾಯಿ ಎಂಬ ದೊಡ್ಡ ಮನುಷ್ಯನನ್ನು ಅಕಸ್ಮಾತ್ತಾಗಿ ಕೆಲಸದಿಂದ ವಜಾಮಾಡಿಬಿಟ್ಟರು ಈ ಅಧಿಕಾರಿಯು ಪ್ರಜಾಹಿತಚಿಂತಕನಾಗಿಯೂ ಚೀನೆಯನ್ನು ಅಭಿವೃದ್ಧಿಗೆ ತರಬೇಕೆಂಬ ಉದ್ದೇಶವುಳ್ಳವನಾಗಿಯೂ, ಪರರಾಷ್ಟ್ರಗಳ ರಾಯಭಾರಿಗಳಲ್ಲಿ ವಿಶೇಷವಾದ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡವನಾಗಿಯೂ ಇದ್ದನು ಇಂಥವನನ್ನು ಕೆಲಸದಿಂದ ವಜಾಮಾಡಿದ್ದು ಸಕಲರಿಗೂ ವ್ಯಸನವನ್ನುಂಟುಮಾಡಿದೆ ಪರರಾಷ್ಟ್ರಗಳ ರಾಯಭಾರಿಗಳು ಮುಖ್ಯವಾಗಿ ಇಂಗ್ಲೀಷ್ ಮತ್ತು ಅಮೇರಿಕದ ರಾಯಭಾರಿಗಳು ಈ ವಿಚಾರವನ್ನು ಕುರಿತು ಚೀನಾ ಗವರ್ನ್‌ಮೆಂಟಿನವರಿಗೆ ಮನವಿ ಹೇಳಿಕೊಂಡಿದ್ದಾರೆ

ನಿಕೋಲಸ್ ಲೆಕ್ಲೆಂಬರ್ಗ್ ಎಂಬೊಬ್ಬ ಇಂಗ್ಲಿಷ್ ವರ್ತಕನು ರಷ್ಯಾರಾಜ್ಯಕ್ಕೆ ಸೇರಿದ ಒಡೆಸ್ಸಾ ನಗರದಲ್ಲಿ ವ್ಯಾಪಾರಮಾಡುವುದಕ್ಕಾಗಿ ಹೋಗಲು ಅಲ್ಲಿನ ರಷ್ಯಾ ಅಧಿಕಾರಿಗಳು ಈತನು ಗೂಢಚಾರನೆಂದು ಊಹಿಸಿ ಹಿಡಿದು ಸೆರೆಯಲ್ಲಿ ಹಾಕಿದರು ಹದಿನೈದು ದಿನಗಳ ವರೆಗೆ ಆತನು ಒಹು ಕೋಳಕಾರಾಗೃಹದಲ್ಲಿದ್ದು, ಆ ಪಟ್ಟಣದಲ್ಲಿರುವ ಇಂಗ್ಲಿಷ್ ರಾಯಭಾರಿಗೆ ತನ್ನ ಕಷ್ಟನಷ್ಟಗಳನ್ನು ಹೇಳಿಕೊಂಡನು ಆಗ ರಾಯಭಾರಿಯು ಆತನನ್ನು ಜೈಲಿನಿಂದ ಬಿಡುಗಡೆಮಾಡಿಸಿದನು ಆದರೆ ಅಧಿಕಾರಿಗಳು ಅವನಲ್ಲಿದ್ದ ಕೆಲವು ದ್ರವ್ಯವನ್ನು ಕಿತ್ತಿಟ್ಟುಕೊಂಡರು ಈತನ ವಿಷಯವಾಗಿ ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ಚರ್ಚೆಯಾಯಿತು ಇಂಗ್ಲಿಷ್ ಗವರ್ನ್‌ಮೆಂಟಿನವರು ರಷ್ಯಾದವರಿಗೆ ಕಾಗದವನ್ನು ಬರೆದು ವಿಚಾರಿಸಿದರು ಕಡೆಗೆ ರಷ್ಯಾ ಚಕ್ರವರ್ತಿಯವರು ಲೆಕ್ಲೆಂಬರ್ಗ್ ಎಂಬಾತನಿಗೆ ಪ್ರತಿಫಲವನ್ನು ಕೊಡುವುದಾಗಿ ಒಪ್ಪಿಕೊಂಡಿದ್ದಾರೆ

ತಾಲ್ಲೂಕು ವರ್ತಮಾನಗಳು

ತಿಪ್ಟೂರು — ಈ ಊರಿನ ತಾಲ್ಲೂಕು ಎ ವಿ ಸ್ಕೂಲ್ ಹೆಡ್‌ಮಾಸ್ಟರ್ ಮೆ ಟಿ ಪುಟ್ಟಣ್ಣರಾಯರು ತಮ್ಮ ಸ್ಕೂಲಿನಲ್ಲಿ ಕಿಂಡರ್‌ಗಾರ್ಟನ್ ಎಂಬ ಒಂದು ಸ್ಕೂಲ್ ಸ್ಥಾಪಿಸಿ, ಸ್ಕೂಲಿನ ಮುಂಭಾಗದಲ್ಲಿ ಬಾಲಕರಿಂದ ಒಂದು ತೋಟವನ್ನು ಮಾಡಿಸಿ, ಆ ತೋಟದಲ್ಲಿ ನಾನಾ ತರಹ ಹೂವಿನ ಗಿಡಗಳನ್ನು ಹಾಕಿ, ಆ ಗಿಡಗಳ ವಿಚಾರದಲ್ಲಿ ಬಾಲಕರಿಗೆ ಅನೇಕ ಸಂಗತಿಗಳನ್ನು ತಿಳಿಸುವಂತೆಯೂ ಮತ್ತು ಹಸ್ತಕೌಶಲ್ಯವನ್ನು ಹೆಚ್ಚು ಮಾಡುವುದಕ್ಕೆ ಬ್ಲಾಕ್ ಡ್ರಾಯಿಂಗ್, ಪೆನ್ಸಿಲ್ ಡ್ರಾಯಿಂಗ್, ಕಾಗದ ಮಡಿಸುವದು, ಅಲ್ಲದೆ ನೀತಿಬೋಧಕವಾದ ಕಥೆಗಳನ್ನು ಅಭಿನಯಪೂರ್ವಕವಾಗಿ ತೋರಿಸುವದು, ಇವೇ ಮೊದಲಾದ ಕೆಲಸಗಳು ಬಹಳ ಚೆನ್ನಾಗಿ ನಡೆಯುತ್ತಿರುವದು ಜನಗಳಿಗೆ ಬಹಳ ಸಂತೋಷವಾಗಿದೆ ಅಲ್ಲದೆ ಇದೇ ಜನವರಿ ತಾ ೧೭ ರಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರವರು ಸ್ಕೂಲಿಗೆ ಹೋಗಿ ದಯಮಾಡಿ, ಬಾಲಕರು ಅತಿ ಪ್ರೀತಿಯಿಂದ ಬೆಳೆಸಿದ್ದ ಗಿಡಗಳ ಹೂವಿನಿಂದ ಮಾಡಲ್ಪಟ್ಟ ತುರಾಯಿಗಳನ್ನು ತೆಗೆದುಕೊಂಡು, ಬಾಲಕರ ಹಾಡು, ಕಥೆ, ಬಾಲಕರಿಂದ ಮಾಡಲ್ಪಟ್ಟ ಕೆಲಸಗಳು ಮುಂತಾದವುಗಳನ್ನು ನೋಡಿ ಸಂತೋಷಪಟ್ಟು ಬಾಲಕರಿಗೆ ಸಕ್ಕರೆ, ಹಣ್ಣು ಮುಂತಾದವುಗಳನ್ನು ಕೊಡಲು ತಕ್ಕ ಬಹುಮಾನವನ್ನು ಕೊಟ್ಟರು ಅಲ್ಲದೆ ಮುಂದೆ ಮೇಲ್ತರದ ವಿದ್ಯಾಭ್ಯಾಸದ ವಿಷಯದಲ್ಲಿ ತಕ್ಕ ಪ್ರೋತ್ಸಾಹವನ್ನು ಸರ್ಕಾರದವರು ಕೊಟ್ಟು ಅಭಿವೃದ್ಧಿಗೆ ತರುವರೆಂದು ನಂಬಿದ್ದೇವೆ ಮತ್ತು ಹೆಡ್ ಮಾಸ್ಟರ ಹಕ್ಕಿಕೆಯ ಪ್ರಕಾರ ಮೇಲ್ಕಂಡ ಕೆಲಸಗಳನ್ನು ನಡೆಯಿಸಿರುವ ಶ್ರೀಮುನಿಸಾಮಯ್ಯನವರ ವಿಷಯದಲ್ಲಿ ಅವರು ಸಂತೋಷಪಡುವ ಬಾಲಕರನ್ನು ವೃದ್ಧಿಗೆ ತರಲು ಪ್ರಾರ್ಥಿಸುತ್ತೇವೆ

ಚಿಕ್ಕಮಗಳೂರು — ಕನ್ನಡ ಸ್ಕೂಲಿನಿಂದ ಲೋಯರ್ ಸೆಕಂಡರಿ ಪರೀಕ್ಷೆಗೆ ಹೋದ ೧೦ ಜನರ ಪೈಕಿ ೬ ಜನರು ೨ನೇ ಕ್ಲಾಸಿನಲ್ಲಿ ಪಾಸ್ ಮಾಡಿದ್ದಾರೆ ಗೌ ಗರ್ಲ್ಸ್ ಸ್ಕೂಲಿನಿಂದ ಇಬ್ಬರು ಹುಡುಗಿಯರು ಹೋಗಿದ್ದರು ಆ ಇಬ್ಬರೂ ಪಾಸ್ ಮಾಡಿದರು — ಕೆಲವು ದಿನಗಳ ಕೆಳಗೆ ತಪಟೂರು ತಾಲ್ಲೂಕಿನಿಂದ ಇಬ್ಬರು ದನಗಳನ್ನು ಮೇಯಿಸುವದಕ್ಕೆ ಈ ಚಿಕ್ಕಮಗಳೂರು ತಾಲ್ಲೂಕು ಹಂಪಾಪುರ ಎಂಬ ಗ್ರಾಮಕ್ಕೆ ಬಂದು ಆ ಇಬ್ಬರ ಪೈಕಿ ಒಬ್ಬನು ಇನ್ನೊಬ್ಬನನ್ನು ಕಲ್ಲಿನಿಂದ ಹೊಡೆದು ಅವನು ಸತ್ತುಹೋದಮೇಲೆ ಅವನಲ್ಲಿದ್ದ ದುಡ್ಡನ್ನು ತಕ್ಕೊಂಡು ಯಾರಿಗೂ ತಿಳಿಯದವಾಗೆ ಪರಾರಿಯಾಗಿದ್ದನು ಈ ಖೂನಿಯಾದ ಸಮಾಚಾರವು ಗ್ರಾಮದ ಪಟೇಲನಿಂದ ಪೊಲೀಸಿಗೆ ರಿಪೋರ್ಟಾಗಿ ತಾಲ್ಲೂಕು ಇನ್ಸ್‌ಪೆಕ್ಟರ್ ದಫೇದಾರ್ ಮುಂತಾದವರು ಪತ್ತೆಮಾಡಲಿಕ್ಕೆ ಹೋದಾಗ ಆಸಾಮಿ ಸಿಕ್ಕಲಿಲ್ಲ ಅದೇ ರಾತ್ರಿ ಕಾನ್‌ಸ್ಟೇಬಲ್ ಅಂತೋಣಿ ಎಂಬಾತನು ತಪಟೂರಿಗೆ ಹೋಗಿ ಅವನನ್ನು ವಿಚಾರಿಸಿ ಸ್ಟೇಷನಿಗೆ ಹೋಗುವುದಕ್ಕೆ ಆ ವ್ಯಕ್ತಿ [illegible]

...ಈ ಊರಿನ ಹಿಂದೂಸ್ಥಾನ ಸ್ಕೂಲ್ ಹೆಡ್‌ಮಾಸ್ಟರಾದ ಮ|| ಗುಲಾಂ ಹುಸೇನ್ ಸಾಹೇಬರು ಕಿಂಡರ್‌ಗಾರ್ಟನ್ ಸ್ಕೂಲಿಗೆ ಹೋಗಿ ಅಲ್ಲಿನ ಕ್ರಮಗಳನ್ನು ಕಲಿತುಕೊಂಡು ಬಂದು, ಅವರು ಕಲಿತುಕೊಂಡ ಎಲ್ಲಾ ಕ್ರಮಗಳನ್ನೂ ತಮ್ಮ ಸ್ಕೂಲಿನಲ್ಲಿ ಆಚರಿಸುತ್ತಿದ್ದಾರೆ. ಸಣ್ಣವಿಂದ ಕಾಗದದ ಮೇಲೆ ಚಿತ್ರಪಠಗಳನ್ನು ಬರೆಯುವದು ತಾಡದಗಳನ್ನು ಮಡಚುವದೂ, ಮಕ್ಕಳು ಮನೆಗಳಲ್ಲಿ ಭಾಗಗಳನ್ನು ಹಾಕಿ ಸ್ವರ ವಿನವಲ್ಲಿಯೂ ಅಷ್ಟಗಳನ್ನು ಬೇಯಿಸುತ್ತವೆ ಯಾವ ರೀತಿ ಬೇಯುತ್ತವೆ ಎಂಬೀ ಸಂಗತಿಗಳನ್ನು ಕಲಿಯುವಂತೆ ಮಾಡಿದಾರೆ. ಮಕ್ಕಳಿಗೆ ಕೆಲವು ವಿನೋದವಾದ ಆಟಗಳನ್ನು ಸಹ ಕಲಿಸಿದಾರೆ. ಇದರಿಂದ ಹುಡುಗರಿಗೆ ಬಹು ಚಟುವಟಿಕೆಯಾಗಿಯೂ ವಿದ್ಯೆಯ ಮೇಲೆ ಆಸೆಯುಳ್ಳವರಾಗಿಯೂ ಇರುತ್ತಾರೆ ಮತ್ತು ವಸ್ತುನಾಶ ಹೇಳಿಕೊಡುವದಕ್ಕೆ ಅನುಕೂಲವಾದ ಅನೇಕ ವಸ್ತುಗಳನ್ನು ತರಿಸಿ ಅವುಗಳ ಮೂಲಕ ಮಕ್ಕಳಿಗೆ ಪಾಠ ಹೇಳಿಕೊಡುವಂತೆ ಮಾಡಿದಾರೆ. ಈ ಹಿಡ್‌ಮಾಸ್ಟರ ಪ್ರಯತ್ನಗಳ ಪ್ರಕಾರ ಇತರ ಹಿಂದೂಸ್ಥಾನಿ ಮತ್ತು ಕನ್ನಡ ಸ್ಕೂಲ್ ಮಾಸ್ಟರುಗಳು ಮಾಡುವದಾದರೆ ತಮ್ಮ ಮಕ್ಕಳಿಗೆ ಬಹಳ ಪ್ರಯೋಜನವಾಗುತ್ತದೆಂಬುವದಕ್ಕೆ ಸಂದೇಹವಿಲ್ಲ. ಜನರು ಬಂದು ಈ ಸಂಗತಿಯನ್ನು ನೋಡಿದರೂ ಹೆಡ್‌ಮಾಸ್ಟರು ಸಂತೋಷದಿಂದ ಹೇಳಿ ವಿವರಿಸುತ್ತಾರೆ.

ಬೀರೂರು.—ಈ ಊರಿನಲ್ಲಿ ನಾಟಕ ಮಂದಿರವಿಲ್ಲದೆ ಜನರ ಏಳಿಗೆ ಆಗುತ್ತಿರಲಿಲ್ಲವೆ ಇತ್ತು. ಈ ಕೊರತೆಯನ್ನು ತಪ್ಪಿಸಲು ಕೆಲವು ಪ್ರಮುಖರು ೬-೭ ಕಳೆದ ಮೂರು ತಿಂಗಳಲ್ಲಿ ನಾಟಕ ಮಂದಿರವನ್ನು ಊರೊಳಗಿರುವ ಒಂದು ಮನೆಯಲ್ಲಿ ಮಾಡಿದರು. ಈಚೆಗೆ ವಿಸ್ತಾರವಾದ ದೊಡ್ಡ ಕಟ್ಟಡವನ್ನು ಈ ನಾಟಕ ಮಂದಿರಕ್ಕೆ ಒಬ್ಬ ದೊಡ್ಡ ಮನುಷ್ಯರು ಬಾಡಿಗೆ ಕೊಟ್ಟಿರುತ್ತಾರೆ. ಹೆಚ್ಚಾಗಿ ಅವರ ಉಪಕಾರವು ಚಿರಸ್ಮರಣೀಯವಾಗಿದೆ. ಇಲ್ಲಿಯ ಕೆಲವು ಮಹನೀಯರು ತಮಗೆ ಬರತಕ್ಕ ಎಲ್ಲಾ ಪತ್ರಿಕೆಗಳನ್ನೂ ಮೈಸೂರು ಗೆಜೆಟನ್ನೂ ಈ ನಾಟಕ ಮಂದಿರಕ್ಕೆ ಒಪ್ಪಿಸಿರುವುದು ಈ ಮಂದಿರದ ಪ್ರೋತ್ಸಾಹಕ್ಕೆ ಮತ್ತು ಕಾರಣವಾಗಿದೆ. ಅಲ್ಲದೆ ಅನೇಕ ದೊಡ್ಡ ಮನುಷ್ಯರು ಧನ ಸಹಾಯ ಮಾಡಿರುತ್ತಾರೆ. ಈ ಮಂದಿರವನ್ನು ಅಭಿವೃದ್ಧಿಗೆ ತರುತ್ತಿರುವವರು ಇಲ್ಲಿನ ಮೆ॥ ಸಾಹುಕಾರ್ ತಂಗ್ಲಿ ನಂಜುಂಡಯ್ಯನವರು ಕಾರ್ಯದರ್ಶಿಗಳಾಗಿಯೂ, ಮೆ|| ಬಿಳಿದಿ ಲಿಂಗಪ್ಪನವರು ಸಹಾಯ ಕಾರ್ಯದರ್ಶಿಗಳಾಗಿಯೂ ಮೆ|| ಸಾಹುಕಾರ್ ನಾಗೇಂದ್ರಶೆಟ್ಟರು ಧನಾಧ್ಯಕ್ಷರಾಗಿಯೂ ಇರುತ್ತಾರೆ. ಸಮ್ಮೇಳನದಲ್ಲಿ ಇಂತ ಕೆಲವು ಪತ್ರಿಕೆಗಳು ಹೊರತಾಗಿ ಮತ್ತಿತರ ಎಲ್ಲಾ ಕನ್ನಡ ಪತ್ರಿಕೆಗಳು ಬರುತ್ತವೆ. ಇದರಿಂದ ನಮ್ಮ ದೇಶದ ಮತ್ತು ಇತರ ರಾಜಕೀಯ ವ್ಯಾಪಾರಗಳು ... ಅನುಕೂಲವಾಗಿದೆ. ... ಬಹು ಜನಗಳು ಬಂದು ಓದುತ್ತಾರೆ. ... ಈ ಊರಿನ ಜನರು ... ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿದೆ. ... ಸಾಹುಕಾರ್ ... ಶ್ರೀನಿವಾಸರಾಯರೂ ಕೆಡೆಯರನ್ನು ಪರೀಕ್ಷಿಸಿ ... ಈ ಸಂಘಕ್ಕೆ ... ವಿದ್ಯಾರ್ಥಿಗಳು ... ಶ್ರೀಗಳಿಗೆ ... ಶಿಕ್ಷಣ ...

ಈ ಊರಿನಲ್ಲಿ ಪ್ಲೇಗ್ ಉಲ್ಬಣವಾಗಿ ... ೨-೩ ತಿಂಗಳಿಂದಲೂ ಪ್ಲೇಗ್ ಹೆಚ್ಚಾಗಿ ... ಮೆ|| ಬಿಳಿದಿ ಲಿಂಗಪ್ಪನವರು ... ಶಿಕ್ಷಕರು ... ಹಳ್ಳಿಗಳ ... ಉಪಾಧ್ಯಾಯ ... ಅನುಕೂಲವಾಗಿ ... ಜನಗಳು ... ಮಾಡಿದರು.—

ಈ ಊರಿನಲ್ಲಿ ಪ್ಲೇಗ್ ಗಲಾಟೆಯು ಪ್ರಾರಂಭವಾಗಿ ೨-೩ ತಿಂಗಳಾಯಿತು. ಒಂದು ವಾರದಿಂದ ೧೦-೧೫ ರಂತೆ ಮರಣಗಳಾಗುತ್ತಿವೆ. ಇದು ಉಲ್ಬಣಸ್ಥಿತಿಯಲ್ಲಿದ್ದಾಗ ಅನೇಕರು ಬಾಳ್ವೆ ಸಂಸಾರಗಳನ್ನು ಕಳೆದುಕೊಂಡರು. ಈ ಪ್ಲೇಗ್ ಗಲಾಟೆಯೊಂದಲ್ಲದೆ ಕಳ್ಳತನವೂ ಕ್ಷಾಮವೂ ಪ್ರಾಪ್ತವಾಗಿ ಜನರನ್ನು ಬಾಧಿಸುತ್ತಿವೆ. ಕ್ಷಾಮನಿವಾರಣಾರ್ಥವಾಗಿ ಈ ಊರಿನ ಕೆಲವು ಮಹನೀಯರು ೧೦-೦ ರೂ ವರೆಗೆ ಚಂದಾ ಹಾಕಿ ೧೦೦ ವಲ್ಲಾ ರಾಗಿಯನ್ನೂ ... ವಲ್ಲಾ ಜೋಳವನ್ನೂ ತರಿಸಿ, ಬಡವರಿಗೆ ೧೨ ಸೇರಿನಂತೆ ಕೊಡುತ್ತಿದಾರೆ. ತಮಗೆ ಸಸ್ಯ ವಾದರೂ ಚಿಂತೆಯಿಲ್ಲ. ಬಡವರಿಗೆ ಈ ರೀತಿಯಾದ ಧರ್ಮದ ಏರ್ಪಾಡನ್ನು ಮಾಡುವದಕ್ಕಾಗಿ ಸರ್ವರೂ ಅವರನ್ನು ಸ್ತುತಿಸುತ್ತಿದಾರೆ. ಇವರು ಏಕಮತ್ಯದಿಂದ ಈ ಧರ್ಮದ ಕೆಲಸವನ್ನು ನಡಿಸಿಕೊಂಡು ಬರಬೇಕೆಂಬುವೇ ನಮ್ಮ ಕೋರಿಕೆ.—ಎಲ್ಲಾ ಜನಗಳೂ ತಮ್ಮ ವಿರಾಮ ಕಾಲವನ್ನು ಕಳೆಯುವುದಕ್ಕೆ ಅನುಕೂಲವಾಗಬೇಕೆಂದು ನಾಟಕ ಮಂದಿರದ ಪೋಷಕರು ತಿಳಿಸಿದರು. ಇದನ್ನು ಅನುಮೋದಿಸಿ ಇಲ್ಲಿಯ ಸ್ವದೇಶಿ ವಸ್ತು ಪ್ರಚಾರಕರಾದ ಮೆ|| ತರೀಕೆರೆ ರಾಮಸ್ವಾಮಿ ಸುಬ್ಬಣ್ಣನವರು ಮೊಲ್ಲಂಡ ಸಮಾಜವನ್ನು ಸ್ಥಾಪಿಸಿ ಎರಡು ತಿಂಗಳಿಗೆ ಹಿಂದೆ, ಅದರವರ ಮತಾಂತರವಾಗಿ ಒಂದು ಕ್ಷಿಪ್ರಕಾಲವನ್ನಿಟ್ಟು ಕೊಂಡು, ದೇವರನ್ನು ಧ್ಯಾನಮಾಡಬೇಕೆಂಬುದೇ ಈ ಸಮಾಜದ ಉದ್ದೇಶವು. ಅದರಂತೆ ಕ್ಷಿಪ್ರವಾದ ಸ್ಥಳದಲ್ಲಿ ಭಜನೆಯು ಪ್ರತಿ ದಿನವೂ ಆಚರಿಸಲ್ಪಡುತ್ತಲಿದೆ. ಈ ಸಾಯಂಕಾಲ ೭-೮ ಗಂಟೆಗೆ ಪ್ರತಿ ದಿನವೂ ನಡಿಯುತ್ತಾ ಇದೆ. ಅಲ್ಲದೆ ಪ್ರತಿ ಭಾನುವಾರವೂ ಉಪನ್ಯಾಸಗಳು ನಡಿಸಲ್ಪಡುತ್ತಲಿವೆ.—ಇಷ್ಟಲ್ಲದೆ ಪಿರಿಸ್ಥಿತಿ ಸೇನಸದನ (ಅನಾಥಾಲಯ)ಕ್ಕೆ ಕೆಲವು ದೊಡ್ಡ ಮನುಷ್ಯರು ವಿಶೇಷ ಗಮನ ಕೊಟ್ಟಿದಾರೆ. ಅದನ್ನು ಸ್ಥಾಪಿಸಬೇಕೆಂದು ಅನೇಕರಿಗೆ ಅಭಿಪ್ರಾಯ ಹುಟ್ಟಿ, ಏರ್ಪಾಡುಗಳು ನಡಿಯುತ್ತಿವೆ. ಇದಕ್ಕಾಗಿ ಮೆ|| ಸಾಹುಕಾರ್ ಬಿಳಿದಿ ನಾಗೇಂದ್ರಶೆಟ್ಟರು ಹತ್ತು ಸಹಸ್ರ ರೂಪಾಯಿ ಕೊಟ್ಟು, ಅದನ್ನು ಮುಂದಿನ ಮಾರ್ಗವಾಗಿ ಪ್ರತಿಷ್ಠಿಸಬೇಕೆಂದು ಇರುತ್ತಾರೆ. ಈ ಸಮಾಜದವರು ಒಂದು ಅನಾಥಾಲಯವನ್ನು (೩ ತಿಂಗಳನಮು) ತಂದು ಸಾಕುತ್ತಲಿದಾರೆ. ಈ ರೀತಿಯಾಗಿ ಚಿಕ್ಕ ಚಿಕ್ಕ ಏರ್ಪಾಡುಗಳನ್ನು ಮಾಡಿ ಅನಂತರ ದೊಡ್ಡ ಏರ್ಪಾಡು ಮಾಡುತ್ತಾರಾಗಿ ಕೇಳುತ್ತೇನೆ. ಇದಕ್ಕೆ ಸ್ಥಳ ೬||ಗಳಲ್ಲಿರುವ ದೊಡ್ಡ ಮನುಷ್ಯರು ಸಹಾಯ ಮಾಡುವಂತೆ ಪ್ರಾರ್ಥನೆ ಪಡಿರುವದಾಗಿ ಅರಿತನು.

ಮೈಸೂರು ಗೆಜೆಟ್ ಸಂಗ್ರಹ.

ಶಿರಸ್ತೆದಾರ್ ಮೆ|| ವೆಂಕಟರಾಯರವರನ್ನು ಹಿರಿಯೂರು ತಾಲ್ಲೂಕ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ಚುನಾಯಿಸಿರುವುದನ್ನು ಸ್ಯಾಂಕ್ಷನ್ ಮಾಡಿದೆ.

ಮುಂದೆ ಹೇಳುವ ಅಮಲ್ದಾರ್‌ಗಳಿಗೆ ಪಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಲ್ಪಟ್ಟಿದೆ.—ಅಂತಾಮನೆಯ ಮೆ|| ಎಚ್. ಎನ್. ರಾಘವಾಚಾರ್ಯ, ಸಿಂಧಗದ ಮ|| ಎಂ. ಎ. ಶ್ರೀನಿವಾಸಯ್ಯಂಗಾರ್ಯ, ದೊಡ್ಡಬಳ್ಳಾಪುರದ ಮೆ|| ಎಂ. ಸದಾಶಿವರಾಯರು, ಆನೆಕಲ್ಲಿನ ಮೆ|| ... ಕೃಷ್ಣಸ್ವಾಮಿಯಂಗಾರ್ಯ, ನಾಗಮಂಗಲದ ಮೆ|| ಶೇಕ್ ಅಬ್ದುಲ್ಲಾ ಸಾಹೇಬರು, ಕೃಷ್ಣರಾಜಪೇಟೆಯ ಮ|| ಎಸ್. ರಾಜಗೋಪಾಲಾಚಾರ್ಯ, ಹಾಸನದ ಮೆ|| ಎಸ್. ಎಚ್. ಅಪ್ಪಣ್ಣಯ್ಯಂಗಾರ್ಯ, ಜಗಳೂರಿನ ಮೆ|| ಇ. ಸಿ. ಸದಾಶಿವಶೆಟ್ಟಿಯವರು, ಶ್ರೀನಿವಾಸಪುರದ ಮೆ|| ವೈ. ನರಸಿಂಹರಾಯರು, ಪಾವಗಡದ ಮೆ|| ಸೈಮರ್ ರಾಬರ್ಟ್‌ಸನವರು, ಹುಣಸೂರಿನ ಮೆ|| ಎಸ್. ಶ್ರೀನಿವಾಸಯಂಗಾರ್ಯ, ಮಂಡ್ಯ ಚಾಬಾದಿನ ಮೆ|| ಸಿ. ನಾರಾಯಣರಾಯರು, ಚಿಕ್ಕಮಗಳೂರಿನ ಮೆ|| ಎಸ್. ಚಕ್ರಪಾಣಿ ಐಯಂಗಾರ್ಯ, ಹೊಸಕೋಟೆಯ ಮೆ|| ಎಚ್. ಎಸ್. ಹಯಗ್ರೀವರಾಯರು.

ಮದ್ದಗಿರಿ ಮುನ್ಸೀಫ್ ಮೆ|| ಎ. ಕೆ. ಶ್ರೀನಿವಾಸ ರಾಘವಾಚಾರ್ಯರಿಗೆ ಪಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಲ್ಪಟ್ಟಿದೆ.

ಬೆಂಗಳೂರ್ ಡಿಸ್ಟ್ರಿಕ್ಟ್ ಸ್ಕೂಲ್‌ಗಳ ಇನ್ಸ್‌ಪೆಕ್ಟರ್ ಮೆ|| ಸಿ. ಕೃಷ್ಣರಾಯರನ್ನು ಬೆಂಗಳೂರು ಹೈಸ್ಕೂಲಿನ ಹೆಡ್‌ಮಾಸ್ಟರ್ ಕೆಲಸಕ್ಕೆ ನೇಮಿಸಿ, ಮೈಸೂರು ಮಹಾರಾಜಾ ಕಾಲೇಜಿನ ಮೆ|| ಬಿ. ಆರ್. ವೆಂಕಟರಾಮನಾಯ್ಡು ಅವರನ್ನು ಬೆಂಗಳೂರು ಸರ್ಕಲ್ ಸ್ಕೂಲುಗಳ ಇನ್ಸ್‌ಪೆಕ್ಟರಾಗಿ ವರ್ಗ ಮಾಡಿದೆ.

ಮೈಸೂರ್ ತಾಲ್ಲೂಕ್ ಶಿರಸ್ತೆದಾರ್ ... ಎನ್. ಶೇಷ ಐಯಂಗಾರ್ಯರು ೧೯ನೇ ದಿನಾಂಕ ವರೆಗೆ ಪ್ರಿವಿಲೇಜ್ ರಜಾ ತಾಲ್ಲೂಕಿನ ಬೆಟ್ಟದ ಅಮಲ್ದಾರರಾಗಿ ಬದಲಿ ನೋಡಿರುತ್ತಾರೆ.

ಅಮಲ್ದಾರ್ ಮೆ|| ... ಜನರಲ್ ಇವರನ್ನು ... ಟಿ. ನರಸೀಪುರದ ತಾಲ್ಲೂಕಿಗೆ ವರ್ಗಮಾಡಿರುವ ಹುಕುಮನ್ನು ರದ್ದು ಮಾಡಿದೆ. ಆನರು ಮೈಸೂರಿನಲ್ಲೇ ಕೆಲಸವಿಡುತಕ್ಕದ್ದು.

ಮುಂದೆ ಹೇಳುವ ಆ ಕಮಿಷನರುಗಳ ವರ್ಗಾವರ್ಗ ಹುಕುಂ ಮಾಡಿದೆ.—(೧) ಮೆ|| ಸಿ. ಚೋಕ್ಕಣ್ಣನವರನ್ನು ಕುಣಿಗಲ್ ನೆಟಿವ್ ಸಬ್ ಡಿವಿಜನ್ ನಿಂದ ಬೆಂಗಳೂರು ಡಿ... ವಿಜನಿಗೂ ಬಾಬಿಗೆ, (೨) ಮೆ|| ಎ. ... ರಾಯರವರನ್ನು ಚಿತ್ರದುರ್ಗ ಡಿಸ್ಟ್ರಿಕ್ಟಿನಿಂದ ಕುಣಿಗಲ್‌ಗೆ ಸಬ್ ಡಿವಿಜನ್‌ಗೆ (೨) ಮೆ|| ಆರ್. ಟಿ. ಮಹದೇವಾಚಾರ್ಯರು ರಜೆಯಿಂದ ವಾಪಸು ಬಂದ ಮೇಲೆ ಚಿತ್ರದುರ್ಗದ ಸಬ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು.

ಸಿಂಹಗಾಬಾದ್ ತಾಲ್ಲೂಕ್ ಅಮಲ್ದಾರ್ ಮೆ|| ... ನಾರಾಯಣರಾಯರಿಗೆ ಟ್ರೈಬ್ ಆಫ್ ಕಾಂಟ್ರಾಕ್ಟ್ ಆಕ್ಟಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ಓದಿಸಿ ವಿಚಾರಣೆ ಮಾಡುವ ಅಧಿಕಾರ ವಹಿಸಲ್ಪಟ್ಟಿದೆ.

ಸಬ್ ಅ. ಇಂಜಿನಿಯರ್ ಮೆ|| ಕೆ. ಎಲ್. ವಾಸುದೇವರಾಯರಿಗೆ ಕೊಟ್ಟಿದ್ದ ಮೂರು ತಿಂಗಳ ಪ್ರಿವಿಲೇಜ್ ರಜದ ನ್ತಿತಿ ಅವರು ಉಪಯೋಗಿಸಿಕೊಳ್ಳದೆ ಇರುವ ಎರಡು ತಿಂಗಳು ಒಂದು ದಿನದ ರಜವನ್ನು ರದ್ದು ಮಾಡಿದೆ. ಅವರು ಡಿಸೆಂಬರ್ ೩೦ ನೇ ದಿನ ಕೆಲಸದ ಮೇಲೆ ಹಾಜರಾಗಿರುತ್ತಾರೆ.

ಸಬ್ ಅ. ಇಂಜಿನಿಯರ್ ಮೆ|| ಎಲ್. ವಿ. ಕೃಷ್ಣಐಯ್ಯಂಗಾರರನ್ನು ಶ್ಯಾನಿಟರಿ ಡಿವಿಜನ್‌ನಿಂದ ಹಾಸನದ ಡಿವಿಜನ್‌ಗೆ ವರ್ಗಮಾಡಿದೆ.

೧೫|| ರೂಪಾಯಿನ ಟೈಪ್‌ರೈಟರ್.

151

ಕಾಗದ, ಆರ್ಜಿ, ಬಿಲ್ಲು ಇವು ಎಲ್ಲವುಗಳನ್ನು ಈ ಯಂತ್ರದಿಂದ ... ಚಿಮುಹೋಗಿ ಟೈಪು ಮಾಡುವುದನ್ನು ಕಲಿಯಬಹುದಾದ ರಿಂದ ಜಾಗ್ರತೆ ಕರಿಸಿ ಕೊಳ್ಳಿ. ಸಾವಕಾಶವಾದರೆ ದೊರೆಯದೇ ಹೋದೀತು. ನಮ್ಮ ವಿಳಾಸ.—

ಕೃಷ್ಣ ಅಂಡ್ ಕಂಪನಿ, ಲಕ್ಕೂರು ಪೇಟೆ, ಕೋಲಾರ್ ಡಿಸ್ಟ್ರಿಕ್ಟ್.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ.—ಬೆನ್ನಿನಲ್ಲಿ ಛಳುಕು ; ನಿದ್ದೆಯಿಲ್ಲದೆ ಇರುವುದು ; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಲುವಾಗಿಯೋ ಇಳಿಯುವುದು ; ಏದೆಪ ಬಾಯಾರಿಕೆ ; ಬಳಲಿಕೆ ; ಎದೆ ತಲ್ಲಣಿಸುವುದು ; ತಲೆನೋವು ; ಗಾಬರಿ ; ಕೀಲು ನೋವು ; ತಲೆ ತಿರುಗುವಿಕೆ ; ಮೈನೋವು ತೀಲುನೋವು ; ಮರವು ; ನಿತ್ರಾಣ ; ಇವೇ ಮೊದಲಾದುವು. ಅಲ್ಲದೆ ಮಾಡಿದರೆ ಮೂತ್ರಾಶ್ಮರೋಗವು, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶದ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳಂದು ಸಂಭವಿಸಬಹುದಾದ ರೋಗಗಳು, ಇವಲ್ಲಾ ಉಂಟಾಗುವುವು.

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-21]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೩—೦—೦ ; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦, ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್, ೩೦, ಪಿ. ಒ. ಬಾಕ್ಸ್ ಬೊಂಬಾಯಿ.—ಇವರಲ್ಲಿ ದೊರೆಯುವುವು.

ರೆಜಿಸ್ಟ್ರೇಷನ್ ಬಾಯರು ಬೇಕೋ ?

1054

ಪತ್ರಕ್ಕೆ ಅವಮಾನವಾಯಿತೆ ? ಓಹೋ, ಸರಿಸರಿ !
ಹಂಚ ಕೆಟ್ಟು ಒರಿಗೈಮಾಡಿಕೊಳ್ಳುವುದಕ್ಕೋ ?

ಸಿರಿ ಪ್ರಕಾಶಿತಾ ಪುಸ್ತಕಕ್ಕಿಂತಲೂ ಬೇರೆ ಬಾಯರು ಬೇಕಿ ... ಕ್ಕಾಗಿ ಬರೆದುಕೊಂಡವರಿಗೆ ಖರ್ಚು ಸೇರಿ ೧—೩—೦ಗೆ ಸಿಗುವುದು. ವಿಳಾಸ.—ಎಂ. ಕೃಷ್ಣಮೂರ್ತಿರಾವ್, ರೆಜಿಸ್ಟ್ರೇಷನ್ ಕ್ಲಾರ್ಕ್, ಹೊನ್ನಾಳಿ ತಾಲ್ಲೂಕ್.

ಕನ್ನಡ ಸಂಗೀತ ವಸ್ತುಮಾಲ.

182

ಇದರಲ್ಲಿ ಚಿಕ್ಕಬಾಲಕರಿಗೆ ತಕ್ಕ ಪ್ರಾರ್ಥನೆ, ಕ್ರೀಡೆ, ಕವಾಯತು, ಕಿಂಡರ್‌ಗಾರ್ಟನ್ ಮತ್ತು ಎಲ್ಲಾ ವಸ್ತು ಪ್ರಾಣಿಗಳ ಸುರಸವರ್ಣನೆಗಳು ಪದ್ಯರೂಪವಾಗಿ ವರ್ಣಿಸಿವೆ. ಪದ್ಯರೂಪವಾಗಿರುವುದರಿಂದ ಕಲಿತ ಪಾಠವು ನೆನಪಿನಲ್ಲಿ ಉಳಿಯುವುದಲ್ಲದೆ ಬಾಲಕರ ಮನರಂಜನವಾಗುವಂತಿದೆ. ಕ್ರಯ—ಒಂದಕ್ಕೆ ೩ ಆಣೆ. ೫ ಪ್ರತಿಗೆ ಟಿ. ಹಾ. ಸಹಿತ ೮ ಆಣೆ. ೬ ಪ್ರತಿಗೆ ಟಿ. ಹಾ ಸಹಿತ ೧ ರೂ. ೪ ಆ.; ೧೨ ಪ್ರತಿಗೆ ಟಿ. ಹಾ. ಸೇರಿ ರೂ. ೩-೮-೦. ವಿಳಾಸ :—ಎಚ್. ಜನಸ್ನಾಥರಾವ್ ಗೋಖಲೆ, ಮುಂದಗೋಡ, ಉತ್ತರ ಕನ್ನಡಾ ಜಿಲ್ಲಾ.

JUST RECEIVED! JUST RECEIVED!!

Stead's Books for the Bairns

(Illustrated) New Numbers

STEAD'S PENNY POPULAR TALES—Sixty-four Pages in a coloured Picture Cover. Each number contains a story of thrilling interest. 24 numbers.

A VERY NICE SELECTION OF [53]

CHRISTMAS AND NEW YEAR CARDS AND CALENDARS FOR 1909.

Apply **The Manager, C.L.S. Book Depot, Mysore City.**

ಮದ್ರಾಸ್ ಸಾಹುಕಾರ್ ಪೇಟೆ,
ಪಿ. ಯೆಂ. ರಾಮಯ್ಯಶೆಟ್ಟರ ಕಂಪೆನಿಯಲ್ಲಿ

99-8

ಕಲಾಸಾಗಾನು ಕಬಿ ಇದ ಪೆಟ್ಟಿಗೆಗಳು ಅಥವಾ ಟ್ರಂಕುಗಳು ಈ ಕೆಳಗಿನ ದರದ ಮಾರಾಟಕ್ಕೆ ಸಿದ್ಧವಾಗಿವೆ. ಬ್ರಾಂಚ್ ಆಫೀಸ್ ಬೆಂಗಳೂರು ನಗರ್ತರಪೇಟೆಯಲ್ಲಿ ಸಿಕ್ಕುವದು.



ಬೇಕಾದವರು ನಮ್ಮ ಆರ್ಡರನ್ನು ತಿಳಿಸಿ ರೂ 10 ಮುಂಗಡವಾಗಿ ಕಳುಹಿಸಿದರೆ ವಿ. ಪಿ. ಮೂಲಕ ರವಾನಿಸಲ್ಪಡುತ್ತೆ. ವಿಶೇಷ ಮಾಹಿತಿ ಬೇಕಾದವರು ಕಾಗದದ ಮುಖಾಂತರ ಮೊಲ್ಲಂಡ ವಿಳಾಸದಾರರಿಂದ ತಿಳಿದುಕೊಳ್ಳಬಹುದು.

ನವೀನ ಪುಸ್ತಕಗಳು.

17-1

(ಕನ್ನಡ ಕಥಾಸರಿತ್ಸಾಗರ. ರೂ. ೧—೮—೦)

ಕೈಲಾಸವಾಸಿ ಸೊರಬದ ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಎಚ್. ಶ್ರೀಕಂಠಯ್ಯನವರಿಂದ ರಚಿತವಾದದ್ದು. ನವರಸಗಳಿಂದ ತುಂಬಿ ಪೂರ್ವೇತಿಹಾಸಪೂರ್ವಕವಿ ನಿರ್ಮಿತ ಈಗ ಓದುವದಕ್ಕೆ ಪ್ರಚಾರದಲ್ಲಿರುವ ಬೃಹತ್ಕಥಾಮಂಜರಿ, ಆರೇಬಿಯನ್ ನೈಟ್ಸ್ ಮುಂತಾದ ಎಲ್ಲಾ ಕಥೆಗಳಿಗಿಂತಲೂ ಅತ್ಯಂತ ಸ್ವಾರಸ್ಯವಾಗಿ ಬರೆಯಲ್ಪಟ್ಟಿದೆ. ಯಾವ ಹೊಳೆಯ ನೀರೇ ಆಗಲಿ ಕಡೆಗೆ ಸಮುದ್ರಕ್ಕೆ ಸೇರುವಂತೆ ಯಾವ ಬಗೆಯ ಕಥೆಯೇ ಆಗಲಿ ಈ ಕಥಾಸರಿತ್ಸಾಗರದಲ್ಲಿರುವ ಕಥೆಗಳಿಗೆ ಸೇರುತ್ತದೆ. ಕ್ರಯ ಒಂದು ರೂಪಾಯಿ ಎಂಟಾಣೆ ಮಾತ್ರ.

ಪ್ರಶ್ನೋತ್ತರ ಲೇಖ್ಯಬೋಧಿನಿ—ಪುಟ ೩೦೦.—ಕ್ರಯ ಸವಿಸ್ತಾರ ಕಾಗದಗಳು, ಅರ್ಜಿಗಳು, ಸಿವಿಲ್, ಮೆಜಿಸ್ಟ್ರೇಟು, ಛ್ಯಾಂಡ್ ರೆವಿನ್ಯೂ ರೂಲ್ಸು, ಬಗೆ ಬಗೆ ದಾನಾದಿಗಳು, ತೀರ್ಮಾನ, ಡಿಕ್ರಿ, ಸ್ಮಾಲ್‌ಕಾಸ್, ಅಪೀಲು, ರಿವ್ಯೂ, ಪೋಲೀಸು, ಸ್ಯಾನಿಟರಿ, ವಿದ್ಯಾಭ್ಯಾಸ, ಮ್ಯುನಿಸಿಪಲ್, ಇಂಜನಿಯರ್, ಸ್ಯಾನಿಟರಿ, ಫಾರೆಸ್ಟು, ಯಕ್ಸೈಜು, ಈ ಇಲಾಖೆಗಳ ಸಂಗತಿಗಳು, ಆಧಾರ, ಘೋಗ್ಯ, ಕ್ರಯ, ದಾನ, ಗೇಣಿ, ಮರಣಶಾಸನ, ಮುಂತಾದವುಗಳ ವಿಧಿ. ರೋಜು ವರ್ಗ, ಮುಂತಾದ ವರ್ತಕರ ಲೆಕ್ಕಗಳೆಲ್ಲಾ ಬರೆಯುವ ರೀತಿ, ಶಿರಾಸ್ತೆದಾರಿಕೆ ಲೆಕ್ಕಗಳು ಬರೆಯುವ ರೀತಿ, ಸಿವಿಲ್ ಪ್ರೊಸೀಜರ್ ಕೋಡು, ಇಂಡಿಯನ್ ಪೆನಲ್ ಕೋಡು, ಹಿಂದೂಲಾ, ಮಹಮ್ಮದೀಯಲಾ, ಕಂಪನಿಸ್ ಆಕ್ಟು, ಮೋಟ್ಟು, ಆರಂಸ್, ಮುಂತಾದ ಎಲ್ಲಾ ಆಕ್ಟುಗಳ ಸಾರಾಂಶಗಳೇ ಮೊದಲಾದ ಹಲವು ವಿಷಯಗಳು ಅಡಗಿವೆ. ಕ್ರಯ ಒಂದು ರೂಪಾಯಿ ನಾಲ್ಕಾಣೆ.

ಗೀತಾಮೃತಮಹೋದಧಿ—ಕ್ರಯ ೦—೮—೦. ಈ ಪುಸ್ತಕದಲ್ಲಿ ಭಗವದ್ಗೀತೆಯ ಅಂಶಗಳನ್ನೆಲ್ಲಾ ಸಮಸ್ತ ಜನಗಳಿಗೂ ಸುಲಭವಾಗಿ ತಿಳಿಯುವಂತೆ ಕನ್ನಡ ಸುಲಭಶೈಲಿಯಲ್ಲಿ ಬರೆದಿರುತ್ತೆ.

ಬೇಗ ಬೇಗ ಮೇಲಿನ ಪುಸ್ತಕಗಳನ್ನು ಈ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಿರಿ. ವಿಳಾಸ.—ಮ್ಯಾನೇಜರ್, ಕರ್ನಾಟಕ ಪುಸ್ತಕಾಲಯ,

ಲಕ್ಕೂರ್ ಪೇಟೆ, ಕೋಲಾರ್ ಡಿಸ್ಟ್ರಿಕ್ಟ್.

ನರಳುವ ಹೆಂಗಸರಿಗೆಲ್ಲಾ

ಪೆರೂನಾದಿಂದ ಪ್ರಯೋಜನವಾಗುವುದು.

ಅನೇಕ ಸ್ತ್ರೀಯರು ಪೆರೂನಾ ಸೇವಿಸಿಯಿಂದ ತಮ್ಮ ಮುಖ ಸೌಂದರ್ಯವನ್ನು ಹಿಂದಕ್ಕಾಗಿ ಪಡೆದುಕೊಂಡಿದಾರೆ. ಸ್ತ್ರೀಯರಿಗುಂಟಾಗುವ ಅನೇಕ ಕಾಯಿಲೆಗಳು ಒಳಗಿನ ಪೊರೆಗಳ ನರಳುವಿಕೆಯಿಂದ ಹುಟ್ಟಿಕೊಂಡಿರುತ್ತವೆ. ಪೆರೂನಾವು ಮುಖದ ಚರ್ಮವನ್ನು ನಿರ್ಮಲವಾಗಿ ಮಾಡಬಲ್ಲದು. ಮುಖವು ಕಾಂತಿಯುಳ್ಳದ್ದಾಗುವಂತೆ ಉತ್ತೇಜಿಸುವುದು.

MME LEO GABOURG

MRS JAMES GOLLOHER

DLLE MARIE L MEUNIER

ನನ್ನ ಸಹೋದರಿಯು ಪೆರೂನಾ ಉಪಯೋಗಿಸೆಂದು ನನಗೆ ಹೇಳಿದಳು. ನಾನು ನಿಮ್ಮ ಔಷಧವನ್ನು ಸೇವಿಸಿದೆನು. ಬೇಗನೆ ನನಗೆ ಆಹಾರ ರುಚಿಸುವಂತಾಯಿತು. ನನಗೆ ಶಕ್ತಿಯೂ ಮಾಂಸವೂ ವೃದ್ಧಿಯಾಗಿ ಪೂರ್ಣಾರೋಗ್ಯದಿಂದಿರುತ್ತೇನೆ. ನಿಮ್ಮ ಔಷಧವು ನನಗೆ ತುಂಬಾ ಪ್ರಯೋಜನವಾಯಿತು. ಅದಕ್ಕಾಗಿ ವಂದಿಸುವೆನು. ಹೀಗೆ ಹೇಳುವವ್ಯಾರೆಂದರೆ —

ಮಿಸ್ ಜೂಲಿಯಾ ಬಟ್ಲರ್,

ಆಸ್ಟಿನ್, ಮಿನ್ನೆಸೋಟ, ಯು. ಎಸ್. ಎ.

ಗುಣವಾದದ್ದಕ್ಕೆ ಕೃತಜ್ಞತೆಯು.

ಮೇಡಂ ಲಿಯೊ ಗೇಬುರ್ಗ್, ೨೧೫ ರೂ ಆರಾಗೊ ಸೆಂಟ್ ಸಾವ್ಯೂರ್, ಕ್ವಿಬೆಕ್ ಕ್ಯಾನಡಾ, ಈಕೆ ಬರೆಯುವುದು —

"ನೀವು ನನಗೆ ಎಷ್ಟು ಹೇಳಿದ್ದಕ್ಕಾಗಿ ನಿಮ್ಮನ್ನು ತುಂಬಾ ವಂದಿಸುವೆನು. ನಿಜವಾಗಿಯೂ ನಾನು ಬಹಳ ಚೆನ್ನಾಗಿ ಆರೋಗ್ಯದಲ್ಲಿದ್ದೇನೆ. ನಾನು ಮೊದಲಿನವಳೇ ಅಲ್ಲವೆಂದು ನನಗೆ ತೋರುವಂತಾಗಿದೆ.

ನನ್ನ ಸ್ನೇಹಿತೆಯರಲ್ಲಿ ಕೆಲವರು ಶೀತದಿಂದ ನರಳುವರು. ಪೆರೂನಾವನ್ನು ಸೇವಿಸಿ ಆರೋಗ್ಯ ಹೊಂದಿರುತ್ತಾರೆ. ನನಗೇನೋ ಬಹು ಬೇಗನೆ ತೃಪ್ತಿಕರವಾಗಿ ಗುಣವಾಯಿತು."

ಪಕ್ಕೆಯ ನೋವು

ಮಿಸೆಸ್ ಜೇಮ್ಸ್ ಗ್ಯಾಲೋಹರ್ ಅಪ್ಪರ್ ಸ್ಯಾಂಡಸ್ಕಿ, ಓಹಿಯೋ, ಯು. ಎಸ್. ಎ. ಈಕೆ ಬರೆಯುವುದು —

"ಪೆರೂನಾದಿಂದ ನನ್ನ ಎದೆಯಲ್ಲೂ ಪಕ್ಕೆಯಲ್ಲೂ ಇದ್ದ ಬಾಧೆಯು ನಿವಾರಣೆಯಾಯಿತು.

"ಒಂದು ವರುಷದ ಕೆಳಗೆ ನಾನು ಈ ರೋಗದಿಂದ ನರಳುತ್ತಿದ್ದೆನು. ಹಿಂದಿನ ಭುಜದ ತಗಟೆ ಹೊತ್ತಿನಲ್ಲಿ ಕೆಲವು ವೈದ್ಯರನ್ನು ಕರೆಸಲಾಯಿತು. ಈ ನೋವಿನ ದೆಸೆಯಿಂದ ನಾನು ಡಾಕ್ಟರಿಗೆ ಹೇಳಿಕಳುಹಿಸುವುದು ಅಗತ್ಯವಿತ್ತು.

ನೀವು ಹೇಳಿದ ಪ್ರಕಾರ ನಾನು ಪೆರೂನಾ ಸೇವಿಸುತ್ತಾ ಬಂದಿದ್ದರಿಂದ ನಾನು ಸುಖವಾಗಿ ನನ್ನ ಮನೆಯ ಕೆಲಸಗಳನ್ನು ಸರಿಯಾಗಿ ನಡಸಿಕೊಂಡು ಹೋಗುತ್ತೇನೆ.

"ಪೆರೂನಾದಲ್ಲಿ ನನಗಿರುವಷ್ಟು ಭರವಸವು ಪ್ರಪಂಚದಲ್ಲಿ ಇನ್ನಾವ ಪದಾರ್ಥದ ಮೇಲೂ ಇಲ್ಲ. ಅದು ನನಗೆ ಗುಣಪಡಿಸಿದೆ. ಅದು ಇತರರಿಗೂ ಗುಣಕೊಟ್ಟು ತಂದ ನಾನು ಬಲ್ಲೆನು."

ಈ ಸಹಿದು ನನ್ನ ಬಾಳೇ ದುಃಖಕರವಾಯಿತು

ಡಲ್ ಮೇರಿ ಎಲ್. ಮ್ಯೂನಿಯರ್, ೪೧೨ ಒಂಟೇರಿಯೊ ಎವಿ. ಮಾಂಟ್ರಿಯಲ್ ಕ್ಯಾನಡಾ ಈಕೆ ಬರೆಯುವುದು — "ನನಗೆ ಕೈತ ರೋಗವು ಪೆರೂನಾದಿಂದ ಗುಣವಾಯಿತೆಂದು ಸಂತೋಷವಾಗಿ ಹೇಳುತ್ತೇನೆ. ಈ ರೋಗವು ನನ್ನ ಬಾಳನ್ನು ದುಃಖಕರವಾಗಿ ಮಾಡಿತ್ತು. ಅದಲ್ಲದೆ ಹಿಂದಿನ ಹೊತ್ತು ಬಹು ಆಯಾಸವೆನು. ಕೆಮ್ಮು ಕಫ ಕ್ಷೀಣದ್ದನ್ನು ಉಗುಳ ಗಂಟಲನ್ನೂ ತಾಗಿಕೊಂಡವನ್ನೂ ಸರಾಗಗೊಳಿಸಿಕೊಂಡರು. ೩ ಔನ್ಸ್ ಬಾಟಲಗಳನ್ನು ತೆಗೆದುಕೊಂಡಿತು. ಈ ಔಷಧವು ನನಗೆ ಹೀಗೆ ಗುಣವಾಗಿತು. ಈ ಸಲು ಕೆರವಾದ ರೋಗದಿಂದ ನರಳುವವರಿಗೆಲ್ಲಾ ಈ ಔಷಧವನ್ನು ಸೇವಿಸೆಂದು ಒಡನೆ ವಿಶೇಷವಾಗಿ ಶಿಫಾರಸು ಮಾಡುತ್ತೇನೆ."

ತಲೆನೋವು ವಾಂತಿಯೂ

ಮಿಸ್ ನಿಲ್ಲಿ ಇ. ವಿಂಗೇಟರ್ಸ್, ಆರ್. ಎಫ್. ಡಿ. ೩೧ ವೆಸ್ಟ್ ಫೀಲ್ಡ್ ನ್ಯೂ ಯಾರ್ಕ್ ಯು. ಎಸ್. ಎ. ಈಕೆ ಬರೆಯುವುದು —

ನಾನು ತಲೆನೋವು ವಾಂತಿ ರೋಗಗಳಿಂದ ಬಹಳ ಕ್ರಮವಾಗಿ ಬಾಧೆಪಡುತ್ತಿದೆ. ಈಗ ಅವು ನನಗೆ ಸಂಪೂರ್ಣವಾಗಿ ಗುಣವಾಯಿತು. ಈಗ ನನಗಿರುವಷ್ಟು ಆರೋಗ್ಯವು ಹತ್ತು ವರುಷಗಳಿಂದ ಇರಲಿಲ್ಲ. ರೋಗದ ಭಯವನ್ನು ನೀಗಿಸಿ ಈ ಎರಡು ರೋಗದ ಔಷಧಗಳನ್ನು ನೀವು ಹೇಳುವಂತೆ ಮಾಡುತ್ತೇನೆ. ಮತ್ತು ದೇವರು ಡಾ|| ಹಾರ್ಟ್‌ಮನ್‌ರವರನ್ನೂ ಅವರ ಅದ್ಭುತ ಔಷಧಗಳನ್ನು ಆಶೀರ್ವದಿಸಲೆಂದು ಬೇಡುವೆನು.

ಕೆಮ್ಮೂ ಬಲಹೀನತೆಯೂ ಕ್ಷಯವೂ

ಮಿಸೆಸ್ ಹ್ಯಾರಿ ಪಾರ್ಕರ್, ಆರ್. ಎಫ್. ಡಿ. ನಂ. ೧ ಲವಾರಿ ಪಾವಾರಾ ಯು. ಎಸ್. ಎ. ಈಕೆ ಬರೆಯುವುದು — ೨೦ ರೋಗಿಗಳು ನನ್ನ ಹತ್ತಿರಲ್ಲಿ ಪೆರೂನಾವನ್ನು ಸೇವಿಸಿ ಶಿಫಾರಸು ಮಾಡುತ್ತೇನೆ. ಮಕ್ಕಳ ಹಲವು ವಿಧವಾದ ರೋಗಗಳಿಗೂ ಕೆಮ್ಮಿಗೂ ಇದು ಉತ್ತಮವಾದ ಔಷಧವೆಂದು ನಾನು ಅನುಭವದಿಂದ ಹೇಳುತ್ತೇನೆ.

ಅಂತರ್ಗತವಾದ ಶೀತವು

ಮಿಸೆಸ್ ಜೇಂಸ್ ಗ್ಯಾಲೋಹರ್ ಸಾವ್ಯರ್ಡ್, ಒಂಟೇರಿಯೊ, ಕ್ಯಾನಡಾ ಈಕೆ ಬರೆಯುವುದು — ನನಗೆ ಅಂತರ್ಗತವಾದ ಶೀತ ಒದಿದು ಎರಡು ವರುಷ ಅನುಭವಿಸಿದೆನು. ಶೀತ ಕಾಲದಲ್ಲಿ ಜಿನ್ನು ಪಕ್ಕೆಗಳೂ ನೋಯುತ್ತಿದ್ದದ್ದರಿಂದ ಮನೆ ಕೆಲಸಗಳನ್ನು ಮಾಡಲೆಂದೆ ಇದ್ದೆನು. ಇಲ್ಲದೆ ಹೋಗ ಅದನ್ನು ನಿವಾರಣೆ ಮಾಡಿಕೊಳ್ಳದೆ ಹೋದರೆ ನಾನು ಬದುಕುವುದಿಲ್ಲವೆಂದು ಶಂಕೆಪಡುತ್ತಿದ್ದೆನು. ನನ್ನ ಹಾಗೇ ರೋಗದಲ್ಲಿ ನರಳುತ್ತಿದ್ದವರಿಗೆ ಪೆರೂನಾದಿಂದ ಗುಣವಾಯಿತೆಂದು ತಿಳಿದು ನಾನೂ ಅದನ್ನು ಸೇವಿಸಿ ನೋಡೋಣವೆಂದು ಗೊತ್ತುಮಾಡಿಕೊಂಡೆನು. ಒಂದು ಬಾಟ್ಲು ಔಷಧವನ್ನು ಸೇವಿಸುವಷ್ಟರಲ್ಲಿ ನನ್ನ ಶರೀರ ಸ್ಥಿತಿಯು ಒಳ್ಳೆಯದಾಗಿ ಹೊಂದಿತು. ಐದು ಬಾಟ್ಲುಗಳನ್ನು ಸೇವಿಸಿದನು. ಈಗ ನಾನು ಸಂಪೂರ್ಣ ಗುಣಹೊಂದಿರುತ್ತೇನೆ. ಅದನ್ನು ನನಗೆ ಕೊಂಡುಕೊಟ್ಟದ್ದಕ್ಕಾಗಿ ಡಾ|| ಹಾರ್ಟ್‌ಮನ್‌ರವರನ್ನು ವಂದಿಸುತ್ತೇನೆ."

ಮಲಕೋಶಕ್ಕೆ ಹಿಡಿದ ಶೀತವು

ಮಿಸೆಸ್ ವಾಸ್ತಿಗ ಡರ್ಬಿನ್, ೧೩೩ ಉತ್ತರ ಬೀದಿ, ಲಿಟಲ್ ರಾಕ್ ಆರ್ಕನ್ಸಾಸ್, ಯು. ಎಸ್. ಎ. ಈಕೆ ಬರೆಯುವುದು —

"ನನಗೆ ಐದು ವರುಷಗಳಿಂದ ಕೆಟ್ಟ ರೋಗ ಒದಿದು ಸೇಳುತ್ತಿದ್ದೆನು. ಕೆ ದು ಕೆಲವ ಔಷಧವನ್ನೆಲ್ಲಾ ಸೇವಿಸಿದೆನು. ಪ್ರಾಯದಿಂದಲೂ ನನಗೆ ಗುಣವಾಗಲಿಲ್ಲ. ಕೆಲವು ಡಾಕ್ಟರುಗಳು ನನ್ನ ಮಲಮೂತ್ರಕೋಶದಲ್ಲಿ ಶೀತವುಂಟಾಗಿ ಅದು ಕ್ಷಯವಾಗುತ್ತಿದೆ ಎಂದು ಹೇಳಿದರು. ಒಬ್ಬ ಡಾಕ್ಟರು ನನ್ನ ರೋಗವನ್ನು ಗುಣವಾಡುತ್ತೇನೆಂದು ಹೇಳಿದರು. ಅವರು ಕೊಟ್ಟ ಔಷಧವನ್ನು ಎರಡು ತಿಂಗಳು ಸೇವಿಸಿದರೂ ಅದರಿಂದ ನನಗೆ ಸ್ವಲ್ಪವೂ ಅನುಕೂಲವಾಗಲಿಲ್ಲ.

ನನ್ನ ಸ್ನೇಹಿತೆಯೊಬ್ಬಳು ಪೆರೂನಾ ಸೇವಿಸೆಂದು ನನಗೆ ಹೇಳಿದಳು. ಸೇವಿಸುತ್ತಾ ಬಂದೆನು. ಎರಡು ಬಾಟ್ಲು ಔಷಧ ಸೇವಿಸುವಷ್ಟರಲ್ಲಿ ನನಗೆ ಗುಣವಾಗುವಂತೆ ತೋರಿತು. ಹಾಗೇ ಅದನ್ನು ಬಿಡದೆ ಸೇವಿಸುತ್ತಾ ಬಂದೆನು. ಈಗ ನಾನು ಕ್ಷೇಮದಿಂದ ಆರೋಗ್ಯ ಹೊಂದಿದೆನು.

ಪೆರೂನಾದಿಂದ ನನಗೆ ಎಷ್ಟು ಪ್ರಯೋಜನವಾಯಿತೆಂದು ತಿಳಿಯಬೇಕೆಂದವರು ನನಗೆ ಬರೆದಲ್ಲಿ ಕೂಡಲೇ ನಾನು ಜವಾಬು ಕೊಡುವೆನು.

ಮಾಂಸವೂ ಶಕ್ತಿಯೂ ಹೆಚ್ಚಾದವು

ಮಿಸೆಸ್ ಕಾಡಿರ್‌ಮಾ ಪ್ರೈಸ್, ಆರ್. ಎಫ್. ಡಿ. ನಂ. ೪ ರಾಜರ್ಸ್‌ವಿಲ್ಲೆ ಟೆನ್ ಯು. ಎಸ್. ಎ. ಈಕೆ ಬರೆಯುವುದು —

"ನನ್ನ ನೆತ್ತಿಗೆ ಶೀತ ಒದಿದಿತ್ತು. ಹತ್ತು ವರುಷ ಕಾಲ ಅದರ ಬಾಧೆಯಿಂದ ನರಳಿದೆನು. ನಾನಾ ಬಗೆಯ ಔಷಧಗಳನ್ನು ಸೇವಿಸಿದಾಗ್ಯೂ ನನಗೆ ವಾಸಿಯಾಗಲಿಲ್ಲ.

"ಕಡೆಯಲ್ಲಿ ಒಂದು ಬಾಟ್ಲು ಪೆರೂನಾ ಕೊಂಡು, ಸೇವಿಸಲಾರಂಭಿಸಿದ ಒಡನೆಯೇ ನನಗೆ ವಾಸಿಯಾಗುವಂತೆ ಕಂಡಿತು. ನಾನು ತುಂಬಾ ಕೃಶವಾಗಿದೆನು. ಬಹಳ ಬಲಹೀನಳಿದ್ದೆನು. ಬಾಯಿಗೆ ರುಚಿ ಇರಲಿಲ್ಲ. ಗಂಟಲಲ್ಲಿ ಬಿಸಿಯಾಗಿತ್ತು. ನುಂಗುವುದಕ್ಕಾಗುತ್ತಿರಲಿಲ್ಲ. ಎಲ್ಲಾ ವಿಷಯಗಳಲ್ಲೂ ಬಹಳ ನಿತ್ರಾಣಳಾಗಿದ್ದೆನು. ಆದರೆ ಈ ಪೆರೂನಾವನ್ನು ಸೇವಿಸುತ್ತಾ ಬಂದ ಹಾಗೆಲ್ಲಾ ಬಲವೂ ಮಾಂಸವೂ ದಿನೇ ದಿನೇ ಹೆಚ್ಚುತ್ತಾ ಬಂದವು."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದ್ದೂ ಇವರಿಂದಲೇ ತಿಳಿಯಬಹುದು

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ :—

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

... ೧೪—೧—೧೯೦೯ ರಿಂದ ೨೦—೧—೧೯೦೯ ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	0	0	0
ಮೈಸೂರು ,,	4	2	0	0
ಬೆಂಗಳೂರು ಡಿಸ್ಟ್ರಿಕ್ಟು	8	7	0	0
ಮೈಸೂರು ,,	50	29	0	0
ಕೋಲಾರ್ ,,	10	[illegible]	1	1
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ	5	4	0	0
ಚಿತ್ರದುರ್ಗ ,,	0	0	0	0
ಕಡೂರ್ ,,	11	10	0	0
ಶಿವಮೊಗ್ಗ ,,	0	0	0	0
* ಸಂಖ್ಯೆ ಕಾಣಿಸಿಲ್ಲ ಒಟ್ಟು	93	67	1	1

ಶಾಲಿವಾಹನ ಶಕೆ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಪುಷ್ಯ ಬಹುಳ ಚತುರ್ದಶಿ ಗುರುವಾರದಿಂದ ಮಾಘ ಶುದ್ಧ ಷಷ್ಠಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾಸ ದಿನ
21	ಗುರು *	ಚತುರ್ದಶಿ	1 50	ಉತ್ತರಾ	55 10	9
22	ಶುಕ್ರ ‡	ಪಾಡ್ಯಮಿ	12 28	ಶ್ರವಣ	2 30	10
23	ಶನಿವಾ †	ಬಿದಿಗೆ	17 6	ಧ	57 29	11
24	ರವಿವಾ ,	ತದಿಗೆ	41 11	ಶ	51 23	12
25	ಚಂದ್ರ	ಚೌತಿ	45 25	ಪೂಭಾ	47 2	13
26	ಕುಜ §	ಪಂಚಮಿ	[illegible]	ಉತ್ತ್ರಭಾ	12 58	14
27	ಬುಧ	ಷಷ್ಠಿ	24 20	ರೇ	19 49	15

* ಗರುಡಜಯಂತಿ ಸರ್ವತ್ರ ಅಮಾವಾಸ್ಯೆ ‡ ಮಾಘ ಸ್ನಾನಾರಂಭ † ಚಂದ್ರದರ್ಶನ , ತಾರುಣ್ಯ ದೆಶೆ ವೃತ, ವರದ ಚೌತಿ § ಶ್ರೀಪಂಚಮಿ ಷಷ್ಠಿ ಮಕರಸಂಕ್ರಮಣ ಪುಣ್ಯಕಾಲ ಕುಮಾರ ಷಷ್ಠೀ ವ್ರತ, ಉತ್ತರಾಯಣ

ಪೇಟೆ ಧಾರಣೆ

ವಿವರ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೪ ೮ ೦	೧೯ ೪ ೦
ಕೆಂಪುತ ಅಕ್ಕಿ ಅವಲ್		೧೬ ೦ ೦	೧೬ ೮ ೦
,, ದುಯ್ಯಂ		೧೫ ೮ ೦	೧೪ ೦ ೦
ಜಾಪ್ರಾನಿ ಅಕ್ಕಿ		೧೫ ೧೨ ೦	೧೯ ೮ ೦
ಸಣ್ಣಕ್ಕಿ ಅವಲ್		೧೬ ೦ ೦	೨೦ ೦
,, ದುಯ್ಯಂ		೧೭ ೮ ೦	೧೯ ೦ ೦
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೬ ೨ ೦	೧೨-೮ ೦
,, ದುಯ್ಯಂ		೧೬ ೦ ೦	೧೭ ೪-೦
ಹೆಸರು ರಾಗಿ ಪಲ್ಲಾ ೧ಕ್ಕೆ		೧೦ ೬ ೦	೧೦ ೦
ಕಾರ್‍ರಾಗಿ		೧೦ ೦ ೦	೯ ೦ ೦
ಜೋಳ		೯ ೬ ೦	೧೦-೦ ೦
ಹುಲ್ಲಂಡೆ ಪಲ್ಲಾ ೧ಕ್ಕೆ		೧೬ ೪ ೦	೧೭ ೦ ೦
ಬಿಳೀ ಅವರೆ		೧೬ ೨ ೦	೧೪ ೮ ೦
ಹೆಸರು		೧೨ ೮ ೦	೧೩ ೮ ೦
ಉದ್ದು		೧೪ ೬ ೦	೧೨-೮ ೦
ಕಡಲೆ		೧೨ ೦-೦	೧೬ ೪ ೦
ಎಳ್ಳು ಸೇ ೧೨೭ ಕ್ಕೆ		೨೯ ೯ ೦	೨೦ ೮-೦
ಹುರುಳಿ		೧೦ ೮ ೦	೧೨ ೦ ೦
ಹರಳು ೧೨೭ ಸೇರಿಗೆ		೧೦ ೨ ೦	೧೦ ೦ ೦
ಸೀಗೇಕಾಯಿ ಮೂ ೧ಕ್ಕೆ		೧ ೮ ೦	೧ ೬ ೦
ಮೆಣಸಿನಕಾಯಿ		೬ ೦ ೦	೩ ೮ ೦
,, ದುಯ್ಯಂ		೫ ೮ ೦	೩ ೪-೦
ಬೆಲ್ಲ ದೊಡ್ಡ ಅಚ್ಚು		೬ ೦ ೦	ಮ ೭ ೦ ೦
ಒಳ್ಳೆಣ್ಣೆ ಮಣ ೧ಕ್ಕೆ		೫ ೧೨ ೦	೫ ೦ ೦
ಹರಳೆಣ್ಣೆ		೬ ೨ ೦	೪ ೬ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೬ ೪ ೦	೬ ೮ ೦
ಉಪ್ಪು		೬ ೦ ೦	೫ ೦-೦
ಹುಣಸೇ ಹಣ್ಣು		೧ ೮ ೦	೧ ೪ ೦
ಹುಳಿಪು		೧ ೪ ೦	೧ ೪ ೦
ತುಪ್ಪ ಮೂ ೧ಕ್ಕೆ		೧೪ ೨ ೦	೧೫ ೮ ೦
ಸೀಮೆಎಣ್ಣೆ ಪೆಟ್ಟಿ ೧ಕ್ಕೆ		೫ ೦ ೧	೪ ೦ ೦
ತೆಂಗಿನಕಾಯಿ ೧೦೦ ಕ್ಕೆ		೬ ೨ ೦	೪ ೮ ೦
ಅಡಿಕೆಕಾಯಿ ಮೂ ೧ಕ್ಕೆ		೦ ೧೨ ೦	೦ ೧೩ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೧ ೧೪ ೦	೦ ೧೪ ೦
ಚಿನ್ನ (ಸೌರ್ನ) ತೊಲ		೧೫ ೭ ೦	೧೫ ೭-೦
,, , ಪವನು		೧೫ ೧೬ ೦	೧೫-೭ ೦
,, , ಗಟ್ಟಿ ತೊಲ ೧ಕ್ಕೆ		೨೪ ೧೦ ೦	೨೪ ೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೦ ೦	೬೪ ೦ ೦

Printed and Published by the Rev. L. W. Thomson, M. A., Proprietor and Manager, Wesleyan Mission Press, Mysore. 21/1/1909

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—೧೯೧೯ ನೇ ಇಸವಿ ಜನವರಿ ತಾರೀಖು ೨ ನೇ ಗುರುವಾರ. ಸಂಚಿಕೆ ೩೫

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

10 70

೧ ಲೋಕಾನುಗ್ರಹ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಸುವರ್ಣ ಭಸ್ಮ, ಬೆಳ್ಳಿಯ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ... ತಯಾರಿಸಿದೆ

... ಜ್ವರ, ಹೊಟ್ಟೆನೋವು ... ಸೊಂಟ, ಕೈಕಾಲು ಕೊಡತ (ಬಾರು) ಮೈ ನಡುಕ, ಶೀತವಾತ ಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ... ಶಕ್ತಿ ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸುತ್ತ ... ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿ ... ಯಾವ ಕಾಯಿಲೆಗೂ ದಾರಿ ... ಬದಲಾವಣೆಯನ್ನು ... ರಕ್ತದಲ್ಲಿ ದೋಷವನ್ನು ತೆಗೆದು ಬುದ್ಧಿ ... ವೃದ್ಧಿಪಡಿಸು ... ಮಕ್ಕಳ ... ಜ್ವರ, ... ಜ್ವರ, ಕೃಶತ್ವವನ್ನು ... ಗುಣಪಡಿಸುತ್ತದೆ

ಇದನ್ನು ... ಖಂಡಿತವಾಗಿಯೂ ... ಜೊತೆಗೆ ಗುರಿ ಯಾಗುವುದಿಲ್ಲ ... ಅನುಪಾನಸಹಿತ ... ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ರೂಪಾಯಿ ... ೧೨ ಕುಪ್ಪಿ ವರೆಗೆ ಪೋಸ್ಟೇಜು ೩ ಆಣೆ

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಜ್ವರ ಹರಿ 64 26

ಇದು ಸಾಧಾರಣ ಜ್ವರ, ಚಳಿಜ್ವರ, ಮೋಹಜ್ವರ, ಪಿತ್ತಜ್ವರ, ಶೀತಜ್ವರ ವಾತಜ್ವರ ... ಎಂಬ ಸಕಲ ವಿಧವಾದ ಜ್ವರಗಳನ್ನೂ ... ವಾಸಿಮಾಡುವದು

ಚಿತ್ರದುರ್ಗದ ... ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನಾವು ಕೆಲವು ದಿವಸಗಳ ಹಿಂದೆ ಕಳುಹಿ ಕೊಟ್ಟ ... ತರಿಸಿ ... ಸ್ವಲ್ಪ ... ನಮ್ಮ ಔಷಧದಿಂದ ಅನೇಕ ಮಂದಿ ಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕೇಳುತ್ತಿರುವುದರಿಂದ ... ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕೃತರಾಗಿದೆ ಎಂದು ಬರೆದಿದ್ದಾರೆ

ಕ್ರಯ— ಸೀಸೆ ೧ ಕ್ಕೆ ೮ ಆಣೆ ೧ ರೂ ೧—೮ ರೂ ... ೩—೧೨ ೮ , ೧೧ ರೂ ಹನ್ನೆರಡು ಸೀಸೆ ತರಿ ಕೊಂಡರೆ ಪೋಸ್ಟೇಜು ವಸೂಲಿ ಬಿಡಲಾಗುವದು

ಓಮಂ ಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ಶಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ಶೀಘ್ರವಾಗಿ ಪರಿಣಾಮ ಕೊಡಲೇ ಗುಣಕೊಡುವದ ಇದು ಹೆಂಗಸರು ... ಋತುವಾಗುವಾಗ ... ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧ ದಂತೆಯೇ ಸೀಸೆಗಳಲ್ಲಿ ದೊರಕುವದು

ಕತವದ ಅಸಿಸ್ಟೆಂಟ್ ಸರ್ಜನ್ ... ಅವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿವೆ ಇದು ಬಹಳ ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಔಷಧ ಸಾಹುಕಾರರಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕೆಂಡ್ ಬೀಚ್ ಲೈನ್, ಮದರಾಸ್

AMRUTANJAN DEPOT, 16 OAK-LANE, BOMBAY. [17-49]

ಅಮೃತಾಂಜನ ಡಿಪ್ಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಅಬಲುಗಂಟು ನೋವು, ಎದೆಶೀತ, ಛಾಯ, ಜಖಮು, ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತೀವ್ರವಾಗಿಯೂ ಯೋಗ್ಯವಾದ ಸಂಗತಿಯಾಗಿರುತ್ತದೆ ಇದು ಚರ್ಮದ ಮೂಲಕ ಮಾಂಸವನ್ನು ಪ್ರವೇಶಿಸಿ, ಕೊಳಕು ಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ ಬಾಟ್ಲಿ ಒಂದರ ಕಿಮ್ಮತು ೦—೮—೦ ಪೋಸ್ಟು ಖರ್ಚು ೦—೪—೦ ಆರು ಬಾಟ್ಲಿ ಕೊಂಡುಕೊಂಡವರಿಗೆ ಒಂದು ಕಪ್ ಇನಾಮು ಆರ್ ಆರ್ ಗಂಗೋಲಿ 1 ನೇ ಕ್ಲಾಸ್ ಸಬ್ ಜಡ್ಜ್ ಕಾಂಡವಾ,—ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ.

ಗಜಕರ್ಣದ ಮುಲಾಮು.

ಮೂರು ಸಾರಿ ತಗಿಸುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಡಬ್ಬಿ ೧ಕ್ಕೆ ೦—೬—೦, ವಿ. ಪಿ. ಖರ್ಚು ೦—೪—೦

ದಂತಮಂಜನ—ಡಬ್ಬಿ ೨ ಆಣೆ ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ, ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ, ಹಲ್ಲುಗಳು ಘಟ್ಟಿಯಾಗುತ್ತವೆ, ಹಲ್ಲುಗಳು ಬೆಳ್ಳಗಾಗುತ್ತವೆ

ಕಜ್ಜಿ ಮುಲಾಮು—ಡಬ್ಬಿ ೧ಕ್ಕೆ ಕಿಮ್ಮತ್ತು ೩ ಆಣೆ

ಕೇಶವರ್ಧನಿ—ಚಳೂ ... ಉಳ್ಳದ್ದು

ಕೇಶವರ್ಧನಿ—ಮಸಿಬುದ್ಧಿ ವ ಮುವದು

ಕೇಶವರ್ಧನಿ—ಕೂದಲನ್ನು ನಯವಾದುವದು ಬಾಟ್ಲಿ ಒಂದರ ಕಿಮ್ಮತ್ತು ರೂ ೧—೦—೦

ವಜ್ರಗುಟಿಕೆ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಸುಮಾಂಗುಟಿಕೆ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸುಂದರೀ ತೈಲ—ಮೋರೆಯ ಮುದ ಬಗೆಳಿಗೆ	೧—೮—೦
ತಾಂಬೂಲ ಗುಟಿಕೆ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೦—೪—೦
ಚೇಳುಕಡಿತದ ಮದ್ದು ಚೇಳುಕಡಿತಕ್ಕೆ	೦—೮—೦
ಗುಲಾಬು ಮಾತ್ರೆ—ಜುಲಾಬಿಗೆ	೦—೮—೦

ಈ ಕಂಪನಿಯವರು ಪಟ್ಟ ... ಸಿದ್ಧೌಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಳಾಸ—ವಿಲಿಯಂ ಮತ್ತು ಕಂಪೆನಿ, ೧೬ ಓಕ್‌ಲೇನು, ಫೋರ್ಟ್ ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 1

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರೀ ಮಾಡುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ನಮೂನೆಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ೧ ರೂ ೪ ಆ

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ ೮ ಆ ೨ ರೂ

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ ೧ ರೂ ೬ ಆ

ಉಣ್ಣೆಯ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಹೊಸಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು, ಕೈಮಗ್ಗ ಪಟ್ಟೆ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಲಾ ಪ್ರಕಟನೆಗಳು

ವ್ಯವಹಾರನಿರ್ಣಯ—ಪುಟಗಳು ೫೨೫ ಹಿಂದೂ ನ್ಯಾಯಮರಿಯಾದೆಗಳು, ೨೮ ಶಾಸನಗಳು ಇವುಗಳ ಸಂಗ್ರಹವು, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ ಕ್ರಯ ವಿ. ಪಿ. ಸೇರಿ ೧ ರೂ ೧೨ ಆಣೆ [10 40]

ಕನ್ನಡ ಲಾ ರಿಪೋರ್ಟ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ ವರ್ಷದ ಚಂದಾ ರೂ ೧—೦—೦ ಮುಂಗಡ, ಯಾ, ವಿ. ಪಿ. ಬಿಡಿಪತ್ರಿಕೆ ೧ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು—ಎಂ. ಮಲ್ಲಾರಾಯರು, ಫಸ್ಟ್ ಗ್ರೇಡ್ ಪ್ಲೀಡರ್, (೯೦) ೨ ನೇ ರೋಡ್, ಚಾಮರಾಜಪೇಟೆ, ಬೆಂಗಳೂರು ಸಿಟಿ— ಈ ವಿಳಾಸಕ್ಕೆ ಬರೆಯುವುದು

ನೋಡಿರಿ "ಪ್ರೋತ್ಸಾಹಕೋಟಿ" ತರಿಸಿರಿ

98 10

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ ೫,೦೦೦ ಹಾಸನ ಟೋಪಿ ಹೊಲಿಸುವ (ಪೇರುವಾ) ಸುಪೀರಿಯರ್ ಉಲನ್

೮ ಅಡಿಗಳಿರುವ ಪೇರುವಾ ಉಲನ್ ಬಂಡಲ್ ೧ಕ್ಕೆ	ರೂ	೩ ೦ ೦
೧೦ ಟೋಪಿಯಾಗುವ ಸುಪೀರಿಯಲ್ ಉಲನ್ ಬಂಡಲ್ ೧ಕ್ಕೆ	ರೂ	೩ ೬ ೦
೧ ಟೋಪಿ ಉಲನ್ ದಾರಕ್ಕೆ (ಸುಪೀರಿಯರ್)		೦-೮-೦
ಹಾಸನ ಟೋಪಿ ಹಾಕುವ ಕೊಕ್ಕೆ ಸೂಜಿ ೧ಕ್ಕೆ	೦ ೨ ೦,	೦-೧-೬
(ಪೇರುವಾ) ಉಲನ್ ದಾರದಲ್ಲಿ ತಯಾರಾದ ಟೋಪಿ ಡಜನ್‌ಗೆ ರೂ		೧೮-೦-೦

ಪೇರುವಾ ಎಂಬ ಉಲನ್ ದಾರಗಳು ನಮಗಾಗಿಯೇ ತರಿಸಿದ್ದರಿಂದ ಬೇರೆಲ್ಲಿಯೂ ದೊರೆಯದು ಈ ಉಲನ್ ದಾರಕ್ಕೆ ಗಿರಾಕಿಗಳು ಜಾಸ್ತಿ ಇರುವದರಿಂದ ಒಂದು ಬಂಡಲ್ ಆದರೂ ಪೇರುವಾ ಉಲನ್ ತರಿಸಿ ನೋಡಿರಿ

ಈಗ ನಮ್ಮಲ್ಲಿ ಬೇರೆ ಒಂದು ಡಿಪಾರ್ಟ್‌ಮೆಂಟು ಓಪನ್ ಮಾಡಿದೇವೆ ಅಂದರೆ ಮಂಗಳೂರಲ್ಲಿ ದೊರೆಯುವ ಸಾಮಾನುಗಳು ಪರಸ್ಥಳದವರಿಗೆ ಯಾವದು ಬೇಕಾದರೂ ಬಹಳ ಕಮ್ಮಿಯಿಂದ ಪಡೆದು ಪರಸ್ಥಳದವರಿಗೆ ಕಳುಹಿಸುವೆವು ಕೇವಲ ಕಮಿಷನ್ ರೂ ೩ ೪ ೦ ಪರಸ್ಥಳದವರಿಗೆ ವಿ. ಪಿ. ಯಿಂದಲೂ ರವಾನಿಸುತ್ತೇವೆ ಕೆಟಲಾಗನ್ನು ಕೇಳಿದವರಿಗೆ ರವಾನಿಸುತ್ತೇವೆ ನಮ್ಮ ವಿಳಾಸ—

ದಿ ಉಲನ್ ಮಾರ್ಟ್, ಮಂಗಳೂರು

JUST RECEIVED! JUST RECEIVED!!

Stead's Books for the Bairns

(Illustrated) New Numbers [5 4]

STEAD'S PENNY POPULAR TALES—Sixty four Pages in a coloured Picture Cover. Each number contains a story of thrilling interest. 24 numbers

CALENDARS FOR 1909

Apply **The Manager, C. L. S. Book Depot, Mysore City**

ಬೇಕಾಗಿದೆ ಬೇಕು

16 2

ಕೊಳ್ಳೇಗಾಲದಲ್ಲಿ ಬಾಲಕಾಭಿವೃದ್ಧಿಯಿಂದಿರುವ ಮಹಮ್ಮದೀಯರ ಉರ್ದು ಪಾಠಶಾಲೆಗೆ - ಡ್ರಿಲ್ - ಮತ್ತು - ಜಿಮ್ನಾಸ್ಟಿಕ್ - ಇವುಗಳನ್ನು ಬೋಧಿಸಲು ಶಕ್ತರಾಗಿ, ಮ್ಯಾಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉರ್ದು ಭಾಷೆಯಿಂದಲಾಗಲಿ, ಮದ್ರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್‌ಗೆ ಸೆಕೆಂಡ್ ಭಾಷೆಯನ್ನು ತೆಗೆದುಕೊಂಡಾಗಲಿ, ತೇರ್ಗಡೆ ಹೊಂದಿರುವ ಉರ್ದು ಭಾಷೆಯನ್ನು ಹೇಳಿಕೊಡತಕ್ಕ ಒಬ್ಬ ಹೆಡ್‌ಮಾಸ್ಟರು ಬೇಕಾಗಿರುತ್ತೆ. ಈ ಉಪಾಧ್ಯಾಯರಿಗೆ ೧೫ ರೂಪಾಯಿ ಮಾಸವೇತನವು ಕೊಡಲ್ಪಡುವುದು. ಮುಂದೆ ಸ್ವಲ್ಪ ಕಾಲದಲ್ಲಿ ಈ ಪಾಠಶಾಲೆಯನ್ನು ಸರ್ಕಾರದವರ ಪೋಷಣೆಗೆ ಒಳಪಡಿಸಬೇಕೆಂದಿರುತ್ತೆ. ಆಗ್ಗೆ ಸರ್ಕಾರಿಯಾಗಿ ವೇತನವು ದೊರೆಯುವುದರಿಂದ ಉಪಾಧ್ಯಾಯರಿಗೆ ಇನ್ನೂ ಸೌಕರ್ಯವಿರುವುದು ಎಂಬುದರಲ್ಲಿ ಸಂದೇಹವಿಲ್ಲ. ಈ ಮೇಲ್ಕಂಡ ಯೋಗ್ಯತೆಯುಳ್ಳವರು ತಮ್ಮ ಸರ್ಟಿಫಿಕೇಟುಗಳನ್ನೂ ಇತರ ಯೋಗ್ಯತಾ ಪತ್ರಿಕೆಗಳನ್ನೂ ಅಥವಾ ಅವುಗಳ ನಕಲುಗಳನ್ನು ಅಪ್ಲಿಕೇಷನ್ ಸಮೇತ - ಕೊಳ್ಳೇಗಾಲದ ಅಹಮ್ಮದಿಯಾ ಅನ್ಜುಮನ್ ಸೆಕ್ರೆಟರಿ ಯವರ ವಿಳಾಸಕ್ಕೆ ಈ ೧೯೦೯ ನೇ ಮಾರ್ಚಿ ಒಂದರೊಳಗಾಗಿ ಕಳುಹಿಸತಕ್ಕದ್ದು. ಮಾರ್ಚಿ ೧೫ ರೊಳಗಾಗಿ - ಅನ್ಜುಮನ್ - ನಿಂದ ಆಯ್ಕೆಯಾಗಿ ಚುನಾಯಿಸಲ್ಪಟ್ಟವರಿಗ ಕೆಲಸಕ್ಕೆ ನೇಮಕವಾದಲ್ಲದುವುದು

16—1—1909

ಮಹಮ್ಮದ್ ಹಿಲಂದರ್, ಪ್ರೆಸಿಡೆಂಟ್
ಅಹಮ್ಮದಿಯಾ ಅನ್ಜುಮನ್, ಕೊಳ್ಳೇಗಾಲ

ಜ್ವರಸುಧಾ

81 17

ಒಂದು ಬಾಟ್ಲಿ ಕ್ರಯ ೧೨ ಆಣೆ—ವಿ ಪಿ ಛಾರ್ಜು ಬೇರೆ

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ಸಹ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರಾದ ಡಾಕ್ಟರುಗಳು ಹೇಳುತ್ತಲಿದ್ದಾರೆ. ಕೆಮ್ಮು, ತಲೆ ನೋವು ಅರೆತಲೆನೋವು ಪಿತ್ತ ಬಳಲಿಕೆ, ಕೈಕಾಲು ನೋವು ಮುಂತಾದವುಗಳನ್ನು ೧—೨ ಹೊತ್ತಿನಲ್ಲಿಯೇ ಡೈನಾಮೆಟನಂತೆ ದಿಗಂತರಕ್ಕೆ ಹಾರಿಸಬಲ್ಲದು. "ಸುಧಾ" ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವೂ ಹೇಗೆ ನಿಲ್ಲಲು ಶಕ್ತವಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ. ಒಂದು ಸಲ ಔಷಧಿಯಲ್ಲಿ ಕಂಡುಬರುವ ಅಮೋಘಗುಣವನ್ನು ನೋಡಿ ನಿರ್ಣಯಿಸಬಹುದು

ದೇವನಹಳ್ಳಿ ಟರ್ಕ್, ಬೆಂಗಳೂರು ಡಿಸ್ಟ್ರಿಕ್ಟ್

ಯಂ ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟೀಷನರ್

ಇದುವರೆಗ ಯಾರೂ ಪ್ರಕಟಿಸದಂತಾ ಪುಸ್ತಕ!!!

10 4

"ಬ್ರಹ್ಮಚರ್ಯ" ವೆಂಬ ಮರ್ಮಶಾಸ್ತ್ರ

ಇದು ಇಂಗ್ಲೀಷ್ ಭಾಷೆಯಲ್ಲಿ ಲೋಕಪ್ರಸಿದ್ಧವಾದ ಪುಸ್ತಕ. ಈಗ ಇದನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿರುವೆವು. ಈ ಮರ್ಮಶಾಸ್ತ್ರವನ್ನು ಯುವನಸ್ಥರೂ ಆಬಾಲವೃದ್ಧರೂ ಓದಿ ತಿಳಿದುಕೊಳ್ಳಬೇಕು. ಅನೇಕ ಹುಡುಗರು ಹಸ್ತಪ್ರಯೋಗವೇ ಮೊದಲಾದ ಭಯಂಕರವಾದ ದುರಭ್ಯಾಸಗಳಿಗೊಳಗಾಗಿ ಕೆಟ್ಟುಹೋಗುತ್ತಾರೆ. ಅವರ ದುಷ್ಪ್ರವರ್ತನೆಗಳಿಗೆ ಬರೀ ಮೌಢ್ಯವೇ ಕಾರಣವಾಗಿರುತ್ತದೆ.

ಈ ಉತ್ಕೃಷ್ಟವಾದ ಪುಸ್ತಕವನ್ನು ಇನ್ನೂ ಚೆನ್ನಾಗಿ ವಿವರಿಸಿ ತಿಳಿಸುವುದಕ್ಕೆ ಇಲ್ಲಿ ಸ್ಥಳ ಸಾಲದು. ಆದರೆ ಇದರಲ್ಲಿ ಅಡಕವಾಗಿರುವ ಅಧ್ಯಾಯಗಳನ್ನು ಇಲ್ಲಿ ತಿಳಿಸುವೆವು. "ಜೀವೋತ್ಪತ್ತಿಯ ಪ್ರಾರಂಭವು, ಅದರ ಶಕ್ತಿಯು." "ಸಸ್ಯಾದಿಗಳ ಜೀವೋತ್ಪನ್ನವಾಗುವಿಕೆ." "ಪ್ರಾಣಿಗಳಲ್ಲುಂಟಾಗುವ ಜೀವೋತ್ಪತ್ತಿಯು." "ಮನುಷ್ಯಸಂತಾನವು, ಇದು ಉತ್ಪತ್ತಿಯಾಗುವ ರೀತಿಯು." "ಹುಡುಗರಲ್ಲಿರುವ ದುಶ್ಚೇಷ್ಟೆಗಳು, ಅಂಗಗಳು ಕೆಡುವ ರೀತಿ." "ಹುಡುಗರ ದುಶ್ಚೇಷ್ಟೆಗಳಿಂದಾಗುವ ನಾನಾ ಕೇಡುಗಳು." "ಹುಡುಗರು ತಮ್ಮ ದೇಹಗಳನ್ನು ರುದ್ಧಿಪುಷ್ಟಿ ಬಲ ಶರೀರಗಳನ್ನು ಕಾಪಾಡುವದಕ್ಕೆ ಸೂತ್ರಗಳು." "ಹುಡುಗರು ತಾವು ಕಳಕೊಂಡ ದೇಹ ಬಲ ಶಕ್ತಿಗಳನ್ನು ತಿರಿಗಿ ಸಂಪಾದಿಸುವ ವಿಧಾನವು." "ಹುಡುಗರು ಪ್ರಾಯಕ್ಕೆ ಬರುವ ಕಾಲವು. ಈ ಕಾಲದಲ್ಲಿ ಗಮನಿಸತಕ್ಕ ವಿಷಯಗಳು." "ಹುಡುಗರು ಪ್ರಾಯಕ್ಕೆ ಬರುವ ಕಾಲ, ಈ ಕಾಲದಲ್ಲಿ ಉಂಟಾಗುವ ಬದಲಾವಣೆಗಳು."

ಇಂಥಾ ಉತ್ಕೃಷ್ಟವಾದ ಪುಸ್ತಕವನ್ನು ಎಲ್ಲರೂ ಕೊಂಡು ತಮ್ಮ ಮನೆಗಳಲ್ಲಿ ಇಡಬೇಕು. ಇದರ ಕ್ರಯ ಮೂರಾಣೆ. ವಿ ಪಿ ಮೂಲಕ ತರಿಸಿಕೊಂಡರೆ ಅಂಚೆಗಾಗುವವು.

ವಿಳಾಸ—ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

CHAMBERLAIN'S COLIC CHOLERA AND DIARRHOEA REMEDY

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



14

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧ ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು, ಪ್ರಪಂಚದಲ್ಲೇ ಇನ್ಯಾವ ಔಷದವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ಕಡು ನೋವನ್ನೂ ನಿಲ್ಲಿಸಿಬಿಡುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು — ಸಣ್ಣ ಶೀಸೆಗೆ ೧ ರೂಪಾಯಿ — ದೊಡ್ಡ ಶೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

2 1

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ಸಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೬|| ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್
ಸಿ ಎಲ್ ಎಸ್ ಬುಕ್ ಡಿಪೋ. ಮೈಸೂರು

ಕ್ಲೆಮೆಂಟೀನ ಪ್ಯಾರಿಸ್ ಬಾಂ ತೈಲವು

(8 5)

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂಧುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆ ಮೀರಿದಂತೆ ಖಂಡಿತವಾಗಿ ವಾಸಿಯಾಗುತ್ತವೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆ ಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದದ್ದರಿಂದಲೇ ಅದನ್ನು ಅಷ್ಟು ಚೆನ್ನಾಗಿ ಜನರು ವಿಶೇಷ ಪ್ರೀತಿಯಿಂದಲೂ ಉಪಯೋಗಿಸುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲಕ್ಕೆ ಸಾವಿರ ಮೂಲೆಗಳಲ್ಲಿ ನಕಲನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತಾರೆ.

ಕ್ರಯ ಶೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ಮ್ಯಾಜಿಸ್ಟ್ರೇಟರೂ ವೈದ್ಯರೂ ಬಿಕರಿಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,
೩೩, ವೇದಮುಲಿಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಆವಶ್ಯಕ

SCOTT'S EMULSION 6-1
(ಸ್ಕಾಟ್ಸ್ ಇಮಲ್ಷನ್)

ಎಂಬ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

೧೯೦೯ ನೇ ಲೋವರ್ ಸೆಕೆಂಡರಿ ಕನ್ನಡ ನೋಟ್ಸ್

11 3

ಮಹಾರಾಜಾಕಾಲೇಜು ಕನ್ನಡ ಪಂಡಿತರು ಮೆ|| ಪಿ ಆರ್ ಕರಿಬಸವಶಾಸ್ತ್ರಿಗಳವರಿಂದ ಪರಿಷ್ಕರಿಸಲ್ಪಟ್ಟುದು. ಪ್ರತಿ ೧ಕ್ಕೆ ೦ ೪ ೦. ೧೦ಕ್ಕೆ ೧ ಹೆಚ್ಚು. ಕನ್ನಡ ಹಿಂದಿ ಪುಸ್ತಕದ ನೋಟ್ಸ್ ಕ್ರಯ ಪ್ರತಿ ೧ಕ್ಕೆ ೦ ೨ ೦, ೫ಕ್ಕೆ ೧ ಹೆಚ್ಚು. ಎಗ್ಸಾಮಿನರ್ ಮಾಸಪತ್ರಿಕೆ ಚಂದಾ, ವರ್ಷಕ್ಕೆ ೧ ೪ ೦, ನೋಟ್ಸು ಒಟ್ಟಿಗೆ ೫ ಚಂದಾ ಪಾವತಿ ಮಾಡುವವರಿಗೆ ಒಂದೊಂದು ಹೆಚ್ಚು. ವಿಳಾಸ—ಸಿ ಪುಟ್ಟಯ್ಯ, ಮ್ಯಾನೇಜರ್, ದಿ ಎಗ್ಸಾಮಿನರ್ ಆಫೀಸ್, ಮೈಸೂರು

ಇಲ್ಲಿ ನೋಡಿ.

14

ತುಮಕೂರು ಮಿಷನ್ ಇಲಾಯಿಯಲ್ಲಿ ಯೂರೋಪಿಯರಿಂದ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಶ್ರೇಷ್ಠವಾದ ಉಲ್ಲನ್ನಿನಿಂದ ತಯಾರಾಗುತ್ತವೆ. ಕ್ರಯ ೧—೧೨ ಆಣೆ ಮೊದಲ್ಗೊಂಡು ೧ ರೂ ೧೨ ಆಣೆ ವರೆಗೆ ೧ ಡಜನ್ ಟೋಪಿಗಳನ್ನು ಕೊಳ್ಳುವವರಿಗೆ ರೂಪಾಯಿ ೫ ರಂತೆ ಡಿಸ್ಕೌಂಟ್ ಕೊಡಲ್ಪಡುವುದು. ಈಗತಾನೇ ಇಂಗ್ಲಿಷ್ ಉಲ್ಲನ್ ಬಂದಿದೆ. ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಬಲ್ಲೆವು. ವಿಳಾಸ—ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಯಿ, ತುಮಕೂರು

ಮದ್ರಾಸ್ ಸಾಹುಕಾರ್ ಪೇಟೆ, ಟಿ. ಎಮ್. ರಾಮಯ್ಯ ಶೆಟ್ಟರ ಕಂಪನಿಯಲ್ಲಿ

99 9

ತಯಾರಾಗುವ ಕಬ್ಬಿಣದ ಪೆಟ್ಟಿಗೆಗಳು ಅಥವಾ ಟ್ರಂಕುಗಳು ಈ ಕೆಳಗಿನ ದರದ ಮಾರಾಟಕ್ಕೆ ಸಿದ್ಧವಾಗಿವೆ. ಬ್ರಾಂಚ್ ಆಫೀಸ್ ಬೆಂಗಳೂರು ನಗರ್ತಪೇಟೆಯಲ್ಲೂ ಸಿಕ್ಕುವವು



ಬೇಕಾದವರು ತಮ್ಮ ಅಡ್ರೆಸ್ಸು ತಿಳಿಸಿ ರೂ 10 ಮುಂಗಡವಾಗಿ ಕಳುಹಿಸಿದರೆ ವಿ ಪಿ ಮೂಲಕ ರವಾನಿಸಲ್ಪಡುತ್ತೆ. ವಿಶೇಷ ಮಾಹಿತಿ ಬೇಕಾದವರು ಕಾಗದದ ಮುಖಾಂತರ ಮೇಲ್ಕಂಡ ವಿಳಾಸದಿಂದ ತಿಳಿದುಕೊಳ್ಳಬಹುದು

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ — ಕ್ರಯ ಒಂದಾಣೆ.

೧೯೦೯ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು. ಇದರಲ್ಲಿ ಮೈಸೂರು ಹೊಸ ಅರಮನೆಯ ಮುಖ್ಯದ್ವಾರವು, ಮೈಸೂರು ಪಬ್ಲಿಕ್ ಆಫೀಸ್ ಕಟ್ಟಡ, ಮೈಸೂರು ಜೂಬಿಲಿ ಹಾಲ್ ಕಟ್ಟಡ, ನೀಲಗಿರಿಗೆ ಹೋಗುವ ರೈಲ್ ಮಾರ್ಗವು ಮತ್ತು ದೇವರಾಯದುರ್ಗ ಇವುಗಳ ಫೋಟೋಗಳು ಬಹಳ ಸೊಗಸಾಗಿವೆ. ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು.

ಚಂದಾದಾರರಿಗೆ ಸೂಚನೆ—ಇದೇ ಜನವರಿ ಆಖೈರಿನೊಳಗಾಗಿ ವೃತ್ತಾಂತ ಪತ್ರಿಕೆಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು. ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು.

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ. ಕೂಡಲೆ ಬರೆಯಿರಿ. ವಿಳಾಸ—

ವೃತ್ತಾಂತ ಪತ್ರಿಕೆ

೧೯೦೯ ನೇ ಇಸವಿ ಜನವರಿ ತಾ ೨೮ ನೇ ಗುರುವಾರ

ಹಿಂದುಸ್ಥಾನದ ಕಸಬುಗಳು

ವಿಲಾಯತಿಯಿಂದ ತಿಂಗಳಲ್ಲಿ ಪ್ರೊಫೆಸರ್ ಲೀಸ್ ಸ್ಮಿತ್ ಎಂಬಾತನು ಹಿಂದುಸ್ಥಾನಕ್ಕೆ ಬಂದು ಇಲ್ಲಿನ ವ್ಯಾಪಾರವನ್ನೂ ಕಸಬುಗಳನ್ನೂ ನೋಡಿ, ಅವುಗಳನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿ ಕೆಲವು ಸಲಹೆಗಳನ್ನು ಕೊಟ್ಟು ಬೊಂಬಾಯಿ ಪಟ್ಟಣದ ಪ್ರೆರಾಂಜಿ ದಾದಾಭಾಯಿ ಇನ್‌ಸ್ಟಿಟ್ಯೂಟ್ ಎಂಬ ಬಂಗಲೆಯಲ್ಲಿ ಉಪನ್ಯಾಸ ಮಾಡಿರುತ್ತಾನೆ ಆ ಅಭಿಪ್ರಾಯಗಳ ಮುಖ್ಯಾಶಯವನ್ನು ಕುರಿತು ಸ್ವಲ್ಪಮಟ್ಟಿಗೆ ಚರ್ಚೆ ಮಾಡುವೆವು ಸುಮಾರು ಎರಡು ಸಾವಿರ ವರುಷಗಳ ಕೆಳಗೆ ಈ ರಾಷ್ಟ್ರದ ಕಸಬುಗಳು ಉಚ್ಛ್ರಾಯಸ್ಥಿತಿಯಲ್ಲಿ ದ್ದವೆಂದು ಹೇಳಬಹುದು ಇದಕ್ಕೆ ದೆಹಲಿ ಪಟ್ಟಣದಲ್ಲಿ ೧,೫೦೦ ವರುಷಗಳ ಹಿಂದೆ ಮಾಡಿ ನಿಲ್ಲಿಸಿರುವ ಕಬ್ಬಿಣದ ಕಂಭವು ಒಂದು ದೃಷ್ಟಾಂತವಾಗಿದೆ ಆಗಿನ ಕಾಲದಲ್ಲಿ ಕಾರೇಗಾರರು ಅಷ್ಟು ಭಾರೀ ಕಂಭವನ್ನು ಹ್ಯಾಗೆ ತಯಾರುಮಾಡಿದರೊ ಎಂದು ನೋಡಿದವರೆಲ್ಲಾ ಆಶ್ಚರ್ಯಪಡುತ್ತಾರೆ ಹಿಂದುಸ್ಥಾನದಲ್ಲಿ ತಯಾರಾದ ಚಾಕು ಕತ್ತರಿಗಳೇ ಮೊದಲಾದವು ವಿಲಾಯತಿಗೂ ರಫ್ತಾಗುತ್ತಿದ್ದವು ಇಲ್ಲಿ ಉತ್ಪತ್ತಿಯಾಗುತ್ತಿದ್ದ ಕಡ್ಡಿಪ್ಪನ್ನು ಪ್ರಪಂಚದ ಎಲ್ಲಾ ಕಡೆಗಳಿಗೂ ಕಳುಹಿಸುತ್ತಿದ್ದರು ಸೀಸ, ತಾಂಬ್ರ, ಹಿತ್ತಾಳೆ ಮೊದಲಾದ ಲೋಹಗಳೂ ಅಪಾರವಾಗಿ ತೆಗೆಯಲ್ಪಟ್ಟು ರಫ್ತಾಗುತ್ತಿದ್ದವು

ಬರಬರುತ್ತ ಪಶ್ಚಿಮ ರಾಜ್ಯಗಳಲ್ಲಿ ಅತಿ ಸುಲಭವಾದ ರೀತಿಯಲ್ಲಿ ಸಾಮಾನುಗಳು ತಯಾರಾಗಿ ಬರುತ್ತಿರೋಣದರಿಂದ ಈ ದೇಶದ ಕಸಬುದಾರರು ಸ್ಪರ್ಧೆಯಲ್ಲಿ ನಿಲ್ಲಲಾರದ ಹಿಂದೆ ಬೀಳಬೇಕಾಯಿತು ಇದರಿಂದ ಕಸಬುಗಳು ಕ್ಷೀಣಸ್ಥಿತಿಗೆ ಬಂದವು ಈಗ ಈ ರಾಷ್ಟ್ರದ ಅಭಿವೃದ್ಧಿಗಾಗಿ ಬೇಕಾದ ಪದಾರ್ಥಗಳು ಬಹು ಅವಶ್ಯವಾಗಿರುವವು ಕಲ್ಲಿದ್ದಲನ್ನೂ ಕಬ್ಬಿಣವನ್ನೂ ಕಸಬುದಾರರು ಬಹಳ ಉಪಯೋಗಿಸುತ್ತಾರೆ ಈ ದೇಶದಲ್ಲಿ ಹೇರಳವಾಗಿ ದೊರಕುವವೆಂದು ಈಗೀಗ ಪ್ರತ್ಯಕ್ಷವಾಗಿ ಕಂಡುಬಂದಿದೆ ಕಲ್ಲಿದ್ದಲ ಗಣಿಗಳು ಬಂಗಾಳದಲ್ಲಿ ಸಿಕ್ಕಿ, ಕಲ್ಲಿದ್ದಲನ್ನು ಬಹಳವಾಗಿ ತೆಗೆಯುತ್ತಾರೆ ಟಾಟಾರವರ ಕಬ್ಬಿಣದ ಕಾರಖಾನೆಯು ಪ್ರಾರಂಭವಾಗುವುದರಿಂದ ಅಂಥಾ ಗಣಿಗಳನ್ನೂ ಕಾರಖಾನೆಗಳನ್ನೂ ಕಂಡುಹಿಡಿದು ಸ್ಥಾಪಿಸಿ, ಹೊಸ ಯಂತ್ರಗಳನ್ನಿಟ್ಟು, ಸಾವಧಾನವಾಗಿ ಕೆಲಸಗಳನ್ನು ಮಾಡಿಸುತ್ತಾ ಬಂದಲ್ಲಿ ಈ ರಾಷ್ಟ್ರದ ಅಭಿವೃದ್ಧಿಯು ಹೆಚ್ಚಾಗುವುದಕ್ಕೆ ಸಂಶಯವಿಲ್ಲ ಇದಲ್ಲದೆ ಕಸಬುದಾರರಿಗೆ ಅವಶ್ಯವಾದ ಇನ್ನೂ ಅನೇಕ ಸಾಧನಗಳು ಈ ದೇಶದಲ್ಲಿ ಸಿಕ್ಕುತ್ತವೆಯಾದ್ದರಿಂದ ಅವುಗಳನ್ನೂ ತೆಗೆದು ಉಪಯೋಗಿಸಬೇಕು ಈ ದೇಶದಲ್ಲಿ ಕೂಲಿಯಾಳುಗಳು ಹೇರಳವಾಗಿ ಸಿಕ್ಕುತ್ತಾರೆ ಕೂಲಿಯ ದರವೂ ಬಹಳ ಸ್ವಲ್ಪವಾಗಿರುವದು ಇದ ಕಾರಣ ಶ್ರೀಮಂತರು ಕಸಬುಗಳನ್ನು ಅಭಿವೃದ್ಧಿಗೆ ತರಲು ಹೆಚ್ಚು ಹೆಚ್ಚಾಗಿ ಹಣವನ್ನು ಕೂಡಿಸಿ ಕಂಪನಿಗಳನ್ನು ಮಾಡಿಕೊಂಡು, ಜಾಗರೂಕತೆಯಿಂದ ಕೆಲಸಗಳನ್ನು ನಡಿಸುತ್ತಾ ಬರಬೇಕಾದದ್ದೊಂದೇ ದೊಡ್ಡ ಕೊರತೆಯಾಗಿರುವುದು

ಮಹತ್ತ ಭೂಕಂಪ

ಎರಡು ಮೂರು ವಾರಗಳಿಂದಲೂ ನಮ್ಮ ಪತ್ರಿಕೆಯಲ್ಲಿ ಇಟಲಿ ದೇಶದಲ್ಲಿ ಆದ ಭಯಂಕರವಾದ ಭೂಕಂಪದ ವಿಷಯ ಬರೆಯುತ್ತಿದ್ದೇವೆ ಈ ಭಯಂಕರವಾದ ಅನಾಹುತದಲ್ಲಿ ರೀಗಿಯೊ ಮತ್ತು ಮೆಸ್ಸಿನಾ ಎಂಬ ಪ್ರಸಿದ್ಧವಾದ ಪಟ್ಟಣಗಳು ನಾಶನ ಹೊಂದಿದವು ರೀಗಿಯೊ ಪಟ್ಟಣವು ಇಟಲಿ ಪರ್ಯಾಯದ್ವೀಪದಲ್ಲಿರುವದು ಮೆಸ್ಸಿನಾ ಎಂಬುದು ಸಿಸಿಲಿ ದ್ವೀಪದ ಒಂದು ತೀರಪಟ್ಟಣ ಕೆಲವು ಹೊತ್ತಿನೊಳಗಾಗಿಯೇ ಐಶ್ವರ್ಯವಾದ ಇವೆರಡು ಪಟ್ಟಣಗಳು ಭೂಕಂಪದ ದೆಸೆಯಿಂದ ಕೆಡವಲ್ಪಟ್ಟವು ಇವುಗಳಲ್ಲಿ ವಾಸಮಾಡಿಕೊಂಡಿದ್ದ ಸಾವಿರಾರು ಜನರು ನಿಮಿಷಮಾತ್ರದಲ್ಲಿ ಲಯ ಹೊಂದಿದರು ಭೂಕಂಪವಾಗುತ್ತಿರುವಾಗ್ಗೆ ಸಮುದ್ರದಿಂದ ದೊಡ್ಡದಾದ ಅಲೆಯು ಎದ್ದು ಬೀದಿಗಳನ್ನು ಪ್ರವಾಹದಿಂದ ತುಂಬಿಸಿಬಿಟ್ಟಿತು ಈ ಅನಾಹುತದಿಂದ ತಪ್ಪಿಸಿಕೊಂಡ ಜನರು ಹೊಟ್ಟೆಗಿಲ್ಲದೆ ಅರೆಪ್ರಾಣವಲ್ಲಿದ್ದರು ಇವರನ್ನು ಯುದ್ಧದ ಹಡಗುಗಳು ಬಂದು ಸಂರಕ್ಷಿಸಿದುವು

ಬುದ್ಧಿವಂತರಾದವರು ಈ ಅನಾಹುತವನ್ನು ಕುರಿತು ಯೋಚನೆ ಮಾಡುವಲ್ಲಿ—ದೇವರು ಯಾತಕ್ಕೆ ಇಂಥ ಕಷ್ಟವನ್ನು ಭೂಲೋಕದ ಮೇಲೆ ಕಳುಹಿಸಬೇಕು ಎಂಬದಾಗಿ ತಮ್ಮೊಳಗೆ ಪ್ರಶ್ನೆ ಮಾಡಿಕೊಳ್ಳುವರು ದೇವರು ಸರ್ವಶಕ್ತನೂ ಸರ್ವಾಂತರ್ಯಾಮಿಯೂ ಆಗಿರುವಲ್ಲಿ ಇಂಥ ಭಯಂಕರವಾದ ನಾಶನವನ್ನು ಬಲಹೀನರಾದ ಮನುಷ್ಯರ ಮೇಲೆ ಯಾಕೆ ಕಳುಹಿಸಬೇಕು? ಹೀಗೆ ಆತನು ತನ್ನ ಸೃಷ್ಟಿಗಳನ್ನು ಬಾಧಿಸುತ್ತಿದ್ದರೆ ಆತನನ್ನು ಪ್ರೀತಿಸ್ವರೂಪನೆನ್ನಬಹುದೇ? ಆತನು ಕನಿಕರಪೂರಿತನಾಗಿದ್ದರೆ ಲೋಕದಲ್ಲಿ ಕಷ್ಟವೆಲ್ಲಿರುವುದು ಆದ್ದರಿಂದ ದೇವರೇ ಇಲ್ಲವೆಂತಲೂ, ಅಥವಾ ಆತನು ಇದ್ದರೆ ಆತನಲ್ಲಿ ಕರುಣೆ ಇಲ್ಲವೆಂತಲೂ ಅನೇಕರು ಮಾತನಾಡಿಕೊಳ್ಳುವುದು ಅಪರೂಪವಲ್ಲ

ಲೋಕದಲ್ಲಿ ನಡೆಯುತ್ತಿರುವ ನಾನಾ ಕಾರ್ಯಗಳಿಗೆ ಸರಿಯಾದ ಕಾರಣಗಳನ್ನು ತಿಳಿಸುವುದು ಮನುಷ್ಯರಾದವರಿಗೆ ಸುಲಭಸಾಧ್ಯವಲ್ಲ ಈ ಸಂಗತಿಯನ್ನು ನಾವೆಲ್ಲರೂ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ ಲೋಕದಲ್ಲಿ ನಡೆಯತಕ್ಕ ನಾನಾ ಅನಾಹುತಗಳಲ್ಲಿ ನಾವು ಒಳ್ಳೇ ಪಾಠಗಳನ್ನು ಕಲಿಯಬಹುದು ಪ್ರಾಮುಖ್ಯವಾಗಿ ನಾವು ಕಲಿಯತಕ್ಕದ್ದೇನಂದರೆ, ನಾವು ವಾಸಮಾಡುತ್ತಿರುವ ಈ ಭೂಮಿಯು ಅಸ್ಥಿರವಾದುದಾಗಿರುವುದು ಈ ರಮಣೀಯವಾದ ಭೂಲೋಕವು ಒಂದಾನೊಂದು ದಿನ ನಾಶನ ಹೊಂದುವುದು ಇದು ನಿಜ ಹೀಗಿದ್ದರೂ ನಾವು ನಮ್ಮ ಜೀವಮಾನ ಕಾಲದಲ್ಲಿ ಮಾಡಬೇಕಾದ ಕರ್ತವ್ಯಗಳು ಅನೇಕವಿರುತ್ತವೆ ನಾವು ಸ್ವಾರ್ಥವನ್ನು ತ್ಯಜಿಸಿ, ಸಮಯ ಸಂದರ್ಭ ಒದಗಿದಾಗೆಲ್ಲಾ ಪರೋಪಕಾರದಲ್ಲಿ ನಿರತರಾಗಿರಬೇಕೆಂಬ ಪಾಠವನ್ನು ಕಲಿತುಕೊಳ್ಳಬೇಕಾಗಿದೆ ವಿಲಾಯತಿಯಿಂದ ಬರತಕ್ಕ ವರ್ತಮಾನ ಪತ್ರಿಕೆಗಳನ್ನು ನಾವು ಓದುವುದಾದರೆ ಈ ಭೂಕಂಪದ ದೆಸೆಯಿಂದ ಕಷ್ಟಪಡುತ್ತಿರುವ ಜನಗಳಿಗೆ ನಾನಾ ವಿಧವಾದ ಸಹಾಯಗಳು ಹ್ಯಾಗೆ ದೊರಕಿದವೆಂಬ ಸಂಗತಿಯನ್ನು ಓದಬಹುದು ಇಟಲಿ ದೇಶದ ರಾಜರೂ ರಾಣಿಯವರೂ ತಮ್ಮ ಪಟ್ಟಣಗಳಲ್ಲಿ ಭೂಕಂಪದ ದೆಸೆಯಿಂದ ಆದ ಅನಾಹುತವನ್ನು ಕೇಳಿ ತಕ್ಷಣವೇ ಅಲ್ಲಿಗೆ ಹೊರಟು ಕಷ್ಟಪಡುತ್ತಿದ್ದವರಿಗೆ ಉದಾರವಾಗಿ ಸಹಾಯ ಮಾಡಿದರು ಇಟಲಿ, ರಷ್ಯಾ ಮತ್ತು ಇಂಗ್ಲೀಷ್ ಸಿಪಾಯಿಗಳು ತಮ್ಮ ಸ್ವಂತ ಪ್ರಾಣಗಳ ಮೇಲೆ ಲಕ್ಷ್ಯವಿಡದೆ ಅನೇಕರನ್ನು ಬದುಕಿಸಿದರು ಲೋಕದ ನಾನಾ ದೇಶಗಳವರು ಈ ಭಯಂಕರವಾದ ಸಮಾಚಾರವನ್ನು ಕೇಳಿದ ಕೂಡಲೇ ಅನೇಕ ಲಕ್ಷ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟು ಕಳುಹಿಸಿದರು ನೋಡಿದಿರಾ, ಈ ಅನಾಹುತದ ದೆಸೆಯಿಂದ ಜನರಲ್ಲಿದ್ದ ಔದಾರ್ಯ ಗುಣವು ಪ್ರಕಾಶಕ್ಕೆ ಬಂತು! ಅನ್ಯರಾದವರು ಸ್ವಾರ್ಥತೆಯನ್ನು ತ್ಯಜಿಸಿ ಪರಾರ್ಥತೆಯಲ್ಲಿ ಆಸಕ್ತರಾದರು ಇದರ ದೆಸೆಯಿಂದ ಅನೇಕ ರಾಜ್ಯಗಳ ಪ್ರಜೆಗಳು ವ್ಯಸನಭರಿತರಾಗಿ ತಮ್ಮ ಪ್ರೀತಿಯನ್ನು ತೋರ್ಪಡಿಸಿದರು ಇಷ್ಟೆಲ್ಲಾ ಆದರೂ ಈ ಭೂಕಂಪವು ಯಾತಕ್ಕಾಯಿತೆಂದು ನಾವು ಹೇಳಲಾರೆವು [illegible] ಭಗವಂತನೇ, ನಿನ್ನ ಕಾರ್ಯಗಳು ಅಶೋಧ್ಯವಾಗಿವೆ ನಮ್ಮ ಅಲ್ಪವಾದ ಯೋಚನೆಗಳಿಗೆ ಅವು ವಿರುದ್ಧವಾಗಿವೆ ನಿನ್ನ ಚಿತ್ತವೇ ನೆರವೇರಲಿ ನಾವಂತಲೂ ನಮ್ಮ ಹೃದಯಪೂರ್ವಕವಾಗಿ ನಿನ್ನಲ್ಲಿ ಭರವಸವಿಟ್ಟು ನಿನ್ನನ್ನು ಪ್ರೀತಿಸುತ್ತೇವೆ ಎಂಬುದಾಗಿ ಹೇಳಬೇಕಾಗಿದೆ

ಈ ವಿಧವಾದ ದಿವ್ಯ ಸ್ವಭಾವವನ್ನು ನಾವು ಪಡೆಯಬೇಕಾದರೆ ನಾವೆಲ್ಲರೂ ಯೇಸುಸ್ವಾಮಿಯ ಮಾದರಿಯನ್ನನುಸರಿಸಬೇಕು ಆತನೊಬ್ಬನೆ ಎಲ್ಲರ ರಕ್ಷಣಾರ್ಥವಾಗಿ ಪ್ರಾಣದಾನ ಮಾಡಿದನು ಆತನು ಅನುಭವಿಸಿದ ಮರಣವು ಬಹು ಕ್ರೂರವಾದದು ಆತನು ಸತ್ಯಕ್ಕೋಸ್ಕರ ಬಹು ಅವಮಾನಕರವಾಗಿ ಕೊಲ್ಲಲ್ಪಟ್ಟನು ಆತನ ಮರಣಕಾಲದಲ್ಲಿ ಆತನ ಶಿಷ್ಯರು ಹಿಂಸೆಗೆ ಹೆದರಿ ತಮ್ಮ ಗುರುವನ್ನು ಬಿಟ್ಟು ಓಡಿಹೋದರು ಹೀಗಿದ್ದರೂ ಯೇಸುಸ್ವಾಮಿಯು ತನಗೆ ಸಂಭವಿಸಿದ ಕಷ್ಟಕ್ಕೋಸ್ಕರ ದೇವರನ್ನು ಎಂದಿಗೂ ದೂಷಿಸಲಿಲ್ಲ ಆತನು ಕಡೆಯಲ್ಲಿ—"ತಂದೆಯೇ, ನಿನ್ನ ಹಸ್ತದಲ್ಲಿ ನನ್ನಾತ್ಮವನ್ನು ಒಪ್ಪಿಸುತ್ತೇನೆ" ಎಂಬುದಾಗಿ ತಿಳಿಸಿದನು

ನಮ್ಮೆಲ್ಲರಿಗೂ ವ್ಯಸನ ಸಂಗತಿಗಳು ಬಂದೇ ಬರುವುವು ಮನುಷ್ಯರಾಗಿ ಹುಟ್ಟಿದ ಮೇಲೆ ಇವುಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಲ್ಲ ಆದರೂ ನಾವು ದೇವರಲ್ಲಿ ಇಟ್ಟಿರುವ ನಮ್ಮ ನಂಬಿಕೆಯನ್ನು ಕಳೆದುಕೊಳ್ಳದೆ—"ನೀನು ನನ್ನನ್ನು ಸಂಹರಿಸಿದರೂ ನಿನ್ನನ್ನು ಪೂರ್ಣವಾಗಿ ನಂಬಿರುವೆನು" ಎಂಬುದಾಗಿ ಪ್ರೀತಿಸ್ವರೂಪನಾದ ದೇವರ ಮುಂದೆ ಧೈರ್ಯವಾಗಿ ಹೇಳೋಣ

ಒಳದೇಶದ ವೃತ್ತಾಂತಗಳು

ಮಂಜರಾಬಾದ್ ತಾಲೂಕು ಕೆಸಲ್ಲಿ ಮಗುವನ್ನು ಕೊಂದುಹಾಕಿದ ತಾಯಿಗೆ ಮೂರು ವರುಷ ಕಠಿಣ ಸಜಾ ವಿಧಿಸಲ್ಪಟ್ಟಿದೆ ಎಂದು ಪ್ರಕಟವಾಗಿದೆ

ಬೆಂಗಳೂರು ಪಟ್ಟಣಕ್ಕೆ ಎಮ್ಮೆ ಕೈಕ್ರಿಯ ಧೀಪಗಳನ್ನು ಇಡಿಸಿರುವುದಕ್ಕಾಗಿ ಎಲ ಮುನಿಸಿಪಾಲಿಟಿಯವರು ವರುಷಕ್ಕೆ ೩೦ ಸಾವಿರ ರೂಪಾಯನ್ನೂ ವಂದಿ ಮುನಿಸಿಪಾಲಿಟಿಯವರು ೨೫ ಸಾವಿರ ರೂಪಾಯನ್ನೂ ಸರಕಾರಕ್ಕೆ ಪಾವತಿ ಮಾಡುತ್ತಾರೆ

ಚಿತ್ರದುರ್ಗದ ಡೆಪ್ಯುಟಿ ಕಮಿಷನರವರು ಹೋದ ವಾರ ಹೊಳಲ್ಕೆರೆಯಲ್ಲಿ ಬ್ರಾಹ್ಮಣ ಬಾಲ್ಯವಿವಾಹದ ಕಾನೂನಿಗೆ ವಿರೋಧವಾದ ಒಂದು ಮದುವೆ ನಡೆದದ್ದು ಅವರ ದೃಷ್ಟಿಗೆ ತರಲಾಯಿತೆಂತಲೂ, ಅವರು ಅಪರಾಧಿಗಳಿಗೆ ಐದು ರೂಪಾಯಿ ಜುಲ್ಮಾನೆ ವಿಧಿಸಿದರೆಂತಲೂ ತಿಳಿಯುತ್ತದೆ

ಮದರಾಸ್ ಗವರ್ನರವರ ಪತ್ನಿಯವರು ಕಳೆದ ಶನಿವಾರ ಆ ಪಟ್ಟಣದ ಟ್ಯುಕರ್ಸ್ ಗಾರ್ಡನ್ ಬಂಗಲೆಗೆ ದಯಮಾಡಿ ಅಲ್ಲಿ ತಂಗಿರುವ ನಮ್ಮ ಮಹಾರಾಣಿಯವರಿಗೂ ಮಹಾರಾಜರಿಯವರಿಗೂ ಮರುಭೇಟಿ ಕೊಟ್ಟು, ಸ್ವಲ್ಪ ಹೊತ್ತು ಸಂಭಾಷಣೆಮಾಡಿಕೊಂಡು ಹೋದರು

ಕಳೆದ ಗುರುವಾರದಿಂದಲೂ ರಾಜಧಾನಿಯಲ್ಲಿ ರಾತ್ರಿಹೊತ್ತು ವಿದ್ಯುಚ್ಛಕ್ತಿಯ ದೀಪಗಳಿಲ್ಲದೆ ಇಂತಾಗಿದೆ ಈಗ ಬೆಳದಿಂಗಳ ಕಾಲವಾದದ್ದರಿಂದ ಪ್ರಜೆಗಳಿಗೆ ಅಷ್ಟೇನೂ ಅನಾನುಕೂಲವಾಗಿಲ್ಲ ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿಯನ್ನು ಕೂಡಿಸಿ ಕಳುಹಿಸುವ ಯಂತ್ರಗಳು ಕೆಟ್ಟುಹೋಗಿರುವುದೇ ಇದಕ್ಕೆ ಕಾರಣವೆಂದು ತಿಳಿದುಬಂದಿದೆ

ಕೋಲಾರ್ ಚಿನ್ನದ ಗಣಿಗಳ ಪೈಕಿ ನಂದಿದುರ್ಗದ ಗಣಿಯಲ್ಲಿ ಕಳೆದ ವಾರ ಬೆಂಕಿ ಹುಟ್ಟಿ ಐದು ಮಂದಿ ಸತ್ತುಹೋದರು ಈ ಪೈಕಿ ಒಬ್ಬ ಇಟಲಿ ದೇಶದವನು, ಇಬ್ಬರು ಇಂಗ್ಲಿಷರು ಇಬ್ಬರು ದೇಶಿಯರು ಕೆಲವು ಬಹಳ ಕಷ್ಟದಿಂದ ಬದುಕಿಕೊಂಡರು ಅತ್ತಲಾಗಿ ಮೈಸೂರ್ ಮೈನ್ ಎಂಬ ಗಣಿಯಲ್ಲಿ ಅನಾಹುತವಾಗಿ ಒಬ್ಬ ಇಟಲಿಯವನೂ, ಮೂವರು ದೇಶೀಯರೂ ತೀರಿಹೋದರು

ಇದುವರೆಗೆ ಈ ಪತ್ರಿಕೆಯ ಎಡಿಟರಾಗಿದ್ದ ರೆವ್ ಇ ಡಬ್ಲ್ಯು ಥಾಂಸನ್, ಎಂ ಎ ಯವರು ಗುಬ್ಬಿ ಸರ್ಕೀಟಿನಲ್ಲಿ ಕೆಲಸ ಮಾಡುವುದಕ್ಕಾಗಿ ವರ್ಗಪಟ್ಟು, ನೆನ್ನೆ ಬೆಳಗ್ಗೆ ಸಂಸಾರ ಸಹಿತ ಪ್ರಯಾಣ ಮಾಡಿದರು ಇಲ್ಲಿನ ಕರುಣಾಪುರದ ಸಂಡೇ ಸ್ಕೂಲ್ ಬಾಲಕರೂ, ಕ್ರೈಸ್ತ ಸಂಘದವರೂ, ವೆಸ್ಲಿಯನ್ ಮಿಷನ್ ಪ್ರೆಸ್ಸಿನ ನೌಕರಮಾನೆಯರೂ ಅವರಿಗೆ ಅಡ್ರೆಸ್ಸುಗಳನ್ನು ಓದಿ, ಅವರಲ್ಲಿ ತಮಗಿದ್ದ ಭಕ್ತಿ ಪ್ರೀತಿ ಕೃತಜ್ಞತೆಗಳನ್ನು ಪ್ರಕಟಪಡಿಸಿದರು

ಕಳೆದ ವಾರ ತಾ ೧೯ ನೇ ಮಂಗಳವಾರ ಸಾಯಂಕಾಲ ೬ ಘಂಟೆ ಸಮಯದಲ್ಲಿ ಇದೇ ಬೆಂಗಳೂರಿನಲ್ಲಿ ವಾಸವಾಗಿದ್ದ ಒಕ್ಕಲಿಗರ ಜಾತಿ ಗೋವಿಂದಯ್ಯನೆಂಬ ಯೌವನಸ್ಥನು ಯಾವ ಕಾರಣದಿಂದಲೋ ಇಲ್ಲಿನ ನದಿಯ ಸಮೀಪದಲ್ಲಿರುವ ಒಂದು ಮರಕ್ಕೆ ಬಲವಾದ ಹಗ್ಗವನ್ನು ಕಟ್ಟಿ, ಅದನ್ನು ತನ್ನ ಕತ್ತಿಗೆ ಹಾಕಿಕೊಂಡು ಪ್ರಾಣವನ್ನು ಕಳೆದುಕೊಂಡ ಸಂಗತಿಯು ಅನೇಕರಿಗೆ ಆಶ್ಚರ್ಯವನ್ನೂ ಭಯವನ್ನೂ ಉಂಟುಮಾಡಿತು ಅನಂತರ ೨೦ ನೇ ತಾ ಬುಧವಾರ ಪೋಲೀಸ್ ಸೂಪರಿಂಟೆಂಟ್ ಸಾಹೇಬರವರೂ, ಪೋ| ಇನ್ಸ್‌ಪೆಕ್ಟರವರೂ, ಡಾಕ್ಟರವರೂ ಇನ್ನೂ ಕೆಲವು ಆಫೀಸರರೂ ದೊಡ್ಡ ಮನುಷ್ಯರೂ ಸೇರಿ ಮಹಜರು ಮಾಡಿಸಿ ಶವವನ್ನು ಅಜಮಾಯಿಸಿ ಬಗ್ಗೆ ಬೌರಿಂಗ್‌ಪೇಟೆಯ ಡಾಕ್ಟರ್ ಸಾಹೇಬರ ಬಳಿಗೆ ಕಳುಹಿಸಿದಾರೆ ಈ ಮರಣಕ್ಕೆ ಕಾರಣವು ಡಾಕ್ಟರ್ ಸಾಹೇಬರಿಂದ ಇನ್ನೂ ಹೊರಪಡಲಿಲ್ಲ ಎಂದು ಒಬ್ಬ ಬಾತ್ಮೀದಾರರು ಬರೆದಿದಾರೆ

ಮೈಸೂರು ಗೆಜೆಟ್ ಸಂಗ್ರಹ

ಅ| ಕಂಟ್ರೋಲರ್ ಮೆ|| ಬಿ ಶ್ರೀನಿವಾಸಯ್ಯಂಗಾರ್ರಿಗೆ ಎರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಮೈಸೂರು ಓರಿಯಂಟಲ್ ಲೈಬ್ರರಿಯ ಕ್ಯುರೇಟರ್ ಮೆ|| ಎ ಮಹಾದೇವಶಾಸ್ತ್ರಿಯವರಿಗೆ ಜನವರಿ ತಾ ೪ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಲೈಬ್ರೇರಿಯನ್ ಮೆ| ಆರ್ ಶಾಮಶಾಸ್ತ್ರಿಯವರು ತಮ್ಮ ಕೆಲಸಗಳೊಂದಿಗೆ ಕ್ಯುರೇಟರ್ ಆಫೀಸಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು

ಶಿವಮೊಗ್ಗಾ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್ ಮೆ ಮಹಮದ್ ಉಸ್ಮಾನ್ ಯವರಿಗೆ ಕ್ರಿಸ್ಮಸ್ ರಜಾದೊಂದಿಗೆ ಐದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು ಸಬ್ ಅ| ಸರ್ಜನ್ ಮೆ|| ಎಸ್ ಕೆ ಹನುಮಂತರಾಯರು ಮೆ| ಮಹಮದ್ ಉಸ್ಮಾನ್‌ರವರ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿದ್ದರು

ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಮೆ| ಎಚ್ ಜೆ ಭಾಭಾ ಯವರಿಗೆ ಜನವರಿ ತಾ ೧೦ ರಿಂದ ತಾ ೧೯ರ ವರೆಗೆ ಪ್ರಿವಿಲೆಜ್ ರಜಾ ಕೊಟ್ಟಿದೆ

ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟ್ ಮೆ|| ಸಿ ರಾಮಲಿಂಗ ರೆಡ್ಡಿಯವರು ಮೆ|| ಭಾಭಾ ಸಾಹೇಬರು ರಜದ ಮೇಲಿರುವಾಗಲೂ ಅದಲ್ಲ ಆ ತರುವಾಯ ಸರ್ಕಾರಿ ಕೆಲಸದ ಮೇಲೆ ಹೊರಗಿರುವಾಗಲೂ ಮೆ|| ಭಾಭಾಯವರ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು

ಸಾಗರದ ಮುನ್ಸಿಫ್ ಮೆ ಪಿ ಮಹದೇವಯ್ಯನವರಿಗೆ ಜನವರಿ ತಾ ೪ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೇಲ್ಕಂಡ ಹುಕುಂ ಕೊಡಲ್ಪಡುವ ತನಕ ಚೀಫ್ ಕೋರ್ಟಿನ ಡೆಪ್ಯುಟಿ ಕ್ಲಾರ್ಕ್ ಡಿ ಅಳಸಿಂಗ್ರಾಚಾರ್ಯ ಸಾಗರದ ಮುನ್ಸಿಫರಾಗಿ ಬದಲಿ ನಿಂತಿರತಕ್ಕದ್ದು

ರೆವಿನ್ಯೂ ಕಮಿಷನರ್‌ರವರ ಆ ಅಸಿಸ್ಟೆಂಟರಾದ ಮೆ ಕೆ ಸುಬ್ಬರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕಡೂರು ಡಿಸ್ಟ್ರಿಕ್ಟ್ ಪಿಡಬ್ಲ್ಯುಡಿ ಛಾರ್ಜನ್ನು ವಹಿಸಿರುವ ಅ|| ಕಮಿಷನರ್ ಮೆ|| ಜಿ ಹನುಮಂತರಾಯರಿಗೆ ಜನವರಿ ತಾ ೮ ರಿಂದ ಒಂದೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೇಲ್ಕಂಡ ಹುಕುಂ ಕೊಡಲ್ಪಡುವ ತನಕ ಪ್ರೊ| ಅ| ಕಮಿಷನರ್ ಮೆ|| ಸಿ ರಂಗನಾಥರಾವ್ ಸಾಹೇಬರವರು ಮೇಲ್ಕಂಡ ಡಿವಿಜನ್ನಿನ ಛಾರ್ಜನ್ನು ವಹಿಸತಕ್ಕದ್ದು

ಮೆ| ರಂಗನಾಥರಾವ್ ಸಾಹೇಬರವರನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ವರ್ಗಮಾಡಿರುವ ಹುಕುಮನ್ನು ರದ್ದು ಮಾಡಿದೆ

ಸಿ ಡೇವಿಡ್ ಪಿಳ್ಳೆಯವರು ಕಾಲವಾದ ಬಾಬು ಕಳೆದ ಆಗಸ್ಟ್ ತಾ ೨೫ ರಿಂದ ವಿ ಬೆಂಗಳೂರು ಗೋಸಾಯಿ ಹುಡುಗರನ್ನು ಸೀನಿಯರ್ ಆಸ್ಪತ್ರೆ ಅಸಿಸ್ಟೆಂಟರಾಗಿ ನೇಮಕಮಾಡಿದೆ

ಅಬ್ದುಲ್ ವಾಹಬ್ ಮತ್ತು ಎಸ್ ಫ್ರಾಂಸಿಸ್ ಎಂಬವರಿಗೆ ಬಡ್ತಿ ಕೊಟ್ಟದ್ದರಿಂದ ಎ ಎಚ್ ಆಲ್ಬಿನ್‌ರವರನ್ನೂ ಸಿ ಕೃಷ್ಣಸ್ವಾಮಿ ಫರ್ನಾಂಡೋ ವರನ್ನೂ ೧ನೇ ಕ್ಲಾಸ್ ಆಸ್ಪತ್ರೆ ಅಸಿಸ್ಟೆಂಟರಾಗಿ ನೇಮಿಸಿದೆ

ತುಮಕೂರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸಿರುವ ಪ್ರೊ| ಅ| ಕಮಿಷನರ್ ಮೆ| ಎನ್ ಮಾಧವರಾಯರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಮುಂದೆ ಹೇಳುವ ಆ ಕಮಿಷನರುಗಳ ಬಡ್ತಿಯ ಹುಕುಂ ಮಾಡಲ್ಪಟ್ಟಿದೆ—

ಮೆ| ಎಂ ಶ್ರೀನಿವಾಸಮೂರ್ತಿಯವರು—೬ ರಿಂದ ೩ನೇ ಕ್ಲಾಸಿಗೆ, ೧೯೦೭ ನೇ ಮೇ ತಾ ೧ ರಿಂದ

ಮೆ| ಟಿ ಸತ್ಯರಾಜಚೆಟ್ಟಿಯವರು ಮತ್ತು ಮ್ಯಾ ಎಲ್ ಬಸ್ವೋಪಂಥ್ ಬಾದಾಮಿಯವರು—೪ ರಿಂದ ೩ನೇ ಕ್ಲಾಸಿಗೆ, ೧೯೦೮ ನೇ ಡಿಸೆಂಬರ್ ತಾ ೧ ರಿಂದ

ಮೆ| ಬಿ ತಂಬೂಚೆಟ್ಟಿಯವರು—೫ ರಿಂದ ೪ ನೇ ಕ್ಲಾಸಿಗೆ, ೧೯೦೮ ನೇ ನವಂಬರ್ ತಾ ೧೬ ರಿಂದ

ಮೆ| ಎಸ್ ಹಿರಿಯಣ್ಣಯ್ಯನವರನ್ನು ಅಸಿಸ್ಟೆಂಟ್ ಕಮಿಷನರನ್ನಾಗಿ ಬಡ್ತಿಮಾಡಿದ್ದರಿಂದ ಮುನ್ಸಿಫ್ ಮೆ| ಜಿ ಶ್ರೀನಿವಾಸ ಐಯರವರನ್ನು ೪ ರಿಂದ ೩ನೇ ಕ್ಲಾಸಿಗೆ ಕಳೆದ ಡಿಸೆಂಬರ್ ತಾ ೯ ರಿಂದ ಬಡ್ತಿಮಾಡಿದೆ

ಮುಂದೆ ಹೇಳುವ ಹುಕುಂ ಜಾರಿಯಲ್ಲಿರತಕ್ಕದ್ದು—ಅ| ಕಮಿಷನರ್ ಮೆ| ಟಿ ವರದರಾಜ ಚೆಟ್ಟಿಯವರು ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲೇ ಕೆಲಸ ಮಾಡತಕ್ಕದ್ದು, ಮತ್ತು ಅ|| ಕಮಿಷನರ್ ಮೆ ಟಿ ಆರ್ ಮಹದೇವರಾಯರನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಡೆಪ್ಯುಟಿ ಕಮಿಷನರ್‌ರವರ ಕೈಕೆಳಗೆ ಕೆಲಸ ಮಾಡುವಂತೆ ವರ್ಗ ಮಾಡಿದಾರೆ

ಅ| ಇಂಜಿನಿಯರ್ ಮೆ| ಟಿ ಜಿ ಲಕ್ಷ್ಮಣರಾಯರನ್ನು ಕೋಲಾರ್ ಡಿವಿಜನ್ನಿಂದ ರೆವಿನ್ಯೂ ಕಮಿಷನರ್‌ರವರ ಆಫೀಸಿಗೆ ವರ್ಗಮಾಡಿದೆ

ಮೆ|| ಸಿ ಇ ಸೂರ್ಯನಾರಾಯಣ ರಾಯರನ್ನು ಭೂಗರ್ಭಶೋಧನಾ ಇಲಾಖೆಯಲ್ಲಿ ಮೈನಿಂಗ್ ಅಸಿಸ್ಟೆಂಟರಾಗಿ ೧೯೦೮ನೇ ನವಂಬರ್ ೧ ರಿಂದ ಮೂರು ವರುಷಗಳ ತನಕ ಕೆಲಸ ಮಾಡುವಂತೆ ನೇಮಿಸಿದೆ

ಧಾರವಾಡದ ವಿದ್ಯಾವರ್ಧಕ ಸಂಘವು.

ಕನ್ನಡ ಭಾಷಾಭಿಮಾನಿಗಳಿಗೆ ಸೂಚನೆ.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸೆಕ್ರೆಟರಿಯವರು ಸಮಸ್ತ ಕರ್ನಾಟಕರಿಗೂ ತಿಳಿಯ ಹೇಳುವುದೇನೆಂದರೆ —

ಕನ್ನಡ ಗ್ರಂಥ ಕರ್ತರ ದ್ವಿತೀಯ ಸಮ್ಮೇಲನದಲ್ಲಿ ವ್ಯವಸ್ಥಿತಗಳಾದ ನಿಯಮಗಳಿಗೆ ಅನುಸಾರವಾಗಿ ಕೆಳಗೆ ಬರೆದ ಸಂಗತಿಗಳ ಕಡೆಗೆ ಯಾವತ್ತು ಕರ್ನಾಟಕಸ್ಥರು ಲಕ್ಷ್ಯ ಕೊಡುವರೆಂದು ನಂಬುತ್ತೇವೆ ೩ನೇ ನಿಯಮ— ಪ್ರಾಚೀನ ಅರ್ವಾಚೀನ ಗ್ರಂಥಕರ್ತೃಗಳ ಗ್ರಂಥ ಪರಿಶೋಧನವನ್ನೂ ಚರಿತ್ರೆ ಲೇಖನವನ್ನೂ ಮಾಡುವುದಕ್ಕೆ ತಕ್ಕ ಉಪಾಯಗಳನ್ನು ಕಲ್ಪಿಸತಕ್ಕದ್ದು ಈ ಕಾರ್ಯವನ್ನು ನೆರವೇರಿಸುವುದಕ್ಕಾಗಿ ಸಂಘದವರು ಯಾವತ್ತು ಕನ್ನಡಿಗರಿಗೆ ವಿಜ್ಞಾಪಿಸುವುದೇನೆಂದರೆ—ಯಾವಲ್ಲಿಯಾದರೂ ಪ್ರಾಚೀನ ಕೈ ಬರಹದ ಗ್ರಂಥಗಳೂ ಅಥವಾ ಬಹು ದಿನಗಳ ಹಿಂದೆ ಮುದ್ರಿತವಾದ ಸಧ್ಯಕ್ಕೆ ದೊರೆಯದಂಥ ಅಪೂರ್ವ ಗ್ರಂಥಗಳೂ ಇದ್ದು, ಸ್ವಲ್ಪ ಕಾಲದಲ್ಲಿಯೇ ಕ್ರಿಮಿ ಕೀಟಕಗಳಿಂದ ನಾಶವಾಗಿ ತೀರ ಲಯ ಹೊಂದುವ ಸಂಭವವಿರುವದರಿಂದ ಅಂಥ ಪುರಾತನ ಗ್ರಂಥಗಳ ಸದುಪಯೋಗವು ಯಾವತ್ತರಿಗೂ ಆಗಬೇಕೆಂಬ ಇಚ್ಛೆಯಿಂದ ಅವುಗಳನ್ನು ಮುದ್ರಿಸಲಿಕ್ಕೆ ಸಂಘದವರು ಒಪ್ಪಿಕೊಳ್ಳುತ್ತಾರೆ ಕಾರಣ ಅವುಗಳನ್ನು ಮಾಲಕರು ಇತ್ತಕಡೆಗೆ ದಯಮಾಡಿ ಕಳುಹಿದರೆ ಅವುಗಳನ್ನು ಮುದ್ರಿಸಿ, ಮುದ್ರಿತವಾದ ಹಲವು ಪ್ರತಿಗಳನ್ನು ಆವಶ್ಯ ಮಾಡಿ ಮೂಲ ಗ್ರಂಥವನ್ನು ಸಹ ಮಾಲಕರಿಗೆ ತಿರುಗಿ ಕೊಡುವರು

೪ನೇ ನಿಯಮ—ರಂಗಭೂಮಿಯಲ್ಲಿ ಆಡುವದಕ್ಕೆ ಯೋಗ್ಯವಾದ ಕರ್ನಾಟಕ ನಾಟಕಗಳನ್ನು ಬರೆಯುವವರಿಗೆ ಬಹುಮಾನ ಕೊಡತಕ್ಕದ್ದು ನಾಟಕವು ಸಮಾಜ ಸುಧಾರಣೆಗೆ ಮುಖ್ಯ ಸಾಧನವಾಗಿದೆ ನಾಟಕ ದ್ವಾರದಿಂದ ಜನರಲ್ಲಿ ಜಾಗೃತೆಯನ್ನು ಹುಟ್ಟಿಸುವುದು ಸುಲಭವಿದ್ದದರಿಂದ ಗ್ರಂಥಗಳನ್ನು ಬರೆಯಲಿಚ್ಛಿಸುವವರಿಗೆ ಸಂಘದವರು ವಿಜ್ಞಾಪಿಸುವುದೇನೆಂದರೆ—ತಾಂ ಸತಿ, ಸಾಮಾಜಿಕ ಐತಿಹಾಸಿಕ (ಮುಖ್ಯವಾಗಿ ಕರ್ನಾಟಕಕ್ಕೆ ಸಂಬಂಧಿಸಿದ) ವಿಷಯಗಳ ಮೇಲೆ ಗದ್ಯರೂಪವಾಗಲಿ, ಸುಲಭವಾದ ಪದ್ಯರೂಪದಿಂದಲಾಗಲಿ ನಾಟಕಗಳನ್ನು ರಚಿಸಿ, ಸಂಘಕ್ಕೆ ಕಳುಹಿದರೆ ಕನ್ನಡ ಭಾಷೆಯ ಮೇಲೆಯೂ ಕರ್ನಾಟಕಸ್ಥರ ಮೇಲೆಯೂ ಮಹದುಪಕಾರವಾಗಿ, ಗ್ರಂಥಕರ್ತರಿಗೆ ಸಂಘದ ಕಮಿಟಿಯವರು ನಿರ್ಣಯ ಮಾಡಿದ ಪ್ರಕಾರ ಬಹುಮಾನ ಹೊಂದುವರು

೫ನೇ ನಿಯಮ—ಸಾಮಾನ್ಯ ಜನರೊಳಗೆ ವಿವಿಧ ವಿಷಯಗಳ ಜ್ಞಾನವು ಸುಲಭವಾಗಿ ಹಬ್ಬುವಂತೆ ಮಾಡುವದಕ್ಕೆ ಅವರಿಗೆ ಆತ್ಯಾವಶ್ಯಕಗಳಾಗಿಯೂ, ಸಾಮಾನ್ಯಗಳೂ ಆಗಿರುವ ವಿಷಯಗಳನ್ನು ತಿಳಿಸತಕ್ಕ ಸಣ್ಣ ಸಣ್ಣ ಪುಸ್ತಕಗಳನ್ನು ಸುಲಭವಾದ ಭಾಷೆಯಲ್ಲಿ ಸ್ಪಷ್ಟವಾಗಿರುವಂತೆ ರಚಿಯಿಸಬೇಕು ಈ ನಿಯಮವು ಮುಂಬೈ ಇಲಾಖಾ ವಿದ್ಯಾ ಖಾತೆಯ ಮುಖ್ಯಾಧಿಕಾರಿಗಳಾದ ಮೆ॥ ಶೆಲ್‌ಬಿ ಸಾಹೇಬರ ಸೂಚನೆಯ ಪ್ರಕಾರ ಮಾಡಲ್ಪಟ್ಟಿದೆ ಈ ಉದ್ದೇಶವನ್ನು ಪೂರೈಸುವದಕ್ಕಾಗಿ ರಾ। ಬ ಶ್ರೀನಿವಾಸರಾವ ರೊದ್ದ, ಮ॥ ರಾ ನಾರಾಯಣರಾವ ಕರಗುದರಿ, ಇವರಿಬ್ಬರು ನೂರು ನೂರು ರೂಪಾಯಿಗಳನ್ನು ಕೊಡಲೊಪ್ಪಿದಾರೆ

ಕೆಳಗೆ ಬರೆದ ಪುಸ್ತಕಗಳನ್ನು ಬರೆಯುವವರಿಗೆ ಯೋಗ್ಯವೆಂದು ನಿರ್ಣಯಿಸಿ ಒಂದೊಂದು ಪುಸ್ತಕಕ್ಕೆ ೨೦ ರೂಪಾಯಿಗಳಂತೆ ಬಹುಮಾನ ಕೊಡುವದು ಗೊತ್ತಾಗಿದೆ ಚಿಕ್ಕ ಪುಸ್ತಕಗಳು ಮುದ್ರಿಸಿದರೆ ಡೆಮಿ ಆಕಾರದ ೨೫ ಪುಟಗಳಷ್ಟು ಇರತಕ್ಕದ್ದು ಸಾಮಾನ್ಯ ಜನರಿಗೆ ಮನೋರಂಜಕವಾಗಿರುವಂತೆ ನಾಟಕ, ಕಥೆ, ಕಾದಂಬರಿ, ಚರಿತ್ರಲೇಖನ, ಆತ್ಮವೃತ್ತಾಂತ ನಿವೇದನ ಅಥವಾ ಸಂಭಾಷಣ ಮುಂತಾದ ರೂಪಗಳಿಂದ ರಚಿಯಿಸಬಹುದು ವಿಷಯಗಳು ಯಾವವೆಂದರೆ — ೧ ಗೃಹ ವೈದ್ಯಕ ೨ ಹತ್ತಿಯಲ್ಲಿಯ ನಾನಾ ತರಹ ಪ್ರಕಾರ ಮತ್ತು ಅವುಗಳಲ್ಲಿ ಬೆಳಸುವ ಕ್ರಮ ೩ ಚಿಕ್ಕ ಬಾಲಕ ಬಾಲಿಕೆಯರಿಗೆ ಅವಶ್ಯವಾದ ಶಿಕ್ಷಣ ೪ ಕರ್ನಾಟಕ ದೇಶದಲ್ಲಿಯ ಪ್ರಸಿದ್ಧ ಪಟ್ಟಣಗಳೂ ಅವುಗಳ ಸಂಕ್ಷಿಪ್ತ ಇತಿಹಾಸವೂ ೫ ಅಶಿಕ್ಷಿತ ಜನರ ಸುಧಾರಣೆಯ ಉಪಾಯಗಳು ೬ ತಸಬೀರು ತೆಗೆಯುವ ಕಲೆಯು ೭ ಮುದ್ರಣ ಕಲಾ ೮ ಮದ್ಯಪಾನ ನಿಷೇಧ ೯ ನಾಗರಿಕರ ಕರ್ತವ್ಯ ೧೦ ಹಿಂದುಸ್ಥಾನ ವ್ಯಾಪಾರದ ಪರಿಸ್ಥಿತಿ

೨ನೇ ಸಮ್ಮೇಲನದಲ್ಲಿ ಪಾಸಾದ ಒಟ್ಟು ೭ ಠರಾವುಗಳಲ್ಲಿ ಮೇಲೆ ನಿವೇದಿಸಿದ ೩ ವಿಷಯಗಳು ಈಗಲೇ ಭಾಷಾಭಿಮಾನಿಗಳ ಸಹಾಯದಿಂದ ನೆರವೇರಿಸಲಿಕ್ಕೆ ಬರುವಂಥ ವಿದ್ಯಕಾರಣ ಯಾವತ್ತು ಭಾಷಾಭಿಮಾನಿಗಳು ಶಂಬಾ ಸಹಾಯ ಮಾಡಬೇಕೆಂದು ಸಂಘದವರ ಪ್ರಾರ್ಥನೆಯದೆ

ಉಳಿದ ಠರಾವುಗಳ ಬಗ್ಗೆ ಸಂಘದವರು ಸಾಧ್ಯವಾದ ಯತ್ನವನ್ನು ನಡಿಸಿದಾರೆ ಮುಂದಿನ ಸಮ್ಮೇಲನವು ಬರುವ ಮೇ ತಿಂಗಳಲ್ಲಿ ಆಗಬಹುದು ಅಷ್ಟರಲ್ಲಿ ಯಾವತ್ತರೂ ತಮಗೆ ಅನುಕೂಲವಾದ ಪ್ರಕಾರ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇವೆ ಪಾರಿತೋಷಕ ನಿಮಿತ್ತವಾಗಿ ೪ ೫ನೇ ನಿಯಮಗಳಿಗೆ ಅನುಸರಿಸಿ ಪುಸ್ತಕಗಳನ್ನು ಕಳುಹುವವರು ಬರುವ ಮಾರ್ಚ ೧ನೇ ತಾರೀಖಿನೊಳಗಾಗಿ ಸಂಘಕ್ಕೆ ಕಳುಹತಕ್ಕದ್ದು ಸದರಿ ಪುಸ್ತಕಗಳು ಮುದ್ರಿಸಲಿಕ್ಕೆ ತಕ್ಕವುಗಳಾಗಿರುವಂತೆ ಸ್ವಚ್ಛವಾಗಿ ಕಾಗದದ ಒಂದೇ ಮಗ್ಗುಲಲ್ಲಿ ಬರೆಯಲ್ಪಟ್ಟಿರಬೇಕು ಒಂದೊಂದು ವಿಷಯದಲ್ಲಿ ಯೋಗ್ಯವೆಂದು ಕಮಿಟಿಯವರು ಗೊತ್ತುಪಡಿಸಿದ ಒಂದೇ ಪುಸ್ತಕಕ್ಕೆ ಬಹುಮಾನ ದೊರೆಯುವುದು ಉಳಿದ ಪುಸ್ತಕಗಳನ್ನು ಲೇಖಕರಿಗೆ ತಿರುಗಿ ಕಳುಹಲಿಕ್ಕೆ ಸಂಘದವರು ಒಪ್ಪಿದ್ದಾರೆ ಆದರೂ ಅವುಗಳಲ್ಲಿ ಮುದ್ರಿಸಲಿಕ್ಕೆ ಯೋಗ್ಯವೆಂದು ಕಂಡವುಗಳನ್ನು ಅವರು ಮುದ್ರಿಸಬಹುದು ಸಂಘದಿಂದ ಮುದ್ರಿತವಾದ ಯಾವತ್ತು ಗ್ರಂಥಗಳ ಮಾಲಕಿಯು ಸಂಘದ್ದೇ ಇರುತ್ತದೆ

ಭೂಕಂಪಗಳೂ ಅನಾಹುತಗಳೂ.

ಕಳೆದ ವಾರ ಬಂದಿರುವ ತಂತೀ ವರ್ತಮಾನಗಳು

ಇಟಲಿ ರಾಜ್ಯದ ಭೂಕಂಪವು.

ಜನವರಿ, ತಾ ೧೬ನೇ ಶನಿವಾರ —ಮೆಸ್ಸೀನಾ ಪಟ್ಟಣದ ಬಳಿ ಸಮುದ್ರದಲ್ಲಿ ಒಂದು ಹಡಗಿನೊಳಗೆ ಮುಖ್ಯ ಅಧಿಕಾರಿಗಳು ಸಭೆ ಸೇರಿ, ಪ್ರಪಂಚದ ನಾನಾ ಭಾಗಗಳಿಂದಲೂ ಭೂಕಂಪದ ರಿಲೀಫ್ ಫಂಡಿಗೆ ದ್ರವ್ಯಾದಿಗಳನ್ನು ಸಹಾಯ ಮಾಡಿದ ವಿಷಯವನ್ನು ಕುರಿತು ಚರ್ಚೆಮಾಡಿ, ಎಲ್ಲರನ್ನೂ ಅತ್ಯಂತವಾಗಿ ಶ್ಲಾಘಿಸಿ ಸ್ತೋತ್ರಮಾಡಿದರು

ಜನವರಿ, ತಾ ೧೭ನೇ ಭಾನುವಾರ —ಮೆಸ್ಸೀನಾದಲ್ಲಿ ಭೂಮಿಯು ಕಂಪಿಸುವುದು ಇನ್ನೂ ತಪ್ಪಲಿಲ್ಲ ಆಗಾಗ್ಗೆ ಭೂಕಂಪವಾಗುತ್ತಲೇ ಇದೆ ಆದರೂ ಪ್ರಜೆಗಳಲ್ಲಿ ಧೈರ್ಯವೂ ನೆಮ್ಮದಿಯೂ ದಿನೇ ದಿನೇ ವೃದ್ಧಿಯೊಂದುತ್ತಿರುವವು ಉಳಿದಿರುವ ಪ್ರಜೆಗಳು ಎಂದಿನಂತೆ ತಮ್ಮ ಕೆಲಸಕಾರ್ಯಗಳನ್ನು ಮಾಡಿಕೊಳ್ಳುತ್ತಾ ಬಂದಿರುವರು

ಜನವರಿ, ತಾ ೨೦ನೇ ಬುಧವಾರ —ಸರ್ಕಾರದ ಮುಖ್ಯಾಧಿಕಾರಿಗಳು ಮೆಸ್ಸೀನಾ ಪಟ್ಟಣದ ಸ್ಥಿತಿಗತಿಯನ್ನು ಪರೀಕ್ಷೆಮಾಡಿ, ಆ ಪಟ್ಟಣದಲ್ಲಿ ಪೂರ್ವದಂತೆ ಜಹಜುಗಳು ತಂಗುವುದಕ್ಕೆ ಅನುಕೂಲ ಹೆಚ್ಚಾಗಿದೆ ಎಂದು ಗೊತ್ತುಮಾಡಿರುತ್ತಾರೆ ವಾಸಕ್ಕೂ ಇತರ ಭಾಗಗಳಲ್ಲು ಅಲ್ಲಿ ವಿಶೇಷ ಸೌಕರ್ಯಗಳುಂಟಾಗಿರುವವು

ಜನವರಿ, ತಾ ೨೧ನೇ ಗುರುವಾರ —ನೆನ್ನೆ ಮೆಸ್ಸೀನಾದಲ್ಲಿ ನಾಲ್ಕು ದಿವಸಗಳ ಕೆಳಗಿನಿಂದ ಇಬ್ಬರನ್ನು ಬದುಕಿಸಿ ಹೊರಕ್ಕೆ ಕರೆದುತಂದರು

ಅಮೇರಿಕದಲ್ಲಿ ರೈಲ್ವೆ ಅನಾಹುತವು.

ಜನವರಿ, ತಾ ೧೬ನೇ ಶನಿವಾರ —ಅಮೇರಿಕದಲ್ಲಿ ಡೆನ್ವೇರಿಗೂ ರೈಯೋಗ್ರಾಂಡಿಗೂ ನಡುವೆ ಗ್ಲೆನ್‌ವುಡ್ ಸ್ಪ್ರಿಂಗ್ ಎಂಬ ಸ್ಟೇಷನ್ನಿನಲ್ಲಿ ರೈಲ್ವೆ ಅನಾಹುತ ನಡೆದು ೧೮ ಮಂದಿ ಪ್ರಯಾಣಸ್ಥರು ಮೃತಪಟ್ಟರು, ೩೦ ಜನರಿಗೆ ಗಾಯಗಳಾಗಿವೆ

ಈಚೆಗೆ ಬಂದ ಸುದ್ದಿ —ಈ ಅನಾಹುತದಲ್ಲಿ ಐವತ್ತು ಜನರು ಮೃತಪಟ್ಟರೆಂದು ತಿಳಿದು ಬಂದಿದೆ ಜನರು ಕುಳಿತಿದ್ದ ರೈಲ್ ಗಾಡಿಯು ಸಾಮಾನ್ ಬಂಡಿಗೆ ಢಿಕ್ಕಾಬಡಿದು ಈ ಅನಾಹುತ ಸಂಭವಿಸಿತು ಗಾಡಿಯೊಳಗಿದ್ದವರೆಲ್ಲಾ ಸತ್ತುಹೋದರು

ಸ್ಟ್ರಾನಾ, ರೆಗ್ಗಿಯೋ ಮತ್ತು ಮೆಸ್ಸೀನಾ ಪಟ್ಟಣಗಳಲ್ಲಿ ಮತ್ತೆ ಭೂಕಂಪಗಳಾದವು.

ಜನವರಿ, ತಾ ೧೯ನೇ ಮಂಗಳವಾರ —ಈ ದಿನ ಬೆಳಗ್ಗೆ ಸ್ಟ್ರಾನಾ ಪಟ್ಟಣದಲ್ಲಿ ಬಲವಾಗಿ ಭೂಮಿಯು ನಡುಗಿತು ಫೋಸಿಯಾದಲ್ಲಿ ಕೆಲವು ಮನೆಗಳು ಕಳಚಿ ಬಿದ್ದುಹೋದವು ಮೂವರು ಮಂದಿ ಮೃತಪಟ್ಟರು ರೆಗ್ಗಿಯೋದಲ್ಲೂ ಮೆಸ್ಸೀನಾದಲ್ಲೂ ಭೂಕಂಪವಾಗುತ್ತಲೇ ಇದೆ ಅಲ್ಲಿ ಈ ದಿನವೂ ಎರಡಾವರ್ತಿ ಭೂಮಿಯು ಕಂಪಿಸಿತು ಈಗ ಚಳಿ ಬಹಳ ಹೆಚ್ಚಾಗಿದೆ ವಿಶೇಷವಾದ ಬಿರುಗಾಳಿಯೂ ಮಳೆಯೂ ಬರುತ್ತಿವೆ

ಜನವರಿ, ತಾ ೨೦ನೇ ಬುಧವಾರ —ಫೋಸಿಯಾದಲ್ಲಿ ಭೂಕಂಪದ ದೆಸೆಯಿಂದ ವಿಶೇಷ ಅನಾಹುತವಾಯಿತು ಎಂಟು ಮಂದಿ ಮೃತಪಟ್ಟಿರುತ್ತಾರೆ

ಜನವರಿ, ತಾ ೨೧ನೇ ಗುರುವಾರ —ಫೋಸಿಯಾ ಡಿಸ್ಟ್ರಿಕ್ಟಿನಲ್ಲಿ ಭೂಕಂಪದ ದೆಸೆಯಿಂದ ಗ್ರಾಮಾಂತರಗಳಲ್ಲಿ ೩೦೦ ಮನೆಗಳಿಗಿಂತಲೂ ಹೆಚ್ಚಾಗಿಯೇ ನಾಶಹೊಂದಿರುತ್ತವೆ ಅನೇಕ ಪ್ರಜೆಗಳು ಪ್ರಾಣ ಕಳೆದುಕೊಂಡರು

ಜನವರಿ, ತಾ ೨೧ನೇ ಗುರುವಾರ —ಫೋಸಿಯಾದಲ್ಲಿ ಭೂಕಂಪದ ದೆಸೆಯಿಂದ ೬೭೯ ಮನೆಗಳು ನಾಶವಾದವೆಂತಲೂ, ಭೂಮಿಯು ಆಗಾಗ್ಗೆ ನಡುಗುತ್ತಲೇ ಇರೋಣದರಿಂದ ಪ್ರಜೆಗಳೆಲ್ಲಾ ಚಲ್ಲಾಪಿಲ್ಲಿಯಾಗಿ ನಾನಾ ಕಡೆಗೆ ಓಡಿಹೋಗುತ್ತಿದಾರೆಂತಲೂ, ಭೂಕಂಪದ ದೆಸೆಯಿಂದ ಹತರಾದವರು ಎಷ್ಟು ಮಂದಿಯೋ ಇನ್ನೂ ಗೊತ್ತುಮಾಡುವುದಕ್ಕಾಗಲಿಲ್ಲವೆಂತಲೂ, ಮಂತ್ರಿಯವರು ಪ್ರಜೆಗಳಿಗೆ ಸಹಾಯ ಸಂಪತ್ತುಗಳನ್ನು ಒದಗಿಸಿ ಕಳುಹಿಸುತ್ತಿದಾರೆಂತಲೂ ಸ್ಟ್ರಾನಾ ಪಟ್ಟಣದ ಪಾಲಿ ಎಂಬ ಅಧಿಕಾರಿಯು ತಂತೀ ವರ್ತಮಾನ ಕೊಟ್ಟಿದಾರೆ

ಫಿಲಿಪ್ಪೈನ್ ದ್ವೀಪಗಳಲ್ಲಿ ಬೆಟ್ಟದಿಂದ ಬೆಂಕಿ ಸುರಿಯುವುದು

ಜನವರಿ, ೨೦ನೇ ಬುಧವಾರ —ಫಿಲಿಪ್ಪೈನ್ ದ್ವೀಪಗಳ ಮುಖ್ಯ ಪಟ್ಟಣವಾದ ಮನ್ನಿಲಾ ನಗರದಿಂದ ತಂತೀ ವರ್ತಮಾನ ಬಂದಿರುವುದೇನೆಂದರೆ — ಲೂಜಾನ್ ಎಂಬ ದ್ವೀಪದ ಪಶ್ಚಿಮಪಾರ್ಶ್ವದಲ್ಲಿರುವ ಲಾಗ್ಗಾಸ್ ಎಂಬ ಅಗ್ನಿಪರ್ವತವು ನೆನ್ನೆ ರಾತ್ರಿಯಿಂದ ಬೆಂಕಿಯನ್ನು ಕಾರುತ್ತಾ ಬಂದಿದೆ ಪರ್ವತದ ಒಳಭಾಗದಲ್ಲಿರುವಂಥಾ ಕಲ್ಲು ಮಣ್ಣು ಲೋಹಾದಿಗಳು ಕುದಿಯುವ ರೀತಿಯಲ್ಲಿ ಕರಗಿ ಮೇಲಕ್ಕೆ ಹಾರಿ ರಸ್ತೆಗಳ ಮೇಲೆಲ್ಲಾ ಅಪಾರವಾಗಿ ಸುರಿದು, ಜನಸಂಚಾರಕ್ಕೆ ಅವಕಾಶವಿಲ್ಲದಂತಾಗಿದೆ ಇದುವರೆಗೆ ಯಾರೂ ಈ ಅನಾಹುತದಲ್ಲಿ ಮೃತಪಡಲಿಲ್ಲ ಸ್ವಲ್ಪ ಕಾಲಕ್ಕೆ ಮುಂಚೆಯೇ ಭೂಮಿಯು ಗುಡುಗಿ ಕಂಪಿಸಿ ಪ್ರಜೆಗಳನ್ನೆಲ್ಲಾ ಎಚ್ಚರಿಸಿದಂತೆ ಕಾಣುವುದು

ಚಿಕಾಗೋ ಪಟ್ಟಣದಲ್ಲಿ ಬೆಂಕಿಯ ಅನಾಹುತವು.

ಜನವರಿ, ೨೧ನೇ ಗುರುವಾರ —ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದ ಬಳಿ ದೊಡ್ಡ ಕೆರೆಯ ನಡುಭಾಗದಲ್ಲಿ ಬರೀ ಮರದಿಂದಲೇ ದೊಡ್ಡ ಮನೆಯನ್ನು ಕಟ್ಟಿದ್ದರು ಈ ಕಟ್ಟಡಕ್ಕೆ ಬೆಂಕಿಬಿದ್ದು ಉರಿದುಹೋಯಿತು ಐವತ್ತು ಜನರು ಬೆಂಕಿಗೆ ಸಿಕ್ಕಿ, ನೀರಿಗೆ ಧುಮುಕಿ ಪ್ರಾಣಕಳೆದುಕೊಂಡರು ಕೆಲವರು ಮಾತ್ರ ಮಂಜುಗಡ್ಡೆಗಳನ್ನು ತಬ್ಬಿಕೊಂಡು ಬದುಕಿದ್ದರು ಇವರನ್ನು ಒಂದು ದೋಣಿಯಲ್ಲಿ ಕೂರಿಸಿ ಹಗ್ಗಕಟ್ಟಿ ಎಳೆದುತಂದು ಬದುಕಿಸಿದರು

ಟ್ರಾನ್ಸ್‌ವಾಲ್‌ನಲ್ಲಿ ಅಪಾರವಾದ ಮಳೆಗಳು.

ಜನವರಿ, ತಾ ೨೨ನೇ ಶುಕ್ರವಾರ —ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲಿನಲ್ಲಿ ಅಪಾರವಾದ ಮಳೆಗಳು ಸುರಿಯುತ್ತಾ ಬಂದಿರೋದರಿಂದ ವಿಟ್‌ವಾಟರ್‌ಸ್ರ್ಯಾಂಡ್ ಎಂಬಲ್ಲಿ ಅನೇಕ ಗಣಿಗಳಲ್ಲಿ ಅಡ್ಡಕಟ್ಟೆಗಳು ಒಡೆದು ಹೋದವು ಅನೇಕ ಪ್ರಜೆಗಳು ಮೃತಪಟ್ಟರೆಂದು ತಿಳಿದು ಬಂದಿದೆ ಒಂದು ಗಣಿಯಲ್ಲೇ ೧೦ ಮಂದಿ ಬಿಳಿಯ ಜನರೂ, ೧೫೦ ಜನ ದೇಶೀಯರೂ ನೀರಿನಲ್ಲಿ ಮುಳುಗಿ ಸತ್ತರು

ಹೊಸ ವರ್ತಮಾನ —ಜೋಹಾನಸ್‌ಬರ್ಗ್‌ನಲ್ಲಿ ೨೪ ಘಂಟೆ ಹೊತ್ತಿನಲ್ಲಿ ಏಳು ಅಂಗುಲ ಮಳೆ ಸುರಿದದ್ದರಿಂದ ಎಲ್ಲಾ ಭಾಗಗಳಲ್ಲೂ ನೀರು ತುಂಬಿಹೋಗಿದೆ ವಿಟ್‌ವಾಟರ್‌ಸ್ರ್ಯಾಂಡ್ ಎಂಬ ಗಣಿಯೊಳಗೆ ಆರನೇ ಅಂತಸ್ತಿನ ತನಕ ನೀರು ನಿಂತಿರುವುದು ಒಳಗೆ ಕೆಲಸಮಾಡುತ್ತಿದ್ದವರ ಪೈಕಿ ಇಬ್ಬರು ಬಿಳಿಯ ಜನರನ್ನೂ ಕೆಲವು ದೇಶೀಯ ಜನರನ್ನೂ ಬದುಕಿಸಿ ಹೊರಕ್ಕೆ ಕರೆದುತಂದರು ಒಂಬತ್ತು ಮಂದಿ ಬಿಳಿಯ ಜನರೂ, ೧೫೦ ೧೬೦ ಮಂದಿಯು ತನಕ ದೇಶೀಯ ಜನರು ಗಣಿಯೊಳಗೆ ಸಿಕ್ಕಿಕೊಂಡಿದ್ದಾರೆ ಅವರನ್ನು ಕಾಪಾಡಿ ಕರೆತರುವುದು ಅಸಾಧ್ಯವಾಗಿದೆ

ಅಡ್ಡಕಟ್ಟೆಗಳು ಒಡೆದುಹೋದದ್ದರಿಂದ ಪ್ರವಾಹವು ನುಗ್ಗಿಬಂದು ಎಲ್ಸ್‌ಬರ್ಗ್ ಎಂಬಲ್ಲಿ ಅನೇಕ ಮನೆಗಳನ್ನು ಕೊಚ್ಚಿಕೊಟ್ಟಿವೆ ಹದಿಮೂರು ಜನರು ನೀರಿನಲ್ಲಿ ಸಿಕ್ಕಿ ಮೃತಪಟ್ಟರು ಇತರ ಅಡ್ಡಕಟ್ಟೆಗಳೂ ಒಡೆಯುವ ಸ್ಥಿತಿಯಲ್ಲಿರುತ್ತವೆ ಇದು ಸಂಭವಿಸಿದರೆ ಪ್ರಜೆಗಳಿಗೆ ಕುಡಿಯುವ ನೀರು ಸಿಕ್ಕದಂತಾಗಿ, ಗಣಿಗಳ ಕೆಲಸ ಬಹಳ ಕಷ್ಟವಾಗುವುದು

ವಿಶೇಷ ವಾರ್ತೆಗಳು

ಈಸೇ ಜನವರಿ ಪ್ರಾರಂಭದಿಂದ ವಿಲಾಯಿತಿಯಲ್ಲಿರುವ ಮುದುಕರಿಗೆ ಸರ್ಕಾರದವರು ಪೆನ್ಷನ್ ಕೊಡತೊಡಗಿದರು ೭೦ ವಯಸ್ಸಿನಲ್ಲಿರುವ ಆ ಮುದುಕರಿಗೆ ಆಯಾ ಸ್ಥಳದ ಪೋಸ್ಟ್ ಆಫೀಸಿನಲ್ಲಿ ಈ ಪೆನ್ಷನ್ ಪಾವತಿ ಆಗುವಂತೆ ಏರ್ಪಾಡಾಗಿ ಸಾಗುತ್ತಿರುವುದು

ಜನರು ಬೀದಿಗಳಲ್ಲಿ ಸಂಚಾರ ಮಾಡುತ್ತಾ ಸಿಕ್ಕಿದ ಕಡೆಯಲ್ಲೆಲ್ಲಾ ಉಗುಳಿ ಹೊಲಸು ಮಾಡುವುದು ಹಿಂದುಸ್ಥಾನದಲ್ಲಿ ಅಪರೂಪವಲ್ಲ ಹಾಂಕಾಂಗಿನಲ್ಲಿ ಈ ದುಷ್ಟ ಪದ್ಧತಿಯನ್ನು ತಪ್ಪಿಸುವುದಕ್ಕೆ ಅಲ್ಲಿನ ಗವರ್ನಮೆಂಟಿನವರು ಒಂದು ಕಾನೂನಿನ ಮಸೂದೆಯನ್ನು ತಯಾರುಮಾಡಿ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆ ಮಾಡುತ್ತಿದಾರೆ

ಮಧ್ಯ ಹಿಂದುಸ್ಥಾನಕ್ಕೆ ಸೇರಿದ ನಾಗಪುರವೆಂಬ ದೊಡ್ಡ ಪಟ್ಟಣದಲ್ಲಿ ಒಂದು ಕಂಪನಿಯವರು ಬಹಳ ಮೂಲಧನವನ್ನು ಕೂಡಿಸಿ ಒಂದು ಕಾರ್ಖಾನೆಯನ್ನು ಸ್ಥಾಪಿಸಿದರೆಂತಲೂ, ಈ ಕಾರ್ಖಾನೆಯಲ್ಲಿ ವ್ಯವಸಾಯವೇ ಮೊದಲಾದ ಕಸುಬುಗಳ ಅಭಿವೃದ್ಧಿಗೆ ಅವಶ್ಯವಾದಂಥಾ ಯಂತ್ರ ಮುಟ್ಟುಗಳನ್ನು ತಯಾರುಮಾಡಿ ವಿಕರಿಸುತ್ತಾರೆಂತಲೂ ತಿಳಿದುಬಂದಿದೆ

ರಾಬರ್ಟ್ ಕಾಕ್ ಎಂಬಾತನು ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಕ್ಷಯ ರೋಗದ ಪರಿಶೋಧನೆಗೂ ಪರಿಹಾರಕ್ಕೂ ದ್ರವ್ಯಸಹಾಯ ಬೇಕೆಂದು ಹಣವನ್ನು ಕೂಡಿಸುತ್ತಿದಾನೆ ಈ ಫಂಡಿಗೆ ಪ್ರಸಿದ್ಧ ಕೋಟ್ಯಾಧೀಶ್ವರನಾದ ಮಿ ಆಂಡ್ರು ಕಾರ್ನೆಗಿ ಎಂಬಾತನು ೩,೭೫,೦೦೦ ರೂಪಾಯಿ ಕೊಟ್ಟಿರುವನು ಈಗ ಈ ಫಂಡಿನಲ್ಲಿ ಒಟ್ಟು ೧೨ ಲಕ್ಷ ರೂಪಾಯಿನ ನಗದು ವಸೂಲಾಗಿರುತ್ತದೆ

ಹಿಂದುಸ್ಥಾನದ ವೈಸರಾಯ್ ಲಾರ್ಡ್ ಮಿಂಟೋ ಪ್ರಭುಗಳು ಪರಿವಾರ ಸಹಿತ ಈ ವರುಷದ ಅಂತ್ಯಭಾಗದಲ್ಲಿ ಸಂಚಾರ ಹೊರಟು, ಅಲ್ವಾರ್, ಜಯಪುರ, ಉದಯಪುರ ಇಂದೋರ್, ಭೂಪಾಲ್, ಬರೋಡಾ, ಮೈಸೂರು, ಈ ದೇಶೀಯ ಸಂಸ್ಥಾನಗಳಿಗೆ ದಯಮಾಡುವವರಾಗಿದಾರೆಂತಲೂ, ಬೊಂಬಾಯಿ, ಮದರಾಸ್ ಬೆಂಗಳೂರು ಪ್ರಾಂತ್ಯದಲ್ಲೂ ಒಂದೆರಡು ದಿನ ತಂಗುವರೆಂತಲೂ ಕಲ್ಕತ್ತೆಯಿಂದ ತಂತೀವರ್ತಮಾನ ಬಂದಿದೆ

ಚಕ್ರವರ್ತಿ ಸಾರ್ವಭೌಮರವರ ಕಳೆದ ನೋವೆಂಬರ್ ತಿಂಗಳ ೧ನೇ ತಾರೀಖಿನಲ್ಲಿ ದಯಪಾಲಿಸಿದ ಇಸ್ತಿಹಾರನಾಮೆಯ ಪ್ರಕಾರ ಬೊಂಬಾಯಿ ಗವರ್ನಮೆಂಟಿನವರು ಆ ಅದಿಸ್ಯದ ಪ್ರಕಾರ ಸೆರೆಯಲ್ಲಿದ್ದ ೭೭೮ ಮಂದಿ ಖೈದಿಗಳ ಶಿಕ್ಷೆಯನ್ನು ಮಾಫ್ ಮಾಡಿ ಅವರನ್ನೆಲ್ಲಾ ಬಿಡುತ್ತಾರೆ ಮತ್ತು ಯೋಗ್ಯರೆಂದು ಕಂಡುಕೊಂಡು ಅಧಿಕಾರಿಗಳ ಪ್ರೀತಿ ಅನುಗ್ರಹಕ್ಕೆ ಪಾತ್ರರಾದ ೫,೪೬೯ ಮಂದಿ ಖೈದಿಗಳ ಶಿಕ್ಷೆಯನ್ನು ಕೆಲವು ಭಾಗ ಮಾಫ್ ಮಾಡಿರುವರು.

ರಷ್ಯಾ ರಾಜ್ಯದ ಸ್ತ್ರೀಯರ ಮೊದಲನೇ ಸಮಾಜವು ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ಕಳೆದ ಡಿಸೆಂಬರ್ ತಾ ೨೨ರಲ್ಲಿ ಜರುಗಿತು ಇದುವರೆಗೆ ಸರ್ಕಾರದವರು ಇಂಥಾ ಕೂಟಗಳು ಯಾವೂ ನಡಿಯದಂತೆ ತಡೆದು ನಿಲ್ಲಿಸಿದ್ದರು ರಷ್ಯಾ ರಾಜ್ಯದ ಎಲ್ಲಾ ಪ್ರಾಂತ್ಯಗಳಿಂದಲೂ ಸ್ತ್ರೀ ಪ್ರತಿನಿಧಿಗಳು ಬಂದು ಸಭೆಯನ್ನು ನಡಿಸಿದರು ಅವರಲ್ಲಿ ಜನಾನ ಪದ್ಧತಿಯವರು, ಪ್ರೊಟೆಸ್ಟೆಂಡಿನವರು, ಆರ್ಮೀನಿಯಾದವರು ಬೌದ್ಧ ಮತೀಯರಾದವರು, ಈ ಮೊದಲಾದ ಎಲ್ಲಾ ವರ್ಗದ ಮತಸ್ಥರೂ ಸಭೆಯಲ್ಲಿ ಹಾಜರಾಗಿದ್ದರು

ಬಂಗಾಳ ಸಂಸ್ಥಾನಕ್ಕೆ ಸೇರಿದ ಸದರ್ ಸಬ್ ಡಿವಿಜನ್ನಿನೊಳಗೆ ಬಾಂಕುರಾ, ರೋಜೀರಾ ಎಂಬ ಠಾಣಾ (ತಾಲ್ಲೂಕು) ಗಳಲ್ಲಿ ಕ್ಷಾಮ ಪ್ರಾಪ್ತವಾಗಿದೆ ಅಂದರೆ, ೬೦೦ ಚದರಮೈಲಿ ವಿಸ್ತಾರವೂ ೭,೫೦,೦೦೦ ಪ್ರಜಾ ಸಂಖ್ಯೆಯೂ ಉಳ್ಳ ಪ್ರದೇಶವು ಕ್ಷಾಮಪೀಡಿತವಾಗಿದೆ ಲೆಫ್ಟಿನೆಂಟ್ ಗವರ್ನರಾದ ಸರ್ ಎಡ್ವರ್ಡ್ ಬೇಕರ್‌ಯವರು ಕಳೆದ ವಾರ ಆ ಪ್ರಾಂತ್ಯ ಸಂಚಾರ ಮಾಡಿಕೊಂಡು ಬಂದರು ಈಗ ಅಲ್ಲಿ ೧೬,೦೦೦ ಪ್ರಜೆಗಳು ಸರ್ಕಾರದವರ ರಿಲೀಫ್ ಕಾಮಗಾರಿಗಳಲ್ಲಿ ಸೇರಿಕೊಂಡು ಜೀವನಮಾಡುತ್ತಿದಾರೆಂದು ತಂತೀ ವರ್ತಮಾನ ಬಂದಿದೆ

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ಆಹಾರ ಧಾನ್ಯಗಳ ಧಾರಣೆಯು ಶುಂಬಾ ಹೆಚ್ಚಿರೋಣದರಿಂದ ಜೀವನಕ್ಕಿಲ್ಲದೆ ಪ್ರಜೆಗಳು ಕಷ್ಟಪಡುತ್ತಿದಾರೆಂತಲೂ ಬಡಬಗ್ಗರಿಗಾಗಿ ರಿಲೀಫ್ ಕಾಮಗಾರಿಗಳನ್ನು ಪ್ರಾರಂಭಿಸಬೇಕೆಂತಲೂ ಪ್ರಜೆಗಳ ಮುಖಂಡರು ದಿವಾನರವರನ್ನು ಕೇಳಿಕೊಂಡರು ದಿವಾನರವರು ಧಾರಣೆಗಳು ಹೆಚ್ಚುವುದಕ್ಕೆ ಕಾರಣವೇನೆಂಬದನ್ನು ತನಿಖೆ ಮಾಡಿ ತಿಳಿಸಬೇಕೆಂಬದಾಗಿ ಒಂದು ಕಮಿಟಿಯನ್ನು ನೇಮಕಮಾಡಿದ್ದಲ್ಲದೆ, ಸಂಸ್ಥಾನದ ಮುಖ್ಯ ಮುಖ್ಯವಾದ ಸ್ಥಳಗಳಲ್ಲಿ ಗವರ್ನಮೆಂಟ್ ಡಿಪೋಗಳನ್ನು ಇಡಿಸಿ ಅಸಲ್ ಖರೀದಿಗೆ ದವಸಗಳನ್ನು ಬಡವರಿಗೆ ಮಾರಾಟ ಮಾಡಬೇಕೆಂದು ಹುಕುಂ ಕೊಟ್ಟಿದಾರೆ

ದಕ್ಷಿಣ ಆಫ್ರಿಕವನ್ನೆಲ್ಲಾ ಏಕಮಾಡಿ ಒಂದೇ ಗವರ್ನಮೆಂಟು ಏರ್ಪಡಿಸಿ ಇಂಗ್ಲಿಷ್ ರಾಜ್ಯಭಾರದ ಒಂದು ಸ್ವಾಸ್ಥ್ಯವಾಗಿ ರೂಪಿಸಬೇಕೆಂದು ಕೆಲವು ಕಾಲದಿಂದ ಚರ್ಚೆಯಾಗುತ್ತಿದೆ ಒಂದು ಸಭೆಯವರು ಆ ಗವರ್ನಮೆಂಟಿನ ಏರ್ಪಾಡುಗಳನ್ನು ಕುರಿತು ಪರ್ಯಾಲೋಚನೆಯಿಂದ ಇತ್ಯರ್ಥ ಮಾಡಿಕೊಂಡಿದ್ದಾರೆ ಆದರೆ ಈ ಗವರ್ನಮೆಂಟು ಕೇಪ್ ಟೌನ್ ನಗರದಲ್ಲಿ ಇರತಕ್ಕದ್ದೋ ಅಥವಾ ಪ್ರಿಟೋರಿಯಾ ಪಟ್ಟಣದಲ್ಲಿ ಇರಬೇಕೋ ಎಂಬ ವಿಷಯ ಇನ್ನೂ ಇತ್ಯರ್ಥವಾಗ

[illegible] ನೆರಡು ಸ್ಥಳಗಳ ವಿಷಯದಲ್ಲೂ ಭಿನ್ನಾಭಿಪ್ರಾಯ ಉಂಟಾಗುವ [illegible] ಬ್ಲೂಯಂಫಾಂಟೀನ್ ಪಟ್ಟಣದಲ್ಲಿ ಗವರ್ನ್‌ಮೆಂಟನ್ನು ಇಡಬಹುದೆಂದು ಊಹಿಸಲ್ಪಟ್ಟಿದೆ.

ವಿಲಾಯತಿಯಿಂದ ಸಾಮಾನುಗಳನ್ನು ವಿ. ಪಿ. ಮೂಲಕ ಹಿಂದುಸ್ಥಾನದ ಪ್ರಜೆಗಳು ಅಂಚೆಯ ಮೇಲೆ ತರಿಸಿಕೊಳ್ಳುವಂತೆ ಆಗಬೇಕೆಂತಲೂ, ಈಗ ಸೀಮೆಯ ವರ್ತಕರು ತರಿಸುವ ಪದಾರ್ಥಗಳಿಗೆ ಬಹಳ ಹೆಚ್ಚಾದ ಲಾಭವನ್ನಿಟ್ಟು ಮಾರುತ್ತಾರೆಂತಲೂ ಕೆಲವು ಪ್ರಜೆಗಳು ವಿಲಾಯತಿಯ ಅಂಚೇ ಇಲಾಖಾ ಮಂತ್ರಿಯವರಿಗೆ ಅರಿಕೆಮಾಡಿಕೊಂಡರು. ಅದರ ಮೇಲೆ ಇಂಡಿಯಾ ಗವರ್ನ್‌ಮೆಂಟಿನವರು ಹಿಂದುಸ್ಥಾನದಲ್ಲಿ ವ್ಯಾಪಾರ ಮಾಡುವ ಇಂಗ್ಲಿಷ್ ವರ್ತಕರ ಅಭಿಪ್ರಾಯವನ್ನು ಕೇಳಿದ್ದಕ್ಕೆ ಇವರೆಲ್ಲಾ ಅಂಥಾ ಬದಲಾವಣೆಯನ್ನು ಮಾಡಬಾರದೆಂದು ಅರಿಕೆ ಮಾಡಿದರು. ಈಗ ಗವರ್ನ್‌ಮೆಂಟಿನವರು ಈ ಅಭಿಪ್ರಾಯ[illegible] ವಿಲಾಯತಿಗೂ ಹಿಂದುಸ್ಥಾನಕ್ಕೂ ವಿ. ಪಿ. ಏರ್ಪಾಡು ಮಾಡುವುದು ಸಹ ತಪ್ಪೆಂದು ಬರೆದಿರುತ್ತಾರೆ.

ಒಬ್ಬ ಬಾತ್ಮಿದಾರನು ಕಲ್ಕತ್ತೆಯ ಒಂದು ಪತ್ರಿಕೆಯಲ್ಲಿ ಬರೆದಿರುವುದೇನೆಂದರೆ —ಜರ್ಮನ್ನರು ಇಲ್ಲಿನ ವ್ಯಾಪಾರವನ್ನೆಲ್ಲಾ ತಾವೇ ಆಕ್ರಮಿಸಿಕೊಳ್ಳುವಂತೆ ಕಾಣುತ್ತದೆ. ದೀಪದಕಡ್ಡಿ ಪೆಟ್ಟಿಗೆಗಳ ಮೇಲೆ ಮೈ. ತಿಲಕರವರ ಭಾವಚಿತ್ರವನ್ನು ಹಾಕಿರುತ್ತಾರೆ. ಖುದೀರಾಮ, ಅರವಿಂದ ಘೋಸ್ ಎಂಬುವ ಭಾವಚಿತ್ರವನ್ನು ಕೈವಸ್ತ್ರಗಳ ಮೇಲೆ ಅಚ್ಚು ಮಾಡಿರುವರು. ಬಾಚಣಿಗೆ ಮೊದಲಾದ ಸಾಮಾನುಗಳ ಮೇಲೆ ಹಿಂದುಸ್ಥಾನದಲ್ಲಿ ಕ್ರೂರಕೃತ್ಯಗಳನ್ನು ನಡಿಸಿ ದೇಶಪಕ್ಷಪಾತಿಗಳೆಂದು ಭಾವಿಸಲ್ಪಟ್ಟಿರುವ ಜನರ ಚಿತ್ರಗಳನ್ನು ಹಾಕಿರುತ್ತಾರೆ. ಇಂಥಾ ಸಾಮಾನನ್ನೇ ಪ್ರಜೆಗಳೆಲ್ಲಾ ಹುಡುಕಿ ಕೊಂಡುಕೊಳ್ಳುತ್ತಿರುವರು. ಕಲ್ಕತ್ತೆಯವರು ಜರ್ಮನ್ನಲ್ಲಿರುವ ಕಾರ್ಖಾನೆಯವರಿಗೆಲ್ಲಾ ಅವರುಗಳ ಫೋಟೋ ಚಿತ್ರಗಳನ್ನು ಕಳುಹಿಸಿಕೊಟ್ಟಿರಬೇಕು. ಈ ಪದಾರ್ಥಗಳು ಕಲ್ಕತ್ತೆಯಲ್ಲಿ ಹೇರಳವಾಗಿ ಬಿಕರಿಯಾಗುತ್ತಿರುವವು ಎಂಬುದೇ.

ಕಳೆದ ೨೦ನೇ ತಾ. ಬುಧವಾರ ಕಲ್ಕತ್ತಾ ಪಟ್ಟಣದಲ್ಲಿ ವೈಸ್‌ರಾಯಿ ಅರ್ಲ್ ಮಿಂಟೋರವರು ತಮ್ಮ ಕುಮಾರ್ತೆಯಾದ ಲೇಡಿ ವೈಯೊಲೆಟ್ ಎಲಿಯಟ್ ಯವರನ್ನು ಲಾರ್ಡ್ ಲ್ಯಾನ್ಸ್‌ಡೌನ್ ರವರ ಕುಮಾರರಿಗೆ ಕೊಟ್ಟು ವಿವಾಹ ಮಾಡಿದರು. ಆಗ್ಗೆ ಆ ಪಟ್ಟಣದ ನೂರಾರು ಮಂದಿ ಯೂರೋಪ್ಯನ್, [illegible] ಮಹಮದೀಯ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಹಾಜರಾಗಿದ್ದು ವಧೂವರರಿಗೆ ಉಡಿಗೆರೆಗಳನ್ನು ಒಪ್ಪಿಸಿ ಅವರನ್ನು ಆಶೀರ್ವದಿಸಿದರು. ಲಗ್ನದ ತರುವಾಯ ನೂತನ ದಂಪತಿಗಳು ಶ್ರೇಷ್ಠವಾದ ಗಾಡಿಯಲ್ಲಿ ಕುಳಿತು, ವಿಶೇಷವಾಗಿ ಅಲಂಕರಿಸಲ್ಪಟ್ಟಿದ್ದ ಬೀದಿಗಳಲ್ಲಿ ಮೆರವಣಿಗೆ ಹೊರಟರು. ಬರ್ದ್ವಾನದ ಮಹಾರಾಜರವರು ತಮ್ಮ ಬಂಗಲೆಯ ಮುಂದೆ ಬ್ಯಾಂಡ್ ಮಾಡಿಸಿ, ವಧೂವರರಿಗೆ ಸುಸ್ವಾಗತವನ್ನು ಬಯಸಿದರು. ನೂತನ ದಂಪತಿಗಳು ಕೆಲವು ಕಾಲ ಬಾರಕ್‌ಪುರದಲ್ಲಿದ್ದು ಬರುವುದಕ್ಕಾಗಿ ಪ್ರಯಾಣ ಮಾಡಿದರು.

ಇಂಗ್ಲಿಷ್ ರಾಜ್ಯಾಂಗವಾದ ಸ್ಕಾಟ್ಲೆಂಡಿನ ಡಾಲ್ಕೀತ್ ಪಟ್ಟಣದಲ್ಲಿ ಒಬ್ಬ ಧನಿಕನು ಸ್ಕೂಲ್ ಮಕ್ಕಳಲ್ಲಿ ಮಿತವ್ಯಯ ಮಾಡಬೇಕೆಂಬ ಕುತೂಹಲವನ್ನು ಹುಟ್ಟಿಸಿ ಅಭಿವೃದ್ಧಿಗೆ ತರಬೇಕೆಂದು ೧೪೦೦ ಸ್ಕೂಲ್ ಮಕ್ಕಳ ಹೆಸರಿನಲ್ಲಿ ತಲಾ ೧ ಶಿ. ಹಣವನ್ನು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟು, ಪಾಸ್ ಬುಕ್ಕುಗಳನ್ನು ಆಯಾ ಹೆಸರಿನ ಮಕ್ಕಳಿಗೆ ಕೊಟ್ಟುಬಿಟ್ಟನು. ಇದಾಗಿ ಆತನು ಸತ್ತು ಒಂದು ವರುಷವಾಯಿತು. ಆ ಮಕ್ಕಳು ತಮ್ಮ ಹಣವನ್ನು ತಿಂಡಿಪದಾರ್ಥಗಳಿಗೆ ಖರ್ಚುಮಾಡದೆ ತಮಗೆ ಸಿಕ್ಕಿದ ದುಡ್ಡನ್ನೆಲ್ಲಾ ಪೋಸ್ಟ್ ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಾಕಿ ಆತನು ತಮಗೆ ಕೊಟ್ಟ ಮೂಲಧನವನ್ನು ಹೆಚ್ಚುಮಾಡುತ್ತಾ ಬಂದರು. ಈಗ ವರುಷಾಂತ್ಯದಲ್ಲಿ ಆ ಮಕ್ಕಳ ಹಣವೆಷ್ಟಾಯಿತೆಂದು ನೋಡುವಾಗ್ಗೆ ೮,೦೦೦ ರೂಪಾಯಿಗಿಂತಲೂ ಹೆಚ್ಚಾಗಿರುವುದು. ಈ ಏರ್ಪಾಡನ್ನು ನೋಡಿ ಬಹು ಮಂದಿ ಆತನನ್ನು ವಂದಿಸುತ್ತಾರೆ. ಆತನ ಉದ್ದೇಶವು ಸಾರ್ಥಕವಾಗಿ ಪರಿಣಮಿಸಿತೆಂದು ಸಂತೋಷಪಡಬೇಕಾಗಿದೆ.

ಪರ್ಷಿಯಾದಲ್ಲಿ ಬಹುಕಾಲದಿಂದ ಪ್ರಜಾಸಮ್ಮತಿಗೆ ಭಂಗವುಂಟಾಗಿರುವುದನ್ನು ನೋಡಿ ಇಂಗ್ಲಿಷ್ ಮತ್ತು ರಷ್ಯಾ ಗವರ್ನ್‌ಮೆಂಟುಗಳ ರಾಯಭಾರಿಗಳು ಆ ರಾಜ್ಯದ ಸುಲ್ತಾನರವರಿಗೆ ತಿಳಿಸಿರುವುದೇನೆಂದರೆ —ಪ್ರಜಾಸಮ್ಮತವಾದ ನ್ಯಾಯವಿಧಾಯಕ ಕೌನ್ಸಿಲ್ ಸಭೆಯನ್ನು ಬೇಗನೆ ಪರ್ಷಿಯಾದಲ್ಲಿ ಸ್ಥಾಪಿಸಿ ಅದನ್ನು ಕ್ರಮದಿಂದ ನಡಿಸಬೇಕು. ಇದು ಪರಮಾವಶ್ಯವಾಗಿರುತ್ತದೆ. ರಾಜ್ಯದ ಖಜಾನೆಯು ಬರಿದಾಗಿರುವುದು. ಸೈನಿಕರೇ ಮೊದಲಾದವರಿಗೆ ಸರಿಯಾಗಿ ಸಂಬಳ ಪಾವತಿ ಆಗದ ಇರೋಣದರಿಂದ ತುಂಬಾ ಅಸಮಾಧಾನ ಉಂಟಾಗಿರುವುದು. ಇದಕ್ಕಾಗಿ ಪರ್ಷಿಯಾ ರಾಜ್ಯದವರು ಇಂಗ್ಲೆಂಡ್ ಮತ್ತು ರಷ್ಯಾ ರಾಜ್ಯಗಳಲ್ಲಿ ಸಾಲ ಪಡೆಯಬಹುದು. ಇದಕ್ಕೆ ಅವರು ಸಹಾಯಮಾಡುವರು. ಇದಲ್ಲದೆ ಪರ್ಷಿಯಾ ರಾಜ್ಯದ ಜಮಾ ಖರ್ಚನ್ನು ಕಡಮೆಮಾಡಿ ಕ್ರಮಪಡಿಸುವುದಕ್ಕೆ ಪರ್ಷಿಯಾ ಸುಲ್ತಾನರವರು ಕೆಲವು ಮಂದಿ ಪರರಾಜ್ಯಗಳ ದೊಡ್ಡ ಮನುಷ್ಯರನ್ನು ಮೇಲ್ವಿಚಾರಕರನ್ನಾಗಿ ನೇಮಿಸಿಕೊಳ್ಳಬೇಕು. ಈ ರೀತಿ ಮಾಡದಿದ್ದಲ್ಲಿ ಪರ್ಷಿಯಾ ರಾಜ್ಯದೊಳಗೆ ಸ್ವದೇಶಿಗಳಿಗಾಗಲಿ ಅನ್ಯದೇಶಿಗಳಿಗಾಗಲಿ ಸುಖ ಸಂತೋಷಗಳು ಲಭಿಸಲಾರವು ಎಂಬುದೇ. ಇದನ್ನು ಪರ್ಷಿಯಾ ಸುಲ್ತಾನರವರು ಒಪ್ಪಿಕೊಂಡಿರುವಂತೆ ಕಾಣುತ್ತದೆ. ಯಾಕೆಂದರೆ ರಷ್ಯಾ ರಾಜ್ಯದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಪರ್ಷಿಯಾ ರಾಜ್ಯಭಾರದ ವಿಷಯಗಳನ್ನು ಕುರಿತು ಆಲೋಚಿಸುವುದಕ್ಕೆ ಕೆಲವು ಮುಖಂಡರು ಸಭೆ ಸೇರುವವರಾಗಿರುವರೆಂದು ತಿಳಿಯುವುದು.

ಲಕ್ನೋ ಪಟ್ಟಣದಲ್ಲಿ ಹಿಂದುಸ್ಥಾನದ ಷಿಯಾ ಮಹಮದೀಯರ ಎರಡನೇ ವಾರ್ಷಿಕ ಸಮಾಜವು ನಡೆಯಿತು. ಅಸ್ಸಾಂ, ಬಂಗಾಳಾ, ಪಂಜಾಬ್, ಸಿಂಧ್, [illegible], ಬೊಂಬಾಯಿ, ದಖನ್, ರಾಜಪುಟಾನಾ, ಸಂಯುಕ್ತ ಆಧಿಪತ್ಯಗಳು ಮೊದಲಾದ ಎಲ್ಲಾ ಪ್ರಾಂತ್ಯಗಳಿಂದಲೂ ಸುಮಾರು ೩,೦೦೦ ಷಿಯಾ ಮತೀಯ ಪ್ರತಿನಿಧಿಗಳು ಹೋಗಿ ಸೇರಿದ್ದರು. ಷಿಯಾ ಮಹಮದೀಯರ [illegible] ಪ್ರೋತ್ಸಾಹ ಕೊಟ್ಟು ಪ್ರೈಮರಿ ವಿದ್ಯೆಯನ್ನು ಕಲಿಸಿ, ವ್ಯವಸಾಯ, [illegible] ಕೈಗಾರಿಕೆಗಳಲ್ಲಿ ಅಭಿರುಚಿಯುಂಟಾಗುವಂತೆ ಮಾಡಬೇಕು ಎಂದು ತೀರ್ಮಾನಿಸಿ ಇದಕ್ಕೋಸ್ಕರ ಒಂದು ಫಂಡನ್ನು ಪ್ರಾರಂಭಿಸಿದರು. ಕೆಲವು ಪಟ್ಟಣಗಳಲ್ಲಿ ಸಕ್ಕರೆ ಕಾರ್ಖಾನೆಗಳನ್ನು ೨೨,೦೦೦ ರೂಪಾಯಿ ಮುಟ್ಟಿಸಿ ಪ್ರಾರಂಭಿಸಬೇಕೆಂತಲೂ, ಬೆಣ್ಣೆ ತುಪ್ಪಗಳ ತಯಾರಿಗೆ ೫,೦೦೦ ರೂಪಾಯಿ ಮೂಲಧನವಿಟ್ಟುಕೊಂಡು ಕಾರ್ಖಾನೆಗಳನ್ನು ನಡಿಸಬೇಕೆಂತಲೂ, ಈ ಹಣಗಳನ್ನು ಷೇರುಗಳ ಮೂಲಕ ಕೂಡಿಸಬೇಕೆಂತಲೂ, ಷಿಯಾ ಹುಡುಗರನ್ನು ಈ ಕಾರ್ಖಾನೆಗಳಲ್ಲಿ ಸೇರಿಸಿಕೊಂಡು ಆಯಾ ಕಸಬುಗಳನ್ನು ಅವರಿಗೆ ಕಲಿಸಬೇಕೆಂತಲೂ, ಪ್ರತಿ ವರುಷವೂ ಕಡೇ ಪಕ್ಷ ಒಬ್ಬ ವಿದ್ಯಾರ್ಥಿಯನ್ನು ವ್ಯವಸಾಯ ಶಾಸ್ತ್ರ ಬೋಧನಾ ವಿದ್ಯಾಶಾಲೆಗೂ, ಒಬ್ಬನನ್ನು ರೂರ್ಕೀ ಇಂಜನಿಯರ್ ಕಾಲೇಜಿಗೂ ವೇತನ ಕೊಟ್ಟು ಕಳುಹಿಸಿ ತರಪೇತು ಮಾಡಿಸುತ್ತಾ ಬರಬೇಕೆಂತಲೂ ಸಭಿಕರು ತೀರ್ಮಾನ ಮಾಡಿದರು. ಲಕ್ನೋ ಪಟ್ಟಣದಲ್ಲಿ ಮಹಮದೀಯ ಬಾಲಕರಿಗೋಸ್ಕರ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಬೇಕೆಂದು ಗೊತ್ತುಮಾಡಿ, ಅದಕ್ಕೆ ಚಂದಾ ಎತ್ತಿದಾಗ ಒಂದು ಲಕ್ಷ ರೂಪಾಯಿ ತನಕ ವಸೂಲಾಯಿತು. ಸಭೆಯಲ್ಲಿದ್ದ ಒಬ್ಬ ಬಡ ಷಿಯಾ ಮಹಮದೀಯನು ಸಭೆಯ ಉದ್ದೇಶವನ್ನು ಕೇಳಿ ಸಂತೋಷಪಟ್ಟು ಸಭಿಕರನ್ನು ಕುರಿತು—ನಾನು ತುಂಬಾ ಬಡವ. ಇಂಥಾ ಮಹಾ ಪರೋಪಕಾರವಾದ ಕಾರ್ಯಕ್ಕೆ ಸಹಾಯಮಾಡಲು ನನ್ನಲ್ಲಿರುವ ಈ ಕಾಸುಗಳನ್ನು ಕೊಡುತ್ತೇನೆ ದಯವಿಟ್ಟು ಅಂಗೀಕರಿಸಬೇಕು ಎಂಬದಾಗಿ ಬೇಡಿಕೊಂಡನು. ಆಗ ಸಭಿಕರೆಲ್ಲಾ ತುಂಬಾ ಸಂತೋಷಯುಕ್ತರಾಗಿ ಆ ಕಾಸುಗಳನ್ನು ಅಮೂಲ್ಯ ದ್ರವ್ಯವೆಂದು ಭಾವಿಸಿ, ಅದನ್ನು ಯಾರು ಬೇಕಾದರೂ ೫೦೦ ರೂಪಾಯಿ ಕೊಟ್ಟು ಕೊಂಡುಕೊಳ್ಳಿ ಎಂದು ತಿಳಿಸಿದರು. ಅದನ್ನು ಕೇಳಿ ನವಾಬ್ ಯೂಸುಫ್ ಹುಸೇನ್ ಖಾನ್ ಎಂಬೊಬ್ಬ ಬ್ಯಾರಿಸ್ಟರವರು ಆ ಕಾಸುಗಳಿಗೆ ೧,೦೦೦ ರೂಪಾಯಿ ಕೊಟ್ಟು ಕೊಂಡುಕೊಂಡರು.

ಇಂಡಿಯಾ ದೇಶದ ವೃತ್ತಾಂತಗಳು.

ಅಫ್ಘಾನಿಸ್ಥಾನದ ಅಮೀರರವರು ಸರ್ಕೀಟು ತೀರಿಸಿಕೊಂಡು, ಜಲಾಲಾಬಾದಿಗೆ ಬಂದಿದ್ದಾರೆಂದು ತಿಳಿಯುವುದು.

ಹೈದರಾಬಾದಿನಲ್ಲಿ ಪ್ರವಾಹದಿಂದಾದ ನಷ್ಟಪರಿಹಾರದ ಫಂಡಿಗೆ ಇದುವರೆಗೆ ೩,೧೮,೪೫೦ ಚಿಲರೆ ರೂಪಾಯಿ ಚಂದಾ ವಸೂಲಾಗಿದೆ.

ಬಾರಾ ನಗರದ [illegible] ಕಾರ್ಖಾನೆಯೊಳಗೆ ಒಂದು ಯಂತ್ರವು ಹಾರಿ ಕೆಲಸ ಮಾಡುತ್ತಿದ್ದ ಇಬ್ಬರು ಅಧಿಕಾರಿಗಳನ್ನು ಕೊಂದುಬಿಟ್ಟಿತು.

ಕೆರಾಚಿ ಪಟ್ಟಣದಲ್ಲಿ ಐದು ಲಕ್ಷ ರೂಪಾಯಿ ವೆಚ್ಚಿಸಿ ಕಟ್ಟಿಸಿದ ಆಸ್ಪತ್ರೆಯನ್ನು ಬೊಂಬಾಯಿ ಗವರ್ನರವರು ಹೋಗಿ ಕಳೆದ ವಾರ ಪ್ರತಿಷ್ಠೆ ಮಾಡಿ ಬಂದರು.

ತಿನ್ನವೆಲ್ಲಿ ಪಟ್ಟಣದಲ್ಲಿ ಪ್ರಜೆಗಳು ವಾಂತಿಭೇದಿ ಉಪದ್ರದ ದೆಸೆಯಿಂದ ಬಹಳ ಕಷ್ಟನಷ್ಟಗಳನ್ನನುಭವಿಸಿದರು. ಒಟ್ಟು ೭೩೭ ಜನರಿಗೆ ಈ ಉಪದ್ರ ತಗುಲಿ, ೩೭೩ ಮಂದಿ ಕಾಲವಾದರು.

ಪೂರ್ವ ಬಂಗಾಳಾ ಮತ್ತು ಅಸ್ಸಾಂ ಎಂಬ ಹೊಸ ಆಧಿಪತ್ಯದಲ್ಲಿ ಕಸಬುಗಳನ್ನು ಅಭಿವೃದ್ಧಿಗೆ ತರಬೇಕೆಂಬ ಉದ್ದೇಶಕ್ಕೆ ಫೆಬ್ರವರಿ ತಾ. ೨೫ ರಲ್ಲಿ ಒಂದು ಮಹಾ ಸಭೆಯು ನಡೆಯುವುದಾಗಿದೆ.

೧೯೦೯ ನೇ ಸಾಲಿನಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಈ ರಾಜ್ಯದಲ್ಲಿ ನೀರಾವರಿ ಕಾಮಗಾರಿಗಳ ಬಡಾವಣೆಗಾಗಿ ಎರಡೂಕಾಲು ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡುವರೆಂದು ಪ್ರಕಟವಾಗಿದೆ.

ರಂಗೂನ್ ಪಟ್ಟಣದಲ್ಲಿ ಒಬ್ಬ ಬರ್ಮೀಯ ಬ್ಯಾರಿಸ್ಟರ ಮೇಲೂ ಆತನ ಹೆಂಡತಿಯ ಮೇಲೂ ೩೭,೦೦೦ ರೂಪಾಯಿಗೆ ಮೋಸ ಮಾಡಿದರೆಂಬ ಮೊಕದ್ದಮೆ ಬಂದು ವಿಚಾರಣೆಯಾಗಿ ಕಳೆದ ವಾರ ವಜಾ ಆಯಿತು.

"ಮಾತೃಪೂಜಾ" ಎಂಬ ನಾಟಕವನ್ನು ರಾಜದ್ರೋಹಕರವಾದ ರೀತಿಯಲ್ಲಿ ಬರೆದಿರುವ ಬಾಬು ಕುಂಜಬಿಹಾರಿ ಗಂಗೂಲಿ ಎಂಬಾತನನ್ನು ದಸ್ತಗಿರಿ ಮಾಡಬೇಕೆಂದು ಮ್ಯಾಜಿಸ್ಟ್ರೇಟರು ವಾರಂಟು ಕೊಟ್ಟಿದ್ದಾರೆ.

ಬಲರಾಮಪುರದ ಲೇಟ್ ಮಹಾರಾಜರಾಗಿದ್ದ ಸರ್ ದಿಗ್ವಿಜಯಸಿಂಹರವರ ಜ್ಞಾಪಕಾರ್ಥವಾದ ಪ್ರತಿಮೆಯೊಂದನ್ನು ಲೆಫ್ಟಿನೆಂಟ್ ಗವರ್ನರವರು ಲಕ್ನೋ ಪಟ್ಟಣದ ಕೇಸರಿಬಾಗ್ ಬರಾದಾರಿ ಎಂಬ ಸ್ಥಳದಲ್ಲಿ ಪ್ರತಿಷ್ಠೆ ಮಾಡಿದರು.

ಮುಂದಿನ ಸಾಲಿನಲ್ಲಿ ಹಿಂದುಸ್ಥಾನದಲ್ಲಿ ರೈಲ್ವೆ ಬಡಾವಣೆಗೋಸ್ಕರ ಗವರ್ನ್‌ಮೆಂಟಿನವರು ಹದಿನೆಂಟೂ ಮುಕ್ಕಾಲು ಕೋಟಿ ರೂಪಾಯನ್ನು ಖರ್ಚು ಮಾಡತಕ್ಕದ್ದೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸ್ಯಾಂಕ್ಷನ್ ಮಾಡಿರುತ್ತಾರೆ.

ಕಳೆದ ೨೦ ನೇ ತಾ. ಬುಧವಾರದ ದಿನ ಅಮಾವಾಸ್ಯೆ ಮಾಘ ಮೇಲಾ ಸಮಯದಲ್ಲಿ ಅಲಹಾಬಾದಿನಲ್ಲಿ ಲಕ್ಷಾಂತರ ಹಿಂದೂ ಯಾತ್ರಾರ್ಥಿಗಳು ಸೇರಿದ್ದರು. ಕಾಶ್ಮೀರ ಮತ್ತು ಕಾಶೀ ಮಹಾರಾಜರುಗಳೂ ಕೂಡ ಹಾಜರಾಗಿದ್ದು ಗಂಗಾ ಸ್ನಾನ ಮಾಡಿದರು.

ಕಳೆದ ಡಿಸೆಂಬರ್ ತಾ. ೩೧ಕ್ಕೆ ಅಖೈರಾದ ಒಂದು ವರುಷದಲ್ಲಿ ಹಿಂದುಸ್ಥಾನದೊಳಗೆ ೧,೪೮,೭೦೦ ಪ್ರಜೆಗಳು ಪ್ಲೇಗ್ ಉಪದ್ರ ತಗಲಿ ಕಾಲವಾದರೆಂದು ತಿಳಿಯುವುದು. ೧೯೦೭ ನೇ ಇಸವಿಯಲ್ಲಿ ೧೩,೧೫,೮೯೭ ಜನರು ಈ ಉಪದ್ರದಲ್ಲಿ ಕಾಲವಾದರು.

ಆಹಾರ ಜಿನಸಿಗಳ ಧಾರಣೆಯು ಹೆಚ್ಚಾಗಿರೋಣದರಿಂದ ೩೦ ರೂಪಾಯಿಗಿಂತ ಕಡಮೆಯಾದ ಸರ್ಕಾರಿ ಸಂಬಳಗಾರರಿಗೆಲ್ಲಾ ಧಾನ್ಯದ ಅಲೋವೆನ್ಸು [illegible] ಕೊಡುತ್ತಾ ಬರಬೇಕೆಂದು ಮದರಾಸ್ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ.

ಕಳೆದ ಶುಕ್ರವಾರ ರಾತ್ರಿ ಕೂಚ್‌ಬೇಹಾರ್ ಮಹಾರಾಜರವರು ಕಲ್ಕತ್ತಾ ಕ್ಲಬ್ ಮಂದಿರದಲ್ಲಿ ವೈಸ್‌ರಾಯಿಯವರಿಗೆ ಭಾರೀ ಭೋಜನವನ್ನು ಮಾಡಿಸಿದರು. ಗ್ವಾಲಿಯರ್, ಇಂದೂರ್, ಕಪೂರ್ಥಲ, ಬರ್ದ್ವಾನ್, ಈ ಸಂಸ್ಥಾನಗಳ ಮಹಾರಾಜರುಗಳೂ ಆ ರಾತ್ರಿ ಹಾಜರಾಗಿದ್ದರು.

ಕಲ್ಕತ್ತಾ ಪಟ್ಟಣದ ಬಳಿ ತಿತ್ತಗೂರ್ ಕಾಗದದ ಕಾರ್ಖಾನೆಯಲ್ಲಿ ಗಲಭೆ ಎಬ್ಬಿಸಿದ ಮಹಮದೀಯರಲ್ಲಿ ೨೯ ಮಂದಿ ಅಪರಾಧಿಗಳನ್ನು ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ. ಈ ಮೊಕದ್ದಮೆಯನ್ನು ಬಾರಕ್‌ಪುರದ ಡೆಪ್ಯುಟಿ ಮ್ಯಾಜಿಸ್ಟ್ರೇಟರು ದರ್ಯಾಪ್ತಿ ಮಾಡುವರು.

ಬಂಗಾಳಾ ಆಧಿಪತ್ಯದ ನದಿಯಾ ಡಿಸ್ಟ್ರಿಕ್ಟಿಗೆ ಸೇರಿದ ಸಾಲಿಂಪುರಿನಲ್ಲಿ ಬಾಬು ಪ್ರಫುಲ್ಲ ಕುಮಾರ ಷಹಾ ಎಂಬೊಬ್ಬ ಡಾಕ್ಟರಿನ ಬಳಿಯಲ್ಲಿ ಎರಡು ಸಿಡಿ ಮದ್ದಿನ ಗುಂಡುಗಳು ಸಿಕ್ಕಿದ್ದರಿಂದ ಪೋಲೀಸಿನವರು ಆತನನ್ನು ದಸ್ತಗಿರಿ ಮಾಡಿ, ಆ ಗುಂಡುಗಳನ್ನು ಪರೀಕ್ಷೆ ಮಾಡಿಸುತ್ತಿದಾರೆ.

ಈ ಸಲ ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ (ರಾಷ್ಟ್ರಕೂಟದ) ಅಧ್ಯಕ್ಷರಾಗಿದ್ದ ಡಾಕ್ಟರ್ ರಾಷ್ ಬಿಹಾರಿ ಘೋಸ್ ಯವರು ಮದರಾಸ್ ಪಟ್ಟಣದ ಸಮಾಜದಲ್ಲಿ ಗೊತ್ತುಮಾಡಲ್ಪಟ್ಟ ರಾಜಕೀಯ ವಿಚಾರವಾದ ತೀರ್ಮಾನಗಳನ್ನು ಕಳೆದ ವಾರ ಇಂಡಿಯಾ ಗವರ್ನ್‌ಮೆಂಟಿನವರಿಗೆ ಒಪ್ಪಿಸಿರುತ್ತಾರೆ.

ತಿರುಪತಿ ಬೆಟ್ಟದ ಮೇಲಿರುವ ಎರಡು ದೇವಸ್ಥಾನಗಳಲ್ಲಿ ಮಹಂತರವರು ಈ ತಿಂಗಳ ಕಡೇ ದಿನ ಅಷ್ಟಬಂಧನವೆಂಬ ಕಾರ್ಯವನ್ನು ನಡಿಸುವವರಾಗಿದಾರೆ. ಭಕ್ತಾದಿಗಳು ಈ ಕಾರ್ಯದ ಖರ್ಚಿನ ಬಾಬಿಗೆ ೫೫,೦೦೦ ರೂಪಾಯಿ ಚಂದಾ ಕೂಡಿಸಿಕೊಟ್ಟು, ಬಹು ವಿಶೇಷವಾದ ಏರ್ಪಾಡುಗಳನ್ನು ಮಾಡುತ್ತಿರುವರು.

ಕಲ್ಕತ್ತಾ ಪಟ್ಟಣದಲ್ಲಿ ಲೇಟ್ ಮಹಾರಾಜ್ಞಿ ವಿಕ್ಟೋರಿಯಾ ಯವರ ಜ್ಞಾಪಕಾರ್ಥವಾಗಿ ಕಟ್ಟುವುದಕ್ಕೆ ಪ್ರಾರಂಭಿಸಿರುವ ಅಮೂಲ್ಯವಾದ ಬಂಗಲೆಯ ಅಸ್ತಿಭಾರವು ಈಗತಾನೇ ಭೂಮಿಯ ಮೇಲೆ ಏಳುವಷ್ಟು ಕಟ್ಟಲಾಗಿದೆ. ಈಗಾಗಲೇ ಅದರಲ್ಲಿ ೧೦೦ ಕಡೆ ಬಿರುಕುಗಳು ಬಿಟ್ಟಿವೆ ಎಂದು ತಿಳಿದುಬಂದಿದೆ.

ಹಿಂದುಸ್ಥಾನದ ವಾಯವ್ಯ ಸರಹದ್ದಿನ ಬಳಿ ಇರುವ ಮಾಸೂದ್ ಎಂಬ ಗುಂಪಿನ ಮಹಮದೀಯರು ಇಂಡಿಯಾ ಗವರ್ನ್‌ಮೆಂಟಿನವರ ಮೇಲೆ ತಮಗಿರುವ ಪ್ರೀತಿ ಸ್ನೇಹ ಗೌರವಾದಿಗಳನ್ನು ಪ್ರಕಾಶಪಡಿಸುವುದಕ್ಕಾಗಿ ತಮ್ಮ ಜನರ ಬಳಿಯಲ್ಲಿ ಸಿಕ್ಕಿದ ಅರವತ್ತು ಬಂದೂಕುಗಳನ್ನು ಕೂಡಿಸಿ ತಂದು ಇಂಗ್ಲಿಷ್ ಅಧಿಕಾರಿಗಳಿಗೆ ಒಪ್ಪಿಸಿರುತ್ತಾರೆ.

ಕಲ್ಕತ್ತೆಯ ಬಳಿ ಹೌರಾ ಪಟ್ಟಣದಲ್ಲಿ ಸುಲಭ ಹಿತೈಷಿ ಎಂಬ ಪ್ರೆಸ್ಸಿನಲ್ಲಿ "ಸೋನಾರ್ ಭಾರತ" ಎಂಬ ಪತ್ರಿಕೆಯು ಅಚ್ಚಾಗಿ ಪ್ರಕಟವಾಗುತ್ತಿತ್ತು. ಈ ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಾರ್ತೆ ಪ್ರಕಟವಾಯಿತೆಂಬುದರ ಮೇಲೆ ಆ ಪ್ರೆಸ್ ಆಫೀಸನ್ನು ಜಪ್ತಿ ಮಾಡಬೇಕೆಂದು ಅಲ್ಲಿನ ಮ್ಯಾಜಿಸ್ಟ್ರೇಟರು ಹುಕುಂ ಕೊಟ್ಟಿದಾರೆ.

ಕಲ್ಕತ್ತೆಯ ಬಳಿ ೩ ಮಂದಿ ಬಂಗಾಳಿಗಳೂ ಒಬ್ಬ ಮಹಮದೀಯನೂ (ಇವರೆಲ್ಲಾ ೧೫ ವರುಷದೊಳಗಿರುವ ಹುಡುಗರು) ಕ್ರೀಕ್ ರೋ ಎಂಬ ಬೀದಿಯಲ್ಲಿ ಸೈನಿಕರು ಹೋಗುತ್ತಿರುವಾಗ ಅವರ ಮೇಲೆ ಕಲ್ಲೆಸೆದರೆಂದು ದಸ್ತಗಿರಿ ಮಾಡಲ್ಪಟ್ಟರು. ಮ್ಯಾಜಿಸ್ಟ್ರೇಟರು ಆ ನಾಲ್ವರು ಹುಡುಗರಿಗೂ ತಲಾ ೫೦ ರೂಪಾಯಿಯಂತೆ ಜುಲ್ಮಾನೆ ವಿಧಿಸಿರುತ್ತಾರೆ.

ಕಲ್ಕತ್ತಾ ಪಟ್ಟಣದಲ್ಲಿ ಲಲಿತ ಕುಮಾರ ಗಂಗೂಲಿ ಎಂಬೊಬ್ಬ ಸನ್ಯಾಸಿಯು ಪೋಲೀಸಿನವರಿಂದ ದಸ್ತಗಿರಿ ಮಾಡಲ್ಪಟ್ಟನು. ಶಾಮ್ ಸಬ್ ಇನ್ಸ್ಪೆಕ್ಟರ್ ಬ್ಯಾನರ್ಜಿಯನ್ನು ಕೊಂದವನೆಂದು ಈ ಸನ್ಯಾಸಿಯು ಒಪ್ಪಿಕೊಂಡು ವಾಙ್ಮೂಲವನ್ನು ಬರೆಸಿರುತ್ತಾನೆ. ಆದರೆ ತನಗೆ ಪಿಸ್ತೂಲು ಎಲ್ಲಿ ದೊರಕಿತೋ ಯಾರು ಕೊಟ್ಟರೋ ಇದನ್ನು ಮಾತ್ರ ಅವನು ಹೇಳಿಲ್ಲ.

ಪಾಟ್ನಾ ನಗರದಲ್ಲಿ ನಾಲ್ಕು ಜನರು ಸೇರಿ ಕೊಲೆಯನ್ನು ಮಾಡಿದರೆಂದು ಸೆಷನ್ಸ್ ಜಡ್ಜರು ಆ ನಾಲ್ವರನ್ನೂ ದರ್ಯಾಪ್ತಿ ಮಾಡಿ, ಅವರಿಗೆ ತಲಾ ಹತ್ತು ವರುಷ ಬಂಕೋಲ್ ಶಿಕ್ಷೆಯನ್ನು ವಿಧಿಸಿದರು. ಈ ಮೊಕದ್ದಮೆಯನ್ನು ವಿಚಾರಣೆ ಮಾಡುವಾಗ್ಗೆ ಸೆಷನ್ಸ್ ಜಡ್ಜರು ಕ್ರಮವನ್ನು ತಪ್ಪಿದರೆಂದು ಅಪರಾಧಿಗಳು ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡರು. ಹೈ ಕೋರ್ಟ್ ಜಡ್ಜಿಗಳಿಬ್ಬರು ಈ ಮೊಕದ್ದಮೆಯ ಕಟ್ಟನ್ನು ಪರಾಂಬರಿಸಿ, ಆ ಮೊಕದ್ದಮೆ ಮತ್ತೆ ದರ್ಯಾಪ್ತಿ ಆಗಲೆಂದು ಹುಕುಂ ಕೊಟ್ಟಿದಾರೆ.

ಮನ್ನಾರುಗುಡಿಯಲ್ಲಿ ಗೋವಿಂದಸ್ವಾಮಿಪಿಳ್ಳೆ, ವೀರಾಸ್ವಾಮಿರಾಜು ಎಂಬ ಇಬ್ಬರು ಪೋಲೀಸಿನವರು ಆನಂದರಾಯನೆಂಬವನನ್ನು ಹಿಡಿದು ಲಾಕಪ್ಪಿನಲ್ಲಿಟ್ಟುಕೊಂಡು ಬಹಳವಾಗಿ ಹೊಡೆದು ಪ್ರಾಣಹೋಗುವಂತೆ ಮಾಡಿ, ಗಾಡಿಯಲ್ಲಿ ಮಲಗಿಸಿ ಅವನ ಸಹೋದರಿಯ ಮನೆಗೆ ಕರೆದುಕೊಂಡುಹೋಗಿ ಬಿಟ್ಟರು. ತರುವಾಯ ಅವನನ್ನು ಅಲ್ಲಿಂದ ಆಸ್ಪತ್ರೆಗೆ ಸಾಗಿಸಿದರು. ಅವನು ಅಲ್ಲಿ ಮೃತಪಟ್ಟನು. ಈಗ ಆ ಇಬ್ಬರು ಪೋಲೀಸಿನವರನ್ನೂ ತನಿಖೆಮಾಡಿ, ತಂಜಾವೂರು ಸೆಷನ್ ಕೋರ್ಟಿನಲ್ಲಿ ವಿಚಾರಣೆಯಾಗಬೇಕೆಂದು ತೀರ್ಮಾನವಾಗಿರುವದು.

ಕಳೆದ ಶನಿವಾರ ಬೊಂಬಾಯಿ ಪಟ್ಟಣದಲ್ಲಿ ಆ ಪ್ರಾಂತ್ಯದ ದೇಶವತ್ಸಲರ ಸಂಘದ ಮೆಂಬರುಗಳು ಒಂದು ಸಭೆಯನ್ನು ನಡಿಸಿ, ಗವರ್ನ್‌ಮೆಂಟಿನವರು ದೇಶವತ್ಸಲರಾದ ಪ್ರಜಾ ಮುಖಂಡರನ್ನು ದರ್ಯಾಪ್ತಿಯಿಲ್ಲದೆ ಗಡೀಪಾರು ಮಾಡಿದ್ದು ಹಿತಕರವಲ್ಲವೆಂತಲೂ, ನಾಗಪುರದಲ್ಲಿ [illegible] ಕಾಂಗ್ರೆಸ್ ಮಹಾ ಸಭೆಯನ್ನು ನಡಿಸಕೂಡದೆಂದು [illegible]

ಅಭಿವೇಶವಾದ ಕಾರ್ಯಗಳೆಂದಲೂ ತೀರ್ಮಾನ ಮಾಡಿದರು ಈ ಸಭೆಯಲ್ಲಿ ರಾವ್ ಬಹದೂರ್ ಸಿ ವಿ ವೈದ್ಯರವರು ಅಗ್ರಸ್ಥಾನವನ್ನು ವಹಿಸಿದ್ದರು

ಪೂನಾ ಪಟ್ಟಣದಲ್ಲಿ ಆಗಾಖಾನ್‌ರವರ ಮನೆಯ ಮುಂದೆ ಬಿದ್ದಿದ್ದ ಒಂದು ಸಿಡಿಮದ್ದಿನ ಗುಂಡನ್ನು ತೆಂಗಿನಕಾಯಿ ಎಂದು ಭಾವಿಸಿ ತೆಗೆದುಕೊಂಡು ಒಡೆದ ಮನುಷ್ಯನಿಗೆ ಅದು ಹತ್ತಿಕೊಂಡು ಕೈ ಮುಖ ಮುಂತಾದ ಭಾಗಗಳನ್ನು ಸುಟ್ಟು ಗಾಯವಾಗಿದೆಯೆಂದೂ, ಅವನು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆಂದೂ, ಆ ಸಿಡಿಮದ್ದಿನ ಗುಂಡು ಅಲ್ಲಿಟ್ಟವರ್ಯಾರೆಂದು ಸರ್ಕಾರದವರು ತಲಾಸು ಮಾಡುತ್ತಿದ್ದಾರೆಂದೂ ತಿಳಿಸಿದೆವಷ್ಟೆ ಈಚೆಗೆ ಪತ್ತೆ ತರಮೊದು ನಡಿಸಿದ್ದರಲ್ಲಿ ಮೊಳೆ ಚೂರು ಮೊದಲಾದವುಗಳೇನೂ ಇರಲಿಲ್ಲನೆಂದೂ, ಅದು ಒಂದು ಬಾಣವಾಗಿತ್ತೆಂದೂ ತಿಳಿದು ಬಂದಿದೆ

ಪಂಜಾಬ್ ಅಧಿಪತ್ಯದ ಕಳೆದ ವರುಷದ ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು ಪ್ರಕಟವಾಗಿದೆ ಆರು ವರುಷಗಳ ಕೆಳಗೆ ಸ್ಕೂಲುಗಳಿಗೆ ಹೋಗುತ್ತಿದ್ದ ಬಾಲಕರ ಸಂಖ್ಯೆ ೨,೨೦,೦೦೦ ಇದ್ದದ್ದು ಕಳೆದ ವರುಷ ೩,೯೩,೦೦೦ಕ್ಕೆ ಹೆಚ್ಚಿರುತ್ತದೆ ಸ್ತ್ರೀ ವಿದ್ಯಾಭ್ಯಾಸವೂ ತುಂಬಾ ಅಭಿವೃದ್ಧಿ ಹೊಂದುತ್ತಿರುವುದು ಆರು ವರುಷಗಳ ಹಿಂದೆ ೩೭,೧೦೦ ಬಾಲಕಿಯರು ಪಾಠಶಾಲೆಗಳಲ್ಲಿ ಓದು ಕಲಿಯುತ್ತಿದ್ದರು ಕಳೆದ ವರುಷ ಅವರ ಸಂಖ್ಯೆಯು ೩೬,೧೦೦ಕ್ಕೆ ಹೆಚ್ಚಿರುತ್ತದೆ ವಿದ್ಯಾಭ್ಯಾಸದ ಇಲಾಖೆಯು ಖರ್ಚು ಸಹಿತ ೫೬ ಲಕ್ಷವಾಗಿದೆ ಮೊದಲು ೩೭ ಲಕ್ಷ ರೂಪಾಯಿ ಮಾತ್ರ ಖರ್ಚಾಗುತಿತ್ತು

ಕಳೆದ ತಾ ೧೭ನೇ ಶನಿವಾರ ಮದರಾಸ್ ಪಟ್ಟಣದಲ್ಲಿ ಶ್ರೀರಾಮಕೃಷ್ಣ ಪರಮಹಂಸರವರ ಮಠದಲ್ಲಿ ಲೇಟ್ ವಿವೇಕಾನಂದಸ್ವಾಮಿಯವರ ಜನ್ಮದಿನವನ್ನು ಸಂಭ್ರಮವಾಗಿ ನೆರವೇರಿಸಿದರು ಸ್ವಾಮಿ ಬ್ರಹ್ಮಾನಂದರವರೂ ಸ್ವಾಮಿ ರಾಮಕೃಷ್ಣಾನಂದರವರೂ, ಕೆಲವು ಸನ್ಯಾಸಿಗಳೂ ಮುಂದಾಳುಗಳಾಗಿ ನಿಂತು ಎಲ್ಲಾ ಕೆಲಸಗಳನ್ನೂ ನಡಿಸಿದರು ಮೆ। ಗಳಾದ ರಾಮಾನುಜ ಐಯಂಗಾರ್ರು, ರಾಮಸ್ವಾಮಿ ಐಯಂಗಾರ್ರು ನಿಂತು ಆ ದಿನ ಸುಮಾರು ೪,೦೦೦ ಬಡಬಗ್ಗರಿಗೆ ಸುಭೋಜನವನ್ನು ಮಾಡಿಸಿದರು ಈ ಭೋಜನದ ಮತ್ತು ಇತರ ಕಾರ್ಯಗಳ ಖರ್ಚನ್ನೆಲ್ಲಾ ಮದರಾಸಿನ ಕೆಲವು ದೊಡ್ಡ ಮನುಷ್ಯರು ವಹಿಸಿಕೊಂಡು ಮಾಡಿದರು ಕಡೆಯಲ್ಲಿ ಒಂದು ಸಭೆ ಸೇರಿ ನಾಲ್ಕಾರು ಮಂದಿ ದೊಡ್ಡ ಮನುಷ್ಯರೂ ಸ್ವಾಮಿಗಳೂ ವಿವೇಕಾನಂದಸ್ವಾಮಿಯವರ ಜೀವಚರಿತ್ರೆಯನ್ನು ಉಪನ್ಯಾಸವಾಗಿ ವಿವರಿಸಿದರು ಸ್ವಾಮಿ ರಾಮಕೃಷ್ಣಾನಂದರವರು ದೇವರ ಸ್ತೋತ್ರವನ್ನು ಮಾಡಿ, ಸಭಿಕರಿಗೆಲ್ಲಾ ಪ್ರಸಾದವನ್ನು ಹಂಚಿದ ತರುವಾಯ ಸಕಲರೂ ತೆರಳಿದರು

ತಿರುವಾಂಕೂರು (ಅನಂತಶಯನ) ಸಂಸ್ಥಾನದ ರಾಜಧಾನಿಯಲ್ಲಿ ಕಳೆದ ವರುಷ ಜೂನ್ ೮ನೇ ತಾರೀಖಿನ ದಿನ ವರ್ತಕರಿಗೂ ಪೋಲೀಸಿನವರಿಗೂ ಮಾರಾಮಾರಿ ನಡೆದು, ವರ್ತಕರು ಪೊಲೀಸ್ ಸ್ಟೇಷನ್‌ಗೆ ಬೆಂಕಿ ಹಾಕಿ ಸುಟ್ಟದ್ದಲ್ಲದೆ ಅರಮನೆಗೆ ಹೋಗಿ ಗಲಭೆ ಎಬ್ಬಿಸಬೇಕೆಂದು ಪ್ರಯತ್ನಪಟ್ಟರು ಈ ಮೊಕದ್ದಮೆಯಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರು ೨೭ ಮಂದಿ ವರ್ತಕರೇ ಮೊದಲಾದವರನ್ನು ಎರಡು ತಿಂಗಳ ವರೆಗೆ ವಿಚಾರಣೆ ಮಾಡಿ ೬೯ ಜನ ಅಪರಾಧಿಗಳನ್ನು ಸೆಷನ್ ವಿಚಾರಣೆಗೆ ಗುರಿ ಮಾಡಿದರು ಸೆಷನ್ಸ್ ಜಡ್ಜರು ಕಳೆದ ಮೂರು ತಿಂಗಳಿಂದಲೂ ಈ ಮೊಕದ್ದಮೆಯನ್ನು ವಿಚಾರಿಸಿ ಮಾಡಿ ಕಳೆದ ವಾರ ಜಡ್ಜ್‌ಮೆಂಟು ಹೇಳಿದರು ಆ ದಿನ ಕೋರ್ಟಿನೊಳಗೂ ಹೊರಗೂ ಜನರು ತುಂಬಿ ತುಳುಕುವಂತೆ ನಿಂತಿದ್ದರು ಸೆಷನ್ಸ್ ಜಡ್ಜರವರು ಎರಡು ದಿನಗಳು ಓದಿದರೂ ಮುಗಿಯಲಾರದಷ್ಟು ವಿಸ್ತಾರವಾದ ಜಡ್ಜ್‌ಮೆಂಟನ್ನು ಬರೆದು ತಂದು, ಅದರಲ್ಲಿ ಮುಖ್ಯವಾದ ಭಾಗಗಳನ್ನು ಮಾತ್ರ ಕೋರ್ಟಿನಲ್ಲಿ ಓದಿ ಹೇಳಿದರು ಅಪರಾಧಿಗಳಲ್ಲಿ ೩೪ ಮಂದಿ ಮಹಮ್ಮದೀಯರು ೧೬ ಜನ ಬ್ರಾಹ್ಮಣರು ೧೮ ಮಂದಿ ಇತರ ಜಾತಿಯ ಹಿಂದುಗಳು ೬೯ ಮಂದಿ ಅಪರಾಧಿಗಳಲ್ಲಿ ೭ ಜನರನ್ನು ಬಿಡುಗಡೆ ಮಾಡಿದರು ತಿನ್ನವೆಲ್ಲಿಯ ಭಾರೀ ವರ್ತಕನಾದ ಸ್ವಾಮಿನಾಥ ಪಿಳ್ಳೆಗೂ ಹುಂಡೀ ವರ್ತಕ ಕೃಷ್ಣ ಐಯಂಗಾರಿಗೂ, ಇನ್ನೊಬ್ಬ ವರ್ತಕರಿಗೂ ತಲಾ ಮೂರು ವರುಷ ಕಠಿಣ ಸಜಾವನ್ನೂ ೧,೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು ಎಸ್ ಪದ್ಮನಾಭ ಐಯಂಗಾರ್ ಬಿ ಎ ಎಂಬಾತನಿಗೆ ಮೂರು ವರುಷ ಕಠಿಣಸಜಾ ಆಯಿತು ಪಾಲಿಯಾ ಇಬ್ರಾಯಿ ಎಂಬ ಮಹಮ್ಮದೀಯ ವರ್ತಕನಿಗೆ ಐದು ವರುಷವೂ, ೧೭ ಮಂದಿ ಅಪರಾಧಿಗಳಿಗೆ ತಲಾ ಎರಡೂವರೆ ವರುಷದಂತೆಯೂ, ೩೫ ಜನರಿಗೆ ತಲಾ ಎರಡು ವರುಷದಂತೆಯೂ ಕಠಿಣ ಸಜಾ ವಿಧಿಸಲಾಯಿತು ಆರು ಮಂದಿ ಹುಡುಗರನ್ನು ೩ರಿಂದ ೫ ವರುಷಗಳ ತನಕ ಶಿಕ್ಷಣಾಲಯದಲ್ಲಿಟ್ಟಿರಬೇಕೆಂದು ವಿಧಿಸಿದರು ಇದಲ್ಲದೆ ಫಿರ್ಯಾದಿ ತರಫು ಸಾಕ್ಷಿ ಹೇಳಿದವರ ಪೈಕಿ ಮೂರು ಜನ ಸುಳ್ಳು ಹೇಳಿರುತ್ತಾರಾದಕಾರಣ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಮಾಡಬೇಕೆಂದು ಜಡ್ಜ್‌ಮೆಂಟಿನಲ್ಲಿ ಆಣತಿಸಿರುತ್ತಾರೆ

ಮೈಸೂರು ಸರ್ಕಾರಿ ಹುಕುಮು

ರೆವಿನ್ಯೂ ಕಮಿಷನರ್‌ರವರ ಅಧಿಕಾರವು.

ಈ ಸಂಸ್ಥಾನದಲ್ಲಿ ನಡಿಸುವ ಗ್ರಾಮನಿವಾರಣೆಯ ಏರ್ಪಾಡಿನ ಮೇಲೆಲ್ಲಾ ಮುಖ್ಯವಾದ ಮೇಲ್ವಿಚಾರಣೆಯ ಅಧಿಕಾರವನ್ನು ರೆವಿನ್ಯೂ ಕಮಿಷನ್‌ರವರಿಗೆ ಕೊಡಲು, ಅವರು ತಮಗೆ ಮೊದಲಿದ್ದ ಕೆಲಸವೇ ಭಾರಿಯಾಗಿತ್ತೆಂತಲೂ ಅವರ ಜತೆಗೆ ಈಗ ಈ ಕೆಲಸವನ್ನು ಹೊಸದಾಗಿ ಕೊಟ್ಟಿರುವುದರಿಂದ, ಅವರ ಕೆಲಸವು ಬಹಳ ಮಟ್ಟಿಗೆ ಹೆಚ್ಚಾಗಿರುವ ಪ್ರಯುಕ್ತ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಕೆಲಸಗಳ ಪೈಕಿ ಕೆಲವು ಭಾಗವನ್ನು ಅವರಿಗೆ ತಪ್ಪಿಸಬೇಕೆಂತಲೂ ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ

೧ ಡೆಪ್ಯುಟಿ ಕಮಿಷನರ ಹುಕುಮಿನ ಮೇಲೆ ಬರುವ ರೆವಿನ್ಯೂ ಅಪ್ಪೀಲುಗಳ ಪೈಕಿ ಸರ್ಕಾರದವರು ಕಳುಹಿಸಬೇಕೆಂದು ಹುಕುಂ ಮಾಡುವಂಥಾ ಅಪೀಲುಗಳನ್ನು ರೆವಿನ್ಯೂ ಕಮಿಷನರ ಫೈಲಿನಿಂದ ಆಗಿಂದಾಗ ವರ್ಗಾಯಿಸಲ್ಪಟ್ಟು, ಕೌನ್ಸಿಲ್ ಕಮಿಟಿಯವರಿಂದ ಫೈಸಲಾಗತಕ್ಕದ್ದು ಲ್ಯಾಂಡ್ ರೆವಿನ್ಯೂ ಕೋಡಿಗೆ ಹೊಸದಾಗಿ ಸೇರಬೇಕೆಂದು ಸಲಹೆಯಾಗಿರುವ ೨೧೦ ಎ ಪ್ರಕರಣದ ಮೇರೆಗೆ ಅವಶ್ಯವಾದ ಅಧಿಕಾರಗಳನ್ನು ಸರ್ಕಾರದವರು ಉಳಿಕೊಂಡಿರುತ್ತಾರೆ

೨ ದಸರಾ ಕಾಲದಲ್ಲಿ ನಡಸುವ ಕೈಗಾರಿಗೆ ಮತ್ತು ವ್ಯವಸಾಯ ಪ್ರದರ್ಶನದ ಕೆಲಸವು ರೆವಿನ್ಯೂ ಕಮಿಷನರವರಿಗೆ ನ್ಯಾಯವಾಗಿ ಸೇರತಕ್ಕದ್ದಲ್ಲವೆಂತಲೂ, ಇದನ್ನು ಅವರಿಗೆ ವಹಿಸಿರುವುದರಿಂದ ಅವರು ನ್ಯಾಯವಾಗಿ ಮಾಡಬೇಕಾದ ಕೆಲಸಗಳಿಗೆ ತೊಂದರೆ ಉಂಟಾಗಿರುವುದೆಂತಲೂ ಕೆಲವು ದಿವಸಗಳಿಂದ ಸರ್ಕಾರದವರಿಗೆ ತಿಳಿಯಬಂದಿರುತ್ತದೆ ಆದಕಾರಣ ಈ ಕೆಲಸವನ್ನು ರೆವಿನ್ಯೂ ಕಮಿಷನರವರಿಂದ ತಪ್ಪಿಸಬೇಕೆಂತಲೂ ಪ್ರದರ್ಶನಕ್ಕೆ ಸಂಬಂಧಪಟ್ಟ ಏರ್ಪಾಡುಗಳನ್ನು ಇನ್ನು ಮುಂದೆ ಸರ್ಕಾರಿ ತೋಟಗಳ ಸೂಪರಿಂಟೆಂಡೆಂಟ್ ಮಿ ಕ್ರಂಬೀಗಲ್‌ರವರಿಗೆ ವಹಿಸಿ ಅವರನ್ನು ಪ್ರದರ್ಶನದ ಕಮಿಟಿಯ ಪ್ರೆಸಿಡೆಂಟರನ್ನಾಗಿಯೂ, ಮೈಸೂರಿನ ಕೈಗಾರಿಕೆ ಪಾಠಶಾಲೆಯ ಸೂಪರಿಂಟೆಂಡೆಂಟ್ ಮಿ ಸುಬ್ಬಸಾಮಿ ಐಯರನ್ನು ಸೆಕ್ರೆಟರಿಯವರನ್ನಾಗಿಯೂ ಮಾಡಬೇಕೆಂತ ಸರ್ಕಾರದವರು ನಿರ್ಣಯಿಸಿರುತ್ತಾರೆ

೩ ವ್ಯವಸಾಯ ಬ್ಯಾಂಕುಗಳ ಮತ್ತು ಅನ್ಯೋನ್ಯ ಸಹಾಯಕ ಸಂಘಗಳ ಮೇಲ್ವಿಚಾರಣೆ ಮತ್ತು ತನಿಖೆಯ ಕೆಲಸಗಳನ್ನು ರೆವಿನ್ಯೂ ಕಮಿಷನವರಿಂದ ಖಾಯಮಾಗಿ ತಪ್ಪಿಸಿದೆ ವ್ಯವಸಾಯದ ಬ್ಯಾಂಕುಗಳ ಇನ್‌ಸ್ಪೆಕ್ಟರೂ ಮತ್ತು ಅನ್ಯೋನ್ಯ ಸಹಾಯಕ ಸಂಘಗಳ ರಿಜಿಸ್ಟ್ರಾರ್ರೂ ಸಹ ಸರ್ಕಾರದವರ ಖುದ್ದು ತಾಬೆಯಲ್ಲಿರತಕ್ಕದ್ದು

ಈ ಕೆಲಸಗಳಲ್ಲದೆ ರೆವಿನ್ಯೂ ಕಮಿಷನರವರಿಗೆ ಇರುವ ಬಾಕಿ ಕೆಲಸಗಳಲ್ಲಿಯೂ ಬಹಳ ಮಟ್ಟಿಗೆ ಕೆಲಸವನ್ನು ಕಡಿಮೆಮಾಡಬೇಕೆಂಬ ಉದ್ದೇಶದಿಂದ, ಈಗ ಅವರ ಸಹಾಯಕ್ಕಾಗಿ ಕೊಟ್ಟಿರುವ ಇಬ್ಬರು ಅಸಿಸ್ಟೆಂಟ್ ಕಮಿಷನರಲ್ಲದೆ ಮತ್ತೊಬ್ಬ ಅ। ಕಮಿಷನ್‌ರನ್ನು ಈ ಕ್ಷಾಮಕಾಲವು ಕಳೆಯುವವರೆಗೆ ಅವರ ಸಹಾಯಕ್ಕಾಗಿ ಕೊಡಲಾಗುವುದು

ತಂತೀ ವರ್ತಮಾನಗಳು.

ಹಿಂದುಸ್ಥಾನದ ವರ್ತಮಾನಗಳು

ಸರಹದ್ದಿನ ಆಚೆ ಅಫ್ರಿದಿಗಳ ದುಷ್ಕೃತವು

ಜನವರಿ ತಾ ೨೩ನೇ ಶನಿವಾರ — ಮುಲ್ಲಾ ಶಕ್ ಆಫ್ರಿದಿ ದಂಗೇಕೋರರ ಗುಂಪನ್ನೂ ಅವರ ಮುಖಂಡನನ್ನೂ ಇಂಗ್ಲಿಷ್ ಸೈನಿಕರು ಈ ದಿನ ಸುತ್ತಿಕೊಂಡು, ಇಬ್ಬರನ್ನು ಕೊಂದು ಆರು ಮಂದಿಯನ್ನು ಕೈಸೆರೆ ಹಿಡಿದದ್ದಾಯಿತು ಎಂತಲೂ, ಇಂಗ್ಲಿಷ್ ಸೈನಿಕರಲ್ಲಿ ಕೆಲವರಿಗೆ ಗಾಯಗಳಾದವೆಂತಲೂ ವಾಯವ್ಯ ಸರಹದ್ದಿನ ಪ್ರಾಂತ್ಯದ ಚೀಫ್ ಕಮಿಷನರ್‌ರವರು ತಂತೀವರ್ತಮಾನ ಕೊಟ್ಟಿದ್ದಾರೆ

ಇಂಗ್ಲಿಷ್ ಸೈನ್ಯದಲ್ಲಿ ಆದ ನಷ್ಟ

ಹೊಸ ವರ್ತಮಾನ — ಮುಲ್ಲಾ ಶಕ್ ಎಂಬ ಮುಖಂಡನು ತನ್ನ ಜನರನ್ನು ನಡಿಸಿಕೊಂಡು ಬಂದನು ಇಂಗ್ಲಿಷ್ ಸೈನಿಕರು ಅವರನ್ನು ಮುತ್ತಿಕೊಂಡು ಯುದ್ಧಮಾಡಿದ್ದರಲ್ಲಿ ಸೈನಿಕರಲ್ಲಿ ಮೂರು ಮಂದಿ ಕೊಲಲ್ಪಟ್ಟರು ಐದು ಮಂದಿಗೆ ಗಾಯಗಳಾದವು

ಈ ಕದನದ ವಿವರಗಳು

ಜನವರಿ ತಾ ೨೪ನೇ ಭಾನುವಾರ — ತಾ ೨೩ರಲ್ಲಿ ಮುಲ್ಲಾ ಶಕ್ ಎಂಬ ಮುಖಂಡನು ತನ್ನ ಹಿಂಬಾಲಕರೊಡನೆ ಪೆಷಾವರಿನಿಂದ ಸ್ವಲ್ಪ ದೂರದಲ್ಲಿ ಬಿಡಾರ ಹೂಡಿದ್ದಾನೆಂತಲೂ, ಪೆಷಾವರ್ ಪಟ್ಟಣವನ್ನು ನುಗ್ಗಿ ಲೂಟಿ ಮಾಡಬೇಕೆಂದಿರುತ್ತಾನೆಂತಲೂ ತಿಳಿದುಬಂದಿತು ಕೂಡಲೇ ಸನ್ನಾಹ ಮಾಡಿಕೊಂಡು ಬಡಾಬೇರ ಎಂಬ ಗ್ರಾಮದ ಬಳಿ ಆ ಗುಂಪಿನವರನ್ನು ಸುತ್ತಿಕೊಂಡು ಯುದ್ಧ ಪ್ರಾರಂಭಿಸಲಾಯಿತು ಯುದ್ಧದಲ್ಲಿ ಆ ಗುಂಪಿನವರ ಪೈಕಿ ಹಲವರು ಗುಂಡೇಟಿನಿಂದ ಕೊಲೆಯಾದರು ಉಳಿದವರು ಬಂದು ಶರಣಾಗತರಾದರು ಆ ಕೊಲಲ್ಪಟ್ಟವರಲ್ಲಿ ಆ ಗುಂಪಿನ ಮುಖಂಡನಾಗಿದ್ದ ಮುಲ್ಲಾ ಶಕ್ ಎಂಬವನೂ ಒಬ್ಬನೆಂದು ತಿಳಿಯುವುದು

ಮಹಮ್ಮದರ ದರ್ಬಾರು

ಅಮೃತಸರ ಜಲಂಧರದಲ್ಲಿರುವ ಮಹಮ್ಮದರ ಮುಖಂಡರು ಮಿಂಟೋಲಾಟ್‌ನ್ನು ಕರೆಸಿಕೊಂಡು ಒಂದು ದೊಡ್ಡ ದರ್ಬಾರನ್ನು ನಡಿಸುವವರಾಗಿದ್ದಾರೆ

ರಾಜದ್ರೋಹಕರವಾದ ಕವನವು

ಜನವರಿ, ತಾ ೨೫ನೇ ಸೋಮವಾರ — ರಾಜದ್ರೋಹಕರವಾದ ಒಂದು ಕವನವನ್ನು ಮಾಡಿ ಪ್ರಕಟಿಸಿದ್ದಕ್ಕಾಗಿ ಢಕ್ಕಾ ನಗರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಹೇಮಚಂದ್ರಸೇನಗುಪ್ತ ಎಂಬಾತನಿಂದ ೫,೦೦೦ ರೂಪಾಯಿನ ಸ್ವಂತ ಜಾಮೀನು ಮುಚ್ಚಳಿಕೆಯನ್ನೂ ೨,೫೦೦ ರೂಪಾಯಿ ಬಾಬತು ಎರಡು ಜಾಮೀನುಗಳನ್ನೂ ತೆಗೆದುಕೊಂಡು ಬಿಟ್ಟಿದ್ದಾರೆ

ಒಮರಾದಲ್ಲಿ ರೈಲ್ವೆ ಅನಾಹುತವು

ಜನವರಿ, ತಾ ೨೪ನೇ ಭಾನುವಾರ — ಹಿಸಾರ ಎಂಬ ಡಿಸ್ಟ್ರಿಕ್ಟಿಗೆ ಸೇರಿದ ಬಾರ್ಡ್ ಗಣಿಗಳ ಕಡೆಯಿಂದ ಒಂದು ರೈಲ್ ಗಾಡಿಯು ವೇಗವಾಗಿ ಬರುತ್ತಾ ಹಾರಿ ಒಂದು ಕಣಿವೆಯೊಳಕ್ಕೆ ಮಗುಚಿಕೊಂಡಿತು ಅದರಲ್ಲಿದ್ದ ನಾಲ್ವರು ಮೃತಪಟ್ಟರು, ಕೆಲವರಿಗೆ ಗಾಯಗಳಾಗಿವೆ ಈ ಗಾಡಿಯಲ್ಲಿ ಲೋಹಗಳ ತುಕ್ಕು ಬಹಳವಾಗಿ ಭರ್ತಿಯಾಗಿತ್ತು

ವಿದೇಶ ವಾರ್ತೆಗಳು

ಪರ್ಷಿಯಾ ರಾಜ್ಯದಲ್ಲಿ ಅನಾಯಕತ್ವವು.

ಜನವರಿ, ತಾ ೨೩ನೇ ಶನಿವಾರ — ಪರ್ಷಿಯಾ ರಾಜ್ಯದ ದಕ್ಷಿಣ ಭಾಗದಲ್ಲಿ ಅನಾಯಕತ್ವವು ಹರಡಿಕೊಂಡಿರುವುದರಿಂದ ಬುಷೈರಿಗೂ ಶಿರಾಜಿಗೂ ಆಮದು ರಫ್ತಿಗೆ ತುಂಬಾ ಅಡಚಣೆಯುಂಟಾಗಿದೆ ಲಾರಿಸ್ತಾನ್ ಪ್ರಾಂತ್ಯದಲ್ಲಿ ಸೈಯದ್ ಹುಸ್ಸೇನ್‌ರವರು ಮುಂದಾಳಾಗಿ ನಿಂತು ಷಾ ಸುಲ್ತಾನರಿಗೆ ಆ ಪ್ರಾಂತ್ಯದ ಆಳ್ವಿಕೆಯು ಏನೂ ಇರುವುದಿಲ್ಲವೆಂದು ಪ್ರತಿಭಟಿಸಿರುತ್ತಾರೆ ಎರಡು ಮೂರು ಅಂಜುಮಾನ್ ಸಭೆಯ ಪ್ರಜೆಗಳು ಕೂಡ ಅದೇ ರೀತಿ ಷಾ ಸುಲ್ತಾನರವರ ಅಧಿಕಾರವನ್ನೂ ಆಳ್ವಿಕೆಯನ್ನೂ ತಿರಸ್ಕಾರ ಮಾಡಿದ್ದಾರೆ

ಜನವರಿ, ತಾ ೨೫ನೇ ಸೋಮವಾರ — ರಷ್ಯಾದವರೂ ಇಂಗ್ಲಿಷರೂ ಪರ್ಷಿಯಾ ರಾಜ್ಯದ ಒಳ ಏರ್ಪಾಡು ಆಳ್ವಿಕೆಯ ಕಾರುಬಾರುಗಳಿಗೆ ತಲೆಹಾಕುವವರಾಗಿಲ್ಲ ಆದರೆ ಪರ್ಷಿಯಾ ರಾಜ್ಯದೊಳಗೆ ಪ್ರಜಾಸಮ್ಮತವಾದ ರಾಜ್ಯಭಾರವು ಸ್ಥಾಪಿಸಲ್ಪಡದಿದ್ದರೆ ಸಂಸ್ಥಾನದಲ್ಲಿ ನೆಮ್ಮದಿಗೆ ಭಂಗವುಂಟಾಗುವುದೆಂದು ಖಂಡಿತವಾಗಿ ಹೇಳಬಹುದು ಇದರಿಂದ ಇಂಗ್ಲಿಷ್ ರಷ್ಯಾ ರಾಜ್ಯಗಳ ವರ್ತಕ ಮಂಡಲಿಯವರಿಗೆ ಅಲ್ಲಿ ತುಂಬಾ ನಷ್ಟವಾಗುವುದು ಈ ಕಾರಣಕ್ಕಾಗಿ ಆ ಎರಡು ರಾಜ್ಯಗಳವರೂ ಷಾ ಸುಲ್ತಾನರವರಿಗೆ ವಿವೇಕವನ್ನು ಸೂಚಿಸಿರುತ್ತಾರೆ

ಹೆಜ್ಜಾಸ್ ರೈಲ್ವೆ

ಜನವರಿ, ತಾ ೨೪ನೇ ಭಾನುವಾರ — ಹೆಜ್ಜಾಸ್ ರೈಲ್ ರಸ್ತೆಯಲ್ಲಿ ಎಲಾಲಾ ಸ್ಟೇಷನ್ ಬಳಿ ಅರಬ್ಬಿಯವರಿಗೂ ರೈಲ್ವೆ ಜನರಿಗೂ ಘೋರ ಯುದ್ಧನಡೆದು, ಅನೇಕರು ಕೊಲ್ಲಲ್ಪಟ್ಟಿದ್ದಾರೆ ಟೆಲಿಗ್ರಾಫ್ ತಂತಿಗಳನ್ನು ಕಿತ್ತುಹಾಕಿಬಿಟ್ಟರು

ಇಬ್ಬರು ಪರದೇಶಿಗಳ ದರೋಡೆಯು

ಟಾಟನ್‌ಹಾಂ ಬಳಿ ಒಂದು ಮೋಟಾರ್ ಗಾಡಿಯೊಳಗೆ ಕೆಲವು ಜನರು ಒಂದು ಕಾರ್ಖಾನೆಯ ಕೂಲಿಕಾರರಿಗೆ ಕೊಡುವುದಕ್ಕೋಸ್ಕರ ತೆಗೆದುಕೊಂಡು ಹೋಗುತ್ತಿದ್ದರು ಇಬ್ಬರು ಪರದೇಶಿಗಳು ಆಯುಧಪಾಣಿಗಳಾಗಿ ಬಂದು ಆ ಮೋಟಾರ್ ಗಾಡಿಯನ್ನು ನಡಸುತ್ತಿದ್ದವನಿಗೆ ಗುಂಡುಹೊಡೆದು ಕೊಂದುಹಾಕಿ, ಹಣವನ್ನು ಅಪಹರಿಸಿಕೊಂಡು, ಟ್ರಾಂ ಗಾಡಿಯಲ್ಲಿ ಕುಳಿತು ಬಹಳ ವೇಗವಾಗಿ ಗಾಡಿ ನಡಿಸುವಂತೆ ಹೆದರಿಸಿ, ಎಡಕ್ಕೂ ಬಲಕ್ಕೂ ಗುಂಡು ಹಾರಿಸುತ್ತಾ ಹೋಗುತ್ತಿದ್ದರು ಪೊಲೀಸಿನವರು ಈ ಕಳ್ಳರನ್ನು ಹಿಡಿಯುವುದಕ್ಕೆ ಮೋಟಾರ್ ಮತ್ತು ಬೈಸಿಕಲ್ ಗಾಡಿಗಳ ಮೇಲೆ ಕುಳಿತು ಹತ್ತು ಮೈಲಿ ದೂರ ಓಡಿಸಿಕೊಂಡು ಹೋಗಿ ವಾಲ್ತಾಂಸ್ಟೊ ಎಂಬ ಸ್ಥಳದಲ್ಲಿ ಅವರನ್ನು ಹಿಡಿದರು ಆದರೆ ಆ ಇಬ್ಬರೂ ಗುಂಡುಗಳನ್ನು ಹಾರಿಸಿ ಆತ್ಮಹತ್ಯವಮಾಡಿಕೊಂಡು ಬಿಟ್ಟರು ಈ ಗುಂಡುಗಳ ಏಟು ತಗಲಿ ಒಟ್ಟು ಮೂವರು ಮೃತಪಟ್ಟರು, ಹಲವರಿಗೆ ಗಾಯಗಳಾದವು ಆ ಪರದೇಶೀಯರಿಬ್ಬರೂ ರಷ್ಯಾರಾಜ್ಯದ ಅರಾಜಕ ಸಂಘಕ್ಕೆ ಸೇರಿದವರೆಂದು ತಿಳಿದು ಬಂದಿದೆ

ಒಂದು ಜಹಜು ಮುಳುಗಿಹೋಯಿತು

ಜನವರಿ, ತಾ ೨೫ನೇ ಸೋಮವಾರ — ರಿಪಬ್ಲಿಕ್ ಎಂಬ ಜಹಜು ಅಮೇರಿಕದಿಂದ ಹೊರಟು ನಾನ್‌ಟಕೆಟ್ ಎಂಬ ಶಿವಪಟ್ಟಣಕ್ಕೆ ಬಂದಾಗ ಅಲ್ಲಿ ಫ್ಲಾರಿಡಾ ಎಂಬ ಜಹಜು ಇದ್ದು ಅದಕ್ಕೆ ಬಡಿಯಿತು ರಿಪಬ್ಲಿಕ್ ಜಹಜಿನಲ್ಲಿ ೭೬೧ ಜನರು ಪ್ರಯಾಣಮಾಡುತ್ತಿದ್ದರು ಇದು ಮುಳುಗುವುದಕ್ಕಾರಂಭವಾದ ಒಡನೆಯೇ ಸುತ್ತುಮುತ್ತಲೂ ಇದ್ದ ಇತರ ಹಡಗುಗಳು ಹೋಗಿ ಅದರಲ್ಲಿದ್ದ ಜನರನ್ನೆಲ್ಲಾ ಬದುಕಿಸಿ ಕರೆದುಕೊಂಡುಬಂದವು ಆದರೂ ಈ ಅಪಘಾತದಲ್ಲಿ ನಾಲ್ವರು ಮೃತಪಟ್ಟರು ಕಡೆಗೆ ರಿಪಬ್ಲಿಕ್ ಎಂಬ ಜಹಜು ಅಪಾಯಕರವಾಗಿ ಸಮುದ್ರದೊಳಗೆ ಮುಳುಗಿಕೊಂಡಿತು

ಇನ್ನೊಂದು ಭೂಕಂಪದ ಸೂಚನೆಯು

ಜನವರಿ, ತಾ ೨೪ನೇ ಭಾನುವಾರ — ಮೆಸ್ಸಿನಾದಲ್ಲಿ ಪ್ರಾಪ್ತವಾದ ಭೂಕಂಪಕ್ಕಿಂತಲೂ ಬಹು ತೀಕ್ಷ್ಣವಾದ ಭೂಕಂಪವು ಪೂರ್ವದಿಗ್ವಲಯದಲ್ಲಿ ಸುಮಾರು ೨,೫೦೦ ಮೈಲಿ ಆಚೆ ಪ್ರಾಪ್ತವಾಗಿರುವಂತೆ ವಿಲಾಯಿತಿ, ಜರ್ಮನಿ, ಇಟಲಿ, ರಷ್ಯಾ ರಾಜಧಾನಿ, ದಕ್ಷಿಣ ಆಫ್ರಿಕಾ ಮುಂತಾದ ಸ್ಥಳಗಳಲ್ಲಿ ಸೂಚನೆಗಳು ಕಂಡುಬಂದಿರುತ್ತವೆ ಈ ಸ್ಥಳಗಳಲ್ಲಿಟ್ಟಿರುವ ಭೂಕಂಪ ಸೂಚಕ ಯಂತ್ರಗಳು ಈ ಸಂಗತಿಯನ್ನು ತಿಳಿಸಿರುವವು

ಹಿಂದುಸ್ಥಾನದವರೂ, ಟ್ರಾನ್ಸ್‌ವಾಲ್ ಶೀಮೆಯೂ

ಜನವರಿ, ತಾ ೨೩ನೇ ಶನಿವಾರ — ದಕ್ಷಿಣ ಆಫ್ರಿಕಾದಲ್ಲಿರುವ ಹಿಂದುಸ್ಥಾನದ ವ್ಯಾಪಾರಸ್ಥರು ಆ ಸರ್ಕಾರದಲ್ಲಿ ರಿಜಿಸ್ಟರ್ ಮಾಡಿಸಿಕೊಳ್ಳದಿದ್ದರೆ ಅವರ ಕಸಬು ಹಾಳಾಗುವುದೆಂದು ಗೊತ್ತಾದದರಿಂದ ಅಲ್ಲಿನ ವರ್ತಕ ಮಂಡಲಿಯ ಪ್ರೆಸಿಡೆಂಟರು ಆ ಮಂಡಲಿಯನ್ನು ವಜಾಮಾಡಿರುತ್ತೇವೆಂದು ತಂತೀ ವರ್ತಮಾನ ಕೊಟ್ಟರು ಹಿಂದುಸ್ಥಾನದ ವರ್ತಕಮಂಡಲಿಯವರು ಅವರಿಗೆ ಹಾಗೆ ವಜಾಮಾಡುವುದು ತರವಲ್ಲವೆಂದು ಜವಾಬು ಕೊಟ್ಟರು ಆದರೆ ಕೆಲವು ಹಿಂದುಸ್ಥಾನದ ವರ್ತಕರು ಇನ್ನು ಮುಂದಕ್ಕೆ ಲೈಸೆನ್ಸುಗಳನ್ನು ಪಡೆಯಬೇಕು ಅಪ್ಪಣೆ ಕೊಡಲ್ಪಟ್ಟವಾದ ಕೆಲಸವಿಲ್ಲವೆಂದು ಪ್ರಕಟಿಸಿದಾರೆ

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು — ಎಡಿಟರ್

ಕರೆಸ್ಪಾಂಡೆನ್ಸ್

ಕೊಪ್ಪದ ಪ್ಲೇಗು ವಿಚಾರವು

ಅಯ್ಯಾ,

ಊರಲ್ಲಿ ಪ್ಲೇಗು ವ್ಯಾಪಿಸಿ ಸುಮಾರು ೧—೧ ತಿಂಗಳಾಗುತ್ತಾ ಬಂದರೂ ಊರು ಸುತರಾಂ ಬಿಡಲಿಲ್ಲ ಮುಕ್ಕಾಲು ಪಾಲು ಊರು ಬಿಟ್ಟು ಕಾಲು ಪಾಲು ಬಿಡದೆ ಇದ್ದಾಗ್ಯೂ ೯—೧೦ ಕೇಸುಗಳು ನಡೆದು, ಹಾಲಿ ಊರಲ್ಲಿ ೫—೬ ಕಾಯಿಲೆಗಳು ಇದ್ದರೂ ಭಯವಿಲ್ಲವೆಂದು ಹೇಳುತ್ತಾ ಅತ್ತಿತ್ತ ಅಡಿಯುತ್ತಿದ್ದಾರೆ ಪ್ಲೇಗು ಕಾಯಿಲೆಯ ವಿಚಾರದಲ್ಲಿ ನಮ್ಮ ಆಸ್ಪತ್ರೆಯ ಅಸಿಸ್ಟೆಂಟು ಬಹಳ ಮುತುವರ್ಜಿಯಿಂದಲೂ ಮೆಹನತ್ತಿನಿಂದಲೂ ಕೆಲಸಮಾಡಿ ಬಡ ಜನಗಳಿಗೆ ಹಣಕಾಸುಗಳಿಂದ ಉಪಚರಿಸಿ ಸಂರಕ್ಷಣೆ ಮಾಡುತ್ತಾರೆಂದು ತಿಳಿದು ಬಹಳ ಸಂತೋಷ ಪಡುತ್ತೇವೆ ಹಾಲಿ ಊರಲ್ಲಿ ರೂಪಾಯಿಗೆ ೫—೫॥ ಸೇರು ಅಕ್ಕಿ, ೮ ಸೇರು ರಾಗಿ, ೪—೪॥ ಸೇರು ಗೋಧಿ, ಈ ರೀತಿ ವ್ಯಾಪಾರಸ್ಥರು ಮಾರಾಟ ಮಾಡುವುದನ್ನು ನಮ್ಮ ಈಗಿನ ಹೊಸ ಅಮಲ್ದಾರರು ಕಂಡು, ಇಂಥ ಕಷ್ಟ ಕಾಲದಲ್ಲಿ ದಯಾವಿನಿಂದ ಜನವನ್ನು ಸಂರಕ್ಷಿಸಬೇಕೆಂತಲೂ, ಸ್ವಲ್ಪ ಲಾಭಕ್ಕೆ ಮಾರಿ ಸರಿಯಾದ ಅಳತೆ ತೂಕ ಸೇರುಗಳಲ್ಲಿ ಕೊಡತಕ್ಕದ್ದೆಂತಲೂ ಬುದ್ಧಿವಾದವನ್ನು ಹೇಳಿ, ಬಡವರ ಮೇಲೆ ಅಂತಃಕರುಣವಿಟ್ಟು ವ್ಯಾಪಾರಸ್ಥರಲ್ಲಿ ಮಾಡಿಸುವದು ನೋಡಿ ಇವರನ್ನು ಎಲ್ಲರೂ ವಂದನೆ ಮಾಡುತ್ತಿದ್ದಾರೆ

ಬಾತ್ಮೀದಾರ

ಚಿಂತಾಮಣಿಯ ಕರ್ನಾಟಕ ಸಮಾಜವು

ಅಯ್ಯಾ,

ಈ ಸಂಘವು ಕೆಲವು ವರ್ಷಗಳಿಂದ ಬೇರೆ ಹೆಸರಿನಿಂದ ನಡೆದುಬರುತ್ತಿತ್ತು ಇದೇ ಜನವರಿ ೯ನೇ ತಾರೀಖಿನಲ್ಲಿ ಜನವರಿ ತಿಂಗಳ ಮೀಟಿಂಗು ಜರುಗಿತು ಮೀಟಿಂಗಿನಲ್ಲಿ ಕರ್ನಾಟಕ ಸಮಾಜ ಎಂಬದಾಗಿ ಹೆಸರು ಬದಲಾಯಿತು ಸಂಘದಲ್ಲಿ ವಾರಕ್ಕೊಂದು ಸಲ ಉಪನ್ಯಾಸವು ಜರುಗುವುದು ಈ ತಿಂಗಳ ೧೬ನೇ ತಾ ನಲ್ಲಿ "ಭಗವದ್ಭಕ್ತಿ ಮತ್ತು ಧ್ಯಾನ" ಎಂಬಿವುಗಳನ್ನು ಕುರಿತು ಉಪನ್ಯಾಸವನ್ನು ಈ ಸಂಘದಲ್ಲಿ ಜಿ ಭೀಮಸೇನರಾವ್ ಎಂಬಾತನು ಓದಿ

...ನ್ಯಾಸವು ನೆರವಾಗಿತ್ತು. ಈ ತಿಂಗಳು ೨೩ನೇ ತಾರೀಖಿನಲ್ಲಿ ಸ್ವಾಮಿ... ಎಂಬ ಉಪನ್ಯಾಸವನ್ನು ಓದಿದರು. ಅನಂತರ ಸದರಿ ಸಂಘದ ಪ್ರೆಸಿಡೆಂಟ... ಎಮ ಸಿಂಹ ಉಪನ್ಯಾಸ ಮೂಲಕವಾಗಿ ವಾಮನ ಮೂರ್ತಿಗೆ ಬಲಿಚಕ್ರವರ್ತಿಯು ಭೂದಾನವನ್ನು ಮಾಡಿದ ಕಥೆಯನ್ನು ಹೇಳಿ, ಕೆಲವು ನೀತಿಗಳನ್ನು ...ಧಿಸಿದರು. ಈ ಸಂಘದಲ್ಲಿ ಬಾಲಕರಿಗೆ ತುಂಬಾ ಉತ್ತಮವಾದ ನೀತಿಗಳು ...ಧಿಸಲ್ಪಡುತ್ತವೆ. ಇವರು ಬೋಧಿಸುವ ಬೋಧನೆಗಳಿಂದಾಗಲೆ ಸ್ವಾತಂತ್ರ್ಯ... ...ಈ ಸಂಘದವರು ಈ ಕರ್ನಾಟಕ ಸಂಘದಿಂದ ಹೆಸರುವಾಸಿಯನ್ನು ಪಡೆದು ಇದೇ ರೀತಿಯಾಗಿ ಉಪನ್ಯಾಸಗಳನ್ನೂ ನೀತಿಬೋಧೆಗಳನ್ನೂ ಮಾಡುತ್ತಾ ...ಕಾಲವನ್ನು ನಿಯಮಿಸಿಕೊಂಡು ಆ ಕಾಲದಂತೆ ನಡೆಯುತ್ತಾ ಬಾಲಕರಿಗೆ ಸದುಪದೇಶವನ್ನು ಮಾಡುತ್ತಾ ಬಂದಲ್ಲಿ ಈ ಸಂಘವು ಅಭಿವೃದ್ಧಿಯನ್ನು ಹೊಂದುವುದರಲ್ಲಿ ಸಂದೇಹವಿಲ್ಲ.

ಹಿತಚಿಂತಕ

ಬೇಲೂರು ಉಪಾಸನಾ ಸಮಾಜವು

ಅಯ್ಯಾ,

ಗೌರ್ನಮೆಂಟ್ ಎ. ವಿ. ಸ್ಕೂಲ್ ಕಟ್ಟಡದಲ್ಲಿ ನಡೆದ ಸಮಾಜದ ಪ್ರಥಮೋಪನ್ಯಾಸಕ್ಕೆ ಮ. ಶಿಗ್ಗಡ ಚನ್ನಕೇಶವರಾಯರು ಸಭಾಧ್ಯಕ್ಷರಾಗಿದ್ದರು. ಮ|| ರಾ. ರಾಮಾನುಜಯ್ಯ, ಮ|| ಟಿ. ನರಸಿಂಗರಾಯರು, ಮ. ಖರೀದಿ ನಾಗೇಶಪ್ಪನವರು, ಮ. ಹೆಡ್ ಮಾಸ್ಟರ್ ಶಾಮರಾಯರು, ಮ|| ಖರೀದಿ ಲಕ್ಷ್ಮೀನಾರಾಯಣ ಶೆಟ್ಟರು, ಮುಂತಾಗಿ ಕೆಲವು ಸ್ಥಳೀಯ ಮಹನೀಯರುಗಳು ಉಪಸ್ಥಿತರಿದ್ದರು. ಅನಾಥಾಲಯದ ಮತ್ತು ಉಪಾಸನಾ ಸಮಾಜದ ಉದ್ದೇಶವನ್ನು ಕುರಿತು ಮ|| ರಾಮಸ್ವಾಮಿ ಸುಬ್ಬಣ್ಣನವರು ಉಪನ್ಯಾಸಮಾಡಿದರು. ...ಸ ಚೀಲಗಳನ್ನು ಸ್ಥಳೀಯ ದೊಡ್ಡ ಮನುಷ್ಯರುಗಳಿಗೆ ಹಂಚಿಕೊಳ್ಳಲು ಮುಂದೆ ಹಂಚಬೇಕೆಂದಿರುವ ಉದ್ದೇಶಗಳನ್ನು ಕುರಿತು ಮ|| ಎಚ್. ಡಿ. ಗುಂಡಪ್ಪನವರು ವಿವರಿಸಿದರು. ಮ. ಶ. ರಾಮರಾಯರು ಅಪ್ಪಣೆಕೊಡಿಸಿದರು. ...ರೆ—ಈಗ್ಗೆ ಎರಡು ವರುಷಗಳಿಗೆ ಮುಂಚೆ ಈ ಡಿಸ್ಟ್ರಿಕ್ಟ್ ಸ್ಕೂಲು ...ಡೆಪ್ಯುಟಿ ಇನ್ಸ್‌ಪೆಕ್ಟರ್ ಮ|| ಎಚ್. ಎಲ್. ವೆಂಕಟ್ರಮಣಯ್ಯನವರು ...ಸತ್ರದಲ್ಲಿ ಅನಾಥಾಲಯವನ್ನು ಏರ್ಪಡಿಸಿ, ತನ್ಮೂಲಕ ಅನಾಥ ಬಾಲಕರಿಗೆ ವಿದ್ಯಾಭಿವೃದ್ಧಿಯು ದೊರೆಯುವಂತೆ ಮಾಡಬೇಕೆಂಬ ಉದ್ದೇಶವನ್ನು ...ಸಿದ್ದರು. ಆಗ ಅಭಿಪ್ರಾಯಗಳು ಅಸಮಂಜಸ ತೋರಿ ಈಗ ಈ ಉದ್ದೇಶವನ್ನು ನಡೆಸಬೇಕೆಂತ ಪ್ರಯತ್ನಪಟ್ಟಿರುವ ಸ್ಥಳೀಯ ಮಹನೀಯರುಗಳ ಅಭಿಪ್ರಾಯಗಳು ಸಮಂಜಸವಾಗಿ ನನಗೆ ತಿಳಿಯಬರುತ್ತಲಿದೆ. ಈ ಉದ್ದೇಶ್ಯಗಳ ಪ್ರಕಾರವಾಗಿ ...ಮುಂದೆ ಅನಾಥ ಬಾಲಕರುಗಳಿಗೆ ತಮ್ಮ ಸತ್ರದಲ್ಲಿ ಅನ್ನಾದಿಗಳ ತಪ್ಪಿ ಏರ್ಪಾಡು ...ತಮ್ಮ ಉದಾರವಾದ ಮನಸ್ಸಿನ ಅಪ್ಪಣೆ ...ವನ್ನು ಸಭಿಕರು ಕೇಳಿ, ತಮ್ಮ ಸಂತೋಷವನ್ನು ಕರತಾಡನದಿಂದ ವ್ಯಕ್ತಪಡಿಸಿದರು. ಮ. ರಾಮಸ್ವಾಮಿ ರಂಗಣ್ಣನವರು ತಮ್ಮ ಉದ್ದೇಶವನ್ನು ತಿಳಿಸಿದಾಗ ಮ. ತಂಗ್ಲಿ ಶ್ರೀ. ಸಣ್ಣಿಂಗಪ್ಪನವರೂ, ಮ|| ಖರೀದಿ ನಾಗೇಶಶೆಟ್ಟರನ್ನೂ ಕೇಳಿಕೊಂಡಮೇಲೆ ಮ. ನಾಗೇಶಶೆಟ್ಟರು ಅಪ್ಪಣೆ ಕೊಡಿಸಿದ್ದೇನೆಂದರೆ, ಈಗ ಅಗ್ರಾಸನಾಧಿಪತಿಗಳಾಗಿರತಕ್ಕ ಮ. ಶಿಗ್ಗಡ ಚನ್ನಕೇಶವರಾಯರು ... ದೇವಾಲಯದ ವಿಷಯದಲ್ಲಿ ಪ್ರಯತ್ನಿಸಿದ ಕೆಲಸಕ್ಕೆ ...ವಿಘ್ನಗಳು ಪ್ರಾಪ್ತವಾದಾಗ್ಯೂ ಲಕ್ಷ್ಯವಿಡದೆ ತಮ್ಮ ಸದುದ್ದೇಶವನ್ನು ...ಕೈಬಿಡದೆ ... ನಿರ್ಯತ್ನವಾದವರೆಂಬ ಸಂಗತಿಯನ್ನು ...ಕುರಿತು ಸಭಿಕರಿಗೆ ತಿಳಿಸಿ ಉದಾರವಾದ ಸಹಾಯವನ್ನು ಮಾಡುವದಾಗಿ ಅಪ್ಪಣೆಕೊಡಿಸಿದ್ದನ್ನು ಕೇಳಿ ಸಭಿಕರೆಲ್ಲರೂ ಆನಂದಿಸಿದರು. ಮ. ತಂಗ್ಲಿ ಸಣ್ಣಿಂಗಪ್ಪ... ಅಪ್ಪಣೆ ... ಮ. ಶಿ. ಚನ್ನಕೇಶವರಾಯರು ... ಸಮಾಜದ ... ಮೂಲಕ ತಮ್ಮ ... ತಮ್ಮ ... ಸಹಾಯವನ್ನು ಮಾಡುವದಾಗಿ ಅಪ್ಪಣೆ ಕೊಡಿಸಿದ್ದನ್ನು ಕೇಳಿ ಸಭಿಕರೆಲ್ಲರೂ ಆನಂದಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಅಗ್ರಾಸನಾಧಿಪತಿಗಳು ಹೇಳಿದ್ದೇನೆಂದರೆ—ಈ ಕಾಲದಲ್ಲಿ ಉಪಯೋಗಿಸಲ್ಪಡುತ್ತಿರುವ ಎಲ್ಲಾ ಧರ್ಮಗಳಿಗಿಂತಲೂ ಈ ಅನಾಥಾಲಯದ ಉದ್ದೇಶವನ್ನುಳ್ಳ ... ಸಮಾಜ ಧರ್ಮವು ಶ್ಲಾಘನೀಯವಾಗಿಯೂ ಉತ್ಕೃಷ್ಟವಾಗಿಯೂ ... ತಿಳಿದುಬರುತ್ತಲಿವೆ. ಈ ಉದ್ದೇಶಗಳು ನೆರವೇರಬೇಕಾದರೆ ಸ್ಥಳೀಯ ಮಹನೀಯರುಗಳು ... ತಮ್ಮ ... ಮನ ಧನಗಳನ್ನು ಒಪ್ಪಿಸುವದರ ಮೂಲಕ ಈ ಸಮಾಜವು ಅಭಿವೃದ್ಧಿಗೆ ಅವಕಾಶವಾಗುವಂತೆ ಪ್ರೋತ್ಸಾಹಿಸಬೇಕು. ಮ|| ಎಚ್. ಡಿ. ಗುಂಡಪ್ಪನವರು ತಿಳಿಸಿದಂತೆ ಎಲ್ಲಾ ...ಗಳಿಗಿಂತಲೂ ಅನಾಥಾಲಯಗಳನ್ನು ಉಂಟುಮಾಡುವ ಧರ್ಮವು ಅತ್ಯುತ್ತಮವಾದದ್ದೆಂತಲೂ ಕೇವಲ ಭಗವತ್ಸ್ವರೂಪವಾಗಿರುವದಾಗಿಯೂ ... ತಿಳಿದುಬರುತ್ತಲಿವೆ. ಈ ಧರ್ಮವು ಎಲ್ಲರ ಅನುಷ್ಠಾನಕ್ಕೆ ತರಲ್ಪಡಬೇಕಾದುದಾಗಿಯೂ, ತಾವು ತಮ್ಮ ಉದಾರವಾದ ಸಹಾಯವನ್ನು ಮಾಡುವದಾಗಿ ... ಅಪ್ಪಣೆ ಕೊಡಿಸಿದ್ದನ್ನು ಕೇಳಿ, ಸಭಿಕರೆಲ್ಲರೂ ತಮ್ಮ ಸ್ವಾಭಾವಿಕವಾದ ಸಂತೋಷವನ್ನು ಕರತಾಡನದಿಂದ ವ್ಯಕ್ತಪಡಿಸಿದರು. ಈ ಮೇರೆ ಅಗ್ರಾಸನಾಧಿಪತಿಗಳು ...ಭಾಷಣವನ್ನು ಮುಗಿಸಿದ ಕೂಡಲೆ ಸಮಾಜದ ಕಾರ್ಯನಿರ್ವಾಹಕರಾದ ... ದೇವಪ್ಪನವರೂ, ಶಿ. ಚನ್ನಕೇಶವರಾಯರೂ ಈ ದಿವಸ ನಡೆದ ಉಪನ್ಯಾಸದಲ್ಲಿ ಅಗ್ರಾಸನಾಧಿಪತಿಗಳಾಗಿ ದಯಮಾಡಿಸಿ ಸಮ್ಮಾನಗಳಿಗೆಲ್ಲಾ ತಕ್ಕ ಸಲಹೆಯನ್ನು ಅಪ್ಪಣೆಕೊಡಿಸಿದ ಕ್ಷೇತ್ರಸ್ಥರ ಸಮಾಜದ ಮೆಂಬರುಗಳ ಪರವಾಗಿ ಮ|| ...ವನ್ನು ಮಾಡಿದರು. ಈ ಮೇರೆ ಈ ದಿವಸದ ಸಮಾಜದ ಉಪನ್ಯಾಸವು ಸಂತೋಷದಿಂದ ಮುಕ್ತಾಯವಾಯಿತು.

ಮೆಂಬರು

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ—ಇಲ್ಲಿ ಪ್ಲೇಗಿನ ಗಲಾಟೆ ಕಡಮೆಯಾಗಿದೆ. ಊರಿನಲ್ಲಿ ಸುಮಾರು ೧೦೦ ಮನೆಗಳವರು ಇದ್ದಾರೆ. ಊರಿನಲ್ಲಿ ಮಾತ್ರ ಇನ್ನು ...ಟೆ ಇದೆ. ಇದುವರೆಗೆ ಸುಮಾರು ೧೦೦ ಜನರು ಪ್ಲೇಗಿನಿಂದ ಸತ್ತಿದ್ದಾರೆ. ...ಜನರು ಊರು ಸೇರುವುದಕ್ಕೆ ಮನೆಗಳನ್ನು ಶುದ್ಧಿ ಮಾಡಿಸುತ್ತಾ ...ಊರು ಬಿಟ್ಟು ಬಂದಾಗ ಊರಿನಲ್ಲಿ ಕಳ್ಳರು ಕೆಲವು ಮನೆಗಳ ಕದ... ...ಯಿಂದ ಸುಟ್ಟು ... ಕೊಂಡು ಹೋಗಿದಾರಂತೆ. ಇನ್ನೂ ಕೆಲವು ಕಳ್ಳತನಗಳು ನಡೆದು ಇವೆ ಎಂದು ಜನರು ಗುಜುಗುಟ್ಟುತ್ತಾರೆ. ಇಲ್ಲಿ ನೀರಿಗೆ ಬಹಳ ಕಷ್ಟವಾಗಿದೆ. ರೈಲಿಗೆ ಸಹ ನೀರು ಸಿಕ್ಕುವುದು ಕಷ್ಟವಾಗಿದೆ. ಬೆಂಗಳೂರಿನಿಂದ ರೈಲಿನಲ್ಲಿ ನೀರು ತಂದು ಇಲ್ಲಿ ಭಾವಿಗೆ ಸುರಿದು, ಪಂಪು ಎತ್ತಿ ರೈಲಿಗೆ ನೀರು ತುಂಬುತ್ತಾರೆ. ಇನ್ನು ಬೇಸಿಗೆ ಕಾಲಕ್ಕೆ ನೀರಿಗೆ ತುಂಬಾ ಕಷ್ಟವಾಗಬಹುದು.

ಶ್ರೀನಿವಾಸಪುರ—ಈ ತಾಲ್ಲೋಕಿನಲ್ಲಿ ಈ ವರುಷ ಮಳೆಯೇ ಸ್ವಲ್ಪವಾಗಿ ಸುರಿದಿರುವ ಕಾರಣ ಕ್ಷಾಮವು ತಲೆದೋರಿ ಧಾರಣೆವಾಸಿಗಳು ಬಹಳ ಬಡವಾಗಿ ಇರುತ್ತವೆ. ಹಾಗಾದರೂ ಕೊಂಡು ತಿನ್ನಲು ಕೈಯಲ್ಲಿ ಕಾಸಿಲ್ಲದೆ ಅನೇಕ ಬಡಬಗ್ಗರು ಕಳ್ಳಾಳಿ ಗಡ್ಡೆ ಮೊದಲಾದ್ದು ತಿಂದು, ಜೀವನವಿಲ್ಲದೆ ಬಹಳ ತುಂಬಾ ತೊಂದರೆಪಡುತ್ತಲಿದ್ದಾರೆ. ಇಂಥಾದ್ದರಲ್ಲಿ ಕಂದಾಯದ ಕಾಲವು ಸಮೀಪಿಸುತ್ತಾ ಬಂತು. ಕಂದಾಯ ಕೊಡಲು ಕ್ಷಾಮ ಕಾಲದಲ್ಲಿ ಸಾಲಾ ಕೊಡುವವರೂ ಇಲ್ಲ. ಈ ಮೇಲ್ಕಂಡ ವಿಷಯಗಳನ್ನು ಕುರಿತು ತಾಲ್ಲೋಕು ಅಮಲ್ದಾರರವರು ತಾಲ್ಲೂಕಿನ ಇತರ ಗ್ರಾಮಗಳಿಗೆ ಸಕೀಟು ದಯಮಾಡಿಸಿ, ಚಂದಾ ಹಣವನ್ನು ವಸೂಲ್ ಮಾಡಿಸಿ ಆ ಹಣದಿಂದ ರಾಗಿ ರೂಪಾಯಿಗೆ ೧೨ ೧೩ ಸೇರಿನಂತೆ ಬಡಬಗ್ಗರಿಗೆ ಬಿಕರಿ ಮಾಡಿಸುತ್ತಲಿದಾರೆ. ಇಂಥಾ ಕಾಲದಲ್ಲಿ ಅಮಲ್ದಾರ್ರು ಬಡಬಗ್ಗರ ಮೇಲೆ ದಯವಿಟ್ಟು ಈ ರೀತಿ ನಡಿಸುವುದು ತುಂಬಾ ಸಂತೋಷವಾಗಿ ಇರುತ್ತೆ. ಅಲ್ಲದೆ ದಿಕ್ಕಿಲ್ಲದ ಪಾಪಿ ಪರದೇಶಿ ಕುಂಟ ಕುರುಡ ಮೊದಲಾದ ಜನಗಳಿಗೆ ಸರ್ಕಾರದವರು ದಿನವಹಿ ಭಕ್ಷ್ಯ ಹಾಕುತ್ತಿದಾರೆ. ಈ ಕ್ಷಾಮ ಕಾಲದಲ್ಲಿ ಇದೇ ರೀತಿಯಾಗಿ ನಮ್ಮ ಅಮಲ್ದಾರರವರು ನಡೆಸಿಕೊಂಡು ಬಂದರೆ ಉಪಯುಕ್ತವೆಂದು ತೋರಬಹುದು.

ವಿದೇಶ ವರ್ತಮಾನಗಳು

ರಷ್ಯಾ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಪಾಂತಿಭೇದಿ ಉಪದ್ರವು ಮತ್ತೆ ಪ್ರಾರಂಭವಾಗಿದೆ.

ಅಮೇರಿಕ ಸಂಸ್ಥಾನಗಳ ಪ್ರೆಸಿಡೆಂಟರ ಸಂಬಳ ಮತ್ತು ಅವರ ಪ್ರಯಾಣದ ಖರ್ಚನ್ನು ವರುಷಕ್ಕೆ ೭೫,೦೦೦ ದಿಂದ ೧,೨೫,೦೦೦ ಡಾಲರಿಗೆ ಛಿದ್ರ ಮಾಡುತ್ತಾರೆ. ಅಂದರೆ, ಅವರ ಸಂಬಳವು ಒಟ್ಟು ಸುಮಾರು ಮೂರು ಲಕ್ಷ ರೂಪಾಯಿ ಆಗುತ್ತದೆ.

ಫ್ರಾನ್ಸ್ ಸಂಸ್ಥಾನದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲಿ ಕೆಲವು ಹಿಂದುಸ್ಥಾನದವರೂ ಜರ್ಮನಿ ಮತ್ತು ರಷ್ಯಾದವರ ಸೇರಿ, ಹಿಂದುಸ್ಥಾನದಿಂದ ಇಂಗ್ಲಿಷರನ್ನು ಓಡಿಸುವುದಕ್ಕೆ ವಿಚಾರ ಮಾಡುತ್ತಾರೆ ಎಂದು ಪ್ರಕಟವಾಗಿತ್ತಷ್ಟೆ. ಇಂಥಾ ಮುಸಲ್ಮಾನರ ಗುಂಪು ಆ ನಗರದಲ್ಲಿ ಇರುವುದಿಲ್ಲವೆಂದು ವೀಣಾ ... ಒಂದು ಪತ್ರಿಕೆಯು ತಿಳಿಸುತ್ತದೆ.

ಇಂಗ್ಲಾಂಡಿಗೆ ಸೇರಿದ ಲಿವರ್ಪೂಲ್ ಪಟ್ಟಣದಲ್ಲಿ ಹಡಗು ವ್ಯಾಪಾರ ಮಾಡುತ್ತಿದ್ದ ಜೋನ್ಸ್ ವುಡ್ ಎಂಬಾತನು ಒಂದೂವರೆ ಕೋಟಿ ರೂಪಾಯಿ ಆಸ್ತಿಯನ್ನು ಸಂಪಾದಿಸಿ, ಅದರಲ್ಲಿ ಇಪ್ಪತ್ತು ಲಕ್ಷ ರೂಪಾಯಿಯನ್ನು ಧರ್ಮಕಾರ್ಯಗಳಿಗೆ ಕೊಟ್ಟಿರುತ್ತಾನೆ. ಈತನ ಕೆಳಗೆ ಕೆಲಸ ಮಾಡುತ್ತಿದ್ದ ಅನೇಕ ಸಂಬಳಗಾರರಿಗೆ ಪೆನ್ಷನ್ ದೊರಕುವಂತೆ ಸ್ವಲ್ಪ ಹಣವನ್ನು ತೆಗೆದಿಟ್ಟಿದಾನೆ.

ಸರ್ವಿಯಾ ರಾಜ್ಯಕ್ಕೆ ಸೇರಿದ ನಾಬಾತ್ ಎಂಬ ಪಟ್ಟಣದಲ್ಲಿ ಸ್ತ್ರೀಯರು ಒಂದು ಸಮಾಜವನ್ನು ನಡಿಸಿ ಯುದ್ಧದ ಇಲಾಖೆಯ ಮಂತ್ರಿಯವರಿಗೆ ಅರಿಕೆ ಮಾಡಿ ಕೊಂಡಿರುವದೇನೆಂದರೆ—ಯುದ್ಧ ಪ್ರಾಪ್ತವಾದಾಗ್ಗೆ ನಮ್ಮ ದೇಶದ ಇಲಾಖೆಗಳಿಗೆ ಸ್ತ್ರೀಯರನ್ನೇ ಗುಮಾಸ್ತೆ, ಕೆಲಸಗಳಿಗೆ ನೇಮಕ ಮಾಡಿ, ಪ್ರತಿ ಒಬ್ಬ ಗಂಡಸನ್ನೂ ಬಂದೂಕು ಹಿಡಿದು ಯುದ್ಧಭೂಮಿಗೆ ಹೋಗುವಂತೆ ಕಳುಹಿಸಬೇಕು.

ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯಾ ಆಧಿಪತ್ಯದಲ್ಲಿ ಪರಕೀಯರು ಯಾರೂ ಜಮೀನನ್ನು ಸ್ವಂತವಾಗಿ ಅನುಭವಿಸಕೂಡದೆಂದು ಅಲ್ಲಿನ ಸರ್ಕಾರದವರು ಕಳೆದ ವಾರ ಕಾನೂನ್ ಮಾಡಿಕೊಂಡಿದಾರೆ. ಇದರಿಂದ ಇನ್ನು ಮುಂದೆ ಅಮೇರಿಕದವರಿಗೂ ಜಪಾನರವರಿಗೂ ಮನಸ್ತಾಪಗಳುಂಟಾಗುವುದಕ್ಕೆ ಅವಕಾಶವಾದೀತು ಎಂಬದಾಗಿ ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ಎಚ್ಚರಿಕೆ ಕೊಟ್ಟಿರುವರು.

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲಿನ ಒಂದು ಗಣಿಯಲ್ಲಿ ಜನವರಿ ೧ನೇ ತಾರೀಖಿನ ದಿನ ಹಬ್ಬದ ರಜಾ ಇದ್ದಾಗ್ಯೂ ಆ ದಿನ ಕೆಲಸಮಾಡಬೇಕೆಂದು ಗಣಿಯವರು ನಿರ್ಬಂಧಪಡಿಸಿದರು. ಚೀನಿಯ ಕೂಲಿಕಾರರು ಪ್ರತಿಭಟಿಸಿ ನಿಂತುಬಿಟ್ಟದ್ದಲ್ಲದೆ ಪೊಂಬಿಯನ್ನು ಸವರು. ಪೋಲೀಸಿನವರು ಗುಂಡುಹೊಡೆದು ಆ ದೊಂಬಿಯನ್ನು ಚದರಿಸಬೇಕಾಯಿತು. ಅದರಲ್ಲಿ ೬ ಮಂದಿ ಕೊಲೆಯಾದರು. ಹಲವರಿಗೆ ಗಾಯಗಳಾಗಿವೆ.

ಚೀನಾ ರಾಜ್ಯದಲ್ಲಿ ಸರ್ಕಾರದವರು ರೈತರೆಲ್ಲಾ ಅಫೀಮನ್ನು ಬೆಳೆಯಕೂಡದೆಂದು ತಾಕೀತು ಕೊಟ್ಟಿದ್ದಾರೆ. ಶುಂಗ್‌ಕಿನ್ ಎಂಬ ಪ್ರಾಂತ್ಯದಲ್ಲಿ ಹನ್ನೆರಡು ಗ್ರಾಮಗಳ ರೈತ ಪ್ರಜೆಗಳು ಸರ್ಕಾರದವರ ಹುಕುಮನ್ನು ಲಕ್ಷ್ಯಮಾಡದೆ ಅಫೀಮು ಬೆಳೆಯುವುದೇ ಸಿದ್ಧವೆಂದು ಹಟಹಿಡಿದಿದಾರೆ. ಎರಡು ಸಹಸ್ರ ಜನರು ಆಯುಧಪಾಣಿಗಳಾಗಿ ಸರ್ಕಾರದವರ ಮೇಲೆ ತಿರುಗಿಬಿದ್ದಿರುವುದರಿಂದ ಆ ಅಧಿಪತ್ಯದ ವೈಸ್‌ರಾಯಿ ಯವರು ಅಲ್ಲಿಗೆ ಸರ್ಕಾರಿ ಸೈನ್ಯಗಳನ್ನು ರವಾನೆಮಾಡಿರುತ್ತಾರೆ.

ಯೆರೂಸಲೇಂ ಡಿಸ್ಟ್ರಿಕ್ಟಿನಲ್ಲಿ ಪೆಟ್ರಿಯಾರ್ಕ್ ಡೇಮಿಯಾನಾಸ್ ಎಂಬ ಅಧಿಕಾರಿಯನ್ನು ವಜಾಮಾಡಿಬಿಟ್ಟರು. ಇದರಿಂದ ಅಲ್ಲಿರುವ ತುರ್ಕಿಯವರಿಗೂ ಗ್ರೀಕ್ ಜನರಿಗೂ ಪರಸ್ಪರ ವೈರಗಳುಂಟಾಗಿರುತ್ತವೆ. ಅವರವರು ಕಾದಾಡುವ ಸ್ಥಿತಿಯಲ್ಲಿದಾರೆಂದು ತಿಳಿದುಬಂದದ್ದರಿಂದ ತುರ್ಕಿ ಗವರ್ನ್‌ಮೆಂಟಿನವರು ಕೆಲವು ಮಂದಿ ದೊಡ್ಡ ಮನುಷ್ಯರನ್ನು ನೇಮಿಸಿ ಅಲ್ಲಿಗೆ ಕಳುಹಿಸಿಕೊಟ್ಟಿದಾರೆ. ಇವರು ಆ ಜನರ ಮನಸ್ತಾಪಗಳನ್ನು ವಿಚಾರಿಸಿ ಸುಲ್ತಾನರವರಿಗೆ ರಿಪೋರ್ಟ್ ಕೊಡುವರು.

ತುರ್ಕಿಯವರಿಗೆ ಆಸ್ಟ್ರಿಯಾ ಮತ್ತು ಬಲ್ಗೇರಿಯಾ ರಾಜ್ಯಗಳ ಮೇಲೆ ಮನಸ್ತಾಪಗಳುಂಟಾಗಿದ್ದದ್ದರಿಂದ ಅವೆರಡು ದೇಶಗಳಿಂದ ತಯಾರಾಗಿ ಬರುವ ಪದಾರ್ಥಗಳನ್ನು ತುರ್ಕಿಯವರು ಕೊಂಡುಕೊಳ್ಳಬಾರದೆಂದು ಕಟ್ಟು ಮಾಡಿಕೊಂಡಿದ್ದರು. ಈಚೆಗೆ ಆ ಮನಸ್ತಾಪಗಳು ಉಭಯತ್ರ ಸಮಂಜಸವಾಗುವಂತೆ ಇತ್ಯರ್ಥವಾಗುವ ಸ್ಥಿತಿಗೆ ಬಂದಿರುವುದರಿಂದ ತುರ್ಕಿ ಗವರ್ನ್‌ಮೆಂಟಿನವರು ಇನ್ನು ಮುಂದೆ ತಮ್ಮ ಪ್ರಜೆಗಳ್ಯಾರೇ ಆಗಲಿ ಆ ಪದಾರ್ಥಗಳನ್ನು ಕೊಂಡುಕೊಳ್ಳದೆ ನಿರಾಕರಿಸಕೂಡದೆಂದು ಸಾರಿಸಿರುತ್ತಾರೆ.

ಅಮೇರಿಕಕ್ಕೆ ಸೇರಿದ ಟೆಕ್ಸಾಸ್ ಡಿಸ್ಟ್ರಿಕ್ಟಿನಲ್ಲಿ ವಾಟರ್ಸ್‌ಪಿಯರ್ಸ್ ಎಂಬ ತೀಮೆಯೆಣ್ಣೆ ಕಂಪೆನಿಯವರು ಅಲ್ಲಿನ ಕಾನೂನಿಗೆ ವಿರೋಧವಾಗಿ ವ್ಯಾಪಾರ ನಡಿಸಿದ್ದರಿಂದ ಅಲ್ಲಿನ ಕೋರ್ಟಿನಲ್ಲಿ ಮೊಕದ್ದಮೆ ಆಗಿ ಆ ಕಂಪೆನಿಯವರಿಗೆ ೧೬ ಲಕ್ಷದ ೨೩ ಸಾವಿರ ದ್ರವ್ಯವನ್ನು ಜುಲ್ಮಾನೆ ಹಾಕಿದ್ದಲ್ಲದೆ ಆ ಕಂಪೆನಿಯವರು ಅಲ್ಲಿಂದ ಹೊರಟು ಹೋಗಬೇಕೆಂದು ತೀರ್ಮಾನ ಮಾಡಿದರು. ಅಮೇರಿಕದ ಸುಪ್ರೀಂ ಕೋರ್ಟಿನಲ್ಲಿ ಅಪೀಲಾಯಿತು. ಅಲ್ಲಿನ ಜಡ್ಜಿಗಳು ಕೆಳ ಕೋರ್ಟಿನ ತೀರ್ಮಾನವನ್ನೇ ಖಾಯಂ ಮಾಡಿರುತ್ತಾರೆ.

ಭೂಕಂಪದಿಂದ ಮೆಸ್ಸೀನಾ ಪಟ್ಟಣದಲ್ಲಿ ೮ ಕೋಟಿ ಸವರಿನ್‌ಗಳೂ, ರೆಗ್ಗಿಯೋದಲ್ಲಿ ೪ ಕೋಟಿ ಸವರಿನ್‌ಗಳೂ, ಬಾಳುವ ಆಸ್ತಿಗಳೂ, ಮೆಸ್ಸೀನ ಜಲಸಂಧಿಯಲ್ಲಿ ಕಟ್ಟಿದ್ದ ೧ ಕೋಟಿ ೨೦ ಲಕ್ಷ ಸವರಿನ್‌ಗಳು ಬಾಳುವ ಕೋಟೆ ಕೊತ್ತಲಗಳೂ, ೯೦ ಲಕ್ಷ ಸವರಿನ್ ಬಾಳುವ ಬಂದರ್ ಪ್ರದೇಶವೂ, ನಷ್ಟವಾಗಿರುವುದಾಗಿ ಊಹಿಸಲ್ಪಟ್ಟಿದೆ. ಹಾಳುಬಿದ್ದಿರುವ ಪಟ್ಟಣಗಳಲ್ಲಿ ಹೂಳುಹೋಗಿರುವ ಹೆಣಗಳ ದುರ್ಗಂಧದಿಂದ ರೋಗಾದಿಗಳು ಉಪಕ್ರಮಿಸಬಹುದೆಂಬ ಶಂಕೆಯಿಂದ ಎಲ್ಲೆಲ್ಲಿಯೂ ಸುಣ್ಣವನ್ನು ಹರಡುತ್ತಿರುವರು. ರೆಗ್ಗಿಯೋದಲ್ಲಿ ಉಳಿದಿರುವ ಪ್ರಜೆಗಳಿಗೆ ಆಹಾರ ಸಾಲದು. ಬೆಕ್ಕುಗಳನ್ನೂ ನಾಯಿಗಳನ್ನೂ ಕೊಂದು ತಿನ್ನುತ್ತಿರುವರೆಂಬದಾಗಿ ಅಂಬ್ರಿಯಾ ಎಂಬ ಹಡಗಿನ ಯಜಮಾನನು ತಿಳಿಸಿರುತ್ತಾನೆ. ರೆಗ್ಗಿಯೋಪಟ್ಟಣದಿಂದ ಪ್ರಜೆಗಳನ್ನು ಸಾಗಿಸುತ್ತಿದ್ದ ೩ ಪ್ರಯಾಣಿಕರ ಗಾಡಿಗಳ ಮೇಲೆ ಪರ್ವತದ ಅಲೆ ಬಂದು ಎಲ್ಲರೂ ಹತರಾದರು. ಹನ್ನೆರಡು ವರ್ಷದ ಒಬ್ಬ ಬಾಲಕಿಯು ಒಂದು ಸನ್ಯಾಸಾಶ್ರಮದ ೩ ಮಂದಿ ಸನ್ಯಾಸಿಗಳನ್ನೂ ೪ ಮಂದಿ ಸಹವಾಸಿಯರನ್ನೂ ಬದುಕಿಸಿದಳು. ಸೇಲ ಎಂಬ ಊರಿನಲ್ಲಿ ಇಬ್ಬರು ಆರ್ಚಕರು ಮಾತ್ರ ಉಳಿದುಕೊಂಡಿದಾರೆ. ಪ್ರಿನ್‌ಸೆಸ್ ಲಾವೆಲ್ ಎಂಬ ರಾಜಕುಮಾರ್ತಿಯು ತನ್ನ ಶಿಥಿಲವಾದ ಅರಮನೆಯಲ್ಲಿ ಕಟ್ಟನ್ನು ಕೇಳಿ ತನ್ನ ಮಕ್ಕಳೆಂದು ಪ್ರಯತ್ನಪಟ್ಟು ಇಬ್ಬರು ಬಾಲಕಿಯರನ್ನು ಸಂರಕ್ಷಿಸಿದಳು. ಆಕೆಯ ಮಕ್ಕಳನ್ನು ಆಕೆಯ ಗಂಡನೇ ಮೊದಲು ರಕ್ಷಿಸಿದ್ದನು. ಇಟಲಿಯ ರಾಣಿಯಾದ ಹೆಲೀನಾಯವರು ಮೆಸ್ಸೀನಾ ಪಟ್ಟಣದ ಅಂಗಹೀನರಾದವರಿಗೆ ಉಪಚಾರಗಳನ್ನು ತಾವೇ ಮಾಡುತ್ತಿರುವರಲ್ಲದೆ, ಅವರ ಬಟ್ಟೆಬರೆಗಳನ್ನೂ ಹೊಲೆದು ಕೊಡುತ್ತಿರುವರು. ಪ್ರಪಂಚದ ಎಲ್ಲಾ ಭಾಗಗಳಿಂದಲೂ ಧನ ಸಹಾಯವು ಬಂದು ಒದಗುತ್ತಿರುವುದು. ಮೃತಪಟ್ಟವರ ಸಂಖ್ಯೆ ಇದುವರೆಗೆ ಗೊತ್ತಾಗಿರುವುದು—ಮೆಸ್ಸೀನ ೧ ಲಕ್ಷ ೦ ಸಾವಿರ. ರೆಗ್ಗಿಯೊ ೩೧ ಸಾವಿರ ... ೪೮ ಸಾವಿರ ಪೆಲರೋ ೩| ಸಾವಿರ ಬಾಗ್ನಾರೋ ವಿಲ್ಲಾ ಜಿಯೊ... ೩,೭೦೦ ಪಲ್ಮಾರೋ ೩,೩೦೦ ... ೮೦೦. ಫ್ರಾನ್ಸಿನಲ್ಲಿರುವ ಒಬ್ಬ ಪುಣ್ಯಾತ್ಮನು ಅನಾಥರಾಗಿರುವ ೧,೦೦೦ ಮಂದಿ ಮಕ್ಕಳನ್ನು ತಾನು ಕರೆದುಕೊಂಡು ಹೋಗಿ ವಿದ್ಯಾ ಬುದ್ಧಿಗಳನ್ನು ಕಲಿಸಿ ಸಲಹುವದಾಗಿ ತಿಳಿಸಿರುತ್ತಾನೆ.

ಲೇಖಿನಿ ಪ್ರಕಾಶಿಕಾ.

10 5

ಪ್ರತಿ ಒಬ್ಬ ವ್ಯಾಸುಶಿ ... ಪತ್ರಗಳನ್ನು ಬರೆಯುವವರು ... ಮತ್ತನ್ನು ಉಳಿಸಿಕೊಳ್ಳಲು ... ಧನಸಂಪಾದನೆ ಮಾಡಲು ಇಷ್ಟವುಳ್ಳವರು ಮತ್ತು ರಿಜಿಸ್ಟ್ರೇಷನ್ ಆಫೀಸುಗಳಿಗೆ ಹೋಗಲು ಪ್ರಯತ್ನ ಪಡುವವರೆಲ್ಲರೂ ರಿಜಿಸ್ಟ್ರೇಷನ್ ... ಯಿಂತಿರುವ ಈ ಪುಸ್ತಕವನ್ನು ಜಾಗ್ರತೆಯಾಗಿ ... ತರಿಸಿಕೊಳ್ಳಿರಿ. ತಕ್ಷಣ ಬರೆದುಕೊಂಡವರಿಗೆ ... ಸೇರಿ ೧—೨—೦ ವಿಳಾಸ —ಯಂ. ಕೃಷ್ಣಮೂರ್ತಿರಾವ್, ರಿಜಿಸ್ಟ್ರೇಷನ್ ಕ್ಲರ್ಕ್, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗಾ ಡಿಸ್ಟ್ರಿಕ್ಟ್.

ನಿನಗೆ ಸ್ವಸ್ಥವಿಲ್ಲವೋ?

ನಿನಗೆ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ? ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ಸ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುವದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯುರಿ, ಕಲ್ಲುನೆಸುವದು, ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಹುಣ್ಣು ... ಗಿನ ಹೊಟ್ಟೆನೋವು, ಯೆಂಗಸರ ವ್ಯಾಧಿಗಳು, ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು, ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ಸ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ ಪಿತ್ತಕೋಶವನ್ನು ಬಲಪಡಿಸಿ ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ ಆರೋಗ್ಯವನ್ನುಂಟುಮಾಡುವುವು. [69 22]

ಬೆಲೆ ೪ ಆಣೆ ೮ ಆಣೆ ಮತ್ತು ೧೨ ಆಣೆ ೧೬ ಆಣೆ ಬುಡ್ಡಿಗಳಲ್ಲಿ ... ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ... ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು. ಅಥವಾ, ಡೋನ್ಸ್

ನರಳುವ ಹೆಂಗಸರಿಗೆಲ್ಲಾ

74

ಪೆರೂನಾದಿಂದ ಪ್ರಯೋಜನವಾಗುವುದು.

ಅನೇಕ ಸ್ತ್ರೀಯರು ಪೆರೂನಾ ಸೇವನೆಯಿಂದ ತಮ್ಮ ಮುಖ ಸೌಂದರ್ಯವನ್ನು ದೀರ್ಘಕಾಲ ಕಾಪಾಡಿಕೊಂಡಿದ್ದಾರೆ ಸೌಂದರ್ಯವಾಗಿರಬೇಕಾದರೆ ಶರೀರವನ್ನು ಒಳಗೂ ಹೊರಗೂ ನಿರ್ಮಲವಾಗಿಟ್ಟುಕೊಂಡಿರಬೇಕು ಪೆರೂನಾವು ಮುಖದ ಚರ್ಮವನ್ನು ನಿರ್ಮಲವಾಗಿಡುವುದು ಮುಖವು ಕಾಂತಿಯು ಮುಖದಲ್ಲಿ ಉಕ್ಕಿಸುವುದು

MME LEO GABOURG

MRS JAMES GOLLOHER

DLLE MARIE L MEUNIER

ಪಕ್ಕೆಯ ನೋವು

ಮಿಸೆಸ್ ಜೂಲಿಯಾ ಎಟ್ರಿಕ್ ಅಪೊಲೊ ಪೆನ್ಸಿಲ್ವೇನಿಯಾ ಯು ಎಸ್ ಎ ಈಕೆ ಬರೆಯುವುದು —

"ಪೆರೂನಾದಿಂದ ನನ್ನ ಎದೆಯಲ್ಲೂ ಪಕ್ಕೆಯಲ್ಲೂ ಇದ್ದ ಬಾಧೆಯು ವಾಸಿಯಾಯಿತು. ಒಂದು ವರುಷದ ಕೆಳಗೆ ನಾನು ಸಿಗೋಗೆ ಬಂದಾಗ ಹಗಲಿರುಳು ನಿಂತುಕೊಳ್ಳುವದರಿಂದ ಎರಡು ಗಂಟೆ ಹೊತ್ತಿನಲ್ಲಿ ಕೆಲವು ವೇಳೆ ಡಾಕ್ಟರನ್ನು ಕರೆಸಬೇಕಾಯಿತು ಈಗ ದೇವರ ದಯದಿಂದ ನಾನು ಡಾಕ್ಟರಿಗೆ ಹೇಳಿಕಳುಹಿಸುವುದು ಅಗತ್ಯವಿಲ್ಲ

ನೀವು ಹೇಳಿದ ಪ್ರಕಾರ ನಾನು ಪೆರೂನಾ ಸೇವಿಸುತ್ತಾ ಬಂದ ಲಕ್ಷ್ಯ ನಾನು ಸುಖವಾಗಿ ನನ್ನ ಮನೆಯ ಕೆಲಸಗಳನ್ನು ಸರಿಯಾಗಿ ಮಾಡಿಕೊಂಡು ಹೋಗುತ್ತೇನೆ

ಪೆರೂನಾದಲ್ಲಿ ನನಗಿರುವಷ್ಟು ಭರವಸವು ಮತ್ತಾವದರಲ್ಲಿ ಇನ್ನಾವ ಪದಾರ್ಥದ ಮೇಲೂ ಇಲ್ಲ ಅದು ನನಗೆ ಸಹಾಯಮಾಡಿದೆ ಅದು ಇತರರಿಗೂ ಗುಣಕೊಡುವುದೆಂದು ನಾನು ನಂಬಿದ್ದೇನೆ"

ಶೀತಹಿಡಿದು ನನ್ನ ಬಾಳೇ ದುಃಖಕರವಾಯಿತು

ಡಲ್ ಮೇರಿ ಎಲ್ ಮೆಯುನಿಯರ್, ೧೧೩ ಓಂಟೆರಿಯೊ ಎವೆ ಮಾಂಟ್ರಿಯಲ್ ಕ್ಯಾನಡ, ಈಕೆ ಬರೆಯುವುದು — ಹಳೆ ಶ್ವಾಸರೋಗವು ಪೆರೂನಾದಿಂದ ವಾಸಿಯಾಯಿತೆಂದು ಸಂತೋಷವಾಗಿ ಹೇಳುತ್ತೇನೆ ಆ ರೋಗವು ನನ್ನ ಬಾಳನ್ನು ದುಃಖಕರವಾಗಿ ಮಾಡಿತ್ತು ಅದರಲ್ಲೂ ಬೇಗಿನ ಹೊತ್ತು ಬಹಳ ಅನುಭವಿಸಿದೆನು ಕೆಮ್ಮು ಕಫ ಶ್ಲೇಷ್ಮವನ್ನು ಉಗುಳ ಗಂಟಲನ್ನೂ ಶ್ವಾಸಕೋಶವನ್ನೂ ಸದಾಗ ಸವರಿಕೊಂಡು ಮನೆಯ ಇತರ ಕೆಲಸಗಳನ್ನು ಮಾಡಬೇಕಾಗಿತ್ತು ಈ ಔಷಧವು ನನಗೆ ಬೇಗನೆ ವಾಸಿಮಾಡಿತು ಈ ಭಯಂಕರವಾದ ರೋಗದಿಂದ ನರಳುವವರಿಗೆಲ್ಲಾ ಈ ಔಷಧವನ್ನು ಸೇವಿಸಬೇಕೆಂದು ನಾನು ವಿಶೇಷವಾಗಿ ಶಿಫಾರಸು ಮಾಡುತ್ತೇನೆ"

ತಲೆನೋವೂ ವಾಂತಿಯೂ

ಮಿಸ್ ಸಟ್ಟಿ ಇ ವಿಂಗಾರ್ಡನ್ ಆರ್ ಎಫ್ ಡಿ ೨ ವೆಸ್ಟ್ ಫೀಲ್ಡ್, ನ್ಯೂಯಾರ್ಕ್ ಯು ಎಸ್ ಎ, ಈಕೆ ಬರೆಯುವುದು —

"ನಾನು ತಲೆನೋವು ವಾಂತಿರೋಗಗಳಿಂದ ಬಹಳ ಶ್ರಮಪಟ್ಟು ಅನುಭವಿಸಿದೆನು ಈಗ ಅವು ನನಗೆ ಸಂಪೂರ್ಣವಾಗಿ ವಾಸಿಯಾದವು ಈಗ ನನಗಿರುವಷ್ಟು ಆರೋಗ್ಯವು ಹತ್ತು ವರುಷಗಳಿಂದ ಇರಲಿಲ್ಲ ರೋಗ ಅನುಭವಿಸುವವರಿಗೆಲ್ಲಾ ಪೆರೂನಾ ಮನ ಲಿನ್ ಎಂಬ ಔಷಧಗಳನ್ನು ಸೇವಿಸಲೆಂದು ಶಿಫಾರಸು ಮಾಡುತ್ತೇನೆ ಮತ್ತು ದೇವರು ಡಾ ಹಾರ್ಟ್‌ಮನ್‌ರನ್ನೂ ಅವರ ಅದ್ಭುತ ಔಷಧಗಳನ್ನೂ ಆಶೀರ್ವದಿಸಲಿ ಎನ್ನುವೆನು

ಕೆಮ್ಮಲೂ ಕೈಕಾಲೂ

ಮಿಸೆಸ್ ಹೆನ್ರಿ ವಾರ್ನರ್ ಆರ್ ಎಫ್ ಡಿ ನಂ ೧ ಅಮಾಟ ಐಯೊವಾ, ಯು ಎಸ್ ಎ, ಈಕೆ ಬರೆಯುವುದು — ಶೀತ ರೋಗ ಪೀಡಿತರೆಲ್ಲಾ ಪೆರೂನಾವನ್ನು ಸೇವಿಸಲಿ ಎಂದು ಶಿಫಾರಸು ಮಾಡುತ್ತೇನೆ ಮಕ್ಕಳಲ್ಲಿ ಹುಟ್ಟುವ ಶೀತರೋಗಗಳಿಗೂ ಕೆಮ್ಮಿಗೂ ಇದು ಉತ್ತಮವಾದ ಔಷಧವೆಂದು ನಾನು ಅನುಭವದಿಂದ ಹೇಳುತ್ತೇನೆ"

ಅಂತರ್ಗತವಾದ ಶೀತವು

ಮಿಸೆಸ್ ಜೇಂಸ್ ಗಾಲೊಹರ್ ನಾಪ್ನೀಡ್, ಓಂಟೆರಿಯೊ ಕ್ಯಾನಡಾ ಈಕೆ ಬರೆಯುವುದು — ನನಗೆ ಅಂತರ್ಗತವಾದ ಶೀತ ಹಿಡಿದು ಎರಡು ವರುಷ ಅನುಭವಿಸಿದೆನು ಆ ಕಾಲದಲ್ಲಿ ಬೆನ್ನೂ ಪಕ್ಕೆಗಳೂ ನೋಯುತ್ತಿದ್ದದ್ದರಿಂದ ಮನೆ ಕೆಲಸಗಳನ್ನು ಮಾಡಲಾರದೆ ಇದ್ದೆನು ಇದಲ್ಲದೆ ಒಂದು ಆದನ್ನು ನಿವಾರಣೆ ಮಾಡಿಕೊಳ್ಳದೆ ಹೋದರೆ ನಾನು ಬದುಕುವುದಿಲ್ಲವೆಂದು ಶಂಕೆಪಡುತ್ತಿದ್ದೆನು ನನ್ನ ಹಾಗೇ ರೋಗದಲ್ಲಿ ನರಳುತ್ತಿದ್ದವರಿಗೆ ಪೆರೂನಾದಿಂದ ವಾಸಿಯಾಯಿತೆಂದು ತಿಳಿದು, ನಾನೂ ಅದನ್ನು ಸೇವಿಸಿ ನೋಡೋಣವೆಂದು ಗೊತ್ತುಮಾಡಿಕೊಂಡೆನು ಒಂದು ಬಾಟ್ಲಿ ಔಷಧವನ್ನು ಸೇವಿಸುವಷ್ಟರಲ್ಲೇ ನನ್ನ ಶರೀರಸ್ಥಿತಿಯು ಬದಲಾವಣೆ ಹೊಂದಿತು ಐದು ಬಾಟ್ಲಿಗಳನ್ನು ಸೇವಿಸಿದೆನು ಈಗ ನಾನು ಸಂಪೂರ್ಣ ಗುಣಹೊಂದಿರುತ್ತೇನೆ ಇದನ್ನು ನನಗೆ ತೋರಿಕೊಟ್ಟದ್ದಕ್ಕಾಗಿ ಡಾ॥ ಹಾರ್ಟ್‌ಮನ್‌ರವರನ್ನು ವಂದಿಸುತ್ತೇನೆ"

ನನ್ನ ಸಹೋದರಿಯು ಪೆರೂನಾ ಉಪಯೋಗಿಸೆಂದು ನನಗೆ ಹೇಳಿದಳು ನಾನು ನಿಮ್ಮ ಔಷಧವನ್ನು ಸೇವಿಸಿದೆನು ಬೇಗನೆ ನನಗೆ ಆಹಾರ ರುಚಿಸುವಂತಾಯಿತು ನನಗೆ ಶಕ್ತಿಯೂ ಮಾಂಸವೂ ವೃದ್ಧಿಯಾಗಿ ಪೂರ್ಣಾರೋಗ್ಯದಿಂದಿರುತ್ತೇನೆ ನಿಮ್ಮ ಔಷಧವು ನನಗೆ ತುಂಬಾ ಪ್ರಯೋಜನವಾಯಿತು ಅದಕ್ಕಾಗಿ ವಂದಿಸುವೆನು ಹೀಗೆ ಹೇಳುವವರ್ಯಾರೆಂದರೆ —

ಮಿಸ್ ಜೂಲಿಯಾ ಬಟ್ಲರ್,

ಆಪ್ಲಟನ್, ವಿಸ್ಕಾನ್‌ಸನ್ ಯು ಎಸ್ ಎ

ಗುಣವಾದದ್ದಕ್ಕೆ ಕೃತಜ್ಞತೆಯು

ಮೇಂ ಲಿಯೊ ಗೇಬರ್ಗ್, ೨೧೫ ರೂ ಅರಾಗೊ ಸೇಂಟ್ ಸಾವ್ಯೂರ್ ಕ್ವಿಬೆಕ್ ಕ್ಯಾನಡಾ, ಈಕೆ ಬರೆಯುವುದು —

ನನಗೆ ಬುದ್ಧಿ ಬಂದಾಗಿನಿಂದಲೂ ನನ್ನ ತುಂಬಾ ದಿನವೆಲ್ಲಾ ನಿಜವಾಗಿಯೂ ನಾನು ಬಹಳ ಚೆನ್ನಾಗಿ ಆರೋಗ್ಯದಲ್ಲಿದ್ದೇನೆ ನಾನು ಮೊದಲಿನಂತೆ ಇಲ್ಲವೆಂದು ನನಗೆ ತೋರುವಂತಾಗಿದೆ

ನನ್ನ ಸ್ನೇಹಿತೆಯರಲ್ಲಿ ಕೆಲವರು ಶೀತದಿಂದ ನರಳುವವರು ಪೆರೂನಾವನ್ನು ಸೇವಿಸಿ ಆರೋಗ್ಯದಿಂದಿರುತ್ತಾರೆ ನನಗೇನೋ ಬಹು ಬೇಗನೆ ತೃಪ್ತಿಕರವಾಗಿ ವಾಸಿಯಾಗಿದೆ"

ಮಲಕೋಶಕ್ಕೆ ಹಿಡಿದ ಶೀತವು

ಮಿಸ್ ನ್ಯಾನಿ ಡರ್ಬಿನ್ ೧೨೪೨ ಉತ್ತರ ಬೀದಿ ಲಿಟಲ್‌ರಾಕ್ ಆರ್ಕನ್‌ಸಾಸ್ ಯು ಎಸ್ ಎ ಈಕೆ ಬರೆಯುವುದು —

"ನನಗೆ ಐದು ವರುಷಗಳಿಂದ ಕೆಟ್ಟರೋಗ ಹಿಡಿದು ನರಳುತ್ತಿದ್ದೆನು ಕಂಡು ಕೇಳಿದ ಔಷಧವೆಲ್ಲಾ ಸೇವಿಸಿದೆನು ಯಾವುದರಿಂದಲೂ ನನಗೆ ವಾಸಿಯಾಗಲಿಲ್ಲ ಕೆಲವು ಡಾಕ್ಟರುಗಳು ನನ್ನ ಮಲಮೂತ್ರಕೋಶದ ಶೀತವುಂಟಾಗಿ ಅದು ಕ್ಷಯವಾಗುತ್ತಿದೆ ಎಂದು ಹೇಳಿದರು ಒಬ್ಬ ಡಾಕ್ಟರು ನನ್ನ ರೋಗವನ್ನು ವಾಸಿಮಾಡುತ್ತೇನೆಂದು ಹೇಳಿದನು ಅವನು ಕೊಟ್ಟ ಔಷಧವನ್ನು ಎರಡು ತಿಂಗಳು ಸೇವಿಸಿದರೂ ಅದರಿಂದ ನನಗೆ ಸ್ವಲ್ಪವೂ ಅನುಕೂಲವಾಗಲಿಲ್ಲ

ನನ್ನ ಸ್ನೇಹಿತೆಯೊಬ್ಬಳು ಪೆರೂನಾ ಸೇವಿಸೆಂದು ನನಗೆ ಹೇಳಿದಳು ಸೇವಿಸುತ್ತಾ ಬಂದೆನು ಎರಡು ಬಾಟ್ಲಿ ಔಷಧ ಸೇವಿಸುವಷ್ಟರಲ್ಲೇ ನನಗೆ ಗುಣವಾಗುವಂತೆ ತೋರಿತು ಹಾಗೇ ಅದನ್ನು ಬಿಡದೆ ಸೇವಿಸುತ್ತಾ ಬಂದೆನು ಈಗ ಸಂಪೂರ್ಣ ಗುಣಹೊಂದಿ ಆರೋಗ್ಯವಾಗಿದ್ದೇನೆ

ಪೆರೂನಾದಿಂದ ನನಗೆ ಎಷ್ಟು ಪ್ರಯೋಜನವಾಯಿತೆಂದು ತಿಳಿಯಬೇಕಾದವರು ನನಗೆ ಬರೆಯಲಿ, ಕೂಡಲೇ ನಾನು ಜವಾಬು ಕೊಡುವೆನು

ಮಾಂಸವೂ ಶಕ್ತಿಯೂ ಹೆಚ್ಚಾದವು

ಮಿಸೆಸ್ ಕಾರ್ಡೀಲಿಯಾ ಬ್ರೌನ್, ಆರ್ ಎಫ್ ಡಿ ನಂ ೪ ರಾಜರ್ಸ್‌ವಿಲ್ಲೆ, ಟೆನ್, ಯು ಎಸ್ ಎ, ಈಕೆ ಬರೆಯುವುದು —

"ನನ್ನ ನೆತ್ತಿಗೆ ಶೀತ ಹಿಡಿದಿತ್ತು ಹತ್ತು ವರುಷ ಕಾಲ ಅದರ ಬಾಧೆಯಿಂದ ನರಳಿದೆನು ನಾನಾ ಬಗೆಯ ಔಷಧಗಳನ್ನು ಸೇವಿಸಿದಾಗ್ಯೂ ನನಗೆ ವಾಸಿಯಾಗಲಿಲ್ಲ

ಕಡೆಯಲ್ಲಿ ಒಂದು ಬಾಟ್ಲಿ ಪೆರೂನಾ ಕೊಂಡು, ಸೇವಿಸಲಾರಂಭಿಸಿದ ಒಡನೆಯೇ ನನಗೆ ವಾಸಿಯಾಗುವಂತೆ ಕಂಡಿತು ನಾನು ತುಂಬಾ ಕೃಶವಾಗಿದ್ದೆನು ಬಹಳ ಬಲಕುಂದಿತ್ತು ಬಾಯಿಗೆ ರುಚಿ ಇರಲಿಲ್ಲ ಗಂಟಲಲ್ಲಿ ಭಾರವಾಗಿತ್ತು ನುಂಗುವುದಕ್ಕಾಗುತ್ತಿರಲಿಲ್ಲ ಎಲ್ಲಾ ವಿಷಯಗಳಲ್ಲೂ ಬಹಳ ನಿತ್ರಾಣವಾಗಿತ್ತು ಆದರೆ ಈ ಪೆರೂನಾವನ್ನು ಸೇವಿಸುತ್ತಾ ಬಂದ ಹಾಗೆಲ್ಲಾ ಬಲವೂ ಮಾಂಸಖಂಡಗಳೂ ಹೆಚ್ಚುತ್ತಾ ಬಂದವು"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದ್ದೂ ಇವರಿಂದಲೇ ತಿಳಿಯಬಹುದು

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

8—1—1909 ರಿಂದ 15—1—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	8	10	0	0
ಮೈಸೂರು „	1	0	0	0
ಬೆಂಗಳೂರು ಡಿಸ್ಟ್ರಿಕ್ಟು	6	0	0	0
ಮೈಸೂರು „	20	15	0	0
ಕೋಲಾರ್ „	18	7	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	19	6
ಹಾಸನ „	3	2	0	0
ಚಿತ್ರದುರ್ಗ „	0	0	0	0
ಕಡೂರ್ „	15	[illegible]	0	0
ಶಿವಮೊಗ್ಗ „	0	0	0	0
* ಸಂಖ್ಯೆ ಕಾಣಿಸಿಲ್ಲ ಒಟ್ಟು	[illegible]	45	19	6

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರ ಮಾಘ ಶುದ್ಧ ಸಪ್ತಮಿ ಗುರುವಾರದಿಂದ ಮಾಘ ಶುದ್ಧ ತ್ರಯೋದಶಿ ಬುಧವಾರ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಜನವರಿ ಮತ್ತು ಫೆಬ್ರವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕೇದಿ ಮಳೆ ಮಾಸ
28	ಗುರು *	ಸಪ್ತಮಿ	11 12	ಅಶ್ವಿ	3 50	16
29	ಶುಕ್ರ †	ಅಷ್ಟಮಿ	14 10	ಭ	11 12	17
30	ಶನಿವಾ †	ನವಮಿ	11 2	ಕೃ	12 12	18
31	ರವಿವಾ	ದಶಮಿ	8 10	ರೋ	11 18	19
1	ಚಂದ	ಏಕಾದಶಿ	[illegible]	ಮೃ	17 10	20
2	ಕುಜ §	ದ್ವಾದಶಿ	[illegible]	ಆ	3 8	21
3	ಬುಧ	ತ್ರಯೋದಶಿ	8 8	ಪು	37 2	22

* ರಥಸಪ್ತಮಿ, ಸೂರ್ಯಚಂದ್ರವ್ರತ ಭೀಷ್ಮಾಷ್ಟಮಿ

† ನವಮೀ ತಿಥಿ † ಮಧ್ವನವಮಿ

ಭೀಷ್ಮೈಕಾದಶಿ

§ ಭೀಷ್ಮದ್ವಾದಶಿ ಪ್ರದೋಷ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಲ್ಪಿ ಅಕ್ಕಿ ಪಲ್ಲ ೧ಕ್ಕೆ	ರೂ	೧೫ ೮ ೦	೧೯ ೪ ೦
ಕೇಸರಿ ಅಕ್ಕಿ ಅವಲ್		೧೬ ...	೧೪ ೮ ೦
„ ಮಧ್ಯಮ		೧೫ ೨ ೦	೧೪ ೩ ೦
ಜಾಪಾನ್ ಅಕ್ಕಿ		೧೫ ೧೨ ೦	೧೯ ೦ ೦
ಸಣ್ಣಕ್ಕಿ ಅವಲ		೧೪ ೦ ೦	೨೦ ೦ ೦
„ ಮಧ್ಯಮ		೧೭ ೮ ೦	೧೮ ೦ ೦
ತೊಗರಿ ಬೇಳೆ ಪಲ್ಲ ೧ಕ್ಕೆ		೧೬ ೦ ೦	೧೪ ೦ ೦
„ ಮಧ್ಯ		೧೬ ೦ ೦	೧೭ ೮ ೦
ಹೆಸರು ಬೇಳೆ ಪಲ್ಲ ೧ಕ್ಕೆ		೧೦ ೨ ೦	೧೦ ೩ ೦
ಕಂಬಾರಿ		೧೦ ೦	೯ ೨ ೦
ಜೋಳ		೯ ೦ ೦	೧೦ ೦ ೦
ಹಲಸಂದೆ ಪಲ್ಲ ೧ಕ್ಕೆ		೧೩ ೪ ೦	೧೩ ೮ ೦
ಬೇಳೆ ಅವರೆ		೧೧ ೦ ೦	೧೩ ೨ ೦
ಹೆಸರು		೧೨ ೮ ೦	೧೪ ೦ ೦
ಉದ್ದು		೧೪ ೦ ೦	೧೪ ೪ ೦
ಕಡಲೆ		೧೮ ೦ ೦	೧೪ ೦ ೦
ಎಳ್ಳು ಸೇ ೧೨೭ ಕ್ಕೆ		೨೮ ೦	೨೨ ೧೩ ೦
ಹುರುಳಿ		೧೦ ೨ ೦	೧೧ ೦ ೦
ಹರಳು ೧೨೭ ಸೇರಿಗೆ		೧೦ ೨ ೦	೧೦ ೦ ೦
ಸೀಗೆಕಾಯಿ ಮಣ ೧ಕ್ಕೆ		೧ ೨ ೦	೧ ೬ ೦
ಮೆಣಸಿನಕಾಯಿ		೬ ೦ ೦	೪ ೧೨ ೦
„ ಮಧ್ಯಮ		೫ ೮ ೦	೪ ೪ ೦
ಪಿಲ್ಲ ಮೊದ್ದ ಅಚ್ಚು		೬ ೦ ೦	ಮ ೧ ೧೩ ೦
ಒಳ್ಳೆಣ್ಣೆ ಮಣ ೧ಕ್ಕೆ		೫ ೧೨ ೦	೫ ೦ ೦
ಹರಳೆಣ್ಣೆ „		೪ ೮ ೦	೪ ೦ ೦
ಕೊತ್ತಂಬರಿ ಪಲ್ಲ ೧ಕ್ಕೆ		೬ ೪ ೦	೬ ೮ ೦
ಉಪ್ಪು „		೬ ೦ ೦	೫ ೪ ೦
ಹುಣಸೇ ಹಣ್ಣು		೧ ೬ ೦	೧ ೪ ೦
ಹಳೇದು		೧ ೪ ೦	೧ ೩ ೦
ತುಪ್ಪ ಮಣ ೧ಕ್ಕೆ		೧೪ ೮ ೦	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೦ ೦	[illegible]
ತೆಂಗಿನಕಾಯಿ ೧೦೦ ಕ್ಕೆ		೩ ೪ ೦	[illegible]
ಅಡಿಕೆಕಾಯಿ ಮಣ ೧ಕ್ಕೆ		೦ ೧೩ ೦	೦ ೧೪ ೦
ಆಲೂಗೆಡ್ಡೆ ಕಾಯಿ ಮಣ ೧ಕ್ಕೆ		೦ ೧೪ ೦	[illegible]
ಚಿನ್ನ (ಪವನ್) ಕೆಂಪು		೧೫ ೭ ೦	[illegible]
„ „ ಪಸಿಮೆ		೧೫ ೧೪ ೦	[illegible]
„ „ ಗಟ್ಟಿ ತೊಲ ೧ಕ್ಕೆ		೨೪ ೧೦ ೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೦ ೦	[illegible]

Printed and Published by the Rev E W. Thompson M A Proprietor and Manager, Wesleyan Mission Pre Mysore. 28/1/1909

REGISTERED

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸ ೧೯೧೫ ನೇ ಇಸವಿ ಫೆಬ್ರುವರಿ ತಾರೀಖು ೪ ನೇ ಗುರುವಾರ. ಸಂಚಿಕೆ ೬.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

16 51

೧. ಲೋಕಾನುಗ್ರಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಅಪ್ಪಟ ಘಸ್ಟ ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆ ಬಾಳುವ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳೆತ (ಬಾವು) ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ಅಗಡಿ ನಿಶ್ಶಕ್ತಿ ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ನಿಂದಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತ ಬಂದರೆ ಬಹಳ ಹೊತ್ತು ಸುವಾಸನೆಯುಳ್ಳದ್ದಾಗಿರುತ್ತೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ... ಕಾಂತಿಯನ್ನೂ ಕೊಡುವ, ನಾನಾ ಮಾಗಳ ಬದಲಾವಣೆಯನ್ನು ಸರಿಪಡಿಸಿ, ... ದೋಷವನ್ನು ಕಳೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಸೂತಕಶೂಲೆ, ಮಕ್ಕಳ ಎಳವು, ಜ್ವರ, ಅಜೀರ್ಣ ಜ್ವರ, ... ಇವುಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇವನ್ನು ... ನಿಂದಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ... ರಕ್ತವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೬ ಆಣೆ

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಜ್ವ ರ ಹ ರಿ. 15 1



ಇದು ಸಾಧಾರಣ ಜ್ವರ ಚಳಿಜ್ವರ, ಮರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ ಬಿಟ್ಟುಬಿಟ್ಟು ಬರುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ನಾಶಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಹಮತ್ ಇಬ್ರಾಹಿಮ್ ಡಿವಿಜನ್ ಆಸಿಸ್ಟೆಂಟ್ ಎನ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡಿಕಾಕ್ಷನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಜ್ವರಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಇದಕ್ಕೆ ಬಹಳ ಉತ್ಸುಕರಾಗಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡಿಕಾಕ್ಷನ ಸೀಸೆಯನ್ನು ವಿ ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ—ಸೀಸೆ ೧ ಕ್ಕೆ ೮ ಆಣೆ ೧ ರೂ, ೧—೮ ರೂ, ರೂ ೩—೧೨ ೮ ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓ ಮ ೦ ಕ ಪೂ ರ ರ

ಈ ಔಷಧವು ಅಜೀರ್ಣ ಶೀತಭೇದಿ ಸಾಧಾರಣ ಹೊಟ್ಟೆ ಕಳೆಯುವದು, ರಕ್ತಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ಉತ್ತಮವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳ ಬಹಿಷ್ಠರಾಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಯನ್ನು ಕೂಡ ಗುಣಪಡಿಸುತ್ತದೆ ಕ್ರಯದ ವರವು ,, ಜ್ವರಹರಿ " ಎಂಬ ಔಷಧವಿರುವ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಮನುಷ್ಯರಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಉಪಯೋಗಿಸಿ ಕೊಟ್ಟ ಕೂಡಲೇ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ... ವಾಧೆಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದರ ಕೆಳಗಿನ ವಿಳಾಸದಂಗ್ರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

BASEL MISSION WEAVING ESTABLISHMENT, 59-24

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಯನ್ (ಮಿಶನ)

ನೆಯ್ಗೆಯ ಕಾರಖಾನೆಯಲ್ಲಿ

ನಾನಾ ವಿಧದ (ಮಿಕ್ಸ್ಡ್) ಟ್ವೀಡ್ ನಮೂನೆಯ ಕೋಟು ಇಜಾರುಗಳ ಚೆಕ್ ಬಟ್ಟೆಗಳೂ ಹಂಟಿಂಗ್ ಎಂಬ ಶಿಕಾರಿ ಬಟ್ಟೆಗಳೂ ಕಟಾಂಗ್ ಎಂಬ ಕವಿರಂಗಿನ ಬಟ್ಟೆಗಳೂ, ಬೇರೆ ಇತರ ಬಟ್ಟೆಗಳೂ ಟೇಬಲ್ ಕ್ಲೋತ್ ಎಂಬ ಮೇಜುವಸ್ತ್ರಗಳೂ ಟುವಾಲು ವಗೈರೆಗಳೂ ನಾಜೂಕಾಗಿ ತಯಾರಿಸಲ್ಪಟ್ಟು ಇವಾಗಲೂ ಚಿಲ್ಲರೆಯಾಗಿಯಾಗಲೀ ರಖಂ ಆಗಿಯಾಗಲೀ ಮಾರಾಟಕ್ಕೆ ತಯಾರಿರುತ್ತವೆ

ಒಳ್ಳೇ ಕಮಿಶ್ಯನ್—ರೂಪಾಯಿ ೧೦೦ ರ ಮೇಲೆ ಮಾಲುಗಳನ್ನು ತೆಗೆದುಕೊಳ್ಳುವ ಗಿರಾಕಿಗಳಿಗೆ ಯಾ ಸಾಹುಕಾರರಿಗೆ ಕೊಡಲಾಗುವದು ಹೆಚ್ಚಿನ ವಿವರ ಬರ್ದಾಗಿ ಯಾ ಕಾಗದ ಮೂಲಕ ತಿಳುಕೊಳ್ಳಬಹುದು

ನಮೂನೆ ಯಾ ಮಾದರಿಗಳು:—ಪರ ಊರಿನ ಸಾಹುಕಾರರು ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಕಳುಹಿಸಲ್ಪಡುವವು

ವಿಶೇಷ ಲಕ್ಷ್ಯ ಸತಕ್ಕದ್ದು:—ಈ ನಮ್ಮ ಮಾಲುಗಳಿಗೆ ಇಲ್ಲಿ ಕಾಣಿಸುವ "ಟ್ರೇಡ್ ಮಾರ್ಕ್" ಎಂಬ ವ್ಯಾಪಾರಗುರ್ತು ಇರುವ ಲೇಬಲ್ ಎಂಬ ಚೀಟು ಹಚ್ಚಿರುತ್ತದೆ ಈ ಗುರ್ತಿನ ಚೀಟುಗಳು ಇಲ್ಲದವುಗಳೆಲ್ಲಾ ಕಾಜಾ ಮಿಶ್ಯನ ಮಾಲುಗಳಲ್ಲವೆಂದು ತಿಳಿಯತಕ್ಕದ್ದು

ಶರ್ತ.—ನಗದಾಗಿ ಇಲ್ಲವೆ ಮಾಲುಗಳು ವಿ ಪಿ ಟಪ್ಪಾಲು ಮೂಲಕ ಕಳುಹಿಸಲ್ಪಡಬೇಕಾಗಿದ್ದಲ್ಲಿ ಕಾಲುಪಾಲು ಮೌಲ್ಯವನ್ನು ಮುಂಗಡವಾಗಿ ರವಾನಿಸತಕ್ಕದ್ದು

ಪತ್ರಗಳನ್ನು ಇಂಗ್ಲೀಷಿನಲ್ಲಿ ಯಾ ಕನ್ನಡದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು

☞ ಈ "ಟ್ರೇಡ್ ಮಾರ್ಕ"ನ್ನಾಗಲೀ, ನಾವು 'ಕೋಪಿರೈಟ್' ಪಡದಿರುವ ಲೇಬಿಲುಗಳನ್ನಾಗಲೀ, ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ಮಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು

ವಿಳಾಸ:—BASEL MISSION WEAVING ESTABLISHMENT,
MANGALORE S CANARA

AMRUTANJAN DEPOT, 16 OAK-LANE, BOMBAY. [17-50]

ಅಮೃತಾಂಜನ್ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಅಬಲುಗಂಟುನೋವು, ಎದೆನೋವು, ಘಾಯ, ಜಖಮು, ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತೀವ್ರವಾಗಿಯೂ ಯೋಗ್ಯವಾದ ಸಂಗತಿಯಾಗಿರುತ್ತದೆ ಇದು ಚರ್ಮದ ಮೂಲಕ ಮಾಂಸವನ್ನು ಪ್ರವೇಶಿಸಿ, ಕೊಳಕು ಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ ಬಾಟ್ಲಿ ಒಂದರ ಕಿಮ್ಮತು ೦—೮—೦ ಪೋಸ್ಟ್ ಖರ್ಚು ೦—೪—೦ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಕಪ್ ಇನಾಮು ಆರ್ ಆರ್ ಗಂಗೋಲಿ I ನೇ ಕ್ಲಾಸ್ ಸಬ್ ಜಡ್ಜ್ ಕಾರವಾರ,—ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ

ಗಜಕರ್ಣದ ಮುಲಾಮು.

ಮೂರು ಸಾರಿ ಹಚ್ಚುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಡಬ್ಬಿ ೧ಕ್ಕೆ ೦—೩—೦, ವಿ ಪಿ ಖರ್ಚು ೦—೨—೦.

ದಂತಮಂಜನ—ಡಬ್ಬಿ ೨ ಆಣೆ. ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ, ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ, ಹಲ್ಲುಗಳು ಘಟ್ಟಿಯಾಗುತ್ತವೆ, ಹಲ್ಲುಗಳು ಬೆಳ್ಳಗಾಗುತ್ತವೆ

ಕಜ್ಜಿ ಮುಲಾಮು—ಡಬ್ಬಿ ೧ ಕ್ಕೆ ಕಿಮ್ಮತು ೩ ಆಣೆ

ಕೇಶವರ್ಧಿನಿ—ಚಲೋ ಪರಿಮಳ ಉಳ್ಳದ್ದು

ಕೇಶವರ್ಧಿನಿ—ಮನಶುದ್ಧಿ ಮಾಡುವದು

ಕೇಶವರ್ಧಿನಿ—ಕೂದಲನ್ನು ನಯಮಾಡುವದು ಬಾಟ್ಲಿ ಒಂದರ ಕಿಮ್ಮತು ರೂ ೧—೦—೦

ವಜ್ರಗುಟಿಕ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಸುಮಾರಿಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸುಂದರೀ ತೈಲ—ಮೋರೆಯ ಮುದ್ದುಗಳಿಗೆ	೦—೮—೦
ತಾಂಬೂಲ ಗುಟಿಕೆ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೧—೮—೦
ಚೇಳುಕಡಿತದ ಮದ್ದು ಚೇಳುಕಡಿತಕ್ಕೆ	೦—೪—೦
ಮುಲಾಮು ಮಾತ್ರೆ—ಬಾಲಬಿಗೆ	೦—೮—೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಳಾಸ—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ," ಮುಂಬಯಿ.

ನರಳುವ ಹೆಂಗಸರಿಗೆಲ್ಲಾ

ಪೆರೂನಾದಿಂದ ಪ್ರಯೋಜನವಾಗುವುದು.

ಅನೇಕ ಸ್ತ್ರೀಯರು ಪೆರೂನಾ ಸೇವನೆಯಿಂದ ತಮ್ಮ ಮುಖ ಸೌಂದರ್ಯವನ್ನು ದೀರ್ಘಕಾಲ ಕಾಪಾಡಿಕೊಂಡಿದ್ದಾರೆ ಸೌಂದರ್ಯವಾಗಿರಬೇಕಾದರೆ ಶರೀರವನ್ನು ಒಳಗೂ ಹೊರಗೂ ನಿರ್ಮಲವಾಗಿಟ್ಟುಕೊಂಡಿರಬೇಕು ಪೆರೂನಾ ಮುಖದ ಚರ್ಮವನ್ನು ನಿರ್ಮಲವಾಗಿಡುವುದು ಸುಖವೂ ಶಾಂತಿಯೂ ಮುಖದಲ್ಲಿ ಉಕ್ಕೇರಿಸುವುದು

MME LEO GABOURG

MRS JAMES GOLLOHER

DLLE MARIE L MEUNIER

ನನ್ನ ಸಹೋದರಿಯು ಪೆರೂನಾ ಉಪಯೋಗಿಸೆಂದು ನನಗೆ ಹೇಳಿದಳು ನಾನು ನಿಮ್ಮ ಔಷಧವನ್ನು ಸೇವಿಸಿದೆನು ಬೇಗನೆ ನನಗೆ ಆಹಾರ ರುಚಿಸುವಂತಾಯಿತು ನನಗೆ ಶಕ್ತಿಯೂ ಮಾಂಸವೂ ವೃದ್ಧಿಯಾಗಿ ಪೂರ್ಣಾರೋಗ್ಯದಿಂದಿರುತ್ತೇನೆ ನಿಮ್ಮ ಔಷಧವು ನನಗೆ ತುಂಬಾ ಪ್ರಯೋಜನವಾಯಿತು ಅದಕ್ಕಾಗಿ ವಂದಿಸುವೆನು ಹೀಗೆ ಹೇಳದವರ‍್ಯಾರೆಂದರೆ — [illegible]

ಮಿಸ್ ಜೂಲಿಯಾ ಬಟ್ಲರ್,

ಆಪ್ಲಟನ್ ವಿಸ್ಕಾನ್ಸಿನ್ ಯು ಎಸ್ ಎ

ಗುಣವಾದದ್ದಕ್ಕೆ ಕೃತಜ್ಞತೆಯು

ಮೇಂ ಲಿಯೊ ಗೇಬರ್ಗ್, ೨೧೫ ರೂ ಅರಾಗೊ ಸೇಂಟ್ ಸಾವ್ಯುರ್, ಕ್ವಿಬೆಕ್ ಕ್ಯಾನಡಾ ಈಕೆ ಬರೆಯುವುದು

ನೀವು ನನಗೆ ಬುದ್ಧಿ ಹೇಳಿದ್ದಕ್ಕಾಗಿ ನಿಮ್ಮನ್ನು ತುಂಬಾ ವಂದಿಸುವೆನು [illegible] ಈಗ ಒಳ್ಳೆ ಚೆನ್ನಾಗಿ ಆರೋಗ್ಯದಲ್ಲಿದ್ದೇನೆ ನಾನು ಮೊದಲಿನವಳೇ ಅಲ್ಲವೆಂದು ನನಗೆ ತೋರುವಂತಾಗಿದೆ

ನನ್ನ ಸ್ನೇಹಿತೆಯರಲ್ಲಿ ಕೆಲವರು ಶೀತದಿಂದ ನರಳುವರು ಪೆರೂನಾವನ್ನು ಸೇವಿಸಿ ಆರೋಗ್ಯವೊಂದಿರುತ್ತಾರೆ ನನಗೆ ಸೇರಿ ಒಡನೆ ಬೇಗನೆ ತೃಪ್ತಿಕರವಾಗಿ ವಾಸಿಯಾಗಿದೆ

ಮಲಕೋಶಕ್ಕೆ ಹಿಡಿದ ಶೀತವು

ಮಿಸೆಸ್ ಮಾಗಿ ಡರ್ಕಿನ್ [illegible] ಉತ್ತರ ಏಳನೆ ಲಿಟಲ್ ರಾಕ್ ಆರ್ಕನ್ಸಾಸ್ ಯು ಎಸ್ ಎ ಈಕೆ ಬರೆಯುವುದು —

ನನಗೆ ಐದು ವರುಷಗಳಿಂದ ಕೆಟ್ಟ ರೋಗ ಹಿಡಿದು ನರಳುತ್ತಿದ್ದೆನು ಕಂಡು ಕೇಳಿದ ಔಷಧವನ್ನೆಲ್ಲಾ ಸೇವಿಸಿದೆನು ಯಾವುದರಿಂದಲೂ ನನಗೆ ವಾಸಿಯಾಗಲಿಲ್ಲ ಕೆಲವು ಡಾಕ್ಟರುಗಳು ನನ್ನ ಮಲಮೂತ್ರಕೋಶದಲ್ಲಿ ಶೀತಸೇರಿಹೋಗಿ ಅದು ಕ್ಷಯವಾಗುತ್ತಿದೆ ಎಂದು ಹೇಳಿದರು ಒಬ್ಬ ಡಾಕ್ಟರು ನನ್ನ ರೋಗವನ್ನು ವಾಸಿಮಾಡುತ್ತೇನೆಂದು ಹೇಳಿದನು ಅವನು ಕೊಟ್ಟ ಔಷಧವನ್ನು ಐದು ತಿಂಗಳು ಸೇವಿಸಿದರೂ ಅದರಿಂದ ನನಗೆ ಸ್ವಲ್ಪವೂ ಅನುಕೂಲವಾಗಲಿಲ್ಲ

ನನ್ನ ಸ್ನೇಹಿತೆಯೊಬ್ಬಳು ಪೆರೂನಾ ಸೇವಿಸೆಂದು ನನಗೆ ಹೇಳಿದಳು ಸೇವಿಸುತ್ತಾ ಬಂದೆನು ಎರಡು ಬಾಟ್ಲು ಔಷಧ ಸೇವಿಸುವಷ್ಟರಲ್ಲೇ ನನಗೆ ಗುಣವಾಗುವಂತೆ ತೋರಿತು ಹಾಗೇ ಅದನ್ನು ಬಿಡದೆ ಸೇವಿಸುತ್ತಾ ಬಂದೆನು ಈಗ ಸಂಪೂರ್ಣ ಗುಣಹೊಂದಿ ಆರೋಗ್ಯವಾಗಿದ್ದೇನೆ

ಪೆರೂನಾದಿಂದ ನನಗೆ ಎಷ್ಟು ಪ್ರಯೋಜನವಾಯಿತೆಂದು ತಿಳಿಯಬೇಕಾದವರು ನನಗೆ ಬರೆದಲ್ಲಿ ಕೂಡಲೇ ನಾನು ಜವಾಬು ಕೊಡುವೆನು

ವಕ್ಕೆಯ ನೋವು

ಮಿಸೆಸ್ ಜೂಲಿಯಾ ಬ್ರಿಕ್ ಟನ್ ಆಪ್ರಿಕ್ಲಿ ಪೆನ್ಸಿಲ್ವೇನಿಯಾ ಯು ಎಸ್ ಎ ಈಕೆ ಬರೆಯುವುದು —

ಪೆರೂನಾದಿಂದ ನನ್ನ ಎದೆಯಲ್ಲೂ ಪಕ್ಕೆಯಲ್ಲೂ [illegible] [illegible] ವರುಷದ ಕೆಳಗೆ [illegible] ಆಗಿದ್ದ [illegible] ವೈದ್ಯರು [illegible] ಕೆಲವು ಡಾಕ್ಟರುಗಳ ಔಷಧ [illegible] ಈಗ [illegible] ಡಾಕ್ಟರಿಗೆ [illegible] ಅಗತ್ಯವಿಲ್ಲ

ನೀವು ಹೇಳಿದ ಪ್ರಕಾರ ನಾನು ಪೆರೂನಾ ಸೇವಿಸುತ್ತಿದ್ದೆ [illegible] ನಾನು [illegible] ಮನೆಯ ಕೆಲಸಗಳನ್ನು ಸರಿಯಾಗಿ ಮಾಡಿಕೊಂಡು ಹೋಗುತ್ತೇನೆ

ಪೆರೂನಾದಲ್ಲಿ ನನಗಿರುವಷ್ಟು ಭರವಸೆಯು [illegible] ಇನ್ಯಾವ ಪದಾರ್ಥದಲ್ಲೂ ಇಲ್ಲ ಅದು ನನಗೆ [illegible] ಅದು ಇತರರಿಗೂ [illegible] ನಾನು ಬಲ್ಲೆನು

ಶೀತ ಹಿಡಿದು ನನ್ನ ಬಾಳೇ ದುಃಖಕರವಾಯಿತು

ಮದ [illegible] ಮೆಯುನಿಯರ್ [illegible] ಓಂಟೇರಿಯೊ ಏರಿ [illegible] ಈಕೆ ಬರೆಯುವುದು [illegible] ಶೈತ್ಯರೋಗವು ಪೆರೂನಾದಿಂದ ವಾಸಿಯಾಯಿತೆಂದು [illegible] ಹೇಳುತ್ತೇನೆ ಆ ರೋಗವು ನನ್ನ ಬಾಳನ್ನು ದುಃಖಕರವಾಗಿ ಮಾಡಿತ್ತು ಅದರಲ್ಲೂ [illegible] ಹೊತ್ತು [illegible] ಕಿವಿ ಕೆಮ್ಮು [illegible] ಸರಾಗವಾಗಿ [illegible] ಕೆಲಸಗಳನ್ನು ಮಾಡಬೇಕಾಗಿತ್ತು ಈ ಔಷಧವು ನನಗೆ ಬೇಗನೆ [illegible] ಈ [illegible] ರೋಗದಿಂದ ನರಳುವವರಿಗೆಲ್ಲಾ ಈ ಔಷಧವನ್ನು ಸೇವಿಸಿರೆಂದು [illegible] ಶಿಫಾರಸ್ ಮಾಡುತ್ತೇನೆ

ತಲೆನೋವೂ ವಾಂತಿಯೂ

ಮಿಸ್ ಸ್ಟೆಲ್ಲಾ ಮೆರಿಡಿತ್ [illegible] ಆರ್ ಎಫ್ ೨ [illegible] ನ್ಯೂಯಾರ್ಕ್ ಯು ಎಸ್ ಎ ಈಕೆ ಬರೆಯುವುದು —

ನಾನು ತಲೆನೋವು ವಾಂತಿರೋಗಗಳಿಂದ ಬಹಳ ಶ್ರಮಪಟ್ಟು ಅನುಭವಿಸಿದವಳು ಈಗ ಅವು ನನಗೆ ಸಂಪೂರ್ಣವಾಗಿ ವಾಸಿಯಾದವು ಈಗ ನನಗಿರುವಷ್ಟು ಆರೋಗ್ಯವು ಹತ್ತು ವರುಷಗಳಿಂದ ಇರಲಿಲ್ಲ ರೋಗ ಅನುಭವಿಸುವವರೆಲ್ಲ ಪೆರೂನಾ ಮನಾಲಿನ್ ಎಂಬ ಔಷಧಗಳನ್ನು ಸೇವಿಸಬೇಕೆಂದು ಶಿಫಾರಸು ಮಾಡುತ್ತೇನೆ ಮತ್ತು ದೇವರು ಡಾ, ಹಾರ್ಟ್‌ಮನ್‌ರವರನ್ನೂ ಅವರ ಅದ್ಭುತ ಔಷಧಗಳನ್ನೂ ಆಶೀರ್ವದಿಸಲಿ ಎನ್ನುವೆನು

ಕೆಮ್ಮಲೂ ಶೈತ್ಯವೂ

ಮಿಸೆಸ್ ಹೆನ್ರಿ ವಾಟರ್ಸ್, ಆರ್ ಎಫ್ ಡಿ ನಂ ೧ ಲಾಮಾಟಿ ಐಯೊವಾ, ಯು ಎಸ್ ಎ ಈಕೆ ಬರೆಯುವುದು — ಶೀತ ರೋಗ ಪೀಡಿತರೆಲ್ಲಾ ಪೆರೂನಾವನ್ನು ಸೇವಿಸಲಿ [illegible] ಶಿಫಾರಸು ಮಾಡುತ್ತೇನೆ ಮಕ್ಕಳಲ್ಲಿ ಹುಟ್ಟುವ ಶೀತರೋಗಗಳಿಗೂ ಕೆಮ್ಮಲಿಗೂ ಇದು ಉತ್ತಮವಾದ ಔಷಧವೆಂದು ನಾನು ಅನುಭವದಿಂದ ಹೇಳುತ್ತೇನೆ

ಅಂತರ್ಗತವಾದ ಶೀತವು

ಮಿಸೆಸ್ ಜಿ [illegible] ಗಾಹೇಗನ್, ನಾರ್ವುಡ್ ಓಂಟೇರಿಯೊ ಕ್ಯಾನಡಾ ಈಕೆ ಬರೆಯುವುದು — ನನಗೆ ಅಂತರ್ಗತವಾದ ಶೀತ ಹಿಡಿದು ಎರಡು ವರುಷ ಅನುಭವಿಸಿದೆನು ಶೀತಕಾಲದಲ್ಲಿ ಬೆನ್ನೂ ಪಕ್ಕೆಗಳೂ ನೋಯುತ್ತಿದ್ದದ್ದರಿಂದ ಮನೆ ಕೆಲಸಗಳನ್ನು ಮಾಡಲಾರದೆ ಇದ್ದೆನು ಇದಲ್ಲದೆ [illegible] ಅದನ್ನು ನಿವಾರಣೆ ಮಾಡಿಕೊಳ್ಳದೆ ಹೋದರೆ ನಾನು ಬದುಕುವುದಿಲ್ಲವೆಂದು ಶಂಕೆಪಡುತ್ತಿದ್ದೆನು ನನ್ನ ಹಾಗೇ ರೋಗದಲ್ಲಿ ನರಳುತ್ತಿದ್ದವರಿಗೆ ಪೆರೂನಾದಿಂದ ವಾಸಿಯಾಯಿತೆಂದು ತಿಳಿದು, ನಾನೂ ಅದನ್ನು ಸೇವಿಸಿ ನೋಡೋಣವೆಂದು ಗೊತ್ತುಮಾಡಿಕೊಂಡೆನು ಒಂದು ಬಾಟ್ಲಿ ಔಷಧವನ್ನು ಸೇವಿಸುವಷ್ಟರಲ್ಲೇ ನನ್ನ ಶರೀರಸ್ಥಿತಿಯು ಬದಲಾವಣೆ ಹೊಂದಿತು ಐದು ಬಾಟ್ಲಿಗಳನ್ನು ಸೇವಿಸಿದೆನು ಈಗ ನಾನು ಸಂಪೂರ್ಣ ಗುಣಹೊಂದಿರುತ್ತೇನೆ ಅದನ್ನು ನನಗೆ ಸೂಚಿಸಿಕೊಟ್ಟದ್ದಕ್ಕಾಗಿ ಡಾ| ಹಾರ್ಟ್‌ಮನ್‌ರವರನ್ನು ವಂದಿಸುತ್ತೇನೆ

ಮಾಂಸವೂ ಶಕ್ತಿಯೂ ಹೆಚ್ಚಾದವು

ಮಿಸೆಸ್ ಕ್ಲಾಡಿಯಾ ಬ್ರೌನ್ ಆರ್ ಎಫ್ ಡಿ ನಂ ೪ ರಾಜರ್ಸ್‌ವಿಲ್ಲಿ ಟೆನ್, ಯು ಎಸ್ ಎ ಈಕೆ ಬರೆಯುವುದು —

ನನ್ನ ಹೊಟ್ಟೆಗೆ ಶೀತ ಹಿಡಿದಿತ್ತು ಹತ್ತು ವರುಷ ಕಾಲ ಅದರ ಬಾಧೆಯಿಂದ ನರಳಿದೆನು ನಾನಾ ಬಗೆಯ ಔಷಧಗಳನ್ನು ಸೇವಿಸಿದಾಗ್ಯೂ ನನಗೆ ವಾಸಿಯಾಗಲಿಲ್ಲ

ಕಡೆಯಲ್ಲಿ ಒಂದು ಬಾಟ್ಲು ಪೆರೂನಾ ಕೊಂಡು, ಸೇವಿಸಲಾರಂಭಿಸಿದ ಒಡನೆಯೇ ನನಗೆ ವಾಸಿಯಾಗುವಂತೆ ಕಂಡಿತು ನಾನು ತುಂಬಾ ಕೃಶವಾಗಿದ್ದೆನು ಬಹಳ ಬಲಕುಂದಿತ್ತು ಬಾಯಿಗೆ ರುಚಿ ಇರಲಿಲ್ಲ ಗಟ್ಟಿ [illegible] ಸೇರದಾಗಿತ್ತು ನುಂಗುವುದಕ್ಕಾಗುತ್ತಿರಲಿಲ್ಲ ಎಲ್ಲಾ ವಿಷಯಗಳಲ್ಲೂ ಬಹಳ ನಿತ್ರಾಣವಾಗಿತ್ತು ಆದರೆ ಈ ಪೆರೂನಾವನ್ನು ಸೇವಿಸುತ್ತಾ ಬಂದ ಹಾಗೆಲ್ಲಾ ಬಲವೂ ಮಾಂಸವೂ ದಿನಗಳೂ ಹೆಚ್ಚುತ್ತಾ ಬಂದವು

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದ್ದೂ ಇವರಿಂದಲೇ ತಿಳಿಯಬಹುದು

ವಿಳಾಸ — ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವ್ಯಾವುದೆಂದರೆ

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೮—೧—೧೯೦೯ ರಿಂದ ೧೫—೧—೧೯೦೯ ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	8	10	0	0
ಮೈಸೂರು ,	1	0	0	0
ಬೆಂಗಳೂರು ಡಿಸ್ಟ್ರಿಕ್ಟು	[illegible]	5	0	0
ಮೈಸೂರು ,	20	15	0	0
ಕೋಲಾರ್ ,	18	7	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	19	6
ಹಾಸನ ,	1	2	0	0
ಚಿತ್ರದುರ್ಗ ,,	0	0	0	0
ಕಡೂರ್ ,,	16	6	0	0
ಶಿವಮೊಗ್ಗಾ ,,	0	0	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	[illegible]	[illegible]	19	6

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಕೀಲಕನಾಮ ಸಂವತ್ಸರದ ಪೌಷ ಶುದ್ಧ ಸಪ್ತಮಿ ಗುರುವಾರದಿಂದ ಮಾಘ ಶುದ್ಧ ತ್ರಯೋದಶಿ ಬುಧವಾರ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಜನವರಿ ಮತ್ತು ಫೆಬ್ರವರಿ

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಿಂಗಳ ಮಳೆ ದಿನ
28	ಗುರು *	ಸಪ್ತಮಿ	11 15	ಶ	[illegible] 50	16
29	ಶುಕ್ರ ‡	ಅಷ್ಟಮಿ	11 40	ಭ	31 [illegible]2	17
30	ಶನಿವಾ †	ನವಮಿ	11 [illegible]	ಕೃ	32 12	18
31	ರವಿವಾ	ದಶಮಿ	[illegible] 30	ರೋ	31 39	19
1	ಚಂದ್ರ	ಏಕಾದಶಿ	[illegible]	ಮೃ	3[illegible] 10	20
2	ಕುಜ §	ದ್ವಾದಶಿ	[illegible]	ಆ	1 [illegible]	21
3	ಬುಧ	ತ್ರಯೋದಶಿ	[illegible]	ಪು	7 2	2[illegible]

* ತಿಥಿದ್ವಯ ರಥಸಪ್ತಮಿ ಸೂರ್ಯಚಂದ್ರೋತ್ಸವ ಭಿಸ್ಮಾಷ್ಟಮಿ

‡ ನವಮಿ ಶಿವ † ಮಧ್ವನವಮಿ

ಬೀಷ್ಮ ದ್ವಾದಶಿ

§ ಏಷ್ಯದ್ವಾದಶಿ ಪ್ರದೋಷ

ಪೇಟೆ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೫ ೮ ೦	೧೯ ೮ ೦
ಕೆಂಬೂತ ಲಿಂ ಅಕ್ಕಿ		೧೭	೧೪ ೮ ೦
, ಮುಂಡು		೧೫ ೮ ೦	೧೮ ೦ ೦
ಜಾಪಾನ್ ಅಕ್ಕಿ		೧೫ ೧೨	೧೯ ೦ ೦
ಸಣ್ಣಕ್ಕಿ ಅವಲ		೧೮ ೦	೨೦ ೦ ೦
, ಮುಯಂ		೧೭ ೮ ೦	೧೮ ೦ ೦
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೬ ೫ ೦	೧೮ ೦ ೦
ಮುಯಿ		೧೭ ೦ ೦	೧೭ ೮ ೦
ಹೈದರಾಗಿ ಪಲ್ಲಾ ೧ಕ್ಕೆ		೧೨ ೫ ೦	೧೨ ೨ ೦
ರಾಗಿ		೧೨ ೦	೯ [illegible]
ಜೋಳ		[illegible]	೧೨ ೨ ೦
ಹುರುಳಿ ಪಲ್ಲಾ ೧ಕ್ಕೆ		೧೩ ೬ ೦	೧೨ ೮ ೦
ಬಿಳಿ ಅವರೆ		೧೦ ೦	೧೨ ೦ ೦
ಹೆಸರು		೧೨ ೮ ೦	೧೩ ೦
ಉದ್ದು		೧೩ ೬ ೦	೧೪ ೪ ೦
ಕಡಲೆ		೯ ೮ ೦	೧೬ ೧೦
ಎಳ್ಳು ಸೇರು ೧೨ಕ್ಕೆ		೨೧ ೦	೨೦ ೧೨ ೦
ಹುರುಳಿ		೧೨ ೮ ೦	೧೧ ೦ ೦
ಹರಳು ೧೨೭ ಸೇರಿಗೆ		೧೨ ೮ ೦	೧೦ ೦ ೦
ಸೀಗೆಕಾಯಿ ಮಣ ೧ಕ್ಕೆ		೧ ೮ ೦	೧ ೬ ೦
ಮೆಣಸಿನಕಾಯಿ		೬ ೦ ೦	೪ ೧೨ ೦
,, ಮುಯಂ		೫ ೮ ೦	೪ ೪ ೦
ವೀಳ್ಯದೆಲೆ ದೊಡ್ಡ ಅಚ್ಚು		೬ ೦ ೦	ಮ ೧ ೧೨ ೦
ಒಳ್ಳೆಣ್ಣೆ ಮಣ ೧ಕ್ಕೆ		೫ ೧೨ ೦	೫ ೦ ೦
ಹರಳೆಣ್ಣೆ ,		೬ ೮ ೦	೪ ೦ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೬ ೪ ೦	೬ ೮ ೦
ಉಪ್ಪು ,		೬ ೦ ೦	೫ ೪ ೦
ಹುಣಸೇ ಹಣ್ಣು		೧ ೬ ೦	೧ ೪ ೦
ಹಳೇದು		೧ ೪	೧ ೨ ೦
ತುಪ್ಪ ಮಣ ೧ಕ್ಕೆ		೧೪ ೫ ೦	೧೫ ೦ [illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೨ ೦	೪ ೦ [illegible]
ತೆಂಗಿನಕಾಯಿ ೧೦೦ ಕ್ಕೆ		೪ ೨ ೦	೪ ೮ [illegible]
ಅಳಲೇಕಾಯಿ ಮಣ ೧ಕ್ಕೆ		೦ ೧೨ ೦	೦ ೧೪ [illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ		೦ ೧೪ ೦	೧ ೦ [illegible]
ಚಿನ್ನ (ಪೌನ್) ಕೆಂಪು		೧೫ ೭ ೦	[illegible]
, ,, ಪಸಿಮೆ		೧೫ ೧೪ ೦	[illegible]
, ,, ಗಟ್ಟಿ ತೊಲ ೧ಕ್ಕೆ		೨೪ ೧೨ ೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೦ ೦	[illegible]

Printed and Published by the Rev E W Thompson, M A, Proprietor and Manager Wesleyan Mission Pre[ss] Mysore 28/1/1909

REGISTERED

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೧೫ ನೇ ಇಸವಿ ಫೆಬ್ರುವರಿ ತಾರೀಖು ೪ ನೇ ಗುರುವಾರ. ಸಂಚಿಕೆ ೨೬

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 16 51

೧ ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಬಾಳುವ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ ...



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ... ಕೈಕಾಲು ಶೋಷಣ (ಬಾವು) ... ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ... ಮುಂತಾದ ಅನೇಕ ರೋಗಗಳಿಗೆ ಕೊಟ್ಟರೆ ಹಿಂದೆ ಶೀಘ್ರವಾಗಿ ಗುಣಪಡಿಸುತ್ತವೆ ...

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಅರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ 18 1

ಇದು ಸಾಧಾರಣ ಜ್ವರ, ಹಳೇಜ್ವರ, ಮಲೇರಿಯಾ ಜ್ವರ, ಶೀತ ಜ್ವರ, ವಾತಜ್ವರ ... ಎಂಬ ಸಕಲ ವಿಧವಾದ ಜ್ವರಗಳನ್ನೂ ಬೇಗನೆ ವಾಸಿಮಾಡುವದು ...

ಕ್ರಯ—ಸೀಸೆ ೧ಕ್ಕೆ ೮ ಆಣೆ ... ಪೋಸ್ಟೇಜು ಬೇರೆ ...

ಓ ಮ ೦ ಕ ಪೂ ರ

ಈ ಔಷಧವು ಅಜೀರ್ಣ, ಶೀತಭೇದಿ ... ಹೊಟ್ಟೆನೋವುಗಳು ... ಮುಂತಾದವುಗಳಿಗೆ ... ಗುಣಕೊಡುವದು ...

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ...

ದೊರೆಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

BASEL MISSION WEAVING ESTABLISHMENT, 59 24

MANGALORE, SOUTH CANARA.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಬಾಸೆಲ್ ಮಿಶ್ಶನ್ (ಬಸ್ತಿಯ) ನೆಯ್ಗೆ ಕಾರಖಾನೆಯಲ್ಲಿ

ನಾನಾ ವಿಧ (ಮಿಶ್ರಿತ) ಟ್ವೀಡ್ ನಮೂನೆಯ ಕೋಟು ಅಂಗಿಗಳ ಚೆಕ್ ಬಟ್ಟೆಗಳೂ ... ಟುವಾಲು ... ಮಾರಾಟಕ್ಕೆ ತಯಾರಿರುತ್ತವೆ.

ಒಳ್ಳೇ ಕಮಿಶ್ಶನ್—ರೂಪಾಯಿ ೧೦೦ ರ ... ವ್ಯಾಪಾರಿಗಳಿಗೆ ಯಾ ... ಕೊಡಲಾಗುವದು ...

ನಮೂನೆ ಯಾ ಮಾದರಿಗಳು—... ಕಳುಹಿಸಲ್ಪಡುವವು.

ವಿಶೇಷ ಲಕ್ಷ್ಯಸತಕ್ಕದ್ದು—ಈ ನಮ್ಮ ವ್ಯಾಲುಗಳಿಗೆ ... "ಟ್ರೇಡ್ ಮಾರ್ಕ್" ಎಂಬ ವ್ಯಾಪಾರಗುರುತು ಇರುವ ಚೀಟಿ ... ತಿಳಿಯತಕ್ಕದ್ದು.

ಶರ್ತ—ನಗದಾಗಿ ... ವ್ಯಾಲುಗಳು ವಿ. ಪಿ. ಟಪ್ಪಾಲ ಮೂಲಕ ಕಳುಹಿಸಲ್ಪಡಬೇಕಾದಲ್ಲಿ ... ಮುಂಗಡವಾಗಿ ರವಾನಿಸತಕ್ಕದ್ದು.

ಪತ್ರಗಳನ್ನು ಇಂಗ್ಲಿಷಿನಲ್ಲಿ ಯಾ ಕನ್ನಡದಲ್ಲಿ ... ಬರೆಯತಕ್ಕದ್ದು.

☞ ಈ "ಟ್ರೇಡ್ ಮಾರ್ಕ್"ನ್ನಾಗಲೀ, ನಾವು "ಕೋಪಿರೈಟ್" ಪಡೆದಿರುವ ಲೇಬಿಲುಗಳನ್ನಾಗಲೀ, ಇಲ್ಲವೆ ಆ ನಮೂನೆಯ ಬೇರೆ ಲೇಬಿಲುಗಳನ್ನಾಗಲೀ ಯಾರಾದರೂ ಇತರ ವ್ಯಾಲುಗಳ ಮೇಲೆ ಪ್ರಯೋಗಿಸಲೂ ಮಾಡಲೂ ಕೂಡದು.

ವಿಳಾಸ—BASEL MISSION WEAVING ESTABLISHMENT, MANGALORE S. CANARA.

AMRUTANJAN DEPOT, 16 OAK-LANE, BOMBAY. [17-50]

ಅಮೃತಾಂಜನ ಡಿಪೋ, ೧೬ ಓಕ್‌ಲೇನ್, ಮುಂಬಯಿ.



ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ... ಎದೆಶೀತ, ಘಾಯ, ಜಖಮು, ಮೂಲವ್ಯಾಧಿ, ಇವೇ ಮೊದಲಾದ ... ಸೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ... ಬಾಟ್ಲಿ ಒಂದರ ಕಿಮ್ಮತ್ತು ೦—೮—೦ ... ಆನರೆಬಲ್ ಸರ್ ... ನಾನು ಅಮೃತಾಂಜನವನ್ನು ಉಪಯೋಗಿಸಿದ್ದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ.

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ.

ಗಜಕರ್ಣದ ಮುಲಾಮು.

ಮೂರು ಸಾರಿ ಹಚ್ಚುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವದು. ಇದರಿಂದ ಚರ್ಮಕ್ಕೆ ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ. ಡಬ್ಬಿ ೧ಕ್ಕೆ ೦—೬—೦ ವಿ. ಪಿ. ಖರ್ಚು ೦—೨—೦

ದಂತಮಂಜನ—ಡಬ್ಬಿ ೨ ಆಣೆ. ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ, ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ, ಹಲ್ಲುಗಳು ಘಟ್ಟಿಯಾಗುತ್ತವೆ, ಹಲ್ಲುಗಳು ಬೆಳ್ಳಗಾಗುತ್ತವೆ.	ವಜ್ರಗುಟಿಕ—ಧಾತುಪುಷ್ಟಿ, ರಕ್ತಶುದ್ಧಿ ೧—೦—೦
ಕಜ್ಜಿ ಮುಲಾಮು—ಡಬ್ಬಿ ೧ಕ್ಕೆ ಕಿಮ್ಮತ್ತು ೩ ಆಣೆ.	ಕುಕ್ ರೋಗರಿಪು—ಹೆಂಗಸರ ಹೊಟ್ಟೆನೋವಿಗೆ ೧—೦—೦
ಕೇಶವರ್ಧಿನಿ—ಚಳೋ ಪರಿಮಳ ಉಳ್ಳದ್ದು.	ಸುಂದರೀ ತೈಲ—ಮೋರೆಯ ಮುದ್ದ ಅಗಲ ೦—೮—೦
ಕೇಶವರ್ಧಿನಿ—ಮನಶುದ್ಧಿ ಪಡುವದು.	ತಾಂಬೂಲ ಗುಟಿಕೆ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ ೦—೪—೦
ಕೇಶವರ್ಧಿನಿ—ಕೂದಲನ್ನು ನಯಮಾಡುವದು. ಬಾಟ್ಲಿ ಒಂದರ ಕಿಮ್ಮತ್ತು ರೂ ೦—೬—೦	ನೇತ್ರಾಂಜನ—ಮುಂದವೃಷ್ಟಿಗೆ ೦—೪—೦
	ಬೇಲುಕಡಿತದ ಮದ್ದು ಚೇಳುಕಡಿತಕ್ಕೆ ೦—೪—೦
	ಜುಲಾಬು ಮಾತ್ರೆ—ಜುಲಾಬಿಗೆ ೦—೪—೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ—ವಿಲಿಯಂ ಮತ್ತು ಕಂಪೆನಿ, ೧೬ ಓಕ್‌ಲೇನು, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ್," ಮುಂಬಯಿ.

JUST RECEIVED! JUST RECEIVED!!

Stead's Books for the Bairns [5 5]
(illustrated) New Numbers

STEAD'S PENNY POPULAR TALES—Sixty four Pages in a coloured Picture Cover. Each number contains a story of thrilling interest. 24 numbers.

CALENDARS FOR 1909.

Apply—The Manager, C L S Book Depot, Mysore City.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

4-5



ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು ಎಲ್ಲಾ ವಿಧದ ಶೀತ, ಗಂಟ್ಲುಸ್ವಲ್ಲ ಎದೆಯಲ್ಲು ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಜಾಗ್ರತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಸಂಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಬಲವನ್ನು ನಿರ್ಮೂಲಿಸುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲಲ್ಲಿ ವಿಕ್ರಯಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಟೀಚರು ಬೇಕು

16 3

ಕೊಳ್ಳೇಗಾಲದಲ್ಲಿ ಬಾಲಕಾಭಿವೃದ್ಧಿಯುಂಟಿರುವ ಮಹಮ್ಮದೀಯರ ಉರ್ದು ಪಾಠಶಾಲೆಗೆ - ಡ್ರಿಲ್ - ಮತ್ತು - ಜಿಮ್ನಾಸ್ಟಿಕ್ - ಇವುಗಳನ್ನು ಬೋಧಿಸಲು ಶಕ್ತರಾಗಿ, ಮೈಸೂರು ಅಪ್ಪರ್ ಸೆಕೆಂಡರಿಯಲ್ಲಿ ಉರ್ದು ಭಾಷೆಯಿಂದಲಾಗಲಿ, ಮದ್ರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್‌ನ ಇದೇ ಭಾಷೆಯನ್ನು ತೆಗೆದುಕೊಂಡಾಗಲಿ, ತೇರ್ಗಡೆ ಹೊಂದಿರುವ ಉರ್ದು ಭಾಷೆಯನ್ನು ಹೇಳಿಕೊಡತಕ್ಕ ಒಬ್ಬ ಹೆಡ್‌ಮಾಸ್ಟರು ಬೇಕಾಗಿರುತ್ತೆ. ಈ ಉಪಾಧ್ಯಾಯರಿಗೆ ೧೫ ರೂಪಾಯಿ ಮಾಸವೇತನವು ಕೊಡಲ್ಪಡುವುದು ಮುಂದೆ ಸ್ವಲ್ಪ ಕಾಲದಲ್ಲಿ ಈ ಶಾಲೆಯನ್ನು ಸರ್ಕಾರದವರ ಪೋಷಣೆಗೆ ಒಳಪಡಿಸಬೇಕೆಂದಿರುತ್ತೆ ಆಗ್ಗೆ ಸರ್ಕಾರಿಯಾಗಿ ವೇತನವು ದೊರೆಯುವುದರಿಂದ ಉಪಾಧ್ಯಾಯರಿಗೆ ಇನ್ನೂ ಸೌಕರ್ಯವಿರುವುದು ಎಂಬುದರಲ್ಲಿ ಸಂದೇಹವಿಲ್ಲ ಈ ಮೇಲ್ಕಂಡ ಯೋಗ್ಯತೆಯುಳ್ಳವರು ತಮ್ಮ ಸರ್ಟಿಫಿಕೇಟುಗಳನ್ನೂ ಇತರ ಯೋಗ್ಯತಾ ಪತ್ರಿಕೆಗಳನ್ನೂ ಅವುಗಳ ನಕಲುಗಳನ್ನು ಅಪ್ಲಿಕೇಷನ್ ಸಮೇತ - ಕೊಳ್ಳೇಗಾಲದ ಅಹಮ್ಮದೀಯ ಅನ್ಜುಮನ್ ಸೆಕ್ರೆಟರಿಯವರ ವಿಳಾಸಕ್ಕೆ ಈ ೧೯೦೯ನೇ ವರ್ಷ ಜನವರಿ ೩೧ನೇ ತಾರೀಖು ಒಳಗಾಗಿ ಕಳುಹಿಸತಕ್ಕದ್ದು. ... ಈ ಕೆಲಸಕ್ಕೆ ನೇಮಕವಾಗಲ್ಪಡುವುದು.

16—1—1909 ಮಹಮ್ಮದ್ ಒಲಿಯಲ್ಲ, ಪ್ರೆಸಿಡೆಂಟ್,
ಅಹಮ್ಮದೀಯ ಅನ್ಜುಮನ್, ಕೊಳ್ಳೇಗಾಲ

ಜ್ವರಸುಧಾ

91 18



ಒಂದು ಬಾಟ್ಲು ಕೆಮ್ಮತಾ ೮ ಆಣೆ —೨ ಶಿ ಬಾರ್ಡುಗ ಬೇರೆ.

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮುಂತಾದ ಜ್ವರಗಳಿಂದಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ಹಾಗೆ ಬೇರೆ ಔಷಧಿ ದೊರೆಯದೆಂದು ಅನುಭವಶಾಲಿಗಳಾದ ಡಾಕ್ಟರುಗಳು ಹೇಳುತ್ತಲಿದ್ದಾರೆ. ... ಕೈಕಾಲು ನೋವು ಮುಂತಾದವುಗಳನ್ನು ... ಹೊತ್ತಿನಲ್ಲಿಯೇ ... "ಸುಧಾ" ಅಂದರೆ ಅಮೃತವನ್ನು ... ಯಾವ ವಿಧವಾದ ರೋಗಗಳೂ ... ವಾಗೆಯೇ ನಮ್ಮ ಜ್ವರಸುಧೆಯು ಎಲ್ಲಾ ವಿಧವಾದ ಜ್ವರಗಳನ್ನೂ ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಸಲ ಈ ಔಷಧಿಯನ್ನು ಕಂಡು ... ವರ್ಣಿಸನಾರೆವು.

ದೇವನಹಳ್ಳಿ ಟೌನ್, ಯಂ ಗೋವಿಂದಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಪ್ರಾಕ್ಟಿಷನರ್

೧೯೦೯ನೇ ಲೋವರ್ ಸೆಕೆಂಡರಿ ಕನ್ನಡ ನೋಟ್ಸ್

11 4

ಮಹಾರಾಜಾ ಕಾಲೇಜು ಕನ್ನಡ ಪಂಡಿತರು ಮ॥ ಸಿ ಆರ್ ಕೇಶವಾಚಾರ್ಯರವರಿಂದ ಪರಿಷ್ಕರಿಸಲ್ಪಟ್ಟಿದು ಪ್ರತಿ ೧ಕ್ಕೆ ೦ ೮ ೦, ೧೦ಕ್ಕೆ ... ಕನ್ನಡ ಪುಸ್ತಕದ ನೋಟ್ಸ್ ... ಪ್ರತಿ ೧ಕ್ಕೆ ... ಎಜ್ಯುಕೇಷನ್ ... ವರ್ಗಕ್ಕೆ ... ನೋಟ್ಸು ... ಮಾಡುವವರಿಗೆ ಒಂದೊಂದು ... ವಿಳಾಸ ... ಮ್ಯಾನೇಜರ್, ವಿ ಎಜ್ಯುಕೇಷನಲ್ ಆಫೀಸ್ ಮೈಸೂರು

ಲೇಖನ ಪ್ರಕಟಣೆ.

10 6

ಪ್ರತಿ ಒಬ್ಬ ... ಪತ್ರಗಳನ್ನು ಬರೆಯುವುದು ... ಬೇಕಾಗಿರುವವರು ... ಪರೀಕ್ಷೆ ... ಜಾಗ್ರತೆಯಾಗಿ ... ವಿಳಾಸ —ಎಂ ಕೃಷ್ಣಮೂರ್ತಿ ರಾವ್, ೨೫ನೆ ... ಹೊನ್ನಾಳಿ ತಾಲ್ಲೂಕು ಶಿವಮೊಗ್ಗ ಡಿಸ್ಟ್ರಿಕ್ಟ್

ಇಲ್ಲಿ ನೋಡಿ.

3 ೬

ತುಮಕೂರು ಮಿಷನ್ ಇಲಾಖೆಯಲ್ಲಿ ಯೂರೋಪಿಯನ್‌ರ ಮೇಲ್ವಿಚಾರಣೆಯಿಂದ ಉತ್ತಮ ತರಹದ ಹಾಸನದ ಟೋಪಿಗಳು ಅತಿ ಕ್ರಯ ... ದಾರದಿಂದ ತಯಾರಾಗುತ್ತವೆ ಕ್ರಯ —೧೨ ಆಣೆ ... ರೂ ೧೨ ಆಣೆಯವರಿಗೆ ... ಡಜನ್ ಟೋಪಿಗಳನ್ನು ತೆಗೆದುಕೊಳ್ಳುವವರಿಗೆ ... ಡಿಸ್ಕೌಂಟ್ ಕೊಡಲ್ಪಡುವುದು ಈಗಿರಾನೇ ಇಂಗ್ಲೆಂಡ್ ... ಬಂದಿದೆ ಬೇಕಾದ ತರಹ ಟೋಪಿಗಳನ್ನು ತಯಾರಿಸಿ ಕಳುಹಿಸಲಾಗುವುದು ವಿಳಾಸ — ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಮಿಷನ್ ಇಲಾಖೆ, ತುಮಕೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

18 7

ತಲೆನೋವು ವಾಯುನೋವು ಸೆಳವು ಗಂಟಿನೋವು ವಾತ ... ನಾನಾ ವಿಧವಾದ ರೋಗಗಳು ... ಶೀತರೋಗಗಳು, ... ಈ ತೈಲವನ್ನು ಹಚ್ಚಿದರೆ ... ಈ ದಿವಸವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ... ಪಂಡಿತರೂ ... ಪರೀಕ್ಷಿಸಿ ... ಈ ತೈಲವನ್ನು ... ಎಸ್. ಕ್ಲೆಮೆಂಟ್ಸ್,

೨೨, ವೇದಮಲೆಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಮದ್ರಾಸ್ ಸಾಹುಕಾರ್ ಪೇಟೆ,
ಟಿ. ಎಂ. ರಾಮಯ್ಯಶೆಟ್ಟರ ಕಂಪೆನಿಯಲ್ಲಿ

99 10

ತಯಾರಾಗುವ ಕಬ್ಬಿಣದ ಪೆಟ್ಟಿಗೆಗಳು ಅಥವಾ ಟ್ರಂಕುಗಳು ಈ ಕೆಳಗಿನ ದರದ ವಾರಂಟಿಕ್ಕೆ ಸಿದ್ಧವಾಗಿವೆ ಬ್ರಾಂಚ್ ಆಫೀಸ್ ಬೆಂಗಳೂರು ನಗರ್ತರಪೇಟೆಯಲ್ಲೂ ಸಿಕ್ಕುವವು



ಬೇಕಾದವರು ತಮ್ಮ ಅಡ್ರೆಸ್ಸು ತಿಳಿಸಿ ರೂ 10 ಮುಂಗಡವಾಗಿ ಕಳುಹಿಸಿದರೆ ವಿ ಪಿ ಮೂಲಕ ರವಾನಿಸಲ್ಪಡುತ್ತೆ ವಿಶೇಷ ಮಾಹಿತಿ ಬೇಕಾದವರು ಕಾಗದದ ಮುಖಾಂತರ ಮೇಲ್ಕಂಡ ವಿಳಾಸದಾರರಿಂದ ತಿಳಿದುಕೊಳ್ಳಬಹುದು

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಷ್ಟ್ರವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸಿವಾನ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 6-5

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವನೆ ಮಾಡುತ್ತಾ ಒಂದೆ ಒಡೆಯೇ ಅದರ ಗುಣಗಳು ಕಂಡುಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲಿ ವಿಕ್ರಯಿಸುತ್ತದೆ

ಮೀನುಹೊತ್ತ ಮನುಷ್ಯ ಇರುವ ಈ ಔಷಧದ ಗುರುತು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಇದುವರಿಗೆ ಯಾರೂ ಪ್ರಕಟಿಸದಂತಾ ಪುಸ್ತಕ!!!

10 5

"ಬ್ರಹ್ಮಚರ್ಯ" ವೆಂಬ ಮರ್ಮಶಾಸ್ತ್ರ

ಇದು ಇಂಗ್ಲೀಷ್ ಭಾಷೆಯಲ್ಲಿ ಲೋಕಪ್ರಸಿದ್ಧವಾದ ಪುಸ್ತಕ ಈಗ ಇದನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿರುವೆವು ಈ ಮರ್ಮಶಾಸ್ತ್ರವನ್ನು ಯಾವತ್ತರೂ ಆಬಾಲವೃದ್ಧರು ಓದಿ ತಿಳಿದುಕೊಳ್ಳಬೇಕು ಅನೇಕ ಹುಡುಗರು ಹಸ್ತಪ್ರಯೋಗಾದಿ ಮೊದಲಾದ ಭಯಂಕರವಾದ ದುರಭ್ಯಾಸಗಳಿಗೊಳಗಾಗಿ ಕೆಟ್ಟು ಹೋಗಿರುತ್ತಾರೆ ಅವರ ದುಷ್ಪ್ರವರ್ತನೆಗಳಿಗೆ ಬರೀ ಮೌಢ್ಯವೇ ಕಾರಣವಾಗಿರುತ್ತದೆ.

ಈ ಉತ್ಕೃಷ್ಟವಾದ ಪುಸ್ತಕವನ್ನು ಇನ್ನೂ ಹೆಚ್ಚಾಗಿ ವಿವರಿಸಿ ತಿಳಿಸುವುದಕ್ಕೆ ಇಲ್ಲಿ ಸ್ಥಳ ಸಾಲದು ಆದರೆ ಇದರಲ್ಲಿ ಅಡಕವಾಗಿರುವ ಅಧ್ಯಾಯಗಳನ್ನು ಇಲ್ಲಿ ತಿಳಿಸುವೆವು - ಜೀವೋತ್ಪತ್ತಿಯ ಪ್ರಾರಂಭವು, ಅದರ ಶಕ್ತಿಯು - ಸಸ್ಯಾದಿಗಳ ಜೀವೋತ್ಪತ್ತಿಸ್ವಭಾವವಾಗುವಿಕೆ - ಪ್ರಾಣಿಗಳಲ್ಲುಂಟಾಗುವ ಜೀವೋತ್ಪತ್ತಿಯು - ಮನುಷ್ಯಸಂತಾನವು, ಅದು ಉತ್ಪತ್ತಿಯಾಗುವ ರೀತಿಯು - ಹುಡುಗರಲ್ಲಿರುವ ದುಷ್ಟಚೇಷ್ಟೆಗಳು, ಅಂಗಗಳು ಕೆಡುವ ರೀತಿ - ಹುಡುಗರ ದುಶ್ಚೇಷ್ಟೆಗಳಿಂದಾಗುವ ನಾನಾ ಕೇಡುಗಳು - ಹುಡುಗರು ತಮ್ಮ ದೇಹಗಳನ್ನು ಶುದ್ಧಿಕೆ ಪುಷ್ಟಿ ಬಲ ತ್ರಾಣಗಳನ್ನು ಕಾಪಾಡುವದಕ್ಕೆ ಸಂತ್ರಗಳು - ಹುಡುಗರು ತಾವು ಕಳಕೊಂಡ ದೇಹಬಲಶಕ್ತಿಗಳನ್ನು ತಿರಿಗಿ ಸಂಪಾದಿಸುವ ವಿಧಾನವು - ಹುಡುಗರು ಪ್ರಾಯಕ್ಕೆ ಬರುವ ಕಾಲವು, ಈ ಕಾಲದಲ್ಲಿ ಗಮನಿಸತಕ್ಕ ವಿಷಯಗಳು - ಹುಡುಗರು ಪ್ರಾಯಕ್ಕೆ ಬರುವ ಕಾಲ, ಈ ಕಾಲದಲ್ಲಿ ಉಂಟಾಗುವ ಬದಲಾವಣೆಗಳು -

ಇಂಥಾ ಉತ್ಕೃಷ್ಟವಾದ ಪುಸ್ತಕವನ್ನು ಎಲ್ಲರೂ ಕೊಂಡು ತಮ್ಮ ಮನೆಗಳಲ್ಲಿ ಇಡಬೇಕು ಇದರ ಕ್ರಯ ಮೂರಾಣೆ ವಿ ಪಿ ಮೂಲಕ ತರಿಸಿಕೊಂಡರೆ ಐದಾಣೆಗಳಾಗುವವು

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಸಿದ್ಧವಾಗಿದೆ. ಕ್ರಯ ಒಂದಾಣೆ.

೧೯೦೯ನೇ ಸಾಲಿನ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಮೈಸೂರು ಹೊಸ ಅರಮನೆಯ ಅನೇಕ ಭಾಗಗಳು, ಮೈಸೂರು ಪಬ್ಲಿಕ್ ಆಫೀಸ್ ಕಟ್ಟಡ, ಮೈಸೂರು ಜೂಬಿಲಿ ಹಾಲ್ ಕಟ್ಟಡ, ನೀಲಗಿರಿಗೆ ಹೋಗುವ ರೈಲ್ ಮಾರ್ಗವು, ಮತ್ತು ಚಿತ್ರದುರ್ಗದ ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ—ಇದೇ ಫೆಬ್ರವರಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ"ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಗಸಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ. ಕೂಡಲೆ ಬರೆಯಿರಿ. ವಿಳಾಸ —

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ವೃತ್ತಾಂತ ಪತ್ರಿಕೆ

೧೯೦೯ ನೇ ಇಸವಿ ಫೆಬ್ರವರಿ ತಾ ೪ ನೇ ಗುರುವಾರ

ರಾಜ್ಯಭಾರದ ಹೊಸ ತಿಸ್ತುಗಳು

ಹಿಂದುಸ್ಥಾನದ ರಾಜ್ಯಭಾರ ಕ್ರಮದಲ್ಲಿ ರೂಢಿಸಲ್ಪಡುವ ಹೊಸ ಬದಲಾವಣೆಗಳನ್ನು ಕುರಿತು ಕಳೆದ ವಾರ ಇಂಡಿಯಾ ಸ್ಟೇಟ್ ಸೆಕ್ರೆಟರಿಗಳಾದ ಲಾರ್ಡ್ ಮಾರ್ಲಿಯವರು ವಿಶೇಷವಾದ ಒಂದು ಭಾಷಣವನ್ನು ಮಾಡಿರುತ್ತಾರೆ. ಲಂಡನ್ ಪಟ್ಟಣದಲ್ಲಿರುವ ಕೆಲವು ಪ್ರಮುಖರಾದ ಮಹಮ್ಮದೀಯರು ಸೇರಿ ಸ್ಟೇಟ್ ಸೆಕ್ರೆಟರಿಯವರ ಬಳಿಗೆ ಹೋಗಿ ತಮ್ಮ ಜನರ ವಿಷಯದಲ್ಲಿ ಗವರ್ನ್‍ಮೆಂಟಿನವರು ಹೆಚ್ಚು ರಿಯಾಯಿತಿಯನ್ನು ತೋರಿಸಬೇಕೆಂದು ಅವರನ್ನು ಕೇಳಿಕೊಂಡರು. ಲಾರ್ಡ್ ಮಾರ್ಲಿಯವರು ಅವರನ್ನು ಕುರಿತು—ನಾವು ಮಾಡಬೇಕೆಂದಿರುವ ಹೊಸ ತಿಸ್ತುಗಳನ್ನು ಇಂಡಿಯಾ ದೇಶೀಯರೂ, ಇತರ ದೇಶೀಯರೂ ಒಪ್ಪಿಕೊಂಡಿರುವುದೂ, ಹಿಂದುಸ್ಥಾನದ ರಾಜ್ಯಭಾರ ಕ್ರಮವನ್ನು ಅಮೇರಿಕ ಖಂಡದ ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟರಾದ ಮೆ|| ರೂಸ್‍ವೆಲ್ಟ್ ಯವರು ಮೆಚ್ಚಿಕೊಂಡಿರುವುದೂ ತುಂಬಾ ಸಂತೋಷಕರವಾಗಿದೆ ಎಂದು ಹೇಳಿದರು.

ಲಾರ್ಡ್ ಮಾರ್ಲಿಯವರು ಇನ್ನೂ ಹೇಳಿದ್ದೇನೆಂದರೆ, ಈ ಹೊಸ ಬದಲಾವಣೆಗಳನ್ನು ರೂಢಿಸುವುದಕ್ಕಿಂತ ಮೊದಲು ಪಾರ್ಲಿಮೆಂಟಿನಲ್ಲಿ ಒಂದು ಹೊಸ ಕಾನೂನು ಚರ್ಚೆಯಾಗಿ ಇತ್ಯರ್ಥವಾಗಬೇಕಾಗಿದೆ. ಅದರ ಮಸೂದೆಯು ತಯಾರಾಗಿರುವುದು. ಈ ತಿಂಗಳಲ್ಲಿ ಪಾರ್ಲಿಮೆಂಟ್ ಸಭೆಯು ಪ್ರಾರಂಭವಾದ ಒಡನೆಯೇ ಈ ಮಸೂದೆಯನ್ನು ಚರ್ಚೆಗೆ ತರುತ್ತೇವೆ. ಈ ಕರುಹಾಯು ಹಿಂದುಸ್ಥಾನದ ರಾಜ್ಯಭಾರ ಕೌನ್ಸಿಲ್ ಸಭೆಗಳಲ್ಲಿ ಮೆಂಬರುಗಳ ಸಂಖ್ಯೆಯನ್ನು ಹೆಚ್ಚು ಮಾಡುವವು. ಇದರಿಂದ ಹಿಂದುಸ್ಥಾನದ ಪ್ರಜೆಗಳಿಗೆ ಆಳ್ವಿಕೆಯಲ್ಲಿ ಹೆಚ್ಚು ಸ್ವಾತಂತ್ರ್ಯಗಳು ದೊರಕುವವು.

ಮಹಮ್ಮದೀಯ ಪ್ರಜೆಗಳ ವಿಷಯದಲ್ಲಿ ಸ್ವಲ್ಪ ಕಷ್ಟವುಂಟಾಗಿರುವಂತೆ ಕಾಣುತ್ತದೆ. ಅವರು ಮುಂದಣ ಕೌನ್ಸಿಲ್ ಸಭೆಗಳಲ್ಲಿ ತಮ್ಮ ಪ್ರತಿನಿಧಿಗಳು ತಕ್ಕಮಟ್ಟಿಗೆ ಚುನಾವಣೆ ಹೊಂದಿ ನೇಮಕವಾಗಲಾರರೆಂದು ಸಂಶಯಪಡುತ್ತಾರೆ. ಲೋಕಲ್ ಬೋರ್ಡುಗಳು ಮೊದಲುಗೊಂಡು ವೈಸ್‍ರಾಯಿಯವರ ಕೌನ್ಸಿಲ್ ವರೆಗೂ ಮಹಮ್ಮದೀಯ ಪ್ರತಿನಿಧಿಗಳು ಮೆಂಬರಾಗಿ ಚುನಾವಣೆ ಆಗುವುದಕ್ಕೆ ಅನುಕೂಲಿಸುವಂತೆ ಅವರಿಗೆ ಪ್ರತ್ಯೇಕವಾದ ಏರ್ಪಾಡಾಗಬೇಕೆಂದು ಅಪೇಕ್ಷಿಸುತ್ತಾರೆ. ಲಾರ್ಡ್ ಮಾರ್ಲಿಯವರು ಹಿಂದುಸ್ಥಾನದ ಎಲ್ಲಾ ಕೋಮುಗಳ ಪ್ರಜೆಗಳ ಕೊರತೆಗಳನ್ನೂ ಇಷ್ಟಾರ್ಥಗಳನ್ನೂ ತಿಳಿಯುವುದರಲ್ಲೂ ತಕ್ಕ ಪರಿಹಾರಗಳನ್ನು ಕಲ್ಪಿಸುವುದರಲ್ಲೂ ಬಹು ಕುತೂಹಲವುಳ್ಳವರಾಗಿದ್ದಾರೆ.

ಒಂದುವೇಳೆ ಮುಸಲ್ಮಾನರಿಗೆ ಪ್ರತಿನಿಧಿತ್ವವನ್ನು ವಿಶೇಷ [illegible] ರೂಢಿಸಬೇಕೆಂದಿರುವ ಬದಲಾವಣೆಗಳು [illegible] ಈ ವಿಷಯವು ಹಿಂದುಸ್ಥಾನದ ಮಹಮ್ಮದೀಯರೂ ಹಿಂದುಗಳೂ ಪರಸ್ಪರ ಸಮಾಧಾನ ಇತ್ಯರ್ಥ ಪಡಿಸಿಕೊಳ್ಳತಕ್ಕದ್ದಾಗಿದೆ. ಈ ರಾಷ್ಟ್ರದ ಸಕಲ ಕೋಮುಗಳವರೂ ಏಕೀಭವಿಸಿ ಅಭಿವೃದ್ಧಿಗೆ ಬರಬೇಕಾಗಿದ್ದ ಪಕ್ಷದಲ್ಲಿ ಪ್ರಮುಖ ಪಂಗಡಗಳಿಗೆ ಸೇರಿದಂಥಾ ಹಿಂದೂ ಮಹಮ್ಮದೀಯರು ಒಂದಾಗಬೇಕು, ಒಬ್ಬರನ್ನೊಬ್ಬರು ಪ್ರೀತಿ ಗೌರವಗಳಿಂದ ಕಾಣಬೇಕು, ಒಬ್ಬರಿಗೊಬ್ಬರು ಬೆಂಬಲವಾಗಿ ನಿಂತು ದೇಶದ ಹಿತವನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಕಾರ್ಯಸಾಧನೆ ಮಾಡುವವರಾಗಬೇಕು. ಶಕ್ತಿ ಪ್ರತಿಶಕ್ತಿಗಳ [illegible] ಸ್ವಾರ್ಥಗಳ [illegible] ಸರ್ಕಾರಕ್ಕೂ ಹಿತಕಾರಿಯಾದ ಬದಲಾವಣೆಗಳನ್ನು ಮಾಡಿ ರೂಢಿಗೆ ತರುವುದು ಅಸಾಧ್ಯವಾದೀತು. ಆದುದರಿಂದ ಹಿಂದುವು ಮಹಮ್ಮದೀಯನ ಪಕ್ಷ ಬಾಧ್ಯತೆಗಳನ್ನು ಗೌರವಿಸಿ, ಮಹಮ್ಮದೀಯನು ಹಿಂದುವಿನ ಉಚಿತ ಅಭಿಪ್ರಾಯಗಳನ್ನು ಮನಸ್ಸಿಗೆ ತಂದುಕೊಂಡು ಯೋಚಿಸಲಿ. ಹೀಗೆ ಉಭಯರೂ [illegible] ಸಂಗತಿ, [illegible] ಗಳನ್ನು ಕಡೆಯ [illegible] ದೇಶೀಯರ ಮಾರ್ಗವು ಒಂದುಮಟ್ಟಿಗೆ ಸರಾಗವಾಗುವುದು. ಉಭಯ ಪಕ್ಷದ ಮುಖಂಡರುಗಳೂ ಕಲೆತು ಈ ವಿಚಾರಗಳೆಲ್ಲಾ ಸಾಂಗವಾಗಿಯೂ ಸೌಜನ್ಯದಿಂದಲೂ ಪರ್ಯಾಲೋಚನೆ ಮಾಡಿ, ಉಭಯರಿಗೂ ಗೌರವಯುಕ್ತವಾದ ರೀತಿಯಲ್ಲಿ [illegible] ಮಾಡಿಕೊಂಡಾರೆಂದು ನಂಬುತ್ತೇವೆ.

ಲಾರ್ಡ್ ಮಾರ್ಲಿಯವರು [illegible] ಹೊಸ ತಿಸ್ತುಗಳೂ ಬದಲಾವಣೆಗಳೂ [illegible] ಪಕ್ಷದಲ್ಲಿ [illegible] [illegible] ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಮಾರ್ಲಿಯವರ [illegible] [illegible] ಹಿಂದೂ ಮುಸಲ್ಮಾನ್ ಪ್ರಜೆಗಳಲ್ಲಿ ವಿಶೇಷ [illegible] ಯಾವ ತರದ ಅಭಿವೃದ್ಧಿಗೂ ಅವಕಾಶವಾಗಲಾರದು. ಆದಕಾರಣ ಹಿಂದೂ ಮಹಮ್ಮದೀಯರಲ್ಲಿ ಮುಂದಾಳುಗಳಾಗಿರತಕ್ಕವರು ಒಗ್ಗಟ್ಟಾಗಿ, ದೇಶಾಭ್ಯುದಯಕ್ಕೆ ಹಿತಕಾರಿಯಾದಂಥಾ ಏರ್ಪಾಡಿನ ವಿಷಯದಲ್ಲಿ ಭಿನ್ನಾಭಿಪ್ರಾಯಗಳೇನೂ ಉಂಟಾಗದಂತೆ ನಿಷ್ಕರ್ಷಿಸಿದ್ದಾರೆಂದು ನಂಬಿ ಹಾರೈಸುತ್ತೇವೆ.

ಸ್ವಂತ ತಿದ್ದುಪಡಿಯೇ ಎಲ್ಲಾ ತಿದ್ದುಪಡಿಗಳಿಗಿಂತ ಶ್ರೇಷ್ಠವಾದುದು

ಈಗ್ಗೆ ನಮ್ಮ ದೇಶವು ಇರುವ ಸ್ಥಿತಿಯಲ್ಲಿ ದೇಶಾಭಿಮಾನಿಗಳೆಲ್ಲರೂ ತಿಳಿದಿರುವರು. ಜನರು ಸಂಘಸಂಸ್ಕರಣಗಳ ವಿಷಯದಲ್ಲೂ ಸರಕಾರಕ್ಕೆ ಸಂಬಂಧಪಟ್ಟ ಕಾರುಬಾರುಗಳ ವಿಷಯದಲ್ಲೂ ದೀರ್ಘವಾಗಿ ಯೋಚಿಸಿ ಚರ್ಚಿಸುತ್ತಿರುತ್ತಾರೆ. ರಾಜಕೀಯ ಕಾರ್ಯಗಳಲ್ಲಿ ಆಸಕ್ತರಾಗಿರುವವರು ಹಿಂದೂದೇಶಕ್ಕೆ ಮಂತ್ರಿಶ್ರೇಷ್ಠರಾಗಿರುವ ಲಾರ್ಡ್ ಮಾರ್ಲೀ ಪ್ರಭುಗಳು ಕೊಟ್ಟಿರುವ ವಿವಿಧ ಸಲಹೆಗಳನ್ನು ಕುರಿತು ಯೋಚಿಸುತ್ತಿರುವರು. ಸಂಘಸಂಸ್ಕರಣ ಕಾರ್ಯಗಳಲ್ಲಿ ಅಭಿರುಚಿ ಹೊಂದಿರುವವರಾದರೋ ಈ ದೇಶದ ಜನರ ನಡವಳಿಕೆಗಳಲ್ಲಿ ಅವಶ್ಯಕವಾಗಿ ಆಗಬೇಕಾಗಿರುವ ಬದಲಾವಣೆಗಳನ್ನು ಯೋಚಿಸಿ ತಮ್ಮ ಇಷ್ಟಾರ್ಥವನ್ನು ಹಲವು ಬಗೆಯಾಗಿ ಸಾಧಿಸಿಕೊಂಡು ಬರುವರು. ಈ ಮೇಲ್ಕಂಡ ಸಂಘದವರು ಬಾಲ್ಯವಿವಾಹದಿಂದಾಗುವ ನಾನಾ ಕೇಡುಗಳನ್ನು ತಪ್ಪಿಸುವುದಕ್ಕೂ ಈ ದೇಶದ ವಿಧವೆಗಳನ್ನು ಉತ್ತಮ ಸ್ಥಿತಿಗೆ ತರುವುದಕ್ಕೂ ಅನೇಕ ಪ್ರಯತ್ನಗಳನ್ನು ಮಾಡುತ್ತಿರುವುದು ಎಲ್ಲರಿಗೂ ಗೊತ್ತಾದ ಸಂಗತಿಯಾಗಿರುತ್ತದೆ. ರೈತಾಪಿಜನಗಳು ಕೂಡ ತಮ್ಮ ಸ್ಥಿತಿಗತಿಗಳನ್ನು ಅಭಿವೃದ್ಧಿ ಮಾಡಿಕೊಳ್ಳಲು ಪ್ರಯತ್ನಪಡುತ್ತಿರುತ್ತಾರೆ. ಈ ಪ್ರಯತ್ನಗಳನ್ನೆಲ್ಲಾ ನೋಡಿ ನಾವು ಸಂತೋಷಪಡುವೆವು. ಜನರು ತಮ್ಮಲ್ಲಿರುವ ಕುಂದು ಕೊರತೆಗಳನ್ನು ತಿಳಿದುಕೊಂಡಿದ್ದರಿಂದಲೇ ತಾವು ಉನ್ನತ ಪದವಿಗೆ ಬರಲು ಅವಕಾಶವಾಯಿತಲ್ಲವೆ?

ದೇವರ ಅತಿಶಯವಾದ ಪ್ರೇರಣೆಯು ಯಾರ್ಯಾರಲ್ಲಿ ಪ್ರವೇಶಿಸುತ್ತದೋ ಅಂಥವರೊಳಗೆಲ್ಲಾ ನೂತನ ಬದಲಾವಣೆಯು ಕಂಡು ಬರುವುದು. ಈ ಪ್ರೇರಣೆಗೊಳಗಾದವರು ಮೊದಲು ತಮ್ಮಲ್ಲಿರುವ ನ್ಯೂನತೆಗಳನ್ನು ತಿಳಿದುಕೊಳ್ಳುತ್ತಾರೆ. ಅಂಥವರು ಉನ್ನತವಾದ, ಮತ್ತು ಸತ್ಯದಿಂದ ಕೂಡಿದ ಬದಲಾವಣೆಯನ್ನು ಸಹಜವಾಗಿಯೂ ಬಯಸುವರು.

ಯಾವ ಪಂಗಡವೇ ಆಗಲಿ ಉತ್ತಮ ಸ್ಥಿತಿಗೆ ಬರಬೇಕಾದರೆ ಅದರಲ್ಲಿ ಸೇರಿರತಕ್ಕ ಪ್ರತಿಯೊಬ್ಬರೂ ಯೋಗ್ಯರೂ ಸತ್ಯವಂತರೂ ಆಗಿರಬೇಕಲ್ಲವೇ? ಹಾಗಿಲ್ಲವೆ ಅದಕ್ಕೆ ಸೇರಿರುವವರು ಅಯೋಗ್ಯರೂ ಸ್ವಾರ್ಥಪರರೂ ಆಗಿರುವವರಾದರೆ ಆ ಪಂಗಡವು ಹ್ಯಾಗೆ ತಾನೆ ಉತ್ತಮ ಸ್ಥಿತಿಗೆ ಬಂದೀತು? ಅಭಿವೃದ್ಧಿಯನ್ನು ಹೊಂದುವುದಕ್ಕೆ ಬದಲಾಗಿ ಅದು ಕ್ಷಯಿಸಿ ಹೋಗುವುದರಲ್ಲಿ ಯಾವ ಸಂದೇಹವಿರುವುದು? ರೈತರು ತಾವು ಮಾಡಿರತಕ್ಕ ಸಾಲವನ್ನು ತೀರಿಸುವುದಕ್ಕೆ ಇಷ್ಟಪಡದಿದ್ದರೆ, ಅವರ ಆಸೆಯು ತಮ್ಮ ಇಷ್ಟಾರ್ಥವನ್ನು ಕಾರ್ಯಗತಗೊಳಿಸದೆ ಹೋದರೆ ಪ್ರಯೋಜನವೇನು? ಅವರು ಮದುವೆ ಮುಂತಾದವುಗಳಿಗೆ ಬೇಕಾದ ಹಣ ಸಾಲವನ್ನು ಮಾಡಿ ಸಾಹುಕಾರರಿಗೆ ಗುಲಾಮರಾಗುತ್ತಲೂ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸದೆ ಅವರನ್ನು ಮೌಢ್ಯದಲ್ಲಿ ಬೆಳಸುತ್ತಲೂ ತಮ್ಮ ಹೊಲಗದ್ದೆಗಳನ್ನು ಹಳೆಯ ರೀತಿಯಲ್ಲಿ ವ್ಯವಸಾಯ ಮಾಡಿಸಿಯೂ ಬರುವುದಾದರೆ ಅವರು ಹ್ಯಾಗೆ ತಾನೆ ಅಭಿವೃದ್ಧಿಯನ್ನು ಹೊಂದುವರು? ಅವರು ಅಭಿವೃದ್ಧಿಯನ್ನು ಹೊಂದಬೇಕಾದರೆ, ಸಾಲಮಾಡುವ ಅಭ್ಯಾಸವನ್ನು ನಿಲ್ಲಿಸಬೇಕು. ಮಕ್ಕಳನ್ನು ಮದರಸಕ್ಕೆ ಹಾಕಬೇಕು. ಹೊಲಗದ್ದೆಗಳನ್ನು ಉತ್ತಮ ರೀತಿಯಲ್ಲಿ ಉತ್ತು ಬಿತ್ತಿ ವ್ಯವಸಾಯ ಮಾಡಬೇಕಾಗಿರುತ್ತದೆ. ಪ್ರತಿಯೊಂದು ಹಳ್ಳಿಯಲ್ಲಿ ಇಬ್ಬರು ಮೂವರು ಒಳ್ಳೇ ಮಾದರಿಯನ್ನು ತೋರಿಸಿದರೆ ಮಿಕ್ಕಾದವರೆಲ್ಲರೂ ಅವರ ಉದಾಹರಣೆಯನ್ನು ಕಲಿತುಕೊಳ್ಳುವುದರಲ್ಲಿ ಸಂಶಯವಿಲ್ಲ.

ಯಾರೇ ಆಗಲಿ ತಮ್ಮ [illegible] ವನ್ನು ಸರಿಮಾಡಿಕೊಳ್ಳುವ ಈ ವಿಷಯಕ್ಕೆ ಕಳುಹಿಸಿದ ಭಗವಂತನನ್ನು ಮೆಚ್ಚಿಸಬೇಕಾದರೆ ಮೊದಲು ಅಂಥವರು ತಮ್ಮನ್ನು [illegible] [illegible] ಗ್ರಂಥದಲ್ಲಿ ಒಂದು ಚರಿತ್ರೆಯು ಬರೆಯಲ್ಪಟ್ಟಿರುತ್ತದೆ. ಅದು ಏನೆಂದರೆ —ಗಿದ್ಯೋನನೆಂಬ ಒಬ್ಬ ಮನುಷ್ಯನಿದ್ದನು. ಅವನು ವಾಸಮಾಡಿಕೊಂಡಿದ್ದ ದೇಶದ ಮೇಲೆ ಕಳ್ಳಕಾಕರು ಬಿದ್ದು ಲೂಟಿಮಾಡಿ ದನ ಕುರಿ ಮೊದಲಾದವುಗಳನ್ನು ಕದ್ದುಕೊಂಡು ಹೋಗುತ್ತಿದ್ದರು. ಪ್ರಜೆಗಳಂತೂ ಬಹಳ ಹಿಂಸೆಗೆ ಗುರಿಯಾಗಿದ್ದರು. ಇದಕ್ಕೆಲ್ಲಾ ಅವರು ದೇವರನ್ನು ಮರೆತುಬಿಟ್ಟು ಆತನ ಕಟ್ಟಳೆಗಳನ್ನು ಉಲ್ಲಂಘಿಸಿ ತಮ್ಮ ಮನಸ್ಸು ಬಂದಹಾಗೆ ನಡೆದದ್ದರಿಂದಲೇ ಅವರಿಗೆ ಸಂಭವಿಸಿತು. ಆ ಸಮಯದಲ್ಲಿ ದೇವರು ಗಿದ್ಯೋನನಿಗೆ ಕಾಣಿಸಿಕೊಂಡು ಅವನು ತನ್ನ ಜನರನ್ನು ಕಳ್ಳಕಾಕರ ಕಾಟದಿಂದ ಬಿಡಿಸಿ ತನ್ನ ದೇಶವನ್ನು ಉತ್ತಮಸ್ಥಿತಿಗೆ ತರಲು ತನ್ನಿಂದ ನೇಮಿಸಲ್ಪಟ್ಟಿರುತ್ತಾನೆಂದು ತಿಳಿಸಿದನು. ಈ ಕೆಲಸವನ್ನು ದೇವರು ಕೊಡುವಾಗ್ಗೆ ಇದರ ಜೊತೆಗೆ ಮತ್ತೊಂದು ಆಜ್ಞೆಯನ್ನು ಕೊಟ್ಟನು. ಅದು ಯಾವದೆಂದರೆ ದೇವರ ಕಟ್ಟಳೆಗಳಿಗೆ ವಿರುದ್ಧವಾಗಿರುವ ಎಲ್ಲಾ [illegible] ಗಳನ್ನು ಗಿದ್ಯೋನನು ತೆಗೆದುಹಾಕಬೇಕೆಂಬುದೇ. ದೇವರು ಗಿದ್ಯೋನನ ಜನರ [illegible] ಅವರು ಸತ್ಯವಂತರಾಗಿರಬೇಕಾದರೆ [illegible] ವಿಗ್ರಹಗಳನ್ನು ಪೂಜಿಸಬಾರದೆಂತಲೂ ಆಜ್ಞಾಪಿಸಿದನು. ಆದರೆ ಅವರು ದೇವರ ಕಟ್ಟಳೆಗಳನ್ನು [illegible] ಅದರಿಂದಲೇ ಅವರಿಗೆ ಕಷ್ಟ ಪ್ರಾಪ್ತವಾಯಿತು. ದೇವರ ಆಜ್ಞೆಯ ಪ್ರಕಾರ ಗಿದ್ಯೋನನು [illegible] ವನ್ನು ವಿಗ್ರಹಾರಾಧನೆಯನ್ನು [illegible] ಮಾಡಬೇಕಾಯಿತು. ಅವನು ತನ್ನ ಜನರಾದ ಇಸ್ರಾಯೇಲರಿಗೆ ಒಳ್ಳೇ ಮಾದರಿಯಾಗಿರಬೇಕಾಯಿತು. ಪ್ರಾರಂಭದಲ್ಲಿ ಇವುಗಳನ್ನೆಲ್ಲಾ ಅನುಸರಿಸುವುದು ಗಿದ್ಯೋನನಿಗೆ ಕಷ್ಟವಾಗಿ ತೋರಿತು. ಏಕೆಂದರೆ ಜನರೆಲ್ಲರೂ [illegible] ವಿರೋಧವಾಗಿದ್ದರು. ಆಗಿದ್ದರೂ ಗಿದ್ಯೋನನು ಧೈರ್ಯಗೆಡದೆ ತನ್ನ ಮನೆಯಲ್ಲಿದ್ದ ವಿಗ್ರಹಗಳನ್ನೆಲ್ಲಾ ಒಂದು ರಾತ್ರಿಯಲ್ಲಿ ನಾಶಮಾಡಿದನು. ನಿಜವಾದ ದೇವರನ್ನು ಪೂಜಿಸುವುದಕ್ಕೆ ಒಂದು ಯಜ್ಞವೇದಿಯನ್ನು ಕಟ್ಟಿಸಿದನು. ಇಂಥಾ ಕೆಲಸವನ್ನು ಗಿದ್ಯೋನನ ತಂದೆಯೂ ಅವನ ಗ್ರಾಮದವರೂ [illegible] [illegible] ಕೋಪಗೊಂಡು [illegible] ಗಿದ್ಯೋನನ [illegible] [illegible] [illegible]

[illegible] ದೇವರ [illegible] ತಿದ್ದುಪಡಿ [illegible] ಮೊದಲು ತಿದ್ದಿಕೊಳ್ಳಬೇಕಾಗಿರುತ್ತದೆ. [illegible] ಉತ್ತಮ ಪದವಿಗೆ ಬರಲಾರೆವು. ನಾವು ಅನ್ಯರಲ್ಲಿರುವ ಕುಂದುಕೊರತೆಗಳನ್ನು ಹೊಗಲಾಡಿಸುವ ಪ್ರಯತ್ನದಲ್ಲಿ ಆಸಕ್ತರಾಗಿರಬಹುದು. ಈ ಕಾರ್ಯದಲ್ಲಿ ನಮ್ಮ ಸ್ವಂತ ತಿದ್ದುಪಡಿಯು ವಿಷಯ ಸಂಪೂರ್ಣವಾಗಿ ಮರೆತಿರಬಹುದು. ಆದರೆ ನಿಜವಾದ ಅಭಿವೃದ್ಧಿಯನ್ನು ಹೊಂದಬೇಕಾದರೆ ಮೊದಲು ನಾವು ದೇವರ ಸಹಾಯದಿಂದ ನಮ್ಮ ಅಂತರ್ಯವನ್ನು ಪರೀಕ್ಷಿಸಬೇಕಾಗಿದೆ. ನಾವು ದೈನ್ಯಭಾವದಿಂದ ದೇವರಿಗೆ ಪ್ರಾರ್ಥಿಸಿದರೆ ಆತನು ನಮ್ಮಲ್ಲಿರುವ ಕುಂದುಕೊರತೆಗಳನ್ನು ತೋರಿಸಿಕೊಡುವನು. ನಾವು ಮಾಡಿರತಕ್ಕ ಅಕ್ರಮಗಳಿಗೋಸ್ಕರ ವ್ಯಸನಪಟ್ಟು ಅವುಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು. ಪಾಪಕ್ಷಮೆಯ ಮಾರ್ಗವನ್ನು ಆತನು ನಮಗೆ ತೋರಿಸಿರುತ್ತಾನೆ. ಆ ಮಾರ್ಗದಲ್ಲಿ ನಾವು ನಡೆಯುವೆವಾದರೆ ಆತನು ನಮ್ಮ ಪಾಪಗಳನ್ನು ಕ್ಷಮಿಸಿ ನಮ್ಮನ್ನು ಪವಿತ್ರರನ್ನಾಗಿ ಮಾಡುವನು.

ಆದ್ದರಿಂದ ನಾವು ಆ ಮಾರ್ಗದಲ್ಲಿ ನಡೆಯುವುದಕ್ಕೆ ಪ್ರಯತ್ನಿಸೋಣ. ನಮ್ಮ ಹೃದಯಾಂತರ್ಯಗಳನ್ನು ತಿದ್ದುಪಡಿ ಮಾಡಿಕೊಂಡರೆ ನಮ್ಮ ದೇಶವನ್ನು ನಾವು ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿ ಸ್ಥಿತಿಗೆ ತರಲು ಶಕ್ತರಾಗುವೆವು.

ಮೈಸೂರು ಗೆಜೆಟ್ ಸಂಗ್ರಹ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಫಾರೆಸ್ಟ್ ಅ|| ಕನ್ಸರ್ವೇಟರ್ ಮೆ|| ವೈ ಸೀತಾರಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾ [illegible] ದಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಜಗಲೂರ್ ತಾಲ್ಲೂಕ್ ಅಮಲ್ದಾರ್ ಮೆ|| ಮಹಮದ್ ಅಬ್ದುಲ್ಲಾ ಷರೀಫ್ ಯವರನ್ನು ತುಂಕೂರಿನ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ನೇಮಕ ಮಾಡಿದೆ.

ಸಬ್ ಅ| ಸರ್ಜನ್ ಮೆ|| ಟಿ ಎಸ್ ಕಿಟ್ಟಪ್ಪನವರನ್ನು ಮೈಸೂರು ಜನರಲ್ ಆಸ್ಪತ್ರೆಗೆ ವರ್ಗಮಾಡಿದೆ.

ಸಬ್ ಅ| ಸರ್ಜನ್ ಮೆ|| ಎಫ್ ನೊರೋನಾಯವರನ್ನು ೪ ರಿಂದ ೩ ನೇ ಕ್ಲಾಸಿಗೆ ಕಳೆದ ಸೆಪ್ಟಂಬರ್ ತಾ ೮ ರಿಂದ ಬಡ್ತಿ ಮಾಡಿದೆ.

ಸೀನಿಯರ್ ಅ| ಕಮಿಷನರ್ ಮೆ|| ಕೆ ಶ್ರೀನಿವಾಸರಾಯರನ್ನು ಕುಲೀಸ್ ಪೇಟೆ ಸಬ್ ಡಿವಿಜನ್‍ಗೆ ವರ್ಗಮಾಡಿದೆ.

ಎಗ್ಸಿಕ್ಯುಟಿವ್ ಇಂಜನಿಯರ್ ಮೆ|| ಪಿ ರಂಗಸ್ವಾಮಿ ಐಯಂಗಾರ್ರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಇಪ್ಪತ್ತೊಂದು ದಿನಗಳಿಗೆ ಜಾಸ್ತಿಮಾಡಿದೆ.

ಅರಸೀಕೆರೆ ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರ್ ಮೆ|| ವಿ ಸಿ ರಾಘವಲುನಾಯ್ಡುಯವರಿಗೆ ಡಿಸೆಂಬರ್ ತಾ ೧೭ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಲೋಕಲ್ ಸರ್ವಿಸ್ ರೆಜಿಮೆಂಟಿನ ಕಮಿಷನ್ಡ್ ರ್ಯಾಂಕಿಯ ಜಮಾದಾರಿ ಗ್ರೇಡಿನಲ್ಲಿ ಸಂಕರರಾಯರನ್ನು ೧ ನೇ ಕ್ಲಾಸಿಗೂ, ಲಕ್ಷ್ಮಣರಾಯರನ್ನೂ, ಷಾಜಾ ಹುಸೈನ್‍ಯವರನ್ನೂ, ಲಿಂಗೋಜಿ ಮೋಹಿತೆಯವರನ್ನೂ ೨ ನೇ ಕ್ಲಾಸಿಗೂ, ಮಹಬೂಬ್ ಖಾನ್‍ಯವರನ್ನೂ, ದೇವರಾವ್ ಸಿಂಧೆಯವರನ್ನೂ, ಸೈಯದ್ ಮಹಮದ್ ಖಾನ್‍ಯವರನ್ನೂ ೩ ನೇ ಕ್ಲಾಸಿಗೂ ಕಳೆದ ಜೂನ್ ತಾ ೧ ರಿಂದ ಬಡ್ತಿ ಮಾಡಿದೆ.

ಅ| ಜಿಯಾಲಜಿಸ್ಟ್ ಮೆ|| ಎಚ್ ಕೆ ಸ್ಲೇಟರ್‌ಯವರಿಗೆ ೧೯೦೯ ನೇ ಫೆಬ್ರವರಿ ತಾ ೨೫ ರಿಂದ ಒಂದು ತಿಂಗಳೂ ಹದಿಮೂರು ದಿನಗಳ ಪ್ರಿವಿಲೆಜ್ ರಜವನ್ನೂ ಆ ತರುವಾಯ ಒಂದು ವರ್ಷದ ಫರ್ಲೋ ರಜವನ್ನು ಕೊಟ್ಟಿದೆ.

ಅ| ಜಿಯಾಲಜಿಸ್ಟ್ ಮೆ|| ಬಿ ಜಯರಾಮ್‍ರವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಜನಗಳ ಮತ್ತು ದನಗಳ ಸಂಚಾರ

ಸಂಸ್ಥಾನದ ಕೆಲವು ಕಡೆ ಮಳೆಯು ಸರಿಯಾಗಿ ಬೀಳದೆ ಪ್ರಕೃತ ಕಾಲಸ್ಥಿತಿಯು ಅಷ್ಟು ಅನುಕೂಲವಾಗಿಲ್ಲವಾಗಿ ದನಗಳನ್ನು ಸಾಕುವ ಮಂದಿಯಾಗಿ ಕೂಲಿಗೂ ಮೇವಿಗೂ ಅನುಕೂಲವಾಗಿರುವ ಪ್ರದೇಶಗಳಿಗೆ ಹೊಡೆದುಕೊಂಡು ಹೋಗುತ್ತಿದ್ದಾರೆಯಷ್ಟೆ. ಈ ವಿಚಾರವಾಗಿ [illegible] ಫಾರೆಸ್ಟ್ ರೇಂಜರು ತಮ್ಮ ೧೯೦೮ ನೇ ಡಿಸೆಂಬರು ೨೭ ನೇ ತಾರೀಖಿನ [illegible] ರಿಪೋರ್ಟಿನಲ್ಲಿ ಬರೆಯುವದೇನೆಂದರೆ —

ನಾಗಮಂಗಲ ಕುಣಿಗಲು ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಿಂದ ದನಗಳನ್ನು ನೀಲಗಿರಿ ಡಿಸ್ಟ್ರಿಕ್ಟಿಗೆ ವಿಶೇಷವಾಗಿ ಹೊಡೆದುಕೊಂಡು ಹೋಗಿರುತ್ತಾರೆ. ಈ ತಾಲ್ಲೂಕುಗಳಿಂದ ಅನೇಕರು ನೀಲಗಿರಿಗೆ ಬಂದು ಕಛೇರಿಗಳಲ್ಲೂ ಮತ್ತು ಕಾಫಿತೋಟಗಳಲ್ಲೂ ನೌಕರಿಗಳನ್ನು ಸಂಪಾದಿಸಿಕೊಂಡು ಬಹಳ ಕಾಲದಿಂದಲೂ ಜೀವಿಸುತ್ತಾರೆ. ಉದಕಮಂಡಲ ಕೂನೂರು ಮತ್ತು ಕೋಡೆ [illegible] ಕೆನಾಲ್ ಕಡೆಗಳಲ್ಲಿ ತರಕಾರಿ ತೋಟಗಳನ್ನು ಮಾಡತಕ್ಕವರೆಲ್ಲಾ ಮೈಸೂರಿನವರೇ. ಈ ರೀತಿ ನಾವಿದಾಗ ಮಂದಿ ಮೈಸೂರಿನವರು ನೀಲಗಿರಿಯಲ್ಲಿ ಅನೇಕ ಉದ್ಯೋಗಗಳಲ್ಲಿ ಸೇರಿಕೊಂಡು ಜೀವಿಸುತ್ತಿರುತ್ತಾರೆ. ಇವರು ಆಗಾಗ್ಗೆ ತಮ್ಮ ಊರುಗಳಿಗೆ ಬಂದು ಇಲ್ಲಿನವರಿಗೆ ನೀಲಗಿರಿಯಲ್ಲಿ [illegible] ಅನುಕೂಲತೆಗಳನ್ನು ಮತ್ತು ಅಲ್ಲಿ ಕೂಲಿ ಕೆಲಸಕ್ಕೆ ಇರತಕ್ಕ ಗಿರಾಕಿಯನ್ನು ಹೇಳುವದುಂಟು. ಈ ಕಾರಣದಿಂದಲೂ ಮತ್ತು ತಮ್ಮ [illegible] ಗಳಲ್ಲಿ ಜನಗಳ ತಿಂಡಿಗೂ ಮೇವಿಗೂ ಅನಾನುಕೂಲವಾಗಿ ಜನಗಳು ಜಾನುವಾರುಗಳನ್ನು ಅನೇಕವಾಗಿ ಅಟ್ಟಿಕೊಂಡು ಅಕ್ಟೋಬರ್, ಡಿಸೆಂಬರ್ ತಿಂಗಳುಗಳಲ್ಲಿ ನೀಲಗಿರಿ ಪ್ರಾಂತ್ಯ ಹೊರಟರು. ಇಲ್ಲಿಂದ ಹೋದವರಿಗೆಲ್ಲಾ ಅಲ್ಲಿ ಕೆಲಸ ಸಿಕ್ಕದೆ [illegible] ಅನೇಕರು ಜೀವನಕ್ಕಿಲ್ಲದೆ ತೊಂದರೆಪಡಬೇಕಾಗಿ ಬಂತು. ಮತ್ತು ದನಗಳ ದರೋ ಸರಿಯಾಗಿ ಮೇವು ಪೋಷಣೆಯಿಲ್ಲದೆ [illegible] ರೋಗ [illegible] ಗಳು ಕಾಣಿಸಿಕೊಂಡು ಸಾಯಲು ಕಾರಣವಾಯಿತು. ಈ ಅವಸ್ಥೆಯನ್ನು ನೋಡಿ ಅಲ್ಲಿನ ಕಾಫಿ ಪ್ಲಾಂಟರುಗಳು ಮತ್ತು [illegible] ಇಲ್ಲಿಂದ ಹೋದವರನ್ನು ತಮ್ಮ [illegible] ಕೊಟ್ಟು ಕೆಲಸಕ್ಕೆ ನೇಮಕ ಮಾಡಿದರು. ರಜಾ ಅವರು ತಮ್ಮ [illegible] ದನಗಳನ್ನು ಅಟ್ಟಿಕೊಂಡು ಬಹಳ ಪ್ರಯಾಸಪಟ್ಟು ಹಿಂತಿರುಗಿ [illegible] [illegible] ಕೆಲವರನ್ನು ಬಂಡೀಪುರದ ಫಾರೆಸ್ಟಿನಲ್ಲಿ ನಿಂತು ದನಗಳನ್ನು ಮೇಯಿಸಬೇಕೆಂದು [illegible] ಯಿತು. ಈ ಫಾರೆಸ್ಟಿನಲ್ಲಿ [illegible] [illegible] ಮತ್ತು ಅನೇಕವಾಗಿ ಬಿಟ್ಟು ಹೊರಟು ಹೋಗುತ್ತಾ ಇದ್ದಾರೆ. [illegible] [illegible] ಅಷ್ಟು ಅನುಕೂಲವಿಲ್ಲ. [illegible] [illegible] [illegible] ಮತ್ತು ನಾಗಮಂಗಲ ತಾಲ್ಲೂಕುಗಳಿಂದ [illegible] ಗಳು ಬಂದಿದ್ದುವು. ಅವರ ಇವುಗಳಲ್ಲಿ [illegible] [illegible] ಹರಡಿಕೊಂಡಿದ್ದದ್ದರಿಂದ ಅವು ಈ ಸ್ಥಳವನ್ನು ಬಿಟ್ಟು ಹೊರಟುಹೋಗಿರುತ್ತವೆ. ಇದ್ದೆಲ್ಲಾ ಅದರ ಈ ಸಂಗತಿ [illegible] ತೊಂದರೆಯಾಗಿರುವ ಪ್ರದೇಶದಲ್ಲಿನ ಜನರು ನೀಲಗಿರಿ ಕಡೆಗೆ ಹೋಗುವದಕ್ಕಿಂತ ಹೆಗ್ಗಡದೇವನಕೋಟೆ ತಾಲ್ಲೂಕು [illegible] ಗ್ರಾಮದಲ್ಲಿ ದನಗಳಿಗೆ ಕುಡಿಯುವದಕ್ಕೆ [illegible] ಇಲ್ಲವೆಂದು ಹೇಳಿಕೊಂಡದ್ದರಿಂದ ಸ್ಟೇಟ್ ಫಾರೆಸ್ಟಿನಲ್ಲಿ ದನಗಳ ರೊಪ್ಪ ಹಾಕುವದಕ್ಕೆ ಅವಕಾಶಕೊಟ್ಟಿರುತ್ತೆ ಎಂಬುದೇ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ತಾ ೩೦ನೇ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸೆಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಡಿಸೆಂಬರಿ ತಿಂಗಳು ಕಡೆಯ ಮೀಟಿಂಗನ್ನು ನಡಿಸಿದರು ಕಳೆದ ನವಂಬರ್, ಡಿಸೆಂಬರ್ ತಿಂಗಳುಗಳ ಜಮಾ ಖರ್ಚು ಮೊದಲಾದ ಲೆಕ್ಕಗಳನ್ನು ಓದಿಸಿ ಪ್ಯಾಸ್ ಮಾಡಿದರು ಕಳೆದ ಡಿಸೆಂಬರ್ ೩೧ರಲ್ಲಿ ಎಲ್ಲಾ ಬಾಬುಗಳಿಂದಲೂ ಮ್ಯುನಿಸಿಪಾಲಿಟಿಗೆ ರೂ ೧೧೬೪೯—೧—೩ ಪೈ ಜಮಾ ಆಯಿತು, ರೂ ೧೦,೦೮೦—೫—೦ ಖರ್ಚಾಯಿತು ಆ ತಿಂಗಳಲ್ಲಿ ಜನನ ೧೩೩, ಮರಣ—ಪ್ಲೇಗ್ ೩೦ ಸಿಡುಬು ೭, ಜ್ವರ, ೧೭, ಇತರ ಕಾರಣಗಳು ೧೮೭ ಅಂತು ೨೪೭ ಎಂದು ತಿಳಿಯಿತು

ಲೆಕ್ಕಗಳನ್ನು ತನಿಖೆಮಾಡಿದ ಆಡಿಟರುಗಳ ರಿಪೋರ್ಟು ಓದಲಾಯಿತು ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಆಕ್ಟ್ರಾಯಿ ಉತ್ಪತ್ತಿ ಕಡಮೆ ಆಗಿದೆ ಎಂತಲೂ, ಕುರಿಗಳ ಆಮದು ರಪ್ತು ಅವುಗಳ ಹಾಸಲ್ ವಸೂಲಿ ಅಷ್ಟು ತೃಪ್ತಿಕರವಾಗಿಲ್ಲವೆಂತಲೂ ... ಬೆಂಗಳೂರಿನಲ್ಲಿ ಜಾರಿಯಲ್ಲಿರುವ ಪ್ರಕಾರ ಕುರಿಗಳ ಹಾಸಲನ್ನು ಪರಾಬು ಹಾಕಿದಲ್ಲಿ ಮ್ಯುನಿಸಿಪಲ್ ಉತ್ಪತ್ತಿ ಜಾಸ್ತಿ ಆಗುವುದಲ್ಲದೆ ಶಿಬ್ಬಂದಿ ಖರ್ಚು ತುಂಬಾ ಕಡಮೆಯಾದೀತೆಂತಲೂ, ಮೊಹತರ್ಫಾ ಕಂದಾಯಕ್ಕೆ ... ಮುತ್ಸದ್ದಿಗಳ ಜವಾನರೂ ಹೆಚ್ಚಾಗಿದ್ದಾಗ್ಯೂ ವಸೂಲಿ ಆಗಿರುವ ಮೊಬಲಗು ತೃಪ್ತಿಕರವಾಗಿಲ್ಲವೆಂತಲೂ ಸೂಚಿಸಿದ್ದರು ಕುರಿಗಳ ಹಾಸಲನ್ನು ಹರಾಜು ಹಾಕುವ ವಿಚಾರದಲ್ಲಿ ಪ್ರತ್ಯೇಕವಾದ ಪ್ರಾಪೋಜಲ್ ಬಂದರೆ ಚರ್ಚಿಸಿ ... ಇತ್ಯರ್ಥವಾದಬಹುದೆಂತಲೂ ಇನ್ನು ಮುಂದೆ ಮೊಹತರ್ಫಾ ವಸೂಲಿಯನ್ನು ಹೆಚ್ಚಿಸಬಹುದೆಂತಲೂ ಕೌನ್ಸಲರುಗಳು ಸೂಚಿಸಿದರು ಇದಲ್ಲದೆ ವಿದ್ಯುಚ್ಛಕ್ತಿಯ ದೀಪಗಳು ಪಟ್ಟಣದಲ್ಲಿ ಕೆಲವು ಕಡೆ ಇಲ್ಲವೇ ಇಲ್ಲವೆಂದೂ, ಕೆಲವು ಸ್ಥಳಗಳಲ್ಲಿ ಹಚಾ ಗಿವೆ ಎಂದೂ, ಇದನ್ನು ಕ್ರಮಪಡಿಸಿ ಸಾಧ್ಯವಾದಷ್ಟು ದೀಪಗಳನ್ನು ಗಲ್ಲಿಗಳಿಗೂ ಇಡಿಸಬೇಕೆಂದೂ, ಈಗ ೬೦೦ ವಿದ್ಯುಚ್ಛಕ್ತಿಯ ದೀಪಗಳಿದ್ದರೂ ಮ್ಯುನಿಸಿಪಾಲಿಟಿಯವರು ಅನೇಕ ಕಡೆಗಳಲ್ಲಿ ಕೆರೋಸಿನ್ ಎಣ್ಣೆ ದೀಪಗಳನ್ನು ಇಟ್ಟಿದಾರೆಂದೂ, ಇದಕ್ಕೆ ಸುಮಾರು ೪೦೦ ಚಿಲ್ಲರೆ ರೂಪಾಯಿ ಪ್ರತಿ ತಿಂಗಳಲ್ಲೂ ಖರ್ಚಾಗುತ್ತಿದೆ ಎಂದೂ, ಇದನ್ನು ವಿದ್ಯುಚ್ಛಕ್ತಿಯ ಇಲಾಖೆಗೆ ಕೊಟ್ಟು ಪಟ್ಟಣಕ್ಕೆ ೧೦೦೦ ಬೆಳಕುಗಳನ್ನು ಇಡಿಸಿಕೊಳ್ಳುವಂತೆ ಏರ್ಪಾಡಾಗಬೇಕೆಂದೂ ಸೂಚಿಸಲಾಯಿತು ಈಗಿರುವ ಹಚ್ಚಾದ ವಿದ್ಯುಚ್ಛಕ್ತಿಯ ದೀಪಗಳನ್ನು ತೆಗೆದು ಹಾಕಿ, ಯಾವ ಯಾವ ಕಡೆ ಎಷ್ಟು ದೀಪಗಳು ಹೊಸದಾಗಿ ಇಡಬೇಕೆಂಬುದನ್ನು ವೈಸ್ ಪ್ರೆಸಿಡೆಂಟರೂ, ಆಯಾ ಮೊಹಲ್ಲೆಯ ಮ್ಯುನಿಸಿಪಲ್ ಕೌನ್ಸೆಲರುಗಳೂ ಸೇರಿ ಅವಲೋಕಿಸಿ ಗೊತ್ತುಮಾಡಿ ತಿಳಿಸಬೇಕೆಂದು ತೀರ್ಮಾನವಾಯಿತು

ಎರಡು ವರುಷಗಳಲ್ಲಿ ವಾಯಿದಾನೆ ಗುಡಿಸಲು ತೆರಿಗೆಯ ವಸೂಲಾತಿಯನ್ನು ಹೆಲ್ತ್ ಆಫೀಸರಿಗೆ ವಹಿಸಿ ಆರೇಳು ತಿಂಗಳಾಗಿದ್ದರೂ ಅವರು ವಸೂಲ್ಮಾಡಲಿಲ್ಲವೆಂದು ಮ ಶ್ರೀಕಂಠಯ್ಯನವರು ಸೂಚಿಸಿದರು ಹೆಲ್ತ್ ಆಫೀಸರು ಆ ತೆರಿಗೆ ವಸೂಲ್ಮಾಡಲು ಅದರ ಕ್ರಮ ಮುಂತಾದದ್ದು ತಮಗೆ ತಿಳಿಯಲಿಲ್ಲವೆಂದು ಹೇಳಿದಾಗ ಮ್ಯುನಿಸಿಪಲ್ ರೂಲ್ಸುಗಳನ್ನು ಓದಿಕೊಂಡು ಅದರಂತೆ ವಸೂಲ್ಮಾಡಬೇಕೆಂದು ಪ್ರೆಸಿಡೆಂಟರು ಹೆಲ್ತ್ ಆಫೀಸರಿಗೆ ತಿಳಿಸಿದರು

ಮನೆಯವರು ತಮ್ಮ ಮನೆ ಎಚ್ಚಲ ನೀರನ್ನು ಹೊರಗಡೆ ಮ್ಯುನಿಸಿಪಲ್ ಚರಂಡಿಗೆ ಬಂದು ಬೀಳುವಂತೆ ಕಾಲುಗಾರಿ ಮುಂತಾದದ್ದು ಮಾಡಿಸಲಿಲ್ಲವೆಂದು ಹೇಳಿ ಹೆಲ್ತ್ ಆಫೀಸರು ಮನೆಯವರನ್ನು ನಿರ್ಬಂಧಪಡಿಸಿ ಅವರ ಮೇಲೆ ಪ್ರಾಸಿಕ್ಯೂಷನ್ ಮಾಡುತ್ತಾರೆಂದೂ, ಅನೇಕ ಕಡೆಗಳಲ್ಲಿ ಮ್ಯುನಿಸಿಪಲ್ ಚರಂಡಿಗಳೇ ಇಲ್ಲದಿರೂ ಇವರಿಂದ ಪ್ರಜೆಗಳನ್ನು ವೃಥಾ ಕಷ್ಟಪಡಿಸುವುದು ಸಹಜವಲ್ಲವೆಂದೂ ಮ|| ಶ್ರೀಕಂಠಯ್ಯನವರು ಸೂಚಿಸಿದರು ಈ ವಿಚಾರವು ಸ್ವಲ್ಪ ಹೊತ್ತು ಚರ್ಚೆಯಾಗಿ ಕಡೆಗೆ ಅಂಥಾ ಕಷ್ಟನಷ್ಟಕ್ಕೆ ಗುರಿಯಾದವರು ಅರ್ಜಿಕೊಟ್ಟು ಹೇಳಿಕೊಂಡಲ್ಲಿ ಅದನ್ನು ತಪ್ಪಿಸಿಕೊಡುತ್ತೇವೆಂದು ಪ್ರೆಸಿಡೆಂಟರು ತಿಳಿಸಿದರು

ಪ್ಲೇಗ್ ಉಪದ್ರವು ರಾಜಧಾನಿಯಲ್ಲಿ ಇನ್ನೂ ಇರೋಣದರಿಂದ ಪ್ಲೇಗ್ ಆದ ಮನೆಗಳನ್ನು ಶುದ್ಧಿಮಾಡುವುದಕ್ಕೆ ಮಾಹೆಯಾನಾ ೯೦ ರೂಪಾಯಿ ತಲಬಿನ ಮೇರೆ ೧೦ ಜನರನ್ನು ನೇಮಕಮಾಡಿಕೊಂಡಿರುವುದು ವಜಾ ಆಗಕೂಡದೆಂದೂ, ವಜಾ ಮಾಡಿಬಿಟ್ಟರೆ ಪಟ್ಟಣದ ಆರೋಗ್ಯ ಕೆಡಲು ಅವಕಾಶವಾಗುವುದೆಂದೂ ಹೆಲ್ತ್ ಆಫೀಸರು ಸೂಚಿಸಿದ್ದರ ಮೇರೆ ಆ ಶಿಬ್ಬಂದಿಯನ್ನು ಇನ್ನೂ ಕೆಲವು ಕಾಲ ಇಟ್ಟಿರತಕ್ಕದ್ದೆಂದು ಗೊತ್ತುಮಾಡಿದರು

ಪ್ಲೇಗ್ ಕ್ಯಾಂಪಿನಲ್ಲಿರುವ ೭ ಮಂದಿ ನೌಕರರಿಗೆ ಬಟ್ಟೆ ಜೋಡು ಮುಂತಾದದ್ದನ್ನು ಮ್ಯುನಿಸಿಪಾಲಿಟಿಯಿಂದ ಕೊಡಿಸಬೇಕೆಂದು ಗವರನ್‌ಮೆಂಟಿನಿಂದ ಸ್ಯಾಂಕ್ಷನ್ ಆಗಿ ಬಂದಿದ್ದ ಹುಕುಮನ್ನು ಓದಿಸಿ ರಿಕಾರ್ಡುಮಾಡಿಕೊಂಡರು

ರಾಜಧಾನಿಯ ನೀರು ಸರಬರಾಯಿನ ಇಲಾಖೆಗೆ ೧೯೦೮—೦೯ ನೇ ಸಾಲಿನ ಖರ್ಚಿಗೆ ಮ್ಯುನಿಸಿಪಾಲಿಟಿಯಿಂದ ೧೫,೦೦೦ ರೂಪಾಯಿ ಪಾವತಿ ಆಗಬೇಕೆಂದು ಗವರನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿರುತ್ತಾರೆ ಇದನ್ನು ಕೌನ್ಸೆಲರುಗಳು ಓದಿಸಿ ರಿಕಾರ್ಡುಮಾಡಿಕೊಂಡರು

ವೀರಣ್ಣನ ಛತ್ರದ ಆಸ್ಪತ್ರೆಯಲ್ಲಿ ಗೆದ್ದಲು ಹಿಡಿಯದಂತೆ ಹೊಸ ಕಾಮಗಾರಿ ಮುಂತಾದದ್ದನ್ನು ಮಾಡಿಸುವುದಕ್ಕೆ ಅಂದಾಜು ಪಟ್ಟಿಯಂತೆ ೩೫೦ ರೂಪಾಯಿ ಖರ್ಚುಮಾಡಬಹುದೆಂದು ಸ್ಯಾಂಕ್ಷನ್ ಮಾಡಿದರು

ಮ್ಯುನಿಸಿಪಲ್ ಬೈಲಾಗಳನ್ನೆಲ್ಲಾ ಒಂದೇ ಸಲ ಓದಿಸಿ ಪ್ಯಾಸ್ ಮಾಡುವುದಕ್ಕಿಂತ ಒಂದೊಂದಾಗಿ ತೆಗೆದುಕೊಂಡು ಅದರಲ್ಲಿರುವ ಸಾಧಕ ಬಾಧಕಗಳನ್ನು ಮತ್ತೊಂದು ಸಲ ಪರೀಕ್ಷಿಸಿ ನೋಡಿ ಕ್ರಮಪಡಿಸಿ ಪ್ಯಾಸ್ ಮಾಡುವುದು ಉತ್ತಮವೆಂದು ಮ|| ರಂಗೈಯಂಗಾರ್ರು ಸೂಚಿಸಿದ್ದನ್ನು ಇತರರೂ ಒಪ್ಪಿಕೊಂಡರು

ಮ|| ಗಳಾದ ರಂಗೈಯಂಗಾರ್ರೂ, ಶ್ರೀಕಂಠಯ್ಯನವರೂ, ಅಂಬಳೆ ಪಂಡಿತರೂ, ತಿರುವೆಂಗಡ ಮೊದಲಿಯಾರ್ರೂ, ಮ್ಯುನಿಸಿಪಲ್ ಮ್ಯಾನೆಜಿಂಗ್ ಕಮಿಟಿಯ ಮೆಂಬರುಗಳಿಯೂ ಮ|| ಗಳಾದ ಅಂಬಳೆ ಪಂಡಿತರೂ, ವೆಂಕಟಕೃಷ್ಣಯ್ಯನವರೂ ರಹಿಮತುಲ್ಲಾ ಸೇಟರೂ, ಮೊದಪ್ಪನವರೂ ಹೆಲ್ತ್ ಕಮಿಟಿಯ ಮೆಂಬರುಗಳಿಯೂ ಮ|| ಶ್ರೀಕಂಠಯ್ಯನವರೂ, ಕೃಷ್ಣಪ್ಪಾಜಿ ಅರಸಿನವರೂ ಆಡಿಟರುಗಳಾಗಿಯೂ ಇರಬೇಕೆಂದು ತೀರ್ಮಾನವಾಯಿತು

ಮ್ಯುನಿಸಿಪಲ್ ಯುನಾನಿ ಆಸ್ಪತ್ರೆಯ ಹಕೀಮರಾದ ಮ|| ಸೈಯದ್ ಮುಸ್ತಫಾ ಸಾಹೇಬ್‌ಯವರಿಗೆ ತಿಂಗಳಿಗೆ ೬೦ ರೂಪಾಯಿನಂತೆ ಸಂಬಳವನ್ನು ಬಡ್ತಿ ಮಾಡಿಕೊಡಬೇಕೆಂದು ಕೌನ್ಸೆಲರುಗಳು ಒಪ್ಪಿರುತ್ತಾರೆ

ಬೆಳಗೊಳದ ನೀರು ಸರಬರಾಜಿನ ಇಲಾಖೆಯವರು ಕೆಲವು ಸಾಮಾನುಗಳನ್ನು ಕೊಂಡುಕೊಂಡದ್ದಕ್ಕೆ ತಗಲಿದ ೨,೦೦೦ ಚಿಲ್ಲರೆ ರೂಪಾಯನ್ನು ಮ್ಯುನಿಸಿಪಾಲಿಟಿಯಿಂದ ಕೊಡಬೇಕಾದದ್ದಿಲ್ಲವೆಂದೂ, ಗವರ್ನಮೆಂಟಿನವರೇ ವಹಿಸಿಕೊಳ್ಳುವುದಾಗಿಯೂ ಹುಕುಂ ಆಗಿತ್ತು ಈ ಹುಕುಮನ್ನು ಕೌನ್ಸೆಲರುಗಳು ಓದಿಸಿ, ವಂದನಾಪೂರ್ವಕವಾಗಿ ರಿಕಾರ್ಡು ಮಾಡಿಕೊಂಡರು

ಮ್ಯುನಿಸಿಪಲ್ ಗ್ರ್ಯಾಂಟನ್ನು ಪಡೆಯುತ್ತಿರುವ ಪ್ರೈಮರಿ ಸ್ಕೂಲುಗಳನ್ನು ಪರೀಕ್ಷೆ ಮಾಡಿ, ಚನ್ನಾಗಿ ಓದಿಸುವಂಥಾ ಸ್ಕೂಲುಗಳಿಗೆ ಹೆಚ್ಚು ಗ್ರ್ಯಾಂಟು ಕೊಡುವಂತೆಯೂ, ಇಲ್ಲದಾದವುಗಳಿಗೆ ಗ್ರ್ಯಾಂಟನ್ನು ಆಗಾಗ್ಗೆ ಕಮ್ಮಿ ಮಾಡುತ್ತಾ ಬರುವಂತೆಯೂ ಹೊಸ ಕ್ರಮವನ್ನು ಅನುಸರಿಸಿದರೆ ಉತ್ತಮವೆಂದು ಮ|| ವೆಂಕಟಕೃಷ್ಣಯ್ಯನವರು ಸೂಚಿಸಿದ್ದನ್ನು ಇತರ ಕೌನ್ಸೆಲರುಗಳೂ ಒಪ್ಪಿಕೊಂಡರು

ವಿಶೇಷ ವಾರ್ತೆಗಳು

ನಾಗಪುರದ ಪ್ರದರ್ಶನೋತ್ಸವದಲ್ಲಿ ಭಾವಾನಗರದ ನಂದಕುವೇರಬಾಯಿ ಎಂಬ ರಾಜಕುಮಾರ್ತೆಗೆ ಆಕೆ ಹಾಕಿ ಕಳುಹಿಸಿದ್ದ ಕಸೂತಿಯ ಚಿತ್ರಕೆಲಸಕ್ಕೆ ಒಂದು ಚಿನ್ನದ ಮೆಡಲು ಕೊಡಲಾಯಿತು

ಕಲ್ಕತ್ತಾ ಪಟ್ಟಣದ ಪೋಲೀಸ್ ಕಮೀಷನರವರು ಮೊಹರಂ ಹಬ್ಬದ ವೇಷವನ್ನು ಹಾಕಿಕೊಳ್ಳುವಂಥಾ ೩೦೦ ಜನ ಹಿಂದುಮಹಮದೀಯ ಪ್ರಜೆಗಳಿಂದ ತಲಾ ೫೦ ರೂಪಾಯಿನ ಜಾಮೀನ್ ಪತ್ರಗಳನ್ನು ಬರೆಸಿಕೊಂಡಿದ್ದರು

ಕೋಲ್ಹಾಪುರದಲ್ಲಿ ಐದು ಮಂದಿ ವಿದ್ಯಾರ್ಥಿಗಳೂ ಮೂವರು ಬ್ರಾಹ್ಮಣರೂ ದುಷ್ಕೃತ್ಯಗಳನ್ನು ನಡಸುವಂತೆ ಜನರಿಗೆ ಪ್ರೋತ್ಸಾಹಪಡಿಸಿ ನೋಟೀಸುಗಳನ್ನು ಅಲ್ಲಲ್ಲಿ ಅಂಟಿಸಿದ್ದರೆಂದು ಮೊಕದ್ದಮೆ ಬಂದು ವಿಚಾರಣೆ ನಡಿಯುತ್ತಿದೆ

ಮಿ ರಾಬರ್ಟ್ ಲೇಡ್ಲಾ ಎಂಬೊಬ್ಬ ಇಂಗ್ಲಿಷ್ ದೊಡ್ಡ ಮನುಷ್ಯನು ಕಲ್ಕತ್ತಾ ಪಟ್ಟಣದಲ್ಲಿರುವ ಒಂದು ವಿದ್ಯಾಶಾಲೆಯ ಫಂಡಿಗೆ ಕೆಲವು ವರುಷಗಳ ಹಿಂದೆ ಎರಡು ಲಕ್ಷ ರೂಪಾಯಿ ಧರ್ಮಕೊಟ್ಟಿದ್ದನು ಈಗ ಈತನು ಮತ್ತೆ ಆ ಸ್ಕೂಲ್ ಫಂಡಿಗೆ ಇನ್ನೊಂದು ಲಕ್ಷ ರೂಪಾಯಿ ಕಳುಹಿಸಿರುತ್ತಾನೆ

ಕಲ್ಕತ್ತಾ ಪಟ್ಟಣದಲ್ಲಿ ಬಾಬು ನರೇಂದ್ರನಾಥ ಮಿತ್ರ ಎಂಬಾತನು ಒಂದು ವಿಧವಾ ನಿಲಯವನ್ನು ಸ್ಥಾಪಿಸಿ ನಡಿಸುತ್ತಾ ಬಂದಿದಾನೆ ಈಗ ಈ ನಿಲಯಕ್ಕೆ ಅಲ್ಲಿನ ಬಾಬು ಮಣಿನಾಥ ಮಿತ್ರ ಎಂಬ ಐಶ್ವರ್ಯವಂತನು ತನ್ನ ಆಸ್ತಿಯಿಂದ ೩೦,೦೦೦ ರೂಪಾಯಿ ಕಳುಹಿಸಿರುತ್ತಾನೆಂದು ತಿಳಿದು ಬಂದಿದೆ

ಬಂಗಾಳಾದಲ್ಲಿ ಗಡೀಪಾರು ಶಿಕ್ಷೆಗೆ ಗುರಿಯಾಗಿರುವ ಬಾಬು ಕೃಷ್ಣಕುಮಾರ ಮಿತ್ರ ಎಂಬಾತನ ಹೆಂಡತಿ ಮಕ್ಕಳಿಗೆ ಜೀವನಕ್ಕೋಸ್ಕರ ಬಂಗಾಳಾ ಗವರ್ನಮೆಂಟಿನವರು ತಿಂಗಳಿಗೆ ೨೦೦ ರೂಪಾಯಿನಂತೆ ಕೊಡುವುದಾಗಿ ಹೇಳಿಕಳುಹಿಸಿದರು ಆತನ ಹೆಂಡತಿ ಮಕ್ಕಳು ಅದು ತಮಗೆ ಅಗತ್ಯವಿಲ್ಲವೆಂದು ಹೇಳಿ ಜವಾಬು ಕೊಟ್ಟಿದಾರೆ

ಮದರಾಸಿನಲ್ಲಿ ಜಡ್ಜರಾಗಿರುವ ಮ|| ಸಿ ಕೃಷ್ಣನ್‌ರವರ ಸವಿಪ ಬಂಧುವಾದ ಮಿಸ್ ಸಿ ಕೆ ಕೌಸಲ್ಯ ಎಂಬ ಯುವತಿಯು ಈ ಸಲ ಎಫ್ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಬಿ ಎ ಪರೀಕ್ಷೆಗೆ ವ್ಯಾಸಂಗ ಮಾಡುವಳಾಗಿದ್ದಾಳೆಂದೂ, ತಿಯ್ಯಾ ಎಂಬ ಜನರಲ್ಲಿ ಇಷ್ಟು ಮಟ್ಟಿಗೆ ವಿದ್ಯಾವತಿಯಾಗಿರತಕ್ಕವರು ಯಾರೂ ಇಲ್ಲವೆಂದೂ ತಿಳಿದು ಬಂದಿದೆ

ಜರ್ಮನ್ ರಾಜ್ಯದ ಮಂತ್ರಿಯವರು ಅಲ್ಲಿನ ಪಾರ್ಲಿಮೆಂಟ್ ಸಭಿಕರನ್ನು ಕುರಿತು ಇತರರಾಜ್ಯಗಳವರೆಲ್ಲಾ ಜರ್ಮನರ ವಿಷಯದಲ್ಲಿ ವಿಶೇಷಸ್ನೇಹಪರರಾಗಿರುತ್ತಾರಾದಕಾರಣ ಜರ್ಮನ್ ರಾಜ್ಯದಲ್ಲಿ ಸೈನ್ಯದ ಸಂಖ್ಯೆಯನ್ನು ಒಹುಮಟ್ಟಿಗೆ ಕಡಮೆ ಮಾಡಬಹುದಾಗಿದೆ ಎಂದು ತಿಳಿಸಿದರು ಪಾರ್ಲಿಮೆಂಟ್ ಮೆಂಬರುಗಳು ಆ ಅಭಿಪ್ರಾಯವನ್ನು ಒಪ್ಪಿಕೊಂಡಿದಾರೆ

ಭಾವಾನಗರದಲ್ಲಿ ರಾಜಕುಮಾರ್ತೆಯನ್ನು ರಾಜಕೋಟೆಯ ರಾಜಕುಮಾರನಿಗೆ ಕೊಟ್ಟು ಕಳೆದ ವಾರ ವಿವಾಹ ನಡಿಸಲಾಯಿತು ಕೆಲವು ದೇಶೀಯ ರಾಜರುಗಳೂ, ಯೂರೋಪ್ಪಿಯನ್ ಸರ್ದಾರರೂ ವಿವಾಹಕಾಲದಲ್ಲಿ ಹಾಜರಾಗಿದ್ದರು ಒಂದು ವಾರದ ತನಕ ಭಾವಾನಗರದಲ್ಲಿ ಉತ್ಸವ, ಸಮಾರಾಧನೆ, ಭೂರಿದಕ್ಷಿಣೆ, ವಿತರಣಾದಿಗಳು ಬಹು ಅಟ್ಟಹಾಸದಿಂದ ನಡಿಸಲ್ಪಟ್ಟವು

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಫಿರೋಸ್ ಪುರದಲ್ಲಿ ಒಬ್ಬ ವಕೀಲನು ಕೋರ್ಟಿನಲ್ಲಿ ಮೊಕದ್ದಮೆಯನ್ನು ಕುರಿತು ವಾದಿಸುವಾಗ್ಗೆ ಜಡ್ಜಿಯವರಿಗೆ ಅವಮಾನಕರವಾದ ಮಾತುಗಳನ್ನು ಪ್ರಯೋಗ ಮಾಡಿದನು ಅದಕ್ಕಾಗಿ ಆತನಿಗೆ ೨೦೦ ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು ಆ ಲಾಗಾಯಿತು ಆ ಜಡ್ಜಿಯ ಕೋರ್ಟಿಗೆ ಯಾವ ಲಾಯರೂ ಹೋಗದಂತೆ ಅಲ್ಲಿನ ವಕೀಲರೆಲ್ಲಾ ಕಟ್ಟುಮಾಡಿಕೊಂಡಿದಾರೆ

ಪೂನಾ ಪಟ್ಟಣದಲ್ಲಿ ಪ್ರಕಟವಾಗುವ "ಕಾಲ್" ಎಂಬ ಮರಾಠಿ ಪತ್ರಿಕೆಯ ಆಫೀಸನ್ನು ಕಳೆದ ವಾರ ಪೋಲೀಸಿನವರು ಶೋಧಿಸಿಮಾಡಿ, ಆಕ್ಟಿಂಗ್ ಎಡಿಟರಾದ ಪುರುಷೋತ್ತಮ ಬಾಪೂಜೀ ಖಾರೇ ಎಂಬಾತನನ್ನು ದಸ್ತಗಿರಿಮಾಡಿಕೊಂಡು ಹೋದರು ಮ್ಯಾಜಿಸ್ಟ್ರೇಟರು ಆತನನ್ನು ಬಂದೀಖಾನೆಯಲ್ಲಿ ಇಡಿಸಿದಾರೆ ರಾಜದ್ರೋಹಕರವಾದ ಬರವಣಿಗೆಯನ್ನು ಆ ಪತ್ರಿಕೆಯಲ್ಲಿ ಬರೆದಿರುತ್ತಾನೆಂಬುವುದೇ ಆತನ ಮೇಲೆ ಬಂದಿರುವ ಅಪವಾದವು

ತಿರುವಾಂಕೂರು (ಅನಂತಶಯನ) ಸಂಸ್ಥಾನದ ಉತ್ತರ ಭಾಗದಲ್ಲಿರುವ ಸಿರಿಯನ್ ಜನರಲ್ಲಿ ಮದುವೆ ಕಾಲದಲ್ಲಿ ವರನ ತಂದೆಯು ಹೆಣ್ಣಿನ ಕಡೆಯವರಿಂದ ಬಹಳ ಹೆಚ್ಚಾದ ದಕ್ಷಿಣೆಯನ್ನು ಕೇಳುವುದು ಈಚೆಗೆ ರೂಢಿಗೆ ಬಂದಿದೆ ಆ ಜನರಲ್ಲಿ ಹೆಣ್ಣು ಹೆತ್ತ ಬಡವರಿಗೂ ಐಶ್ವರ್ಯವಂತರಿಗೂ ಈ ವರದಕ್ಷಿಣೆ [illegible] ದು ಈಗ ಅಲ್ಲಿನ ಕೆಲವು ಮುಖಂಡರು ಸೇರಿ ನಾನಾ ಪ್ರಯತ್ನಗಳನ್ನು ಮಾಡುತ್ತಿದಾರೆ

ಕಳೆದ ೨೭ನೇ ತಾ ಬುಧವಾರದ ದಿನ ಜರ್ಮನಿ ಚಕ್ರವರ್ತಿಯವರ ಐವತ್ತನೇ ವರ್ಷಂತಿ ಉತ್ಸವವನ್ನು ಬಹು ಅಟ್ಟಹಾಸದಿಂದ ನಡೆಸಿದರು ರಾಜವರ್ಗದವರೆಲ್ಲಾ ಅರಮನೆಯಲ್ಲಿ ಸೇರಿ ಚಕ್ರವರ್ತಿಯವರಿಗೆ ಜಯವನ್ನು ಬಯಸಿದರು ಪ್ರಜೆಗಳು ಲಕ್ಷಗಟ್ಟಲೆ ರಾಜಬೀದಿಗಳನ್ನಲಂಕರಿಸಿ ನಾನಾ ಉತ್ಸವಗಳನ್ನು ನಡಿಸಿ ಸಂತೋಷಪಟ್ಟರು ವರ್ತಮಾನ ಪತ್ರಿಕೆಗಳು ಚಕ್ರವರ್ತಿಯವರ ಗುಣಕಥನವನ್ನು ಮಾಡಿ ಅವರ ಕಾರ್ಯಗಳನ್ನೂ ಉಪನ್ಯಾಸಗಳನ್ನೂ ಉದ್ದೇಶಗಳನ್ನೂ ಹೊಗಳಿದರು

ಕಳೆದ ೧೯೦೭ ೦೮ನೇ ಸಾಲಿನಲ್ಲಿ ಹಿಂದೂಸ್ಥಾನದೊಳಗೆ ಐವತ್ತು ನಾರಿನ ಕಾರ್ಖಾನೆಗಳಿದ್ದವು ಅವುಗಳ ಮೂಲಧನ ೧೦ ಕೋಟಿಯೂ ೫೩ ಲಕ್ಷ ರೂಪಾಯಿ ಅವುಗಳಲ್ಲಿ ೧,೮೭,೮೦೦ ಜನರು ಕೆಲಸಮಾಡುತ್ತಿದ್ದರು ಅವುಗಳಲ್ಲಿ ತಯಾರಾಗಿ ರಫ್ತುಮಾಡಲ್ಪಟ್ಟ ಗೋಣಿಚೀಲಗಳೂ ಬಟ್ಟೆಗಳೂ ೧೮ ಕೋಟಿಯೂ ೩೦ ಲಕ್ಷ ರೂಪಾಯಿಗೆ ಬಿಕರಿ ಆಗಿರುತ್ತವೆ ೪೦೦ ಪೌಂಡು ತೂಕದ ಒಂದು ಗಟ್ಟಾ ನಾರಿಗೆ ಮೊದಲು ಕ್ರಯ ೬೫ ರೂಪಾಯಿ ಇದ್ದದ್ದು ಈಗ ೪೨ ರೂಪಾಯಿಗೆ ಇಳಿದು ಹೋಗಿರುವುದು

ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳ ಪೋಲೀಸ್ ಇಲಾಖೆಯ ವಾರ್ಷಿಕ ರಿಪೋರ್ಟಿನಿಂದ ತಿಳಿದುಬರುವುದೇನೆಂದರೆ—ಜನರ ಕೊಲೆಗಳಿಂದ ಮೃತಪಟ್ಟವರು ೧೦೦ ಜನರು ತಾವಾಗಿ ಗಾಯಮಾಡಿಕೊಂಡು ಸತ್ತವರು ೮,೯೫೨ ಮಂದಿ ಸರ್ಕಾರದವರು ಗಲ್ಲಿಗೆ ಹಾಕಿದವರು ೯೩ ಜನರು, ಆತ್ಮಹತ್ಯೆಮಾಡಿಕೊಂಡವರು ೧೦,೭೫೨ ಮಂದಿ ಬೇರೆ ಬೇರೆ ಸರ್ಕಾರಿ ತಾಲ್ಲೂಕಾ ಕೋರ್ಟು, ಕಚೇರಿ, ಕಾರ್ಖಾನೆಗಳಲ್ಲಿ ನೌಕರರಾದವರು ಕಳೆದ ವರುಷ ನಾಲ್ಕು ಕೋಟಿ [illegible] ಐದು ಲಕ್ಷ ರೂಪಾಯನ್ನು ಕದ್ದು ತಿಂದುಹಾಕಿದರು ಎಂಬುದೇ

ಹಿಂದೂಸ್ಥಾನದ ವಾಯುವ್ಯ ಸರಹದ್ದಿನ ಬಳಿ ಪೋರ್ಟ್ ಕಳೆದ ಕೆಲವು ದಿನವನ್ನು ಇಂಗ್ಲಿಷ್ ಸೈನ್ಯಕ್ಕೆ ಸೇರಿಸಿಕೊಂಡು ತರಬೇತು ಮಾಡಿರುತ್ತಾರೆ ಈ ಸೈನಿಕರಲ್ಲಿ ಜಾಗೆ ಜಾಯಿ ಎಂಬ ಹುದ್ದೆದಾರನು ಸಿಪಾಯಿಗಳಿದ್ದ ತನ್ನ ಕೈಕೆಳಗಿನ ಇಪ್ಪತ್ತು ಮಂದಿ ಸಹಚರನ್ನು ಕಟ್ಟಿಕೊಂಡು ಆರು ಕುದುರೆಗಳನ್ನು ಗುಂಡಿನಿಂದ ಕೊಂದುಹಾಕಿ, ಗಾಮಲೀ ಹವಾಲ್ದಾರ್ ಜಾಯಿ ಎಂಬ ... ಒಬ್ಬ ದಫೇದಾರನನ್ನು ಕೊಂದುಹಾಕಿ ಒಬ್ಬ ಸವಾರನನ್ನು ಗಾಯಪಡಿಸಿ ಓಡಿಹೋಗಿರುತ್ತಾನೆ ಅವನು ಇಪ್ಪತ್ತು ಮೂರು ಕ್ಯಾರ್ಬಿನ್ ಪಿಸ್ತೂಲುಗಳನ್ನೂ ಅರವತ್ತು ಕುದುರೆಗಳನ್ನೂ ತನ್ನ ಕೂಡ ಸಾಗಿಸಿಕೊಂಡು ಹೋದನು

ಬ್ರಿಟಿಷ್ ರಾಜ ಭಾರಕ್ಕೆ ಸೇರಿದ ಸಮಸ್ತ ಸಂಸ್ಥಾನಗಳಿಂದಲೂ ಪ್ರಸಿದ್ಧರಾದ ವರ್ತಮಾನ ಪತ್ರಿಕಾ ಎಡಿಟರುಗಳನ್ನು ವಿಲಾಯಿತಿಯ ಎಡಿಟರುಗಳ ಸಂಘದವರು ತೀವುಗೆ ಔತನಕೊಟ್ಟು ಕರಿಸಿಕೊಳ್ಳುವವರಾಗಿದಾರೆ ಹಿಂದುಸ್ಥಾನದಿಂದಲೂ ೮ ೧೦ ಮಂದಿ ಎಡಿಟರುಗಳು ಅಲ್ಲಿಗೆ ಹೋಗುವರು ವಿಲಾಯತಿಯಲ್ಲಿ ಇವರೆಲ್ಲಾ ಸೇರಿ ನಾಲ್ಕಾರು ದಿನ ಸಭೆ ನಡಿಸಿ ಪ್ರಜೆಗಳಿಗೂ ಗವರ್ನಮೆಂಟಿನವರಿಗೂ ಹಿತಕರವಾದ ವಿಚಾರಗಳನ್ನೂ ಪತ್ರಿಕಾ ಎಡಿಟರುಗಳ ಜವಾಬ್ದಾರಿ ಮುಂತಾದ ವಿಷಯಗಳನ್ನೂ ಕುರಿತು ಚರ್ಚೆಮಾಡುವರು ತರುವಾಯ ಇವರಿಗೆಲ್ಲಾ ಎಂಟು ಹತ್ತು ಸ್ಥಳಗಳಲ್ಲಿ ಭಾರೀ ಔತನಗಳು ನಡಿಯುವವು ವಿಲಾಯತಿಯ ಕಲಾಶಾಲೆಗಳನ್ನೂ ಅಲ್ಲಿನ ಕಸಬುಗಳ ಕಾರ್ಖಾನೆಗಳನ್ನೂ ತೋರಿಸುತ್ತಾರೆ ಇಷ್ಟೇ ಅಲ್ಲ ಚಕ್ರವರ್ತಿ ಸಾರ್ವಭೌಮರವರು ಇವರಿಗೆ ವಿಶೇಷ ... ಪಾಲಿಸುವವರಾಗಿದಾರೆ

ಉತ್ತರ ದೇಶದ ಹಲವು ಕಡೆಗಳಲ್ಲಿ ಕ್ಷಾಮವು ಮತ್ತೆ ಕಾಣಿಸಿಕೊಳ್ಳುತ್ತಿದೆ ದರ್ಭಾಂಗ ಜಿಲ್ಲೆಗೆ ಸೇರಿದ ಇನ್ನೆರಡು ತಾಲ್ಲೂಕುಗಳಲ್ಲಿ ಕ್ಷಾಮವು ವ್ಯಾಪಿಸಿಯಾಯಿತು ಮೊದಲಿಗಿಂತಲೂ ಇನ್ನೂ ಆರು ಲಕ್ಷ ಜನರು ಕ್ಷಾಮಪೀಡಿತರಾಗಿದಾರೆ ಕ್ಷಾಮನಿವಾರಣೆಗಾಗಿ ಏರ್ಪಟ್ಟ ರಿಲೀಫ್ ಕಾಮಗಾರಿಗಳಲ್ಲಿ ಒಟ್ಟು ೪೭,೦೦೦, ಜನರು ಸೇರಿಕೊಂಡಿದಾರೆ ಈ ಪೈಕಿ ಬಂಗಾಳಾದಲ್ಲಿ ೩೨,೮೦೦, ಸಂಯುಕ್ತ ಆಧಿಪತ್ಯಗಳು ೯,೮೦೦, ಪೂರ್ವ ಬಂಗಾಳಾ ೫,೦೦೦, ಉಳಿದವರು ಮಧ್ಯಪ್ರಾಂತ್ಯದಲ್ಲಿರುವವರು ಪ್ರಜೆಗಳು ಸಂಯುಕ್ತ ಆಧಿಪತ್ಯಗಳಲ್ಲೂ ಎರಡು ಜಿಲ್ಲೆಗಳೊಳಗೆ ಮಂಜು ಅಪಾರವಾಗಿ ಸುರಿದು ಬೆಳೆಗಳು ನಷ್ಟವಾದವು ವಿಜಾಪುರ ಜಿಲ್ಲೆಯಲ್ಲೂ ಶಾಹೀಮಹಾರಾಜರವರ ಜಹಗೀರಿಯಾದ ಕೇರಮಂಗಲೂರಿನಲ್ಲೂ ಕ್ಷಾಮ ಪ್ರಾಪ್ತವಾಗಿದೆ ಎಂದು ಸರ್ಕಾರದವರು ಪ್ರಕಟಮಾಡಿರುತ್ತಾರೆ

ಕಲ್ಕತ್ತಾ ಪಟ್ಟಣದ ಪೋಸ್ಟ್ ಮಾಸ್ಟರವರು ಆ ಪಟ್ಟಣದ ದೊಡ್ಡ ಮನುಷ್ಯರಿಗೂ, ಭಾರಿ ವರ್ತಕರಿಗೂ, ಕಾರ್ಖಾನೆಗಳಿಗೂ, ಕಂಪೆನಿಗಳಿಗೂ ಪ್ರತ್ಯೇಕಪ್ರತ್ಯೇಕವಾದ ಒಂದೊಂದು ಪೋಸ್ಟ್ ಪೆಟ್ಟಿಗೆಯನ್ನು ಅವರವರ ಮನೆ, ಅಂಗಡಿ, ಕಾರ್ಖಾನೆ, ಅಥವಾ ಕಂಪನಿಯ ಮುಂಭಾಗಗಳಲ್ಲಿ ಇಟ್ಟುಕೊಡುವುದಾಗಿಯೂ, ಅದರಲ್ಲಿ ಒಂದು ಭಾಗಕ್ಕೆ ಅವರು ಕಾಗದಗಳನ್ನು ಹಾಕಿದರೆ ಪೋಸ್ಟ್ ಆಫೀಸಿನವರು ಪ್ರತಿ ದಿನವೂ ಬಂದು ತೆಗೆದುಕೊಂಡು ಹೋಗುವುದಾಗಿಯೂ, ಅವರವರಿಗೆ ಬೇರೆ ಕಡೆಗಳಿಂದ ಬರುವ ಕಾಗದಗಳನ್ನು ಆ ಪೆಟ್ಟಿಗೆಯ ಇನ್ನೊಂದು ಭಾಗದಲ್ಲಿ ಪೋಸ್ಟ್ ಜವಾನರು ಹಾಕಿ ಹೋಗುವುದಾಗಿಯೂ, ಇಂಥಾ ಏರ್ಪಾಡಿಗೆ ಒಪ್ಪುವವರು ಪ್ರತಿ ಪೆಟ್ಟಿಗೆಗೂ ವರುಷಕ್ಕೆ ೧೨ ರೂಪಾಯಿನಂತೆ ಪೋಸ್ಟ್ ಆಫೀಸಿಗೆ ಅಡ್ವಾನ್ಸು ಕೊಡುತ್ತಾ ಬರಬೇಕೆಂಬುದಾಗಿಯೂ ಬರೆದು ತಿಳಿಸಿರುತ್ತಾರೆ ಇದರಿಂದ ಜನರು ತಾವೇ ತಮ್ಮ ಕಾಗದಗಳನ್ನು ಪೆಟ್ಟಿಗೆಯೊಳಗೆ ಹಾಕುವುದಕ್ಕೂ, ತಮಗೆ ಬರತಕ್ಕ ಕಾಗದಗಳನ್ನು ತಾವೇ ತೆಗೆದುಕೊಳ್ಳುವುದಕ್ಕೂ ಅನುಕೂಲವಾಗುತ್ತಿದೆ

ಲಂಡನ್ ಪಟ್ಟಣದಲ್ಲಿ ಹಿಂದುಸ್ಥಾನದ ಮುಸಲ್ಮಾನ್ ಸಂಘದವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಮಾರ್ಲಿಯವರ ಭೇಟಿ ಪಡೆದುಕೊಂ

ಮುಸಲ್ಮಾನ್ ಜನರು ಅಸಮಾಧಾನವಾಗಿದ್ದರೆ ಅವರ ಪ್ರತಿನಿಧಿಯೊಬ್ಬನನ್ನು ವೈಸ್‌ರಾಯಿಯವರ ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರ ಕೆಲಸಕ್ಕೆ ನೇಮಕಮಾಡಬೇಕೆಂದು ಪ್ರಾರ್ಥಿಸುತ್ತವೆ ಎಂಬುದೇ ಇದನ್ನು ಕೇಳಿ ಲಾರ್ಡ್ ಮಿಂಟೋರವರು ಅವರಿಗೆ ತಿಳಿಸಿದ್ದೇನೆಂದರೆ—ವೈಸ್‌ರಾಯಿಯವರ ಎಗ್ಸಿಕ್ಯುಟಿವ್ ಕೌನ್ಸಿಲ್ ಸಭೆಯಲ್ಲಿ ಈಗ ಆರುಮಂದಿ ಮೆಂಬರುಗಳಿರುವರು ಆ ಪೈಕಿ ಒಬ್ಬ ಮೆಂಬರ ಕೆಲಸವನ್ನು ಹಿಂದುಸ್ಥಾನದ ದೇಶೀಯ ಮೊದಲು ಮನುಷ್ಯನಿಗೆ ಕೊಡತಕ್ಕದ್ದೆಂದು ನಿಗಧಿಸಲಾಗಿದೆ ಆ ದೇಶೀಯನು ಹಿಂದುವಾಗಿಯೇ ಇರಬೇಕೆಂದಾಗಲಿ ಮಹಮದೀಯನೇ ಆಗಿರಬೇಕೆಂದಾಗಲಿ ಗೊತ್ತುಮಾಡಿಲ್ಲ ಹಿಂದುವಿಗೆ ಒಂದುಸ್ಥಾನವನ್ನೂ ಮಹಮದೀಯನಿಗೆ ಒಂದುಸ್ಥಾನವನ್ನೂ ಕೊಡುವುದು ಸಧ್ಯದಲ್ಲಿ ಆಗತಕ್ಕದ್ದಲ್ಲ ಹಿಂದು ಮಹಮದೀಯ ಮೊದಲಾದ ಯಾವ ಜಾತಿಗೆ ಸೇರಿದವನಾದಾಗ್ಯೂ ಯೋಗ್ಯತಾ ಸಿದ್ಧಿಯನ್ನು ಪಡೆದವನಾಗಿದ್ದ ಪಕ್ಷದಲ್ಲಿ ಮೆಂಬರಾಗಬಹುದಾಗಿರುತ್ತದೆ ಹಿಂದುಸ್ಥಾನದ ಆಳ್ವಿಕೆಯಲ್ಲಿ ಇಂಗ್ಲಿಷ್ ಗವರ್ನಮೆಂಟಿನವರು ಪಕ್ಷಪರಪಕ್ಷಗಳನ್ನು ಗಣನೆ ಮಾಡಲಾರರು ದೇಶೀಯರುಗಳಿಗೆ ಈಗ ಕೊಡಲ್ಪಡುವ ಹಕ್ಕು ಸ್ವಾತಂತ್ರ್ಯಗಳನ್ನು ಅವರು ತಕ್ಕ ರೀತಿಯಲ್ಲಿ ನಿರ್ವಹಿಸಿಕೊಂಡು ಬಾರದೆ ಹೋದ ಪಕ್ಷಕ್ಕೆ ಆ ಹಕ್ಕು ಅವರಿಗೆ ಉಳಿಯಲಾರದು ಮತ್ತು ಅವರಿಗೆ ಇಂಥಾ ಅನುಕೂಲವಾದ ಕಾಲ ಸಂಭವಿಸುವುದು ಅಪರೂಪವಾದೀತು ಎಂಬೀ ರೀತಿಯಾಗಿ ಜವಾಬು ಕೊಟ್ಟು ಕಳುಹಿಸಿದರು

ಇಂಡಿಯಾ ದೇಶದ ವೃತ್ತಾಂತಗಳು

ವೈಸ್‌ರಾಯಿಯವರು ಏಪ್ರಿಲ್ ತಿಂಗಳಲ್ಲಿ ವಾಯುವ್ಯ ಸರಹದ್ದಿನ ಪ್ರಾಂತ್ಯ ಸಂಚಾರ ಹೊರಡುವವರಾಗಿದಾರೆ

ಇಟಲಿ ರಾಜ್ಯದ ಭೂಕಂಪದ ರಿಲೀಫ್ ಫಂಡಿಗೆ ಇದುವರಿಗೆ ಕಲ್ಕತ್ತೆಯಲ್ಲಿ ೪೪,೦೦೦ ರೂಪಾಯಿ ಚಂದಾ ವಸೂಲಾಗಿದೆ

ಡಿರಾದೂನ್ ಪಟ್ಟಣದಲ್ಲಿ ಜನರಲ್ ಊಲ್‌ಕೊಂಬ್ ಎಂಬ ಮುದ್ದೇ ಖಾನ ಬಂಗಲೆಗೆ ಬೆಂಕಿ ಬಿದ್ದು ಸಂಪೂರ್ಣವಾಗಿ ಉರಿದು ಹೋಯಿತು

ಭೂಕಂಪದ ಸೂಕ್ಷ್ಮದರ್ಶಕ ಯಂತ್ರವನ್ನು ಬೊಂಬಾಯಿ ನಲ್ಲಿ ಇಟ್ಟಿರುತ್ತಾರೆ ಅಲ್ಲಿಂದ ಸುಮಾರು ೩,೫೦೦ ಮೈಲಿ ದೂರದಲ್ಲಿ ಒಂದು ಭೂಕಂಪ ಸಂಭವಿಸಿದಂತೆ ಆ ಯಂತ್ರವು ತಿಳಿಸಿದೆ

ಬರೋಡಾ ಪಟ್ಟಣದಲ್ಲಿ ರಾತ್ರಿಹೊತ್ತು ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚಬೇಕೆಂದು ಗಾಯಕವಾಡ ಮಹಾರಾಜರವರು ಅಪ್ಪಣೆ ಕೊಟ್ಟಿದಾರೆ ಇನ್ನು ನಾಲ್ಕಾರು ತಿಂಗಳಲ್ಲಿ ಅದು ಸಿದ್ಧವಾಗಬಹುದು

“ವಂದೇಮಾತರಂ” ವೆಂಬ ರಾಜದ್ರೋಹಕರವಾದ ಪುಸ್ತಕವನ್ನು ಕಲ್ಕತ್ತೆಯಲ್ಲಿ ಅಚ್ಚುಹಾಕಿಕೊಟ್ಟವನಿಗೆ ಎರಡು ವರ್ಷ, ಪ್ರಕಟಿಸಿದವನಿಗೆ ೧೮ ತಿಂಗಳು, ಅದನ್ನು ಬರೆದವನಿಗೆ ಎರಡು ವರುಷ ಈ ರೀತಿ ಕಠಿಣ ಸಜಾ ವಿಧಿಸಲ್ಪಟ್ಟಿವೆ

ಕಲ್ಕತ್ತಾ ಪಟ್ಟಣದ ಗೂಸರಿ ಎಂಬಲ್ಲಿರುವ ಭೂತನಾಥನ ದೇವಸ್ಥಾನಕ್ಕೆ ಪೋಲೀಸಿನವರು ಹೋಗಿ ಶೋಧನೆಮಾಡಿದಾಗ ಅಲ್ಲಿ ಕೆಲವು ಕತ್ತಿಗಳೂ ಬಂದೂಕುಗಳೂ ಸಿಕ್ಕಿದವು ಅವನ್ನು ಯಾರು ಇಟ್ಟಿರುವರೆಂದು ತನಿಖೆಮಾಡುತ್ತಿದಾರೆ

ಕಳೆದ ೧೯೦೫ನೇ ಇಸವಿಯ ಭೂಕಂಪದಲ್ಲಿ ಕಾಂಗ್ರಾ ಕಣಿವೆಯಲ್ಲಿದ್ದ ಅತ್ಯಂತ ಪುರಾತನವೂ ಪ್ರಸಿದ್ಧವೂ ಆದ ವಜ್ರೇಶ್ವರೀ ದೇವಸ್ಥಾನವು ಬಿದ್ದುಹೋಯಿತಷ್ಟೆ ಈಗ ಸಿಖ್ ಜನರ ಮುಖಂಡರು ಹಣವನ್ನು ಕೊಡಿಸಿ ಆ ದೇವಸ್ಥಾನವನ್ನು ಪುನಹಾ ಕಟ್ಟಿಸುತ್ತಿದಾರೆ

ಮಿಡ್ನಾಪುರದ ಸಿಡಿಮದ್ದಿನ ಗುಂಡಿನ ಮೊಕದ್ದಮೆಯಲ್ಲಿ ಕಳೆದ ವಾರ ಮ್ಯಾಜಿಸ್ಟ್ರೇಟರು ಜಡ್ಜ್‌ಮೆಂಟ್ ಹೇಳಿದರು ಸಂತೋಷದಾಸನಿಗೆ ಹತ್ತು ವರುಷವೂ, ಸುರೇಂದ್ರಮುಖರ್ಜಿಗೆ ಏಳು ವರುಷವೂ, ಜೋಗಜೀವನಘೋಷಿಗೆ ಐದು ವರುಷವೂ ಬಂದೀಖಾನೆ ಶಿಕ್ಷೆ ವಿಧಿಸಲ್ಪಟ್ಟಿತು

ಹಿಂದುಸ್ಥಾನದಲ್ಲಿ ಪ್ರಜೆಗಳು ಭಾರಿಯಾದ ಆಹಾರ ವಸ್ತುಗಳಿಗೆ ಹಚ್ಚುವ ವೆಚ್ಚದ ಹಿಂಸೆ ವರ್ತಮಾನಗಳನ್ನು ಕಳುಹಿಸುವುದಕ್ಕೂ ಅನುಕೂಲಿಸುವಂತೆ ಗವರ್ನಮೆಂಟಿನವರು ರೂ ೫೦, ರೂ ೧೦, ರೂ ೧೦೦ ಈ ಬೆಲೆಯುಳ್ಳ ಒಂದೊಂದೇ ದೊಡ್ಡ ಸ್ಟಾಂಪನ್ನು ಮಾಡಿಸಿ ವಿಲಾಯತಿಯಿಂದ ತರಿಸಿ, ಮುಖ್ಯ ಮುಖ್ಯವಾದ ಪೋಸ್ಟ್ ಆಫೀಸುಗಳಲ್ಲಿ ವಿಕ್ರಯ ಮಾಡಿಸುವವರಾಗಿದಾರೆ

ಪೂನಾ ಪಟ್ಟಣದ ಬಳಿ ಕರ್ಕಿ ಎಂಬ ಮದ್ದುಗುಂಡು ತಯಾರಾಗುವ ಕಾರ್ಖಾನೆಯ ಬಳಿ ಪಹರೆ ಇದ್ದ ಒಬ್ಬ ಸಿಪಾಯಿಯು ಅಲ್ಲಿಗೆ ಹೋಗಿದ್ದ ಒಬ್ಬ ದೇಶೀಯನನ್ನು ಪ್ರಶ್ನೆ ಮಾಡಿದ್ದಕ್ಕೆ ಅವನು ತೃಪ್ತಿಕರವಾದ ಜವಾಬು ಕೊಡಲಿಲ್ಲವೆಂಬ ಕಾರಣದ ಮೇಲೆ ಆ ದೇಶೀಯನಿಗೆ ಗುಂಡು ಬಾರುಮಾಡಿ ಕೊಂದಿದನು ಅವನನ್ನು ಈಗ ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡುತ್ತಿದಾರೆ

ತಿರುವಾಂಕೂರು (ಟ್ರಿವೆಂಡ್ರಮ್) ಸಂಸ್ಥಾನವನ್ನು ಕಳೆದ ೧೮೬೦ ರಿಂದ ೧೮೮೦ನೇ ಇಸವಿಯ ತನಕ ಆಳಿದ ಮಹಾರಾಜರವರ ಪತ್ನೀರವರು ಕಳೆದವಾರ ೬೫ ನೇ ವಯಸ್ಸಿನಲ್ಲಿ ಕಾಲವಾದರು ಈಕೆ ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಸಂಪಾದಿಸಿ ಕೆಲವು ಗ್ರಂಥಗಳನ್ನು ಬರೆದಿರುತ್ತಾರೆ ಬಹಳ ಧರ್ಮಿಷ್ಠೆ ಯಾಗಿದ್ದದ್ದರಿಂದ ಬಹುಜನರು ಆಕೆಯ ಆಶ್ರಯದಿಂದ ಜೀವನಮಾಡುತ್ತಿದ್ದರು

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಮಠಾಲೆ ಪಟ್ಟಣದಲ್ಲಿ ಮೆಕ್ಲರ್ ಎಂಬೊಬ್ಬ ಜರ್ಮನಿ ಆಗಂತುಕನ ಹೆಂಡತಿಯು ಕಾಲವಾದಳು ಆಕೆಯ ಸಂಸ್ಕಾರಮಾಡುವುದಕ್ಕೆ ಪುರೋಹಿತನಿಗೆ ಹೇಳಿಕಳುಹಿಸಿದನು ಪುರೋಹಿತನು ಬಂಗಲೆಗೆ ಹೋಗಿ ನೋಡುವಲ್ಲಿ ಗಂಡಹೆಂಡರಿಬ್ಬರೂ ಸತ್ತು ಮಲಗಿ

ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಪ್ರಕಟವಾಗುತ್ತಿದ್ದ “ಸ್ವರಾಜ್ಯ” ವೆಂಬ ಪತ್ರಿಕೆಯ ಎಡಿಟರ್ ರಾವ ಹರಿ ಎಂಬಾತನಿಗೆ ರಾಜದ್ರೋಹಕರವಾದ ವಾರ್ತೆ ಪ್ರಕಟಿಸಿದ್ದಕ್ಕಾಗಿ ಸೆಷನ್ಸ್ ಜಡ್ಜರು ಏಳು ವರುಷದ ಬಂದೀಖಾನೆ ಶಿಕ್ಷೆಯನ್ನು ವಿಧಿಸಿದ್ದರು ಆತನು ಅದರ ಮೇಲೆ ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡನು ಹೈಕೋರ್ಟ್ ಜಡ್ಜಿಗಳು ಕೆಳಕೋರ್ಟಿನ ಶಿಕ್ಷೆಯನ್ನೇ ಖಾಯಂ ಮಾಡಿರುತ್ತಾರೆ

ಕೊಲ್ಹಾಪುರ ಸಂಸ್ಥಾನದಲ್ಲಿ ಮೂರು ಮಂದಿ ವಿದ್ಯಾರ್ಥಿಗಳು ತಾವು ಓದುತ್ತಿದ್ದ ಸ್ಕೂಲಿನಲ್ಲಿ ಕೆಲವು ದ್ರವ್ಯಗಳನ್ನು ಅಪಹರಿಸಿದರು ಮೊಕದ್ದಮೆ ಬಂದಾಗ ಅವರು ತಮ್ಮ ಅಪರಾಧವನ್ನು ಒಪ್ಪಿಕೊಂಡು ಕ್ಷಮಾಪಣೆಯನ್ನು ಬೇಡುವದಕ್ಕೆ ಪ್ರತಿಯಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮೇಲೆಯೇ ಅನೇಕ ಅಪವಾದಗಳನ್ನು ಹೊರಿಸಿದರು ಸೆಷನ್ಸ್ ಜಡ್ಜರು ಆ ಮೂರು ಮಂದಿಗೂ ತಲಾ ನಾಲ್ಕು ವರುಷದಂತೆ ಕಠಿಣಸಜಾ ವಿಧಿಸಿರುತ್ತಾರೆ

ಗುಂಟೂರು ಜಿಲ್ಲೆ ಪಾಲನಾಡು ತಾಲ್ಲೂಕಿಗೆ ಸೇರಿದ ಅಡಿಗೊಪ್ಪಲ ಎಂಬ ಗ್ರಾಮಕ್ಕೆ ಒಂದು ಹುಲಿ ಪ್ರವೇಶಿಸಿ ಒಂದು ಮನೆಯೊಳಗೆ ವಾಸಮಾಡಲಾರಂಭಿಸಿತು ಹಲವು ಜನರು ಅದನ್ನು ಕೊಲ್ಲಬೇಕೆಂದು ಪ್ರಯತ್ನಪಟ್ಟರು ಅದು ಸಿಕ್ಕಲಿಲ್ಲ ಕೆಲವರನ್ನು ಕಡಿದು ಗಾಯಮಾಡಿತು ಈಗ ಅದು ಅಲ್ಲಿಂದ ತಪ್ಪಿಸಿಕೊಂಡು ಹೋಗಿ ಪಿನಾಲೂ ಆ ಗ್ರಾಮದ ಪಶುಗಳ ಪ್ರಾಣಿಗಳನ್ನು ಒಂದೊಂದಾಗಿ ಹಿಡಿದು ತಿಂದುಹಾಕುತ್ತಾ ಬಂದಿದೆ ಎಂದು ಒಬ್ಬ ವರ್ತಮಾನದಾರನು ಬರೆದಿದಾನೆ

ಒಂಗೋಲಿಗೆ ಸೇರಿದ ಏರ್ಪೇಡಿನಲ್ಲಿ ೧೬ ವಯಸ್ಸಿನ ಒಬ್ಬ ಬ್ರಾಹ್ಮಣ ಹುಡುಗಿಯು ೬ ವರುಷದ ತನ್ನ ಮೈದುನನನ್ನು ಕೊಂದುಹಾಕಿದಳೆಂದು ಮೊಕದ್ದಮೆ ಆಗಿ ಸೆಷನ್ಸ್ ಜಡ್ಜರು ಆ ಹುಡುಗಿಗೆ ಯಾವಜ್ಜೀವ ಬಂದೀಖಾನೆ ಶಿಕ್ಷೆಯನ್ನು ವಿಧಿಸಿದಂತೆ ಶಿಕ್ಷೆ ವಿಧಿಸುವದು ಹೈಕೋರ್ಟಿನ ಜಡ್ಜಿಗಳು ಈ ಮೊಕದ್ದಮೆಯು ಕಟ್ಟಿನ್ನು ಪರಿಶೋಧಿಸಿ, ಅದು ಸ್ಪಷ್ಟವಾಗಿಲ್ಲ ಮೊಕದ್ದಮೆ ಎಂದು ಹೇಳಿ, ಶಿಕ್ಷೆಯನ್ನು ವಜಾಮಾಡಿ ಆ ಹುಡುಗಿಯನ್ನು ಬಿಡುಗಡೆ ಮಾಡಿಸಿಬಿಟ್ಟರು

ಪೂರ್ವ ಬಂಗಾಳಾ ಮತ್ತು ಅಸ್ಸಾಂ ಪ್ರಾಂತ್ಯಕ್ಕೆ ಸೇರಿದ ದಿನಾಜ್‌ಪೂರ್ ಕೋರ್ಟಿಗೆ ಲೋಕಲ್ ಬೋರ್ಡಿಗೆ ಇಬ್ಬರು ಗಾಡಿಯವರು ಹೋದಾಗ ಅವರಿಗೂ ಜಮೀನ್ದಾರರ ಸೇವಕರಿಗೂ ಮಾತು ನಡೆದು ಜಗಳವಾಯಿತು ಆ ಸೇವಕರು ಎರಡು ಕುರಿಗಳನ್ನು ತೆಗೆದು ಆ ಗಾಡಿಯವರಿಬ್ಬರನ್ನು ಹಾಕಿ ಹೊಡೆದು ಮಣ್ಣು ತುಂಬಿ ಕೊಂದುಹಾಕಿದರು ಸರ್ಕಾರದವರು ಆ ಶವಗಳನ್ನು ಗುಣಿಯಿಂದ ತೆಗೆಸಿ ಆ ಸೇವಕರ ಮೇಲೆ ಸಧ್ಯ ಬಂದೋಬಸ್ತು ಹಿಡಿದು ತನಿಖೆ ಮಾಡುತ್ತಿದಾರೆ

ಆಫ್ರಿಕಾ ದೇಶಕ್ಕೆ ಸೇರಿದ ಕಾಂಡಹಾರಿನಲ್ಲಿ ಚಿನ್ನದ ಗಣಿಗಳು ಸಿಕ್ಕಿರುತ್ತವೆ ಅಲ್ಲಿ ಚಿನ್ನವನ್ನು ತೆಗೆಯುವದಕ್ಕೆ ಅಮೀರರವರು ಶೀಮೆಯಿಂದ ಬೇಕಾದ ಯಂತ್ರ ಸಾಮಗ್ರಿಗಳನ್ನು ತರಿಸಿರುತ್ತಾರೆ ಈ ಯಂತ್ರಗಳನ್ನು ಕೈಬರ್ ನಗರದಿಂದ ಅಲ್ಲಿಗೆ ಸಾಗಿಸಿಕೊಂಡು ಹೋಗುವುದಕ್ಕೆ ಅಮೀರರವರು ಕಾಬೂಲಿನಿಂದ ಆನೆಗಳನ್ನು ಕಳುಹಿಸಿದಾರೆ ಅಮೀರರ ಕಡೆ ಇನ್‌ಜನಿಯರಾದ ಮ್ಯಾಕ್ನೆಲ್ ಎಂಬ ಅಧಿಕಾರಿಯು ಕೈಬರ್ ನಗರಕ್ಕೆ ಬರುವುದನ್ನು ಆ ಆನೆಗಳು ಎದುರುನೋಡುತ್ತಿರುವವು

ನಾಗಪುರದಲ್ಲಿ ಲೇಟ್ ಮಹಾರಾಜ್ಞೀ ವಿಕ್ಟೋರಿಯಾರವರ ಜ್ಞಾಪಕಾರ್ಥವಾಗಿ ನಿಲ್ಲಿಸಿದ್ದ ಆಕೆಯವರ ಪ್ರತಿಮೆಗೆ ಬಣ್ಣಗಳನ್ನು ಬಳಿದು ಬಿನ್ನವಾಡಿದ ವಿಚಾರದಲ್ಲಿ ಮ್ಯಾಜಿಸ್ಟ್ರೇಟರು ಕಳೆದ ವಾರ ಡಾಮ ಎಂಬ ಒಬ್ಬ ವಿದ್ಯಾರ್ಥಿಗೆ ಎರಡು ವರುಷದ ಕಠಿಣ ಸಜಾವನ್ನೂ, ಜೋಷಿ ಎಂಬ ಗವರ್ನ್‌ಮೆಂಟ್ ಫಾರಂ ಓವರ್ಸಿಗೆ ಎರಡು ವರುಷದ ಕಠಿಣ ಸಜಾವನ್ನೂ ವಿಧಿಸಿ, ವಿದ್ಯಾರ್ಥಿಗಳಿಗಾಗಿರುವ (ಸ್ಟೂಡೆಂಟ್ಸ್ ಹೋಮಿನ) ಸೂಪರಿಂಟೆಂಡೆಂಟ್ ನಾರಾಯಣರಾಯನನ್ನು ಬಿಡುಗಡೆ ಮಾಡಿದರು

ಖಿಲ್ಜಿ ಜನರು ಹಿಂದುಸ್ಥಾನದ ವಾಯುವ್ಯ ಸರಹದ್ದಿನ ಒಳ ವ್ಯಾಪಾರ ಸರಕುಗಳನ್ನು ಸುಂಕಕೊಡದೆ ಕತ್ತಲೆ ಹೊತ್ತಿನಲ್ಲಿ ಸಾಗಿಸಿಕೊಂಡು ಹೋಗುತ್ತಿದ್ದರು ಪಿಂಡಿಕಾಕ್ ಎಂಬ ಕಣಿವೆಯಲ್ಲಿರುವ ಇಂಗ್ಲಿಷ್ ಸೈನಿಕರಿಗೂ ಆ ವರ್ತಕರಿಗೂ ಕಳೆದ ವಾರ ಒಂದು ದಿನ ರಾತ್ರಿ ಕದನವಾಯಿತು ಖಿಲ್ಜಿ ವರ್ತಕರಲ್ಲಿ ಹಲವರಿಗೆ ಗುಂಡಿನ ಏಟು ಬಿದ್ದು ವ್ಯತಪಟ್ಟರು ಉಳಿದವರು ಆ ಸೈನಿಕರ ಮೇಲೆ ಥಕ್ಕಾ ಪ್ರಾಂತ್ಯದ ಮುಖಂಡನಿಗೆ ದೂರು ಹೇಳಿದಾಗ ಆತನು ಅವರ ಫಿರ್ಯಾದನ್ನು ಕೇಳದೆ ತಿರಸ್ಕಾರ ಮಾಡಿಬಿಟ್ಟನು

ಉತ್ತರ ದೇಶದಲ್ಲಿ ಬಾರಕ್‌ಪೂರ್ ಜಿಲ್ಲೆಗೆ ಸೇರಿದ ಟಾಗೋರ್ ರಾಜವಂಶದವರ ದೇವಸ್ಥಾನದ ಕಾವಲುಗಾರನು ಮೂಲವಿಗ್ರಹವನ್ನೂ ಅದರ ಮೈಮೇಲಿದ್ದ ಸುಮಾರು ೩,೦೦೦ ರೂಪಾಯಿನ ನಗಗಳನ್ನೂ ಅಪಹರಿಸಿ, ವಿಗ್ರಹವನ್ನು ಒಂದು ಕೆರೆಯೊಳಕ್ಕೆ ಎಸೆದು, ನಗಗಳನ್ನೆಲ್ಲ ಇನ್ನೊಬ್ಬರ ಬಳಿ ಬಚ್ಚಿಟ್ಟನು ಅದು ಪತ್ತೆ ಆಯಿತು ಈಗ ಅವನನ್ನೂ ಅವನ ಸಂಗಡಿಗರಾದ ಇನ್ನಿಬ್ಬರನ್ನೂ ಹಿಡಿದು, ಸಬ್ ಡಿವಿಷನ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ವಿಚಾರಣೆಗೆ ಕಳುಹಿಸಿದಾರೆ ಅವರ ಬಳಿ ೨,೦೦೦ ರೂಪಾಯಿನ ಕಳುವು ಮಾಲು ಸಿಕ್ಕಿರುತ್ತದೆ

ಕಲ್ಕತ್ತಾ ಪಟ್ಟಣದಲ್ಲಿ ಮದನಮೋಹನ ಗೋಸಾಯಿ ಎಂಬವನ ಹೆಂಡತಿಯು ಅತ್ತೇ ಮನೆಯಲ್ಲಿ ತನ್ನನ್ನು ಹಿಂಸೆ ಮಾಡುತ್ತಾರೆಂದು ಓಡಿಹೋಗಿ ತನ್ನ ತಂದೆಯ ಮನೆಯಲ್ಲಿ ಸೇರಿಕೊಂಡು, ಅಡಿಗೆಮನೆಯೊಳಗೆ ಬೀಗ ಹಾಕಿಕೊಂಡು ಕುಳಿತಿದ್ದಳು ಮದನಮೋಹನ ಗೋಸಾಯಿಯೂ ಇನ್ನು ಹನ್ನೆರಡು ಮಂದಿ ಬಂಗಾಳಿಗಳೂ ಸೇರಿ ಅವಳ ಮನೆಗೆ ಹೋಗಿ ಆ ಅಡಿಗೆಮನೆಯ ಬಾಗಿಲನ್ನು ಮುರಿದು ಒಳಗಿದ್ದ ಆ ಹುಡುಗಿಯನ್ನು ಬಲಾತ್ಕಾರವಾಗಿ ಎತ್ತಿಕೊಂಡು ಹೋಗುತ್ತಿದ್ದರೆಂದೂ, ಗಲಭೆಯಾದದ್ದನ್ನು ನೋಡಿ ದಾರಿಯಲ್ಲಿ ಬಿಟ್ಟು ಹೋದರೆಂದೂ ಮೊಕದ್ದಮೆ ಆಗಿದೆ ಜಿಲ್ಲಾ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು

ಈ ತಿಂಗಳ ೨೫ ನೇ ತಾ ಗುರುವಾರದಿಂದ ವರ್ತಿಕ ಪ ೭ರ ವರೆಗೆ ಕುಂಭಕೋಣದಲ್ಲಿ ಮಹಾ ಗಂಭೀರವಾದ ಜಾತ್ರೆ ನಡೆಯುತ್ತದೆ ಕಡೇ ಪಕ್ಷ ಐದು ಲಕ್ಷ ಸಹಸ್ರಪ್ರಜೆಗಳು ಅಲ್ಲಿ ಸೇರುವರೆಂದು ಅಂದಾಜು ಕಟ್ಟಲ್ಪಟ್ಟಿದೆ ಆಗಂತುಕರು ಇಳುಕೊಳ್ಳುವುದಕ್ಕೂ, ಅವರ ಆಹಾರ ವಿಹಾರಗಳಿಗೂ ಕುಡಿಯುವ ನೀರಿಗೂ, ಆರೋಗ್ಯರಕ್ಷಣೆಗೂ ಅನುಕೂಲವಾಗುವಂತೆ ಮುನಿಸಿಪಾಲಿಟಿಯವರು ಏರಾಡಿಯಿಂದ ಬಹು ವಿಶೇಷವಾದ ಏರ್ಪಾಡುಗಳನ್ನು ಮಾಡುತ್ತಿದಾರೆ ರೈಲ್ ಕಂಪನಿಯವರು ಅಲ್ಲಿಗೆ ಯಾತ್ರೆ ಹೋಗಿ ಬರುತಕ್ಕ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಛಾರ್ಜಿನ ದರಗಳನ್ನು ಕಡಮೆ ಮಾಡಿರುತ್ತಾರೆ ವಿಶೇಷವಾದ ಪೋಲೀಸ್ ಕಾವಲೂ ಸಿದ್ಧ ಮಾಡಲ್ಪಟ್ಟಿದೆ

ಬೊಂಬಾಯಿ ಪಟ್ಟಣದಲ್ಲಿ ಮಹಾ ಲಕ್ಷ್ಮಿ ಸ್ಟೇಷನ್ನಿಂದ ಗ್ರ್ಯಾಂಟ್ ರೋಡ್ ಸ್ಟೇಷನ್ನಿಗೆ ಕಳೆದ ವಾರ ರೈಲ್‌ಗಾಡಿ ಹೋಗುತ್ತಿದ್ದಾಗ ಕಂಬಿಗಳ ನಡುವೆ ಹಳ್ಳದಲ್ಲಿ ಎರಡು ವರುಷದ ಗಂಡು ಮಗುವು ಮಲಗಿ ನಿದ್ದೆ ಮಾಡುತ್ತಿತ್ತು ಗಾಡಿ ನಡೆಸುವವನು ದೂರದಿಂದಲೇ ಅದನ್ನು ನೋಡಿ ಎಷ್ಟೊ ಸಾಹಸಪಟ್ಟರೂ ಎರಡು ಗಾಡಿಗಳು ಅದರ ಮೇಲೆ ಹಾದು ಆಚೆಗೆ ಹೋದವು ಆಗ ನಿಲ್ಲಿಸಿ ಇಳಿದು ಹೋಗಿ ನೋಡುವಾಗ್ಗೆ ಮಗುವಿಗೆ ಸ್ವಲ್ಪವೂ ಅಪಾಯ ಸಂಭವಿಸಿರಲಿಲ್ಲ ಸುಖವಾಗಿ ನಿದ್ದೆಹೋಗುತ್ತಿದ್ದಿತು ವಿಚಾರಿಸಿದಾಗ ಸುಮಾರು ಎರಡು ಫರ್ಲಾಂಗ್ ದೂರದಲ್ಲಿ ಅದರ ತಾಯಿ ಕೂಲಿಮಾಡುತ್ತಿದ್ದಳು, ಅವಳ ಮಗುವು ಅಂಬೆಗಾಲಿಟ್ಟುಕೊಂಡು ಹೋಗಿ ಕಂಬಿಗಳ ಮಧ್ಯೆ ಮಲಗಿ ನಿದ್ದೆ ಮಾಡುತ್ತಿದ್ದದ್ದೂ ಗೊತ್ತಾಯಿತು ಆಗ ಆ ತಾಯಿಯ ಸಂತೋಷಕ್ಕೆ ಪಾರವೇ ಇರಲಿಲ್ಲ

ತಾಲ್ಲೂಕು ವರ್ತಮಾನಗಳು.

ಚಿತ್ರದುರ್ಗ.—ಬಿಸಲಿನ ಝಳವು ಹೆಚ್ಚುತ್ತ ಬರುತ್ತಿದೆ ಹಿಂದಣ ಜೇಸಿಗೆಯಲ್ಲಿ ರಾತ್ರಿವೇಳೆ ಒಳ್ಳೆ ಚಳಿಗಾಳಿ ಬೀಸುತ್ತಿತ್ತು ಈ ವರುಷವಾದರೋ ಗಾಳಿ ಕಡಿಮೆಯಾಗಿದೆ ನೀರಿನ ಕೊರತೆಯಂತೂ ಹೇಳಲಸಾಧ್ಯವಾಗಿದೆ ಊರಲ್ಲಿನಲ್ಲೀ ೪೦೦ರು ನಲ್ಲ ಭಾವಿಗಳ ನೀರನ್ನು ಒಳಸದೆ ಬಹು ಕಾಲದಿಂದ ಬಿಟ್ಟಿದ್ದಷ್ಟೆ ಈಗಲಾದರೋ ಭಾವಿಗಳಲ್ಲಿ ನೀರಿಕೆಳ್ಳೋಣವೆಂದರೆ ಅವುಗಳೂ ತಳದವರಿಗೆ ಬತ್ತಿಹೋಗಿದೆ ಈಗಾಗಲೇ ಈ ರೀತಿ ಪರಿಣಮಿಸಿರುವಲ್ಲಿ ಮುಂದೆ ಮುಂಗಾರು ಮಳೆಗಳು ಬರುವ ತನಕ ಹ್ಯಾಗಿರುವುದೋ ಊಹಿಸಲಾರದವಾಗಿದೆ ಅಕ್ಕಿ ರಾಗಿ ಮುಂತಾದ ಪದಾರ್ಥಗಳ ಧಾರಣೆಯು ಯಥಾಸ್ಥಿತಿಯಲ್ಲಿದೆಯೇ ಹೊರತು ಇಳಿತವಾಗಲಿಲ್ಲ ಹಳ್ಳಿಗಳ ಪ್ರಜೆಗಳಲ್ಲಿ ಪರಿಶಿಷ್ಟ ವರ್ಗದವರಿಗೆ ಕೂಲಿಗಳನ್ನು ಬಿಟ್ಟುಕೊಂಡು ಗಂಡಸರೂ ಹೆಂಗಸರೂ ಕುಳಿತುಕೊಳ್ಳುವುದು ಇಲ್ಲ ಸಧ್ಯ ಹಿಂದಾಗಿದೆ ಬಂದವರಿಗೆಲ್ಲಾ ಎರಡು ಮೂರು ಸರಿದಿ ನೀರು ತೆಗೆದುಕೊಳ್ಳಲಿಕ್ಕೆ ಸಹಾ ಅವಕಾಶ ಕೆಲವರಿಗೆ ಸಿಕ್ಕುವುದೇ ಇಲ್ಲ ಬಡಬಗ್ಗರಿಗೆ ಕಟ್ಟಿಗೆ ತಂದು ಮಾರಿಕೊಳ್ಳುವುದೇ ಹೊರತು ಇನ್ಯಾವ ಜೀವನೋಪಾಯವೂ ಇಲ್ಲವಾಗಿದೆ ದನಕರುಗಳು ಕೂಳಿ ಕಣಗಳನ್ನು ಕಿತ್ತು ತಿಂದುಕೊಂಡು ಕುಡಿಯುವುದಕ್ಕೆ ಹೊರಗೆ ಎಲ್ಲಿಯೂ ನೀರು ಕಾಣದೆ ಊರಿನಲ್ಲಿ ನಲ್ಲಿಗಳ ಹತ್ತಿರ ಮಂದೆ ಮಂದೆಗಳಾಗಿ ನಿಂತು ಪಾಯಾರಿಕೆಯನ್ನು ತಣಿಸಿಕೊಳ್ಳಲಿಕ್ಕೆ ಪ್ರಯತ್ನಪಡುತ್ತವೆ

ತುಮಕೂರು.—ಈಗ ಒಂದು ತಿಂಗಳ ಹಿಂದೆ ಧಾರಣೆಯಾಗಿ ಒಹಳ ಏರಿ ಹೋಗಿತ್ತು ಅಕ್ಕಿ ರೂಪಾಯಿಗೆ ೬ ೩ ಸೇರು ಆಗಿತ್ತು ಈಚೆಗೆ ರೂಪಾಯಿಗೆ ೭½ ೭ ಸೇರು ಮೇರೆಗೆ ಮಾರಾಟವಾಗುತ್ತದೆ ಧರ್ಮಿಷ್ಠರಾದ ಕೋಲಿ ನ್ಯಾಪಾರ ಮಾಡುವ ಮೆ ಹನುಮಂತಶೆಟ್ಟಿಯವರು ಈಗ ಸುಮಾರು ಒಂದು ತಿಂಗಳಿಂದಲೂ ನಷ್ಟಪಟ್ಟರೂ ಚಿಂತೆಯಿಲ್ಲವೆಂದು ಭಾವಿಸಿ, ಬೇರೆಯವರು ಮಾರುವದಕ್ಕಿಂತಲೂ ಒಂದು ಸಾವು ಜಾಸ್ತಿಯೇ ಕೊಡುತ್ತಾರೆ ಇವರ ಮೇಲ್ಪಂಕ್ತಿಯನ್ನು ಬೇರೆಯವರೂ ಹಿಂಬಾಲಿಸಿದರೆ ಬಡಬಗ್ಗರಿಗೆ ಎಷ್ಟೋ ಸಂತೋಷವಾಗುವುದು ಈಗ ಹೊಸದಾಗಿ ಬಂದಿರುವ ಮುನಿಸಿಪಲ್ ಮನೇಜಾರನು ಮುನಿಸಿಪಾಲಿಟಿ ಪಾರುಪತ್ಯ ವಿಷಯದಲ್ಲಿ ತುಂಬಾ ಶ್ರಮ ಕೊಡುತ್ತಾನೆಂದು ಕೇಳಲು ಸಂತೋಷಪಡಬೇಕಾಗಿದೆ ಆ ಕಮಿಷನರಾದ ಮೆ, ಸುಂದರರಾಜಯ್ಯಂಗಾರ್‌ರವರು ೩೦ ನೇ ತಾ ಟೆರ್ನ್ ಗಸ್ತುಮಾಡಿ, ಸಂತೋಷಪಟ್ಟರೆಂದು ಕೇಳುತ್ತೇವೆ ಹಿಂದೆ ಪ್ರತಿ ವರ್ಷವೂ ಮೊಹರಂ ಕಾಲದಲ್ಲಿ ಯಾವ ಗಲಾಟೆಯಾಗದಂತೆ ಬಂದೋಬಸ್ತಿಗಾಗಿ ಮೈಸೂರಿನಿಂದ ರಿಜರ್ವ್ ಪೋಲೀಸಿನವರು ಬರುತ್ತಿದ್ದದ್ದು ಈಗ ಕಳೆದ ವರ್ಷದಿಂದಲೂ ನಿಂತುಹೋಗಿರುತ್ತದೆ ನಮ್ಮ ಪೋಲೀಸ್ ಇನ್ಸ್‌ಪೆಕ್ಟರು ಯಾವ ಗಲಾಟೆಗೂ ಆಸ್ಪದ ಕೊಡದಂತೆ ಉತ್ತಮವಾದ ಏರ್ಪಾಡು ಮಾಡುತ್ತಿರುವರು

ಶಿವಮೊಗ್ಗ.—ವೆಸ್ಲಿಯನ್ ಮಿಷನ್ ಬೋಧಕರಾದ ಘನ ಟಾಮ್ಲಿನ್‌ಸನ್ ದೊರೆಯವರಿಗೆ ಆ ಇಲಾಖೆಯ ಉಪಾಧ್ಯಾಯರೂ, ಕ್ರೈಸ್ತಸಭಿಕರೂ ವಂದನಾ ಪತ್ರಿಕೆಗಳನ್ನು ಒಪ್ಪಿಸಿದರು ೩೦ ೩೧ ರಲ್ಲಿ ದೊರೆಯು ವಿಲಾಯತಿಗೆ ಪ್ರಯಾಣ ಬೆಳಸಿದರು ಇವರು ಕೊಂಚಕಾಲಮಾತ್ರ ಈ ಪ್ರಾಂತ್ಯದಲ್ಲಿದ್ದರೂ ತಮ್ಮ ಕರ್ತವ್ಯವನ್ನು ಪೂರ್ಣಶಕ್ತಿಯಿಂದ ನಡಸಿದರು—ಈ ಟೌನಿಗೆ ತುಂಗಾ ನದಿಯಿಂದ ನಲ್ಲಿಗಳ ಮೂಲಕ ನೀರು ಬಿಡುತ್ತಾರೆಂದು ಬಹುಕಾಲದಿಂದಲೂ ಜನರು ಹೇಳಿಕೊಳ್ಳುತ್ತಾರೆ ಈ ಕ್ಷಾಮಕಾಲದಲ್ಲಿ ಇಂಥಾ ಕೆಲಸವನ್ನು ಪ್ರಾರಂಭಿಸಿದರೆ ದಯಾಳುಸರ್ಕಾರದವರು ಅನೇಕ ಪ್ರಜೆಗಳನ್ನು ನಾನಾ ವಿಧದಿಂದ ಸಂರಕ್ಷಿಸಿದಂತಾಗುತ್ತ ವಿವಾಹ ಬಹುಷ್ಟ್ರರವರೂ ಶ್ರೀಮನ್ಮಹಾರಾಜರಿಗೂ ಹಾಗೂ ಶೀರಿನ ಸ್ಥಳಗಳನ್ನು ನೋಡಿಕೊಂಡು ಹೋಗಿದಾರೆಂದು ಎಲ್ಲರೂ ಮುಂದಿನ ಕಾರ್ಯವನ್ನು ಎದುರುನೋಡುತ್ತಾರೆ—ಮರ್ಕಿಸಾಂಕ್ರಾಮಿಕಯು ಸಾಧಾರಣವಾಗಿದೆ ತಿರಿಗಿ ಪ್ಲೇಗ್ ಉಪದ್ರವ ಪ್ರಾರಂಭವಾದಂತೆ ಕಾಣುತ್ತೆ ಈ ದಿನ ಒಂದು ಮರಣವಾಯಿತು—ಬೇರೆ ಬೇರೆ ತಾಲ್ಲೂಕುಗಳಲ್ಲಿ ಧರ್ಮಾತ್ಮರು ಬಡವರಿಗೆ ನಾನಾ ರೀತಿಯಲ್ಲಿ ಸಹಾಯಮಾಡುವನ್ನು ಕೇಳುವಾಗ ಎಲ್ಲರೂ ಸಂತೋಷಪಡುತ್ತಾರೆ ಇನ್ನು ಮುಂದೆ ಇಲ್ಲಿಯೂ ಅಂಥಾ ಸಹಾಯಗಳು ಪ್ರಚಾರಕ್ಕೆ ಬರಬಹುದೆಂದು ನಿರೀಕ್ಷಿಸಲ್ಪಟ್ಟಿದೆ

ಹೊಳಲ್ಕೆರೆ.—ಈ ಸಂವತ್ಸರ ಮಳೆಯ ಅಭಾವದಿಂದ ಈಗಲೇ ಕೆರೆಕಟ್ಟೆಗಳಲ್ಲ ಬತ್ತಿಹೋಗುತ್ತಿವೆ ದನಕರುಗಳಿಗೆ ಮೇವೂ ನೀರೂ ಇಲ್ಲದೆ, ಕಾಪಾಡುವುದೇ ಕಷ್ಟವು ಬಡ ರೈತರು ಮೊದಲಾದವರು ಹೊಟ್ಟೆಗಿಲ್ಲದೆ ಆಲೆಯುವ ಹೊತ್ತು ಬಂತು ಅದ್ದರಿಂದ ಬಡ ಜನಗಳಿಗೆ ಕೂಲಿ ಸಿಕ್ಕುವದಕ್ಕೆ ಕೆಲ್ಪದ ಕೆರೆಗೆ ೫,೦೦೦ ರೂ ಕಾಮಗಾರಿ ಆಗಲು ಮುಂಜೂರಾಗಿ ಸರ್ಕಾರದ

ದೂರಾಗಿರುವ ಭದ್ರಾ ನಾಲೆಯ ಕೆಲಸವನ್ನು ಈ ಕಾಲದಲ್ಲಿ ಪ್ರಾರಂಭಿಸಿದಲ್ಲಿ ಬಡ ಜನಗಳಿಗೆ ಕೂಲಿಸಿಕ್ಕಿ ಈ ಪ್ರಾಂತ್ಯ ಆಗಾಗ್ಗೆ ಉಂಟಾಗುವ ಕ್ಷಾಮವಾದಿ ಬಾಧೆಗಳು ತಪ್ಪಿ ಪ್ರಜೆಗಳು ಸುಖಿಸಾಗಿರುವರು.—ಇಲ್ಲಿ ರೆ ಸ್ಕೂಲಿನಲ್ಲಿ ಹಾಲಿ ೧೨೨ ಬಾಲಕರ ಮೇಲೆ ಅಭ್ಯಾಸಮಾಡುವರು. ಸಾಧಾರಣವಾಗಿ ಇನ್ನೂ ೫೦—೬೦ ಬಾಲಕರು ಜನಾಯಿಸಬಹುದು. ಇಂಗ್ಲಿಷ್ ಅಭ್ಯಾಸಮಾಡತಕ್ಕ ಬಾಲಕರು ೩೦ ರ ವರೆಗೆ ಇರುವರು. ಅದ್ದರಿಂದ ಪ್ರತ್ಯೇಕ ಒಬ್ಬ ಇಂಗ್ಲಿಷ್ ಮಾಸ್ಟರನ್ನಾಗಲಿ ಅಥವಾ ಹಾಲೀ ಇರುವವರಲ್ಲಿ ಇಬ್ಬರ ಪೈಕಿ ಒಬ್ಬರಿಗೆ ಅಲೊವ್ಯನ್ಸ್ ಕೊಟ್ಟಾಗಲಿ ಇಂಗ್ಲಿಷ್ ಕಲಿಸುವ ಏರ್ಪಾಟು ಮಾಡಿಸೋಣವಾಗಬೇಕು. ಕಳೆದ ಸಂವತ್ಸರ ಇಬ್ಬರಲ್ಲಿ ಒಬ್ಬ ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣನಾದನು.—ಇಲ್ಲಿಗೆ ೫—೬ ಮೈಲಿ ಫಾಸಲೆಯಲ್ಲಿ ಹಾದೋನಹಳ್ಳಿಯಲ್ಲಿ ತಾ. ೨೮ನೇ ರಾತ್ರಿ ಒಂದು ಮನೆಯಲ್ಲಿ ಹುಡುಗಿಯು ದೀಪಕ್ಕೆ ಎಣ್ಣೆ ಹಾಕಲು ಬುಡ್ಡಿಯ ಬಾಯನ್ನು ತೆರೆದು ಬುಡ್ಡಿ ಎಣ್ಣೆ ತಬ್ಬದ ಒಳಗೆ ಅದ್ದಿದಳು. ಅಷ್ಟರಲ್ಲಿ ಇನ್ನೊಂದು ಕೈಯಲ್ಲಿ ಉರಿಯುತ್ತಿದ್ದ ಬತ್ತಿಯು ಆ ಎಣ್ಣೆಯಲ್ಲಿ ಬಿದ್ದು ಉರಿಯು ಜೋರಾಗಿ, ಮಾಳಿಗೆ ಮನೆಯಾದ್ದರಿಂದ ಮುಂದಿನ ಛಾವಣಿ ಮಟ್ಟಿಗೆ ಸುಟ್ಟು, ಮನೆಯ ಒಳಗಿದ್ದ ನಾಲ್ವರೂ, ಹತ್ತು ಜಾನುವಾರುಗಳೂ, ಹೊಗೆಯಿಂದ ಉಸಿರುಕಟ್ಟಿ ಹೊರಗೆ ಹೋಗುವುದಕ್ಕೆ ಅವಕಾಶವಿಲ್ಲದೆ ಅಲ್ಲಿಯೇ ಬೆಂದು ಹೋದವು. ಅದೇ ಸಾಲಿನಲ್ಲಿ ೩೦ ಮನೆಗಳೂ ಮಾರನೆ ದಿನ ೧೯ ಮನೆಗಳೂ ಬೆಂಕಿಯಲ್ಲಿ ಸುಟ್ಟುಹೋದವು. ಕಷ್ಟಕ್ಕೊಳಗಾದವರ ಸಂಕಟವೆಷ್ಟೆಂದು ಹೇಳೋಣ. ಕಾಳು, ಬಟ್ಟೆಬರೆಗಳೆಲ್ಲ ಸುಟ್ಟು ಬೂದಿಯಾದವು. ೧೫—೨೦ ಸಾವಿರ ರೂಪಾಯಿ ನಷ್ಟವಾಗಿರಬಹುದೆಂದು ಹೇಳುತ್ತಾರೆ.—ದನಕರುಗಳನ್ನು ಕೊಯ್ಯುವ ಕೊಲೆಗಾರರು ದಿನೇ ದಿನೇ ಹೆಚ್ಚುತ್ತಿರುವರು. ಇದನ್ನು ತಪ್ಪಿಸಲು ಮಾಡಿರುವ ರೂಲುಸು ಈ ಪ್ರಾಂತ್ಯ ಆಚರಣೆಗೆ ಬಂದಂತೆ ಕಾಣಲಿಲ್ಲ. ಸದ್ಯದಲ್ಲಿಯೇ ಜಾರಿಗೆ ತರುವುದುತ್ತಮ. ಆಕಸ್ಮಾತ್ತಾಯಿಯಂತೆ ಚರ್ಮಕ್ಕೂ ಮೊಹರು, ಗುರುತುಗಳನ್ನು ಇಡುವುದರಲ್ಲಿ ನಿಷ್ಕಾರಣವಾದ ಪ್ರಾಣಿಹಿಂಸೆಯು ತಪ್ಪಿಹೋಗುವುದರಲ್ಲಿ ಸಂಶಯವಿಲ್ಲ.—೧೫—೨೦ ದಿನಗಳ ಹಿಂದೆ ಕೊಪ್ಪದ ಶ್ರೀಲಕ್ಷ್ಮಮ್ಮನ ಜಾತ್ರೆಯು ಅತಿ ವಿಜೃಂಭಣೆಯಿಂದ ನಡೆಯಿತು. ಅನೇಕ ಭಕ್ತಾದಿಗಳು ಬಂದು ಕಾಣಿಕೆ ಹರಕೆ ಮೊದಲಾದವನ್ನು ಒಪ್ಪಿಸಿದರು. ೩—೪ ದಿನಗಳು ಬಾಣ ಬಿರುಸುಗಳಿಂದಲೂ ಬಾಣ ಬಿರುಸು ಮೊದಲಾದವುಗಳಿಂದಲೂ ಕರ್ಣಾನಂದ ನೇತ್ರಾನಂದಕರವಾದ ಉತ್ಸವಗಳು ನಡೆದವು. ನೂರಾರು ಪ್ರಾಣಿಗಳು ತಮ್ಮ ಅಶಾಶ್ವತವಾದ ದೇಹವನ್ನು ಮಾಲೀಕರ ಮೂಲಕದಿಂದ ದೇವತೆಗೆ ಅರ್ಪಿಸಿ ಪ್ರಾಣವನ್ನು ಬಿಟ್ಟವು.

ಅರಸೀಕೆರೆ.—ಬಿಸಲಿನ ಧಗೆಯಿಂದ ಎಲ್ಲಾ ಬಾವಿಗಳೂ ಬತ್ತಿಹೋಗುತ್ತಿರುವದರಿಂದ ನೀರಿನ ಕಷ್ಟವೆಷ್ಟೆಂತ ಹೇಳಲಾಗದು. ಹುರುಳಿ ಬಾವಿಯಲ್ಲೂ ನೀರು ತೀರಾ ಕಮ್ಮಿಯಾಗಿ ಕ್ರಿಮಿ ಬೀಳಲಾರಂಭಿಸಿರುವದರಿಂದ ಮುಂದೆ ಇದರಿಂದ ವಾಂತಿಭೇದಿ ಉಪದ್ರಕ್ಕೆ ಅವಕಾಶವಾಗುವದು. ಡಾಕ್ಟರು ಪರಿಶೀಲಿಸಿ ಈ ನೀರನ್ನು ಜನರು ಕುಡಿಯದಂತೆ ಅಡ್ಡಿ ಮಾಡಬೇಕಾಗಿದೆ.—ಈಚೆಗೆ ಇಲ್ಲಿ ನಾಯಿಗಳಿಂದ ಕಡಿಸಿಕೊಂಡು ಸಾಯುವದೂ, ಕೂನೂರು ಆಸ್ಪತ್ರೆಗೆ ಹೋಗುವದೂ ಪ್ರಾರಂಭವಾಗಿದೆ. ಕಳೆದ ವಾರ ಒಬ್ಬ ಯೌವನಸ್ಥನು ನಾಯಿ ಕಡಿದುದರಿಂದ ಮೃತನಾದನು. ಇವನು ವೃದ್ಧ ತಂದೆಗೆ ಒಬ್ಬನೇ ಮಗನಾಗಿದ್ದದರಿಂದ ತಂದೆಯ ದುಃಖವು ಅಪಾರವಾಗಿ, ಸುತ್ತುಮುತ್ತಣ ಸ್ನೇಹಿತರೂ ಕುಲಸ್ಥರೂ ಎಲ್ಲಾ ಬಂದು ಬಾತ್ತಿಯೋಪಾದಿ ಸೇರಿ ಸ್ವಾಂತನಪಡಿಸಿದರು. ನೆನ್ನೆ ದಿವಸ ರೈಲ್ವೆ ಸ್ಟೇಷನ್ ಬಳಿ ಮೂವರನ್ನು ಒಂದು ಹುಚ್ಚುನಾಯಿ ಕಡಿಯಿತು. ಅವರು ಕೂನೂರಿಗೆ ಹೋಗಬೇಕಾಯಿತು. ಅಲ್ಲಲ್ಲಿ ಹುಚ್ಚು ನಾಯಿಗಳ ಆಕ್ರಾಂತ್ಯ ಅಧಿಕವಾಗಿದೆ. ಸರ್ಕಾರದವರು ದಯವಿಟ್ಟು ಈ ಹುಚ್ಚು ನಾಯಿಗಳನ್ನು ಕೊಲ್ಲಿಸಬೇಕಾಗಿದೆ.—ಈ ಊರಲ್ಲಿರುವ ಸಾಹುಕಾರ್ ... ನವರು ಸಣ್ಣಯ್ಯನ ಕೂಡೆಟ್ಟೆಯ ಒಂದು ಶಿವಾಲಯವನ್ನು ಕಟ್ಟಿಸಿ, ಅದರ ಪ್ರತಿಷ್ಠೆಗಾಗಿ ಬಹಳ ಹಣ ವಿಚ್ಛಾಪಮಾಡುತ್ತಿದ್ದಾರೆ. ಬ್ರಾಹ್ಮಣರಿಗೂ ಆಗಮಿಕರಿಗೂ ಪುರೋಹಿತರಿಗೂ ಕೆಲಸ್ಥರಿಗೂ ಸಂತರ್ಪಣೆಗಳೂ ವಾದ್ಯಘೋಷಗಳೂ ಪತ್ನಿಸೆಗಳೂ ಪೂಜೆಪುನಸ್ಕಾರಗಳೂ ಬಹು ವಿಶೇಷವಾಗಿ ನಡೆಯುತ್ತಿವೆ.—ಸಂತೆಯಲ್ಲಿ ವರ್ತಕರು ಕಮ್ಮಿ ಸೇರಿನಲ್ಲಿ ಅಳತೆ ಮಾಡುವದಲ್ಲದೆ ರಾಗಿಯಲ್ಲಿ ವಿಪರೀತ ಕಸ ಮಣ್ಣು ಸೇರಿಸಿ ಮಾರುತ್ತಿದ್ದಾರೆ. ಇದರಿಂದ ಪಲ್ಲ ೧ ಕ್ಕೆ ೧೦ ಸೇರು ನಷ್ಟವಾಗುವದು.—ಊರಿಗೆ ನೀರು ತರುವಂತೆ ನಲ್ಲಿಗಳನ್ನು ಹಾಕಲು ತರುಪತಿ ರಸ್ತೆ ಈಚಲು ಹಳ್ಳದ ಬಳಿ ಭಾವಿ ತೆಗೆಯುತ್ತಿದ್ದಾರೆ. ಈ ಸ್ಥಳದ ಮಣ್ಣು ಮರಳು ಗೋಡಾಗಿರುವದಲ್ಲದೆ ಹಳ್ಳ ಪ್ರದೇಶವಾಗಿರುವದರಿಂದ ದೊಡ್ಡ ಮಳೆಗಳು ಬರುವಾಗ್ಗೆ ಆ ಭಾವಿಯು ಮುಚ್ಚಿಹೋಗುವದೆಂದು ಅನೇಕರು ಹೇಳುತ್ತಾರೆ. ಈ ಕೆಲಸಕ್ಕೂ ಮತ್ತೊಂದು ಭಾವಿಗೂ ಕೆಲವು ಸಾವಿರ ರೂಪಾಯಿ ಖರ್ಚಾಗುತ್ತಿದ್ದರೂ ಜನರಿಗೆ ನೀರಿನ ಕಷ್ಟ ತಪ್ಪಲಿಲ್ಲ.—ಸಂತೆಯ ದಿನ ಸಾವಿರಾರು ಗಾಡಿ ಬರುವದರಿಂದ ರಸ್ತೆಗಳಲ್ಲಿ ಧೂಳು ಎದ್ದು ಜನರ ಮೈಮೇಲೂ ಬಟ್ಟೆಗಳ ಮೇಲೂ ತಿಂಬುವದು. ಮುನಿಸಿಪಾಲಿಟಿಯವರು ಲಾಭವನ್ನೇ ಹುಡುಕದೆ ಅಂಥ ಎರಡು ರಸ್ತೆಗಳಲ್ಲಿ ಸಂತೆ ದಿನ ಮಾತ್ರವಾದರೂ ರಸ್ತೆಗೆ ನೀರು ಹಾಕಿಸುವದು ಬಹು ಪ್ರಯೋಜನ. ಮೊಹರಂ ಹಬ್ಬದಲ್ಲಿ ಗಲಾಟೆ ಇಲ್ಲದೆ ಜನರು ಮಾಮೂಲಿನಂತೆ ನಡೆಕೊಂಡರು. ಈ ವಾರದಲ್ಲಿ ಈ ಟೌನ್‌ನಲ್ಲಿರುವ ಕುಂಬಾರರಲ್ಲಿ ಇಬ್ಬರು ಮೂವರು ಆಕಸ್ಮಾತ್ತಾಗಿ ಮೃತರಾದ್ದರಿಂದ ಸರ್ಕಾರದವರು ಆ ಮನೆಯ ಜನರನ್ನು ಪ್ರತ್ಯೇಕವಾಗಿ ಇರಿಸಿದಂತಾಯಿತು. ಅಲ್ಲಿಯೂ ಒಬ್ಬರು ಮೃತನಾದ ಕಿಯೂ ವರ್ತಮಾನ ಹುಟ್ಟಿ, ಇದು ಪ್ಲೇಗ್ ಎಂಬದಾಗಿ ಊರೆಲ್ಲಾ ಗಾಬರಿ ಆಗಿ ಜನರು ತಲ್ಲಣಪಡುತ್ತಿದ್ದರು. ಆದರೆ ಇದರ ವಿಷಯವಾಗಿ ಡಾಕ್ಟರಲ್ಲೂ ಅಮಲ್ದಾರರಲ್ಲೂ ವಿಚಾರಿಸಿದ್ದಾಗ್ಗೆ ಅದು ಪ್ಲೇಗ ಮರಣಗಳಲ್ಲವೆಂದೂ, ಆದರೂ ಸಂಶಯಾಸ್ಪದವಾಗಿ ಊರಾಚೆ ಆ ಕುಟುಂಬವನ್ನು ಪ್ರತ್ಯೇಕವಾಗಿಡಲಾಗಿದೆ ಎಂತಲೂ, ಸತ್ತವರು ಸುಮಾರು ಮೂರು ನಾಲ್ಕು ದಿವಸ ಜ್ವರವೆಂತಲೂ, ಅವರೂ ಬೇರೆ ಬೇರೆ ಕಾರಣಗಳಿಂದ ಮೃತಪಟ್ಟರೆಂತಲೂ, ಊರಲ್ಲಿ ಇಲಿಗಳು ಸಾಯುತ್ತಿರುವುದಿಲ್ಲವೆಂತಲೂ ತಿಳಿಯಲಾಗಿದೆ.—ಶ್ರೀ. ಇಲಾಖೆಯಲ್ಲಿ ಬಹುಕಾಲದಿಂದಿದ್ದ ಸ್ಟೇಷನ್ ಮಾಸ್ಟರ್ ಮಿ|| ಆರ್ಮ್‌ಸ್ಟ್ರಾಂಗ್ ಎಂಬುವರು ರಿಟೈರ್ ಆಗಿ, ಹೊಸಬರು ಕೆಲಸಕ್ಕೆ ಬಂದರೆಂತಲೂ, ಸ. ಇನ್ಸ್‌ಪೆಕ್ಟರಿಗೂ, ಡಿ. ಸಿ. ದಫೇದಾರರಿಗೂ ಬೇರೆ ಬೇರೆ ಸ್ಥಳಗಳಿಗೆ ವರ್ಗವಾಗಿದೆ ಎಂತಲೂ ಕೇಳಲಾಗಿದೆ.—ಪೋಲೀಸ್ ಕೇಸುಗಳ ಪ್ರಾಬಲ್ಯಕ್ಕೆ ಕಾರಣಗಳು ದುರ್ಭಿಕ್ಷವೇ ಎಂದು ಹೇಳಬಹುದು. ರಾಗಿ ೧೦||—೧೧ ಸೇರೂ, ಅಕ್ಕಿ ೫||—೬ ಸೇರೂ, ತೊಗರಿ ಬೇಳೆ ೬|| ಸೇರೂ ಮಾರುತ್ತೆ. ಸಂತೆಯಲ್ಲಿ ಸುಂಕ ಎತ್ತುವವರ ಅತ್ಯಾಚಾರ ಪ್ರಬಲವಾಗಿದೆ. ಇದು ಬಹು ಅನ್ಯಾಯವೇ ಸರಿ.

ಒಳದೇಶದ ವೃತ್ತಾಂತಗಳು.

ಈ ಸಂಸ್ಥಾನದ ಮುಜರಾಯಿ ಇಲಾಖೆಯಲ್ಲೂ ಇಂಜನಿಯರ್ ಇಲಾಖೆಯಲ್ಲೂ ಇರುವ ಸಣ್ಣ ನೌಕರರಿಗೂ ಕೂಡ ಕ್ಷಾಮದ ಅಲೋಯನ್ಸನ್ನು ಕೊಡಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

ಮಳವಳ್ಳಿ ತಾಲ್ಲೂಕು ಹುನಗನಹಳ್ಳಿ ಎಂಬ ಗ್ರಾಮದಲ್ಲಿ ಒಬ್ಬ ಪ್ರಾಯಸ್ಥನು ವಿದ್ಯುಚ್ಛಕ್ತಿಯ ತಂತಿಯನ್ನು ಹಿಡಿದುಕೊಂಡದ್ದರಿಂದ ಅವನಿಗೆ ಪೂರಾ ಬಾಧೆಯುಂಟಾಗಿ ಆರೇಳು ದಿನ ನರಳಿ ಕಾಲವಾದನೆಂದು ತಿಳಿದುಬಂದಿದೆ.

ಬೆಂಗಳೂರು ದಂಡಿನಲ್ಲಿ ಪೊನ್ನುಸಾಮಿ ಎಂಬೊಬ್ಬ ರಿಜರ್ವ್ ಪೋಲೀಸಿನವನು ಕಳೆದ ವಾರ ತನ್ನ ಮನೆಯಲ್ಲಿ ನೇಣುಹಾಕಿಕೊಂಡು ಪ್ರಾಣಬಿಟ್ಟನು. ಅವನಿಗೆ ಉಬ್ಬಸರೋಗವಿದ್ದದ್ದರಿಂದ ಅದರ ಕಷ್ಟವನ್ನು ತಡೆಯಲಾರದೆ ಆತ್ಮಹತ್ಯಮಾಡಿಕೊಂಡನೆಂದು ಪ್ರಕಟವಾಗಿದೆ.

ರಾಜಧಾನಿಯಲ್ಲಿ ದೊಡ್ಡರೋಗದಿಂದ ಅನೇಕ ಗೋಕಾಯಿಗಳು ಈ ಸಲ ಮೃತಪಟ್ಟವು. ಅರಮನೆ ಇಲಾಖೆಯ ದನಗಳ ಪೈಕಿ ಹಲವು ತೀರಿಹೋದವು. ಪಶುವೈದ್ಯದ ಇನ್ಸ್‌ಪೆಕ್ಟರವರು ಬಂದು ಎಲ್ಲಾ ದನಗಳಿಗೂ ಔಷಧಿ ಹಾಕಿದರು. ಈ ಪೈಕಿಯೂ ೮—೧೦ ರಾಸುಗಳು ನರಳುತ್ತಿವೆ ಎಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಮೊಹರಂ ಹಬ್ಬವು ಮೊನ್ನೆಗೆ ಮುಕ್ತಾಯವಾಯಿತು. ಈ ಸಲ ಗಿರೋವುಗಳೂ ವೇಷಗಳೂ ಬಹಳ ವಿಶೇಷವಾಗಿದ್ದವು. ಗಲಾಟೆಯು ಬೀದಿಗಳಲ್ಲಿ ಅಪಾರವಾಗಿದ್ದರೂ ಪೋಲೀಸ್ ಬಂದೋಬಸ್ತು ಬಹು ತೃಪ್ತಿಕರವಾಗಿದ್ದದ್ದರಿಂದ ಯಾವ ವಿಧವಾದ ಜಗಳಕದನಗಳೂ ಗಲಭೆಯೂ ಪ್ರಾಪ್ತವಾಗಲಿಲ್ಲ.

ಶ್ರೀಮನ್ಮಹಾರಾಜರವರು ಸಂಸ್ಥಾನದೊಳಗೆ ಸರ್ಕೀಟು ಪ್ರಯಾಣವನ್ನು ಮುಗಿಸಿ, ಈ ವಾರ ಬೆಂಗಳೂರಿನಿಂದ ಬೊಂಬಾಯಿಗೆ ಚಿತ್ತೈಸಿ ಅಲ್ಲಿ ಕೆಲವು ಕಾಲ ಇದ್ದು, ಅಲ್ಲಿಂದ ಮದರಾಸಿಗೆ ವಾಪಸು ಬಂದು, ಶ್ರೀಮನ್ ಯುವರಾಜರವರು ಇಂಗ್ಲೆಂಡಿನಿಂದ ಹಿಂತಿರುಗುವ ತನಕ ಅಲ್ಲೇ ಇರುತ್ತಾರೆಂದು ವರ್ತಮಾನವಿದೆ.

ಶ್ರೀ ಉಡುಪಿಯ ಸ್ವಾಮಿಗಳು ಕಳೆದ ವಾರ ಬೆಂಗಳೂರಿಗೆ ದಯಮಾಡಿ, ಅಲ್ಲಿನ ಗುಂಡೋಪಂತರ ಸತ್ರದಲ್ಲಿ ಪರಿವಾರ ಸಹಿತ ಇಳುಕೊಂಡಿದ್ದಾರೆಂತಲೂ, ಮುಜರಾಯಿ ಸೂಪರಿಂಟೆಂಡೆಂಟರೇ ಮೊದಲಾದವರು ಅವರನ್ನು ಸತ್ಕರಿಸಿ ಕರೆದುಕೊಂಡು ಬಂದರೆಂತಲೂ, ಕೆಲವು ಕಾಲದ ಮೇಲೆ ಸ್ವಾಮಿಗಳು ಅಲ್ಲಿಂದ ರಾಜಧಾನಿಗೂ ದಯಮಾಡುವವರಾಗಿದ್ದಾರೆಂತಲೂ ಕೇಳುತ್ತೇವೆ.

ಮೈಸೂರಿನಿಂದ ಹಾಸನಕ್ಕೆ ರೈಲ್ ರಸ್ತೆ ಹಾಕುವುದಕ್ಕೋಸ್ಕರ ಪ್ರಿಲಿಮಿನರಿ ಸರ್ವೆ ಮಾಡುವುದಕ್ಕೆ ಮದರಾಸ್ ಮತ್ತು ದಕ್ಷಿಣ ಮರಾಟಾ ರೈಲ್‌ವೇ ಕಂಪನಿಯವರು ಕಳುಹಿಸಿಕೊಟ್ಟ ಖರ್ಚಿನ ಅಂದಾಜಾ ಪಟ್ಟಿಯನ್ನು ಮೈಸೂರು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿರುತ್ತಾರೆ. ಹಾಸನದಿಂದ ಅರಸೀಕೆರೆಗೆ ಹಾಕುವ ಲೈನನ್ನು ಈ ಮೊದಲೇ ಸರ್ವೆಮಾಡಿ ಪೂರೈಸಿದೆ.

ಕೋಲಾರಕ್ಕೆ ಸೇರಿದ ಪೊಲ್ಲಿಬೆಟ್ಟದ ಬಳಿ ಒಂದು ತೋಟದಲ್ಲಿ ಕೂಲಿಯವರು ದಬ್ಬೆಯನ್ನು ಪರಿಮಾಡುತ್ತಿದ್ದಾಗ ಭೂಸ್ಥಾಪನೆಯಾಗಿದ್ದ ನಿಧಿಯು ಸಿಕ್ಕಿ, ಅವರಲ್ಲಿ ವ್ಯಾಜ್ಯ ಹುಟ್ಟಿ ಕಡೆಗೆ ಪೋಲೀಸಿಗೆ ರಿಪೋರ್ಟಾಯಿತು. ಅವರು ತನಿಖೆ ಮಾಡುತ್ತಿದ್ದಾರೆ. ಅಲ್ಲಿ ಸಿಕ್ಕಿರುವ ನಾಣ್ಯಗಳಲ್ಲಿ ಒಂದು ಕಡೆ ಆನೆಯ ಆಕೃತಿಯೂ, ಇನ್ನೊಂದು ಕಡೆ ಹಿಂದೂಸ್ಥಾನಿ ಲಿಪಿಯೂ ಅಚ್ಚಾಗಿರುತ್ತವೆ.

ಸರ್ಕಾರದವರು ಎರಡು ವರುಷದಿಂದ ಬೆಂಗಳೂರಿನಲ್ಲಿ ಶಿಕ್ಷಾರಿ ಸ್ಕೂಲನ್ನು ಸ್ಥಾಪಿಸಿ ನಡಿಸುತ್ತಾ ಬಂದರು. ಅದರಲ್ಲಿ ೧೩ ಜನ ಶಿಕ್ಷಾರರೂ, ೨೭ ಮಂದಿ ಇತರರೂ ಶಿಕ್ಷಿತರಾಗಿರುತ್ತಾರೆ. ಈ ಸ್ಕೂಲನ್ನು ಮುಂದಕ್ಕೆ ನಡಿಸಬೇಕಾದದ್ದಿಲ್ಲವೆಂದು ರೆವಿನ್ಯೂ ಕಮಿಷನರ್‌ರವರು ಶಿಫಾರಸು ಮಾಡಿದ್ದರ ಮೇರೆ ಸರ್ಕಾರದವರು ಈ ತಿಂಗಳ ಆಖೈರಿನಿಂದ ಅದನ್ನು ವಜಾ ಮಾಡತಕ್ಕದ್ದೆಂದು ಸ್ಯಾಂಕ್ಷನ್ ಮಾಡಿರುತ್ತಾರೆ.

ಶ್ರೀ ಶೃಂಗೇರಿ ಜಗದ್ಗುರುಗಳು ಕಳೆದ ವಾರ ಮಧುರೆ ಜಿಲ್ಲೆಯಲ್ಲಿ ಅಮ್ಮನಾಯಕನ ಊರಿನಿಂದ ದಿಂಡಿಗಲ್ಲಿಗೆ ಪರಿವಾರ ಸಹಿತ ಹೋಗುತ್ತಿರುವಾಗ ಕಾಡಿನಲ್ಲಿ ೪೦-೫೦ ಜನ ಕಳ್ಳಕೊರಮರು ಬಂದು ಗಲಭೆ ಮಾಡುವವರಾಗಿದ್ದರೆಂದೂ, ಶಿಪಾಯಿ ರಾಮಸಿಂಗ್ ಎಂಬವನು ಸಾಹಸವಾಗಿ ಅವರನ್ನು ಓಡಿಸಿಕೊಂಡು ಹೋಗಿ ಆ ಪೈಕಿ ಮೂರು ಮಂದಿ ಕಳ್ಳರನ್ನು ಹಿಡಿದು ದಿಂಡಿಗಲ್ ಪೋಲೀಸಿಗೆ ಒಪ್ಪಿಸಿರುತ್ತಾನೆಂದೂ ಒಬ್ಬ ಬಾತ್ತಿದಾರರು ಬರೆಯುತ್ತಾರೆ.

ನಮ್ಮ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯಾದ ಮಿ|| ಮುಕಾನಿಕಿಯವರು ಮುಂಬರುವ ಮಾರ್ಚಿ ಆಖೈರಿಗೆ ಆ ಕೆಲಸವನ್ನು ಬಿಟ್ಟು ಹೋಗುತ್ತಾರೆ. ಆ ಕೆಲಸಕ್ಕೆ ಮಿ|| ಬಿ. ಎ. ಸಿ. ಎಂಬುವರು ನೇಮಕವಾಗಿದ್ದರು. ಇವರು ತಮ್ಮ ದೇಹಸ್ಥಿತಿ ಅನುಕೂಲವಾಗಿಲ್ಲವಾದ್ದರಿಂದ ಸಲಹೆಯನ್ನು ಬಿಟ್ಟು ಬರುವುದಿಲ್ಲವೆಂದು ತಿಳಿಸಿದರು. ಆದಕಾರಣ ಆ ಕೆಲಸಕ್ಕೆ ಶ್ರೀಮನ್ಮಹಾರಾಜರವರು ಬೇರೊಬ್ಬ ಸರದಾರರನ್ನು ನೇಮಕ ಮಾಡಿಕೊಳ್ಳುವವರಾಗಿದ್ದಾರೆ.

ನಂಜನಗೂಡಿನಲ್ಲಿ ಮೊನ್ನೆ ಮುಸಲ್ಮಾನರ ಸ್ವಾಂತಿಕೀಲ ವ್ಯವಹಾರ. ಹಬ್ಬದ ನಿಮಿತ್ತ ತಾಬೂತುಗಳನ್ನು ಮೆರವಣಿಗೆ ಮಾಡಿಕೊಂಡು ಹೋಗುತ್ತಿದ್ದಾಗ ಯಾವ ಕಾರಣದಿಂದಲೋ ಸಬ್ ಡಿವಿಜನ್ ಆಫೀಸರೇ ಮೊದಲಾದ ಸರ್ಕಾರಿ ನೌಕರರಿಗೂ ಮೆರವಣಿಗೆಯವರಿಗೂ ವಾಕ್ಯುದ್ಧವುಂಟಾಗಿ ಕಲ್ಲುಗಳು ಎಸೆಯಲ್ಪಟ್ಟು ಪ್ರಜಾಶಾಂತಿಗೆ ಭಂಗವುಂಟಾಯಿತು. ಸರ್ಕಾರಿ ಅಧಿಕಾರಿಗಳು ತಲೆಮರೆಸಿಕೊಂಡು ರಾತ್ರಿ ಮೈಸೂರಿಗೆ ತಂತಿ ವರ್ತಮಾನ ಕೊಟ್ಟರು. ಮಧ್ಯರಾತ್ರಿಯಲ್ಲಿ ಇಲ್ಲಿಂದ ಪೋಲೀಸ್ ಸೂಪರಿಂಟೆಂಡೆಂಟರೂ, ಮೈಸೂರು ತಾಲ್ಲೂಕ್ ಇನ್ಸ್‌ಪೆಕ್ಟರರೂ, ಕೊಂಡು ಸಾರ್ಜೆಂಟರೂ ಮೆಡಿಕಲ್ ಮೇತ್ರಿ ಅಲ್ಲಿಗೆ ಹೋಗಿ, ಗಲಭೆಯನ್ನೆಲ್ಲಾ ಶಮನಮಾಡಿ ತಾಬೂತುಗಳ ಮೆರವಣಿಗೆಯನ್ನು ನಡಿಸಿದರು. ನೆನ್ನೆ ಬೆಳಗೆ ಡೆಪ್ಯುಟಿ ಕಮಿಷನರ್‌ರವರು ಅಲ್ಲಿಗೆ ... ಮಾಡುತ್ತಿದ್ದಾರೆ.

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ನಂದಿದುರ್ಗದ ಗಣಿಯೊಳಗೆ ಬೆಂಕಿ ಹುಟ್ಟಿ ಐದು ಮಂದಿ ಕಾಲವಾದರೆಂದೂ, ಹಲವು ಕೂಲಿಯವರಿಗೆ ಗಾಯಗಳಾದವೆಂದೂ ತಿಳಿದಿದೆಯಷ್ಟೆ. ಆ ಬೆಂಕಿಯು ಹದಿನೈದು ದಿವಸಗಳಿಂದಲೂ ಆರದೆ ಗಣಿಯೊಳಗೆ ಇನ್ನೂ ಹೊಗೆಯಾಡುತ್ತಲೇ ಇದೆ. ಈ ಬೆಂಕಿ ಸಂಪೂರ್ಣವಾಗಿ ಆರಿದ ಹೊರತು ಜನರು ಗಣಿಯೊಳಗಿಳಿದು ಚಿನ್ನ ತೆಗೆಯುವ ಕೆಲಸವನ್ನು ಪ್ರಾರಂಭಿಸಲಾಗದು. ಆದದ್ದರಿಂದ ಸುಮಾರು ಮೂರು ಸಾವಿರ ಕೂಲೀ ಆಳುಗಳಿಗೆ ಕೆಲಸ ತಪ್ಪಿಹೋಗಿದೆ. ಗಣೀ ಮಾಲೀಕರು ಅವರಿಗೆ ಕೆಲವು ಕಾಲದ ವರೆಗಾದರೂ ಅರ್ಧ ಕೂಲಿಯನ್ನು ಕೊಟ್ಟುಕೊಂಡು ಬಂದಿದ್ದಾರೆ. ಆ ಜನರು ಕೆಲಸವಿಲ್ಲದೆ ಗಲ್ಲಿಗಳಲ್ಲಿ ಅಂಗಡಿ ಮುಂಗಟ್ಟುಗಳನ್ನು ನುಗ್ಗಿ ಲೂಟಿ ಮುಂತಾದದ್ದು ಮಾಡಬಾರದೆಂದು ಬಂದೋಬಸ್ತಿಗಾಗಿ ಬೆಂಗಳೂರಿನಿಂದ ಐವತ್ತು ಮಂದಿ ಪೋಲೀಸಿನವರನ್ನು ಕಳುಹಿಸಿ ಅಲ್ಲಲ್ಲಿ ನೇಮಕಮಾಡಿದ್ದಾರೆ. ಉರಿಯೂ ಹೊಗೆಯಾಡುವುದೂ ಬೇಗನೆ ಶಮನವಾಗಿ ಗಣಿಯ ಕೆಲಸ ಪ್ರಾರಂಭವಾಗದೆ ಸಾವಕಾಶವಾದಲ್ಲಿ ಗಣಿಯ ಮಾಲೀಕರಿಗೆ ತುಂಬಾ ನಷ್ಟವಾಗುವುದು ಮಾತ್ರವೇ ಅಲ್ಲ; ಕೂಲಿಕಾರರಾದ ಸಾವಿರಾರು ಜನರ ಜೀವನಕ್ಕೂ ತುಂಬಾ ಕಷ್ಟವಾದೀತೆಂದು ಕಾಣುವುದು.

ಬಾತ್ತಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ತಿಗಳಿಗೆ ನಾವು ಜಾಗಕೊಡಲಾರೆವು. ಆದಕಾರಣ ಬಾತ್ತಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಅಂಥವುಗಳಿಗೆ ನಾವು ಜಾಗ ಕೊಡಲಾರೆವು.

ಬಾತ್ತಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

'ನಾಲಗೆಯಲ್ಲಿ ರಸ, ಹೊಟ್ಟೆಯೊಳಗೆ ವಿಷ'—ಚಿಕ್ಕಮಗಳೂರು; 'ಪ್ರತ್ಯಕ್ಷದರ್ಶಿ'—ಯಳಂದೂರು; 'ಬಾತ್ತಿದಾರ'—ತೆಟ್ಟಳ್ಳಿ. 'ಉಪನ್ಯಾಸ ವಿಷಯ'—ಹೊಮ್ಮಸಂದ್ರ — ಈ ಬಾತ್ತಿಗಳನ್ನು ಪ್ರಕಟಿಸಲಾರೆವು.—ಎಡಿ.|

ಯಲಹಂಕದಲ್ಲಿರುವ ದಾಸಪ್ಪನವರ ಭಾವಿಯಲ್ಲಿ ನೀರು ಬತ್ತಿಹೋಗಿರುವದರಿಂದ ಅದರ ಹಕ್ಕುದಾರರು ಅದರ ಹೂಳನ್ನು ತೆಗಿಸಿ ಪ್ರಜೆಗಳಿಗೆ ನೀರಿನ ಅನುಕೂಲ ಮಾಡಿಕೊಟ್ಟು, ಕೀರ್ತಿ ಪಡೆಯಬೇಕೆಂದು ಒಬ್ಬ ಬಾತ್ತಿದಾರರು ಬರೆದಿದ್ದಾರೆ. ಆ ಗ್ರಾಮದ ಪ್ರಜೆಗಳು ಸೇರಿ ಈ ವಿಷಯವನ್ನು ಆಲೋಚನೆ ಮಾಡಿ, ಮೇಲ್ಕಂಡ ಮಾಲೀಕರಿಗೆ ತಿಳಿಸಿದ ಪಕ್ಷದಲ್ಲಿ ಅವರು ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಟ್ಟಾರೆಂದು ನಂಬುತ್ತೇವೆ.—ಎಡಿ.|

ಕಳೆದ ತಿಂಗಳ ೧೪ನೇ ತಾರೀಖಿನ ನಮ್ಮ ಪತ್ರಿಕೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ಕೆಲವರು ಒಂದು ಸಂಸಾರದವರಿಗೆ ಕಷ್ಟನಷ್ಟಗಳನ್ನುಂಟುಮಾಡುತ್ತಿದ್ದಾರೆಂದೂ, ಅದರ ಪರಿಹಾರಕ್ಕೆ ಅವರು ಪೋಲೀಸಿಗೂ ಮ್ಯಾಜಿಸ್ಟ್ರೇಟರಿಗೂ ಬರೆದುಕೊಂಡರೆ ಅವರು ತಕ್ಕ ಬಂದೋಬಸ್ತು ಮಾಡಾರೆಂದೂ ನಾವು ಸೂಚಿಸಿದ್ದೆವಷ್ಟೆ. ಈಚೆಗೆ ಆ ಬಾತ್ತಿದಾರರು ಅದೇ ವಿಷಯವನ್ನು ಕುರಿತು ಮೊದಲು ಪೋಲೀಸಿಗೆ ಎರಡಾವರ್ತಿಯೂ, ಸಬ್ ಡಿವಿಜನ್ ಆಫೀಸರಿಗೆ ಒಂದಾವರ್ತಿಯೂ ಅರ್ಜಿ ಬರೆದುಕೊಂಡಿದೆಯೆಂತಲೂ, ಇದುವರೆಗೂ ಏನೂ ಇತ್ಯರ್ಥವಾಗಲಿಲ್ಲವೆಂತಲೂ ಬರೆದಿರುತ್ತಾರೆ. ಈಗಲಾದರೂ ಪೋಲೀಸ್ ಇಲಾಖೆಯವರೂ ಮ್ಯಾಜಿಸ್ಟ್ರೇಟರೂ ಆ ಅರ್ಜಿಯಲ್ಲಿ ಕಂಡ ವಿಷಯಗಳನ್ನು ತನಿಖೆ ಮಾಡಿ, ಪ್ರಜೆಗಳಿಗೆ ವೃಥಾ ಕಷ್ಟನಷ್ಟಗಳುಂಟಾಗದಂತೆ ಏರ್ಪಾಡು ಮಾಡಿಯಾರೆಂದು ನಿರೀಕ್ಷಿಸುತ್ತೇವೆ. ಆ ಬಾತ್ತಿಯನ್ನು ಪ್ರಕಟಿಸಲು ಸ್ಥಳಸಂಕೋಚವಾಗಿದೆ ಎಂದು ವಿಷಾದಿಸುವೆವು.—ಎಡಿ.|

ಕರೆಸ್ಪಾಂಡೆನ್ಸ್.

ಪ್ರಜೆಗಳಿಗೆ ನೀರಿನ ಕಷ್ಟವು.

ಅಯ್ಯಾ,

ಈ ವರ್ಷದಲ್ಲಿ ಮಳೆ ಬೆಳೆಗಳು ಇಲ್ಲದೆ ಹೊಸಹಳ್ಳಿ ತಾಲ್ಲೂಕಿನಲ್ಲಿ ಬಡಬಗ್ಗರ ಜೀವನಕ್ಕೆ ಬಹಳ ಕುಂದಕವಾಗಿರುತ್ತೆ. ಮತ್ತು ದನ ಕರುಗಳಿಗೆ ನೀರಿಗೂ ಮೇವಿಗೂ ಬಹಳ ತೊಂದರೆಯಾಗಿರುತ್ತೆ. ಈ ಊರಿನಲ್ಲಿ ಪುರಾತನದಿಂದಲೂ ಒಂದು ಭಾವಿಯಾದರೂ ಇಲ್ಲದೆ ಇರುತ್ತೆ. ಈಗ ಈ ತಾಲ್ಲೂಕಿಗೆ ಬಂದಿರುವ ಅಮಲ್ದಾರ್ ಮಿ|| ಪಿ. ಸುಬ್ಬರಾಯರು ಭಾವಿ ಆಗಲು ಸ್ಯಾಂಕ್ಷನ್ ಮಾಡಿಸಿರುತ್ತಾರೆ. ಜಾಗ್ರತೆಯಲ್ಲಿ ಈ ಮಹಾಶಯರಿಗೆ ಪುಣ್ಯಬಂದೀತೆಂದು ನಂಬುತ್ತೇವೆ. ಈಗ ಇದೇ ತಾಲ್ಲೂಕು ... ಗ್ರಾಮದಲ್ಲಿ ಒಕ್ಕಲಿಗ ಕಾಶಿ ಬಂದ್ರಾಯಪ್ಪ ಸಂಜಾತನು ಈ ಗ್ರಾಮದ ಕಾಡಿನಲ್ಲಿ ಬೂದುಗೆರೆಗೆ ಹೋಗುವ ದಾರಿಯಲ್ಲಿ ಸುಮಾರು ೫೦೦ ರೂಪಾಯಿ ವರೆಗೂ ಖರ್ಚುಮಾಡಿ ಒಂದು ಕುಂಟೆಯನ್ನು ತೆಗೆಸಿರುತ್ತಾನೆ. ಈ ಗ್ರಾಮದಲ್ಲಿ ಒಬ್ಬ ಭಿಕ್ಷುಗಾರನು ಬಂದು ತಾನು ದೇವಕೋಪಾಸಕನೆಂದು ಜನಗಳಿಗೆ ಮರುಳುಮಾಡಿ, ಸುಮಾರು ೫-೬ ರೂಪಾಯಿ ವರೆಗೂ ಕಿತ್ತುಕೊಂಡು ಹೋಗಿರುತ್ತಾನೆ. ನಮ್ಮ ಜನಗಳು ಇಂಥಾ ಅನೇಕಕ್ಕೆ ಗುರಿಯಾಗಿರುತ್ತಾರೆ.

ಬಾತ್ತಿದಾರ.

ಹೊಮ್ಮಸಂದ್ರದ ವಿದ್ಯಾ ಪ್ರೋತ್ಸಾಹಕ ಸಂಘವು.

ಅಯ್ಯಾ,

ಈ ಸಂಘವು ೧೯೦೭ನೇ ಇಸವಿ ಜೂನ್ ೧ನೇ ತಾ|| ಪ್ರಾರಂಭವಾಗಿ, ಸೆಪ್ಟೆಂಬರ್ ತಿಂಗಳ ವರೆಗೂ ವಾರಕ್ಕೊಂದು ಉಪನ್ಯಾಸದಂತೆ ನಡೆಯುತ್ತಾ ಬಂತು. ಅನಂತರ ಪ್ಲೇಗಿನ ದೆಸೆಯಿಂದ ಮುಚ್ಚಲ್ಪಟ್ಟು, ೧೯೦೮ನೇ ಇಸವಿ ಆಖೈರು ವರೆಗೆ ಸಂಘದ ಕಾರ್ಯಗಳು ನಡೆಯಲು ಅವಕಾಶವಾಗಲಿಲ್ಲ. ೧೯೦೮ನೇ ಏಪ್ರಿಲ್ ೩ ನೇ ರಿಂದ ಸಂಘದ ಮೆಂಬರುಗಳಲ್ಲಿ ಕೆಲವರು ಚಂದಾ ಹಾಕಿ, ಕೆಲವು ಪತ್ರಿಕೆಗಳನ್ನು ತರಿಸಿ, ರೀಡಿಂಗ್ ರೂಂ ಪ್ರಾರಂಭಿಸಿ, ಸಂದರ್ಭಾನುಸಾರ ವಿವಾದಂಗಳನ್ನು ನಡಿಸುತ್ತೇವೆ. ಈ ಸಂವಾದಗಳಲ್ಲಿ ಬಾಲಕರ ವಿದ್ಯಾಭ್ಯಾಸ, ಆಲೋಚನಾ ಶಕ್ತಿಗಳ ಅಭಿವೃದ್ಧಿಗೆ ಕಾರಣವಾದ ಸಂಗತಿಗಳು ಉಪನ್ಯಾಸ ಮಾಡಲ್ಪಡುತ್ತವೆ.

ಇನ್ನು ಮುಂದೆ ಸಂಘದ ಕಾರ್ಯಗಳನ್ನು ಹೆಚ್ಚಿಸಬೇಕೆಂದು ತೀರ್ಮಾನಿಸಿ, ಈ ಕೆಳಗೆ ಕಂಡಂತೆ ಉದ್ದೇಶಿಸಿದೆ:—(೧) ಇದುವರೆಗೂ ಪ್ರೈವೇಟ್‌ನಲ್ಲಿದ್ದ (ಸಂಘದವರಿಗೆ ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದ) ಪತ್ರಿಕೆಗಳನ್ನು ಗ್ರಾಮಸ್ಥರ

...ಏರ್ಪಾಟು ಮಾಡುವುದು (೨) ಗ್ರಾಮದಲ್ಲಿ ಸ್ಥಾಪಿತವಾಗಿರುವ ಸ್ಕೂಲು ಗಳಿಗೆ ಹೋಗಲು ಅನಾನುಕೂಲವಾಗಿ ಆಸಕ್ತಿಪರರಾದ ವಿದ್ಯಾರ್ಥಿಗಳಿಗೆ ರಾತ್ರಿ ಶಾಲೆ ವಿದ್ಯಾಭ್ಯಾಸಕ್ಕೆ ಸಹಕಾರಿ ಮಾಡುವುದು (೩) ಸ್ಥಾಪಿತವಾಗಿರುವ ಪಾಠಶಾಲೆ ವಿದ್ಯಾರ್ಥಿಗಳಿಗೆ ಸಂಘದ ಮೆಂಬರುಗಳಿಂದ ಗೊತ್ತು ಮಾಡಲ್ಪಡುವಂತೆ ಪಠ್ಯ ವಿದ್ಯಾರ್ಥಿಗಳ ಪ್ರವೃತ್ತಿ ಬರುವ ಜನಗಳನ್ನು ಹಂಚಲು ಸಹಾಯ ಮಾಡುವುದು. ಪ್ರತ್ಯೇಕ ಗ್ರಾಮದಲ್ಲಿ ಅನುಕೂಲವಾದ ಸ್ಥಳ ಸಿಕ್ಕಿದ ಒಡನೆ ಒಂದನೇ ಉದ್ದೇಶವೂ ಸಂಘದ ಮೆಂಬರುಗಳಿಂದ ಖರ್ಚಿಗೆ ಏರ್ಪಾಟು ಮಾಡಲ್ಪಟ್ಟು ಮಾಸ್ತರನ್ನು ನೇಮಿಸಿದ ಬಳಿಕ ಎರಡನೇ ಉದ್ದೇಶವೂ ನಡವಳಿಕೆಯಲ್ಲಿ ತರಲ್ಪಡುವವು. ಈ ಸಂಘ ದ ಉದ್ದೇಶಗಳನ್ನು ಪೂರೈಸಿಕೊಳ್ಳಲು ದ್ರವ್ಯಸಹಾಯ ಬೇಕಾಗಿರುವುದರಿಂದ ಮಹ ನೀಯರುಗಳು ವಿಶ್ವಾಸದಿಂದ ಕೊಡುವ ಮೊಬಲಗನ್ನು ಕೃತಜ್ಞತಾ ಪೂರ್ವಕ ವಾಗಿ ಸ್ವೀಕರಿಸುವೆವು.

ಸಂಘದ ಕಾರ್ಯದರ್ಶಿ.

...ಈ ಗ್ರಾಮದಲ್ಲಿ ನೀರಿನ ಅವಶ್ಯವು ತುಂಬಾ ಆಗಿದೆ. ಬಹಳ ಜನರು ನೀರು ತೆಗೆಯುವ ಬಾವಿಗಳೆಲ್ಲಾ ಈಗ ನೀರು ಇಲ್ಲದೆ ... ಧರ್ಮ ಸರ್ಕಾರದವರು ಈ ವಿಷಯ ಗಮನ ಕೊಡುವುದು ಅವಶ್ಯಕ.

ರೈಲಿನ ತೊಂದರೆಯೂ, ಕ್ಷಾಮ ವಿಚಾರವೂ.

ಅಯ್ಯಾ,

ನಾನು ಕಳೆದ ... ನಾ ... ಕಾಲ ಬೆಂಗಳೂರಿನಿಂದ ಹೊರಡತಕ್ಕ ರೈಲಿನಲ್ಲಿ ಹತ್ತಿ, ಬೆಳಗ್ಗೆ ... ಗುಬ್ಬಿ ಸ್ಟೇಷನ್‌ನಿಂದ ಬೀರೂ ರು ಸ್ಟೇಷನ್ ವರೆಗೆ ಜನಗಳು ತುಂಬಿದ್ದು, ಇಳಿಯಲು ಸೂಕ್ಷ್ಮವಾಗಿ ಹತ್ತಿದ ಜನರು ಮೊದಲು ಕೂತಿದ್ದವರಿಗೂ ಬಹಳ ತೊಂದರೆ ಪಡಿಸುತ್ತ ... ಅಂದರೆ ... ಗಾಡಿಯಲ್ಲಿ ... ಜನ ಒಬ್ಬರ ಮೇಲೊಬ್ಬರು ಕೂತಿದ್ದರು ... ಕೆಲವರು ... ಸಂಕಟ ಹೇಳತಕ್ಕ ... ಈ ತೊಂದರೆ ... ಜನಗಳು ಕೂಡ ಕಂಪಾರ್ಟ್‌ಮೆಂಟುಗಳ ... ಗಾಡಿಗಳಿಗೆ ... ಗಾಡಿಗಳಲ್ಲಿ ... ರೈಲ್ವೆ ನೌಕರರೂ ... ಬಹಳ ಸಂಕಟ ... ಪಕ್ಷಪಾತವಿಲ್ಲದೆಯೂ ಜನರಿಗೆ ಬೇಕಾಗುವಷ್ಟು ... ಗಾಡಿಗಳನ್ನು ಹಾಕುವುದರ ಮೂಲಕವೂ ಪ್ರಯಾಣಿಕರಿಗೆ ಸೌಕರ್ಯ ಉಂಟುಮಾಡಿದರೆ ಅನುಕೂಲ.

ದಾವಣಗೆರೆ ... ಒಂದು ... ಪ್ರಜೆಗೆ ... ನಾನು ... ಅವರಿಗಿರತಕ್ಕ ... ಕಷ್ಟವನ್ನು ಪ್ರತ್ಯಕ್ಷ ... ನೋಡಿದವನಿಗೆ ... ಉಂಟುಮಾಡುತ್ತದೆ ... ಗಳಲ್ಲಿ ... ಬೆಳೆ ಬತ್ತಿಹೋಗಿದೆ ... ಬಿತ್ತಿದ್ದನ್ನು ... ಹಾಕಿಕೊಳ್ಳುತ್ತಿದ್ದಾರೆ ... ಜನಗಳಿಗೆ ಅಹಾರ ... ಇವರಿಗೆ ... ಬಹಳ ಸಂಕಟವಾಯಿತು. ಈ ಗ್ರಾಮದಲ್ಲಿ ವಿದ್ಯಾಭಿವೃದ್ಧಿ ಚನ್ನಾಗಿ ನಡೆಯುತ್ತದೆ. ಇವರಲ್ಲಿ ಬಾಲಕಿಯರ ಸ್ಕೂಲು ಈ ... ಆರಂಭದಲ್ಲಿ ಹೊಸದಾಗಿ ಏರ್ಪಡಿಸಿದ್ದು ಈ ಸ್ಕೂಲ್ ಮಾಸ್ತರು ... ನಡತೆ, ಸರಸ ... ಇಲ್ಲ ... ಎಂದಿಗೂ ವಿದ್ಯಾ ... ಹುಡುಗಿಯರನ್ನು ... ಅವರಿಗೂ ಅವರ ತಂದೆ ತಾಯಿಗ ಳಿಗೂ ... ಆಸಕ್ತಿ ಹುಟ್ಟಿಸತಕ್ಕದ್ದು ಶ್ಲಾಘನೀಯವಾಗಿದೆ.

ಕಳೆದ ... ಈ ವರ್ಷಗಳಲ್ಲಿ ಎಂದಿನ ... ಆಗಿನ ಸ್ಥಿತಿಯನ್ನು ... ನಾನು ಚನ್ನಾಗಿ ನೋಡಿದವನಾಗಿದ್ದೇನೆ ... ಈಗಿನ ಕ್ಷಾಮದ ... ನೋಡಿದರೆ ... ಒಂದೇ ರೀತಿ ಕ್ಷಾಮವಿತ್ತು ... ಮನುಷ್ಯನ ಆಹಾರ ... ಅನೇಕ ಸ್ಥಳಗಳಲ್ಲಿ ಬೆಳೆ ... ತಾಲೂಕುಗಳಲ್ಲಿ ಒಂದು ಭಾಗದಲ್ಲಿ ಫಸಲಾಗಿದೆ, ಇನ್ನೊಂದು ಭಾಗದಲ್ಲಿ ಪೂರ್ಣವಾಗಿ ಇಲ್ಲ. ... ಸ್ಥಿತಿ ಹೀಗೆ ಇದ್ದಾಗ್ಯೂ ಎಲ್ಲಾ ಸ್ಥಳದಲ್ಲೂ ಜನರಿಗೆ ಸಿಕ್ಕುತ್ತಾ ... ದನಗಳಿಗೆ ಹುಲ್ಲು ನೀರು ಮಾತ್ರ ಪೂರ್ಣವಾಗಿ ಸಿಕ್ಕುವದಿಲ್ಲ. ಈ ತೊಂದ ರೆಯು ಜನಗಳನ್ನು ಬಹಳ ಬಾಧೆ ಪಡಿಸಿದೆ.

ಪೆನ್ಷನ್ ಆಫೀಸರ್.

ವಿದೇಶ ವರ್ತಮಾನಗಳು.

ಇಟಲಿ ರಾಜ್ಯದ ಮಹಾರಾಣಿಯವರಾದ ಮಾರ್ಗರೆಟ್ ಯವರು ಇಷ್ಟ ರಲ್ಲೇ ಜರ್ಮನಿ ದೇಶಕ್ಕೆ ಹೋಗಿ ಬರುವವರಾಗಿದ್ದಾರೆ.

ಚೀನಾ ರಾಜ್ಯದ ಚಕ್ರವರ್ತಿಯಾಗಿರುವ ಎಳೇ ಮಗುವಿಗೆ ಸಿಡುಬಿನ ಉಪ ದ್ರವ ಪ್ರಾಪ್ತವಾಗಿದೆ ಎಂದು ತಂತಿ ವರ್ತಮಾನ ಬಂದಿದೆ.

ಅಬ್ಸೀನಿಯಾ ರಾಜ್ಯದ ಚಕ್ರವರ್ತಿ ಮೆನೆಲಿಕ್ ಯವರು ಖಾಯಿಲೆಯಾಗಿ ಮರಣ ಹೊಂದುವ ಸ್ಥಿತಿಯಲ್ಲಿದ್ದಾರೆಂದು ವರ್ತಮಾನ ಹುಟ್ಟಿದೆ.

ಲಂಡನ್ ಪಟ್ಟಣದಲ್ಲಿದ್ದು ಕಾಲವಾದ ಲೇಡಿ ಗೋಲ್ಡ್‌ಸ್ಮಿತ್ ಎಂಬಾಕೆ ಯು ತನ್ನ ಆಸ್ತಿಯಲ್ಲಿ ಆರು ಲಕ್ಷ ರೂಪಾಯಿಯನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಉಯಿಲು ಬರೆದಿಟ್ಟಿರುತ್ತಾಳೆ.

ಪರ್ಷಿಯಾ ರಾಜ್ಯದ ಷಾ ಸುಲ್ತಾನರವರು ಪರರಾಜ್ಯಗಳವರ ಅಭಿಪ್ರಾಯ ವನ್ನು ಅಂಗೀಕರಿಸಿ, ಒಬ್ಬ ಯೂರೋಪಿಯನ್ ನಿಪುಣನನ್ನು ತಮ್ಮ ರಾಜ್ಯದ ಖಜಾನಾಧಿಕಾರಿಯಾಗಿ ನೇಮಕಮಾಡಿಕೊಳ್ಳಬೇಕೆಂದು ಗೊತ್ತುಮಾಡಿಕೊಂಡಿದ್ದಾರೆ.

ಲಂಡನ್ ಪಟ್ಟಣದ ಬಾರಿ ವರ್ತಕರ ಕಂಪನಿಯ ಪಾಲುಗಾರನಾಗಿದ್ದು ಗತಿಸಿ ಹೋದ ಮೆ|| ವಾವನಲ್ಲಿನ್ ಎಂಬಾತನು ತನ್ನ ಆಸ್ತಿಯಲ್ಲಿ ೮ ಲಕ್ಷ ರೂಪಾಯಿಯನ್ನು ಧರ್ಮ ಕಾರ್ಯಗಳಿಗೆ ವಿನಿಯೋಗಿಸುವಂತೆ ಉಯಿಲು ಬರೆದಿ ರುತ್ತಾನೆ.

ಹಿಂದೂಸ್ಥಾನದ ವೈಸ್‌ರಾಯಿಯವರ ಎಗ್ಸಿಕ್ಯುಟಿವ್ ಸಭೆಗೆ ಕಲ್ಕತ್ತಾ ಹೈ ಕೋರ್ಟಿನಲ್ಲಿ ಜಡ್ಜಿಯವರಾಗಿರುವ ಮೆ|| ಅಷುತೋಷ್ ಮುಖರ್ಜಿಯವರನ್ನು ಮೆಂಬರಾಗಿ ನೇಮಕ ಮಾಡುತ್ತಾರೆಂದು ಲಂಡನ್ ಪಟ್ಟಣದ "ಡೆಯಿಲಿ ಮೆ ಯಿಲ್" ಎಂಬ ಪತ್ರಿಕೆಯು ಹೇಳುತ್ತದೆ.

ಟರ್ಕಿ ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿ ಗವರ್ನ್‌ಮೆಂಟ್ ಮಿಲಿಟರಿ ವಿದ್ಯಾಶಾಲೆಯೊಳಗೆ ಕೆಲವು ವಿದ್ಯಾರ್ಥಿಗಳು ಅವಿಧೇ ಯರಾದದ್ದರಿಂದ ಆ ಕೃತ್ಯಕ್ಕೆ ಎಂಬತ್ತು ಮಂದಿಯನ್ನು ದಸ್ತಗಿರಿ ಮಾಡಿ, ಸೈನ್ಯ ದ ಇಲಾಖೆಯ ಕೋರ್ಟಿನಲ್ಲಿ ವಿಚಾರಣೆ ಮಾಡುತ್ತಿದ್ದಾರೆ.

ಪರ್ಷಿಯಾ ರಾಜ್ಯಕ್ಕೆ ಸೇರಿದ ಆಸ್ತರಾಬಾದ್‌ನಲ್ಲಿ ಪ್ರಜಾ ಪಕ್ಷದವರು ತಮ್ಮ ಗವರ್ನರವರ ಇಬ್ಬರು ಕುಮಾರರನ್ನು ಕೊಂದುಹಾಕಿ, ಗವರ್ನರವರನ್ನು ಗಾಯಮಾಡಿದ್ದಾರೆ. ಗವರ್ನ್‌ಮೆಂಟಿನವರು ಮಷ್ಹದ್ ಪ್ರಾಂತ್ಯದಿಂದ ಅಲ್ಲಿಗೆ ಸೈನ್ಯವನ್ನೂ ಮದ್ದು ಗುಂಡು ಫಿರಂಗಿಗಳನ್ನೂ ಕಳುಹಿಸಿಕೊಟ್ಟರು.

ಸೋಮಾಲಿಲ್ಯಾಂಡಿನಲ್ಲಿ ಒಬ್ಬ ಸುಲ್ತಾನನು ಮುಲ್ಲಾ ಎಂಬ ಮುಖಂ ಡನನ್ನು ಸಂಧಿಸಿ ಯುದ್ಧಮಾಡಿ ಸೋಲಿಸಿ, ಆತನು ಅಪಹರಿಸಿಕೊಂಡುಹೋ ಗಿದ್ದ ಗೋಕಾಯಿಗಳನ್ನೆಲ್ಲಾ ಹಿಡಿಸಿಕೊಂಡು ಬಂದದ್ದಲ್ಲದೆ ಮುಲ್ಲಾನಿನ ಕಡೆ ಯ ೩೪ ಜನರನ್ನು ಕೈಸೆರೆ ಹಿಡಿದಿರುತ್ತಾನೆಂದೂ, ಈ ಯುದ್ಧದಲ್ಲಿ ಮುಲ್ಲಾ ನಿನ ಹಿಂಬಾಲಕರು ೯೦ ಮಂದಿ ಮೃತಪಟ್ಟರೆಂದೂ ವರ್ತಮಾನ ಬಂದಿದೆ.

ಚೀನಾ ರಾಜ್ಯದಲ್ಲಿ ದೊಡ್ಡ ಹುದ್ದೆದಾರನಾಗಿರುವ ಮೆ|| ಟಾಂಗ್‌ಷಾ ವೋಯಿ ಎಂಬಾತನು ವಿಲಾಯತಿಗೆ ಹೋಗಿ ಇದ್ದನು. ಅಲ್ಲಿನವರು ಆತನನ್ನು ಪ್ರಶ್ನೆಮಾಡಿದಾಗ ಆತನು ಪ್ರತ್ಯುತ್ತರವಾಗಿ - ವಿಲಾಯತಿ, ಫ್ರಾನ್ಸ್, ಜರ್ಮನಿ ಮೊದಲಾದ ರಾಜ್ಯಗಳಲ್ಲಿ ಹುಟ್ಟುವಳಿ ಬಾಬುಗಳನ್ನೂ ಖರ್ಚು ಬಾಬುಗಳನ್ನೂ ಚನ್ನಾಗಿ ತಿಳಿದುಕೊಂಡು ಹೋಗುವುದಕ್ಕೋಸ್ಕರ ಬಂದಿರುತ್ತೇನೆ ಎಂದು ತಿಳಿಸಿದನು.

ಅಮೇರಿಕಕ್ಕೆ ಸೇರಿದ ಪಿಟ್ಸ್‌ಬರ್ಗ್ ಡಿಸ್ಟ್ರಿಕ್ಟಿನಲ್ಲಿ ಬಾಸ್ವೆಲ್ ಎಂಬ ಗಣಿಯೊಳಗೆ ಬೆಂಕಿ ಹುಟ್ಟಿ ಮಹಾ ಶಬ್ದದೊಡನೆ ಹಾರಿದ್ದರಿಂದ ಮೂರು ಮಂದಿ ಕೆಲಸಗಾರರು ಮೃತಪಟ್ಟರು. ಗಣಿಯೊಳಗೆ ಇದ್ದವರನ್ನು ಬದುಕಿಸು ವುದಕ್ಕೆ ಬಹು ಜನರು ಸಾಹಸಪಟ್ಟು ಒಳಕ್ಕೆ ಇಳಿದುಹೋದಾಗ ಗಣಿಯ ಒಂದು ದೊಡ್ಡ ಕಂಬವು ಬಿದ್ದು ಅವರಲ್ಲಿ ಇಪ್ಪತ್ತು ಮಂದಿ ಅದರ ಕೆಳಗೆ ಸಿಕ್ಕಿ ಹೋಗಿದ್ದಾರೆ.

ಅಮೇರಿಕದ ಮುಖ್ಯಪಟ್ಟಣವಾದ ನ್ಯೂಯಾರ್ಕ್ ನಗರದಲ್ಲಿ ಮಿಸ್ ಗ್ರೀನ್‌ಲೀಫ್ ... ಎಂಬ ೨೦ ವರುಷದ ಮಹಾಸುಂದರಿಯು ಕಾಯಿಲೆ ಆಗಿ ಮೃತಪಟ್ಟಳು. ಅವಳ ತಂದೆತಾಯಿಗಳು ಶವವನ್ನು ಹಾಕಿಕೊಂಡು ಒಂದು ದಿನವೆಲ್ಲಾ ಗೋಳಾಡಿ, ಮರುದಿನ ಇನ್ನೊಂದು ಕೊಠಡಿಯಲ್ಲಿ ಕೂತು ವಿಷವನ್ನು ಕುಡಿದು ಇಬ್ಬರೂ ಮೃತಪಟ್ಟರು. ... ತಂದೆ ಬಹು ಪ್ರಸಿದ್ಧ ನಾದ ಪಂಡಿತನಾಗಿದ್ದನು.

ಮದರಾಸ್ ಪಟ್ಟಣದ ಪ್ರೆಸಿಡೆನ್ಸಿ ಕಾಲೇಜು ಎಂಬ ವಿದ್ಯಾಶಾಲೆಯಲ್ಲಿ ಬಹುಕಾಲ ಸಂಸ್ಕೃತ ಪಂಡಿತರಾಗಿದ್ದು ಸೀಮೆಗೆ ಹೋಗಿ ಕಾಲವಾದ ಎಚ್. ಜಿ. ಆಪರ್ಟ್ ಎಂಬ ಜರ್ಮನಿ ಪಂಡಿತನು ವಿಲಾಯತಿಯಲ್ಲಿ ಒಂದೂವರೆ ಲಕ್ಷ ರೂಪಾಯಿನ ಆಸ್ತಿಯನ್ನು ಮಾಡಿರುತ್ತಾನೆ. ಆತನು ತನ್ನ ಮರಣಶಾಸನದಲ್ಲಿ ಬರೆದಿರುವುದೇನೆಂದರೆ—ನನ್ನ ಎರಡು ಬೆಕ್ಕುಗಳಿಗೂ ಪ್ರತಿದಿನವೂ ಆಹಾರ ಮುಂತಾದದ್ದನ್ನು ಕೊಟ್ಟು ಚನ್ನಾಗಿ ಸಾಕುವುದಕ್ಕೆ ನನ್ನ ಆಸ್ತಿಯಲ್ಲಿ ದಿನಕ್ಕೆ ೧೮ ಆಣೆಯಂತೆ ವಿಚಾರದ ದಹೇಕು. ಸಂಸ್ಕೃತ ವಿದ್ಯೆಯನ್ನು ಕಲಿಸುವುದಕ್ಕೆ ನನ್ನ ಆಸ್ತಿಯಿಂದ ಹಣ ಕೊಡಬೇಕು. ನಾನು ಸತ್ತ ಮೇಲೆ ನನ್ನ ಶವವನ್ನು ಶಸ್ತ್ರ ... ಹೋಗಿರುವುದನ್ನು ಪರೀಕ್ಷೆಯಿಂದ ಗೊತ್ತುಮಾಡಿ ಅನಂತರ ದಹನ ಮಾಡಬೇಕು ಎಂಬುದೇ.

ಮುಫತ್ತಾಗಿ ಕ್ಯಾಲೆಂಡರು.

19 1

ಬೆಂಗಳೂರು ಸಿಟಿ ದಿ ಸ್ಟಾರ್ ಟ್ರೇಡಿಂಗ್ ಅಸೋಸಿಯೇಷನ್‌ಯವರು ಅಂದವಾಗಿ ಪ್ರಿಂಟುಮಾಡಿಸಿರುವ ೧೯೦೯ ನೇ ಇಸವಿಯ ಕ್ಯಾಲೆಂಡರನ್ನು ಅರ್ಧಾಣೆ ಪೋಸ್ಟೇಜ್ ಸ್ಟಾಂಪು ಕಳುಹಿಸಿ ಕೇಳುವ ಪ್ರತಿ ಒಬ್ಬರಿಗೂ ಮುಫ ತ್ತಾಗಿ ಕಳುಹಿಸುವರು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂ ದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿ ನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತ ವಾಗಿಯೋ ಬಿಸುವಾಗಿಯೋ ಇಳಿಯುವುದು; ಬಿಡದ ಬಾಯಾರಿಕೆ, ಬಳಲಿಕೆ; ಎದೆ ಕಲ್ಲಿಸುವುದು, ತಲೆನೋವು, ಗಾಬರಿ, ಕಣ್ಣು ನೋವು; ತಲೆ ತಿರುಗುವಿಕೆ; ಮೈನೋವು ಕೀಲುನೋವು, ಮರವು, ನಿತ್ರಾಣ; ಇವೇ ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋ ಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂ ದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-23]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೦—೦; ಅಥವಾ ೬ ಬುದ್ದಿಗಳಿಗೆ ರೂ. ೧೦—೮—೦. ಔಷಧ ಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೨೦, ಪಿ. ೬ ಬಾಕ್ಸ್, ಬೊಂಬಾಯಿ.—ಇವರಲ್ಲಿ ದೊರೆಯುವುದು.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 1

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂ ಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋ ಗುವದಿಲ್ಲ. ಕ್ರಯ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾ ದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೬|| ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯ ಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್.

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಲಾ ಪ್ರಕಟನಗಳು.

ವ್ಯವಹಾರನಿರ್ಣಯ—ಪುಟಗಳು ೫೪೫ ... ಮಹಮದೀಯ ಲಾಗಳು, ೨೯ ಕಾನೂನುಗಳು ಇವುಗಳ ಸಂಗ್ರಹವೂ, ೯೨ ದಸ್ತಾವೇಜು, ೪೩ ಅರ್ಜಿ ಇವುಗಳ ನಮೂನೆಗಳೂ ಉಳ್ಳ ಕನ್ನಡದ ಲಾ ಪುಸ್ತಕ. ಕ್ರಯ ವಿ. ಪಿ. ಸೇರಿ ೧ ರೂ ೧೨ ಆಣೆ [40-11]

ಕನ್ನಡ ಲಾ ರಿಪೋರ್ಟ್—ಪ್ರಿವಿ ಕೌನ್ಸಿಲ್, ಹೈ ಕೋರ್ಟ್, ಚೀಫ್ ಕೋರ್ಟ್ ತೀರ್ಪುಗಳು ಕನ್ನಡಕ್ಕೆ ಸಂಗ್ರಹಿಸಲ್ಪಟ್ಟಿರುವ ಈ ಮಾಸ ಪತ್ರಿಕೆಯು ತಿಂಗಳಿಗೊಮ್ಮೆ ಹೊರಡುತ್ತದೆ. ವರ್ಷದ ಚಂದಾ ರೂ ೧—೦—೦ ಮುಂಗಡ, ವಿ. ಪಿ. ಬಿಡಿಪತ್ರಿಕೆ ೧ ಕ್ಕೆ ೦—೨—೦

ಇವುಗಳನ್ನಪೇಕ್ಷಿಸುವವರು—... ಎಂ. ಮಲ್ಲಾರಾಧ್ಯರು, ಫಸ್ಟ್ ಗ್ರೇಡ್ ಪ್ಲೀಡರ್, (೯೦) ೨ ನೇ ರೋಡ್, ಚಾಮರಾಜ ಪೇಟೆ, ಬೆಂಗಳೂರು ಸಿಟಿ.— ಈ ವಿಳಾಸಕ್ಕೆ ಬರೆಯುವುದು.

ನೋಡಿರಿ "ಪ್ರೋತ್ಸಾಹಕೊಡಿರಿ" ತರಿಸಿರಿ.

98 11

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ. ೫,೦೦೦ ಹಾಸನ ಟೋಪಿ ಹೊಲೆಯುವ (ಪೇರುವಾ) ಸುಪೀರಿಯರ್ ಉಲ್ಲನ್.

೮ ಅಡಿಗಳಿರುವ ಪೇರುವಾ ಉಲ್ಲನ್ ಬಂಡಲ್ ೧ ಕ್ಕೆ ರೂ ೩-೦-೦
೧೦ ಟೋಪಿಯಾಗುವ ಸುಪೀರಿಯರ್ ಉಲ್ಲನ್ ಬಂಡಲ್ ೧ ಕ್ಕೆ ರೂ ೪-೭-೦
೧ ಟೋಪಿ ಉಲ್ಲನ್ ದಾರಕ್ಕೆ (ಸುಪೀರಿಯರ್) ರೂ. ೦ ೮ ೦
ಹಾಸನ ಟೋಪಿ ಹಾಕುವ ಕೊಕ್ಕೆ ಸೂಜಿ ೧ ಕ್ಕೆ ೦-೨-೦, ೦-೧-೬
(ಪೇರುವಾ) ಉಲ್ಲನ್ ದಾರದಲ್ಲಿ ತಯಾರಾದ ಟೋಪಿ ಡಜನ್‌ಗೆ ರೂ ೧೮-೦-೦

ಪೇರುವಾ ಎಂಬ ಉಲ್ಲನ್ ದಾರಗಳು ನಮಗಾಗಿಯೇ ತರಿಸಿದ್ದರಿಂದ ಬೇರೆ ಲ್ಲಿಯೂ ದೊರೆಯದು. ಈ ಉಲ್ಲನ್ ದಾರಕ್ಕೆ ಗಿರಾಕಿಗಳು ಜಾಸ್ತಿ ಇರುವದ ರಿಂದ ಒಂದು ಬಂಡಲ್ ಆದರೂ ಪೇರುವಾ ಉಲ್ಲನ್ ತರಿಸಿ ನೋಡಿರಿ.

ಈ ನಮ್ಮಲ್ಲಿ ಬೇರೆ ಒಂದು ಡಿಪಾರ್ಟ್‌ಮೆಂಟು ಓಪನ್ ಮಾಡಿದೇವೆ. ಅಂದರೆ ಮಂಗಳೂರಲ್ಲಿ ದೊರೆಯುವ ಸಾಮಾನುಗಳು ಪರಸ್ಥಳದವರಿಗೆ ಯಾವದು ಬೇಕಾದರೂ ಬವಳಸಿಯಿಂದ ಪಡೆದು ಪರಸ್ಥಳದವರಿಗೆ ಕಳುಹಿಸುವನೇ ... ಕಮಿಷನ್ ರೂ ೩-೪-೦ ಪರಸ್ಥಳದವರಿಗೆ ವಿ. ಪಿ ಯಿಂದಲೂ ಸಾಮಾನು ... ಕೇಟಲಾಗನ್ನು ಕೇಳುವವರಿಗೆ ರವಾನಿಸುತ್ತೇವೆ. ನಮ್ಮ ವಿಳಾಸ —

ದಿ ಉಲ್ಲನ್ ಮಾರ್ಟ್, ಮಂಗಳೂರು.

THE PLACE FOR HASSAN CAPS IS
HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

14

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

1¥ b. ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಸರಬರಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆ ಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ತಿಳಿದುಕೊಂ ಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರ ವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾ ಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾ ಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾ ದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ,
೧ ರೂ ೬ ಆ, ೧ ರೂ ೪ ಆ
ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ. ೮ ಆ. ; ೨ ರೂ
ದಾಂಡ ಟೋಪಿಗಳು ೧ ರೂ ೧೨ ಆ, ೧ ರೂ. ೮ ಆ. ; ೧ ರೂ. ೬ ಆ.
ಉಸುಕಿನ ಟೋಪಿಗಳು ೧ ರೂ ೮ ಆ., ೧ ರೂ. ೬ ಆ ;

ಕೂಸುಗಳ ಟೋಪಿ, ಸೂಥಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಇಪ್ಪತ್ತು ವರ್ಷದ ಕಾಯಿಲೆ, ಬದುಕುವೆನೆಂಬ ಆಶೆಯೇ ಇರಲಿಲ್ಲ.

75

ಯಾವ ಔಷಧವೂ ಗುಣಕೊಡಲಿಲ್ಲ. ಪೆರೂನಾ ವಾಸಿಮಾಡಿತು.

ದೇಹದೊಳಗಿನ ಶೈತ್ಯ

ಅನೇಕ ರೋಗಿಗಳು ಪರೀಕ್ಷೆಯಾಗಿರುವ ತರಗತಿಯಲ್ಲಿ ಶೈತ್ಯದಿಂದ ಬಹಳವಾಗಿ ದುರ್ಬಲತೊಂದಿ ಕೊರಗುತ್ತಿದ್ದಾರೆ. ಇದರಿಂದಾಗುವಷ್ಟು ಕೇಡುಗಳು ಇನ್ನಾವ ರೋಗದಿಂದಲೂ ಉಂಟಾಗದು. ಶ್ವಾಸಕೋಶ ಜಾಗದಲ್ಲಿ ವಿಶೇಷ ನಿಶಕ್ತಿ, ಕಷ್ಟಕರವಾದ ನರಳುವಿಕೆ, ಎದೆಬಿರಿದ ದುರ್ಬಲ ಇವೆಲ್ಲಾ ಉಂಟಾಗುತ್ತವೆ. ಈ ತರಹಾ ರೋಗಗಳು ಸಾವಿರಾರು ಮಂದಿ ಕ್ರಮೇಣ ಒಬ್ಬೊಬ್ಬರಾಗಿ ಪೆರೂನಾ ವಾಸಿಮಾಡಬಲ್ಲ ಔಷಧವೆಂದು ಕಂಡುಕೊಂಡಿದ್ದಾರೆ. ಒಬ್ಬನು ಇನ್ನೊಬ್ಬನಿಗೆ ಹೇಳುವನು. ಈ ಪ್ರಕಾರ ಈ ಸುದ್ದಿಯು ಎಲ್ಲಾ ಕಡೆಗಳಿಗೂ ಹರಡಿಕೊಂಡು ದೇಹದ ಅಂತರ್ಗತವಾದ ಶೈತ್ಯವನ್ನು ಶಾಶ್ವತವಾಗಿ ನಿವಾರಣೆ ಮಾಡುವದಕ್ಕೆ ಇದು ಉತ್ತಮೋತ್ತಮವಾದ ಔಷಧವೆಂದು ಅನುಭವಪೂರ್ವಕವಾಗಿ ಗೊತ್ತಾದಂಥಾ ಜನರು ಹೇರಳವಾಗಿರುತ್ತಾರೆ. ಅನೇಕ ಜನರು ಅನ್ನಕೋಶ, ಮೂತ್ರಕೋಶ, ಇತರ ಕೋಶಗಳಲ್ಲಿ ಉಂಟಾಗಿದ್ದ ಶೈತ್ಯರೋಗವನ್ನು ಸಂಪೂರ್ಣವಾಗಿ ನಿವಾರಣೆ ಮಾಡಿದೆ ಎಂದು ಕೃತಜ್ಞತೆಯಾಗಿ ಬರೆದು ತಿಳಿಸಿರುವರು. ಅಂಥಾ ರೋಗಿಗಳಿಗೆ ಪೆರೂನಾದಿಂದ ಉಂಟಾದ ಗುಣವನ್ನು ಕೆಳಗೆ ಅವರು ಬರೆದಿರುವ ಮಾತನ್ನು ಕೆಳಗೆ ತಿಳಿಸುತ್ತೇವೆ.

MR. ABNER N. KEEP



MR. SIDNEY WESSELS

ಆಹಾರ ರುಚಿಸುತ್ತಿದೆ

ಮಿ ಸಿಡ್ನಿ ವೆಸ್ಸಲ್ಸ್, ಪೆಂಬ್ರೋಕ್ ಒಂಟೇರಿಯೋ ಕ್ಯಾನಡ ಈತ ಬರೆಯುವುದು —

ನನಗೆ ಇಪ್ಪತ್ತು ವರುಷದ ತನಕ ಅಜೀರ್ಣರೋಗವಿತ್ತು. ಇದರಿಂದ ನಾನು ಬಹಳ ಕಷ್ಟಪಟ್ಟೆನು. ಹಲವು ಮಂದಿ ಡಾಕ್ಟರುಗಳು ಚಿಕಿತ್ಸೆ ಮಾಡಿದರೂ ಅದು ನನಗೆ ಸಂಪೂರ್ಣ ಗುಣಕೊಡಲಿಲ್ಲ.

ಕೆಲವು ವಾರಗಳಲ್ಲಿ ನಾನು ಕೆಲಸ ಬಿಟ್ಟು ಮನೆಯಲ್ಲಿ ಮಲಗಿರುತ್ತಿದ್ದೆನು. ಬಾಧೆ ಹೆಚ್ಚಾಗಿದ್ದದರಿಂದ ಹಾಲು ಮಾತ್ರ ಕುಡಿಯುತ್ತಿದ್ದೆನು. ಏನು ತಿಂದರೂ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ.

ನನಗೆ ವಾಸಿಯಾಗುವುದಿಲ್ಲವೆಂದು ನಿರಾಶೆಯುಂಟಾಗುವಂತಾಯಿತು. ಆಗ ಪೆರೂನಾ ವಿಷಯ ತಿಳಿಯಿತು. ಅದನ್ನು ಸೇವಿಸಿನೋಡೋಣವೆಂದು ಗೊತ್ತುಮಾಡಿದೆನು.

ಒಂದು ಬಾಟ್ಲಿ ಸೇವಿಸುವಷ್ಟರಲ್ಲೇ ತುಂಬಾ ಅನುಕೂಲವಾಯಿತು. ಈ ಆಶ್ಚರ್ಯಕರವಾದ ಔಷಧವನ್ನು ಇನ್ನೊಂದು ಬಾಟ್ಲಿ ಸೇವಿಸಿದೆನು. ಆಗ ನನ್ನ ಹೊಟ್ಟೆ ನೋವು ನಿವಾರಣೆಯಾಗಿ ನಾಲಿಗೆ ರುಚಿಯುಳ್ಳದ್ದು, ಸಂತೋಷವಾಗಿ ಊಟ ಮಾಡುವಂತಾಯಿತು. ಈ ಪ್ರಪಂಚದಲ್ಲಿ ಪೆರೂನಾ ಒಂದು ಶ್ರೇಷ್ಠವಾದ ಔಷಧವೆಂದು ನಾನು ನಂಬಿರುತ್ತೇನೆ.

ಮಿ ರಾಬರ್ಟ್ ಇ ಡರ್ಕ್ ಟ್ರಜರರ್ ಸ್ಟೇಟ್ಸ್ ಆಫ್ ಇಂಡಸ್ಟ್ರಿಯಲ್ ಫ್ರೀಡಂ ಮತ್ತು ಪ್ರಸಿದ್ಧ ಶೀಯಿಕರೂ ಉಪನ್ಯಾಸಕರೂ, ಈತನು ೧೧ ಎಸ್ ಲಿಂಕನ್ ಬೀದಿ, ಷಿಕಾಗೋದಿಂದ ಬರೆಯುವುದು —

ನಾಲ್ಕು ವರುಷಗಳ ಹಿಂದೆ ನನ್ನ ಮೂತ್ರಕೋಶದಲ್ಲಿ ಬಾಧೆಯುಂಟಾಯಿತು. ಕ್ರಮೇಣ ನೋವು ಹೆಚ್ಚುತ್ತಾ ಬಂತು. ಛಳುಕು ಹುಟ್ಟಿತು. ಮೂತ್ರದ ಬಣ್ಣ ಬದಲಾಯಿತು. ಕ್ರಮ ತಪ್ಪಿ ಜಲಬಾಧೆ ಆಗಲಾರಂಭಿಸಿತು.

ಮೂತ್ರಕೋಶವು ಕೆಟ್ಟದ್ದರಿಂದ ಹೀಗಾಗಿದೆ ಎಂದು ನನಗೆ ಗೊತ್ತಾಯಿತು.

ಪೆರೂನಾ ವಿಷಯವನ್ನು ಓದಿ ಅದನ್ನು ಸೇವಿಸಬೇಕೆಂದು ಗೊತ್ತುಮಾಡಿಕೊಂಡೆನು. ಹತ್ತು ದಿನಗಳೊಳಗೆ ನನಗೆ ಗುಣ ಕಂಡಿತು. ಛಳುಕು ಕ್ರಮೇಣ ಕಡಮೆಯಾಯಿತು. ನನ್ನ ಸಂತೋಷವನ್ನು ಅಳತೆಯಿಂದು ವಿವರಿಸಲಾರೆನು.

ಮೂರು ತಿಂಗಳಾಗುವಷ್ಟರೊಳಗೆ ನನಗೆ ತುಂಬಾ ಸೌಖ್ಯವಾಯಿತು. ಆಹಾರವು ರುಚಿಸುತ್ತದೆ. ನನ್ನಲ್ಲಿದ್ದ ನಡುಕವೂ ಬಿಟ್ಟಿತು. ಸ್ವಲ್ಪವೂ ಬೇರೆ ಯಾವದೂ ಎರಡು ವರುಷಗಳಿಂದಲೂ ಆರೋಗ್ಯ ಸ್ಥಿತಿಯುಳ್ಳವನಾಗಿರುತ್ತೇನೆ.

ಮುಕ್ತಿ ಪ್ರಾಯ ಬಂದಿದೆ

ಮಿ ಅಬ್ನೇರ್ ಎನ್ ಕೀಪ್ ವೆಲ್ಲಂಡ್ ಒಂಟೇರಿಯೋ ಕ್ಯಾನಡ ಈತ ಬರೆಯುವುದು —

ನಾನು ಶೈತ್ಯರೋಗದಿಂದ ಇಪ್ಪತ್ತು ವರುಷಗಳಿಗಿಂತಲೂ ಹೆಚ್ಚಾಗಿ ನರಳಿದೆನು. ಕೇಳಿದ ಔಷಧಗಳನ್ನೆಲ್ಲಾ ಮಾಡಿದೆನು. ಫಿಲಡೆಲ್ಫಿಯಾ, ಬಫೆಲೋ, ನೆಬ್ರಾಸ್ಕಾ ಈ ಮೊದಲಾದ ಸ್ಥಳಗಳ ಪ್ರಸಿದ್ಧ ವೈದ್ಯರುಗಳು ಹೇಳಿದ ಚಿಕಿತ್ಸೆಯನ್ನೆಲ್ಲಾ ಮಾಡಿಕೊಂಡೆನು. ಆದರೆ ಯಾವ ಯಾವ ಔಷದದಿಂದಲೂ ಚಿಕಿತ್ಸೆಯಿಂದಲೂ ನನಗೆ ಗುಣವಾಗಲಿಲ್ಲ.

ಕಡೆಗೆ ನನ್ನ ಆರೋಗ್ಯವು ಕೆಟ್ಟುಹೋಗಿ ಕೈಲಿದ್ದ ಹಣವೆಲ್ಲಾ ಮುಗಿದುಹೋಗಿ ಪೆರೂನಾ ಸೇವಿಸಿ ನೋಡೋಣವೆಂದು ನಿಶ್ಚಯಿಸಿದೆನು. ಆಗ್ಗೆ ಈ ದೇಶಕ್ಕೆ ಬಂದು ಎರಡು ವರುಷಗಳಾಗಿದ್ದವು.

ಒಂದು ಬಾಟ್ಲಿ ಪೆರೂನಾ ಗುಣಕೊಟ್ಟಿತು. ಐದು ಬಾಟ್ಲಿ ಸೇವಿಸುವಷ್ಟರಲ್ಲಿ ನಾನು ಪೂರಾ ಗುಣಹೊಂದಿದೆನು.

ನನಗೆ ಎಂಬತ್ತೆರಡು ವರುಷವಾಯಿತು. ಈಗ ನೋಡಿದರೆ ಮೂವತ್ತು ವರುಷದವನ ಶಕ್ತಿ ನನಗೆ ಬಲವಿಕೆಯೂ ಆರೋಗ್ಯವೂ ಉಂಟಾಗಿದೆ.

ಸಾವಧಾನವಾಗಿ ಯೋಚಿಸಿ ಸಂತೋಷದಿಂದಲೂ ಕೃತಜ್ಞತೆಯಿಂದಲೂ ಈ ಕಾಗದವನ್ನು ಬರೆದಿರುತ್ತೇನೆ. ಏಕೆಂದರೆ ಈ ದೇಶದಲ್ಲಿ ರೋಗದಲ್ಲಿ ನರಳುತ್ತಿರುವವರೆಲ್ಲಾ ಡಾಕ್ಟರಿಗೆ ಕೊಟ್ಟು ಬರಿಗೈ ಮಾಡಿಕೊಳ್ಳುವವರು ನನ್ನ ಹಾಗೆ ಅನೇಕರಿರುತ್ತಾರೆ.

ಮೆ|| ಎಚ್ ಎಚ್, ಇವೊರಿ ವೈಸ್ ಚಾನ್ಸಲರ್ ಡಾಕ್ಟರ್ ಆಫ್ ಆನರ್ಸ್, ಕೆ ಪಿ ಒಮಾಹಾ, ನೆಬ್ರಾಸ್ಕ ಈತನು ೨೦೧೫ ಎನ್ ಪದಿನಾರನೇ ಬೀದಿಯಿಂದ ಪೆರೂನಾವು ಬಲಕಾರಿಯಾದ ಶ್ರೇಷ್ಠ ಔಷಧವೆಂದು ಹೀಗೆ ಬರೆಯುವದೇನೆಂದರೆ —

ಪೆರೂನಾವಿನ ಗುಣವು ಆಶ್ಚರ್ಯಕರವಾದದ್ದು. ಬಲಕಾರಿಯಾದ ಔಷಧವೆಂದು ಬಹಳ ಸಂತೋಷದಿಂದ ಹೇಳುತ್ತೇನೆ. ನನ್ನ ಜೊತೆಯಲ್ಲಿ ನೌಕರಿ ಮಾಡುತ್ತಿರುವವರ ಪೈಕಿ ಅನೇಕಾನೇಕರು ಅನ್ನಕೋಶದಲ್ಲೂ ನೆತ್ತಿಯಲ್ಲೂ ಶೈತ್ಯದಿಂದ ಬಹಳ ಕಷ್ಟಪಡುತ್ತಿದ್ದು, ಈ ಔಷಧವನ್ನು ಸೇವಿಸಿ ಚನ್ನಾಗಿ ಗುಣ ಹೊಂದಿದಾರೆ.

ಪೆರೂನಾ ಶರೀರ ಧರ್ಮವನ್ನು ಕ್ರಮಪಡಿಸಿ ಬಲಕೊಡುತ್ತದೆ. ಜೀರ್ಣಕಾರಿಯಾದದ್ದು, ಸುಖನಿದ್ರೆಯನ್ನು ಕೊಡುವುದು. ರೋಗಿಗಳೆಲ್ಲಾ ಇದರ ಸೇವನೆಯಿಂದ ಸುಖ ಹೊಂದಬಹುದಾಗಿದೆ.

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದವು ಇವರಿಂದಲೇ ತಿಳಿಯಬಹುದು

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ.—

ಮೆಸ್ಸರ್ಸ್ ಹಿಚ್‍ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

15—1—1909 ರಿಂದ 22—1—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	12	10	0	0
ಮೈಸೂರು ,,	1	1	0	0
ಬೆಂಗಳೂರು ಡಿಸ್ಟ್ರಿಕ್ಟು	4	1	0	0
ಮೈಸೂರು ,,	[illegible]	28	0	0
ಕೋಲಾರ್ ,,	9	7	2	1
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	8	6	5	2
ಹಾಸನ ,,	1	4	0	0
ಚಿತ್ರದುರ್ಗ ,,	5	3	0	0
ಕಡೂರ್ ,,	5	1	15	12
ಶಿವಮೊಗ್ಗಾ ,,	0	0	3	2
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	88	66	25	17

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಮಾಘ ಶುದ್ಧ ಚತುರ್ದಶಿ ಗುರುವಾರದಿಂದ ಮಾಘ ಬಹುಳ ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಫೆಬ್ರವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾಸದ ತಾರೀ
4	ಗುರು *	ಚತುರ್ದಶಿ	10 30	ಪು	11 28	23
5	ಶುಕ್ರ ‡	ಪೌರ್ಣಮಿ	11 11	ಶ್ಲೇ	10 11	24
6	ಶನಿವಾ †	ಪಾಡ್ಯಮಿ	[illegible]	ಮ	50 12	25
7	ರವಿವಾ §	ಬಿದಿಗೆ	[illegible] 38	ಪೂ	[illegible]	26
8	ಚಂದ್ರ	ತದಿಗೆ	25 [illegible]	ಉ	[illegible]	27
9	ಕುಜ	ಚೌತಿ	31 1	ಉ	[illegible] 28	28
10	ಬುಧ	ಪಂಚಮಿ	18 10	ಹ	11 30	29

* ತ್ರಿನೇತ್ರೇಶ್ವರ ಮಹೋತ್ಸವ ‡ ಮಾಘಸ್ನಾನ ಸಮಾಪ್ತಿ, ವ್ಯತೀಪಾತ ಯೋಗ

† ಶೂನ್ಯತಿಥಿ

§ ಉತ್ತನಹಳ್ಳಿ ಜಾತ್ರೆ, ಮಾರೀಸಾದು

ಸಂಕಷ್ಟಚತುರ್ಥಿ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೫ ೨ ೦	೧೯ ೮ ೮
ಕೆಂಬೂತಿ ಅಕ್ಕಿ ಅವಲ್		೧೬ ೦ ೦	೧೮ ೮ ೦
,, ಮುಂ		೧೫ ೨ ೦	೧೨ ೦ ೦
ಜಾಪ್ರಾಗೆ ಅಕ್ಕಿ		೧೫ ೧೨ ೦	೧೯ ೦ ೦
ಸಣ್ಣಕ್ಕಿ ಅವಲ್		೧೨ ೦ ೦	೨೦ ೦ ೦
,, ಮುಂ		೧೭ ೨ ೦	೧೨ ೮ ೦
ತೊಗರಿ ಬೇಳೆ ಪಲ್ಲಾ ೧ ಕ್ಕೆ		೧೬ ೮ ೦	೧೭ ೮ ೦
,, ಮುಂ		೧೬ ೦ ೦	೧೭ ೦ ೦
ಹೆಸರು ರಾಗಿ ಪಲ್ಲಾ ೧ ಕ್ಕೆ		೧೦ ೨ ೦	೧೦ ೦ ೦
ಕಾರ್ರಾಗಿ		೧೦ ೦ ೦	೯ ೮ ೦
ಜೋಳ		೯ ೨ ೦	೯ ೧೨ ೦
ಹಲಸಂದೆ ಪಲ್ಲಾ ೧ ಕ್ಕೆ		೧೩ ೪ ೦	೧೨ ೮ ೦
ಬೇಳೆ ಅವರೆ		೧೦ ೦ ೦	೧೨ ೦ ೦
ಹೆಸರು		೧೨ ೮ ೦	೧೪ ೦ ೦
ಉದ್ದು		೧೬ ೬ ೦	೧೩ ೪ ೦
ಕಡಲೆ		೧೨ ೦ ೦	೧೩ ೮ ೦
ಎಳ್ಳು ಸೇ ೧೨೭ ಕ್ಕೆ		೨೧ ೦ ೦	೨೦ ೮ ೦
ಹುರುಳಿ		೧೦ ೨ ೦	೧೧ ೮ ೦
ಹರಳು ೧೨೭ ಸೇರಿಗೆ		೧೦ ೨ ೦	೧೦ ೦ ೦
ಸೀಗೇಕಾಯಿ ಮಣ ೧ ಕ್ಕೆ		೧ ೮ ೦	೧ ೫ ೦
ಮೆಣಸಿನಕಾಯಿ		೬ ೦ ೦	೪ ೦ ೦
,, ದುಂಡು		೫ ೮ ೦	೩ ೮ ೦
ಬೆಲ್ಲ ದೊಡ್ಡ ಅಚ್ಚು		೬ ೦ ೦	ಮ ೧ ೧೦ ೦
ಒಳ್ಳೆಣ್ಣೆ ಮಣ ೧ ಕ್ಕೆ		೫ ೧೨ ೦	೫ ೦ ೦
ಹರಳೆಣ್ಣೆ ,,		೪ ೮ ೦	೪ ೦ ೦
ಕೊತ್ತುಂಬರಿ ಪಲ್ಲಾ ೧ ಕ್ಕೆ		೬ ೪ ೦	೬ ೧೨ ೦
ಉಪ್ಪು		೬ ೦ ೦	೫ ೬ ೦
ಹುಣಸೇ ಹಣ್ಣು		೧ ೮ ೦	೧ ೪ ೦
,, ಹಳೇದು		೧ ೪ ೦	೧ ೪ ೦
ತುಪ್ಪ ಮಣ ೧ ಕ್ಕೆ		೧೪ ೮ ೦	೧೫ ೦ ೦
ಸೀಮೆಯೆಣ್ಣೆ ಪೆಟ್ಟಿ ೧ ಕ್ಕೆ		೫ ೦ ೦	೪ ೦ ೦
ತೆಂಗಿನಕಾಯಿ ೧೦೦ ಕ್ಕೆ		೪ ೨ ೦	೪ ೧೨ ೦
ಅಡಿಕೆಕಾಯಿ ಮಣ ೧ ಕ್ಕೆ		೦ ೧೨ ೦	೧೦ ೦
ಅಂಟ್ವಾಳದ ಕಾಯಿ ಮಣ ೧ ಕ್ಕೆ		೦ ೧೪ ೦	೦ ೧೫ ೦
ಚಿನ್ನ (ಪೌನ್) ಕೆಂಪು		೧೫ ೭ ೦	೧೫ ೭ ೦
,, ,, ಪವನ್		೧೫ ೧೯ ೦	೧೫ ೧೧ ೦
,, ,, ಗಟ್ಟಿ ತೊಲ ೧ ಕ್ಕೆ		೨೪ ೧೦ ೦	೨೪ ೬ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೦ ೦	೬೫ ೦ ೦

Printed and Published by the Rev E W Thompson, M A, Proprietor and Manager, Wesleyan Mission Press, Mysore 4/2/1909

REGISTERED
M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸ ೧೯೧೯ ನೇ ಇಸವಿ ಫೆಬ್ರವರಿ ತಾರೀಖು ೧೧ ನೇ ಗುರುವಾರ. ಸಂಚಿಕೆ ೩೭

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

16 52

೧ ಲೋಕಾಮಯಹರ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು ಮೈ ಕೈ ಕಾಲು ಕೊಡತ (ಭಾರ), ಮೈ ನಡುಕ, ಶೀ ವಾತಗಳ ಬಾಧೆ ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ ಶ್ಲೇಷ್ಮ ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಒದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ ... ಎರ ಕುತುಕಿಲಿ ಮಕ್ಕಳ ಎಸೆವು, ಜ್ವರ ಅತಿಸಾರ, ಕ್ಷಯವ್ಯಾಧಿಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇವನ್ನು ... ಮತ್ತೆ ರುಚಿವರು ... ಶೀತವಾಗಿಯೂ ಪ್ಲೇಗಿನ ಸೋಂಕಿಗ ಗುರಿಯಾಗುವುದಿಲ್ಲ ಒಳ್ಳೆ ಬಲವರ್ಧಕವಾಗಿದೆ

ಅನುಪಾನವು ಚೀಟಿಯ ಸಂಗಡವೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ರೂಪಾಯಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಜ್ವ ರ ಹ ರಿ

18 2



ಇದು ಸಾಧಾರಣ ಜ್ವರ ಹಳೇಜ್ವರ ಮರೇಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ ಚಳಿಬಿಡುವವು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ... ಸರ್ ... ಟ ... ವೆ ಕಟಪತಿ ಅಯ್ಯರವರು—ನೀವು ಕಳುಹಿಸಿ ... ಗಳ ಹಿಂದೆ ಕಳುಹಿಸಿ ಕೊಟ್ಟ ... ಜ್ವರಹರಿ ... ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲಿ ನಿಮ್ಮ ಔಷಧಿಯಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇಲ್ಲಿ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ... ಸೀಸೆ ... ಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೬ ಆಣೆ, ೧ ರೂ ... ೧—೨ ರೂ ... ರೂ ೨—೧೨ ಆ ... ೧೧ ರೂ ... ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಾಸಿ ಬಿಡಲಾಗುವದು

ಓ ಮ ಂ ಕ ರ್ಪೂ ರ

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ರಕ್ತಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳ ಬಹಿಷ್ಠರಾಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವರವು , ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ ಅಜೀರ್ಣಭೇದಿ, ಅಜೀರ್ಣ ರೋಗಸ್ಥರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಔಷಧ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅಲ್ಲದೆ ಕೆಳಗಿನ ವಿಳಾಸದಿಂದ್ರ ... ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

AMRUTANJAN DEPOT, 16 OAK-LANE, BOMBAY. [17-51]

ಅಮೃತಾಂಜನ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ಬಿಟ್ಟುಗಂಟುನೋವು, ಎದೆಶೀತ, ಘಾಯ, ಜಖಮು, ಮೂಲವ್ಯಾಧಿ, ಇವೇ ಮೊದಲಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತಿಳಿಯಲು ಯೋಗ್ಯವಾದ ಸಂಗತಿಯಾಗಿರುತ್ತದೆ ಇದು ಚರ್ಮದ ಮೂಲಕ ಮಾಂಸವನ್ನು ಪ್ರವೇಶಿಸಿ, ಕೊಳಕು ಪದಾರ್ಥಗಳಿಂದ ಹುಟ್ಟಿದ ನಾನಾ ತರದ ವೇದನೆಗಳನ್ನು ನಾಶಪಡಿಸುತ್ತದೆ ಬಾಟ್ಲಿ ಒಂದರ ಕಿಮ್ಮತ್ತು ೦—೮—೦ ಪೋಸ್ಟು ಖರ್ಚು ೦—೪—೦ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಕಪ್ ಇನಾಮು ಆರ್ ಆರ್ ಗಂಗೋಳಿ ... ಕ್ಲಾಸ್ ಸಬ್ ಜಡ್ಜ್ ಕಾರವಾರ,—ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ ಕೆಮ್ಮಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣ ತುರಿ ಕಜ್ಜಿ ನಾಶವಾಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಡಬ್ಬಿ ೧ಕ್ಕೆ ೦—೬—೦ ವಿ ಪಿ ಖರ್ಚು ೦—೪—೦

ದಂತಮಂಜನ—ಡಬ್ಬಿ ೨ ಆಣೆ ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ, ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ ಹಲ್ಲುಗಳು ಘಟ್ಟಿಯಾಗುತ್ತವೆ ಹಲ್ಲುಗಳು ಬೆಳ್ಳಗಾಗುತ್ತವೆ

ಕಜ್ಜಿ ಮುಲಾಮು ಡಬ್ಬಿ ೧ ಕ್ಕೆ ಕಿಮ್ಮತ್ತು ೩ ಆಣೆ

ಕೇಶವರ್ಧನಿ—ಚಲೋ ಪರಿಮಳ ಉಳ್ಳದ್ದು

ಕೇಶವರ್ಧನಿ—ಮನಶ್ಶುದ್ಧಿ ಮಾಡುವದು

ಕೇಶವರ್ಧನಿ—ಕೂದಲನ್ನು ಸಮಮಾಡುವದು ಬಾಟ್ಲಿ ಒಂದರ ಕಿಮ್ಮತ್ತು ರೂ ೧—೦—೦

ವಜ್ರಗುಟಿಕ—ಧಾತುಪುಷ್ಟಿ, ರಕ್ತಶುದ್ಧಿ	೧—೦—೦
ಕುಸುಮಾಂಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸುಂದರೀ ತೈಲ—ಮೋರೆಯ ಮುದ ಜಗಳಿಗೆ	೦—೮—೦
ತಾಂಬೂಲ ಗುಟಿಕೆ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೦—೮—೦
ಜೇಳುಕಡಿತದ ಮದ್ದು ಜೇಳುಕಡಿತಕ್ಕೆ	೦—೪—೦
ಜುಲಾಬು ಮಾತ್ರೆ—ಜುಲಾಬಿಗೆ	೦—೯—೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಳಾಸ —ವಿಲಿಯಂ ಮತ್ತು ಕಂಪೆನಿ, ೧೬ ಓಕ್‌ಲೇನು ಫೋರ್ಟು, ಮುಂಬಯಿ

ಟೆಲಿಗ್ರಾಫ್ ಅಡ್ರಸ್ಸು —"ಅಮೃತಾಂಜನ," ಮುಂಬಯಿ.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

25

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು.

ನೋಡಿರಿ 'ಪ್ರೋತ್ಸಾಹಕೊಡಿರಿ" ತರಿಸಿರಿ

93 12

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ

೫,೦೦೦ ಹಾಸನ ಟೋಪಿ ಹೊಲಿಯುವ (ಪೇರುಮಾ) ಸುಪೀರಿಯರ್ ಉಲನ್		
೮ ಅಡಿಗಳುಳ್ಳ ಪೇರುಮಾ ಉಲನ್ ಬಂಡಲ್ ೧ ಕ್ಕೆ	ರೂ	೩-೨ ೦
೧೦ ಟೋಪಿಯಾಗುವ ಸುಪೀರಿಯರ್ ಉಲನ್ ಬಂಡಲ್ ೧ ಕ್ಕೆ	ರೂ	೩-೬ ೦
೧ ಟೋಪಿ ಉಲನ್ ದಾರಕ್ಕೆ (ಸುಪೀರಿಯರ್)	ರೂ	೦ ೮ ೦
ಹಾಸನ ಟೋಪಿ ಹಾಕುವ ಕೊಕ್ಕೆ ಸೂಜಿ ೧ ಕ್ಕೆ		೨ ೨ ೦ , ೦ ೧ ೬
(ಪೇರುಮಾ) ಉಲನ್ ದಾರದಲ್ಲಿ ತಯಾರಾದ ಟೋಪಿ ಡಜನ್‌ಗೆ	ರೂ	೧೮ ೦-೦

ಪೇರುಮಾ ಎಂಬ ಉಲನ್ ದಾರಗಳು ನಮಗಾಗಿಯೇ ಇಂಗ್ಲೆಂಡಿನಿಂದ ಬೇರೆಲ್ಲಿಯೂ ದೊರೆಯದು ಈ ಉಲನ್ ದಾರಕ್ಕೆ ಗಿರಾಕಿಗಳು ಜಾಸ್ತಿ ಇರುವದರಿಂದ ಒಂದು ಬಂಡಲ್ ಆದರೂ ಪೇರುಮಾ ಉಲನ್ ತರಿಸಿ ನೋಡಿರಿ

ಈಗ ನಮ್ಮಲ್ಲಿ ಬೇರೆ ಒಂದು ಡಿಪಾರ್ಟ್‌ಮೆಂಟು ಓಪನ್ ಮಾಡಿದೇವೆ ಅಂದರೆ ಮಂಗಳೂರಲ್ಲಿ ದೊರೆಯುವ ಸಾಮಾನುಗಳು ಪರಸ್ಥಳದವರಿಗೆ ಯಾವದು ಬೇಕಾದರೂ ಅವರ ಕಡೆಯಿಂದ ಪಡೆದು ಪರಸ್ಥಳದವರಿಗೆ ಕಳುಹಿಸುವದೇ ಇದಕ್ಕೂ ಕಮಿಶನ್ ರೂ ೩ ೪ ೦ ಪರಸ್ಥಳದವರಿಗೆ ವಿ ಪಿ ಯಿಂದಲೂ ರವಾನಿಸುತ್ತೇವೆ ಕೆಟಲಾಗನ್ನು ಕೇಳುವವರಿಗೆ ರವಾನಿಸುತ್ತೇವೆ ನಮ್ಮ ವಿಳಾಸ —

ವಿ ಉಲನ್ ಮಾರ್ಟ್, ಮಂಗಳೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

15

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ , ೧ ರೂ ೬ ಆ ೧ ರೂ ೪ ಆ

ರೇಶ್ಮೆ ಚಿಕ್ಕೆಯುಳ್ಳ ಟೋಪಿಗಳು ೧ ರೂ ೮ ಆ , ೨ ರೂ

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ ,

ಕೂಸುಗಳ ಟೋಪಿ, ಸೂರ್ಯ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಉಚಿತ ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರಖಾನೆ, ಹಾಸನ.

JUST RECEIVED! JUST RECEIVED!!

Stead's Books for the Bairns
(Illustrated) New Numbers [5]

STEAD'S PENNY POPULAR TALES—Sixty-four Pages in a coloured Picture Cover. Each number contains a story of thrilling interest. 24 numbers.

CALENDARS FOR 1909.

Apply—The Manager, C L S Book Depot, Mysore City

ಟೀಚರು ಬೇಕು

164

ಕೊಳ್ಳೇಗಾಲದಲ್ಲಿ ಬಾಲಕಾಭಿವೃದ್ಧಿಯಿಂದಿರುವ ಮಹಮ್ಮದೀಯರ ಉರ್ದು ಪಾಠಶಾಲೆಗೆ ಡ್ರಿಲ್ ಮತ್ತು ಜಿಮ್ನಾಸ್ಟಿಕ್ ಇವುಗಳನ್ನು ಬೋಧಿಸುವ ಶಕ್ತರಾಗಿ, ಮೈಸೂರು ಅಪ್ಪರ್ ಸೆಕೆಂಡರಿಯಲ್ಲಿ ಉರ್ದು ಭಾಷೆಯಿಂದಲಾಗಲಿ, ಮದ್ರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್‌ಗೆ ಡಿಟೋ ಭಾಷೆಯನ್ನು ತೆಗೆದುಕೊಂಡಾಗಲಿ, ತೇರ್ಗಡೆ ಹೊಂದಿರುವ ಉರ್ದು ಭಾಷೆಯನ್ನು ಹೇಳಿಕೊಡುವದಕ್ಕೆ ಒಬ್ಬ ಹೆಡ್ಮಾಸ್ಟರು ಬೇಕಾಗಿರುತ್ತೆ. ಈ ಉಪಾಧ್ಯಾಯರಿಗೆ ೧೫ ರೂಪಾಯಿ ಮಾಸವೇತನವು ಕೊಡಲ್ಪಡುವುದು. ಮುಂದೆ ಸ್ವಲ್ಪ ಕಾಲದಲ್ಲಿ ಈ ಪಾಠಶಾಲೆಯನ್ನು ಸರ್ಕಾರದವರ ಪೋಷಣೆಗೆ ಒಳಪಡಿಸಬೇಕೆಂದಿರುತ್ತೆ. ಆಗ್ಗೆ ಸರ್ಕಾರಿಯಾಗಿ ವೇತನವು ದೊರೆಯುವುದರಿಂದ ಉಪಾಧ್ಯಾಯರಿಗೆ ಇನ್ನೂ ಸೌಕರ್ಯವಿರುವುದು ಎಂಬುದರಲ್ಲಿ ಸಂದೇಹವಿಲ್ಲ. ಈ ಮೇಲ್ಕಂಡ ಯೋಗ್ಯತೆಯುಳ್ಳವರು ತಮ್ಮ ಸರ್ಟಿಫಿಕೇಟುಗಳನ್ನೂ ಇತರ ಯೋಗ್ಯತಾ ಪತ್ರಿಕೆಗಳನ್ನೂ ಅಥವ ಅವುಗಳ ನಕಲುಗಳನ್ನು ಅಪ್ಲಿಕೇಷನ್ ಸಮೇತ ಕೊಳ್ಳೇಗಾಲದ ಮಹಮ್ಮದಿಯಾ ಅಂಜುಮನ್ ಸೆಕ್ರಟರಿ ಯವರ ವಿಳಾಸಕ್ಕೆ ಈ ೧೯೦೯ ನೇ ವರ್ಷ ಒಂದನೇ ಫೆಬ್ರವರಿಯೊಳಗಾಗಿ ಕಳುಹಿಸತಕ್ಕದ್ದು. ಮಾರ್ಚಿ ೧೫ ರೊಳಗಾಗಿ ಅಂಜುಮನ್‌ನಿಂದ ತೀರ್ಮಾನಿಸಿ ಗೊತ್ತುಮಾಡಲ್ಪಟ್ಟವರಿಗೆ ಕೆಲಸಕ್ಕೆ ಸೇರ ಬಹುದೆಂದು ತಿಳಿಸಲ್ಪಡುವುದು.

16—1—1909
ಮಹಮ್ಮದ್ ಖಲಂದರ್, ಪ್ರೆಸಿಡೆಂಟ್,
ಅಹಮ್ಮದೀಯಾ ಅಂಜುಮನ್, ಕೊಳ್ಳೇಗಾಲ

ಜ್ವರಸುಧಾ

111

ಒಂದು ಬಾಟ್ಲಿ ಕಿಮ್ಮತ್ತು ೮ ಆಣೆ — ವಿ. ಪಿ. ಖರ್ಚು ಹೊರತು



ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಬರುವ ಜ್ವರ, ಮೂರು ದಿವಸಕ್ಕೊಂದು ಸಾರಿ ಬರುವ ಜ್ವರ ಮುಂತಾದ ಅನೇಕ ಜ್ವರಗಳನ್ನು ವಾಸಿಮಾಡುವ ಇದಕ್ಕೆ ಸಮಾನವಾದ ಔಷಧಿ ಲೋಕದಲ್ಲಿ ಇಲ್ಲವೆಂದು ಅನುಭವಶಾಲಿಗಳಾದ ಡಾಕ್ಟರುಗಳು ಹೇಳುತ್ತಲಿದ್ದಾರೆ. ಪಿತ್ತ, ತಲೆನೋವು ಅಜೀರ್ಣ, ಕಣ್ಣುಗಳು ಹಳದಿಯಾಗುವುದು, ಮೈನೋವು ಮುಂತಾದವುಗಳನ್ನು ೧—೨ ಹೊತ್ತಿನಲ್ಲಿಯೇ ದೈನಾಮೈಟಿನಂತೆ ದಿಗಂತರಕ್ಕೆ ಹಾರಿಸಬಲ್ಲದು. ಸುಧಾ ಅಂದರೆ ಅಮೃತವನ್ನು ಕುಡಿದವರಿಗೆ ಯಾವ ರೋಗವೂ ಹೇಗೆ ಅಂಟುವುದಿಲ್ಲವೋ ಹಾಗೆಯೇ ನಮ್ಮ ಜ್ವರಸುಧಾ ಎಲ್ಲಾ ವಿಧವಾದ ಜ್ವರಗಳನ್ನೂ ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ. ಒಂದು ಸಲ ಔಷಧಿಯಲ್ಲಿ ಕಂಡುಬರುವ ಅಮೋಘಗುಣವನ್ನು ಹೆಚ್ಚು ವರ್ಣಿಸ ಬೇಕಾದ್ದಿಲ್ಲ.

ದೇವನಹಳ್ಳಿ ಟೌನ್,
ಬೆಂಗಳೂರು ಡಿಸ್ಟ್ರಿಕ್ಟ್
ಯಂ. ಗೋವಿಂದಶೆಟ್ಟಿ,
ಮೆಡಿಕಲ್ ಪ್ರಾಕ್ಟೀಷನರ್

ಇದುವರೆಗೆ ಯಾರೂ ಪ್ರಕಟಿಸದಂಥಾ ಪುಸ್ತಕ!!!

106

"ಬ್ರಹ್ಮಚರ್ಯ" ವೆಂಬ ಮರ್ಮಶಾಸ್ತ್ರ

ಇದು ಇಂಗ್ಲೀಷ್ ಭಾಷೆಯಲ್ಲಿ ಲೋಕಪ್ರಸಿದ್ಧವಾದ ಪುಸ್ತಕ. ಈಗ ಇದನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿರುವೆವು. ಈ ಮರ್ಮಶಾಸ್ತ್ರವನ್ನು ಯುವಕರೂ ಆಬಾಲವೃದ್ಧರೂ ಓದಿ ತಿಳಿದುಕೊಳ್ಳಬೇಕು. ಅನೇಕ ಹುಡುಗರು ಹಸ್ತಪ್ರಯೋಗವೇ ಮೊದಲಾದ ಭಯಂಕರವಾದ ದುರಭ್ಯಾಸಗಳಿಗೊಳಗಾಗಿ ಕೆಟ್ಟು ಹೋಗಿರುತ್ತಾರೆ. ಅವರ ದುಸ್ಸ್ವಪ್ನಾವಸ್ಥೆಗಳಿಗೆ ಬರೀ ಮೌಢ್ಯವೇ ಕಾರಣವಾಗಿರುತ್ತದೆ.

ಈ ಉತ್ಕೃಷ್ಟವಾದ ಪುಸ್ತಕವನ್ನು ಇನ್ನೂ ಹೆಚ್ಚಾಗಿ ವಿವರಿಸಿ ತಿಳಿಸುವುದಕ್ಕೆ ಇಲ್ಲಿ ಸ್ಥಳ ಸಾಲದು. ಆದರೆ ಇದರಲ್ಲಿ ಅಡಕವಾಗಿರುವ ಅಧ್ಯಾಯಗಳನ್ನು ಇ ... ತಿಳಿಸುವೆವು. "ಜೀವೋತ್ಪತ್ತಿಯ ಪ್ರಾರಂಭವು ಅದರ ರಹಸ್ಯವು" "ಸಸ್ಯಾದಿಗಳ ಜೀವೋತ್ಪನ್ನವಾಗುವಿಕೆ" "ಪ್ರಾಣಿಗಳಲ್ಲುಂಟಾಗುವ ಜೀವೋತ್ಪತ್ತಿಯು" "ಮನುಷ್ಯಸಂತಾನವು, ಇದು ಉತ್ಪತ್ತಿಯಾಗುವ ರೀತಿಯು" "ಹುಡ ... ರುವ ಇಂದ್ರಿಯಗಳು, ಅಂಗಗಳು ಕೆಡುವ ರೀತಿ" "ಹುಡುಗರ ದುಷ್ಟ ... ಆಗುವ ನಾನಾ ಕೇಡುಗಳು" "ಹುಡುಗರು ತಮ್ಮ ದೇಹಗಳನ್ನು ... ಬಲ ಸ್ಥಾನಗಳನ್ನು ಕಾಪಾಡುವದಕ್ಕೆ ಸೂತ್ರಗಳು" "ಹುಡ ... ಕಳಕೊಂಡ ದೇಹ ಬಲ ಶಕ್ತಿಗಳನ್ನು ತಿರುಗಿ ಸಂಪಾದಿಸುವ ವಿಧಾನವು ... ರು ಪ್ರಾಯಕ್ಕೆ ಬರುವ ಕಾಲವು. ಈ ಕಾಲದಲ್ಲಿ ಗಮನಿಸತಕ್ಕ ವಿಷಯ ... ಹುಡುಗರು ಪ್ರಾಯಕ್ಕೆ ಬರುವ ಕಾಲ, ಈ ಕಾಲದಲ್ಲಿ ಉಂಟಾಗುವ ಬದಲಾವಣೆಗಳು"

ಇಂಥಾ ಉತ್ಕೃಷ್ಟವಾದ ಪುಸ್ತಕವನ್ನು ಎಲ್ಲರೂ ಕೊಂಡು ತಮ್ಮ ಮನೆಗಳಲ್ಲಿ ಇಡಬೇಕು. ಇದರ ಕ್ರಯ ಮೂರಾಣೆ. ವಿ. ಪಿ. ಮೂಲಕ ತರಿಸಿಕೊಂಡರೆ ಖರ್ಚುಗಳಾಗುವವು.

ವಿಳಾಸ — ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

46



ಮಾಂಸಖಂಡಗಳ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ಬಿಟ್ಟ ಹತ್ತದೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯವರೆಗೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಆದ್ದರಿಂದ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕ್ಲೋರೋಫಾರಂ ಮುಂತಾದ್ದೇನೂ ಅಲ್ಲ

ಇದು ಎಲ್ಲೆಲ್ಲೂ ವಿಕ್ರಯವಾಗುವುದು
ಸಣ್ಣ ಶೀಸೆಗೆ ೧ ರೂಪಾಯಿ
ದೊಡ್ಡ ಶೀಸೆಗೆ ೨ ರೂಪಾಯಿ

ಲೇಖಿನ ಪ್ರಕಾಶಿಕಾ.

107

ಪ್ರತಿ ಒಬ್ಬ ಸ್ಟಾಂಪುವೆಂಡರುಗಳು ಪಟೇಲರು ಪತ್ರಗಳನ್ನು ಬರೆಯುವವರು ಲೇವಾದೇವಿ ಮಾಡುವವರು ಮುದ್ದತ್ತನ್ನು ತಿಳಿಸಿಕೊಳ್ಳಲು ಅಥವಾ ಧನಸಂಪಾದನೆ ಮಾಡಲು ಇಷ್ಟಪಡುವವರು ಮತ್ತು ರಿಜಿಸ್ಟ್ರೇಷನ್ ಆಫೀಸುಗಳಿಗೆ ಹೋಗಲು ಪ್ರಯತ್ನ ಪಡುವವರೆಲ್ಲರೂ ರಿಜಿಸ್ಟ್ರೇಷನ್ ಆಯಿರುವ ಈ ಪುಸ್ತಕವನ್ನು ಜಾಗ್ರತೆಯಾಗಿ ವಿಂಟಿತ ತರಿಸಿಕೊಳ್ಳಿರಿ. ತಕ್ಷಣ ಬರೆದುಕೊಂಡವರಿಗೆ ಖರ್ಚು ಸೇರಿ ೧—೨—೦ ವಿ. ಪಿ. ... ಯ ಕೃಷ್ಣಮೂರ್ತಿರಾವ್, ರಿಜಿಸ್ಟ್ರೇಷನ್ ಕ್ಲಾರ್ಕ್ ಹೊನ್ನಾಳಿ ತಾಲ್ಲೂಕು ಶಿವಮೊಗ್ಗಾ ಡಿಸ್ಟ್ರಿಕ್ಟ್

ಕ್ಲೆಮಂಟರ ಮ್ಯಾಜಿಕ್ ಬಾಂ ತೈಲವು

149

ತಲೆನೋವು, ವಾಯುನೋವು ... ಸ್ನಾಯು ವಾಯು ನಾನಾ ವಿಧ ... ರೋಗಗಳು, ಶೀತರೋಗಗಳು ... ಕೀಲುಗಳ ಸಂದುಕಟ್ಟುಗಳ ನೋವು ... ನೋವು ಹಲ್ಲುನೋವು ಇವುಗಳೆಲ್ಲಾ ಈ ತೈಲವನ್ನು ಹಚ್ಚಿದರೆ ... ದಂತೆ ಮಾಯವಾಗುತ್ತವೆ. ಈ ಔಷಧವನ್ನು ... ಎಲ್ಲಾ ... ಪರೀಕ್ಷೆ ಮಾಡಿ ... ಗುಣಕೊಡುತ್ತದೆಂದು ಒಪ್ಪಿ ... ತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧವು ... ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಚಿಕಿತ್ಸೆಮಾಡಿದವರೆಲ್ಲಾ ಇದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲವನ್ನು ಒಡೆದು ಅದರ ಹುಟ್ಟನ್ನೇ ಹಾಳುಮಾಡುತ್ತದೆ.

ಕ್ರಯ ಶೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆರು ೬ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿಸುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸನ್,
೩೭, ಮೇದರಮಲ್ಲಿಪಿಳ್ಳೆ ಬೀದಿ, ವೇಪೇರಿ, ಮದರಾಸ್

ಸನ್ ೧೮೭೬ ರಿಂದ ೧೯೦೬ ವರೆಗೆ

ಕಾಲದ ಪರೀಕ್ಷೆ

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION

66

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿ ಎನ್ನುವುದನ್ನು ಪಂಡಿತರೆಲ್ಲಾ ಅನೇಕ ವೇಳೆ ಪರೀಕ್ಷೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ.

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಕ್ರಮಗಳು ನಾನಾ ತರದ ಕೆಮ್ಮುಗಳು
ಸಕಲವಿಧ ಶೈತ್ಯಗಳು, ಮಾಂಸಖಂಡಗಳ ಕ್ಷೀಣತೆ

ಆಹಾರದಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು

ಔಷದಗಳ ಅಂಗಡಿಗಳಲ್ಲೆಲ್ಲಾ
ಸಿಕ್ಕುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಕ್ಷಾಮದ ಫಂಡು.

ಈಗಿನ ಕ್ಷಾಮ ನಿವಾರಣಾರ್ಥವಾಗಿ ಮಹಾಜನರು ಚಂದಾ ಕೊಡುವುದಾಗಿ ವಾಗ್ದಾನ ಮಾಡಿದವರೂ ಸಕಲ ಜನರೂ ತಮ್ಮ ಚಂದಾ ಹಣಗಳನ್ನು ಈ ಕೆಳಗೆ ರುಜು ಮಾಡುವವರ ಆಫೀಸಿಗೆ ಕಳುಹಿಸಿ ಕೊಟ್ಟು ರಶೀದಿ ಪಡೆಯಬಹುದು

೨೭—೧—೧೯೦೯
ಎಂ. ಜಿ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್
ಮ್ಯುನಿಸಿಪಲ್ ಕೌನ್ಸಿಲ್ ಮೈಸೂರು

ನ್ಯಾಸ್ತಿಹಾರ್.

111

ಚಿತ್ರದುರ್ಗದ ಮುನ್ಸೀಫ್ ಕೋರ್ಟಿನ,
ಅಸಲ್ ನಂಬರು 935 1907—08

ವಾದಿಗಳು

(1) ... ಕೆಂಗಮಲ್ಲಯ್ಯ ಮುತ್ತಿನವರ ... ಗಳ ನಾಯಕ (2) ಡಿಟೋ ತಾಲ್ಲೂಕು ಸೂರಮನಹಳ್ಳಿ ಬೀಳ ಕಟ್ಟಿ ... ಹಟ್ಟಿಯಲ್ಲಿರುವ ... ಮುತ್ತಿನವರ ... ಗಳ ನಾಯಕ

ಪ್ರತಿವಾದಿಗಳು

(1) ನೇ ... ಬಂಗಾರಪ್ಪ ... ತಾಲ್ಲೂಕು ... (2) ... ತಾಲ್ಲೂಕು ... ಕೋಟೆಯಲ್ಲಿರುವ ದೊಡ್ಡ ... ಪೂಜಾರಿ ... (4) ನೇ ... ತಾಲ್ಲೂಕು ಮುತ್ತಿಗಾರಹಳ್ಳಿಯಲ್ಲಿರುವ ... ಮಗ ... (5) ನೇ ಡಿಟೋ ತಾಲ್ಲೂಕು ... ಹಳ್ಳಿಯಲ್ಲಿರುವ ... ದೇವರ ಪೂಜಾರಿ ಮುತ್ತಪ್ಪ (6) ನೇ ಡಿಟೋ ತಾಲ್ಲೂಕು ... ಹಳ್ಳಿಯಲ್ಲಿರುವ ಮಲ್ಲಯ್ಯನ ಮಗ ... ದೇವರ ... ತಿಮ್ಮಯ್ಯ (7) ನೇ ಚಳ್ಳಕೆರೆ ತಾಲ್ಲೂಕು ಕೋಲಂಪಳ್ಳಿ ... ಮುತ್ತಿನವರ ಪೂಜಾರಿ ... (8) ನೇ ಮೊಳಕಾಲ್ಮೂರು ತಾಲ್ಲೂಕು ಮುತ್ತಿಗಾರಹಳ್ಳಿ ... ಕಾವಲ್‌ನಲ್ಲಿರುವ ... (9) ನೇ ಡಿಟೋ ತಾಲ್ಲೂಕು ... ಹಳ್ಳಿ ... (10) ನೇ ಡಿಟೋ ತಾಲ್ಲೂಕು ... ಕರಿಯಪ್ಪ ... ಮಗ ... (11) ನೇ ಡಿಟೋ ... ಬಡವಪ್ಪ ... ಮಗ ... ಮುತ್ತ ... (12) ನೇ ಡಿಟೋ ತಾಲ್ಲೂಕು ಮುತ್ತಿಗಾರ ಹಳ್ಳಿಯಲ್ಲಿರುವ ... ಮುತ್ತ ... ಮಗ ... ಯ್ಯ

ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ — ಮೊಳಕಾಲ್ಮೂರು ತಾಲ್ಲೂಕು ಮುತ್ತಿಗಾರ ಹಳ್ಳಿ ಬಳಿ ಕಮರದ ಕಾವಲಿನಲ್ಲಿ ವ್ಯಾಸನಾಯಕರಿಗೆ ಸೇರಿದ ಮುತ್ತಯ್ಯಗಳು ಎಂಬ ದೇವರ ಕಾರ್ಯವನ್ನು ನಿರ್ವಹಿಸಲು ವಾದಿಗಳನ್ನು ನಾಯಕರೆಂದು ತೀರ್ಮಾನಿಸಬೇಕೆಂತಲೂ ಸದರಿ ನಾಯಕತನದ ಹಕ್ಕಿಗೆ ಒಳಪಟ್ಟ ಕರ್ತವ್ಯಗಳಲ್ಲಿ ಪ್ರತಿವಾದಿಗಳು ಪ್ರವೇಶಿಸದಂತೆಯೂ ವಾದಿಗಳ ವಿನಹ ಸ್ವತಃವಾಗಿ ಈ ದೇವರ ಕಾರ್ಯವನ್ನು ಪ್ರತಿವಾದಿಗಳು ನಡಿಸಕೂಡದಂತೆಯೂ ಶಾಶ್ವತವಾದ ಇಂಜಂಕ್ಷನ್ ಕೊಡಿಸಬೇಕೆಂದು ವಾದಿಗಳು ದಾವಾ ಮಾಡಿರುತ್ತಾರೆ.

ಸದರಿ ದಾವಾದಲ್ಲಿ ಪಕ್ಷದಾರರುಳ್ಳ ಸಮಸ್ತ ವ್ಯಾಸನಾಯಕರ ಪಂಗಡದವರು ತಾವು ಖುದ್ದಾಗಿಯಾಗಲಿ ಲಾಯರು ಮೂಲಕವಾಗಿ ಯಾಗಲಿ ಸನ್ 1909 ನೇ ಇಸವಿ ಫೆಬ್ರವರಿ ತಾರೀಖು 27 ನೇ ಶನಿವಾರ ದಿವಾ 11 ಘಂಟೆಗೆ ಈ ಕೋರ್ಟು ರೂಬರೂಬು ಹಾಜರಾಗಿ ವ್ಯವಹರಿಸಿಕೊಳ್ಳತಕ್ಕದ್ದಿದೆ.

Date, 26—1—09
S. VENKATAKRISHNAIYA
Munsiff

ವೃತ್ತಾಂತ ಪತ್ರಿಕೆ

೧೯೦೯ ನೇ ಇಸವಿ ಫೆಬ್ರವರಿ ತಾ|| ೧೧ ನೇ ಗುರುವಾರ

ಕೂಲಿಗಾಗಿ ಊರು ಬಿಟ್ಟು ಹೋಗುತ್ತಿರುವುದು

ಪೂರ್ವ ಕಾಲದಲ್ಲಿ ಹಿಂದೂಸ್ಥಾನದ ಪ್ರಜೆಗಳು ತಾವು ಹುಟ್ಟಿ ಬೆಳೆದ ಊರು ಕೇರಿಗಳನ್ನು ಬಿಟ್ಟು ಅನ್ಯದೇಶಕ್ಕೆ ಹೋಗುತ್ತಿರಲಿಲ್ಲ ಈಚೆಗೆ ಅವರಲ್ಲಿ ಈ ಅಭಿಪ್ರಾಯವು ಬಹಳ ಮಟ್ಟಿಗೆ ಕಡಮೆಯಾಗುತ್ತಾ ಬಂದಿದೆ ಅನೇಕಾನೇಕರು ಅಂದರೆ ಸಾವಿರ ಗಟ್ಟಲೆ ಪ್ರಜೆಗಳು ಹಿಂದೂಸ್ಥಾನವನ್ನು ಬಿಟ್ಟು ಅನ್ಯದೇಶಗಳಿಗೆ ಪ್ರತಿ ವರುಷವೂ ಹೋಗಿ ನೆಲಸುತ್ತಾ ಬಂದಿದ್ದಾರೆ ಅನೇಕರು ತಂಡತಂಡವಾಗಿ ದಕ್ಷಿಣ ಅಫ್ರಿಕಕ್ಕೂ, ಪೂರ್ವ ಅಫ್ರಿಕಕ್ಕೂ, ಮಧ್ಯ ಅಮೇರಿಕಕ್ಕೂ, ಪಸಿಫಿಕ್ ಸಾಗರದಲ್ಲಿರುವ ಫೀಜೀ ಮೊದಲಾದ ದ್ವೀಪಾಂತರಗಳಿಗೂ, ಬರ್ಮಾ ಸಿಂಗಪೂರ ಮೊದಲಾದ ಇಂಥ ಕಡೆಗಳಿಗೂ ಹೋಗುವರು ಇವರೆಲ್ಲಾ ಸಾಮಾನ್ಯವಾಗಿ ಕೂಲಿಮಾಡತಕ್ಕವರಾಗಿಯೂ ಚಿಲ್ಲರೆ ವ್ಯಾಪಾರಗಾರರಾಗಿಯೂ ಇರುತ್ತಾರೆ ಇವರಿಗೆ ತಾವು ಹುಟ್ಟಿ ಬೆಳೆದ ದೇಶದಲ್ಲಿ ಸಿಕ್ಕುವುದಕ್ಕಿಂತಲೂ ಆ ಅನ್ಯದೇಶಗಳಲ್ಲಿ ವಿಶೇಷ ಆದಾಯ ದೊರಕುತ್ತದೆ ಆದುದರಿಂದಲೇ ಅವರು ಮನೆಮಠಗಳನ್ನು ತ್ಯಜಿಸಿ ಪರದೇಶಗಳಿಗೆ ಹೋಗಿ ನೆಲಸುತ್ತಾರೆ ಹೀಗೆ ಹೋಗತಕ್ಕವರೆಲ್ಲಾ ಸಮಾರಾಗಿ ತಮಿಳು, ತೆಲುಗು, ಹಿಂದೂಸ್ಥಾನಿ ಭಾಷೆಗಳನ್ನಾಡತಕ್ಕ ಪ್ರದೇಶಗಳಿಗೆ ಸೇರಿದವರು ಆದರೆ ಹಿಂದೂ ಪಂಗಡಗಳಲ್ಲೆಲ್ಲಾ ತಮಿಳರೇ ವಲಸೆ ಹೋಗುವುದರಲ್ಲಿ ಮುಂದಾಳುಗಳೆನ್ನಿಸಿಕೊಂಡಿದ್ದಾರೆ

ಈ ರೀತಿ ಕೂಲಿಮಾಡತಕ್ಕ ಜನರೇ ಅನ್ಯದೇಶಗಳನ್ನು ಕುರಿತು ಹೋಗುತ್ತಿರುವುದರಿಂದ ಈ ದೇಶದ ಟೀ ಮತ್ತು ಕಾಫಿ ತೋಟಗಳಲ್ಲಿಯೂ, ಸಾಮಾನ್ಯವಾದ ಜಮೀನ್ ವ್ಯವಸಾಯ ಕಾರ್ಯಗಳಿಗೂ ಗಂಡು ಹೆಣ್ಣಾಳುಗಳು ದೊರಕುವುದು ದಿನೇ ದಿನೇ ದುರ್ಲಭವಾಗುತ್ತಿರುವುದು ಇದರಿಂದ ಕೂಲಿಯ ದರಗಳು ಹೆಚ್ಚುತ್ತಾ ಬಂದಿವೆ ಕೆಲಸಕ್ಕೆ ಬೇಕಾಗುವಷ್ಟು ಜನರು ದೊರಕದಿದ್ದರೆ ಕೂಲಿಯ ದರಗಳು ಹೆಚ್ಚುವುದೇನೋ ಸ್ವಭಾವಸಿದ್ಧವೇ ಇದಲ್ಲದೆ ಜೀವನಕ್ಕೆ ಕಷ್ಟವಾದ ಕಾಲದಲ್ಲಿ ಕೂಲಿ ಕಂಬಳಿಗಳ ದರವೂ ಹೆಚ್ಚಲೇ ಬೇಕು

ಇದರಿಂದ ಒಂದು ದೊಡ್ಡ ಪ್ರಯೋಜನವುಂಟಾಗಿರುತ್ತದೆ ಅನೇಕ ಶತಮಾನಗಳಿಂದಲೂ ಈ ರಾಷ್ಟ್ರದಲ್ಲಿ ಸಾಮಾನ್ಯ ಜನರು ಗುಲಾಮರಾಗಿ ನಡೆಸಿಕೊಳ್ಳಲ್ಪಡುತ್ತಿದ್ದರು ಇದು ಈಗ ತಪ್ಪಿ ಹೋಗುತ್ತಾ ಬಂದಿರುವುದು ಕೂಲಿಕಂಬಳಿಗಾರರು ಆಯಾ ಜಮೀನು ಆಯಾ ಗ್ರಾಮಗಳನ್ನು ಬಿಟ್ಟು ಪರ ಸ್ಥಳಕ್ಕೆ ವಲಸೆ ಮಾಡಬಾರದೆ, ಅವರ ಕೂಲಿಕಾರರೂ ಜಮೀನಿನ ಜೊತೆ ಅನ್ಯರ ವಶವರ್ತಿಗಳಾಗುತ್ತಿದ್ದರು ಗುಲಾಮರನ್ನು ಅಂದರೆ ಜೀತಗಾರರನ್ನು ಇಟ್ಟುಕೊಳ್ಳುವುದು ಕಾನೂನಿಗೆ ವಿರುದ್ಧವೆಂಬುದೂ ನಿಜವು, ಆದರೆ ಅನೇಕಾನೇಕ ಜಮೀನ್‍ದಾರರು ಗೇಣಿದಾರರಿಗೆ ಸಾಲಕೊಟ್ಟು ತಮ್ಮ ಮನೆಗಳಲ್ಲಿ ಜೀತಕ್ಕೆ ನೇಮಿಸಿಕೊಳ್ಳುವುದು ಇನ್ನೂ ತಪ್ಪಿ ಇಲ್ಲ ಇಂಥಾ ಜೀತಗಾರರನ್ನು ಗುಲಾಮರಂತೆಯೇ ಭಾವಿಸುವುದಾಗಿದೆ ಜನರು ಇಂಥಾ ಅಯೋಗ್ಯವಾದ ಸ್ಥಿತಿಯಲ್ಲಿರುವುದನ್ನು ತಪ್ಪಿಸಿಕೊಳ್ಳಬೇಕೆಂದು ಹೆಚ್ಚಾದ ಕೂಲಿ ಸಿಕ್ಕಿ ಹಣವನ್ನು ಸಂಗ್ರಹಿಸಲಿಕ್ಕೆ ಅನುಕೂಲವಾಗಿರುವ ಅನ್ಯದೇಶಗಳಿಗೆ ಹೊರಟುಹೋಗುತ್ತಿದ್ದಾರೆ ಇದರಿಂದ ಜಮೀನ್‍ದಾರರಿಗೆ ಕೂಲಿಕಾರರು ಸಿಕ್ಕುವುದು ಕಷ್ಟವಾಗುತ್ತದೆ ಆದರೆ ಕೂಲಿಯ ದರವನ್ನು ಅವರು ಹೆಚ್ಚಿಸದಿದ್ದಲ್ಲಿ ಬೇಕಾದ ಆಳುಗಳು ಸಿಕ್ಕದಂತಾಗುತ್ತದೆ

ಪೂರ್ವ ಕಾಲದಲ್ಲಿ ಯಜಮಾನನಿಗೂ ಆಳಿಗೂ ಇದ್ದ ಕನಿಷ್ಠವಾದ ಸಂಬಂಧವು ಕಾಲಕ್ರಮದಲ್ಲಿ ಸಡಿಲವಾಗುತ್ತಾ ಬಂದಿದೆ ಅವರಿಗೆ ಪರಸ್ಪರವಾದ ಪ್ರೀತಿಯೂ ನ್ಯಾಯಯುಕ್ತವಾದ ನಂಬಿಕೆಯೂ ಹುಟ್ಟಬೇಕಾಗುವುದು ಯಜಮಾನನು ಆಲೋಚಿಸಬೇಕಾದದ್ದು ಕೂಲಿಯ ದರ ಒಂದೇ ಅಲ್ಲ ಜೀತಗಾರನಿಗೂ ಅವನ ಸಂಸಾರಕ್ಕೂ ಜೀವನೋಪಾಯಕ್ಕೆ ಅವಶ್ಯಕವಾದಷ್ಟು ಕೊಟ್ಟರೆ ಸಾಕು ಎಂಬುದೇ ಸಾಲದು ಆದರೆ ಇದಕ್ಕಿಂತಲೂ ವಿಶೇಷವಾದ ಸಂಬಂಧವು ಅವರಿಗೆ ಉಂಟಾಗಬೇಕು ಅವರಿಗೆ ಸ್ವೇಚ್ಛಾವಾತ್ಸಲ್ಯಾದಿಗಳೂ ಪರಸ್ಪರವಾದ ಭಕ್ತಿ ಪ್ರೀತಿ ಸಹಾಯಾದಿಗಳೂ ಅಭಿವೃದ್ಧಿಯಾದಲ್ಲಿ ಅವರ ಯಜಮಾನನೂ ಸೇವಕನೂ ಏಕೀಭವಿಸಿ ದೇಶೋನ್ನತಿಗೆ ಸಹ ಯುಕ್ತಗಳಾದ ಕಾರ್ಯಗಳನ್ನು ನಡಿಸಲು ಬಹಳ ಅನುಕೂಲವಾಗುವುದು

ದೇಹಲಿಯಲ್ಲಿ ಗಣಿತ ಶಾಸ್ತ್ರಾಧ್ಯಕ್ಷನಾಗಿದ್ದ ರಾಮಚಂದ್ರ ಎಂಬಾತನ ವೃತ್ತಾಂತ

ಈತನ ತಾಯಿಯು ವಿಧವೆಯಾಗಿ ಕೇವಲ ಬಡತನದಲ್ಲಿದ್ದು ತನ್ನ ಆರು ಮಂದಿ ಮಕ್ಕಳ ಉದರ ಪೋಷಣೆಯನ್ನು ಮಾಡಲಾರದೆ ಇರಲು ಆಕೆಗೆ ಒಂದು ಸಹಾಯ ಒದಗಿತು ಹ್ಯಾಗೆಂದರೆ ಇಂಗ್ಲಿಷ್ ಭಾಷೆಯನ್ನು ಓದಲಿಕ್ಕೆ ಯಾರಾದರೂ ತಮ್ಮ ಮಕ್ಕಳನ್ನು ವಿದ್ಯಾಶಾಲೆಗೆ ಕಳುಹಿಸಿದರೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಹತ್ತು ರೂಪಾಯಿಗಳ ವಿದ್ಯಾವೇತನವನ್ನು ಕೊಡುತ್ತೇವೆಂದು ದಯಾಳುಗಳಾದ ಬ್ರಿಟಿಷ್ ಇಂಡಿಯಾ ಸರ್ಕಾರದವರು ನಿರ್ಣಯಿಸಿದರು ರಾಮಚಂದ್ರನ ತಾಯಿಯು ಈ ವಾರ್ತೆಯನ್ನು ಕೇಳುತ್ತಲೇ ಸಂತೋಷದಿಂದ ತನ್ನ ಮಗನನ್ನು ಶಾಲೆಗೆ ಕಳುಹಿಸಿ ಆ ವೇತನವನ್ನು ಕುಟುಂಬ ಪೋಷಣೆಗೆಂದು ಸ್ವೀಕರಿಸಿದಳು ಇದರಿಂದ ರಾಮಚಂದ್ರನ ದಾರಿದ್ರ್ಯವೇ ಆತನ ವಿದ್ಯಾರ್ಜನೆಗೆ ಆಧಾರವಾಗಿ ಪರಿಣಮಿಸಿತು

ಆಗ ಹತ್ತು ವರುಷ ಪ್ರಾಯದವನಾಗಿದ್ದ ಈ ಬಾಲಕನು ಬಹಳ ಕಷ್ಟಪಟ್ಟು ಓದಿ ಕಲಿತು ದೊರೆತ ಮೇಲೆ ತಾನು ವ್ಯಾಸಂಗಮಾಡಿದ ಆ ಮಹಾಪಾಠಶಾಲೆಯಲ್ಲಿ ಮೊದಲು ಉಪಾಧ್ಯಕ್ಷನಾಗಿ ಅನಂತರ ಗಣಿತವನ್ನು ಬೋಧಿಸುವ ಅಧ್ಯಕ್ಷ ಪದವಿಗೆ ಬಂದನು ಈತನು ವಿದ್ಯೆಯಲ್ಲಿ ಅಭಿವೃದ್ಧಿ ಹೊಂದುತ್ತ ಬಂದಾಗ ಹಿಂದೂಮತದ ಧರ್ಮತತ್ವಗಳಲ್ಲಿ ಈತನಿಗಿದ್ದ ಭಕ್ತಿಯು ಸಡಿಲವಾಯಿತು ಈತನು ವಿಗ್ರಹಾರಾಧನೆ, ಜಾತಿಭೇದ ಮುಂತಾದ ಅಜ್ಞಾನ ಪದ್ಧತಿಗಳನ್ನು ತ್ಯಜಿಸಿ ಇತರ ಮತಗ್ರಂಥಗಳನ್ನು ಸಹ ಲಕ್ಷ್ಯವಿಡದೆ ಕೇವಲ ಅಸಡ್ಡೆಯಿಂದ ತಿರಸ್ಕರಿಸುತ್ತಿದ್ದನು ಒಂದು ದಿನ ಒಬ್ಬಾನೊಬ್ಬ ಪಾದ್ರಿಯು ದೇಹಲಿ ಪಟ್ಟಣದ ಬಾಜಾರದಲ್ಲಿ ಕ್ರೈಸ್ತಮತ ಧರ್ಮವನ್ನು ಬೋಧಿಸುವ ಕೆಲವು ಪುಸ್ತಕಗಳನ್ನು ಈತನಿಗೆ ಕೊಡಲು—ಅವುಗಳನ್ನು ನಾನು ಓದುವದಕ್ಕೆ ಅನರ್ಹವಾದವುಗಳೆಂದು ನಮ್ಮ ಮನೆಯ ಗೂಡಿನಲ್ಲಿ ಬಿಸಾಡಿದೆನೆಂದು ಈತನೇ ಬರೆದಿದ್ದಾನೆ ಸತ್ಯವೇದ (ಬೈಬಲು) ವನ್ನು ಆಗಾಗ್ಗೆ ಓದಿದರೂ ಇಂಗ್ಲಿಷ್ ಭಾಷಾಭ್ಯಾಸಕ್ಕೂ ಮತ್ತು ಚರಿತ್ರೆಯನ್ನು ಗ್ರಹಿಸುವದಕ್ಕೂ ಓದಿದನೇ ಹೊರತು ಭಕ್ತಿಯಿಂದ ಓದಲಿಲ್ಲ ಇಂಗ್ಲಿಷ್ ಅಧಿಕಾರಿಗಳನ್ನೂ ಹುದ್ದೇದಾರರನ್ನೂ ಈತನು ಬಹಳ ಗೌರವದಿಂದ ಕಾಣುತ್ತಿದ್ದನು ಆದರೂ ಅವರು ಅನುಸರಿಸಿರುವ ಮತವು ಸತ್ಯವಾದದ್ದೋ ಏನೋ? ಎಂಬ ವಿಚಾರವನ್ನು ಮಾತ್ರ ಆತನು ಮಾಡ ಮನಸಿಲ್ಲದವನಾಗಿದ್ದನು

ಆದರೆ ಇಂಥಾ ಅವಿಚಾರ ಸ್ಥಿತಿಯಲ್ಲಿ ಆತನು ಬಹಳ ಕಾಲ ಇರಲಿಲ್ಲ ಹ್ಯಾಗೆಂದರೆ,—ಒಂದು ದಿನ ಆತನ ವಿದ್ಯಾರ್ಥಿಯೊಬ್ಬನು "ಇಂಗ್ಲಿಷರು ದೇವಾರಾಧನೆ ಮಾಡುವ ಕ್ರಮವನ್ನು ನೋಡಬೇಕೆಂದು" ಅಪೇಕ್ಷಿಸಿದ್ದರಿಂದ ರಾಮಚಂದ್ರನು ಆದಿತ್ಯವಾರದ ಸಾಯಂಕಾಲ ದೇವಾರಾಧನೆಯ ಸಮಯಕ್ಕೆ ಸರಿಯಾಗಿ ಆ ವಿದ್ಯಾರ್ಥಿಯನ್ನು ತಾನೆ ಕರೆದುಕೊಂಡು ಆ ಪಟ್ಟಣದಲ್ಲಿದ್ದ ಒಂದು ಕ್ರೈಸ್ತ ದೇವಾಲಯಕ್ಕೆ ಹೋದನು ಅಲ್ಲಿ ತನಗೆ ಪರಿಚಿತರಾಗಿದ್ದ ಅನೇಕ ಮಂದಿ ಅಧಿಕಾರಿಗಳು ಸಾಧಾರಣ ಜನರೊಂದಿಗೆ ಸೇರಿ ಬಹು ಭಕ್ತಿಯಿಂದ ಸಂಗೀತಗಳನ್ನು ಹೇಳುತ್ತ ಅಡ್ಡಬಿದ್ದು ಪ್ರಾರ್ಥನೆ ಮಾಡುತ್ತಿರುವುದನ್ನು ನೋಡಿ ಬಹಳ ವಿಸ್ಮಯಭರಿತನಾದನು ಆ ಜನಗಳು ತನ್ನ ಹಾಗೆ ವಿದ್ಯಾಸಂಪನ್ನರೂ ಅಧಿಕಾರಿಗಳೂ ಐಶ್ವರ್ಯವಂತರೂ ಆಗಿದ್ದರೂ ದೇವರ ಮುಂದೆ ತಮ್ಮನ್ನು ಅತಿ ದೈನ್ಯದಿಂದ ತಗ್ಗಿಸಿಕೊಂಡು ಆತನ ಮುಂದೆ ತಾವು ಪಾಪಿಗಳೆಂದೂ ಅರಿಕೆ ಮಾಡಿ ಕ್ಷಮೆಯನ್ನು ಬೇಡುತ್ತಿರುವದನ್ನು ನೋಡಿ—ಅಯ್ಯೋ ನಾನು ಎಂಥಾ ಕಠಿಣ ಚಿತ್ತನು ಎಷ್ಟು ದುರಹಂಕಾರಿ, ಇಂಥಾ ಜನಗಳೂ ಕೂಡ ಭಯ ಭಕ್ತಿಗಳಿಂದ ಆರಾಧಿಸುವ ದೇವರು ಯಾರು? ಆತನು ಎಂಥವನು? ಎಂದು ವಿಚಾರಿಸದೆ ಇದ್ದೆನೆ ಎಂದು ಮನಸ್ಸಿನಲ್ಲಿ ತಪಿಸಿದನು ಆರಾಧನೆ ಮುಗಿಯುತ್ತಲೇ ಮನೆಗೆ ಬಂದು ಗೂಡಿನಲ್ಲಿ ತಿರಸ್ಕಾರದಿಂದ ಬಿಸಾಡಿದ್ದ ಬೈಬಲನ್ನೂ ಕ್ರೈಸ್ತಮತದ ಇತರ ಗ್ರಂಥಗಳನ್ನೂ ತೆಗೆದು ಶೋಧಿಸಿ ಅವುಗಳನ್ನು ಆಸಕ್ತಿಯಿಂದ ಓದುವವನಾದನು ಮತ್ತು ಈ ಮತದ ನಿಜಾರ್ಥವನ್ನು ತಿಳಿಯುವವರೆಗೂ ವಿಶ್ರಾಂತಿ ಹೊಂದದೆ ಆದಕ್ಕಾಗಿ ತನಗೆ ಮೊದಲಿಂದಲೂ ಬಹಳ ಪ್ರೀತಿಪಾತ್ರವಾಗಿದ್ದ ಗಣಿತ ಶಾಸ್ತ್ರಾಭ್ಯಾಸವನ್ನು ಸಹ ಬಿಟ್ಟನು ಮತ್ತು ತನ್ನ ಮನಸ್ಸನ್ನು ಯೇಸುಕ್ರಿಸ್ತನ ಮುಖಾಂತರ ದೇವರ ಕಡೆಗೆ ಏಕಚಿತ್ತದಿಂದ ತಿರುಗಿಸಿ ಪ್ರಾರ್ಥನೆ ಮಾಡಲಾರಂಭಿಸಿದನು ಕ್ರೈಸ್ತ ಪಾದ್ರಿಗಳು ದೇವರ ಚಿತ್ತವನ್ನು ಬೋಧಿಸುವ ಆತನ ಸೇವಕರೆಂದು ಗ್ರಹಿಸಿದನು

ಹಿಂದೂ ದೇಶದಲ್ಲಿ ಒಬ್ಬನು ಯಾವ ಮತವನ್ನಾದರೂ ಅಂತರಂಗದಲ್ಲಿ ನಂಬಿ ಯಾವ ದೇವರನ್ನಾದರೂ ತನ್ನ ಮನಸ್ಸಿನಲ್ಲಿ ಸ್ಮರಿಸಿ ಪೂಜಿಸಬಹುದು ಆದರೆ ಯಾರಾದರೂ ಬಹಿರಂಗವಾಗಿ ಹಿಂದೂ ಮತವು ದೇವರಿಂದ ಬಂದದ್ದಲ್ಲವೆಂದು ಹೇಳಿ ಕ್ರೈಸ್ತನಾಗಬೇಕೆಂದು ಎಲ್ಲರ ಮುಂದೆ ದೀಕ್ಷಾಸ್ನಾನವನ್ನು ಹೊಂದಿ ಕ್ರಿಸ್ತನನ್ನು ಸ್ವೀಕರಿಸಿದರೆ ಅಂಥವನಿಗೆ ಅನೇಕ ಹಿಂಸೆಗಳು ತರಂಗತರಂಗಗಳಾಗಿ ಬರುತ್ತವೆಂಬುದು ಎಲ್ಲರಿಗೂ ಮುಂದಟ್ಟಾಗಿಯೇ ಇದೆ ರಾಮಚಂದ್ರನು ಗುಟ್ಟಾಗಿ ಕ್ರಿಸ್ತಭಕ್ತನಾಗಿದ್ದುಕೊಂಡು ಬಹಿರಂಗವಾಗಿ ಸ್ವಜಾತಿಯಲ್ಲಿರುವವನಂತೆ ನಟಿಸಿದ್ದರೆ ಆತನು ಈ ಕಷ್ಟ ಪರಂಪರೆಗಳನ್ನು ತಪ್ಪಿಸಿಕೊಳ್ಳುವದು ಸುಲಭಸಾಧ್ಯವಾಗಿತ್ತು ಆತನು ಇವೆರಡು ಮಾರ್ಗಗಳಲ್ಲಿ ಯಾವದನ್ನು ಅವಲಂಬಿಸಲಿ ಎಂದು ಕೆಲವು ಕಾಲ ಸ್ಥಿರ ಚಿತ್ತವಿಲ್ಲದೆ ಅಡ್ಡಾಡುತ್ತಿದ್ದರೂ ಯೇಸುಕ್ರಿಸ್ತನಲ್ಲಿ ಭಕ್ತಿಯುಳ್ಳವನು ಬಹಿರಂಗವಾಗಿ ಆತನ ಶಿಷ್ಯನಾಗುವದೇ ಉತ್ತಮೋತ್ತಮವಾದ ಮಾರ್ಗವೆಂದು ಸ್ಪಷ್ಟವಾಗಿ ತಿಳಿದಿದ್ದನು ಆ ವೇಳೆಯಲ್ಲಿ ತನ್ನ ಮನಸ್ಸಿನೊಳಗೆ ನಡೆಯುತ್ತಿದ್ದ ಹೋರಾಟವನ್ನು ಕುರಿತು ತನ್ನ ದಿನಚರಿ ಪುಸ್ತಕದಲ್ಲಿ ಆತನು ಬರೆದಿರುವದೇನಂದರೆ—೧೮೫೨ ನೇ ಜುಲೈ ತಿಂಗಳು ರಾಮಚಂದ್ರನೆಂಬ ನಾನು "ನನ್ನನ್ನು ಬಹಿರಂಗವಾಗಿ ಯೇಸುಕ್ರಿಸ್ತನ ಶಿಷ್ಯನನ್ನಾಗಿ ಮಾಡಿಕೊ" ಎಂದು ನನ್ನ ರಕ್ಷಕನಾದ ದೇವರನ್ನು ದೈನ್ಯದಿಂದ ಬೇಡುತ್ತಿದ್ದೇನೆ ಕ್ರಿಸ್ತನ ಶಿಷ್ಯನಾಗಿದ್ದೇನೆಂದು ಬಹಿರಂಗವಾಗಿ ಆತನ ದೀಕ್ಷಾಸ್ನಾನವನ್ನು ಸ್ವೀಕರಿಸುವದು ಬಹಳ ಕಷ್ಟವಾಗಿ ಕಾಣುತ್ತದೆ ನಾನು ಕ್ರೈಸ್ತನಾದರೆ ನನ್ನ ಈ ವಾರ್ತೆಗಳಿಗೆ ತಕ್ಕ ಪದವನ್ನು ಸಂಪಾದಿಸುವದು ದುರ್ಲಭ ಇದೂ ಅಲ್ಲದೆ ಒಬ್ಬ ದೊಡ್ಡ ಪಂಡಿತರು ಕಲ್ಕತ್ತಾದಲ್ಲಿ ನನ್ನನ್ನು ಭಾರೀ ಉದ್ಯೋಗಕ್ಕೆ ಶಿಫಾರಸು ಮಾಡಿದರು ಆದರೆ ನಾನು ಕ್ರೈಸ್ತನಾಗಬೇಕೆಂಬ ಮನಸ್ಸುಳ್ಳವನಾಗಿದ್ದೇನೆಂದು ಅವರು ತಿಳಿದ ಕೂಡಲೆ—ನಿನ್ನನ್ನು ಶಿಫಾರಸು ಮಾಡಿ ಆ ಉದ್ಯೋಗವನ್ನು ನಿನಗೆ ಕೊಡಿಸುವದಿಲ್ಲ ಎಂದು ಬರೆದಿರುವರು ಇತ್ತ ಈ ಕಷ್ಟಗಳನ್ನು ಸಹಿಸುವದು ಕಷ್ಟವಾಗಿದೆ ಅತ್ತಲಾಗಿ ನಾನು ಕ್ರಿಸ್ತನ ಭಕ್ತನಾಗಿ ಮನೋವಾಕ್ಕಾಯಗಳಿಂದ ಆತನನ್ನು ಆಶ್ರಯಿಸದೆ ಇದ್ದರೆ ನನ್ನ ರಕ್ಷಣೆಗೆ ಎಡೆಯಾಗಲಾರದು ನಾನೇನು ಮಾಡಲಿ ಎಂಬುದೇ

ಇಂಥಾ ಸ್ಥಿತಿಯಲ್ಲಿ ರಾಮಚಂದ್ರನು ಮಾಡಿದ್ದರೂ ಕ್ರೈಸ್ತದೇವಾರಾಧನೆಗೆ ಹೋಗುವದನ್ನು ಮಾತ್ರ ಬಿಡಲಿಲ್ಲ ಮತ್ತು ಬಹಳ ಕಾಲ ಇಂಥಾ ಸಂದೇಹಗಳಿಂದ ಕೊರಗುತ್ತಿರಲಿಲ್ಲ ಯಾಕೆಂದರೆ ಆತನಿಗೆ ಸಹೃದಯನಾದ ಮನಸುಳ್ಳ ಒಬ್ಬ ಮಿತ್ರನು ಆತನಿಗೆ ದೊರಕಿದನು ಈತನು ದೆಹಲೀ ಪಟ್ಟಣದ ಆಸ್ಪತ್ರೆಯಲ್ಲಿ ವೈದ್ಯನಾಗಿದ್ದ ಚಿಮನ್‍ಲಾಲನು ಈತನು ರೆವರೆಂಡ್ ಜಾಕ್ಸನ್ ಎಂಬ ಪ್ರಸಿದ್ಧರಾದ ಪಾದ್ರಿಗಳಿಂದ ಶಿಕ್ಷಿತನಾಗಿದ್ದನು ಕಡೆಗೆ ಇವರಿಬ್ಬರು ಅತಿ ಧೈರ್ಯವನ್ನಾಂತು ಬಹಿರಂಗವಾಗಿ ಯೇಸುಸ್ವಾಮಿಯೇ ತಮ್ಮ ರಕ್ಷಕನೆಂದು ಒಪ್ಪಿಕೊಂಡು ದೀಕ್ಷಾಸ್ನಾನ ಸಂಸ್ಕಾರವನ್ನು ಪಡೆದರು ಇದು ಊರಲ್ಲಿ ತಿಳಿದ ಕೂಡಲೆ ರಾಮಚಂದ್ರನ ಪತ್ನಿಯೂ ಮತ್ತು ಸಹೋದರರು ಆತನನ್ನು ತಮ್ಮ ಮನೆಯಿಂದ ಬಹಿಷ್ಕರಿಸಿ ಆತನನ್ನು ನೋಡುವದಕ್ಕೆ ಸಹ ಮನಸ್ಸಿಲ್ಲದವರಾದರು ಆತನ ಪೂರ್ವದ ಸ್ನೇಹಿತರೆಲ್ಲರೂ ಆತನನ್ನು ತಿರಸ್ಕರಿಸಿ ಆತನನ್ನು ಬಿಟ್ಟಗಲಿದರು ಆತನ ಸೇವಕರು ಸಹ ಒಗ್ಗಟ್ಟಾಗಿ ಆತನ ಬಳಿಗೆ ಬಂದು ನಾವಿನ್ನು ನಿಮ್ಮ ಸೇವಕರಾಗಿರಲಾರೆವೆಂದು ಹೇಳಿದರು ಆದರೂ ರಾಮಚಂದ್ರನು ತನ್ನ ಪ್ರೀತಿ, ಸದ್ಗುಣ, ಸಜ್ಜನತೆ, ಔದಾರ್ಯಗಳಿಂದ ತಾನು ಮುಂಚಿಗಿಂತಲೂ ಯೇಸುಕ್ರಿಸ್ತನ ಮುಖಾಂತರ ಉತ್ತಮನಾಗಿದ್ದೇನೆಂದು ಪ್ರತ್ಯಕ್ಷ ಪಡಿಸಿದನು ಆತನು ಕ್ರೈಸ್ತನಾದ ಮೇಲೆ ಕೆಟ್ಟುಹೋಗದೆ ಉತ್ತಮನಾಗಿದ್ದಾನೆಂದು ತಿಳಿದು ಆತನ ಪತ್ನಿಯು ಆತನನ್ನು ಸೇರಿದಳು, ಮತ್ತು ಕ್ರಮೇಣ ಆತನ ಅಣ್ಣ ತಮ್ಮಂದಿರೂ ಬಂಧುಗಳೂ ಗೆಳೆಯರೂ ಆತನನ್ನು ಹಿಮ್ಮಡಿಯಾಗಿ ಗೌರವಿಸಿ ಸ್ನೇಹಿಸಿದರು ಆತನು ಅಂಧಕಾರ ಭರಿತವಾದ ಈ ಲೋಕದಲ್ಲಿ ಜ್ಯೋತಿರ್ಮಂಡಲದಂತೆ ಪ್ರಕಾಶಿಸುತ್ತಿದ್ದನು ಇದಲ್ಲವೇ ನಿಜ ಕ್ರೈಸ್ತ ಭಕ್ತನ ಲಕ್ಷಣ

ಒಳದೇಶದ ವೃತ್ತಾಂತಗಳು.

ಕುಣಿಗಲ ತಾಲ್ಲೂಕು ಹುಲಿಗೊಂಡನಹಳ್ಳಿಯಲ್ಲಿ ಪ್ರಜೆಗಳು ಒಂದು ಪರಸ್ಪರ ಸಹಾಯಕ ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ

ಮೈಸೂರು ಪಟ್ಟಣದಲ್ಲಿ ಈಗ ಇರುವಂಥಾ ಮ್ಯುನಿಸಿಪಲ್ ಕೌನ್ಸಿಲರುಗಳೇ ಮುಂದಿನ ಜೂನ್ ಆಖೈರು ವರೆಗೂ ಇರತಕ್ಕದ್ದೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ

ಶ್ರೀಮನ್‍ಮಹಾರಾಜರವರು ಪರಿವಾರ ಸಹಿತ ಕಳೆದ ಸೋಮವಾರ ರಾತ್ರಿ ಬೆಂಗಳೂರಿನಲ್ಲಿ ರೈಲು ಹತ್ತಿ ಬೊಂಬಾಯಿಗೆ ದಯಮಾಡಿದರು ಅವರು ಅಲ್ಲಿ ೧೦—೧೨ ದಿನಗಳ ತನಕ ಇರುತ್ತಾರೆಂದು ತಿಳಿಯುವುದು

ನಂಜನಗೂಡಿನಲ್ಲಿ ನಡೆದ ಮೊಹರಂ ಮೆರವಣಿಗೆಯ ಗಲಾಟೆಯಲ್ಲಿ ಸರ್ಕಾರದವರು ಆರು ಮಂದಿ ಮುಖಂಡರನ್ನು ದಸ್ತಗಿರಿ ಮಾಡಿದಾರೆಂದೂ, ಇನ್ನೂ ಹೆಚ್ಚು ಪೋಲೀಸ್ ಶಿಬ್ಬಂದಿಯನ್ನು ಅಲ್ಲಿಯೇ ಇಟ್ಟಿದ್ದಾರೆಂದೂ ಕೇಳುತ್ತೇವೆ

ಬೆಂಗಳೂರು ಪಟ್ಟಣದಲ್ಲಿ ಮೆ|| ದೊಡ್ಡಣ್ಣನವರ ಧರ್ಮಪಾಠಶಾಲೆಯಲ್ಲಿ ಹುಡುಗರಿಗೆ ಕಸಬನ್ನು ಕಲಿಸಲಾರಂಭಿಸಿದ್ದಾರೆಂದೂ, ಇದಕ್ಕಾಗಿ ಸರ್ಕಾರದವರು ತಿಂಗಳಿಗೆ ೧೦೦ ರೂಪಾಯಿ ಗ್ರ್ಯಾಂಟು ಕೊಡುತ್ತಿದ್ದಾರೆಂದೂ ಪ್ರಕಟವಾಗಿದೆ

ಬರೋಡಾ ಸಂಸ್ಥಾನದಲ್ಲಿ ಪ್ರಜೆಗಳ ಮಕ್ಕಳಿಗೆಲ್ಲಾ ಫೀಜಿಲ್ಲದೆ ಬಲಾತ್ಕಾರವಾಗಿ ವಿದ್ಯೆ ಕಲಿಸುವ ವಿಧಾನವನ್ನು ಅಜಮಾಯಿಷಿ ಮಾಡಿಕೊಂಡು ಬರುವುದಕ್ಕಾಗಿ ಹೋಗಿದ್ದ ಮೆ|| ಎಚ್ ಜೆ ಭಾಭಾ ಅವರು ಕಳೆದ ವಾರ ವಾಪಸು ಬಂದರು

ರಾಜಧಾನಿಯಲ್ಲಿ ಕಳೆದ ತಿಂಗಳೊಳಗೆ ಒಂದು ವಾರವೆಲ್ಲಾ ವಿದ್ಯುಚ್ಛಕ್ತಿಯ ದೀಪಗಳಿರಲಿಲ್ಲ ಈಚೆಗೆ ಮೊನ್ನೆ ಭಾನುವಾರವೂ ಕತ್ತಲು ಕವಿದಿತ್ತು ಹೀಗೆ ಆಗೋಣದರಿಂದ ರಾತ್ರಿಹೊತ್ತು ಜನಸಂಚಾರಕ್ಕೂ ಪೋಲೀಸ್ ಉದ್ಯೋಗಿಗೂ ತುಂಬಾ ತೊಂದರೆಯುಂಟಾಗುತ್ತದೆ

ಕೊಡಗು ತಿಗ್ಗತ್ನಾಡು ಪಂಚಗ್ರಾಮದ ಮಹಾಶಿವರಾತ್ರಿ ಇರ್ಪು ಜಾತ್ರೆಗೂ, ನೀಲಗಿರಿದ ತಾಲ್ಲೂಕು ನವಿಲು ನರಸಿಂಹಸ್ವಾಮಿ ಜಾತ್ರೆಗೂ ಈ ಸಲ ಹೊರಗಿನ ಜನರನ್ನು ಬಿಡುವುದಿಲ್ಲವೆಂದೂ, ಪ್ಲೇಗ್ ಮೊದಲಾದ ಸಾಂಕ್ರಾಮಿಕ ರೋಗಗಳಿಗೆ ಅವಕಾಶವಾಗಬಹುದೆಂದೂ ಸರ್ಕಾರದವರು ನಿರ್ಣಯಪಡಿಸಿದ್ದಾರೆ

ಹುಣಸೂರಿನಲ್ಲಿದ್ದ ಮೈ ವಿಲ್ಸಂ ಇನ್ಸ್‍ಪೆಕ್ಟರ್ ಅವರಿಗೆ ಅಲ್ಲಿಂದ ತರೀಕೆರೆಗೆ ವರ್ಗವಾಯಿತು ಅಲ್ಲಿನ ಕೆಲವು ಜನರು ಸೇರಿ ಅವರಿಗೆ ಔತಣವನ್ನು ಮಾಡಿ ಅಡ್ರೆಸ್ ಓದಿ ಅವರಲ್ಲಿ ತಮಗಿದ್ದ ಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು ಇದಕ್ಕಾಗಿ ಅಲ್ಲಿ ನಡೆದ ಸಂತೋಷಕಾರ್ಯಗಳೆಲ್ಲಾ ಪ್ರಕಟಿಸಲು ಸ್ಥಳ ಸಂಕೋಚವಾಗಿರುತ್ತದೆ

ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಪ್ರತಿ ಒಂದು ತಾಲ್ಲೂಕಿನಲ್ಲೂ ಎರಡು ಹೋಬಳಿಗಳಲ್ಲಿ ಅಂದರೆ, ಕಸಬಾಹೋಬಳಿಯಲ್ಲೂ ಅದಕ್ಕೆ ಸೇರಿದ ಇನ್ನೊಂದು ಹೋಬಳಿಯಲ್ಲೂ ಬಲಾತ್ಕಾರವಾಗಿ ಮಕ್ಕಳಿಗೆ ಶಿಕ್ಷಣಕೊಡುವ ಕಾನೂನನ್ನು ಒಂದು ವರುಷದ ತನಕ ಮಾದರಿಯಲ್ಲಿ ತಂದು ಅಜಮಾಯಿಷಿ ಮಾಡಬೇಕೆಂದೂ, ಮುಂದಿನ ವರುಷ ಕೊಳವೇ ಭಾವಿಗಳನ್ನು ತೋಡುವುದಕ್ಕೆ ಎರಡು ದಜನ್ ಯಂತ್ರಗಳನ್ನು ತರಿಸಬೇಕೆಂದೂ, ಶಾಲೆಗಳ ಪ್ರಯೋಜನಕ್ಕೆ ಸೇರಿರುವ ದಸ್ತೆಯನ್ನು ಮುಜರಾಯಿ ಫಂಡಿನಿಂದಲೇ ದುರಸ್ತುಮಾಡಿಸಬೇಕೆಂದೂ ಡಿಸ್ಟ್ರಿಕ್ಟ್ ಬೋರ್ಡಿನವರು ಗೊತ್ತುಮಾಡಿದ್ದಾರೆ

ಚನ್ನಪಟ್ಟಣದ ಮೆ| ಎಸ್ ... ... ಎಂಬುವರು ಕಳೆದ ೧೯೦೭ನೇ ಜೂನ್ ವರೆಗೆ "ಸುಭಾಷಿಣಿ" ಎಂಬ ವಾರ ಪತ್ರಿಕೆಯನ್ನು ಪ್ರಕಟಿಸುತ್ತಿದ್ದು ಆ ತರುವಾಯ ತಾವಾಗಿಯೇ ನಿಲ್ಲಿಸಿ, ಈಗ ಅದನ್ನು ಮತ್ತೆ ಪ್ರಕಟಿಸುವುದಕ್ಕೆ ಅಪ್ಪಣೆಯಾಗಬೇಕೆಂದು ಸರ್ಕಾರದವರನ್ನು ಕೇಳಿದರು ಗವರನ್‍ಮೆಂಟಿನವರು ಆ ಪತ್ರಿಕೆಯ ಹಿಂದಣ ಕೆಲವು ಸಂಚಿಕೆಗಳನ್ನು ತರಿಸಿ ನೋಡಿ, ಒಂದೆರಡು ವಿಷಯಗಳು ಬಹಳ ಆಕ್ಷೇಪಣೀಯವಾಗಿದ್ದದ್ದರಿಂದ ಅವರು ಅಂಥಾ ಸಂಗತಿಗಳನ್ನು ಕುರಿತು ಮತ್ತೆ ಬರೆಯುವುದಿಲ್ಲವೆಂದು ಬೆಂಗಳೂರು ಡೆಪ್ಟಿ ಕಮಿಷನರವರಿಗೆ ಬರಹ ಮೂಲಕವಾಗಿ ಭರವಸೆಯನ್ನು ಕೊಡುವ ಪಕ್ಷಕ್ಕೆ ಅವರಿಗೆ ಆ ಪತ್ರಿಕೆಯನ್ನು ಪ್ರಕಟಿಸಲು ಅಪ್ಪಣೆಕೊಡಬಹುದೆಂದು ಹುಕುಂ ಮಾಡಿರುತ್ತಾರೆ

ಅರಸೀಕೆರೆಯಲ್ಲಿ ಹಾರನಹಳ್ಳಿ ಸಾಹುಕಾರ್ ಮೆ|| ನರಸಿಂಹಶೆಟ್ಟರು ಸುಮಾರು ೫—೬ ಸಾವಿರ ರೂಪಾಯಿ ಖರ್ಚು ಮಾಡಿ ಒಂದು ದೇವಾಲಯವನ್ನು ಕಟ್ಟಿಸಿದರು ಕಳೆದ ವಾರ ಅಲ್ಲಿನ ವರ್ತಕರೇ ಮುಂತಾದವರು ಸೇರಿ ಶಿವಪಂಚಾಯತನವನ್ನು ಪ್ರತಿಷ್ಠೆ ಮಾಡಿಸಿ ಉತ್ಸವಾದಿಗಳನ್ನೂ ದಾನಧರ್ಮಗಳನ್ನೂ ಸಂತರ್ಪಣೆಗಳನ್ನೂ ನಡಿಸಿದರು ಆಗ ಮುಜರಾಯಿ ಸೂಪರಿಂಟೆಂಡೆಂಟರವರು ಅಲ್ಲಿದ್ದು ಆ ಕಾರ್ಯಗಳನ್ನೆಲ್ಲಾ ಪರಾಂಬರಿಸಿದರು ದೇವಸ್ಥಾನದಲ್ಲಿ ಮುಂದೆ ನಡೆಯಬೇಕಾದ ನಿತ್ಯಗಟ್ಲೆ ಕಾರ್ಯಗಳಿಗೆ ಮೆ|| ನರಸಿಂಹಶೆಟ್ಟರು ೫,೦೦೦ ರೂಪಾಯಿಯನ್ನು ಸರ್ಕಾರಕ್ಕೆ ವಹಿಸಿರುತ್ತಾರೆ ಮತ್ತು ಈ ಉತ್ಸವ ಕಾಲದಲ್ಲಿ ೫—೬ ಮಂದಿ ಬಡ ಬಾಲಕರಿಗೆ ಉಪನಯನಗಳೂ ನಡೆಸಲ್ಪಟ್ಟವು ಎಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ

ಸರ್ಕಾರಿ ಹುಕುಮುಗಳು ಇಂಗ್ಲಿಷಿನಲ್ಲಿ ಪ್ರಕಟವಾಗೋಣದರಿಂದ ಪ್ರಜೆಗಳು ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲವೆಂತಲೂ, ಕನ್ನಡದಲ್ಲೂ ಪ್ರಕಟಿಸಿದರೆ ಕ್ರಯಕೊಟ್ಟು ತೆಗೆದುಕೊಳ್ಳುತ್ತೇವೆಂತಲೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಗವರನ್‍ಮೆಂಟಿನವರನ್ನು ಕೇಳಿಕೊಳ್ಳುತ್ತಾ ಬಂದರು ಸರ್ಕಾರದವರು ಅದೇ ಪ್ರಕಾರ ಒಂದು ವರುಷದಿಂದ ಹುಕುಂಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿ ಬಿಕರಿಗೆ ಸಿದ್ಧಮಾಡಿಕೊಡುತ್ತಾ ಬಂದಿದ್ದಾರೆ ಪ್ರಜೆಗಳು ಒಂದು ವರುಷದಲ್ಲಿ ೬|| ಆಣೆಯಷ್ಟು ಹುಕುಂಗಳನ್ನು ಮಾತ್ರ ಕೊಂಡುಕೊಂಡಿರುವರು ಇದರಿಂದ ಅಷ್ಟೇನೂ ಪ್ರಯೋಜನವಾಗಲಿಲ್ಲವಾದದ್ದರಿಂದ ಇನ್ನು ಮುಂದೆ ಈ ತರ್ಜುಮೆ ಮಾಡುವುದನ್ನು ನಿಲ್ಲಿಸಬೇಕೆಂದು ಕೇಳಿದ್ದಕ್ಕೆ ಗವರನ್‍ಮೆಂಟಿನವರು ಪರೀಕ್ಷಾರ್ಥವಾಗಿ ಇನ್ನೊಂದು ವರುಷ ಆ ಹುಕುಮನ್ನು ಜಾರಿಯಲ್ಲಿಟ್ಟು ನೋಡಬೇಕೆಂದು ಅಪ್ಪಣೆಕೊಡಿಸಿದ್ದಾರೆ

ಆಯುರ್ವೇದ ಮಹಾಸಭೆಯು

ಮಲಬಾರು ಜಿಲ್ಲಾ ಕೊಳ್ಳೆಂಗೋಡು ಪಟ್ಟಣದ ರಾಜಾ ಹೈ ಸ್ಕೂಲ್ ಕಟ್ಟಡದಲ್ಲಿ ಒಂದು ವಾರದ ಕೆಳಗೆ ಆರ್ಯ ವೈದ್ಯ ಸಮಾಜದವರು ಐಳನೆಯ ಆಯುರ್ವೇದ ವೈದ್ಯ ಸಮಾಜವನ್ನು ನಡಿಸಿದರು. ಮಲಬಾರ್, ತಿರುವಾಂಕೂರು (ಅನಂತಶಯನ), ಕೊಚ್ಚಿ ಪ್ರಾಂತ್ಯಗಳಿಂದಲೂ ಮದರಾಸ್ ಪ್ರಾಂತ್ಯದಿಂದಲೂ ನೂರಾರು ಮಂದಿ ಪಂಡಿತರೂ ಪ್ರೋತ್ಸಾಹಕರೂ ಹೋಗಿದ್ದರು. ಕೊಳ್ಳೆಂಗೋಡು ರಾಜರವರ ಸಹೋದರರಾದ ಮೆ|| ಮಾಧವರಾಜರವರು ಮುಂದಾಳಾಗಿ ನಿಂತು, ಸಮಾಜದ ಏರ್ಪಾಡುಗಳನ್ನೆಲ್ಲಾ ಮಾಡಿಸಿದ್ದಲ್ಲದೆ ಪ್ರತಿನಿಧಿಗಳ ಆಹಾರ ವಿಹಾರಗಳಿಗೂ ಅನೇಕ ಸೌಕರ್ಯಗಳನ್ನು ಕಲ್ಪಿಸಿದ್ದರು. ಮದರಾಸ್ ಪಟ್ಟಣದ ಆಯುರ್ವೇದ ವಿದ್ಯಾಶಾಲೆಯ ಮುಖ್ಯ ಪಂಡಿತರಾದ ಮೆ|| ಡಿ. ಗೋಪಾಲಾಚಾರ್ಯರು ಸಭೆಯ ಪ್ರೆಸಿಡೆಂಟರಾಗಿ ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಮೆ|| ಮಾಧವರಾಜರವರು ಪ್ರತಿನಿಧಿಗಳಿಗೆಲ್ಲಾ ಸುಸ್ವಾಗತವನ್ನು ಬಯಸಿ, ಈ ಸಭೆಯ ಕಾರ್ಯಗಳನ್ನು ಸಾರ್ಥಕ ಪಡಿಸಬೇಕೆಂದು ಪ್ರಾರ್ಥಿಸಿದರು. ಸೆಕ್ರಿಟರಿಯವರ ಪರವಾಗಿ ಮೆ|| ಕೃಷ್ಣವಾರ್ಯರು ಸಮಾಜದ ವಾರ್ಷಿಕ ರಿಪೋರ್ಟನ್ನು ಓದಿದರು.

ಎರಡನೇ ದಿನದ ಸಭೆಯಲ್ಲಿ ವೈದ್ಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆಲ್ಲಾ ಪ್ರೆಸಿಡೆಂಟರು ಸರ್ಟಿಫಿಕೇಟುಗಳನ್ನು ಹಂಚಿ ಕೊಟ್ಟರು. ಕೊಚ್ಚಿಯ ರಾಜಕುಮಾರರು ಆ ವಿದ್ಯಾರ್ಥಿಗಳಿಗೆ ಕೆಲವು ಬುದ್ಧಿವಾದಗಳನ್ನು ಹೇಳಿ ಉಪನ್ಯಾಸ ಮಾಡಿದರು. ಔಷಧಗಳನ್ನೂ ಮೂಲಿಕೆಗಳನ್ನೂ ಪ್ರದರ್ಶನ ಮಾಡಿದ್ದ ಪಂಡಿತರುಗಳಿಗೆ ಮೆ|| ಶಂಕರಶರ್ಮರವರು ಮೆಡಲುಗಳನ್ನು ಕೊಟ್ಟು, ಮುಂದಿನ ವರುಷ ವೈದ್ಯ ಪರೀಕ್ಷೆಯಲ್ಲಿ ಮೊದಲನೆಯವನಾಗಿ ತೇರ್ಗಡೆ ಹೊಂದುವ ವಿದ್ಯಾರ್ಥಿಗೆ ಚಿನ್ನದ ಮೆಡಲನ್ನು ಕೊಡುವುದಾಗಿ ವಾಗ್ದಾನ ಮಾಡಿದರು.

ತರುವಾಯ ಕೊಳ್ಳೆಂಗೋಡಿನ ಮೆ|| ಕೃಷ್ಣನ್ ನಾಯರವರು ಸರ್ಪವಿಷವನ್ನೂ ಅದರ ಪರಿಹಾರ ವಿಧಾನವನ್ನೂ ಕುರಿತ ಉಪನ್ಯಾಸವನ್ನೂ, ತಿರೂರಿನ ಮೆ|| ಕುಟ್ಟಿ ಕೃಷ್ಣರವರು ಮಕ್ಕಳ ಪೋಷಣೆಯನ್ನು ಕುರಿತ ಉಪನ್ಯಾಸವನ್ನೂ, ಒಳ್ಳೂರಿನ ಮೆ|| ಅಂತೋನಿ ವೈದ್ಯರವರು ಹಿಂದೂ ಔಷಧಗಳನ್ನು ಕುರಿತ ಉಪನ್ಯಾಸವನ್ನೂ ಮಾಡಿದರು. ಅನಂತರ ಮದರಾಸಿನಲ್ಲಿ ಸ್ಥಾಪಿಸಿ ನಡಿಸುತ್ತಿರುವಂಥಾ ಹಿಂದೂ ವೈದ್ಯ ವಿದ್ಯಾಶಾಲೆಯನ್ನು ಮಲಬಾರಿನಲ್ಲೂ ಸ್ಥಾಪಿಸಬೇಕೆಂದೂ ಇದಕ್ಕೋಸ್ಕರ ದ್ರವ್ಯವನ್ನು ಕೂಡಿಸಬೇಕೆಂದೂ ಸಭಿಕರು ತೀರ್ಮಾನ ಮಾಡಿದರು. ಮಾನುಷ ಶರೀರ ಶಾಸ್ತ್ರವನ್ನು ಕುರಿತು ಉಲಿತವಾದ ಉಪನ್ಯಾಸವನ್ನು ಬರೆದು ಕಳುಹುವವರಿಗೆ ೧೦೦ ರೂಪಾಯಿ ಬಹುಮಾನಕೊಡುತ್ತೇನೆಂದು ಕಲ್ಲಿಕೋಟೆಯ ಸಾಮೂರಿ ವಂಶದ ಮೆ|| ಕಿಟ್ಟುಣ್ಣಿ ರಾಜರು ಸಭೆಯಲ್ಲಿ ತಿಳಿಸಿದರು.

ಮುಂದಿನ ವರುಷ ಆಯುರ್ವೇದ ವೈದ್ಯ ಸಮಾಜವನ್ನು ಬಡಗರಾ ಪಟ್ಟಣದಲ್ಲಿ ನಡಿಸಬೇಕೆಂದೂ, ಅದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿಸುವುದಾಗಿಯೂ ಮೆ|| ಐಯಂಚೇರಿ ಶಂಕರವರ್ಮರಾಜರವರು ಸಭಿಕರಿಗೆ ತಿಳಿಸಿದರು. ಆಗ್ಗೆ ಅಲ್ಲಿ ವೈದ್ಯ ಭಾಗಗಳನ್ನು ಪ್ರದರ್ಶನಮಾಡಬೇಕೆಂತಲೂ ತೀರ್ಮಾನವಾಯಿತು. ಕಡೆಯಲ್ಲಿ ಪ್ರೆಸಿಡೆಂಟರಿಗೂ, ಕೊಚ್ಚಿ ರಾಜರಿಗೂ ವಂದನೆಗಳನ್ನು ಸಮರ್ಪಿಸಿ, ಚಕ್ರವರ್ತಿಯವರಿಗೆ ಜಯವಾಗಲೆಂದು ಜಯಘೋಷಮಾಡಿ ಸಮಾಜವನ್ನು ಮುಕ್ತಾಯಮಾಡಿದರು. ಸಮಾಜದ ಪ್ರತಿನಿಧಿಗಳೆಲ್ಲಾ ಸಭೆಯು ಸಾಂಗವಾಗಿ ನಡಿಯುವಂತೆಯೂ, ಆದರಪೂರ್ವಕವಾದ ಅತಿಥಿ ಸತ್ಕಾರಗಳನ್ನು ಕಲ್ಪಿಸಿ ಕೊಟ್ಟದ್ದಕ್ಕಾಗಿಯೂ ಮೆ|| ಮಾಧವರಾಜರವರನ್ನು ಬಹಳವಾಗಿ ವಂದನೆ ಮಾಡಿದರು.

ವಿಶೇಷ ವಾರ್ತೆಗಳು.

ಬೊಂಬಾಯಿಯಲ್ಲಿ ನಡೆಯುತಕ್ಕ ವೈದ್ಯಮಂಡಲಿಯ ಸಭೆಗೆ ಮೇಜರ್ ರೋನಾಲ್ಡ್ ರಾಸ್ ಎಂಬ ಪ್ರಸಿದ್ಧ ಇಂಗ್ಲಿಷ್ ವೈದ್ಯರು ಬರುವವರಾಗಿದಾರೆ.

ಟ್ರಾನ್ಸ್‌ವಾಲಿನಲ್ಲಿರುವ ಹಿಂದುಸ್ಥಾನದ ಪ್ರಜೆಗಳ ಪೈಕಿ ಕಳೆದ ವಾರ ಮೂವತ್ತು ಮಂದಿಯನ್ನು ರಿಜಿಸ್ಟರ್ ಮಾಡಿಸಿ ಕೊಳ್ಳಲಿಲ್ಲವೆಂದು ಅಲ್ಲಿನ ಸರ್ಕಾರದವರು ಗಡೀಪಾರು ಮಾಡಿರುತ್ತಾರೆ.

ವಿಲಾಯತಿಯ ರಾಜ್ಯದ ಯುದ್ಧದ ಇಲಾಖೆಯಲ್ಲಿರುವ ಮುಖಂಡರಾದ ನಾಲ್ವತ್ತು ಮಂದಿ ಸೇನಾಪತಿಗಳು ನಾಲ್ಕು ದಿನಗಳ ವರೆಗೆ ಅಂತರಂಗವಾದ ಸಭೆಯನ್ನಡಿಸಿ, ಯುದ್ಧದ ಇಲಾಖೆಯ ಶಿಸ್ತುಗಳನ್ನು ಕುರಿತು ಚರ್ಚೆ ಮಾಡಿಕೊಂಡರು.

ಲಂಡನ್ ಪಟ್ಟಣದ ವೈದ್ಯ ವಿದ್ಯಾಶಾಲೆಗೆ ಒಬ್ಬ ಪುಣ್ಯಾತ್ಮನು ಮೂರು ಲಕ್ಷ ರೂಪಾಯಿ ಧರ್ಮ ಕೊಟ್ಟಿರುತ್ತಾನೆ. ಆತನು ತನ್ನ ಹೆಸರನ್ನು ತಿಳಿಸಲಿಲ್ಲ. ಈ ಹಣವನ್ನು ವೈದ್ಯಶಾಸ್ತ್ರ ಪರಿಶೋಧನೆಗೋಸ್ಕರವೇ ವಿನಿಯೋಗಿಸಬೇಕೆಂದು ವಿಧಿಸಿರುವನು.

ಮುಂದಿನ ಏಪ್ರಿಲ್ ಪ್ರಾರಂಭದಿಂದ ಮಲಬಾರ್ ಜಿಲ್ಲೆಗೆ ಸೇರಿದ ಕಲ್ಲಿಕೋಟೆ, ಕನ್ನಾನೂರು, ಪೊನ್ನಾನಿ ತಾಲ್ಲೂಕುಗಳಲ್ಲಿ ಅಫೀಂ ಬಿಕರಿ ಮಾಡುವ ಕೋಠಿಗಳನ್ನು ಮುಚ್ಚಿಬಿಟ್ಟು, ತಾಲ್ಲೂಕ್ ಕಚೇರಿಗಳಲ್ಲೇ ಚಿಲ್ಲರೆ ಬಿಕರಿದಾರರಿಗೆ ಕೊಡುವಂತೆ ಹುಕುಂ ಆಗಿದೆ.

ಬೆಳ್ಳಿಯ ಧಾರಣೆಯು ತುಂಬಾ ಅಗ್ಗವಾಗಿರುವುದನ್ನು ನೋಡಿ ಹಿಂದುಸ್ಥಾನದ ಕೆಲವು ವರ್ತಕರು ಆ ಲೋಹವನ್ನು ಅಪಾರವಾಗಿ ಪರದೇಶಗಳಿಗೆ ರಫ್ತು ಮಾಡಲಾರಂಭಿಸಿದಾರೆ. ಕಳೆದ ವರುಷ ಹಿಂದುಸ್ಥಾನಕ್ಕೆ ಹೊರಗಿನಿಂದ ಬಂದ ಬೆಳ್ಳಿಗಿಂತಲೂ, ಇಲ್ಲಿಂದ ರವಾನೆಯಾದದ್ದು ೧೩ ಲಕ್ಷ ರೂಪಾಯಿನಷ್ಟು ಹೆಚ್ಚಿರುತ್ತದೆ.

ಇಟಲಿ ರಾಜ್ಯದ ಭೂಕಂಪದ ರಿಲೀಫ್ ಫಂಡಿಗೆ ಜಪಾನ್ ರಾಜ್ಯದ ವರ್ತಮಾನ ಪತ್ರಿಕೆಗಳು ತಮ್ಮ ಚಂದಾದಾರರುಗಳಿಂದಲೂ ಇತರ ಪ್ರಜೆಗಳಿಂದಲೂ ಧರ್ಮದ ಹಣವನ್ನು ಕೂಡಿಸುತ್ತಿದಾರೆ. ಜಪಾನ್ ಚಕ್ರವರ್ತಿಯವರೂ ಚಕ್ರವರ್ತಿನಿಯವರೂ ಅವರನ್ನು ಕೇಳಿ ಹತ್ತು ಸಹಸ್ರ ದ್ರವ್ಯವನ್ನು ಚಂದಾ ಕಳುಹಿಸಿ ಕೊಟ್ಟರು.

ಮಲಬಾರ್ ಜಿಲ್ಲೆಗೆ ಸೇರಿದ ಕನ್ನಾನೂರು ರಾಜವಂಶದಲ್ಲಿ ಅಲಿ ರಾಜು ಇಂಬಿಚಿಬೀಬಿ ಎಂಬಾತನಿಗೆ ಗವರ್ನ್‌ಮೆಂಟಿನವರು ಸುಲ್ತಾನ್ ಎಂಬ ಬಿರುದನ್ನು ಕೊಟ್ಟರು. ಈ ರಾಜನು ಗವರ್ನ್‌ಮೆಂಟಿನವರಿಗೆ ವಹಿಸಿರುವ ನಾಲ್ಕಾರು ದ್ವೀಪಗಳನ್ನು ಮದರಾಸ್ ಸರ್ಕಾರದವರು ಹಿಂತಿರುಗಿಸಬೇಕೆಂದು ವಿಜ್ಞಾಪನೆ ಮಾಡಿಕೊಂಡಿರುವುದಾಗಿ ಗೊತ್ತಾಗಿರುತ್ತದೆ.

ಬಂಕಿಪುರದ ಬಳಿ ಜಗಮಕುಹೆ ಎಂಬ ಪುರಾತನ ಕಾಲದ ಒಂದು ಭಾರೀ ಕೊಳವನ್ನು ಸರ್ಕಾರದವರು ಶೋಧನೆಮಾಡಿಸುತ್ತಿದಾರೆ. ಈಗ ಅದರಲ್ಲಿದ್ದ ಸುಮಾರು ನಾಲ್ವತ್ತು ಅಡಿ ಪ್ರಮಾಣದ ನೀರನ್ನು ಪಂಪುಗಳ ಮೂಲಕ ಎತ್ತಿಸುರಿದರು. ಪ್ರಾಚೀನ ವಸ್ತು ವಿಶೇಷಗಳು ಅಲ್ಲಿ ದೊರೆಯುತ್ತವೆ ಎಂಬುವುದೇ ಈ ಶೋಧನೆಯ ಉದ್ದೇಶವೆಂದು ಪ್ರಕಟವಾಗಿದೆ.

ಅಫೀಮು ಬೆಳೆಯುವುದನ್ನೂ ಅದರ ಮಾರಾಟದ ರೀತಿಯನ್ನೂ ಚರ್ಚಿಸಿ ಕ್ರಮಪಡಿಸುವುದಕ್ಕೆ ಚೀನಾ ರಾಜ್ಯಕ್ಕೆ ಸೇರಿದ ಷಾಂಘಾಯಿ ಪಟ್ಟಣದಲ್ಲಿ ಒಂದು ದೊಡ್ಡ ಸಭೆ ನಡೆಯುತ್ತಿದೆ. ಈ ಸಭೆಗೆ ಇಂಗ್ಲಾಂಡ್, ಅಮೇರಿಕ, ಜರ್ಮನಿ, ಫ್ರಾನ್ಸ್, ರಷ್ಯಾ, ತುರ್ಕಿ, ಚೀನಾ, ಜಪಾನ್, ಹಾಲೆಂಡ್, ಪೋರ್ಚುಗಲ್, ಸಯಾಂ, ಪರ್ಷಿಯಾ ಮೊದಲಾದ ರಾಜ್ಯಗಳಿಂದ ಪ್ರತಿನಿಧಿಗಳು ಹೋಗಿರುತ್ತಾರೆ.

ಕಾಶೀ ಪಟ್ಟಣದ ಉದ್ಯಾನ ವನದಲ್ಲಿ ನಿಲ್ಲಿಸಿರುವ ಲೇಟ್ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರ ಲೋಹ ಪ್ರತಿಮೆಯನ್ನು ದುಷ್ಕರ್ಮಿಗಳು ವಿಕಾರ ಮಾಡಿರುತ್ತಾರೆ. ಅದರ ಮುಖಕ್ಕೆ ಟಾರ್ ಎಂಬ ಕಪ್ಪನ್ನು ಬಳಿದಿದ್ದರು. ಆ ಪಟ್ಟಣದಲ್ಲಿರುವ ಭಾರೀ ಜಮೀನ್‌ದಾರನಾದ ಬಾಬು ಮೋತಿಚಂದ್ ಎಂಬಾತನು ಆ ದುಷ್ಟರನ್ನು ಪತ್ತೆ ಮಾಡಿದವರಿಗೆ ೫೦೦ ರೂಪಾಯಿ ಇನಾಮು ಕೊಡುತ್ತೇನೆಂದು [illegible]

ಈ ತಿಂಗಳ ಕಡೇ ವಾರ ಕುಂಭಕೋಣದಲ್ಲಿ ಮಹಾಮಾಘವೆಂಬ ಜಾತ್ರೆ ನಡೆಯುವ ಕಾಲಕ್ಕೆ ಲಕ್ಷಾಂತರ ಪ್ರಜೆಗಳು ಅಲ್ಲಿ ಸೇರುತ್ತಾರೆಂದು ಗೊತ್ತಾದ ಕಾರಣ ಆ ಸಮಯದಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳ ವಸ್ತುಪ್ರದರ್ಶನವನ್ನು ಜರುಗಿಸಿ ಕಸಬುಗಳಿಗೆ ಪ್ರೋತ್ಸಾಹಕೊಡಬೇಕೆಂದು ಗೊತ್ತುಮಾಡಿದಾರೆ. ಈ ಕಾರ್ಯವನ್ನು ತೃಪ್ತಿಕರವಾಗಿ ನಡಿಸುವುದಕ್ಕೋಸ್ಕರ ಅಲ್ಲಿರುವ ಯೂರೋಪ್ಯನ್ ಮತ್ತು ದೇಶೀಯ ಅಧಿಕಾರಿಗಳು [illegible] ಸಾಹಸ ಪಡುತ್ತಿದಾರೆ.

ವಿಲಾಯತಿಗೆ ಸೇರಿದ ಬರ್ಮಿಂಗ್ಹಾಂ ಜಿಲ್ಲೆಯ ರೈತ ಪ್ರಜೆಗಳ ಸಭೆಯಲ್ಲಿ ಸರ್ ಹೊರೇಸ್ ಪ್ಲಂಕೆಟ್‌ಯವರು ತಿಳಿಸಿದ್ದೇನಂದರೆ — ರೈತ ಸಂಘಗಳ ಅಭಿವೃದ್ಧಿಯು ವಿಲಾಯತಿಗಿಂತಲೂ ಐರ್ಲಾಂಡಿನಲ್ಲಿ ಬಹಳ ಚೆನ್ನಾಗಿರುವುದು. ಕಳೆದ ಇಪ್ಪತ್ತು ವರುಷಗಳಲ್ಲಿ ರೈತರುಗಳೇ ಸೇರಿ ೧,೦೦೦ ಪರಸ್ಪರ ಸಹಾಯಕ ಸಂಘಗಳನ್ನು ಏರ್ಪಾಡು ಮಾಡಿಕೊಂಡಿದಾರೆ. ಸುಮಾರು ಒಂದು ಲಕ್ಷ ಜಮೀನ್ ವ್ಯವಸಾಯಗಾರರು ಆ ಸಂಘಗಳಲ್ಲಿ ಹಣ ಹಾಕಿ, ಸಾಲ ಪಡೆಯುತ್ತಾ ವ್ಯವಸಾಯ ಕಾರ್ಯಗಳನ್ನು ನಡಿಸಿ ಲಾಭ ಸಂಪಾದಿಸುತ್ತಿರುವರು. ಈ ಸಂಘಗಳಲ್ಲಿ ಸುಮಾರು ಮೂರು ಕೋಟಿ ರೂಪಾಯಿ ತನಕ ಲೇವಾದೇವಿ ನಡೆಯುವುದು ಎಂಬುದೇ.

ಬೊಂಬಾಯಿ ಪಟ್ಟಣದಲ್ಲಿ ಮದ್ಯಪಾನವನ್ನು ಕಡಮೆ ಮಾಡಬೇಕೆಂಬ ಉದ್ದೇಶದಿಂದ ಅಲ್ಲಿನ ಕೆಲವು ದೊಡ್ಡಮನುಷ್ಯರು ಗವರ್ನರವರನ್ನು ಕಂಡು ಅವರಿಗೆ ಅರಿಕೆಮಾಡಿಕೊಳ್ಳಬೇಕೆಂದು ಕುತೂಹಲಪಟ್ಟರು. ಗವರ್ನರವರು ಅವರಿಗೆ ಭೇಟಿ ಕೊಟ್ಟು, ಅವರ ಅಭಿಪ್ರಾಯವನ್ನು ಲಾಲಿಸುವುದಾಗಿ ವಾಗ್ದಾನಮಾಡಿದಾರೆ. ಅತ್ತಲಾಗಿ ಆ ಗವರ್ನ್‌ಮೆಂಟಿನವರು ಅಬ್ಕಾರಿ, ಅಫೀಂ ದುಕಾನುಗಳನ್ನು ಹರಾಜು ಮೂಲಕ ಬಿಕರಿ ಮಾಡುವುದರಿಂದ ಕುಡುಕುತನವು ಹೆಚ್ಚಬಹುದೆಂದು ಊಹಿಸಿ, ಪರೀಕ್ಷಾರ್ಥವಾಗಿ ಕೆಲವು ಅಂಗಡಿಗಳಿಗೆ ಇಷ್ಟಿಷ್ಟೇ ಹಣ ವಸೂಲಾಗಬೇಕೆಂದು ಗೊತ್ತುಮಾಡಿ ಹರಾಜು ಹಾಕದೆ ಅರ್ಜಿದಾರರಲ್ಲಿ ಯೋಗ್ಯರಾದವರನ್ನು ಹುಡುಕಿ ಕೊಡುವಂತೆ ಹುಕುಂ ಮಾಡಿದಾರೆ.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಸಂಕ್ರೇಲ್ ಎಂಬ ಸ್ಥಳದಲ್ಲಿ ಬೆಲ್ವಿಡೆರಿನ ಕಾರ್ಖಾನೆ ಇದೆ. ಅಲ್ಲಿ ಮೇಸ್ತ್ರಿಯಾದ ಬಿಹಾರಿ ಲಾಲ್ ದಳ್ವಾಳ್ ಎಂಬವನು ಬುದ್ಧಿಕುಶಲತೆಯನ್ನು ಉಪಯೋಗಿಸಿ, ಯಂತ್ರ ಮೊದಲಾದ ಸಾಧನಗಳೇನೂ ಇಲ್ಲದೆ ಕೈಯಿಂದಲೇ ಒಂದು ಬಂದೂಕವನ್ನು ತಯಾರ್ಮಾಡಿ, ಕಾರ್ಖಾನೆಯಲ್ಲಿ ತನ್ನ ಪೆಟ್ಟಿಗೆಯೊಳಗೆ ಇಟ್ಟುಕೊಂಡಿದ್ದನು. ಅದು ಬಹು ಅಂದವಾಗಿಯೂ ಯಂತ್ರಗಳ ಸಹಾಯದಿಂದ ಮಾಡಿದಷ್ಟು ನಾಜೂಕಾಗಿಯೂ ಇರುತ್ತದೆ. ಇದನ್ನು ಆ ಕಾರ್ಖಾನೆಯ ಒಬ್ಬ ಯೂರೋಪ್ಯನ್ ನೌಕರನು ಕಂಡು, ಪೋಲೀಸಿಗೆ ತಿಳಿಸಿದನು. ಅವನನ್ನು ದಸ್ತಗಿರಿ ಮಾಡಿ, ಆ ಬಂದೂಕನ್ನು ಕಿತ್ತುಕೊಂಡು, ಅವನಿಗೆ ಶಿಕ್ಷೆ ವಿಧಿಸಿದರು. ಈಗ ಆ ಬಂದೂಕನ್ನು ಕಲ್ಕತ್ತೆಯಲ್ಲಿರುವ ಸಕಲವಸ್ತುಪ್ರದರ್ಶನ ಶಾಲೆಯಲ್ಲಿ ಇಡಿಸಿರುತ್ತಾರೆ.

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ವಿಂಗೋರ್ಲಾ ಪಟ್ಟಣದಲ್ಲಿ ಆರ್. ಎನ್. ವಾದ್ಯೆ ಎಂಬಾತನು "ವಿಂಗೋರ್ಲಾ ವ್ಯವಸಾಯದ ಸಹಾಯಕ ಕಂಪನಿ" ಎಂಬೊಂದು ಭೀಮಾ (ಇನ್‌ಷೂರೆನ್ಸ್) ಕಂಪನಿಯನ್ನು ಪ್ರಾರಂಭಿಸಿ, ಜನರಿಂದ ಚಂದಾ ಹಣವನ್ನು ಕೂಡಿಸಿ ದುರ್ವಿನಿಯೋಗ ಪಡಿಸುತ್ತಿದ್ದನು. ಮದರಾಸ್ ಅಧಿಪತ್ಯದ ಅನೇಕಾನೇಕ ಪ್ರಜೆಗಳು ಆ ಕಂಪನಿಯಲ್ಲಿ ಮೆಂಬರುಗಳಾಗಿ ಸೇರಿಕೊಂಡು ಹಣ ಕೊಟ್ಟಿರುತ್ತಾರೆ. ಆ ಮುಖಂಡನು ಇವರ ಬಾಬತು ೫೮,೦೦೦ ರೂಪಾಯನ್ನು ತಿಂದುಹಾಕಿ ಮೋಸಮಾಡಿರುತ್ತಾನೆಂದು ರುಜುವಾತು ಬಂದದ್ದರಿಂದ ತಂಜಾವೂರು ಜಿಲ್ಲಾ ಮನ್ನಾರಗುಡಿಯ ಡೆಪ್ಯುಟಿ ಮ್ಯಾಜಿಸ್ಟ್ರೇಟರು ಆ ಮೂಲಕರ್ತನೂ ಮೋಸಗಾರನೂ ಆದ ವಾದ್ಯೆ ಎಂಬವನಿಗೆ ಎರಡು ವರುಷ ಕಠಿಣಸಜವನ್ನೂ ೧,೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

ಬೊಂಬಾಯಿನ ತಾತಾ ಕಂಪನಿಯವರು ಮಧ್ಯ ಹಿಂದುಸ್ಥಾನದಲ್ಲಿ ಒಂದು ಭಾರೀ ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪಿಸುವವರಾಗಿದಾರಷ್ಟೆ. ಈಗ ಈ ದೇಶದಲ್ಲಿ ಅಂಥಾ ಇನ್ನೊಂದು ಕಾರ್ಖಾನೆಯು ಬಾರಾಕಾರ್ ಎಂಬ ಸ್ಥಳದಲ್ಲಿ ಏರ್ಪಾಡಾಗುವದರಲ್ಲಿದೆ. ಆಸ್ಟ್ರೇಲಿಯಾ ದ್ವೀಪದ ಕೆಲವು ಪರೀಕ್ಷಕರು ಕಬ್ಬಿಣದಿಂದ ಉಕ್ಕನ್ನು ತಯಾರ್ಮಾಡುವುದಕ್ಕೆ ಸುಲಭವಾದ ಹೊಸ ಮಾರ್ಗವನ್ನು ಕಂಡುಹಿಡಿದು, ಆ ರೀತಿ ಉಕ್ಕು ತಯಾರಾಗುವ ಕಾರ್ಖಾನೆಯನ್ನು ಸ್ಥಾಪಿಸುವುದಾಗಿಯೂ, ಇದರ ಮೂಲ ಧನಕ್ಕೆ ಪ್ರಸಿದ್ಧ ಕೋಟ್ಯಾಧೀಶ್ವರನಾದ ಮೆ|| ಆಂಡ್ರ್ಯು ಕಾರ್ನೆಗಿ ಎಂಬಾತನು ದ್ರವ್ಯ ಮೊದಲಾದದ್ದನ್ನು ಕೊಡುವುದಾಗಿ ಮಾತು ಕೊಟ್ಟಿದಾನೆಂತಲೂ ಪ್ರಕಟವಾಗಿದೆ. ಈ ಕಂಪನಿಯ ಮೂಲ ಧನವಾದ ಮೂರು ಲಕ್ಷ ರೂಪಾಯನ್ನೂ ಈ ದೇಶದಲ್ಲೇ ಪ್ರಜೆಗಳಿಂದ ಷೇರುಗಳ ಮೂಲಕ ಕೂಡಿಸುವವರಾಗಿದಾರೆ.

ಲಂಡನ್ ಪಟ್ಟಣದಲ್ಲಿರುವ ಇಂಡಿಯಾ ಆಫೀಸಿನಲ್ಲಿ ಸರ್ ವಿಲ್ಲಿಯಂ ಲೀವಾರ್ನರ್‌ಯವರು ವೈಸ್ ಪ್ರೆಸಿಡೆಂಟರಾಗಿರುತ್ತಾರೆ. ಆ ಪಟ್ಟಣದಲ್ಲಿ ವಿದ್ಯಾರ್ಥಿಯಾಗಿರುವ ಕುಂಜಲಾಲ್ ಭಟ್ಟಾಚಾರ್ಯನೆಂಬೊಬ್ಬ ಬಂಗಾಳಿಯು ವೈಸ್ ಪ್ರೆಸಿಡೆಂಟರನ್ನು ಕಂಡು ಅವರಿಗೆ ಒಂದು ಅರ್ಜಿಯನ್ನು ಒರೆದು ಒಪ್ಪಿಸಿ, ಹಿಂದುಸ್ಥಾನದಲ್ಲಿ ಎಂಟು ಮಂದಿ ಬಂಗಾಳಿಗಳನ್ನು ಗಡೀಪಾರು ಮಾಡಿದ್ದಕ್ಕೆ ಕಾರಣವೇನೆಂದು ಪ್ರಶ್ನೆ ಮಾಡಿದನು. ಆಗ ಅವರು ಇವನಿಗೆ ಪ್ರತ್ಯುತ್ತರವನ್ನು ಕೊಡದೆ ಅವನನ್ನು ದೂಷಣೆ ಮಾಡಿದ ಹಾಗೂ, ಅಷ್ಟಕ್ಕೇ ಆ ಬಂಗಾಳಿ ವಿದ್ಯಾರ್ಥಿಗೆ ಕೋಪ ಹುಟ್ಟಿ ವೈಸ್ ಪ್ರೆಸಿಡೆಂಟರ ಮೇಲೆ ಬಿದ್ದು ಅವರನ್ನು ಹೊಡೆದ ಹಾಗೂ ವರ್ತಮಾನ ಬಂದಿದೆ. ತರುವಾಯ ಪೋಲೀಸಿನವರು ಆ ವಿದ್ಯಾರ್ಥಿಯು ಇಳುಕೊಂಡಿದ್ದ ಮನೆಯನ್ನು ಸುತ್ತಿಕೊಂಡು ವಿಚಾರಿಸಿದ್ದರಲ್ಲಿ ಆ ಕಟ್ಟಡದೊಳಗೆ ಹನ್ನೆರಡು ಮಂದಿ ಬಂಗಾಳಿಗಳು ವಾಸ ಮಾಡುತ್ತಿದ್ದರೆಂದು ಗೊತ್ತಾದದ್ದರಿಂದ ಅವರನ್ನೆಲ್ಲಾ ದಸ್ತಗಿರಿ ಮಾಡಿ ವಿಚಾರಣೆಗೆ ಗುರಿಮಾಡುವರೆಂದು ತಂತೀ ವರ್ತಮಾನ ಬಂದಿದೆ.

ಹಾಂಕಾಂಗ್ ಬ್ಯಾಂಕ್ ಕಂಪನಿ ಎಂಬ ಒಂದು ಭಾರೀ ವ್ಯಾಪಾರ ಸಂಘವು ಕೆಟ್ಟ [illegible] ವರ್ತಮಾನ ಬಂದಿದೆ. ಸುಮಾರು ಒಂದು ನೂರು ಸಂವತ್ಸರಗಳಿಂದಲೂ ಈ ಕಂಪನಿಯವರು ವಿಲಾಯತಿಯಲ್ಲೂ ಚೀನಾ ರಾಜ್ಯಕ್ಕೆ ಸೇರಿದ ಷಾಂಘಾಯಿ ಪಟ್ಟಣದಲ್ಲೂ ಅಂಗಡಿಗಳನ್ನಿಟ್ಟು ಬಟ್ಟೆ ಬರೆ ಮುಂತಾದ ಸರಕನ್ನು ಆಮದು ರಫ್ತು ಮಾಡುತ್ತಾ ತುಂಬಾ ನಂಬಿಕೆಯುಳ್ಳ ಮತ್ತು ಘನತೆಯುಳ್ಳ ಸಂಸ್ಥೆಯೆಂಬ ಹೆಸರನ್ನು ಪಡೆದಿದ್ದರು. ಕಳೆದ ವಾರ ಆ ಕಂಪನಿಯಲ್ಲಿ ಹಣ ಹಾಕಿದ್ದ ಅನೇಕ ಮಂದಿ ಷೇರುದಾರರು ಮ್ಯಾಂಚೆಸ್ಟರ್ ಪಟ್ಟಣದಲ್ಲಿ ಸಭೆ ಸೇರಿ, ಆದಾಯ ವೆಚ್ಚಗಳನ್ನು ತನಿಖೆ ಮಾಡಿದರು. ಈ ಕಂಪನಿಯಿಂದ ಸುಮಾರು ೩೭ ಲಕ್ಷ ರೂಪಾಯಿ ದೇಣೇದಾರರಿಗೆ ಸಾಲ ಆಗಬೇಕಾಗಿದೆ. ಷಾಂಘಾಯಿ ಪಟ್ಟಣದಲ್ಲಿ ಆಸ್ತಿಯು ಎಷ್ಟು ಮಟ್ಟಿಗೆ ಇದೆ ಎಂಬುದನ್ನು ಗೊತ್ತು ಮಾಡುವ ತನಕ ಷೇರುದಾರರು ಅದರ ಮುಂದಿನ ಕಾರ್ಯಗಳನ್ನು ನಿಲ್ಲಿಸಿರುತ್ತಾರೆ.

ಕಾಕಿನಾಡಾದಲ್ಲಿ ಹೋದ ವರುಷ ದುಷ್ಟಜನರು ಯೂರೋಪ್ಯನ್ ನಿವಾಸಿಗಳನ್ನು ಅಪಹಾಸ್ಯ ಕಷ್ಟನಷ್ಟಗಳಿಗೆ ಗುರಿಮಾಡಿ, ಪ್ರಜಾ ನೆಮ್ಮದಿಗೆ ಭಂಗವನ್ನುಂಟು ಮಾಡಿದರು. ಮದರಾಸ್ ಗವರ್ನ್‌ಮೆಂಟಿನವರು ಆ ಪಟ್ಟಣಕ್ಕೆ ಶಿಕ್ಷಾರ್ಥವಾದ ಪೋಲೀಸ್ ಸಿಬ್ಬಂದಿಯನ್ನು ನೇಮಕಮಾಡಿ, ಇವರ ಸಂಬಳವನ್ನು ಅಲ್ಲಿನ ಸಮಸ್ತ ಪ್ರಜೆಗಳಿಂದಲೂ ಧಾರಾಳವಾಯಿ ಪ್ರಕಾರ ವಸೂಲ್ಮಾಡಬೇಕೆಂದು ವಿಧಿಸಿರುತ್ತಾರೆ. ಈಗ ಅಲ್ಲಿರುವ ಯೂರೋಪ್ಯನ್ ಪ್ರಜೆಗಳು ಈ ತೆರಿಗೆಯನ್ನು ತಾವು ಕೊಡಬೇಕಾದದ್ದಿಲ್ಲವೆಂದೂ, ಅಧಿಕಾರಿಗಳು ತಕ್ಕ ಬಂದೋಬಸ್ತು ಮಾಡದೇ ಹೋದದ್ದರಿಂದ ಹಾಗೆ ಗಲಭೆಯಾಗಲು ಅವಕಾಶವಾಯಿತೆಂತಲೂ, ತಾವು ಅಂಥಾ ಗಲಭೆಯಲ್ಲಿ ಸೇರದೆ ಅದಕ್ಕಾಗಿ ಕಷ್ಟ ಪ್ರಯತ್ನ ಮಾಡಿದಾಗ್ಯೂ ತಮ್ಮನ್ನೂ ಈ ತೆರಿಗೆಗೆ ಗುರಿ ಮಾಡಿರುವುದು ಅನ್ಯಾಯವಾಗಿದೆ ಎಂತಲೂ ವಿಜ್ಞಾಪನಾ ಪತ್ರಿಕೆಯನ್ನು ಬರೆದು ಮದರಾಸ್ ಗವರ್ನ್‌ಮೆಂಟಿಗೆ ಒಪ್ಪಿಸಿರುತ್ತಾರೆ.

ಉತ್ತರ ದೇಶದಲ್ಲಿರುವ ಲಾಹೋರ್ ಪಟ್ಟಣದಿಂದ ಠಾಕೂರ್ ಸಾಹೇಬ್ ಚಂದ್ರವರ್ಮ ಎಂಬೊಬ್ಬ ದೊಡ್ಡ ಮನುಷ್ಯರು ಕಳೆದ ವಾರ ಬಳ್ಳಾರಿಗೆ ಬಂದು ಅಲ್ಲಿನ ಮಹಾಜನ ಸಭೆಯಲ್ಲಿ ಹಿಂದುಸ್ಥಾನದ ಏಳಿಗೆಗೆ ಅವಶ್ಯವಾದ ವಿಚಾರಗಳನ್ನು ಕುರಿತು ಉಪನ್ಯಾಸ ಮಾಡಿದರು. ಅದರ ಮುಖ್ಯಾಂಶವೇನೆಂದರೆ — ಹಿಂದುಸ್ಥಾನದ ಸಕಲ ಪ್ರಾಂತ್ಯಗಳಲ್ಲೂ ಇರುವ ಎಲ್ಲಾ ಪ್ರಜೆಗಳೂ ಒಂದೇ ಭಾಷೆಯನ್ನು ಕಲಿತು ಆಡುವಂತಾಗಬೇಕು. ಈ ರಾಷ್ಟ್ರದಲ್ಲಿರುವ ೩೦ ಕೋಟಿ ಪ್ರಜೆಗಳಲ್ಲಿ ೧೮ ಕೋಟಿ ಜನರು ಹಿಂದಿ ಭಾಷೆಯನ್ನಾಡುತ್ತಾರೆ. ಆದಕಾರಣ ಆ ಭಾಷೆಯನ್ನೇ ಅಭಿವೃದ್ಧಿಗೆ ತಂದರೆ ಈ ಉದ್ದೇಶವು ನೆರವೇರುವುದು. ಎರಡನೆಯದಾಗಿ ಎಲ್ಲರೂ ಒಂದೇ ಮತಸ್ಥರಾಗಬೇಕು, ಅಂದರೆ, ಏಕದೇವಾರಾಧನೆಯೂ ಸಾರ್ವತ್ರಿಕವಾದ ಸಹೋದರ ವಾತ್ಸಲ್ಯವೂ ನೆಲೆಗೊಳ್ಳಬೇಕು. ಬಾಲ್ಯ ವಿವಾಹಗಳನ್ನು ಸಂಪೂರ್ಣವಾಗಿ ನಿಲ್ಲಿಸದೆ ಹೋದಲ್ಲಿ ಈ ರಾಷ್ಟ್ರದ ಪ್ರಜೆಗಳು ಖಂಡಿತವಾಗಿಯೂ ಅಭಿವೃದ್ಧಿ ಹೊಂದಲಾರರು. ಇಷ್ಟೇ ಅಲ್ಲ. ಅಲ್ಪರೆಂದು ಕೀಳು ಬಹಳ ಹೀನವಾಗಿ ಕಾಣುತ್ತಿರುವ ಪಂಚಮರೇ ಮೊದಲಾದ ಮೂಢ ಜನರಿಗೆ ತಕ್ಕಹಾಗೆ ವಿದ್ಯೆ ಬುದ್ಧಿಗಳನ್ನು ಕಲಿಸಿ, ಅವರನ್ನು ಉತ್ತಮ ಸ್ಥಿತಿಗೆ ತಾರದಿದ್ದರೆ ದೇಶೋನ್ನತಿಗೆ ಅವರು ಪ್ರತಿಬಂಧಕರಾಗಿ ಪರಿಣಮಿಸುವರು. ಸ್ತ್ರೀ ವಿದ್ಯಾಭ್ಯಾಸವನ್ನು ಸಾಂಗವಾಗಿಯೂ ತೃಪ್ತಿಕರವಾಗಿಯೂ ಮಾಡಿಸಬೇಕಾದದ್ದು ಪರಮಾವಶ್ಯವಾಗಿರುತ್ತದೆ. ಗಂಡಸರೆಲ್ಲಾ ರಾಮನಂತಾಗಬೇಕೆಂದು ಕುತೂಹಲ ಪಟ್ಟಲ್ಲಿ ಸ್ತ್ರೀಯರನ್ನೆಲ್ಲಾ ಸೀತೆಯ ಹಾದಿಯಲ್ಲಿ ಬುದ್ಧಿ ವಿವೇಕ ಜ್ಞಾನಾದಿಗಳಲ್ಲಿ ಬೆಳಸಬೇಕಾಗಿರುವುದು.

ಇಂಡಿಯಾ ದೇಶದ ವೃತ್ತಾಂತಗಳು

ಕಲ್ಕತ್ತಾ ಪಟ್ಟಣದಲ್ಲಿ ಲೈಸೆನ್ಸ್ ಪಡೆಯದೆ ಬಂದೂಕುಗಳನ್ನು ಇಟ್ಟುಕೊಂಡಿದ್ದದ್ದಕ್ಕಾಗಿ ಪೋಲೀಸಿನವರು ಐದು ಮಂದಿ ಮಹಮ್ಮದೀಯರ ಮೇಲೂ, ಒಬ್ಬ ಹಿಂದುವಿನ ಮೇಲೂ ಮೊಕದ್ದಮೆ ಮಾಡಿದಾರೆ.

ಕಲ್ಕತ್ತಾ ಪಟ್ಟಣದ ಡೈಮಂಡ್ ಹಾರ್ಬರ್ ಎಂಬ ಭಾಗದಲ್ಲಿ ಪೋಲೀಸಿನವರು ಒಬ್ಬ ಮಹಮ್ಮದೀಯನ ಮನೆಯನ್ನು ಶೋಧನೆ ಮಾಡಿದಾಗ ಖೋಟಾ ನಾಣ್ಯಗಳ ತಯಾರಿಗೆ ಅನುಕೂಲವಾದ ಯಂತ್ರ ಸಾಮಗ್ರಿಗಳೆಲ್ಲಾ ಪೂರ್ತಿಯಾಗಿ ಸಿಕ್ಕಿದವು.

ಹಿಂದುಸ್ಥಾನದ ರೈಲ್ವೇ ಹುಟ್ಟುವಳಿಯು ಕಳೆದ ಹತ್ತು ತಿಂಗಳಲ್ಲಿ ಹೋದ ವರುಷದ ಹುಟ್ಟುವಳಿಗಿಂತ ಮೂರು ಕೋಟಿ ರೂಪಾಯಿ ಕಡಮೆಯಾಗಿರುತ್ತದೆ. ಇದಕ್ಕೆ ಅನೇಕ ಕಡೆಗಳಲ್ಲಿ ಕ್ಷಾಮಬಾಧೆಯುಂಟಾಗಿರುವುದೇ ಮುಖ್ಯ ಕಾರಣವೆಂದು ತಿಳಿಯುವುದು.

• • •

ಬಂಗಾಳಾ ಗವರ್ನಮೆಂಟಿನವರು ಅಚ್ಚಿನ ಕಾರ್ಖಾನೆಯನ್ನು ಕಿತ್ತುಕೊಂಡು "ಯುಗಾಂತರ" ವೆಂಬ ಪತ್ರಿಕೆಯನ್ನು ಪ್ರಕಟಿಸಕೂಡದೆಂದು ನಿರ್ಬಂಧಪಡಿಸಿದ್ದಾಗ್ಯೂ ಆ ಪತ್ರಿಕೆಯು ಕಳೆದ ವಾರ ಚಂದ್ರನಗರದಲ್ಲಿ ಮತ್ತೆ ಪ್ರಕಟವಾಗಿದೆ ಎಂದು ತಿಳಿಯುವುದು

• • •

ಹಿಂದುಸ್ಥಾನದ ಸರ್ವಸೇನಾಪತಿಯಾದ ಲಾರ್ಡ್ ಕಿಚ್ನರ್ ಯವರು ನಾಳೆಯ ದಿನ ಕಲ್ಕತ್ತೆಯಿಂದ ಹೊರಟು ಢಕ್ಕಾ ನಗರದ ಮೇಜಿ ಭೋಪಾಲ್ ಸಂಸ್ಥಾನದ ಜಂಗಲುಗಳಲ್ಲಿ ಶಿಕಾರಿಮಾಡುವುದಕ್ಕಾಗಿ ಅಲ್ಲಿನ ಕುಮಾರ ಬಹದೂರ್ ಯವರ ಆತಿಥ್ಯವನ್ನು ಅಂಗೀಕರಿಸಿ ಹೋಗಬರುವರು.

• • •

ಹೈದರಾಬಾದ್ ಪಟ್ಟಣದಲ್ಲಿ ಪ್ರವಾಹಗಳ ಬೆಸಯಿಂದ ಕೊಚ್ಚಿ ಹೋದ ಸೇತುವೆಗಳನ್ನೆಲ್ಲಾ ಮತ್ತೆ ಕಟ್ಟಿಸುವುದಕ್ಕೆ ಅಂದಾಜಾ ಪಟ್ಟಿಗಳನ್ನು ತಯಾರುಮಾಡಿಸಿ ಸ್ಯಾಂಕ್ಷನ್ ಬಗ್ಗೆ ನೈಜಾಮರವರ ಬಳಿಗೆ ಕಳುಹಿಸಿದರು ಅದಕ್ಕೆ ಸುಮಾರು ೪ ಲಕ್ಷದ ೫೫ ಸಾವಿರ ರೂಪಾಯಿ ಖರ್ಚಾಗ ಬಹುದೆಂದು ಕಾಣುತ್ತದೆ

• • •

ಬಂಗಾಳಾ ಆದಿಪತ್ಯದಲ್ಲಿ ಸಾಮಾನ್ಯವಾಗಿಯೂ ಉತ್ತರ ಬೆಹಾರಿನಲ್ಲಿ ವಿಶೇಷವಾಗಿಯೂ ಕ್ಷಾಮ ಬಾಧೆಯುಂಟಾಗಿರುವುದರಿಂದ ಸರ್ಕಾರದವರು ಕ್ಷಾಮ ನಿವಾರಣೆಗಾಗಿ ಸ್ಯಾಂಕ್ಷನ್ ಮಾಡಿರುವುದು ೧೪ ಲಕ್ಷ ರೂಪಾಯಿ ಸಾಲಾಗುವುದಿಲ್ಲವೆಂದೂ, ಇನ್ನೂ ಹೆಚ್ಚು [illegible] ದೆಂದೂ ಪ್ರಕಟವಾಗಿ[illegible]

• • •

ಚಕ್ರವರ್ತಿ ಸಾರ್ವಭೌಮರವರು ಸರ್ ಲಾರೆನ್ಸ್ ಜಂಕಿನ್ಸ್ ಯವರಿಗೆ ಕಲ್ಕತ್ತಾ ಪಟ್ಟಣದ ಹೈ ಕೋರ್ಟಿನ ಚೀಫ್ ಜಡ್ಜಿಯ ಪದವಿಯನ್ನು ದಯಪಾಲಿಸಿದರು. ಇದು ಬಂಗಾಳಾ ಪ್ರಜೆಗಳಿಗೆ ಸಂತೋಷವನ್ನುಂಟುಮಾಡಿದೆ. ಏಕೆಂದರೆ ಇವರ ಪರ್ಯಾಯಕ್ಕಾಗಿಯೂ ಸಮಸಭಾವವೂ ನ್ಯಾಯಪರಿಶೀಲನಾ ಶಕ್ತಿಯೂ ಜನಜನಿತವಾಗಿರುತ್ತವೆ

• • •

ಗ್ವಾಲಿಯರ್ ಸಂಸ್ಥಾನದ ಸಿಂಧಿಯಾ ಮಹಾರಾಜರವರು ವ್ಯವಸಾಯಕ್ಕೆ ಅನುಕೂಲವಾಗುವ ಹಾಗೆ ಹನ್ನೆರಡು ಏರಿ ಕೆರೆಗಳನ್ನು ಕಟ್ಟಿಸಬೇಕೆಂದು ೧,೩೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ ಕೆರೆಗಳು ನಿರ್ಮಿತವಾದ ಮೇಲೆ ಆಯ ಜಮೀನುಗಳಿಗೆ ನೀರು ಹಾಯಿಸುವುದಕ್ಕೆ ನಾಲೆಗಳನ್ನು ತೋಡಿಸುವರು. ಇದರಿಂದ ಆ ಸಂಸ್ಥಾನದ ವ್ಯವಸಾಯವೂ ರಾಜಾದಾಯವೂ ಹೆಚ್ಚುವುದಕ್ಕೆ ಸಂಶಯವಿಲ್ಲ

• • •

ಕಲ್ಕತ್ತಾ ಪಟ್ಟಣದ ಬೀಡನ್ ಚೌಕದಲ್ಲಿ ಕಳೆದ ಭಾನುವಾರ ಒಂದು ಸ್ವದೇಶೀ ಸಭೆಯು ನಡೆಯಿತು ರಾಮಾನಂದ ಚಟರ್ಜೀಯವರು ಒಳದೇಶದ ಕೈಗಾರಿಕೆಗಳಿಗೆ ಪ್ರೋತ್ಸಾಹಕೊಟ್ಟು ಅಭಿವೃದ್ಧಿಗೆ ತರಬೇಕೆಂದೂ, ಮೌಲ್ವಿ ಲೀಕಮುಜಮುಲ್ ಯವರು ಕೆ. ಎಂ ಮಿತ್ರರನ್ನು ಸರ್ಕಾರದವರು ಗಡೀಪಾರು ಮಾಡಿದ್ದು ಸರಿಯಲ್ಲವೆಂದೂ [illegible] ಉಪನ್ಯಾಸಗಳನ್ನು ಮಾಡಿದರು ಯಾವ ತರದ ಗಲಭೆಯೂ ನಡೆಯಲಿಲ್ಲ.

• • •

ಕಳೆದ ವಾರ ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಪ್ಲೇಗ್ ಉಪದ್ರವ ದಿಂದುಂಟಾದ ಒಟ್ಟು ೨,೮೯೭ ಜನರು ಕಾಲವಾದರು ಈ ಪೈಕಿ ಪಂಜಾಬ್ ಆದಿಪತ್ಯದಲ್ಲಿ ೫೮೭ ಮಂದಿ, ಬೊಂಬಾಯಿ ಆಧಿಪತ್ಯ ೪೭೮, ಬರ್ಮಾ ೪೧೯, ಸಂಯುಕ್ತ ಆಧಿಪತ್ಯಗಳು ೩೨೯, ಬಂಗಾಳಾ ೨೫೦, ಮಧ್ಯಪ್ರಾಂತ್ಯಗಳು ಮತ್ತು ಬೇರಾರ ೨೧೩, ರಾಜಪುಟಾನಾ ೩೩೩, ಮದರಾಸ್ ಆದಿಪತ್ಯ ೯೦, ಮೈಸೂರು ಸಂಸ್ಥಾನ ೮೧, ಹೈದರಾಬಾದ್ ಸಂಸ್ಥಾನ ೩೭, ಈ ರೀತಿ ಮರಣಗಳಾಗಿರುತ್ತವೆ

• • •

ಪ್ಲೇಗ್ ಉಪದ್ರವ ಹರಡುವುದಕ್ಕೆ ಇಲಿಗಳೇ ಮುಖ್ಯ ಕಾರಣವಾದದ್ದರಿಂದ ಇಲಿಗಳನ್ನು ಕೊಲ್ಲುವುದಕ್ಕೆ ಮನೆಗಳಲ್ಲಿ ಬೆಕ್ಕುಗಳನ್ನು ಸಾಕಬೇಕೆಂದು ಡಾಕ್ಟರುಗಳು ಹೇಳುತ್ತಿದಾರೆ. ಬರ್ಮಾ ಆಧಿಪತ್ಯಕ್ಕೆ ಸೇರಿದ ಮಾಂಡಲೇ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಪ್ರಾಣಿಗಳ ಆಲಯವನ್ನು ಪ್ರಾರಂಭಿಸಿ, ಬೆಕ್ಕುಗಳನ್ನು ಅಪಾರವಾಗಿ ಸಾಕಿ ಬೆಳೆಸುತ್ತಿದಾರೆ ಅಪೇಕ್ಷೆ ಪಟ್ಟ ಪ್ರಜೆಗಳಿಗೆ ಆ ಬೆಕ್ಕುಗಳನ್ನು ಕೊಡುವರು. ಅನುಕೂಲಸ್ಥರಾದವರಿಗೆ ಅವುಗಳನ್ನು ವಿಕರಿ ಮಾಡುತ್ತಾರೆ.

• • •

ಮೊಹರಂ ಕಡೆಯ ದಿನ ಕಲ್ಕತ್ತಾ ಪಟ್ಟಣದಲ್ಲಿ ಮುಸಲ್ಮಾನ ಜನರು ತಾಬೂತುಗಳನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದಾಗ ಜನರು ಕಿಕ್ಕಿರಿಯುವಂತೆ ರಾಜಬೀದಿಗಳಲ್ಲಿ ತುಂಬಿದ್ದರು. ಆಗ ಅಕಸ್ಮಾತ್ತಾಗಿ ಒಂದು ಕುದುರೆಯು ಬೆದರಿ ಸ್ವೇಚ್ಛೆಯಾಗಿ ದೊಂಬಿಯೊಳಗೆ ನುಗ್ಗಿ ಮೆರವಣಿಗೆಯನ್ನು ಭಗ್ನಮಾಡಿತು. ಉತ್ಸವಗಾರರು ತಾಬೂತುಗಳನ್ನು ಎತ್ತಿ ಹಾಕಿ ದಿಕ್ಕಾಪಾಲು ಓಡಿಹೋದರು. ಪೋಲೀಸಿನವರು ಪ್ರವೇಶಮಾಡಿ ಗಲಭೆಯನ್ನೆಲ್ಲಾ ಶಮನಮಾಡಿದರು ದೇವರ ದಯದಿಂದ ಯಾರಿಗೂ ಅಪಾಯವೇನೂ ಸಂಭವಿಸಲಿಲ್ಲ

• • •

ಕಳೆದ ಬುಧವಾರ ಸಾಯಂಕಾಲ ಸುಮಾರು ೪|| ಗಂಟೆ ಹೊತ್ತಿನಲ್ಲಿ ಮದರಾಸ್ ಪಟ್ಟಣದ ಮುತ್ತಾಲಪೇಟೆಯೊಳಗೆ ಜೈಲ್ ಬೀದಿಯಲ್ಲಿ ಹೊಸದಾಗಿ ಕಟ್ಟಿಸುತ್ತಿದ್ದ ಶ್ರೀರಂಗಂ ಸೆಟ್ಟಿರ ಎಣ್ಣೆ ಕಾರ್ಖಾನೆಯು ಅಕಸ್ಮಾತ್ತಾಗಿ ಕುಸಿದು ಬಿದ್ದು ಹೋಯಿತು. ಪೋಲೀಸಿನವರು ಹೋಗಿ ಮಣ್ಣು ಮುಂತಾದದ್ದನ್ನು ಬಿಡಿಸಿ ನೋಡುವಲ್ಲಿ ಮೂರು ಮಂದಿ ಗಂಡಸರ ಮತ್ತು ಇಬ್ಬರು ಹೆಂಗಸರ ಶವಗಳು ಸಿಕ್ಕಿದವು ಇನ್ನಿಬ್ಬರಿಗೆ ಗಾಯಗಳಾಗಿವೆ. ಹಳೇ ತಳಹದಿಯ ಮೇಲೆ ಆ ಕಟ್ಟಡವನ್ನು ಎಬ್ಬಿಸುತ್ತಿದ್ದದ್ದೇ ಈ ಅನಾಹುತಕ್ಕೆ ಕಾರಣವೆಂದು ಹೇಳುತ್ತಾರೆ.

ತಿನ್ನವೆಲ್ಲಿ ಜಿಲ್ಲೆಗೆ ಸೇರಿದ ಅಂಬಾಸಮುದ್ರ ಮತ್ತು ಶ್ರೀವೈಕುಂಠ ತಾಲ್ಲೂಕುಗಳಲ್ಲಿ ಕೆಲವು ಸಂವತ್ಸರಗಳಿಂದ ಮಳೆ ಬೆಳೆಯಿಲ್ಲದೆ ಬಹಳ ಕಷ್ಟಪಡುವುದಾಗಿಯೂ, ನೀರಿನ ಕ್ಷಾಮವು ಬಹಳ ಹೆಚ್ಚಾಗಿದೆ ಎಂತಲೂ, ನೀರಾವರಿ ಕಾಮಗಾರಿಯನ್ನು ಬೇಗನೆ ಪ್ರಾರಂಭಿಸಿ ಮಾಡಿಸದೆ ಹೋದರೆ ಮುಂದೆ ದೊಡ್ಡ ಕ್ಷಾಮ ಪ್ರಾಪ್ತವಾಗುವುದೆಂತಲೂ ಚಿತ್ತರೆ ನದಿಯ ಪಕ್ಕದಲ್ಲಿ ಉದ್ದಕ್ಕೂ ೧೫ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ಬೆಳೆಗಳು ಒಣಗಿಹೋಗಿರುತ್ತವೆಂತಲೂ ಆ ಪ್ರಾಂತ್ಯದ ಪ್ರಜೆಗಳು ರುಜುಮಾಡಿ ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡಿದಾರೆ.

• • •

ಕೊಯಮುತ್ತೂರಿನಲ್ಲಿ ಇದುವರೆಗೆ ಪ್ಲೇಗ್ ಉಪದ್ರವು ಪ್ರಾಪ್ತವಾಗದೆ ಪ್ರಜೆಗಳು ಸೌಖ್ಯವಾಗಿದ್ದರು ಹೊರಗಿನವರು ಅಲ್ಲಿಗೆ ಹೋಗಿ ಸಾಯುತ್ತಿದ್ದದ್ದು ತಪ್ಪಿ, ಈಗ ಅಲ್ಲಿನವರೇ ಪ್ಲೇಗ್ ತಗಲಿ ನರಳುವ ಗತಿಗೆ ಬಂದಿದೆ ಕಳೆದ ವಾರ ಅಲ್ಲಿನವರೇ ಐದು ಮಂದಿ ಈ ಉಪದ್ರದಲ್ಲಿ ಕಾಲವಾದರು. ಇದು ಪಟ್ಟಣದಲ್ಲೆಲ್ಲಾ ತುಂಬಾ ಗಾಬರಿಯನ್ನುಂಟುಮಾಡಿರುವುದು ಅಧಿಕಾರಿಗಳು ಸಭೆ ಸೇರಿ, ಪ್ಲೇಗ್ ಉಪದ್ರವನ್ನು ಅಡಗಿಸುವುದಕ್ಕೂ ಪ್ರಜೆಗಳು ಊರ ಹೊರಗೆ ವಾಸಮಾಡುವುದಕ್ಕೂ ಏರ್ಪಾಡುಗಳನ್ನು ಮಾಡಿರುತ್ತಾರೆ. ಕ್ಯಾಂಪಿಗೆ ಸಾಗಿಸಲ್ಪಟ್ಟವರಲ್ಲೂ ಈಚೆಗೆ ಒಬ್ಬಿಬ್ಬರು ಕಾಲವಾದರೆಂದು ತಿಳಿದು ಬಂದಿದೆ.

• • •

ಮಲಬಾರ್ ಪ್ರಾಂತ್ಯದಲ್ಲಿ ನೆಲಗಡಲೆಯ ಬೆಳೆಯೇ ಸ್ವಲ್ಪಪ್ರಾಯವಾಗಿತ್ತು ಪಾಲಘಾಟಿನ ತಹಶೀಲ್ದಾರರಾದ ಮೆ|| ರಾಮಚಂದ್ರ ಐಯರವರು ತುಂಬಾ ಸಾಹಸಪಟ್ಟು ಅಲ್ಲಿನ ರೈತ ಪ್ರಜೆಗಳಿಗೆ ಪ್ರೋತ್ಸಾಹಪಡಿಸಿ, ನೆಲಗಡಲೆಯ ಪೈರು ಇಡಿಸಿ ಅದರಿಂದ ವ್ಯವಸಾಯ ಮಾಡಿಸುವುದಕ್ಕಾರಂಭಿಸಿದನು. ಕಳೆದ ವರುಷ ಐನೂರು ಎಕರೆ ಜಮೀನುಗಳಲ್ಲಿ ಆ ಪೈರನ್ನು ಇಟ್ಟರು ರೈತರು ಈಗ ಈ ಬೆಳೆ ಮಾಡುವುದರಲ್ಲಿ ತುಂಬಾ ಕುತೂಹಲವುಳ್ಳವರಾಗಿದಾರೆ. ಹೊಸ ಬೆಳೆಗಳನ್ನು ಇಡುವುದರಲ್ಲಿ ಶೀಲವತಿಕಸ್ಥರಾದ ದೊಡ್ಡ ಮನುಷ್ಯರು ರೈತರಿಗೆ [illegible] ಅಭಿವೃದ್ಧಿ ಹೊಂದುವುದಲ್ಲದೆ ರೈತರು ಪುಣ್ಯವಂತರಾಗಲು ಸಹಾಯವಾಗುವುದು

• • •

ಕಲ್ಕತ್ತಾ ಪಟ್ಟಣದಲ್ಲಿ ಪ್ರೊಫೆಸರ್ ಗ್ರೀಸಿ ಎಂಬೊಬ್ಬ ಸಮರ್ಥನು ಜನರ ಮನಸ್ಸಿನಲ್ಲಿ ನಡೆಯುವ ಆಲೋಚನೆಯನ್ನು ತಿಳಿದು ಹೇಳಬಲ್ಲನೆಂದು ತಿಳಿಸಿದನು ಅಲ್ಲಿನ ಯುಂಪೈರ್ ಥಿಯೇಟರ್ ಎಂಬ ನಾಟಕಶಾಲೆಯಲ್ಲಿ ವರ್ತಮಾನಪತ್ರಿಕಾ ಪ್ರತಿನಿಧಿಗಳೂ ಹಲವು ಮಂದಿ ದೊಡ್ಡಮನುಷ್ಯರೂ ಸಭೆಸೇರಿ ಆ ಸಮರ್ಥನನ್ನು ಪರೀಕ್ಷೆಮಾಡಿದರು ಆತನು ಹೇಳುವಂತೆ ನಡೆದುಕೊಂಡರೆ ೧,೦೦೦ ರೂಪಾಯಿ ಬಹುಮಾನ ಕೊಡುತ್ತೇನೆಂದು ಮೆ|| ಬಾಕ್ಸ್ಟರ್ ಎಂಬಾತನು ಶಪಥ ಕಟ್ಟಿದನು. ತರುವಾಯ ಪ್ರೊಫೆಸರ್ ಗ್ರೀಸನ ಕಣ್ಣು ಕಟ್ಟಿ [illegible]. ಆತನ ಸಮೀಪದಿಂದ ಶಿಪಾಯಿ ಒಬ್ಬನ ಹೆಸರಿನ ಗೆರೆಯನ್ನು ಎಳೆಯುತ್ತಾ, ನಾಟಕ ಶಾಲೆಯ ಮೇಲುಪ್ರದೇಶಕ್ಕೆ ಹೋಗಿ ನಾನಾ ಕಷ್ಟ ದಾರಿಗಳನ್ನು ಬಳಸಿ, ಒಂದು ಪೆಟ್ಟಿಗೆಯೊಳಗಿನಿಂದ ಗೆರೆಯನ್ನು ಎಳೆದುಕೊಂಡು ಹೋದನು ಪರೀಕ್ಷಕರು ನೋಡುತ್ತಿದ್ದಾಗ ಆ ಸಮರ್ಥನು ಆ ಗೆರೆಯು ಎಲ್ಲೆಲ್ಲಿ ಹೋಗಿತ್ತೋ ಆಯಾ ಸ್ಥಳದ ಮೇಲೆಯೇ ನಡೆದುಕೊಂಡು ಹೋಗಿ ಅದು ಎಲ್ಲಿಗೆ ಅಬ್ಬೇರಾಯಿತೋ ಅಲ್ಲಿ ನಿಂತು ಬಿಟ್ಟನು. ಕಣ್ಣು ಕಟ್ಟಿದ್ದರೂ ಈತನು ಎಳ್ಳಷ್ಟು ತಪ್ಪಿಹೋಗದೆ ಆ ಗೆರೆಯ ಮೇಲೆ ಹೋದದ್ದನ್ನು ನೋಡಿ ಎಲ್ಲರೂ ಪರಮಾಶ್ಚರ್ಯ ಪಟ್ಟರು. ಕಡೆಗೆ ಬ್ಯಾಕ್ಸ್ಟರನು ಗೊತ್ತು ಮಾಡಿದ್ದ ಬಹುಮಾನವನ್ನು ಆತನಿಗೆ ಒಪ್ಪಿಸಿದನು.

ವಿದೇಶ ವರ್ತಮಾನಗಳು.

ವಿಲಾಯತಿಗೆ ಸೇರಿದ ಯರಮತ್ ನಗರದಲ್ಲಿ ಒಂದು ಜಹಜಿನೊಳಗಿದ್ದ ಯಂತ್ರವು ಮಹಾ ಶಬ್ದದೊಡನೆ ಹಾರಿದ್ದರಿಂದ ಆರು ಮಂದಿ ಹತರಾದರು

• • •

ಶರೀರ ಸೌಖ್ಯಕ್ಕಾಗಿ ದಕ್ಷಿಣ ಆಫ್ರಿಕದಲ್ಲಿ ಪ್ರವಾಸನೆ ಮಾಡುತ್ತಿದ್ದ ಲಾರ್ಡ್ ಕರ್ಸನ್‌ರವರು ಕಳೆದ ಬುಧವಾರ ವಿಲಾಯತಿಯನ್ನು ಕುರಿತು ಹಿಂತಿರುಗಿದರು.

• • •

ಚೀನಾ ರಾಜ್ಯಕ್ಕೆ ಸೇರಿದ ಕ್ಯಾಂಟನ್ ಪಟ್ಟಣದ ಸಮುದ್ರ ತೀರದಲ್ಲಿ ಬೆಂಕಿ ಬಿದ್ದು ಕೆಲವು ದೋಣಿಗಳು ಉರಿದು ಹೋದವು. ೭೧೦ ಜನರು ಸುಟ್ಟ ಶರೀರಗಳು ದೊರಕಿರುತ್ತವೆ. ಇನ್ನೂ ಅನೇಕರು ಸಿಕ್ಕಿಯಿಲ್ಲ.

• • •

ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳಲ್ಲಿ ಯಾರೂ ಔಷಧಕ್ಕೆ ವಿನಹಾ ಇನ್ನಾವ ಕಾರಣಕ್ಕಾಗಲಿ ಪರದೇಶಗಳಿಂದ ಅಫೀಮನ್ನು ತರಿಸ ಕೂಡದೆಂತಲೂ, ತರಿಸಿದವರು ಶಿಕ್ಷೆಗೆ ಗುರಿಯಾಗುವರೆಂತಲೂ ಕಾನೂನ್ ಮಾಡಿ ಜಾರಿಗೆ ತಂದಿರುತ್ತಾರೆ.

• • •

ಅಮೇರಿಕಕ್ಕೆ ಸೇರಿದ ಬ್ರೆಜಿಲ್ ಸೀಮೆಯ ಮುಖ್ಯ ಪಟ್ಟಣವಾದ ರಿಯೋಡಿಜನೀರೋ ನಗರದಲ್ಲಿ ಪೋಲೀಸಿನವರಿಗೂ ಪ್ರಜೆಗಳಿಗೂ ಮೂರು ದಿನ ರಾತ್ರಿಕಾಲದಲ್ಲಿ ಕಲಹಗಳು ನಡೆದು ಅನೇಕರು ಮೃತರಾದರೆಂತಲೂ, ಬಹು ಜನರಿಗೆ ಗಾಯಗಳಾದವೆಂದೂ ತಿಳಿದು ಬಂದಿದೆ.

• • •

ವಿಲಾಯತಿಯಲ್ಲಿ ದಿಕ್ಕಿಲ್ಲದ ಮುದಿ ಪ್ರಾಯದವರಿಗೆಲ್ಲಾ ಸರ್ಕಾರದಿಂದ ಪೆನ್ಷನ್ ಕೊಡಿಸುವುದು ಈ ವರುಷ ಆರಂಭವಾಗಿದೆಯಷ್ಟೆ. ಕಳೆದ ತಿಂಗಳು ಪೆನ್ಷನ್ ತೆಗೆದುಕೊಂಡವರಲ್ಲಿ ಶೇಕಡಾ ೭೦ ಮಂದಿ ಹೆಂಗಸರೆಂತಲೂ, ಇವರುಗಳಲ್ಲಿ ನೂರಕ್ಕೆ ಎಪ್ಪತ್ತು ಮಂದಿ ವಿಧವೆಯರೆಂತಲೂ ತಿಳಿದು ಬಂದಿದೆ

• • •

ಮಾಂಚೂರಿಯಾ ಸೀಮೆಯಲ್ಲಿ ಟೆಲಿಗ್ರಾಫ್ ತಂತಿಗಳನ್ನು ಹಾಕಿ ತಂತೀ ವರ್ತಮಾನಗಳನ್ನು ಕಳುಹಿಸುವುದಕ್ಕೆ ಅನುಕೂಲ ಪಡಿಸ ಬಹುದೆಂದು ಚೀನಾದವರು ಜಪಾನ್‌ನವರಿಗೆ ಅಧಿಕಾರವನ್ನು ಕೊಟ್ಟಿದಾರೆ. ಇದಕ್ಕಾಗಿ ಜಪಾನ್‌ನವರು ಚೀನೆಯವರಿಗೆ ಕರಾರು ಬರೆದು ಕೊಟ್ಟು, ಉತ್ಪತ್ತಿಯಲ್ಲಿ ಒಂದು ಭಾಗವನ್ನು ಕೊಡುವುದಾಗಿ ಒಪ್ಪಿಕೊಂಡಿರುವರು.

ದಕ್ಷಿಣ ಆಫ್ರಿಕಕ್ಕೆ ಗೋಧಿಯನ್ನು ಅಪಾರವಾಗಿ ಸಾಗಿಸಿಕೊಂಡು ಹೋಗುತ್ತಿದ್ದ ಕ್ಲಾನ್ ರೋನಾಲ್ಡ್ ಎಂಬೊಂದು ಜಹಜು ಕಳೆದ ವಾರ ಆಸ್ಟ್ರೇಲಿಯಾ ದ್ವೀಪದ ಬಳಿ ಎಡಿಕ್‌ಬಗಿನ ಸಮೀಪದಲ್ಲಿ ಸುಳಿಗೆಸಿಕ್ಕಿ ಸಮುದ್ರದ ಪಾಲಾಯಿತು. ಜಹಜಿನ ಯಜಮಾನನೂ, ನಾಲ್ವತ್ತು ಮಂದಿ ನೌಕರಮಾನೆಯರೂ ನೀರಿನಲ್ಲಿ ಮೃತಪಟ್ಟರು. ಗೋಧಿಯೆಲ್ಲಾ ಹಾಳಾಯಿತು.

• • •

ಅಮೇರಿಕಕ್ಕೆ ಸೇರಿದ ಬ್ರೆಜಿಲ್ ಸೀಮೆಯೊಳಗೆ ಡಾಕ್ಟರ್ ವೈಮೋಲೆಂಡೊ ಎಂಬಾತನು ತನ್ನ ಭಾವಮೈದನು ಕೋರ್ಟಿನಲ್ಲಿ ಸಾಕ್ಷಿ ಹೇಳುತ್ತಿದ್ದಾಗ ಅವನನ್ನು ಹೊಡೆದು ಕೊಂದುಹಾಕಿದನು. ಅದಕ್ಕೆ ಆ ಡಾಕ್ಟರನ್ನು ಹಿಡಿದು ದರ್ಯಾಪ್ತಿ ಮಾಡಿದಾಗ ಅವನು—ನಮ್ಮ ಸಂಸಾರದ ಗುಟ್ಟನ್ನು ಹೊರಕ್ಕೆ ತಂದು ಹಾಕಿ ಸಾಕ್ಷಿ ಹೇಳುತ್ತಿದ್ದದ್ದರಿಂದ ನಾನು ನನ್ನ ಭಾವಮೈದನನ್ನು ಕೊಂದು ಹಾಕಿದೆನು ಎಂಬ ಅರ್ಥಕ್ಕೆ ಕೈಫಿಯತ್ತು ಕೊಟ್ಟನು. ಜಡ್ಜಿಯವರು ಆಗ ಆತನನ್ನು ಖುಲಾಸ್ ಮಾಡಿ ಬಿಟ್ಟರು

• • •

ಆಫ್ರಿಕಕ್ಕೆ ಸೇರಿದ ಕೈಗೇರಿಯಾದಲ್ಲಿ ಇಂಗ್ಲಿಷರೂ ಜರ್ಮನಿಯವರೂ ಸೇರಿ ಎಲ್ಲೆಕಟ್ಟನ್ನು ಗೊತ್ತು ಮಾಡುತ್ತಿರುವಾಗ ಒಂದು ಸಾವಿರ ದೇಶೀಯ ಜನರು ಏಕವಾಗಿ ಬಂದೊಡನೆ ಸಹಿತ ಅವರ ಮೇಲೆ ನುಗ್ಗಿ ಅವರ ಸಾಮಗ್ರಿಗಳನ್ನು ಕೊಳ್ಳೆ ಹೊಡೆಯಲಾರಂಭಿಸಿದರು. ಇಂಗ್ಲಿಷ್ ಮತ್ತು ಜರ್ಮನಿ ಸೈನಿಕರು ಅವರನ್ನು ತಡೆದು ಸೊಂಕನಾಳಿ ಎಂಬ ರಾಜ್ಯದಲ್ಲಿ ಬಹು ಕಠಿಣವಾದ ಯುದ್ಧ ಮಾಡಿ, ಅವರನ್ನೆಲ್ಲಾ ಓಡಿಸಿದರು. ಸೈನಿಕರಲ್ಲಿ ೨೪ ಮಂದಿ ಗಾಯಪಟ್ಟರು. ಈ ಪೈಕಿ ಜರ್ಮನ್ ಕಮಿಷನರೂ ಒಬ್ಬರಾಗಿದಾರೆ. ಕೆಲವರು ಮೃತಪಟ್ಟಿರುವರು.

• • •

ಜರ್ಮನಿ ರಾಜ್ಯದಲ್ಲಿ ಹಿಮವು ಅಕಸ್ಮಾತ್ತಾಗಿಯೂ ಅಪಾರವಾಗಿಯೂ ಕರಗಿ ನದಿಗಳಲ್ಲಿ ಪ್ರವಾಹ ಹೆಚ್ಚಿ ತುಂಬಾ ಕಷ್ಟ ನಷ್ಟಗಳನ್ನುಂಟುಮಾಡಿದೆ. ಜನ [illegible] ಹೋಗಿ ಬರುವ ರಸ್ತೆಗಳೂ ಸೇತುವೆಗಳೂ ಹಾಳಾದವು. ರೈಲ್ ಗಾಡಿಗಳ ಸಂಚಾರಕ್ಕೆ ಅಡಚಣೆಯುಂಟಾಯಿತು [illegible] ಎಂಬ ನದಿಯು ಇನ್ನೂ ಉಕ್ಕುವುದರಲ್ಲೇ ಇರೋಣದರಿಂದ ಇನ್ನೂ ಅಪಾರ ನಷ್ಟವುಂಟಾದೀತೆಂಬ ಭೀತಿ ಹುಟ್ಟಿರುವುದು. ಇದುವರೆಗೆ ಬಹಳ ಆಸ್ತಿಪಾಸ್ತಿಗಳು ನಷ್ಟವಾಗಿರುವುದಲ್ಲದೆ ಈ ಪ್ರವಾಹಕ್ಕೆ ಸಿಕ್ಕಿ ನಾಲ್ವತ್ತು ಮಂದಿ ಮೃತಪಟ್ಟರೆಂದು ತಿಳಿದು ಬಂದಿದೆ

• • •

ರಷ್ಯಾ ಜಪಾನ್ ಯುದ್ಧದಲ್ಲಿ ರಷ್ಯಾದವರ ಭೂ ಸೈನ್ಯಾಧಿಪತಿಯಾಗಿದ್ದ ಜನರಲ್ ಸ್ಟೋಯಿಸೆಲ್ ಯವರನ್ನೂ, ಹಡಗುಗಳ ಅಧಿಪತಿಯಾಗಿದ್ದ ಅಡ್ಮಿರಲ್ ನೆಬೋಗಟಾಫ್ ಯವರನ್ನೂ ರಷ್ಯಾ ಗವರ್ನಮೆಂಟಿನವರು ದರ್ಯಾಪ್ತಿ ಮಾಡಿ, ಅವರು ಸರಿಯಾಗಿ ಯುದ್ಧ ಕಾರ್ಯಗಳನ್ನು ನಡಿಸಲಿಲ್ಲವೆಂದು ಅಪರಾಧ ಹೊರಿಸಿ, ಹತ್ತು ವರುಷ ಸಜಾ ಅನುಭವಿಸುವಂತೆ ಇಬ್ಬರಿಗೂ ಶಿಕ್ಷೆ ವಿಧಿಸಿದರು ಇವರಿಬ್ಬರೂ ಈಗ ತಮ್ಮ ಕಷ್ಟ ದೆಶೆಯನ್ನು ವಿವರಿಸಿ ರಷ್ಯಾ ಚಕ್ರವರ್ತಿಯವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡು, ಅವರ ಯುಗಾದಿ ಹಬ್ಬದ ಸಂತೋಷದ ದಿನ ತಮ್ಮಿಬ್ಬರಿಗೂ ಕ್ಷಮಾಪಣೆಯನ್ನು ದಯಪಾಲಿಸಿ ಸೆರೆಮನೆಯಿಂದ ಬಿಡುಗಡೆ ಮಾಡಿಕೊಡಬೇಕೆಂದು ಬೇಡಿಕೊಂಡಿದಾರೆ.

• • •

ಇಟಲಿ ರಾಜ್ಯದಲ್ಲಿ ಭೂಕಂಪದ ಅನಾಹುತವಾದ ಸುದ್ದಿಯು ತಲುಪಿದ ಕೂಡಲೇ ಫ್ಲಾರೆನ್ಸ್ ಎಂಬ ಆ ರಾಜ್ಯದ ಒಂದು ಪಟ್ಟಣದಲ್ಲಿ ಸ್ಕೂಲ್ ಹುಡುಗರು ಕಷ್ಟನಿವಾರಣಾರ್ಥವಾಗಿ ಪ್ರಜೆಗಳಿಂದ ಹಣವನ್ನೂ ಬಟ್ಟೆಬರೆಗಳನ್ನೂ ಕೂಡಿಸಿ, ಮೆಸ್ಸೀನಾಕ್ಕೆ ಕಳುಹಿಸಿದರು ಅವರು ಗಾಡಿಯನ್ನು ನಡಿಸಿಕೊಂಡು ಮನೆ ಮನೆಗೂ ಹೋಗಿ ಅಪಾರ ಬಟ್ಟೆಗಳನ್ನೂ ೬,೦೦೦ ರೂಪಾಯನ್ನೂ ಕೂಡಿಸಿದರು. ಅವರ ಪಂಗಾವಲಿಗೆ ಪೋಲೀಸಿನವರೂ ಸೈನಿಕರೂ ಹೋಗಿದ್ದರು. ಆ ಭೂಕಂಪದ ಭೀತಿಯನ್ನು ಕುರಿತು ಒಬ್ಬ ಬಾತ್ಮಿದಾರರು ಅಲ್ಲಿಂದ ಬರೆದಿರುವುದೇನೆಂದರೆ—ಭೂಕಂಪದ ವೃತ್ತಾಂತವನ್ನು ಕೇಳಿದರೆ ಎದೆ ಒಡೆದು ಹೋಗುತ್ತದೆ ಅನೇಕ ಸಿಪಾಯಿಗಳೂ ಪೋಲೀಸಿನವರೂ ಮೆಸ್ಸೀನಾ ಮತ್ತು ರೆಗ್ಗಿಯೋ ನಗರಗಳಲ್ಲಿ ನಡೆದ ಅನಾಹುತವನ್ನು ನೋಡಿ ಗಾಬರಿಯಿಂದ ಹುಚ್ಚರಂತೆ ಆಗಿಹೋಗಿದಾರೆ. ಬದುಕಿ ಬಂದವರಲ್ಲಿ ಅನೇಕರು ಬುದ್ಧಿಭ್ರಮಣೆ ಹೊಂದಿಯೂ ಹುಚ್ಚರಾಗಿಯೂ ಆಗಿರುತ್ತಾರೆ ಅವರು ಆ ಅನಾಹುತದಿಂದ ಹ್ಯಾಗೆ ತಪ್ಪಿಸಿಕೊಂಡು ಬಂದರೆಂಬುವುದು ಅವರಿಗೇ ತಿಳಿಯದು. ಇನ್ನು ಕೆಲವರಿಗೆ ತಮ್ಮ ಹೆಸರೇನೆಂಬುವುದೂ ಮರೆತುಹೋಗಿದೆ ಇದು ಮಹಾ ಭಯಂಕರವಾದ ಅನಾಹುತವೇ ಸರಿ ಇನ್ನೊಂದು ವಿಶೇಷವೇನೆಂದರೆ. ಅನೇಕಾನೇಕ ಇಟ್ಟಿಗೆ ಗಾರೆ ಮನೆಗಳೂ ಕಲ್ಲು ಕಟ್ಟಡಗಳೂ ಅನಾಮತ್ತಾಗಿ ಉರುಳಿ ಹೋಗಿರುತ್ತವೆ. ಆದರೂ ಒಂದು ಕಡೆಯಲ್ಲಿ ಐದು ಮನೆಗಳು ಸ್ವಲ್ಪವೂ ಜಾಖಮ್ ಆಗದೆ ಎಂದಿನಂತೆ ಚೆನ್ನಾಗಿರುವವು ಇವನ್ನು ಉಕ್ಕಿನ ಸಾಮಾನು ಹಾಕಿ ಸಿಮೆಂಟ್ ಎಂಬ ಅಂಟಾದ ಗಾರೆಯಿಂದ ಕಟ್ಟಿರುತ್ತಾರೆ ಈ ಕಟ್ಟಡಗಳಿಗೆ ಸ್ವಲ್ಪವೂ ಅಪಾಯ ಸಂಭವಿಸಿ ಇಲ್ಲ ಒಂದೆರಡು ಕಡೆಗಳಲ್ಲಿ ಮಾತ್ರ ಸ್ವಲ್ಪ ಬಗ್ಗಿ ಹೋಗಿರುವವು ಎಂಬುದೇ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಕರೆಸ್ಪಾಂಡೆನ್ಸ್.

ಆರ್ಯ ವೈಶ್ಯ ಮಹಾಸಭೆಯು.

ಅಯ್ಯಾ,

ಮೈಸೂರಲ್ಲಿ ನಡೆದ ಆರ್ಯ ವೈಶ್ಯ ಮಹಾಸಭಾದಲ್ಲಿ ದ್ವಿತೀಯ ಕಾನ್‌ಫರೆನ್ಸು ತ್ಯಾಮಗೊಂಡ್ಲದಲ್ಲಿ ನಡೆಯಬೇಕೆಂದು ತೀರ್ಮಾನವಾಗಿದೆ. ಈಚೆಗೆ ಬೆಂಗಳೂರಿನಲ್ಲಿರುವ ವೈಶ್ಯಮಹನೀಯರು ದ್ವಿತೀಯ ಕಾನ್‌ಫರೆನ್ಸು ಬೆಂಗ

ಊರಲ್ಲಿ ನಡೆಯಬೇಕೆಂದು ತ್ಯಾಮಗೊಂಡ್ಲುದ ವೈಶ್ಯ ಮಹಾ ಜನಗಳ ಸಮ್ಮತೀ ಮೇಲೆ ಪ್ರಯತ್ನ ಪಡುತ್ತಿರುವುದಾಗಿ ತಿಳಿಯಬರುತ್ತೆ ಬೆಂಗಳೂರಿನಲ್ಲೇ ನಡೆಯಬೇಕೆಂಬ ತೀರ್ಮಾನವನ್ನು ಬೆಂಗಳೂರಿನವರು ಈ ವೈಶ್ಯ ಮಹಾ ಸಭೆಯ ಹೆಡ್ ಆಫೀಸಿಗೆ ತಿಳುಹಿಸಿದಲ್ಲಿ ಮುಂದಿನ ಸಭೆಗೋಸ್ಕರ ನಡೆಯಬೇಕಾದ ಕಾರ್ಯ ಭಾಗಗಳನ್ನು ಜಾಗ್ರತೆ ನಡಿಸಲು ಈಗಿನಿಂದ ಪ್ರಯತ್ನಪಡಬೇಕಾಗುತ್ತೆ ಕುಲೋದ್ಧಾರಕ್ಕಾಗಿ ಎಲ್ಲರೂ ಏಕೀಭವಿಸಿ, ಸ್ವಪ್ರತಿಷ್ಠೆ ಸ್ವಪ್ರಯೋಜನಗಳನ್ನು ಬಿಟ್ಟು ಸದೆ, ಬರುವ ವರುಷದ ಸಭೆಯನ್ನು ಸಾಂಗವಾಗಿ ನೆರವೇರಿಸಬೇಕಾದದ್ದು ಅವರ ಕರ್ತವ್ಯವಾಗಿರುತ್ತೆ

ಈ ವೈಶ್ಯ ಮಹಾಸಭೆಯವರು ೧೯೦೮ನೇ ಇಸವಿ ಡಿಸೆಂಬರು ತಾ ೨೭ ರಲ್ಲಿ ಮಾಗಡಿ ಆರ್ಯ ವೈಶ್ಯರ ಸತ್ರದಲ್ಲಿ ಸಭೆಸೇರಿ ತೀರ್ಮಾನಿಸಿರುವ ಕೆಳಗೆ ವಿವರಿಸುವ ವಿಷಯಗಳು ತುಂಬಾ ಶ್ಲಾಘನೀಯವಾಗಿಯೂ ಸರ್ವರೂ ಆಚರಿಸತಕ್ಕವುಗಳಾಗಿಯೂ ಇರುತ್ತವೆ —ಆರ್ಯ ವೈಶ್ಯ ಮಹಾ ಸಭೆಯ ೯ನೇ ತೀರ್ಮಾನದಲ್ಲಿ ಶುಭಕಾರ್ಯಗಳು ನಡೆಯುವಾಗ ಈ ಮಹಾ ಸಭೆಯ ಉಪಯೋಗಾರ್ಥವಾಗಿ ನಾಮಕರಣದಲ್ಲಿ ೪ ಆಣೆಗೆ ಕಡಮೆ ಇಲ್ಲದೆಯೂ, ಉಪನಯನದಲ್ಲಿ ೮ ಆಣೆಗೆ ಕಡಮೆ ಇಲ್ಲದೆಯೂ, ವಿವಾಹದಲ್ಲಿ ಉಭಯರಿಂದ ೨ ರೂಪಾಯಿಗೆ ಕಡಮೆ ಇಲ್ಲದೆಯೂ, ನಿಷೇಕದಲ್ಲಿ ಉಭಯರಿಂದ ೧ ರೂಪಾಯಿಗೆ ಕಡಮೆ ಇಲ್ಲದೆಯೂ ರುಸುಂ ವಸೂಲು ಮಾಡುವದನ್ನು ಆಚರಣೆಗೆ ತರಬೇಕು (೨) ವಿವಾಹ ಕಾಲದಲ್ಲಿ ೩ನೇ ದಿವಸ ಆಚರಿಸಬೇಕಾದ ಗೋತ್ರ ಪೂಜಾ ಕಾಲದಲ್ಲಿ ಅಂಗೀ ರುಮಾಲು ಹಾಕಿಕೊಂಡು, ಪೂಜೆಮಾಡುವ ಪದ್ಧತಿಯನ್ನು ತಪ್ಪಿಸಿ, ಮಡಿವಸ್ತ್ರಗಳನ್ನುಟ್ಟು ಪೂಜೆಮಾಡಬೇಕು ಮತ್ತು ಸರ್ವರೂ ಮಡಿವಸ್ತ್ರಗಳನ್ನುಟ್ಟು ಬರಬೇಕು (೩) ಆರ್ಯ ವೈಶ್ಯ ಕುಲೋತ್ಪನ್ನರಾದ ಬಾಲಕಿಯರು ಪ್ರಥಮ ಋತುವಾದ ಕಾಲದಲ್ಲಿ ಬ್ರಾಹ್ಮಣ ಸ್ತ್ರೀಯರೇ ಬಂದು “ಪಡಿ” ಹಾಸತಕ್ಕ ಪದ್ಧತಿಯನ್ನು ಬಿಟ್ಟು, ಸ್ವಮತದ ಮುತ್ತೈದೆಯರಿಂದಲೇ ನಡಿಸತಕ್ಕದ್ದು

ಈ ಮಾಗಡಿ ವೈಶ್ಯ ಸಭೆಯವರು ನಡಿಸಿದಂತ ಇತರ ಕಡೆಗಳಲ್ಲಿಯೂ ಆಚರಣೆಗೆ ತರುವದು ಪ್ರತಿ ಒಬ್ಬರ ಕರ್ತವ್ಯವೆಂತ ತಿಳಿಯತಕ್ಕದ್ದು ಈಗ ಲಗ್ನ ಕಾಲವಾಗಿದೆ ಆರ್ಯ ವೈಶ್ಯ ಮಹಾ ಸಭೆಯವರು ಏರ್ಪಡಿಸಿರುವ ಮೌಲ್ಯಗಳನ್ನು ವಸೂಲ್ಮಾಡಿ ಈ ಸಭೆಗೆ ಕಳುಹಿಸಿ ಕೊಡಲು ಸಕಾಲವಾಗಿದೆ ಈ ವಿಷಯದಲ್ಲಿ ಎಲ್ಲರೂ ಶ್ರದ್ಧೆಯಿಂದ ಪ್ರವರ್ತಿಸಿದರೆ ಮಾಡಿ ಸಭೆಯ ಫಂಡನ್ನು ವೃದ್ಧಿಪಡಿಸಲು ಪ್ರಯತ್ನ ಮಾಡಬೇಕು

ಆರ್ಯ ವೈಶ್ಯ ಮಹಾಸಭೆಯವರು ಮಾಗಡಿ ವೈಶ್ಯ ಮಂಡಲಿಯವರ ತೀರ್ಮಾನಗಳಂತೆ ಆಚರಿಸತಕ್ಕದ್ದಲ್ಲದೆ ಉಪನಯನ ವಿವಾಹಗಳನ್ನು ಏಕ ಕಾಲದಲ್ಲಿ ನಡೆಸದೆ, ಲಗ್ನಕ್ಕೆ ಒಂದು ವರ್ಷ ಮುಂಚೆ ಉಪನಯನವನ್ನು ನೆರವೇರಿಸಬೇಕೆಂತಲೂ, ಇದುವರಿವಿಗೆ ಉಪನಯನವಿಲ್ಲದೆ ವಯಸ್ಕರಾಗಿರುವವರಿಗೆ ಇನ್ನೊಂದು ವರುಷದೊಳಗೆ ಉಪನಯನ ಮಾಡಬೇಕೆಂತಲೂ ಆರ್ಯ ವೈಶ್ಯ ಮಹಾಸಭೆಯಿಂದ ಸಲಹೆಗಳು ಕೊಡಲ್ಪಟ್ಟಿವೆ ಇದಕ್ಕೆ ಸರ್ವರೂ ಗಮನ ಕೊಟ್ಟು ಆಚರಿಸಬೇಕಾಗಿದೆ ಇದಲ್ಲದೆ ಸರ್ವರೂ ಅನ್ಯೋನ್ಯ ಭಾವದಿಂದ ಈ ಸಭೆಯ ಅಭಿಮತಗಳನ್ನನುಸರಿಸಿ ಅಲ್ಲಲ್ಲಿ ಬ್ರಾಂಚ್ ಸಭೆಗಳನ್ನು ಜಾಗ್ರತೆಯಾಗಿ ಏರ್ಪಡಿಸಿ ಕುಲಾಭಿವೃದ್ಧಿಗಾಗಿ ಆಗಬೇಕಾದ ಕಾರ್ಯಭಾಗಗಳನ್ನು ಯೋಚಿಸಿ ಈ ಲಗ್ನ ಕಾಲಗಳಲ್ಲಿ ವಿಧಾಯಕವಾದ ದ್ರವ್ಯಾರ್ಜನೆ ಮಾಡಿ ಈ ಸಭೆಯ ಫಂಡಿಗೆ ಸೇರಿಸಿ ತನ್ಮೂಲಕ ಯಶೋವಂತರಾಗಬೇಕೆಂದು ಕೇವಲ ದೀನ ಭಾವದಿಂದ ಸರ್ವರನ್ನು ಪ್ರಾರ್ಥಿಸುತ್ತೇವೆ

ಪೆನ್ಷನ್ ಆಫೀಸರ್

ಕ್ಷಾಮನಿವಾರಣಾಯ ವಿಧಾನಂಗಳು.

ಮೈಸೂರು ಸರ್ಕಾರಿ ಹುಕುಮುಗಳು

ದನಗಳೂ, ಹುಲ್ಲುಬನ್ನಿಯೂ.

ಪ್ರಕೃತ ದನಗಳಿಗೆ ಮೇವು ಸಿಕ್ಕುವುದು ಬಹಳ ಕಷ್ಟವಾಗಿರುವುದರಿಂದ ಸರ್ಕಾರದವರು ಚಿತ್ರದುರ್ಗ, ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲೂ ಮತ್ತು ಇತರ ಡಿಸ್ಟ್ರಿಕ್ಟುಗಳಲ್ಲಿ ಈ ರೀತಿ ಕಷ್ಟ ಪ್ರಾಪ್ತವಾಗಿರುವ ಪ್ರದೇಶಗಳಲ್ಲೂ ೧೯೦೮—೦೯ ನೇ ಸಾಲಿಗೆ ಹುಲ್ಲುಬನ್ನಿಯನ್ನು ಪೂರ್ತಿಯಾಗಿ ರಿಮಿಟ್ ಮಾಡಿರುತ್ತಾರೆ

ಅಧಿಕಾರಿಗಳ ಜವಾಬ್ದಾರಿಯು

ಯಾವ ಕಡೆಯಲ್ಲೇ ಆಗಲಿ ಪ್ರಜೆಗಳ ಪೈಕಿ ಯಾರಾದರೂ ಜೀವನಕ್ಕೆ ಸುತರಾಂ ಗತಿಯಿಲ್ಲದೆ ಕಷ್ಟಪಡುತ್ತಿರುವ ಪಕ್ಷಕ್ಕೆ ಅಧಿಕಾರಿಗಳು ಅಂಥವರಿಗೆ ಒಡನೆಯೇ ಜೀವನಕ್ಕೆ ಅನುಕೂಲ ಮಾಡಿ ಕೊಡಬೇಕು ಅನಂತರ ಅದಕ್ಕಾಗಿ ತಗಲುವ ಖರ್ಚನ್ನು ಗವರ್ನ್‌ಮೆಂಟಿಗೆ ತಿಳಿಸಬೇಕು ಈ ವಿಚಾರವನ್ನು ಸಮಸ್ತ ಅಧಿಕಾರಿಗಳೂ ಗಮನಕ್ಕೆ ತಂದುಕೊಂಡು ಬಹು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾ ಬರಬೇಕಾಗಿದೆ

ಕ್ಷಾಮನಿವಾರಣೆಯ ಅಲೋವೆನ್ಸುಗಳು.

ಮಾಹೆಯಾನ ೩೦ ರೂಪಾಯಿಗಿಂತಲೂ ಜಾಸ್ತಿ ತಲಬಿಲ್ಲದ ಸಮಸ್ತ ಇಲಾಖೆಗಳ ನೌಕರ ಮಾನೇರುಗಳಿಗೂ ಕ್ಷಾಮದ ಅಲೋವೆನ್ಸುಗಳನ್ನು ಕೊಡುತ್ತಾ ಬರಬೇಕೆಂದು ಹುಕುಂ ಮಾಡಲಾಗಿದೆ ಈ ಹುಕುಂ ಪ್ರಕಾರ ಬೆಂಗಳೂರು, ಕೋಲಾರ, ತುಮಕೂರು ಮತ್ತು ಕಡೂರ್ ಡಿಸ್ಟ್ರಿಕ್ಟುಗಳಲ್ಲಿ ಈ ಅಲೋವೆನ್ಸ್ ಕೊಡುವುದು ಕಳೆದ ಡಿಸೆಂಬರ್ ಅಖೈರಿಗೂ, ಉಳಿದ ಡಿಸ್ಟ್ರಿಕ್ಟುಗಳಲ್ಲಿ ಜನವರಿ ಆಖೈರಿಗೂ ನಿಂತುಹೋಗತಕ್ಕದ್ದಾಗಿದೆ ಆದರೆ ಈಗಿನ ಸ್ಥಿತಿಯನ್ನು ನೋಡಲಾಗಿ ಇನ್ನೂ ಕೆಲವು ಕಾಲದ ತನಕ ದುರ್ಭಿಕ್ಷವು ನಿವಾರಣೆಯಾಗುವಂತೆ ಕಾಣುವುದಿಲ್ಲ ಆದಕಾರಣ ಈ ಹಿಂದೆ ಸ್ಯಾಂಕ್ಷನ್ ಮಾಡಿರುವ ಅಲೋವೆನ್ಸುಗಳನ್ನೆಲ್ಲಾ ಸಮಸ್ತ ಇಲಾಖೆಗಳ ನೌಕರ ಮಾನೇರುಗಳಿಗೂ ೧೯೦೯ ನೇ ಮಾರ್ಚಿ ಆಖೈರು ತನಕ ಸಲ್ಲಿಸುತ್ತಾ ಬರಬೇಕೆಂದು ಹುಕುಂ ಮಾಡಲಾಗಿದೆ

ಅಧಿಕಾರಿಗಳಿಗೆ ರಜಾ ಕೊಡುವುದು

ಡೆಪ್ಯುಟಿ ಕಮಿಷನರು, ಅಸಿಸ್ಟೆಂಟ್ ಕಮಿಷನರು, ಅಮಲ್ದಾರ್ರು, ಈ ಮೊದಲಾದ ಎಗ್ಸಿಕ್ಯುಟಿವ್ ಅಧಿಕಾರಿಗಳಿಗೆ ಡಾಕ್ಟರ ಸರ್ಟಿಫಿಕೇಟು ವಿನಹಾ ಈ ಕಾಲದಲ್ಲಿ ರಜಾ ಕೊಡತಕ್ಕದ್ದಲ್ಲವೆಂದು ರೆವಿನ್ಯೂ ಕಮಿಷನರವರು ಗವರ್ನ್‌ಮೆಂಟಿಗೆ ಸೂಚಿಸಿದರು. ಅವರ ಮೇಲೆ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ —ಈಗ ಪ್ರಾಪ್ತವಾಗಿರುವ ದುಷ್ಕಾಲವು ನಿವಾರಣೆಯಾಗುವ ತನಕ ರೆವಿನ್ಯೂ ಕಮಿಷನರವರು ಸೂಚಿಸುವ ಮೇರೆ ವಿಶೇಷವಾದ ಆವಶ್ಯಕತೆ ತಂದು ಬಂದಲ್ಲದೆ ರೆವಿನ್ಯೂ ಅಧಿಕಾರಿಗಳನ್ನು ಬದಲಾವಣೆ ಮಾಡುವುದು ಸಹಜವಾಗಿರುವಂತೆ ಕಾಣುವುದಿಲ್ಲ ಆದಕಾರಣ ಕಾಯಿಲೆ ಸಂಬಂಧವಾಗಲಿ ಸರಿಯಾದ ಡಾಕ್ಟರ್ ಸರ್ಟಿಫಿಕೇಟಾಗಲಿ ಬಂದ ಹೊರತು ಕಷ್ಟಪರಿಹಾರದ ಕೆಲಸವನ್ನು ವಹಿಸಿರುವಂಥಾ ರೆವಿನ್ಯೂ ಅಧಿಕಾರಿಗಳಿಗೂ ಇತರ ಇಲಾಖೆಗಳ ಅಧಿಕಾರಿಗಳಿಗೂ ಮತ್ತೊಂದು ಹುಕುಂ ಕೊಡಲ್ಪಡುವ ತನಕ ರಜಾ ದೊರಕಲಾರದು

ನಾಲಾ ನೀರೂ, ಗನ್ನಾ ಫಸಲೂ

ಮುಂಡರಗಿ, ಹೇಮಗಿರಿ, ಶ್ರೀರಾಮದೇವರ ನಾಲಾಗಳ ಕೆಳಗೆ ಹಾಲಿ ನಿಂತಿರುವ ಪೈರಿಗೂ ಮತ್ತು ಶಿವನಸಮುದ್ರದ ವಿದ್ಯುಚ್ಛಕ್ತಿ ಕೆಲಸಕ್ಕೂ ನೀರಿನ ಅನಾನುಕೂಲತೆಯುಂಟಾಗದ ರೀತಿ ನೋಡಿಕೊಳ್ಳಬೇಕಾಗುತ್ತವೆ ಪ್ರಕೃತಸ್ಥಿತಿಯಲ್ಲಿರುವಂತೆ ನದಿಯಲ್ಲಿ ನೀರು ಕಡಮೆಯಾಗುತ್ತಾ ಹೋದರೆ, ಬಿಸಲು ಕಾಲದಲ್ಲಿ ಕಬ್ಬಿನ ಫಸಲಿಗೆ ನೀರು ಬಿಡಲು ಸಾಧ್ಯವಾಗದೇ ಹೋಗಬಹುದು ಈ ಕಾರಣಗಳಿಂದ ಮೇಲ್ಕಂಡ ನಾಲಾಗಳ ಭಾಜನಲ್ಲಿರತಕ್ಕ ಅಸಿಸ್ಟೆಂಟ್ ಇಂಜಿನಿಯರವರು ಈ ನಾಲಾಗಳ ಕೆಳಗಿನ ರೈತರಿಗೆ ಎಚ್ಚರಿಸಿದಾಗ್ಯೂ, ಇವರುಗಳು ಹೊಸದಾಗಿ ಕಬ್ಬಿನ ಪೈರು ಇಡುವುದರಲ್ಲಿ ದೃಢರಾಗಿರುವುದಾಗಿ ತಿಳಿಯಬರುತ್ತದೆ ಈ ನಾಲಾಗಳ ಕೆಳಗೆ ಬೇಸಿಗೆಯಲ್ಲಿ ಯಾವ ಪೈರನ್ನಾದರೂ ಇಟ್ಟರೆ ನೀರಿಗೆ ತೊಂದರೆಯಾಗಿ ಛಾನಲ್ ಡಿವಿಜನ್‌ನವರು ನೀರು ಸರಬರಾಜು ಮಾಡಲು ಜವಾಬ್ದಾರರಾಗುವುದಿಲ್ಲ ಕಾರಣ ಈ ವಿಚಾರವನ್ನು ಆ ಪ್ರಾಂತ್ಯದ ರೈತರ ತಿಳುವಳಿಕೆಗೆ ತಂದಿರುತ್ತದೆ

ಗ್ರಾಮ ರಿಲೀಫ್ ಕಾಮಗಾರಿ.

ಗ್ರಾಮಾಂತರಗಳಲ್ಲಿ ಜನಗಳಿಗೆ ಸಹಾಯವನ್ನು ಒದಗಿಸಿಕೊಡುವ ಬಗ್ಗೆ ರಿಲೀಫ್ ಕಾಮಗಾರಿಗಳನ್ನು ಹೇಗೆ ಗೊತ್ತುಮಾಡುವುದು ? ಮತ್ತು ಅವುಗಳನ್ನು ಹೇಗೆ ನಡಿಸಬೇಕು ? ಎಂಬೀ ವಿಚಾರಗಳಲ್ಲಿ ರೆವಿನ್ಯೂ ಕಮಿಷನರವರು ಡೆಪ್ಯುಟಿ ಕಮಿಷನರುಗಳ ತಿಳುವಳಿಕೆ ಮತ್ತು ನಡವಳಿಕೆ ಬಗ್ಗೆ ಈ ಕೆಳಗೆ ಕಂಡ ಹುಕುಂ ಕೊಟ್ಟಿರುತ್ತಾರೆ

ಮೇಲ್ಕಂಡ ಕಾಮಗಾರಿಗಳು ಒಂದಕ್ಕೊಂದು ಕೇವಲ ಸಮೀಪದಲ್ಲಿಲ್ಲದ ರೀತಿ ನೋಡಿಕೊಳ್ಳಬೇಕಲ್ಲದೆ ಒಂದು ಗ್ರಾಮದವರಿಗೋಸ್ಕರ ಏರ್ಪಡಿಸಿದ ಕಾಮಗಾರಿಯು ಸದರಿ ಗ್ರಾಮಕ್ಕೆ ೪ ೫ ಮೈಲಿ ಫಾಸಲೆಯಲ್ಲಿಯೇ ಇರುವಂತೆ ಗೊತ್ತುಮಾಡಬೇಕು ಏಕೆಂದರೆ ಬಡ ಜರಾಯತುದಾರ್ರು, ಮಾದಿಗರು, ಹೊಲೆಯರು ಮತ್ತು ಭೂಸ್ಥಿತಿಯಿಲ್ಲದ ಇತರರು ತಮ್ಮ ಗ್ರಾಮಗಳಲ್ಲಿಯೇ ವಾಸವಾಗಿದ್ದುಕೊಂಡು ಕಾಮಗಾರಿಗಳಿಗೆ ಹೋಗಿ ಬರಲು ಅನುಕೂಲವಾಗಿರುತ್ತದೆ ಒಂದೇ ಕಾಮಗಾರಿಯಲ್ಲಿ ಅನೇಕ ಗ್ರಾಮಗಳ ಜನರು ಕೆಲಸ ಮಾಡುತ್ತಿರುವ ದಾದರೆ ಸದರಿ ಕಾಮಗಾರಿಯನ್ನು ಒಂದು ಗ್ರಾಮಕ್ಕೆ ಒಂದು ಬ್ಲಾಕಿನಂತೆ ವಿಂಗಡಿಸಿ, ಆಯಾ ಬ್ಲಾಕುಗಳಲ್ಲಿ ಕ್ರಮವಾಗಿ ಕೆಲಸ ತೆಗೆದುಕೊಳ್ಳುವ ಬಗ್ಗೆ ಆಯಾ ಗ್ರಾಮದ ಪಟೇಲರನ್ನೇ ನೇಮಿಸಬಹುದು ಕಾಮಗಾರಿಯು ಗ್ರಾಮದ ಪಟೇಲನ ಸುಪರ್ದಿನಲ್ಲಿರತಕ್ಕದ್ದು ಅವಶ್ಯ ಕಂಡಲ್ಲಿ ಇಂಥಾ ಕಾಮಗಾರಿ ನಡೆಯುವ ಇರುವ ನೆರೆಗ್ರಾಮದ ಪಟೇಲನನ್ನು ಆತನಿಗೆ ಕುಮ್ಮಕ್ಕು ಕೊಡಬಹುದು ಕೆಲವು ಸಂದರ್ಭಗಳಲ್ಲಿ ಪಟೇಲನ ಜೊತೆಗೆ ಬುದ್ಧಿವಂತರಾದ ಇಬ್ಬರು ಪ್ರಮುಖ ರೈತರನ್ನು ಸಹಾಯಕ್ಕಾಗಿ ಕೊಡುವುದು ಉತ್ತಮ ಮತ್ತೆ ಕೆಲವು ಸಂದರ್ಭಗಳಲ್ಲಿ ಪಟೇಲನೊಂದಿಗೆ ಶ್ಯಾನುಭೋಗನು ಸಹಾ ಜಂಟಿಯಾಗಿ ಕಾಮಗಾರಿ ಭಾಜನಲ್ಲಿದ್ದರೆ ಉತ್ತಮ ಇಷ್ಟೆಲ್ಲಾ ಮಾಡಿದಾಗ್ಯೂ ಕಾಮಗಾರಿಯು ಸರಿಯಾಗಿ ನಡೆಯುವುದಕ್ಕೂ ಕ್ರಮವಾಗಿ ಕೂಲೀ ಬಟವಾಡೆಯಾಗುವುದಕ್ಕೂ ಪಟೇಲನೇ ಮುಖ್ಯ ಜವಾಬ್ದಾರನಾಗಿರತಕ್ಕದ್ದು ಈ ಕಾಮಗಾರಿಗಳ ಕೆಲಸವನ್ನು ಪ್ರತಿ ದಿವಸವೂ ಅಳತೆ ಆಯಾ ದಿವಸವೇ ಪರೀಕ್ಷೆಮಾಡುವ ಪದ್ಧತಿ ಅನುಸರಿಸಬೇಕು ಕೂಲಿಯವರ ಸ್ಥಿತಿಯನ್ನನುಸರಿಸಿ ಕೆಲಸವನ್ನು ಹೆಚ್ಚು ಕಡಮೆ ಹಂಚತಕ್ಕದ್ದು ಕೂಲಿಗೆ ತಕ್ಕಷ್ಟು ಕೆಲಸ ತೆಗೆಯುವ ಭಾಗದಲ್ಲಿ ಪಟೇಲನು ಜವಾಬ್ದಾರನಾಗಿರುತ್ತಾನೆ ಕಾಮಗಾರಿಗೆ ಬರತಕ್ಕ ಕೂಲೀ ಜನರ ಸಾರ ಮುಂತಾದ ತಪ್ಸೀಲು ತೋರಿಸುವ ಹಾಜರೀ ಪಟ್ಟಿಯನ್ನು ಶ್ಯಾನುಭೋಗನ ಸಹಾಯದಿಂದ ತಯಾರಿಸಿ, ಅವರು ಕೆಲಸಕ್ಕೆ ಬಂದು ಕೂಲಿಯನ್ನು ತೆಗೆದುಕೊಂಡದ್ದಕ್ಕೆ ಪಟ್ಟಿಯಲ್ಲಿ ದಿನಚರಿಯಲ್ಲೂ ಗುರುತುಮಾಡಬೇಕು ಪೇಟೇ ಧಾರಣೆ ಮತ್ತು ಫ್ಯಾಮಿನ್ ಕೋಡಿನಲ್ಲಿ ನಮೂದಿರುವ ದರಗಳನ್ನು ಪರ್ಯಾಲೋಚನೆಗೆ ತೆಗೆದುಕೊಂಡು, ಕೂಲಿಯವರ ಆಶ್ರಿತವರ್ಗಕ್ಕೆ ಸಹಾಯಕವಾಗಿಯೂ ಇರುವಂತೆ ನ್ಯಾಯವಾದ ರೀತಿಯಲ್ಲಿ ಕೂಲೀ ದರವನ್ನು ಗೊತ್ತುಮಾಡಿ ಬಟವಾಡೆ ಮಾಡಬೇಕು

ಹೆಚ್ಚು ಅನುಕೂಲತೆ ಕಂಡು ಬಂದಲ್ಲಿ ಕಾಮಗಾರಿಯನ್ನು ಕಂಟ್ರಾಕ್ಟು ತರೀಕು ನಡಿಸಬಹುದು, ಅಂದರೆ, ಪಟೇಲನೇ ಕಂಟ್ರಾಕ್ಟುದಾರನಾಗಿರಬೇಕು ಅವನು ಬಡವರಾದ ಗ್ರಾಮಸ್ಥರನ್ನು ಕೂಲಿಗೆ ನೇಮಿಸಿಕೊಂಡು ಅವರಿಗೆ ಅಮಲ್ದಾರ್ರು ಒಪ್ಪುವ ನ್ಯಾಯವಾದ ದರದಂತೆ ಕೂಲಿಯನ್ನು ಆಯಾ ದಿನ ಕೊಡ್ಡೆ ಪಾವತಿ ಮಾಡಲು ಒಪ್ಪಬೇಕು ಸಾಧ್ಯವಾದಲ್ಲಿ ಕೂಲಿಯನ್ನು ಪೂರಾ ಧಾನ್ಯರೂಪವಾಗಿಯೋ ಇಲ್ಲವೇ ಸ್ವಲ್ಪ ಧಾನ್ಯರೂಪವಾಗಿಯೂ ಬಾಕಿ ನಗದಾಗಿಯೂ ಕೊಡಬಹುದು ಸಾಧ್ಯವಾದ ಕಡೆಗಳಲ್ಲಿ ಗೌರವಸ್ಥರಾದ ಗ್ರಾಮಸ್ಥರಿಗೆ ಕಂಟ್ರಾಕ್ಟು ಕೊಡಬಹುದು ಅಥವಾ ಕಾಮಗಾರಿಗಳ ಮೇಲ್ವಿಚಾರಣೆಯನ್ನು ವಹಿಸಬಹುದು

ಶ್ಯಾನುಭೋಗನು (ತಾನು ಸ್ವತಃ ಕಾಮಗಾರಿ ಭಾಜನಲ್ಲಿಲ್ಲದೇ ಇರುವಾಗ) ತನ್ನ ಠಿಕಾಣದಲ್ಲಿ ಜರುಗುವ ಕಾಮಗಾರಿಗಳನ್ನು ನೋಡಿಕೊಂಡು ಪಟೇಲನಿಗೆ ಸಾಧ್ಯವಾದ ಕುಮ್ಮಕ್ಕನ್ನು ಕೊಡುತ್ತಿರಬೇಕು ಮತ್ತು ವಾರಕ್ಕೊಂದಾವರ್ತಿ ಕಾಮಗಾರಿಯನ್ನು ಪರೀಕ್ಷೆ ಮಾಡಿಸಿ, ಪಾವತಿ ಪಟ್ಟಿಗಳ ತಯಾರಿಯಲ್ಲಿ ಪಟೇಲನಿಗೆ ಸಹಾಯ ಮಾಡಬೇಕು ಪ್ರತಿದಿನವೂ ಕೂಲಿಯನ್ನು ಪಾವತಿ ಮಾಡುವುದು ಅನವಶ್ಯಕವೆಂದು ಕಂಡು ಬರುವ ಸಂದರ್ಭಗಳಲ್ಲಿ ವಿಸಹ ವಾರಕ್ಕೊಂದಾವರ್ತಿ ಸಂತೆಯ ಹಿಂದಿನ ದಿವಸ ಕೂಲಿ ಬಟವಾಡೆ ಮಾಡಬೇಕು ಶೇಕದಾರನು ತನ್ನ ಹೋಬಳಿಯಲ್ಲಿ ನಡೆಯುವ ಕಾಮಗಾರಿಗಳನ್ನೆಲ್ಲಾ ವಾರಕ್ಕೊಂದಾವರ್ತಿಯಾದರೂ ತನಿಖೆಮಾಡಿ ಕಾಮಗಾರಿಯಲ್ಲಾಗಲಿ ಬಟವಾಡೆಯಲ್ಲಾಗಲಿ ಕಂಡು ಬರುವ ದೋಷಗಳನ್ನೆಲ್ಲಾ ತನ್ನ ವಾರದ ಡೈರಿಗಳಲ್ಲಿ ಕಾಣಿಸಿ ಅಮಲ್ದಾರರಿಗೆ ರಿಪೋರ್ಟು ಮಾಡತಕ್ಕದ್ದು ಶೇಕದಾರನಿಗೆ ಕೆಲಸವು ಜಾಸ್ತಿಯಾದಲ್ಲಿ ರಿಲೀಫ್ ಕಾಮಗಾರಿಗಳ ಮೇಲ್ವಿಚಾರಣೆ ಮಾಡುವುದರಲ್ಲಿ ಈತನಿಗೆ ಸಹಾಯಮಾಡುವ ಬಗ್ಗೆ ಅಸಿಸ್ಟೆಂಟ್ ಶೇಕದಾರರನ್ನು ನೇಮಿಸತಕ್ಕದ್ದು ಇವರುಗಳನ್ನು ಶೇಕದಾರರ ಕೈಕೆಳಗಾಗಲಿ, ಅಥವ ಸ್ವತಂತ್ರವಾಗಿ ಹೋಬಳಿಯ ಒಂದು ಭಾಗದ ಭಾಜನಲ್ಲಿರುವುದಕ್ಕಾಗಲಿ ನೇಮಿಸಬಹುದು ಅಮಲ್ದಾರರು ಯಾವಾಗಲೂ ಸಂಚರಿಸತಕ್ಕದ್ದಲ್ಲದೆ ಏರ್ಪಾಟೆಲ್ಲವೂ ಸಮರ್ಪಕವಾಗಿ ನಡೆಯುವ ಭಾಗದಲ್ಲಿ ಜವಾಬ್ದಾರರಾಗಿರುತ್ತಾರೆ

ಮೇಲ್ಕಂಡಂತೆ ಗ್ರಾಮ ರಿಲೀಫ್ ಕಾಮಗಾರಿಗಳನ್ನು ನಡೆಸುವುದಕ್ಕೆ ಅವಶ್ಯವಾದ ಒಳ ಏರ್ಪಾಟುಗಳ ವಿಷಯದಲ್ಲಿ ಡೆಪ್ಯುಟಿ ಕಮಿಷನರವರಿಗೆ ಪೂರ್ಣ ಸ್ವಾತಂತ್ರ್ಯವಿರುತ್ತೆ ಈ ಕಾಮಗಾರಿಗಳು ಕೈಗೂಡಬೇಕಾದರೆ ಡೆಪ್ಯುಟಿ ಕಮಿಷನರುಗಳು ಈ ವಿಚಾರದಲ್ಲಿ ತುಂಬಾ ಮುತುವರ್ಜಿ ವಹಿಸಬೇಕು ಸಾಧ್ಯವಾದಷ್ಟುಗೂ ಸಹಾಯವನ್ನು ಒದಗಿಸಿಕೊಡುವುದಲ್ಲದೆ ಸ್ಥಳೀಯರಿಗೆ ವಿಶೇಷ ಉಪಯೋಗವಾದ ಕಾಮಗಾರಿಗಳನ್ನು ಮಾಡಿಸುವುದು ಇವರ ಮುಖ್ಯೋದ್ದೇಶವಾಗಿರಬೇಕು

ತಾಲ್ಲೋಕು ವರ್ತಮಾನಗಳು.

ನಾಗಮಂಗಲ.—ಈ ತಾಲ್ಲೂಕಿಗೆ ಸೇರಿದ ಅನೇಕ ಗ್ರಾಮಗಳಲ್ಲಿ ನೀರಿಗೆ ತುಂಬಾ ತಾಪವಾಗಿದೆ ಕಳೆದ ಎರಡು ವರುಷಗಳಿಂದ ಮಳೆ ಬೆಳೆ ಇಲ್ಲದೆ ಅನೇಕ ಮುದ್ರವೇ ಮೊದಲಾದ ಕಡೆ ಬಡವರಿಗೆ ಜೀವನಕ್ಕೆ ಬಹು ಕಷ್ಟವಾಗಿದೆ ಅನೇಕರು ಗೆಡ್ಡೆಗೆಣಸುಗಳನ್ನು ತಿನ್ನುತ್ತಿದ್ದಾರೆ ದನಗಳಿಗೆ ನೀರಿಗೂ ಮೇವಿಗೂ ಬಹಳ ತೊಂದರೆಯಾಗಿರುತ್ತೆ ಈ ಊರಲ್ಲಿ ಪೂರ್ವದಿಂದಲೂ ಒಂದು ಬಾವಿಯಾದರೂ ಇಲ್ಲದೆ ಇದೆ ನಮ್ಮ ಅಮಲ್ದಾರ್ರವರು ಬಾವಿ ತೋಡಿಸುವುದಕ್ಕೆ ಸ್ಯಾಂಕ್ಷನ್ ಮಾಡಿದಾರೆ ಜಾಗ್ರತೆಯಲ್ಲಿ ಕಾಮಗಾರಿ ಶುರುಮಾಡಿಸಿದಾರೆಂದು ನಂಬುತ್ತೇನೆ —ಕೆಲವು ಕಡೆ ಸರ್ಕಾರದವರು ಬಂದು ಜಮೀನುಗಳನ್ನು ಒತ್ತೆ ಕೊಂಡು ತಕಾವಿ ಸಾಲಕೊಡುವುದಾಗಿ ಹೇಳಿಹೋದರು ಇದು ಇನ್ನೂ ಕೊಡಿಸಲಿಲ್ಲ ಹ್ಯಾಗೂ ಪ್ರಜೆಗಳಿಗೆ ಜೀವನಕ್ಕೆ ಬಹಳ ಕಷ್ಟವಾಗಿರುತ್ತದೆ ಇದನ್ನು ಬೇಗನೆ ಅಧಿಕಾರಿಗಳು ನಿವಾರಣೆಮಾಡಿಯಾರೆಂದು ಹಾರೈಸುತ್ತೇವೆ —ಸಬ್ಬ ಗ್ರಾಮದ ಮುನಿದಾಸೇಗೌಡನ ಬಾಬತು ಸುಮಾರು ೮೦೦—೮೫೦ ರೂಪಾಯಿನ ಕ್ರಯ ಬಾಳುವ ಕಬ್ಬಿನ ಪೈರಿಗೆ ಕೆಲವು ದುಷ್ಟರು ಸೇರಿ ರಾತ್ರಿವೇಳೆಯಲ್ಲಿ ಬೆಂಕಿ ಹಾಕಿದರು ಬೆಳೆಯೆಲ್ಲಾ ಸಂಪೂರ್ಣವಾಗಿ ನಾಶಹೊಂದಿತು ಆ ರೈತನು ತಾಲ್ಲೂಕ್ ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಿಕೊಂಡನು ದಯಾಳುಗಳಾದ ಅಮಲ್ದಾರರು ಮುದ್ದೆ ಬಂದು ಅಜಮಾಯಿಷಿಮಾಡಿಕೊಂಡು ಹೋದರು ಆ ದುಷ್ಟರನ್ನು ಪತ್ತೆಮಾಡಿ ಶಿಕ್ಷಿಸುತ್ತಾರೆಂದು ಪ್ರಾರ್ಥಿಸುತ್ತೇನೆ —ಹೂವಿನಹಳ್ಳಿ ಎಂಬ ಗ್ರಾಮದಲ್ಲಿ ಒಬ್ಬ ಒಕ್ಕಲಿಗನು ಸುಮಾರು ವರುಷದಿಂದಲೂ ಒಂದು ಮುಂಗಸಿ ಎಂಬ ಪ್ರಾಣಿಯನ್ನು ಸಾಕುತ್ತಾ ಇದ್ದನು ಈಗ್ಗೆ ಸುಮಾರು ೮—೧೦ ದಿವಸಗಳ ಹಿಂದೆ ಆತನ ಹೆಂಡತಿಯು ೮—೬ ತಿಂಗಳ ತನ್ನ ಎಳೇ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ, ನೀರು ತರುವುದಕ್ಕೆ ಹೋದಳೆಂತಲೂ, ಆ ಮುಂಗಸಿಯು ಸಿಟ್ಟಿನಿಂದ ತೊಟ್ಟಿಲಲ್ಲಿ ಮಲಗಿದ್ದ ಆ ಮಗುವನ್ನು ಕಚ್ಚಿಕೊಂಡು ದೂರಮಾಡಿದುತ್ತೆಂತಲೂ ವರ್ತಮಾನ ಕೇಳುತ್ತೇನೆ

ಚಿಕ್ಕಬಳ್ಳಾಪುರ.—ಹೋದ ತಿಂಗಳಲ್ಲಿ ಈ ಊರಿನ ಆಫೀಸರುಗಳೂ, ದೊಡ್ಡ ಮನುಷ್ಯರೂ ಮತ್ತು ಕೆಲವು ಮುಂದಿ ವರ್ತಕರೂ ಗರ್ಲ್ಸ್ ಸ್ಕೂಲಿನಲ್ಲಿ ಸಭೆ ಸೇರಿ ಕ್ಷಾಮದ ದೆಸೆಯಿಂದ ಕಷ್ಟಪಡುತ್ತಲಿರುವ ಮುದುಕರಿಗೂ, ಊನರಿಗೂ ಸುಭಿಕ್ಷಕಾಲವು ಬರುವ ವರಿವಿಗೂ ಸಹಾಯಮಾಡುವ ಹಾಗೆ ಆಲೋಚಿಸಿ, ಇದಕ್ಕಾಗಿ ಪ್ರತಿ ಮಾಸವೂ ಧನಿಕರು ಬುದ್ಧಿಯುಳ್ಳವರು ತಮ್ಮ ಚಂದಾ ಹಣವನ್ನು ಕೊಡಬೇಕೆಂದು ತೀರ್ಮಾನಮಾಡಿ, ಚಂದಾ ಪಟ್ಟಿಯನ್ನು ತಯಾರು ಮಾಡಿದರು ಈಗ ಕೆಲವು ದಿವಸಗಳಿಂದಲೂ ಸುಮಾರು ೪೦—೫೦ ಜನಗಳಿಗೆ ದಿನವಹಿ ಅರ್ಧ ಸೇರು ರಾಗಿಯ ಮೇರಿಗೆ ಹಂಚಿಕೊಡುತ್ತಲಿದಾರೆ ಇದು ಸುಭಿಕ್ಷಕಾಲದ ವರಿವಿಗೆ ಬಹಳ ಸಹಾಯವಾಗಿರುತ್ತದೆ — ಸುಮಾರು ಎರಡು ತಿಂಗಳಿಂದಲೂ ಎಲ್ ಎಫ್ ಕಾಮಗಾರಿಯನ್ನು ಶುರು ಮಾಡಿರುತ್ತಾರೆ ಕೋಟೆಯ ಪಶ್ಚಿಮ ಭಾಗದ ಮುಳ್ಳಿನ ಗೂಡಿನ ಕೆಲವು ಭಾಗವನ್ನು ಎತ್ತಿ ತಂದರೆ ಅದ್ದಳಾಗಿ ಬಿದ್ದಿರುವ ರಸ್ತೆಯ ಪಕ್ಕಕ್ಕೂ ಮತ್ತು ಅಲ್ಲಲ್ಲಿರುವ ಹಳ್ಳಗಳಿಗೂ ಹಾಕಿಸುತ್ತಿದಾರೆ ಗಂಡಸರಿಗೆ ಮೂರಾಣೆಯೂ ಹೆಂಗಸರಿಗೆ ಎರಡು ದುಡ್ಡು ಕೂಲಿ ಕೊಡುತ್ತಲಿರುವದರಿಂದ ಬಹಳ ಕೊಂಚ ಜನರು ಮಾತ್ರ ಕೆಲಸಕ್ಕೆ ಬರುತ್ತಾರೆ ಈಗ್ಗೆ ಒಂದು ವರುಷದಿಂದಲೂ ಈ ಊರಿಗೆ ಸೇರಿದ ಕೊರದೆ ಅಡ್ಡ ಹೆದ್ದಾರಿಯ ಹೇಳತಕ್ಕ ಸರ್ಕಾರದವರು ಅರ್ಬನ್ ಫಂಡವಾದರ ಒಳಗೆರೆಯ ಪಕ್ಕದಲ್ಲಿ ಒಂದು ಬಾವಿ ಮಾತ್ರ ತೋಡಿಸಿರುತ್ತಾರೆ ಊರಿನ ನಾಲ್ಕು ದಿಕ್ಕುಗಳಲ್ಲಿಯೂ ಪ್ರಜೆಗಳಿಗೆ ಅನುಕೂಲವಾಗುವ ರೀತಿಯಲ್ಲಿ ತಕ್ಕ ಬಾವಿಗಳನ್ನು ಜಾಗ್ರತೆಯಾಗಿ ತೋಡಿಸದೆ ಹೋದರೆ ಬಡ ಪ್ರಜೆಗಳು ಬಹು ವಾದ ಕಷ್ಟಕ್ಕೆ ಗುರಿಯಾಗುವರು —ಶೊಸರು ಹಬ್ಬವು ಎಲ್ಲಾ ವರ್ಷಗಳಲ್ಲಿ ಯೂ ನಡೆಯುವಂತೆ ಈ ಸಾರಿಯೂ ಸಹಾ ಬಹಳ ಸಂಭ್ರಮದಿಂದ ನೆರವೇರಿತು ಆದರೆ ಅನೇಕ ವಾಹನಗಳೂ ಸಹಾ ಬಹಳ ತಡೆದು ರಾತ್ರಿಯಲ್ಲಿ ಹಾಗಿಯ ಊಡ್ಡಕ್ಕೂ ಅಲೆವು ತೊಳೆಯುತ್ತಾ ಹೋಗುತ್ತಿದ್ದರೆಂತಲೂ, ಈ ದುರ್ಭಿಕ್ಷ ಕಾಲದಲ್ಲಿಯೂ ಸಹಾ ಹೆಂಡ ಸಾರಾಯಿ ಮಾರುವವರಿಗೆ ಸ್ವಲ್ಪವೂ ವಿರಾಮವಿಲ್ಲದೆ ವ್ಯಾಪಾರ ನಡೆಯಿತೆಂತಲೂ ವರ್ತಮಾನ ಕೇಳುವದರಿಂದ ತುಂಬಾ ವ್ಯಸನಪಡಬೇಕಾಗಿದೆ —ಹೋದ ವರುಷ ಪ್ಲೇಗಿನ ಗಲಾಟೆಯಿಂದ ನಿಂತುಹೋಗಿದ್ದ ನಂದಿ ಜಾತ್ರೆಯು ಈ ಸಾರಿ ಅಂಥಾ ತೊಂದರೆಗಳೊಂದೂ ಇಲ್ಲದಿರುವದರಿಂದ ಶಿವರಾತ್ರಿಯಲ್ಲಿ ಮಾಮೂಲಿನಂತೆ ನಡೆಸುವ ಹಾಗೆ ಸರ್ಕಾರದವರು ಅಪ್ಪಣೆಕೊಟ್ಟಿರುತ್ತಾರೆಂತಲೂ, ಜೀವ ಜನಗಳಿಗೆ ಮೇವು ವಗೈರೆಗಳಿಗೆ ಬಾಬುಗಳನ್ನು ತೋರಿಸಿ ಅನುಕೂಲಪಡಿಸುತ್ತಾರೆಂತಲೂ ವರ್ತಮಾನ ಕೇಳುತ್ತೇನೆ

ಸಾಲಿಗ್ರಾಮ.—ಇಲ್ಲಿ ಬಿಸಲಿನ ತಾಪವನ್ನು ಸಹಿಸುವುದು ಕಷ್ಟವಾಗಿದೆ ರೈತರೆಲ್ಲರೂ ಧಾನ್ಯಗಳನ್ನು ರೇಜಿ ಮಾಡಿಕೊಳ್ಳುತ್ತಾ ಇರುವರು ಇದು ಸುಗ್ಗೀ ಕಾಲವಾದರೂ, ಈ ಸ್ಥಳವು ಭತ್ತ ಬೆಳೆಯುವ ಪ್ರದೇಶವಾದರೂ ಧಾರಣೆವಾಸಿಗಳು ಮಾತ್ರ ತುಂಬಾ ಚಪಾವಾಗಿಯೇ ಇವೆ. ಅಕ್ಕಿ ರೂಪಾಯಿಗೆ ೭ ಸೇರು, ರಾಗಿ ಪಾವಲಿಗೆ ೭ ಪಡಿ ಸಂತೆಯಲ್ಲಿ ಅಳತೆಯೋ ಹೇಳ ತೀರದು ದುರ್ಭಿಕ್ಷಕ್ಕೆ ಅಧಿಕ ಮೋಸವೆನ್ನುವಂತೆ ಅಳತೆಯೂ ಜನಗಳಿಗೆ ನಷ್ಟ ಪಡಿಸುತ್ತಿರುವುದು ಈ ಊರಿನ ಒಬ್ಬ ದೊಡ್ಡ ಮನುಷ್ಯರು ೪ ರೂಪಾಯಿ ಅಕ್ಕಿಯನ್ನು ಅಳೆಸಿ ಮನೆಗೆ ತಂದು ಅಳೆದಾಗ ಎರಡೂ ಮುಕ್ಕಾಲು ರೂಪಾಯಿನದೇ ಆಯಿತು ಪೋಲೀಸಿನವರು ಈ ವಿಚಾರದಲ್ಲಿ ನಿಗಾ ಕೊಡುತ್ತಾರೆಂದು ನಂಬಿದ್ದೇನೆ — ಮೊನ್ನೆ ಭಾನುವಾರ ಮೈಸೂರ್ ಸರ್ಕಲ್ ಇನ್ಸ್‌ಪೆಕ್ಟರವರು ಇಲ್ಲಿನ ಎ ವಿ ಸ್ಕೂಲ್ ಪರೀಕ್ಷೆಗೆ ಬಂದು ಪಾಠಶಾಲೆಯನ್ನು ಪರೀಕ್ಷಿಸಿ ತುಂಬಾ ಸಂತೋಷಪಟ್ಟರೆಂದು ಕೇಳಿದೆನು ಉತ್ತಮ ಸ್ಥಿತಿಯಲ್ಲಿರುವ ಈ ಸ್ಕೂಲಿನಲ್ಲಿ ಟೀಚರ್ ಮಾಡೆಲ್ ಕ್ಲಾಸ್ ಎಂದು ಒಂದು ಸಂಘವಿರುವುದೆಂದು ಕೇಳಿದೇನೆ ಈ ಸಂಘಕ್ಕೆ ಇನ್ಸ್‌ಪೆಕ್ಟರವರು ಅಗ್ರಾಸನವನ್ನು ವಹಿಸಿ, ಅ|| ಮಾಸ್ಟರ್ ಮ್ಮ|| ಕೆ. ವೀರಣ್ಣ

ಷರು ಕಿಂಡರ್‌ಗಾರ್ಟೆನ್ ವಿಚಾರವಾಗಿ ಬರೆದಿದ್ದ ಉಪನ್ಯಾಸವನ್ನೂ, ಅವರು ಹುಡುಗರಿಂದಲೇ ಮಾಡಿಸಿದ ಮಣ್ಣಿನ ನಾನಾದರಿ ಕೆಲಸಗಳನ್ನೂ, ಬಣ್ಣದ ಕೆಲಸವನ್ನೂ, ಕಾಗದ ನೆಯಿಗೆ ಕೆಲಸವನ್ನೂ ನೋಡಿ ಸಂತೋಷಪಟ್ಟರು. ಅಲ್ಲದೆ ಈ ಸಂದರ್ಭದಲ್ಲಿ ನೀರಡ್ಡ ನುಡಿಂ?ದ ಒರೆದ ವೃತ್ತ ಸಭ್ಯಗಳನ್ನೂ ಕೇಳಿ ಅತ್ಯಂತ ಸಂತೋಷವನ್ನು ಹೊಂದಿದರು. ಸ್ಕೂಲಿನಲ್ಲಿ ಸುಮಾರು ೨೦೦—೨೫೦ ಹುಡುಗರಿದ್ದರೂ ಒಂದೂವರೆ ಅಂಕಣದ ಒಂದು ಬಸವಿನ ಗುಡಿ, ಮತ್ತೊಂದು ಮೂರು ಅಂಕಣದ ಸಣ್ಣ ಕವಳಿಗೆ ಮನೆ. ಸೂಲ್ ಅಭಿವೃದ್ಧಿಗೆ ಬರಲು ಸ್ಕೂಲ್ ಕಟ್ಟಡ ಅತ್ಯವಶ್ಯಕವಾಗಿದೆ. ಈ ತೊಂದರೆಯನ್ನು ಮೇಲ್ಪಟ್ಟ ಅಧಿಕಾರಿಗಳು ಜಾಗ್ರತೆಯಲ್ಲಿಯೇ ಪರಿಹರಿಸುತ್ತಾರೆಂದು ನಂಬಿದ್ದೇನೆ.—ಈ ಊರಿನಲ್ಲಿ ದೊಡ್ಡ ರೋಗ ಬಂದು ಅನೇಕ ದನಗಳು ಸತ್ತು ಹೋಗುತ್ತಿವೆ. ಎರಡು ತಿಂಗಳಾದರೂ ಈ ರೋಗವು ಇಲ್ಲಿಂದ ಬಿಡಲಿಲ್ಲ. ಕಾಲವೋ ಕಷ್ಟಕಾಲ. ತಿರುಪತಿಯ ಕಾಟವೋ ಹೇಳತೀರದು. ಇಂಥಾದ್ದರಲ್ಲಿ ನೀರಿನ ಕಷ್ಟವೂ ಇಲ್ಲಿ ಅಪಾರವಾಗಿದೆ. ನಾಲೆಯು ನೀರು ನಿಂತು ಹೋಯಿತು. ೨೦ ದಿನಗಳಿಂದಲೂ ಆ ನಿಂತ ನೀರನ್ನು ಕುಡಿದು ಸಾಧಿಸೂ ಅನೇಕರು ಕೆಮ್ಮಲು, ನೆಗಡಿ, ಜ್ವರಾದಿಗಳಲ್ಲಿ ನರಳುತ್ತಿದ್ದಾರೆ. ಆ ನೀರೂ ಸಿಕ್ಕದೆ ಇಲ್ಲಿಗೆ ೩—೪ ಮೈಲಿ ದೂರದಲ್ಲಿರುವ ಆನೇಗೊಳದಿಂದ ಜನರು ನೀರನ್ನು ತರಬೇಕಾದವರಾಗಿದ್ದಾರೆ. ಪ್ರಾಣಾಧಾರವಾದ ನೀರೇ ಗತಿಯಿಲ್ಲದ ಮೇಲೆ ಜನರು ಬದುಕುವ ಬಗೆ ಹೇಗೆ ? ಈ ಗ್ರಾಮದ ಮುನಿಸಿಪಲ್ ಮೆಂಬರುಗಳು ಮೇಲಕ್ಕೆ ಬರೆದು ಜನಗಳಿಗೆ ನೀರನ್ನೂ ಅನುಕೂಲ ಮಾಡುವರೆಂದು ಕೋರುತ್ತೇನೆ.

ಹಾಸನ.—ಈ ಊರಿನಲ್ಲಿ ಎರಡು ಮೂರು ತಿಂಗಳಿಂದ ಪ್ಲೇಗ್ ವ್ಯಾಪಿಸ್ತಾಗಿದ್ದು ಊರು ನಿರ್ಜನವಾಗಿ ಬಿಡಲಿಲ್ಲ. ಈ ಊರಿಗೆ ಈ ಕಾಯಿಲೆಯು ಮೊದಲು ಬಂದ ಹಾಗಾಯಿತು. ಇದರಿಂದ ಊರು ಬಹಳ ಹೀನಸ್ಥಿತಿಗೆ ಬಂದಂತೆ ಕಾಣುತ್ತೆ. ಇಲ್ಲಿನ ಧಾನ್ಯಗಳನ್ನು ನೋಡಿದರೆ ಬಡವರು ಜೀವನ ಮಾಡುವುದು ಬಹಳ ಕಷ್ಟವಾಗಿದೆ. ರೂಪಾಯಿಗೆ ೬—೬|| ಸೇರು ಅಕ್ಕಿ, ೧೦—೧೧ ಸೇರು ರಾಗಿ ಮಾರುತ್ತೆ. ಚನ್ನರಾಯಪಟ್ಟಣ, ಅರಸೀಕೆರೆ ಈ ಪ್ರಾಂತ್ಯದ ಜನಗಳು ಅಲ್ಲಿ ದನಗಳಿಗೆ ಮತ್ತು ಜನಗಳಿಗೆ ನೀರು ಇಲ್ಲದೆ ಈ ಮಾರ್ಗವಾಗಿ ಮಲೆನಾಡಿಗೆ ತಂಡೋಪತಂಡವಾಗಿ ಹೋಗುತ್ತಾರೆ. ಈ ಊರಿನಲ್ಲಿ ನೀರಿನ ತೊಂದರೆಯು ಬಹಳವಾಗಿದೆ. ಇಲ್ಲಿನ ದೇವಗೆರೆಯಲ್ಲಿ ನೀರು ಬಹಳ ಕೆಟ್ಟುಹೋಗಿದೆ. ಇದರಿಂದ ಜನಗಳಿಗೆ ಸದ್ಯದಲ್ಲೇ ತುಂಬಾ ತೊಂದರೆಯಾಗಬಹುದಾಗಿದೆ. ಅದ್ದರಿಂದ ಪೇರ ಕಡೆ ಭಾವಿಯನ್ನಾದರೂ ತೋಡಿಸಿಕೊಟ್ಟರೆ ಬಹಳ ಅನುಕೂಲವಾಗುತ್ತೆ.— ಇಲ್ಲಿನ ಕನ್ನಡ ಸ್ಕೂಲು ಬಹಳ ಪುರಾತನ ಕಟ್ಟಡವಾಗಿದೆ. ಈ ಸಲ ಇದಕ್ಕೆ ಹಿಂದಿನ ಮಳೆ ಬೀಳದೆ ಇದ್ದುದರಿಂದ ಈ ಕಟ್ಟಡವು ಉಳಿದಿದೆ. ಇನ್ನೊಂದು ಅಥವಾ ಎರಡು ಸಲ ಮಳೆ ಬರುವುದರೊಳಗಾಗಿ ಇದಕ್ಕೆ ಆಯುಸ್ಸು ಪೂರೈಸಬಹುದು. ಇದನ್ನು ನೋಡುವಲ್ಲಿ ಸರಕಾರದವರು ಇದರ ಮೇಲೆ ಗಮನಿಸಿದ್ದಂತೆ ಕಾಣುವುದಿಲ್ಲ. ಮತ್ತು ಇಲ್ಲಿನ ಮೈ ಸ್ಕೂಲಿನಿಂದ ಕನ್ನಡ ಸ್ಕೂಲಿಗೆ ಗೌರ್ನಮೆಂಟ್ ಬುಕ್ ಡಿಪೋ ಬಂದಿರುವುದರಿಂದ ಜನಗಳಿಗೆ ಯಾವ ಅಡ್ಡಿಯೂ ಇಲ್ಲದೆ ಜಾಗ್ರತೆಯಾಗಿ ಪುಸ್ತಕಗಳು ಸಿಕ್ಕಲು ಅನುಕೂಲವಾಗಿದೆ. ಇಲ್ಲಿ ಎ. ವಿ. ಸ್ಕೂಲು ಮಾಧ್ಯಮ ತರಗತಿಯ ವಿದ್ಯಾರ್ಥಿಗಳು ಸಿದ್ಧವಿದ್ದು ಈ ಸ್ಕೂಲಿನ ಕಟ್ಟಡವನ್ನು ಹೊಸದಾಗಿ ಕಟ್ಟಲು ಏರ್ಪಾಡು ಮಾಡಿದ್ದಾರೆ. ಈ ಸ್ಕೂಲಿನಲ್ಲಿ ಕಳೆದ ೧೯೦೮ ನೇ ಇಸವಿ ಎಲ್. ಎಸ್. ಪರೀಕ್ಷೆಯಲ್ಲಿ ೬ ಜನಕ್ಕೆ ೩ ಜನ ತೇರ್ಗಡೆ ಹೊಂದಿದರು. ಈ ಸ್ಕೂಲಿನ ಸ್ಥಿತಿಯು ತೃಪ್ತಿಕರವಾಗಿದೆ. ಹಾಸನಕ್ಕೆ ಮೈಸೂರಿನ ರೈಲು ಬರುತ್ತದೆಂಬ ಸಮಾಚಾರವು ಇಲ್ಲಿನ ಜನಗಳಿಗೆ ತುಂಬಾ ಸಂತೋಷವನ್ನುಂಟು ಮಾಡಿದೆ. ಹಾಗೆ ರೈಲು ಹಾಕುವುದರಿಂದ ಜನಗಳಿಗೆ ತುಂಬಾ ಪ್ರಯೋಜನವುಂಟು. ಮತ್ತು ಸದ್ಯದಲ್ಲಿ ರೈಲು ರಸ್ತೆಯ ಕಾಮಗಾರಿಯನ್ನು ಹಿಡಿದರೆ ತುಂಬಾ ಅನುಕೂಲವಾಗುತ್ತೆ.—ಇಲ್ಲಿನ ಟಾಂಗಾ ಕಂಪನಿಯನ್ನು ಬೇರೊಬ್ಬರು ಮಾಡಿಕೊಂಡರೆಂಬ ವರ್ತಮಾನವು ತುಂಬಾ ಇದೆ. ಹಾಗೆ ಮಾಡಿಕೊಂಡಿದ್ದರೆ ಅವರು ಮೋಟಾರ್ ಗಾಡಿಗಳನ್ನು ಇಡುವುದರಿಂದ ಜನಗಳಿಗೆ ತುಂಬಾ ಪ್ರಯೋಜನವಾಗುತ್ತೆ.—ಇಲ್ಲಿ ಮೊಹರಂ ಹಬ್ಬದ ಯಾವ ಗಲಾಟೆಯೂ ಇಲ್ಲದೆ ನಡೆಯಿತು. ಪೋಲೀಸು ಬಂದೋಬಸ್ತು ಚೆನ್ನಾಗಿತ್ತು. ಈ ಊರಿನ ಸಮೀಪದಲ್ಲಿ ಗುದ್ದಲಿಯ ಪೆಟ್ಟಿನಿಂದ ಒಬ್ಬನನ್ನು ಒಬ್ಬನು ಹೊಡೆದು ಕೊಂದು ಹಾಕಿದ್ದು ರುಜುವಾಗಿ ಅವನಿಗೆ ಎರಡು ವರುಷ ಕಠಿಣ ಸಜಾ ವಿಧಿಸಿದರು. ಇಲ್ಲಿನ ರೈಲು ಪಲ್ಲವಾಗಾರದ ಮನೆಯಲ್ಲಿ ೨೦೦ ರೂಪಾಯಿ ಬಾಳಬಹುದಾದ ಒಡವೆಗಳು ಕಳುವಾದವು. ಈ ಊರಿನ ಹೊಲಗೇರಿಯಲ್ಲಿ ಗುಮಾನಿಯ ಮೇಲೆ ಇಬ್ಬರನ್ನು ಹಿಡಿದುಕೊಂಡು ಬಂದು ಜೈಲಿನಲ್ಲಿಟ್ಟಿದ್ದಾರೆ.—ಈ ಊರಿನ ಸಾಹುಕಾರ್ ಪುಟ್ಟಸ್ವಾಮಿ ಶೆಟ್ಟರು ಪ್ಲೇಗಿನಿಂದ ಕಾಲವಾದರು. ಈ ವಿಷಯವು ಇಲ್ಲಿನ ಜನಗಳಲ್ಲಿ ಸಂಭ್ರಮ ವಿಷಾದವನ್ನುಂಟುಮಾಡಿದೆ.—ಇಲ್ಲಿನ ಘನ ಹೊಂದಿದ ವೆಸ್ಲಿಯನ್ ಮಿಷನ್ ರೆವರೆಂಡ್ ಸ್ಯಾಮ್ ಎಂಬವರು ಪತ್ನಿ ಸಹಿತ ಸೀಮೆಗೆ ಪ್ರಯಾಣ ಮಾಡಿದರು. ಇವರು ಹೊರಡುವಾಗ ಇಲ್ಲಿನ ಕ್ರೈಸ್ತ ಮಂಡಲಿಯವರೂ ಉಪಾಧ್ಯಾಯರುಗಳೂ ಇವರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಿದರು.

ಮೈಸೂರು ಗೆಜೆಟ್ ಸಂಗ್ರಹ.

ಗವರ್ನ್‌ಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ ಮೆ|| ಕೆ. ಎಸ್. ಚಂದ್ರಶೇಖರ ಅಯ್ಯರವರಿಗೆ ಫೆಬ್ರವರಿ ತಾ ೩ ರಿಂದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿ ಮೆ|| ಸಿ. ಎಸ್. ಬಾಲಸುಂದರಂ ಅಯ್ಯರವರು ಮತ್ತೊಂದು ಹುಕುಂ ಕೊಡಲ್ಪಡುವತನಕ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯಾಗಿ ಕೆಲಸನೋಡತಕ್ಕದ್ದು.

ಚಿಕ್ಕಬಳ್ಳಾಪುರದ ತಾಲ್ಲೂಕು ಅಮಲ್ದಾರ್ ಮೆ|| ಕೆ. ಶ್ರೀನಿವಾಸರಾಯರಿಗೆ ಆರು ತಿಂಗಳ ರಜಾ ಕೊಟ್ಟಿದೆ. ಈ ಪೈಕಿ ಇಪ್ಪತ್ತು ದಿನಗಳ ರಜವನ್ನು ಪ್ರಿವಿಲೆಜ್ ರಜಾದಂತೆ ಎಣಿಸಬೇಕು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಪೋಲೀಸ್ ಇನ್ಸ್‌ಪೆಕ್ಟರ್ ಕೆ. ನಾರಾಯಣ ಅಯ್ಯರವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿಕ್ಕಬಳ್ಳಾಪುರದ ತಾಲ್ಲೂಕ್ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ಕಳುಹಿಸಲ್ಪಟ್ಟಿದ್ದಾರೆ. ಕೂಡಲೇ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಮೆ|| ಎ. ಎಸ್. ಸಾಂಬಶಿವ ಅಯ್ಯರವರನ್ನು ಬರೋಡೆಗೆ ಕಳುಹಿಸಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೆ|| ಇ. ದಕ್ಷಿಣಾಮೂರ್ತಿಯವರು ಸೆಂಟ್ರಲ್ ಕಾಲೇಜಿನಲ್ಲಿ ಭೂಗರ್ಭ ಶಾಸ್ತ್ರ ವಿಚಾರವನ್ನು ಕಲಿಸುವ ಉಪಾಧ್ಯಾಯರಾಗಿಯೂ ಕೆಲಸಮಾಡತಕ್ಕದ್ದು.

ದಾವಣಗೆರೆ ಸಬ್ ಡಿವಿಷನ್ ಅ|| ಕಮಿಷನರ್ ಮೆ|| ನಗರ್ ಸುಬ್ಬರಾಯರಿಗೆ ಅಪರಾಧಿಗಳನ್ನು ಸೆಷನ್ ಕೋರ್ಟಿಗೆ ಕಮಿಟ್ ಕೊಡಬೇಕೆಂದು ಹೇಳುವ ಅಧಿಕಾರ ವಹಿಸಲ್ಪಟ್ಟಿದೆ.

ಮೆ|| ಕೆ. ಎಸ್. ಚಂದ್ರಶೇಖರ ಅಯ್ಯರವರಿಂದ ಮೆ|| ಸಿ. ಎಸ್. ಬಾಲಸುಂದರಂ ಅಯ್ಯರವರು ಫೆಬ್ರವರಿ ತಾ. ೧ ರಲ್ಲಿ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ ಕೆಲಸದ ಛಾರ್ಜನ್ನು ವಹಿಸಿಕೊಂಡರು.

ಮೆ|| ಮಹಮದ್ ಅಬ್ದುಲ್ಲಾ ಷರೀಫ್‌ಯವರನ್ನು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ನೇಮಕಮಾಡಿದ್ದರಿಂದ ರಜದ ಮೇಲಿರುವ ಅಮಲ್ದಾರ್ ಮೆ|| ಜಿ. ನಾರಾಯಣರಾಯರು ಕೂಡಲೇ ಬಂದು ಜಗಲೂರ್ ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು.

ಮುಂದೆ ಹೇಳುವ ಅಮಲ್ದಾರರುಗಳ ಬಡ್ತಿಯು ಹುಕುಂ ಮಾಡಲ್ಪಟ್ಟಿದೆ:—ಮೆ|| ಗಳಾದ ಎ. ಕೃಷ್ಣಸ್ವಾಮಯ್ಯಂಗಾರ್ರು, ಎಚ್. ಎಸ್. ವೆಂಕಟಾಚಾರ್ರು, ಎನ್. ಗೋಪಾಲಕೃಷ್ಣ ಅಯ್ಯಂಗಾರ್ರು—೨ ನೆಯ ಕ್ಲಾಸಿಗೆ.

ಮೆ|| ಗಳಾದ ಬಿ. ಎಸ್. ವೆಂಕಟೇಶಯ್ಯನವರು, ಎನ್. ರಾಮರಾಯರು, ಬಿ. ನಾರಾಯಣಸ್ವಾಮಯ್ಯಂಗಾರ್ರು, ಎಂ. ಎಸ್. ರಾಮಚಂದ್ರರಾಯರು, ಎಂ. ಎ. ಶ್ರೀನಿವಾಸಯ್ಯಂಗಾರ್ರು, ಎ. ಸದಾಶಿವರಾಯರು, ಎಸ್. ಎನ್. ಅಪ್ಪಣ್ಣಯ್ಯಂಗಾರ್ರು—೩ ನೇಯ ಕ್ಲಾಸಿಗೆ.

ಮೆ|| ಜಿ. ನಾರಾಯಣರಾಯರನ್ನೂ, ಮೆ|| ಸಿ. ನಾರಾಯಣರಾಯರನ್ನೂ ೪ ನೆಯ ಕ್ಲಾಸ್ ಅಮಲ್ದಾರರನ್ನಾಗಿ ಖಾಯಂ ಮಾಡಿದೆ.

ಎಂ. ಅಹೋಬಲಶಾಸ್ತ್ರಿಯವರನ್ನು ಡಿಪ್ಟಿ ಅಮಲ್ದಾರರನ್ನಾಗಿ ಖಾಯಂ ಮಾಡಿದೆ.

ಮುಂದೆ ಹೇಳುವ ಇಂಜನಿಯರ್ ಇಲಾಖಾ ಅಧಿಕಾರಿಗಳನ್ನು ರಿಲೀಫ್ ಕಾಮಗಾರಿ ಪ್ರಾರಂಭಿಸಿ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕಾಗಿ ರೆವಿನ್ಯೂ ಇಲಾಖೆಗೆ ವರ್ಗಮಾಡಿದೆ:—

ಅ|| ಇಂಜನಿಯರ್ ಮೆ|| ವೆಂಕಟರಾವ್ ನಿಜಗಲ್‌ಯವರನ್ನು ಬೆಂಗಳೂರಿನಿಂದ ಕೋಲಾರಕ್ಕೆ; ಅ|| ಇಂಜನಿಯರ್ ಮೆ|| ಟಿ. ಅರುಣಾಚಲ ಅಯ್ಯರನ್ನು ನೀರಿನ ಸರಬರಾಯಿ ಇಲಾಖೆಯಿಂದ ಚಿತ್ರದುರ್ಗಕ್ಕೆ, ಸಬ್ ಅ|| ಇಂಜನಿಯರ್ ಮೆ|| ಕೆ. ವಿ. ದೇಶಿಕಾಚಾರ್ಯರನ್ನು ಬೆಂಗಳೂರು ಸ್ಪೆಷಲ್ ಡ್ಯೂಟಿಯಿಂದ ತುಮಕೂರಿಗೆ, ಓವರ್ಸಿಯರ್ ವಿ. ಲಕ್ಷ್ಮಣರಾಯರನ್ನು ಮೈಸೂರಿನಿಂದ ಬೆಂಗಳೂರಿಗೆ, ಓವರ್ಸಿಯರ್ ಎಚ್. ಎಸ್. ಕೃಷ್ಣಯ್ಯಂಗಾರ್ರನ್ನು ಬೆಂಗಳೂರಿನಿಂದ ಹಾಸನ ಡಿಸ್ಟ್ರಿಕ್ಟಿಗೆ; ಓವರ್ಸಿಯರ್ ಬಿ. ತಂಗವೇಲು ಮೊದಲಿಯಾರ್ರನ್ನು ಶಿವಮೊಗ್ಗ ಡಿಸ್ಟ್ರಿಕ್ಟಿಗೆ, ಓವರ್ಸಿಯರ್ ಜೆ. ಪಳ್ಳಿಯ? ಎಲ್ಲೆಸ್‌ಯವರನ್ನು ಹಾಸನದ ಡಿಸ್ಟ್ರಿಕ್ಟಿಗೆ, ಓವರ್ಸಿಯರ್ ಟಿ. ಎಸ್. ಲಕ್ಷ್ಮಣರಾಯರನ್ನು ಕಡೂರು ಡಿಸ್ಟ್ರಿಕ್ಟಿಗೆ. ಇವರೆಲ್ಲಾ ಕೂಡಲೇ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳ ಬಳಿಗೆ ಹೋಗಿ ಅವರು ನೇಮಿಸುವ ಕೆಲಸಗಳನ್ನು ನಡಿಸತಕ್ಕದ್ದು.

ತಂತೀ ವರ್ತಮಾನ ಸಾರವು.

ಅನ್ಯದೇಶ.

ಫೆಬ್ರವರಿ ತಾ. ೭ ನೇ ಭಾನುವಾರ.—ಜರ್ಮನಿಯಲ್ಲಿ ಪ್ರವಾಹದ ಸೆಳೆಯಿಂದ ಅಪಾರವಾದ ನಷ್ಟ ಸಂಭವಿಸಿದೆ. ಮೃತಪಟ್ಟವರ ಸಂಖ್ಯೆಯು ಹೆಚ್ಚುತ್ತಲೇ ಇರುವುದು. ವೈಸರ್, ಎಲ್ಬ್, ಮೆಯಿನ್, ಓಡರ್ ಎಂಬೀ ನದಿಗಳಲ್ಲಿ ಇನ್ನೂ ಪ್ರವಾಹ ಹೆಚ್ಚುತ್ತಲೇ ಇದೆ. ಡ್ರೆಸ್‌ಡನ್ ಪಟ್ಟಣದಲ್ಲಿ ಬಹಳ ಕಷ್ಟ ಪ್ರಾಪ್ತವಾಗಿರುವುದು. ಅಪಾರವಾದ ಹಿಮಗಡ್ಡೆಗಳು ಪಟ್ಟಣದ ಮೇಲೆ ಉರುಳಿ ಬಂದು ಸೇತುವೆಗಳನ್ನು ಬಡಿಯುತ್ತಿರುವವು. ಲೀಪ್ಜಿಗ್, ಫ್ರಾಂಕ್‌ಫರ್ಟ್ ಪಟ್ಟಣಗಳಲ್ಲಿ ಕೆಲವು ಭಾಗಗಳು ಪ್ರವಾಹದೊಳಗೆ ಮುಳುಗಿರುತ್ತವೆ. ಪ್ರಜೆಗಳಿಗೆ ಸಹಾಯಮಾಡುವುದಕ್ಕೋಸ್ಕರ ಸರ್ಕಾರದವರು ಅಲ್ಲಲ್ಲಿ ಪೋಲೀಸ್ ಕಾವಲುಗಾರರನ್ನು ನೇಮಕಮಾಡಿರುವರು.

ಪರ್ಷಿಯಾ ರಾಜ್ಯದ ಗಲಭೆಯು.

ಪರ್ಷಿಯಾ ರಾಜ್ಯಕ್ಕೆ ಸೇರಿದ ಮೆಷ್ಡ್ ಪಟ್ಟಣದಲ್ಲಿ ಪ್ರಜೆಗಳು ದಂಗೆಯೆದ್ದಿರುವುದನ್ನು ನೋಡಿ, ಖೊರಾಸಾನ್ ಅಧಿಪತ್ಯದ ಜನಗಳೂ ದಂಗೆಯೆದ್ದಿರುತ್ತಾರೆ. ಅಂಜುಮಾನ್ ಸಂಘದವರೇ ಆಳ್ವಿಕೆಯನ್ನು ವಹಿಸಿಕೊಂಡು, ರಾಜಕಾರ್ಯಗಳನ್ನೆಲ್ಲಾ ತಾವೇ ನಡಿಸಲಾರಂಭಿಸಿದ್ದಾರೆ.

ಕ್ರೂರ ಕೃತ್ಯವು.

ಚಿಲಿ ರಾಜ್ಯದ ಮುಖ್ಯ ಪಟ್ಟಣವಾದ ಸಾಂಟಿಯಾಗೋದಲ್ಲಿ ದುಷ್ಟ ಡ್ಯಾರೋ ಜರ್ಮನಿ ರಾಯಭಾರಿಯನ್ನು ಕೊಂದು ಹಾಕಿ, ಅತನು ವಾಸವಾಗಿದ್ದ ಬಂಗಲೆಯನ್ನು ಸುಟ್ಟು ಇರುತ್ತಾರೆ.

ರಷ್ಯಾದಲ್ಲಿ ಲಂಚಕೋರತನವು.

ಫೆಬ್ರವರಿ, ತಾ. ೮ ನೇ ಸೋಮವಾರ.—ನಿಜನಿನೌಗರಾಡಿನ ಮಾಜಿ ಗವರ್ನರಾಗಿದ್ದ ಬ್ಯಾರನ್ ಫ್ರೆಡರಿಕ್ ಎಂಬಾತನನ್ನು ಕ್ಷಾಮನಿವಾರಣೆಯ ಕೆಲಸಕ್ಕೆ ನೇಮಕಮಾಡಿದ್ದರು. ಅತನು ಸರ್ಕಾರದ ಹಣವನ್ನು ತಿಂದುಹಾಕಿದ್ದರಿಂದ ರಷ್ಯಾ ಗವರ್ನ್‌ಮೆಂಟಿನವರು ಅತನನ್ನು ಕೆಲಸದಿಂದ ವಜಾಮಾಡಿದ್ದಲ್ಲದೆ ಅತನಿಗೆ ೧೦,೦೦೦ ದ್ರವ್ಯವನ್ನು ಜುಲ್ಮಾನೆ ಹಾಕಿರುತ್ತಾರೆ.

ಹಿಂದುಸ್ಥಾನ.

ಕಾನೂನ್ ಬದಲಾವಣೆಯು.

ಫೆಬ್ರವರಿ, ತಾ. ೭ ನೇ ಭಾನುವಾರ.—ಪರಸ್ಪರ ಸಹಾಯಕ ಸಂಘಗಳ ಕಾನೂನನ್ನು ಬದಲಾವಣೆ ಮಾಡುವ ವಿಚಾರದಲ್ಲಿ ಇಂಡಿಯಾ ಗವರನ್‌ಮೆಂಟಿನವರು ಬೇರೆ ಬೇರೆ ಅಧಿಪತ್ಯಗಳ ಅಭಿಪ್ರಾಯಗಳನ್ನು ಕೇಳುತ್ತಾರೆ.

ಧಾನ್ಯಗಳ ಆಮದು.

ಹಿಂದುಸ್ಥಾನದಲ್ಲಿ ಗೋಧಿಯ ಧಾರಣೆಯು ಜಾಸ್ತಿಯಾಗಿರುವುದನ್ನು ನೋಡಿ ವರ್ತಕರು ಆಸ್ಟ್ರೇಲಿಯಾ ದ್ವೀಪದಿಂದ ಗೋಧಿಯನ್ನು ಹಡಗುಗಳ ಮೇಲೆ ಅಪಾರವಾಗಿ ಕಲ್ಕತ್ತೆಗೆ ತರಿಸುತ್ತಾ ಇದ್ದಾರೆ. ಇದಲ್ಲದೆ ಬರ್ಮಾ ಅಧಿಪತ್ಯದಿಂದ ಅಕ್ಕಿಯು ಹೇರಳವಾಗಿ ರವಾನಾಗಿ ಬರುತ್ತಿರುವುದು ಇನ್ನೂ ಕಡಮೆಯಾಗಲಿಲ್ಲ.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ರೋಗ ಉಂಟಾಗಿರಲಿ—" ನನಗೆ ದಿನಕ್ಕೆ ಒಂದು ಸಲವಾದರೂ ಮಲಪ್ರವೃತ್ತಿಯಾಗುತ್ತಿದೆಯೋ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ಸ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಮಲಪ್ರವೃತ್ತಿಯಾಗಿ ನಿನಗೆ ಮೈ



(೧೨ ಆಣೆ ಬುಡ್ಡಿ ಪರಿಮಾಣ.)

ಸ್ವಸ್ಥವಾಗುವುದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಳೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ; ಪಿತ್ತಜ್ವರ; ಅಜೀರ್ಣ; ಅಗ್ನಿಮಾಂದ್ಯ; ಗಾಬರಿ; ಅರುಚಿ; ಎದೆಯು ಕಲ್ಲಿನಿಸುವುದು; ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ; ಮೂಳೆಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ನಿಮ್ಮಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಕರುಳುಗಳಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [69-24]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು. ಅಥವಾ, ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ನೋಟೀಸ್.

23-1

ಮೈಸೂರು ಸಿಟಿ ಮ್ಯುನಿಸಿಪಲ್ ಮೂಸುಲ್ (ಅಕ್ಟ್ರಾಯಿ) ಆಫೀಸು ಪಕ್ಕದಲ್ಲಿರುವ ೯೭ ನೇ ನಂಬರು ಮಳಿಗೆಯಲ್ಲಿ ಅವಲ್ ತರಹ ರವೆ ಮತ್ತು ಹಿಟ್ಟು ಚಿಲ್ಲರೆಯಾಗಿಯೂ, ಮೊತ್ತವಾಗಿಯೂ ಸುಲಭ ಕ್ರಯಕ್ಕೆ ಸಿಕ್ಕುತ್ತದೆ.

೧೯೦೯ ನೇ ಲೋವರ್ ಸೆಕೆಂಡರಿ ಕನ್ನಡ ನೋಟ್ಸ್.

11-5

ಮಹಾರಾಜಾಕಾಲೇಜು ಕನ್ನಡ ಪಂಡಿತರು ಮೆ|| ಪಿ. ಆರ್. ಕರಿಬಸವಶಾಸ್ತ್ರಿಗಳವರಿಂದ ಪರಿಷ್ಕರಿಸಲ್ಪಟ್ಟಿದ್ದು. ಪ್ರತಿ ೧ ಕ್ಕೆ ೦-೪-೦ ; ೧೦ ಕ್ಕೆ ೧ ಹೆಚ್ಚು. ಕನ್ನಡಬೋಧೆ ಪುಸ್ತಕದ ನೋಟ್ಸ್ ಕ್ರಯ ಪ್ರತಿ ೧ಕ್ಕೆ ೦-೩-೦ ; ೫ ಕ್ಕೆ ೧ ಹೆಚ್ಚು. ಎಗ್ಸಾಮಿನರ್ ಮಾಸಪುಸ್ತಕ.-ಚಂದಾ, ವರ್ಷಕ್ಕೆ ೧-೪-೦, ನೋಟ್ಸು ಬಹುಮಾನ, ಒಟ್ಟಿಗೆ ೫ ಚಂದಾ ಹಾಕಿ ಮಾಡುವವರಿಗೆ ಒಂದೊಂದು ಹೆಚ್ಚು. ವಿಳಾಸ: ಸಿ. ಪುಟ್ಟಯ್ಯ, ಮ್ಯಾನೇಜರ್, ದಿ ಎಗ್ಸಾಮಿನರ್ ಆಫೀಸ್; ಮೈಸೂರು.

ಸಂಜೀವಿನೀ ಔಷಧಾಲಯ, ಮೈಸೂರು.

23-1

ಎಂ. ಎಸ್. ಕುಮಾರಾಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು.—ಮರವೆ, ನಿಃಶಕ್ತಿ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋಮು, ವಾಯುನೋವುಗಳೂ, ಹಳೇ ಜ್ವರ, ಕ್ಷಯ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಮೊದಲಾದ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸವೃದ್ಧಿ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವುದರಲ್ಲಿ ಇದು ಸಿದ್ಧೌಷಧ. ಕ್ರಯ ೨ ರೂಪಾಯಿ.

ಸಂಜೀವಿನೀ ಮಾತ್ರೆ:—ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ. ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದ್ದಾರೆ. ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವುದಿಲ್ಲ. ಕ್ರಯ ೧ ರೂಪಾಯಿ.

ಕಾಲಕೂಟವಟಕ:—ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧ. ಕ್ರಯ ೮ ಆಣೆ.

ಮದ್ರಾಸ್ ಸಾಹುಕಾರ್ ಪೇಟೆ,
ಟಿ. ಏಮ್. ರಾಮಯ್ಯ ಶೆಟ್ಟರ ಕಂಪೆನಿಯಲ್ಲಿ

09-11

ತಯಾರಾಗುವ ಕಬ್ಬಿಣದ ಪೆಟ್ಟಿಗಳು ಅಥವಾ ಟ್ರಂಕುಗಳು ಈ ಕೆಳಗಿನ ದರದ ಮಾರಾಟಕ್ಕೆ ಸಿದ್ಧವಾಗಿವೆ. ಬ್ರಾಂಚ್ ಆಫೀಸ್ ಬೆಂಗಳೂರು ನಗರ್ತರಪೇಟೆಯಲ್ಲೂ ಸಿಕ್ಕುವದು.



ಬೇಕಾದವರು ತಮ್ಮ ಅಡ್ರೆಸ್ಸು ತಿಳಿಸಿ ರೂ. 10 ಮುಂಗಡವಾಗಿ ಕಳುಹಿಸಿದರೆ ವಿ. ಪಿ ಮೂಲಕ ರವಾನಿಸಲ್ಪಡುತ್ತೆ. ವಿಶೇಷ ಮಾಹಿತಿ ಬೇಕಾದವರು ಕಾಗದದ ಮುಖಾಂತರ ಮೇಲ್ಕಂಡ ವಿಳಾಸದಾರರಿಂದ ತಿಳಿದುಕೊಳ್ಳಬಹುದು.

ಊರಲ್ಲಿ ನಡಿಯಬೇಕೆಂದು ಕ್ಯಾಮುಗೊಂಡಲದ ವೈಶ್ಯ ಮಹಾ ಜನಗಳ ಸಮ್ಮತೀ ಮೇಲೆ ಪ್ರಯತ್ನ ಪಡುತ್ತಿರುವದಾಗಿ ತಿಳಿಯಬರುತ್ತೆ. ಬೆಂಗಳೂರಿನಲ್ಲೇ ನಡಿಯ ಬೇಕೆಂಬ ತೀರ್ಮಾನವನ್ನು ಬೆಂಗಳೂರಿನವರು ಈ ವೈಶ್ಯ ಮಹಾ ಸಭೆಯ ಹೆಡ್ ಆಫೀಸಿಗೆ ತಿಳುಹಿಸಿದಲ್ಲಿ ಮುಂದಿನ ಸಭೆಗೋಸ್ಕರ ನಡಿಯಬೇಕಾದ ಕಾರ್ಯ ಭಾಗಗಳನ್ನು ಜಾಗ್ರತೆ ನಡಿಸಲು ಈಗಿನಿಂದ ಪ್ರಯತ್ನಪಡಬೇಕಾಗುತ್ತೆ. ಕುಲೋದ್ಧಾರಕ್ಕಾಗಿ ಎಲ್ಲರೂ ಏಕೀಭವಿಸಿ, ಸ್ವಪ್ರತಿಷ್ಠೆ ಸ್ವಪ್ರಯೋಜನಗಳನ್ನು ಬಿಟ್ಟು ಸದೆ, ಬರುವ ವರುಷದ ಸಭೆಯನ್ನು ಸಾಂಗವಾಗಿ ನೆರವೇರಿಸಬೇಕಾದದ್ದು ಅವರ ಕರ್ತವ್ಯವಾಗಿರುತ್ತೆ

ಈ ವೈಶ್ಯ ಮಹಾಸಭೆಯವರು ೧೯೦೮ನೇ ಇಸವಿ ಡಿಸೆಂಬರು ತಾ ೨೭ರಲ್ಲಿ ಮಾಗಡಿ ಆರ್ಯ ವೈಶ್ಯರ ಸತ್ರದಲ್ಲಿ ಸಭೆಸೇರಿ ತೀರ್ಮಾನಿಸಿರುವ ಕೆಳಗೆ ವಿವರಿಸುವ ವಿಷಯಗಳು ತುಂಬಾ ಶ್ಲಾಘನೀಯವಾಗಿಯೂ ಸರ್ವರೂ ಆಚರಿಸ ತಕ್ಕವುಗಳಾಗಿಯೂ ಇರುತ್ತವೆ:—ಆರ್ಯ ವೈಶ್ಯ ಮಹಾ ಸಭೆಯ ೯ನೇ ತೀರ್ಮಾನದಲ್ಲಿ ಶುಭಕಾರ್ಯಗಳು ನಡಿಯುವಾಗ ಈ ಮಹಾ ಸಭೆಯ ಉಪಯೋಗಾರ್ಥವಾಗಿ ನಾಮಕರಣದಲ್ಲಿ ೪ ಆಣೆಗೆ ಕಡಮೆ ಇಲ್ಲದೆಯೂ, ಉಪನಯನದಲ್ಲಿ ೮ ಆಣೆಗೆ ಕಡಮೆ ಇಲ್ಲದೆಯೂ, ವಿವಾಹದಲ್ಲಿ ಉಭಯರಿಂದ ೨ ರೂಪಾಯಿಗೆ ಕಡಮೆ ಇಲ್ಲದೆಯೂ, ನಿಷೇಕದಲ್ಲಿ ಉಭಯರಿಂದ ೧ ರೂಪಾಯಿಗೆ ಕಡಮೆ ಇಲ್ಲದೆಯೂ ರುಸುಂ ವಸೂಲು ಮಾಡುವದನ್ನು ಆಚರಣೆಗೆ ತರಬೇಕು (೨) ವಿವಾಹ ಕಾಲದಲ್ಲಿ ಇನೇ ದಿವಸ ಆಚರಿಸಬೇಕಾದ ಗೋತ್ರ ಪೂಜಾ ಕಾಲದಲ್ಲಿ ಅಂಗೀ ರುಮಾಲು ಹಾಕಿಕೊಂಡು, ಪೂಜೆಮಾಡುವ ಪದ್ಧತಿಯನ್ನು ತಪ್ಪಿಸಿ, ಮಡಿವಸ್ತ್ರಗಳನ್ನುಟ್ಟು ಪೂಜೆಮಾಡಬೇಕು. ಮತ್ತು ಸರ್ವರೂ ಮಡಿವಸ್ತ್ರಗಳನ್ನುಟ್ಟು ಬರಬೇಕು. (೩) ಆರ್ಯ ವೈಶ್ಯ ಕುಲೋತ್ಪನ್ನರಾದ ಬಾಲಕಿಯರು ಪ್ರಥಮ ಋತುವಾದ ಕಾಲದಲ್ಲಿ ಬ್ರಾಂಹ್ಮಣ ಸ್ತ್ರೀಯರೇ ಬಂದು "ಧಡಿ" ಹಾಸತಕ್ಕ ಪದ್ಧತಿಯನ್ನು ಬಿಟ್ಟು, ಸ್ವಮತದ ಮುತ್ತೈದೆಯರಿಂದಲೇ ನಡಿಸತಕ್ಕದ್ದು

ಈ ಮಾಗಡಿ ವೈಶ್ಯ ಸಭೆಯವರು ನಡಿಸಿದಂತೆ ಇತರ ಕಡೆಗಳಲ್ಲಿಯೂ ಆಚರಣೆಗೆ ತರುವದು ಪ್ರತಿ ಒಬ್ಬರ ಕರ್ತವ್ಯವೆಂತ ತಿಳಿಯತಕ್ಕದ್ದು. ಈಗ ಲಗ್ನ ಕಾಲವಾಗಿದೆ. ಆರ್ಯ ವೈಶ್ಯ ಮಹಾ ಸಭೆಯವರು ಏರ್ಪಡಿಸಿರುವ ಮೌಲ್ಯಗಳನ್ನು ವಸೂಲ್ಮಾಡಿ ಈ ಸಭೆಗೆ ಕಳುಹಿಸಿ ಕೊಡಲು ಸಕಾಲವಾಗಿದೆ. ಈ ವಿಷಯದಲ್ಲಿ ಎಲ್ಲರೂ ಶ್ರದ್ಧೆಯಿಂದ ದ್ರವ್ಯಶೇಖರ ಮಾಡಿ ಸಭೆಯ ಫಂಡನ್ನು ವೃದ್ಧಿಪಡಿಸಲು ಪ್ರಯತ್ನ ಮಾಡಬೇಕು.

ಆರ್ಯ ವೈಶ್ಯ ಮಹಾಸಭೆಯವರು ಮಾಗಡಿ ವೈಶ್ಯ ಮಂಡಲಿಯವರ ತೀರ್ಮಾನಗಳಂತೆ ಆಚರಿಸತಕ್ಕದ್ದಲ್ಲದೆ ಉಪನಯನ ವಿವಾಹಗಳನ್ನು ಏಕ ಕಾಲದಲ್ಲಿ ಮಾಡದೆ, ಲಗ್ನಕ್ಕೆ ಮೂರು ವರ್ಷ ಮುಂಚೆ ಉಪನಯನವನ್ನು ನೆರವೇರಿಸಬೇಕೆಂತಲೂ, ಇದುವರಿಗೆ ಉಪನಯನವಿಲ್ಲದೆ ವಯಸ್ಕರಾಗಿರುವವರಿಗೆ ಇನ್ನೊಂದು ವರುಷದೊಳಗೆ ಉಪನಯನ ಮಾಡಬೇಕೆಂತಲೂ ಆರ್ಯ ವೈಶ್ಯ ಮಹಾಸಭೆಯಿಂದ ಸರ್ಕ್ಯುಲರು ಕೊಡಲ್ಪಟ್ಟಿವೆ ಇದಕ್ಕೆ ಸರ್ವರೂ ಗಮನಕೊಟ್ಟು ಆಚರಿಸ ಬೇಕಾಗಿದೆ. ಇದಲ್ಲದೆ ಸರ್ವರೂ ಅನ್ಯೋನ್ಯ ಭಾವದಿಂದ ಈ ಸಭೆಯ ಅಭಿಮತಗಳನ್ನನುಸರಿಸಿ ಅಲ್ಲಲ್ಲಿ ಬ್ರಾಂಚ್ ಸಭೆಗಳನ್ನು ಜಾಗ್ರತೆಯಾಗಿ ಏರ್ಪಡಿಸಿ ಕುಲಾಭಿವೃದ್ಧಿಗಾಗಿ ಆಗಬೇಕಾದ ಕಾರ್ಯಭಾಗಗಳನ್ನು ಯೋಚಿಸಿ ಈ ಲಗ್ನ ಕಾಲಗಳಲ್ಲಿ ವಿಧಾಯಕವಾದ ದ್ರವ್ಯಾರ್ಜನೆ ಮಾಡಿ ಈ ಸಭೆಯ ಫಂಡಿಗೆ ಸೇರಿಸಿ ತನ್ಮೂಲಕ ಯಶೋವಂತರಾಗ ಬೇಕೆಂದು ಕೇವಲ ದೀನ ಭಾವದಿಂದ ಸರ್ವರನ್ನು ಪ್ರಾರ್ಥಿಸುತ್ತೇನೆ

ಪೆನ್ಷನ್ ಆಫೀಸರ್.

ಕ್ಷಾಮನಿವಾರಣಾರ್ಥ ಏರ್ಪಾಡುಗಳು.

ಮೈಸೂರು ಸರ್ಕಾರಿ ಹುಕುಮುಗಳು

ದನಗಳೂ, ಹುಲ್ಲುಬನ್ನಿಯೂ.

ಪ್ರಕೃತ ದನಗಳಿಗೆ ಮೇವು ಸಿಕ್ಕುವುದು ಬಹಳ ಕಷ್ಟವಾಗಿರುವುದರಿಂದ ಸರ್ಕಾರದವರು ಚಿತ್ರದುರ್ಗ, ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲೂ ಮತ್ತು ಇತರ ಡಿಸ್ಟ್ರಿಕ್ಟುಗಳಲ್ಲಿ ಈ ರೀತಿ ಕಷ್ಟ ಪ್ರಾಪ್ತವಾಗಿರುವ ಪ್ರದೇಶಗಳಲ್ಲೂ ೧೯೦೮—೦೯ ನೇ ಸಾಲಿಗೆ ಹುಲ್ಲುಬನ್ನಿಯನ್ನು ಪೂರ್ತಿಯಾಗಿ ರೆಮಿಷನ್ ಮಾಡಿರುತ್ತಾರೆ

ಅಧಿಕಾರಿಗಳ ಜವಾಬ್ದಾರಿಯು.

ಯಾವ ಕಡೆಯಲ್ಲೇ ಆಗಲಿ ಪ್ರಜೆಗಳ ಪೈಕಿ ಯಾರಾದರೂ ಜೀವನಕ್ಕೆ ಸುತರಾಂ ಗತಿಯಿಲ್ಲದೆ ಕಷ್ಟಪಡುತ್ತಿರುವ ಪಕ್ಷಕ್ಕೆ ಅಧಿಕಾರಿಗಳು ಅಂಥವರಿಗೆ ಒಡನೆಯೇ ಜೀವನಕ್ಕೆ ಅನುಕೂಲ ಮಾಡಿ ಕೊಡಬೇಕು ಅನಂತರ ಅದಕ್ಕಾಗಿ ತಗಲುವ ಖರ್ಚನ್ನು ಗವರ್ನ್ಮೆಂಟಿಗೆ ತಿಳಿಸಬೇಕು ಈ ವಿಚಾರವನ್ನು ಸಮಸ್ತ ಅಧಿಕಾರಿಗಳೂ ಗಮನಕ್ಕೆ ತಂದುಕೊಂಡು, ಬಹು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾ ಬರಬೇಕಾಗಿದೆ.

ಕ್ಷಾಮನಿವಾರಣೆಯ ಅಲೋವೆನ್ಸುಗಳು.

ಮಾಹೆಯಾನ ೨೦ ರೂಪಾಯಿಗಿಂತಲೂ ಜಾಸ್ತಿ ತಲಬಿಲ್ಲದ ಸಮಸ್ತ ಇಲಾಖೆಗಳ ನೌಕರ ಮಾಸೇದಾರುಗಳಿಗೂ ಕ್ಷಾಮದ ಅಲೋವೆನ್ಸುಗಳನ್ನು ಕೊಡುತ್ತಾ ಬರಬೇಕೆಂದು ಹುಕುಂ ಮಾಡಲಾಗಿದೆ. ಈ ಹುಕುಂ ಪ್ರಕಾರ ಬೆಂಗಳೂರು, ಕೋಲಾರ, ತುಮಕೂರು ಮತ್ತು ಕಡೂರ್ ಡಿಸ್ಟ್ರಿಕ್ಟುಗಳಲ್ಲಿ ಈ ಅಲೋವೆನ್ಸ್ ಕೊಡುವುದು ಕಳೆದ ಡಿಸೆಂಬರ್ ಆಖೈರಿಗೂ, ಉಳಿದ ಡಿಸ್ಟ್ರಿಕ್ಟುಗಳಲ್ಲಿ ಜನವರಿ ಆಖೈರಿಗೂ ನಿಂತುಹೋಗತಕ್ಕದ್ದಾಗಿತ್ತು ಆದರೆ ಈಗಿನ ಸ್ಥಿತಿಯನ್ನು ನೋಡಲಾಗಿ ಇನ್ನೂ ಕೆಲವು ಕಾಲದ ತನಕ ದುರ್ಭಿಕ್ಷವು ನಿವಾರಣೆಯಾಗುವಂತೆ ಕಾಣುವುದಿಲ್ಲ. ಆದಕಾರಣ ಈ ಹಿಂದೆ ಸ್ಯಾಂಕ್ಷನ್ ಮಾಡಿರುವ ಅಲೋವೆನ್ಸುಗಳನ್ನೆಲ್ಲಾ ಸಮಸ್ತ ಇಲಾಖೆಗಳ ನೌಕರ ಮಾಸೇದಾರುಗಳಿಗೂ ೧೯೦೯ ನೇ ಮಾರ್ಚಿ ಆಖೈರು ತನಕ ಸಲ್ಲಿಸುತ್ತಾ ಬರಬೇಕೆಂದು ಹುಕುಂ ಮಾಡಲಾಗಿದೆ.

ಅಧಿಕಾರಿಗಳಿಗೆ ರಜಾ ಕೊಡುವುದು.

ಡೆಪ್ಯುಟಿ ಕಮಿಷನರು, ಅಸಿಸ್ಟೆಂಟ್ ಕಮಿಷನರು, ಅಮಲ್ದಾರ್ರು, ಈ ಮೊದಲಾದ ಎಗ್ಸಿಕ್ಯುಟಿವ್ ಅಧಿಕಾರಿಗಳಿಗೆ ಡಾಕ್ಟರ ಸರ್ಟಿಫಿಕೇಟು ವಿನಾ ಈ ಕಾಲದಲ್ಲಿ ರಜಾ ಕೊಡತಕ್ಕದ್ದಲ್ಲವೆಂದು ರೆವಿನ್ಯೂ ಕಮಿಷನರವರು ಗವರ್ನ್ಮೆಂಟಿಗೆ ಸೂಚಿಸಿದರು. ಅದರ ಮೇಲೆ ಗವರ್ನ್ಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ:—ಈಗ ಪ್ರಾಪ್ತವಾಗಿರುವ ದುಷ್ಕಾಲವು ನಿವಾರಣೆಯಾಗುವ ತನಕ ರೆವಿನ್ಯೂ ಕಮಿಷನರವರು ಸೂಚಿಸುವ ಮೇರೆ ವಿಶೇಷವಾದ ಆವಶ್ಯಕತೆ ತಂದು ಬಂದಲ್ಲದೆ ರೆವಿನ್ಯೂ ಅಧಿಕಾರಿಗಳನ್ನು ಬದಲಾವಣೆ ಮಾಡುವುದು ಸಹಜವಾಗಿರುವಂತೆ ಕಾಣುವುದಿಲ್ಲ. ಆದಕಾರಣ ಕಾಯಿಲೆ ಸಬಬಾಗಲಿ ಸರಿಯಾದ ಡಾಕ್ಟರ್ ಸರ್ಟಿಫಿಕೇಟಾಗಲಿ ಬಂದ ಹೊರತು ಕಷ್ಟಪರಿಹಾರದ ಕೆಲಸವನ್ನು ವಹಿಸಿರುವಂಥಾ ರೆವಿನ್ಯೂ ಅಧಿಕಾರಿಗಳಿಗೂ ಇತರ ಇಲಾಖೆಗಳ ಅಧಿಕಾರಿಗಳಿಗೂ ಮತ್ತೊಂದು ಹುಕುಂ ಕೊಡಲ್ಪಡುವ ತನಕ ರಜಾ ದೊರಕಲಾರದು.

ನಾಲಾ ನೀರೂ, ಗದ್ದೆ ಫಸಲೂ.

ಮಂಡಗೆರೆ, ಹೇಮಗಿರಿ, ಶ್ರೀರಾಮದೇವರ ನಾಲಾಗಳ ಕೆಳಗೆ ಹಾಲಿ ನಿಂತಿರುವ ಪೈರಿಗೂ ಮತ್ತು ಶಿವನಸಮುದ್ರದ ವಿದ್ಯುಚ್ಛಕ್ತಿ ಕೆಲಸಕ್ಕೂ ನೀರಿನ ಅನಾನುಕೂಲವುಂಟಾಗದ ರೀತಿ ನೋಡಿಕೊಳ್ಳ ಬೇಕಾಗುತ್ತದೆ. ಪ್ರಕೃತಸ್ಥಿತಿಯಲ್ಲಿರುವಂತೆ ನದಿಯಲ್ಲಿ ನೀರು ಕಡಮೆಯಾಗುತ್ತಾ ಹೋದರೆ, ಬೇಲು ಕಾಲದಲ್ಲಿ ಕಬ್ಬಿನ ಫಸಲಿಗೆ ನೀರು ಬಿಡಲು ಸಾಧ್ಯವಾಗದೇ ಹೋಗಬಹುದು ಈ ಕಾರಣದಿಂದ ಮೇಲ್ಕಂಡ ನಾಲಾಗಳ ಭಾಗಗಳಲ್ಲಿರತಕ್ಕ ಅಸಿಸ್ಟೆಂಟ್ ಇಂಜನಿಯರವರು ಈ ನಾಲಾಗಳ ಕೆಳಗಿನ ರೈತರಿಗೆ ಎಚ್ಚರಿಸಿದಾಗ್ಯೂ ಇವರುಗಳು ಹೊಸದಾಗಿ ಕಬ್ಬಿನ ಪೈರು ಇಡುವುದರಲ್ಲಿ ಮುಂದಾಗಿರುವುದಾಗಿ ತಿಳಿಯ ಬರುತ್ತದೆ. ಈ ನಾಲಾಗಳ ಕೆಳಗೆ ಬೇಸಿಗೆಯಲ್ಲಿ ಯಾವ ಪೈರನ್ನಾದರೂ ಇಟ್ಟರೆ ನೀರಿಗೆ ತೊಂದರೆಯಾಗಿ ಛಾನಲ್ ಡಿಪಾರ್ಟ್ಮೆಂಟಿನವರು ನೀರು ಸರಬರಾಜು ಮಾಡಲು ಜವಾಬ್ದಾರರಾಗುವುದಿಲ್ಲ ಕಾರಣ ಈ ವಿಚಾರವನ್ನು ಆ ಪ್ರಾಂತ್ಯದ ರೈತರ ತಿಳುವಳಿಕೆಗೆ ತಂದಿರುತ್ತದೆ.

ಗ್ರಾಮ ರಿಲೀಫ್ ಕಾಮಗಾರಿ.

ಗ್ರಾಮಾಂತರಗಳಲ್ಲಿ ಜನಗಳಿಗೆ ಸಹಾಯವನ್ನು ಒದಗಿಸಿಕೊಡುವ ಬಗ್ಗೆ ರಿಲೀಫ್ ಕಾಮಗಾರಿಗಳನ್ನು ಹೇಗೆ ಗೊತ್ತುಮಾಡುವುದು? ಮತ್ತು ಅವುಗಳನ್ನು ಹೇಗೆ ನಡಿಸಬೇಕು ಎಂಬೀ ವಿಚಾರಗಳಲ್ಲಿ ರೆವಿನ್ಯೂ ಕಮಿಷನರವರು ಡೆಪ್ಯುಟಿ ಕಮಿಷನರುಗಳ ತಿಳುವಳಿಕೆ ಮತ್ತು ನಡವಳಿಕೆ ಬಗ್ಗೆ ಈ ಕೆಳಗೆ ಕಂಡ ಹುಕುಂ ಕೊಟ್ಟಿರುತ್ತಾರೆ.

ಮೇಲ್ಕಂಡ ಕಾಮಗಾರಿಗಳು ಒಂದಕ್ಕೊಂದು ಕೇವಲ ಸಮೀಪದಲ್ಲಿಲ್ಲದ ರೀತಿ ನೋಡಿಕೊಳ್ಳಬೇಕಲ್ಲದೆ ಒಂದು ಗ್ರಾಮದವರಿಗೋಸ್ಕರ ಏರ್ಪಡಿಸಿದ ಕಾಮಗಾರಿಯು ಸದರಿ ಗ್ರಾಮಕ್ಕೆ ೪-೫ ಮೈಲಿ ಫಾಸಲೆಯಲ್ಲಿಯೇ ಇರುವಂತೆ ಗೊತ್ತುಮಾಡಬೇಕು ಏಕೆಂದರೆ ಬಡ ಒಕ್ಕಲಿಗರು, ಮಾದಿಗರು, ತೋಟಿಯರು ಮತ್ತು ಭೂಸ್ಥಿತಿಯಿಲ್ಲದ ಇತರರು ತಮ್ಮ ಗ್ರಾಮಗಳಲ್ಲಿಯೇ ವಾಸವಾಗಿದ್ದುಕೊಂಡು ಕಾಮಗಾರಿಗಳಿಗೆ ಹೋಗಿ ಬರಲು ಅನುಕೂಲವಾಗಿರುತ್ತದೆ. ಒಂದೇ ಕಾಮಗಾರಿಯಲ್ಲಿ ಅನೇಕ ಗ್ರಾಮಗಳ ಜನರು ಕೆಲಸ ಮಾಡುತ್ತಿರುವುದಾದರೆ ಸದರಿ ಕಾಮಗಾರಿಯನ್ನು ಒಂದು ಗ್ರಾಮಕ್ಕೆ ಒಂದು ಬ್ಲಾಕಿನಂತೆ ವಿಂಗಡಿಸಿ, ಆಯಾ ಬ್ಲಾಕುಗಳಲ್ಲಿ ಕ್ರಮವಾಗಿ ಕೆಲಸ ತೆಗೆಯಿಸಿಕೊಳ್ಳುವ ಬಗ್ಗೆ ಆಯಾ ಗ್ರಾಮದ ಪಟೇಲರನ್ನೇ ನೇಮಿಸಬಹುದು. ಕಾಮಗಾರಿಯು ಗ್ರಾಮದ ಪಟೇಲನ ಸುಪರ್ದಿನಲ್ಲಿರತಕ್ಕದ್ದು ಅವಶ್ಯ ಕಂಡಲ್ಲಿ ಇಂಥಾ ಕಾಮಗಾರಿ ನಡೆಯುವೇ ಇರುವ ನೆರೆಗ್ರಾಮದ ಪಟೇಲನನ್ನು ಆತನಿಗೆ ಕುಮ್ಮಕ್ಕು ಕೊಡಬಹುದು. ಕೆಲವು ಸಂದರ್ಭಗಳಲ್ಲಿ ಪಟೇಲನ ಜೊತೆಗೆ ಬುದ್ಧಿವಂತರಾದ ಇಬ್ಬರು ಪ್ರಮುಖ ರೈತರನ್ನು ಸಹಾಯಕ್ಕಾಗಿ ಕೊಡುವುದು ಉತ್ತಮ ಮತ್ತೆ ಕೆಲವು ಸಂದರ್ಭಗಳಲ್ಲಿ ಪಟೇಲನೊಂದಿಗೆ ಶ್ಯಾನುಭೋಗನು ಸಹಾ ಜಂಟಿಯಾಗಿ ಕಾಮಗಾರಿ ಭಾರದಲ್ಲಿದ್ದರೆ ಉತ್ತಮ. ಇಷ್ಟೆಲ್ಲಾ ಮಾಡಿದಾಗ್ಯೂ ಕಾಮಗಾರಿಯು ಸರಿಯಾಗಿ ನಡೆಯುವುದಕ್ಕೂ ಕ್ರಮವಾಗಿ ಕೂಲೀ ಬಟವಾಡೆಯಾಗುವುದಕ್ಕೂ ಪಟೇಲನೇ ಮುಖ್ಯ ಜವಾಬ್ದಾರನಾಗಿರತಕ್ಕದ್ದು ಈ ಕಾಮಗಾರಿಗಳ ಒಳ ಕೆಲಸವನ್ನು ಪ್ರತಿ ದಿವಸವೂ ಹಂಚಿ ಆಯಾ ದಿನವೇ ಅಳೆಯುವಂಥವ ಪದ್ಧತಿ ಅನುಸರಿಸಬೇಕು. ಕೂಲಿಯವರ ಸ್ಥಿತಿಯನ್ನನುಸರಿಸಿ ಕೆಲಸವನ್ನು ಹೆಚ್ಚು ಕಡಮೆ ಹಂಚತಕ್ಕದ್ದು. ಕೂಲಿಗೆ ತಕ್ಕಷ್ಟು ಕೆಲಸ ತೆಗೆಯುವ ಭಾಗದಲ್ಲಿ ಪಟೇಲನು ಜವಾಬ್ದಾರನಾಗಿರುತ್ತಾನೆ. ಕಾಮಗಾರಿಗೆ ಬರತಕ್ಕ ಕೂಲೀ ಜನರ ಸಾರ ಮುಂತಾದ ತಪ್ಸೀಲು ತೋರಿಸುವ ಹಾಜರೀ ಪಟ್ಟಿಯನ್ನು ಶ್ಯಾನುಭೋಗನ ಸಹಾಯದಿಂದ ತಯಾರಿಸಿ, ಅವರು ಕೆಲಸಕ್ಕೆ ಬಂದು ಕೂಲಿಯನ್ನು ತೆಗೆದುಕೊಂಡದ್ದಕ್ಕೆ ಪಟ್ಟಿಯಲ್ಲಿ ದಿನಚರಿಯಲ್ಲೂ ಗುರುತುಮಾಡಬೇಕು ಪೇಟೆ ಧಾರಣೆ ಮತ್ತು ಫ್ಯಾಮಿನ್ ಕೋಡಿನಲ್ಲಿ ನಮೂದಿರುವ ದರಗಳನ್ನು ಪರ್ಯಾಲೋಚನೆಗೆ ತೆಗೆದುಕೊಂಡು, ಕೂಲಿಯವರ ಆಶ್ರಿತವರ್ಗಕ್ಕೆ ಸಹಾಯಕವಾಗಿಯೂ ಇರುವಂತೆ ನ್ಯಾಯವಾದ ರೀತಿಯಲ್ಲಿ ಕೂಲೀ ದರವನ್ನು ಗೊತ್ತುಮಾಡಿ ಬಟವಾಡೆ ಮಾಡಬೇಕು.

ಹೆಚ್ಚು ಅನುಕೂಲತೆ ಕಂಡು ಬಂದಲ್ಲಿ ಕಾಮಗಾರಿಯನ್ನು ಕಂಟ್ರಾಕ್ಟು ತರೀಕು ನಡಿಸಬಹುದು, ಅಂದರೆ, ಪಟೇಲನೇ ಕಂಟ್ರಾಕ್ಟುದಾರನಾಗಿರಬೇಕು. ಅವನು ಬಡವರಾದ ಗ್ರಾಮಸ್ಥರನ್ನು ಕೂಲಿಗೆ ನೇಮಿಸಿಕೊಂಡು, ಅವರಿಗೆ ಅವುಲ್ದಾರ್ರು ಒಪ್ಪುವ ನ್ಯಾಯವಾದ ದರದಂತೆ ಕೂಲಿಯನ್ನು ಆಯಾ ದಿನ ಕೊಡ್ಲೆ ಪಾವತಿ ಮಾಡಲು ಒಪ್ಪಬೇಕು. ಸಾಧ್ಯವಾದಲ್ಲಿ ಕೂಲಿಯನ್ನು ಪೂರಾ ಧಾನ್ಯರೂಪವಾಗಿಯೋ ಇಲ್ಲವೇ ಸ್ವಲ್ಪ ಧಾನ್ಯರೂಪವಾಗಿಯೂ ಬಾಕಿ ನಗದಾಗಿಯೂ ಕೊಡಬಹುದು ಸಾಧ್ಯವಾದ ಕಡೆಗಳಲ್ಲಿ ಗೌರವಸ್ಥರಾದ ಗ್ರಾಮಸ್ಥರಿಗೆ ಕಂಟ್ರಾಕ್ಟು ಕೊಡಬಹುದು; ಅಥವಾ ಕಾಮಗಾರಿಗಳ ಮೇಲ್ವಿಚಾರಣೆಯನ್ನು ವಹಿಸಬಹುದು.

ಶ್ಯಾನುಭೋಗನು (ತಾನು ಸ್ವತಃ ಕಾಮಗಾರಿ ಭಾರದಲ್ಲಿಲ್ಲದೇ ಇರುವಾಗ) ತನ್ನ ಹೋಬಳಿಯಲ್ಲಿ ನಡೆಯುವ ಕಾಮಗಾರಿಗಳನ್ನು ನೋಡಿಕೊಂಡು ಪಟೇಲನಿಗೆ ಸಾಧ್ಯವಾದ ಕುಮ್ಮಕ್ಕನ್ನು ಕೊಡುತ್ತಿರಬೇಕು ಮತ್ತು ವಾರಕ್ಕೊಂದಾವರ್ತಿ ಕಾಮಗಾರಿಯನ್ನು ಜರೀಬು ಮಾಡಿಸಿ, ಪಾವತಿ ಪಟ್ಟಿಗಳ ತಯಾರಿಯಲ್ಲಿ ಪಟೇಲನಿಗೆ ಸಹಾಯ ಮಾಡಬೇಕು ಪ್ರತಿದಿನವೂ ಕೂಲಿಯನ್ನು ಪಾವತಿ ಮಾಡುವುದು ಅವಶ್ಯಕವೆಂದು ಕಂಡು ಬರುವ ಸಂದರ್ಭಗಳಲ್ಲಿ ವಿನಹ ವಾರಕ್ಕೊಂದಾವರ್ತಿ ಸಂತೆಯ ಹಿಂದಿನ ದಿವಸ ಕೂಲಿ ಬಟವಾಡೆ ಮಾಡಬೇಕು. ಶೇಕದಾರನು ತನ್ನ ಹೋಬಳಿಯಲ್ಲಿ ನಡೆಯುವ ಕಾಮಗಾರಿಗಳನ್ನೆಲ್ಲಾ ವಾರಕ್ಕೊಂದಾವರ್ತಿಯಾದರೂ ತನಿಖೆಮಾಡಿ ಕಾಮಗಾರಿಯಲ್ಲಾಗಲಿ ಬಟವಾಡೆಯಲ್ಲಾಗಲಿ ಕಂಡು ಬರುವ ಲೋಪಗಳನ್ನೆಲ್ಲಾ ತನ್ನ ವಾರದ ಡೈರಿಗಳಲ್ಲಿ ಕಾಣಿಸಿ ಅಮಲ್ದಾರರಿಗೆ ರಿಪೋರ್ಟು ಮಾಡತಕ್ಕದ್ದು. ಶೇಕದಾರನಿಗೆ ಕೆಲಸವು ಜಾಸ್ತಿಯಾದಲ್ಲಿ ರಿಲೀಫ್ ಕಾಮಗಾರಿಗಳ ಮೇಲ್ವಿಚಾರಣೆ ಮಾಡುವುದರಲ್ಲಿ ಈತನಿಗೆ ಸಹಾಯಮಾಡುವ ಬಗ್ಗೆ ಅಸಿಸ್ಟೆಂಟ್ ಶೇಕದಾರರನ್ನು ನೇಮಿಸತಕ್ಕದ್ದು. ಇವರುಗಳನ್ನು ಶೇಕದಾರರ ಕೈಕೆಳಗಾಗಲಿ, ಅಥವ ಸ್ವತಂತ್ರವಾಗಿ ಹೋಬಳಿಯ ಒಂದು ಭಾಗದ ಭಾರದಲ್ಲಿರುವುದಕ್ಕಾಗಲಿ ನೇಮಿಸಬಹುದು. ಅಮಲ್ದಾರರು ಯಾವಾಗಲೂ ಸಂಚರಿಸತಕ್ಕದ್ದಲ್ಲದೆ ಏರ್ಪಾಟೆಲ್ಲವೂ ಸಮರ್ಪಕವಾಗಿ ನಡೆಯುವ ಭಾಗಕ್ಕೆ ಜವಾಬ್ದಾರರಾಗಿರುತ್ತಾರೆ

ಮೇಲ್ಕಂಡಂತೆ ಗ್ರಾಮ ರಿಲೀಫ್ ಕಾಮಗಾರಿಗಳನ್ನು ನಡೆಸುವುದಕ್ಕೆ ಅವಶ್ಯವಾದ ಒಳ ಏರ್ಪಾಟುಗಳ ನಿಷಯದಲ್ಲಿ ಡೆಪ್ಯುಟಿ ಕಮಿಷನರವರಿಗೆ ಪೂರ್ಣ ಸ್ವಾತಂತ್ರ್ಯವಿರುತ್ತೆ. ಈ ಕಾರ್ಯಗಳು ಕೈಗೂಡಬೇಕಾದರೆ ಡೆಪ್ಯುಟಿ ಕಮಿಷನರುಗಳು ಈ ವಿಚಾರದಲ್ಲಿ ತುಂಬಾ ಮುತುವರ್ಜಿ ವಹಿಸಬೇಕು. ಸಾಧ್ಯವಾದಮಟ್ಟಿಗೂ ಸಹಾಯವನ್ನು ಒದಗಿಸಿಕೊಡುವುದಲ್ಲದೆ ಸ್ಥಳೀಯವಾಗಿ ವಿಶೇಷ ಉಪಯೋಗವಾದ ಕಾಮಗಾರಿಗಳನ್ನು ಮಾಡಿಸುವುದು ಇವರ ಮುಖ್ಯೋದ್ದೇಶವಾಗಿರಬೇಕು.

ತಾಲ್ಲೋಕು ವರ್ತಮಾನಗಳು.

ನಾಗಮಂಗಲ.—ಈ ತಾಲ್ಲೋಕಿಗೆ ಸೇರಿದ ಅನೇಕ ಗ್ರಾಮಗಳಲ್ಲಿ ನೀರಿಗೆ ತುಂಬಾ ಸಾಡಾಗಿದೆ. ಕಳೆದ ಎರಡು ವರುಷಗಳಿಂದ ಮಳೆ ಬೆಳೆ ಇಲ್ಲದೆ ಅಳೀಸಮುದ್ರನೇ ಮೊದಲಾದ ಕಡೆ ಬಡವರಿಗೆ ಜೀವನಕ್ಕೆ ಬಹು ಕಷ್ಟವಾಗಿದೆ. ಅನೇಕರು ಗೆಡ್ಡೆಗೆಣಸುಗಳನ್ನು ತಿನ್ನುತ್ತಿದ್ದಾರೆ. ದನಗಳಿಗೆ ನೀರಿಗೂ ಮೇವಿಗೂ ಬಹಳ ತೊಂದರೆಯಾಗಿರುತ್ತೆ ಈ ಊರಲ್ಲಿ ಪೂರ್ವದಿಂದಲೂ ಒಂದು ಭಾವಿಯಾದರೂ ಇಲ್ಲದೆ ಇದೆ. ನಮ್ಮ ಅಮಲ್ದಾರ್ರವರು ಭಾವಿ ತೋಡಿಸುವುದಕ್ಕೆ ಸ್ಯಾಂಕ್ಷನ್ ಮಾಡಿದ್ದಾರೆ. ಜಾಗ್ರತೆಯಲ್ಲಿ ಕಾಮಗಾರಿ ಶುರುಮಾಡಿಸಿಯಾರೆಂದು ನಂಬುತ್ತೇನೆ.—ಕೆಲವು ಕಡೆ ಸರ್ಕಾರದವರು ಬಂದು ಜಮೀನುಗಳನ್ನು ಒತ್ತೆ ಕೊಂಡು ತಕಾವಿ ಸಾಲಕೊಡುವುದಾಗಿ ಹೇಳಿಹೋದರು. ಇದು ಇನ್ನೂ ಕೊಡಲಿಲ್ಲ. ಹ್ಯಾಗೂ ಪ್ರಜೆಗಳಿಗೆ ಜೀವನಕ್ಕೆ ಬಹಳ ಕಷ್ಟವಾಗಿರುತ್ತದೆ. ಇದನ್ನು ಬೇಗನೆ ಅಧಿಕಾರಿಗಳು ನಿವಾರಣೆಮಾಡಿಯಾರೆಂದು ಹಾರೈಸುತ್ತೇವೆ.—ಸದರಿ ಗ್ರಾಮದ ಮರಿದಾಸೇಗೌಡನ ಬಾಬತು ಸುಮಾರು ೮೦೦—೮೫೦ ರೂಪಾಯಿನ ಕ್ರಯ ಬಾಳುವ ಕಬ್ಬಿನ ಪೈರಿಗೆ ಕೆಲವು ದುಷ್ಟರು ಸೇರಿ ರಾತ್ರಿವೇಳೆಯಲ್ಲಿ ಬೆಂಕಿ ಹಾಕಿದರು ಬೆಳೆಯೆಲ್ಲಾ ಸಂಪೂರ್ಣವಾಗಿ ನಾಶಹೊಂದಿತು ಆ ರೈತನು ತಾಲ್ಲೋಕ್ ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದು ಮಾಡಿಕೊಂಡನು. ದಯಾಳುಗಳಾದ ಅಮಲ್ದಾರರು ಖುದ್ದು ಬಂದು ಅಜಮಾಯಿಷಿ ಮಾಡಿಕೊಂಡು ಹೋದರು. ಆ ದುಷ್ಟರನ್ನು ಪತ್ತೆಮಾಡಿ ಶಿಕ್ಷಿಸುತ್ತಾರೆಂದು ಪ್ರಾರ್ಥಿಸುತ್ತೇನೆ.—ಹೂವಿನಹಳ್ಳಿ ಎಂಬ ಗ್ರಾಮದಲ್ಲಿ ಒಬ್ಬ ಒಕ್ಕಲಿಗನು ಸುಮಾರು ವರುಷದಿಂದಲೂ ಒಂದು ಮುಂಗಸಿ ಎಂಬ ಪ್ರಾಣಿಯನ್ನು ಸಾಕುತ್ತಾ ಇದ್ದನು ಈಗ್ಗೆ ಸುಮಾರು ೮—೧೦ ದಿವಸಗಳ ಹಿಂದೆ ಅವನ ಹೆಂಡತಿಯು ೫—೬ ತಿಂಗಳ ಕೂಸು ಎಳೇ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ, ನೀರು ತರುವುದಕ್ಕೆ ಹೋದಳಂತಲೂ, ಆ ಮುಂಗಸಿಯು ಹಟ್ಟಿಗೆ ಹೋಗಿ ತೊಟ್ಟಿಲೊಳ್ಳಿ ಮಲಗಿದ್ದ ಆ ಮಗುವನ್ನು ಕಡಿದು ಕೊಂದು ಬೋರುವಾಡಿರುತ್ತೆಂತಲೂ ವರ್ತಮಾನ ಕೇಳುತ್ತೇನೆ

ಚಿಕ್ಕಬಳ್ಳಾಪುರ.—ಹೋದ ತಿಂಗಳಲ್ಲಿ ಈ ಊರಿನ ಆಫೀಸರುಗಳೂ, ದೊಡ್ಡ ಮನುಷ್ಯರೂ ಮತ್ತು ಕೆಲವು ಮಂದಿ ವರ್ತಕರೂ ಗರ್ಲ್ಸ್ ಸ್ಕೂಲಿನಲ್ಲಿ ಸಭೆ ಸೇರಿ ಕ್ಷಾಮದ ಬೇಗೆಯಿಂದ ಕಷ್ಟಪಡುತ್ತಲಿರುವ ಮುದುಕರಿಗೂ, ಊನರಿಗೂ ಸುಭಿಕ್ಷಕಾಲವು ಬರುವ ವರಿವಿಗೂ ಸಹಾಯಮಾಡುವ ಹಾಗೆ ಆಲೋಚಿಸಿ, ಇದಕ್ಕಾಗಿ ಪ್ರತಿ ಮಾಹೆಯಲ್ಲಿಯೂ ದಯಾರ್ದ್ರ ಬುದ್ಧಿಯುಳ್ಳವರು ತಮ್ಮ ಚಂದಾ ಹಣವನ್ನು ಕೊಡಬೇಕೆಂದು ತೀರ್ಮಾನವಾಗಿ, ಚಂದಾ ಪಟ್ಟಿಯನ್ನು ತಯಾರು ಮಾಡಿದರು. ಈಗ ಕೆಲವು ದಿವಸಗಳಿಂದಲೂ ಸುಮಾರು ೪೦—೫೦ ಜನಗಳಿಗೆ ದಿನವಹಿ ಅರ್ಧ ಸೇರು ರಾಗಿಯ ಮೇರಿಗೆ ಹಂಚಿಕೊಡುತ್ತಲಿದ್ದಾರೆ. ಇದು ದಿಕ್ಕಿಲ್ಲದ ಬಡವರಿಗೆ ಬಹಳ ಸಹಾಯವಾಗಿರುತ್ತದೆ.—ಸುಮಾರು ಎರಡು ತಿಂಗಳಿಂದಲೂ ರಿಲೀಫ್ ಕಾಮಗಾರಿಯನ್ನು ಶುರು ಮಾಡಿದ್ದಾರೆ ಕೋಟೆಯ ಪಶ್ಚಿಮ ಭಾಗದ ಮಣ್ಣಿನ ಗೋಡೆಯ ಕೆಲವು ಭಾಗವನ್ನು ಎತ್ತಿ ಕಂದಕಕ್ಕೆ ಅಡ್ಡಲಾಗಿ ಬಿದ್ದಿರುವ ರಸ್ತೆಯ ಪಕ್ಕಕ್ಕೂ, ಮತ್ತು ಅಲ್ಲಲ್ಲಿರುವ ಹಳ್ಳಗಳಿಗೂ ಹಾಕಿಸುತ್ತಿದ್ದಾರೆ. ಗಂಡಸರಿಗೆ ಮೂರಾಣೆಯೂ, ಹೆಂಗಸರಿಗೆ ಎರಡು ದುಡ್ಡೂ ಕೂಲಿ ಕೊಡುತ್ತಲಿರುವದರಿಂದ ಬಹಳ ಕೊಂಚ ಜನರು ಮಾತ್ರ ಕೆಲಸಕ್ಕೆ ಬರುತ್ತಾರೆ.—ಈಗ್ಗೆ ಒಂದು ವರುಷದಿಂದಲೂ ಈ ಊರಿನಲ್ಲಿ ನೀರಿನ ಕೊರತೆ ಅಧಿಕವಾಗಿದ್ದು ಹೋಯಿತೆಂದು ಸರ್ಕಾರದವರು ಈಚೆಗೆ ಕಂದಕದ ಒಳಗಿನ ಪಕ್ಕದಲ್ಲಿ ಒಂದು ಭಾವಿಮಾತ್ರ ತೋಡಿಸಿರುತ್ತಾರೆ. ಊರಿನ ನಾಲ್ಕು ದಿಕ್ಕುಗಳಲ್ಲಿಯೂ ಪ್ರಜೆಗಳಿಗೆ ಅನುಕೂಲವಾಗುವ ರೀತಿಯಲ್ಲಿ ತಕ್ಕ ಭಾವಿಗಳನ್ನು ಜಾಗ್ರತೆಯಾಗಿ ತೋಡಿಸದೆ ಹೋದರೆ ಬಡ ಪ್ರಜೆಗಳು ಬಹಳವಾದ ಕಷ್ಟಕ್ಕೆ ಗುರಿಯಾಗುವರು.—ನೊಹರಂ ಹಬ್ಬವು ಎಲ್ಲಾ ವರ್ಷಗಳಲ್ಲಿಯೂ ನಡೆಸುವಂತೆ ಈ ಸಾರಿಯೂ ಸಹಾ ಬಹಳ ಸಂಭ್ರಮದಿಂದ ನಡೆಯಿತು. ಆದರೆ ಅನೇಕ ಮಾನಸ್ತರೂ ಸಹಾ ಬಹಳ ಕುಡಿದು ರಾತ್ರಿಯಲ್ಲಿ ಬಾಯಿಯ ಉದ್ದಕ್ಕೂ ಅಲಾವು ತುಳಿಯುತ್ತಾ ಹೋಗುತ್ತಿದ್ದರೆಂತಲೂ, ಈ ದುರ್ಭಿಕ್ಷ ಕಾಲದಲ್ಲಿಯೂ ಸಹಾ ಹೆಂಡ ಸಾರಾಯಿ ಮಾರುವವರಿಗೆ ಸ್ವಲ್ಪವೂ ವಿರಾಮವಿಲ್ಲವೆ ವ್ಯಾಪಾರ ನಡೆಯಿತೆಂದೂ ವರ್ತಮಾನ ಕೇಳುವದರಿಂದ ತುಂಬಾ ವ್ಯಸನಪಡಬೇಕಾಗಿದೆ.—ಹೋದ ವರುಷ ಪ್ಲೇಗಿನ ಗಲಾಟೆಯಿಂದ ನಿಂತುಹೋಗಿದ್ದ ನಂದೀ ಜಾತ್ರೆಯು ಈ ಸಾರಿ ಅಂಥಾ ತೊಂದರೆಗಳೊಂದೂ ಇಲ್ಲದಿರುವದರಿಂದ ಶಿವರಾತ್ರಿಯಲ್ಲಿ ಮಾಮೂಲಿನಂತೆ ನಡೆಸುವ ಹಾಗೆ ಸರ್ಕಾರದವರು ಅಪ್ಪಣೆಕೊಟ್ಟಿರುತ್ತಾರೆಂತಲೂ, ಜಾನುವಾರುಗಳಿಗೆ ನೀರು ವಗೈರೆಗಳಿಗೆ ಭಾವಿಗಳನ್ನು ತೋಡಿಸಿ ಅನುಕೂಲಪಡಿಸುತ್ತಾರೆಂತಲೂ ವರ್ತಮಾನ ಕೇಳುತ್ತೇನೆ

ಸಾಲಿಗ್ರಾಮ.—ಇಲ್ಲಿ ಬಿಸಲಿನ ತಾಪವನ್ನು ಸಹಿಸುವುದು ಕಷ್ಟವಾಗಿದೆ ರೈತರೆಲ್ಲರೂ ಧಾನ್ಯಗಳನ್ನು ರಾಶಿ ಮಾಡಿಕೊಳ್ಳುತ್ತಾ ಇರುವರು. ಇದು ಸುಗ್ಗೀಕಾಲವಾದರೂ, ಈ ಸ್ಥಳವು ಭತ್ತ ಬೆಳೆಯುವ ಪ್ರದೇಶವಾದರೂ ಧಾರಣೆವಾಸಿಗಳು ಮಾತ್ರ ತುಂಬಾ ಚಡಾವಾಗಿಯೇ ಇವೆ. ಅಕ್ಕಿ ರೂಪಾಯಿಗೆ ೭ ಸೇರು, ರಾಗಿ ಪಾವಲಿಗೆ ೭ ಪಡಿ. ಸಂತೆಯಲ್ಲಿ ಅಳತೆಯೋ ಹೇಳ ತೀರದು. ದುರ್ಭಿಕ್ಷಕ್ಕೆ ಅಧಿಕ ಮೋಸವೆನ್ನುವಂತೆ ಅಳತೆಯೂ ಜನಗಳಿಗೆ ನಷ್ಟ ಪಡಿಸುತ್ತಿರುವುದು. ಈ ಊರಿನ ಒಬ್ಬ ದೊಡ್ಡ ಮನುಷ್ಯರು ೩ ರೂಪಾಯಿ ಅಕ್ಕಿಯನ್ನು ಅಳೆಸಿ ಮನೆಗೆ ತಂದು ಅಳೆದಾಗ ಎರಡೂ ಮುಕ್ಕಾಲು ರೂಪಾಯಿನದೇ ಆಯಿತು ಪೋಲೀಸಿನವರು ಈ ವಿಚಾರದಲ್ಲಿ ನಿಗಾ ಕೊಡುತ್ತಾರೆಂದು ನಂಬಿದ್ದೇನೆ—**ಮೊನ್ನೆ ಭಾನುವಾರ ಮೈಸೂರ್ ಸರ್ಕಲ್ ಇನ್ಸ್ಪೆಕ್ಟರವರು ಇಲ್ಲಿನ ಎ. ವಿ. ಸ್ಕೂಲ್ ಪರೀಕ್ಷೆಗೆ ಬಂದು ಪಾಠಶಾಲೆಯನ್ನು ಪರೀಕ್ಷಿಸಿ ತುಂಬಾ ಸಂತೋಷಪಟ್ಟರೆಂದು ಕೇಳಿದೆನು ಉತ್ತಮ ಸ್ಥಿತಿಯಲ್ಲಿರುವ ಈ ಸ್ಕೂಲಿನಲ್ಲಿ ಲೋಯರ್ ಮಾಡೆಲ್ ಕ್ಲಾಸ್ ಎಂದು ಒಂದು ಸಂಘವಿರುವುದೆಂದು ಕೇಳಿದೇನೆ. ಈ ಸಂಘಕ್ಕೆ ಇನ್ಸ್ಪೆಕ್ಟರವರು ಅಗ್ರಾಸನವನ್ನು ವಹಿಸಿ, ಅ|| ಮಾಸ್ಟರ್ ಮ|| ಕೆ. ವೀರಣ್ಣ**

ಹಸು ಕೆಂದರಗಾರ್ಡನ್ ವಿಚಾರವಾಗಿ ಬರೆದಿದ್ದ ಉಪನ್ಯಾಸವನ್ನೂ, ಅವರು ಮುಖಾಂತರ ಮಾಡಿಸಿದ ಮಸ್ಲಿನ ಮಾದರಿ ಕೆಲಸಗಳನ್ನೂ, ಬಣ್ಣದ ಕೆಲಸ ವನ್ನೂ, ಕಾಗದ ಮಡಿಕೆ ಕೆಲಸವನ್ನೂ ನೋಡಿ ಸಂತೋಷ ಪಟ್ಟರು ಅಲ್ಲದೆ ಈ ಸಂದರ್ಭದಲ್ಲಿ ಎಲಿಮೆಂಟರಿ ಚಿತ್ರ ವ್ಯತ್ತ ಪದ್ಯಗಳನ್ನೂ ಕೇಳಿ ಅತ್ಯಂತ ಸಂತೋಷವನ್ನು ಹೊಂದಿದರು ಸ್ಕೂಲಿನಲ್ಲಿ ಸುಮಾರು ೨೦೦—೩೦೦ ಹುಡು ಗರು ಒಂದೂವರೆ ಅಂಕಣದ ಒಂದು ಬಸವನ ಗುಡಿ, ಮತ್ತೊಂದು ಮೂರು ಅಂಕಣದ ಸಣ್ಣ ಕವಳಿಗೆ ಮನೆ ಸ್ಕೂಲ್ ಅಭಿವೃದ್ಧಿಗೆ ಬರಲು ಸ್ಕೂಲ್ ಕಟ್ಟ ಡದ ಅಗತ್ಯವಾಗಿದೆ ಈ ತೊಂದರೆಯನ್ನು ಮೇಲ್ಪಟ್ಟ ಆಫೀಸರು ಜಾಗ್ರತೆ ಯಲ್ಲಿಯೇ ಪರಿಹರಿಸುತ್ತಾರೆಂದು ನಂಬಿದೇನೆ — ಈ ಊರಿನಲ್ಲಿ ದೊಡ್ಡ ರೋ ಗ ಬಂದು ಅನೇಕ ದನಗಳು ಸತ್ತು ಹೋಗುತ್ತಿವೆ ಎರಡು ತಿಂಗಳಾದರೂ ಈ ರೋಗವು ಇಲ್ಲಿಂದ ಬಿಡತಕ್ಕಲ್ಲದು ಕಾಯಿಲೆ ಕಾಲ್ಮಕಾಲ ತಿರುಪೆಯ ಸು ಕಾಟಿಯಲ್ಲಿ ಹೋಗಿರದು ಇಂತಾದ್ದರಲ್ಲಿ ನೀರಿನ ಕ್ಷಾಮವು ಇಲ್ಲ ಅದಾ ಗಿದೆ ನಾಲೆಯ ನೀರು ನಿಂತು ಹೋಯಿತು ೨೦ ದಿವಸಗಳಿಂದಲೂ ಆ ನಿಂತ ನೀರನ್ನು ಕುಡಿದು ಕೊಡಿಮೂ ಅನೇಕರು ಕೆಮ್ಮಲು, ನೆಗಡಿ, ಜ್ವರಾದಿಗಳಲ್ಲಿ ನರಳುತ್ತಾರೆ ಆ ನೀರೂ ಎಷ್ಟರ ಇಲ್ಲಿಗೆ ೩—೪ ಮೈಲಿ ದೂರದಲ್ಲಿರುವ ಆವತಿ ಹೊಳೆಯಿಂದ ಜನರು ನೀರನ್ನು ತರತಕ್ಕವರಾಗಿದ್ದಾರೆ ಪ್ರಾಣಾಧಾರ ವಾದ ನೀರೇ ಗತಿಯಿಲ್ಲದೆ ಮೇಲೆ ಜನರು ಬದುಕುವ ಬಗೆ ಹೇಗೆ? ಈ ಗ್ರಾಮದ ಮುನಿಸಿಪಲ್ ಮೆಂಬರುಗಳು ಮೇಲಕ್ಕೆ ಬರೆದು ಜನಗಳಿಗೆ ನೀರನ್ನು ಅನುಕೂಲ ಪಡಿಸುವರೆಂದು ಕೇಳುತ್ತೇನೆ

ಹಾಸನ — ಈ ಊರಿನಲ್ಲಿ ಎರಡು ಮೂರು ತಿಂಗಳಿಂದ ಪ್ಲೇಗ್ ವ್ಯಾಪಿ ಸಿದ್ದರೂ ಊರು ಸಂಪೂರ್ಣ ಬಿಡಲಿಲ್ಲ ಈ ಊರಿಗೆ ಈ ಕಾಯಿಲೆಯು ೭ ೮ ಸಲ ಬಂದ ಹಾಗಾಯಿತು ಇದರಿಂದ ಊರು ಬಹಳ ಹೀನಸ್ಥಿತಿಗೆ ಒಂದಂತೆ ಇರುತ್ತೆ ಇಲ್ಲಿನ ಧಾರಣೆವಾರುಗಳನ್ನು ನೋಡಿದರೆ ಬಡವರು ಜೀವನ ಮಾಡು ವುದು ಬಹಳ ಕಷ್ಟವಾಗಿದೆ ರೂಪಾಯಿಗೆ ೬—೬| ಸೇರು ಅಕ್ಕಿ ೧೧—೧೧ ಸೇರು ರಾಗಿ ಮಾರುತ್ತೆ ಚನ್ನರಾಯಪಟ್ಟಣ, ಅರಸೀಕೆರೆ ಈ ಪ್ರಾಂತ್ಯದ ವರ್ತಕರು ಅಲ್ಲಿ ದಿನಗಳ ಮಾತ್ರ ಜನಗಳಿಗೆ ಸಹಾಯವಿಲ್ಲದೆ ಈ ಮಾರ್ಗವಾಗಿ ಮಲೆನಾಡಿಗೆ ಧಾನ್ಯ ತೆಗೆದುಕೊಂಡು ಹೋಗುತ್ತಾರೆ ಈ ಊರಿನಲ್ಲಿ ನೀರಿನ ತೊಂದರೆಯು ಹೆಚ್ಚಾಗಿದೆ ಇಲ್ಲಿನ ದೇವಗೆರೆಯಲ್ಲಿ ನೀರು ಬಹಳ ಕೆಟ್ಟು ಹೋಗಿದೆ ಆದುದರಿಂದ ಜನಗಳಿಗೆ ಸಮ್ಮಿಳಿತ ತುಂಬಾ ತೊಂದರೆಯಾಗಿ ಒದಗಿದೆ ಆದ್ದರಿಂದ ಸೀರ ಕದೆ ಹೋಗುವುದನ್ನು ಕೊಡಿಸಿಕೊಟ್ಟರೆ ಬಹಳ ಅನುಕೂಲವಾಗುತ್ತೆ — ಇಲ್ಲಿನ ಕನ್ನಡ ಸ್ಕೂಲು ಬಹಳ ಪುರಾತನ ಕಟ್ಟಡ ವಾಗಿದೆ ಈ ಸ್ಕೂಲಿಗೆ ಬಿಂಗ ತುಮಟ ವಿಳದ ಇದ್ದದ್ದರಿಂದ ಈ ಕಟ್ಟಡವು ಶಿಥಿಲವಾಗಿ ... ಎರಡು ಸಲ ಮಳೆ ಬರುವುದರೊಳಗೆ ... ಪೂರ್ತಿಯಾಗಿ ಬೀಳುವುದು ಇದನ್ನು ನೋಡುವಲ್ಲಿ ... ಇವರ ಮೇಲೆ ... ಕಾಣುವದಿಲ್ಲ ಮತ್ತು ಇಲ್ಲಿನ ಹೆ ಸ್ಕೂಲಿನ ಕನ್ನಡ ಸ್ಕೂಲಿಗೆ ಗೌರ್ನಮೆಂಟ್ ಬುಕ್ ಡಿಪೋ ಒಂದಿರುವುದರಿಂದ ಜನಗಳಿಗೆ ಯಾವ ಅಡ್ಡಿಯೂ ಇಲ್ಲದೆ ಜಾಗ್ರತೆಯಾಗಿ ಪುಸ್ತಕಗಳು ಸಿಕ್ಕಲು ಅನುಕೂಲವಾಗಿದೆ ಇಲ್ಲಿ ಎ ವಿ ಸ್ಕೂಲು ಮಾಧ್ಯ ಮಿಕ ... ಹೊಸದಾಗಿ ಕಟ್ಟಲು ಏರ್ಪಾಡು ಮಾಡಿಯಾಯಿತು ಈ ಸ್ಕೂಲಿನಲ್ಲಿ ಕಳೆದ ೧೯೧೮ನೇ ... ಪರೀಕ್ಷೆಯಲ್ಲಿ ೬ ಜನಕ್ಕೆ ೪ ಜನ ತೇರ್ಗಡೆ ... ಮೈಸೂರಿನ ರೈಲು ಬರುತ್ತದೆಂಬ ವದಂತಿ ಇದೆ ಇದು ಜನಗಳಿಗೆ ಎಂಥಾ ಸಂತೋ ಷವನ್ನುಂಟು ... ಹಾಕುವುದರಿಂದ ಜನಗಳಿಗೆ ತುಂಬಾ ಪ್ರಯೋಜನವುಂಟು ಮತ್ತು ಸದ್ಯದಲ್ಲಿ ರೈಲು ರಸ್ತೆಯ ಕಾಮಗಾರಿಯನ್ನು ಹಿಡಿದರೆ ತುಂಬಾ ಅನುಕೂಲವಾಗುತ್ತೆ — ಇಲ್ಲಿಗೆ ಬಾಂಗಾ ಕಂಪೆನಿಯನ್ನು ಏರ್ಪಾಟು ಮಾಡಿಕೊಂಡರೆಂಬ ವರ್ತಮಾನವು ದಿಟವಾ ಇದೆ ಹಾಗೆ ಎಂದಿ ಗೂ ದಿವಸ ಅನವು ಮೋಟಾರ್ ಗಾಡಿಗಳನ್ನು ಇಡುವುದರಿಂದ ಜನಗಳಿಗೆ ತುಂಬಾ ಪ್ರಯೋಜನವಾಗುತ್ತೆ — ಇಲ್ಲಿ ಮೊಹರಂ ಹಬ್ಬದ ಯಾವ ಗಲಾಟೆಯೂ ಇಲ್ಲದೆ ನಡೆಯಿತು ಪೋಲೀಸು ಬಂದೋಬಸ್ತು ಚೆನ್ನಾಗಿಲ್ಲ ಈ ಊರಿನ ಸಮೀಪದ ಹಳ್ಳಿ ಗುಡ್ಡೇನಹಳ್ಳಿಯಲ್ಲಿ ಒಬ್ಬನನ್ನು ಒಬ್ಬನು ಚಿಟ್ಟಿನಿಂದ ಕೊಂದು ಹಾಕಿದ್ದು ಕೇಸಿನ ... ಆಗಿ ಅವನಿಗೆ ಎರಡು ವರುಷ ಕಠಿಣ ಸಜಾ ವಿಧಿಸಿದರು ಇಲ್ಲಿನ ಜಿಲ್ಲಾ ದಫೇದಾರನ ಮನೆಯಲ್ಲಿ ೨೦೦ ರೂಪಾಯಿ ಬಾಳಬಹುದಾದ ಒಡವೆಗಳು ಕಳುವಾದವು ಈ ಊರಿನ ಹೊಲಗೇರಿಯಲ್ಲಿ ಗುಮಾನಿಯ ಮೇಲೆ ಇಬ್ಬರನ್ನು ಹಿಡಿದುಕೊಂಡು ಬಂದು ಜೈಲಿನಲ್ಲಿಟ್ಟಿದ್ದಾರೆ — ಈ ಊರಿನ ಹಾಕುಕಾರ್ ವೃತ್ತಿಯ ಕೆಟ್ಟರು ಪ್ಲೇಗಿನಿಂದ ಕಾಲವಾದರು ಈ ವಿಷ ಯವು ಇಲ್ಲಿನ ಜನಗಳಲ್ಲಿ ತುಂಬಾ ವಿಷಾದವನ್ನುಂಟುಮಾಡಿದೆ — ಇಲ್ಲಿನ ವಾಸ ಹೊಂದಿದ ವೆಸ್ಲಿಯನ್ ಮಿಷನ್ ರೆವರೆಂಡ್ ಸ್ಟ್ರಾಹಾಂ ಎಂಬುವವರು ಮತ್ತೆ ... ಕೆಲಸಕ್ಕೆ ಪ್ರಯಾಣ ಮಾಡಿದರು ಇವರು ಹೊರಡುವಾಗ ಇಲ್ಲಿನ ಕ್ರೈಸ್ತ ಮಂಡಲಿಯವರೂ ಉಪಾಧ್ಯಾಯರುಗಳೂ ಅವರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಿದರು

ಮೈಸೂರು ಗೆಜೆಟ್ ಸಂಗ್ರಹ

ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ ಮೆ|| ಕೆ ಎಸ್ ಚಂದ್ರಶೇಖರ ಐಯರವರಿಗೆ ಫೆಬ್ರವರಿ ತಾ ೪ ರಿಂದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಗವರ್ನಮೆಂಟ್ ಅಂಡರ್ ಸೆಕ್ರೆಟರಿ ಮ|| ಸಿ ಎಸ್ ಬಾಲಸುಂದರಂ ಐಯರವರು ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಜನರಲ್ ಮತ್ತು ರೆವಿ ನ್ಯೂ ಇಲಾಖೆಗಳ ಸೆಕ್ರೆಟರಿಯಾಗಿ ಕೆಲಸನೋಡತಕ್ಕದ್ದು

ಚಿಕ್ಕಬಳ್ಳಾಪುರದ ತಾಲ್ಲೂಕು ಅಮಲ್ದಾರ್ ಮೆ|| ಕೆ ಶ್ರೀನಿವಾಸರಾಯ ರಿಗೆ ಆರು ತಿಂಗಳ ರಜಾ ಕೊಟ್ಟಿದೆ ಈ ಪೈಕಿ ಇಪ್ಪತ್ತು ದಿನಗಳ ರಜವನ್ನು ಪ್ರಿವಿಲೆಜ್ ರಜಾದಂತೆ ಎಣಿಸಿದೆ ಕು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಪೋಲೀಸ್ ಇನ್ಸ್‌ಪೆಕ್ಟರ್ ಕೆ ನಾರಾಯಣ ಐಯರವರು ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಚಿಕ್ಕಬಳ್ಳಾಪುರದ ತಾಲ್ಲೂಕ್ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ಮಾಡಲ್ಪಟ್ಟಿದ್ದಾರೆ ಕೂಡಲೇ ಕೆಲಸದ ಮೇಲೆ ಹಾಜರಾಗತಕ್ಕದ್ದು

ಮೆ|| ವಿ ಎಸ್ ಸಾಂಬಶಿವ ಐಯರವರನ್ನು ಛಡೋಡಿಗೆ ಕಳುಹಿಸಿರುವ ರಿಂದಲೂ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಮೆ|| ಇ ಡಬ್ಲಿಯು ಮೆಡಿಕಲ್ ಯವರು ಸೆಂಟ್ರಲ್ ಕಾಲೇಜಿನಲ್ಲಿ ಭೂಗರ್ಭ ಶಾಸ್ತ್ರ ವಿಜ್ಞಾನವನ್ನು ಕಲಿಸುವ ಉಪಾಧ್ಯಾಯರಾಗಿಯೂ ಕೆಲಸಮಾಡತಕ್ಕದ್ದು

ದಾವಣಗೆರೆ ಸಬ್ ಡಿವಿಜನ್ ಅ|| ಕಮಿಷನರ್ ಮೆ| ನಗರ್ ಸುಬ್ಬರಾಯ ರಿಗೆ ಅಪರಾಧಿಗಳನ್ನು ಸೀಕ್ ಟೈಲಿಗೆ ಜಾಮೀನು ಕೊಡಬೇಕೆಂದು ಕೇಳುವ ಅಧಿಕಾರ ವಹಿಸಲ್ಪಟ್ಟಿದೆ

ಮೆ| ಕೆ ಎಸ್ ಚಂದ್ರಶೇಖರ ಐಯರವರಿಂದ ಮೆ|| ಸಿ ಎಸ್ ಬಾಲ ಸುಂದರಂ ಐಯರವರು ಫೆಬ್ರವರಿ ತಾ ೧ ರಲ್ಲಿ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ ಕೆಲಸದ ಛಾರ್ಜನ್ನು ವಹಿಸಿಕೊಂಡರು

ಮೆ|| ಮಹಮದ್ ಅಬ್ದುಲ್ಲಾ ಷರೀಫ್‌ಯವರನ್ನು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ನೇಮಕಮಾಡಿದ್ದರಿಂದ ರಜದ ಮೇಲಿರುವ ಅಮಲ್ದಾರ್ ಮೆ| ಜಿ ನಾರಾಯಣರಾಯರು ಕೂಡಲೇ ಬಂದು ಜಗಲೂರ್ ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು

ಮುಂದೆ ಹೇಳುವ ಅಮಲ್ದಾರರುಗಳ ಬಡ್ತಿಯ ಹುಕುಂ ಮಾಡಲ್ಪ ಟ್ಟಿದೆ — ಮೆ|| ಗಳಾದ ಎ ಕೃಷ್ಣಸ್ವಾಮಯ್ಯಂಗಾರ್ರು, ಎಚ್ ಎಸ್ ವೆಂಕ ಟಾಚಾರ್ರು, ಎನ್ ಗೋಪಾಲಕೃಷ್ಣ ಯ್ಯಂಗಾರ್ರು — ೨ ನೆಯ ಕ್ಲಾಸಿಗೆ

ಮೆ|| ಗಳಾದ ಪಿ ಎಸ್ ವೆಂಕಟೇಶಯ್ಯನವರು, ಎನ್ ರಾಮರಾಯರು, ಬಿ ನಾರಾಯಣಸ್ವಾಮಯ್ಯಂಗಾರ್ರು, ಎಂ ಎಸ್ ರಾಮಚಂದ್ರರಾಯರು, ಎಂ ಎ ಶ್ರೀನಿವಾಸಯ್ಯಂಗಾರ್ರು, ಪಿ ಸದಾಶಿವರಾಯರು, ಎಸ್ ಎನ್ ಅಪ್ಪಣ್ಣಯ್ಯಂಗಾರ್ರು — ೩ ನೇಯ ಕ್ಲಾಸಿಗೆ

ಮೆ|| ಜಿ ನಾರಾಯಣರಾಯರನ್ನೂ, ಮೆ|| ಸಿ ನಾರಾಯಣರಾಯರನ್ನೂ ೪ ನೆಯ ಕ್ಲಾಸ್ ಅಮಲ್ದಾರರನ್ನಾಗಿ ಖಾಯಂ ಮಾಡಿದೆ

ಎಂ ಅಹೋಬಲಶಾಸ್ತ್ರೀಯವರನ್ನು ಡಿಪ್ಟಿ ಅಮಲ್ದಾರರನ್ನಾಗಿ ಖಾಯಂ ಮಾಡಿದೆ

ಮುಂದೆ ಹೇಳುವ ಇಂಜಿನಿಯರ್ ಇಲಾಖೆ ಅಧಿಕಾರಿಗಳನ್ನು ರಿಲೀಫ್ ಕಾಮಗಾರಿ ಪ್ರಾರಂಭಿಸಿ ಮೇಲೆ ಬಾರಕೆ ನೋಡಿಕೊಳ್ಳುವುದಕ್ಕಾಗಿ ರೆವಿನ್ಯೂ ಇಲಾಖೆಗೆ ವರ್ಗಮಾಡಿದೆ —

ಅ|| ಇಂಜಿನಿಯರ್ ಎ ವೆಂಕಟರಾವ್ ನಿಜಗಲ್‌ಯವರನ್ನು ಬೆಂಗಳೂ ರಿನಿಂದ ಕೋಲಾರಕ್ಕೆ, ಅ|| ಇಂಜಿನಿಯರ್ ಮೆ|| ಟಿ ಅರುಣಾಚಲ ಐಯ ರನ್ನು ನೀರಿನ ಸರಬರಾಯಿ ಇಲಾಖೆಯಿಂದ ಚಿತ್ರದುರ್ಗಕ್ಕೆ, ಸಬ್ ಅ|| ಇಂಜಿನಿಯರ್ ಮ|| ಕೆ ವಿ ಬೇಸಿಕಾಚಾರ್ಯರನ್ನು ಬೆಂಗಳೂರು ಸ್ಪೆಷಲ್ ಡಿವಿಜನಿಂದ ತುಮಕೂರಿಗೆ, ಓವರ್ಸಿಯರ್ ವಿ ಲಕ್ಷ್ಮೀನಾರಾಯಣರನ್ನು ಮೈಸೂರಿನಿಂದ ಮಂಡ್ಯಕ್ಕೆ, ಓವರ್ಸಿಯರ್ ಎಚ್ ಎಸ್ ಕೃಷ್ಣಯ್ಯಂಗಾ ರ್ರನ್ನು ಬೆಂಗಳೂರಿನಿಂದ ಮೈಸೂರು ಡಿಸ್ಟ್ರಿಕ್ಟಿಗೆ, ಓವರ್ಸಿಯರ್ ವಿ ತಂಗ ವೇಲು ಮೊದಲಿಯಾರ್ರನ್ನು ಶಿವಮೊಗ್ಗ ಡಿಸ್ಟ್ರಿಕ್ಟಿಗೆ, ಓವರ್ಸಿಯರ್ ಜಿ ಪಿಳ್ಳೆಯ ಹೆ ಎಲ್ಲಿಸ್‌ರವರನ್ನು ಹಾಸನದ ಡಿಸ್ಟ್ರಿಕ್ಟಿಗೆ, ಓವರ್ಸಿಯರ್ ಟಿ ಎನ್ ಲಕ್ಷ್ಮೀನಾರಾಯಣರನ್ನು ಕಡೂರು ಡಿಸ್ಟ್ರಿಕ್ಟಿಗೆ ಇವರೆಲ್ಲ ಕೂಡಲೇ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳ ಬಳಿಗೆ ಹೋಗಿ ಅವರು ನೇಮಿಸುವ ಕೆಲಸಗಳನ್ನು ನಡಿಸತಕ್ಕದ್ದು

ತಂತೀ ವರ್ತಮಾನ ಸಾರವು

ಲಿನ್ಯಡೀಕ

ಫೆಬ್ರವರಿ ತಾ ೭ ನೇ ಭಾನುವಾರ — ಜರ್ಮನಿಯಲ್ಲಿ ಪ್ರವಾಹದ ದೆಸೆ ಯಿಂದ ಅಪಾರವಾದ ನಷ್ಟ ಸಂಭವಿಸಿದೆ ಮೃತಪಟ್ಟವರ ಸಂಖ್ಯೆಯು ಹೆಚ್ಚು ತ್ತಿದೆ ಇರ ವುದು ... ಎಲ್ಬ, ಮೊಯಿನ್, ಓಡರ್ ಎಂಬ ನದಿಗಳಲ್ಲಿ ಇನ್ನೂ ಪ್ರವಾಹ ಹೆಚ್ಚುತ್ತಲೇ ಇದೆ ಡ್ರೆಸ್ಡನ್ ಪಟ್ಟಣದಲ್ಲಿ ಬಹಳ ಕಷ್ಟ ಪ್ರಾಪ್ತವಾಗಿರುವುದು ಅಪಾರವಾದ ಹಿಮಗಡ್ಡೆಗಳು ಪಟ್ಟಣದ ಮೇಲೆ ಉರುಳಿ ಬಂದು ಸೇತುವೆಗಳನ್ನು ಬಡಿಯುತ್ತಿರುವುವು ಲೀಪ್ಜಿಗ್, ಫ್ರಾಂಕ್‌ಫರ್ಟ್ ಪಟ್ಟಣಗಳಲ್ಲಿ ಕೆಲವು ಭಾಗಗಳು ಪ್ರವಾಹದೊಳಗೆ ಮುಳುಗಿರುತ್ತವೆ ಪ್ರಜೆ ಗಳಿಗೆ ಸಹಾಯಮಾಡುವುದಕ್ಕೋಸ್ಕರ ಸರ್ಕಾರದವರು ಅಲ್ಲಲ್ಲಿ ಪೋಲೀಸ್ ಕಾವಲುಗಾರರನ್ನು ನೇಮಕಮಾಡಿರುವರು

ಪರ್ಷಿಯಾ ರಾಜ್ಯದ ಗಲಭೆಯು

ಪರ್ಷಿಯಾ ರಾಜ್ಯಕ್ಕೆ ಸೇರಿದ ಮೆಸ್ಡ್ ಪಟ್ಟಣದಲ್ಲಿ ಪ್ರಜೆಗಳು ದಂಗೆಯೆ ದ್ದಿರುವುದನ್ನು ನೋಡಿ, ಖೊರಾಸಾನ್ ಅಧಿಪತ್ಯದ ಜನಗಳೂ ದಂಗೆಯೆದ್ದಿರು ತ್ತಾರೆ ಅಂಜುಮಾನ್ ಸಂಘದವರೇ ಅಧ್ಯಕ್ಷತೆಯನ್ನು ವಹಿಸಿಕೊಂಡು, ರಾಜಕಾ ರ್ಯಗಳನ್ನೆಲ್ಲಾ ತಾವೇ ನಡಿಸಲಾರಂಭಿಸಿದಾರೆ

ಕ್ರೂರ ಕೃತ್ಯವು

ಚೀನಿ ರಾಜ್ಯದ ಮುಖ್ಯ ಪಟ್ಟಣವಾದ ಸಾಂಟಿಯಾಗೋದಲ್ಲಿ ದುಷ್ಟ ರ್ಯಾರೋ ಜರ್ಮನಿ ರಾಯಭಾರಿಯನ್ನು ಕೊಂದು ಹಾಕಿ, ಆತನು ವಾಸವಾ ಗಿದ್ದ ಬಂಗಲೆಯನ್ನು ಸುಟ್ಟು ಇರುತ್ತಾರೆ

ರಷ್ಯಾದಲ್ಲಿ ಲಂಚಕೋರತನವು

ಫೆಬ್ರವರಿ, ತಾ ೮ ನೇ ಸೋಮವಾರ — ನಿಜನಿನೊಗರಾಡಿನ ಮಾಜಿ ಗವರ್ನ ರಾಗಿದ್ದ ಬ್ಯಾರನ್ ಫ್ರೆಡರಿಕ್ ಎಂಬಾತನನ್ನು ಕ್ಷಾಮನಿವಾರಣೆಯ ಕೆಲಸಕ್ಕೆ ನೇಮಕಮಾಡಿದ್ದರು ಆತನು ಸರ್ಕಾರದ ಹಣವನ್ನು ತಿಂದುಹಾಕಿದ್ದರಿಂದ ರಷ್ಯಾ ಗವರನ್‌ಮೆಂಟಿನವರು ಆತನನ್ನು ಕೆಲಸದಿಂದ ವಜಾಮಾಡಿದ್ದಲ್ಲದೆ ಆತ ನಿಗೆ ೧೦,೦೦೦ ದ್ರವ್ಯವನ್ನು ಜುಲ್ಮಾನೆ ಹಾಕಿರುತ್ತಾರೆ

ಹಿಂದುಸ್ಥಾನ

ಕಾನೂನ್ ಬದಲಾವಣೆಯು.

ಫೆಬ್ರವರಿ, ತಾ ೭ ನೇ ಭಾನುವಾರ — ಪರಸ್ಪರ ಸಹಾಯಕ ಸಂಘಗಳ ಕಾನೂನನ್ನು ಬದಲಾವಣೆ ಮಾಡುವ ವಿಚಾರದಲ್ಲಿ ಇಂಡಿಯಾ ಗವರನ್‌ಮೆಂಟಿ ನವರು ಬೇರೆ ಬೇರೆ ಅಧಿಪತ್ಯಗಳ ಅಭಿಪ್ರಾಯಗಳನ್ನು ಕೇಳುತ್ತಾರೆ

ಧಾನ್ಯಗಳ ಆಮದು

ಹಿಂದುಸ್ಥಾನದಲ್ಲಿ ಗೋಧಿಯ ಧಾರಣೆಯು ಚಡಾವಾಗಿರುವುದನ್ನು ನೋಡಿ ವರ್ತಕರು ಆಸ್ಟ್ರೇಲಿಯಾ ದ್ವೀಪದಿಂದ ಗೋಧಿಯನ್ನು ಹಡಗುಗಳ ಮೇಲೆ ಅಪಾರವಾಗಿ ಕಲ್ಕತ್ತೆಗೆ ತರಿಸುತ್ತಾ ಇದಾರೆ ಇದಲ್ಲದೆ ಬರ್ಮಾ ಅಧಿಪತ್ಯದಿಂದ ಅಕ್ಕಿಯು ಬಹಳವಾಗಿ ರಫ್ತಾಗಿ ಬರುತ್ತಿರುವುದು ಇನ್ನೂ ಕಡಿಮೆಯಾಗಲಿಲ್ಲ

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ — ಎಂದರೆ, ನಿನಗೆ ಯಾವ ರೋಗ ಉಂಟಾಗಿದೆ — "ನನಗೆ ದಿನಕ್ಕೆ ಒಂದು ಸುಖದರೂ ಉಲ್ಲಾಸವೃತ್ತಿಯಾಗುತ್ತಿದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ... ನ ಬೆಳಿಗ್ಗೆ ಸುಖವಾಗಿ ಮಲ ಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧಗೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ — ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಸಿರಿ, ಅಶಕ್ತಿ, ಎದೆಯು ಕಲ್ಲಿಸುವುದು, ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ನಿದಮೂಲಿಕೆಗಳಿಂದಲೇ ತಯಾ ರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ... ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತ ಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವ ನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿ ಹರಿಸಿ, ಆರೋಗ್ಯವನ್ನುಂಟುಮಾಡುವುವು [69 24]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆ ಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುವು ಅಥವಾ, ಡೋನ್, ಪಿ ಒ ಬಾಕ್ಸ್ ೨೦ ಬೊಂಬಾಯಿ — ಇವರಲ್ಲಿ ದೊರೆಯುವುದು

ನೋಟೀಸ್

22 1

ಮೈಸೂರು ಸಿಟಿ ಮ್ಯುನಿಸಿಪಲ್ ವಸೂಲಿ (ಅಕ್ರಾಯಿ) ಆಫೀಸು ಪಕ್ಕದಲ್ಲಿರುವ ೯೩ ನೇ ನಂಬರು ಮಳಿಗೆಯಲ್ಲಿ ಅವಲ್ ತರಹ ರವೆ ಮತ್ತು ಹಿಟ್ಟು ಚಿಲ್ಲರೆಯಾಗಿಯೂ, ಸಗಟಾಗಿಯೂ ಮಲಿವ ಕ್ರಯಕ್ಕೆ ಸಿಕ್ಕುತ್ತದೆ

೧೯೧೯ ನೇ ಲೋವರ್ ಸೆಕಂಡರಿ ಕನ್ನಡ ನೋಟ್ಸ್

13 5

ಮಹಾರಾಜಾಕಾಲೇಜು ಕನ್ನಡ ಪಂಡಿತರು ಮೆ|| ಪಿ ಆರ್ ಕರಿಬಸವಶಾಸ್ತ್ರಿ ಗಳವರಿಂದ ಪರಿಷ್ಕರಿಸಲ್ಪಟ್ಟದ್ದು ಪ್ರತಿ ೧ಕ್ಕೆ ೦ ೪ ೦, ೧೦ಕ್ಕೆ ೧ ಹೆಚ್ಚು. ಕನ್ನಡಿನ ಪುಸ್ತಕದ ನೋಟ್ಸ್ ಕ್ರಯ ಪ್ರತಿ ೧ಕ್ಕೆ ೦ ೨ ೦, ೫ಕ್ಕೆ ೧ ಹೆಚ್ಚು ಎಗ್ಸಾಮಿನರ್ ಮಾಸಪುಸ್ತಕ ಚಂದಾ, ವರ್ಷಕ್ಕೆ ೧ ೪ ೦, ನೋಟ್ಸು ಬಹು ಮಾನ, ಒಟ್ಟು ೧೫ ಚಂದಾ ಪಾವತಿ ಮಾಡುವವರಿಗೆ ಒಂದೊಂದು ಹೆಚ್ಚು ವಿಳಾಸ ಸಿ ಪುಟ್ಟಯ್ಯ, ಮ್ಯಾನೇಜರ್, ದಿ ಎಗ್ಸಾಮಿನರ್ ಆಫೀಸ್, ಮೈಸೂರು

ಸಂಜೀವಿನೀ ಔಷಧಾಲಯವು, ಮೈಸೂರು.

23 1

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಪಿಂಡು — ನರದೌರ್ಬಲ್ಯ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋಮು, ವಾಯುನೋವುಗಳು, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿ ಭ್ರಮಣೆ, ಮಂಕುತನ, ಉರಿಮೂತ್ರ, ಸೊಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪುಷ್ಟಿಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ೨ ರೂ ಪಾಯಿ

ಸಂಜೀವಿನೀ ಮಾತ್ರೆ — ನಾನಾ ಬಗೆ ಜ್ವರಗಳೂ ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ ೨ ೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ೧ ರೂಪಾಯಿ

ಕಾಲಕೂಟ ವಟಿಕ — ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗ ಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ೮ ಆಣೆ

ಮದ್ರಾಸ್ ಸಾಹುಕಾರ್ ಪೇಟೆ,
ಟಿ. ಎಮ್. ರಾಮಯ್ಯ ಶೆಟ್ಟರ ಕಂಪೆನಿಯಲ್ಲಿ

99 11

ತಯಾರಾಗುವ ಕಬ್ಬಿಣದ ಪೆಟ್ಟಿಗೆಗಳು ಅಥವಾ ಟ್ರಂಕುಗಳು ಈ ಕೆಳಗಿನ ದರದ ಮಾರಾಟಕ್ಕೆ ಸಿದ್ಧವಾಗಿವೆ ಬ್ರಾಂಚ್ ಆಫೀಸ್ ಬೆಂಗಳೂರು ನಗರ್ತರಪೇಟೆಯ ಲ್ಲೂ ಸಿಕ್ಕುವದು

ಬೇಕಾದವರು ತಮ್ಮ ಅಡ್ರೆಸ್ಸು ತಿಳಿಸಿ ರೂ 10 ಮುಂಗಡವಾಗಿ ಕಳುಹಿ ಸಿದರೆ ವಿ ಪಿ ಮೂಲಕ ರವಾನಿಸಲ್ಪಡುತ್ತೆ ವಿಶೇಷ ಮಾಹಿತಿ ಬೇಕಾದವರು ಕಾಗದದ ಮುಖಾಂತರ ಮೇಲ್ಕಂಡ ವಿಳಾಸದಾರರಿಂದ ತಿಳಿದುಕೊಳ್ಳಬಹುದು.

ಇಪ್ಪತ್ತು ವರ್ಷದ ಕಾಯಿಲೆ,

76

ಬದುಕುವೆನೆಂಬ ಆಶೆಯೇ ಇರಲಿಲ್ಲ.

ಯಾವ ಔಷಧವೂ ಗುಣಕೊಡಲಿಲ್ಲ, ಪೆರೂನಾ ವಾಸಿಮಾಡಿತು.

ದೇಹದೊಳಗಿನ ಕೈತ್ಯ

ಅನೇಕ ರೋಗಿಗಳು ಶರೀರದೊಳಗಿರುವ ಅಂಗಗಳಲ್ಲಿ ಶೈತ್ಯ ಹಿಡಿದು ಬಹಳವಾಗಿ ದುರ್ಬಲಹೊಂದಿ ಕೊರಗುತ್ತಿದ್ದಾರೆ. ಇದರಿಂದಾಗುವಷ್ಟು ಕೇಡುಕು ಇನ್ಯಾವ ರೋಗದಿಂದಲೂ ಉಂಟಾಗದು. ತುಂಬಾ ಜುಗುಪ್ಸೆ, ವಿಶೇಷ ಜಿಡ್ಡು, ಅಶಕ್ತತೆರವಾದ ನರಳುವಿಕೆ, ಎಡೆಬಿಡದ ದುರ್ಬಲ, ಇವೆಲ್ಲಾ ಉಂಟಾಗುತ್ತವೆ. ಈ ತರಹಾ ರೋಗಗಳು ಸಾವಿರಾರು ಮಂದಿ ಕ್ರಮೇಣ ಒಬ್ಬೊಬ್ಬರಾಗಿ ಪೆರೂನಾ ವಾಸಿಮಾಡಬಲ್ಲ ಔಷಧವೆಂದು ಕಂಡುಕೊಂಡಿದಾರೆ. ಒಬ್ಬನು ಇನ್ನೊಬ್ಬನಿಗೆ ತಿಳಿಸುವನು. ಈ ಪ್ರಕಾರ ಈ ಸುದ್ದಿಯು ಎಲ್ಲಾ ಕಡೆಗಳಿಗೂ ಹರಡಿಕೊಂಡು ದೇಹದ ಅಂಗಗಳ ಕವಾದ ಶೈತ್ಯವನ್ನು ಶಾಶ್ವತವಾಗಿ ನಿವಾರಣೆ ಮಾಡುವದಕ್ಕೆ ಇದು ಉತ್ತಮೋತ್ತಮವಾದ ಔಷಧವೆಂದು ಅನುಭವಪೂರ್ವಕವಾಗಿ ಹೆಚ್ಚು ಜನರು ಹೇಳಲಾಗಿರುತ್ತಾರೆ. ಅನೇಕ ಜನರು ಅನ್ನಕೋಶ, ಮೂತ್ರಕೋಶ, ಇತರ ಕೋಶಗಳಲ್ಲಿ ಉಂಟಾಗಿದ್ದ ಶೈತ್ಯರೋಗವನ್ನು ಸಂಪೂರ್ಣವಾಗಿ ನಿವಾರಣೆ ಮಾಡಿದೆ ಎಂದು ತಾವಾಗಿ ಬರೆದು ತಿಳಿಸಿರುವ ಇಂಥಾ ರೋಗಿಗಳಿ? ಪೆರೂನಾದಿಂದ ಉಂಟಾದ ಗುಣವನ್ನು ಕುರಿತು ಅವರು ಬರೆದಿರುವ ಮಾತನ್ನು ಕೆಳಗೆ ತಿಳಿಸುತ್ತೇವೆ.



MR. ABNER N. KEEP



MR. SIDNEY WESSELS

ಆಹಾರ ರುಚಿಸುತ್ತಿಗೆ

ಮಿ॥ ಸಿಡ್ನಿ ವೆಸ್ಸಲ್ಸ್ ನ್ಯೂರ್ರಿಟ್ ಓಂಟೇರಿಯೋ ಕ್ಯಾನ್‌ ಡಾ ಇತ ಬರೆಯುವುದು —

ನನಗೆ ಇಪ್ಪತ್ತು ವರುಷದ ತನಕ ಅಜೀರ್ಣರೋಗವಿತ್ತು. ಇದರಿಂದ ನಾನು ಬಹಳ ಕಷ್ಟಪಟ್ಟೆನು. ಹಲವು ಮಂದಿ ಡಾಕ್ಟರುಗಳು ನನ್ನನ್ನು ನೋಡಿದರೂ ಅದು ನನಗೆ ಸಂಪೂರ್ಣ ಗುಣಕೊಡಲಿಲ್ಲ.

ಕೆಲವುಸಲ ವಾರಗಟ್ಲೆ ನಾನು ಕೆಲಸ ಬಿಟ್ಟು ಮನೆಯಲ್ಲಿ ಮಲಗಿರುತ್ತಿದ್ದೆನು. ಬಾಧೆ ಹೆಚ್ಚಾಗಿದ್ದುದರಿಂದ ಹಾಲು ಮಾತ್ರ ಕುಡಿಯುತ್ತಿದ್ದೆನು. ಏನು ತಿಂದರೂ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ.

"ನನಗೆ ವಾಸಿಯಾಗುವುದಿಲ್ಲವೆಂದು ನಿರುತ್ಸಾಹವಾಗುವಂತಾಯಿತು. ಆಗ ಪೆರೂನಾ ವಿಷಯ ತಿಳಿಯಿತು. ಅದನ್ನು ಸೇವಿಸಬೇಕೆಂದು ಗೊತ್ತುಮಾಡಿದೆನು."

"ಒಂದು ಬಾಟ್ಲು ಸೇವಿಸುವಷ್ಟರಲ್ಲೇ ತುಂಬಾ ಅನುಕೂಲವಾಯಿತು. ಈ ಆಶ್ಚರ್ಯಕರವಾದ ಔಷಧವನ್ನು ಇನ್ನೊಂದು ಬಾಟ್ಲು ಸೇವಿಸಿದೆನು. ಆಗಲೇ ನನ್ನ ಹೊಟ್ಟೆ ನೋವು ನಿವಾರಣೆಯಾಗಿ ನಾಲಿಗೆ ರುಚಿಸುತ್ತಿತು. ಸಂತೋಷವಾಗಿ ಊಟ ಮಾಡುವಂತಾಯಿತು. ಈ ಪ್ರಪಂಚದಲ್ಲಿ ಪೆರೂನಾ ಬಹು ಶ್ರೇಷ್ಠವಾದ ಔಷಧವೆಂದು ನಾನು ನಂಬಿರುತ್ತೇನೆ."

ಮಿ॥ ರಾಬರ್ಟ್ ಇ ಹಾರ್ಕನ್ ಟ್ರಯಾನ್ ಸ್ಟೇಟ್ಸ್ ಆಫ್ ಇಂಡ್ಯ..ಯಲಾ ಫ್ರೀಡಂ ಮತ್ತು ಪ್ರಸಿದ್ಧ ಬೌಳಕನೂ ಉಪನ್ಯಾಸಕನೂ. ಈತನು ೧೧ ಎಸ್ ಲಿಂಕನ್ ಬೀದಿ, ಚಿಕಾಗೊ ದಿಂದ ಬರೆಯುವುದು —

ನಾಲ್ಕು ವರುಷಗಳ ಹಿಂದೆ ನನ್ನ ಬೆನ್ನು ಕಂಬಾಗಿ ಬಾಧೆಯುಂಟಾಯಿತು. ಕ್ರಮೇಣ ನೋವು ಹೆಚ್ಚುತ್ತಾ ಬಂತು. ಬಳಲಿಕೆ ಹುಟ್ಟಿತು. ಮೂತ್ರದ ಬಣ್ಣ ಬದಲಾಯಿತು. ಕ್ರಮ ತಪ್ಪಿ ಜಲಬಾಧೆ ಆಗಲಾರಂಭಿಸಿತು.

"ಮೂತ್ರಕೋಶವು ಕೆಟ್ಟಿದ್ದರಿಂದ ಹೀಗಾಗಿದೆ ಎಂದು ನನಗೆ ಗೊತ್ತಾಯಿತು."

"ಪೆರೂನಾ ವಿಷಯವನ್ನು ಓದಿ ಅದನ್ನು ಸೇವಿಸಬೇಕೆಂದು ಗೊತ್ತುಮಾಡಿಕೊಂಡೆನು. ಹತ್ತು ದಿನಗಳೊಳಗೆ ನನಗೆ ಗುಣ ಕಂಡಿತು. ಬಳಲಿಕೆ ಕ್ರಮೇಣ ಕಡಮೆಯಾಯಿತು. ನನ್ನ ಸಂತೋಷವನ್ನು ಇಷ್ಟೆಂದು ವಿವರಿಸಲಾರೆನು."

"ಮೂರು ತಿಂಗಳಾಗುವಷ್ಟರೊಳಗೆ ನನಗೆ ತುಂಬಾ ಸೌಖ್ಯವಾಯಿತು. ಆಹಾರವು ರುಚಿಸುತ್ತದೆ. ನನ್ನಲ್ಲಿದ್ದ ನಡುಕವೂ ಸಿಟ್ಟಿನ ಸ್ವಭಾವವೂ ನಿವಾರಣೆಯಾದವು. ಎರಡು ವರುಷಗಳಿಂದಲೂ ಆರೋಗ್ಯದೃಢಕಾಯನಾಗಿರುತ್ತೇನೆ."

ಮತ್ತೆ ಪ್ರಾಯ ಬಂದಿದೆ

ಮಿ॥ ಅಬ್ನೇರ್ ಎನ್ ಕೀಪ್ ವೆಸ್ಟ್ ಟೆಂಪಲ್ ಓಂಟೇರಿಯೋ ಕ್ಯಾನ್, ಈತ ಬರೆಯುವುದು —

ನಾನು ಶೈತ್ಯ ರೋಗದಿಂದ ಇಪ್ಪತ್ತು ವರುಷಗಳಿಗೆ ಮೇಲ್ಪಟ್ಟು ಬಾಧೆಪಟ್ಟಿದ್ದೆನು. ಕೇಳಿದ ಔಷಧಗಳನ್ನೆಲ್ಲಾ ಮಾಡಿದೆನು. ಫಿಲಡೆಲ್ಫಿಯಾ, ಬಫೆಲೋ, ನೆಬ್ರಾಸ್ಕಾ ಈ ಮೊದಲಾದ ಸ್ಥಳಗಳ ಪ್ರಸಿದ್ಧ ವೈದ್ಯರುಗಳು ಹೇಳಿದ ಚಿಕಿತ್ಸೆಯನ್ನೆಲ್ಲಾ ಮಾಡಿಕೊಂಡೆನು. ಆದರೆ ಯಾವ ಔಷಧದಿಂದಲೂ ಚಿಕಿತ್ಸೆಯಿಂದಲೂ ನನಗೆ ಗುಣವಾಗಲಿಲ್ಲ.

ಕಡೆಗೆ ನನ್ನ ಆರೋಗ್ಯವು ಕೆಟ್ಟುಹೋಗಿ ಕೈಲಿದ್ದ ಹಣವೆಲ್ಲಾ ಮುಗಿಸುವುದಕ್ಕೆ ಪೆರೂನಾ ಸೇವಿಸಬೇಕೆಂದು ನನಗೆ ಬುದ್ಧಿ ಬಂತು. ಆಗ ನನಗೆ ಎಪ್ಪತ್ತೆರಡು ವರುಷಗಳಾಗಿದ್ದವು.

ಒಂದು ಬಾಟ್ಲು ಪೆರೂನಾ ಗುಣಕೊಟ್ಟಿತು. ಐದು ಬಾಟ್ಲು ಸೇವಿಸುವಷ್ಟರಲ್ಲಿ ನಾನು ಪೂರಾ ಗುಣಹೊಂದಿದೆನು.

"ನಾನು ಎಂಭತ್ತೆರಡು ವರುಷದವನು. ಈಗ ನೋಡಿದರೆ ಮೂವತ್ತು ವರುಷದವನಂತೆ ನನಗೆ ಲವಲವಿಕೆಯೂ ಆರೋಗ್ಯವೂ ಉಂಟಾಗಿದೆ."

ಸಾಮಾನ್ಯವಾಗಿ ರೋಗಪೀಡಿತರಾಗಿರುವವರಿಗೆಲ್ಲಾ ಒಳ್ಳೇದಾಗಲೆಂದು ಈ ಕಾಗದವನ್ನು ಬರೆದಿರುತ್ತೇನೆ. ಯಾಕೆಂದರೆ ಈ ವಿಷದಲ್ಲಿ ರೋಗದಲ್ಲಿ ನರಳುತ್ತಿರುವವರೆಲ್ಲಾ ಡಾಕ್ಟರಿಗೆ ಕೊಟ್ಟು ಬರಿಗೈ ಮಾಡಿಕೊಳ್ಳುವವರು ನನ್ನ ಹಾಗೆ ಅನೇಕರಿರುತ್ತಾರೆ.

ಮಿ॥ ಎಚ್ ಎಲ್ ಇಮೊಂ ವೈಸ್ ಕೌನ್ಸಲರ್, ಮಾಸ್ಟರ್ ಆಫ್ ಆರಂಸ್ ಕೆ ಪಿ, ಒಮಾಹಾ ನೆಬ್ರಾಸ್ಕ ಈತನು ೨೦೫ ಎಸ್ ಹದಿನಾರನೇ ಬೀದಿಯಿಂದ ಪೆರೂನಾವು ಬಲಕಾರಿಯಾದ ಸರ್ವೋತ್ತಮ ಔಷಧವೆಂದು ಹೊಗಳಿ ಬರೆಯುವದೇನೆಂದರೆ —

"ಪೆರೂನಾವಿನ ಗುಣವು ಅಸಾಧಾರಣವಾದದ್ದು. ಬಲಕಾರಿಯಾದ ಔಷಧವೆಂದು ಬಹಳ ಸಂತೋಷದಿಂದ ಹೇಳುತ್ತೇನೆ. ನನ್ನ ಜೊತೆಯಲ್ಲಿ ನೌಕರಿ ಮಾಡುತ್ತಿರುವವರ ಪೈಕಿ ಅನೇಕರು ಅನ್ನಕೋಶದಲ್ಲೂ ಪಿತ್ತಕೋಶದಲ್ಲೂ ಶೈತ್ಯಹಿಡಿದು ಬಹಳ ಕಷ್ಟಪಡುತ್ತಿದ್ದು ಈ ಔಷಧವನ್ನು ಸೇವಿಸಿ ಚನ್ನಾಗಿ ಗುಣ ಹೊಂದಿದಾರೆ."

"ಪೆರೂನಾ ಶರೀರ ಧರ್ಮವನ್ನು ಕ್ರಮಪಡಿಸಿ ಬಲಕೊಡುತ್ತದೆ. ಜೀರ್ಣಕಾರಿಯಾದದ್ದು, ಸುಖನಿದ್ರೆಯನ್ನು ಕೊಡುವುದು. ರೋಗಿಗಳೆಲ್ಲಾ ಅದರ ಸೇವನೆಯಿಂದ ಸುಖ ಹೊಂದಬಹುದಾಗಿದೆ."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದದ್ದೂ ಇವರಿಂದಲೇ ತಿಳಿಯಬಹುದು.

ವಿಳಾಸ—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

1 1—1909 ರಿಂದ 22—1—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	18	10	0	0
ಮೈಸೂರು ,,	1	1	0	0
ಬೆಂಗಳೂರು ಡಿಸ್ಟ್ರಿಕ್ಟು	4	4	0	0
ಮೈಸೂರು ,,	35	28	0	0
ಕೋಲಾರ್ ,,	9	7	2	1
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	8	6	5	2
ಹಾಸನ ,,	5	4	0	0
ಚಿತ್ರದುರ್ಗ ,,	5	3	0	1
ಕಡೂರ್ ,,	5	7	15	6
ಶಿವಮೊಗ್ಗಾ ,,	0	0	8	15
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	86	66	35	27

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ, ಮಾಘ ಬಹುಳ ಷಷ್ಠಿ ಗುರುವಾರದಿಂದ ಮಾಘ ಬಹುಳ ದ್ವಾದಶಿ ಬುಧವಾರ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಫೆಬ್ರವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
11	ಗುರು *	ಷಷ್ಠಿ	43 20	ಚಿತ್ತ	16 42	30
12	ಶುಕ್ರ ‡	ಸಪ್ತಮಿ	48 1	ಸ್ವಾತಿ	31 11	1
13	ಶನಿ	ಅಷ್ಟಮಿ	46 20	ವಿ	21 30	2
14	ರವಿ §	ನವಮಿ	[illegible]	ಅ	25 [illegible]	3
15	ಚಂದ್ರ	ದಶಮಿ	[illegible] 10	ಜ್ಯೆ	[illegible] 2	4
16	ಕುಜ †	ಏಕಾದಶಿ	[illegible]	ಮೂ	[illegible] 38	5
17	ಬುಧ	ದ್ವಾದಶಿ	19 29	ಪೂಷಾ	2 1	6

* ದಗ್ಧಯೋಗ
‡ ತಿಸ್ರೋಽಷ್ಟಕಾ ವಿಷ್ಣುಪದ ಪುಣ್ಯಕಾಲ
§ ವ್ಯತೀಪಾತ ಯೋಗ ಪರ್ಣೋದಯೋಗ ದ್ವಾದಶಿ ?
† ಸರ್ವತ್ರ ಏಕಾದಶಿ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲ ೧ಕ್ಕೆ ರೂ	೧೫ ೮-೦	೧೯ ೦ ೦
ಕೆಂಬೂತಿ ಅಕ್ಕಿ ಅವಲ್	೧೭ ೦ ೦	೧೮ ೮ ೦
,, ದುಯ್ಯಂ	೧೫ ೮ ೦	೧೮ ೦ ೦
ಜಾಪಾನ್ ಅಕ್ಕಿ	೧೫ ೧೨ ೦	೧೯ ೦ ೦
ಸಣ್ಣಕ್ಕಿ ಅವಲ್	೧೪ ೦ ೦	೨೦ ೦-೦
,, ದುಯ್ಯಂ	೧೭ ೮ ೦	೧೮ ೮ ೦
ತೊಗರಿ ಬೇಳೆ ಪಲ್ಲ ೧ಕ್ಕೆ	೧೭-೮ ೦	೧೭ ೪-೦
,, ದುಯ್ಯಂ	೧೬ ೦ ೦	೧೭ ೦-೦
ಮೈಸೂರು ರಾಗಿ ಪಲ್ಲ ೧ಕ್ಕೆ	೧೦ ೦ ೦	೧೦ ೦ ೦
ಕಾರಾಗಿ	೯ ೮ ೦	೯ ೮ ೦
ಜೋಳ	೯ ೦ ೦	೯ ೧೨ ೦
ಹಲಸಂದೆ ಪಲ್ಲ ೧ಕ್ಕೆ	೧೪ ೪ ೦	೧೩ ೬ ೦
ಬಿಳಿ ಅವರೆ	೧೪ ೦ ೦	೧೨ ೦ ೦
ಹೆಸರು	೧೫-೦ ೦	೧೩ ೦ ೦
ಉದ್ದು	೧೪ ೪ ೦	೧೩ ೪-೦
ಕಡಲೆ	೧೭-೮-೦	೧೩-೫-೦
ಎಳ್ಳು ಸೇ ೧೨೭ ಕ್ಕೆ	೨೯-೦ ೦	೨೦ ೮ ೦
ಹುರುಳಿ	೧೦ ೮ ೦	೧೦ ೮ ೦
ಹರಳು ೧೨೭ ಸೇರಿಗೆ	೧೦ ೮ ೦	೧೦ ೦ ೦
ನೆಲಗಡಲೆಕಾಯಿ ಮಣ ೧ಕ್ಕೆ	೧ ೮ ೦	೧-೫ ೦
ಮೆಣಸಿನಕಾಯಿ	೫ ೮ ೦	೪ ೦-೦
,, ದುಯ್ಯಂ	೫ ೦ ೦	೩ ೮-೦
ಬೆಲ್ಲ ದೊಡ್ಡ ಅಚ್ಚು	೬ ೪-೦	ಮ ೧ ೧೦ ೦
ಒಳ್ಳೆಣ್ಣೆ ಮಣ ೧ಕ್ಕೆ	೫ ೦ ೦	೫-೦ ೦
ಹರಳೆಣ್ಣೆ ,,	೪ ೮ ೦	೪ ೦ ೦
ಕೊತ್ತುಂಬರಿ ಪಲ್ಲ ೧ಕ್ಕೆ	೭ ೦ ೦	೬ ೧೨-೦
ಉಪ್ಪು ,,	೬ ೦ ೦	೫-೬-೦
ಹುಣಸೇ ಹಣ್ಣು	೧ ೮ ೦	೧ ೪-೦
,, ಹಳೇದು	೧ ೪ ೦	೧-೪-೦
ತುಪ್ಪ ಮಣ ೧ಕ್ಕೆ	೧೪-೮ ೦	೧೫ ೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೦ ೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	೪ ೫ ೦	೪ ೧೨-೦
ಅಡಕೆಕಾಯಿ ಮಣ ೧ಕ್ಕೆ	೦ ೧೨-೦	೯ ೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦ ೧೫ ೦	೦ ೧೫ ೦
ಚಿನ್ನ (ಪವನ್) ಒಂದು	೧೫-೭-೦	೧೫-೭-೦
,, ,, ಪವನು	೧೫-೧೪ ೦	೧೫-೧೦-೦
,, ,, ಗಟ್ಟಿ ತೊಲ ೧ಕ್ಕೆ	೨೪-೧೦ ೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೭ ೦ ೦	೬೫-೦ ೦

Printed and Pub'ished by the Rev E W THOMPSON, M A, Proprietor and Manager, Wesleyan Mission Press Mysore. 11/2/1909

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೯ ನೇ ಇಸವಿ ಫೆಬ್ರವರಿ ತಾರೀಖು ೧೮ ನೇ ಗುರುವಾರ. ಸಂಚಿಕೆ ೭೮

ಜ್ವರಸುಧಾ

81 20

ಒಂದು ಬಾಟ್ಲಿ ಕಿಮ್ಮತ್ತು ೮ ಆಣೆ—ವಿ ಪಿ ಛಾರ್ಜು ಬೇರೆ

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ಹಾಗೆ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಶಾಲಿಗಳಾದ ಡಾಕ್ಟರುಗಳು ಹೇಳುತ್ತಲಿದ್ದಾರೆ ... ಮುಂತಾದವುಗಳನ್ನು ೧—೨ ದಿವಸಗಳಲ್ಲಿಯೇ ... ದಿಗಂತರಕ್ಕೆ ಓಡಿಸಬಲ್ಲದು. ಸುಧಾ ಅಂದರೆ ಅಮೃತವನ್ನು ಸೇವಿಸಿದ ಬಳಿಕ ಯಾವ ವಿಧವಾದ ರೋಗವೂ ... ಇರುವದಿಲ್ಲವೋ ... ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನೂ ನಾಶಪಡಿಸುವದರಲ್ಲಿ ಪ್ರಸಿದ್ಧಿ ಹೊಂದಿದೆ ... ಬರುವ ಅನೇಕ ಗುಣಗಳನ್ನು ಹೆಚ್ಚು ವರ್ಣನೆ ಮಾಡತಕ್ಕದ್ದು.

ಬೆಂಗಳೂರು ಸಿಟಿ, ... ಎಂ ಗೋವಿಂದಶೆಟ್ಟಿ ಮೆಡಿಕಲ್ ಪ್ರಾಕ್ಟಿಷನರ್

ಜ್ವರಹರಿ

18 3

ಇದು ಸಾಧಾರಣ ಜ್ವರ, ಛಳೀಜ್ವರ, ಮಲೇರಿಯ ಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಮಳೆಬಿಡುವುದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬೇಗನೆ ನಾಶಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜರಾಯಿತ್ ಇಲಾಖಾ ... ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ... ಕಳುಹಿಸಿ ಕೊಟ್ಟ ... ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ... ಜನಗಳು ... ದಯವಿಟ್ಟು ... ಸೀಸೆ ... ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೬ ತೂ ... ೧—೮ ರೂ ... ೨—೧೨ ಆ ... ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವೆಚ್ಚ ಬಿಡಲಾಗುವದು

ಓಮಂ ಕರ್ಪೂರದ

Omum-Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ... ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹತ್ತಾದ ಪರಿಣಾಮ, ಕೂಡಲೇ ಗುಣಕೊಡುವದು ಇದು ... ಹೊಸ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಗುಣಪಡಿಸುತ್ತದೆ ... "ಓಮಂ ಕರ್ಪೂರ" ಎಂಬ ಔಷಧ ... ಸೀಸೆಗಳಲ್ಲಿ ದೊರಕುವದು.

... ಅಸಿಸ್ಟೆಂಟ್ ಸರ್ಜನ್ ಗಣಪತಿ ... ರವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ... ಅಜೀರ್ಣ ಭೇದಿ, ಅಜೀರ್ಣ ರೋಗಿಗಳಿಗೆ ... ಕೊಟ್ಟ ಕೂಡಲೆ ಆ ರೋಗವು ಗುಣವಾಗುತ್ತಲಿದೆ ... ಔಷಧವೆಂತ ಬರೆದಿದ್ದಾರೆ

ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ... ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ... ಕೆಳಗಿನ ವಿಳಾಸದುತ್ತ್ರಲ್ಲಿ ವಿಶೇಷ —

... ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್

AMRUTANJAN DEPOT, 16 OAK-LANE, BOMBAY. [17-52]

ಅಮೃತಾಂಜನ್ ಡಿಪೋ, ೧೬ ಓಕ್‌ಲೇನ್, ಮುಂಬಯಿ.

ಅಮೃತಾಂಜನ ಭಾರತವರ್ಷೀಯ ಬೇನೆಹಾರಿ ಮುಲಾಮು.

ಅಮೃತಾಂಜನವು ಹಿಂದುಸ್ಥಾನದಲ್ಲಿ ಬೆಳೆಯುವ ಔಷಧಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಉಳುಕು, ... ನೋವು ಎದೆನೋವು, ಗಾಯ, ... ಮುಂತಾದ ಯಾವ ತರದ ನೋವುಗಳ ಮೇಲೂ ಈ ಅಮೃತಾಂಜನದ ಮರ್ದನದ ರೀತಿಯು ತೀಯಲು ಯೋಗ್ಯವಾದ ಸಂಗತಿಯಾಗಿರುತ್ತದೆ ಇದು ಚರ್ಮದ ಮೂಲಕ ... ಪ್ರವೇಶಿಸಿ, ರೋಗಕಾರ ಪದಾರ್ಥಗಳಿಂದ ಹುಟ್ಟಿದ ನಾನಾ ತರದ ಬೇನೆಗಳನ್ನು ನಾಶಪಡಿಸುತ್ತದೆ ಬಾಟ್ಲಿ ಒಂದರ ಕಿಮ್ಮತ್ತು ೦—೮—೦ ಪೋಸ್ಟು ಖರ್ಚು ೦—೪—೦ ಆರು ಬಾಟ್ಲಿ ತರಿಸಿಕೊಂಡವರಿಗೆ ಒಂದು ಕಪ್ ಇನಾಮು ಆರ್ ಆರ್ ಗಂಗೋಲಿ 1 ನೇ ಕ್ಲಾಸ್ ಸಬ್ ಜಡ್ಜ್ ಕಾರವಾರ,—ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ವಾತದ ಬೇನೆಗೂ, ಕೆಮ್ಮಿಗೂ, ಉಪಯೋಗಿಸಿದ್ದೇನೆ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ

ಅಮೃತಾಂಜನದ ಪ್ರಯೋಗದ ವಿಷಯ ಒಂದು ಹೊಸ ಪುಸ್ತಕವನ್ನು ತಯಾರಿಸಿರುತ್ತೇವೆ

ಗಜಕರ್ಣದ ಮುಲಾಮು.

ಮೂರು ನಾರಿ ತಾಗಿಸುವದರೊಳಗೆ ಗಜಕರ್ಣ, ತುರಿ ಕಜ್ಜಿ ನಾಶವಾಗುವದು ಇದರಿಂದ ಚರ್ಮವು ಕಪ್ಪಾಗುವದಿಲ್ಲ ಮತ್ತು ಉರಿಯುವದಿಲ್ಲ ಡಬ್ಬಿ ೧ಕ್ಕೆ ೦—೬—೦, ವಿ ಪಿ ಖರ್ಚು ೦—೪—೦

ದಂತಮಂಜನ—ಡಬ್ಬಿ ೨ ಆಣೆ ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ, ಬಾಯಿಯ ವಾಸನೆಯನ್ನು ಪೂರ್ಣವಾಗಿ ತೆಗೆಯುತ್ತದೆ, ಹಲ್ಲುಗಳು ಘಟ್ಟಿಯಾಗುತ್ತವೆ, ಹಲ್ಲುಗಳು ಬೆಳ್ಳಗಾಗುತ್ತವೆ

ಕಜ್ಜಿ ಮುಲಾಮು—ಡಬ್ಬಿ ೧ಕ್ಕೆ ಕಿಮ್ಮತ್ತು ೬ ಆಣೆ

ಕೇಶವರ್ಧನಿ—ಚಲೋ ಪರಿಮಳ ಉಳ್ಳದ್ದು

ಕೇಶವರ್ಧನಿ—ಮನಸ್ಸನ್ನು ತಂಪುಮಾಡುವದು

ಕೇಶವರ್ಧನಿ—ಕೂದಲನ್ನು ನಯಮಾಡುವದು ಬಾಟ್ಲಿ ಒಂದರ ಕಿಮ್ಮತ್ತು ರೂ ೧—೦—೦

ವಜ್ರಗುಟಿಕ—ಧಾತುಪುಷ್ಟಿ, ರಕ್ತವೃದ್ಧಿ	೧—೦—೦
ಕುಸುಮಾರಿಗುಟಿಕ—ಹೆಂಗಸರ ಹೊಟ್ಟೆನೋವಿಗೆ	೧—೦—೦
ಸುಂದರೀ ತೈಲ—ಮೋರೆಯ ಮೊಡವೆಗಳಿಗೆ	೦—೮—೦
ತಾಂಬೂಲ ಗುಟಿಕ ತಾಂಬೂಲ ಸೊಗಸು ವೃದ್ಧಿಸಲಿಕ್ಕೆ	೦—೮—೦
ನೇತ್ರಾಂಜನ—ಮಂದದೃಷ್ಟಿಗೆ	೦—೮—೦
ಚೇಳುಕಡಿತಕ್ಕೆ ಮದ್ದು ಚೇಳುಕಡಿತಕ್ಕೆ	೦—೪—೦
ಜುಲಾಬು ಮಾತ್ರೆ—ಜುಲಾಬಿಗೆ	೦—೮—೦

ಈ ಕಂಪನಿಯವರು ಹಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ

ವಿಳಾಸ—ವಿಲಿಯಂ ಮತ್ತು ಕಂಪನಿ, ೧೬ ಓಕ್‌ಲೇನು, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ," ಮುಂಬಯಿ.

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

2 6

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಕ್ರಯವು ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬ ಆಣೆ ವರೆಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತವೆ ಶಾಲುಗಳು ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,
ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು.

ನೋಡಿರಿ 'ಪ್ರೋತ್ಸಾಹಕೊಡಿರಿ" ತರಿಸಿರಿ

98 13

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ ೫,೦೦೦ ಹಾಸನ್ ಟೋಪಿ ಹೊಲಿಯುವ (ಪೇರುಮಾ, ಸುಪೀರಿಯರ್ ಉಲನ್

೮ ಅಡಿಗಳಿರುವ ಪೇರುಮಾ ಉಲನ್ ಬಂಡಲ್ ೧ ಕ್ಕೆ ರೂ ೪—೦

೧೦ ಟೋಪಿಯಾಗುವ ಸುಪೀರಿಯರ್ ಉಲನ್ ಬಂಡಲ್ ೧ ಕ್ಕೆ ರೂ ೩-೬ ೦

೧ ಟೋಪಿ ಉಲನ್ ದಾರಕ್ಕೆ (ಸುಪೀರಿಯರ್) ರೂ. ೦-೮ ೦

ಹಾಸನ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ ಕ್ಕೆ ೦ ೨ ೦, ೦ ೧-೬

(ಪೇರುಮಾ) ಉಲನ್ ದಾರದಲ್ಲಿ ತಯಾರಾದ ಟೋಪಿ ಡಜನ್‌ಗೆ ರೂ ೧೮-೦-೦

ಪೇರುಮಾ ... ಉಲನ್ ದಾರಗಳು ನಮಗಾಗಿಯೇ ತರಿಸಿದ್ದರಿಂದ ಬೇರೆಲ್ಲಿಯೂ ದೊರೆಯದು ಈ ಉಲನ್ ದಾರಕ್ಕೆ ಗಿರಾಕಿಗಳು ಜಾಸ್ತಿ ಇರುವದರಿಂದ ಒಂದು ಬಂಡಲ್ ಆದರೂ ಪೇರುಮಾ ಉಲನ್ ತರಿಸಿ ನೋಡಿರಿ

ಈಗ ನಮ್ಮಲ್ಲಿ ಬೇರೆ ಒಂದು ಡಿಪಾರ್ಟ್‌ಮೆಂಟು ಓಪನ್ ಮಾಡಿದೇವೆ ... ಮಂಗಳೂರಿನಲ್ಲಿ ದೊರೆಯುವ ಸಾಮಾನುಗಳು ಪರಸ್ಥಳದವರಿಗೆ ಯಾವದು ಬೇಕಾದರೂ ಚವಕಸಿಯಿಂದ ಖರೀದು ಮಾಡಿ ಪರಸ್ಥಳದವರಿಗೆ ಕಳುಹಿಸುವದು ... ರೂ ೩ ೪-೦ ಪರಸ್ಥಳದವರಿಗೆ ವಿ ಪಿ ಯಿಂದಲೂ ರವಾನಿಸುತ್ತೇವೆ ಕೆಟಲಾಗನ್ನು ಕೇಳುವವರಿಗೆ ರವಾನಿಸುತ್ತೇವೆ ನಮ್ಮ ವಿಳಾಸ —

ದಿ ಉಲನ್ ಮಾರ್ಟ್, ಮಂಗಳೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 6

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ನಿಶ್ಚಿತವಾಗಿಯೂ ಹಾಸನದಿಂದಲೇ ಎಂದ್ಹೇಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ನೇರಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದ, ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ, ೧ ರೂ ೪ ಆ

ರೇಶ್ಮೆ ಕುಚ್ಚುಳ್ಳ ಟೋಪಿಗಳು ೧ ರೂ ೮ ಆ, ೨ ರೂ

ದಾರದ ಟೋಪಿಗಳು ೧ ರೂ ೧೨ ಆ ೧ ರೂ, ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಕೂಸುಗಳ ಟೋಪಿ, ಸೂಕ್ಷ್ಮ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನ್ ಟೋಪಿ ಕಾರ್ಖಾನೆ ಹಾಸನ

ಕ್ಷಾಮದ ಫಂಡು.

ಈಗಿನ ಕ್ಷಾಮದ ನಿವಾರಣಾರ್ಥವಾಗಿ ಮಾಡೋಯಾನಾ ಚಂದಾ ಕೊಡುವುದಾಗಿ ವಾಗ್ದಾನಮಾಡಿರತಕ್ಕ ಸಕಲ ಜನರೂ ತಮ್ಮ ಚಂದಾ ಮೊಬಲುಗುಗಳನ್ನು ಈ ಕೆಳಗೆ ರುಜು ಮಾಡುವವರ ಆಫೀಸಿಗೆ ಕಳುಹಿಸಿ ಕೊಟ್ಟು ರಸೀದಿ ಪಡೆಯ ಬಹುದು

ತಾ|| ೬ ೨ ೧೯೦೯ — ಎಂ ಜಿ ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್,
ಸಿಟಿ ಮ್ಯುನಿಸಿಪಲ್ ಕೌನ್ಸಿಲ್, ಮೈಸೂರು

ಸಂಜೀವಿನೀ ಔಷಧಾಲಯ, ಮೈಸೂರು.

252

ಎಂ ಎಸ್. ಕುಮಾರಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರವೆ, ಸನುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋಮು, ವಾಯುನೋವುಗಳೂ, ಹಳೇ ಜ್ವರ, ಕ್ಷಯ , ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿ ಭ್ರಮಣೆ, ಮಂಕುತನ, ಅತಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರೀ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ ೩ ೪ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಕಾಲಕೂಟ ವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಮದ್ರಾಸ್ ಸಾಹುಕಾರ್ ಪೇಟೆ,
ಟಿ. ಎಂ. ರಾಮಯ್ಯ ಶೆಟ್ಟರ ಕಂಪೆನಿಯಲ್ಲಿ

99 12

ತಯಾರಾಗುವ ಕಬ್ಬಿಣದ ಪೆಟ್ಟಿಗಳು ಅಥವಾ ಟ್ರಿಜರಿಂಗಳು ಈ ಕೆಳಗಿನ ದರದ ಮಾರಾಟಕ್ಕೆ ಸಿದ್ಧವಾಗಿವೆ ಬ್ರಾಂಚ್ ಆಫೀಸ್ ಬೆಂಗಳೂರು ನಗರ್ತರಪೇಟೆಯ ಲ್ಲೂ ಸಿಕ್ಕುವವು



ಬೇಕಾದವರು ತಮ್ಮ ಅಡ್ರಸ್ಸು ಕಳುಹಿ ರೂ 10 ಮುಂಗಡವಾಗಿ ಕಳುಹಿ ಸಿದರೆ ವಿ ಪಿ ಮೂಲಕ ರವಾನಿಸಲ್ಪಡುತ್ತೆ ವಿಶೇಷ ಮಾಹಿತಿ ಬೇಕಾದವರು ಕಾಗದದ ಮುಖಾಂತರ ಮೇಲ್ಕಂಡ ವಿಳಾಸದಾರರಿಂದ ತಿಳಿದುಕೊಳ್ಳಬಹುದು

ಇದುವರೆಗೆ ಯಾರೂ ಪ್ರಕಟಿಸದಂತಾ ಪುಸ್ತಕ!!!

107

“ಬ್ರಹ್ಮಚರ್ಯ” ವೆಂಬ ನೀತಿಶಾಸ್ತ್ರ

ಇದು ಇಂಗ್ಲೀಷ್ ಭಾಷೆಯಲ್ಲಿ ಲೋಕಪ್ರಸಿದ್ಧವಾದ ಪುಸ್ತಕ ಈಗ ಇದನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿರುವೆವು ಈ ಮಹಾಗ್ರಂಥವನ್ನು ಯೌವನಸ್ಥರೂ ಅಬಾಲವೃದ್ಧರೂ ಓದಿ ತಿಳಿದುಕೊಳ್ಳಬೇಕು ಅನೇಕ ಹುಡುಗರು ಹಸ್ತಪ್ರಯೋಗ ಮೊದಲಾದ ಭಯಂಕರವಾದ ದುರಭ್ಯಾಸಗಳ ಗೊಳಗಾಗಿ ಕೆಟ್ಟು ಹೋಗಿರುತ್ತಾರೆ ಅವರ ದುಷ್ಪ್ರವರ್ತನೆಗಳಿಗೆ ಅಜ್ಞಾನವೇ ಕಾರಣವಾಗಿರುತ್ತದೆ.

ಈ ಉತ್ಕೃಷ್ಟವಾದ ಪುಸ್ತಕವನ್ನು ಇನ್ನೂ ಚೆನ್ನಾಗಿ ವಿವರಿಸಿ ತಿಳಿಸುವು ದಕ್ಕೆ ಇಲ್ಲಿ ಸ್ವಲ್ಪ ನಾಲ್ಕು ಅದರ ಇದರಲ್ಲಿ ಅಡಕವಾಗಿರುವ ಅಧ್ಯಾಯಗ ಳನ್ನು ಇಲ್ಲಿ ತಿಳಿಸುವೆವು “ಜೀವೋತ್ಪತ್ತಿಯ ಪ್ರಾರಂಭವು, ಅದರ ಶಕ್ತಿಯು” “ಸಸ್ಯಾದಿಗಳ ಜೀವೋತ್ಪನ್ನವಾಗುವಿಕೆ” “ಪ್ರಾಣಿಗಳಲ್ಲುಂಟಾಗುವ ಜೀವೋ ತ್ಪತ್ತಿಯು” “ಮನುಷ್ಯಸಂತಾನವು, ಇದು ಉತ್ಪತ್ತಿಯಾಗುವ ರೀತಿಯು.” “ಹುಡುಗರಲ್ಲಿ ರುವ ದುಷ್ಟ ಸ್ವಭಾವಗಳು, ಅಂಗಗಳು ಕೆಡುವ ರೀತಿ” “ಹುಡುಗರ ದುಷ್ಟ ಸ್ವಭಾವಗಳಿಂದಾಗುವ ನಾನಾ ಕೇಡುಗಳು” “ಹುಡುಗರು ತಮ್ಮ ದೇಹಗ ಳನ್ನು ಶುದ್ಧತೆ ಪುಷ್ಟಿ ಬಲ ತ್ರಾಣಗಳನ್ನು ಕಾಪಾಡುವದಕ್ಕೆ ಸಾಧನಗಳು” “ಹುಡುಗರು ಕಾವು ಕಳೆಕೊಂಡ ದೇಹ ಬಲ ಶಕ್ತಿಗಳನ್ನು ತಿರಿಗಿ ಸಂಪಾದಿಸುವ ವಿಧಾನವು” “ಹುಡುಗರು ಪ್ರಾಯಕ್ಕೆ ಬರುವ ಕಾಲವು ಈ ಕಾಲದಲ್ಲಿ ಗಮ ನಿಸತಕ್ಕ ವಿಷಯಗಳು” “ಹುಡುಗರು ಪ್ರಾಯಕ್ಕೆ ಬರುವ ಕಾಲ, ಈ ಕಾಲದಲ್ಲಿ ಉಂಟಾಗುವ ಬದಲಾವಣೆಗಳು”

ಇಂಥಾ ಉತ್ಕೃಷ್ಟವಾದ ಪುಸ್ತಕವನ್ನು ಎಲ್ಲರೂ ಕೊಂಡು ತಮ್ಮ ಮನೆ ಗಳಲ್ಲಿ ಇಡಬೇಕು ಇದರ ಕ್ರಯ ಮೂರಾಣೆ ವಿ. ಪಿ ಮೂಲಕ ತರಿಸಿಕೊಂ ಡರೆ ಐದಾಣೆಗಳಾಗುವವು

ವಿಳಾಸ —ಮ್ಯಾನೇಜರ್, ಸಿ ಎಲ್ ಎನ್ ಬುಕ್ ಡಿಪೋ ಮೈಸೂರು.

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

4-7



ಶೀತ ಹೊಟ್ಟೆಯ ನೋವು, ಬಲು ಭೇದಿಯಾಗುವುದು ಆಮಶಂಕೆ, ವಾಂತಿಭೇದಿ ಉಪದ್ರ, ಕಾಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ನಾಶಮಾಡುತ್ತವೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದು ಕಿಸಿರುವಷ್ಟು ಮತ್ತು ರೋಗವನ್ನು ಬಾಧೆಯನ್ನು ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲಿ ಇನ್ನಾವ ಔಷಧವೂ ಮಾಡುವುದಿಲ್ಲ ಜ್ಞಾಪಕದಲ್ಲಿಟ್ಟುಕೊಳ್ಳಿ— ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ನಾಶಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು — ಸಣ್ಣ ಶೀಸೆಗೆ ೧ ರೂಪಾಯಿ — ದೊಡ್ಡ ಶೀಸೆಗೆ ೨ ರೂಪಾಯಿ

ಲೇಖನ ಪ್ರಕಾಶಿಕಾ.

105 8

ಪ್ರತಿ ಒಬ್ಬ ಸ್ಕೂಲು ಹುಡುಗರು ಪಟೇಲರು ಪತ್ರಗಳನ್ನು ಬರೆಯುವವರು ಲೇವಾದೇವಿ ಮಾಡುವವರು ದುಡ್ಡನ್ನು ಉಳಿಸಿಕೊಳ್ಳಲು ಅಥವಾ ಧನಸಂಪಾದನೆ ಮಾಡಲು ಇಷ್ಟವುಳ್ಳವರು ಮತ್ತು ರಿಜಿಸ್ಟ್ರೇಷನ್ ಆಫೀಸುಗಳಿಗೆ ಹೋಗಲು ಪ್ರಯತ್ನ ಪಡುವವರೆಲ್ಲರೂ ರಿಜಿಸ್ಟ್ರೇಷನ್ ಲಾಯರಂತಿರುವ ಈ ಪುಸ್ತಕವನ್ನು ಜಾಗ್ರತೆಯಾಗಿ ಖಂಡಿತ ತರಿಸಿಕೊಳ್ಳಿರಿ ತಕ್ಷಣ ಬರೆದುಕೊಂಡವರಿಗೆ ಪಿರ್ಚರ್ ಬೆಲೆ ೧—೨—೦ ವಿಳಾಸ ಯಂ ಕೃಷ್ಣಮೂರ್ತಿರಾವು, ರಿಜಿಸ್ಟ್ರೇಷನ್ ಕ್ಲಾರ್ಕ್, ಹೊನ್ನಾಳಿ ತಾಲ್ಲೂಕು, ಶಿವಮೊಗ್ಗಾ ಡಿಸ್ಟ್ರಿಕ್ಟ್

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

48 10

ತಲೆನೋವು, ವಾಯುನೋವು, ಸೆಳತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆ ಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆ ಮಾಡಿದಂತೆ ಖಂಡಿತವಾಗಿ ವಾಸಿಯಾಗು ತ್ತದೆ ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರು ತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷ ಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿ ಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂ ದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರ ಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವ ನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿ ಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜೆಂಟರ ವಿಳಾಸ—

ಎಸ್. ಪೀಟರ್ಸ್,
೩೩, ವೇದವಲ್ಲಿಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಮಕ್ಕಳ ಹಿತಕಾರಿ

ಎಂದರೆ

SCOTT'S EMULSION

6-7

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧಕ್ಕೆ ಈ ಮುಖಾಂತರ ತಂದೆತಾಯಿಗಳು ಹೆಸರಿಟ್ಟಿ ದ್ದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸುತ್ತದೆ

ಇದು ಕುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವಿಸುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯವಾಗುವುದು , ಅಶಕ್ತರಾದ ಮಕ್ಕ ಳನ್ನು ಬಲಿಷ್ಠರನ್ನಾಗಿ ಮಾಡುವುದು

ಕ್ರಮೋಕ್ತವಾದ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೋನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

೧೯೦೯ ನೇ ಇಸವಿ ಸಚಿತ್ರ ಕನ್ನಡ ನೋಟ್

116

ಮಹಾರಾಜಾ ಕಾಲೇಜು ಕನ್ನಡ ಪಂಡಿತರಾದ ಮ|| ಸಿ ಆರ್ ಕರಿಬಸವಶಾಸ್ತ್ರಿ ಗಳವರಿಂದ ಪರಿಷ್ಕರಿಸಲ್ಪಟ್ಟಿದೆ ಪ್ರತಿ ೧ಕ್ಕೆ ೦ ೬ ೦ , ೧೦ಕ್ಕೆ ೧ ಹೆಚ್ಚು ಕನ್ನಡ ಶೀಟ್ ಪುಸ್ತಕದ ನೋಟ್ ಕ್ರಯ ಪ್ರತಿ ೧ಕ್ಕೆ ೦ ೨ ೦ , ೫ಕ್ಕೆ ೧ ಹೆಚ್ಚು ಎಗ್ಜಾಮಿನರ್ ಮಾಸಪುಸ್ತಕ ಚಂದಾ, ವರ್ಷಕ್ಕೆ ೧-೪ ೦, ನೋಟ್ಸು ಬಹು ಮಾನ ಒಟ್ಟಿಗೆ ೫ ಚಂದಾ ಸಾಗಿಸುವವರಿಗೆ ಒಂದೊಂದು ಹೆಚ್ಚು ಶೀಘ್ರ ಪತ್ರಿಕೆ, ಮ್ಯಾನೇಜರ್ ದಿ ಎಗ್ಜಾಮಿನರ್ ಆಫೀಸ್, ಮೈಸೂರು

ನೋಟೀಸ್

223

ಮೈಸೂರು ಸಿಟಿ ಮ್ಯುನಿಸಿಪಾಲ್ ವಸೂಲ್ (ಅಕ್ಟ್ರಾಯ್) ಆಫೀಸು ಪಕ್ಕದಲ್ಲಿರುವ ೯೩ನೇ ನಂಬರು ಮಳಿಗೆಯಲ್ಲಿ ಅವಲ್ ತರದ ರವ ಮತ್ತು ಹಿಟ್ಟು ಜಲ್ಲರಿಯಾಗಿಯೂ, ಮೊತ್ತವಾಗಿಯೂ ಸಹಾ ಕ್ರಯಕ್ಕೆ ಸಿಕ್ಕುತ್ತದೆ

MUNICIPAL NOTICE

27-1

List showing the rates of the LAMP-POSTS and LANTERNS, &c available for sale in the Municipal Stores —

No	Particulars.		Rates on each article
1	Ornamental cast iron lamp post		Rs 10—0—0
2	Cast iron lamp post without ornaments		5—0—0
3	Stone lamp post		,, 3—0—0
4	Street lantern	Middle size	,, 1—4—0
5	Iron stand for	do	,, 0—8—0
6	Street lantern	Small size	,, 1—0—0
7	Iron stand for	do	,, 0—8—0
8	Railway burner, No I,		,, 1—0—0
9	do do No II		,, 0—12—0
10	Iron stand made of iron plates		,, 0—6—0
11	Teakwood lamp post		,, 2—0—0

Mysore, 9 2 1909 — M G Krishnaswami Rao,
Vice President,
City Municipal Office

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

281



೧. ಲೋಕೋಪಕಾರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ ಟೈಫಾಯಿಡ್, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ನೆಗಡಿ, ಕೆಮ್ಮು, ಗೂರಲು (ಉಬ್ಬಸ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮು, ನೆಗಡಿ ನಿಶ್ಶಕ್ತಿ, ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನಾಡಿ ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧವಾದ ವೃದ್ಧಿ ಪಡಿಸುತ್ತವೆ ಸ್ತ್ರೀಯರ ಸೂತಕಶೂಲೆ, ಮಕ್ಕಳ ಎಳವೆ, ಜ್ವರ, ಚಳಿಜ್ವರ, ಕ್ಷಯತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತವೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿ ಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.
ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ವೃತ್ತಾಂತ ಪತ್ರಿಕೆ

೦

ಸನ್ ೧೯೧೯ ನೇ ಇಸವಿ ಫೆಬ್ರುವರಿ ತಾ ೧೮ ನೇ ಗುರುವಾರ

ಕ್ಷಾಮನಿವಾರಣೆಯ ಸನ್ನಾಹಗಳು

ಮೈಸೂರು ಸಂಸ್ಥಾನದ ಹಲವು ಸ್ಥಳಗಳಲ್ಲಿ ದುಷ್ಕಾಲವು ಪ್ರಾಪ್ತವಾಗಿ ಕ್ಷಾಮವು ತಲದೋರುವಂತೆ ಭೀತಿಯುಂಟಾಗಿರುವುದು. ಈಗಿನ ಕಷ್ಟದೆಸೆಯನ್ನು ನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ಮೈಸೂರು ಗವರನ್‌ಮೆಂಟಿನವರು ಅನೇಕ ಹುಕುಮುಗಳನ್ನು ಕೊಡುತ್ತಾ ಒಂದವಾರ ಅವುಗಳಲ್ಲಿ ಮುಖ್ಯವಾದವುಗಳನ್ನು ಕ್ರೋಢೀಕರಿಸಿ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಶ್ರೀಮನ್ ಮಹಾರಾಜಾ ಸರ್ಕಾರದವರು ಈಗಿನ ದುಷ್ಕಾಲದ ಸ್ಥಿತಿಯನ್ನು ಮುಂದಟ್ಟು ಮಾಡಿಕೊಂಡಿದಾರೆಂದು ಸಂತೋಷ ಪಡುವೆವು. ಹೀಗಿದಾಗ್ಯೂ ಇಷ್ಟರಲ್ಲೇ ಮುಂಗಾರು ಹಿಂಗಾರು ಮಳೆಗಳು ಕ್ರಮವಾಗಿ ಸುರಿದು, ಈಗ ಗಾಬರಿಯನ್ನುಂಟುಮಾಡುತ್ತಿರುವ ದುಷ್ಕಾಲವು ಪರಿಹರವಾದೀತೆಂದು ನಂಬಿ ಹಾರೈಸುತ್ತೇವೆ.

ಕ್ಷಾಮನಿವಾರಣೆಗಾಗಿ ಏರ್ಪಟ್ಟ ಕಾನೂನುಗಳೂ ಕ್ರಮಗಳೂ ಅಧಿಕಾರಿಗಳಿಗೂ ನೌಕರಮಾನ್ಯರಿಗೂ ಚೆನ್ನಾಗಿ ತಿಳಿದಿವೆಯೋ ಇಲ್ಲವೋ ಎಂದು ಅನುಮಾನ ಪಡುತ್ತೇವೆ. ಆದರೂ ಆ ವಿಧಿಗಳನ್ನೂ ಕ್ರಮಗಳನ್ನೂ ಅಧಿಕಾರಿಗಳು ಬೇಗನೆ ಮುಂದಟ್ಟು ಮಾಡಿಕೊಂಡು, ತಾಪತ್ರಯವಾಗದಂತೆ ಅವುಗಳ ಪ್ರಕಾರ ಕಾರ್ಯಗಳನ್ನು ನಡಿಸಲು ಸಿದ್ಧರಾಗುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಅಧಿಕಾರಿಗಳಿಗೆ ಅಪೇಕ್ಷಿಸಿದ ಕೆಲಸಗಳು ಹುಟ್ಟಾಗಿಲ್ಲದಂತೆಯೂ, ಹುಟ್ಟಿಗಿಲ್ಲದಂತಾ ಪ್ರಜೆಗಳ ಕಷ್ಟ ಪರಿಹಾರಕ್ಕಾಗಿ ಅವರು ಗಮನ ಕೊಡುವಂತೆಯೂ ಅವಕಾಶ ದೊರಕಬೇಕಾದದ್ದು ಅವಶ್ಯವಾಗಿರುತ್ತದೆ.

ಗೋಕಾಪಿಗಳಿಗೆ ಪ್ರಾಪ್ತವಾಗಿರುವ ಕಷ್ಟದೆಸೆಯನ್ನು ನಿವಾರಣೆ ಮಾಡುವ ವಿಷಯದಲ್ಲಿ ಗವರ್ನಮೆಂಟಿನವರು ಮುತುವರ್ಜಿ ವಹಿಸುವುದನ್ನು ನೋಡಿ ಸಂತೋಷ ಪಡುತ್ತೇವೆ. ಮೇವು ನೀರನ್ನು ಹುಡುಕಿಕೊಂಡು ಸಾವಿರಾರು ದನಗಳನ್ನು ಊರಿಂದೂರಿಗೆ ಸಾಗಿಸಿಕೊಂಡು ಹೋಗಿಯೂ ಹೋಗುತ್ತಲೂ ಇದಾರೆ. ಸರ್ಕಾರದವರು ಕೆಲವು ಸ್ಟೇಟು ಫಾರೆಸ್ಟುಗಳನ್ನು ದನಗಳ ಮೇವಿಗೋಸ್ಕರ ಬಿಟ್ಟುಕೊಟ್ಟಿರುವರು. ಯಾವ ಯಾವ ಫಾರೆಸ್ಟುಗಳನ್ನು ರೈತರಿಗೆ ಬಿಟ್ಟುಕೊಟ್ಟಿದಾರೆಂಬುದನ್ನು ಇನ್ನೊಂದು ಭಾಗದಲ್ಲಿ ವಿವರವಾಗಿ ಕಾಣಿಸಿರುವೆವು. ಆ ಬಂಗಲೆ ಫಾರೆಸ್ಟು ಮುಂಗಾರು ಮಳೆ ಬರುವ ತನಕ ಮೇವಿಗೆ ಸಾಕಾದೀತೆಂದು ನಿರೀಕ್ಷಿಸುತ್ತೇವೆ.

ತುಮಕೂರು, ಚಿತ್ರದುರ್ಗ, ಕೋಲಾರ ಡಿಸ್ಟ್ರಿಕ್ಟುಗಳಲ್ಲಿ ಇತರ ಕಡೆಗಳಲ್ಲೂ ವಸೂಲಾಗದೇ ಬಾಕಿಯಾಗಿರುವ ೧೯೧೨-೧೩ ನೇ ಸಾಲಿನ ಬಾಬತು ಸುಂಕಗಳನ್ನು ಕಂದಾಯವನ್ನು ವಸೂಲ್ಮಾಡ ತಕ್ಕದ್ದಲ್ಲವೆಂದು ಖಿಲಾಸಾ ಮಾಡಲಾಗಿದೆ. ಇದಲ್ಲದೆ ಸರ್ಕಾರಿ ಜಂಗಲುಗಳಲ್ಲಿ ರೈತರು ತಮ್ಮ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವುದಕ್ಕೆ ಅವರಿಂದ ಯಾವ ರುಸುಮನ್ನೂ ವಸೂಲ್ಮಾಡ ಕೂಡದೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ. ಹೀಗೆ ಮಾಡದ ಹೊರತು ಥಳ್ಳಿ ಅಲ್ಲಂತರ ದನಗಳು ಸ್ವಲ್ಪವನ್ನು ಮತ್ತೆ ಮಳೆ ಬಂದಾಗ್ಯೂ ರೈತರು ಉತ್ತು ಬಿತ್ತು ಬೆಳೆ ಮಾಡುವುದಕ್ಕೆ ಎತ್ತುಗಳ ಪ್ರಯೋಜನವಾಗುತ್ತಿದ್ದು ಹೇಳಬೇಕಾದ್ದಿಲ್ಲ.

ಕೋಲಾರ ಡಿಸ್ಟ್ರಿಕ್ಟಿನಲ್ಲೂ ಇತರ ಕಡೆಗಳಲ್ಲೂ ಕೆರೆ ಮುಂತಾದವುಗಳನ್ನು ಕಾಮಗಾರಿ ಮಾಡಿಸಬೇಕೆಂದು ಕೆಲವು ಹಣವನ್ನು ಸ್ಯಾಂಕ್ಷನ್ ಮಾಡಿರುತ್ತಾರೆ. ಈ ಕಾಮಗಾರಿಗಳನ್ನು ಸಾಧಕವಾದ ಸಮಯದಲ್ಲಿ ಪ್ರಾರಂಭಿಸಿ, ಕೂಲಿ ಸಿಕ್ಕದೆ ಕಷ್ಟಪಡುತ್ತಿರುವವರನ್ನು ಸುರಕ್ಷಿತವಾಗಿ ಮಾಡಬಹುದೆಂದು ನಿರೀಕ್ಷಿಸುತ್ತೇವೆ. ಪ್ರಾರಂಭದಲ್ಲಿ ಈ ಕಾಮಗಾರಿಗಳು ಆಯಾ ಗ್ರಾಮಗಳ ಸಮೀಪದಲ್ಲೇ ಇರುವಂತೆ ಆಗಬೇಕು. ಇಲ್ಲವಾದರೆ ಕೂಲಿಗಾಗಿ ಎರಡು ಮೂರು ಗ್ರಾಮಗಳಿಗೆ ಬಿಟ್ಟು ಹೋಗುವುದಕ್ಕೂ ಅಲ್ಲಿ ಕೆಲಸ ಸಿಕ್ಕಿದೆ ಹೋದ ಸ್ಥಳದ ಅನಾನುಕೂಲತೆಗಳನ್ನು ಹೊಂದುವುದಕ್ಕೂ ಆಸ್ಪದವಾದೀತು. ಇದೀಗ ಈ ಗ್ರಾಮಾಂತರಗಳ ಎಲ್ಲಾ ಕಾಮಗಾರಿಗಳೇ ಒಟ್ಟು ಮುಖ್ಯವಾಗಿರುತ್ತವೆ. ಕಳೆದ ವಾರದ ಸರ್ಕಾರಿ ಗೆಜೆಟ್ಟುಗಳನ್ನು ನೋಡಿದರೆ ೧,೨೫೦ ಗಂಡಾಳು, ೫,೦೦೦ ಹೆಣ್ಣಾಳು, ೭೬೦ ಮಕ್ಕಳು ಎಲ್ಲಾ ಕಾಮಗಾರಿಗಳನ್ನು ಮಾಡುತ್ತಿದಾರೆಂದೂ, ೪,೫೦೦ ಪ್ರಜೆಗಳಿಗೆ ಸರ್ಕಾರದಿಂದ ಧರ್ಮದ ದವಸ ಸಲ್ಲುತ್ತಿದೆ ಎಂದೂ ತಿಳಿದುಬರುತ್ತದೆ. ಈ ಸ್ಥಿತಿ ಕೋಲಾರದ ಮತ್ತು ಚಿತ್ರದುರ್ಗದ ಡಿಸ್ಟ್ರಿಕ್ಟುಗಳ ಪ್ರಜೆಗಳದು ವಿಶೇಷ.

ರೈತ ಪ್ರಜೆಗಳ ಮತ್ತು ಕೂಲಿಕಾರರ ಕಷ್ಟನಿವಾರಣೆಗೋಸ್ಕರ ಬಹು ಜಾಗ್ರತೆ ಕಾಮಗಾರಿಗಳನ್ನು ಸ್ಪೆಷಲ್ ಅಬೀನಿಗನು ನೇಮಕ ಮಾಡಬೇಕು. ಆದರಿಂದ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡುವ ಹಲವು ನೌಕರನನ್ನೇರಿಗಳ ಪುರಸ್ಕಾರ ಮಾಡಿರಲೆಂದು ಬೇಡಿಕೊಳ್ಳುತ್ತೇವೆ. ಈ ರಿಲೀಫ಼ು ಕಾರ್ಯಗಳಿಂದ ಪ್ರಜೆಗಳ ಕಷ್ಟವು ಪರಿಹಾರವಾಗಲಿ ಎಂದು ಗವರ್ನಮೆಂಟಿನವರು ಕೋರುವರೆನ್ನುತ್ತಾರೆ. ಆದರಿಂದ ಡಿಸ್ಟ್ರಿಕ್ಟು ಅಧಿಕಾರಿಗಳು ಸರ್ಕಾರದ ಹಣದಲ್ಲಿ ಲೇಶ ಮಾತ್ರವೂ ದುರ್ವಿನಿಯೋಗವಾಗದೆ, ಪ್ರಜೆಗಳ ಸಂರಕ್ಷಣೆಯು ಸಾರ್ಥಕವಾಗಿ ನೆರವೇರುವ ವಿಷಯದಲ್ಲಿ ಬಹಳ ಶ್ರದ್ಧೆಯಿಂದ ನೋಡಿಕೊಳ್ಳಬೇಕಾಗಿರುತ್ತದೆ. ಈ ಕ್ಷಾಮನಿವಾರಣೆಯ ಕೆಲಸಗಳಿಗೋಸ್ಕರ ಭೂಪಾದೆಯ ಸಸ್ಯಾನ್ಸಾಪಿಯಕ್ಕೂ ಸ್ವಪಂತಕರಾರೆನಿಸುವಂಥಾ ನೌಕರಮಾನ್ಯರನ್ನು ಮತ್ತು ನೇಮಿಸಬೇಕಾದದ್ದು ಮುಖ್ಯವಾದದ್ದು. ಮುಂದಿಟ್ಟ ಅಧಿಕಾರಿಗಳು ದುರ್ವಿನಿಯೋಗಮಾಡಿಕೊಂಡು ಹಿಂಬಾ ಸುಖಪಡಬೇಕಾಗಿ ತವಿಸಿಕೊಳ್ಳುತ್ತಾ ಒರಟೇಲಾಗಿದೆ. ಸರ್ಕಾರದವರು ಸ್ಯಾಂಕ್ಷನ್ ಮಾಡುವ ಹಣಕಾಸು ಸಾರ್ಥಕವಾಗಿ ಎಷ್ಟು ಮಟ್ಟಿಗೆ ವಿನಿಯೋಗವಾಗುವುದೋ ಎಂದು ನಾವು ವಿಶೇಷ ಕುತೂಹಲದಿಂದಲೂ ಕುತೂಹಲಯುಕ್ತರಾಗಿಯೂ ನೋಡುತ್ತಾ ಬರುವೆವು. ಗವರ್ನಮೆಂಟಿನವರ ಉದ್ದೇಶವಿರುವಂತೆ ಪ್ರಜೆಗಳು ರಿಲೀಫ಼ು ಕೆಲಸಗಳಿಂದ ಆಹಾರವನ್ನು ಪಡೆದು ಈ ಕಷ್ಟಕಾಲವನ್ನು ಕಳೆಯಲಿ ಎಂದು ಹಾರೈಸುತ್ತೇವೆ.

ಬಿಡಿಬಿಡಿ ವರ್ತಮಾನಗಳು

ಮದರಾಸ್ ಪಟ್ಟಣದಲ್ಲಿರುವ ನಮ್ಮ ಮಹಾರಾಣಿಯವರೂ ಯುವರಾಜರವರೂ ಪರಿವಾರ ಸಹಿತ ಸುಖವಾಗಿ ಮಾರ್ಚಿ ತಾ ೩ ಕ್ಕೆ ಅಲ್ಲಿಂದ ವಾಪಸು ರಾಜಧಾನಿಗೆ ದಯಮಾಡುವರೆಂದು ವರ್ತಮಾನವಿದೆ.

•

ನಂಜನಗೂಡಿನಲ್ಲಿ ಶ್ರೀಕಂಠೇಶ್ವರ ಸ್ವಾಮಿ ಜಾತ್ರೆ ಕಾಲದಲ್ಲಿ ಅಂದರೆ ಏಪ್ರಿಲ್ ತಾ ೩ ಕ್ಕೆ ಸರ್ಕಾರದವರು ದನಗಳ ಪ್ರದರ್ಶನವನ್ನು ನಡಿಸುತ್ತಾರೆಯೂ, ಉತ್ತಮವಾದ ರಾಸುಗಳಿಗೆ ೧೧೧ ರೂಪಾಯಿ ೧೧ ಬಹುಮಾನವಾಗಿ ಕೊಡಿಸುವುದಾಗಿಯೂ ಪ್ರಕಟವಾಗಿದೆ.

•

ಶ್ರೀಮನ್ ಮಹಾರಾಜರವರು ಪರಿವಾರ ಸಹಿತ ಕಳೆದ ಬುಧವಾರ ಬೊಂಬಾಯಿ ಪಟ್ಟಣವನ್ನು ಬಿಟ್ಟು, ಪೆಡ್ಡರ್ ರೋಡಿನಲ್ಲಿರುವ ಮ|| ಮಥುರದಾಸ್ ಗೋಕುಲದಾಸ್ ಯವರ ಬಂಗಲಿಯಲ್ಲಿ ಇಳಿದುಕೊಂಡಿದಾರೆ. ಅವರು ಅಲ್ಲಿಂದ ಮುಂದಿನ ಬುಧವಾರ ವಾಪಸು ಬೆಂಗಳೂರಿಗೆ ದಯಮಾಡುವರೆಂದು ಕೇಳುತ್ತೇವೆ.

•

ನಂಜನಗೂಡಿನಲ್ಲಿ ಮೊಹರಂ ಕಡೆಯ ದಿನ ನಡೆದ ದೊಂಬಿ ಜಗಳದಲ್ಲಿ ಪೋಲೀಸಿನವರು ೧೭ ಮಂದಿ ಮಹಮದೀಯರ ಮೇಲೆ ಮೊಕದ್ದಮೆ ಮಾಡಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಕಳುಹಿಸಿದಾರೆ. ಈ ಮೊಕದ್ದಮೆಯನ್ನು ಯಾವ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡುವರೋ ಇನ್ನೂ ಇತ್ಯರ್ಥವಾಗಲಿಲ್ಲ.

•

ಬೆಂಗಳೂರು ತಾಲ್ಲೂಕು ಬೇಗೂರು ಹೋಬಳಿ ಸ್ವಾಸನ್ನ ಹಳ್ಳಿ ಗ್ರಾಮದಲ್ಲಿ ವಡ್ಡರ ಚಿಕ್ಕ ಮುನಿಗನೆಂಬುವನ ಮನೆಯಲ್ಲಿ ಒಂದು ಹಸು ಹಾಕಿರುವ ಕರುವಿಗೆ ಬಲದ ಕಣ್ಣಿನಲ್ಲಿ ಅರ್ಧ ಅಂಗುಲ ನಾಲಿಗೆಯೂ, ಎಡದ ಕಣ್ಣಿನಲ್ಲಿ ಒಂದು ಅಂಗುಲ ನಾಲಿಗೆಯೂ ಹುಟ್ಟಿದೆ ಎಂದೂ, ಕರುವು ಓಡಾಡಿಕೊಂಡಿದೆ ಎಂದೂ ಒಬ್ಬ ಬಾತ್ಮೀದಾರರು ಬರೆದಿದಾರೆ.

•

ಸರ್ಕಾರದವರು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಶಿಕ್ಷಾರಿ ಟ್ರೇನಿಂಗ್ ಸ್ಕೂಲನ್ನು ವಜಾಮಾಡಿ, ಇನ್ನು ಮುಂದೆ ಮೈಸೂರು ಇನ್‌ಜಿನಿಯರಿಂಗ್ ಸ್ಕೂಲಿನಲ್ಲಾಗಲಿ, ಬೆಂಗಳೂರು ರಾಯಬಹದೂರ್ ಅರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್ರ ಸ್ಕೂಲಿನಲ್ಲಾಗಲಿ ತೇರ್ಗಡೆ ಹೊಂದಿದವರನ್ನು ಶಿಕ್ಷಾರಿ ಕೆಲಸಕ್ಕೆ ನೇಮಿಸಿಕೊಳ್ಳತಕ್ಕದ್ದೆಂದು ಹುಕುಂ ಮಾಡಿರುತ್ತಾರೆ.

•

ನಂಜನಗೂಡು ಸಬ್ ಡಿವಿಜನ್ ಆಫೀಸರಾಗಿದ್ದ ಮ|| ಎಸ್ ವೈದ್ಯನಾಥ ಐಯರವರಿಗೆ ಸರ್ಕಾರದವರು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟು, ಆ ತರುವಾಯ ಅವರು ಪೆನ್‌ಷನ್ ಪಡೆಯುತಕ್ಕದ್ದೆಂದು ಹುಕುಂ ಕೊಟ್ಟಿದಾರೆ. ಆ ಸಬ್ ಡಿವಿಜನ್ ಛಾರ್ಜನ್ನು ಅಲ್ಲಿನ ಅಸಿಸ್ಟೆಂಟ್ ಕಮಿಷನರ್ ಮ|| ಟಿ ಕೆ ಸುಂದರರಾಜಯ್ಯಂಗಾರ್ಯ ಹಂಗಾಮಿಯಾಗಿ ವಹಿಸಿಕೊಂಡು ಕೆಲಸ ನೋಡುತ್ತಿರುವರು.

•

ರಾಜಧಾನಿಯ ದೊಡ್ಡ ಪೇಟೆಯಲ್ಲಿ ವ್ಯಾಪಾರ ವ್ಯಾಪಾರ ಮಾಡುವ ಮ|| ಎಸ್ ಎಜ್ಜೀಪುರವಾಯನ ಜವಾಹಿರ ವ್ಯಾಪಾರಕ್ಕಾಗಿ ಸೀಮೆ ವಿಲಾಯತಿಗೆ ಪ್ರಯಾಣ ಮಾಡಿದರು. ಅವರು ಅದಕ್ಕೆ ಬೇಕಾಗುವ ಸರ್ಟಿಫಿಕೇಟುಗಳನ್ನು ಇಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದಲೂ, ಬ್ರಿಟಿಷ್ ರೆಸಿಡೆಂಟರಿಂದಲೂ ಪಡೆದಿರುತ್ತಾರೆ. ಇವರು ಮದರಾಸಿನಿಂದ ಸೀಮೆಗೆ ಹೋಗಿ ಅಲ್ಲಿ ಜಹಜು ಹತ್ತುವರೆಂದು ಕೇಳುತ್ತೇವೆ.

•

ಈಗೀಗ ಸ್ವಲ್ಪ ಸ್ವಲ್ಪ ಮೋಡದಿಂದಲೂರಿಂದವಾಗಿದೆ. ಪೂರ್ವ ದಿಕ್ಕಿನಲ್ಲಿ ಗುಡುಗು ಮಿಂಚುಗಳ ಮತ್ತು ಮಿಂಚುವುದು. ಬಿಸಿಲಿನ ತಾಪವು ಹೆಚ್ಚಾಗಿ ಇದೆ. ಇದು ರಾಜಧಾನಿಯ ಇದ್ದಂತೆ ತುಂಬಾ ಪ್ರಿಯವಾಗಿರುವದು. ಪುನಃ ಪುನಃ ಚಂದಾ ಕೊಟ್ಟು ಬಡವನ್ನಾಗಿ ರಾಗಿಯನ್ನು ಅಗ್ಗವಾಗಿ ಖರೀದಿ ಮಾಡುತ್ತಾ ಇದಾರೆ. ಆ ದೇಶದ ಅಕ್ಕಿಯೂ ಹೇರಳವಾಗಿ ಬಂದು ಅಗ್ಗವಾಗಿ ಸಿಕ್ಕುತ್ತಿದೆಯಾದರೂ ಪ್ರಜೆಗಳು ಅದನ್ನು ಕೊಂಡು ಉಪಯೋಗಿಸುವುದು ಕಡಿಮೆ.

•

ಮೈಸೂರಿನ ಪಟ್ಟಣದಲ್ಲಿ ನಡೆಯುವ ವೈದ್ಯ ಪರೀಕ್ಷೆಗೆ (ವಾಕ್ಸಿನುಗಳ ನಿವಾರಣೆ) ರಾಜಧಾನಿಯ ಮಿಷನ್ ಆಸ್ಪತ್ರೆಯಿಂದ ವಾಕ್ಸಿನುಗಳಿಂದ ಮಿಸ್ ಡಾಕ್ಟರ್ ಅಕ್ಕತಂಗಿಯರಾದರೂ ಪೆನ್ನಿಯ ದಿನ ಪ್ರತಿ ೯ ಮಾಡಿರುತ್ತಾರೆ. ಕೆಲವು ದಿನಗಳಿಗಾಗಿ ಅವರು ವಾಪಸು ಬರುವರು. ಅದುವರೆಗೆ ಮಿಷನ್ ಆಸ್ಪತ್ರೆಯಲ್ಲಿ ಸುಪೀರಿಯರ್ ಸರ್ಜನ್ ಎಂ ಬಿ ಎಂಬುವರು ರೋಗಿಗಳಿಗಾಗಿ ಮದ್ದು ಕೊಂಡು, ಎಂದಿನಂತೆ ಆಸ್ಪತ್ರೆಯಲ್ಲಿ ವಿದ್ಯಾರ್ಥಿಗಳನ್ನು ಕೊಟ್ಟು ಚಿಕಿತ್ಸೆ ನಡಿಸುತ್ತಾರೆಂದು ತಿಳಿದು ಬಂದಿದೆ.

•

ಈ ಸಲ ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಜಾತ್ರೆಗೂ, ಬೌರಿಂಗ್ ಪೇಟೆ ತಾಲ್ಲೂಕು ಗುಟ್ಟಹಳ್ಳಿ, ಪೆದ್ದಹಳ್ಳಿಗಳಲ್ಲಿ ನಡೆಯುವ ಜಾತ್ರೆಗಳಿಗೂ, ಮಾಗಡಿ ತಾಲ್ಲೂಕು ತಿರುಮಲೆ, ಸುಗ್ಗನಹಳ್ಳಿ ರಥೋತ್ಸವಗಳಿಗೂ, ಆನೇಕಲ್ ತಾಲ್ಲೂಕು ಬನ್ನೇರುಘಟ್ಟ ಹುಸಕೂರು ಜಾತ್ರೆ ರಥೋತ್ಸವಗಳಿಗೂ, ಚನ್ನಪಟ್ಟಣ ತಾಲ್ಲೂಕು ಕೋಟ್ಟದಗುಡ, ಕಳ್ಳಿ ಬೇವಿನಪುರ ಕೋಟೆಗಳಿಗೆ ಗುರುಸಿದ್ದಾಪುರ ತಾರೇಹಳ್ಳಿಗಳಲ್ಲಿ ನಡೆಯುವ ಜಾತ್ರೆಗಳಿಗೂ ಜನವನ್ನು ನೋಡಬೇಕೆ ತಡೆದು ವಾಪಸು ಕಳುಹಿಸಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದಾರೆ.

•

ರಾಜಧಾನಿಯ ಕೋಟೆ ಬಳಿಯ ಸ್ವಾಮಿಯಲ್ಲಿ ಕೊತ್ತಲ ಪೇಟೆಯಲ್ಲಿ ೬೦ ಅಡಿ ಎತ್ತರವಾದ ರಸ್ತೆಯನ್ನು ಹಾಕಬೇಕೆಂದು ಗೊತ್ತಾಗಿದೆ. ಅಲ್ಲಿರುವ ಮನೆಗಳನ್ನು ಟ್ರಸ್ಟ್ ಬೋರ್ಡಿನ ಪ್ರೆಸಿಡೆಂಟ್ ಗವರ್ಮೆಂಟಿನವರು ಅಜಮಾಯಿಷಿ ಮಾಡಿ ಪ್ರತಿಫಲವನ್ನು ಕೊಟ್ಟು ಮನೆ ಬಿಡಿಸುವ ತರದೂದು ನಡೆಸುತ್ತಿದಾರೆ. ಮನೆಗಳನ್ನು ನೋಡಿ ಅವುಗಳ ಅಂದಾಜು ಮುಂತಾದದ್ದನ್ನು ಗೊತ್ತುಮಾಡುವುದಕ್ಕೆ ಅವರು ಮ್ಯುನಿಸಿಪಲ್ ಕೌನ್ಸಿಲರುಗಳಾದ ಮ|| ಎನ್ ಶ್ರೀಕಂಠಯ್ಯನವರನ್ನೂ ಮ|| ಎಂ ನರಸಿಂಹಸ್ವಾಮಿಯವರನ್ನೂ ಸಹಾಯಕ್ಕೆ ಕರೆದುಕೊಂಡಿರುವರು. ಮುಂದಿನ ಜೂನ್ ಅಥವಾ ಜುಲೈ ತಿಂಗಳಲ್ಲಿ ಆ ಮನೆಗಳನ್ನೆಲ್ಲಾ ಒಡೆದು ಹಾಕುವರೆಂದು ಕೇಳುತ್ತೇವೆ.

ಜೀವಮಾನದ ಉದ್ದೇಶವು

ಭಗವಂತನು ನಮ್ಮೆಲ್ಲರನ್ನು ಸೃಷ್ಟಿಸಿ ಕಾಪಾಡುತ್ತಾ ಬರುತ್ತಿರುವನೆಂಬುದು ಸಹಜವಾದುದಷ್ಟೆ. ಆತನು ನಮ್ಮನ್ನು ಯಾತಕ್ಕೆ ಸೃಷ್ಟಿಸಿದನು? ಭೂಲೋಕದಲ್ಲಿ ನಮ್ಮನ್ನುಯಾತಕ್ಕೆ ಕಳುಹಿಸಿರುವನು ಎಂಬ ಪ್ರಶ್ನೆಗಳನ್ನು ಅನೇಕರು ಕೇಳುವುದು ಅಪರೂಪವಲ್ಲ. ಕೆಲವರು ಸರಳತೆಯಿಂದ ಸುಖವಿದವರಾಗಿ ತಮ್ಮನ್ನು ಭಗವಂತನು ಪಾಪದ ಫಲಗಳನ್ನನುಭವಿಸಿ ಸಾಯುವುದಕ್ಕೆಂದೇ ಸೃಷ್ಟಿಸಿರುವನೆಂದು ತಿಳಿದುಕೊಂಡಿರುತ್ತಾರೆ. ಆದರೆ ಇಂಥಾ ಅಭಿಪ್ರಾಯವು ತಪ್ಪು. ನಾವೆಲ್ಲರೂ ಪವಿತ್ರರಾಗಿದ್ದು ಕೊಂಡು ಸುಖವಾಗಿ ಜೀವಿಸಬೇಕೆಂಬುವುದೇ ದೇವರ ಇಷ್ಟವಾಗಿರುತ್ತದೆ. ನಾವೆಲ್ಲರೂ ಆತನಂತೆ ಪವಿತ್ರರಾಗಿರುವುದಕ್ಕೆ ಪ್ರಯತ್ನಪಡಬೇಕಾಗಿದೆ.

ನಾವು ಮಾಡಿದ ಕರ್ಮಗಳಿಗೋಸ್ಕರ ಈ ಭೂಲೋಕದಲ್ಲಿ ಜನಿಸುತ್ತೇವೆಂಬುದಾಗಿ ತಿಳಿದುಕೊಂಡಿರುವವರಿಗೆ ಜೀವಮಾನದ ಯಾವ ಗಂಭೀರವಾದ ಉದ್ದೇಶವೂ ಇರಲಾರದು. ಹೀಗೆ ನಾವು ತಿಳಿದುಕೊಂಡರೆ ನಮ್ಮ ಜೀವಮಾನವು ಒಂದು ಕಾಟವಾಗಿ ಪರಿಣಮಿಸುವುದು. ಅದರಿಂದ ಅದೃಷ್ಟ ಚಾಗ್ರತೆಯಲ್ಲಿ ತಪ್ಪಿಸಿಕೊಳ್ಳುವುದೇ ನಮ್ಮ ಪ್ರಯತ್ನವಾಗಿರುವದು. ಇದು ನಿಜವಾಗಿಯೂ ಬಹು ಶೋಚನೀಯವಾದ ಸ್ಥಿತಿ.

ನಮ್ಮ ಜೀವಮಾನವನ್ನು ನಾನಾ ರೀತಿಯಲ್ಲಿ ಅಭಿವೃದ್ಧಿ ಹೊಂದುವಂತೆ ಮಾಡಬಹುದು. ನಮ್ಮ ಜೀವಮಾನದ ಗುರಿಯು ನಾನಕರವಾದುದಾಗಿರಬಹುದು ನಿಶ್ಚಯವನ್ನು ಸಂಪಾದಿಸಬೇಕೆಂಬುದಾಗಲಿ ಇಲ್ಲವೇ ವಿದ್ಯಾರ್ಜನೆ ಮಾಡಬೇಕೆಂಬುದಾಗಲಿ ನಾವು ಅಪೇಕ್ಷಿಸಬಹುದು. ಇವೆಲ್ಲಾ ಮನುಷ್ಯನಿಗೆ ಬೇಕಾಗಿದ್ದರೂ ಇವೇ ಮನುಷ್ಯನ ಜೀವನಾನುಭವವನ್ನು ಸಾರ್ಥಕಪಡಿಸತಕ್ಕ ಸಲಕರಣೆಗಳೆಂದು ಯಾರೂ ತಿಳಿಯಬಾರದು. ಇವೆಲ್ಲಾ ಒಂದು ವೇಳೆ ನಮಗೆ ದೊರೆತರೂ ನಾವು ದುಷ್ಕರ್ಮಿಗಳಾಗಿ ಬದುಕಬಹುದು. ಆದರೆ ಯಾವುದಾದರೂ ಸರಿ ತಮ್ಮನ್ನು ಲೌಕಿಕದ ಆಸಾಧಕಗಳಿಗೆ ಒಪ್ಪಿಸಿ ಬಿಡದಿರಲಿ.

ನಾವು ನಮ್ಮ ನಡತೆಗಳನ್ನು ತಿದ್ದಿಕೊಳ್ಳಬೇಕಾದರೆ ನಮ್ಮ ಆತ್ಮವು ದೇವರಿಗೆ ಮೆಚ್ಚಿಕೆಯುಳ್ಳದ್ದಾಗಿರಬೇಕು. ಹಾಗಾದರೆ ನಮ್ಮ ಆತ್ಮಶುದ್ಧಿಗೋಸ್ಕರ ಅವಶ್ಯಕವಾದವುಗಳು ಯಾವುವು. ಮೊದಲನೆಯದಾಗಿ ನಾವು ದೇವರನ್ನು ಆರಾಧಿಸಬೇಕು. ನಮ್ಮ ಮನಸ್ಸು ನಿಷ್ಕಳಂಕವಾಗಿದ್ದರೆ ಆತನ ವಾಣಿಯು ನಮಗೆ ಕೇಳಬರುವುದು. ಆತನು ನಾವು ಮಾಡಬೇಕಾದ ಕೆಲಸಗಳನ್ನು ನಮಗೆ ಕಲಿಸುತ್ತಲೂ ನಾವು ಮಾಡಬಾರದ ಕೆಲಸಗಳನ್ನು ಮಾಡದಂತೆ ಎಚ್ಚರಿಸುತ್ತಲೂ ಬರುವನು. ನಾವು ಯಾವಾಗಲೂ ನಮ್ಮ ಮನಸ್ಸಾಕ್ಷಿಗೆ ವಿಧೇಯರಾಗಿ ನಡೆದುಕೊಳ್ಳಬೇಕು. ನಾವು ಯೋಗ್ಯರಾಗಿ ನಡೆದುಕೊಳ್ಳುವ ಪ್ರಯತ್ನದಲ್ಲಿ ನಮಗೆ ಹಲವು ವಿಘ್ನಗಳು ತೋರುವುದುಂಟು. ಒಮ್ಮೆ ನಮಗೆ ಏನುಪ್ರಾಪ್ತವಾದರೂ ಸರಿ ನಾವು ದೇವರನ್ನು ಮಾತ್ರ ಮರೆಯಕೂಡದು. ದೇವರ ದಯೆಯಿಂದ ಭಾವಿ ಜೀವನವನು ಪ್ರಯೋಜನಕಾರಿಯಾಗಿ ಮಾಡಬೇಕು ಎಂಬುವ ಮಾತನ್ನು ನಾವು ತಿಳಿಯಬೇಕು.

ನಾವು ದೇವರನ್ನು ತಿಳಿಯುವುದಕ್ಕೆ ಸ್ವಪ್ರಯತ್ನವನ್ನು ಮಾಡುವುದಲ್ಲದೆ ಅನ್ಯರ ಸಹಾಯವನ್ನು ಕೂಡ ಹುಡುಕಿ ಅಪೇಕ್ಷಿಸಬೇಕು. ಅನೇಕ ಋಷಿಗಳೂ ಮತ್ತು ಮಹಾತ್ಮರೂ ದೇವರ ವಿಷಯ ಜನರಿಗೆ ಬೋಧಿಸಿರುತ್ತಾರೆ. ಈ ಬೋಧಕರೆಲ್ಲರಲ್ಲಿಯೂ ಯೇಸು ಕ್ರಿಸ್ತನು ಪ್ರಸಿದ್ಧನಾದವನು. ಈತನು ದೇವರ ವಿಷಯವಾಗಿ ತಿಳಿಸಿರುವ ಬೇರೆ ಯಾವ ಬೋಧಕರೂ ತಿಳಿಸಿಲ್ಲ. ಯೇಸು ಸ್ವಾಮಿಯು ತಿಳಿಸಿರುವ ಪ್ರಕಾರ ದೇವರು ನಮ್ಮ ತಂದೆಯಾಗಿರುತ್ತಾನೆ. ನಾವು ಆತನ ಮಕ್ಕಳಾಗಿರುತ್ತೇವೆ. ಆತನು ನಮ್ಮನ್ನು ಪ್ರೀತಿಯಿಂದ ಕಾಪಾಡಿಕೊಂಡು ಬರುತ್ತಾನೆ. ನಾವು ಆತನನ್ನು ಪ್ರೀತಿಪಡಿಸತಕ್ಕವರಾಗಿರುತ್ತೇವೆ. ಆತನು ನಮಗೆ ಸತ್ಯವಾದದನ್ನು ಮಾಡುವುದಕ್ಕೂ ನಿರ್ಮಲ ಯೋಗ್ಯರಾಗಿ ನಡೆದುಕೊಳ್ಳುವುದಕ್ಕೂ ಸಹಾಯಮಾಡುವನು.

ನಾವು ದೇವರನ್ನು ಅರಿದು ಆತನನ್ನು ಮನಃಪೂರ್ವಕವಾಗಿ ಪ್ರೀತಿಸಿದರೆ ನಮ್ಮ ಜೀವನಸೂತ್ರವು ಬಹು ಪವಿತ್ರವಾದುದೆಂದು ಹೇಳಬಹುದು. ನಾವು ಯೋಗ್ಯರಾಗಿಯೂ ಸತ್ಪಂತರಾಗಿಯೂ ಇರುವುದು, ಪರೋಪಕಾರದ ನಮ್ಮಲ್ಲಿ ನೆಲೆಗೊಳ್ಳುವುದು, ನಮ್ಮ ಸುತ್ತ ಮುತ್ತಲೂ ವಾಸಮಾಡುವ ಜನರಿಗೆ ನಮ್ಮಿಂದ ಹಲವಾದ ಪ್ರಯೋಜನವಾಗುವುದು; ನಾವು ದೇವರ ಮಕ್ಕಳೆಂದೆನ್ನಿಸಿಕೊಂಡು ಆತನ ಆಜ್ಞೆಗಳನ್ನು ಕೈಕೊಳ್ಳುವುದೇ ನಮ್ಮ ಜೀವಮಾನದ ಉದ್ದೇಶವಾಗಿರಲಿ.

ಮೈಸೂರು ಗೆಜೆಟು ಸಂಗ್ರಹ

ಮುಜರಾಯಿ ಸೂಪರಿಂಟೆಂಡೆಂಟ್ ಮ|| ಎ ಸುಬ್ಬರಾಯ ಐಯರವರಿಗೆ ಫೆಬ್ರುವರಿ ತಾ ೧೯ ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಗವರನ್‌ಮೆಂಟ್ ಅಸಿಸ್ಟೆಂಟ್ ಮ|| ವಿ ಎಸ್ ಬಾಲಸುಬ್ರಹ್ಮಣ್ಯ ಐಯರವರು ತಮ್ಮ ಕೆಲಸಗಳಲ್ಲದೆ ಮುಜರಾಯಿ ಸೂಪರಿಂಟೆಂಡೆಂಟರ ಚಾಲ್ತಿ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಡಿ ಎ ಕೆ ನಾರ್ ಮ|| ಡಿ ಶ್ರೀನಿವಾಸಯ್ಯಂಗಾರರಿಗೆ ಪಿ ಎ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಬೆಂಗಳೂರು ಸಿಟಿ ಪೋಲೀಸ್ ಚೀಫ್ ಇನ್‌ಸ್ಪೆಕ್ಟರ್ ಮ|| ಎಚ್ ಡಿ ಓಬಳಯ್ಯನವರನ್ನು ಹಂಗಾಮಿಯಾಗಿ ೫ ನೇ ಕ್ಲಾಸ್ ಅ ಸಿಸ್ಟೆಂಟ್ ಕಮಿಷನರ್‌ಗಾಗಿ ನೇಮಿಸಿ, ಫೈಂಟ ರಾಸ್ ಪೋಲೀಸ್ ಅ ಸೂಪರಿಂಟೆಂಡೆಂಟ್ ಕೆಲಸಕ್ಕೆ ವರ್ಗ ಮಾಡಿದೆ.

ಪೋಲೀಸ್ ಪ್ರೊಬೇಷನರಿ ಅ ಸೂಪರಿಂಟೆಂಡೆಂಟ್ ಮ|| ಎ ಸಿ ಬಸವರಾಜು ಅರಸಿನವರನ್ನು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿನಲ್ಲಿ ಕೆಲಸ ಮಾಡುವಂತೆ ವರ್ಗವಾಗಿದೆ.

ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಖಜಾನೆ ಛಾರ್ಜನ್ನು ವಹಿಸಿರುವ ಪ್ರೊಬೇಷನರಿ ಅ ಸಿಸ್ಟೆಂಟ್ ಕಮಿಷನರ್ ಮ|| ಸಿ ರಂಗನಾಥರಾವ್ ಸಾಹೇಬ್ ಯವರಿಗೆ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಮ|| ಡಿ ಬಿ ರಾಮಚಂದ್ರ ಮೊದಲಿಯಾರ್ರನ್ನು ಬೆಂಗಳೂರು ಗವರನ್‌ಮೆಂಟ್ ಸೆಂಟ್ರಲ್ ಪ್ರೆಸ್ಸಿನಲ್ಲಿ ಅ ಸೂಪರಿಂಟೆಂಡೆಂಟಾಗಿ ನೇಮಕ ಮಾಡಿದೆ.

ಚೀಫ್ ಇನ್‌ಜಿನಿಯರ್ ಮತ್ತು ಗವರನ್‌ಮೆಂಟ್ ಸೆಕ್ರಿಟರಿ ಮ|| ಡಬ್ಲ್ಯು ಹೆಚ್ ಚೆನ್ ಯವರಿಗೆ ಕಳೆದ ಆಗಸ್ಟ್ ತಾ ೧೮ ರ ಆದ್ಯಾಯನುನು ೩ ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡುವ ತನಕ ಮ|| ಪಿ ಎ ಬಿ ನ ಡ್ರಾವ್ ಯವರು ಆ ಚೀಫ್ ಇನ್‌ಜಿನಿಯರ್ ಮತ್ತು ಗವರನ್‌ಮೆಂಟ್ ಸೆಕ್ರಿಟರಿಯಾಗಿ ನೇಮಿಸಲ್ಪಟ್ಟಿದಾರೆ.

ಓವರ್‌ಸಿಯರ್ ಎಂ ಕೃಷ್ಣರಾಯರನ್ನು ಚಿತ್ರದುರ್ಗದಿಂದ ಹಾಸನದ ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ. ಓವರ್‌ಸಿಯರ್ ಮ|| ಪಿ ಪಡ್ಡಿಯ ಹೋಟೆಲ್ಲಿನವರ ವರ್ಗವನ್ನು ರದ್ದು ಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ಫಂಡ್ ಬೋರ್ಡು.

ಮೈಸೂರು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನ ಮೆಂಬರುಗಳು ಕಳೆದ ಶನಿವಾರ ಮಧ್ಯಾಹ್ನ ಇಲ್ಲಿನ ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿ ಸಭೆಸೇರಿ ಮೀಟಿಂಗನ್ನು ನಡೆಸಿದರು ಪ್ರೆಸಿಡೆಂಟ್ ಮೆ|| ಕಾಂತರಾಜೇ ಅರಸಿನವರು ಅಗ್ರಾಸನವನ್ನು ವಹಿಸಿದ್ದರು ಡಿಸ್ಟ್ರಿಕ್ಟಿನ ಸರ್ಕಾರಿ ಮತ್ತು ಬೇರೋಜುಗಾರ ಮೆಂಬರುಗಳೂ ತಾಲ್ಲೂಕುಗಳ ಅಮಲ್ದಾರರುಗಳೂ ಹಾಜರಾಗಿದ್ದರು ಆ ದಿನ ಮೆಂಬರುಗಳು ಚರ್ಚಿಸಿ ತೀರ್ಮಾನಿಸಿದ ವಿಷಯಗಳ್ಯಾವವೆಂದರೆ —

ಡಿಸ್ಟ್ರಿಕ್ಟ್ ಬೋರ್ಡಿನವರು ೩ನೇ ದರ್ಜೆಯ ಟ್ರಾವಲರ್ಸ್ ಬಂಗಲೆ ಮತ್ತು ಮುಸಾಫರ ಖಾನೆಗಳಿಗೆ ೧೦೦ ರೂಪಾಯಿನೊಳಗೆ ಖರ್ಚು ಮುಂತಾದ ಸಾಮಾನುಗಳನ್ನು ಕೊಂಡುಕೊಳ್ಳಬಹುದೆಂದು ಗವರ್ನಮೆಂಟಿನವರು ಅಧಿಕಾರ ಕೊಟ್ಟಿದ್ದಾರೆ ಹಿಂದೂ ಯುನಾನಿ ವೈದ್ಯಶಾಲೆಗಳ ಲೆಕ್ಕಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ತರಿಸಿಕೊಂಡು ಸರ್ಕಾರಕ್ಕೆ ಕಳುಹಿಸಬೇಕೆಂದು ಹುಕುಂ ಆಗಿದೆ ಮೈಸೂರಿನಲ್ಲಿ ನಾಲ್ಕು ಆಸ್ಪತ್ರೆಗಳನ್ನು ಕಟ್ಟುವುದಕ್ಕೆ ತಗಲುವ ಒಟ್ಟು ಖರ್ಚಿನಲ್ಲಿ ಮೂರನೇ ಒಂದು ಪಾಲನ್ನು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನವರು ವಹಿಸಿಕೊಂಡು ಕೊಡಬಹುದೆಂದು ತೀರ್ಮಾನವಾಯಿತು ಕೃಷ್ಣರಾಜಪೇಟೆ ತಾಲ್ಲೂಕು ಸಿಂಧಗಟ್ಟ ಗ್ರಾಮದಲ್ಲಿ ಒಬ್ಬ ಹಕೀಮನನ್ನೂ, ಟಿ ನರಸೀಪುರದ ತಾಲ್ಲೂಕು ತಲಕಾಡಿನಲ್ಲಿ ಹಂಗಾಮಿಯಾಗಿ ಒಬ್ಬ ಹಿಂದೂ ವೈದ್ಯನನ್ನೂ ನೇಮಿಸಿಕೊಳ್ಳಬಹುದೆಂದು ಸ್ಯಾಂಕ್ಷನ್ ಆಗಿದೆ ಶಿವನಸಮುದ್ರದ ಬಳಿ ಇರುವ ಪ್ಲೇಗಿನ ಪ್ರಜೆಗಳಿಗೋಸ್ಕರ ರೊಟ್ಟಿಕಟ್ಟೆಯಲ್ಲಿ ಮತ್ತೆ ಒಂದು ಸಂತೆ ಕಟ್ಟುವಂತೆ ಮಾಡಬೇಕೆಂದು ಹುಕುಂ ಆಗಿದೆ ಮಳವಳ್ಳಿಯಿಂದ ಬೊಪ್ಪಗೌಡನಪುರಕ್ಕೆ ಗಾಡಿ ರಸ್ತೆಯನ್ನು ಸರ್ಕಾರದಿಂದ ಮಾಡಿಸಿಕೊಟ್ಟಲ್ಲಿ ಅದನ್ನು ಕಾಪಾಡಿಕೊಂಡು ಬರುವುದಕ್ಕೆ ಮೆಂಬರುಗಳು ಒಪ್ಪಿಕೊಂಡರು ನಂಜನಗೂಡಿನಿಂದ ನರಸೀಪುರಕ್ಕೆ ಹೋಗುವ ರಸ್ತೆಯಲ್ಲಿ ಮೋರಿಗಳನ್ನು ಕಟ್ಟುವುದಕ್ಕೆ ತಯಾರಾಗಿ ಬಂದಿದ್ದ ೧,೨೩೧ ರೂಪಾಯಿನ ಅಂದಾಜು ಪಟ್ಟಿಯನ್ನು ಒಪ್ಪಿ, ಅದರಂತೆ ಕೆಲಸ ಮಾಡಿಸಬಹುದೆಂದು ಸ್ಯಾಂಕ್ಷನ್ ಆಯಿತು ಪೆರಿಯಾಪಟ್ಟಣದ ಮೂಲಕ ಹಾಸನದಿಂದ ಕನ್ನಾನೂರಿಗೆ ಹೋಗುವ ರಸ್ತೆಗೆ ಜಲ್ಲಿ ಹಾಕುವುದಕ್ಕೆ ಸುಮಾರು ೧೧,೬೮೫ ರೂಪಾಯಿ ಆಗುತ್ತದೆಂದು ಇಂಜನಿಯರವರು ಬರೆದಿದ್ದ ಅಂದಾಜು ಪಟ್ಟಿಯನ್ನು ಬೋರ್ಡಿನವರು ಸ್ಯಾಂಕ್ಷನ್ ಮಾಡಿ, ಅದನ್ನು ಮೂರು ವರುಷ ತಡ ಕೊಟ್ಟು ಮಾಡಿಸಬೇಕೆಂದು ತೀರ್ಮಾನಿಸಿದರು ಕೃಷ್ಣರಾಜಪೇಟೆ ತಾಲ್ಲೂಕು ಕಿಕ್ಕೇರಿಯಲ್ಲಿ ಹಿಂದೂ ವೈದ್ಯರನ್ನು ನೇಮಿಸುವ ವಿಷಯವನ್ನು ಚರ್ಚೆ ಮಾಡಿದರು ಆ ಗ್ರಾಮವು ತುಂಬಾ ಕೊಳಕಾಗಿದೆ ಎಂತಲೂ ಜನರು ಉಪಯೋಗಿಸುವ ನೀರು ಸ್ವಲ್ಪವೂ ಚನ್ನಾಗಿಲ್ಲವೆಂತಲೂ, ಆಸ್ಪತ್ರೆ ಇಡುವುದಕ್ಕೆ ಖರ್ಚು ಮಾಡುವ ಹಣವನ್ನು ಕನ್ಸರ್ವೆನ್ಸಿ ಮತ್ತು ನೀರಿನ ಏರ್ಪಾಡುಗಳಿಗೆ ವಿನಿಯೋಗಿಸುವುದು ಉತ್ತಮವೆಂತಲೂ ಸೀನಿಯರ್ ಸರ್ಜನ್‌ರವರು ಅಭಿಪ್ರಾಯಪಟ್ಟಿದ್ದರು ಕಿಕ್ಕೇರಿಯ ಯೂನಿಯನ್ ಸಂಘದವರು ಈ ವಿಷಯವನ್ನು ಚರ್ಚೆಮಾಡಿ ಅವರ ಅಭಿಪ್ರಾಯವನ್ನು ತಿಳಿಸಿದ ಮೇಲೆ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ತೀರ್ಮಾನ ಮಾಡಬಹುದೆಂದು ತೆಗೆದಿಟ್ಟರು ಹುಣಸೂರು ತಾಲ್ಲೂಕು ಬೆಟ್ಟದಪುರದಲ್ಲಿ ಯೂನಿಯನ್ ಪಂಚಾಯಿತಿ ಏರ್ಪಾಡಾದ ಮೇಲೆ ಅಲ್ಲಿಗೆ ವೈದ್ಯನನ್ನು ನೇಮಿಸುವ ಯೋಚನೆ ಮಾಡತಕ್ಕದ್ದೆಂದು ಗೊತ್ತು ಮಾಡಿದರು ಮಂಡ್ಯದ ತಾಲ್ಲೂಕು ಶಿವಪುರದಲ್ಲಿರುವ ಹಳೇ ಮುಸಾಫರಖಾನೆಯನ್ನು ಸ್ವಲ್ಪ ಮಟ್ಟಿಗೆ ದುರಸ್ತು ಮಾಡಬೇಕೆಂತಲೂ, ಬೇರೊಂದು ಹೊಸ ಕಟ್ಟಡವನ್ನು ಕಟ್ಟಬೇಕೆಂತಲೂ ತೀರ್ಮಾನಿಸಿದರು ಮುಡುಕತೊರೆ, ನಂಜನಗೂಡುಗಳಲ್ಲಿ ದನಗಳ ಪ್ರದರ್ಶನಕ್ಕೆ ೫೦ ರೂಪಾಯಿನಂತೆ ಖರ್ಚು ಮಾಡಬಹುದೆಂದು ಸ್ಯಾಂಕ್ಷನ್ ಆಯಿತು ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ಟ್ರಾವೆಲರ್ಸ್ ಬಂಗಲೆಯನ್ನು ಕಟ್ಟುವ ವಿಷಯದಲ್ಲಿ ಮೊದಲು ತಾಲ್ಲೂಕ್ ಬೋರ್ಡಿನ ಅಭಿಪ್ರಾಯವನ್ನು ತಿಳಿಯಬೇಕೆಂದು ತೆಗೆದಿಟ್ಟರು ೧೯೦೯—೧೦ ನೇ ಸಾಲಿನ ಡಿಸ್ಟ್ರಿಕ್ಟ್ ಫಂಡ್ ಜಮಾ ಖರ್ಚಿನ ಅಂದಾಜು ಪಟ್ಟಿಯನ್ನು ಓದಿಸಿ ಚರ್ಚೆಯಿಂದ ತೀರ್ಮಾನ ಮಾಡಿದರು ಫಂಡಿನಲ್ಲಿ ೧,೯೪,೪೮೬ ರೂಪಾಯಿ ಖರ್ಚಿಗೆ ದೊರಕುವುದೆಂದೂ, ಈ ಪೈಕಿ ಇಂಜನಿಯರ್ ಇಲಾಖಾ ಕಾಮಗಾರಿಗಳಿಗೆ ೮೩,೬೨೫ ರೂಪಾಯಿಯೂ ಸಿಬ್ಬಂದಿ ಖರ್ಚಿಗೆ ೫೭,೦೦೦ ರೂಪಾಯಿಯೂ ಕೊಟ್ಟರೆ ಚಿಲ್ಲರೆ ಕಾಮಗಾರಿಗಳಿಗೆ ೫೪,೦೦೦ ರೂಪಾಯಿ ಉಳಿಯುವುದೆಂದೂ ಗೊತ್ತುಮಾಡಿ, ಈ ಹಣವನ್ನು ತಾಲ್ಲೂಕ್ ವಾರ್ ಖರ್ಚಿಗೆ ವಿನಿಯೋಗಿಸಿದ ವಿವರ ಹ್ಯಾಗಂದರೆ —ಮೈಸೂರು ರೂ ೪,೦೦೦, ನಂಜನಗೂಡು ರೂ ೫,೨೦೦, ಶ್ರೀರಂಗಪಟ್ಟಣ ರೂ ೭,೦೦೦, ಯಡತೊರೆ ರೂ ೪,೬೦೧, ಹುಣಸೂರು ರೂ ೪,೨೦೦, ಹೆಗ್ಗಡದೇವನಕೋಟೆ ರೂ ೧,೬೦೦, ಗುಂಡ್ಲುಪೇಟೆ ರೂ ೨,೭೦೦, ಚಾಮರಾಜನಗರ ರೂ ೩,೩೦೦, ಟಿ ನರಸೀಪುರ ರೂ ೪ ೬೭೫, ಕೃಷ್ಣರಾಜಪೇಟೆ ರೂ ೩ ೩೦೦, ನಾಗಮಂಗಲ ರೂ ೩,೬೦೦, ಮಂಡ್ಯ ರೂ ೫,೬೦೦, ಮಳವಳ್ಳಿ ರೂ ೨,೬೦೦, ಫ್ರೆಂಚ್‌ರಾಕ್ಸ್ ರೂ ೨,೦೦೦ ಈ ಹಣಗಳಲ್ಲಿ ಬಹು ಭಾಗವನ್ನು ಆಯಾ ತಾಲ್ಲೂಕಿನಲ್ಲಿ ಬಾವಿಗಳನ್ನು ಆಳಮಾಡುವುದಕ್ಕೂ, ಹೊಸ ಬಾವಿಗಳನ್ನು ತೋಡಿಸುವುದಕ್ಕೂ ವಿಶೇಷವಾಗಿ ಉಪಯೋಗಿಸಬೇಕೆಂದು ವಿಧಿಸಲಾಯಿತು

ಕ್ಷಾಮನಿವಾರಣೆಯ ಏರ್ಪಾಡುಗಳು

ಮೈಸೂರು ಸರ್ಕಾರಿ ಹುಕುಮುಗಳು.

ಹುಲ್ಲುಬನ್ನಿಯ ರಿಮಿಷನ್.

ದನಗಳಿಗೆ ಮೇವು ಸಿಕ್ಕುವುದು ಕಷ್ಟವಾಗಿರೋದರಿಂದ ಗವರ್ನಮೆಂಟಿನವರು ಚಿತ್ರದುರ್ಗ, ಕೋಲಾರ, ತುಮಕೂರು ಡಿಸ್ಟ್ರಿಕ್ಟುಗಳಲ್ಲೂ, ಇಂಥಾ ಕಷ್ಟ ಪ್ರಾಪ್ತವಾಗಿರುವ ಇತರ ಡಿಸ್ಟ್ರಿಕ್ಟುಗಳಲ್ಲೂ ೧೯೦೮-೦೯ನೇ ಸಾಲಿನ ಹುಲ್ಲುಬನ್ನಿಯನ್ನು ಸಂಪೂರ್ಣವಾಗಿ ಮಾಫಿ ಬಿಟ್ಟಿರುತ್ತಾರೆ

ಫಾರೆಸ್ಟುಗಳಲ್ಲಿ ಮೇವಿನ ರುಸುಂ ರಿಮಿಷನ್

ಗೋಕಾಯಿಗಳ ಮೇವಿಗೆ ಸದ್ಯದಲ್ಲಿ ತುಂಬಾ ಕಷ್ಟವಾಗಿರುವುದನ್ನು ನೋಡಿ ಸರ್ಕಾರದವರು ತುಮಕೂರು, ಕೋಲಾರ, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲೂ, ಕಷ್ಟಸಂಭವಿಸಿರುವ ಇತರ ಡಿಸ್ಟ್ರಿಕ್ಟುಗಳಲ್ಲೂ ಸರ್ಕಾರಿ ಜಂಗಲುಗಳಲ್ಲಿ ರಾಸುಗಳನ್ನು ಬಿಟ್ಟು ಮೇಯಿಸಿದ್ದಕ್ಕೆ ರೈತರು ಕೊಡಬೇಕಾಗಿರುವ ರುಸುಮುಗಳ ಬಾಕಿಯನ್ನೆಲ್ಲಾ ಮಾಫಿ ಬಿಟ್ಟಿರುವರು

ತೋಟಿತಳವಾರಿಗಳಿಗೆ ಸಹಾಯಕೊಡುವುದು

ಈಗ ಕಾಲಸ್ಥಿತಿಯು ಕೆಟ್ಟಿರೋದರಿಂದ ಇತರ ಕಾಲಗಳಿಗಿಂತಲೂ ಈಗಲೂ ಇನ್ನು ಮುಂದೆಯೂ ಗ್ರಾಮಾಂತರಗಳಲ್ಲಿ ತೋಟಿತಳವಾರಿಗಳಿಗೆ ಕೆಲಸ ವಿಶೇಷವಾಗಬಹುದು ಅವರು ತಮ್ಮ ಗ್ರಾಮಗಳನ್ನು ಬಿಟ್ಟು ಹೋಗುವುದು ಸಹಜವಾಗಿಲ್ಲ ಆದಕಾರಣ ಅವರುಗಳಿಗೆ ಫ್ಯಾಮಿನ್ ಕೋಡನ್ನು ಅನುಸರಿಸಿ ಸೂಕ್ತತೋರಿದ ರೀತಿಯಲ್ಲಿ ಸಹಾಯ ಮಾಡಬೇಕಾದ ಭಾರವನ್ನು ರೆವಿನ್ಯೂ ಕಮಿಷನರವರಿಗೆ ವಹಿಸಿರುತ್ತೆ ಎಂದು ಸರ್ಕಾರದವರು ತಿಳಿಸಿರುತ್ತಾರೆ

ಸಣ್ಣ ಕೆರೆಗಳ ಕಾಮಗಾರಿಯು

ಸಂಸ್ಥಾನಾಮಳೆ ಸಣ್ಣ ಕೆರೆಗಳಿಗೆ ಕಲ್ಲು ಮತ್ತು ಇಟ್ಟಿಗೆ ಗಾರೆ ಕಾಮಗಾರಿಗಳನ್ನು ಮಾಡಿಸುವುದಕ್ಕೆ ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಬೇಕೆಂದು ರೆವಿನ್ಯೂ ಕಮಿಷನರವರು ಗವರ್ನಮೆಂಟಿನವರನ್ನು ಕೇಳಿದರು ಸರ್ಕಾರದವರು ಈ ಕೆಲಸಗಳಿಗೆ ಕಳೆದ ಡಿಸೆಂಬರಿನಲ್ಲಿ ೩೦,೦೦೦ ರೂಪಾಯನ್ನು ಸ್ಯಾಂಕ್ಷನ್ ಮಾಡಿರುವುದಾಗಿಯೂ, ಈಗ ಅವರ ಅಪೇಕ್ಷೆಯಂತೆ ಉಳಿದ ೭೦,೦೦೦ ರೂಪಾಯನ್ನು ಮುಂಜೂರು ಮಾಡಿರುತ್ತೇವೆಂತಲೂ ಅಪ್ಪಣೆ ಕೊಟ್ಟಿದ್ದಾರೆ

ಅಧಿಕಾರಿಗಳು ಸಿದ್ಧರಾಗಿರಬೇಕು

ಸಂಸ್ಥಾನದ ಕೆಲವು ಭಾಗಗಳಲ್ಲಿ ಕಷ್ಟದೆಸೆಯು ಪ್ರಾಪ್ತವಾಗಿದೆ ಮುಂದೆ ಮುಂಗಾರು ಮಳೆಯು ನಡೆಸದೆ ಹೋದರೆ ಕಷ್ಟವು ಇನ್ನೂ ವಿಸ್ತಾರವಾಗುವುದು ಆದಕಾರಣ ರಿಲೀಫ್ ಕಾಮಗಾರಿಗಳೇ ಮೊದಲಾದ ಕಾರ್ಯಗಳನ್ನು ನಡೆಸುತ್ತಿರುವ ಅಧಿಕಾರಿಗಳೂ ಅದಕ್ಕಾಗಿ ಮುಂದೆ ನೇಮಕವಾಗತಕ್ಕ ಅಧಿಕಾರಿಗಳೂ ಈಗಿನಿಂದಲೂ ಫ್ಯಾಮಿನ್ ಕೋಡನ್ನು ಚನ್ನಾಗಿ ಓದಿ ಅದರಲ್ಲಿ ಉದಹರಿಸಿರುವ ಭಾಗಗಳನ್ನೆಲ್ಲಾ ಚನ್ನಾಗಿ ಮನದಟ್ಟುಮಾಡಿಕೊಂಡಿರಬೇಕಾದದ್ದು ಪರಮಾವಶ್ಯಕವಾಗಿದೆ ಇಲಾಖೆಗಳ ಮುಖ್ಯಸ್ಥರೂ, ಡೆಪ್ಯುಟಿ ಕಮಿಷನರುಗಳೂ ತಮ್ಮ ಕೈಕೆಳಗಣ ಅಧಿಕಾರಿಗಳಿಗೆ ಈ ವಿಚಾರವನ್ನು ಚನ್ನಾಗಿ ತಿಳಿಯಪಡಿಸಬೇಕು

ಕಷ್ಟನಿವಾರಣೆಗೆ ಕಾಮಗಾರಿಗಳ ಏರ್ಪಾಟು.

ಸದ್ಯದಲ್ಲಿ ಕೂಲಿಯಿಂದ ಜೀವಿಸತಕ್ಕಂಥಾ ಪ್ರಜೆಗಳಿಗೆ ಜೀವನಕ್ಕೆ ತುಂಬಾ ಕಷ್ಟವಾಗಿರೋದರಿಂದ ರಿಲೀಫ್ ಕಾಮಗಾರಿಗಳನ್ನು ಪ್ರಾರಂಭಿಸುವುದಕ್ಕೆ ಸ್ಯಾಂಕ್ಷನ್ ಆಗಬೇಕೆಂದು ಕೋಲಾರದ ಡೆಪ್ಯುಟಿ ಕಮಿಷನರವರು ಕೇಳಿದ್ದರ ಮೇಲೆ ಸರ್ಕಾರದವರು ಮಾಡಿಸಬಹುದೆಂದು ಅಪ್ಪಣೆ ಕೊಡಿಸಿರುತ್ತಾರೆ ಆ ಕಾಮಗಾರಿಗಳು ಯಾವವೆಂದರೆ —(೧) ಕೋಲಾರ್ ತಾಲ್ಲೂಕ್ ಕೋಡಿಕನ್ನೂರು ಕೆರೆ ಏರಿಯನ್ನು ಅಗಲವಾಗಿ ಮಾಡುವುದು—ರೂ ೨,೦೦೦ (೨) ಶ್ರೀನಿವಾಸಪುರದ ತಾಲ್ಲೂಕ್ ಲಕ್ಷ್ಮೀಸಾಗರ ಕೆರೆಯ ಏರಿಯನ್ನು ಅಗಲಮಾಡುವುದು—ರೂ ೧,೦೦೦ (೩) ಶಿಡ್ಲಘಟ್ಟದ ತಾಲ್ಲೂಕು ಾವಲಿಕೆರೆ ಏರಿಯನ್ನು ವಿಸ್ತಾರಮಾಡುವುದು—ರೂ ೨,೦೦೦ ಈ ರೀತಿ ಈ ಮೂರು ಕೆಲಸಗಳಿಗೂ ೫,೦೦೦ ರೂಪಾಯಿ ಸ್ಯಾಂಕ್ಷನ್ ಆಗಿರುತ್ತದೆ

ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಕಷ್ಟಪರಿಹಾರವು

ಚಿತ್ರದುರ್ಗದ ಡಿಸ್ಟ್ರಿಕ್ಟಿನ ಒಂದು ಭಾಗದಲ್ಲಿ ಮಾತ್ರ ಕಷ್ಟಪ್ರಾಪ್ತವಾಗಿದ್ದರೂ ಇತರ ಭಾಗಗಳಲ್ಲೂ ಪ್ರಜೆಗಳ ದಾನಧರ್ಮಗಳು ಕಡಮೆಯಾಗಿರೋದರಿಂದ ಕಷ್ಟವು ವಿಶೇಷವಾಗಿರುತ್ತದೆ ಇಂಥಾ ಪ್ರದೇಶಗಳಲ್ಲೂ ಕೂಡ ಸರ್ಕಾರದಿಂದಲೇ ಕಷ್ಟಪರಿಹಾರ ಮಾಡಬಹುದೇ ಎಂದು ಅಲ್ಲಿನ ಡೆಪ್ಯುಟಿ ಕಮಿಷನರವರು ಪ್ರಶ್ನೆಮಾಡಿದರು ಕ್ಷಾಮವು ಪ್ರಾಪ್ತವಾಗಿದೆ ಎಂದು ಪ್ರಕಟಿಸುವ ತನಕ ಕಷ್ಟಪರಿಹಾರಕ್ಕೆ ದ್ರವ್ಯವನ್ನು ವಿನಿಯೋಗಿಸಬಹುದೆಂದು ಸ್ಪೆಷಲ್ಲಾಗಿ ಸ್ಯಾಂಕ್ಷನ್ ಮಾಡಿದೆಯೇ ಹೊರತು ಬೇರೆ ಅಲ್ಲವಾದದ್ದರಿಂದ ಕಷ್ಟಪ್ರಾಪ್ತವಾಗಿರುವಂಥಾ ಪ್ರದೇಶಗಳಲ್ಲಿ ಮಾತ್ರವೇ ನಿರ್ಗತಿಕರಾಗಿ ಕಂಡುಬಂದವರಿಗೆ ಸರ್ಕಾರದಿಂದ ಸಹಾಯ ಮಾಡಬೇಕೆಂತಲೂ, ಈ ರಿಯಾಯಿತಿಯನ್ನು ಇತರ ಪ್ರದೇಶಗಳಿಗೆ ಅನ್ವಯಿಸಕೂಡದೆಂತಲೂ ಗವರ್ನಮೆಂಟಿನವರು ಹುಕುಂ ಕೊಟ್ಟಿರುತ್ತಾರೆ

ಗೋಕಾಯಿಗಳ ಮೇವಿಗೆ ಏರ್ಪಾಡು

ಗೋಕಾಯಿಗಳಿಗೆ ರೈತರು ಹುಲ್ಲು ಕಾಣದೆ ಬಹಳ ಚಿಂತೆ ಪಡುತ್ತಿದ್ದಾರೆಂಬ ಸಂಗತಿಯನ್ನು ಫಾರೆಸ್ಟ್ ಕನ್ಸರ್ವೇಟರವರು ಕೇಳಿ, ತುಮಕೂರು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ದನಗಳಿಗೋಸ್ಕರ ಬುಕ್ಕಾಪಟ್ಟಣ, ತೀರ್ಥರಾಂಪುರ, ದಾಸೋಡಿ, ಕುದುರೆ ಕಣಿವೆಗಳ ಸ್ಟೇಟ್ ಫಾರೆಸ್ಟುಗಳನ್ನೂ, ಅರಸೀಕೆರೆ, ಚನ್ನರಾಯಪಟ್ಟಣಗಳಿಗೆ ಸೇರಿದ ಹಿರೀಕಲ್ಲುಗುಡ್ಡ, ನೇಸಾಸಿ, ಬಸವೆಕಲ್ಲು, ಬಾಳನಕಟ್ಟೆ, ಬೆಟ್ಟದಪುರ, ಬಾಜೂರು, ರಾಮನಹಳ್ಳಿ, ಪರಮತ್ತಿನಹಳ್ಳಿ, ಗೌಡಕೆರೆ, ಮಂಟಿಗುಡ್ಡ, ಅಮ್ಮನಕಟ್ಟೆ ಎಂಬೀ ಸ್ಟೇಟ್ ಫಾರೆಸ್ಟುಗಳನ್ನೂ, ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಹುಲಿಯೂರುದುರ್ಗ, ಹಂಡಲಕೊಪ್ಪ, ದೇವರಾಯದುರ್ಗ, ಮಂಚಲದೊರೆ ಎಂಬೀ ಸ್ಟೇಟ್ ಫಾರೆಸ್ಟುಗಳನ್ನೂ, ರಾಮದುರ್ಗ, ಕೋಟೆ ಗುಡ್ಡ, ಕೋಟೆಹಳ್ಳಿ ಕಾವರಗಾಲ, ರಂಗನಾಥಪುರ, ಸಿದಗಲ್ಲು, ಮದ್ದಗಿರಿ, ಚಿಕ್ಕ ಮದ್ದಗಿರಿ ಎಂಬೀ ಸ್ಟೇಟ್ ಫಾರೆಸ್ಟುಗಳನ್ನೂ ರೈತರಿಗೆ ಬಿಟ್ಟುಕೊಟ್ಟಿದ್ದಾರೆ ಈ ಫಾರೆಸ್ಟುಗಳಲ್ಲಿ ದನಗಳ ಮೇವಿಗೆ ಸರ್ಕಾರದವರು ಯಾವ ರುಸುಮನ್ನೂ ತೆಗೆದುಕೊಳ್ಳುವುದಿಲ್ಲವೆಂದು ಹೇಳಿ ಮಾಫಿ ಬಿಟ್ಟಿರುತ್ತಾರೆ

ಗೋಕಾಯಿಗಳ ಸಂಚಾರವು.

ತಿಪ್ಟೂರು ತಾಲ್ಲೂಕಿನ ೮೦ ದನಗಳೂ, ಕುಣಿಗಲ್ ತಾಲ್ಲೂಕಿನ ೧೩೦ ದನಗಳೂ, ಕಡೂರು ತಾಲ್ಲೂಕಿನ ೮೦ ದನಗಳೂ ಲಕ್ಕವಳ್ಳಿ ಪ್ರಾಂತ್ಯದ ಗ್ರಾಮಾಂತರಗಳಲ್ಲಿ ಮೇವಿಗಾಗಿ ಹೋಗಿದ್ದವು ಅವುಗಳಲ್ಲಿ ಕೆಲವಕ್ಕೆ ಕಾಲುಬಾಯಿ ಜ್ವರವಿತ್ತು ಮಲನಾಡಿನ ಹವಾ ಅವಕ್ಕೆ ಒಗ್ಗದೆ ಹೋದದ್ದರಿಂದ ಗೋಕಾಯಿಗಳು ಅಷ್ಟು ಚನ್ನಾಗಿರಲಿಲ್ಲ ದನಗಳ ರೋಗ ಚಿಕಿತ್ಸಕ ಅಧಿಕಾರಿಯು ಆ ಪ್ರಾಂತ್ಯಕ್ಕೆ ಹೋಗಿ ಅಜಮಾಯಿಷಿಮಾಡಿ, ರೋಗಪರಿಹಾರಕ್ಕೆ ತಕ್ಕ ಔಷಧಾದಿಗಳನ್ನು ಪಾಲಕರಿಗೆ ತಿಳಿಸಿ, ಅಲ್ಲಿಯೇ ಇನ್ನು ಕೆಲವು ಕಾಲ ಇದ್ದು ಹೋಗಬಹುದೆಂದು ವಿವೇಕ ಹೇಳಿ ಬಂದರು ಇನ್ನೊಂದು ಕಡೆಯಲ್ಲಿ ತಿಪ್ಟೂರು ಗ್ರಾಮಗಳ ಕಡೆಯಿಂದ ಹೋಗಿದ್ದ ೬೦೦ ರಾಸುಗಳು ಆ ಪ್ರಾಂತ್ಯ ಮೇಯುತ್ತಿದ್ದವು ತಂಗ್ಲಿ ಶೇಷಯ್ಯಂಗಾರ್ರ ಬಾಬತ್ತು ೨೫೦ ದನಗಳೂ ಬೇರೆ ಕಡೆ ಬಂದಿದ್ದವು ಕೆಲವು ಮಂದೆಗಳಲ್ಲಿ ಕಾಲುಬಾಯಿ ಜ್ವರವಿತ್ತು ತುಮಕೂರು ಡಿಸ್ಟ್ರಿಕ್ಟಿನ ದನಗಳು ಲಿಂಗದಹಳ್ಳಿ ಕಡೆಗೆ ಬಂದಿರುತ್ತವೆ ತುರುವೇಕೆರೆ ಮತ್ತು ತಿಪ್ಟೂರು ಕಡೆಯಿಂದ ತರೀಕೆರೆ ಪ್ರಾಂತ್ಯಕ್ಕೆ ೮೦೦ ರಾಸುಗಳು ಹೋಗಿರುವವು ಬೆಂಕಿಪುರದ ಪ್ರಾಂತ್ಯದಲ್ಲಿದ್ದ ರಾಸುಗಳಿಗೆ ವೈದ್ಯರು ಶಿಡುಬು ಹಾಕಿದ್ದಾಯಿತು

ಸಭೆಯ ತೀರ್ಮಾನಗಳು.

ಕಳೆದ ಜನವರಿ ತಾ ೧೮ರಲ್ಲಿ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಕ್ಷಾಮನಿವಾರಣೆಯ ಏರ್ಪಾಡುಗಳನ್ನು ಕುರಿತು ಚರ್ಚಿಸುವುದಕ್ಕಾಗಿ ಅಧಿಕಾರಿಗಳು ಸೇರಿ ಮೀಟಿಂಗ್ ನಡೆಸಿದರು ಆ ಸಭೆಯಲ್ಲಿ ದಿವಾನರವರು, ಇಬ್ಬರು ಕೌನ್ಸೆಲರುಗಳು, ಚೀಫ್ ಇಂಜನಿಯರವರು, ರೆವಿನ್ಯೂ ಕಮಿಷನರವರು, ಫಾರೆಸ್ಟ್ ಕನ್ಸರ್ವೇಟರವರು, ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರು ಮತ್ತು ಕೋಲಾರದ ಡೆಪ್ಯುಟಿ ಕಮಿಷನರವರು, ಇವರು ಹಾಜರಾಗಿದ್ದರು ಈ ಮೀಟಿಂಗಿನಲ್ಲಿ ಅವರು ಚರ್ಚಿಸಿ ತೀರ್ಮಾನಮಾಡಿರುವ ಮುಖ್ಯ ವಿಷಯಗಳ್ಯಾವವೆಂದರೆ —

ಹುಲ್ಲನ್ನು ಒದಗಿಸುವುದು —ಕೋಲಾರದ ಡೆಪ್ಯುಟಿ ಕಮಿಷನರವರು ದನಗಳ ಮೇವಿಗಾಗಿ ಪ್ಲಾಂಟೇಷನ್‌ಗಳಲ್ಲಿ ಕೂಲಿಕೊಟ್ಟು ಹುಲ್ಲನ್ನು ಕೊಯಿದು ತರಿಸಿ ಅಸಲ್ ಖರೀದಿಗೆ ರೈತರಿಗೆ ಕೊಡುತ್ತೇವೆಂದೂ, ಇದಕ್ಕಾಗಿ ೧,೦೦೦ ರೂಪಾಯಿ ಬೇಕಾಗುವುದೆಂದೂ ಕೇಳುತ್ತಾರೆ ಅವರು ಕೂಡಲೇ ಆ ರೀತಿ ಮಾಡಬಹುದಾಗಿದೆ ಇದಲ್ಲದೆ ರೆವಿನ್ಯೂ ಕಮಿಷನರು ಹುಲ್ಲು ಕತ್ತರಿಸುವುದಕ್ಕೂ ಅವನ್ನು ಅಮುಕಿ ಗಟ್ಟುಗಳಾಗಿ ಮಾಡುವುದಕ್ಕೂ ಅನುಕೂಲಿಸುವಂಥಾ ಯಂತ್ರಗಳನ್ನು ತರಿಸಿಕೊಂಡು, ಇತರ ಡಿಸ್ಟ್ರಿಕ್ಟುಗಳಲ್ಲೂ ಹುಲ್ಲು ಕೊಯಿದು ಶೇಖರಮಾಡುವುದಕ್ಕೆ ಏರ್ಪಾಡು ಮಾಡಬಹುದಾಗಿದೆ ಹುಲ್ಲು ಕೊಯಿದು ಬೇಕಾದ ಸ್ಥಳಗಳಿಗೆ ರವಾನೆ ಮಾಡುವುದಕ್ಕಾಗಿ ೧೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಲಾಗಿದೆ ಫಾರೆಸ್ಟ್ ಕನ್ಸರ್ವೇಟರವರು ಶಿವಮೊಗ್ಗ ಕಡೂರು ಪ್ರಾಂತ್ಯಗಳಲ್ಲಿ ಸಂಚಾರಮಾಡಿದ್ದರಲ್ಲಿ ಇನ್ನೊಂದು ತಿಂಗಳ ವರೆಗೆ ಅಲ್ಲಿನ ರೈತರಿಗೆ ಹುಲ್ಲು ಸಿಕ್ಕುವ ಹಾಗಿದೆ ಎಂದೂ, ಅವಶ್ಯಬಿದ್ದರೆ ೫,೦೦೦ ಟನ್‌ಗಳ ಹುಲ್ಲನ್ನು ಕೊಯಿದು ಒದಗಿಸಬಹುದೆಂದೂ ತಿಳಿಸುತ್ತಾರೆ ಈ ಭಾಗದಲ್ಲಿ ಸಾವಕಾಶಮಾಡಲಾಗದು ಕಾಡುಹುಲ್ಲು ರೈತರ ದನಗಳಿಗೆ ಒಗ್ಗುವುದಕ್ಕಾಗಿ ಈಗಿನಿಂದಲೂ ಅದನ್ನು ಒದಗಿಸುವ ಏರ್ಪಾಡು ಮಾಡಬೇಕು ಕಡೆಯಲ್ಲಿ ಇದರಿಂದ ಸ್ವಲ್ಪ ನಷ್ಟವಾದರೂ ಚಿಂತೆಯಿಲ್ಲ ಆದಕಾರಣ ಫಾರೆಸ್ಟ್ ಕನ್ಸರ್ವೇಟರವರು ದಿನಕ್ಕೆ ೨—೩ ಟನ್‌ಗಳ ಪ್ರಕಾರ ೧,೦೦೦ ಟನ್ ಹುಲ್ಲನ್ನು ಕತ್ತರಿಸಿ, ಅರಸೀಕೆರೆ, ತಿಪ್ಟೂರು, ತುಮಕೂರು ತಾಲ್ಲೂಕ್ ಕಸಬಾಗಳಿಗೂ, ಬಾಣಸಂದ್ರಕ್ಕೂ ಆಯಾ ಸ್ಥಳಗಳಲ್ಲಿ ಸಂತೆ ಕಟ್ಟುವ ಹಿಂದಿನ ದಿನ ತಲಪುವಂತೆ ಒಂದೊಂದು ವ್ಯಾಗನ್ ಭರ್ತಿಯಷ್ಟು ಹುಲ್ಲನ್ನು ರವಾನೆಮಾಡುತ್ತಾ ಬರಬೇಕು

ಅನ್ನಸತ್ರ ಹಾಕಿಸುವುದೂ, ಧಾನ್ಯವನ್ನು ಕೊಡಿಸುವುದೂ —ಸದ್ಯಕ್ಕೆ ಅನ್ನಸತ್ರಗಳನ್ನು ಪ್ರಾರಂಭಿಸಬೇಕಾದ ಅಗತ್ಯ ಕಾಣುವುದಿಲ್ಲ ಆದರೂ ಅಂಥಾ ಸಮಯ ಒದಗಿದ ಪಕ್ಷದಲ್ಲಿ ಅನ್ನಸತ್ರಗಳನ್ನು ಪ್ರಾರಂಭಿಸುವ ವಿಷಯದಲ್ಲಿ ಡೆಪ್ಯುಟಿ ಕಮಿಷನರುಗಳು ಸಿದ್ಧರಾಗಿರಬೇಕು ಗ್ರಾಮಾಂತರಗಳಲ್ಲಿ ಧಾನ್ಯದ ಪಡಿಗಳನ್ನು ಬಡಬಗ್ಗರಿಗೆ ಅಳೆಯುವಂತೆ ಹುಕುಂ ಕೊಟ್ಟಿರೋದರಿಂದ ಅಲ್ಲಿ ಅನ್ನಸತ್ರಗಳು ಬೇಕಾಗುವುದಿಲ್ಲ ತಾಲ್ಲೂಕ್ ಕಸಬೆಗಳಂಥಾ ದೊಡ್ಡ ಊರುಗಳಲ್ಲಿ ಅನ್ನಸತ್ರಗಳನ್ನು ಪ್ರಾರಂಭಿಸಬೇಕಾದೀತು ಆದರೂ ಡಿಸ್ಟ್ರಿಕ್ಟ್ ಅಧಿಕಾರಿಗಳಿಗೆ ಈ ಏರ್ಪಾಡಿನ ಜವಾಬ್ದಾರಿಯನ್ನೆಲ್ಲಾ ವಹಿಸಲಾಗಿರುತ್ತದೆ ಅತ್ತಲಾಗಿ ಸಂಸ್ಥಾನದ ಘಾಟಾ ಮಾರ್ಗಗಳಲ್ಲಿ ಪ್ರಜೆಗಳ ಆಮದು ರಫ್ತಿರುವ ಕಡೆಗಳಲ್ಲಿರುವಂಥಾ ಪೋಲೀಸ್ ಸ್ಟೇಷನ್‌ಗಳನ್ನು ಕಷ್ಟಪರಿಹಾರದ ಮಾರ್ಗನ್ನಾಗಿ ಮಾಡಿ, ಜೀವನಕ್ಕಿಲ್ಲದೆ ಅಲೆಯುವವರನ್ನು ಕಂಡಕೂಡಲೆ ಅವರಿಗೆ ಧಾನ್ಯಾದಿಗಳನ್ನು ಒದಗಿಸಿಕೊಡುವಂತೆಯೂ, ಅನ್ನಸತ್ರಗಳಿರುವ ಸ್ಥಳಗಳನ್ನೂ, ದನಗಳಿಗೆ ಮೇವು ಸಿಕ್ಕುವ ಪ್ರದೇಶಗಳನ್ನೂ ಪ್ರಜೆಗಳಿಗೆ ಪೋಲೀಸಿನವರು ತಿಳಿಯಪಡಿಸುವಂತೆಯೂ ರೆವಿನ್ಯೂ ಕಮಿಷನರವರು ಏರ್ಪಾಡುಮಾಡಬೇಕು ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಪುರಾಭಿವೃದ್ಧಿಯ ಕಾಮಗಾರಿಗಳನ್ನು ಬಡಬಗ್ಗರಿಂದ ರಿಲೀಫ್ ಕೆಲಸದಂತೆ ಮಾಡಿಸಬಹುದು ಸರ್ಕಾರಿ ಅಧಿಕಾರಿಗಳೂ ಬೇರೋಜುಗಾರರಾದ ದೊಡ್ಡ ಮನುಷ್ಯರೂ ಕಮಿಟಿಗಳಾಗಿ ನಿಂತು ಆ ಕಾಮಗಾರಿಗಳ ಮೇಲ್ವಿಚಾರಣೆ ನೋಡಿಕೊಳ್ಳಬಹುದು

ಚೀಫ್ ಇಂಜನಿಯರವರು ಕಾಮಗಾರಿಗಳನ್ನು ಮಾಡಿಸುವುದರಲ್ಲೂ ಕಂಟ್ರಾಕ್ಟರುಗಳಿಗೆ ದೇಶೀಯ ಪ್ರಜೆಗಳನ್ನೇ ಕೆಲಸಕ್ಕೆ ಉಪಯೋಗಿಸಿಕೊಳ್ಳುವಂತೆ ಹೇಳಿ ಈ ಮೂಲಕ ಕಷ್ಟನಿವಾರಣೆ ಮಾಡಬಹುದಾಗಿದೆ ರೆವಿನ್ಯೂ ಕಮಿಷನರವರು ಡೆಪ್ಯುಟಿ ಕಮಿಷನರುಗಳನ್ನೂ ಇಂಜನಿಯರ್ ಇಲಾಖೆಯವರನ್ನೂ ಕಂಡು ಅವರ ಸಲಹೆಗಳನ್ನು ಪಡೆದು ದೊಡ್ಡ ದೊಡ್ಡ ಕೆಲಸಗಳನ್ನು ಪ್ರಾರಂಭಿಸಿ ರಿಲೀಫ್ ಕಾಮಗಾರಿಗಳಂತೆ ಮಾಡಿಸಬಹುದಾಗಿರುತ್ತದೆ ಕೋಲಾರದಲ್ಲಿ ಎ|| ಇಂಜನಿಯರ ಮೂಲಕ ಅವಶ್ಯವಾದ ಕಡೆಗಳಲ್ಲಿ ಬಾವಿತೋಡುವ ಯಂತ್ರಗಳನ್ನುಪಯೋಗಿಸಿ ನೀರನ್ನು ಎತ್ತಿ ಒದಗಿಸುವಂತೆ ಏರ್ಪಾಡು ಮಾಡತಕ್ಕದ್ದು

ಆಹಾರ ಧಾನ್ಯಗಳನ್ನು ತರಿಸುವುದು —ಹೊರಗಿನಿಂದ ಆಹಾರ ದಿನಸಿಗಳನ್ನೂ, ಮೇವಿನ ಹುಲ್ಲನ್ನೂ ತರಿಸುವ ವಿಷಯದಲ್ಲಿ ರೆವಿನ್ಯೂ ಕಮಿಷನರವರು ತರದೂದು ಮಾಡಬೇಕಾಗಿರುತ್ತದೆ ಅವರು ಒಬ್ಬ ಅಧಿಕಾರಿಯನ್ನು ಮದರಾಸಿಗೆ ಕಳುಹಿಸಬಹುದಾಗಿದೆ ಧಾನ್ಯಗಳನ್ನು ಸುಲಭ ದರಕ್ಕೆ ಸಾಗಿಸಿ ತಂದು ಕೊಡುವ ವಿಷಯದಲ್ಲಿ ರೆವಿನ್ಯೂ ಕಮಿಷನರವರಿಗೂ ರೈಲ್ವೆ ಕಂಪನಿಯವರಿಗೂ ಆಗಲೇ ಕಾಗದ ಪತ್ರಗಳು ನಡೆಯುತ್ತಿರುವಂತೆ ತಿಳಿದು ಬಂದಿದೆ ಈ ಭಾಗದಲ್ಲಿ ಗವರ್ನಮೆಂಟಿನಿಂದ ಆಗಬೇಕಾಗಿರುವುದನ್ನು ತಿಳಿಸಿದರೆ ಮಾಡಬಹುದಾಗಿದೆ

ನೇಯ್ಗೆಯವರಿಗೆ ಸಹಾಯ ಕೊಡುವುದು —ನೇಯ್ಗೆ ಕಸಬನ್ನು ನಡಿಸತಕ್ಕವರಿಗೆ ಜೀವನಕ್ಕೆ ತುಂಬಾ ಕಷ್ಟವಾಗಿರೋದರಿಂದ ಪ್ರತಿ ಒಂದು ಮಗ್ಗಕ್ಕೂ ೧೦ ರಿಂದ ೧೫ ರೂಪಾಯಿ ವರೆಗೆ ಅಡ್ವಾನ್ಸು ಕೊಡಬೇಕಾಗಿದೆ ಎಂತಲೂ, ಇದಕ್ಕಾಗಿ ಇನ್ನೂ ೧,೫೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿಕೊಡಬೇಕೆಂತಲೂ ರೆವಿನ್ಯೂ ಕಮಿಷನರವರು ಕೇಳಿರುತ್ತಾರೆ ಅವರಿಗೆ ಸಹಾಯ ಮಾಡುವ ವಿಷಯದಲ್ಲಿ ಬೇರೆ ಬೇರೆ ಡಿಸ್ಟ್ರಿಕ್ಟುಗಳಲ್ಲಿ ಬೇರೆ ಬೇರೆ ತರಹಾ ಏರ್ಪಾಡುಗಳು ಇರೋದರಿಂದಲೂ, ಆ ಪೈಕಿ ಕೆಲವು ಆಕ್ಷೇಪಣೆಯುಗಳಿಗೆ ಕಾರಣವಾದದರಿಂದಲೂ ಗವರ್ನಮೆಂಟಿನವರು ರೆವಿನ್ಯೂ ಕಮಿಷನರವರಿಂದ ಕೆಲವು ವಿವರಗಳನ್ನು ಕೇಳಿ ತಿಳಿದುಕೊಂಡು ಹುಕುಂ ಕೊಡಬೇಕಾಗಿರುವುದು

ಮೈಸೂರು ಶ್ರೀ ಕೃಷ್ಣರಾಜ ಕೃಷಿ ಶಿಲ್ಪಾಭಿವರ್ಧಕ ಸಮಾಜವು.

1907ನೇ ಇಸವಿ ನವಂಬರ್ ಲಾಗಾಯಿತು 1909ನೇ ಇಸವಿ ಜನವರಿ ಆಖೈರು ವರಗಿನ ರಿಪೋರ್ಟು.

ಕಳೆದ ಭಾನುವಾರ ಮಧ್ಯಾಹ್ನ ಮೇಲ್ಕಂಡ ಸಂಘವು ರಾಜಧಾನಿಯ ಟೌನ್ ಹಾಲ್ ಬಂಗಲಿಯಲ್ಲಿ ನಡೆಯಿತು ಇಲ್ಲಿನ ಬಹು ಮಂದಿ ದೊಡ್ಡ ಮನುಷ್ಯರೂ ತಾಲ್ಲೂಕುಗಳಿಂದ ಬಂದಿದ್ದ ರೈತ ಪ್ರಜೆಗಳ ಮುಖಂಡರೂ ಸಭೆಯಲ್ಲಿ ಹಾಜರಾಗಿದ್ದರು. ಪೆನ್‌ಷನ್ ಡಿಸ್ಟ್ರಿಕ್ಟ್ ಜಡ್ಜ್ ರಾದ ಮೆ|| ಬಿ. ಕೃಷ್ಣಮಾಚಾರ್ಯರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಮೇಲ್ಕಂಡ ಸಂಘದ ಸೆಕ್ರೆಟರಿಯವರಾದ ಅಡ್ವೋಕೇಟ್ ಮೆ|| ಎಚ್. ನರಸಿಂಗರಾಯರು ಸಭಿಕರಿಗೆ ಸಂಘದ ವಾರ್ಷಿಕ ರಿಪೋರ್ಟನ್ನು ಓದಿ ತಿಳಿಸಿದರು ಅದರ ಮುಖ್ಯ ಭಾಗಗಳನ್ನು ತೆಗೆದು ಇಲ್ಲಿ ಪ್ರಕಟಿಸಿರುತ್ತೇವೆ

ಮೆಂಬರುಗಳ ಸಂಖ್ಯೆ.

ಈ ಸಮಾಜವು ಪ್ರಾರಂಭವಾದಾಗ 175 ಜನರು ಮೆಂಬರುಗಳಾಗಿ ಸೇರಿದರು ಈ ಪೈಕಿ 110 ಜನಗಳು ತಮ್ಮ ಬಾಬುತು ಷೇರು ವಗೈರೆ ಕೊಟ್ಟರು ಬಾಕಿ ಇದುವರಿವಿಗೂ ಕೊಡದೇ ಇರತಕ್ಕವರ ಸಂಖ್ಯೆ 65, ಪೂರಾ ವಾಪಸು ಮಾಡಿರತಕ್ಕವರು 25 ಜನಗಳು, ಹೊಸದಾಗಿ ಸೇರಿರತಕ್ಕವರು 47, ಬಿಟ್ಟವರ ಸಂಖ್ಯೆ 8 ಜುಮ್ಲಾ ಹಾಲಿ ರಿಜಿಸ್ಟರಿನಲ್ಲಿ ಇರತಕ್ಕವರು 204. ಅಲ್ಲದೆ 1,113 ಷೇರುಗಳು ಖಚಾಗಿರುತ್ತವೆ.

ಜಮಾ ಖರ್ಚು.

1908ನೇ ಇಸವಿ ಜನವರಿ ಲಾಗಾಯಿತು ಅಂದರೆ ಈ ಸಮಾಜವು ರಿಜಿಸ್ಟರು ಆದ ಲಾಗಾಯಿತು 1909 ನೇ ಇಸವಿ ಜನವರಿ ಆಖೈರು ವರಿವಿಗೆ ವಸೂಲಾದ ಮೊಬಲಗುಗಳ ತಪಶೀಲು :—

ಜಮಾ ರೂ. 2,741—11—3 ಪೈ; ಈ ಪೈಕಿ ರೂ. 878—5—0 ಖರ್ಚಾಗಿ, ರೂ. 1,863—6—3 ಪೈ ನಗದು ಹಾಜರಿ ಇರುತ್ತದೆ. ಸೇವಿಂಗ್ಸ್ ಬ್ಯಾಂಕಿನಲ್ಲಿ ಇರತಕ್ಕ ಹಣಕ್ಕೆ ಬಡ್ಡಿ ಜೂನ್ ಮಾಹೆ ಆಖೈರಿಗೆ ಬರತಕ್ಕದ್ದಾಗಿರುವುದರಿಂದ ಇದುವರಿವಿಗೂ ಷೇರು ತೆಗೆದುಕೊಂಡಿರತಕ್ಕವರಿಗೆ ಬಡ್ಡಿ ಬಟವಾಡೆ ಮಾಡಲು ಅವಕಾಶವಿಲ್ಲ. ಷೇರುದಾರರುಗಳಿಂದ ವಸೂಲಾದ ಹಣ ರೂ 2,214—11—0ರಲ್ಲಿ 500 ರೂಪಾಯಿಗಳನ್ನು ರಾ|| ವಾಸುದೇವಯ್ಯನವರಿಗೆ ಕೊಟ್ಟಿರುವುದು ಜಾತಾ, ಬಾಕಿ ಮೊಬಲಗಿಗಿಂತ ಹೆಚ್ಚು ಹಣ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಾಜರು ಇರೋಣದರಿಂದ ಷೇರುದಾರರುಗಳು ತಮ್ಮ ಅಸಲು ಷೇರು ಮೊಬಲಗಿನ ವಿಷಯದಲ್ಲೂ ಮತ್ತು ಸೇವಿಂಗ್ಸ್ ಬ್ಯಾಂಕ್ ದರ ಪ್ರಕಾರ ಬಡ್ಡಿ ಹೊಂದುವ ವಿಷಯದಲ್ಲೂ ಯೋಚಿಸಬೇಕಾದದ್ದಿಲ್ಲ

ರೀಡಿಂಗು ರೂಮು.

ಮೈಸೂರು ಎಗ್ರಿ ಭವನ್ ಕಟ್ಟಡದಲ್ಲಿ ಒಂದು ರೀಡಿಂಗ್ ರೂಮನ್ನು ಸ್ಥಾಪಿಸಿ, ವ್ಯವಸಾಯ ಕೈಗಾರಿಕೆಗಳ ವಿಷಯವಾದ ಪತ್ರಿಕೆಗಳನ್ನು ತರಿಸುತ್ತಿದಾರೆ. ಇವುಗಳನ್ನು ಓದಿ ಪ್ರಯೋಜನ ಹೊಂದದೆ ಇರುವುದು ಶೋಚನೀಯವಾಗಿದೆ

ಮ್ಯೂಜಿಯಮ್.

ಮೈಸೂರು ಪಟಾ ಇಂಡಸ್ಟ್ರಿಯಲ್ ಮತ್ತು ಅಗ್ರಿಕಲ್ಚರಲ್ ಎಗ್ರಿ ಭವನ್ನಿಗೆ ಬಂದಿದ್ದ ಧಾನ್ಯಗಳ ಪೈಕಿ ಮುಖ್ಯವಾದ ಧಾನ್ಯಗಳಲ್ಲಿ ಸುಮಾರು ನೂರು ತರಹ ಕಾಳುಗಳನ್ನು ಎಗ್ರಿ ಭವನ್ ಬಿಲ್ಡಿಂಗಿನ ಮೇಲ್ಗಡೆ ಟೀನ್ ಡಬ್ಬಿಗಳನ್ನು ಮಾಡಿಸಿ, ಅದಕ್ಕೆ ಕನ್ನಡಿ ಬಾಗಿಲು ಮಾಡಿಸಿ, ಆ ಧಾನ್ಯಗಳನ್ನು ಕಾಣುವ ಹಾಗೂ ಮತ್ತು ಅವುಗಳ ಹೆಸರು, ಸಿಕ್ಕ ತಕ್ಕ ಸ್ಥಳ ವಗೈರೆ ತಿಳಿಯತಕ್ಕ ಬಗ್ಗೆ ಒಂದು ಕಾರ್ಡನ್ನು ಅವುಗಳಿಗೆ ಹತ್ತಿಸಿ ಇಡಿಸಿರುತ್ತೆ ಈ ಧಾನ್ಯಗಳ ಪೈಕಿ ಮೆಂಬರುಗಳು ಯಾವುವನ್ನು ಅಪೇಕ್ಷಿಸಿದಾಗ್ಯೂ, ತರಿಸಿ ಕೊಡುವುದಕ್ಕೆ ತಕ್ಕ ಏರ್ಪಾಡು ಮಾಡಿರುತ್ತದೆ. ಈ ಧಾನ್ಯಗಳ ತಪಶೀಲುಗಳನ್ನು ಕಾಣಿಸಿ, ಇವುಗಳನ್ನು ಬೆಳೆ ಮಾಡತಕ್ಕ ಕ್ರಮವನ್ನು ನಮೂದಿಸಿ, ಎಲ್ಲಾ ಮೆಂಬರುಗಳಿಗೂ ಒಂದು ಲಿಸ್ಟನ್ನು ಅಚ್ಚು ಹಾಕಿಸಿ ಸಾದರಪಡಿಸಿರುತ್ತೆ

ವ್ಯವಸಾಯದ ಕಮಿಟಿ.

ಈ ಕಮಿಟಿಯವರು 1908ನೇ ಫೆಬ್ರವರಿ ಮಾಹೆಯಲ್ಲಿ ಒಂದು ಮೀಟಿಂಗು ಸೇರಿದರು ಆ ಕಾಲದಲ್ಲಿ ಮ|| ರಾ|| ಕೆ. ನರಸುಬ್ರಹ್ಮಣ್ಯಂಗಾರ್ರವರಿಂದ ಕಮಿಟಿಯವರ ಮುಂದಿಟ್ಟ ಅಭಿಪ್ರಾಯಗಳು ಚರ್ಚೆಮಾಡಿ ಅಂಗೀಕರಿಸಲ್ಪಟ್ಟವು. ಅವುಗಳಲ್ಲಿ ಕಳೆದ ವರ್ಷ ನಾವುಗಳು ಗಮನಕೊಡುವುದಕ್ಕೆ ಸಾಧ್ಯವಾದವುಗಳು ಯಾವುವೆಂದರೆ,—(೧) ಹೊಸ ಬೀಜಗಳನ್ನು ಬೆಳೆದು ಪರೀಕ್ಷಿಸುವುದು, (೨) ಹೊಸ ಗೊಬ್ಬರಗಳನ್ನು ಉಪಯೋಗಿಸಿ ಪರೀಕ್ಷಿಸುವುದು; (೩) ಭತ್ತದ ಪೈರುಗಳಲ್ಲಿ ಒಂದೊಂದೇ ಪೈರನ್ನು ಒಂದಡಿ ಅಥವಾ ಒಂದೂ ಕಾಲು ಅಡಿ ಅಂತರದಲ್ಲಿ ನಾಟುವುದು. ಈ ಉದ್ದೇಶಗಳಿಂದ ಎರಡು ತರಹ ನಾಲ್ಕು ತಿಂಗಳ ಭತ್ತ, ಒಂದು ತರಹ ಮೂರು ತಿಂಗಳ ಭತ್ತ, ಒಂದು ತರಹ ನಾಲ್ಕು ತಿಂಗಳ ಕಡ್ಲೇಕಾಯಿ, ಎರಡು ತರಹ ಹತ್ತೀ ಬೀಜ ಇವುಗಳನ್ನೂ, ಎಲುಬಿನ ಪುಡಿ ಪಿಟ್ಲುಪ್ಪು, ಈ ಗೊಬ್ಬರಗಳನ್ನು ಯಾರ್ಯಾರು ಅಪೇಕ್ಷಿಸುವರೋ ತಿಳಿಸಬೇಕೆಂದು ಒಂದು ನೋಟೀಸನ್ನು ಮೆಂಬರುಗಳಿಗೆಲ್ಲಾ ಕಳುಹಿಸಿಕೊಟ್ಟದ್ದು ತಮ್ಮೆಲ್ಲರಿಗೂ ವೇದ್ಯವಿರುತ್ತಷ್ಟೆ. ಈ ಭಾಗದಲ್ಲಿ ಹ| ರೆವಿನ್ಯೂ ಕಮಿಷನರ್ ಸಾಹೇಬರವರು ದಯವಿಟ್ಟು ನಮಗೆ ಮಾಡಿರತಕ್ಕ ಸಹಾಯವನ್ನು ಇಲ್ಲಿ ನಮೂದಿಸತಕ್ಕದ್ದಾಗಿದೆ ನಮ್ಮ ಕೋರಿಕೆಯ ಮೇರೆ ಮೂರು ತರಹ ಭತ್ತ 250 ಸೇರು, ಎರಡು ತರಹ ಗೊಬ್ಬರ 800 ಪೌನು, ಎರಡು ತರಹ ಹತ್ತೀ ಬೀಜ 10 ಪೌನು, ಇವುಗಳನ್ನು ಈ ಸಮಾಜಕ್ಕೆ ಮುಫತ್ತಾಗಿ ಕೊಟ್ಟರು. ಇವುಗಳನ್ನು ಅಪೇಕ್ಷಿಸಿದವರಿಗೆ ಮುಫತ್ತಾಗಿ ಕೊಟ್ಟಿರುತ್ತದೆ ಇದಲ್ಲದೆ ಈ ಬೀಜಗಳ ಮತ್ತು ಗೊಬ್ಬರಗಳ ಉಪಯೋಗದ ವಿಷಯದಲ್ಲಿಯೂ ತಿಳಿಯಬೇಕಾದ ಸಂಗತಿಗಳನ್ನು ಅಚ್ಚುಹಾಕಿದ ಸರ್ಕ್ಯೂಲರ್ ಮೂಲಕ ಮೆಂಬರುಗಳಿಗೆಲ್ಲಾ ತಿಳಿಸಿರುತ್ತದೆ. ಭತ್ತದ ಬೀಜಗಳನ್ನು ಬೆಳೆದು ಅಜಮಾಯಿಷಿ ಮಾಡುವುದಕ್ಕಾಗಿ ತೆಗೆದುಕೊಂಡ ಮೆಂಬರುಗಳ ಸಂಖ್ಯೆ 15, ಗೊಬ್ಬರಗಳನ್ನು ತೆಗೆದುಕೊಂಡವರು 14 ಜನರು. ಇವುಗಳ ಫಲಿತಾಂಶವನ್ನು ದಯವಿಟ್ಟು ತಿಳಿಸಬೇಕೆಂದು ಕೇಳಿಕೊಂಡದ್ದಕ್ಕೆ 5—6 ಮೆಂಬರುಗಳು ಮಾತ್ರ ತಿಳಿಸಿರುವರು. ಮಳೆ ಬಾರದಿದ್ದದ್ದಕ್ಕಾಗಿ ಪೈರು ಹಾಳಾಯಿತೆಂದು 2—3 ಜನರು ತಿಳಿಸುತ್ತಾರೆ.

ಈ ಸಮಾಜವು ಇನ್ನೂ ಪೂರ್ವವಯಸ್ಸಿನಲ್ಲಿರುವುದರಿಂದ ಕ್ರಮೇಣ ನಮ್ಮ ಉದ್ದೇಶಗಳು ನೆರವೇರುವುದರಲ್ಲಿ ಸಂದೇಹವಿಲ್ಲವೆಂದು ತೋರುತ್ತದೆ. ಮೆಂಬರುಗಳಿಗೆ ವ್ಯವಸಾಯಾಭಿವೃದ್ಧಿಯಲ್ಲಿ ನಿಸ್ಸಂದೇಹವಾಗಿ ಆಸೆ ಇದೆ. ಇದಕ್ಕಾಗಿ ಅವರುಗಳು ಮಾಡಬೇಕಾದ ಪ್ರಯತ್ನಗಳನ್ನು ತಕ್ಕಕಾಲದಲ್ಲಿ ಮಾಡಬೇಕು. ಮೆಂಬರುಗಳಿಗೆ ಹಂಚಿದ ಬೀಜಗಳೂ ಗೊಬ್ಬರಗಳೂ ಉತ್ತಮವಾದವುಗಳೆಂದು ಮದ್ರಾಸು ಮತ್ತು ಇತರ ಕಡೆಗಳಲ್ಲಿ ತಿಳಿದುಬಂದಿರುತ್ತದೆ. ಇದಲ್ಲದೆ ಇವನ್ನು ಬೆಳೆದ ಈ ಸಮಾಜದ ಮೆಂಬರುಗಳಾದ ನಾ| ರಾ|| ಮಂಡಿಕಲ್ ರಾಮಾಶಾಸ್ತ್ರಿಗಳು, ತಲಕಾಡು ಸುಬ್ರಹ್ಮಣ್ಯನಾರಣಪ್ಪನವರು ಮತ್ತು ಪಿರಿಯಾಪಟ್ಟಣದ ಮಿರ್ ರಜಾ ಅಲಿ ಸಾಹೇಬರವರು ಉತ್ತಮವಾದವುಗಳೆಂದು ಹೇಳುತ್ತಾರೆ. ಈ ಪೈಕಿ ಮೊದಲಿನ ಇಬ್ಬರೂ ಬಾದ್‌ಷಾ ಭೋಗವೆಂಬುವ ಭತ್ತವನ್ನು ಬೆಳೆಮಾಡಿ ಒಂದು ಸೇರಿಗೆ 30 ಸೇರು ಆಯಿತೆಂದೂ, ಇನ್ನೊಬ್ಬರು ಬಂಕೊ ಭತ್ತವನ್ನು ಬೆಳೆಮಾಡಿ ಒಂದು ಸೇರಿಗೆ 14 ಸೇರು ಬೆಳೆಬಾಯಿತೆಂದೂ ತಿಳಿಸುತ್ತಾರೆ. ಆದ್ದರಿಂದ ಇವುಗಳನ್ನು ಎಲ್ಲರೂ ಬೆಳೆದು ಪರೀಕ್ಷಿಸಬೇಕು. ವ್ಯವಸಾಯದಲ್ಲಿ ಒಂದು ಪೈರು ಒಂದು ಹೊಲದಲ್ಲಿ ಬೆಳೆದ ಹಾಗೆ ಪಕ್ಕದ ಜಮೀನಿನಲ್ಲಿ ಬೆಳೆಯುವುದಿಲ್ಲವಾದ್ದರಿಂದ ನಾನಾ ಕಡೆಯಲ್ಲಿಯೂ ಬೆಳೆಮಾಡಿ ಪರೀಕ್ಷಿಸಿದರೆ ವಿನಾ ಇವುಗಳ ವಿಷಯದಲ್ಲಿ ನಿಷ್ಕರ್ಷೆಯಾದ ಫಲಿತಾಂಶವನ್ನು ಹೇಳುವುದಕ್ಕೆ ಆಗುವುದಿಲ್ಲ. ಮೆಂಬರುಗಳಿಗೆ ಹಂಚಿದ ಭತ್ತದ ಬೀಜಗಳು ಯಾವುವೆಂದರೆ.—ಬಾದ್‌ಷಾ ಭೋಗ, ಬಂಕೊ ಭತ್ತ, ಹಳ್ಳ ಭತ್ತ, ಜಪಾನ್ ಶೀಮೆಯ ಕಡ್ಲೇಕಾಯಿ, ಚಾಡಿ ಮತ್ತು ಬರಾ ಎನ್ನುವ ಹತ್ತೀ ಬೀಜ, ಎಲುಬಿನ ಪುಡಿ ಮತ್ತು ಪಿಟ್ಲುಪ್ಪು ಈ ಗೊಬ್ಬರಗಳೂ ಮೆಂಬರುಗಳಿಗೆ ಅಜಮಾಯಿಷಿಗಾಗಿ ಹಂಚಲ್ಪಟ್ಟವು ಮೆಂಬರುಗಳಿಗೆ ರವಾನಿಸಲ್ಪಟ್ಟ ಸರ್ಕ್ಯೂಲರಿನಲ್ಲಿ ತಿಳಿಸಿದ್ದ ರೀತಿಯಲ್ಲಿ ಇದನ್ನು ಅನೇಕರು ಉಪಯೋಗಿಸಲಿಲ್ಲವೆಂದು ತೋರಿಬರುತ್ತದೆ. ಹೆಚ್ಚಾಗಿ ಭತ್ತ ಬೆಳೆಯುವ ಶ್ರೀರಂಗಪಟ್ಟಣ ಮೊದಲಾದ ಸ್ಥಳಗಳಲ್ಲಿ ದನದ ಗೊಬ್ಬರ ಸಾಕಾದಷ್ಟು ಸಿಕ್ಕುವುದಿಲ್ಲವಾದ್ದರಿಂದ ಅಂತಾ ಕಡೆಗಳಲ್ಲಿ ಈ ಗೊಬ್ಬರಗಳನ್ನು ಉಪಯೋಗಿಸುವ ವಾಡಿಕೆಯನ್ನು ಅನುಸರಿಸುವುದರಿಂದ ಪ್ರಯೋಜನವುಂಟೆಂದು ತೋರುತ್ತದೆ ಈ ಭಾಗದಲ್ಲಿ ಈ ವರ್ಷ ಹೆಚ್ಚು ಮುತುವರ್ಜಿಯನ್ನು ಕೊಡಬೇಕಾಗಿ ಕೋರುತ್ತೇವೆ.

ನಮ್ಮ ದೇಶದಲ್ಲಿ ವಾಡಿಕೆಯಾಗಿ 3—4 ಪೈರುಗಳನ್ನು ಸುಮಾರು ಒಂದು ಗೇಣು ಅಂತರದಲ್ಲಿ ನಾಟುವ ಪದ್ಧತಿ ಇದೆ. ಇದಕ್ಕೆ ಬದಲಾಗಿ ಒಂದೊಂದು ಪೈರನ್ನು ಜಮೀನಿನ ಫಲವತ್ತಿಗನುಸಾರವಾಗಿ ಒಂದು ಅಡಿ ಅಂತರದಿಂದ ೧½ ಅಡಿ ಅಂತರದ ವರೆಗೆ ನಾಟಿ ಪರೀಕ್ಷಿಸಬೇಕೆಂದು ಸರ್ಕ್ಯೂಲರ್ ಪತ್ರಿಕೆಯಲ್ಲಿ ವಿಜ್ಞಾಪಿಸಿತ್ತು. ಆ ಭಾಗದಲ್ಲಿ ಒಬ್ಬರೂ ಗಮನಕೊಟ್ಟ ಹಾಗೆ ತೋರುವುದಿಲ್ಲ ಇದೇ ವಿಷಯದಲ್ಲಿ ಸಾಪ್ರಯತ್ನವಾಗಬೇಕಾಗಿದೆ

ಈ ಸಮಾಜದವರು 10 ರೂಪಾಯಿಕೊಟ್ಟು ಜೋಳದ ಕಡ್ಡಿಯನ್ನು ಕತ್ತರಿಸಿ ತಕ್ಕ ಯಂತ್ರವನ್ನು ಕೊಂಡುಕೊಂಡಿರುತ್ತಾರೆ. ಇದು ಬಹಳ ಉಪಯೋಗಕರವೆಂದು ತೋರುತ್ತದೆ ಇದು ಜೋಳದ ಕಡ್ಡಿ ಪೋಲಾಗದಂತೆಯೂ, ದನವು ಮೇಯುವುದಕ್ಕೆ ಸುಲಭವಾಗಿರುವ ಹಾಗೂ, ಬಾಗ್ರತೆ ಈ ಯಂತ್ರದಿಂದ ಜೋಳದ ಕಡ್ಡಿಗಳನ್ನು ಕತ್ತರಿಸಲು ಅನುಕೂಲವಾಗಿಯೂ ಇರುತ್ತದೆ.

ಇಂಡಸ್ಟ್ರಿಯಲ್ ಮೀಟಿಂಗು.

ಹಾರುವ ಲಾಳಿಯುಳ್ಳ ಹೊಸ ತರಹಾ ಮಗ್ಗಗಳಲ್ಲಿ ಕೆಲಸ ಮಾಡುವುದನ್ನು ಕಲಿತು ಬರುವುದಕ್ಕಾಗಿ ಮೈಸೂರಿನ ಒಬ್ಬಾತನಿಗೆ ಸಂಘದಿಂದ ವೇತನ ಕೊಟ್ಟು ಶೇಲಂಗೆ ಕಳುಹಿಸಿದಾರೆ ಆತನು ಅಲ್ಲಿಯ ಗವರ್ನ್‌ಮೆಂಟ್ ನೆಯ್ಗೆ ಕಾರ್ಖಾನೆಯಲ್ಲಿ ಕೆಲಸ ಕಲಿತುಕೊಳ್ಳುತ್ತಿರುವನು ಕಲಿಯತಕ್ಕ ಭಾಗ ವಿಶೇಷವಾಗಿರೋಣದರಿಂದ ಆರು ತಿಂಗಳ ವರೆಗೆ ಆತನು ಅಲ್ಲೇ ಇರಬೇಕಾಗಿದೆ ಎಂದು ಅಲ್ಲಿನ ಸೂಪರಿಂಟೆಂಡರು ತಿಳಿಸುತ್ತಾರೆ

ಈ ಸಮಾಜದವರು ಮುಂದೆ ಮಾಡಬೇಕಾದ ಕೆಲಸಗಳು ಯಾವುವೆಂದರೆ :— ಈಗ ಇರತಕ್ಕ ರೀಡಿಂಗು ರೂಮಿಗೆ ಇನ್ನೂ ಕೆಲವು ಹೆಚ್ಚಾದ ಜರ್ನಲ್‌ಗಳನ್ನು ತರಿಸತಕ್ಕದ್ದು; ಮತ್ತು ವ್ಯವಸಾಯ, ಕೈಗಾರಿಕೆಗಳ ವಿಷಯದಲ್ಲಿ ಇರತಕ್ಕ ಒಳ್ಳೇ ಪುಸ್ತಕಗಳನ್ನು ತರಿಸಿ ಒಂದು ಲೈಬ್ರೆರಿಯನ್ನು (ಸರಸ್ವತೀ ಭಂಡಾರ) ಮಾಡತಕ್ಕದ್ದು, ಎಲ್ಲಾ ತಾಲ್ಲೂಕುಗಳಲ್ಲೂ ರೈತರುಗಳಿಗೆ ಪ್ರೋತ್ಸಾಹಪಡಿಸಿ ನೂತನವಾದ ಬೀಜಗಳನ್ನೂ ಮತ್ತು ಗೊಬ್ಬರಗಳನ್ನೂ ಕೊಟ್ಟು ಪರೀಕ್ಷಾರ್ಥವಾಗಿ ಸ್ವಲ್ಪ ಭೂಮಿಯಲ್ಲಿ ವ್ಯವಸಾಯಮಾಡಿ ಅದರ ಫಲಿತಾಂಶವನ್ನು ತಿಳಿಸುವಂತೆ ಮಾಡಿಸತಕ್ಕದ್ದು. ಹೀಗೆ ಮಾಡುವುದರಲ್ಲಿ ಕ್ರಮೇಣ ರೈತರುಗಳಿಗೆ ತಿಳುವಳಿಕೆಯುಂಟಾಗಿ ವ್ಯವಸಾಯವು ಅಲ್ಲಿ ವೃದ್ಧಿಗೆ ಬರಬಹುದು. ಕೈಗಾರಿಕೆ ಕೆಲಸಗಳಲ್ಲೂ ಬಹಳ ವಿಧವಾದ ಕೈಗಾರಿಕೆ ಕೆಲಸಗಳನ್ನು ಜನಗಳಿಗೆ ಕಲಿಯಪಡಿಸಿ ಅದನ್ನು ಅಭ್ಯಾಸ ಮಾಡುವುದಕ್ಕೆ ಕೆಲಸದವರನ್ನು ಸರಿಯಾದ ಸ್ಥಳಕ್ಕೆ ಸ್ಕಾಲರ್‌ಷಿಪ್ ಕೊಟ್ಟು ಕಳುಹಿಸಿ ಅಭ್ಯಾಸ ಮಾಡಿಸಿ ಅಂಥಾ ಕೈಗಾರಿಕೆ ಕೆಲಸವನ್ನು ಈ ಡಿಸ್ಟ್ರಿಕ್ಟಿನಲ್ಲಿ ಮಾಡಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡತಕ್ಕದ್ದು. ಇವೇ ಮೊದಲಾದ ಅನೇಕ ವಿಧದಲ್ಲಿ ಈ ಸಮಾಜವು ಉಪಯೋಗವಾದ ಕೆಲಸ ಮಾಡಬಹುದಾದ್ದರಿಂದ ಎಲ್ಲಾ ಮೆಂಬರುಗಳೂ ಹೆಚ್ಚಾದ ಉತ್ಸಾಹದಿಂದ ಈ ಸಮಾಜಕ್ಕೆ ದ್ರವ್ಯದಿಂದಲೂ ಮತ್ತು ಇತರ ವಿಧದಿಂದಲೂ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ಜಯಪುರ ಸಂಸ್ಥಾನದ ಕೌನ್ಸಿಲ್ ಮೆಂಬರಾದ ನವಾಬ್ ವಜೀರ್ ಅಲ್ಲಿ ಖಾನ್‌ರವರು ಮಕ್ಕಾ ಪಟ್ಟಣಕ್ಕೆ ಯಾತ್ರೆ ಹೋಗುವವರಾಗಿದಾರೆ

ಬೊಂಬಾಯಿ ಪಟ್ಟಣದಲ್ಲಿ ಬಾಲ್ಯವಿದ್ಯೆಯನ್ನು ಕಲಿಸುವುದಕ್ಕೆ ಯೋಗ್ಯವಾದಂಥಾ ಪಾಠಶಾಲೆಗಳನ್ನು ಕಟ್ಟಿಸಿಕೊಡಬೇಕೆಂದು ಗವರ್ನ್‌ಮೆಂಟಿನವರು ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

ಇಟಲಿ ರಾಜ್ಯದ ಭೂಕಂಪದ ರಿಲೀಫ್ ಫಂಡಿಗೆ ಕಲ್ಕತ್ತೆಯಲ್ಲಿ ೭೫,೦೦೦ ರೂಪಾಯಿ ಚಂದಾ ವಸೂಲಾಗಿದೆ. ಗ್ವಾಲಿಯರ್ ಸಂಸ್ಥಾನದ ಮಹಾರಾಜರವರು ೧೦,೦೦೦ ರೂಪಾಯಿ ಚಂದಾ ಕೊಟ್ಟದಾರೆ.

ಪೆಷಾವರಿನಲ್ಲಿ ಮುಲ್ಲಾಖಾನ್ ಎಂಬ ಮುಖಂಡ ದರೋಡೇಕೋರನ ಹಿಂಬಾಲಕರಾಗಿ ಸಿಕ್ಕಿ ಬಿದ್ದಿದ್ದ ಏಳು ಮಂದಿ ದುಷ್ಟರನ್ನೂ ಗವರ್ನ್‌ಮೆಂಟಿನವರು ಕಳೆದ ವಾರ ವಿಚಾರಣೆಮಾಡಿ ಮರಣದಂಡನೆಗೆ ಗುರಿಪಡಿಸಿದರು.

ಕೊಲ್ಹಾಪುರ ಸಂಸ್ಥಾನದಲ್ಲಿ ಕೆಲವರು ಸೇರಿ ಕರ್ನಲ್ ಫೆರ್ರಿಸ್ ಎಂಬ ಹುದ್ದೇದಾರರನ್ನು ಕೊಂದುಹಾಕಬೇಕೆಂದು ಫಿತೂರಿ ಮಾಡಿದ್ದರೆಂದು ಸರ್ಕಾರದವರು ೧೦—೧೨ ಮಂದಿಯನ್ನು ಹಿಡಿದು ದರ್ಯಾಪ್ತಿ ಮಾಡುತ್ತಿದಾರೆ.

ಪಂಜಾಬ್ ಅಧಿಪತ್ಯದ ಪೋಲೀಸ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಮೆ|| ಪಾರ್ಕರವರು ಲಾಹೋರ್ ಪಟ್ಟಣದಲ್ಲಿ ಭಾರೀ ಬಿತಸೋತ್ಸವ ನಡೆಯುತ್ತಿದ್ದಾಗ ಸ್ನೇಹಿತರ ಕೂಡ ಮಾತನಾಡುತ್ತಿರುವಾಗ್ಗೆ ತಾಗೇ ಆಯಿರಿಯ ಮೇಲೆ ಒರಗಿಕೊಂಡು ಪ್ರಾಣಬಿಟ್ಟರು.

ಕಳೆದ ತಿಂಗಳ ಮಾರ್ಚಿ ಲಾಗಾಯಿತು ಹಿಂದುಸ್ಥಾನದ ಟಂಕಸಾಲೆಗಳಲ್ಲಿ ೧೫೫ ಲಕ್ಷ ರೂಪಾಯಿಗಳು ಛಾಪಾ ಮಾಡಲ್ಪಟ್ಟವು. ಮತ್ತು ಅದುವರೆಗೆ ಸಮುಕಲಾದ ೩೦೭ ಲಕ್ಷ ಹಳೇ ರೂಪಾಯಿಗಳನ್ನು ಗವರ್ನ್‌ಮೆಂಟಿನವರು ಚಲಾವಣೆಯಿಂದ ತೆಗೆದು ಕರಗಿಸಿಬಿಟ್ಟರು.

ಕಾಕಿನಾಡಾ ಪಟ್ಟಣದಲ್ಲಿ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಗೆ ಅಲ್ಲಿನ ವೆಂಕಟಾಚಲಪತಿಯವರೂ ಚಲ್ಲಮೈಯನವರೂ ೪೧,೦೦೦ ರೂಪಾಯಿಯನ್ನು ಸರ್ಕಾರದವರ ವಶಕ್ಕೆ ಕೊಟ್ಟದಾರೆ. ಇವರ ಧರ್ಮಬುದ್ಧಿಯನ್ನು ಅಲ್ಲಿನ ಪ್ರಜೆಗಳು ಬಹಳವಾಗಿ ಹೊಗಳುತ್ತಿರುವರು.

ಕಲ್ಕತ್ತಾ ಪಟ್ಟಣದಲ್ಲಿ ವೈಸ್‌ರಾಯಿ ಪ್ರಭುಗಳು ಕಳೆದ ವಾರ ಕಿಶನ್‌ಘಡದ ಮಹಾರಾಜರವರಿಗೂ, ಧೋಲ್‌ಪುರದ ಮಹಾರಾಜ ರಾಣಾರವರಿಗೂ, ಜಿಂದ್ ಸಂಸ್ಥಾನದ ರಾಜರಿಗೂ, ಜಲಾವಾರದ ರಾಜರಾಣಾರವರಿಗೂ, ಪೂಂಚ್ ಸಂಸ್ಥಾನದ ಮಹಾರಾಜರವರಿಗೂ ಭೇಟಿಕೊಟ್ಟು, ಅವರನ್ನೆಲ್ಲಾ ಸತ್ಕರಿಸಿದರು.

ಕಲ್ಕತ್ತೆಯಲ್ಲಿ ದೇಶಸೇವಕರ ಹಿಂಸೆಯು ಹೆಚ್ಚಾಗಿದೆ ಎಂತಲೂ, ಅದನ್ನು ತಪ್ಪಿಸುವುದಕ್ಕೆ ಪೋಲೀಸ್ ಉಸ್ತುವಾರಿಯನ್ನು ಕೊಡಬೇಕೆಂತಲೂ ತಾರಕೇಶ್ವರ ಮಹಂತರವರು ಮ್ಯಾಜಿಸ್ಟ್ರೇಟರಿಗೆ ಅರ್ಜಿ ಬರೆದುಕೊಂಡರು. ಅವರಿಗೆ ಪೋಲೀಸ್ ಕುಮುಕನ್ನು ಕೊಡಬೇಕೆಂದು ಮ್ಯಾಜಿಸ್ಟ್ರೇಟರು ಹುಕುಂ ಕೊಟ್ಟದಾರೆ.

ಮೀರಟ್ ಪಟ್ಟಣದಲ್ಲಿ ೭೦ ವರುಷದ ಒಬ್ಬ ಮಹಮದೀಯನು ಮಕ್ಕಾ ಮದೀನಾ ರೈಲ್ ರಸ್ತೆಯ ಫಂಡಿಗೆ ತಾನು ಚಂದಾ ವಸೂಲಾತತಕ್ಕವನೆಂದು ಜನರಿಗೆ ಮೋಸಪಡಿಸಿ ಹಣವನ್ನು ಕೂಡಿಸಿ ತಿಂದುಹಾಕುತ್ತಾ ಬಂದನು. ಇದು ಪತ್ತೆಯಾಗಿ ಅವನನ್ನು ಹಿಡಿದು ವಿಚಾರಣೆಮಾಡಿ, ಅವನಿಗೆ ಇಪ್ಪತ್ತು ವರುಷಗಳ ಕಠಿಣ ಸಜಾ ವಿಧಿಸಿರುತ್ತಾರೆ.

ನಾಗಪುರದಿಂದ ಚಂದ್ರಾಪುರಾ ಎಂಬ ರಾಜ್ಯಕ್ಕೆ ೯೮ ಮೈಲಿ ದೂರ ರೈಲ್ ರಸ್ತೆಯನ್ನು ಹಾಕಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸ್ಯಾಂಕ್ಷನ್ ಮಾಡಿದಾರೆ. ಮಾಂಗನೀಸ್ ಲೋಹವೂ ಕಲ್ಲಿದ್ದಲ ಗಣಿಗಳೂ ಇರುವ ಪ್ರಾಂತ್ಯದಲ್ಲಿ ಈ ರೈಲ್ ರಸ್ತೆಯು ಹೋಗುತ್ತಾದ್ದರಿಂದ ಗಣಿಗಳ ಕೆಲಸವು ಹೆಚ್ಚುವುದಕ್ಕೆ ತುಂಬಾ ಅನುಕೂಲವಾಗುವುದು.

ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿಯಲ್ಲಿ ಹದಿನಾಲ್ಕು ವರುಷಗಳ ಏಜಂಟರಾಗಿ ಕೆಲಸಮಾಡುತ್ತಿದ್ದು ಕಳೆದ ಜೂನ್ ತಿಂಗಳಲ್ಲಿ ಶೀಮೆಗೆ ಹೋದ ಕರ್ನಲ್ ಜೆ ಬ್ರಿಸನ್ ಮೂರ್ಡಾಕ್ ಯವರು ಕಳೆದ ವಾರ ಕಾಲವಾದರೆಂದು ತಂತೀ ವರ್ತಮಾನ ಬಂದಿದೆ. ಇವರ ಕಾಲದಲ್ಲಿ ಆ ರೈಲ್‌ವೇ ಕಂಪನಿಯು ತುಂಬಾ ಅಭಿವೃದ್ಧಿಗೆ ಬರಲಾಯಿತು.

ಕಾಶೀ ಪಟ್ಟಣದಲ್ಲಿ ಗಾಜಿನ ಸಾಮಾನುಗಳನ್ನು ತಯಾರ್ಮಾಡುವುದಕ್ಕೆ ಒಂದು ಭಾರೀ ಕಾರ್ಖಾನೆಯು ಸ್ಥಾಪನೆಯಾಗಿ ಒಂದು ವರುಷವಾಯಿತು ಮೊದಲನೇ ವಾರ್ಷಿಕ ಮೀಟಿಂಗು ನಡೆಯಿತು ರಾಯ್ ಬಹದೂರ್ ಸುಂದರಲಾಲ್ ಯವರು ಸಭೆಯ ಪ್ರೆಸಿಡೆಂಟರಾಗಿದ್ದರು ಈ ಕಾರ್ಖಾನೆಯಲ್ಲಿ ಕೆಲಸಗಳು ಬಹಳ ತೃಪ್ತಿಕರವಾಗಿ ನಡೆಯುತ್ತಿವೆ ಎಂದು ಆ ರಿಪೋರ್ಟಿನಿಂದ ತಿಳಿದು ಬರುತ್ತದೆ

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಮಿರ್ಜಾಪುರದ ಹತ್ತಿರ ಇಂಗ್ಲಿಷ್ ಸೈನ್ಯಗಳ ಕವಾತು ಕಸರತ್ತುಗಳೂ, ಕೃತಕ ಯುದ್ಧ ಕಾರ್ಯಗಳೂ ನಡೆಯುತ್ತಿವೆ. ಲಖ್ನೋ, ಫೈಜಾಬಾದ್, ಅಲ್ಲಹಾಬಾದ್ ಪ್ರಾಂತ್ಯಗಳಲ್ಲಿರುವ ಸುಮಾರು ೧೦,೦೦೦ ಸೈನಿಕರು ಅಲ್ಲಿ ಸೇರಿರುತ್ತಾರೆ. ಬಹು ಮಂದಿ ಸೈನ್ಯಾಧಿಪತಿಗಳೂ ಹುದ್ದೇದಾರರೂ ಮುಖಂಡರಾಗಿ ನಿಂತು ಎಲ್ಲಾ ಕಾರ್ಯಗಳನ್ನೂ ನಡೆಸುತ್ತಾ ಬಂದಿದಾರೆ

ಕೊಲ್ಹಾಪುರದಲ್ಲಿ ಕೆಲವು ಮಂದಿ ಯೌವನಸ್ಥರು ಸೇರಿಕೊಂಡು ಸಿಡಿಮದ್ದಿನ ಗುಂಡುಗಳನ್ನು ಮಾಡಿ ಅಧಿಕಾರಿಗಳನ್ನು ಕೊಲ್ಲುವ ವಿಷಯವಾಗಿ ನೋಟೀಸುಗಳನ್ನು ಬರೆದು ಊರಿನಲ್ಲೆಲ್ಲಾ ಅಂಟಿಸಿದ್ದರು ಸರ್ಕಾರದವರು ಅವರಲ್ಲಿ ೯ ಮಂದಿಯನ್ನು ಹಿಡಿದು ದರ್ಯಾಪ್ತಿ ಮಾಡಿಸಿದರು. ಮ್ಯಾಜಿಸ್ಟ್ರೇಟರು ಇಬ್ಬರನ್ನು ಖುಲಾಸ್ ಮಾಡಿ, ಉಳಿದ ನಾಲ್ವರಿಗೆ ತಲಾ ೩ ತಿಂಗಳಿಂದ ೧೨ ತಿಂಗಳ ವರೆಗೂ ಕಠಿಣ ಸಜವನ್ನು ವಿಧಿಸಿದರು.

ಕೈಗಾರಿಕೆ ಮತ್ತು ಶಾಸ್ತ್ರ ವಿದ್ಯೆಯನ್ನು ಪ್ರೋತ್ಸಾಹಪಡಿಸುವುದಕ್ಕೆ ಕಲ್ಕತ್ತೆಯಲ್ಲಿ ದೇಶೀಯ ದೊಡ್ಡ ಮನುಷ್ಯರು ಸೇರಿ ಒಂದು ಸಭೆಯನ್ನು ಮಾಡಿ, ಫಂಡನ್ನು ಕೂಡಿಸಿರುತ್ತಾರೆ. ಈ ಸಂಘದವರು ೧೦೦ ಮಂದಿ ವಿದ್ಯಾರ್ಥಿಗಳನ್ನು ತರಪೇತಾಗಿ ಬರುವುದಕ್ಕೆ ಚುನಾಯಿಸಿ, ಅವರಲ್ಲಿ ೨೦ ಮಂದಿಗೆ ೨೫ ರಿಂದ ೧೦೦ ರೂಪಾಯಿ ವರೆಗೆ ವಿದ್ಯಾರ್ಥಿ ವೇತನಗಳನ್ನು ಕೊಡುವುದಾಗಿಯೂ, ೮೦ ಮಂದಿಗೆ ಪ್ರಯಾಣದ ಖರ್ಚುಕೊಡುವುದಾಗಿಯೂ ತೀರ್ಮಾನಮಾಡಿದರು. ಈ ರೀತಿ ಪ್ರತಿ ವರುಷವೂ ಈ ಸಂಘದವರು ಜೀಶೋನ್ನತಿಗಾಗಿ ಸಹಾಯಮಾಡುತ್ತಿದಾರೆ.

ಗುತ್ತಿಯಿಂದ ೧೨ ಮೈಲಿ ದೂರದಲ್ಲಿರುವ ಪಾಮಿಡಿ ಎಂಬ ಸ್ಥಳದಲ್ಲಿ ಕೆಲವು ಕಾಲದಿಂದಲೂ ಹಿಂದೂ ಮಹಮ್ಮದೀಯರಲ್ಲಿ ವಿರೋಧ ವೈಷಮ್ಯಗಳು ಇದ್ದು, ಕಳೆದ ಮೊಹರಂ ಹಬ್ಬದ ಕಡೇ ದಿನ ದೊಂಬಿ ಕಲಹವಾಯಿತು ಇಬ್ಬರು ಮೂವರು ಈ ಕಡಿದಾಟದಲ್ಲಿ ಮೃತಪಟ್ಟರು ಕೆಲವರಿಗೆ ಗಾಯಗಳಾದವು ಅಲ್ಲಿನ ಪೋಲೀಸಿನವರಿಂದ ಕಲಹವನ್ನು ತಡೆಯಲು ಸಾಧ್ಯವಾಗದೆಹೋಯಿತು ಮರುದಿನ ಅನಂತಪುರ, ಗುತ್ತಿ, ತಾಡಪತ್ರಿ, ಧರ್ಮಾವರ ಮುಂತಾದ ಕಡೆಗಳಿಂದ ಸುಮಾರು ೧೫೦ ಮಂದಿ ಪೋಲೀಸಿನವರೂ, ಅಧಿಕಾರಿಗಳೂ ಹೋಗಿ ನಿಂತು ಪ್ರಜಾ ನೆಮ್ಮದಿಯನ್ನು ಕಾಪಾಡುತ್ತಿದಾರೆ

ಆದವೋನಿಯ ತಹಶೀಲ್ದಾರ (ಅಮಲ್ದಾರ)ರಾಗಿದ್ದ ಮಿ॥ ಕೃಷ್ಣಶೆಟ್ಟರು ಅಲ್ಲಿಗೆ ೫ ಮೈಲಿ ದೂರದಲ್ಲಿರುವ ವಿರೂಪಪುರಂ ಎಂಬ ಗ್ರಾಮಕ್ಕೆ ಹೋಗಿ ಇಳುಕೊಂಡು, ಗ್ರಾಮಾಧಿಕಾರಿಗಳು ಸರ್ಕಾರದ ಹಣವನ್ನು ದುರ್ವಿನಿಯೋಗಮಾಡಿದಾರೆಂದು ಕೇಳಿ, ಅವರ ಮನೆಗೆ ಹೋಗಿ ಲೆಕ್ಕ ಪತ್ರಗಳನ್ನು ಅಜಮಾಯಿಷಿ ಮಾಡಿಕೊಂಡು, ತಾವು ಇಳಿದಿದ್ದ ಸ್ಥಳಕ್ಕೆ ವಾಪಸು ಬಂದರು ಬೆಳಗಾದ ಮೇಲೆ ಅವರು ಕ್ಯಾಂಪಿನಲ್ಲಿ ಇರಲಿಲ್ಲ ಸುತ್ತುಮುತ್ತಲು ಹುಡುಕಿ ನೋಡಿದಾಗ ಅವರ ಶವವು ಒಂದು ಹಾಳು ಬಾವಿಯಲ್ಲಿ ಸಿಕ್ಕಿತು ಯಾರೋ ಅವರನ್ನು ಕೊಂದಿರಬೇಕೆಂದು ಅನುಮಾನ ಉಂಟಾಗಿದೆ ಅಧಿಕಾರಿಗಳು ಅಲ್ಲಿಗೆ ಹೋಗಿ ತನಿಖೆ ಮಾಡುತ್ತಿದಾರೆ.

ಹಿಂದುಸ್ಥಾನದ ಕಳೆದ ಎಂಟು ವರುಷಗಳ ಆದಾಯವ್ಯಯಗಳ ತಪಶೀಲನ್ನು ಸರ್ಕಾರದವರು ಪ್ರಕಟಿಸಿರುತ್ತಾರೆ. ಈ ಲೆಕ್ಕದಿಂದ ತಿಳಿಯುವುದೇನೆಂದರೆ—೧೯೦೦ನೇ ಸಾಲಿನಲ್ಲಿ ಉತ್ಪತ್ತಿಯು ೧೧೨ ಕೋಟಿ ೫೦ ಲಕ್ಷ ರೂಪಾಯಿ ಇದ್ದದ್ದು ೧೯೦೭ನೇ ಸಾಲಿನಲ್ಲಿ ೧೩೫ ಕೋಟಿ ೫೦ ಲಕ್ಷ ರೂಪಾಯಿಗೆ ಹೆಚ್ಚಿತು ಖರ್ಚು ಬಾಬು ೧೯೦೦ನೇ ಇಸವಿಯಲ್ಲಿ ೧೦೪ ಕೋಟಿ ರೂಪಾಯಿ ಇದ್ದದ್ದು ೧೯೦೭ನೇ ಇಸವಿಯಲ್ಲಿ ೧೨೪ ಕೋಟಿ ರೂಪಾಯಿಗೆ ಬೆಳೆಯಿತು ಈ ಎಂಟು ವರುಷಗಳಲ್ಲಿ ಗವರ್ನ್‌ಮೆಂಟಿನವರು ೪೬ ಕೋಟಿ ರೂಪಾಯಿ ಸಾಲವನ್ನು ತೀರಿಸಿದರು ೭೦ ಕೋಟಿ ರೂಪಾಯಿಯನ್ನು ರೈಲ್ವೆ ನೀರಾವರಿ ಕಾಮಗಾರಿಗಳಿಗೂ ವಿನಿಯೋಗಿಸಿರುತ್ತಾರೆ

ಮದರಾಸ್ ಪಟ್ಟಣದಲ್ಲಿ ಒಂದು ಸಂಸ್ಕೃತ ವಿದ್ಯಾಶಾಲೆ ಇರುತ್ತದೆ ಕಡಲೂರಿನಲ್ಲಿ ಮುನ್ಸೀಫರಾಗಿದ್ದು ಕಾಲವಾದ ಮಿ॥ ಎ ಸ್ವಾಮಿನಾಥ ಶಾಸ್ತ್ರಿಗಳು ತಮ್ಮ ಆಸ್ತಿಯಲ್ಲಿ ಹತ್ತು ಸಾವಿರ ರೂಪಾಯನ್ನು ಬ್ಯಾಂಕಿನಲ್ಲಿ ಹಾಕಿಕೊಂಡಿದ್ದರು ಈ ಹಣವನ್ನೂ ಅವರ ಒಡವೆಯನ್ನೂ ಮೇಲ್ಕಂಡ ಸಂಸ್ಕೃತ ಪಾಠಶಾಲೆಯ ಮೂಲಧನಕ್ಕೆ ದಾನಮಾಡಬೇಕೆಂದು ಉಯಿಲು ಬರೆದಿರುತ್ತಾರೆ ಇನ್ನು ಮುಂದೆ ಆ ಪಾಠಶಾಲೆಯು ಸ್ವಾಮಿನಾಥ ಶಾಸ್ತ್ರಿಗಳ ಸಂಸ್ಕೃತ ಪಾಠಶಾಲೆ ಎಂದು ಹೆಸರಾಗುವುದು ಅದರಲ್ಲಿ ಅವರ ತಸ್ವೀರನ್ನು ಮಾಡಿಸಿ ಇಟ್ಟಿರುತ್ತಾರೆ ಅವರು ಕಾಲವಾದ ವರ್ಷಾಬ್ದಿಕದ ದಿನ ೬ ಜನರ ... ನಿಲಯದಲ್ಲಿರುವ ವಿದ್ಯಾರ್ಥಿಗಳಿಗೆಲ್ಲಾ ಅನ್ನವಸ್ತ್ರಗಳನ್ನು ಕೊಡಿಸುವರು

ಕಲ್ಕತ್ತಾ ಪಟ್ಟಣದಲ್ಲಿ ಅಲಿಪುರದ ಕೋರ್ಟಿನಿಂದ ಮೊಕದ್ದಮೆ ತೀರಿಸಿಕೊಂಡು ಬರುತ್ತಿದ್ದ ಪಬ್ಲಿಕ್ ಪ್ರಾಸಿಕ್ಯೂಟರ್ ಬಾಬು ಅಶುತೋಷ್ ಬಿಶ್ವಾಸ್ ಎಂಬಾತನನ್ನು ಚಾರುಚಂದ್ರ ಬೋಸ್ ಎಂಬ ೨೩ ವರುಷದ ಯೌವನಸ್ಥನು ಬಹಿರಂಗವಾಗಿ ಕೋರ್ಟಿನ ಬಳಿಯಲ್ಲಿ ರಿವಾಲ್ವರ್ ಗುಂಡುಹೊಡೆದು ಕೊಂದುಹಾಕಿದನು ಸಮೀಪದಲ್ಲಿದ್ದ ಜನರು ಆ ಮನುಷ್ಯನನ್ನು ಕೂಡಲೇ ಹಿಡಿದುಕೊಂಡು ಅವನ ಕೈಲಿದ್ದ ಬಂದೂಕನ್ನು ಕಿತ್ತುಕೊಂಡರು ಈ ಕೊಲೆಪಾತಕಿಯನ್ನು ಕೇಳಿದಾಗ ಅವನು— ನನ್ನ ಕೆಲಸ ಪೂರೈಸಿತು ಎಂದು ಹೇಳಿದನು ಅತ್ತಲಾಗಿ ಅದೇ ದಿನ ರಾತ್ರಿ ಢಾಕಾ ... ಸ್ಟೇಷನ್ನಿನಿಂದ ಹೊರಟ ರೈಲ್‌ಗಾಡಿಗೆ ಯಾರೋ ಎರಡು ಸಿಡಿಮದ್ದಿನ ಗುಂಡುಗಳನ್ನು ಹೊಡೆದರು ಅದು ಬಡಿದ ಗಾಡಿಯೊಳಗೆ ಗವರ್ನ್‌ಮೆಂಟ್ ಪ್ರಾಸಿಕ್ಯೂಟರ್ ಮಿ॥ ಹ್ಯೂಂ ಎಂಬುವರು ಕುಳಿತಿದ್ದರು ದೇವರ ದಯದಿಂದ ಯಾವ ಅಪಾಯವೂ ಯಾರಿಗೂ ತಗಲಿಲ್ಲ ಇವೆರಡು ಕ್ರೂರಕೃತ್ಯಗಳೂ ಬಂಗಾಳ ಪ್ರಾಂತದಲ್ಲೆಲ್ಲಾ ಬಹಳ ಭಯವನ್ನು ಉಂಟುಮಾಡಿವೆ

ಪೂನಾ ಪಟ್ಟಣದಲ್ಲಿ ಪ್ರೊಫೆಸರ್ ಪರಾಂಜಪೆಯವರು ಪ್ರಕಟಿಸುತ್ತಿದ್ದ 'ಕಾಲ' ಎಂಬ ಮರಾಠಿ ವಾರ ಪತ್ರಿಕೆಯಲ್ಲಿ ರಾಜದ್ರೋಹಕರವಾದ ಬಾತ್ಮಿಗಳನ್ನು ಬರೆದದ್ದಕ್ಕಾಗಿ ಅವರ ಮೇಲೆ ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ನಡೆಯುತ್ತಿತ್ತು ಕಳೆದ ವಾರ ಪ್ರತಿವಾದಿಯು ತಾವು ಹಾಗೆ ಬರೆಯಬಾರದಾಗಿತ್ತೆಂತಲೂ, ಅಪರಾಧವನ್ನು ಕ್ಷಮಿಸಬೇಕೆಂತಲೂ, ಇನ್ನು ಮುಂದೆ ತುಂಬಾ ಎಚ್ಚರಿಕೆಯಿಂದ ಬರೆಯುವುದಾಗಿಯೂ ಹೇಳಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕ್ಷಮಾಪಣೆಯನ್ನು ಬೇಡಿಕೊಂಡರು ಅಪರಾಧವನ್ನು ಮಾಡಿ ತಪ್ಪಿಸಿಕೊಳ್ಳುವುದಕ್ಕಾಗದೆಂದು ಗೊತ್ತಾದಾಗ ಹೀಗೆ ಕ್ಷಮಾಪಣೆಯನ್ನು ಬೇಡುವುದೂ, ಕ್ಷಮಾಪಣೆಯನ್ನು ಕೊಟ್ಟು ಮನ್ನಿಸುವುದೂ ಸರಿಯಲ್ಲವೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಭಿಪ್ರಾಯಪಟ್ಟು ಪ್ರತಿವಾದಿಗೆ ಆರು ತಿಂಗಳ ಕಠಿಣ ಸಜೆಯನ್ನೂ ೧೦೦೦ ರೂಪಾಯಿ ಜುಲ್ಮಾನೆಯನ್ನೂ ಜುಲ್ಮಾನೆ ಕೊಡದಿದ್ದರೆ ಇನ್ನೂ ಮೂರು ತಿಂಗಳ ಸಜೆಯನ್ನೂ ಅನುಭವಿಸಬೇಕೆಂದು ಶಿಕ್ಷೆ ವಿಧಿಸಿರುತ್ತಾರೆ

ತಂತಿ ವರ್ತಮಾನಗಳು

ಹಿಂದುಸ್ಥಾನ.

ಫೆಬ್ರವರಿ, ತಾ. ೧೪ ನೇ ಭಾನುವಾರ.—ವೈಸ್‌ರಾಯಿಯವರು ಬಂಗಾಳಾ ಲೆಫ್ಟಿನೆಂಟ್ ಗವರ್ನರವರ ಮುಖಾಂತರ ಪ್ಲೀಡರ್ ಬಾಬು ಅಶುತೋಷ್ ಬಿಶ್ವಾಸ್‌ರವರ ಹೆಂಡತಿ ಮಕ್ಕಳಿಗೆ ತಮ್ಮ ಸಂತಾಪವನ್ನು ತಿಳಿಸಬೇಕೆಂದು ಅಪ್ಪಣೆ ಕೊಡಿಸಿದಾರೆ.

ಕೊಲ್ಲಲ್ಪಟ್ಟ ಪ್ಲೀಡರ್ ಬಾಬು ಅಶುತೋಷ್ ಬಿಶ್ವಾಸ್‌ರವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಏರ್ಪಾಡುಮಾಡುವುದಕ್ಕಾಗಿ ವರ್ಧಮಾನದ ಮಹಾರಾಜರವರು ಕಲ್ಕತ್ತಾ ಪಟ್ಟಣದ ಟೌನ್ ಹಾಲ್ ಬಂಗಲೆಯಲ್ಲಿ ಒಂದು ಮಹಾಜನ ಸಭೆಯನ್ನು ನಡೆಸುವವರಾಗಿದಾರೆ

ಫೆಬ್ರವರಿ, ತಾ. ೧೫ ನೇ ಸೋಮವಾರ.—ಪ್ಲೀಡರ್ ಬಾಬು ಅಶುತೋಷ್ ಬಿಶ್ವಾಸ್‌ರವರನ್ನು ಗುಂಡಿನಿಂದ ಹೊಡೆದು ಕೊಂದುಹಾಕಿದ ಅಪರಾಧಿಯನ್ನು ಮಿ॥ ರೋ ಎಂಬ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿದರು ಕೋರ್ಟಿನೊಳಗೂ ಹೊರಗಡೆಯಲ್ಲೂ ಬಲವಾದ ಪೋಲೀಸ್ ಉಸ್ತುವಾರಿ ನೇಮಿಸಲ್ಪಟ್ಟಿತ್ತು ಆ ಮೊಕದ್ದಮೆಗೆ ಸಂಬಂಧಪಟ್ಟವರನ್ನಲ್ಲದೆ ಇತರರ್ಯಾರನ್ನೂ ಕೋರ್ಟಿನೊಳಕ್ಕೆ ಬಿಡದೆ ತಡೆದುಬಿಟ್ಟರು ಮ್ಯಾಜಿಸ್ಟ್ರೇಟರು ಅಪರಾಧಿಯಾದ ಚಾರುಚಂದ್ರ ಬೋಸನಿಗೆ ಮರಣದಂಡನೆಯನ್ನು ವಿಧಿಸಿದರು ಈ ಜಡ್ಜ್‌ಮೆಂಟನ್ನು ಕೇಳಿ ಅಪರಾಧಿಯು ನಕ್ಕನು

ಮುಂದಿನ ವರುಷ ಹಿಂದುಸ್ಥಾನದ ರಾಜ್ಯಾದಾಯದಲ್ಲಿ ಮೂರು ಕೋಟಿ ರೂಪಾಯಿ ಕಡಮೆಯಾಗಬಹುದೆಂದು ಕಂಡುಬರುತ್ತದೆ

ವರ್ಧಮಾನ ಸಂಸ್ಥಾನದಲ್ಲಿ ಕ್ರಮವಾಗಿ ಕ್ಷಾಮನಿವಾರಣೆಯ ಏರ್ಪಾಡುಗಳು ನಡೆಯುತ್ತಲಿವೆ ಸರ್ಕಾರದವರು ಕ್ಷಾಮಪೀಡಿತರಾದ ಪ್ರಜೆಗಳ ಸಂರಕ್ಷಣೆಗೆ ಸಿವಿಲ್ ಅಧಿಕಾರಿಗಳನ್ನೂ, ಇವರ ಸಹಾಯಕ್ಕೆ ಕೆಲವು ಸೈನ್ಯದ ಹುದ್ದೇದಾರರನ್ನೂ ನೇಮಕಮಾಡಿರುತ್ತಾರೆ

ರಂಗೂನ್ ಪಟ್ಟಣದಲ್ಲಿ ಶನಿವಾರ ಸಾಯಂಕಾಲ ಸ್ಟೇಷನ್ನಿನಲ್ಲಿ ನಿಂತಿದ್ದ ರೈಲ್ ಗಾಡಿಗಳಿಗೆ ಸಾಮಾನು ಭರ್ತಿಯಾಗಿದ್ದ ರೈಲ್ ಗಾಡಿಗಳು ಬಂದು ಬಡಿದದ್ದರಿಂದ ಹದಿನೈದು ಗಾಡಿಗಳು ಸಂಪೂರ್ಣವಾಗಿ ಮುರಿದುಹೋದವು ದೇವರ ದಯದಿಂದ ಯಾರಿಗೂ ಯಾವ ಅಪಾಯವೂ ಸಂಭವಿಸಲಿಲ್ಲ

ಬೊಂಬಾಯಿ ಪಟ್ಟಣದಲ್ಲಿರುವ ದಖನಿ ಮುಸಲ್ಮಾನ್ ಸಂಘದ ಸೆಕ್ರೆಟರಿಯವರಾದ ಮೌಲ್ವಿ ರಫಿಯುದ್ದೀನ್ ಅಹಮದ್‌ರವರು ಹಿಂದುಸ್ಥಾನದ ರಾಜಕೀಯ ಶಿಸ್ತುಗಳನ್ನು ಕುರಿತು ವೈಸ್‌ರಾಯಿಯವರಿಗೆ ತಂತಿವರ್ತಮಾನ ಕಳುಹಿಸಿರುವುದರ ಮುಖ್ಯಾಭಿಪ್ರಾಯವೇನೆಂದರೆ—ಕೌನ್‌ಸಿಲ್ ಸಭೆಗಳಲ್ಲಿ ಮುಸಲ್ಮಾನ್ ಪ್ರಜೆಗಳ ಪ್ರತಿನಿಧಿಗಳು ಮುಸಲ್ಮಾನರೇ ಆಗಬೇಕು ವೈಸ್‌ರಾಯಿಯವರ ಕೌನ್‌ಸಿಲ್ಲಿನಲ್ಲಿ ಮಹಮ್ಮದೀಯ ಮೆಂಬರುಗಳ ಸಂಖ್ಯೆಯನ್ನು ೫ ರಿಂದ ೬ ಕ್ಕೆ ಹೆಚ್ಚಿಸಬೇಕು ಬೊಂಬಾಯಿ ಗವರ್ನರವರ ಕೌನ್‌ಸಿಲ್ ಸಭೆಯಲ್ಲಿ ಮಹಮ್ಮದೀಯ ಮೆಂಬರುಗಳು ಮೂವರು ಇರಬೇಕೆಂದು ಸೂಚಿಸಲಾಗಿದೆ ಇದಕ್ಕೆ ಬದಲಾಗಿ ಐದು ಮಂದಿ ಇರುವಂತೆ ಮಾಡಿಕೊಡಬೇಕು

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ನಿಜವಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಎಂದೂ ಸ್ಥಳಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಗುಂಡ್ಲುಪೇಟೆ ೩೩, ಬೊಂಬ್ಲಾಪುರದ ಬಾತ್ಮಿ, ಬೇಲೂರು ಉಪಾಧ್ಯಾಯ, ಚಿತ್ರದುರ್ಗದ ಸ್ಟುಡೆಂಟ್ ಹೋಬಳಿ ಪ್ರೊಸೀಡಿಂಗ್ಸ್ ಮತ್ತು ವಿಜಯ ಪತ್ರಿಕೆ —ಈ ಬಾತ್ಮಿಗಳನ್ನು ಸ್ಥಳ ಸಂಕೋಚದಿಂದ ಪ್ರಕಟಿಸಲು ಸಾಧ್ಯವಾಗಲಿಲ್ಲವೆಂದು ವಿಷಾದಿಸುತ್ತೇವೆ

ಚಂದಾದಾರ್, ಹಾಸನ —ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿ

ಕರೆಸ್ಪಾಂಡೆನ್ಸ್.

ಬೆಂಗಳೂರು ತಾಲ್ಲೂಕು ಹೆಬ್ಬಾಳುಗ್ರಾಮ

ಅಯ್ಯಾ,

ಹೆಬ್ಬಾಳು ಗ್ರಾಮದ ಕೆರೆ ಒಡೆದು ಆರು ತಿಂಗಳುಗಳಾಗುತ್ತಾ ಬಂತು ನೀರಿಗೆ ತುಂಬಾ ತೊಂದರೆಯಾಗಿದ್ದರಿಂದ ರಾಜ್ಯದ ಸಂಕಟವನ್ನರಿತು ಪಟೇಲ ರೈತರು ಗ್ರಾಮಕ್ಕೆ ಸಮೀಪವಾಗಿ ಬಾವಿಯನ್ನು ತೆಗೆಸಿ ಜನಗಳಿಗೂ ಮತ್ತು ದನಗಳಿಗೂ ನೀರಿನ ಕ್ಷಾಮವನ್ನು ನಿವಾರಣೆ ಮಾಡಿದರು ಜೀವನಕ್ಕಾದರೋ ಕೆರೆಯಲ್ಲಿ ಕಡಿಮೆಯಾಗುವಷ್ಟು ಮಾಡಿದರು ಎರಡು ಬೆಳೆಗೂ ಬೆಳೆ ಇಲ್ಲದೆ ಹೋಯಿತು ಒಂದು ಮಳೆಗಾಲ ಕೆರೆಗೆ ಬಿದ್ದ ನೀರು ಪೂರ್ತಿಯಾಗಿ ಹರಿದುಹೋಗುತ್ತದೆ ಎಂದು ನಂಬಿದ ರೈತರು ಕೆಲವು ದಿವಸ ಸಿಕ್ಕುವುದೂ ಕಷ್ಟವಾಗಿರುತ್ತೆ ಇಂಥಾದ್ದರಲ್ಲಿ ರೈತರು ಕಾಲವನ್ನು ಕಳೆಯಲಾರದೆ ಕಂದಾಯವನ್ನು ಕಟ್ಟಲಾರೆ

ಇತ್ತಲಾಗಿ ಈ ಗ್ರಾಮಕ್ಕೆ ಪ್ಲೇಗು ಅನಂತ ಪ್ರಾಪ್ತವಾಗಿ ಒಂಬತ್ತು ಜನರ ವರೆವಿಗೂ ಬಲಿಪಡೆದು ಇನ್ನೂ ಇಷ್ಟು ಜನ ಕಾಯಿಲೆ ಇರುತ್ತಾರೆ ಗ್ರಾಮ ಬಿಟ್ಟು ಆಚೆ ಗುಡಿಸಲಿನಲ್ಲಿ ವಾಸಮಾಡಬೇಕೆಂದರೆ ನೀರಿನ ಕ್ಷಾಮ ಒಂದು, ಬೆಳೆಯು ಇಲ್ಲದ ಒಂದು ಇವೆರಡನ್ನೂ ತಡೆಯಲಾರದೆಂದರೆ ಕಳ್ಳತನಾಂತರ ಒಂದು ಇಂಥಾ ಕ್ಷಾಮ ಕಾಲದಲ್ಲಿ ಮೈಸೂರು ಸರ್ಕಾರದವರು ಇದೇ ಗ್ರಾಮದ ಬಳಿ ಅಗ್ರಿಕಲ್ಚರಲ್ ಎಕ್ಸ್‌ಪೆರಿಮೆಂಟಲ್ ಫಾರಮನ್ನು ಮಾಡಿ ಒಂದು ಕಲ್ಲು ಕಟ್ಟಡದ ಭೂಮಿಯನ್ನು ನೀರಿನ ಉಪಯೋಗಕ್ಕಾಗಿ ತೆಗೆಸುತ್ತಾ ಇದಾರೆ ಇದರಿಂದ ಕೂಲಿಯವರಿಗೆ ಇನ್ನೂ ಕೆಲವು ಕಾಲ ಜೀವನ ನಡೆಯಬಹುದೆಂದು ನಾವು ಸಂತೋಷಪಡುತ್ತಿದ್ದೇವೆ ಇನ್ನೂ ಒಂದೆರಡು ಬಾವಿಗಳನ್ನೂ ಹೀಗೇ ತೆಗೆಸಿ ಸರ್ಕಾರದವರು ಬಡ ಜನಗಳನ್ನು ಕಾಪಾಡುತ್ತಾರೆಂಬ ವರ್ತಮಾನ ಸಹ ಇರುವುದರಿಂದ ತುಂಬಾ ಸಂತೋಷಪಡುತ್ತಾ ಇದೇವೆ

ಬಾತ್ಮಿದಾರ

ಕಂದಾಯದ ರಿಮಿಷನ್ ವಿಚಾರವು

ಅಯ್ಯಾ,

ನಾನು ಈ ೧೫ ದಿವಸಗಳಿಂದ ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ನಾಗಮಂಗಲದ ತಾಲ್ಲೂಕು ಮತ್ತು ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಕುಣಿಗಲ್ ತುರುವೇಕೆರೆ ತಾಲ್ಲೂಕು ಮತ್ತು ಸುತ್ತುಮುತ್ತಣ ಪ್ರಾಂತ್ಯವೆಲ್ಲಾ ಸಂಚಾರ ಮಾಡಿಕೊಂಡು ಬಂದೆನು ನಾನು ಸಂಚಾರ ಮಾಡಿದ ಪ್ರಾಂತ್ಯವಲ್ಲಾ ಎಲ್ಲಿ ನೋಡಿದಾಗ್ಯೂ ಜನಗಳ ಅತ್ಯಂತ ವಿಚಾರದ ದುರವಸ್ಥೆಯು ಮತ್ತು ನೀರಿನ ಗೊಟ್ಟು ಹೇಳಲಾಗದು ಅಲ್ಲಿನ ಗೋಕಾಯಿಗಳ ದುರವಸ್ಥೆಯನ್ನು ನೋಡಿದರೆ ವಿವರಿಸಲಶಕ್ಯವಾಗಿದೆ

ಜನಗಳು ತಮಗೆ ಉಂಟಾಗಿರುವ ದುರವಸ್ಥೆಯನ್ನು ಕುರಿತು ಗೌರ್ನಮೆಂಟಿನವರನ್ನು ಕಂದಾಯವನ್ನು ರಿಮಿಷನ್ ಮಾಡಿಕೊಂಡಬೇಕೆಂದು ಅನೇಕ ವೇಳೆ ಪ್ರಾರ್ಥಿಸಿಕೊಂಡದ್ದರ ಮೇಲೆ ಸ್ವಲ್ಪ ಭಾಗವನ್ನಾದರೂ ರಿಮಿಷನ್ ಮಾಡಿಕೊಡುವೆವೆಂದು ವಾಗ್ದಾನಮಾಡಿರುವ ಅಯಾ ಡಿಸ್ಟ್ರಿಕ್ಟು ಆಫೀಸರುಗಳ ವಾಗ್ದಾನದಂತೆ ಕಂದಾಯ ರಿಮಿಷನ್ ಮಾಡುವೆವೆಂದು ಸರ್ಕಾರದವರ ದಾರಿಯನ್ನೇ ಎದುರು ನೋಡುತ್ತಿರುವಲ್ಲಿಯೇ ಫೆಬ್ರವರಿ ತಿಂಗಳು ಪ್ರಾರಂಭವಾಗುತ್ತಲೇ ಸರ್ಕಾರದವರು ಅಂದರೆ ಗ್ರಾಮಾಧಿಕಾರಿಗಳು ವಗೈರೆ ನೌಕರರು ಕಂದಾಯಕ್ಕಾಗಿ ಕೊಡುವ ತಗಾದೆಯನ್ನು ಹೇಳಲಸಾಧ್ಯವಾಗಿರುತ್ತೆ ತಾವು ದಯವಿಟ್ಟು ಈ ಕಂದಾಯ ರಿಮಿಷನ್ ವಿಷಯ ತಿಳಿದು ಪ್ರಕಟಗೊಳಿಸಿ, ಮುಗ್ಧರಾದ ಮತ್ತು ಗರೀಬರಾದ ಆ ಜನಗಳ ಮನೋರಥವನ್ನು ನೆರವೇರಿಸಿ ಸಂತೋಷಗೊಳಿಸುವಿರೆಂದು ದೃಢವಾಗಿ ನಂಬಿರುತ್ತೇನೆ

ಪಾಠಕ

[ಕಂದಾಯದ ರಿಮಿಷನ್ ವಿಚಾರವನ್ನು ಗವರ್ನ್‌ಮೆಂಟಿನವರು ಬೇಗ ನಿಷ್ಕರ್ಷೆಪಡಿಸಿ, ಆಯಾ ಡಿಸ್ಟ್ರಿಕ್ಟ್ ಅಧಿಕಾರಿಗಳಿಗೂ ಗ್ರಾಮಾಂತರ ಪ್ರಜೆಗಳಿಗೂ ತಿಳಿಸಬೇಕಾಗಿರುತ್ತದೆ ಸಾವಕಾಶಮಾಡಿದಷ್ಟೂ ಬಡರೈತರ ಕಷ್ಟನಷ್ಟಗಳು ಹೆಚ್ಚುವುದಕ್ಕೆ ಸಂಶಯವಿಲ್ಲ - ಎಡಿ.]

ಹೊಳಲ್ಕೆರೆ ತಾಲ್ಲೂಕು ಕೋಣಸಾಗರ.

ಅಯ್ಯಾ,

ಈ ಊರಿನಲ್ಲಿ ನೀರಿನ ಅಭಾವವು ಜಾಸ್ತಿಯಾಗಿದೆ. ಬಡಬಗ್ಗರು ಹೊಟ್ಟೆಗಿಲ್ಲದೆ ನರಳುತ್ತಿದಾರೆ ಈಗ ೨೩ ಸಂವತ್ಸರಗಳಿಂದಲೂ ಮಳೆಯು ಬಾರದಿರುವುದರಿಂದ ಕಾವಲುಗಳಲ್ಲಿ ಮೇವು ಮತ್ತು ನೀರು ಸಿಕ್ಕದೆ ಅಲೆಯುತ್ತಿರುವ ಗೋಕಾಯಿಗಳ ಕಷ್ಟವಂತು ಹೇಳತೀರದು ಈ ಗ್ರಾಮದಲ್ಲಿ ಈಗೀಗ ಕಳ್ಳಕಾಕರ ಹಾವಳಿಯು ತಲೆದೋರುತ್ತಿದೆ ಈಗ್ಗೆ ಕೆಲವು ದಿನಗಳ ಕೆಳಗೆ ಕುರುಬರ ವೀರಣ್ಣನೆಂಬಾತನ ಮನೆಯಲ್ಲಿ ಕನ್ನವನ್ನಿಕ್ಕಿ, ಕೆಲ ಕೆಲ ಸಾಮಾನುಗಳನ್ನು ಎತ್ತಿಕೊಂಡು ಹೋಗಿರುವರೆಂದು ಗೊತ್ತಾಗುತ್ತದೆ ಈ ಗ್ರಾಮವು ದೊಡ್ಡ ಗ್ರಾಮವಾದರೂ ಪೋಲೀಸ್ ಉಸ್ತುವಾರಿಯು ಕಡಮೆಯಾಗಿದೆ ಇಂಥಾ ಕಾಲದಲ್ಲಿ ಸರ್ಕಾರದವರು ೨ ೩ ಮಂದಿ ಕಾನ್‌ಸ್ಟೇಬಲ್‌ರನ್ನು ಖಾಯಮಾಗಿ ನೇಮಿಸುವುದು ಶ್ರೇಯಸ್ಕರವು

ಮೊಹತರ್ಫಾ (ಮನೆಯ), ಕಂದಾಯವು ಒಟ್ಟುವಸೂಲಿಯಿಂದ ವಸೂಲಿ ನಡೆಯುತ್ತಿವೆ ಝಾಡಮಾಲಿಗಳನ್ನು ಮಾತ್ರ ಗ್ರಾಮ ಪಾಕೀಜು ಮಾಡುವುದಕ್ಕಾಗಿ ೨ ರೂ ಬಡ್ತಿಯಿಂದ ೪ ಜನರನ್ನು ಬೆಳಿಗ್ಗೆ ಸಾಯಂಕಾಲ ಎರಡಾವರ್ತಿ ಗುಡಿಸುವಂತೆ ಖಾಯಂ ನೇಮಿಸಿದರೂ. ಸರಿಯಾಗಿ ದಿನಕ್ಕೊಂದಾವರ್ತಿಯಾದರೂ ಕೆಲಸ ನಡೆಯುವದಿಲ್ಲ ಆದಪರಿಂದ ಈ ಗ್ರಾಮವು ಕೇವಲ ಹೆಸರಿಗೆ ಮಾತ್ರ ಯೂನಿಯನ್ ಎಂದು ಹೇಳಬಹುದಾಗಿದೆ ಈ ಗ್ರಾಮದಲ್ಲಿ ಚಂಡಿ ತಯಾರಿ ಆಕ್ಸಾ ಮತ್ತು ಪೋಲಿ ಜನಗಳಿಗೆ ದೊಡ್ಡಿಯನ್ನು ಕಟ ನಿಲಿಕ್ಸಾ ಸಾಹುಕಾರ ಮುದ್ದಪ್ಪನವರು ಕೆಟ್ರಿಕ್ಟು ವಹಿಸಿದ್ದರು ಕೆಲಸವು ಖಚಿತವಾಗಿ ನಡೆದಿದೆ

—೪ ವರುಷಗಳಿಂದ ನಮ್ಮ ರೈತರಿಗೆ ತಲಾವಿನ ಅಸರೆಯು ಇಲ್ಲದಿರುವುದರಿಂದಲೂ ಬಾವಿಗಳಲ್ಲಿ ನೀರಿನ ಅಭಾವವು ಜಾಸ್ತಿಯಾದದ್ದರಿಂದಲೂ, ಕ್ಷಯರೋಗಗಳನ್ನುಂಟುಮಾಡುವ ಮತ್ತು ಕೀಟಿಪ್ಲೇಗ್‌ದ ಸಂಖ್ಯೆಯು ಹೆಚ್ಚುವುದರಿಂದಲೂ ಸುಸ್ಥಳಾದವನು ತೊಂದರೆಯುಂಟಾಗಿ, ಗ್ರಾಮವು ಬಹು ದುಸ್ಥಿತಿಗೆ ಇಳಿದಿದೆ ಇದನ್ನು ನಮ್ಮ ದಯಾಳು ಗವರ್ನ್‌ಮೆಂಟಿನವರು ತಾಲ್ಲೂಕ್ ಅಧಿಕಾರಿಗಳಿಂದ ಅಜಮಾಯಿಷಿ ಮಾಡಿಸಿ ಸಾಧ್ಯವಾದಮಟ್ಟಿಗೂ ಸಣ್ಣ ನೀರಾವರಿ ಕಾಮಗಾರಿಗಳನ್ನು ಆರಂಭಿಸಿ, ಬಡಬಗ್ಗರಿಗೆ ಅನುಕೂಲಿಸುವ ಹಾಗೆ ತಕ್ಕಮಟ್ಟಿಗೆ ರಿಲೀಫ್ ಕಾಮಗಾರಿಗಳನ್ನು ನಡೆಸಿ, ಇಂಥಾ ಸ್ಥಳಗಳಲ್ಲಿ ಕೆಲ ಕೆಲ ತೆರಿಗೆಗಳನ್ನು ತಪ್ಪಿಸಿದರೆ ಕ್ಷಾಮ ಪೀಡೆಯಿಂದ ಬಡಬಗ್ಗರು ನಿವೃತ್ತರಾಗುವರೆಂದು ಬಯಸುತ್ತೇನೆ

ಇಂಥಾ ಕಾಲದಲ್ಲಿ ನಮ್ಮ ಗವರ್ನ್‌ಮೆಂಟಿನವರು ಸಾಧ್ಯವಾದಷ್ಟು ಕರ್ತವ್ಯ ಪರತೆಯಿಂದ ಭೂತ ದಯಾ ಪರಾಯಣರಾಗಿ ಬಡಬಗ್ಗರ ಕಷ್ಟವನ್ನು ನಿವಾರಣೆಮಾಡುವ ಪ್ರಯತ್ನಕ್ಕೆ ಪ್ರಾರಂಭಿಸುವರೆಂದು ನಂಬಿದೇನೆ

ಬಾತ್ಮಿದಾರ

ತಾಲ್ಲೂಕು ವರ್ತಮಾನಗಳು

ದೊಡ್ಡಬಳ್ಳಾಪುರ.— ಇಲ್ಲಿ ೬ —೭ ತಿಂಗಳುಗಳ ಕೆಳಗೆ ಪ್ಲೇಗಿನಿಂದ ಬಿಟ್ಟುಬಿಡದೆ ಹತ್ತು ದಿವಸಕ್ಕೆ ಸುಮಾರು ಮೂವತ್ತು ಸಾವು ಜನ ಊರು ಬಿಟ್ಟು ಹೊರಗೆ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದು ಮೊಹರಂ ಹಬ್ಬಕ್ಕೆ ಕಾಲುವಾಸಿ ಜನರು ಊರಿಗೆ ಬಂದು ಮನೆಗಳನ್ನು ಸೇರಿದರು ಮೊಹರಂ ಹಬ್ಬವು ನಾಮಕಾವಾಸ್ತೆ ನಡೆಯಿತು ಈಚೆಗೆ ಇನ್ನೂ ಕೆಲವರು ಮನೆಗಳನ್ನು ಸೇರಿದರು ಈಗ್ಗೆ ನಾಲ್ಕು ದಿನಗಳಿಂದ ... ನಿಃಶೇಷವಾಗಿ ಹೋಗಿಲ್ಲ ಮೊದಲು ಜನಗಳು ಊರು ಸೇರುವಾಗ ೨—೩ ಕೇಸುಗಳೂ ... ಕಾಯಿಲೆಗಳೂ ಇದ್ದವು ಈಗಲಾದರೋ ಅದಕ್ಕಿಂತಲೂ ಅಧಿಕವಾಗಿ ಬಹುದು ಮರಣಗಳೂ ದಿನಕ್ಕೆ ೩—೪ ಇಷ್ಟು ಇರುತ್ತೆ ಇಂಥಾ ದಿನಗಳಲ್ಲಿಯೂ ಕೂಡ ಗುಡಿಸಲುಗಳಿಂದ ಬಹು ಆತುರದಿಂದ ಜನಗಳು ಮನೆಗಳನ್ನು ಸೇರುತ್ತಲೇ ಇರುತ್ತಾರೆ ಊರಿನವರೆಲ್ಲಾ ಸಂಪೂರ್ಣವಾಗಿ ಮನೆಗಳನ್ನು ಬಿಟ್ಟದ್ದರೆ ಈ ಅಂಟುರೋಗವು ಇಷ್ಟು ದಿನಗಳು ಇರುತ್ತಿರಲಿಲ್ಲವೆಂದು ಅನೇಕರು ನಂಬುತ್ತಾರೆ ಇದಲ್ಲದೆ ಕೆಲವರು—ನಾವು ಏನೂ ಅನಲಿ ಈ ಕ್ಷಾಮಕಾಲದಲ್ಲಿ ಎಷ್ಟು ದಿವಸ ಕೆಲಸಕಾರ್ಯಗಳಿಲ್ಲದೆ ಬದುಕುವುದು" ಎಂದು ಬಂದೇ ಬಿಟ್ಟರು —ಧಾರಣೆಗಳಲ್ಲಿ ದೇಶಾಂತರದ ಅಕ್ಕಿ ಮಾತ್ರ ಒಂದು ಸೇರು ಹೆಚ್ಚಾಗಿದೆ ಕಡಮೆ ದವಸವಲ್ಲಾ ಯಥಾಸ್ಥಿತಿಯಾಗಿರುತ್ತೆ ಹಿಂದೆ ಹಿರೇಮಠ ವೆಂಕಟಪ್ಪನವರಿಗೆ ಹುಚ್ಚುನಾಯಿ ಕಡಿದ ವಿಷಯ ಸೂಚಿಸಿತ್ತಷ್ಟೆ ಆ ಕೇಸು ರೇಬೀಸ್ ಆದರೆಂದು ತಿಳಿದುಬಂದಿತು ಹಿಂದೆ ಪೇಟೆಯ ಮುದ್ದಪ್ಪನೆಂಬುವನಿಗೆ ಇದರಂತೆ ಹುಚ್ಚುನಾಯಿ ಕಡಿದು ೧—೨ ತಿಂಗಳೊಳಗಾಗಿ ಮೃತಪಟ್ಟನು ಅದರಿಂದ ವೆಂಕಟಪ್ಪನವರ ವಿಷಯವಾಗಿ ಅನೇಕರು ಕಸೌಲಿ ಆಸ್ಪತ್ರೆಗೆ ಹೋಗಿ ಔಷಧವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿರುತ್ತಾರೆ ಅವರು ಬೇಗ ಪ್ರಯತ್ನ ಮಾಡುವದೇ ಒಳ್ಳೇದಾಗಿರುತ್ತೆ —ಅರ್ಧರಾತ್ರಿ ಸಮಯದಲ್ಲಿ ಆರಸಪ್ಪನೆಂಬುವನು ಓಡಿಬರುತ್ತಾ ಇದ್ದನೆಂದು ಬೀಟಿನಲ್ಲಿದ್ದ ಕಾನ್‌ಸ್ಟೇಬಲ್‌ಗಳು ಆತನನ್ನು ಹಿಡಿದು ಠಾಣೆ ದಫೇದಾರ್ರವರಲ್ಲಿ ಕೊಡಲು, ಬೆಳಗಾಗುವದರೊಳಗಾಗಿ ಆತನನ್ನು ಬಿಟ್ಟುಬಿಟ್ಟರು ಕಾರಣವೇನೋ ತಿಳಿಯದು —ನೀರಿನ ಅವಸ್ಥೆ ತುಂಬಾ ಶೋಚ್ಯವಾಗಿದೆ ಆರಳುಮಲ್ಲಿಗೆ ಬಾಗಿಲಿನ ನೀರು ಬಾವಿಯನ್ನು ಶೋಧಿಸಿರುತ್ತಾರೆ. ನೀರು ಸೇದುವವರಿಗೆಲ್ಲಾ ತುಂಬಾ ಅನಾನುಕೂಲವಾಗಿದೆ ಜಾಗ್ರತೆ ಸಂಪಾದಿಸುವದು ಶ್ರೇಯಸ್ಕರ —ಇಲ್ಲಿಂದ ತುಮಕೂರಿಗೆ ಪ್ರಯಾಣಮಾಡತಕ್ಕ ರೈಲು ಗಾಡಿಗಳು ಯಶವಂತಪುರದಲ್ಲಿ ನಿಂತು ತುಮಕೂರಿಗೆ ಹತ್ತಬೇಕು ಸಕಾಲಕ್ಕೆ ರೈಲು ಗಾಡಿಗಳು ಬಾರವೆ. ತುಮಕೂರು ಗಾಡಿಗಳು ಹೊರಟುಹೋಗಿ ಅನೇಕರು ಬಹುವಂತ

ಕ್ಷಾಮದಲ್ಲಿ ಅನ್ನವಿಲ್ಲವೆ ಶ್ರಮಪಡಬೇಕಾಗಿದೆ. ರೈಲ್ವೆ ಅಧಿಕಾರಿಗಳು ಜಂಕ್ಷನ್ ಸ್ಟೇಷನ್ನಲ್ಲಿ ರೈಲುಗಳು ಸಿಕ್ಕುವಂತ ಸರಿಯಾದ ಏರ್ಪಾಡು ಮಾಡಿದರೆ ತುಂಬಾ ಅನುಕೂಲವಾಗುತ್ತ.—ಕ್ಷಾಮದ ದೆಸೆಯಿಂದ ಎಲ್ಲಾ ನೌಕರರಿಗೂ ಈಗ ಅಲೋಯನ್ಸ್ ಕೊಡುತ್ತಿದಾರಷ್ಟೆ ಪೋಲೀಸು ಇಲಾಖಾ ನೌಕರರಿಗೂ ಸಹ ಇದರಂತೆಯೇ ಕೊಡುವರೆಂದು ನಂಬಿದೇವೆ

ಚಿಕ್ಕಮಗಳೂರು.—ಧಾರಣೆವಾಸಿಗಳ ಸಮಯ ಎಲ್ಲಾ ಕಡೆ ಒಂದೇ ರೀತಿಯಾಗಿದೆ ಇಲ್ಲಿಗೆ ನಮ್ಮ ಸೀನಿಯರ್ ಸರ್ಜನ್ ಸಾಹೇಬರು ಬೆಂಗಳೂರಿನಿಂದ ದಯಮಾಡಿ ಒಂದು ವಾರದಿಂದಲೂ ಟೌನ್ ಆರೋಗ್ಯ ಬದಾವಣೆಗಳ ವಿಷಯದಲ್ಲಿ ಯೋಚನೆಮಾಡುತ್ತಿದಾರೆ. ಇಲ್ಲಿ ನೀರಿನ ಸರಬರಾಯಿ ಸದ್ಯಕ್ಕೆ ಸ್ವಲ್ಪ ತೃಪ್ತಿಕರವಾಗಿದೆ ಎಂಬುವದರಲ್ಲಿ ಸಂಶಯವೇ. ನಮ್ಮ ಸೀನಿಯರ್ ಸರ್ಜನ್ ಸಾಹೇಬರು ಮೊನ್ನೆ ತಾವೇ ೫ ಮೈಲಿ ದೂರ ನಡೆದು ಹೋಗಿ ಟೌನ್‌ಗೆ ಸರಬರಾಯಿ ಆಗುವ ಕೆರೆಯನ್ನು ಪರಾಂಬರಿಸಿ ಬಂದರು. ಆದರೆ ಈಗ ಕೆರೆಯ ತಳದಲ್ಲಿ ಹಳ್ಳದ ನೀರು ನಲ್ಲಿ ಮೂಲಕ ಬರುತ್ತದೆ. ಅದನ್ನು ಸಹ ಅವರು ಪರೀಕ್ಷಿಸಿ ಡಂಗೂರಿ ಮೂಲಕ ಟವನ್‌ನವರೆಲ್ಲರೂ ನೀರನ್ನು ಚನ್ನಾಗಿ ಕುದಿಸಿ ಪಾನಮಾಡಬೇಕೆಂದು ಸಾರಿದಾರ ಇದರಂತೆ ಪ್ರಜೆಗಳೆಲ್ಲರೂ ಅವರ ಮಾತನ್ನು ಗಮನಕ್ಕೆ ತಂದುಕೊಂಡು ನಡೆದರೆ ಬಹಳ ಅನುಕೂಲವಾಗಿ ಬರುವದು ಟವನೆಲ್ಲಾ ಚನ್ನಾಗಿ ಸಾಕಾಗಿದೆ ಅಲ್ಲದೆ ಪಾಠಶಾಲೆಗಳಿಗೆಲ್ಲಾ ಹೋಗಿ ನೋಡಿ, ದೇಹ ಶುದ್ಧಿಸಿಕೊಳ್ಳಬೇಕೆಂದು ಬುದ್ಧಿವಾದಗಳನ್ನು ಹೇಳುತ್ತಿದಾರೆ ಪ್ಲೇಗಿನ ರೋಗಿಕು ಇಲ್ಲಿ ಇಲ್ಲ ಆದರ ಸಕ್ರೇಪಟ್ನ, ಕಡೂರಿನಲ್ಲಿದೆ. ಪ್ರತಿ ದಿವಸ ಇಲ್ಲಿನವರು ಅಲ್ಲಿಗೂ, ಅಲ್ಲಿನವರು ಇಲ್ಲಿಗೂ ಹೋಗಿಬರುತ್ತಿದಾರೆ—ಚಿಕ್ಕಮಗಳೂರು ಬಾರ್ಡರ್ ಸಪಾಯಿಗಳು ೭೭ ಮಂದಿ, ಜಮೇದಾರ್, ಅಮಲ್ದಾರ್ ಮೊದಲಾದವರು ತರೀಕೆರೆಗೆ ಹೋಗಿ ಒಂದೂವರೆ ಲಕ್ಷ ರೂಪಾಯಿ ಖಜಾನೆ ತೆಗೆದುಕೊಂಡು ೫ನೇ ತಾರೀಖಿನಲ್ಲಿ ಬರುವಾಗ ಸಕ್ರೇಪಟ್ಣದ ಹತ್ತಿರ ರಾತ್ರಿ ೮ ಗಂಟೆ ಸಮಯದಲ್ಲಿ ಪೊದೆಯ ಕಡೆಯಿಂದ ಇವರಿಗಳ ಮೇಲೆ ನಾಲ್ಕು ಕವಣೆ ಕಲ್ಲುಗಳು ಬಿದ್ದವು ಹವಾಲ್ದಾರ್ ನರಸಿಂಹಸ್ವಾಮಿನಾಯ್ಡುರು ಜಮೇದಾರನ್ನು ಕೇಳದ್ದಕ್ಕೆ ನೀವೇ ವಿಚಾರ ಮಾಡಬೇಕೆಂದು ಆರ್ಡರ್ ಮಾಡಿದ್ದರಿಂದ ಧೈರ್ಯವಾಗಿ ನಾಲ್ಕು ಸಿಪಾಯಿಗಳಿಂದ ಬದೂಕು ಚಾರ್ಜ್ ಮಾಡಿಸಿಕೊಂಡು ಹವಾಲ್ದಾರರು ಸಿಪಾಯಿಗಳೊಂದಿಗೆ ಹೊರಟರು ಇವರು ಹೋಗುತ್ತಿರುವಲ್ಲಿ ಕಲ್ಲುಗಳು ಹವಾಲ್ದಾರರ ಕಡೆ ಹಾದುಹೋದಾಗ್ಯೂ ಭಯಪಡದೆ ಅಲ್ಲಿಯೇ ನಿಂತು ಚನ್ನಾಗಿ ಆಲೋಚನೆಮಾಡಿ ಕಲ್ಲಿನ ಪೆಟ್ಟಿಯನ್ನು ತಪ್ಪಿಸಿಕೊಂಡು, ಸಿಪಾಯಿಗಳಿಗೆ ಧೈರ್ಯವನ್ನು ಹೇಳಿ ಗುಂಡು ಹಾರಿಸುವದಕ್ಕೆ ಅಪ್ಪಣೆ ಮಾಡಿ ತಾವು ಹಾರಿಸಿದರು ಈ ದುಷ್ಟ ಗ್ಯಾಂಗ್ ಪಿಡ್ಡರು ಹೆದರಿ ಓಡಿಹೋಗುವದಕ್ಕೆ ಮಾರ್ಗವನ್ನು ಕಾಣದೆ ಅಲ್ಲಿಯೇ ನಿಂತರು ಸಿಪಾಯಿಗಳನ್ನು ಕಳುಹಿಸಿ ಅವರನ್ನು ರಾತ್ರಿವೇಳೆ ಹಿಡಿದು ಜಮೇದಾರರ ಬಳಿಗೆ ಹಾಜರುಮಾಡಿದ್ದಕ್ಕೆ ಅವರು ಬಹಳ ಸಂತೋಷಪಟ್ಟು, ಆ ರಾತ್ರಿಯೆಲ್ಲಾ ಅವರನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದು, ಬೆಳಗ್ಗೆ ೭ ಗಂಟೆ ಸಮಯದಲ್ಲಿ ಸಕ್ರೇಪಟ್ಣದ ಅಮಲ್ದಾರರ ವಶಕ್ಕೆ ಆ ಗ್ಯಾಂಗ್ ಪಿಡ್ಡರನ್ನು ಕೊಟ್ಟು ಖಜಾನೆ ಒಂದೂವರೆ ಲಕ್ಷಕ್ಕೆ ಯಾವ ಅಪಾಯವಿಲ್ಲದಂತೆ ಚಿಕ್ಕಮಗಳೂರು ಬಂದು ಸೇರಿಸಿದರು ಹವಾಲ್ದಾರ್ ನರಸಿಂಹಸ್ವಾಮಿನಾಯ್ಡುರ ಸಾಹಸವು ಸಾರ್ಥಕವಾಯಿತು ಈ ವಿಷಯ ಮೇಲ್ಪಟ್ಟ ಆಫೀಸರಿಗೂ ರಿಪೋರ್ಟಾಗಿದೆ

ಚಿತ್ರದುರ್ಗ.—ಇಲ್ಲಿನ ಆರ್ಯನ್ ಸ್ಟೂಡೆಂಟ್ಸ್ ಹೋಮಿನ ಧರ್ಮದರ್ಶಿಗಳೂ ಪೋಷಕರೂ ಹಿಂದಿನ ವಾರದಲ್ಲಿ ಸಭೆ ಸೇರಿ ಕೆಲವು ಮುಖ್ಯವಾದ ವಿಷಯಗಳನ್ನು ಈ ಹೋಮಿನ ಅಭಿವೃದ್ಧಿಗಾಗಿ ಚರ್ಚಿಸಿ ತೀರ್ಮಾನಿಸಿದರು ಅವುಗಳಲ್ಲಿ ಮುಖ್ಯವಾದವುಗಳ್ಯಾವವೆಂದರೆ (೧) ಈ ಹೋಮಿನ ಸ್ಥಳವಸತಿಗಾಗಿ ಧರ್ಮದರ್ಶಿಗಳ ಅರ್ಜಿಯನ್ನು ಸರಕಾರದವರು ಮನ್ನಿಸಿ, ಬಾಲ್ಯವನ್ನಲ್ಲಿ ಬಹಳ ಸುಲಭವಾದ ಬಾಡಿಗೆಗೆ ಮನೆಗಳನ್ನು ಕೊಡಿಸಿದ್ದಕ್ಕಾಗಿ ಸರಕಾರಕ್ಕೆ ವಂದನೆ ಸಮರ್ಪಿಸುವದು. (೨) ಈಗ ಕ್ಷಾಮಕಾಲವಾದ್ದರಿಂದ ವಿದ್ಯಾರ್ಥಿಗಳು ಪೋಷಕರು ಕೊಡುತ್ತಿರುವ ಫೀಜು ಖರ್ಚಿಗೆ ಸಾಲದೆಂದು ಯೋಚಿಸಿ, ಅದರ ದರವನ್ನು ತಕ್ಕಮಟ್ಟಿಗೆ ಹೆಚ್ಚಿಸಬೇಕು (೩) ವಿದ್ಯಾರ್ಥಿಗಳ ನಿಲಯಕ್ಕಾಗಿ ೧೦-೧೫ ಸಾವಿರ ರೂಪಾಯಿಗಳು ಖರ್ಚುಮಾಡಿ ಕಟ್ಟಿಸಬೇಕಾಗಿರುವ ಭಾರಿ ಕಟ್ಟಡವು ಕ್ಷಾಮಕಾಲದ ದೆಸೆಯಿಂದ ಸ್ವಲ್ಪ ಕಾಲ ನಿಲ್ಲಿಸಬೇಕಾಗಿ ಬಂದರೂ ಆ ವರೆಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒಂದು ಚಿಕ್ಕ ಮನೆಯನ್ನು ಕಟ್ಟಿಸುವದಕ್ಕಾಗಿ ಭಟ್ಟರಾಜು ಪಂಗಡದ ಕೆಲವು ಮುಖ್ಯಸ್ಥರು ಇದಕ್ಕಾಗಿ ಧರ್ಮಬುದ್ಧಿಯುಳ್ಳ ಮಹನೀಯರಿಂದ ಭಿಕ್ಷೆ ಎತ್ತಿ ಕೆಲವು ದ್ರವ್ಯವನ್ನು ಸಂಗ್ರಹ ಮಾಡಬಹುದು (೪) ಭಟ್ಟರಾಜು ಪಂಗಡದ ವಿದ್ಯಾರ್ಥಿಗಳು ಕೇವಲ ಹಿಂದೆ ಬಿದ್ದು ನಿರ್ಗತಿಕರಾಗಿರುವದರಿಂದ ಅವರನ್ನು ವಿದ್ಯಾಭಿವೃದ್ಧಿಯಲ್ಲಿ ಪ್ರೋತ್ಸಾಹಪಡಿಸುವದಕ್ಕಾಗಿ ಹೋಮಿನ ಧರ್ಮದರ್ಶಿಗಳೂ ಪೋಷಕರೂ ಸರಕಾರಕ್ಕೆ ಒಂದು ಅರ್ಜಿಯನ್ನು ನಮ್ಮ ಡೆಪ್ಯುಟಿ ಕಮೀಷನರ್ ಮೆ ಚಂಗಯ್ಯಶೆಟ್ಟರವರ ಮೂಲಕ ಕಳುಹಿಸಿ, ಆ ಪಂಗಡದ ವಿದ್ಯಾರ್ಥಿಗಳಿಗೆ ಸ್ಕೂಲ್ ಫೀಜು ಮಾಫ್‌ಮಾಡಿಸಿ ಯೋಗ್ಯರಾದವರಿಗೆ ವೇತನವನ್ನು ಕೊಡಬೇಕೆಂತ ಪ್ರಾರ್ಥಿಸುವದು ಈ ವಿಷಯಗಳನ್ನು ತೀರ್ಮಾನಿಸಿ ಕಾರ್ಯಾರಂಭವಾಗಿದೆ.— ಈ ಡಿಸ್ಟ್ರಿಕ್ಟ್ ಹಿರಿಯೂರು ತಾಲ್ಲೂಕಿನಲ್ಲಿ ಕಳೆದ ಪೌರ್ಣಮಿಯಿಂದ ತ್ಯಾಗಮಲ್ಲೇಶ್ವರನ ಪರಿಷೆಯು ನಡೆಯಿತು ಜನಗಳು ವಿಶೇಷ ಸೇರಿಲಿಲ್ಲ ಈ ದೇಶದ ಬೇರೆ ಬೇರೆ ಕಡೆಗಳಲ್ಲಿ ಕ್ಷಾಮವು ಪ್ರಾಪ್ತವಾಗಿದ್ದರೂ ಹಿರಿಯೂರು ಸುತ್ತಮುತ್ತ ವಾಣಿವಿಲಾಸದ ತಲಾವಿನ ಆಶ್ರಯದಿಂದ ಎಲ್ಲಿ ನೋಡಿದರೂ ತಕ್ಕಮಟ್ಟಿಗೆ ಹಸುರಾಗಿ ದನಕರುಗಳಿಗೆ ಹುಲ್ಲು ನೀರು ಸಿಕ್ಕುತ್ತದೆ ಆದರೂ ಬಹಳ ಕಾಲದಿಂದ ಈ ಊರು ಅನಾರೋಗ್ಯಕ್ಕೆ ಆಕರವಾಗಿರುವದರಿಂದ ಅದರ ಸ್ಥಳವನ್ನು ಬದಲಾಯಿಸಿ ಎತ್ತರವಾದ ಜಾಗದಲ್ಲಿ ತಾಲ್ಲೋಕು ಕಚೇರಿಯ ಕಡೆ ಊರನ್ನು ಕಟ್ಟಿಸಬೇಕೆಂಬ ಯೋಚನೆ ಅಂಕುರಿಸಿದೆ ಇದಕ್ಕೆ ಊರ ನಿವಾಸಿಗಳು ನಿಗಾ ಕೊಟ್ಟು ಸರಕಾರಕ್ಕೆ ಸಹಾಯ ಮಾಡಬೇಕು ಇದಲ್ಲದೆ ಮಾರಿಕಣಿವೆಯಿಂದ ಇನ್ನೊಂದು ಕಾಲುವೆಯನ್ನು ಪಶ್ಚಿಮ ಮುಖವಾಗಿ ಆರಂಭಿಸಿ ಸದ್ಯಕ್ಕೆ ಸುಮಾರು ೩೦-೪೦ ಮೈಲಿಗಳ ವರಿಗಾದರೂ ನೀರಾವರಿ ಮಾಡಬೇಕೆಂದು ನಿಶ್ಚಯ ಮಾಡಿರುವಂತೆ ತೋರುತ್ತ ಇದಾದರೆ ಈ ಕಾಲದಲ್ಲಿ ಬಡಬಗ್ಗರಿಗೆ ರಿಲೀಫ್ ಕೆಲಸ ದೊರೆಯುವದೂ ಅಲ್ಲದೆ ಈ ಡಿಸ್ಟ್ರಿಕ್ಟಿಗೆ ಸ್ಥಿರವಾದ ಮಹೋಪಕಾರವನ್ನು ಮಹಾರಾಜಾ ಸರಕಾರದವರು ಮಾಡಿದಂತೆ ಆಗಿ ಅವರನ್ನು ಪ್ರಜೆಗಳು ಸಾರ್ವದಾ ಉಪಕಾರ ಸ್ಮರಣೆಯಿಂದ ವಂದಿಸುತ್ತಿರುವರು

ವಿದೇಶ ವರ್ತಮಾನಗಳು:

ನ್ಯೂಜೀಲಾಂಡ್ ರಾಜ್ಯಕ್ಕೆ ಸೇರಿದ ಪೆಂಗೂಯಿನ್ ಎಂಬೊಂದು ಹಡಗು ಕಳೆದ ವಾರ ಬಂಡೆಗೆ ಬಡಿದು ನಾಶವಾದದ್ದರಿಂದ ಅದರಲ್ಲಿದ್ದ ಸುಮಾರು ೪೦ ಜನರು ಸಮುದ್ರದ ಪಾಲಾದರು

ರಷ್ಯಾದವರ ಒಂದು ಹಡಗು ಸೋಫೋ ರೊಸ್ಸೀಕ್ ಎಂಬ ರೇವಿನ ಬಳಿ ಜರ್ಮನಿಯ ಜಹಜಿಗೆ ಆಕಸ್ಮಾತ್ತಾಗಿ ಬಡಿದು ಮುಳುಗಿಹೋಯಿತು. ನಾಲ್ವರು ಮಾತ್ರ ಉಳುಕೊಂಡರು ಸುಮಾರು ೩೦ ಮಂದಿ ಸಮುದ್ರದ ಪಾಲಾದರು.

ಮಹಮದೀಯರ ಯಾತ್ರಾಸ್ಥಾನಗಳಿಗೆ ಹಾಕಿದ್ದ ರೈಲ್ ರಸ್ತೆಯಲ್ಲಿ ಮಾನ್‌ನಿಂದ ತೇಬುಕ್ ವರೆಗಿನ ರಸ್ತೆಯನ್ನು ಅರಬ್ಬೀ ಜನರು ಹಾಳುಮಾಡಿದ್ದಲ್ಲದೆ ತಂತೀ ವರ್ತಮಾನ ಹೋಗಿಬರುವ ತಂತೀ ಕಂಬಗಳನ್ನೂ ಕಿತ್ತುಹಾಕಿರುತ್ತಾರೆ

ವಿಲಾಯಿತಿಗೆ ಸೇರಿದ ವಾಡ್ಸ್‌ವರ್ತ್ ಎಂಬ ಪಟ್ಟಣದಲ್ಲಿ ಪ್ಲಾಕ್ಸ್‌ಟನ್ ಎಂಬೊಬ್ಬ ತೋಟಗಾರನ ಹೆಂಡತಿಯು ೪೫ನೇ ವಯಸ್ಸಿನಲ್ಲಿ ಬಸುರಾಗಿ ನಾಲ್ಕು ಮಕ್ಕಳನ್ನು ಏಕಕಾಲದಲ್ಲಿ ಹೆತ್ತಳು ಆದರೆ ಹೆತ್ತ ಸ್ವಲ್ಪ ಹೊತ್ತಿನ ಮೇಲೆ ಅವೆಲ್ಲಾ ಮೃತಪಟ್ಟವು

ಲಂಡನ್ ಪಟ್ಟಣದಲ್ಲಿ ವಿದ್ಯಾರ್ಥಿಯಾಗಿರುವ ಒಬ್ಬ ಬ್ರಾಹ್ಮಣ ಯೌವನಸ್ಥನು ಸರ್ ವಿಲ್ಲಿಯಂ ಲೀ ವಾರ್ನರ್ ಎಂಬುವರನ್ನು ಕಂಡು ಅವರ ಮೇಲೆ ಬಿದ್ದು ಹೊಡೆಯುವುದಕ್ಕೆ ಹೋದನೆಂದು ತಿಳಿಸಿದ್ದೆವಷ್ಟೆ ಆ ಬ್ರಾಹ್ಮಣ ವಿದ್ಯಾರ್ಥಿಯನ್ನು ದಯಾಸ್ಪದಮಾಡಿ ಕಳೆದ ವಾರ ಅರ್ಧಂದಲೂ ಇನ್ನಬ್ಬರಿಂದಲೂ ನೇಕ ಬಾಲಿಗೆ ಜಾಮೀನ್ ತೆಗೆದುಕೊಂಡು ಬಿಡುಗಡೆ ಮಾಡಿರುತ್ತಾರೆ

ವಿಲಾಯಿತಿಯಲ್ಲಿ ಎಂದೂಕಾಗಳನ್ನು ವಶಮಾಡುವ ಕಂಪನಿಯು ಪಿಜಂಟನಿಂದ ರಷ್ಯಾ ರಾಜ್ಯದ ಸೈನ್ಯಾಧಿಪತಿಯಾದ ಮೇಜರ್ ಜನರಲ್ ಅಲೆಕ್ಸೀಫ್ ಎಂಬಾತನು ೫೦,೦೦೦ ದ್ರವ್ಯವನ್ನು ಲಂಚವಾಗಿ ತೆಗೆದುಕೊಂಡನೆಂದು ತಿಳಿದು ಬಂದದ್ದರಿಂದ ರಷ್ಯಾ ಗವರ್ನ್‌ಮೆಂಟಿನವರು ಆತನನ್ನು ಕೆಲಸದಿಂದ ತೆಗೆದುಹಾಕಿ, ಮಿಲ್ಟರಿ ಕೋರ್ಟಿನಲ್ಲಿ ವಿಚಾರಣೆ ಮಾಡುತ್ತಿದಾರೆ

ವಿಲಾಯಿತಿಯಲ್ಲಿ ೭೦ ವರುಷಕ್ಕಿಂತ ಹೆಚ್ಚಾದ ಮುದುಕರಿಗೆ ಸರಕಾರದವರು ಧರ್ಮದ ಪೆನ್ಷನ್ ಕೊಡುತ್ತಿದಾರಷ್ಟೆ ಕಳೆದ ವರುಷದ ಅಖೈರು ವರೆಗೆ ಒಟ್ಟು ೫,೯೬,೦೩೮ ಜನರು ಈ ಪೆನ್ಷನ್ ಪಡೆದಿರುತ್ತಾರೆ. ಈ ಪೈಕಿ ಇಂಗ್ಲಾಂಡಿನವರು ೩,೩೮,೯೪೮ ಮಂದಿ, ವೇಲ್ಸಿನವರು ೫೯,೯೫೭ ಮಂದಿ, ಸ್ಕಾಟ್ಲೆಂಡಿನವರು ೬೪ ೭೬೯ ಮಂದಿ ಐರ್ಲೆಂಡಿನವರು ೧ ೬೦,೩೬೫ ಮಂದಿ

ವಿಲಾಯಿತಿಗೆ ಸೇರಿದ ಲಿಂಕನ್‌ಷೈರ್ ಫೆನ್ಸ್ ಎಂಬ ಸ್ಥಳದಲ್ಲಿ ಪ್ರಜೆಗಳು ದೀರ್ಘಾಯುಸ್ಸಿನಲ್ಲಿ ಬದುಕುವವರಾಗಿ ಕಾಣುತ್ತಾರೆ ಕಳೆದ ೧೯೦೮ನೇ ವರುಷದಲ್ಲಿ ೭೦ ವರುಷಕ್ಕಿಂತ ಹೆಚ್ಚು ವಯಸ್ಸಿನವರು ೩೪೦ ಜನರೂ, ೮೦ ರಿಂದ ೯೦ ವಯಸ್ಸಿನೊಳಗಿದ್ದವರು ೧೩೦ ಮಂದಿಯೂ, ೯೦ ರಿಂದ ೧೦೦ ವಯಸ್ಸಿನೊಳಗಿದ್ದವರು ೩೬ ಜನರೂ, ೧೦೭ ವರುಷವಾಗಿದ್ದವನೊಬ್ಬನೂ ಕಾಲವಾದರು

ಈಚೆಗೆ ಚೀನಾ ರಾಜ್ಯದಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳು ನಡೆಯಲಾರಂಭವಾಗಿರುತ್ತವೆ ಪ್ರತಿ ಒಂದು ದೊಡ್ಡ ಪಟ್ಟಣದಲ್ಲೂ ಈಗಿನ ಕಾಲಾನುಗುಣ್ಯವಾದ ಬದಲಾವಣೆ ಕಂಡು ಬರುವವು ಎಲ್ಲಾ ಕಡೆಗಳಲ್ಲೂ ಜಲ್ಲಿ ಕಲ್ಲು ಹಾಸಿದ ಬಾಟಾ ಮಾರ್ಗಗಳೂ, ಪಟ್ಟಣದ ರೊಚ್ಚನ್ನು ಸಾಗಿಸುವಂಥಾ ಭಾರೀ ಬಚ್ಚಲುಗಳೂ ಆಗುತ್ತವೆ ರಸ್ತೆಗಳು ಕೊಳಕಿಲ್ಲದೆ ನಿರ್ಮಲವಾಗಿರುವವು ಅಂಗಡಿ ಮುಂಗಟ್ಟುಗಳು ವಿಶಾಲವಾದ ಕಟ್ಟಡಗಳಲ್ಲಿ ಇಡಲ್ಪಟ್ಟವೆ ದೊಡ್ಡ ದೊಡ್ಡ ವರ್ಕ್‌ಷಾಪುಗಳು ಕಟ್ಟಲ್ಪಟ್ಟವೆ. ತರಪೇತಾದ ಮತ್ತು ಯೂನಿಫಾರಂ ಧರಿಸುಗಳಲ್ಲಿರುವ ಪೋಲೀಸಿನವರು ಎಲ್ಲಾ ಕಡೆಗಳಲ್ಲೂ ಕಾಣುವರು ಈಗಿನ ಕಾಲಕ್ಕೆ ಯೋಗ್ಯವಾದ ಭಾರೀ ಕಟ್ಟಡಗಳೂ, ಬಂಗಲೆಗಳೂ, ವಿದ್ಯುಚ್ಛಕ್ತಿಯ ದೀಪಗಳೂ, ದಿನಸಿವಾರಿ ಗಾಡಿಗಳೂ ನೋಡಬಹುದು ವಿಶಾಲವಾದ ಪಾಠಶಾಲೆಗಳಲ್ಲಿ ಯೋಗ್ಯವಾದ ಉಡುಪುಗಳನ್ನು ಧರಿಸಿ ಓದುವ ಹುಡುಗರೂ, ಕಸರತ್ತುಗಳನ್ನು ಮಾಡುವ ಯೌವನಸ್ಥರೂ ಇರುತ್ತಾರೆ ದೊಡ್ಡ ವಾಚಕಶಾಲೆಗಳೂ, ಉಪನ್ಯಾಸ ಮಂದಿರಗಳೂ ಹುಟ್ಟಿ ಹೆಚ್ಚುತ್ತಿರುವವು. ಚೀನೆಯವರು ಹಿಂದಣ ಮಕ್ಕಳನ್ನು ಬಿಗಿಯಾಗಿ ಕೂಡಿಸಿಕೊಂಡು ಸಂಚಾರ ಮಾಡುತ್ತಾರೆ ಅನ್ಯ ಜನಾಂಗದವರ ಮೇಲಿದ್ದ ಅನುಮಾನವೂ ಭೀತಿಯೂ ದ್ವೇಷವೂ ತೊಲಗಿಹೋದವು ಎಲ್ಲರೂ ಏಕೀಭವಿಸಿ ಕೆಲಸ ಕಾರ್ಯಗಳನ್ನು ಮಾಡುತ್ತಾ ಆಹಾರ ವಿಹಾರಗಳಲ್ಲಿ ವಿನೋದಪಡುವವರಾಗಿದಾರೆ ಸ್ತ್ರೀ ವಿದ್ಯಾಭ್ಯಾಸವು ಹರಡುತ್ತಿದೆ ಅಫೀಮು ಸೇವನೆಯನ್ನು ತಿರಸ್ಕಾರ ಮಾಡುತ್ತಿದಾರೆ ರಾಜಸಂತತಿಯವರೂ, ದೊಡ್ಡ ಮನುಷ್ಯರೂ ಮೋಟಾರ್ ಮೊದಲಾದ ಅನ್ಯ ದೇಶಗಳ ವಾಹನಗಳಲ್ಲಿ ಧಾರಾಳವಾಗಿ ಸಂಚರಿಸುವುದನ್ನು ನೋಡಬಹುದು ರೈಲ್, ಟೆಲಿಗ್ರಾಫು, ಅಂಚೆ, ಈ ಬಾಬುಗಳು ದಿನೇ ದಿನೇ ಹೆಚ್ಚುತ್ತಾ ಇವೆ ಇವುಗಳನ್ನು ಅಭಿವೃದ್ಧಿಗೆ ತರಬೇಕೆಂಬ ಕುತೂಹಲವು ಹರಡಿಕೊಳ್ಳುತ್ತಿದೆ ತಂತೀ ವರ್ತಮಾನಕ್ಕೆ ಕೊಡಬೇಕಾದ ದರಗಳು ಬಹಳ ಹೆಚ್ಚಾಗಿವೆ ಆದರೆ ಅಲ್ಲಿನ ಅಂಚೆಯ ಸೌಲಭ್ಯವು ಇನ್ನೆಲ್ಲೂ ಸಿಕ್ಕಲಾರದು ವಿದ್ಯಾಭ್ಯಾಸದ ವಿಷಯದಲ್ಲಿ ಎಲ್ಲರಿಗೂ ಕುತೂಹಲ ಹೆಚ್ಚುತ್ತಿದೆ ಈ ರೀತಿ ಚೀನಾ ರಾಜ್ಯಭಾರವು ಹಲವು ಮಾರ್ಗಗಳಲ್ಲಿ ಕಣ್ಣುಬಿಟ್ಟು ಅಭಿವೃದ್ಧಿ ಹೊಂದುತ್ತಾ ಬಂದಿರುವುದು

JUST RECEIVED! **JUST RECEIVED!!**

Stead's Books for the Bairns

(Illustrated) New Numbers [57

STEAD'S PENNY POPULAR TALES Sixty four Pages in a coloured Picture Cover Each number contains a story of thrilling interest 24 numbers

CALENDARS FOR 1909.

Apply—**The Manager, C.L.S. Book Depot, Mysore City.**

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ, ಬಳಲಿಕೆ; ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣು ಮೊಬ್ಬು; ತಲೆ ತಿರುಗುವಿಕೆ; ಮೈನೋವು ಕೀಲುನೋವು, ಮರವು, ನಿಶ್ಶಕ್ತಿ; ಇವೇ ಮೊದಲಾದುವು. ಉಪೇಕ್ಷೆ ಮಾಡಿದರೆ ಮೂತ್ರಜಲಧರ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [69-25]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.

ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦, ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೨೦, ಪಿ. ಒ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

ಹೊಸ ಪುಸ್ತಕಗಳು. ಟಪ್ಪಾಲಖರ್ಚು ಪ್ರತಿ ಹೆಚ್ಚು ಬಿಲು ಅಗ. ೧

26 1

ಕನ್ನಡ ೩ನೇ ರೀಡರಿನ ಟಿಪ್ಪಣಿ ವ್ಯಾಕರಣಾಭ್ಯಾಸ ಸಹಿ	೨ ಆಣೆ
ಡಿಟೋ ೪ನೇ ರೀಡರಿನ ಟಿಪ್ಪಣಿ ಡಿಟೋ	೧ ಆಣೆ
೧ನೇ ತರದ ಅಂಕಗಣಿತದ ಉತ್ತರಗಳು	೧ ಆಣೆ.

ವಿಳಾಸ —ಕೆ. ರಾಮಸ್ವಾಮಿಅಯ್ಯಂಗಾರ್, ಮಾಗಡಿ.

ಆಲಸ್ಯಮಾಡಿದರೆ ದೊರೆಯುವುದಿಲ್ಲ.

25 1

1909 ನೇ ಇಸವಿ ಕ್ಯಾಲೆಂಡರುಗಳ ಬಹುಮಾನ.

ಫೆಬ್ರವರಿ ತಿಂಗಳು ಆಖೈರಿನೊಳಗೆ ನಮಗೆ ಕಾರ್ಡಿನಲ್ಲಿ ವಿಳಾಸವನ್ನು ಬರೆದು ಕಳುಹಿಸತಕ್ಕವರಿಗೆ ಒಂದು ಸೊಗಸಾದ ವಿಚಿತ್ರವಾದ ಕ್ಯಾಲೆಂಡರನ್ನು ಉಚಿತವಾಗಿ ಕಳುಹಿಸುವೆವು ಶೀಘ್ರವಾಗಿ ಬರೆಯಿರಿ

ವಿಳಾಸ —ದಿ ರೈಟ್ಸ್ ವಾಚ್ ಕಂಪನಿ, ಪಾರ್ಕ್‌ಟೌನ್. ಮದರಾಸು

ಗೃಹಕೃತ್ಯದ ನೋಟೀಸ್.

29 1

ಬೆಂಗಳೂರು ಡಿಸ್ಟ್ರಿಕ್ಟು ಮಧುಗಿರಿ ತಾಲ್ಲೂಕು ಮುನ್‌ಸೀಫ್ ಕೋರ್ಟು ದಫೇದಾರ್ ಹನುಮಂತನಾಯ್ಕನು ಇದರಿಂದ ಲೇವಾದೇವಿ ಮಾಡತಕ್ಕ ವರ್ತಕರು ಮತ್ತು ರೈತಾಪಿ ಜನಗಳಿಗಾಗಿ ಸರ್ವರಿಗೂ ತಿಳಿಯಪಡಿಸುವುದೇನೆಂದರೆ—ನನ್ನ ಧರ್ಮಪತ್ನಿಯಾದ ಲಕ್ಕೀ ಎಂಬುವಳು ಮತ್ತು ೨ ನೇ ಮಗ ರಂಗನೆಂಬುವನು ಸಹಾ ನನ್ನ ಪೋಷಣೆಯಲ್ಲಿದ್ದು ನನ್ನ ಇಚ್ಛೆಯಂತೆ ನಡೆಯದೆ, ಅವರ ಮನಸ್ಸಿಯಾಗಿದ್ದುಕೊಂಡು, ನನಗೆ ಕೆಡುಕುಮಾಡಬೇಕೆಂಬ ಇರಾದೆಯುಳ್ಳವರಾಗಿರುವಂತೆ ತಿಳಿಯಬಂದಿರುತ್ತದೆ ಆದ್ದರಿಂದ ಇವರು ನನ್ನ ಸ್ವಯಾರ್ಜಿತವಾದ ಸ್ಥಿರಸೊತ್ತುಗಳ ಪೈಕಿ ಯಾವ ಸೊತ್ತನ್ನಾಗಲೀ, ನನ್ನ ೧ ನೇ ಮಗ ಭೀಮನೆಂಬುವನ ಹೆಸರಿನಲ್ಲಿರುವ ಸ್ಥಿರಸೊತ್ತನ್ನೇ ಆಗಲೀ ಲಕ್ಕೀ ಎಂಬುವಳು ಮತ್ತು ಇವಳ ೨ ನೇ ಮಗ ರಂಗನೆಂಬುವನು ಸಹಾ ಸೇರಿ ನನ್ನ ಮತ್ತು ಭೀಮನ ಹೆಸರಿನಲ್ಲಿರುವ ಸ್ಥಿರಸೊತ್ತುಗಳನ್ನೇನಾದರೂ ಆಧಾರ, ಕ್ರಯ, ಭೋಗ್ಯ ಮುಂತಾದ್ದು ಮಾಡಿಸಿಕೊಂಡಲ್ಲಿ ಸದರಿ ಸಾಲಕ್ಕೆ ನಾವಾಗಲೀ, ನಮ್ಮ ಯಾವ ಆಸ್ತಿಯಾಗಲೀ ಈಡಾಗಲಾರದಾದ ಮುಂಚಿತವಾಗಿ ಈ ಮೂಲಕ ಸರ್ವರಿಗೂ ತಿಳಿಯಪಡಿಸಿರುತ್ತೇನೆ

ತಾ ೮—೨—೧೯೦೯. ಹನುಮಂತನಾಯ್ಕನ ರುಜು

ಕಾಂತಿವರ್ಧಕ ಎಣ್ಣೆ.

24-1

ನೂತನವಾಗಿ ಕಂಡು ಹಿಡಿಯಲ್ಪಟ್ಟದ್ದು.

ತಲೆಕೂದಲು ಬೆಳೆಯಲು ಉತ್ತಮವಾದ ಸುಗಂಧ ಎಣ್ಣೆ.

ಸ್ತ್ರೀಯರ ಸೌಂದರ್ಯಕ್ಕೆ ಮುಖ್ಯ ಕಾರಣ ಭೂತವಾದ ಕೇಶವು ಚೆನ್ನಾಗಿ ಬೆಳೆದು ಸೌಂದರ್ಯವನ್ನು ಹೆಚ್ಚಿಸತಕ್ಕ ಈ ನೂತನ ಎಣ್ಣೆಯು ಬಜಾರಿನಲ್ಲಿ ಮಾರಲ್ಪಡುವ ಇತರ ಎಣ್ಣೆಗಳಂತೆ ಲೇಶವೂ ದುರ್ಗುಣಯುಕ್ತವಾದುದಲ್ಲ. ಎಲ್ಲ ದರ್ಜೆಯ ಗಂಡಸರೂ, ಹೆಂಗಸರೂ ಹೊಂದಬಹುದಾದ್ದಕ್ಕೆ ಅನುಕೂಲವಾಗಿ ಇದರ ಬೆಲೆಯೂ ಕಮ್ಮಿ ಇಡಲ್ಪಟ್ಟಿದೆ ನಮ್ಮ ಈ ಎಣ್ಣೆಯ ಉಪಯೋಗದಿಂದ ಎಂಥಾ ಪಟ್ಟೆ ತಲೆಯಾದರೂ ಕೂದಲು ಹುಲುಸಾಗಿ ಬೆಳೆಯುತ್ತದೆ. ಈ ಎಣ್ಣೆಯನ್ನು ಒಳ್ಳೆ ಕೊಬರಿಯೆಣ್ಣೆ ಅಥವಾ ಅಚ್ಚೆಳ್ಳೆಣ್ಣೆಯೊಂದಿಗೆ ಬೆರೆಸಿಯೂ ಉಪಯೋಗಿಸಬಹುದು. ಇದರ ಬೆಲೆ ನಂ 1 ಶೀಷ 1 ಕ್ಕೆ ರೂ 1—0—0, ನಂ. 2, 0—12—0 ನಂ 3, 0—8—0



ವಿಳಾಸ —ಪಿ ಓ ಎಂಡ್ ಕಂಪನಿ, ಗಿರಿಗಾಂ, ಬೊಂಬಾಯಿ.

ಇಪ್ಪತ್ತು ವರ್ಷದ ಕಾಯಿಲೆ,

ಬದುಕುವೆನೆಂಬ ಆಶೆಯೇ ಇರಲಿಲ್ಲ.

ಯಾವ ಔಷಧವೂ ಗುಣಕೊಡಲಿಲ್ಲ. ಪೆರೂನಾ ವಾಸಿಮಾಡಿತು.

ದೇಹದೊಳಗಿನ ಶೈತ್ಯವು

ಅನೇಕ ರೋಗಿಗಳು ಶರೀರದೊಳಗಿರುವ ಅಂಗಗಳಲ್ಲಿ ಶೈತ್ಯಹಿಡಿದು ಬಹಳವಾಗಿ ದುರ್ಬಲಹೊಂದಿ ಕೊರಗುತ್ತಾರೆ ಇದರಿಂದುಂಟಾಗುವಷ್ಟು ಕಷ್ಟವು ಇನ್ನಾವ ರೋಗದಿಂದಲೂ ಉಂಟಾಗದು ತುಂಬಾ ಜುಗುಪ್ಸೆ ವಿಶೇಷ ನಿಶ್ಶಕ್ತಿ, ಕಷ್ಟಕರವಾದ ಸಂಕಟಗಳು, ಎದೆಬಡಿತ ದುರ್ಬಲ, ಇವೆಲ್ಲಾ ಉಂಟಾಗುತ್ತವೆ ಈ ತರಹಾ ರೋಗಗಳು ಸಾವಿರಾರು ಮಂದಿ ಕ್ರಮೇಣ ಒಬ್ಬೊಬ್ಬರಾಗಿ ಪೆರೂನಾ ವಾಸಿಮಾಡಬಲ್ಲ ಔಷಧವೆಂದು ಕಂಡುಕೊಂಡಿದಾರೆ ಒಬ್ಬನು ಇನ್ನೊಬ್ಬನಿಗೆ ತಿಳಿಸುವನು ಈ ಪ್ರಕಾರ ಈ ಸುದ್ದಿಯು ಎಲ್ಲಾ ಕಡೆಗೆಲೂ ಹರಡಿಕೊಂಡು, ದೇಹದ ಅಂತರ್ಗತವಾದ ಶೈತ್ಯವನ್ನು ಶಾಸ್ತ್ರತವಾಗಿ ನಿವಾರಣೆ ಮಾಡುವದಕ್ಕೆ ಇದು ಉತ್ತಮೋತ್ತಮವಾದ ಔಷಧವೆಂದು ಅನುಭವಪೂರ್ವಕವಾಗಿ ಹೇಳುವರು. ಜನರು ಹೇರಳವಾಗಿರುತ್ತಾರೆ ಅನೇಕ ಜನರು ಅನ್ನಕೋಶ ವ ಉಸ್ವಕೋಶ, ಇತರ ಕೋಶಗಳಲ್ಲಿ ಉಂಟಾಗಿದ್ದ ಶೈತ್ಯರೋಗಗಳನ್ನು ಸಂಪೂರ್ಣವಾಗಿ ನಿವಾರಣೆ ಮಾಡಿದೆ ಎಂದು ತಾವಾಗಿ ಬರೆದು ತಿಳಿಸಿದ್ದಾರೆ ಇಂಥಾ ರೋಗಿಗಳಿಗೆ ಪೆರೂನಾದಿಂದ ಉಂಟಾದ ಗುಣವನ್ನು ಕೇಳಿ ಅವರು ಬರೆದಿರುವ ಮಾತನ್ನು ಕೆಳಗೆ ತಿಳಿಸುತ್ತೇವೆ



MR. ABNER N KEEP



MR. SIDNEY WESSELS

ಆಹಾರ ರುಚಿಸುತ್ತಿದೆ

ಮಿ ಸಿಡ್ನಿವೆಸ್ಸಲ್ಸ್, ನ್ಯೂಯಾರ್ಕ್, ಒಂಟೆರಿಯೊ ಕ್ಯಾಸ್ಕ್ ಈತನು ಬರೆಯುವುದು —

• ನನಗೆ ಇಪ್ಪತ್ತು ವರುಷದ ತನಕ ಅಜೀರ್ಣರೋಗವಿತ್ತು ಇದರಿಂದ ನಾನು ಬಹಳ ಕಷ್ಟಪಟ್ಟೆನು ಹಲವು ಮಂದಿ ಡಾಕ್ಟರುಗಳು ಚಿಕಿತ್ಸೆ ಮಾಡಿದರೂ ಒಂದೂ ನನಗೆ ಸಂಪೂರ್ಣ ಗುಣಕೊಡಲಿಲ್ಲ

• ಕೆಲವರು ವಾರಗಟ್ಲೆ ನಾನು ಕೆಲಸ ಬಿಟ್ಟು ಮನೆಯಲ್ಲೇ ಮಲಗಿರುತ್ತಿದ್ದೆನು ಬಾಧೆ ಹೆಚ್ಚಾಗಿದ್ದ ಪ್ರಕಾರ ಹಾಲು ಮಾತ್ರ ಕುಡಿಯುತ್ತಿದ್ದೆನು ಇದು ತೀ ಪೆರೂ ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ

ನನಗೆ ಗುಣವಾಗುವುದಿಲ್ಲವೆಂದು ನಿರಾಶೆಯುಂಟಾಗುವ ಕಾಲದಲ್ಲಿಯಾಯಿತು ಆಗ ಪೆರೂನಾ ವಿಷಯ ತಿಳಿಯಿತು ಅದನ್ನು ಸೇವಿಸಿ ನೋಡಬೇಕೆಂದು ಗೊತ್ತುಮಾಡಿದೆನು ಒಂದು ಬಾಟ್ಲು ಸೇವಿಸುವಷ್ಟರಲ್ಲಿ ತುಂಬಾ ಅನುಕೂಲವಾಯಿತು ಈ ಆಶ್ಚರ್ಯಕರವಾದ ಔಷಧವನ್ನು ಇನ್ನೊಂದು ಬಾಟ್ಲು ಸೇವಿಸಿದೆನು ಒಳ್ಳೇ ನನ್ನ ಹೊಟ್ಟೆ ನೊಂದು ನಿವಾರಣೆಯಾಗಿ ಹಾಲಿಗೆ ರುಚಿಯುಟ್ಟಿತು ಸಂತೋಷವಾಗಿ ಊಟ ಮಾಡುವಂತಾಯಿತು ಈ ಪ್ರಸಂಗದಲ್ಲಿ ಪೆರೂನಾ ಬಗ್ಗೆ ಶ್ಲಾಘನೀಯವಿದುವೆ ಮು ನಾನು ನಂಬಿರುತ್ತೇನೆ

ಮಿ॥ ರಾಬರ್ಟ್ ಇ ಹಾಬ್ಸ್, ಪ್ರಿಯರ್ ಸ್ಟೇಟ್ಸ್ ಆಫ್ ಇಂಡಿಪೆಂಡೆಂಟ್ ಯಲ್ ಸ್ಪ್ರಿಡಂ ಮತ್ತು ಪ್ರಸಿದ್ಧ ಲೇಖಕನೂ ಉಪನ್ಯಾಸಕನೂ, ಈತನು ೧೧ ಎಸ್ ಲಿಂಕನ್ ಬಿಡಿ, ಚಿಕಾಗೋದಿಂದ ಬರೆಯುವುದು —

ನಾಲ್ಕು ವರುಷಗಳ ಹಿಂದೆ ನನ್ನ ಪಿನ್ನು ಕುಂಟಾಗಿ ಬಾಧೆಯುಂಟಾಯಿತು ಕ್ರಮೇಣ ನೋವು ಹೆಚ್ಚುತಾ ಬಂತು ಭಳುಕು ಹುಟ್ಟಿತು ಗುಣತ್ರದ ಒಣ್ಣ ಬಡಲಾಯಿತು ಕ್ರಮ ತಪ್ಪಿ ಜಲಬಾಧೆ ಆಗಲಾರಂಭಿಸಿತು

• ಮೂತ್ರಕೋಶವು ಕೆಟ್ಟಿದ್ದರಿಂದ ಹೀಗಾಗಿದೆ ಎಂದು ನನಗೆ ಗೊತ್ತಾಯಿತು

• ಪೆರೂನಾ ವಿಷಯವನ್ನು ಓದಿ ಅದನ್ನು ಸೇವಿಸಬೇಕೆಂದು ಗೊತ್ತುಮಾಡಿ ಕೊಂಡೆನು ಹತ್ತು ದಿನಗಳೊಳಗೆ ನನಗೆ ಗುಣ ಕಂಡಿತು ಒಟ್ಟುಕು ಕ್ರಮೇಣ ಕಡಮೆಯಾಯಿತು ನನ್ನ ಸಂತೋಷವನ್ನು ಅಭಿವೃದ್ಧಿಪಡಿಸಿ ಹರಿಸಿಲಿಕೆನು

• ಮೂರು ತಿಂಗಳಾಗುವಷ್ಟರೊಳಗೆ ನನಗೆ ತುಂಬಾ ಸೌಖ್ಯವಾಯಿತು ಆಹಾರವು ರುಚಿಸುತ್ತಿದೆ ನನ್ನಲ್ಲಿದ್ದ ನಡುಕವು ಬಿಟ್ಟು ಸ್ವಭಾವಸ್ಥ ಸ್ಥಿತಿಗೆ ಬಂದವು ಎರಡು ವರುಷಗಳಿಂದಲೂ ಆರೋಗ್ಯ ಸ್ಥಿತಿಯಲ್ಲಿರುತ್ತೇನೆ •

ಪುನಃ ಪ್ರಾಯ ಬಂದಿದೆ

ಮಿ ಅಬ್ನರ್ ಎನ್ ಕೀಪ್ ಮೆಕ್ ಲೀನ್ ಓಹಿಯೋ ಈತನು ಬರೆಯುವುದು —

ಯಾವ ರೀತಿ ರೋಗದಿಂದ ಇಪ್ಪತ್ತು ವರುಷಗಳಿಂದ ಬಳ ದ ಓದಿ ಸಂಪನ್ನು ಇಪ್ಪ ಔಷಧಗಳನ್ನೆಲ್ಲಾ ಸ ಸಿದೆನು ಬಾಧೆ ಬಿ ಸೋಲ ಬ್ಯಾ ಸ ಮೊದಲಾದ ಸ್ಥಳಗಳ ಪ್ರಸಿದ್ಧ ವೈದ್ಯರುಗಳ ಹತ್ತಿರ ಚಿಕಿತ್ಸೆಯನ್ನು ಮಾಡಿಕೊಂಡೆನು ಆದರೆ ಯಾರ ಔಷಧದಿಂದಲೂ ಗುಣವುಂಟಾಗಲಿಲ್ಲ

ಕಡೆಗೆ ನನ್ನ ಆರೋಗ್ಯವು ಕೆಟ್ಟುಹೋಗಿ ಕೈಲಿದ್ದ ಹಣವೆಲ್ಲಾ ಮುಗಿದುಹೋಗಿ ಪೆರೂನಾ ಸೇವಿಸಿ ನೋಡೋಣ ಎಂದು ಸ್ನೇಹಿತನ ಆಜ್ಞೆಯ ಮೇರೆಗೆ ಬಂದು ಎರಡು ವರುಷಗಳಾಗಿದ್ದವು

ಒಂದು ಬಾಟ್ಲು ಪೆರೂನಾ ಗುಣಕೊಟ್ಟಿತು ಎರಡು ಬಾಟ್ಲು ಸೇವಿಸಿದ ಬಳಿಕ ನಾನು ಪೂರಾ ಗುಣಹೊಂದಿದೆನು

• ನಾನು ಎಪ್ಪತ್ತೆರಡು ವರುಷದವನು ಈಗ ನೋಡಿದರೆ ಪೂರಾ ವಸ್ತು ನನ್ನ ವಯಸ್ಸಿನವನಿಗೆ ಬಲವಲಿಕೆಯೂ ಆರೋಗ್ಯವೂ ಉಂಟಾಗಿದೆ

ಸ್ವಾನುಭವವಾಗಿ ರೋಗದಿಂದ ನರಳುತ್ತಿರುವವರಿಗೆಲ್ಲಾ ಒಳ್ಳೆಯದಾಗಲೆಂದು ಈ ಕಾಗದವನ್ನು ಬರೆದಿರುತ್ತೇನೆ ಯಾಕೆಂದರೆ ಈ ದೇಶದಲ್ಲಿ ರೋಗದಲ್ಲಿ ನರಳ ತಮ್ಮಲ್ಲಿರುವುದನ್ನೆಲ್ಲಾ ಡಾಕ್ಟರಿಗೆ ಕೊಟ್ಟು ಬರಿಗೈ ಮಾಡಿಕೊಳ್ಳುವವರು ನನ್ನ ಹಾಗೆ ಅನೇಕರಿರುತ್ತಾರೆ

ಮಿ॥ ಎಚ್ ಎಲ್, ಇನೂರಿ ವೈಸ್ ಛಾನ್ಸೆಲರ್, ವಾಸ್ಟರ್ ಆಫ್ ಆರಸ್ಸ್, ಕೆ ವಿ, ಪಿನಾಹಾ ಸ್ಟೇಟ್ಸ್ ಈತನು ಬಿಂಗ ಎಸ್ ಹವಿದಾರನಿ ಬಿ ಎಯಿಂದ ವಿಡಾತವು ಬಲಕಾರಿಯಾದ ಸೇವ ಓ ಔಷಧವೆಂದು ಹೊಗಳಿ ಬರೆಯುವದೇನೆಂದರೆ

• ಪೆರೂನಾದಿಂದ ಗುಣವು ಅಸಾಧಾರಣವಾದದ್ದು ಬಲಕಾರಿಯಾದ ಔಷಧವೆಂದು ಬಹಳ ಸಂತೋಷದಿಂದ ಹೇಳುತ್ತೇನೆ ನನ್ನ ಜೊತೆಯಲ್ಲಿ ನೌಕರಿ ಮಾಡುತ್ತಿರುವವರ ಪೈಕಿ ಅನೇಕರು ಅನ್ನಕೋಶದಲ್ಲೂ ಇತರ ಸ್ಥಳಗಳಲ್ಲೂ ಶೈತ್ಯಹಿಡಿದು ಬಹಳ ಕಷ್ಟಪಡುತ್ತಿದ್ದು, ಈ ಔಷಧವನ್ನು ಸೇವಿಸಿ ಚೆನ್ನಾಗಿ ಗುಣ ಹೊಂದಿದಾರೆ

• ಪೆರೂನಾ ಶರೀರ ದಾರ್ಢ್ಯವನ್ನು ವೃದ್ಧಿಪಡಿಸಿ, ಬಲಕೊಡುತ್ತದೆ ಬಳಲಿಕೆಯಾದ ವರ್ದ್ಧು ಸುಖವನ್ನು ಕೊಡುವುದು ರೋಗಿಗಳೆಲ್ಲಾ ಇದರ ಸೇವನೆಯಿಂದ ಸುಖ ಹೊಂದಬಹುದಾಗಿದೆ •

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ ಇಂಗ್ಲೀಷು ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದವನ್ನು ಇವರಿಂದಲೇ ತಿಳಿಯಬಹುದು

ವಿಳಾಸ —ಹಿಂದ ಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ

ಮೆಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೩೧—೧—1909 ರಿಂದ ೬—೨—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	14	8	0	0
ಮೈಸೂರು ,,	1	1	0	0
ಬೆಂಗಳೂರು ಡಿಸ್ಟ್ರಿಕ್ಟು	4	4	0	0
ಮೈಸೂರು ,,	28	29	0	0
ಕೋಲಾರ್ ,,	6	7	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	7	3
ಹಾಸನ ,,	19	7	0	0
ಚಿತ್ರದುರ್ಗ ,,	1	0	0	0
ಕಡೂರ್ ,,	8	6	0	0
ಶಿವಮೊಗ್ಗ ,,	5	1	0	12
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	80	65	8	3

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಮಾಘ ಬಹುಳ ತ್ರಯೋದಶಿ ಗುರುವಾರದಿಂದ ಫಾಲ್ಗುಣ ಶುದ್ಧ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಫೆಬ್ರವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಡಿ ಮೊಳದ ಪ
18	ಗುರು *	ತ್ರಯೋದಶಿ	36 20	ಪೂ	[illegible] 02	7
19	ಶುಕ್ರ †	ಚತುರ್ದಶಿ	30 18	ಶ್ರ	1 10	8
20	ಶನಿ	ಅಮಾವಾಸ್ಯೆ	21 00	ಧ	1 48	9
21	ರವಿ ‡	ಪಾಡ್ಯ	11 24	ಶ	1[illegible] 1	10
22	ಸೋಮ	ಬಿದಿಗೆ	13 10	ಪೂಭಾ	[illegible] 18	11
23	ಕುಜ †	ತದಿಗೆ	7 18	ಉ ಭಾ	3 00	12
24	ಬುಧ	ಚೌತಿ	1 38	ರೇವತಿ	[illegible] 12	13

* ಪ್ರದೋಷ ಮಹಾಶಿವರಾತ್ರಿ, ಗಂಜಪಗೂಡಿನಲ್ಲಿ ಉತ್ಸವ ‡ ಚಂದ್ರದರ್ಶನ † ಶ್ರೀ ರಾಮ ಗರುಡೋತ್ಸವ [illegible] ಸಮುದ್ರಸ್ನಾನ ಗಂಗಾಸ್ನಾನ ಸರ್ವತ್ರ, ಅಮಾವಾಸ್ಯೆ ‡ ವಿದ್ಯಾರಣ್ಯ, ಚಂದ್ರೋದಯ † ಅಮೃತಯೋಗ ಮಹಾಸ್ಪೃಷ್ಟ ಉತ ರಯೋಗ

ಪೇಟೆ ಧಾರಣೆ

ವಿಷಯ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೪ ೮ ೦	೧೯ ೦ ೦
ಕೆಂಬೂತಿ ಅಕ್ಕಿ ಅವಲ್		೧೬ ೦	೧೨ ೮ ೦
,, ಮಧ್ಯಮ		೧೨ ೫ ೦	೧೨ ೦ ೦
ಜಾಸಾನ್ಯ ಅಕ್ಕಿ		೧೧ ೧೦ ೦	೧೯ ೦ ೦
ಸಣ್ಣಕ್ಕಿ ಅವಲ್		೧೮ ೦ ೦	೨ ೦ ೦
,, ಮಧ್ಯಮ		೧೭ ೮ ೦	೧೮ ೫ ೦
ತೊಗರಿ ಬೇಳೆ ಪಲ್ಲಾ ೧ ಕ್ಕೆ		೧೬ ೮ ೦	೧೭ ೮ ೦
,, ಮಧ್ಯಮ		೧೬ ೦ ೦	೧೭ ೦ ೦
ಹೈಜ್ ರಾಗಿ ಪಲ್ಲಾ ೧ ಕ್ಕೆ		೧೦ ೧೦	೧೦ ೦ ೦
ಕಾಂರಾಗಿ		೯ ೫ ೦	೯ ೮ ೦
ಜೋಳ		೯ ೦ ೦	೯ ೧೨
ಹಲಸಂದೆ ಪಲ್ಲಾ ೧ ಕ್ಕೆ		೧ ೪ ೦	೧೩ ೮ ೦
ಒಳ್ಳೆ ಅವರೆ		೧೬ ೦ ೦	೧೩ ೦
ಹೆಸರು		೧೨ ೦ ೦	೧೩ ೦ ೦
ಉದ್ದು		೧೪ ೬ ೦	೧೩ ೪ ೦
ಕಡಲೆ		೧೬ ೫ ೦	೧೩ ೮ ೦
ಎಳ್ಳು ಸೇ ೧೭೭ ಕ್ಕೆ		೨೯ ೦	೩೦ ೮ ೦
ಹುರುಳಿ		೧೦ ೮ ೦	೧೦ ೫
ಹರಳು ೧೨೭ ಸೇರಿಗೆ		೧೦ ೫ ೦	೧೧ ೦
ಸೀಗೇಕಾಯಿ ಮಣ ೧ ಕ್ಕೆ		೧ ೫ ೦	೧ ೫ ೦
ಮೆಣಸಿನಕಾಯಿ		೫ ೮ ೦	೪ ೦ ೦
,, ಮಧ್ಯಮ		೫ ೦ ೦	೩ ೮ ೦
ಪಿಲ್ಲ ಮೊಡ್ಡ ಅಚ್ಚು		೬ ೬ ೦	ಮ ೧ ೧೦ ೦
ಒಳ್ಳೆಣ್ಣೆ ಮಣ ೧ ಕ್ಕೆ		೭ ೦ ೦	೫ ೦ ೦
ಹರಳೆಣ್ಣೆ		೪ ೦ ೦	೪ ೦ ೦
ಕೊತ್ತುಂಬರಿ ಪಲ್ಲಾ ೧ ಕ್ಕೆ		೭ ೦ ೦	೬ ೧೨ ೦
ಉಪ್ಪು ,,		೬ ೦ ೦	೫ ೭ ೦
ಹುಣಸೇ ಹಣ್ಣು		೧ ೫ ೦	೧ ೪ ೦
,, ಹಳೇದು		೧ ೪ ೦	೧ ೪ ೦
ತುಪ್ಪ ಮಣ ೧ ಕ್ಕೆ		೧೪ ೫ ೦	೧೫ ೦ ೦
ಬೆಣ್ಣೆಯಿಸ್ಲ ಪೆಟಿ ೧ ಕ್ಕೆ		೫ ೦ ೦	೪ ೦ ೦
ತೆಂಗಿನಕಾಯಿ ೧೦೦ ಕ್ಕೆ		೪ ೫ ೦	೪ ೧೨ ೦
ಅಡಿಕೆಕಾಯಿ ಮಣ ೧ ಕ್ಕೆ		೦ ೧೨ ೦	೧ ೦ ೦
ಅಂಟುವಾಳದ ಕಾಯಿ ಮಣ ೧ ಕ್ಕೆ		೦ ೧೪ ೦	೦ ೧೫ ೦
ಚಿನ್ನ (ತೊಲೆ) ಕೆಂಪು		೧೫ ೭ ೦	೧೫ ೭ ೦
,, ,, ಪಸುಪು		೧೫ ೧೬ ೦	೧೫ ೧೦ ೦
,, ,, ಗಟ್ಟಿ ತೊಲ ೧ ಕ್ಕೆ		೨೪ ೧೦ ೦	೨೪ ೬ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೦ ೦	೬೫ ೦ ೦

Printed and Published by the Rev E W Thompson, M A Proprietor and Manager, Wesleyan Mission Press, Mysore. 18/2/1909

REGISTERED M 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೯ ನೇ ಇಸವಿ ಫೆಬ್ರವರಿ ತಾರೀಖು ೨೫ ನೇ ಗುರುವಾರ. ಸಂಚಿಕೆ ೩೯

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಈಗ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30 1]

ತಲೆನೋವು ಗಂಟು ಉಬ್ಬುವದು ...

ಗಂಧರ್ವಸಾರದ ಮುಲಾಮು.

ವಜ್ರಗುಟಿಕೆ.

ಈ ಕಂಪನಿಯವರು ಹತ್ತು ನಮೂನೆಯ ಔಷಧಗಳನ್ನು ತಯಾರಿಸುವವರಿರುತ್ತಾರೆ ... ಬರೆದುಕೊಳ್ಳಬಹುದು ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್ ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು — ಅಮೃತಾಂಜನ ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಿಲ್ಲದರೆ ಬೇಗ ಬರೆದು ತರಿಸಿಕೊಳ್ಳಿ. 17

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಮಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯವಾಗುತ್ತಿರುವ ಟೋಪಿಗಳ ಧಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ಯಾರಾಗುವ ಟೋಪಿಗಳ ದಾರ ಪ್ಲಾನೆಟ್ ಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೆ ನೀವು ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದ, ಕೆಂಪು, ಕಪ್ಪು, ಬಿಳಿ, ಕಾಸಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ರೇಶ್ಮೆ ಚುಕ್ಕೆಯುಳ್ಳ ಟೋಪಿಗಳು ೧ ರೂ ೮ ಆ ೨ ರೂ

ಸಾದ ಟೋಪಿಗಳು ೧ ರೂ ೧೨ ಆ ೧ ರೂ ೪ ಆ, ೧ ರೂ ೬ ಆ

ಅಂಚಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೊಪ್ಪನ ಟೋಪಿ, ಸರ್ಧಿಗೆ ಮೇಜೋಡು, ಬಗ್ಗಿನ ಮೇಜೋಡು, ಕಲ್ಲಿನ ಪ್ಯಾಂಟು ... ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಜ್ವರಸುಧಾ

81 21

ಒಂದು ಬಾಟ್ಲಿ ಕಿಮ್ಮತ್ತು ೮ ಆಣೆ—ವಿ. ಪಿ. ಖರ್ಚು ಬೇರೆ

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ಹಾಗೆ ಬೇರೆ ಔಷಧ ಲೋಕದಲ್ಲೇ ಇಲ್ಲವೆಂದು ಅನುಭವಿಕರಿಂದ ದಾಖಲೆಗಳು ಹೇಳುತ್ತಲಿವೆ ... ಕ್ವಿನೈನು ಮುಂತಾದವುಗಳನ್ನು ... ಜ್ವರಸುಧಾ ಎಂದರೆ ... ಜ್ವರಗಳನ್ನು ನಾಶಪಡಿಸುವುದರಲ್ಲಿ ಪ್ರಸಿದ್ಧಿ ಹೊಂದಿದೆ ... ಮಾಡಲಾಗಿದೆ.

ದೇವಸಾಹ್ನ ಟಿರ್ರಕ್, ಬೆಂಗಳೂರು ಡಿಸ್ಟ್ರಿಕ್ಟ್ — ಎಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್

ಜ್ವರಹರಿ. 18 4



ಇದು ಸಾಧಾರಣ ಜ್ವರ, ಛಳಿಜ್ವರ, ಮೋರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರವರು—ತಾವು ಕೆಲವು ದಿನಗಳ ಹಿಂದೆ ಕಳುಹಿಸಿ ಕೊಟ್ಟ ... ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಔಷಧಿ ಕೇಳುತ್ತಿರುವದರಿಂದ ದಯವಿಟ್ಟು ಇನ್ನೊಂದು ... ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದಾರೆ.

ಕ್ರಯ—ಸೀಸೆ ೧ಕ್ಕೆ ೮ ಆಣೆ, ೧ ರೂ ... ೮ ರೂ ... ದಪ್ಪ ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಮಾಡಲಾಗುವದು.

ಓಮಂ ಕರ್ಪೂರ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ ನಾನಾತರದ ಹೊಟ್ಟೆನೋವುಗಳು—ಮುಂತಾದ ಕಾಲರಾ ಮಹಾ ರೋಗವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೇಗಂದರೆ ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ... ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಹಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪರುಷರುಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಲ್ಲಿಯೂ ವಿಶೇಷ —

ಹೆಸ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

JUST RECEIVED! JUST RECEIVED!!

Stead's Books for the Bairns

illustrated New Numbers 5 81

STEAD'S PENNY POPULAR TALES—Sixty four Pages in a coloured Picture Cover. Each number contains a story of thrilling interest. 24 numbers.

CALENDARS FOR 1909.

Apply—**The Manager, C L S Book Depot Mysore City**

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !! 27

ನಮ್ಮಲ್ಲಿ ಈಗ ನವರಾತ್ರೆಗೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ ಈ ಬಟ್ಟೆಗಳನ್ನು ತರಿಸಿ ನೋಡಿ. ಅಗ್ಗ. ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವದು ಗಜ ಒಂದಕ್ಕೆ ... ಆಣೆಯಿಂದ ... ಆಣೆ ವರೆಗೂ ... ಅಗಲ ... ಟೋಪಿಗಳು ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ನೋಡಿರಿ ಪ್ರೋತ್ಸಾಹಕರೇ ! ತರಿಸಿ 98 14

ನೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಡಮೆ ಮಾಡಲಾಗಿದೆ. ...,೦೦೦ ಹಾಸನ್ ಟೋಪಿ ಹೆಣೆಯುವ (ಪೇರುವ) ಸುಪೀರಿಯರ್ ಉಲನ್ ಇದ್ದ ... ಬಂಡಲ್ ೧ಕ್ಕೆ ರೂ ೪ ೦೦

೧೦ ಟೋಪಿಮಾಡುವ ಸುಪೀರಿಯರ್ ಉಲನ್ ಬಂಡಲ್ ೧ಕ್ಕೆ ರೂ ೩ ೦

೧ ಟೋಪಿ ಉಲನ್ ದಾರಕ್ಕೆ (ಸುಪೀರಿಯರ್) ರೂ ೦ ೬ ೦

ಹಾಸನ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ಕ್ಕೆ ೦ ೨ ೦ ೦ ೧ ೬

(ಪೇರುವ) ಉಲನ್ ದಾರದಲ್ಲಿ ತಯಾರಾದ ಟೋಪಿ ... ೧ ... ರೂ ೧ ೨ ೦

ಪೇರುವಾ ಎಂಬ ಉಲನ್ ದಾರಗಳು ನಮ್ಮಲ್ಲಿಯೇ ಪಡೆದು ದೊರೆಯುವದರಿಂದ ಬೇರೆಲ್ಲಿಯೂ ದೊರೆಯದು. ಈ ಉಲನ್ ದಾರಕ್ಕೆ ಗಿರಾಕಿಗಳು ಜಾಸ್ತಿ ಇರುವದರಿಂದ ಒಂದು ಬಂಡಲ್ ಆದರೂ ಪೇರುವಾ ಉಲನ್ ತರಿಸಿ ನೋಡಿರಿ.

ಈಗ ನಮ್ಮಲ್ಲಿ ಬೇರೆ ಒಂದು ಡಿಪಾರ್ಟ್‌ಮೆಂಟು ಓಪನ್ ಮಾಡಿದೇವೆ ಅಂದರೆ ಮಂಗಳೂರಿನಲ್ಲಿ ದೊರೆಯುವ ಸಾಮಾನುಗಳು ಪರಸ್ಥಳದವರಿಗೆ ಯಾವದು ಬೇಕಾದರೂ ಚಿಕ್ಕಸೆಯಿಂದ ಪಡೆದು ಪರಸ್ಥಳದವರಿಗೆ ಕಳುಹಿಸುವದೇ ... ಕಮಿಷನ್ ರೂ ೩ ೪ ೦ ಪರಸ್ಥಳದವರಿಗೆ ವಿ. ಪಿ. ಯಿಂದಲೂ ರವಾನಿಸುತ್ತೇವೆ. ಕೆಟಲಾಗನ್ನು ಕೇಳಿದವರಿಗೆ ರವಾನಿಸುತ್ತೇವೆ. ನಮ್ಮ ವಿಳಾಸ —

ದಿ ಉಲನ್ ಮಾರ್ಟ್, ಮಂಗಳೂರು

ಪಾಳ್ಯದ ವೆಂಕಟಾಚಲ ಪಂಡಿತರ ಔಷಧಗಳು. 99 2

೧ ಲೋಕಾಮಯಹರ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹೊಟ್ಟೆನೋವು ಕೆಮ್ಮಲು, ನೆಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಮಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯ ... ಇಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ... ಕಾಯಿಲೆಗೂ ದಾರಿಕೊಡದೆ, ನೀರು ಹಸಾರ ಬವಲು ... ಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಕಾಲದ ಮಕ್ಕಳ ... ಜ್ವರ, ನೆಗಡಿ, ಕೈ ಕಾಲುಗಳನ್ನು ಬಹು ಬೇಗನೆ ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ವೈದ್ಯರನ್ನು ಹುಡುಕಿಕೊಂಡು ಹೋಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನವು ಔಷಧದ ಸಂಗಡಲೇ ಇರುತ್ತದೆ.

೨೫ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ... ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ ... ಎಸ್. ಆರ್.

ವೈದ್ಯಶಾಲಾ ಲಕ್ಷ್ಮೀವಿಲಾಸ ರಸ್ತೆ, ಮೈಸೂರು.

ನೋಟೀಸ್

22

ಮೈಸೂರು ಸಿಟಿ ಮ್ಯುನಿಸಿಪಲ್ ಮೊಸುಲ್ (ಅಕ್ಸರಾಯಿ) ಆಫೀಸು ಪಕ್ಕದಲ್ಲಿರುವ ೯೩ ನೇ ನಂಬರು ಮಳಿಗೆಯಲ್ಲಿ ಅವಲ್ ತರಹೆ ರವ ಮತ್ತು ಹಿಟ್ಟು ಚಿಲ್ಲರೆಯಾಗಿಯೂ, ಹೋಲ್ಸೇಲಾಗಿಯೂ ಸುಲಭ ಕ್ರಯಕ್ಕೆ ಸಿಕ್ಕುತ್ತದೆ

ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು

11 7

ಚರಿತ್ರೆಯ ಪ್ರಶ್ನೋತ್ತರ, ಭೂಗೋಳ ಪ್ರಶ್ನೋತ್ತರ, ಆರೋಗ್ಯ ಪ್ರಶ್ನೋತ್ತರ—(1891 06) ಕ್ರಯ ೧ ೪ ೦ ವ್ಯವಸಾಯ ಪ್ರಶ್ನೋತ್ತರ ೦ ೫ ೦ ಎಗ್ಸಾಮಿನರ್ ಮಾಸಪುಸ್ತಕ ಚಂದಾ, ವರ್ಷಕ್ಕೆ ೧ ೬ ೦ ಅಂಚೆ ೧ ಹೆಚ್ಚು ೧೯೦೯ ನೇ ಕ್ಯಾಲೆಂಡರ್ ಕನ್ನಡ ಪ್ಲಸೋರ್ ೦ ೯ ೦ ೧೦ಕ್ಕೆ ೧ ಹೆಚ್ಚು ಕನ್ನಡ ಸ್ಟಡೆಂಟ್ಸ್ ಕ್ರಯ ಪ್ರತಿ ೧ಕ್ಕೆ ೦ ೩ ೦, ೫ಕ್ಕೆ ೧ ಹೆಚ್ಚು ಪಿ ಪುಟ್ಟಯ್ಯ, ಮ್ಯಾನೇಜರ್ ದಿ ಎಗ್ಸಾಮಿನರ್ ಆಫೀಸ್ ಮೈಸೂರು

ಕಾಂತಿವರ್ಧಕ ಎಣ್ಣೆ.

42

ನೂತನವಾಗಿ ಕಂಡು ಹಿಡಿಯಲ್ಪಟ್ಟದ್ದು

ತಲೆಕೂದಲು ಬೆಳೆಯಲು ಉತ್ತಮವಾದ ಸುಗಂಧ ಎಣ್ಣೆ

ಸ್ತ್ರೀಯರ ಸೌಂದರ್ಯಕ್ಕೆ ಮುಖ್ಯ ಕಾರಣ ಭೂತವಾದ ಕೇಶವು ಚೆನ್ನಾಗಿ ಬೆಳೆದು ... ಈ ನೂತನ ಎಣ್ಣೆಯು ಬಜಾರಿನಲ್ಲಿ ಮಾರಲ್ಪಡುವ ಇತರ ಎಣ್ಣೆಗಳಂತೆ ಕೇವಲ ಸುಗಂಧಯುಕ್ತ ಮಾಡಲ್ಪಟ್ಟು ಎಲ್ಲ ದಿವ್ಯ ಗಂಧ ... ಹೊಂದಬಹುದಾದ ... ಅನುಕೂಲವಾಗಿ ಇದರ ಬೆಲೆಯೂ ಕಮ್ಮಿ ಇಡಲ್ಪಟ್ಟಿದೆ ... ಈ ಎಣ್ಣೆಯ ಉಪಯೋಗದಿಂದ ... ಕೂದಲು ಹುಲುಸಾಗಿ ಬೆಳೆಯುತ್ತದೆ ಈ ಎಣ್ಣೆಯನ್ನು ಎಳ್ಳೆಣ್ಣೆ ಕೊಬ್ಬರಿಯೆಣ್ಣೆ ಅಥವಾ ಆವ್ದಲೆಣ್ಣೆಯೊಂದಿಗೆ ಬೆರೆಸಿಯೂ ಉಪಯೋಗಿಸಬಹುದು ... 1 ಶೀಸೆ 1ಕ್ಕೆ ರೂ 1—0—0

... ಎಂಡ್ ಕಂಪನಿ ೧೦೨, ಬೊಂಬಾಯಿ

ಪ್ರಸಿದ್ಧವಾದ ಮೂರು ಪುಸ್ತಕಗಳನ್ನು ತರಿಸಿರಿ.

10 8

"ಬ್ರಹ್ಮಚರ್ಯ" ವೆಂಬ ಕಾಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ ಐದಾಣೆ

"ಸ್ವಪ್ರಯಾಸಫಲದೀಪಿಕೆ" ಎನ್ನುವ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ಹೊಂದಿರುವರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪುಸ್ತಕವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರವರೆಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟಿದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

ವಿಳಾಸ—ಮ್ಯಾನೇಜರ್ ಸಿ ಎಲ್ ಎನ್ ಬುಕ್ ಡಿಪೋ ಮೈಸೂರು

ವೃತ್ತಾಂತ ಪತ್ರಿಕೆಯ ಬಹುಮಾನ.

ಸಿದ್ಧವಾಗಿದೆ ಕ್ರಯ ಒಂದಾಣೆ.

೧೯೦೯ ನೇ ವರ್ಷದ ಕ್ಯಾಲೆಂಡರು ದೊಡ್ಡ ಸೈಜು ಇದರಲ್ಲಿ ಮೈಸೂರು ಹೊಸ ಅರಮನೆಯ ಆನೇಬಾಗಿಲು, ಮೈಸೂರು ಪಬ್ಲಿಕ್ ಆಫೀಸ್ ಕಟ್ಟಡ, ಮೈಸೂರು ಜೂಬಿಲಿ ಹಾಲ್ ಕಟ್ಟಡ ನೀಲಗಿರಿಗೆ ಹೋಗುವ ರೈಲ್ ಮಾರ್ಗವು ಮತ್ತು ಚಿತ್ರದುರ್ಗ ಇವುಗಳ ಫೋಟೋಗಳು ಬಹಳ ಸೊಗಸಾಗಿವೆ ಇದುವರೆಗೆ ಇಂಥಾ ಚಿತ್ರಗಳು ಕ್ಯಾಲೆಂಡರಲ್ಲಿ ಯಾರೂ ನೋಡಿರಲಾರರು

ಚಂದಾದಾರರಿಗೆ ಸೂಚನೆ—ಇದೇ ಫೆಬ್ರವರಿ ಆಖೈರಿನೊಳಗಾಗಿ "ವೃತ್ತಾಂತ ಪತ್ರಿಕೆ" ಗೆ ಒಂದು ವರ್ಷದ ಚಂದಾ ಅಡ್ವಾನ್ಸು ಕಟ್ಟತಕ್ಕವರಿಗೆಲ್ಲಾ ಒಂದೊಂದು ಕ್ಯಾಲೆಂಡರನ್ನು ಪುಕ್ಕಟ್ಟೆ ಕೊಡುವೆವು ಅನಂತರ ಖಂಡಿತವಾಗಿ ಸಿಕ್ಕಲಾರದೆಂದು ಸೂಚಿಸುವೆವು

ಎಚ್ಚರಿಕೆ—ಬಹಳ ಕೊಂಚ ಪ್ರತಿಗಳನ್ನು ಮಾತ್ರ ಪ್ರಿಂಟು ಮಾಡಿದೇವೆ ಜಾಗ್ರತೆ ಬರೆಯಿರಿ ವಿಳಾಸ—

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

CHAMBERLAIN'S COUGH REMEDY

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು



18

ಶೀತದ ಕೆಮ್ಮು, ಗಂಟಲು ಗೂರಲು ಹುಡುಗರ ನಾಯಿಕೆಮ್ಮು ಎಲ್ಲಾ ತರದ ಶೀತ ಗಂಟಲಿನಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು ಇವಕ್ಕೆಲ್ಲಾ ಈ ಔಷಧವು ಬಾಣಸ್ವರೂಪವಾಗಿದೆ

ಆ ಕೆಮ್ಮನ್ನು ಅಲಕ್ಷ್ಯ ಮಾಡಿದರೆ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮುಂದೆ ... ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ... ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಕ್ಲೀಷ್ಮ ಕಟ್ಟುವುದನ್ನೂ ಶ್ಲೇಷ್ಮ ಏಳುವುದನ್ನೂ ... ನಿವಾರಣೆಮಾಡುತ್ತದೆ ... ಅದನ್ನು ಕೂಡಲೇ ಪರಿಹರಿಸುತ್ತದೆ ... ಕೆಮ್ಮಿನ ರಭಸವನ್ನು ನಿಲ್ಲಿಸಿಬಿಡುತ್ತದೆ ... ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ ನೀವು ಸುಖವಾಗಿ ನಿದ್ರೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ಕಷಾಯ

... ಕೆ ಯಿಂದ ಮುಟ್ಟಿದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಕ್ಷಾಮದ ಫಂಡು

ಈಗಿನ ಕ್ಷಾಮದ ನಿವಾರಣಾರ್ಥವಾಗಿ ಸಹಾಯಾರ್ಥ ಚಂದಾ ಕೊಡುವುದಾಗಿ ವಾಗ್ದಾನಮಾಡಿರತಕ್ಕ ಸಕಲ ಜನರೂ ತಮ್ಮ ಚಂದಾ ಮೊಬಲಗುಗಳನ್ನು ಈ ಕೆಳಗೆ ರುಜು ಮಾಡುವವರ ಆಫೀಸಿಗೆ ಕಳುಹಿಸಿ ಕೊಟ್ಟು ರಸೀದಿ ಪಡೆಯಬಹುದು

ತಾ॥ ೬ ೨ ೧೯೦೯ ಎಂ ಜಿ ಕೃಷ್ಣಸ್ವಾಮಿರಾವ್

ವೈಸ್ ಪ್ರೆಸಿಡೆಂಟ್

ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಮೈಸೂರು

ಮದ್ರಾಸ್ ಸಾಹುಕಾರ್ ಪೇಟೆ,

ಟಿ. ಎಂ. ರಾಮಯ್ಯ ಶೆಟ್ಟರ ಕಂಪನಿಯಲ್ಲಿ

13

ತಯಾರಾಗುವ ಕಬ್ಬಿಣದ ಪೆಟ್ಟಿಗೆಗಳು ಅಥವಾ ಟ್ರಂಕುಗಳು ಈ ಕೆಳಗಿನ ದರದ ವ್ಯಾಪಾರಕ್ಕೆ ಸಿದ್ಧವಾಗಿವೆ ಬ್ರಾಂಚ್ ಆಫೀಸ್ ... ನಗರದಲ್ಲಿಯೂ ಸಿಕ್ಕುವದು



ಬೇಕಾದವರು ತಮ್ಮ ಅಡ್ರೆಸ್ಸು ತಿಳಿಸಿ ರೂ 10 ಮುಂಗಡವಾಗಿ ಕಳುಹಿಸಿದರೆ ವಿ ಪಿ ಮೂಲಕ ರವಾನಿಸಲ್ಪಡುತ್ತೆ ವಿಶೇಷ ಮಾಹಿತಿ ಬೇಕಾದವರು ಕಾಗದದ ಮುಖಾಂತರ ಮೇಲ್ಕಂಡ ವಿಳಾಸದಾರರಿಂದ ತಿಳಿದುಕೊಳ್ಳಬಹುದು

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 68

(ಸ್ಕಾಟ್ಸ್ ಇಮಲ್ಷನ್)

ಘಟ್ಟಿ ಶರೀರವುಳ್ಳವರ್ಯಾರೂ ಪ್ಲೇಗ್, ಮಹಾಮಾರಿರೋಗ, ... ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಆಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ಹಿಡಿಯುತ್ತದೆ

ಅಸ್ವಸ್ಥವನ್ನು ಪರಿಹರಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ, ಸಂಪೂರ್ಣ ಕ್ಷೇಮವನ್ನು ಉಂಟು ಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಅಲಸ್ಯಮಾಡಿದರೆ ದೊರೆಯುವುದಿಲ್ಲ

19 ನೇ ಇಸವಿ ... ಬಹುಮಾನ

... ತಿಂಗಳು ... ನಮಗೆ ... ಕಾರ್ಡಿನಲ್ಲಿ ... ಸವನ್ನು ಬರೆದು ಕಳುಹಿಸತಕ್ಕವರಿಗೆ ಒಂದು ... ವಿಚಿತ್ರವಾದ ಕ್ಯಾಲೆಂಡರನ್ನು ಉಚಿತವಾಗಿ ಕಳುಹಿಸುವೆವು ಶೀಘ್ರವಾಗಿ ಬರೆಯಿರಿ

ವಿಳಾಸ — ... ಮದರಾಸು

ಕ್ಲೇಮಂಟರ ಮಾಜಿಕ್ ಬಾಂ ತೈಲವು

1910

ತಲೆನೋವು ವಾಯುನೋವು ಶೀತ ಗಂಟಲುನೋವು, ... ನಾನಾ ಬಗೆಯ ... ತರೋಗಗಳು ... ಹಲ್ಲುನೋವು —ಇವುಗಳಲ್ಲಾ ಈ ತೈಲವನ್ನು ಹಚ್ಚಿದರೆ ... ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ... ಪರೀಕ್ಷೆಮಾಡಿ ... ಗುಣಕೊಡುತ್ತದೆ ... ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ... ಶಕ್ತಿಯು ಅದ್ಭುತವಾದದು ... ಅದನ್ನು ... ವಿಶೇಷ ಪ್ರೀತಿಯಿಂದ ಎಲ್ಲರೂ ಹೊಗಳುವರು ಈ ಔಷಧವನ್ನು ... ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟುಕೊಂಡು ಹೇಳುವರು ಈ ಅಮೋಘವಾದ ತೈಲವು ... ಹಿಡಿದು ಅದರ ... ಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೦ ... ಪ್ಯಾಕಿಂಗ್ ... ಆಣೆ ಅದರೆ ೬ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ... ವ್ಯಾಪಾರಸ್ಥರಿಗೆ ... ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್ ಪೀಟರ್ಸನ್,

೩೩, ನೈನಿಯಪ್ಪ ನಾಯಕನ ಬೀದಿ, ವೇಪೇರಿ, ಮದರಾಸ್

ಸಂಜೀವಿನೀ ಔಷಧಾಲಯ, ಮೈಸೂರು.

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮುಪ್ಪು, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ ರಕ್ತದೋಷ, ಚರ್ಮವ್ಯಾಧಿ, ಮೂಲವ್ಯಾಧಿ, ವಾಯುರೋಗಗಳೂ ಹಳೇ ಜ್ವರ, ಕೃಶತ್ವ ಅಜೀರ್ಣ ತಲೆನೋವು ನೆತ್ತಿಯುರಿ, ತಲೆಭಾರ ಮಲಬದ್ಧ ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ... ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ ಮಾಂಸಖಂಡ, ಬಲ, ಧೈರ್ಯ ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಟುತ್ವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೩ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣ ... ಪ್ರಕೋಪ ಇವುಗಳಿಗೆ ಖಾತರಿಯ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ... ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಕಾಲಕೂಟ ವಟಕ — ಪ್ಲೇಗ್ ಗೆಡ್ಡೆ ಮೊದಲಾಗಿ ಎಲ್ಲಾ ತರದ ಗೆಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಮಾಚಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿ ... ವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಕಡ್ಡಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಧಾಣೆ ಲೇಬಲ್ ಇಟ್ಟು ಬರೆಯಿರಿ

ಬಿ ಕೆ ಸ್ವಾಮಿ,

ಪ್ರೊಪ್ರೈಟರ್

ವೃತ್ತಾಂತ ಪತ್ರಿಕೆ

೧೯೦೯ ನೇ ಇಸವಿ ಫೆಬ್ರವರಿ ತಾ|| ೨೫ ನೇ ಗುರುವಾರ

ಮೈಸೂರು ಇಂಜನಿಯರ್ ಇಲಾಖೆಯು

ಸಂಸ್ಥಾನದ ಶ್ರೇಯೋಭಿವೃದ್ಧಿಗೆ ಮರಾಮತ್ತು ಇಲಾಖೆಯು ಮುಖ್ಯವಾದದ್ದು. ಯಾಕೆಂದರೆ ಈ ಇಲಾಖೆಯ ದೆಸೆಯಿಂದ ಕೆರೆ ನಾಲೆಗಳ ಕಾಮಗಾರಿ ನಡೆದು ಜಮೀನುಗಳು ಫಲಭರಿತವಾಗುವವು, ಊರಿಂದೂರಿಗೆ ಹೋಗಿ ಬರುವಂಥಾ ರಸ್ತೆಗಳೂ ಸೇತುವೆಗಳೂ ಆಗುತ್ತವೆ; ಇದಲ್ಲದೆ ಭಾರಿಯಾದ ಕಟ್ಟಡಗಳೂ ಈ ಇಲಾಖೆಯಿಂದಲೇ ನಿರ್ಮಾಣವಾಗುವವು.

ಕಳೆದ ಸಾಲಿನಲ್ಲಿ ಈ ಇಲಾಖೆಯವರು ಮಾರಿಕಣಿವೆ ತಲಾಪಿನ ಹಿರಿಯ ಕಾಮಗಾರಿಯನ್ನು ಪೂರೈಸಿರುತ್ತಾರೆ. ಆಣೆಯ ಬಲಪಾರ್ಶ್ವದ ನಾಲೆಯಲ್ಲಿ ೧೮ ಮೈಲಿ ಫಾಸಲೆಯ ತನಕ ನೀರು ಬಿಟ್ಟದ್ದಾಯಿತು, ಎಡಪಾರ್ಶ್ವದ ನಾಲೆಯಲ್ಲಿ ೨೨ ಮೈಲಿ ವರೆಗೆ ನೀರು ಹರಿಯುತ್ತಿದೆ. ಈ ನಾಲೆಗಳ ನೀರಿನಿಂದ ೩,೮೨೭ ಎಕರೆ ಜಮೀನಿನಲ್ಲಿ ತರೀ ಸಾಗುವಳಿ ಮಾಡಲಾಯಿತು. ಈ ಕೆರೆಯನ್ನು ಆದರ ನಾಲೆಗಳ ಕಾಮಗಾರಿಯೆಲ್ಲಾ ಸಂಪೂರ್ಣವಾಗಿ ಮುಕ್ತಾಯವಾದಲ್ಲಿ ಇದರಿಂದ ಸಂಸ್ಥಾನಕ್ಕೆ ವಿಶೇಷ ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ.

ಚಿತ್ರದುರ್ಗದ ತಾಲ್ಲೂಕು ಕಲ್ಲಹಳ್ಳಿಯಲ್ಲಿ ಕೆರೆಯ ಕಾಮಗಾರಿಯೂ, ಚಳ್ಳಕೆರೆ ತಾಲ್ಲೂಕಿನ ರಾಣಿಕೆರೆಯ ಕಾಮಗಾರಿಯೂ ಶೀಘ್ರ ಮುಕ್ತಾಯವಾಗುವುವೆಂತಲೇ ಹೇಳಬಹುದು. ಇವೆರಡೂ ಬಹಳ ದೊಡ್ಡ ಕಾಮಗಾರಿಗಳಾಗಿರುತ್ತವೆ. ಮೊದಲನೆಯದಕ್ಕೆ ೯೨,೨೩೩ ರೂಪಾಯಿಯೂ, ಎರಡನೆಯದಕ್ಕೆ ೩,೨೨,೭೭೭ ರೂಪಾಯಿಯೂ ಖರ್ಚಾಗುವವೆಂದು ಅಂದಾಜು ಆಗಿದೆ.

ಹೊಸ ನಡೆಯುತ್ತಿರುವ ಇತರ ಮುಖ್ಯ ಕಾಮಗಾರಿಗಳಾವುವೆಂದರೆ— (೧) ಬೌರಿಂಗ್‌ಪೇಟೆ ತಾಲ್ಲೂಕು ರಾಮಸಾಗರದ ಕೆರೆಯನ್ನು ದುರಸ್ತು ಮಾಡುವುದು, (೨) ಗೌರೀಬಿದನೂರು ತಾಲ್ಲೂಕು ಹೊಸೂರು ಕೆರೆಯ ಕಾಮಗಾರಿ, (೩) ಮಾಲೂರು ತಾಲ್ಲೂಕು ಸೋಂಪುರದಲ್ಲಿ ಒಂದು ಹೊಸ ಕೆರೆಯನ್ನು ಕಟ್ಟುವುದು. ಈ ಕೆಲಸ ತ್ವರಿತವಾಗಿ ನಡೆಯುತ್ತಿವೆ ಎಂದು ತಿಳಿದುಬಂದಿದೆ.

ಸಣ್ಣ ಕೆರೆಗಳನ್ನು ದುರಸ್ತು ಮಾಡಿಸಿ ಒಳ್ಳೇ ಸ್ಥಿತಿಯಲ್ಲಿಡುವುದಕ್ಕೆ ಗ್ರಾಮವಾಸಿಗಳು ಸಹಾಯ ಮಾಡಲು ಹೊರಟಿರುವುದನ್ನು ನೋಡಿ ನಾವು ಸಂತೋಷಿಸುತ್ತೇವೆ. ಈ ಕೆರೆ ಕಟ್ಟೆಗಳು ಗ್ರಾಮಾಂತರಗಳಲ್ಲಿ ಜನ ಜಾನುವಾರುಗಳಿಗೆ ಬಹು ಉಪಯೋಗಕರವಾಗಿರುತ್ತವೆ. ಅವುಗಳಿಂದ ಬೇಕಾದ ನೀರು ದೊರೆಯುವುದಲ್ಲದೆ, ಸಾಧ್ಯವಾಗುವ ಮಟ್ಟಿಗೂ ಕೆಲವು ಸಾಗುವಳಿಯೂ ನಡೆಯುವುದು. ಹೀಗೆ ಮಾಡುವುದರಿಂದ ಕ್ಷಾಮ ಕಾಲಗಳಲ್ಲಿ ಈ ಪರಿಣಾಮ ಸಹಾಯವಾಗಿರುವುದು.

ಗವರ್ನ್‌ಮೆಂಟಿನವರು ಈಗ ಮಾಡುತ್ತಿರುವಂಥಾ ರಸ್ತೆಗಳನ್ನು ಇನ್ನೂ ಸ್ವಲ್ಪ ಹೆಚ್ಚು ಮಾಡಿಸಿ ಉತ್ತಮಸ್ಥಿತಿಯಲ್ಲಿಡಬೇಕಾದದ್ದು ಅವಶ್ಯವಾದುದು. ಏಕೆಂದರೆ ರೈಲ್ವೇ ಸ್ಟೇಷನುಗಳಿಂದ ಹೊಸ ರಸ್ತೆಗಳು ಇನ್ನೂ ಹೆಚ್ಚಾಗಿ ಆಗಬೇಕು. ಗ್ರಾಮಾಂತರಗಳಿಂದ ದೊಡ್ಡ ರಸ್ತೆಗಳಿಗೆ ಒಂದು ಸೇರುವಂಥಾ ಮಾರ್ಗಗಳನ್ನು ಮಾಡಿದಲ್ಲಿ ರೈತ ಪ್ರಜೆಗಳು ಬೆಳೆಯುವ ದವಸ ಧಾನ್ಯಾದಿಗಳನ್ನು ಸುಲಭವಾಗಿ ಸಾಗಿಸಿಕೊಂಡು ಬರುವುದಕ್ಕೆ ಅನುಕೂಲವಾದೀತು.

ಕಳೆದ ಸಾಲಿನಲ್ಲಿ ಮೈಸೂರು ಅರಮನೆಯನ್ನು ಕಟ್ಟುವುದಕ್ಕೆ ಐದುವರೆ ಲಕ್ಷ ರೂಪಾಯಿಯನ್ನೂ, ಸಾರ್ವಜನಿಕ ಕಟ್ಟಡಗಳಿಗಾಗಿ ಸುಮಾರು ಮೂರು ಲಕ್ಷ ರೂಪಾಯಿಯನ್ನೂ ಖರ್ಚು ಮಾಡಿದರು. ಈ ಅರಮನೆ ಪೂರೈಸುತ್ತಾ ಬಂದಿದೆ.

ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದಕ್ಕೆ ಬಹಳ ಹಣ ಖರ್ಚು ಮಾಡಲಾಯಿತು. ಆದರೆ ಈ ಇಲಾಖೆಯ ಉತ್ಪತ್ತಿಯು ಈ ವೆಚ್ಚ ಖರ್ಚಿಗೆ ಸರಿಹೋಗಿರುವುದು.

ಕಳೆದ ೧೯೦೭—೦೮ ನೇ ಸಾಲಿನಲ್ಲಿ ಗವರ್ನ್‌ಮೆಂಟಿನವರು ಇಂಜನಿಯರ್ ಇಲಾಖೆಯ ಕಾಮಗಾರಿಗಳಿಗೆ ೩೭ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದರು. ಇನ್ನು ಮುಂದೆ ಸಾಲೊಂದಕ್ಕೆ ೪೦ ಲಕ್ಷ ರೂಪಾಯಿಗಳಿಗೆ ಕಡಿಮೆಯಾಗುವುದಾಗಿ ತೀರ್ಮಾನ ಮಾಡಿರುತ್ತಾರೆ. ಸಂಸ್ಥಾನದ ಯಾವ ಕೆಲವು ಭಾಗ ಪ್ರಜೆಗಳಿಗೇನೂ ಪ್ರಯೋಜನವಾಗದ ರೀತಿಯಲ್ಲಿ ಖರ್ಚಾದರೂ ಆಗಬಹುದು. ಆದರೆ ಈ ಪ್ರಕಾರ ಈ ಬಾಬಿಗೆ ಹಣವನ್ನು ಕಡಿತ ಮಾಡುವುದರಿಂದ ಪ್ರಯೋಜನವಾಗಬಹುದೇ ಎಂದು ಸಂಶಯಪಡುತ್ತೇವೆ. ಮೇಲ್ವಿಚಾರಣೆ ಅಧಿಕಾರಿಗಳನ್ನು ಆಗಾಗ್ಗೆ ಬದಲಾವಣೆ ಮಾಡುವುದರಲ್ಲಿ ಕೆಲಸಗಳು ಎಷ್ಟು ಮಟ್ಟಿಗೆ ತೃಪ್ತಿಕರವಾಗಿ ನಡೆಯಬಹುದೋ ನಮಗೆ ತೋರುವುದಿಲ್ಲ. ಅಧಿಕಾರಿಗಳ ಸಂಖ್ಯೆಯು ಹೆಚ್ಚಾಗಿದ್ದರೆ ಅವರನ್ನು ತೆಗೆದು ಬಿಡಬಹುದು. ಆದರೆ ಇಂಥಾ ಮುಖ್ಯವಾದ ಇಲಾಖೆಯಲ್ಲಿ ಆಗಾಗ್ಗೆ ವಿಶೇಷ ಬದಲಾವಣೆಗಳನ್ನು ಮಾಡುತ್ತಲೂ, ಹೊಸ ವಿಧಾನಗಳನ್ನು ರೂಪಿಸುತ್ತಲೂ ಬಂದಲ್ಲಿ ಇಲಾಖೆಯು ಕ್ಷೀಣಗತಿಗೆ ಬರುವುದಲ್ಲದೆ ಬಹಳ ನಷ್ಟ ಆದೀತೆನ್ನುವುದಕ್ಕೆ ಸಂಶಯವಿಲ್ಲ. ರಸ್ತೆಗಳು ಕೆಟ್ಟುಹೋಗಿ, ನಾಲೆಗಳು ಸತ್ತೆ ಬೆಳೆದು ಕಟ್ಟಿಕೊಂಡು, ಕೆರೆಕಟ್ಟೆಗಳು ಒಡೆದು ಬಿದ್ದು ಹೋದ ಪಕ್ಷದಲ್ಲಿ ಪ್ರಜಾಸಾಮಾನ್ಯಕ್ಕೆ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗುತ್ತವೆ. ತರೀ ಫಸಲಿಗೂ, ಪ್ರಜೆಗಳ ಸ್ನಾನ ಪಾನಾದಿಗಳಿಗೂ ಬೇಕಾಗುವಷ್ಟು ನೀರಾವರಿ ಕಾಮಗಾರಿಗಳನ್ನು ಮಾಡಿಸಲೇಬೇಕು; ರೈತರಿಗೆ ಅವರ ದವಸವನ್ನು ಸಾಗಿಸಿಕೊಂಡು ಬರುವುದಕ್ಕೂ ಪ್ರಜೆಗಳ ಓಡಾಟಕ್ಕೂ ಅನುಕೂಲವಾದ ರಸ್ತೆಗಳೂ ಮಾರ್ಗಗಳೂ ಮಾಡಿಸಲೇಬೇಕು. ಆದಕಾರಣ ಪ್ರಜೆಗಳ ಸೌಕರ್ಯಕ್ಕೂ ಸಂಸ್ಥಾನಾಭಿವೃದ್ಧಿಗೂ ಅಡಚಣೆಯಾಗುವಂಥಾ ಯಾವ ಕಾರ್ಯವನ್ನೂ ಗವರ್ನ್‌ಮೆಂಟಿನವರು ಮಾಡಲಾರರೆಂದು ನಂಬುತ್ತೇವೆ.

ರಾಮಚಂದ್ರನ ಶಿಷ್ಯ ಜಾನಕೀನಾಥನ ವೃತ್ತಾಂತ

ದೆಹಲಿಯಲ್ಲಿ ಗಣಿತ ಶಾಸ್ತ್ರಾಧ್ಯಕ್ಷನಾಗಿದ್ದ ರಾಮಚಂದ್ರನ ವೃತ್ತಾಂತವನ್ನು ಈಗ ಎರಡು ವಾರಗಳ ಹಿಂದೆ ಈ ಪತ್ರಿಕೆಯಲ್ಲಿ ವಾಚಕರು ಓದಿರುವರಷ್ಟೆ. ಈತನ ಉತ್ತಮವಾದ ಮೇಲ್ಪಂಕ್ತಿಯನ್ನನುಸರಿಸಿ ಇನ್ನೂ ಕೆಲವರು ಕ್ರಿಸ್ತನ ಭಕ್ತರಾದರು. ಇವರೆಲ್ಲರೂ ಸಚ್ಚರಿತರಾಗಿದ್ದರು. ಆದರೆ ಎಲ್ಲರ ಚರಿತ್ರೆಯನ್ನು ಇಲ್ಲಿ ಹೇಳುವದು ಅಸಾಧ್ಯ. ಆದದರಿಂದ ಇವರ ಪೈಕಿ ಒಬ್ಬನಾದ ಜಾನಕೀನಾಥನ ಚರಿತ್ರೆಯನ್ನು ಮಾತ್ರ ಇಲ್ಲಿ ಕ್ರೋಢೀಕರಿಸಿ ಹೇಳುತ್ತೇವೆ. ಆತನು ತನ್ನ ವಿಷಯವಾಗಿ ಬರೆದಿರುವದೇನಂದರೆ—ನಾನು ಹುಟ್ಟಿದ್ದು ಬ್ರಾಹ್ಮಣ ಸಂತತಿಯಲ್ಲಿ. ಈ ನಮ್ಮ ಸಂತತಿಯವರನ್ನು ಜನರು ಬಹು ಘನಪಡಿಸಿ ದೇವತೆಗಳಿಗೆ ಸಲ್ಲುವ ಮಾನಮರ್ಯಾದೆಗಳನ್ನು ನಮಗೂ ಸಲ್ಲಿಸುತ್ತಿದ್ದರು. ನಮ್ಮ ಮನೆತನದ ಆಚಾರ, ವ್ರತ, ನಿಯಮಗಳೂ ಬಹಿರಂಗದಲ್ಲಿ ನೋಡುವವರಿಗೆ ಅತಿ ಶ್ಲಾಘನೀಯವಾಗಿಯೇ ಇದ್ದವು. ನಾನು ಮೊದಲು ಮೊದಲು ಇದರ ವಿಷಯವಾಗಿ ಎಷ್ಟೋ ಡಂಭ ಕೊಚ್ಚಿಕೊಳ್ಳುತ್ತಿದ್ದೆನು. ಈಗ ಯೋಚನೆ ಮಾಡಿದರೆ ಹೊರಗಡೆ ಸುಣ್ಣ ಹಚ್ಚಿರುವ ಗೋರಿಗಳನ್ನು ನೋಡಿ ಬೆರಗಾಗುವವನಂತೆ ನಾನೂ ಇದ್ದೆನೆಂದು ತೋರುತ್ತದೆ. ಗೋರಿಗಳು ಸುಣ್ಣ ಹಚ್ಚಿರುವದರಿಂದ ಮೇಲ್ಗಡೆ ಮಿಣುಗುತ್ತಿದ್ದರೂ ಒಳಗಡೆ ಅಸಹ್ಯವಾದ ಪದಾರ್ಥಗಳಿಂದ ದುರ್ನಾತ ಬಡಿಯುತ್ತವಷ್ಟೆ. ನಿಜವಾದ ದೇವರನ್ನು ಅರಿದು ಆರಾಧಿಸದೆ ಇರುವವರ ಆಚಾರವ್ರತಗಳು ಸಹ ಮೇಲೆ ಮಾತ್ರ ಶೋಭಿಸುತ್ತ ಒಳಗಡೆ ಜೀವವಿಲ್ಲದವುಗಳಾಗಿರುವವು. ಹೋಳೀ ಹಬ್ಬದಲ್ಲಿ ನಮ್ಮ ಹಿರಿಯರ ಮಾತು ಕೇಳಿ ಎಷ್ಟೋ ದುರ್ವಾಕ್ಯಗಳನ್ನು ನುಡಿದು ದುಶ್ಚಾಳಿಗಳನ್ನು ನಡಿಸಿದೆನು. ಆಗಲೂ ನನ್ನ ಅಂತರಂಗದಲ್ಲಿ ಮನಸ್ಸಾಕ್ಷಿಯು ಎಷ್ಟೋ ನನ್ನನ್ನು ಆಕ್ಷೇಪಿಸಿತು. ನಾನು ಆ ದೇವರ ಶಬ್ದವನ್ನು ಲಕ್ಷಿಸಲಿಲ್ಲ. ನಾನು ಹದಿನಾರು ವರುಷದ ಯುವಾವಸ್ಥೆಯಲ್ಲಿರುವಾಗ ವಂಶಪಾರಂಪರ್ಯವಾಗಿ ಬಂದಿದ್ದ ಆಚಾರಗಳನ್ನು ನಡಿಸುವದೇ ನನ್ನ ಭಕ್ತಿಯಾಗಿತ್ತು. ನೀತಿ, ಸತ್ಯ, ಪವಿತ್ರತ್ವ, ಪರೋಪಕಾರಗಳ ವಿಷಯದಲ್ಲಿಯೂ ನಿಜಜೀವಿತ ವಿಷಯದಲ್ಲಿಯೂ ನನಗೆ ಬೋಧಿಸುವವರು ಯಾರೂ ಇರಲಿಲ್ಲ. ಆದರೆ ನಾನು ಪಾಠಶಾಲೆಗೆ ಹೋಗಿ ಮೊದಲನೆ ಪಂಕ್ತಿಗೆ ಸಿದ್ಧಪಡಿಸಿಕೊಳ್ಳುತ್ತಿರುವಾಗ ಆ ಪಾಠಪುಸ್ತಕಗಳಲ್ಲಿ ಸಿಕ್ಕಿದ ನೀತಿ ವಾಕ್ಯಗಳೂ ಮತ್ತು ಶ್ರೀ ಮತ್ತಾಯನು ಬರೆದ ಸುವಾರ್ತೆಯೂ ನನ್ನನ್ನು ಚನ್ನಾಗಿ ಶಿಕ್ಷಿಸಿದವು. ಈಗ ನನ್ನಲ್ಲಿ ಸ್ವಧರ್ಮದ ವಿಷಯವಾಗಿ ವಿಚಾರ ಹುಟ್ಟಲು ನನ್ನ ಮಿತ್ರರಲ್ಲಿ ಒಬ್ಬನು ನಾಸ್ತಿಕನಾಗುವಂತೆ ಎಷ್ಟು ಪ್ರಯತ್ನಪಟ್ಟರೂ ಆವನು ಬಹುಕಾಲ ಅಕಾಲ ಮೃತ್ಯುಗೆ ತುತ್ತಾದನು. ಆಗ ನನ್ನಲ್ಲಿ ವಿಚಾರ ಹುಟ್ಟಿ ನನ್ನ ಗೆಳೆಯನ ಹಾಗೆ ನಾನು ಸತ್ತರೆ ನಾನು ಮಾಡಿರುವ ಪಾತಕಗಳಿಂದ ದೇವರ ಮುಂದೆ ಹ್ಯಾಗೆ ನಿಲ್ಲಬಲ್ಲೆನು ಎಂದು ಚಿಂತಿಸಿದೆನು. ನನ್ನ ಸ್ನೇಹಿತನಾದ ರಾಮಚಂದ್ರನು ಕ್ರಿಸ್ತಮತಾವಲಂಬಿಯಾದದ್ದು ಆತನ ಮುಖಾಂತರ ಮೂರು ವರುಷಗಳ ವರಿಗೂ ಸತ್ಯವೇದವನ್ನು ಪರೀಕ್ಷಿಸಿ ಯೇಸು ಕ್ರಿಸ್ತಸ್ವಾಮಿಯನ್ನು ಆಶ್ರಯಿಸದೆ ಇದ್ದರೆ ಆತ್ಮರಕ್ಷಣೆಯು ಇನ್ನೆಲ್ಲಿಯೂ ದೊರಕುವದಿಲ್ಲವೆಂದು ನಿಶ್ಚಯವನ್ನು ಮಾಡಿಕೊಂಡೆನು.

ನಾನು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಿ ಆತನ ಭಕ್ತರ ಸಭೆಯಲ್ಲಿ ಸೇರಿದೆನು. ಹಿಂದೂ ಮತದ ಆಚಾರಗಳಲ್ಲಿ ಬಹಳ ಕಾಲ ಮನಸ್ಸಿಟ್ಟು ನಡೆಯುತ್ತಿದ್ದವನು ಒಂದೇ ಸಾರಿ ಅವರ ಬಂಧನವನ್ನು ತಪ್ಪಿಸಿಕೊಳ್ಳುವದು ಸುಲಭವಲ್ಲ. ನಾನು ಆಗಲೇ ನನ್ನ ದುಸ್ಸ್ವಭಾವಕ್ಕೆ ವಿರೋಧವಾಗಿ ಯುದ್ಧ ಮಾಡತಕ್ಕ ವೀರನಂತೆ ನನ್ನ ದುರಿಚ್ಛೆಗಳನ್ನು ಜಯಿಸಲು ಪ್ರಯತ್ನಿಸಿದರೂ ಬಹಳ ಕಾಲ ಜಯ ದೊರೆಯದೆ ಹೋಯಿತು. ನನ್ನಲ್ಲಿ ಕೆಟ್ಟ ಯೋಚನೆಗಳು ಹುಟ್ಟುವದು ಬಹು ಸಾಧಾರಣವಾಗಿತ್ತು. ಇವು ನನ್ನ ಸಂಕಲ್ಪವನ್ನೂ ಪ್ರತಿಜ್ಞೆಯನ್ನೂ ಜೀವನ ಪ್ರವಾಹಗಳು ಬಲಹೀನವಾದ ಕಟ್ಟೆಯನ್ನು ಕೊಚ್ಚಿ ಬಿಡುವಂತೆ ಸೋಲಿಸುತ್ತಿದ್ದವು. ಇದರಿಂದ ನಾನು ಚನ್ನಾಗಿ ಮಂದಟು ಮಾಡಿಕೊಂಡ ಒಂದು ವಿಷಯವನ್ನು ವಾಚಕರ ಎಚ್ಚರಿಕೆಗೋಸ್ಕರ ಹೇಳುತ್ತೇನೆ. ಅದೇನಂದರೆ—ಒಬ್ಬನು ಪಾಪದ ಹಾದಿಯಲ್ಲಿ ಬಹಳ ದೂರ ಹೋಗಿ ಅನಂತರ ಪಶ್ಚಾತ್ತಾಪಪಟ್ಟು ನವಜೀವ ಪ್ರವರ್ತಕನಾಗಬೇಕೆಂದು ಅಪೇಕ್ಷಿಸಿದರೆ ಅವನು ಪಾಪದ ಹಾದಿಯನ್ನು ಬಿಡಿಸಿಕೊಂಡು ಎಂದಕ್ಕೆ ಬರುವದಕ್ಕೆ ಬಹಳ ಕಾಲ ಹಿಡಿಯುವದು. ಏಕೆಂದರೆ ಒಬ್ಬನು ದುಷ್ಪದ್ಧತಿಗಳಿಗೆ ಒಗ್ಗುವದು ಸುಲಭ. ಆದರೆ ಆ ಪದ್ಧತಿಗಳು ಅವನನ್ನು ಆಕ್ರಮಿಸಿಕೊಂಡ ಮೇಲೆ ಅವುಗಳನ್ನು ಬಿಡುವದು ಸುಲಭವಲ್ಲ. ಅವು ಅವನ ಕೈಕಾಲುಗಳಿಗೆ ತೊಡಿಸಿದ ಭಾರವಾದ ಬೇಡಿಗಳಾಗಿರುವವು. ಇದನ್ನು ತಿಳಿದ ಯೆಹೂದ್ಯ ಗ್ರಂಥಕಾರನು ಬರೆದಿರುವದನ್ನು ಎಲ್ಲರೂ ನಿತ್ಯವೂ ಧ್ಯಾನಿಸುತ್ತಿರಬೇಕು. ಆ ಮಾತುಗಳು ಜೇನಿಗಿಂತ ಮಧುರವಾಗಿವೆ. ಅದೇನಂದರೆ, ದುಷ್ಟರ ಆಲೋಚನೆಯಲ್ಲಿ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಲ್ಲದೆ ಕುಚೋದ್ಯಗಾರರು ಕೂತುಕೊಳ್ಳುವಲ್ಲಿ ಕೂತುಕೊಳ್ಳದೆ ಸರ್ವೇಶ್ವರನ ನ್ಯಾಯಪ್ರಮಾಣದಲ್ಲಿ ಸಂತೋಷಿಸಿ ಅವನ ನ್ಯಾಯಪ್ರಮಾಣವನ್ನೇ ರಾತ್ರಿ ಹಗಲು ಧ್ಯಾನಿಸುವ ಮನುಷ್ಯನೇ ಭಾಗ್ಯವಂತನು. ಇದಕ್ಕನುಸಾರವಾಗಿ ಇನ್ನೊಬ್ಬ ಭಕ್ತನು ಹೇಳುವುದು ನನ್ನ ಅನುಭವಕ್ಕೆ ಬಂದಿತು. ಏನಂದರೆ - ಒಳ್ಳೇದನ್ನು ಮಾಡುವುದಕ್ಕೆ ನನಗೇನೋ ಮನಸ್ಸುಂಟು. ಆದರೆ ಅದನ್ನು ಮಾಡುವುದು ನನ್ನಿಂದಾಗದು. ಒಳ್ಳೇದನ್ನು ಮಾಡಬೇಕೆಂದಿರುವ ನನಗೆ ಕೆಟ್ಟದ್ದೇ ಸಿದ್ಧವಾಗಿದೆ. ಅಂತರಂಗದೊಳಗೆ ದೇವರ ನಿಯಮದಲ್ಲಿ ಆನಂದಪಡುವವನಾಗಿದ್ದೇನೆ. ಆದರೆ ನನ್ನಲ್ಲಿ ಪರಾಧೀನ ಸ್ವಭಾವವೆಂಬ ಬೇರೊಂದು ನಿಯಮ ಉಂಟು. ಇದು ದೇವರ ನಿಯಮಕ್ಕೊಳಗಾಗಬೇಕೆಂದಿರುವ ನನ್ನ ಸಂಗಡ ಕಾದಾಡಿ ನನ್ನನ್ನು ಸೆರೆಹಿಡಿದು ನನ್ನನ್ನು ಪಾಪದ ನಿಯಮಕ್ಕೆ ವಶ ಮಾಡುವಂಥಾದ್ದಾಗಿದೆ. ಅಯ್ಯೋ ಎಂಥಾ ದುರವಸ್ಥೆಯಲ್ಲಿ ಬಿದ್ದ ಮನುಷ್ಯ! ಈ ಮಾತುಗಳು ನನ್ನ ಸ್ಥಿತಿಗೆ ಚನ್ನಾಗಿ ಒಪ್ಪಂಬಟ್ಟವು. ನಾನು ಬಲೆಯಲ್ಲಿ ಬಿದ್ದ ಹಕ್ಕಿಯಂತೆ ನಿರಾಶೆಯುಳ್ಳವನಾಗಿರುವಾಗ ದೇವರು ಜಗದ್ಗುರುವಾದ ಯೇಸುಕ್ರಿಸ್ತನ ಮೂಲಕ ಸಿದ್ಧಪಡಿಸಿರುವ ರಕ್ಷಣೆಯ ಮಾರ್ಗವು ಆತನ ಪವಿತ್ರಾತ್ಮನ ಉಪದೇಶದ ಮೂಲಕ ನನಗೆ ಬೆಳಕನ್ನು ಕೊಟ್ಟಿತು. ನಾನು ಆ ಜಗದ್ಗುರುವನ್ನು ದಿಕ್ಕಿಲ್ಲದ ರೋಗಿಷ್ಠ ತಾಯಿಯನ್ನು ಮರೆಹೋಗುವಂತೆ ಆಶ್ರಯಿಸಿದಾಗ ಆತನ ಪವಿತ್ರಾತ್ಮನು ನನ್ನಲ್ಲಿ ನೆಲಸಿ ಕ್ರಮೇಣ ಅಂತರಂಗವನ್ನು ಚದರಿಸಿ ದೇವರ ಕಟ್ಟಳೆಗಳನ್ನು ಪ್ರೀತಿ ಮಾಡಿ ಅವುಗಳನ್ನು ನಡಿಸುವ ಶಕ್ತಿಯನ್ನು ಕೊಟ್ಟಿದ್ದಾನೆ. ನಾನು ಇನ್ನೂ ಸಂಪೂರ್ಣವಾಗಿ ಪಾಪವನ್ನು ಜೈಸುವುದಕ್ಕೂ ಪರಿಶುದ್ಧನಾಗಿ ಬಾಳುವುದಕ್ಕೂ ಅಶಕ್ತನಾಗಿದ್ದೇನೆ. ದೇವರ ಕುಮಾರನಾದ ಯೇಸು ಪ್ರಭುವು ನನ್ನನ್ನು ಪಾಪದ ಪಾಶದಿಂದ ಬಿಡಿಸಿದ್ದಾನೆ. ಆತನ ಮಾರ್ಗದಲ್ಲಿ ನಡೆಯುವುದಕ್ಕೆ ಹರ್ಷವನ್ನು ಹುಟ್ಟಿಸಿದ್ದಾನೆ. ನಾನು ಆತನನ್ನೇ ಪೂರ್ಣವಾಗಿ ಆಶ್ರಯಿಸಿದರೆ ನನಗೆ ಪೂರ್ಣವಾದ ರಕ್ಷಣೆ ಜಾಗ್ರತೆಯಲ್ಲಿ ದೊರೆಯುವುದೆಂದು ಸಂದೇಹವಿಲ್ಲದೆ ನಂಬುತ್ತೇನೆ.

ವಾಚಕರೇ ಜಾನಕೀನಾಥನಂತೆ ನೀವೂ ಜಗದ್ಗುರುವನ್ನು ಆಶ್ರಯಿಸಿ ಪಾಪಪರಿಹಾರವನ್ನು ಹುಡುಕಲೊಲ್ಲಿರಾ?

ಊರ್ದೇಶದ ವೃತ್ತಾಂತಗಳು.

ಕಳೆದ ಶನಿವಾರ ರಾತ್ರಿ ರಾಜಧಾನಿಯಲ್ಲಿ ಒಂದು ಹದ ಒಳ್ಳೇ ಮಳೆಯಾಯಿತು. ಈಚೆಗೆ ಬಿಸಲಿನ ಧಗೆಯು ಹೆಚ್ಚುತ್ತಾ ಇದೆ. ಭಾರತವಾಸಿಗಳು ಇನ್ನೂ ಇಳಿತರವಾಗಲಿಲ್ಲ.

ಕೋಲಾರ್ ಗೇಟಿಯು ರೈಲ್ವೆ ಸ್ಟೇಷನ್ ಸಮೀಪದಲ್ಲಿರುವ ರೈಲ್ವೆ ನೌಕರರ ಒಂದು ಮನೆಗೆ ಕಳೆದ ವಾರ ಬೆಂಕಿಬಿದ್ದು ಹುಲ್ಲು ಮೊದಲಾದ ಕೆಲವು ಭಾಗ ಸುಟ್ಟುಹೋಯಿತು.

ಬೆಂಗಳೂರಿನಲ್ಲಿ ಸ್ಥಾಪಿಸಲ್ಪಡುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ಶಾಸ್ತ್ರಶೋಧನಾ ವಿದ್ಯಾಶಾಲೆಯ ಫಂಡಿಗೆ ಮದರಾಸ್ ಗವರ್ನ್‌ಮೆಂಟಿನವರು ೫೦,೦೦೦ ರೂಪಾಯಿ ಗ್ರ್ಯಾಂಟನ್ನು ಕೊಟ್ಟಿದಾರೆ.

ದಿವಾನ್ ವಿ. ಪಿ. ಮಾಧವರಾಯರವರು ತುಮಕೂರು ಅರಸೀಕೆರೆ ಪ್ರಾಂತ್ಯಗಳಲ್ಲಿ ಕಳೆದ ವಾರ ಸಂಚಾರ ಮಾಡಿ, ಕ್ಷಾಮನಿವಾರಣೆಯ ವಿಚಾರಣೆಗೆ ವಿಷಯಗಳನ್ನು ಸ್ಥಳಾಧಿಕಾರಿಗಳಿಗೆ ಸೂಚಿಸಿ ಮೊನ್ನೆ ಮಂಗಳವಾರ ಬೆಳಗ್ಗೆ ವಾಪಸು ಬೆಂಗಳೂರಿಗೆ ದಯಮಾಡಿದರು.

ಮಡಿಕೇರಿಯಲ್ಲಿರುವ ಸ್ವಸ್ಥಾನಿಗ [illegible] ರೂಪಾಯಿಯಿಂದ ೭೫೦ ರೂಪಾಯಿ ವರೆಗೆ ಸಂಬಳ ಒಪ್ಪಿ ಅಸಿಸ್ಟೆಂಟ್ ಒಬ್ಬ ಹೆಡ್ ಮಾಸ್ಟರನ್ನು ಇಂಡಿಯಾ ಸ್ಟೇಟ್ ಸೆಕ್ರಟರಿಯವರು ಸೀಮೆಯಿಂದಲೇ ನೇಮಕ ಮಾಡಿ ಕಳುಹಿಸಿಕೊಡುತ್ತಾರೆಂದು ತಿಳಿದುಬಂದಿದೆ.

ಅ|| ಕಮಿಷನರ್ ಮಿ. ಕೆ. ಶ್ರೀನಿವಾಸರಾಯರವರು ಸರ್ಕಾರದವರು ಸುಮಾರು ಈ ತಿಂಗಳ ಪ್ರಾರಂಭದಲ್ಲಿ ಕುಣಿಗಲ್ ಹೇರ್ ಸಬ್ ಡಿವಿಜನ್‌ಗೆ ವರ್ಗ ಮಾಡಿದ್ದರು. ಈಗ ಮತ್ತೆ ಅವರನ್ನು ಅಲ್ಲಿಂದ ಹು[ಣ]ಸೂರು ಸಬ್ ಡಿವಿಜನ್‌ಗೆ ವರ್ಗಾಯಿಸಿರುತ್ತಾರೆಂದು ಪ್ರಕಟವಾಗಿದೆ.

ಮದರಾಸ್ ಪಟ್ಟಣದಲ್ಲಿ ಮೈಲಾಪೂರದ ಎಡ್ವರ್ಡ್ ಎಲಿಯಟ್ಸ್ ರಸ್ತೆಯಲ್ಲಿ ದಿವಾನ್ ಬಹದೂರ್ ಎಸ್. ಸುಬ್ರಹ್ಮಣ್ಯಂ ಅಯ್ಯರವರು ಸ್ತ್ರೀಯರ ಮತ್ತು ಮಕ್ಕಳ ರೋಗ ಚಿಕಿತ್ಸೆಗೋಸ್ಕರ ಸ್ವಂತ ಹಣವನ್ನು ವೆಚ್ಚಿಸಿ ಒಂದು ಆಸ್ಪತ್ರೆಯನ್ನು ಕಟ್ಟಿಸಿರುತ್ತಾರೆ. ಮದರಾಸ್ ಗವರ್ನರವರು ನಾಳೆ ತಾ|| ೧ನೇ ಸೋಮವಾರ ಸಾಯಂಕಾಲ ೫ ಘಂಟೆಗೆ ಆ ಕಟ್ಟಡವನ್ನು ಪ್ರತಿಷ್ಠೆ ಮಾಡುವರು. ನಮ್ಮ ಮಹಾರಾಜರವರು ಆ ಗೌರವಾನ್ವಿತರಾಗಿ ಆ ಆಸ್ಪತ್ರೆಯನ್ನು ಪ್ರಾರಂಭಿಸುವ ಸಂತೋಷ ಕಾರ್ಯವನ್ನು ನಡೆಸುವವರಾಗಿದ್ದಾರೆ.

ಬೆಂಗಳೂರು ದಂಡಿನಲ್ಲಿ ಕಳೆದ ವಾರ ಒಂದು ದಿನ ರಾತ್ರಿ ದೇಶೀಯ ಸರ್ಕಸ್ ಕಂಪೆನಿಯ ಆಟವನ್ನು ಜನರು ನೋಡುತ್ತಿರುವಾಗ ಆ ಕಂಪೆನಿಯ ಒಂದು ಹುಲಿಯು ತನ್ನ ಬೋನಿನಿಂದ ತಪ್ಪಿಸಿಕೊಂಡು ನೋಟಕರು ಕುಳಿತಿದ್ದ ಸ್ಥಳಕ್ಕೆ ಬಂದಿತು. ಜನರೆಲ್ಲಾ ಗಾಬರಿಯಿಂದ ಅತ್ತಿತ್ತ ಓಡಿಹೋದರು. ನಾಟಕಶಾಲೆಯ ಬಾಗಿಲಲ್ಲಿ ನಿಂತಿದ್ದ ಪೋಲೀಸ್ ಸಬ್ ಇನ್‌ಸ್ಪೆಕ್ಟರು ಧೈರ್ಯದಿಂದ ಅದನ್ನು ತಡೆದು ಅದರ ಸರಪಣಿಯನ್ನು ಹಿಡಿದುಕೊಂಡರು. ಅದು ಅವರ ಮೇಲೆ ಹಾರುವದಕ್ಕೆ ಪ್ರಯತ್ನಪಟ್ಟಾಗ ಅವರು ಸರಪಣಿಯನ್ನು ಬಿಡದೇ ಗಟ್ಟಿಯಾಗಿ ಕೂಗಿಕೊಂಡದ್ದರಿಂದ ಅದು ಸುಮ್ಮನೆ ಗುರಕ ಯಿಸುತ್ತಾ ನಿಂತುಕೊಂಡಿತು. ಅಷ್ಟರಲ್ಲಿ ಅದರ ಪಾಲಕನು ಬಂದು ಹಿಡಿದು ಬೋನಿನೊಳಗೆ ಹಾಕಿದನು.

ಕಳೆದ ಸೋಮವಾರ ಕೋಲಾರದಲ್ಲಿ ಮೈಸೂರ್ ಮೈನ್ ಎಂಬ ಚಿನ್ನದ ಗಣಿಯಲ್ಲಿ ಅನಾಹುತವಾಗಿ ಇಬ್ಬರು ಕೂಲಿಯವರು ಸತ್ತರು. ಮೂರು ನಾಲ್ಕು ಮಂದಿಗೆ ಗಾಯಗಳಾಗಿರುತ್ತವೆ. ಅತ್ತಲಾಗಿ ನಂದಿದುರ್ಗವೆಂಬ ಗಣಿಯಲ್ಲಿ ಪಂಕೆಯು ದಾರಿಹೋಗಿ ಕೂಲಿಕಾರರು ಬಹು ಚಟುವಟಿಕೆಯಿಂದ ಕೆಲಸ ಮಾಡುತ್ತಿದ್ದಾರೆ. ಎರಡು ವಾರಗಳಿಂದ ಕೆಲಸ ನಿಂತುಹೋಗಿದ್ದದರಿಂದ ಕೂಲಿಯವರಲ್ಲಿ ಗಲಭೆ ಕದನಗಳೇನಾದರೂ ಆಗಬಹುದೆಂದು ಊಹಿಸಿ, ಅದನ್ನು ಅಡಗಿಸುವುದಕ್ಕೂ ಪ್ರಜಾ ನೆಮ್ಮದಿಯನ್ನು ಕಾಪಾಡುವುದಕ್ಕೂ ಸರ್ಕಾರದವರು ಬೆಂಗಳೂರಿಂದ ಅಲ್ಲಿಗೆ ಸ್ಪೆಷಲ್ ಪೋಲೀಸ್ ಪಬ್ಬಂದಿಯನ್ನು ಕಳುಹಿಸಿದ್ದರು. ಇವರಿಗೂ ಅಲ್ಲಿನ ಪೋಲೀಸಿನವರಿಗೂ ಮನಸ್ತಾಪಗಳುಂಟಾಗಿ, ಕಡೆಯಲ್ಲಿ ಅವರನ್ನೆಲ್ಲಾ ವಾಪಸು ಬೆಂಗಳೂರಿಗೆ ಕಳುಹಿಸಿಬಿಟ್ಟರು.

ಬೆಂಗಳೂರಿನಲ್ಲಿ ಹತ್ತಿ, ರೇಷ್ಮೆ ಮತ್ತು ಕಂಬಳಿ ಸರಕುಗಳನ್ನು ತಯಾರಾಗುವ ಕಾರ್ಖಾನೆಯವರು ಕಳೆದ ಆರು ತಿಂಗಳ ಜಮಾ ಖರ್ಚಿನ ಪಟ್ಟಿಯನ್ನು ಪ್ರಕಟಿಸಿದಾರೆ. ಈ ಬಾಪ್ತಿಯಲ್ಲಿ ೮೦,೦೦೦ ರೂಪಾಯಿ ಲಾಭ ಹುಟ್ಟಿ ಬಂದಿರುವುದಾಗಿದೆ. ಶೇಕಡಾ ವರ್ಷಕ್ಕೆ ೧೦ ರೂಪಾಯಿಯಂತೆ ಪಾಲುದಾರರಿಗೆ ಡಿವಿಡೆಂಡು ಬಟವಾಡೆ ಮಾಡುವರು. ಆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಯೂರೋಪಿಯನ್ ನೌಕರರಿಗೆ ಇನಾಮು ಕೊಡುವುದಕ್ಕಾಗಿ ೬,೭೫೫ ರೂಪಾಯಿಯನ್ನೂ, ಕೆಲಸಗಾರರ ಗ್ರ್ಯಾಚ್ಯುಟಿ ಫಂಡಿಗೆ ಕೊಡುವುದಕ್ಕೆ ೬,೭೫೫ ರೂಪಾಯಿಯನ್ನೂ, ರಿಜರ್ವ್ ಫಂಡಿಗೆ ೧೨,೦೦೦ ರೂಪಾಯಿಯನ್ನೂ, ಇನ್‌ಶೂರೆನ್ಸ್ ಫಂಡಿಗೆ ೧೦,೦೦೦ ರೂಪಾಯಿಯನ್ನೂ ತೆಗೆದಿಟ್ಟಿದಾರೆ. ಕಳೆದ ಬಾಪ್ತಿಯಲ್ಲಿ ಕಂಬಳಿಯ ಬಟ್ಟೆ ಬರೆಗಳು ಬಹಳ ಚನ್ನಾಗಿ ಬೆಳೆದು ಅದರ ಹತ್ತಿಯ ಬಟ್ಟೆಗಳ ಬೆಲೆಯು ಈ ಸಂಸ್ಥಾನದಲ್ಲಿ ಕ್ಷಾಮಬಾಧೆಯುಂಟಾಗಿರೋದರಿಂದ ಅಷ್ಟು ತೃಪ್ತಿಕರವಾಗಿ ನಡೆಯಲಿಲ್ಲ. ಆದಕಾರಣ ತಯಾರಾದ ಸರಕುಗಳು ಬಹಳವಾಗಿ ಕಾರ್ಖಾನೆಯಲ್ಲಿ ದಸ್ತಾನು ಉಳಿದಿರುತ್ತವೆ.

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಫೆಬ್ರವರಿ ತಾ. 13 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ.			ಕೂಲಿ ಕೊಟ್ಟಿದ್ದು.	ಧರ್ಮಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು.	ರೂ	
ಬೆಂಗಳೂರು	619	327	46	197	.
ಕೋಲಾರ	1,175	627	184	1,417	...
ತುಮಕೂರು	2,634	1,595	146	4,260	643
ಮೈಸೂರು	379	177	16	488	873
ಹಾಸನ	167	62	.	.	..
ಶಿವಮೊಗ್ಗ	119	62	16	106	..
ಕಡೂರು	.	...	..	15	.
ಚಿತ್ರದುರ್ಗ	572	320	99	936	.
ಒಟ್ಟು	5,634	3,170	507	7,749	1,516

ಬೆಂಗಳೂರು ಸಿಟಿ ರಿಲೀಫ್ ಫಂಡು.

ತಾ. 7–2–09 ರ ವರಿವಿಗೆ ನಡೆದ ರಿಲೀಫು ಲೆಕ್ಕ ತಪಶೀಲು.

ತಾ 7-2-09 ರ ವರಿವಿಗೆ ವಾಗ್ದಾನವಾಗಿರುವ ಮೊಬಲಗು ರೂ. 1,431-0-0
ತಾ. 7-2-09 ರ ವರೆಗೆ ವಸೂಲು ಆಗಿರುವ ಮೊಬಲಗು ,, 10,670-0-0
ಖರೀದಿ ಆಗಿರುವ ರಾಗಿ ಕ್ರಯ .. ,, 24,905-7-8
ರಾಗಿ 1 ಆಣೆಗೆ 3 ಸೇರು ಪ್ರಕಾರ ಮಾರುವುದರಿಂದ
ಉಂಟಾಗಿರುವ ನಷ್ಟ .. 3,918-2-8
ಬಿಕರಿ ಆಗಿರುವ ಅಕ್ಕಿ ಅಸಲು ಕ್ರಯ .. 1,654-3-0
ಅಕ್ಕಿ 1 ಆಣೆಗೆ 2 ಸೇರು ಪ್ರಕಾರ ಮಾರುವುದರಿಂದ ಆದ ನಷ್ಟ 65-9-6

[ಮೇಲ್ಕಂಡ ರಿಲೀಫ್ ಫಂಡಿಗಾಗಿ ಚಂದಾ ಕೊಟ್ಟಿರುವ ದಾನಾಕರ್ತರ ಹೆಸರಿನ ಪಟ್ಟಿಯನ್ನು ಪ್ರೆಸಿಡೆಂಟರು ನಮ್ಮ ಬಳಿಗೆ ಕಳುಹಿಸಿರುತ್ತಾರೆ. ಇದನ್ನು ಪ್ರಕಟಿಸಲು ಕುತೂಹಲ ಪಡುತ್ತೇವಾದರೂ ಸ್ಥಳ ಸಂಕೋಚವಾಗಿದೆ ಎಂದು ಚಿಂತಪಡುವೆವು –ಎಡಿ.]

ಶ್ರೀ ಕೃಷ್ಣರಾಜ ಕೃಷಿ ಶಿಲ್ಪಾಭಿವರ್ಧಕ ಸಮಾಜ, ಲಿಮಿಟೆಡ್, ಮೈಸೂರು

ಈ ಸಂಘದ ಜನರಲ್ ಮೀಟಿಂಗು ಇದೇ ಫೆಬ್ರವರಿ ತಾ. ೧೪ನೇ ಭಾನುವಾರ ಮಧ್ಯಾಹ್ನ ೩ ಘಂಟೆಯಲ್ಲಿ ಮೈಸೂರು ಟೌನ್‌ಹಾಲಿನಲ್ಲಿ ನಡೆಯಿತೆಂದು ಕಳೆದ ವಾರ ತಿಳಿಸಿದೆವಷ್ಟೆ. ಈ ಮೀಟಿಂಗಿನಲ್ಲಿ ರಿಟೈರ್ಡ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್ ಮ॥ ಬಿ ತಿರುಮಲಾಚಾರ್ಯರು ಅಗ್ರಾಸನವನ್ನು ವಹಿಸಬೇಕೆಂದು ವೆರ್ನಕ್ಯುಲರ್ ರಿಜಿಸ್ಟ್ರಾರ್ ಮ॥ ಎಚ್ ಕೃಷ್ಣರಾಯರು ಸೂಚಿಸಿದರು. ಅಡ್ವೊಕೇಟ್ ಜೆ. ಎಂ. ಸಿ ರಂಗಯ್ಯಂಗಾರ್ಯರು ಸೆಕೆಂಡ್ ಮಾಡಿದ್ದನ್ನು ಸಭಿಕರೆಲ್ಲಾ ಅನುಮೋದಿಸಿದರು. (೧) ೧೯೦೭ನೇ ನವಂಬರು ಲಾಗಾಯಿತು ೧೯೦೮ನೇ ಜನವರಿ ಆಖೈರು ವರೆಗಿನ ರಿಪೋರ್ಟನ್ನು ಸೆಕ್ರಟರಿ ಮ॥ ಎಚ್ ನರಸಿಂಗರಾಯರು ಓದಿದರು. ಅದನ್ನು ಎಲ್ಲರೂ ಒಪ್ಪಿದರು. (೨) ಸಮಾಜದ ಪ್ರೆಸಿಡೆಂಟರು, ವೈಸ್ ಪ್ರೆಸಿಡೆಂಟರು, ಲೀಗಲ್ ಅಡ್ವೈಜರು, ಸೆಕ್ರೆಟರಿಗಳೂ ಕಳೆದ ವರ್ಷ ಇದ್ದವರೇ ಈ ವರ್ಷವೂ ಇರಬೇಕೆಂದು ತೀರ್ಮಾನವಾದದ್ದಲ್ಲದೆ ಕೈಗಾರಿಕೆ ಕಮಿಟಿಗೆ ಮ॥ ಅಂಬಳೆ ಅಣ್ಣಯ್ಯಪಂಡಿತರನ್ನೂ, ಮ॥ ಮಹಮದ್ ಜಾಫರ್ ಸಾಹೇಬರವರನ್ನೂ ಸೇರಿಸಿಕೊಳ್ಳಬೇಕೆಂದು ಮ॥ ಎಚ್ ನರಸಿಂಗರಾಯರು ಸೂಚಿಸಿದ್ದನ್ನು ಎಲ್ಲರೂ ಒಪ್ಪಿದರು. (೩) ಈಗ ನಗದು ಹಾಜರಿರತಕ್ಕ ಹಣದಲ್ಲಿ ೫೦೦ ರೂಪಾಯನ್ನು ಚಾಲ್ತಿ ಖರ್ಚಿಗಾಗಿ ಇಟ್ಟುಕೊಂಡು ಉಳಿದದ್ದರ ಮೂರನೇ ಒಂದು ಭಾಗವನ್ನು ವ್ಯವಸಾಯಾಭಿವೃದ್ಧಿಗೂ, ಮೂರನೇ ಎರಡು ಭಾಗವನ್ನು ಕೈಗಾರಿಕೆ ಕೆಲಸಗಳ ಅಭಿವೃದ್ಧಿಗೂ ಸಾಲಾ ಕೊಡಬಹುದು ಎಂದು ಅಡ್ವೊಕೇಟ್ ಮ॥ ಬಿ ರಾಘವಾಚಾರ್ಯರು ಸೂಚಿಸಿದ್ದನ್ನು ಎಲ್ಲರೂ ಒಪ್ಪಿದರು. (೪) ಬಿತ್ತನೆ ಬೀಜಗಳ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಪ್ರತಿ ತಾಲೂಕಿನಲ್ಲೂ, ಯಾವ ಯಾವ ತಾಲೂಕಿಗೆ ಎಷ್ಟೆಷ್ಟು ಆಗಬೇಕು ಎನ್ನುವುದನ್ನು ಆಯಾಯ ತಾಲೂಕುಗಳಿಂದ ತಿಳಿದುಕೊಂಡು ಸಕಾಲದಲ್ಲಿ ರವಾನೆ ಮಾಡತಕ್ಕದ್ದೆಂದು ತೀರ್ಮಾನವಾಯಿತು. (೫) ಸೆಕ್ರೆಟರಿಗಳವರಿಂದ ಒದಲ್ಪಟ್ಟ ರಿಪೋರ್ಟನ್ನು ಅಚ್ಚು ಹಾಕಿಸಿ, ಎಲ್ಲರಿಗೂ ಕಳುಹಿಸಿಕೊಡತಕ್ಕದ್ದೆಂದು ಗೊತ್ತುಮಾಡಲಾಯಿತು. (೬) ಈ ಸಮಾಜಕ್ಕೆ ಬರತಕ್ಕ ಇಂಗ್ಲೀಷು ಜರ್ನಲ್ಲುಗಳಲ್ಲಿ ಮುಖ್ಯವಾದ ಅಂಶಗಳನ್ನು ಕನ್ನಡಿಸಿ ಅಚ್ಚುಹಾಕಿಸಿ, ಎಲ್ಲರಿಗೂ ತಿಳಿಸತಕ್ಕದ್ದು. (೭) ಎಗ್ಜಿಭಿಷನ್ನಿನಲ್ಲಿರತಕ್ಕ ರೀಡಿಂಗುರೂಂ, ಮತ್ತು ಮ್ಯೂಜಿಯಮ್ಮನ್ನು ಅಲ್ಲಿಂದ ತಪ್ಪಿಸಿ ಲ್ಯಾನ್ಸ್‌ಡೌನ್ ಬಜಾರಿನಲ್ಲಿ ಇಡತಕ್ಕದ್ದು. ಕಡೆಯಲ್ಲಿ ಮ॥ ಬಿ ತಿರುಮಲಾಚಾರ್ಯರವರು ಅಗ್ರಾಸನವನ್ನು ವಹಿಸಿ ಕಾರ್ಯನಿರ್ವಾಹ ಮಾಡಿದ್ದಕ್ಕಾಗಿ ಸಭಿಕರೆಲ್ಲರೂ ವಂದನೆಗಳನ್ನು ವಿನಾಡಿದ ನಂತರ ಸಭೆಯು ಬರಖಾಸ್ತು ಮಾಡಲ್ಪಟ್ಟಿತು.

ಇಂಜಿನಿಯರ್ ಇಲಾಖೆಯ ರಿಪೋರ್ಟು.

೧೯೦೭–೦೮ ನೇ ಸಾಲಿನಲ್ಲಿ ನಡೆದ ಕಾಮಗಾರಿಗಳು.

ಮೈಸೂರು ಸಂಸ್ಥಾನದ ಇಂಜಿನಿಯರ್ ಇಲಾಖೆಯವರು ಸಂಸ್ಥಾನಾಮುಳೆ ೧೯೦೭-೦೮ ನೇ ಸಾಲಿನಲ್ಲಿ ನಡಿಸಿದಂಥಾ ಕಾಮಗಾರಿಗಳ ರಿಪೋರ್ಟನ್ನು ಗವರ್ನಮೆಂಟಿನವರು ಪರಾಂಬರಿಸಿ ಅದರ ಗೊತ್ತುವಳಿಯನ್ನು ಪ್ರಕಟಿಸಿರುತ್ತಾರೆ. ಈ ಗೊತ್ತುವಳಿಯಲ್ಲಿ ಕಂಡುಬರುವ ಮುಖ್ಯ ಭಾಗಗಳನ್ನು ತೆಗೆದು ಪ್ರಕಟಿಸುವೆವು.

ಕಂಟ್ರಿಬ್ಯೂಷನ್ ಮತ್ತು ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಡು ಎಂಬೀ ಎರಡು ಬಾಬುಗಳ ವಿನಾ ಉಳಿದ ಎಲ್ಲಾ ಕಾಮಗಾರಿಗಳಿಗೂ ೧೯೦೭-೦೮ ನೇ ಸಾಲಿನ ಖರ್ಚಿಗೆ ೩೭,೨೩,೧೯೫ ರೂಪಾಯಿ ಸ್ಯಾಂಕ್ಷನ್ ಮಾಡಲಾಯಿತು. ಈ ಪೈಕಿ ಒಟ್ಟು ೩೬,೦೦,೪೯೭ ರೂಪಾಯಿ ಖರ್ಚಾಗಿರುವುದರ ವಿವರ ಹ್ಯಾಗೆಂದರೆ:—

ಯಾವ ಬಾಬಿನಿಂದ ?	ಗ್ರಾಂಟು ಎಷ್ಟು .	ಖರ್ಚಾದದ್ದು
ಪ್ರಾವಿನ್ಸಿಯಲ್ ಫಂಡು	ರೂ. ೨೮,೨೪,೮೨೧ .	ರೂ. ೨೬,೯೦,೬೫೫
ಲೋಕಲ್ ಫಂಡ್ ಜನರಲ್ ,,	೪೩,೩೨೦ . .	,, ೩೯,೧೩೮
ಡಿಸ್ಟ್ರಿಕ್ಟ್ ಫಂಡುಗಳು . ,,	೪,೩೮,೭೧೯ . .	,, ೪,೦೪,೦೧೭
ಮ್ಯುನಿಸಿಪಲ್ ಫಂಡುಗಳು ,,	೭೬,೯೩೦ . .	,, ೭೪,೩೫೭
ಗ್ರಾಮ ಪಾಠಶಾಲಾ ಫಂಡು ,,	೧೧,೫೯೫ .	,, ೯,೬೪೧
ಇರ್ರಿಗೇಷನ್ ಸೆಸ್ ಫಂಡು . . ,,	೨,೨೦,೦೦೦	. . ,, ೨,೦೯,೩೯೬
ಅರಮನೆ ಕಾಮಗಾರಿ ಫಂಡು ,,	೯೫,೮೬೦	,, ೮೭,೬೯೧

ಮೇಲ್ಕಂಡಂತೆ ಕಾಮಗಾರಿಗಳು ನಡೆದು ಇರುತ್ತವೆ. ಸ್ಯಾಂಕ್ಷನ್ ಆದ ಒಟ್ಟು ಹಣದಲ್ಲಿ ೧,೬೩,೦೪೯ ರೂಪಾಯಿ ವಾಪಸು ಸರ್ಕಾರಕ್ಕೆ ಉಳಕೊಂಡಿತು. ಆದರೆ ಸ್ಕೂಲ್ ಮನೆಗಳನ್ನು ಕಟ್ಟುವುದಕ್ಕೆ ೧೧,೦೦೦ ರೂಪಾಯಿ ಸ್ಯಾಂಕ್ಷನ್ ಆಗಿದ್ದರೂ ಅದನ್ನೆಲ್ಲಾ ವಿನಿಯೋಗಿಸದೆ ಸುಮಾರು ೭,೦೦೦ ರೂಪಾಯಿ ಉಳಿಸಿಬಿಟ್ಟದ್ದು ಅಷ್ಟೇನೂ ಸಂತೋಷಕರವಾಗಿಲ್ಲ. ಅತ್ತಲಾಗಿ ಕಂಟ್ರಿಬ್ಯೂಷನ್ ಬಾಬಿನಲ್ಲಿ ೧,೫೭,೨೨೧ ರೂಪಾಯಿ ಕಾಮಗಾರಿಗಳಿಗೆ ಖರ್ಚು ಮಾಡಿರುತ್ತಾರೆ ಮತ್ತು ಕಾವೇರಿ ವಿದ್ಯುಚ್ಛಕ್ತಿಯ ಕಾರ್ಖಾನೆಗೆ ಈ ಸಾಲಿನಲ್ಲಿ ೧೬,೨೯,೦೩೩ ರೂಪಾಯಿ ವಿನಿಯೋಗಿಸಿರುವರು. ಆದಕಾರಣ ಸಂಸ್ಥಾನಾಮುಳೆ ನಡೆದ ಕಾಮಗಾರಿಗಳಿಗೆಲ್ಲಾ ಒಟ್ಟು ೫೩,೮೬,೩೫೦ ರೂಪಾಯಿ ಅಂದರೆ, ಹಿಂದಿನ ಸಾಲಿಗಿಂತ ಸುಮಾರು ೬ ಲಕ್ಷ ರೂಪಾಯಿ ಜಾಸ್ತಿಯಾಗಿ ಖರ್ಚು ಮಾಡಲಾಗಿದೆ.

೨,೫೦೦ ರೂಪಾಯಿ ಅಥವಾ ಅದಕ್ಕಿಂತಲೂ ಹೆಚ್ಚು ಖರ್ಚಾಗುವ ಕಾಮಗಾರಿಗಳನ್ನು ದೊಡ್ಡ ಕೆಲಸಗಳು ಎಂದು ನಿಗದಿಸಲ್ಪಟ್ಟಿವೆ. ಈ ಸಾಲಿನಲ್ಲಿ ಇಂಥಾ ೧೧೮ ದೊಡ್ಡ ಕೆಲಸಗಳು ಕಾಮಗಾರಿ ನಡೆದು ಅವುಗಳಿಗೆ ೯,೭೭,೭೬೩ ರೂಪಾಯಿ ಖರ್ಚಾಗಿರುವುದು. ಈ ಪೈಕಿ ನಾಲಾ ಕಾಮಗಾರಿಗೆ ೧,೯೬,೧೭೩ ರೂಪಾಯಿಯೂ, ಕೆರೆ ಕಾಮಗಾರಿಗೆ ೨,೬೬,೦೯೦ ರೂಪಾಯಿಯೂ ವಿನಿಯೋಗವಾಗಿದೆ. ಇಂಥಾ ದೊಡ್ಡ ಕಾಮಗಾರಿಗಳಿಗೆ ಮಾರ್ಕಣಿವೆ ಕೆಲಸವೂ ಒಂದಾಗಿರುತ್ತದೆ. ಈ ತಲಾವಿನ ಕೆಳಗೆ ೩,೮೨೭ ಎಕರೆ ಜಮೀನು ಸಾಗುವಳಿ ಆಗಿ ೧೨,೧೫೪ ರೂಪಾಯಿ ಕಂದಾಯ ಉತ್ಪತ್ತಿಯಾಗಿರುವುದು. ಇದುವರೆಗೆ ಮಾರ್ಕಣಿವೆ ತಲಾವಿಗೂ, ಅದರ ನಾಲಾಗಳಿಗೂ ಒಟ್ಟು ೪೦,೬೭,೨೭೧ ರೂಪಾಯಿ ಖರ್ಚು ಮಾಡಲಾಗಿದೆ. ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಬೇಗುರಿನಲ್ಲಿ ಒಂದು ಭಾವಿ ತೆಗೆಯಿಸಿ ಕಬ್ಬಿನಿ ಕಾವೇರಿ ನೀರನ್ನು ಸೇರಿಸ ಮಾಡುವುದು ತುಂಬಾ ಲಾಭಕರವಾದದ್ದೆಂದು ತಿಳಿದು ಬಂದಿದೆ. ಇದರ ಸ್ಥಿತಿಗತಿಯನ್ನು ಗೊತ್ತು ಮಾಡುವುದಕ್ಕೆ ೨೮-೪೬೦ ರೂಪಾಯಿ ಖರ್ಚು ಮಾಡಿದ್ದಾಯಿತು. ಆದರೆ ಈ ಕಾಮಗಾರಿಗೆ ಬಹಳ ಹಣ ಬೇಕಾಗುವುದರಿಂದ ಅದನ್ನು ಪ್ರಾರಂಭಿಸಬೇಕೋ ಬೇಡವೋ ಎಂಬುವುದನ್ನು ಸರ್ಕಾರದವರು ಪರ್ಯಾಲೋಚನೆಯಲ್ಲಿ ಇಟ್ಟುಕೊಂಡಿದ್ದಾರೆ.

ಸಣ್ಣ ನೀರಾವರಿ ಕಾಮಗಾರಿಗಳಿಗೆ ಈ ಸಾಲಿನಲ್ಲಿ ೪೦,೧೨೬ ರೂಪಾಯಿ (ಅಂದರೆ, ನಾಲೆಗಳಿಗೆ ೬,೩೨೬ ರೂಪಾಯಿಯೂ, ಕೆರೆಗಳಿಗೆ ೩೩,೮೦೦ ರೂಪಾಯಿಯೂ) ಖರ್ಚು ಮಾಡಲಾಗಿದೆ. ಸಣ್ಣ ಕೆರೆಗಳನ್ನು ದುರಸ್ತು ಮಾಡುವುದರಲ್ಲಿ ಮಣ್ಣು ಕೆಲಸವನ್ನು ರೈತರು ಮಾಡಬೇಕು, ಇಲ್ಲವೇ ಅದಕ್ಕೆ ತಗಲುವ ಹಣವನ್ನು ತಂದುಕೊಂಡು ಕೊಡಬೇಕು; ಕಲ್ಲು ಕೆಲಸ, ಗಾರೆ ಇಟ್ಟಿಗೆ ಕೆಲಸಗಳನ್ನು ಸರ್ಕಾರದವರು ಮಾಡಿಸಬೇಕು. ಈ ಸಾಲಿನಲ್ಲಿ ಈ ವಿಷಯಕ್ಕೆ ಸರ್ಕಾರದವರು ೭೭,೯೭೨ ರೂಪಾಯಿ ಮುಟ್ಟಿಸಿ ಕಾಮಗಾರಿ ಮಾಡಿಸಿರುತ್ತಾರೆ. ೨೮೩ ಸಣ್ಣ ಕೆರೆಗಳು ಕಾಮಗಾರಿ ಆದವು. ಕೋಲಾರ ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ಈ ಕೆರೆಗಳ ಕೆಲಸ ತುಂಬಾ ತೃಪ್ತಿಕರವಾಗಿ ನಡೆದಿದೆ.

ಸಿವಿಲ್ ಕಟ್ಟಡಗಳಲ್ಲೆಲಾ ಅರಮನೆಯ ಕೆಲಸವೇ ಭಾರಿಯಾದದ್ದು. ಈ ಕಾಮಗಾರಿಗೆ ಈ ಸಾಲಿನಲ್ಲಿ ೩,೭೭,೩೭೬ ರೂ. ಖರ್ಚಾಗಿದೆ. ಅರಮನೆಗೆ ಬೆಂಕಿಯ ಅಪಾಯವಿಲ್ಲದಂತೆ ಕೊಳವನ್ನು ಕಟ್ಟಿಸಿ, ನೀರು ಬರುವ ನಲ್ಲಿಗಳನ್ನು ಹಾಕಿಸಿ, ದೊಡ್ಡ ದೊಡ್ಡ ಪೀಪಾಯಿಗಳನ್ನು ಅರಮನೆಯ ಮೇಲ್ಭಾಗದಲ್ಲಿ ಇಡಿಸಿದ್ದಕ್ಕೆ ೨೫,೪೪೩ ರೂಪಾಯಿ ಖರ್ಚಾಯಿತು. ಇತರ ಸಿವಿಲ್ ಕಾಮಗಾರಿಗಳು ನಡೆದಿರುವುದು ಯಾವುವೆಂದರೆ,—ಬೆಟ್ಟದಹಳ್ಳಿಯಲ್ಲಿ ವ್ಯವಸಾಯ ಪರೀಕ್ಷಕ ಭಾರಂ ಕಟ್ಟಡಗಳು, ಕೋಲಾರ್ ಚಿನ್ನದ ಗಣಿಗಳಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರ ವಾಸದ ಮನೆಗಳು, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪೇಷೆಂಟು ಮತ್ತು ಯೂರೋಪಿಯನ್ ರೋಗಿಗಳ ವಾರ್ಡುಗಳು, ಇತ್ಯಾದಿ. ಈ ರೀತಿ ಸಿವಿಲ್ ಕಟ್ಟಡಗಳಿಗೆಲ್ಲಾ ಒಟ್ಟು ಈ ಸಾಲಿನಲ್ಲಿ ೬,೨೮,೭೮೯ ರೂಪಾಯಿ ಖರ್ಚು ಮಾಡಲಾಯಿತು. ಇದಲ್ಲದೆ ಶಿಥಿಲವಾಗಿದ್ದ ಸಿವಿಲ್ ಕಟ್ಟಡಗಳನ್ನು ೧,೦೮,೮೪೫ ರೂಪಾಯಿ ಮುಟ್ಟಿಸಿ ದುರಸ್ತು ಮಾಡಿಸಿದೆ. ಹಳೇಬೀಡಿನಲ್ಲಿ ಪ್ರಾಚೀನ ಕಾಲದ ಕೇದಾರೇಶ್ವರ ದೇವಸ್ಥಾನವನ್ನು ರಿಪೇರಿ ಮಾಡಿಸಿರುತ್ತದೆ.

ರಸ್ತೆಗಳನ್ನು ಹೊಸದಾಗಿ ಮಾಡಿಸುವುದು, ಪ್ರಯಾಣಸ್ಥರಿಗೆ ವಸತಿಯಾದ ಮನೆಗಳನ್ನೂ ಸತ್ರಗಳನ್ನೂ ಕಟ್ಟಿಸುವುದು, ರಸ್ತೆಗಳನ್ನು ದುರಸ್ತು ಮಾಡಿಸುವುದು, ಬೆಂಗಳೂರು ಸಿಟಿ ಬಸವನಗುಡಿ ಮಲ್ಲೇಶ್ವರಗಳಲ್ಲಿ ಚರಂಡಿಗಳನ್ನು ಕಟ್ಟಿಸುವುದು, ಹರಿಹರದ ಟೌನಿಗೆ ಕುಡಿಯುವ ನೀರನ್ನು ಒದಗಿಸುವುದು, ಈ ಮೊದಲಾದ ಕೆಲಸಗಳಿಗೆ ಈ ಸಾಲಿನಲ್ಲಿ ೪,೮೪,೪೪೧ ರೂಪಾಯಿ ಖರ್ಚಾಯಿತು. ಸಂಸ್ಥಾನಾಮುಳೆ ಒಟ್ಟು ೧,೯೪೧ ಮೈಲಿಯ ರಸ್ತೆಗಳಿದ್ದವು. ಈ ರಸ್ತೆಗಳನ್ನು ಒಳ್ಳೇ ಸ್ಥಿತಿಯಲ್ಲಿಡುವುದಕ್ಕೆ ಸರಾಸರಿ ಮೈಲಿಗೆ ೩೧೪ ರೂಪಾಯಿ ಖರ್ಚಾಗಿದೆ.

ಕಾವೇರೀ ವಿದ್ಯುಚ್ಛಕ್ತಿಯ ಕಾರ್ಖಾನೆಗೆ ೧೬,೧೩,೦೩೬ ರೂಪಾಯಿಗಳು ಖರ್ಚಾದವು. ಇದಲ್ಲದೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ವಿದ್ಯಾಶಾಲೆಗೆ ವಿದ್ಯುಚ್ಛಕ್ತಿಯನ್ನು ಸಾಗಿಸುವ ತಂತಿಗಳನ್ನು ಹಾಕುವುದಕ್ಕೂ, ದಕ್ಷಿಣ ಮರಾಟ ರೈಲ್ವೆ ಕಂಪನಿಗೆ ವಿದ್ಯುಚ್ಛಕ್ತಿಯ ಪಂಪನ್ನು ಇಡುವುದಕ್ಕೂ, ಬೆಂಗಳೂರಿನಲ್ಲಿ ಪ್ರಜೆಗಳ ಮನೆಗಳಿಗೆ ಬೆಳಕನ್ನು ಒದಗಿಸುವುದಕ್ಕೂ ಅವರುಗಳಿಂದ ಬಂದ ೧೫,೬೬೪ ರೂಪಾಯಿ ಖರ್ಚಾಗಿರುತ್ತದೆ. ಜನವರಿ ೧ ನೇ ತಾ. ನಿಂದ ಬೆಂಗಳೂರು ದಂಡಿಗೆ ದೀಪಗಳನ್ನು ಕೊಡುತ್ತಾ ಬರಲಾಗಿದೆ. ಮೈಸೂರಿನಲ್ಲಿ ದೀಪಗಳನ್ನಿಡಿಸುವುದಕ್ಕೆ ಆಗಬೇಕಾದ ಕಾಮಗಾರಿಗಳು ಪೂರೈಸುತ್ತಾ ಬಂದಿದ್ದವು. ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಡಿನಿಂದ ಈ ಸಾಲಿನಲ್ಲಿ ಒಟ್ಟು ೧೫,೦೧,೯೯೯ ರೂಪಾಯಿ ಹುಟ್ಟುವಳಿ ಆಗಿರುತ್ತದೆ. ಈ ಪೈಕಿ ಕೋಲಾರ್ ಚಿನ್ನದ ಗಣಿಗಳಿಂದ ೧೪,೪೭,೫೯೨ ರೂಪಾಯಿಯೂ, ಬೆಂಗಳೂರು ಪಟ್ಟಣದಿಂದ ೪೭,೩೫೫ ರೂಪಾಯಿಯೂ, ಪಂಪಿನಿಂದ ೮,೦೫೨ ರೂಪಾಯಿಯೂ ಉತ್ಪತ್ತಿಯಾಗಿದೆ.

ಈ ಸಾಲಿನಲ್ಲಿ ಇಂಜಿನಿಯರ್ ಇಲಾಖೆಯ ಸಿಬ್ಬಂದೀ ಖರ್ಚು ಒಟ್ಟು ೭,೪೬,೪೫೩ ರೂಪಾಯಿ ಆಗಿರುವುದು.

ಕ್ಷಾಮನಿವಾರಣೆಯ ಏರ್ಪಾಡುಗಳು.

ಮೈಸೂರು ಸರ್ಕಾರಿ ಹುಕುಮುಗಳು.

ದನಗಳ ಮೇವು.

೧. ತುಮಕೂರು ಡಿಸ್ಟ್ರಿಕ್ಟಿನ ಸ್ಟೇಟ್ ಫಾರೆಸ್ಟುಗಳಲ್ಲಿ ೧೧,೩೫೦ ರಾಸುಗಳನ್ನು ರೈತರು ಬಿಟ್ಟು ಮೇಯಿಸುತ್ತಿದ್ದರೆ ಫಾರೆಸ್ಟುಗಳಲ್ಲಿ ಸಾಧ್ಯವಾದ ಕಡೆಗಳಲ್ಲೆಲ್ಲಾ ಭಾವಿಗಳನ್ನೂ ಚಿಲುಮೆಗಳನ್ನೂ ತೆಗಿಸಿ, ಗೋಕಾಯಿಗಳ ನೀರಿಗೆ ಅನುಕೂಲ ಮಾಡಿರುತ್ತದೆ. ಗ್ರಾಮಾಂತರಗಳಲ್ಲಿ ರಾಗಿಯ ಹುಲ್ಲು ಸಿಕ್ಕುತ್ತಿದೆಯಾದದ್ದರಿಂದ ಜಂಗ್ಲಿನ ಹುಲ್ಲನ್ನು ರೈತರು ಅಪೇಕ್ಷಿಸುವವರಾಗಿಲ್ಲ. ಡೆಪ್ಯುಟಿ ಕಮಿಷನರವರು ೨೦೦ ಟನ್ ಹುಲ್ಲು ಬೇಕೆಂದು ಫಾರೆಸ್ಟ್ ಕನ್ಸರ್ವೇಟರನ್ನು ಕೇಳಿರುತ್ತಾರೆ. ಅಲ್ಲಿನ ಫಾರೆಸ್ಟುಗಳೊಳಗೆ ಕುರುಬರಾಗಲಿ ಗೋಲಿಗರಾಗಲಿ ಇಲ್ಲವಾದಕಾರಣ ಅವರಿಗೆ ಸಹಾಯಮಾಡುವ ಏರ್ಪಾಡೇನೂ ಆವಶ್ಯವಿರುವುದಿಲ್ಲ.

೨. ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಅಪೇಕ್ಷೆಯ ಪ್ರಕಾರ ಚನ್ನಪಟ್ಟಣ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ, ನೆಲಮಂಗಲ, ಈ ತಾಲೂಕುಗಳಲ್ಲಿ ಮೈಸೂರು ಮತ್ತು ಬ್ರಿಟಿಷ್ ಮಿಲ್ಟೇರಿ ಇಲಾಖೆಗಳಿಗೆ ಬಿಟ್ಟುಕೊಟ್ಟಿರುವ ಪ್ಲಾಂಟೇಷನ್ ವಿನಾ ಉಳಿದ ಫಾರೆಸ್ಟುಗಳನ್ನು ರೈತರ ದನಗಳ ಮೇವಿಗಾಗಿ ಬಿಡಿಸಿಕೊಡಲಾಗಿದೆ. ಇದನ್ನು ಗವರ್ನಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ.

೩. ಅರಸೀಕೆರೆ ತಾಲೂಕು ಗೋವಿಂದಪುರ ಗ್ರಾಮದ ಗೋಕಾಯಿಗಳ ಮೇವಿಗಾಗಿ ಬಸವಕಲ್ಲು ಸ್ಟೇಟ್ ಫಾರೆಸ್ಟನ್ನು ಕನ್ಸರ್ವೇಟರವರು ಬಿಟ್ಟುಕೊಟ್ಟಿರುವುದನ್ನು ಸರ್ಕಾರದವರು ಒಪ್ಪಿ ಸ್ಯಾಂಕ್ಷನ್ ಮಾಡಿದಾರೆ.

೪. ಗುಬ್ಬಿ ತಾಲೂಕು ಚಿಕ್ಕಗುಡ್ಡದ ಕಾವಲನ್ನು ಗ್ರಾಮಾಂತರಗಳ ದನಗಳ ಮೇವಿಗಾಗಿ ಬಿಟ್ಟುಕೊಡಬೇಕೆಂದು ಡೆಪ್ಯುಟಿ ಕಮಿಷನರವರು ಶಿಫಾರಸು ಮಾಡಿದಂತೆ ಅಮೃತಮಹಲ್ ಇಲಾಖಾ ಸೂಪರಿಂಟೆಂಡೆಂಟರವರು ಬಿಡಿಸಿರುತ್ತಾರೆ. ಇದನ್ನು ಗವರ್ನಮೆಂಟಿನವರು ಅನುಮೋದಿಸಿರುವರು.

೫. ಶಿವಮೊಗ್ಗ ಡಿಸ್ಟ್ರಿಕ್ಟಿನ ಸ್ಟೇಟ್ ಫಾರೆಸ್ಟುಗಳಲ್ಲಿ ಸಾಕಾದಷ್ಟು ಹುಲ್ಲು ಸಿಕ್ಕುವುದರಿಂದಲೂ ರೈತರು ಒಂದು ಗಾಡಿ ಹೊರೆಗೆ ಇಷ್ಟು ಅಂತ ಸುಂಕ ಕೊಟ್ಟು ಕೊಯಿದು ಸಾಗಿಸಿಕೊಂಡು ಹೋಗುತ್ತಿದ್ದಾರೆಂತಲೂ ಡೆಪ್ಯುಟಿ ಕಮಿಷನರವರು ರಿಪೋರ್ಟು ಮಾಡಿರುತ್ತಾರೆ.

೬. ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಸ್ಟೇಟ್ ಫಾರೆಸ್ಟುಗಳಲ್ಲಿ ಸುಮಾರು ೪,೫೦೦ ಟನ್‌ಗಳ ಹುಲ್ಲು ಕೊಯಿದು ಬೇಕಾದ ಕಡೆಗಳಿಗೆ ರವಾನೆ ಮಾಡಬಹುದು. ಶಿವಮೊಗ್ಗ, ಬೀರೂರು, ತರೀಕೆರೆ ಸ್ಟೇಷನ್‌ಗಳಲ್ಲಿ ೨೫ ಟನ್‌ಗಳಂತೆ ಹುಲ್ಲನ್ನು ಸಾಗಿಸಿ ಇಡಿಸಿರುತ್ತಾರೆ. ಅದನ್ನು ರೈಲಿನ ಮೇಲೆ ರವಾನೆ ಮಾಡುವುದು ಬಹಳ ದುಬಾರಿ ಖರ್ಚು ಆಗುತ್ತದೆ. ಸರ್ಕಾರದವರು ರೈಲ್ವೆ ಅಧಿಕಾರಿಗಳಿಗೆ ಬರೆದು ಭಾಡಿಗೆ ದರವನ್ನು ಕಡಮೆ ಮಾಡಿಸಬೇಕಾಗಿದೆ. ಇದಕ್ಕಿಂತಲೂ ಸುಲಭವೂ ಅನುಕೂಲವೂ ಆದ ಏರ್ಪಾಡು ಇನ್ನೊಂದು ಉಂಟು. ಅದೇನೆಂದರೆ ಪ್ರಾಂತ್ಯದ ಗ್ರಾಮಗಳಲ್ಲಿ ಗಾಡಿ ಎತ್ತುಗಳನ್ನು ಇಟ್ಟುಕೊಂಡಿರುವಂಥಾ ರೈತರನ್ನು ರೆವಿನ್ಯೂ ಅಧಿಕಾರಿಗಳು ಪ್ರೋತ್ಸಾಹ ಪಡಿಸಿ ಅವರ ಮೂಲಕ ಜಂಗಲಿನಿಂದ ಹುಲ್ಲು ಸಾಗಿಸಿಕೊಂಡು ಹೋಗುವಂತೆ ಮಾಡಿದರೆ ಬೇಕಾದ ಕಡೆಗಳಿಗೆ ಹುಲ್ಲು ಕಳುಹಿಸಬಹುದು; ಇದಲ್ಲದೆ ಅಂಥಾ ರೈತರಿಗೆ ದಿನ ಒಂದಕ್ಕೆ ಒಂದು ರೂಪಾಯಿನಂತೆ ಸಂಪಾದನೆಯೂ ಆದೀತು. ಈ ಏರ್ಪಾಡನ್ನು ರೆವಿನ್ಯೂ ಅಧಿಕಾರಿಗಳು ಮಾಡುವುದು ಉತ್ತಮವಾಗಿದೆ ಎಂಬೀ ರೀತಿಯಾಗಿ ಫಾರೆಸ್ಟ್ ಕನ್ಸರ್ವೇಟರವರು ಬರೆದದ್ದಕ್ಕೆ ಗವರ್ನಮೆಂಟಿನವರು ಅದರಂತೆ ಮಾಡುವುದು ಬಹಳ ಆವಶ್ಯವೆಂದು ಎಲ್ಲಾ ಡೆಪ್ಯುಟಿ ಕಮಿಷನರುಗಳಿಗೂ ತಿಳಿಸಿರುತ್ತಾರೆ.

ಕೊಳ, ಹೊಂಡಗಳನ್ನು ದುರಸ್ತುಮಾಡಿಸುವುದು

ಗ್ರಾಮಾಂತರಗಳಲ್ಲಿ ಸಣ್ಣ ಕೆರೆ, ಕೊಳ, ಕಟ್ಟೆ, ಹೊಂಡ ಬಾವಿ, ಈ ಮೊದಲಾದ ಜಲಾಶಯಗಳು ಇದ್ದಾಗ್ಯೂ ಅವುಗಳ ನೀರು ಕೆಟ್ಟು ಹೋಗಿವೆ ಎಂತಲೂ, ಕೆಲವು ಕಡೆ ಅವು ಶಿಥಿಲವಾಗಿ ಉಪಯೋಗವಿಲ್ಲವೆಂತಲೂ, ಇವುಗಳನ್ನೆಲ್ಲಾ ದುರಸ್ತು ಮಾಡಿಸಿ ಒಳ್ಳೇ ಸ್ಥಿತಿಯಲ್ಲಿಟ್ಟರೆ ಜನ ದನಗಳಿಗೆ ನೀರು ಸಿಕ್ಕಲು ಅನುಕೂಲವಾಗಬಹುದೆಂತಲೂ ರೆವಿನ್ಯೂ ಕಮಿಷನರವರು ಬರೆದದ್ದರ ಮೇಲೆ ಗವರ್ನಮೆಂಟಿನವರು—ಈ ಕೆಲಸಗಳನ್ನು ಅಗತ್ಯವಾಗಿ ಮಾಡಿಸಬಹುದು. ಇದಕ್ಕಾಗಿ ಬೇರೆ ಸ್ಯಾಂಕ್ಷನ್ ಮಾಡಬೇಕಾದ ಅಗತ್ಯವಿಲ್ಲ. ಹಿಂದೆ ಸ್ಯಾಂಕ್ಷನ್ ಮಾಡಿರುವ ೭೦,೦೦೦ ರೂಪಾಯಿನಲ್ಲಿ ಆವಶ್ಯವಾದಷ್ಟು ಹಣವನ್ನು ರೆವಿನ್ಯೂ ಕಮಿಷನರು ರೈತರಿಗೆ ಸಾಲವಾಗಿ ಕೊಡಿಸಬಹುದಾಗಿದೆ ಎಂಬದಾಗಿ ಹುಕುಂ ಕೊಟ್ಟಿರುತ್ತಾರೆ.

ಗೋಕಾಯಿಗಳು ಲಯವಾದದ್ದು.

ಮೈಸೂರು ಸಂಸ್ಥಾನದಲ್ಲಿ ೧೯೦೬–೦೭ನೇ ಸಾಲಿನಲ್ಲಿ ೧,೦೮,೧೬೧ ಪಶುಪ್ರಾಣಿಗಳು (ಅಂದರೆ, ಹಸು, ಎತ್ತು, ಹೋರಿ, ಎಮ್ಮೆಕೋಣ, ಎಮ್ಮೆ, ಕುರಿ ಮೇಕೆ, ಕುದುರೆ, ಕತ್ತೆ ಇವು) ಮೃತಪಟ್ಟವು. ಕಳೆದ ೧೯೦೭–೦೮ನೇ ಸಾಲಿನಲ್ಲಿ ೧,೩೧,೭೯೧ ಪ್ರಾಣಿಗಳು ಕಾಲವಾಗಿರುತ್ತವೆ. ಕಾಯಿಲೆ ರೋಗದಿಂದ ೮೮,೫೫೩ ಹಸು ಎತ್ತು ಎಮ್ಮೆಗಳು ಸತ್ತುಹೋದವು; ಅಂದರೆ, ಹಿಂದಿನ ಸಾಲಿಗಿಂತಲೂ ೫೨,೦೩೯ ರಾಸುಗಳು ಹೆಚ್ಚಾಗಿ ಮೃತಪಟ್ಟಿರುತ್ತವೆ. ಈ ಸಂಖ್ಯೆಗಳು ಸರಿಯಾದವುಗಳಲ್ಲವೆಂದೂ, ಇದಕ್ಕಿಂತಲೂ ಇನ್ನೂ ಹೆಚ್ಚಾಗಿಯೇ ಗೋಕಾಯಿಗಳು ಈ ಸಾಲಿನಲ್ಲಿ ಸತ್ತುಹೋಗಿರುವುದರಲ್ಲಿ ಸಂಶಯವಿಲ್ಲವೆಂದೂ ರೆವಿನ್ಯೂ ಕಮಿಷನರವರು ತಿಳಿಸುತ್ತಾರೆ. ಇದು ಗವರ್ನಮೆಂಟಿನವರಿಗೆ ತುಂಬಾ ವ್ಯಾಕುಲವನ್ನುಂಟುಮಾಡಿದೆ. ಪಶುವೈದ್ಯದ ಇಲಾಖೆಯನ್ನು ಈಚೆಗೆ ಏರ್ಪಾಡು ಮಾಡಿರೋಣದರಿಂದ ಈ ಇಲಾಖೆಯವರು ಪಶುಗಳ ರೋಗಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡಿ, ರೈತರಿಗೆ ಸಕಾಲದಲ್ಲಿ ಸರಿಯಾದ ಎಚ್ಚರಿಗೆ ಬುದ್ಧಿಮಾತುಗಳನ್ನು ಹೇಳಕೊಟ್ಟಾರೆಂದು ನಿರೀಕ್ಷಿಸಲ್ಪಟ್ಟಿದೆ. ಡೆಪ್ಯುಟಿ ಕಮಿಷನರುಗಳು ಗೋಕಾಯಿಗಳ ಸ್ಥಿತಿಗತಿ ವಿಷಯದಲ್ಲಿ ವಿಶೇಷವಾದ ಗಮನವನ್ನು ಕೊಡು

ಪದು ಸಹಜವೆಂದು ತೋರುತ್ತದೆ ೧೯೦೭ನೇ ಸಾಲಿನಲ್ಲಿ ಸಂಸ್ಥಾನದಲ್ಲಿ ಡಿಸ್ಟ್ರಿಕ್ಟುವಾರು ಪ್ರಾಣಗಳು ನಷ್ಟವಾಗಿರುವುದು ಎಷ್ಟೆಂದರೆ —

ಡಿಸ್ಟ್ರಿಕ್ಟು	ಕಾಯಿಲೆಗಳಿಂದ	ಮೃಗಗಳ ಕೈಸಿಕ್ಕಿ	ಅಚಾತುರ್ಯದಿಂದ	ಒಟ್ಟು
ಮಂಗಳೂರು	8,459	1,212	7,704	17,373
ಕೋಲಾರ	14,452	197	1,301	15,950
ತುಮಕೂರು	16,267	959	6,794	24,020
ಮೈಸೂರು	4,388	776	5,949	11,112
ಹಾಸನ	14,595	398	3,169	18,162
ಶಿವಮೊಗ್ಗ	15,535	4,09[illegible]	5,025	25,6[illegible]
ಕಡೂರು	10,589	810	2,821	14,220
ಚಿತ್ರದುರ್ಗ	4,269	356	2,674	7,299
ಒಟ್ಟು	88,751	7,812	3[illegible],406	1,31,791

ವಿದೇಶ ವರ್ತಮಾನಗಳು

ವಿಲಾಯಿತಿಯಲ್ಲಿರುವ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚನಾ ಸಭೆಗೆ ಸರ್ ಥಾಮಸ್ ರ್‍ಯಾಲೀ ಯವರನ್ನು ಮೆಂಬರಾಗಿ ನೇಮಕ ಮಾಡುವರೆಂದು ಪ್ರಕಟವಾಗಿದೆ

ಏಷ್ಯಾಮೈನರಿಗೆ ಸೇರಿದ ಸಿವಾಸ್ ಎಂಬ ಆಧಿಪತ್ಯದಲ್ಲಿ ಭೂಕಂಪವು ಪ್ರಾಪ್ತವಾಗಿ ೪೩೦ ಮನೆಗಳು ನಾಶವಾದವೆಂತಲೂ ೪೫೩ ಕಟ್ಟಡಗಳು ಕೆಲವು ಭಾಗ ಬಿದ್ದು ಹೋದವೆಂತಲೂ, ಆದರೆ ಅದು ಒಟ್ಟಾಗಿ ಪ್ರಾಣಹಾನಿಯಾಗಲಿಲ್ಲವೆಂತಲೂ ತಂತೀ ವರ್ತಮಾನ ಬಂದಿದೆ

ಸಯಾಂ ರಾಜ್ಯದ ಚಕ್ರವರ್ತಿಯವರು ತಮ್ಮ ರಾಜ್ಯಕ್ಕೆ ಸೇರಿದ ಕೆಲಾಂಟನ್ ಟ್ರಂಗನೂ ಕೇಡಾ ಎಂಬೀ ಪಟ್ಟಣಗಳನ್ನು ಇಂಗ್ಲಿಷರಿಗೆ ವಹಿಸಿಕೊಡುವವರಾಗಿರುವರೆಂತಲೂ ಈ ವಿಷಯದಲ್ಲಿ ಇಂಗ್ಲಿಷರಿಗೂ ಸಯಾಮಿನವರಿಗೂ ಒಂದು ಕರಾರು ಆಗುವುದರಲ್ಲಿದೆ ಎಂತಲೂ ತಿಳಿದು ಬಂದಿದೆ

ಉತ್ತರ ಅಮೆರಿಕದಲ್ಲಿ ಸೆಲ್ ನದಿಯ ಪಶ್ಚಿಮ ಪಾರ್ಶ್ವದಲ್ಲಿ ೨೫೦೦೦ ಪ್ರಜಾ ಸಂಖ್ಯೆಯುಳ್ಳ ಯೆಲ್ಲೋ ಎಂಬ ಊರಿನಲ್ಲಿ ಸ್ನೇಕ್ ನದಿಗೆ ಅಡ್ಡಲಾಗಿ ಭಾರೀ ಅಣೆಕಟ್ಟನ್ನು ಕಟ್ಟಿ ಪೂರೈಸಿದರು ಅದು ೬೦೦ ಅಡಿ ಉದ್ದವಾಗಿರುತ್ತದೆ ಅದರಿಂದ ನಾಲೆಗಳನ್ನು ತೆಗೆದು ಉದ್ದಕ್ಕೂ ತರೀ ಪಸಲು ಬೆಳೆಯುವಂತೆ ಮಾಡಿದ್ದಾರೆ

ನ್ಯೂಜೀಲಾಂಡ್ ಎಂಬ ಇಂಗ್ಲಿಷ್ ಸ್ವಾಸ್ಥ್ಯದ ಪೆಂಗ್ವಿನ್ ಎಂಬ ಹಡಗು ಸಮುದ್ರದಲ್ಲಿ ಕಳೆದ ವಾರ ಬಿರುಗಾಳಿಗೆ ಸಿಕ್ಕಿಬಿದ್ದು ಅನಾಹುತವಾಯಿತು ಅದರಲ್ಲಿ ಪ್ರಯಾಣಮಾಡುತ್ತಿದ್ದ ಸುಮಾರು ೧೮೦ ಮಂದಿಯ ಪೈಕಿ ಇಪ್ಪತ್ತಾರು ಜನರು ಮಾತ್ರ ದಡವನ್ನು ಸೇರಿದರೆಂತಲೂ, ಉಳಿದವರೆಲ್ಲಾ ಸಮುದ್ರದ ಪಾಲಾದರೆಂತಲೂ ತಂತೀ ವರ್ತಮಾನ ಬಂದಿದೆ

ಜರ್ಮನಿ ರಾಜ್ಯದಲ್ಲಿ ಗೌರವದಿಂದ ಜೀವನ ಮಾಡುವುದಕ್ಕೆ ಗತಿ ಇಲ್ಲದ ದಶಾ ದೊಡ್ಡ ಮನುಷ್ಯರಿಗೆ ಚಕ್ರವರ್ತಿಯವರು ಸ್ವಲ್ಪ ಸ್ವಲ್ಪ ಮೂಲಧನವನ್ನು ಕೊಟ್ಟು ತಮ್ಮ ಸ್ವಾಸ್ಥ್ಯವಾದ ಜರ್ಮನ್ ಆಫ್ರಿಕಕ್ಕೆ ಕಳುಹಿಸಲಾರಂಭಿಸಿದಾರೆ ಒಬ್ಬ ದೊಡ್ಡ ಮನುಷ್ಯನು ಅಲ್ಲಿ ಹೋಗಿ ನಿಂತು ಹಾಗುವೇಳೆ ಮುಂದಿನದ್ದು ಮಾಡಿಸುವುದಕ್ಕೆ ಚಕ್ರವರ್ತಿಯವರು ಆತನಿಗೆ ೯೭,೫೦೦ ರೂಪಾಯಿ ಕೊಟ್ಟರು

ವಿಲಾಯಿತಿಗೆ ಸೇರಿದ ಡರ್ಹಂ ಪಟ್ಟಣದ ವೆಸ್ಟ್ ಸ್ಟಾನ್ಲಿ ಎಂಬ ಕಲ್ಲಿದ್ದಲ ಗಣಿಯೊಳಗೆ ಬೆಂಕಿ ಹುಟ್ಟಿ ಮಹಾ ಶಬ್ದದೊಡನೆ ಸಿಡಿಯಿತು ಆ ಗಣಿಯೊಳಗೆ ಕೆಲಸ ಮಾಡುತ್ತಿದ್ದ ೨೩೦ ಜನರು ಮೇಲಕ್ಕೆ ಹತ್ತಿ ಬರಲು ಉರಿಯ ದೆಸೆಯಿಂದ ಸಾಧ್ಯವಾಗಲಿಲ್ಲ ಆ ಪ್ರಾಂತ್ಯದಲ್ಲಿರುವ ಜನರಿಗೆ ಈ ಅನಾಹುತವು ತುಂಬಾ ಗಾಬರಿಯನ್ನುಂಟುಮಾಡಿದೆ ೧೫೦ ಶವಗಳನ್ನು ಹೊರಕ್ಕೆ ತೆಗೆದರೆಂದು ವರ್ತಮಾನ ಬಂದಿದೆ

ರಾಜ್ಯಭಾರ ಕಾರ್ಯಗಳಲ್ಲಿ ಸ್ತ್ರೀಯರಿಗೂ ಗಂಡಸರಿಗಿರುವಂತೆ ಹಕ್ಕು ಸ್ವಾತಂತ್ರ್ಯಾದಿಗಳನ್ನು ಕೊಡಬೇಕೆಂದು ವಿಲಾಯಿತಿ ಮೊದಲಾದ ಪಶ್ಚಿಮ ರಾಜ್ಯಗಳಲ್ಲಿ ಹೆಂಗಸರು ಹೋರಾಡುತ್ತಿದ್ದಾರಷ್ಟೆ ಇನ್ನು ಸುಮಾರು ಎರಡು ತಿಂಗಳೊಳಗಾಗಿ ಲಂಡನ್ ಪಟ್ಟಣದಲ್ಲಿ ಸ್ತ್ರೀಯರ ಸಮಾಜವು ನಡೆಯುವುದಾಗಿದೆ ಆ ಸಮಾಜಕ್ಕೆ ಇಪ್ಪತ್ತೊಂದು ರಾಜ್ಯಗಳಿಂದ ಸ್ತ್ರೀ ಪ್ರತಿನಿಧಿಗಳು ಹೋಗಿ, ಉಪನ್ಯಾಸ ಮುಂತಾದವನ್ನು ನಡಿಸುವವರಾಗಿದ್ದಾರೆ

ಇಟಲಿ ರಾಜ್ಯಕ್ಕೆ ಸೇರಿದ ಮೆಸ್ಸೀನದಲ್ಲಿ ಭೂಕಂಪದ ದೆಸೆಯಿಂದಾದ ಅನಾಹುತವನ್ನೂ ಅಪಾರವಾದ ಕಷ್ಟನಷ್ಟಗಳನ್ನೂ ವಾಚಕರು ತಿಳಿದಿರುತ್ತಾರಷ್ಟೆ ಕಳೆದ ವಾರ ಮತ್ತೆ ಅದೇ ಪಟ್ಟಣದಲ್ಲಿ ಬಲವಾದ ಭೂಕಂಪವು ಪ್ರಾಪ್ತವಾಗಿ, ಮೊದಲನೆಯ ಭೂಕಂಪದ ಬಿರುಸನ್ನು ಕಳೆದು ಉಳುಕೊಂಡಿದ್ದ ಕಟ್ಟಡಗಳೆಲ್ಲಾ ಸಂಪೂರ್ಣವಾಗಿ ಬಿದ್ದುಹೋದವು ಸಿಸಿಲಿಯಲ್ಲೂ ದಕ್ಷಿಣ ಇಟಲಿಯಲ್ಲೂ ಭೂಮಿಯು ಒಂದೇ ಸಮನಾಗಿ ನಡುಗಿತು

ಜರ್ಮನಿ ರಾಜ್ಯದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಘಾತುಕರು ಒಂಟಿಗರಾಗಿ ಸಂಚರಿಸುವಂಥಾ ಸ್ತ್ರೀಯರನ್ನು ಚಾಕು ಮತ್ತು ಭರ್ಜಿಗಳಿಂದ ಇರಿದು ಗಾಯಮಾಡುತ್ತಿದ್ದಾರೆಂತಲೂ, ಇದುವರೆಗೆ ಸುಮಾರು ಇಪ್ಪತ್ತು ಮಂದಿ ಸ್ತ್ರೀಯರು ಈ ಕ್ರೂರ ಹಿಂಸೆಗೆ ಗುರಿಯಾಗಿ ಒಬ್ಬಿಬ್ಬರು ಮೃತಪಟ್ಟರೆಂತಲೂ, ಈ ವಿಚಾರವು ಆ ಪಟ್ಟಣದ ಒಳಗೂ ಹೊರಗೂ ಬಹು ವಿಶೇಷವಾದ ಆಗ್ರಹವನ್ನುಂಟುಮಾಡಿದೆ ಎಂತಲೂ ತಂತೀ ವರ್ತಮಾನ ಬಂದಿದೆ

ಟ್ರಾನ್ಸ್‌ವಾಲ್ ನಾಡಿನಿಂದ ಕಳೆದ ವರುಷ [illegible] ಪೌಂಡುಗಳ ಬೆಲೆ ಬಾಳುವ ಎಲ್ಲಾ ಬಗೆ ಮೊದಲಾದ ಲೋಹಗಳನ್ನು ಅಗೆದೆತ್ತಿದರು ಈ ಪೈಕಿ ಚಿನ್ನ [illegible] ಪೌಂಡು ಕಲ್ಲಿದ್ದಲು [illegible] ಪೌಂಡು ಬೆಳ್ಳಿ [illegible] ಪೌಂಡು, ವಜ್ರಗಳು [illegible] ಪೌಂಡು ಉಳಿದ ಲೋಹಗಳು [illegible] ಪೌಂಡು ಹಿಂದಿನ ವರುಷ ಉತ್ಪತ್ತಿ ಮಾಡಿದ್ದಕ್ಕಿಂತಲೂ ಈ ವರುಷದ ಲೋಹಗಳ ಬೆಲೆಯು [illegible] ಪೌಂಡು ಜಾಸ್ತಿಯಾಗಿರುತ್ತದೆ

ಫ್ರಾನ್ಸ್ ಸಂಸ್ಥಾನಕ್ಕೆ ಸೇರಿದ ಪಾರಿಸ್ ಎಂಬ ಪಟ್ಟಣದಲ್ಲಿ ಆಕಾಶ ವಿಮಾನಗಳನ್ನು ತಯಾರುಮಾಡುವ ಕುಶಲ ವಿದ್ಯೆಯನ್ನು ಕಲಿಸುವುದಕ್ಕೆ ಒಂದು ವಿದ್ಯಾಶಾಲೆಯು ಈಗತಾನೇ ಪ್ರಾರಂಭವಾಗಿದೆ ಬಹಳ ಚತುರರಾದ ಇಂಜನಿಯರುಗಳು ಹೋಗಿ ಆ ವಿದ್ಯಾಶಾಲೆಯಲ್ಲಿ ವಿದ್ಯಾರ್ಥಿಗಳಾಗಿ ಸೇರಿಕೊಂಡಿರುವರು ಫ್ರೆಂಚ್ ಸರ್ಕಾರದವರು ಈ ವಿದ್ಯಾಶಾಲೆಗೆ ಸ್ವಲ್ಪ ಮಟ್ಟಿಗೆ ದ್ರವ್ಯ ಸಹಾಯ ಮಾಡುತ್ತಾ ಪ್ರೋತ್ಸಾಹಪಡಿಸುತ್ತಾ ಬಂದಿರುವರು ಈಗ ೧೯೦ ಮಂದಿ ಇಂಜನಿಯರುಗಳು ಅಲ್ಲಿ ಕ್ರಮವಾಗಿ ಶಿಕ್ಷೆ ಹೊಂದುತ್ತಿದ್ದಾರೆ

ರಷ್ಯಾ ರಾಜ್ಯದಲ್ಲಿ ಆಕಾಶದಲ್ಲಿ ಸಂಚರಿಸುವಂಥಾ ಹಡಗುಗಳನ್ನು ತಯಾರುಮಾಡುವುದಕ್ಕೆ ಒಂದು ಕಂಪನಿಯು ಸ್ಥಾಪನೆಯಾಗಿದೆ ಈ ಕಂಪನಿಯ ಪ್ರತಿನಿಧಿಗಳು ರಷ್ಯಾ ರಾಜ್ಯದಲ್ಲೆಲ್ಲಾ ಸಂಚಾರಮಾಡಿ ಚಂದಾ ಮೊಬಲಗನ್ನು ವಸೂಲುಮಾಡಬಹುದೆಂದು ಚಕ್ರವರ್ತಿಯವರು ಅಪ್ಪಣೆಯನ್ನು ದಯಪಾಲಿಸಿರುತ್ತಾರೆ ಸಾಮಾನ್ಯ ಕಾಲದಲ್ಲಿ ಈ ಕಂಪನಿಯವರು ತಮ್ಮ ಹಡಗುಗಳನ್ನು ವ್ಯಾಪಾರ ಮೊದಲಾದ ಕಾರ್ಯಗಳಿಗೆ ವಿನಿಯೋಗಿಸಬಹುದೆಂದೂ, ಯುದ್ಧಕಾಲ ಪ್ರಾಪ್ತವಾದಾಗ್ಗೆ ಅವುಗಳನ್ನೆಲ್ಲಾ ಸೈನ್ಯದ ಇಲಾಖೆಗೆ ವಹಿಸಿಬಿಡಬೇಕೆಂದೂ ಚಕ್ರವರ್ತಿಯವರು ಅಭಿಪ್ರಾಯಪಟ್ಟಿದ್ದಾರೆ

ಮೆಕ್ಸಿಕೋ ರಾಜ್ಯಕ್ಕೆ ಸೇರಿದ ಅಕಪಲ್ಕೊ ಪಟ್ಟಣದಲ್ಲಿ ಒಂದು ನಾಟಕ ಶಾಲೆಯೊಳಗೆ ಸುಮಾರು ೧,೨೦೦ ಚಿಕ್ಕವರೂ ದೊಡ್ಡ ಮನುಷ್ಯರೂ ಸೇರಿ, ಮನಮೋಹನಾದಿ ವಿನೋದವನ್ನು ನೋಡುತ್ತಿದ್ದರು ಆಗ್ಗೆ ಅಕಸ್ಮಾತ್ತಾಗಿ ತೆರೆಯು ಅಂಟಿಕೊಂಡು ಉರಿಯು ಬಹು ಬೇಗನೆ ನಾಟಕಶಾಲೆಯನ್ನೆಲ್ಲಾ ಆವರಿಸಿಕೊಂಡಿತು ಬಾಗಿಲು ಬಹಳ ಇಕ್ಕಟ್ಟಾಗಿದ್ದುದರಿಂದಲೂ ಜನರು ಗಾಬರಿಯಿಂದ ಬಾಗಿಲ ಕಡೆಗೆ ನುಗ್ಗಿದ್ದರಿಂದಲೂ ತುಂಬಾ ಅನಾಹುತವಾಯಿತು ಅನೇಕರು ತುಳಿತಕ್ಕೆ ಸಿಕ್ಕಿಯೂ, ಬೆಂಕಿಯ ಜ್ವಾಲೆಯಲ್ಲಿ ಬಿದ್ದೂ ಮೃತಪಟ್ಟರು ಸುಮಾರು ೩೦೦—೩೫೦ ಜನರ ಪತ್ತೆ ಸಿಕ್ಕಿಲ್ಲ

ಚೀನಾ ರಾಜ್ಯದಿಂದ ಮೆ|| ತಂಗ್‌ಷಾವೋಯಿ ಎಂಬೊಬ್ಬ ದೊಡ್ಡ ಅಧಿಕಾರಿಯು ಲಂಡನ್ ಪಟ್ಟಣಕ್ಕೆ ಹೋಗಿರುತ್ತಾನೆ ಲಂಡನ್ ಪಟ್ಟಣದ ಬಿಷಪ್ ಎಂಬ ಮುಖ್ಯ ಗುರುವೂ ಕೆಲವು ದೊಡ್ಡ ಮನುಷ್ಯರೂ ಸೇರಿ ಆ ಚೀನಾ ಅಧಿಕಾರಿಯನ್ನು ಕಂಡು—ಚೀನೀಯವರು ಅಫೀಮು ವ್ಯಾಪಾರವನ್ನೂ ಅದರ ಸೇವನೆಯನ್ನೂ ಚೀನಾದಲ್ಲಿ ಕಡಮೆ ಮಾಡುವುದಕ್ಕೋಸ್ಕರ ಸಾಹಸಪಡುತ್ತಿರುವುದು ತುಂಬಾ ಸಂತೋಷಕರವಾಗಿದೆ ಎಂದೂ, ಇದರಿಂದ ಚೀನೀಯವರ ಅಭಿವೃದ್ಧಿಯು ಸ್ಥಿರಪಡುವುದಕ್ಕೆ ತುಂಬಾ ಸಹಾಯವಾಯಿತೆಂತಲೂ ಹೇಳಿದರು ಅದಕ್ಕೆ ಚೀನಾ ಅಧಿಕಾರಿಯು ಸಮಯೋಚಿತವಾದ ಉತ್ತರವನ್ನು ಕೊಟ್ಟು, ಅವರನ್ನು ವಂದಿಸಿದನು

ಪರ್ಷಿಯಾ ದೇಶದ ಪಶ್ಚಿಮ ಪ್ರಾಂತವಾದ ಲೂರಿಸ್ಟಾನ್ ಎಂಬ ಪರ್ವತ ಪ್ರದೇಶದಲ್ಲಿ ಹಿಂದಿನ ವಾರ ಬಹು ಬಲವಾದ ಭೂಕಂಪ ಪ್ರಾಪ್ತವಾಯಿತು ಗ್ರಾಮಾಂತರಗಳಲ್ಲಿ ಜನರು ಬಹುಶಃ ವಾಸಮಾಡುವುದಿಲ್ಲ ಆದರೂ ಅರವತ್ತು ಗ್ರಾಮಗಳು ಭೂಕಂಪಕ್ಕೆ ಸಿಕ್ಕಿ ನಾಶ ಹೊಂದಿದವು ಕೆಲವು ಗ್ರಾಮಗಳು ಅನಾಮತ್ತಾಗಿ ಭೂಮಿಯೊಳಗೆ ಹುಗಿಲ್ಪಟ್ಟು ಅದೃಶ್ಯವಾದವು ಪಡಾವು ಸಹಿತ ಪ್ರಜೆಗಳೂ, ಎರಡುಸಾವಿರ ಗೋಕಾಯಿಗಳೂ ಬಲಿಯಾದವು ಬದುಕಿಕೊಂಡು ಕಷ್ಟಕ್ಕೆ ಸಿಕ್ಕಿದ ಪ್ರಜೆಗಳು ಬುರುಜಿರ್ದ್ ಎಂಬ ಊರಿಗೆ ಹೋಗಿ ಸೇರಿ, ಗವರ್ನಮೆಂಟಿನವರ ಪೋಷಣೆ ಸಹಾಯಾದಿಗಳನ್ನು ಅಪೇಕ್ಷಿಸುತ್ತಾರೆ ಅತ್ತ ಏಷ್ಯಾ ಸ್ಮರ್ನಾ ಎಂಬ ಪಟ್ಟಣದಲ್ಲಿ ಭೂಮಿಯು ಬಲವಾಗಿ ಕಂಪಿಸಿತು ಹಿಂದಿನಂತೆ ಅನೇಕ ಮನೆಗಳು ಕಳಚಿ ಬಿದ್ದವು ಆದರೆ ಪ್ರಾಣನಷ್ಟವೇನೂ ಆಗಿಲ್ಲವೆಂದು ತಿಳಿದು ಬಂದಿದೆ ಪೋರ್ಟೋರಿಕೋದಲ್ಲೂ ಭೂಮಿಯು ಬಲವಾಗಿ ನಡುಗಿತು ಆದರೆ ಅಷ್ಟೇನೂ ವಿಶೇಷ ನಷ್ಟ ಸಂಭವಿಸಲಿಲ್ಲ

ಪರ್ಷಿಯಾ ರಾಜ್ಯದಲ್ಲಿ ರಾಜಕೀಯವಾದ ಕಲಹಗಳೂ ಕಾದಾಟಗಳೂ ಇನ್ನೂ ಶಮನವಾಗಲಿಲ್ಲ ಅನೇಕ ಕಡೆಗಳಲ್ಲಿ ಪ್ರಜಾ ನೆಮ್ಮದಿಗೆ ಭಂಗವುಂಟಾಗಿ, ರಾಜಪಕ್ಷದವರಿಗೂ ಪ್ರಜಾಪಕ್ಷದವರಿಗೂ ಕದನಗಳಾಗುವುದರಲ್ಲೇ ಇದೆ ಎಸ್ಟ್ ಎಂಬ ಪಟ್ಟಣದಲ್ಲಿ ಛಾಸ್ತಿಯಾಗಿ ಮಹಮದೀಯರ ಹಿಂಸೆಯನ್ನು ತಡೆಯಲಾರದೆ ಸುಮಾರು ೧೦೦ ಮಂದಿ ಪಾರ್ಸಿಗಳು ಹೆಂಗಸರು ಮಕ್ಕಳ ಸಹಿತ ಮನೆಮಠಗಳನ್ನು ಬಿಟ್ಟು ಹೋಗಿ ಇಂಗ್ಲಿಷ್ ರಾಯಭಾರಿಯ ಆಶ್ರಯದಲ್ಲಿ ಸೇರಿಕೊಂಡಿದ್ದಾರೆ ಅತ್ತಲಾಗಿ ರೆಷ್ಟ್ ಎಂಬ ಪ್ರಾಂತ್ಯದಲ್ಲಿ ಗಲಭೆಯನ್ನು ಅಡಗಿಸುವುದಕ್ಕೆ ಸರ್ಕಾರದ ಎರಡು ರೆಜಿಮೆಂಟು ಸೈನ್ಯಗಳೂ ಫಿರಂಗಿಗಳೂ ರವಾನೆ ಮಾಡಲ್ಪಟ್ಟವು ಈಚೆಗೆ ರಾಜಧಾನಿಯಾದ ಟೆಹರಾನ್ ಪಟ್ಟಣದಲ್ಲಿ ಪ್ರಜಾ ನೆಮ್ಮದಿಗೆ ಭಂಗವುಂಟಾಗುವಂಥಾ ಕ್ರೂರ ಕೃತ್ಯಗಳೂ ಅಕ್ರಮ ಕಾರ್ಯಗಳೂ ನಡೆಯುವವೆಂದು ಗಾಬರಿಯುಂಟಾಗಿದೆ ಪರರಾಜ್ಯಗಳ ರಾಯಭಾರಿಗಳು ತಮ್ಮ ಪೋಷಣೆಗೆ ಸೇರಿದ ಜನರನ್ನು ಎಚ್ಚರಿಸಿರುತ್ತಾರೆಂದು ತಂತೀ ವರ್ತಮಾನ ಬಂದಿದೆ

ದಕ್ಷಿಣ ಆಫ್ರಿಕದಲ್ಲಿರುವ ಇಂಡಿಯಾ ದೇಶದ ಪ್ರಜೆಗಳ ಮಹಾ ಸಭೆಯ ಪ್ರೆಸಿಡೆಂಟಾಗಿದ್ದ ಮೆ|| ದಾವೂದ್ ಎಂಬಾತನನ್ನೂ ಮೆ|| ಚಿಕ್ಕಗಂಧಿಯನ್ನೂ ಅಲ್ಲಿನ ಸರ್ಕಾರದವರು ದರ್ಯಾಪ್ತಿಮಾಡಿ ತಲಾ ಆರು ತಿಂಗಳ ಸಜಾ ವಿಧಿಸಿದರು ಎಂಟು ಮಂದಿ ಇಂಡಿಯಾದವರಿಗೆ ತಲಾ ಆರು ತಿಂಗಳ ಕಠಿಣ ಸಜವೂ, ಇನ್ನೇಳು ಜನರಿಗೆ ಮೂರು ತಿಂಗಳ ಕಠಿಣ ಸಜವೂ ವಿಧಿಸಲ್ಪಟ್ಟವು ಅಲ್ಲಿನ ಸರ್ಕಾರದವರು ಇವರನ್ನೆಲ್ಲಾ ಅಲ್ಲಿಂದ ಹೊರಕ್ಕೆ ಕಳುಹಿಸಿದ್ದರು ಇವರೆಲ್ಲಾ ಅವರ ಹುಕುಮನ್ನು ಉಲ್ಲಂಘನೆ ಮಾಡಿ ಮತ್ತೆ ಕೇಪ್ ಕಾಲನಿಗೆ ಹೋಗಿ ಸೇರಿಕೊಂಡಿದ್ದರು ಆದಕಾರಣ ಸರ್ಕಾರದವರು ಈಗ ಅವರನ್ನು ಹಿಡಿದು ದರ್ಯಾಪ್ತಿ [illegible] ಶಿಕ್ಷಿಸಿರುತ್ತಾರೆ ನೇಟಾಲ್ ಇಂಡಿಯನ್ ಜನರ ಮಹಾ ಸಭೆಯ ಪ್ರೆಸಿಡೆಂಟರನ್ನು ಅಲ್ಲಿಂದ ಗಡೀಪಾರು ಮಾಡಿಬಿಟ್ಟರು ಅತ್ತಲಾಗಿ ಜೋಹಾನಸ್‌ಬರ್ಗಿನಲ್ಲಿರುವ ಏಷ್ಯಾ ಜನರ ಪೈಕಿ ಅರವಾಸಿ ಪ್ರಜೆಗಳು ಸರ್ಕಾರದಲ್ಲಿ ತಮ್ಮ ಹೆಸರು, ವಾಸಸ್ಥಳ, ಕಸಬು ಮುಂತಾದ್ದನ್ನು ಹೇಳಿ ಬರೆಯಿಸುತ್ತಾ ಬಂದಿದ್ದಾರೆ

ದಕ್ಷಿಣ ಆಫ್ರಿಕವನ್ನೆಲ್ಲಾ ಒಟ್ಟು ಕೂಡಿಸಿ ಒಂದೇ ಬ್ರಿಟಿಷ್ ಸ್ವಾಸ್ಥ್ಯವಾಗಿ ಮಾಡಬೇಕೆಂದು ಆಲೋಚನೆ ನಡೆದಿರುತ್ತದೆ ಒಂದು ಗವರ್ನಮೆಂಟು ಏರ್ಪಾಡಾಗುವುದು ಅದನ್ನು ಆಳುವುದಕ್ಕೆ ಒಬ್ಬ ಗವರ್ನರ್ ಜನರಲ್ ನೇಮಕವಾಗುವನು ಈತನ ಸಹಾಯಕ್ಕೆ ಸೆನೆಟ್ ಮತ್ತು ಹೌಸ್ ಆಫ್ ಅಸೆಂಬ್ಲಿ ಎಂಬೀ ಎರಡು ಮಂತ್ರಾಲೋಚನಾ ಸಭೆಗಳು ನಿರ್ಮಾಣವಾಗುತ್ತದೆ ಈಗಿರುವ ಕೇಪ್ ಕಾಲನಿ, ನೆಟಾಲ್, ಆರೆಂಜ್ ನದೀ ಸ್ವಾಸ್ಥ್ಯ, ಟ್ರಾನ್ಸ್‌ವಾಲ್ ಎಂಬೀ ವಿಭಾಗಗಳು ಹಿಂದುಸ್ಥಾನದಲ್ಲಿರುವಂತೆ ಆಧಿಪತ್ಯಗಳಾಗಿ ಗವರ್ನರ್ ಜನರಲ್ಲಿನ ಆಳ್ವಿಕೆಗೆ ಬರುವವು ಪ್ರತಿ ಒಂದು ಆಧಿಪತ್ಯವನ್ನೂ ಒಬ್ಬ ಗವರ್ನರು ಆಳುತ್ತಾನೆ ಈತನ ಸಹಾಯಕ್ಕೆ ಒಂದು ಸಭೆಯು ಏರ್ಪಾಡಾಗುವುದು ಈ ಸಭೆಯ ಮೆಂಬರುಗಳು ಅಲ್ಲಿನ ಪ್ರಜೆಗಳಿಂದ ಚುನಾಯಿಸಲ್ಪಡುವರು ಡಚ್ ಮತ್ತು ಇಂಗ್ಲಿಷ್ ಭಾಷೆಗಳು ಸರ್ಕಾರಿ ಭಾಷೆಗಳಾಗುವವು ಪ್ರಿಟೋರಿಯಾ, ಜೋಹಾನಸ್‌ಬರ್ಗ್, ಕೇಪ್ ಟೌನ್, ಈ ಮೂರರ ಪೈಕಿ ಒಂದು ಪಟ್ಟಣದಲ್ಲಿ ಗವರ್ನರ್ ಜನರಲ್ ಎಂಬ ಅಧಿಪತಿಯು ದಕ್ಷಿಣ ಆಫ್ರಿಕಾ ಎಂಬ ಸ್ವಾಸ್ಥ್ಯದ ಗವರ್ನಮೆಂಟನ್ನು ಸ್ಥಾಪಿಸಿ ಆಳುತ್ತಾ ಬರುವನು

ಇಂಡಿಯಾ ದೇಶದ ವೃತ್ತಾಂತಗಳು

ಕಾಶ್ಮೀರದ ಮಹಾರಾಜರವರು ಕಾಶೀ ಪಟ್ಟಣಕ್ಕೆ ಹೋಗಿ ಗಂಗಾಸ್ನಾನಾದಿಗಳನ್ನು ಮಾಡುತ್ತಿದ್ದಾರೆ

ಮುಜಫರ್‌ಪುರದಲ್ಲಿ ಕಳೆದ ವಾರ ಒಂದು ದಿನ ಸಮರಾತ್ರಿಯಲ್ಲಿ ೪೫ ಸೆಕೆಂಡುಗಳ (ಸುಮಾರು ಅರ್ಧ ನಿಮಿಷದ) ತನಕ ಬಲವಾಗಿ ಭೂಮಿಯು ಕಂಪಿಸಿತು

ಮೆ|| ಬಾಲ ಗಂಗಾಧರ ತಿಲಕರವರಿಗೆ ಶಿಕ್ಷೆಯಾದ ಮೊಕದ್ದಮೆಯನ್ನು ಅವರ ಹಿತ ಚಿಂತಕರು ವಿಲಾಯಿತಿಯಲ್ಲಿರುವ ಪ್ರಿವಿ ಕೌನ್ಸಿಲ್ ಎಂಬ ಕೋರ್ಟಿನಲ್ಲಿ ಅಪೀಲು ಮಾಡಿಸಿರುತ್ತಾರೆಂದು ತಿಳಿದುಬಂದಿದೆ

ಢಾಕಾ ನಗರದಲ್ಲಿ ಬಾಬು ರಸಿಕಚಂದ್ರ ಚಕ್ರವರ್ತಿ ಎಂಬೊಬ್ಬ ವಕೀಲನು ತನ್ನ ಬಳಿ ಇದ್ದ ಒಬ್ಬ ಯುರಸೂಜಾತಿಯ ಸೇವಕನನ್ನು ಕೊಂದುಹಾಕಿದನೆಂದು ಮೊಕದ್ದಮೆ ಆಗಿ ಡಿಸ್ಟ್ರಿಕ್ಟ್ ಜಡ್ಜರು ಆತನನ್ನು ಜಾಮೀನಿನ ಮೇಲೆ ಬಿಟ್ಟಿರುತ್ತಾರೆ

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ಮೂವತ್ತೈದು ವರುಷಗಳಿಂದ ವೈದ್ಯ ಮಾಡುತ್ತಾ ತುಂಬಾ ಪ್ರಸಿದ್ಧಿಯನ್ನು ಹೊಂದಿದ ಕವಿರಾಜ ದ್ವಾರಕಾನಾಥ ಸೇನ ಎಂಬ ಬಂಗಾಳಿ ದೊಡ್ಡ ಮನುಷ್ಯನು ಕಳೆದ ವಾರ ಕಾಲವಾದನೆಂದು ಪ್ರಕಟವಾಗಿದೆ

ಕೊಯಮುತ್ತೂರು ಜಿಲ್ಲೆಗೆ ಸೇರಿದ ತಿರುಪೂರಿನಲ್ಲಿ ಸುಬ್ರಹ್ಮಣ್ಯಪಿಳ್ಳೆ ಎಂಬುವನ ಮನೆಯಲ್ಲಿ ಖೋಟಾ ನಾಣ್ಯಗಳೂ, ಅವುಗಳ ತಯಾರಿಗೆ ಬೇಕಾದ ಸಾಮಾನೂ ಸಿಕ್ಕಿದ್ದರಿಂದ ಅವನಿಗೆ ಸೆಷನ್ಸ್ ಜಡ್ಜರು ಒಂದು ವರುಷ ಕಠಿಣ ಸಜಾ ವಿಧಿಸಿದರು

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಸಾಕ್ಲಿಗುಡ್ಡವೆಂಬ ರೈಲ್ ಸ್ಟೇಷನ್ನಲ್ಲಿ ಒಬ್ಬ ರೈಲ್ವೆ ನೌಕರನ ಮನೆಗೆ ಸಮರಾತ್ರಿಯಲ್ಲಿ ಹನ್ನೆರಡು ಮಂದಿ ಕಳ್ಳರು ನುಗ್ಗಿ ಮನೆಯವನನ್ನು ಹೊಡೆದು ಗಾಯಮಾಡಿ, ಸಾವಿರಾರು ರೂಪಾಯಿನ ನಗನಾಣ್ಯಗಳನ್ನು ಎತ್ತಿಕೊಂಡು ಹೋದರು ಈಗ ಆ ಜನರೆಲ್ಲಾ ಮಾಲ್ ಸಮೇತ ಸಿಕ್ಕಿಬಿದ್ದಿದ್ದಾರೆ

ಹಿಂದೂಸ್ಥಾನದಲ್ಲಿ ರಾಜಾದಾಯವು ತೃಪ್ತಿಕರವಾಗಿದ್ದ ಪಕ್ಷದಲ್ಲಿ ಇನ್ನು ಮುಂದೆ ಪ್ರತಿ ವರುಷವೂ ಒಂದು ಕೋಟಿ ರೂಪಾಯಿನಂತೆ ಖರ್ಚುಮಾಡಿ, ನೀರಾವರಿ ಕಾಮಗಾರಿಗಳನ್ನು ಮಾಡಿಸುತ್ತಾ ಬರಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸ್ಯಾಂಕ್ಷನ್ ಮಾಡಿದಾರೆ ಇದುವರೆಗೆ ಸಾಲ್ ೧ಕ್ಕೆ ೭೫ ಲಕ್ಷ ರೂಪಾಯಿನಂತೆ ಈ ಬಾಬಿಗೆ ವಿನಿಯೋಗಿಸುತ್ತಿದ್ದರು

ಆದಿವೇಸಿಯ ತಹಶೀಲ್ದಾರರ ಶವವು ಒಂದು ಹಾಳುಬಾವಿಯಲ್ಲಿ ಸಿಕ್ಕಿತೆಂದು ತಿಳಿಸಿದೆವಷ್ಟೆ ಪಂಚಾಯಿತರು ಮಹಜರಿನಲ್ಲಿ ಅವರು ಆತ್ಮಹತ್ಯ ಮಾಡಿಕೊಂಡರೆಂದು ಅಭಿಪ್ರಾಯ ಪಟ್ಟಿದಾರೆ ಆದರೆ ಆ ಪ್ರಾಂತ್ಯದಲ್ಲೆಲ್ಲಾ ಜನರು ಈ ಅಕಾಲ ಮರಣದ ವಿಷಯವಾಗಿ ಗುಸುಗುಸುಪಡುತ್ತಿರುವುದರಿಂದ ಸರ್ಕಾರದವರು ಅವರನ್ನು ಯಾರಾದರೂ ಕೊಂದುಹಾಕಿರಬಹುದೇ ಎಂದು ಅನುಮಾನಪಟ್ಟು ತನಿಖೆ ಮಾಡಿಸುತ್ತಿದ್ದಾರೆ

ಬಂಗಾಳಾ ಆಧಿಪತ್ಯದಲ್ಲಿ ಸರ್ಕಾರದವರು ಬಾಬು ಕೃಷ್ಣಕುಮಾರ ಮಿತ್ರ ಎಂಬಾತನನ್ನು ಗಡೀಪಾರು ಮಾಡಿರುತ್ತಾರಷ್ಟೆ ಆತನಿಗೆ ಕ್ಷಮಾಪಣೆಯನ್ನು ಕೊಟ್ಟು, ಆತನನ್ನು ವಾಪಸು ಕರೆಸಿಕೊಳ್ಳಬೇಕೆಂದು ಕೇಳಿಕೊಳ್ಳುವುದಕ್ಕಾಗಿ ಬಾಬು ಸುರೇಂದ್ರನಾಥ ಬಾನರ್ಜಿ, ಮೋತಿಲಾಲ್ ಘೋಷ್, ರಾಜಾ ವಿನಯ ಕೃಷ್ಣದೇವ ಎಂಬೀ ದೊಡ್ಡ ಮನುಷ್ಯರು ಲೆಫ್ಟಿನೆಂಟ್ ಗವರ್ನರವರ ಬಳಿಗೆ ಹೋಗಿ ಬಂದರೆಂದು ತಿಳಿಯುವುದು

ಕೊಲ್ಹಾಪುರ ಸಂಸ್ಥಾನದಲ್ಲಿ ಸಿಡಿಮದ್ದಿನ ಗುಂಡುಗಳನ್ನು ಮಾಡಿ ಅಧಿಕಾರಿಗಳನ್ನು ಕೊಲ್ಲಬೇಕೆಂದು ಪ್ರಯತ್ನಮಾಡಿದ್ದಕ್ಕಾಗಿ ಬಾಪಟ್ಟು ಮತ್ತು ಗೋಖಲೆ ಎಂಬಿಬ್ಬರನ್ನು ಹಿಡಿದು ದರ್ಯಾಪ್ತಿ ಮಾಡಿದಲ್ಲಿ ಮೊದಲನೇ ಅಪರಾಧಿಗೆ ಏಳು ವರುಷ ಕಠಿಣ ಸಜಾ ೧,೦೦೦ ರೂಪಾಯಿ ಜುಲ್ಮಾನೆ, ಜುಲ್ಮಾನೆ ಕೊಡ

ದಿದ್ದರೆ ಇನ್ನೂ ಒಂಬತ್ತು ತಿಂಗಳ ಸಜಾ ವಿಧಿಸಿದರು. ಎರಡನೆಯ ಆಪಾದಿತನಿಗೆ ಎರಡು ವರುಷಗಳ ಕಠಿಣ ಸಜಾ ಆಯಿತು. ಉಳಿದ ಇಬ್ಬರನ್ನು ಖುಲಾಸ್ ಮಾಡಿರುತ್ತಾರೆ.

•

ಆಗ್ರಾ ಪಟ್ಟಣದಲ್ಲಿರುವ ಲೋಕಪ್ರಸಿದ್ಧವಾದ ತಾಜ್ ಮಹಲ್ ಎಂಬ ಮುಸಲ್ಮಾನರ ಕಟ್ಟಡದೊಳಗೆ ಮುಂತಾಜ್ ಮಹಲ್ ಎಂಬ ಗೋರಿಯ ಮೇಲ್ಭಾಗದಲ್ಲಿ ಕಳೆದ ವಾರ ಬಹು ಶ್ರೇಷ್ಠವಾದ ದೀಪವನ್ನು ಕಟ್ಟಿದರು. ಹಿಂದೆ ವೈಸ್‌ರಾಯರಾಗಿದ್ದ ಲಾರ್ಡ್ ಕರ್ಜನ್‌ರವರು ಈ ಲಾಂದನ್ನು ಈಜಿಪ್ಟ್ ರಾಜ್ಯದಲ್ಲಿ ಬಹು ಸುಂದರವಾಗಿ ಮಾಡಿಸಿ ಉಚಿತವಾಗಿ ಕಳುಹಿಸಿ ಕೊಟ್ಟರು. ಅದನ್ನು ತಯಾರುಮಾಡುವುದಕ್ಕೆ ಸುಮಾರು ಐದು ಸಾವಿರ ರೂಪಾಯಿ ಖರ್ಚಾಯಿತೆಂದು ತಿಳಿಯುವುದು.

•

ಗೋದಾವರಿ ಡಿಸ್ಟ್ರಿಕ್ಟಿಗೆ ಸೇರಿದ ಪೋಲವೇರು ಎಂಬ ಊರಿನಲ್ಲಿ ಇಬ್ಬರು ಪೋಲೀಸಿನವರೂ ಇನ್ನೊಬ್ಬನೂ ಸೇರಿಕೊಂಡು, ಅಂಚೆ ವಸ್ತುಗಳನ್ನು ತಗೆದುಕೊಂಡು ಹೋಗುತ್ತಿದ್ದ ಪೋಸ್ಟ್ ಜವಾನನ್ನು ಹಿಡಿದು ಹೊಡೆದು ಕೊಂದುಹಾಕಿ, ವಸ್ತುಗಳನ್ನು ಅಪಹರಿಸಿದರು. ಆ ಪೈಕಿ ಒಬ್ಬ ಪೋಲೀಸಿನವನು ತನ್ನ ಕೃತ್ಯವು ಪತ್ತೆ ಆಯಿತೆಂದು ತಿಳಿದು, ಮನೆಯಲ್ಲಿ ತನ್ನ ಹೆಂಡತಿಯನ್ನು ಕೊಂದುಹಾಕಿ, ತಾನೂ ಆತ್ಮಹತ್ಯಮಾಡಿಕೊಂಡನು. ಇನ್ನೊಬ್ಬ ಪೋಲೀಸಿನವನೂ ಅವನ ಸಹಾಯಕನೂ ಈಗ ಸಿಕ್ಕಿಬಿದ್ದಿದ್ದಾರೆ.

•

ಕಲ್ಕತ್ತೆಯ ಪೋಲೀಸಿನವರು ಕಳೆದವಾರ ಒಂದು ದಿನ ಬೆಳಗಿನ ಝಾವದಲ್ಲಿ ಹೊತ್ತು ಮನುಷ್ಯರಾದ ಇಬ್ಬರು ಬಂಗಾಳಿಗಳ ಮನೆಗಳಿಗೆ ನುಗ್ಗಿ ಶೋಧನೆ ಮಾಡಿದರು. ಕೆಲವು ಕಾಗದ ಪತ್ರಗಳು ಸಿಕ್ಕಿರುತ್ತವೆ. ಇದಲ್ಲದೆ ಒಬ್ಬ ಬ್ಯಾರಿಸ್ಟರ್ ಸೇವಕನು ಒಳ್ಳೆಗಂಜನ ಒಂದು ಕೊಳವಿನಲ್ಲಿ [illegible] ಸಿಕ್ಕಿದವೆಂದು ಹೇಳಿ ಕೆಲವು ರಿವಾಲ್ವರ್ ಎಂಬ ಪಿಸ್ತೂಲುಗಳನ್ನು ಪೋಲೀಸಿನವರಿಗೆ ತಂದೊಪ್ಪಿಸಿದನು. ಆದರೆ ಅವನು ಕೊಟ್ಟ ಸಮಾಧಾನವು ತೃಪ್ತಿಕರವಾಗಿರಲಿಲ್ಲವಾದದರಿಂದ ಪೋಲೀಸಿನವರು ಅವನನ್ನು ಹಿಡಿದು ಇಟ್ಟುಕೊಂಡು, ಪತ್ತೆದಾರನು ನಡೆಸುತ್ತಿದ್ದಾರೆ.

•

ಗಯಾ ಪಟ್ಟಣದಲ್ಲಿರುವ ಬೋಧಿ ವಿಹಾರವೆಂಬ ಕ್ಷೇತ್ರದ ವಿಷಯವಾಗಿ ಅಲ್ಲಿನ ಹಿಂದೂ ಮಹಂತರಿಗೂ ಬೌದ್ಧ ಮತದ ಸುಮಂಗಲ ಧರ್ಮಪಾಲರಿಗೂ ವ್ಯಾಜ್ಯ ಹುಟ್ಟಿ, ಹೈಕೋರ್ಟ್ ಜಡ್ಜಿಯವರು ಮಹಂತರ ಪರವಾಗಿ ತೀರ್ಮಾನ ಮಾಡಿದರು. ಈ ವಿಚಾರವು ಬರ್ಮಾ ದೇಶಕ್ಕೆ ತಿಳಿಯಿತು. ಅಲ್ಲಿ ಬೌದ್ಧ ಮಹಾಜನರು ಸುಮಾರು ಎರಡು ಸಾವಿರ ಮಂದಿ ಸೇರಿ ಸಭೆಯನ್ನು ನಡಿಸಿ, ಮೊದಲಿನ ತೀರ್ಮಾನವು ತೃಪ್ತಿಕರವಾಗಿಲ್ಲವೆಂದೂ ಅದರ ಮೇಲೆ ಅಪೀಲ್ ಮಾಡಬೇಕೆಂದೂ ಗೊತ್ತುಮಾಡಿದರು. ಈ ಖರ್ಚಿಗೆ [illegible] ರೂಪಾಯಿ ಚಂದಾ ಕೂಡಿಸಿರುತ್ತಾರೆ.

•

ಪೂನಾ [illegible] ಮತ್ತು [illegible] ಹೊಸ ಅಫೀಸಿನಲ್ಲಿ ಬಾರತಿ ಪೂನಾ ವರೆಗೆ ಇರುವ ಕೊತ್ತ ರೈಲ್ ರಸ್ತೆ ಇರುವ ಪ್ರಾಂತ್ಯದಲ್ಲಿ ರೈಲು ರಸ್ತೆಯ ಉಭಯ ಪಾರ್ಶ್ವಗಳಲ್ಲೂ ಒಂದು ಮೈಲಿ ದೂರದೊಳಗೆ ಸೇರಿದ ಗ್ರಾಮಾಂತರಗಳಿಗೆ ಶಿಕ್ಷಾ ಫಲವಾದ ಪ್ಯೂನಿಟಿವ್ ಪೋಲೀಸ್ ಠಾಣೆಯನ್ನು ನೇಮಿಸಬೇಕೆಂತಲೂ ಇದರ ಸಂಬಳವನ್ನು ಆ ಗ್ರಾಮಗಳ ಜನರು ಕೊಡಬೇಕೆಂತಲೂ, ಈ ಪೋಲೀಸಿನವರು ರೈಲ್ ರಸ್ತೆಯ ಉದ್ದಕ್ಕೂ [illegible] ಗಂಟೆಯಿಂದ ಬೆಳಗು ಹರಿಯುವ ತನಕ ಪಹರೆ ಕೊಡುತ್ತಾ, ರೈಲ್ ಗಾಡಿಗಳಿಗೆ ಯಾವ ಅಪಾಯವೂ ಸಂಭವಿಸದಂತೆ ನೋಡಿಕೊಳ್ಳಬೇಕೆಂತಲೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

•

ಕಲ್ಕತ್ತೆಯಲ್ಲಿ ಒಬ್ಬ ಮುಸಲ್ಮಾನ ಕಸಾಬರವನು ಕೊಯ್ಯುವುದಕ್ಕಾಗಿ ಎರಡು ಹಸುಗಳನ್ನು ಕೊಂಡುಕೊಂಡು, ಕಸಾಬಖಾನೆಗೆ ಅಟ್ಟಿಕೊಂಡು ಹೋಗುತ್ತಿದ್ದಾಗ ಅವು ತಪ್ಪಿಸಿಕೊಂಡು ಒಬ್ಬ ಬಾಬುವಿನ ಮನೆಯೊಳಕ್ಕೆ ಓಡಿಹೋದವು. ಮನೆಯವರೂ ಇತರ ಹಿಂದುಗಳೂ ಸೇರಿ ಆ ಮುಸಲ್ಮಾನನು ಅವೆರಡನ್ನೂ ಕೊಲ್ಲುತ್ತಾನೆಂದು ತಿಳಿದು ಕಟ್ಟಿ ಹಾಕಿದರು. ಅಲ್ಲಿ ಬಹಳ ದೊಂಬಿ ನಡೆಯಿತು. ಈ ವಿಚಾರವು ಪೋಲೀಸ್ ಕಮಿಷನರಿಗೆ ತಿಳಿದು, ಅವರು ಮಹಮ್ಮದೀಯರನ್ನೂ ಹಿಂದುಗಳನ್ನೂ ಕರೆಸಿಕೊಂಡು ವಿಚಾರಣೆ ಮಾಡಿದಾಗ ಹಿಂದುಗಳು ಆ ಹಸುಗಳನ್ನು ಇಟ್ಟುಕೊಳ್ಳುವುದಾಗಿಯೂ ಆ ಮುಸಲ್ಮಾನನಿಗೆ ೧೨೦ ರೂಪಾಯಿ ಪ್ರತಿಫಲ ಕೊಡುವುದಾಗಿಯೂ ಹೇಳಿ ಒಪ್ಪಿಕೊಂಡು, ಆ ರೀತಿ ಪಾವತಿ ಮಾಡಿದರು. ಆ ಮುಸಲ್ಮಾನನು ತಾನು ಅವುಗಳಿಗೆ ಕೊಟ್ಟಿದ್ದ ಹಣಕ್ಕಿಂತ ತುಂಬಾ ಹೆಚ್ಚಾಗಿ ಸಿಕ್ಕಿದ್ದರಿಂದ ಸಂತೋಷಪಟ್ಟುಕೊಂಡು ಹೊರಟುಹೋದನು.

•

ಬೊಂಬಾಯಿ ಪಟ್ಟಣದಲ್ಲಿ ಹೋರಿ ಬಂದರ್ ಎಂಬ ರೈಲ್ವೆ ಸ್ಟೇಷನು ಬಹಳ ಅಮರು ಅಷ್ಟು ಉಳ್ಳದ್ದಾಗಿದೆ. ಹೈದರಾಬಾದ್ ಸಂಸ್ಥಾನದ ನೈಜಾಮರವರು ಕಳೆದ ವಾರ ಸ್ಪೆಷಲ್ ರೈಲಿನಲ್ಲಿ ಬೊಂಬಾಯಿಗೆ ಪಯಣಮಾಡಿ ಸ್ಟೇಷನ್ನಿನಲ್ಲಿ ಇಳಿದರು. ಸ್ಟೇಷನನ್ನು ಬಹಳ ಸುಂದರವಾಗಿ ಅಲಂಕಾರಮಾಡಿ, ಅಲ್ಲಿನ ಅಧಿಕಾರಿಗಳು ಅವರನ್ನು ಎದುರುಗೊಂಡರು. ಪ್ಲಾಟ್‌ಫಾರಮಿನ ಬಳಿಯಲ್ಲಿ ನೈಜಾಮರವರಿಗೋಸ್ಕರಲೂ ಅವರ ಮುಖ್ಯ ಅಧಿಕಾರಿಗಳಿಗಾಗಿಯೂ ಹಲವು ಮೋಟಾರ್ ಗಾಡಿಗಳನ್ನೂ, ಅವರ ಸಾಮಾನು ಸಾಗುವುದಕ್ಕೆ ೧೫೦ ಎತ್ತಿನ ಬಂಡಿಗಳನ್ನೂ ಸಾಲಾಗಿ ನಿಲ್ಲಿಸಿದ್ದರು. ನೈಜಾಮರವರು ಬರುವುದಕ್ಕೆ ಮೊದಲೇ ದಿನ ಅವರ ಮೋಟಾರ್ ಗಾಡಿಗಳ ಸಾಮಾನುಗಳ ಸಮೇತ ಬಾಡಿಗಾರ್ಡ್ ಸ್ವಾರರು ಸ್ಪೆಷಲ್ ರೈಲುಗಳಲ್ಲಿ ಬಂದಿಳಿದರು. ನೈಜಾಮರವರ ಕ್ಯಾಂಪಿನಲ್ಲಿ ಸುಮಾರು ೪೦೦ ಜನ ಸೇವಕರುಗಳೂ ಅಧಿಕಾರಿಗಳೂ ಬಂದಿರುತ್ತಾರೆ. ನೈಜಾಮರವರು ಬೊಂಬಾಯಿಗೆ ಹೋಗಿರುವುದು ಇದು ಎರಡನೇ ಸಲವೆಂದು ತಿಳಿಯುತ್ತದೆ.

•

ಇಲಿ ಹೆಗ್ಗಣಗಳಿಂದ ಪ್ಲೇಗ್ ಉತ್ಪತ್ತಿ ಹರಡುವುದೆಂದೂ, ಅವನ್ನು ನಾಶಮಾಡಿ ಬಿಟ್ಟರೆ ಆ ರೋಗವು ಅಡಗಿ ಹೋಗುವುದೆಂದೂ ಗೊತ್ತಾಗಿ ಅನೇಕಾನೇಕ ಪಟ್ಟಣಗಳಲ್ಲಿ ಮ್ಯುನಿಸಿಪಾಲಿಟಿಯವರು ಆ ಪ್ರಾಣಿಗಳನ್ನು ಕೊಂದುಹಾಕುವುದಕ್ಕೆ ಏರ್ಪಾಡು ಮಾಡಿರುತ್ತಾರೆ. ಈ ಪ್ರಾಣಿಗಳ ಚರ್ಮವು ಬಹು ಸೂಕ್ಷ್ಮವಾಗಿರುವುದರಿಂದ ಇದರಿಂದ ವಿಲಾಯಿತಿಯಲ್ಲಿ ನಾನಾ ಬಗೆಯ ಕೆಲಸಗಳನ್ನು ಮಾಡುತ್ತಾರೆ. ಲಂಡನ್ ಪಟ್ಟಣದಲ್ಲಿ ವರುಷಕ್ಕೆ ಏಳೂವರೆ ಲಕ್ಷ ರೂಪಾಯಿನ ಇಲಿ ಹೆಗ್ಗಣಗಳ ಚರ್ಮಗಳು ಬೇಕಾಗುವವೆಂತಲೂ, ಹಿಂದುಸ್ಥಾನದ ಜನರು ಈ ಪ್ರಾಣಿಗಳ ಚರ್ಮವನ್ನು ಕೂಡಿಸಿ ಕಳುಹಿಸುವುದಾದರೆ ಅವರಿಗೆ ತುಂಬಾ ಸಂಪಾದನೆಯಾಗಬಹುದೆಂತಲೂ ಬೊಂಬಾಯಿನ ಒಂದು ಪತ್ರಿಕೆಯು ಸೂಚಿಸುತ್ತದೆ. ಆಸ್ಟ್ರೇಲಿಯಾ ದ್ವೀಪದಲ್ಲಿ ರೈತರ ಜನಗಳಿಗೆ ಕಂಟಕವಾಗಿ ಪರಿಣಮಿಸಿದ್ದ ಮೊಲಗಳನ್ನು ಅಲ್ಲಿನ ಜನರು ನಿರ್ಮೂಲ ಮಾಡಬೇಕೆಂದು ಉದ್ದೇಶಪಟ್ಟು, ಅವುಗಳನ್ನು ಹಿಡಿದು ಕೊಂದು ಚರ್ಮವನ್ನು ಸೀಮೆಗೆ ರಫ್ತು ಮಾಡುತ್ತಾ ಬಂದರು. ಇದರಿಂದ ಅಲ್ಲಿನ ಫಸಲು ಹಾಳಾಗುತ್ತಿದ್ದದ್ದು ತಪ್ಪಿಹೋದದ್ದು ಮಾತ್ರವೇ ಅಲ್ಲ, ಆ ಜನರಿಗೆ ಚರ್ಮಗಳ ಬಿಕರಿಯಿಂದ ಲಾಭ ಸಂಪಾದನೆಯೂ ಆಯಿತು. ಇದೇ ರೀತಿ ಹಿಂದುಸ್ಥಾನದ ಪ್ರಜೆಗಳು ಪ್ಲೇಗನ್ನು ಅಡಗಿಸುವುದಲ್ಲದೆ ಇಲಿ ಹೆಗ್ಗಣಗಳ ಚರ್ಮವನ್ನು ಕೂಡಿಸಿ [illegible] ಪ್ರಯೋಜನವನ್ನು ಹೊಂದಬಹುದಾಗಿದೆ.

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು. —ಎಡಿಟರ್

ಬೆಂಗಳೂರು ಸಿಟಿ ಚಂದಾದಾರರು ಬರೆದಿರುವ ಬಾತ್ಮಿಯನ್ನೂ, ಮೈಸೂರಿನ "ಸ್ಪೆಕ್ಟೇಟರ್" ರು ಬರೆದಿರುವ ಬಾತ್ಮಿಯನ್ನೂ ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ. —ಎಡಿ.]

"[illegible]," ನಂಜನಗೂಡು —ತಮ್ಮ ಹೆಸರು ವಿಳಾಸವನ್ನು ತಿಳಿಸಲಿಲ್ಲ.

ಕರೆಸ್ಪಾಂಡೆನ್ಸ್

ಪೋಲೀಸ್ ನೌಕರರಿಗೆ ಒಳ್ಳೇ [illegible]

ಅಯ್ಯಾ,

ಬೇರಿಂಗುಪೇಟೆ ತಾಲ್ಲೂಕು ಕಸಬ [illegible] ಗ್ರಾಮದ ಪೋಲೀಸ್ ಸ್ಟೇಷನ್ [illegible] ನಲ್ಲಿ ಇದ್ದ [illegible] ರಾಯರು ಈ ಸ್ಟೇಷನ್ನಿಗೆ ಬಂದ ಲಾಗಾಯ್ತು ಇಲ್ಲಿನ ಜನಗಳನ್ನು ಬಹು [illegible] ಯಿಂದ ಕಾಪಾಡುತ್ತಾ, ಕಳ್ಳಕೋರರು ಒಬ್ಬರನ್ನೂ ಬಿಡದೆ ವಸ್ತುಗಳ ಹೊಲಬುಗಳ [illegible] ಅವರ ನಿಶಸ್ತಿಯನ್ನು ಕಂಡುಹಿಡಿದು ಜನಗಳಿಗೆ ಯಾವ ತೊಂದರೆಯೂ ಇಲ್ಲದಂತೆ ಜನರ ಯೋಗ್ಯತೆಗಳನ್ನು ಸರಿಯಾಗಿ ತಿಳಿದುಕೊಂಡು ಧರ್ಮವಾಗಿ [illegible] ಮಾಡಿ ಈ ಸ್ಥಾನಕ್ಕೆ ಒಳ್ಳೇ ಹೆಸರನ್ನು ಪಡೆದರು. ಇದ ವರಿವಿಗೆ ಇಂಥಾ ಬೇರು ಪಡೆದು ಈ ಸ್ಟೇಷನ್ನಿನಲ್ಲಿ ಕೆಲಸ ಮಾಡಿದವರು [illegible] ಇಲ್ಲ. ಇವರು ಸಮರ್ಥವಾಗಿ ಸರ್ಕಾರಕ್ಕೆ ಮತ್ತೆ ಪ್ರೀತಿಪಾತ್ರರಾಗಿ ಮತ್ತು ಜನರಿಗೆ [illegible] ತೊಂದರೆ ಇಲ್ಲದೆ ಇದ್ದ ಇವರಿಗೆ ಇಲ್ಲಿಂದ ಬೇರಿಂಗ್‌ಪೇಟೆ ಟೌನ್ [illegible] ವರ್ಗವಾಗಿ ಇರುವಂತೆ ಕೇಳುತ್ತೇವೆ. [illegible] ಆಫೀಸರು ಈ ರೀತಿ ಹೆಸರು ಪಡೆಯುವರೋ ಇಲ್ಲವೋ ಎಂದು ನಮಗೆ ತುಂಬಾ ವ್ಯಸನವಾಗಿರುತ್ತದೆ.

ಪುರವಾಸಿ

ನೆಲಮಂಗಲದ ನಾಕೀಜಾ [illegible]

ಅಯ್ಯಾ,

ಈ ಊರಿನ ಸ್ಯಾನಿಟೇಷನ್ ಏಕ ರಥ ವಿಪರೀತವಾದದ್ದಾಗಿದೆ. ಗ್ರಾಮದಲ್ಲಿ ಎಲ್ಲಿ ಹೋದರೂ ದೊಡ್ಡ ರಸ್ತೆಗಳಲ್ಲಿಯೇ ಆಗಲಿ ಸಂದುಗಳಲ್ಲಿಯೇ ಆಗಲಿ ಎಲ್ಲೆಲ್ಲೂ ದುರ್ಗಂಧಮಯವಾಗಿರುತ್ತದೆ. ಹೀಗಿರುವಲ್ಲಿ ಮ್ಯುನಿಸಿಪಾಲಿಟಿ ಎಷ್ಟರ ಮಟ್ಟಿಗಿರುತ್ತದೆಂಬುದನ್ನು ವಿವರಿಸಿ ಹೇಳಬೇಕಾಗಿಲ್ಲ. ಅದು ಸ್ಪಷ್ಟವಾಗಿಯೇ ಇರುತ್ತದೆ. ದೈವಾನುಗ್ರಹದಿಂದ ಈ ಸಾರಿ ಪ್ಲೇಗಿನ ವ್ಯಾಧಿಯು ನಮ್ಮ ಗ್ರಾಮದ ಮೇಲೆ ಬೀಳಲಿಲ್ಲ. ಗ್ರಾಮವು ಈ ರೀತಿ ಅನಾರೋಗ್ಯದ ಸ್ಥಿತಿಯಲ್ಲಿರುವುದನ್ನು ನೋಡಿ ಬಹಳ ವಿಷಾದಪಡಬೇಕಾಗಿದೆ. ಊರಿನಲ್ಲಿ ನಿವಿಲ್ಲಾಗಿರುವ ಮನೆಗಳನ್ನು ನೋಡಿದರೆ ಹಿಂದೆ ಈ ಉಪದ್ರವದಿಂದ ಆದ ನಷ್ಟಗಳು ಚೆನ್ನಾಗಿ ಕಂಡುಬರುತ್ತವೆ. ಮಲ ಮೂತ್ರಗಳಿಗೆ ಅವಕಾಶವನ್ನು ಕೊಡತಕ್ಕ ಮೋಟು ಗೋಡೆಗಳನ್ನು ಕೆಡವಹಾಕಿಸಿ, ಬಯಲುಮಾಡಿ, ಹೇರಳವಾಗಿರುವ ತಿಪ್ಪೆ ಗುಂಡಿಗಳನ್ನು ಮುಚ್ಚಿಸಿದ ವಿನಾ ರೋಗದ ಭೀತಿ ತಪ್ಪುವುದಿಲ್ಲವೆಂಬುವದರಲ್ಲಿ ಸಂದೇಹವಿಲ್ಲ. ಪ್ರಜೆಗಳ ವಿದ್ಯಾಭ್ಯಾಸ ವಿಶೇಷವಾಗಿರುವದರಿಂದ ನಿರ್ಮಲತ್ವದ ಪ್ರಯೋಜನಗಳು ಜನಗಳಿಗೆ ಗೋಚರವಾಗಿಲ್ಲ. ಸಾಮಾನ್ಯ ಜನರು ಬುದ್ಧಿ ಹೇಳುವವರೂ [illegible] ಮಗುವಿನ ಆರೋಗ್ಯಕ್ಕೋಸ್ಕರ ಕಹಿಯಾದ ಮದ್ದನ್ನು ಮಗುವು ನಿಷೇಧಿಸಿದರೂ ತಾಯಿಯು ಬಲಾತ್ಕಾರವಾಗಿ ಪ್ರಯೋಗಿಸುವಂತೆ, ತಾಲ್ಲೂಕ್ ಬೋರ್ಡಿನಲ್ಲಿರುವ ಮ್ಯುನಿಸಿಪಾಲಿಟಿಯವರು ಬಲಾತ್ಕಾರದಿಂದಲಾದರೂ ಪ್ರಜೆಗಳು ಮನೆ ಮಠಗಳನ್ನು ನಿರ್ಮಲವಾಗಿಟ್ಟುಕೊಳ್ಳುವಂತೆ ಮಾಡುವುದಲ್ಲದೆ, ಊರಿನಲ್ಲಿ ದುರ್ಗಂಧವು ಹೊರಡದಂತೆ ಗ್ರಾಮ ನೈರ್ಮಲ್ಯ ವಿಷಯದಲ್ಲಿ ತುಂಬಾ ಶ್ರದ್ಧೆಯಿಂದ ಕೆಲಸಗಳನ್ನು ನಡಿಸಬೇಕೆಂದು ಕೋರುತ್ತೇನೆ.

ಪ್ರಜಾ ಹಿತೈಷಿ.

ಬೆಂಕಿಯಿಂದಾದ ಅನಾಹುತವು

ಅಯ್ಯಾ,

ನಾನು ಒಂದು ದಿವಸ ೩ ಗಂಟೆ ಸಮಯದಲ್ಲಿ ಅಜ್ಜಂಪುರದಿಂದ ಬೀರೂರಿಗೆ ಸ್ವಲ್ಪ ಕೆಲಸದ ಉದ್ದೇಶ ಹೋಗಿ ಮರುದಿನ ಬೆಳಗ್ಗೆ ಬರಬೇಕೆಂದು ಊಹಿಸಿಕೊಂಡಿದ್ದೆನು. ಈ ಊರಿನವರು ಪ್ಲೇಗ್ ಗಲಾಟೆ ಉದ್ರೇಕ, ಹೊರಗೆ ಷೆಡ್ಡುಗಳಲ್ಲಿರುವುದು ಸರಿಯಷ್ಟೆ. ಅದೇ ದಿವಸ ರಾತ್ರಿಯಲ್ಲಿ ಅರ್ಕಸಾಲೆಯವರ ಷೆಡ್ಡುಗಳ ಪಕ್ಕದಲ್ಲಿ ಬಾಕಿ ಇತರೇ ಜಾತಿಯವರು ಷೆಡ್ಡುಗಳನ್ನು ಹಾಕಿಕೊಂಡಿದ್ದರು. ಕ್ಯಾಂಪುಗಳಲ್ಲಿ ಒಂದಕ್ಕೆ ಯಾರೋ ದಾರಿಕೋರನೊಬ್ಬನು ಬೆಂಕಿಯನ್ನು ತೋರಿಸಿ ಹೋದನು. ಅದೇ ಸಮಯದಲ್ಲಿ ಆ ಮನೆಯವನು ಹೆಂಡತಿಯನ್ನು ಬಿಟ್ಟು ಹೋಗಿದ್ದನು. ಆ ಹೆಂಗಸಾದರೋ ರಾತ್ರಿಕಾಲವಾದ್ದರಿಂದ ಒಳಗೆ ಯಾವುದೋ ಕೆಲಸದ ಮೇಲೆ ಇದ್ದು ಈ ವಿಷಯವನ್ನು ಅರಿಯದೆ ಇದ್ದಳು. ಇದನ್ನು ಹೊರಗೆ ಯಾರೋ ಒಬ್ಬನು ನೋಡಿ ಗಾಬರಿಯಿಂದ ಹತ್ತರಕ್ಕೆ ಹೋಗಿ ಒಳಗಿದ್ದ ಹೆಂಗಸಿಗೆ ಈ ವರ್ತಮಾನವನ್ನು ತಿಳಿಸಿದ್ದರಿಂದ ಆಕೆಯು ಹೊರಗೆ ಬಂದು ಕೂಗಿಕೊಂಡಳು. ಅಷ್ಟರಲ್ಲಿಯೇ ಉರಿಯು ಹೆಚ್ಚಾಯಿತು. ಜನರು ಬರುವುದರೊಳಗಾಗಿ ಸುತ್ತಲಿದ್ದ ೩-೪ ಕ್ಯಾಂಪುಗಳು ಹತ್ತಿಕೊಂಡು ಜನರಿಗೆ ಆರಿಸಲು ಅಸದಳವಾಯಿತು. ಇಂಥಾದ್ದರಲ್ಲಿ ಬೆಂಕಿಯನ್ನು ಕೆಡಿಸುವುದಕ್ಕೆ ಹತ್ತಿರ ಇರುವ ಹೊಂಡದಲ್ಲಿ ನೀರಾದರೂ ಇದೇ ಸಮಯದಲ್ಲಿ ಇರಲಿಲ್ಲ. ಈ ಜನರ ಗಲಾಟೆ ಮಧ್ಯದಲ್ಲಿ ಸುಟ್ಟ ಕ್ಯಾಂಪು ಸಿಲಕ್ಕೆ ಬಿದ್ದಿತು. ಇಂಥಾ ಕಟ್ಟ ಕೆಲಸವಾದ ಕ್ಯಾಂಪಿಗೆ ಬೆಂಕಿಯನ್ನು ಹತ್ತಿಸಿದ ಮನುಷ್ಯನು ಆ ಕ್ಯಾಂಪಿನ ಯಜಮಾನನಿಗೆ ಜನ್ಮ ಗಾತಕನಂಬವಾಗಿ ಹೇಳುತ್ತಾರೆ. ಈ ಕಾಲದಲ್ಲಿ ಪ್ರಾಪ್ತವಾಗಿರುವ ಪ್ಲೇಗ್ ಎಂಬ ಅಂಟುರೋಗಕ್ಕೆ ಹೆದರಿ ಪ್ರಾಣವನ್ನು ಉಳಿಸಿಕೊಳ್ಳಲಿಕ್ಕೆ ಊರ ಹೊರಗೆ ಷೆಡ್ಡುಗಳಲ್ಲಿ ಇಂಥ ಮೊದಲಾದ ಅವಾಂತರಗಳೂ ಕೂಡ ತಪ್ಪುವುದಿಲ್ಲ. ನಾವು ಮುಖ್ಯವಾಗಿ ಷೆಡ್ಡುಗಳನ್ನು ಕಟ್ಟಬೇಕಾದರೆ ಮೇಲಿನ ಹೊದಿಕೆಯನ್ನು ಹೆಂಚಿನಿಂದಾದರೂ ತಗಡುಗಳಿಂದಾದರೂ ಹಾಕುವುದು ಬಹಳ ಉತ್ತಮವಾದ ಕೆಲಸವಾಗಿದೆ. ನಮ್ಮ ಪೋಲೀಸಿನವರು ಇಂಥಾ ದುಷ್ಟ ಕೆಲಸವನ್ನು ನಡಿಸತಕ್ಕ ದುಷ್ಟರನ್ನು ತಲಾಷ್ ಮಾಡಿ ಶಿಕ್ಷಿಸುವುದು ಉತ್ತಮ.

ಎ. ವೆಂಕಟಾಚಾರ್

ಕೆರೆಯ ನೀರು ವ್ಯರ್ಥ ಮಾಡುವುದು.

ಅಯ್ಯಾ,

ಈಗ ಉಂಟಾಗಿರುವ ನೀರಿನ ಕ್ಷಾಮ ಎಂಬುವುದು ಲೋಕಪ್ರಸಿದ್ಧವಾದದ್ದು. ತುಮಕೂರು ತಾಲ್ಲೂಕು ಕೋಳಾಲದ ಸಮ್ಮತು ವರಾಹಪುರ ಬಳಿ ಇರುವ ಪ್ರಸಿದ್ಧವಾದ ಕೆರೆಯಲ್ಲಿ ನವಂಬರ್ ಅಷ್ಟೆಂಬರ್ ವರೆಗೆ ಸುಮಾರು ೧೦-೧೨ ಅಡಿ ನೀರಿತ್ತು. ಇದರಿಂದ ಎರಡು ಮೂರು ಎಕರೆ ಗದ್ದೆ ಸಾಗುವಳಿ ಆಗಬಹುದಾಗಿತ್ತು. ಈ ಗ್ರಾಮವು ಮತ್ತು ವೆಂಕಟಾಪುರ ಎಂಬ ಗ್ರಾಮಗಳ ಬಳಿ ೧೮-೨೦ ಎಕರೆ ಗದ್ದೆ ಸಾಗುವಳಿ ಆಗಿದೆ. ಗದ್ದೆ, ಜೋಳ ವಗೈರೆ ಸುಮಾರು ೬೦-೭೦ ಎಕರೆ ಸಾಗುವಳಿಯಾಗಿದೆ. ಈ ಫಸಲಿಗೆ ಹದ ನೀರೆಂಬುವುದು ಗೊತ್ತೇ ಇದೆ. ಹೀಗಿದ್ದಾಗ್ಯೂ ಈಗಿರುವ ಫಸಲು ಪೂರೈಸಿ [illegible] ಅಡಿ ನೀರು ನಿಲ್ಲುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಹಾಲಿ ಈ ಗ್ರಾಮದ ಬಳಿ ಗದ್ದೆ ಸಾಗುವಳಿ ಮಾಡಿರುವ ರೈತರು ವೃಥಾ ನೀರು ಹಲಾಕಾಗುತ್ತೆಂದು ತಾಲ್ಲೂಕಿಗೆ ಅರ್ಜಿ ಕೊಟ್ಟರು. ಸಾಗುವಳಿಗೆ ಉಪಯೋಗವಿಲ್ಲದೆ ಇರುವ ಬೀಳು ಹಳ್ಳ, ಕೊರಕಲು ತುಂಬಿ ಹೋಗುವಂತೆ ಯಾವಾಗಲೂ ಯಾವದಾದರೂ ಮೂರ ಫಸಲಿನ ನಿಮಿತ್ತ ಕೆರೆಯಲ್ಲಿದ್ದ ನೀರು ಹೋಗುವುದಕ್ಕೆ ಎತ್ತಿದ ತೂಬು ಇಳಿಸದೆ ನೀರೆಲ್ಲಾ ಹಲಾಕಾಗಿ ಹೋಯಿತು. ಜನಗಳಿಗೆ ಇಟ್ಟ ಫಸಲು ಕೈಸೇರುವುದಕ್ಕೆ ತೊಂದರೆ ಆಯಿತು. ಈ ಗ್ರಾಮದ ಬಳಿ ಎಲ್ಲರಂತೆ ಕ್ರಿಮಿನಲ್ ಕೇಸು ರಿಪೋರ್ಟ್ ಮಾಡಿದರೆ ಸರ್ಕಾರದವರು ಕೆರೆಯಲ್ಲಿ ನೀರಿದ್ದ ಸಬಬು ರಿಪೋರ್ಟ್ ಕೊಡುವುದಿಲ್ಲವೆಂದು ಅಪ್ಪಣೆ ಕೊಟ್ಟಿದ್ದಾರೆ. ನೀರು ಹೋದ ನಾಗರಿಕರನ್ನು ತೀರ್ಮಾನಿಸದ ಸರ್ಕಾರದ ಯಾವ ನಿಬಂಧನೆಯೂ ಇಲ್ಲ. ಬಡರೈತರ ಯತ್ನವೇನು ಇದ್ದಿತ್ತು? ನೀರು ಇಲ್ಲದಾಗ ನಮಗೆ ಫಸಲಿನ ನಷ್ಟಕ್ಕಾಗಿ ಸಂಕಟಪಡಬೇಕಾಯಿತು. ನಮ್ಮ ಕಷ್ಟವನ್ನು ಮಾತ್ರ [illegible] ಗವರ್ನಮೆಂಟಿನವರೇ ತಪ್ಪಿಸಿ ಕಾಪಾಡಬೇಕಾಗಿ ಇದೆ. ಫಸಲು ಆಗಿದ್ದರೆ ಸುಮಾರು ಜನಗಳಿಗೆ [illegible] ಮೂರು ತಿಂಗಳು [illegible] ದಿಗಲು ಬಹಳ ಪರಿಹಾರವಾಗಿ ಪಕ್ಷಪಾತವಿಲ್ಲದೆ [illegible] ತೊಂದರೆಗಳನ್ನು ತೊಂದರೆಗಳಾಗಿ ಮಾಡಿಯೂ ಇಲ್ಲ. ಈ ಕೆರೆ ಅಚ್ಚುಕಟ್ಟು [illegible] ನಾಗರಿಕ ಸರ್ಕಾರಕ್ಕೆ ನಾವು ಮೊರೆಯಿಡುತ್ತೇವೆ. [illegible] ಈಗಿರುವ ಪುರಾತನ ಇದೇ ಕೆರೆ ಅಚ್ಚುಕಟ್ಟು ಕಟ್ಟು, ಜನರು ದುಃಖ ನಾವುಗಳ ಬರುವುದಕ್ಕೆ ಅವಕಾಶವಿಲ್ಲ.

ಪ್ರತ್ಯಕ್ಷದರ್ಶಿ

[ಈ ವಿಚಾರವನ್ನು ರೆವಿನ್ಯೂ ಅಧಿಕಾರಿಗಳು ತನಿಖೆಯಿಂದ ನಿಜಸ್ಥಿತಿಯನ್ನು ತಿಳಿದು [illegible] ವಿಚಾರಿಸಿ, [illegible] ಕೆರೆ ನಾಲೆಗಳ ಮೇಲ್ವಿಚಾರಣೆಗೆ ನೇಮಿಸಿದ ಮನುಷ್ಯರನ್ನು ಸರ್ಕಾರದವರು ನೇಮಕಮಾಡುವುದಕ್ಕೆ [illegible] ಮಾಡುವುದರಲ್ಲಿ [illegible] —ಎಡಿ.]

ವಿವಾಹಕಾಲದ ದ್ರವ್ಯನಷ್ಟವು ದುಂದುಗಾರಿಕೆ

ಅಯ್ಯಾ,

ಒಕ್ಕಲಿಗರ ಮಹೋಪಕಾರಕವಾದ ವಿಷಯವಾಗಿ ಕೊಡಗಿನಲ್ಲಿ ನಡೆದ ಈ ಕೆಳಗೆ ನಮೂದಿಸಿರುವ ಕೊಂಚ ವಿಷಯವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವದರ ಮೂಲಕ ಬಂದು ದಾರಿಗಿರುವ ನಮ್ಮ ಒಕ್ಕಲಿಗ ಮಹನೀಯರೆಲ್ಲರೂ ಯೋಚಿಸತಕ್ಕ ಅಂಶವನ್ನು ಅರಿಕೆ ಮಾಡಿದ್ದೇನೆ.

ಈ ತಿಂಗಳು [illegible] ನೇ ತಾರೀಖು ವಗೈರೆ ದು [illegible] ಸೋಮವಾರ ಪೇಟೆಗೆ ನಮ್ಮ ನೆಂಟರ ಒಂದು ಲಗ್ನಕ್ಕೋಸ್ಕರ ಹೋಗಿದ್ದೆವು. ಆ ದಿನ ನಾವು ಆ ಶಿವಪ್ಪ ಕೆಲವು ಮುಖ್ಯಸ್ಥರ ಗೌಡರುಗಳು ಸಹ ಕೆಲವು ದಿನ ವಾದ ಚಪ್ಪರದಲ್ಲಿ ವಿರಾಮವಾಗಿ ಕುಳಿತಿದ್ದ ವೇಳೆಯಲ್ಲಿ ಕಟ್ಟಾರು ಪಟೇಲ್ [illegible] ರವರು ಪ್ರಸ್ತಾಪಿಸಿದ್ದೇನೆಂದರೆ—

ನಮ್ಮ ಮತದಲ್ಲಿ ಕೆಲವರು ಹೆಣ್ಣನ್ನು ಲಗ್ನ ಮಾಡಿ ಕೊಡುವಾಗ ತೆರ ಎಂಬ ನೆಪದ ಮೇಲೆ ವರನ ಕಡೆಯಿಂದ ವಿಪರೀತ ಹಣವನ್ನೂ ದವಸವನ್ನೂ ತೆಗೆದುಕೊಂಡು ಅಪ್ರಯೋಜಕವಾಗಿ ದುಂದು ಖರ್ಚು ಮಾಡುವರು. ಈ ವಿಧದಿಂದ ಹುಲವರಿಗೆಲ್ಲ ಆಸ್ತಿಗಳೆಲ್ಲಾ ನಿರ್ನಾಮವಾಗಿ ಹೋಗುತ್ತವಲ್ಲದೆ ದುಸ್ಸಾಧ್ಯಗಳು ಹುಟ್ಟಿ, ವಿಮುಕ್ತಿ ಇಲ್ಲದಂತೆ ಸಾಲದ ಬಂಧನಕ್ಕೊಳಗಾಗುತ್ತಾ ಬರುತ್ತಿದ್ದೇವೆ. ಇಂಥಾ ವಿಷಯಗಳಲ್ಲೆಲ್ಲಾ ವಿವೇಕಗಳನ್ನು ಹೇಳುತ್ತಿರುವ ಪತ್ರಿಕೆಗಳ ಮೂಲಕವೂ, ಮತದವರಾದ ಇತರ ಊರಿನವರಿಂದ ಬಂದಿರುವ ಕಾಗದದ ಮೂಲಕವೂ ಗೊತ್ತಾಗಿಯೂ ಕೊಡಗು ದೇಶದವರಾದ ನಾವುಗಳು ಈ ವಿಷಯಗಳೆಲ್ಲವನ್ನೂ ಆಲೋಚಿಸದೆಯೂ, ಒಂದಕ್ಕೂ ಜವಾಬನ್ನು ಕೊಡದೆಯೂ ಇರುವದು ಆಶ್ಚರ್ಯವಲ್ಲವೇ? ಈ ದಿನ ಇಲ್ಲಿ ಹಾಜರಿರುವ ಮುಖಂಡರುಗಳಾದ ನಮ್ಮ ಗೌಡರುಗಳು ಜವಾಬು ಏನು ಹೇಳುತ್ತೀರೆಂತ ಕೇಳಿಕೊಂಡರು.

ಮೇಲೆ ಹೇಳಿದ ಪಾಪುಪಟೇಲ್ ರವರು ಬಸಪ್ಪಗೌಡ್ರು ವಗೈರೆ ಜವಾಬು ಹೇಳಿದ್ದೇನೆಂದರೆ— ಈ ಶುಭಕಾರ್ಯದ ದಿನ ಇಂಥಾ ಸಂಭಾಷಣೆ ಬಂದದ್ದು ಬಹು ಮುಖ್ಯವಾದದ್ದು. ನಮ್ಮ ಮೇಲೆ ನಮ್ಮ ಸೀಮೆಯಲ್ಲಿ ಪಟೇಲರುಗಳು ಕಚೇರಿಯಲ್ಲಿ ವರದಿಗೆ ಸೇರುವ ವೇಳೆ ಆಯಾಯ ಹೋಬಳಿಯವರು ಆಗಾಗ್ಗೆ ವಿಚಾರಣೆ ನಡಿಸಿ, ತಿಳುವಳಿಕೆ ಇಲ್ಲದವರಿಗೆ ಜ್ಞಾನವನ್ನುಂಟು ಮಾಡಿ ಅಲ್ಲಸಿಗೆ ಏಕ್ಕ್ಯಮತ ಎಂತೆ ಕಾಸಿ ಘಟಾಟಿಯಿಂದ ಬಹುಕಾಲದಿಂದುಂಟಾಗಿರುವ ಈ ದುಷ್ಪದ್ಧತಿಯನ್ನು ತ್ಯಜಿಸುವ ವಿಷಯದಲ್ಲಿ ನಾವು ಮೊದಲು ಜಾರಿಗೆ ತಂದ ನಂತರ ಇದಕ್ಕಾಗಿ ಬೇಕಾಗುವ ಸಹಾಯವನ್ನು ಗವರ್ನಮೆಂಟಿನವರಿಂದಲೂ ಪಡೆಯಬಹುದಾಗಿರುತ್ತೆ. ಈ ವಿಷಯಗಳೆಲ್ಲವನ್ನೂ ದೂರದಲ್ಲಿರುವ ನಮ್ಮ ಬಂಧುಗಳೇ ಮೊದಲಾದವರ ತಿಳುವಳಿಕೆಗೋಸ್ಕರ ಲಿಖಾವಟ್ಟು ಮೂಲಕ ತಿಳಿಸಬೇಕೆಂತ ವಗೈರೆ ತೀರ್ಮಾನಿಸಿರುತ್ತಾರೆ.

ಆದ್ದರಿಂದ ಬಂಧು ಬಾಂಧವರಾದ ಮತ್ತು ಮಹಾಭವರಾಗಳಾದ ಕೊಡಗು ಮಂಜರಾಬಾದ್ ವಗೈರೆಯಲ್ಲಿರುವ ಒಕ್ಕಲಿಗ ಮಹನೀಯರೇ, ಮೇಲಿನ ವಿಷಯದಲ್ಲಿ ತುಂಬಾ ಗಮನ ಕೊಡಬೇಕಾಗಿರುತ್ತದಲ್ಲದೆ, ಈಗ್ಗೆ ಕಾಫಿ ಬೆಳೆಯ

ತಾಲ್ಲೂಕು ವರ್ತಮಾನಗಳು

ಗುಂಟೂರಿನ ಬಳಿ ದೊಂಬಿ ಕಲಹವು.

ಪೋಲೀಸಿನವರು ಕೊಲೆಯಾದರಂತೆ.

ಕಾಣೆಗೆ ಒಂದಿನಿಸ ಸುದ್ದಿ

ಸೂಪರಿಂಟೆಂಡೆಂಟರವರನ್ನೂ ಮೊದಲು ಮಾಡಿದಾರೆ ಒಬ್ಬ ಪೋಲೀಸಿನವನು ... ಗಲಾಟೆಯಲ್ಲಿ ... ಪ್ರಜೆಗಳು ಸನ್ನದ್ಧರಾಗಿದ್ದಾರೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕಳೆದ ರವಿವಾರ ತಿಳಿಸಿರುತ್ತಾರೆ ಈಗ ... ಪೋಲೀಸ್ ಡಿಪ್ಟಿ ಇನ್ಸ್‌ಪೆಕ್ಟರ್ ಜನರಲ್‌ರವರೂ ಅಲ್ಲಿ ಹೋಗಿ ನಿಂತು ತನಿಖೆ ಮಾಡುತ್ತಿದ್ದಾರೆ

ಮೈಸೂರು ಗೆಜೆಟ್ ಸಂಗ್ರಹ

ಚಿತ್ರದುರ್ಗದ ಡಿಸ್ಟ್ರಿಕ್ಟ್ ರೆವಿನ್ಯೂ ಪ್ರೊಬೇಷನರ್ ಮೆ|| ಟಿ ಅಬ್ದುಲ್ ಖಾದರ್ ಯವರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಸೀನಿಯರ್ ಅ|| ಕಮಿಷನರ್ ಮೆ ಎಸ್ ವೈದ್ಯನಾಥ ಐಯರವರಿಗೆ ಅವರು ಛಾರ್ಜು ಕೊಟ್ಟ ತಾರೀಖು ಲಾಗಾಯ್ತು ಏಪ್ರಿಲ್ ತಾ ... ವರೆಗೆ ಪ್ರಿವಿಲೆಜ್ ರಜಾ ಕೊಟ್ಟಿದೆ

ಅ|| ಕಂಟ್ರೋಲರ್ ಮೆ| ಬಿ ಶ್ರೀನಿವಾಸ ಐಯಂಗಾರ್ರಿಗೆ ಫೆಬ್ರವರಿ ತಾ ... ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮದಗಿರಿ ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಸೀನಿಯರ್ ಅ|| ಕಮಿಷನರ್ ಮ| ಪಿ ಆರ್ ತ್ಯಾಗರಾಜ ಐಯರವರಿಗೆ ಮೂರು ತಿಂಗಳು ಕಾಯಿಲೆ ರಜಾ ಕೊಟ್ಟಿದೆ

ತುಂಕೂರಿನ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ನೇಮಕವಾಗಿರುವ ಮ ಮಹಮದ್ ಅಬ್ದುಲ್ಲಾ ಷರೀಫ್ ರವರನ್ನು ಕಡೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ

ಮೆ| ಸಿ ಕೃಷ್ಣಮೂರ್ತಿ ರಾವರನ್ನು ತುಂಕೂರಿನಿಂದ ಚಿತ್ರದುರ್ಗಕ್ಕೂ, ಮೆ|| ಷರೀಫ್ ಅಲಿಯವರನ್ನು ಚಿತ್ರದುರ್ಗದಿಂದ ಕಡೂರಿಗೂ ವರ್ಗಮಾಡಿರುವ ಹುಕುಮನ್ನು ರದ್ದು ಮಾಡಿಯಿದೆ

ನಿಮಗೆ ಮೈ ಸ್ವಸ್ಥವಿಲ್ಲವೇ?

(೧೨ ಆಣೆ ಬುದ್ದಿ ಸಮಾಚಾರ)

ಸ್ವಸ್ಥವಾಗುವುದು ಮಲಬದ್ಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬದ್ಧದಿಂದ ರೋಗಗಳಿಗೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ — ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ ಅಗ್ನಿಮಾಂದ್ಯ, ಗಾಬರಿ ಅಶಕ್ತಿ, ಎದೆಯು ಕಲ್ಲಿಣಿಸುವುದು ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಮೂಳೆಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ಕಳ್ಳಿ ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ಕಷ್ಟದ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [69-26]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುದ್ದಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುದ್ದಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ — ಇವರಲ್ಲಿ ದೊರೆಯುವುದು

MUNICIPAL NOTICE

27 2

List showing the rates of LAMP POSTS and LANTERNS &c available for sale in the Municipal Stores —

No	Particulars.		Price of each article.
1	Ornamental cast iron lamp post		Rs 10—0—0
2	Cast iron lamp post		8—0—0
3	Stone lamp post		,, 3—0—0
4	Street lantern	Middle size	,, 1—4—0
5	Iron stand for	do	,, 0—8—0
6	Street lantern	Small size	, 1—0—0
7	Iron stand for	do	,, 0—6—0
8	Railway burner No I.		, 1—0—0
9	do do No II		, 0—12—0
10	Iron stand made of iron plates		,, 0—6—0
11	Teakwood lamp post		,, 2—0—0

Mysore, M G Krishnaswami Rao,
9 2 1909. *Vice President,*
City Municipal Office.

ಇಪ್ಪತ್ತು ವರ್ಷದ ಕಾಯಿಲೆ,

ಬದುಕುವೆನೆಂಬ ಆಶೆಯೇ ಇರಲಿಲ್ಲ

ಯಾವ ಔಷಧವೂ ಗುಣಕೊಡಲಿಲ್ಲ. ಪೆರೂನಾ ವಾಸಿಮಾಡಿತು.

ದೇಹದೊಳಗಿನ ಶೈತ್ಯವ

ಅನೇಕ ರೋಗಗಳು ಶರೀರದೊಳಗಿರುವ ಅಂಗಗಳಲ್ಲಿ ಶೈತ್ಯದಿಂದ ಬಹಳವಾಗಿ ಪ್ರಾರಂಭವಾಗುತ್ತವೆ. ಇದರಿಂದಾಗುವ ಶುಷ್ಕತೆಯುಳ್ಳ [illegible] ಗಳಿಂದಲೂ ಉಂಟಾಗದು. ತುಂಬಾ ಜನರನ್ನ ವಿಶೇಷ ನಿರಾಶೆ ಕಷ್ಟವಾದ ನರಳುವಿಕೆ ಎಡೆಬಿಡದ ದುರ್ಬಲ [illegible] ಉಂಟಾಗುತ್ತವೆ. ಈ ಎರಡೂ ರೋಗಗಳು ಸಾವಿರಾರು ಮಂ[illegible] ಕ್ರಮೇಣ ಒಬ್ಬೊಬ್ಬರಾಗಿ ಪೆರೂನಾ ವಾಸಿಮಾಡಬಲ್ಲ ಔಷಧವ[illegible] ಕಂಡುಕೊಂಡಿದ್ದಾರೆ. ಒಬ್ಬ [illegible] ಇನ್ನೊಬ್ಬನಿಗೆ ತಿಳಿಸುವನು. ಈ ಪ್ರ[illegible] ಈ ಸುದ್ದಿಯು ಎಲ್ಲಾ ಕಡೆಗಳಿಗೂ ಹರಡಿಕೊಂಡು ದೇಹದ ಅಂತರ್ಗತವಾದ ಶೈತ್ಯವನ್ನು [illegible] ಮಾಡುವುದಕ್ಕೆ ಇದು ಉತ್ತಮೋತ್ತಮವಾದ ಔಷಧವೆಂದು ಅನುಭವಪೂರ್ವಕವಾಗಿ ಹೇಳುವ ಜನರು ಹೇರಳವಾಗಿರುತ್ತಾರೆ. ಅನೇಕ ಜನರು ಅನ್ನಕೋಶ ಮತ್ತು ಕೋಶ [illegible] ಮುಂತಾದ ಶೈತ್ಯರೋಗಗಳನ್ನು ಸ[illegible] ವಾಗಿ [illegible] ಎಂದು [illegible] ಬರೆದು ತಿಳಿ[illegible] ಈ ಕಾಯಿಲೆಗಳಿಗೆ ಪೆರೂನಾದಿಂದ ಉಂಟಾದ ಗುಣವನ್ನು [illegible] ಅವರು ಬರೆದಿರುವ ಪತ್ರಗಳು [illegible] ತಿಳಿಸುತ್ತವೆ.





ಆಹಾರ ರುಚಿಸುತ್ತಿದ

ಮಿ ಸಿಡ್ನಿ ವೆಸ್ಸಲ್ಸ್ [illegible] ಬರೆಯುವುದು —

ನನಗೆ ಇಪ್ಪತ್ತು ವರುಷದ ಶಕ್ತಿ ಅಜೀರ್ಣರೋಗವಿತ್ತು. ಇದರಿಂದ ನಾನು ಬಹಳ ಕಷ್ಟಪಟ್ಟೆನು. ಹಲವು ಮಂದಿ ಡಾಕ್ಟರುಗಳು ಹೇಳಿದಂತೆ ಔಷಧಿಯನ್ನು [illegible] ನನಗೆ ಸ್ವಲ್ಪವೂ ಗುಣಕೊಡಲಿಲ್ಲ.

ಕೆಲವು ವಾರಗಳಲ್ಲಿ ನಾನು ಕೆಲಸ ಬಿಟ್ಟು ಮನೆಯಲ್ಲಿ ಮಲಗಿರು[illegible] ಬಾಧೆ ಹೆಚ್ಚಾಗಿದ್ದುದರಿಂದ ಹಾಲು ಮಾತ್ರ ಕುಡಿಯುತ್ತಿದ್ದೆನು [illegible] ಹೊಟ್ಟೆಯಲ್ಲಿ ನಿಲ್ಲುತ್ತಿರಲಿಲ್ಲ.

ನನಗೆ ವಾಸಿಯಾಗುವುದಿಲ್ಲವೆಂದು ನಿರಾಶೆಯುಂಟಾಗುವಂತಾಯಿತು. ಆಗ ಪೆರೂನಾ ವಿಷಯ ತಿಳಿಯಿತು. ಅದನ್ನು ಸೇವಿಸಿನೋಡೋಣವೆಂದು ನಿಶ್ಚಯಮಾಡಿದೆನು.

ಒಂದು ಬಾಟ್ಲಿ ಸೇವಿಸುವಷ್ಟರಲ್ಲೇ ತುಂಬಾ ಅನುಕೂಲವಾಯಿತು. ಈ ಆಶ್ಚರ್ಯಕರವಾದ ಔಷಧವನ್ನು ಇನ್ನೊಂದು ಬಾಟ್ಲಿ ಸೇವಿಸಿದೆನು. [illegible] ಹೊಟ್ಟೆ [illegible] ನಿವಾರಣೆಯಾಗಿ ಹಾಳಾಗಿ [illegible] ಸಂತೋಷವಾಗಿ [illegible] ಈ ಪ್ರಪಂಚದಲ್ಲಿ ಪೆರೂನಾ ಬಹು ಶ್ರೇಷ್ಠವಾದ ಔಷಧವೆಂದು ನಾನು ನಂಬಿರುತ್ತೇನೆ.

ಮಿ ರಾಬರ್ಟ್ [illegible] ಯುಲ್ ಫ್ರೀಡಂ ಮತ್ತು ಪ್ರಸಿದ್ಧ ಲೇಖಕನೂ ಉಪನ್ಯಾಸಕನೂ ಆದ [illegible] ಎಸ್ ಲಿಂಕನ್ ಬಿ ಡಿ, ಚಿಕಾಗೋದಿಂದ ಬರೆಯುವುದು —

"ನಾಲ್ಕು ವರುಷಗಳ ಹಿಂದೆ ನನ್ನನ್ನು [illegible] ಬಾಧೆ [illegible] ಕ್ರಮೇಣ [illegible] ಬದಲಾಯಿತು. ಕ್ರಮ ತಪ್ಪಿ [illegible]

ಮೂತ್ರಕೋಶವು ಕೆಟ್ಟು [illegible] ಹೋಗಿದೆ [illegible]

"ಪೆರೂನಾ ವಿಷಯವನ್ನು [illegible] ಕೊಂಡೆನು. ಹತ್ತು ದಿನಗಳೊಳಗೆ [illegible] ಕ್ರಮೇಣ [illegible] ಕಡಿಮೆಯಾಯಿತು. ನನ್ನ [illegible]

"ಮೂರು ತಿಂಗಳಾಗುವಷ್ಟರೊಳಗೆ ನನಗೆ ತುಂಬಾ [illegible] ರವು ರುಚಿಸುತ್ತದೆ. ನನ್ನಲ್ಲಿದ್ದ [illegible] ಎರಡು ವರುಷಗಳಿಂದಲೂ ಆರೋಗ್ಯ [illegible]"

ಮೈಸೂರು [illegible]

[illegible]

[illegible] ಸ್ಯರೋಗದಿ [illegible] ಮುಂದಾಗಿ [illegible] ಅದರೆ [illegible] ನನಗೆ ಗುಣವಾಗ

[illegible] ಆರೋಗ್ಯವು [illegible] ಈ ದೇಶಕ್ಕೆ ಬಂದು [illegible]

[illegible] ಪೆರೂನಾ [illegible]

[illegible] ಈಗ [illegible] ಆರೋಗ್ಯ ಉಂಟಾಗಿದೆ.

[illegible] ದೇಶದಲ್ಲಿ [illegible] ದಾಕ್ಟರಿಗೆ ಕೊಟ್ಟು [illegible] ನನ್ನ ಹಾಗೆ ಅನೇಕರುಂಟಾಗುತ್ತಾರೆ.

ಮಿ ಎಚ್ ಎಲ್, ಇಮೊರಿ ವೆಸ್ ಥರ್ನ್‌ಲರ್ ಮಾಸ್ಟರ್ ಆಫ್ [illegible] ಕೆ ಪಿ ಒಮಾಹಾ ನೆಬ್ರಾಸ್ಕ ಈತನು ೨೦೫ ಎಸ್ ಹದಿನಾರನೇ ಬೀದಿಯಿಂದ ಪೆರೂನಾವು ಬಲಕಾರಿ [illegible] ಹೊಗಳಿ ಬರೆಯುವುದೇನೆಂದರೆ —

ಪೆರೂನಾವಿನ ಗುಣವು ಆರೋಗ್ಯವನ್ನು ಬಲಕಾರಿಯಾದ ಔಷಧವು ಬಹಳ ಸಂತೋಷದಿಂದ [illegible] ಕೆಲಸ ಮಾಡುತ್ತಿರುವವರ ಪೈಕಿ ಅನೇಕರಿಗೆ [illegible] ಎಲ್ಲಾ [illegible] ಬಹಳ ಕಷ್ಟಪಡುತ್ತಿದ್ದ ಈ ಔಷಧವನ್ನು [illegible] ಗುಣ ಕೊಡುವದು.

ಪೆರೂನಾ ಶರೀರ ಪ್ರಮಾಣವನ್ನು ಕ್ರಮಪಡಿಸಿ ಬಲಕೊಡುತ್ತದೆ. [illegible] ಕೊಡುವುದು ರೋಗಿಗಳೆಲ್ಲಾ ಆರೋಗ್ಯ ಸುಖ ಹೊಂದಬಹುದಾಗಿದೆ.

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ. ಇಂಗ್ಲೀಷು ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದ್ದು ಇವರಿಂದಲೇ ತಿಳಿಯಬಹುದು

ವಿಳಾಸು—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

——190 ರಿಂದ 13—2—1909 ರ ವರೆಗೆ

ಸ್ಥಳ	ಪ್ಲೇಗ್ ಹಿಡಿದದ್ದು	ಪ್ಲೇಗ್ ಸತ್ತದ್ದು	ಕಾಲರಾ ಹಿಡಿದದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	13	8	0	0
ಮೈಸೂರು	4	2	0	0
ಬೆಂಗಳೂರು ಡಿಸ್ಟ್ರಿಕ್ಟು	[illegible]	[illegible]	0	0
ಮೈಸೂರು "	11	10	0	0
ಕೋಲಾರ್	16	10	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	10	[illegible]	4	4
ಹಾಸನ	[illegible]	[illegible]	[illegible]	0
ಚಿತ್ರದುರ್ಗ	0	1	0	0
ಕಡೂರು	13	8	3	1
ಶಿವಮೊಗ್ಗಾ	3	0	0	0
ಸಂಸ್ಥಾನದಲ್ಲಿ ಜುಮ್ಲಾ	[illegible]	[illegible]	7	5

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಮಾಘ ಬಹುಳ ಷ[illegible] ಗುರುವಾರದಿಂದ ಫಾಲ್ಗುಣ ಶುದ್ಧ ದಶಮಿ ಬುಧವಾರದ ವರೆಗೆ [illegible]

೧೯೦೯ ನೇ ಫೆಬ್ರವರಿ ಮತ್ತು ಮಾರ್ಚಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಇಂಗ್ಲೀಷ್ ತಾರೀಖು
[illegible]	ಗುರು	[illegible]	[illegible] 18	[illegible]	018	14
[illegible]	ಶುಕ್ರ	[illegible]	18 1	[illegible]	[illegible]	15
7	[illegible]	[illegible]	16 0		31	16
[illegible]	ಸೋಮ	[illegible]	14 [illegible]	[illegible]	1 01	17
1	[illegible]	[illegible]	[illegible]	[illegible]	3 3	18
[illegible]	[illegible]	[illegible]	[illegible]	[illegible]		19
3	[illegible]	[illegible]	[illegible]	[illegible]	[illegible]	20

[illegible]
ಅಮೃತಸಿದ್ಧಿಯೋಗ
ಸರ್ವತ್ರ ಏಕಾದಶಿ

ಪೇಟೆ ಧಾರಣೆ

ವಿವರ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೫ ೭ ೦	೧೯ ೮ ೦
ಕೆಂಪು ಅಕ್ಕಿ ಅವಲ್		[illegible]	೧೯ ೦ ೦
ಮೀಡಿಯಂ		[illegible]	೧೮ ೪ ೦
ಜಪಾನ್ ಅಕ್ಕಿ		೧೫ ೧೩	೨೦ ೦ ೦
ಸಣ್ಣಕ್ಕಿ ಅವಲ್		೧೭	೨೧ ೦ ೦
,, ಮೀಡಿಯಂ		೧೭ ೮ ೦	[illegible]
ತೊಗರಿ ಬೇಳೆ ಪಲ್ಲಾ ೧ಕ್ಕೆ		[illegible]	[illegible]
ಮೀಡಿಯಂ		[illegible]	[illegible]
ಹೈಗ್ ರಾಗಿ ಪಲ್ಲಾ ೧ಕ್ಕೆ		[illegible]	[illegible]
ಕಾರ್ರಾಗಿ		[illegible]	[illegible]
ಜೋಳ		[illegible]	[illegible]
ಹುಲಸಂದೆ ಪಲ್ಲಾ ೧ಕ್ಕೆ		[illegible]	[illegible]
ಬಿಳೀ ಅವರೆ		೧೧ ೨ ೦	೧೧ ೦ ೦
ಹೆಸರು		[illegible]	[illegible]
ಉದ್ದು		[illegible]	[illegible]
ಕಡಲೆ		[illegible]	[illegible]
ಎಳ್ಳು ಸೇ ೧೦೦ಕ್ಕೆ		[illegible]	[illegible]
ಹುರುಳಿ		[illegible]	೧೧ ೦ ೦
ಹರಳು ೧೦೦ ಸೇರಿಗೆ		[illegible]	[illegible]
ಶೇಂಗಾಕಾಯಿ ಮಣ ೧ಕ್ಕೆ		[illegible]	[illegible]
ಮೆಣಸಿನಕಾಯಿ		[illegible]	[illegible]
ಮೀಡಿಯಂ		೫ ೦ ೦	[illegible]
ಬೆಲ್ಲ ದೊಡ್ಡ ಅಚ್ಚು		[illegible]	[illegible]
ಒಳ್ಳೆಣ್ಣೆ ಮಣ ೧ಕ್ಕೆ		[illegible]	[illegible]
ಹರಳೆಣ್ಣೆ ,,		[illegible]	[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ		[illegible]	[illegible]
ಉಪ್ಪು		[illegible]	[illegible]
ಹುಣಸೇ ಹಣ್ಣು		[illegible]	[illegible]
,, ಹಳೇದು		[illegible]	[illegible]
ತುಪ್ಪ ಮಣ ೧ಕ್ಕೆ		[illegible]	[illegible]
ಸೀಮೆಎಣ್ಣೆ ಪೆಟ್ಟಿ ೧ಕ್ಕೆ		[illegible]	[illegible]
ತೆಂಗಿನಕಾಯಿ ೧೦೦ಕ್ಕೆ		[illegible]	[illegible]
ಅಳಲೇಕಾಯಿ ಮಣ ೧ಕ್ಕೆ		[illegible]	[illegible]
ಅಂಟುವಾಳದ ಕಾಯಿ ಮಣ ೧ಕ್ಕೆ		೦ ೧ ೦	[illegible]
ಚಿನ್ನ (ಪೌ) ಕೆಂಪು		[illegible]	[illegible]
,, ಪಸುಮೆ		[illegible]	[illegible]
,, ,, ಗಟ್ಟಿ ತೊಲ ೧ಕ್ಕೆ		[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		[illegible]	[illegible]

Printed and Published by the Rev E W THOMPSON, M A Proprietor and Manager Wesleyan Mission Press, Mysore 25/2/1909

REGISTERED
No. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೯ ನೇ ಇಸವಿ ಮಾರ್ಚಿ ತಾರೀಖು ೪ ನೇ ಗುರುವಾರ. ಸಂಚಿಕೆ ೪೦

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ತಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟಿದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [20 2]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಟ್ಟು ಗಂಟು, ಗಂಟು ಬೇನೆ, ಅಂಗವಾಯು, ವಿಪರೀತ, ಶೀತ, ಜಜ್ಜು, ಮುಂತಾದವು.

ಆರ್ ಬಿ ಸೋಜಾ, ಮೆನೆಜರ್, ಕಾಫಿ ತೋಟ ಮಡಕೇರಿ, ಬರೆಯುತ್ತಾರೆ— ನಿಮ್ಮ ಅಮೃತಾಂಜನವು ದೇಹದಲ್ಲಿಯ ಶೀತಕ್ಕೂ, ಕೆಮ್ಮಿಗೂ ... ಉತ್ತಮವಾದದ್ದು. ನನ್ನ ಕೂಲಿ ಆಳುಗಳಲ್ಲಿ ಬಹು ಜನರಿಗೆ ... ಬಾಟ್ಲಿ ಒಂದರ ಕಿಮ್ಮತ್ತು ... ಬಾಟ್ಲುಗಳಿಗೆ ... ಬಾಟ್ಲುಗಳಿಗೆ ೧೦ ೦ ೦ ... ಬಾಟ್ಲುಗಳಿಗೆ ... ವ್ಯಾಪಾರಗಾರರಿಗೆ ... ಸಿಕ್ಕುವದು

ಗಜಕರ್ಣಾದಿ ಮುಲಾಮು.

ಸುಮಾರು ... ಗಜಕರ್ಣ ತುರಿ ಕಜ್ಜಿ ಮುಂತಾದವು ... ಇದರಿಂದ ಉರಿಯು ಬರುವದಿಲ್ಲ ... ಡಬ್ಬಿ ಒಂದರ ಕಿಮ್ಮತ್ತು ...

ವಜ್ರಗುಟಿಕೆ.

... ರಕ್ತಶುದ್ಧಿ, ಮಾಟ ಒಂದರ ಕಿಮ್ಮತ್ತು ರೂ	೧ ೮ ೦
...	೨ ೯ ೦
... ಹಲ್ಲುಗಳು ಗಟ್ಟಿಯಾಗುತ್ತವೆ	೦ ೩ ೦

ಈ ಕಂಪೆನಿಯವರು ಹೊಸ ನಮೂನೆಯ ಔಷಧಗಳನ್ನು ತಯಾರಿಸುವದರ ... ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

... ಅಮೃತಾಂಜನ ಮುಂತಾದವು

THE PLACE FOR HASSAN CAPS IS HASSAN.

ನಿಮ್ಮ ... ಮೇಲಿರುವದು ?

... ಟೋಪಿ ... ಹಾಸನದ ಟೋಪಿ ... ಬೇಗ ... ತರಿಸಿಕೊಳ್ಳಿರಿ.

... ಟೋಪಿ ... ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

...

ಒಳ್ಳೇದಾದ ... ಟೋಪಿಗಳ ... ಬಣ್ಣ ಹೋಗುವದಿಲ್ಲ ...

ಕೆಂಪು, ನೀಲ, ಬಿಳಿಕೆ, ಕಾಫಿ ಬಣ್ಣದ ಟೋಪಿಗಳು ೧ ರೂ ... ೧ ರೂ ೬ ೪

... ಟೋಪಿಗಳು ... ರೂ ...

ಟೋಪಿಗಳು ೧ ರೂ ... ೧ ರೂ ... ೧ ರೂ ೬ ೪

... ಟೋಪಿಗಳು ೧ ರೂ ... ೧ ರೂ ೬ ೪ ,

ಹಸುರು ಟೋಪಿ, ... ಕೃಯದ ... ನಮ್ಮ ... ಕೊಡಲ್ಪ ... ನಮ್ಮ ವಿಳಾಸ —

... ಹಾಸನದ ಟೋಪಿ, ಕಾರ್ಖಾನೆ, ಹಾಸನ

ಜ್ವರಸುಧಾ.

81 22

ಒಂದು ಬಾಟ್ಲಿ ಕಿಮ್ಮತ್ತು ೮ ಆಣೆ — ... ಖರ್ಚು ಬೇರೆ

... ಜ್ವರ ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆ ನಾಡು ಜ್ವರ ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ಹಾಗೆ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಶಾಲಿಗಳಾದ ಡಾಕ್ಟರುಗಳು ಹೇಳುತ್ತಲಿದಾರೆ ... ತಲೆ ನೋವು ಅರೆತಲೆನೋವು, ಚಳಿಜ್ವರಗಳು, ಕೈಕಾಲು ನೋವು ಮುಂತಾದವುಗಳನ್ನು ... ಹೊತ್ತಿನಲ್ಲಿಯೇ ... ಹಾರಿಸಬಲ್ಲದು ... ಸುಧಾ ಅಂದರೆ ಅಮೃತವನ್ನು ... ಯಾವ ವಿಧವಾದ ರೋಗವೂ ಹೇಗೆ ... ಉಳಿಯುವದಿಲ್ಲವೋ ... ಜ್ವರಗಳನ್ನು ... ಒಂದು ಶೀಸೆ ಔಷದಿಯಲ್ಲಿ ಕಂಡು ಬರುವ ಅಮೋಘಗುಣವನ್ನು ಹೆಚ್ಚು ವರ್ಣನೆ ಮಾಡಲಾರೆವು

ದೇವನಹಳ್ಳಿ ಟೌನ್. ... ವೈಂ ಗೋ... ಶೆಟ್ಟಿ,
ಬೆಂಗಳೂರು ಡಿಸ್ಟ್ರಿಕ್ಟ್. • ಮೆಡಿಕಲ್ ಪ್ರಾಕ್ಟಿಷನರ್.

ಜ್ವರಹರಿ. 185

... ಜ್ವರ ... ಜ್ವರ ... ಜ್ವರ ... ಜ್ವರಗಳನ್ನೂ ... ವಾಸಿಮಾಡುವದು

... ದುರ್ಗದ ... ಮರಾಮತ್ ... ವೆಂಕಟಪತಿ ಅಯ್ಯರವರು— ... ಕಳುಹಿಸಿ ಕೊಟ್ಟ ... ಬಹಳ ಉಪಕಾರವಾಗಿದೆ ಎಂದು ಬರೆದಿದ್ದಾರೆ.

... ಆಣೆ ... ರೂ ... ರೂ ... ರೂ

... ಮಾಡಲಾಗುವದು

ಕಿಮಂಕಪ್ಪೂರ



... ಕಡವರ ಆಸ್ಪತ್ರೆ ... ಸರ್ಜನ್ ... ಕಂಪನಿಯವರು ... ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ... ಅಜೀರ್ಣಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ ಕೂಡಲೇ ಅವರ ರೋಗವು ಗುಣವಾಗುತ್ತಲಿದೆ ... ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ಎರಡು ಔಷದಗಳೂ ಊರುಮನೆಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಕಾರರಲ್ಲೂ, ಔಷದ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇಲ್ಲದೆ ಕೆಳಗಿನ ವಿಳಾಸದಿಂದಲ್ಲಿ ವಿಶೇಷ —

ಹನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

JUST RECEIVED! JUST RECEIVED!!

Stead's Books for the Bairns

(illustrated) New Numbers [5 9]

STEAD'S PENNY POPULAR TALES Sixty four Pages in a coloured Picture Cover. Each number contains a story of thrilling interest 24 numbers

CALENDARS FOR 1909.

Apply The Manager, C.L.S Book Depot, Mysore City.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ	ರೂ ೧—೧೪—೦
,, ,, ೬ ,,	,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುತ್ತಿರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸುವಂಥ ರಿಜಿಸ್ಟರ್ ನಂಬರನ್ನು ಮರೆಯದೆ ನಮೂದಿಸತಕ್ಕದ್ದು.

ನಮ್ಮ ವಿಳಾಸ —ಮ್ಯಾನೇಜರು, ವೃತ್ತಾಂತ ಪತ್ರಿಕೆ, ಮೈಸೂರು.

ನೋಡಿರಿ "ಪ್ರೋತ್ಸಾಹಕೋಡಿದೆ" ತರಿಸಿರಿ

98 15

ನೂತನ ... ಬಹಳ ಕಮ್ಮಿ ದರದಲ್ಲಿ ... ಟೋಪಿ ... ಸುಪೀರಿಯರ್ ಉಲ್ಲನ್

... ಉಲ್ಲನ್ ಬಂಡಲ್ ೧ಕ್ಕೆ ರೂ ೩ ೦-೦

... ಟೋಪಿ ... ಸುಪೀರಿಯರ್ ಉಲ್ಲನ್ ಬಂಡಲ್ ೧ಕ್ಕೆ ರೂ ೩-೭ ೦

೧ ಟೋಪಿ ಉಲ್ಲನ್ ... (ಸುಪೀರಿಯರ್) ರೂ ೦ ೬-೦

... ಟೋಪಿ ... ರೂ ... ೦-೧ ೬

... ಉಲ್ಲನ್ ... ಬಂಡಲ್ ... ಉಲ್ಲನ್ ... ತರಿಸುವವರಿಗೆ ... ಸಿಗುವುದು

ಈಗ ನಮ್ಮಲ್ಲಿ ಬೇರೆ ಒಂದು ... ವಾಡಿಕೆ ... ಊರುಗಳಲ್ಲಿ ದೊರೆಯುವ ... ಕಳುಹಿಸುವ ... ಕೆಟಲಾಗನ್ನು ಕೇಳುವವರಿಗೆ ... ನಮ್ಮ ವಿಳಾಸ

... ಉಲ್ಲನ್ ಮಾರ್ಟ್, ಮಂಗಳೂರು

ವಾಳ್ಯದ ವೆಂಕಟಾಚಲ ಪಂಡಿತರ ಔಷಧಗಳು



೧ ಲೋಕಾನಂದ ... ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ... ಕಸ್ತೂರಿ ಮೊದಲಾದ ... ತಯಾರಿಸಿದೆ ... ಜ್ವರ, ... ಕೆಮ್ಮು, ... ರೋಗಗಳಿಗೆ ... ಕೊಟ್ಟರೆ ... ಗುಣವಾಗುವುದು.

ಬಾಣಂತಿಯರಿಗೆ ... ಉಪಯೋಗಿಸುತ್ತ ... ರಕ್ತ ... ವಾಯು ... ಬಲವಾದ ... ಹೆಚ್ಚಿಸಿ, ... ಜ್ವರ, ... ಗುಣಪಡಿಸುತ್ತದೆ.

ಇವನ್ನು ಸೇವಿಸುತ್ತಿರುವವರು ... ಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷದದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ... ಕುಪ್ಪಿಗೆ ೧ ಕುಪ್ಪಿ ಹೆಚ್ಚು.

೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ವಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.
ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಪ್ರಸಿದ್ಧವಾದ ಮೂರು ಪುಸ್ತಕಗಳನ್ನು ತರಿಸಿ.

10 9

"ಬ್ರಹ್ಮಚರ್ಯ" ವೆಂಬ ಮರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪುಸ್ತಕವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರ ವರಿವಿಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

ವಿಳಾಸ—ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು



49

ಬೆನ್ನುಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಕಿಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಡಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಾಂಸಕಟ್ಟುಗಳಲ್ಲೂ ಗಾಯನಾಗುವುದು, ಊದಿಕೊಳ್ಳುವುದು, ತೀವ್ರವಾಗಿ ಕಳಿಯುವ ಬಾಧೆ, ಕಿಂಡಕ್ಕೆ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಆಗಾಗ್ಗೆ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕ್ಷಯಿಸುವ ಮುಚ ದ್ರವ್ಯವೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 ೯

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂಥವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶಿ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಮಗೆ ಗೊತ್ತಾಗುವುದು ಗಜ ಒಂದಕ್ಕೆ [illegible] ಆಣೆ ಮೊದಲು [illegible] ಆಣೆ ವರೆಗೂ ಜಿಲ್ಲರೆಯಾಗಿ ಅಗಲೀ ಒಟ್ಟಾಗಿ ಅಗಲೀ [illegible] ಕೋಟುಗಳು, ಜಾಕೆಟುಗಳು, ಮುಸುಕಿನ ಟೋಪಿಗಳು, [illegible] ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಆಲಸ್ಯಮಾಡಿದರೆ ದೊರೆಯುವುದಿಲ್ಲ

25 1

1909 ನೇ ಇಸವಿ ಕ್ಯಾಲೆಂಡರುಗಳ ಬಹುಮಾನ

ಫೆಬ್ರವರಿ ತಿಂಗಳು ಆಖೈರಿನೊಳಗೆ ನಮಗೆ ಒಂದಾಣೆ ಕಾರ್ಡಿನಲ್ಲಿ ವಿಳಾಸವನ್ನು ಬರೆದು ಕಳುಹಿಸತಕ್ಕವರಿಗೆ ಒಂದು ಸೊಗಸಾದ ವಿಚಿತ್ರವಾದ ಕ್ಯಾಲೆಂಡರನ್ನು ಉಚಿತವಾಗಿ ಕಳುಹಿಸುವೆವು ಶೀಘ್ರವಾಗಿ ಬರೆಯಿರಿ

ವಿಳಾಸ —ಪಿ ರೆ ಲ್ಲಿ ವಾಟ್ ಕಂಪನಿ, ಪಾರ್ಕ್‌ಟವುನ್, ಮದರಾಸು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

48-11

ತಲೆನೋವು, ವಾಯುನೋವು, ಸೀತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು —ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಒಂದೇಕ್ಷಣದೊಳಗಾಗಿ ನಿಶ್ಚಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆ ದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಉಪಯೋಗಿಸುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೬ ಆಣೆ ಆದರೆ ೩ ಅಥವಾ ಹೆಚ್ಚು ಬುಡ್ಡಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬುಡ್ಡಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್ ಪೀಟರ್ಸನ್

೩೭, ವೇಪಮರತ್ತಿಪಿಳ್ಳೆ ಬೀದಿ, ವೇಪೇರಿ, ಮದರಾಸ್

ಕ್ಷಾಮದ ಫಂಡು

ಈಗಿನ ಕ್ಷಾಮದ ನಿವಾರಣಾರ್ಥವಾಗಿ ಮಾಡಲ್ಪಡುವ ಚಂದಾ ಕೊಡುವುದಾಗಿ ವಾಗ್ದಾನಮಾಡಿರತಕ್ಕ ಸಕಲ ಜನರೂ ತಮ್ಮ ಚಂದಾ ಹಣಗಳನ್ನು ಈ ಕೆಳಗೆ ರುಜು ಮಾಡುವವರ ಆಫೀಸಿಗೆ ಕಳುಹಿಸಿ ಕೊಟ್ಟು ರಸೀದಿ ಪಡೆಯಬಹುದು

[illegible] ಎಂ ಜಿ ಕೃಷ್ಣಸ್ವಾಮಿರಾವ್,

ವೈಸ್ ಪ್ರೆಸಿಡೆಂಟ್,

ಮ್ಯುನಿಸಿಪಲ್ ಆಫೀಸ್, ಮೈಸೂರು

MUNICIPAL NOTICE

27-3

List showing the rates of LAMP-POSTS and LANTERNS &c available for sale in the Municipal Stores —

No	PARTICULARS.			PRICE OF EACH ARTICLE
1	Ornamental cast iron lamp post		Rs	10—0—0
2	Cast iron lamp post			8 0—0
3	Stone lamp post			3—0—0
4	Street lantern	Middle size	„	1—4—0
5	Iron stand for	do	„	0—8 0
6	Street lantern	Small size	,	1—0- 0
7	Iron stand for	do	„	0—8 0
8	Railway burner No I		,	1—0—0
9	do do No II			0 12—0
10	Iron stand made of iron plates		,	0 —6—0
11	Teakwood lamp post		,	2—0—0

Mysore M G KRISHNASWAMI RAO

9 2 1909 *Vice President,*

City Municipal Office

ಕೇಶವರ್ಧಕತೈಲ

21 3

ನೂತನವಾಗಿ ಕಂಡು ಹಿಡಿಯಲ್ಪಟ್ಟದ್ದು

ತಲೆಕೂದಲು ಬೆಳೆಯಲು ಉತ್ತಮವಾದ ಸುಗಂಧ ತೈಲ

[illegible]

ಯೋಗ್ಯವಾದುದು ಇದರ ಬೆಲೆ 1 ಸೀಸೆ 1ಕ್ಕೆ ರೂ 1—0—0

[illegible]

ಧರ್ಮಪದ

21

ಎಂಬ ಕನ್ನಡ ಪುಸ್ತಕವು ನಮ್ಮ ಇಂಡಿಯಾ ದೇಶದಲ್ಲಿ ೩,೦೦೦ ವರ್ಷಗಳಿಂದೀಚೆಗೆ ಯಾರಾಗಲು ಪ್ರಕಟಿಸಿರಲಿಲ್ಲವು [illegible] ಜಪಾನ್, ಸಯಾಂ, ಬ್ರಹ್ಮದೇಶ, ಸಿಲೋನ್ (ಲಂಕಾ) ಮುಂತಾದ ದೇಶಗಳ ಜನರಿಂದ ಮಹಾ ಪ್ರಮಾಣ ಗ್ರಂಥವೆಂದು ಪೂಜಿಸಲ್ಪಟ್ಟಿದೆ ಹಿಂದುಗಳಿಗೆ ಮುಖ್ಯ ಪ್ರಮಾಣಗಳಾದ ವೇದಗಳು [illegible] ಉಪನಿಷತ್ತುಗಳು, [illegible] ವೇದಾಂತ ಗ್ರಂಥಗಳು, ಧರ್ಮ ಶಾಸ್ತ್ರಗಳು ಮುಂತಾದ ಗ್ರಂಥಗಳಿಂದಲೂ ೧೨ ಬೌದ್ಧ ಗ್ರಂಥಗಳಿಂದಲೂ ಸಮಸಮುಂಜಸ ಸಾಕ್ಷ್ಯಗಳನ್ನು ಗ್ರಂಥಕರ್ತರು ಈ ಗ್ರಂಥಕ್ಕೆ ಉದ್ಧರಿಸಿ ತೋರಿಸಿರುವರು ಇದಕ್ಕೆ [illegible] ಎಂ ಶಾಮರಾವ್ ಎಂ ಎ ಯವರು ಇಂಗ್ಲಿಷಿನಲ್ಲಿ ಶ್ರೇಷ್ಠವಾದ ಉಪೋದ್ಘಾತವನ್ನು ಬರೆದಿರುವರು [illegible]

[illegible]

ಮೆ|| ಕೆ ಬಿ [illegible], ಜನರಲ್ ಮರ್ಚೆಂಟ್,

ಚಿಕ್ಕಪೇಟೆ, ಬೆಂಗಳೂರು ಸಿಟಿ

ಸಂಜೀವಿನೀ ಔಷಧಾಲಯ, ಮೈಸೂರು.

2 1

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜ್ವರ, ವಾಯುನೋವುಗಳೂ ಹಳೇಜ್ವರ, ಕೆಮ್ಮು, ಅಜೀರ್ಣ, ತಲೆನೋವು, ಸ್ತ್ರೀರೋಗ, [illegible] ಮುಂತಾದ ರೋಗಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ ನರಗಳ ಪುಷ್ಟಿ ರಕ್ತಪುಷ್ಟಿಗಳನ್ನು ಹೆಚ್ಚಿಸಿ, [illegible] ಬಲ ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿ ಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ [illegible] ೩ ರೂಪಾಯಿ

ಸಂಜೀವಿನೀ ವಟ್ಟಾ —ನಾನಾ ಜಾತಿ ಜ್ವರಗಳೂ, ಪ್ಲೇಗು ಉಪಶಮನಾಯು [illegible] ಇವುಗಳಿಗೆ ಖಾತರಾದ ಔಷಧ [illegible] ಪ್ಲೇಗಿನಿಂದ ಗುಣಹೊಂದಿದಾರೆ [illegible] ಕ್ರಯ ಪೆಟ್ಟಿ ೧ಕ್ಕೆ ೧ ರೂಪಾಯಿ

ಕಾಲಕೂಟ ವಟಿಕ ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ [illegible] ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಖಾತಿ [illegible] —ಉಬ್ಬಸ, ಕೆಂಗಣ್ಣು, ವಾಚಗಟ್ಟು [illegible] ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿ [illegible] ವನ್ನು ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ [illegible] ೧ಕ್ಕೆ ೫ ಆಣೆ [illegible] ಆಣೆ

ಇನ್ನೂ ಅನೇಕ ಔಷಧಗಳೂ, ತಾ [illegible] ಅತ್ತರುಗಳೂ ಗಂಧವಟ್ಟಿಗಳೂ [illegible] ಡಾಕ್ಟರ್ ಮತ್ತು ಡಾಕ್ಟರ್‌ಗಳ [illegible] ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,

ಪ್ರೊಪ್ರೈಟರ್

ಮಕ್ಕಳ ರೋಗಗಳನ್ನು

ಯಾವಾಗಲೂ [illegible] ಪೂರಾವಾಗಿ

[illegible] ಮಕ್ಕಳು [illegible]

ಆಹಾರರುಚಿ ಕಡಿಮೆ [illegible] ಇಂದ ತಿಂದಲೇ

SCOTT'S EMULSION. 69

(ಸ್ಕಾಟ್ಸ್ ಇಮಲ್‌ಷನ್)

[illegible]



[illegible]

ಮೀನಿನಿಂದ ಮುಕ್ತಿ ತಯಾರಿಸಲ್ಪಟ್ಟ

[illegible]

ಲಂಡನ್ [illegible]

ಈ [illegible] ಇರುವ ಔಷಧವನ್ನೇ ತೆಗೆದುಕೊಳ್ಳಿ

ವೃತ್ತಾಂತ ಪತ್ರಿಕೆ.

———.o:———

೧೯೦೯ ನೇ ಇಸವಿ ಮಾರ್ಚಿ ತಾ ೪ ನೇ ಗುರುವಾರ

ಮೈಸೂರು ಸಂಸ್ಥಾನದ ವ್ಯವಸಾಯ ಬ್ಯಾಂಕುಗಳು.

ಮೈಸೂರು ಸಂಸ್ಥಾನದಲ್ಲಿರುವ ವ್ಯವಸಾಯದ ಬ್ಯಾಂಕುಗಳ ಇನ್ಸ್‌ಪೆಕ್ಟರಾದ ಮ|| ಎಂ. ಶಾಮರಾಯರವರು ಆ ಬ್ಯಾಂಕುಗಳ ೧೯೦೭—೦೮ ನೇ ಸಾಲಿನ ವಾರ್ಷಿಕ ರಿಪೋರ್ಟನ್ನು ಪ್ರಕಟಿಸಿರುತ್ತಾರೆ. ಈ ರಿಪೋರ್ಟು ಅಷ್ಟೇನೂ ಸಂತೋಷಕರವಾಗಿಲ್ಲ. ಮೈಸೂರು ಗವರ್ನಮೆಂಟಿನವರು ಕೆಲವು ವರುಷಗಳ ಕೆಳಗೆ ವಿಶೇಷ ದಯಾರಸವನ್ನು ಪ್ರಕಾಶಪಡಿಸಿ ಬಹಳ ಹಣವನ್ನು ಕೊಟ್ಟು ಈ ಬ್ಯಾಂಕುಗಳನ್ನು ಸ್ಥಾಪನೆಮಾಡಿ, ಅವುಗಳ ಮೂಲಕ ರೈತ ಪ್ರಜೆಗಳಿಗೂ ಪ್ಲಾಂಟರುಗಳಿಗೂ ಜಮೀನು ಮತ್ತು ತೋಟಗಳ ಆಬಾದಿಗಾಗಿ ಸುಲಭ ಬಡ್ಡಿಗೆ ಸಾಲ ಕೊಡಲಾರಂಭಿಸಿದರು. ವ್ಯವಸಾಯವು ಅಭಿವೃದ್ಧಿಹೊಂದಿ ಗವರ್ನಮೆಂಟಿನ ಹಣವು ಸರಿಯಾಗಿ ವಾಪಸು ಬಂದೀತೆಂದು ಸರ್ಕಾರದವರು ನಂಬಿದರು. ಈ ರೀತಿ ಸರ್ಕಾರದ ಹಣ ಸುಲಭ ಬಡ್ಡಿಗೆ ಸಿಕ್ಕುವುದೆಂದು ಗೊತ್ತಾದಕೂಡಲೇ ಅನೇಕಾನೇಕ ಜನರು ಆತುರವಾಗಿ ಒಂದು ಸಾಲ ಪಡೆದುಕೊಂಡದ್ದಲ್ಲದೆ, ಅದನ್ನು ವಿನಿಯೋಗಿಸಿ ಸ್ವಪ್ರಯೋಜನವನ್ನು ಮಾಡಿಕೊಂಡರು. ಸಾಲ ವಾಪತಿ ಆಗಬೇಕಾದ ಸಮಯವು ಒದಗಿದಾಗ ಅದನ್ನು ವಸೂಲ್ಮಾಡುವುದು ಅಸಾಧ್ಯವೆಂದು ಕಂಡುಬಂದಿತು. ಗವರ್ನಮೆಂಟಿನವರು ಆ ಸಾಲದ ವಸೂಲಿಗಾಗಿ ಕಠಿಣತರವಾದ ನಿಬಂಧನೆಗಳನ್ನು ಮಾಡಿದ್ದಲ್ಲದೆ ಆ ಬ್ಯಾಂಕುಗಳ ಕಾರುಬಾರುಗಳನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಒಬ್ಬ ಅಧಿಕಾರಿಯನ್ನೂ ನೇಮಿಸಬೇಕಾಯಿತು.

ಈ ಬ್ಯಾಂಕುಗಳ ಇನ್ಸ್‌ಪೆಕ್ಟರವರು ಪ್ರಕಟಿಸಿರುವ ರಿಪೋರ್ಟು ಸಮರ್ಪಕವಾದದ್ದಲ್ಲ. ಆದರೂ ಗವರ್ನಮೆಂಟಿನವರು ಉದ್ದೇಶಪಟ್ಟಂತೆ ಆ ಬ್ಯಾಂಕುಗಳಿಂದ ಪ್ರಯೋಜನವಾಗಲಿಲ್ಲವೆಂಬುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಯಾತಕ್ಕೆಂದರೆ ಇನ್ಸ್‌ಪೆಕ್ಟರವರೇ ಈ ಬ್ಯಾಂಕುಗಳ ನಡವಳಿಕೆಯ ವಿಷಯದಲ್ಲಿ ಹೀಗೆ ಹೇಳಿರುತ್ತಾರೆ.—ಈ ಬ್ಯಾಂಕುಗಳ ಮೆಂಬರುಗಳಲ್ಲಿ ಸ್ವಾರ್ಥ ಬುದ್ಧಿಯೇ ವಿಶೇಷವಾಗಿದೆ. ಈ ಸಂಸ್ಥಾನದ ವ್ಯವಸಾಯವನ್ನು ಅಭಿವೃದ್ಧಿಗೆ ತರಬೇಕೆಂದು ಗವರ್ನಮೆಂಟಿನವರು ಸುಲಭ ಬಡ್ಡಿಗೆ ಸಾಲ ದೊರಕುವಂತೆ ಈ ಬ್ಯಾಂಕುಗಳನ್ನು ಸ್ಥಾಪಿಸಿದರು. ಮೆಂಬರುಗಳು ಸಾಲವನ್ನು ಪಡೆದುಕೊಂಡು, ಅದರಿಂದ ಬರುವ ಲಾಭವನ್ನೆಲ್ಲಾ ತಮ್ಮ ಸ್ವಪ್ರಯೋಜನಕ್ಕಾಗಿಯೇ ವಿನಿಯೋಗಿಸಿಕೊಳ್ಳುವುದರಲ್ಲಿ ಆಸೆ ಪಡತಕ್ಕವರಾಗಿದ್ದಾರೆ. ಅವರ ಉದ್ದೇಶವು ಈ ರೀತಿ ಇರೋಣವಾದುದರಿಂದಲೇ ಈ ಬ್ಯಾಂಕುಗಳು ಅಭಿವೃದ್ಧಿಹೊಂದದೆ ಅವನತಿಯುಂಟಾಗಿದೆ.

ಈ ಸಾಲಿನಲ್ಲಿ ಈ ಬ್ಯಾಂಕುಗಳ ಸಂಖ್ಯೆಯು ೯೬ ರಿಂದ ೮೫ಕ್ಕೆ ಇಳಿಯಿತೆಂದೂ, ಗವರ್ನಮೆಂಟಿನವರು ಹನ್ನೊಂದು ಬ್ಯಾಂಕುಗಳನ್ನು ಮುಚ್ಚಿಬಿಡುವಂತೆ ಹುಕುಂ ಕೊಟ್ಟರೆಂದೂ, ಈ ಪೈಕಿ ಎಂಟು ಬ್ಯಾಂಕುಗಳಲ್ಲಿ ಲೇವಾದೇವಿ ನಿಲ್ಲಿಸಲಾಗಿದೆ ಎಂದೂ ಗೊತ್ತಾಗುತ್ತದೆ. ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ತಳಗವಾರ, ಮಾಲೂರು, ಕುಣಿಗಲ್, ಕನಕಪುರ(?) ಪೇಟೆ, ಅರದೇಶಹಳ್ಳಿಗಳಲ್ಲಿದ್ದ ಸಾಲ್ಲ ವ್ಯವಸಾಯದ ಬ್ಯಾಂಕುಗಳು, ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಚಿಕ್ಕನಾಯಕನಹಳ್ಳಿಯ ಬ್ಯಾಂಕೂ, ಮೈಸೂರು ಡಿಸ್ಟ್ರಿಕ್ಟು ಕ್ರಾಂತಿರಾಕ್ಸಿನ ಬ್ಯಾಂಕೂ, ಶಿವಮೊಗ್ಗಾ ಡಿಸ್ಟ್ರಿಕ್ಟು ಬೋಗಿನಲ್ಲಿದ್ದ ಬ್ಯಾಂಕೂ, ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಸೇರಿದ ಮಲ್ಲಾಪುರದ ಬ್ಯಾಂಕೂ, ಅಂತೂ ಎಂಟು ಬ್ಯಾಂಕುಗಳು ಮುಚ್ಚಲ್ಪಟ್ಟವು. ಈ ರಿಪೋರ್ಟನ್ನು ನೋಡಿದಲ್ಲಿ ಸದ್ಯ ೫೭ ಬ್ಯಾಂಕುಗಳಲ್ಲಿ ಲೇವಾದೇವಿ ಜರುಗುತ್ತಿದೆ ಎಂದು ಗೊತ್ತಾಗುವುದು. ಇವರ ಈ ಪೈಕಿ ಕೆಲವು ಬ್ಯಾಂಕುಗಳೊಳಗೆ ಸ್ವಲ್ಪ ಮಟ್ಟಿಗಾದ ಖರ್ಚು ಬಾಬುಗಳನ್ನು ಬಹಳ ಹೆಚ್ಚಾಗಿ ಇಟ್ಟುಕೊಂಡಿರುವರು. ರೈತರೂ ಜಮೀನ್ದಾರರೂ ತಮ್ಮ ಹಣವನ್ನು ತಂದು ಈ ಬ್ಯಾಂಕುಗಳಿಗೆ ಕೊಟ್ಟಿರುವುದು ಸ್ವಲ್ಪವಾಗಿದೆ. ಅದಕಾರಣ ಇವುಗಳ ಕಾರ್ಯಕ್ರಮದಲ್ಲಿ ಮುಚ್ಚಿ ಹೋಗಬಹುದೆಂದು ಕಾಣುವುದು. ಈ ಬ್ಯಾಂಕುಗಳಿಂದ ಮೆಂಬರುಗಳಿಗೆ ಯಾತಕ್ಕಾಗಿ ಸಾಲ ಕೊಟ್ಟಿರುವುದು ಗೊತ್ತಾಗುವುದಿಲ್ಲ. ಸಾಲ ತೆಗೆದುಕೊಂಡ ಹಣವನ್ನು ಅವರು ಅನ್ಯಥಾ ಖರ್ಚು ಮಾಡಿಕೊಂಡು, ಸಾಲ್ಲ ಸಕ್ಕಾದ ಕಾರಣಗಳನ್ನು ನಮೂದು ಮಾಡುತ್ತಾರೆ ಎಂಬುದಾಗಿ ಇನ್ಸ್‌ಪೆಕ್ಟರವರು ತಿಳಿಸಿರುವರು. ಇಂಥಾ ರಿಪೋರ್ಟನ್ನು ಓದಿ ನೋಡಿದಾಗ ನಮಗೆ ಬಹಳ ವಿಷಾದವಾಯಿತು. ಗವರ್ನಮೆಂಟಿನವರ ಉದ್ದೇಶವು ನೆರವೇರಲಿಲ್ಲ. ಅವರ ನಿರೀಕ್ಷಣೆಯು ವ್ಯರ್ಥವಾಗಿ ಪರಿಣಮಿಸಿತು.

ಈ ಬ್ಯಾಂಕುಗಳು ಅಭಿವೃದ್ಧಿಗೆ ಬಾರದಿರುವುದಕ್ಕೆ ಮೆಂಬರುಗಳ ಬುದ್ಧಿಕುಶಲತೆಯು ಅಷ್ಟೇನೂ ಅವಶ್ಯವಾಗಿಲ್ಲ. ಅವರು ಪವಿತ್ರರಾಗಿಯೂ, ಸದ್ಗುಣಿಗಳಾಗಿಯೂ, ಸತ್ಯವಂತರಾಗಿಯೂ ಆಗಬೇಕಾಗಿರುವುದೊಂದೇ ಎಲ್ಲಕ್ಕಿಂತ ದೊಡ್ಡ ಅವಶ್ಯಕತೆಯಾಗಿರುತ್ತದೆ. ಮೆಂಬರುಗಳು ಪ್ರಾಮಾಣಿಕರುಗಳಾಗಿದ್ದರು, ಪರರ ಹಣದಿಂದ ಪ್ರಯೋಜನ ಹೊಂದಬೇಕೆನ್ನುವರು, ಅವರಲ್ಲಿ ನೋಡುವಂತಿ ಉದ್ದೇಶಪಟ್ಟ ಕಾರ್ಯಕ್ಕಲ್ಲದೆ ಇತರ ಕೆಲಸಗಳಿಗೆ ಸಾಲ ಕೊಟ್ಟು ಬ್ಯಾಂಕಿನ ಹಣವನ್ನು ದುರ್ವಿನಿಯೋಗ ಪಡಿಸಿದಾರೆ. ಇಂಥಾ ದುರ್ಗುಣಗಳು ಸಾಮಾನ್ಯವಾಗಿ ಕಾಣುತ್ತಾ ಬರುವಲ್ಲಿ ಮೈಸೂರು ಸಂಸ್ಥಾನವು ಅಭಿವೃದ್ಧಿ ಹೊಂದುವುದಾಗಲಿ ಐಶ್ವರ್ಯಯುಕ್ತವಾಗಲಿ ಆಗುವುದು ಅಸಾಧ್ಯವಾಗಿರುತ್ತದೆ. ಈ ದೇಶದ ಶ್ರೇಯಸ್ಸಿಗೆ ಬೇಕಾಗಿರುವುದು ಅಪಾರವಾದ ವಿದ್ಯೆಯಲ್ಲ; ಪ್ರಜೆಗಳು ಮೋಸ, ಕೃತ್ರಿಮ, ಅಸತ್ಯತೆಗಳನ್ನು ತ್ಯಜಿಸಿ ಸತ್ಯವಂತರೂ ಸಚ್ಚರಿತ್ರರೂ ಆಗಬೇಕಾಗಿರುತ್ತದೆ. ಸ್ವಾರ್ಥತೆಯು ನಿರ್ನಾಮವಾಗಿ ಪರಾರ್ಥವು ಜನರಲ್ಲಿ ರಂಜಿಸಬೇಕು. ಆಗಲೀಗ ದೇಶೋನ್ನತಿಗೂ ಶ್ರೇಯೋಭಿವೃದ್ಧಿಗೂ ಯಾವ ಅಡ್ಡಿಯೂ ಉಂಟಾಗಲಾರದೆಂದು ನಿರೀಕ್ಷಿಸ ಬಹುದಾಗಿದೆ.

ಒಳದೇಶದ ವೃತ್ತಾಂತಗಳು.

ಶ್ರೀಮತ್ ಯುವರಾಜರವರು ಜಪಾನ್ ರಾಜ್ಯದಿಂದ ಹಿಂತಿರುಗಿ ರಾಜಧಾನಿಯನ್ನು ಕುರಿತು ದಯಮಾಡುತ್ತಿದಾರೆ. ಅವರು ಈ ಸಲ ಯುಗಾದೀ ಹಬ್ಬದೊಳಗಾಗಿ ಮೈಸೂರನ್ನು ತಲಪುವರೆಂದು ಕೇಳುತ್ತೇವೆ.

• • •

ಬೆಂಗಳೂರು ಚೀಫ್ ಕೋರ್ಟ್ ಚೀಫ್ ಜಡ್ಜಿಯವರಾದ ಮ|| ಸ್ಟಾನ್ಲಿ ಇಸ್ಮಾಯಲ್‌ಯವರು ಸಂಸಾರ ಸಹಿತ ರಜಾ ಪಡೆದು ಸೀಮೆಗೆ ಹೋಗಿ ಮುಂದಿನ ಜೂನ್ ತಿಂಗಳಲ್ಲಿ ವಾಪಸು ಬರುತ್ತಾರೆಂದು ಕೇಳುತ್ತೇವೆ.

• • •

ಸರಕಾರಿ ಛಾಪಾ ಕಾಗದಗಳನ್ನು ಡಿಸ್ಟ್ರಿಕ್ಟ್ ಖಜಾನೆಯಿಂದ ವೆಂಡರುಗಳಿಗೂ ಇತರರಿಗೂ ಬಳಕೆ ಮಾಡುವಾಗ್ಗೆ ಅವುಗಳ ತಲೆಯ ಮೇಲೆ ಡಿಸ್ಟ್ರಿಕ್ಟ್ ಖಜಾನೆಯ ಮೊಹರನ್ನು ಒತ್ತಿ ಕೊಡಬೇಕೆಂದು ಸರ್ಕಾರದವರು ವಿಧಿಸಿರುತ್ತಾರೆ.

• • •

ಬೆಂಗಳೂರಿನಲ್ಲಿರುವ ಗವರ್ನಮೆಂಟ್ ಸೆಂಟ್ರಲ್ ಪ್ರೆಸ್ಸಿನ ಸೂಪರಿಂಟೆಂಡೆಂಟರಾದ ಮಿ. ಪಿ. ಎಚ್. ಯೇಟ್ಸ್‌ಯವರು ಒಂದು ತಿಂಗಳ ರಜಾ ಪಡೆದು, ಅಲ್ಲಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವವರಾಗಿದ್ದಾರೆಂದು ಪ್ರಕಟವಾಗಿದೆ.

• • •

ಒಬ್ಬ ಬಾತ್ಮೀದಾರರು ಬರೆಯುವುದು:—ಅಂತರವಳ್ಳಿ ಸಂಸ್ಥಾನದ ಪಟ್ಟದ ಸ್ವಾಮಿಗಳು ಮೈಸೂರು ಡಿಸ್ಟ್ರಿಕ್ಟು ಪ್ರಾಂತ್ಯ ಸಾಮಾನ್ಯ ಸಲ್ಲಮಗಳೊಡನೆ ದಯಮಾಡಿಸೋಣಾಗಿದೆ. ಅವರು ಈಗ ನಂಜನಗೂಡಿನ ಮಠದಲ್ಲಿ ಇನ್ನೂ ಹದಿನೈದು ದಿನ ಇದ್ದು ಮುಂದಕ್ಕೆ ಪ್ರಯಾಣ ಮಾಡುವವರಾಗಿದಾರೆ.

• • •

ಶ್ರೀ ಶಿವಗಂಗಾ ಮಹಾಕ್ಷೇತ್ರವೆಂಬಲ್ಲಿ ಪ್ರತಿವರುಷವೂ ನಡೆಯುತ್ತಿರುವ ರಥೋತ್ಸವಕ್ಕೆ ಹೊಸ ಬೆಳ್ಳಿ ಪಾಲಕಿ ಹೊಸ ಕೊಳವು ಇವು ಕೆಲಸವು ಬಾಕಿ ಇರುವುದರಿಂದ ಯುಗಾದಿ ಹಬ್ಬದಲ್ಲಿ ನಡೆಯುವಂತೆ ನಿಶ್ಚಯವಾಗಿದೆ ಎಂತಲೂ, ಅಗ್ರ ಎತ್ತುಗಳ ಪಂಕ್ತಿಯೂ ಸೇರುವಂತೆ ವಿಸ್ತಾರವಾಗಿದೆ ಎಂತಲೂ ಅಲ್ಲಿನ ಉದ್ಯಾನಸ್ವಾಮಿಯವರು ತಿಳಿಸುತ್ತಾರೆ.

• • •

ಶ್ರೀಮತ್ ನಂಜರಾಜ ಬಹದ್ದೂರರವರ ಪತ್ನಿಯವರು ತಮ್ಮಲ್ಲಿದ್ದ ಕೆಲವು ನಗಗಳನ್ನೂ ಚಿನ್ನ ಬೆಳ್ಳಿ ಪದಾರ್ಥಗಳನ್ನೂ ಅರಮನೆ ಅಮೀನರವರ ಮೂಲಕ ಕಳೆದವಾರ ಹರಾಜು ಮಾಡಿಸಿದರು. ಅದರಿಂದ ಸುಮಾರು ೧೨|| ಸಾವಿರ ರೂಪಾಯಿ ಹುಟ್ಟಿದ್ದಾಯಿತು. ಆಕೆಯವರು ಈ ಹಣವನ್ನು ಧರ್ಮ ಕೆಲಸಕ್ಕೆ ವಿನಿಯೋಗಿಸುವವರಾಗಿದಾರೆಂದು ವರ್ತಮಾನವಿದೆ.

• • •

ಕಳೆದ ಶುಕ್ರವಾರ ಸಾಯಂಕಾಲ ಬೆಂಗಳೂರು ರೆಸಿಡೆನ್ಸಿ ಬಂಗಲೆಯಲ್ಲಿ ಬ್ರಿಟಿಷ್ ರೆಸಿಡೆಂಟರವರು ಮ|| ಮೂರ್‌ಯವರನ್ನೂ ಅವರ ಪತ್ನಿಯವರನ್ನೂ ಕರೆಸಿಕೊಂಡು ಒಂದು ಔತಣವನ್ನು ಮಾಡಿದರು. ಬೆಂಗಳೂರಿನಲ್ಲಿರುವ ಸರದಾರರೂ ದೊಡ್ಡ ಮನುಷ್ಯರೂ ಕರೆಯಲ್ಪಟ್ಟಿದ್ದರು. ನಮ್ಮ ಶ್ರೀಮನ್ ಮಹಾರಾಜರವರೂ, ದಿವಾನರವರೂ ಅಲ್ಲಿಗೆ ದಯಮಾಡಿದ್ದರು.

• • •

ಶ್ರೀರಂಗಪಟ್ಟಣಕ್ಕೂ ಮೇಲುಕೋಟೆಗೂ ನಡುವೆ ಬೆಳಕವಾಡಿ(?) ಗ್ರಾಮದಲ್ಲಿರುವ ಬಾಳೆ ಅರಸಿನವರ ದಮ ಸತ್ರವನ್ನೂ, ಈ ಸತ್ರಕ್ಕೆ ಬಿಟ್ಟು ಕೊಟ್ಟಿರುವ ಮಾನ ಕಸಬಾ, ಬೆಳ್ಳಾಳೆ ಎಂಬ ಧರ್ಮಾದಾಯದ ಗ್ರಾಮಗಳ ಮೇಲ್ವಿಚಾರಣೆಯನ್ನೂ ಗವರ್ನಮೆಂಟಿನವರು ಮುಜರಾಯಿ ಇಲಾಖೆಗೆ ಸೇರಿಸಿಕೊಂಡು, ಸತ್ರವನ್ನು ಕ್ರಮವಾಗಿ ನಡಿಸುತ್ತಾ ಬರಬೇಕೆಂದು ಹುಕುಂ ಕೊಟ್ಟಿದಾರೆ.

• • •

ಮೇಲುಕೋಟೆಯಲ್ಲಿರುವ ಶ್ರೀ ಯತಿರಾಜ ಮಠದ ಗುರು ಪೀಠಕ್ಕೆ ಕಟ್ಟಿದ ೨೧ ನೇ ಆಳ್ವಿಕೆಗೆ ಆಚಾರ್ಯರು ಉರುಫ್ ಪಂಡಿತ ರಾಮಾನುಜಪುರಂ ತಿರುಮಲೆ ಅನಂದಾಳ್ವಾರ್ ಅಳಗಾಯ ಸಿಂಗ್ರಾಚಾರ್ಯರನ್ನು ಶ್ರೀ ಯದುಗಿರಿ ಯತಿರಾಜ ಸಂಪ್ರದಾಯದ ರಾಮಾನುಜ ಜೀಯರ್ ಎಂಬ ಅಂಕಿತದಿಂದ ನೇಮಕವಾಗಿರುವುದನ್ನು ಗವರ್ನಮೆಂಟಿನವರು ಒಪ್ಪಿಕೊಂಡಿರುತ್ತಾರೆ.

• • •

ಅರಮನೆ ಇಲಾಖೆಯ ಮೇಲ್ವಿಚಾರಣೆಗೆ ಈ ಮುಜರಾಯಿ ಸತ್ರ ಮಠ ದೇವಸ್ಥಾನಗಳು ಒಳಪಟ್ಟಿದ್ದವು. ಈ ಪೈಕಿ ಹನ್ನೆರಡನ್ನು ಸರ್ಕಾರದವರು ಅವರ ಸ್ವಾಧೀನಕ್ಕೆ ಬಿಟ್ಟು ಉಳಿದವುಗಳನ್ನೆಲ್ಲಾ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಸ್ವಾಧೀನಕ್ಕೆ ವಹಿಸುತ್ತಾರೆ. ಈ ಹನ್ನೆರಡು ಧರ್ಮ ಕಾರ್ಯಗಳಿಗೂ ಸಾಲ್ಲ ಬೇಕಾದ ರೂಪಾಯಿ ಮುಜರಾಯಿ ತನಖೀಕು ಇರುತ್ತದೆ.

• • •

ಬೆಂಗಳೂರು ಸಿಟಿ ಮಾಮೂಲು ಪೇಟೆಯಲ್ಲಿ ರುದ್ರಪ್ಪನೆಂಬೊಬ್ಬ ಲಿಂಗಾಯತನು ಸುಮಾರು ಕಳೆದ ಗುರುವಾರ ರಾತ್ರಿ ಆತ ಮಲಗಿ ನಿದ್ದೆ ಮಾಡುತ್ತಿದ್ದಾಗ ಯಾರೋ ಕೊಂದುಬಿಟ್ಟರು. ಆತನು ಮೈಮೇಲಿದ್ದ ಒಡವೆಗಳನ್ನೆಲ್ಲಾ ಅಪಹರಿಸಿದ್ದರು. ಪೊಲೀಸಿನವರು ಸತ್ತ ರಮೂದು ನಡಿಸಿ ವೀರಪ್ಪ ರಾಮಪ್ಪ ಎಂಬೊಬ್ಬನನ್ನು ದಸ್ತಗಿರಿ ಮಾಡಿದರು. ಅವನ ಬಳಿ ಸುಮಾರು ಮೂರು ಸಾವಿರ ರೂಪಾಯಿನ ನಗಗಳು ಸಿಕ್ಕಿದವು. ಇದಲ್ಲದೆ ಆ ರುದ್ರಪ್ಪನ ಮನೆಯಲ್ಲಿ ವಾಸಮಾಡುತ್ತಿದ್ದ ಸಣ್ಣ ತಮ್ಮನನ್ನೂ, ಅವನ ಹೆಂಡತಿಯನ್ನೂ, ಇನ್ನು ಕೆಲವರನ್ನೂ ಹಿಡಿದು ತನಿಖೆ ನಡಿಸುತ್ತಿದಾರೆಂದು ಪ್ರಕಟವಾಗಿದೆ.

ಮೊನ್ನೆ ಮಂಗಳವಾರ ಸಾಯಂಕಾಲ ಸುಮಾರು ೬|| ಗಂಟೆಗೆ ಮಹಾಮಾತೃಶ್ರೀಯವರೂ, ಮಹಾರಾಣಿಯವರೂ, ರಾಜಕುಮಾರಿಯರೂ ಪರಿವಾರ ಸಹಿತ ಸ್ಪೆಷಲ್ ರೈಲಿನಲ್ಲಿ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿದರು. ರೈಲ್ವೇ ಸ್ಟೇಷನ್ನಲ್ಲಿ ರಾಜಪಿಂತಿಯವರೂ ಮ್ಯುನಿಸಿಪಲ್ ಕೌನ್ಸಿಲರುಗಳು ಮುಂತಾದವರೂ ಹಾಜರಾಗಿದ್ದು ಅವರಿಗೆ ಹಾರ ತುರಾಯಿಗಳನ್ನೊಪ್ಪಿಸಿ ಸುಸ್ವಾಗತವನ್ನು ಬಯಸಿದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು.

• • •

ಕಳೆದ ವರುಷ ಮೈಸೂರಿನಲ್ಲಿ ನಡೆದ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರ ಪೈಕಿ ಶ್ರೀಮತಿ ಪಂಡಿತಾ ಎ. ಸುಂದರಮ್ಮನವರಿಗೆ ಕಳೆದ ಶನಿವಾರ ರಾತ್ರಿ ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀ ಶಾಖೆಯವರು ಆಕೆಯನ್ನು ಕರೆಸಿಕೊಂಡು ಒಂದು ಸಭೆಯನ್ನು ನಡಿಸಿ, ಆಕೆಯ ಪಾಂಡಿತ್ಯದ ವಿಷಯದಲ್ಲಿ ತಮಗುಂಟಾದ ಸಂತೋಷವನ್ನು ಸೂಚಿಸಿದ್ದಲ್ಲದೆ, ಭಗವದ್ಗೀತಾ ಗ್ರಂಥವನ್ನು ಸುಂದರವಾದ ಪೆಟ್ಟಿಗೆಯಲ್ಲಿಟ್ಟು ಆಕೆಗೆ ಬಹುಮಾನವಾಗಿ ಒಪ್ಪಿಸಿದರು. ಶ್ರೀಮತಿ ಸುಂದರಮ್ಮನವರು ಕಡೆಯಲ್ಲಿ ಅವರನ್ನು ವಂದಿಸಿದ್ದಲ್ಲದೆ ವಿದ್ಯಾಭ್ಯಾಸವನ್ನು ಕುರಿತು ಉಪನ್ಯಾಸ ಮಾಡಿದರು.

• • •

ಮೊನ್ನೆ ತಾ ೧ ನೇ ಸೋಮವಾರ ಸಾಯಂಕಾಲ ರಾಜಧಾನಿಯಲ್ಲಿ ಮಾರಿತಿಡಿ ಎಂಬ ಮೆರವಣಿಗೆ ಆಯಿತು. ಹಿಂದೆ ಈ ತಿಡಿಯಲ್ಲಿ ಇಬ್ಬರು ಕಡಿದಾಡಿ ಘೋರಾ ಜಖಂ ಆದದ್ದರಿಂದ ಸರ್ಕಾರದವರು ಯಾರೂ ತಿಡಿಯನ್ನು ಹತ್ತಕೂಡದೆಂದು ಹುಕುಂ ಕೊಟ್ಟು ತಡೆದುಬಿಟ್ಟರು. ಈಗ ಈ ತಿಡಿಗೆ ಮನುಷ್ಯನ ಆಕೃತಿಯಂತೆ ಒಂದು ಬೊಂಬೆಯನ್ನು ಮಾಡಿ, ಅದಕ್ಕೆ ಸರಿಯಾಗಿ ದುಸ್ತು ಹಾಕಿ ತಿಡಿಯ ಕೊನೆಗೆ ಕಟ್ಟಿ ಮೆರವಣಿಗೆ ಮಾಡುತ್ತಾರೆ. ಈ ಮೆರವಣಿಗೆಯನ್ನು ನೋಡುವುದಕ್ಕಾಗಿ ಸಾವಿರಾರು ಜನರು ಗುಂಪು ಸೇರಿ ಕೋಲಾಹಲಪ್ರದವಾಡುತ್ತಿದ್ದರು. ಕುರಿಕೋಣಗಳನ್ನು ಪದ್ಧತಿಯಂತೆ ಮೈದಾನದಲ್ಲೂ ಗುಡಿಯಲ್ಲೂ ಕೊಂದು ರಕ್ತ ಹರಿಸಿದರು.

• • •

ಬೊಂಬಾಯಿ ಪಟ್ಟಣದಲ್ಲಿರುವ ಪಶುವೈದ್ಯ ವಿದ್ಯಾಶಾಲೆಯ ಸುಮಾರು ೨೬ ಮಂದಿ ವಿದ್ಯಾರ್ಥಿಗಳು ತಮ್ಮ ಗುರುವಾದ ಮ|| ಎ. ಜೆ. ಷೇಕ್‌ಯವರ ಕೂಡ ಕುಣಿಗಲಿಗೆ ಹೋಗಿ ಅಲ್ಲಿನ ಕುದುರೆಗಳ ಫಾರವನ್ನು ನೋಡಿಕೊಂಡು, ಕಳೆದ ಭಾನುವಾರ ಬೆಳಗ್ಗೆ ರಾಜಧಾನಿಗೆ ಬಂದು, ಮೂರು ದಿನಗಳಲ್ಲಿ ಅರಮನೆ ಕರೋಹಟ್ಟಿ, ಅಶ್ವಶಾಲೆ, ಗಜಶಾಲೆಗಳಿಗೆ ಹೋಗಿ ರಾಸುಗಳ ಸಾಕಾಣಿಕೆ, ಸ್ಥಿತಿಗತಿ ಮೊದಲಾದ ವಿಚಾರಗಳನ್ನು ನೋಡಿ ಕೇಳಿ ತಿಳಿದುಕೊಂಡರು. ಮೊನ್ನೆ ಮಂಗಳವಾರ ರಾತ್ರಿ ಬೆಂಗಳೂರನ್ನು ಕುರಿತು ಪ್ರಯಾಣ ಮಾಡುವವರಾಗಿದ್ದರು. ಈ ವಿದ್ಯಾರ್ಥಿಗಳ ಸಂಬಂಧದ ಖರ್ಚನ್ನೆಲ್ಲಾ ಬೊಂಬಾಯಿ ಗವರ್ನಮೆಂಟಿನವರು ವಹಿಸುತ್ತಾರೆಂದು ತಿಳಿದು ಬಂದಿದೆ.

• • •

ಬೆಂಗಳೂರು ಬಸವನ ಗುಡಿಯಲ್ಲಿ ಹೊಸದಾಗಿ ಏರ್ಪಾಡಾಗಿರುವ ರಾಮಕೃಷ್ಣ ಮಿಷನ್ ಮಠದಲ್ಲಿ ಕಳೆದ ಸೋಮವಾರ ರಾಮಕೃಷ್ಣ ಪರಮಹಂಸರವರ ಜಯಂತಿ ಉತ್ಸವವನ್ನು ನೆರವೇರಿಸಿದರು. ಬೆಳಗ್ಗೆ ಮೆರವಣಿಗೆಯೂ ಭಜನೆಯೂ, ಮಧ್ಯಾಹ್ನ ಸಾವಿರಾರು ಬಡಜನರಿಗೆ ಸುಖಭೋಜನವೂ, ಸಾಯಂಕಾಲ ಪರಮಹಂಸರ ಜೀವಿತ ಚರಿತೆಯ ಉಪನ್ಯಾಸಗಳೂ ನಡೆದವು. ಮ|| ಕೆ. ರಾಮಚಂದ್ರರಾಯರೂ, ಗವರ್ನಮೆಂಟ್ ಕಂಟ್ರೋಲರಾದ ಮ|| ಜಿ. ಎಸ್. ಚಕ್ರವರ್ತಿಯವರೂ ಉಪನ್ಯಾಸಗಳನ್ನು ಮಾಡಿದರು. ಒಬ್ಬ ವೃದ್ಧರು ಸಂಸ್ಕೃತದಲ್ಲಿ ಉಪನ್ಯಾಸವನ್ನು ಮಾಡಿದ ಮೇಲೆ ಸ್ವಾಮಿ ಆತ್ಮಾನಂದರವರು ಮಿಷನ್ನಿನ ಪರವಾಗಿ ಕೆಲವು ಮಾತುಗಳನ್ನು ಹೇಳಿ ಸಭಿಕರನ್ನು ವಂದಿಸಿದರು. ಈ ಮಿಷನ್ ಕಟ್ಟಡದ ಮುಂತಾದದ್ದಕ್ಕೆ ಬೇಕಾದ ಸಲಕರಣೆಗಳನ್ನೆಲ್ಲಾ ಒದಗಿಸಿಕೊಟ್ಟಿರುವ ಅಸಿಸ್ಟೆಂಟ್ ಕಮಿಷನರ್ ಮ|| ಎಂ. ಎ. ನಾರಾಯಣ ಅಯ್ಯಂಗಾರ್ರಿಗೆ ಬೆಂಗಳೂರಿನಿಂದ ತುಮಕೂರಿಗೆ ವರ್ಗವಾದ ವಿಚಾರವು ಅಲ್ಲಿನ ಮೆಂಬರುಗಳಲ್ಲಿ ವ್ಯಾಕುಲವನ್ನುಂಟು ಮಾಡಿದೆ ಎಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

• • •

ಕಳೆದ ನವರಾತ್ರಿ ಉತ್ಸವ ಕಾಲದಲ್ಲಿ ಮೈಸೂರು ಪಟ್ಟಣದಲ್ಲಿ ನಡೆದ ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನದಲ್ಲೂ, ಗೋಶಾಲೆಯುಗಳ ಪ್ರದರ್ಶನದಲ್ಲೂ, ಸೆಯ್ಸಿ ಮಗ್ಗಗಳ ಪೋಟೋಪೋಟಿಯಲ್ಲೂ, ಉಳುವ ನೇಗಿಲುಗಳ ಪೋಟಾಪೋಟಿಯಲ್ಲೂ, ಹುಡುಗರ ಆಟಪಾಟಗಳಲ್ಲೂ ಕಮಿಟಿಯವರಿಂದ ಕೊಡತಕ್ಕಾದ ಮೆಡಲುಗಳ ಮತ್ತು ಬಹುಮಾನಗಳ ಪಟ್ಟಿಯನ್ನು ಸರ್ಕಾರದವರು ತಯಾರುಮಾಡಿಸಿ, ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿಕೊಟ್ಟಿದಾರೆ. ಇದರಲ್ಲಿ ಮೆಡಲು ಮುಂತಾದದ್ದನ್ನು ಪಡೆದಿರುವವರ ಸಂಖ್ಯೆ ಎಷ್ಟೆಂದರೆ—ಚಿನ್ನದ ಮೆಡಲುಗಳು ೧೦. ಬೆಳ್ಳಿ ಮೆಡಲುಗಳು ೪೮, ಕಂಚಿನ ಮೆಡಲುಗಳು ೫೨, ಹಣದ ಬಹುಮಾನ ೩೦೬, ಉತ್ಕೃಷ್ಟವಾದವುಗಳಿಗೆ ಕೊಡಲ್ಪಟ್ಟ ಸರ್ಟಿಫಿಕೇಟುಗಳು ೧೩೬, ಗೋಶಾಲೆಯುಗಳಿಗೆ ಬಹುಮಾನಗಳು ೨೩, ಉಳುವುದಕ್ಕೆ ಬಹುಮಾನಗಳು ೬೮, ನೆಯ್ಯುವುದಕ್ಕೆ ಬಹುಮಾನಗಳು ೧೫, ಆಟಪಾಟಗಳಲ್ಲಿ ಹಂಚಿದ ಬಹುಮಾನಗಳು ೬೬. ಒಟ್ಟು ೭೬೫ ಬಹುಮಾನಗಳೂ ಮೆಡಲುಗಳೂ ಕೊಡಲ್ಪಟ್ಟಿರುತ್ತವೆ.

• • •

ವೈದ್ಯಶಾಲೆಗಳಿಗೆ ಸರ್ಕಾರದಿಂದ ಗ್ರಾಂಟು (ಸಹಾಯ ದ್ರವ್ಯ) ಸಲ್ಲುತ್ತವೆ. ಆ ವೈದ್ಯ ಶಾಲೆಗಳ ಪಂಡಿತರು ಸರ್ಕಾರಿ ನೌಕರದಾರರಲ್ಲ ಎಂಬುದಾಗಿ ಸರ್ಕಾರದವರು ಹುಕುಂ ಕೊಟ್ಟಿದ್ದರು. ಆದರೆ ಹಾಸನದ ಡಿಸ್ಟ್ರಿಕ್ಟಿಗೆ ಸೇರಿದ ಕೆಲವು ಸ್ಥಳಗಳಲ್ಲಿರುವ ವೈದ್ಯಶಾಲೆಗಳ ಪಂಡಿತರನ್ನು ಆ ನೌಕರಿಯಲ್ಲಿ ಖಾಯಂ ಮಾಡಿದೆ ಎಂದು ಗವರ್ನಮೆಂಟಿನಿಂದ ಹುಕುಂ ಆದದ್ದನ್ನು ನೋಡಿ, ಹಾರನಹಳ್ಳಿಯ ವೈದ್ಯಶಾಲಾ ಪಂಡಿತರು ತಾವು ಸರ್ಕಾರಿ ನೌಕರರೆಂದು ಭಾವಿಸಿ ಸರ್ಕಾರದ ಭೀಮಾ (ಇನ್ಷೂರೆನ್ಸ್) ಕಂಪನಿಗೆ ಸೇರಬೇಕೆಂದು ಡಾಕ್ಟರಿಂದ ಸರಿಯಾದ ಸರ್ಟಿಫಿಕೇಟನ್ನು ಕಳುಹಿಸಿದರು. ಸರ್ಕಾರಿ ಭೀಮಾ ಕಂಪನಿಯವರು ಆ ಪಂಡಿತರನ್ನು ಒಬ್ಬ ಮೆಂಬರಾಗಿ ಒಪ್ಪಿ ಅಂಗೀಕರಿಸಿಕೊಂಡಿರುತ್ತಾರೆ. ಪಂಡಿತರು ಖಾಯಂ ನೌಕರರಲ್ಲವೆಂದು ತಿಳಿದ ಮೇಲೆ ಹಾರನಹಳ್ಳಿಯ ವೈದ್ಯನನ್ನು ಸರ್ಕಾರದವರು ತಮ್ಮ ಭೀಮಾ ಕಂಪನಿಗೆ ಯಾಕೆ ಸೇರಿಸಿಕೊಂಡರೋ ಗೊತ್ತಾಗಲಿಲ್ಲ. ಈ ವಿಚಾರವನ್ನು ಹಾಸನದ ಡಿಸ್ಟ್ರಿಕ್ಟ್ ಬೋರ್ಡಿನವರು ಚರ್ಚೆಮಾಡಿ ಗವರ್ನಮೆಂಟಿಗೆ ಅರಿಕೆ ಮಾಡಿಕೊಂಡಿರುತ್ತಾರೆ.

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಫೆಬ್ರವರಿ ತಾ. 20 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು.	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು	ಧರ್ಮಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು.	ಮಕ್ಕಳು.	ರೂ.	
ಬೆಂಗಳೂರು	598	533	71	1,114	16
ಕೋಲಾರ	4,564	1,715	234	1,468	6,273
ತುಂಕೂರು	6,347	2,899	304	3,372	1,334
ಮೈಸೂರು	6,143	6,155	458	494	147
ಹಾಸನ	227	185		8	.
ಶಿವಮೊಗ್ಗ	78	62	9	110	
ಕಡೂರು	187	50		18	..
ಚಿತ್ರದುರ್ಗ	1,046	427	197	865	277
ಒಟ್ಟು	19,070	11,979	1,273	7,779	8,047

ಇಂಡಿಯಾ ದೇಶದ ವೃತ್ತಾಂತಗಳು

ಹೈದರಾಬಾದಿನಲ್ಲಿ ಪ್ರವಾಹದ ಕಷ್ಟಪರಿಹಾರಕ ರಿಲೀಫ್ ಫಂಡಿಗೆ ಇದುವರೆಗೆ ೩,೯೭೭,೮೫೩ ರೂಪಾಯಿ ಚಂದಾ ವಸೂಲಾಗಿದೆ

ಬೊಂಬಾಯಿ ಪಟ್ಟಣದ ತಾಜ್‌ಮಹಲ್ ಎಂಬ ಹೋಟೇಲಿನಲ್ಲಿ ೮,೦೦೦ ರೂಪಾಯಿ ಕಳುವಾಯಿತು ಪೋಲೀಸಿನವರು ಪತ್ತೆ ತರದೂದು ನಡಿಸುತ್ತಾರೆ

ಕಲ್ಕತ್ತಾ ಪಟ್ಟಣದಲ್ಲಿ ಏಪ್ರಿಲ್ ತಿಂಗಳ ೯, ೧೦ ಮತ್ತು ೧೧ ನೇ ತಾರೀಖುಗಳಲ್ಲಿ ಸರ್ವ ಮತಗಳ ಸಮಾಜವು ಜರುಗಿಸಲ್ಪಡುವುದೆಂದು ಗೊತ್ತಾಗಿದೆ

ಬೊಂಬಾಯಿನಲ್ಲಿ ಮೂವರು ಹೆಂಗಸರು ಖೋಟಾ ನಾಣ್ಯಗಳನ್ನು ಚಲಾವಣೆ ಮಾಡುತ್ತಿದ್ದರೆಂದು ಪೋಲೀಸಿನವರು ಹಿಡಿದು ಅವರ ಮೇಲೆ ಮೊಕದ್ದಮೆ ಮಾಡಿದ್ದಾರೆ

ವಿಜಾಪುರಪಟ್ಟಣದ ರೈಲ್ವೆ ಸ್ಟೇಷನ್ ಬಳಿ ಹತ್ತಿ ತುಂಬಿದ್ದ ಕೊಟ್ಟಿಗೆ ಕಳೆದ ವಾರ ಬೆಂಕಿ ಬಿದ್ದು, ಧೋಬಿನ ಪಟ್ಟಣದ ೧,೩೬೩ ಗಟ್ಟುಗಳ ನಾಶವು ಸುಟ್ಟುಹೋಯಿತು

ಮದರಾಸ್ ಯೂನಿವರ್ಸಿಟಿ ವಿದ್ಯಾಸಂಘದಲ್ಲಿ ತೇರ್ಗಡೆ ಹೊಂದಿದವರಿಗೆ ಈ ತಿಂಗಳ ೨೫ ನೇ ತಾರೀಖಿನಲ್ಲಿ ಗವರ್ನರವರು ಅಗ್ರಾಸನವನ್ನು ವಹಿಸಿ ವಾರ್ಷಿಕ ಅಡ್ರೆಸ್ಸನ್ನು ಕೊಡುವರು

ಬಗಾಲ ... ದಲ್ಲಿ ಇನ್ನು ಮೂರು ವರುಷಗಳ ತನಕ ಆನೆಗಳನ್ನು ಹಿಡಿಯುವುದಕ್ಕೆ ಕೆಡ್ಡಾ ವಿರ್ಮಾಣ ಇಟ್ಟು ನಡಿಸಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸ್ಯಾಂಕ್ಷನ್ ಮಾಡಿದ್ದಾರೆ

ಮೆ| ಬಾಲಗಂಗಾಧರ ತಿಲಕರವರು ಬರ್ಮಾ ಅಧಿಪತ್ಯಕ್ಕೆ ಸೇರಿದ ಮಾಂಡಲೇ ಪಟ್ಟಣದ ಬಂಧೀಖಾನೆಯಲ್ಲಿ ಆರೋಗ್ಯವಾಗಿದ್ದಾರೆಂತಲೂ, ಅವರು ಭಗವದ್ಗೀತೆಯ ವಿಷಯದಲ್ಲಿ ಒಂದು ಪುಸ್ತಕವನ್ನು ಬರೆಯುತ್ತಿದ್ದಾರೆಂತಲೂ ತಿಳಿದು ಬರುವುದು

ರಂಗೂನ್ ಪಟ್ಟಣದ ಜನರಲ್ ಕಂಪೆನಿಯ ಷೇಕ್ ಅಬ್ದುಲ್ ಕಾಸಿಂ ಜಮಾಲ್ ಎಂಬ ಮಹಮದೀಯ ಸಾಹುಕಾರನು ಅಲೀಘಡದ ಮಹಮದೀಯ ಕಾಲೇಜಿನ ವಿದ್ಯಾರ್ಥಿನಿಲಯವನ್ನು ಕಟ್ಟುವುದಕ್ಕೆ ೫೦,೦೦೦ ರೂಪಾಯಿ ಧರ್ಮ ಮಾಡಿರುತ್ತಾನೆ

ಕಾಶೀ ಮಹಾರಾಜರವರ ಕುಮಾರರಾದ ಶಙ್ಕರ ಸಾಹೆಬ್‌ರವರು ಅವರ ವಿದ್ಯಾಗುರುವಾದ ಕ್ಯಾಪ್ಟನ್ ಪ್ಲಂಕೆಟ್‌ರವರ ಕೂಡ ಕಳೆದ ವಾರ ಮದರಾಸಿಗೆ ಬಂದು ಅಲ್ಲಿನ ಎಲ್ಲಾ ಭಾಗಗಳನ್ನೂ ನೋಡಿ ಗವರ್ನರವರ ಭೇಟಿ ಮಾಡಿಕೊಂಡು ವಾಪಸು ಹೋದರು

ಬರ್ಮಾ ಅಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣದ ಸೆಂಟ್ರಲ್ ಜೈಲಿನಲ್ಲಿ ಬಂಧೀಖಾನರು ತಪ್ಪಿಸಿಕೊಂಡು ಹೋಗಬೇಕೆಂದು ತಮ್ಮ ಕೊಠಡಿಗಳ ಬಾಗಿಲನ್ನು ಒಡೆದು ಹಾಕುತ್ತಿದ್ದರು ಪೋಲೀಸಿನವರು ಐದು ಮಂದಿ ಬಂಧೀಖಾನರನ್ನು ದಸ್ತಗಿರಿ ಮಾಡಿರುತ್ತಾರೆ

ಹಿಂದುಸ್ಥಾನದ ಜನರು ಈಜಿಪ್ಟಿಗೆ ಹೋದರೆ ಅಲ್ಲಿ ಇವರಿಗೆ ಕೆಲಸವೇನೂ ದೊರಕುವುದಿಲ್ಲವೆಂತಲೂ ಹೀಗೆ ಹೋಗಿ ಅಲ್ಲಿ ಜೀವನಕ್ಕಿಲ್ಲದೆ ಅಲೆಯುವವರಿಗೆ ಯಾವ ವಿಧವಾದ ಪರಿಹಾರವೂ ಸಿಕ್ಕುವ ದಾರಿಯಿಲ್ಲವೆಂತಲೂ ಇಂಡಿಯಾ ಗವರ್ನ್‌ಮೆಂಟಿನವರು ಪ್ರಕಟಿಸಿರುತ್ತಾರೆ

ಬೊಂಬಾಯಿ ಅಧಿಪತ್ಯದಲ್ಲಿ ಪ್ರಕಟವಾಗುವ "ಸಾತಾರ" ಎಂಬ ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಾರ್ತೆಗಳು ಪ್ರಕಟವಾಗಿವೆ ಎಂದು ಅದರ ಎಡಿಟರಾದ ವಾಸುದೇವ ದಾಮೋದರ ಮುಂಡಕೆ ಎಂಬಾತನನ್ನು ಸರ್ಕಾರದವರು ವಾರಂಟಿನಿಂದ ಹಿಡಿದು ದಸ್ತಗಿರಿ ಮಾಡುತ್ತಿದ್ದಾರೆ

ಯರ್ಕಾಡಿನಲ್ಲಿ ರೈಲ್ವೆ ಸ್ಟೇಷನಿನಿಂದ ಅಂಚೆ ವಸ್ತುಗಳನ್ನು ಹೊತ್ತುಕೊಂಡು ಹೋಗುತ್ತಿದ್ದ ಅಂಚೆ ಜವಾನನನ್ನು ಅಳಗಾಪುರ ಗ್ರಾಮದ ಬಳಿ ವೈರೋಡಿನಲ್ಲಿ ಕಳ್ಳರು ಹಿಡಿದು ಪ್ರಾಣ ಹೋಗುವಂತೆ ಪೂರಾ ಹೊಡೆದು ಕೆಡವಿ, ವಸ್ತುಗಳನ್ನೆಲ್ಲಾ ಕಿತ್ತುಕೊಂಡು ಹೋದರು.

"ಪಂಥ" ಎಂಬ ಪುಸ್ತಕದಲ್ಲಿ ರಾಜದ್ರೋಹಕರವಾದ ವಿಚಾರಗಳನ್ನು ಕುರಿತು ಬರೆದದ್ದರಿಂದ ಆ ಗ್ರಂಥಕರ್ತನಾದ ಕಿರಣಚಂದ್ರಮುಖರ್ಜಿ ಎಂಬಾತನನ್ನು ಸರ್ಕಾರದವರು ಹಿಡಿದು ದಸ್ತಗಿರಿ ಮಾಡಿಸಲು ಮ್ಯಾಜಿಸ್ಟ್ರೇಟರು ಆತನಿಗೆ ಹದಿನೆಂಟು ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ

ಕಲ್ಕತ್ತಾ ಪಟ್ಟಣದಲ್ಲಿ ಸಿಡುಬಿನ ಉಪದ್ರವು ಪ್ರಜೆಗಳಿಗೆ ತುಂಬಾ ಕಳವಳವನ್ನುಂಟುಮಾಡುತ್ತಿದೆ ಆಸ್ಪತ್ರೆಯೊಳಗೆ ಇದ್ದು ಚಿಕಿತ್ಸೆ ಹೊಂದುತ್ತಿರುವ ಈ ರೋಗಿಗಳ ಸಂಖ್ಯೆಯು ಸುಮಾರು ೨೬೫ ಎಂದೂ, ಪೇಟೆಯಲ್ಲಿ ಮನೆಯೊಳಗೆ ಕಾಯಿಲೆ ಬಿದ್ದಿರುವವರು ಬಹಳವಾಗಿದ್ದಾರೆಂದೂ ಪ್ರಕಟವಾಗಿದೆ

ಹಿಂದುಸ್ಥಾನದ ಸ್ತ್ರೀಯರ ಹಿತವನ್ನು ಬಯಸಿ ಅವರಿಗಾಗಿ ಒಂದು ಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿರುವ ಮದರಾಸಿನ ಮಿಸೆಸ್. ಕಮಲ ಸತ್ಯನಾಥನ್ ಎಂಬ ವಿದ್ಯಾವತಿಯನ್ನು ಪಿಟ್ಟಾಪುರದ ರಾಜರು ತಮ್ಮ ರಾಣೀರುಗಳಿಗೆ ವಿದ್ಯೆ ಕಲಿಸುವುದಕ್ಕಾಗಿ ನೇಮಕ ಮಾಡಿಕೊಂಡಿದ್ದಾರೆಂದು ತಿಳಿದುಬಂದಿದೆ

ಕಾಶೀ ಪಟ್ಟಣದಲ್ಲಿ ಲೇಟ್ ಮಹಾರಾಜ್ಞಿ ಚಕ್ರವರ್ತಿನಿಯವರ ಭಾವಪ್ರತಿಮೆಯನ್ನು ಕೆಡಿಸಿ ವಿಕಾರ ಮಾಡಿದ ಲಾಲ್ ಮೋಹನನೆಂಬೊಬ್ಬ ಬಂಗಾಳಿ ಹುಡುಗನನ್ನು ಸರ್ಕಾರದವರು ಹಿಡಿದು ದಸ್ತಗಿರಿ ಮಾಡಿ ಅವನಿಗೆ ಎರಡು ವರುಷ ಕಠಿಣ ಸಜವನ್ನೂ, ೨೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬ್ರಿಸಾಲಪುರದಲ್ಲಿ "ಪ್ರಭಾತ" ಎಂಬ ವರ್ತಮಾನ ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಾರ್ತೆಗಳನ್ನು ಅಚ್ಚುಹಾಕಿ ಕೊಟ್ಟದ್ದಕ್ಕಾಗಿ ಜನಾರ್ದನ ಪ್ರಿಂಟಿಂಗ್ ಪ್ರೆಸ್ ಎಂಬ ಛಾಪಖಾನೆಯನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹುಕುಂ ಕೊಟ್ಟಿದ್ದಾರೆ

ಲಕ್ನೋ ಪಟ್ಟಣದಲ್ಲಿ ಪ್ಯಾಟ್ರಿಕ್ ವಿಕ್ಟರ್ ಎಂಬೊಬ್ಬ ಡಾಕ್ಟರು ಒಂದು ಕೊಲೆಯ ಮೊಕದ್ದಮೆ ವಿಚಾರಣೆಯಾಗುವಾಗ ಸಾಕ್ಷಿ ಕೊಡುವ ಸಂದರ್ಭದಲ್ಲಿ ಇಲ್ಲದ ಸಂಗತಿಗಳನ್ನು ಕಲ್ಪಿಸಿ ಹೇಳಿ ಕೊಟ್ಟಿದ್ದು ... ಬಂದು ... ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ತನಿಖೆ ಮಾಡುತ್ತಿದ್ದಾರೆ

ಉಮಾಚಂದ್ರ ವಿಶ್ವಾಸ್ ಎಂಬೊಬ್ಬ ಗುಮಾಸ್ತೆಯು ಕಲ್ಕತ್ತಾ ಪಟ್ಟಣದ ಪೋಸ್ಟ್ ಆಫೀಸಿನಲ್ಲಿ ಯಾರ ವಿಳಾಸಕ್ಕೋ ಬಂದಿದ್ದ ಒಂದು ಪಾರ್ಸೆಲ್ಲನ್ನು ಒಡೆದು ಅದರಲ್ಲಿದ್ದ ಅಮೂಲ್ಯವಾದ ಪಚ್ಚೆಯನ್ನು ಅಪಹರಿಸಿದನೆಂದು ಮೊಕದ್ದಮೆ ಆಗಿ, ಹೈಕೋರ್ಟಿನಲ್ಲಿ ವಿಚಾರಣೆ ನಡೆದು, ಅವನಿಗೆ ಮೂರು ವರುಷ ಕಠಿಣ ಸಜಾ ವಿಧಿಸಲಾಯಿತು

ಫರಿದ್‌ಪುರದಲ್ಲಿ ವಿದ್ಯಾಭ್ಯಾಸಂಗ ಮಾಡುತ್ತಿದ್ದ ಸತ್ಯೇಂದ್ರನಾಥ ಭಟ್ಟಾಚಾರಿ ಎಂಬೊಬ್ಬ ವಿದ್ಯಾರ್ಥಿಯು ಪುಸ್ತಕದಲ್ಲಿ ಸಿಡಿಮದ್ದಿನ ಗುಂಡುಗಳನ್ನು ತಯಾರುಮಾಡುವ ವಿಧಾನಗಳನ್ನು ಬರೆದು ಒಂದು ಕೈಚೀಲದ ಜೇಬಿನಲ್ಲಿ ಸಿಕ್ಕಿತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಬಾಬು ದೇವೇಂದ್ರ ಪ್ರಸಾದರಾಯರವರು ಅವನನ್ನು ದಸ್ತಗಿರಿ ಮಾಡುತ್ತಿದ್ದಾರೆ

ಕಲ್ಲಿಕೋಟೆಯ ಸಾಸೀ ಧರ್ಮಶಾಲೆಯೊಳಗಿದ್ದ ಒಬ್ಬ ಪಾರ್ಸಿ ... ನಸ್ಸನ್ನು ಕಳೆದ ಶುಕ್ರವಾರ ರಾತ್ರಿ ಕಳ್ಳರು ಕಟ್ಟಿಹಾಕಿ ಆತನ ಕೊಠಡಿಯಲ್ಲಿದ್ದ ಸಾಮಾನುಗಳನ್ನೂ ಹಣ ಕಾಸನ್ನೂ ಅಪಹರಿಸಿಕೊಂಡು ಹೋದರು ಮರುದಿನ ಬೆಳಗ್ಗೆ ಆತನ ಸೇವಕನು ಹೋಗಿ ಕಟ್ಟನ್ನು ಬಿಚ್ಚಿ ಪೋಲೀಸಿಗೆ ತಿಳಿಸಿದನು ಪೋಲೀಸಿನವರು ಪತ್ತೆ ತರದೂದು ನಡಿಸುತ್ತಿದ್ದಾರೆ

ಕಲ್ಕತ್ತಾ ಪಟ್ಟಣದ ಜನರಲ್ ಆಸ್ಪತ್ರೆಯಲ್ಲಿ ಫೆರ್ರಿಸ್ ಎಂಬೊಬ್ಬ ಯೂರೋಪ್ಯನು ನಿದ್ರಾರೋಗಪೀಡಿತನಾಗಿ ಕಳೆದ ಅಕ್ಟೋಬರ್ ತಾ ೨೩ರಿಂದ ಚಿಕಿತ್ಸೆ ಹೊಂದುತ್ತಿದ್ದು, ಕಳೆದ ಡಿಸೆಂಬರ್ ತಾ ೧೬ರಲ್ಲಿ ಗುಣಹೊಂದಿ ಆಸ್ಪತ್ರೆಯಿಂದ ಕಳುಹಲ್ಪಟ್ಟನು ಅಲ್ಲಿನ ಡಾಕ್ಟರು ಆತನ ರೋಗವನ್ನು ವಾಸಿಮಾಡಿದ್ದನ್ನು ನೋಡಿ, ಅವರನ್ನು ಎಲ್ಲರೂ ಹೊಗಳುತ್ತಿದ್ದಾರೆ

ಕಲ್ಕತ್ತಾ ಪಟ್ಟಣದಲ್ಲಿರುವ ಸುಲಭ ಹಿತೈಷಿ ಎಂಬ ಪ್ರಿಂಟಿಂಗ್ ಆಫೀಸಿನಲ್ಲಿ "ಸಮಯೋಕ್ತಿನಲ್ಲಿ ಎಚ್ಚರಿಕೆಯಾಗಿರು" ಎಂಬ ಗ್ರಂಥವನ್ನು ಬರೆದು ಅಚ್ಚುಹಾಕಿಸಿಕೊಟ್ಟಿದ್ದಕ್ಕಾಗಿ ಅದರಲ್ಲಿ ರಾಜದ್ರೋಹಕರವಾದ ಸಂಗತಿಗಳಿರುವವೆಂದು ಹೇಳಿ ಆ ಅಚ್ಚಿನ ಕಾರಖಾನೆಯನ್ನು ಜಪ್ತಿಮಾಡಿ ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಹುಕುಂ ಕೊಟ್ಟಿದ್ದಾರೆ

ಕತ್ಯವಾಡದ ಒಬ್ಬ ರಾಜಕುಮಾರನಿಗೆ ಹುಚ್ಚು ಹಿಡಿದದ್ದರಿಂದ ಆತನನ್ನು ಬೊಂಬಾಯಿ ಪಟ್ಟಣದ ಕೊಲಬಾ ಹುಚ್ಚರ ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡುತ್ತಿದ್ದರು ಈಗ ಒಂದು ವಾರದ ಕೆಳಗೆ ಆತನು ಆಸ್ಪತ್ರೆಯಿಂದ ತಪ್ಪಿಸಿಕೊಂಡು ಹೋದವನು ಇನ್ನೂ ಸಿಕ್ಕಿಯಿಲ್ಲ ಆತನು ಸಮುದ್ರದಲ್ಲಿ ಬಿದ್ದು ಆತ್ಮಹತ್ಯೆಮಾಡಿಕೊಳ್ಳುವುದಾಗಿ ಬರೆದಿಟ್ಟು ಹೋದ ಒಂದು ಕಾಗದ ಮಾತ್ರ ಸಿಕ್ಕಿರುತ್ತದೆ

ಕೃಷ್ಣಾ ಜಿಲ್ಲೆಗೆ ಸೇರಿದ ಎಲ್ಲೋರಿನಲ್ಲಿ ಈ ತಿಂಗಳ ಕಡೇ ವಾರದಲ್ಲಿ ಗೋಕಾಯಿಗಳ ಪ್ರದರ್ಶನ ನಡೆಯುವುದು ಕಲೆಕ್ಟರವರೇ ಪ್ರದರ್ಶನವನ್ನು ಪ್ರಾರಂಭಿಸಿ, ಉತ್ಕೃಷ್ಟವಾದ ಹಸುವಿಗೆ ೧೦೦ ರೂಪಾಯನ್ನೂ, ಎಂಜದ ಹೋರಿಗೆ ೫೦ ರೂಪಾಯನ್ನೂ, ಆ ಡಿಸ್ಟ್ರಿಕ್ಟಿನಲ್ಲಿ ಬೆಳೆದಂಥಾ ಉತ್ತಮತರದ ನಾರಿಗೆ ೫೦ ರೂಪಾಯನ್ನೂ ತಮ್ಮ ಕೈಯಿಂದ ಬಹುಮಾನ ಕೊಡುವುದಾಗಿ ತಿಳಿಸಿರುತ್ತಾರೆ

ಸಂಯುಕ್ತ ಅಧಿಪತ್ಯಗಳಲ್ಲಿರುವ ಮ್ಯುನಿಸಿಪಾಲಿಟಿಗಳಲ್ಲಿ ಆಕ್ಟ್ರಾಯ್ ಸುಂಕಗಳನ್ನು ವಜಾಮಾಡಿ, ಮನೆಯ ಬಾಬ ತೆರಿಗೆಗಳನ್ನು ಏರ್ಪಡಿಸಬೇಕೆಂದು ಅಲ್ಲಿನ ಕೆಲವು ದೊಡ್ಡಮನುಷ್ಯರು ತನಿಖೆ ಮಾಡುತ್ತಿದ್ದಾರೆ ಆಕ್ಟ್ರಾಯ್ ಸುಂಕಗಳ ದೆಸೆಯಿಂದ ಪಟ್ಟಣಗಳಲ್ಲಿ ಪದಾರ್ಥ ಮತ್ತು ಜಿನಸುಗಳ ಕ್ರಯ ಬಹಳವಾಗಿ ಹೆಚ್ಚಿರುತ್ತದೆ ಇದನ್ನು ಕಡಮೆ ಮಾಡಬೇಕೆಂಬುವುದೇ ಸರ್ಕಾರದವರ ಉದ್ದೇಶವಾಗಿದೆ

ಬರೋಡಾ ಸಂಸ್ಥಾನದ ದಿವಾನರಾದ ಮೆ| ಕೆಸಾರಾವ್ ರುಸ್ತುಂಜಿಯವರು ಕಳೆದ ತಿಂಗಳ ಆಖೈರಿನಲ್ಲಿ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಪೆನ್ಷನ್ ಪಡೆದುಕೊಂಡರು ಇವರು ಕಳೆದ ಮೂವತ್ತು ನಾಲ್ಕು ವರುಷದಿಂದಲೂ ಆ ಸಂಸ್ಥಾನದಲ್ಲಿ ನೌಕರಿ ಮಾಡಿ, ಸಕಲ ಪ್ರಜೆಗಳಲ್ಲೂ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡಿರುವರು ಇವರ ಹೆಸರನ್ನು ಆ ಸಂಸ್ಥಾನದಲ್ಲಿ ಶಾಶ್ವತಪಡಿಸಬೇಕೆಂದು ಜನರು ಪ್ರಯತ್ನಪಡುತ್ತಿರುವಂತೆ ವರ್ತಮಾನವಿದೆ

ಅದಿವೇಲಯ ತಹಶೀಲ್ದಾರ್ ಮೆ|| ಎಂ ಕೃಷ್ಣಯ್ಯಶೆಟ್ಟಿಗ ಶವವು ಒಂದು ಹಾಳು ಬಾವಿಯಲ್ಲಿ ಸಿಕ್ಕಿತಷ್ಟೆ ಸರ್ಕಾರದವರು ಆ ಗ್ರಾಮದ ರೆಡ್ಡಿಯನ್ನು ಹಿಡಿದು ತನಿಖೆಮಾಡಿದಾಗ ಕೆಲವು ಸಂಗತಿಗಳು ತಿಳಿದುಬಂದವು ಅದರ ಮೇಲೆ ಪೋಲೀಸಿನವರು ಆ ಗ್ರಾಮದ ಕರಣೀಕ (ಶ್ಯಾನುಭೋಗ)ನನ್ನೂ, ಅವನ ಮಗನನ್ನೂ ಅಳಿಯನನ್ನೂ ಇನ್ನಿಬ್ಬರನ್ನೂ ದಸ್ತಗಿರಿ ಮಾಡಿರುತ್ತಾರೆ ಇವರೆಲ್ಲಾ ಬ್ರಾಹ್ಮಣರು ಇವರು ಸೇರಿ ಆತನನ್ನು ಕೊಂದು ಹಾಕಿದರೆಂದು ಮೊಕದ್ದಮೆ ಆಗಿದೆ

ಬಂಗಾಳಾ ಲೆಫ್ಟಿನೆಂಟ್ ಗವರ್ನರಾದ ಸರ್ ಎಡ್ವರ್ಡ್ ಬೇಕರ್ ಯವರು ಜಗನ್ನಾಥಕ್ಕೆ ಹೋಗಿದ್ದ ವೇಳೆ ಅವರನ್ನು ಸತ್ಕರಿಸುವುದಕ್ಕೆ ಅಲ್ಲಿನ ಪ್ರಜೆಗಳು ಚಪ್ಪರ ಕಮಾನು, ತೋರಣಾದಿಗಳನ್ನು ಕಟ್ಟಿ ಪಟ್ಟಣವನ್ನು ಅಲಂಕಾರ ಮಾಡಿದ್ದರು ಅವರು ದಯಮಾಡಿದ ದಿನ ಒಂದು ಚಪ್ಪರಕ್ಕೆ ಯಾರೋ ಬೆಂಕಿ ಹಾಕುವುದಕ್ಕೆ ಪ್ರಯತ್ನಪಟ್ಟು ಉರಿಯುವ ಬೆಂಕಿ ಬಟ್ಟೆಗಳನ್ನು ಎಸೆದರು ಪೋಲೀಸಿನವರು ಪತ್ತೆ ತರದೂದು ನಡಿಸಿ, ಒಬ್ಬ ಬಂಗಾಳಿಯವನನ್ನು ದಸ್ತಗಿರಿ ಮಾಡಿರುತ್ತಾರೆ

ಹಿಂದೂ ದೇಶದಲ್ಲಿ ಈಗೀಗ ಪ್ಲೇಗ್ ಉಪದ್ರವದಿಂದಾಗುವ ಮರಣ ಸಂಖ್ಯೆಯು ಸ್ವಲ್ಪ ಸ್ವಲ್ಪವಾಗಿ ಹೆಚ್ಚುತ್ತಿದೆ ಕಳೆದ ... ವಾರದಲ್ಲಿ ... ಮಂದಿ ಈ ಉಪದ್ರವದಿಂದ ಸತ್ತಿದ್ದಾರೆ ಈ ಪೈಕಿ ... ಬೊಂಬಾಯಿ ಅಧಿಪತ್ಯದಲ್ಲಿ ..., ಸಂಯುಕ್ತ ಅಧಿಪತ್ಯಗಳಲ್ಲಿ ..., ಮಧ್ಯ ಪ್ರಾಂತ್ಯ ಮತ್ತು ಬೀರಾರ್ ೪೭೪, ಬಂಗಾಳಾ ೨೩೪, ರಜಪುಟಾನಾ ೧೧೬, ಮದರಾಸ್ ಅಧಿಪತ್ಯ ೩೫, ಮೈಸೂರು ಸಂಸ್ಥಾನ ೧೦, ... ಇಂಡಿಯಾ ..., ಈ ರೀತಿ ಮರಣಗಳಾಗಿವೆ

ಕಳೆದ ವಾರ ಒಂದು ದಿನ ಡಿಲ್ಲಿ ಪಟ್ಟಣದಲ್ಲಿ ಅಸಾಧಾರಣವಾದ ಆನೆಕಲ್ಲಿನ ಮಳೆಯು ಸುರಿಯಿತು ಅದರ ಏಟಿಗೆ ಸಿಕ್ಕಿ ಇಬ್ಬರು ಮೃತಪಟ್ಟರು ಪಟ್ಟಣದ ಬೀದಿಗಳಲ್ಲಿದ್ದ ಮ್ಯುನಿಸಿಪಲ್ ಲಾಂದ್ರಗಳು ಒಡೆದು ಹೋದವು ಆನೆಕಲ್ಲುಗಳು ಅರ್ಧ ಪೌಂಡು ತೂಕವುಳ್ಳವು ... ದೊಡ್ಡವಾಗಿದ್ದವು ಪಟ್ಟಣದಲ್ಲೆಲ್ಲಾ ಈ ಆನೆಕಲ್ಲು ಸುಮಾರು ... ಅಡಿ ಎತ್ತರಕ್ಕೆ ಬಿದ್ದಿದ್ದವು ಅನೇಕ ಬಡಜನರ ಮನೆಗಳು ಬಿದ್ದುಹೋಗಿ ಬಹಳ ನಷ್ಟವಾಯಿತೆಂದು ತಿಳಿದುಬಂದಿದೆ

ಅಲ್ಲಹಾಬಾದ್ (ಪ್ರಯಾಗ) ಪಟ್ಟಣದ ಕಾಲೇಜು ... ಸಂಸ್ಕೃತ ಪಂಡಿತರಾದ ಬಾಲಕೃಷ್ಣಭಟ್ಟರವರು ಆ ಪಟ್ಟಣದಲ್ಲಿ ಬಂಗಾಳಾ ವಿಭಜನೆಯನ್ನು ಕುರಿತು ನಡೆದ ಒಂದು ಸಭೆಗೆ ಹೋಗಿ ಸಭೆಯ ಅಗ್ರಾಸನವನ್ನು ವಹಿಸಿದರೆಂಬ ಸಂಗತಿಯು ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರಿಗೆ ತಿಳಿದು ಬಂದದ್ದರಿಂದ ಅವರು ಆ ಪಂಡಿತರನ್ನು ಕೆಲಸದಿಂದ ವಜಾ ಮಾಡಿದರು ಅದರ ಮೇಲೆ ಅಲ್ಲಿನ ವಿದ್ಯಾರ್ಥಿಗಳು ಆ ಪಂಡಿತರ ಮನೆಗೆ ಹೋಗಿ ಅವರನ್ನು ಕಂಡು ಒಂದು ಅಡ್ರೆಸ್ಸನ್ನು ಒಪ್ಪಿಸಿ ಬಂದರೆಂದು ಪ್ರಕಟವಾಗಿದೆ

ಕುಂಭಕೋಣದಲ್ಲಿ ಮಹಾ ಮಾಘದ ಜಾತ್ರೆಯು ಕಳೆದ ಗುರುವಾರದಿಂದ ಪ್ರಾರಂಭವಾಯಿತು ಅನೇಕ ಸಹಸ್ರ ಯಾತ್ರಾರ್ಥಿಗಳು ಅಲ್ಲಿ ಸೇರುತ್ತಾರೆ ಅಲ್ಲಿನ ದೊಡ್ಡ ಮನುಷ್ಯರು ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನ ಶಾಲೆಯನ್ನು ಕಟ್ಟಿ ಪ್ರದರ್ಶನ ನಡಿಸುತ್ತಿದ್ದಾರೆ ದಿವಾನ್ ಬಹದ್ದೂರ್ ರಘುನಾಥರಾಯರು ಪ್ರೆಸಿಡೆಂಟರಾಗಿ ನಿಂದು ಪ್ರದರ್ಶನವನ್ನು ಪ್ರಾರಂಭಿಸಿದರು ಮದರಾಸ್ ಗವರ್ನರವರೂ ನಾಳೆ ಹೊರಟು ಅಲ್ಲಿಗೆ ದಯಮಾಡಿ ಎರಡು ದಿನ ಇದ್ದು ಅಲ್ಲಿಂದ ಪರಾಂಬರಿಸಿ ಹಿಂದಕ್ಕೆ ಬರುವವರಾಗಿದ್ದಾರೆ

ಬಂಗಾಳಾ ಲೆಫ್ಟಿನೆಂಟ್ ಗವರ್ನರವರು ಪುರಿ (ಜಗನ್ನಾಥಕ್ಕೆ) ಹೋದ ವಾರ ದಯಮಾಡಿದ್ದಾಗ ಅಲ್ಲಿನ ಪ್ರಜೆಗಳು ಕಪಿಗಳ ಕಾಟವನ್ನು ತಪ್ಪಿಸಿಕೊಡಬೇಕೆಂದು ಅರಿಕೆ ಮಾಡಿಕೊಂಡರು ಕೋತಿಗಳನ್ನು ಕೊಲ್ಲುವುದು ಹಿಂದುಗಳಿಗೆ ಹಿತಕರವಲ್ಲ ಯಾತ್ರಾರ್ಥಿಗಳು ಅಲ್ಲಿಗೆ ಅಪಾರವಾಗಿ ಹೋಗುವರು ಅಲ್ಲಿ ನಡೆಯುವ ಅನ್ನದಾನದ ದೆಸೆಯಿಂದ ಈ ಕೋತಿಗಳ ಕಾಟ ಹೆಚ್ಚಾಗಿದೆ ಪುರಜನರೇ ಇದನ್ನು ನಿರ್ಮೂಲ ಮಾಡುವುದಕ್ಕೆ ಏರ್ಪಾಡು ಮಾಡಿಕೊಳ್ಳಬೇಕೆಂದೂ ತಾವು ಈ ವಿಷಯದಲ್ಲಿ ಪ್ರವರ್ತಿಸುವುದಿಲ್ಲವೆಂದೂ ಲೆಫ್ಟಿನೆಂಟ್ ಗವರ್ನರವರು ಅಪ್ಪಣೆ ಕೊಡಿಸಿದರು

ಪ್ಲೇಗ್ ಉಪದ್ರವವು ಕೊಯಮುತ್ತೂರಿನಲ್ಲಿ ಚನ್ನಾಗಿ ಬೇರೂರಿದಂತೆ ಕಾಣುವುದು ಅದು ಹಾದಿಸಿಕೊಂಡಿರುವ ಪ್ರಭಾಗವನ್ನೆಲ್ಲಾ ಖಾಲಿಮಾಡಿದ್ದಾಯಿತು ನೂರಾರು ಸಂಸಾರಗಳು ಮೈದಾನಗಳಲ್ಲಿ ವಾಸಮಾಡುತ್ತಿವೆ ಸುಮಾರು ೨,೫೦೦ ಜನರು ಪ್ಲೇಗ್ ಚುಚ್ಚುಮದ್ದನ್ನು ಹಾಕಿಸಿಕೊಂಡದ್ದಾಯಿತು ಅಲ್ಲಿಂದ ಹೊರಗೆ ಹೋಗತಕ್ಕವರನ್ನು ಆರೋಗ್ಯ ಪರೀಕ್ಷೆ ಮಾಡದೆ ಇತರ ಊರುಗಳವರು ಸೇರಿಸಿಕೊಳ್ಳಕೂಡದೆಂದು ಇಸ್ತಿಹಾರುಗಳು ಪ್ರಕಟವಾದವು ಸರ್ಕಾರದ ಅಧಿಕಾರಿಗಳು ಪ್ರಜೆಗಳ ಮುಖಂಡರ ಮೂಲಕ ಜನರಿಗೆ ವಿವೇಕ ಹೇಳುತ್ತಾ, ಅವರ ಕ್ಷೇಮಕ್ಕೆ ತಕ್ಕ ಸಹಕರಣಗಳನ್ನು ಒದಗಿಸಿಕೊಡುತ್ತಿದ್ದಾರೆ

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಮಾಪೂದ್ ಎಂಬ ಸ್ಥಳದಲ್ಲಿ "ರಾಷ್ಟ್ರಮತ" ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದ ಬಾಲಕೃಷ್ಣರಾಮಜಿ ಫಲವಾಂಕರ್ ಎಂಬ ಎಡಿಟರ ಮೇಲೆ ರಾಜದ್ರೋಹದ ಮೊಕದ್ದಮೆ ಆಗಿ, ಕೊಲಬಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕಠಿಣವಾದ ಆತನಿಗೆ ೧೮ ತಿಂಗಳ ಕಠಿಣ ಸಜಾ, ೫೦೦ ರೂಪಾಯಿ ಜುಲ್ಮಾನೆ ಎಂಬ ಶಿಕ್ಷೆಯನ್ನು ವಿಧಿಸಿದ್ದರು. ಆತನು ಅದರ ಮೇಲೆ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದನು. ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ಕಟ್ಟನ್ನು ಪರಾಂಬರಿಸಿ, ಕೆಳಕೋರ್ಟಿನ ಶಿಕ್ಷೆಯನ್ನೇ ಖಾಯಂಮಾಡಿರುತ್ತಾರೆ.

ಕಿಲ್ಲೇಕೋಟೆಗೆ ಸೇರಿದ ಮಾಳಾಪುರದ ಜಂಗಲಿನಿಂದ ಒಂದು ಚಿರತೆಯು ... ಗ್ರಾಮಕ್ಕೆ ನುಗ್ಗಿ ಒಬ್ಬ ಹೆಂಗಸನ್ನು ಹೊಡೆದು ತಿಂದು ಬೀದಿಗಳಲ್ಲಿ ಹೊರಟು ಸುಮಾರು ಹದಿಮೂರು ಜನರಿಗೆ ಗಾಯಮಾಡಿ, ಕೊನೆಗೆ ಒಂದು ... ದಲ್ಲಿ ಹೋಗಿ ಸೇರಿಕೊಂಡಿತು. ನೊರೋನಾ ಎಂಬ ಕ್ರೈಸ್ತ ನೌಕರನು ... ಕೂಡ ಹೋಗಿ ಚಿರತೆಯನ್ನು ಕಂಡು ಅದಕ್ಕೆ ಗುಂಡುಹೊಡೆದನು. ಅದು ತಪ್ಪಿಸಿಕೊಂಡು ಆತನ ಮೇಲೆ ಹಾರಿತು. ಆತನು ಮರೆಯಾದನು. ಅದು ... ನನ್ನು ಹಿಡಿದು ಕೊಂದುಹಾಕಿ ಎಳೆದುಕೊಂಡು ಹೋಗುತ್ತಿತ್ತು. ಆ ಕ್ರೈಸ್ತ ನೌಕರನು ಮತ್ತೆ ಗುಂಡುಹೊಡೆದು ಆ ಕ್ರೂರಮೃಗವನ್ನು ಕೊಂದುಹಾಕಿದನು. ಗ್ರಾಮಸ್ಥರೆಲ್ಲಾ ಆತನ ಧೈರ್ಯವನ್ನು ಹೊಗಳುತ್ತಿದ್ದಾರೆ.

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಸಿಕಂದ್ರಾಬಾದಿನ ಬಳಿ ಮುಷೀರಾಬಾದ್ ಎಂಬ ಗ್ರಾಮದಲ್ಲಿ ಮುಸಲ್ಮಾನರು ತಮ್ಮ ಇಮಾಂಹುಸೇನ್‌ರವರ ವಾರ್ಷಿಕೋತ್ಸವವನ್ನು ಮಾಡಿ, ಪ್ರತಿವರ್ಷವೂ ನಡೆಯುವಂತೆ ಬೆಂಕಿಕೊಂಡದ ಹಬ್ಬವನ್ನು ನಡಿಸಿದರು. ನಾಲ್ಕಾರು ಗಜಗಳ ಸೌದೆಯನ್ನು ಕೊಂಡದಲ್ಲಿ ಹಾಕಿ ಉರಿಸಿ, ಒಳ್ಳೆ ಕೆಂಡಗಳಾದ ಮೇಲೆ ಚೆನ್ನಾಗಿ ಹರಡಿ, ಮೊದಲು ಇಬ್ಬರು ಮುಸಲ್ಮಾನರು "ಹುಸೇನ್ ಅಲಿ ದೂಲಾ" ಎಂದು ಕೂಗುತ್ತಾ ಅದರ ಮೇಲೆ ... ಸಲ ಬರಿ ಕಾಲಿನಲ್ಲಿ ನಡೆದಾಡಿದರು. ತರುವಾಯ ನೂರಾರು ಜನರು ಅದೇ ಬೆಂಕಿಕೆಂಡಗಳ ಮೇಲೆ ಓಡಾಡಿದರು. ಯಾರಿಗೂ ಸುಟ್ಟ ಗಾಯಗಳಾಗಲಿಲ್ಲ. ಸಣ್ಣ ಮಕ್ಕಳು ಕೂಡ ಅದರಲ್ಲಿ ನುಗ್ಗಿ ನಡೆದು ಹಾರಾಡಿದರು. ನಾವಿರಾರು ಜನರು ಅಗ್ನಿಕೊಂಡದ ಸುತ್ತಲೂ ನಿಂತು ನೋಡಿದರು.

ಬೊಂಬಾಯಿ ಪಟ್ಟಣದಲ್ಲಿ ಕಳೆದ ವಾರ ವೈದ್ಯರುಗಳ ಸಮಾಜವು ಜರುಗಿತು. ಹಿಂದೂಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ಹಿಲಾಯತಿಯಿಂದಲೂ ಪ್ರಸಿದ್ಧ ವೈದ್ಯರುಗಳು ಬಂದು ಸೇರಿದ್ದರು. ಬೊಂಬಾಯಿ ಗವರ್ನರವರು ಡಾಕ್ಟರುಗಳಿಗೆ ಸುಸ್ವಾಗತವನ್ನು ಬಯಸಿ ಈ ಸಮಾಜದ ಕಾರ್ಯಗಳು ರೋಗ ನಿವಾರಣೆಗೂ ಕಷ್ಟ ಪರಿಹಾರಕ್ಕೂ ಸಹಾಯವಾಗಲೆಂದು ಹರಸಿದರು. ಪ್ರಸಿದ್ಧ ವೈದ್ಯರು ಬೇರೆ ಬೇರೆ ರೋಗಗಳ ವಿಷಯದಲ್ಲಿ ತಾವು ಪರಿಶೋಧನ ಮಾಡಿ ಕಂಡುಹಿಡಿದ ಸಂಗತಿಗಳನ್ನು ಉಪನ್ಯಾಸಗಳಾಗಿ ಬರೆದು ಓದಿ ಹೇಳಿದರು. ಬಹು ಮಂದಿ ಡಾಕ್ಟರುಗಳು ಪ್ಲೇಗ್ ಉಪದ್ರವನ್ನು ಕುರಿತು ಉಪನ್ಯಾಸ ಮಾಡಿದರು. ಪ್ಲೇಗ್ ಉಪದ್ರವು ಮೊದಲು ಇಲಿ ಹೆಗ್ಗಣಗಳಿಗೆ ಹಿಡಿದು, ಅವುಗಳ ಮೈಮೇಲಿರುವ ಚಿಗಟಗಳ ದೆಸೆಯಿಂದ ಮನುಷ್ಯನಿಗೆ ವ್ಯಾಪಿಸುವುದೆಂದು ಸಿದ್ಧಾಂತಪಡಿಸಿದರು. ಕೊಳೆಯಿಂದ ಪ್ಲೇಗ್ ಉತ್ಪತ್ತಿಯಾಗುವುದಿಲ್ಲವೆಂದೂ, ಈ ಉಪದ್ರವು ಜನಗಳ ಸಾಮಾನುಗಳಲ್ಲಿ ಸೇರಿಕೊಂಡಿರುವಂಥಾ ಚಿಗಟಗಳ ದೆಸೆಯಿಂದ ಊರಿಂದೂರಿಗೆ ಹರಡುತ್ತದೆಂತಲೂ ತಿಳಿಸಿದರು. ... ...

ಮೈಸೂರಿನ ಯುವರಾಜರು ಮಿಂಟೋ ಪ್ರಭುಗಳು ಕೂಚ್‌ಬಿಹಾರ್ ಸಂಸ್ಥಾನದ ಜಂಗಲುಗಳಲ್ಲಿ ಶಿಕಾರಿ ಮಾಡುವುದಕ್ಕೆ ಹೋಗಿದ್ದು, ಬಹಳ ಆತುರದಿಂದ ಕಳೆದ ವಾರ ಕಲ್ಕತ್ತೆಗೆ ದಯಮಾಡಿದರು. ಜಂಗಲಿನಲ್ಲಿ ಒಂದು ಅಚಾತುರ್ಯವಾದ ಕೆಲಸ ನಡೆಯಿತು. ವೈಸ್‌ರಾಯಿಯವರು ಒಂದು ಆನೆಯ ಮೇಲೆ, ಅವರ ಮಿಲಿಟರಿ ಸೆಕ್ರೆಟರಿಯವರಾದ ಕರ್ನಲ್ ಬ್ರೂಕ್‌ರವರು ... ಆನೆಯ ಮೇಲೆ ಕುಳಿತು ಜಂಗಲಿನಲ್ಲಿ ಮೃಗಗಳನ್ನು ಹುಡುಕಿಕೊಂಡು ಹೋದರು. ಘೇಂಡಾಮೃಗ ಸಿಕ್ಕಿದರೆ ಅದನ್ನು ವೈಸ್‌ರಾಯಿಯವರೇ ಗುರಿಯಿಂದ ಹೊಡೆದು ಕೊಲ್ಲಬೇಕೆಂದು ಗೊತ್ತಾಗಿತ್ತು. ಅಲ್ಲಿ ಅದಕ್ಕೆ ಸರಿಯಾಗಿ ಒಂದು ಘೇಂಡಾಮೃಗವು ಸಿಕ್ಕಿ, ಕರ್ನಲ್ ಬ್ರೂಕ್‌ರವರು ಕುಳಿತಿದ್ದ ಆನೆಯ ಮೇಲೆ ನುಗ್ಗಿ ಬಂದಿತು. ಆನೆಯು ಅದನ್ನು ತನ್ನ ಸೊಂಡಿಲಿನಿಂದ ನೂಕಿ ದೊಬ್ಬಿತು. ಈ ಸಡಕಾಟದಲ್ಲಿ ಘೇಂಡಾಮೃಗವು ಬಿದ್ದುಕೊಂಡಿತು. ಆನೆಯು ಅದನ್ನು ತುಳಿಯುವುದಕ್ಕೆ ಸಮೀಪಕ್ಕೆ ಹೋದಾಗ ಜೋಗಿದ್ದರಿಂದ ಮೇಲೆ ಹೌದಾದಲ್ಲಿ ಕುಳಿತಿದ್ದ ಕರ್ನಲ್‌ರವರು ಕೆಳಕ್ಕೆ ಬಿದ್ದರು. ಕೂಡಲೆ ಅವರೂ ಮೇಲಿನಿಂದ ಧುಮುಕಿಕೊಂಡರು. ಅವರ ತೋಳು ಹೌದಾಕ್ಕೆ ಸಿಕ್ಕಿಕೊಂಡು ಮೂಳೆ ಜಖಮ್ ಆಯಿತು. ಘೇಂಡಾಮೃಗವು ಎದ್ದು ಆನೆಯ ಮೇಲೆ ನುಗ್ಗಿತು. ಆಗ ಕರ್ನಲ್ ಬ್ರೂಕ್‌ರವರು ಆನೆಯನ್ನು ಸಂರಕ್ಷಿಸಬೇಕೆಂದು ಒಂದೇ ಕೈಯಲ್ಲಿ ಬಂದೂಕನ್ನು ಗುರಿಕಟ್ಟಿ ಹೊಡೆದರು. ಆದರೆ ಘೇಂಡಾಮೃಗಕ್ಕೆ ಬಹಳ ಗಾಯವಾಗಲಿಲ್ಲ. ಅದು ತಪ್ಪಿಸಿಕೊಂಡು ಜಂಗಲಿಗೆ ಓಡಿ ಹೊರಟುಹೋಯಿತು. ಕರ್ನಲ್ ಬ್ರೂಕ್‌ರವರನ್ನು ಕಲ್ಕತ್ತೆಯ ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡುತ್ತಿದ್ದಾರೆ. ಈ ಸಲ ಶಿಕಾರಿಗೆ ಹೊರಟಲ್ಲಿ ವೈಸ್‌ರಾಯಿಯವರು ಒಂದು ಹುಲಿ, ಒಂದು ಕಾಡುಕೋಣ, ಒಂದು ಘೇಂಡಾಮೃಗ, ಈ ಮೂರನ್ನು ಕೊಂದಿರುತ್ತಾರೆ.

ವಿದೇಶ ವರ್ತಮಾನಗಳು.

ದಕ್ಷಿಣ ಆಫ್ರಿಕದಲ್ಲಿ ಆರೋಗ್ಯಕ್ಕಾಗಿ ಸಂಚಾರ ಮಾಡುತ್ತಿದ್ದ ಲಾರ್ಡ್ ಕರ್ಜನ್‌ರವರು ಕಳೆದ ವಾರ ವಾಪಸು ಹಿಲಾಯತಿಯನ್ನು ತಲುಪಿರುತ್ತಾರೆ.

ಸ್ಕಾಟ್‌ಲೆಂಡಿಗೆ ಸೇರಿದ ಗ್ಲಾಸ್ಗೋ ಪಟ್ಟಣದಲ್ಲಿದ್ದು ಕಾಲವಾದ ಮಿ॥ ಕೀರ್ ಡಿಕ್ ಎಂಬುವನು ತನ್ನ ಆಸ್ತಿಯಿಂದ ಆಸ್ಪತ್ರೆ ಮೊದಲಾದ ಧರ್ಮಕಾರ್ಯಗಳಿಗೆ ೪೯॥ ಲಕ್ಷ ರೂಪಾಯಿಯನ್ನು ವಿನಿಯೋಗಿಸಬೇಕೆಂದು ಮರಣ ಶಾಸನವನ್ನು ಬರೆದಿರುತ್ತಾನೆ.

ಲಂಡನ್ ಪಟ್ಟಣದಲ್ಲಿ ಕುಕ್ ಕಂಪನಿಯವರ ಕಾರ್ಖಾನೆಗೆ ಬೆಂಕಿಬಿದ್ದು ಇಪ್ಪತ್ತು ಸಾವಿರ ಗಟ್ಟಿಗಳ ನಾರು ಸುಟ್ಟು ಹಾಳಾಯಿತು. ಕಂಪನಿಯವರಿಗೆ ಆರು ಲಕ್ಷ ರೂಪಾಯಿ ನಷ್ಟವಾಗಿದೆ.

ಪರ್ಷಿಯಾ ರಾಜ್ಯದ ರಾಜಧಾನಿಯಾದ ಟೆಹರಾನ್ ಪಟ್ಟಣದಲ್ಲಿ ಸಿಡಿಮದ್ದಿನ ಗುಂಡುಗಳನ್ನು ಇಟ್ಟುಕೊಂಡಿದ್ದ ಮೂರು ಮಂದಿಯನ್ನು ಸರ್ಕಾರದವರು ಹಿಡಿದು, ಮೊದಲನೆಯ ದಿನ ಒಬ್ಬನನ್ನೂ, ಮರುದಿನ ಇಬ್ಬರನ್ನೂ ಗಲ್ಲಿಗೆ ಹಾಕಿಸಿದರು.

ಚೀನಾ ರಾಜ್ಯದಲ್ಲಿ ಮ್ಯಾಂಚೂವಂಶದ ಅಧಿಕಾರಿಗಳು ಚಕ್ರವರ್ತಿಯವರಿಗೆ ಬರೆಯುವ ಕಾಗದಗಳಲ್ಲಿ "ನಿಮ್ಮ ಗುಲಾಮರು" ಎಂದು ಕಾಣಿಸುತ್ತಿದ್ದರು. ಇನ್ನು ಮುಂದೆ ಈ ರೀತಿ ಬರೆಯ ಕೂಡದೆಂತಲೂ, "ನಿಮ್ಮ ಮಂತ್ರಿಗಳು" ಎಂದು ನಮೂದು ಮಾಡಬೇಕೆಂತಲೂ ಈಗಿನ ರೀಜಂಟರವರು ಹುಕುಂ ಕೊಟ್ಟಿದ್ದಾರೆ.

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲಿನಲ್ಲಿ ಸರ್ಕಾರದವರು ಮಿ॥ ಗಂಧಿ ಎಂಬ ಹಿಂದೂಸ್ಥಾನದವನನ್ನು ಹಿಡಿದು, ಆತನು ರಿಜಿಸ್ಟರು ಮಾಡಿಸಿಕೊಳ್ಳದೆ ತಪ್ಪಿದ್ದಕ್ಕಾಗಿ ೭೫೦ ರೂಪಾಯಿ ಜುಲ್ಮಾನೆ ಕೊಡಬೇಕು, ಇಲ್ಲವೇ ಮೂರು ತಿಂಗಳ ಕಠಿಣ ಸಜಾ ಅನುಭವಿಸಬೇಕು ಎಂಬ ಶಿಕ್ಷೆಯನ್ನು ವಿಧಿಸಿರುತ್ತಾರೆ.

ದಕ್ಷಿಣ ಅಮೇರಿಕದಲ್ಲಿ ಅರ್ಜೆಂಟೈನ್ ಪ್ರಜಾ ಪ್ರಭುತ್ವದ ಮುಖ್ಯ ಪಟ್ಟಣವಾದ ಬ್ಯೂನಸ್ ಐರಸ್‌ನಿಂದ ಮಾಂಟೆವಿಡಿಯೋ ಎಂಬಲ್ಲಿಗೆ ಹೋಗುತ್ತಿದ್ದ ಪ್ರೆಸಿಡೆಂಟ್ ರೋಕಾ ಎಂಬ ಹಡಗು ಅಕಸ್ಮಾತ್ತಾಗಿ ಹತ್ತಿಕೊಂಡುರಿದು ಒಡೆದು ಹೋಯಿತು. ನಾಲ್ವತ್ತು ಜನರು ನೀರಿನ ಪಾಲಾದರೆಂದು ತಂತಿ ವರ್ತಮಾನ ಬಂದಿದೆ.

ಬುದ್ಧನ ಬೋಧನೆಗಳೂ ಆತನ ಮತ ತತ್ವಗಳೂ ಬರೆಯಲ್ಪಟ್ಟಿರುವ ಬಹು ಅಮೂಲ್ಯವಾದ ೧೦೮ ಗ್ರಂಥಗಳನ್ನು ಲಾರ್ಡ್ ಫ್ರೇಸರ್‌ರವರು ದಲಾಯಿಲಾಮಾ ಎಂಬ ಟಿಬೆಟ್ಟಿನ ಮಹಾ ಗುರುವಿನಿಂದ ಸಂಪಾದಿಸಿ, ಸೀಮೆಗೆ ಕಳುಹಿಸಿದ್ದಾರೆ. ಇವು ಟಿಬೆಟ್ ಭಾಷೆಯಲ್ಲಿ ಬರೆದಿರುವುವು. ಈ ಗ್ರಂಥಕ್ಕೆ ಸುಮಾರು ... ರೂಪಾಯಿ ಬೆಲೆಯಾಗ ಬಹುದೆಂದು ಹೇಳುತ್ತಾರೆ.

ಉತ್ತರ ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳ ಪೈಕಿ ಕ್ಯಾಲಿಫೋರ್ನಿಯಾ ಆಧಿಪತ್ಯದಲ್ಲಿ ಸೆನೆಟ್ ಎಂಬ ಪ್ರತಿನಿಧಿ ಸಭೆಯಲ್ಲಿ ಜಪಾನಿನವರ ಯಾವ ಜನರನ್ನೂ ಅಲ್ಲಿಗೆ ಸೇರಿಸ ಕೂಡದೆಂದು ಒಂದು ಕಾನೂನು ಮಾಡಿ ಪ್ಯಾಸ್ ಮಾಡಿರುತ್ತಾರೆ. ಇಂಥಾ ಕಾನೂನು ರೂಢಿಸುವುದಿಲ್ಲವೆಂದು ಆ ಸಭೆಯವರೇ ಕೆಲವು ವಾರಗಳ ಕೆಳಗೆ ತಿಳಿಸಿದ್ದು, ಈಗ ಅದನ್ನು ಯಾಕೆ ಜಾರಿಗೆ ತರಬೇಕೆಂದು ತೀರ್ಮಾನ ಮಾಡಿರುತ್ತಾರೆಯೋ ಗೊತ್ತಾಗಲಿಲ್ಲ.

ಪರ್ಷಿಯಾ ರಾಜ್ಯದಲ್ಲಿ ರಾಜಕೀಯ ವಿಷಯಗಳು ಅಲ್ಲಿನ ಪ್ರಜೆಗಳ ಮನಸ್ಸನ್ನೂ ಪರರಾಷ್ಟ್ರಗಳ ರಾಯಭಾರಿಗಳ ಮನಸ್ಸನ್ನೂ ಕೊರೆಯುತ್ತಿರುವುದು ತಪ್ಪಲಿಲ್ಲ. ಷಾ ಸುಲ್ತಾನರವರು ತಮ್ಮ ರಾಜ್ಯದಲ್ಲಿ ಪ್ರಜಾ ಪ್ರತಿನಿಧಿ ಸಭೆಯನ್ನು ಸ್ಥಾಪಿಸಬೇಕೆಂತಲೂ, ಇಲ್ಲವಾದರೆ ಪರರಾಜ್ಯಗಳ ರಾಯಭಾರಿಗಳು ತಮ್ಮ ತಮ್ಮ ಆಸ್ತಿಪಾಸ್ತಿಗಳ ಮತ್ತು ಹಕ್ಕು ಬಾಧ್ಯತೆಗಳ ಸಂರಕ್ಷಣೆಗೆ ಅವಶ್ಯವಾದ ಏರ್ಪಾಡುಗಳನ್ನು ಮಾಡಿಕೊಳ್ಳಬೇಕಾಗುವುದೆಂತಲೂ, ಸುಲ್ತಾನರವರಿಗೆ ಸಾಲ ಮುಂತಾದದ್ದು ಬೇಕಾದಲ್ಲಿ ದೊರಕಲಾರದೆಂತಲೂ ಇಂಗ್ಲಿಷ್ ಮತ್ತು ರಷ್ಯಾ ಗವರ್ನ್‌ಮೆಂಟುಗಳವರು ಸುಲ್ತಾನರವರಿಗೆ ತಿಳಿಸುವವರಾಗಿದ್ದಾರೆ.

ಹಿಲಾಯತಿ ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸುವಂಥಾ ಹಕ್ಕು ಕೊಡಬೇಕೆಂದು ಹೋರಾಡುತ್ತಿರುವ ಕೆಲವು ಸ್ತ್ರೀಯರು ಕಳೆದ ವಾರ ಗುಂಪು ಕಟ್ಟಿಕೊಂಡು ಪಾರ್ಲಿಮೆಂಟ್ ಸಭೆಮನೆಯೊಳಕ್ಕೆ ಪ್ರವೇಶಿಸಬೇಕೆಂದು ಬಲಾತ್ಕಾರವಾಗಿ ನುಗ್ಗಿದರು. ಪೋಲೀಸಿನವರು ಅವರನ್ನೆಲ್ಲಾ ತಡೆದು ಹಿಮ್ಮೆಟ್ಟಿಸಿದ್ದಲ್ಲದೆ ಅವರಲ್ಲಿ ಸುಮಾರು ೩೦ ಮಂದಿ ಹೆಂಗಸರನ್ನು ದಸ್ತಗಿರಿ ಮಾಡಿದರು. ಹಿಂದೂಸ್ಥಾನದ ವೈಸ್‌ರಾಯಿಯವರಾಗಿದ್ದ ಲಾರ್ಡ್ ಲಿಟನ್ ಪ್ರಭುಗಳ ಕುಮಾರ್ತೆಯೂ ಹಿಡಿಯಲ್ಪಟ್ಟು, ಈಕೆಗೂ ಸಜಾ ಶಿಕ್ಷೆಯನ್ನು ವಿಧಿಸಿದರು. ಇವರೆಲ್ಲಾ ಜುಲ್ಮಾನೆ ಕೊಡುವುದಕ್ಕೆ ಇಷ್ಟವಿಲ್ಲದೆ ಬಂದೀಖಾನೆಗೆ ಹೋಗಿರುತ್ತಾರೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಿಸಿದರು. ಕಳೆದ ಜನವರಿ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳು ಓದಲ್ಪಟ್ಟವು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ ೧೨,೭೮೧-೭-೧ ಪೈ ಜಮಾ ಆಯಿತೆಂದೂ, ರೂ ೮,೯೯೫-೧೩-೧೧ ಪೈ ಖರ್ಚಾಯಿತೆಂದೂ ತಿಳಿಯಿತು. ಆ ತಿಂಗಳಲ್ಲಿ ಜನನ ೧೨೬, ಮರಣ—ಪ್ಲೇಗ್ ೬, ಸಿಡುಬು ೪೭, ಜ್ವರ ೧೫, ಒಟ್ಟು ೧೭೬ ಎಂದು ಗೊತ್ತಾಯಿತು. ಆಡಿಟರುಗಳ ರಿಪೋರ್ಟು ಓದಿದ್ದರಲ್ಲಿ ತೆರಿಗೆಗಳು ತೃಪ್ತಿಕರವಾಗಿ ವಸೂಲಾಗುತ್ತಿಲ್ಲವೆಂದೂ, ಮ್ಯುನಿಸಿಪಲ್ ಆಫೀಸಿನಲ್ಲಿ ಜನರಲ್ ಖಾತೆಯನ್ನಿಡಿಸಿ ಮುತ್ಸದ್ದಿಗಳಿಗೆ ರಶೀತಿ ಪುಸ್ತಕಗಳನ್ನು ಪತ್ರ ಕೊಡಿಸಿ ಹಣ ವಸೂಲಿ ಮಾಡಿ ಮಾಡಬೇಕೆಂದೂ, ವಸೂಲಾತಿಗೂ ಸಿಬ್ಬಂದಿಯ ಖರ್ಚಿಗೂ ತಾರತಮ್ಯವಿಲ್ಲದೆ ಸಿಬ್ಬಂದಿ ಖರ್ಚು ಹೆಚ್ಚಾಗಿದೆ ಎಂದೂ, ಆಸೇಸರಿಗೆ ಇನ್ಸ್ಪೆಕ್ಟರು ಹಣದಿಂದ ಅಡ್ವಾನ್ಸು ಕೊಟ್ಟಿರುವುದು ಕೆಲವು ವರುಷಗಳು ಕಳೆದುಹೋಗಿದ್ದರೂ ವಸೂಲಾಗದೆ ಹಾಗೇ ಉಳಿಕೊಂಡಿದೆ ಎಂದೂ ತಿಳಿದು ಬಂದಿದೆ. ಈ ಲೋಪಗಳನ್ನೆಲ್ಲಾ ಜಾಗ್ರತೆಯಿಂದ ಸರಿಪಡಿಸಬೇಕೆಂದು ಕೌನ್ಸಲರುಗಳು ತೀರ್ಮಾನ ಮಾಡಿದರು.

ರಾಜಧಾನಿಯಲ್ಲಿರುವ ಕರ್ನಾಟಕ ಮತ್ತು ಯುನಾನಿ ಆಸ್ಪತ್ರೆಗಳ ಮೇಲ್ವಿಚಾರಣೆಯನ್ನು ಆಪಾಧಿಕಾರಿ ಮಿ॥ ಎಸ್ ವೆಂಕೋಬರಾಯರಿಗೆ ವಹಿಸಬೇಕೆಂದು ಸಿವಿಲ್ ಸರ್ಜನ್‌ರವರು ಶಿಫಾರಸು ಮಾಡಿದ್ದರು. ಈ ವಿಷಯ ಚರ್ಚೆಯಾದದ್ದರಲ್ಲಿ ಮುಂದಿನ ತಿಂಗಳ ಮೀಟಿಂಗಿಗೆ ಸಿವಿಲ್ ಸರ್ಜನ್‌ರವರನ್ನು ಕರೆಸಿಕೊಂಡು ಅವರ ಅಭಿಪ್ರಾಯವನ್ನು ತಿಳಿಯಬೇಕೆಂದು ಗೊತ್ತು ಮಾಡಿದರು. ಕರ್ನಾಟಕ ಆಸ್ಪತ್ರೆಯಲ್ಲಿ ಕಂಪೌಂಡರಾಗಿರುವ ವಿಶ್ವನಾಥಯ್ಯನವರ ಸಂಬಳವನ್ನು ೫ ರೂಪಾಯಿ ಬಡ್ತಿ ಮಾಡಬಹುದೆಂದು ಒಪ್ಪಿಕೊಂಡರು.

ಇನ್ನು ಮುಂದೆ ಮ್ಯುನಿಸಿಪಲ್ ಸ್ಕೂಲುಗಳಿಗೆ ಪರೀಕ್ಷೆಯ ಫಲಿತಾಂಶದ ಪ್ರಕಾರ ಗ್ರ್ಯಾಂಟನ್ನು ಕಮ್ಮಿ ಜಾಸ್ತಿ ಮಾಡಿ ಕೊಡುವಂತೆ ಮ್ಯಾನೇಜಿಂಗ್ ಕಮಿಟಿಯವರು ಶಿಫಾರಸು ಮಾಡಿದ್ದನ್ನು ಕೌನ್ಸಲರುಗಳು ಒಪ್ಪಿಕೊಂಡಿದ್ದಾರೆ.

ಮೈಸೂರು ಪಟ್ಟಣಕ್ಕೆ ವಿದ್ಯುಚ್ಛಕ್ತಿಯ ಸಹಾಯದಿಂದ ನೀರನ್ನು ಎತ್ತಿ ತಂದು ಒದಗಿಸುವುದಕ್ಕೆ ೫೦,೦೦೦ ರೂಪಾಯಿ ಬೇಕಾಗಿರುವುದರಿಂದ ಈ ಹಣವನ್ನು ಮ್ಯುನಿಸಿಪಾಲಿಟಿಗೆ ಶೇಕಡಾ ವರುಷಕ್ಕೆ ೪ ರೂಪಾಯಿ ಬಡ್ಡಿಯಂತೆ ಸಾಲ ಕೊಡುವುದಾಗಿ ಸರ್ಕಾರದವರು ಒಪ್ಪಿರುತ್ತಾರೆ. ಇದಲ್ಲದೆ ಈಗ ಅಲ್ಲಿ ನೀರು ಎತ್ತುವ ಚಾಲ್ತಿ ಕೆಲಸಗಳಿಗೆ ೨೪,೦೧೬ ರೂಪಾಯಿ ಬೇರೆ ಬೇಕಾಗಿರುವುದರಿಂದ ಇದನ್ನು ಅದೇ ರೀತಿ ಸಾಲ ಕೊಡಬಹುದೆಂದು ಸರ್ಕಾರದವರು ತಿಳಿಸಿ ಈ ಸಾಲಗಳನ್ನು ಯಾವರೀತಿ ತೀರಿಸುತ್ತೀರೆಂದು ಮ್ಯುನಿಸಿಪಲ್ ಕೌನ್ಸಿಲಿನವರನ್ನು ಕೇಳಿದ್ದರು. ಮೆಂಬರುಗಳು ಈ ವಿಷಯವನ್ನು ಬಹು ದೀರ್ಘವಾಗಿ ಚರ್ಚೆಮಾಡಿ, ಒಂದು ಸಬ್ ಕಮಿಟಿಯನ್ನು ನೇಮಕ ಮಾಡಿ, ಇವರು ಇದುವರೆಗೆ ಈ ನೀರಿನ ಏರ್ಪಾಡಿಗೆ ಖರ್ಚಾಗುವುದನ್ನೆಲ್ಲಾ ಗೊತ್ತುಮಾಡಿ ಸರ್ಕಾರಕ್ಕೆ ತಿಳಿಸಬೇಕೆಂದು ಗೊತ್ತುಮಾಡಿದರು.

ಧರ್ಮಿ ನರಸಪ್ಪನವರ ಅಗ್ರಹಾರದಲ್ಲಿ ವೆಂಕಣ್ಣಾಚಾರ್ರು ಅಕ್ರಮವಾಗಿ ಒಂದು ಮನೆಯನ್ನು ಸ್ವಾಧೀನಪಡಿಸಿಕೊಂಡಿರುವ ಭಾಗದಲ್ಲಿ ಅವರ ಮೇಲೆ ದಾವಾ ಮಾಡುವ ವಿಷಯದಲ್ಲಿ ಮ್ಯುನಿಸಿಪಲ್ ಕೌನ್ಸಿಲ್‌ನವರು ಸಮ್ಮತಿಪಟ್ಟರು.

ಜೀವಣ್ಣರಾಯನ ಕಟ್ಟೆ ಒಳಭಾಗದಲ್ಲಿ ಅಕ್ಕಿ ತಯಾರುಮಾಡುವ ಕಾರ್ಖಾನೆಯನ್ನು ಕಟ್ಟಿ ಕೆಲಸ ನಡಿಸುವುದಕ್ಕೆ ಸ್ಥಳವನ್ನು ಕೊಡಬೇಕೆಂದು ಪೆನ್ಷನರ್ ಅ॥ ಕಮೀಷನರ್ ಮಿ॥ ಕೆ. ತ್ರಿವೇಂಕಟಯ್ಯನವರು ಕೇಳಿದ್ದರು. ಈ ಸ್ಥಳವನ್ನು ಅವರಿಗೆ ಕೊಡಿಸಬಹುದೆಂತಲೂ ಟ್ರಸ್ಟ್ ಬೋರ್ಡಿನವರು ಅವರಿಂದ ಅವಶ್ಯವಾದ ಕರಾರನ್ನು ಬರೆಸಿ ಮುಚ್ಚಳಿಕೆ ತೆಗೆದುಕೊಳ್ಳಬಹುದೆಂತಲೂ ಕೌನ್ಸಲರುಗಳು ತೀರ್ಮಾನಮಾಡಿರುತ್ತಾರೆ.

೨೦ ರೂಪಾಯಿಗೊಳಗಿರುವ ಮ್ಯುನಿಸಿಪಲ್ ಸಂಬಳಗಾರರಿಗೆ ಕ್ಷಾಮದ ಭತ್ಯವನ್ನು ಕೊಡಬೇಕೆಂದು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ. ಇದಕ್ಕೆ ಬೇಕಾಗುವ ಹಣವನ್ನು ವೈಸ್ ಪ್ರೆಸಿಡೆಂಟರವರು ಮ್ಯುನಿಸಿಪಲ್ ಹಣದಲ್ಲಿ ಒದಗಿಸಬೇಕೆಂದು ಮೆಂಬರುಗಳು ತೀರ್ಮಾನ ಮಾಡಿದರು.

ಮ್ಯುನಿಸಿಪಲ್ ಚಾಲ್ತಿ ಖರ್ಚಿಗೋಸ್ಕರ ೩,೮೪೪ ರೂಪಾಯಿಯನ್ನು ಇತರ ಬಾಬುಗಳಿಂದ ಹೊರಳ ಮಾಡಿಕೊಳ್ಳಬಹುದೆಂದು ಮೆಂಬರುಗಳು ಒಪ್ಪಿಕೊಂಡರು.

ಮೈಸೂರಿನಲ್ಲಿ ಈಗ ಸಿಡುಬಿನ ಉಪದ್ರ ಹೆಚ್ಚಾಗಿರುವುದರಿಂದ ಎಲ್ಲಾ ಮೊಹಲ್ಲೆಗಳಲ್ಲೂ ಮಕ್ಕಳು ಮುಂತಾದವರಿಗೆ ದೇವಿಹಾಲು ಹಾಕಿಸುವುದಕ್ಕೆ ತಿಂಗಳಿಗೆ ೧೫ ರೂಪಾಯಿ ಸಂಬಳದ ಮೇರೆ ನಾಲ್ಕು ಮಂದಿ ಸಿಡುಬು ಹಾಕತಕ್ಕವರನ್ನು ಹಂಗಾಮಿಯಾಗಿ ನೇಮಕ ಮಾಡಿಕೊಳ್ಳಬಹುದೆಂದು ಕೌನ್ಸಲರುಗಳು ಸ್ಯಾಂಕ್ಷನ್ ಮಾಡಿರುತ್ತಾರೆ.

ಸೀತಾವಿಲಾಸ ಅಗ್ರಹಾರದಲ್ಲಿರುವ ಶಿರಸ್ತೇದಾರ್ ವೆಂಕಟರಮಣಯ್ಯನವರು ತಮ್ಮ ಮನೆ ಪೂರ್ವದಿಕ್ಕಿನ ಖಾಲಿ ನಿವೇಶನವನ್ನು ತಮಗೆ ಕೊಡಿಸಿದರೆ ಅದರಲ್ಲಿ ಹೂವು ತುಳಸಿ ಹಾಕಿಕೊಂಡಿದ್ದು ಮ್ಯುನಿಸಿಪಾಲಿಟಿಯವರಿಗೆ ಬೇಕಾದಾಗ ಬಿಟ್ಟು ಕೊಡುತ್ತೇನೆಂದು ಅರ್ಜಿ ಬರೆದುಕೊಂಡಿದ್ದರು. ಆ ನಿವೇಶನವನ್ನು ಅವರಿಗೆ ಕೊಡಬಹುದೆಂತಲೂ, ಅವರಿಂದ ಸರಿಯಾದ ಮುಚ್ಚಳಿಕೆ ಬರೆಸಿಕೊಳ್ಳಬೇಕೆಂತಲೂ, ಈ ರೀತಿ ಪಟ್ಟಣದ ಇತರ ಭಾಗಗಳಲ್ಲಿ ಅಕ್ಕಪಕ್ಕದ ಮನೆಗಳವರಿಗೆ ವಹಿಸಿರುವ ಮ್ಯುನಿಸಿಪಲ್ ಖಾಲಿ ನಿವೇಶನಗಳಲ್ಲಿ ಅವು ಮ್ಯುನಿಸಿಪಾಲಿಟಿಗೆ ಸೇರಿದವುಗಳೆಂದು ಗೊತ್ತಾಗುವಂತೆ ಕಲ್ಲುಗಳ ಮೇಲೆ ಅಕ್ಷರಗಳನ್ನು ಕೆತ್ತಿಸಿ ನಡಿಸಬೇಕೆಂತಲೂ ಕೌನ್ಸಲರುಗಳು ತೀರ್ಮಾನ ಮಾಡಿದರು.

ತಾಲ್ಲೋಕು ವರ್ತಮಾನಗಳು

ಹುಣಸೂರು.—ಈ ಊರಿನಲ್ಲಿ ಸುಮಾರು ೧೦—೧೫ ದಿನಗಳಿಂದಲೂ ಪ್ಲೇಗ್ ಶುರುವಾಗಿ, ೧೦—೧೨ ಮರಣಗಳಾದವು. ಹೊಸದಾಗಿ ಕೇರಿಗೆ ತಗಲಿದೆ. ಇಲಿಗಳು ಮನೆಗಳಲ್ಲಿ ಸಾಯುತ್ತವೆ. ಈಗಾಗಲೇ ೧೬೭ ಮನೆಗಳವರೆಲ್ಲಾ ಊರು ಬಿಟ್ಟು ಹೆದ್ದುಗಳಲ್ಲಿ ವಾಸ ಮಾಡುತ್ತಾರೆ. ಇನ್ನು ಎಲ್ಲರೂ ಊರು ಬಿಡುವವರಲ್ಲಿದ್ದಾರೆ. ಊರಿನ ಶಾನಭೋಗರು ವಿಷಯದಲ್ಲಿ ಸಮ್ಮ ಅಮಲ್ದಾರರು ತುಂಬಾ ನಿಗಾ ಕೊಟ್ಟು ಸಾಕ್ ಮಾಡಿಸುತ್ತಾ ಇದ್ದಾರೆ. ಬಿಸಿಲು ಅಧಿಕವಾಗಿದೆ. ಬೆಳಗಿನ ಜಾವದಲ್ಲಿ ಬಹಳ ಹಿಮ ಸುರಿಯುತ್ತದೆ. ದಾರಣೆವಾಸಿಗಳು ಇಳಿದಿಲ್ಲ. ಈ ಊರಲ್ಲಿ ಪ್ಲೇಗ್ ಇನ್ಸ್‌ಪೆಕ್ಟರು ಇಲ್ಲದ್ದರಿಂದ ಮ್ಯುನಿಸಿಪಲ್ ಮುಖಂಡರೇ ಬಹಳ ಮುತುವರ್ಜಿಯಿಂದ ಪ್ಲೇಗ್ ಡ್ಯೂಟಿ ನೋಡುತ್ತಾರೆ.

ಚಿತ್ರದುರ್ಗ.—ಬಿಸಿಲಿನ ಧಗೆಯು ದಿನೇ ದಿನೇ ಹೆಚ್ಚುತ್ತಲಿದೆ. ಕೆಲವು ದಿನಗಳು ಮೋಡವಾಡುತ್ತಾ ರಾತ್ರಿ ಹಗಲು ಬಹಳ ಸೆಕೆಯಾಗುತ್ತಿದ್ದು, ಮೋಡಗಳೆಲ್ಲಾ ಚದರಿಹೋಗಿವೆ. ಸದ್ಯ ಮಳೆಯ ಕುರುಹು ಏನೂ ಕಾಣಬರುವದಿಲ್ಲ. ನೀರಿನ ಸರಬರಾಯಿ ದಿನ ದಿನ ಕಮ್ಮಿಯಾಗುತ್ತಾ ಬರುತ್ತಿದೆ. ಒಡ್ಡಿನಲ್ಲಿ ಬಂಕಿಯಾಗಿ ನಿಂತಿದ್ದ ನೀರನ್ನು ಏನಾ ನಾಲ್ಕಾರು ಅಳುಗಳು ಎತ್ತಿ ಪೈಪುಗಳ ಮುಖಾಂತರ ಊರಿಗೆ ಸಾಗಿಸುತ್ತಿದ್ದಾರೆ. ಅದು ಸಹ ಮುಗಿದು ಬಂದಿದೆ. ಮುಂದೇನು ಮಾಡಬೇಕೋ ಎಂಬ ಚಿಂತೆಯು ಮುನಿಸಿಪಾಲಿಟಿಯವರನ್ನೂ ಊರ ಜನಗಳನ್ನೂ ಬಾಧಿಸುತ್ತಲಿದೆ.—ಈ ಡಿಸ್ಟ್ರಿಕ್ಟಿಗೆ ಸೇರಿದ ತಿಪ್ಪರಂಗಪ್ಪನೆಂಬ ಒಬ್ಬ ಭಾರೀ ರೈತನು ತನ್ನ ತಂದೆ ಸ್ವಂತ ಜಮೀನಿನಲ್ಲಿ ಕಟ್ಟಿಸಿದ್ದ ಕೆರೆಯು ಶಿಥಿಲವಾಗಿರುವದನ್ನು ದುರಸ್ತುಮಾಡಿಕೊಳ್ಳಲಾರದೆ ಸರ್ಕಾರದವರು ಅದನ್ನು ಹಾಳ್ ಆಗದಹಾಗೆ ಕೆಲವು ಸಾವಿರ ರೂಪಾಯಿಗಳ ಕಮ್ಮಿ ಕ್ರಯಕ್ಕಾದರೂ ತೆಗೆದುಕೊಂಡು ಬಡವನನ್ನು ಉದ್ಧಾರಮಾಡಬೇಕೆಂದು ಬರೆದಿತ್ತಷ್ಟೆ. ಅರ್ಜಿ

ಯಾದು, ಅಮಲ್ದಾರರೇ ಮುಂತಾದ ಅಧಿಕಾರಿಗಳು ಈ ರೈತನ ಕಲೆ ಜಮೀನುಗಳನ್ನು ನೋಡಿಕೊಂಡು ಬಂದು ಮೇಲ್ಪಟ್ಟವರಿಗೆ ಬರೆದರೆಂದು ವದಂತಿ ಇದೆ ಆದರೇನು ? ರೈತನಿಗೆ ಮಾತ್ರ ಈವರಿಗೂ ಒಂದು ಕಾಸಾದರೂ ಪ್ರಯೋಜನವಾಗಲಿಲ್ಲ ಆಪ್ತ ರಂಗಪ್ಪನೇ ತನ್ನ ಸ್ಥಿತಿಯನ್ನು ತಿಳಿದಿದ್ದ ೮ ೧೦ ಮಂದಿ ಭಾಗೀ ರೈತರನ್ನು ಕಟ್ಟಿಕೊಂಡು ಬಹಳ ಖರ್ಚಿಟ್ಟುಕೊಂಡು ಬೆಂಗಳೂರಿಗೆ ಹೋಗಿ ರೆವಿನ್ಯೂ ಕಮೀಷನರು ಮೊದಲಾಗಿ ಸಕಲ ಅಧಿಕಾರಿಗಳನ್ನೂ ಬಹಳ ಕಷ್ಟದಿಂದ ಕಂಡು ಅರ್ಜಿಯನ್ನು ಒಪ್ಪಿಸಿದರೂ ಇದೂ ಒಂದು ಹೊಸ ಖರ್ಚಿನ ಬಾಬಾಗಿ ಪರಿಣಮಿಸಿ ನೂರಾರು ರೂಪಾಯಿ ಖರ್ಚಿಗೆ ಕಾರಣವಾಯಿತೇ ಹೊರತು ಕೆರೆ ದುರಸ್ತಾಗಿ, ರೈತನ ಹೊಟ್ಟೆ ತುಂಬಲಿಲ್ಲ. ಸಾಲಗಾರರ ಕಾಟ ತಪ್ಪಲಿಲ್ಲ. ಸರ್ಕಾರದವರ ಸಂಟೆ ಕಾಯುವದು ತಪ್ಪಲಿಲ್ಲ. ನೆನ್ನೆ ದಿನ ಆ ಮನುಷ್ಯನು ಬಂದು—ನನ್ನ ಆಸ್ತಿ ಆಧಾರವನಿಟ್ಟುಕೊಂಡು ಕೆಲವು ಸಾವಿರ ರೂಪಾಯಿ ತಕಾವಿ ತಣಕ್ಕಾದರೂ ಅರ್ಜಿ ಹಾಕಿಕೊಳ್ಳಿ ಎಂದು ಬಂದೆ ಸ್ವಾಮಿ, ಊರಲ್ಲಿ ದೊರೆಗಳಿಲ್ಲ ಎಂತ ದುಃಖದಿಂದ ಹೇಳಿಕೊಳ್ಳುತ್ತಿದ್ದನು. ಸರಕಾರದವರು ಈ ಬಡ ರೈತನು ಕೆಟ್ಟುಹೋಗುತ್ತಿರುವದನ್ನು ನೋಡಿ ತಮಗೆ ಸೂಕ್ತವಾಗಿ ತೋರುವ ಯಾವ ವಿಧದಿಂದಲಾದರೂ ಸಹಾಯಮಾಡಿ ಕಾಪಾಡಬೇಕೆಂದು ನಿರೀಕ್ಷಿಸುತ್ತೇವೆ

ಚನ್ನರಾಯಪಟ್ಟಣ.—ಕಳೆದ ಮಾಹೆ ೨೧ನೇ ತಾ ಭಾನುವಾರ ಪ್ರಾತಃಕಾಲ ೧೦ ಘಂಟೆಗೆ ನಮ್ಮ ದಿವಾನ್ ಬಹದ್ದೂರ್ ಮ॥ ವಿ. ಪಿ. ಮಾಧವರಾಯರ ಸವಾರಿಯು ಸಲ್ಲಿಗೆರೆ ಮಾರ್ಗವಾಗಿ ಈ ಊರಿಗೆ ದಯಮಾಡಿಸಿತು ಇಲ್ಲಿನ ಸ್ಥಳಾಧಿಕಾರಿಗಳಾದ ನಮ್ಮ ಅಮಲ್ದಾರರು ಟ್ರಾವೆಲರ್ಸ್ ಬಂಗ್ಲೆಯಲ್ಲಿ ಮನೋಹರವಾದ ಚಪ್ಪರವನ್ನು ಹಾಕಿಸಿ ಸಕಲ ಮರ್ಯಾದೆಗಳೊಡನೆ ಎದುರುಗೊಂಡರು ಇಲ್ಲಿನ ವೆಸ್ಲಿಯನ್ ಮಿಷನ್ ಗರ್ಲ್ಸ್ ಸ್ಕೂಲು ಬಾಲಕಿಯರು ಅವರ ಮೇಲೆ ವಾಡಿದಂಥ ಸುಸ್ವಾಗತದ ಸೂಚಕವಾದ ಹಾಡನ್ನು ಹೇಳುವುದಕ್ಕೆ ಪ್ರಾರಂಭಿಸಿದನ್ನು ಕಂಡು ದಿವಾನ್‌ರವರು ಆ ಕೂಡಲೆ ಮೋಟಾರ್ ಗಾಡಿಯನ್ನು ನಿಲ್ಲಿಸಿ ಬಾಲಕಿಯರು ಬಹಳ ಮನೋಹರವಾಗಿ ಅವರ ಸುಸ್ವಾಗತದ ಮತ್ತು ಶ್ರೇಯಃ ಪ್ರಾರ್ಥನೆಯ ಹಾಡುಗಳನ್ನು ಹಾಡಿದ್ದನ್ನು ಕೇಳಿ ಬಹಳ ಸಂತೋಷಪಟ್ಟು, ಅವರಿಗೋಸ್ಕರವಾಗಿ ಕೊಂಚ ಮೊಬಲಗನ್ನು ದಯಪಾಲಿಸಿದರು ಅನಂತರ ವೈದಿಕರೇ ಮುಂತಾದವರು ಫಲ ಮಂತ್ರಾಕ್ಷತೆಗಳನ್ನು ಕೊಟ್ಟರು ಪುರವಾಯ ಮುನಿಸಿಪಲ್ ಮೆಂಬರುಗಳು, ತಾಲ್ಲೋಕು ಅಧಿಕಾರಿಗಳು ವರ್ತಕರೇ ಮುಂತಾಗಿ ಸರ್ವರೂ ಅವರಿಗೆ ಸುಸ್ವಾಗತವನ್ನು ಬಯಸಿದರು ಬಳಿಕ ನಮ್ಮ ದಿವಾನ್ ಸಾಹೇಬರು ಸರ್ವರ ಕ್ಷೇಮ ಲಾಭವನ್ನು ವಿಚಾರಿಸಿ, ಸರ್ವರಿಗೂ ಮುಗುಳ್ನಗೆ ಬರುವಂತೆ ಮಾತಾಡಿ, ತಾವು ವಿಶ್ರಾಂತಿಗೋಸ್ಕರ ಬಂಗ್ಲೆ ಒಳಕ್ಕೆ ಹೊರಟುಹೋದರು ಆ ದಿನ ಸಾಯಂಕಾಲ ೪ ಘಂಟೆ ಸಮಯಕ್ಕೆ ಅನೇಕ ಜನರು ಈಗ ಪ್ರಾಪ್ತವಾಗಿರುವ ಕ್ಷಾಮದ ವಿಚಾರವಾಗಿ ಅರ್ಜಿಗಳನ್ನು ಬರೆದುಕೊಂಡು ಹೋಗಿ ಅಹವಾಲುಗಳನ್ನು ಹೇಳಿಕೊಳ್ಳುವದಕ್ಕೋಸ್ಕರ ಅವರ ಸಮಯವನ್ನು ಕಾಯುತ್ತಿರುವಾಗ್ಗೆ ೪½ ಘಂಟೆ ಸಮಯಕ್ಕೆ ಬಂಗ್ಲೆ ಒಳಗಿನಿಂದ ದಿವಾನ್ ಸಾಹೇಬರು ದಯಮಾಡಿ, ಬಂಗ್ಲೆ ಒಳಗೆ ತಾಲ್ಲೋಕು ಅಧಿಕಾರಿಗಳು ಏರ್ಪಡಿಸಿದ್ದ ಚಪ್ಪರದಲ್ಲಿ ಕುಳಿತುಕೊಂಡು, ಸರ್ವರ ಅಹವಾಲುಗಳನ್ನೂ ವಿಚಾರಿಸಿ, ನೀರಿಲ್ಲದೆ ಇರುವ ಗ್ರಾಮಗಳಲ್ಲಿ ಬಾವಿಗಳನ್ನು ತೆಗಿಸಿ ಕೊಡುವುದಾಗಿಯೂ, ಕೆರೆ, ಕಟ್ಟೆ, ಮುಂತಾದವು ಒಡದು ಹೋಗಿದ್ದರೆ ಅವನ್ನು ಮಾಡಿಸಿ ಕೊಡುತ್ತೇವೆಂತಲೂ, ಕಂದಾಯದ ವಿಷಯದಲ್ಲಿ ಪ್ರಜೆಗಳಿಗೆ ಯಾವ ತೊಂದರೆಯೂ ಕೊಡದ ಹಾಗೆ ಹುಕುಂ ಕೊಡುತ್ತೇವೆಂತಲೂ ಜೀವನಕ್ಕಿಲ್ಲದೆ ಅಳಿಯುತ್ತಿರುವ ಜನರಿಗೆ ರಿಲೀಫ್ ಕಾಮಗಾರಿ ಕೆಲಸಕ್ಕೆ ಸುರೂ ಮಾಡಿ ಜೀವನಕ್ಕೆ ಕೂಲಿ ಕೆಲಸಗಳು ದೊರೆಯುವಂತೆ ಏರ್ಪಾಡು ಮಾಡಿ ಕೊಡುತ್ತೇವೆಂತಲೂ ಅಪ್ಪಣೆ ಮಾಡಿದರು ಇದೇ ಸಮಯದಲ್ಲಿ ಇಲ್ಲಿನ ಸಂಸ್ಕೃತ ಪಾಠಶಾಲಾ ಸಾಹಿತ್ಯ ವಿದ್ವಾನ್ ಗೋಪಾಲ ಕೃಷ್ಣಶಾಸ್ತ್ರಿಗಳು ಸ್ವಕೃತ ಮಾಡಿದಂಥ ಅವರ ಸುಸ್ವಾಗತವನ್ನೂ ಮತ್ತು ಅವರ ಶ್ರೇಯಃ ಪ್ರಾರ್ಥನೆಯ ಸಂಸ್ಕೃತ ಶ್ಲೋಕಗಳನ್ನು ಹೇಳಿದರು. ಮಧ್ಯದಲ್ಲಿ ಇಲ್ಲಿನ ಗುಲಾಂ ಮಹಮ್ಮದ್ ಸಾಹೇಬರು ಹಿಂದುಸ್ತಾನಿ ಭಾಷೆಯಲ್ಲಿ ಒಂದು ಅರ್ಜಿಯನ್ನು ಓದಿ ಹೇಳಿದರು ದಿವಾನ್‌ರವರು ಇವರುಗಳು ಹೇಳಿದಂಥಾದ್ದನ್ನು ಕೇಳಿ ಬಹಳ ಸಂತೋಷಪಟ್ಟರು ಈ ಊರಿನ ತಾಲ್ಲೋಕು ಕಚೇರಿ ಮುಂಭಾಗದಲ್ಲೂ ಹಿಂಭಾಗದಲ್ಲೂ ಇರುವ ಕೆರೆಯ ಬಾವಿಗಳನ್ನು ಈ ನೀರಿಲ್ಲದ ಕಾಲದಲ್ಲಿ ಸರಿಯಾಗಿ ಕಾಮಗಾರಿ ಮಾಡುವುದಕ್ಕೆ ನಮ್ಮ ಅಮಲ್ದಾರರು ಸರಕಾರಕ್ಕೆ ಕೊಡಬೇಕಾಗಿ ಪ್ರಾರ್ಥನೆ—ಪ್ರಕೃತದ ಸ್ಥಿತಿಯಲ್ಲಿ ಇಲ್ಲಿನ ನೀರಿನ ಕೊರತೆಯಿಂದಲೂ ಸಂತೆಯಲ್ಲಿ ದಿನಸಿ ಧಾರಣೆ ಜಾಸ್ತಿಯಾಗಿರುವುದರಿಂದಲೂ ೫೪ ಶೇರಿನ ಕೆಲವು ಜನ ವರ್ತಕರು ತಪ್ಪು ಮಾಡಿ, ತೂಕದ ಬೊಟ್ಟುಗಳಲ್ಲಿ ತೂಕ ಅಳತೆ ವಾಡುವುದು ಇನ್ನೂ ತಪ್ಪಲಿಲ್ಲ ಸಾಲಿಸಾಲಿನಂತೆ ಕಂದಾಯದ ವಸೂಲಿಯೂ ಬಹಳ ನಿರ್ದಯದಿಂದ ನಡೆಯುತ್ತಿದೆ ಇದ ಅನಂತರ ಮಾರನೆ ದಿನ ನಮ್ಮ ದಿವಾನ್ ಸಾಹೇಬರು ಬಾಲಕಿಯರಿಗೋಸ್ಕರ ಕೊಟ್ಟಿದ್ದ ಮೊಬಲಗಿಗೆ ಮಿಠಾಯಿ ಮುಂತಾದದ್ದನ್ನು ತರಿಸಿ ಸ್ಕೂಲಿನಲ್ಲಿ ನಮ್ಮ ಮಹಾರಾಜರ ಚಕ್ರವರ್ತಿಗಳ ಶ್ರೇಯಃ ಪ್ರಾರ್ಥನೆ ಮುಂತಾದ ಹಾಡುಗಳನ್ನು ಬಾಲಕಿಯರಿಂದ ಹೇಳಿಸಿ ಸರ್ವರಿಗೂ ಮಿಠಾಯಿ ಹಂಚಿ ಕೊಟ್ಟರು ಈ ದಿವಸ ಬೆಳಿಗ್ಗೆ ನಮ್ಮ ದಿವಾನ್ ಸಾಹೇಬರ ಸವಾರಿಯು ಇಲ್ಲಿನ ಎ. ವಿ. ಸ್ಕೂಲಿಗೂ ಬಂದು, ಬಾಲಕರು ಸ್ಕೂಲು ಪಾಠದ ಸಾಮಾನುಗಳನ್ನು ಹೇಳುತ್ತಿದ್ದನ್ನು ಕಂಡು ಬಹಳ ಸಂತೋಷಪಟ್ಟು, ನಮ್ಮ ಇನ್ಸ್‌ಪೆಕ್ಟರು ಮತ್ತು ತಿರುಮಲ ಐಯ್ಯಂಗಾರ್ಯ ಮೂಲಕ ಸ್ಕೂಲಿನ ಅಭಿವೃದ್ಧಿ ವಿಚಾರವನ್ನು ತಿಳಿದುಕೊಂಡು ಆ ಸೀಕೆರೆ ಮಾರ್ಗವಾಗಿ ಬೆಂಗಳೂರಿಗೆ ದಯಮಾಡಿದರು

ಕಳೆದುಹೋಗಿದ್ದ ರಾಜಕುಮಾರನು

ಅನೇಕ ಶತಮಾನಗಳ ಹಿಂದೆ ಉತ್ತರ ದೇಶದಲ್ಲಿ ಒಬ್ಬ ಪ್ರಸಿದ್ಧನಾದ ಅರಸು ಸುಖದಿಂದ ರಾಜ್ಯಭಾರ ಮಾಡಿಕೊಂಡಿದ್ದನು ಅವನಿಗೆ ಒಬ್ಬನೇ ಮಗನಿದ್ದನು ಈ ಮಗನು ಒಂದು ಹೊತ್ತು ಅರಮನೆಯಿಂದ ಹೊರಗೆ ಹೊರಟು ಸಮೀಪದಲ್ಲಿದ್ದ ಒಂದು ಕಾಡಿಗೆ ಹೊರಟುಬಿಟ್ಟನು ಆ ಕಾಡಿನಲ್ಲಿ ವಾಸವಾಗಿದ್ದ ಒಬ್ಬ ಬಡವನು ಸುಂದರನಾಗಿದ್ದ ಆ ರಾಜಕುಮಾರನನ್ನು ಹಿಡಿದುಕೊಂಡು ಬಹಳ ದೂರದಲ್ಲಿದ್ದ ಬೇರೊಂದು ಅರಣ್ಯಕ್ಕೆ ಹೊರಟುಹೋದನು ಅರಮನೆಯಲ್ಲಿ ಯಾದರೋ ರಾಜಕುಮಾರನು ತಪ್ಪಿಸಿಕೊಂಡು ಹೋದುದು ಎಲ್ಲರನ್ನು ಮಹಾವ್ಯಸನದಲ್ಲಿ ಮುಳುಗಿಸಿತು ಅವನಿಗಾಗಿ ನಾನಾ ಕಡೆಗಳಲ್ಲಿಯೂ ಹುಡುಕುವುದಕ್ಕೆ ಹೋದರು ಹುಡುಕುವುದರಲ್ಲಿಯೂ ಅನೇಕ ವರುಷಗಳು ಕಳೆದವು ಈ ಮಧ್ಯೆ ರಾಜಕುಮಾರನು ಆ ಬಡವನ ಹತ್ತಿರ ವಾಸಮಾಡಿಕೊಂಡು ಅತನು ಹೇಳಿದ ಕೆಲಸಗಳನ್ನು ನೆರವೇರಿಸಿ ಆತನಿಗೆ ಮಗನಂತಿದ್ದನು. ಆತನ ಉಡುಪು ಚರ್ಮದ ಉಡುಪುಗಳಾಗಿದ್ದವು ಗೆಡ್ಡೆಗೆಣಸೇ ಆತನ ಆಹಾರ ಒಂದಾನೊಂದು ದಿವಸ ಈ ರಾಜಕುಮಾರನಿದ್ದ ಕಾಡಿಗೆ ಯಾರೋ ಬೇಟೆಯಾಡುವುದಕ್ಕೆ ಬಂದರು. ಬೇಟೆಗೆ ಬಂದವರು ರಾಜಕುಮಾರನನ್ನು ಆಕಸ್ಮಿಕವಾಗಿ ಕಂಡು ಇವನ ರೂಪಲಾವಣ್ಯಗಳಿಗೆ ಮೆಚ್ಚಿ ಇವನನ್ನು ತಮ್ಮ ಸಂಗಡ ಕರೆದುಕೊಂಡು ಹೋಗುವುದಕ್ಕೆ ಪ್ರಯತ್ನಪಟ್ಟರು ಆದರೆ ಆ ಹುಡುಗನು ಒಪ್ಪದೆ ಬಡವನ ಗುಡಿಸಲನ್ನು ಸೇರಿಕೊಂಡನು ಬೇಟೆಗಾರರು ಹಿಂತಿರುಗಿ ಬಂದು ತಾವು ಕಂಡ ಆ ಬಾಲಕನ ವಿಷಯವಾಗಿ ಅರಸನಿಗೆ ತಿಳಿಸಿದರು ಅರಸನು ಎಲ್ಲವನ್ನು ಕೇಳಿ ತಾನೇ ಆ ಕಾಡಿಗೆ ಹೋದನು ಅಲ್ಲಿ ಹುಡುಗನು ಆಟವಾಡುತ್ತಿರುವುದನ್ನು ನೋಡಿದನು ಅರಸನು ಆ ಹುಡುಗನನ್ನು ಗುರುತು ಹಿಡಿದು ಕಳೆದುಹೋದ ಮಗನು ಅವನೇ ಎಂದು ತಿಳಿದುಕೊಂಡು ಅವನನ್ನು ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಅವನು ಕಳೆದುಹೋದ ವೃತ್ತಾಂತವನ್ನೆಲ್ಲಾ ತಿಳಿಸಿದನು ಎಲ್ಲವನ್ನು ಕೇಳಿದಮೇಲೆ ಆ ಹುಡುಗನು ಬಡವನು ತನ್ನ ತಂದೆಯಲ್ಲವೆಂದು ತಿಳಿದುಕೊಂಡನು. ಇವನು ಯಾವಾಗ್ಗೆ ತಾನು ರಾಜಪುತ್ರನೆಂದು ತಿಳಿದುಕೊಂಡನೋ ಅದೇ ಸಮಯದಲ್ಲಿ ತನ್ನ ತಂದೆಯಾದ ರಾಜನ ಸಂಗಡ ಅರಮನೆಗೆ ಹೊರಟು ಬಂದನು

ಈ ಕಥೆಯಿಂದ ನಾವು ಒಂದು ವಿಶೇಷವಾದ ಸಾರವನ್ನು ಕಲಿಯಬಹುದು ದೇವರು ನಮ್ಮೆಲ್ಲರನ್ನು ಸೃಷ್ಟಿಸಿ ಕಾಪಾಡುತ್ತಾ ಬರುತ್ತಾನೆ ನಾವೆಲ್ಲರೂ ಆತನ ಸ್ವರೂಪವನ್ನು ಧರಿಸಿದವರಾಗಿ ಆತನ ಮಕ್ಕಳಾಗಿರುತ್ತೇವೆ ಆತನು ನಮಗೆ ತಂದೆಯಾಗಿರುತ್ತಾನೆ. ಹೀಗಿರುವಲ್ಲಿ ಪಾಪವು ನಮ್ಮನ್ನು ದೇವರಿಂದ ದೂರ ಮಾಡುತ್ತದೆ ದೇವರು ಮೆಚ್ಚದೆ ಇರತಕ್ಕ ಗುಣಗಳನ್ನು ಪಾಪವು ನಮ್ಮಲ್ಲಿ ಹುಟ್ಟಿಸುತ್ತದೆ ಹೀಗಿದ್ದರೂ ದೇವರು ನಮ್ಮನ್ನು ಮರೆತುಬಿಡುವನೋ ? ಎಂದಿಗೂ ಇಲ್ಲವಲ್ಲಾ ನಾವು ಪಾಪವಶರಾಗಿ ದೇವರನ್ನು ಬಿಟ್ಟುಹೋದರೆ ನಾವು ದುಃಖಿತರಾಗಿರುವೆವೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ ಉದಾಹರಣೆಗಾಗಿ ಉತ್ತಮ ವಂಶದ ಹೊಟ್ಟೆಯಲ್ಲಿ ಹುಟ್ಟಿದ ಒಬ್ಬ ಯೌವನಸ್ಥನನ್ನು ತೆಗೆದುಕೊಳ್ಳೋಣ ಈತನು ಸಕಲವಿದ್ಯಾಸಂಗತನಾಗಿದ್ದು ಗುಣಶೀಲವಂತನಾಗಿರುತ್ತಾನೆ ಇಂಥವನು ದುರಾಸ್ಪದದಿಂದ ದುಷ್ಟರ ಸಹವಾಸದಲ್ಲಿ ಬಿದ್ದು ಅವರೊಡನೆ ಕಲವುಕಾಲ ವಾಸವಾಗಿರುತ್ತಾನೆ ಅವನು ಕೊಂಚ ಕಾಲ ಸಂತೋಷವಾಗಿರಬಹುದು ಆದರೆ ಅವನಿಗೆ ನಾನಾವಿಧವಾದ ತೊಂದರೆಗಳು ಜಾಗ್ರತೆಯಲ್ಲಿಯೇ ಒದಗುವವು ಅವನ ಸ್ಥಿತಿಯು ಅವನಿಗೇನೆ ಅಸಹ್ಯ ಹುಟ್ಟಿಸುವುದು ಅಂಥಾ ಸಮಯದಲ್ಲಿ ಅವನು ತನ್ನ ಪೂರ್ವದ ಸ್ಥಿತಿಯನ್ನು ನೆನೆದುಕೊಳ್ಳದೇ ಇರುವನೇ ? ತನ್ನ ತಂದೆಯ ಪ್ರೀತಿಯು ಅವನ ಮನಸ್ಸಿಗೆ ಬಾರದಿರುವುದೇ ? ಅವನು ತನ್ನ ತಂದೆಯ ಮನೆಯನ್ನು ಸೇರಿಕೊಳ್ಳುವ ತನಕ ಅವನಿಗೆ ಸಂತೋಷವಿಲ್ಲದಿರುವುದು. ಮನುಷ್ಯನು ಸಹ ಮುಕ್ತನಾಗಬೇಕಾದರೆ ತನ್ನನ್ನು ಪ್ರೀತಿಸುತ್ತಿರುವ ದೇವರನ್ನು ಸೇರಿಕೊಳ್ಳಬೇಕು ಇದಾಗದಿದ್ದರೆ ಅವನಿಗೆಂದಿಗೂ ಸಂತೋಷವಿಲ್ಲವು

ಕ್ರೈಸ್ತ ಮತದಲ್ಲಿ ಮನುಷ್ಯನು ದೇವರನ್ನು ಹುಡುಕುವ ವಿಷಯವಾಗಿಯೂ ದೇವರು ಮನುಷ್ಯನನ್ನು ಹುಡುಕುವ ವಿಷಯವಾಗಿಯೂ ಓದುತ್ತೇವೆ ಮನುಷ್ಯನಾದವನು ಪಾಪಬಂಧನಕ್ಕೆ ಸಿಕ್ಕಿ ನರಳುತ್ತಿರುವ ಸಮಯದಲ್ಲಿ ದೇವರು ಅವನನ್ನು ಬಿಡಿಸಬೇಕೆಂದು ಅವನ ಹತ್ತಿರಕ್ಕೆ ಬರುವನು

ಮನುಷ್ಯನಾದವನು ತನ್ನ ಶೋಚನೀಯವಾದ ಸ್ಥಿತಿಯನ್ನು ತಿಳಿದುಕೊಳ್ಳುವುದೇ ಪ್ರಾಮುಖ್ಯವಾದದ್ದು ಈ ತಿಳಿವಳಿಕೆಯನ್ನು ಅವನು ನಾನಾ ರೀತಿಯಲ್ಲಿ ಹೊಂದಬಹುದು ಭಗವಂತನು ಅನುಗ್ರಹಿಸಿರುವ ಸತ್ಯವೇದ ಗ್ರಂಥವಿರುತ್ತದೆ ಇದನ್ನು ಭಕ್ತಿಪೂರ್ವಕವಾಗಿ ಓದುವುದರಿಂದ ದೇವರನ್ನು ತಿಳಿದುಕೊಳ್ಳಬಹುದು ಭಕ್ತರ ಜೀವನಾನುಭವಗಳ ಮೂಲಕವೂ ದೇವರನ್ನು ತಿಳಿಯಬಹುದು ದೇವರ ವಿಷಯವಾಗಿಯೂ ಸರ್ವೋತ್ತಮನಾಗಿ ಬೋಧಿಸುತ್ತಿರುವ ಮನಸ್ಸಾಕ್ಷಿಯು ಸಹ ಇರುವುದು ಈ ಸಾಧನಗಳೆಲ್ಲವುಗಳಿಗಿಂತ ಜಗದ್ಗುರುವಾದ ಯೇಸು ಕ್ರಿಸ್ತನೇ ದೇವ ಸಾನ್ನಿಧ್ಯಕ್ಕೆ ಹೋಗುವ ಮಾರ್ಗವನ್ನು ಭೂಲೋಕದವರಿಗೆ ತೋರಿಸಿಕೊಟ್ಟಿರುತ್ತಾನೆ

ಮೈಸೂರು ಗೆಜೆಟ್ ಸಂಗ್ರಹ

ಮೈಸೂರು ಓರಿಯಂಟಲ್ ಲೈಬ್ರರಿ ಕ್ಯುರೇಟರಾದ ಮ. ಆ. ಮಹಾದೇವ ಶಾಸ್ತ್ರಿಗಳಿಗೆ ಕೊಟ್ಟಿರುವ ಹದಿನೆದು ದಿನಗಳ ರಜವನ್ನು ಇನ್ನೂ ಐದು ದಿನಗಳಿಗೆ ಜಾಸ್ತಿಮಾಡಿದೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ವಿಚಾರಣೆಯ ಅ॥ ಕಮೀಷನರ್ ಮ॥ ಎ. ಮೃತ್ಯುಂಜಯ ಐಯ್ಯರವರು ಸಾಕ್ಷಿಗಳ ಕೈಫಿಯತ್ತನ್ನು ಸ್ವಹಸ್ತ ಇಂಗ್ಲೀಷಿನಲ್ಲಿ ಬರೆದುಕೊಳ್ಳತಕ್ಕದೆಂದು ಹುಕುಂ ಕೊಡಲಾಗಿದೆ

ಶಿವಮೊಗ್ಗಾ ಸಬ್ ಜಡ್ಜರಾದ ಮ॥ ಡಿ. ಎಂ. ನರಸಿಂಗರಾಯರಿಗೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಕೈಮಿನಲ್ ೧೯ನೇ ನಂಬರು ಮೊಕದ್ದಮೆಯನ್ನು ಫೈಸಲ್ ಮಾಡುವುದಕ್ಕೆ ಅ॥ ಸೆಷನ್ಸ್ ಜಡ್ಜರ ಅಧಿಕಾರವನ್ನು ಕೊಟ್ಟಿದೆ

ಕುಣಿಗಲ್ ಪೋಲೀಸ್ ಸಬ್ ಡಿವಿಜನ್ ಚಾರ್ಜನ್ನು ವಹಿಸಿರುವ ಸೀನಿಯರ್ ಅ॥ ಕಮೀಷನರ್ ಮ॥ ಜೆ. ಶ್ರೀನಿವಾಸರಾಯರನ್ನು ತುಮಕೂರ್ ಡಿಸ್ಟ್ರಿಕ್ಟು ಮಧುಗಿರಿ ಸಬ್ ಡಿವಿಜನ್ ಚಾರ್ಜಿಗೆ ವರ್ಗಮಾಡಿದೆ

ಮೈಸೂರು ಗವರ್ನಮೆಂಟಿನವರು ಪ್ರೆಸಿಡೆನ್ಸಿ ಸ್ಕೂಲಿನ ಎಕ್ಸಾಮಿನರುಗಳಲ್ಲಿ ಕಂಡ ಶಕ್ತಿಯುಳ್ಳವರನ್ನು ಮಾಡುವವರಿಗೆ ತಿಳಿಸಬೇಕೆಂದು ಬೆಂಗಳೂರು ಎಟೆಂಡರ್ಲಿಸ್ಟ್ ಜಾರಿಗೆ ತಂದಿರುತ್ತಾರೆ

ಎಗ್ಸಿಕ್ಯುಟಿವ್ ಇಂಜಿನಿಯರ್ ಮ॥ ವಿ. ಪಿ. ರಾಘವಲುನಾಯುಡುರವರು ಸರ್ವೀಸ್ ಸಹಿತ ಕೆಲಸ ಬಿಟ್ಟದ್ದರಿಂದ ಎಗ್ಸಿಕ್ಯುಟಿವ್ ಇಂಜಿನಿಯರ್ ಮ॥ ಸಿ. ಮಾಧವರಾಯರನ್ನು ಆ ಡಿವಿಜನ್ ಚಾರ್ಜಿಗೆ ನೇಮಿಸಿದೆ

ಅರಕಲಗೂಡು ತಾಲ್ಲೂಕು ಅಮಲ್ದಾರ್ ಮ॥ ಎಂ. ಕೃಷ್ಣರಾಯರಿಗೆ ಫೆಬ್ರವರಿ ತಾ ೧೦ ದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಮಂಜೂರು ಮಾಡಿದೆ

ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರ ಆಫೀಸ್ ಇಂಗ್ಲೀಷ್ ಹೆಡ್ ಕ್ಲಾರ್ಕ್ ಮ॥ ಜಿ. ರಾಮಸ್ವಾಮಿ ಐಯ್ಯಂಗಾರ್ಯರು ಮುಂದಿನ ಹುಕುಂ ಕೊಡಲ್ಪಡುವ ತನಕ ಅರಕಲಗೂಡು ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು

ಮೂಡಿಗೆರೆ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮ॥ ಕೆ. ಶೆ. ವೆಂಕಟಸ್ವಾಮಿ ಐಯರವರಿಗೆ ಫೆಬ್ರವರಿ ತಾ ೧೯ ರಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಶಿರಸ್ತೆದಾರ್ ಟಿ. ಅಬ್ದುಲ್ ರಸೂಲ್‌ಯವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅರಕಲಗೂಡು ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು

ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರಾದ ಮ॥ ೩. ಎಸ್. ಅಚ್ಯುತರಾಯರಿಗೆ ಫೆಬ್ರವರಿ ತಾ ೧೯ ರಿಂದ ಹತ್ತು ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಸಿವಿಲ್ ಸರ್ಜನ್ ಮೆ॥ ಬಿ. ಡಿ. ರಾಘವೇಂದ್ರರಾಯರು ತಮ್ಮ ಕೆಲಸಗಳೊಂದಿಗೆ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರಾಗಿ ಕೆಲಸ ನೋಡತಕ್ಕದ್ದು.

ರೆವಿನ್ಯೂ ಕಮೀಷನರವರ ಅಸಿಸ್ಟೆಂಟರಾದ ಮ॥ ಕೆ. ಸುಬ್ಬರಾಯರು ರಜದಿಂದ ವಾಪಸು ಬಂದು ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದುಮಾಡಿದೆ

ಅ॥ ಕಮೀಷನರ್ ಮ॥ ಬಿ. ವೆಂಕೋಬರಾಯರು ರಜದಿಂದ ವಾಪಸು ಬಂದು ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದುಮಾಡಿದೆ

೪ ಸದ್ಯ ಆ ಖಜಾನೆಯ ಛಾರ್ಜನ್ನು ವಹಿಸಿರುವ ಅ॥ ಕಮೀಷನರ್ ಮ॥ ಎಸ್. ಪಿ. ರಾಜಗೋಪಾಲಾಚಾರಿಯವರನ್ನೂ, ಮ॥ ಡಿ. ಶ್ರೀನಿವಾಸಯ್ಯಂಗಾರ್ಯರನ್ನೂ ಕಳೆದ ಡಿಸೆಂಬರ್ ತಾ ೩ ರಿಂದ ಅ॥ ಕಮೀಷನರಾಗಿ ಖಾಯಂ ಮಾಡಲಾಗಿದೆ

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಮತಿಗಟ್ಟದ ಸಿದ್ದರಾಮಯ್ಯ —ನೀವು ನಿಮಗೆ ಬರಬೇಕಾಗಿರುವ ಬಾಕಿ ವಿಷಯದಲ್ಲಿ ಆ ಇಲಾಖೆಯ ಅಧಿಕಾರಿಗಳಿಗೆ ಬರೆದು ಕೊಂಡಲ್ಲಿ ಅವರು ವಸೂಲ್ ಮಾಡಿಸಿ ಕೊಡಿಸುವರೆಂದು ನೆನಸುತ್ತೇವೆ

ಅರಸೀಕೆರೆ ಪ್ರಜಾ ಹಿತಚಿಂತಕ —ನಿಮ್ಮ ಬಾತ್ಮಿಯನ್ನು ಪ್ರಕಟಿಸಲಾರೆವು ನೀವು ನ್ಯಾಯಸ್ಥಾನಗಳಲ್ಲಿ ವ್ಯವಹರಿಸಿಕೊಳ್ಳಬೇಕಾಗಿದೆ

ಬೇಲೂರು ಕೃಷ್ಣಪ್ಪ —ನೀವು ಬರೆದಿರುವ ಉಪನ್ಯಾಸಕ್ಕೆ ನಮ್ಮಲ್ಲಿ ಸ್ಥಳ ಸಿಕ್ಕಲಾರದು ವರ್ತಮಾನಗಳನ್ನು ಸಂಗ್ರಹಿಸಿ ಬರೆದರೆ ಪ್ರಕಟಿಸಬಹುದು

ಕರೆಸ್ಪಾಂಡೆನ್ಸ್.

ದುಷ್ಟತನವು.

ಅಯ್ಯಾ,

ಬೆಂಗಳೂರು ಹಳೇ ಚಾಮರಾಜಪೇಟೆಯಲ್ಲಿ ಇರುವ ಅಮ್ಮಿ ಚಿಕ್ಕಪ್ಪ ಎಂಬುವರು ೭ ೬ ಹಸುಗಳನ್ನು ಕಟ್ಟಿಕೊಂಡು ಮಕ್ಕಳುಗಳಿಗೆ ಹಾಲು ಬೆಣ್ಣೆ ಮಜ್ಜಿಗೆ ಸಹ ಧರ್ಮಾರ್ಥವಾಗಿ ಕೊಡುವ ಸಂಪತ್ತುಳ್ಳವರು. ಆದ್ದರಿಂದ ಇವರಿಗೆ ಈ ತಿಂಗಳು ೧೨ನೇ ತಾರೀಖು ಶಿವರಾತ್ರಿ ಹಬ್ಬದ ದಿನ ಮುನಿಯ ಎಂಬುವನು ಬೆಳಿಗ್ಗೆ ಅಮ್ಮಿ ಚಿಕ್ಕಪ್ಪನವರು ಒಂದು ಮನೆಗೆ ಹೋಗಿ ಒಂದು ಹುಲ್ಲು ಬಂಡಿ ಬೇಗಹಾಕಿ ಇದ್ದರು ಡಿಪೋ ಮುರಿದು ಆ ಮನೆಗೆ ಬೆಂಕಿ ಹಚ್ಚಿ ಹುಲ್ಲು ಮನೆ ಸುಟ್ಟುಬಿಟ್ಟನು ಹಸುಗಳು ಪೋಲೀಸು ಕಿಸ್ಕೆಸ್ ನಮ್ಮ ಪತ್ತೆಮಾಡಿ ಚಿಕ್ಕ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಛಾರ್ಜ್ ಮಾಡಿದರು ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ರುಜುವಾತಿನಿಂದ ಈ ತಿಂಗಳು ೨೩, ೩ ತಿಂಗಳಿನಲ್ಲಿ ಡಿಪೋ ಸರಿಯನ್ನು ಸೆಷನ್ಸ್ ಕೋರ್ಟಿಗೆ ಕಳುಹಿಸಿದರು

ಮುನಿಯಪ್ಪ ಶೆಟ್ಟಿ

ಚಿಕ್ಕಂಪುರದ ವಿಚಾರಗಳು

ಅಯ್ಯಾ,

ಬಿಸಲಿನ ತಾಪ ಹೆಚ್ಚಾಗಿದೆ ಧಾರಣೆಗಳು ಜಾಸ್ತಿಯಾಗಿದೆ ಕುಡಿಯುವದಕ್ಕೆ ನೀರಿಲ್ಲದೆ ಗ್ರಾಮದವರು ಪೇಚಾಡುತ್ತಾರೆ ಸರ್ಕಾರದವರು ಈ ವಿಷಯದಲ್ಲಿ ಗಮನಕೊಟ್ಟು ಏನಾದರೂ ಏರ್ಪಾಡು ಮಾಡದಿದ್ದರೆ ಈ ಗ್ರಾಮದವರು ನೀರಿಲ್ಲದೆ ಕಷ್ಟಪಡಬೇಕಾಗಿರುತ್ತೆ

ಈ ಗ್ರಾಮದಲ್ಲಿ ದುಷ್ಟಜನರು ಚಿಮಾಡದ ಆಸೆಗೆ ಅನೇಕ ದನಗಳನ್ನು ಕೊಲ್ಲುತ್ತಾ ಇದ್ದರು ಇದನ್ನು ನಿಲ್ಲಿಸಲು ಬಹುಕಾಲದಿಂದಲೂ ಆಗಲಿಲ್ಲ ಸ್ಮಾಲ್ ಜನಾರ್ದನಾಗನ ಮೇಲೆ ಎಷ್ಟು ರಾತ್ರಿ ೮ ಗಂಟೆ ವೇಳೆಯಲ್ಲಿ ಮಾದಿಗರು ಮೂವರು ಜನ ಕೊಯ್ಯುತ್ತಿದ್ದರೆಂದು ಈ ಊರಿಗೆ ಹೊಸದಾಗಿ ಬಂದಿರುವ ಜಮೀನುದಾರ್ ಅಪ್ಪಾಜಿರಾಯರು ಅವರನ್ನು ಹಿಡಿದು ಮೊಕದ್ದಮೆ ಹಾಕಿದರು ಪೋಲೀಸಿನವರ ಪರಿಶೋಧನೆಯಲ್ಲಿ ಮೊಕದ್ದಮೆ ಬಿದ್ದುಹೋಗದೆ ಮಾಡಿದ್ದಕ್ಕೆ ಸಂತೋಷ ಇದರಿಂದ ಈ ಗ್ರಾಮದ ಗೋವಧೆಯನ್ನು ಈ ಜಮೀನುದಾರರು ತಮ್ಮ ಕಾಲದಲ್ಲಿ ನಿಲ್ಲಿಸಲು ಪ್ರಯತ್ನಿಸಿದ್ದಾರೆಂದು ತಿಳಿಯಿತು

ಈ ಊರಿನ ಮುನಿಸಿಪಲ್ ಬಂಡಿಗಳು ಇಲ್ಲದಿರುವುದರಿಂದ ಈ ದೀಪಗಳು ಬೇರೆ ಉರಿಯುವುದಿಲ್ಲ ಇದಕ್ಕೆ ಮುನಿಸಿಪಲ್ ಮೆಂಬರುಗಳಾದರೂ ಕೊಂಚ ಮುತುವರ್ಜಿ ವಹಿಸಿದರೆ ಬಹಳ ಸಹಾಯವಾದೀತು

ಪ್ರಜಾಹಿತ ಚಿಂತಕ

ಇದೇ ಸಮಯದಲ್ಲಿ ನಡೆದ ಅನಾಹುತವು

ಅಯ್ಯಾ,

ಇದೇ ಫೆಬ್ರವರಿ ತಿಂಗಳ ೨ ತಾ ಶನಿವಾರದ ದಿನ ಬೆಳಗಿನಲ್ಲಿ ಒಂದು ಸಣ್ಣ ಮುದುಕಿಯು ನೀರನ್ನು ಎಳೆಯುವ ವೇಳೆಯಲ್ಲಿ ಬಿದ್ದು ಆದರ ಮೇಲಿನಿಂದ ನೂರಾರು ಅಡಿ ಆಳವಾದ ಗಜಗಳ ದೂರ ಏರಿಸಿ ಬಿಟ್ಟಿತು ತರುವಾಯ, ಬಾವಿಗಳಿಗೆ ಹೋದು ಹಾಕುವವರು ಮಾಡಿದ ಅಜಾಗ್ರತೆಯಿಂದಲೋ ಇನ್ನಾವ ಕಾರಣದಿಂದಲೋ ಈ ರೀತಿ ಬಿದ್ದು ಚಕ್ರಗಳು ಕಿತ್ತುಕೊಂಡಾಗ ಬಿಗಿದಿಗೆ ಬೀಳುವಂತೆ ಮಾಡಿದ್ದು ಬಹಳ ಕಷ್ಟ

ಪ್ಪೆಗೆ ರಕ್ತವು ತಗಲಿ, ಗೋಡೆಯ ಕಡೆ ಹಾಕಿದ್ದ ಒಂದು ಭಾರೀ ಕಲ್ಲು ಚಪ್ಪಡಿಯು ಕೆಳಕ್ಕೆ ಬಿದ್ದು, ಮುಳಬಾಗಲಿನಿಂದ ಡ್ಯೂಟಿಗೆ ಬಂದಿದ್ದ ಒಬ್ಬ ಮುಸಲ್ಮಾನರ ಪೊಲೀಸ್ ದಫೇದಾರರಿಗೆ ಬಡಿದು ತುಂಬಾ ಜಖಂ ಮಾಡಿತು. ಒಡನೆಯೇ ಅಲ್ಲಿ ಕೆಲಸವನ್ನು ನಡೆಸುತ್ತಿದ್ದುದಕ್ಕಾಗಿ ಹಾಜರಿದ್ದ ಮುಳಬಾಗಲಿನ ಅಮಲ್ದಾರರೂ, ಪೊಲೀಸ್ ಸೂಪರಿಂಟೆಂಡೆಂಟರೂ, ಇನ್ಸ್ಪೆಕ್ಟರೂ, ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರೇ ಮೊದಲಾದ ಮಹನೀಯರೂ ಕನಿಕರದಿಂದ ಒಂದಾಗಿ ಸೇರಿ ಒಡನೆಯೇ ಆತನನ್ನು ಮುಳಬಾಗಲಿನ ಮೆಡಿಕಲ್ ಆಫೀಸರ ಹಾಸ್ಪಿಟಲಿಗೆ ಕಳುಹಿಸಿಕೊಟ್ಟರು. ಜಖಂ ಹೊಂದಿದ ದಫೇದಾರರು ದೇವರ ಕೃಪೆಯಿಂದ ಬೇಗ ಸ್ವಸ್ಥವಾಗಲೆಂದು ಹಾರೈಸುತ್ತೇನೆ. ಅಲ್ಲಿಂದ ಮುಂದಕ್ಕೆ ತೇರು ಸಾಗಲೇ ಇಲ್ಲ. ಜನಗಳಲ್ಲಿ ಆ ದಿನ ಸ್ವಲ್ಪವೂ ಗೆಲುವೇ ಇರಲಿಲ್ಲ.

ಲವಣ ಸ್ನಾನದ ರೋಗಗಳ ಸ್ಥಿತಿಯಂತೂ ಹೇಳಲೇ ಕೂಡದು. ಮಹಾ ಬಯಲಾರಿ. ಈ ಸ್ಥಳದಲ್ಲಿ ಗಾಲೀಯಾನಾ ಉತ್ಪತ್ತಿಯಾಗುವ ಮೊಬಲಗಿನಲ್ಲಿ ಸ್ವಲ್ಪವನ್ನು, ತೇರು ಎಳೆಯುವ ಹುವ ಬಡರ ರೋಗವನ್ನು ಗಮನ ಮಾಡಲು ಏಕೆ ಉಪಯೋಗಿಸಬಾರದೋ ಗೊತ್ತಾಗುವದಿಲ್ಲ. ಅದೇ ದಿನ ಒಬ್ಬ ಹುಡುಗನೂ ಒಬ್ಬ ಮುದುಕಿಗೂ ಪ್ರಾಣ ನಷ್ಟವಾಗುವಂತಿತ್ತು. ದೇವರ ಕೃಪೆಯಿಂದ ಅವರಿಬ್ಬರೂ ತಪ್ಪಿಸಿಕೊಂಡರು. ಬಾತ್ಮೀದಾರ್.

ಚುಟಿಕೆ ಹಾಕುವುದೂ, ಮದ್ಯಪಾನವೂ.

ಅಯ್ಯ,

ಈ ನಮ್ಮ ಡಪ್ಪಿಯು ಎ. ಟಿ. ಕೂಟಕ್ಕೆ ಅಂಗಗಳಾಗಿದ್ದವರಲ್ಲಿ ಗಡುಸಲ್ಲದವರ ಕೆಲಸದವರ ವಿಷಯವಾಗಿಯೂ, ಮದ್ಯವಿಸರ್ಜನೆಮಾಡದೆ ಸೇವಿಸುವುದರಿಂದುಂಟಾಗುವ ನಷ್ಟಗಳ ವಿಷಯದಲ್ಲಿಯೂ ನಾನು ಅಲ್ಪಸ್ವಲ್ಪವಾಗಿ ತಿಳಿಸಲು ಸಂತೋಷಿಸುತ್ತೇನೆ. ಏನೆಂದರೆ,

ಇದಕ್ಕೆ ಅಂಗವಾಗಿದ್ದ ಒಬ್ಬಾಕೆಯು ಒಂದು ಗ್ರಾಮದಲ್ಲಿ ಪ್ರವೇಶಿಸುವಾಗಲೇ ಹುಟ್ಟಿ ಮೂರು ದಿವಸ ಆಗಿದ್ದ ಒಂದು ಮಗುವಿಗೆ ಬೇರೊಬ್ಬ ಸ್ತ್ರೀಯು ಚುಟಿಕೆ ಹಾಕಿಸುವುದನ್ನು ಆಕೆ ನೋಡಿ,—ಅಮ್ಮಾ, ನಿನ್ನ ಶರೀರದ ಮೇಲೆ ಹಾಗೆ ಹಾಕುತ್ತಿದ್ದರೆ ನಿನಗೆ ನೋವು ಆಗುವುದಿಲ್ಲವೋ ? ಎಂದು ಆಕೆಯನ್ನು ಪ್ರಶ್ನೆಮಾಡುವಲ್ಲಿ,—ಸಂದೇಹವಿಲ್ಲದೆ ಆಗುತ್ತದೆ ಎಂದು ಆಕೆ ಹೇಳಿದಳು. ಅದೇ ಮೇರೆಗೆ ಆ ಸಣ್ಣ ಮಗುವಿಗೆ ನೋವು ಇಲ್ಲವೋ ಎಂದು ಕೇಳಿದ್ದಕ್ಕೆ,—ನಾನು ಅಲ್ಲ, ಆಕೆ ಹಾಕಿದಳು ಎಂದು ಹೇಳುವಾಗ ಆಕೆಯು ಆ ಸ್ತ್ರೀಯರ ಸಂಗತಿ—ಇನ್ನು ಮೇಲೆ ಹಾಗೆ ಹಾಕಬೇಡಿರಿ ಎಂದು ಬುದ್ಧಿಯುಳ್ಳ ಮಾತುಗಳನ್ನು ಹೇಳಿದ ಕಡ್ಲೇಸ್ಪರ, ಅವರು ಅದನ್ನು ಕೇಳಿ,—ಇನ್ನು ಮೇಲೆ ಹಾಕುವುದಿಲ್ಲವೆಂದು ಹೇಳಿ, ಅದನ್ನು ಬಿಟ್ಟುಬಿಟ್ಟರು. ಈಗ ಅದೇ ಮನೆಯಲ್ಲಿ ಒಂದು ಕೂಸು ಹುಟ್ಟಿದ್ದರೂ ಅದಕ್ಕೆ ಹಾಕಲಿಲ್ಲ. ಇದೇ ವಿಷಯದಲ್ಲಿ ಪೇಟೆಯಲ್ಲಿ ಅನೇಕರು ಮಕ್ಕಳಿಗೆ ಚುಟಿಕೆ ಹಾಕುತ್ತಿರುವುದನ್ನು ಮತ್ತೊಬ್ಬ ಸ್ತ್ರೀಯು ನೋಡಿ,—ಅಮ್ಮಾ, ಈ ರೀತಿಯಲ್ಲಿ ಚುಟಿಕೆ ಹಾಕುವುದರಿಂದ ಏನೇನೂ ಪ್ರಯೋಜನವಿಲ್ಲ ಎಂಬವಾಗಿ ಹೇಳಿದಳು ಮತ್ತು ಅವರಲ್ಲಿ ಸಣ್ಣ ಮಗುವು ಅಸೌಖ್ಯವಾಗಿದ್ದ ಒಬ್ಬ ಸ್ತ್ರೀಯು ಹೇಳಿದ್ದೇನಂದರೆ—ಇಲ್ಲ ಅಮ್ಮಾ, ಇದನ್ನು ಹಾಕುವುದರಿಂದ ಮಗುವಿಗೆ ಸ್ವಸ್ಥವಾಗಬಹುದು ಎಂದು ಆಕೆ ಹೇಳಿದ್ದನ್ನು ಈ ಸ್ತ್ರೀಯು ಕೇಳಿ, ಅವರ ಸಂಗಡ ಮಾತಾಡಿ ಹೇಳಿದ್ದೇನಂದರೆ— ಈ ರೀತಿಯಲ್ಲಿ ಚುಟಿಕೆ ಹಾಕುವುದಕ್ಕೆ ಬದಲಾಗಿ ಸಾಸಿವೆ ಪೋಲ್ಟೀಸು ಮಾಡಿ ಹಾಕುವುದಾದರೆ ಸ್ವಲ್ಪ ಮೇಲಾಗಬಹುದು ಎಂದು ಹೇಳಿ, ಆ ಸ್ತ್ರೀಯು ಬಂದುವಿಡದೆ ಅಲ್ಲಿಯೇ ಇದ್ದು, ಸಾಸಿವೆ ಪೋಲ್ಟೀಸು ಮಾಡಿ ಮಗುವಿಗೆ ಹಾಕಿ, ಮಾರನೇ ದಿವಸ ಕೇಳುವಲ್ಲಿ ಅದಕ್ಕೆ ಸ್ವಲ್ಪ ಗುಣವಾಗಿದೆ ಎಂದು ತಿಳಿಸಿದರು. ಇದರಿಂದ ನಾವು ತಿಳಿಯುವುದೇನೆಂದರೆ, ಹೀಗೆ ಸ್ತ್ರೀಯರು ಅನೇಕ ಗ್ರಾಮಗಳಿಗೆ ಹೋಗಿ ಸಾರುವುದಾದರೆ, ಅವರ ಹಾಗೆಯೇ ಅನೇಕರು ಈ ರೀತಿಯಲ್ಲಿ ಚುಟಿಕೆ ಹಾಕುವುದನ್ನು ಸಂಪೂರ್ಣವಾಗಿ ಬಿಟ್ಟುಬಿಡುತ್ತಾರೆಂದು ನಾವು ನಿರೀಕ್ಷಿಸುತ್ತೇವೆ.

ಮದ್ಯಪಾನವಿಸರ್ಜನೆಯ ವಿಷಯ ಹೇಳುವುದಾದರೆ, ಇದರಿಂದ ಶರೀರಕ್ಕೂ ಆತ್ಮಕ್ಕೂ ನಷ್ಟವುಂಟು. ಇದರ ವಿಷಯದಲ್ಲಿಯೂ ಸ್ತ್ರೀಯರು ಮನೆಮನೆಗೆ ಹೋಗಿ ಹೇಳುವಾಗಲೂ ಕೆಲವರು ಇದನ್ನು ಬಿಟ್ಟುಬಿಡುತ್ತೇವೆ ಎಂತಲೂ, ಕೆಲವರು ಇದನ್ನು ಬಿಡುವುದಿಲ್ಲವೆಂತಲೂ ಹೇಳುತ್ತಾರೆ. ಇದನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂಬುವುದೇ ನಮ್ಮೆಲ್ಲರ ಕೋರಿಕೆಯೂ, ಪ್ರಾರ್ಥನೆಯೂ ಆಗಿದೆ. ಇದರ ವಿಷಯದಲ್ಲಿ ಒಬ್ಬ ಸ್ತ್ರೀಯು ಕಾವಲಿಪುರಕ್ಕೆ ಹೋಗಿ ಮಾತಾಡುವಾಗ ಅನೇಕ ದಿವಸಗಳಿಂದ ಸಾರಾಯಿಯನ್ನು ಕುಡಿಯುವುದಕ್ಕೆ ಅಭ್ಯಾಸ ಮಾಡಿ, ಅದನ್ನು ಬಿಡುವುದಕ್ಕೆ ಆಗದ ಇದ್ದ ಒಬ್ಬ ಸ್ತ್ರೀಗೆ—ಸಾರಾಯಿಯನ್ನು ಕುಡಿಯಬಾರದು, ಅದನ್ನು ಬಿಟ್ಟುಬಿಡು ಎಂದು ಹೇಳಿದ್ದಕ್ಕೆ,—ಇಲ್ಲ ಅಮ್ಮಾ, ಅದನ್ನು ರುಚಿನೋಡದೆ ಇದ್ದರೆ ನನಗೆ ಆಗುವುದಿಲ್ಲವೆಂದು ಹೇಳಿದಂಥಾ ಒಬ್ಬಾಕೆ ಹತ್ತು ದಿವಸದ ಬೋಧನೆಯನ್ನು ಕೇಳಿ ಈಗ ಆಕೆ ಅದನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟಿದ್ದಾಳೆಂಬುವ ಈ ವಿಷಯವು ನಮಗೆ ತುಂಬಾ ಸಂತೋಷವನ್ನು ಉಂಟುಮಾಡುವಂತಾಗಿದೆ. ಈ ರೀತಿಯಲ್ಲಿ ಮದ್ಯಪಾನವಿಸರ್ಜನೆಯು ಸಂಪೂರ್ಣವಾಗಿ ನೆರವೇರುವುದಕ್ಕೆ ದೇವರು ನಮಗೆ ಸಹಾಯ ಮಾಡುವನೆಂದು ತಿಳಿದು, ನಾವೆಲ್ಲರೂ ಪ್ರಾರ್ಥನೆ ಮಾಡಬೇಕಾಗಿರಬೇಕೆಂಬುವುದೇ ನಮ್ಮೆಲ್ಲರ ಕೋರಿಕೆಯಾಗಿದೆ.

ವಿನಯವುಳ್ಳ, ಡಪ್ಪಿಯು ಸಿ. ಟಿ. ಕೂಟ

ಬಂಗಾಳದಲ್ಲಿ ಗಲಭೆಯು.

ಕಲ್ಕತ್ತಾಪಟ್ಟಣದಲ್ಲಿದ್ದ ಯುವಕ ಸಮ್ಮೇಲನ ಸಮಿತಿ ಎಂಬ ಸಮಾಜವನ್ನೂ, ಖುಲ್ನಾ ಡಿಸ್ಟ್ರಿಕ್ಟಿಗೆ ಸೇರಿದ ಕಾರ್ಯಾರಾದಲ್ಲಿದ್ದ ವ್ರತ ಸಮಿತಿ ಎಂಬ ಸಮಾಜವನ್ನೂ ಹೊಸದಾಗಿ ಜಾರಿಗೆ ತಂದಿರುವ ಕಾನೂನಿಗೆ ವಿರೋಧವಾದವುಗಳೆಂದು ಹೇಳಿ ಸರ್ಕಾರದವರು ಇಸ್ತಿಹಾರು ಕೊಟ್ಟು ಮುಚ್ಚಿಸಿಬಿಟ್ಟಿದ್ದಾರೆ.

ಬಾರಿಸಾಲ್ ನಗರದಲ್ಲಿ ರಾಜದ್ರೋಹಾಪರಾಧಕ್ಕೆ ಗುರಿಯಾದ ಮುಕುಂದದಾಸನೆಂಬ ಅಪರಾಧಿಗೆ ಸೆಷನ್ಸ್ ಜಡ್ಜರು ಎರಡು ವರುಷಗಳ ಕಠಿಣ ಸಜಾ ವಿಧಿಸಿದ್ದಾರೆ.

ಕರಾಚಿಯಲ್ಲಿ ರಾಜದ್ರೋಹವು.

ನಂದಲಾಲನೆಂಬೊಬ್ಬ ಬಂಗಾಳಿ ಯುವಕನು ಪಂಜಾಬ್ ಶಿಕಾರಪುರದಿಂದ ಕರಾಚಿಗೆ ಬಂದು, ಸ್ವದೇಶೀ ವಿಷಯಗಳನ್ನು ಬೋಧಿಸುವ ಸಭೆಗಳನ್ನು ಕೂಡಿಸಿ, ಸಭೆಗಳನ್ನು ಕೂಡಿಸಿ ರಾಜದ್ರೋಹಕರವಾದ ಉಪನ್ಯಾಸಗಳನ್ನು ಮಾಡುತ್ತಾ ಪ್ರತಿಗಳ ಮನಸ್ಸನ್ನು ಕೆಡಿಸುತ್ತಿದ್ದನೆಂದು ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆತನಿಗೆ ನೋಟೀಸ್ ಕೊಟ್ಟು ಕೇಳಿಕೆಗೆ ಜಾಮೀನ್ ಕೊಡಬೇಕೆಂದು ತಿಳಿಸಿರುತ್ತಾರೆ.

ಮಾರ್ಚ್, ತಾ. ೧ನೇ ಸೋಮವಾರ.—ಕೆ. ಸಿ. ಬಿಸ್ವಾಸ್ ಎಂಬುವನು ಬಂಗಾಳದ ಅಡ್ಮಿನಿಸ್ಟ್ರೇಟರ್ ಜನರಲ್‌ರವರ ಆಫೀಸಿನಲ್ಲಿ ಗುಮಾಸ್ತೆಯಾಗಿದ್ದು ಕೊಂಡು, ಸುಳ್ಳು ಲೆಕ್ಕಗಳನ್ನು ಬರೆದಿರುವ ದೋಷದ ಮೇಲೆ ಹೈಕೋರ್ಟ್ ಜಡ್ಜಿಯವರು ವಿಚಾರಣೆಮಾಡಿ, ಅವನಿಗೆ ಆರು ವರುಷಗಳ ಕಠಿಣಸಜಾ ವಿಧಿಸಿರುತ್ತಾರೆ.

ರಾಜರುಗಳ ಕೂಟವು.

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಹಿಂದೂ ರಾಜರು, ತುಮಾನ್‌ದಾರರು, ಸಿಕ್ ಜಹಗೀರ್‌ದಾರರು ಮಹಮ್ಮದೀಯ ನವಾಬರು ಸರ್ದಾರರುಗಳೆಲ್ಲಾ ಏಕೀಭವಿಸಿ ಒಂದು ಸಮಾಜವನ್ನು ಏರ್ಪಾಡುಮಾಡಿಕೊಂಡಿದ್ದಾರೆ. ಲಾಹೋರ್ ಪಟ್ಟಣದ ಗವರ್ನ್‌ಮೆಂಟ್ ಹೌಸ್ ಎಂಬ ಭವನದಲ್ಲಿ ಈ ಸಮಾಜವು ಕೂಡಿತು. ಈ ಸಮಾಜಕ್ಕೆ ಆ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರಾದ ಸರ್ ಲೂಯಿ ಡೇನ್‌ರವರು ಪೋಷಕರಾಗಿರುವುದಾಗಿ ಒಪ್ಪಿಕೊಂಡರು. ಇದುವರೆಗೆ ಸುಮಾರು ೧೩೦ ಮಂದಿ ಮಹನೀಯರು ಮೆಂಬರುಗಳಾಗಿ ಸೇರಿಕೊಂಡಿದ್ದಾರೆ. ಇವರೇ ಪ್ರಜೆಗಳಿಗೆ ಸ್ವಭಾವಸಿದ್ಧವಾದ ಮುಖಂಡರುಗಳಾಗಿರೋಣದರಿಂದಲೂ, ಇವರಲ್ಲಿ ರಾಜಭಕ್ತಿಯೂ ಪ್ರಜಾಪ್ರೀತಿಯೂ ಹೇರಳವಾಗಿರೋಣದರಿಂದಲೂ ದೇಶದ ಶ್ರೇಯಸ್ಸಿಗೆ ಈ ಸಮಾಜವು ವಿಶೇಷವಾಗಿ ಸಹಾಯಮಾಡುತ್ತೆನ್ನುವುದಕ್ಕೆ ಸಂಶಯವಿಲ್ಲ.

ಅನ್ಯದೇಶ ವಾರ್ತೆಗಳು.

ಪರ್ಷಿಯಾ ರಾಜ್ಯದ ಗಲಭೆಯು.

ಫೆಬ್ರುವರಿ, ತಾ. ೨೮ನೇ ಭಾನುವಾರ.—ಪರ್ಷಿಯಾ ರಾಜ್ಯಕ್ಕೆ ಸೇರಿದ ರಿಷ್ಟ್ ಎಂಬ ಪಟ್ಟಣದಲ್ಲಿ ಪ್ರಜಾ ಪಕ್ಷದವರು ಸರ್ಕಾರಿ ಸೈನ್ಯಗಳು ಬಾರದಂತೆ ತಡೆಯಬೇಕೆಂಬ ಉದ್ದೇಶದಿಂದ ರಷ್ಯಾ ರೋಡಿನಲ್ಲಿ ಉದ್ದಕ್ಕೂ ಕೋಟೆ ಕೊತ್ತಲಗಳನ್ನು ಕಟ್ಟುತ್ತಲೂ, ಭೂಮಿಯಲ್ಲಿ ಸುರಂಗವನ್ನು ಇಡುತ್ತಲೂ ಇದ್ದಾರೆ.

ಇಂಗ್ಲಿಷ್ ಸೈನ್ಯದ ಖರ್ಚು.

ಬ್ರಿಟಿಷ ರಾಜ್ಯದ ಸೈನ್ಯದ ಇಲಾಖೆಯಲ್ಲಿ ೧೯೦೯—೧೦ ನೇ ಸಾಲಿಗೆ ೨,೭೪,೩೫,೦೦೦ ಪೌಂಡು (ಪೌಂಡು ೧೫ ರೂಪಾಯಿ) ಖರ್ಚಾಗುವುದೆಂದು ಅಂದಾಜು ಆಗಿದೆ. ಕಳೆದ ವರುಷ ಈ ಬಾಬಿಗೆ ೨,೭೪,೫೯,೦೦೦ ಪೌಂಡು ಖರ್ಚಾಯಿತು. ಸೈನ್ಯದ ಸಂಬಳ ಮುಂತಾದ ಬಾಬಿಗೆ ಹೆಚ್ಚಾಗಿ ೪,೦೪,೯೭೩ ಪೌಂಡೂ, ಮದ್ದು ಗುಂಡು ಮುಂತಾದದ್ದು ೬,೮೦,೧೦೭ ಪೌಂಡೂ, ಸೈನ್ಯದ ಸರಬರಾಯಿ ಮತ್ತು ಬಿಂಗು ೩,೬೩,೦೦೦ ಪೌಂಡೂ ಆಗುವುದೆಂದು ನಿರ್ಧರಿಸಲ್ಪಟ್ಟಿದೆ.

ಫ್ರಾನ್ಸಿನಲ್ಲಿ ಸುಂಕಗಳು.

ಫ್ರಾನ್ಸ್ ಸಂಸ್ಥಾನದ ಸುಂಕದ ಇಲಾಖೆಯ ಕಮಿಟಿಯವರು ಆಮದು ರಫ್ತಾಗುವ ಕೆಲವು ಸರಕುಗಳ ಸುಂಕದ ದರಗಳನ್ನು ಹೆಚ್ಚು ಮಾಡಬೇಕೆಂದು ಗವರ್ನ್‌ಮೆಂಟಿಗೆ ರಿಪೋರ್ಟ್ ಕೊಟ್ಟರು. ಅದರ ಮೇಲೆ ಮಂತ್ರಿ ಸಭೆಯವರು ಚರ್ಚೆಮಾಡಿ, ಸಾರು ಮತ್ತು ದಾರಗಳ ಮೇಲೂ ಅವುಗಳಿಂದ ತಯಾರಾದ ಸರಕುಗಳ ಮೇಲೂ ಸುಂಕವನ್ನು ಹೆಚ್ಚಿಸಕೂಡದೆಂದು ತೀರ್ಮಾನ ಮಾಡಿರುತ್ತಾರೆ.

ರಷ್ಯಾ ಚೀನಾಗಳ ಮನಸ್ತಾಪವು.

ಮಾರ್ಚ, ತಾ. ೧ನೇ ಸೋಮವಾರ.—ಚೀನಾ ರಾಜ್ಯಕ್ಕೆ ಸೇರಿದ ಹಾರ್ಬಿನ್ ಪಟ್ಟಣದಲ್ಲಿ ಮ್ಯುನಿಸಿಪಲ್ ಏರ್ಪಾಡುಗಳನ್ನೆಲ್ಲಾ ರಷ್ಯಾದವರು ತಾವೇ ವಹಿಸಿಕೊಂಡು ನಡೆಸಬೇಕೆಂದು ಹಟ ಹಿಡಿದಿದ್ದಾರೆ. ಯೂರೋಪಿನ ರಾಜ್ಯಗಳವರಾದರೋ ರಷ್ಯಾದವರಿಗೆ ಅಂತಾ ಅಧಿಕಾರವನ್ನು ಕೊಡದೆ ಪ್ರತಿಭಟಿಸಬೇಕೆಂದು ಚೀನೀಯರಿಗೆ ಸಲಹೆ ಕೊಡುತ್ತಿರುವರು. ರಷ್ಯಾದವರು ಹಾರ್ಬಿನ್ ಪಟ್ಟಣದಲ್ಲಿ ಚೀನೀಯರು ಸರಕು ತುಂಬಿಕೊಂಡಿರುವಂಥಾ ಕೋಠಡಿಗಳನ್ನೆಲ್ಲಾ ಮುಚ್ಚಿಸಿ, ಸುಂಕವನ್ನು ಕೊಟ್ಟಲ್ಲದೆ ತೆರೆಯಕೂಡದೆಂದು ನಿರ್ಬಂಧಪಡಿಸಿರುತ್ತಾರೆ. ಆದ್ದರಿಂದ ಚೀನಾ ಗವರ್ನ್‌ಮೆಂಟಿನವರು ತಮ್ಮ ವರ್ತಕರಿಗ್ಯಾದರೂ ರಷ್ಯಾದವರಿಗೆ ಸುಂಕ ಕೊಡಲಾಗದ್ದನ್ನು ಸಾಮಾನ್ಯವಾದಕೂಡದೆಂದು ಹುಕುಂ ಕೊಟ್ಟಿರುವರು. ರಷ್ಯಾದವರು ಅಲ್ಲಿರುವ ಅನ್ಯದೇಶದವರ ವರ್ತಕರನ್ನೂ ಹಾಗೆಯೇ ನಿರ್ಬಂಧಪಡಿಸುತ್ತೇವೆಂದು ಹೇಳುತ್ತಿದ್ದಾರೆ.

ಲಿಸ್ಬನ್ ಪಟ್ಟಣದಲ್ಲಿ ಸಿಲುಬಾಚ್ಛೃತ್ಯಗಳು.

ಫೆಬ್ರುವರಿ, ೨೮ನೇ ಭಾನುವಾರ.—ಪೋರ್ಚುಗಲ್ ರಾಜ್ಯದ ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ಹಬ್ಬದ ಉತ್ಸವಕ್ಕಾಗಿ ಪ್ರಜೆಗಳು ಕೆಲವು ಉತ್ಸವಗಳನ್ನು ನಡೆಸಿದರು. ಆ ಸ್ಥಿತಿ ಕೆಲವು ದುಷ್ಟರು ತಮ್ಮ ರಾಜನನ್ನೂ ಆತನ ತಂದೆ, ಹಿರಿಯ ರಾಜಕುಮಾರ ಮೊದಲಾದವರ ವೇಷಗಳನ್ನು ಕಟ್ಟಿ, ಅವರು ಸತ್ತ ಬಗೆಯಲ್ಲಿ ಹೊಗುತ್ತಿರುವ ರೀತಿಯ ಬೀದಿ ರಾಜಕುಮಾರರುಗಳನ್ನು ಕೊಲೆಮಾಡಿದವರೂ, ಅವರ ವೇಷವನ್ನು ಪಟ್ಟಣದಲ್ಲಿ ಮೆರವಣಿಗೆ ಮಾಡಿ ಸಮಾಧಿ ಸ್ಥಳಕ್ಕೆ ಸಾಗಿಸಿಕೊಂಡು ಹೋದಂತೆಯೂ ನಟಿಸಿ ತೋರಿಸಿದರು. ಇಂಥಾ ದುಷ್ಟವಾದ ಪ್ರದರ್ಶನಗಳನ್ನು ನಡೆಸಿದವರನ್ನು ತಡೆಯುವುದಕ್ಕೆ ಆ ಕಾಲದ ಆ ದುಷ್ಟ ಜನರು ಪೋಲೀಸಿನವರನ್ನು ಕಲ್ಲುಗಳಿಂದ ಹೊಡೆಯುತ್ತಾ ಬಂದರು. ಗಲಭೆಯೂ ಜೊತೆ ಕದನಗಳೂ ಹೆಚ್ಚಾಗ ಪೋಲೀಸಿ

ಹಿಂದೂ ದೇಶದ ಸಮಾಚಾರ ಸಾರವು.

ಬಂದೂಬಸ್ತಿನ ವಾರ್ತೆಗಳು.

ಸೈನಾರ್ ಮುಕ್ತಿ ರದ ಸಂತಾಪವು

ಫೆಬ್ರುವರಿ ೨೮ನೇ ಭಾನುವಾರ ಸಂಜೆ ತಿಂಗಳ ಕಡೇ ವಾರದಲ್ಲಿ ಕಲ್ಕತ್ತಾಪಟ್ಟಣದಲ್ಲಿ ಹಿಂದೂ ನವ ಪರ್ಷದ ಉತ್ಸವ ಮತ್ತು [illegible] ನಡೆಸುವ ಕ್ಲಾಸ್ ಬೆಂಬಲಗಳನ್ನು ಗಿರಿಕೊಂಡು ಪೈಸಾರಾ ಯುವಕರು ರೀತಿಯಾಗಿ ದೊಡ್ಡ ಮನೋವ್ಯಥೆ ಅಲ್ಲಿಯೇ ಇದ್ದರು. ತರುವಾಯ ಲಾಹೋರ್ ಅನ್ನು ಸೇರಿದ ಪಟ್ಟಣಕ್ಕೆ ಹೋಗಿ ಅಲ್ಲಿನ ವಿದ್ಯಾರ್ಥಿಗಳನ್ನು ಶರಾಂಬರಿಸಿಕೊಂಡು ಅಲ್ಲಿಂದ ಹಾದಿಯಲ್ಲಿ ಗಡಿಪ್ರಾಂತ್ಯದಲ್ಲಿರುವ ಕೋಹಾತ್ ಮತ್ತು ಕುರ್ರಂ ಕಣಿವೆಗಳ ಮಾರ್ಗವಾಗಿ ಆ ಬಳಿಕ ಪೇಷಾವರ್ ನಗರವನ್ನು ಹೋಗಿ ಸೇರುತ್ತಾರೆ

ಜನರು ಪಿಸ್ತೂಲುಗಳನ್ನೂ ಶಸ್ತ್ರಗಳನ್ನೂ ಹಿಡಿದು ಸುಗ್ಗಿ ಗುಂಡು ಹೊಡೆಯುತ್ತಾ ಆ ಗುಂಪನ್ನು ಚದರಿಸಲು ಪ್ರಯತ್ನಪಟ್ಟರು. ಅದರೂ ಇದು ಅವರಿಂದ ಸಾಧ್ಯವಾಗದೆ ಹೋದದ್ದನ್ನು ನೋಡಿ ಸೈನಿಕರು ಬಂದು ಜನರನ್ನು ದಸ್ತಗಳಿಂದ ಓಡಿಸಿಬಿಟ್ಟರು. ಸುಮಾರು ಇಪ್ಪತ್ತು ಜನರನ್ನು ದಸ್ತಗಿರಿ ಮಾಡಿರುತ್ತಾರೆ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ವ್ಯಾಧಿಯು ಶರೀರಕ್ಕೆ ಬರಲು ಪ್ರಾರಂಭವಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳು:—ಟೊಂಕ ನೋವು; ಹೃದಯದ ಬಡಿತ; ಮೂತ್ರವು ಸ್ವಲ್ಪವಾಗಿಯೋ ಹೆಚ್ಚಾಗಿಯೋ ಬರುವುದು; ಕಣ್ಣು ಮಂಜಾಗುವುದು; ಬಳಲಿಕೆ; ತಲೆ ಸುತ್ತುವುದು; ತಲೆನೋವು; ಗಾಬರಿ; ಕಾಲು ಊತ; ಕೀಲು ಬಿಗುವು; ಮೈಕೈಗಳ ಸೆಳೆತ; ಮರವು; ನಿದ್ರೆ ಇಲ್ಲದಿರುವಿಕೆ, ಇವೇ ಮೊದಲಾದವುಗಳು. ಅಲಕ್ಷ್ಯ ಮಾಡಿದರೆ ಮೂತ್ರಕೃಚ್ಛ್ರ, ವಾಯು, ಮೈಬಾವು, ಅಶ್ಮರಿ, ಮೂತ್ರಕೋಶದ ಕ್ಷಯ ಮೊದಲಾದ ರೋಗಗಳು ಉಂಟಾಗುವುವು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ತಿಳಿಯಲ್ಪಡುವ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು, ಮೂತ್ರೇಂದ್ರಿಯಗಳನ್ನು ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [59-27]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಸುವುವು.



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೩೦, ಪಿ. ಓ. ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

ನೋಟೀಸ್.

22 1

ಮೈಸೂರು ಸಿಟಿ ಮ್ಯುನಿಸಿಪಾಲ್ ವಾಸುಲ್ (ಅಕ್ಕರಾಯಿ) ಆಫೀಸು ಪಕ್ಕದಲ್ಲಿರುವ ೯೭೭ ನೇ ನಂಬರು ಮಳಿಗೆಯಲ್ಲಿ ಅವಲ್ ತರಹೆ ರವೆ ಮತ್ತು ಹಿಟ್ಟು ಚೆಲ್ಲರೆಯಾಗಿಯೂ, ಹೋತ್ತವಾಗಿಯೂ ಸುಲಭ ಕ್ರಯಕ್ಕೆ ಸಿಕ್ಕುತ್ತದೆ.

ವಿಕರಿಗೆ ಸಿದ್ಧವಾಗಿರುವ ಪುಸ್ತಕಗಳು

11 8

ಚರಿತ್ರೆಯ ಪ್ರಶ್ನೋತ್ತರ, ಭೂಗೋಳ ಪ್ರಶ್ನೋತ್ತರ, ಆರೋಗ್ಯಪ್ರಶ್ನೋತ್ತರ—(1891-06) ಕ್ರಯ ೧-೪-೦. ವ್ಯವಸಾಯ ಪ್ರಶ್ನೋತ್ತರ ೦-೫-೦ ಎಗ್ಸಾಮಿನರ್ ಮಾಸಪುಸ್ತಕ—ಚಂದಾ, ವರ್ಷಕ್ಕೆ ೧-೪-೦, ೫ಕ್ಕೆ ೧ ಪಟ್ಟು. ೧೯೦೮ ನೇ ಲೋವರ್‌ಸೆಕೆಂಡರಿ ಕನ್ನಡನೋಟ್ಸ್ ೦-೪-೦, ೧೦ಕ್ಕೆ ೧ ಪಟ್ಟು. ಕನ್ನಡಸೀ ಪುಸ್ತಕದ ನೋಟ್ಸ್ ಕ್ರಯ ಪ್ರತಿ ೧ಕ್ಕೆ ೦-೨-೦, ೫ಕ್ಕೆ ೧ ಪಟ್ಟು.

ಸಿ. ಪುಟ್ಟಯ್ಯ, ಮ್ಯಾನೇಜರ್, ದಿ ಎಗ್ಸಾಮಿನರ್ ಆಫೀಸ್. ಮೈಸೂರು.

ಆಸ್ತಿಯ ಬಿರಲ್ ನೋಟೀಸು.

33 1

ಅತ್ತಿಗುಪ್ಪಾ ತಾಲ್ಲೂಕು ಅಕ್ಕಿಪೇಟೆ ಹೋಬಳಿ ಏಂಡವಳ್ಳಿ ಗ್ರಾಮದಲ್ಲಿರುವ ನಮ್ಮ ಪಿತ್ರಾರ್ಜಿತವಾದ ಗಿರಿಗೌಡರ ಬಾಬತು ಗದ್ದೆ. ಹೊಲ, ಇವುಗಳು ಸದರಿ ಗಿರಿಗೌಡರ ಮಕ್ಕಳು ಜವರ, ಕೃಷ್ಣಯ್ಯ ಇವರುಗಳಿಗೆ ವಾಲ್ ವಾರೀಮತ್ತು ಆಗದೆ ಇರುವದರಿಂದ ಸದರಿ ಜಮೀನುಗಳನ್ನು ಕೃಷ್ಣಯ್ಯನೆಂಬುವನು ಸವತಿಯಾದ ತನ್ನ ಅಣ್ಣ ಜವರಣ್ಣನ ಮಗನಾದ ತಿರುಮಲಯ್ಯನೆಂಬ ನನಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಖರೀದಿ ಅಥವಾ ವಗ್ಯೆರೆ ಮಾಡಬೇಕೆಂದು ಇರುತ್ತಾನೆ. ಇದಕ್ಕೆ ನನ್ನ ಮೊಕಾಬಿಲೇ ಇಲ್ಲದೆ ಯಾರಾದರೂ ಖರೀದಿ ಅಥವಾ ವಗ್ಯೆರೆ ಮಾಡಿಕೊಂಡರೆ ಮುಂದೆ ಆಗುವ ನನ್ನ ಲುಕ್ಸಾನಿಗೂ ಮತ್ತು ಇತರ ಖರ್ಚುಗಳಿಗೂ ಗುರಿಯಾಗಬೇಕಾಗುತ್ತೆಂದು ಇದರಿಂದ ಸಮಸ್ತ ಜನಗಳಿಗೂ ತಿಳಿಸಿರುತ್ತೆ. ೨—೩—೧೯೦೯

ಮೈಸೂರು ಮಂಡಿಮೊಹಲ್ಲಾ ತಿರುಮಲಯ್ಯ ಉರುಫ್ ಕೃಷ್ಣಯ್ಯ

ಮಾವಿನ ಫಸಲಿನ ಹರಾಜು

31 1

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ —ತುಂಕೂರು ತಾಲ್ಲೂಕು ಗೂಳೂರು ಸಮ್ಮತು ಗೌರೀಪುರವೆಂಬ ಪವತಿಪಟ್ಟ ಮಿಸ್ಟರ್ ಕಾನ್ವನವರ ಕಾನ್ ಎಸ್ಟೇಟ್ ಎಂಬ ನಮ್ಮ ಸ್ವಂತ ತೋಟದಲ್ಲಿನ ಪಕ್ವ ಕಸಿ ಮಾವಿನ ಫಸಲನ್ನು ಈ ಕೀಲಕ ಸಂವತ್ಸರದ ಮಾತ್ರ ಇದೇ ಮಾರ್ಚ ೧೦ ನೇ ತಾ ಮಧ್ಯಾಹ್ನ ೧೨ ಗಂಟೆಗೆ ಸದರಿ ತೋಟದ ಬಳಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ. ಇಷ್ಟವಿದ್ದವರು ಬಂದು ಬಿಡ್‌ನಾಲ್‌ನಿಂದ ಪಡೆಯಬಹುದು. ತೋಟದಲ್ಲಿ ಸುಮಾರು ೫೦೦ ಮರಗಳಿವೆ. ಹರಾಜಿನಲ್ಲಿ ಪಡೆದವರು ತಕ್ಷಣ ಹರಾಜು ಮೊಬಲಗಿನಲ್ಲಿ ಅರ್ಧ ಪಾವತಿಮಾಡಬೇಕು. ತಪ್ಪಿದಲ್ಲಿ ಪುನಃ ಹರಾಜು ಮಾಡಿಸಿದ್ದರಲ್ಲಿ ಬರುವ ನಷ್ಟಕ್ಕೆ ಮೊದಲು ಹರಾಜಿನ ಆಸಾಮಿಯು ಜವಾಬ್ದಾರನು ಆಗುತ್ತಾನೆ. ಬಿಟ್ಟು ಉಳಿದದ್ದಲ್ಲಿ ಸದರಿಯವರಿಗೆ ಸಲ್ಲತಕ್ಕದು. ಹರಾಜು ಒಪ್ಪಿಕೊಂಡವರು ಮೊಬಲಗು ಬಾಕಿ ಉಳಿಕೆ ಮೊಬಲಗು ಈ ಮಾರ್ಚ ಆಖೈರಿನೊಳಗೆ ಸಂದಾಯ ಮಾಡತಕ್ಕದ್ದು. ತಪ್ಪಿದ್ದಲ್ಲಿ ಅಡ್ವಾನ್ಸು ಕೊಟ್ಟ ಸಂಬಳಗಳನ್ನು ಕಳೆದುಕೊಳ್ಳಬೇಕಾಗಿದೆ, ಮೊದಲಿಂದ ಫಸಲಿನ ಮೇಲೆ ಹರಾಜಿನವರಿಗೆ ಏನೂ ಹಕ್ಕು ಬಾಧ್ಯತೆ ಇರುವುದಿಲ್ಲ. ಹರಾಜಿನ ದಿನ ಮಳೆ ಬಂದರೆ ಮಾರನೇ ದಿನ ಹರಾಜು ಮಾಡಲ್ಪಡುತ್ತೆ.

ಎ. ಎಸ್. ನಂಜುಂಡಶೆಟ್ಟಿ,

೪೭, ನಾರಾಯಣ ಪಿಳ್ಳೆ ಸ್ಟ್ರೀಟ್, ಬೆಂಗಳೂರು ದಂಡು.

ಪೆರೂನಾ ವಿಷಯವಾಗಿ ಹೆಂಗಸರಿಂದ ಬಂದಿರುವ ಕಾಗದಗಳು. 7-9

ಮಿಸೆಸ್. ಕ್ಲೇರಾ ಎಲ್. ಮಿಲ್ಲರ್. ಮಿಸೆಸ್. ಎಸ್. ಎಲ್. ಜೂಯೆಲ್. ಮಿಸೆಸ್. ಮಹಲ ರೀಡ್.

ಮುಂದಿನ ಕಾಗದಗಳು ದಿನವೂ ಅನುಭವವನ್ನು ತಿಳಿಸುತ್ತವೆ. ಕಾಯಿಲೆ ಅನುಭವಿಸಿ, ಪೆರೂನಾದಿಂದ ಸಿಂಧಿತವಾದ ಗುಣವನ್ನು ಹೊಂದಿದ ಸ್ತ್ರೀಯರು ಯಥಾರ್ಥವಾಗಿ ನುಡಿದಿರುವ ಮಾತುಗಳಾಗಿವೆ.

ಶೀಘ್ರದಲ್ಲೇ ಗುಣಕೊಡುವಂಥಾ ಈ ಔಷಧ ಸಿಕ್ಕುವುದು ಅಮೇರಿಕದ ಹೆಂಗಸರಿಗೆ ತುಂಬಾ ಅನುಕೂಲವಾಗಿದೆ. ಮಲಬದ್ಧತೆ, ವಾಯುಸೋಪ್ಪು, ಮೂತ್ರಕೋಶದ ಅಕ್ರಮ, ಹುಡಿಗೆಮ್ಮು, ಈ ಮೊದಲಾದ ಶೀತದಿಂದ ಹುಟ್ಟುವ ನಾನಾ ರೋಗಗಳನ್ನು ಪೆರೂನಾ ನಿವಾರಣೆಮಾಡಬಲ್ಲದು. ಎಂತಲೂ ಈ ಮಾತನ್ನು ಹೆಂಗಸರು ಹೇಳುತ್ತಾರೆ. ತಮ್ಮಂತೆ ನರಳುವ ಹೆಂಗಸರಿಗೆ ಅನುಕೂಲವಾಗಲಿ ಎನ್ನುವುದಲ್ಲದೆ ಅವರ ಆಶಯವು ಇನ್ನೇನೂ ಆಗಿರಲಾರದು.

ಪೆರೂನಾಕ್ಕೆ ಪ್ರತಿ ದಿನವೂ ಹೊಸ ಸ್ನೇಹಿತರನ್ನು ಮಾಡಿಕೊಳ್ಳುತ್ತದೆ. ಪೆರೂನಾಕ್ಕೆ ಸರ್ವದಾ ದೊರೆಯುವ ಪ್ರಸಿದ್ಧಿಗೆಲ್ಲಾ ಅದನ್ನು ಉಪಯೋಗಿಸಿ ಜನರು ಹೇಳುವ ಶಿಫಾರಸು ಕಾಗದಗಳೇ ಮುಖ್ಯ ಕಾರಣವು.

ಬಿಡದ ಹುಡಿಗೆಮ್ಮು.

ಮಿಸೆಸ್ ಕ್ಲೇರಾ ಎಲ್. ಮಿಲ್ಲರ್, ಚಾರ್ಲ್ಟನ್, ಕೊಲಂಬಿಯ, ಸಿಟಿ, ಸಿಟಲ್, ವಾಷಿಂಗ್ಟನ್, ಯು. ಎಸ್. ಎ., ಮೊದಲು ಸೂಗೆ ಕಂಟ್ರಿ ಕ್ಲಬ್ ವೈಸ್‌ಪ್ರೆಸಿಡೆಂಟ್, ಈಕೆ ಬರೆಯುವುದು :–

"ಹುಡಿಗೆಮ್ಮಿನಿಂದ ನಾನು ಬಹಳ ಅನುಭವಿಸಿದೆನು. ಒಂಬತ್ತು ಬಾಟ್ಲ ಪೆರೂನಾ ಸೇವಿಸುವಷ್ಟರಲ್ಲಿ ಅದು ನನಗೆ ನಿವಾರಣೆಯಾಯಿತು. ಇದಕ್ಕಿಂತ ಉತ್ಕೃಷ್ಟವಾದ ಔಷಧ ಬೇರೊಂದಿಲ್ಲ. ಪೆರೂನಾ ದೇಹದ ಅಂಗಗಳಲ್ಲಿ ಮಾಡತಕ್ಕ ಕೆಲಸಗಳು ಬಹು ಅದ್ಭುತವಾಗಿರುತ್ತವೆ. ಅದು ಶರೀರದ ಶಕ್ತಿಯನ್ನು ವೃದ್ಧಿಪಡಿಸಿ, ದೇಹದ ಸ್ವಾಭಾವಿಕ ಕೆಲಸಗಳಿಗೆ ಸಹಾಯವಾಗುತ್ತದೆ.

"ನಾನು ಇದರ ವಿಷಯವನ್ನು ನನ್ನ ಸ್ನೇಹಿತರಿಗೆ ಬಹಳವಾಗಿ ಹೇಳಿದೆನು. ಅವರೂ ನನ್ನಂತೆಯೇ ಇದನ್ನು ತುಂಬಾ ಕೊಂಡಾಡುತ್ತಾರೆ. ಅದು ನಿಜವಾಗಿಯೂ ಗುಣಕೊಡುವ ಔಷಧವೆಂದು ನನಗೆ ಗೊತ್ತು."

ನಡುಕ, ದಣಿವು ಮತ್ತು ದುರ್ಬಲ.

ಮಿಸೆಸ್. ಕ್ರಿಸ್ಟಿನಾ ಸ್ಟಕಲ್ಲಾ, ಆರ್ಡರ್ ಆಫ್., ಬಫೆಲೊ, ನ್ಯೂಯಾರ್ಕ್, ಯು. ಎಸ್. ಎ., ಈಕೆ ಬರೆಯುವುದು :— "ಶರೀರದೊಳಗೆ ಶೀತದಿಂದ ನರಳುತ್ತಿರುವವರೆಲ್ಲಾ ಇದನ್ನು ಬಹು ಪ್ರಯೋಜನ ಹೊಂದುವರೆಂದು ನಂಬುತ್ತೇನೆ.

"ನನ್ನ ಸ್ಥಿತಿಯು ನಿಜವಾಗಿ ಕೆಟ್ಟುಹೋಗಿತ್ತು. ನನಗೂ ನನ್ನ ಸ್ನೇಹಿತರಿಗೂ ನನ್ನ ಶರೀರಸ್ಥಿತಿಯು ಸ್ವಲ್ಪ ಗಾಬರಿಯುಂಟಾಗಿತ್ತು. ದೇಹವು ನಡುಗುತ್ತಿತ್ತು. ರಾತ್ರಿ ನಿದ್ದೆ ಬರುತ್ತಿರಲಿಲ್ಲ. ಆಹಾರದಿಂದ ಪ್ರಯೋಜನವಾಗಲಿಲ್ಲ. ಆ ವೇಳೆಗೆ ನನಗೆ ದಣಿವೂ ದುರ್ಬಲವೂ ಇದ್ದವು. ಅನೇಕ ಡಾಕ್ಟರುಗಳನ್ನು ಕೇಳಿ ಔಷಧ ಸೇವಿಸಿದರೂ ನನಗೆ ಕಷ್ಟ ಪರಿಹಾರವಾಗಲಿಲ್ಲ. ಆಗ ನಾನು ಪೆರೂನಾ ಸೇವಿಸಲಾರಂಭಿಸಿದೆನು.

"ಕಡೆಯಲ್ಲಿ ಎರಡು ಬಾಟ್ಲ ಔಷಧ ಸೇವಿಸುವಷ್ಟರಲ್ಲಿ ನಾನು ಬೇರೆ ಹೆಂಗಸಾದಂತೆ ತೋರಿತು. ಅವರೂ ಅಲ್ಲಿಗೇ ನಿಲ್ಲಿಸಲಿಲ್ಲ. ಇನ್ನೂ ಕೆಲವು ಬಾಟ್ಲಗಳ ಪೆರೂನಾ ಸೇವಿಸುತ್ತಾ ಬಂದೆನು. ನನಗೆ ಸಂಪೂರ್ಣ ಗುಣವಾಯಿತು. ಆಗಿನಿಂದಲೂ ಸುಖವಾಗಿದ್ದೇನೆ. ಈಗ ಚೆನ್ನಾಗಿ ಊಟಮಾಡುತ್ತೇನೆ. ಒಳ್ಳೇ ನಿದ್ದೆ ಬರುತ್ತಿದೆ."

ಪೆರೂನಾಕ್ಕೆ ಒಳ್ಳೇ ಹೆಸರು.

ಮಿಸೆಸ್. ಎಸ್. ಎಲ್. ಜೂಯಲ್, ಆರ್. ಎಫ್. ಡಿ. ೧, ಸ್ಪ್ರಿಂಗ್‌ಫೋರ್ಟ್, ಪೆನ್ಸಿಲ್ವೇನಿಯ, ಯು. ಎಸ್. ಎ. ಈಕೆ ಬರೆಯುವುದು :—

"ಅನೇಕ ವರುಷಗಳು ನಾನು ಪೆರೂನಾ ಉಪಯೋಗಿಸಿ ಅದರ ಪ್ರಯೋಜನವನ್ನು ತಿಳಿದಿರುತ್ತೇನೆ. ನನ್ನ ಗುರ್ತು ಕಂಡವರಿಗೂ ಅದು ತುಂಬಾ ಹಿತವನ್ನುಂಟುಮಾಡಿರುವುದನ್ನು ಬಲ್ಲೆನು. ಪೆರೂನಾ ವಿಷಯದಲ್ಲಿ ಒಳ್ಳೇ ಮಾತನ್ನಲ್ಲದೆ ಬೇರೇನೂ ಹೇಳಲಾರೆನು."

ಪೆರೂನಾವನ್ನು ಮನೆಯಲ್ಲಿಟ್ಟಿದೆ

ಮಿಸೆಸ್, ಮೇರಿ ಗೋಟ್ಸ್‌ಚಾಕ್, ಓರಿಯಂಟ್, ಓಕ್ಲಹೋಮ, ಯು. ಎಸ್. ಎ., ಈಕೆ ಬರೆಯುವುದು :— "ನಾನೂ, ನನ್ನ ಮಕ್ಕಳೂ, ನನ್ನ ಗಂಡನೂ ನಿಮ್ಮ ಔಷಧಗಳನ್ನು ಸೇವಿಸಿ, ಯಾವಾಗಲೂ ಮನೆಯಲ್ಲಿಟ್ಟುಕೊಂಡಿರುತ್ತೇವೆ. ಈ ಔಷಧದಿಂದ ನನಗೆ ಆರೋಗ್ಯವುಂಟಾಯಿತು. ಅನೇಕ ಕಡೆಗಳಿಂದ ಜನರು ನನಗೆ ವಾಸಿಯಾದದ್ದನ್ನು ಕೇಳಿ ಆಶ್ಚರ್ಯಪಟ್ಟು ಬರೆಯುತ್ತಾರೆ. ನನ್ನ ಗಂಡನಿಗಿದ್ದ ಉಬ್ಬಸರೋಗ, ನನ್ನ ಮಗಳ ಕೈನೋವು ಬಾಧೆ, ಹೊಟ್ಟೆನೋವು, ನನ್ನ ಮಗನ ಗಂಟಲನೋವು, ಎಲ್ಲಾ ವಾಸಿಯಾಯಿತು. ಕಾಯಿಲೆ ಇದ್ದಾಗ ನಾನು ೧೧೦ ಪೌಂಡು ತೂಗುತ್ತಿದ್ದೆನು. ಈಗ ೧೪೦ ಪೌಂಡು ಮಾಂಸ ಖಂಡಗಳು ಬೆಳೆದು ಸುಖವಾಗಿದ್ದೇನೆ.

"ಡಾ|| ಹಾರ್ಟ್‌ಮನ್‌ರವರ ಔಷಧವು ಭೂಮಿಯಲ್ಲೆಲ್ಲಾ ಅಪೂರ್ವಕರವಾದದ್ದು. ಅದರಿಂದ ಬಹು ಜನರು ಶೀಘ್ರವಾಗಿ ದೇಹದಾರ್ಢ್ಯ ಹೊಂದುತ್ತಾರೆ. ಪೆರೂನಾವು ನರಗಳಿಗೆ ಹಿತಕೊಡುವುದು; ಸ್ತ್ರೀಯರ ರೋಗಗಳಿಗೆಲ್ಲಾ ಅದು ಉತ್ತಮೋತ್ತಮವಾದ ಔಷಧವಾಗಿದೆ.

"ಹತ್ತು ವರುಷಗಳ ತನಕ ರೋಗದಲ್ಲಿ ನರಳುತ್ತಿದ್ದೆ. ನಾನು ಈಗ ಸಂಪೂರ್ಣ ಗುಣ ಹೊಂದಿರುತ್ತೇನೆಂದು ನಿಮಗೆ ಬರೆಯಲು ತುಂಬಾ ಸಂತೋಷವಾಗುತ್ತದೆ. ನೀವು ಹೇಳಿದ ಚಿಕಿತ್ಸೆಗಾಗಿ ನಿಮ್ಮನ್ನು ಅಪಾರ ಹೊಗಳುವೆನು."

ಮಲಬದ್ಧತೆ, ಮೂತ್ರಕೋಶರೋಗ.

ಮಿಸೆಸ್. ಮಹಲಾ ರೀಡ, ಕಾರ್ಬನ್‌ವಿಲ್ಲಿ, ಓಂಟ್, ಕೆನ್ನಡ, ಈಕೆ ಬರೆಯುವುದು :—

"ನನ್ನ ಮುದಿತನದಲ್ಲಿ ನಿಮ್ಮ ಪ್ರಖ್ಯಾತವಾದ ಔಷಧವು ನನಗೆ ಮಹೋಪಕಾರವಾಗಿರುತ್ತದೆ. ಈಗ ನಾನು ಸೌಖ್ಯವಾಗಿರುವಷ್ಟು ಹಿಂದೆ ಅನೇಕ ವರುಷಗಳಿಂದ ಇರಲಿಲ್ಲ.

ನನಗೆ ಮಲಬದ್ಧವಾಗುತ್ತಾ, ಮೂತ್ರ ಕೋಶದ ಅಕ್ರಮ ಹುಟ್ಟಿ, ವಾಯುಸೋಪ್ಪು ಪ್ರಾಪ್ತವಾಗಿತ್ತು. ಎರಡು ವರುಷಗಳ ಹಿಂದೆ ನನ್ನ ಆರೋಗ್ಯವು ಸಂಪೂರ್ಣ ಕೆಟ್ಟಿತು. ಅಷ್ಟರಲ್ಲಿ ನನ್ನ ಪ್ರೀತಿ ಪಾತ್ರಳಾದ ಒಬ್ಬ ಸ್ನೇಹಿತಳು ನಿಮ್ಮ ಪೆರೂನಾ, ಮನಾಲಿನ್ ಎಂಬ ಔಷಧಗಳನ್ನು ಕಳುಹಿಸಿಕೊಟ್ಟಳು.

"ಬಾಟ್ಲ ಮೇಲೆ ಬರೆದಿರುವಂತೆ ನಾನು ಔಷಧಗಳನ್ನು ತೆಗೆದುಕೊಳ್ಳುತ್ತಾ ಬಂದೆನು. ನನಗೆ ಬೇಗ ಅನುಕೂಲವಾಯಿತು. ಅದರ ಮೇಲೂ ಅದನ್ನೇ ಸೇವಿಸಿಕೊಂಡು ಬಂದೆನು.

"ಮೇಲ್ಕಂಡ ರೋಗಗಳೆಲ್ಲಾ ಈಗ ನನಗೆ ಸಂಪೂರ್ಣ ವಾಸಿಯಾಗಿವೆ. ಮೊದಲಿಗಿಂತ ಈಗ ನಾನು ಸುಖವಾಗಿದ್ದೇನೆ.

"ಈ ಔಷಧಗಳ ಗುಣವನ್ನು ಅತ್ಯಧಿಕವಾಗಿ ಹೊಗಳಲಾರೆನು. ಅದನ್ನು—ಸಿಕ್ಕುವಂತೆ ಸಂದರ್ಭ ಬಿದ್ದಾಗಲೆಲ್ಲಾ ಇತರರಿಗೆ ಹೇಳುತ್ತಾ ಇದ್ದೇನೆ."

ಪ್ರಸಿದ್ಧವಾದ ಔಷಧವು.

ಅನೇಕ ವರುಷಗಳಿಂದಲೂ ಎಲ್ಲಾ ಶೈತ್ಯರೋಗಗಳಿಗೂ ಪೆರೂನಾ ಗುಣಕೊಡುವ ಔಷಧವೆಂದು ಪ್ರಸಿದ್ಧವಾಗಿದೆ. ಈ ರೋಗಗಳಿಗೆ ಇತರ ಔಷಧಗಳು ಎಷ್ಟೋ ಹುಟ್ಟಿ ಅದೃಶ್ಯವಾದವು. ಆದರೆ ಪೆರೂನಾದಿನ ಒಳ್ಳೇ ಹೆಸರಿಗೆ ಸ್ವಲ್ಪವೂ ಕುಂದುಕೊರತೆಗಳುಂಟಾಗಿರುವುದಿಲ್ಲ.

ಪೆರೂನಾ ಬಹು ಸಾರವತ್ತಾದ ಮೂಲಿಕೆಗಳಿಂದ ತಯಾರಾದ ಔಷಧವು. ಅದು ದೇಹದ ಅಂಗಾಂಗಗಳ ಮೇಲೂ ನರಗಳ ಮೇಲೂ ಕೆಲಸಮಾಡಬಲ್ಲದು. ಶೈತ್ಯವೆಂಬುವುದು ಯಾವ ಭಾಗದಲ್ಲಿ ಅಕ್ರಮವನ್ನುಂಟು ಮಾಡಿದ್ದರೂ ಪೆರೂನಾ ಅದನ್ನೆಲ್ಲಾ ನಿವಾರಣೆಮಾಡಿರುತ್ತದೆ.

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದದ್ದು ಇವರಿಂದಲೇ ತಿಳಿಯಬಹುದು.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ:—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

12—2—1909 ರಿಂದ 19—2—1909 ರ ವರೆಗೆ.

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	7	7	0	0
ಮೈಸೂರು ,,	2	1	0	0
ಬೆಂಗಳೂರು ಡಿಸ್ಟ್ರಿಕ್ಟು	3	4	11	7
ಮೈಸೂರು ,,	20	18	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	1	1	0	0
ತುಂಕೂರು ಡಿಸ್ಟ್ರಿಕ್ಟು	3	9	1	0
ಹಾಸನ ,,	2	1	0	0
ಚಿತ್ರದುರ್ಗ ,,	0	0	0	0
ಕಡೂರ್ ,,	6	7	7	4
ಶಿವಮೊಗ್ಗ ,,	4	4	0	0
* ಸಂಖ್ಯೆ ಕಾಣೆಸಿಲ್ಲ. ಜುಮ್ಲಾ	57	49	19	11

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಕೀಲಕನಾಮ ಸಂವತ್ಸರದ ಫಾಲ್ಗುಣ ಶುದ್ಧ ತ್ರಯೋದಶಿ ಗುರುವಾರದಿಂದ ಫಾಲ್ಗುಣ ಬಹುಳ ತದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೯ ನೇ ಮಾರ್ಚಿ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶೇದಿ ಕುಂಭ ಮಾಸ
4	ಗುರು *	ತ್ರಯೋದಶಿ	51-50	ಪು	0-23	21
5	ಶುಕ್ರ	ಚತುರ್ದಶಿ	56-20	ಪು	4-50	22
6	ಶನಿವಾ ::	ಪೌರ್ಣಮಿ	60-0	ಮ	10-48	23
7	ರವಿವಾ ;;	ಪೌರ್ಣಮಿ	1-15	ಪು	17-20	24
8	ಚಂದ್ರ §	ಪಾಡ್ಯಮಿ	6-38	ಉ	23-50	25
9	ಕುಜ	ಬಿದಿಗೆ	11-40	ಹ	29-2	26
10	ಬುಧ †	ತದಿಗೆ	16-16	ಚಿ	35-34	27

* ಚಾಮರಾಜೇಶ್ವರ ರಥ. :: ಹೋಳಿಕೋತ್ಸವ, ಕಾಮದಹನ, ಪ್ರಸನ್ನ ಗುಂಡೇಶ್ವರಸ್ವಾಮಿ ರಥ. ;; ಮಹಾವ್ಯಾಪ್ತ. § ಕರೀಘಟ್ಟದ ಶ್ರೀನಿವಾಸ ಸ್ವಾಮಿ ರಥ. † ಚತುರ್ಥೀ ತಿಥಿ. ದಗ್ಧ ಯೋಗ, ಸಂಕಷ್ಟಚತುರ್ಥಿ.

ಕ್ರಾಪಿನ ಧಾರಣೆ.

ದಿನಸಿ.		ಮೈಸೂರು.	ಬೆಂಗಳೂರು.
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ	ರೂ.	೧೫-೮-೦	೧೯-೮-೦
ಕೆಂಬತಿ ಅಕ್ಕಿ ಅವಲ್	...	೧೬-೦-೦	೧೯-೦-೦
,, ಮಧ್ಯಮ	...	೧೫-೮-೦	೧೮-೦-೦
ಜಾಪ್ರಾಣಿ ಅಕ್ಕಿ	...	೧೫-೧೩-೦	೨೦-೦-೦
ಸಣ್ಣಕ್ಕಿ ಅವಲ್	...	೧೮-೦-೦	೨೧-೦-೦
,, ಮಧ್ಯಮ	...	೧೭-೮-೦	೨೦-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	...	೧೬-೮-೦	೧೭-೦-೦
,, ಮಧ್ಯಮ	...	೧೬-೦-೦	೧೬-೮-೦
ಹೈಕ್ ರಾಗಿ ಪಲ್ಲಾ ೧ಕ್ಕೆ	...	೮-೧೨-೦	೯-೮-೦
ಕಾರಾಗಿ	...	೮-೪-೦	೯-೦-೦
ಜೋಳ	...	೮-೮-೦	೯-೮-೦
ಹಲಸಂದೆ ಪಲ್ಲಾ ೧ಕ್ಕೆ	...	೧೪-೪-೦	೧೩-೦-೦
ಬಳೀ ಅವರೆ	...	೧೧-೦-೦	೧೧-೦-೦
ಹೆಸರು	...	೧೪-೪-೦	೧೩-೪-೦
ಉದ್ದು	...	೧೪-೪-೦	೧೩-೮-೦
ಕಡಲೆ	...	೧೪-೪-೦	೧೪-೦-೦
ಎಳ್ಳು ಸೇ. ೧೨೭ ಕ್ಕೆ	...	೨೧-೦-೦	೨೧-೮-೦
ಹುರುಳಿ	...	೧೦-೮-೦	೧೧-೦-೦
ಹರಳು ೧೨೭ ಸೇರಿಗೆ	...	೧೦-೮-೦	೧೦-೪-೦
ಸೀಗೇಕಾಯಿ ಮಣ ೧ಕ್ಕೆ	...	೧-೮-೦	೧-೬-೦
ಮೆಣಸಿನಕಾಯಿ	...	೫-೮-೦	೩-೧೨-೦
,, ಮಧ್ಯಮ	...	೫-೦-೦	೩-೪-೦
ಬೆಲ್ಲ ದೊಡ್ಡ ಅಚ್ಚು	...	೬-೪-೦	ಮ ೧-೧೦-೦
ಒಳ್ಳೆಣ್ಣೆ ಮಣ ೧ಕ್ಕೆ	...	೫-೦-೦	೫-೦-೦
ಹರಳೆಣ್ಣೆ ,,	...	೪-೮-೦	೪-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ	...	೭-೦-೦	೬-೮-೦
ಉಪ್ಪು ,,	...	೬-೦-೦	೫-೭-೦
ಮೆಣಸೀ ಹಣ್ಣು	...	೧-೮-೦	೧-೬-೦
,, ಪಲೀಸು	...	೧-೪-೦	೧-೪-೦
ತುಪ್ಪ ಮಣ ೧ಕ್ಕೆ	...	೧೪-೮-೦	೧೪-೮-೦
ನಿಮ್ಮೆಂಬಣ್ಣೆ ಪೆಟ್ಟಿ ೧ಕ್ಕೆ	...	೫-೦-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	...	೪-೪-೦	೫-೦-೦
ಅಳಲೇಕಾಯಿ ಮಣ ೧ಕ್ಕೆ	...	೦-೧೩-೦	೦-೧೩-೦
ಅಂಟುವಾಳದ ಕಾಯಿ ಮಣ ೧ಕ್ಕೆ	...	೦-೧೪-೦	೧-೩-೦
ಟಿಸ್ಸ (ಪೌಕ್) ಕೆಂಪು	...	೧೫-೭-೦	೧೫-೮-೦
,, ,, ಹಸಿಮ	...	೧೫-೧೪-೦	೧೫-೧೩-೦
,, ,, ಗಟ್ಟಿ ತೊಲ ೧ಕ್ಕೆ	...	೨೪-೧೦-೦	೨೪-೭-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	...	೬೭-೦-೦	೬೪-೦-೦

Printed and Published by the Rev. H. Gulliford, Proprietor and Manager, Wesleyan Mission Press, Mysore. 4/3/1909.

REGISTERED
M. ೨೦

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೯ ನೇ ಇಸವಿ ಮಾರ್ಚಿ ತಾರೀಖು ೧೧ ನೇ ಗುರುವಾರ. ಸಂಚಿಕೆ ೪೧

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟಿದ್ದು

...ಉಪಯೋಗಕ್ಕೋಸ್ಕರವೂ ಮತ್ತು ...ಗೆ ನಮೂದಿಸಿರುವ ರೋಗಗಳಿಗೆ ತಕ್ಕುದಾದ ಗುಣಕಾರಿಯು [30 8]

ತಲೆನೋವು, ಗಂಟು ಉಬ್ಬುವದು, ನಾತ, ... ಉಳುಕು, ಅಜೀರ್ಣ ಗಂಟು, ಗಂಟಲು ... ವಿಪರೀತ ಪಾಯು, ... ಕಾಫಿ, ತೋಟ ... ಅಮೃತಾಂಜನವು ... ನಮ್ಮ ಕೋಲಿ ... ಒಂದರ ಕಿಮ್ಮತ್ತು ... ಬಾಟ್ಲಿಗಳಿಗೆ ...

ಗಜಕರ್ಣದ ಮುಲಾಮು.

... ಗಜಕರ್ಣ ತುರಿ, ಕಜ್ಜಿ ಮುಂತಾದವು ... ಒಂದರ ಕಿಮ್ಮತ್ತು ...

ವಜ್ರಗುಟಿಕೆ.

ಘಟ್ಟಪ್ಪು, ರಕ್ತದುಷ್ಟಿ, ಬಾಟ್ಲಿ ಒಂದರ ಕಿಮ್ಮತ್ತು ರೂ ೧ ೦ ೦

ಮಂಡಲೋ ಮುಲಾಮು ೦ ೮ ೦

ದಂತಮಂಜನ—ಹಲ್ಲುಗಳು ಗಟ್ಟಿ ಯಾಗುತ್ತವೆ ೦ ೨ ೦

... ಔಷಧಗಳನ್ನು ... ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬ...

ವಿಲಿಯಂ ... ಕಂಪೆನಿ ಪ್ರೋಪ್ರೈಟರ್ಸ್ ಮುಂಬಯಿ

... 'ಅಮೃತಾಂಜನ' ಮುಂಬಯಿ

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಿಲ್ಲದಿದ್ದರೆ ಬೇಗ ಬರೆದು ತರಿಸಿಕೊಳ್ಳಿ.

19

ಈ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿ ... ಹಾಸನದಲ್ಲಿಯೇ ...

... ಕಡೆಗಳಲ್ಲಿ ... ಹಾಸನದ ಟೋಪಿಗಳೆಂದು ಎಲ್ಲರೂ ...

... ನಮ್ಮಲ್ಲಿ ... ಬರುವದು ...

... ಟೋಪಿಗಳು ... ಬಣ್ಣಗಳಿಲ್ಲದ್ದೂ ... ನಮ್ಮಲ್ಲಿ ದೊರೆಯುವವು.

... ಟೋಪಿಗಳು ೧ ರೂ ... ೪ ಆ ...

... ರೂ ... ಆ ...

... ಟೋಪಿ ಫ್ಯಾಷನ್ ಮೋಜೋಡು, ಅರ್ಧ ಮೋಜೋಡು, ಕತ್ತಿನ ... ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕಳುಹಿಸಲ್ಪಡುವುದು. ನಮ್ಮ ವಿಳಾಸ—

...ರ್, ಹಾಸನದ ಟೋಪಿ ಕಾರ್ಖಾನೆ ಹಾಸನ

ಜ್ವರಸುಧಾ

81 24

ಒಂದು ಬಾಟ್ಲಿ ಕಿಮ್ಮತ್ತು ೮ ಆಣೆ—ವಿ ಪಿ ಖರ್ಚು ಬೇರೆ

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಬರುವ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಚಳಿ ... ಜ್ವರ ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ಹೊರತು ಬೇರೆ ಔಷಧ ಲೋಕದಲ್ಲಿ ಇಲ್ಲವೆಂದು ಅನುಭವಿಕರಾದ ಡಾಕ್ಟರುಗಳು ಹೇಳುತ್ತಲಿದ್ದಾರೆ ... ತಲೆನೋವು ಅರೆತಲೆನೋವು, ... ಮುಂತಾದವುಗಳನ್ನು ... ಹೊತ್ತಿನಲ್ಲಿಯೇ ... ದಿಗಂತರಕ್ಕೆ ಓಡಿಸಬಲ್ಲದು "ಸುಧಾ" ಅಂದರೆ ಅಮೃತವನ್ನು ಸೇವಿಸಿದಷ್ಟು ... ಯಾವ ವಿಧವಾದ ... ಎಲ್ಲಾ ವಿಧವಾದ ಜ್ವರಗಳನ್ನು ... ಪ್ರಸಿದ್ಧಿ ಗೊಂಡಿದೆ ... ಔಷಧಿಯಲ್ಲಿ ಕಂಡು ಬರುವ ಅಮೋಘಗುಣವನ್ನು ಹೆಚ್ಚು ವರ್ಣನೆ ಮಾಡತಕ್ಕದ್ದು ...

ದೇವನಹಳ್ಳಿ ಟವನ್, ಬೆಂಗಳೂರು ಡಿಸ್ಟ್ರಿಕ್ಟ್. ಬಿ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್

ಜ್ವರಹರಿ 18 6



ಇದು ಸಾಧಾರಣ ಜ್ವರ, ಪಿತ್ತಜ್ವರ, ... ಜ್ವರ ... ಜ್ವರಗಳನ್ನೂ ಬಹು ಬೇಗನೆ ಗುಣಪಡಿಸುವದು.

ಚಿತ್ರದುರ್ಗದ ... ಸಬ್ ಡಿವಿಜನ್ ಆಫೀಸರ್ ... ಜ್ವರದಿಂದ ಪೀಡಿತರು ... ಮೂಲಕ ... ಬರೆದಿದ್ದಾರೆ

ಕ್ರಯ ... ರೂ ... ರೂ ... ಹೆಸರಿನ ... ಬಾರಿ ಬಿಡಲಾಗುವದು

* *

ಓಮಂ ಕರ್ಪೂರ



ಈ ಔಷಧವು ... ಧಾರಣ ಹೊಟ್ಟೆ ಕಳೆಯುವದು, ... ಮುಂತಾದ್ದಕ್ಕೆಲ್ಲಾ ... ಓಮಂ ಕರ್ಪೂರ ... ಜ್ವರಹರಿ ಎಂಬ ಔಷಧ ... ಮೆಡಿಕಲ್ ... ಆಸ್ಪತ್ರೆಯಲ್ಲಿ ... ಕೊಡುತ್ತಾರೆ ... ಔಷಧವೆಂದ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ ... ಕ್ರಯಕ್ಕೆ ಸಿಕ್ಕುತ್ತವೆ ಇಲ್ಲದಿದ್ದರೆ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಹೆಚ್ಚಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕೆಂಡ್ ಬೀಚ್ ಲೇನ್, ಮದರಾಸ್

JUST RECEIVED! JUST RECEIVED!!

Stead's Books for the Bairns

(Illustrated) New Numbers [5 10]

STEAD'S PENNY POPULAR TALES—Sixty four Pages in a coloured Picture Cover. Each number contains a story of thrilling interest. 24 numbers

CALENDARS FOR 1909

Apply—The Manager, C.L.S Book Depot, Mysore City

ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೮—೦

ಪರಸ್ಥಳದವರು ... ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸಹಿತ ರೂ ೧—೧೪—೦

" " " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ... ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ... ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ನೋಡಿರಿ "ಪ್ರೋತ್ಸಾಹಕೊಡಿರಿ" ತರಿಸಿರಿ

98 16

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ ೫,೦೦೦ ಹಾಸನ ಟೋಪಿ ಹೋಲುವ (ಪೇರುವಾ) ಸುಪೀರಿಯರ್ ಉಲ್ಲನ್ ... ಬಂಡಲ್ ೧ಕ್ಕೆ ರೂ ೩ ೦ ೦

೧೦ ಟೋಪಿಯಾಗುವ ಸುಪೀರಿಯರ್ ಉಲ್ಲನ್ ಬಂಡಲ್ ೧ಕ್ಕೆ ರೂ ...

೧ ಟೋಪಿ ಉಲ್ಲನ್ ವಾರಕ್ಕೆ (... ರೂ ೦ ...

ಹಾಸನ ಟೋಪಿ ಹಾಕುವ ಕೆಂಪು ... ೧ಕ್ಕೆ ೦ ೨ ೦, ೦ ೧ ...

(ಪೇರುವಾ) ಉಲ್ಲನ್ ... ಪೇರುವಾ ... ಉಲ್ಲನ್ ... ಈ ಉಲ್ಲನ್ ... ಒಂದು ಬಂಡಲ್ ಆದರೂ ಪೇರುವಾ ಉಲ್ಲನ್ ...

ಈಗ ನಮ್ಮಲ್ಲಿ ಹೊಸ ಒಂದು ಡಿಪಾರ್ಟ್‌ಮೆಂಟು ಓಪನ್ ಮಾಡಿದೇವೆ ... ಉತ್ತರವನ್ನು ... ಕಳುಹಿಸುವಾ ...

... ನಮ್ಮ ವಿಳಾಸ — ... ಉಲ್ಲನ್ ಮಾರ್ಟ್, ಮಂಗಳೂರು

ಮಾಳ್ಯದ ವೆಂಕಟಾಚಲ ಪಂಡಿತರ ದಿವ್ಯೌಷಧಗಳು

28 1

೧ ಲೋಕಾಮೃತದ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳಿಂದ ತಯಾರಿಸಿದೆ ...



ಚಳಿಜ್ವರ, ಜ್ವರ ... ಕೆಮ್ಮು, ... ನೋವು, ... ಕೈಕಾಲು ... ಗಳ ಬಾಧೆ, ಅಜೀರ್ಣ, ... ಮುಂತಾದ ರೋಗಗಳಿಗೆ ಕೊಟ್ಟರೆ ... ಗುಣಪಡಿಸುತ್ತದೆ

... ದೇಹಕ್ಕೆ ... ವೃದ್ಧಿ ... ಜ್ವರ, ... ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ... ಪ್ಲೇಗಿನ ... ಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

... ಮಾತ್ರೆಯುಳ್ಳ ಕುಪ್ಪಿಗೆ ... ಆಣೆ ... ಕುಪ್ಪಿಗೆ ೧ ಕುಪ್ಪಿ ... ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಮಾಳ್ಯದ ವೆಂಕಟಾಚಲ ಪಂಡಿತ ಎಸ್. ಎಸ್. ಆರ್.

ವೈದ್ಯಶಾಲಾ ಲಕ್ಷ್ಮೀ ... ಮೈಸೂರು

ಪ್ರಸಿದ್ಧವಾದ ಮೂರು ಪುಸ್ತಕಗಳನ್ನು ಪರಾಂಬರಿಸಿ.

10 10

"ಬ್ರಹ್ಮಚರ್ಯ" ವೆಂಬ ಮಹೋತ್ಕೃಷ್ಟ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯತ್ನಸಫಲದೀಪಿಕೆ" ಎಂಬ ಪುಸ್ತಕವನ್ನು ಅನೇಕ ವಿದ್ವಾಂಸರು ತಮ್ಮ ತಮ್ಮ ಸ್ಥಾನಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ... "ಸ್ವಪ್ರಯತ್ನಸಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪಠ್ಯವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರ ವರೆಗೂ ಓದತಕ್ಕದ್ದು ...

"ವಾಕ್ಯತ್ರೀದಿಗ್ವಿಜಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುತ್ತವೆ ಇದರಲ್ಲಿ ಸಮುದ್ರದ ಮೇಲಿನ ಪ್ರವಾಸ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತಪ್ಪದೆ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

ವಿಳಾಸ — ಮ್ಯಾನೆಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

2

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಬಣ್ಣ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ... ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ... ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ... ಟವಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ... ನಮ್ಮಲ್ಲಿ ... ಕ್ರಯ ಕ್ಕೆ ಸಿಕ್ಕುತ್ತವೆ

ವಿಳಾಸ — ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಕಾಂತಿವರ್ಧಕ ಎಣ್ಣೆ

24-4

ನೂತನವಾಗಿ ಕಂಡು ಹಿಡಿಯಲ್ಪಟ್ಟದ್ದು

ತಲೆಕೂದಲು ಬೆಳೆಯಲು ಉತ್ತಮವಾದ ಸುಗಂಧ ಎಣ್ಣೆ

ಪ್ರಿಯರೇ ... ಕೇಶವು ... ಈ ನೂತನ ... ಎಣ್ಣೆಯು ಬಜಾರಿನಲ್ಲಿ ದೊರೆಯುವ ಇತರ ಎಣ್ಣೆಗಳಂತೆ ... ಸುಗಂಧಯುಕ್ತ ... ಕೂದಲು ... ಹೊಂದಿಸಬಹುದಾದ ... ಅನುಕೂಲವಾಗಿ ... ಈ ಎಣ್ಣೆಯು ಉಪಯೋಗದಿಂದ ... ತಲೆನೋವು ... ಕೂದಲು ಹುಲುಸಾಗಿ ಬೆಳೆಯುತ್ತವೆ ಈ ಎಣ್ಣೆಯನ್ನು ಒಳ್ಳೆ ಕೊಬರಿಯೆಣ್ಣೆ ಅಥವಾ ಅಕ್ಕಿಯೊಡನೆ ಬೆರಸಿಯೂ ಉಪಯೋಗಿಸಬಹುದು

ಇದರ ಬೆಲೆ ನಂ 1 ಶೀಸೆ 1 ಕ್ಕೆ ರೂ 1—0—0 ನಂ 2, 0—12—0 ನಂ 3, 0—8—0

ವಿಳಾಸ — ಸಿ ಪಿ ಎಂಡ್ ಕಂಪನಿ, ಗಿರಿಗಾಂ, ಬೊಂಬಾಯಿ

ಧರ್ಮಪದ

12 2

ಎಂಬೀ ಕನ್ನಡ ಪುಸ್ತಕವು ನಮ್ಮ ಇಂಡಿಯಾ ದೇಶದಲ್ಲಿ ೨,೦೦೦ ವರ್ಷಗಳಿಂದೀಚೆಗೆ ಯಾವಾಗಲೂ ಗೋಚರಿಸಿರಲಿಲ್ಲವು ಇದು ಚೈನಾ, ಕೋರಿಯಾ ಜಪಾನ್, ಅನಾಂ, ಸ್ಯಾಂ, ಬರ್ಮಾ, ಸಿಲೋನ್ (ಲಂಕಾ) ಮುಂತಾದ ದೇಶಗಳ ಜನಗಳಿಂದ, ಮಹಾ ಪ್ರಮಾಣ ಗ್ರಂಥವೆಂದು ಪೂಜಿಸಲ್ಪಟ್ಟದೆ ಹಿಂದು ಗಳಿಗೆ ಮುಖ್ಯ ಪ್ರಮಾಣಗಳಾದ ವೇದಗಳು, ೧೮ ಉಪನಿಷತ್ತುಗಳು, ೧೬ ವೇದಾಂತ ಗ್ರಂಥಗಳು, ೪ ಧರ್ಮ ಶಾಸ್ತ್ರಗಳು, ಮುಂತಾದ ಗ್ರಂಥ ಗಳಿಂದಲು, ೧೨ ಬೌದ್ಧ ಗ್ರಂಥಗಳಿಂದಲು ಸಹಸಮಂಜಸ ವಾಕ್ಯಗಳನ್ನು ಗ್ರಂಥಕರ್ತರು ಈ ಗ್ರಂಥಕ್ಕೆ ಉದ್ಧರಿಸಿ ತೋರಿಸಿರುವರು ಇದಕ್ಕೆ ಎಸ್ ಎಂ ಶಾಮರಾವ್ ಎಂ ಎ ಯವರು ಇಂಗ್ಲೀಷಿನಲ್ಲಿ ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು ಮತ್ತು ನಮ್ಮ ಮೈಸೂರು ಶ್ರೀಮನ್ಮಹಾರಾಜರವರ ಅಪ್ಪಣೆಯ ಪ್ರಕಾರ ಅವರ ನಾಮಾಂಕಿತದಿಂದ ಪ್ರಕಟಿಸಲ್ಪಟ್ಟದೆ ಇದರಲ್ಲಿ ಪ್ರಪಂಚದಲ್ಲಿರುವ ಲೋಕೋತ್ತರ ಶ್ರೇಷ್ಠರಾದ ಬುದ್ಧದೇವರ ಕಂಚಿನ ಪ್ರತಿಮೆಯ ಛಾಯಾಚಿತ್ರವೂ, ಮೈಸೂರು ಶ್ರೀಮನ್ಮಹಾರಾಜರವರ ಜಿ ಸಿ ಎಸ್ ಐ ಎಂಬ ಬಿರುದಿನಿಂದ ಕೂಡಿದ ಛಾಯಾಚಿತ್ರವು ಮತ್ತು ಗ್ರಂಥಕರ್ತರ ಛಾಯಾಚಿತ್ರವು ಸಹ ಇರುವುವು ಈ ಪುಸ್ತಕದ ಅನೇಕ ವಿಧವಾದ ಬಿಸ್ತರಣೆಗಳು ಪುಸ್ತಕದಿಂದಲೆ ವ್ಯಕ್ತವಾಗುವುವು ಇದರ ಕ್ರಯ — ದಪ್ಪರಟ್ಟಿನದು, ವಿ ಪಿ ಪಿ ಸೂಚಿ ರೂ ೧—೩—೦, ಸುಂದರವಾದ ವಸ್ತ್ರ ಕಾಗದದ ಬೈಂಡಿನದು ರೂ ೦—೧೦—೦ ನಮ್ಮ ವಿಳಾಸ —

ಮೆ|| ಕೆ ದಿ ಪುಟ್ಟಪ್ಪ, ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಪೇಟೆ, ಬೆಂಗಳೂರು ಸಿಟಿ.

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೆನ್ ಯವರು ಹೊಟ್ಟೆನೋವು ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



1 10

ಕಿಳಿ ಹೊಟ್ಟೆ ನೋವು, ಬಿಡಿ ಬೇದಿಯಾಗುವುದು ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ರೋಗಗಳು — ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಗುಣ ... ಸಿಸಾವನ್ನು ಮುಚ್ಚು ನೋವನ್ನೂ ಬಾಧೆಯನ್ನೂ ನಿವಾರಣೆ ... ಜ್ಞಾಪಕದಲ್ಲಿಟ್ಟುಕೊಳ್ಳಿ — ಒಂದು ಹೊತ್ತು ಈ ಔಷದವನ್ನು ... ನೋವನ್ನು ನಿಲ್ಲಿಸಿಬಿಡುತ್ತದೆ ... ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಅಪಾಯಕರವಾದ ಮದ್ದು ಇದರಲ್ಲಿಲ್ಲ

ಇದು ಎಲ್ಲಲ್ಲೂ ಬಿಕರಿಯಾಗುವುದು — ಸಣ್ಣ ಸೀಸೆಗೆ ೧ ರೂಪಾಯಿ — ದೊಡ್ಡ ಶೀಸೆಗೆ ೨ ರೂಪಾಯಿ

ಕ್ಷಾಮದ ಫಂಡು

ಈಗಿನ ಕ್ಷಾಮದ ನಿವಾರಣಾರ್ಥವಾಗಿ ಏನಾದರೂ ಚಂದಾ ಕೊಡುವುದಾಗಿ ವಾಗ್ದಾನಮಾಡಿರತಕ್ಕ ಸಕಲ ಜನರೂ ತಮ್ಮ ಚಂದಾ ಮೊಬಲಗುಗಳನ್ನು ಈ ಕೆಳಗೆ ರುಜು ಮಾಡುವವರ ಆಫೀಸಿಗೆ ಕಳುಹಿಸಿ ಕೊಟ್ಟು ರಸೀದಿ ಪಡೆಯ ಬಹುದು

ತಾ|| ೬-೩-೧೯೦೯ ಎಂ ಜಿ ಕೃಷ್ಣಸ್ವಾಮಿರಾವ್

ವೈಸ್ ಪ್ರೆಸಿಡೆಂಟ್,

ಸಿಟಿ ಮ್ಯುನಿಸಿಪಲ್ ಕೌನ್ಸಲ್, ಮೈಸೂರು

ಕ್ಲೆನ್ಸೆಂಟರ ಮ್ಯಾಜಿಕ್ ಬಾಂ ತೈಲವು

40 2

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಪಟ್ಟಿಯಲ್ಲಿ ಯುಕ್ತವಾಗಿ ಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ನೋವಿನಿಂದ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಇದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅನೇಕವಾದ ರೋಗ ನೋವಿನ ಮೂಲವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುತ್ತದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್ ಟೀಟರ್ಸ್,

೩೩, ವೇದವಲ್ಲಿಪಿಳ್ಳೆ ಬೀದಿ, ವೇಪೇರಿ, ಮದರಾಸ್

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು

ಶ್ವಾಸಕೋಶಗಳು ಬಲಹೀನವಾಗಿರುವುವೆಂದು ಇದರಿಂದ ತೋರಿಬರುತ್ತದೆ ಅದನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 6-10
(ಸ್ಕಾಟ್ಸ್ ಇಮಲ್ಷನ್)

ಎಂಬೀ ಈ ಔಷಧವು ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟದೆ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರೆಯುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನುಹೊತ್ತುಕೊಂಡಿರುವ ಮನುಷ್ಯನ ಗುರುತನ್ನು ನೋಡುಕೊಳ್ಳಿ

ವಿಕರಿಗೆ ಸಿದ್ಧವಾಗಿರುವ ಪುಸ್ತಕಗಳು

11

ಚರಿತ್ರೆ ... ಫೋಟೋ ಪ್ರಶ್ನೋತ್ತರ, ಆರೋಗ್ಯಪ್ರಶ್ನೋತ್ತರ — (...) ಕ್ರಯ ... ವ್ಯವಸಾಯ ಪ್ರಶ್ನೋತ್ತರ ... ಎಗ್ಜಾಮಿನರ್ ಮಾಸಪುಸ್ತಕ ಚಂದಾ, ವರ್ಷಕ್ಕೆ ... ಕನ್ನಡ ... ಪುಸ್ತಕದ ... ಪ್ರತಿ ... ಪುಟ್ಟಯ್ಯ, ಮ್ಯಾನೇಜರ್, ... ಮೈಸೂರು

ಬಕ್ಕಪಿಜಯ.

ಮಹಾ ... ಕನ್ನಡದಲ್ಲಿ ... ಸೂರ್ಯರು ... ಮುದ್ರಿತವಾಗಿದ್ದುದು ... ಸಂಸ್ಕರಿಸಿ ಮುದ್ರಿಸಲ್ಪಡುತ್ತಿದೆ ... ಅಂದವಾದ ಮುದ್ರಣ ... ಗುಣಜ್ಞರು ಪರಿಶೀಲಿಸಿ ಪ್ರೋತ್ಸಾಹಿಸಬೇಕು

ವಿಳಾಸ — ಮೈಸೂರು ಸೀತಾರಾಮಶಾಸ್ತ್ರಿ, ನಾರ್ಮಲ್ ಸ್ಕೂಲ್ ಪಂಡಿತ, ಮೈಸೂರ್

ತ ರೆವಾರಿ — ಪುಸ್ತಕ — ಕೇಂಬವೇ ...

ಗಣಿತಜ್ಞಾನ

1

ಈ ಗಣಿತಪುಸ್ತಕದಲ್ಲಿ ... ಶಿಕ್ಷಕರು, ಮೈಸೂರಿನ ... ಸ್ಕೂಲ್ ... ವಿದ್ಯಾರ್ಥಿಗಳು, ಬಾಲಕರಿಗೂ ಗುಮಾಸ್ತರಿಗೂ, ವರ್ತಕರಿಗೂ, ... ಸುಲಭವಾಗಿ ... ಕನ್ನಡದಲ್ಲಿ ... ಉತ್ತಮವಾದ ಪುಸ್ತಕವಿಲ್ಲ

ಇದರ ಬೆಲೆ (ಅಂಚೆ ವೆಚ್ಚ ದೊಡನೆ) ರೂ 1—1—0 ಮಾತ್ರವಾಗಿ

... ರೂ 0—12—0 ... ರೂ 0—6—0

ವಿಳಾಸ — ... ಕೃಷ್ಣರಾವ್,

... ಬೆಂಗಳೂರು ...

ಸಂಜೀವಿನೀ ಔಷಧಾಲಯ, ಮೈಸೂರು.

2

ಎಂ ಎಸ್ ಕುಮಾರಾಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು — ಮರವೆ, ನಿರುತ್ಸಾಹ, ನಿದ್ರಾಭಂಗ, ವೀರ್ಯ ಶಕ್ತಿ ರಕ್ತದೋಷ, ಚರ್ಮವ್ಯಾಧಿ, ಮೋಹ, ವಾಯುನೋವುಗಳೂ, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನಿಶ್ಶಕ್ತಿ, ತಲೆಭಾರ ಮಲಬಂಧ ... ಮಂಕುತನ, ಉರಿಮೂತ್ರ, ನೋವುರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹುಟ್ಟಿಸಿ ಮಾಂಸವೃದ್ಧಿ, ಬಲ, ಧೈರ್ಯ, ಕಾಂತಿ, ಉತ್ಸಾಹ ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೩ ರೂಪಾಯಿ

ಸಂಜೀವಿನೀ ಮಾತ್ರೆ — ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಿಯಾದ ಔಷಧ ಸಾವಿರಾರು ಮಂದಿ ಇದರಿಂದ ಗುಣ ಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಕಾಲರಾಬಿಂದು — ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಲೋಚನ ಬಿಂದು — ಉರಿಗಣ್ಣು, ಕೆಂಗಣ್ಣು, ಮಾಚಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣುಗಳ ಮಬ್ಬುಗಳನ್ನು ... ದೃಷ್ಟಿ ಪಾಟವವನ್ನೂ ನೋಡುವ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ಶರಬತ್ತುಗಳೂ, ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗೆ ಬೇಗ ಅಪ್ಲೈ ಬರೆಯಿರಿ

ಟಿ. ಕೆ. ಸ್ವಾಮಿ,
ಪ್ರೊಪ್ರೈಟರ್

ವೃತ್ತಾಂತ ಪತ್ರಿಕೆ.
—:೦:—
೧೯೦೯ ನೇ ಇಸವಿ ಮಾರ್ಚಿ ತಾ|| ೧೧ ನೇ ಗುರುವಾರ.

ಮೈಸೂರು ಸಂಸ್ಥಾನವೂ, ವ್ಯವಸಾಯ ಶಾಸ್ತ್ರ ಪರಿಶೋಧನಾ ಕಾರ್ಯಗಳೂ

ಮೈಸೂರು ಸಂಸ್ಥಾನದ ಬೆಳೆಗಳನ್ನು ಭೂಗುಣಗಳನ್ನು ಪರೀಕ್ಷೆಮಾಡಿ, ವ್ಯವಸಾಯವನ್ನು ಅಭಿವೃದ್ಧಿಗೆ ತರುವಂಥ, ಸರ್ಕಾರದವರೂ ರೈತ ಪ್ರಜೆಗಳೂ ಮಾಡಬೇಕಾದ ಕಾರ್ಯಗಳನ್ನು ಸೂಚಿಸುವುದಕ್ಕಾಗಿ ಮೈಸೂರು ಗವರ್ನಮೆಂಟಿನವರು ಸುಮಾರು ಹತ್ತು ವರುಷಗಳ ಹಿಂದೆ ವ್ಯವಸಾಯದ ಇಲಾಖೆಯನ್ನು ಏರ್ಪಾಡುಮಾಡಿ, ವ್ಯವಸಾಯ ಶಾಸ್ತ್ರ ಪಂಡಿತರನ್ನು ನೇಮಿಸಿರುತ್ತಾರೆ. ಡಾಕ್ಟರ್ ಲೆಮನ್ ರವರು ಪ್ರತಿವರುಷದಲ್ಲೂ ಹಲವು ಪರೀಕ್ಷೆಗಳನ್ನು ನಡಿಸಿ, ಫಲಿತಾಂಶಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ. ಈ ಇಲಾಖೆಯ ೧೯೦೭-೦೮ ನೇ ಸಾಲಿನ ರಿಪೋರ್ಟು ಈ ವಾರ ನಮಗೆ ಬಂದಿರುವುದು.

ಈ ರಿಪೋರ್ಟಿನ ಮೊದಲನೆಯ ಭಾಗವು ಪ್ರಕಟಿಸಲ್ಪಡತಕ್ಕದ್ದಲ್ಲವೆಂದು ನಮೂದಾಗಿದ್ದರೂ ಅದನ್ನು ಅಚ್ಚು ಹಾಕಿಸಿ ಪ್ರಜೆಗಳಿಗೆಲ್ಲಾ ತಿಳಿಸಿರುತ್ತಾರೆ. ಈ ಭಾಗದಲ್ಲಿ ವ್ಯವಸಾಯ ಶಾಸ್ತ್ರ ಪಂಡಿತರು ತಾವು ನಡಿಸಿರುವ ಕಾರ್ಯಗಳನ್ನು ವಿವರಿಸಿರುವರು. ಅವರು ಊರಿಂದ ಊರಿಗೆ ಸಂಚಾರ ಮಾಡಿದರು. ನವರಾತ್ರಿಯಲ್ಲಿ ನಡೆದ ಪ್ರದರ್ಶನದ ವಿಚಾರಗಳಿಗೂ, ವ್ಯವಸಾಯಾಭಿವೃದ್ಧಿಗೆ ಸಹಕಾರಿಗಳಾದ ಉಪಕರಣಗಳನ್ನು ಮುಟ್ಟುಗಳನ್ನೂ ಪರೀಕ್ಷೆಮಾಡುವುದಕ್ಕೂ ತಮ್ಮ ಬಹಳ ಸಮಯವನ್ನು ವಿನಿಯೋಗಿಸಿದರು.

ರಾಗಿ, ಭತ್ತ, ಕಬ್ಬು, ಈ ಮೊದಲಾದ ಧಾನ್ಯಾದಿಗಳ ಪರೀಕ್ಷಾ ಸ್ಥಾನದ ಜಮೀನುಗಳಲ್ಲಿ ಬೆಳೆಮಾಡಿ, ಪರೀಕ್ಷೆ ನಡಿಸಿರತಕ್ಕ ವಿಚಾರವು ಈ ರಿಪೋರ್ಟಿನಲ್ಲಿ ವಿವರಿಸಲ್ಪಟ್ಟಿದೆ. ಈ ಪರೀಕ್ಷೆಗಳು ಇನ್ನೂ ಕೆಲವು ವರುಷಗಳ ತನಕ ನಡೆದರೆ ಯಾವುದೂ ನಿರ್ಧಾರವಾಗಿ ಹೇಳಲಾಗದಂಥಾ ಸ್ಥಿತಿಯಲ್ಲಿರುತ್ತವೆ. ಯಾವ ಪೈರನ್ನು ಎಂಥಾ ಭೂಮಿಯಲ್ಲಿ ಬೆಳೆಯಬೇಕು, ಯಾವ ತರದ ಗೊಬ್ಬರ ಗೋಡು ಉಪಯೋಗಿಸಬೇಕು, ಯಾವ ತಿಂಗಳಲ್ಲಿ ಬಿತ್ತಬೇಕು, ಎಷ್ಟು ಮಳೆಯಾದರೆ ಫಸಲು ಹುಲುಸಾಗುವುದು. ಇವೇ ಮೊದಲಾದ ವಿಚಾರಗಳನ್ನು ಪರೀಕ್ಷೆಗಳ ಮೂಲಕ ಗೊತ್ತುಮಾಡಿ ತಿಳಿದುಕೊಳ್ಳಬೇಕೆಂಬುವುದೇ ಮುಖ್ಯ ಉದ್ದೇಶವಾಗಿರುತ್ತದೆ. ಇದಕ್ಕಾಗಿ ಈ ಪರೀಕ್ಷೆಗಳನ್ನು ನಡಿಸುತ್ತಾ ಬರಬೇಕಾದದ್ದು ಬಹಳ ಅವಶ್ಯ. ಮತ್ತು ಇವುಗಳ ಸಹಾಯದಿಂದ ಈ ಸಂಸ್ಥಾನದ ರೈತ ಪ್ರಜೆಗಳು ಧಾನ್ಯಾದಿಗಳನ್ನು ಹುಲುಸಾಗಿಯೂ ಹೆಚ್ಚಾಗಿಯೂ ಬೆಳೆಯುವುದಕ್ಕೆ ಸಹಾಯವಾದೀತೆಂದು ನಂಬುತ್ತೇವೆ. ಆದರೆ ಇಂಥಾ ಪರೀಕ್ಷೆಗಳ ಫಲಿತಾಂಶಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಡಾಕ್ಟರ್ ಲೆಮನ್ ರವರು ಸ್ವಲ್ಪ ಕಷ್ಟವಾಗಿರುತ್ತೆಂದು ವಿಷಾದಿಸುವೆವು. ರೈತರಿಗೆ ತಮ್ಮ ಸ್ವಾಧೀನದಲ್ಲಿರುವ ಜಮೀನುಗಳಲ್ಲಿ ಹುಲುಸಾದ ಫಸಲನ್ನು ಪಡೆದುಕೊಳ್ಳುವುದಕ್ಕೆ ಬೇಕಾಗುವ ಸಹಾಯ ಸಂಪತ್ತುಗಳನ್ನು ಒದಗಿಸಿಕೊಡುತ್ತಾ ಬರಬೇಕಾದದ್ದು ಪರಮಾವಶ್ಯಕವಾಗಿರುತ್ತದೆ.

ರಾಗಿಯನ್ನು ತೆನೆಗಳಿಂದ ಬಿಡಿಸಿ ತೂರಿ ಚೊಕ್ಕಟಮಾಡುವಂಥಾ ಒಂದು ಯಂತ್ರವನ್ನು ಸರ್ಕಾರದವರು ನವಿಲು ಕೃಷ್ಣರಾಜಾಪುರಕ್ಕೆ ತರಿಸಿ ಪರೀಕ್ಷೆ ಮಾಡಿಸಿದರು. ಈ ಯಂತ್ರವು ಬಹಳ ಕೆಲಸವನ್ನು ಮಾಡುತ್ತದೆ, ಆದರೆ ಧಾನ್ಯವು ಸ್ವಲ್ಪವೂ ಹಾಳಾಗದೆ ಶುದ್ಧವಾಗುತ್ತದೆಂದು ಗೊತ್ತಾದ್ದರಿಂದ ಕೆಲವರು ಇದನ್ನು ತರಿಸಿಕೊಳ್ಳಬೇಕೆಂದು ಕಾತರಪಡುತ್ತಿರುವುದು ತುಂಬಾ ಸಂತೋಷಕರವಾಗಿದೆ. ಇದಲ್ಲದೆ ಪೈರನ್ನು ಕಟಾವು ಮಾಡುವ ಒಂದು ಯಂತ್ರವನ್ನು ರಾಗಿ, ಜೋಳದ ಕಡ್ಡಿಗಳನ್ನು ಕತ್ತರಿಸಿಕೊಡುವ ಒಂದು ಯಂತ್ರವನ್ನು ತರಿಸಿಟ್ಟು, ಇವುಗಳಿಂದ ಕೆಲಸಮಾಡಿಸಿ ಪರೀಕ್ಷೆ ನಡಿಸಿರುತ್ತಾರೆ. ಈ ಯಂತ್ರಗಳಿಗೆ ಎತ್ತುಗಳನ್ನು ಕಟ್ಟಿ ಈ ಕೆಲಸಗಳನ್ನು ಬಹು ಸುಲಭವಾಗಿ ಮಾಡಿಸಿಕೊಳ್ಳಬಹುದೆಂದು ತಿಳಿದುಬಂದಿದೆ.

ಮಳೆ ಜಾಸ್ತಿ ಮೊದಲಾದವು ಗಿಡಗಳಿಗೂ ತೆನೆಗಳಿಗೂ ರೋಗ ಬರುವ ಪೈರು ಬಹಳವಾಗಿ ಕೆಟ್ಟುಹೋಗುತ್ತಿದೆ. ಕೆಲವು ಸ್ಥಳಗಳಲ್ಲಿ ಪೈರೆಲ್ಲಾ ಸಂಪೂರ್ಣವಾಗಿ ನಾಶಹೊಂದಿರುವುದುಂಟು. ಇಂಥಾ ಮಳೆ ಹುಪ್ಪಟೆ ಕ್ರಿಮಿಕೀಟಗಳನ್ನು ಪರೀಕ್ಷೆಮಾಡಿ, ಅವುಗಳನ್ನು ನಾಶಪಡಿಸುವ ವಿಧಾನಗಳನ್ನು ಕಂಡುಹಿಡಿದು ತಿಳಿಯಪಡಿಸುವುದಕ್ಕೋಸ್ಕರ ಮೈಸೂರು ಗವರ್ನಮೆಂಟಿನವರು ಡಾಕ್ಟರ್ ಕೋಲ್ ಮೆನ್ ಎಂಬ ಕ್ರಿಮಿಶಾಸ್ತ್ರ ಶೋಧಕ ಪಂಡಿತರನ್ನು ನೇಮಕಮಾಡಿದರು. ಇವರು ಸದ್ಯದಲ್ಲಿ ಅಡಿಕೆ ಫಸಲನ್ನು ನಾಶಮಾಡುವ ಕೊಳೆ ರೋಗವನ್ನು ಕುರಿತು ಪರೀಕ್ಷೆ ಮಾಡುತ್ತಿದ್ದಾರೆಂತಲೂ, ಇದುವರೆಗೆ ಅವರು ಮಾಡಿರುವ ಪರಿಶೋಧನಾ ಕಾರ್ಯಗಳಿಂದ ಈ ರೋಗವನ್ನು ಹಾಳುಮಾಡಲು ಶುಭಸೂಚಕಗಳು ತೋರಿಬರುತ್ತಿವೆ ಎಂತಲೂ ಕೇಳಿ ನಾವು ಸಂತೋಷಪಡುವೆವು.

ಈ ಇಲಾಖೆಯವರು ನಡಿಸುವ ಪರಿಶೋಧನೆಗಳು ಸಾರ್ಥಕವಾಗಬೇಕಾದಲ್ಲಿ ರೈತ ಪ್ರಜೆಗಳು ಅವರಿಗೆ ಸಹಾಯ ಮಾಡಬೇಕಾದದ್ದು ಬಹಳ ಅವಶ್ಯ. ಹ್ಯಾಗೆಂದರೆ, ರೈತರು ತಮ್ಮ ಜಮೀನುಗಳ ಪೈರಿಗೆ ಹುಳು ಹುಪ್ಪಟೆಗಳು ಹಿಡಿದ ಪಕ್ಷದಲ್ಲಿ ಅಂಥಾ ಪೈರನ್ನು ಹುಳುಗಳ ಸಹಿತವಾಗಿ ಕೊಯಿದು ಪರೀಕ್ಷೆಗಾಗಿ ಮೇಲ್ಕಂಡ ಡಾಕ್ಟರ್ ಕೋಲ್ ಮೆನ್ ರವರ ಬಳಿಗೆ ಕಳುಹಿಸಿ, ಬೆಳೆಯು ಯಾವಾಗ ತಿಯಲ್ಲಿ ಹುಳು ಹಿಡಿಯಲಾರಂಭವಾಯಿತು, ಅದರಿಂದ ಎಷ್ಟು ನಷ್ಟವಾಯಿತು, ಈ ಮೊದಲಾದ ಸಂಗತಿಗಳನ್ನೆಲ್ಲಾ ಅವರಿಗೆ ವಿವರವಾಗಿ ತಿಳಿಸಬೇಕಾಗಿದೆ. ರೈತರು ಇಷ್ಟುಮಟ್ಟಿಗೆ ಮಾಡಿದಲ್ಲಿ ಡಾಕ್ಟರ್ ಕೋಲ್ ಮೆನ್ ರವರು ಪರೀಕ್ಷೆಮಾಡುವುದಕ್ಕೂ ಅವಶ್ಯವಾದ ವಿಷಯಗಳನ್ನು ರೈತರಿಗೆ ತಿಳಿಯಪಡಿಸುವುದಕ್ಕೂ ಅನುಕೂಲವಾದೀತು.

ಮೈಸೂರು ಗವರ್ನಮೆಂಟಿನವರು ಈ ಸಂಸ್ಥಾನದಲ್ಲಿ ವ್ಯವಸಾಯವನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿ ಶಾಸ್ತ್ರವತ್ತಾಗಿ ಸಿದ್ಧಾಂತಮಾಡಲ್ಪಟ್ಟ ಕ್ರಮಗಳನ್ನು ರೈತಪ್ರಜೆಗಳಿಗೆ ತಿಳಿಯಪಡಿಸುತ್ತಾ, ಅವರಿಗೆ ಇತರ ವಿಧದಲ್ಲಿ ಬೇಕಾಗುವ ಸಹಾಯ ಸಂಪತ್ತುಗಳನ್ನು ಹೆಚ್ಚು ಹೆಚ್ಚಾಗಿ ಒದಗಿಸಿಕೊಡುತ್ತಾ ಬರುವರೆಂದು ನಂಬಿ ನಿರೀಕ್ಷಿಸುತ್ತೇವೆ. ಅವರು ಈ ರೀತಿ ರೈತರಿಗೆ ಸಹಾಯಮಾಡದೆಹೋದರೆ ಈ ಸಂಸ್ಥಾನದಲ್ಲಿ ವ್ಯವಸಾಯವು ಅಭಿವೃದ್ಧಿಹೊಂದಲಾರದು; ಮತ್ತು ಪ್ರಜೆಗಳ ಶ್ರೇಯೋಭಿವೃದ್ಧಿಗೆ ತುಂಬಾ ಕುಂದಕವಾದೀತು.

ಸಮಾಧಾನ ಸ್ಥಾಪನೆಗೆ ತಕ್ಕ ಉಪಾಯವೇನು?

ಹಿಂದೂ ಮತದ ಅಭ್ಯುದಯಕ್ಕೋಸ್ಕರ ಇರುವ ಒಬ್ಬ ದೊಡ್ಡ ಮನುಷ್ಯರು ಉತ್ತರದೇಶದಲ್ಲಿ ಪ್ರಸಿದ್ಧಿಯಾಗುತ್ತಿರುವ ಒಂದು ಪತ್ರಿಕೆಗೆ ಬರೆದಿರುವದೇನಂದರೆ— ಎಲ್ಲಾ ವಿಧಗಳೂ ಮನುಷ್ಯನಿಗೆ ಸಮಾಧಾನವನ್ನುಂಟು ಮಾಡಬೇಕೆಂಬ ಉದ್ದೇಶದಿಂದ ಸ್ಥಾಪಿಸಲ್ಪಟ್ಟಿವೆ. ಮನುಷ್ಯರು ಪ್ರಾರ್ಥನೆಗಳಲ್ಲಿ ಘೋರ ಸಮಾಧಾನವನ್ನು ಹೊಂದಿ ಆತ್ಮಾನಂದದಿಂದ ತೃಪ್ತರಾಗಿರಬೇಕಾದರೆ ಅವರು ಮೊದಲು ಸದ್ಗುಣಗಳಿಂದ ಅಲಂಕೃತರಾಗುವದು ಆವಶ್ಯಕ. ಈ ದೇಶದಲ್ಲಿ ಈಗ ಹಬ್ಬುತ್ತಿರುವ ಅಸಮಾಧಾನವನ್ನೂ ಅತೃಪ್ತಿಯನ್ನೂ ನೋಡಿ ಸಮಾಧಾನವನ್ನು ಅಪೇಕ್ಷಿಸುವ ಸಕಲ ಹಿಂದುಗಳೂ ಮಹಮದೀಯರೂ ಕ್ರೈಸ್ತರೂ ಕೇವಲ ವ್ಯಸನದಿಂದಲೂ ಚಿಂತೆಯಿಂದಲೂ ತುಂಬಿದ್ದಾರೆ. ಆದರೆ ಕ್ರೈಸ್ತರು ಯೇಸುಕ್ರಿಸ್ತನ ಶಿಷ್ಯರಾಗಿರುವದರಿಂದ ವ್ಯಸನಪಡುತ್ತ ಇರುವದು ಸಾಲದೆಂದು ಸಕಲ ಮನುಷ್ಯರಿಗೂ ಸತ್ಯ ನೀತಿಗಳನ್ನು ಬೋಧಿಸಿ ಮನಸ್ಸಮಾಧಾನವನ್ನುಂಟುಮಾಡುವದಕ್ಕೆ ಪ್ರಯತ್ನ ಪಡುತ್ತಲಿದ್ದಾರೆ. ಮನಸ್ಸಮಾಧಾನಕ್ಕೂ ಶಾಂತಿಗೂ ತಕ್ಕ ಉಪಾಯವು ನಮ್ಮ ರಕ್ಷಕನಾದ ಕ್ರಿಸ್ತನೇ ಎಂಬದರಿಂದ ಹಿಂದಿನವರಿಗೆ ಎಂದೆಂದಿಗೂ ಸರಿಯಾಗಿ ಅವರು ನಿರ್ಣಯಿಸಿಕೊಂಡಿರುವದರಿಂದ ಈ ಉಪಾಯವು ಎಲ್ಲರಿಗೆ ತಿಳಿಯಬೇಕೆಂದು ಅದನ್ನು ಪ್ರಕಟಿಸುತ್ತಿರುವರು. ಆದ್ದರಿಂದ ನಮ್ಮ ಬುದ್ಧಿವಂತ ಸ್ನೇಹಿತರನ್ನು ಸಾಮಾನ್ಯರಾದ ಸಕಲ ಜನರಲ್ಲಿ ಸದ್ಭಾವವನ್ನೂ ನಿಜವಾದ ಜ್ಞಾನವನ್ನೂ ಹಬ್ಬಿಸಬೇಕೆಂದು ನಾನು ಕುತೂಹಲದಿಂದ ಬೇಡುತ್ತೇನೆ. ಇದನ್ನು ಈ ಕೆಲಸದ ಜೊತೆಗೆ ಅತ್ಯವಶ್ಯಕವಾದ ಇನ್ನೊಂದು ಕೆಲಸವನ್ನು ಇವರು ಸೇರಿಸಿಕೊಳ್ಳಬೇಕೆಂಬದೆ ನನ್ನ ಬಯಕೆ. ಆ ಇನ್ನೊಂದು ಕೆಲಸವೇನಂದರೆ—ಬ್ರಿಟಿಷ್ ಸರಕಾರದವರಿಂದ ಈ ಹಿಂದೂ ದೇಶದ ಪ್ರಜೆಗಳಿಗೆ ಪ್ರಾಪ್ತವಾಗಿರುವ ಅನೇಕಾನೇಕ ಮೇಲುಗಳನ್ನು ಎಲ್ಲರಿಗೂ ತಿಳಿಯಪಡಿಸಿ ಅವರನ್ನು ರಾಜಭಕ್ತಿಯುಳ್ಳವರನ್ನಾಗಿ ಮಾಡುವದೇ ಆ ಕೆಲಸ. ಮನುಷ್ಯರನ್ನು ತಿದ್ದಿ ಅವರನ್ನು ಸನ್ಮಾರ್ಗದಲ್ಲಿ ನಡಿಯುವ ಹಾಗೆ ಮಾಡುವದು ಬಹು ದೊಡ್ಡ ಕೆಲಸ. ಈ ಕೆಲಸವನ್ನು ನಮ್ಮ ಮಿತ್ರರಾದ ಕ್ರೈಸ್ತರು ಕೈಕೊಂಡಿರುವಾಗ ಯಾರಾದರು ಅವರ ಕೆಲಸಕ್ಕೆ ವಿಘ್ನಕಾರಿಗಳಾಗಿರಬಾರದೆಂದು ನಾನು ಅಪೇಕ್ಷಿಸುತ್ತೇನೆ" ಎಂಬುವದೇ.

ಈ ಮಾತುಗಳನ್ನು ನಾವು ನಿಜವೆಂದು ನಂಬುತ್ತೇವೆ. ಯಾಕೆಂದರೆ ಯೇಸು ಕ್ರಿಸ್ತನು ಸಮಾಧಾನದ ರಾಜನು. ಆತನು ಈ ಲೋಕದಲ್ಲಿ ಮನುಷ್ಯಾವತಾರವೆತ್ತಿ ಬಂದಾಗ "ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ ಉಂಟಾಗಲಿ" ಎಂದು ದೇವ ದೂತರು ಗೀತ ಹಾಡಿದರು. ಮತ್ತು ಆತನು ತನ್ನ ಶಿಷ್ಯರಿಗೆ ಬೋಧಿಸುತ್ತ ಹೇಳಿದ್ದೇನಂದರೆ - ಸಮಾಧಾನ ಪಡಿಸುವವರು ಧನ್ಯರು; ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು. ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು ಎಂದು ಹೇಳಿದನು. ಇದಲ್ಲದೆ ಆತನ ಶಿಷ್ಯರು ಬಹಳ ಕಳವಳದಿಂದ ವ್ಯಾಕುಲ ಪಡುತ್ತಿರುವಾಗ ಆತನು—ಶಾಂತಿಯನ್ನು ನಿಮಗೆ ಕೊಡುತ್ತೇನೆ. ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ. ಲೋಕವು ಅಂಥಾ ಶಾಂತಿಯನ್ನು ನಿಮಗೆ ಕೊಡಲಾರದು ಎಂದು ಬೋಧಿಸಿದನು. ಇಂಥಾ ಮಹಾ ಶಾಂತಿಯನ್ನೂ ಸಮಾಧಾನವನ್ನೂ ಯೇಸುಕ್ರಿಸ್ತನು ಈಗಲೂ ತನ್ನ ಶಿಷ್ಯರಿಗೆ ಕೊಡುತ್ತಿದ್ದಾನೆ. ಸಾವಿರಗಳೂ ಕ್ರೈಸ್ತ ಭಕ್ತರೂ ಈ ಸಮಾಧಾನವನ್ನು ತಮ್ಮ ಹೃದಯದಲ್ಲಿ ಅನುಭವಿಸುತ್ತಿರುವದರಿಂದ ಈ ಮಹಾಪ್ರಾದ ವರವು ಎಲ್ಲರಿಗೂ ಲಭಿಸಬೇಕೆಂದು ಕ್ರಿಸ್ತನ ಸುವಾರ್ತೆಯನ್ನೂ ಆತನು ದಯಪಾಲಿಸುವ ರಕ್ಷಣೆಯನ್ನೂ ಎಲ್ಲರಿಗೂ ಸಾರುತ್ತಿದ್ದಾರೆ. ರಕ್ಷಣೆಯ ಮಾರ್ಗವನ್ನು ಸಾರುವದರಲ್ಲಿ ಮುಂದಾಳಾಗಿದ್ದ ಶ್ರೀ ಪೌಲನೆಂಬ ಪ್ರೇಷಿತನು—ನಾವು ಕ್ರಿಸ್ತನ ರಾಯಭಾರಿಗಳಾಗಿದ್ದು ದೇವರೊಂದಿಗೆ ಸಮಾಧಾನವಾಗಿರೆಂದು ನಿಮ್ಮನ್ನು ಪ್ರಬೋಧಿಸುತ್ತೇವೆಂದು ಹೇಳಿದ್ದಾನೆ.

ಆದರೆ ಈ ಸಮಾಧಾನವು ಅಧಿಕಾರ ಪದವಿಗಳಿಂದಾದರೂ ಬೆಳ್ಳಿ ಭಂಗಾರದ ರಾಶಿಗಳಿಂದಾದರೂ ಲಭಿಸತಕ್ಕದ್ದಲ್ಲ. ಈಗ ಹಿಂದೂ ದೇಶದ ಅಸಮಾಧಾನವು ಲೌಕಿಕ ಅಧಿಕಾರ ಪದವಿಗಳನ್ನು ಹೊಂದಿಕೊಳ್ಳಬೇಕೆಂಬ ಅಭಿಲಾಷೆಯಿಂದ ಉಂಟಾಗಿರುವದು ಸರಿಯಷ್ಟೆ. ಇದು ಲೌಕಿಕಾಭಿಲಾಷೆಯಾಗಿದ್ದರೂ ಕೆಟ್ಟದ್ದಲ್ಲವೆಂದು ನಾವು ಹೇಳುತ್ತೇವೆ. ಆದರೆ ಈ ಲೌಕಿಕಾಭಿಲಾಷೆಯನ್ನು ನಡೆಸಿಕೊಳ್ಳುವದು ಸಹ ಕ್ರಿಸ್ತನಿಂದಲೇ ಬರಬೇಕು. ಇಂಗ್ಲಿಷ ಅಧಿಕಾರಿಗಳಿಗೆ ಭೂಕಳೆ, ಪ್ರತಾಪ, ನಿಷ್ಪಕ್ಷಪಾತತೆ, ಸತ್ಯ, ನೀತಿ, ಮನೋಧೈರ್ಯಾದಿಂದ ಆಳಬಲ್ಲವರೂ ಕರ್ತವ್ಯಪರಾಯಣರೂ ಎಂಬ ಹೆಸರು ಹ್ಯಾಗೆ ಬಂತು? ಯೇಸು ಕ್ರಿಸ್ತನಿಂದಲೇ. ನಾವು ಇಂಥಾ ಗುಣಶೀಲರಾದರ ಹೊರತು ಅಧಿಕಾರ ಮಾಡಬಲ್ಲ ಶಕ್ತಿಯು ಬರುವದಿಲ್ಲ. ಆದರೆ ಈ ಗುಣಗಳು ನಮ್ಮಲ್ಲಿ ಉದಯವಾಗುವದಕ್ಕೆ ಮುಂಚೆ ಅಧಿಕಾರಾವಕಾಶಗಳಾದರೆ ನಮಗೂ ನಮ್ಮ ದೇಶದವರಿಗೂ ನಷ್ಟವೇ ಹೊರತು ಪ್ರಯೋಜನವಿಲ್ಲವೆಂದು ನಾವು ಹಿಂದಿಕ್ಕಾಗಿ ತಿಳಿಯಬೇಕು. ಆದ್ದರಿಂದ ಲೌಕಿಕಾಧಿಕಾರವನ್ನು ಹೊಂದಬೇಕೆಂಬ ಮನಸ್ಸುಳ್ಳವರು ಆ ಅಧಿಕಾರವನ್ನು ಸಾಂಗವಾಗಿ ನಡಿಸುವದಕ್ಕೆ ಅವಶ್ಯಕವಾದ ಸದ್ಗುಣಗಳನ್ನು ಹೊಂದಿಕೊಳ್ಳುವದಕ್ಕೆ ನೋಡಲು ಪ್ರಯತ್ನಿಸಬೇಕು. ಈ ಸದ್ಗುಣಗಳು ದೇವರು ಕಳುಹಿಸಿ ಕೊಟ್ಟಿರುವ ಪರಮ ಗುರುವಾದ ಯೇಸುವನ್ನಾಶ್ರಯಿಸುವವರಿಗೆ ದೊರಕುವವು. ಆತನ ಪವಿತ್ರಾತ್ಮನೇ ಅವರಲ್ಲಿ ನೆಲಸಿ ಈ ಸದ್ಗುಣಗಳನ್ನು ಉಂಟುಮಾಡುವನು. ಈ ಪವಿತ್ರತೆಯನ್ನು ಹೊಂದಿದ ಕ್ರೈಸ್ತ ಭಕ್ತರಿಗೆ ಈ ಸಂದರ್ಭದಲ್ಲಿ ಒಂದು ಮಾತನ್ನು ಜ್ಞಾಪಿಸಬೇಕಾಗಿದೆ. ಏನಂದರೆ— ಹಿಂದೂ ದೇಶದ ನಿವಾಸಿಗಳಾದ ನಮ್ಮ ಸ್ನೇಹಿತರು ಸಮಾಧಾನವನ್ನು ಎಲ್ಲಾ ಕಡೆಯೂ ಹುಡುಕುತ್ತಿದ್ದಾರೆ. ಎಲ್ಲಿಯೂ ಅದನ್ನು ಕಾಣದೆ ಕಡೆಗೆ ಕ್ರಿಸ್ತನ ಭಕ್ತರಾಗಿರುವ ನಮ್ಮಲ್ಲಿ ಅದು ಸಿಕ್ಕುವದೇನೋ ಎಂದು ನಮ್ಮಲ್ಲಿಗೆ ಬರುತ್ತಾರೆ. ನಾವು ಉದಹರಿಸಿರುವ ಇಂಗ್ಲಿಷ್ ಪತ್ರಿಕೆಯಲ್ಲಿ ಹಿಂದೂ ಮತಾವಲಂಬಿಗಳಾದ ಆ ದೊಡ್ಡ ಮನುಷ್ಯರು ಬರೆದಿರುವದನ್ನು ಓದಲಿ. ಕ್ರಿಸ್ತನ ಸೇವಕರ ಮುಖಾಂತ್ರವಾಗಿಯೆ ಲೋಕದಲ್ಲಿ ಸಮಾಧಾನ ಹಬ್ಬಬೇಕೆಂದು ಅವರು ತಿಳಿದಿದ್ದಾರೆ. ಕ್ರೈಸ್ತರಾದವರಿಗೆ ಇದರಿಂದ ದೊಡ್ಡ ಮರ್ಯಾದೆ ಪೂಜ್ಯತೆ ಬಂತಲ್ಲವೇ. ಎಂತ ಹೇಳಬಹುದು. ಹೌದು ಅದರ ಮರ್ಯಾದೆ ಮಾತ್ರವಲ್ಲ. ಜವಾಬ್ದಾರಿಕೆಯೂ ಅವರ ತಲೆಯ ಮೇಲೆ ಬಂತೆಂದು ನಾವು ಭಾವಿಸಬೇಕಾಗಿದೆ. ಕ್ರಿಸ್ತನ ಭಕ್ತರೆನ್ನಿಸಿಕೊಳ್ಳುವವರು ಆತನ ಪವಿತ್ರಾತ್ಮನಿಗೆ ವಶವರ್ತಿಗಳಾಗಿ ಆತನಿಂದ ಬಲವನ್ನು ಹೊಂದುತ್ತ ಆತನ ಆಜ್ಞೆಗಳನ್ನು ಕೈಕೊಂಡು ನಡದರೆ ಕತ್ತಲೆಯಲ್ಲಿರುವವರಿಗೆ ಪ್ರಕಾಶವನ್ನು ಕೊಡುವ ಜ್ಯೋತಿರ್ಮಂಡಲಗಳಂತೆ ಇರುವರು. ಆದರೆ ತಮ್ಮ ಜವಾಬ್ದಾರಿಯನ್ನು ತಿಳಿಯದೆ ಕ್ರಿಸ್ತನಲ್ಲಿ ಭಕ್ತಿಯುಳ್ಳವರು ಆತನಲ್ಲಿ ಆಸಕ್ತಿಯುಳ್ಳವರೂ ಅಲ್ಲದಿದ್ದರೆ ಬೆಳಕನ್ನು ಹುಡುಕುತ್ತಿರುವವರಿಗೆ ತಮ್ಮ ಸಹಾಯವು ಅದರಿಂದ ಉಂಟಾಗಲಾರದು. ಕ್ರೈಸ್ತ ಭಕ್ತರೆಲ್ಲರು ಈಗ ತಮ್ಮ ರಕ್ಷಕನಿಗ ಲಭಿಸುತ್ತಿರುವ ಪೂಜ್ಯತೆಯನ್ನು ನೋಡಿ ಎಚ್ಚರಾಗಿ, ತಮ್ಮ ಮೇಲೆ ಬಿದ್ದಿರುವ ಜವಾಬ್ದಾರಿಕೆಯನ್ನು ಪ್ರೀತಿಯಿಂದ ಹೊರತಕ್ಕವರಾಗಲಿ. ಸಮಾಧಾನ ಸ್ಥಾಪನೆಗೆ ಇದೇ ಉತ್ತಮೋತ್ತಮವಾದ ಉಪಾಯ.

ಸ್ವದೇಶದ ವೃತ್ತಾಂತಗಳು.

ಸಂಸ್ಥಾನದ ಸಿವಿಲ್ ಚೀಫ್ ಆಫೀಸರ್ ಮ|| ಪಿ. ಅಣ್ಣಯ್ಯರವರು ಮೊನ್ನೆ ಮಂಗಳವಾರ ರಾಜಕಾರ್ಯದ ನಿಮಿತ್ತ ರಾಜಧಾನಿಗೆ ದಯಮಾಡಿದರು

•

ಮಂಗಳೂರು ತಾಲ್ಲೂಕು ಬೋರ್ಡ್ ಮೆಂಬರಾಗಿದ್ದ ಹಳೆ ಅಂಗಡಿ ಅಬ್ದುಲ್ ಅಜೀಜ್ ಸಾಹೇಬ ಅಸ್ವಸ್ಥರಾದವರು ಕಳೆದ ಆ ದಿನದಲ್ಲಿ ಕಾಲವಾದರೆಂದು ಒಬ್ಬ ವಾರ್ತಾದಾರರು ತಿಳಿಸುತ್ತಾರೆ.

•

ಮ|| ಸಿ. ಪಿ. ಮಾಧವರಾವ್, ಸಿ. ಐ. ಇ. ಯವರ ದಿವಾನ್ಗಿರಿಯು ಈ ತಿಂಗಳ ಕಡೆಗೆ ಮುಕ್ತಾಯವಾಗುವುದು. ಬಳಿಕ ಈ ಅಧಿಕಾರವು ಯಾರಿಗೆ ವಹಿಸಲ್ಪಡುವುದೋ ಇನ್ನೂ ನಿಷ್ಕರ್ಷೆಯಾಗಲಿಲ್ಲವೆಂದು ಕೇಳುತ್ತೇವೆ

•

ನಂಜನಗೂಡು ತಾಲ್ಲೂಕು ತುಮ್ಮನೇರಳೆ ಗ್ರಾಮದಲ್ಲಿ ಕಳೆದ ವಾರ ಬೆಂಕಿ ಬಿದ್ದು ಸುಮಾರು ೪೦ ಮನೆಗಳು ಸುಟ್ಟು ಹೋದವು. ಅಧಿಕಾರಿಗಳು ಅಲ್ಲಿಗೆ ಹೋಗಿ ಅಜಮಾಯಿಷಿ ಮಾಡಿಕೊಂಡು ಬಂದರು

•

ಮೈಸೂರು ಗವರ್ನಮೆಂಟಿನವರು ಬೆಂಗಳೂರಿನ ರಾಜಧಾನಿಗೆ ಟೆಲಿಫೋನ್ ಲೈನುಗಳನ್ನು ಹಾಕಿಸುವವರಾಗಿದ್ದಾರೆ. ಅದನ್ನು ಸರ್ಕಾರಿ ಖರ್ಚಿನಿಂದ ಹಾಕಿಸುವುದಕ್ಕಾಗಿ ಮಾತ್ರವೇ ಉಪಯೋಗಿಸುವರೆಂದು ತಿಳಿಯುವುದು

•

ಮೈಸೂರು ಸರ್ಕಾರದವರು ಮಂಡ್ಯವನ್ನು ಮುನಿಸಿಪಾಲಿಟಿ ಸಾಗಿ ರಾಜ್ಯದಂತೆ ಏರ್ಪಾಡು ಕೊಟ್ಟಿದ್ದಾರೆ. ಈ ಮುನಿಸಿಪಾಲಿಟಿಗೆ ಕಲ್ಲಹಳ್ಳಿ, ಚಂದಗಿರಿ ದೊಡ್ಡಿ, ಚಿಕ್ಕಮಂಡ್ಯ, ಹೊಸಹಳ್ಳಿ ತಿಂಗಳ ದೊಡ್ಡಿ, ಮ್ಯಾಗೌಡನ ದೊಡ್ಡಿ, ಹೊಸಹಳ್ಳಿ ಎಂಬಿವು ಸೇರಿಸಲ್ಪಡುವವು

•

ಚೀಫ್ ಜಡ್ಜರಾದ ಮ|| ಇಸ್ಟ್ರನ್ ರವರು ಕಳೆದ ವಾರ ರಾಜಧಾನಿಗೆ ಬಂದು, ನಂಜನಗೂಡಿಗೆ ಹೋಗಿ ಅಲ್ಲಿನ ಕೋರ್ಟನ್ನು ಅಜಮಾಯಿಷಿ ಮಾಡಿಕೊಂಡು, ಮಾರನೆ ಮೈಸೂರಿನಲ್ಲೂ ಕೋರ್ಟುಗಳ ಕಾರುಬಾರುಗಳನ್ನು ತನಿಖೆಮಾಡಿಕೊಂಡು ಬೆಂಗಳೂರಿಗೆ ಪ್ರಯಾಣಮಾಡಿದರು

•

ಮೈಸೂರು ಸಂಸ್ಥಾನದಲ್ಲೆಲ್ಲಾ ಕಳೆದ ಜನವರಿ ತಾ. ೧೨ಕ್ಕೆ ಆಖೈರಾದ ಎರಡು ವಾರಗಳಲ್ಲಿ ೮-೬೪೩ ಪ್ಲೇಗ್ ರೋಗಿಗಳನ್ನೂ, ತಾ. ೨೬ಕ್ಕೆ ಆಖೈರಾದ ಎರಡು ವಾರಗಳಲ್ಲಿ ೬,೯೫೦ ಇಲಿ ಹೆಗ್ಗಣಗಳನ್ನೂ ಸರ್ಕಾರದವರು ಕೊಲ್ಲಿಸಿರುವುದಾಗಿ ಸ್ಯಾನಿಟರಿ ಕಮೀಷನರವರು ತಿಳಿಸುತ್ತಾರೆ

•

ನಮ್ಮ ಮಹಾರಾಜರವರು ಮಿ॥ ಲೇಲ್, ಎಮ್ ಸ್ಮಾಲ್ವುಡ್, ಐ. ಸಿ. ಎಸ್ ಎಂಬವರನ್ನು ತಮ್ಮ ಪ್ರೈವೇಟ್ ಸೆಕ್ರೆಟರಿಯಾಗಿ ನೇಮಕಮಾಡಿಕೊಂಡಿರುತ್ತಾರೆ. ಇವರು ಈಗ ಮದರಾಸ್ ಅಧಿಪತ್ಯಕ್ಕೆ ಸೇರಿದ ವಿಶಾಖಪಟ್ಟಣದ ಜಿಲ್ಲೆಯ ಕಲೆಕ್ಟರ್ ಕೆಲಸದಲ್ಲಿರುವರು. ಇವರು ಮುಂದಿನ ತಿಂಗಳಲ್ಲಿ ಕೆಲಸದ ಮೇಲೆ ಹಾಜರಾಗುವರೆಂದು ಕೇಳುತ್ತೇವೆ

•

ಸಾಮಾನ್ಯವಾಗಿ ದೇಶಾದೇಶಗಳಲ್ಲಿ ಹಟ್ಟಿದ ಸಿವಿಲ್ ವ್ಯಾಜ್ಯಗಳನ್ನು ಹಿಡಿದು ವಿಚಾರಣೆ ಮಾಡಿ ತೀರ್ಮಾನಿಸುವುದಕ್ಕೆ ಸರ್ಕಾರದವರು ಸ್ಮಾಲ್ ಕಾಸ್ ಕೋರ್ಟುಗಳನ್ನು ಸ್ಥಾಪಿಸಬೇಕೆಂದು ಉದ್ದೇಶಪಟ್ಟು, ಅದಕ್ಕಾಗಿ ಒಂದು ಕಾನೂನ್ ಮಾಡುವವರಾಗಿದ್ದಾರೆ. ಈ ಕಾನೂನಿನ ಮಸೂದೆಯನ್ನು ತಯಾರುಮಾಡಿ ಈ ವಾರದ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಿರುವರು.

•

ಶ್ರೀಮನ್ ಮಹಾರಾಜರವರು ಮೊನ್ನೆ ೫ ನೇ ಸೋಮವಾರ ಬೆಳಿಗ್ಗೆ ಮೋಟಾರ್ ಗಾಡಿಯಲ್ಲಿ ಬೆಂಗಳೂರಿನಿಂದ ಹೊರಟು, ಸುಮಾರು ೧೧ ಗಂಟೆಗೆ ರಾಜಧಾನಿಯನ್ನು ಸುರಕ್ಷಿತವಾಗಿ ತಲುಪಿದರು, ಗೌರವಾರ್ಥವಾದ ತೋಫುಗಳು ಹಾರಿಸಲ್ಪಟ್ಟವು. ಅವರ ಸಂಗಡ ಡೆಪ್ಯುಟಿ ಕಮೀಷನರ್ ಮ|| ಎಂ. ಕಾಂತರಾಜೇ ಅರಸಿನವರು, ಪ್ರೈವೇಟ್ ಸೆಕ್ರೆಟರಿ ಮ|| ಆ ಮುಕಾನಸಿಯವರು, ಅಸಿಸ್ಟೆಂಟ್ ಸೆಕ್ರೆಟರಿ ಮ|| ಪಿ. ರಾಘವೇಂದ್ರರಾಯರು ಈ ಮೊದಲಾದವರೆಲ್ಲಾ ರಾಜಧಾನಿಗೆ ವಾಪಸು ಬಂದರು.

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಫೆಬ್ರವರಿ ತಾ. 27 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು	ಧರ್ಮಕ ಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು	ರೂ	
ಬೆಂಗಳೂರು	670	104	64	702	428
ಕೋಲಾರ	4,496	2,082	240	2,871	6,024
ತುಂಕೂರು	7,989	3,139	463	3,077	4,834
ಮೈಸೂರು	7,842	7,041	582	447	142
ಹಾಸನ	1,004	542			38
ಶಿವಮೊಗ್ಗ	141	184	22	209	.
ಕಡೂರು	14	89		170	
ಚಿತ್ರದುರ್ಗ	2,181	1,413	524	721	1,726
ಒಟ್ಟು	24,585	15,054	1,800	8,647	14,090

ಕ್ಷಾಮನಿವಾರಣೆಯ ಏರ್ಪಾಡುಗಳು

ಮೈಸೂರು ಸರ್ಕಾರ ಹುಕುಮುಗಳು

ಹುಲ್ಲು ಧಾನ್ಯಾದಿಗಳೂ, ರೈಲ್ ಚಾರ್ಜುಗಳೂ.

ಸಂಸ್ಥಾನದ ಈ ಸಂಸ್ಥಾನದ ಕೆಲವು ಭಾಗಗಳಲ್ಲಿ ದುಷ್ಕಾಲವು ವಿಸ್ತೃತವಾಗಿರೋಣದರಿಂದ ಆಹಾರಧಾನ್ಯಗಳನ್ನೂ ಹುಲ್ಲು ಹಿಂಡಿಗಳನ್ನೂ ಬೇರೆ ಭಾಗಗಳಿಂದಲೂ ತರಿಸುವ ವಿಷಯದಲ್ಲಿ ಏರ್ಪಾಡುಮಾಡಬೇಕೆಂದು ಗವರ್ನ್‌ಮೆಂಟಿನವರು ಕೋಲಾರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಾದ ಮ ಸಿ ಶ್ರೀಕಂಠೇಶ್ವರ ಐಯರವರನ್ನು ಮದರಾಸ್ ಮತ್ತು ದಕ್ಷಿಣಮರಾಟಾ ರೈಲ್ವೆ ಅಧಿಕಾರಿಗಳ ಕೂಡ ಮಾತನಾಡಿಕೊಂಡು ಬರುವಂತೆ ಕಳುಹಿಸಿಕೊಟ್ಟರು ಜನರಲ್ ಟ್ರಾಫಿಕ್ ಮ್ಯಾನೇಜರಾದ ಮಿ| ರೈಟ್‌ಯವರು ರೈಲ್ ಛಾರ್ಜಿನ ದರಗಳನ್ನು ಕಡಿಮೆಮಾಡುವ ವಿಷಯದಲ್ಲಿ ಒಪ್ಪಿಕೊಂಡಿರುತ್ತಾರೆ ಗವರ್ನ್‌ಮೆಂಟಿನವರು ಅವರನ್ನು ವಿಶೇಷವಾಗಿ ವಂದಿಸುವರು ಹುಲ್ಲು ಹಿಂಡಿ ಸಾಗಿಸುವುದಕ್ಕೆ ದೊಡ್ಡ ಛಾಟಿಯ (ಬ್ರಾಡ್ ಗೇಜ್) ರೈಲ್ ರಸ್ತೆಯಲ್ಲಿ ನಾಲ್ಕು ಚಕ್ರಗಳುಳ್ಳ ಒಂದು ವಾಗನ್ ಭರ್ತಿಗೆ ಒಂದು ಮೈಲಿಗೆ ೩ ಆಣೆಯಂತೆ ರೈಲ್ ಛಾರ್ಜು ಕೊಡಬೇಕು ಸಣ್ಣ ಛಾಟಿಯ (ಮೀಟರ್ ಗಾಜ್) ರೈಲ್ ರಸ್ತೆಯಲ್ಲಿ ಒಂದು ವಾಗನ್ ಭರ್ತಿಗೆ ಮೊದಲನೇ ೫೦ ಮೈಲಿ ವರೆಗೆ ಪ್ರತಿ ಮೈಲಿಗೂ ೩ ಆಣೆ, ಮುಂದೆ ೧೦೦ ಮೈಲಿ ವರೆಗೆ ಪ್ರತಿ ಮೈಲಿಗೂ ೧| ಆಣೆ, ಅದಕ್ಕಿಂತಲೂ ದೂರವಾದರೆ ಪ್ರತಿ ಮೈಲಿಗೂ ೧ ಆಣೆಯಂತೆಯೂ ಎಂಟು ಚಕ್ರಗಳುಳ್ಳ ದೊಡ್ಡ ವಾಗನ್ ಭರ್ತಿಯಾಗಿದ್ದರೆ ಆ ದರಗಳ ಇಮ್ಮಡಿಯಾಗಿ ಕೊಡಬೇಕೆಂದು ಟ್ರಾಫಿಕ್ ಮ್ಯಾನೇಜರವರು ದರಗಳನ್ನು ತಗ್ಗಿಸಿರುತ್ತಾರೆ ಆದರೆ ವರ್ತಕರೂ ಸಾಹುಕಾರರೂ ಹುಲ್ಲು ಹಿಂಡಿಗಳನ್ನು ತರಿಸುವುದಾದರೆ ಒಂದು ವಾಗನ್ ಭರ್ತಿಗೆ ಪ್ರತಿ ಮೈಲಿಗೂ ಅರ್ಧ ಆಣೆಯಂತೆ ಮಾತ್ರ ಛಾರ್ಜು ಕೊಡಬಹುದು ಉಳಿದ ಛಾರ್ಜನ್ನೆಲ್ಲಾ ಗವರ್ನ್‌ಮೆಂಟಿನವರೇ ವಹಿಸಿಕೊಂಡು ಪಾವತಿಮಾಡುತ್ತಾರೆ ಇದಲ್ಲದೆ ಬೆಜವಾಡಾ, ಗುಂಟೂರು, ತೆನಾಲಿ, ಈ ಸ್ಥಳಗಳಿಂದ ಅಕ್ಕಿಯನ್ನು ತರಿಸುವುದಾದರೆ ಟ್ರಾಫಿಕ್ ಮ್ಯಾನೇಜರವರು ಮಾಮೂಲು ಛಾರ್ಜಿನ ದರಗಳನ್ನು ಕಡಿಮೆಮಾಡುತ್ತೇವೆಂದು ತಿಳಿಸುವರು ರೆವಿನ್ಯೂ ಕಮಿಷನರವರೂ ಡೆಪ್ಯುಟಿ ಕಮಿಷನರುಗಳೂ ಈ ರಿಯಾಯತಿಯುಳ್ಳ ದರಗಳನ್ನು ಆಯಾ ಸ್ಥಳದ ವರ್ತಕರಿಗೂ ಸಾಹುಕಾರರಿಗೂ ದಿನಸಿ ತರಿಸುವವರಿಗೂ ತಿಳಿಸಿ ಅಕ್ಕಿ ಹುಲ್ಲು ಹಿಂಡಿ ಮುಂತಾದ್ದನ್ನು ತರಿಸುವಂತೆ ಪ್ರೋತ್ಸಾಹಪಡಿಸಬೇಕಾಗಿದೆ

ಪಾವಗಡದಲ್ಲಿ ಧಾನ್ಯದ ಅಂಗಡಿಯು

ತುಂಕೂರು ಡಿಸ್ಟ್ರಿಕ್ಟಿಗೆ ಸೇರಿದ ಪಾವಗಡದಲ್ಲಿ ಅಕ್ಕಿ ರಾಗಿ ಜೋಳ ಮೊದಲಾದ ಮುಖ್ಯ ಆಹಾರಧಾನ್ಯಗಳು ಸಿಕ್ಕುವುದು ಪ್ರಯಾಸವಾಗಿದೆ ಸರ್ಕಾರದವರು ಧಾನ್ಯವನ್ನು ತರಿಸಿ ಅಂಗಡಿ ಇಟ್ಟು ಬಿಕರಿಮಾಡಿಸುವುದು ವ್ಯಾಪಾರ ಧರ್ಮಕ್ಕೆ ಸಹಕಾರಿಯಾಗಲಾರದು ಆದರೆ ಅಲ್ಲಿನ ವರ್ತಕರೇ ಮುಂದಾಳುಗಳಾಗಿ ೫೦೦ ರೂಪಾಯನ್ನು ಕೂಡಿಸಿ, ಒಂದು ಧಾನ್ಯದ ಅಂಗಡಿಯನ್ನು ಸ್ಥಾಪಿಸಬೇಕೆಂದಿದ್ದಾರೆ ರೆವಿನ್ಯೂ ಕಮಿಷನರವರು ಈ ವರ್ತಕರಿಗೆ ಸರ್ಕಾರದಿಂದ ೧,೦೦೦ ರೂಪಾಯಿ ಕೊಡಿಸಬೇಕೆಂದೂ, ಅವರೇ ದಿನಸಿ ತರಿಸಿ ಅಂಗಡಿ ಇಟ್ಟು ಬಿಕರಿಮಾಡುತ್ತಾರೆಂದೂ ಶಿಫಾರಸು ಮಾಡಿರುವರು ಆದಕಾರಣ ಗವರ್ನ್‌ಮೆಂಟಿನವರು ೧,೦೦೦ ರೂಪಾಯನ್ನು ತುಂಕೂರು ಡೆಪ್ಯುಟಿ ಕಮಿಷನರವರ ವಶಕ್ಕೆ ಕೊಡಿಸಿ, ಈ ಹಣವನ್ನು ಪಾವಗಡದ ಒಬ್ಬ ಮುನಿಸಿಪಲ್ ಕೌನ್ಸಿಲರಿಗೋ ಅಥವಾ ವರ್ತಕ ಸಂಘಕ್ಕೋ ವಹಿಸಬೇಕೆಂದೂ, ಈ ಹಣವನ್ನು ಒಂದು ವರುಷದ ವಾಯಿದೆಯಲ್ಲಿ ವಸೂಲ್ಮಾಡಬೇಕೆಂದೂ, ಅದಕ್ಕೆ ಬಡ್ಡಿಯೇನೂ ಕೊಡಬೇಕಾದ್ದಿಲ್ಲವೆಂದೂ ಹುಕುಂ ಮಾಡಿರುತ್ತಾರೆ

ಇಂಡಿಯಾ ಕೌನ್ಸಿಲ್ಲುಗಳ ಕಾನೂನು.

ಹಿಂದುಸ್ಥಾನದ ರಾಜ್ಯಭಾರ ಕ್ರಮದಲ್ಲಿ ಕೆಲವು ಬದಲಾವಣೆಗಳನ್ನು ಕಲ್ಪಿಸಿ, ದೇಶೀಯ ದೊಡ್ಡ ಮನುಷ್ಯರಿಗೂ ಕೆಲವು ಹಕ್ಕು ಸ್ವಾತಂತ್ರ್ಯಗಳನ್ನು ವಹಿಸುವುದಕ್ಕೆ ಇಂಡಿಯಾ ಸ್ಟೇಟ್ ಸೆಕ್ರಿಟರಿಯವರಾದ ಲಾರ್ಡ್ ಮಾರ್ಲೀಯವರು ಒಂದು ಕಾನೂನಿನ ಮಸೂದೆಯನ್ನು ತಯಾರುಮಾಡಿ, ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ತಂದಿರುತ್ತಾರೆಂದು ವಾಚಕರಿಗೆ ತಿಳಿದಿರುತ್ತೇವಷ್ಟೆ ಪಾರ್ಲಿಮೆಂಟಿನಲ್ಲಿ ಈ ಮಸೂದೆಯ ವಿಷಯದಲ್ಲಿ ಇನ್ನೂ ಚರ್ಚೆಯಾಗುತ್ತಲೇ ಇದೆ ಕಳೆದ ವಾರ ನಡೆದ ಕೆಲವು ಚರ್ಚೆಗಳನ್ನು ಈಗ ಸೂಚಿಸಬೇಕಾಗುತ್ತೇವೆ

ಈ ಮಸೂದೆಯಲ್ಲಿ ನಮೂದಾಗಿರುವ ಪ್ರಕಾರ ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯಲ್ಲಿ ೬೦ ಮಂದಿ ಮೆಂಬರುಗಳು, ಮದರಾಸ್, ಬೊಂಬಾಯಿ, ಬಂಗಾಳಾ, ಸಂಯುಕ್ತ ಅಧಿಪತ್ಯಗಳ ಗವರ್ನರ್ ಅಥವಾ ಲೆಫ್ಟಿನೆಂಟ್ ಗವರ್ನರುಗಳ ಮಂತ್ರಾಲೋಚನಾ ಸಭೆಗಳಲ್ಲಿ ತಲಾ ೫೦ ಮಂದಿ ಮೆಂಬರುಗಳೂ, ಪೂರ್ವ ಬಂಗಾಳಾ ಅಧಿಪತ್ಯಕ್ಕೆ ೩೦ ಮೆಂಬರುಗಳೂ, ಪಂಜಾಬಿಗೆ ೩೫, ಬರ್ಮಾಗೆ ೧೫ ಮೆಂಬರುಗಳೂ ಚುನಾವಣೆಗಳ ಮೂಲಕವೂ ಗವರ್ನ್‌ಮೆಂಟಿನವರು ನೇಮಕಮಾಡೋಣದರಿಂದಲೂ ಇರುವಂತೆ ಆಗುವುದು ಮತ್ತು ಸಾಮಾನ್ಯವಾದ ಮೆಂಬರುಗಳ ಅವಧಿಯು ಮೂರು ವರುಷಕ್ಕೂ, ವಿಶೇಷ ಮೆಂಬರುಗಳ ಅವಧಿಯು ಒಂದು ವರುಷಕ್ಕೂ ಮುಕ್ತಾಯವಾಗುತ್ತದೆ. ಜನಾ ಖರ್ಚುಗಳ ಅಂದಾಜಾ ಪಟ್ಟಿಗಳನ್ನು ಕುರಿತು ಚರ್ಚೆಮಾಡುವುದಕ್ಕೆ ಈ ಮಂತ್ರಾಲೋಚನಾ ಸಭೆಯ ಮೆಂಬರುಗಳು ಬೇರೆ ಬೇರೆ ಕಮಿಟಿಗಳಾಗಿ ಸಲ್ಲತಕ್ಕದ್ದೆಂದೂ, ಈ ಕಮಿಟಿಯವರ ತೀರ್ಮಾನಗಳನ್ನೆಲ್ಲಾ ಗವರ್ನ್‌ಮೆಂಟಿನವರು ತಮಗೆ ತೋರ್ಪಡಿಸಿದಂತೆ ಬದಲಾವಣೆ ಮಾಡಿ, ಮತ್ತೆ ದೊಡ್ಡ ಮಂತ್ರಾಲೋಚನಾ ಸಭೆಯಲ್ಲಿಟ್ಟು ಚರ್ಚೆಮಾಡತಕ್ಕದ್ದೆಂದೂ, ರೈಲ್ವೆ, ಸೈನ್ಯ, ಈ ಮೊದಲಾದ ಕೆಲವು ಬಾಬುಗಳನ್ನು ಗವರ್ನ್‌ಮೆಂಟಿನವರು ಸಭೆಯಲ್ಲಿ ಚರ್ಚೆಗೆ ತರಬೇಕಾದ ಅಗತ್ಯವಿಲ್ಲವೆಂದೂ ಲಾರ್ಡ್ ಮಾರ್ಲೀಯವರು ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ತಿಳಿಸಿದರು ಬೇರೆ ಬೇರೆ ಅಧಿಪತ್ಯಗಳ ಮಂತ್ರಾಲೋಚನಾ ಸಭೆಗಳಲ್ಲೂ ಇದೇ ರೀತಿ ಕಾರುಬಾರುಗಳು ನಡೆಯುವವು ಮತ್ತು ಕಮಿಟಿಗಳಲ್ಲಿ ಗೊತ್ತಾದ ತೀರ್ಮಾನಗಳು ಪ್ರಜಾಹಿತಕ್ಕೆ ನಿರೋಧವಾಗಿದ್ದ ಪಕ್ಷದಲ್ಲಿ ಪ್ರೆಸಿಡೆಂಟರು ಅಂಥಾ ತೀರ್ಮಾನಗಳನ್ನು ತಿರಸ್ಕರಿಸಬಹುದು ಎಂಬದಾಗಿಯೂ ಲಾರ್ಡ್ ಮಾರ್ಲೀಯವರು ತಿಳಿಸಿದರು ಈ ಸಭೆಗಳಿಗೆ ಮೆಂಬರುಗಳನ್ನು ಚುನಾವಣೆಮಾಡತಕ್ಕಂಥಾ ಕ್ರಮಗಳು ಮಾತ್ರ ಇನ್ನೂ ನಿರ್ಧಾರವಾಗಿಲ್ಲವೆಂದೂ, ಮಹಮ್ಮದೀಯರನ್ನು ಮಂತ್ರಾಲೋಚನಾ ಸಭೆಗಳಿಗೆ ಸೇರಿಸಿಕೊಳ್ಳುವಂತೆ ಏನುಮಾಡಬೇಕೆಂಬ ವಿಚಾರವು ಇನ್ನೂ ಆಲೋಚನೆಯಲ್ಲಿದೆ ಎಂದೂ ಸೆಕ್ರೆಟರಿಯವರು ಹೇಳಿದರು

ಲಾರ್ಡ್ ಹ್ಯಾರಿಸ್ ಲಾರ್ಡ್ ನಾರ್ತ್‌ಕೋಟ್, ಲಾರ್ಡ್ ಸ್ಯಾಂಡ್‌ಹರ್ಸ್ಟ್, ಲಾರ್ಡ್ ಲ್ಯಾನ್ಸ್‌ಡೌನ್ ಈ ಮೊದಲಾದ ಮೆಂಬರುಗಳು ಮೇಲ್ಕಂಡ ಮಸೂದೆಯ ಕೆಲವು ಅಂಶಗಳನ್ನು ಒಪ್ಪಿಕೊಂಡು ಸಮ್ಮತಿ ತೋರಿಸಿದರು ಮಂತ್ರಾಲೋಚನಾ ಸಭೆಗಳ ಮೆಂಬರ ಸಂಖ್ಯೆಗಳನ್ನು ಹೆಚ್ಚು ಮಾಡುವುದೂ, ಮದರಾಸ್ ಮತ್ತು ಬೊಂಬಾಯಿ ಗವರ್ನ್‌ಮೆಂಟುಗಳ ಎಗ್ಸಿಕ್ಯುಟಿವ್ ಕೌನ್ಸಿಲ್ಲುಗಳ ರಚನೆ ಮತ್ತು ಅವುಗಳಲ್ಲಿ ಕೆಲಸ ನಡೆಯಬೇಕಾದ ಕ್ರಮ ಇವುಗಳನ್ನು ಆದರೆ ಈ ಎರಡನೇ ವಿಚಾರದಲ್ಲಿ ಲಾರ್ಡ್ ಮಾರ್ಲೀಯವರು ಇಂಡಿಯಾ ಗವರ್ನ್‌ಮೆಂಟಿನವರ ಅಭಿಪ್ರಾಯವನ್ನು ತೆಗೆದುಕೊಳ್ಳುವದಾಗಿ ಮಾತುಕೊಟ್ಟಿದ್ದಾರೆ

ಆ ಬಳಿಕ ಲೆಫ್ಟಿನೆಂಟ್ ಗವರ್ನರುಗಳ ಸಹಾಯಕ್ಕೆ ಒಂದೊಂದು ಎಗ್ಸಿಕ್ಯುಟಿವ್ ಕೌನ್ಸಿಲ್ ಏರ್ಪಾಡು ಮಾಡಬೇಕೆಂಬ ವಿಚಾರದ ಚರ್ಚೆಯಾಯಿತು ಲಾರ್ಡ್ ಮ್ಯಾಕ್ಡಾನಲ್ಡ್‌ರವರು ಈ ಭಾಗವು ಅಗತ್ಯವಿಲ್ಲವಾದದ್ದರಿಂದ ಈ ಸೆಕ್ಷನನ್ನೇ ವಜಾಮಾಡಬೇಕೆಂದು ಸೂಚಿಸಿದರು ಲಾರ್ಡ್ ಕರ್ಜನ್‌ರವರೂ ಅದೇ ರೀತಿ ಅಭಿಪ್ರಾಯಪಟ್ಟರು ಲಾರ್ಡ್ ಕ್ರೋಮರ್‌ರವರು ಎದ್ದು ಗವರ್ನ್‌ಮೆಂಟಿನವರು ಇಂಡಿಯಾ ಗವರ್ನ್‌ಮೆಂಟಿನವರ ಮತ್ತು ಗವರ್ನರುಗಳ ಅಭಿಪ್ರಾಯಗಳನ್ನು ಕೇಳಿ ತಿಳಿದುಕೊಳ್ಳದೆ ಈ ಎಗ್ಸಿಕ್ಯುಟಿವ್ ಕೌನ್ಸಿಲುಗಳನ್ನು ಏರ್ಪಾಡುಮಾಡುವುದು ತರವಲ್ಲವೆಂದು ಕೇಳಿಕೊಂಡರು ಇದಕ್ಕೆ ಪ್ರತಿಯಾಗಿ ಲಾರ್ಡ್ ಮಾರ್ಲೀಯವರು—ಗವರ್ನರುಗಳನ್ನು ಕೇಳಿ ಅವರ ಅಭಿಪ್ರಾಯಗಳನ್ನು ತರಿಸಿಕೊಳ್ಳುವುದೂ, ಅವುಗಳನ್ನು ರಿಕಾರ್ಡು ಮಾಡಿಕೊಳ್ಳುವುದೂ ಬಹಳ ಅವಿವೇಕಪೂರ್ವಕವಾದ ಕೆಲಸವಾಗಿದೆ ಎಂತಲೂ, ಇಂಥಾ ಘನವೂ ಗಾಂಭೀರ್ಯವೂ ಆದಂಥಾ ವಿಚಾರಗಳನ್ನು ಚಿಕ್ಕ ಚೂರುಮಾಡಿ ಒಂದೊಂದನ್ನೇ ಹಿಡಿದು ಪಾರ್ಲಿಮೆಂಟ್ ಮೆಂಬರುಗಳು ಚರ್ಚೆಮಾಡುವುದು ಹಿತಕರವಾದದ್ದಲ್ಲವೆಂತಲೂ ಹೀಗೆ ಮಾಡುತ್ತಾ ಹೋದಲ್ಲಿ ಈ ಕಾನೂನೇ ನಿರರ್ಥಕವಾಗುತ್ತದೆ ಎಂತಲೂ ಹೇಳಿದರು ಅದಕ್ಕೆ ಲಾರ್ಡ್ ಲ್ಯಾನ್ಸ್‌ಡೌನ್‌ರವರು ಎದ್ದು—ಈ ಕಾನೂನನ್ನೇ ರದ್ದುಪಡಿಸಬೇಕೆಂಬುವುದು ನನ್ನ ಅಭಿಲಾಷೆಯಾಗಿಲ್ಲವೆಂದೂ, ಆದರೆ ಲೆಫ್ಟಿನೆಂಟ್ ಗವರ್ನರುಗಳ ಸಹಾಯಕ್ಕೆ ಎಗ್ಸಿಕ್ಯುಟಿವ್ ಕೌನ್ಸಿಲ್ಲುಗಳನ್ನು ಸ್ಥಾಪಿಸಿಕೊಡಬೇಕಾದ ಅಗತ್ಯ ಕಂಡುಬರುವುದಿಲ್ಲವಾದಕಾರಣ ಆ ಭಾಗಕ್ಕೆ ಮಟ್ಟಿಗೆ ಅನೇಕರು ವಿರೋಧಿಗಳಾಗಿದ್ದಾರೆಂದೂ ಸೂಚಿಸಿದರು ಪಾರ್ಲಿಮೆಂಟ್ ಸಭೆಯಲ್ಲಿದ್ದ ಎಲ್ಲಾ ಮೆಂಬರುಗಳ ಅಭಿಪ್ರಾಯವನ್ನೂ ಕೇಳಿದಾಗ ೧೪ ಮಂದಿ ಮೆಂಬರುಗಳು ಮಾತ್ರ ಲೆಫ್ಟಿನೆಂಟ್ ಗವರ್ನರುಗಳಿಗೆ ಎಗ್ಸಿಕ್ಯುಟಿವ್ ಕೌನ್ಸಿಲ್ಲುಗಳು ಕೊಡಲ್ಪಡಬೇಕೆಂದೂ, ೫೯ ಮಂದಿ ಮೆಂಬರುಗಳು ಹಾಗೆ ಕೊಡಕೂಡದೆಂದೂ ಅಭಿಪ್ರಾಯ ಪಟ್ಟದ್ದರಿಂದ ಈ ಭಾಗವನ್ನು ಕಾನೂನಿನಿಂದ ವಜಾ ಮಾಡಿಬಿಟ್ಟು, ಉಳಿದ ಭಾಗಗಳನ್ನು ಒಪ್ಪಿ ಪ್ಯಾಸ್ ಮಾಡಿರುತ್ತಾರೆ

ರೈತರು ತಿಳಿಯಬೇಕಾದ ವಿಷಯಗಳು

ಬಾಂಕು ಬತ್ತದ ಸಾಗುವಳಿ

ಬಾಂಕು ಬತ್ತದ ಸಾಗುವಳಿಯು ಬಹಳ ಅನುಕೂಲವಾಗಿರುವಂತೆ ಕಾಣಬರುತ್ತದೆ ಒಂದೊಂದೇ ಸಸಿ ನಾಟುವ ಪದ್ಧತಿಯನ್ನು ಅನೇಕವಾಗಿ ಅಜಮಾಯಿಷಿ ಮಾಡಿ ನೋಡಿದ್ದರಲ್ಲಿ ಬಹಳ ಅನುಕೂಲ ಕಂಡುಬಂದಿರುತ್ತದೆ ಆದರೆ ಇದರ ಅನುಕೂಲತೆಯ ವಿಚಾರದಲ್ಲಿ ನಿಸ್ಸಂದೇಹವಾಗಿ ಹೇಳಬೇಕಾದರೆ ಇನ್ನೂ ೩-೪ ವರುಷಗಳ ಅನುಭವ ಬೇಕಾದೀತು ಬೆಳವಣಿಗೆಗೆ ಸಾಕಾದಷ್ಟು ಸ್ಥಳವಿದ್ದಲ್ಲಿ ಒಂದು ಬತ್ತದ ಸಸಿಯಿಂದ ೫೦ ಕವಲುಗಳೊಡೆಯುವದುಂಟು ಒಂದು ಎಕರೆಗೆ ೩೦ ಪೌಂಡು ಒಳ್ಳೇ ಬಿತ್ತ ಸಾಕಾಗುವದಾಗಿ ತಿಳಿಯಬರುತ್ತದೆ ಪಾಲೂರಿನಲ್ಲಿ ಬಾಂಕು ಬತ್ತವನ್ನು ಒಂದೊಂದು ಸಸಿಯಂತೆ ನಾಟಿ ಹಾಕಿ ಬೆಳೆ ಮಾಡಿದ್ದರಲ್ಲಿ ಎಕರೆಗೆ ೧,೮೦೧ ಮದರಾಸು ಸೇರು ಬತ್ತ ಉತ್ಪತ್ತಿಯಾಗಿರುವಂತೆ ತಿಳಿದು ಬಂದಿದೆ

ಇಲಿ ಚರ್ಮದ ಉಪಯೋಗಗಳು

ಇಲಿಯ ಚರ್ಮವು ಅನೇಕ ಶೃಂಗಾರಕ ಕಸಬುಗಳಲ್ಲಿ ಉಪಯೋಗಪಡುತ್ತದೆ ಈ ಕಾರಣದಿಂದಲೇ ಲಂಡನ್ ಪಟ್ಟಣದಲ್ಲಿ ಪ್ರತಿ ವರ್ಷದಲ್ಲೂ ಸುಮಾರು ೫೦,೦೦೦ ಪೌನಿನಷ್ಟು (೭,೫೦,೦೦೦ ರೂಪಾಯಿಗಳು) ಈ ಚರ್ಮದ ವ್ಯಾಪಾರ ನಡೆಯುತ್ತದೆ ಇದು ಬುಕ್ ಬೈಂಡಿಂಗ್, ಫೋಟೊ ಚೌಕಟ್ಟುಗಳು, ಸಣ್ಣ ಚೀಲಗಳು, ಹೆಂಗಸರು ಉಪಯೋಗಿಸುವ ಕೈಚೀಲಗಳ ಪೆಟ್ಟಿಗೆಗಳು, ಇವೇ ಮೊದಲಾದ ಇನ್ನೂ ಇತರ ಸಾಮಾನುಗಳ ತಯಾರಿಯಲ್ಲಿ ಉಪಯೋಗಪಡುತ್ತದೆ. ಈ ಮಾರ್ಗ ರಾಜ್ಯದಲ್ಲಿ ತೋರಿದ ಮಹಾ ಉದ್ಯೋಗವಿಲ್ಲದೆ ಇದ್ದವರು ಇದರಿಂದ ದಿನವೂ ೪ ೪|| ಶಿಲಿಂಗು (೩ ೪ ರೂಪಾಯಿ) ಗಳನ್ನು ಸಾಧಿಸುತ್ತಲಿದ್ದರು ಇಲಿಗಳು ಇಂಗ್ಲೆಂಡಿನಲ್ಲಿ ವರ್ಷ ವರ್ಷ ಕೋಟ್ಯಂತರ ರೂಪಾಯಿಗಳ ನಷ್ಟವನ್ನುಂಟುಮಾಡುತ್ತಿವೆ ಆಗಲೇ ಅನೇಕರು ಇವುಗಳ ಹಾವಳಿಯನ್ನು ತಪ್ಪಿಸುವ ಉದ್ದೇಶದಿಂದ ಇವನ್ನು ಹಿಡಿಯುವ ಉದ್ಯೋಗದಲ್ಲಿ ಪ್ರವೃತ್ತರಾಗಿರುತ್ತಾರೆ ಅಲ್ಲದೆ ಇಂಗ್ಲೆಂಡಿನಲ್ಲಿ ದೊಡ್ಡ ಕಪ್ಪೆಗಳ ಚರ್ಮಕ್ಕೂ ಕೂಡ ವಿಶೇಷ ಗಿರಾಕಿ ಉಂಟು ಮತ್ತು ಇದು ಇಲ್ಲಿಗೆ ಹೋಗಿದ ಸ್ಥಿತಿಯಲ್ಲಿ ಬರುತ್ತದೆ ಇಂಡಿಯಾ ದೇಶದಲ್ಲಿ ಈ ಚರ್ಮವನ್ನು ತಯಾರಿಸುವದಾದರೆ ಇಲ್ಲಿನ ಬೆಟ್ಟಗುಡ್ಡಗಳಲ್ಲಿ ವಾಸವಾಗಿರುವ ಅನಾಗರಿಕರಾದ ಜನರಿಗೆ ಒಂದು ಲಾಭಕರವಾದ ಉದ್ಯೋಗವು ದೊರೆಯುತ್ತದಲ್ಲದೆ, ಚರ್ಮವನ್ನು ರಫ್ತುಮಾಡುವ ವ್ಯಾಪಾರಿಗೂ ಸಹ ಒಳ್ಳೇ ಫಾಯಿದೆಕರವಾಗಿರುವದು ಕಪ್ಪೆ ಚರ್ಮವು ಅಧಿಕ ಮಟ್ಟಕ್ಕೆ ಬಹಳ ಘಟ್ಟಿಯಾದ ಶೋಗಲಾಗುತ್ತದೆ ಇಂಗುಗಳು ಮತ್ತು ಸಾಗುವಳಿಯಿಲ್ಲದೆ ಇರುವ ಜಮೀನುಗಳಲ್ಲಿ ಕಾಡು ಕಪ್ಪೆಗಳನ್ನು ಜನರು ಸಹ ಹಿಡಿದು ಕೊಲ್ಲಲಾಗದೆ ಇರುವದರಿಂದ ಒಗಿದವುಗಳ ಮತ್ತು ಕಪ್ಪೆ ಚರ್ಮಗಳನ್ನು ಕೂಡಿಹಾಕಿ ವ್ಯಾಪಾರ ಮಾಡಬಹುದು

ಕಬ್ಬಿಗೆ ಬೀಳುವ ಹುಳ.

ಕಬ್ಬು, ಜೋಳ ಮತ್ತು ಮುಸುಕಿನಜೋಳ, ಈ ಪೈರುಗಳಿಗೆ ಒಂದು ತರಹ ಹುಳ ಬೀಳುತ್ತದೆ ಇದು ದಂಟನ್ನು ಕೊರೆಯುವದರಿಂದ ಪೈರು ಬಹಳ ನಷ್ಟವಾಗುತ್ತದೆ ಇದು ಬಿಳೀಹುಳ ಮತ್ತು ಒಂದು ಅಂಗುಲ ಉದ್ದವಾಗಿರುತ್ತದೆ ಇದನ್ನು ಸಾಮಾನ್ಯವಾಗಿ ಎಳೇ ಕಬ್ಬಿನಲ್ಲಿ ನೋಡಬಹುದು ಕಬ್ಬಿನ ಪೈರು ಚಿಗುರಿದ ಕೂಡಲೆ ಇದು ಅನೇಕ ವೇಳೆ ನೆರಿಕೆ ಹೋಗಿರುವದನ್ನು ಎಲ್ಲರೂ ನೋಡಿರಬಹುದು ಈ ಚಿಗುರನ್ನು ಕಿತ್ತು ನೋಡಿದರೆ ಹುಳುವು ಗಿಡದ ದಂಟಿನ ಮಧ್ಯ ತಿಂದು, ಮೇಲಕ್ಕೂ ಕೆಳಕ್ಕೂ ಒಂದು ಸಣ್ಣ ರಂಧ್ರವನ್ನು ಮಾಡಿರುವದರಿಂದ ಹೀಗಾಗುವದಕ್ಕೆ ಕಾರಣವಾಯಿತೆಂಬುವದು ಚನ್ನಾಗಿ ಗೊತ್ತಾಗುತ್ತದೆ ಹುಳುವು ... ಯಲ್ಲಿ ... ಬಹುದು

ಈ ಹುಳಗಳ ಬಾಧೆಯನ್ನು ತಪ್ಪಿಸುವದಕ್ಕೆ ಈ ಮುಂದೆ ವಿವರಿಸುವ ಸಮಾನ್ಯ ಪರಿಹಾರಗಳನ್ನು ಮಾಡಬಹುದು —(೧) ಹುಳು ಬಿದ್ದ ಚಿಗುರುಗಳನ್ನು ಕತ್ತರಿಸಿ ಅಥವಾ ಚಾಕುವಿನಿಂದ ಕೆಳಗಿನ ಪಕ್ಕ ಕೊಯ್ದು ಸುಟ್ಟು ಬಿಡಬೇಕು ಏಕೆಂದರೆ, ಇವು ಪುನಃ ಚಿಗುರುವದಿಲ್ಲವಾದಕಾರಣ ರೈತರಿಗೆ ಇದರಿಂದ ನಷ್ಟವೇನೂ ಇಲ್ಲ ಆದರೆ ಇವುಗಳನ್ನು ಕತ್ತರಿಸದೇ ಬಿಟ್ಟರೆ ಹುಳುಗಳು ಇತರ ಒಳ್ಳೇ ... (೨) ಕಬ್ಬು ... ಮತ್ತು ಮುಸುಕಿನಜೋಳ ಇವುಗಳ ಕೊಳೆಯನ್ನು ... ಬೇಕು ಏಕೆಂದರೆ, ಹುಳುಗಳು ಇವರಲ್ಲಿ ... ಈ ಪದ್ಧತಿಯನ್ನು ಎಲ್ಲರೂ ಅನುಸರಿಸಿದರೆ ಹುಳುಗಳು ನಿರ್ಮೂಲವಾಗುವವು (೩) ನವಂಬರು, ಡಿಸೆಂಬರು ಮತ್ತು ಜನವರಿ ತಿಂಗಳುಗಳಲ್ಲಿ ಈ ಹುಳುಗಳು ಅಷ್ಟು ಕಾಣಿಸಿಕೊಳ್ಳುವದಿಲ್ಲವಾದಕಾರಣ ನವಂಬರು ಡಿಸೆಂಬರು ತಿಂಗಳಲ್ಲಿ ಕಬ್ಬಿನ ಪೈರು ಹಾಕಿದರೆ ಹುಳುಗಳು ಕಾಣಿಸಿಕೊಳ್ಳುವವರೊಳಗಾಗಿ ಪೈರು ಬಲಿತು ಹುಳುವು ಏನಾದರೂ ಕೂಡ ಹಾಳುಮಾಡಲಿಕ್ಕೆ ತಡೆಯುವಷ್ಟು ಶಕ್ತಿಯುಳ್ಳದ್ದಾಗಿರುತ್ತದೆ (೪) ಹುಳುವು ಕಬ್ಬಿಗಿಂತ ಮುಸುಕಿನಜೋಳಕ್ಕೆ ಬೀಳುವದು ವಿಶೇಷವಾದ್ದರಿಂದ ಕಬ್ಬಿನ ಗದ್ದೆಯಲ್ಲಿ ಮುಸುಕಿನಜೋಳವನ್ನು ಅಲ್ಲಲ್ಲಿ ಬೆಳೆ ಎರಡು ತಿಂಗಳ ನಂತರ ಜೋಳದ ಕಡ್ಡಿಗಳನ್ನು ಕೊಯ್ದು ದನಗಳಿಗೆ ಹಾಕಬಹುದು ಈ ರೀತಿ ಮಾಡುವದು ಕಬ್ಬು ಬೆಳೆಯುವವರಿಗೆ ಸಹಾಯಕರವಾಗಿರುತ್ತದೆ ಈ ಬೋರರ್ ಹುಳುವಿನಿಂದ ಆಗುವ ಉಪದ್ರವನ್ನು ಅಂದಾಜುಮಾಡುವದು ಕಷ್ಟ ಕೆಟ್ಟ ವರ್ಷಗಳಲ್ಲಿ ಈ ಹುಳುವಿನ ಕಾಟದಿಂದ ಜಮೀನುಗಳಲ್ಲಿ ಬೇರೆ ... ಗೋಚರಕ್ಕೆ ಬಂದಿರುತ್ತದೆ

ಭೂಸಾರವನ್ನು ವೃದ್ಧಿಮಾಡುವುದು

ಭೂಮಿಯ ಸಾರವನ್ನು ವೃದ್ಧಿಮಾಡುವುದು ಹೇಗೆಂದು ಪ್ರತಿ ರೈತನೂ ಕೇಳುವನು ಪೈರುಗಳನ್ನು ಬದಲಾಯಿಸಿ ಹಾಕುವುದು ಮೊದಲನೆಯ ಮಾರ್ಗವೆಂದು ಹೇಳಬಹುದು ರಾಗಿ, ಜೋಳ ಮುಂತಾದ ಪೈರುಗಳು ಭೂಮಿಯಿಂದ ವಿಶೇಷವಾಗಿ ಫಾಸ್ಫರಸ್ ಎಂಬ ಪದಾರ್ಥವನ್ನೂ ನೈಟ್ರೋಜನ್ ಎಂಬುವುದನ್ನೂ ಸಂಗ್ರಹಿಸುವವು ಕಡಲೆ, ಹುರುಳಿ, ಹೆಸರು, ತೊಗರಿ ಮೊದಲಾದ ಪೈರುಗಳು ಭೂಮಿಯಿಂದ ಮುಖ್ಯವಾಗಿ ಸುಣ್ಣವನ್ನು ತೆಗೆದುಕೊಳ್ಳುವವು ಪ್ರತಿವರ್ಷವೂ ಅವುಗಳನ್ನೇ ಹಾಕಿದರೆ ವರ್ಷವರ್ಷಕ್ಕೂ ಒಂದೇ ವಿಧವಾದ ಪದಾರ್ಥವು ಭೂಮಿಯಿಂದ ಸಂಗ್ರಹಿಸಲ್ಪಡುತ್ತಿರುವುದು, ಆಗ ಭೂಮಿಯು ನಿಸ್ಸಾರವಾಗುತ್ತದೆ ಆದಕಾರಣ ಪೈರುಗಳು ಕೆಟ್ಟುಹೋಗುವವು ಈ ರೀತಿ ಮಾಡದೆ ಧಾನ್ಯವನ್ನು ಬಿತ್ತಿದ ಮೇಲೆ ಕಾಳನ್ನೂ, ಕಾಳಾದ ಮೇಲೆ ಧಾನ್ಯವನ್ನೂ ಬದಲಾಯಿಸಿ ಬಿತ್ತುತ್ತಾ ಬಂದರೆ ಮೇಲೆ ಹೇಳಿದಂತೆ ನಷ್ಟವು ಭೂಮಿಗೆ ಉಂಟಾಗುವುದಿಲ್ಲ ಭೂಮಿಯು ಕಾಲಕ್ರಮದಲ್ಲಿ ಬೇಕಾದ ನೂತನ ಪದಾರ್ಥಗಳನ್ನು ಸ್ವೀಕರಿಸಿಕೊಳ್ಳುವುದು ಆದಕಾರಣ ಒಂದು ಬಗೆಯ ಪೈರು ತೆಗೆದುಕೊಳ್ಳುವ ಪದಾರ್ಥವನ್ನು ಮತ್ತೊಂದು ಬಗೆಯ ಪೈರು ಭೂಮಿಗೆ ಕೊಡಬಲ್ಲದು ಇದೂ ಅಲ್ಲದೆ ಕಾಳುಗಳ ಪೈರುಗಳು ಭೂಮಿಗೆ ನೈಟ್ರೋಜನ್ನನ್ನು ವಿಶೇಷವಾಗಿ ಕೊಟ್ಟು ಬಲಮಾಡುವ ಸ್ವಭಾವವುಳ್ಳವುಗಳಾಗಿವೆ ಅದರಿಂದ ಮತ್ತೊಂದು ಸಸ್ಯಕ್ಕೆ ಅನುಕೂಲಿಸುವಷ್ಟು ನೈಟ್ರೋಜನು ಭೂಮಿಗೆ ಲಾಭವಾಗುತ್ತಿರುವುದು ನೇಲಿ, ಹತ್ತಿ ಮುಂತಾದ ಪೈರುಗಳು ಬೇರುಗಳನ್ನು ಆಳವಾಗಿ ಬಿಟ್ಟು, ಭೂಮಿಯ ಕೆಳಮಣ್ಣಿನ ಭಾಗದಿಂದ ಆಹಾರವನ್ನು ತೆಗೆದುಕೊಳ್ಳುವವು ರಾಗಿ ಮುಂತಾದ ಪೈರುಗಳು ಭೂಮಿಯ ಮೇಲ್ಭಾಗದಿಂದಲೇ ಆಹಾರವನ್ನು ತೆಗೆದುಕೊಳ್ಳುವವು ಆದುದರಿಂದ ಬದಲಾಯಿಸಿ ಪೈರುಗಳನ್ನು ಹಾಕಿದರೆ ಒಂದುಸಾರಿ ಭೂಮಿಯ ಮೇಲ್ಭಾಗಕ್ಕೂ, ಮತ್ತೊಂದುಸಾರಿ ಆಳವಾದ ಭಾಗಕ್ಕೂ ವಿಶ್ರಾಂತಿ ಸಿಕ್ಕುವದು ಈ ವಿಶ್ರಾಂತಿ ಸಮಯದಲ್ಲಿ ಭೂಮಿಯು ತನಗೆ ಆ ಭಾಗದಲ್ಲಿ ಸಂಭವಿಸಿದ ನಷ್ಟವನ್ನು ಸಂಪಾದಿಸಿಕೊಳ್ಳುವದು ಒಂದೇ ಜಾತಿಯ ಪೈರನ್ನು ಹಾಕಿದರೆ ಒಂದೇ ಭೂಭಾಗದಿಂದ ಪದೇಪದೇ ಆಹಾರವು ಹೋಗುತ್ತಿರುವುದರಿಂದ ಆ ಭೂಮಿಯು ನಿಸ್ಸಾರವಾಗಿರುವುದು

ಕೆಲವು ಪೈರುಗಳಿಗೆ ಕೆಲವು ತರಹ ಹುಳಗಳು ಬೀಳುವವು ಆ ಹುಳಗಳು ಆ ಪೈರನ್ನೇ ತಿನ್ನುವವಲ್ಲದೆ ಬೇರೆಜಾತಿ ಪೈರುಗಳನ್ನು ತಿನ್ನುವವು ವರ್ಷವರ್ಷಕ್ಕೂ ಒಂದೇ ಭೂಮಿಯಲ್ಲಿ ಒಂದೇ ಪೈರನ್ನು ಹಾಕುತ್ತಾ ಬಂದರೆ ಆ ಪೈರಿಗೆ ಬೀಳುವ ಹುಳಗಳು ಭೂಮಿಯೊಳಕ್ಕೆ ಹೋಗಿ ಅಲ್ಲಿ ಸ್ಥಿರವಾಗಿ ನಿಂತುಕೊಳ್ಳುವು

ವು ಆಮಸಾ-ವಿಲ ಹುಳುವಿನ ಬಾಧ್ಯಗಳು ಪೈರುಗಳಿಗೆ ಬರುವವು. ಪೈರುಗಳನ್ನು ಬದಲಾಯಿಸಿ ಹಾಕುತ್ತಾ ಬಂದರೆ, ಒಂದು ಜಾತಿ ಪೈರಿಗೆ ಬೀಳುವ ಹುಳಗಳು ಎರಡನೆ ಜಾತಿ ಪೈರಿಗೆ ಬೀಳುವದಿಲ್ಲವಾದ ಕಾರಣ, ಎರಡನೇ ಪೈರನ್ನು ಹಾಕಿದಾಗ ಮೊದಲನೆ ಪೈರಿನ ಹುಳಗಳು ತಿನ್ನುವದಕ್ಕೆ ಅನುಕೂಲವಾದ ಆಹಾರವು ದೊರೆಯದೆ ಅವು ಸತ್ತು ಹೋಗುವವು. ಒಂದೇ ಪೈರನ್ನು ಹಾಕಿದ್ದ ಆದರೆ ಹುಳಗಳಿಗೆ ಯಾವಾಗಲೂ ಪುಷ್ಕಳವಾದ ಆಹಾರವು ಸಿಕ್ಕುವುದು. ಆದುದರಿಂದ ಆ ಪೈರುಗಳು ಹುಳುಬಿದ್ದು ಕೆಟ್ಟುಹೋಗುವವು. ಹೊಗೆಸೊಪ್ಪು, ಗೋಧಿ, ಮುಂತಾದವುಗಳು ನೆಲದಿಂದ ಸಾರವನ್ನು ವಿಶೇಷವಾಗಿ ಎಳೆಯುವವು. ತುರುಳಿ, ಬಟಾಣಿ ಮುಂತಾದವು ನೆಲಕ್ಕೆ ಬಲವನ್ನು ಕೊಡುವವು. ಸಾರವನ್ನು ಎಳೆಯುವ ಪೈರನ್ನು ಹಾಕಿದ ತರುವಾಯ ಸಾರಪ್ರದವಾದ ಪೈರನ್ನು ಹಾಕುವುದರಿಂದ ಭೂಮಿಯು ಫಲಪ್ರದವಾಗುವುದು. ಈ ಸ್ಥಿತಿಗಳನ್ನು ಗಮನಿಸಿ ವ್ಯವಸಾಯಗಾರರು ಒಂದು ಕ್ರಮದ ಪೈರುಗಳನ್ನು ಬದಲಾಯಿಸುತ್ತಾ ಬಂದರೆ ನೆಲಕ್ಕೆ ಸಾರವು ಹೆಚ್ಚಾಗುವದು. ಒಂದೇ ಭೂಮಿಯಲ್ಲಿ ವರ್ಷವರ್ಷವೂ ಗೋಧಿಯನ್ನೇ ಒಬ್ಬ ವ್ಯವಸಾಯಗಾರನು ಬೆಳೆದನು. ಈ ಪ್ರಕಾರ ಮಾಡಿದ್ದರಿಂದ ತನ್ನ ಭೂಮಿಯ ಒಂದೊಂದು ಎಕರೆಯಲ್ಲಿ ೫ ವರ್ಷಗಳಲ್ಲಿ ೧೬೧ ಕೆ.ಜಿ ತೂಕದಷ್ಟು ನೈಟ್ರೋಜನು ನಾಶವಾಯಿತೆಂದು ನಿರ್ಧರಿಸಿದನು. ಆತನು ಬದಲಾಯಿಸಿ ಪೈರುಗಳನ್ನು ಹಾಕಿದ್ದರಿಂದ ಎಕರೆಗೆ ಒಂದು ವರ್ಷದಲ್ಲಿ ೬೧ ತೊಲೆಗಳಿಗೆ ಮೇಲ್ಪಟ್ಟು ನೈಟ್ರೋಜನು ವೃದ್ಧಿಯಾಯಿತೆಂದು ಹೇಳುತ್ತಿದ್ದಾನೆ. ಒಂದು ಪಟ್ಟು ಬೆಳೆಯುವ ಭೂಮಿಯಲ್ಲಿ ಮೂರು ಪಟ್ಟುಗಳನ್ನು ಬೆಳೆಯಬೇಕಾದರೆ ಈ ಪದ್ಧತಿಗಳನ್ನು ಅನುಸರಿಸಬೇಕು.

ಶ್ರೀ ಕೃಷ್ಣರಾಜ ಕೃಷಿವಿದ್ಯಾಭಿವರ್ಧಕ ಸಮಾಜ ಲಿಮಿಟೆಡ್, ಮೈಸೂರು

ಸರ್ ೧೯೦೯ನೇ ಇಸವಿ ಮಾರ್ಚಿ ತಾ ೭ನೇ ಭಾನುವಾರ ಪ್ರಾತಃಕಾಲ ೭ ಘಂಟೆಯಲ್ಲಿ ಛಾರ್ಗಸ್‌ಫೀಲ್ಡ್ ಬಜಾರಿನ ಕೊಠಡಿಯಲ್ಲಿ ಈ ಸಮಾಜದ ವ್ಯವಸಾಯ ಮತ್ತು ಕೈಗಾರಿಕೆ ಕಮಿಟಿ ಮೆಂಬರುಗಳು ನಡೆಸಿದ ಮೀಟಿಂಗಿನಲ್ಲಿ ಹಾಜರಿದ್ದ ಮೆಂಬರುಗಳು ಮತ್ತು ತೀರ್ಮಾನವಾದ ವಿಷಯಗಳು —

ರಿಟೈರ್ಡ್ ಪೊಲೀಸ್ ಸೂಪರಿಂಟೆಂಡೆಂಟ್ ಮ|| ಮಹಮದ್ ಜಾಫರ್ ಸಾಹೇಬರವರು ಅಗ್ರಾಸನವನ್ನು ವಹಿಸಬೇಕೆಂದು ಅಡ್ವೊಕೇಟ್ ಮ|| ವಿ ರಾಘವಾಚಾರ್ಯರು [illegible] ಅಗ್ರಿಕಲ್ಚರಲ್ ಲಕ್ಚರರ್ ಮ|| ಕೆ ನರಸಿಂಹಯ್ಯಂಗಾರ್ಯರು ಸೆಕೆಂಡ್ ಮಾಡಿದ್ದನ್ನು ಹಾಜರಿದ್ದ ಮೆಂಬರುಗಳು ಒಪ್ಪಿದರು. ಹಾಜರಿದ್ದ ಮೆಂಬರುಗಳು — ಮ|| ರಾ|| ರಾ|| ಅಡ್ವೊಕೇಟ್ ವಿ ರಾಘವಾಚಾರ್ಯರು, ಅಗ್ರಿಕಲ್ಚರಲ್ ಲಕ್ಚರರ್ ಕೆ ನರಸಿಂಹಯ್ಯಂಗಾರ್ಯರು, ವಿ [illegible] ಸುಬ್ರಹ್ಮಣ್ಯರು, ಅಂಬಳೆ ಅಣ್ಣಯ್ಯ ಪಂಡಿತರು, ಮಹಮದ್ ಜಾಫರ್ ಸಾಹೇಬರವರು, ಜಹಗೀರ್‌ದಾರ್ ಮಾದಪ್ಪನವರು, ಜಿ ಸುಬ್ಬಸ್ವಾಮಿ ಅಯ್ಯರವರು, ಎಚ್ ನರಸಿಂಗರಾಯರು

ತೀರ್ಮಾನವಾದ ವಿಷಯಗಳು

ವ್ಯವಸಾಯದ ವಿಷಯದಲ್ಲಿ —(೧) ೧೯೦೮ನೇ ಇಸವಿ ಫೆಬ್ರವರಿ ೧೬ರಲ್ಲಿ ಮ್ಯಾನೇಜಿಂಗ್ ಕಮಿಟಿಯವರು ತೀರ್ಮಾನಿಸಿದಂತೆ ವ್ಯವಸಾಯದ ಯಾಸಗಳು, ಬಿತ್ತನೆ ಬೀಜಗಳು ಮತ್ತು ಗೊಬ್ಬರ ಇವುಗಳನ್ನು ಉಪಯೋಗಿಸತಕ್ಕ ಮತ್ತು ಬೆಳೆಸಾಡತಕ್ಕ ಕ್ರಮ ವಗ್ಯೆರೆ ವಿಷಯಗಳು ಹೋದ ಸಾಲಿನಲ್ಲಿ ಕಮಿಟಿ ಮೆಂಬರುಗಳ ಅಭಿಪ್ರಾಯದಂತೆ ಯಾವದೂ ಸರಿಯಾಗಿ ನಡೆಯಲಿಲ್ಲವಾಗಿ ಈ ವರ್ಷದಲ್ಲಿ ಈ ವಿಷಯವು ಹೆಚ್ಚು ಮುತುವರ್ಜಿಯಿಂದ ಕ್ರಮವಾಗಿ ಪೂರೈಸತಕ್ಕ ತಕ್ಕ ಏರ್ಪಾಡು ಮಾಡಬೇಕೆಂದು ಅಗ್ರಿಕಲ್ಚರಲ್ ಲಕ್ಚರರ್ ಮ|| ಕೆ ನರಸಿಂಹಯ್ಯಂಗಾರ್ಯರು ಸೂಚಿಸಿದ್ದನ್ನು ಎಲ್ಲರೂ ಒಪ್ಪಿದರು. (೧) ಬಿತ್ತನೆ ಬೀಜ, ಗೊಬ್ಬರ, ಯಾಸಗಳು ವಗ್ಯೆರೆ ಸಾಮಾನುಗಳ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಪ್ರತಿ ತಾಲ್ಲೂಕಿನಲ್ಲೂ ಒಬ್ಬ ದೊಡ್ಡ ಮನುಷ್ಯನನ್ನು ಜವಾಬ್ದಾರರನ್ನಾಗಿ ನೇಮಿಸಿಕೊಂಡು ಅಲ್ಲಿ ಬಿತ್ತನೆ ಬೀಜ ವಗ್ಯೆರೆಗಳಿಗೆ ಸಂಬಂಧಪಟ್ಟ ಒಂದು ಡಿಪೋವನ್ನು ಏರ್ಪಡಿಸಬೇಕು. (೨) ಕಳೆದ ವರ್ಷ ಜನವರಿ ತಿಂಗಳಿನಲ್ಲಿ ವ್ಯವಸಾಯದ ಕಮಿಟಿ ಮೆಂಬರುಗಳು ಡೆಮಾನ್‌ಸ್ಟ್ರೇಷನ್ ಫಾರಂ ವಿಷಯದಲ್ಲಿ ತೀರ್ಮಾನಿಸಿದಂತೆ ಅಂದರೆ ೫೧ ಏಕರೆ ಎಲ್ಲಿಯಾದರೂ ಸಮೀಪದಲ್ಲಿರತಕ್ಕ ಸರ್ಕಾರಿ ಜಮೀನನ್ನು ಸುಪರ್ದು ಮಾಡಿಕೊಂಡು ಅಲ್ಲಿ ವ್ಯವಸಾಯ ಕ್ರಮವನ್ನು ದೃಷ್ಟಾಂತವಾಗಿ ತೋರಿಸಿಕೊಡತಕ್ಕ ಬಗ್ಗೆ ತಕ್ಕ ಪ್ರಯತ್ನ ಮಾಡಬೇಕು, ಅಲ್ಲದೆ ಇದರ ಮೇಲ್ವಿಚಾರಣೆಗಾಗಿ ಮ|| ಗಳಾದ ಕೆ ನರಸಿಂಹಯ್ಯಂಗಾರ್ಯರು, ವಿ ರಾಘವಾಚಾರ್ಯರು, ಅಂಬಳೆ ಅಣ್ಣಯ್ಯ ಪಂಡಿತರು ಇವರುಗಳನ್ನು ಚುನಾಯಿಸಿರುತ್ತಾರೆ. (೩) ಬಿತ್ತನೆ ಬೀಜ, ಗೊಬ್ಬರ, ಯಾಸಗಳಿಗಾಗಿ ಸುಮಾರು ೧೫೦ ರೂಪಾಯಿಗಳ ವರೆಗೂ ಖರ್ಚುಮಾಡಿ, ಅವುಗಳನ್ನು ತರಿಸಿ ಅಪೇಕ್ಷಿಸುವ ಮೆಂಬರುಗಳಿಗೆ ಖರೀದಿಗೆ ಕೊಡಬಹುದು.

ಕೈಗಾರಿಕೆ ವಿಷಯದಲ್ಲಿ —(೧) ಹೆಣಿಗೆ ಕೆಲಸವನ್ನೇ ಅಭಿವೃದ್ಧಿ ಪಡಿಸುವದಕ್ಕಾಗಿ ಅಂದರೆ ಟೋಪಿ, ನೈಟ್ ಬನಿಯನ್, ಕಾಲುಚೀಲ ವಗ್ಯೆರೆ ಬಟ್ಟೆಗಳನ್ನು ತಯಾರುಮಾಡುವ ವಿಧವನ್ನು ಕಲಿಸಿಕೊಡತಕ್ಕ ಬಗ್ಗೆ ಅದಕ್ಕೆ ಬೇಕಾಗುವ ಸಾಮಾನು ವಗ್ಯೆರೆ ತರಿಸಿಕೊಳ್ಳುವದಕ್ಕಾಗಿ ಸುಮಾರು ೩೦೦ ರೂಪಾಯಿ ವರಿಗೂ ಖರ್ಚುಮಾಡಬಹುದು. ಈ ವಿಷಯಗಳಲ್ಲಿ ಹೆಚ್ಚು ತಿಳುವಳಿಕೆಯನ್ನು ಮ|| ಜಿ ಸುಬ್ಬಸ್ವಾಮಯ್ಯರವರ ಅಧೀನದಲ್ಲಿರತಕ್ಕ ಈ ಕೆಲಸಗಳನ್ನು ತಿಳಿದವರ ಪೈಕಿ ಒಬ್ಬರು ಕಲಿತುಕೊಳ್ಳತಕ್ಕವರಿಗೆ ಮುಫತ್ತಾಗಿ ಕಲಿಸಿಕೊಡಲು ಒಪ್ಪಿರುತ್ತಾರೆ. (೨) ಮ|| ಗಳಾದ ಜಿ ಸುಬ್ಬಸ್ವಾಮಯ್ಯರೂ, ಅಂಬಳೆ ಅಣ್ಣಯ್ಯ ಪಂಡಿತರೂ, ವಿ ರ ಘವಾಚಾರ್ಯರೂ ಮತ್ತು ಎಂ ಎಲ್ ವಾಸುದೇವಯ್ಯನವರೂ ಸೇರಿ ಈಗ ತರಿಸಿರತಕ್ಕ ೫೦೦ ರೂಪಾಯಿ ಸಾಮಾನುಗಳ ಜೊತೆಗೆ ಇನ್ನು ೫೦೦ ರೂಪಾಯಿ ಸಾಮಾನು ವಗ್ಯೆರೆಗಳನ್ನು ತರಿಸಿ, ತಕ್ಕ ರೀತಿಯಲ್ಲಿ ಉಪಯೋಗಿಸಿ ಬಟ್ಟೆಗಳನ್ನು ತಯಾರುಮಾಡಿಸಬಹುದು. (೩) ರೆವಿನ್ಯೂ ಕಮಿಷನರವರು ಈ ಸಮಾಜದವರ ವಶಕ್ಕೆ ಕೊಟ್ಟಿರುವ ಹಾರುವ ಲಾಳಿಯುಳ್ಳ ಮಗ್ಗವನ್ನು ಮೈಸೂರು ಚಿಕ್ಕಗಡಿಯಾರದ ೪೫೦ನೇ ನಂಬರು ಮನೆಯಲ್ಲಿರತಕ್ಕ ಮ|| ಬಿ. ಎಸ್ ಕೃಷ್ಣಯ್ಯಂಗಾರ್ಯರವರಿಗೆ ಕೆಲವು ಕಾಲ ತಕ್ಕ ಮುಚ್ಚಳಿಕೆ ತೆಗೆದುಕೊಂಡು ಕೊಡಬಹುದು, ಮತ್ತು ಇವರು ಕೇಳತಕ್ಕ ಸಾಲದ ವಿಷಯದಲ್ಲಿ ಸೆಕ್ರೆಟರಿಯವರು ಯೋಚಿಸಿ ಜಾಮೀನು ಕೊಡಬೇಕಾಗಿರುತ್ತದೆ. (೪) ಮೇಲ್ಕಂಡ ಮ|| ಎಂ ಜಿ ಶಾಮಯ್ಯಂಗಾರ್ಯರವರ ವಿಷಯದಲ್ಲಿ ಮೇಲ್ಕಂಡ ಮ|| ಗಳಾದ ಜಿ ಸುಬ್ಬಸ್ವಾಮಯ್ಯರೂ, ವಿ ರಾಘವಾಚಾರ್ಯರೂ, ಅಂಬಳೆ ಅಣ್ಣಯ್ಯ ಪಂಡಿತರೂ ಮತ್ತು ಎಂ ಎಲ್ ವಾಸುದೇವಯ್ಯನವರೂ, ಈ ನಾಲ್ಕು ಜನಗಳೂ ಸೇರಿ ತೀರ್ಮಾನಿಸುವಂತೆ ೫೦೦ ರೂಪಾಯಿನ ವರಿವಿಗೂ ಕೊಡಬಹುದು. (೫) ಸೇಲಂಗೆ ಹೋಗಿ ನೇಗೆ ಕಲಿತುಕೊಂಡು ಬರಬೇಕೆಂದು ಇಷ್ಟಪಟ್ಟು ಅರ್ಜಿ ಕೊಟ್ಟಿರತಕ್ಕವರಿಗೆ ನಾವು ಈಗ ಕಳುಹಿಸಿರತಕ್ಕ ಮನುಷ್ಯನು ವಾಪಸು ಬಂದನಂತರ ಇವರುಗಳನ್ನು ವಿದ್ಯಾರ್ಥಿಗಳನ್ನಾಗಿ ಸೇರಿಸಿಕೊಂಡು ಈ ಸ್ಥಳದಲ್ಲಿ ನೇಗೆ ವಗ್ಯೆರೆ ಕೆಲಸಗಳನ್ನು ಕಲಿಸಬಹುದು ಎಂಬದಾಗಿ ತೀರ್ಮಾನವಾಗಿದೆ ಎಂದು ತಿಳಿಸಬಹುದು. (೬) ರೇಷ್ಮೆಯನ್ನು ರಾಟೆ ಆಡಿ ನೂಲು ತೆಗೆಯತಕ್ಕ ಕಸಬಿನ ವಿಷಯದಲ್ಲಿ ಮ|| ಮಹಮದ್ ಜಾಫರ್ ಸಾಹೇಬರವರೂ ಮ|| ವಿ ರಾಘವಾಚಾರ್ಯರೂ ಸೇರಿ ೧೫೦ ರೂಪಾಯಿ ವರಿಗೂ ಖರ್ಚುಮಾಡಬಹುದು. ಈ ಕೆಲಸವನ್ನು ಕೂಡ ಮಹಮ್ಮದೀಯರ ವಿಧವಾ ನಿಲಯದಲ್ಲಿ ಪ್ರಾರಂಭಿಸತಕ್ಕದ್ದು. (೭) ಕ್ಷಾಮಕಾಲವಾದದ್ದರಿಂದ ರೈತರಿಗೆ ೨ ರೂಪಾಯಿ, ಜವಾನನಿಗೆ ೧ ರೂಪಾಯಿ ಹೆಚ್ಚಾಗಿ ಮೂರು ತಿಂಗಳ ವರಿಗೂ ಕೊಡತಕ್ಕದ್ದು. (೮) ಕಳೆದ ವರ್ಷದ ರಿಪೋರ್ಟೂ ಮತ್ತು ಮೀಟಿಂಗುಗಳಲ್ಲಿ ತೀರ್ಮಾನವಾದ ವಿಷಯಗಳೂ ಉಳ್ಳ ಒಂದು ಕಾಪಿಯನ್ನು ಶ್ರೀಮನ್ ಮಹಾರಾಜರವರಿಗೂ ಮತ್ತು ರೆವಿನ್ಯೂ ಕಮಿಷನರವರಿಗೂ ಕಳುಹಿಸಿಕೊಡಬೇಕು. ಅಲ್ಲದೆ ಈ ಸಮಾಜಕ್ಕೆ ವರ್ಷಂಪ್ರತಿಯಲ್ಲಿಯೂ ಸರ್ಕಾರದಿಂದ ೩೦೦ ರೂಪಾಯಿಗೆ ಕಡಿಮೆಯಿಲ್ಲದಂತೆ ಗ್ರಾಂಟು ಕೊಡಿಸಿಕೊಡಬೇಕೆಂದು ರೆವಿನ್ಯೂ ಕಮಿಷನರವರನ್ನು ಕೇಳಿಕೊಳ್ಳತಕ್ಕದ್ದು.

ಮ|| ಮಹಮದ್ ಜಾಫರ್ ಸಾಹೇಬರವರು ಅಗ್ರಾಸನವನ್ನು ವಹಿಸಿ ಕಾರ್ಯ ನಡೆಸಿದ್ದಕ್ಕಾಗಿ ವಂದನೆಗಳನ್ನು ಮಾಡಲಾಯಿತು. ಅನಂತರ ಸಭೆಯು ಬರಖಾಸ್ತಾಯಿತು.

ತಾ|| ೭-೩ ೧೯೦೯, ಮಹಮದ್ ಜಾಫರ್ ಸಾಹೇಬರು,

ಮೈಸೂರು ಪ್ರಸಿಡೆಂಟ್

ಇಂಡಿಯಾ ದೇಶದ ವೃತ್ತಾಂತಗಳು

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ವಾರ ಪ್ಲೇಗಿನ ಉಪದ್ರದಿಂದ ೪೩೨ ಜನರು ಕಾಲವಾದರೆಂದು ತಿಳಿದುಬಂದಿದೆ.

ರಾಜಪುಟಾನಾಕ್ಕೆ ಸೇರಿದ ದಂಗಾರಪುರ ಸಂಸ್ಥಾನದ ರಾಜರವರಿಗೆ [illegible] ಪದವಿಯನ್ನು ಕಟ್ಟಿ, [illegible] ಬಂದರು.

ಬಾರಕ್‌ಪುರದ ಸ್ಪೆಷಲ್ ಜಡ್ಜ್ ರಾದ ಮ|| ಒಜ್ಜಾಯಿ ಕರಿಂ ಎಂಬವರು ಬಕ್ರೀದ್ ಹಬ್ಬದ ದಿನ ನಡೆದ ದೊಂಬಿಯಲ್ಲಿ ಕಳೆದ ವಾರ [illegible] ಸಜಾ ನರಿಗೆ ತಲಾ ಎರಡು ತಿಂಗಳ ಕಠಿಣಸಜಾ ವಿಧಿಸಿದರು.

ಢಾಕಾ ನಗರದಲ್ಲಿ ಪ್ಲೀಡರಾದ ರಸಿಕಚಂದ್ರ ಚಕ್ರವರ್ತಿಯವರು ತಮ್ಮ ಸೇವಕನನ್ನು ಕೊಲ್ಲಿಸಿದರೆಂದು ಬಂದಿದ್ದ ಮೊಕದ್ದಮೆ ವಿಚಾರಣೆ ಆಗಿ ಅವರ ಮೇಲೆ ಅಪರಾಧ ತೋರುವುದಿಲ್ಲವೆಂದು ಬಿಡುಗಡೆ ಹೊಂದಿರುತ್ತಾರೆ.

ಕಲ್ಕತ್ತಾ ವಿದ್ಯಾನಿಲಯದ ವಾರ್ಷಿಕ ಸಭೆಯು ತಾ ೧೩ನೇ ಶನಿವಾರ ನಡೆಯುವುದಾಗಿದೆ. ವೈಸ್‌ರಾಯ್ ಲಾರ್ಡ್ ಮಿಂಟೋರವರು ಆ ದಿನ ಸಭೆಯ ಅಗ್ರಾಸನವನ್ನು ವಹಿಸಿ, ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಹಿತೋಕ್ತಿಗಳನ್ನು ತಿಳಿಸುವವರಾಗಿದ್ದಾರೆ.

ಹಿಂದುಸ್ಥಾನದ ದೇಶೀಯ ಸಂಸ್ಥಾನಗಳ ಪ್ರಜೆಗಳ್ಯಾರಾದರೂ ವಿಲಾಯತಿಗೆ ಹೋಗಬೇಕೆಂದು ಅಪೇಕ್ಷೆಪಟ್ಟರೆ ಅಂಥವರು ಆಯಾ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರನ್ನು ಕಂಡು, ಅವರಿಂದ ಅಪ್ಪಣೆ ಚೀಟಿಗಳನ್ನು ಪಡೆದುಕೊಳ್ಳಬಹುದೆಂದು ಇಂಡಿಯಾ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದ್ದಾರೆ.

ಬರ್ಮಾ ಅಧಿಪತ್ಯದಲ್ಲಿ ಈ ವರುಷ ೭೫,೪೬,೩೭೮ ಎಕರೆ ಜಮೀನಿನಲ್ಲಿ ಬತ್ತವನ್ನು ಬೆಳೆಮಾಡಿರುತ್ತಾರೆ, ಅಂದರೆ, ಹೋದ ವರುಷಕ್ಕಿಂತ ೨,೯೪,೩೦೦ ಎಕರೆಗಳು ಹೆಚ್ಚು. ಈ ಸಲ ಆ ಅಧಿಪತ್ಯದಿಂದ ಇತರ ಕಡೆಗಳಿಗೆ ರಫ್ತು ಮಾಡುವುದಕ್ಕೆ ೨,೪೨,೯೫,೩೦೦ ಟನ್ನು ಅಕ್ಕಿ ಉಳಿಯುವುದೆಂದು ತಿಳಿದುಬಂದಿದೆ.

ಪೂರ್ವ ಬಂಗಾಳಕ್ಕೆ ಸೇರಿದ ಟಿಪ್ಪಾರಿ ಎಂಬ ಸಂಸ್ಥಾನದ ರಾಜರು ಸಂಚಾರ ಮಾಡುತ್ತಿದ್ದಾಗ ಕಾರ್ನೆ ಎಂಬೊಬ್ಬ ಇಂಗ್ಲಿಷ್ ಸಿಪಾಯಿಯು ಅವರ ಜವಾಹಿರಿ ಪೆಟ್ಟಿಗೆಯನ್ನು ಅಪಹರಿಸಿ, ಕೆಲವು ನಗಗಳನ್ನು ಖರ್ಚುಮಾಡುವಷ್ಟರಲ್ಲೇ ಸಿಕ್ಕಿಬಿದ್ದನು. ಕೇಳಿದಾಗ ತನಗೆ ಗತಿಯಿಲ್ಲದ್ದರಿಂದ ಕಳುವುಮಾಡಿದೆನೆಂದು ಉತ್ತರಕೊಟ್ಟನು.

ಫ್ರೆಂಚರಿಗೆ ಸೇರಿದ ಪುದುಚೇರಿ ಪಟ್ಟಣದಲ್ಲಿ ಬೀದಿಗಳಿಗೆಲ್ಲಾ ರಾತ್ರಿ ಹೊತ್ತು ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವುದಕ್ಕೆ ಏರ್ಪಾಡುಮಾಡುತ್ತಿದ್ದಾರೆ. ಅದಕ್ಕೆ ಬೇಕಾಗುವ ಯಂತ್ರಗಳೂ ದೀಪದ ಕಂಬಗಳೂ ಸೀಮೆಯಿಂದ ತರಿಸಿದ್ದಾಯಿತು. ಪಟ್ಟಣಕ್ಕೆಲ್ಲಾ ಮೊದಲು ೪೦೦ ದೀಪಗಳನ್ನು ಇಡುತ್ತಾರೆಂದು ಪ್ರಕಟವಾಗಿದೆ.

ಸಿರಾಂಪುರದ ಬಳಿ ಇರುವ ಹರಿಪುರದಲ್ಲಿ ಕೆಲವು ಮಂದಿ ಬಂಗಾಳಿಗಳು ದೊಡ್ಡಮನುಷ್ಯರಂತೆ ಪೋಷಾಕುಗಳನ್ನು ಧರಿಸಿಕೊಂಡು, ಗೋಪಾಲಚಂದ್ರ ಘೋಷ್ ಎಂಬ ಐಶ್ವರ್ಯವಂತನ ಮನೆಯನ್ನು ರಾತ್ರಿಹೊತ್ತು ನುಗ್ಗಿ ಮನೆಯವರಲ್ಲಿ ನಾಲ್ವರನ್ನು ಹೊಡೆದು ಗಾಯಮಾಡಿ, ಸುಮಾರು ೨,೦೦೦ ರೂಪಾಯಿನ ಆಸ್ತಿಯನ್ನು ಕಳುವುಮಾಡಿಕೊಂಡು ಹೋಗಿದ್ದಾರೆ.

ಹಿಂದುಸ್ಥಾನದ ಕಸಬು ಕೈಗಾರಿಕೆಗಳನ್ನು ಪ್ರೋತ್ಸಾಹಪಡಿಸಿ ಅಭಿವೃದ್ಧಿಗೆ ತರುವುದಕ್ಕೋಸ್ಕರ ಅಯೋಧ್ಯೆಯ ದೊಡ್ಡ ಮನುಷ್ಯರು ಸೇರಿ ಒಂದು ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಈ ಸಂಘಕ್ಕೆ ರಾಜಾ ರಾಂಪಾಲ್ ಸಿಂಗರವರು ಪ್ರೆಸಿಡೆಂಟರಾಗಿಯೂ, ರಾಜಾ ಪೃಥುವಿಪಾಲ್ ಸಿಂಗರವರು ವೈಸ್ ಪ್ರೆಸಿಡೆಂಟರಾಗಿಯೂ ಬ್ಯಾರಿಸ್ಟರ್ ಮ|| ಎ ಪಿ ಸೇನ್‌ರವರು ಸೆಕ್ರೆಟರಿಯಾಗಿಯೂ ನಿಂತು ಕಾರ್ಯಾರಂಭ ಮಾಡಿರುವರು.

ಪೂರ್ವ ಬಂಗಾಳಾ ಮತ್ತು ಆಸ್ಸಾಂ ಎಂಬ ಹೊಸ ಅಧಿಪತ್ಯದ ಮುಖ್ಯ ಪಟ್ಟಣವಾದ ಢಾಕಾ ನಗರದಲ್ಲಿ ದೇಶ ಭಾಷೆಯ ವಾರ ಪತ್ರಿಕೆಯಲ್ಲಿ ಅದರ ಎಡಿಟರಾದ ಇಂದ್ರಚಂದ್ರ ಘೋಷ್ ಎಂಬಾತನು ಪ್ರಜೆಗಳಲ್ಲಿ ಸರ್ಕಾರದವರ ಮೇಲೆ ದ್ವೇಷಾಸೂಯೆಗಳನ್ನು ಉಂಟುಮಾಡಿ ಪ್ರಜಾಶಾಂತಿಗೆ ಭಂಗಬರುವಂಥಾ ವಾಕ್ಯಗಳನ್ನು ಬರೆದನೆಂದು ಹೇಳಿ ಸರ್ಕಾರದವರು ಆತನನ್ನು ದಸ್ತಗಿರಿ ಮಾಡಿದ್ದಲ್ಲದೆ, ಆತನ ಮನೆಯನ್ನು ಜಪ್ತಿಮಾಡಿದರು.

ಅಗ್ರಾ ಪಟ್ಟಣದಲ್ಲಿ ಮುಂದಿನ ತಿಂಗಳಲ್ಲಿ ಕಸಬುಗಳ ಪ್ರೋತ್ಸಾಹಕ್ಕಾಗಿ ಒಂದು ಮಹಾ ಸಭೆಯು ನಡೆಯುವುದು. ಸುಲ್ತಾನ್‌ಪುರದ ಡೆಪ್ಟಿ ಕಮಿಷನರ್ ರಾದ ಖಾನ್ ಬಹದೂರ್ ಎ ಯೂಸುಫ್ ಅಲಿಯವರು ಸಭೆಯ ಪ್ರೆಸಿಡೆಂಟ್ ರಾಗಿ ಚುನಾಯಿಸಲ್ಪಟ್ಟಿದ್ದಾರೆ. ಆ ತರುವಾಯ ಸಂಘಸಂಸ್ಕರಣ ಸಮಾಜವನ್ನು ನಡೆಸುತ್ತಾರೆ. ಈ ಸಭೆಯಲ್ಲಿ ಸ್ಕೂಲುಗಳ ಇನ್‌ಸ್ಪೆಕ್ಟರಾಗಿರುವ ರಾಯ್ ಬಹದೂರ್ ಜ್ಞಾನೇಂದ್ರನಾಥ ಚಕ್ರವರ್ತಿಯವರು ಅಗ್ರಸ್ಥಾನವನ್ನು ವಹಿಸುವದಾಗಿ ಒಪ್ಪಿಕೊಂಡಿದ್ದಾರೆ.

ಕಲ್ಕತ್ತಾ ಪಟ್ಟಣದಲ್ಲಿರುವ ಕುಮಾರ್‌ತುಲಿ ಎಂಬ ಜನರು ಒಂದು ದೊಡ್ಡ ಚಪ್ಪರವನ್ನು ಹಾಕಿ, ಅದರಲ್ಲಿ ತಮ್ಮ ದೇವರನ್ನು ಇಟ್ಟು, ಪೂಜೆ ಉತ್ಸವಾದಿಗಳನ್ನು ನಡಿಸುತ್ತಿರುವಾಗ ಸಾವಿರಾರು ಜನರು ಗುಂಪು ಸೇರಿದ್ದರು. ಆ ಸಮಯದಲ್ಲಿ ಚಪ್ಪರಕ್ಕೆ ಬೆಂಕಿ ಬಿದ್ದು ಉರಿಯಲಾರಂಭಿಸಿತು. ಅನೇಕಾನೇಕರು ಸ್ಥಾನದ ಮೇಲೆ ಆಸೆಯನ್ನು ತೊರೆದು ಕುಣಿದಾಡಿ ಹೊರಕ್ಕೆ ಬರಬೇಕೆಂದು ಪ್ರಯತ್ನಿಸಿದರು. ಅವರಲ್ಲಿ [illegible] ಮಂದಿಗೆ ಸಣ್ಣ ಗಾಯಗಳಾಗಿ ೮ ೧೦ ಜನರು ಕಾಲವಾದರೆಂದು ತಿಳಿದುಬಂದಿದೆ.

ಕಲ್ಕತ್ತಾ, ಬೊಂಬಾಯಿ, ಮದ್ರಾಸು ಇರುವ ಟಂಕಸಾಲೆಗಳಲ್ಲಿ ಕಳೆದ ವರುಷ ೧೬,೩೩೬ ಲಕ್ಷ ರೂಪಾಯಿ ನಾಣ್ಯಗಳು ಛಾಪಾ ಆದವು, ಅಂದರೆ, ಹಿಂದಿನ ವರುಷಕ್ಕಿಂತ ೮ ಕೋಟಿ ರೂಪಾಯಿ ಕಡಮೆ. ವರ್ತಕರು ೮೫೦ ಲಕ್ಷ ರೂಪಾಯಿನ ಬಂಗಾರವನ್ನು ಟಂಕಸಾಲೆಗಳಿಗೆ ಕೊಟ್ಟು, ನಾಣ್ಯಗಳನ್ನು [illegible] ಕಳೆದ ವರುಷ [illegible] ಒಂದಾಣೆಯ ನಿಕ್ಕಲ್ ನಾಣ್ಯಗಳನ್ನು ಛಾಪಾ ಹಾಕಿದ್ದರಲ್ಲಿ ಗವರ್ನ್‌ಮೆಂಟಿನವರಿಗೆ ೧೫ ಲಕ್ಷ ರೂಪಾಯಿಯೂ, ಕಂಚಿನ ನಾಣ್ಯಗಳನ್ನು ತಯಾರು ಮಾಡಿದ್ದರಲ್ಲಿ ೧೭ ಲಕ್ಷ ಲಾಭವುಂಟಾದಂತಾಗಿದೆ.

ಹಿಂದುಸ್ಥಾನದ ವಾಯವ್ಯ ಸರಹದ್ದಿನ ಸಂರಕ್ಷಣೆಗಾಗಿ ನೇಮಿಸಿದ್ದ ದೇಶೀಯ ಸೈನಿಕರ ಪೈಕಿ ಗುಲ್ ಬೈರಾಂ ಖಾನ್ ಎಂಬವನೂ ಇನ್ನು ಕೆಲವು ಸಿಪಾಯಿಗಳೂ ಸೈನ್ಯವನ್ನು ಬಿಟ್ಟು ತಪ್ಪಿಸಿಕೊಂಡು ಹೋದದ್ದಲ್ಲದೆ, ಕೆಲವು ಜನರನ್ನು ಕೊಂದುಹಾಕಿ, ಯುದ್ಧಸಾಮಗ್ರಿಗಳನ್ನೂ ಕುದುರೆಗಳನ್ನೂ ಸಾಗಿಸಿಕೊಂಡು ಹೋದರು. ಇವರನ್ನು ಹಿಡಿದು ಶಿಕ್ಷಿಸುವುದಕ್ಕೆ ಕ್ಯಾಪ್ಟನ್ ಲಾರಿಂಗ್‌ಯವರು ಕೆಲವು ಸೈನ್ಯಸಮೇತ ನುಗ್ಗಿಹೋಗಿ ಅವರನ್ನು ಸಂಧಿಸಿ ಯುದ್ಧಮಾಡಿ, ಜಯಿಸಿ, ಚದರಿಸಿಬಿಟ್ಟರು. ಈ ಕದನದಲ್ಲಿ ಆ ಇಂಗ್ಲಿಷ್ ಸೈನ್ಯಾಧಿಪತಿಯೂ ನಾಲ್ಕಾರು ಮಂದಿ ಸೈನಿಕರೂ ಕೊಲೆಯಾದರೆಂದು ತಿಳಿದುಬಂದಿದೆ.

ಹಿಂದಿನ ಶನಿವಾರ ಹೂಗ್ಲಿ ಪಟ್ಟಣದ ಪ್ರದರ್ಶನ ಶಾಲೆಯಲ್ಲಿ ಒಂದು ಮೇಜಿನ ಮೇಲೆ ಸಿಡಿಮದ್ದಿನ ಗುಂಡು ಸಿಕ್ಕಿತು. ಅದು ಒಂದು ಮಡಿಕೆಯಲ್ಲಿತ್ತು. ಅದರ ಮೇಲೆ ಪ್ರದರ್ಶನದ ಸೆಕ್ರೆಟರಿ ಮ|| ಬಾಬು ವಸಂತ ಕೃಷ್ಣ ವಿಶ್ವಾಸರಿಗೆ ಅದನ್ನು ತಲಪಿಸಬೇಕೆಂದು ವಿಳಾಸ ಬರೆದಿತ್ತು. ಅದೇ ರೀತಿ ಆ ಮಡಿಕೆಯನ್ನು ಅವರ ಎದುರಿಗೆ ಎಟ್ಟಿ ನೋಡಿದಾಗ ಅದರೊಳಗಿದ್ದ ಸಿಡಿಮದ್ದಿನ ಗುಂಡು ಸಿಕ್ಕಿತು. ಎಲ್ಲರೂ ಗಾಬರಿಬಿದ್ದು ಅದನ್ನು ಪೊಲೀಸಿನವರ ವಶಕ್ಕೆ ಒಪ್ಪಿಸಿದರು. ಪೊಲೀಸಿನವರು ಪತ್ತೆ ತರದೂದು ನಡಿಸಿ, ಇಬ್ಬರು ಬಂಗಾಳಿ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದ್ದಾರೆ.

ಅಫ್ಘಾನಿಸ್ಥಾನದಲ್ಲಿ ಒಳ್ಳೇ ವ್ಯಾಕ್ಸಾರಸಗಳನ್ನು ತಯಾರುಮಾಡುವುದಕ್ಕೆ ಒಬ್ಬ ಕೆಲಸಗಾರನು ನಾನಾಹನಡುತ್ತಿದ್ದಾನೆ. ಅಲ್ಲಿಂದ ಇತರ ಕಡೆಗಳಿಗೆ ಈ ವೈದ್ಯಪ್ರಮೇಯಗಳನ್ನು ರಫ್ತುಮಾಡಿ, ತುಂಬಾ ಸಂಪಾದನೆ ಮಾಡಬೇಕೆಂಬುದೇ ಆತನ ಉದ್ದೇಶವಾಗಿರುವಂತೆಯೂ, ಗವರ್ನ್‌ಮೆಂಟಿನವರು ಅವರಿಗೆ ಬೇಕಾದ ಸಹಾಯಗಳನ್ನು ಒದಗಿಸಿಕೊಡುವಂತೆ ಮಾಡಿಕೊಟ್ಟಿರುವುದಾಗಿಯೂ ಪ್ರಕಟವಾಗಿದೆ. ದ್ರಾಕ್ಷಾರಸಗಳು ಹೇರಳವಾಗಿ ತಯಾರಾದಾಗ್ಯೂ ಅವು ಅಫ್ಘಾನಿಸ್ಥಾನದಿಂದ ಸಾಗಿಹೋಗುವುದಕ್ಕೆ ಸುಲಭವಾದ ಮಾರ್ಗಗಳಿಲ್ಲದಿರೋಣದರಿಂದ ಈ ವ್ಯಾಪಾರದಿಂದ ಲಾಭವೇನೂ ಹುಟ್ಟುವಹಾಗಿಲ್ಲವೆಂದು ಹೇಳಬಹುದಾಗಿದೆ.

ಬಂಗಾಳಾ ಲೆಫ್ಟಿನೆಂಟ್ ಗವರ್ನರಾದ ಸರ್ ಎಡ್ವರ್ಡ್ ಬೇಕರ್‌ಯವರು ಪೂರಿ (ಜಗನ್ನಾಥ)ಕ್ಕೆ ದಯಮಾಡಿದ್ದ ವೇಳೆಯಲ್ಲಿ ಅಲ್ಲಿನ ಭಗವಾನ್ ದಾಸ್ ಮನುಜದಾಸ್ ಮತ್ತು ರಘುನಂದನ ರಾಮಾನುಜದಾಸ್ ಎಂಬೀ ಇಬ್ಬರು ಮಹಂತರುಗಳು ಆ ಪಟ್ಟಣದಲ್ಲಿ ಯಾತ್ರಾರ್ಥಿಗಳಿಗಾಗಿ ಒಂದು ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ಉದ್ದೇಶಿಸಿ, ಮೊದಲನೆಯವರು ೨,೦೦೦ ರೂಪಾಯನ್ನೂ ಎರಡನೆಯವರು ೫,೦೦೦ ರೂಪಾಯನ್ನೂ ಹಾಕಿ, ಒಟ್ಟು ಹಣವನ್ನು ಸರ್ಕಾರದವರ ವಶಕ್ಕೆ ವಹಿಸಿದರು. ಲೆಫ್ಟಿನೆಂಟ್ ಗವರ್ನರವರು ಅದನ್ನು ಸ್ವೀಕರಿಸಿ, ಆಸ್ಪತ್ರೆಯನ್ನು ನಿರ್ಮಾಣಮಾಡುತ್ತೇವೆಂದು ವಾಗ್ದಾನಮಾಡಿದ್ದಲ್ಲದೆ, ಇಬ್ಬರು ಮಹಂತರುಗಳನ್ನೂ ಬಹಳವಾಗಿ ವಂದಿಸಿರುತ್ತಾರೆ.

ಕಳೆದ ತಿಂಗಳ ಅಂತ್ಯಭಾಗದಲ್ಲಿ ಹಿಂದುಸ್ಥಾನದ ವಾಯುವ್ಯ ಸರಹದ್ದಿನ ಬಳಿ ಇರುವ ಕೋಹಾಟ್ ಮತ್ತು ತಿರಾಹ್ ಪ್ರಾಂತ್ಯಗಳಿಂದ ಕೆಲವು ಜನರು ಗುಂಪುಕಟ್ಟಿಕೊಂಡು ಬಂದು, ಕೋಹಾಟ್ ಬಜಾರು ರಸ್ತೆಯಲ್ಲಿ [illegible] ದ್ದರು. ಒಬ್ಬ ಜಮೀದಾರನು ಇಪ್ಪತ್ತು ಮಂದಿ ಪೊಲೀಸಿನವರೊಡನೆ ಅಲ್ಲಿಗೆ ಹೋಗಿ ತಾ ೨೬ನೇ ಬೆಳಿಗ್ಗೆ ಅವರನ್ನು ಸುತ್ತಿಕೊಂಡರು. ಅವರು [illegible]

ಹಾಗುವದಿಲ್ಲವೆಂದು ಹೇಳಿದಾಗ ಅವರಿಗೂ ಪೋಲೀಸಿನವರಿಗೂ ಜಗಳ ಆದ ನಂತರ ಕೈ ಕೈ ಸೇರಿ ಹೊಡೆದಾಡಿದರು. ಶಸ್ತ್ರಗಳಲ್ಲಿ ಹನ್ನೊಂದು ಮಂದಿ ಕೊಲ್ಲಲ್ಪಟ್ಟರು, ಒಬ್ಬನು ಗಾಯಪಟ್ಟು ಸೆರೆ ಸಿಕ್ಕಿದನು. ಪೋಲೀಸಿನವರಲ್ಲಿ ಒಬ್ಬನು ಸತ್ತನು, ಇಬ್ಬರು ಸಿಪಾಯಿಗಳೂ ಒಬ್ಬ ಗ್ರಾಮಸ್ಥನೂ ಗಾಯಪಟ್ಟರು.

* * *

ಫಿರೋಜ್‌ಪುರದ ಬಳಿ ಸರ್ಕಾರಕ್ಕೆ ಸೇರಿದ ಕೆಲವು ಬಂದೂಕುಗಳು ಕಳುವಾದವು. ಪೋಲೀಸಿನವರು ಈ ಮೊಕದ್ದಮೆಯಲ್ಲಿ ಇಪ್ಪತ್ತೆರಡು ಜನರನ್ನು ವಶ್ತಗಿರಿ ಮಾಡಿದ್ದಾರೆ.

* * *

ಕಳೆದ ವಾರ ಹಿಂದೂಸ್ಥಾನದಲ್ಲೆಲ್ಲಾ ೩,೩೫೪ ಜನರು ಪ್ಲೇಗ್ ಉಪದ್ರವದಲ್ಲಿ ಕಾಲವಾಗಿರುತ್ತಾರೆ. ಪಂಜಾಬ್ ಆಧಿಪತ್ಯದಲ್ಲಿ ೧,೧೧೪, ಮದರಾಸು ಪ್ರಾಂತ್ಯ... ಬೊಂಬಾಯಿ ಆಧಿಪತ್ಯ ೪೫೫, ಸಂಯುಕ್ತ ಆಧಿಪತ್ಯಗಳು ೫೪೬, ಬಂಗಾಳ ೩೫೧, ಬರ್ಮ ೩೦೪, ಮಧ್ಯಪ್ರಾಂತ್ಯಗಳು ಮತ್ತು ಬೀರಾರ್ ೪೮೩, ಮೈಸೂರು ಸಂಸ್ಥಾನ ೧೨೩, ಹೈದರಾಬಾದ್ ಸಂಸ್ಥಾನ ೭೫, ಮಧ್ಯ ಇಂಡಿಯಾ ೧೮, ರಾಜಪುಟಾನಾ ೧೯೦, ಮದರಾಸ್ ಆಧಿಪತ್ಯ ೪೮.

* * *

ಮದರಾಸ್ ಪಟ್ಟಣದ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮಿ ॥ ಎಸ್ ಕಾಯಿಸ್ ಎಂಬುವರು ತಾವು ಇದ್ದ ಸವಾರಿ ಬಂಗಲೆಯ ಬೀದಿಗೆ ಹೋಗಿ ನಾಗೂಡ್ ಎಂಬ ಸೇಟುರು ಮನೆಯಲ್ಲಿಲ್ಲದ ವೇಳೆ ಒಳಕ್ಕೆ ನುಗ್ಗಿ ಘೋಷಾ ಹೆಂಗಸರಿಗೆ ಅವಮಾನಪಡಿಸಿದರೆಂದೂ, ಮನೆಗೆ ಬರಬೇಕೆಂದು ಮೊದಲೇ ತಿಳಿಸಲಿಲ್ಲವೆಂದೂ, ಹಾಗೆ ಮನೆ ನುಗ್ಗಿದರಿ ಎಂದು ಕೇಳಿದಾಗ ಕಂದಾಯವನ್ನು ವಸೂಲು ಮಾಡುವುದಕ್ಕೆ ಬಂದೆನೆಂದು ಉತ್ತರಕೊಟ್ಟದ್ದಲ್ಲದೆ ಕೈಲಿದ್ದ ಕರ್ಚಿಸಿಹೋಟು ಗಳನ್ನು ಬಲಾತ್ಕಾರವಾಗಿ ಕಿತ್ತುಕೊಂಡಿದ್ದಾರೆಂದೂ ಆ ವರ್ತಕನು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವರ ಮೇಲೆ ಫಿರ್ಯಾದು ಮಾಡಿರುತ್ತಾನೆ.

* * *

ದಕ್ಷಿಣ ಕೆನರಾ ಜಿಲ್ಲೆಗೆ ಸೇರಿದ ಕಾಸರಗೋಡ್ ತಾಲ್ಲೂಕಿನ ಮುನ್ಸಿಫ್ ಕೋರ್ಟಿನಲ್ಲಿ ಕಳೆದ ೧೯೦೮ನೇ ಇಸವಿಯಿಂದಲೂ ಕನ್ನಡದೇ ಸರ್ಕಾರಿ ಭಾಷೆಯಾಗಿತ್ತು. ಅಂದರೆ, ಕೈಫಿಯತ್ತುಗಳನ್ನೂ, ಲೆಕ್ಕಪತ್ರಗಳನ್ನೂ ಕನ್ನಡ ಲಿಪಿಯಲ್ಲೇ ಬರೆಯುತ್ತಿದ್ದರು. ಈಗಲೂ ಅಲ್ಲಿನ ತಾಲ್ಲೂಕ್ ಮತ್ತು ಡಿಸ್ಟ್ರಿಕ್ಟ್ ಕೋರ್ಟುಗಳಲ್ಲಿ ಕಾಗದ ಲೆಕ್ಕಪತ್ರಗಳನ್ನೆಲ್ಲಾ ಕನ್ನಡದಲ್ಲೇ ಇಟ್ಟಿದ್ದಾರೆ. ಈಗ ಆ ಮುನ್ಸಿಫ್ ಕೋರ್ಟಿನಲ್ಲಿ ಮಾತ್ರ ಕನ್ನಡಕ್ಕೆ ಪ್ರತಿಯಾಗಿ ಮಲೆಯಾಳ ಭಾಷೆಯಲ್ಲಿ ಕೈಫಿಯತ್ತು ಲೆಕ್ಕಾಚಾರ ಮುಂತಾದವನ್ನು ಇಟ್ಟು ನಡಿಸಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ. ಅಲ್ಲಿನ ಪ್ರಜೆಗಳು ಇದನ್ನು ತಪ್ಪಿಸಿ ಹಿಂದಿನಂತೆಯೇ ಕನ್ನಡ ಬಾಷೆಯನ್ನು ಇಟ್ಟುಕೊಡಬೇಕೆಂದು ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡಿದ್ದಾರೆ.

* * *

ಬಂಗಾಳದ ಗವರ್ನಮೆಂಟಿನವರು ಪೂರ್ವ ಬಂಗಾಳ ಸ್ಟೇಟ್ ರೈಲ್ವೆ ದಾರಿಯ ಉದ್ದಕ್ಕೂ ಕೆಲವು ಗ್ರಾಮಗಳಲ್ಲಿ ಶಿಕ್ಷಾರ್ಥವಾದ ಪೋಲೀಸ್ ಸಿಬ್ಬಂದಿಯನ್ನು ನೇಮಿಸಿರುತ್ತಾರೆ. ದುಷ್ಟ ಜನರು ಆ ಮಾರ್ಗದಲ್ಲಿ ಹೋಗಿಬರುವ ರೈಲ್ ಗಾಡಿಗಳಿಗೆ ಸಿಡಿಮದ್ದಿನ ಗುಂಡುಗಳನ್ನು ಎಸೆಯುತ್ತಲೂ, ಪ್ರಾಣಹಾನಿ ಮಾಡುತ್ತಲೂ ಬಂದಿರುವುದರಿಂದ ಈ ದುಷ್ಕೃತ್ಯವನ್ನು ತಡೆಯುವುದಕ್ಕಾಗಿ ಪೋಲೀಸಿನವರನ್ನು ಗೊತ್ತುಮಾಡಿದರು. ಅವರ ಸಿಬ್ಬಂದಿ ಖರ್ಚು ತಿಂಗಳಿಗೆ ೨೦೦ ರೂಪಾಯಿ ಆಗುವುದರಿಂದ, ಈ ಹಣವನ್ನು ಆಯಾ ಗ್ರಾಮಗಳ ಪ್ರಜೆಗಳಿಂದ ವಸೂಲ್ಮಾಡಬೇಕೆಂದೂ, ಆ ಪ್ರಾಂತ ಅಧಿಕಾರಿಗಳು ನಿರ್ಣಯಿಸಿದ್ದಾರೆ. ಈ ಶಿಕ್ಷೆಯನ್ನು ಮಾಡುವಂಥಾ ಜನರು ಮಾತ್ರ ಈ ಕಂದಾಯವನ್ನು ಕೊಡಬೇಕಾದದ್ದಿಲ್ಲವೆಂದೂ ಹುಕುಂ ಕೊಟ್ಟಿದ್ದಾರೆ.

* * *

ಕುಂಭಕೋಣದಲ್ಲಿ ಮಹಾಮಾಘೋತ್ಸವವು ಕಳೆದ ಗುರುವಾರದಿಂದ ಪ್ರಾರಂಭವಾಯಿತು. ದಿನ ಒಂದಕ್ಕೆ ೮-೧೦ ಸಲ ರೈಲ್ ಗಾಡಿಗಳು ಜನಗಳನ್ನು ಕರೆದುಕೊಂಡು ಹೋಗಿ ಬಿಡುತ್ತಿವೆ. ಪ್ರಜಾ ಸಮೃದ್ಧಿಗೂ ಆರೋಗ್ಯಕ್ಕೂ ಕುಂದು ಕೊರತೆಗಳುಂಟಾಗದಂತೆ ಸರ್ಕಾರದವರೂ ಪ್ರಜೆಗಳ ಮುಖಂಡರೂ ಬಹಳ ಎಚ್ಚರಿಕೆಯಿಂದ ಏರ್ಪಾಡುಗಳನ್ನು ಮಾಡಿರುತ್ತಾರೆ. ಮ್ಯುನಿಸಿಪಾಲಿಟಿಯವರು ಪ್ರಜಾ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಸುಮಾರು ೫೦ ಸಾವಿರ ರೂಪಾಯಿ ಖರ್ಚು ಮಾಡಿದರು. ಕಳೆದ ಶನಿವಾರ ಮುಖ್ಯದಿನವಾದದ್ದರಿಂದ ಜನಸಂದಣಿಯು ಬಹು ವಿಶೇಷವಾಗಿ ಕೂಡಿತ್ತು. ಆರೋಗ್ಯಕರವಾದ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸರ್ಕಾರದವರು ಕೆಲವು ಕೊಳವೆ ಬಾವಿಗಳನ್ನು ತೋಡಿಸಿದರು, ಕೊಳಗಳಲ್ಲಿ ನೀರು ತುಂಬಿಸಿಯೂ ಅನುಕೂಲಪಡಿಸಿದರು. ಮದರಾಸ್ ಗವರ್ನರವರು ಅಲ್ಲಿಗೆ ದಯಮಾಡಬೇಕೆಂದಿದ್ದರು, ಇತರ ಕೆಲಸಗಳ ನಿಮಿತ್ತ ಆ ಪ್ರಯಾಣವನ್ನು ನಿಲ್ಲಿಸಿಬಿಟ್ಟರೆಂದು ತಿಳಿದು ಬಂದಿದೆ.

* * *

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಕಲಾಕಾಂಕರದ ರಾಜಾ ರಾಂಪಾಲ್ ರವರು ಕಾಲವಾದರೆಂದು ಪ್ರಕಟವಾಗಿದೆ. ಇವರು ದೇಶಹಿತಕ್ಕಾಗಿ ಬಹಳ ಕೆಲಸ ಮಾಡಿದ್ದರು, ಹಿಂದೂಸ್ಥಾನದಲ್ಲೂ ವಿಲಾಯಿತಿಯಲ್ಲೂ ಹೆಸರುವಾಸಿಯನ್ನು ಪಡೆದಿದ್ದರು. ಹಿಂದೂಸ್ಥಾನದ ರಾಷ್ಟ್ರೀಯ ಸಭೆಯನ್ನು (ನ್ಯಾಷನಲ್ ಕಾಂಗ್ರೆಸ್) ಸ್ಥಾಪಿಸುವುದರಲ್ಲಿ ಮುಂದಾಳುಗಳಾಗಿದ್ದರು. ಸಂಯುಕ್ತ ಆಧಿಪತ್ಯ ಗವರ್ನರವರ ಮಂತ್ರಾಲೋಚನಾ ಸಭೆಯ ಮೆಂಬರಾಗಿದ್ದು, ರಾಜ್ಯಭಾರದ ಕೆಲಸಗಳನ್ನು ಕುರಿತು ಬಹು ವಿಶೇಷ ಬುದ್ಧಿಕುಶಲತೆ ಪ್ರಜಾಹಿತಚಿಂತನೆಗಳಿಂದ ಚರ್ಚೆಗಳನ್ನು ನಡಿಸಿದವರು. ಇವರು ವಿಲಾಯಿತಿಯಲ್ಲಿ ಕೆಲವು ಕಾಲವಿದ್ದು, ಇಂಗ್ಲಿಷ್ ಸ್ತ್ರೀಯನ್ನು ವರಿಸಿ ವಿವಾಹಮಾಡಿಕೊಂಡು ಇಲ್ಲಿಗೆ ಬಂದು "ಹಿಂದೂಸ್ಥಾನ್" ಎಂಬ ಪ್ರಸಿದ್ಧವಾದ ಒಂದು ವಾರಪತ್ರಿಕೆಯನ್ನು ವಿಶೇಷ ವೈಭವದಿಂದಲೂ, ಸ್ವತಂತ್ರವಾಗಿಯೂ ನಡಿಸುತ್ತಾ ಇದ್ದರು. ಇಂಥಾ ಸತ್ಪುರುಷರು ಕಾಲವಾದದ್ದು ಆ ಪ್ರಾಂತ್ಯದ ಜನರಿಗೆ ವಿಶೇಷವಾಗಿಯೂ, ದೇಶಕ್ಕೆ ಸಾಮಾನ್ಯವಾಗಿಯೂ ತುಂಬಾ ನಷ್ಟವಾಗಿರುತ್ತದೆ.

* * *

ವಿಲಾಯಿತಿಯ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುತ್ತಿರುವ ಇಂಡಿಯಾ ಕೌನ್ಸಿಲ್ ಸಭೆಗಳ ಪರಿವರ್ತನ ವಿಷಯವಾದ ಹೊಸ ಕಾನೂನಿನಲ್ಲಿ ಲೆಫ್ಟಿನೆಂಟ್ ಗವರ್ನರುಗಳ ಸಹಾಯಕ್ಕೆ ಎಗ್ಸಿಕ್ಯುಟಿವ್ ಕೌನ್ಸಿಲ್‌ಗಳನ್ನು ಸ್ಥಾಪಿಸಿ ಕೊಡಬೇಕೆಂಬುದು ಒಂದು ಭಾಗವಾಗಿದೆ. ಈ ಭಾಗವು ಸದ್ಯದಲ್ಲಿ ಅಗತ್ಯವಿಲ್ಲವೆಂಬ ಕಾರಣದಿಂದ ಪ್ರಭುಗಳ ಸಭೆಯಲ್ಲಿ ಚರ್ಚೆಯಾಗುತ್ತಿದೆ. ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟಿನವರು ಈ ಭಾಗವನ್ನು ಬಿಟ್ಟು ಬಿಡಬೇಕೆಂದು ಪಟ್ಟುಹಿಡಿದ ಅಭಿಪ್ರಾಯವು ಸಹಜವಾದದ್ದಲ್ಲವೆಂದೂ, ಲೆಫ್ಟಿನೆಂಟ್ ಗವರ್ನರುಗಳಿಗೂ ಎಗ್ಸಿಕ್ಯುಟಿವ್ ಕೌನ್ಸಿಲ್ಲುಗಳನ್ನು ಸಹಾಯಕ್ಕೆ ಕಲ್ಪಿಸಿ ಕೊಡಬೇಕೆಂದು ಲಾರ್ಡ್ ಮಾರ್ಲೀಯವರು ಕಾನೂನಿನಲ್ಲಿ ಸೇರಿಸಿರುವುದೇ ಸರಿಯಾಗಿದೆ ಎಂದೂ, ಅದರಂತೆ ಕಾನೂನ್ ಆಗಬೇಕೆಂದೂ ಇಂಗ್ಲಿಷ್ ಗವರ್ನಮೆಂಟಿಗೆ ಅರಿಕೆ ಮಾಡಿಕೊಳ್ಳುವ ದಕ್ಕೋಸ್ಕರ ಕಲ್ಕತ್ತಾ ಪಟ್ಟಣದಲ್ಲಿ ಟೌನ್ ಹಾಲ್ ಬಂಗಲೆಯಲ್ಲಿ ಒಂದು ಮಹಾ ಸಭೆಯು ಮೊನ್ನೆ ಸೋಮವಾರ ಸಾಯಂಕಾಲ ನಡೆಯಿತು. ಈ ಸಭೆಗೆ ಒಂದು ಮಹಾಮಂದಿಯ ದೊಡ್ಡ ಮನುಷ್ಯರು ಬಹುಮಂದಿ ಹೋಗಿದ್ದರೆಂದು ತಿಳಿದುಬಂದಿದೆ.

* * *

ವಾಣಿಯಂಬಾಡಿಯಲ್ಲಿ ಭಾರೀ ಚರ್ಮದ ವರ್ತಕನಾದ ಪೈಲಪ್ಪೆ ಇಬ್ರಾಹಿಂ ಸಾಹೇಬ್ ಎಂಬ ಸಾಹುಕಾರರು ಕಳೆದ ವಾರ ೭೦ನೇ ವಯಸ್ಸಿನಲ್ಲಿ ಕಾಲವಾದನು. ಮದರಾಸ್, ಬೆಂಗಳೂರು, ಉತ್ತರ ದೇಶಗಳಲ್ಲೆಲ್ಲಾ ಈತನ ಕೋಠಿಗಳೂ, ಏಜಂಟರೂ ಇರುತ್ತಾರೆ. ಚರ್ಮದ ವ್ಯಾಪಾರದಲ್ಲಿ ಈತನು ಮಹದೈಶ್ವರ್ಯವಂತನಾದನು. ಆದರೆ ಅದಕ್ಕೆ ತಕ್ಕಂತೆ ಈತನ ದಯಾಬುದ್ಧಿಯೂ ಪರೋಪಕಾರ ಚಿತ್ತವೃತ್ತಿಯೂ ಶ್ಲಾಘ್ಯವಾಗಿದ್ದವು. ಈತನು ಹಲವು ಧರ್ಮಕಾರ್ಯಗಳಿಗೆ ದ್ರವ್ಯ ಸಹಾಯಮಾಡುತ್ತಾ, ಅನೇಕ ಬಡಬಗ್ಗರನ್ನು ಸಂರಕ್ಷಣೆ ಮಾಡುತ್ತಾ ಇದ್ದನು. ವಾಣಿಯಂಬಾಡಿಯೊಳಗೆ ಈತನು ೧೦,೦೦೦ ರೂಪಾಯಿ ಖರ್ಚು ಮಾಡಿ ಒಂದು ಪಾಠಶಾಲೆಯನ್ನು ಕಟ್ಟಿಸಿ, ಅದು ಶಾಶ್ವತವಾಗಿ ನಡೆಯುವಂತೆ ೧೧,೦೦೦ ರೂಪಾಯಿ ಮೂಲಧನವನ್ನು ಕೊಟ್ಟಿರುತ್ತಾನೆ. ಅಲ್ಲಿ ಒಂದು ಬಾಲಿಕಾ ಪಾಠಶಾಲೆಯನ್ನೂ ಕಟ್ಟಿಸಿಕೊಟ್ಟನು. ಇಷ್ಟೇ ಅಲ್ಲ, ಕೆಲವು ವರುಷಗಳ ಕೆಳಗೆ ಪಾಲರ್ ನದಿಯ ಪ್ರವಾಹದ ದೆಸೆಯಿಂದ ಮನೆಮಠಗಳನ್ನು ಕಳೆದುಕೊಂಡಂಥಾ ಬಡಬಗ್ಗರಾದ ಪ್ರಜೆಗಳಿಗೆ ಕೆಲವು ಕಾಲದ ತನಕ ಅನ್ನವಸ್ತ್ರಗಳನ್ನು ಕೊಡಿಸಿ ಸಂರಕ್ಷಣೆ ಮಾಡಿದ್ದಲ್ಲದೆ, ಅನೇಕರಿಗೆ ಮನೆಗಳನ್ನೂ ಕಟ್ಟಿಸಿಕೊಟ್ಟಿರುತ್ತಾನೆ. ವೇಲೂರಿನಲ್ಲಿರುವ ಎರಡು ಪಾಠಶಾಲೆಗಳಿಗೆ ಬಹಳ ದ್ರವ್ಯಸಹಾಯ ಮಾಡಿರುವನು. ಇಂಥಾ ದಯಾಶಾಲಿಯು ಕಾಲವಾದ ವಿಷಯದಲ್ಲಿ ಅಲ್ಲಿನ ಜನರೆಲ್ಲಾ ವಿಷಾದಪಡುವುದೇನೂ ಆಶ್ಚರ್ಯವಲ್ಲ.

* * *

ಕಲ್ಕತ್ತಾ ಪಟ್ಟಣದಲ್ಲಿ ಅಲಿಪುರದ ಸಿಡಿಮದ್ದಿನ ಗುಂಡಿನ ಮತ್ತು ಸಿತೂರಿ ಗುಂಪಿನ ಮೊಕದ್ದಮೆಯು ವಿಚಾರಣೆಗೆ ಪ್ರಾರಂಭವಾಗಿ ತೊಂಬತ್ತೈದು ದಿನಗಳಾದವು. ಕೋರ್ಟಿನಲ್ಲಿ ಇದುವರೆಗೆ ೨೩೦ ಸಾಕ್ಷಿಗಳ ಹೇಳಿಕೆಯನ್ನು ಬರೆದುಕೊಂಡದ್ದಾಯಿತು. ಈ ಮೊಕದ್ದಮೆಗೆ ಸಂಬಂಧಪಟ್ಟ ೧,೦೦೦ ಕಾಗದ ಪತ್ರಗಳನ್ನು ಹಾಜರುಮಾಡಿದ್ದಾರೆ. ಸರ್ಕಾರದ ತರಫಿನ ಲಾಯರಾದ ಮಿ॥ ನಾರ್ಟನ್ ಎಂಬ ಪ್ರಸಿದ್ಧ ವಕೀಲರೂ, ಎದುರು ಕಕ್ಷಿಯ ವಕೀಲರೂ ಆರ್ಗುಮೆಂಟ್ ಮಾಡುವುದಕ್ಕೆ ಇನ್ನೂ ಎಷ್ಟು ದಿವಸ ತೆಗೆದುಕೊಳ್ಳುವರೋ ಇವರು ಹೇಳುವುದೆಲ್ಲಾ ಮುಗಿಯಬೇಕಾದರೆ ಕಡೇ ಪಕ್ಷ ಹದಿನೈದು ದಿನಗಳಾದರೂ ಹಿಡಿಯುವವೆಂದು ತಿಳಿಯುತ್ತದೆ. ಮುಖ್ಯ ಅಪರಾಧಿಯಾದ ಅರವಿಂದ ಘೋಷ್ ಎಂಬಾತನು ತನ್ನ ವಾಙ್ಮೂಲವನ್ನು ಬರೆದು ಒಪ್ಪಿಸಿರುತ್ತಾನೆ. ಅದರಲ್ಲಿ ತಾನು ನಿರಪರಾಧಿ ಎಂದೂ, ಸಿತೂರಿ ಕೋರರ ಗುಂಪು ಇತ್ತೆಂದು ಹೇಳುವ ಮಾಣಿಕ್‌ತೋಲಾ ಉದ್ಯಾನದ ಕಡೆ ತಾನು ಯಾವಾಗಲೂ ಹೋದದ್ದಿಲ್ಲವೆಂದೂ, ಹೇಮಚಂದ್ರನನ್ನು ತಾನು ಒಂದು ಸಲ ಮಾತ್ರ ನೋಡಿದ್ದೇನೆಂದೂ, ತಾನು ಗ್ರಂಥಗಳನ್ನು ರಚಿಸುವದರಲ್ಲೂ ಭಕ್ತಿ ವಿಷಯವನ್ನು ಕುರಿತು ಬೋಧನೆಮಾಡುವುದರಲ್ಲೂ ಉದ್ಯುಕ್ತನಾಗಿದ್ದುದರಿಂದ ತನ್ನ ಗೃಹಕೃತ್ಯ ವಿಚಾರವನ್ನು ಕೂಡ ನೋಡಿಕೊಳ್ಳುತ್ತಿರಲಿಲ್ಲವೆಂದೂ, ವೈರೇಂದ್ರನು ತನಗೆ ಯಾವ ಕಾಗದ ಪತ್ರವನ್ನೂ ಬರೆದಿಲ್ಲವೆಂದೂ, ತಾನು ಉಪನ್ಯಾಸಗಳನ್ನು ಮಾಡಿದಾಗ್ಯೂ ಯಾವ ಸಂದರ್ಭದಲ್ಲೂ ರಾಜದ್ರೋಹಕರವಾದ ಸಂಗತಿಗಳನ್ನು ಆಡಲಿಲ್ಲವೆಂದೂ ತನ್ನ ವಾಙ್ಮೂಲದಲ್ಲಿ ಒರೆದಿರುತ್ತಾನೆ.

ಮೈಸೂರು ಟ್ರಸ್ಟ್ ಬೋರ್ಡಿನ ವಿಚಾರಗಳು

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಮೆಂಬರುಗಳು ಕಳೆದ ಬುಧವಾರ ಬೆಳಗ್ಗೆ ಸಿಟಿ ಸೇರಿ ತಂಗಳು ಕಮಿಟಿಯ ಮೀಟಿಂಗನ್ನು ನಡಿಸಿದರು. ಆಗ ಚರ್ಚೆಯಾಗಿ ತೀರ್ಮಾನವಾಗಿರುವ ವಿಷಯಗಳ್ಯಾವುವೆಂದರೆ — (೧) ಸಂಸ್ಥಾನದೊಳಗೆ ಕಷ್ಟಕಾಲದ ಸಬಬು ಸರ್ಕಾರದವರು ನೌಕರರಿಗೂ ಗಳಿಗೆ ಭಾಗ್ಯದ ಅಲೋವೆನ್ಸನ್ನು ಕೊಡಬೇಕೆಂದು ತೀರ್ಮಾನ ಮಾಡಿರುತ್ತಾರಷ್ಟೆ. ಈ ಹಣವನ್ನು ಒದಗಿಸುವುದಕ್ಕೆ ಎಲ್ಲಾ ಬಾಬುಗಳಿಗೂ ಸ್ಯಾಂಕ್ಷನ್ ಮಾಡಿರುವ ಹಣಗಳ ಪೈಕಿ ಕೆಲ ಕೆಲವು ಭಾಗವನ್ನು ಕೊಡತಕ್ಕದ್ದಾಗಿ ಬಂದಿರುವ ಮೈಸೂರು ನಗರಾಭಿವೃದ್ಧಿಗೆ ಸ್ಯಾಂಕ್ಷನ್ ಮಾಡಿರುವ ಮೊಬಲಗಿನಲ್ಲೂ ಅದಕ್ಕಾಗಿ ೨೫,೦೦೦ ರೂಪಾಯಿ ವಾಪಸು ತೆಗೆದುಕೊಳ್ಳುತ್ತೇವೆಂದು ಹುಕುಂ ಕೊಟ್ಟಿದ್ದರು. ಮೆಂಬರುಗಳು ಈ ಹುಕುಮನ್ನು ಓದಿಸಿ ರಿಕಾರ್ಡು ಮಾಡಿಕೊಂಡರು. (೨) ಕೋಟೆಯ ದಕ್ಷಿಣಭಾಗದ ಹೊರಪಾರ್ಶ್ವದಲ್ಲಿ ಫೈವ್‌ಲೈಟ್ ಸ್ಕ್ವೇರ್ ಬಳಿ ಗ್ರಾಮಸಾರವು ಹರಿದುಹೋಗುತ್ತಿರುವ ದೊಡ್ಡ ಬಚ್ಚಲಿನ ಮೋರಿಯ ಭಾಗದಲ್ಲಿ ಕಮಾನು ಕಟ್ಟಿ ಅದರ ಮೇಲೆ ಮಣ್ಣು ಸುರಿದು ನೆಲ ಮಟ್ಟಮಾಡುವುದಕ್ಕೆ ಅಂದಾಜುಪಟ್ಟಿ ತಯಾರಾಗಿತ್ತು. ಇದನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿ, ಅದಕ್ಕಾಗಿ ೬,೫೫೦ ರೂಪಾಯಿ ವಿನಿಯೋಗಿಸಬಹುದೆಂದು ತಿಳಿಸಿರುತ್ತಾರೆ. ಮೆಂಬರುಗಳು ಇದನ್ನು ಓದಿಸಿ ರಿಕಾರ್ಡು ಮಾಡಿಕೊಂಡರು. (೩) ಲಕ್ಷ್ಮೀಪುರದ ಬಡಾವಣೆಯಲ್ಲಿ ಬಚ್ಚಲು ಮುಂತಾದವನ್ನು ಕಟ್ಟಿಸುವುದಕ್ಕೆ ಗವರ್ನಮೆಂಟಿನವರು ಅಂದಾಜುಪಟ್ಟಿಯಂತೆ ೧೭,೧೩೩ ರೂಪಾಯಿ ಸ್ಯಾಂಕ್ಷನ್ ಮಾಡಿರುವುದನ್ನು ಮೆಂಬರುಗಳು ಓದಿಸಿ ರಿಕಾರ್ಡು ಮಾಡಿಕೊಂಡರು. (೪) ಪಟ್ಟೆಗೇಗೂಡಿಗೆ ಸೇರಿದ ಆವರಣದಲ್ಲಿ ಬಚ್ಚಲ ನೀರು ಹರಿದುಹೋಗುವ ಮತ್ತು ಇತರ ಕಾಮಗಾರಿಗಳಿಗೆ ಗವರ್ನಮೆಂಟಿನವರು ಅಂದಾಜುಪಟ್ಟಿಯಂತೆ ೧೨,೭೬೩ ರೂಪಾಯಿ ಸ್ಯಾಂಕ್ಷನ್ ಮಾಡಿರುವುದನ್ನು ಓದಿ ರಿಕಾರ್ಡು ಮಾಡಿಕೊಂಡರು. (೫) ಪುಟ್ಟಣ್ಣಗೌಡರ ಮೂಲಕ ದೊಡ್ಡ ಕೆರೆಗೆ ನಡಿಸಿದ ಕಾಮಗಾರಿಗಾಗಿ ಅವರಿಗೆ ಇನ್ನೂ ೧,೨೫೦ ಚಿಲ್ಲರೆ ರೂಪಾಯಿ ಕೊಡಬೇಕಾಗಿದೆ ಎಂದು ಎಗ್ಸಿಕ್ಯುಟಿವ್ ಇಂಜಿನಿಯರವರು ಕಾಗದ ಬರೆದಿದ್ದರು. ಈ ವಿಷಯದಲ್ಲಿ ಕೆಲವು ಸಂಗತಿಗಳನ್ನು ತಿಳಿದುಕೊಳ್ಳಬೇಕಾಗಿದೆ ಎಂದು ಹೇಳಿ ಮೆಂಬರುಗಳು ಅದರ ಚರ್ಚೆಯನ್ನು ಇನ್ನೊಂದು ಸಲಕ್ಕೆ ಇಟ್ಟುಕೊಂಡಿದ್ದಾರೆ. (೬) ಎಗ್ಸಿಕ್ಯುಟಿವ್ ಇಂಜಿನಿಯರವರು ತಯಾರುಮಾಡಿರುವ ಹೊಸ ತರಹಾ ಪ್ಲಾನ್ಸು ಇಟ್ಟಿಗೆಗಳನ್ನು ಉಪಯೋಗಿಸಿ, ಚಿಕ್ಕಹರ್ಡ್ವಿಕ್ ಸ್ಕೂಲಿನಲ್ಲಿ ಹದಿನಾರು ಮನೆಗಳನ್ನು ಮಾದರಿಗಾಗಿ ಕಟ್ಟಿಸುತ್ತಿದ್ದಾರೆ. ಈ ಮಾದರಿಯಂತೆಯೇ ಇನ್ನೂ ಹದಿನಾಲ್ಕು ಮನೆಗಳನ್ನು ಕಟ್ಟಿಸುವುದಕ್ಕೆ ಹಣ ಸ್ಯಾಂಕ್ಷನ್ ಆಗಬೇಕೆಂದು ಅವರು ಟ್ರಸ್ಟ್ ಬೋರ್ಡಿಗೆ ಬರೆದಿದ್ದರು. ಸ್ಯಾನಿಟರಿ ಕಮೀಷನರವರು ಈಗ ಕಟ್ಟಿರುವ ಹೊಸ ತರಹಾ ಮನೆಗಳಲ್ಲಿ ಸೆಕೆಯು ಬಹಳ ಹೆಚ್ಚಾಗಿತೆಂದು ಅಭಿಪ್ರಾಯಪಟ್ಟಿರುತ್ತಾರೆ. ಮೆಂಬರುಗಳು ಈ ವಿಷಯವನ್ನು ಚರ್ಚೆಮಾಡಿ, ಈಗ ಕಟ್ಟಿರುವಂಥಾ ಮನೆಗಳಲ್ಲಿ ಸೆಕೆಯು ಎಷ್ಟುಮಟ್ಟಿಗೆ ಇದೆ ಎಂಬುದನ್ನು ಗೊತ್ತುಮಾಡಬೇಕೆಂದೂ, ಆ ತರುವಾಯ ಇತರ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭಿಸಬಹುದೆಂದೂ ತೀರ್ಮಾನಮಾಡಿದರು. ಇನ್ನು ಕೆಲವು ವಿಷಯಗಳು ಸ್ವಲ್ಪ ಸ್ವಲ್ಪ ಚರ್ಚೆಯಾಗಿ, ಮೆಂಬರುಗಳು ಮೊಬಾ ಆದಾಯ ಸ್ಥಳಗಳನ್ನು ಅಜಮಾಯಿಷಿ ಮಾಡಿ ಇತ್ಯರ್ಥಪಡಿಸಬೇಕೆಂದು ಗೊತ್ತುಮಾಡಿದರು.

ಬಾತ್ಮಿದಾರರಿಗೆ ನೋಟೀಸು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು — ಎಡಿಟರ್.

ಕರೆಸ್‌ಪಾಂಡೆನ್ಸ್.

ಗ್ರಾಮವಾಸಿಗಳ ಕಷ್ಟಗಳು.

ಅಯ್ಯಾ,

ಮದ್ದೂರು ತಾಲ್ಲೂಕು ದೊಡ್ಡ ಮಾಲೂರು ಗ್ರಾಮದಲ್ಲಿ ಇದು ವರೆಗೂ ಊರಿನಲ್ಲಿನ ಭಾವಿಗಳಲ್ಲಿ ಸ್ವಲ್ಪ ಮಟ್ಟಿಗೆ ಪಾನಕ್ಕೆ ನೀರು ಸಿಕ್ಕುತ್ತಿತ್ತು. ಈಗ ೧೦-೧೫ ದಿವಸಗಳ ಲಾಗಾಯ್ತು ಊರಿನಲ್ಲಿರುವ ಭಾವಿಗಳೆಲ್ಲ ಪೂರ್ತಿಯಾಗಿ ಬತ್ತಿಹೋಗಿ, ನೀರಿನ ಅವಶ್ಯವನ್ನು ತೋರಿಸಿದವು. ಅಲ್ಲದೆ ಈ ಊರಿಗೆ ೨ ಫರ್ಲಾಂಗ್ ದೂರದಲ್ಲಿ ಸಜ್ಜನರ ಬಿರಣ್ಣನೆಂಬುವರು ತಮ್ಮ ಸ್ವಂತ ಜಮೀನಿನಲ್ಲಿ ಭಾವಿ ತೋಡಿಸಿದರು. ಅದರಲ್ಲಿ ಊರಿನವರೆಲ್ಲರೂ ನೀರು ತಂದು ಪಾನಕ್ಕೆ ಉಪಯೋಗಿಸುತ್ತಾ ಇದ್ದರು. ಇದನ್ನು ನೋಡಿ ಸದರಿ ಬಿರಣ್ಣನವರು ನೀರು ಕಡಮೆಯಾಗುವದೆಂಬ ಭಯದಿಂದ ಆ ಭಾವಿಯಲ್ಲಿ ಕಲಿಗನ್ನು ಹಾಕಿ ನೀರನ್ನು ದುರ್ಗಂಧವಾಗಿ ಕೆಡಿಸಿ ಬಿಟ್ಟರು. ಇದರಿಂದ ನೀರಿನ ಅವಶ್ಯವನ್ನು ಎಷ್ಟು ವರ್ಣಿಸಿದರೂ ಸಾಲದು. ಇತ್ತೀಚೆಗೆ ಈ ಗ್ರಾಮದ ವೈಶ್ಯರ ಇದರಿಂದ ಬಿಟ್ಟರು. ಈ ಗ್ರಾಮಕ್ಕೆ ಸಮೀಪದಲ್ಲಿಯೇ ತಮ್ಮ ಸ್ವಂತ ಖರ್ಚಿನಿಂದ ಭಾವಿ ತೋಡಿಸುತ್ತಾ ಇದ್ದಾರೆ. ಇದರಲ್ಲಿ ಸಿಕ್ಕುವ ನೀರು ಬಹಳ ಉಪ್ಪಾಗಿರುವದರಿಂದ ಪಾನಕ್ಕೆ ಯೋಗ್ಯವಾಗಿಲ್ಲ. ಜೀವಜಂತುಗಳ ಪಾನಕ್ಕೆ ಯೋಗ್ಯವಾಗಿದೆ. ಸದರಿ ವೀರಣ್ಣನವರ ಭಾವಿಯ ನೀರು ಪಾನಕ್ಕೆ ಯೋಗ್ಯವಾದದ್ದು. ಇದರಲ್ಲಿ ನೀರು ತಂದು ಪಾನಕ್ಕೆ ಉಪಯೋಗಿಸಿಕೊಳ್ಳುವ ಹಾಗೆ ದಯಾಳುಗಳಾದ ಸರ್ಕಾರದವರು ಹುಕುಂ ಅಪ್ಪಣೆ ಕೊಡಿಸುವ ಈ ಗ್ರಾಮದ ನೀರಿನ ಅವಸ್ಥೆಯು ಪರಿಹಾರವಾಗುತ್ತದೆ.

ಅಲ್ಲದೆ ಈ ಗ್ರಾಮಕ್ಕೆ ಗೌರ್ನಮೆಂಟ್ ಸ್ಕೂಲು ಬಂದು ೧೩ ವರ್ಷಗಳಾಯಿತು. ಆ ಲಾಗಾಯ್ತು ಬಹಳ ಹೀನಸ್ಥಿತಿಯಲ್ಲಿದ್ದುದು ಕಳೆದ ೬ ವರ್ಷಗಳ ಲಾಗಾಯ್ತು ಬಹಳ ಒಳ್ಳೇ ಸ್ಥಿತಿಯಲ್ಲಿರುತ್ತದೆ.

ಈ ಗ್ರಾಮದ ಜನಗಳಿಗೆ ಅಂದಿಗಿಲ್ಲದೆ ಕಷ್ಟಪಡುತ್ತಿರುವುದನ್ನು ನೋಡಿ ದಯಾಳುಗಳಾದ ಸರ್ಕಾರದವರು ಈ ಊರಿನ ರಿಲೀಫ್ ಕಾಮಗಾರಿ ನಡಿಸುವುದಕ್ಕೆ ಹಣ ಸ್ಯಾಂಕ್ಷನ್ ಮಾಡಿದ್ದಾರೆ. ಕೆಲಸಕ್ಕೆ ಇನ್ನೂ ಪ್ರಾರಂಭವಿಲ್ಲ. ಪ್ರಜೆಗಳು ಹೊಟ್ಟೆಗಿಲ್ಲದೆ ಈ ಗ್ರಾಮದ ದೊಡ್ಡ ಕೆರೆಯಲ್ಲಿ ಕಕ್ಕರಿಕೆ ಎಂಬ ಗಿಡವನ್ನು ಹಾಕಿ, ಅದರ ಲಾಭದಿಂದ ತಂದು ಅದರ ಬೀಜಗಳಿಂದ ಜೀವಿಸುತ್ತಾ ಇದ್ದಾರೆ. ಆದ್ದರಿಂದ ದಯಾಳುಗಳಾದ ಘನ ಸರ್ಕಾರದವರು ಜಾಗ್ರತೆಯಾಗಿ ರಿಲೀಫ್ ಕಾಮಗಾರಿಯನ್ನು ಪ್ರಾರಂಭಿಸಿ ಪ್ರಜೆಗಳನ್ನು ಉದ್ಧಾರ ಮಾಡುವರೆಂದು ಪ್ರಾರ್ಥಿಸುತ್ತೇನೆ.

ಬಾತ್ಮಿದಾರ.

ತಾಲ್ಲೂಕು ವರ್ತಮಾನಗಳು.

ಚಿತ್ರದುರ್ಗ.—ಕಳೆದ ತಿಂಗಳು ೨೫ನೇ ತಾ ಭಾನುವಾರ ಇಲ್ಲಿನ ಆಯರನ್ ಸ್ಕೂಲಿನಲ್ಲಿ ಮೇಷ್ಟರು ಉಪಾಧ್ಯಾಯರುಗಳೂ ಅಭಿಮಾನಶಾಲಿಗಳೂ ಸೇರಿ ನಡಿಸಿದ ಕಾರ್ಯಗಳಿವೆಂದರೆ — ಮೈ ॥ ಸ ॥ ಕೃಷ್ಣರಾಯರು ಬಡ ವಿದ್ಯಾರ್ಥಿಗಳನ್ನು ತಮ್ಮ ಮನೆಯಲ್ಲಿಟ್ಟುಕೊಂಡು ಸಂರಕ್ಷಿಸುತ್ತಿದ್ದಾರೆ. ರೆವ್ ಜ ವೆಸ್ಲಿಯವರು ನಾಯಕರ ಹಾಗೆ ೩ ಗಂಟೆ ಹೊತ್ತು ಪ್ರತಿದಿನವೂ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಕಲಿಸುತ್ತಾರೆ. ಭಟ್ಟರಾಜು ಬಾಲಕರಿಗೆ ಫೀಜನ್ನು ಮಾಫ್ ಮಾಡಿಸಿಕೊಡಬೇಕೆಂದು ಗವರ್ನಮೆಂಟಿಗೆ ವಿಜ್ಞಾಪನಾ ಪತ್ರಿಕೆಯನ್ನು ಕಳುಹಿಸುತ್ತಾಯಿದೆ. ಆ ಸ್ಕೂಲಿನ ಹೆಡ್ ಮಾಸ್ಟರವರು ಇಬ್ಬರು ಭಟ್ಟರಾಜು ಬಾಲಕರಿಗೆ ಫೀಜನ್ನು ಮಾಫ್ ಮಾಡಿಕೊಟ್ಟಿರುವುದಲ್ಲದೆ ಪುಸ್ತಕಗಳನ್ನು ಕೊಡುತ್ತಿರುವದಾಗಿ ತಿಳಿದಿದೆ. ಈ ಹೊಸ ಸಂಘಕ್ಕೆ ಚಂದಾ ಕೊಡುವುದಕ್ಕೆ ಕೆಲವು ಜನರು ಮುಂದೆ ಬರುತ್ತಿದ್ದಾರೆ. ಇದಕ್ಕಾಗಿ ಅವರಿಗೆ ಪ್ರಾರ್ಥನಾಪತ್ರಿಕೆಗಳು ರಶೀತಿ ಪುಸ್ತಕಗಳು ಕೊಡಲಾಗಿವೆ. ಈ ಭಟ್ಟರಾಜು ಸಂಗದವರು ಒಡೆಯರನ್ನು ಕೇಳಿ ನಗದು ೫೦ ರೂಪಾಯನ್ನೂ ೫೦ ರೂಪಾಯಿನ ಸಾಮಾನುಗಳನ್ನೂ ಸಂಪಾದಿಸಿದರು. ಈ ಹೊಸದಾಗಿ ನಮ್ಮ ಸರ್ವಸ್ವವನ್ನೂ ವಿನಿಯೋಗಿಸಿ ಅದನ್ನು ಅಭಿವೃದ್ಧಿಗೆ ತರಬೇಕೆಂದು ಶ್ರಮಪಡುತ್ತಿರುವ ಮೈ ॥ ಹನುಮಂತರಾಯರವರಿಗೆ ಈ ಹೊಸದಾಗಿ ಸ್ವಲ್ಪ ಸಹಾಯಧನವನ್ನು ಗವರ್ನಮೆಂಟಿನವರು ಕೊಡುವುದಕ್ಕೆ ವಿಜ್ಞಾಪನೆ ಮಾಡಿಕೊಳ್ಳಬೇಕೆಂದು ಮೆಂಬರುಗಳು ಚರ್ಚೆಮಾಡಿ, ಈ ವಿಚಾರವನ್ನು ಇನ್ನೊಂದು ವೇಳೆ ಇತ್ಯರ್ಥಮಾಡೋಣವೆಂದು ತೀರ್ಮಾನ ಮಾಡಿಕೊಂಡರು.

ತರೀಕೆರೆ.—ಇಲ್ಲಿಗೆ ಸುಮಾರು ೧೨ ಮೈಲಿ ದೂರದಲ್ಲಿರುವ ಲಕ್ಕವಳ್ಳಿ ಗ್ರಾಮದ ಸಮೀಪದಲ್ಲಿ ಚಿನ್ನದ ಗಣಿಯಲ್ಲಿ ಕೆಲಸ ಮಾಡುತ್ತಿರುವ ದೇವಮ್ಮ ಎಂಬ ಸ್ತ್ರೀಯೂ ಇನ್ನೂ ಕೆಲವರೂ ತಮ್ಮ ಸ್ವಂತ ಸ್ಥಳವಾದ ತಿಪಟೂರಿಗೆ ಹೋಗಿ ತಮ್ಮ ಕಾಯಿಲೆ ತೀರಿಸಿಕೊಂಡು ಪುನಃ ಕೆಲಸದ ಮೇಲೆ ಹಾಜರಾಗುವದಕ್ಕೆ ರೈಲ್ ಹತ್ತಿ, ಇದೇ ತಿಂಗಳು ಮೊದಲನೇ ತಾರೀಖಿನಲ್ಲಿ ತರೀಕೆರೆ ಸ್ಟೇಷನ್ನಿನಲ್ಲಿ ಇಳಿಯಲು, ರೈಲ್ವೆ ಪೋಲೀಸ್ ಜವಾನರಿಬ್ಬರು ಮುಲ್ಕಿಂದ ಕೆಲವು ಜನರನ್ನು ಹಿಡಿದು, ಭಾವಿಯಿಂದ ೨೦ ಕೊಡ ನೀರು ಸೇದಿ ಹಾಕುವವರಾಗ ಅಪ್ಪಣೆ ಕೊಟ್ಟಂತೆಯೂ, ಈ ಜನರು ಪೋಲೀಸ್ ಜವಾನರ ಮಾತನ್ನು ಕೇಳದೆ ಹೋದದ್ದಕ್ಕಾಗಿ ಅವರು ಇವರನ್ನು ಹೊಡೆದು ಕಳುಹಿಸಿಬಿಟ್ಟರೆಂದೂ, ಏಟುತಿಂದ ಜನರು ಅದೇ ಸಾಯಂಕಾಲ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಪರ್ಯಾದು ಕೊಟ್ಟಿರುತ್ತಾರೆಂದು ಕೇಳುತ್ತೇನೆ. ಈ ಕ್ಷಾಮಕಾಲದಲ್ಲಿ ಹೊಟ್ಟೆ

ತೋರಿಕೊಳ್ಳುವದಕ್ಕಾಗಿ ಸ್ವಂತ ಸ್ಥಳವನ್ನೂ, ಹೆಂಡತಿ ಮಕ್ಕಳನ್ನೂ ಬಿಟ್ಟು ಕೂಲಿಗೆ [illegible] ಹೀಗೆ ಮಾಡುವದು ತುಂಬಾ ಅನ್ಯಾಯ. ಮೇಲ್ಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ತುಂಬಾ ಗಮನಕೊಟ್ಟು ಬಡವರನ್ನು ಕಾಪಾಡುವರೆಂದು ಕೋರುತ್ತೇನೆ.—ಪ್ಲೇಗಿನ ಭಯದಿಂದ ಊರು ಬಿಟ್ಟು ಗುಡ್ಡಗಳಿಗೆ ಹೋದಂಥಾ ಜನಗಳ ಪೈಕಿ ಕೆಲವರು ಊರಿನಲ್ಲಿ ಹೋಗಿ ವಾಸಮಾಡುವದಕ್ಕಿಂತಲೂ ಗುಡ್ಡಗಳಲ್ಲಿಯೇ ಇರುವದು ಉತ್ತಮವೆಂದು ಯೋಚಿಸಿ, ಈಗಲೂ [illegible] ಗುಡ್ಡಗಳಲ್ಲಿಯೇ ಇರುತ್ತಾರೆ. ಊರಿಗೆ ಬಂದು ಸೇರಿರುವವರಲ್ಲಿ ಕೆಲವರು ತಮ್ಮ ಗುಡ್ಡಗಳನ್ನು ಕಿತ್ತು ಹಾಕದೆ ಹಾಗೆಯೇ ಇಟ್ಟಿರುತ್ತಾರೆ. ಇದರ ಯೋಚನೆ ಏನೆಂಬುವದನ್ನು ನಮಗೆ ತಿಳಿಯಲಿಲ್ಲ. ಪ್ರತಿದಿನವೂ ಬಿಸಿಲಿನ ತಾಪವು ಜೋರಾಗುತ್ತಾ [illegible] ಬರುತ್ತಿದೆ. ಬಿಸಿಲಿನ ತಾಪದಿಂದ ಇಲ್ಲಿನ ಜನರು ಬಹಳ ಮುಖವರ್ಜಿ ವಹಿಸಿ ಕೆಲವು ಮಕ್ಕಳಿಗೆ ಬೇವು ಹಾಕಿಸುತ್ತಾರೆ. [illegible] ಹಾಕುವ ಏರ್ಪಾಡಿನಲ್ಲೇ ಇರುತ್ತಾರೆ. [illegible] ಟಪಾಲಿಗೆ ಸಂಬಂಧಪಟ್ಟ ಋಣದವರಿಗಳೂ ಒಬ್ಬ [illegible] ಇರುವರೆಂದು ಕೇಳುತ್ತೇನೆ. ಇಷ್ಟು ಜನವಿದ್ದಾಗ್ಯೂ ಟಪಾಲು [illegible] ನೇಮಿಸಿಲ್ಲ. ಟಪಾಲು ಮನೆಯಲ್ಲಿ ಅಲ್ಲಲ್ಲಿ ಕಳ್ಳರ ಬೆಳೆದಿರುತ್ತವೆ. ಈಗಲೇ ಅದನ್ನು ಪಾಕ್ ಮಾಡಿಸದೆ ಹೋದರೆ ಮಳೆಗಾಲದಲ್ಲಿ ಬಹಳ ಕೆಸರು ಬೆಳೆದುಕೊಂಡು, ವಿಷಜಂತುಗಳಿಗೆ ತಾವು ಮಾಡುವದರಲ್ಲಿ ಏನೂ ಸಂದೇಹವಿರಲಾರದು. ಆದ್ದರಿಂದ ನಮ್ಮ ಅಧಿಕಾರಿಗಳು ಈ ವಿಷಯಕ್ಕೆ ಗಮನ ಕೊಡುವರೆಂದು ನಂಬುತ್ತೇನೆ.

ದಾವಣಗೆರೆ.—ಇದೇ ತಿಂಗಳು ೪ನೇ ತಾ ಗುರುವಾರ ಸಾಯಂಕಾಲ ೫ ಗಂಟೆಗೆ ದಾವಣಗೆರೆ ಎ. ವಿ. ಸ್ಕೂಲಿನ ಮಕ್ಕಳಿಗೆ ಬಹುಮಾನ ಕೊಡಲೂ, ಮುಖ್ಯವಾಗಿ ಬಹಳ ಕಾಲದಿಂದ ಕೆಲಸ ಮಾಡಿ ಇದೇ ತಿಂಗಳಲ್ಲಿ ರಿಟೈರಾದ ಹೆಡ್ ಮಾಸ್ಟರ್ ಗುರುರಾಜಯ್ಯನವರಿಗೆ ಒಂದು ಅಡ್ರೆಸ್ ಕೊಡಲೂ ಒಂದು ದೊಡ್ಡ ಸಭೆಯು ಸೇರಿತು. ಆ ಸಭೆಗೆ ದಾವಣಗೆರೆ ಸಬ್ ಡಿವಿಜನ್ ಆಫೀಸರಾದ ಮ॥ ಸುಬ್ಬರಾಯರು ಅಗ್ರಾಸನವನ್ನು ವಹಿಸಿದ್ದರು. ಮತ್ತು ಈ ಊರಿನ ಅಮಲ್ದಾರರು, ಡಾಕ್ಟರು ಮತ್ತು ಇನ್ನೂ ಅನೇಕ ಸರಕಾರಿ ಉದ್ಯೋಗಸ್ಥರು, ಸ್ಕೂಲು ಮಾಸ್ತರುಗಳು, ಮುನಿಸಿಪಲ್ ಮೆಂಬರುಗಳು, ಅನೇಕ ವರ್ತಕರು ಸಹ ನೆರೆದಿದ್ದರು. ಮಕ್ಕಳು ನಾನಾ ವಿಧವಾದ ಆಟಗಳನ್ನು ಸಭಿಕರಿಗೆ ತೋರಿಸಿದ ಮೇಲೆ ಡಿ. ಇನ್ಸ್ಪೆಕ್ಟರ್ ಆಗಿರುವ ಮ॥ [illegible] ಕಳೆದ ವರ್ಷದ ಸ್ಕೂಲಿನ ರಿಪೋರ್ಟನ್ನು ಓದಿದರು. ಅನಂತರ ಮ॥ ಗುರುರಾಜಯ್ಯನವರನ್ನು ಒಂದು ಪ್ಲಾಟ್ಫಾರಂನಲ್ಲಿ ಕುಳ್ಳಿರಿಸಿ, ಉಪಾಧ್ಯಾಯರ ಪರವಾಗಿಯೂ ಮಕ್ಕಳ ಪರವಾಗಿಯೂ ಒಂದು ಶ್ರೇಷ್ಠವಾದ ಅಡ್ರೆಸ್ಸನ್ನು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಓದಿ ತಮ್ಮ ಕೃತಜ್ಞತೆಯನ್ನು ತೋರಿಸಿದರು. ಬಳಿಕ ಚೇರ್ಮನ್ನರವರು ಮ॥ ಗುರುರಾಜಯ್ಯನವರ ಗುಣಗಳನ್ನು ಬಹಳವಾಗಿ ಕೊಂಡಾಡಿದ್ದು ಮಾತ್ರವಲ್ಲದೆ, "ಹಿಂದೆ ನಾನು ಅಮಲ್ದಾರಿಯ ಕೆಲಸವನ್ನು ನೋಡುವಾಗ್ಯೂ ಇಷ್ಟು ವೃದ್ಧಿಯಾಗಿರಲಿಲ್ಲ. ಈ ದಿನ ನಾನು ಕೇಳಿದ ರಿಪೋರ್ಟನ್ನು ಮತ್ತು ಈ ಬೇರೆ ಉಪಾಧ್ಯಾಯರು ಹೆಡ್ ಮಾಸ್ಟರಿಗೆ ಕೊಟ್ಟ ಅಡ್ರೆಸ್ಸನ್ನು ಕೇಳುವಾಗ್ಯೂ ಬಹಳ ವೃದ್ಧಿಯಲ್ಲಿದೆ ಎಂಬುವದಕ್ಕೆ ಏನೂ ಸಂದೇಹವಿಲ್ಲ. ಇವರಿಗಿಂತ ರಿಟೈರಾಗುವ ಹೆಡ್ ಮಾಸ್ಟರ ಮಹನೀಯರು ಯಾರೂ ಬೇರೆ ಇಲ್ಲ. ಇವರ ಹೆಸರು ಎಂದೆಂದಿಗೂ ಇವರ ಗುಣವೂ ಇವರ ಕೆಲಸವೂ ಹಾಗೆಯೇ ಪ್ರಕಾಶಿಸುತ್ತಾ ಇವೆ ಎಂಬುವದಕ್ಕೆ ಏನೂ ಸಂದೇಹವಿಲ್ಲ" ಎಂದು ಹೇಳಿದರು. ಮ॥ ಗುರುರಾಜಯ್ಯನವರು ಈ ಊರಿನಲ್ಲಿ ೩೮ ವರ್ಷ ಕೆಲಸ ಮಾಡಿದವರು. ಅವರಲ್ಲಿಯೂ ೨೫ ವರ್ಷಗಳು ಎ. ವಿ. ಸ್ಕೂಲ್ ಹೆಡ್ ಮಾಸ್ಟರಾಗಿದ್ದರು. ಇವರು ಈ ಊರಿಗೆ ಬರುವಾಗ್ಯೂ ೬೪ ಮಕ್ಕಳು ಮಾತ್ರ ಬರುತ್ತಿದ್ದರು. ಈಗಲಾದರೋ ೬೫೦ ಮಕ್ಕಳು ಓದುತ್ತಿದ್ದಾರೆ. ಈ ಮಕ್ಕಳ ಪೈಕಿ ೫೦ಕ್ಕೆ ಮೇಲ್ಪಟ್ಟು ಇಂಗ್ಲೀಷ್ ವಿದ್ಯಾಭ್ಯಾಸವನ್ನು ಮಾಡುತ್ತಾ ಇದ್ದಾರೆ. ಇನ್ನು ಕೆಲವು ದಿವಸ ಇವರೇ ಇರುತ್ತಿದ್ದರೆ ಖಂಡಿತಾ ಈ ಸ್ಕೂಲು ಹೈ ಸ್ಕೂಲು ಆಗುತ್ತಿತ್ತೆಂಬುವದಕ್ಕೆ ಏನೂ ಸಂದೇಹವಿಲ್ಲ. ಅವರಿಗೆ ವಿಶ್ರಾಂತಿಯನ್ನು ಕೊಡಲೋಸುಗ ಗೌವರ್ನಮೆಂಟಿನವರು ರಿಟೈರ್ ಮಾಡಿದರು. ಈ ಸಂಗತಿಯು ಇಲ್ಲಿನ ಉಪಾಧ್ಯಾಯರಿಗೂ ಪ್ರಜೆಗಳಿಗೂ ತುಂಬಾ ವ್ಯಸನಕ್ಕೆ ಕಾರಣವಾಗಿದೆ. ಆದರೂ ಅವರು ೩೮ ವರ್ಷ ಕೆಲಸಮಾಡಿ ಗೌರ್ನಮೆಂಟಿನಿಂದಲೂ ಪ್ರಜೆಗಳಿಂದಲೂ ಒಳ್ಳೇ ಹೆಸರನ್ನು ಪಡೆದಿರುವದನ್ನು ನೋಡುವದಾದರೆ ನಾವೆಲ್ಲರೂ ಆನಂದಪಡಬೇಕಾಗಿದೆ. ಇದುಮಾತ್ರವಲ್ಲದೆ ಇವರ ಕಾಲದಲ್ಲಿ ಅನೇಕ ಉಪಾಧ್ಯಾಯರೂ ಮಕ್ಕಳೂ ಈ ಸ್ಥಳದಿಂದ ಹೋಗಿ ತುಂಬಾ ಅಭಿವೃದ್ಧಿ ಸ್ಥಿತಿಯಲ್ಲಿದ್ದಾರೆ. ಮತ್ತು ಇವರ ಕಾಲದಲ್ಲಿದ್ದ ಮೇಲಿನ ಅಧಿಕಾರಿಗಳು ಇವರ ವಿಷಯದಲ್ಲಿ ಇವರ ಕೆಲಸದ ವಿಷಯವಾಗಿ ಒಳ್ಳೇ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇಷ್ಟುಮಾತ್ರವಲ್ಲದೆ ಈ ಊರಿನ ಪ್ರಜೆಗಳ ಮಕ್ಕಳಿಗೆ ಇವರು ಒಬ್ಬ ಶ್ರೇಷ್ಠನಾದ ತಂದೆಯೋಪಾದಿಯಲ್ಲಿದ್ದಾರೆಂದೂ ಬರೆದಿದ್ದಾರೆ. ಇಂಥಾವರ ಮೇಲ್ಪಂಕ್ತಿಯನ್ನೇ ಮೈಸೂರಿನ ಎಲ್ಲಾ ಉಪಾಧ್ಯಾಯರೂ ಅನುಸರಿಸಿದರೆ ಎಷ್ಟೋ ಒಳ್ಳೇದಾಗುವದೆನ್ನುವದಕ್ಕೆ ಏನೂ ಸಂದೇಹವಿಲ್ಲ. ಭಗವಂತನು ಇವರಿಗೆ ಆಯುರಾರೋಗ್ಯಗಳನ್ನು ಕೊಟ್ಟು ಕಾಪಾಡಲೆಂಬುವದೇ ನಮ್ಮೆಲ್ಲರ ಕೋರಿಕೆಯಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ಕೋಲಾರದ ಚಿನ್ನದ ಗಣಿಗಳ ಸ್ಯಾನಿಟರಿ ಬೋರ್ಡಿಗೆ ಒಳಪಟ್ಟ ಪ್ರದೇಶದಲ್ಲೆಲ್ಲಾ ಬಲಾತ್ಕಾರವಾಗಿ ಬೇವು ಹಾಕುವ ಕಾನೂನನ್ನು ಒಂದು ವರುಷದ ವರೆಗೆ ಜಾರಿಗೆ ತರಲಾಗಿದೆ.

ಮ॥ ಸಾಹುಕಾರ್ ಪುಟ್ಟಸ್ವಾಮಿ ಚೆಟ್ಟಿಯವರನ್ನು ತಿಪ್ಟೂರು ಮ್ಯುನಿಸಿಪಲ್ ಬೋರ್ಡಿಗೆ ಮೆಂಬರಾಗಿ ನೇಮಕ ಮಾಡಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮ॥ ಟಿ. ರಾಯಲು ಚೆಟ್ಟಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ ಮ॥ ಕೆ. ಎಸ್. ಚಂದ್ರಶೇಖರ ಅಯ್ಯರವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ಎರಡು ವಾರ ಜಾಸ್ತಿ ಮಾಡಿದೆ.

ಕ್ರೈಂಟ್ ರಾಕ್ಸ್ ಪೋಲೀಸ್ ಆಕ್ಟಿಂಗ್ ಅ॥ ಸೂಪರಿಂಟೆಂಡೆಂಟ್ ಮ॥ ಕೆ. ಸಿ. ಬಸವರಾಜೆ ಅರಸಿನವರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ರವರ ಕೈಕೆಳಗೆ ಸ್ಪೆಷಲ್ ಡ್ಯೂಟಿ ಮೇಲೆ ಇರುವ ಅ॥ ಇಂಜಿನಿಯರ್ ಮ॥ ಟಿ. ಅರುಣಾಚಲ ಮುದಲಿಯಾರವರಿಗೆ ಒಂಬತ್ತು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅಮಲ್ದಾರ್ ಮ॥ ಎನ್. ರಾಮಸ್ವಾಮಿ ಅಯ್ಯಂಗಾರ್ಯರು ನವೆಂಬರ್ ತಾ ೪ ರಲ್ಲಿ ಚನ್ನಗಿರಿ ತಾಲ್ಲೂಕ್ ಛಾರಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ.

ಹಜೂರು ವಿಚಾರಿ ಛಾರಜನ್ನು ವಹಿಸಿರುವ ಮ॥ ಕೆ. ಕೃಷ್ಣ ಅಯ್ಯರವರು ಫಿಬ್ರವರಿ ತಾ ೮ ರಲ್ಲಿ ಕೆಲಸದ ಮೇಲೆ ಹಾಜರಾದದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ.

ಮಾಗಡಿ ತಾಲ್ಲೂಕು ಅಮಲ್ದಾರ್ ಮ॥ ಎನ್. ಗೋಪಾಲಕೃಷ್ಣ ಅಯ್ಯಂಗಾರ್ಯರ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಆರು ತಿಂಗಳ ರಜಾ ಕೊಟ್ಟಿದೆ. ಈ ಪೈಕಿ ಒಂದು ತಿಂಗಳ ಹದಿನೆಂಟು ದಿನಗಳು ಪ್ರಿವಿಲೆಜ್ ರಜಾ ದಂತೆ ಎಣಿಸಲ್ಪಡುವುದು.

[illegible] ಡೆಪ್ಯುಟಿ ಕಮಿಷನರ್‌ರವರ ಆಫೀಸ್ ಜುಡಿಷಲ್ ಹೆಡ್ ಮುನ್ಷಿ ಎಂ. ವೆಂಕಟಸ್ವಾಮಿರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮಾಗಡಿ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಮೈಸೂರು ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮ॥ ಎಸ್. ಪಿ. ರಾಜಗೋಪಾಲಾಚಾರ್ಯರಿಗೆ ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ. ಮತ್ತು ಅವರು ವಿಚಾರಣೆ ಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಹೇಳಿಕೆಯನ್ನು ಸ್ವಹಸ್ತದಿಂದ ಇಂಗ್ಲೀಷಿನಲ್ಲಿ ಬರೆದುಕೊಳ್ಳತಕ್ಕದ್ದು.

ಮುಂದೆ ಹೇಳುವ ಅ॥ ಕಮಿಷನರುಗಳ ವರ್ಗವರ್ಗ ಹುಕುಂ ಮಾಡಿದೆ.

(೧) ಮ॥ ಬಿ. ವೆಂಕೋಬರಾಯರನ್ನು ಕಡೂರಿನಿಂದ ಬೆಂಗಳೂರು ಡಿಸ್ಟ್ರಿಕ್ಟು ಕುಣಿಗಲ್ ಸಬ್ ಡಿವಿಜನ್ ಛಾರಜಿಗೆ.

ಮ॥ ೨ ರಂಗನಾಥರಾವ್ ಸಾಹೇಬ್ ಅವರನ್ನು ಕಡೂರು ಸಬ್ ಡಿವಿಜನ್ ಛಾರಜಿಗೆ.

ಚಿತ್ರದುರ್ಗದ ಸಬ್ ಡಿವಿಜನ್ ಆಫೀಸರ್ ಮ॥ ೪. ಪದ್ಮರಾಜಯ್ಯನವರು ವಿಚಾರಣೆ ಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಹೇಳಿಕೆಗಳನ್ನು ಸ್ವಹಸ್ತ ಇಂಗ್ಲೀಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿದೇಶ ವರ್ತಮಾನಗಳು.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ರಾಜ್ಯಭಾರವನ್ನು ನಡಿಸುವಂಥಾ ಪ್ರೆಸಿಡೆಂಟಿಗೆ ವರುಷಕ್ಕೆ ೩,೭೫,೦೦೦ ರೂಪಾಯಿ ಸಂಬಳ ಪಾವತಿ ಮಾಡಬೇಕೆಂದು ಅಲ್ಲಿನ ಪಾರ್ಲಿಮೆಂಟ್ ಮೆಂಬರುಗಳು ತೀರ್ಮಾನ ಮಾಡಿರುತ್ತಾರೆ.

ಯೂರೋಪಿನ ಮಧ್ಯಪ್ರಾಂತ್ಯಗಳು ಅಂದರೆ ಆಸ್ಟ್ರಿಯಾ, ಉತ್ತರ ಇಟಲಿ ಪ್ರದೇಶಗಳಲ್ಲಿ ಹಿಮವು ಬಹಳ ಜೋರಾಗಿ ಸುರಿಯಲಾರಂಭವಾಗಿದೆ. ಕೆಲವು ಕಡೆಗಳಲ್ಲಿ ಹಿಮಗಡ್ಡೆಗಳು ಆಪಾರವಾಗಿ ಹರಿದು ಬಂದು, ಬಹು ಜನರನ್ನು ಮುಳುಗಿಸಿ ಕೊಂದುಹಾಕಿರುತ್ತವೆ.

ಮ॥ ಬಾಲಗಂಗಾಧರ ತಿಲಕರ ಮತ್ತು ಪರಾಂಜಪೆಯವರ ಮೊಕದ್ದಮೆಗಳನ್ನು ವಿಲಾಯಿತಿಯ ಪ್ರಿವಿ ಕೌನ್ಸಿಲ್ ಎಂಬ ಕೋರ್ಟಿನಲ್ಲಿ ಅಪೀಲ್‌ಮಾಡಬೇಕೆಂದು ಅವರ ಕಡೆಯವರು ಅರ್ಜಿ ಹಾಕಿಕೊಂಡಿದ್ದರು. ಆ ಕೋರ್ಟಿನ ಜಡ್ಜಿಗಳು ಅಪೀಲನ್ನು ದಾಖಲ್ ಮಾಡಿಕೊಳ್ಳುವುದಿಲ್ಲವೆಂದು ತೀರ್ಮಾನವಾಡಿದರು.

ಇಂಗ್ಲಾಂಡಿಗೆ ಸೇರಿದ ಬರ್ಕನ್‌ಹೆಡ್ ಎಂಬ ತೀರಪಟ್ಟಣದಲ್ಲಿ ಹಡಗುಗಳು ನಿಲ್ಲುವದಕ್ಕೆ ಒಂದು ಅಡ್ಡಕಟ್ಟೆಯನ್ನು ಕಟ್ಟುತ್ತಿದ್ದರು. ಅದು ಕಳೆದವಾರ ಅಕಸ್ಮಾತ್ತಾಗಿ ಮುರಿದುಹೋಗಿ, ಅಲ್ಲಿ ಕೆಲಸಮಾಡುತ್ತಿದ್ದ ಜನರ ಪೈಕಿ ಹದಿನಾಲ್ಕು ಜನರು ಸಮುದ್ರದಲ್ಲಿ ಮುಳುಗಿ ಸತ್ತರೆಂದು ತಂತೀ ವರ್ತಮಾನ ಬಂದಿದೆ.

ವಿಲಾಯಿತಿಯ ಚಕ್ರವರ್ತಿ ಸಾರ್ವಭೌಮರವರು ತಮ್ಮ ಶರೀರ ಸ್ಥಿತಿಯನ್ನು ಸರಿಪಡಿಸಿಕೊಂಡು ಬರುವುದಕ್ಕಾಗಿ ಡಾಕ್ಟರುಗಳ ಅಭಿಪ್ರಾಯವನ್ನನುಸರಿಸಿ, ಫ್ರಾನ್ಸಿನ ದಕ್ಷಿಣ ಭಾಗದಲ್ಲಿರುವ ಬಾಟ್ಸ್ ಎಂಬ ಸ್ಥಳವನ್ನು ಕುರಿತು ಪ್ರಯಾಣಮಾಡಿದರು. ಅವರು ಎರಡು ತಿಂಗಳ ಕಾಲ ಅಲ್ಲಿ ಇದ್ದು ವಾಪಸು ಬರುವರೆಂದು ಪ್ರಕಟವಾಗಿದೆ.

ದಕ್ಷಿಣ ಆಫ್ರಿಕಕ್ಕೆ ಸೇರಿದ ನಟಾಲಿನಲ್ಲಿ ದಿನಿಜೂಲೂ ಎಂಬೊಬ್ಬ ದೇಶೀಯ ರಾಜನು ಇಂಗ್ಲಿಷ್ ಗವರ್ನಮೆಂಟಿನ ಮೇಲೆ ತಿರುಗಿಬಿದ್ದಿದ್ದ ದಂಗೆಕೋರರಿಗೆ ಆಶ್ರಯವನ್ನು ಕೊಟ್ಟನೆಂದು ಮೊಕದ್ದಮೆ ಬಂದು ವಿಚಾರಣೆಯಾಗಿ, ಆತನಿಗೆ ೪ ವರುಷ ಸಜಾವೂ ೧,೫೦೦ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು. ಈ ಮೊಕದ್ದಮೆಯನ್ನು ವಿಚಾರಣೆ ಮಾಡಿಸಿದ್ದಕ್ಕೆ ಗವರ್ನಮೆಂಟಿಗೆ ಒಂದೂವರೆ ಲಕ್ಷ ರೂಪಾಯಿ ಖರ್ಚಾಗಿರುತ್ತದೆ.

ವಿಲಾಯಿತಿ ರಾಜ್ಯದಲ್ಲಿ ೭೦ ವರುಷಗಳಿಗೆ ಮೇಲ್ಪಟ್ಟು ಜೀವನಕ್ಕಿಲ್ಲದೆ ಕಷ್ಟಪಡುತ್ತಿರುವಂಥಾ ಮುದುಕರಿಗೆಲ್ಲಾ ಪ್ರತಿ ವಾರಕ್ಕೂ ಐದು ಶಿಲ್ಲಿಂಗ್ (ರೂ. ೩-೧೨-೦) ಯಂತೆ ಸರ್ಕಾರದವರು ಪೆನ್ಷನ್ ಕೊಡಲಾರಂಭಿಸಿದಾಗಿನಿಂದ [illegible] ಇಂಗ್ಲಾಂಡಿನಲ್ಲಿ ೫೦,೦೦೦ ಮುದುಕರೂ ಮುದುಕಿಯರೂ ಬಡಸ್ಥಿತಿಯಲ್ಲಿಲ್ಲದಿದ್ದರೂ ಸರ್ಕಾರದಿಂದ ಪೆನ್ಷನ್ ಪಡೆದುಕೊಂಡಿದ್ದಾರೆಂದು ಗೊತ್ತಾಗಿದೆ. ಮಂತ್ರಿಯವರು ಈ ವಿಚಾರವನ್ನು ಕುರಿತು ತನಿಖೆಮಾಡಿಸುತ್ತೇವೆಂದು ತಿಳಿಸಿದ್ದಾರೆ.

ಆಸ್ಟ್ರೇಲಿಯಾದಲ್ಲಿ ಡಂಕನ್ ಮ್ಯಾಕಿಂಟೈರ್ ಎಂಬೊಬ್ಬನು ಮದುವೆ ಮಾಡಿಕೊಂಡು, ಹೆಂಡತಿಯ ಕೂಡ ಜಹಜಿನಲ್ಲಿ ವಿಲಾಯಿತಿಗೆ ಬಂದಿಳಿದನು. ಆ ಕೂಡಲೇ ಅಲ್ಲಿನ ಪೋಲೀಸಿನವರು ವಾರಂಟು ತೋರಿಸಿ ಅವನನ್ನು ದಸ್ತಗಿರಿ ಮಾಡಿದರು. ಆಗ ಅವನ ಬಳಿ ೪,೫೦೦ ರೂಪಾಯಿ ನಗದು ಸಿಕ್ಕಿತು. ಇವನು ಆಸ್ಟ್ರೇಲಿಯಾದಲ್ಲಿ ಒಂದು ವರ್ತಕರ ಕಂಪಿನಿಯ ಏಜಂಟನನ್ನು ಕಂಡು ಸುಳ್ಳಾದ ಟೆಲಿಗ್ರಾಫ್ ವರ್ತಮಾನವನ್ನು ತೋರಿಸಿ, ಆ ಏಜಂಟಿನಿಂದ ೧,೫೦೦ ರೂಪಾಯಿ ಪಡೆದುಕೊಂಡು ಮೋಸಮಾಡಿರುವುದಾಗಿ ಇವನ ಮೇಲೆ ಮೊಕದ್ದಮೆ ಆಗಿದೆ.

ಫೀಜೀ ದ್ವೀಪಗಳಿಗೆ ಹೋಗಿ ವಾಸಮಾಡಿಕೊಂಡು ಕಬ್ಬಿನ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಹಿಂದೂಸ್ಥಾನದ ಪ್ರಜೆಗಳು ದಂಗೆ ಏಳುವವರಾಗಿದ್ದರೆಂದು ಒಂದು ಪತ್ರಿಕೆಯು ಪ್ರಕಟಪಡಿಸಿತು. ಇದನ್ನು ಅಪವಾದವೆಂದು ಅಲ್ಲಿನ ಕಮಿಷನರವರು ಬರೆಯುವುದೇನೆಂದರೆ— ಇಲ್ಲಿ ಫೀಜೀ ಸ್ವದೇಶಿಗಳು ೮೭,೦೦೦ ಜನರೂ, ಹಿಂದೂಸ್ಥಾನದವರು ೩೮,೦೦೦ ಜನರೂ, ೩,೦೦೦ ಬಿಳಿಯ ಜನರೂ ಇರುತ್ತಾರೆ. ಹಾಗೇನಾದರೂ ಹಿಂದೂಸ್ಥಾನದವರು ದಂಗೆಯೆದ್ದರೆ ಫೀಜೀ ಜನರು ಬಿಳಿಯ ಜನರ ಪಕ್ಷದಲ್ಲಿ ನಿಂತು ಹಿಂದೂಸ್ಥಾನದವರ ಪಟಾಟೋಪವನ್ನು ಅಡಗಿಸಬಲ್ಲರು ಎಂಬುದೇ.

ವಿದ್ಯಾಭ್ಯಾಸಕ್ಕೆ ಮೊದಲಾದ ಕಾರಣಗಳಿಗೋಸ್ಕರ ಲಂಡನ್ ಪಟ್ಟಣದಲ್ಲಿ ವಾಸಮಾಡಿಕೊಂಡಿರುವಂಥಾ ಹಿಂದೂಸ್ಥಾನದ ಯೌವನಸ್ಥರ ಚರ್ಯೆಯು ಅಷ್ಟು ತೃಪ್ತಿಕರವಾಗಿಲ್ಲದೆ ಈಚೆಗೆ ಕೆಲವು ದುಷ್ಟ ಕೃತ್ಯಗಳನ್ನೂ ರಾಜದ್ರೋಹ ಕಾರ್ಯಗಳನ್ನೂ ಮಾಡಬೆಚ್ಚಿಸುತ್ತಿದ್ದಾರೆಂದು ತಿಳಿದು ಬಂದದ್ದರಿಂದ ಅಲ್ಲಿನ ಪೋಲೀಸ್ ಅಧಿಕಾರಿಗಳು ಅವರ ನಡವಳಿಕೆ ಮುಂತಾದವನ್ನು ಗುಪ್ತವಾಗಿಯಿಟ್ಟು ನೋಡಿಕೊಳ್ಳುತ್ತಾ ಬರುವಂತೆ ಏರ್ಪಾಡು ಮಾಡಿದ್ದಾರೆ. ಈ ವಿಚಾರವನ್ನು ಕುರಿತು ವಿಲಾಯಿತಿ ಪಾರ್ಲಿಮೆಂಟಿನಲ್ಲಿ ಮ॥ ಓಗ್ರಡಿ ಎಂಬವರು ಪ್ರಶ್ನೆ ಮಾಡಿದ್ದಕ್ಕೆ ಸರ್ಕಾರದ ಪರವಾಗಿ ಮ॥ ಎಚ್. ಗ್ಲಾಡ್‌ಸ್ಟನ್‌ರವರು ಆ ರೀತಿ ಪೋಲೀಸ್ ಜಾಗ್ರತೆ ಇಟ್ಟಿರುವುದು ನಿಜವೆಂದು ಉತ್ತರ ಕೊಟ್ಟಿದ್ದಾರೆ.

ಹಿಂದೂಸ್ಥಾನದ ಪ್ರಜೆಗಳು ವ್ಯಾಪಾರ ವ್ಯವಸಾಯ ಮೊದಲಾದ ಜೀವನೋಪಾಯಗಳನ್ನು ಹುಡುಕಿಕೊಂಡು ಅನ್ಯದೇಶಗಳಿಗೆ ಅಂದರೆ ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ಕ್ಯಾನಡಾ, ಫೀಜಿ, ಈ ಮೊದಲಾದ ಇಂಗ್ಲಿಷ್ ವಸಾಹತುಗಳಿಗೆ ಹೋದರೆ ಅನುಕೂಲವಾಗಿರುವುದೋ, ಅಲ್ಲಿಯ ಸರ್ಕಾರದವರ ಕಾನೂನುಗಳು ಇವರ ವಿಷಯದಲ್ಲಿ ಹ್ಯಾಗಿರಬೇಕೋ ಇದೆಲ್ಲವನ್ನೂ ಕುರಿತು ಚರ್ಚೆ ಮಾಡಿ ಒಂದು ರಿಪೋರ್ಟು ತಯಾರುಮಾಡಲು ಲಾರ್ಡ್ ಮಾರ್ಲೆಯವರೂ ಲಾರ್ಡ್ ಕ್ರೂಯವರೂ ಆಲೋಚಿಸಿ, ಇದಕ್ಕಾಗಿ ಒಂದು ಕಮಿಷನ್ (ಪಂಚಾಯಿತರನ್ನು) ನೇಮಕಮಾಡಿದ್ದಾರೆ. ಈ ಪಂಚಾಯಿತಿಗೆ ಲಾರ್ಡ್ ಸ್ಯಾಂಡರ್ಸನ್‌ರವರು ಪ್ರೆಸಿಡೆಂಟರು. ಲಾರ್ಡ್ ಸ್ಯಾಂಡರ್‌ಹರ್ಸ್ಟ್ (ಹಿಂದೆ ಬೊಂಬಾಯಿ ಗವರ್ನರಾಗಿದ್ದವರು), [illegible] ಪಡೆದವರು), ಸರ್ ಜೇಂಸ್ ಡಿಗ್ಸ್ ಲಾ ಟೊಚ್ (ಹಿಂದೆ ಸಂಯುಕ್ತ ಅಧಿಪತ್ಯಗಳ ಲೆಫ್ಟಿನೆಂಟ್ ಗವರ್ನರಾಗಿದ್ದವರು). ಈ ಮೂವರೂ ಮೆಂಬರುಗಳಾಗಿ ನೇಮಿಸಲ್ಪಟ್ಟಿದ್ದಾರೆ.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೊ. ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಒಂದೋ ಎರಡೋ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇ ಉಂಟಾಗುವುವೆಂಬುವದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ.—ಪಿತ್ತಕೋಶ ರೋಗ ; ಪಿತ್ತ ; ಪಿತ್ತಜ್ವರ , ಅಜೀರ್ಣ ; ಅಗ್ನಿಮಾಂದ್ಯ ; ಗಾಬರಿ ; ಅಶಕ್ತಿ , ಎದೆಯು ಕಲ್ಲೆನಿಸುವುದು ; ತಲೆತಿರುಗುವುದು ; ತಲೆನೋವು ; ಹೊಟ್ಟೆಯುಬ್ಬರ ; ಹುಳಿತೇಗಿನ ಹೊಟ್ಟೆನೋವು , ಹೆಂಗಸರ ವ್ಯಾಧಿಗಳು ; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕೆಟ್ಟಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ಕಷ್ಟದ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [69 28]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ, ಡೋನ್ಸ್, ಪಿ. ಓ. ಬಾಕ್ಸ್ ೩೦, ಬೊಂಬಾಯಿ.—ಇವರಲ್ಲಿ ದೊರೆಯುವುದು.

ಎಲ್ಲರೂ ಚಂದಾದಾರರಾಗಲು ಇದೇ ಸಮಯ.

ಸಚಿತ್ರ. ಚಾತುರ್ಯ. ಮಾಸಪತ್ರಿಕೆ.

ಸಚಿತ್ರವಾದ ಈ ಮಾಸಪತ್ರಿಕೆಯಲ್ಲಿ ಹಾಸ್ಯರಸದ ಲೇಖನಗಳೂ, ವಿನೋದ ಕಥೆಗಳೂ, ಜ್ಞಾನ, ಭಕ್ತಿ, ವೈರಾಗ್ಯ, ನೀತಿ, ಸ್ವಧರ್ಮ ವಿಷಯಕವಾದ ಲೇಖನಗಳೂ ಪ್ರಕಟವಾಗುತ್ತಿವೆ. ದುರ್ಲಭವಾದ ಈ ಮಾನವ ಜನ್ಮವನ್ನು ಕರ್ಮಭೂಮಿಯಾದ ಈ ಭರತಖಂಡದಲ್ಲಿ ಪಡೆದುದಕ್ಕೆ ತಕ್ಕ ಸತ್ಕರ್ಮಗಳನ್ನು ಸರ್ವರೂ ಆಚರಿಸಬೇಕೆಂಬುದಾಗಿ ತಿಳಿಸುವದಕ್ಕೆ ಈ ಪತ್ರಿಕೆಯು ಹೊರಟಿದೆ. ಇದರ ವಾರ್ಷಿಕ ಚಂದಾ (ಏಪ್ರಿಲ್ ತಿಂಗಳ ೧೫ ನೇ ತಾರೀಖಿನೊಳಗಾಗಿ ಚಂದಾದಾರರಾಗುವವರಿಗೆ ಮಾತ್ರ) ಪರಸ್ಥಳದವರಿಗೆ ಅಂಚೆ ವೆಚ್ಚವೂ ಸೇರಿ ೧೧ ಆಣೆಗಳು. ಆ ತರುವಾಯ ಆಗುವವರಿಗೆಲ್ಲಾ ೧ ರೂಪಾಯಿ ಆಗುತ್ತೆ. ಬೇಗ ಚಂದಾದಾರರಾಗಿರಿ. ಇದರ ಚಂದಾ ಅತ್ಯಲ್ಪವಾಗಿರುವುದರಿಂದ ಮಾದರಿ ಪತ್ರಿಕೆಯು ಸಿಗಲಾರದು. ವಿಳಾಸ:—ಎಡಿಟರ್ "ಚಾತುರ್ಯ," ೩ ನೇ ರೋಡು

[34—1] ನಂ. ೧೩೭ ಚಾಮರಾಜ ಪೇಟೆ, ಬೆಂಗಳೂರು ಸಿಟಿ.

ಪೆರೂನಾ ವಿಷಯವಾಗಿ ಹೆಂಗಸ ರಿಂದ ಬಂದಿರುವ ಕಾಗದಗಳು.

710

ಮಿಸೆಸ್ ಕ್ಲೇರಾ ಎಲ್ ಮಿಲ್ಲರ್ ಮಿಸೆಸ್ ಎಸ್ ಎಲ ಜೂಯೆಲ್ ಮಿಸೆಸ್ ಮಹಲ ರೀಡ್

ಮುಂದಿನ ಕಾಗದಗಳು ದಿನವು ಅನುಭವವನ್ನು ತಿಳಿಸುತ್ತವೆ [illegible] ಅನುಭವಿಸಿ ಪೆರೂನಾದಿಂದ ಹಿಂದಿನ ಗುಣವನ್ನು ಹೊಂದಿದ ಸ್ತ್ರೀಯರು ಯಥಾರ್ಥವಾಗಿ ನುಡಿದಿರುವ ಮಾತುಗಳಾಗಿವೆ

ಕೂಡಲೆ ಗುಣಕೊಡುವಂಥಾ ಈ ಔಷದ ಎಕ್ಸ್ಟ್ರಾಕ್ಟು ಅಮೇರಿಕದ ಹೆಂಗಸರಿಗೆ ತುಂಬಾ ಅನುಕೂಲವಾಗಿದೆ ಮಲಬದ್ಧತೆ, ಮೂತ್ರಕೋಶದ ಅಕ್ರಮ, ಹುಡಿಗೆಮ್ಮು ಈ ಮೊದಲಾದ ಶೀತದಿಂದ ಹುಟ್ಟುವ ನಾನಾ ರೋಗಗಳನ್ನು ಪೆರೂನಾ ನಿವಾರಣೆಮಾಡಬಲ್ಲದು ಎಂತೂ ಈ ಮಾತನ್ನು ಹೆಂಗಸರು ಹೇಳಿರುತ್ತಾರೆ ತಮ್ಮ [illegible] ನರಳುವ ಹೆಂಗಸರಿಗೆ ಅನುಕೂಲವಾಗಲಿ ಎನ್ನುತ್ತವಲ್ಲದ [illegible] ಇನ್ನೇನೂ ಆಗಿರಲಾರದು

ಪೆರೂನ [illegible] ಹೊಸ [illegible] ಮಾಡಿಕೊಳ್ಳುತ್ತಿದೆ [illegible] ಸಹಜವಾಗಿ ದೊರಕಿರುವ ಪ್ರಸಿದ್ಧಿಗಳ್ [illegible] ಉಪಯೋಗಿಸು[illegible]ವರು ಹೇಳುವ [illegible]

ಬಿಡದ ಹುಡಿಗೆಮ್ಮು

ಮಿಸೆಸ್ ಕ್ಲೇರಾ ಎಲ್ ಮಿಲ್ಲರ್, [illegible], ಕೊಲಂಬಿಯ [illegible], ಸಿಯಟಲ್, ವಾಸಿಂಗ್ಟನ್, ಯು ಎಸ್ ಎ, ಮೊದಲು [illegible] ಕೌಂಟಿ [illegible] ವೈಸ್‌ಪ್ರೆಸಿಡೆಂಟ್ ಈಕೆ ಬರೆಯುವುದು

" [illegible] ನಾನು ಎರಡು [illegible] ಒಂಬತ್ತು ಬಾಟ್ಲ ಪೆರೂನಾ ಸೇವಿಸುವ [illegible] ಆದು ನನಗೆ ನಿವಾರಣೆ [illegible] ಇದ [illegible] ಉತ್ಕೃಷ್ಟವಾದ ಔಷಧಿ [illegible] ಗಳಲ್ಲಿ ಮಾತನ್ನು ಕೇಳ [illegible] ಎಂದು [illegible] ಹೆಂಗಸರಿಗೆ ಸಹಾಯವಾಗುವುದು

ನಾನು ಇದರ [illegible] ನನ್ನ [illegible] ತುಂಬಾ ಕೊಂಡ [illegible] ನನಗೆ [illegible]

ದುಃಖ, ದಣುವು ಮತ್ತು ದುರ್ಬಲ

ಮಿಸೆಸ್ ಕ್ರಿಸ್ಟಿನ ಸ್ಟುಕಲ್ಲಾ [illegible] ನ್ಯೂಯಾರ್ಕ್ ಯು ಎಸ್ ಎ ಈಕೆ ಬರೆಯುವದು — [illegible] ಇದನ್ನು ಪ್ರಯೋಜನ ಹೊಂದುವವರೆಂದು [illegible]

ನನ್ನ [illegible] ಮಾತನ್ನು [illegible] ದು [illegible] ನನ್ನ [illegible] ಮಾಡಿದ [illegible] ನನಗೆ [illegible] ನಾನು [illegible] ಇದೆ [illegible] ನಾನು [illegible] ನಾನು ಜೀವ [illegible] ನಿಜವು [illegible] ನಾನು [illegible]

ಆದರೂ ಅಲ್ಲಿಗೇ ನಿಲ್ಲಿಸಲಿಲ್ಲ ಇನ್ನೂ ಕೆಲವು ಬಾಟ್ಲಿಗಳ ಪೆರೂನಾ ಸೇವಿಸುತ್ತಾ ಬಂದೆನು ನನಗೆ ಸಂಪೂರ್ಣ ಗುಣವಾಯಿತು ಆಗಿನಿಂದಲೂ ಸುಖವಾಗಿದೇನೆ ಈಗ ಚನ್ನಾಗಿ ಊಟಮಾಡುತ್ತೇನೆ ಒಳ್ಳೇ ನಿದ್ದೆ ಬರುತ್ತದೆ "

ಪೆರೂನಾವಿಗೆ ಒಳ್ಳೇ ಹೆಸರು

ಮಿಸೆಸ್ ಎಸ್ ಎಲ್ ಜೂಯಲ್ [illegible] ಸ್ಪ್ರಿಂಗ್‌ಫೀಲ್ಡ್, [illegible] ಯು ಎಸ್ ಎ ಈಕೆ ಬರೆಯುವುದು —

ಅನೇಕ ವರುಷಗಳ [illegible] ಪೆರೂನಾ ಉಪಯೋಗಿ [illegible] ಪ್ರಯೋಜನ [illegible] ಎಂದವರಿಗೂ ಅದು ತುಂಬಾ [illegible] ಮಾಡಿರುವವನ್ನು [illegible] ಒಳ್ಳೇ ಮಾತನ್ನಲ್ಲದ [illegible] ನು

ಪೆರೂನಾವನ್ನು ಮನೆಯಲ್ಲಿಟ್ಟಿದೆ

ಮಿಸೆಸ್ ಮೇರಿ ಎ ಗೋರ್ಟನ್, [illegible] ಯು ಎಸ್ ಎ ಈಕೆ ಬರೆಯುವುದು — ನಾನೂ ನನ್ನ ಮಕ್ಕಳೂ ನನ್ನ ಗಂಡನೂ [illegible] ಪೆರೂನಾ [illegible] ಈ [illegible] ನನ್ನ [illegible] ಅನೇಕ [illegible] ನನಗೆ [illegible] ನನ್ನ [illegible] ನಾನು [illegible] ಪೌಂಡು [illegible] ಮಿರುಗು [illegible]

ಈ [illegible] ಪೆರೂನಾ [illegible] ನಾನು [illegible] ಬರೆದು [illegible] ನಮಗೆ [illegible] ಇದೆ [illegible]

ತ್ತದೆ ನೀವು ಹೇಳಿದ ಚಿಕಿತ್ಸೆಗಾಗಿ ನಿಮ್ಮನ್ನು ಆದರ ಹೊಗಳುವೆನು "

ಮಲಬದ್ಧತೆ, ಮೂತ್ರಕೋಶರೋಗ

ಮಿಸೆಸ್ ಮಹಲಾ ರೀಡ ಕಾರ್ಬನ್‌ವೆಲ್ಲೆ ಓಂಟ್ ಕ್ಯಾನಡ ಈಕೆ ಬರೆಯುವುದು —

" ನನ್ನ [illegible] ಪ್ರಾಯವಾದ ಔಷಧವು ನನಗೆ ಮಹೋಪಕಾರ [illegible] ನಾನು [illegible] ವರುಷಗಳಿಂದ [illegible]

ನನಗೆ ಮಲಬದ್ಧ [illegible] ಅಕ್ರಮ [illegible] ಕೆಟ್ಟ [illegible] ಪೆರೂನಾ [illegible]

[illegible] ಜನಗಳ [illegible] ಅನುಕೂಲ [illegible]

ಈ ದಿವಸದ [illegible] ಹೆಂಗಸರಿಗೆ [illegible]

ಪ್ರಸಿದ್ಧವಾದ ಔಷದವು

ಅನೇಕ ವರುಷಗಳಿಂದ [illegible] ಹೆಂಗಸರಿಗೆ ಪೆರೂನಾ ಗುಣಕೊಡುವ [illegible] ಪ್ರಸಿದ್ಧವಾಗಿದೆ [illegible]

ಪೆರೂನಾ [illegible] ಬೇಕಾದ [illegible] ಪೆರೂನಾ [illegible]

ಪೆರೂನಾ ಕಳುಹಿಸುವ ಕಂಪನಿ ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು ತಿಳಿದು, ವಾ ಕಳಿಸ [illegible] ಕಾಗದ ಬರೆದಲ್ಲಿ ಕಳುಹಿಸುತ್ತೇವೆ [illegible] ಮುಂತಾದವನ್ನೂ ಇವರಿಂದಲೇ ತಿಳಿಯಬಹುದು

ವಿಳಾಸ — ಹಿಂದೂಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್ ಬೆಂಗಳೂರು

HITCHCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, [illegible]

11——1909 ರಿಂದ 20——1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	3[illegible]	30	0	0
ಮೈಸೂರು ,,	8	3	0	0
ಬೆಂಗಳೂರು ಡಿಸ್ಟ್ರಿಕ್ಟು	21	11	0	0
ಮೈಸೂರು	20	21	0	0
ಕೋಲಾರ್ ,,	*	*	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	2	0
ಹಾಸನ	[illegible]	3	0	0
ಚಿತ್ರದುರ್ಗ ,,	1	1	0	0
ಕಡೂರ್ ,,	10	[illegible]	6	[illegible]
ಶಿವಮೊಗ್ಗಾ ,,	2	1	9	1
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	10[illegible]	77	17	11

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಕೀಲಕನಾಮ ಸಂವತ್ಸರದ ಫಾಲ್ಗುಣ [illegible] ಗುರುವಾರದಿಂದ ಫಾಲ್ಗುಣ [illegible] ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಮಾರ್ಚ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕೇಂದ್ರ ಊರ್ಧ್ವ ದಿನ
11	ಗುರು *	[illegible]ತಿ	19 12	ಸ್ವಾ	10 1	[illegible]8
12	ಶುಕ್ರ	ಪಂಚಮಿ	22 20	ವಿ	13 36	2
13	ಶನಿವಾ	ಷ[illegible]	21 30	ಅ	1[illegible]	1
14	ರವಿವಾ	ಸಪ್ತ[illegible]	21 12	ಜ್ಯೆ	16 51	2
1[illegible]	ಚಂದ್ರ §	ಅಷ್ಟಮಿ	[illegible]3 10	ಮೂ	1[illegible]	3
1[illegible]	ಕುಜ	ನವಮಿ	19 1[illegible]	ಪೂ	1[illegible]	1
17	ಬುಧ †	ದಶಮಿ	16 20	ಉತ್ತರಾ	13 2	

* [illegible] ತಿಥಿ [illegible] ಹುಟ್ಟಿದಲ್ಲಿ [illegible] ರಥ § ಅಷ್ಟಮಿ [illegible] † [illegible] ತಿಥಿ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಅಕ್ಕಿ ಪಲ್ಲಾ ೧ಕ್ಕೆ	ರೂ	[illegible]	[illegible]
[illegible]		[illegible]	[illegible]
ದು[illegible]		[illegible]	[illegible]
ಜಾನ್ರಾಗಿ ಅಕ್ಕಿ		[illegible]	[illegible]
ಸಣ್ಣ ಅವಲ್		[illegible]	[illegible]
,, ದುಯ್ಯಂ		[illegible]	[illegible]
ತೊಗರಿ ಬೇಳೆ ಪಲ್ಲ ೧ಕ್ಕೆ		[illegible]	[illegible]
,, ದುಯ್ಯಂ		[illegible]	[illegible]
[illegible] ಪಲ್ಲ ೧ಕ್ಕೆ		[illegible]	[illegible]
ಕಡ್ಲೆ[illegible]		[illegible]	[illegible]
[illegible]		[illegible]	[illegible]
ಹುರುಳಿ ಪಲ್ಲ ೧ಕ್ಕೆ		[illegible]	[illegible]
ಬೇಳೆ [illegible]		[illegible]	[illegible]
ಹೆಸರು		[illegible]	[illegible]
ಉದ್ದು		[illegible]	[illegible]
ಕಡ್ಲೆ		[illegible]	[illegible]
ಎಳ್ಳು [illegible]		[illegible]	[illegible]
ಹುರುಳಿ		[illegible]	[illegible]
[illegible]		[illegible]	[illegible]
[illegible] ಮಣ ೧ಕ್ಕೆ		[illegible]	[illegible]
ಮೆಣಸಿನಕಾಯಿ		[illegible]	[illegible]
ದು[illegible]		[illegible]	[illegible]
[illegible]		[illegible]	[illegible]
ಒಳ್ಳೆ[illegible] ಮಣ ೧ಕ್ಕೆ		[illegible]	[illegible]
ಹರಳೆಣ್ಣೆ		[illegible]	[illegible]
ಕೊತ್ತುಂಬರಿ ಪಲ್ಲ ೧ಕ್ಕೆ		[illegible]	[illegible]
ಉಪ್ಪು		[illegible]	[illegible]
ಹುಣಸೆ ಹಣ್ಣು		[illegible]	[illegible]
,, [illegible]		[illegible]	[illegible]
[illegible] ಮಣ ೧ಕ್ಕೆ		[illegible]	[illegible]
[illegible] ಪೆಟ್ಟಿ ೧ಕ್ಕೆ		[illegible]	[illegible]
ತೆಂಗಿನಕಾಯಿ ೧ಕ್ಕೆ		[illegible]	[illegible]
[illegible] ಮಣ ೧ಕ್ಕೆ		[illegible]	[illegible]
[illegible] ಮಣ ೧ಕ್ಕೆ		[illegible]	[illegible]
[illegible]		[illegible]	[illegible]
[illegible]		[illegible]	[illegible]
[illegible] ತೊಲ ೧ಕ್ಕೆ		[illegible]	[illegible]
ಬೆಳ್ಳಿ [illegible] ತೊಲ ೧ಕ್ಕೆ		[illegible]	[illegible]

Printed and Published by the Rev H Gulliford Proprietor and Manager Wesleyan Mission Press Mysore 11/3/1909

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು.

ಕ್ರಯ ೧ ದುಡ್ಡು.

ಸಂಪುಟ ೨೨ — ಮೈಸೂರು—ಸೆಪ್ಟಂಬರ್ ನೇ ತಾರೀಖು ೧೮ನೇ ಗುರುವಾರ. — ಸಂಚಿಕೆ ೪೨

WILLIAM & Co. FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ. ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು. [20 4]

ತಲೆನೋವು ಗಂಟು ಊದಿಕೊಳ್ಳುವದು, ವಾತ, ... ದಿವಸ, ಉಳುಕು, ಅಬಲು ಗಂಟು, ಗಂಟ್ಲು ... ಅರ್ಧ ತಲೆನೋವು, ವಿಷ ಶೀತ, ಭೇದಿ, ಜಾಡ್ಯ, ಇತ್ಯಾದಿ ... ಆರ್ ಡಿ ಸೋಪಾ, ಮೆನೆಜರ್, ಕಾಫಿ, ತೋಟ ನಾರಕೇರಿ, ಬರೆಯು ... ಕೇಳಿಕೊಂಡರೆ—ನಮ್ಮ ಅಮೃತಾಂಜನವು ದೇಹದಲ್ಲಿಯ ಶೀತಕ್ಕೂ, ಕೆಮ್ಮಿಗೂ, ... ಗಳಿಗೂ ಉತ್ತಮವಾದದ್ದು. ನಮ್ಮ ಕೂಲಿ ಆಳುಗಳಲ್ಲಿ ಹೆಚ್ಚು ಜನರಿಗೆ ... ಬೇಕಾಗಿರುತ್ತದೆ ಬಾಟ್ಲಿ ಒಂದರ ಕಿಮ್ಮತ್ತು ೦-೮-೦ ೧೨ ಬಾಟ್ಲಿಗಳಿಗೆ ... ಬಾಟ್ಲಿಗಳಿಗೆ ೧೮-೦-೦. ೫೦ ಬಾಟ್ಲಿಗಳಿಗೆ ೨೨ ೦-೦. ವ್ಯಾಪಾರ ... ಗೆ ಚಲೋದ ಕಮಿಷನ್ ಸಿಕ್ಕುವದು

ಗಜಕರ್ಣದ ಮುಲಾಮು.

ಮೂರು ನಾಲ್ಕು ದಿನಗಳೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವು ... ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗು ... ಡಬ್ಬಿ ಒಂದರ ಕಿಮ್ಮತ್ತು ೦ ೬ ೦ ೧೨ ಡಬ್ಬಿಗಳಿಗೆ ೬-೦-೦

ವಜ್ರಗುಟಿಕೆ.

ಧಾತುಪುಷ್ಟಿ, ರಕ್ತಶುದ್ಧಿ, ಬಾಟ್ಲಿ ಒಂದರ ಕಿಮ್ಮತ್ತು ರೂ	೧-೦-೦
ಸುಂದರಿ ಮುಲಾಮು	೦ ೮-೦
ದಂತಮಂಜನ—ಹಲ್ಲುಗಳು ಗಟ್ಟಿಯಾಗುತ್ತವೆ	೦-೨-೦

ಈ ಕಂಪನಿಯವರು ಮತ್ತು ನಮೂನೆಯ ಔಷಧಗಳನ್ನು ತಯಾರಿಸುವದ ... ಕ್ಯಾಟಲಾಗು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು. ವಿಳಾಸ —

ವಿಲಿಯಂ ಮತ್ತು ಕಂಪನಿ. ಫ್ಲೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು :—"ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ. 1-10

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ನಿಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ತಯಾರಿಸಲಾಗುತ್ತಿರುವ ಟೋಪಿಗಳ ದಾರದ ... ಅತೀ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂ ... ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರ ವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಮಾಡಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿ ... ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ. ೬ ಆ., ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮ , ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ : ೧ ರೂ ೮ ಆ., ೧ ರೂ ೬ ಆ.

ಉಣ್ಣೆಯ ಟೋಪಿಗಳು ೧ ರೂ ೮ ಆ., ೧ ರೂ ೬ ಆ ;

ಕಾಲುಚೀಲ, ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಜ್ವರಸುಧಾ.

81 24

ಒಂದು ಬಾಟ್ಲಿ ಕಿಮ್ಮತ್ತು ೮ ಆಣೆ —ವಿ ಪಿ. ಛಾರ್ಜು ಬೇರೆ

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ಹೊರತು ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರಾದ ಡಾಕ್ಟರುಗಳು ಹೇಳುತ್ತಲಿದಾರೆ. ನೈಕ್ಯ, ತಲೆನೋವು ಆರತಲೆ ನೋವು, ಬೆನ್ನುಛಳುಕು, ಕೈಕಾಲು ನೋವು ಮುಂತಾದವುಗಳನ್ನು ೧—೨ ಹೊತ್ತಿನಲ್ಲಿಯೇ ಡೈನಾಮೈಟಿನಂತೆ ದಿಗಂತರಕ್ಕೆ ಹಾರಿಸಬಲ್ಲದು. "ಸುಧಾ" ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವೂ ಹೇಗೆ ಮೈ ಅಂಟುವುದಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನೂ ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಸೀಸೆ ಉಪಯೋಗಿಸುವಲ್ಲಿ ಕಂಡು ಬರುವ ಆರೋಗ್ಯಗುಣವನ್ನು ಹೆಚ್ಚು ವರ್ಣಿಸಿ ವಾಡಬೇಕಿಲ್ಲ.

ದೇವನಹಳ್ಳಿ ಓಣಿ, ಬೆಂಗಳೂರು ಡಿಸ್ಟ್ರಿಕ್ಟ್ — ಯಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟೀಷನರ್.

ಜ್ವರಹರಿ.

18-7



ಇದು ಸಾಧಾರಣ ಜ್ವರ, ಮಲೇಜ್ವರ, ಮೊಲೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿಬಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪ್ಪ ಅಯ್ಯಂಗಾರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ಎಂಟು ಡಜನ್ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷದದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಬೇಗನೆ ಗುಣ ಹೊಂದಿರುವರು ಇನ್ನೂ ಜನಗಳು ಕೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ಎಂಟು ಡಜನ್ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ , ೧—೮ ರೂ , ದೂ ೨—೧೨ ಆ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವ್ಯಾಸ್ ಬಿಡಲಾಗುವದು

ಭೀಮಸೇನ ಕರ್ಪೂರ.

Dinum Camphor

ಈ ಔಷಧವು ಅಜೀರ್ಣ ಭೇದಿ, ಸಾಧಾರಣ ಹೊಟ್ಟೆ ಕಳೆಯುವುದು. ವಾಂತಿಭೇದಿ, ನಾನಾವಿಧ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ ಕಂಡಿತ ಗುಣಕೊಡುವದು ಇದು ಹೆಂಗಸರು ತೀರ ... ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಭೀಮಸೇನ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ಎರಡು ಔಷಧಗಳು ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಪಾರ್ಮಸಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅಲ್ಲದೆ ಕೆಳಗಿನ ವಿಳಾಸದಲ್ಲಿಯೂ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

JUST RECEIVED! JUST RECEIVED!!

Stead's Books for the Bairns

(illustrated) New Numbers [5 11]

STEAD'S PENNY POPULAR TALES—Sixty four Pages in a coloured Picture Cover Each number contains a story of thrilling interest 24 numbers

CALENDARS FOR 1909.

Apply—The Manager, C.L.S. Book Depot, Mysore City.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲಿ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೨
ಪರಸ್ಥಳದವರು ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ	ರೂ ೧—೧೪—೦
" " " " "	" ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುತ್ತಿರುವ ಪತ್ರಿಕೆಯ ಲೇಬಲ್ಲಿನಲ್ಲಿ ಅಚ್ಚಾಗಿರುವ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಕಾಂತಿವರ್ಧಕ ಯೆಣ್ಣೆ.

24 5

ನೂತನವಾಗಿ ಕಂಡು ಹಿಡಿಯಲ್ಪಟ್ಟದ್ದು.

ತಲೆಕೂದಲು ಬೆಳೆಯಲು ಉತ್ತಮವಾದ ಸುಗಂಧ ಯೆಣ್ಣೆ.

ಸ್ತ್ರೀಯರ ಸೌಂದರ್ಯಕ್ಕೆ ಮುಖ್ಯ ಕಾರಣ ಭೂತವಾದ ಕೇಶವು ಚೆನ್ನಾಗಿ ಬೆಳೆದು ಸೌಂದರ್ಯವನ್ನು ಹೆಚ್ಚಿಸ ತಕ್ಕ ಈ ನೂತನ ಯೆಣ್ಣೆಯು ಬಜಾರಿನಲ್ಲಿ ಮಾರಲ್ಪಡುವ ಇತರ ಯೆಣ್ಣೆಗಳಂತೆ ಲೇಶವೂ ದುರ್ಗಂಧಯುಕ್ತವಾದುದಲ್ಲ. ಎಲ್ಲ ದರ್ಜೆಯ ಗಂಡಸರೂ ಹೆಂಗಸರೂ ಹೊಂದಬಹುದಾದ್ದಕ್ಕೆ ಅನುಕೂಲವಾಗಿ ಇದರ ಬೆಲೆಯೂ ಕಮ್ಮಿ ಇಡಲ್ಪಟ್ಟಿದೆ ನಮ್ಮ ಈ ಯೆಣ್ಣೆಯ ಉಪಯೋಗದಿಂದ ಎಂಥಾ ಪಟ್ಟ ತಲೆಯಾದರೂ ಕೂದಲು ಹುಲುಸಾಗಿ ಬೆಳೆಯುತ್ತದೆ ಈ ಎಣ್ಣೆಯನ್ನು ಒಳ್ಳೆ ಕೊಬರಿಯೆಣ್ಣೆ ಅಥವಾ ಅಚ್ಚೆಳ್ಳೆಯೊಂದಿಗೆ ಬೆರಸಿಯೂ ಉಪಯೋಗಿಸಬಹುದು ಇದರ ಬೆಲೆ ನಂ 1 ಶೀಷೆ 1ಕ್ಕೆ ರೂ 1—0—0 ನಂ 2, 0—12—0 ನಂ 3, 0—8—0.

ವಿಳಾಸ —ಸಿ. ಪಿ. ಎಂಡ್. ಕಂಪನಿ, ಗಿರಿಗಾಂ, ಬೊಂಬಾಯಿ

ಶಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28 5

೧ ಲೋಕಾಮೃತರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಹುಳಿ, ಸಂದುಗಳ ನೋವು, ವೈಕೃತೀಲು ಕೊಡತ (ಭಾವ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನಿದ್ರಾ ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ನಿಂಡಿತವಾಗಿ ಗುಣಪಡಿಸುತ್ತವೆ

ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸುತ್ತ ಬಂದರೆ ಬಾಯಿ ಹೊತ್ತು ಸುವಾಸನೆಯಾಗಿರುತ್ತೆ. ಎಂತಹ ಆಹಾರವಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ಸ್ವಲ್ಪ ಋತುಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುವುದೆ ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ಚಳಿಜ್ವರ, ಕ್ಷಯತ್ತಗಳನ್ನು ಬಹು ಬೇಗನೆ ಗುಣಪಡಿಸುತ್ತವೆ

ಇದನ್ನು ಸೇವಿಸುತ್ತಿರುವವರು ನಿಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನವನ್ನು ಔಷಧದ ಸಂಗಡಲೇ ಇಡುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಶಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಪ್ರಸಿದ್ಧವಾದ ಮೂರು ಪುಸ್ತಕಗಳನ್ನು ಪರಾಂಬರಿಸಿ.

10 11

"ಬ್ರಹ್ಮಚರ್ಯ" ವೆಂಬ ಮರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ತರುಣನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪ್ರೈಸಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರ ವರಿವಿಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

ವಿಳಾಸ — ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 10

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಡಿಗಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂಥವುಗಳಾಗಿವೆ ಬಣ್ಣವು ಹೋಗುವುದಿಲ್ಲ ಕ್ರಯವು ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬|| ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್. ಬುಕ್ ಡಿಪೋ ಮೈಸೂರು

ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು

11 10

ಚರಿತ್ರೆಯ ಪ್ರಶ್ನೋತ್ತರ ಭೂಗೋಳ ಪ್ರಶ್ನೋತ್ತರ, ಆರೋಗ್ಯಪ್ರಶ್ನೋತ್ತರ—(1891 06) ಕ್ರಯ ೧-೪-೦ ವ್ಯವಸಾಯ ಪ್ರಶ್ನೋತ್ತರ ೦-೫-೦ ಎಗ್ಜಾಮಿನರ್ ಮಾಸಪುಸ್ತಕ ಚಂದಾ, ವರ್ಷಕ್ಕೆ ೧-೪-೦, ೫ಕ್ಕೆ ೧ ಹೆಚ್ಚು ೧೯೦೯ ನೇ ಲೋವರ್‌ಸೆಕೆಂಡರಿ ಕನ್ನಡ ನೋಟ್ಸ್ ೦-೪-೦, ೧೦ಕ್ಕೆ ೧ ಹೆಚ್ಚು ಕನ್ನಡ ೩ನೇ ಪುಸ್ತಕದ ನೋಟ್ಸ್ ಕ್ರಯ ಪ್ರತಿ ೧ಕ್ಕೆ ೦-೨-೦ ೫ಕ್ಕೆ ೧ ಹೆಚ್ಚು

ಸಿ ಪುಟ್ಟಯ್ಯ, ಮ್ಯಾನೇಜರ್, ದಿ ಎಗ್ಜಾಮಿನರ್ ಆಫೀಸ್ ಮೈಸೂರು

ಭಕ್ತವಿಜಯ.

15 2

ಮಹಾರಾಷ್ಟ್ರದಿಂ ಕನ್ನಡಿಸಲ್ಪಟ್ಟು, ಮೈಸೂರರಮನೆಯ ಶಿಲಾಯಂತ್ರದಲ್ಲಿ ಮುದ್ರಿತವಾಗಿದ್ದುದು ವಚನಾತ್ಮಕ ಬಹು ರಸಭರಿತ ಭಗವದ್ಭಕ್ತರ ಚರಿತ್ರೆಯುಳ್ಳುದು ಶ್ರೀಮನ್ಮಹಾರಾಜರವರ ಅಪ್ಪಣೆಯಂ ಪಡೆದು, ಮಾಸಸಂಚಿಕೆಯಾಗಿ ಪರಿಷ್ಕರಿಸಿ ಮುದ್ರಿಸಲ್ಪಡುತ್ತಿದೆ ತಿಂಗಳಿಗೆ ೪ ಫಾರಂ ರಾಯಲ್ ೮ ಪೇಜ್ ನೊಗನಾದ ಕಾಗದ ಅಂದವಾದ ಮುದ್ರಣ ವಾರ್ಷಿಕ ಚಂದಾ ಪರಸ್ಥಳಕ್ಕೆ ೨—೪—೦ ಗುಣಜ್ಞರು ಪರಿಶೀಲಿಸಿ ಪ್ರೋತ್ಸಾಹಿಸಬೇಕು

ವಿಳಾಸ — ಮೈಸೂರು ಸೀತಾರಾಮಶಾಸ್ತ್ರಿ, ನಾರ್ಮಲ್ ಸ್ಕೂಲ್ ಪಂಡಿತ, ಮೈಸೂರ್

ಧರ್ಮಪದ

12 3

ಎಂಬೀ ಕನ್ನಡ ಪುಸ್ತಕವು ನಮ್ಮ ಇಂಡಿಯಾ ದೇಶದಲ್ಲಿ ೨,೦೦೦ ವರ್ಷಗಳಿಂದೀಚೆಗೆ ಯಾವಾಗಲೂ ಗೋಚರಿಸಿರಲಿಲ್ಲವು ಇದು ಚೈನಾ, ಕೋರಿಯಾ ಜಪಾನ್, ಅನಾಂ, ಸೈಯ್ಯಾಂ, ಬರ್ಮಾ, ಸಿಲೋನ್ (ಲಂಕಾ) ಮುಂತಾದ ದೇಶಗಳ ಜನಗಳಿಂದ, ಮಹಾ ಪ್ರಮಾಣ ಗ್ರಂಥವೆಂದು ಪೂಜಿಸಲ್ಪಟ್ಟಿದೆ ಹಿಂದುಗಳಿಗೆ ಮುಖ್ಯ ಪ್ರಮಾಣಗಳಾದ ವೇದಗಳು ೧೯ ಉಪನಿಷತ್ತುಗಳು ೧೬ ವೇದಾಂತ ಗ್ರಂಥಗಳು, ೪ ಧರ್ಮ ಶಾಸ್ತ್ರಗಳು, ಮುಂತಾದ ಗ್ರಂಥಗಳಿಂದಲೂ ೩ ಬೌದ್ಧ ಗ್ರಂಥಗಳಿಂದಲೂ ಸಮಸಮಂಜಸ ವಾಕ್ಯಗಳನ್ನು ಗ್ರಂಥಕರ್ತರು ಈ ಗ್ರಂಥಕ್ಕೆ ಉದ್ಧರಿಸಿ ತೋರಿಸಿರುವರು ಇದಕ್ಕೆ ಮ|| ಎಂ ಶಾಮರಾವ್ ಬಿ ಎ ಯವರು ಇಂಗ್ಲೀಷಿನಲ್ಲಿ ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು ಮತ್ತು ನಮ್ಮ ಮೈಸೂರು ಶ್ರೀಮನ್ಮಹಾರಾಜರವರ ಅಪ್ಪಣೆಯ ಪಡೆದು ಅವರ ನಾಮಾಂಕಿತದಿಂದ ಪ್ರಚುರ ಪಡಿಸಲ್ಪಟ್ಟಿದೆ ಇದರಲ್ಲಿ ಜಪಾನ್ ದೇಶದಲ್ಲಿರುವ ಲೋಕಾಶ್ಚರ್ಯಕರವಾದ ಬುದ್ಧದೇವರ ಕಂಚಿನ ಪ್ರತಿಮೆಯ ಭಾವಚಿತ್ರವೂ, ಮೈಸೂರು ಶ್ರೀಮನ್ಮಹಾರಾಜರವರ ಜಿ ಸಿ ಎಸ್ ಐ ಬಿರುದಿನಿಂದ ಕೂಡಿದ ಭಾವಚಿತ್ರವೂ ಮತ್ತು ಗ್ರಂಥಕರ್ತರ ಭಾವಚಿತ್ರವೂ ಇರುವುವು ಈ ಪುಸ್ತಕದ ಅನೇಕ ವಿಧವಾದ ಭಿನ್ನತ್ವಗಳು ಪುಸ್ತಕದಿಂದಲೇ ವ್ಯಕ್ತವಾಗುವವು ಇದರ ಕ್ರಯ —ದಪ್ಪ ರಟ್ಟಿನದು ವಿ ಪಿ ಪಿ ಸಹಿತ ರೂ ೧—೨—೦, ಸುಂದರವಾದ ದಪ್ಪ ಕಾಗದದ ಬೈಂಡಿನದು ರೂ ೧—೧—೦ ನಮ್ಮ ವಿಳಾಸ —

ಮೆ|| ಕೆ ಬಿ ಪುಟ್ಟಪ್ಪ, ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಪೇಟೆ, ಬೆಂಗಳೂರು ಸಿಟಿ.

CHAMBERLAIN'S COUGH REMEDY.

ಚೇಂಬರ್ಲೈನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

4 11

ಶೀತದ ಕೆಮ್ಮು, ಗಂಟಲು ಗೊರೆನ್ನುವುದು, ಹುಣುಗೆಮ್ಮು, ನಾಯಿಕೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಸಬ್ಧವನ್ನು ನಿಲ್ಲಿಸಿಬಿಡುತ್ತದೆ ಎದೆ ಒಡೆಯುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಕ್ಷಾಮದ ಫಂಡು

ಈಗಿನ ಕ್ಷಾಮದ ನಿವಾರಣಾರ್ಥವಾಗಿ ಮಾಹೆಯಾನಾ ಚಂದಾ ಕೊಡುವವರಾಗಿ ವಾಗ್ದಾನಮಾಡಿರತಕ್ಕ ಸಕಲ ಜನರೂ ತಮ್ಮ ಚಂದಾ ಮೊಬಲಗುಗಳನ್ನು ಈ ಕೆಳಗೆ ರುಜು ಮಾಡುವವರ ಆಫೀಸಿಗೆ ಕಳುಹಿಸಿ ಕೊಟ್ಟು ರಸೀದಿ ಪಡೆಯಬಹುದು.

ತಾ|| ೬-೨-೧೯೦೯ ಎಂ ಜಿ ಕೃಷ್ಣಸ್ವಾಮಿರಾವ್,

ವೈಸ್ ಪ್ರೆಸಿಡೆಂಟ್

ಸಿಟಿ ಮ್ಯುನಿಸಿಪಲ್ ಕೌನ್ಸಲ್, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

48-43

ತಲೆನೋವು ವಾಯುನೋವು, ಸಿಳಿತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅತ್ಯಂತ ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ಪೇಡಮಲೆಪಿಳ್ಳೆ ಬೀದಿ, ವೇಪೇರಿ, ಮದರಾಸ್

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣದಾಧಿಕ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION

6 11

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಮೀನುಮನುಷ್ಯ ಇರುವ ಈ ಔಷಧದ ಗುರುತು

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಸಂಜೀವಿನೀ ಔಷಧಾಲಯ, ಮೈಸೂರು.

216

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋಮು, ವಾಯುನೋವುಗಳು, ಹಳೇ ಜ್ವರ, ಕ್ಷಯ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವುದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಪ್ಲೇಗ್ ಜ್ವರಗಳೂ, ಪ್ಲೇಗು ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೆಟ್ಟಿ ೧ಕ್ಕೆ ೧ ರೂಪಾಯಿ

ಕುಲಕೂಟವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಮಾಚಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗಳೊಡನೆ ಟೇಬಲ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,

ಪ್ರೊಪ್ರೈಟರ್

೧ನೇ ಸಂಪುಟ ಕನ್ನಡ ಕಥಾಸರಿತ್ಸಾಗರ ಪ್ರತಿಗಳು ೩೦೦

37 1

ನವರಸಯುಕ್ತವಾಗಿ ಪೂರ್ವ ಕವಿ ಸೋಮದೇವನಿಂದ ಸಂಸ್ಕೃತದಲ್ಲಿ ರಚಿಸಿ ಈಗ ಮಾತ್ರ ಕನ್ನಡದಲ್ಲಿ ನೂರಬ ಎ ವಿ ಸ್ಕೂಲ್ ಹೆಡ್ಮಾಸ್ಟರ್ ಮ|| ರಾ| ಎನ್ ಶ್ರೀಕಂಠಯ್ಯ ಬಿ ಎ ಯವರಿಂದ ರಚಿತವಾಗಿ ಮ|| ರಾ| ಭಾರತಿ ಸಂಪಂಗಿರಾಮಯ್ಯನವರಿಂದ ಪ್ರಕಟಿಸಿದ್ದು ಕ್ರಯ ೧-೮-೦, ೭-೩ನೇ ಸಂಪುಟಗಳು ಜಾಗ್ರತೆ ಬೆಳಕಿಗೆ ಸಿದ್ಧವಾಗುತ್ತ

ಗೀತಾಮೃತ ಮಹೋದಧಿ —ಗೀತಾಮೃತ ಪಾನಮಾಡಿ ಧನ್ಯರಾಗಬೇಕೆಂಬ ಮಹಾಶಯರಿಗೆಲ್ಲಾ ಕೃಷ್ಣಾರ್ಜುನರ ಸಂವಾದವನ್ನು ಸುಲಭವಾಗಿ ತಿಳಿಯುವಂತೆ ತಿಳಿಗನ್ನಡದಲ್ಲಿ ಬರೆದ ಅತ್ಯಂತೋಪಕಾರಿ ಕ್ರಯ ೦-೬-೦ ಆಣೆ

ಪ್ರಶ್ನೋತ್ತರ ಲೇಖ್ಯಬೋಧಿನಿ ನಾಲ್ಕನೆ ಪುಟಗಳು ೪೨೦ ಕ್ರಯ ೧-೪-೦, ಆಯಾ ಮರ್ಯಾದೆಯನ್ನು ಅನುಸರಿಸಿ ಸರ್ವರಿಗೂ ಬರೆಯುವ ಮರ್ಯಾದೆ ಮತ್ತು ಪತ್ರಿಕೆಗಳು, ರೆವಿನ್ಯೂ ಪಟಾಸ್ತು, ಪರ್ವಾನಗಿ ಲ್ಯಾಂಡ್ ರೆವಿನ್ಯೂ ರೂಲ್ಸು ಪ್ರಕಾರ ರೈತರಿಗೆ ರಿಯಾಯಿತಿ ಹೊಂದುವ ಒಗೆಗಳು ಅರ್ಜಿಗಳು ಸಿವಿಲ್ ದಾವಾ, ಪ್ರತಿದಾವೆಯು ವಗೈರೆ ವಿಚಾರಣೆ, ಡಿಕ್ರಿ ಜಡ್ಜ್‌ಮೆಂಟ್, ಡಿ ಯಾಚನಾ ಕ್ರಮಗಳು, ಪೋಲೀಸಿನವರು ಮತ್ತು ಕೋರ್ಟುಗಳಿಗೆ ಇರುವ ಅಧಿಕಾರದ ಪರಿಮಿತಿ ಇಂಜಿನಿಯರ್, ಫಾರೆಸ್ಟ್, ಸ್ಯಾನಿಟರಿ, ಮುಜರಾಯಿ, ವಿದ್ಯಾಭ್ಯಾಸ ಮ್ಯುನಿಸಿಪಲ್ ಈ ಇಲಾಖೆಗಳಿಗೆ ಸಂಗತಿಗಳು ಆಧಾರ ಭೋಗ್ಯ, ಕ್ರಯ, ದಾನ, ಸಾಲು, ಮರಣಶಾಸನ, ಪಾರಿಖತ್ತು ಮೊದಲಾದುವುಗಳನ್ನು ಬರೆಯುವ ವಿಧಿ ಅನುಭವ ಸಿವಿಲ್ ಪ್ರೊಸಿಜರ್ ಕೋಡು ಇಂಡಿಯನ್ ಪೀನಲ್ ಕೋಡು, ಹಿಂದೂ ಲಾ ಮಹಮದೀಯ ಲಾ, ರಿಜಿಸ್ಟ್ರೇಷನ್ ಆಕ್ಟ್, ಕೆಂಪನೀಸ್ ಆಕ್ಟ್, ಲ್ಯಾಂಡ್ ಅಕ್ವಿಜಿಷನ್, ಮೊದ್ಲು, ಅರಸು ಆಕ್ಟ್, ಎಲ್ಲಾ ವರ್ತಕರಿಗೂ ಉಪಯೋಗವಾದ ಲೆಕ್ಕ ಬುಕ್ಕುಗಳು, ರಾಸಭಾವಿಕೆ ಚಿತ್ರ, ಇವುಗಳನ್ನು ಬರೆಯುವ ರೀತಿ ಮೊದಲಾದವುಗಳ ಸಾರಾಂಶವನ್ನೆಲ್ಲಾ ವಿವರಿಸಿದೆ ವಿಳಾಸ —

ಮ್ಯಾನೇಜರ್, ಕರ್ನಾಟಕ ಪುಸ್ತಕಶಾಲಾ, ಲಕ್ಷ್ಮೀರ್ ಪೋಸ್ಟ್

(ಮಾಲೂರ್, ಕೋಲಾರ್).

ವೃತ್ತಾಂತ ಪತ್ರಿಕೆ.
—:o:—
೧೯೦೯ನೇ ಇಸವಿ ಮಾರ್ಚಿ ತಾ|| ೧೮ನೇ ಗುರುವಾರ.

ಮೈಸೂರು ಸಂಸ್ಥಾನವೂ, ವಿದ್ಯಾಭ್ಯಾಸವೂ.

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯು ೧೯೦೭-೦೮ನೇ ಸಾಲಿನ ರಿಪೋರ್ಟನ್ನು ಇನ್ಸ್ಪೆಕ್ಟರ್ ಜನರಲ್‌ರವರು ಕಳೆದ ೧೯೦೮ನೇ ನವಂಬರ್ ತಾ. ೨೦ ರಲ್ಲಿ ಕಳುಹಿಸಿಕೊಟ್ಟರು. ಗವರ್ನಮೆಂಟಿನವರು ೧೯೦೯ನೇ ಜನವರಿ ತಾ. ೩೦ ರಲ್ಲಿ ಓರ್ಡರ್ ಹುಕುಂ ಬರೆದು, ಈಗ ತಾನೇ ಪ್ರಕಟಮಾಡಿರುತ್ತಾರೆ.

ಈ ಸಾಲಿನಲ್ಲಿ ಸಂಸ್ಥಾನದೊಳಗೆ ವಿದ್ಯಾಭಿವೃದ್ಧಿಯು ಚೆನ್ನಾಗಿ ಆಗಿರುತ್ತದೆ. ಹಿಂದಿನ ಸಾಲಿನಲ್ಲಿ ೩,೯೨೪ ಪಾಠಶಾಲೆಗಳಿದ್ದವು; ಈ ಸಾಲಿನಲ್ಲಿ ಅವುಗಳ ಸಂಖ್ಯೆಯು ೪,೧೪೭ ಕ್ಕೆ ಹೆಚ್ಚಿರುತ್ತದೆ. ಹಾಗೆಯೇ ವಿದ್ಯಾಭ್ಯಾಸ ಮಾಡತಕ್ಕವರ ಸಂಖ್ಯೆಯೂ ಹಿಂದಿನ ಸಾಲಿನಲ್ಲಿ ೧,೧೭,೯೫೧ ಇದ್ದದ್ದು ಈ ಸಾಲಿನಲ್ಲಿ ೧,೨೩,೧೦೭ ಕ್ಕೆ ಹೆಚ್ಚಿರುವುದು. ಮತ್ತು ಈ ಇಲಾಖೆಯಲ್ಲಿ ಗವರ್ನಮೆಂಟಿನವರು ೧೪,೭೪,೯೧೪ ರೂಪಾಯನ್ನು ಖರ್ಚುಮಾಡಿದ್ದಾರೆ.

ಈ ಸಾಲಿನಲ್ಲಿ ಗವರ್ನಮೆಂಟಿನವರು ಲೋವರ್ ಪ್ರೈಮರಿ ತರಗತಿಗಳಲ್ಲಿ ವಿದ್ಯಾರ್ಥಿಗಳಿಂದ ಫೀಜು ವಸೂಲ್ಮಾಡಬೇಕಾದದ್ದಿಲ್ಲ ವೆಂದು ಹುಕುಂ ಮಾಡಿದರು. ಆದಕಾರಣ ಈಗ ಸಂಸ್ಥಾನದಾದ್ಯಂತ ಪ್ರಥಮ (ಪ್ರೈಮರಿ) ವಿದ್ಯಾಭ್ಯಾಸವು ಫೀಜಿಲ್ಲದೆ ಧರ್ಮಾರ್ಥವಾಗಿ ನಡೆಯುತ್ತಿದೆ. ಮತ್ತು ಅದಕ್ಕಿಂತ ಮೇಲ್ಪಟ್ಟ ತರಗತಿಗಳಲ್ಲಿ ಫೀಜಿನ ದರಗಳನ್ನು ಬಹಳ ಮಟ್ಟಿಗೆ ಕಡಮೆ ಮಾಡಿರುತ್ತಾರೆ. ಈ ಸಂಸ್ಥಾನದಲ್ಲಿ ಫೀಜಿನಿಂದ ಉತ್ಪತ್ತಿಯಾಗುವಂಥಾ ಹಣವು ಹಿಂದುಸ್ಥಾನದ ಇತರ ಕಡೆಗಳಿಗಿಂತ ಬಹಳ ಕಡಮೆಯಾಗಿರೋಣದರಿಂದ ಮೈಸೂರು ಗವರ್ನಮೆಂಟಿನವರು ಈ ಬಾಬಿಗೆ ಹೆಚ್ಚು ಹಣವನ್ನು ವಿನಿಯೋಗಿಸಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿ ವಿದ್ಯೆ ಕಲಿಸುವುದಕ್ಕೆ ಪ್ರತಿ ಒಬ್ಬ ಪ್ರಜೆಗೂ ಸರ್ಕಾರದವರು ೬ ಆಣೆ ೧೧ ಪೈ ಖರ್ಚುಮಾಡುವರು; ಮದರಾಸಿನಲ್ಲಾದರೋ ತಲೆಗೆ ೧ ಆಣೆ ೯ ಪೈ ಬೀಳುವುದು. ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ಮಕ್ಕಳಿಗೂ ವಿದ್ಯೆ ಕಲಿಸಬೇಕಾದಲ್ಲಿ ಸರ್ಕಾರದವರು ಇನ್ನೂ ಬಹಳ ಹಣವನ್ನು ಕೊಡಬೇಕಾದೀತು; ಇಲ್ಲವೇ, ಫೀಜಿನ ದರಗಳನ್ನು ಹೆಚ್ಚಿಸಬೇಕು. ಪ್ರೈಮರಿ ಪಾಠಶಾಲೆಗಳಲ್ಲಿ ಫೀಜನ್ನು ಸಂಪೂರ್ಣವಾಗಿ ವಜಾ ಮಾಡಿದ್ದಾಗ್ಯೂ ಖಾಸಗೀ ಪಾಠಶಾಲೆಗಳಿಗೆ ಕೊಡುತ್ತಿರುವ ಸಹಾಯ ದ್ರವ್ಯವನ್ನು ಸರ್ಕಾರದವರು ಇನ್ನೂ ಹೆಚ್ಚು ಮಾಡಿರುವುದಿಲ್ಲ.

ಈ ಸಾಲಿನಲ್ಲಿ ವಿದ್ಯೆ ಕಲಿಯುತ್ತಿದ್ದ ಬಾಲಿಕೆಯರ ಸಂಖ್ಯೆಯು ಹೋದ ಸಾಲಿಗಿಂತ ಕಡಮೆಯಾಯಿತೆಂದು ತಿಳಿಸಲು ವ್ಯಸನಪಡುತ್ತೇವೆ. ಮೈಸೂರು ಸಂಸ್ಥಾನದಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ವಿಶೇಷ ಪ್ರೋತ್ಸಾಹವಿರುವುದು. ಹಿಂದುಸ್ಥಾನದ ಇತರ ಕಡೆಗಳಲ್ಲಿರುವಂತೆ ಮೈಸೂರು ಸೀಮೆಯಲ್ಲೂ ಸೆಕೆಂಡರಿ ಮತ್ತು ಪ್ರೌಢ ವಿದ್ಯಾಭ್ಯಾಸ ನಡೆಯುವ ತರಗತಿಗಳಲ್ಲಿ ಬಾಲಿಕೆಯರಿಗೆ ಫೀಜನ್ನು ಹಾಕಿ ವಿದ್ಯೆ ಕಲಿಸುವಂತೆ ಏರ್ಪಾಡು ಮಾಡತಕ್ಕ ಕಾಲ ಬಂದಿದೆ ಎಂದು ಈಗ ಖಂಡಿತವಾಗಿ ಹೇಳಬಹುದು.

ಮೆ|| ಜೆ. ಕುಕ್ ಸಾಹೇಬರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ೨೫ ವರುಷಗಳ ವರೆಗೆ ಕೆಲಸಮಾಡಿ ಈ ಸಾಲಿನಲ್ಲಿ ನಿವೃತ್ತರಾದರು. ಇವರು ಸ್ವತಃ ಬಹಳ ಒಳ್ಳೆಯವರಾಗಿದ್ದು ತಮ್ಮಲ್ಲಿ ಓದುವುದಕ್ಕೆ ಬಂದ ಸಾವಿರಾರು ವಿದ್ಯಾರ್ಥಿಗಳನ್ನು ಸಚ್ಚರಿತ್ರರನ್ನಾಗಿ ತಯಾರು ಮಾಡುವುದಕ್ಕೆ ಬಹಳ ಸಾಹಸಪಟ್ಟರು. ಆದಕಾರಣ ಅವರು ಮಾಡಿರುವ ಶ್ರೇಷ್ಠವಾದ ಕಾರ್ಯವೂ, ಅವರ ಸದ್ಬೋಧೆಯೂ, ಅವರ ಮೇಲಾದ ಕೀರ್ತಿಯೂ ಈ ಸಂಸ್ಥಾನದಲ್ಲಿ ಶಾಶ್ವತವಾಗಿ ನಿಲ್ಲುವವು.

ಕೆಳಗಿನ ದರ್ಜೆಯಲ್ಲಿರುವ ಉಪಾಧ್ಯಾಯರುಗಳ ಸಂಬಳವನ್ನು ಸರ್ಕಾರದವರು ಹೆಚ್ಚುಮಾಡಿದ್ದನ್ನು ನೋಡಿ ನಾವು ಪರಮ ಸಂತೋಷಪಡುತ್ತೇವೆ. ಯಾಕಂದರೆ ಒಳ್ಳೆಯ ಸಂಬಳ ಕೊಟ್ಟಲ್ಲದೆ ಉತ್ತಮರಾದ ಉಪಾಧ್ಯಾಯರು ಸಿಕ್ಕಲಾರರು.

ಮಕ್ಕಳಿಗೆ ಕಿಂಡರ್‌ಗಾರ್ಟನ್ ಮತ್ತು ಸ್ಲಾಯಿಡ್ ಎಂಬ ಹೊಸ ತರದ ಶಿಕ್ಷಣವನ್ನು ಮಾಡಿಸಿದರೆ ತುಂಬಾ ಪ್ರಯೋಜನವಾದೀತೆಂದು ಊಹಿಸಿ ಈ ಶಿಕ್ಷಣವನ್ನು ಪ್ರಾರಂಭಿಸಿರುತ್ತಾರಷ್ಟೆ. ಇದು ಮೇಲೆ ನಡೆಯುವ ಈ ಶಿಕ್ಷಣದಿಂದ ತಕ್ಕಮಟ್ಟಿಗೆ ಪ್ರಯೋಜನವಾಗಿರುವುದೇ ಎಂದು ನಾವು ಎಂದಿಸುವತ್ತೇವೆ

ಸರ್ಕಾರದವರಾಗಲಿ ಖಾಸಗಿ ಜನರಾಗಲಿ ರೂಢಿಸುವಂಥಾ ವಿದ್ಯಾಭ್ಯಾಸದ ಕ್ರಮಗಳು ಎಂಥವುಗಳಾಗಬೇಕೆಂದರೆ, ಹೇಳಿಕೊಡುವುದು ಎಷ್ಟಾಗಿದ್ದರೂ ಹುಡುಗರೂ ಹುಡುಗಿಯರೂ ಅದನ್ನು ಚೆನ್ನಾಗಿ ತಿಳಿದುಕೊಳ್ಳುವಂತಿರಬೇಕು: ಅವರು ಸ್ವಸಾಮರ್ಥ್ಯವನ್ನು ವಿನಿಯೋಗಿಸಿ, ಕಲಿತದ್ದನ್ನು ಅಷ್ಟಕ್ಕೇ ಬಿಡದೆ ಸ್ವನಿರ್ಣಯ ಮಾಡುವ ಸಾಧನರಾಗಬೇಕು, ಆ ಶಿಕ್ಷಣದಿಂದ ಅವರಲ್ಲಿ ಸಚ್ಚರಿತ್ರೆಯೂ, ಉತ್ಸಾಹಪೂರ್ವಕವಾದ ಕರ್ತವ್ಯ ಪರಾಯಣತೆಯೂ, ಮನೆಯವರಿಗೂ ನೆರೆಹೊರೆಯವರಿಗೂ ರಾಜನಿಗೂ ದೇವರಿಗೂ ಸಲ್ಲಬೇಕಾದ ಕರ್ತವ್ಯಾಂಶಗಳನ್ನು ಸಲ್ಲಿಸುವುದರಲ್ಲಿ ಕುತೂಹಲವೂ ಉಂಟಾಗುವಂತಿರಬೇಕು. ನಮ್ಮ ಪಾಠಶಾಲೆಗಳಲ್ಲಿ ತರಬೇತಾಗಿ ಹೋಗುವಂಥಾ ವಿದ್ಯಾರ್ಥಿಗಳು ಸ್ವಾರ್ಥಪರಾಯಣರಾಗಿಯೂ, ಅಲಕ್ಷ್ಯಭಾವವುಳ್ಳವರಾಗಿಯೂ, ಕರ್ತವ್ಯ ವಿದೂಷಕರಾಗಿಯೂ ಆದಪಕ್ಷದಲ್ಲಿ ಸಂಸ್ಥಾನವು ಯಥಾರ್ಥವಾದ ಶ್ರೇಯೋಭಿವೃದ್ಧಿಯನ್ನು ಖಂಡಿತವಾಗಿಯೂ ಹೊಂದಲಾರದು

ಕ್ರೈಸ್ತರು ಯಾರು?

ಇಂದಿನ ದೇಶದಲ್ಲಿ ಕ್ರೈಸ್ತರ ವಿಷಯು ಜನರೊಳಗೆ ನಾನಾ ತರವಾದ ಅಭಿಪ್ರಾಯಗಳಿವೆಯೆಂದು ಕಂಡು ಬರುತ್ತದೆ. ಜುಟ್ಟನ್ನು ಬೋಳಿಸಿ ಕ್ರೈಸ್ತ ದೇವಾಲಯಗಳಿಗೆ ಹೋಗಿ ಪ್ರಾರ್ಥನೆ ಮಾಡುವವರು ಮಾತ್ರ ಕ್ರೈಸ್ತರೆಂದು ಕೆಲವರು ಭಾವಿಸುತ್ತಾರೆ. ಮತ್ತೆ ಕೆಲವರು ಕ್ರೈಸ್ತ ಮತದ ತತ್ವಗಳನ್ನು ಆಚರಣೆಯಲ್ಲಿಟ್ಟುಕೊಂಡಿರುವವರನ್ನು ನೋಡಿ ಕ್ರೈಸ್ತರೆಂದು ಹೇಳುವರು. ಆದರೆ ಕ್ರೈಸ್ತರು ಯಾರೆಂಬು ನಿರ್ಧರಿಸುವುದು ಬಹು ಕಷ್ಟವಾದ ಸಂಗತಿಯಾಗಿರುತ್ತದೆ. ಯಾರು ತಮ್ಮ ಗುರುವಾದ ಯೇಸು ಕ್ರಿಸ್ತನ ನಡತೆಯನ್ನು ಅನುಸರಿಸಿ ಅದರಂತೆ ನಡೆಯುತ್ತಾರೆಯೋ ಅಂಥವರೇ ಕ್ರೈಸ್ತರು. ಯಾರು ತಮ್ಮ ನಡೆ ನುಡಿ ಕ್ರಿಯೆಗಳಲ್ಲಿ ಕ್ರಿಸ್ತನಂತೆ ನಡೆಯುವುದಿಲ್ಲವೋ ಅಂಥವರು ನಿಜಕ್ರೈಸ್ತರೆನ್ನಿಸಿಕೊಳ್ಳಲಾರರು. ಒಬ್ಬ ಯೌವನಸ್ಥನು ಒಂದುವೇಳೆ ತನ್ನ ತಂದೆಯ ಮುಖಭಾವವನ್ನು ಹೊಂದಿರಬಹುದು, ತಂದೆಗಿದ್ದ ವಿದ್ಯೆಯು ಅವನಿಗಿದ್ದರೂ ಇರಬಹುದು. ಆದರೆ ಅವನು ತನ್ನ ತಂದೆಯ ಉತ್ತಮ ಗುಣ ಸ್ವಭಾವಗಳನ್ನು ಪಡೆಯದೆ ಹೋಲಿಯಾಗಿದ್ದರೆ ಅಂಥವನು ತನ್ನ ತಂದೆಯ ಹೆಸರನ್ನು ಎತ್ತುವುದಕ್ಕೂ ಅಯೋಗ್ಯನೆಂದು ಭಾವಿಸಬೇಕಲ್ಲವೆ? ಹೀಗಿದ್ದ ಪಕ್ಷದಲ್ಲಿ ಕ್ರೈಸ್ತರೆನ್ನಿಸಿಕೊಳ್ಳುವವರು ಶ್ರೇಷ್ಠರಾಗಿಯೇ ಇರಬೇಕು. ಯೇಸು ಕ್ರಿಸ್ತನು ಕೊಟ್ಟಿರತಕ್ಕ ಕಟ್ಟಳೆಗಳನ್ನು ಅನುಸರಿಸಿಕೊಂಡು ಬರುವುದು ಒಂದುವೇಳೆ ಸುಲಭವಾಗಿದ್ದರೂ ಇರಬಹುದು. ಆದರೆ ಯಾವನು ತನ್ನ ಗುರುವಿನ ಶ್ರೇಷ್ಠ ತರವಾದ ಮಾದರಿಯನ್ನನುಸರಿಸಿಕೊಂಡು ಬರುತ್ತಾನೆಯೋ ಅಂಥವನೇ ಕ್ರೈಸ್ತನೆನ್ನಿಸಿಕೊಳ್ಳಲು ಯೋಗ್ಯನಾಗಿರುತ್ತಾನೆ. ಅಂಥವನೇ ಕ್ರೈಸ್ತ ಮತದ ಶ್ರೇಷ್ಠತ್ವಕ್ಕೆ ಮಾದರಿಯಾಗಿರುವನು. ಈಗಿನ ಕಾಲಗಳಲ್ಲಿ ಹಿಂದೂಗಳಾದರೂ ಮಹಮದೀಯರಾದರೂ ಕ್ರೈಸ್ತರಾದರೂ ತಮ್ಮ ಮತತತ್ವಗಳ ವಿಷಯ ಹೋರಾಡದೆ ತಮ್ಮ ಒಳಗಣ ಮತ್ತು ಹೊರಗಣ ಪ್ರತಿ ದಿನದ ನಡತೆಯ ವಿಷಯ ಯೋಚಿಸಬೇಕಾಗಿದೆ. ಯಾವನು ತನ್ನ ನಡತೆಯನ್ನು ದೇವರ ಸನ್ನಿಧಿಯಲ್ಲಿ ಮೆಚ್ಚಿಕೆಯಲ್ಲದ್ದೂ ಅತೃಪ್ತಿಕರವಾದದ್ದೂ ಆಗಿರುವಂತೆ ಮಾಡಿಟ್ಟುಕೊಂಡಿರುತ್ತಾನೆಯೋ ಅಂಥವನು ಬ್ರಾಹ್ಮಣನಾಗಿದ್ದರೇನು ಹೊಲೆಯನಾಗಿದ್ದರೇನು? ಅವನು ಕ್ರೈಸ್ತನಾಗಿದ್ದರೇನು ಬೌದ್ಧನಾಗಿದ್ದರೇನು? ತತ್ವಗಳಿಗಿಂತ ನಡತೆಯೇ ಶ್ರೇಷ್ಠ. ಯೇಸು ಕ್ರಿಸ್ತನು ತನ್ನ ಮತವನ್ನು ಬೋಧನೆಯ ಮೂಲಕವೇ ಮಾತ್ರ ಸ್ಥಾಪಿಸದೆ ಅದನ್ನು ತನ್ನ ನಡತೆಯ ಮತ್ತು ಕೆಲಸದ ಮೂಲಕವೂ ಸ್ಥಾಪಿಸಿರುತ್ತಾನೆ. ಆದ್ದರಿಂದ ಆತನ ಶಿಷ್ಯರೆಂದೆನ್ನಿಸಿಕೊಂಡಿರುವವರು ಆತನು ಕೊಟ್ಟಿರುವ ಕಟ್ಟಳೆಗಳನ್ನು ಆಚರಣೆಯಲ್ಲಿಟ್ಟುಕೊಳ್ಳುವುದಲ್ಲದೆ ಅವುಗಳನ್ನು ತಮ್ಮ ಪ್ರತಿ ದಿನದ ನಡತೆಯಲ್ಲಿ ಅಭ್ಯಾಸಿಸಿ ಯೇಸು ಕ್ರಿಸ್ತನ ಮಾದರಿಯನ್ನು ಅನುಸರಿಸಿ ನಡೆಯಬೇಕು

ಒಳದೇಶದ ವೃತ್ತಾಂತಗಳು.

ಸೀನಿಯರ್ ಕೌನ್ಸಿಲರ್ ಮೆ|| ಆನಂದರಾಯರು ರಾಜಧಾನಿಗೆ ಬಂದಿರುತ್ತಾರೆಂದು ಕಳೆದ ವಾರ ತಿಳಿಸಿದ್ದೆವು ಅವರು ಬಂದಿರಲಿಲ್ಲ. ಮುಂದಿನ ವಾರ ಬರುವವರಾಗಿದ್ದಾರೆಂದು ತಿಳಿಯುವುದು.

ಬ್ರಿಟಿಷ್ ರೆಸಿಡೆಂಟ್ ಮೆ|| ಎಸ್ ಎಂ. ಫ್ರೇಸರ್ ಯವರು ಸೀಮೆಯಿಂದ ವಾಪಸು ಬರುವ ತಮ್ಮ ಪತ್ನಿಯವರನ್ನು ಸಂಧಿಸಿ ಕರೆದು ತರುವುದಕ್ಕಾಗಿ ಮುಂದಿನ ವಾರ ಬೊಂಬಾಯಿಗೆ ದಯಮಾಡುವವರಾಗಿದ್ದಾರೆಂದು ಪ್ರಕಟವಾಗಿದೆ

ಕಳೆದ ಶನಿವಾರ ಬೆಳಿಗ್ಗೆ ದಿವಾನ್ ಮೆ|| ಮಾಧವರಾಯರು ಬೆಂಗಳೂರಿನಿಂದ ರಾಜಧಾನಿಗೆ ಬಂದು ಮರುದಿನ ಮಧ್ಯಾಹ್ನ ವಾಪಸು ಪ್ರಯಾಣ ಮಾಡಿದರು. ಅವರು ಮುಂದಿನ ವಾರ ಮತ್ತೆ ಮೈಸೂರಿಗೆ ಬರುವವರಾಗಿದ್ದಾರೆಂದು ಕೇಳುತ್ತೇವೆ.

ಹೋದ ವಾರ ಮದುವೆಗೋಸ್ಕರ ಎರವಲಾಗಿ ತೆಗೆದುಕೊಂಡು ಹೋಗಿದ್ದ ನಗಗಳನ್ನು ವಾಪಸು ತಂದು ಕೊಡಬೇಕೆಂದು ಶ್ರೀರಂಗಪಟ್ಟಣದಲ್ಲಿ ರೈಲು ಹತ್ತಿದ ಮನುಷ್ಯನಿಂದ ಯಾರೋ ಆ ನಗಗಳ ಗಂಟನ್ನು ಅಪಹರಿಸಿದರೆಂದೂ, ರೈಲ್ವೆ ಪೋಲೀಸಿನವರು ಪತ್ತೆ ತರಮೂದು ನಡಿಸುತ್ತಿದ್ದಾರೆಂದೂ ತಿಳಿದು ಬಂದಿದೆ

ಬೆಂಗಳೂರು ಬಸವನ ಗುಡಿ ಮಲ್ಲೇಶ್ವರ ಬಡಾವಣೆಗಳಿಗೂ ಸುತ್ತುಮುತ್ತಲೂ ಇರುವ ಗ್ರಾಮಗಳಿಗೂ (ಮುನಿಸಿಪಾಲಿಟಿ ಪಾಳ್ಯದ ವಿನಾ) ರಾತ್ರಿ ಹೊತ್ತು ೫೧೫ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಬೇಕೆಂದು ಏರ್ಪಾಡಾಗುತ್ತಿದೆ. ಇದಕ್ಕೆ ಸರ್ಕಾರದವರು ೧,೧೫,೬೯೫ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ

ಕಳೆದ ಗುರುವಾರ ರಾತ್ರಿ ಉರಿಗಾಂ ಚಿನ್ನದಗಣಿಗಳ ಪೈಕಿ ಬುಲೆನ್ ಷಾಫ್ಟ್ ಎಂಬ ಗಣಿಯಲ್ಲಿ ಒಬ್ಬ ನೌಕರನು ಅಜಾಗರೂಕತೆಯಿಂದ ಯಂತ್ರವನ್ನು ತಿರುಗಿಸಿದ್ದಕ್ಕಾಗಿ ಇಬ್ಬರು ಇಟಲಿ ದೇಶದವರೂ, ಒಬ್ಬ ಸ್ವದೇಶಿಯೂ ಮೃತಪಟ್ಟರು. ಆರು ಜನರಿಗೆ ಗಾಯಗಳಾದವು. ಸರ್ಕಾರದವರು ಆ ನೌಕರನನ್ನು ದಸ್ತಗಿರಿ ಮಾಡಿ, ಅವನ ಮೇಲೆ ಮೊಕದ್ದಮೆ ತಂದಿದ್ದಾರೆ.

ಬೆಂಗಳೂರು ದಂಡಿನಲ್ಲಿ ಮೆ|| ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್ರವರು ಅಲ್ಲಿ ಒಂದು ವಿದ್ಯಾರ್ಥಿ ನಿಲಯವನ್ನೂ, ಪಂಚಮರಿಗಾಗಿ ಒಂದು ಪಾಠಶಾಲೆಯನ್ನೂ ಕಟ್ಟಿಸುತ್ತಾರೆ. ಕಳೆದ ಶನಿವಾರ ಸಾಯಂಕಾಲ ಬ್ರಿಟಿಷ್ ರೆಸಿಡೆಂಟರವರು ಬಹು ಜನ ಸರ್ದಾರರ ಮತ್ತು ದೇಶೀಯ ದೊಡ್ಡ ಮನುಷ್ಯರ ಮಧ್ಯೆ ನಿಂತು ಅವೆರಡು ಕಟ್ಟಡಗಳನ್ನೂ ಪ್ರತಿಷ್ಠೆ ಮಾಡಿದರು.

ಸಾಮಾನ್ಯವಾಗಿ ಅಡ್ವೊಕೇಟರೂ ೧ನೇ, ೨ನೇ, ಗ್ರೇಡುಗಳ ಪ್ಲೀಡರುಗಳೂ ಸುಲಭವಾಗಿ ದೊರಕುವ ಸ್ಥಳಗಳಲ್ಲಿ ಮ್ಯಾಜಿಸ್ಟ್ರೇಟರುಗಳು ಮುಖ್ತ್ಯಾರರೆಂಬ ೩ನೇ ಗ್ರೇಡಿನ ಪ್ಲೀಡರುಗಳಿಗೆ ಕಕ್ಷಿಗಾರರ ಪರವಾಗಿ ಮೊಕದ್ದಮೆಗಳನ್ನು ಹಿಡಿದು ವಾದಿಸುವುದಕ್ಕೆ ಅವಕಾಶಕೊಡಕೂಡದೆಂದು ಮೈಸೂರು ಚೀಫ್ ಕೋರ್ಟಿನವರು ಒಂದು ಸರ್ಕ್ಯುಲರನ್ನು ಎಲ್ಲಾ ಮ್ಯಾಜಿಸ್ಟ್ರೇಟರುಗಳಿಗೂ ಕಳುಹಿಸಿಕೊಟ್ಟಿದ್ದಾರೆ

ಬೆಂಗಳೂರು ಸಿಟಿಯ ಮಾರ್ಕೆಟ್ಟನ್ನು ಈಗಿನ ಸ್ಥಳದಿಂದ ತಪ್ಪಿಸಿ ಕೋಟೆ ಕೆಂಪಕ ಮುಚ್ಚಿರುವ ಕಡೆ ಕಟ್ಟಬೇಕೆಂದು ಚರ್ಚೆಯಾಯಿತು. ಮ್ಯುನಿಸಿಪಲ್ ಕೌನ್ಸಿಲರುಗಳು ಹೊಸ ಸ್ಥಳವು ಚೆನ್ನಾಗಿಯೂ ಅನುಕೂಲವಾಗಿಯೂ ಇಲ್ಲವೆಂದೂ, ಈಗಿರುವ ಮಾರ್ಕೆಟ್ಟನ್ನೇ ಒಳಗೂ ಸುತ್ತಲೂ ಆರೋಗ್ಯಕರವಾದ ರೀತಿಯಲ್ಲಿ ಬದಲಾವಣೆ ಮಾಡಿ ಇಡುವುದೇ ಉತ್ತಮವೆಂದೂ ತೀರ್ಮಾನಿಸಿದ್ದಾರೆ. ಇದಲ್ಲದೆ ಅಕ್ಕಿಪೇಟೆಯ ಮಾರ್ಕೆಟ್ಟನ್ನು ಮೆ. ಕೆಂಭಂ ಕಾಮ್ಮಿಯಂಗಾರ್ರ ಮನೆ ಒಡೆದುಹಾಕಿ ಬಹಾವಣೆ ಮಾಡಿ ಅನುಕೂಲಪಡಿಸಬೇಕೆಂದೂ ಗೊತ್ತಾಗಿದೆ.

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ಮೆ|| ವಿ. ಪಿ. ಮಾಧವರಾಯರು ದಿವಾನ್‌ಗಿರಿ ಮಾಡಿ, ಕಂದಾಯದ ಶಿಸ್ತನ್ನು ಒದಲಾಯಿಸಿ ರೈತರು ದವಸಕ್ಕೆ ಪ್ರತಿಯಾಗಿ ಹಣವನ್ನು ಕಂದಾಯಕೊಡುವಂತೆ ಏರ್ಪಾಡುಮಾಡಿದರಷ್ಟೆ. ಅಲ್ಲಿನ ಪ್ರಜೆಗಳು ಇದಕ್ಕಾಗಿ ಮೆ|| ಮಾಧವರಾಯರನ್ನು ಕೊಂಡಾಡುತ್ತಿದ್ದಾರೆ. ಮತ್ತು ಆಗಲೇ ಒಂದು ಕಡೆ ಅವರ ಹೆಸರಿನ ಮೇಲೆ ಶಿಲಾಶಾಸನವನ್ನು ಕೆತ್ತಿಸಿ ನೆಡಿಸಿದರು ಈಗ ಅವರ ಪ್ರತಿಮೆಯನ್ನು ಮಾಡಿಸಿ ನಿಲ್ಲಿಸಿ, ಅವರ ದಿವಾನ್‌ಗಿರಿಯ ಪ್ರಭಾವವನ್ನು ಶಾಶ್ವತಪಡಿಸಬೇಕೆಂದು ಅನಂತಶಯನದ ಪ್ರಜೆಗಳು ಚರ್ಚೆಮಾಡುತ್ತಿದ್ದಾರೆ.

ನಮ್ಮ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಗಳಾಗಿ ಕಳೆದ ಆರೂವರೆ ವರುಷಗಳಿಂದ ಕೆಲಸಮಾಡುತ್ತಾ ಬಂದಿರುವ ಮೆ|| ಇ. ಮೆಕಾನಕಿಯವರು ಈ ತಿಂಗಳ ಕೊನೆಗೆ ಕೆಲಸ ಬಿಡುತ್ತಾರಾದದ್ದರಿಂದ ಅವರಿಂದ ಉಪಕಾರ ಹೊಂದಿದ ಮೈಸೂರು ಪ್ರಜೆಗಳು ಅವರನ್ನು ಯೋಗ್ಯವಾದ ರೀತಿಯಲ್ಲಿ ಸನ್ಮಾನ ಮಾಡಿ ಕಳುಹಿಸಿಕೊಡಬೇಕೆಂದು ಕಳೆದ ಶನಿವಾರ ಪುರಜನರು ಸೇರಿ ಗೊತ್ತುಮಾಡಿದರು. ಈ ಉತ್ಸವವು ಈ ತಿಂಗಳ ತಾ ೨೭ನೇ ಶನಿವಾರ ರಾತ್ರಿ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ನಡೆಯುವುದಾಗಿದೆ. ಕೆಲವು ದೊಡ್ಡ ಮನುಷ್ಯರೂ ವರ್ತಕರೂ ಅಧಿಕಾರಿಗಳೂ ಸಹಾಯಕರಾಗಿ ನಿಂತು ಈ ಸಂತೋಷ ಕಾರ್ಯವನ್ನು ನೆರವೇರಿಸುವವರಾಗಿದ್ದಾರೆ.

ಕಳೆದ ವಾರ ಹುಣಸೂರಿನಲ್ಲಿ ೫ ಮನೆಗಳು ಯಜ್ಞೇಶ್ವರನ ಪಾಲಾದವು. ರಾಗಿ, ಭತ್ತದ ಮೂಟೆಗಳು ಕೆಲವು ನಷ್ಟವಾದವು ಈ ಕಾಲದಲ್ಲಿ ಮ್ಯಾತಿಸನ್‌ ಕಂಪನಿಯವರೂ, ಮೆ|| ಹೇ ಕಂಪನಿಯವರೂ ಗಾಡಿಗಳಲ್ಲಿ ನೀರು ತುಂಬಿಸಿಕೊಂಡು ಬಂದು ಶಾಸೆ ಮೆಹನತ್ತಿನಿಂದ ಬೆಂಕಿಯನ್ನು ಆರಿಸಿದರು. ನಮ್ಮ ಅಮಲ್ದಾರರ ಕಡೆಯಿಂದ ವಾಟರ್ ಸಪ್ಲೈ ಓವರ್‌ಸೀಯರವರಾದ ಚಂದ್ರಶೇಖರಯ್ಯನವರೂ, ಮುನಿಸಿಪಲ್ ಮನೇಗಾರರೂ ಬಹಳ ಶ್ರಮಪಟ್ಟು ಮುತುವರ್ಜಿಯಿಂದ ಅದಕ್ಕೆ ಸಹಾಯ ಮಾಡಿದರು. ಇವರೆಲ್ಲಾ ಇಷ್ಟು ಮೆಹನತ್ತು ಮಾಡದಿದ್ದರೆ ಇನ್ನೂ ಬಹಳ ಮನೆಗಳು ನಷ್ಟವಾಗುತ್ತಿದ್ದವು ಎಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಬೆಂಗಳೂರು ದಂಡಿನ ಎರಡನೇ ಮ್ಯಾಜಿಸ್ಟ್ರೇಟರಾದ ಖಾನ್ ಬಹದೂರ್ ಎಂ. ಅಬ್ದುಲ್ ರಹಮಾನ್‌ರವರು ಪ್ರಜಾ ವಾತ್ಸಲ್ಯಪೂರ್ವಕವಾದ ಹಲವು ಕಾರ್ಯಗಳನ್ನು ನಡಿಸಿ ಪ್ರಜೆಗಳ ಪ್ರೀತಿಯನ್ನೂ ಅಧಿಕಾರಿಗಳ ಸನ್ಮಾನವನ್ನೂ ಸಂಪಾದಿಸಿಕೊಂಡಿದ್ದಾರೆ. ಇವರಿಗೆ ವೈಸ್‌ರಾಯಿಯವರು ಕೇಸರೀ ಹಿಂದ್ ಎಂಬ ಮೆಡಲನ್ನು ದಯಪಾಲಿಸಿ, ಅವರಲ್ಲಿ ತಮಗುಂಟಾಗಿರುವ ಸಂತೋಷಾತಿಶಯವನ್ನು ಪ್ರಕಾಶಪಡಿಸಿದರು. ಬ್ರಿಟಿಷ್ ರೆಸಿಡೆಂಟ್ ಮೆ|| ಎಸ್. ಎಂ. ಫ್ರೇಸರ್ ಯವರು ಕಳೆದ ಬುಧವಾರ ಒಂದು ದೊಡ್ಡ ಸಭೆಯನ್ನು ಕೂಡಿಸಿ, ಸಭಾ ಮಧ್ಯದಲ್ಲಿ ಅವರ ಗುಣಕಥನವನ್ನು ಮಾಡಿ, ವೈಸ್‌ರಾಯಿಯವರಿಂದ ಬಂದಿದ್ದ ಮೇಲ್ಕಂಡ ಬಿರುದಿನ ಬಿಲ್ಲೆಯನ್ನು ಅವರಿಗೆ ಒಪ್ಪಿಸಿದರು

ಮೈಸೂರು ಗೆಜೆಟ್ ಸಂಗ್ರಹ.

ನಾಸಿಕ ನಗರದಲ್ಲಿ ಈಗ ಪ್ಲೇಗ್ ಬೇನೆ ಉಪದ್ರವು ನಿವಾರಣೆಯಾಗಿರುವುದರಿಂದ ಸಿಂಹಾಸ್ಥದ ಉತ್ಸವಗಳಿಗೆ ಯಾತ್ರಾರ್ಥಿಗಳು ಅಲ್ಲಿಗೆ ಹೋಗದಂತೆ ತಡೆಯುವುದಿಲ್ಲವೆಂದು ಬೊಂಬಾಯಿ ಗವರ್ನಮೆಂಟಿನವರು ನಮ್ಮ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಿದ್ದಾರೆ.

ಚನ್ನರಾಯಪಟ್ಟಣದ ತಾಲ್ಲೂಕು ಶ್ರವಣಬೆಳ್ಗೊಳದಲ್ಲಿ ನಡೆಯಬೇಕೆಂದು ನಿಷ್ಕರ್ಷೆಯಾಗಿದ್ದ ಮಹಾಭಿಷೇಕೋತ್ಸವವನ್ನು ಸದ್ಯಕ್ಕೆ ನಿಲ್ಲಿಸಿರುತ್ತಾರಾದದ್ದರಿಂದ ಅಲ್ಲಿಗೆ ಯಾತ್ರಾರ್ಥಿಗಳನ್ನು ಬಿಡುವುದಿಲ್ಲವೆಂಬ ಹುಕುಮನ್ನು ರದ್ದು ಮಾಡಿದೆ.

ಚೀಫ್ ಕೋರ್ಟ್ ಡೆಪ್ಯುಟಿ ರೆಜಿಸ್ಟ್ರಾರ್ ಮೆ|| ಬಿ ಬಸವಾರಾಧ್ಯರವರಿಗೆ ಮಾರ್ಚಿ ತಾ. ೮ ರಿಂದ ಪೂರಾ ಸಂಬಳದ ಮೇಲೆ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರು ತಾಲ್ಲೂಕ್ ಅಮಲ್ದಾರ್ ಮ|| ಎ. ಹೇಸ್ ಯವರನ್ನು ಅ|| ಕಮಿಷನರಾಗಿ ಬದಲಿ ನೇಮಕಮಾಡಿದೆ. ಮ|| ರಾಯಲು ಚೆಟ್ಟಿಯವರು ರಜದ ಮೇಲಿರುವ ಕಾಲದಲ್ಲಿ ಸಿವಿಲ್ ಆಫೀಸರಾಗಿ ಕೆಲಸಮಾಡತಕ್ಕದ್ದು

ಸೀನಿಯರ್ ಅ|| ಕಮಿಷನರ್ ಮೆ|| ಕೆ ಶ್ರೀನಿವಾಸರಾಯರನ್ನು ಗುಬ್ಬಿ ಸಬ್ ಡಿವಿಜನ್‌ಗೂ, ಸೀನಿಯರ್ ಅ ಕಮಿಷನರ್ ಮೆ|| ಎಂ. ಎ ನಾರಾಯಣ ಐಯಂಗಾರ್‌ರನ್ನು ಮಧುಗಿರಿ ಸಬ್ ಡಿವಿಜನ್‌ಗೂ ವರ್ಗಮಾಡಿದೆ.

ಅಮಲ್ದಾರ್ ಮೆ|| ಎಂ. ಕೃಷ್ಣರಾಯರು ರಜದ ಮೇಲಿರುವಾಗ್ಗೆ ಹಾಸನದ ಡೆಪ್ಯುಟಿ ಕಮಿಷನರ್‌ರವರ ಆಫೀಸ್ ಹೆಡ್ ಕ್ಲಾರ್ಕ್ ಜೆ. ಎಸ್. ರಾಮಸ್ವಾಮಯ್ಯಂಗಾರ್ರು ಅರಕಲಗೂಡು ತಾಲ್ಲೂಕ್ ಅಮಲ್ದಾರರಾಗಿ ಬದಲಿ ನೋಡತಕ್ಕದ್ದು.

ಮೆ ಎ. ಸುಬ್ರಹ್ಮಣ್ಯ ಐಯರವರನ್ನು ಮುಜರಾಯಿ ಸೂಪರಿನ್‌ಟೆಂಡೆಂಟರಾಗಿ ನೇಮಕಮಾಡಿರೋಣದರಿಂದ ಮುಂದೆ ಹೇಳುವ ಬದ್ಲಿಗಳು ಹುಕುಂ ಮಾಡಲ್ಪಟ್ಟವು:—ಚೀಫ್ ಕೋರ್ಟ್ ರೆಜಿಸ್ಟ್ರಾರ್ ಮೆ|| ಪಿ. ಎ ರಾಜರತ್ನ ಮೊದಲಿಯಾರ್ರು, ಮೆ|| ಮೀರ್ ಹಂಜಾ ಹುಸ್ಸೇನ್ ಯವರೂ, ಹುಜೂರು ಖಜಾನಾ ಆಫೀಸರ್ ಮೆ|| ಕೆ. ಕೃಷ್ಣ ಐಯರವರೂ ಸೀನಿಯರ್ ಅ|| ಕಮಿಷನರ್‌ರುಗಳಾಗಿರತಕ್ಕದ್ದು.

ಕಳೆದ ತಿಂಗಳ ತಾ. ೨೫ ರಿಂದ ಚಿತ್ರದುರ್ಗದ ಡಿವಿಜನ್‌ನನ್ನು ಮಾರಿಕಣಿವೆ ಡಿವಿಜನ್‌ನಿಂದ ಪ್ರತ್ಯೇಕ ಮಾಡಲ್ಪಟ್ಟಿದೆ ಮೆ|| ಸಿ. ಕೃಷ್ಣ ಐಯಂಗಾರ್ರು ಚಿತ್ರದುರ್ಗದ ಡಿವಿಜನ್ ಅ|| ಎಗ್ಸಿಕ್ಯುಟಿವ್ ಇನ್‌ಜನಿಯರಾಗಿ ನೇಮಿಸಲ್ಪಟ್ಟಿದ್ದಾರೆ. ಮಾರಿಕಣಿವೆ ಡಿವಿಜನ್‌ಗೆ ಮೆ|| ಎಚ್. ಡಿ. ರೈಸ್ ಯವರು ಅ|| ಎಗ್ಸಿಕ್ಯುಟಿವ್ ಇನ್‌ಜನಿಯರಾಗಿರತಕ್ಕದ್ದು.

ಮುಜರಾಯಿ ಸೂಪರಿಂಟೆಂಡೆಂಟ್ ಮೆ|| ಎ. ಸುಬ್ರಹ್ಮಣ್ಯ ಐಯರವರು ಮಾರ್ಚಿ ತಾ. ೧ ರಲ್ಲಿ ರಜದಿಂದ ಬಂದು ಕೆಲಸದ ಛಾರ್ಜನ್ನು ವಹಿಸಿಕೊಂಡಿದ್ದಾರೆ

ದೇವರಾಯ ಸಮುದ್ರದ ವರದಿ ನಾರಣಪ್ಪನವರ ಮಗ ಡಿ. ಎನ್. ವೆಂಕಟೇಶ ಐಯರ್ ಎಂಬ ಹುಡುಗನು ಬೆಂಗಳೂರು ವೆ|| ಮಿ|| ಹೈ ಸ್ಕೂಲಿನ ೫ ನೇ ಫಾರಂನಲ್ಲಿ ವಿದ್ಯಾರ್ಥಿಯಾಗಿದ್ದು, ತನ್ನ ಸರ್ಟಿಫಿಕೇಟನ್ನು ತಿದ್ದಿ ಮೋಸಪಡಿಸುವುದಕ್ಕೆ ಪ್ರಯತ್ನಪಟ್ಟನಾದದ್ದರಿಂದ ಅವನನ್ನು ೧೯೧೦ ನೇ ಜನವರಿ ವರೆಗೆ ಈ ಸಂಸ್ಥಾನದ ಯಾವ ಸ್ಕೂಲಿಗೂ ಸೇರಿಸಿಕೊಳ್ಳಕೂಡದು.

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಮಾರ್ಚಿ ತಾ. 6 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು.	ರಿಲೀಫ್ ಕೆಲಸ ಮಾಡುವವರ ಸಂಖ್ಯೆ. ಗಂಡಾಳು.	ಹೆಣ್ಣಾಳು.	ಮಕ್ಕಳು.	ಕೂಲಿ ಕೊಟ್ಟದ್ದು. ರೂ.	ಧರ್ಮಸಹಾಯ ಪಡೆದ ಜನರು.
ಬೆಂಗಳೂರು	1,161	693	229	1,608	355
ಕೋಲಾರ	6,994	3,922	923	2,186	6,780
ತುಮಕೂರು	5,386	3,063	213	2,090	3,311
ಮೈಸೂರು	541	495	77	190	692
ಹಾಸನ	392	250	..	...	24
ಶಿವಮೊಗ್ಗ	899	637	134	273	..
ಕಡೂರು	14	17	..	6	..
ಚಿತ್ರದುರ್ಗ	1,103	802	175	632	165
ಒಟ್ಟು	16,993	8,821	1,751	7,193	11,230

ಮೈಸೂರು ಸರ್ಕಾರಿ ಹುಕುಮುಗಳು.

ಪ್ಲೇಗ್ ಇಲಾಖೆಯ ರಿಪೋರ್ಟು.

ಮೈಸೂರು ಸಂಸ್ಥಾನದ ಸ್ಯಾನಿಟರಿ ಕಮಿಷನರ್‌ರವರು ೧೯೦೭-೦೮ನೇ ಸಾಲಿನ ಪ್ಲೇಗ್ ಇಲಾಖೆಯ ರಿಪೋರ್ಟನ್ನು ಪ್ರಕಟಿಸಿದ್ದಾರೆ. ಅದರಿಂದ ತಿಳಿದು ಬರುವ ಮುಖ್ಯ ವಿಚಾರಗಳೇನೆಂದರೆ;—ಹಿಂದಿನ ಎರಡು ಸಾಲುಗಳಿಗಿಂತ ಈ ಸಾಲಿನಲ್ಲಿ ಪ್ಲೇಗ್ ಉಪದ್ರ ತಗಲಿದವರ ಸಂಖ್ಯೆಯೂ, ಅದರಲ್ಲಿ ಕಾಲವಾದವರ ಸಂಖ್ಯೆಯೂ ಬಹಳ ಹೆಚ್ಚಾಗಿರುತ್ತವೆಂದು ತಿಳಿಸಲು ವಿಷಾದವಾಗುತ್ತದೆ ಹ್ಯಾಗಂದರೆ—

	೧೯೦೫-೦೬	೧೯೦೬-೦೭	೧೯೦೭-೦೮
ತಗಲಿದವರ ಸಂಖ್ಯೆ	೩,೦೨೩	೪,೯೮೩	೧೯,೨೭೫
ಸತ್ತವರ ಸಂಖ್ಯೆ	೨,೧೩೮	೪,೫೮೭	೧೯,೦೭೫

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಬಹಳ ಹೆಚ್ಚಾಗಿಯೂ, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಬಹಳ ಕೊಂಚವಾಗಿಯೂ ಪ್ಲೇಗ್ ಕಾಯಿಲೆಗಳು ಪ್ರಾಪ್ತವಾದವು. ಮೈಸೂರು ಬೆಂಗಳೂರು ಪಟ್ಟಣಗಳಲ್ಲೂ ಹೆಚ್ಚಾಗಿಯೇ ಇದ್ದವು ಆದರೂ ಹೀಗೆ ಕಾಯಿಲೆಗಳು ಬಹಳವಾಗಿ ಹೆಚ್ಚಲು ಕಾರಣಗಳೇನೆಂಬುದನ್ನು ಕುರಿತು ಸ್ಯಾನಿಟರಿ ಕಮಿಷನರ್‌ರವರು ತಿಳಿಸಿಲ್ಲ. ಅಕ್ಸಲಾಗಿ ಈ ಸಾಲಿನಲ್ಲಿ ಸಂಸ್ಥಾನವು ೪,೮೫೧ ರೂಪಾಯಿ ಖರ್ಚುಮಾಡಿ, ೯೦,೭೯೧ ಇಲಿಹೆಗ್ಗಣಗಳನ್ನು ಕೊಲ್ಲಿಸಿರುತ್ತಾರೆ. ಹಿಂದಿನ ಸಾಲಿನಲ್ಲಿ ೧೯೩ ಮಂದಿಯೂ, ಈ ಸಾಲಿನಲ್ಲಿ ೩,೧೬೭ ಜನರೂ ಪ್ಲೇಗ್ ಚುಚ್ಚುಮದ್ದನ್ನು ಹಾಕಿಸಿಕೊಂಡರು. ಇದಕ್ಕೋಸ್ಕರವೇ ಪ್ರತ್ಯೇಕವಾಗಿ ಡಾಕ್ಟರುಗಳನ್ನು ನೇಮಕಮಾಡಿದ್ದರೂ ಇಷ್ಟು ಸ್ವಲ್ಪ ಜನರು ಮಾತ್ರ ಚುಚ್ಚು ಹಾಕಿಸಿಕೊಂಡಿರುವುದು ವಿಷಾದಕರವಾಗಿದೆ. ಡಾಕ್ಟರುಗಳೂ ರೆವಿನ್ಯೂ ಅಧಿಕಾರಿಗಳೂ ಈ ಭಾಗದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಬೇಕು ಪ್ಲೇಗ್ ನಿರೋಧಕವಾದ ಎಲ್ಲಾ ಕಾರ್ಯಗಳಿಗೂ ಈ ಸಾಲಿನಲ್ಲಿ ೭೫,೨೧೮ ಚಿಲ್ಲರೆ ರೂಪಾಯಿ, ಅಂದರೆ ಹಿಂದಿನ ಸಾಲಿಗಿಂತ ಸುಮಾರು ೧,೭೪೦ ರೂಪಾಯಿ ಕಡಮೆ ಖರ್ಚಾಗಿರುವುದು.

ತಕಾವಿ ಸಾಲ ಕೊಡುವುದು.

ಈ ಸಂಸ್ಥಾನದಲ್ಲಿ ಕೆಲವು ರೈತರು ತಮ್ಮ ಜಮೀನುಗಳನ್ನು ಆಗಲೇ ವ್ಯವಸಾಯದ ಬ್ಯಾಂಕುಗಳಿಗೆ ಆಧಾರಮಾಡಿ, ಸಾಲಪಡೆದುಕೊಂಡಿದ್ದಾರೆಂದೂ, ಅಂಥವರಿಗೆ ಈಗ ಪವರ್ ವ್ಯವಸಾಯ ಮಾಡಿಕೊಳ್ಳುವುದಕ್ಕೆ ತಕಾವಿ ಸಾಲಗಳನ್ನು ಕೊಡಬೇಕಾಗಿದೆ ಎಂದೂ ರೆವಿನ್ಯೂ ಕಮಿಷನರ್‌ರವರು ಶಿಫಾರಸು ಮಾಡಿದರು ಗವರ್ನ್‌ಮೆಂಟಿನವರು ಅಂಥಾ ಜಮೀನುಗಳ ಅಂದಾಜು ಕ್ರಯದ ಹಣದಲ್ಲಿ ಬ್ಯಾಂಕುಗಳ ಸಾಲವನ್ನು ಕಳೆದು ಉಳಿಯುವ ಹಣದಮೇಲೆ ದಾಮಾಷಾಯಿ ಪ್ರಕಾರ ತಕಾವಿ ಸಾಲಗಳನ್ನು ಕೊಡಬಹುದೆಂದು ಹುಕುಂ ಕೊಟ್ಟಿದ್ದಾರೆ

ಜಾನುವಾರುಗಳ ಹೆಣವನ್ನು ಪರೀಕ್ಷಿಸುವುದು.

ಜಾನುವಾರುಗಳ ಹೆಣವನ್ನು ಕತ್ತರಿಸಿ ಪರೀಕ್ಷೆಮಾಡಿ ಅವುಗಳ ಮರಣಕ್ಕೆ ಕಾರಣವನ್ನು ಕಂಡುಹಿಡಿಯಬೇಕೆಂದು ಸರ್ಕಾರಿ ಅಧಿಕಾರಿಗಳು ಅಪೇಕ್ಷಿಸುವ ಸಂದರ್ಭಗಳಲ್ಲಿ ಡಾಕ್ಟರುಗಳು ಪರೀಕ್ಷೆಮಾಡಬೇಕೆಂತಲೂ, ಖಾಸಗೀಜನರು ಹಾಗೆ ಪರೀಕ್ಷೆಮಾಡಿಸಬೇಕೆಂದು ಅಪೇಕ್ಷಿಸಿದರೆ ಡಾಕ್ಟರಿಗೆ ಪ್ರತಿ ಲಾಷ್ ಮಹಜರಿಗೂ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿ ೫ ರೂಪಾಯಿಗೆ ಜಾಸ್ತಿ ಇಲ್ಲದಂತೆಯೂ, ಇತರ ಪ್ರದೇಶಗಳಲ್ಲಿ ೩ ರೂಪಾಯಿಯೊಳಗೂ ಫೀಜು ಕೊಡಬೇಕೆಂತಲೂ ಗವರ್ನ್‌ಮೆಂಟಿನವರು ಹುಕುಂಕೊಟ್ಟಿದ್ದಾರೆ.

“ವಿಕಟಪ್ರತಾಪ,” ಮಾಸ ಪತ್ರಿಕೆಯು.

“ವಿಕಟಪ್ರತಾಪ” ವೆಂಬ ಮಾಸ ಪತ್ರಿಕೆಯು ಎರಡು ವರುಷಕಾಲ ನಡೆಯುತ್ತಿತ್ತು. ಈಚೆಗೆ ಅದರ ಅಧಿಕಾರಗಳನ್ನೆಲ್ಲಾ ಬೆಂಗಳೂರಿನಲ್ಲಿರುವ ಮ॥ ಪಿ. ಎಂ. ಚಕ್ರಪಾಣಯ್ಯನವರು ವಹಿಸಿಕೊಂಡು, ಅದನ್ನು ನಡಿಸುವುದಕ್ಕೆ ಅಪ್ಪಣೆ ಆಗಬೇಕೆಂದು ಕೇಳಿರುತ್ತಾರೆ. ಅವರಿಗೆ ಅಂಥಾ ಅಪ್ಪಣೆಯನ್ನು ವರ್ತಮಾನ ಪತ್ರಿಕೆಗಳ ಕಾನೂನ್ ಪ್ರಕಾರ ಕೊಡಲಾಗಿದೆ.

ಕಳೆದ ವರುಷ ಪ್ರತಿನಿಧಿಸಭೆಯಲ್ಲಿ ಚರ್ಚೆಯಾದ ಕೆಲವು ವಿಷಯಗಳೂ ತೀರ್ಮಾನಗಳೂ.

(೧) ಕಬ್ಬಿನ ಹಾಲನ್ನು ಕುದಿಸಿ ಬೆಲ್ಲ ಮಾಡುವುದಕ್ಕೆ ರೈತರು ಕರಡಿಬಟ್ಟಿ ಮತ್ತು ಬೆಲ್ಲಂದೂರು ಫಾರೆಸ್ಟುಗಳಿಂದ ಸೌದೆಯನ್ನು ತಂದುಕೊಳ್ಳಬಹುದೆಂತಲೂ, ಪ್ರತಿ ಒಂದು ಗಾಡಿಗೂ ಎರಡು ಆಣೆಯಂತೆ ಸುಂಕ (ಸೀನಿಯರೇಜ್) ಕೊಡಬೇಕೆಂತಲೂ ಗವರ್ನ್‌ಮೆಂಟಿನವರು ಹುಕುಂಕೊಟ್ಟಿದ್ದಾರೆ. (೨) ರೈತರು ನೇಗಿಲು ಮುಂತಾದ ವ್ಯವಸಾಯದ ಮುಟ್ಟುಗಳನ್ನು ಮಾಡಿಕೊಳ್ಳುವುದಕ್ಕೆ ಮತ್ತಿಮರವನ್ನು ಮುಫತ್ತಾಗಿ ಕೊಡಬಹುದೆಂದು ಹುಕುಂ ಆಗಿದೆ. ಹೊನ್ನೆ ಮತ್ತು ಬೀಟೆ ಮರಗಳನ್ನು ಹಾಗೆಯೇ ಕೊಡಿಸಬೇಕೆಂದು ಪ್ರತಿನಿಧಿಗಳು ಕೇಳಿಕೊಂಡರು. ಶಿಕಾರಿಪುರ, ಸೊರಬ ಮತ್ತು ಸಾಗರ ತಾಲ್ಲೂಕುಗಳಲ್ಲಿ ಚಿಕ್ಕಗಿಡಗಳ ಕೊನೆಗಳನ್ನೂ ಕೊಂಬೆಗಳನ್ನೂ ವರುಷಕ್ಕೊಂದಾವರ್ತಿ ಕತ್ತರಿಸಿಹಾಕುತ್ತಾರೆ. ಹೀಗೆ ಕತ್ತರಿಸಿದ್ದನ್ನು ಮುಫತ್ತಾಗಿ ಫಾರೆಸ್ಟ್ ಅಧಿಕಾರಿಗಳು ರೈತರಿಗೆ ವ್ಯವಸಾಯದ ಮುಟ್ಟುಗಳಿಗೋಸ್ಕರ ಕೊಡತಕ್ಕದ್ದೆಂತಲೂ, ಸೌದೆಯ ಸುಂಕವನ್ನು ಕಡಮೆ ಮಾಡಲಾಗದೆಂತಲೂ, ಡಿಸ್ಟ್ರಿಕ್ಟ್ ಫಾರೆಸ್ಟುಗಳಿಂದ ಹೊಂಗೆ, ಹುನಲು ಮತ್ತು ಕಗ್ಗಲಿ ಮರಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಹುಕುಂ ಕೊಡಲಾಗುವುದಿಲ್ಲವೆಂತಲೂ ಸರ್ಕಾರದವರು ತೀರ್ಮಾನಮಾಡಿದ್ದಾರೆ. (೩) ಪಟ್ಟೇದಾರನ ರಾಜೀನಾಮೆಯನ್ನು ಅಂಗೀಕರಿಸುವುದಕ್ಕೆ ಮುಂಚೆ ಸ್ಪೆಷಲ್ ನೋಟಿಸ್ ರಿಜಿಸ್ಟರಿನಲ್ಲಿ ದಾಖಲ್ ಮಾಡಿಸಿಕೊಂಡಿರುವವರ ಹೆಸರಿಗೆ ಸರ್ಕಾರದಿಂದ ನೋಟಿಸ್ ಕೊಡಲ್ಪಡಬೇಕು. ಆದರೆ ಇಂಥಾ ನೋಟಿಸ್ ಪಡೆಯದೇಹೋದದರಿಂದಲೇ ಸ್ಪೆಷಲ್ ನೋಟಿಸ್ ರಿಜಿಸ್ಟರ್‌ದಾರರಿಗೆ ಯಾವದೊಂದು ಹಕ್ಕು ಉಂಟಾಗಲಾರದೆಂತಲೂ, ಇತರರಿಗಿರಬಹುದಾದ ಹಕ್ಕಿಗೆ ಯಾವ ನ್ಯೂನತೆಯೂ ಉಂಟಾಗಲಾರದೆಂತಲೂ ತಿಳಿಯತಕ್ಕದ್ದು

ಶುದ್ಧವಾದ ಹಾಲು.

ಅದು ಕೆಟ್ಟುಹೋಗುವ ರೀತಿಯು.

ನಮ್ಮ ದೇಶದಲ್ಲಿ ಶುದ್ಧವಾದ ಹಾಲನ್ನು ಹೊಂದುವುದು ಕಷ್ಟವಾದದ್ದರಿಂದ ಮೊದಲು ನಾವು ಹಾಲು ಕೆಡುವ ರೀತಿಯನ್ನು ತಿಳಿದುಕೊಳ್ಳಬೇಕು. ಯಾಕೆಂದರೆ ಹಾಲು ಕೆಡುವ ರೀತಿಯು ನಮಗೆ ಚೆನ್ನಾಗಿ ತಿಳಿಯಬಂದರೆ ನಾವು ಒಳ್ಳೇ ಹಾಲನ್ನು ಹೊಂದುವುದಕ್ಕೆ ಪ್ರಯತ್ನಪಡಬಲ್ಲೆವು ಹಾಲು ಕೆಡುವಂತೆ ಮಾಡಲು ನಾವು ಎಂದಿಗೂ ಪ್ರಯತ್ನಿಸಲಾರೆವು. ಅಥವಾ ಕೆಟ್ಟ ಹಾಲಿನಿಂದ ನಮಗೆ ತೊಂದರೆಯುಂಟಾಗುವುದೆಂಬುದನ್ನಾದರೂ ತಿಳಿದು ಅಂಥ ಹಾಲನ್ನು ಉಪಯೋಗಿಸದೇ ಇರುವುದಕ್ಕಾದರೂ ಕೆಲವು ಸಮಯಗಳಲ್ಲಿ ಪ್ರಯತ್ನಿಸುವುದರಲ್ಲಿ ಸಂದೇಹವಿಲ್ಲ. ನಮ್ಮ ದೇಶದವರು ಹಾಲನ್ನು ಕೆಡದಂತೆ ಇಡಲು ನೋಡಲಿ ಹಾಲು ಕರೆಯುವ ಪಾತ್ರೆ ವಿಷಯದಲ್ಲಿ ಹೆಚ್ಚಾಗಿ ಗಮನ ಕೊಡಬೇಕು. ಮುಖ್ಯವಾಗಿ ಗೌಳಿಗರು ಈ ವಿಷಯದಲ್ಲಿ ಸ್ವಲ್ಪವೂ ಎಚ್ಚರಿಕೆಯನ್ನು ತೆಗೆದುಕೊಳ್ಳುವುದೇ ಇಲ್ಲ. ಅದೂ ಅಲ್ಲದೆ ಹಸುವನ್ನು ಸಹ ಶುಚಿಯಾಗಿಡುವುದಿಲ್ಲ. ಅದರ ಮೈಯನ್ನು ತೊಳೆದು, ಮಾಲೀಸು ಮಾಡುವ ವಿಷಯವಂತೂ ಹೇಳತಕ್ಕದ್ದೇ ಇಲ್ಲ. ಹೀಗಿರುವಲ್ಲಿ ದನಗಳ ಮೈಯಲ್ಲಿ ಕೊಳೆ ಸೇರುವುದೇನು ಆಶ್ಚರ್ಯವಲ್ಲ. ಕೆಲವು ದನಗಳ ಮೈಯಲ್ಲಿ ಕೊಳೆಯೊಂದೇ ಅಲ್ಲದೆ ಅದರ ಜೊತೆಗೆ ಚಿಗಟ, ಉಣ್ಣೆಗಳೂ ಸೇರಿ ಕೊನೆಗೆ ಅವುಗಳಿಗೆ ಚರ್ಮವ್ಯಾಧಿಗಳೂ ಸಹ ಪ್ರಾಪ್ತವಾಗುವವು

ಗೌಳಿಗರು ಹಾಲು ಕರೆಯುವಾಗ ಅನೇಕ ವೇಳೆಗಳಲ್ಲಿ ತಮ್ಮ ತಲೆ ಮತ್ತು ಎದೆಗಳನ್ನು ಕೊಳೆಯಾಗಿರುವ ಹಸುವಿನ ಪಕ್ಕಗಳಿಗೆ ಸೇರಿಸಿ ಉಜ್ಜುತ್ತಾರೆ. ಹಸುವು ಸಹ ತನ್ನ ಮೈಯಿನ ನವೆಯನ್ನು ನಿವಾರಿಸಿಕೊಳ್ಳಲು ಕೊಳೆಯಾಗಿರುವ ಬಾಲವನ್ನು ತನ್ನ ಮೈಯಿಗೆ ತಗಲುವಂತೆ ಝಾಡಿಸುತ್ತದೆ. ಆಗ ದನವಿನ ಮೈ ಕೊಳೆಯು ಹಾಲಿನ ಪಾತ್ರೆಗೆ ಸೇರಿ ಅದರ ಸಂಗಡ ಬೆರೆಯುವುದು ಇದಲ್ಲದೆ ಹಾಲು ಕರೆಯುವಾಗ ಗೌಳಿಗರು ತಮ್ಮ ಕೈಯಿಂದ ಕೆಚ್ಚಲು ಸರಿಯಾಗಿ ಜಾರುವಂತೆ ಕೈಗೆ ಸ್ವಲ್ಪ ಎಣ್ಣೆ ಹಚ್ಚಿಕೊಳ್ಳುವ ಪದ್ಧತಿಯುಂಟು. ಕೆಲವು ವೇಳೆ ಎಣ್ಣೆ ಸಿಕ್ಕದಿದ್ದರೆ ಕೈಮೇಲೆ ಉಗುಳಿಕೊಳ್ಳುತ್ತಾರೆ ಇದು ಬಹಳ ಕೆಟ್ಟದ್ದು ಯಾಕೆಂದರೆ ಈ ಉಗುಳುಹಾಲಿಗೆ ಸೇರಿ ಅವನ ಕೆಮ್ಮು ಮುಂತಾದ ರೋಗ ಬೀಜಗಳು ಹಾಲಿಗೆ ಸೇರಿ ಆ ಹಾಲನ್ನು ಉಪಯೋಗಿಸುವವರಿಗೆ ಪ್ರಾಪ್ತವಾಗಿ, ರೋಗ ಹರಡುವುದಕ್ಕೆ ಕಾರಣವಾಗುವುದು. ಹಾಲು ಕರೆಯುವಾಗ ಗೌಳಿಗರು ತಮ್ಮ ಬೆರಳುಗಳಿಂದ ತಮ್ಮ ಮೂಗಿನ ಪಕ್ಕಗಳನ್ನು ಉಜ್ಜಿಕೊಳ್ಳುವುದೂ, ಆಗಾಗ್ಗೆ ಸಿಂಬಳ ಸೀದುವುದೂ ವಾಡಿಕೆ. ಇದರಿಂದ ಆ ಸಿಂಬಳವೂ, ಜಡ್ಡೂ ಹಾಲಿಗೆ ಸೇರುತ್ತವೆ. ಗೌಳಿಗರು ತಮ್ಮ ದೇಹವನ್ನೂ ವಸ್ತ್ರಗಳನ್ನೂ ಶುಚಿಯಾಗಿಟ್ಟುಕೊಂಡಿರುವುದು ಅಪರೂಪ. ಹಾಲು ಕರೆಯುವಾಗ ಕೈಯನ್ನು ತಮ್ಮ ಕೊಳೇ ವಸ್ತ್ರಕ್ಕೂ ತೊಡೆಯಮೇಲೂ ಉಜ್ಜಿಕೊಳ್ಳುವರು ನವೆಯಾದರೆ ಕೆರೆದುಕೊಳ್ಳುವರು ಇವುಗಳಿಂದ ಗೌಳಿಗನ ಕೊಳೆಯು ಹಾಲಿಗೆ ಸೇರುವುದು. ಅವರ ಕೈಯಿನಲ್ಲಿ ಅಂಟಿಕೊಂಡಿರುವ ಕೊಳೆಯು ಹಾಲು ಕರೆಯುವಾಗ ಅದಕ್ಕೆ ಸೇರಬಹುದು. ನಮಗೆ ತಿಳಿದಿರುವ ಹಾಗೆಯೇ ಗೌಳಿಗರು ಹೀಗೆ ಮತ್ತೊಂದು ವಿಧವಾದ ಕೊಳೆಯನ್ನು ಸೇರಿಸುತ್ತಾರೆ ಅಡಿಕೆಲೆ, ಹೊಗೆಸೊಪ್ಪು ಅಗಿಯುತ್ತಾ ರಸವನ್ನು ಆಗಾಗ್ಗೆ ಆ ಕಡೆ ಈ ಕಡೆ ಉಗುಳುತ್ತಾ ಇರುವರು ಪಾತ್ರೆಗಾಗಲೀ ಸೇರಿ ಹಾಲು ಕೆಡಲು ಅವಕಾಶವಾಗುವುದು.

ದನಗಳಿಗೆ ರೋಗ ಬಂದರೆ ಗೌಳಿಗರು ಅದನ್ನು ಪಶುವೈದ್ಯನಿಗೆ ತೋರಿಸಿ ತಕ್ಕ ಇಲಾಜು ಮಾಡಿಸುವುದಿಲ್ಲ. ಕೆಲವರು ಏನೋ ತಮಗೇ ತಿಳಿದ ಒಂದೆರಡು ಔಷಧಿಗಳನ್ನು ಮಾಡುವರು ಅದಕ್ಕೆ ಒಂದು ವಿಧವಾದ ರೋಗವಿದ್ದರೆ ಇವರು ಮಾಡುವ ಇಲಾಜು ಬೇರೊಂದಾಗುವುದು. ಇದು ಹಾಗಿರಲಿ. ಕವಾಡಿಗರು ಇಂಥಾ ದನಗಳ ಹಾಲನ್ನೂ ಸಹ ಬಿಡದೆ ಕರೆದು ದುಡ್ಡಿನ ಆಸೆಗೆ ತಂದು ಮಾರುತ್ತಾರೆ. ಇದರಿಂದ ದನದ ಕಾಯಿಲೆಗಳು ಮನುಷ್ಯರಲ್ಲಿ ಹರಡಿಕೊಳ್ಳಲು ಕಾರಣವಾಗುತ್ತದೆ. ಕೆಲವು ದನಗಳಿಗೆ ಕೆಚ್ಚಲಿನ ಮೇಲೆ ಕೆಲವು ವಿಧವಾದ ಬಾವು (ಹುಣ್ಣು) ಗಳೇಳುತ್ತವೆ. ಆಗ ಕವಾಡಿಗರು ಯಾವ ಮೊಲೆಯ ಮೇಲೆ ಹುಣ್ಣಾಗಿರುತ್ತದೆಯೋ ಅದಕ್ಕೆ ಒಂದು ತುಂಡು ದಾರವನ್ನು ಕಟ್ಟಿ, ಬಾಕಿಯ ಮೊಲೆಗಳಿಂದ ಹಾಲನ್ನು ಕರೆಯುವರು. ಹೀಗೆ ಮಾಡುವುದು ತಪ್ಪು. ಯಾಕೆಂದರೆ ದನಕ್ಕೆ ಕಾಯಿಲೆಯಾದ ಮೇಲೆ ಅದರ ಶರೀರದಲ್ಲಿರುವ ರಕ್ತದಲ್ಲೆಲ್ಲಾ ಈ ಕಾಯಿಲೆಯ ಕ್ರಿಮಿಗಳು ಸೇರಿಯೇ ಇರುತ್ತದೆಂಬುದು ಸ್ಪಷ್ಟವಾಗಿದೆ. ಈ ರಕ್ತವೇ ಹಾಲಾಗಿ ಪರಿಣಮಿಸುವುದರಿಂದ ಹಾಲೂ ಸಹ ಆರೋಗ್ಯಕರವಾಗಿರಲಾರದು. ಮನುಷ್ಯರಿಗೆ ಸಿಡುಬು, ದಡಾರಗಳು ಬರುವಂತೆ ದನಗಳಿಗೂ ಬರುವವು. ಆದರೆ ಕವಾಡಿಗರು ಇವನ್ನು ಅಲಕ್ಷ್ಯವಾಗಿ ಕಾಣುತ್ತಾರೆ. ಖಂಡಿತವಾಗಿಯೂ ಹಾಗೆ ಮಾಡಬಾರದು. ಇಂಥಾ ದನಗಳ ಹಾಲನ್ನು ತಂದು ಮಾರಬಾರದು. ಇದರಿಂದ ಮುಖ್ಯವಾಗಿ ಎರಡು ತೊಂದರೆಗಳು ಪ್ರಾಪ್ತವಾಗುತ್ತೆಂದು ಹೇಳಬಹುದು. ಒಂದನೇದು, ಗೌಳಿಗನು ಇಂಥಾ ದನದ ಬಳಿಗೆ ಆಗಾಗ ಹೋಗಿ ಸೋಂಕನ್ನು ಹೊಂದಿ, ಮತ್ತೊಂದು ಹಸುವಿನ ಬಳಿಗೆ ಹೋಗುವುದರಿಂದ ಅದಕ್ಕೆ ಆ ಸೋಂಕು ತಗಲುತ್ತದೆ. ಹಾಗೇ ರೋಗ ಹರಡುವುದಕ್ಕೆ ಮಾರ್ಗವಾಗುವುದು. ಎರಡನೇದು, ಇಂಥ ದನಗಳ ಹಾಲನ್ನು ಜನಗಳು ಕುಡಿಯುವುದರಿಂದ ತಾವೂ ಆ ರೋಗಗಳನ್ನು ಹೊಂದುವರು. ಮತ್ತು ಗಂಟಲು ಶ್ವಾಸನಾಳಗಳಲ್ಲಿ ವಿಶೇಷವಾದ ನೋವು ಹುಟ್ಟುತ್ತದೆ. ಹಾಲು ಕರೆಯುವವನಿಗೆ ಯಾವದಾದರೂ ಒಂದು ರೋಗವಿದ್ದರೆ ಅದರ ಕ್ರಿಮಿಗಳು ಅವನು ಉಸುರುಬಿಡುವಾಗ ಹೊರಕ್ಕೆ ಬಂದು ಹಾಲಿನಲ್ಲಿ ಸೇರಿಕೊಳ್ಳುತ್ತವೆ. ಇದಲ್ಲದೆ ಹಾಲು ಕರೆಯುವವನಿಗೆ ಕಜ್ಜಿ ಅಥವಾ ಇನ್ನಾವ ವಿಧವಾದ ಚರ್ಮ ರೋಗವಾಗಲೀ, ಕೈ ಬಾವುಗಳ ರೋಗವಾಗಲೀ ಇದ್ದರೆ ಇಂಥಾ ರೋಗದ ಸೂಕ್ಷ್ಮ ಕ್ರಿಮಿಗಳು ಹಾಲಿನ ಸಂಗಡ ಸೇರಿಕೊಳ್ಳುವವು.

ಈ ರೀತಿ ಹಾಲು ಮಾರುವವರು ಆಚರಿಸುವ ಕೆಲವು ದುರಾಚಾರಗಳಿಂದ ಹಾಲು ಕೆಡುತ್ತದೆ. ಇದರಲ್ಲಿ ಮುಖ್ಯವಾದದ್ದು ಹಾಲಿಗೆ ನೀರನ್ನಾಗಲೀ, ಇನ್ನಾವ ಪದಾರ್ಥವನ್ನಾಗಲೀ ಬೆರಸುವಿಕೆ. ಹಾಗೆ ಬೆರಸಿದರೂ ಶುದ್ಧವಾದ ನೀರನ್ನು ಬೆರಸುವುದೇ ಇಲ್ಲವೆಂದು ಎಲ್ಲರಿಗೂ ತಿಳಿದೇ ಇದೆ. ಶುದ್ಧವಾದ ಪಾತ್ರೆಗಳಲ್ಲಿ ಇಟ್ಟಿರುವುದಿಲ್ಲ. ಮತ್ತು ಅಂಥ ಪಾತ್ರೆಗಳನ್ನು ತೊಳೆಯುವುದೇ ಇಲ್ಲ. ಅನೇಕ ದಿವಸಗಳ ವರಿಗೂ ನೀರು ಅದರಲ್ಲಿಯೇ ಕೊಳೆತುಕೊಂಡಿರುತ್ತದೆ. ಕೆಲವು ವೇಳೆ ಇದರಲ್ಲಿ ಪಾಚಿ ಮುಂತಾದದ್ದು ಸಹ ಕಾಣಬರುತ್ತವೆ. ಹಾಲಿನ ಕೆನೆ ಮತ್ತು ಬೆಣ್ಣೆಗಳನ್ನು ತೆಗೆಯುವಾಗ ಅದಕ್ಕೆ ಕೊಳೆಯು ಸೇರುತ್ತದೆ. ಕೆನೆ ತೆಗೆಯುವುದಕ್ಕೆ ಉಪಯೋಗಿಸುವ ಉಪಕರಣಗಳೂ ಸಹ ಕೊಳೆಯಾಗಿರುತ್ತವೆ. ಕೆಲವರು ಕೈಯಿಂದಲೇ ತೆಗೆಯುತ್ತಾರೆ ಇದರಿಂದ ಕೈಯಿನ ಕೊಳೆ ಸಹ ಅದಕ್ಕೆ ಸೇರುತ್ತದೆ. ಬೆಣ್ಣೆ ತೆಗೆಯುವುದಕ್ಕೆ ಉಪಯೋಗಿಸುವ ಕಡಗೋಲು ಮುಂತಾದವು ಕೊಳೆಯಾಗಿರುತ್ತವೆಂದು ಹೇಳಬೇಕಾದದ್ದೇ ಇಲ್ಲ. ಈ ರೀತಿ ಸರ್ವಪ್ರಕಾರದಲ್ಲೂ ಹಾಲು ಕೆಡುತ್ತದೆ. ಆದುದರಿಂದ ನಮ್ಮ ಹಿಂದೂ ದೇಶದಲ್ಲಿ ಉತ್ತಮವಾದ ಹಾಲು ದೊರೆಯುವುದು ಬಹಳ ಶ್ರಮವಾಗಿದೆ

ಒಳ್ಳೇ ಹಾಲು ಪಡೆಯುವ ಕ್ರಮಗಳು.

ಪ್ರಜೆಗಳು ಒಳ್ಳೇ ಹಾಲನ್ನು ಪಡೆಯುವುದಕ್ಕೆ ಸರ್ಕಾರದವರು ಕೆಲವು ನಿಬಂಧನೆಗಳನ್ನು ಜಾರಿಗೆ ತರುವಂತೆ ಕೇಳಿಕೊಳ್ಳುವುದೂ ಮತ್ತು ಕೆಲವು ಸೂಕ್ಷ್ಮಗಳನ್ನು ಮಾಡುವುದೂ ಮುಖ್ಯವಾಗಿದೆ. ಅವು ಯಾವುವೆಂದರೆ —ದನಗಳನ್ನು ಸಾಕುವವರೆಲ್ಲರೂ ದನದ ಕೊಟ್ಟಿಗೆಯನ್ನು ಶುಚಿಯಾಗಿ ಮತ್ತು ವಿಧಿಗನುಸಾರವಾಗಿ ಇಡುವಂತೆಯೂ, ದನಗಳನ್ನು ಸರಿಯಾಗಿ ಕಾಪಾಡುವಂತೆಯೂ ಮಾಡಿರುವ ಮುನಿಸಿಪಾಲಿಟಿ ನಿಬಂಧನೆಗಳು. ದನಗಳನ್ನು ಆಗಾಗ್ಗೆ ಒಬ್ಬ ಪಶುವೈದ್ಯನು ಪರೀಕ್ಷಿಸುತ್ತಿರಬೇಕು. ಹಾಲು ಕರೆಯುವವರಿಗೆ ಯಾವ ಕಾಯಿಲೆಯೂ ಇರಬಾರದು. ಮತ್ತು ಈ ವಿಷಯಕ್ಕಾಗಿ ಅವರು ಸರ್ಕಾರದ ಅಪ್ಪಣೆ (ಲೈಸೆನ್ಸ್) ಯನ್ನು ಹೊಂದಿರಬೇಕು.

ಹಾಲು ಕರೆಯುವುದಕ್ಕೆ ಮುಂಚೆ ದನಗಳನ್ನು ತೊಳೆಯಬೇಕು, ಮತ್ತು ಮಾಲೀಸ್ ಮಾಡಬೇಕು

ದನಗಳಿಗೆಲ್ಲಾ ಕ್ರಮವಾಗಿ ಉತ್ತಮವಾದ ಆಹಾರ ನೀರು ಕೊಟ್ಟು ಕಾಯಿಲೆ ಬಾರದಂತೆ ಜಾಗರೂಕತೆಯಿಂದ ನೋಡಿಕೊಳ್ಳಬೇಕು ಕಾಯಿಲೆ ಬಂದರೆ ಅಂಥವುಗಳನ್ನು ಬಾಕಿ ದನಗಳಿಂದ ಬೇರೆಯಾಗಿಟ್ಟು, ಸರಿಯಾದ ಇಲಾಜು ಮಾಡಿಸಬೇಕು ದನಗಳ ಕೊಟ್ಟಿಗೆಯನ್ನು ಶುಭ್ರವಾಗಿಟ್ಟಿರಬೇಕಲ್ಲದೆ ಸಾಕಾದಷ್ಟು ಬೆಳಕು ಗಾಳಿ ಪ್ರವೇಶ ಮಾಡುವುದಕ್ಕನುಕೂಲವಾಗಿರುವಂತೆ ಕಟ್ಟಿರಬೇಕು. ಹಾಲು ಕರೆಯುವವರು ಪ್ರತಿಯೊಂದು ಸಾರಿ ಕರೆಯುವಾಗಲೂ ಕೈಗಳನ್ನು ರೋಗನಾಶಕಗಳಾದ ನೀರಿನಿಂದ ತೊಳೆದುಕೊಳ್ಳುವಂತೆ ಬಲಾತ್ಕರಿಸಬೇಕು. ಹಾಲು ಕೆಡಬಹುದಾದ ಕ್ರಮಗಳನ್ನು ಅನುಸರಿಸುವ ಪತಿಯೊಬ್ಬ ಮನುಷ್ಯನೂ ಕ್ರೂರವಾದ ದುಲ್ಮಾನೆಗಳಿಂದ ಶಿಕ್ಷಿಸಲ್ಪಡಬೇಕು.

ಹಾಲಿನ ಪಾತ್ರೆಗಳನ್ನು ಎಂದಿಗೂ ಕೊಟ್ಟಿಗೆಯಲ್ಲಿ ಇರಿಸಬಾರದು ಯಾಕೆಂದರೆ ಕೊಟ್ಟಿಗೆಯಲ್ಲಿರುವ ಅಂಗಾಲವನ್ನು, ಅಮೋನಿಯಾ ಮುಂತಾದ ಕೆಟ್ಟ ಹಬೆಗಳು ಹಾಲಿನಲ್ಲಿ ಬಹಳ ಜಾಗ್ರತೆಯಾಗಿ ಸೇರಿಕೊಳ್ಳುವವು.

ಹಾಲನ್ನು ಮಾರುವ ಕೋಣೆಗಳು ಬಹಳ ಶುಭ್ರವಾಗಿರಬೇಕು ಹಾಲು ಮಾರುವ ಕಡೆ ತರಕಾರಿ ಮುಂತಾದವುಗಳನ್ನು ಮಾರಲು ಅಪ್ಪಣೆ ಕೊಡಕೂಡದು. ಹಾಲು ಮಾರತಕ್ಕ ಸ್ಥಳಗಳಿಗೆ ಸಮೀಪದಲ್ಲಿ ತರಕಾರಿ ಅಂಗಡಿಗಳ ಅಪ್ಪಣೆ ಕೊಡಕೂಡದು.

ಹಾಲು ಕರೆದನಂತರ ಅದನ್ನು ಶೋಧಿಸಬೇಕು, ಮತ್ತು ಆರಿಸಬೇಕು.

ಹಾಲನ್ನು ಕೊಳ್ಳುವವರು ಹಾಲನ್ನು ಕ್ರಿಮಿರಹಿತವಾದ ತರುಪಿನ ಪಾತ್ರೆಗಳಲ್ಲಿ ಹಾಕಿ ಮೇಲೆ ಪಾತ್ರೆಯು ಮಾಡಿರುವ ಲೋಹದಿಂದಲೇ ಮಾಡಿದ ಶುಭ್ರವಾದ ಮುಚ್ಚಳವನ್ನು ಮುಚ್ಚಿ ತೆಗೆದುಕೊಂಡು ಹೋಗಬೇಕು ಇಲ್ಲದಿದ್ದರೆ ಕಸ, ಧೂಳು, ಕೆಟ್ಟ ಹಬೆ ಮತ್ತು ವಾಸನೆಗಳು ಹಾಲಿಗೆ ಸೇರುತ್ತವೆ

ಕೆಟ್ಟ ಹಾಲು ಮಾರುವವರನ್ನು ಕಂಡರೆ ಆಕ್ಷೇಪಿಸಬೇಕಲ್ಲದೆ ಗ್ರಾಮಾಧಿಕಾರಿಗಳಿಗೆ ಈ ವಿಷಯವನ್ನು ತಿಳಿಸಿ ಶಿಕ್ಷೆಯಾಗುವಂತೆ ಮಾಡಬೇಕು. ಯಾಕೆಂದರೆ ಒಬ್ಬರಿಬ್ಬರಿಗೆ ಹೀಗೆ ಶಿಕ್ಷೆಯಾದರೆ ಬಾಕಿಯವರು ತಮಗೂ ಶಿಕ್ಷೆಯಾದೀತೆಂದು ಹೆದರುವರಲ್ಲದೆ ಕೆಟ್ಟ ಹಾಲನ್ನು ಎಂದಿಗೂ ಮಾರುವುದಕ್ಕೆ ಪ್ರಯತ್ನಿಸುವುದಿಲ್ಲ.

ಕ್ಷಾಮನಿವಾರಣೆಯ ವಿಧಾನಗಳು.

ಮೈಸೂರು ಸರ್ಕಾರಿ ಹುಕುಮುಗಳು.

ತೋಟಿ ತಳವಾರಿಗಳ ಅಲೋಯೆನ್ಸು.

ಈ ಸಂಸ್ಥಾನದ ಉಕ್ಕಡಗಳನ್ನು ಕಾಯುತ್ತಿರುವಂಥಾ ತೋಟಿ ತಳವಾರಿಗಳಿಗೆ ಈ ಕಷ್ಟಕಾಲದಲ್ಲಿ ಹೆಚ್ಚು ಕೆಲಸ ಬೀಳುವ ಸಂಭವವಿದೆ. ಅವರ ಸಂಬಳವಲ್ಲದೆ ಅವರು ಇತರ ವಿಧವಾದ ಜೀವನೋಪಾಯಗಳನ್ನು ಹುಡುಕಿಕೊಳ್ಳುವುದು ಪ್ರಯಾಸವಾಗಿರುವುದು. ಆದಕಾರಣ ಅಂಥಾ ಉಕ್ಕಡಗಳ ಕಾವಲಿಗೆ ನೇಮಿಸಲ್ಪಟ್ಟಿರುವ ತೋಟಿತಳವಾರಿಗಳಿಗೆ ೧೯೦೯ನೇ ಜನವರಿ ೧ರ ಲಾಗಾಯತು ಮೂರು ತಿಂಗಳ ವರೆಗೆ ತಲಾ ಒಂದು ರೂಪಾಯಿನಂತೆ ಅಲೋಯೆನ್ಸು ಕೊಡತಕ್ಕದ್ದೆಂದು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿರುತ್ತಾರೆ. ಈ ಅಲೋಯೆನ್ಸಿಗಾಗಿ ತಿಂಗಳೊಂದಕ್ಕೆ ಖರ್ಚಾಗಬೇಕಾದ ೮೫೦ ರೂಪಾಯನ್ನು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ತಮ್ಮ ಇಲಾಖೆಗೆ ಸ್ಯಾಂಕ್ಷನ್ ಆಗಿರುವ ಇತರ ಬಾಬುಗಳ ಹಣದಲ್ಲಿ ಮಿಗಿಸಿ ಪಾವತಿಮಾಡಬೇಕಾಗಿದೆ.

ದನಗಳ ಹುಲ್ಲಿನ ಸರಬರಾಯಿ.

ಶಿವಮೊಗ್ಗಾ ಡೆಪ್ಯುಟಿ ಕಮಿಷನರ್‌ರವರು ಮೇಲ್ಕಂಡ ವಿಚಾರವಾಗಿ ಗವರ್ನ್‌ಮೆಂಟಿನಿಂದ ಕೊಡಲ್ಪಟ್ಟ ಹುಕುಂ ಅನುಸರಿಸಿ, ತಿಳಿಸಿರುವುದೇನೆಂದರೆ:—ಗೋ

ಧನಗಳ ಮೇವಿಗೆ ಕಷ್ಟವಾಗಿರುವ ಪ್ರದೇಶಗಳಲ್ಲಿ ಉಪಯೋಗವಾಗುವುದ ಕ್ಕೋಸ್ಕರ ಬೆಂಕಿಪುರ ಮತ್ತು ಶಿವಮೊಗ್ಗ ಸ್ಟೇಷನ್‌ಗಳಲ್ಲಿ ಕತ್ತರಿಸಿದ ಹುಲ್ಲು ಜಮಾವಣೆ ಮಾಡಿ ಸಿದ್ಧಪಡಿಸಿದೆ. ಆದರೆ ಚನ್ನಗಿರಿ, ಹೊನ್ನಾಳಿ ತಾಲ್ಲೂಕುಗಳಲ್ಲಿ ಬಾಧೆಪಡುತ್ತಿದ್ದಲ್ಲಿ ರೈತರು ತಮ್ಮ ರಾಸುಗಳಿಗೆ ಜೋಳದ ಸಪ್ಪೆ, ರಾಗಿಹುಲ್ಲು ಇವು ಸಾಕಾಗಿರೋಣದರಿಂದ ಈ ಜಂಗಲಿನ ತರಹ ಹುಲ್ಲನ್ನು ಅವಕ್ಕೆ ಹಾಕಿದರೆ ಅವು ತಿನ್ನುವದಿಲ್ಲವೆಂದೂ, ಒಂದು ವೇಳೆ ತಿಂದರೆ ಕ್ಷೀಣ ಹೊಂದು ತ್ತವೆಂದೂ ಹೇಳಿ, ಜೋಳದ ಸಪ್ಪೆಯನ್ನು ತರಿಸಿಕೊಳ್ಳುವುದಕ್ಕೆ ತಮಗೆ ಅಡ್ವಾನ್ಸುಗಳನ್ನು ಕೊಡಿಸಬೇಕೆಂದು ಕೇಳಿಕೊಂಡರು ಈ ಭಾಗದಲ್ಲಿ ರೈತರಿಗೆ ಕೂಡ ಗ್ರಾಂಟುಗಳನ್ನು ಕೊಡಿಸುತ್ತಾ ಬರಬೇಕೆಂದು ಅಮಲ್ದಾರರುಗಳಿಗೆ ತಿಳಿಸ ಲಾಗಿದೆ.

ರೈತರು ಹುಲ್ಲನ್ನು ಸಾಗಿಸುವುದು.

ಶಿವಮೊಗ್ಗ ಡೆಪ್ಯುಟಿ ಕಮಿಷನರವರು ಮೇಲ್ಕಂಡ ವಿಷಯದಲ್ಲಿ ಬರೆಯು ತ್ತಾರೇನೆಂದರೆ —ಕೆಲವು ಕಡೆಗಳಲ್ಲಿ ರೈತರು ತಮ್ಮ ಎತ್ತು ಗಾಡಿಗಳನ್ನು ಕಟ್ಟಿ ಕೊಂಡು ಜಂಗಲುಗಳಿಗೆ ಹೋಗಿ, ಅಲ್ಲಿ ಕತ್ತರಿಸಿ ಸಿದ್ಧಪಡಿಸಿರುವ ಹುಲ್ಲನು ತುಂಬಿ, ಬೆಂಕಿಪುರ ತರೀಕೆರೆ ಸ್ಟೇಷನ್‌ಗಳಿಗೆ ಸಾಗಿಸಿಕೊಂಡು ಹೋಗುತ್ತಾರೆ ಆದರೆ ಚನ್ನಗಿರಿ ಹೊನ್ನಾಳಿ ತಾಲ್ಲೂಕುಗಳ ಉತ್ತರ ಭಾಗಗಳಲ್ಲಿರುವ ಗ್ರಾಮ ಗಳವರು ಈ ರೀತಿ ಹುಲ್ಲು ಸಾಗಿಸುವುದಕ್ಕೆ ಸಮ್ಮತಿಪಡುವುದಿಲ್ಲ

ಕಸಬುದಾರರಿಗೆ ಅಡ್ವಾನ್ಸು.

ದುಷ್ಕಾಲದ ದೆಸೆಯಿಂದ ಈ ಸಂಸ್ಥಾನದಲ್ಲಿ ನೆಯ್ಗೆ ಮೊದಲಾದ ಕಸಬುಗ ಳಿಂದ ಜೀವನಮಾಡತಕ್ಕವರಿಗೆ ಉಂಟಾಗಿರುವ ಕಷ್ಟವನ್ನು ನಿವಾರಣೆ ಮಾಡುವು ದಕ್ಕೋಸ್ಕರ ಗವರ್ನ್‌ಮೆಂಟಿನವರು ಸಂಸ್ಥಾನದ ಮೇಲೆ ಅಂಥಾ ಕಸಬುದಾರರಿಗೆ ಅಡ್ವಾನ್ಸುಗಳನ್ನು ಕೊಡಬೇಕೆಂದು ಕಳೆದ ನೊವೆಂಬರ್ ತಾ. ೨೫ ರಲ್ಲಿ ೪೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ. ಇದು ಸಾಲದೆಂತಲೂ, ೧,೩೦,೦೦೦ ರೂಪಾಯಿ ಬೇಕಾಗಿದೆ ಎಂದೂ ರೆವಿನ್ಯೂ ಕಮಿಷನರವರು ಕಳೆದ ಜನವರಿಯಲ್ಲಿ ಗವರ್ನ್‌ಮೆಂಟಿಗೆ ಬರೆದರು ಸರ್ಕಾರದವರು ಫೆಬ್ರವರಿ ತಿಂಗಳಲ್ಲಿ ೩೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

ಕೆರೆಗಳ ಕಾಮಗಾರಿ ಮುಂಜೂರಾತಿಯು.

ಮಧುಗಿರಿ ತಾಲ್ಲೂಕಿಗೆ ಸೇರಿದ ಮಲ್ಲನಾಯಕನಹಳ್ಳಿ ಮತ್ತು ತೊಳ್ಳೇನ ಹಳ್ಳಿ ಕೆರೆಗಳು ದುರಸ್ತು ಮಾಡಿಸುವುದು, ಕಾಂತನಹಳ್ಳಿ ಕೆರೆಯನ್ನು ಸರಿಪಡಿಸುವು ದು, ಕುಣಿಗಲ ಕೆರೆ ಕೆಳಗಣ ರಾಮಬಾಣದ ನಾಲೆಯನ್ನು ಒಳ್ಳೇ ಸ್ಥಿತಿಯಲ್ಲಿ ಇಡುವುದು, ಕುಣಿಗಲ ತಾಲ್ಲೂಕಿನಲ್ಲಿ ಸಂಕನಪುರದ ಅಣೆಯಿಂದ ತುಂಬುವ ಕೆರೆ ಗಳನ್ನು ದುರಸ್ತುಮಾಡಿಸುವುದು, ಗುಬ್ಬಿ ತಾಲ್ಲೂಕಿಗೆ ಸೇರಿದ ಕೊಡಗಲ್ಲು ಕೆರೆ ಯನ್ನೂ, ನಾಗಮಂಗಲದ ತಾಲ್ಲೂಕಿಗೆ ಸೇರಿದ ಚಿಕ್ಕಯಗಟಿ ಮತ್ತು ಅಂಚೆ ಚಿಟ್ಟನಹಳ್ಳಿ ಕೆರೆಗಳನ್ನೂ ಒಳ್ಳೇಸ್ಥಿತಿಯಲ್ಲಿಡುವುದು, ಈ ಕಾಮಗಾರಿಗಳನ್ನು ಇಂಜಿನಿಯರ್ ಇಲಾಖೆಯವರು ಇದುವರೆಗೆ ಆಗಲೇ ಮಾಡಿಸುವುದಕ್ಕೆ ಆರಂಭಿಸಿರಬೇ ಕು; ಇಲ್ಲವೇ, ಕೂಡಲೇ ಸುರುಮಾಡುತ್ತಾರೆ ಈ ಕಾಮಗಾರಿಗಳಿಗೆಲ್ಲಾ ೮೦,೦೦೦ ರೂಪಾಯಿ ಆಗುವುದೆಂದು ಅಂದಾಜಾ ಆಗಿದೆ ಈ ಪೈಕಿ ಕೂಡಲೇ ೨೫,೦೦೦ ರೂಪಾಯನ್ನು ಒದಗಿಸಲಾಗಿದೆ ಈ ಕಾಮಗಾರಿಗಳು ದುಷ್ಕಾಲ ವ್ಯಾಪ್ತವಾಗಿರುವ ಮಧುಗಿರಿ, ಕುಣಿಗಲು, ಗುಬ್ಬಿ ಮತ್ತು ನಾಗಮಂಗಲ ತಾಲ್ಲೂಕುಗಳಲ್ಲಿ ಜನರಿಗೆ ಕೂಲಿ ಕೆಲಸವನ್ನು ಒದಗಿಸಿಕೊಟ್ಟು, ಅವರ ಜೀವ ನಕ್ಕೆ ಅನುಕೂಲಪಡಿಸುವವು. ಚಿಕ್ಕನಾಯಕನಹಳ್ಳಿ ಮತ್ತು ತಿಪ್ಟೂರು ತಾಲ್ಲೂ ಕುಗಳಲ್ಲಿ ಯಾವ ಕಾಮಗಾರಿಗಳನ್ನು ಪ್ರಾರಂಭಿಸಿ ಮಾಡಿಸಬೇಕೆಂಬ ವಿಷಯದ ಲ್ಲಿ ರೆವಿನ್ಯೂ ಕಮಿಷನರವರು ಚೀಫ್ ಇಂಜನಿಯರರ ಕೂಡ ಆಲೋಚಿಸಬೇ ಕಾಗಿದೆ ತುಮಕೂರು ಡೆಪ್ಯುಟಿಕಮಿಷನರವರು ಮಾಡಿಸಬೇಕೆಂದು ಸೂಚಿಸುವ ತುಂಬಾಡಿ ಪ್ರಾಜೆಕ್ಟನ್ನು ಗವರ್ನ್‌ಮೆಂಟಿನವರು ಒಪ್ಪುವವರಾಗಿಲ್ಲ ಅದಕ್ಕೆ ಪ್ರತಿಯಾಗಿ ಮಾರ್ಕೋನಹಳ್ಳಿ ಪ್ರಾಜೆಕ್ಟಿನ ವಿಚಾರವನ್ನು ಡೆಪ್ಯುಟಿಕಮಿಷನರವರು ತನಿಖೆ ಮಾಡಿಸಿ ತಿಳಿಸಬಹುದಾಗಿದೆ ಈ ಭಾರೀ ಕಾಮಗಾರಿಯನ್ನು ಕೂಡಲೆ ಪ್ರಾರಂಭಿಸುವ ವಿಷಯದಲ್ಲಿ ಗವರ್ನ್‌ಮೆಂಟಿನವರು ಅಭಿಪ್ರಾಯಪಟ್ಟಿದ್ದಾರೆ

ರಸ್ತೆಗೆ ಹಾಕುವ ಕಲ್ಲಿನ ಜಮಾವಣೆಯು

ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ನಾಲ್ಕು ಪ್ರಾವಿನ್ಷಿಯಲ್ ರೋಡುಗ ಳಿಗೂ, ಹತ್ತು ಡಿಸ್ಟ್ರಿಕ್ಟ್ ಫಂಡ್ ರೋಡುಗಳಿಗೂ ಬೇಕಾಗುವ ಝಲ್ಲಿಕಲ್ಲು ಗಳನ್ನು ಆಯಾ ಗ್ರಾಮಗಳ ಬಳಿ ರಸ್ತೆಗಳ ಪಕ್ಕಗಳಲ್ಲಿ ಜಮಾಯಿಸುವುದಕ್ಕೆ ೧೬,೧೭೦ ರೂಪಾಯಿ ಬೇಕೆಂದೂ, ಈ ಕೆಲಸವನ್ನು ಗ್ರಾಮಾಂತರಗಳಲ್ಲಿ ಜೀವ ನಕ್ಕೆ ಮಾರ್ಗವಿಲ್ಲದವರಿಂದ ಮಾಡಿಸುತ್ತೇವೆಂದೂ, ಹೀಗೆ ಜಮಾವಣೆ ಮಾಡುವ ಝಲ್ಲಿಯು ಕಲ್ಲು ಎರಡು ವರುಷಗಳಿಗೆ ಸಾಕಾಗುವುದೆಂದೂ ಡೆಪ್ಯುಟಿ ಕಮಿಷನ ರವರು ಗವರ್ನ್‌ಮೆಂಟಿಗೆ ಬರೆದುಕೊಂಡರು ಸರ್ಕಾರದವರು ಈ ವಿಚಾರವನ್ನು ತನಿಖೆ ಮಾಡಿಸಿದ್ದರಲ್ಲಿ ಆ ಪೈಕಿ ಎರಡು ಪಾಲಿನಷ್ಟು ಮಣ್ಣು ಝಲ್ಲಿಕಲ್ಲು ಅನಲೇ ಜಮಾವಣೆ ಆಗಿರುವಂತೆಯೂ, ಈ ಕೆಲಸವನ್ನು ಗ್ರಾಮಾಂತರ ಪ್ರಜೆಗ ಳಿಂದಲೇ ಮಾಡಿಸಿರುವುದಾಗಿಯೂ ಗೊತ್ತಾಯಿತು. ಆದರ ಮೇಲೆ ಈ ಜಮಾವ ಣೆಯ ಕೆಲಸವನ್ನು ಇನ್ನೂ ಸ್ವಲ್ಪ ಮಾಡಿಸಬಹುದೆಂದು ಅಪ್ಪಣೆಕೊಟ್ಟು, ಅದ ಕ್ಕಾಗಿ ೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿ, ೧೯೦೯-೧೦ ನೇ ಸಾಲಿನಲ್ಲಿ ಈ ಬಾಬಿಗೆ ವಿನಿಯೋಗಿಸುವ ಹಣದಲ್ಲಿ ವಜಾಹಾಕಬೇಕೆಂದು ತಿಳಿಸಿರುತ್ತಾರೆ

ಬಿತ್ತನೆ ಬೀಜವನ್ನು ತೆಗೆದಿಡುವುದು.

ದುಷ್ಕಾಲ ವ್ಯಾಪ್ತವಾಗಿ ಬೆಳೆಗಳು ಆಗದೆ ಇರೋಣದರಿಂದ ಮುಂದಿನ ಬಿತ್ತನೆಯ ಕಾಲಕ್ಕೆ ಒಳ್ಳೇ ಬೀಜಗಳು ದೊರಕಲಾರವೆಂದು ತಿಳಿದುಬಂದಿದೆ. ಈಗ ಭತ್ತ, ರಾಗಿ, ಹುರುಳಿ ಮೊದಲಾದ ಧಾನ್ಯಗಳ ಸುಗ್ಗಿಯ ಕಾಲವಾಗಿದೆ. ಈಗಲೇ ಒಳ್ಳೆಯ ಬಿತ್ತನೇ ಬೀಜಗಳನ್ನು ಕೊಂಡು ದಾಸ್ತಾನ ಇಟ್ಟುಕೊಳ್ಳುವು ದಕ್ಕೆ ರೈತರಿಗೆ ಪ್ರೋತ್ಸಾಹಪಡಿಸಿ, ಅದಕ್ಕಾಗಿ ಅವರಿಗೆ ಅಡ್ವಾನ್ಸುಗಳನ್ನು ಕೊಡತಕ್ಕದ್ದು, ಮತ್ತು ಡೆಪ್ಯುಟಿ ಕಮಿಷನರುಗಳು ಕೂಡ ಧಾನ್ಯವನ್ನು ಅಲ್ಲಲ್ಲಿ ಕೊಂಡಿಟ್ಟುಕೊಂಡಿದ್ದು, ಬಡಬಗ್ಗರಾದ ರೈತರಿಗೆ ಮುಂದಿನ ಬಿತ್ತನೇ ಕಾಲದಲ್ಲಿ ಹಂಚಿಕೊಡಬೇಕು. ಇದಕ್ಕೋಸ್ಕರ ಗವರ್ನ್‌ಮೆಂಟಿನಿಂದ ೧,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಲಾಗಿದೆ.

ಅಮೃತಮಹಲ್ ಕಾವಲುಗಳು.

ರೈತಪ್ರಜೆಗಳ ದನಗಳ ಮೇವಿಗೋಸ್ಕರ ಅಮೃತಮಹಲ್ ಇಲಾಖೆಯ ಸೂಪರಿಂಟೆಂಡೆಂಟರು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಏಳು ಕಾವಲುಗಳನ್ನೂ, ಕಡೂರಿನಲ್ಲಿ ಎಂಟು ಕಾವಲುಗಳನ್ನೂ, ಹಾಸನದಲ್ಲಿ ಏಳನ್ನೂ, ಚಿತ್ರದುರ್ಗದ ಲ್ಲಿ ಐದನ್ನೂ ರೈತರಿಗಾಗಿ ಹಂಗಾಮಿ ತರೀಖು ಬಿಟ್ಟುಕೊಟ್ಟಿದೆ ಎಂದು ತಿಳಿಸಿರು ತ್ತಾರೆ

ಕುಡಿಯುವ ನೀರಿನ ಭಾವಿಗಳನ್ನು ತೆಗಿಸುವುದು.

ಕಷ್ಟದೆಸೆಯು ಪ್ರಾಪ್ತವಾಗದೇ ಇರುವ ಪ್ರದೇಶಗಳಲ್ಲಿ ಕುಡಿಯುವ ನೀರಿ ಗೆ ಅಭಾವವಾಗಿದ್ದ ಪಕ್ಷದಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಮುನಿಸಿಪಲ್ ಫಂಡುಗಳಿಂದ ಹಣವನ್ನು ಖರ್ಚು ಮಾಡಿ ಶಾಶ್ವತವಾದ ಭಾವಿಗಳನ್ನೂ ಹಂಗಾ ಮಿಯಾದ ಜಲಾಶಯಗಳನ್ನೂ ಕಲ್ಪಿಸಿ ಕೊಡಬೇಕು. ನೀರನ್ನು ಒದಗಿಸಿ ಕೊಡ ಬೇಕಾದ ಕೆಲಸವು ಲೋಕಲ್ ಬೋರ್ಡುಗಳಿಗೆ ಸೇರಿದ್ದಾಗಿದೆ. ಕಷ್ಟದೆಸೆ ಪ್ರಾಪ್ತ ವಾಗಿರುವಂಥಾ ನಾಗಮಂಗಲದ ತಾಲ್ಲೂಕು ನೆಲ್ಲಿಗೆರೆಯಲ್ಲಿ ರೈತರು ಸಾಹಸ ಪಟ್ಟು ಭಾವಿಯನ್ನು ತೋಡಿಕೊಂಡಿದಾರೆಂದೂ, ಅದಕ್ಕೆ ಗವರ್ನ್‌ಮೆಂಟ್ ಹಣ ಕೊಟ್ಟು ಕಲ್ಲು ಕಾಮಗಾರಿ ಮಾಡಿಸಿದೆ ಎಂದೂ ತಿಳಿದು ಬಂದಿದೆ ಡೆಪ್ಯುಟಿಕಮಿ ಷನರೂ ಸ್ಥಳಾಧಿಕಾರಿಗಳೂ ಚಟುವಟಿಕೆಯಾಗಿ ಸಾಹಸಪಟ್ಟು ಪ್ರೋತ್ಸಾಹಪಡಿ ಸುತ್ತಾ ಬಂದಲ್ಲಿ ರೈತರು ನೆಲ್ಲಿಗೆರೆಯಲ್ಲಿ ನಡೆದಂತೆ ತಾವೇ ಮಟ್ಟಿ ಕಾಮಗಾರಿ ಮಾಡಿ ಭಾವಿಗಳನ್ನು ತೋಡಿಕೊಳ್ಳುವರು ಸರ್ಕಾರದಿಂದ ಅಂಥವರಿಗೆ ಕಲ್ಲಿನ ಕಾಮಗಾರಿ ನಡಿಸಬಹುದಾಗಿದೆ.

ಹೊಟ್ಟೆಗಿಲ್ಲದವರಿಗೆ ಸಹಾಯಮಾಡುವುದು.

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಗವರ್ನ್‌ಮೆಂಟಿನಿಂದ ಕೊಡೋಣಾದ ೩,೦೦೦ ರೂಪಾಯನ್ನು ಮಂಡ್ಯ, ಕೃಷ್ಣರಾಜಪೇಟೆ, ನಾಗಮಂ ಗಲ ತಾಲ್ಲೂಕುಗಳಿಗೆ ೧,೦೦೦ ರೂಪಾಯಿನಂತೆ ಹಂಚಿಕೊಟ್ಟು, ಜೀವನಕ್ಕಿಲ್ಲದೆ ಕಷ್ಟಪಡುವಂಥಾ ಪ್ರಜೆಗಳಿಗೆ ಧರ್ಮಾರ್ಥವಾಗಿ ಧಾನ್ಯಗಳನ್ನು ಹಂಚಿ ಜೀವನ ನಡಿಸಬೇಕೆಂದು ಹುಕುಂಕೊಟ್ಟರು ಅನೇಕ ಜನರು ತಮ್ಮ ಮನೆ ಮಠ ಗ್ರಾಮ ಭೂಮಿಗಳನ್ನು ಬಿಟ್ಟು ಜೀವನಾರ್ಥವಾಗಿ ಇತರ ಕಡೆಗಳಲ್ಲಿ ಅಲೆಯು ತ್ತಾರೆ ಈ ಪೈಕಿ ಮೈಸೂರು ಪಟ್ಟಣಕ್ಕೆ ಬಂದಿದ್ದ ಕೆಲವರನ್ನು ಕಾಲಸ್ಸಿಕ್ಸ್ ಅಮಲ್ದಾರರ ವಶಕ್ಕೆ ಒಪ್ಪಿಸಿ ಅವರನ್ನು ಕಾಪಾಡಬೇಕೆಂದು ಏರ್ಪಾಡು ಮಾಡಿ ದರು ಇವರು ಕೆಲವು ದಿನಗಳ ಮೇಲೆ ಬೇಸರಿಸಿಕೊಂಡು, ಈಚೆಗೆ ಅರಮನೆಯ ಕಾಮಗಾರಿಯಲ್ಲಿ ಸೇರಿಕೊಂಡಿದಾರೆ ಟಿ.ನರಸೀಪುರದಲ್ಲಿ ಕೆಲವು ಮುಸಲ್ಮಾನರೂ, ಮೇದಿನ ಮತ್ತು ಬನಗಿಗ್ರಾಮಗಳಲ್ಲಿ ಹೊಲೆಯರೂ ಕ್ಷಾಮಪೀಡಿತರಾಗಿ ದ್ದಾರೆ ಬನಗಿಯಲ್ಲಿ ಜನರು ಹೊಟ್ಟೆಗಿಲ್ಲದೆ ಬಡಕಲಾಗಿದಾರೆಂದೂ, ಅವರಿಗೆ ಧರ್ಮದ ಪಡಿಯನ್ನು ಅಳೆಯುತ್ತಿದ್ದಾರೆಂದೂ ತಿಳಿದುಬಂದದ್ದರಿಂದ ಆ ಪ್ರಾಂ ತ್ಯದಲ್ಲಿ ಅಮಲ್ದಾರರು ಸಂಚರಿಸಿ ಪ್ರಜಾ ಸಂರಕ್ಷಣೆಯನ್ನು ನೋಡಿಕೊಳ್ಳಬೇ ಕೆಂದು ಹುಕುಂ ಕೊಡಲಾಗಿದೆ. ಕ್ಷಾಮ ಪ್ರಾಪ್ತವಾಗಿದೆ ಎಂದು ಸರ್ಕಾರಿಯಾಗಿ ಪ್ರಕಟವಾಗದೆ ಇರುವಂಥಾ ಪ್ರದೇಶಗಳಲ್ಲಿ ಸರ್ಕಾರದ ಹಣವನ್ನು ವಿನಿಯೋಗಿಸಿ ಧರ್ಮದ ಪಡಿಗಳನ್ನು ಅಳೆಯುವುದರಿಂದ ಕೆಡುಕುಂಟಾದೀತು. ಅಂಥಾ ಕಡೆಗ ಳಲ್ಲಿ ಪುಣ್ಯವಂತರಾದ ಪ್ರಜೆಗಳಿಂದ ಧರ್ಮದ ಫಂಡುಗಳನ್ನು ಕೂಡಿಸಿ, ಬಡಬ ಗ್ಗರಿಗೆ ಸಹಾಯ ಮಾಡಬೇಕಾಗಿದೆ. ಸರ್ಕಾರದ ಅಧಿಕಾರಿಗಳು ಮುತುವರ್ಜಿ ವಹಿಸಿ ಈ ಭಾಗದಲ್ಲಿ ಪ್ರೋತ್ಸಾಹಪಡಿಸಬೇಕೆಂದು ಗವರ್ನ್‌ಮೆಂಟಿನವರು ನಿರೀ ಕ್ಷಿಸುತ್ತಾರೆ

ವಿದೇಶ ವರ್ತಮಾನಗಳು.

ಮಲೆಯಾ ಎಂಬ ಪರ್ಯಾಯ ದ್ವೀಪದಲ್ಲಿರುವ ಸಂಸ್ಥಾನಗಳವರೆಲ್ಲಾ ಸೇರಿ ಬ್ಯಾಂಕಾಕಿನಿಂದ ಮಲೆಯಾ ಎಲ್ಲೆಕಟ್ಟಿನ ತನಕ ರೈಲ್ ರಸ್ತೆಯನ್ನು ಹಾಕುವುದಕ್ಕೆ ಆರು ಕೋಟಿ ರೂಪಾಯಿ ಕೊಡುವುದಾಗಿ ಒಪ್ಪಿಕೊಂಡಿದಾರೆ.

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಆರ್ಕನ್ಸಾಸ್ ಡಿಸ್ಟ್ರಿಕ್ಟಿನಲ್ಲಿ ಅಕಸ್ಮಾತ್ತಾಗಿ ಅಪಾರವಾದ ಮಳೆ ಸುರಿದು, ೪೦ ಜನರು ಮೃತಪಟ್ಟರು, ೬೦ ಮಂದಿಗೆ ಗಾಯಗಳಾಗಿವೆ ಬ್ರಿಂಕ್ಲೆ ಎಂಬ ಪಟ್ಟಣವೆಲ್ಲಾ ಸುಮಾರಾಗಿ ಹಾಳಾ ಯಿತೆಂದು ಹೇಳಬಹುದು

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲ್ ಗವರ್ನ್‌ಮೆಂಟಿನವರು ಗಡೀ ಪಾರು ಮಾಡಿರುವಂಥಾ ಹಿಂದೂಸ್ಥಾನದ ಪ್ರಜೆಗಳನ್ನು ನಟಾಲಿನ ಎಲ್ಲೆಕಟ್ಟಿನಿಂದ ಆಚೆಗೆ ಕಳುಹಿಸದೆ ಲೊರೆನ್ಸೊ ಮಾರ್ಕ್ವೆಸ್ ಎಂಬ ತೀರಪಟ್ಟಣದಲ್ಲಿ ಹಡಗು ಗಳಲ್ಲಿ ತಡೆದಿಟ್ಟುಕೊಂಡಿದಾರೆ

ಜಮೇಕಾ ದ್ವೀಪದಲ್ಲಿ ಕಬ್ಬನ್ನು ಬೆಳೆದು ಕಾರ್ಖಾನೆಗಳನ್ನು ಸ್ಥಾಪಿಸಿ ಸಕ್ಕರೆಯನ್ನು ತಯಾರುಮಾಡುವುದಕ್ಕಾಗಿ ಇಂಗ್ಲೆಂಡಿನಲ್ಲಿ ಒಂದು ಕಂಪನಿಯು ಏರ್ಪಾಡಾಗಿದೆ. ಕಂಪನಿಯು ಮೂಲಧನಕ್ಕೆ ಷೇರುಗಳ ಮೂಲಕ ೩೭,೫೦,೦೦೦ ರೂಪಾಯನ್ನು ಕೂಡಿಸಿರುತ್ತಾರೆ

ಹಡಗು ಮತ್ತು ಹಡಗುಗಳ ರಚನೆಯಲ್ಲಿ ಪ್ರವೀಣನೆನಿಸಿಕೊಂಡಿದ್ದು ಕಾಲ ವಾದ ಡಾಕ್ಟರ್ ಫ್ರಾನ್ಸಿಸ್ ಎಲ್ಗಾರ್ ಎಂಬ ಇಂಗ್ಲಿಷ್ ದೊಡ್ಡ ಮನುಷ್ಯನು ತನ್ನ ಆಸ್ತಿಯಲ್ಲಿ ೪,೮೦,೦೦೦ ರೂಪಾಯಿ ತೆಗೆದು ಪರೋಪಕಾರಕ ಕಾರ್ಯ ಗಳಿಗೆ ವಿನಿಯೋಗಿಸಬೇಕೆಂದು ಉಯಿಲು ಬರೆದಿರುವನು.

ಲಂಡನ್ ಪಟ್ಟಣದಲ್ಲಿ ಸರ್ಕಾರದವರು ಪ್ರಜಾ ಸಂಖ್ಯೆಯನ್ನು ಗೊತ್ತು ಮಾಡುವುದಕ್ಕಾಗಿ ಖಾನೇಷುಮಾರಿ (ಸೆನ್ಸಸ್) ಲೆಕ್ಕಗಳನ್ನು ಕಳೆದ ತಿಂಗಳ ಮಧ್ಯಭಾಗದಲ್ಲಿ ಬರೆಸಿದರು ಈ ಲೆಕ್ಕಗಳಿಂದ ಆ ಪಟ್ಟಣದಲ್ಲಿ ಮನೆಮಠಗಳಿ ಲ್ಲದ ಪ್ರಜೆಗಳು ೨,೦೮೮ ಮಂದಿ ಇದ್ದರೆಂದು ತಿಳಿಯುವುದು.

ಈಜಿಪ್ಟ್ ದೇಶದ ಕೈರೋ ಎಂಬ ಮುಖ್ಯ ಪಟ್ಟಣದಲ್ಲಿ ಅಜಹಾರ್ ಎಂಬ ವಿದ್ಯಾನಿಲಯದ ವಿದ್ಯಾರ್ಥಿಗಳಿಗೂ ಸೂಪರಿಂಟೆಂಡೆಂಟರುಗಳಿಗೂ ಕಡಿದಾಟಗಳು ನಡೆದು, ಸರ್ಕಾರದವರು ೬೩ ಮಂದಿಯನ್ನು ದಸ್ತಗಿರಿ ಮಾಡಿರುತ್ತಾರೆ ಮು ಖ್ಯಾಧಿಕಾರಿಯು ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟುಬಿಟ್ಟನು

ಚೀನಾ ರಾಜ್ಯದ ರಾಜಧಾನಿಯಾದ ಪೀಕಿಂಗ್ ನಗರದಲ್ಲೂ ಇತರ ಪಟ್ಟಣ ಗಳಲ್ಲೂ ನಾಲ್ಕು ಭಾರೀ ವೈದ್ಯ ವಿದ್ಯಾಶಾಲೆಗಳನ್ನು ಇಟ್ಟು, ಚೀಣೆಯವರನ್ನು ವೈದ್ಯದಲ್ಲಿ ಶರಪೇತುಮಾಡಬೇಕೆಂದು ಕೆಲವು ಇಂಗ್ಲಿಷ್ ಮಹನೀಯರು ಪ್ರ ಯತ್ನ ಪಟ್ಟಿದಾರೆ. ಈ ವಿದ್ಯಾಶಾಲೆಗಳಿಗೆ ಅವರು ೧೫ ಲಕ್ಷ ರೂಪಾಯಿ ಕೂಡಿ ಸಬೇಕೆಂದು ಸಾಹಸಪಡುತ್ತಿದಾರೆ.

ಇಂಗ್ಲಾಂಡಿಗೆ ಸೇರಿದ ಬಾಕಪ್ ಎಂಬ ಊರಿನಲ್ಲಿ ಹತ್ತೀ ಕಾರ್ಖಾನೆ ಯೊಳಗೆ ಕೂಲಿಮಾಡುವ ಕಾರ್ಟ್‌ಮೆನ್ ಎಂಬಾತನ ಹೆಂಡತಿಯು ಬಸುರಾಗಿ ಹಿಂದಿನ ವಾರ ಏಕಕಾಲದಲ್ಲಿ ಮೂರು ಗಂಡು ಮಕ್ಕಳನ್ನು ಹೆತ್ತಳು. ಮಹಾ ರಾಜಾ ಚಕ್ರವರ್ತಿಯವರಿಗೆ ಈ ಸುದ್ದಿಯು ತಲಪಿ, ಅವರು ತುಂಬಾ ಸಂತೋಷ ಪಟ್ಟು ಆಕೆಗೆ ೪೫ ರೂಪಾಯಿ ಬಹುಮಾನವನ್ನು ದಯಪಾಲಿಸಿರುತ್ತಾರೆ

ಐರ್ಲಾಂಡಿಗೆ ಸೇರಿದ ಮೆಯಿಡ್‌ಸ್ಟೋನ್ ಪಟ್ಟಣದಲ್ಲಿ ದನಗಳ ಆಹಾರ ವನ್ನು ತಯಾರುಮಾಡುವ ಒಂದು ಭಾರೀ ಕಾರ್ಖಾನೆಗೆ ಬೆಂಕಿಬಿದ್ದು, ಎರಡೂ ವರೆ ಲಕ್ಷ ರೂಪಾಯಿನ ಪದಾರ್ಥಗಳೂ ಕಟ್ಟಡಗಳೂ ಹಾಳಾದವು. ಅತ್ತಲಾಗಿ ಯಾರ್ಕ್‌ಷೈರ್ ಡಿಸ್ಟ್ರಿಕ್ಟಿಗೆ ಸೇರಿದ ಲಾಸ್‌ವೇಡ್ ಎಂಬ ಸ್ಥಳದಲ್ಲಿ ಕಾಗ ದ ತಯಾರಾಗುವ ಕಾರ್ಖಾನೆಗೆ ಬೆಂಕಿ ಬಿದ್ದು ಮೂರು ಲಕ್ಷ ರೂಪಾಯಿನ ಸರಕು ನಷ್ಟವಾಯಿತು

ಇಂಗ್ಲಿಷ್ ಗವರ್ನ್‌ಮೆಂಟಿನವರು ಹಡಗುಗಳ ಸೈನ್ಯದ ಇಲಾಖೆಗೆ ಕಳೆದ ಸಾಲಿನಲ್ಲಿ ೩ ಕೋಟಿ ೨೨ ಲಕ್ಷದ ೧೯ ಸಾವಿರದ ೫ ನೂರು ಪೌಂಡು ಖರ್ಚು ಮಾಡಿದರು. ೧೯೦೯-೧೦ ನೇ ಸಾಲಿನಲ್ಲಿ ೩ ಕೋಟಿ ೫೧ ಲಕ್ಷದ ೪೨ ಸಾವಿ ರದ ೭ ನೂರು ಪೌಂಡನ್ನು ಖರ್ಚುಮಾಡುವವರಾಗಿದಾರೆ. ಹೊಸದಾಗಿ ಜಹಜು ಹಡಗುಗಳನ್ನು ತಯಾರುಮಾಡಿಸುವುದಕ್ಕೆ ಆ ಪೈಕಿ ೮೮,೮೫,೧೯೪ ಪೌಂಡು ಗಳು ವಿನಿಯೋಗಿಸಲ್ಪಡುವವು

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಸ್ಟ್ಯಾಂಡರ್ಡ್ ಎಂಬ ಎಣ್ಣೇ ಕಂಪನಿಯವರು ೧,೪೬೨ ವಿಧವಾಗಿ ಅಪರಾಧಗಳನ್ನು ಮಾಡಿದ ರೆಂದು ಹೇಳಿ, ಮೊಕದ್ದಮೆ ಬಂದು ೧೮ ತಿಂಗಳ ಕೆಳಗೆ ಕಂಪನಿಯವರಿಗೆ ೮ ಕೋಟಿ ೩೭ ಲಕ್ಷದ ೫೦ ಸಾವಿರ ರೂಪಾಯಿ ಜುಲ್ಮಾನೆ ಹಾಕಿದರು. ಅವರು ಅದರ ಮೇಲೆ ಅಪೀಲ್ ಮಾಡಿಕೊಂಡಾಗ ಕೆಳ ಕೋರ್ಟಿನ ಜುಲ್ಮಾನೆಯು ವಜಾ ಆಯಿತೆಂದು ತಂತೀವರ್ತಮಾನ ಬಂದಿದೆ.

ಯೂರೋಪ್ಪಿಗೆ ಸೇರಿದ ಬೆಲ್ಗೇರಿಯಾ ಸೀಮೆಯಲ್ಲಿ ಮೂವತ್ತು ವರುಷ ಕ್ಕಾಗಿ ಮದುವೆಮಾಡಿಕೊಳ್ಳದೆ ಇರುವಂಥಾ ಗಂಡಸರು ಗವರ್ನ್‌ಮೆಂಟಿಗೆ ತಲೆ ಗಂದಾಯವನ್ನು ಕೊಡಬೇಕೆಂದು ಅಲ್ಲಿನ ಪಾರ್ಲಿಮೆಂಟಿನಲ್ಲಿ ಒಂದು ಕಾನೂನು ಚರ್ಚೆಯಾಗಿ ಜಾರಿಗೆ ತರಲಾಗಿದೆ. ಈ ತೆರಿಗೆಯಿಂದ ೧,೫೦,೦೦೦ ರೂಪಾಯಿ ಉತ್ಪತ್ತಿಯಾಗುವುದೆಂದೂ, ಈ ಹಣವನ್ನು ಅಲ್ಲಿನ ವಿದ್ಯಾಭಿವೃದ್ಧಿಗೆ ವಿನಿಯೋ ಗಿಸುವಂತೆ ತೀರ್ಮಾನ ಮಾಡಿದಾರೆಂದೂ ಪ್ರಕಟವಾಗಿದೆ

ಇಂಗ್ಲಾಂಡಿಗೆ ಸೇರಿದ ಬ್ರಿಸ್ಟಲ್ ಪಟ್ಟಣದಲ್ಲಿ ಒಂದು ವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ಚಂದಾ ಕೂಡಿಸಲಾರಂಭಿಸಿದಾರೆ, ಕಟ್ಟಡಗಳೆಲ್ಲಾ ಸಿದ್ಧವಾ ಗಿರುತ್ತವೆ ಮೆ|| ವ್ಯಾನಿಂಗ್ ವಿಲ್ಸ್ ಎಂಬಾತನು ಅದಕ್ಕೆ ಒಂದೂವರೆ ಲಕ್ಷ ರೂಪಾಯಿ ಕೊಟ್ಟನು. ಫಂಡಿನಲ್ಲಿ ಈಗ ಒಟ್ಟು ೩೦ ಲಕ್ಷ ರೂಪಾಯಿ ಶೇಖ ರವಾಗಿದೆ ಈತನ ತಂದೆಯು ಅದಕ್ಕೆ ಒಂದು ವಾರದ ಕೆಳಗೆ ಮಹೋದ್ಧಾರ ಕಾರ್ಯಗಳಿಗಾಗಿ ಎರಡೂಕಾಲು ಲಕ್ಷ ರೂಪಾಯಿ ಧರ್ಮಮಾಡಿದನು

ಫ್ರಾನ್ಸ್ ಸಂಸ್ಥಾನದಲ್ಲಿ ಕಾರ್ಖಾನೆಗಳೇ ಮೊದಲಾದ ಕಡೆಗಳಲ್ಲಿ ಸೇರಿ ಕೊಂಡು, ಜೀವನಮಾಡುತ್ತಿರುವಂಥಾ ಕೂಲೀ ಜನರಿಗೆ ೬೫ ವರುಷ ವಯ ಸ್ಸಾದ ಮೇಲೆ ತಿಂಗಳಿಗೆ ೬ ರೂಪಾಯಿನಂತೆ ಪೆನ್ಷನ್ ಕೊಡಿಸುವಂತೆ ಏರ್ಪಾ ಡುಮಾಡಬೇಕೆಂದು ಅಲ್ಲಿನ ಪಾರ್ಲಿಮೆಂಟಿನವರು ಚರ್ಚೆ ಮಾಡುತ್ತಿದಾರೆ. ಈ ಪೆನ್ಷನ್ ಫಂಡಿಗೆ ಕೆಲವು ಹಣವನ್ನು ಕಾರ್ಖಾನೆಗಳ ಸಾಹುಕಾರರು ಕೊಡಬೇ ಕೆಂತಲೂ, ಉಳಿದ ಹಣವನ್ನು ಸರ್ಕಾರದವರು ಹಾಕಬೇಕೆಂತಲೂ ಗೊತ್ತಾಗಿದೆ.

ಈಚೆಗೆ ಇಂಗ್ಲಾಂಡ್, ಜರ್ಮನಿ, ಸ್ವೀಡನ್ ಎಂಬ ಯೂರೋಪ್ಪಿಯನ್ ರಾಜ್ಯಗಳಲ್ಲಿ ಹೊಲಗದ್ದೆಗಳಲ್ಲಿ ವಿದ್ಯುಚ್ಛಕ್ತಿಯನ್ನು ಪ್ರಯೋಗಿಸಿ ವ್ಯವ ಸಾಯ ಮಾಡಲಾರಂಭಿಸಿದಾರೆಂದೂ, ಈ ಶಕ್ತಿಯ ಸಹಾಯದಿಂದ ಶೇಕಡಾ ೩೦ ರಿಂದ ೪೦ರ ವರೆಗೆ ಪೈರಿನ ಹುಲುಸು ಹೆಚ್ಚಾಗುವುದೆಂದೂ ಸಿದ್ಧಾಂತ ಮಾಡಿ ರುತ್ತಾರೆ. ಗೋಧಿ, ಬಾರ್ಲಿ ಮೊದಲಾದ ಧಾನ್ಯಗಳ ಫಸಲಿಗೆ ವಿದ್ಯುಚ್ಛಕ್ತಿಯನ್ನು ಪ್ರಯೋಗಿಸಬೇಕೆಂದು ರೈತ ಪ್ರಜೆಗಳಿಗೆ ತಿಳಿಸಿ, ಅದರ ವಿಧಾನ ಮುಂತಾದದ್ದನ್ನು ಹೇಳಿಕೊಡುತ್ತಾ ಬಂದಿದಾರೆ

ಇಂಗ್ಲಾಂಡಿನ ಒಂದು ರೈಲ್ವೆ ಕಂಪನಿಯಲ್ಲಿ ನೌಕರನಾಗಿರುವ ಮೆ|| ಜೆ. ಸಿ ಬೇಕರ್ ಎಂಬಾತನು ತನ್ನ ಜೊತೆಗಾರರಾದ ನೌಕರ ಮಾನೇಜರುಗಳಿಂದ ಕಳೆದ ಇಪ್ಪತ್ತು ವರುಷಗಳಲ್ಲಿ ಒಂದೊಂದೇ ಆಣೆಯಂತೆ ಧರ್ಮವನ್ನು ಎತ್ತಿ ಕೂಡಿಸಿ, ಒಟ್ಟು ೭,೫೦ ರೂಪಾಯಿನ ಒಂದಾಣೇ ನಾಣ್ಯಗಳನ್ನೇ ಟೊಂಟನ್ ಪಟ್ಟಣದ ಆಸ್ಪತ್ರೆಯ ಮೂಲಧನಕ್ಕೆ ದಾನಮಾಡಿರುತ್ತಾನೆ. ಆ ಆಸ್ಪತ್ರೆಯ ಮೇಲ್ವಿಚಾರಣಾ ಕರ್ತರು ಸಭೆಸೇರಿ, ಆತನ ಧರ್ಮಬುದ್ಧಿ, ಪರಿಶ್ರಮವನ್ನೂ, ಸಾಹಸಾದಿಗಳನ್ನು ಕೊಂಡಾಡಿದರು.

ಮಿಸೆಸ್ ಟಿಂಡೇಲ್ ಎಂಬಾಕೆಯು ಗಣಿಗಳಲ್ಲಿ ಕೂಲಿಗಾರರು ಕೆಲಸ ಮಾಡು ವಾಗ್ಗೆ ಆಕಸ್ಮಾತ್ತಾಗಿ ಬೆಂಕಿ ಹತ್ತಿಕೊಂಡು ಅನಾಹುತ ಸಂಭವಿಸುವುದನ್ನೂ ಅನೇಕಾನೇಕ ಕೂಲಿಕಾರರು ಅಕಾಲ ಮರಣ ಹೊಂದುತ್ತಿರುವುದನ್ನೂ ನೋಡಿ ತನಕರಪಟ್ಟು, ಹೀಗೆ ಗಣಿಗಳಲ್ಲಿ ಅನಾಹುತಗಳು ಆಗದಂತೆ ಹೊಸ ಹೊಸ ಉಪಾಯಗಳನ್ನು ಕಂಡು ಹಿಡಿಯತಕ್ಕವರಿಗೆ ಪ್ರತಿ ವರುಷವು ಒಂದೊಂದು ಮೆಡಲನ್ನು ಮಾಡಿಕೊಡಬೇಕೆಂದು ತೀರ್ಮಾನಿಸಿ, ಅದಕ್ಕಾಗಿ ತನ್ನ ಆಸ್ತಿಯಿಂದ ಹಣವನ್ನು ಮೂಲಧನವಾಗಿ ಕೊಟ್ಟಿರುತ್ತಾಳೆ.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಸೈಕಿ ಪಿಟ್ಸ್ ಬರ್ಗ ಎಂಬ ಪಟ್ಟಣದಲ್ಲಿ ಸಿಟಿ ಕೌನ್ಸಿಲ್ ಎಂಬ ಸರ್ಕಾರಿ ಸಭೆಯ ಕೆಲವು ಮೆಂಬರುಗಳು ಸರ್ಕಾರದ ಹಣವನ್ನು ತಿಂದುಹಾಕುತ್ತಾರೆಂದು ಅವರ ಮೇಲೆ ಮೊಕದ್ದಮೆ ನಡೆಯುತ್ತಿದೆ ಇವರು ಕೋರ್ಟಿನಲ್ಲಿ ಸಂಬಾಯಿತದಾರರಿಗೆ ಚತಾವಣಿ ಮಾಡಿ ಅವರಿಂದ ತಾವು ನಿರಪರಾಧಿಗಳೆಂಬ ಅಭಿಪ್ರಾಯಗಳನ್ನು ಹೇಳಿಸಿ, ಶಿಕ್ಷೆಯಾಗದಂತೆ ತಪ್ಪಿಸಿಕೊಳ್ಳಬೇಕೆಂದು ಅವರಿಗೆ ಲಂಚ ಕೊಡಲು ಪ್ರಯತ್ನ ಪಟ್ಟರು ಇದಕ್ಕಾಗಿ ಆ ಮೆಂಬರುಗಳ ಮೇಲೆ ಇನ್ನೊಂದು ಮೊಕದ್ದಮೆ ತರಲಾಗಿದೆ

ಸಂಯುಕ್ತ ಸಂಸ್ಥಾನಗಳ ಗವರ್ನ್‌ಮೆಂಟಿನವರು ಉತ್ತರ ಮತ್ತು ದಕ್ಷಿಣ ಅಮೇರಿಕಾಗಳ ನಡುವೆ ಇರುವ ಸಣ್ಣ ಭೂಖಂಡವನ್ನು ಒಡೆದುಹಾಕಿ, ಹಡಗುಗಳ ಸಂಚಾರಕ್ಕೆ ಯೋಗ್ಯವಾದಂಥಾ ಜಲಮಾರ್ಗವನ್ನು ಕಲ್ಪಿಸಿ, ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರಗಳನ್ನು ಏಕವಾಗಿ ಮಾಡಬೇಕೆಂದು ಕಾಮಗಾರಿ ಮಾಡಿಸುತ್ತಿದ್ದಾರೆ ಈ ಕಾಮಗಾರಿಯು ಕೆಲವು ವರುಷಗಳಿಂದ ನಡೆಯುತ್ತಿರುವುದು ಇದು ಇನ್ನು ೩ ೪ ವರುಷಗಳೊಳಗಾಗಿ ಪೂರೈಸುವುದೆಂದೂ, ಈ ಕಾಮಗಾರಿಗೆಲ್ಲಾ ಒಟ್ಟು ೧೦೮ ಕೋಟಿ ರೂಪಾಯಿ ಖರ್ಚಾಗುವುದೆಂದೂ ತಿಳಿದುಬಂದಿದೆ

ಪರ್ಶಿಯಾ ರಾಜ್ಯಕ್ಕೆ ಸೇರಿದ ಟೆಬ್ರಿಜ್ ಪಟ್ಟಣದಲ್ಲಿ ರಾಜಪಕ್ಷದವರಿಗೂ ಪ್ರಜಾಪಕ್ಷದವರಿಗೂ ದಿನವಹಿ ಕದನ ಕಡಿದಾಟಗಳು ನಡೆಯುತ್ತಲೇ ಇರುವವು ಕಳೆದ ಗುರುವಾರ ರಾಜಪಕ್ಷದವರು ಆ ಪಟ್ಟಣದ ಕೆಲವು ಭಾಗಗಳನ್ನು ಗೆದ್ದು ಆಕ್ರಮಿಸಿಕೊಂಡಾಗ ಪ್ರಜಾಪಕ್ಷದವರು ಅವರ ಮೇಲೆ ಮುತ್ತಿಗೆ ಹಾಕಿ ಅವರನ್ನೆಲ್ಲಾ ಅಲ್ಲಿಂದ ಓಡಿಸಿದ್ದಲ್ಲದೆ ಅನೇಕರನ್ನು ಕೈಸೆರೆ ಹಿಡಿದುಕೊಂಡರು ಒಂದು ಫಿರಂಗಿಯನ್ನೂ ಕಿತ್ತುಕೊಂಡರು ಆ ಪಟ್ಟಣದಲ್ಲಿ ಆಹಾರ ಸಿಕ್ಕದೆ ಪ್ರಜೆಗಳು ಬಹಳ ಕಷ್ಟಪಡುತ್ತಿದ್ದಾರೆಂದೂ ರೋಗಾದಿಗಳೂ ಪ್ರಾರಂಭವಾಗಿವೆ ಎಂದೂ ತಂತೀ ವರ್ತಮಾನ ಬಂದಿದೆ

ಸಯಾಮಿನ ರಾಜಧಾನಿಯಾದ ಬ್ಯಾಂಕಾಕ್ ಪಟ್ಟಣದಲ್ಲಿ ಸಯಾಂ ರಾಜ್ಯದವರಿಗೂ ಇಂಗ್ಲಿಷರಿಗೂ ಒಂದು ಕರಾರು ನಡೆದು, ಉಭಯ ರಾಜ್ಯಗಳ ಪ್ರತಿನಿಧಿಗಳು ಅದಕ್ಕೆ ಕಳೆದ ವಾರ ರುಜುಹಾಕಿದರು ಸಯಾಮಿನವರು ಕೇಲಾಂಟನ್, ಟ್ರೆಂಗನೂ, ಕೆ ಡಾ ಎಂಬೀ ಪಟ್ಟಣಗಳನ್ನು ಇಂಗ್ಲಿಷರಿಗೆ ಸಂಪೂರ್ಣವಾಗಿ ವಹಿಸಿಬಿಟ್ಟರು ಇಂಗ್ಲಿಷರು ತಮ್ಮ ಸ್ವಾಧೀನದಲ್ಲಿರುವ ಇತರ ಭಾಗಗಳನ್ನು ಸಯಾಮಿಗೆ ವಾಪಸು ಕೊಟ್ಟರು ಇನ್ನುಮುಂದೆ ಇಂಗ್ಲಿಷ್ ಪ್ರಜೆಗಳು ಅಲ್ಲಿ ಅಪರಾಧಗಳನ್ನು ನಡೆಸಿದರೆ ಅವರನ್ನು ಅಲ್ಲಿನ ಕೋರ್ಟುಗಳಲ್ಲೇ ವಿಚಾರಣೆ ಮಾಡಬೇಕೆಂದೂ, ದಿಯಾನತ್ತಿಯಾಗುವಾಗ್ಗೆ ಜಡ್ಜಿಗಳ ಸಹಾಯಕ್ಕೆ ಕೆಲವು ಮಂದಿ ಯೂರೋಪ್ಯರು ಕೋರ್ಟುಗಳಲ್ಲಿ ಹಾಜರಾಗಿರಬೇಕೆಂದೂ ನಿಬಂಧನೆಯಾಗಿದೆ

ಸಂಯುಕ್ತ ಸಂಸ್ಥಾನಗಳ ಮುಖ್ಯಪಟ್ಟಣವಾದ ನ್ಯೂಯಾರ್ಕ ನಗರದಲ್ಲಿ ಸಿ ಡಬ್ಲ್ಯು ಮಾರ್ಸ ಎಂಬೊಬ್ಬ ವರ್ತಕನು ಬ್ಯಾಂಕನ್ನು ಇಟ್ಟು ಲೇವಾದೇವಿ ನಡಿಸುತ್ತಾ ಬಂದದ್ದರಲ್ಲಿ ಸರ್ಕಾರದ ನಿಬಂಧನೆಗಳಿಗೆ ವಿರೋಧವಾದ ಕಾರುಬಾರುಗಳನ್ನು ನಡಿಸಿದನೆಂದು ಗೊತ್ತಾದದ್ದರಿಂದ ಗವರ್ನ್‌ಮೆಂಟಿನವರು ಅತನನ್ನು ಹಿಡಿದು ದಯಾಪ್ತಿ ಮಾಡಿ ಆತನಿಗೆ ಹದಿನಾರು ವರುಷಗಳ ಸಜಾ ಶಿಕ್ಷೆಯನ್ನು ವಿಧಿಸಿದರು ಇದರ ಮೇಲೆ ಆತನು ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡನು ಆ ಕೋರ್ಟಿನವರು ಆತನನ್ನು ರಾತ್ರಿಹೊತ್ತು ಮಾತ್ರ ಬಂದೀಖಾನೆಯಲ್ಲಿಟ್ಟರಬೇಕೆಂದೂ, ಹಗಲುಹೊತ್ತಿನಲ್ಲಿ ಪೋಲೀಸ್ ಪಹರೆಯ ಮೇಲೆ ಆತನನ್ನು ಬ್ಯಾಂಕಿನ ಕೆಲಸಗಳನ್ನು ನಡಿಸುವುದಕ್ಕೆ ಬಿಟ್ಟು ಕೊಡಬೇಕೆಂದೂ ಹುಕುಂ ಕೊಟ್ಟಿದ್ದಾರೆ ಕೋರ್ಟಿನವರು ಈ ರೀತಿಯಾದ ಶಿಕ್ಷೆಯನ್ನು ವಿಧಿಸಿರುವುದು ಅಪೂರ್ವವಾದದ್ದೆಂದು ಅಲ್ಲಿನ ಪ್ರಜೆಗಳು ತುಂಬಾ ಆಶ್ಚರ್ಯಪಡುತ್ತಿರುವರು

ಹಿಂದುಸ್ಥಾನದ ಪ್ರಜೆಗಳು ಜೀವನೋಪಾಯಕ್ಕಾಗಿ ಫೀಜೀ ದ್ವೀಪಕ್ಕೆ ಹೋಗಿ ಅಲ್ಲೇ ನೆಲಸಿರುತ್ತಾರೆ ಕನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದವರು ಅಲ್ಲಿಗೆ ಹಿಂದುಸ್ಥಾನದಿಂದ ನೆಟ್ಟಗೆ ಹೋಗತಕ್ಕವರನ್ನು ಮಾತ್ರ ಸೇರಿಸಿಕೊಳ್ಳುತ್ತೇವೆಂದೂ ಇತರ ಕಡೆಗಳಿಂದ ಹೋಗತಕ್ಕ ಹಿಂದುಸ್ಥಾನದವರನ್ನು ಸೇರಿಸಿಕೊಳ್ಳುವುದಿಲ್ಲವೆಂದೂ ಇಸ್ತಿಹಾರು ಹಾಕಿಸಿರುತ್ತಾರಾದರೂ ಫೀಜೀ ದ್ವೀಪದಿಂದ ಕೆಲವು ಹಿಂದುಸ್ಥಾನದ ಪ್ರಜೆಗಳು ಎರಡು ವಾರಗಳ ಕೆಳಗೆ ಕನಡಾ ಸ್ವಾಸ್ಥ್ಯಕ್ಕೆ ಹೋದರು ಇಂತಾ ೧೧ ಜನರನ್ನು ಕನಡಾ ಸರ್ಕಾರದವರು ಹಿಡಿದು, ವಾಪಸು ಕಳುಹಿಸಬೇಕೆಂದು ಹುಕುಂ ಮಾಡಿದರು ಈ ೧೧ ಜನರೂ ಅಲ್ಲಿನ ಕೋರ್ಟಿನಲ್ಲಿ ಸರ್ಕಾರದವರ ಮೇಲೆ ಫಿರ್ಯಾದು ಮಾಡಿದ್ದರಲ್ಲಿ ಜಡ್ಜಿಗಳು ಸರ್ಕಾರದವರ ಇಸ್ತಿಹಾರನ್ನು ರದ್ದುಪಡಿಸಿ ಅವರನ್ನೆಲ್ಲಾ ಬಂಧನದಿಂದ ಬಿಡಿಸಿಬಿಟ್ಟರು ಈಗ ಈ ೧೧ ಜನರೂ ಸರ್ಕಾರದವರ ಮೇಲೆ ೬೦೦೦ ರೂಪಾಯಿ ಡಾಮಿಜಿಗೆ ದಾವಾ ತಂದಿರುತ್ತಾರೆ

ಚೀನಾ ರಾಜ್ಯದಲ್ಲಿ ಅಫೀಮಿನ ಬೆಳೆಯನ್ನು ವರುಷೇ ವರುಷ ಕಡಮೆ ಮಾಡಬೇಕೆಂತಲೂ, ಇತರ ಕಡೆಗಳಿಂದ ಅಲ್ಲಿಗೆ ರಫ್ತಾಗಿ ಹೋಗುವ ಅಫೀಮನ್ನೂ ಕ್ರಮೇಣ ಕಡಮೆಮಾಡಬೇಕೆಂತಲೂ ಕಾಲಕ್ರಮದಲ್ಲಿ ಅದರ ಸೇವನೆಯನ್ನು ಆ ರಾಜ್ಯದಲ್ಲಿ ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕೆಂತಲೂ ಗವರ್ನ್‌ಮೆಂಟಿನವರು ಗೊತ್ತುಮಾಡಿಕೊಂಡು, ಆ ಅರ್ಥಕ್ಕೆ ಕಾರ್ಯಗಳನ್ನು ನಡಿಸುತ್ತಾ ಬಂದಿರುವುದೂ ಪರರಾಜ್ಯಗಳವರೂ ಕೂಡ ಈ ವಿಷಯದಲ್ಲಿ ಚೀನಾದವರಿಗೆ ಸಹಾಯಮಾಡುತ್ತಾ ಬಂದಿರುವುದೂ ವಾಚಕರಿಗೆ ತಿಳಿದಿದೆಯಷ್ಟೆ ಇದರ ಫಲ ತಾಂಶವು ತೃಪ್ತಿಕರವಾಗಿರುವುದು ಹಾಗೆಂದರೆ ಕಳೆದ ೧೯೦೬ನೇ ಇಸವಿಯಲ್ಲಿ ಚೀನಾ ರಾಜ್ಯದಲ್ಲಿ ೭ ಕೋಟಿ ೮೦ ಲಕ್ಷ ಪೌಂಡು ಅಫೀಮನ್ನು ಬೆಳೆದದ್ದಲ್ಲದೆ ಇತರ ಕಡೆಗಳಿಂದ ೭೨ ಲಕ್ಷದ ೫೦ ಸಾವಿರ ಪೌಂಡಿನ ಅಫೀಮನ್ನು ತರಿಸಿಕೊಂಡಿದ್ದಾರೆ ಆದರೆ ೧೯೦೮ನೇ ಇಸವಿಯಲ್ಲಿ ೪ ಕೋಟಿ ೯೦ ಲಕ್ಷ ಪೌಂಡು ಅಫೀಮನ್ನು ಬೆಳೆದರೆಂದೂ ಇತರ ಕಡೆಗಳಿಂದ ೬೫ ಲಕ್ಷ ಪೌಂಡು ಅಫೀಮನ್ನು ತರಿಸಿಕೊಂಡರೆಂದೂ ತಿಳಿಯುವುದು

ಕಳೆದ ಗುರುವಾರ ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳ ಮುಖ್ಯಪಟ್ಟಣವಾದ ವಾಷಿಂಗ್‌ಟನ್ ನಗರದಲ್ಲಿ ಮೆ|| ಟಾಫ್ಟ್‌ಯವರು ರಾಜ್ಯಭಾರದ ಅಧ್ಯಕ್ಷತೆಯನ್ನು ವಹಿಸಿಕೊಂಡರು ಅದಕ್ಕಾಗಿ ಆ ದಿನ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಹೋಗಿ ಸಭೆಯಲ್ಲಿ ಹಾಜರಾಗಿದ್ದರು ಹೊಸ ಪ್ರೆಸಿಡೆಂಟರಾದ ಮೆ|| ಟಾಫ್ಟ್‌ಯವರು ಸಭಿಕರಿಗೆ ತಮ್ಮ ರಾಜ್ಯಭಾರ ಕ್ರಮಗಳನ್ನು ಕುರಿತು ಉಪನ್ಯಾಸಮಾಡಿದರು ಆ ತರುವಾಯ ಪ್ರೆಸಿಡೆಂಟರು ೪೦,೦೦೦ ಸೈನಿಕರ ಕವಾತು ಮುಂತಾದವುಗಳನ್ನು ಪರಾಂಬರಿಸಿದರು ಆ ದಿನ ಅಪಾರವಾದ ಹಿಮ ಸುರಿಯುತ್ತಿದ್ದರೂ ಈ ಉತ್ಸವಗಳನ್ನು ನೋಡುವುದಕ್ಕೆ ಎರಡೂವರೆ ಲಕ್ಷ ಪ್ರಜೆಗಳು ಸೇರಿದ್ದರು ಇತರ ಕಡೆಗಳಿಂದ ಈ ಉತ್ಸವಗಳನ್ನು ನೋಡುವುದಕ್ಕೆ ಸಾವಿರಾರು ಪ್ರಜೆಗಳು ರೈಲುಗಾಡಿಗಳಲ್ಲಿ ಪ್ರಯಾಣಮಾಡಿಕೊಂಡು ಬರುತ್ತಿರುವಲ್ಲಿ ಮಂಜು ಹಿಮ ಸುರಿಯೋಣದರ ದೆಸೆಯಿಂದ ಗಾಡಿಗಳು ಮುಂದಕ್ಕೆ ಹೋಗದಂತೆ ಅಡ್ಡಿಯಾಗಿ ಅಲ್ಲಲ್ಲೇ ನಿಂತುಬಿಟ್ಟವು ಆದದ್ದರಿಂದ ಅನೇಕರು ಹಿಂತಿರುಗಿ ಹೋಗಬೇಕಾಯಿತು ಅಂತ್ಯದಲ್ಲಿ ಇದುವರೆಗೆ ಸಂಯುಕ್ತ ಅಧಿಪತ್ಯಗಳನ್ನು ಆಳುತ್ತಾ ಬಂದ ಪ್ರೆಸಿಡೆಂಟ್ ರೂಸ್‌ವೆಲ್ಟ್‌ಯವರು ಆ ಪದವಿಯ ಭಾರವನ್ನು ಪ್ರೆಸಿಡೆಂಟ್ ಟಾಫ್ಟ್‌ಯವರಿಗೆ ವಹಿಸಿ, ಮರುದಿನ ದೇಶಾಟನೆಗಾಗಿ ಆಫ್ರಿಕಾಖಂಡವನ್ನು ಕುರಿತು ತೆರಳಿದರು

ಬೆಂಗಳೂರು ಸಿಟಿ ರಿಲೀಫ್ ಫಂಡು

ತಾ|| ೬-೧೨-೧೯೦೮ ರಿಂದ ೧-೩-೧೯೦೯ರ ವರೆಗೆ ನಡೆದ ರಿಲೀಫಿನ ವಿವರ.

	ರೂ	ಆ	ಪೈ
೬-೨-೧೯೦೯ ವರೆಗೆ ವಾಗ್ದಾನ ಮಾಡಿರುವ ಮೊಬಲಗು	೧೪,೬೭೧	೦	೦
೬-೨-೧೯೦೯ ವರೆಗೆ ವಸೂಲಾಗಿರುವ ಮೊಬಲಗು	೧೨,೬೭೦	೦	೦
೭-೨-೧೯೦೯ ರಿಂದ ಮಾರ್ಚಿ ೧೧ನೇ ತಾ ವರೆಗೆ ವಸೂಲಾದ್ದು	೧,೧೯೧	೨	೦
೬-೨-೧೯೦೯ ವರೆಗೆ ಖರೀದಿ ಆಗಿರುವ ರಾಗಿ ಮೂಟೆ ೩,೧೪೭ಕ್ಕೆ ಕ್ರಯ	೮,೯೦೫	೭	೨
ಸದರಿ ೩,೧೪೭ ಮೂಟೆ ರಾಗಿಯನ್ನು ನಾಲ್ಕಾಣೆಗೆ ಮೂರು ಸೇರು ಪ್ರಕಾರ ಬಿಕರಿಮಾಡಿದ್ದರಿಂದ ಉಂಟಾದ ನಷ್ಟ	೩,೯೧೮	೨	೬
೧ ೩ ೯೦೯ ವರೆಗೆ ಖರೀದಿ ಆಗಿರುವ ರಾಗಿ ಮೂಟೆ ೧,೦೩೧ಕ್ಕೆ ಕ್ರಯ	೭ ೨೬೯	೭	೪
ಸದರಿ ೧,೦೩೧ ಮೂಟೆ ರಾಗಿಯನ್ನು ನಾಲ್ಕಾಣೆಗೆ ೩ ಮತ್ತು ೩½ ಸೇರು ಪ್ರಕಾರ ಬಿಕರಿಮಾಡಿದ್ದರಲ್ಲಿ ಉಂಟಾದ ನಷ್ಟ	೭೯೬	೭	೭
೬ ೨ ೯೦೯ ವರೆಗೆ ಬಿಕರಿ ಆಗಿರುವ ಅಕ್ಕಿ ಮೂಟೆ ೧೭೦ಕ್ಕೆ ಕ್ರಯ	೧,೬೭೬	೩	೦
ಸದರಿ ಅಕ್ಕಿ ಮೂಟೆ ೧೭೦ಕ್ಕೆ ನಾಲ್ಕಾಣೆಗೆ ೭ ಸೇರು ಪ್ರಕಾರ ಬಿಕರಿಮಾಡಿದ್ದರಿಂದ ಉಂಟಾಗಿರುವ ನಷ್ಟ	೭೫	೯	೬
೭ ೨ ೯೦೯ ರಿಂದ ಮಾರ್ಚಿ ೧೧ನೇ ತಾ ವರೆಗೆ ಖರೀದಿ ಆಗಿರುವ ಅಕ್ಕಿ ಮೂಟೆ ೨೫೨ಕ್ಕೆ ಕ್ರಯ	೭,೫೩೯	೦	೮
ಸದರಿ ಮೂಟೆ ೨೫೨ಕ್ಕೆ ದರ ನಾಲ್ಕಾಣೆಗೆ ಎರಡು ಸೇರು ಪ್ರಕಾರ ಬಿಕರಿಮಾಡಿದ್ದರಲ್ಲಿ ಉಂಟಾದ ನಷ್ಟ	೨೩೧	೧೫	೧

ಬೆಂಗಳೂರು ಸಿಟಿ ರಿಲೀಫ್ ಫಂಡಿಗಾಗಿ ಕೆಳಗೆ ನಮೂದಿಸಿರುವ ಧರ್ಮಕರ್ತರು ಮಾಡಿರುವ ಚಂದಾಪಟ್ಟಿ

ಮೆ ಗಳಾದ ವಿ ಪಿ ಮಾಧವರಾಯರವರು, ರೂ ೫೦೦, ಟಿ ಆನಂದರಾಯರವರು, ರೂ ೪೦೦, ಕೆ ಪಿ ಪುಟ್ಟಣ್ಣಶೆಟ್ಟರವರು, ರೂ ೩೦೦, ವಿ ರಂಗಸ್ವಾಮಿ ಐಯಂಗಾರ್ರವರು ರೂ ೨೫೦, ಎಸ್ ಇರ್ಮಾ ಸಾಹೇಬರವರು ರೂ ೨೦೦ ದಳವಾಯಿ ದೇವರಾಜೇ ಅರಸಿನವರು ರೂ, ೧೫೦, ಬಿ ಜಿ ಕುಮಾರಸ್ವಾಮಿ ನಾಯಕರವರು ರೂ ೧೫೦, ಜಿ ಎಸ್ ಚಕ್ರವರ್ತಿಯವರು ರೂ ೧೦೦, ಎಚ್ ವಿ ನಂಜುಂಡೈಯನವರು ರೂ ೧೦೦, ಪಿ ಎಸ್ ಕೃಷ್ಣರಾಯರವರು ರೂ ೧೦೦, ಎಸ್ ಎಸ್ ಸೇಟ್ಲೂರ್‌ರವರು ರೂ ೧೦೦ ಲೆಫ್ಟಿನೆಂಟ್ ಕರ್ನಲ್ ಜಿ ದೇಶರಾಜೇ ಅರಸಿನವರು ರೂ ೧೦೦, ವೈ ಶ್ರೀನಿವಾಸರಾಯರವರು ರೂ ೫೦, ಡಿ ಸೀತಾರಾಮಯ್ಯನವರು ರೂ ೫೦ ಡಿ ತಿಮ್ಮರಾಯರವರು ರೂ ೫೧, ಕೆ ರಾಮಸ್ವಾಮಿ ಐಯಂಗಾರ್ರವರು ರೂ ೨೫

ಖಾತ್ರಿದಾರರಿಗೆ ನೋಟೀಸು.

ಖಾತ್ರಿದಾರರು ಕಳುಹಿಸುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್ಪಾಂಡೆನ್ಸ್.

ಸಕಲೇಶಪುರದಲ್ಲಿ ಬೆಂಕಿಯ ಕೆಡುಕು

ಅಯ್ಯಾ,

ಈ ಊರಿನಲ್ಲಿ ೧೫—೨೦ ದಿವಸಗಳಿಂದ ಆನೆಕಲ್ಲಿನ ಶ್ರೀ ವೇಣುಗೋಪಾಲಸ್ವಾಮಿ ಕರ್ಣಾಟಕ ಸಭಾ ಕಂಪನಿಯವರು ಬಂದು ಇಲ್ಲಿನ ಕಛೇರಿ ಮುಂದಿರುವ ಮೈದಾನದಲ್ಲಿ ಡೇರೆಯನ್ನು ಹಾಕಿ ನಾಟಕವನ್ನು ಆಡುತ್ತಿದ್ದರು ಕಳೆದ ೬ ನೇ ತಾರೀಖಿನ ರಾತ್ರಿ ಸುಮಾರು ೧೨ ಘಂಟೆ ಸಮಯದಲ್ಲಿ ಡೇರೆ ಹತ್ತಿಕೊಂಡು ಉರಿಯಲು ಪ್ರಾರಂಭಿಸಿತು ದೈವವಶಾತ್ತು ಗಾಳಿ ಕೇರಿಯಲ್ಲಿ ಕೈ ಕೆಳಕೆಯಾಗುತ್ತಿದ್ದದ್ದರಿಂದ ಅಲ್ಲಿದ್ದ ಜನರು ಓಡಿ ಬಂದು ಉರಿಯನ್ನು ಆರಿಸಿದರು ಆದರೂ ಕೂಡ ಸ್ಟೇಜಿನ ಮೇಲೆ ಹಾಕಿದ್ದ ಡೇರೆಯೆಲ್ಲಾ ಉರಿದು ಹೋಯಿತು ಮತ್ತು ೪—೫ ಪರದೆಗಳು ಸಂಪೂರ್ಣವಾಗಿ ಸುಟ್ಟುಹೋದವು ಇದಕ್ಕೆ ಬೆಂಕಿ ಹ್ಯಾಗೆ ಬಿದ್ದಿತೋ ಪತ್ತೆಯಿಲ್ಲ ಆಗ ಡೇರೆಯಲ್ಲಿ ೧೦—೧೨ ಜನ ಕಂಪನಿಯವರು ಮಲಗಿದ್ದರೂ ಕೂಡ ಇಂದಾ ಅನಾಹುತವು ಸಂಭವಿಸಿತು ಇವರುಗಳ ಪೈಕಿ ಮೂರು ಜನರ ಎದೆ ಕೈಗಳು ಮಾತ್ರ ಸುಟ್ಟುಹೋದವು

ಪ್ರಜಾ ಹಿತೈಷಿ

"ವಿದ್ಯಾದಾಯಿನಿ"ಯ ಉಪನ್ಯಾಸ ಲೇಖಕರು.

ಅಯ್ಯಾ,

೧೯೦೮ನೆಯ ಇಸವಿ ಅಕ್ಟೋಬರ್ ತಿಂಗಳಿನ "ವಿದ್ಯಾದಾಯಿನಿ" ಎಂಬ ಮಾಸ ಪತ್ರಿಕೆಯಲ್ಲಿ ಎಸ್ ಶ್ರೀಕಂಠಯ್ಯನವರಿಂದ ಬರೆಯಲ್ಪಟ್ಟ "ಅಕ್ಷರಾಭ್ಯಾಸ" ವೆಂಬ ಒಂದು ಲೇಖನವಿತ್ತು ಆ ಉಪನ್ಯಾಸದಲ್ಲಿ ಸಣ್ಣ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುವ ಕ್ರಮವನ್ನು ಚೆನ್ನಾಗಿ ವಿಮರ್ಶಿಸಿದ್ದರು ಅವರ ಇನರು ಹೇಳುವ ಬಳೆ, ಕಡ್ಡಿಗಳ ಕ್ರಮವು ಫ್ರೋಬೆಲ್ಲನಿಗೆ ಗೊತ್ತಿರಲಿಲ್ಲ ತಲೂ, ತಾವು ಹೊಸದಾಗಿ ಕಂಡುಹಿಡಿದುದೆಂತಲೂ, ಫ್ರೋಬೆಲ್ಲನ ಇಷ್ಟ ಕರಣಗಳಂತೆ ಇದೂ ಒಂದು ಕರಣವೆಂತಲೂ ಈ ಉಪನ್ಯಾಸದಲ್ಲಿ ಬರೆದಿನನ್ನು ನೋಡಿದಲ್ಲಿ ಇವರು ಕಿಂಡರ್‌ಗಾರ್ಟನ್ ಕರಣಗಳನ್ನೇ ಚೆನ್ನಾಗಿ ನೋಡಿಲ್ಲವೆಂದು ತೋರುವುದು ಇವರು ಕಂಡುಹಿಡಿದಿರುವ ಬಳೆ, ಕಡ್ಡಿಗಳ ಕ್ರಮ ಫ್ರೋಬೆಲ್ಲನ ಎಂಟು ಒಂಬತ್ತನೆಯ ಕರಣಗಳಾಗಿರುತ್ತವೆ ಇದು ಹೊಸದೇನೂ ಅಲ್ಲ ಈ ವಿಷಯವನ್ನು ಮೈಸೂರು ನಾರ್ಮಲ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಮೆ|| ವೆಂಕಟಸುಬ್ಬಯ್ಯನವರು ರಚಿಸಿರುವ "ಕಿಂಡರ್‌ಗಾರ್ಟನ್ ಕ್ರಮ" ಎಂಬ ಪುಸ್ತಕದಿಂದ ತಿಳಿದುಕೊಳ್ಳಬಹುದು

ಪಿ ವಿ

ಆಲೂರು ಸಂತೆಯಲ್ಲಿ ಜನರ ಕಷ್ಟಗಳು

ಅಯ್ಯಾ,

ಈ ಆಲೂರಲ್ಲಿ ವಾರಕ್ಕೆ ಒಂದಾವರ್ತಿ ಬುಧವಾರದ ದಿವಸ ಒಹು ದೊಡ್ಡದಾದ ಸಂತೆ ನಡೆಯುತ್ತದೆ ಇದರ ಸಂಗಡ ಬೆಂಗಳೂರು, ಮಂಗಳೂರು, ಬಳ್ಳಾರಿ ವಗೈರೆ ಕಡೆಯಿಂದ ಸಾವಿರಾರು ರೂಪಾಯಿನ ವ್ಯಾಪಾರ ನಡೆಯುತ್ತದೆ ಪ್ರಸಿದ್ಧವಾಗಿದೆ ಈಗ್ಗೆ ೩ ವರುಷದ ಕೆಳಗೆ ಈ ಊರಿಗೆ ಪ್ಲೇಗ್ ಬಂದ ಸಂದರ್ಭದಲ್ಲಿ ಊರೊಳಗೆ ಇದ್ದ ಸಂತೆಯನ್ನು ತೆಗೆದು ದೊಡ್ಡ ಬೋರೆಯ ಮೇಲೆ ಹಾಕಿದರು ಈ ಸಂತೆಯಲ್ಲಿ ಕೂಡುವ ವ್ಯಾಪಾರಿಗಳೂ ಪ್ರಜೆಗಳು ಸುಮಾರು ೧೦ ೧೫ ಸಾವಿರವಾಗಬಹುದು ಈ ಬೇಸಿಗೆ ಕಾಲದಲ್ಲಿ ಕುಡಿಯುವದಕ್ಕೆ ನೀರಿಲ್ಲದೆಯೂ, ಕೂರುವದಕ್ಕೆ ನೆರಳಿಲ್ಲದೆಯೂ ಅವರೆಲ್ಲಾ ಶ್ರಮಪಡುತ್ತಿದ್ದಾರೆ ಈ ಊರಿನಿಂದ ಪ್ಲೇಗು ನಿವಾರಣೆಯಾಗಿ ೨ ವರುಷವಾದಾಗ್ಯೂ ಸಂತೆಯು ಮೂಲಸ್ಥಾನಕ್ಕೆ ಬರುವಂತೆ ಆಗದೇ ಇರುವದು ತುಂಬಾ ಶೋಚನೀಯವಾಗಿದೆ ಈ ರೀತಿಯಾದ ಕಷ್ಟವನ್ನು ಪರಿಹಾರಮಾಡಿಕೊಡಬೇಕೆಂದು ಗ್ರಾಮಸ್ಥರು ೨ ೩ ಅರ್ಜಿಯನ್ನೂ ಕೊಟ್ಟಿದ್ದಾರೆ ಇಲ್ಲಿನ ಡೆಪ್ಯುಟಿ ಅಮಲ್ದಾರ್ ಮಹಮ್ಮದ್ ಸೈಯದ್ ಷರೀಫ್ ಸಾಹೇಬರು ಒಹು ದೊಡ್ಡ ಮನುಷ್ಯರು ದೊಡ್ಡ ಸಂಸಾರಿಗಳೂ, ವಿಶೇಷ ಪಾಪಭೀತರೂ ಪ್ರಜೆಗಳ ಕಷ್ಟ ಎಳ್ಳಷ್ಟೂ ಸಹಿಸದವರೂ ಆಗಿದ್ದಾರೆ ಇವರು ಸಂತೆಯಲ್ಲಿ ನಡೆಯುತ್ತಿದ್ದ ಪಸಿಕೆ ವಗೈರೆ ಕೆಲವು ದುಷ್ಕೃತ್ಯಗಳನ್ನು ನಿಲ್ಲಿಸಿ ಬಹುಮಟ್ಟಿಗೆ ಶ್ರಮಪಡಿಸಿದ್ದಾರೆ ಇದೇ ರೀತಿ ನೀರಿಗೂ ನೆರಳಿಗೂ ಜನರು ಪಡುವ ಕಷ್ಟವನ್ನು ಇವರು ದಮ್ಮ ಚಿತ್ತಕ್ಕೆ ತಂದುಕೊಂಡು, ಮೇಲಕ್ಕೆ ಸಿಫಾರಸು ಮಾಡಿ ಮೂಲಸ್ಥಾನಕ್ಕೇ ಈ ಸಂತೆಯನ್ನು ತಂದು ಪ್ರಜೆಗಳ ಕಷ್ಟ ತಪ್ಪಿಸ್ಯಾರೆಂದು ನಂಬಿದ್ದೇನೆ ಆರೇಹಳ್ಳಿ, ತಿಮ್ಮಾಪುರ, ಬಸರವಳ್ಳಿ, ನಾಗಮಂಗಲ, ಈ ಸ್ಥಳಗಳಲ್ಲಿ ದನಗಳಿಗೆ ಹುಲ್ಲು ಇಲ್ಲದೆ, ರೈತ ಪ್ರಜೆಗಳು ಈ ಸಂತೆಗೆ ನೂರಾರು ಗಾಡಿಗಳು ತಂದು, ಹುಲ್ಲು ಭರ್ತಿಮಾಡಿಕೊಂಡು ಹೋಗಿ ಅಸ್ಥಿ ಪಂಜರವಾಗಿರುವ ತಮ್ಮ ದನಗಳನ್ನು ಕಾಪಾಡಿಕೊಳ್ಳುತ್ತಿದ್ದಾರೆ ಅವರ ಸಂತೆಯೇ ಹುಲ್ಲಿನ ಸಂತೆಯಾಗಿರುವದರಿಂದ ದನಗಳಿಗೆ ಈ ರೀತಿ ಕಷ್ಟ ಒದಗಿಕಲ್ಲು ಎಂದು ಜನಗಳು ತುಂಬಾ ಸಂಕಟಪಡುತ್ತಾರೆ

ಪುರವಾಸಿ

ಬೆಂಕಿಯಿಂದಾದ ಅನರ್ಥವು

ಅಯ್ಯಾ,

ಕಳೆದ ೧೧ನೇ ತಾ ವೃತ್ತಾಂತ ಪತ್ರಿಕೆಗೆ "ಯಾರುಬರ್ತಿ ಕೊಟ್ಟಿರೋ" ಇದು ಒಹು ಮಟ್ಟಿಗೆ ತಪ್ಪಾಗಿರುತ್ತದೆ ತುಮಕೂರು ಡಿಸ್ಟ್ರಿಕ್ಟ್ ನೆಲಮಂಗಲ ತಾಲ್ಲೂಕು ದೊಡ್ಡ ಕೌಲಂದೆ ಹೋಬಳಿ ಸೇರಿದ ಎಂಬುವ ಗ್ರಾಮಕ್ಕೆ ಇದೇ ಮಾರ್ಚ ತಾ ೩ನೇ ಬುಧವಾರ ಒಳಗ್ಗೆ ಸುಮಾರು ೧೧ ಘಂಟೆ ಸಮಯದಲ್ಲಿ ಮೊದಲು ಒಬ್ಬ ಯೋಗಸೊಬುವನ ಮನೆಗೆ ಆಕಸ್ಮಾತ್ ಅಗ್ನಿಯು ಪ್ರವೇಶಿಸಿ, ತರುವಾಯ ಒಂದೆರಡು ಮನೆಗಳನ್ನು ವಿನಾಯಿಸಿ ನೋಲ್ಲದ ಮಾರ್ಗಗಳನ್ನೂ ಮತ್ತು ಇತರರ ಮನೆಗಳ ಪೈಕಿ ಉಪ್ಪಲಿಗರ ೬ ಮನೆಗಳನ್ನೂ ಒಟ್ಟು ಸುಮಾರು ೯೦ ಮನೆಗಳು ಸುಟ್ಟು ಭಸ್ಮವಾದವು ಒಳಗಿನ ಸಾಮಾನುತಕ್ಕ ಪಾತ್ರೆಗಳು ಮೊದಲಾಗಿ ಬಟ್ಟೆ ಬರೆ, ತಿನ್ನತಕ್ಕ ಭತ್ತ, ಜೋಳ ಇತರ ಕಿರಾಣಿ ದಿನಸುಗಳಲ್ಲಿ ಒಂದು ಕಾಳನ್ನಾದರೂ ಹೊರಕ್ಕೆ ತೆಗೆದುಕೊಳ್ಳಲಿಕ್ಕಾದರೂ ಅವಕಾಶವಿಲ್ಲದ ರೀತಿ ಎಲ್ಲಾ ಸುಟ್ಟು ಬೂದಿಯಾಯಿತು ಅದೇ ದಿನ ಅಮಲ್ದಾರ್ ಮೆ|| ಧರ್ಮರಾಯರು ಈ ಸುದ್ದಿಯನ್ನು ಕೇಳಿ ತಾವೇ ಖುದ್ದು ದಯಮಾಡಿ ಕಷ್ಟನಷ್ಟದಲ್ಲಿ ಸಿಕ್ಕಿಕೊಂಡಿದ್ದ ಜನಗಳಿಗೆ ಒಹು ಮಟ್ಟಿಗೆ ಸಹಾಯ ಮಾಡಿ ಬಂದರು

ಪೋಲೀಸ್ ಸೂಪರಿಂಟೆಂಡೆಂಟರೂ ತಾಲ್ಲೂಕ್ ಇನ್ಸ್‌ಪೆಕ್ಟರೂ ದಯಮಾಡಿಸಿ ಅವರುಗಳಿಗೆಲ್ಲಾ ಧೈರ್ಯವನ್ನೂ ಆದರಣೆಯನ್ನೂ ಹಲವು ವಿಧವಾಗಿ ಹೇಳಿದ್ದೂ ಅಲ್ಲದೆ ತಾ ೭ನೇ ಭಾನುವಾರ ಡೆಪ್ಯುಟಿ ಕಮಿಷನರ್ ಮೆ ಕಾಂತರಾಜೆ ಅರಸಿನವರೂ, ಮೇಲ್ಕಂಡ ಮಹನೀಯರುಗಳೂ ಘಟನೆ ದಯಮಾಡಿಸಿ ಬಡ ನಿವಸಿಯರಿಗೂ, ಅನಾಥ ಮಕ್ಕಳಿಗೂ ಜೋಳ, ಸೀರೆ, ಬಟ್ಟೆ ಬರೆ, ದುಡ್ಡು ಸಹಾ ಕೊಟ್ಟು ತಮ್ಮ ಕನಿಕರವನ್ನು ಪ್ರಕಾರ ಪಡಿಸಿರುತ್ತಾರೆ ರಾಯಲ್ ಸರ್ಕಾರನವರೂ ಸ್ವಲ್ಪ ಮಟ್ಟಿಗೆ ತಮ್ಮ ಆಟದ ಮಟ್ಟುವಲ್ಲಿ ಸಹಾಯ ಕೊಟ್ಟಿರೆಂದು ನಂಬಿ ಇದೆ ಇನ್ನೂ ಸಹ ದರ್ಮ ಬುದ್ಧಿಯಿಂದು ಪಿ ಒಹುದು

ಜಂಗಲಿಗೆ ಹೋಗಿ ಮುಫತ್ತಾಗಿ ಮರ, ಮಂಡಿ, ಬಿದಿರು, ಗಳ, ಬೊಂಬು ಮೊದಲಾದವುಗಳನ್ನು ಕಡಿದು ತಂದುಕೊಳ್ಳುವಂತೆ ಹುಕುಂ ಕೊಟ್ಟಿರುತ್ತಾರೆ

ಇಷ್ಟಾದರೂ ಭಗವತ್ಕಟಾಕ್ಷದಿಂದ ಜನ ದನಕರುಗಳಿಗೆ ಯಾವ ನಷ್ಟವೂ ಸಂಭವಿಸದಿರುವುದನ್ನು ನೋಡಿ ತುಂಬಾ ಸಂತೋಷಪಡಬೇಕಾಗಿದೆ

ಈ ಬೆಂಕಿಯ ದೆಸೆಯಿಂದ ಒಟ್ಟು ಸುಮಾರು ೮ ಇಲ್ಲವೆ ೧೦ ಸಹಸ್ರ ರೂಪಾಯಿನ ಮಾಲುಗಳು ನಷ್ಟವಾಗಿವೆಯೆಂದು ಹೇಳುತ್ತಾರೆ ಇದು ಅಪಾರವಾದ ನಷ್ಟವೇ ಸರಿ

ಆ ಜನಗಳ ಅನನುಕೂಲಗಳನ್ನೂ, ನಿರ್ಭಾಗ್ಯದೆಸೆಯನ್ನೂ, ಸಂಕಟವನ್ನೂ ನೋಡಿ ಹೇಳತೀರದು ಒಬ್ಬನ ಮನೆಯಲ್ಲಾದರೂ ಸ್ವಲ್ಪ ಗೆಲುವೂ ಇಲ್ಲವು ಮೂಢರಾದ ಈ ಬಡ ಜನಗಳು ಇನ್ನು ಮುಂದೆ ಕಟ್ಟತಕ್ಕ ಮನೆಗಳನ್ನು ಮಧ್ಯೆ ಮಧ್ಯೆ ಬೀದಿಗಳನ್ನು ಬಿಟ್ಟು, ಸಾಲುಸಾಲಾಗಿ ಈಗ ಸ್ವಲ್ಪ ಹೆಚ್ಚು ಖರ್ಚು ಮುಟ್ಟಿಸಿ ಹೆಂಚಿನ ಮನೆಗಳನ್ನು ಕಟ್ಟಿಕೊಳ್ಳುವಂತೆ ಸಹಾಯಮಾಡಿ ಬುದ್ಧಿವಾದಗಳನ್ನು ಹೇಳಿದರೆ ಪ್ರಾಯಶಃ ಪದೇ ಪದೇ ಸಂಭವಿಸುವ ಈ ವಿಧವಾದ ಬೆಂಕಿಯ ಹಾವಳಿಯನ್ನು ತಪ್ಪಿಸಿಕೊಳ್ಳಬಹುದಾಗಿದೆ ನಾನು ೯|| ಮೈಲಿ ದೂರದಲ್ಲಿದ್ದರೂ ಅದೇ ದಿನ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿರುತ್ತೇನೆ

ಬಡ ಜನರ ಹಿತಚಿಂತಕ

ಇಂಡಿಯಾ ದೇಶದ ವೃತ್ತಾಂತಗಳು.

ಇಂಗ್ಲಾಂಡಿಗೆ ಹೋಗಿರುವ ಲಾಲಾ ಲಾಜಪತ್ ರಾಯಿಯವರು ಇನ್ನೂ ಕೆಲವು ವಾರಗಳ ತರುವಾಯ ವಾಪಸು ಹಿಂದುಸ್ಥಾನಕ್ಕೆ ಬರುವವರಾಗಿದಾರೆ.

ಹೈದರಾಬಾದ್ ಸಂಸ್ಥಾನದ ನೈಜಾಮರವರು ಕಳೆದ ಗುರುವಾರ ಬೊಂಬಾಯಿಗೆ ಹಿಂತಿರಿಗಿ ಪ್ರಯಾಣಮಾಡಿ, ಗುಲ್ಬರ್ಗಾ ಪಟ್ಟಣವನ್ನು ತಲಪಿದರು.

ಕ್ಷಾಮದ ದೆಸೆಯಿಂದ ಸಂಯುಕ್ತ ಆಧಿಪತ್ಯಗಳಲ್ಲಿ ೩೦,೦೦೦ ಪ್ರಜೆಗಳು, ಬಂಗಾಳದಲ್ಲಿ ೭೩,೦೦೦ ಪ್ರಜೆಗಳೂ ಸರ್ಕಾರದವರ ಪೋಷಣೆಯಲ್ಲಿರುತ್ತಾರೆಂದು ತಿಳಿಯುವುದು

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಸೂರತ್ತಿನಲ್ಲಿದ್ದ ಮ॥ ಮಣಿಭಾಯಿ ಎಂಬವರನ್ನು ತಮ್ಮ ಸಂಸ್ಥಾನದ ದಿವಾನರನ್ನಾಗಿ ನೇಮಕವಾಡಿಕೊಂಡಿದಾರೆ

ಕಲ್ಕತ್ತೆಯಲ್ಲಿ ಬಾಬು ಅಶುತೋಷ್ ಬಿಶ್ವಾಸ್ ಎಂಬ ಗವರ್ನ್‌ಮೆಂಟ್ ವಕೀಲನನ್ನು ಕೊಂದುಹಾಕಿದ ಚಾರುಚಂದ್ರ ಬೋಸ್ ಎಂಬವನನ್ನು ನಾಳೆಯ ದಿನ ಗಲ್ಲಿಗೆ ಹಾಕುವಂತೆ ಗೊತ್ತಾಗಿದೆ

ಸೇಲಂ ಡಿಸ್ಟ್ರಿಕ್ಟಿನಲ್ಲಿ ಮೊರಪ್ಪೂರು ಧರ್ಮಪುರಿಯ ರೈಲ್ ರಸ್ತೆಯನ್ನು ಹೊಸೂರಿನ ವರೆಗೆ ಬಡಾವಣೆ ಮಾಡಬೇಕೆಂದು ತೀರ್ಮಾನವಾಗಿದೆ. ಇದಕ್ಕಾಗಿ ೫ ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿರುವುದು

ಅಫ್ಘಾನಿಸ್ಥಾನದ ಅಮೀರರವರು ಕಳೆದ ತಿಂಗಳು ಜಲಾಲಾಬಾದಿನಲ್ಲಿ ಮುಕ್ಕಾಂ ಮಾಡಿದ್ದ ವೇಳೆ ಇಂಡಿಯಾ ಗವರ್ನ್‌ಮೆಂಟಿನಿಂದ ತಮಗೆ ಸಲ್ಲಬೇಕಾಗಿದ್ದ ೨೦-೩೦ ಲಕ್ಷ ರೂಪಾಯನ್ನು ನಗದಾಗಿ ತರಿಸಿಕೊಂಡಿರುತ್ತಾರೆ

ಹುಬ್ಬಳ್ಳಿಯಲ್ಲಿ ಪಂಡಾರ್ ಎಂಬ ಜನರಿಗೂ ಆರ್ಯ ಸಮಾಜದವರಿಗೂ ಕ್ಷಿಪ್ರವಾಗಿ ಕಡಿದಾಟಗಳು ನಡೆದು, ಎರಡು ಕಡೆಯಲ್ಲೂ ಕೆಲವರಿಗೆ ಗಾಯಗಳಾದವು ಪೋಲೀಸಿನವರು ಹೋಗಿ ಜಗಳವಾಡಿದವರನ್ನು ದಸ್ತಗಿರಿ ಮಾಡಿದಾರೆ

ಬೊಂಬಾಯಿ ಗವರ್ನರರವರು ಮುಂದಿನ ಮೇ ತಿಂಗಳಲ್ಲಿ ಧಾರವಾಡಕ್ಕೆ ಹೋಗಿ, ಒಂದು ವಾರದ ತನಕ ಇದ್ದು, ಆ ಪಟ್ಟಣಕ್ಕೆ ಒಳ್ಳೇ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಯನ್ನು ಪ್ರಾರಂಭಿಸುವರೆಂದು ಪ್ರಕಟವಾಗಿದೆ

ರಂಗೂನ್ ಪಟ್ಟಣದಲ್ಲಿ ಹಡಗುಗಳ ಸರಕು ಮುಂತಾದದ್ದನ್ನು ಇಳಿಸಲು ಹೆಚ್ಚು ಜಹಜುಗಳು ನಿಲ್ಲುವುದಕ್ಕೂ ಸ್ಥಳವನ್ನು ಕೊಡುಕೊಂಡು ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸರ್ಕಾರದವರು ೭॥ ಲಕ್ಷ ರೂಪಾಯಿಗಳನ್ನು ಸಾಲ ಮಂಜೂರು ಪ್ರಕಟಿಸಿದಾರೆ

ನಾಸಿಕ್ ಪಟ್ಟಣದಲ್ಲಿ ಗಣೇಶ ದಾಮೋದರ ಸಾವರ್ಕರ್ ಎಂಬ ಪುಸ್ತಕ ಪ್ರಕಾಶಕನು ಪದ್ಯಗಳ ಬಾಪಿನಲ್ಲಿ ರಾಜದ್ರೋಹಕರವಾದ ವಿಷಯಗಳನ್ನು ಪ್ರಕಟವಾಗಿ ಬರೆದು ಪ್ರಕಟಿಸಿದನೆಂದು ಮೊಕದ್ದಮೆ ಬಂದಿದೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಸುತ್ತಿದಾರೆ.

ಕೊಲ್ಹಾಪುರ ಸಂಸ್ಥಾನದ ಛತ್ರಪತಿ ಮಹಾರಾಜರವರು ಹೊಲೆಯರ ಮಕ್ಕಳಿಗಾಗಿ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸಿಕೊಟ್ಟಿದಾರೆ ಈ ರೀತಿ ಕೀಳು ಜಾತಿಯ ಪ್ರಜೆಗಳನ್ನು ಅಭಿವೃದ್ಧಿಗೆ ತರಬೇಕೆಂದು ಮಹಾರಾಜರವರು ಸಾಹಸ ಪಡುತ್ತಿರುವುದು ತುಂಬಾ ಸ್ತೋತ್ರಾರ್ಹವಾಗಿದೆ

ಆರ್ಸ ಜಹಗೀರ್ದಾರರು ತಮ್ಮ ಶೆಟ್ಟಿವಿಜಯ ನಗರದಲ್ಲಿ ಮುಂದಿನ ತಿಂಗಳು ೧೫ ಕ್ಕಿರಲ್ಲಿ ವ್ಯವಸಾಯ ವಸ್ತುಪ್ರದರ್ಶನೋತ್ಸವವನ್ನು ನಡೆಸುವವರಾಗಿದ್ದಾರೆ ಇಷ್ಟವುಳ್ಳವರು ಈ ಪ್ರದರ್ಶನದ ಸೆಕ್ರೆಟರಿಯವರ ಹೆಸರಿಗೆ ಪ್ರದರ್ಶನ ವಸ್ತುಗಳನ್ನು ಈ ತಿಂಗಳ ಆಖೈರಿನೊಳಗಾಗಿ ಕಳುಹಿಸಬಹುದಾಗಿದೆ

ಕಲ್ಕತ್ತಾ ಪಟ್ಟಣದಲ್ಲಿ ದೇಶೀಯ ವಿದ್ಯಾಪ್ರೋತ್ಸಾಹಕ ಸಮಾಜಕ್ಕೆ ಒಂದು ಮನೆಯನ್ನು ಕಟ್ಟಿಸಬೇಕೆಂದು ಚಂದಾ ಕಲೆಹಾಕುತಿದಾರೆ ಈ ಫಂಡಿಗೆ ಗೌರಿಪುರದ ಬಾಬು ವ್ರಜೇಂದ್ರ ಕಿಶೋರ್ ರಾಯಿ ಚೌಧ್ರಿ ಎಂಬಾತನು ೨೫,೦೦೦ ರೂಪಾಯಿ ಚಂದಾ ಕೊಟ್ಟಿರುತ್ತಾನೆಂದು ಪ್ರಕಟವಾಗಿದೆ

ಅಫ್ಘಾನಿಸ್ಥಾನದಲ್ಲಿ ದಾರೊಂಟಾ ಎಂಬ ರಾಜ್ಯದಲ್ಲಿ ಕಾಬೂಲ್ ನದಿಗೆ ಒಂದು ದೊಡ್ಡ ಸೇತುವೆ ಕಟ್ಟಲ್ಪಟ್ಟಾಯಿತು ಕಲ್ಕತ್ತಾ ಪಟ್ಟಣದ ಬರ್ನ್ ಎಂಬ ಕಂಪೆನಿಯವರು ಈ ಸೇತುವೆಯ ಕಂಟ್ರಾಕ್ಟು ವಹಿಸಿಕೊಂಡು ಕಟ್ಟಿದರು ಮುಂದಿನ ವಾರ ಅಮೀರರವರು ಈ ಸೇತುವೆಯನ್ನು ಪ್ರತಿಷ್ಠೆ ಮಾಡುತ್ತಾರೆ.

ಬುಂದೇಲಖಂಡಕ್ಕೆ ಸೇರಿದ ಪನ್ನಾ ಸಂಸ್ಥಾನದ ಕುಮಾರ ವೀರೇಂದ್ರ ಸಿಂಹನವರು ವಾರನ್ ಹೇಸ್ಟಿಂಗ್ಸ್ ಎಂಬ ಗವರ್ನರ್ ಜನರಲ್‌ರವರ ಚಿತ್ರವನ್ನು ವೈಸ್‌ರಾಯಿಯವರಿಗೆ ಒಪ್ಪಿಸಿದರು ಅದನ್ನು ಸುಮಾರು ೧೦೦ ವರ್ಷಗಳ ಹಿಂದೆ ಹಾಪ್ನರ್ ಎಂಬ ಚಿತ್ರಗಾರನು ಬಹು ಸುಂದರವಾಗಿ ಬರೆದಿದ್ದಾನೆ

ಪ್ರಿನ್ಸ್ ಆಫ್ ವೇಲ್ಸ್‌ರವರು ಕಳೆದ ೧೯೦೫ನೇ ಅಕ್ಟೋಬರ್ ತಿಂಗಳು ಇಂದೋರ್ ಸಂಸ್ಥಾನಕ್ಕೆ ದಯಮಾಡಿದ್ದುದರ ಜ್ಞಾಪಕಾರ್ಥವಾಗಿ ಮಹಾರಾಜರು ಅವರ ಹೆಸರಿನ ಮೇಲೆ ನ್ಯಾಯಸ್ಥಾನಗಳ ಭಾರೀ ಕಟ್ಟಡವನ್ನು ಕಟ್ಟಿಸಿದರು ಕಳೆದ ವಾರ ಆ ಸಂಸ್ಥಾನದ ಮಹಾರಾಜಾ ತುಕೋಜಿರಾವ್ ಹೋಳ್ಕರ್‌ಯವರೂ, ಬ್ರಿಟಿಷ್ ರೆಸಿಡೆಂಟರೂ, ದಿವಾನರಾದ ರಾಯಬಹದ್ದೂರ್ ನಾನಕ್ ಚಂದ್‌ರವರೂ ಹಾಜರಾಗಿದ್ದು ಕಟ್ಟಡವನ್ನು ಪ್ರತಿಷ್ಠೆಮಾಡಿದರು.

ಜಾಂಜಿಬಾರಿನಿಂದ ಒಬ್ಬ ವರ್ತಕನು ಕಚ್ಛವಾಡದ ವರ್ತಕನಿಗೆ ಒಂದು ಥಾಂಗಿಯನ್ನು ಅಂಚೆಯ ಮೇಲೆ ಕಳುಹಿಸಿದನು ರಾಜಕೋಟೆಯ ಅಂಚೆ ಕಛೇರಿಯಲ್ಲಿ ಒಬ್ಬ ಗುಮಾಸ್ತೆಯು ಆ ಥಾಂಗಿಯನ್ನು ಒಡೆದು ಅದರಲ್ಲಿದ್ದ ಒಂದು ಚಿನ್ನದ ಬಳೆಯನ್ನು ಅಪಹರಿಸಿದನು ಸೆಷನ್ಸ್ ಜಡ್ಜರು ಅವನಿಗೆ ಎರಡು ವರುಷ ಕಠಿಣಸಜಾ ವಿಧಿಸಿರುತ್ತಾರೆ.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಸಾರಾಲ್ ಎಂಬ ಡಿಸ್ಟ್ರಿಕ್ಟಿನ ಜಮೀನ್ದಾರರಾದ ಬಾಬು ಯೋಗೇಂದ್ರನಾಥ ರಾಯಿಯವರ ಬಳಿ ನಗದಿ ಗುಮಾಸ್ತೆಯಾಗಿದ್ದ ಇಂದ್ರಭೂಷಣ ಮಿತ್ರನೆಂಬವನು ತನ್ನ ಯಜಮಾನನ ಪೆಟ್ಟಿಗೆಯಲ್ಲಿದ್ದ ಎರಡು ಲಕ್ಷ ರೂಪಾಯಿಗಿಂತಲೂ ಹೆಚ್ಚು ಕರೆನ್ಸಿ ನೋಟುಗಳನ್ನು ಕಳವು ಮಾಡಿದ್ದರಿಂದ ಅವನಿಗೆ ಏಳು ವರುಷಗಳ ಕಠಿಣಸಜಾ ವಿಧಿಸಿರುತ್ತಾರೆ

ನಾಸಿಕ್ ಪಟ್ಟಣದಲ್ಲಿ ವಾಮನ ಸಖಾರಾಂ ಖಾರೇ ಎಂಬೊಬ್ಬ ವಕೀಲನು ಪಬ್ಲಿಕ್ ಸಭೆಗಳಲ್ಲಿ ರಾಜದ್ರೋಹಕರವಾದ ಉಪನ್ಯಾಸಗಳನ್ನು ಮಾಡುತ್ತಾ ಬಂದನು ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆತನನ್ನು ವಿಚಾರಿಸಿ ಮಾಡಿ, ಒಂದು ವರುಷ ನೇಕ್‌ಚಾಲಿಗೆ ೨,೦೦೦ ರೂಪಾಯಿನ ಮುಚ್ಚಳಿಕೆ ಬರೆಸಿಕೊಂಡದ್ದಲ್ಲದೆ, ೧,೦೦೦ ರೂಪಾಯಿನ ಇಬ್ಬರನ್ನು ಜಾಮೀನ್ ತೆಗೆದುಕೊಂಡು ಬಿಟ್ಟಿದಾರೆ

ಬೊಂಬಾಯಿ ಪಟ್ಟಣದ ಮಾಂಡ್ವಿ ಎಂಬ ಭಾಗದಲ್ಲಿ ಥೋಂಗ್ರಿ ಬೀದಿಯಲ್ಲಿ ಛಾಪುಪುರ ಸಂಸ್ಥಾನದ ಸರಕು ತುಂಬಿದ್ದ ಕಟ್ಟಡದಲ್ಲಿ ಬೆಂಕಿ ಬಿದ್ದು ಸುಮಾರು ೨೦,೦೦೦ ರೂಪಾಯಿ ನಷ್ಟವಾಯಿತು. ಈ ಬೆಂಕಿಯ ಜ್ವಾಲೆಗಳು ಸುತ್ತಲೂ ವ್ಯಾಪನೆಯಾಗಿ ಪ್ರಜೆಗಳ ಮತ್ತು ಸಾಹುಕಾರರ ಕೆಲವು ಮನೆಮಠಗಳು ಸುಟ್ಟುಹೋದವು ಅವೆಲ್ಲಾ ೨೫,೦೦೦ ರೂಪಾಯಿನ ನಷ್ಟವಾಗಬಹುದೆಂದು ತಿಳಿಯುವುದು.

ಇಂಡಿಯಾ ಗವರ್ನ್‌ಮೆಂಟಿನವರು ಪ್ಯಾಸ್ ಮಾಡಿರುವ ಪಂಚಾಯಿತಿ ಕಾನೂನನ್ನು ದೆಹಲಿ, ಅಮೃತಸರ, ಲಾಹೋರ್ ಪಟ್ಟಣಗಳಲ್ಲಿ ಜಾರಿಗೆ ಬರುವಂತೆ ಮಾಡಬೇಕೆಂದು ಪಂಜಾಬಿನ ವರ್ತಕ ಮಂಡಲಿಯವರು ಗವರ್ನ್‌ಮೆಂಟಿನವರನ್ನು ಕೇಳಿಕೊಂಡಿದಾರೆ. ವ್ಯಾಪಾರಕ್ಕೆ ಅಂದರೆ ಲೇವಾದೇವಿಯ ಸಂಬಂಧಪಟ್ಟ ವ್ಯಾಜ್ಯಗಳನ್ನು ಕಕ್ಷಿಗಾರರು ಒಪ್ಪಿದಲ್ಲಿ ಪಂಚಾಯಿತರೇ ಕುಳಿತು ಇತ್ಯರ್ಥಪಡಿಸಬಹುದು ಎಂಬುವುದೇ ಆ ಕಾನೂನಿನ ಉದ್ದೇಶವಾಗಿದೆ

೧೯೦೯ ೧೦ನೇ ಸಾಲಿನಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ರೈಲ್ವೆ ಬಡಾವಣೆಯ ಕಾಮಗಾರಿಗಳಿಗೆ ೧೫ ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಮೊದಲು ನಿಷ್ಕರ್ಷೆಯಾಗಿತ್ತು ಆದರೆ ಕಳೆದ ವರುಷದ ರೈಲ್ವೆ ಉತ್ಪತ್ತಿಯು ಅಷ್ಟು ತೃಪ್ತಿಕರವಾಗಿಲ್ಲದಿರುವುದನ್ನು ನೋಡಿ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಮುಂದಿನ ವರುಷ ರೈಲ್ವೆ ಬಡಾವಣೆಗೆ ೧೫ ಕೋಟಿ ರೂಪಾಯಿ ಮಾತ್ರ ವಿನಿಯೋಗಿಸಬೇಕೆಂದು ಅಪ್ಪಣೆ ಕೊಡಿಸಿರುತ್ತಾರೆ

ಪ್ಲೇಗ್ ಉಪದ್ರವು ಹಿಂದುಸ್ಥಾನದಲ್ಲಿ ವಾರವಾರಕ್ಕೆ ಹೆಚ್ಚುತ್ತಾ ಇದೆ ಕಳೆದ ವಾರ ೪,೧೯೯ ಜನರು ಈ ರೋಗದಲ್ಲಿ ಕಾಲವಾದರು ಈ ಪೈಕಿ ಪಂಜಾಬ್ ೮೧೧, ಬೊಂಬಾಯಿ ೭೯೯, ಸಂಯುಕ್ತ ಆಧಿಪತ್ಯಗಳು ೭೮೪, ಬಂಗಾಳಾ ೪೬೨, ಮಧ್ಯಪ್ರಾಂತ್ಯಗಳು ೪೬೧ ರಾಜಪುಟಾನಾ ೨೬೪, ಬರ್ಮಾ ೪೯೧ (ಮಾಂಡಲೇ ಪಟ್ಟಣ ಒಂದರಲ್ಲೇ ೨೭೭), ಮೈಸೂರು ೮೭, ಮಧ್ಯ ಇಂಡಿಯಾ ೩೭, ಹೈದರಾಬಾದ್ ೫೬, ಮದರಾಸ್ ಆಧಿಪತ್ಯ ೨೬, ಈ ರೀತಿ ಮರಣಗಳಾದವು

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಚಾರಾಪಾರ್ ಎಂಬ ರಾಜ್ಯದಲ್ಲಿ ಗವರ್ನ್‌ಮೆಂಟಿನವರ ಮದ್ದಿನ ಮನೆಯೊಳಗಿಂದ ಯಾರೋ ಸುಮಾರು ೧೬೦ ಪೌಂಡು ತೂಕದಷ್ಟು ಮದ್ದನ್ನೂ, ೬೦ ಪಿಂಜ ಸುರಬತ್ತಿಯನ್ನೂ ಅಪಹರಿಸಿಕೊಂಡುಹೋದರು ಈ ವಿಚಾರವು ಆ ಪ್ರಾಂತ್ಯದಲ್ಲೆಲ್ಲಾ ತುಂಬಾ ಗಾಬರಿಯನ್ನುಂಟುಮಾಡಿದೆ ಕಲ್ಕತ್ತಾ ಮೊದಲಾದ ಪ್ರದೇಶಗಳಲ್ಲಿ ಪೋಲೀಸಿನವರು ಬಹು ಜಾಗರೂಕತೆಯಿಂದ ಬಂದೋಬಸ್ತು ಮಾಡಿಕೊಳ್ಳಬೇಕೆಂದು ಹುಕುಂ ಕೊಟ್ಟಿದಾರೆ ಇದುವರೆಗೂ ಈ ಕಳುವಿನ ಸುಳುವೇ ಪತ್ತೆ ಆಗದೆ ಇರುವುದು ಪರಮಾಶ್ಚರ್ಯಕರವಾಗಿರುವುದು

ಕೆರೋಸಿನ್ ಎಣ್ಣೆ (ಸೀಮೆಎಣ್ಣೆ) ಯನ್ನು ಶುದ್ಧಿಮಾಡುವುದಕ್ಕೆ ಸಲ್ಫ್ಯೂರಿಕ್ ಆಸಿಡ್ (ಗಂಧಕ ದ್ರಾವಕ) ವನ್ನು ಬಹಳವಾಗಿ ಉಪಯೋಗಿಸುತ್ತಾರೆ. ಬರ್ಮಾ ದೇಶದ ಎಣ್ಣೆಯ ಕಂಪೆನಿಯವರು ಈ ದ್ರಾವಕವನ್ನು ವರುಷಕ್ಕೆ ೨,೦೦೦ ಟನ್‌ಗಳಷ್ಟು ಸೀಮೆಯಿಂದ ತರಿಸಿಕೊಳ್ಳುತ್ತಿದಾರೆ ಈಗ ಈ ದ್ರಾವಕವನ್ನು ಬರ್ಮಾದಲ್ಲೇ ತಯಾರುಮಾಡಿಕೊಳ್ಳುವುದಕ್ಕೋಸ್ಕರ ಹೊಸದಾಗಿ ಒಂದು ಕಂಪನಿಯನ್ನು ಸ್ಥಾಪಿಸಿರುವರು ಈ ಕಂಪನಿಯು ಮೂಲಧನವಾದ ೫ ಲಕ್ಷ ರೂಪಾಯನ್ನು ಷೇರುಗಳ ಮೂಲಕ ಕೂಡಿಸಿ, ಇಷ್ಟರಲ್ಲೇ ಕಾರ್ಖಾನೆಯನ್ನು ಸ್ಥಾಪಿಸುವವರಾಗಿದಾರೆ

ಕಲ್ಕತ್ತಾ ಪಟ್ಟಣದಲ್ಲಿ ಬರ್ದವಾನ್ ಮಹಾರಾಜರವರು ಒಂದು ಮೋಟಾರ್ ಗಾಡಿಯನ್ನು ಹೊಸದಾಗಿ ಕ್ರಯಕ್ಕೆ ತೆಗೆದುಕೊಂಡು, ಲೈಸನ್ಸು ತೆಗೆದುಕೊಳ್ಳದೇನೇ ಬೀದಿಗಳಲ್ಲಿ ಸವಾರಿ ಮಾಡಿಕೊಂಡು ಹೋದರೆಂದು ಮೊಕದ್ದಮೆ ಆಯಿತು ಮ್ಯಾಜಿಸ್ಟ್ರೇಟರು ಮಹಾರಾಜರನ್ನು ದರ್ಯಾಫ್ತು ಮಾಡಿ, ಅವರಿಗೆ ಎಚ್ಚರಿಕೆ ಹೇಳಿ ಬಿಟ್ಟುಬಿಟ್ಟರು ಹಾಗೆಯೇ ಮ್ಯಾಜಿಸ್ಟ್ರೇಟರು ಟಿಕ್ಕಾರಿ ಮತ್ತು ಕೂಚ್‌ಬಿಹಾರ್ ಸಂಸ್ಥಾನಗಳ ಮಹಾರಾಜರುಗಳಿಗೂ ಎಚ್ಚರಿಕೆ ಕೊಟ್ಟಿರುವುದಾಗಿ ತಿಳಿದು ಬಂದಿದೆ

ಗುಂಟೂರು ಜಿಲ್ಲೆಗೆ ಸೇರಿದ ಕೋಟಪ್ಪಕೊಂಡದಲ್ಲಿ ಜಾತ್ರೆಯಾದಾಗ್ಗೆ ಗಾಡಿಯವರಿಗೂ ಪೋಲೀಸಿನವರಿಗೂ ಮಾರಾಮಾರಿ ನಡೆದು ದೊಂಬಿಯಾಯಿತಷ್ಟೆ ಈ ಜಗಳದ ಪೂರ್ವೋತ್ತರವನ್ನು ಕುರಿತು ತನಿಖೆಮಾಡುವುದಕ್ಕೆ ಮದರಾಸ್ ಗವರ್ನ್‌ಮೆಂಟಿನವರು ಮಿ ಹಾರ್ನೆ ಎಂಬ ಅಧಿಕಾರಿಯನ್ನು ಕಳೆದ ವಾರ ಅಲ್ಲಿಗೆ ಕಳುಹಿಸಿಕೊಟ್ಟಿದಾರೆ ಇದಲ್ಲದೆ ಅಲ್ಲಿನ ಡಿವಿಜನ್ ಆಫಿಸರಾದ ಮೆ॥ ಪಿ ಕೇಶಾರಾವ್‌ಯವರನ್ನೂ, ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮೆ॥ ಎ. ಸುಬ್ಬರಾಯರವರನ್ನೂ, ನರಸರಾಯಪೇಟೆ ತಾಲ್ಲೂಕ್ ಮ್ಯಾಜಿಸ್ಟ್ರೇಟರನ್ನೂ ಸರ್ಕಾರದವರು ಸಸ್ಪೆಂಡ್ ಮಾಡಿರುವರು.

ಮದರಾಸ್ ಪಟ್ಟಣದ ಪುರಸವಾಕಂ ಎಂಬೊ ಶಾಂತಿದ ಸಂಘನಿಧಿ ಎಂಬ ಬ್ಯಾಂಕಿನವರು ನಗಗಳನ್ನು ಅಡವಿಟ್ಟುಕೊಂಡು ಸಾಲಕೊಡುತ್ತಿದ್ದರು ಆ ನಗಗಳು ಇಟ್ಟಿದ್ದ ಕೊಠಡಿಗೆ ಐದು ಮಂದಿ ಡೈರೆಕ್ಟರುಗಳೂ ಐದು ಬೀಗಗಳನ್ನು ಹಾಕಿಕೊಂಡು ಬೀಗದ ಕೈಗಳನ್ನು ತಮ್ಮ ತಮ್ಮ ಬಳಿ ಇಟ್ಟುಕೊಂಡಿರುವುದು ವಾಡಿಕೆಯಾಗಿತ್ತು. ಬಹು ಕಾಲದಿಂದ ಆ ಐದು ಮಂದಿಯೂ ಒಟ್ಟಿಗೆ ಸೇರದೆ ಬೀಗ ಮುದ್ರೆಗಳು ತೆಗೆಯುವುದಕ್ಕೆ ಮಾರ್ಗವಿರಲಿಲ್ಲ. ಕಳೆದ ವಾರ ಅಡವಿದ್ದ ಕೆಲವು ನಗಗಳನ್ನು ವಾಪಸು ಕೊಡುವುದಕ್ಕಾಗಿ ಆ ಕೊಠಡಿಯ ಬಾಗಿಲನ್ನು ತೆಗೆಸಿದ್ದಲ್ಲದೆ ಅಲ್ಲಿಟ್ಟಿದ್ದ ನಗಗಳನ್ನೆಲ್ಲಾ ತನಿಖೆ ಮಾಡಿಸಿದರು. ಆಗ ೩೦,೦೦೦ ರೂಪಾಯಿನ ಜವಾಹಿರಿಯು ಕಳುವಾಗಿದೆ ಎಂದು ತಿಳಿಯಿತು ಪೋಲೀಸಿಗೆ ವರ್ತಮಾನ ಹೋಗಿ ಅವರು ಪತ್ತೆಹಚ್ಚುವುದು ನಡೆಸುತ್ತಿದಾರೆ.

ಪುದುಕೋಟೆಯ ರಾಜರ ದೇಹಸ್ಥಿತಿಯು ಅನುಕೂಲವಾಗಿಲ್ಲದ್ದರಿಂದ ಡಾಕ್ಟರುಗಳು ಅವರು ಸೀಮೆಗೆ ಹೋಗಿ ಕೆಲವು ದೀರ್ಘ ಕಾಲದ ವರೆಗೆ ಇದ್ದು ಬರಬೇಕೆಂದು ಹೇಳಿದರು ಅದೇ ರೀತಿ ಕಳೆದ ವಾರ ರಾಜರು ಪ್ರಯಾಣಮಾಡಿರುತ್ತಾರೆ ಇದುವರೆಗೆ ಸಂಸ್ಥಾನದಲ್ಲಿ ದಿವಾನ್‌ರಾಗಿದ್ದ ದಿವಾನ್ ಬಹದೂರ್ ವೆಂಕಟರಮಣದಾಸ್ ನಾಯುಡು ಯವರಿಗೆ ಪೆನ್‌ಷನ್ ಕೊಟ್ಟು ಕೆಲಸ ಬಿಡಿಸಿದರು ರಾಜರು ದೀರ್ಘಕಾಲ ವಾಪಸು ಬರುವವರಾಗಿಲ್ಲದ್ದರಿಂದ ಪುದುಕೋಟೆ ಸಂಸ್ಥಾನದ ಕಾರುಬಾರುಗಳನ್ನು ನೋಡಿಕೊಳ್ಳುವುದಕ್ಕೆ ಒಂದು ರೀಜನ್ಸಿ ಕೌನ್‌ಸಿಲ್ಲನ್ನು ಏರ್ಪಾಡು ಮಾಡಿದಾರೆ ಈ ಕೌನ್‌ಸಿಲ್‌ಗೆ ಮೆ॥ ಜಿ ಟಿ ಎಚ್ ಬ್ರಾಕನ್ ಯವರೂ, ರಾಜರ ಸಹೋದರರಾದ ದೊರೈ ರಾಜರೂ, ಆ ಸಂಸ್ಥಾನದ ಚೀಫ್ ಜಡ್ಜಿ ಯವರೂ ಮೆಂಬರುಗಳಾಗಿದಾರೆ ಇವರು ಐಕಮತ್ಯದಿಂದ ಕಾರ್ಯಗಳನ್ನು ನಡಿಸುತ್ತಾ ಬರುವುದಾದರೆ ಸಂಸ್ಥಾನವು ತುಂಬಾ ಅಭಿವೃದ್ಧಿ ಹೊಂದೀತೆನ್ನುವುದಕ್ಕೆ ಸಂಶಯವಿಲ್ಲ.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—" ನನಗೆ ದಿನಕ್ಕೆ ಒಂದು ಸಲವಾದರೂ ಶೌಚಪ್ರವೃತ್ತಿಯಾಗುತ್ತಿದೆಯೇ ? " ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಶೌಚಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು



(೧೨ ಆಣೆ ಬುಡ್ಡಿ ಪರಿಮಾಣ.)

ಮಲಬಂಧನೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಒಹಳ ಹೊತ್ತು ತಡೆಯಲ್ಪಟ್ಟು ನಿಜವಾಗಿ, ನಂಜಾಗುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇಳ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ.—ಪಿತ್ತಕೋಶ ರೋಗ ; ಪಿತ್ತ ; ಪಿತ್ತಜ್ವರ ; ಅಜೀರ್ಣ , ಅಗ್ನಿಮಾಂದ್ಯ ; ಗಾಬರಿ , ಅಶಕ್ತಿ , ಎದೆಯು ತಲ್ಲಣಿಸುವುದು ; ತಲೆತಿರುಗುವುದು , ತಲೆನೋವು , ಹೊಟ್ಟೆಯುಬ್ಬರ , ಹುಂತೇಗಿನ ಹೊಟ್ಟೆನೋವು ; ಹೆಂಗಸರ ವ್ಯಾಧಿಗಳು , ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [69-29]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು. ಅಥವಾ, ಡೋನ್ಸ್, ಪಿ. ಒ ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುದು.

ನೋಡಿರಿ. " ಪ್ರೋತ್ಸಾಹ ಕೊಡಿರಿ." ತರಿಸಿರಿ.

94 17

ಈಗ ತಾನೇ ಸೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ ೫,೦೦೦ ಹಾಸನ್ ಟೋಪಿ ಹೊಲಿಯುವ ಸುಪೀರಿಯರ್ ಫ್ಲಾಲನ್ ದಾರ

೧೨ ಟೋಪಿಯಾಗುವ ಫ್ಲಾಸ್ ಬಂಡಲ್ ೧ಕ್ಕೆ ೩-೭-೦, ೧ ಟೋಪಿಯಾಗುವ ಫ್ಲಾಸ್ ದಾರಕ್ಕೆ ೦-೮-೦ ಹಾಸನ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ಕ್ಕೆ ೦-೧-೬, ೦-೨-೦ ೩೦ ಇಂಚಿನ ದೊಡ್ಡ ಸೈಜು ಬನಿಯನ್ ೧ಕ್ಕೆ ೦-೮-೦, ಮಾಲಿ ಪೋಸ್ಟು ಕಾರ್ಡು, ದಬ್ಬಲ್ ಕಲರ್, ೧,೦೦೦ ಕ್ಕೆ ೧-೮-೦; ಸುಗಂಧ ಸಿಂಜೇಸೀ, ಭೃಂಗಾಮಲಕ ತೈಲ, ಸೀಸೆ ೧ಕ್ಕೆ ೦-೮-೦, ಮೆಂತ್ಯಾಲ್, ತಲೆನೋವಿಗೆ ಅನುಕೂಲವಾದ ಔಷಧ, ಡಬ್ಬಿ೧ಕ್ಕೆ ೦-೩-೦ ೩೦೦ ಮಾತ್ರೆಗಳು ಇರುವ ಕ್ವಿನೈನ್ ಪರಿಮಾಣದ ಕಾಂಚೀಲಿಸ್ತ್ರನು, ಪ್ಯಾಕೆಟ್ ೧ಕ್ಕೆ ೦-೪-೦ ರಿಬ್ಬನ್ ಕೈವಸ್ತ್ರಗಳು (ಚಂದವಾದದ್ದು) ೧ಕ್ಕೆ ೦-೨-೦, ಡಬ್‌ಕೊಫ್ ನ್ಯಾಯಿಲ್ ಸಾಬು ೧ಕ್ಕೆ ೪-೦-೦, ಕೊಂಬಿನ ಬಾಚಣಿಗೆಗಳು, ದೊಡ್ಡ ಸೈಜು, ಡಜನ್ ೧ಕ್ಕೆ ೧೧-೦-೦, ಗುಟಕಣವಾದ ಮಲಾಮು ಡಬ್ಬಿ ೧ಕ್ಕೆ ೦-೬-೦, ೨೮ ಇಂಗ್ಲೀಷು ಅಕ್ಷರಗಳಿರುವ ಪೆಟ್ಟಿಗೆ ೧ಕ್ಕೆ ೨-೮-೦ ಪರಿಮಳ ನಸ್ಯದಪುಡಿ ಸೀಸೆ ೧ಕ್ಕೆ ೦-೨-೦, ೮ ಲಡಿಗಳಿರುವ ಪೆರುಮಾ ಫ್ಲಾಸ್ ದಾರದ ಬಂಡಲ್ ೧ಕ್ಕೆ ೩-೦-೦, ಪೆರುಮಾ ಫ್ಲಾಸ್ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ ೧೮-೦-೦ ; ಲೋಕ ಪ್ರಸಿದ್ಧವಾದ ಬೇಳನ ಔಷಧ ಸೀಸೆ ೧ಕ್ಕೆ ೦-೪-೦ ಕ್ಯಾಟಲಾಗನ್ನು ಕೇಳಿದವರಿಗೆ ಕಳುಹಿಸುತ್ತೇವೆ ಪರಸ್ಥಳದವರಿಗೆ ವಿ ಪಿ. ಯಿಂದಲೂ ರವಾನಿಸುತ್ತೇವೆ.

ವಿಳಾಸ —ಡಿ. ಫ್ಲಾಲನ್ ಮಾರ್ಟ್, ಮಂಗಳೂರು

ಪೆರೂನಾ ವಿಷಯವಾಗಿ ಹೆಂಗಸರಿಂದ ಬಂದಿರುವ ಕಾಗದಗಳು. 7-11

ಮಿಸೆಸ್. ಕ್ಲೇರಾ ಎಲ್. ಮಿಲ್ಲರ್. ಮಿಸೆಸ್. ಎಸ್. ಎಲ್. ಜೂಯೆಲ್. ಮಿಸೆಸ್. ಮಹುಲ ರೀಡ್.

ಮುಂದಿನ ಕಾಗದಗಳು ದಿನವೂ ಅನುಭವವನ್ನು ತಿಳಿಸುತ್ತವೆ. ಕಾಯಿಲೆ ಅನುಭವಿಸಿ, ಪೆರೂನಾದಿಂದ ಮಾಡಿತವಾದ ಗುಣವನ್ನು ಹೊಂದಿದ ಸ್ತ್ರೀಯರು ಯಥಾರ್ಥವಾಗಿ ನುಡಿದಿರುವ ಮಾತುಗಳಾಗಿವೆ.

ಕೂಡಲೇ ಗುಣಕೊಡುವಂಥಾ ಈ ಔಷಧ ಸಿಕ್ಕುವುದು ಅಮೇರಿಕದ ಹೆಂಗಸರಿಗೆ ತುಂಬಾ ಅನುಕೂಲವಾಗಿದೆ. ಮಲಬದ್ಧತೆ, ವಾಯುಶೋಷ, ಮೂತ್ರಕೋಶದ ಅಕ್ರಮ, ಹುಡಿಗೆಮ್ಮು, ಈ ಮೊದಲಾದ ಶೀತದಿಂದ ಹುಟ್ಟುವ ನಾನಾ ರೋಗಗಳನ್ನು ಪೆರೂನಾ ನಿವಾರಣೆಮಾಡಬಲ್ಲದು. ಎಂತಲು ಈ ಮಾತನ್ನು ಹೆಂಗಸರು ಹೇಳಿರುತ್ತಾರೆ. ತಮ್ಮಂತೆ ನರಳುವ ಹೆಂಗಸರಿಗೆ ಅನುಕೂಲವಾಗಲಿ ಎನ್ನುವದಲ್ಲದೆ ಅವರ ಆಶಯವು ಇನ್ನೇನೂ ಆಗಿರಲಾರದು.

ಪೆರೂನಾವು ಪ್ರತಿ ದಿನವೂ ಹೊಸ ಸ್ನೇಹಿತರನ್ನು ಮಾಡಿಕೊಳ್ಳುತ್ತದೆ. ಪೆರೂನಾವಿಗೆ ಸಹಜವಾಗಿ ದೊರಕಿರುವ ಪ್ರಸಿದ್ಧಿಗೆಲ್ಲಾ ಅದನ್ನು ಉಪಯೋಗಿಸಿದ ಜನರು ಹೇಳುವ ಶಿಫಾರಸು ಕಾಗದಗಳೇ ಮುಖ್ಯ ಕಾರಣವು.

ಬಿಡದ ಹುಡಿಗೆಮ್ಮು.

ಮಿಸೆಸ್ ಕ್ಲೇರಾ ಎಲ್. ಮಿಲ್ಲರ್, ಬಾಕ್ಸ್ ೭೧, ಕೊಲಂಬಿಯ, ಸ್ಟ್ರೀ., ಸೀಟಲ್, ವಾಷಿಂಗ್ಟನ್, ಯು. ಎಸ್. ಎ., ಮೊದಲು ಸೂಗೆ ಕಂಟ್ರಿ ಕ್ಲಬ್ ವೈಸ್‌ಪ್ರೆಸಿಡೆಂಟ್, ಈಕೆ ಬರೆಯುವುದು :-

"ಹುಡಿಗೆಮ್ಮಿನಿಂದ ನಾನು ಬಹಳ ಅನುಭವಿಸಿದೆನು. ಒಂಬತ್ತು ಬಾಟ್ಲು ಪೆರೂನಾ ಸೇವಿಸುವಷ್ಟರಲ್ಲಿ ಅದು ನನಗೆ ನಿವಾರಣೆಯಾಯಿತು. ಇದಕ್ಕಿಂತ ಉತ್ಕೃಷ್ಟವಾದ ಔಷಧ ಬೇರೊಂದಿಲ್ಲ. ಪೆರೂನಾ ದೇಹದ ಅಂಗಗಳಲ್ಲಿ ಮಾಡತಕ್ಕ ಕೆಲಸಗಳು ಬಹು ವಿಶೇಷವಾಗಿರುತ್ತವೆ. ಅದು ಶರೀರದ ಶಕ್ತಿಯನ್ನು ವೃದ್ಧಿಮಾಡಿ, ದೇಹದ ಸ್ವಾಭಾವಿಕ ಕೆಲಸಗಳಿಗೆ ಸಹಾಯವಾಡುವುದು.

"ನಾನು ಇದರ ವಿಷಯವನ್ನು ನನ್ನ ಸ್ನೇಹಿತರಿಗೆ ಬಹಳವಾಗಿ ಹೇಳಿದೇನೆ. ಅವರೂ ನನ್ನಂತೆಯೇ ಇದನ್ನು ತುಂಬಾ ಕೊಂಡಾಡುತ್ತಾರೆ. ಅದು ನಿಜವಾಗಿಯೂ ಗುಣಕೊಡುವ ಔಷಧವೆಂದು ನನಗೆ ಗೊತ್ತು."

ನಡುಕ, ದಣಿವು ಮತ್ತು ದುರ್ಬಲ.

ಮಿಸೆಸ್. ಕ್ರಿಸ್ಟಿನಾ ಸ್ಮಿಕಲ್ಸಾ, ೪೯೦ ವಿಸ್ಲೋ ಅವ್., ಬಫೆಲೊ, ನ್ಯೂಯಾರ್ಕ್, ಯು. ಎಸ್. ಎ., ಈಕೆ ಬರೆಯುವುದು "— ಶರೀರದೊಳಗೆ ಶೀತಹಿಡಿದು ನರಳುತ್ತಿರುವವರೆಲ್ಲಾ ಇದನ್ನು ಓದಿ ಪ್ರಯೋಜನ ಹೊಂದುವರೆಂದು ನಿರೀಕ್ಷಿಸುತ್ತೇನೆ.

ನನ್ನ ಸ್ಥಿತಿಯು ನಿಜವಾಗಿ ಕೆಟ್ಟುಹೋಗಿತ್ತು. ನನಗೂ ನನ್ನ ಸ್ನೇಹಿತರಿಗೂ ನನ್ನ ಶರೀರಸ್ಥಿತಿಯನ್ನು ನೋಡಿ ಗಾಬರಿಯುಂಟಾಗಿತ್ತು. ದೇಹವು ನಡುಗುತ್ತಿತ್ತು. ರಾತ್ರಿ ನಿದ್ದೆ ಬರುತ್ತಿರಲಿಲ್ಲ. ಆಹಾರದಿಂದ ಪ್ರಯೋಜನವಾಗಲಿಲ್ಲ. ಯಾವಾಗಲೂ ನನಗೆ ದಣಿವೂ ದುರ್ಬಲವೂ ಇದ್ದುವು. ಅನೇಕ ಡಾಕ್ಟರುಗಳನ್ನು ಕೇಳಿ ಔಷಧ ಸೇವಿಸಿದರೂ ನನಗೆ ಕಷ್ಟಪರಿಹಾರವಾಗಲಿಲ್ಲ. ಆಗ ನಾನು ಪೆರೂನಾ ಸೇವಿಸಲಾರಂಭಿಸಿದೆನು.

"ಕಡೆಯಲ್ಲಿ ಎರಡು ಬಾಟ್ಲು ಔಷಧ ಸೇವಿಸುವಾಗ್ಗೆ ನಾನು ಬೇರೆ ಹೆಂಗಸಾದಂತೆ ತೋರಿತು. ಆದರೂ ಅಲ್ಲಿಗೇ ನಿಲ್ಲಿಸಲಿಲ್ಲ. ಇನ್ನೂ ಕೆಲವು ಬಾಟ್ಲುಗಳ ಪೆರೂನಾ ಸೇವಿಸುತ್ತಾ ಬಂದೆನು. ನನಗೆ ಸಂಪೂರ್ಣ ಗುಣವಾಯಿತು. ಆಗಿನಿಂದಲೂ ಸುಖವಾಗಿದ್ದೇನೆ. ಈಗ ಚನ್ನಾಗಿ ಊಟಮಾಡುತ್ತೇನೆ. ಒಳ್ಳೇ ನಿದ್ದೆ ಬರುತ್ತಿದೆ."

ಪೆರೂನಾವಿಗೆ ಒಳ್ಳೇ ಹೆಸರು.

ಮಿಸೆಸ್. ಎಸ್. ಎಲ್. ಜೂಯೆಲ್, ಆರ್. ಎಫ್. ಡಿ. ೧, ಸ್ಪ್ರಿಂಗ್‌ಪೋರ್ಟ್, ಪೆನ್ಸಿಲ್ವೇನಿಯ, ಯು. ಎಸ್. ಎ. ಈಕೆ ಬರೆಯುವುದು :—

"ಅನೇಕ ವರುಷಗಳು ನಾನು ಪೆರೂನಾ ಉಪಯೋಗಿಸಿ ಅದರ ಪ್ರಯೋಜನವನ್ನು ತಿಳಿದಿರುತ್ತೇನೆ. ನನ್ನ ಗುರ್ತು ಕಂಡವರಿಗೂ ಅದು ತುಂಬಾ ಹಿತವನ್ನುಂಟುಮಾಡಿರುವುದನ್ನು ಬಲ್ಲೆನು. ಪೆರೂನಾ ವಿಷಯದಲ್ಲಿ ಒಳ್ಳೇ ಮಾತನ್ನಲ್ಲದೆ ಬೇರೇನೂ ಹೇಳಲಾರೆನು."

ಪೆರೂನಾವನ್ನು ಮನೆಯಲ್ಲಿಟ್ಟಿದೆ.

ಮಿಸೆಸ್. ಮೇರಿಯು ಗೋರ್ಟ್ಲೆಜ್, ಓರಿಯಂಟ, ಓಕ್ಲಹೋಮ, ಯು. ಎಸ್. ಎ., ಈಕೆ ಬರೆಯುವುದು :— "ನಾನೂ, ನನ್ನ ಮಕ್ಕಳೂ, ನನ್ನ ಗಂಡನೂ ನಿಮ್ಮ ಔಷಧಗಳನ್ನು ಸೇವಿಸಿ, ಯಾವಾಗಲೂ ಮನೆಯಲ್ಲಿಟ್ಟುಕೊಂಡಿರುತ್ತೇವೆ. ಈ ಔಷಧದಿಂದ ನನಗೆ ಆರೋಗ್ಯವುಂಟಾಯಿತು. ಅನೇಕ ಕಡೆಗಳಿಂದ ಜನರು ನನಗೆ ವಾಸಿಯಾದದ್ದನ್ನು ಕೇಳಿ ಆಶ್ಚರ್ಯಪಟ್ಟು ಬರೆಯುತ್ತಿದ್ದಾರೆ. ನನ್ನ ಗಂಡನಿಗಿದ್ದ ಉಬ್ಬಸರೋಗ, ನನ್ನ ಮಗಳ ಕಿವಿಯ ಬಾಧೆ, ಹೊಟ್ಟೆನೋವು, ನನ್ನ ಮಗನ ಗಂಟಲನೋವು, ಎಲ್ಲಾ ವಾಸಿಯಾಯಿತು. ಕಾಯಿಲೆ ಇದ್ದಾಗ ನಾನು ೧೨೦ ಪೌಂಡು ತೂಗುತ್ತಿದ್ದವಳು ಈಗ ೧೪೦ ಪೌಂಡು ಮಾಂಸ ಖಂಡಗಳು ಬೆಳೆದು ಸುಖವಾಗಿದ್ದೇನೆ.

"ಡಾ|| ಹಾರ್ಟ್‌ಮೆಕ್‌ರವರ ಔಷಧವು ಭರವಸವುಳ್ಳದ್ದು, ಆಶ್ಚರ್ಯಕರವಾದದ್ದು. ಅದರಿಂದ ಬಹು ಚಮತ್ಕಾರವಾಗಿ ದೇಹಧರ್ಮವು ಚನ್ನಾಗುತ್ತದೆ. ಪೆರೂನಾವು ನರಗಳಿಗೆ ಹಿತಕೊಡುವುದು ; ಶ್ಲೇಷ್ಮ ರೋಗಗಳಿಗೆಲ್ಲಾ ಅದು ಉತ್ತಮೋತ್ತಮವಾದ ಔಷಧವಾಗಿದೆ

"ಹತ್ತು ವರುಷಗಳ ತನಕ ರೋಗದಲ್ಲಿ ನರಳುತ್ತಿದ್ದ ನಾನು ಈಗ ಸಂಪೂರ್ಣ ಗುಣ ಹೊಂದಿರುತ್ತೇನೆಂದು ನಿಮಗೆ ಬರೆಯಲು ತುಂಬಾ ಸಂತೋಷವಾಗುತ್ತದೆ. ನಿಮ್ಮ ಹೇಳಿದ ಚಿಕಿತ್ಸೆಗಾಗಿ ನಿಮ್ಮನ್ನು ಅಪಾರ ಹೊಗಳುವೆನು."

ಮಲಬದ್ಧತೆ, ಮೂತ್ರಕೋಶರೋಗ.

ಮಿಸೆಸ್. ಮಹುಲಾ ರೀಡ್, ಕಾರ್ಬೆಟ್ಸ್, ಓರ್ಲ್, ಕ್ಯಾನಡ, ಈಕೆ ಬರೆಯುವುದು :—

"ನನ್ನ ಮುದಿತನದಲ್ಲಿ ನಿಮ್ಮ ಪ್ರಖ್ಯಾತವಾದ ಔಷಧವು ನನಗೆ ಮಹೋಪಕಾರವಾಡಿರುತ್ತದೆ. ಈಗ ನಾನು ಸೌಖ್ಯವಾಗಿರುವಷ್ಟು ಹಿಂದೆ ಅನೇಕ ವರುಷಗಳಿಂದ ಇರಲಿಲ್ಲ.

ನನಗೆ ಮಲಬದ್ಧವಾಗುತ್ತಾ, ಮೂತ್ರಕೋಶದ ಅಕ್ರಮ ಹುಟ್ಟಿ, ವಾಯುಶೋಷ ಪ್ರಾಪ್ತವಾಗಿ, ಎರಡು ವರುಷಗಳ ಹಿಂದೆ ನನ್ನ ಆರೋಗ್ಯವು ಸಂಪೂರ್ಣ ಕೆಟ್ಟಿತು. ಅಷ್ಟರಲ್ಲಿ ನನ್ನ ಪ್ರೀತಿಪಾತ್ರಳಾದ ಒಬ್ಬ ಸ್ನೇಹಿತಳು ನಿಮ್ಮ ಪೆರೂನಾ, ಮನಾಲಿನ್ ಎಂಬ ಔಷಧಗಳನ್ನು ಕಳುಹಿಸಿಕೊಟ್ಟಳು.

"ಬಾಟ್ಲ ಮೇಲೆ ಬರೆದಿರುವಂತೆ ನಾನು ಔಷಧಗಳನ್ನು ತೆಗೆದುಕೊಳ್ಳುತ್ತಾ ಬಂದೆನು. ನನಗೆ ಬೇಗ ಅನುಕೂಲವಾಯಿತು. ಅದರ ಮೇಲೂ ಅದನ್ನೇ ಸೇವಿಸಿಕೊಂಡು ಬಂದೆನು.

"ಮೊದಲಿಂದ ರೋಗಗಳೆಲ್ಲಾ ಈಗ ನನಗೆ ಸಂಪೂರ್ಣ ವಾಸಿಯಾಗಿವೆ. ಮೊದಲಿಗಿಂತ ಈಗ ನಾನು ಸುಖವಾಗಿದ್ದೇನೆ.

"ಈ ಔಷಧಗಳ ಗುಣವನ್ನು ಅತಿಶಯವಾಗಿ ಹೊಗಳಲಾರೆನು. ಅದನ್ನು ಸೇವಿಸುವಂತೆ ಸಂದರ್ಭ ಬಿದ್ದಾಗಲೆಲ್ಲಾ ಇತರರಿಗೆ ಹೇಳುತ್ತಾ ಇದ್ದೇನೆ."

ಪ್ರಸಿದ್ಧವಾದ ಔಷಧವು.

ಅನೇಕ ವರುಷಗಳಿಂದಲೂ ಎಲ್ಲಾ ಶ್ಲೈಷ್ಮರೋಗಗಳಿಗೂ ಪೆರೂನಾ ಗುಣಕೊಡುವ ಔಷಧವೆಂದು ಪ್ರಸಿದ್ಧವಾಗಿದೆ. ಈ ರೋಗಗಳಿಗೆ ಇತರ ಔಷಧಗಳು ಎಷ್ಟೋ ಹುಟ್ಟಿ ಅದೃಶ್ಯವಾದವು. ಆದರೆ ಪೆರೂನಾವಿನ ಒಳ್ಳೇ ಹೆಸರಿಗೆ ಸ್ವಲ್ಪವೂ ಕುಂದುಕೊರತೆಗಳುಂಟಾಗಿರುವುದಿಲ್ಲ.

ಪೆರೂನಾ ಬಹು ಸಾರವತ್ತಾದ ಮೂಲಿಕೆಗಳಿಂದ ತಯಾರಾದ ಔಷಧವು. ಅದು ದೇಹದ ಅಂಗಾಂಗಗಳ ಮೇಲೂ ನರಗಳ ಮೇಲೂ ಕೆಲಸಮಾಡಬಲ್ಲದು. ಶ್ಲೈಷ್ಮವೆಂಬುವುದು ದೇಹದ ಭಾಗದಲ್ಲಿ ಅಕ್ರಮವನ್ನುಂಟುಮಾಡಿದ್ದರೂ ಪೆರೂನಾ ಅದನ್ನೆಲ್ಲಾ ನಿವಾರಣೆಮಾಡಿರುತ್ತದೆ.

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದದ್ದೂ ಇವರಿಂದಲೇ ತಿಳಿಯಬಹುದು.

ವಿಳಾಸ: — ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

26—2—1909 ರಿಂದ 5—3—1909 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	18	18	0	0
ಮೈಸೂರು ,,	8	6	0	0
ಬೆಂಗಳೂರು ಡಿಸ್ಟ್ರಿಕ್ಟು	39	31	3	2
ಮೈಸೂರು ,,	24	20	0	0
ಕೋಲಾರ್ ,,	*	*	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	3	3
ಚಿತ್ರದುರ್ಗ ,,	0	0	0	0
ಕಡೂರ್ ,,	6	2	3	4
ಶಿವಮೊಗ್ಗ ,,	0	0	0	0
* ಸಂಖ್ಯೆ ಕಾಣಿಸಿಲ್ಲ. ಒಟ್ಟು	95	76	9	9

ಶಾಲಿವಾಹನ ಶಕ ವರುಷಂಗಳು ೧೮೩೦ ನೇ ಕೀಲಕನಾಮ ಸಂವತ್ಸರದ ಫಾಲ್ಗುಣ ಬಹುಳ ಏಕಾದಶಿ ಗುರುವಾರದಿಂದ ೧೮೩೧ನೇ ಸೌಮ್ಯ ಸಂವತ್ಸರದ ಚೈತ್ರ ಶುದ್ಧ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೯ ನೇ ಮಾರ್ಚಿ.

ತಾ.	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶೇದಿ ಉಂಟಾದ ವರ್ಷ
18	ಗುರು *	ಏಕಾದಶಿ	15-51	ಶ್ರ	40-28	6
19	ಶುಕ್ರ ::	ದ್ವಾದಶಿ	6-46	ಧ	36-58	7
20	ಶನಿವಾ	ತ್ರಯೋದಶಿ	1-4	ಉಪರಿ	54-24	8
21	ರವಿವಾ §	ಅಮಾವಾಸ್ಯ	49-8	ಪೂಭಾ	22-48	9
22	ಚಂದ್ರ ::	ಪಾಡ್ಯಮಿ	43-28	ಉತ್ತ್ರಭಾ	24-40	10
23	ಕುಜ	ಬಿದಿಗೆ	37-40	ರೇ	20-46	11
24	ಬುಧ †	ತದಿಗೆ	32-28	ಶ್ವಿ	17-20	12

* ಸರ್ವತ್ರ ಏಕಾದಶಿ, ಹಿಮವದ್ಗೋಪಾಲಸ್ವಾಮಿರಥ. :: ಪ್ರದೋಷ. § ಸರ್ವತ್ರ ಅಮಾವಾಸ್ಯೆ. :: ಚಾಂದ್ರಸಂವತ್ಸರಾರಂಭ, ನೀಲಪಟ ಧಾರಣ. † ಸೌಭಾಗ್ಯಗೌರೀವ್ರತ, ಮೃತ್ಯುಯೋಗ, ದಗ್ಧಯೋಗ, ದಬ್ಬೇದಲು ಬಂ ೧.

ಪೇಟೇ ಧಾರಣೆ.

ವಿವರ.		ಮೈಸೂರು.	ಬೆಂಗಳೂರು.
ಕಡ್ಡೀ ಅಕ್ಕಿ ಪಲ್ಲ ೧ ಕ್ಕೆ	ರೂ.	೧೫-೮-೦	೧೯-೮-೦
ಕೆಂಬೂತಿ ಅಕ್ಕಿ ಅವಲ್	...	೧೬-೦-೦	೧೮-೮-೦
,, ಮುಮು:	...	೧೩-೮-೦	೧೮-೦-೦
ಜಾಪಾನಿ ಅಕ್ಕಿ	...	೧೫-೧೨-೦	೨೦-೦-೦
ಸಣ್ಣಕ್ಕಿ ಅವಲ್	...	೧೮-೦-೦	೨೧-೦-೦
,, ದುಂಡು	...	೧೭-೮-೦	೧೯-೮-೦
ತೊಗರೀ ಬೇಳೆ ಪಲ್ಲ ೧ ಕ್ಕೆ	...	೧೬-೮-೦	೧೬-೮-೦
,, ದುಂಡು	...	೧೬-೦-೦	೧೬-೦-೦
ಹೈಕ್ ರಾಗಿ ಪಲ್ಲ ೧ ಕ್ಕೆ	...	೮-೧೨-೦	೯-೦-೦
ಕಾರ್ರಾಗಿ	...	೮-೮-೦	೮-೮-೦
ಜೋಳ	...	೮-೮-೦	೯-೮-೦
ಹೇಸಂವೆ ಪಲ್ಲ ೧ ಕ್ಕೆ	...	೧೪-೪-೦	೧೨-೮-೦
ಬೀ ಅವರೆ	...	೧೧-೦-೦	೧೧-೦-೦
ಹೆಸರು	...	೧೪-೪-೦	೧೩-೮-೦
ಉದ್ದು	...	೧೪-೪-೦	೧೩-೮-೦
ಕಡಲೆ	...	೧೪-೪-೦	೧೪-೦-೦
ಎಳ್ಳು ಸೇ. ೧೨೭ ಕ್ಕೆ	...	೨೧-೯-೦	೨೧-೦-೦
ಹುರುಳಿ	...	೧೦-೮-೦	೯-೧೨-೦
ಹರಳು ೧೨೭ ಸೇರಿಗೆ	...	೧೦-೮-೦	೧೦-೪-೦
ಸೀಗೇಕಾಯಿ ಮಣ ೧ ಕ್ಕೆ	...	೧-೮-೦	೧-೬-೦
ಮೆಣಸಿನಕಾಯಿ	...	೫-೮-೦	೩-೮-೦
,, ಮುಂಡಿ	...	೫-೦-೦	೩-೪-೦
ಬೆಲ್ಲ ದೊಡ್ಡ ಅಚ್ಚು	...	೬-೪-೦	ಮ ೧-೧೧-೦
ಒಳ್ಳೆಣ್ಣೆ ಮಣ ೧ ಕ್ಕೆ	...	೫-೦-೦	೫-೦-೦
ಹರಳೆಣ್ಣೆ ,,	...	೪-೮-೦	೪-೪-೦
ಕೊತ್ತುಂಬರಿ ಪಲ್ಲ ೧ ಕ್ಕೆ	...	೭-೦-೧	೭-೦-೦
ಉಪ್ಪು ,,	...	೩-೦-೦	೫-೪-೦
ಹುಣಸೇ ಹಣ್ಣು	...	೧-೮-೦	೧-೬-೦
,, ಹಳೇದು	...	೧-೪-೦	೧-೪-೦
ತುಪ್ಪ ಮಣ ೧ ಕ್ಕೆ	...	೧೪-೫-೦	೧೪-೦-೦
ಸೀಮೆಯೆಣ್ಣೆ ಪೆಟ್ಟಿ ೧ ಕ್ಕೆ	...	೫-೦-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ	...	೪-೫-೦	೫-೦-೦
ಆಳಲೇಕಾಯಿ ಮಣ ೧ ಕ್ಕೆ	...	೦-೧೨-೧	೧-೦-೦
ಅಂಟ್ವಾಳದ ಕಾಯಿ ಮಣ ೧ ಕ್ಕೆ	...	೦-೧೪-೦	೧-೨-೦
ಚಿನ್ನ (ಪೌನ್) ಕೆಂಪು	...	೧೫-೭-೦	೧೫-೯-೦
,, ,, ಪಸಿಮೆ	...	೧೫-೧೪-೦	೧೫-೧೧-೦
,, ,, ಗಟ್ಟಿ ತೊಲ ೧ ಕ್ಕೆ	...	೨೪-೧೦-೦	೨೪-೭-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	...	೬೭-೦-೦	೬೩-೮-೦

Printed and Published by the Rev. H. Gulliford, Proprietor and Manager, Wesleyan Mission Press, Mysore. 18/3/1909.

REGISTERED
M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೯ ನೇ ಇಸವಿ ಮಾರ್ಚಿ ತಾರೀಖು ೨೫ ನೇ ಗುರುವಾರ. ಸಂಚಿಕೆ ೪೩

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30 5]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ ಉಳುಕು, ಅಬಲು ಗಂಟು, ಗಂಟ್ಲು ಹುಣ್ಣು, ಅರ್ಧಾಂಗವಾಯು, ಎದೆಶೀತ, ಛಾಯಿ, ಜಖಮು, ಇತ್ಯಾದಿ.

ಆರ್. ಡಿ. ಸೋಜಾ, ಮೆನೆಜರ್, ಕಾಫಿ, ತೋಟ ಮಡಕೇರಿ, ಬರೆಯುತ್ತಾರೆ:—ನಿಮ್ಮ ಅಮೃತಾಂಜನವು ದೇಹದಲ್ಲಿಯ ಶೀತಕ್ಕೂ, ಕೆಮ್ಮಿಗೂ, ಹುಣ್ಣುಗಳಿಗೂ ಉತ್ತಮವಾದದ್ದು. ನನ್ನ ಕೂಲಿ ಆಳುಗಳಲ್ಲಿ ಹೆಚ್ಚು ಜನರಿಗೆ ಗುಣವಾಗಿರುತ್ತದೆ ಬಾಟ್ಲಿ ಒಂದರ ಕಿಮ್ಮತು ೦-೮-೦. ೧೨ ಬಾಟ್ಲಿಗಳಿಗೆ ೫-೦-೦ ೨೪ ಬಾಟ್ಲಿಗಳಿಗೆ ೧೦-೦-೦. ೫೦ ಬಾಟ್ಲಿಗಳಿಗೆ ೨೦-೦-೦ ವ್ಯಾಪಾರಸ್ಥರಿಗೆ ಅಂಗೀಕಾರವಾಗಿ ಕಮೀಷನ್ ಸಿಕ್ಕುವದು.

ಗಜಕರ್ಣದ ಮುಲಾಮು.

ಮೈಮೇಲೆ ಕಾಣಿಸಿಕೊಳ್ಳುವ ಗಜಕರ್ಣ, ಕುರಿ, ಕಜ್ಜಿ ಮುಂತಾದವು ಗುಣವಾಗುವವು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತು ೦-೩-೦. ೧೨ ಡಬ್ಬಿಗಳಿಗೆ ೮-೦-೦

ವಜ್ರಗುಟಿಕೆ.

ಧಾತುಪುಷ್ಟಿ, ರಕ್ತಪುಷ್ಟಿ, ಬಾಟ್ಲಿ ಒಂದರ ಕಿಮ್ಮತು ರೂ.		೧-೦-೦
ದಂತಮಂಜನ ಮುಲಾಮು		೦-೮-೦
ದಂತಮಂಜನ—ಹಲ್ಲುಗಳು ಗಟ್ಟಿಯಾಗುತ್ತವೆ		೦-೨-೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು :—"ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1-11

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಸ್ಥಳಗಳಲ್ಲಿ ಹರಡಿಕೊಂಡವು ? ಮುಖ್ಯವಾಗಿಯೂ ಹಾಸನದಿಂದಲೇ ಎಂದು ಹೇಳಬಹುದು.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಇಲ್ಲಿಯವು. ಆದ್ದರಿಂದ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಉಪಯೋಗಿಸುವರು.

ಅವರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರ ನೂಲುವ ಕೆಲಸ ಸ್ಟೀಮಿಗೆ ಬಿಡಾಯಿಸುತ್ತಿರುವುದರಿಂದಲೇ ಬರುವದು. (೨) ಟೋಪಿಗಳನ್ನು ಚುಚ್ಚುವಾಗ ಮತ್ತು ಕೈ ಕೆಲಸ ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿ ಮಾಡಿಕೊಡುವ ಹಾಗೆ ಆರಿಸಿ ಕಳುಹಿಸುತ್ತೇವೆ.

ಒಳ್ಳೆದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದವರು ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವು ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಬಿಳಿ ಕೆಂಪು, ಕಪ್ಪು, ಬಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ., ೧ ರೂ. ೪ ಆ.

ಮಕ್ಕಳ ಟೋಪಿಗಳು ರೂ ೧-೮ ; ರೂ ೧-೧೨.

ಮಕ್ಕಳ ಟೋಪಿಗಳು ರೂ ೨

ಬಿಳಿ ಟೋಪಿಗಳು ೧ ರೂ. ೧೨ ಆ. , ೧ ರೂ. ೮ ಆ ; ೧ ರೂ. ೬ ಆ

ಕಪ್ಪು ಟೋಪಿಗಳು ೧ ರೂ ೮ ಆ. , ೧ ರೂ. ೬ ಆ ;

ಜರಿಯ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತನೆ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಡಲ್ಪಡುವದು ನಮ್ಮ ವಿಳಾಸ:—

ಮ್ಯಾನೇಜರ್, ಹಾಸನ ಟೋಪಿ, ಕಾರ್ಖಾನೆ, ಹಾಸನ

ಜ್ವರಸುಧಾ.



81-25

ಒಂದು ಬಾಟ್ಲಿ ಕಿಮ್ಮತು ೮ ಆಣೆ—೨ ಪೈ.

ಛಾರ್ಜು ಬೇರೆ

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗು ಜ್ವರ, ಚಳಿ ಜ್ವರ ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ಹಾಗೆ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಶಾಲಿರಾದ ಡಾಕ್ಟರುಗಳು ಹೇಳುತ್ತಲಿದ್ದಾರೆ. ಕೈಕಾಲು, ತಲೆನೋವು ಆಲಸ್ಯತನವು, ಬೆನ್ನು ಛಳುಕು, ಕೈಕಾಲು ನೋವು ಮುಂತಾದವುಗಳನ್ನು ೧—೨ ಹೊತ್ತಿನಲ್ಲಿಯೇ ದೈವಾಮೃತವಂತೆ ದಿಗಂತರಕ್ಕೆ ಹಾರಿಸಬಲ್ಲದು. "ಸುಧಾ" ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವೂ ಹೇಗೆ ಮೈ ಅಂಟುವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನೂ ನಾಶಪಡಿಸುವದರಲ್ಲಿ ಪ್ರಸಿದ್ಧಿಗೊಂಡಿದೆ. ಒಂದು ಶೀಸೆ ಔಷಧಿಯಲ್ಲಿ ಕಂಡು ಬರುವ ಗುಣೋಪಯೋಗವನ್ನು ಹೆಚ್ಚು ವರ್ಣನೆ ಮಾಡಬೇಕೇನು

ದೇವನಹಳ್ಳಿ ಟಿ. ಗೋವಿಂದಶೆಟ್ಟಿ, ಬೆಂಗಳೂರು ಡಿಸ್ಟ್ರಿಕ್ಟ್. ಮೆಡಿಕಲ್ ಪ್ರಾಕ್ಟಿಷನರ್.

ಜ್ವರಹರಿ.

18-52

ಇದು ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಬಿ. ವೆಂಕಟೇಶ ಅಯ್ಯಂಗಾರರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ಸೀರಿಯಾಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ ; ೧—೮ ರೂ, ರೂ ೨—೧೨ ಆ ; ೧೧ ರೂ. ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ಉಪಕಾರವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹಿಂಗಸು ತಿಂಗಳಿಗೆ ಒಂದುವರೆ ಹೊರಗೆ ಆಗುವಾಗ್ಗೆ ಕೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ಪಟ್ಟಿ, ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಶಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅದರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷದ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

JUST RECEIVED! JUST RECEIVED!

Stead's Books for the Bairns

(Illustrated) New Numbers [9-12]

STEAD'S PENNY POPULAR TALES—Sixty-four Pages in a coloured Picture Cover. Each number contains a story of thrilling interest 24 numbers

CALENDARS FOR 1909.

Apply—The Manager, C.L.S. Book Depot, Mysore City.

ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	...	ರೂ	೧—೬—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸಹ		ರೂ.	೦—೧೪—೦
" " ೬ " "		"	೦—೧೫—೦

ಚಂದಾದಾರರಾಗಕಬಯಸುವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾಪತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಕಾಂತಿವರ್ಧಕತೈಲ.

24-6

ನೂತನವಾಗಿ ಕಂಡು ಹಿಡಿಯಲ್ಪಟ್ಟದ್ದು.

ತಲೆಕೂದಲು ಬೆಳೆಯಲು ಉತ್ತಮವಾದ ಸುಗಂಧ ಯೆಣ್ಣೆ.

ಸ್ತ್ರೀಯರ ಸೌಂದರ್ಯಕ್ಕೆ ಮುಖ್ಯ ಕಾರಣ ಭೂಷಣವಾದ ಕೇಶವು ಚೆನ್ನಾಗಿ ಬೆಳೆದು ಸೌಂದರ್ಯವನ್ನು ಹೆಚ್ಚಿಸತಕ್ಕ ಈ ನೂತನ ಯೆಣ್ಣೆಯು ಬಜಾರಿನಲ್ಲಿ ಮಾರಲ್ಪಡುವ ಇತರ ಯೆಣ್ಣೆಗಳಂತೆ ಲೇಶವೂ ದುರ್ಗುಣಯುಕ್ತವಾದುದಲ್ಲ. ಎಲ್ಲ ದರ್ಜೆಯ ಗಂಡಸರೂ, ಹೆಂಗಸರೂ ಹೊಂದಬಹುದಾದ್ದಕ್ಕೆ ಅನುಕೂಲವಾಗಿ ಇದರ ಬೆಲೆಯೂ ಕಮ್ಮಿ ಇಡಲ್ಪಟ್ಟಿದೆ. ನಮ್ಮ ಈ ಯೆಣ್ಣೆಯ ಉಪಯೋಗದಿಂದ ಎಂಥಾ ಪಟ್ಟು ಹಿಡಿದರೂ ಕೂದಲು ಹುಲುಸಾಗಿ ಬೆಳೆಯುತ್ತದೆ. ಈ ಎಣ್ಣೆಯನ್ನು ಒಳ್ಳೆ ಕೊಬರಿಯೆಣ್ಣೆ ಅಥವಾ ಅಚ್ಚೆಳ್ಳೆಣ್ಣೆಯೊಂದಿಗೆ ಬೆರಸಿಯೂ ಉಪಯೋಗಿಸಬಹುದು. ಇದರ ಬೆಲೆ. ನಂ. 1 ಶೀಸೆ 1 ಕ್ಕೆ ರೂ 1—0—0 ನಂ. 2, 0—12—0 ನಂ. 3, 0—8—0.

ವಿಳಾಸ :—ಜಿ. ಪಿ. ಎಂಡ್ ಕಂಪನಿ, ಗಿರಿಗಾಂ, ಬೊಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

29 6

೧. ಲೋಕಾಮಯಹರ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮು, ನೆಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ.

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಯೂ ಬಾರದಿ ಕೊಡದೆ, ನಾಡಿ ಹಸಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಟ್ಟು ಜ್ವರ, ಕೃತಕ್ತಗಳನ್ನು ಬಹು ಬೇಗ ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೩ ಕುಪ್ಪಿಗೆ ೧ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಕಿರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಶಿಕ್ಷಕರಿಗೆ ಸಿದ್ಧವಾಗಿರುವ ಪುಸ್ತಕಗಳು.

11-11

ಚರಿತ್ರೆಯ ಪ್ರಶ್ನೋತ್ತರ, ಭೂಗೋಳ ಪ್ರಶ್ನೋತ್ತರ, ಆರೋಗ್ಯಪ್ರಶ್ನೋತ್ತರ—(1901-06) ಕ್ರಯ ೧-೪-೦. ವ್ಯವಸಾಯ ಪ್ರಶ್ನೋತ್ತರ ೦-೫-೦. ಎಗ್ಸಾಮಿನರ್ ಮಾಸಪುಸ್ತಕ:-ಚಂದಾ, ವರ್ಷಕ್ಕೆ ೧-೪-೦, ೫ಕ್ಕೆ ೧ ಹೆಚ್ಚು. ೧೯೦೯ ನೇ ಲೋವರ್‌ಸೆಕೆಂಡರಿ ಕನ್ನಡನೋಟ್ಸ್ ೦-೪-೦ ; ೧೦ಕ್ಕೆ ೧ ಹೆಚ್ಚು. ಕನ್ನಡ ೩ನೇ ಪುಸ್ತಕದ ನೋಟ್ಸ್ ಕ್ರಯ ಪ್ರತಿ ೧ಕ್ಕೆ ೦-೩-೦ ; ೫ಕ್ಕೆ ೧ ಹೆಚ್ಚು.

ಸಿ. ಪುಟ್ಟಯ್ಯ, ಮ್ಯಾನೇಜರ್, ದಿ ಎಗ್ಸಾಮಿನರ್ ಆಫೀಸ್; ಮೈಸೂರು.

ಭಕ್ತವಿಜಯ.

35 3

ಮಹಾರಾಷ್ಟ್ರದಿಂ ಕನ್ನಡಿಸಲ್ಪಟ್ಟು, ಮೈಸೂರರಮಣೀಯ ಶಿಲಾಯಂತ್ರದಲ್ಲಿ ಮುದ್ರಿತವಾಗಿದ್ದುದು. ವಚನಗ್ರಂಥ. ಬಹು ರಸಭರಿತ. ಭಗವದ್ಭಕ್ತರ ಚರಿತ್ರೆಯುಳ್ಳದು. ಶ್ರೀಮನ್ಮಹಾರಾಜರವರ ಅಪ್ಪಣೆಯಂ ಪಡೆದು, ಮಾಸಸಂಚಿಕೆಯಾಗಿ ಪರಿಷ್ಕರಿಸಿ ಮುದ್ರಿಸಲ್ಪಡುತ್ತಿದೆ. ತಿಂಗಳಿಗೆ ೪ ಫಾರಂ ರಾಯಲ್ ೮ ಪೇಜ್. ಸೊಗಸಾದ ಕಾಗದ. ಅಂದವಾದ ಮುದ್ರಣ. ವಾರ್ಷಿಕ ಚಂದಾ ೨ ರೂ. ಪರಸ್ಥಳಕ್ಕೆ ೨—೪—೦. ಗುಣಜ್ಞರು ಪರಿಶೀಲಿಸಿ ಪ್ರೋತ್ಸಾಹಿಸಬೇಕು.

ಮೈಸೂರು ಸೀತಾರಾಮಶಾಸ್ತ್ರಿ, ನಾರ್ಮಲ್ ಸ್ಕೂಲ್ ಪಂಡಿತ, ದೊಡ್ಡಪೇಟೆ, ಮೈಸೂರ್.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2-11

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಮೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತಹವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಕ್ರಯ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ರುಮಾಲುಗಳು, ದಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ. ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪ್ಪೋ, ಮೈಸೂರು.

ನೋಡಿರಿ. "ಪ್ರೋತ್ಸಾಹ ಕೊಡಿರಿ." ತರಿಸಿರಿ.

99-1

ಈಗ ತಾನೇ ಶೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ

೫,೦೦೦ ಪಾಸನ್ ಟೋಪಿ ಹೊಲಿಯುವ ಸುಪೀರಿಯರ್ ಫ್ಲಾಸ್ ದಾರ

೧೦ ಟೋಪಿಯಾಗುವ ಫ್ಲಾಸ್ ಬಂಡಲ್ ೧ಕ್ಕೆ ೩-೭-೦. ೧ ಟೋಪಿಯಾಗುವ ಫ್ಲಾಸ್ ದಾರಕ್ಕೆ ೦-೬-೦ ; ಪಾಸನ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ಕ್ಕೆ ೦-೧-೬, ೦-೨-೦ ; ೩೦ ಇಂಚಿನ ದೊಡ್ಡ ಸೈಜು ಬನಿಯನ್ ೧ಕ್ಕೆ ೦-೮-೦ ; ಬಿಳಿ ಪೋಸ್ಟು ಕಾರ್ಡು, ಡಬ್ಬಲ್ ಕಲರ್, ೧,೦೦೦ ಕ್ಕೆ ೧-೮-೦ ; ಸುಗಂಧ ಸಂಜೀವಿನಿ, ಭೃಂಗಾಮಲಕ ತೈಲ, ಸೀಸೆ ೧ಕ್ಕೆ ೦-೮-೦ ; ಮೆಂಥಾಲ್, ಕಫರೋಗಕ್ಕೆ ಅನುಕೂಲವಾದ ಔಷಧ, ಡಬ್ಬಿ ೧ಕ್ಕೆ ೦-೩-೦ ; ೩೦೦ ಮಾತ್ರೆಗಳು ಇರುವ ಸೆಕ್, ಕಕ್ ಪರಿಮಳದ ತಾಂಬೂಲಮಿತ್ರನು, ಪ್ಯಾಕೆಟ್ ೧ಕ್ಕೆ ೦-೩-೦, ಲೆಸ್ ಕೈವಸ್ತ್ರಗಳು (ಚಂದವಾದವು) ೧ಕ್ಕೆ ೦-೨-೦ ; ರೋಸ್‌ಕೋಪ್ ಸ್ಟಾಯಿಲ್ ವಾಚು ೧ಕ್ಕೆ ೪-೦-೦ ; ಕೊಂಬಿನ ಬಾಚಣಿಗೆಗಳು, ದೊಡ್ಡ ಸೈಜು, ಡಜನ್ ೧ಕ್ಕೆ ೧೧-೦-೦; ಗಜಕರ್ಣದ ಮುಲಾಮು ಡಬ್ಬಿ ೧ಕ್ಕೆ ೦-೬-೦; ೨೮ ಇಂಗ್ಲೀಷು ಅಕ್ಷರಗಳದಗಿ ಇರುವ ಪೆಟ್ಟಿಗೆ ೧ಕ್ಕೆ ೨-೮-೦ ; ಪರಿಮಳ ನಶ್ಯದಪುಡಿ ಸೀಸೆ ೧ಕ್ಕೆ ೦-೨-೦, ೮ ಬಡಿಗೆಳಿರುವ ಪೆರುವಾ ಫ್ಲಾಸ್ ದಾರದ ಬಂಡಲ್ ೧ಕ್ಕೆ ೩-೦-೦ ; ಪೆರುವಾ ಫ್ಲಾಸ್ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ ೧೮-೦-೦ ; ಲೋಕ ಪ್ರಸಿದ್ಧವಾದ ಜೇಳಿನ ಔಷದ ಸೀಸೆ ೧ಕ್ಕೆ ೦-೪-೦. ಕ್ಯಾಟಲಾಗನ್ನು ಕೇಳಿದವರಿಗೆ ಕಳುಹಿಸುತ್ತೇವೆ. ಪರಸ್ಥಳದವರಿಗೆ ವಿ. ಪಿ. ಯಿಂದಲೂ ರವಾನಿಸುತ್ತೇವೆ.

ವಿಳಾಸ:—ಡಿ. ಪೌಲನ್ ಮಾರ್ಟಿನ್, ಮಂಗಳೂರು

ಧರ್ಮಪದ

32-4

ಎಂಬೀ ಕನ್ನಡ ಪುಸ್ತಕವು ನಮ್ಮ ಇಂಡಿಯಾ ದೇಶದಲ್ಲಿ ೩,೦೦೦ ವರ್ಷಗಳಿಂದೀಚೆಗೆ ಯಾವಾಗಲು ಗೋಚರಿಸಿರಲಿಲ್ಲವು. ಇದು ಚೈನಾ, ಕೋರಿಯಾ ಜಪಾನ್, ಅನಾಂ, ಸೈಯ್ಯಾಂ, ಬರ್ಮಾ, ಸಿಲೋನ್ (ಲಂಕಾ) ಮುಂತಾದ ದೇಶಗಳ ಜನಗಳಿಂದ, ಮಹಾ ಪ್ರಮಾಣ ಗ್ರಂಥವೆಂದು ಪೂಜಿಸಲ್ಪಟ್ಟಿದೆ. ಹಿಂದುಗಳಿಗೆ ಮುಖ್ಯ ಪ್ರಮಾಣಗಳಾದ ವೇದಗಳು, ೧೯ ಉಪನಿಷತ್ತುಗಳು, ೧೬ ವೇದಾಂತ ಗ್ರಂಥಗಳು, ೪ ಧರ್ಮ ಶಾಸ್ತ್ರಗಳು, ಮುಂತಾದ ಗ್ರಂಥಗಳಿಂದಲು, ೧೨ ಬೌದ್ಧ ಗ್ರಂಥಗಳಿಂದಲು ಸಹಸಮಂಜಸ ವಾಕ್ಯಗಳನ್ನು ಗ್ರಂಥಕರ್ತರು ಈ ಗ್ರಂಥಕ್ಕೆ ಉದ್ಧರಿಸಿ ತೋರಿಸಿರುವರು. ಇದಕ್ಕೆ ಮ॥ ಎಂ. ಶಾಮರಾವ್ ಎಂ. ಎ. ಯವರು ಇಂಗ್ಲೀಷಿನಲ್ಲಿ ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು. ಮತ್ತು ನಮ್ಮ ಮೈಸೂರು ಶ್ರೀಮನ್ಮಹಾರಾಜರವರ ಅಪ್ಪಣೆಯ ಪ್ರಕಾರ ಅವರ ನಾಮಾಂಕಿತದಿಂದ ಪ್ರಚುರ ಪಡಿಸಲ್ಪಟ್ಟಿದೆ. ಇದರಲ್ಲಿ ಜಪಾನ್ ದೇಶದಲ್ಲಿರುವ ಲೋಕಾಶ್ಚರ್ಯಕರವಾದ ಬುದ್ಧದೇವರ ಕಂಚಿನ ಪ್ರತಿಮೆಯ ಭಾವಚಿತ್ರವೂ, ಮೈಸೂರು ಶ್ರೀಮನ್ಮಹಾರಾಜರವರ ಜಿ. ಸಿ. ಎಸ್. ಐ. ಎಂಬ ಬಿರುದಿನಿಂದ ಕೂಡಿದ ಭಾವಚಿತ್ರವು ಮತ್ತು ಗ್ರಂಥಕರ್ತರ ಭಾವಚಿತ್ರವೂ ಸಹ ಇರುತ್ತವೆ. ಈ ಪುಸ್ತಕದ ಅನೇಕ ವಿಧವಾದ ಔನ್ನತ್ಯಗಳು ಪುಸ್ತಕದಿಂದಲೇ ವ್ಯಕ್ತವಾಗುವುವು. ಇದರ ಕ್ರಯ:—ವಪ್ಪರಟ್ಟಿನದು, ವಿ. ಪಿ. ಪಿ. ಸಹಿತ ರೂ. ೧—೬—೦, ಸುಂದರವಾದ ವಸ್ತ್ರ ಕಾಗದದ ಬೈಂಡಿನದು ರೂ. ೦—೧೪—೦. ನಮ್ಮ ವಿಳಾಸ.—

ಮೆ॥ ಕೆ. ಬಿ. ಪುಟ್ಟಪ್ಪ, ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

4-12



ಬೆನ್ನಿಲುಬಿನ ನೋವು, ಪಕ್ಕಗಳಲಿ ಆಗುವ ನೋವು, ಕೀಲುಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಅಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಾಂಸಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ತಳೆಯುವ ಬಾಧೆ, ಅಂಗಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮಾಂಸದೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ. ಆದಷ್ಟೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕ್ಷಾರದ ಮುಟ್ಟದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಕ್ಷಾಮದ ಫಂಡು.

ಈಗಿನ ಕ್ಷಾಮದ ನಿವಾರಣಾರ್ಥವಾಗಿ ಮಹನೀಯರಾ ಚಂದಾ ಕೊಡುವುದಾಗಿ ವಾಗ್ದಾನಮಾಡಿರತಕ್ಕ ಸಕಲ ಜನರೂ ತಮ್ಮ ಚಂದಾ ಮೊಬಲಗುಗಳನ್ನು ಈ ಕೆಳಗೆ ರುಜು ಮಾಡುವವರ ಆಫೀಸಿಗೆ ಕಳುಹಿಸಿ ಕೊಟ್ಟು ರಸೀದಿ ಪಡೆಯಬಹುದು.

ತಾ॥ ೬-೩-೧೯೦೯. ಎಂ. ಜಿ. ಕೃಷ್ಣಸ್ವಾಮಿರಾವ್,

ವೈಸ್ ಪ್ರೆಸಿಡೆಂಟ್,

ಸಿಟಿ ಮ್ಯುನಿಸಿಪಲ್ ಕೌನ್ಸಿಲ್, ಮೈಸೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

49-11

ತಲೆನೋವು, ವಾಯುನೋವು, ಸಂಧಿ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂಧುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ನಿವಾರಿಸಿದಂತೆ ನಿಶ್ಚಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದದ್ದರಿಂದಲೇ ಇದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಇದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ.

ಕ್ರಯ ಶೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ಮೇದಮಲೆಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಸನ್ ೧೮೭೬ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೊಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 6-12

(ಸ್ಕಾಟ್ಸ್ ಇಮಲ್ಷನ್)

ಎಂಬೀ ಜೀವನಾ ಔಷಧಿಯನ್ನು ಸ್ವಂತ ಸಂಬಂಧಿಗಳೆಲ್ಲಾ ಅನೇಕ ವೇಳೆ ಪರಿಶೋಧಿಸಿ ಮಾಡಿ, ಸರ್ವೋತ್ತಮವಾದದ್ದೆಂದು ಹೇಳುತ್ತಾರೆ.

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಗಣಿಸಿದೆ:—

ಶ್ವಾಸಕೋಶದ ಅಕ್ರಮಗಳು ; ನಾನಾ ತರದ ಕೆಮ್ಮುಗಳು ;

ಸಕಲವಿಧ ಶೈತ್ಯಗಳು ; ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ.

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಜೀವನಾ ಔಷಧವೂ ಇದೇ.

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮನುಷ್ಯನು ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸಂಜೀವಿನೀ ಔಷಧಾಲಯ, ಮೈಸೂರು.

24-7

ಎಂ. ಎಸ್. ಕುಮಾರಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋಮು, ವಾಯುನೋವುಗಳೂ. ಛಳಿಜ್ವರ, ಕ್ಷಯ, ಅಜೀರ್ಣ, ತಲೆನೋವು, ನಿತ್ರಾಯಾಸ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕು, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಪಿಂಡ, ಬಲ, ಸ್ವರ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ. ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ.—ನಾನಾ ಬಗೆ ಜ್ವರಗಳು, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಪರಿಹಾರ ಔಷಧ. ಅಪರಿಹಾರ ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ —ಇ ವಿಶಕ್ತೋದ್ಭವನ ಸೋಕುತ್ತದ್ದ ರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೆಟ್ಟಿ ೧ಕ್ಕೆ ೧ ರೂಪಾಯಿ

ಕಾಲಕೂಟ ವಟಿಕ—ಪ್ಲೇಗ್ ಗಡ್ಡೆ ಮೊದಲಾದ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ.

ಸುಮಿತ್ರ ಬಿಂದು.—ಉರಿಗಣ್ಣು, ಕೆಂಗಣ್ಣು, ಮಬ್ಬುಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮಿದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮಿದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ. ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ.

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ. ಪ್ರತಿ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಆದಾಗ್ಗೆ ಟೇಬಲ್ ಇಟ್ಟು ಬರೆಯಿರಿ

ಪಿ. ಕೆ ಸ್ವಾಮಿ,

ಪ್ರೊಪ್ರೈಟರ್

೧ನೇ ಸಂಪುಟ. ಕನ್ನಡ ಕಥಾಸರಿತ್ಸಾಗರ. ಪುಟಗಳು ೩೬೦.

37 2

ನವರಸಯುಕ್ತವಾಗಿ ಪೂರ್ವ ಕವಿ ಸೋಮದೇವನಿಂದ ಸಂಸ್ಕೃತದಲ್ಲಿ ರಚಿಸಿ ಈಗ ಮಾತ್ರ ಕನ್ನಡದಲ್ಲಿ ಸೊರಬ ಎ. ವಿ. ಸ್ಕೂಲ್ ಹೆಡ್ಮಾಸ್ಟರ್ ಮ॥ ರಾ॥ ಎನ್. ಶ್ರೀಕಂಠಯ್ಯ ಬಿ. ಎ. ಯವರಿಂದ ರಚಿತವಾಗಿ ಮ॥ ರಾ॥ ಭಾರತ ಸಂಪಂಗಿರಾಮಯ್ಯನವರಿಂದ ಪ್ರಕಟಿಸಿದ್ದು. ಕ್ರಯ ೧-೮-೦, ೨ ೩ನೇ ಸಂಪುಟಗಳು ಜಾಗ್ರತೆ ವಿಕರಿಗೆ ಸಿದ್ಧವಾಗುತ್ತೆ.

ಗೀತಾಮೃತ ಮಹೋದಧಿ.—ಗೀತಾಮೃತ ಪಾನಮಾಡಿ ಧನ್ಯರಾಗಬೇಕೆಂಬ ಮಹಾಶಯರಿಗೆಲ್ಲಾ ಕೃಷ್ಣಾರ್ಜುನರ ಸಂವಾದವನ್ನು ಸುಲಭವಾಗಿ ತಿಳಿಯುವಂತೆ ತಿಳಿಗನ್ನಡದಲ್ಲಿ ಬರೆದಿ. ಅತ್ಯಂತೋಪಕಾರಿ ಕ್ರಯ ೦-೫-೦ ಆಣೆ

ಪ್ರಶ್ನೋತ್ತರ ಲೇಖ್ಯಬೋಧಿನಿ ಸಾಲ್ವಾನಿ, ಪುಟಗಳು ೩೭೦, ಕ್ರಯ ೧-೪-೦, ಆಯಾ ಮಾತಪದ್ಧತಿಯನ್ನು ಅನುಸರಿಸಿ ಸರ್ವರಿಗೂ ಬರೆಯುವ ಮರ್ಯಾದೆ ಮತ್ತು ಪತ್ರಗಳು. ರೆವಿನ್ಯೂ ದರಖಾಸ್ತು, ಮಾರ್ಜಿನಗೀ, ಅಪೀಲ್ ರೆವಿಷನ್, ಮೂಲ್ಕು ಪ್ರಕಾರ ವೈಕರಿಗ ರಿಯಾಯಿತಿ ಮೊರೆಯುವ ಬಗೆಬಗೆಯ ಅರ್ಜಿಗಳು, ಸಿವಿಲ್ ದಾವಾ, ಪ್ರತಿವಾದಿಯ ಎದುರುತ್ತರ. ವಿಚಾರಣೆ. ಡಿಕ್ರಿ, ಜಡ್ಜ್‌ಮೆಂಟ್, ದಾಯಭಾಗ ಕ್ರಮಗಳು, ಪೋಲೀಸಿನವರು ಮತ್ತು ಕೋರ್ಟುಗಳಿಗೆ ಇರುವ ಅಧಿಕಾರದ ಪರಿಮಿತಿ, ಇಂಜಿನಿಯರ್, ಫಾರೆಸ್ಟು, ಸಾನಿಟರಿ, ಎಕ್ಸೈಜು, ವಿದ್ಯಾಭ್ಯಾಸ, ಮ್ಯುನಿಸಿಪಲ್ ಈ ಇಲಾಖೆಗಳ ಬಗೆಬಗೆ ಸಂಗತಿಗಳು, ಆಧಾರ, ಭೋಗ್ಯ, ಕ್ರಯ, ದಾನ, ಪಾಲು, ಮರಣಶಾಸನ, ಸಾರೀಖಿದ್ಮತ್ತು, ಮೊದಲಾದುವುಗಳನ್ನು ಬರೆಯುವ ವಿಧಿ, ಅನುಭವ, ಸಿವಿಲ್ ಪ್ರೊಸೀಜರ್ ಕೋಡು, ಇಂಡಿಯನ್ ಪೀನಲ್ ಕೋಡು, ಹಿಂದೂ ಲಾ, ಮಹಮದೀಯ ಲಾ, ರಿಜಿಸ್ಟ್ರೇಷನ್ ಆಕ್ಟ್, ಕಂಪನೀಸ್ ಆಕ್ಟ್, ಲ್ಯಾಂಡ್ ಅಕ್ವಿಜಿಷನ್. ಸ್ಟಾಂಪು ಆರಂಸು ಆಕ್ಟು, ಎಲ್ಲಾ ವರ್ತಕರಿಗೂ ಉಪಯೋಗವಾದ ಸೋಜುಮಗಣ, ನಾನ ಭಾಷಿಕ ಚೆಕ್ಕು, ಇವುಗಳನ್ನು ಬರೆಯುವ ರೀತಿ ಮೊದಲಾದವುಗಳ ಸಾರಾಂಶವನ್ನೆಲ್ಲಾ ವಿವರಿಸಿದೆ. ವಿಳಾಸ.—

ಮ್ಯಾನೇಜರ್, ಕರ್ನಾಟಕ ಪುಸ್ತಕಶಾಲಾ, ಲಕ್ಕೂರ್ ಪೋಸ್ಟು (ಮಾಲೂರ್, ಕೋಲಾರ).

ವೃತ್ತಾಂತ ಪತ್ರಿಕೆ

೧೯೦೯ ನೇ ಇಸವಿ ಮಾರ್ಚಿ ತಾ. ೨೫ ನೇ ಗುರುವಾರ

ಹಿಂದೂ ಮತವನ್ನು ತ್ಯಜಿಸುವವರ ಕಷ್ಟ ನಷ್ಟಗಳು.

ಹಿಂದೂ ಧರ್ಮಶಾಸ್ತ್ರವು ಬಹಳ ಹೊಸದಾದದ್ದು, ಅದು ಯಾವ ಜಾತಿಯವರಿಗೆ ಎಷ್ಟು ಮಟ್ಟಿಗೆ ಅನ್ವಯವಾಗುವುದೋ ಸುಲಭವಾಗಿ ಹೇಳಲಾಗದು. ಅದರಲ್ಲಿ ಕೆಲವು ಭಾಗಗಳು ದ್ವಿಜರಿಗೆ ಅನ್ವಯವಾಗುತ್ತವೆ. ಇನ್ನು ಕೆಲವು ಶಾಸನಗಳು ಕೀಳು ದರ್ಜೆಯ ಪ್ರಜೆಗಳಿಗೆ ಅನ್ವಯಿಸತಕ್ಕವುಗಳಾಗಿವೆ. ಮೈಸೂರು ಸಂಸ್ಥಾನದಲ್ಲಿರುವ ಸಮಸ್ತ ಹಿಂದುಗಳಿಗೂ ದಾಯಭಾಗ ವಿಚಾರವಾದ ಕಾನೂನು ಒಂದೇ ಎಂದು ಕಂಡುಬರುವುದು.

ಒಬ್ಬ ಮನುಷ್ಯನು ಹಿಂದುಗಳ ಆಚಾರವಿಚಾರಗಳನ್ನು ತ್ಯಜಿಸಿದಲ್ಲಿ ಅವನು ಹಿಂದೂ ಧರ್ಮಶಾಸ್ತ್ರ ರೀತಿಯಾಗಿ ತನ್ನ ಪಿತರಾರ್ಜಿತ ಸೊತ್ತಿನಲ್ಲಿ ಪಾಲು ಕಳೆದುಕೊಳ್ಳುತ್ತಾನೆ; ಮತ್ತು ಅವನು ತನ್ನ ಸ್ವಂತ ಮಕ್ಕಳನ್ನು ತನ್ನ ಪೋಷಣೆಯಲ್ಲಿಟ್ಟುಕೊಂಡು ಸಂರಕ್ಷಣೆ ಮಾಡಲು ಅರ್ಹನೆನಿಸುವುದಿಲ್ಲ. ಅವನ ಸ್ಥಿತಿಯು ಈ ರೀತಿಯಾಗಿರುತ್ತದು ಮೈಸೂರು ಸಿವಿಲ್ ಕೋರ್ಟುಗಳಲ್ಲಿ ಉಕ್ತವಾಗಿರುವ ತೀರ್ಮಾನಗಳಿಂದ ವೇದ್ಯವಾಗುವುದು.

ಈಗಿನ ವಿದ್ಯಮಾನಗಳನ್ನು ನೋಡಲಾಗಿ ಸಾಂಸರ್ಗಿಕ ರಾಜಕೀಯಗಳೇ ಮೊದಲಾದ ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿಯೂ ಬದಲಾವಣೆಗಳೂ ಕಂಡುಬರುತ್ತಿರುವವು. ಮತ್ತು ಬ್ರಿಟಿಷ್ ಇಂಡಿಯಾದಲ್ಲಿರುವ ಪ್ರಜೆಗಳಿಗೆ ಈ ವಿವಾದ ಕುಂದು ಕೊರತೆಗಳನ್ನು ನಿವಾರಣೆ ಮಾಡಿರುತ್ತಾರೆ. ಇಂಥಾದ್ದರಲ್ಲಿ ಮೈಸೂರು ಸಂಸ್ಥಾನದ ಪ್ರಭುಗಳೂ ಸಹ ತಮ್ಮ ಪ್ರಜೆಗಳಿಗಿರುವ ಅಂಥಾ ನ್ಯೂನತೆಗಳನ್ನು ಹೋಗಲಾಡಿಸುವುದು ನ್ಯಾಯವೂ ಸಹಜವೂ ಆಗಿರುವುದು. ಯಾಕೆಂದರೆ ಒಬ್ಬ ಪ್ರಜೆಯು ತನಗೆ ನ್ಯಾಯವೂ ಯೋಗ್ಯವೂ ಎಂದು ಕಂಡುಬರುವ ಯಾವ ಕಾರಣಕ್ಕಾಗಿಯೋ ತಾನು ಹುಟ್ಟಿದ ಮತವನ್ನೂ ಆ ಮತಕ್ಕೆ ಸಹಜವಾದ ಆಚಾರವ್ಯವಹಾರಗಳನ್ನೂ ತ್ಯಜಿಸಿಬಿಡಬಹುದು; ಅಂಥಾ ಪ್ರಜೆಗೆ ಕುಂದು ಕೊರತೆಗಳನ್ನು ಉಂಟುಮಾಡೋಣವದರಲ್ಲಿ ಬಹಳ ಕಷ್ಟ ನಷ್ಟಗಳುಂಟಾಗುವವು.

ಮನುಷ್ಯನಾದವನು ಆಲೋಚನೆ ಮಾಡದಂತೆ ನಾವು ಅಡ್ಡಿ ಬಂಧಗಳನ್ನು ಕಲ್ಪಿಸುವುದು ಯಾರಿಂದಲೂ ಸಾಧ್ಯವಲ್ಲ. ಅವನು ದಿನೇ ದಿನೇ ಬೆಳವಣಿಗೆ ಹೊಂದುತ್ತಾನೆ. ಹೊಸ ಅಭಿಪ್ರಾಯಗಳು ಅವನ ಮನಸ್ಸಿಗೆ ಹೊಳೆಯುವವು; ಪ್ರಪಂಚದಲ್ಲಿ ಜನಾಂಗಗಳ ಅಭಿವೃದ್ಧಿಯನ್ನೂ ಕಾರ್ಯಭಾಗಗಳನ್ನೂ ಚರಿತ್ರೆಗಳಿಂದ ಓದಿ ತಿಳಿಯುತ್ತಾನೆ. ಮತ್ತು ತನ್ನ ದೇಶದ ಜನರು ಅವನತಿ ಹೊಂದಿದ್ದಾದರೆ ಅವರು ಅನೇಕ ಭಾಗಗಳಲ್ಲಿ ಸ್ವದ್ವಾಚಾರ ಅಭಿಪ್ರಾಯಗಳನ್ನು ತ್ಯಜಿಸಿ ಉತ್ತಮ ತರದ ಬದಲಾವಣೆಗಳನ್ನು ಮಾಡಿ ಅವುಗಳನ್ನು ಆಚರಿಸುತಾ ಬರಬೇಕೆಂಬದಾಗಿ ಅವನು ಸತ್ಯವಾಗಿ ತಿಳಿದುಕೊಳ್ಳಬಹುದು. ಹೀಗೆ ಹಿರಿಯರ ಸ್ವದ್ವಾಚಾರಗಳನ್ನೂ ಅಭಿಪ್ರಾಯಗಳನ್ನೂ ತ್ಯಜಿಸಿರುವಂಥಾ ಪ್ರಜೆಗಳು ಮೈಸೂರಿನಲ್ಲಿ ಕೇವಲವಾಗಿ ಇಲ್ಲವೋ? ಹಿಂದೂ ಧರ್ಮಶಾಸ್ತ್ರವನ್ನು ಕ್ರಮವಾಗಿಯೂ ಕಟ್ಟುನಿಟ್ಟಾಗಿಯೂ ಆಚರಿಸಿದ ಪಕ್ಷದಲ್ಲಿ ಅನೇಕಾನೇಕರನ್ನು ಜಾತಿಯಿಂದ ಬಹಿಷ್ಕರಿಸಬೇಕಾಗುವುದಿಲ್ಲವೋ? 'ಎಷ್ಟು ಜನರು ಸಮುದ್ರಯಾನ ಮಾಡಿರುವುದಿಲ್ಲ' 'ಎಷ್ಟು ಮಂದಿ ಮತಕೃತ್ಯಗಳನ್ನೂ ಆಚಾರ ವಿಚಾರಗಳನ್ನೂ ಮೀರಿ ನಡೆದಿರುವುದಿಲ್ಲ' ಹೀಗಿದ್ದಾಗ್ಯೂ ಅವರು ಸ್ವದ್ವಾಚಾರಗಳನ್ನು ಮೀರಿ ನಡೆದಿರುತ್ತೇನೆಂದು ಬಹಿರಂಗವಾಗಿ ಹೇಳದೆ ಹೋಗಿದ್ದರಿಂದ ಅವರಿಗೆ ಏನೂ ಆಗದೆ ಜಾತಿಯಲ್ಲೇ ಇದ್ದುಕೊಂಡಿರುತ್ತಾರೆ. ಆದರೆ ಯಾವನಾದರೂ ತನ್ನ ಮನೋಭಿಪ್ರಾಯಗಳನ್ನು ಸ್ಪಷ್ಟವಾಗಿ ಒಪ್ಪವಾಗಿ ಒಪ್ಪಿಕೊಂಡು ಅದನ್ನು ಬಹಿರಂಗವಾಗಿ ತೋರಿಸುವುದಾದರೆ ಅಂಥವನು ಕಷ್ಟ ನಷ್ಟಗಳಿಗೆ ಗುರಿಯಾಗುವನು. ಸಾಮಾನ್ಯವಾಗಿ ತಿಳುವಳಿಕೆ ಸಾಲದಂಥಾ ಜನರು ಅವನನ್ನು ನಿಂದಿಸಿ ಅಪಹಾಸ್ಯಮಾಡಿ ತಿರಸ್ಕರಿಸುವರು, ಇದಿಷ್ಟೇ ಅಲ್ಲ ಅವನು ಸಹಿಸಿಕೊಳ್ಳಬೇಕಾದದ್ದೇನೋ ಸಹಜ. ಆದರೆ ಪ್ರಜಾಪಾಲನೆಯನ್ನು ವಹಿಸಿರುವಂಥಾ ಗವರ್ನ್‌ಮೆಂಟಿನವರು ಈಗ ಮಾಡುತ್ತಿರುವ ರೀತಿಯಲ್ಲಿ ನಿಕ್ಷಪಾತವಾಗಿ ನಂಬಿ ಬಹಿರಂಗವಾಗಿ ನಡೆದುಕೊಳ್ಳುವಂಥಾ ಮನುಷ್ಯನಿಗೆ ಕಷ್ಟ ನಷ್ಟಗಳಿಗೆ ಈಡುಮಾಡುವುದು ತರವಲ್ಲ.

ಈ ರೀತಿಯಾದ ಕಷ್ಟ ನಷ್ಟಗಳನ್ನು ಕುರಿತು ಆಲೋಚನೆ ಮಾಡಿಕೊಳ್ಳುವದಕ್ಕಾಗಿ ಕಳೆದ ಬುಧವಾರ ಕೆಲವು ದೊಡ್ಡ ಮನುಷ್ಯರಾದ ಪ್ರತಿನಿಧಿಗಳು ಹೋಗಿ ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜರವರನ್ನು ಕಂಡರು. ಅವರು ಆ ಪ್ರತಿನಿಧಿಗಳನ್ನು ಆದರಪೂರ್ವಕವಾಗಿ ಕಂಡು, ಅವರು ಓದಿ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆಯನ್ನು ಆಲಿಸಿ ಅಂಗೀಕರಿಸಿ, ಅದಕ್ಕೆ ವಿಶೇಷ ಗಮನ ಕೊಡುತ್ತೇವೆಂದು ಅಪ್ಪಣೆ ಕೊಡುತ್ತಾರೆ. ಗವರ್ನ್‌ಮೆಂಟಿನವರು ಈ ವಿಚಾರವನ್ನು ಇತ್ಯರ್ಥಮಾಡದೆ ಅನೇಕ ವರುಷಗಳಿಂದ ಬಿಟ್ಟುಬಿಟ್ಟಿರುವರು. ಈಗಲಾದರೂ ಈ ವಿಷಯದಲ್ಲಿ ಕಾನೂನ್ ಏರ್ಪಾಡನ್ನು ಮಾಡಿದರೆ ತುಂಬಾ ಉಪಕಾರವಾಗುವುದು. ಈಗಿರುವ ಕಾನೂನಿನ ನಿರ್ಬಂಧಗಳು ಸ್ವತಂತ್ರ್ಯವನ್ನು ಪ್ರೋತ್ಸಾಹ ಪಡಿಸುವದಾಗಿವೆ. ಇದರಿಂದ ಶ್ರೀಮನ್ ಮಹಾರಾಜರವರ ಪ್ರಜೆಗಳು ಸತತವಾದ ಅಭಿವೃದ್ಧಿ ಪರಂಪರೆಯನ್ನು ಹೊಂದುವುದಕ್ಕೆ ಅನುಕೂಲವಾಗುವಂತಿಲ್ಲ. ಪ್ರತಿ ಒಬ್ಬ ಮನುಷ್ಯನಿಗೆ ಅವನ ಬುದ್ಧಿ ಮನೋಭಿಪ್ರಾಯಗಳು ಸಮ್ಮತಿಸುವ ರೀತಿಯಲ್ಲಿ ಧಾರಾಳವಾಗಿ ವರ್ತಿಸುವುದಕ್ಕೆ ಅವಕಾಶವಿರಬೇಕು; ಹೀಗೆ ವರ್ತಿಸುವುದಕ್ಕೆ ಅವನ ಪಿತರಾರ್ಜಿತ ಆಸ್ತಿಯು ಪಾಲಿಗಾಗಲಿ, ತನ್ನ ಮಕ್ಕಳ ಸ್ವಾಧೀನ ಸಂರಕ್ಷಣೆಗೆಗಾಗಲಿ ಯಾವುದೊಂದು ಲೋಪವೂ ಕೊರತೆಯೂ ಉಂಟಾಗಕೂಡದು. ಅನಾವಶ್ಯಕವಾದ ಅನೇಕ ವಿರೋಧಾಭಿಪ್ರಾಯಗಳನ್ನು ಹುಟ್ಟಿಸಿರುವ ಈ ವಿಷಯವನ್ನು ಶ್ರೀಮನ್ ಮಹಾರಾಜರವರು ದಿವ್ಯಚಿತ್ತಕ್ಕೆ ತಂದುಕೊಂಡು ಬೇಗನೆ ಇತ್ಯರ್ಥಪಡಿಸುವರೆಂದು ನಂಬಿ ಹಾರೈಸುತ್ತೇವೆ.

ಯುಗಾದಿ ಹಬ್ಬವು.

ಕಳೆದ ೨೨ ನೇ ಸೋಮವಾರ ಸರ್ವರೂ ಯುಗಾದಿ ಹಬ್ಬವನ್ನು ಆಚರಿಸಿದ್ದಾರೆ. ಬೇರೆ ಹಬ್ಬಗಳಿಲ್ಲದಂಥಾ ಒಂದು ವಿಶೇಷತ್ವವು ಈ ಹಬ್ಬಕ್ಕೆ ಉಂಟು. ಅದೇನಂದರೆ ಇದು ಸರ್ವಸಮ್ಮತವಾಗಿಯೂ ಸರ್ವರಿಗೆ ಹುರುವಾಗಿಯೂ ಇದೆ. ಕೆಲವು ಹಿಂದೂ ಜನಗಳ ಹಬ್ಬಗಳನ್ನು ಮುಸಲ್ಮಾನರೂ ಕ್ರಿಸ್ತರೂ ಆಚರಿಸುವದಿಲ್ಲ. ಕ್ರಿಸ್ತರೂ ಮುಸಲ್ಮಾನರೂ ಆಚರಿಸುವ ಬೇರೆ ಕೆಲವು ಹಬ್ಬಗಳನ್ನು ಹಿಂದೂ ಜನಗಳು ಆಚರಿಸುವದಿಲ್ಲ. ಆದರೆ ಯುಗಾದೀ ಹಬ್ಬವನ್ನು ಸರ್ವರೂ ಒಂದು ಕಾಲವಲ್ಲ; ಮತ್ತೊಂದು ಕಾಲದಲ್ಲಿಯಾದರೂ ಆಚರಿಸೇ ಆಚರಿಸುತ್ತಾರೆ. ಇದಲ್ಲದೆ ಕಾಲದ ಋತುವು ಸಹ ಯುಗಾದಿಯನ್ನು ಸೂಚಿಸುವದಾಗಿದೆ. ಮಾವು, ಹುಣಿಸೆ ಮುಂತಾದ ಮರಗಳು ಹಣ್ಣಾದ ಎಲೆಗಳನ್ನು ಉದುರಿಸಿ ಕೋಮಲವಾಗಿರತಕ್ಕ ಎಳೆ ಪಲ್ಲವ ಪುಷ್ಪಗಳನ್ನೂ ನೂತನವಾಗಿ ಹೊದ್ದುಕೊಂಡು ನೂತನ ಯುಗದ ಆರಂಭಕ್ಕಾಗಿ ನಾವು ಹೊಸ ಉಡುಪಿನಿಂದ ಅಲಂಕಾರಯುಕ್ತರಾಗಿರುವ ಪ್ರಕಾರ ನೀವೂ ಸಕಲ ಸದ್ಗುಣಗಳಿಂದ ಅಲಂಕೃತರಾಗಿ ಹೊಸ ವರುಷವನ್ನು ಎದುರುಗೊಳ್ಳಿರಿ ಎಂದು ಮನಷ್ಯರಿಗೆ ಸಾರುತ್ತಿರುವವೋ ಎಂಬಂತಿವೆ.

ಆದರೆ ಯುಗಾದಿ ಹಬ್ಬದ ಊಟ, ಉಪಚಾರ, ಉಡಿಗೆ, ತೊಡಿಗೆಗಳ ಸಂಭ್ರಮದಲ್ಲಿ ನಾವು ನಮ್ಮ ಕರ್ತವ್ಯವನ್ನು ಮರೆತು ಹೋಗಬಹುದೋ? ಯುಗಾದಿ ಹಬ್ಬದ ಅಭಿಪ್ರಾಯವೇನು? ಕಳೆದ ಕೀಲಕನಾಮ ಸಂವತ್ಸರದ ಕಾಲವು ಸಂದುಹೋದರೂ ಕರುಣಾಳುವಾದ ಭಗವಂತನು ನಮ್ಮನ್ನು ಉಳಿಸಿದ್ದಾನೆ. ಆ ಸಂವತ್ಸರದಲ್ಲಿ ಎಷ್ಟೋ ವ್ಯಾಧಿ ವಿಪತ್ತುಗಳೂ ಲೋಕದಲ್ಲಿ ಹರಡಿದ್ದವು. ನಮಗೆ ಬಹಳ ಸಮೀಪವಾಗಿರುವ ಹೈದರಾಬಾದಿನಲ್ಲಿ ಜಲಪ್ರಳಯವಾಗಿ ಸಾವಿರಾರು ಮಂದಿ ಮಡಿದು ಹೋದರು. ಅನೇಕರು ಮನೆ, ಮಠಗಳನ್ನೂ ಹೆಂಡರು, ಮಕ್ಕಳನ್ನೂ ತಂದೆತಾಯಿಗಳನ್ನೂ, ಹೋಗಲಾಡಿಸಿಕೊಂಡು ನಿರ್ಗತಿಕರಾದರು. ನಮಗೆ ದೂರವಾಗಿರುವ ಕೆಲವು ದ್ವೀಪಾಂತರಗಳಲ್ಲಿ ಪರ್ವತಗಳು ಬೆಂಕಿ ಗಂಧಕಗಳನ್ನು ಕಾರಿ ಲಕ್ಷಾಂತರ ಜನಗಳು ಮೃತಪಟ್ಟರು. ಭೂಮಿಯು ಬಿರಿದು ಅನೇಕರನ್ನು ನುಂಗಿಬಿಟ್ಟಿತು. ಇಂಥ ಅನಾಹುತಗಳಿಗೆ ನಮ್ಮನ್ನು ಬಿಡಿಸಿ ಕಾಪಾಡಿದಾತನು ಯಾರು? ಲಕ್ಷಾಂತರ ಜನಗಳು ಅಳಿದು ಹೋಗಿರುವಾಗ್ಗೆ ನಾವು ಮಾತ್ರ ಉಳಿದಿರುವದಕ್ಕೆ ನಾವೇನು ಪುಣ್ಯವನ್ನು ಮಾಡಿದ್ದೆವು. ನಾವು ಅಳಿದುಹೋದವರಿಗಿಂತ ಹೆಚ್ಚು ಪುಣ್ಯಾತ್ಮರೆಂದು ಹೇಳುವದಕ್ಕೆ ನಮ್ಮಲ್ಲಿ ಯಾರಿಗೂ ಬಾಯಿ ಬರಲಾರದು. ನಮ್ಮನ್ನು ಸಮಾಧಾನದಿಂದ ಕಾಪಾಡಿ ಸೌಮ್ಯ ಸಂವತ್ಸರದ ಹೊಸ ಯುಗಾದಿಯನ್ನು ನೋಡಿ ಆಚರಿಸುವಂತೆ ಮಾಡಿರುವದು ಕೃಪಾನಿಧಿಯಾದ ದೇವರ ಮಹಾ ಕನಿಕರವೇ ಹೊರತು ಮತ್ತೇನೂ ಅಲ್ಲವಷ್ಟೆ. ಹೀಗಿರುವದರಿಂದ ಈ ಮಹೋತ್ಸವದ ಕಾಲದಲ್ಲಿ ನಮ್ಮ ಕರ್ತವ್ಯವೇನು? ಕೃತಜ್ಞತೆಯಿಂದ ಆತನಿಗೆ ಅಡ್ಡಬಿದ್ದು ನಮ್ಮ ಅಯೋಗ್ಯತೆಯನ್ನು ಅರಿಕೆಮಾಡುತ್ತ ಉಪಕಾರಸ್ಮರಣೆಯಿಂದ ಆತನನ್ನು ಭಜಿಸಬೇಕಲ್ಲವೇ? ಆತನ ಮಹೋಪಕಾರಗಳನ್ನು ಅನುಭವಿಸಿರುವ ನಾವು ಆತನ ಉಪಕಾರಗಳಿಗೆ ಬದಲಾಗಿ ಏನೂ ಸಲ್ಲಿಸಲಾರೆವು. ಆತನು ಸಹ ನಮ್ಮಿಂದ ಏನೂ ಕೇಳದೆ ನಾವು ಸತ್ಯವಂತರಾಗಿಯೂ ಪರಿಶುದ್ಧರಾಗಿಯೂ ನೀತಿವಂತರಾಗಿಯೂ ಬದುಕಬೇಕೆಂದು ಆಜ್ಞಾಪಿಸುತ್ತಾನೆ. ಕೀಲಕನಾಮ ಸಂವತ್ಸರದ ವ್ಯಾಧಿ ವಿಪತ್ತುಗಳನ್ನು ನಮ್ಮಿಂದ ದೂರಮಾಡಿ ಆತನು ಕಾಪಾಡಿದ್ದರೂ ಈ ಲೋಕದಲ್ಲಿ ನಾವು ಶಾಶ್ವತವಾಗಿರುವದಿಲ್ಲವೆಂಬುವದೇನೂ ಸ್ಪಷ್ಟವಾಗಿದೆ. ನಮ್ಮ ಆಯುಸ್ಸಿನ ಕಾಲದಲ್ಲಿ ಒಂದು ಸಂವತ್ಸರವು ಸಂದುಹೋಯಿತು. ಇನ್ನು ಎಷ್ಟು ಯುಗಾದಿಗಳನ್ನು ನಾವು ನೋಡುವೆವೋ. ಸೌಮ್ಯ ಸಂವತ್ಸರದ ಅಂತ್ಯವನ್ನು ಮುಟ್ಟುವೆವೋ ಏನೋ ತಿಳಿಯದು. ನಾವು ದೇವರ ಸನ್ನಿಧಾನಕ್ಕೆ ಹೋಗಿ ನಮ್ಮ ಲೆಖ್ಖವನ್ನು ಒಪ್ಪಿಸಬೇಕಾದ ಕಾಲವು ಸಮೀಪವಾಗಿರುವದರಿಂದ ಈಗಿಂದಲೇ ನಮ್ಮ ತಪ್ಪುಗಳನ್ನು ತಿದ್ದಮಾಡಬೇಕಷ್ಟೆ.

ಯುಗಾದಿ ಹಬ್ಬದ ದಿನ ಹೊಸ ವರುಷದ ಪಂಚಾಂಗಗಳನ್ನು ಓದುವದೂ ಭಟ್ಟರ ಬಳಿ ಗುಂಪು ಗುಂಪಾಗಿ ನೆರೆದು ಬಂದು ಕೇಳುವದೂ ಸರ್ವಸಾಧಾರಣವಾದ ವಾಡಿಕೆಯಾಗಿದೆ. ಆ ದಿನ ಭಟ್ಟರು ಮುಂದಣ ವರುಷದಲ್ಲಿ ಇಷ್ಟಿಷ್ಟು ಮಳೆಯಾಗುವದು, ಇಷ್ಟಿಷ್ಟು ಫಲವಾಗುವದು, ಇಂತಿಂಥಾ ಗಿಡ ವೃಕ್ಷಗಳಿಗೂ ಇಂತಿಂಥಾ ಮೃಗ ಜಂತುಗಳಿಗೂ ಇಂತಿಂಥಾ ಮನುಷ್ಯರಿಗೂ ವೃದ್ಧಿಯೂ, ಇಂತಿಂಥ ಮೃಗ, ಪಕ್ಷಿ, ಗಿಡ ಮನುಷ್ಯರಿಗೆ ಹಾನಿಯೂ ಸಂಭವಿಸುವವೆಂದು ಹೇಳುವ ಪದ್ಧತಿಯುಂಟು. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವೇನಂದರೆ,— ಮುಂದೆ ಆಗ ಹೋಗ ಬಹುದಾದ ಕಾರ್ಯಾಕಾರ್ಯಗಳನ್ನೂ, ಹಾನಿವೃದ್ಧಿಗಳನ್ನೂ ಮೊದಲೇ ತಿಳಿದು ಹೇಳುವ ಕಾಲಜ್ಞಾನವು ಮಾನವರಿಗೆ ಅಸಾಧ್ಯವಾಗಿದೆ. ದೇವರು ತಾನು ಮುಂದೆ ಮಾಡಬೇಕೆಂದಿರುವ ಕಾರ್ಯಗಳನ್ನು ಮನುಷ್ಯನ ಬುದ್ಧಿಗೆ ನಿಲುಕದಂತೆ ಅಗೋಚರ ಮಾಡಿದ್ದಾನೆ. ಆತನ ಚಿತ್ತವು ಹೀಗಿರುವಲ್ಲಿ ಮುಂದಣ ಕಾಲದಲ್ಲಿ ಆಗಹೋಗುವ ಮಳೆ ಬೆಳೆ ಹಾನಿ ವೃದ್ಧಿಗಳನ್ನು ಯಾವ ಮನುಷ್ಯನಾಗಲಿ ತಿಳಿಸುತ್ತೇನೆಂದು ಹೇಳುವದು ಸರ್ವಶಕ್ತನ ಚಿತ್ತಕ್ಕೆ ವಿರುದ್ಧವಾಗಿದೆ. ಹಾಗಾದರೆ ಈ ವಿಷಯದಲ್ಲಿ ನಮ್ಮ ಕರ್ತವ್ಯವೇನು? ಪ್ರೇಮಾಬ್ಧಿಯಾದ ಆತನ ಚಿತ್ತಕ್ಕೆ ನಮ್ಮನ್ನು ಒಪ್ಪಿಸಿ, ನಿನ್ನ ಚಿತ್ತದ ಸಂಯೋಜನೆಯ ಪ್ರಕಾರ ನಡೆಯಾಗಲಿ. ನೀನು ಮಾತ್ರ ದುಷ್ಕಾಲದಲ್ಲಿಯೂ ಸುಕಾಲದಲ್ಲಿಯೂ ನನ್ನ ಕೈಬಿಡದೆ ಕಾಯುತ್ತಿರು ಎಂದು ಬೇಡಬೇಕು. ಇಂಥವರಿಗೆ ಸೌಮ್ಯ ಸಂವತ್ಸರವು ಸೌಮ್ಯವಾಗಿಯೇ ಪರಿಣಮಿಸುವದು ಇದಕ್ಕೆ ಸಂದೇಹವಿಲ್ಲ.

ಸ್ವದೇಶದ ವೃತ್ತಾಂತಗಳು.

ಬೆಂಗಳೂರು ಸಿಟಿ ಬಡಾವಣೆಗಳಿಗೂ ಸುತ್ತುಮುತ್ತಿನ ಗ್ರಾಮಗಳಿಗೂ ವಿದ್ಯುಚ್ಛಕ್ತಿಯ ದೀಪಗಳನ್ನು ಮುಂದಿನ ಕಾಲದಲ್ಲಿ ಇಡತಕ್ಕದ್ದೆಂದು ತೀರ್ಮಾನವಾಗಿದೆ.

ಕೋಲಾರ್ ಜಿಲ್ಲೆಯ ಜನ್ನವಗೆ ಬಳಿ ಮೈಕಿ ಬಾರ್ನ್ ಶಾಫ್ಟ್ ಎಂಬ ಗಣಿಯೊಳಗೆ ಕಳೆದ ವಾರ ಒಂದು ಅನಾಹುತ ನಡೆದು ಇಬ್ಬರು ಕೂಲಿ ಆಳುಗಳು ಮೃತಪಟ್ಟರು, ಇನ್ನು ಐವರಿಗೆ ಗಾಯಗಳಾಗಿವೆ.

ಮದ್ದೂರು ಟವನ್ನನ್ನು ಮ್ಯುನಿಸಿಪಾಲಿಟಿಯಾಗಿ ಮಾಡುವುದಾಗಿಯೂ, ಅದಕ್ಕೆ ಶಿವಪುರ, ಬೆಂಗಳೂರು ಚನ್ನನದೊಡ್ಡಿ ಎಂಬ ಗ್ರಾಮಗಳು ಸೇರಿಸಲ್ಪಡುವುದಾಗಿಯೂ ಸರ್ಕಾರದವರು ಇಸ್ತಿಹಾರು ಕೊಟ್ಟಿದ್ದಾರೆ.

ಶ್ರೀಮನ್ ಯುವರಾಜರು ಕಳೆದ ಶನಿವಾರ ಬೆಂಗಳೂರಿನಲ್ಲಿ ಇಳಿದಾಗ ಅಲ್ಲಿನ ಪ್ರಜೆಗಳು ಅವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಂದು ದಿವ್ಯವಾದ ಕ್ಯಾಸ್ಕೆಟ್ಟಿನಲ್ಲಿಟ್ಟು ಒಪ್ಪಿಸಿ, ತಮ್ಮ ರಾಜಭಕ್ತಿ ಸಂತೋಷಾತಿಶಯಗಳನ್ನು ಪ್ರಕಾಶಪಡಿಸಿದರು.

ಮೈಸೂರು ಸಂಸ್ಥಾನದ ರೆಜಿಸ್ಟ್ರೇಷನ್ ಆಫೀಸುಗಳಲ್ಲಿ ಜನರು ಪುಸ್ತಕಗಳನ್ನು ಹುಡುಕಿ ತಮಗೆ ಬೇಕಾದ ಸಂಗತಿಗಳನ್ನು ತಿಳಿದುಕೊಳ್ಳುವುದಕ್ಕೆ ರೂ. ೧—೮—೦ ಯನ್ನು ಫೀಜುಕೊಡಬೇಕೆಂತಲೂ, ಇದು ೧೯೦೯ ನೇ ಜುಲೈ ೧ ರಿಂದ ಜಾರಿಗೆ ತರಲ್ಪಡುವುದೆಂತಲೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

ರಾಜಧಾನಿಯ ಪ್ರಜೆಗಳು ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮೆ॥ ಆ ಮೆಕಾನಕಿಯವರಿಗೆ ಟೌನ್ ಹಾಲ್ ಬಂಗಲೆಯಲ್ಲಿ ತಾ. ೨೯ ನೇ ಸೋಮವಾರ ರಾತ್ರಿ ಔತಣೋತ್ಸವವನ್ನು ನಡಿಸುವವರಾಗಿದಾರೆ. ಇಲ್ಲಿನ ವಾಲಂಟಿಯರ್ ಎಂಬ ಸೈನಿಕರೂ ನಿನ್ನೆ ರಾತ್ರಿ ಟೌನ್ ಹಾಲಿನಲ್ಲಿ ಅವರಿಗಾಗಿ ಒಂದು ಸಂತೋಷೋತ್ಸವವನ್ನು ಮಾಡುವವರಾಗಿದ್ದರು.

ರಾಜಧಾನಿಯಲ್ಲಿ ಪೋಸ್ಟ್ ಆಫೀಸೂ ಟೆಲಿಗ್ರಾಫ್ ಆಫೀಸೂ ಪ್ರತ್ಯೇಕವಾಗಿಯೇ ಇದ್ದುಕೊಂಡು ಬಂದಿರುತ್ತವೆ. ಇದರಿಂದ ಪ್ರಜೆಗಳಿಗೂ ವರ್ತಕರಿಗೂ ಯಾವಾಗ ಬೇಕಾದರೂ ತಂತೀ ವರ್ತಮಾನಗಳನ್ನು ಕಳುಹಿಸುವುದಕ್ಕೆ ಸೌಲಭ್ಯವುಂಟು. ಈಗ ಪ್ರತ್ಯೇಕವಾಗಿರುವ ಟೆಲಿಗ್ರಾಫ್ ಆಫೀಸನ್ನು ತೆಗೆದು ಹಾಕಿ, ಪೋಸ್ಟ್ ಆಫೀಸಿಗೆ ಕೂಡಿಸಿ ಬಿಡಬಹುದೇ ಎಂದು ಸರ್ಕಾರದವರು ಯೋಚಿಸಿ, ಪ್ರಜೆಗಳ ಅಭಿಪ್ರಾಯವನ್ನು ತಿಳಿಯಬೇಕೆಂದು ಅಪೇಕ್ಷಿಸುತ್ತಾರೆ. ಹೀಗೆ ಬದಲಾವಣೆ ಮಾಡೋಣದರಿಂದ ವರ್ತಕರೇ ಮುಂತಾದ ಪ್ರಜೆಗಳಿಗೆ ತುಂಬಾ ಅನಾನುಕೂಲವಾಗುವುದು. ಈಗ ಯಾವ ಹೊತ್ತಿನಲ್ಲಿ ಬೇಕಾದರೂ ತಂತೀ ವರ್ತಮಾನಗಳನ್ನು ಕಳುಹಿಸ ಬಹುದಾಗಿದೆ. ಪೋಸ್ಟ್ ಆಫೀಸಿಗೆ ಸೇರಿಸೋದ ಮೇಲೆ ಸಾಯಂಕಾಲ ಅಥವಾ ರಾತ್ರಿ ಹೊತ್ತಿನಲ್ಲಿ ವರ್ತಮಾನಗಳನ್ನು ತೆಗೆದುಕೊಳ್ಳದಂತಾಗುತ್ತದೆ. ಆದಕಾರಣ ವರ್ತಕರೂ ಪ್ರಜೆಗಳೂ ಈ ವಿಷಯವನ್ನು ಪರ್ಯಾಲೋಚನೆ ಮಾಡಿ, ತಮ್ಮ ಅಭಿಮತವನ್ನು ಸರ್ಕಾರಕ್ಕೆ ಅರಿಕೆಮಾಡಿಕೊಳ್ಳಬೇಕಾಗಿದೆ.

ಮೈಸೂರು ಗೆಜೆಟ್ ಸಂಗ್ರಹ

ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜರಾದ ಮೆ॥ ಜಸ್ಟಿಸ್ ಎಸ್. ಇಪ್ಪಯ್ಯನವರಿಗೆ ಬೇಸಿಗೆಯ ರಜಾ ಅನುಸರಿಸಿ ಜೂನ್ ತಾ. ೧೫ ರಿಂದ ಅರ್ಧ ಸಂಬಳದ ಮೇಲೆ ಇಪ್ಪತ್ತೇಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹಿರಿಯೂರು ಮತ್ತು ಚಳ್ಳಕೆರೆ ತಾಲ್ಲೂಕುಗಳ ಶಿರಸ್ತೇದಾರರಾದ ಬಿ ವೆಂಕಟರಾಯರಿಗೂ, ಟಿ ನರಸಿಂಗರಾಯರಿಗೂ ತಂಗಾಮಿಯಾಗಿ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಲ್ಪಟ್ಟಿದೆ.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಮಾಡಿದೆ:— (೧) ಮೆ॥ ಆ ಸಿ ಸದಾಶಿವಾ ಪಿಳ್ಳೆಯವರನ್ನು ಹೊಸದುರ್ಗದಿಂದ ಜಗಲೂರು ತಾಲ್ಲೂಕಿಗೆ (೨) ಮೆ॥ ಜಿ. ನಾರಾಯಣ ರಾಯರನ್ನು ಜಗಲೂರಿನಿಂದ ಹೊಸದುರ್ಗ ತಾಲ್ಲೂಕಿಗೆ.

ಮಾರ್ಚಿ ತಾ. ೧೫ ರಲ್ಲಿ ಗವರ್ನ್‌ಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ ಕೆಲಸದ ಚಾರ್ಜನ್ನು ಮೆ ಕೆ ಎಸ್ ಚಂದ್ರಶೇಖರ ಐಯ್ಯರವರು ಮೆ ಸಿ ಎಸ್ ಬಾಲಸುಂದರಂ ಐಯರವರಿಂದ ವಹಿಸಿಕೊಂಡರು.

ಇಂಜಿನಿಯರ್ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿ ಹುಕುಂ ಮಾಡಿದೆ:—(೧) ಆ ಎಗ್ಸಿಕ್ಯುಟಿವ್ ಇಂಜನಿಯರ್ ಮೆ ವಿ ಐಯ್ಯಸಾಮಿ ಐಯರವರನ್ನು ಮೆ॥ ಎಚ್ ಜಿ. ಪೋಲ್ಡಾಯಿಯವರು ಕಾಲವಾದ ಕಾರಣ ಕೋಲಾರದಿಂದ ಹಾಸನದ ಡಿವಿಜನ್‌ಗೆ (೨) ಮೆ॥ ಬಿ ಬಿ ಗರುಡಾಚಾರ್ಯರು ಕೋಲಾರ್ ಡಿವಿಜನ್ ಆ॥ ಎಗ್ಸಿಕ್ಯುಟಿವ್ ಇಂಜನಿಯರಾಗಿ.

ಟಿಪ್ಪೆರಾ ಮಹಾರಾಜರವರ ಮರಣವು.

ಮೋಟಾರ್ ಗಾಡಿಯ ಅನಾಹುತವು

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಟಿಪ್ಪೆರಾ ಸಂಸ್ಥಾನದ ಮಹಾರಾಜರವರು ತೀರ್ಥಯಾತ್ರೆ ಮಾಡಿಕೊಂಡು ಬರಬೇಕೆಂದು ಪರಿವಾರ ಸಹಿತ ಕಾಶೀ ಪಟ್ಟಣಕ್ಕೆ ದಯಮಾಡಿ ಕಾಶೀ ಮಹಾರಾಜರವರ ಅರಮನೆಯಲ್ಲಿ ಇಳುಕೊಂಡಿದ್ದರು. ಕಳೆದ ೧೨ ನೇ ತಾ. ಶುಕ್ರವಾರ ಸಾಯಂಕಾಲ ಅವರು ಕಾಶೀ ಮಹಾರಾಜರವರ ಮೋಟಾರ್ ಗಾಡಿಯಲ್ಲಿ ಕೂತು ಸಾರನಾಥ್ ಎಂಬಲ್ಲಿಗೆ ಹೋಗುತ್ತಿರುವಾಗ ದಾರಿಯಲ್ಲಿ ಪೊಲೀಸ್ ಸೂಪರಿಂಟೆಂಡೆಂಟರವರ ಬಂಗಲೆಯ ಹತ್ತಿರ ಒಂದು ತಿರುವು ಸಿಕ್ಕಿತು. ಮೋಟಾರ್ ಗಾಡಿಯು ವೇಗವಾಗಿ ತಿರುಗಿದ್ದರಿಂದ ಹತೋಟಿ ತಪ್ಪಿ ರಸ್ತೆಯಿಂದ ಆಚೆಗೆ ನುಗ್ಗಿ ಸುಮಾರು ಇಪ್ಪತ್ತು ಅಡಿ ಆಳವಾದ ಒಂದು ಹಳ್ಳದೊಳಕ್ಕೆ ಮಗುಚಿಕೊಂಡಿತು. ಟಿಪ್ಪೆರಾ ಮಹಾರಾಜರವರು ನೆಲಕ್ಕೆ ಬಡಿಯಲ್ಪಟ್ಟು ಸ್ಮರಣೆ ತಪ್ಪಿ ಬಿದ್ದುಕೊಂಡರು. ಅವರ ಎರಡೂ ತೊಡೆಗಳೂ ಮುರಿದು ಹೋದವು. ಕೂಡಲೇ ವರ್ತಮಾನ ತಿಳಿದು ಅವರನ್ನು ನಂದೇಶ್ವರವೆಂಬ ಬಂಗಲೆಗೆ ಕರೆದುಕೊಂಡು ಹೋಗಿ ಸಿವಿಲ್ ಮತ್ತು ಮಿಲಿಟರಿ ಡಾಕ್ಟರುಗಳು ಉಪಚಾರಮಾಡಿ ದಿನಗಳಿಂದ ಚಿಕಿತ್ಸೆ ಮಾಡಿದರು. ಆದರೆ ಅವರ ಪ್ರಯತ್ನಗಳೆಲ್ಲಾ ವ್ಯರ್ಥವಾಗಿ, ಮಹಾರಾಜರವರು ಆ ರಾತ್ರಿಯೇ ಕಾಲವಾದರು.

ಆಗ ಮೊಟರ್ ಗಾಡಿಯಲ್ಲಿ ಮಹಾರಾಜರವರ ಸಂಗಡ ಅವರ ಪ್ರೈವೆಟ್ ಸೆಕ್ರೆಟರಿ ಬಾಬು ಲಲಿತ ಬಿಹಾರಿ ಸೇನರಾಯರವರೂ, ಇನ್ನು ನಾಲ್ವರು ದೊಡ್ಡ ಮನುಷ್ಯರೂ ಕೂತಿದ್ದರು. ಇವರೆಲ್ಲರಿಗೂ ಘೋರ ಗಾಯಗಳಾಗಿರುತ್ತವೆ. ಪ್ರೈವೆಟ್ ಸೆಕ್ರೆಟರಿಯವರಿಗೆ ಪ್ರಜ್ಞೆಯಿಲ್ಲವೆಂದೂ ಅವರು ಬದುಕುವುದು ಕಷ್ಟವಾಗಿದೆ ಎಂದೂ ತಂತೀ ವರ್ತಮಾನ ಬಂದಿದೆ. ಇಷ್ಟೆಲ್ಲಾ ಅನಾಹುತವಾದರೂ ಆ ಮೋಟರ್ ಗಾಡಿಗೆ ಸ್ವಲ್ಪವೂ ಅಪಾಯ ಸಂಭವಿಸಲಿಲ್ಲ. ಆ ದಿನ ರಾತ್ರಿಯೇ ಟಿಪ್ಪೆರಾ ಮಹಾರಾಜರವರ ದೇಹವನ್ನು ಮಹಾಸಂಭ್ರಮವಾಗಿ ದಹನ ಮಾಡಿದರು. ಅವರ ವಯಸ್ಸಿಗೆ ಅನುಸಾರವಾದ ೫೪ ಸಲ ಗುಂಡುಗಳನ್ನು ಗೌರವಾರ್ಥವಾಗಿ ಹಾರಿಸಿದರು.

ಅಗರ್ತಲಾ ರಾಜಧಾನಿಯಾದ ಕೋಮಿಲ್ಲಾ ಪಟ್ಟಣದಲ್ಲಿ ಪ್ರಜೆಗಳು ಮಹಾ ಸಭೆಯನ್ನು ನಡಿಸಿ ತಮ್ಮ ವ್ಯಸನವನ್ನು ಪ್ರಕಾಶಪಡಿಸಿದರು. ಯುವರಾಜರವರು ಸಿಂಹಾಸನವನ್ನು ಹತ್ತಿ ರಾಜ್ಯಭಾರ ಮಾಡುವುದಕ್ಕೆ ಟಿಪ್ಪೆರಾ ಸಂಸ್ಥಾನದಲ್ಲೆಲ್ಲಾ ಆ ಅರ್ಥಕ್ಕೆ ಇಸ್ತಿಹಾರನಾಮೆಯನ್ನು ಪ್ರಕಟಿಸಿರುತ್ತಾರೆ.

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಮಾರ್ಚಿ ತಾ. 13 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು.	ರಿಲೀಫ್ ಕೆಲಸ ಮಾಡುವವರ ಸಂಖ್ಯೆ.			ಕೂಲಿ ಕೊಟ್ಟದ್ದು.	ಧರ್ಮಸಹಾಯ ಪಡೆದ ಜನರು.
	ಗಂಡಾಳು.	ಹೆಣ್ಣಾಳು.	ಮಕ್ಕಳು	ರೂ.	
ಬೆಂಗಳೂರು	1,513	600	223	1,672	912
ಕೋಲಾರ	1,109	378	103	1,847	969
ತುಮಕೂರು	3,841	1,550	157	1,738	1,514
ಮೈಸೂರು	949	599	148	317	783
ಹಾಸನ	183	147	17	172	6
ಶಿವಮೊಗ್ಗ	296	147	110	698	...
ಕಡೂರು	26	19	..	11	...
ಚಿತ್ರದುರ್ಗ	488	292	79	520	675
ಒಟ್ಟು	8,131	3,812	837	7,003	4,850

ಇಂಡಿಯಾ ದೇಶದ ಕೈಮಗ್ಗಗಳು.

ಕಳೆದ ಡಿಸೆಂಬರು ತಿಂಗಳು ಮದರಾಸಿನಲ್ಲಿ ನಡೆದ ಇಂಡಿಯನ್ ಇಂಡಸ್ಟ್ರಿಯಲ್ ಕಾನ್‌ಫರೆನ್ಸ್ ಸಭೆಯ ಪ್ರೆಸಿಡೆಂಟರು ಈ ದೇಶದ ನೆಯಿಗೆ ಕಸಬಿನ ವಿಷಯವಾಗಿ ಹೇಳಿದ್ದೇನೆಂದರೆ,—

ಕೈಮಗ್ಗದ ಕಸಬನ್ನು ಉತ್ತಮಪಡಿಸುವುದು ಅತ್ಯವಶ್ಯಕವೆನ್ನುವುದಕ್ಕೆ ಅನೇಕ ಕಾರಣಗಳುಂಟು. ಸುಮಾರು ೫೦ ೬೦ ಲಕ್ಷ ಪ್ರಜೆಗಳು ಇದನ್ನೇ ನಂಬಿ ಬಹಳ ಪ್ರಯಾಸದಿಂದ ತಮ್ಮ ಜೀವನವನ್ನು ಸಂಪಾದಿಸಿಕೊಳ್ಳುತ್ತಿದ್ದಾರೆ. ಪವರ್ ಅಂದರೆ ಯಂತ್ರಶಕ್ತಿಯಿಂದ ನಡೆಯುವ ಮಗ್ಗಗಳನ್ನು ಈಗಿರುವುದಕ್ಕಿಂತ ಎರಡರಷ್ಟು ಹೆಚ್ಚಿಸಿದರೂ ಕೂಡ ಇಷ್ಟು ಜನಕ್ಕೂ ಕ್ಷಿಪ್ರದಲ್ಲಿಯೇ ಕೆಲಸ ದೊರೆಯುವುದು ಅನುಮಾನ. ಈಗಿರುವ ಯಂತ್ರಶಕ್ತಿಯ ಮಗ್ಗಗಳು ಸುಮಾರು ೭೧,೭೦೦೦ ಜನಗಳಿಗೆ ಕೆಲಸ ಒದಗಿಸುತ್ತಲಿವೆ. ಸುಮಾರು ೨೦ ಲಕ್ಷ ಜನರು ಕೈಮಗ್ಗದ ನೆಯಿಗೆ ಕೆಲಸದವರು. ಅನಾರೋಗ್ಯಕರವಾದ ಕಟ್ಟಡಗಳಲ್ಲಿ ಸಾವಿರಾರು ಮಂದಿ ಕಾರ್ಖಾನೆದಾರರು ಗಿಜಿಬಿಜಿಯಾಗಿ ಸೇರಿಕೊಂಡು ಕೆಲಸಮಾಡುವುದರಲ್ಲಿ ಎಷ್ಟು ಅನುಕೂಲಗಳನ್ನು ಕಲ್ಪಿಸಿಕೊಟ್ಟಾಗ್ಯೂ ಕೂಡ ಇದು ಗ್ರಾಮಾಂತರಗಳಲ್ಲಿ ಸ್ವತಂತ್ರವಾಗಿ ವಾಸಿಯಾಗಿರುವ ತಮ್ಮ ತಮ್ಮ ಮನೆಗಳಲ್ಲಿಯೇ ಈ ಕಸಬನ್ನು ನಡೆಸುವುದಕ್ಕೆ ಸಮಾನವಾಗಲಾರದು. ನಾಜೂಕಾದ ಮತ್ತು ಚಿತ್ರವಿಚಿತ್ರವಾದ ಬಟ್ಟೆಗಳ ತಯಾರಿಗೆ ಉತ್ತಮ ತರಹ ಕೈಮಗ್ಗಗಳಿಗಿಂತಲೂ ಯಂತ್ರಶಕ್ತಿಯ ಮಗ್ಗಗಳು ಹೆಚ್ಚು ಉಪಯುಕ್ತವಾಗಿರುವುದಿಲ್ಲ. ಕೈಮಗ್ಗಗಳನ್ನು ಹೆಚ್ಚು ಕೆಲಸ ಮಾಡುವಂತೆ ನೇಗಿಲುದಾರ ಉತ್ತಮಪಡಿಸುವುದರಲ್ಲಿ ಶಾಸ್ತ್ರೀಯವಾದ ಸರ್ವ ಪ್ರಯತ್ನಮಾಡುವುದು ಪ್ರಜಾಹಿತಕರವಾಗಿಯೂ ನೀತಿ ಸಮ್ಮತವಾಗಿಯೂ ಇರುತ್ತವೆ. ಈ ವಿಷಯವಾದ ಪ್ರಯತ್ನಗಳು ಸಿದ್ಧಿಯಾಗಬಹುದೆಂದು ಈಚೆಗೆ ಅನೇಕ ಕಡೆಗಳಲ್ಲಿ ನಡೆದಿರುವ ಉತ್ತಮ ತರಹ ಕೈಮಗ್ಗಗಳ ಪ್ರದರ್ಶನಗಳಲ್ಲೂ ಫೋಟೋಫೋನಿಗಳಲ್ಲಿ ನಿರೂಪಿಸಲ್ಪಟ್ಟಿರುವುದು. ಆದರೆ ಸಾಮಾನ್ಯವಾಗಿ ನಮ್ಮ ನೆಯಿಗೆಯವರು ನೂತನ ಪದ್ಧತಿಗಳನ್ನು ಅವಲಂಬಿಸುವುದರಲ್ಲಿ ಹಿಂತೆಗೆಯುವ ಸ್ವಭಾವವುಳ್ಳವರು. ಪ್ರದರ್ಶನಗಳನ್ನೂ ಫೋಟೋಫೋನಿಗಳನ್ನೂ ನಡೆಸುವ ಮಾತ್ರದಿಂದಲೇ ನಮ್ಮ ನೆಯಿಗೆಯವರು ಉತ್ತಮ ತರಹ ಮಗ್ಗಗಳ ಯೋಗ್ಯತೆಯನ್ನು ಮುಂದಟ್ಟುಮಾಡಿಕೊಂಡು ಅವುಗಳನ್ನು ಸ್ವತಃ ವಾಡಿಕೆಗೆ ತರುವರೆಂದು ಹೇಳಲಿಕ್ಕಾಗುವುದಿಲ್ಲ. ರೈತರಂತೆಯೇ ಇವರಿಗೂ ಈ ಹೊಸ ಸಂಗತಿಗಳು ಮೇಲಿಂದ ಮೇಲೆ ತಿಳಿಸಿದಲ್ಲದೆ ಗೊತ್ತಾಗುವುದಿಲ್ಲ. ಈ ಸಭೆ ಮತ್ತು ಇದಕ್ಕೆ ಸೇರಿದ ಉಪಸಭೆಯವರು ನೆಯಿಗೆ ಕಸಬು ವಿಶೇಷವಾಗಿ ನಡೆಯುತ್ತಿರುವ ಪ್ರದೇಶಗಳಿಂದ ಒಬ್ಬಿಬ್ಬರು ಬುದ್ಧಿವಂತರಾದ ನೆಯಿಗೆಯವರಿಗೆ ಸ್ಕಾಲರ್‌ಷಿಪ್ ವೇತನಗಳನ್ನು ಕೊಟ್ಟು ಅವರ ಯೋಗ್ಯತೆಗೊಳಪಟ್ಟು ಚಲಿಸಬಹುದಾದ ಯಾವುದಾದರೂ ಒಂದು ಹೊಸ ಮಗ್ಗದಲ್ಲಿ ಅವರಿಗೆ ರೂಢಿಯಾಗಿರುವ ತರಹ ಬಟ್ಟೆಯನ್ನು ನೇಯುವುದಕ್ಕೆ ಕಲಿಸುವುದರ ಮೂಲಕ ಅವುಗಳ ಪ್ರಯೋಜನಗಳನ್ನು ಇವರ ತಿಳುವಳಿಕೆಗೆ ತರಬೇಕು. ಅನಂತರ ಇವರು ತಮ್ಮ ಜನಗಳಿಗೆ ಈ ಮಗ್ಗದ ಕೆಲಸವನ್ನು ತೋರಿಸಿ, ಕಲಿಯಲು ಪ್ರೋತ್ಸಾಹಿಸುವವರನ್ನು ತರಬೇತು ಮಾಡುವ ಪ್ರಯತ್ನದ ಮೇಲೆ ಇವರಿಗೆ "ಸಲ್ವೇಷನ್ ಆರ್ಮಿ" ಅಂಥ ಯಾವುದಾದರೂ ಒಂದು ಮಗ್ಗವನ್ನು ಇನಾಮಾಗಿ ಕೊಡಬೇಕು.

ಮೈಸೂರು ಸರ್ಕಾರಿ ಹುಕುಮುಗಳು.

ಹುಚ್ಚುನಾಯಿ ಕಡಿದದ್ದಕ್ಕೆ ಚಿಕಿತ್ಸೆಯು.

ಇಂಡಿಯಾ ದೇಶದಲ್ಲಿ ಹುಚ್ಚು ನಾಯಿಯು ಕಡಿತದಿಂದ ಉಂಟಾಗುವ ರೋಗಕ್ಕೆ ಚಿಕಿತ್ಸೆ ವಿಷಯವಾಗಿ ಒಂದು ಸಣ್ಣ ಪುಸ್ತಕವನ್ನು ಪ್ರತಿ ಹೋಬಳಿ ಶೇಕದಾರರಿಗೂ ಗವರ್ನಮೆಂಟಿನವರು ಕಳುಹಿಸಿ ಕೊಟ್ಟಿದ್ದಾರೆ. ಈ ಚಿಕಿತ್ಸಾ ಕ್ರಮವನ್ನು ಎಲ್ಲರೂ ತಿಳಿದುಕೊಳ್ಳುವುದು ಅವಶ್ಯಕವಾಗಿರುವ ಕಾರಣ ಈ ಪುಸ್ತಕವನ್ನು ಶೇಕದಾರರು ಮುಖಾಂತರವಾದ ಪಟೇಲ್ ಶಾನುಭೋಗರುಗಳಿಂದ ಗ್ರಾಮ ಚಾವಡಿಗಳಲ್ಲಿ ಬಹಿರಂಗವಾಗಿ ಓದಿಸಿ ಇದರಲ್ಲಿರುವ ಸಂಗತಿಗಳನ್ನು ಜನಗಳ ತಿಳುವಳಿಕೆಗೆ ತರುತ್ತಾರೆಂದು ನಂಬಿರುತ್ತೆ.

ಕೈಗಾರಿಕೆಗೆ ಪ್ರೋತ್ಸಾಹವು

ತಿರುಮಕೂಡ್ಲು ನರಸೀಪುರದಲ್ಲಿ ರೇಷ್ಮೆ ತಯಾರುಮಾಡಿ ಹೊರಗೆ ರಫ್ತು ಮಾಡುವುದಕ್ಕೋಸ್ಕರ ಹೊಸದಾಗಿ ಒಂದು ಕೋಆಪರೇಟಿವ್ ಸೊಸೈಟಿಯು ಏರ್ಪಟ್ಟು ರಿಜಿಸ್ಟರಾಗಿರುತ್ತದೆ. ಕಳೆದ ಫೆಬ್ರವರಿ ತಿಂಗಳಲ್ಲಿ ರಿಜಿಸ್ಟ್ರಾರವರು ಈ ಸೊಸೈಟಿಯನ್ನು ತನಿಖೆ ಮಾಡಿದರು. ಮೈಂಬರುಗಳು ಬಹಳ ಉಂಗದೊಳಗಾಗಿ ಸೊಸೈಟಿ ಕೆಲಸಗಳನ್ನು ನಿರ್ವಹಿಸುತ್ತಿರುವುದಲ್ಲದೆ, ಹೊರಗೆ ರಫ್ತಾಗಬೇಕಾದ ರೇಷ್ಮೆಯು ಬಹಳವಾಗಿ ಜಮಾಯಿಸಿದ್ದಷ್ಟು ಅವರಿಗೆ ತಿಳಿದುಬಂತು. ಈ ಸೊಸೈಟಿಯು ರೇಷ್ಮೆಯನ್ನು ಇತರ ಕಡೆಗಳಲ್ಲಿ ಮಾರಾಟ ಮಾಡಿಸಿ ಕೊಡುವ ಉದ್ದೇಶದಿಂದ ರಿಜಿಸ್ಟ್ರಾರವರು ಇಂಡಿಯಾ ದೇಶದಲ್ಲಿ ಇತರ ಪ್ರಾವಿನ್ಸುಗಳ ರಿಜಿಸ್ಟ್ರಾರುಗಳಿಗೆ ಬರೆಸಿರುತ್ತಾರೆ. ಈ ಮೂಲಕ ತಿರುಮಕೂಡ್ಲು ನರಸೀಪುರದ ಸೊಸೈಟಿಗೆ ಸಹಾಯವಾಗಬಹುದು.

ಅರ್ಜಿ ತಲಪಿದ್ದಕ್ಕೆ ರಸೀತಿಯು.

ಅರ್ಜಿದಾರರು ತಾಲ್ಲೂಕು ಕಚೇರಿಗಳಿಗೆ ಅರ್ಜಿಗಳನ್ನು ಕಳುಹಿಸಿಕೊಡುವ ಸಂದರ್ಭಗಳಲ್ಲಿ ಅಂಥಾ ಅರ್ಜಿಗಳು ತಾಲ್ಲೂಕು ಆಫೀಸರವರ ಕೈಸೇರಿದ್ದರ ಬಗ್ಗೆ ಒಂದು ರಸೀತಿಯನ್ನು ಅರ್ಜಿದಾರರಿಗೆ ತಾಲ್ಲೂಕಿನಿಂದ ಕಳುಹಿಸಬೇಕೆಂದು ೧೯೦೮ ನೇ ಇಸವಿಯ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದದ್ದರ ಮೇಲೆ ಸರ್ಕಾರದವರು ಹುಕುಂ ಮಾಡಿರುವುದೇನೆಂದರೆ —ಮೇಲ್ಕಂಡಂತೆ ನೆರವೇರಿಸಿ ಕೊಡತಕ್ಕ ವಿಷಯದಲ್ಲಿ ಯಾವ ಆಕ್ಷೇಪಣೆಯೂ ಕಂಡುಬರುವುದಿಲ್ಲ. ಪಾವಗಡದ ತಾಲ್ಲೂಕಿನ ಮತ್ತು ಇತರ ಆಫೀಸರುಗಳಿಗೆ ಟಪ್ಪಾಲು ಮೂಲಕ ಕಳುಹಿಸಲ್ಪಡುವ ಅರ್ಜಿಗಳ ಜೊತೆಯಲ್ಲಿ ಒಂದಾಣೆ ಕೋರ್ಟ್‌ಫೀಸ್ ಸ್ಟ್ಯಾಂಪನ್ನು ಅಂಟಿಸಿ ಇರುವ ಒಂದು ರಸೀತಿಯನ್ನು ಸಹಾ ಕಳುಹಿಸಿದಲ್ಲಿ ಅಂಥಾ ಅರ್ಜಿಯು ಯಾವ ಆಫೀಸರಿಗೆ ಕಳುಹಿಸಲ್ಪಟ್ಟು ಇರುತ್ತೋ ಅಂಥಾ ಆಫೀಸರವರಿಂದಲಾಗಲಿ ಅಥವಾ ಅವರಿಂದ ಅಪ್ಪಣೆ ಪಡೆದಿರುವ ಆ ಆಫೀಸಿನ ಶಾಬೇದಾರಿ ನೌಕರರಿಂದಲಾಗಲಿ ಸದರಿ ರಶೀತಿಯು ರುಜು ಮಾಡಲ್ಪಟ್ಟು ಅರ್ಜಿದಾರನಿಗೆ ವಾಪಸು ಕಳುಹಿಸಲ್ಪಡಬೇಕು.

ತೆಂಗಿನ ನಾರಿನ ಕಸಬು.

ಇಂಡಿಯಾ ದೇಶದಲ್ಲಿ ತೆಂಗು ವಿಶೇಷವಾಗಿ ಆಗುತ್ತದೆ ಮತ್ತು ಮಟ್ಟೆ ಸುಲಿದು ಕಾಯಿಗಳನ್ನು ಅನ್ಯದೇಶಗಳಿಗೆ ಬಹಳವಾಗಿ ರಫ್ತು ಮಾಡುತ್ತಾರೆ. ಆದಾಗ್ಯೂ ಕೂಡ ಮಟ್ಟೆಯಿಂದ ನಾರು ತೆಗೆಯುವ ಕಸಬನ್ನು ಸ್ಥಾಪಿಸಲು ಯಾರೂ ಮುಂದಾಗಿಲ್ಲ. ತಕ್ಕ ಯಂತ್ರೋಪಕರಣಗಳನ್ನಿಟ್ಟುಕೊಂಡು ತಯಾರಾದ ಸರಕಿಗೆ ಒಳ್ಳೆ ಗಿರಾಕಿಯನ್ನು ಒದಗಿಸಿಕೊಂಡರೆ ತೆಂಗಿನ ಮಟ್ಟೆಯು ಅತ್ಯಲ್ಪ ಬೆಲೆಗೆ ದೊರೆಯುತ್ತಾದ್ದರಿಂದ ಈ ಕಸಬಿನಿಂದ ಒಳ್ಳೇ ಲಾಭವನ್ನು ಹೊಂದಬಹುದು. ೧೯೦೮ ನೆ ಇಸವಿಯಲ್ಲಿ ಬೊಂಬಾಯಿ ಪಟ್ಟಣದಲ್ಲಿ ಈ ಕಸಬನ್ನು ಸ್ಥಾಪಿಸಲು ಪ್ರಯತ್ನವೇನೋ ನಡೆಯಿತು. ಆದರೆ ಯಾವ ಕಾರಣದಿಂದಲೋ ಅದಕ್ಕೆ ತಕ್ಕ ಪ್ರೋತ್ಸಾಹವು ದೊರಕಿದಂತೆ ಕಂಡುಬರುವುದಿಲ್ಲ. ಸ್ವಲ್ಪ ಬಂಡವಾಳದಿಂದ ಈ ಕಸಬನ್ನು ನಡೆಸಬಹುದಾದದ್ದರಿಂದಲೂ ಮತ್ತು ಸ್ಥಳದಿಂದ ಸ್ಥಳಕ್ಕೆ ಸಾಗಿಸಲು ಬೇಕಾದ ಅನುಕೂಲಗಳಿರುವ ಪಶ್ಚಿಮತೀರದಲ್ಲಿ ಸದ್ಯದಲ್ಲಿ ಈ ಕಸಬನ್ನು ಯಾರೂ ನಡೆಸುತ್ತಿರುವುದಿಲ್ಲವಾದದ್ದರಿಂದಲೂ ಒಬ್ಬನಾಗಲಿ ಒಕ್ಕೂಟವೇ ಆಗಲಿ ಲಾಭಕರವಾದ ಈ ಉದ್ಯೋಗವನ್ನು ಸ್ಥಾಪಿಸಲು ಸುಲಭ ಸಾಧ್ಯವಾಗುತ್ತದೆ.

ನೆಯಿಗೆಯವರಿಗೆ ಸಹಾಯಕೊಡುವುದು.

ಮಸ್ಕಲವು ಪ್ರಸ್ತವಾಗದೆ ಇರುವ ಕಡೆಗಳಲ್ಲೂ ಹತ್ತಿ ಬಟ್ಟೆಗಳಿಗೆ ಗಿರಾಕಿ ಬಹಳ ಕಡಮೆಯಾಗಿರೋದರಿಂದ ನೆಯಿಗೆ ಮಗ್ಗಗಳನ್ನಿಟ್ಟು ಕಸಬು ಮಾಡುವಂಥಾ ಜನರಿಗೆ ಜೀವನ ನಡೆಯುವುದು ತುಂಬಾ ಕಷ್ಟವಾಗಿದೆ ಎಂತಲೂ, ಅವಶ್ಯವಾದ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರು ಅಡ್ವಾನ್ಸಿನಿಂದ ನೆಯಿಗೆಯವರಿಗೆ ಜೀವನ ನಡೆಯುವಂತೆ ಸಹಾಯ ಕೊಡಬಹುದೇ ಎಂತಲೂ ರೆವಿನ್ಯೂ ಕಮಿಷನರವರು ಗವರ್ನಮೆಂಟಿನವರಿಗೆ ಬರೆದು ಕೇಳಿದ್ದರು. ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ—ಕಷ್ಟಕಾಲ ಸಂಭವಿಸದೆ ಇರುವಂಥಾ ಸ್ಥಳಗಳಲ್ಲೂ ಸಹಾಯ ಕೊಡಬೇಕೆಂಬ ವಿಷಯದಲ್ಲಿ ಗವರ್ನಮೆಂಟಿನವರು ಸಮ್ಮತಿಪಡಲಾರರು. ಮಸ್ಕಲವು ಕಠಿಣವಾಗಿಯೂ ವಿಸ್ತಾರವಾಗಿಯೂ ಇರತಕ್ಕ ಪ್ರದೇಶಗಳಲ್ಲಿ ಮಾತ್ರ ಕಷ್ಟನಿವಾರಣೆಗೆ ಗವರ್ನಮೆಂಟಿನವರು ಪ್ರಯೋಜಿಸತಕ್ಕದ್ದಾಗಿದೆ. ಆದರೆ ಯಾವುದಾದರೂ ವಿಶೇಷ ಕಾರಣಕ್ಕಾಗಿ ನೆಯಿಗೆಯವರು ಯಾರಾದರೂ ಜೀವನಕ್ಕಿಲ್ಲದೆ ಕಷ್ಟಪಡುತ್ತಿರುವುದಾದರೆ ಆ ಸಂದರ್ಭವನ್ನೆಲ್ಲಾ ವಿಸ್ತಾರವಾಗಿ ವಿವರಿಸಿ ಗವರ್ನಮೆಂಟಿಗೆ ಬರೆದ ಪಕ್ಷದಲಿ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಲು ಪರ್ಯಾಲೋಚನೆ ಮಾಡುವರು.

ಕಂದಾಯದ ರಿಮಿಷನ್.

ಮಧುಗಿರಿ ತಾಲ್ಲೂಕು ಪುರವರದಲ್ಲಿರುವ ಸಣ್ಣ ಕೆರೆಯು ಸುಮಾರು ೧೯-೧೫ ವರುಷಗಳ ಹಿಂದೆ ಒಡೆದು ಹೋಯಿತು. ಆದರೆ ಒಳಗೆರೆಯ ಆಸರೆಯಲ್ಲಿ ತಲಪರಿಕೆಗಳನ್ನು ತೆಗೆದು ನೀರು ಹಾಯಿಸಿ ವ್ಯವಸಾಯ ಮಾಡಬಹುದಾಗಿದ್ದದ್ದರಿಂದ ಆ ಕೆರೆ ಕೆಳಗಿನ ಜಮೀನುಗಳ ತರೀ ಕಂದಾಯದಲ್ಲಿ ಅರೆವಾಸಿಯನ್ನು ರಿಮಿಷನ್ ಮಾಡಲಿಲ್ಲ. ಈಗಲಾದರೋ ಆ ತಲಪರಿಕೆಗಳಲ್ಲೂ ನೀರು ದೊರಕುವುದಿಲ್ಲವೆಂದು ತಿಳಿದುಬಂದಿದೆ. ಅರ್ಜಿದಾರರು ಆ ಕೆರೆ ಒಡೆದುಹೋದ ಕಾಲದಿಂದಲೂ ಅದರ ಕೆಳಗಿನ ಜಮೀನುಗಳಿಗೆ ತರೀ ಕಂದಾಯವನ್ನು ಮಾಫಿ ಮಾಡಿ ಕೊಟ್ಟು, ಖುಷ್ಕಿ ಕಂದಾಯವನ್ನು ಮಾತ್ರ ಹಾಕಿ ವಸೂಲ್ಮಾಡಬೇಕೆಂದೂ, ಆ ಕೆರೆಯನ್ನು ದುರಸ್ತು ಮಾಡಿಸಿ ಕೊಡಬೇಕೆಂದೂ ಕೇಳಿಕೊಂಡಿದ್ದಾರೆ. ಆದರೆ ಯಾವ ಸಾಲಿನಿಂದ ತಲಪರಿಕೆಗಳಲ್ಲೂ ನೀರು ಸಿಕ್ಕದೆ ಹೋಗಿದೆಯೋ ಆ ಸಾಲಿನಿಂದ ಮಾತ್ರ ಅರ್ಧ ಕಂದಾಯವನ್ನು ರಿಮಿಷನ್ ಮಾಡಬಹುದಾಗಿದೆ. ಈ ಸಣ್ಣ ಕೆರೆಯ ವಿಷಯವು ಡಿಸ್ಟ್ರಿಕ್ಟ್ ಅಧಿಕಾರಿಗಳೇ ಇತ್ಯರ್ಥ ಮಾಡದೆ, ಗವರ್ನಮೆಂಟಿಗೆ ರಿಪೋರ್ಟಾದ ಬಾಗದಲ್ಲಿ ವಿಚಾರಿಸಬೇಕಾಗಿದೆ. ಈ ಕೆರೆಯನ್ನು ದುರಸ್ತು ಮಾಡುವುದಕ್ಕೆ ಬೇಕಾಗುವ ೩,೮೩೧ ರೂಪಾಯಿನ ಅಂದಾಜು ಪಟ್ಟಿಯನ್ನು ಸ್ಯಾಂಕ್ಷನ್ ಮಾಡಿದೆ. ಈ ಮಸ್ಕಲಿನ ಪುನಸ್ಸುಖದರೊಳಗಾಗಿ ಈ ಕಾಮಗಾರಿಯನ್ನು ಮಾಡಿಸಿ ಮುಗಿಸಬೇಕಾಗಿರುತ್ತದೆ.

ಮೈಸೂರು ಸೀಮೆಯ ಕ್ರೈಸ್ತ ಪ್ರಜೆಗಳ ಹಕ್ಕು ಬಾಧ್ಯತೆಗಳು

ಶ್ರೀಮನ್ ಮಹಾರಾಜರವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದ್ದು.

ಮೈಸೂರು ಸಂಸ್ಥಾನದಲ್ಲಿರುವ ಕ್ರೈಸ್ತ ಪ್ರಜೆಗಳ ಹಕ್ಕು ಬಾಧ್ಯತೆಯ ವಿಚಾರವಾಗಿ ರೋಮನ್ ಕ್ರೈಸ್ತರ ಪರವಾಗಿ ರೆವ್. ಫಾದರ್ ಟಾಬರ್ಡ್‌ಯವರೂ, ವೆಸ್ಲಿಯನ್ ಮಿಷನ್ ಕ್ರೈಸ್ತರ ಪರವಾಗಿ ರೆವ್. ಡಿ. ಎ. ರೀಸ್‌ಯವರೂ, ಲಂಡನ್ ಮಿಷನ್ ಕ್ರೈಸ್ತರ ಪರವಾಗಿ ರೆವ್. ಇ. ಪಿ. ರೈಸ್‌ಯವರೂ ಕಳೆದ ತಾ ೧೭ ನೇ ಬುಧವಾರ ಮಧ್ಯಾಹ್ನ ರಾಜಧಾನಿಗೆ ಬಂದು, ಅರಮನೆ ಕಂಠೀರವ ಲಕ್ಷ್ಮೀ ತೊಟ್ಟಿಯಲ್ಲಿ ಶ್ರೀಮನ್ ಮಹಾರಾಜರವರನ್ನು ಕಾಣಿಸಿಕೊಂಡು ಅವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದರು. ಆ ವಿಜ್ಞಾಪನಾ ಪತ್ರಿಕೆಯಲ್ಲಿ ಕಂಡ ಮುಖ್ಯ ವಿಷಯಗಳೇನೆಂದರೆ —

ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜಾ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದೂರ್, ಜಿ. ಸಿ. ಎಸ್. ಐ. ಯವರ ಸನ್ನಿಧಾನದಲ್ಲಿ—

ತಮ್ಮ ಕ್ರೈಸ್ತ ಪ್ರಜೆಗಳ ಪ್ರತಿನಿಧಿಗಳಾದ ನಾವು ಮೈಸೂರು ಸಂಸ್ಥಾನದಲ್ಲಿ ಕ್ರೈಸ್ತ ಮತಾವಲಂಬಿಗಳ ಹಕ್ಕು ಬಾಧ್ಯತೆಗಳಿಗೆ ಉಂಟಾಗಿರುವ ವಿಶೇಷತರವಾದ ಕುಂದು ಕೊರತೆಗಳನ್ನು ತಮಗೆ ಅರಿಕೆಮಾಡಿ ವಿಜ್ಞಾಪನಾ ಪತ್ರಿಕೆಗಳನ್ನು ಒಪ್ಪಿಸಲು ಅವಕಾಶವನ್ನು ಬೇಡುತ್ತೇವೆ.

ತಮ್ಮ ಘನವನ್ನೈದಿದ ಆಳ್ವಿಕೆಯಲ್ಲಿ ಈ ಸಂಸ್ಥಾನದ ಇತರ ಪ್ರಜೆಗಳು ಅನುಭವಿಸುತ್ತಿರುವಂಥಾ ಹಕ್ಕು ಬಾಧ್ಯತೆ ಸ್ವಾತಂತ್ರ್ಯಾದಿಗಳನ್ನು ನಾವೂ ಪಡೆದು ಅನುಭವಿಸುತ್ತಿದ್ದೇವೆಂಬದನ್ನು ಕೃತಜ್ಞತಾಪೂರ್ವಕವಾಗಿ ಒಪ್ಪಿ ಅರಿಕೆ ಮಾಡುವೆವು ಮತ್ತು ನಾವೂ ನಮ್ಮ ವರ್ಗಕ್ಕೆ ಸೇರಿರತಕ್ಕ ಪ್ರಜೆಗಳೂ ತಮ್ಮ ವಿಷಯದಲ್ಲೂ ಈ ಸಂಸ್ಥಾನದ ರಾಜ ಮನೆತನದ ವಿಷಯದಲ್ಲೂ ಸಂಪೂರ್ಣವಾದ ಮತ್ತು ಅಕುಟಿಲವಾದ ರಾಜಭಕ್ತಿಯುತರಾಗಿರುತ್ತೇವೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇವೆ. ತಮ್ಮ ಆಳ್ವಿಕೆಯಲ್ಲಿ ಜಾತಿ ಮತಗಳ ತಾರತಮ್ಯವಿಡದೆ ಸಕಲ ಪ್ರಜೆಗಳನ್ನೂ ತಾವು ಏಕರೀತಿಯಲ್ಲಿ ಸಂರಕ್ಷಣೆ ಮಾಡತಕ್ಕವರೆಂತಲೂ, ಪ್ರಜೆಗಳ ನೈಜವಾದ ಕ್ಷೇಮಾಭಿವೃದ್ಧಿಯಲ್ಲೇ ನೆಲಗೊಂಡಿರುವಂಥಾ ಏಕಚಿತ್ತ ಮನೋಭಾವವುಳ್ಳವರೆಂತಲೂ ಸಿದ್ಧಾಂತ ಪಟ್ಟಿರುವುದು. ನಮ್ಮಲ್ಲಿ ಈ ವಿಷಯದ ನಂಬಿಕೆಯು ಪರಿಪೂರ್ಣವಾಗಿರೋದರಿಂದಲೇ ನಾವು ಧೈರ್ಯಗೊಂಡು ತಮಗೆ ಸಾಕ್ಷಾತ್ತಾಗಿ ಈ ವಿಜ್ಞಾಪನಾ ಪತ್ರಿಕೆಯನ್ನು ಸಮರ್ಪಣೆ ಮಾಡಿರುತ್ತೇವೆ.

ಕ್ರೈಸ್ತ ಮತಾವಲಂಬಿಗಳಿಗೆ ಸದ್ಯದಲ್ಲಿ ಉಂಟಾಗಿರುವ ಹಕ್ಕು ಬಾಧ್ಯತೆಗಳ ಕುಂದು ಕೊರತೆಗಳನ್ನು ಕುರಿತು ಸಂಕ್ಷೇಪವಾಗಿ ತಮ್ಮ ಸನ್ನಿಧಿಯಲ್ಲಿ ಅರಿಕೆ ಮಾಡಿಕೊಳ್ಳಲು ಅನುಜ್ಞೆಯನ್ನು ಬೇಡುತ್ತೇವೆ. ಈ ಹಕ್ಕು ಬಾಧ್ಯತೆಗಳ ಕುಂದು ಕೊರತೆಗಳು ೧೯೦೪ ನೇ ಜೂನ್ ತಾ ೧೯ರಲ್ಲಿ ಮೈಸೂರು ಚೀಫ್ ಕೋರ್ಟಿನವರು ದಾಸಪ್ಪ-ಚಿಕ್ಕಮ್ಮ ಎಂಬ ಮೊಕದ್ದಮೆಯಲ್ಲಿ ಹೇಳಿದ ತೀರ್ಮಾನದಿಂದ ಪ್ರಕಾಶಕ್ಕೆ ಬಂದವು. ಆ ಮೊಕದ್ದಮೆಯಲ್ಲಿ ಕ್ರೈಸ್ತನಾದವನು ತನ್ನ ಮಕ್ಕಳ ಸಂರಕ್ಷಣೆಯನ್ನು ತನಗೇ ವಹಿಸಬೇಕೆಂದು ದಾವಾ ಮಾಡಿದನು. ಗತಿಸಿದ ಚೀಫ್ ಜಡ್ಜ್ ರಾಜಧರ್ಮಪ್ರವೀಣ ಟಿ. ಆರ್. ಎ. ತಂಬುಚೆಟ್ಟಿಯವರ ಅಭಿಪ್ರಾಯಕ್ಕೆ ವಿರೋಧವಾಗಿ ಉಳಿದ ಇಬ್ಬರು ಚೀಫ್ ಕೋರ್ಟ್ ಜಡ್ಜಿಗಳು ಅಭಿಪ್ರಾಯ ಪಟ್ಟದ್ದರ ದೆಸೆಯಿಂದ ಕ್ರೈಸ್ತನಾದನೆಂಬ ಕಾರಣಕ್ಕಾಗಿ ವಾದಿಗೆ ಅಂಥಾ ಹಕ್ಕು ಬಾಧ್ಯತೆಯು ತಪ್ಪಿಸಲ್ಪಟ್ಟಿತು. ಆ ಇಬ್ಬರು ಜಡ್ಜಿಗಳ ಅಭಿಪ್ರಾಯವು ಅವರು ಬರೆದಿರುವ ಕೆಳಗೆ ಕಂಡ ಸಂಗತಿಯಿಂದ ವೇದ್ಯವಾಗುತ್ತದೆ —

"ಹಿಂದೂ ಮತವನ್ನು ತ್ಯಜಿಸಿ ಜಾತಿಯಿಂದ ಹೊರಗೆ ಹಾಕಲ್ಪಟ್ಟ ಮನುಷ್ಯನು ತನ್ನ ಸಿವಿಲ್ ಹಕ್ಕು ಬಾಧ್ಯತೆಗಳನ್ನು ಕಳೆದು ಕೊಳ್ಳುತ್ತಾನೆಂಬುದನ್ನು ಸಿದ್ಧಾಂತ ಪಡಿಸಲು ಸ್ಮೃತಿ ವಾಕ್ಯಗಳನ್ನೂ ಹಿಂದೂ ಲಾವನ್ನೂ ಉದಾಹರಿಸಬೇಕಾದ ಆವಶ್ಯಕತೆಯು ಕಂಡು ಬರುವುದಿಲ್ಲ.

"ಹಿಂದೂ ಲಾದ ಪ್ರಕಾರ ಅಂಥವನು ತನ್ನ ಸಿವಿಲ್ ಹಕ್ಕುಗಳನ್ನು ಕಳೆದುಕೊಳ್ಳುತ್ತಾನೆ; ಅವನ ಹೆಂಡತಿಯು ಇಷ್ಟಪಡುವುದಾದರೆ ಅವನನ್ನು ಬಿಟ್ಟು ಪ್ರತ್ಯೇಕವಾಗಿರಬಹುದು; ಅವನ ಮಕ್ಕಳು ಅವನ ಆಸ್ತಿಯನ್ನು ತಮ್ಮ ತಮ್ಮಲ್ಲೇ ವಿಭಾಗಮಾಡಿಕೊಳ್ಳಬಹುದು. ಇಂಥಾ ಕೊರತೆಗಳನ್ನು ನಿರ್ಮೂಲ ಮಾಡುವುದಕ್ಕಾಗಿ ೧೮೫೦ ನೇ ಇಸವಿಯ ೨೧ ನೇ ಕಾನೂನು ಪ್ಯಾಸಾಗಿರುತ್ತದೆ. ಈ ಕಾನೂನು ಈ ಸೀಮೆಯಲ್ಲಿ ಜಾರಿಗೆ ಬಂದಿರುವುದಿಲ್ಲವೆಂದು ಗೊತ್ತಾದದ್ದರಿಂದ ಅಂಥಾ ಕೊರತೆಗಳಿಲ್ಲವೆಂದು ತೀರ್ಮಾನಮಾಡಲು ನಮಗೆ ಅಧಿಕಾರವಿಲ್ಲ."

ಈ ಭಾಗದಲ್ಲಿ ನಾವು ಅರಿಕೆ ಮಾಡಿಕೊಳ್ಳಬೇಕಾಗಿರುವ ಸಂಗತಿ ಏನೆಂದರೆ, ಬ್ರಿಟಿಷ್ ಜನರಿಗೆ ಅನ್ವಯಿಸತಕ್ಕಂಥಗಳಾದ ಈ ಕಾನೂನುಗಳನ್ನು ಸಾರ್ವತ್ರಿಕವಾಗಿ ಅನ್ವಯಿಸಲಾಗದು. ಕೆಲವು ವರ್ಷಗಳು ಆಸಾಧ್ಯರು ಪ್ರಾದ್ಧ ಕರ್ಮಗಳನ್ನು ಆಚರಣೆಯಲ್ಲಿಟ್ಟುಕೊಳ್ಳದೆ ಇರೋದರಿಂದ ಹಕ್ಕು ಬಾಧ್ಯತೆಗಳಿಗೆ ಕುಂದು ಕೊರತೆಗಳೇನೂ ಇಲ್ಲದಿದ್ದರೂ ಅಂಥವರಿಗೂ ಈ ಕಾನೂನುಗಳನ್ನು ಅನ್ವಯಮಾಡಿದಲ್ಲಿ ಕೊರತೆಗಳಿದ್ದಂತೆ ಕಲ್ಪನೆಯಾಗುತ್ತದೆ.

ಮೇಲ್ಕಂಡ ಜಡ್ಜುಮೆಂಟು ಉಕ್ತವಾದ ಒಡನೆಯೇ ಮಹಾಸ್ವಾಮಿಯವರ ಕ್ರೈಸ್ತ ಪ್ರಜೆಗಳು ೧೮೫೦ ನೇ ಇಸವಿಯ ೨೧ ನೇ ಕಾನೂನನ್ನೇ, ಇಲ್ಲವೇ ಅದರಂತೆ ಇರುವ ಇನ್ನೊಂದು ಕಾನೂನನ್ನೋ ಜಾರಿಗೆ ತರಬೇಕೆಂದು ಅರ್ಜಿಯ ಮೂಲಕ ಕೇಳಿಕೊಂಡರು. ಆ ಕಾನೂನು ಬ್ರಿಟಿಷ್ ಇಂಡಿಯಾದಲ್ಲಿ ಕಳೆದ ೬೦ ವರುಷಗಳಿಂದಲೂ ಜಾರಿಯಲ್ಲಿರುತ್ತದೆ, ಮತ್ತು ಬೆಂಗಳೂರು ದಂಡಿನಲ್ಲೂ ಅದು ಆಚರಣೆಗೆ ತರಲ್ಪಟ್ಟಿರುವುದು. ಜಾತಿಯಿಂದ ಬಹಿಷ್ಕರಿಸಲ್ಪಟ್ಟರೂ, ಅನ್ಯ ಮತವನ್ನು ಅವಲಂಬಿಸಿದರೂ ಯಾವನೊಬ್ಬನಿಗೂ ಅವನ ಸಿವಿಲ್ ಹಕ್ಕು ಬಾಧ್ಯತೆಗಳಿಗೆ ನ್ಯೂನತೆಗಳುಂಟಾಗಕೂಡದೆಂದು ಆ ಕಾನೂನು ವಿಧಿಸುತ್ತದೆ.

ಮೈಸೂರು ಗವರ್ನಮೆಂಟಿನವರು ೧೯೦೫ ನೇ ಇಸವಿ ಮಾರ್ಚಿ ತಾ ೨೯ ರಲ್ಲಿ ಚೀಫ್ ಕೋರ್ಟ್ ಜಡ್ಜಮೆಂಟನ್ನು ಅವಲಂಬಿಸಿ ಅದರ ಮೇಲೆ ತಮ್ಮ ಅಭಿಪ್ರಾಯಗಳನ್ನು ಬರೆದು ಬ್ರಿಟಿಷ್ ರೆಸಿಡೆಂಟರಿಗೆ ಒಂದು ಲೇಖನವನ್ನು ಬರೆದಿದ್ದಾರೆ. ಈ ಲೇಖನದ ಕಡೆಯ ಭಾಗದಲ್ಲಿ ಅವರು ಹೇಳಿರುವುದೇನೆಂದರೆ :—

"ಚರ್ಚಾಸ್ಪದವಾದ ಈ ಮುಖ್ಯ ವಿಚಾರದಲ್ಲಿ ಒಂದಕ್ಕೊಂದು ವಿರೋಧವಾಗಿರುವಂಥಾ ಹಕ್ಕು ಬಾಧ್ಯತೆಗಳು ವಿಶೇಷವಾಗಿರುತ್ತವೆ. ಮೈಸೂರು ಗವರ್ನಮೆಂಟಿನವರು ಅವುಗಳನ್ನು ಬಹು ದೀರ್ಘವಾಗಿ ಪರ್ಯಾಲೋಚನೆ ಮಾಡಿ ತೀರ್ಮಾನಿಸಿರುವುದೇನೆಂದರೆ, ಮತಾಂತರವನ್ನು ಹೊಂದಿದವನಿಗೆ ಅವನ ಎಲ್ಲಾ ಸಿವಿಲ್ ಆಸ್ತಿಯ ಹಕ್ಕು ಬಾಧ್ಯತೆಗಳನ್ನೂ ಪಿತ್ರಾರ್ಜಿತ ಮತ್ತು ದಾಯಭಾಗ ಸಹಿತವಾಗಿ ಊರ್ಜಿತ ಪಡಿಸುವಂಥಾ ಒಂದು ಕಾನೂನು ಮಾಡಬೇಕಾದದ್ದೇ ಸಹಜ. ಆದರೆ ಅಂಥಾ ಹಕ್ಕು ಬಾಧ್ಯತೆಗಳನ್ನು ಅನುಭವಿಸುವಾಗ್ಗೆ ಅವನ ಸಂಸಾರಕ್ಕೆ ಸೇರಿದ ಇತರ ದಾಯಾದಿಗಳಿಗೆ ಅನಾದಿಯಿಂದಲೂ ಆಚರಣೆಯಲ್ಲಿ ಬಂದಿರುವ ಹಕ್ಕು ಬಾಧ್ಯತೆಗಳ ನಿರ್ಬಾಧಕವಾದ ಅನುಭೋಗಕ್ಕೆ ಯಾವ ಕುಂದುಕೊರತೆಗಳೂ ಉಂಟಾಗದಂತಿರಬೇಕು."

ಮೇಲ್ಕಂಡ ಅಭಿಪ್ರಾಯಗಳಿಗೆ ಅನುಸಾರವಾಗಿ ಒಂದು ಮುಸೂದೆ ಕಾನೂನು ತಯಾರಾಯಿತು. ಇದಕ್ಕೆ ರೀಜೆನ್ಸಿ ಕೌನ್ಸಿಲ್ ಸಭೆಯ ಒಪ್ಪಿಗೆಯೂ ಆಯಿತು. ಆದರೆ ಅದನ್ನು ಜಾರಿಗೆ ತರಲಿಲ್ಲ.

ಹೀಗೆ ಹತ್ತು ವರುಷಗಳು ಗತಿಸಿದವು. ತರುವಾಯ ಒಂದು ಕಮಿಟಿಯು ನೇಮಕವಾಯಿತು. ಎಲ್ಲಾ ಜಾತಿಯ ಪ್ರತಿನಿಧಿಗಳೂ ಆ ಕಮಿಟಿಗೆ ಮೆಂಬರಾಗಿ ನೇಮಿಸಲ್ಪಟ್ಟರು. ಅನ್ಯಮತಾವಲಂಬಿಯ ಹಕ್ಕು ಬಾಧ್ಯತೆಗೆ ಇರುವಂಥಾ ಕುಂದು ಕೊರತೆಗಳನ್ನು ನಿವಾರಣೆ ಮಾಡುವುದಕ್ಕೆ ಕಾನೂನು ಆಗಬೇಕಾಗಿದ್ದೇ ಎಂಬ ವಿಚಾರವನ್ನು ಚರ್ಚೆಯಿಂದ ಇತ್ಯರ್ಥ ಪಡಿಸುವುದಕ್ಕೂ, ಹಾಗೆ ಅದು ಅವಶ್ಯವೆಂದು ತೀರ್ಮಾನವಾಗುವ ಪಕ್ಷದಲ್ಲಿ ಅದಕ್ಕೆ ಸೂಕ್ತವಾದ ರೀತಿಯಲ್ಲಿ ಒಂದು ಮುಸೂದೆಯನ್ನೂ ತಯಾರ್ಮಾಡುವುದಕ್ಕೂ ಈ ಕಮಿಟಿಗೆ ಅಧಿಕಾರ ಕೊಡಲಾಯಿತು. ಅದೇ ರೀತಿ ಆ ಕಮಿಟಿಯವರು ಚರ್ಚೆ ಮಾಡಿದ್ದರಲ್ಲಿ ಕಾನೂನು ಆಗಬೇಕಾದದ್ದೇ ಅವಶ್ಯವೆಂದು ಗೊತ್ತಾಯಿತು. ಕೂಡದೆಂದು ಒಬ್ಬ ಮೆಂಬರಾದರೂ ಅಭಿಪ್ರಾಯ ಪಡಲಿಲ್ಲ. ಕಡೆಗೆ ಈ ಕಮಿಟಿಯವರು ರಚಿಸಿದ ಮುಸೂದೆ ಕಾನೂನನ್ನು ಸರ್ಕಾರದವರು ಪ್ರಜೆಗಳ ತಿಳುವಳಿಕೆಗಾಗಿ ೧೯೦೫ ನೇ ಇಸವಿ ಅಕ್ಟೋಬರ್ ತಾ ೧೩ ರಲ್ಲಿ ಪ್ರಕಟಿಸಿದರು.

ಅದರಂತೆ ಕಾನೂನು ಆಗಕೂಡದೆಂಬ ಅರ್ಥಕ್ಕೆ ಪ್ರಜೆಗಳು ಹಲವು ಅರ್ಜಿಗಳನ್ನೂ ವಿಜ್ಞಾಪನಾ ಪತ್ರಿಕೆಗಳನ್ನೂ ಸರ್ಕಾರಕ್ಕೆ ಒಪ್ಪಿಸಿರುವುದು ನಮಗೆ ತಿಳಿದಿದೆ. ಆದರೆ ಅಲ್ಪ ಸಂಖ್ಯೆಯ ಪ್ರಜಾ ಸಂಗಡದ ಹಕ್ಕು ಬಾಧ್ಯತೆಗಳನ್ನು ಊರ್ಜಿತ ಪಡಿಸಬೇಕೆಂಬ ಶ್ರೇಷ್ಠವಾದ ಉದ್ದೇಶವನ್ನುಳ್ಳ ಇಂಥಾ ಕಾನೂನಿನ ವಿಷಯದಲ್ಲಿ ಅಪಾರ್ಥಗಳನ್ನು ಕಲ್ಪಿಸಿ ದುರಭಿಪ್ರಾಯಗಳನ್ನು ಸೂಚಿಸುವುದೂ, ಕಾನೂನು ಆಗಕೂಡದೆಂದು ವಿರೋಧಿಸುವುದೂ ಅವರೂಪವೂ ಅಲ್ಲ, ಅಸರಿಕ್ಷ್ಯವೂ ಅಲ್ಲವೆಂದು ವಿಜ್ಞಾಪನೆ ಮಾಡುತ್ತೇವೆ. ಯಾವ ದೇಶದಲ್ಲಾಗಲಿ ಇಂಥಾ ಕಾನೂನುಗಳನ್ನು ಮಾಡಿ ಜಾರಿಗೆ ತರಬೇಕಾದದ್ದು ಪ್ರಜಾ ಬಾಹುಳ್ಯದ ಇಷ್ಟಾನಿಷ್ಟಗಳಿಗೆ ಒಳಪಟ್ಟದ್ದಲ್ಲವೆಂದೂ, ಅವುಗಳಿಂದ ಯಥಾರ್ಥವಾದ ಧರ್ಮಸಂಸ್ಥಾಪನೆಯಾಗುತ್ತದೆ ಎಂಬ ಶ್ರೇಷ್ಠವಾದ ಉದ್ದೇಶವೇ ಮುಖ್ಯ ಕಾರಣವೆಂದೂ ಏನೆಲ್ಲ ಹೇಳುವುದು? ಮೇಲ್ಕಂಡ ಕಮಿಟಿಯ ಮೆಂಬರುಗಳು ಪ್ರಜೆಗಳಲ್ಲಿ ಗಣ್ಯರಾಗಿಯೂ ಎಲ್ಲಾ ಮತಗಳ ಪ್ರತಿನಿಧಿಗಳಾಗಿಯೂ ಇದ್ದರೆಂಬುವುದನ್ನು, ಅವರೆಲ್ಲಾ ಏಕವಾಕ್ಯತೆಯಿಂದ ಕಾನೂನಾಗಬೇಕೆಂದು ಸಮ್ಮತಿಪಟ್ಟರೆಂಬುವುದನ್ನೂ ಮಹಾಸ್ವಾಮಿಯವರು ಗಣನೆಗೆ ತಂದುಕೊಳ್ಳದೆ ಇರಲಾರರೆಂದು ನಂಬುತ್ತೇವೆ.

ಮೇಲ್ಕಂಡ ಮುಸೂದೆಯನ್ನು ಪ್ರಕಟಿಸಿದ್ದಾಗ್ಯೂ ಮಹಾಸ್ವಾಮಿಯವರ ಕ್ರೈಸ್ತ ಪ್ರಜೆಗಳು ಆಗಲಿ ಅವರು ತಮ್ಮ ಕುಂದು ಕೊರತೆಗಳು ನಿವಾರಣೆ ಹೊಂದಬಹುದೆಂದು ನಿರೀಕ್ಷಿಸಿಕೊಂಡಿದ್ದರು. ಅವರು … ಈ ಮುಸೂದೆಯಿಂದ ಸಂಪಾದಿಸಿಕೊಳ್ಳಬಹುದಾಗಿದ್ದಾಗ್ಯೂ, ಪರರ ಹಕ್ಕು ಬಾಧ್ಯತೆಗಳಿಗೆ ಲೋಪವುಂಟಾಗದಂತೆ ತಮ್ಮ ಕೆಲವು ಹಕ್ಕುಗಳನ್ನಾದರೂ ಊರ್ಜಿತ ಪಡುವುದೆಂಬ ಬಯಕೆಯ ಮೇಲೆ ಅದೇ ಕಾನೂನಾದರೆ ಸಾಕು ಎಂದು ಒಪ್ಪಿಕೊಂಡರು. ಈ ಮುಸೂದೆ ಕಾನೂನು ಪ್ರಕಟವಾದ ೧೯೦೫ ನೇ ಇಸವಿಯಿಂದ ಈಚೆಗೆ ಅದನ್ನು ಪ್ಯಾಸ್ ಮಾಡಿ ಜಾರಿಗೆ ತರುವ ಭಾಗದಲ್ಲಿ ಯಾವ ಕಾರ್ಯಗಳೂ ನಡೆದಿರುವುದಿಲ್ಲ. ಅದರಿಂದ ಮಹಾಸ್ವಾಮಿಯವರ ಕ್ರೈಸ್ತ ಪ್ರಜೆಗಳು ಮೊದಲಿನಂತೆಯೇ ಈಗ ಹೆಚ್ಚಾಗಿ ಕಷ್ಟನಷ್ಟಗಳನ್ನು ಅನುಭವಿಸುತ್ತಾರೆ.

ಈ ವರ್ಷದಲ್ಲಿ ೧೯೦೭ ನೇ ಇಸವಿ ಸೆಪ್ಟೆಂಬರ್ ತಾ ೨ ರಲ್ಲಿ ತುಮಕೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಉಕ್ತವಾದ ಒಂದು ಜಡ್ಜ್‌ಮೆಂಟಿನ ವಿಚಾರವನ್ನು ಮಹಾಸ್ವಾಮಿಯವರಿಗೆ ಅರಿಕೆ ಮಾಡಿಕೊಳ್ಳುವೆವು. ಈ ಮೊಕದ್ದಮೆಯಲ್ಲಿ ಮೂರು ಮಂದಿ ವಾದಿಗಳು ಕೆಲವು ಸೊತ್ತುಗಳಿಗೆ ತಾವು ಹಕ್ಕುದಾರರೆಂದೂ ಅವುಗಳನ್ನು ತಮಗೆ ಕೊಡಿಸಿಕೊಡಬೇಕೆಂದೂ ಕೋರ್ಟಿನವರನ್ನು ಕೇಳಿಕೊಂಡರು. ಅವರ ಹಕ್ಕೇನೋ ನ್ಯಾಯವಾದದ್ದೆಂತಲೇ ಸ್ಥಿರಪಟ್ಟಿತು. ಆದರೆ ವಾದಿಗಳ ಪೈಕಿ ಒಬ್ಬರು ಕ್ರೈಸ್ತ ಮತವನ್ನು ಸ್ವೀಕರಿಸಿದವರೆಂದು ಗೊತ್ತಾದದ್ದರಿಂದ ಅವರಿಗೆ ಹಕ್ಕಿಲ್ಲವೆಂದು ತೀರ್ಮಾನ ಮಾಡಲ್ಪಟ್ಟಿತು. ನೂರನೇ ವಾದಿಯು … ಇವನು ಒಂದು ಕೊಲೆಯ ನೊಂದಣಿಯಲ್ಲಿ ಸಿಕ್ಕಿದ್ದು ಸಜಾ ಶಿಕ್ಷೆಯನ್ನು ಅನುಭವಿಸುತ್ತಾನೆ. ಕೋರ್ಟಿನವರು ಅವನನ್ನು ವಾದಿಯಾಗಿ ಅಂಗೀಕರಿಸಿ ಅವನ ಪರವಾಗಿ ಡಿಕ್ರಿ ಕೊಟ್ಟರು. ಆದರೆ ಕ್ರೈಸ್ತ ಮತವನ್ನು ಅವಲಂಬಿಸಿಕೊಂಡದ್ದಕ್ಕೋಸ್ಕರ ಒಬ್ಬ ಮನುಷ್ಯನಿಗೆ ತನ್ನ ಹಕ್ಕು ಬಾಧ್ಯತೆಗಳನ್ನು ಇಲ್ಲವೆಂದು ಮಾಡಿ, ಕೊಲೆಪಾತಕಿಯೂ ಸೆರೆಮನೆಯಲ್ಲಿ ಆಗಿರುವ ಮನುಷ್ಯನಿಗೆ ಅಂಥಾ ಹಕ್ಕು ಬಾಧ್ಯತೆಗಳನ್ನು ಊರ್ಜಿತವಾಗಿ ಕೊಡುವಂಥಾ ಕಾನೂನನ್ನು ನಾವು ಎಂಥಾ ಕಾನೂನೆಂದು ವಿವರಿಸೋಣ? ಮನುಷ್ಯನಾದವನು ತನ್ನ ಇಷ್ಟಬಂದ ಮತವನ್ನು ಅವಲಂಬನೆ ಮಾಡಿಕೊಳ್ಳುವುದಕ್ಕೆ … ಮೈಸೂರು ಸಂಸ್ಥಾನದೊಳಗೆ ಮಾತ್ರ … ಕಾನೂನಿಗೆ … ಇಂಥಾ ಕುಂದು ಕೊರತೆಗಳನ್ನು ನಿವಾರಣೆ ಮಾಡಿಕೊಡಬೇಕೆಂದು ಮಹಾಸ್ವಾಮಿಯವರನ್ನು ಭಕ್ತಿಯಿಂದಲೂ ವಿನಯಪೂರ್ವಕವಾಗಿಯೂ ಬೇಡಿಕೊಳ್ಳುತ್ತೇವೆ.

ಮಹಾ ಪ್ರಭುಗಳಾದ … ೧೮೫೮ ನೇ ಇಸವಿಯಲ್ಲಿ ದಯಪಾಲಿಸಿದ ಇಷ್ಟಿಹಾರ ನಾಮೆಯ … ಆ ಇಷ್ಟಿಹಾರ ನಾಮೆಯು ಬ್ರಿಟಿಷ್ ಇಂಡಿಯಾದಲ್ಲಿರುವ ಕೋಟ್ಯನುಕೋಟಿ ಪ್ರಜೆಗಳಿಗೆ ಮಹಾದುಪಕಾರವಾದ ಸ್ವಾತಂತ್ರ್ಯಗಳ ಕಾರಣವಾಗಿರುತ್ತದೆ. ಅದರಲ್ಲಿ ಈ ಕೆಳಗೆ ಕಾಣಿಸಲ್ಪಟ್ಟಿರುವ ಬೆಲೆಯುಳ್ಳ ಅಭಯವು ಉಂಟು —

"ಕ್ರೈಸ್ತ ಮತದ ತತ್ವವನ್ನು ನಾವು ದೃಢವಾಗಿ ನಂಬಿ ಆ ಮತದಿಂದ ದೊರೆತ ಸ್ವಾಸ್ಥ್ಯವನ್ನು ಹೊಂದಿರುತ್ತೇವೆಯಾದರೂ ನಮ್ಮ ಮತದ ಮೇಲೆಯೇ ನಮ್ಮ ಪ್ರಜೆಗಳೂ ನಡೆದುಕೊಳ್ಳಬೇಕೆಂದು ಬಲಾತ್ಕರಿಸುವ ಇಷ್ಟವು ನಮಗಿಲ್ಲ. ಆ ಹಕ್ಕನ್ನೂ ನಾವು ವಹಿಸುವುದಿಲ್ಲ. ಮತಪ್ರಯುಕ್ತವಾದ ಅಥವಾ ಆಚಾರಪ್ರಯುಕ್ತವಾದ ಗುರಿಯ ಮೇಲೆ ಒಬ್ಬರಿಗೆ ಅನುಕೂಲವನ್ನೂ ಮತ್ತೊಬ್ಬರಿಗೆ ಪ್ರತಿಕೂಲವನ್ನೂ ನಿರ್ಣಯಿಸತಕ್ಕದ್ದಲ್ಲ. ನಡೆಯದೆ ಇರಬೇಕೆಂಬುವುದೂ, ಸಮಸ್ತ ಪ್ರಜೆಗಳು ಕಾನೂನಿನ ಏಕಪ್ರಕಾರವಾದ ಮತ್ತು ನಿಷ್ಪಕ್ಷಪಾತವಾದ ಸಂರಕ್ಷಣೆಯನ್ನು ಪಡೆಯತಕ್ಕದ್ದೆಂಬುವುದೂ ನಮಗೆ ರಾಜಾಭಿಲಾಷೆ ಮತ್ತು ಆಜ್ಞಾಪರವಾದದ್ದು ನಾವು ತಿಳಿಸುತ್ತೇವೆ."

ಸೀಬರ್ ಮಹಾರಾಜ್ಞಿ ಚಕ್ರವರ್ತಿನಿಯವರೂ ಈಗಿನ ಮಹಾರಾಜಾ ಚಕ್ರವರ್ತಿಯವರೂ ಹಿಂದುಸ್ಥಾನದಲ್ಲಿ ಸಕಲ ಪ್ರಜೆಗಳಿಗೂ ಅವರು ಯಾವ ಮತಕ್ಕೆ ಸೇರಿದವರಾಗಿರಲಿ ಮತವಿಚಾರವಾದ ಕುಂದು ಕೊರತೆಗಳೇನೂ ಇರಕೂಡದೆಂದು ಸ್ಥಿರವಾಗಿ ಘೋಷಿಸುತ್ತಾ ಬಂದಿರುವಂತೆಯೇ ಈ ಸಂಸ್ಥಾನದ ಕ್ರೈಸ್ತ ಪ್ರಜೆಗಳಿಗೂ ಆ ವಿಧವಾದ ಕುಂದು ಕೊರತೆಗಳನ್ನು ನಿವಾರಣೆ ಮಾಡಿಕೊಡುವ ವಿಷಯದಲ್ಲಿ ಮಹಾಸ್ವಾಮಿಯವರು ದಯಾರಸವನ್ನೂ ಸಂತೋಷವನ್ನೂ ವಿನಿಯೋಗವಾಡಿ ಕಾಪಾಡಬೇಕೆಂದು ಈ ವಿಜ್ಞಾಪನೆಯ ಮೂಲಕ ಅತ್ಯಂತ ಭಕ್ತಿಪೂರ್ವಕವಾಗಿ ಕೇಳಿಕೊಳ್ಳುತ್ತೇವೆ.

ಸರ್ವಶಕ್ತನಾದ ದೇವರು ಮಹಾಸ್ವಾಮಿಯವರಿಗೂ ಮೈಸೂರು ಸಂಸ್ಥಾನದ ರಾಜಮನೆತನಕ್ಕೂ ಸರ್ವಶ್ರೇಷ್ಠನಾದ ವರಗಳನ್ನು ದಯಪಾಲಿಸಲೆಂದೂ, ಮಹಾಸ್ವಾಮಿಯವರ ಗವರ್ನ್‌ಮೆಂಟಿನ ಸರ್ವಾಲೋಚನೆಗಳೂ ತೀರ್ಮಾನಗಳೂ ದೀರ್ಘಾಲೋಚನೆ ಜ್ಞಾನ ಸತ್ಯತೆಗಳಿಂದ ಕೂಡಿ, ಸತ್ಫಲಗಳನ್ನು ಫಲಿಸುವಂತಾಗಲೆಂದೂ ಪ್ರಾರ್ಥಿಸುತ್ತೇವೆ.

ಶ್ರೀಮನ್ಮಹಾರಾಜರವರ ಪ್ರತ್ಯುತ್ತರವು.

ಮೇಲ್ಕಂಡ ವಿಜ್ಞಾಪನಾ ಪತ್ರಿಕೆಯನ್ನು ಅಂಗೀಕರಿಸಿ ಶ್ರೀಮನ್ಮಹಾರಾಜರವರು ಅವರಿಗೆ ಪ್ರತ್ಯುತ್ತರವಾಗಿ ಅಪ್ಪಣೆ ಕೊಡಿಸಿದ್ದೇನೆಂದರೆ:—

ದೊಡ್ಡ ಮಹನೀಯರುಗಳಿರಾ,

ನೀವು ಈ ದಿನ ನಮಗೆ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆಯ ವಿಚಾರವು ಕಳೆದ ಅನೇಕ ವರುಷಗಳಿಂದಲೂ ನಮ್ಮ ಗವರ್ನ್‌ಮೆಂಟಿನ ಮುಂದೆ ಹಲವು ಪಡೆ ತರಲಾಗಿರುತ್ತದೆ. ನೀವುಗಳು ಬಹಳ ಕಾಲದಿಂದ ನಮ್ಮ ಸೀಮೆಯಲ್ಲಿ ನಮ್ಮ ಪ್ರಜೆಗಳ ಮಧ್ಯೆ ಇದ್ದುಕೊಂಡು ಬಂದಿರುತ್ತೀರಾದದ್ದರಿಂದ ಈ ವಿಚಾರವನ್ನು ತೀರ್ಮಾನ ಮಾಡುವುದರಲ್ಲಿ ಇರುವಂಥಾ ಕಷ್ಟಗಳು ನಿಮಗೆ ಚೆನ್ನಾಗಿ ತಿಳಿದಿರುವವು. ಆದಕಾರಣ ನೀವು ಈಗಲೇ ನಮ್ಮಿಂದ ನಿಂಡಿತವಾದ ಪ್ರತ್ಯುತ್ತರವನ್ನು ನಿರೀಕ್ಷಿಸುವುದಿಲ್ಲ.

ಮೈಸೂರು ರಾಜರ ವಿಷಯದಲ್ಲೂ ಅವರ ಆಳಿಕೆಯ ವಿಷಯದಲ್ಲೂ ನಿಮ್ಮ ಮೂಲಕ ಕ್ರೈಸ್ತ ಪ್ರಜೆಗಳು ವ್ಯಕ್ತಪಡಿಸಿರುವ ಸದಭಿಪ್ರಾಯಗಳಿಗಾಗಿ ನಿಮ್ಮನ್ನು ವಂದಿಸುತ್ತೇನೆ. ಮತ್ತು ನಿಮ್ಮ ವಿಜ್ಞಾಪನೆಗೆ ನಾವು ನಮ್ಮ ಅತ್ಯಂತ ವಿಶೇಷವಾದ ಗಮನವನ್ನು ಕೊಡುತ್ತೇವೆಂದು ನಿಮಗೆ ಧೈರ್ಯ ಹೇಳುವೆವು.

ತರುವಾಯ ಮೇಲ್ಕಂಡ ಪ್ರತಿನಿಧಿಗಳು ಸಂತೋಷಪಟ್ಟು ಶ್ರೀಮನ್ಮಹಾರಾಜರವರಿಂದ ಬೀಳ್ಕೊಂಡು ವಾಪಸು ಬಂದರು.

ತಾಲ್ಲೋಕು ವರ್ತಮಾನಗಳು

ಅಜ್ಜಂಪುರ.—ಈ ಊರಿನಲ್ಲಿ ರಾತ್ರಿಕಾಲಗಳಲ್ಲಿ ಈಗಿನ ಮುನಿಸಿಪಲ್ ಲಾಂದ್ರಗಳು ಪ್ರಕಾಶಕ್ಕೆ ಬಂದಿವೆ. ಇವುಗಳೆಲ್ಲಾ ಈ ಊರು ಡಾಕ್ಟರವರ ಮೇಲ್ವಿಚಾರಣೆಯಲ್ಲಿರುತ್ತವೆ. ಇವರು ಕೆಲಸ್ಕ್ಯಾಕಿರಿಂದ ಲಾಂದ್ರಗಳನ್ನು ಕರಿಸಿ ನೋಡಿದರು. ಮುಕ್ಕಾಲು ಭಾಗ ಲಾಂದ್ರಗಳೇ ಒಡೆದುಹೋಗಿದ್ದವು. ಜಾಗ್ರತೆ ಸರಿಪಡಿಸಿ ಎಲ್ಲಾ ಲಾಂದ್ರಗಳೂ ಬೆಳಕು ನೀಡಾಬೇಕೆಂದು ನಂಬಿದೆ.—ಸ್ಕೂಲ್ ಹೆಡ್ ಮಾಸ್ಟರು ರಜಾ ಹೋಗಿದಾರೆ. ಸ್ಕೂಲ್ ವಿದ್ಯಾರ್ಥಿಗಳ ಸಂಖ್ಯೆ ಆಗ ಎಲ್ಲಾ ಕ್ಲಾಸುಗಳೂ ಅರ್ಧ ಭಾಗದಂತೆ ಮೇಲಿನ ಕ್ಲಾಸಿಗೆ ಹೋದರು.—ಪ್ಲೇಗಿನ ದೆಸೆಯಿಂದ ಊರು ಬಿಟ್ಟಾಗ್ಗೆ ಇದೇ ಟಿಕ್ ದೊಡ್ಡ ಪೇಟೆ … ಗುಡಿ ಬೀಗ ಮುರಿದು ಯಾರೋ ಕಳವು ಮಾಡಿದ್ದರು. ಈ ಫಿರ್ಯಾದನ್ನು ಇಲ್ಲಿನ ಜಮಾದಾರು ಪತ್ತೆ ಮಾಡಿದಾರೆ. ಒಬ್ಬ ಮುಸಲ್ಮಾನ್, ೩ ಜನ ಕುರುಬರು, ಒಬ್ಬ ತಿಗಳರವನು ಈ ರೀತಿ ಜನರು ಕಳವು ಮಾಡಿದ್ದರು. … ಹಳ್ಳಿಯಲ್ಲೂ ಸಹ ಹೋಟೆಲ್ದ್ದ ಹಂಡೆ, ಕೀಲು ಪಗ್ಗೆರೆ ಮನೆಲುಗಳು ಪತ್ತೆ ಆ ಕೋರ್ಟಿಗೆ ಒಳಪಡಿಸಿದಾರೆ. ಈಗೀಗ ಕಳವುಗಳು ಕಾನುಮಾಗುತ್ತಾ ಬಂದಿವೆ.—ಸಂತೆಯಲ್ಲಿ … ಒಂದೆರಡು ಸಂತೆಗಳಲ್ಲಿ ಈ ವಿಚಾರಕ್ಕೆ ನಮ್ಮ … ಗಮನಕೊಟ್ಟರೆ ಈ ಕ್ಷಾಮ ಕಾಲದಲ್ಲಿ ಬಡಬಗ್ಗರಿಗೆ ಎಷ್ಟೋ ಉಪಕಾರವಾದೀತು.

ಹೊಳೆನರಸೀಪುರ.—ಬಿಸಿಲಿನ ಕಾವು ಸಹಿಸಲಸಾಧ್ಯವಾಗಿದೆ. ಧಾರಣೆಗಳು … ಏರುತ್ತಲಿದೆ. ಅಕ್ಕಿ ರೂಪಾಯಿಗೆ ೬ ಸೇರು, ರಾಗಿ ೧೦ ೧೧ ಸೇರು, ಈ ಪ್ರಕಾರ ಮಾರುತ್ತಿವೆ.—ಈ ಊರಿನಲ್ಲಿ … ನದಿಯ ದೆಸೆಯಿಂದ ನೀರಿಗೆ ಮಾತ್ರ ತುಂಬಾ ಅನುಕೂಲವಾಗಿರುತ್ತೆ. ಜಾನುವಾರುಗಳಿಗೆ ಮಾತ್ರ ಹುಲ್ಲು ಮೇವಿಗೆ ಬಹಳ ಕಷ್ಟ. ಇದರಲ್ಲಿ ಈ ಊರು ಸುತ್ತುಮುತ್ತಲಿನ ಕೆಲವು ಹಳ್ಳಿಗಳಲ್ಲಿ ದನಗಳ ದೊಡ್ಡ ರೋಗವು ಹುಟ್ಟಿ ಬಹು ದನಗಳನ್ನು … ಮಾಡಿಬಿಟ್ಟಿತು. ಇದರ ಪ್ರಯುಕ್ತ ರೈತರಿಗೆ ಬಹಳ ಕಷ್ಟವಾಗಿದೆ. ಮತ್ತು ಈ ಟೌನಿನಲ್ಲಿ … ಹಿಂದಿಗಿಂತ … ದಿನ ಕ್ರಮೇಣ ಬಹಳ ಹೆಚ್ಚುತ್ತಾ ಬಂದಿದೆ. ಹಿಂದಿನ … ವಿಷಯದಲ್ಲಿ ಯಾವ ವಿಧವಾದ … ಕಾರಣವಾಗಿದೆ. ಈಗ ಹೊಸದಾಗಿ ಬಂದಿರುವ ನಮ್ಮ ಅಮಲ್ದಾರರವರು … ಏರ್ಪಾಡು ಮಾಡುವರೆಂದು ನಂಬಿದ್ದೇವೆ.—ಈ ಊರಿಗೆ ಸ್ವಲ್ಪ ದೂರದಲ್ಲಿ ಒಂದೆರಡು ಹಳ್ಳಿಗಳಲ್ಲಿ … ಉಪದ್ರವ ಸ್ವಲ್ಪ ಇದೆ ಎಂದು ವರ್ತಮಾನವಿದೆ.—… ಮಳೆ … ಈ ಊರಲ್ಲಿ ಪೋಲೀಸ್ … ಈ ವಿಷಯದಲ್ಲಿ ಜಮೀದಾರ್ ನರಸಿಂಹಾಚಾರ್ಯರು … ಮಾಡಿರುವುದು ಬಹಳ ಅನುಕೂಲವಾಗಿದೆ.—ಈಚೆಗೆ ಬಂದಿರುವ ಪೋಲೀಸ್ ಇನ್ಸ್‌ಪೆಕ್ಟರು ಕೂಡ ದೃಷ್ಟಿ ಇಟ್ಟು ಕೆಲಸ ಮಾಡುವವರಲ್ಲದೆ, ಊರಿನ ಜನಗಳ ಮತ್ತು ವರ್ತಕರ ಪ್ರೀತಿಗೆ ಪಾತ್ರರಾಗಿರುತ್ತಾರೆ.

ಚಿತ್ರದುರ್ಗ.—ಚಿತ್ರದುರ್ಗದ ಹೈಸ್ಕೂಲಿನಿಂದ … ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಈ ಸಾರಿ … ಮಂದಿ ವಿದ್ಯಾರ್ಥಿಗಳು ಹಾಜರಾಗಿದ್ದರು. ಆ ಪೈಕಿ ಒಬ್ಬನೇ ಒಬ್ಬ ವಿದ್ಯಾರ್ಥಿಯು … ಅವನೂ ಇದಕ್ಕೆ ಪೂರ್ವ ಎರಡು ಮೂರಾವರ್ತಿ ಪರೀಕ್ಷೆಗೆ ಹಾಜರಾಗಿ ಉತ್ತೀರ್ಣನಾಗದಿದ್ದವನು. … ಹೆಡ್ ಮಾಸ್ಟರವರೂ ಉಳಿದ ಉಪಾಧ್ಯಾಯರೂ ಈ ವಿಷಯಕ್ಕೆ ನಿಗಾ ಕೊಡುವರೆಂದು ನಂಬಿದ್ದೇವೆ.—ನೀರಿನ ಕ್ಷಾಮವು ಬರಬರುತ್ತ ಹೆಚ್ಚುತ್ತಲಿದೆ. ಬೇಗ ಮಳೆ ಬಾರದಿದ್ದರೆ ಬಹಳ ಕಷ್ಟವುಂಟಾಗುವುದೆಂದು ತೋರುತ್ತದೆ.—ಇದೇ ತಿಂಗಳು ೧೧ನೇ ತಾ. ಇಲ್ಲಿಗೆ ಸುಮಾರು ೬-೭ ಮೈಲಿಗಳ ದೂರದಲ್ಲಿರುವ ನಾಯಕನ ಹಟ್ಟಿಯಲ್ಲಿ ದೊಡ್ಡ ಪರಿಷೆ ನಡೆಯಿತು. ಹೋದ ಜಾತ್ರೆಯಲ್ಲಿ ಸೇರಿದಷ್ಟು ಜನಗಳು ಈ ಸಾರಿ ಸೇರಲಿಲ್ಲ. ಆದರೆ ಈ ಸಲ ಅಲ್ಲಿ ಜೂಜು ಆಡುವುದು ಸಂಪೂರ್ಣವಾಗಿ ನಿಲ್ಲಿಸಲ್ಪಟ್ಟಿತು. ಬಾಕಿ ವಿಷಯಗಳಲ್ಲಿಯೂ ಎಲ್ಲವೂ ಕ್ರಮವಾಗಿ ಜರುಗಿತು. ಹೋದ ವರುಷ ಅಲ್ಲಿ ಸುಮಾರು ೧೦೦—೧೫೦ ಮಂದಿ ಜೂಜಾಡುವ ಅಂಗಡಿಗಳನ್ನಿಟ್ಟು, ಯಾರ ಭಯವೂ ಇಲ್ಲದೆ ರಾತ್ರಿ ಹಗಲೂ ಆಡುತ್ತಿದ್ದರು. ಈ ಸಲ ಅವರ ಸುಳುವೇ ಅಪರೂಪವಾಗಿದ್ದದ್ದು ಅಲ್ಲಿ ಉಸ್ತುವಾರಿಗಾಗಿ ಬಂದಿದ್ದ ಅಮಲ್ದಾರರಾದ ಮೆ|| ಎಂ. ಎಸ್. ರಾಮಚಂದ್ರರಾಯರವರ ತನಿಖೆಯ ಭಯವನ್ನು ತೋರಿಸುತ್ತದೆ.—ಮತ್ತು ಅಲ್ಲಿಗೆ ಸಮೀಪವಾದ ತಲಕು ಎಂಬ ಗ್ರಾಮದಿಂದ ನಾಯಕನ ಹಟ್ಟಿಗೆ ಕ್ಷಾಮದ ದೆಸೆಯಿಂದ ರಿಲೀಫ್ ಕಾಮಗಾರಿ ರಸ್ತೆ ಮಾಡಿಸುತ್ತಾರೆ. ಬಡವರಿಗೆ ರಾಗಿ ಮುಂತಾದ್ದನ್ನು ಕೊಡಿಸುತ್ತಾರೆ. ಇದರಲ್ಲಿ ಕೂಲಿ ಜನಗಳಿಗೆ ಸಂದಾಯ ಕೂಲಿ ಮುಂತಾದದ್ದು ತೊಂದರೆಯಿಲ್ಲದೆ ದೊರಕುವಂತೆ ಅಮಲ್ದಾರರೇ ಖುದ್ದು ಆಜಮಾಯಿಸಿ ಮಾಡುತ್ತಾರೆಂತ ವಿಚಾರದಿಂದ ತಿಳಿಯುತ್ತದೆ.—ಈ ಊರಲ್ಲಿ ೪-೫ ತಿಂಗಳು ಪತ್ರಿಕೆ ತೆಗೆದುಕೊಂಡು ಅನಂತರ ಬೇಡ ಎನ್ನುವರೂ, ಆ ವರೆಗೂ ಪಡೆದ ಪತ್ರಿಕೆಗಳಿಗಾದರೂ ದುಡ್ಡನ್ನು ಕೊಡದೆ ತೊಂದರೆ ಮಾಡುವವರೂ ಕೆಲವರಲ್ಲಿ ವಾಡಿಕೆಯಾಗಿದೆ.

ಅರಸೀಕೆರೆ.—ಬಿಸಿಲಿನ ಧಗೆ ಬರಬರ ಅಧಿಕವಾಗಿದೆ. ನೀರಿನ ಸರಬರಾಯಿ ಸಾಕಾಗಿರುವದಿಲ್ಲವು. ನೀರಿನ ಕಷ್ಟವೆಷ್ಟೆಂತ ಹೇಳಿದರೂ ತೀರದು. ಸರ್ಕಾರದವರು ಹತ್ತು ಹನ್ನೆರಡು ಸಾವಿರ ರೂಪಾಯಿ ಮುಂಜೂರ್ಮಾಡಿದ್ದರೂ … ದವರು ಒಬ್ಬ ಎರಡಾವರ್ತಿ … ಮಾಡಿ ಊರಿನ ಸ್ಥಿತಿಯನ್ನೂ ಜನರ ಕಷ್ಟವನ್ನೂ ಸ್ವತಹ ಪರಾಂಬರಿಸಿ ಶೀಘ್ರವಾಗಿ ನೀರಿನ ಭಾವಿಯ ಕೆಲಸ ಮುಗಿಸುವಂತೆ ಅಪ್ಪಣೆ ನೀಡಿದ್ದಾಗ್ಯೂ ಜನರು ಒಂದು ಕೊಡ ನೀರಿಗೆ ಪಡುವ … ಮಹಾ ಸಂಕಟಕರವಾಗಿದೆ. ಈ ಊರಿನ ಸಂತೆಗೆ ಗಾಡಿಗಳು ಹೋಗುವ ಮಾರ್ಗದಲ್ಲಿರುವ ಒಂದು ಉಪ್ಪು ನೀರಿನ ಭಾವಿಯು ಜನರಿಗೆ … ಆಧಾರವಾಗಿದೆ. ಆದರೆ ಅದರ ಸಮೀಪದಲ್ಲಿ ಹೊಸದಾಗಿ ಕಟ್ಟಿಸಿರುವ ಒಂದು ಮುಸಲ್ಮಾನರ ಮನೆಯಲ್ಲಿ ಸತ್ತ ದನಗಳ ಚರ್ಮವನ್ನು ಮುಗ್ಗಿಸುವದರಿಂದ ಕೆಟ್ಟ ವಾಸನೆ ಸಹಿಸಲಸಾಧ್ಯವಾಗಿದೆ. ಅಲ್ಲದೆ ಅಲ್ಲಲ್ಲಿ ಚರ್ಮದ ನಾತವು ಹಬ್ಬುತ್ತಿದೆ. ಈ ಕೆಟ್ಟ ವಾಸನೆ ಎಷ್ಟು ಅಸಹ್ಯಕರವಾಗಿಯೂ ಅನಾರೋಗ್ಯಕರವಾಗಿಯೂ ಪ್ಲೇಗ್ ಇಲಿಗಳಿಗೆ ಆಸ್ಪದವಾಗಿಯೂ ಉಂಟೆಂತ ಹೇಳುವದು ನಾಲದು. ಅರಸೀಕೆರೆ ಮುನಿಸಿಪಲ್ ವೈಸ್ ಪ್ರೆಸಿಡೆಂಟರವರೂ, ಮೆಂಬರುಗಳೂ, ಮುಖ್ಯವಾಗಿ ಡಾಕ್ಟರವರೂ ಶೀಘ್ರವಾಗಿ ಈ ಕೆಟ್ಟ ವಾಸನೆಯನ್ನು … ತಕ್ಕ ತಿಳುವಳಿಕೆ ಎಚ್ಚರಿಕೆ ಕೊಡಬೇಕಾಗಿದೆ.—ಧಾರಣೆವಾಸಿಗಳು ಯಥಾಪ್ರಕಾರವಾಗಿವೆ. ಈ ಊರಲ್ಲಿ ಸಂತೆ ಪರಸ್ಥಳದ ವರ್ತಕರು ಬಹು ಕಮ್ಮಿ … ಮಾರುತ್ತಾರೆ.—ಅಲ್ಲಲ್ಲಿ ಕ್ಷಾಮನಿವಾರಣೆಯ ಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಿವೆ. ಅಮಲ್ದಾರರವರು ತುಂಬಾ ಮುತುವರ್ಜಿಯಿಂದ ಕ್ಷಾಮನಿವಾರಣೆಯ ಕಾರ್ಯಗಳನ್ನು ನೋಡುತ್ತಿರುವಂತೆ ತಿಳಿಯಲಾಗಿದೆ.—ಇಲ್ಲಿನ ಪ್ರಸಿದ್ಧ ತಿರುಪತಿ ದೇವಾಲಯದಲ್ಲಿ ಕಳ್ಳತನ ನಡೆದ ಹಾಗೂ ಆರೋಪಿಗಳನ್ನು ಪತ್ತೆಮಾಡಿ ಕಮಿಟ್ ಮಾಡಿದ ಹಾಗೂ ವರ್ತಮಾನವಿತ್ತು. ಆದರೆ ಫಲಿತಾಂಶ ಪ್ರಕಟವಾಗಿಲ್ಲ.—ಇಲ್ಲಿನ … ಇಲಾಖಾ ಸಬ್ ಡಿ|| ಆಫೀಸರ್ ಎಲಿಸ್ ಸಾಹೇಬರಿಗೂ ಅವರ ರೈಟರ್ ಶ್ರೀನಿವಾಸಯ್ಯಂಗಾರ್ರಿಗೂ ವರ್ಗವು ತಪ್ಪಿಹೋಯಿತು.—ಇಲ್ಲಿನ ಕೆಲವು ಸ್ಥಳಿಕ ದೊಡ್ಡ ಮನುಷ್ಯರು ಸಹಾಯಸಂಘವನ್ನು ಏರ್ಪಡಿಸಿ ಪರಸ್ಥಳದಿಂದ ರೈಲಿನ ಮೇಲೆ ಹುಲ್ಲು ತರಿಸಿ ಅಸಲ್ ಬೆಲೆಗೆ ಮಾರುವಂತೆ ಏರ್ಪಡಿಸಿದಾರೆ. ಮೆ|| ಕೊಟ್ಟಾ ಕೇಶವಯ್ಯಸೆಟ್ಟರೂ, ಮೆ|| … ಚೆನ್ನಯ್ಯಸೆಟ್ಟರೂ, ಮೆ|| ವೆಂಕಟಸುಬ್ಬಯ್ಯನವರೂ ಇನ್ನು ಕೆಲವರೂ ಮುಂದಾಳುಗಳಾಗಿ ಸಹಾಯ ಮಾಡಿರುತ್ತಾರೆ. ರಾಗಿ ೧೧ ಸೇರು, ಸ್ಥಳದ ಅಕ್ಕಿ ೭ ಸೇರು, ಹುರುಳಿ ೭-೮ ಸೇರು, ಜೋಳ ೧೧ ಸೇರು ಮಾರುತ್ತಿದೆ.

ಚನ್ನಪಟ್ಟಣ.—ಈಗ ಬಿಸಿಲಿನ ತಾಪವು ಬಹು ವಿಶೇಷವಾಗಿದೆ. ಈ ವರುಷ ಈ ಪ್ರಾಂತ್ಯ ಕಡಿಮೆಯಿಂದ ಬಹು ಜನ ಕಷ್ಟಪಟ್ಟರು. ಈಗಿನ ಮಟ್ಟಿಗೂ ಈ ಟೌನ್ನಿಗೆ ನೀರಿನ ಕಷ್ಟ ಕಾಣಲಿಲ್ಲ. ಇಲ್ಲಿನ ಜಲಾಶಯವಾದ … ಕಟ್ಟೆಯಲ್ಲಿ ಜಲವು ಬತ್ತಿ ಹೋಗುತ್ತದೆ. ಈಗಾಗಲೇ ಜನರು ನೀರಿಗೋಸ್ಕರ ಆಲೋಚಿಸುತ್ತಲಿರುವರು. ಸುತ್ತುಮುತ್ತಲಿನ ಕೆಲವು ಗ್ರಾಮಗಳಲ್ಲಿ ಜನರು ನೀರಿಗೋಸ್ಕರ ಪಡುವ ಶ್ರಮವನ್ನು ನೋಡಲಾಗದು. ನೀರಿಲ್ಲದೆ ದನಕರುಗಳು ಮೃತಿಯನ್ನೈದುತ್ತಿರುವವು. ಕೆಲವು ಗ್ರಾಮಗಳಲ್ಲಿ ಸರ್ಕಾರದವರು ಕ್ಷಾಮ ನಿವಾರಣೆಯನ್ನು ಅನುಸರಿಸಿ, ಕೆಲವು ಭಾವಿಗಳನ್ನು ತೆಗೆಸಲು ಉಪಕ್ರಮಿಸಿರುವಂತೆ ತೋರುತ್ತೆ.—ಇಲ್ಲಿಗೆ ಹೊಸದಾಗಿ ಬಂದಿದ್ದ ಅಸ್ಸಿಸ್ಟೆಂಟ್ ಕಮಿಷನರ್ ಮೆ|| ಆದಿನಾರಾಯಣ ಶೆಟ್ಟಿಯವರು ಮೂರು ನಾಲ್ಕು ತಿಂಗಳುಗಳಲ್ಲಿಯೇ ಜನರ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡರು. ಬಡವರಲ್ಲಿ ವಿಶೇಷ … ಇವರು ಅಕಸ್ಮಾತ್ತಾಗಿ ತಿಪಟೂರಿಗೆ ವರ್ಗವಾಗಿ ಹೋದ ವಿಷಯವು ಇಲ್ಲಿನ ಅನೇಕ ಪ್ರಜೆಗಳಿಗೆ ವಿಷಾದಕರವಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಮುಂಚೆ ಇಲ್ಲಿ … ಮೆ|| ಜವರಪ್ಪ ಶೆಟ್ಟಿಯವರು ಇಲ್ಲಿಗೆ ಬರುವರೆಂಬ ಸುದ್ದಿಯುಂಟು. ಇವರು ಈ ನೂತನ ಸ್ಥಳದಲ್ಲಿ ಪ್ರಜಾಹಿತಕರರಾಗಿದ್ದು ಉಪಕಾರಿಗಳೆನಿಸಿಕೊಂಡರೆಂಬುದಾಗಿ ಹಾರೈಸುತ್ತೇವೆ. ಇಲ್ಲಿನ ಸರ್ಕಾರಿ ಕೈಗಾರಿಕೆಯ ಕಾರ್ಖಾನೆಯು ಬರಬರುತ್ತ ಏಳಿಗೆಯಾಗುತ್ತ ದಿನೇ ದಿನೇ ವೃದ್ಧಿಗೊಳ್ಳುತ್ತಾ ಕೀರ್ತಿಗೊಳ್ಳುತ್ತಾ ಇರುವುದು. ಇದು ಸಕಲರಿಗೂ ಸಂತೋಷಕರವಾಗಿದೆ. ಅಲ್ಲದೆ ಈ ಕಾರ್ಖಾನೆಯು ಈಗ … ನೂತನ ಸೊಸೈಟಿಯನ್ನು ಸಂಪಾದಿಸಿಕೊಂಡಿರುವುದು. ಈ ಸೊಸೈಟಿಯ ಉದ್ದೇಶ ಮತ್ತು ಕ್ರಮಗಳ ಪ್ರಕಾರ ಈ ಮೈಸೂರು ಸೀಮೆಯ … ಈ ಕಾರ್ಖಾನೆಗೆ ಬಂದು ಕೈಗಾರಿಕೆ ಕಲಿಯಬಹುದು. ಇಲ್ಲಿ ಒಂದು ಆರು ತಿಂಗಳ ವರೆಗೆ ಸ್ವಂತ ಖರ್ಚಿನಲ್ಲಿ ಉದ್ಯೋಗ ಕಲಿಸಿದ ಮೇಲೆ ಕಾರ್ಖಾನೆಯಲ್ಲಿ ಮಾಸೋಪಾದಿ ೧೦ ರೂಪಾಯಿ ಸಂಬಳ ಕೊಡುವರು. ಅನಂತರ ಪ್ರತಿ ವರುಷವೂ ಸಂಬಳ ಬಡ್ತಿ ಪಡೆದು ೩೦ ರೂಪಾಯಿ ವರೆಗೂ ಸಂಬಳ ಪಡೆಯಲು ಅವಕಾಶವಿದೆ. ಈ ವಿಚಾರಕ್ಕೆ ಮುಂದೆ ವಿಸ್ತಾರವಾದ ಪ್ರಕಟನೆಯನ್ನು ಕೊಡುತ್ತೇವೆ.—ಕಳೆದ ತಾ. ೨೭ರಲ್ಲಿ ಚನ್ನಪಟ್ಟಣದ ತಾಲ್ಲೂಕು … ಹೊಸಹಳ್ಳಿ ಗ್ರಾಮದಲ್ಲಿ ರಾಗಿ ಹುಲ್ಲಿನ ಒಣಗಲೆಗೆ ಬೆಂಕಿ ಬಿದ್ದು ಭಸ್ಮವಾಯಿತು. ಸುಮಾರು ಮುನ್ನೂರು ರೂಪಾಯಿ ನಷ್ಟವಾಯಿತೆಂದು ತಿಳಿಯಬರುತ್ತೆ. ಇಂಥಾ ಅನಾಹುತಗಳ ಸಮಯದಲ್ಲಿ

ನೀರಿನ ಕೊರತೆ ಬಹಳವಾಗಿದೆ. ಕಳೆದ ತಾ. ೬ನೇ ಶನಿವಾರ ಸಾಯಂಕಾಲ ೪ ಘಂಟೆ ವೇಳೆಯಲ್ಲಿ ಚನ್ನಪಟ್ಟಣದ ಜನಾನಾ ಆಸ್ಪತ್ರೆಯ ಒಂದು ಭಾಗದಲ್ಲಿ ಆಕಸ್ಮಿಕದಿಂದ ಬೆಂಕಿ ಹಚ್ಚಿಕೊಳ್ಳಲು ಅದು ಕೊಠಡಿಗಳೂ, ಒಂದು ನಾಲು ಮನೆಗಳು ಬಿದ್ದುಹೋದವು. ಕೆಲವು ಔಷಧ, ಯಂತ್ರ, ಬಟ್ಟೆ, ಊಟದ ಪದಾರ್ಥ, ಪುಸ್ತಕಗಳು, ಎಲ್ಲಾ ಸುಮಾರು ೩೦೦-೪೦೦ ರೂಪಾಯಿ ಸರಕು ನಷ್ಟವಾಯಿತು. ಆ ಸಮಯಕ್ಕೆ ಪೋಲೀಸ್ ಇನ್‌ಸ್ಪೆಕ್ಟರ್‌ರವರು ಪೋಲೀಸಿನವರೊಡನೆ ಬಂದು ಬೆಂಕಿಯನ್ನು ಆರಿಸುವುದರಲ್ಲಿ ತುಂಬಾ ಪ್ರಯತ್ನ ಮಾಡಿದರು. ಪೇಟೆಗಳ ಅನೇಕ ಜನರು ಸಹಾಯಕರಾಗಿದ್ದರು. ಈ ಧರ್ಮದ ಆಸ್ಪತ್ರೆಗೆ ಬಂದ ನಷ್ಟವನ್ನು ನೋಡಿ ಜನರು ಮರುಗುತ್ತಿದ್ದಾರೆ.

ಚಿಕ್ಕಮಗಳೂರು.—ಇಲ್ಲಿಗೆ ೧೨ ಮೈಲಿ ದೂರದಲ್ಲಿನ ಆಲದೂರಿನಿಂದ ಮೊನ್ನೆ ದಿನ ಪ್ಲೇಗಿನ ರೋಗಿಯು ತರಲ್ಪಟ್ಟನು. ಇಲ್ಲಿನ ವೈದ್ಯ ಶಿರೋಮಣಿಗಳು ಪರೀಕ್ಷಿಸಿ ಸರಿಯಾದ ಕಾಲರಾ ಎಂದು ತೀರ್ಮಾನಿಸಿದರು. ಅನಂತರ ಪ್ಲೇಗ್ ಷೆಡ್ಡಿಗೆ ರೋಗಿಯನ್ನು ಕಳುಹಿಸಿದರು. ಸುಮಾರು ನಾಲ್ಕಾರು ಘಂಟೆಯೊಳಗಾಗಿಯೇ ರೋಗಿಯು ಸತ್ತು ಹೋದನು. ಸದ್ಯಕ್ಕೆ ಇತರ ಯಾವ ವಿಧವಾದ ಕಾಯಿಲೆಯೂ ಇಲ್ಲವಾಗಿದೆ. ಅಕ್ಕಪಕ್ಕ ಗ್ರಾಮಾಂತರಗಳಲ್ಲಿಯೂ ಹೆಚ್ಚಿನ ಪುಕಾರು ಇಲ್ಲ. ಆದರೆ ಆಲದೂರಿನಲ್ಲಿ ನಡೆದದ್ದು ಆಶ್ಚರ್ಯವೇ ಸರಿ.—ನೀರಿನ ಕೊರತೆ ಇಲ್ಲಿನವರಿಗೆ ಇಲ್ಲವಾಗಿದೆ. ಆದರೆ ಯಾವ ರಾಜ್ಯದಲ್ಲಿ ಯಾವರೂ ಕಷ್ಟಬರುವನು ಕೇವಲ ಬಡವರಿಗೆ ತಾನೇ. ಅದರಂತೆ ಇಲ್ಲಿನ ಹೊಸಪೇಟೆ, ವರ್ತಕರ ಹಟ್ಟಿಯಲ್ಲಿರುವ ಬಾವಿನಲ್ಲಿ ನೀರು ಪತ್ತೆ ಇಲ್ಲ. ಜನರ ಕಷ್ಟ ಅಪಾರವೆಂದೇ ಹೇಳಬೇಕಾಗಿದೆ. ಮೇಲ್ಪಟ್ಟ ಸ್ಥಳಾಧಿಕಾರಿಗಳು ಗಮನವಿಟ್ಟರೆ ಬಡವರು ಭಾಗ್ಯವಂತರಾಗುವರು.—ಆಗಲೇ ಮಂಗಳೂರಿನ ಹಾವಿನವರಿಸ್ಟ್ ಬ್ರದರ್ಸ್ ಕಂಪೆನಿಯವರು ಕಾಫಿ ಮಾರಾಟಕ್ಕೆ ಬಗ್ಗೆ ರಂಗೂನಿನ ಆಕ್ಷನ್ ದಾಸ್ತಾನು ಮಾಡಿದ್ದಾರೆ. ಕಾಫಿ ಮನೆಯಲ್ಲಿ ಮಾರಬೇಕೆಂದಿರುವರು.—ಇಲ್ಲಿಗೆ ೧೫ ಮೈಲಿ ದೂರದಲ್ಲಿ ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿಯವರ ಪೀಠವೊಂದುಂಟಷ್ಟೆ. ಪೂರ್ವದಲ್ಲಿ ರಸ್ತೆ ಇಲ್ಲದೆ ಜನರು ಬಹಳ ಶ್ರಮವನ್ನನುಭವಿಸುತ್ತಿದ್ದರು. ಲೇಟ್ ಚಾಮರಾಜ ಒಡೆಯರ್ ಬಹದ್ದೂರರವರ ಸವಾರಿ ಈ ಪ್ರಾಂತ್ಯ ಚಿತ್ತೈಸಿದ ಕಾಲದಲ್ಲಿ ದಾರಿಯ ತೊಂದರೆಯನ್ನು ನೋಡಿ, ಅಡಿಯಿಂದ ತುದಿಯವರೆಗೆ ಸ್ತ್ರೀಪುರುಷರಿಗೂ ಕುದುರೆ ಗಾಡಿ ಸರಿಯಾಗಿ ಹೋಗುವಂತೆ ಮಾರ್ಗವನ್ನು ಮಾಡಿಸಿದರು. ಆಗಿನಿಂದ ಪ್ರಜೆಗಳಿಗೆ ತೊಂದರೆಯಿಲ್ಲದೆ ಪ್ರಯಾಣಕ್ಕೆ ಸರಾಗವಾಯಿತು. ಸದರಿ ಪೀಠದ ಉರುಸು ಬಹು ಚಾಲ್ತಿ ವಾಗಿ ೮ ೯ ದಲ್ಲಿ ನಡೆಯಿತು. ಸುಮಾರು ೩-೪ ಸಹಸ್ರ ಹಿಂದೂ ಮುಸಲ್ಮಾನ್ ಪ್ರಜೆಗಳು ಸೇರಿದ್ದರು. ಕೂಡಿ ಬಂದಿದ್ದ ಸರ್ವ ಜನರಿಗೂ ಅಲ್ಲಿನ ಸೀರದಿಂದಲೂ ಭೋಜನ ಭಕ್ಷ್ಯವಗೈರೆ ಸರಬರಾಯಿ ಆಯಿತು. ಇಲ್ಲಿ ಪ್ರತಿವರುಷವೂ ನಾನಾ ಪ್ರದೇಶಗಳಿಂದ ಬರುವವರ ಸಂಖ್ಯೆ ೧೨ ಅಥವಾ ೧೫ ಸಹಸ್ರವಾಗಬಹುದು. ಎನ್ನುವುದರಿಂದ ಮಾತ್ರವಲ್ಲದೆ ಇತರ ದೂರದ ಪ್ರದೇಶಗಳಿಂದಲೂ ಭಕ್ತಾದಿಗಳು ಬರುವವರಾಗಿದ್ದಾರೆ. ಇಲ್ಲಿನ ಆದಾಯ ಸ್ವಲ್ಪವಾದರೂ ಏರ್ಪಟ್ಟು ಹೆಚ್ಚೆಂದೇ ಹೇಳಬೇಕು. ಈ ಪೀಠವು ಒಂದೇ ಬಗೆಯವರಿಗಲ್ಲ. ಎಲ್ಲಾ ಬಗೆ ಜನರಿಗೂ ಪಾವನವಾಗಿದೆ. ಇಲ್ಲದೆ ಪುಣ್ಯಸ್ಥಳವೆನಿಸಿಕೊಂಡಿರುವುದು. ಮಾರ್ಗದ ಸುತ್ತುಮುತ್ತಲಿರುವ ಗುಹೆಗಳಲ್ಲಿ ಗೋಸಾಯಿಗಳು, ಫಕೀರರು ತಿಂಗಳು ತಿಂಗಳಟ್ಟಲೆ ತಪಸ್ಸು ಮಾಡುತ್ತಲಿದ್ದಾರೆ. ಚಾಲ್ತಿ ಉರುಸಿನಲ್ಲಿ ಇಬ್ಬರು ಗೋಸಾಯಿಗಳೂ ಒಬ್ಬ ಫಕೀರನೂ ತಪಸ್ಸಿನಲ್ಲಿದ್ದರು. ಈ ಮೂವರೂ ೨ ತಿಂಗಳಿಂದ ಹಾಗೆ ಇದ್ದಾರೆಂದು ಗೊತ್ತಾಯಿತು. ದೇಶದೇಶಗಳಿಂದ ಬಂದಿದ್ದ ಮೌಲ್ವಿಯವರು ದೇವಭಕ್ತಿ ಧರ್ಮ ವಿಷಯವಾಗಿ ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ನೂರಾರು ಜನರು ಆಸಕ್ತಿಯಿಂದ ಕೇಳಿದರು. ಭಕ್ತಿಗೆ ವಿಷ್ಯವೇ ಸಾರ್ಥಕವೆಂದು ಉಪನ್ಯಾಸ ಮಾಡಿದರು. ಇದು ವೆಗ್ಗ ಸಜ್ಜಾದ ಹಜರತ್ ಸ್ವಾಮಿ ಸೈಯದ್ ಮುತಕಲ್ಲಾ ಸಾಹಿಬರ ಮುಂದೆ ನಡೆಯಿತು. ಇನ್ನು ಇಲ್ಲಿ ಕೆಲವು ಪುಣ್ಯಸ್ಥಳಗಳುಂಟು. ಒಂದಕ್ಕೆ ಮಾತ್ರ ಮೊದಲಿನ ಹಜರತ್ತರು ಮಾರ್ಗ ಮಾಡಿರುವರು. ಅದರ ಹೆಸರು ಮಾಣಿಕ್‌ದಾರೆ. ಇದೇ ಪುಣ್ಯಸ್ಥಳ. ಇಲ್ಲಿ ಎತ್ತರದಿಂದ ನೀರು ಧುಮುಕುವುದು. ಎಲ್ಲಾ ಕೋಮಿನ ಜನರೂ ಸ್ನಾನವಾಡುವರು. ಇದುವರೆಗೆ ಯಾವ ನಷ್ಟವೂ ಸಂಭವಿಸಿಲ್ಲ. ರೋಗಿಷ್ಟರು ಸ್ನಾನಮಾಡಿ ಆರೋಗ್ಯ ಹೊಂದುತ್ತಾರೆಂದು ಹೇಳುವರು. ಇಲ್ಲಿನ ನೀರೂ ಹವಾ ಬಹಳ ಒಳ್ಳೇದಾಗಿದೆ.

ಶ್ರೀಮನ್ ಯುವರಾಜರವರ ಆಗಮನವು

ಕಳೆದ ಡಿಸೆಂಬರ್ ತಾ. ೨೬ರಲ್ಲಿ ಶ್ರೀಮನ್ ಯುವರಾಜರವರು ಪರಿವಾರ ಸಹಿತ ರಾಜಧಾನಿಯಿಂದ ಹೊರಟು ಇನ್ನೂ ದಿನದಲ್ಲಿ ಜಯಪುರ ಪಟ್ಟಣ ರಾಜ್ಯಕ್ಕೆ ಸಂದರ್ಶನಾರ್ಥವಾಗಿ ದಯಮಾಡಿದರಷ್ಟೆ. ಇವರು ಕಳೆದ ಫೆಬ್ರವರಿ ಕಡೆಗೆ ದೇಶಾಟನವನ್ನು ತೀರಿಸಿಕೊಂಡು ಸುಕ್ಷೇಮವಾಗಿ ರಾಜಧಾನಿಯನ್ನು ಬಂದು ಸೇರಿದರು. ಆ ದಿನ ಅವರನ್ನು ಎದುರುಗೊಳ್ಳುವುದಕ್ಕೆ ರಾಜಧಾನಿಯ ರೈಲ್ವೇ ಸ್ಟೇಷನ್ನಿನಲ್ಲಿ ಬಹು ನೇತ್ರಾನಂದಕರವಾಗಿ ಅಲಂಕಾರ ಮಾಡಿದ್ದರು. ದೇವಸ್ಥಾನಗಳಿಂದ ತೀರ್ಥ ಪ್ರಸಾದಗಳು ಕಳುಹಲ್ಪಟ್ಟಿದ್ದವು. ಶ್ರೀಕಂಠೀರವ ಮತ್ತು ಬಿಡದಿಯ ಅರಮನೆಯ ವಿದ್ವಾಂಸರುಗಳು ಹಾಜರಾಗಿದ್ದರು. ದಿವಾನ್‌ರವರೂ, ಮ. ರಾ. ರಾ. ಕಾಂತರಾಜೆ ಅರಸಿನವರು, ದೇವರಾಜೆ ಅರಸಿನವರು, ಪೇಶ್ವಾಜೆ ಅರಸಿನವರು, ದಫೇದಾರ್ ಲಿಂಗರಾಜೆ ಅರಸಿನವರು, ನಂಜುಂಡರಾಜೆ ಅರಸಿನವರು, ಈ ಮೊದಲಾದ ರಾಜವಂಶದವರೂ, ಅಸಿಸ್ಟೆಂಟ್ ಕಮಿಷನರುಗಳೂ, ಎಲ್ಲಾ ಇಲಾಖೆಗಳ ಅಧಿಕಾರಿಗಳೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ಎಲ್ಲಾ ಕೋಮುಗಳ ಪ್ರಮುಖರೂ ಸ್ಟೇಷನ್ನಿನಲ್ಲಿ ಕಾದಿದ್ದರು. ಪ್ಲಾಟ್‌ಫಾರಂ ಹೊರಗಡೆ ಸ್ಟೇಷನ್ ಮುಂದೆ ಬ್ಯಾಂಡಿನವರು, ಅರಮನೆ ಸಿಪಾಯಿಗಳು, ಸವಾರ್ ರೆಜಿಮೆಂಟ್ ಸ್ವಾರರು ಕಟ್ಟಿ ನಿಂತಿದ್ದರು.

ಈ ದಿನ ರೈಲ್ ಗಾಡಿಯು ಸಾಯಂಕಾಲ ೫ ಘಂಟೆ ೪೫ ನಿಮಿಷಕ್ಕೆ ಬರುವುದು ತಪ್ಪಿ ಒಂದು ಗಂಟೆ ತಡವಾಯಿತು. ರೈಲ್ ಗಾಡಿಯು ಪ್ಲಾಟ್‌ಫಾರಮಿಗೆ ಬಂದು ನಿಂತ ಒಡನೆಯೇ ಸರದಾರರೂ ಪ್ರಮುಖರೂ ಅಧಿಕಾರಿಗಳೂ ಆನಂದದಿಂದ ಯುವರಾಜರವರಿಗೆ ಸಲಾಂ ಮಾಡಿ ಬಳಿಗೆ ಹೋದರು. ಶ್ರೀಮನ್ ಯುವರಾಜರು ಸ್ವಲ್ಪ ಹೊತ್ತಿನ ಮೇಲೆ ಗಾಡಿಯಿಂದಿಳಿದು ಬಂದು ಹರ್ಷಮುಖಿಗಳಾಗಿ ಎಲ್ಲರನ್ನೂ ಮನ್ನಿಸುತ್ತಾ ಅವರ ಯೋಗಕ್ಷೇಮಗಳನ್ನು ವಿಚಾರಿಸಿದರು. ಅಷ್ಟರಲ್ಲೇ ಮ್ಯುನಿಸಿಪಲ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟರವರ ಮುಂದೆ ಹೋಗಿ ಪುರವಾಸಿಗಳ ಪರವಾಗಿ ಶ್ರೀಮನ್ ಯುವರಾಜರವರಿಗೆ ಸುಸ್ವಾಗತವನ್ನು ಬಯಸಿ ಹಾರ ತುರಾಯಿಗಳನ್ನು ಒಪ್ಪಿಸಿದರು. ಯುವರಾಜರವರು ಮುಂದೆ ಹೊರಟು ಸ್ಟೇಷನ್ ಹೊರವಾರ್ಡಿಗೆ ಹೋಗಿ ಅಲ್ಲಿ ಸೈನಿಕರು ಮಾಡಿದ ಸಲ್ಯೂಟುಗಳನ್ನು ಅಂಗೀಕರಿಸಿ, ವಿನ್ಯಾಸದ ಸಾರೋಟಿನಲ್ಲಿ ಕುಳಿತು, ಜಯಘೋಷವಾಗುತ್ತಿರುವಲ್ಲಿ ಅರಮನೆಯನ್ನು ಕುರಿತು ತೆರಳಿದರು. ದಾರಿಯ ಉದ್ದಕ್ಕೂ ಪುರಜನರು ತಂಡ ತಂಡವಾಗಿ ನಿಂತು ಯುವರಾಜರವರ ದರ್ಶನ ಮಾಡಿ ಸಂತೋಷಪಟ್ಟರು. ಗೌರವಾರ್ಥವಾದ ೨೧ ತೋಪುಗಳು ಹಾರುತ್ತಿರುವಲ್ಲಿ ಶ್ರೀಮನ್ ಯುವರಾಜರವರು ಅರಮನೆಯನ್ನು ತಲುಪಿ, ಶ್ರೀಮನ್ ಮಹಾರಾಜರವರಿಗೂ, ಮಹಾಮಾತೃಶ್ರೀಯವರಿಗೂ, ರಾಜವಂಶದವರಿಗೂ ಪರಮಾನಂದವನ್ನುಂಟುಮಾಡಿದರು.

ಯುವರಾಜರವರು ಸಮುದ್ರಯಾನ ಮಾಡಿ ದೇಶಾಟನೆಯನ್ನು ಮಾಡಿಕೊಂಡು ಬಂದುದರಿಂದ ಮೊದಲಿಗಿಂತಲೂ ಕಾಯಪುಷ್ಟಿ, ಆರೋಗ್ಯಭಾಗ್ಯಗಳನ್ನು ಪಡೆದು ಸುಖಿಗಳಾಗಿರುತ್ತಾರೆ. ಅವರ ಸಂಗಡ ಪ್ರಯಾಣ ಮಾಡಿದ್ದ ಸದಾರರುಗಳಾದ ಕೆ. ಲಕ್ಷ್ಮೀಕಾಂತರಾಜೆ ಅರಸಿನವರು, ಗೋಪಾಲರಾಜೆ ಅರಸಿನವರು, ಲಿಂಗರಾಜೆ ಅರಸಿನವರು, ಕೃಷ್ಣರಾಜೆ ಅರಸಿನವರು, ಡಾ॥ ಬ್ರಾಕ್‌ಮೋರ್‌ರವರು, ಡಾ॥ ರಂಗಣ್ಣನವರು, ಮ. ಸಿಂಗಳಾಚಾರ್ಯ, ಮ. ಗಜಾನನ ಕರ್ವೆಯವರು ಮತ್ತು ಸುಮಾರು ೬೦ ಮಂದಿ ಸೇವಕಾಳುಗಳು. ಈ ಮೊದಲಾದವರೆಲ್ಲಾ ಕ್ಷೇಮದಿಂದ ವಾಪಸು ಬಂದರು.

ಜಮೀನಿಗೆ ಹಾಕುವ ಗೊಬ್ಬರ

ದನಪಿನ ಗೊಬ್ಬರ

ದನಗಳ ಸಗಣಿಗಿಂತ ಅವುಗಳ ಗಂಜಳವು ಬಹಳ ಸಾರವತ್ತಾದ ಗೊಬ್ಬರ. ಇಂಥಾ ಗೊಬ್ಬರವನ್ನು ನಮ್ಮ ರೈತರುಗಳು ಕೂಡಿಸಿ ಕಾಪಾಡಿಕೊಳ್ಳದೆ ಪೋಲು ಮಾಡುತ್ತಲಿದ್ದಾರೆ. ಹಾಗೆ ಮಾಡದೆ, ದನಗಳನ್ನು ಕಟ್ಟುವ ಜಾಗದಲ್ಲಿ ಪ್ರತಿದಿವಸವೂ ಹೊಸ ಮಣ್ಣನ್ನು ತೆಳ್ಳಗೆ ಚೆಲ್ಲಿದರೆ ದನಗಳು ಹೊಯ್ಯುವ ಗಂಜಳವನ್ನು ಈ ಮಣ್ಣು ಹೀರಿಕೊಳ್ಳುತ್ತದೆ. ಈ ಮಣ್ಣನ್ನು ಸಗಣಿಯ ಜೊತೆಯಲ್ಲಿ ಗುಡಿಸಿ ತಿಪ್ಪೆಯಲ್ಲಿ ಸೇರಿಸಿದರೆ ಬಹಳ ಉಪಯೋಗವಾದ ಗೊಬ್ಬರವಾಗುತ್ತದೆ.

ನಮ್ಮ ದೇಶದಲ್ಲಿ ದನದಿನ ಸಗಣಿಯನ್ನು ಗೊಬ್ಬರವಾಗಿ ಉಪಯೋಗಿಸುವುದರಲ್ಲಿ ಅನೇಕ ರೈತರು ತಿಳುವಳಿಕೆ ಸಾಲದೆ ಅಶ್ರದ್ಧೆ ಮಾಡುತ್ತಾರೆ. ಸಗಣಿಯನ್ನು ಸಾಮಾನ್ಯವಾಗಿ ಹಳ್ಳಗಳಲ್ಲಿ ಬಿಸಿಲು, ಗಾಳಿ ಮತ್ತು ಮಳೆ ತಗಲುವ ಹಾಗೆ ಬಯಲು ಪ್ರದೇಶದಲ್ಲಿ ಗುಪ್ಪೆ ಮಾಡಿ ಬಿಡುತ್ತಾರೆ. ಇದರಿಂದ ಗೊಬ್ಬರದ ಸಾರವು ಬಹಳ ಮಟ್ಟಿಗೆ ಬಿಸಿಲಿನಿಂದ ಆವಿಯ ರೂಪವಾಗಿ ಹೊರಟು ಹೋಗುವುದಲ್ಲದೆ, ಮಳೆಯಿಂದ ದ್ರವರೂಪವಾಗಿ ಕೊಚ್ಚಿ ಹೋಗುತ್ತದೆ. ಇದನ್ನು ತಪ್ಪಿಸುವುದಕ್ಕೆ ಸುಲಭವಾದ ಒಂದು ಉಪಾಯವುಂಟು.

ಯಾವಾಗಲೂ ಗೊಬ್ಬರವನ್ನು ಒಂದು ಗುಂಡಿಯಲ್ಲಿಯೇ ಹಾಕಬೇಕು ಮತ್ತು ಅದರ ಮೇಲೆ ಮಳೆಯ ನೀರೂ ಬಿಸಿಲೂ ಬೀಳದಂತೆ ಒಂದು ಚಾವಣಿಯನ್ನು ಮಾಡಿ ಬಿಟ್ಟರೆ ಮೇಲ್ಕಂಡಂತೆ ಅದರ ಸಾರವು ಹೋಗುವುದಿಲ್ಲ. ಅಗಲಕ್ಕೆ ಗೊಬ್ಬರದ ಗುಂಡಿಯನ್ನು ಗುದ್ದಲಿಯಿಂದ ಅಗೆದು ಮಟ್ಟ ಮಾಡಿ ದಮ್ಮಸ್ಸು ಮುಕೆಯಿಂದ ಚನ್ನಾಗಿ ಕಟ್ಟಬೇಕು. ಅಥವಾ ಕಾಲಿನಿಂದ ಚನ್ನಾಗಿ ತುಳಿಯಬೇಕು. ಗೋಡೆಯ ಪಕ್ಕಕ್ಕೂ ಮತ್ತು ಅಡಿಗೂ ಗೊಬ್ಬರವನ್ನು ಹಾಕುವುದಕ್ಕೆ ಮುಂಚಿತವಾಗಿಯೇ ಜೇಡಿ ಮಣ್ಣನ್ನು ಘಟ್ಟಿಯಾಗಿ ಸವರಿ ಗೊಬ್ಬರವನ್ನು ಗುಂಡಿಯಲ್ಲಿ ಹಾಕಿದರೆ ಅದರ ಸಾರವನ್ನು ಭೂಮಿಯು ಹೀರಿಕೊಳ್ಳುವುದಿಲ್ಲ. ಈ ರೀತಿ ಮಾಡುವುದರಿಂದ ಗೊಬ್ಬರವು ಸಾಮಾನ್ಯವಾಗಿ ನಮ್ಮ ರೈತರು ಸೇರಿಸುವ ದನದಿನ ಗೊಬ್ಬರಕ್ಕಿಂತ ಬಹಳ ಸಾರವತ್ತಾದ ಗೊಬ್ಬರವಾಗುತ್ತದೆ. ಇದನ್ನು ಜಮೀನುಗಳಿಗೆ ಉಪಯೋಗಿಸಿದರೆ ಈಗ ಉಂಟಾಗುವ ಫಾಯಿದೆಗಿಂತ ೨-೩ ರಷ್ಟು ಹೆಚ್ಚಾದ ಫಾಯಿದೆಯಾಗುವುದು.

ಮೂಳೆ ಹುಡಿ ಮತ್ತು ಸಟ್ಲುಪ್ಪು (ಕಡ್ಡುಪ್ಪು) ಇವುಗಳ ಗೊಬ್ಬರ

ಶಾಸ್ತ್ರಜ್ಞರು ಮೂಳೆ ಹುಡಿ ಮತ್ತು ಕಡ್ಡುಪ್ಪು ಈ ಗೊಬ್ಬರಗಳನ್ನು ಬತ್ತದ ಗದ್ದೆಗೆ ಉಪಯೋಗಿಸುವುದರಿಂದ ರೈತರಿಗೆ ೧ಕ್ಕೆ ೨ರಷ್ಟು ಬೆಳೆ ಆಗಿ ಲಾಭವುಂಟಾಗುತ್ತದೆಂದು ನಿರ್ಣಯಿಸಿದ್ದಾರೆ. ಈ ಗೊಬ್ಬರಗಳನ್ನು ಎಕರೆ ೧ಕ್ಕೆ ಮೂಳೆ ಹುಡಿ ಮೈಸೂರಿನ ೯ ಮಣ, ಕಡ್ಡುಪ್ಪು ೪೦ ಸೇರು ಹಾಕಬೇಕು. ಈ ರೀತಿ ಗೊಬ್ಬರ ಹಾಕಿ ವ್ಯವಸಾಯ ಮಾಡುವ ಗದ್ದೆಯಲ್ಲಿ ಇಂಥಾ ಗೊಬ್ಬರವನ್ನು ಉಪಯೋಗಿಸದೆ ಮಾಡಿದ ಗದ್ದೆಯ ಫಸಲಿಗಿಂತ ಹೆಚ್ಚಾಗಿ ಫಸಲು ಆಗಿರುತ್ತದೆಂದು ತಿಳಿದುಬಂದಿದೆ. ವ್ಯವಸಾಯ ಶಾಸ್ತ್ರಜ್ಞರು ಅಕ್ಕಪಕ್ಕದ ಎರಡು ಎಕರೆಯನ್ನು ಸಂಗ್ರಹಿಸಿ ಮಾಡಿದರು. ೧ ಎಕರೆಯನ್ನು ಸಾಮಾನ್ಯವಾಗಿ ನಮ್ಮ ದೇಶದಲ್ಲಿ ರೂಢಿಯಲ್ಲಿರುವಂತೆ ಸಾಗುವಳಿ ಮಾಡಿ ನಾಟಿ ಹಾಕಿದರು. ಬಾಕಿ ೧ ಎಕರೆಗೆ ಮೇಲ್ಕಂಡ ಪ್ರಮಾಣದಂತೆ ಮೂಳೆ ಹುಡಿ, ಕಡ್ಡುಪ್ಪು ಹಾಕಿ ವ್ಯವಸಾಯ ಮಾಡಿ ನಾಟಿ ಹಾಕಿದರು. ಸಾಮಾನ್ಯ ವ್ಯವಸಾಯ ಮಾಡಿದ ಗದ್ದೆಯಲ್ಲಿ ಒಂದು ಎಕರೆಗೆ ೧೮ ಮಣ ೩೩ ಸೇರು ಬತ್ತವೂ, ೩೦ ಮಣ ೩೫ ಸೇರು ಹುಲ್ಲೂ ಬೆಳೆಯಾಯಿತು. ಆದರೆ ಮೂಳೆ ಗೊಬ್ಬರ ಹಾಕಿ ವ್ಯವಸಾಯ ಮಾಡಿದ ಒಂದು ಎಕರೆ ಗದ್ದೆಯಲ್ಲಿ ೩೬ ಮಣ ೧೬ ಸೇರು ಬತ್ತವೂ, ೬೫ ಮಣ ೩ ಸೇರು ಹುಲ್ಲೂ ಬೆಳೆಯಾಗಿರುತ್ತದೆ.

ಈ ಗೊಬ್ಬರ ಸಿಕ್ಕುವ ಸ್ಥಳಗಳು.

ಕಲ್ಕತ್ತೆಯಲ್ಲಿ ಮೂಳೆ ಹುಡಿಯು ಮೈಸೂರಿನ ೩ ಮಣಕ್ಕೆ ೨ ರೂಪಾಯಿ ಸಂತೆಯಾಗಿ ಕಡ್ಡುಪ್ಪು ೧ ಮಣಕ್ಕೆ ೭ ರೂಪಾಯಿ ಸಂತೆಯೂ ಸಿಕ್ಕುತ್ತದೆ. ಮದರಾಸಿನಲ್ಲಿ ಈ ಗೊಬ್ಬರಗಳು ಪ್ಯಾರಿ ಅಂಡ್ ಕೋ ಎಂಬ ಕಂಪನಿಯಲ್ಲಿ ದೊರೆಯುವುದು.

ಗೊಬ್ಬರವನ್ನು ಹಾಕತಕ್ಕ ಕ್ರಮ.

ಗದ್ದೆಯನ್ನು ಉಳುವಾಗ ಅದರ ಮೇಲೆ ಮೂಳೆ ಹುಡಿಯನ್ನು ತೆಳ್ಳಗೆ ಸಮನಾಗಿ ಚೆಲ್ಲಿ ಎರಡು ಉಳು ಮಾಡಬೇಕು. ಈ ರೀತಿ ಉಳುಮೆ ಮಾಡಿ ಕೆಲವು ದಿವಸ ಕೊಳೆಯುವುದಕ್ಕೆ ಬಿಟ್ಟರೆ ಮೂಳೆ ಹುಡಿಯು ಮಣ್ಣಿನ ಸಂಗಡ ಮಿಶ್ರವಾಗಿ ಕೊಳೆತು ಮಣ್ಣಿನ ಸಂಗಡ ಸೇರಿಹೋಗುತ್ತದೆ. ಈ ರೀತಿ ಮಾಡುವುದರಿಂದ ಗದ್ದೆಗೆ ಹಾಯಿಸಿದ ನೀರು ಬಿಟ್ಟಾಗ ಈ ಗೊಬ್ಬರವು ಕೊಚ್ಚಿ ಹೋಗುವುದಿಲ್ಲ. ಸಟ್ಲುಪ್ಪು (ಕಡ್ಡುಪ್ಪು) ನೀರಿನಲ್ಲಿ ಬಹಳ ಸುಲಭವಾಗಿ ಕರಗಿ ಕೊಚ್ಚಿ ಹೋಗುವುದರಿಂದ ಇದನ್ನು ಗದ್ದೆ ಉತ್ತು ನಾಟಿ ಹಾಕುವುದಕ್ಕೆ ಮುಂಚೆ ಹಾಕಬಾರದು. ಈ ಗೊಬ್ಬರ ಮೊದಲೆ ಒಂದಕ್ಕೆ ನಾಲ್ಕರಷ್ಟು ಮಣ್ಣು ಸೇರಿಸಿ ನಟ್ಟ ಪೈರು ಬೇರು ಬಿಟ್ಟ ಮೇಲೆ ಒಂದು ಸಲವೂ ಮತ್ತು ೧೫ ೨೦ ದಿವಸಗಳ ತರುವಾಯ ಒಂದು ಸಲವೂ ಗದ್ದೆಗೆ ಹಾಕಬೇಕು.

ಮೂಳೆ ಗೊಬ್ಬರವು ಎಲ್ಲಾ ಬಗೆಯ ಗದ್ದೆಗಳಿಗೆ ಹಾಕುವುದರಿಂದ ಫಾಯಿದೆ ಉಂಟಾಗಲಾರದು. ಆದದ್ದರಿಂದ ಮೊದಲು ಯಾವುದಾದರೂ ಒಂದು ಗದ್ದೆಯಲ್ಲಿ ೬ ಸೆಂಟು ಸಾಲುಗಳಿಗೆ ಮಾತ್ರ ಹಾಕಿ ಅದರಿಂದ ಫಾಯಿದೆಯಾಗುತ್ತದೆಯೋ ಇಲ್ಲವೋ ಎಂದು ತಿಳಿದುಕೊಂಡು, ತರುವಾಯ ಪೂರ್ತಿ ಗದ್ದೆಗೆ ಉಪಯೋಗಿಸಬಹುದು. ಇದರಿಂದ ಉಂಟಾಗುವ ಫಾಯಿದೆಯನ್ನು ರೈತರು ಲೆಕ್ಕ ಮಾಡಿ ತಿಳಿದುಕೊಳ್ಳಬಹುದು.

ಬಾತ್ಮಿದಾರರಿಗೆ ನೋಟೀಸು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಕರೆಸ್ಪಾಂಡೆನ್ಸ್

ಆನೇಕಲ್ಲಿನ ವಿಷಯಗಳು.

ಅಯ್ಯಾ,

ಆನೇಕಲ್ ಕಸಬೆಗೆ ೧ ಮೈಲಿ ದೂರದಲ್ಲಿರುವ ಶ್ರೀ ತಿಮ್ಮರಾಯಸ್ವಾಮಿ ದೇವರಿಗೆ ಈ ಮಾಹೆ ತಾ. ೫ನೇ ಭಾನುವಾರ ರಥೋತ್ಸವವೂ, ಮರುದಿವಸ ರಾತ್ರಿ ಮುತ್ತಿನ ಪಾಲಕೀ ಉತ್ಸವವೂ ನಡೆಸಲ್ಪಡುವವು.

ಆನೇಕಲ್ ಕಸಬೆಯಲ್ಲಿ ೧೯೦೯ನೇ ಜನವರಿ ತಾ. ೨೩ನೇ ಶನಿವಾರ ಉಪಾಧ್ಯಾಯರ ಸಂಘವು ಏರ್ಪಡಿಸಲ್ಪಟ್ಟಿತು. ಈ ಸಂಘಕ್ಕೆ ಅನೇಕ ಉಪಾಧ್ಯಾಯರು ಸೇರಿರುತ್ತಾರೆ. ಇದರ ಮೊದಲನೆಯ ಮೀಟಿಂಗು ಮಾರ್ಚಿ ತಾ. ೬ನೇ ಶನಿವಾರ ನಡೆಯಿತು. ಈ ಸಭೆಯಲ್ಲಿ ಅಮಲ್ದಾರ್ ಮ. ಕುಪ್ಪುಸ್ವಾಮಯ್ಯಂಗಾರ್ಯರವರು ಅಗ್ರಾಸನವನ್ನಲಂಕರಿಸಿ, ಸರ್ವರ ಮನಸ್ಸನ್ನೂ ಸಂತೋಷಪಡಿಸಿದರು.

ಮಿತ್ರಜನ ಮನೋಲ್ಲಾಸಕ

ಸರ್ಕಾರದ ಜಂಗಲು ಉರಿದುಹೋದದ್ದು.

ಅಯ್ಯಾ,

ಚಿಕ್ಕಮಗಳೂರು ತಾಲ್ಲೂಕು ಜಾಗರದ ಮಾಗಡೆ ಮುತ್ತೋಡಿ ಫಾರೆಸ್ಟು ಮತ್ತು ಫಾರೆಸ್ಟಿಗೆ ಸೇರಿಸಿಕೊಂಡ ಜಂಗ್ಲಿಗಳು ಮತ್ತು ನಾಗನಹಳ್ಳಿ ವಿಂಗಳು ಹಾಕಿರತಕ್ಕ ಫೈರ್ ಫಾರೆಸ್ಟ್ ಜಂಗ್ಲಿಗಳು ಇದೆ ಕಳೆದ ಫೆಬ್ರವರಿ ತಾ. ೨೦ರಿಂದ ಮಾರ್ಚಿ ತಾ. ೧೦ರ ವರೆಗೆ ಬೆಂಕಿ ಬಿದ್ದು ಸರ್ಕಾರಕ್ಕೆ ಸೇರಿದ ಫಾರೆಸ್ಟು ಬಂಗಲೆ ಸಹಾ ಸುಟ್ಟು, ಗಿಡ ಮರ ಸಸಿ ಬಿದಿರು ಸಮೇತ ನಾಶವಾಗಿರುವುದು. ನೋಡಿದರೆ ಗವರ್ನ್‌ಮೆಂಟಿಗೆ ಸುಮಾರು ಎರಡೂವರೆ ಮೂರು ಲಕ್ಷ ರೂಪಾಯಿ ನಷ್ಟವಾಗಬಹುದು. ಈ ಫಾರೆಸ್ಟು ಮಾಡುವ ದಿನದಿಂದ ವರ್ಷ ವರ್ಷ ಸುಮಾರಾಗಿ ಜಂಗ್ಲಿ ಸುಡುತ್ತಾ ಇದ್ದರೆ ಮರ ಗಿಡಗಳಿಗೆ ಅಪಾಯ ಸಂಭವಿಸಲಾರದು ಎಂಟು ಹತ್ತು ವರುಷಕ್ಕೆ ಒಂದು ಸಲ ಬೆಂಕಿ ಬಿದ್ದರೆ ಉರಿ ಬಹಳ ಜಾಸ್ತಿಯಾಗಿ ಮರದ ಬೇರು ಸಹಿತ ಸುಟ್ಟುಬಿಡುತ್ತೆ. ಅದಲ್ಲದೆ ಈ ಸೀಮೆಯಲ್ಲಿ ಹೆಬ್ಬಿದಿರಿಗೆ ಆರವತ್ತು ವರುಷಕ್ಕೆ ಒಂದುಸಲ ಕಟ್ಟೆ ಬಂದು ಬೆಂಕಿ ಬೀಳುವುದು ಸಹಜವೆಂದೂ ಮತ್ತು ಕಿರಿಬಿದಿರಿಗೆ ಹತ್ತು ವರುಷಕ್ಕೆ ಒಂದು ಕಟ್ಟೆ ತಗಲಿ ಬೆಂಕಿ ಬೀಳುತ್ತೆ ಎಂದೂ ಪೂರ್ವಿಕರು ಹೇಳುತ್ತಿದ್ದರು. ಈ ಫಾರೆಸ್ಟಿನಲ್ಲಿ ಗಂಧ ಸಿವಾಯಿ ಇತರ ಜಾತಿ ಮರಗಳಿಂದ ಉತ್ಪತ್ತಿ ಕಾಣುವುದು ತಿಳಿಯುವುದಿಲ್ಲ. ಅದು ಅಲ್ಲದೆ ಅಕ್ಕಪಕ್ಕ ಇರತಕ್ಕ ರೈತರಿಗೆ ಫಾರೆಸ್ಟಿನವರು ಪೂರಾ ತೊಂದರೆ ಕೊಡುತ್ತಾರೆ. ಗವರ್ನ್‌ಮೆಂಟಿನಿಂದ ಬಹಳ ಕೆಲಬು ತೆಗೆದುಕೊಂಡು ಬಹು ಜನ ಸೇರಿಕೊಂಡು ಫಾರೆಸ್ಟು ಜಂಗ್ಲಿ ಸರಿಯಾಗಿ ನಿಗಾ ನೋಡದೆ ಸರ್ವೆ ಸೆಟಲ್‌ಮೆಂಟ್ ಆದ ಬಳಿಕ ತರುಲ್ ವರೆಗೂ ಫಾರೆಸ್ಟು ಜಂಗ್ಲಿಯಿಂದ ಸುಮಾರು ನೂರು ಇನ್ನೂರು ವರುಷದ ಮನುಷ್ಯಜಾತಿ ಮರಗಳು ನಾಶವಾಗುವುದಕ್ಕೆ ಕಾರಣವಾಯಿತು. ಸರ್ಕಾರಕ್ಕೆ ಬಹಳ ನಷ್ಟ ಎಂಬುದು ಕೋಟಿ ಸ್ಪಷ್ಟವಾಗುತ್ತದೆ.

ಒಬ್ಬ ರೈತ

ಒಂದು ಗ್ರಾಮದಲ್ಲಾದ ನಷ್ಟಗಳು.

ಅಯ್ಯಾ,

ಬೆಂಗಳೂರು ತಾಲ್ಲೂಕಿಗೆ ಸೇರಿದ ಮಾದರ ಚೀಟನಹಳ್ಳಿಯಲ್ಲಿ ಈ ತಿಂಗಳು ತಾ. ೧೯ನೇ ಬುಧವಾರ ಹಗಲು ೧೨ ಗಂಟೆ ಹೊತ್ತಿಗೆ ತಿಮ್ಮಣ್ಣ ಗೌಡರ ಬಾಬತು ಮೆಲು ಮನೆಗೆ ಬೆಂಕಿ ಬಿದ್ದು ಸುಟ್ಟು ಹೋಯಿತು. ಇದರಿಂದ ಸುಮಾರು ೩೦೦ ರೂಪಾಯಿ ನಷ್ಟವಾಯಿತೆಂದು ಹೇಳುತ್ತಾರೆ. ಆ ದಿನ ತಿಮ್ಮಣ್ಣ ಗೌಡರು ಗ್ರಾಮದಲ್ಲಿ ಇರಲಿಲ್ಲ. ದೊಡ್ಡ ಗೌಡರೂ ಗ್ರಾಮಸ್ಥರೂ ಸೇರಿ ಬಹಳ ಕಷ್ಟಪಟ್ಟು ಬೆಂಕಿಯನ್ನು ಆರಿಸಿದರು. ಸ್ವಲ್ಪ ತಾವಕಾಶವಾಗಿದ್ದರೆ ಉರಿಯು ಊರಿಗೂ ವ್ಯಾಪಿಸಿಕೊಂಡು, ಮೇಲ್ಲ ಮನೆಗಳೆಲ್ಲಾ ನಾಶವಾಗುತ್ತಿತ್ತು. ಗೋಶಾಲೆಗಳಿಗೆ ಮೇವೂ ನೀರೂ ಇಲ್ಲದೆ ಕಷ್ಟಪಡುವ ಇಂಥಾ ಕ್ಷಾಮಕಾಲದಲ್ಲಿ ಯಾರು ಈ ಹುಲ್ಲಿನ ರಾಶಿಗೆ ಬೆಂಕಿ ಹಾಕಿದರೋ ಎಂದು ಪ್ರಜೆಗಳು ತುಂಬಾ ವ್ಯಸನಪಡುತ್ತಿದ್ದಾರೆ.

ಈ ಪ್ರಾಂತ್ಯ ಕಳ್ಳರ ಕಾಟ ಹೆಚ್ಚಾಗಿದೆ. ಈ ಊರಿನಲ್ಲಿರುವ ಮುಜರಾಯಿ ನಾಯ್ಡು ಎಂಬುವನು ಕುಟುಂಬ ಸಹಿತ ಕೆಲಸದ ನಿಮಿತ್ತವಾಗಿ ಬೆಂಗಳೂರು ಪೇಟೆಗೆ ಹೋಗಿದ್ದರು. ಅವರು ಇಲ್ಲದಿರಲು ಅವರ ಮನೆಗೆ ಕಳ್ಳರು ಬಿದ್ದು ಒಂದು ದೊಡ್ಡ ಪೆಟ್ಟಿಗೆಯನ್ನು ಎತ್ತಿಕೊಂಡು ಹೋದರು. ಮಾರನೇ ದಿನ ಅವರು ಬಂದು ನೋಡುವಾಗ್ಗೆ ಈ ಊರಿನ ಸಮೀಪದಲ್ಲಿರುವ ಒಂದು ಗುಡ್ಡದ ಮೇಲೆ ಪೆಟ್ಟಿಗೆ ಚೂರುಗಳು ಸಿಕ್ಕಿದವು. ಅದರಲ್ಲಿದ್ದ ಬಟ್ಟೆಗಳನ್ನು ಹರಿದು ಅಲ್ಲಲ್ಲೇ ಬಿಸಾಡಿದ್ದರು. ಸುಮಾರು ೧೦೦-೧೫೦ ರೂಪಾಯಿನ ಮಾಲುಗಳು ಕಳುವಾಗಿರುತ್ತವೆ. ಇದಕ್ಕೆ ಹಿಂದೆ ಅವರ ಒಂದು ಗಾಡಿಯನ್ನು ಯಾರೋ ಕದ್ದು ತೆಗೆದುಕೊಂಡು ಹೋಗಿದ್ದರು. ಒಂದು ಬಾವಿಯಲ್ಲಿ ಈ ಗಾಡಿಯ ತುಂಡುಗಳು ಸಿಕ್ಕಿದವು. ಅದರ ಚಕ್ರಗಳು ಇರಲಿಲ್ಲ. ಈ ಕಳ್ಳತನಗಳು ಯಾರು ಮಾಡಿದರೋ ಇನ್ನೂ ಗೊತ್ತಾಗದೆ ಇದೆ.

ಇಲ್ಲಿ ನೀರಿಗೆ ಬಹಳ ಕಷ್ಟವಾಗಿದೆ. ಇಲ್ಲಿನ ರಸ್ತೆ ಮೂಲೆಯ ಬಾವಿಯಲ್ಲಿ ತಕ್ಕಮಟ್ಟಿಗೆ ಜನಗಳಿಗೆ ನೀರು ಸಿಕ್ಕುತ್ತಾ ಇತ್ತು. ಇಂಥಾ ಬಾವಿಯಲ್ಲಿ ಯಾರೋ ಮನುಷ್ಯರ ಹೇಸಿಕೆ ಮಡಕೆಯನ್ನು ತಂದು ಹಾಕಿದ್ದರು. ನೀರು ತೆಗೆಸಿ ನೋಡುವಾಗ್ಗೆ ಅದು ತುಂಬಾ ದುರ್ವಾಸನೆಯಾಗಿತ್ತು. ಈ ದುಷ್ಕೃತ್ಯವನ್ನು ಯಾರು ಮಾಡಿದರೋ ತಿಳಿಯಲಿಲ್ಲ. ಪೋಲೀಸ್ ಇಲಾಖೆಯವರು ಬೇಗ ಇಟ್ಟು ಇಂಥಾ ದುಷ್ಟ ಜನರನ್ನು ಪತ್ತೆಮಾಡಿ ತಕ್ಕಹಾಗೆ ಶಿಕ್ಷಿಸುತ್ತಾರೆಂದು ನಂಬಿದ್ದೇನೆ.

ಪ್ರಜಾ ಹಿತಚಿಂತಕ.

ಇಂಡಿಯಾ ದೇಶದ ವೃತ್ತಾಂತಗಳು.

ಪಟಿಯಾಲಾ ರಾಜ್ಯದ ಭೂಕಂಪದ ರಿಲೀಫ್ ಫಂಡಿಗೆ ಕಲ್ಕತ್ತಾ ಪಟ್ಟಣದಲ್ಲಿ ೧೭೦೦೦ ರೂಪಾಯಿ ಚಂದಾ ವಸೂಲಾಗಿದೆ

ಕಲ್ಕತ್ತಾ ಪಟ್ಟಣದ ಬಳಿ ಚಿತ್ಪುರದ ನಾರಿನ ಕಾರ್ಖಾನೆಗೆ ಬೆಂಕಿ ಬಿದ್ದು ೬೦೦೦೦ ರೂಪಾಯಿನ ಸರಕು ಸುಟ್ಟು ಹೋಯಿತು

ಮೆಜಿಸ್ಟ್ರೇಟ ಮಾವರ್ಕರ್ ರವರನ್ನು ಗವರ್ನ್‌ಮೆಂಟಿನವರು ಬೊಂಬಾಯಿ ಹೈಕೋರ್ಟಿನ ಚೀಫ್ ಜಡ್ಜರಾಗಿ ಬದಲಿ ನೇಮಿಸಿರುತ್ತಾರೆ

ಹಿಂದುಸ್ಥಾನದಲ್ಲಿ ಕಳೆದ ವರುಷದ ರೈಲ್ವೆ ಹುಟ್ಟುವಳಿಯು ಹಿಂದಿನ ಸಾಲಿಗಿಂತ ಎರಡೂವರೆ ಕೋಟಿ ರೂಪಾಯಿ ಕಡಮೆಯಾಗುವ ಹಾಗಿದೆ

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರೂ, ಫಿರೋಜಾ ಸಂಸ್ಥಾನದ ಮಹಾರಾಜರವರೂ ಪರಿವಾರ ಸಹಿತ ಕಳೆದ ವಾರ ಬೊಂಬಾಯಿಗೆ ಬಂದಿರುತ್ತಾರೆ

ಕಳೆದ ಶನಿವಾರ ಕಾಶೀ ಪಟ್ಟಣದಲ್ಲಿ ಮಹಾವಾರುಣೀ ಎಂಬ ಪುಣ್ಯಕಾಲದಲ್ಲಿ ಗಂಗಾಸ್ನಾನ ಮಾಡಬೇಕೆಂದು ಹೋದ ಯಾತ್ರಿಕರುಗಳ ತುಳಿದಾಟದಲ್ಲಿ ಇಪ್ಪತ್ತು ಜನರು ಸತ್ತು ಹತರಾದರು

ಸಿಂದು ದೇಶದ ಹಾಯುವ ಕರಾಚಿಯ ಬಳಿ ಇರುವ ಕೇಮಾರಿ ಎಂಬ ಸ್ಥಳದಲ್ಲಿ ಬೆಂಕಿ ಬಿದ್ದು ೧೦೦ ಮನೆಗಳೂ ಅಂಗಡಿಗಳೂ ಸುಟ್ಟು ಹೋದದ್ದರಿಂದ ಸುಮಾರು ೩ ಲಕ್ಷ ರೂಪಾಯಿ ನಷ್ಟವಾಗಿರುತ್ತದೆ

ಹೋದ ವರುಷ ಏಪ್ರಿಲ್ ೧ ರಿಂದ ಈ ತಿಂಗಳ ೧೫ ರವರೆಗೆ ಕಲ್ಕತ್ತೆಯಿಂದಲೂ ಚಿತ್ತಗಾಂಗದಿಂದಲೂ ೩ ಕೋಟಿಯ ೫೮ ಲಕ್ಷ ರೂಪಾಯಿನ ಟೀ ಸೊಪ್ಪು ಅನ್ಯದೇಶಗಳಿಗೆ ರಫ್ತಾಗಿ ಹೋಗಿರುತ್ತದೆ

ಬೊಂಬಾಯಿ ಸಮೀಪದಲ್ಲಿ ಒಬ್ಬ ಮಹಮದೀಯನು ಕಲ್ಯಾಣ ರೈಲ್ ಗಾಡಿಯೊಳಕ್ಕೆ ನುಗ್ಗಿ ಒಬ್ಬ ಹಿಂದೂ ಸ್ತ್ರೀಯು ಕಟ್ಟಿದ್ದ ಚಿನ್ನದ ಒಡವೆಯನ್ನು ಕಿತ್ತುಕೊಂಡು, ಗಾಡಿ ನಿಂತ ಕೂಡಲೇ ಇಳಿದು ಓಡಿದ ರಭಸಕ್ಕೆ ಭೂಮಿ ಮೇಲೆ ಬಿದ್ದು ಅಲ್ಲೇ ಸತ್ತು ಹೋದನು

ಹನ್ನೆರಡು ಮಂದಿ ಬಂಗಾಳಿಗಳು [illegible] ಬಂದಾಗ ಸ್ಟೇಷನ್ನಲ್ಲಿ ರೈಲು ಇಳಿದ ಕೂಡಲೆ ಅವರೆಲ್ಲರನ್ನೂ ಪಟ್ಟಣದ ಪೊಲೀಸಿನವರು ದಸ್ತಗಿರಿ ಮಾಡಿದರು ಅವರ ಬಳಿ ಚೂರಿ ಕತ್ತರಿ ಮೊದಲಾದವು ಸಿಕ್ಕಿದವು ಅವರು ದರೋಡೆಕೋರರೆಂದು ಊಹಿಸಲ್ಪಟ್ಟರು

ಜಾಸ್ಕ ಎಂಬ ತೀರಪಟ್ಟಣದ ಬಳಿ ಘಾಟ್ ಎಂಬ ಜಹಜು ಬೊಂಬಾಯಿಗೆ ಬರುತ್ತಿರುವಾಗ ಒಂದು ದೋಣಿಯಲ್ಲಿ ಕೆಲವು ಜನರು ೩೦೦ ಬಂದೂಕುಗಳನ್ನು ಭರ್ತಿ ಮಾಡಿಕೊಂಡು ಹೋಗುತ್ತಿದ್ದರು ಆ ಜಹಜಿನವರು ಆ ದೋಣಿಯನ್ನು ತಡೆದು, ಬಂದೂಕುಗಳನ್ನು ಕಿತ್ತುಕೊಂಡು ಬಂದಿದ್ದಾರೆ

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ವಾರ ಪ್ಲೇಗಿನಿಂದ ಕಿರುಮನ ಉಪದ್ರವು ಕಾಣಿಸಿಕೊಂಡು ಹೆಚ್ಚುತ್ತಿರುವುದರಿಂದ ಕಳೆದ ವಾರ ೧೯೭ ಜನರು ಸತ್ತರು; ಈ ರೋಗ ೧೯೦೯ ರ ಮಂದಿ ಪೀಡಿತರಾಗಿದ್ದಾರೆ, ಈಗ ಉಪದ್ರವು ಕಡಿಮೆಯಾಗುತ್ತ ಇರುವುದಾಗಿ ತಂತೀವರ್ತಮಾನ ಬಂದಿದೆ

ಕಲ್ಕತ್ತಾ ಪಟ್ಟಣದ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಮಿ ಕಿಂಗ್ಸ್ ಫರ್ಡ ರವರನ್ನು ಕೊಲ್ಲಬೇಕೆಂದು ಸಿದ್ಧಪಡಿಸಿದ್ದ ಒಂದು ಪುಸ್ತಕದ ಸಂಗತಿ ಕೇಳಿ ಗಾಬರಿಯಾಗಿ ಅವರ ಬಂಗಲೆಗೆ ಕೆಲವರು ಪೋಲೀಸಿನವರು ಕಾವಲು ಇಟ್ಟಿರುವುದಾಗಿ ವಿಚಾರಿಸಲಾಗಿದೆ

ಬಂಗಾಳಾ ಸಂಸ್ಥಾನಕ್ಕೆ ಸೇರಿದ ಶ್ರೀರಾಮಪುರದಲ್ಲಿ ಒಬ್ಬ ಜನ ಬಂಗಾಳಿಗಳು ಪೊಲೀಸ್ ಸುಪ್ರೆಂಡೆಂಟರ ವಿರುದ್ಧ ದಾಖಲೆ ಮಾಡಿದರು. ಕೆಲವು ದಿನಗಳಲ್ಲಿ ಸರ್ಕಾರದವರು ಇವರನ್ನು ಹಿಡಿದು ಕೇಸು ಮಾಡಿದರಲ್ಲಿ ಅವರಿಗೆ ತಲಾ ಏಳು ದಿನಗಳಿಂದ ಮೂರು ತಿಂಗಳ ತನಕ ಸಜಾ ಶಿಕ್ಷೆ ಯಾಗಿದೆ

ಅಫ್ಘಾನಿಸ್ಥಾನದ ಅಮೀರರವರು ಜಲಾಲಾಬಾದಿನಲ್ಲಿ ತ್ಯಾಗ ಅವರ ಪರಿವಾರದವರನ್ನು ಅವರ ಸಂಸಾರಕ್ಕೆ ಸೇರಿದ ಇತರ ಜನರನ್ನು ಕೊಲ್ಲಬೇಕೆಂದು ಒಂದು ಪಿತೂರಿ ನಡೆದ ಹಾಗೂ, ಅದು ಪತ್ತೆ ಆಗಿ ಕಾಬೂಲ್ ಮತ್ತು ಜಲಾಲಾಬಾದಿನಲ್ಲಿ ಸರ್ಕಾರದವರು ಹಲವು ಜನರನ್ನು ದಸ್ತಗಿರಿ ಮಾಡಿರುವ ಹಾಗೆ ವರ್ತಮಾನವಿದೆ.

ಪೂನಾ ಪಟ್ಟಣದಲ್ಲಿ ಪೋಲೀಸಿನವರು ವಾರಂಟು ಪಡೆದು ಅಲ್ಲಿನ ನ್ಯೂ ಇಂಗ್ಲಿಷ್ ಕಾಲೇಜ್, ಫರ್ಗೂಸನ್ ಕಾಲೇಜ್ ಎಂಬೀ ವಿದ್ಯಾಶಾಲೆಗಳಲ್ಲಿ ಓದತಕ್ಕ ವಿದ್ಯಾರ್ಥಿಗಳ ಮನೆಗಳನ್ನೂ ಮಹಾರಾಷ್ಟ್ರ ಪುಸ್ತಕಾಲಯವನ್ನೂ ಶೋಧನೆ ಮಾಡಿ, ರಾಜದ್ರೋಹಕರವಾದ ಸಂಗತಿಗಳುಳ್ಳ ಪುಸ್ತಕಗಳನ್ನೂ ಕಾಗದ ಪತ್ರಗಳನ್ನೂ ತಾಗಿಸಿಕೊಂಡು ಹೋದರು

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಈ ತಿಂಗಳ ೩೦ ಕ್ಕೆ ಕಲ್ಕತ್ತಾ ಪಟ್ಟಣದಿಂದ ಹೊರಟು, ಅಮೃತಸರ, ಲಾಹೋರ್ ಕೋಹಾಟ್, ಪೆಷಾವರ್, ಮೊದಲಾದ ಪಟ್ಟಣಗಳ ಮೇಲೆ ಸಂಚಾರ ಮಾಡಿಕೊಂಡು ಡೆಹ್ರಾಡೂನ್ ಪಟ್ಟಣವನ್ನು ತಲುಪಿ ಏಪ್ರಿಲ್ ಆಖೈರುವರೆಗೆ ಅಲ್ಲಿರುವರು ಆ ತರುವಾಯ ಅವರು ಬೇಸಿಗೆ ಕಳೆಯುವುದಕ್ಕೋಸ್ಕರ ಸಿಮ್ಲಾ ಪಟ್ಟಣಕ್ಕೆ ಪ್ರಯಾಣಮಾಡುತ್ತಾರೆಂದು ಪ್ರಕಟವಾಗಿದೆ.

ಬೊಂಬಾಯಿ ಅಧಿಪತ್ಯದ ಗವರ್ನರಾದ ಸರ್ ಜಾರ್ಜ್ ಕ್ಲಾರ್ಕ್‌ರವರ ಪತ್ನಿಯವರು ಕೆಲವು ತಿಂಗಳ ಹಿಂದೆ ಕಾಲವಾಗಿ ಅವರಿಗೆ ನಾತಿಶ್ವರದ ವ್ಯಸನ ಪ್ರಾಪ್ತವಾಯಿತು ಈಗ ಅವರ ಏಕಪುತ್ರಿಯಾದ ಮಿಸ್ ಕ್ಲಾರ್ಕ್‌ರವರು ಕೆಲವು ದಿನಗಳಿಂದ ಕಾಯಿಲೆ ಇದ್ದು ಕಳೆದ ಭಾನುವಾರ ರಾತ್ರಿ ತೀರಿಹೋದರೆಂದು ತಂತೀ ವರ್ತಮಾನ ಬಂದಿದೆ. ಗವರ್ನರವರಿಗೆ ಉಂಟಾಗಿರುವ ವಿಯೋಗ ದುಃಖವು ಅಸಾಧ್ಯವೆಂದು ವಿವರಿಸಬೇಕಾಗಿಲ್ಲ

ಪ್ಲೇಗ್ ಉಪದ್ರವದಿಂದಾದ ಮರಣಗಳು ಕಳೆದ ವಾರ ಇನ್ನೂ ಹೆಚ್ಚಾಗಿರುತ್ತವೆ ಒಟ್ಟು ೯,೫೫೩ ಜನರು ಈ ಉಪದ್ರದಲ್ಲಿ ಕಾಲವಾದರು ಈ ಪೈಕಿ ಪಂಜಾಬ್ ೧,೧೭೭, ಬೊಂಬಾಯಿ ಅಧಿಪತ್ಯ ೯೩೮, ಸಂಯುಕ್ತ ಅಧಿಪತ್ಯಗಳು ೮೩೯, ಬಂಗಾಳಾ ೪೭೭, ಬರ್ಮಾ ೯೦೮, ಮಧ್ಯಪ್ರಾಂತ್ಯ ಮತ್ತು ಬೀರಾರ್ ೩೪೭, ರಾಜಪುಟಾಣಾ ೩೦೮, ಮೈಸೂರ್ ಸಂಸ್ಥಾನ ೯೧, ಹೈದರಾಬಾದ್ ೫, ಮದರಾಸ್ ಆಧಿಪತ್ಯ ೩೧, ಈ ರೀತಿ ಮರಣಗಳಾಗಿವೆ.

ಕಳೆದ ವಾರ ಬಂಗಾಳಾ ಮತ್ತು ಸಂಯುಕ್ತ ಅಧಿಪತ್ಯಗಳಲ್ಲಿ ಕ್ಷಾಮ ಪೀಡಿತರ ಸಂಖ್ಯೆಯು ಸ್ವಲ್ಪ ಕಡಿಮೆಯಾಯಿತು. ಬಂಗಾಳಾದಲ್ಲಿ ಕೆಲವು ವಾರಗಳಿಂದೀಚೆಗೆ ಆ ಸಂಖ್ಯೆಯು ಹೆಚ್ಚು ಪುದರಲ್ಲಿ ಸಂಶಯವಿಲ್ಲ. ಈಗ ೧೧,೫೦೮ ವ್ಯಕ್ತಿಗಳು ಗವರ್ನ್‌ಮೆಂಟಿನವರ ಪೋಷಣೆಯಲ್ಲಿರುತ್ತಾರೆ ದಕ್ಷಿಣಾಂಗ ಪ್ರಾಂತದಲ್ಲಿ ಕ್ಷಾಮಗ್ರಸ್ತವಾಗಿರುವ ಕಡೆ ಪೈರು ಈ ಸಲ ಬಹಳ ಕೆಟ್ಟು ಹೋಗಿದೆ ಮುಂದೆ ಆ ಪ್ರಾಂತ್ಯದಲ್ಲಿ ಕ್ಷಾಮವು ಇನ್ನೂ ಹೆಚ್ಚುವುದು

ಸಾತಾರ ಜಿಲ್ಲೆಗೆ ಸೇರಿದ ವೆಂಕಟಾಪುರದಲ್ಲಿ ಕಳೆದ ಮಂಗಳವಾರ ಪೊಲೀಸಿನವರು ಮೆ ಗೋಖಲೆಯವರ ಮನೆಯನ್ನು ಶೋಧನೆಮಾಡಿದರು ಆ ದಿನ ಸಾಯಂಕಾಲ ಸಾತಾರೆಯ ರೋಡ್ ಸ್ಟೇಷನ್ನಲ್ಲಿ ಬ್ರಾಹ್ಮಣ ರಾಮದಾಸ್ ಎಂಬಾತನನ್ನು ದಸ್ತಗಿರಿ ಮಾಡಿದರು ವಾಯಿ ಎಂಬ ಸ್ಥಳದಲ್ಲಿ ಮನೋಹರಪಂತ್ ಅಭ್ಯಂಕರ್ ಎಂಬಾತನ ಮನೆಯನ್ನು ಆ ದಿನವೇ ಶೋಧಿಸಿದ್ದಲ್ಲದೆ ಮರು ದಿನ ಮೆ ಗೋಖಲೆಯವರ ಮನೆಯಲ್ಲಿ ಸಿಕ್ಕಿದ ಕೆಲವು ಕಾಗದ ಪತ್ರಗಳನ್ನು ತೆಗೆದುಕೊಂಡು ಹೋದರು

ಹಿಂದುಸ್ಥಾನದ ಕ್ಷಾಮನಿವಾರಣೆಯ ಇಂಪೀರಿಯಲ್ ಫಂಡಿನ ಟ್ರಸ್ಟಿಗಳಾದರು ಕಳೆದ ಸೋಮವಾರ ೧೯೦೮ ನೇ ಇಸವಿಯಲ್ಲಿ ನಡೆದ ಕಾರ್ಯಗಳನ್ನು ಪರಿಶೀಲಿಸಿ ಕಳೆದ ವರುಷ ಈ ಫಂಡಿನಿಂದ ಕ್ಷಾಮನಿವಾರಣೆಗಾಗಿ ೬ ಲಕ್ಷ ರೂಪಾಯಿಯನ್ನು ಸಂಯುಕ್ತ ಅಧಿಪತ್ಯಗಳಿಗೂ, ೬೫ ಸಾವಿರ ರೂಪಾಯಿಯನ್ನು ಮಧ್ಯಪ್ರಾಂತ್ಯಗಳಿಗೂ ಕೊಡಲಾಯಿತು ಈಗ ೪,೬೦,೦೦೦ ರೂಪಾಯಿಯು ಕಲ್ಕತ್ತೆಯಲ್ಲಿ ಸ್ಥಾಪಿತವಾಗಿ ಮತ್ತು ಕ್ಷಾಮನಿವಾರಣೆಯು ರಿಲೀಫ್ ಫಂಡಿಗೂ ಕೊಡಲಾಗಿದೆ ಈಗ ಮೊಬಲಗಿನ ಫಂಡಿನಲ್ಲಿ ಇನ್ನೂ ೬,೫೦,೦೦೦ ರೂಪಾಯಿ ಉಳಿದಿರುತ್ತದೆ

ಇಂಗ್ಲೆಂಡಿನ ಆರ್ಲ್ ಮಿಂಟೋ ಪ್ರಭುಗಳು ಬಾಸ್ಕರ್‌ಫೀಲ್ಡ್ ದೊಡ್ಡ ಮನುಷ್ಯರನ್ನೂ ಸರ್ದಾರರುಗಳನ್ನೂ ಕರೆಸಿಕೊಂಡು ಒಂದು ಉದ್ಯಾನವನ ಸಮಾರಂಭವನ್ನು ನಡೆಸಿ, ಅತಿಥಿಗಳ ಸಂತೋಷಾರ್ಥವಾಗಿ ನಾನಾ ವಿನೋದಗಳನ್ನು ಕಲ್ಪಿಸಿದ್ದರು ಹಿಂದೂಸ್ಥಾನದ ಸ್ಯಾಂಡೋ ಎಂಬ ಕೀರ್ತಿಯನ್ನು ಪಡೆದಿರುವ ಪ್ರೊಫೆಸರ್ ರಾಮಮೂರ್ತಿ ಸ್ವಾಮಿಯು ಆಗ ಕಸರತ್ತುಗಳನ್ನು ಮಾಡಿ, ತನ್ನ ಅಸಾಧಾರಣ ಸಾಮರ್ಥ್ಯವನ್ನು ಪ್ರಕಾಶಪಡಿಸಿದನು ವೈಸ್‌ರಾಯಿ ಪ್ರಭುಗಳು ಬಹಳವಾಗಿ ಮೆಚ್ಚಿಕೊಂಡು ಆತನಿಗೆ ಒಂದು ಮೆಡಲನ್ನು ದಯಪಾಲಿಸಿರುತ್ತಾರೆ.

ಬೊಂಬಾಯಿನ ಶೇಟ್ ನರಸಿಂಗ್ ಎಂಬ ನಾಯಕರೊಬ್ಬರು ಪೂನಾಪಟ್ಟಣದಲ್ಲಿ ಯೂರೋಪಿಯನ್ ಜನರಿಗೆ ಚಿಕಿತ್ಸೆ ನಡೆಯುವಂತಾ ಒಂದು ಚಾರಿಟೆ ವೈದ್ಯಶಾಲೆಯನ್ನು ಕಟ್ಟಿಸಿಕೊಡುತ್ತೇನೆಂದು ಪ್ರಾರ್ಥನೆ ಮಾಡಿದರಷ್ಟೆ ಎರಡು ವರುಷಗಳ ಹಿಂದೆ ಕಟ್ಟಡವು ಕಾಮಗಾರಿ ನಡೆದು ಕಳೆದ ವಾರ ಮುಕ್ತಾಯವಾಯಿತು ಸರ್ ಜಾರ್ಜ್ ಕ್ಲಾರ್ಕ್‌ರವರು ಅದನ್ನು ಪ್ರತಿಷ್ಠೆ ಮಾಡಿ, ಆ ವರ್ತಕರ ಧರ್ಮಬುದ್ಧಿಯನ್ನು ಕೊಂಡಾಡಿದರು ಅದಕ್ಕಾಗ್ಯೂ ಅವರು ೬೦,೦೦೦ ರೂಪಾಯಿ ಖರ್ಚು ಮಾಡಿರುತ್ತಾರೆಂದು ತಿಳಿಯಬಂದಿದೆ

ಪೂನಾ ಪಟ್ಟಣದಲ್ಲಿ ಹಿಂದಿನ ವಾರ ಕುಷ್ಠ ರೋಗಿಗಳ ಚಿಕಿತ್ಸೆಗಾಗಿ ಒಂದು ಗೃಹವನ್ನು ಸ್ಥಾಪನೆಮಾಡಿದರು ಅದಕ್ಕೆ ಸುಮಾರು ೬೦,೦೦೦ ರೂಪಾಯಿ ಖರ್ಚಾಯಿತು ಅದರಲ್ಲಿ ೩೦೦ ಮಂದಿ ರೋಗಿಗಳಿರುವುದಕ್ಕೆ ಸ್ಥಳವನ್ನು ಕಟ್ಟಿಸಿರುವರು ಈಗ ಈ ರೋಗಿಗಳ ಚಿಕಿತ್ಸಾರ್ಥವಾಗಿಯೇ ಇರುವ ಮಿಷನ್ ಸಂಘದವರು ೧೦೩ ಮಂದಿ ಮಕ್ಕಳನ್ನು ಸಾಕುತ್ತಿದ್ದಾರೆ ಅವರ ಪೋಷಣೆಯಲ್ಲಿ ಆ ೩೩೭ ಜನ ಕುಷ್ಠರೋಗಿಗಳು ಸೇರಿಕೊಂಡು ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಾರೆಂದೂ, ಆ ಮಕ್ಕಳೆಲ್ಲಾ ಕುಷ್ಠ ರೋಗಿಗಳ ಹೊಟ್ಟೆಯಲ್ಲಿ ಜನಿಸಿದವರೆಂದೂ ತಿಳಿಯುವುದು

ನೂರಾರು ರಜಪುತ್ರ ಮಹಾ ಸಭೆಯು ಹಿಂದಿನ ವಾರ ಜೋಧಪುರ ಪಟ್ಟಣದಲ್ಲಿ ಜರುಗಿತು ರಜಪುತ್ರ ಜನರು ಗವರ್ನ್‌ಮೆಂಟಿಗೆ ಕೊಡಬೇಕಾದ ಕಂದಾಯ ಮತ್ತು ತೆರಿಗೆಗಳಲ್ಲಿ ರೂಪಾಯಿಗೆ ಅರ್ಧ ಆಣೆಯಂತೆ ಈ ಮಹಾಸಭೆಯ ಫಂಡಿಗೆ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಹೀಗೆ ಕೊಡುವ ಹಣವನ್ನು ತಮ್ಮ ಬಾಲಕರ ವಿದ್ಯಾಭ್ಯಾಸವೇ ಮೊದಲಾದ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ತೀರ್ಮಾನವಾಯಿತು. ಜನನ, ವಿವಾಹ, ಮರಣಕಾಲಗಳಲ್ಲಿ ಮಿತಿ ಮೀರಿ ಸಾಲಮಾಡಿ ಆಗಲಿ ಸಾಲವಾದರೆ ಆಗಲಿ ದ್ರವ್ಯವನ್ನು ಖರ್ಚು ಮಾಡ ಕೂಡದೆಂದು ಒಪ್ಪಿಕೊಂಡರು.

ಮಧ್ಯಪ್ರಾಂತಗಳಿಗೆ ಸೇರಿದ ಹೋಶಂಗಾಬಾದ್ ಎಂಬ ಪಟ್ಟಣದ ಸ್ಕೂಲ್ ಕಟ್ಟಡದಲ್ಲಿ ಮಹಾರಾಜಾ ಚಕ್ರವರ್ತಿಯವರ ಚಿತ್ರಪಟವನ್ನು ಕಟ್ಟಿದ್ದಕ್ಕೆ ಯಾರೋ ಕೆಲವರು ಅದರ ಮುಖಭಾವವನ್ನು ಕೆಡಿಸಿ ಬಿಟ್ಟಿದ್ದರು ಶಾಲೆ ತನಿಖೆ ಮಾಡಿದಾಗ ಒಬ್ಬ ಬ್ರಾಹ್ಮಣನು ಈ ದುಷ್ಟಕೃತ್ಯವನ್ನು ನಡೆಸಿದನೆಂದು ಗೊತ್ತಾಯಿತು ಇನ್ನೊಂದು ಪಾಠಶಾಲೆಯಲ್ಲಿ ಒಬ್ಬ ಹುಡುಗನು ತನ್ನ ಪಾಠದ ಪುಸ್ತಕದಲ್ಲಿದ್ದ ಒಂದು ಚಿತ್ರವನ್ನು ಸೀಳಿ ಕಡ್ಡಿಯಿಂದ ಚುಚ್ಚಿ ಕೆಡಿಸುತ್ತಿದ್ದನು ಉಪಾಧ್ಯಾಯನು ಪ್ರಶ್ನೆಮಾಡಿದಾಗ - ಈ ಚಿತ್ರವನ್ನು ನಾನು ಮೆಚ್ಚುವುದಿಲ್ಲ " ಎಂದು ಹೇಳಿದನು ಅದು ಚಕ್ರವರ್ತಿ ಸಾರ್ವಭೌಮರವರ ಬಂಧುವರ್ಗಕ್ಕೆ ಸೇರಿದವರ ಚಿತ್ರವಾಗಿತ್ತು. ಬೀರಾರ್ ಪಟ್ಟಣದಲ್ಲಾದರೋ ಚಕ್ರವರ್ತಿಯವರ ಜನ್ಮೋತ್ಸವವನ್ನು ನೆರವೇರಿಸಿದ ದಿನ ಒಬ್ಬ ಉಪಾಧ್ಯಾಯನು ಉಪನ್ಯಾಸ ಮಾಡುತ್ತಾ - ಇನ್ನೊಂದು ದಿನದ ತನಕ ನಾವು ಈ ಉತ್ಸವವನ್ನು ನಡೆಸಬೇಕೋ ನೋಡಿಸ ತಕ್ಕದ್ದಾಗಿದೆ ಎಂಬೀ ಅರ್ಥಕ್ಕೆ ಕೆಲವು ಮಾತುಗಳನ್ನು ಹೇಳಿದನು ಸರ್ಕಾರದವರು ಆ ಉಪಾಧ್ಯಾಯನನ್ನು ಕೆಲಸದಿಂದ ತೆಗೆದುಬಿಟ್ಟಿರು ಉಪಾಧ್ಯಾಯರು ಇಂಥಾ ದುರ್ಬೋಧನೆಯನ್ನು ಮಾಡಿದರೆ, ಹುಡುಗರ ಮನಸ್ಸನ್ನು ಕೆಡಿಸಿ, ಈ ದೇಶಕ್ಕೆ ನಾಶವನ್ನುಂಟುಮಾಡುತ್ತಾರೆ

ಹೈದರಾಬಾದ್ ಪಟ್ಟಣದಲ್ಲಿ ಪ್ರವಾಹಕ್ಕೆ ಸಿಕ್ಕಿ ಮನೆ ಮಠಗಳನ್ನು ಕಳೆದುಕೊಂಡಿದ್ದ ಕೆಲವು ಬಡಜನಗಳು ಮಾಡಿದ ಹುಲ್ಲಿನ ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದರು ಕಳೆದ ವಾರ ಆ ಮನೆಗಳಿಗೆ ಬೆಂಕಿ ಬಿದ್ದು ಸುಮಾರು ಇನ್ನೂರು ಮನೆಗಳು ಸುಟ್ಟು ಹೋದವು ಮಂತ್ರಿಗಳವರು ದೊರದಲ್ಲಿ ಉರಿಯನ್ನು ಕಂಡು ಮೋಟಾರ್ ಗಾಡಿಯಲ್ಲಿ ಬಹು ವೇಗವಾಗಿ ಅಲ್ಲಿಗೆ ಬಂದು ಬೆಂಕಿಯೆಲ್ಲಾ ಶಮನವಾಗುವ ತನಕ ವ್ಯಸನಾಕ್ರಾಂತರಾಗಿ ನೋಡುತ್ತಿದ್ದು ಆ ಬಡವರಿಗೆ ದ್ರವ್ಯ ಬಟ್ಟೆ ಬರೆಗಳನ್ನು ಕೊಡಿಸಿ ವಾಪಸು ಹೋದರು ಈ ಬೆಂಕಿಯನ್ನು ಆರಿಸುವುದಕ್ಕೆ ಪ್ರಯತ್ನಪಟ್ಟ ಕೆಲವು ಪೋಲೀಸಿನವರಿಗೆ ಪೆಟ್ಟು ಗಾಯಗಳಾದವು

ಕಲ್ಕತ್ತಾ ಪಟ್ಟಣದ ರಾಜದ್ರೋಹ ಮತ್ತು ಪಿತೂರಿ ಮೊಕದ್ದಮೆಯು ದಯಾಕ್ಷೆಗೆ ಪ್ರಾರಂಭವಾಗಿ ೧೧೦ ದಿನಗಳಾದವು ಬ್ಯಾರಿಸ್ಟರ್ ನೆ. ನಾರ್ಟನ್‌ರವರು ಮೊನ್ನೆ ಸೋಮವಾರ ಸರ್ಕಾರಿ ಪರದಿನ ಆರ್ಗ್ಯುಮೆಂಟನ್ನು ಪೂರೈಸಿದರು ಅಪರಾಧಿಗಳ ಕಡೆ ವಕೀಲರು ಆರ್ಗ್ಯುಮೆಂಟನ್ನು ಪ್ರಾರಂಭಿಸಿದಾರೆ ಈ ವಾರ ನೆಲ್ಲಾ ನಡೆಯುತ್ತಾ ಬಂದಿದೆ ಅಕ್ಕತಾಗಿ ಸರ್ಕಾರದವರು ಪಬ್ಲಿಕ್ ಪ್ರಾಸಿಕ್ಯೂಟರ ಅಂಗರಕ್ಷಕನಾಗಿ ಒಬ್ಬರಾದ ಪೊಲೀಸ್ ಪಹರೆಯನ್ನು ಕೊಟ್ಟಿದ್ದಾರೆ ಮತ್ತು ಕೋರ್ಟಿಗೆ ಹೋಗುವ ಪ್ರತಿ ಒಬ್ಬರನ್ನೂ ಚೆನ್ನಾಗಿ ಶೋಧನೆ ಮಾಡುತ್ತಿರುವರು ವಕೀಲರು ಕೋರ್ಟಿನಿಂದ ಮನೆಗೆ ಹೋಗುವಾಗಲೂ, ಮನೆಯಿಂದ ಕೋರ್ಟಿಗೆ ಬರುವಾಗಲೂ ಪೋಲೀಸಿನವರು ಅವರ ಹಿಂದೆ ಮುಂದೆ ಇದ್ದು ಅಂಗರಕ್ಷಣೆ ಮಾಡುತ್ತಿದ್ದಾರೆ

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನು ನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವಿಕೆ; ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಸುವಾಗಿಯೋ ಇಳಿಯುವುದು, ಬಿಡದ ಬಾಯಾರಿಕೆ, ಬಳಲಿಕೆ, ಎದೆ ಕಲ್ಲಾಡುವುದು, ಕಲೆನೋವು, ಗಾಬರಿ ಕಣ್ಣು ಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮದವು, ನಿಶ್ಶಕ್ತಿ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರಕೋಶಪ್ರವ, ವಾಯು, ಮೈಚಾಪು, ಉರಮೂತ್ರ, ಮೂತ್ರಕೋಶ ಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸತಕ್ಕದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-30]

ಅರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು, ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ ೩—೦—೦; ಅಥವಾ ೬ ಬುಡ್ಡಿಗಳಿಗೆ ರೂ ೧೧—೮—೦. ವಿಷ್ಣುಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್, ೩೦, ಪಿ ಓ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುವು

ಪ್ರಸಿದ್ಧವಾದ ಹಾಲ್ಕು ಪುಸ್ತಕಗಳನ್ನು ಪರಾಂಬರಿಸಿ.

10-12

“ಬ್ರಹ್ಮಚರ್ಯ” ವೆಂಬ ಮರ್ಮಶಾಸ್ತ್ರ. ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ. ವಿ ಪಿ ಪಿ. ಮೂಲಕ, ಐದಾಣೆ

“ಸ್ವಪ್ನಯಾಸಫಲದೀಪಿಕೆ” ಇನ್ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು. ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು “ಸ್ವಪ್ನಯಾಸಫಲದೀಪಿಕೆಯನ್ನು” ಒಂದು ಮುಖ್ಯವಾದ ಪರೀಕ್ಷೆಗೆ ಪ್ಠ್ಯವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರ ವರಿವಿಗೂ ಓದತಕ್ಕದ್ದು. ಕ್ರಯ ನಾಲ್ಕಾಣೆ. ವಿ ಪಿ ಪಿ ಮೂಲಕ ಆರಾಣೆ

“ವ್ಯಾಸನೈರ್ಯೋದಿಗಾಮನಯಾಣದ ಚರಿತ್ರೆ” ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ಸ್ವಿಕವಾದದ್ದು. ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುವು. ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು.

ಕ್ರಯ, ಒಂದಾಣೆ. ವಿ ಪಿ ಪಿ ಮೂಲಕ ಮೂರಾಣೆ.

“ಅಗಸ್ಟಿನ್ ದಿನಸ್ಮರಣೆ” ಇದು ಲೋಕಪ್ರಸಿದ್ಧವಾದ ಪುಸ್ತಕವು. ಕ್ರೈಸ್ತ ಮತದಲ್ಲಿ ತಿಳಿಸುವ ಪಾಪಪರಿತಾಪ, ಪಾಪಮನ್ನಣೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು.

ಇದರ ಬೆಲೆ.—ಕ್ಯಾಲಿಕೋ ಬೈಂಡು ಪ್ರತಿ ಒಂದಕ್ಕೆ ೦—೧೦—೦

ಒಟ್ಟಿನ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ.—ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು.

ಪೆರೂನಾ ವಿಷಯವಾಗಿ ಹೆಂಗಸ ರಿಂದ ಬಂದಿರುವ ಕಾಗದಗಳು.

714

ಮಿಸೆಸ್ ಕ್ಲೇರಾ ಎಲ್ ಮಿಲ್ಲರ್. ಮಿಸೆಸ್ ಎಸ್ ಎಲ್ ಜೂಯೆಲ್. ಮಿಸೆಸ್ ಮಹಲ ರೀಡ್

ಮುಂದಿನ ಕಾಗದಗಳು ದಿನವೂ ಅನುಭವವನ್ನು ತಿಳಿಸುತ್ತವೆ ಕಾಯಿಲೆ ಅನುಭವಿಸಿ ಪೆರೂನಾದಿಂದ ಮಿಂದಿಕ್ಕಾದ ಗುಣವನ್ನು ಹೊಂದಿದ ಸ್ತ್ರೀಯರು ಯಥಾರ್ಥವಾಗಿ ನುಡಿದಿರುವ ಮಾತುಗಳಾಗಿವೆ

ಕೂಡಲೇ ಗುಣಕೊಡುವಂಥಾ ಈ ಔಷಧ ಎಕ್ಕಳವು ಅನೇಕ ಹೆಂಗಸರಿಗೆ ತುಂಬಾ ಅನುಕೂಲವಾಗಿದೆ ಮಲಬದ್ಧತೆ ವಾಯುಸೋಪು ಮೂತ್ರಕೋಶದ ಅಕ್ರಮ ಹುಡಿಗೆಮ್ಮು, ಈ ಮೊದಲಾದ ಶೀತದಿಂದ ಹುಟ್ಟುವ ನಾನಾ ರೋಗಗಳನ್ನು ಪೆರೂನಾ ನಿವಾರಣೆಮಾಡಬಲ್ಲದು ಎಂತಲೂ ಈ ಮಾತನ್ನು ಹೆಂಗಸರು ಹೇಳುತ್ತಾರೆ ತಮ್ಮಂತೆ ನರಳುವ ಹೆಂಗಸರಿಗೆ ಅನುಕೂಲವಾಗಲಿ ಎನ್ನುವುದಲ್ಲದೆ ಅವರ ಆಶಯವು ಇನ್ನೇನೂ ಆಗಿರಲಾರದು

ಪೆರೂನಾವು ಪ್ರತಿ ದಿನವೂ ಹೊಸ ಸ್ನೇಹಿತರನ್ನು ಮಾಡಿಕೊಳ್ಳುತ್ತಿದೆ ಪೆರೂನಾವಿಗೆ ಸಹಜವಾಗಿ ದೊರಕಿರುವ ಪ್ರಸಿದ್ಧಿಗೆಲ್ಲಾ ಅದನ್ನು ಉಪಯೋಗಿಸಿದ ಜನರು ಹೇಳುವ ಶಿಫಾರಸು ಕಾಗದಗಳೇ ಮುಖ್ಯ ಕಾರಣವು

ಬಿಡದ ಹುಡಿಗೆಮ್ಮು

ಮಿಸೆಸ್ ಕ್ಲೇರಾ ಎಲ್ ಮಿಲ್ಲರ್, ಬಾಕ್ಸ್ ೭೧ ಕೊಲಂಬಿಯಾ, ಸ್ಟ್ರಾ, ಸೀಟಲ್ ವಾಶಿಂಗ್ಟನ್, ಯು ಎಸ್ ಎ, ಮೊದಲು ಸೂಗೆ ಕಂಟ್ರಿ ಕ್ಲಬ್ ವೈಸ್‌ಪ್ರೆಸಿಡೆಂಟ್ ಈಕೆ ಬರೆಯುವುದು

“ಹುಡಿಗೆಮ್ಮಿನಿಂದ ನಾನು ಬಹಳ ಅನುಭವಿಸಿದೆನು ಒಂಬತ್ತು ಬಾಟ್ಲಿ ಪೆರೂನಾ ಸೇವಿಸುವಷ್ಟರಲ್ಲಿ ಅದು ನನಗೆ ನಿವಾರಣೆಯಾಯಿತು ಇದಕ್ಕಿಂತ ಉತ್ಕೃಷ್ಟವಾದ ಔಷಧ ಬೇರೊಂದಿಲ್ಲ ಪೆರೂನಾ ದೇಹದ ಅಂಗಗಳಲ್ಲಿ ಮಾಡತಕ್ಕ ಕೆಲಸಗಳು ಬಹು ವಿಶೇಷವಾಗಿರುತ್ತವೆ ಅದ ಶರೀರದ ಶಕ್ತಿಯನ್ನು ವೃದ್ಧಿಮಾಡಿ ದೇಹದ ಸ್ವಾಭಾವಿಕ ಕೆಲಸಗಳಿಗೆ ಸಹಾಯವಾಗುವುದು

“ನಾನು ಇದರ ವಿಷಯವನ್ನು ನನ್ನ ಸ್ನೇಹಿತರಿಗೆ ಬಹಳವಾಗಿ ಹೇಳಿದೆನು ಅವರೂ ನನ್ನಂತೆಯೇ ಇದನ್ನು ತುಂಬಾ ಕೊಂಡಾಡುತ್ತಾರೆ ಅದು ನಿಜವಾಗಿಯೂ ಗುಣಕೊಡುವ ಔಷಧವೆಂದು ನನಗೆ ಗೊತ್ತು”

ನಡುಕ, ದಣುವು ಮತ್ತು ದುರ್ಬಲ

ಮಿಸೆಸ್ ಕ್ರಿಸ್ಟಿನಾ ಸ್ಕ್ರೆಲ್ಲಾ ೪೯೦ ವಿನ್ಸ್ಲೋ ಅವ್ ಬಫೆಲೊ ನ್ಯೂಯಾರ್ಕ್, ಯು ಎಸ್ ಎ ಈಕೆ ಬರೆಯುವುದು — “ಶರೀರದೊಳಗೆ ಶೀತಹಿಡಿದು ನರಳುತ್ತಿರುವವರೆಲ್ಲಾ ಇದನ್ನು ಓದಿ ಪ್ರಯೋಜನ ಹೊಂದುವರೆಂದು ನಿರೀಕ್ಷಿಸುತ್ತೇನೆ

ನನ್ನ ಸ್ಥಿತಿಯು ನಿಜವಾಗಿ ಕೆಟ್ಟುಹೋಗಿತ್ತು ನನಗೂ ನನ್ನ ಸ್ನೇಹಿತರಿಗೂ ನನ್ನ ಆರೋಗ್ಯ ತಿರುಗಿ ಬರುವುದು ನೋಡಿ ಗಾಬರಿಯುಂಟಾಗಿತ್ತು ದೇಹವು ನಡುಗುತ್ತಿತ್ತು ರಾತ್ರಿ ನಿದ್ದೆ ಬರುತ್ತಿರಲಿಲ್ಲ ಆಹಾರದಿಂದ ಪ್ರಯೋಜನವಾಗಲಿಲ್ಲ ಈ ವಾಗಲೂ ನನಗೆ ದಣುವೂ ದುರ್ಬಲವೂ ಇದ್ದವು ಅನೇಕ ಡಾಕ್ಟರುಗಳನ್ನು ಕೇಳಿ ಔಷಧ ಸೇವಿಸಿದರೂ ನನಗೆ ಕಷ್ಟಪರಿಹಾರವಾಗಲಿಲ್ಲ ಆಗ ನಾನು ಪೆರೂನಾ ಸೇವಿಸಲಾರಂಭಿಸಿದೆನು

“ಕಡೆಯಲ್ಲಿ ಎರಡು ಬಾಟ್ಲಿ ಔಷಧ ಸೇವಿಸುವಾಗ್ಗೆ ನಾನು ಬೇರೆ ಹೆಂಗಸಾದಂತೆ ತೋರಿತು ಆದರೂ ಅಲ್ಲಿಗೇ ನಿಲ್ಲಿಸಲಿಲ್ಲ ಇನ್ನೂ ಕೆಲವು ಬಾಟ್ಲಿಗಳ ಪೆರೂನಾ ಸೇವಿಸುತ್ತಾ ಬಂದೆನು ನನಗೆ ಸಂಪೂರ್ಣ ಗುಣವಾಯಿತು ಆಗಿನಿಂದಲೂ ಸುಖವಾಗಿದ್ದೇನೆ ಈಗ ಚೆನ್ನಾಗಿ ಊಟಮಾಡುತ್ತೇನೆ ಒಳ್ಳೇ ನಿದ್ದೆ ಬರುತ್ತದೆ”

ಪೆರೂನಾವಿಗೆ ಒಳ್ಳೇ ಹೆಸರು

ಮಿಸೆಸ್ ಎಸ್ ಎಲ್ ಜೂಯಲ್ ಆರ್ ಎಫ್ ಡಿ ೧ ಪ್ರಿನ್ಸ್‌ಟನ್ ವೆಸ್ಟ್‌ವರ್ಜೀನಿಯ, ಯು ಎಸ್ ಎ ಈಕೆ ಬರೆಯುವುದು —

“ಅನೇಕ ವರುಷಗಳು ನಾನು ಪೆರೂನಾ ಉಪಯೋಗಿಸಿ ಅದರ ಪ್ರಯೋಜನವನ್ನು ತಿಳಿದಿದ್ದೇನೆ ನನ್ನ ಕುಟುಂಬದವರಿಗೂ ಅದು ತುಂಬಾ ಹಿತವನ್ನುಂಟುಮಾಡಿರುವುದರಿಂದ ಎಲ್ಲಿ ನಾನು ಪೆರೂನಾ ವಿಷಯದಲ್ಲಿ ಒಳ್ಳೇ ಮಾತನ್ನಲ್ಲದೆ ಬೇರೆ ಏನೂ ಹೇಳಲಾರೆನು

ಪೆರೂನಾವನ್ನು ಮನೆಯಲ್ಲಿಟ್ಟಿದೆ

ಮಿಸೆಸ್ ಮೇರಿ ಗೋರ್ಟ್‌ಜ್ ಓರಿಯಂಟ ಒಕ್ಲಹೋಮ ಯು ಎಸ್ ಎ ಈಕೆ ಬರೆಯುವುದು — ನಾನೂ, ನನ್ನ ಮಕ್ಕಳೂ, ನನ್ನ ಗಂಡನೂ ನಿಮ್ಮ ಔಷಧಗಳನ್ನು ಸೇವಿಸಿ ಯಾವಾಗಲೂ ಮನೆಯಲ್ಲಿಟ್ಟುಕೊಂಡಿರುತ್ತೇವೆ ಈ ಔಷಧದಿಂದ ನನಗೆ ಆರೋಗ್ಯವುಂಟಾಯಿತು ಅನೇಕ ಕಡೆಗಳಿಂದ ಜನರು ನನಗೆ ವ್ಯಾಧಿಯಾದದ್ದನ್ನು ಕೇಳಿ ಆಶ್ಚರ್ಯಪಟ್ಟು ಬರೆಯುತ್ತಿದ್ದಾರೆ ನನ್ನ ಗಂಡನಿಗಿದ್ದ ಉಬ್ಬಸರೋಗ ನನ್ನ ಮಗಳ ಕಿವಿಯ ಬಾಧೆ ಹೊಟ್ಟೆನೋವು, ನನ್ನ ಮಗನ ಗಂಟಲನೋವು ಎಲ್ಲಾ ವಾಸಿಯಾಯಿತು ಕಾಯಿಲೆ ಇದ್ದಾಗ ನಾನು ೧೦೦ ಪೌಂಡು ತೂಗುತ್ತಿದ್ದೆನು ಈಗ ೧೩೫ ಪೌಂಡು ಮಾಂಸ ಖಂಡಗಳು ಬೆಳೆದು ಸುಖವಾಗಿದ್ದೇನೆ

ಡಾಕ್ಟರ್ ಹಾರ್ಟ್‌ಮೆನ್‌ರವರ ಔಷಧವು ಭಗವಂತನ ಕೃಪೆಯ ಆಶ್ಚರ್ಯಕರ ದಾನವು ಅದರಿಂದ ಬಹು ಚಮತ್ಕಾರವಾಗಿ ದೇಹವು ಚೆನ್ನಾಗುತ್ತದೆ ಪೆರೂನಾವು ನರಗಳಿಗೆ ಹಿತಕೊಡುವುದು ಶೀತರೋಗಗಳಿಗೆಲ್ಲಾ ಅದು ಉತ್ತಮೋತ್ತಮವಾದ ಔಷಧವಾಗಿದೆ

“ಹತ್ತು ವರುಷಗಳ ತನಕ ರೋಗದಲ್ಲಿ ನರಳುತ್ತಿದ್ದ ನಾನು ಈಗ ಸಂಪೂರ್ಣ ಗುಣಹೊಂದಿರುತ್ತೇನೆಂದು ನಿಮಗೆ ಬರೆಯಲು ತುಂಬಾ ಸಂತೋಷಪಡುತ್ತೇನೆ ನಾವು ಹೇಳಿದ ಚಿಕಿತ್ಸೆಗಾಗಿ ನಿಮ್ಮನ್ನು ಅಪಾರ ಹೊಗಳುವೆನು”

ಮಲಬದ್ಧತೆ, ಮೂತ್ರಕೋಶರೋಗ

ಮಿಸೆಸ್ ಮಹಲಾ ರೀಡ, ಕಾರ್ಬನ್‌ವಿಲ್ಲೆ ಓಂಟ್, ಕ್ಯಾನಡ ಈಕೆ ಬರೆಯುವುದು —

“ನನ್ನ ಮುದಿತನದಲ್ಲಿ ನಿಮ್ಮ ಪ್ರಖ್ಯಾತವಾದ ಔಷಧವು ನನಗೆ ಮಹೋಪಕಾರವಾಗಿರುತ್ತದೆ ಈಗ ನಾನು ಸೌಖ್ಯವಾಗಿರುವಷ್ಟು ಹಿಂದೆ ಅನೇಕ ವರುಷಗಳಿಂದ ಇರಲಿಲ್ಲ

ನನಗೆ ಮಲಬದ್ಧವಾಗುತ್ತಾ ಮೂತ್ರಕೋಶದ ಅಕ್ರಮ ಹುಟ್ಟಿ ವಾಯುಸೋವು ಪ್ರಾಪ್ತವಾಗಿತ್ತು ಎರಡು ವರುಷಗಳ ಹಿಂದೆ ನನ್ನ ಆರೋಗ್ಯವು ಸಂಪೂರ್ಣ ಕೆಟ್ಟಿತು ಅಷ್ಟರಲ್ಲಿ ನನ್ನ ಪ್ರೀತಿಪಾತ್ರಳಾದ ಒಬ್ಬ ಸ್ನೇಹಿತಳು ನಿಮ್ಮ ಪೆರೂನಾ ಮನಾಲಿನ್ ಎಂಬ ಔಷಧಗಳನ್ನು ಕಳುಹಿಸಿಕೊಟ್ಟಳು

“ಬಾಟ್ಲಿ ಮೇಲೆ ಬರೆದಿರುವಂತೆ ನಾನು ಔಷಧಗಳನ್ನು ತೆಗೆದುಕೊಳ್ಳುತ್ತಾ ಬಂದೆನು ನನಗೆ ಬೇಗ ಅನುಕೂಲವಾಯಿತು ಅಂದ ಮೇಲೂ ಅದನ್ನೇ ಸೇವಿಸಿಕೊಂಡು ಬಂದೆನು

“ನನ್ನ ಹಿಂದಿನ ರೋಗಗಳೆಲ್ಲಾ ಈಗ ನನಗೆ ಸಂಪೂರ್ಣ ವಾಸಿಯಾಗಿವೆ ಮೊದಲಿಗಿಂತ ಈಗ ನಾನು ಸುಖವಾಗಿದ್ದೇನೆ

“ಈ ಔಷಧಗಳ ಗುಣವನ್ನು ಅಷ್ಟಿಷ್ಟೆಂದು ಹೊಗಳಲಾರೆನು ಅದನ್ನು ಸೇವಿಸುವಂತೆ ಸಂದರ್ಭ ಬಿದ್ದಾಗಲೆಲ್ಲಾ ಇತರರಿಗೆ ಹೇಳುತ್ತಾ ಇದ್ದೇನೆ”

ಪ್ರಸಿದ್ಧವಾದ ಔಷಧವು

ಅನೇಕ ವರುಷಗಳಿಂದಲೂ ಎಲ್ಲಾ ಶೀತರೋಗಗಳಿಗೂ ಪೆರೂನಾ ಗುಣಕೊಡುವ ಔಷಧವೆಂದು ಪ್ರಸಿದ್ಧವಾಗಿದೆ ಈ ರೋಗಗಳಿಗೆ ಇತರ ಔಷಧಗಳು ಎಷ್ಟೋ ಹುಟ್ಟಿ ಅದೃಶ್ಯವಾದವು ಆದರೆ ಪೆರೂನಾವಿನ ಒಳ್ಳೇ ಹೆಸರಿಗೆ ಸ್ವಲ್ಪವೂ ಕುಂದುಕೊರತೆಗಳುಂಟಾಗಿರುವುದಿಲ್ಲ

ಪೆರೂನಾ ಬಹು ಸ್ವರವತ್ತಾದ ಮೂಲಿಕೆಗಳಿಂದ ತಯಾರಾದ ಔಷಧವು ಅದು ದೇಹದ ಅಂಗಾಂಗಗಳ ಮೇಲೂ ನರಗಳ ಮೇಲೂ ಕೆಲಸಮಾಡಬಲ್ಲದು ಶೀತವೆಂಬುವುದು ಯಾವ ಭಾಗದಲ್ಲಿ ಅಕ್ರಮವನ್ನುಂಟುಮಾಡಿದ್ದರೂ ಪೆರೂನಾ ಅದನ್ನೆಲ್ಲಾ ನಿವಾರಣೆಮಾಡಿರುತ್ತದೆ

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದದ್ದೂ ಇವರಿಂದಲೇ ತಿಳಿಯಬಹುದು

ವಿಳಾಸ ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

[illegible]—1909 ರಿಂದ 1[illegible]—3—1909 ರ ವರೆಗೆ

ಸ್ಥಳ	ಪ್ಲೇಗ್ ಆದದ್ದು	ಪ್ಲೇಗ್ ಸತ್ತದ್ದು	ಕಾಲರಾ ಆದದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	[illegible]	8	0	0
ಮೈಸೂರು ,,	0	1	0	0
ಬೆಂಗಳೂರು ಡಿಸ್ಟ್ರಿಕ್ಟು	11	10	0	0
ಮೈಸೂರು ,,	32	21	1	2
*ಕೋಲಾರ್ ,,	16	15	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	1	1	2	1
ಹಾಸನ ,,	[illegible]	3	[illegible]	0
ಚಿತ್ರದುರ್ಗ ,,	1	0	0	0
ಕಡೂರ್ ,,	4	6	11	4
ಶಿವಮೊಗ್ಗ ,,	[illegible]	1	9	-
* ಸಂಖ್ಯೆ ಕಾಣಿಸಿಲ್ಲ ಒಟ್ಟು	81	72	14	16

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಚೈತ್ರ ಶುದ್ಧ ಚೌತಿ ಗುರುವಾರದಿಂದ ಚೈತ್ರ ಶುದ್ಧ ದಶಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಮಾರ್ಚಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಕುಂಭ ಮಾಸ
25	ಗುರು	ಚೌತಿ	28 17	ಭ	13 50	1[illegible]
26	ಶುಕ್ರ	ಪಂಚಮಿ	21 32	ಕೃ	12 29	1[illegible]
27	ಶನಿ	ಷಷ್ಠಿ	26 [illegible]	ರೋ	11 2[illegible]	1[illegible]
28	ರವಿ *	ಸಪ್ತಮಿ	20 28	ಮೃ	11 12	1[illegible]
29	ಚಂದ್ರ	ಅಷ್ಟಮಿ	30 12	ಆ	1[illegible] 54	17
30	ಕುಜ	ನವಮಿ	21 3[illegible]	ಪು	1[illegible] [illegible]0	18
31	ಬುಧ †	ದಶಮಿ	23 49	ಪುಷ್ಯ	15-58	1[illegible]

* ತಿಥಿದ್ವಯಂ ನವಮಿಗೆ ಕ್ಷಯತಿಥಿ, ಶ್ರೀರಾಮನವಮಿ, † ನಂಜನಗೂಡಿನಲ್ಲಿ ಶ್ರೀಕಂಠೇಶ್ವರ (ಮೇಲುಕೋಟೆಯಲ್ಲಿ ವೈರಮುಡಿ ಉತ್ಸವ

ಪೇಟೆ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೫ ೮ ೦	೧೬ ೮ ೦
ಕೆಂಬೂತಿ ಅಕ್ಕಿ ಅವಲ್		೧೬ ೦ ೦	೧೮ ೮ ೦
,, ಮಧ್ಯಮ		೧೫ ೮ ೦	೧೮ ೨ ೪
ಜಾತಿಬ್ರಾಣಿ ಅಕ್ಕಿ		೧೫ ೧೨ ೦	೨೦ ೦ ೦
ಸಣ್ಣಕ್ಕಿ ಅವಲ್		೧೪ ೦ ೦	೨೧ ೦ ೦
,, ಮಧ್ಯಮ		೧೬ ೮ ೦	೧[illegible] ೪ ೦
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೬ ೮ ೦	೧೬ ೪ ೦
,, ಮಧ್ಯಮ		೧೬ ೦ ೦	೧೬ ೦
ಹೈನ್ ರಾಗಿ ಪಲ್ಲಾ ೧ಕ್ಕೆ		೮ ೧೨ ೦	೯ ೦ ೦
ಕಾರಾಗಿ		೮ ೪ ೦	೮ ೮ ೦
ಜೋಳ		೮ ೪ ೦	೬ ೮ ೦
ಹಲಸಂದೆ ಪಲ್ಲಾ ೧ಕ್ಕೆ		೧೬ ೪ ೦	೧೨ ೪ ೦
ಬಿಳೀ ಅವರೆ		೧೧ ೦ ೦	೧೧ ೦ ೦
ಹೆಸರು		೧೪ ೬ ೦	೧೩ ೮ ೦
ಉದ್ದು		೧೪ ೪ ೦	೧೫ ೪ ೦
ಕಡಲೆ		೧೪ ೬ ೦	೧೪ ೦ ೦
ಎಳ್ಳು ಸೇ ೧೨೭ ಕ್ಕೆ		೨೧ ೦ ೦	೨೧ ೦ ೦
ಹುರುಳಿ		೧೦ ೮ ೦	[illegible] ೧೨ ೦
ಹರಳು ೧೨೭ ಸೇರಿಗೆ		೧೦ ೮ ೦	೧೦ ೪ ೦
ಸಿಗೇಕಾಯಿ ಮಣ ೧ಕ್ಕೆ		೧ ೮ ೦	೧ ೬ ೦
ಮೆಣಸಿನಕಾಯಿ		೫ ೮ ೦	೩ ೮ ೦
ಮಧ್ಯಮ		೫ ೦ ೦	೩ ೬ ೦
ಬೆಲ್ಲ ಮೊದ್ದು ಅಚ್ಚು		೬ ೬ ೦	ಮ ೧ ೧೧ ೦
ಒಳ್ಳೆಣ್ಣೆ ಮಣ ೧ಕ್ಕೆ		೫ ೦ ೦	೫ ೦ ೦
ಹರಳೆಣ್ಣೆ		೪ ೮ ೦	೪ ೬ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೭ ೦ ೦	೭ ೦ ೦
ಉಪ್ಪು		೬ ೦ ೦	೫ ೪ ೦
ಹುಣಸೇ ಹಣ್ಣು		೧ ೮ ೦	೧ ೬ ೦
ಹಳೇದು		೧ ೪ ೦	೧ ೬ ೦
ತುಪ್ಪ ಮಣ ೧ಕ್ಕೆ		೧೪ ೮ ೦	೧೪ ೦ ೦
ಸೀಮೆಎಣ್ಣೆ ಪೆಟ್ಟಿ ೧ಕ್ಕೆ		೫ ೦ ೦	೪ ೨ ೦
ತೆಂಗಿನಕಾಯಿ ೧೦೦ ಕ್ಕೆ		೪ ೮ ೦	೫ ೦ ೦
ಅಳಲೇಕಾಯಿ ಮಣ ೧ಕ್ಕೆ		೦ ೧೨ ೦	೧ ೦ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦ ೧೬ ೦	೧ ೨ ೦
ಚಿನ್ನ (ಪವನ್) ಕೆಂಪು		೧೫ ೭ ೦	೧೫ [illegible] ೦
,, ಪಸಿಮೆ		೧೫ ೧೪ ೦	೧೫ ೧[illegible] ೦
,, ,, ಗಟ್ಟಿ ತೊಲ ೧ಕ್ಕೆ		೨೪ ೧೦ ೦	೨೪ ೭ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೦ ೦	೬೩ ೪ ೦

Printed and Published by the Rev H GULLIFORD Proprietor and Manager Wesleyan Mission Press Mysore 25/3/1909

REGISTERED
M. 20

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೯ ನೇ ಇಸವಿ ಏಪ್ರಿಲ್ ತಾರೀಖು ೧ ನೇ ಗುರುವಾರ. ಸಂಚಿಕೆ ೪೪

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮಾತ್ರ ಇರುವ ರೋಗಗಳಿಗೆ ತಕ್ಕಷ್ಟು ಗುಣಕಾರಿಯು. [30 6]

ತಲೆನೋವು, ಗಂಟು ಊದಿಕೊಂಡದ್ದು, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲು ನೋವು, ಅಘಾತಗಳಾಯು. ಎದೆನೋವು, ಘಾಯ, ಜಖಮು, ಇತ್ಯಾದಿ

ಆರ್ ಡಿ. ಸೋಜಾ, ಮೆನೆಜರ್, ಕಾಫಿ ತೋಟ ... ಬರೆಯುವದೇನಂದರೆ—ನಮ್ಮ ಅಮೃತಾಂಜನವು ದೇಹದಲ್ಲಿಯ ... ನೋವುಗಳಿಗೂ ಉತ್ತಮವಾದದ್ದು ... ಗುಣವಾಗುತ್ತದೆ. ಬಾಟ್ಲಿ ಒಂದರ ಕಿಮ್ಮತ್ತು ೦-೮-೦ ೧೨ ಬಾಟ್ಲಿಗಳಿಗೆ ೫-೯-೦. ೨೪ ಬಾಟ್ಲಿಗಳಿಗೆ ೧೦-೨-೨. ೫೦ ಬಾಟ್ಲಿಗಳಿಗೆ ೨೦-೦-೦ ವ್ಯಾಪಾರಸ್ಥರಿಗೆ ಬಹಳವಾಗಿ ಕಮಿಷನ್ ಸಿಕ್ಕುವದು.

ಗಜಕರ್ಣದ ಮುಲಾಮು.

ಮೂರು ನಾಲ್ಕು ತಾಸುಗಳೊಳಗೆ ಗಜಕರ್ಣ, ತುರಿ. ಕಜ್ಜಿ ಮುಂತಾದವು ನಾಶವಾಗುವವು. ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ವಜ್ರಗುಟಿಕೆ.

ಧಾತುಪುಷ್ಟಿ, ರಕ್ತಶುದ್ಧಿ, ಬಾಟ್ಲಿ ಒಂದರ ಕಿಮ್ಮತ್ತು ರೂ. ೧-೦-೦
ಸುಂದರೀ ಮುಲಾಮು ೦-೫-೦
ದಂತಮಂಜನ—ಹಲ್ಲುಗಳು ಗಟ್ಟಿಯಾಗುತ್ತವೆ ೦-೩-೦

ಈ ಕಂಪನಿಯವರು ಮತ್ತು ಸಮೂಹಿಯ ಔಷಧಗಳನ್ನು ತಯಾರಿಸುವರು ಇವ ಕ್ಯಾಟಲಾಗು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು ವಿಳಾಸ –

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು :— ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1-12

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ನೋಡಲು ಎಷ್ಟು ನಯವಾದವು ... ಹಾಸನದಿಂದಲೇ ...

ಈ ... ಟೋಪಿಗಳ ... ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಳ್ಳುವರು ...

... ಟೋಪಿಗಳ ... (೨) ಟೋಪಿಗಳನ್ನು ... ಅಪೇಕ್ಷಿಸುವವರಿಗೆ ಬಹಳ ... ಕಳುಹಿಸುತ್ತೇವೆ

ಒಳ್ಳೇ ... ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ... ನಮ್ಮಲ್ಲಿ ದೊರೆಯುವದಿಲ್ಲ

... ಕೆಂಪು ಕಪ್ಪು, ... ಟೋಪಿಗಳು ೧ ರೂ ... ಆ, ೧ ರೂ. ೬ ಆ. ; ೧ ರೂ ೮ ಆ

... ಟೋಪಿಗಳು ರೂ. ೧ ೮ , ರೂ ೧-೧೨.

... ಟೋಪಿಗಳು ರೂ ೨

... ಟೋಪಿಗಳು ೧ ರೂ ೧೨ ಆ. ; ೧ ರೂ. ೮ ಆ. ; ೧ ರೂ. ೬ ಆ.

... ಟೋಪಿಗಳು ೧ ರೂ ೪ ಆ. , ೧ ರೂ ೬ ಆ ;

... ಟೋ , ... ಬೇಕಾದವರು ... ನಮ್ಮ ವಿಳಾಸ.—

ಮ್ಯಾನೇಜರ್, ಹಾಸನ ಟೋಪಿ, ಕಾರಖಾನೆ, ಹಾಸನ

ಜ್ವರಸುಧಾ.

81-26

ಒಂದು ಬಾಟ್ಲಿ ಕಿಮ್ಮತ್ತು ೮ ಆಣೆ.—ವಿ. ಪಿ. ಛಾರ್ಜು ಬೇರೆ.

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ಹಾಗೆ ಬೇರೆ ಔಷಧಿ ಲೋಕದಲ್ಲಿ ಇಲ್ಲವೆಂದು ಅನುಭವಿಕರಾದ ಡಾಕ್ಟರುಗಳು ಹೇಳುತ್ತಲಿದ್ದಾರೆ. ... ತಲೆನೋವು ... ಮುಂತಾದವುಗಳನ್ನು ೧—೨ ಹೊತ್ತಿನಲ್ಲಿಯೇ ... ಗುಣಕ್ಕೆ ತಾರಿಸಬಲ್ಲದು. "ಸುಧಾ" ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವೂ ಹೇಗೆ ಮೈ ಅಂಟುವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನೂ ನಾಶಪಡಿಸುವದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಸೀಸೆ ಔಷಧಿಯಲ್ಲಿ ಕಂಡುಬರುವ ಆರೋಗ್ಯಗುಣವನ್ನು ಹೆಚ್ಚು ವರ್ಣನೆ ಮಾಡಲಾರೆವು

ದೇವನಹಳ್ಳಿ ಟೌನ್, ಬೆಂಗಳೂರು ಡಿಸ್ಟ್ರಿಕ್ಟ್.

ಎಂ. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್.

ಜ್ವರಹರಿ.

18-9

... ಜ್ವರ, ... ಜ್ವರ, ನೂರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ... ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ನಾಶಪಡಿಸುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ... ಸಬ್ ರಿಜಿಸ್ಟ್ರಾರ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯಂಗಾರವರು—... ಕಳುಹಿಸಿ ಕೊಟ್ಟ ... ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು. ... ಜನಗಳು ... ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ ; ೧—೮ ರೂ ; ರೂ ೨—೧೨ ಆ. , ೧೧ ರೂ. ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಾಪ್ಸಿ ಬರಲಾಗುವದು

ಓಮಂಕರ್ಪೂರ.

... ಉಬ್ಬಸ, ... ಹೊಟ್ಟೆ ಕಳೆಯುವದು, ... ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ... ಗುಣಕೊಡುವದು. ಇದು ... ಹೊಟ್ಟೆನೋವು ಮುಂತಾದ ... ಗಳನ್ನು ಕೂಡ ಗುಣಪಡಿಸುತ್ತದೆ ... ಜ್ವರಹರಿ" ಎಂಬ ಔಷಧದಂತೆಯೇ ... ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ... ವರು—ಪ್ರಿಯ ಓಮಂಕರ್ಪೂರವನ್ನು ನಾನೂ ನನ್ನ ... ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಜನಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿಯೂ ಪಡೆಯಿರಿ—

ಹೆಸ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

JUST RECEIVED! JUST RECEIVED!!

Stead's Books for the Bairns

(Illustrated) New Numbers [5 13]

STEAD'S PENNY POPULAR TALES—Sixty-four Pages in a coloured Picture Cover. Each number contains a story of thrilling interest. 24 numbers.

CALENDARS FOR 1909.

Apply—**The Manager, C.L.S. Book Depot, Mysore City.**

ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ	೧—೨—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ.	೧—೧೪—೦
" " ೬ " "	"	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾರತಕ್ಕ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಕಾಂತಿವರ್ಧನ ಕರ್ವೆ ...

24-7

ನೂತನವಾಗಿ ಕಂಡು ಹಿಡಿಯಲ್ಪಟ್ಟದ್ದು.

ತಲೆಕೂದಲು ಬೆಳೆಯಲು ಉತ್ತಮವಾದ ಸುಗಂಧ ಯೆಣ್ಣೆ.

ಸ್ತ್ರೀಯರ ಸೌಂದರ್ಯಕ್ಕೆ ಮುಖ್ಯ ಕಾರಣಭೂತವಾದ ಕೇಶವು ಚೆನ್ನಾಗಿ ... ಸೌಂದರ್ಯವನ್ನು ಹೆಚ್ಚಿಸತಕ್ಕ ಈ ನೂತನ ಯೆಣ್ಣೆಯು ಬಜಾರಿನಲ್ಲಿ ಮಾರಲ್ಪಡುವ ಇತರ ಯೆಣ್ಣೆಗಳಂತೆ ... ಹೊಂದಬಹುದಾದ್ದಕ್ಕೆ ಅನುಕೂಲವಾಗಿ ಇದರ ಬೆಲೆಯೂ ಕಡಿಮೆ ಇಡಲ್ಪಟ್ಟದೆ ... ಈ ಯೆಣ್ಣೆಯು ಉಪಯೋಗದಿಂದ ... ಕೂದಲು ... ಈ ಎಣ್ಣೆಯನ್ನು ಒಳ್ಳೆ ... ಉಪಯೋಗಿಸಬಹುದು

ಯೋಗಿಸಬಹುದು ಇದರ ಬೆಲೆ ನಂ. 1 ಸೀಸೆ 1 ಕ್ಕೆ ರೂ 1—0—0 ನಂ. 2, 0—12—0. ನಂ. 3, 0—8—0

ವಿಳಾಸ.—ಸಿ. ಪಿ ಎಂಡ್ ಕಂಪನಿ, ಗಿರಿಗಾಂ, ಬೊಂಬಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

75 7



೧. ಬೋಳಾಯುಕ್ತದ ಕಸ್ತೂರೀ ಮಾತ್ರೆ.— ಈ ಮಾತ್ರೆಗಳನ್ನು ... ಭಸ್ಮ, ಚಿನ್ನದ ... ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ. ... ನೋವು, ... ಅಜೀರ್ಣ. ಅಗ್ನಿಮಾಂದ್ಯ, ಹಲ್ಲುನೋವು. ಕೆಮ್ಮು, ... ಅರೋಚಕ, ಇನ್ನೂ ಅನೇಕ ರೋಗಗಳನ್ನು ಕೂಡಲೆ ... ಗುಣಪಡಿಸುತ್ತವೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತ ... ಬಹಳ ಹೊತ್ತು ಸುವಾಸನೆಯಾಗಿರುತ್ತೆ, ... ನಿಯಮಿತವಾಗಿ ... ರಕ್ತದಲ್ಲಿ ... ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ. ... ಜ್ವರ, ಕೃದತ್ತಗಳನ್ನು ಬಹು ಬೇಗನೆ ಗುಣಪಡಿಸುತ್ತವೆ

ಇವನ್ನು ಸೇವಿಸುತ್ತಿರುವವರು ... ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

... ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ. ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಕ್ಷಾಮದ ಫಂಡು.

ಈಗಿನ ಕ್ಷಾಮದ ನಿವಾರಣಾರ್ಥವಾಗಿ ಮಹಾಜನಾ ಚಂದಾ ಕೊಡುವುದಾಗಿ ವಾಗ್ದಾನಮಾಡಿರತಕ್ಕ ಸಕಲ ಜನರೂ ತಮ್ಮ ಚಂದಾ ಮೊಬಲಗುಗಳನ್ನು ಈ ಕೆಳಗೆ ರುಜು ಮಾಡುವವರ ಆಫೀಸಿಗೆ ಕಳುಹಿಸಿ ಕೊಟ್ಟು ರಸೀದಿ ಪಡೆಯಬಹುದು

ತಾ|| ೬ ೨ ೧೯೦೯ — ಎಂ ಜೆ ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್,
ಸಿಟಿ ಮ್ಯುನಿಸಿಪಲ್ ಕೌನ್ಸೆಲ್, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

48-45

ತಲೆನೋವು, ವಾಯುನೋವು, ಸೆಳತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗೆ ನಿವಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆ ಮಾಡುವವರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ಉಪಯೋಗಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೩ ಆಣೆ ಪ್ಯಾಕಿಂಗ್ ೪ ಆಣೆ ೬ವರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿಸ ಬಹುದು

ಮುಖ್ಯ ಏಜೆಂಟರ ವಿಳಾಸ— ಎಸ್ ಹಿಟಿಸೆರ್,
೩೩, ವೇದವಲ್ಲಿ ಬೀದಿ, ವೇಪೇರಿ, ಮದರಾಸ್

ನೋಡಿರಿ. “ಪ್ರೋತ್ಸಾಹಕ ಕೊಡಿರಿ” ಕರಿಸಿರಿ.

95 1.)

ಈಗ ತಾಜಾ ಸೀಮೆಯಿಂದ ಬಂದಿದೆ

ಮೊದಲಿನ ಸ್ತ್ರೀ ಸಿಕ್ಕಿನವೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ ೫,೦೦೦ ಹಾಸನ್ ಟೋಪಿ ಹಾಕುಯುವ ಸುಪೀರಿಯರ್ ಫ್ಲಾನಲ್ ದಾರ

೧೦ ಟೋಪಿಯಾಗುವ ಫ್ಲಾನಲ್ ಬಂಡಲ್ ೧ಕ್ಕೆ ೩ ೦ ೧ ಟೋಪಿಯಾಗುವ ಫ್ಲಾನಲ್ ದರ ೮ ೦ ಹಾಕ್ ಟೋಪಿ ಹಾಕುವ ಕೊಕ್ಕೆ ಸೆಟ್ ೧ಕ್ಕೆ ೦ ೧ ೬, ೨ ೦ ೩ ಇಂಚಿನ ದೊಡ್ಡ ಸೈಜು ಬಂಗ್ಲೆ ೧ಕ್ಕೆ ೦ ೮ ೦ ೨ ೮ ಪ್ಲೇಸು ಕಾರ್ಡು, ಪಬ್ಲಿಕ್ ಕಲರ್, ೧,೦೦೦ ಕ್ಕೆ ೧ ೨ ೦ ಸುಗಂಧ ಸೋಪು, ಭೃಂಗಾಮಲಕ ತೈಲ, ಶೀಸೆ ೧ಕ್ಕೆ ೦ ೮ ೦, ನೊಂತ್ಯಾಲ್, ಕಡಿಮೆ ಬೆಲೆಯಲ್ಲಿ ಉತ್ತಮ ಫಲವಾದ ಔಷಧ, ಡಬ್ಬಿಗೆ ೦ ೩ ೦ ೩೦೦ ಮಾತ್ರೆಗಳು ಇರುವ ಸೆಟ್, ಸೋಪು ಪರಿಮಳದ ತಾಂಬೂಲಮಿಶ್ರಸು, ಪ್ಯಾಕೆಟ್ ೧ಕ್ಕೆ ೦ ೩ ೦ ಲೇಸ್ ಕೈವಸ್ತ್ರಗಳು (ಚಂದನಾದದ್ದು) ೧ಕ್ಕೆ ೦ ೨ ೦, ರಾಸ್ಕೋಪ್ ಸ್ಟ್ಯಾಯಿಲ್ ವಾಚು ೧ಕ್ಕೆ ೪ ೦ ೦, ಕೊಟ್ಟಿನ ಬಾಚಣಿಗೆಗಳು, ದೊಡ್ಡ ಸೈಜು ಡಜನ್ ೧ಕ್ಕೆ ೧೧ ೧ ೦ ಗಜಕರ್ಣದ ಮುಲಾಮು ಡಬ್ಬಿ ೧ಕ್ಕೆ ೦ ೬ ೦, ೨೬ ಇಂಗ್ಲೀಷು ಅಕ್ಷರಗಳಿರುವ ಪೆಟ್ಟಿಗೆ ೧ಕ್ಕೆ ೦ ೮ ೦, ಪರಿಮಳ ನಶ್ಯದಪುಡಿ ಸೀಸೆ ೧ಕ್ಕೆ ೦ ೨ ೦, ೮ ಬಿಡಿಗಳಿರುವ ಪೆರುವಾ ಫ್ಲಾನಲ್ ದಾರದ ಬಂಡಲ್ ೧ಕ್ಕೆ ೩ ೦ ೦ ಪೆರುವಾ ಫ್ಲಾನಲ್ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ ೧೨ ೦ ೦, ಲೋಕ ಪ್ರಸಿದ್ಧವಾದ ಬೇಳಿನ ಔಷಧ ಸೀಸೆ ೧ಕ್ಕೆ ೦ ೬ ೦ ಕ್ಯಾಟಲಾಗನ್ನು ಕೇಳಿದವರಿಗೆ ಕಳುಹಿಸುತ್ತೇವೆ ಪರಸ್ಥಳದವರಿಗೆ ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ —ಡಿ. ಮೋಲನ್ ಮಾರ್ಟ್, ಮಂಗಳೂರು

ಧರ್ಮಪದ

32)

ಎಂಬ ಕನ್ನಡ ಪುಸ್ತಕವು ನಮ್ಮ ಇಂಡಿಯಾ ದೇಶದಲ್ಲಿ ೨,೦೦೦ ವರ್ಷಗಳಿಂದೀಚೆಗೆ ಯಾವಾಗಲೂ ಗೋಚರಿಸಲಿಲ್ಲವು ಇದು ಚೈನಾ ಕೋರಿಯಾ ಜಪಾನ್, ಅಸಾಂ, ಸೈಯಾಂ, ಬರ್ಮ, ಸಿಲೋನ್ (ಲಂಕಾ) ಮುಂತಾದ ದೇಶಗಳ ಜನಗಳಿಂದ, ಮಹಾ ಪ್ರಮಾಣ ಗ್ರಂಥವೆಂದು ಪೂಜಿಸಲ್ಪಟ್ಟಿದೆ ಹಿಂದುಗಳಿಗೆ ಮುಖ್ಯ ಪ್ರಮಾಣಗಳಾದ ವೇದಗಳು, ೧೯ ಉಪನಿಷತ್ತುಗಳು, ೧೬ ವೇದಾಂತ ಗ್ರಂಥಗಳು, ೪ ಧರ್ಮ ಶಾಸ್ತ್ರಗಳು, ಮುಂತಾದ ಗ್ರಂಥಗಳಿಂದಲೂ, ೧೨ ಬೌದ್ಧ ಗ್ರಂಥಗಳಿಂದಲೂ ಸಮಾನವಾದ ವಾಕ್ಯಗಳನ್ನು ಗ್ರಂಥಕರ್ತರು ಈ ಗ್ರಂಥಕ್ಕೆ ಉದ್ಧರಿಸಿ ತೋರಿಸಿರುವರು ಇದಕ್ಕೆ ಮ|| ಎಂ ಶಾಮರಾವ್ ಎಂ ಎ ಯವರು ಇಂಗ್ಲೀಷಿನಲ್ಲಿ ಸ್ತುತಿವಾದ ಉಪೋದ್ಘಾತವನ್ನು ಬರೆದಿರುವರು ಮತ್ತು ನಮ್ಮ ಮೈಸೂರು ಶ್ರೀಮನ್ಮಹಾರಾಜರವರ ಅಪ್ಪಣೆಯ ಪ್ರಕಾರ ಅವರ ನಾಮಾಂಕಿತದಿಂದ ಪ್ರಚುರ ಪಡಿಸಲ್ಪಟ್ಟಿದೆ ಇದರಲ್ಲಿ ಜಪಾನ್ ದೇಶದಲ್ಲಿರುವ ಲೋಕೋತ್ತರ ಯೋಗ್ಯವಾದ ಬುದ್ಧದೇವನ ಕಂಚಿನ ಪ್ರತಿಮೆಯ ಭಾವಚಿತ್ರವೂ, ಮೈಸೂರು ಶ್ರೀಮನ್ಮಹಾರಾಜರವರ ಜಿ ಸಿ ಎಸ್ ಐ ಎಂಬ ಬಿರುದಿನಿಂದ ಕೂಡಿದ ಭಾವಚಿತ್ರವೂ ಮತ್ತು ಗ್ರಂಥಕರ್ತರ ಭಾವಚಿತ್ರವೂ ಸಹ ಇರುವುವು ಈ ಪುಸ್ತಕದ ಅನೇಕ ವಿಧವಾದ ಓನ್ನತ್ಯಗಳು ಪುಸ್ತಕದಿಂದಲೇ ವ್ಯಕ್ತವಾಗುವುವು ಇದರ ಕ್ರಯ —ವಸ್ತ್ರಬದ್ಧನವು, ವಿ ಪಿ ಪಿ ಸಹಿತ ರೂ ೧—೩—೦, ಸುಂದರವಾದ ದಪ್ಪ ಕಾಗದದ ಬೈಂಡಿನದು ೨—೧೪—೦ ನಮ್ಮ ವಿಳಾಸ —

ಮ|| ಕೆ ಪಿ. ಪುಟ್ಟಪ್ಪ, ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೈನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



1 13

ಕೆಳ ಹೊಟ್ಟೆಯ ನೋವು, ಬಹು ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತೆರದ ಶೂಲೆಗಳು—ಈ ರೋಗಗಳನ್ನೆಲ್ಲಾ ನಾಶಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು — ಸಣ್ಣ ಶೀಸೆಗೆ ೧ ರೂಪಾಯಿ — ದೊಡ್ಡ ಶೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 12

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕ ಬಟ್ಟೆಗಳು ನಾಡಿನವರಿಗಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವುದಿಲ್ಲ ಹಿಂದೆ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾಗುವುವುಗಳು ಬಡವರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ ಈ ಬಟ್ಟೆಗಳ ಶ್ರೇಷ್ಠತೆಯು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೧೪ ಆಣೆ ವರೆಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತವೆ ಶಾಲುಗಳು, ಹಾಸಿಗೆಯ ಟೋಪಿಗಳು, ಮಕ್ಕಳ ಟೋಪಿಗಳು, ಹೆಂಗಸರ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,
ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು

“ವಿಕಟಪ್ರತಾಪ.”

ಸಚಿತ್ರವೂ, ವಿಚಿತ್ರವೂ ಆದ ಮಾಸಪತ್ರಿಕೆ

ಸಾರಾಂಶ — ಓದುವರಿಂದ ಉಕ್ಕಿ ಮರುಗುಂಟಾಗುವ ಹಾಸ್ಯ ಸಂಗತಿಗಳು, ಆಶ್ಚರ್ಯಕರ ವಿಲಾಸ ಸೇವಕರುಗಳ ಸ್ವಲಾಪ ಕಾಮಿನಿಯರ ಸಲ್ಲಾಪ ರಸಿಕರ ಆಲಾಪ, ಜಾರರ ಅಪಲಾಪ, ಮಾನಿನಿಗಳ ಕೋಪ, ಈ ಕಲಾಪಗಳ ಚಿತ್ರಗಳಿಂದೊಪ್ಪುತ್ತಿರುವುದು ನಮ್ಮ ವಿಕಟಪ್ರತಾಪ

ಹಾಸ್ಯರಸದಿಂದ ಕೂಡಿ, ಅನೇಕ ಪ್ರೌಢವಿದ್ವಾಂಸರ ಲೇಖನಗಳಿಂದ ಪ್ರಕಾಶಿಸುವ ಈ ಪತ್ರಿಕೆಗೆ ಪ್ರತಿ ಒಂದು ಡಿಸ್ಟ್ರಿಕ್ಟ್, ತಾಲ್ಲೂಕು, ಹೋಬಳಿಗಳಲ್ಲಿಯೂ ಏಜಂಟರುಗಳು ಬೇಕಾಗಿವೆ ಏಜಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲ್ಪಡುವುದು

ಈ ವಿಕಟಪ್ರತಾಪವೆಂಬ ಮಾಸಪತ್ರಿಕೆಗೆ ಈ ಲಾಗಾಯಿತು ಒಂದು ವರುಷ ಚಂದಾದಾರರ ಗುವವರಿಗೆ ಸ್ತ್ರೀ ಪಂಚಸಾಹಸವೆಂಬ ಐದು ಜನ ಯುವತಿಯರುಗಳ ವಿನೋದವಾದ ಕಥೆಯ ಪುಸ್ತಕವನ್ನು ಬಹುಮಾನವಾಗಿ ಕೊಡಲ್ಪಡುವುದು

ವಾರ್ಷಿಕ ಚಂದಾ ಸ್ವಸ್ಥಳದವರಿಗೆ ಮತ್ತು ಪರಸ್ಥಳದವರಿಗೆ
(ಅಂಚೆವೆಚ್ಚ ಸೇರಿ) ರೂ ೧—೦—೦

ಚಂದಾ ಹಣ ಮುಂಗಡವಾಗಿ ಬಂದ ಹೊರತು ಪತ್ರಿಕೆಯನ್ನು ಯಾರಿಗೂ ಕಳುಹಿಸುವದಿಲ್ಲ

38 1

ನಮ್ಮ ವಿಳಾಸ —'ವಿಕಟಪ್ರತಾಪ' ಆಫೀಸ್
೧೩೮ ಬಳೇ ಪೇಟೆ ಬೆಂಗಳೂರು ಸಿಟಿ

ಮಕ್ಕಳ ಹಿತಕಾರಿ

ಎಂದು

SCOTT'S EMULSION 6-13

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧಕ್ಕೆ ಕೊಟ್ಟಂತಹ ತಂದೆತಾಯಿಗಳು ಸಂತುಷ್ಟರಾದರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವಿಸುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯವಾಗಿಸುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್ ಇಂಗ್ಲೆಂಡ್.

ಸಂಜೀವಿನೀ ಔಷಧಾಲಯ, ಮೈಸೂರು.

2J 8

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಬಾಲನೆ, ನಿಯಶ್ವಾಸ, ಸ್ವಪ್ನಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಕ್ಷಯ, ಕ್ಷಯರೋಗಗಳೂ, ಪಳೇಜ್ವರ, ಕೈಕತ್ತು, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬದ್ಧ, ಬುದ್ಧಿಭ್ರಮಣೆ, ಮಂಕುತನ, ಉರಿವ ಕಣ್ಣು, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹುಟ್ಟಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ ಇಂದ್ರಿಯ ಪಟುತ್ವಗಳನ್ನು ವೃದ್ಧಿಪಡಿಸುವುದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಂತ್ರ —ನಾನಾ ಬಗೆ ಜ್ವರಗಳೂ, ಪ್ಲೇಗು ಉಷ್ಣವಾಯು ಪ್ರಕೋಪ, ಇವುಗಳಿಗೆ ಪಾಷಾಣ ರಹಿತ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದರು ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೆಟ್ಟಿಗೆ ೧ಕ್ಕೆ ೧ ರೂಪಾಯಿ

ಕಾಲಕೂಟವಟಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ನಯನಾಮೃತ ಬಿಂದು —ಉರಿಗಣ್ಣು, ಕೆಂಗಣ್ಣು, ಪಾಚಗಣ್ಣು, ದೃಷ್ಟಿದೋಷ, ಪೊರೆ, ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಶಕ್ತಿಯನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಿ ತರಾವರಿ ಪತ್ರಗಳೂ, ಗ ದವಿಟ್ಟ ಲಿಷ್ಟುಗಳಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳು ಬೇಕು ಅರ್ಜಿಗೆ ಜವಾಬ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ
ಪ್ರೊಪ್ರೈಟರ್

೧ನೇ ಸಂಪುಟ ಕನ್ನಡ ಕಥಾಸರಿತ್ಸಾಗರ ಪ್ರಕಟವಾಯಿತು.

37 9

ನವರಸಯುಕ್ತವಾಗಿ ಮಹಾ ಕವಿ ಸೋಮದೇವನಿಂದ ಸಂಸ್ಕೃತದಲ್ಲಿ ರಚಿಸಿ ಈಗ ಹೊಸ ಕನ್ನಡದಲ್ಲಿ ಸೊರಬ ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮ|| ರಾ|| ಎನ್ ಶ್ರೀಕಂಠಯ್ಯ ಬಿ ಎ ಯವರಿಂದ ರಚಿತವಾಗಿ ಮ ರಾ ಛಾಪಿ ಸಂಪಂಗಿರಾಮಯ್ಯನವರಿಂದ ಪ್ರಕಟಿಸಿದ್ದು ಕ್ರಯ ೧ ೨ ೦, ೨—೩ನೇ ಸಂಪುಟಗಳು ಜಾಗ್ರತೆ ವಿಕರಿಗೆ ಸಿದ್ಧವಾಗುತ್ತ

ಗೀತಾಮೃತ ಮಹೋದಧಿ —ಗೀತಾಮೃತ ಪಾನವಾದಿ ಪದ್ಯರಾಗವೇ ಕೆಂಬ ಮಹಾಶಯರಿಗೆಲ್ಲಾ ಕೃಷ್ಣಾರ್ಜುನರ ಸಂವಾದವನ್ನು ಸುಲಭವಾಗಿ ತಿಳಿಯುವಂತೆ ತಿಳಿಗನ್ನಡದಲ್ಲಿ ಬರೆದಿ ಅತ್ಯಂತೋಪಕಾರಿ ಕ್ರಯ ೦ ೮ ಆಣೆ

ಪ್ರಶ್ನೋತ್ತರ ಲೇಖ್ಯಬೋಧಿನಿ ಸಾಲ್ಯಾಣೆ, ಪುಟಗಳು ೩೬೦ ಕ್ರಯ ೧ ೪ ೦ ಆಯಾ ಮತಪದ್ಧತಿಯನ್ನು ಅನುಸರಿಸಿ ಸರ್ವರಿಗೂ ಬರೆಯುವ ಮರ್ಯಾದೆ ಮತ್ತು ಪತ್ರಿಕೆಗಳು, ರೀಷ್ಟ್ರ ದಸ್ತಾವೇಜು, ವರ್ಗವಾಗಿ ಲ್ಯಾಂಡ್ ರೆವಿನ್ಯೂ ರೂಲ್ಸು ಪ್ರಕಾರ ರೈತರಿಗೆ ರಿಯಾಯಿತಿ ದೊರೆಯುವ ಬಗೆಬಗೆಯ ಅರ್ಜಿಗಳು, ಸಿವಿಲ್ ದಾವಾ, ಪ್ರತಿವಾದಿಯ ಎದುರುತ್ತರ, ಎಬಾರ್ಡ್ ಡಿಕ್ರಿ, ಜಡ್ಜ್‌ಮೆಂಟ್, ದಾಯಭಾಗ ಕ್ರಮಗಳು, ಪೋಲೀಸಿನವರು ಮತ್ತು ಕೋರ್ಟುಗಳಿಗೆ ಇರುವ ಅಧಿಕಾರದ ಪರಿಮಿತಿ, ಇಂಜಿನಿಯರ್, ಫಾರೆಸ್ಟ್ ಸಾನಿಟರಿ, ಎಕ್ಸೈಜು, ವಿದ್ಯಾಭ್ಯಾಸ, ಮ್ಯುನಿಸಿಪಲ್ ಈ ಇಲಾಖೆಗಳ ಬಗೆಬಗೆ ಸಂಗತಿಗಳು, ಆಧಾರ, ಯೋಗ್ಯ, ಕ್ರಯ, ದಾನ, ಪಾಲು, ಮರಣಶಾಸನ, ಪಾರೀಖತ್ತು, ಮೊದಲಾದುವುಗಳನ್ನು ಬರೆಯುವ ವಿಧಿ, ಅನುಭವ, ಸಿವಿಲ್ ಪ್ರೊಸೀಜರ್ ಕೋಡು, ಇಂಡಿಯನ್ ಪೆನಲ್ ಕೋಡು, ಹಿಂದೂ ಲಾ, ಮಹಮದೀಯ ಲಾ, ರಿಜಿಸ್ಟ್ರೇಷನ್ ಆಕ್ಟ್, ಕಂಪನೀಸ್ ಆಕ್ಟ್, ಲ್ಯಾಂಡ್ ಅಕ್ವಿಜಿಷನ್, ಪೊಲೀಸ್ ಅರಸು ಆಕ್ಟು, ಎಲ್ಲಾ ವರ್ತಕರಿಗೂ ಉಪಯೋಗವಾದ ಲೇವಾದೇವಿ, ವಾರ್ಷಿಕ ಲೆಕ್ಕ, ಇವುಗಳನ್ನು ಬರೆಯುವ ರೀತಿ ಮೊದಲಾದವುಗಳ ಸಾರಾಂಶವನ್ನೆಲ್ಲಾ ವಿವರಿಸಿದೆ ವಿಳಾಸ —

ಮ್ಯಾನೇಜರ್, ಕರ್ನಾಟಕ ಪುಸ್ತಕಶಾಲಾ, ಲಕ್ಕೂರ್ ಪೋಸ್ಟ್ (ಮಾಲೂರ್, ಕೋಲಾರ).

ವೃತ್ತಾಂತ ಪತ್ರಿಕೆ.

೧೯೦೯ ನೇ ಇಸವಿ ಏಪ್ರಿಲ್ ತಾ| ೧ ನೇ ಗುರುವಾರ

ಮೈಸೂರು ಸಂಸ್ಥಾನದ ಮ್ಯುನಿಸಿಪಾಲಿಟಿಗಳೂ ಲೋಕಲ್ ಬೋರ್ಡುಗಳೂ

ಮೈಸೂರು ಗವರ್ನ್‌ಮೆಂಟಿನವರು ಈ ಸಂಸ್ಥಾನದ ಮ್ಯುನಿಸಿಪಲ್ ಮತ್ತು ಲೋಕಲ್ ಫಂಡ್ ಬೋರ್ಡುಗಳ ವಾರ್ಷಿಕ ರಿಪೋರ್ಟನ್ನು ಈಗ ತಾನೇ ಪ್ರಕಟಿಸಿರುತ್ತಾರೆ. ಇದರಿಂದ ಈ ಸೀಮೆಯಲ್ಲಿ ೮೮ ಮ್ಯುನಿಸಿಪಾಲಿಟಿಗಳು ಇರುತ್ತವೆಂದೂ, ಈ ಪೈಕಿ ಎರಡು ಸ್ಥಳಗಳಲ್ಲಿ ೧೯೦೭ ನೇ ಇಸವಿಯ ಏಳನೇ ಕಾನೂನು ಜಾರಿಯಲ್ಲಿದೆ ಎಂದೂ ತಿಳಿದು ಬರುತ್ತದೆ. ಇನ್ನು ಮುಂದೆ ಇನ್ನೂ ಹದಿನೈದು ಸ್ಥಳಗಳಲ್ಲಿ ಈ ಕಾನೂನನ್ನು ಜಾರಿಗೆ ತರುವವರಾಗಿದಾರೆ. ಈ ಮ್ಯುನಿಸಿಪಾಲಿಟಿಗಳಲ್ಲಿ ಒಟ್ಟು ೮೮೭ ಮಂದಿ ಮೆಂಬರುಗಳಿರುತ್ತಾರೆ. ಈ ಪೈಕಿ ೩೧೫ ಮಂದಿ ಸರ್ಕಾರಿ ನೌಕರರು, ೫೫೧ ಮಂದಿ ಗವರ್ನ್‌ಮೆಂಟಿನಿಂದ ನೇಮಕವಾದವರು, ೨೧ ಜನರು ಪ್ರಜೆಗಳಿಂದ ಚುನಾವಣೆಯಾದವರು. ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ಮಾತ್ರ ಸರ್ಕಾರದವರು ಈ ಚುನಾವಣೆಯ ಹಕ್ಕನ್ನು ಪ್ರಜೆಗಳಿಗೆ ವಹಿಸಿರುತ್ತಾರೆ.

ಈ ಸಂಘಗಳು ಅನೇಕ ವೇಳೆ ಸಭೆ ಸೇರಿ ವಿಷಯಗಳನ್ನು ಚರ್ಚೆ ಮಾಡಿರುತ್ತವೆ. ಆದರೆ ೧೨ ಮ್ಯುನಿಸಿಪಾಲಿಟಿಗಳಲ್ಲಿ ಕಂದಾಯಗಳನ್ನು ತೃಪ್ತಿಕರವಾಗಿ ವಸೂಲ್ಮಾಡಲಿಲ್ಲವೆಂದೂ, ಮುತುವರ್ಜಿ ವಹಿಸಿ ವಸೂಲ್ಮಾಡಬೇಕಾಗಿದೆ ಎಂದೂ ಸರ್ಕಾರದವರು ಆಕ್ಷೇಪಣೆ ಮಾಡಿರುವರು.

“ಮ್ಯುನಿಸಿಪಲ್ ವಿಚಾರಗಳಲ್ಲಿ ಖಾಸಗಿ (ಸಾಹುಕಾರಿ) ಮೆಂಬರುಗಳು ಎಂದಿನಂತೆ ಮುತುವರ್ಜಿ ವಹಿಸಿ ಕೆಲಸಮಾಡುತ್ತಾ ಬಂದಿರುವುದು ಗವರ್ನ್‌ಮೆಂಟಿಗೆ ಸಂತೋಷವನ್ನುಂಟುಮಾಡಿದೆ. ಮೆಂಬರುಗಳು ತಾಳ್ಮೆಯಿಂದಲೂ ಗಂಭೀರವಾಗಿಯೂ ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದಾರೆ. ಅವರು ಇನ್ನೂ ಹೆಚ್ಚು ಉತ್ಸಾಹವನ್ನು ಪ್ರಕಾಶಪಡಿಸಬಹುದಾಗಿದೆ” ಎಂಬದಾಗಿ ಗವರ್ನ್‌ಮೆಂಟಿನವರು ಹೇಳಿರುವುದನ್ನು ಓದಿ ನಾವು ತುಂಬಾ ಸಂತೋಷಪಡುವೆವು.

ಸಂಸ್ಥಾನದಾಖಲೆ ಡಿಸ್ಟ್ರಿಕ್ಟ್ ಬೋರ್ಡುಗಳೂ, ೭೭ ತಾಲ್ಲೂಕ್ ಬೋರ್ಡುಗಳೂ, ೧೩೫ ಯೂನಿಯನ್ ಪಂಚಾಯತಿಗಳೂ ಇರುವವು. ಇದಲ್ಲದೆ ಕೋಲಾರ್ ಚಿನ್ನದ ಗಣಿಗಳ ಆರೋಗ್ಯವಿಚಾರವನ್ನು ನೋಡಿಕೊಳ್ಳುವುದಕ್ಕೆ ಒಂದು ಪ್ರತ್ಯೇಕವಾದ ಸ್ಯಾನಿಟರಿ ಬೋರ್ಡು ಇರುವುದು. ಇವುಗಳಲ್ಲೆಲ್ಲಾ ಒಟ್ಟು ೨,೩೯೦ ಮೆಂಬರುಗಳು ಇದ್ದುಕೊಂಡು, ಸ್ಥಳೀಯ ಕಾರ್ಯಗಳನ್ನು ಸ್ವತಂತ್ರಿಸಿ ನಡಿಸುತ್ತಾ ಬಂದಿದಾರೆ. ಈ ಮೆಂಬರುಗಳಲ್ಲಿ ೬೭೯ ಮಂದಿ ಸರ್ಕಾರದ ನೌಕರರಾಗಿಯೂ, ೧,೩೩೧ ಮಂದಿ ಗವರ್ನ್‌ಮೆಂಟಿನಿಂದ ನೇಮಿಸಲ್ಪಟ್ಟವರಾಗಿಯೂ, ೩೮೦ ಮಂದಿ ಪ್ರಜೆಗಳಿಂದ ಚುನಾಯಿಸಲ್ಪಟ್ಟವರಾಗಿಯೂ ಇರುತ್ತಾರೆ. ಈ ಖಾಸಗಿ ಮೆಂಬರುಗಳು ತಮಗೆ ವಹಿಸಲ್ಪಟ್ಟಿರುವ ಕಾರುಬಾರುಗಳನ್ನು ಉತ್ಸಾಹದಿಂದಲೂ ಮುತುವರ್ಜಿಯಾಗಿಯೂ ನೆರವೇರಿಸುತ್ತಾ ಬಂದಿರುವುದು ಗವರ್ನ್‌ಮೆಂಟಿನವರಿಗೆ ತೃಪ್ತಿಯನ್ನುಂಟುಮಾಡಿದೆ.

ಮ್ಯುನಿಸಿಪಾಲಿಟಿಗಳೂ ಬೋರ್ಡುಗಳೂ ಸ್ಥಳೀಯ ಆರೋಗ್ಯ ವಿಚಾರಕ್ಕೂ ನೀರಿನ ಸರಬರಾಯಿಗೂ ತಕ್ಕಮಟ್ಟಿಗೆ ಗಮನಕೊಡುತ್ತಾ ಬಂದಿರುತ್ತವೆ. ಆದರೂ ಅನೇಕಾನೇಕ ಸ್ಥಳಗಳಲ್ಲಿ ಆರೋಗ್ಯ ವಿಚಾರವು ಕ್ರಮಪಟ್ಟಿರುವುದಿಲ್ಲ, ಒಳ್ಳೆಯ ಕುಡಿಯುವ ನೀರು ದೊರಕುವುದಿಲ್ಲ. ಈ ಲೋಪಗಳನ್ನು ಹೋಗಲಾಡಿಸುವುದಕ್ಕೆ ಈ ಸಂಘಗಳೂ ಸರ್ಕಾರದವರೂ ಇನ್ನೂ ಹೆಚ್ಚಾದ ಗಮನವನ್ನೂ ವಿಶೇಷ ದ್ರವ್ಯವನ್ನೂ ವಿನಿಯೋಗಿಸಬೇಕಾಗಿದೆ ಎನ್ನುವುದಕ್ಕೆ ಸಂಶಯವಿಲ್ಲ. ಒಂದೆರಡು ವಿಚಾರಗಳಿಗೆ ಸರ್ಕಾರದವರು ಗಮನ ಕೊಟ್ಟರುತ್ತಾರಾದಾಗ್ಯೂ ಇದು ಸಾಲದೆಂದೂ, ಇನ್ನೂ ಈ ಭಾಗದಲ್ಲಿ ಹೆಚ್ಚು ಮುತುವರ್ಜಿಯನ್ನು ಪ್ರಕಾಶಪಡಿಸಬೇಕಾಗಿದೆ ಎಂದೂ ನಮಗೆ ತೋರುತ್ತಿದೆ.

ಜನನ ಮರಣಗಳ ವಿಷಯದಲ್ಲಿ ಗವರ್ನ್‌ಮೆಂಟಿನವರೂ, ಲೋಕಲ್ ಬೋರ್ಡುಗಳೂ, ಮ್ಯುನಿಸಿಪಾಲಿಟಿಗಳೂ ವಿಶೇಷವಾದ ಶ್ರದ್ಧೆಯನ್ನೂ ಮುತುವರ್ಜಿಯನ್ನೂ ವಹಿಸಬೇಕಾಗಿರುವುದು. ಸರ್ಕಾರದವರು ಪ್ರಕಟಿಸಿರುವ ಲೆಕ್ಕಗಳು ಯಥಾರ್ಥವಾದವುಗಳಾಗಿರುವ ಪಕ್ಷದಲ್ಲಿ ಸಂಸ್ಥಾನದ ಪ್ರಜಾ ಸಂಖ್ಯೆಯು ಬಹಳ ಮಟ್ಟಿಗೆ ಕಡಿಮೆಯಾಗುತ್ತಿದೆ ಎಂದು ಕಾಣುತ್ತಿದೆ. ಯಾಕೆಂದರೆ ಜನನ ಸಂಖ್ಯೆಗಿಂತಲೂ ಮರಣ ಸಂಖ್ಯೆಯೇ ಹೆಚ್ಚಾಗಿರುತ್ತದೆ. ಒಂದು ವೇಳೆ ಆ ಲೆಕ್ಕಗಳು ನಿಷ್ಕೃಷ್ಟವಾಗಿಲ್ಲವಾದಲ್ಲಿ ಅವು ಸರಿಯಾಗಿಲ್ಲವೆಂದು ತಿಳಿಸಿ, ಖರಾರಾದ ಸಂಖ್ಯೆಯನ್ನು ಗೊತ್ತುಮಾಡುವ ವಿಷಯದಲ್ಲಿ ಖಂಡಿತವಾದ ಏರ್ಪಾಡುಗಳನ್ನು ಮಾಡಬೇಕು. ಮ್ಯುನಿಸಿಪಾಲಿಟಿಗಳು ಏರ್ಪಾಡಾಗಿರುವ ಪಟ್ಟಣ ಗ್ರಾಮಗಳಲ್ಲಿ ಜನನ ೧೩,೬೭೭, ಮರಣ ೧೫,೩೯೦ ಎಂದೂ, ಲೋಕಲ್ ಬೋರ್ಡ್ ಮುಂತಾದವುಗಳಲ್ಲಿ ಜನನ ೮೭,೬೭೭, ಮರಣ ೯೧,೦೫೭ ಎಂದೂ ಮೇಲ್ಕಂಡ ರಿಪೋರ್ಟಿನಿಂದ ವೇದ್ಯವಾಗುತ್ತದೆ. ಈ ಸಂಖ್ಯೆಗಳು ತಿಳಿಸುವಂತೆ ಜನನಕ್ಕಿಂತ ಮರಣ ಸಂಖ್ಯೆಯೇ ಹೆಚ್ಚಾಗಿರುವುದಾದರೆ ಪ್ರಜಾ ಸಂಖ್ಯೆಯು ಬಹು ಬೇಗನೆ ಕಡಮೆಯಾಗುತ್ತಿರುವುದು. ಹೀಗೆ ಎಷ್ಟು ಮಾತ್ರಕ್ಕೂ ಇರಬಾರದೆಂದು ನಾವು ಯೋಚಿಸುತ್ತೇವೆ. ಆದಕಾರಣ ಗವರ್ನ್‌ಮೆಂಟಿನವರು ಈ ರೀತಿ ಪ್ರಜೆಗಳಲ್ಲಿ ತಪ್ಪು ತಿಳುವಳಿಕೆಯನ್ನುಂಟುಮಾಡುವಂಥಾ ಸಂಗತಿಗಳನ್ನು ಪ್ರಕಟಮಾಡುವುದು ತರವಲ್ಲ.

ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳ ಮೆಂಬರುಗಳು ಪ್ರಜಾ ಹಿತಚಿಂತನೆಯುಳ್ಳ ಕಾರ್ಯಗಳನ್ನು ನಡಿಸುವುದಕ್ಕೆ ಇನ್ನೂ ತುಂಬಾ ಅವಕಾಶವುಂಟೆನ್ನುವುದಕ್ಕೆ ಸಂಶಯವಿಲ್ಲ. ಆದಕಾರಣ ಅವರು ಪ್ರಜೆಗಳ ಕ್ಷೇಮಕ್ಕೂ ದೇಶೋನ್ನತಿಗೂ ಇನ್ನೂ ವಿಶೇಷವಾಗಿ ತಮ್ಮ ಶಕ್ತಿ ಸಾಮರ್ಥ್ಯಾದಿಗಳನ್ನು ವಿನಿಯೋಗಿಸಲು ಸಾಹಸಪಟ್ಟಾರೆಂದು ನಂಬಿ ಹಾರೈಸುತ್ತೇವೆ.

ಮೆ|| ಇ. ಮೆಕಾನಕಿ, ಐ ಸಿ ಎಸ್. ಯವರು.

ನಮ್ಮ ಮಹಾರಾಜರವರಿಗೆ ಪಟ್ಟಾಭಿಷೇಕವಾದಾರಭ್ಯ ಅಂದರೆ, ಸುಮಾರು ಏಳು ವರುಷಗಳಿಂದ ಮೆ|| ಇ. ಮೆಕಾನಕಿ, ಐ ಸಿ ಎಸ್. ಯವರು ಅವರ ಪ್ರೈವೆಟ್ ಸೆಕ್ರೆಟರಿಗಳಾಗಿದ್ದರು. ಇವರು ಈಗ ಮೈಸೂರು ಸಂಸ್ಥಾನವನ್ನು ಬಿಟ್ಟುಹೋಗುವ ವಿಷಯದಲ್ಲಿ ಸಾಮಾನ್ಯವಾಗಿ ಎಲ್ಲರೂ ವ್ಯಸನಪಡುವವರಾಗಿದಾರೆ. ಅವರಿಗೆ ಈ ಸಂಸ್ಥಾನದ ಕಾರುಬಾರುಗಳು ಬಹಳ ಚೆನ್ನಾಗಿ ಅನುಭವಕ್ಕೆ ಬಂದಿರುತ್ತವೆ. ಅವರು ಇನ್ನೂ ಕೆಲವು ಕಾಲ ಈ ಸೀಮೆಯಲ್ಲಿಯೇ ಇರುವುದಕ್ಕೆ ಒಪ್ಪಿಕೊಂಡಿದ್ದರೆ ಚೆನ್ನಾಗಿತ್ತೆಂದು ಬಹುಜನರು ಪಡುವ ಅಭಿಪ್ರಾಯವನ್ನು ಇಲ್ಲಿ ಸೂಚಿಸುವೆವು.

ಮೆ|| ಮೆಕಾನಕಿಯವರಿಗೆ ಸರ್ಕಾರದಲ್ಲಿ ಅಷ್ಟೇನೂ ವಿಶೇಷವಾದ ಅಧಿಕಾರವಿರಲಿಲ್ಲ; ಆದರೂ ಅವರ ಸಾಮರ್ಥ್ಯದ ದೆಸೆಯಿಂದ ತುಂಬಾ ಪ್ರಯೋಜನವಾಗಿರುತ್ತದೆ. ಅವರಿಗೂ ಶ್ರೀಮನ್ಮಹಾರಾಜರವರಿಗೂ ಇದ್ದ ಸಂಬಂಧವು ಗೋಪ್ಯವಾದದ್ದು, ಆ ವಿಚಾರಗಳು ಪ್ರಜೆಗಳು ತಿಳಿಯತಕ್ಕವುಗಳೆಂದಾಗಲಿ, ಬಹಿರಂಗವಾದ ಚರ್ಚೆಗೆ ಬರತಕ್ಕವುಗಳೆಂದಾಗಲಿ ಹೇಳಕೂಡದು. ಆದರೆ ಮೆ|| ಮೆಕಾನಕಿಯವರು ಶ್ರೀಮನ್ಮಹಾರಾಜರವರಿಗೂ ಅವರ ಪ್ರಜೆಗಳಿಗೂ ಮಧ್ಯವರ್ತಿಗಳಾಗಿದ್ದುಕೊಂಡು ಕಾರ್ಯಭಾಗಗಳನ್ನು ನಡಿಸಿ ಈ ಸಂಸ್ಥಾನದ ಜನರೊಳಗೆ ಒಳ್ಳೆಯ ಹೆಸರುವಾಸಿಯನ್ನು ಸಂಪಾದಿಸಿಕೊಂಡಿರುತ್ತಾರೆಂಬುವುದಕ್ಕೆ ಏನೂ ಸಂಶಯವಿಲ್ಲ.

ಯಥಾರ್ಥವಾದ ಕಷ್ಟನಷ್ಟಗಳು ಉಂಟಾಗಿವೆ ಎಂದು ತಿಳಿದು ಬಂದ ಸಂದರ್ಭಗಳಲ್ಲೆಲ್ಲಾ ಮೆ|| ಮೆಕಾನಕಿಯವರು ತುಂಬಾ ಸುಲಭಸಾಧ್ಯರಾಗಿದ್ದುಕೊಂಡು ಸಹಾಯ ಮಾಡಿರುತ್ತಾರೆ. ವ್ಯಥೆಪಡುವವರನ್ನು ನೋಡಿ ಅವರು ಮನಸ್ಸು ತಡೆಯಲಾರದೆ ಬಹು ಧಾರಾಳವಾಗಿ ಸಹಾಯ ಮಾಡತಕ್ಕವರು. ಅನ್ಯಾಯವಾಗಿದೆ ಎಂದು ತಿಳಿದ ಕಡೆ ಅವರು ಪ್ರವೇಶಮಾಡಿ ನ್ಯಾಯವನ್ನು ದೊರಕಿಸಿ ಕೊಟ್ಟಿದಾರೆ, ಮತ್ತು ಸತ್ಪಾತ್ರರಿಗೆ ಅವರು ಯಾವಾಗಲೂ ತಮ್ಮ ಕೈಲಾದ ಸಹಾಯವನ್ನು ಮಾಡುವರು. ಮತ್ತು ಎಲ್ಲಾ ಸಂದರ್ಭಗಳಲ್ಲೂ ಶ್ರೀಮನ್ಮಹಾರಾಜರವರ ಘನಮಾನಗಳಿಗೆ ಸ್ವಲ್ಪವೂ ಕುಂದುಕೊರತೆಗಳು ಬಾರದಂತೆ ಕಾಪಾಡಿಕೊಂಡು ಬಂದಿದಾರೆ.

ಇಂಥವರು ಈ ದೇಶವನ್ನು ಬಿಟ್ಟುಹೋಗುವ ವಿಷಯದಲ್ಲಿ ಪ್ರಜೆಗಳು ವ್ಯಸನಪಟ್ಟಿರುತ್ತಾರೆಂಬುದು ಅವರಿಗಾಗಿ ಕಳೆದ ವಾರ ರಾಜಧಾನಿಯಲ್ಲಿ ನಡೆದ ಎರಡು ಸನ್ಮಾನೋತ್ಸವಗಳಿಂದ ವೇದ್ಯವಾಗುತ್ತದೆ. ಈ ಸಂಸ್ಥಾನದಲ್ಲಿ ಇವರ ಅಧಿಕಾರದ ಅವಧಿಯು ಮುಕ್ತಾಯವಾದ ಭಾಗದಲ್ಲಿ ನಾವುಕೂಡ ವಿಷಾದಪಡುತ್ತೇವಾದರೂ ಅವರಿಗೆ ಚಿರಕಾಲ ಸುಖ ಸಂತೋಷಾದಿಗಳೂ ಅಧಿಕಾರದ ಮೇಲ್ಮೆಯೂ ಲಭಿಸುತ್ತಾ ಬರಲೆಂದು ಕುತೂಹಲಪೂರ್ವಕವಾಗಿ ಹಾರೈಸುತ್ತೇವೆ.

ಕ್ರೈಸ್ತರು ಯಾರು?

ಈ ಕೆಳಗೆ ಬರೆದಿರುವ ಲೇಖನವು ನಮಗೆ ತಲಪಿತು. ಇದನ್ನು ಛಾಪಿಸಿ, ಅದರಡಿಯಲ್ಲಿ ಪ್ರಶ್ನೆಗಳಿಗೆ ಉತ್ತರವನ್ನು ಬರೆಯುತ್ತೇವೆ.

ಅಯ್ಯಾ ಎಡಿಟರವರೇ,

ನಾನು ತಮ್ಮಗಳ ವಿಶೆಯುಳ್ಳ ಪತ್ರಿಕೆಯನ್ನು ಹೋದ ವಾರ ಓದುತ್ತಿರುವಾಗ ಅದರಲ್ಲಿ ಒಂದೆರಡು ಅನುಮಾನ ಪ್ರವಾಹ ನನ್ನ ಮನಸ್ಸಿಗೆ ಹೊಳೆದದ್ದರಿಂದ ತಾವು ಕೆಳಗೆ ಸೂಚಿಸುವ ಅನುಮಾನಗಳ ನಿವಾರಣೆಯಂ ಮಾಡುವಿರೆಂದು ನಂಬುವೆನು. ಅವುಗಳಾವುವೆಂದರೆ —

1. ಕ್ರೈಸ್ತನಾಗಬೇಕಾದರೆ ಕ್ರಿಸ್ತನ ಚರಿತ್ರೆಯನ್ನು ಓದಿ, ಅದರಂತೆ ನಡೆದುಕೊಳ್ಳಬೇಕೆಂದು ಹೇಳಿರುವಿರಿ. ಕ್ರಿಸ್ತನ ಚರಿತ್ರೆಯು ನಿಶ್ಚಯವಾಗಿ ಕ್ರಿಸ್ತನ ಶಿಷ್ಯರು ಬರೆದರೋ?

2. ಹಾಗೆ ಬರೆದ ಪುಸ್ತಕಗಳನ್ನು ಶೋಧಿಸುವಾಗ ಕ್ರಿಸ್ತನ ಜೀವನ ಚರಿತ್ರೆಯಲ್ಲೀ ಒಂದರಸ್ಕೊಂದು ಸಮನೊಂದುವವೇ? ಹಾಗೆ ಹೊಂದದೆ ಹೋದ ಪಕ್ಷದಲ್ಲಿ ಯಾವುದು ತಾನೇ ಕ್ರಿಸ್ತನ ಬೋಧೆಯೆಂದು ನಂಬಿ ನಡೆಯಬೇಕು?

3. ಕ್ರಿಸ್ತನ ನಡತೆಯನ್ನು ಮೇಲ್ಪಂಕ್ತಿಯಾಗಿಟ್ಟು ನಡೆದುಕೊಳ್ಳಿರಿ ಎಂದು ಕ್ರೈಸ್ತರಿಗೆ ಸೂಚಿಸಿರುವಿರಿ. ಆದರೆ ಕ್ರಿಸ್ತನ ನಡತೆಯು ಹಲವು ವೇಳೆ ಸನ್ಮಾರ್ಗವನ್ನೂ, ಸದ್ಧರ್ಮವನ್ನೂ ಸರಿಯಾಗಿ ಬೋಧಿಸುವುದಿಲ್ಲವೆನ್ನುವದಕ್ಕೆ ನಾಲ್ಕು ಪುಸ್ತಕಗಳೇ ಆಧಾರವಾಗಿರುತ್ತವೆ. ಇದು ಹೀಗೆ ಮೇಲ್ಕಂಡ ಪ್ರಶ್ನೆಗಳಿಗೆ ಸಮುತ್ತರಂಗಳನ್ನಿಯುವಿರೆಂದು ಕೋರುವ [illegible]

1. ಕ್ರಿಸ್ತನ ಶಿಷ್ಯರು ಅವನ ಚರಿತ್ರೆಯನ್ನು ನಿಶ್ಚಯವಾಗಿ ಬರೆದರು. ಅವರು ಬರೆದ ಪುಸ್ತಕಗಳನ್ನು ವಿದ್ವಾಂಸರು ಬಹು ದೀರ್ಘವಾಗಿ ಪರೀಕ್ಷಿಸಿ ಆ ಪುಸ್ತಕಗಳಲ್ಲಿ ಯೇಸು ಕ್ರಿಸ್ತನ ನಿಜ ಚರಿತ್ರೆಯು ಬರೆಯಲ್ಪಟ್ಟಿದೆ ಎಂದು ಒಪ್ಪಿಕೊಳ್ಳುತ್ತಾರೆ.

2. ಕ್ರಿಸ್ತನ ಜೀವನ ಚರಿತ್ರೆಯಲ್ಲಿ ಒಂದರಸ್ಕೊಂದು ಸಮ ಹೊಂದುತ್ತದೆ. ಕೆಲವು ಅಲ್ಪವಾದ ಸಂಗತಿಗಳಲ್ಲಿ ಸಮಹೊಂದದೆ ಇದ್ದಾಗ್ಯೂ, ಯೇಸು ಕ್ರಿಸ್ತನ ಬೋಧನೆಯು ನಿಶ್ಚಯವಾಗಿ ಸಂಶಯ ಪಡುವದಕ್ಕೆ ಏನೂ ಆಸ್ಪದವಿಲ್ಲವು.

3. ಯೇಸು ಕ್ರಿಸ್ತನ ನಡತೆಯು ಯಾವಾಗಲೂ ಸನ್ಮಾರ್ಗವನ್ನೂ ಸದ್ಧರ್ಮವನ್ನೂ ಸರಿಯಾಗಿ ಬೋಧಿಸುತ್ತದೆ. ಜನರೆಲ್ಲಾ ಯೇಸು ಕ್ರಿಸ್ತನ ನಡತೆಯನ್ನು ಅನುಸರಿಸುತ್ತಾ ಬಂದರೆ ಸುಳ್ಳು, ಮೋಸ, ವಂಚನೆ, ದ್ವೇಷ, ಹೊಟ್ಟೇಕಿಚ್ಚು, ಕೋಪ ಮೊದಲಾದ ದುರ್ಗುಣಗಳನ್ನು ತ್ಯಜಿಸಿ, ಸತ್ಯ, ನೀತಿ ಪವಿತ್ರತ್ವ, ದಯೆ ಉಪಕಾರ ಮೊದಲಾದ ಸದ್ಗುಣಗಳನ್ನು ಧರಿಸಿಕೊಳ್ಳುವರಲ್ಲವೇ? ಎಲ್ಲಾ ಜನರೂ ಯೇಸು ಕ್ರಿಸ್ತನ ಮಾದರಿಯನ್ನು ಹಿಂಬಾಲಿಸಿದರೆ, ಈ ಲೋಕಕ್ಕೆ ಕೃತಯುಗವು ಬಂದಹಾಗಾಗುತ್ತದೆ.

—ಎಡಿಟರ್.]

ಸ್ವದೇಶದ ವೃತ್ತಾಂತಗಳು.

ಬ್ರಿಟಿಷ್ ರೆಸಿಡೆಂಟರವರು ಕಳೆದ ಭಾನುವಾರದ ದಿನ ಬೊಂಬಾಯಿನಿಂದ ಪತ್ನಿ ಸಹಿತರಾಗಿ ವಾಪಸು ಬೆಂಗಳೂರಿಗೆ ದಯಮಾಡಿದರು.

ಶ್ರೀಮನ್ಮಹಾರಾಜರವರು ಪರಿವಾರ ಸಹಿತ ಮುಂದಿನ ವಾರ ರಾಜಧಾನಿಯಿಂದ ನೀಲಗಿರಿ ಬೆಟ್ಟವನ್ನು ಕುರಿತು ತೆರಳುವರೆಂದು ಕೇಳುತ್ತೇವೆ.

ಮದರಾಸ್ ಪಟ್ಟಣದಲ್ಲಿ ೧೫ ದಿನಕ್ಕೊಂದಾವರ್ತಿ ಪ್ರಕಟವಾಗುತ್ತಿದ್ದ “ವೀರಕೇಸರಿ” ಎಂಬ ಪತ್ರಿಕೆಯು ಮೊನ್ನೆ ಯುಗಾದಿ ಹಬ್ಬದಿಂದ ಪ್ರತಿ ಶನಿವಾರವೂ ಹೊರಡುತ್ತಿದೆ.

ಇಟಲಿ ರಾಜ್ಯದ ಮೆಸ್ಸೀನಾದಲ್ಲಿ ಭೂಕಂಪದ ರಿಲೀಫ್ ಫಂಡಿಗೆ ಕೋಲಾರ್ ಚಿನ್ನದ ಗಣಿಗಳ ಬೋರ್ಡಿನವರು ೧,೩೬೪ ಚಿಲ್ಲರೆ ರೂಪಾಯಿ ಚಂದಾ ಕೂಡಿಸಿ ಕಳುಹಿಸಿರುತ್ತಾರೆ.

ಈ ತಿಂಗಳು ತಾ ೨೮, ೨೯ ನೇ ಬುಧವಾರ ಗುರುವಾರಗಳಲ್ಲಿ ಒಕ್ಕಲಿಗರ ಮೂರನೇ ಮಹಾ ಸಭೆಯು ಬೆಂಗಳೂರು ಪಟ್ಟಣದಲ್ಲಿ ನಡೆಯುವಂತೆ ಆ ಸಂಘದವರು ತೀರ್ಮಾನ ಮಾಡಿಕೊಂಡಿರುತ್ತಾರೆ.

ಕಳೆದ ರವಿವಾರ ಸಾಯಂಕಾಲ ಡಾಕ್ಟರ್ ಪಲ್ಪುರವರು ರಾಜಧಾನಿಗೆ ಬಂದು, ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಮ್ಯಾಜಿಕ್ ಲ್ಯಾಂಟ್ರನ್ ಪ್ರದರ್ಶನವನ್ನು ಮಾಡಿ ಪ್ರಜೆಗಳಿಗೆ ಅನೇಕ ತರದ ಆರೋಗ್ಯ ವಿಚಾರಗಳನ್ನು ದೃಷ್ಟಾಂತಪಡಿಸಿ ತೋರಿಸಿ ವಿವರಿಸಿದರು.

ಕಳೆದ ಫೆಬ್ರುವರಿ ತಿಂಗಳಲ್ಲಿ ಮೈಸೂರು ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಸರ್ಕಾರಿ ವೈದ್ಯರು ೮೮೪ ಪ್ರಜೆಗಳಿಗೆ (೬೧೯ ಮಂದಿ ಗಂಡಸರು, ೨೬೫ ಜನ ಹೆಂಗಸರು) ಪ್ಲೇಗ್ ಚುಚ್ಚನ್ನು ಹಾಕಿರುತ್ತಾರೆ. ಮತ್ತು ಆ ತಿಂಗಳಲ್ಲಿ ತಾ ೧೫ ರ ವರೆಗೆ ೭,೧೯೮ ಹೆಗ್ಗಣ ಇಲಿಗಳನ್ನು ಕೊಲ್ಲಿಸಿರುವರು.

ಶ್ರೀಮಾನ್ ಯುವರಾಜರವರು ಕಳೆದ ಭಾನುವಾರ ಬೆಳಗ್ಗೆ ೫|| ಗಂಟೆಗೆ ಮೋಟಾರ್ ಗಾಡಿಗಳಲ್ಲಿ ರಾಜಧಾನಿಯಿಂದ ನೀಲಗಿರಿ ಬೆಟ್ಟವನ್ನು ಕುರಿತು ತೆರಳಿದರು. ಅವರ ಕೂಡ ಮೆ| ಸುಬ್ರಹ್ಮಣ್ಯರಾಜೇ ಅರಸಿನವರೂ, ಡಾಕ್ಟರ್ ಎಸ್. ರಂಗಣ್ಣನವರೂ, ಮೆ|| ಶಿಂಗ್ರಾಚಾರ್ಯರೂ ಪ್ರಯಾಣಮಾಡಿದರು.

ಮೈಸೂರು ಜನರಲ್ ಏಜೆನ್ಸಿಯ ಮೆ ಎಲ್ ರಾಮಚಂದ್ರರಾಯರು “ಮೈಸೂರ್ ಪೇಟ್ರಿಯಟ್” ಎಂಬ ವರ್ತಮಾನ ಪತ್ರಿಕೆಯನ್ನು ಪ್ರಕಟಿಸಬೇಕೆಂದು ಉದ್ದೇಶಪಟ್ಟು, ಗವರ್ನ್‌ಮೆಂಟಿನವರ ಅನುಜ್ಞೆಯನ್ನು ಪಡೆಯುವುದಕ್ಕಾಗಿ ಅರ್ಜಿ ಬರೆದದ್ದಕ್ಕೆ ಗವರ್ನ್‌ಮೆಂಟಿನವರು ಅಪ್ಪಣೆ ದೊರೆಯಲಾರದೆಂದು ಅವರಿಗೆ ಜವಾಬು ಕೊಟ್ಟಿರುತ್ತಾರೆ.

ಅರಸೀಕೆರೆಯ ಅಮಲ್ದಾರ್ ಮ ನಾರಾಯಣಸ್ವಾಮಿ ನಾಯಡುರವರು ಅಲ್ಲಿನ ಪ್ರಜಾ ಮುಖಂಡರನ್ನು ಕರೆಸಿ ಒಂದು ಸಭೆಯನ್ನು ನಡಿಸಿ ಆ ತಾಲ್ಲೂಕಿನ ಗೋಶಾಲೆಗಳಿಗೆ ಹುಲ್ಲನ್ನು ತರಿಸಿ ಅಸಲ್ ಬೆಲೆಗೆ ವಿಕ್ರಯ ಮಾಡಬೇಕೆಂದು ನಿಶ್ಚಯಿಸಿ, ಅದಕ್ಕಾಗಿ ಚಂದಾ ಎತ್ತಿ ಸುಮಾರು ೫೦೦ ರೂಪಾಯಿ ವರೆಗೆ ಕೂಡಿಸಿರುತ್ತಾರೆಂದು ಕೇಳಿ ಸಂತೋಷಪಡುತ್ತೇವೆ.

ಮೈಸೂರು ಸಂಸ್ಥಾನದಲ್ಲಿ ಕೊಕ್ಕೇನ್ ಮತ್ತು ಮಾರ್ಫೀನ್ ಎಂಬ ವಿಷ ಪದಾರ್ಥಗಳನ್ನು ಯಾರೂ ಬಿಕರಿ ಮಾಡಕೂಡದೆಂದೂ, ಔಷಧ ಮಾರತಕ್ಕ ಅಂಗಡಿಗಳವರು ಅದಕ್ಕಾಗಿ ಲೈಸೆನ್ಸು ಪಡೆಯಬೇಕೆಂದೂ, ಅದನ್ನು ಡಾಕ್ಟರು ಬರೆದುಕೊಡುವ ಔಷಧದ ಪಟ್ಟಿಯಲ್ಲಿ ಬರೆದಿದ್ದ ಹೊರತು ಯಾರಿಗೂ ವಿಕ್ರಯ ಮಾಡಕೂಡದೆಂದೂ ಸರ್ಕಾರದವರು ಕಾನೂನ್ ಮಾಡಿರುತ್ತಾರೆ.

ಮೆ, ಆರ್ ಎಚ್ ಕ್ಯಾಂಬೆಲ್ ಯವರು ಕಳೆದ ವಾರ ರಾಜಧಾನಿಗೆ ಬಂದು, ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಕೆಲಸದ ಛಾರ್ಜನ್ನು ವಹಿಸಿಕೊಂಡರು. ಮೆ ಇ ಮೆಕಾನಕಿಯವರು ಮೊನ್ನೆ ಮಂಗಳವಾರ ರಾತ್ರಿ ರಾಜಧಾನಿಯಿಂದ ತೆರಳಿದರು. ನೆನ್ನೆ ಇವರಿಗೆ ಬೆಂಗಳೂರಿನಲ್ಲಿ ದಿವಾನ್ ಮಾಧವರಾಯರು ತಮ್ಮ ಬಂಗಲೆಯಲ್ಲಿ ಸನ್ಮಾನೋತ್ಸವವನ್ನು ನಡಿಸುವವರಾಗಿದ್ದರು.

ಸೀನಿಯರ್ ಕೌನ್ಸಿಲರ್ ಮೆ| ಟಿ ಆನಂದರಾಯರಿಗೆ ಮೈಸೂರು ಸಂಸ್ಥಾನದ ದಿವಾನ್‌ಗಿರಿಯು ನೇಮಕವಾಯಿತೆಂಬ ಅರ್ಥಕ್ಕೆ ನೆನ್ನೆ ಸರ್ಕಾರಿ ವಿಶೇಷ ಪತ್ರಿಕೆಯು ಪ್ರಕಟವಾಗಿರುತ್ತದೆ. ಅವರು ಈ ದಿನ ಮೆ|| ವಿ ಪಿ ಮಾಧವರಾಯರಿಂದ ದಿವಾನ್‌ಗಿರಿಯ ಛಾರ್ಜನ್ನು ವಹಿಸಿಕೊಳ್ಳುವವರಾಗಿದಾರೆ. ಫರ್ಲೊ ಪಡೆದು ಕೆಲಸದಿಂದ ನಿವೃತ್ತರಾಗಿರುವ ಮೆ| ವ ದವರಾಯರ ಸರ್ವೀಸ್ ವಿಚಾರದಲ್ಲಿ ಶ್ರೀಮನ್ಮಹಾರಾಜರವರ ಅಭಿಮತವು ನಾಳೆಯ ದಿನ ಸರ್ಕಾರಿ ವಿಶೇಷ ಪತ್ರಿಕೆಯಲ್ಲಿ ಹೊರಪಡುವುದು. ಕೌನ್ಸಿಲರುಗಳು ಮೊದಲಾದ ಮುಖ್ಯ ಉದ್ಯೋಗಸ್ಥರುಗಳ ಬದಲಾವಣೆಗಳು ಈ ವಾರದ ಸರ್ಕಾರಿ ಗಜೆಟ್ಟಿನಲ್ಲಿ ಪ್ರಕಟವಾಗುತ್ತವೆ. ಮೆ|| ಕೆ ಪಿ ಪುಟ್ಟಣ್ಣಚೆಟ್ಟಿಯವರೂ, ಮೆ ಎಚ್ ವಿ ನಂಜುಂಡಯ್ಯನವರೂ ಕೌನ್ಸಿಲರುಗಳಾಗಿ ನೇಮಿಸಲ್ಪಡುವ ಬಹುದೆಂದು ಕೇಳುತ್ತೇವೆ.

ಪಕ್ಷಾಂತರ ಕೆಸರು ಬೆಳ್ಳಿಗೆ ಸೇರಿದ ಫೂತ್ಲೂರಿನಲ್ಲಿ ಜಮೀನ್ದಾರರು ಸೇರಿ ಒಂದು ಸಂಘವನ್ನು ಮಾಡಿಕೊಂಡು ಕೃಷಿ ಪ್ರಬಲದ ಇಂಗಿತ, ಕಷ್ಟಸುಖಾದಿಗಳನ್ನೆಲ್ಲಾ ಗವರ್ನ್‌ಮೆಂಟಿಗೆ ಅರಿಕೆ ಮಾಡಿಕೊಳ್ಳಲಾರಂಭಿಸಿರುವುದು ಸಂತೋಷಕರವಾಗಿದೆ. ಈ ಸಂಘದವರು ಮೊದಲನೆಯ ವಾರ್ಷಿಕೋತ್ಸವವನ್ನು ನಡಿಸಿ, ಅದರ ರಿಪೋರ್ಟನ್ನು ಸರ್ಕಾರಕ್ಕೆ ಕಳುಹಿಸಿರುತ್ತಾರೆ. ವ್ಯವಸಾಯ ಪ್ರಜೆಗಳು ತಾವೇ ಸಮುದಾಯದಿಂದ ಒಟ್ಟುಗೂಡಿ ಕಾರ್ಯಭಾಗ ನಡೆಸುತ್ತಾ ಬಂದರೆ ಅವರ ಕಷ್ಟನಷ್ಟಗಳು ಸರ್ಕಾರಕ್ಕೆ ತಿಳಿಯಬರುವುದಕ್ಕೂ ಅವು ನಿವಾರಣೆ ಹೊಂದುವುದಕ್ಕೂ ವಿಶೇಷ ಸಹಾಯವಾಗುವುದು. ಮತ್ತು ಇಂಥಾ ಸಂಘಗಳಿಂದ ಪ್ರಜೆಗಳಲ್ಲಿ ಪರಸ್ಪರವಾದ ನಂಬಿಕೆ ಪ್ರೀತಿ ವಿಶ್ವಾಸಾದಿಗಳು ಹೆಚ್ಚಿ ಅಭಿವೃದ್ಧಿಯಾಗುತ್ತವೆ. ನಮ್ಮ ಸಂಸ್ಥಾನದ ರೈತ ಪ್ರಜೆಗಳೂ ಈ ವಿಚಾರಕ್ಕೆ ಗಮನ ಕೊಟ್ಟಾರೆಂದು ನಂಬಿ ನಿರೀಕ್ಷಿಸುತ್ತೇವೆ.

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಮಾರ್ಚಿ ತಾ. 20 ಕ್ಕೆ ಕಡೆಯಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ.			ಕೂಲಿ ಕೊಟ್ಟದ್ದು ರೂ	ಧರ್ಮಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು		
ಬೆಂಗಳೂರು	1,695	586	214	1,530	318
ಕೋಲಾರ	1,216	153	99	2,831	929
ತುಂಕೂರು	2,102	934	216	2,639	192
ಮೈಸೂರು	775	906	175	1,284	306
ಹಾಸನ	141	75	19	217	2
ಶಿವಮೊಗ್ಗ	240	88	136	405	5
ಕಡೂರು	102	51	..	32	
ಚಿತ್ರದುರ್ಗ	763	402	166	803	935
ಒಟ್ಟು	7,034	3,494	1,024	9,747	3,006

ಮೈಸೂರು ಸರ್ಕಾರಿ ಹುಕುಮುಗಳು.

ಕ್ಷಾಮನಿವಾರಣೆಯ ಏರ್ಪಾಡುಗಳು

ಧರ್ಮಾರ್ಥವಾದ ಸಹಾಯವು

ಸಂಸ್ಥಾನದೊಳಗೆ ಬೇರೆ ಬೇರೆ ಡಿಸ್ಟ್ರಿಕ್ಟುಗಳಲ್ಲೂ, ತಾಲ್ಲೂಕುಗಳಲ್ಲೂ ಎಷ್ಟೆಷ್ಟು ಪ್ರಜೆಗಳಿಗೆ ದುರ್ಭಿಕ್ಷದ ನಿಮಿತ್ತವಾಗಿ ಧರ್ಮ ಸಹಾಯ ಮಾಡಬೇಕು, ಯಾವ ರೀತಿ ಈ ಧರ್ಮ ಸಹಾಯ ಕೊಡಲ್ಪಡುವುದು, ಮತ್ತು ಯಾವ ದರದಂತೆ ಪಾವತಿ ಆಗುವುದು ಈ ವಿಷಯಗಳನ್ನೆಲ್ಲಾ ರೆವಿನ್ಯೂ ಕಮಿಷನರ್‌ರವರು ವಿಸ್ತಾರವಾಗಿ ಬರೆದು ಗವರ್ನ್‌ಮೆಂಟಿಗೆ ತಿಳಿಸಬೇಕಾಗಿದೆ—ಇಂಥಾ ಧರ್ಮ ಸಹಾಯಕ್ಕಾಗಿ ಗವರ್ನ್‌ಮೆಂಟಿನವರು ಈ ಮೊದಲೇ ೨೫,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ. ಇದು ಸಾಲದೆಂದು ರೆವಿನ್ಯೂ ಕಮಿಷನರ್‌ರವರು ಬರೆದಿರೋಣದರಿಂದ ಈಗ ಮತ್ತೆ ೧೦,೦೦೦ ರೂಪಾಯಿ ಈ ಬಾಬಿಗೆ ಸ್ಯಾಂಕ್ಷನ್ ಮಾಡಲ್ಪಟ್ಟಿರುತ್ತದೆ.

ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸುವುದು.

ಗ್ರಾಮಾಂತರಗಳಲ್ಲಿ ರಾತ್ರಿ ಹೊತ್ತು ಗಸ್ತು ಮಾಡುವುದು, ರಸ್ತೆ, ಗಾಡಿ ಮಾರ್ಗ, ಜಂಗಲ್ ಹಾದಿ, ಕಾಲು ಹಾದಿ, ಈ ಮುಂತಾದ ಕಡೆಗಳಲ್ಲಿ ಉಸ್ತುವಾರಿ ಮಾಡುವುದು, ಪ್ರಜೆಗಳ ಆಸ್ತಿ ವಸ್ತುಗಳ ಮೇಲೆ ನಿಗಾ ಇಟ್ಟು ನೋಡಿಕೊಳ್ಳುವುದು, ಸಂತೆಗಳಿಗೆ ಹೋಗಿ ಬರುವ ಧಾನ್ಯದ ಸರಕುಗಳ ಸಂಗಡ ಉಸ್ತುವಾರಿಗಾಗಿ ಹೋಗುತ್ತಿರುವುದು, ಈ ಏರ್ಪಾಡುಗಳಿಗೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಮಾಡಿರುವ ಏರ್ಪಾಡುಗಳು ತೃಪ್ತಿಕರವಾಗಿರುತ್ತವೆ—ದುರ್ಭಿಕ್ಷವು ಪ್ರಾಪ್ತವಾಗಿದ್ದಾಗ್ಯೂ ಡಿಸ್ಟ್ರಿಕ್ಟು ಪೋಲೀಸ್ ಅಧಿಕಾರಿಗಳು ತುಂಬಾ ನಿಗಾ ಇಟ್ಟಿರುವುದರಿಂದ ಕಳುವು ಮುಂತಾದ ಕೃತ್ಯಗಳು ಹೆಚ್ಚಲಿಲ್ಲವೆಂದು ಗವರ್ನ್‌ಮೆಂಟಿನವರು ಸಂತೋಷಪಡುತ್ತಾರೆ. ಆದರೆ ಪೋಲೀಸ್ ಇಲಾಖೆಯ ಸಿಬ್ಬಂದಿಯನ್ನು ಹೆಚ್ಚು ಮಾಡುವುದಕ್ಕೆ ಇನ್ನೂ ಅಂಥಾ ದುರ್ಭಿಕ್ಷ ಪ್ರಾಪ್ತವಾಗಿಲ್ಲವೆಂದು ಗವರ್ನ್‌ಮೆಂಟಿನವರು ಅಭಿಪ್ರಾಯಪಡುವರು. ಕೆಲವು ವರುಷಗಳಿಂದ ಈಚೆಗೆ ಸರ್ಕಾರದವರು ಗ್ರಾಮ ಪೋಲೀಸ್ ಮತ್ತು ನಾಕಾ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚು ಮಾಡಿರುತ್ತಾರೆ. ಈ ಸಿಬ್ಬಂದಿಯು ಈಗಲೇ ಹೆಚ್ಚಾಗಿರುವುದು. ಮತ್ತು ಬಾರ್ ಶಿಪಾಯಿಗಳನ್ನು ಸ್ಟೇಷನ್, ಲಾಕಪ್ ಮೊದಲಾದ ಕಡೆಗಳಿಗೆ ಪಹರೆ ನೇಮಕ ಮಾಡಿದಲ್ಲಿ ಆ ಪೋಲೀಸಿನವರನ್ನು ಇತರ ಕಡೆಗಳಿಗೆ ವಿನಿಯೋಗಿಸಿಕೊಳ್ಳಬಹುದಾಗಿದೆ. ಆದದ್ದರಿಂದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಅಪೇಕ್ಷಿಸಿರುವಂತೆ ಪೋಲೀಸ್ ಸಿಬ್ಬಂದಿಯನ್ನು ಸದ್ಯಕ್ಕೆ ಹೆಚ್ಚಿಸಬೇಕಾದ ಅವಶ್ಯ ಕಂಡುಬರುವುದಿಲ್ಲ. ಆದರೆ ಈಗಿನ ದುರ್ಭಿಕ್ಷವು ಕ್ಷಾಮಕಾಲವಾಗಿ ಪರಿಣಮಿಸಿದ ಪಕ್ಷದಲ್ಲಿ ಆ ಸಿಬ್ಬಂದಿಯನ್ನು ಹೆಚ್ಚಿಸುವ ವಿಷಯ ಯೋಚಿಸಬಹುದಾಗಿದೆ—ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಬಾರ್ ಶಿಪಾಯಿಗಳನ್ನು ಮೇಲ್ಕಂಡ ರೀತಿ ನೇಮಿಸಿಕೊಳ್ಳುವ ವಿಷಯದಲ್ಲಿ ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್‌ರವರ ಮತ್ತು ಚೀಫ್ ಕಮಾಂಡಾಂಟರವರ ಕೂಡ ಪರ್ಯಾಲೋಚನೆ ಮಾಡಿ ಗವರ್ನ್‌ಮೆಂಟಿಗೆ ಬರೆದಲ್ಲಿ ಅನುಕೂಲವಾಗುವ ರೀತಿ ಹುಕುಂ ಕೊಡಲು ಪರ್ಯಾಲೋಚಿಸಬಹುದು.

ಸಾಮಾನ್ಯ ಹುಕುಮುಗಳು

ಶಿಕ್ಷಾನುಭೋಗಿಗಳ ಫಿರ್ಯಾದುಗಳನ್ನು ಒಡೆಯುವುದು

ಸರ್ಕಾರದವರು ಶಿಕ್ಷಾನುಭೋಗಿಗಳ ಫಿರ್ಯಾದುಗಳನ್ನು ನಿಬಂಧನೆಮಾಡಿ, ಡಿಸ್ಟ್ರಿಕ್ಟ್ ಗ್ರಾಮಗಳಲ್ಲಿಟ್ಟಬೇಕೆಂದು ನಿರ್ಧರಿಸಿರುತ್ತಾರೆ. ಇಂಥಾ ಫಿರ್ಯಾದುಗಳ ಖರಾವರ್ದು ಒಟ್ಟಿಬರ ಹೆಸರಿನಲ್ಲಿ ಶಾಶ್ವತವಾಗಿದೆ. ಇದನ್ನು ತಪ್ಪಿಸಿ ದಾಯಾದಿಗಳ ಅನುಕೂಲಕ್ಕೋಸ್ಕರ ಫಿರ್ಯಾದುಗಳನ್ನು ಒಡೆದು ಖರಾವರ್ದುಗಳನ್ನು ಇಬ್ಬರು ಮೂವರ ಹೆಸರಿಗೆ ಮಾಡುವುದು ಪೋಟಿಗೆ ರೂಲಿಸಿಗೆ ವಿರೋಧವಾದದ್ದು. ರೆವಿನ್ಯೂ ಅಧಿಕಾರಿಗಳು ಈ ರೀತಿ ಬದಲಾವಣೆಮಾಡಬೇಕಾಗಿ ಬಂದಲ್ಲಿ ಮೊದಲೇ ಅದಕ್ಕೆ ಗವರ್ನ್‌ಮೆಂಟ್ ಸ್ಯಾಂಕ್ಷನ್ ಪಡೆದುಕೊಳ್ಳಬೇಕಾಗಿದೆ.

ಕಂದಾಯ ಕೊಟ್ಟವನ ಹೆಸರು ಪಟ್ಟಿಯಲ್ಲಿ ಕಾಣಿಸುವುದು.

ಕಂದಾಯ ಪಾವತಿ ಮಾಡಿದವನ ಹೆಸರನ್ನು ಕೆಲವು ಸಂದರ್ಭಗಳಲ್ಲಿ ಶಾನುಭೋಗರು ಪಟ್ಟಿಯಲ್ಲಿ ನಮೂದು ಮಾಡಿದೆ ಕಿರದಿ ರೋಜು ಪುಸ್ತಕದಲ್ಲಿ ಮಾತ್ರ ಬರೆಯುತ್ತಾರೆ. ಪಟ್ಟಿಯಲ್ಲಿ ಮೊಬಲಗನ್ನು ಮಾತ್ರ ಕಾಣಿಸುತ್ತಾರಲ್ಲದೆ ಪಾವತಿ ಮಾಡಿದವನ ಹೆಸರು ಬರೆಯುವುದಿಲ್ಲ. ಅಂಥವನ ಹೆಸರನ್ನು ಕಾಣಿಸಬೇಕೆಂದು ಕಳೆದ ೧೯೦೮ ನೇ ಇಸವಿಯ ಅಕ್ಟೋಬರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಸರ್ಕಾರದವರನ್ನು ಕೇಳಿಕೊಳ್ಳುತ್ತಾ ಬಂದರು. ಗವರ್ನ್‌ಮೆಂಟಿನವರು ಡೆಪ್ಯುಟಿ ಕಮಿಷನರುಗಳ ಅಭಿಪ್ರಾಯವನ್ನೂ ರೆವಿನ್ಯೂ ಕಮಿಷನರ್‌ರವರ ಇರಾದೆಯನ್ನೂ ತರಿಸಿಕೊಂಡು ಹುಕುಂ ಕೊಟ್ಟಿರುವುದೇನೆಂದರೆ—ಪಟ್ಟೇದಾರ, ಸಿಕ್ಮಿದಾರ ಅಥವಾ ಅನುಭವದಾರರೇ ಮೊದಲಾದ ಯಾರೇ ಆಗಲಿ ಕಂದಾಯ ಪಾವತಿಮಾಡಿದರೆ ಅಂಥವರ ಹೆಸರುಗಳನ್ನು ಪಟ್ಟಿಯಲ್ಲಿ ನಮೂದು ಮಾಡಿಕೊಡಬೇಕಾದದ್ದು ನ್ಯಾಯವಾಗಿದೆ. ಇನ್ನು ಮುಂದೆ ಪಟ್ಟಿಯ ನಮೂನೆಯಲ್ಲಿ ಇನ್ನೊಂದು ಕಲಮನ್ನು ಹೆಚ್ಚು ಮಾಡಬೇಕು. ಈ ಹೊಸ ಕಲಮಿನಲ್ಲಿ ಕಂದಾಯ ಪಾವತಿಮಾಡಿದವನ ಹೆಸರನ್ನು ಶಾನುಭೋಗನು ಬರೆದುಕೊಡಬೇಕು. ಮತ್ತು ಅಂಥಾ ಪಾವತಿದಾರನ ಹೆಸರಿನಲ್ಲಿ ಪಟ್ಟೆ ಇಲ್ಲದಿರುವ ಪಕ್ಷದಲ್ಲಿ ಕಿರದಿ ರೋಜಿನಲ್ಲಿ ಅವನ ಹೆಸರನ್ನೂ, ಅವನಿಂದ ಪಾವತಿ ಆದ ಹಣವನ್ನೂ ನಮೂದು ಮಾಡಿಕೊಂಡು, ಅಂಥಾ ಕಿರದಿ ದಾಖಲೆಯುಳ್ಳ ನಕಲನ್ನು ಬರೆದುಕೊಡಬೇಕು. ಈ ನಕಲಿಗೆ ರೂಲಿನ ಪ್ರಕಾರ ಫೀಜನ್ನು ಅವನಿಂದ ವಸೂಲು ಮಾಡಿಕೊಳ್ಳಬಹುದು. ಇದಕ್ಕಾಗಿ ಅಚ್ಚು ಹಾಕಿದಂಥಾ ಕಿರದಿ ಫಾರಮುಗಳನ್ನು ಜಾಡಿಯಾಗಿ ಪ್ರತಿ ಒಬ್ಬ ಶಾನುಭೋಗನಿಗೂ ಕಳುಹಲಾಗುವುದು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ತಾ ೨೭ ನೇ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಲೆಯ ಮೀಟಿಂಗನ್ನು ನಡೆಸಿದರು. ಕಳೆದ ಫೆಬ್ರವರಿ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ೧೧,೩೪೯ ರೂಪಾಯಿ ಹುಟ್ಟುವಳಿ ಆಯಿತು. ರೂ ೭,೯೧೫-೩-೪ ವೆಚ್ಚ ಖರ್ಚಾಯಿತು. ಆ ತಿಂಗಳಲ್ಲಿ ಜನನ ೧೩೪ ಮರಣ—ಪ್ಲೇಗ್ ೭, ಸಿಡುಬು ೫೦, ಜ್ವರ ೧೬, ಇತರ ಕಾರಣಗಳು ೧೩೯, ಒಟ್ಟು ೨೦೭.

ಮ್ಯುನಿಸಿಪಲ್ ಲೆಕ್ಕಗಳನ್ನು ಆಡಿಟ್ ಮಾಡಿದ ಆಡಿಟರು—ಲೆಕ್ಕಗಳು ಸರಿಯಾಗಿವೆ. ಮೊಹತರ್ಫಾ, ಮನೆ, ನೀರು, ದರ್ಪಣ ಈ ಬಾಬುಗಳ ಕಂದಾಯದ ವಸೂಲಾತಿಯು ಇನ್ನೂ ತೃಪ್ತಿಕರವಾಗಿಲ್ಲ. ಆ ಹಿಂದು ತಿಂಗಳಲ್ಲಿ ೧,೧೫೦ ಚಿಲ್ಲರೆ ರೂಪಾಯಿ ಮಾತ್ರ ವಸೂಲಾಗಿರುತ್ತದೆ. ವಸೂಲಾತಿಯ ಸಿಬ್ಬಂದಿಯು ಹೆಚ್ಚಾಗಿದೆ. ಮೇಲ್ವಿಚಾರಣೆಯನ್ನು ಹೆಚ್ಚು ಮಾಡಬೇಕು. ಮುನ್ಸಿಪ್ಯಾಲಿಟಿಗೆ ಹವಾಲ್ದಾರರು ಅಗತ್ಯವಿಲ್ಲ. ಈ ಬಾಗದಲ್ಲಿ ಬೇಗ ತೃಪ್ತಿಕರವಾದ ಏರ್ಪಾಡು ಮಾಡಬೇಕಾಗಿದೆ. ಹೆಲ್ತ್ ಆಫೀಸಿನವರು ಹಿತ್ತಲು ಮನೆಗಳನ್ನು ಗುಡಿಸುವುದಕ್ಕೆ ಮನೆಯವರಿಂದ ವಸೂಲ್ಮಾಡಿರುವ ತೆರಿಗೆಯನ್ನು ಮ್ಯುನಿಸಿಪಾಲಿಟಿಗೆ ಪಾವತಿಮಾಡಿರುವುದಿಲ್ಲ ಎಂಬೀ ರೀತಿ ರಿಪೋರ್ಟು ಮಾಡಿದ್ದರು. ಈ ವಿಚಾರಗಳನ್ನು ಚರ್ಚೆ ಮಾಡಿದಾಗ ಮೇಲ್ಕಂಡ ತೆರಿಗೆಯನ್ನು ಈಚೆಗೆ ಹೆಲ್ತ್ ಆಫೀಸಿನವರು ಪಾವತಿ ಮಾಡಿರುತ್ತಾರೆಂದು ತಿಳಿಯಿತು. ಕಂದಾಯದ ವಸೂಲಾತಿಯಲ್ಲಿ ಹೊಸ ಬದಲಾವಣೆ ಮಾಡಬೇಕೆಂದು ಗೊತ್ತುಮಾಡಿದರು.

ರಾಜಧಾನಿಯಲ್ಲಿರುವ ಸರ್ಕಾರಿ ಕರ್ನಾಟಕ ಮತ್ತು ಯೂನಾನಿ ವೈದ್ಯಶಾಲೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕೆ ಆಸಾಮಿ ಎಸ್ ವೆಂಕೋಬರಾಯರನ್ನು ನೇಮಿಸಬಹುದೆಂದೂ. ಅದಕ್ಕಾಗಿ ಅವರಿಗೆ ಪ್ರತಿಮಾಸವೂ ಕೊಡಬೇಕಾದ್ದಿಲ್ಲವೆಂದೂ ಸಿವಿಲ್ ಸರ್ಜನ್‌ರವರು ಶಿಫಾರಸು ಮಾಡಿದ್ದರು. ಮತ್ತು ಕೌನ್ಸಿಲರುಗಳು ಈ ವಿಷಯವನ್ನು ಚರ್ಚೆ ಮಾಡುತ್ತಿದ್ದಾಗ ಸಿವಿಲ್ ಸರ್ಜನ್‌ರವರು ವೈಸ್ ಪ್ರೆಸಿಡೆಂಟರಿಗೆ—ನಾನು ಹಿಂದುಗಡೆ ಮೆಂಬರುಗಳ ಆಕ್ಷೇಪಣೆಗಳಿಗೆಲ್ಲಾ ಉತ್ತರ ಹೇಳಬೇಕಾಗುವುದು. ಇದು ಅಲೌಕಿಕವಾದದ್ದರಿಂದ ನಾನು ಮೀಟಿಂಗಿಗೆ ಬರಲಿಲ್ಲವೆಂಬ ಅರ್ಥಕ್ಕೆ ಒಂದು ಕಾಗದವನ್ನು ಬರೆದಿದ್ದರು. ಹಿಂದೆಯೇ ಈ ವಿಚಾರ ಚರ್ಚೆಯಾಗಿ ಸಿವಿಲ್ ಸರ್ಜನ್‌ರವರು ಆವರದ ವೈದ್ಯಶಾಲೆಗಳ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳತಕ್ಕದ್ದೆಂದು ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿರೋಣದರಿಂದ ಆ ರೀತಿ ಆಚರಣೆ ನಡೆಯಬೇಕೆಂದು ಮೆಂಬರುಗಳು ತೀರ್ಮಾನ ಮಾಡಿದರು.

ಬಳಗೊಳದಲ್ಲಿ ಯಂತ್ರಗಳನ್ನಿಟ್ಟು ವಿದ್ಯುಚ್ಛಕ್ತಿಯ ಸಹಾಯದಿಂದ ನೀರನ್ನು ಎತ್ತಿ ರಾಜಧಾನಿಗೆ ಕಳುಹಿಸಿಕೊಡುವ ಏರ್ಪಾಡಿಗೆ ಮ್ಯುನಿಸಿಪಾಲಿಟಿಯವರು ೫೦,೦೦೦ ರೂಪಾಯಿ ಪಾವತಿ ಮಾಡಿದರು. ಈಚೆಗೆ ಚೀಫ್ ಇಂಜನಿಯರವರು ಅದರ ಸಿಬ್ಬಂದಿ ಖರ್ಚಿಗೂ ಮುಟ್ಟುಗಳ ರಿಪೇರಿಗೂ ಸಲ್ಲ ಹಣವನ್ನು ಮ್ಯುನಿಸಿಪಾಲಿಟಿಯಿಂದ ಕೊಡಿಸಿಕೊಡಬೇಕೆಂದು ಕೇಳಿದರು. ಗವರ್ನ್‌ಮೆಂಟಿನವರು ಈ ಹೆಚ್ಚು ಬಾಬನ್ನು ಮ್ಯುನಿಸಿಪಾಲಿಟಿಗೆ ಹಾಕಬೇಕಾದ್ದಿಲ್ಲವೆಂದು ಹುಕುಂ ಕೊಟ್ಟಿರುತ್ತಾರೆ.

ಮೈಸೂರು ಪಟ್ಟಣದ ಆರೋಗ್ಯವಿಚಾರವನ್ನು ಮೇಲ್ವಿಚಾರಣೆ ನೋಡಿಕೊಳ್ಳುವ ಸ್ಯಾನಿಟರಿ ಮತ್ತು ಅ॥ ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ಮೇಲ್ಮನವಿ, ಅವರ ಬದಲಿ ಬರತಕ್ಕ ಮುಂತಾದವುಗಳನ್ನೆಲ್ಲಾ ಮ್ಯುನಿಸಿಪಾಲಿಟಿಯವರೇ ವಹಿಸಬೇಕೆಂದೂ, ಸ್ಯಾನಿಟರಿ ಕಮಿಷನರ್‌ರವರಿಗೆ ವಹಿಸ ಕೂಡದೆಂದೂ ಕೌನ್ಸಿಲರುಗಳು ತೀರ್ಮಾನ ಮಾಡಿದರು.

ರಾಜಧಾನಿಯಲ್ಲಿರುವ ಮಹಾರಾಣಿಯವರ ಹೆಂಗಸರ ಆಸ್ಪತ್ರೆಯಲ್ಲಿ ಮೇಟ್ರನ್ ಎಂಬ ಮುಖ್ಯ ಮೇಲ್ವಿಚಾರಕಳೂ ದೇಶೀಯ ಸ್ತ್ರೀ ನರ್ಸುಗಳೂ ವಾಸಮಾಡತಕ್ಕ ಕಟ್ಟಡಗಳೂ, ಜೈಲ್ ಖಾನೆಯೊಳಗೆ ಅಧಿಕಾರಿಗಳೂ ನೌಕರರೂ ವಾಸಮಾಡುವ ಕಟ್ಟಡಗಳಿಗೂ ಮ್ಯುನಿಸಿಪಲ್ ತೆರಿಗೆಯನ್ನು ಮಾಫ್ ಮಾಡದೆ ವಸೂಲ್ಮಾಡಬೇಕೆಂದು ಕೌನ್ಸಿಲರುಗಳು ಗೊತ್ತುಮಾಡಿದರು.

ರಾಜಧಾನಿಯ ಲಕ್ಷ್ಮೀಪುರವೆಂಬ ಬಡಾವಣೆಯಲ್ಲಿ ಬಚ್ಚಲುಗಳನ್ನು ಕಟ್ಟಿ ರಸ್ತೆ ಹಾಕುವುದು ಮುಂತಾದ ಕೆಲಸಗಳಿಗೆ ಸರ್ಕಾರದವರು ೧೭,೧೩೫ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ. ಕೌನ್ಸಿಲರುಗಳು ಈ ಹುಕುಮನ್ನು ಓದಿಸಿ ರಿಕಾರ್ಡು ಮಾಡಿಕೊಂಡರು.

ಸ್ವಂತ ಉಪಯೋಗಕ್ಕಾಗಿ ಕೆಲವು ಸರಕುಗಳನ್ನು ಪಟ್ಟಣದೊಳಕ್ಕೆ ತಂದುಕೊಂಡರೂ ಅದಕ್ಕೂ ನಾಯಿರ್ ಕಟ್ಟೆಯವರು ಸುಂಕವನ್ನು ವಸೂಲ್ಮಾಡುತ್ತಾರೆಂದೂ, ಇದನ್ನು ತಪ್ಪಿಸಿಕೊಡಬೇಕೆಂದೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಸರ್ಕಾರದವರನ್ನು ಕೇಳಿದ್ದರು. ಗವರ್ನ್‌ಮೆಂಟಿನವರು ಈ ವಿಚಾರವನ್ನು ಚರ್ಚಿಸಿ ಕೌನ್ಸಿಲರುಗಳ ಅಭಿಮತವನ್ನು ತಿಳಿಸಬೇಕೆಂದು ಬರೆದಿದ್ದರು. ಕೌನ್ಸಿಲರುಗಳು ಚೀಫ್ ಕಮಿಷನರ್‌ರವರ ಕಾಲದ ರಿಕಾರ್ಡುಗಳನ್ನು ತರಿಸಿ ನೋಡಿ, ಮೊದಲಿಂದಲೂ ನಡೆದುಬಂದಿರುವಂತೆಯೇ ಕೆಲವು ರಿಯಾಯಿತಿಗಳನ್ನು ಇನ್ನು ಮುಂದೆಯೂ ಚಲಾವಣೆಯಲ್ಲಿ ತರಲ್ಪಡುವುವೆಂದು ಗೊತ್ತುಮಾಡಿದರು. ತೆಂಗಿನ ಕಾಯಿ ೩, ಬೆಲ್ಲದ ಅಚ್ಚು ೩, ಬೆಣ್ಣೆ ಸೇರು ೫, ತುಪ್ಪ ಸೇರು ೫, ಸಕ್ಕರೆ ಸೇರು ೫, ತಂಬಾಕು ಸೇರು ೧, ವೀಳ್ಯದೆಲೆ ಕಟ್ಟು ೧, ಈ ರೀತಿ ಪ್ರಜೆಗಳ್ಯಾರಾದರೂ ತಮ್ಮ ಮನೆಯ ಉಪಯೋಗಕ್ಕೋಸ್ಕರ ತಂದುಕೊಂಡ ಪಕ್ಷದಲ್ಲಿ ಅವುಗಳಿಗೆ ಸುಂಕ ಕೊಡಬೇಕಾದದ್ದಿಲ್ಲವೆಂದೂ, ಈ ರಿಯಾಯಿತಿಗಳನ್ನೆಲ್ಲಾ ವಿವರವಾಗಿ ಕನ್ನಡದಲ್ಲಿ ಹಲಗೆಗಳ ಮೇಲೆ ಬರೆಸಿ, ಪ್ರತಿ ಒಂದು ಉಕ್ಕಡದಲ್ಲೂ ಬಹಿರಂಗವಾಗಿ ನೇತುಹಾಕಬೇಕೆಂದೂ ಮೆಂಬರುಗಳು ತೀರ್ಮಾನಮಾಡಿದರು.

ನಮ್ಮ ಪುಸ್ತಕ ಭಂಡಾರವು

“ತಂಬೂಚಿ ಸಿಂಧಾಮಣಿ”

ಬೆಂಗಳೂರು ಸೆಂಟ್ ಜೋಸೆಫ್ ಕಾಲೇಜಿನ ತಮಿಳು ಪಂಡಿತರಾದ ಮ॥ ಎ ವಂಕಟಸುಬ್ಬ ಪಿಳ್ಳೆಯವರು ರಾಜಧರ್ಮ ಪ್ರವೀಣ ಟಿ ಆರ್ ಎ ತಂಬೂ ಚೆಟ್ಟಿಯಾರ್, ಸಿ ಐ ಇ ಯವರ ಜೀವಚರಿತ್ರೆಯನ್ನು ಕಾವ್ಯರೂಪವಾಗಿ ತಮಿಳಿನಲ್ಲಿ ಬರೆದು ಅಚ್ಚುಹಾಕಿಸಿ, ಒಂದು ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿರುತ್ತಾರೆ. ಈ ಗ್ರಂಥಕ್ಕೆ ಬೆಂಗಳೂರು ಸೆಂಟ್ರಲ್ ಕಾಲೇಜಿನ ಸಹಾಯೋಪಾಧ್ಯಾಯರಾದ ಮ॥ ಎಸ್ ಕೃಷ್ಣಸ್ವಾಮಿ ಐಯ್ಯಂಗಾರ್, ಎಂ ಎ ಯವರು ಉಪೋದ್ಘಾತವನ್ನು ಬರೆದಿರುವರು. ಈ ಕಾವ್ಯವು ೧೧ ಅಧ್ಯಾಯಗಳಾಗಿಯೂ ೯೩೦ ಪದ್ಯಗಳನ್ನುಳ್ಳದ್ದಾಗಿಯೂ ಇರುವುದು. ಸ್ರಿ ತಂಬೂಚೆಟ್ಟಿಯವರ ಬಾಲ್ಯ, ವಿದ್ಯಾಭ್ಯಾಸ, ಅವರು ಅಧಿಕಾರಕ್ಕೆ ಹತ್ತಿದ್ದು, ಅವರ ನಿರ್ಮಲವಾದ ಗುಣ ನಡತೆಗಳು, ಅವರ ಶಕ್ತಿ ಸಾಹಸಕಾರ್ಯಗಳು, ಜನಸಾಮಾನ್ಯದಲ್ಲಿ ಅವರಿಗಿದ್ದ ಪ್ರೀತಿ ಭಕ್ತಿ ವಿಶ್ವಾಸಗಳು, ಈ ಮೊದಲಾದ ಸಂಗತಿಗಳನ್ನೆಲ್ಲಾ ಇದರಲ್ಲಿ ಬಹು ಮನೋಹರವಾಗಿಯೂ, ಲಲಿತವಾಗಿಯೂ ಸಾಂಗೋಪಾಂಗವಾಗಿಯೂ ವಿವರಿಸಿರುತ್ತಾರೆ. ತಮಿಳು ತಿಳಿದವರೆಲ್ಲ ಈ ಪುಸ್ತಕವನ್ನು ತರಿಸಿ ಓದಿದಲ್ಲಿ ತುಂಬಾ ಪ್ರಯೋಜನವಾದೀತೆನ್ನುವುದಕ್ಕೆ ಸಂದೇಹವಿಲ್ಲ. ಹುಡುಗರೂ ಯೌವನಸ್ಥರೂ ಇಂಥಾ ಶ್ರೇಷ್ಠವಾದ ಜೀವಚರಿತ್ರೆಗಳನ್ನು ಓದಿ, ತಮ್ಮ ನಡವಳಿಕೆಗಳನ್ನು ಉತ್ತಮೋತ್ತಮವಾಗಿ ಮಾಡಿಕೊಳ್ಳುವುದು ಶ್ರೇಯಸ್ಕರವಾಗಿರುವುದು. ಹನ್ನೆರಡನೇ ವಯಸ್ಸಿನಲ್ಲೇ ತಂದೆತಾಯಿಗಳನ್ನು ಕಳೆದುಕೊಂಡಾಗ್ಯೂ, ಮ॥ ತಂಬೂಚೆಟ್ಟಿಯವರು ಸಕಲರಿಂದಲೂ ಹೊಗಳಿಸಿಕೊಳ್ಳುವಷ್ಟು ಯೋಗ್ಯತೆ ಗುಣ ನಾಮಧೇಯಾದಿಗಳನ್ನು ಹ್ಯಾಗೆ ಸಂಪಾದಿಸಿಕೊಂಡು ದಿವಾನ್ ಪದವಿಯವರೆಗೆ ಹತ್ತಿದರೋ ಮೈಸೂರು ಸಂಸ್ಥಾನದ ಪ್ರಜೆಗಳಿಗೆಲ್ಲಾ ತಿಳಿದ ವಿಷಯವೇ ಆಗಿರುತ್ತದೆ.

“ಕನ್ನಡ ಇಂಗ್ಲೀಷು ಭಾಷಾನುಬಂಧ”

ಮೇಲ್ಕಂಡ ಅಂತರದ ಒಂದು ಪುಸ್ತಕವನ್ನು ಮಂಗಳೂರು ಬಾಸೆಲ್ ಮಿಷನ್ ಪ್ರೆಸ್ಸಿನವರು ನಮಗೆ ಕಳುಹಿಸಿರುತ್ತಾರೆ. ಇದರಲ್ಲಿ ವ್ಯಾಕರಣ ಸೂತ್ರಗಳೂ, ಕನ್ನಡ ಶಬ್ದಗಳಿಗೆ ತಕ್ಕ ಇಂಗ್ಲಿಷ್ ಪದಗಳೂ, ಸಂವಾದಗಳೂ ಇರುತ್ತವೆ. ಗ್ರಂಥಕರ್ತರಾದ ಸಿ ಪಿ ಸಿ ಮಾಚ್‌ಯವರು ಕನ್ನಡಿಗರಿಗೆ ಇಂಗ್ಲೀಷನ್ನು ಕಲಿಸುವುದಕ್ಕೆ ಪ್ರಯತ್ನಪಟ್ಟಿರುತ್ತಾರೆ. ಹಲವು ವಿಚಾರಗಳು ಹಿಂದೂ ವಿದ್ಯಾರ್ಥಿಗಳಿಗೆ ಉಪಯುಕ್ತಗಳಾಗಿರುವವು. ಕನ್ನಡ ಅಕ್ಷರಗಳ ಸಂಜ್ಞೆಗಳಿಂದ ಇಂಗ್ಲಿಷ್ ಪದಗಳ ಉಚ್ಚಾರಣೆಯನ್ನು ಕಲಿಸಲು ಅವರು ಪ್ರಯತ್ನಪಟ್ಟಿದ್ದಾರೆ. ಇದರಲ್ಲಿ ಒಂದೊ ವಿದ್ಯಾರ್ಥಿಗಳು ತಪ್ಪು ದಾರಿಗೆ ಹೋಗಬಹುದೆಂದೂ, ಅವರು ಇಂಗ್ಲಿಷ್ ಪದಗಳ ಉಚ್ಚಾರಣೆಯನ್ನು ತಪ್ಪುತಪ್ಪಾಗಿ ತಿಳಿದುಕೊಳ್ಳಬಹುದೆಂದೂ ತೋರುತ್ತದೆ. ಈ ಪುಸ್ತಕದ ಬೆಲೆ ಒಂದು ರೂಪಾಯಿ.

“ಉಪನ್ಯಾಸ ವಿದ್ಯಾ.”

ಕೂಟಗಳಲ್ಲೂ ಸಭೆಗಳಲ್ಲೂ ಎದ್ದು ನಿಂತು ಮಾತನಾಡುವ ಶಕ್ತಿ ಸಾಮಾನ್ಯರಿಗೆ ಸ್ವಭಾವಸಿದ್ಧವಾಗಿ ಅನೇಕರಿಗೆ ಇರುವುದಿಲ್ಲ. ಇತರ ವಿದ್ಯೆಗಳಂತೆ ಇದನ್ನೂ ಕ್ರಮವಾಗಿಯೇ ಅಭ್ಯಾಸ ಮಾಡಬೇಕಾಗಿರುತ್ತದೆ. ವಿದ್ಯಾರ್ಥಿಗಳು ಉಪನ್ಯಾಸ ವಿದ್ಯೆಯಲ್ಲಿ ಚತುರರಾಗಬೇಕಾದಲ್ಲಿ ಈ ವಿಷಯವನ್ನು ಕುರಿತು ಬರೆಯಲ್ಪಟ್ಟಿರುವ ಗ್ರಂಥಗಳನ್ನು ಹೇರಳವಾಗಿ ಓದಬೇಕಾಗಿರುವುದು. ಕನ್ನಡದಲ್ಲಿ ಈವರೆಗೆ ಇಂಥಾ ವಿದ್ಯೆಯನ್ನು ಕಲಿಸುವ ಪುಸ್ತಕಗಳು ಯಾವೂ ಇರಲಿಲ್ಲ. ಧಾರವಾಡದ ಟ್ರೇನಿಂಗ್ ಕಾಲೇಜಿನ ಸೆಕೆಂಡ್ ಪ್ರಿನ್ಸಿಪಲ್ ಮ॥ ವೆಂಕಟರಂಗೋ ಕಟ್ಟಿಯವರು ಈ ವಿಚಾರವಾಗಿ ಒಂದು ಪುಸ್ತಕವನ್ನು ರಚಿಸಿರುತ್ತಾರೆ. ವಿದ್ಯಾರ್ಥಿಗಳೂ ಉಪಾಧ್ಯಾಯರೂ ಈ ಪುಸ್ತಕವನ್ನು ತರಿಸಿ ಓದಿದಲ್ಲಿ ಉಪನ್ಯಾಸಕನ ಯೋಗ್ಯತೆಯು ಎಷ್ಟು ಮಟ್ಟಿನದಾಗಿರಬೇಕೆಂಬುವುದು ಗೊತ್ತಾಗುತ್ತದೆ. ಇದರ ಕ್ರಯ ಆರು ಆಣೆ.

“ಚಂಡಕೌಶಿಕ ನಾಟಕಂ.”

ಮೈಸೂರು ಆಸ್ಥಾನ ಕವಿ ಬಸವಪ್ಪ ಶಾಸ್ತ್ರಿಗಳು ಈ ನಾಟಕವನ್ನು ರಚಿಸಿದರು. ಅರಮನೆ ಇಲಾಖೆಯ ಮ॥ ಸಿ ರಾಮಚಂದ್ರರಾಯರು ಈ ಗ್ರಂಥವನ್ನು ಪರಿಷ್ಕರಿಸಿ ಎರಡನೆಯ ಸಲ ಮುದ್ರಿಸಿರುತ್ತಾರೆ. ಈ ನಾಟಕವನ್ನು ಮದರಾಸ್ ಯೂನಿವರ್ಸಿಟಿ ವಿದ್ಯಾಸಂಘದವರು ಪರೀಕ್ಷೆಗಳಿಗೆ ಪಾಠಪುಸ್ತಕವಾಗಿ ನೇಮಿಸಿದ್ದರೆಂದು ಸೂಚಿಸೋಣದರಿಂದಲೇ ಅದರ ಯೋಗ್ಯತೆಯು ಸ್ಥಿರಗೊಳ್ಳುವುದು.

“ಪಶುವೈದ್ಯಸಂಗ್ರಹ.”

ಈ ಮಹೋಪಕಾರವಾದ ವೈದ್ಯ ಪುಸ್ತಕವನ್ನು ಮೈಸೂರು ಸರ್ಕಾರದ ನೌಕರರಾಗಿರುವ ಮ॥ ಎನ್. ನರಸಿಂಹಯ್ಯಂಗಾರ್ಯರು ರಚಿಸಿದರು. ಇದನ್ನು ಗವರ್ನ್‌ಮೆಂಟಿನವರು ವಹಿಸಿಕೊಂಡು, ಸರ್ಕಾರದ ಛಾಪಾ ಖಾನೆಯಲ್ಲಿ ಮುದ್ರಿಸಿ ಪ್ರಕಟ ಮಾಡಿರುತ್ತಾರೆ. ಗೋಕಾಯಿಗಳನ್ನು ಸಾಕುವವರೆಲ್ಲಾ ಈ ಪುಸ್ತಕವನ್ನು ಓದಿ, ರೋಗ ಲಕ್ಷಣ ಚಿಕಿತ್ಸಾದಿಗಳನ್ನು ತಿಳಿದುಕೊಂಡಿರಬೇಕಾದದ್ದು ಪರಮಾವಶ್ಯವಾಗಿರುತ್ತದೆ. ಪಶು ವೈದ್ಯವನ್ನು ತಿಳಿದವರು ಈ ನಾಡಿನಲ್ಲಿ ಬಹು ವಿರಳರಾಗಿರುತ್ತಾರೆ. ಗೋಕಾಯಿಗಳು ಚಿಕಿತ್ಸೆಯಿಲ್ಲದೆ ಅನೇಕಾನೇಕ ಸಾಯುವವು. ಸರ್ಕಾರದ ಪಶುವೈದ್ಯರು ಬರುವ ತನಕ ಜನರು ವಿವೇಕವುಳ್ಳ ಚಿಕಿತ್ಸೆಯನ್ನು ರೋಗ ಹಿಡಿದ ದನಗಳಿಗೆ ಮಾಡಿಕೊಳ್ಳುವಂತಾಗಬೇಕು. ವಿಷಯಗಳನ್ನು ಆಲಂಬಿಸದೆ ಸುಲಭ ಮಾತುಗಳಿಂದ ಎಲ್ಲರಿಗೂ ತಿಳಿಯುವಂತೆ ಈ ಪುಸ್ತಕವನ್ನು ಬರೆದಿರುತ್ತಾರೆ. ದನಗಳ ಪ್ರತಿ ಒಂದು ರೋಗವನ್ನೂ, ಅದರ ಲಕ್ಷಣವನ್ನೂ, ಚಿಕಿತ್ಸೆಯನ್ನೂ ಈ ಪುಸ್ತಕದಿಂದ ಸಕ್ರಮವಾಗಿ ತಿಳಿದುಕೊಳ್ಳಬಹುದಾಗಿದೆ.

ನಮ್ಮಲ್ಲಿಗೆ ತಲುಪಿರುವ ಇತರ ಪುಸ್ತಕಗಳ್ಯಾವವೆಂದರೆ—ಗೀತಮಂದಾರ, ಹೈದರಾಲಿಯ ಚರಿತ್ರೆ, ಶ್ರೀಮನ್ಮಧ್ವಾಚಾರ್ಯರ ಚರಿತ್ರೆ—ಇವು ಮೈಸೂರು ಮ॥ ಆ ರಾಮರಾಯರಿಂದ ರಚಿತವಾದವು. ಸಂಗೀತ ವಸ್ತುಸಾರ—ಇದನ್ನು ಈ ಕನಕಾ ಮಂಟಪದ್ದೆಯ ಮ॥ ಎನ್ ಜಗನ್ನಾಥರಾಯರು ರಚಿಸಿದಾರೆ.

ಹಿಂದುಸ್ಥಾನದ ಜಮಾ ಖರ್ಚು.

ಉತ್ಪತ್ತಿ ಕಡಮೆ; ಖರ್ಚು ಹೆಚ್ಚು.

ಕಳೆದ ಮಾರ್ಚಿ ತಾ 22 ನೇ ಸೋಮವಾರ ಮಧ್ಯಾಹ್ನ ಕಲ್ಕತ್ತಾ ಪಟ್ಟಣದಲ್ಲಿ ವೈಸ್‌ರಾಯಿ ಲಾರ್ಡ್ ಮಿಂಟೊ ಪ್ರಭುಗಳು ಮಂತ್ರಾಲೋಚನಾ ಸಭೆಯನ್ನು ನಡಿಸಿದರು ಆ ಸಭೆಯಲ್ಲಿ ಇಂಡಿಯಾ ಗವರ್ನ್‌ಮೆಂಟಿನ ಮೆಂಬರುಗಳೂ, ಬೇರೆ ಬೇರೆ ಆಧಿಪತ್ಯಗಳ ಪ್ರಜಾಪಕ್ಷದ ದೇಶೀಯ ಮೆಂಬರುಗಳೂ ಹಾಜರಾಗಿದ್ದರು. ಈ ಸಭೆಯಲ್ಲಿ ಖಜಾನಾ ಛಕ್ಕಿಯವರಾದ ಸರ್ ಗೈ ಫ್ಲೀಟ್‌ವುಡ್ ವಿಲ್‌ಸನ್, ಕ. ಸಿ ಎಸ್. ಯವರು ಹೋದ ವರುಷದ ಆದಾಯವ್ಯಯಗಳ ನಿಷ್ಕಳ ಲೆಕ್ಕಗಳನ್ನೂ, ಹಾಲಿ ಸಾಲಿನ ಜಮಾಖರ್ಚುಗಳ ಎರಡನೇ ಅಂದಾಜಾ ಪಟ್ಟಿಗಳನ್ನೂ ಮುಂದಿನ ಸಾಲಿನ ಉತ್ಪತ್ತಿ ಖರ್ಚುಗಳ (ಬಡ್ಜೆಟ್) ಅಂದಾಜಾ ಪಟ್ಟಿಗಳನ್ನೂ ಓದಿ ಒಪ್ಪಿಸಿದರು ಅವುಗಳಲ್ಲಿ ಕಂಡುಬರುವ ಮುಖ್ಯ ಬಾಬುಗಳನ್ನು ಕ್ರೋಢೀಕರಿಸಿ ಕೆಳಗೆ ವಿವರಿಸುವೆವು (ವಾಚಕರು ಪೌಂಡಿಗೆ 15 ರೂಪಾಯಿನಂತೆ ಲೆಕ್ಕಕೊಂಡು ಆಯವ್ಯಯಗಳನ್ನು ರೂಪಾಯಿನಲ್ಲಿ ತಿಳಿದುಕೊಳ್ಳಬಹುದಾಗಿದೆ)

1907-8 ನೇ ಸಾಲಿನ ಜಮಾ ಖರ್ಚು

ಉತ್ಪತ್ತಿ	...	ಪೌಂಡುಗಳು 7,10,03,275
ಖರ್ಚು	... ..	7,06 97,229
	ನಿವ್ವಳ ಶಿಲ್ಕು	3,06,046

1908-9 ನೇ ಸಾಲಿನ 2 ನೇ ಅಂದಾಜಾ ಪಟ್ಟಿ.

ಉತ್ಪತ್ತಿ	. .	ಪೌಂಡುಗಳು 6,96,28,600
ಖರ್ಚು	.. . ,,	7,33,19,100
	ಅಂದಾಜಾ ನಷ್ಟ	37,20,500

1909-10 ನೇ ಸಾಲಿನ ಬಡ್ಜೆಟ್ಟು

ಉತ್ಪತ್ತಿ	. ..	ಪೌಂಡುಗಳು 7,37,30,900
ಖರ್ಚು	. . ,,	7,35,20,000
	ಅಂದಾಜಾ ಶಿಲ್ಕು	2,10,900

1908-9 ನೇ ಸಾಲಿನ ವಿಚಾರಗಳು.

ಹಿಂದುಸ್ಥಾನದ ಕಾಲಸ್ಥಿತಿಯು 1907-08 ನೇ ಸಾಲಿನ ತನಕ ಪ್ರತಿ ಸಾಲಿನಲ್ಲೂ ಬಹಳ ತೃಪ್ತಿಕರವಾಗಿತ್ತು, ರಾಜಾದಾಯವು ವರುಷ ವರುಷ ಹೆಚ್ಚುತ್ತಾ ಬಂತು. 1900 ನೇ ವರುಷದಲ್ಲಿ ಕ್ಷಾಮಪ್ರಾಪ್ತವಾಗಿದ್ದರೂ ಸರ್ಕಾರದ ಉತ್ಪತ್ತಿಯು ಹೆಚ್ಚು ಕಡಮೆಯಾಗಲಿಲ್ಲ 1907 ನೇ ವರುಷದ ಮಧ್ಯಭಾಗದಲ್ಲಿ ಮಳೆಯು ನಿಲ್ಲದೆ ಹೋದಾಗ್ಯೂ, ಆ ಸಾಲಿನ ಉತ್ಪತ್ತಿಯಲ್ಲಿ 3,06,046 ಪೌಂಡು ಶಿಲ್ಕು ಉಳಿಯಿತು. ಆ ಸಾಲಿನ ದುಸ್ಥಾಲವು ಹಾಲೀ ಸಾಲಿಗೂ ವ್ಯಾಪಿಸಿಯಿತು ಮುಂಗಾರು ಫಸಲುಗಳು ಮಳೆಯಿಲ್ಲದೆ ಕೆಟ್ಟುಹೋದವು ಗೋಧಿಯ ಬೆಳೆಯು ಶೇಕಡಾ 27 ರಷ್ಟೂ, ಎಣ್ಣೆ ಬೀಜಗಳ ಫಸಲು ಶೇಕಡಾ 60 ರಷ್ಟೂ ನಷ್ಟವಾಯಿತು ವ್ಯಾಪಾರವು ಮಂದವಾಯಿತು ಸಾಮು ಪರದೇಶಕ್ಕೆ ರಫ್ತಾಗಲಿಲ್ಲ ಹಲ್ಲಿ ಬೆಳೆ ಕೈಸೇರಿತು ಬರ್ಮಾ ಆಧಿಪತ್ಯದಿಂದ ಅನ್ಯದೇಶಗಳಿಗೆ ರಫ್ತಾಗುತ್ತಿದ್ದ ಅಕ್ಕಿಯಲ್ಲಿ ಮೂರನೇ ಒಂದು ಪಾಲಿನಷ್ಟು ಹಿಂದುಸ್ಥಾನದಲ್ಲಿ ಕ್ಷಾಮವಿದ್ದ ಪ್ರಾಂತ್ಯಗಳಿಗೆ ಕಳುಹಲ್ಪಟ್ಟಿತು. ಆದರೆ 1907-08 ನೇ ಸಾಲಿನ ಕ್ಷಾಮವು ನಿವಾರಣೆಯಾದ ಹಾಗೆ ವ್ಯಾಪಾರವು ಚುರುಕಾದೀತೆಂಬ ಬರವಸೆಯುಂಟಾಗಿದ್ದದ್ದು ತಪ್ಪಿಹೋಯಿತು ಕಳೆದ ಮಾರ್ಚಿ ಆಖೈರಿನಲ್ಲಿ ಕ್ಷಾಮಪೀಡಿತರ ಸಂಖ್ಯೆಯು ಸ್ವಲ್ಪವಾದರೂ ಇದ್ದೇ ಇತ್ತು ಆದರೂ ಕಾಲಕ್ರಮದಲ್ಲಿ ಮಳೆ ಬೆಳೆಗಳಾಗಬಹುದೆಂಬ ನಿರೀಕ್ಷಣೆಯಿಂದ ಕಳೆದ ವರುಷ ಬಡ್ಜೆಟ್ಟನ್ನು ತಯಾರುಮಾಡಿದ ಖಜಾನಾ ಛಕ್ಕಿಯವರು ಈ ಸಾಲಿನಲ್ಲಿ 5,71,800 ಪೌಂಡು ಶಿಲ್ಕು ಉಳಿಯಬಹುದೆಂದು ಅಂದಾಜು ಕಟ್ಟಿದ್ದರು ಆದರೆ ಈ ಸಾಲಿನ ಕಾಲಸ್ಥಿತಿಯು ಕೆಟ್ಟು, ಆ ನಿರೀಕ್ಷಣೆಯನ್ನು ಸುಳ್ಳುಮಾಡಿತು

ಮಳೆ ತಪ್ಪಿ ಬೆಳೆಗಳು ಹಾಳಾದವು ಈ ಸಾಲಿನ ಮುಂಗಾರು ಬೆಳೆ ಬಹಳ ಸ್ವಲ್ಪವಾಯಿತು ಈಚೆಗೆ ಸ್ವಲ್ಪ ಮಳೆ ಬಂದಾಗ್ಯೂ ಅನೇಕ ಕಡೆಗಳಲ್ಲಿ ಮೂರನೇ ಒಂದು ಪಾಲಿಗಿಂತಲೂ ಹೆಚ್ಚಾಗಿ ಬೆಳೆಗಳು ನಷ್ಟವಾದವು. ಸಂಯುಕ್ತ ಆಧಿಪತ್ಯಗಳು, ಮಧ್ಯಇಂಡಿಯಾ, ಮಧ್ಯಪ್ರಾಂತ್ಯಗಳು, ಬೊಂಬಾಯಿ, ಬಂಗಾಳಾ, ಪಂಜಾಬ್, ಮದರಾಸ್. ಈ ಕಡೆಗಳಲ್ಲಿ ರಿಲೀಫ್ ಕೆಲಸಗಳು ಆರಂಭವಾದವು 1908 ನೇ ಏಪ್ರೈಲ್ 1 ರಲ್ಲಿ 11,25 000 ಬ್ರಿಟಿಷ್ ಇಂಡಿಯಾ ಪ್ರಜೆಗಳೂ, 1,50,000 ದೇಶೀಯ ಸಂಸ್ಥಾನಗಳ ಪ್ರಜೆಗಳೂ ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದ್ದರು ಜೂಲೈ ತಿಂಗಳ ತನಕ ಈ ಕ್ಷಾಮಪೀಡಿತರ ಸಂಖ್ಯೆಯು ಕಡಮೆಯಾಗಲಿಲ್ಲ ಅಕ್ಟೋಬರ್ ಮತ್ತು ನೊವೆಂಬರ್ ತಿಂಗಳ ಮಳೆ ನಿಂತುಹೋಯಿತು ಉತ್ತರದೇಶದಲ್ಲಿ ಮಲೇರಿಯಾ ಜ್ವರದಿಂದ ಅನೇಕ ಪ್ರಜೆಗಳು ಲಯವಾದರು ವ್ಯವಸಾಯ ಕಾರ್ಯಗಳಿಗೆ ತುಂಬಾ ಕೊರತೆಯುಂಟಾಯಿತು. ಎರಡನೆಯದಾಗಿ ಆಮದು ರಫ್ತು ಬಹುಮಟ್ಟಿಗೆ ನಿಂತುಹೋಯಿತು. ವ್ಯಾಪಾರವು ಹಿಂದುಸ್ಥಾನದಲ್ಲಿ ಮಾತ್ರವೇ ಮಂದವಾಯಿತೆಂದು ತಿಳಿಯಬಾರದು. ಈ ಸಾಲಿನಲ್ಲಿ ಪ್ರಪಂಚದ ಎಲ್ಲಾ ಕಡೆಗಳಲ್ಲೂ ಹೀಗೇ ಆಗಿರುತ್ತದೆ ಕಳೆದ ಹನ್ನೆರಡು ವರುಷಗಳಲ್ಲಿ ಈ ರಾಷ್ಟ್ರದ ವ್ಯಾಪಾರವು ಹೆಚ್ಚುತ್ತಲೇ ಬಂದಿದೆ. ಕಳೆದ 1896-97 ನೇ ಸಾಲಿನಲ್ಲಿ ಒಟ್ಟು 198 ಕೋಟಿ ರೂಪಾಯಿನ ಸರಕುಗಳು ಆಮದು ರಫ್ತಾಗಿರುತ್ತವೆ 1907-08 ನೇ ಸಾಲಿನಲ್ಲಾದರೋ 362 ಕೋಟಿ ರೂಪಾಯಿನ ಸರಕು ಆಮದು ರಫ್ತಾಯಿತು 1908-09 ನೇ ಸಾಲಿನಲ್ಲಿ ಆಮದು ರಫ್ತು ಕಡಮೆಯಾಗಿದೆ. ಇದರಿಂದ ರೈಲ್ವೆ ಹುಟ್ಟುವಳಿಯು ಬಹಳ ಕಡಮೆಯಾಯಿತು ಹೀಗೆಯೇ ಫಾರೆಸ್ಟು, ಸುಂಕ, ಅಂಚೆ, ಟೆಲಿಗ್ರಾಫ್, ಟಂಕಸಾಲೆ, ಈ ಬಾಬುಗಳಲ್ಲಿ ಉತ್ಪತ್ತಿ ಕಡಮೆಯಾಗಿರುತ್ತದೆ.

ಈ ರೀತಿ ವ್ಯವಸಾಯ ಮತ್ತು ವ್ಯಾಪಾರಗಳಲ್ಲಿ ಕೊರತೆಯುಂಟಾದದ್ದರಿಂದ ಹಾಲಿಸಾಲು ಆಖೈರಾಗುವುದರೊಳಗೆ ಇಂಡಿಯಾ ಗವರ್ನ್‌ಮೆಂಟಿನ ಹುಟ್ಟುವಳಿಯಲ್ಲಿ 37,20,500 ಪೌಂಡು ನಷ್ಟವಾದೀತೆಂದು ಹೇಳಬಹುದಾಗಿದೆ. ಈ ಪೈಕಿ ರೈಲ್ವೆ ಉತ್ಪತ್ತಿ ಒಂದರಲ್ಲೇ 36,74,800 ಪೌಂಡು ಕಡಮೆಯಾಗುವುದು ಮತ್ತು ಸೈನ್ಯದ ಇಲಾಖೆಯಲ್ಲಿ ಕೆಲವು ಅನಿರೀಕ್ಷ್ಯವಾದ ಹೆಚ್ಚು ಖರ್ಚುಗಳನ್ನು ಮಾಡಬೇಕಾಯಿತು ಉತ್ತರ ಬೀಹಾರ್, ಉತ್ತರ ಅಯೋಧ್ಯ, ಪೂರ್ವ ಬಂಗಾಳದ ಕೆಲವು ಡಿಸ್ಟ್ರಿಕ್ಟುಗಳು, ಈ ಪ್ರಾಂತ್ಯಗಳಲ್ಲೆಲ್ಲಾ ಈಗ್ಲೂ ಗಹೋ ರಿಲೀಫ್ ಕಾಮಗಾರಿಗಳು ನಡಿಯುತ್ತಿರುವವು. ಚೀನಾ ರಾಜ್ಯಕ್ಕೆ ಅಫೀಮು ಕಳುಹಿಸುವುದನ್ನು ಕಡಮೆಮಾಡಬೇಕಾಗಿರೋಣದರಿಂದ ಈ ಬಾಬಿನ ಹುಟ್ಟುವಳಿ ಕಡಮೆಯಾಗುವುದು. ಅನ್ಯದೇಶಗಳ ಸರಕುಗಳು ಅಪಾರವಾಗಿ ಬಂದು ಕರಗಪಡಿ ಆಗದೆ ಉಳಿದಿವೆ. ಧಾರಣೆವಾಸಿಗಳು ಇನ್ನೂ ಹೆಚ್ಚಾಗಿಯೇ ಇರುತ್ತವೆ. ಧಾರಣೆಗಳು ಇಳಿದು, ದಾಸ್ತಾನ್ ಇರುವ ಸರಕುಗಳು ಬಿಕರಿ ಆದಲ್ಲದೆ ವ್ಯಾಪಾರವು ಚುರುಕಾಗುವುದಿಲ್ಲ. ಕಳೆದ 1907-08 ನೇ ಸಾಲಿನಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಸಂಯುಕ್ತ ಆಧಿಪತ್ಯಗಳ ಕ್ಷಾಮನಿವಾರಣೆಗೆ 51,329 ಪೌಂಡು ಖರ್ಚುಮಾಡಿದರು.

ಹಾಲಿ ಸಾಲಿನ ಹುಟ್ಟುವಳಿಯಲ್ಲಿ 38,10.300 ಪೌಂಡು ಕಡಮೆಯೂ, ಖರ್ಚಿನಲ್ಲಿ 7,18,700 ಪೌಂಡು ಜಾಸ್ತಿಯೂ ಆಗಿದೆ ಅಫೀಮು ಬಿಕರಿಮಾಡಿದ್ದರಲ್ಲಿ ಮಾತ್ರ 10,41,300 ಪೌಂಡು ಜಾಸ್ತಿ ಉತ್ಪತ್ತಿಯಾಗಿರುವುದು. ಯಾವ ಬಾಬಿನ ಹುಟ್ಟುವಳಿ ಎಷ್ಟು ಕಡಮೆಯಾಯಿತೆಂದರೆ :—

ಬಾಬು.	ಪೌಂಡು.	ಬಾಬು	ಪೌಂಡು
ಜಮೀನ್	2,61,100	ಫೋರೆಸ್ಟು	78,000
ಉಪ್ಪು ..	1,85,600	ಅಂಚೆ .	85 900
ಸುಂಕ . .	1,18 000	ಟಂಕಸಾಲೆ .	1,48 900
ಬಡ್ಡಿ .	88,500	ನೀರಾವರಿ .	72,100

ಹಾಲಿಸಾಲಿನ ಖರ್ಚು ಬಾಬುಗಳು.

ಈ ಸಾಲಿನಲ್ಲಿ ಆಹಾರದ ಬಿನಸಿಗಳು ಪ್ರಿಯವಾದ ಕಾರಣ ಸಮಸ್ತ ಸರ್ಕಾರಿ ಇಲಾಖೆಗಳ ಸಣ್ಣ ನೌಕರರಿಗೂ ಹಾಸ್ಯದ ಅಲೋಯನ್ಸು ಪಾವತಿಮಾಡುತ್ತಿದೆ. ಮಿಲಿಟರಿ (ಸೈನ್ಯದ) ಇಲಾಖೆಯನ್ನು ಬಿಟ್ಟು ಇತರ ಸಿವಿಲ್ ಇಲಾಖೆಗಳಿಗೆ ಈ ಬಾಬಿನ ಖರ್ಚು 5,97.000 ಪೌಂಡಾಗಿರುವುದು ಇದಲ್ಲದೆ ಹಿಂದುಸ್ಥಾನದ ಆಳ್ವಿಕೆಯನ್ನು ಇಂಗ್ಲಿಷ್ ಗವರ್ನ್‌ಮೆಂಟಿಗೆ ವಹಿಸಿಕೊಂಡ ಐವತ್ತನೇ ವರುಷದ ಸಂತೋಷದ ನಿಮಿತ್ತವಾಗಿ ಚಕ್ರವರ್ತಿಯವರ ಆಜ್ಞಾನುಸಾರ ಈ ರಾಷ್ಟ್ರದ ಎಲ್ಲಾ ಇಲಾಖೆಗಳಲ್ಲೂ 50 ರೂಪಾಯಿಗೆ ಒಳಪಟ್ಟ ಸಂಬಳದಾರರಿಗೆ ಒಂದು ವಾರದ ಸಂಬಳವನ್ನು ಮಾಫಿ (ಉಚಿತ) ಯಾಗಿ ಕೊಡಲಾಯಿತಷ್ಟೆ. ಇದಕ್ಕೆ 1,40,000 ಪೌಂಡು ಖರ್ಚಾಗಿರುತ್ತದೆ. ಕ್ಷಾಮಪ್ರಾಪ್ತವಾಗಿರುವ ಕಡೆಗಳಲ್ಲಿ ವಸೂಲಾಗದೆ ಬಾಕಿ ನಿಂತಿದ್ದ ತಕಾವಿ ಸಾಲಗಳ ಪೈಕಿ 69,700 ಪೌಂಡು ರಿಮಿಷನ್ ಮಾಡಲಾಯಿತು ಆಫ್ಘಾನಿಸ್ಥಾನದ ಅಮೀರರಿಗೆ ಸಲ್ಲಬೇಕಾಗಿ ಉಳಿದಿದ್ದ 2,26,700 ಪೌಂಡು ಬಹುಮಾನವನ್ನು ಅವರು ಈ ಸಾಲಿನಲ್ಲಿ ಪಾವತಿ ತೆಗೆದುಕೊಂಡಿರುತ್ತಾರೆ. ಈ ರಾಷ್ಟ್ರದ ಸಂರಕ್ಷಣೆಗಾಗಿ ಹೆಚ್ಚು ಸೈನ್ಯವನ್ನು ಸೇರಿಸಬೇಕಾಗಿ ಬಂದದ್ದರಿಂದ ಈ ಬಾಬಿಗೆ 77,000 ಪೌಂಡು ಹೆಚ್ಚು ಖರ್ಚಾಯಿತು ಈ ಸಾಲಿನಲ್ಲಿ ವಾಯವ್ಯ ಪ್ರಾಂತ್ಯದ ಸರಹದ್ದಿನ ಆಚೆ ಮಹಮಂದರೆಂಬ ಗುಂಪಿನವರ ಮೇಲೆ ಯುದ್ಧ ಕಾರ್ಯಗಳನ್ನು ನಡಿಸಿದ್ದಕ್ಕೂ, ಸೈನ್ಯದ ಬೇರೆ ಮುಂತಾದ ಬಾಬಿಗೂ 2,66,700 ಪೌಂಡು ಹೆಚ್ಚು ಖರ್ಚಾಗಿದೆ ಇದಲ್ಲದೆ ಪೂರ್ವ ಬಂಗಾಳಾ ಮತ್ತು ಅಸ್ಸಾಂ, ಬಂಗಾಳಾ, ಸಂಯುಕ್ತ ಆಧಿಪತ್ಯಗಳು, ಈ ಮೂರು ಗವರ್ನ್‌ಮೆಂಟುಗಳಿಗೂ ಕ್ಷಾಮನಿವಾರಣೆಗಾಗಿ ಇಂಡಿಯಾ ಗವರ್ನ್‌ಮೆಂಟಿನ ಹುಟ್ಟುವಳಿಯಿಂದ 6,54,000 ಪೌಂಡುಗಳನ್ನು ಪಾವತಿಮಾಡಲಾಗಿದೆ

1909-10 ನೇ ಸಾಲಿನ ಬಡ್ಜೆಟ್ಟು.

ಮುಂದಿನ ಸಾಲಿನ ಜಮಾ ಖರ್ಚು ಶಿಲ್ಕುಗಳನ್ನು ಮೇಲೆಯೇ ಸೂಚಿಸಿದೆ ಕ್ಷಾಮ ನಿವಾರಣೆಗೂ, ಮಿಲಿಟರಿ ಇಲಾಖೆಗೂ ಮುಂದಿನ ವರುಷ ಹೆಚ್ಚು ಖರ್ಚಾಗಬೇಕಾಗಿರೋಣದರಿಂದ ಪೊಲೀಸ್ ಮತ್ತು ವೈದ್ಯ ಇಲಾಖೆಗಳ ವಿನಹಾ ಉಳಿದ ಬಾಬುಗಳ ಖರ್ಚುಗಳನ್ನು ಬಹು ಮಟ್ಟಿಗೆ ಕಡಮೆ ಮಾಡಲಾಗುವುದು. ಕ್ಷಾಮ ನಿವಾರಣೆಗಾಗಿ ನೆಮ್ಮದಿಯವರಿಗೆ ಕೊಟ್ಟಿರುವ ಅಡ್ವಾನ್ಸಿನ ಪೈಕಿ 31,100 ಪೌಂಡು ವಸೂಲಾಗುವುದೆಂದು ನಿರೀಕ್ಷಿಸಿದೆ ಕ್ಷಾಮ ನಿವಾರಣೆಗೆ ಬಂಗಾಳಾದಲ್ಲಿ 1,21,800 ಪೌಂಡೂ, ಸಂಯುಕ್ತ ಆಧಿಪತ್ಯಗಳಲ್ಲಿ 65,000 ಪೌಂಡೂ ಖರ್ಚಾಗುವಂತೆ ತೆಗೆದಿಟ್ಟಿದೆ ಸೈನ್ಯದ ಇಲಾಖೆಯಲ್ಲಿ ಸಂಬಳಕ್ಕೆ 1,30,000 ಪೌಂಡು, ಅಂದರೆ 1 50,000 ಪೌಂಡು ಹೆಚ್ಚಾಗಿ, ವಿನಿಯೋಗಿಸಲ್ಪಡುವುದು ಬೇರೆ ಬೇರೆ ಆಧಿಪತ್ಯಗಳ ಪೊಲೀಸ್ ಇಲಾಖೆಯ ಹೊಸ ಬದಲಾವಣೆಗಳಿಗೆ ಇಂಡಿಯಾ ಗವರ್ನ್‌ಮೆಂಟಿನಿಂದ ಮುಂದಿನ ವರುಷ ಕೊಡಲ್ಪಡುವ ಮೊಬಲಗು ಎಷ್ಟೆಂದರೆ :—

ಪ್ರಾಂತ್ಯ.	ರೂಪಾಯಿ.	ಪ್ರಾಂತ್ಯ	ರೂಪಾಯಿ
ಬೊಂಬಾಯಿ ಅಧಿ . .	3,00,000	ಸಂಯುಕ್ತ ಅಧಿ. .	4,00,000
ಬಂಗಾಳಾ ಅಧಿ.	2,50,000	ಮಧ್ಯಪ್ರಾಂತ್ಯ.	50,000
ಪೂರ್ವ ಬಂ. ಅಧಿ. . .	1,50,000		
		ಒಟ್ಟು	11,50,000

ಸೈನ್ಯದ ಇಲಾಖೆ.—ಹಿಂದುಸ್ಥಾನದ ಮಿಲಿಟರಿ (ಸೈನ್ಯದ) ಇಲಾಖೆಯೊಳಗೆ (1) ಭೂ ಸೈನ್ಯ, (2) ಹಡಗಿನ ಸೈನ್ಯ, (3) ಸೈನ್ಯದ ಕಟ್ಟಡಗಳು, (4) ವಿಶೇಷ ರಕ್ಷಣಾ ಏರ್ಪಾಡುಗಳು ಎಂಬ ನಾಲ್ಕು ಬಾಬುಗಳು ಸೇರಿಕೊಂಡಿವೆ. ಈ ಬಾಬುಗಳಿಗೆಲ್ಲಾ ಗವರ್ನ್‌ಮೆಂಟಿನವರು ಆಯಾ ಸಾಲಿನಲ್ಲಿ ಖರ್ಚುಮಾಡಿರುವ ಹಣವೆಷ್ಟೆಂದರೆ:—

ಸಾಲು.	ಪೌಂಡು.	ಸಾಲು	ಪೌಂಡು
1905-06	2,10,59,411	1908-09 ...	2,06 57,700
1906-07 ...	2,15,86,086	1909-10 . .	2,07,08,200
1907-08 . .	2,04,15.787		

ಇದಲ್ಲದೆ ಸರ್ವ ಸೇನಾಪತಿಯವರು ಹಿಂದುಸ್ಥಾನದ ಸೈನ್ಯವನ್ನು ಬದಲಾವಣೆ ಮಾಡಿ ಒಳ್ಳೇ ಸ್ಥಿತಿಯಲ್ಲಿ ಇಡುವುದಕ್ಕೂ ಕಾಮಗಾರಿ ಮುಗಿಸುವುದಕ್ಕೂ ಐದು ವರುಷ ಕಾಲ ಪ್ರತಿ ಸಾಲಿನಲ್ಲೂ 21 ಲಕ್ಷದ 67 ಸಾವಿರ ಪೌಂಡಿನಂತೆ ಸ್ಪೆಷಲ್ ಫಂಡನ್ನು ಕೊಡುತ್ತಾ ಬರಬೇಕೆಂದು ಕೇಳಿದ ಪ್ರಕಾರ ಈ ಹಣವನ್ನು ಕಳೆದ 1904-05 ನೇ ಸಾಲಿನ ಲಾಗಾಯಿತು ಕೊಡುತ್ತಾ ಬರಲಾಗಿದೆ. ಈ ಹಣದ ಪೈಕಿ ಇದುವರೆಗೆ ಅವರು 82,46,000 ಪೌಂಡು ಖರ್ಚುಮಾಡಿದ್ದಾರೆ. ಮುಂದಿನ ಸಾಲಿನಿಂದ ಈ ಸ್ಪೆಷಲ್ ಫಂಡನ್ನು ಸೈನ್ಯದ ಇಲಾಖೆಗೆ ಕೊಡುವುದಿಲ್ಲ.

ರೈಲ್ವೆ ಬಡಾವಣೆ.—1908 ನೇ ಮಾರ್ಚಿ ತಾ. 31 ರಲ್ಲಿ ಹಿಂದುಸ್ಥಾನದೊಳಗೆ ಒಟ್ಟು 30,206¼ ಮೈಲಿ ದೂರ ರೈಲ್ ರಸ್ತೆಗಳಿದ್ದವು. ಹಾಲಿಸಾಲಿನಲ್ಲಿ 774¼ ಮೈಲಿ ದೂರ ಹೊಸ ರೈಲ್ ರಸ್ತೆಗಳು ಸಿದ್ಧವಾಗುತ್ತವೆ ಮುಂದಿನ ವರುಷ 731½ ಮೈಲಿಯಷ್ಟು ರೈಲ್ ಭಾಟೆಗಳನ್ನು ಕಾಮಗಾರಿ ಮಾಡಿಸಿ ಸಿದ್ಧಪಡಿಸಬೇಕೆಂದಿರುತ್ತಾರೆ. ಹಿಂದುಸ್ಥಾನದ ರೈಲ್ವೆ ಉತ್ಪತ್ತಿ, ಬಡಾವಣೆ ಮುಂತಾದದ್ದನ್ನು ಕುರಿತು ಚರ್ಚೆಮಾಡಿ ರಿಪೋರ್ಟು ಬರೆದಂಥಾ ಕಮಿಟಿಯವರು ರೈಲ್ವೆ ಬಡಾವಣೆಗೆ ಗವರ್ನ್‌ಮೆಂಟಿನವರು ಪ್ರತಿ ಸಾಲಿನಲ್ಲೂ 125 ಲಕ್ಷ ಪೌಂಡಿನಂತೆ ವಿನಿಯೋಗಿಸುತ್ತಾ ಬರಬೇಕೆಂದು ಸೂಚಿಸಿರುತ್ತಾರೆ. ಮುಂದಿನ ಸಾಲಿನಲ್ಲಿ ಇಷ್ಟು ಹಣ ಕೊಡಲು ಸಾಧ್ಯವಿಲ್ಲವಾದದ್ದರಿಂದ ಈ ಬಾಬಿಗೆ ಒಂದು ಕೋಟಿ ಪೌಂಡನ್ನು ಮಾತ್ರ ತೆಗೆದಿಡಲಾಗುವುದು ಮುಂದೆ ಕಾಲಸ್ಥಿತಿಯು ಅನುಕೂಲವಾದ ಪಕ್ಷದಲ್ಲಿ ಮೇಲ್ಕಂಡ ಪ್ರಕಾರ ಹೆಚ್ಚು ಮೊಬಲಗನ್ನು ಕೊಡಬಹುದಾಗಿದೆ.

ನೀರಾವರಿ ಕಾಮಗಾರಿಗಳು —ಕಳೆದ 1908 ನೇ ಮಾರ್ಚಿ ತಾ. 31 ರಲ್ಲಿ ಒಟ್ಟು 53,677 ಮೈಲಿ ಉದ್ದ ಸಣ್ಣ ದೊಡ್ಡ ನಾಲೆಗಳಿದ್ದವು ಇವುಗಳ ಕೆಳಗೆ 410 ಲಕ್ಷ ಎಕರೆ ಜಮೀನು ಜರೀ ಫಸಲಿಗೆ ತರಲ್ಪಡಬಹುದು. 1907-08 ಸಾಲಿನಲ್ಲಿ 2,00,61,531 ಎಕರೆ ಜಮೀನು ವ್ಯವಸಾಯದಲ್ಲಿತ್ತು. ಈ ನೀರಾವರಿ ಕಾಮಗಾರಿಗಳಿಗೆ ಒಟ್ಟು 10 ಕೋಟಿಯೂ 17 ಲಕ್ಷ ರೂಪಾಯಿ ಮೂಲಧನ ಖರ್ಚಾಗಿರುತ್ತಾದದ್ದರಿಂದ ಖರ್ಚು, ಬಡ್ಡಿ ಹೋಗಲಾಗಿ ಸರ್ಕಾರಕ್ಕೆ ಆ ಸಾಲಿನಲ್ಲಿ 190 ಲಕ್ಷ ರೂಪಾಯಿ ನಿವ್ವಳ ಆದಾಯ (ಅಂದರೆ, ಶೇಕಡಾ 7½ ರಂತೆ ಬಡ್ಡಿ) ಬಂದಿರುತ್ತದೆ 1908-09 ನೇ ಸಾಲಿನಲ್ಲಿ 200 ಲಕ್ಷ ರೂಪಾಯಿ (ಅಂದರೆ, ಶೇಕಡಾ 8¼ ರಂತೆ ಬಡ್ಡಿ) ಲಾಭವಾದೀತೆಂದು ಅಂದಾಜಾಗಿದೆ. 1909 ನೇ ಮಾರ್ಚಿ ತಾ. 31 ರಲ್ಲಿ ಒಟ್ಟು 54,912 ಮೈಲಿ ದೂರವುಳ್ಳ ದೊಡ್ಡ ಸಣ್ಣ ನಾಲೆಗಳು ಸಿದ್ಧವಾಗುವವೆಂದು ನಿರೀಕ್ಷಿಸಲ್ಪಟ್ಟಿದೆ.

ಮೆ|| ಇ. ಮೆಕಾನಕಿಯವರಿಗೆ ರಾಜಧಾನಿಯಲ್ಲಿ ನಡೆದ ಸನ್ಮಾನೋತ್ಸವಗಳು.

ನಮ್ಮ ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯಾಗಿ ಕಳೆದ ಏಳು ವರುಷಗಳಿಂದಲೂ ಕೆಲಸ ಮಾಡಿದ ಮೆ|| ಇ. ಮೆಕಾನಕಿಯವರು ಈ ಸಂಸ್ಥಾನವನ್ನು ಬಿಟ್ಟು ಹೋಗತಕ್ಕವರಾಗಿರುವುದನ್ನು ಕಂಡು ರಾಜಧಾನಿಯ ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರು ಕಳೆದ ವಾರ ಅವರಿಗಾಗಿ ಔತಣ ಮೊದಲಾದ ಸನ್ಮಾನೋತ್ಸವಗಳನ್ನು ನಡೆಸಿದರು.

ವಾಲಂಟಿಯರ್ ಸೈನಿಕರು ಮಾಡಿದ ಸನ್ಮಾನವು.

ಕಳೆದ ತಾ ೨೪ ನೇ ಬುಧವಾರ ರಾತ್ರಿ ರಾಜಧಾನಿಯಲ್ಲಿರುವ ವಾಲಂಟಿಯರ್ ಸೈನಿಕರು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಬಹು ಸಂಭ್ರಮಯುಕ್ತವಾದ ಉತ್ಸವವನ್ನು ಜರುಗಿಸಿದರು ಇದಕ್ಕಾಗಿ ಬಂಗಲೆಯನ್ನು ಒಳಗೂ ಹೊರಗೂ ದಿವ್ಯವಾಗಿ ಅಲಂಕರಿಸಿದ್ದರು. ರಾತ್ರಿ ಸುಮಾರು ೯ ಗಂಟೆಗೆ ಮೆ|| ಇ ಮೆಕಾನಕಿಯವರನ್ನು ಆ ಬಂಗಲೆಗೆ ಕರೆದು ಅವರನ್ನು ಶ್ರೇಷ್ಠವಾದ ಪೀಠದಲ್ಲಿ ಕುಳ್ಳಿರಿಸಿ. ಯೂರೋಪಿಯನ್‌ರಿಗೆ ಹಿತಕರಗಳಾದ ಸಂಗೀತಾದಿಗಳನ್ನು ನಡಿಸಿದರು ಬ್ಯಾಂಡ್ ವಾದ್ಯಗಾರರು ಕಿವಿಗಿಂಪಾದ ಹಾಡುಗಳನ್ನು ನುಡಿಸಿದರು ಕಡೆಯಲ್ಲಿ ಮೆ ನಾಗಸ್ವಾಮಿ ಯವರು ವಾಲಂಟಿಯರ ಪರವಾಗಿ ಮೆ|| ಮೆಕಾನಕಿಯವರಿಗೆ ಒಂದು ಅಡ್ರೆಸ್ಸನ್ನು ಓದಿ ಕೊಟ್ಟರು. ಅದರಲ್ಲಿ ಕಂಡ ಮುಖ್ಯಾಭಿಪ್ರಾಯಗಳೇನೆಂದರೆ :—

ನೀವು ಈ ಉತ್ಸವಕ್ಕೆ ದಯಮಾಡಿದ್ದು ನಮಗೆಲ್ಲಾ ತುಂಬಾ ಸಂತೋಷವನ್ನುಂಟುಮಾಡಿದೆ ವಾಲಂಟಿಯರ್ ಕಂಪನಿಯು ನಿಮ್ಮ ಕಾಲದಲ್ಲಿ ಬಹಳ ಅಭಿವೃದ್ಧಿಗೆ ಬಂದಿರುವುದು ಅದರ ವಿಷಯದಲ್ಲಿ ನೀವು ತುಂಬಾ ಉತ್ಸಾಹಗೊಂಡು ಕಾರ್ಯಗಳನ್ನು ನಡಿಸುತ್ತಾ ಬಂದಿರಿ. ನಾವುಗಳೆಲ್ಲಾ ಇದಕ್ಕಾಗಿ ನಿಮ್ಮನ್ನು ಕೃತಜ್ಞತಾಪೂರ್ವಕವಾಗಿ ವಂದಿಸುತ್ತೇವೆ. ಈ ದಿನ ನಾವು ಒಪ್ಪಿಸುವ ಈ ಅಲ್ಪ ವಸ್ತುವನ್ನು ತಾವು ಕೃಪೆಯಿಟ್ಟು ಅಂಗೀಕರಿಸಿ ನಮ್ಮ ಜ್ಞಾಪಕಾರ್ಥವಾಗಿ ತಮ್ಮ ಬಳಿಯಲ್ಲಿಟ್ಟುಕೊಂಡಿರಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೂ ನಿಮ್ಮ ಪತ್ನಿ ಪುತ್ರಾದಿಗಳಿಗೂ ದೇವರು ಸರ್ವದಾ ಸುಖ ಸಂತೋಷಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುವೆವು

ಅದಕ್ಕೆ ಮೆ ಮೆಕಾನಕಿಯವರು ಪ್ರತ್ಯುತ್ತರವಾಗಿ ತಿಳಿಸಿದ್ದೇನೆಂದರೆ .— ನೀವು ಈ ದಿನ ನನಗೆ ಮಾಡಿದ ಸನ್ಮಾನವನ್ನೂ ಕೊಟ್ಟಿರುವ ಈ ಬಹುಮಾನವಸ್ತುವನ್ನೂ ಕೃತಜ್ಞತೆಯಿಂದಲೂ ಬಹು ಸಂತೋಷವಾಗಿಯೂ ಅಂಗೀಕರಿಸುತ್ತೇನೆ ವಾಲಂಟಿಯರ್ ಸೈನ್ಯವನ್ನು ಒಳ್ಳೆ ಸ್ಥಿತಿಗೆ ತಂದಿಡಲು ನಾನು ಸಾಹಸಪಟ್ಟೆನೆಂದು ನೀವು ಹೇಳಿರುವ ಮಾತು ನನಗೆ ತುಂಬಾ ಸಂತೋಷವನ್ನುಂಟುಮಾಡಿದೆ. ಈ ಕಂಪನಿಯ ಹುದ್ದೆದಾರರು ನನಗೆ ಈ ಭಾಗದಲ್ಲಿ ತುಂಬಾ ಸಹಾಯ ಮಾಡಿರುತ್ತಾರೆಂದು ಈ ಸಮಯದಲ್ಲಿ ಸೂಚಿಸದೆ ಇರಲಾರೆನು. ಈ ಕಂಪನಿಯು ಈಗ ಸಂಪಾದಿಸಿಕೊಂಡಿರುವ ಒಳ್ಳೆಯ ಹೆಸರು ಶಾಶ್ವತವಾಗಿದ್ದೀತೆಂದೂ, ಇನ್ನೂ ಅತಿಶಯವಾಗಿ ಅಭಿವೃದ್ಧಿ ಹೊಂದೀತೆಂದೂ ನಂಬಿ ನಿರೀಕ್ಷಿಸುತ್ತೇನೆ.

ಈ ವರುಷ ಈ ಕಂಪನಿಯ ಕೆಲಸಗಳನ್ನು ಬಹು ತೃಪ್ತಿಕರವಾಗಿ ನಡಿಸಿದ್ದ ಕೆಲವು ವಾಲಂಟಿಯರುಗಳಿಗೆ ಮೆ| ಮೆಕಾನಕಿಯವರು ಆ ಸಂತೋಷ ಸಭೆಯಲ್ಲಿ ಬಹು ಮಾನಗಳನ್ನು ಕೊಟ್ಟರು. ತರುವಾಯ ಎಲ್ಲರೂ ಮೆ|| ಮೆಕಾನಕಿಯವರಿಗೆ ಜಯವಾಗಲೆಂದು ಘೋಷಮಾಡಿ, ಆ ದಿನದ ಉತ್ಸವವನ್ನು ಮುಕ್ತಾಯಮಾಡಿದರು.

ಪುರಜನರು ಮಾಡಿದ ಸನ್ಮಾನೋತ್ಸವವು.

ಕಳೆದ ತಾ. ೨೯ ನೇ ಸೋಮವಾರ ರಾತ್ರಿ ಅದೇ ಟೌನ್ ಹಾಲ್ ಬಂಗಲೆಯಲ್ಲಿ ಪುರ ಜನರು ಸೇರಿ ಮೆ|| ಇ. ಮೆಕಾನಕಿಯವರಿಗಾಗಿ ಬಹು ಸಂಭ್ರಮಯುಕ್ತವಾದ ಔತಣೋತ್ಸವವನ್ನು ಮಾಡಿದರು. ಬಂಗಲೆಯ ಒಳಗೆ ಬಹು ನೇತ್ರಾನಂದಕರವಾಗಿ ಅಲಂಕಾರಗಳನ್ನು ಮಾಡಿದ್ದರು. ಹೊರಪಾರ್ಶ್ವದಲ್ಲಿ ದೀಪೋಳ್ಳವವನ್ನು ಮಾಡಿದರು. ರಾಜಧಾನಿಯಲ್ಲಿರುವ ಮುಖ್ಯ ಮುಖ್ಯರಾದ ಅರಸುಗಳೂ, ಸರ್ಕಾರ್ ಅಧಿಕಾರಿಗಳೂ, ಇಲಾಖೆಗಳ ಅಧಿಕಾರಿಗಳೂ, ನ್ಯಾಯ ಮಂಡಲಿಯವರೂ, ಬಹುಮಂದಿ ಶೆಟ್ಟಿ ವರ್ತಕರೂ, ಯೂರೋಪಿಯನ್ ಮತ್ತು ಯೂರೇಷಿಯನ್ ಸರದಾರರೂ ದೊರೆಸಾನಿಗಳೂ ಎಲ್ಲಾ ಸುಮಾರು ೫೦೦ ಮಂದಿಗಿಂತಲೂ ಹೆಚ್ಚಾಗಿಯೇ ಸಭೆಯನ್ನಲಂಕರಿಸಿದ್ದರು. ಮೇಲ್ಗಡೆ ಬಾಲ್ಕನಿ ಯಲ್ಲಿ ದೇಶೀಯ ಸ್ತ್ರೀಯರೂ, ವಿದ್ಯಾರ್ಥಿಗಳೂ ಸೇರಿದ್ದರು. ಮಹಾರಾಜರವರ ಬ್ಯಾಂಡ್ ವಾದ್ಯಗಾರರು ಮಾರ್ಚ್ ಎಂಬ ಪದವನ್ನು ನುಡಿಸುವಲ್ಲಿ ಮೆ|| ಮೆಕಾ

ನಶಿಯುವರೂ, ಮುಂದೆ ಅವರ ಕೆಲಸವನ್ನು ವಹಿಸುವ ಮಿ ಆರ್ ಎಚ್ ಕ್ಯಾಂಬೆಲ್, ಐ ಸಿ ಎಸ್ ಯವರೂ ಸಾರೋಟಿನಲ್ಲಿ ಬಂದಿಳಿದರು ಉತ್ಸವದ ಕಮಿಟಿಯ ಪ್ರೆಸಿಡೆಂಟ್ ಮತ್ತು ಸೆಕ್ರೆಟರಿಗಳ್ ಮುಂತಾದವರು ಅವರನ್ನು ಎದುರುಗೊಂಡು ಒಳಕ್ಕೆ ಕರೆದುತಂದು ಶ್ರೇಷ್ಠಾಸನಗಳಲ್ಲಿ ಕುಳ್ಳಿರಿಸಿದರು ಆ ಕೂಡಲೇ ಇಲ್ಲಿನ ಕಾನ್ವೆಂಟಿನ ಮಕ್ಕಳ ಪೈಕಿ ಒಂದು ಸಣ್ಣ ಮಗುವು ಬಂದು ಮೆ|| ಮೆಕಾನಕಿಯವರಿಗೆ ಒಂದು ಸುಂದರವಾದ ತುರಾಯಿಯನ್ನು ಒಪ್ಪಿಸಿತು

ತರುವಾಯ ಕಾನ್ವೆಂಟಿನ ೧೫—೨೦ ಮಂದಿ ಸಣ್ಣ ಮಕ್ಕಳು ಪಿಯಾನಾ ವಾದ್ಯಕ್ಕೆ ಅನುಸಾರವಾಗಿ ಬಹು ಇಂಪಾದ ಹಾಡುಗಳನ್ನು ಹೇಳಿ ಸಭಿಕರಿಗೆ ಆಹ್ಲಾದವನ್ನುಂಟುಮಾಡಿದರು ಮಿ ಡಿಕ್ರೂಸ್‌ಯವರ ಪತ್ನಿ ಪುತ್ರಿಯರೂ ಮೆ|| ಪೆರೆರಾ ಎಂಬಾತನೂ ಹಾಡಿ ಪಿಟೀಲನ್ನು ಬಹು ಸ್ವಾರಸ್ಯವಾಗಿ ನುಡಿಸಿದರು ವೈಣಿಕ ಶಿಖಾಮಣಿ ಮೆ|| ಶೇಷಣ್ಣನವರ ಇಂಪಾದ ವೀಣಾ ಗಾನವಾಯಿತು ಕೊಳಲು ವಾದ್ಯಗಾರರು ಬಹು ಮನೋಹರವಾಗಿಯೂ ಮಹಾ ಸ್ವತ್ಯಹರ್ಷವಾಗಿಯೂ ಕೊಳಲಿನಲ್ಲಿ ರಾಗವನ್ನು ಆಲಾಪನೆಮಾಡಿ ಒಂದೆರಡು ಪದಗಳನ್ನು ನುಡಿಸಿದರು ಪ್ರಸಿದ್ಧರಾದ ಒಬ್ಬ ಪಾರ್ಸಿ ದೊಡ್ಡ ಮನುಷ್ಯರು ಇಂಗ್ಲೀಷಿನಲ್ಲಿ ವಾಗ್ಮಿರಿಯುಳ್ಳ ಕೆಲವು ಮಾತುಗಳನ್ನು ಆಡಿ ಸಭಿಕರನ್ನು ಸಂತೋಷಪಡಿಸಿದರು. ಬಳಿಕ ಚಾಮರಾಜೇಂದ್ರ ನಾಟಕ ಸಂಘದವರು « ರತ್ನಾವಳಿ » ನಾಟಕದ ಮೂರನೇ ಅಂಕದಲ್ಲಿ ಒಂದು ಸೀನನ್ನು ಆಡಿ ಸಭಿಕರಿಗೆ ನೇತ್ರಾನಂದವನ್ನೂ ಮನೋರಂಜನೆಯನ್ನೂ ಉಂಟುಮಾಡಿದರು ಇದಲ್ಲದೆ ಸ್ತ್ರೀ ವೇಷಧಾರಿಗಳಾದ ಅದೇ ಕಂಪನಿಯ ಎಂಟು ಮಂದಿ ಇಂಪಾದ ಹಾಡು ಹೇಳಿಕೊಂಡು ಜಡೆಯನ್ನು ಹಾಕಿ ಬಿಚ್ಚಿದ್ದು ಬಹು ಸಂತೋಷಕರವಾಗಿತ್ತು

ಕಡೆಯಲ್ಲಿ ಪುರಜನರ ಪರವಾಗಿ ಕಮಿಟಿಯ ಪ್ರೆಸಿಡೆಂಟರಾದ ಮೆ|| ಬಿ ತಿರುಮಲಾಚಾರ್ಯರು ಮೆ ಮೆಕಾನಕಿಯವರನ್ನು ಕುರಿತು ಕೆಲವು ಮಾತುಗಳನ್ನು ಹೇಳಿದರು ಅದರ ಮುಖ್ಯಾಭಿಪ್ರಾಯವೇನೆಂದರೆ —

ಮೆ|| ಮೆಕಾನಕಿಯವರು ನಮ್ಮ ಶ್ರೀಮನ್ಮಹಾರಾಜರವರಿಗೆ ರಾಜ್ಯಾಭಿಷೇಕವಾದ ಕಳೆದ ಏಳು ವರುಷಗಳಿಂದಲೂ ಮೈಸೂರಿಗೆ ಬಂದು ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಕೆಲಸವನ್ನು ವಹಿಸುತ್ತಿದ್ದು ಈಗ ಆ ಕೆಲಸವನ್ನು ಬಿಟ್ಟು ಹೋಗುವವರಾಗಿದ್ದಾರೆ ಇವರು ಈ ಪಟ್ಟಣದ ಪ್ರಜೆಗಳಿಗೆ ನಾನಾ ಪ್ರಕಾರವಾದ ಉಪಕಾರಗಳನ್ನು ಮಾಡಿ ಸಕಲರ ಕೃತಜ್ಞತೆ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿರುತ್ತಾರೆಂಬುವುದಕ್ಕೆ ಈ ದಿನದ ಈ ಸಂತೋಷ ಸಭೆಯೂ ಇದರ ಉತ್ಸಾಹವೂ ದೃಷ್ಟಾಂತಗಳಾಗಿರುವುವು ಮೆ|| ಮೆಕಾನಕಿಯವರು ಇಲ್ಲಿರುವಾಗ್ಗೆ ಈ ಪಟ್ಟಣದ ಮತ್ತು ಪುರಜನರ ಅಭಿವೃದ್ಧಿ ಕ್ಷೇಮ ಚಿಂತನೆಯನ್ನು ವಿಶೇಷವಾಗಿ ವಹಿಸಿದ್ದರು ಅವರ ಕಾಲದಲ್ಲಿ ಈ ಪಟ್ಟಣದ ಅಭಿವೃದ್ಧಿಗಾಗಿ ಟ್ರಸ್ಟ್ ಬೋರ್ಡ್ ಎಂಬ ಸಂಘವು ಏರ್ಪಟ್ಟಿತು ಅವರು ಈ ಸಂಘದ ಕಾರ್ಯಗಳಲ್ಲಿ ತುಂಬಾ ಉತ್ಸಾಹಶೀಲರಾಗಿ ಕೆಲಸ ಮಾಡುತ್ತಾ ಬಂದದ್ದರಿಂದ ಪಟ್ಟಣವು ಬಹುಮಟ್ಟಿಗೆ ಆರೋಗ್ಯಕರವಾಯಿತು ಕೊಳಕಾದ ಅನೇಕ ಭಾಗಗಳು ಒಡೆಯಲ್ಪಟ್ಟವು ರಸ್ತೆಗಳೂ ಚರಂಡಿಗಳೂ ಬಡಾವಣೆಗಳೂ ವಿಶೇಷವಾಗಿ ಆದದ್ದರಿಂದ ಪುರವಾಸಿಗಳಿಗೆ ಆರೋಗ್ಯಕರವಾದ ಗಾಳಿ, ಬೆಳಕು, ಬಿಸಿಲು ಬೀಳುವ ನಿವಾಸಸ್ಥಳಗಳು ಉಂಟಾದವು ಮೊದಲು ಪ್ಲೇಗ್ ಉಪದ್ರವ ಹಾವಳಿಯು ಈ ಪಟ್ಟಣದಲ್ಲಿ ವಿಶೇಷವಾಗಿದ್ದದ್ದು ಈಗ ಬಹುಮಟ್ಟಿಗೆ ಈ ಅಭಿವೃದ್ಧಿ ಕಾರ್ಯಗಳ ದೆಸೆಯಿಂದ ತಪ್ಪಿ ಪ್ರಜೆಗಳು ಸಮೃದ್ಧಿಯಾಗಿರುತ್ತಾರೆ ಮೆ|| ಮೆಕಾನಕಿಯವರು ರಾಜಪಾಳ್ಯ ಸ್ಟೇಯಾಜೀರಾವ್ ರಸ್ತೆಯಲ್ಲಿ ಭಾರಿಯಾದ ಕೈಗಾರಿಕೆಗಳ ಪಾಠಶಾಲೆಯನ್ನು ಕಟ್ಟಿಸುವುದಕ್ಕೆ ತುಂಬಾ ಸಾಹಸಪಟ್ಟರು ಈ ಕಟ್ಟಡಕ್ಕೆ ಘನವಷ್ಟೈಇದ ಪ್ರಿನ್ಸ್ ಆಫ್ ವೇಲ್ಸ್‌ರವರು ಸ್ವತಃ ಅಸ್ತಿಭಾರಶಿಲೆಯನ್ನು ಹಾಕಿರುತ್ತಾರೆ ಇವರ ಕಾಲದಲ್ಲೇ ಈ ಕಟ್ಟಡವು ಪೂರೈಸದೆ ಹೋಯಿತಲ್ಲಾ ಎಂದು ನಮಗೆಲ್ಲಾ ಸ್ವಲ್ಪ ವಿಷಾದವಾಗಿದ್ದಾಗ್ಯೂ, ಅದು ಸಿದ್ಧವಾಗಿ ಪ್ರತಿಷ್ಠೆಯಾಗುವ ಸಮಯಕ್ಕೆ ಅವರು ಬಾರದೆ ಇರಲಾರರೆಂದು ಕುತೂಹಲವು ವರ್ಧಕವಾಗಿ ನಿರೀಕ್ಷಿಸುತ್ತೇವೆ ನಮ್ಮ ಶ್ರೀಮನ್ಮಹಾರಾಜರವರು ಇವರ ಕಾಲದಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳ ಪ್ರದರ್ಶನಗಳನ್ನು ರಾಜಧಾನಿಯಲ್ಲಿ ಪ್ರಾರಂಭಿಸಿದರು ಇವು ಫಲದಾಯಕವಾಗುವಂತೆ ನಡೆದದ್ದಕ್ಕೆ ಮೆ|| ಮೆಕಾನಕಿಯವರ ಉತ್ಸಾಹವೂ ಸಾಹಸವೂ ತುಂಬಾ ಸಹಕಾರಿಗಳಾಗಿದ್ದವು ಇಷ್ಟೇ ಅಲ್ಲ ಮೆ|| ಮೆಕಾನಕಿಯವರು ಮಹಾರಾಣೀ ಕಾಲೇಜಿನ ಮೇಲ್ವಿಚಾರಣಾ ಕಮಿಟಿಯ ಮೆಂಬರಾಗಿದ್ದುಕೊಂಡು, ಸ್ತ್ರೀ ವಿದ್ಯಾಭಿವೃದ್ಧಿಗೆ ಬಹು ಒಳ್ಳೆಯ ಸಲಹೆ ಪ್ರೋತ್ಸಾಹಾದಿಗಳನ್ನು ಕೊಟ್ಟಿರುತ್ತಾರೆ ಇವರು ತುಂಬಾ ಕರುಣಾರ್ದ್ರಚಿತ್ತದವರು, ಪರೋಪಕಾರಿಗಳು, ಸಹಜ ಗುಣಶೀಲರು ದೇವರು ಇವರನ್ನೂ ಇವರ ಸಂಸಾರವನ್ನೂ ಚಿರಕಾಲ ಸುಖದಿಂದ ಕಾಪಾಡಿ, ಅವರಿಗೆ ಮಂಗಳವನ್ನುಂಟುಮಾಡುತ್ತಾ ಬರಲೆಂದು ಪ್ರಾರ್ಥಿಸುತ್ತೇವೆ

ಮುಂದೆ ಇವರ ಸ್ಥಾನವನ್ನಲಂಕರಿಸುವ ಮೆ|| ಕ್ಯಾಂಬೆಲ್‌ಯವರೂ ಈ ದಿನ ಈ ಸಂತೋಷೋತ್ಸವಕ್ಕೆ ದಯಮಾಡಿ ಬಂದದ್ದು ನಮಗೆಲ್ಲಾ ತುಂಬಾ ಹರ್ಷವನ್ನುಂಟುಮಾಡಿರುವುದು ಈ ಸಂದರ್ಭದಲ್ಲೇ ನಾವು ಅವರಿಗೆ ಸುಖಾಗಮನವನ್ನು ಬಯಸುವೆವು ಈ ಸಂಸ್ಥಾನದಲ್ಲಿರುವ ತನಕ ಅವರು ಸುಖಸಂತೋಷಗಳಿಂದ ಕೂಡಿದವರಾಗಿರುತ್ತಾರೆಂದೂ ಅವರಿಂದ ನಮಗೆ ವಿಶೇಷವಾದ ಪ್ರಯೋಜನವಾಗುತ್ತದೆಂದೂ ನಂಬಿ ಹಾರೈಸುತ್ತೇವೆ

ಈ ರೀತಿಯಾಗಿ ಮೆ|| ತಿರುಮಲಾಚಾರ್ಯರು ಇಂಗ್ಲೀಷಿನಲ್ಲಿ ಹೇಳಿದ ಅಭಿಪ್ರಾಯಗಳನ್ನೇ ಮಿ ವೆಂಕಟಕೃಷ್ಣಯ್ಯನವರು ಕನ್ನಡದಲ್ಲೂ ಮೆ|| ಮಹಮದ್ ಜಾಫರ್ ಯವರು ಹಿಂದೂಸ್ತಾನಿಯಲ್ಲೂ ತಿಳಿಸಿದರು ಮೆ|| ಮೆಕಾನಕಿಯವರಿಗೂ ಮಿ ಕ್ಯಾಂಬೆಲ್ ಯವರಿಗೂ ದೊಡ್ಡದಾದ ಹೂವಿನ ಹಾರ ಹಾಕಿ ಸುಗಂಧಪೂರಿತವಾದ ತುರಾಯಿಗಳನ್ನು ಕೊಟ್ಟರು ತರುವಾಯ ಮೆ ಮೆಕಾನಕಿಯವರು ಪುರಜನರನ್ನು ಕೃತಜ್ಞತಾಪೂರ್ವಕವಾಗಿ ವಂದಿಸಿದರು ಸಭಿಕರೆಲ್ಲ ಮೆ|| ಮೆಕಾನಕಿಯವರಿಗೆ ಜಯವಾಗಲೆಂದು ಘೋಷಮಾಡಿದರು ಬ್ಯಾಂಡ್ ವಾದ್ಯಗಾರರು ಸಲಾಂ ಬಾಜಾವನ್ನು ನುಡಿಸಿದ ಮೇಲೆ ಆ ರಾತ್ರಿಯ ಸಂತೋಷೋತ್ಸವವು ಸಾಂಗವಾಗಿ ಮುಕ್ತಾಯವಾಯಿತು

ತಾಲ್ಲೂಕು ವರ್ತಮಾನಗಳು.

ತೀರ್ಥಹಳ್ಳಿ.—ಕಳೆದ ಫೆಬ್ರವರಿ ತಾ ೨೭ ನೇ ಶನಿವಾರ ತೀರ್ಥಹಳ್ಳಿ ತಾಲ್ಲೂಕು ಆಗುಂಬೆ ಸಮ್ಮತು ಕಾರಿಹಕ್ಕಲು ಗ್ರಾಮದಲ್ಲಿ ಒಂದು ಕೊಲೆ ನಡೆಯಿತು ಸಿಂಗಪ್ಪನೆಂಬ ಬ್ರಾಹ್ಮಣನು ಬಹು ದಿವಸಗಳಿಂದ ರುಪಾಯಿ ಮಾಡಿಕೊಂಡಿದ್ದ ಹಣವನ್ನೆಲ್ಲ ಅವನ ಎರಡನೇ ಹೆಂಡತಿಯ ಕಡೆಯವನಾದ ತಿಮ್ಮಪ್ಪನೂ, ಆ ಗ್ರಾಮದ ಪಟೇಲ ಕೆಲಸ ನೋಡುತ್ತಿದ್ದ ವೆಂಕಟಗಿರಿಯಪ್ಪನೂ ಸೇರಿ, ಕೊಲ್ಲಲ್ಪಟ್ಟವನಲ್ಲಿದ್ದ ಸುಮಾರು ಸಾವಿರ ರೂಪಾಯಿನ ಆಸ್ತಿಯನ್ನು ಅಪಹರಿಸಿಕೊಳ್ಳಲು ೨೭ ನೇ ತಾ ರಾತ್ರಿ ಸಿಂಗಪ್ಪಯ್ಯನನ್ನು ಕೊಂದು. ಆ ರಾತ್ರಿ ಆ ಹೆಣವನ್ನು ಜಂಗಲಿನಲ್ಲಿ ಎಲ್ಲಿಯೋ ಒಂದು ಸ್ಥಳದಲ್ಲಿಟ್ಟಿದ್ದು ಅದು ಎಲ್ಲಿ ಹೊರಪಡುವದೋ ಎಂಬ ಭೀತಿಯಿಂದ ಆ ಹೆಣವನ್ನು ತಂದು ಆ ಕೊಲ್ಲಲ್ಪಟ್ಟ ಆತನ ಮನೆಗೇ ತಂದು ಹಾಕಿ ಆ ಮನೆಗೆ ಬೆಂಕಿ ಹಚ್ಚಿದ ಹಾಗೂ, ಈ ವರ್ತಮಾನವು ಪಟೇಲನ ಮೂಲಕ ಆಗುಂಬೆ ಪೋಲೀಸ್ ಸ್ಟೇಷನ್ನಿಗೆ ತಿಳಿದ ನಂತರ ಅಲ್ಲಿಗೆ ಇನ್‌ಸ್ಪೆಕ್ಷನ್‌ಗಾಗಿ ಹೋಗಿದ್ದ ಪೋಲೀಸ್ ಇನ್‌ಸ್ಪೆಕ್ಟರೂ ದಫೇದಾರರೂ ಹೋಗಿ ನೋಡಿದ್ದರಲ್ಲಿ ಸುಟ್ಟ ಮನೆಯಲ್ಲಿ ಬಿದ್ದಿದ್ದ ಶವವು ಕಂಡಿತು ಆ ಕೂಡಲೆ ಅಮಲ್ದಾರರಿಗೆ ವರ್ತಮಾನ ಕಳುಹಿಸಲಾಗಿ ಅವರೂ ಆಸ್ಪತ್ರೆ ಅಸಿಸ್ಟೆಂಟರೂ ಹೋಗಿ ಅಜಮಾಯಿಷಿ ಮಾಡಿದ ನಂತರ ತಾಲ್ಲೂಕು ಅಮಲ್ದಾರರೂ ಇನ್‌ಸ್ಪೆಕ್ಟರೂ ಅದೇ ಸ್ಥಳದಲ್ಲಿ ಸುಮಾರು ಹದಿನೈದು ದಿನಗಳ ತನಕ ಇದ್ದು ಮೊದಲು ತಿಮ್ಮಪ್ಪಯ್ಯನೆಂಬ ಬ್ರಾಹ್ಮಣನನ್ನೂ, ಸುಮಾರು ಆರು ದಿವಸಗಳಾದ ನಂತರ ಕಾಡಿನಲ್ಲಿ ತಲೆ ತಪ್ಪಿಸಿಕೊಂಡಿದ್ದ ನಾಗಮ್ಮನನ್ನೂ, ಅನಂತರ ಶೃಂಗೇರಿ ತಾಲ್ಲೂಕಿನಲ್ಲಿ ಮೂರನೇ ಅಪರಾಧಿಯಾದ ವೆಂಕಟಗಿರಿಯಪ್ಪನನ್ನೂ ಹಿಡಿದು. ಇವರನ್ನೆಲ್ಲಾ ಶಿವಮೊಗ್ಗೆಯಲ್ಲಿರುವ ಕಮಿಟಿಂಗ್ ಮ್ಯಾಜಿಸ್ಟ್ರೇಟರ ಬಳಿಗೆ ಕಳುಹಿಸಿರುವದಾಗಿಯೂ, ಈ ಮೊಕದ್ದಮೆಯಲ್ಲಿ ಈ ತಾಲ್ಲೂಕು ಅಮಲ್ದಾರರಾದ ಮೆ|| ನರಸಿಂಹ ಶಾಸ್ತ್ರಿಗಳು ಬಹಳ ಮೆಹನತ್ತಿನಿಂದ ಪತ್ತೆ ತಪಸೀಲು ನಡಿಸಿ ಕೊಲೆಪಾತಕರನ್ನು ಪತ್ತೆಮಾಡಿದರೆಂದೂ ಕೇಳುತ್ತೇನೆ —ಈ ಊರಿನಲ್ಲಿ ಸುಮಾರು ಎರಡು ತಿಂಗಳಿಂದಲೂ ಹತ್ತು ಹದಿನೈದು ದಿನಗಳಿಗೆ ಒಂದೊಂದು ಕಾಲರಾ ಕೇಸ್ ಆಗುತ್ತಿದ್ದದ್ದು, ಸುಮಾರು ಎಂಟು ದಿವಸಗಳಿಂದೀಚೆಗೆ ಐದಾರು ಜನರು ಅದೇ ಉಪದ್ರದಿಂದ ತೀರಿಹೋದರೆಂದು ವರ್ತಮಾನವಿದೆ ಇದರ ನಿಮಿತ್ತ ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರು ಭಾವಿಯ ನೀರಿಗೆ ಏನೋ ಒಂದು ಶುದ್ಧಿಮಾಡುವ ಪುಡಿಯನ್ನು ಹಾಕಿರುತ್ತಾರೆ —ಈ ಪ್ರಾಂತ್ಯ ಎರಡು ಮೂರು ದಿನಗಳಿಂದ ಮೋಡವಾದುತ್ತಾ ಗುಡುಗುತ್ತಾ ರಾತ್ರೀ ವೇಳೆ ಮಿಂಚುತ್ತಾ ಇರುತ್ತದೆ ಆದರೂ ಮಳೆ ಮಾತ್ರ ಬಿದ್ದಿರುವದಿಲ್ಲ ಆದರೆ ಹಗಲಿನಲ್ಲಿ ಬಿಸಿಲಾದರೋ ಅಧಿಕವಾಗಿಯೂ, ಸೆಕೆಯು ಸಹಿಸಕೂಡದ್ದಾಗಿಯೂ ಇರುತ್ತದೆ ಇದರ ದೆಸೆಯಿಂದ ಅನೇಕರು ಜ್ವರದಲ್ಲಿ ಬೀಳುತ್ತಿದ್ದಾರೆಂದೂ, ಮಲೆನಾಡಿನಲ್ಲಿ ಇಂಥಾ ಕಾಲದಲ್ಲಿಯೇ ಜನರು ಹೆಚ್ಚು ಕಾಯಿಲೆಯಲ್ಲಿ ಬೀಳುತ್ತಾರೆಂದೂ ಹೇಳುತ್ತಾರೆ

ಚನ್ನರಾಯಪಟ್ಟಣ —ಈ ಹೊಸ ವರ್ಷವಾದ ಸೌಮ್ಯ ಸಂವತ್ಸರದ ಚೈತ್ರಶುದ್ಧ ಪಾಡ್ಯಕ್ಕೆ ಸರಿಯಾದ ತಾ ೨೨ ನೇ ಸೋಮವಾರ ಈ ಊರಿನ ಎ ವಿ ಸ್ಕೂಲಿನಲ್ಲಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಬಾಲಕರಿಗೆ ಬಹುಮಾನವು ಕೊಡಲ್ಪಟ್ಟಿತು ಸರ್ಕಲ್ ಇನ್ಸ್‌ಪೆಕ್ಟರ್ ಮಿ ಎಂ ಶ್ರೀನಿವಾಸರಾಯರು ಇನ್ಸ್‌ಪೆಕ್ಷನ್ ಉದ್ದಿಷ್ಟ ಈ ಊರಿಗೆ ದಯಮಾಡಿದ್ದರು ಅವರನ್ನೇ ಸಭಾಧ್ಯಕ್ಷರನ್ನಾಗಿ ಮಾಡಿ ಹಾಸನದಿಂದ ದಯಮಾಡಿದ್ದ ಎಗ್ಸಿಕ್ಯುಟಿವ್ ಇಂಜನಿಯರ್ ಮಿ ವಿಜಯಸ್ವಾಮಿ ಐಯರವರು, ನಮ್ಮ ಅಮಲ್ದಾರರು, ಸಬ್ ರಿಜಿಸ್ಟ್ರಾರವರು, ಡಾಕ್ಟರು, ಪೋ ಇನ್ಸ್‌ಪೆಕ್ಟರವರು, ಮ್ಯುನಿಸಿಪಲ್ ಮೆಂಬರುಗಳು, ಶೆಟ್ಟಿ ವರ್ತಕರೇ ಮುಂತಾದ ಅನೇಕ ಜನಗಳನ್ನು ಆಹ್ವಾನ ಪತ್ರಿಕೆಗಳ ಮೂಲಕ ಬರಮಾಡಿಕೊಂಡು ಬಾಲಕರಿಂದ ಕಿಂಡರ್‌ಗಾರ್ಟನ್ ಮುಂತಾದ ಕುಶಲ ವಿದ್ಯೆಗಳಿಂದಲೂ, ಗದ್ಯ ಪದ್ಯ ರೂಪವಾಗಿಯೂ, ಸಂಗೀತದಿಂದಲೂ ಸಭಿಕರ ಮನಸ್ಸನ್ನು ತುಂಬಾ ಸಂತೋಷಪಡಿಸಿದರು ಹೆಡ್ ಮಾಸ್ಟರ್ ಮೆ|| ತಿರುಮಲ ಐಯಂಗಾರ್ಯರು ಸ್ಕೂಲಿನ ವಾರ್ಷಿಕ ರಿಪೋರ್ಟನ್ನು ಇಂಗ್ಲೀಷಿನಲ್ಲಿ ಓದಿ ಹೇಳಿದರು ಬಳಿಕ ಇನ್ಸ್‌ಪೆಕ್ಟರವರು ಬಾಲಕರಿಗೆ ಪುಸ್ತಕಗಳನ್ನು ಬಹುಮಾನವಾಗಿ ಕೊಟ್ಟರು ಇಲ್ಲಿನ ಮಿ ಭೀಮರಾಯರು ಸಿನಮೆಟೋಗ್ರಾಫ್ ಎಂಬ ವಿನೋದದಿಂದ ಸರ್ವರ ಮನಸ್ಸನ್ನೂ ಸಂತೋಷ ಪಡಿಸಿದರು ಸರ್ವರೂ ನಮ್ಮ ಎಡ್ವರ್ಡ್ ಸಾರ್ವಭೌಮರವರ ಮತ್ತು ನಮ್ಮ ಮಹಾರಾಜರವರ ಶ್ರೇಯಃ ಪ್ರಾರ್ಥನೆ ಮಾಡಿದ ಬಳಿಕ ಸಭಿಕರಿಗೆ ಪುಷ್ಪ, ಗಂಧ ತಾಂಬೂಲಾದಿ ಹಂಚಲ್ಪಟ್ಟು ಆ ದಿವಸದ ಸಭೆಯು ಬರಖಾಸ್ತಾಯಿತು —ಮಾರನೇ ಬೆಳಿಗ್ಗೆ ಇನ್ಸ್‌ಪೆಕ್ಟರವರು ಸ್ಕೂಲಿಗೆ ಎಗ್ಸಿಕ್ಯುಟಿವ್ ಇನ್‌ಜನಿಯರ ಸಮೇತ ದಯಮಾಡಿ, ಕೆಲವು ಶಿಥಿಲವಾಗಿದ್ದ ಭಾಗಗಳನ್ನು ಪರೀಕ್ಷೆಮಾಡಿ ಸ್ಕೂಲು ಕಟ್ಟಡವು ಬಾಲಕರಿಗೆ ಸಾಲದೆಂತಲೂ ಹೊಸ ಕಟ್ಟಡವನ್ನು ಕಟ್ಟಿಸಿಕೊಡುತ್ತೇವೆಂತಲೂ, ಹಳೇದನ್ನು ರಿಪೇರಿ ಮಾಡಿಸುತ್ತೇವೆಂತಲೂ ಹೇಳಿ ಹಾಸನಕ್ಕೆ ತೆರಳಿದರು —ನಮ್ಮ ಡೆ|| ಕಮಿಷನರ್ ಸಾಹೇಬರವರು ಈ ಊರಿಗೆ ದಯಮಾಡಿ ೩—೪ ದಿವಸ ಇದ್ದು ಜಮಾಬಂದಿ ಮುಂತಾದ ಕೆಲಸಗಳನ್ನು ನೆರವೇರಿಸಿಕೊಂಡು ಹಾಸನಕ್ಕೆ ಪ್ರಯಾಣ ಮಾಡಿದರು —ಈ ತಾರೀಖು ತಾ ೨೩ ನೇ ಮಂಗಳವಾರ ಈ ಊರು ಕೋಟೆಯೊಳಗೆ ಇರುವ ಕೆಲವರ ಮನೆಗಳಿಗೆ ಬೆಂಕಿ ಬಿದ್ದು ೨ ೩ ಮನೆಗಳು ಸುಟ್ಟುಹೋದವು ಪೋ, ಇನ್ಸ್‌ಪೆಕ್ಟರ್ ರವರೂ, ಮ ರಾ. ವೆಂಕಟರಾಮೈಯನವರೂ ಸೇರಿ ೩೦೦—೪೦೦ ಜನರನ್ನು ಕೂಡಿ ಹಾಕಿ, ಇಂಥಾ ನೀರಿಲ್ಲದ ಕಾಲದಲ್ಲಿ ಜನಗಳಿಗೆಲ್ಲಾ ಹೇಳಿ ಬಹಳ ಶ್ರಮಪಟ್ಟು ನೀರು ತರಿಸಿ ಹಾಕಿ ಉರಿಯನ್ನು ಸಮಾಧಾನ ಪಡಿಸಿದರು ಗಾಳಿ ವಿಶೇಷವಾಗಿ ಬೀಸದೆ ಇದ್ದದ್ದರಿಂದ ಸ್ವಲ್ಪದರಲ್ಲಿಯೇ ಪಾರಾಯಿತು ಇಲ್ಲದಿದ್ದರೆ ೧೦—೧೫ ಮನೆಗಳು ಹತ್ತಿಕೊಂಡು ಸುಟ್ಟು, ಬೂದಿಯಾಗುತ್ತಾ ಇತ್ತು ದೇವರ ಕೃಪೆಯಿಂದ ಜನಗಳಿಗೆ ಏನೂ ಅಪಾಯ ಸಂಭವಿಸಲಿಲ್ಲ ಮೂಗು ಪ್ರಾಣಿಗಳಾದ ೨ ಕುರಿಮರಿಗಳು ೪—೫ ಕೋಳಿಗಳು ಮಾತ್ರ ನಷ್ಟವಾದವು ಸಾಲೀಕರಿಗೆ ೨೦೦ ರೂಪಾಯಿನ ವರೆಗೂ ನಷ್ಟವಾಗಿರುತ್ತೆ —ನೀರಿನ ಕ್ಲೇಶವೂ ಬಿಸಿಲಿನ ತಾಪವೂ ಹೇಳತೀರದು ಈ ಊರು ಹೋಬಳಿಯಲ್ಲಿ ಅನೇಕರಿಗೆ ಜೀವನಕ್ಕೆ ಮಾರ್ಗವಿಲ್ಲದೆ ಬಹು ತೊಂದರೆಪಡುತ್ತಾ ಇರುತ್ತಾರೆ ಸರ್ಕಾರದವರು ಇಂಥಾ ಕಾಲದಲ್ಲಿ ರಿಲೀಫ್ ಕಾಮಗಾರಿ ಕೆಲಸಕ್ಕೆ ಸುರುಮಾಡಿಸಿ, ಈ ಬಡ ಜನಗಳಿಗೆ ಕೂಲಿ ದೊರೆಯುವಂತೆ ಏರ್ಪಾಡು ಮಾಡಿದರೆ ಬಹು ಜನಕ್ಕೆ ಅನುಕೂಲವಾಗುತ್ತೆ ಈ ನೀರಿನ ತೊಂದರೆಯನ್ನು ಕಂಡು ಈ ಊರಿನಲ್ಲಿರುವ ಜವಳಿ ಅಂಗಡಿ ಮಿ ಸುಬ್ಬಣ್ಣಶೆಟ್ಟರು ಧರ್ಮಾರ್ಥವಾಗಿ ಒಂದು ಭಾವಿಯನ್ನು ತೆಗಿಸಿ ತಳದಿಂದಲೂ ಕಲ್ಲು ಕಟ್ಟಿಸುತ್ತಾ ಇರುತ್ತಾರೆ ನಮ್ಮ ದಿವಾನ್ ಸಾಹೇಬರು ಈ ಊರಿಗೆ ಸ್ವಲ್ಪ ದಿವಸದ ಹಿಂದೆ ದಯಮಾಡಿದ್ದಾಗ್ಗೆ ಈ ಊರು ಸಂತೇಮಾಳದಲ್ಲಿರುವ ಸೇದೋ ಭಾವಿಯನ್ನು ಅಜಮಾಯಿಷಿಮಾಡಿ ನೀರು ಇಲ್ಲದ್ದನ್ನು ಕಂಡು ಇನ್ನೂ ೨—೩ ಆಳುದ್ದ ತೋಡಿಸಿ ಕಲ್ಲು ಕಟ್ಟುವಂತೆ ಹುಕುಂ ಮಾಡಿ ಹೋದ ಪ್ರಕಾರ ಕೆಲಸಕ್ಕೆ ಸುರುವಾಗಿ ಕೊಂಚ ನೀರೂ ಸಹ ಬಂದಿದೆ ನಮ್ಮ ಅಮಲ್ದಾರರು ತಾಲ್ಲೂಕು ಕಚೇರಿ ಬಳಿ ಇರುವ ಸೇದೋ ಭಾವಿಗಳನ್ನೂ ಇನ್ನೂ ಕೊಂಚ ಆಳವಾಗಿ ತೋಡಿಸಿದರೆ ಈ ಊರಿನ ಜನರಿಗೆ ನೀರಿನ ಕಷ್ಟವೂ, ಊರೊಳಗಿರುವ ಕಲ್ಯಾಣಿಗೆ ಜನಗಳು ಬಿದ್ದು ಸಾಯುವುದೂ ತಪ್ಪಿ, ಸುಖದಾಗಿರುವುದರಲ್ಲಿ ಸಂದೇಹವಿಲ್ಲ ದಯವಿಟ್ಟು ಇದನ್ನು ಮಾಡಿಸಿ ಕೊಡುತ್ತಾರೆಂದು ನಂಬಿದ್ದೇನೆ

ಮೈಸೂರು ಗೆಜೆಟ್ ಸಂಗ್ರಹ.

ಚಿತ್ರದುರ್ಗದ ಹೈ ಸ್ಕೂಲ್ ಹೆಡ್ ಮಾಸ್ಟರ್ ಮೆ|| ಆರ್ ರಘುನಾಥರಾಯರಿಗೆ ಫೆಬ್ರವರಿ ತಾ ೨ ರಿಂದ ಅರ್ಧ ಸಂಬಳದ ಮೇಲೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಅಮಲ್ದಾರ್ ಮಿ ಎಚ್ ಎಸ್ ವೆಂಕಟರಾಮಯ್ಯ ರಜದಿಂದ ವಾಪಸು ಬಂದು ಡಿಸೆಂಬರ್ ತಾ ೪ ರಲ್ಲಿ ಕೆಲಸಕ್ಕೆ ದಾಖಲಾದದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ದೇವನಹಳ್ಳಿ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ|| ಪಿ ಸುಬ್ಬರಾಯರಿಗೆ ಫೆಬ್ರವರಿ ತಾ ೩೬ ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶ್ರೀಮನ್ ಮಹಾರಾಜರವರ ಅ|| ಪ್ರೈವೆಟ್ ಸೆಕ್ರೆಟರಿ ಮೆ|| ಪಿ. ರಾಘವೇಂದ್ರರಾಯರನ್ನು ಏಪ್ರಿಲ್ ತಾ ೧ ರಿಂದ ಹುಜೂರ್ ಸೆಕ್ರೆಟರಿಯ ಕೆಲಸಕ್ಕೆ ನೇಮಕಮಾಡಿದೆ

ಮಿ ಬಿ ವಿ ರಾಮೈಯಂಗಾರ್ಯರನ್ನು ಜನವರಿ ತಾ ೨೨ ರಿಂದ ಫಾರೆಸ್ಟ್ ಇಲಾಖೆಯಲ್ಲಿ ೧ ನೇ ಗ್ರೇಡ್ ಅ|| ಕನ್‌ಸರ್ವೇಟರಾಗಿ ನೇಮಕಮಾಡಿದೆ

ಅ ಕಮಿಷನರ್ ಮೆ|| ಸಿ ನಾರಾಯಣರಾಯರನ್ನು ಫೆಬ್ರವರಿ ತಾ ೬ ರಿಂದ ೭ ನೆಯ ಕ್ಲಾಸಿಗೆ ಬಡ್ತಿ ಮಾಡಿದೆ

ಬಾತ್ಮೀದಾರರಿಗೆ ನೋಟೀಸು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಕರೆಸ್ಪಾಂಡೆನ್ಸ್

ದಾವಣಗೆರೆಯಲ್ಲಿ ಮ್ಯುನಿಸಿಪಲ್ ವಿಷಯ

ಅಯ್ಯಾ.

ಚಿತ್ರದುರ್ಗ ಡಿಸ್ಟ್ರಿಕ್ಟು ದಾವಣಗೆರೆ ಕಸಬ ಆನೆಕೊಂಡದ ಗ್ರಾಮದ ರೀಸರ್ವೆ ನಂಬರುಗಳು ೨೩, ೭೪ ೭೫ ಉಳ್ಳ ಜಮೀನುಗಳನ್ನು ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲ್ಲೂಕು ಪೈಂ ಚಗಟೇರಿ ಗ್ರಾಮದ ಸಾಹುಕಾರ ಜವಳಿ ವೀರಪ್ಪನವರ ಮಗ ವೀರಪ್ಪನವರು ನಡರಿ ನಂಬರುಗಳ ಪೈಕಿ ೭೪ ನೇ ನಂಬರಿನಲ್ಲಿರುವ ದೇವಸ್ಥಾನದ ವಿನಿಯೋಗಗಳಿಗೂ, ಸ್ಥಳ ಪರಸ್ಥಳ ಜನಗಳಿಗೂ, ಚತ್ರ ಭಾವಿ ಕಟ್ಟತಕ್ಕ ಬಗ್ಗೆ ದಾವಣಗೆರೆ ವಾಸಸ್ಥ ಬಳ್ಳಾರಿ ಚನ್ನವೀರಪ್ಪನವರಿಗೆ ಸೇಲ್ ಮೂಲಕ ಕೊಟ್ಟಿದ್ದನ್ನು ಈಗ ದಾವಣಗೆರೆ ಟವರ್‌ಗೋಸ್ಕರ ೧೫೦ ಎಕರೆ ಬಡಾವಣೆ ಮಾಡಿದ ಸ್ಥಳ ಬಿಟ್ಟು ಈ ದೇವಸ್ಥಾನದ ಜಮೀನುಗಳನ್ನು ತೆಗೆದುಕೊಳ್ಳಬೇಕೆಂಬ ಇರಾದೆಯು ತಿಳಿದು ಬಂದದ್ದರಿಂದಲೂ, ಗವರ್ನ್‌ಮೆಂಟಿನವರು ಬಡಾವಣೆ ಮಾಡಿದ ಬೀದಿಗಳೂ ರಸ್ತೆಗಳೂ ಇರುವ ಸ್ಥಳದಲ್ಲಿ ಬಂಗಲೆ ಸಾಪ್ ಕಟ್ಟಿಸುವದನ್ನು ಬಿಟ್ಟು ಈ ದೇವಸ್ಥಾನದ ವಿನಿಯೋಗಕ್ಕೆ ಕೊಟ್ಟಿರತಕ್ಕ ಜಾಗದಲ್ಲಿಯೇ ಕಟ್ಟಡಗಳನ್ನು ಕಟ್ಟಿಸಬೇಕೆಂಬ ಅಭಿಪ್ರಾಯ ಪಟ್ಟಿದ್ದನ್ನು ಕೇಳಿ ವಿಷಾದ ಪಡಬೇಕಾಗಿದೆ ಈ ವಿಷಯದಲ್ಲಿ ಗವರ್ನ್‌ಮೆಂಟಿನವರು ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ

ನಿಮ್ಮ ವಾಚಕ

ಇಂಡಿಯಾ ದೇಶದ ವೃತ್ತಾಂತಗಳು

ಬಂಗಾಳ ಅಧಿಪತ್ಯದಲ್ಲಿ ರಾಜದ್ರೋಹವನ್ನು ಅಡಗಿಸುವ ಕಾರ್ಯಗಳಿಗೆ ಸರ್ಕಾರದವರು ಕಳೆದ ವರುಷ ಏಳು ಲಕ್ಷ ರೂಪಾಯಿ ಖರ್ಚು ಮಾಡಿದರೆಂದು ಪ್ರಕಟವಾಗಿದೆ

∴

ಪಂಜಾಬ್ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರ್ ಕೆಲಸವನ್ನು ನೋಡುತ್ತಿದ್ದು ಶೀಮ್ಲಾ ಹೋಗಿದ್ದ ಸರ್ ಚಾರ್ಲ್ಸ್ ರಿವಾಜ್‌ರವರು ಕಾಲವಾದರೆಂದು ತಂತೀ ವರ್ತಮಾನ ಬಂದಿದೆ

∴

ಡಾರ್ಜಿಲಿಂಗ್ ಡಿಸ್ಟ್ರಿಕ್ಟಿಗೆ ಸೇರಿದ ಕಾಲಿಂಪಾಂಗ್, ಗ್ಯಾಂಟಾಕ್ ಎಂಬೀ ಪ್ರದೇಶಗಳಲ್ಲಿ ಕಾಡಿಗೆ ಬೆಂಕಿ ಬಿದ್ದು ಕೆಲವು ದಿನಗಳಿಂದ ಉರಿಯುತ್ತಿದೆ ಎಂದು ತಂತೀ ವರ್ತಮಾನ ಬಂದಿರುವುದು

∴

ಆಗ್ರಾ ಪ್ರಾಂತದ ಅಡ್ವೊಕೇಟ್ ಜನರಲ್ಲರ ಕೆಲಸಕ್ಕೆ ಸಮರ್ಥನಾದ ಒಬ್ಬ ದೇಶೀಯ ವಕೀಲನನ್ನು ನೇಮಕಮಾಡಬೇಕೆಂದು ಸಂಯುಕ್ತ ಪ್ರಾಂತಗಳ ಗವರ್ನ್‌ಮೆಂಟಿನವರು ಆಲೋಚನೆ ಮಾಡುತ್ತಿದ್ದಾರೆ

∴

ಬೊಂಬಾಯಿ ಗವರ್ನರವರು ತಮಗುಂಟಾಗಿರುವ ಸರ್ಕಾರದ ವಿದೇಶಗಳ ಮೇಲಿನವನ್ನು ಸಾಧನೆ ಮಾಡಿಕೊಳ್ಳುವುದಕ್ಕಾಗಿ ಸಿಂಧ್ ಪ್ರಾಂತ್ಯ ಸಂದರ್ಶನ ಕೊಂಡು ಎರಡು ಕಳೆದ ಭಾನುವಾರ ಹಡಗು ಹತ್ತಿ ಪ್ರಯಾಣಮಾಡಿದರು

∴

ಶೃಂಗೇರಿ ಸಂಸ್ಥಾನದ ಜಗದ್ಗುರುಗಳವರು ಕಲ್ಕತ್ತೆಗೆ ಹೋಗುವುದಕ್ಕೆ ಮುಂಚೆ ಕಲ್ಕತ್ತೆಯ ಕೃಷ್ಣಾ ನಗರದಲ್ಲಿ ಕಟ್ಟಲು ಮಠದ ಮಹಮಹಿಮೆಯ ವಿದ್ಯಾರ್ಥಿಗಳ ಬಂಗಲೆ ಸಂದಿಗೆ ೧,೦೦೦ ರೂಪಾಯಿ ಕೊಡಬೇಕೆಂದು ಸ್ಯಾಂಕ್ಷನ್ ಮಾಡಿದರೆಂದು ತಿಳಿದಿದೆ

∴

ಕಾಶ್ಮೀರ ಸಂಸ್ಥಾನದ ಮಹಾರಾಜರವರ ಸಹೋದರರಾದ ರಾಜಾ ಸರ್ ಅಮರ ಸಿಂಗರವರು ಕಾಯಿಲೆಯಾಗಿದ್ದಾರೆಂದು ತಿಳಿಸಿದ್ದೆವಷ್ಟೆ ಇವರು ರಾಜಧಾನಿಯಾದ ಜಮ್ಮೂ ಪಟ್ಟಣದಲ್ಲಿ ಕಳೆದ ಗುರುವಾರ ರಾತ್ರಿ ಕಾಲವಾದರೆಂದು ತಂತೀ ವರ್ತಮಾನ ಬಂದಿದೆ

ಅಫ್ಘಾನಿಸ್ಥಾನದ ರಾಜಧಾನಿಯಲ್ಲಿ ಅಮೀರರ ಮೇಲೆ ಸಿಕಾರಿ ಮಾಡಿದ್ದ ಕಲು ಗೊತ್ತಾದ ಒಡನೆಯೇ ಅಮೀರರ ಅಪ್ಪಣೆಯ ಪ್ರಕಾರ ಕೆಲವು ಸಿಕಾರಿ ಕೋರರನ್ನು ಹಿಡಿದು ಗುಂಡಿನ ಬಾಯಿಗೆ ಕಟ್ಟಿ ಹಾರಿಸಿಬಿಟ್ಟರೆಂದು ಪ್ರಕಟವಾಗಿದೆ

ಲಾಹೋರ್ ಪಟ್ಟಣದಲ್ಲಿ ಸಿಕ್ ಜನರ [illegible] ಸಮಾಜವು ಈ ತಿಂಗಳಲ್ಲಿ ನಡೆಯುವುದು ಭಾರಿ ಜಹಗೀರ್ದಾರರಾದ ಸರ್ದಾರ್ ಯೋಗೀಂದ್ರಸಿಂಗರವರು ನಡೆಸು ಪ್ರಸಿದ್ಧ ಟಿಗಾಗಿ ಚುನಾವಣೆ ಮಾಡಬೇಕೆಂದು ಆ ಜನರಿಂದ ಚುನಾಯಿಸಲ್ಪಟ್ಟಿದ್ದಾರೆ

ಕೊಯಮುತ್ತೂರಿನ ಹತ್ತಿರ ಕಂಗಾಯಂ ಎಂಬ ಗ್ರಾಮದಲ್ಲಿ ಒಬ್ಬ ಗೌಡನು ತನ್ನ ಸಹೋದರನ ಮನೆಗೆ ಬೆಂಕಿ ಹಾಕಿ ಅವನನ್ನೂ ಅವನ ಇಬ್ಬರು ಮಕ್ಕಳನ್ನೂ ಸುಟ್ಟು ಹಾಕಿದನು ಈ ಅಸಂಭವವು ಅವನ ಮೇಲೆ ರುಜುವಾದದ್ದರಿಂದ ಸೆಷನ್ಸ್ ಜಡ್ಜರು ಅವನಿಗೆ ಮರಣದಂಡನೆಯನ್ನು ವಿಧಿಸಿದಾರೆ

ಬಂಗಾಳ ಅಧಿಪತ್ಯಕ್ಕೆ ಸೇರಿದ ರಾಂಚಿ ಡಿಸ್ಟ್ರಿಕ್ಟಿನ ಕೋದರಮಾ ಎಂಬ ಸ್ಥಳದಲ್ಲಿ [illegible] ನಮ್ಮ ಟಿನ್ನೂ [illegible] ಗಳನ್ನೂ ಕಳುವು ಮಾಡಿದ್ದರು. [illegible] ಪಟ್ಟಣದಲ್ಲಿ ಆ ಕಳುವು ಪತ್ತೆ ಆಗಿರುವಂತೆಯೂ, ಪೋಲೀಸಿನವರು [illegible] ಗಳನ್ನು ಹಿಡಿಯುವ ಏರ್ಪಾಡು ಮಾಡುತ್ತಿರುವರೆಂದೂ ಪ್ರಕಟವಾಗಿದೆ

ಕರ್ನಾಟಕ [illegible] ರೈಲ್ವೆ [illegible] ಗಾಡಿಗಳು [illegible] ಬಿಟ್ಟು ಕೆಳಕ್ಕೆ [illegible] [illegible] ಗಾಡಿಗಳು [illegible] ಮುಂದಿನ [illegible] ಪಟ್ಟರು [illegible]

[illegible] ಅಧಿಪತ್ಯಕ್ಕೆ [illegible] ಪಟ್ಟಣದಲ್ಲಿ [illegible] ಮಹಮ್ಮದ್ [illegible] ತನ್ನ [illegible] ಕಠಿಣ ಸಜೆಯನ್ನು [illegible]

[illegible] ಕಲ್ಲು [illegible] ಪಟ್ಟಣ [illegible] ಹಾಗೆ [illegible] ಕಲ್ಕತ್ತ [illegible] ರನ್ನು ಕರೆ [illegible]

[illegible] ಪಟ್ಟಣದಲ್ಲಿ ಗವರ್ನ [illegible] ವಕೀಲನಾಗಿದ್ದ [illegible] ಕೊಲ್ಲಲ್ಪಟ್ಟ [illegible] ಯುವರ ಎದುರು ಮಗನಿಗೆ ಸರ್ಕಾರದವರು ಒಂದು ನೌಕರಿಯನ್ನು ಕೊಟ್ಟರು [illegible] ಮಗನು ತನಗೆ ಸರ್ಕಾರಿ [illegible] ಮನೆ [illegible] ಗವರ್ನಮೆಂಟಿನವರು [illegible] ಕೊಡುತ್ತಾರೆಂದು ವರ್ತಮಾನವಿದೆ

[illegible] ಪಟ್ಟಣಕ್ಕೆ ಹೋಗುತ್ತಿದ್ದ ರೈಲ್ [illegible] ಗಳು [illegible] ಅಪಾಯವಾಯಿತು [illegible] ಪ್ರಯಾಣಿಕರು [illegible] ಕೊಡಿ [illegible] ರೈಲ್ವೆ ಕಂಪೆನಿಯವರಿಗೆ ಈ ಅಪಘಾತದಿಂದ ೮೦,೦೦೦ ರೂಪಾಯಿ [illegible] ನಷ್ಟವಾದವು

[illegible] ಪ್ರಾಂತ್ಯದ ಸರಹದ್ದಿನ ಆಚೆ ಕೆಲವು ಜನರ ಕಳ್ಳ [illegible] ಎಂಬ [illegible] ಮುಖಂಡನು ತನ್ನ ಹಿಂಬಾಲಕರ ಸಮೇತ ಒಂದು ಬ್ರಿಟಿಷ್ ಗ್ರಾಮಗಳಿಗೆ ನುಗ್ಗಿ ದರೋಡೆ ಮುಂತಾದ ಕ್ರೂರಕೃತ್ಯಗಳನ್ನು ನಡಿಸಿದನು [illegible] ಸೈನಿಕರು ಅವನನ್ನು ಓಡಿಸಿ [illegible] ಹಿಡಿದುಕೊಂಡಿದ್ದ [illegible] ಗವರ್ನಮೆಂಟಿನವರ [illegible] ಪಟ್ಟಣದಲ್ಲಿ ಗಲ್ಲಿಗೆ ಹಾಕಿದರು.

ಕಳೆದ [illegible] ಪ್ರಾಂತ್ಯದಲ್ಲಿ [illegible] ದಷ್ಟು [illegible] ಬಿಹಾರ್ ಮತ್ತು [illegible] ಅಧಿಪತ್ಯಗಳಲ್ಲಿ [illegible] ಬಾಧೆಯು ಹೆಚ್ಚುತ್ತಿದೆ ಕಳೆದ ವಾರ [illegible] ಜನರು [illegible] ಮರಣಕ್ಕೆ ಈಡಾದರು [illegible] ಲ್ಲಿಯೂ ಕೂಡ [illegible] ಹೆಚ್ಚಾಗಿರುವುದರಿಂದ ದೊಡ್ಡ ದೊಡ್ಡ [illegible] ಮರಣಗಳು ಆಗುತ್ತಾ ಬಂದಿವೆ

ನೇಪಾಳ ಸಂಸ್ಥಾನದಲ್ಲಿ ಮಂತ್ರಿಶ್ರೇಷ್ಠರಾಗಿಯೂ ಸೇನಾಪತಿಯಾಗಿಯೂ ಇದ್ದ ಮಹಾರಾಜಾ ಚಂದ್ರಶಂಶೇರ್ ಜಂಗ್ ಬಹದೂರ್ ಯವರು ಗೂರ್ಖಾ ಅನಾಥ [illegible] ಪಟ್ಟಣದಲ್ಲಿ ಒಂದು ಅನಾಥ ಶಾಲೆಯನ್ನೂ ಒಂದು ವಿದ್ಯಾಶಾಲೆಯನ್ನೂ ಕಟ್ಟಿಸಿ [illegible] ಅವೆರಡೂ ಶಾಶ್ವತವಾಗಿ ನಡೆಯುವಂತೆ ಬೇಕಾದಷ್ಟು ದ್ರವ್ಯವನ್ನು ಕೊಟ್ಟಿರುವರು ಈಗ ಅಲ್ಲಿ [illegible] ಮಂದಿ ಗೂರ್ಖಾ ಬಾಲಕರೂ [illegible] ಉಪಾಧ್ಯಾಯರೂ ಇರುತ್ತಾರೆ

ಇಂಡಿಯಾ ಗವರನ್‌ಮೆಂಟಿನವರು ಮದ್ರಾಸ್ ಪ್ರಾಂತ್ಯಗಳಲ್ಲಿ ಸರ್ ಪಿ.ಸಿ. ಕೃಷ್ಣಸ್ವಾಮಿಯವರಿಗೆ ಅಡಿಷನಲ್ ಜುಡಿಷಲ್ ಕಮಿಷನರ ಕೆಲಸವನ್ನೂ ಮಿ ಬಿ ಸಿ ಮಿತ್ರ ಯವರಿಗೆ ಗವರನ್‌ಮೆಂಟ್ ಅಡ್ವೊಕೇಟ್ ಕೆಲಸವನ್ನೂ ದಯಪಾಲಿಸಿದರೆಂದು ತಿಳಿದು ಬಂದಿದೆ ಈ ರೀತಿ ದೇಶೀಯ ದೊಡ್ಡ ಮನುಷ್ಯರು ಜವಾಬ್ದಾರಿಯುಳ್ಳ ದೊಡ್ಡ ದೊಡ್ಡ ಹುದ್ದೆಗಳಿಗೆ ನೇಮಕವಾಗುತ್ತಿರುವುದನ್ನು ನೋಡಿ ಹಿಂದೂಸ್ಥಾನದ ಪ್ರಜೆಗಳು ತಮ್ಮ ಕೃತಜ್ಞತೆಯನ್ನು ಗವರನ್‌ಮೆಂಟಿಗೆ ಪ್ರಕಾಶಪಡಿಸುತ್ತಿರುವರು

ಬಿಹಾರ್ ಪ್ರಾಂತ್ಯದಲ್ಲಿ ಶಂಕರ ಪಾಂಡು ರಂಗರಾಯನೆಂಬಾತನು "ಸ್ವಾವಲಂಬನ" ಎಂಬ ಪತ್ರಿಕೆಯ ಎಡಿಟರಾಗಿದ್ದು, ಆ ಪತ್ರಿಕೆಯಲ್ಲಿ ರಾಜದ್ರೋಹಕರವಾದ ವಿಷಯಗಳನ್ನು ಬರೆದು ಪ್ರಕಟಮಾಡಿದನು ಆಕೋಲಾ ಪಟ್ಟಣದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆತನನ್ನು ಹಿಡಿದು ದರ್ಯಾಫ್ತು ಮಾಡಿ, ಆತನಿಗೆ ಒಂದು ವರುಷದ ಕಠಿಣ ಸಜೆಯನ್ನೂ, ೧,೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು ಆತನು ತನ್ನ ಕೈಪತ್ರಿನಲ್ಲಿ ಹಾಗೆ ಬರೆದದ್ದುಂಟೆಂದು ಒಪ್ಪಿಕೊಂಡು ಕ್ಷಮಾಪಣೆಯನ್ನು ಬೇಡಿಕೊಂಡನು.

ಹಿಂದೂಸ್ಥಾನದ ವಾಯುವ್ಯ ಸರಹದ್ದಿನ ಬಳಿ ಫ್ರೆಂಚ್ ಕಾಲೊನಿಯಲ್ಲಿ ಪ್ರಜಾಸೈನ್ಯದಿಗೆ ಭಂಗವುಂಟಾಗಿದೆ ಎಲ್ಲೆಕಟ್ಟಿನ ಆಚೆ ಇರುವ ಮಹಮ್ಮದೀಯ ವಂಶೀಕರು ಬ್ರಿಟಿಷ್ ಪ್ರಾಂತ್ಯಕ್ಕೆ ಆಗಾಗ್ಗೆ ನುಗ್ಗಿ ಬಂದು ದಾಂಧಲೆ ನಡಿಸುತ್ತಿದ್ದಾರೆ ಇವರ ಹಾವಳಿಯನ್ನು ಅಡಗಿಸುವ ವಿಷಯದಲ್ಲಿ ಗವರ್ನಮೆಂಟಿನವರು ಅಲ್ಲಿಗೆ ಒಂದು ಸೈನ್ಯವನ್ನು ಕಳುಹಿಸುವಂತೆ ಕಾಣುವುದು ಹ್ಯಾಗೂ ಆ ಪ್ರಾಂತ್ಯವು ಸುರಕ್ಷಿತವಾಗಿಲ್ಲದ್ದರಿಂದ ವೈಸ್‌ರಾಯಿಯವರು ಮುಂದಿನ ವಾರ ಅಲ್ಲಿಗೆ ಪ್ರಯಾಣಮಾಡಬೇಕೆಂದಿದ್ದದ್ದನ್ನು ನಿಲ್ಲಿಸಿಬಿಟ್ಟಿರುತ್ತಾರೆಂದು ತಂತಿ ವರ್ತಮಾನ ಬಂದಿದೆ

ಲಾಹೋರ್ ಪಟ್ಟಣದಲ್ಲಿ ಹರಳಿನಿಂದ ಎಣ್ಣೆ ತೆಗೆಯುವುದಕ್ಕೂ, ಹಿಟ್ಟುಗಳನ್ನು ತಯಾರುಮಾಡುವುದಕ್ಕೂ ಒಂದು ದೊಡ್ಡ ಕಾರ್ಖಾನೆಯನ್ನು ಇಟ್ಟಿದ್ದಾರೆ [illegible] ಪ್ರಾಂತ್ಯದ ಕೆಲವು ರೈತರು ಈ ಕಾರ್ಖಾನೆಯಿಂದ ಹರಳಿನ ಹಿಂಡಿಯನ್ನು ಆಕಸ್ಮಾತ್ತಾಗಿ ಕೊಂಡುತರಿಸಿ ತಮ್ಮ ಕಬ್ಬಿನ ಬೆಳೆಯಾಗುವ ಗದ್ದೆಗಳಿಗೆ ಗೊಬ್ಬರವಾಗಿ ಉಪಯೋಗಿಸುತ್ತಾ ಬಂದಿರುವರು ಇದರಿಂದ ಗನ್ನಾ ಪಸಲು ಹುಲುಸಾಗಿ ಬೆಳೆಯಾಗುತ್ತದೆಂದು ಗೊತ್ತಾಯಿತು ಈಗ ಪಂಜಾಬಿನ ಕೃಷಿ [illegible] ಅದೇ ಹಿಂಡಿಯನ್ನು ತಮ್ಮ ಗದ್ದೆಗಳಿಗೂ ಉಪಯೋಗಿಸುತ್ತಾ ಬಂದಿರೋಣದರಿಂದ ಮುಂದೆ ಕಾರ್ಖಾನೆಯಲ್ಲಿ ಈ ಹಿಂಡಿಯು ವಿಕ್ರಯವಾಗುವುದು [illegible] ಇರುತ್ತದೆ ಈ ನಿಮಿತ್ತಕ್ಕೆ [illegible] ಗನ್ನಾ [illegible] ಮಾಡುವ ರೈತರೂ ಗಮನಕೊಟ್ಟು ಈ ಹಿಂಡಿಯನ್ನು ಒಳಿಗೆ ಹಾಕಿ [illegible] ಗದ್ದೆಗಳಿಗೆ ಗೊಬ್ಬರವಾಗಿ ಉಪಯೋಗಿಸಿ ಪರೀಕ್ಷೆ ಮಾಡಬೇಕೆಂದು [illegible]

[illegible] ಕೋಲಾರ ಚಿನ್ನದ ಗಣಿ [illegible] ಜಡ್ಜರಾಗಿರುವ [illegible] ಚಕ್ರವರ್ತಿ [illegible] ವರು [illegible] ಕ್ಯಾಪ್ಟನ್ [illegible] ಕಾನೂನು ವಿಚಾರವನ್ನು [illegible] ಬೆಂಗಳೂರು [illegible] ಇವರಿಗೆ ಜಡ್ಜ್ [illegible] ತಿಂಗಳಿಗೆ ೩೦೦ ರೂಪಾಯಿ [illegible] ಇವರಿಗೆ [illegible] ಚಾರಿತ್ರ್ಯ [illegible] ದವರನ್ನು [illegible] ಆಧಿಪತ್ಯಗಳ [illegible] ರಾಜಭಕ್ತಿ [illegible] ಕಳುಹಿಸುತ್ತಲೂ ಬಂದಿ[illegible]

ವಿದೇಶ ವರ್ತಮಾನಗಳು.

ಮಿ [illegible] ಚರ್ಚಿಲ್ ಯವರು ಮುಂದೆ ಹಿಂದೂಸ್ಥಾನದ [illegible] ನೇಮಕವಾಗಿ ಬರುವರೆಂದು ವರ್ತಮಾನ ಹುಟ್ಟಿದೆ

[illegible] ರಾಜಧಾನಿ [illegible] ಪಟ್ಟಣದಲ್ಲಿ ಆರು [illegible] ಒಂದು [illegible] ಗುಂಡು [illegible] ನವರು [illegible] ಕೆಲವು ಜನರನ್ನು ಗುಮಾನಿಯ ಮೇಲೆ ಹಿಡಿದಿರುತ್ತಾರೆ

[illegible] ಪಟ್ಟಣದ [illegible] ಎಂಬ [illegible] ದಲ್ಲಿ [illegible] ೦೦ ಮೂಟೆಗಳ ನಾರು [illegible] ಹೋಯಿತು ಇದರ [illegible] ಮಾಲೀಕರಿಗೆ ಸುಮಾರು ಲಕ್ಷ ರೂಪಾಯಿ ನಷ್ಟವಾಗಿರುತ್ತದೆ

ಇಂಗ್ಲೆಂಡಿನಿಂದ ಕೆಲವು ಇಂಗ್ಲಿಷ್ ಕಾರೀಗಾರರು ಜಪಾನ್ ರಾಜ್ಯಕ್ಕೆ ಹೋಗಿ ಅಲ್ಲಿಯ [illegible] ತಯಾರುಮಾಡುವ ಕಾರ್ಖಾನೆಯನ್ನು [illegible] ಕೆಲವು ದಿನ ಕೆಲಸ ಮಾಡಿದನಂತರ ಆ ಕಾರ್ಖಾನೆಯನ್ನು ಜಪಾನ್‌ನವರಿಗೆ ವಹಿಸಿಬಿಟ್ಟು ವಾಪಸು ಬರುವಂತೆ ಒಪ್ಪಿಕೊಂಡಿರುವರು

ಈಜಿಪ್ಟ್ ರಾಜ್ಯದಲ್ಲಿ ದೇಶಭಿಮಾನಿ ವರ್ತಮಾನ ಪತ್ರಿಕೆಗಳು ಬಹು ಕಠೋರವಾದ [illegible] ಗಳನ್ನು ಪ್ರಕಟಿಸಿ ಪ್ರಜೆಗಳ ಮನಸ್ಸನ್ನು ಕೆಡಿಸಿರುವುದರಿಂದ ಇಂಗ್ಲಿಷ್ ಗವರನ್‌ಮೆಂಟಿನವರು ಅವನ್ನು ನಿಲ್ಲಿಸುವುದಕ್ಕೆ ಒಂದು ಕಾನೂನನ್ನು ಮತ್ತೆ ಜಾರಿಗೆ ತರಬೇಕೆಂದು ಗೊತ್ತುಮಾಡಿರುತ್ತಾರೆ

ಸರ್ವಿಯಾ ರಾಜ್ಯದ ಯುವರಾಜನ ಬಳಿಯಲ್ಲಿದ್ದ ಒಬ್ಬ ಸೇವಕನು ಕ್ರೂರ [illegible] ದಿಂದ ಸತ್ತು ಹೋದನೆಂದೂ, ಈ ಮರಣಕ್ಕೆ ಯುವರಾಜನವರೇ ಕಾರಣರೆಂದೂ ಅಪವಾದ ಬಂದಿದೆ ಯುವರಾಜನವರು ತಮಗಿರುವ ರಾಜ್ಯಪದವಿಯ ಹಕ್ಕನ್ನು ನಿರಾಕರಿಸಿ ಬಿಟ್ಟುಬಿಡುತ್ತೇನೆಂದು ತಿಳಿಸಿದ್ದಾರೆ ಈ ವಿಚಾರವು ಆ ರಾಜ್ಯದ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುತ್ತಿದೆ ರಾಜ್ಯಪದವಿಯು ಎರಡನೆ ಕುಮಾರರಿಗೆ ದೊರಕುವಂತಾಗಬಹುದೆಂದು ವರ್ತಮಾನವಿದೆ

ದಕ್ಷಿಣ ಆಫ್ರಿಕಾ ಗವರನ್‌ಮೆಂಟಿನವರು ಅಲ್ಲಿರುವ ಕೆಲವು ಹಿಂದೂಸ್ಥಾನದ ಪ್ರಜೆಗಳನ್ನು ಗಡೀಪಾರು ಮಾಡಿ ಅವರನ್ನು ಹಡಗಿನಲ್ಲಿ ಇಟ್ಟು ಇರುತ್ತಾರೆಂಬುದನ್ನು ಕೇಳಿ ವಿಲಾಯಿತಿಯ ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ಲಾರ್ಡ್ ಆಂಟಿಲ್ ಯವರು ಇಂಗ್ಲಿಷ್ ಗವರನ್‌ಮೆಂಟಿನವರ ಮೇಲೆ ಆಕ್ಷೇಪಣೆ ಮಾಡಿದರು ಗವರನ್‌ಮೆಂಟಿನ ಪರವಾಗಿ ಲಾರ್ಡ್ ಕ್ರೂ ಯವರು ಅದರಿಂದ ಅವರಿಗೆ ತೊಂದರೆಯೇನೂ ಉಂಟಾಗಲಾರದೆಂದೂ, ಈ ವಿಚಾರವಾಗಿ ಟ್ರಾನ್ಸ್‌ವಾಲ್ ಗವರನ್‌ಮೆಂಟಿಗೂ ಇಂಗ್ಲಿಷ್ ಗವರನ್‌ಮೆಂಟಿಗೂ ಕಾಗದ ಪತ್ರಗಳು ನಡಿಯುತ್ತಿವೆ ಎಂದೂ ತಿಳಿಸಿದರು

ಜರ್ಮನಿ ಚಕ್ರವರ್ತಿಯವರಿಗೆ ಅವರ ಪ್ರಜೆಗಳ ಪೈಕಿ ಒಬ್ಬ ವಿದ್ಯಾರ್ಥಿಯು ಒಂದು ಅರ್ಜಿಯನ್ನು ಬರೆದುಕೊಂಡನು ಅದರ ಅಭಿಪ್ರಾಯವೇನೆಂದರೆ— ತಾವು ಕರುಣೆಯುಳ್ಳವರೆಂದು ಕೇಳಿದೇನೆ ನಾನು ತಂದೆಯಿಲ್ಲದವನು. ನಮ್ಮ ತಾಯಿ ಒಂಬತ್ತು ಮಕ್ಕಳನ್ನು ಸಾಕಬೇಕಾಗಿದೆ ನನ್ನ ಸಹೋದರಿಯರಲ್ಲಿ ಮೂವರು ಸೇವಕಿಯರಾಗಿದ್ದುಕೊಂಡು ತಮ್ಮ ಕಷ್ಟಾರ್ಜಿತದಿಂದ ನನಗೆ ಹಣಕೊಟ್ಟು ವಿದ್ಯೆ ಕಲಿಸುವವರಾಗಿದಾರೆ ಆದರೆ ಇದು ನನಗೆ ಸಾಲದು ತಾವು ಕೃಪೆಯಿಟ್ಟು ನನಗೆ ಸಹಾಯಮಾಡಿದಲ್ಲಿ ನಾನು ಓದಿ ಉಪಾಧ್ಯಾಯನಾಗಬೇಕೆಂದಿರುತ್ತೇನೆ" ಈ ಕಾಗದವನ್ನು ಅವನು ಚಕ್ರವರ್ತಿಯವರಿಗೆ ಹಾಕಿದ ಒಂದು ವಾರದ ಮೇಲೆ ಅವನಿಗೆ ೧೦೦ ರೂಪಾಯಿ ಬಂದು ತಲಪಿತು

ಪರ್ಷಿಯಾ ರಾಜ್ಯದಲ್ಲಿ ರಾಜಪಕ್ಷದವರಿಗೂ ಪ್ರಜಾಪಕ್ಷದವರಿಗೂ ಇನ್ನೂ ವೀರ ವೈಷಮ್ಯಗಳೂ ಜನಗಳ ಕದನಗಳೂ ಹೆಚ್ಚುತ್ತಾ ಬಂದಿವೆ ಕೆಲವು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಪ್ರಜಾಪಕ್ಷದವರೇ ರಾಜ್ಯಕಾರ್ಯಗಳನ್ನು ಆಕ್ರಮಿಸಿಕೊಂಡು ಸ್ವತಂತ್ರರಾಗಿರುವರು ಕೆಲವು ಕಡೆ ಪ್ರಜಾ ಸೈನ್ಯದಿಗೆ ಭಂಗವುಂಟಾಗಿದೆ ಪರ ರಾಜ್ಯಗಳ ರಾಯಭಾರಿಗಳು ತಮ್ಮ ಹಕ್ಕು ಸ್ವಾತಂತ್ರ್ಯಗಳಿಗೂ ಹಿಂಬಾಲಕರಿಗೂ ಕಷ್ಟ ನಷ್ಟಗಳೇನೂ ಆಗದಂತೆ ಏರ್ಪಾಡು ಮಾಡಿಕೊಳ್ಳುತ್ತಿರುವರು ಷಾ ಸುಲ್ತಾನರವರ ಅಧಿಕಾರವು ಹಲವು ಕಡೆಗಳಲ್ಲಿ ಕಡಿಮೆಯಾಗುತ್ತಲೂ ತಪ್ಪಿ ಹೋಗುತ್ತಲೂ ಬಂದಿದೆ. ಇನ್ನು ಕೆಲವು ಕಾಲದೊಳಗಾಗಿ ಆ ರಾಜ್ಯದ ರಾಜ್ಯಭಾರ ಕ್ರಮಗಳೆಲ್ಲಾ ರೂಪಾಂತರವಾಗಬಹುದೆಂದು ಅನೇಕರು ಊಹಿಸುತ್ತಾರೆ

ನಿನಗೆ ಸ್ವಸ್ಥವಿಲ್ಲವೋ ?

ನಿನಗೆ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—'ನನಗೆ ದಿನಕ್ಕೆ ಒಂದು ಸಲವಾದರೂ ಮಲಪ್ರವೃತ್ತಿಯಾಗುತ್ತದೆಯೇ ?' ಎಂದು ನಿನ್ನನ್ನು ನೀನೇ ಕೇಳಿಕೊ. ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಗ್ಗೆ ಸುಖವಾಗಿ ಮಲಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವುದು



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟ ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಬಲವಾದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುವವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ, ಗಾಢ ಆಸಕ್ತಿ, ಎದೆಯು ತಲ್ಲಣಿಸುವುದು ತಲೆಶೂಲೆ ಗುವುದು ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆ ನೋವು ಚರ್ಮದ ವ್ಯಾಧಿಗಳು, ಇವೇ ಮೊದಲಾದವು ಇವೆಲ್ಲಾ ಬಿಟ್ಟುಬಿಟ್ಟರೆ ದೃಷ್ಟಿ ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕೆಟ್ಟದಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ ಪಿತ್ತಕೋಶವನ್ನು [illegible] ಪಿತ್ತದ ನೀರು [illegible] ಇಳಿಯುವಂತೆ ಮಾಡಿ, [illegible] ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ ಆರೋಗ್ಯವನ್ನುಂಟುಮಾಡುವುವು [69 31]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು [illegible] ಬುಡ್ಡಿಗಳಲ್ಲಿರುವುದಕ್ಕೆ [illegible] ರಷ್ಟು ಹೆಚ್ಚು ಮಾತ್ರೆಗಳಿರುತ್ತವೆ ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್ ಪಿ. ಓ. ಬಾಕ್ಸ್ ೨೦ ಬೊಂಬಾಯಿ — ಇವರಲ್ಲಿ ದೊರೆಯುವುದು

ವಿಕ್ರಯಕ್ಕಿರುವ ಪುಸ್ತಕಗಳು

11-12

ಚರಿತ್ರೆ [illegible] ಭೂಗೋಳ ಪ್ರಶ್ನೋತ್ತರ, ಆರೋಗ್ಯಪ್ರಶ್ನೋತ್ತರ—(1901 0.) ಕ್ರಯ ೧೬೦ ವ್ಯವಸಾಯ ಪ್ರಶ್ನೋತ್ತರ ೮೫೦. ಎಡ್ಮಂಡ್ ವಾರ್ಷಿಕ ಚಂದಾ, ವರ್ಷಕ್ಕೆ ೧೪೦, ಇಕ್ಕೆ ೧ ಹಚ್ಚು [illegible] ಸೀ ಹೋವರ್ಡ್‌ರವರ ಕನ್ನಡನೋಟ್ಸ್ ೦೪೦ ೧೮ಕ್ಕೆ ೧ ಹಚ್ಚು ಕನ್ನಡ [illegible] ಪುಸ್ತಕದ ನೋಟ್ಸ್ ಕ್ರಯ ಪ್ರತಿ [illegible]ಕ್ಕೆ ೦೨೦, ೮ಕ್ಕೆ ೧ ಹಚ್ಚು.

ಸಿ. ಪುಟ್ಟಣ್ಣ, ಮ್ಯಾನೇಜರ್, ವಿದ್ಯಾಭ್ಯಾಸ ಮಿನರ್ ಆಫೀಸ್, ಮೈಸೂರು

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ಪರಾಂಬರಿಸಿ.

10-13

"ಬ್ರಹ್ಮಚರ್ಯ" ಬೆಲೆ ಮುಕ್ಕಾಲಾಣೆ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಎವದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ನಯಾಸುಫಲದೀಪಿಕೆ" ಈ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶೀಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸಫಲದೀಪಿಕೆ"ಯನ್ನು ಒಂದು ಮುಖ್ಯವಾದ ಪರೀಕ್ಷೆಗೆ ಪುಸ್ತಕವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರ ವರಿವಿಗೂ ಓದತಕ್ಕದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟಿದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು. ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಆಗಸ್ಟಿನ ದಿನ್ನವಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಮನಸ್ಸಾಂತರ, ಪಾಪಮನ್ನಣೆ, ಪವಿತ್ರತೆ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತ್ರೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ಕೈಟಿನ ಬೈಂಡು ಪ್ರತಿ ಒಂದಕ್ಕೆ ೦—೧೦—೦

ಒಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು.

ಕನಡಾದಲ್ಲಿ ಪೆರೂನಾ ಸೇವನೆ ಮಾಡುವ ಒಂದಾನೊಂದು ಸಂಸಾರವು.

713

ಪೆರೂನಾವನ್ನು ಸಕಾಲದಲ್ಲಿ ಉಪಯೋಗಿಸುವುದರಿಂದ ಅನೇಕ ಕಾಯಿಲೆಗಳನ್ನು ನಿವಾರಣ ಮಾಡಬಲ್ಲದೆಂದು ಅನೇಕ ಸ್ತ್ರೀಯರು ಕಂಡುಕೊಂಡಿರುತ್ತಾರೆ.

ಮಿಸೆಸ್ ಎಟ್ಟಾ ಬೂಕರ್ ... ಬರೆಯುತ್ತಾರೆ — ...

ಮಿಸೆಸ್ ಬೂಕರ್ ಬರೆದಿರುವ ಇನ್ನೊಂದು ಕಾಗದದಲ್ಲಿ ಆಕೆ ಹೇಳುವುದೇನೆಂದರೆ — ...

ಅಜೀರ್ಣವಿದ್ದ ಮಗು

ಮಗುವಿಗೆ ಪೆರೂನಾ ಕೊಡುವುದು

ಮಗುವಿಗೆ ಆರೋಗ್ಯವಾಯಿತು

ಮಗುವಿಗೆ ಪೆರೂನಾ ಮಾಡಿದ್ದು

ಅವರ ಹೆಣ್ಣು ಮಗುವಿನ ಪ್ರಾಣವನ್ನು ಕಾಪಾಡಿತು

ಕಾಯಿಲೆ ಬೀಳುವ ಮಕ್ಕಳು

... ಕಾಯಿಲೆ ಬೀಳುತ್ತಾ ಬಹಳ ಕೃಶವಾಗಿದ್ದಳು ...

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆವ ತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ. ಇಂಗ್ಲೀಷು ತೆಲುಗು ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದವೂ ಇವರಿಂದಲೇ ತಿಳಿಯಬಹುದು

ವಿಳಾಸ: — ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

12—3—1909 ರಿಂದ 18—3—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	14	10	0	0
ಮೈಸೂರು	0	0		0
ಬೆಂಗಳೂರು ಡಿಸ್ಟ್ರಿಕ್ಟು	2[illegible]	18	[illegible]	0
ಮೈಸೂರು	1?	[illegible]1	1	2
ಕೋಲಾರ್	•	•	•	•
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	[illegible]	0	0
ಹಾಸನ	1	0	11	7
ಚಿತ್ರದುರ್ಗ	0	0	0	0
ಕಡೂರ್	4	1	14	[illegible]
ಶಿವಮೊಗ್ಗಾ	•	•	•	•
• ಸ್ಟೇಟ್ ಕಾಣಿಸಿಲ್ಲ ಜುಮ್ಲಾ	8[illegible]	0	[illegible]	18

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಚೈತ್ರ ಶುದ್ಧ ಏಕಾದಶಿ ಗುರುವಾರ ದಿಂದ ಚೈತ್ರ ... ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಏಪ್ರಿಲ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶ್ರಾದ್ಧ ತಿಥಿ
1	ಗುರು	ಏಕಾದಶಿ	[illegible]	ಆಶ್ಲೆ	[illegible]	[illegible]
[illegible]	ಶುಕ್ರ	ದ್ವಾದಶಿ	[illegible]	ಮ	[illegible]	[illegible]
[illegible]	ಶನಿ	ತ್ರಯೋದಶಿ	[illegible]	ಪು	[illegible]	[illegible]
[illegible]	ರವಿ	ಚತುರ್ದಶಿ	[illegible]	ಪು	[illegible]	[illegible]
[illegible]	ಸೋಮ	ಪೌರ್ಣಮಿ	[illegible]	ಹ	[illegible]	[illegible]
[illegible]	ಕುಜ	ಪಾಡ್ಯಮಿ	[illegible]	[illegible]	[illegible]	
[illegible]	ಬುಧ	ಬಿದಿಗೆ	[illegible]	[illegible]	[illegible]	[illegible]

ಪೇಟೆ ಧಾರಣೆ

ಪದಾರ್ಥ	ಮೈಸೂರು	ಬೆಂಗಳೂರು
ರಾಗಿ ...	[illegible]	[illegible]
ಕೆಂಪು ...	[illegible]	[illegible]
...	[illegible]	[illegible]
ತೊಗರಿ ...	[illegible]	[illegible]
ಹೆಸರು ...	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಹುರಳಿ ...	[illegible]	[illegible]
ಎಳ್ಳು	[illegible]	[illegible]
ಕೊತ್ತುಂಬರಿ ...	[illegible]	[illegible]
ಉಪ್ಪು	[illegible]	[illegible]
ಬೆಲ್ಲ	[illegible]	[illegible]
ತುಪ್ಪ	[illegible]	[illegible]
ಬಿಳೀ ... ಅಕ್ಕಿ	[illegible]	[illegible]
ಚಿನ್ನ (ಪವನ್) ...	[illegible]	[illegible]
... ತೊಲ ...	[illegible]	[illegible]
ಬೆಳ್ಳಿ ... ತೊಲ ...	[illegible]	[illegible]

Printed and Published by the Rev. H. GULLIFORD Proprietor and Manager Wesleyan Mission Press Mysore 1/4/1909

REGISTERED
M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—೧೯೦೯ ನೇ ಇಸವಿ ಏಪ್ರಿಲ್ ತಾರೀಖು ೮ ನೇ ಗುರುವಾರ. ಸಂಚಿಕೆ ೪೫

WILLIAM & Co FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ಶಕ್ತವಾದ ಗುಣಕಾರಿಯು [30 7]

ತಲೆನೋವು ಗಂಟು ಉಬ್ಬುವದು ವಾತ ಸಂಧಿವಾತ ಉಳುಕು ಅಬಲು ಗಂಟು, ಗಂಟ್ಲು ನೋವು ಅರ್ಧಾಂಗವಾಯು ಎದೆನೋವು ಘಾಯ ಜಖಮು ಇತ್ಯಾದಿ

ಆರ್ ಡಿ ಸೋಪಾ ಮೆಸೆಜರ್ ಕಾಫಿ ತೋಟ ಮುದಕೆರೆ, ಬರೆಯುವದೇನೆಂದರೆ— ನಿಮ್ಮ ಅಮೃತಾಂಜನವು ದೇಹದಲ್ಲಿಯ ನೋವುಗಳಿಗೂ ಕೆಮ್ಮಿಗೂ ನೋವುಗಳಿಗೂ ಉತ್ತಮವಾದದ್ದು ನನ್ನ ಕೂಲಿ ಆಳುಗಳಲ್ಲಿ ಹೆಚ್ಚು ಜನರಿಗೆ ಗುಣವಾಗಿರುತ್ತದೆ ಬಾಟ್ಲಿ ಒಂದರ ಕಿಮ್ಮತ್ತು ೦ ೮ ೦ ೧೨ ಬಾಟ್ಲಿಗಳಿಗೆ ೫ ೪ ೦ ೨೪ ಬಾಟ್ಲಿಗಳಿಗೆ ೧೦ ೦ ೦ ೫೦ ಬಾಟ್ಲಿಗಳಿಗೆ ೨ ೦ ೦ ವ್ಯಾಪಾರಸ್ಥರಿಗೆ ಬೇಕಾದಾಗ ಕಮಿಷನ್ ಕೊಡುವದು

ಗಜಕರ್ಣದ ಮುಲಾಮು.

ಮೂರು ಸಾರಿ ಹಾಕುವದರೊಳಗೆ ಗಜಕರ್ಣ ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦ ೬ ೦ ೧೨ ಡಬ್ಬಿಗಳಿಗೆ ೪ ೦ ೦

ವಜ್ರಗುಟಿಕೆ.

ಧಾತುಪುಷ್ಟಿ, ರಕ್ತಶುದ್ಧಿ, ಬಾಟ್ಲಿ ಒಂದರ ಕಿಮ್ಮತ್ತು ರೂ	೧ ೦ ೦
ಸುಂದರೀ ಮುಲಾಮು	೦ ೮ ೦
ದಂತಮಂಜನ—ಹಲ್ಲುಗಳು ಗಟ್ಟಿಯಾಗುತ್ತವೆ	೦ ೩ ೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು ವಿಳಾಸ —

ವಿಲಿಯಂ ಮತ್ತು ಕಂಪನಿ ಫೋರ್ಟ್ ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು — ಅಮೃತಾಂಜನ, ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯು ಮೋಳಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

111

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ವಿಶೇಷವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಏಕರಿಸಲಾಗುತ್ತಿರುವ ಟೋಪಿಗಳ ಮಾರವೆಲ್ಲಾ ಹೇಳುವದು ಅವೆ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ — ೧ ನಮ್ಮಲ್ಲಿ ಮಾರಾಗುವ ಟೋಪಿಗಳ ದರ ವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೆ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೆ ನಿಂತು ಚನ್ನಾಗಿ ಹಾಕಿಸುತ್ತೇವೆ ಅವೆ ಕೆಡುವವರಿಗೆ ಎಷ್ಟು ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ ಚನ್ನಾಗಿ ಹೆಸೆದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವೂ ಚನ್ನಾಗಿಲ್ಲವಷ್ಟೇ ವೆಲೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು ಕಪ್ಪು, ಬಿಳಿ, ಹಸುರು ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧ ೮ ರೂ ೧ ೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ಜರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ ರೂ ೬ ಆ

ಕಸೂತಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಕೊಡುಗರ ಟೋಪಿ, ಪೂರ್ಣ ಮೋಜೋರ್ ಅರ್ಧ ಮೋಜೋಡು, ಕತ್ತಿನ ಪಟ್ಟಿ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿದ ಕೂಡಲೆ ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ

ಜ್ವರಸುಧಾ

81 27

ಒಂದು ಬಾಟ್ಲಿ ಕಿಮ್ಮತ್ತು ೮ ಆಣೆ — ವಿ ಪಿ ಛಾರ್ಜು ಬೇರೆ

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ಸಮಾನ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರಾದ ಡಾಕ್ಟರುಗಳು ಹೇಳುತ್ತಲಿದ್ದಾರೆ ಕೈಕಾಲು, ತಲೆನೋವು ಅತಿಸಾರ, ಬೆನ್ನುಭಳುಕು ಕೈಕಾಲು ನೋವು ಮುಂತಾದವುಗಳನ್ನು ೧—೨ ಹೊತ್ತಿನಲ್ಲಿಯೇ ಡೈನಾಮೈಟಿನಂತೆ ದಿಗಂತರಕ್ಕೆ ಹಾರಿಸಿಬಿಡುವದು "ಸುಧಾ" ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವೂ ಹೇಗೆ ಮೈ ಅಂಟುವುದಿಲ್ಲವೋ ಹಾಗೆಯೇ ನಮ್ಮ ಜ್ವರಸುಧೆಯು ಎಲ್ಲಾ ವಿಧವಾದ ಜ್ವರಗಳನ್ನೂ ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಶೀಸೆ ಔಷಧಿಯಲ್ಲಿ ಕಂಡುಬರುವ ಆರೋಗ್ಯಗುಣವನ್ನು ಹೆಚ್ಚು ವರ್ಣನೆ ಮಾಡತೀರದು

ದೇವನಹಳ್ಳಿ ಟೌನ್, ಬೆಂಗಳೂರು ಡಿಸ್ಟ್ರಿಕ್ಟ್

ಯು. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್

ಜ್ವರಹರಿ

18 10



ಇದು ಸಾಧಾರಣ ಜ್ವರ ಹಳೇಜ್ವರ ಮೊರೇಜ್ವರ ಪಿತ್ತಜ್ವರ ಶೀತಜ್ವರ ವಾತಜ್ವರ ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನಾವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨ ಡಜನಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೩ ಡಜನಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸುವದೆ ಉಪಕಾರವಾಗಿದೆ—ಎಂದೆ ಬರೆದಿದಾರೆ

ಕ್ರಯ — ಸೀಸೆ ೧ಕ್ಕೆ ೮ ಆಣೆ ೧ ರೂ ೧—೭ ರೂ ರೂ ೩—೧೨ ಆ ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓಮಂ ಕರ್ಪೂರ



ಈ ಔಷಧವು ಅಜೀರ್ಣ ಶೀತಭೇದಿ ಸಾಧಾರಣ ಹೊಟ್ಟೆ ಕಳಿವು ಏವದು, ವಾಂತಿ ವಿ ಸಾಂಕ್ರಾಮಿಕದ ಹೊಟ್ಟೆ ನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ಶಕ್ತವಾಗಿ ಕೆಲಸ ಕೊಡತಕ್ಕ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆ ನೋವು ಮುಂತಾದ ವ್ಯಾಧಿಗಳನ್ನು ಕಾದ ಗುಣಪಡಿಸುತ್ತದೆ ಕ್ರಯದ ದೇವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ ಎಂಬವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಲೂಕುದಾರರೂ ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ ಅಜೀರ್ಣಭೇದಿ ಅಜೀರ್ಣ ರೋಗಿಸ್ತರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಕಾರರಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್ ಮದರಾಸ್

JUST RECEIVED! JUST RECEIVED!!

Stead's Books for the Bairns

(illustrated) New Numbers [5 14]

STEAD'S PENNY POPULAR TALES—Sixty four Pages in a coloured Picture Cover Each number contains a story of thrilling interest 24 numbers

CALENDARS FOR 1909

Apply—The Manager, C L S Book Depot Mysore City

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ ೧—೧೪—೦
" " ೬ "	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ ಚಂದಾ ಕಟ್ಟುವಾಗಲೂ ತಮಗೆ ಸಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರು, ವೃತ್ತಾಂತ ಪತ್ರಿಕೆ ಮೈಸೂರು

"ವಿಕಟಪ್ರತಾಪ"

ಸಚಿತ್ರವೂ, ವಿಚಿತ್ರವೂ ಆದ ಮಾಸಪತ್ರಿಕೆ

ಪಾಗ್ದಾನ — ಅವರಿಂದ ಉತ್ತಮರಿಗೆ ಉಂಟಾಗುವ ತಾಪ ಸಜ್ಜನರ ವಿಪ್ರಲಾಪ, ಅನಾಥರ ವಿಲಾಪ ಸೋಮಾರಿಗಳ ಪ್ರಲಾಪ ಕಾಮಿಯರ ಸಲ್ಲಾಪ, ರಸಿಕರ ಆಲಾಪ ಜಾರ ಅಪಲಾಪ ಮಾನಿಗಳ ಕೋಪ ಈ ಕಲಾಪಗಳ ಚಿತ್ರಗಳಿಂದೊಪ್ಪಿರುವುದು ನಮ್ಮ ವಿಕಟಪ್ರತಾಪ

ಹಾಸ್ಯರಸದಿಂದ ಕೂಡಿ, ಅನೇಕ ಪ್ರಸಿದ್ಧ ಕವಿಗಳ ಲೇಖನಗಳಿಂದ ಪ್ರಕಾಶಿಸುವ ಈ ಪತ್ರಿಕೆಗೆ ಪ್ರತಿಯೊಂದು ಡಿಸ್ಟ್ರಿಕ್ಟ್ ತಾಲ್ಲೂಕು ಹೋಬಳಿಗಳಲ್ಲಿಯೂ ಏಜಂಟರುಗಳು ಬೇಕಾಗಿದೆ ಏಜಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲ್ಪಡುವುದು

ಈ ವಿಕಟಪ್ರತಾಪವೆಂಬ ಮಾಸಪತ್ರಿಕೆಗೆ ಈ ಉಗಾಯಿತು ಒಂದು ವರುಷ ಚಂದಾದಾರರಾಗುವವರಿಗೆ ಸ್ತ್ರೀ ಸಂಚಾರಕವೆ ಬಹಳ ಜನ ಯುವತಿಯರುಗಳ ವಿನೋದವಾದ ಕಥೆಯ ಪುಸ್ತಕವನ್ನು ಉಚಿತವಾಗಿ ಕೊಡಲ್ಪಡುವುದು

ವಾರ್ಷಿಕ ಚಂದಾ ಸ್ವಸ್ಥಳದವರಿಗೆ ಮತ್ತು ಪರಸ್ಥಳದವರಿಗೆ (ಅಂಚೆವೆಚ್ಚ ಸೇರಿ) ರೂ ೧—೦—೦

ಚಂದಾ ಹಣ ಮುಂಗಡವಾಗಿ ಬಂದ ಹೊರತು ಪತ್ರಿಕೆಯನ್ನು ಯಾರಿಗೂ ಕಳುಹಿಸುವುದಿಲ್ಲ 38 2

ನಮ್ಮ ವಿಳಾಸ — ವಿಕಟಪ್ರತಾಪ ಆಫೀಸ್

೧೩೪ ಅರಳೇ ಪೇಟೆ ಬೆಂಗಳೂರು ಸಿಟಿ

ಪಾಳ್ಯದ ವೆಂಕಟಾಚಲ ಪಂಡಿತರ ದಿವ್ಯೌಷಧಗಳು

29 8

೧ ಲೋಕಾಮಯಹರ ಕಸ್ತೂರೀ ಮಾತ್ರೆ — ಈ ಮಾತ್ರೆಗಳನ್ನು ಜವರದ ಭಸ್ಮ ಚಿನ್ನದ ರೇಕು ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ ಜ್ವರ ಹೊಟ್ಟೆ ನೋವು ಸಂದುಗಳ ನೋವು ಕೈ ಕಾಲು ಕೊಡತ [illegible] ಮೈ ನಡುಕ, ಕಿವಿ ಬಾತಗಳ ಬಾಧೆ, ಅಜೀರ್ಣ ಅತಿಸಾರ ಹುಟ್ಟುನೋವು ಕೆಮ್ಮು, ನೆಗಡಿ ಅಶಕ್ತಿ ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ ಎಂತಹ ಕಾಯಿಲೆಗೂ ವಾಸಿ ಕೊಡುವದೆ ಸೀದು ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ [illegible] ಕುಟುಕುಡಾಚಿ ಮಕ್ಕಳ ಎಳವು ಜ್ವರ ಇವು ಜ್ವರ ಕ್ಷಯಪತ್ರಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ರಕ್ತವರ್ಧಕವಾಗಿದೆ

ಅನುಪಾನವನ್ನು ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್

ವೈದ್ಯಶಾಲಾ ಲಕ್ಷ್ಮೀವಿಲಾಸ ರೋಡ್, ಮೈಸೂರು

ಕ್ಷಾಮದ ಫಂಡು.

ಈಗಿನ ಕ್ಷಾಮದ ನಿವಾರಣಾರ್ಥವಾಗಿ ಮಹನೀಯರಾಗಿ ಚಂದಾ ಕೊಡುವುದಾಗಿ ವಾಗ್ದಾನಮಾಡಿರತಕ್ಕ ಸಕಲ ಜನರೂ ತಮ್ಮ ಚಂದಾ ಮೊಬಲಗುಗಳನ್ನು ಈ ಕೆಳಗೆ ರುಜು ಮಾಡುವವರ ಆಫೀಸಿಗೆ ಕಳುಹಿಸಿ ಕೊಟ್ಟು ರಸೀದಿ ಪಡೆಯ ಬಹುದು

ತಾ|| ೬-೩ ೧೯೦೯ ಎಂ ಜಿ ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್,
ಸಿಟಿ ಮ್ಯುನಿಸಿಪಲ್ ಕೌನ್ಸಲ್, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

48-16

ತಲೆನೋವು, ವಾಯುನೋವು, ಸೆಳತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಪೂರ್ವಕವಾಗಿ ನಿಶ್ಚಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ನಿಶ್ಚಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿಕೊಂಡಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವುದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪಾಕಿಂಗ್ ಚಾರ್ಜು ವಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ವೈದ್ಯರೂ ವಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—
ಎಸ್ ಪೀಟರ್ಸ್,
೨೨, ಪೇದಮುತಿಪಿಳ್ಳೆ ಬೀದಿ, ಪೇಟೆ, ಮದರಾಸ್

ನೋಡಿರಿ. "ಪ್ರೋತ್ಸಾಹ ಕೊಡಿರಿ." ತರಿಸಿರಿ

98-20

ಈಗ ತಾನೇ ಸೀಮೆಯಿಂದ ಬಂದಿದೆ.

ನಮ್ಮಲ್ಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ ೫೦೦ ಪಾಸನ್ ಟೋಪಿ ಹೊಲಿಯುವ ಸುಪೀರಿಯರ್ ಫ್ಲಾನಲ್ ದಾರ ೧ ಟೋಪಿಯಾಗುವ ಫ್ಲಾನಲ್ ಬಂಡಲ್ ೧ಕ್ಕೆ ೩ ೭ ೦ ೧ ಟೋಪಿಯಾಗುವ ಫ್ಲಾನಲ್ ದಾರಕ್ಕೆ ೮ ೭ ಪಾಸನ್ ಟೋಪಿಯ ಕಸೂತಿ ಕೆಲಸಕ್ಕೆ ಸೂಜಿ ೧ಕ್ಕೆ ೧ ೨ ೦ ೪೦ ೯ ಬಗೆ ದಾರ್ಡ್ಸ್ ಸೆಜು ಬನಿಯನ್ ೧ಕ್ಕೆ ೮ ೨ ೧ ಬಾಲಿ ಫೋಸ್ಟು ಕಾರ್ಡು ಡಬಲ್ ಕಲರ್ ೧೦೦೦ ಕ್ಕೆ ೧ ೮ ೦ ಸುಗಂಧ ಸಂಜೀವಿನಿ ಬ್ರೈಟ್ ಮಲಕ ತೈಲ ಸೀಸೆ ೧ಕ್ಕೆ ೦ ೮ ೬ ತಲೆ ನೋವಿಗೆ ಅನುಕೂಲವಾದ ಔಷಧ, ದಬಿ ೧ಕ್ಕೆ ೦ ೪ ೧೦ ವಾಸನೆಗಳು ಇರುವ ಸೆಂಟ್ ಪರಿಮಳದ ತಾಂಬೂಲಮಿಶ್ರಣ ಪಾಕೆಟ್ ೧ಕ್ಕೆ ೦ ೪ ಲಿನನ್ ಕೆ ವಸ್ತ್ರಗಳು (ಚಂದವಾದದ್ದು) ೧ಕ್ಕೆ ೦ ೭ ೦ ದಾರ್ಕೋಸ್ ಸ್ಟ್ಯಾಂಪಲ್ ವಾಚು ೧ಕ್ಕೆ ೬ ೦ ೦ ಕೋಟಿನ ಬಾಟನ್‍ಗಳು ದೊಡ್ಡ ಸೈಜು ಡಜನ್ ೧ಕ್ಕೆ ೧೧ ೦ ೦ ಗಜಕರ್ಣದ ಮುಲಾಮು ಡಬ್ಬಿ ೧ಕ್ಕೆ ೧ ೬ ೨೬ ಇಂಗ್ಲೀಷು ಅಕ್ಷರಗಳಡಗಿ ಇರುವ ಪೆಟ್ಟಿಗೆ ೧ಕ್ಕೆ ೨ ೮ ಪರಿಮಳ ಇರುವ ದಪ್ಪ ಸೀಸೆ ೧ಕ್ಕೆ ೦ ೨ ೦ ೮ ಬಡಿಗಳಿರುವ ಪೆರುಮಾ ಫ್ಲಾನಲ್ ದಾರದ ಬಂಡಲ್ ೧ಕ್ಕೆ ೩ ೮ ೧ ಪೆರುವಾನವ ಲಿನನ್ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ ೧೨ ೦ ೦, ಜ್ವರಕೆ ಪ್ರಸಿದ್ಧವಾದ ಚೀಲದ ಔಷಧ ಸೀಸೆ ೧ಕ್ಕೆ ೪ ೦ ಕ್ಯಾಟಲಾಗನ್ನು ಕೇಳಿದವರಿಗೆ ಕಳುಹಿಸುತ್ತೇವೆ ವರಸ್ಥಳದವರಿಗೆ ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ —ದಿ ನ್ಯೂಲನ್ ಮಾರ್ಟ್, ಮಂಗಳೂರು

ಧರ್ಮಪದ

32-6

ಎಂಬೀ ಕನ್ನಡ ಪುಸ್ತಕವು ನಮ್ಮ ಇಂಡಿಯಾ ದೇಶದಲ್ಲಿ ೨,೫೦೦ ವರ್ಷಗಳಿಂದೀಚೆಗೆ ಯಾವಾಗಲು ಗೋಚರಿಸಲಿಲ್ಲವು ಇದು ಚೈನಾ ಕೋರಿಯಾ ಜಪಾನ್ ಅನಾಂ, ಸೈಯ್ಯಾಂ, ಬರ್ಮಾ ಸಿಲೋನ್ (ಲಂಕಾ) ಮುಂತಾದ ದೇಶಗಳ ಜನಗಳಿಂದ, ಮಹಾ ಪ್ರಮಾಣ ಗ್ರಂಥವೆಂದು ಪೂಜಿಸಲ್ಪಟ್ಟಿದೆ ಹಿಂದುಗಳಿಗ ಮುಖ್ಯ ಪ್ರಮಾಣಗಳಾದ ವೇದಗಳು ೧೦೮ ಉಪನಿಷತ್ತುಗಳು, ೧೮ ವೇದಾಂತ ಗ್ರಂಥಗಳು ೪ ಧರ್ಮ ಶಾಸ್ತ್ರಗಳು ಮುಂತಾದ ಗ್ರಂಥಗಳಿಂದಲು, ೧೮ ಬೌದ್ಧ ಗ್ರಂಥಗಳಿಂದಲು ಸಹಸಮಂಜಸ ವಾಕ್ಯಗಳನ್ನು ಗ್ರಂಥಕರ್ತರು ಈ ಗ್ರಂಥಕ್ಕೆ ಉದ್ಧರಿಸಿ ತೋರಿಸಿರುವರು ಇದಕ್ಕೆ ಮಿ ಎಂ ಶಾಮರಾವ್ ಬಿ ಎ ಯವರು ಇಂಗ್ಲೀಷಿನಲಿ ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು ಮತ್ತು ನಮ್ಮ ಮೈಸೂರು ಶ್ರೀಮನ್ಮಹಾರಾಜರವರ ಅಪ್ಪಣೆಯ ಪ್ರಕಾರ ಅವರ ನಾಮಾಂಕಿತದಿಂದ ಪ್ರಚುರ ಪಡಿಸಲ್ಪಟಿದೆ ಇದರಲ್ಲಿ ಜಪಾನ್ ದೇಶದಲ್ಲಿರುವ ಲೋಕಾಶ್ಚರ್ಯಕರವಾದ ಬುದ್ಧದೇವನ ಕಂಚಿನ ಪ್ರತಿಮೆಯ ಭಾವಚಿತ್ರವೂ, ಮೈಸೂರು ಶ್ರೀಮನ್ಮಹಾರಾಜರವರ ಜಿ ಸಿ ಎಸ್ ಐ ಎಂಬ ಬಿರುದಿನಿಂದ ಕೂಡಿದ ಭಾವಚಿತ್ರವೂ ಮತ್ತು ಗ್ರಂಥಕರ್ತರ ಭಾವಚಿತ್ರವೂ ಸಹ ಇರುವುವು ಈ ಪುಸ್ತಕದ ಅನೇಕ ವಿವಾದ ಔನ್ನತ್ಯಗಳು ಪುಸ್ತಕದಿಂದಲೆ ವ್ಯಕ್ತವಾಗುವುವು ಇದರ ಕ್ರಯ —ದಪ್ಪರಟ್ಟಿನದು ವಿ ಪಿ ಪಿ ಸಹಿತ ರೂ ೧—೩—೦, ಸುಂದರವಾದ ದಪ್ಪ ಕಾಗದದ ಪೈಂಡಿನದು ರೂ ೦—೧೪—೦ ನಮ್ಮ ವಿಳಾಸ —

ಮೆ|| ಕೆ ಬಿ ಪುಟ್ಟಣ್ಣ, ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ

CHAMBERLAIN'S COUGH REMEDY.



ಚೇಂಬರ್ಲೇನ್‍ಯವರು ಕಂಡುಹಿಡಿದ ಕೆಮ್ಮಿನ ಔಷಧವು

4-14

ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಸಹಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‍ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ನಿಶ್ಚಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಚಟ್ಟವನ್ನು ನಿಲ್ಲಿಸಿಬಿಡುತ್ತವೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‍ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸಂಜೀವಿನೀ ಔಷಧಾಲಯಮು, ಮೈಸೂರು.

23-9

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರಣ, ಸಲುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಮೇಹ, ವಾಯುನೋವುಗಳೂ, ಹಳೇಜ್ವರ, ಕ್ಷಯ, ಅಜೀರ್ಣ, ತಲೆನೋವು, ನೆತ್ತಿಯುರಿ ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮುಂತಾದ ಉರಿಮೂತ್ರ ಸೋಮರೋಗ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ಪುಷ್ಟಿ ಪಡಿಸಿ ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಪಿಂಡ, ಬಲ ಧೈರ್ಯ, ಕಾಂತಿ ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವುದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಪ್ಲೇಗಿನ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು ಉಷ್ಣವಾಯು ಪ್ರಕೋಪ ಇವುಗಳಿಗೆ ಖಾತರಾದ ಔಷಧ ನೂರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವುದಿಲ್ಲ ಕ್ರಯ ಪೊಟ್ಲ ೧ಕ್ಕೆ ೧ ರೂಪಾಯಿ

ಕಾಲಕೂಟ ವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಮಿನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪಾಚಗಣ್ಣು, ತಲೆನೋವು ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿ ಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ ತರಾವರಿ ಅತ್ತರುಗಳೂ, ಗಂಧದಬಿಲ್ಲೆ ಊದಬತ್ತಿಗಳೂ ನಮಲ್ಲಿ ಸಿಕ್ಕುತ್ತವೆ ಪ್ರೈಸ್ ಲಿಸ್ಟ್ ಮತ್ತು ಕಾಲ್ಲೋಕು ಹದ್ ಕ್ವಾರ್ಟರ್ಸ್‍ಗಳಲ್ಲಿ ಏಜಂಟುಗಳೂ ಬೇಕು ಅರ್ಜಿ ಬರೆಯಿರಿ

ಪಿ ಕೆ ಸ್ವಾಮಿ,
ಪ್ರೊಪ್ರೈಟರ್

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ತರಿಸಿಬರಿಸಿ.

10-14

'ಬ್ರಹ್ಮಚರ್ಯ' ಎಂಬ ಮಹಾಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಧರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯುವನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಭಾಷೆಗಳಲ್ಲಿ ಭಾಷಾಂತರ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸಫಲದೀಪಿಕೆ"ಯನ್ನು ಒಂದು ಮುಖ್ಯವಾದ ಪರೀಕ್ಷೆಗೆ ಪ್ರೈಸಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರ ವರಿವಿಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಂಜಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಂಜಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟೈನ್ ದಿನ್ನಪಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಜನ್ಮಾಂತರ ಪಾಪವುನ್ನಣೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ಕೈಲಿನ ಬೈಂಡು ಪ್ರತಿ ಒಂದಕ್ಕೆ ೦—೧೦—೦
ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ವಿಕರಿಗೆ ಸಿದ್ಧವಾಗಿರುವ ಪುಸ್ತಕಗಳು

11-13

ಚರಿತ್ರೆಯ ಪ್ರಶ್ನೋತ್ತರ ಭೂಗೋಳ ಪ್ರಶ್ನೋತ್ತರ, ಆರೋಗ್ಯಪ್ರಶ್ನೋತ್ತರ—1891-06 ಕ್ರಯ ೦-೪-೦ ವ್ಯವಸಾಯ ಪ್ರಶ್ನೋತ್ತರ ೦ ೭ ೦ ಎಗ್ರಿಕಲ್ಚರಲ್ ಮಾಸಪುಸ್ತಕ ಚಂದಾ, ವರ್ಷಕ್ಕೆ ೧ ೪ ೦ ೫ಕ್ಕೆ ೧ ಹೆಚ್ಚು ೧೯೦೮ನೇ ಓವರ್‌ಸಿಕೆ ಷರಿ ಕನ್ನಡನೋಟ್ ೦ ೬ ೦ ೧೦ಕ್ಕೆ ೧ ಹೆಚ್ಚು ಕನ್ನಡ ನೀ ಪುಸ್ತಕದ ನೋಟ್ ಕ್ರಯ ಪ್ರತಿ ೧ಕ್ಕೆ ೦ ೨ ೮ ೫ಕ್ಕೆ ೧ ಹೆಚ್ಚು ಪುಟ್ಟಯ್ಯ, ಮ್ಯಾನೇಜರ್ ದಿ ಎಗ್ರಿಕಲ್ಚರಲ್ ಆಫೀಸ್ ಮೈಸೂರು

ಔಷಧಿ ತೆಗೆದುಕೊಂಡು ಗುಣವಾಗುವದಕ್ಕಿಂತಲೂ

ಶಕ್ತಿ ತೈಲ ಹಚ್ಚಿರುವುದು ಉತ್ತಮ

SCOTT'S EMULSION.

6-11

(ಸ್ಕಾಟ್ಸ್ ಇಮಲ್ಷನ್)

ಘಟ್ಟ ಪರಿಸರವುಳ್ಳವರಾಗಲಿ ಪ್ಲೇಗ್ ಮಹಾಮಾರಿರೋಗ ಇವುಗಳಿಂದ ಅಥವಾ ಮ್ಯಾಲೇರಿಯಾ ಜ್ವರ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಒಬ್ಬೊಬ್ಬನನ್ನು ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲವಾಗ ಮಾಡಿ ಸಂಪೂರ್ಣ ಪುಷ್ಟಿಯನ್ನು ಉಂಟುಮಾಡುತ್ತದೆ

ಕ್ವಸನೋಕದ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಲ್ಪಡುತ್ತದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್
ಔಷಧಗಳ ತಯಾರಿಕರು
ಲಂಡನ್ ಇಂಗ್ಲೆಂಡ್

ಈ ಮೀನುಗುರುತು ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೆನೆಂದರೆ —ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು ಗಾಬರಿ ಕಣ್ಣು ನೋವು, ತಲೆ ತಿರುಗುವಿಕೆ, ಮೈನೋವು ಕೀಲುನೋವು ಮರವು ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರಪೀಡೆಯ ವಾಯು ಮೈಬಾವು ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‍ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [69-32]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‍ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೩—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್ ೩೦, ಪಿ ಒ ಬಾಕ್ಸ್ ಬೊಂಬಾಯಿ — ಇವರಲ್ಲಿ ದೊರೆಯುವುದು

ವೃತ್ತಾಂತ ಪತ್ರಿಕೆ.

ಸನ್ ೧೯೦೯ ನೇ ಇಸವಿ ಏಪ್ರೆಲ್ ತಾ ೮ ನೇ ಗುರುವಾರ

ಮೈಸೂರು ಸಂಸ್ಥಾನದ ದಿವಾನ್‌ಗಿರಿಯು

ಮೆ|| ವಿ. ಪಿ. ಮಾಧವರಾವ್, ಸಿ. ಐ. ಇ. ಯವರು ಮೈಸೂರು ಸಂಸ್ಥಾನದ ದಿವಾನ್‌ಗಿರಿಯನ್ನು ಬಿಟ್ಟುಬಿಡುತ್ತಾರೆಂದೂ, ಶ್ರೀಮನ್ಮಹಾರಾಜಾ ಶ್ರೀಕೃಷ್ಣರಾಜೇಂದ್ರ ಒಡೆಯರ್, ಜಿ. ಸಿ. ಎಸ್. ಐ. ರವರು ಮೊದಲನೇ ಕೌನ್ಸೆಲರಾಗಿರುವ ಮೆ|| ಟಿ. ಆನಂದರಾವ್, ಬಿ. ಎ. ಯವರನ್ನು ದಿವಾನ್ ಪದವಿಗೆ ನೇಮಕಮಾಡಿಕೊಳ್ಳುವರೆಂದೂ ಕೆಲವು ಕಾಲದಿಂದ ಜನಜನಿತವಾಗಿದ್ದ ವರ್ತಮಾನವು ಈ ತಿಂಗಳ ೧ ನೇ ತಾರೀಖು ಗುರುವಾರ ಪ್ರಕಟವಾದ ಇಸ್ತಿಹಾರ್‌ನಾಮೆಯಿಂದ ಯಥಾರ್ಥವಾಗಿ ಪರಿಣಮಿಸಿತು.

ಮೆ|| ಮಾಧವರಾಯರು ಈ ಸಂಸ್ಥಾನದಲ್ಲಿ ಮಾಡಿದ ಸರ್ವೀಸಿನ ವಿಚಾರವಾಗಿ ಮೈಸೂರು ಗವರ್ನ್‌ಮೆಂಟಿನವರು ನಮೂದು ಮಾಡಿರುವುದನ್ನು ಸಹಜವಾದದ್ದೆಂದು ನಾವು ಒಪ್ಪಿಕೊಳ್ಳುವೆವು. ಶ್ರೀಮನ್ಮಹಾರಾಜರವರು ವಿಶೇಷ ದಯಾಪೂರ್ವಕವಾಗಿ ಅನುಜ್ಞೆಯನ್ನು ಕೊಟ್ಟಿರುವುದೇನೆಂದರೆ —

ಇವರು ಮೈಸೂರು ಸಂಸ್ಥಾನಕ್ಕೆ ಮಾಡಿದ ಸೇವೆಯ ವಿಷಯದಲ್ಲಿ ತಮಗುಂಟಾದ ಮೆಚ್ಚಿಕೆಯನ್ನು ನೆನಪಿನಲ್ಲಿಡಲು ಶ್ರೀಮನ್ಮಹಾರಾಜರು ಅಪೇಕ್ಷಿಸುತ್ತಾರೆ. ಮೆ|| ಮಾಧವರಾಯರು ೧೮೭೦ ರಲ್ಲಿ ಈ ಸಂಸ್ಥಾನದ ಉದ್ಯೋಗಕ್ಕೆ ಸೇರಿ ಅಲ್ಲಿಂದ ೯ ವರ್ಷಕಾಲದೊಳಗೆ ಸಬ್ ಜಡ್ಜಿನ ಸ್ಥಾನಕ್ಕೆ ಹತ್ತಿ, ೧೮೮೫ ರಲ್ಲಿ ಡೆಪ್ಯುಟಿ ಕಮೀಷನರ್ ಆಗಿ ನಿಯಮಿಸಲ್ಪಟ್ಟರು. ೧೮೯೨ ರಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರಾಗಿ ನಿಯಮಿಸಲ್ಪಟ್ಟರು. ೧೮೯೮ ರಲ್ಲಿ ಮೈಸೂರು ಸೀಮೆಯಲ್ಲಿ ಪ್ಲೇಗ್ ರೋಗವು ವ್ಯಾಪಿಸಿದಾಗ ಆ ರೋಗದ ನಿರೋಧಕ್ಕಾಗಿ ಮಾಡಬೇಕಾದ ಕೆಲಸಗಳನ್ನು ಮಾಡಿಸುವ ಕಷ್ಟತರವೂ ಪೂರ್ಣವಾದ ಉತ್ತರವಾದಿತ್ವವುಳ್ಳದೂ ಆದ ಮುಖ್ಯೋದ್ಯೋಗವು - ಪ್ಲೇಗ್ ಕಮೀಷನರ್ ಹೆಸರಿನಿಂದ ಇವರಿಗೆ ವಹಿಸಲ್ಪಟ್ಟಿತು. ಇವರು ಅದೇ ವರ್ಷದಲ್ಲಿ ಆಲೋಚನಾ ಸಭೆಯ ಸಭಾಸ್ಥರರಾಗಿಯೂ ಮಾಡಲ್ಪಟ್ಟರು. ೧೮೯೯ ರಲ್ಲಿ ಇವರ ಕರ್ತವ್ಯತತ್ಪರತೆಯೂ ಸಾಮರ್ಥ್ಯವೂ ಸಾರ್ವಭೌಮ ಸರ್ಕಾರದ ಮೆಚ್ಚಿಕೆಗೂ ಪಾತ್ರವಾಗಿ, ಅವರು ಇವರಿಗೆ ಸಿ. ಐ. ಇ. ಎಂಬ ಬಿರುದನ್ನು ದಯಪಾಲಿಸಿದರು. ತಿರುವಾಂಕೂರು ಸಂಸ್ಥಾನದ ಮಂತ್ರಿ ಪದವಿಯನ್ನು ವಹಿಸುವುದಕ್ಕೋಸ್ಕರ ಇವರು ೧೯೦೪ ರಲ್ಲಿ ಮೈಸೂರು ಸಂಸ್ಥಾನದಲ್ಲಿದ್ದ ತಮ್ಮ ಕೆಲಸವನ್ನು ಬಿಟ್ಟು ಹೋಗಿದ್ದರು. ಎರಡು ವರ್ಷಗಳ ತರುವಾಯ ಇವರು ಮತ್ತೆ ಕರೆಯಿಸಲ್ಪಟ್ಟು ಈ ಸಂಸ್ಥಾನದ ಮಂತ್ರಿ ಪದವಿಯು ಇವರಿಗೆ ವಹಿಸಲ್ಪಟ್ಟಿತು. ಮೆ|| ಮಾಧವರಾಯರು ತಮ್ಮ ದೀರ್ಘವಾದ ಅಧಿಕಾರದಲ್ಲಿ ಸರ್ಕಾರದ ಕೆಲಸಗಳನ್ನು ಉತ್ತಮ ಕಳೆಯಿಂದಲೂ ಸಾಮರ್ಥ್ಯದಿಂದಲೂ ನಿರ್ವಹಿಸಿ ಗಣನೀಯರಾಗಿರುತ್ತಾರೆ. ಇಂಥವರಿಗೆ ಸಂಸ್ಥಾನದ ಉದ್ಯೋಗಸಂಬಂಧದಿಂದ ನಿವೃತ್ತರಾಗಲು ಅಪ್ಪಣೆಯನ್ನು ಕೊಡುವ ಸಂದರ್ಭದಲ್ಲಿ, ಸಮರ್ಥರಾದ ಉದ್ಯೋಗಸ್ಥರ ಉಪಯೋಗವು ತಮಗೆ ತಪ್ಪಿಹೋಗುವುದನ್ನು ಶ್ರೀಮನ್ಮಹಾರಾಜರವರು ನೆನೆಸಿಕೊಳ್ಳುತ್ತಾರೆ.

ಮೆ|| ಟಿ. ಆನಂದರಾಯರಿಗೆ ದಿವಾನ್‌ಗಿರಿಯು ದೊರಕಿದ ವಿಷಯದಲ್ಲಿ ನಾವು ಸಂತೋಷಪಡುವೆವು. ದಿವಾನ್ ಪದವಿಯು ಸಿಂಹಾಸನಾಧಿಕಾರಾದದ್ದಲ್ಲವೆಂದೂ ಅದರಿಂದ ಹುಟ್ಟುವ ಕರ್ತವ್ಯಾಂಶಗಳನ್ನು ಸಾರ್ಥಕವಾಗಿ ನೆರವೇರಿಸುವುದಕ್ಕೆ ರಾತ್ರಿ ಹಗಲೂ ಶ್ರಮಪಡಬೇಕಾಗಿದೆ ಎಂದೂ ಮೆ|| ಆನಂದರಾಯರಿಗಲ್ಲದೆ ಪರರ್‍ಯಾರಿಗೂ ಗೊತ್ತಾಗತಕ್ಕದ್ದಲ್ಲ. ಮೆ|| ಆನಂದರಾಯರು ಸತ್ಯವಂತರೂ, ಪ್ರಾಮಾಣಿಕರೂ, ವಿವೇಕಶೀಲರೂ ಆಗಿರುತ್ತಾರೆ. ಆದಕಾರಣ ಅವರು ತಮಗೆ ಲಭ್ಯವಾಗಿರುವ ಈ ವಿಶೇಷವಾದ ಪದವಿಯನ್ನು ಸ್ವಪ್ರಯೋಜನಕ್ಕಾಗಿ ವಿನಿಯೋಗಪಡಿಸಿಕೊಳ್ಳತಕ್ಕವರಲ್ಲವೆಂದು ನಾವು ಖಂಡಿತವಾಗಿ ತಿಳಿದುಕೊಂಡಿರುತ್ತೇವೆ. ಅವರು ಶ್ರೀಮನ್ಮಹಾರಾಜರವರ ಘನಮಾನಗಳನ್ನು ಕಾಪಾಡಿಕೊಂಡು ಬರತಕ್ಕವರೆಂತಲೂ, ಈ ಸಂಸ್ಥಾನದ ಪ್ರಜೆಗಳ ಸ್ಥಿತಿಗತಿಗಳನ್ನು ಅಭಿವೃದ್ಧಿಗೆ ತರುವ ಮಾರ್ಗದಲ್ಲಿ ಸಾರ್ಥಪಡಿಸತಕ್ಕವರೆಂತಲೂ ನಮಗೆ ನಂಬಿಕೆಯುಂಟು.

ಮೆ|| ಟಿ. ಆನಂದರಾಯರು ಯಥಾರ್ಥವಾಗಿ ಪ್ರಜೆಗಳ ಸೇವಕರಾಗಿರುವಂಥಾ ಸಚ್ಚರಿತ್ರರಾದ ನೌಕರರನ್ನು ಆರಿಸಿ ತಮ್ಮ ಕೆಳಿಯಲ್ಲಿ ಇಟ್ಟುಕೊಳ್ಳುವರೆಂದು ನಿರೀಕ್ಷಿಸುತ್ತೇವೆ. ಯಾಕೆಂದರೆ ಅನೇಕಾನೇಕ ನೌಕರಮಾನೇರುಗಳು ಸ್ವಪ್ರಯೋಜಕರಾಗಿರುವರು, ಸರ್ಕಾರದವರು ತಮ್ಮನ್ನು ಪ್ರಜೆಗಳ ಹಿತಕ್ಕಾಗಿಯೇ ನೇಮಕಮಾಡಿರುವರಲ್ಲದೆ ಸ್ವಪ್ರಯೋಜನವನ್ನು ಹುಡುಕಿಕೊಳ್ಳುವುದಕ್ಕಲ್ಲ ಎಂಬ ಅಂಶವನ್ನು ಅವರು ಮರೆತುಬಿಟ್ಟಿರುವರು. ಇಂಥಾ ಸ್ವಾರ್ಥಬುದ್ಧಿಯು ಗವರ್ನ್‌ಮೆಂಟ್ ನೌಕರರಲ್ಲಿ ಸಿನ್ನಾಮವಾಗಿ, ಅವರೆಲ್ಲಾ ಈ ಸಂಸ್ಥಾನದ ಪ್ರಜಾಹಿತಕ್ಕಾಗಿಯೇ ಕಾರ್ಯಗಳನ್ನು ನಡಿಸುತ್ತಾ ಬರತಕ್ಕವರಾದ ಪಕ್ಷದಲ್ಲಿ ಮೈಸೂರು ಸೀಮೆಯು ಇತರ ಸೀಮೆಗಳಿಗೆ ಮೇಲ್ಪಂಕ್ತಿಯಾದದ್ದಾಗಿ ಪರಿಣಮಿಸುತ್ತೆನ್ನುವುದಕ್ಕೆ ಸಂಶಯವಿಲ್ಲ.

ಮೆ|| ಟಿ. ಆನಂದರಾಯರು ಈ ದೊಡ್ಡ ಉದ್ಯೋಗವನ್ನು ಸಾರ್ಥಕವಾಗುವಂತೆ ನಡಿಸಿಕೊಂಡು ಬರುವುದಕ್ಕೆ ಅವರಿಗೆ ಅವಶ್ಯವಾದ ದೇಹದಾರ್ಢ್ಯವೂ ಬುದ್ಧಿಶಕ್ತಿಯೂ ಪರಿಜ್ಞಾನವೂ ಅವಿಚ್ಛಿನ್ನವಾಗಿ ಲಭಿಸಲೆಂದು ಹಾರೈಸುತ್ತೇವೆ. ಅವರ ಕಾರ್ಯಾಚರಣೆಗಳನ್ನು ಕುರಿತು ಚರ್ಚಿಸಿ ಆಕ್ಷೇಪಣೆಮಾಡತಕ್ಕವರು ಬಹುಮಂದಿ ಇದ್ದಾರು. ಅವರಿಗೆ ಬೆಂಬಲವಾಗಿ ನಿಂತು ಸಹಾಯಮಾಡತಕ್ಕವನು ಒಬ್ಬನಿದ್ದರೆ ಸ್ವಪ್ರಯೋಜನದಲ್ಲಿ ಕುತೂಹಲವುಳ್ಳಂಥಾ ಅನೇಕರು ಅವರನ್ನು ಬಳಸಿಕೊಳ್ಳುವರು. ಆದಕಾರಣ ಮೆ|| ಆನಂದರಾಯರು ಇದುವರೆಗೆ ಯಾವ ಶ್ರೇಷ್ಠವಾದ ಉದ್ದೇಶದಿಂದ ಕೆಲಸಗಳನ್ನು ನಡಿಸುತ್ತಾ ಬಂದಿರುವರೋ ಅದೇ ಉದ್ದೇಶವನ್ನೇ ಅವರು ಇನ್ನು ಮುಂದೆಯೂ ಇಟ್ಟುಕೊಂಡು, ಮೈಸೂರು ಸಂಸ್ಥಾನಕ್ಕೆ ಶ್ರೇಯೋಭಿವೃದ್ಧಿಯನ್ನು ತಂದಾರೆಂದು ನಂಬಿ ನಿರೀಕ್ಷಿಸುತ್ತೇವೆ.

ಸ್ವದೇಶದ ವೃತ್ತಾಂತಗಳು.

ಸರ್ಕಾರದವರು ಕೂಲೀಸ್‌ಪೇಟೆಯಲ್ಲಿ ಹೊಸ ಕಾನೂನ್ ಪ್ರಕಾರ ಮ್ಯುನಿಸಿಪಾಲಿಟಿಯನ್ನು ಏರ್ಪಾಡುಮಾಡುವುದಾಗಿ ಹುಕುಂ ಕೊಟ್ಟಿರುತ್ತಾರೆ.

ಶ್ರೀಮನ್ಮಹಾರಾಜರವರು ಈ ತಿಂಗಳು ತಾ ೧೫ ನೇ ಗುರುವಾರ ರಾಜಧಾನಿಯಿಂದ ನೀಲಗಿರಿಗೆ ಮೋಟಾರ್ ಗಾಡಿಯಲ್ಲಿ ದಯಮಾಡುವವರಾಗಿದ್ದಾರೆಂದು ಕೇಳುತ್ತೇವೆ.

ಕಳೆದ ವಾರವೂ ಈ ವಾರವೂ ಬೆಂಗಳೂರು ಮತ್ತು ಮೈಸೂರಿನ ದಿನಸಿ ಪೇಟೆ ಧಾರಣೆಗಳು ಬಹಳ ವ್ಯತ್ಯಸ್ತವಾಗಿರುತ್ತವೆ. ಈ ರೀತಿ ಇಷ್ಟು ಮಟ್ಟಿಗೆ ಹೆಚ್ಚು ಕಡಮೆಯಾಗಲು ಕಾರಣವೇನೋ ಗೊತ್ತಾಗಲಿಲ್ಲ.

ಬೆಂಗಳೂರು ಕೋಟೆಯ ಹೊರಪಾರ್ಶ್ವದಲ್ಲಿರುವ ವಿಸ್ತಾರವಾದ ಜಮೀನನ್ನು ಒಕ್ಕಲಿಗರ ಸಂಘದ ಪುರೋಭಿವೃದ್ಧಿ ಕಾರ್ಯಗಳಿಗೋಸ್ಕರ ಉಚಿತವಾಗಿ ಕೊಟ್ಟಿದೆ ಎಂದು ಗವರ್ನ್‌ಮೆಂಟಿನವರು ಹುಕುಂಮಾಡಿದಾರೆ.

ಹೊಸ ದಿವಾನ್‌ರವರೂ ಹೊಸ ಕೌನ್ಸಿಲ್ ಮೆಂಬರುಗಳೂ ಮೊನ್ನೆ ಸೋಮವಾರ ಮಧ್ಯಾಹ್ನ ಸಭೆ ಸೇರಿ ಮೊದಲನೆಯ ಕೌನ್ಸಿಲ್ ಮೀಟಿಂಗ್ ನಡಿಸಿದರು. ಆಗ್ಗೆ ಸಂಸ್ಥಾನದ ಇಲಾಖೆಗಳು ಹಂಚಿಕೆಯಾದವೆಂದು ಕೇಳುತ್ತೇವೆ.

ಶ್ರೀಮನ್ಮಹಾರಾಜರವರಿಗೆ ಕಳೆದ ವಾರ ಸ್ವಲ್ಪ ದೇಹಾಲಸ್ಯವುಂಟಾಗಿತ್ತು. ಸೀನಿಯರ್ ಸರ್ಜನ್ ಡಾಕ್ಟರ್ ಸ್ಮಿತ್‌ಯವರು ಬಂದು ಚಿಕಿತ್ಸೆ ಮಾಡಿದರು. ಅವರು ಈಗ ಆರೋಗ್ಯವಾಗಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.

ಮಾಜಿ ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರಿಗೆ ಮದರಾಸ್ ಪಟ್ಟಣದಲ್ಲಿ ಕಾಹಿಲೆಯು ಪ್ರಾಪ್ತವಾಗಿದೆ ಎಂದು ತಿಳಿಸಲು ವಿಷಾದಿಸುತ್ತೇವೆ. ಆದರೆ ಈಗ ಅವರು ಆರೋಗ್ಯ ಹೊಂದುತ್ತಿರುವರೆಂದು ಕೇಳಿ ಸಂತೋಷಪಡುವೆವು.

ಸಂಸ್ಥಾನದ ಎಕ್ಸೈಸ್ ಕಮೀಷನರ್ ಮೆ|| ಎಚ್. ಎಚ್. ಕ್ರಂಪ್ ರವರೂ, ಇನ್‌ಸ್ಪೆಕ್ಟರ್ ಜನರಲ್ ಮೆ|| ಡಿ. ದೇವರಾಜ್ ಅರಸಿನವರೂ, ಡೆಪ್ಯುಟಿ ಕಮೀಷನರ್ ಮೆ|| ಎಂ. ನಾರಾಯಣರಾಯರೂ ಕಳೆದ ವಾರ ರಾಜಧಾನಿಗೆ ಬಂದಿರುತ್ತಾರೆ.

ಈ ಸಲ ನಂಜನಗೂಡಿನ ದೊಡ್ಡ ಜಾತ್ರೆಯಲ್ಲಿ ಬಹು ವಿಶೇಷವಾದ ಜನ ಸೇರಿತ್ತು. ಆದರೆ ಈ ಪ್ರಾಂತ್ಯದ ದನಗಳಿಗೆ ಅಂಟುರೋಗವಿರುವ ಕಾರಣ ಸರ್ಕಾರದವರು ನಂಜನಗೂಡಿನಲ್ಲಿ ಈ ಜಾತ್ರೆ ಕಾಲದಲ್ಲಿ ನಡಿಸಬೇಕಾಗಿದ್ದ ದನಗಳ ಪ್ರದರ್ಶನವನ್ನು ನಿಲ್ಲಿಸಿಬಿಟ್ಟರು.

ಕಳೆದ ಶುಕ್ರವಾರ ರಾತ್ರಿ ರಾಜಧಾನಿಯಲ್ಲಿ ಮೂರು ಅಂಗುಲ ಪ್ರಮಾಣದಷ್ಟು ಬಹು ಒಳ್ಳೆಯ ಮಳೆಯಾಯಿತು. ಇದರಿಂದ ಕೆರೆ ಕಟ್ಟೆ ಕೊಳಗಳಿಗೆ ಒಂದೆರಡು ತಿಂಗಳು ಸಾಕಾಗುವಷ್ಟು ನೀರು ಬಂದಿರುತ್ತದೆ. ಮೊನ್ನೆ ಮಂಗಳವಾರ ರಾತ್ರಿಯೂ ಸ್ವಲ್ಪ ಮಳೆ ಆಗಿರುತ್ತದೆ.

ರಾಜಧಾನಿಯಲ್ಲಿರುವ ಲಾಯರುಗಳ ಸಂಘದವರು ಎರಡನೇ ವಾರ್ಷಿಕೋತ್ಸವವನ್ನು ಮುಂದಿನ ಭಾನುವಾರ ನಡಿಸುವರು. ಅಡ್ವೋಕೇಟ್ ಮೆ|| ಎ. ರಾಮಣ್ಣನವರು ಆ ದಿನ ಲಾಯರುಗಳಿಗೆಲ್ಲಾ ತಮ್ಮ ಬಂಗಲೆಯಲ್ಲಿ ಸುಖಭೋಜನ ಮಾಡಿಸುವವರಾಗಿದ್ದಾರೆಂದು ಕೇಳುತ್ತೇವೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಹೊಸದುರ್ಗ ತಾಲ್ಲೂಕಿನ ಶ್ರೀರಂಗಪುರ ಗ್ರಾಮದಲ್ಲಿ ಬೆಂಕಿಬಿದ್ದು ೬೩ ಮನೆಗಳೂ, ಹರಿಹರ ಸಬ್ ತಾಲ್ಲೂಕಿನ ಮಲೆಬೆನ್ನೂರಿನಲ್ಲಿ ಹುಲ್ಲಿನ ಮೆದೆಗಳೂ ಸುಟ್ಟುಹೋದವೆಂದೂ ಇದರಿಂದ ೫೦ ಸಾವಿರ ರೂಪಾಯಿ ನಷ್ಟವಾಗಿದೆ ಎಂದೂ ಪ್ರಕಟವಾಗಿದೆ.

ರಾಜಧಾನಿಯ ಉತ್ತರ ಪಾರ್ಶ್ವದಲ್ಲಿರುವ ಬೊಪ್ಪನಹಳ್ಳಿ ಕೆರೆಗೆ ನೀರು ಬರುತ್ತಿದ್ದ ಆಸರೆಯನ್ನು ತಪ್ಪಿಸಿದ್ದರಿಂದ ಆ ಕೆರೆಯಲ್ಲಿ ನೀರು ನಿಲ್ಲದೆ ಜನರಿಗೂ ದನಗಳು ಪ್ರಾಣಿಗಳಿಗೂ ಬಹಳ ತೊಂದರೆಯುಂಟಾಗಿದೆ ಎಂದೂ, ಸರ್ಕಾರದವರು ಗಮನಕೊಟ್ಟು ಈ ಕೆರೆಗೆ ನೀರು ಬರುವ ಆಸರೆಯನ್ನು ಮೊದಲಿನಂತೆ ಕಲ್ಪಿಸಿಕೊಡಬೇಕೆಂದೂ ಒಬ್ಬ ವಾರ್ತಾದಾರರು ತಿಳಿಸುತ್ತಾರೆ.

ನೆನ್ನೆ ಬೆಳಿಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸೆಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸ್ಪೆಷಲ್ ಮೀಟಿಂಗನ್ನು ನಡಿಸಿ, ಮುಂದಿನ ವರುಷದ ಮ್ಯುನಿಸಿಪಲ್ ಜಮಾಖರ್ಚುಗಳ ಅಂದಾಜಾ ಪಟ್ಟಿಗಳನ್ನು ತನಿಖೆಯಿಂದ ಪ್ಯಾಸ್‌ಮಾಡಿದರು. ಮ್ಯುನಿಸಿಪಾಲಿಟಿಯ ಉತ್ಪತ್ತಿಯಲ್ಲಿ ಬಹಳ ಹಣ ಸಾಲಕ್ಕಾಗಿ ಪಾವತಿ ಆಗಬೇಕಾಗಿರುವುದರಿಂದ ಈ ಸಾಲ್ ಆಖೈರಿನಲ್ಲಿ ಅವಶ್ಯವಾದಷ್ಟು ಉಳಿಯುವುದಿಲ್ಲವೆಂದು ತಿಳಿದುಬಂದಿದೆ.

ರಾಜಧಾನಿಯಲ್ಲಿ ಸಿಡುಬಿನ ಉಪದ್ರವು ಹೆಚ್ಚಾಗಿರುವುದನ್ನೂ ಬಹುಮಂದಿ ಮಕ್ಕಳು ಸಿಡುಬೆದ್ದು ಸಾಯುವುದನ್ನೂ ನೋಡಿ ಸೀನಿಯರ್ ಸರ್ಜನ್‌ರವರು ಹೆಚ್ಚು ಸಿಬ್ಬಂದಿಯನ್ನು ನೇಮಿಸಿ ದೇವಿ ಸಿಡುಬು ಹಾಕುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಈ ವಿಚಾರವಾಗಿ ಮೆ|| ಎಂ. ಕಾಂತರಾಜೇ ಅರಸಿನವರು ಪುರಜನರಿಗೆಲ್ಲಾ ತಿಳಿಸಿರುವ ಇಸ್ತಿಹಾರನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಪ್ರಜೆಗಳು ಈ ವಿಚಾರಕ್ಕೆ ಗಮನಕೊಟ್ಟು, ತಮ್ಮ ಮನೆಯಲ್ಲಿರುವವರನ್ನೆಲ್ಲಾ ಸಿಡುಬು ಹಾಕಿಸಿ ಕಾಪಾಡಿಕೊಂಡಾರೆಂದು ನಿರೀಕ್ಷಿಸುವೆವು.

ದರ್ಬಾರ್ ಸರ್ಜನ್‌ರಾಗಿ ಶ್ರೀಮಾನ್ ಯುವರಾಜರವರ ಕೂಡ ಯುರೋಪಿಗೆ ಹೋಗಿಬಂದ ಡಾಕ್ಟರ್ ಡ್ರೇಕ್ ಬ್ರಾಕ್ಮನ್‌ರವರು ಸೀಮೆಗೆ ಪ್ರಯಾಣಮಾಡುವುದರಿಂದ ಗವರ್ನ್‌ಮೆಂಟಿನವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಡಾಕ್ಟರ್ ಟಿ. ವಿ. ಆರುಮುಗಂ ಮೊದಲಿಯಾರ್‌ರನ್ನು ನೀಲಗಿರಿಗೆ ಶ್ರೀಮಾನ್ ಯುವರಾಜರವರ ದೇಹಾರೋಗ್ಯವನ್ನು ನೋಡಿಕೊಳ್ಳುವುದಕ್ಕೆ ವರ್ಗ ಮಾಡಿದರು. ಅರಮನೆಯ ಸಿವಿಲ್ ಸರ್ಜನ್ ಮೆ|| ಟಿ. ಎಸ್. ನಂಜಪ್ಪನವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಛಾರ್ಜಿಗೆ ಕಳುಹಿಸಿಕೊಟ್ಟಿದ್ದಾರೆ.

ಈ ತಿಂಗಳ ಅಂತ್ಯಭಾಗದಲ್ಲಿ ಬೆಂಗಳೂರು ಮೆ|| ದೊಡ್ಡಣ್ಣನವರ ಛಾಪಾಖಾನಾ ಕಟ್ಟಡದಲ್ಲಿ ಒಕ್ಕಲಿಗರ ಮೂರನೇ ಮಹಾಸಭೆಯು ನಡಿಯುತ್ತದೆ. ದಿವಾನ್ ಮೆ|| ಟಿ. ಆನಂದರಾಯರು ಅಗ್ರಾಸನವನ್ನು ವಹಿಸಿ ಸಭೆಯನ್ನು ಜರುಗಿಸುವರು. ಮಾಜಿ ದಿವಾನ್ ಮೆ|| ವಿ. ಪಿ. ಮಾಧವರಾಯರಿಗೂ, ದಿವಾನ್ ಮೆ|| ಟಿ. ಆನಂದರಾಯರಿಗೂ ಸಂಘದವರು ಕೃತಜ್ಞತಾಪೂರ್ವಕವಾದ ಅಡ್ರೆಸ್ಸುಗಳನ್ನು ಒಪ್ಪಿಸುತ್ತಾರೆಂತಲೂ ಬ್ರಿಟಿಷ್ ರೆಸಿಡೆಂಟರಾದ ಘನವನ್ನೈದಿದ ಮೆ|| ಎಸ್. ಎಂ. ಫ್ರೇಸರ್‌ಯವರು ಒಕ್ಕಲಿಗರ ಮಂಡಲಿಗೆ ಕೆಲವು ಹಿತೋಕ್ತಿಗಳನ್ನು ತಿಳಿಸುವವರಾಗಿದಾರೆಂತಲೂ ಗೊತ್ತಾಗಿದೆ.

ಕಳೆದ ಭಾನುವಾರ ಮಧ್ಯಾಹ್ನದ ಮೆಯಿಲ್ ಗಾಡಿಯಲ್ಲಿ ಮೊದಲನೇ ಕೌನ್ಸೆಲರ್ ಮೆ|| ಕೆ. ಪಿ. ಪುಟ್ಟಣ್ಣಚೆಟ್ಟಿಯವರೂ, ಎರಡನೇ ಕೌನ್ಸೆಲರ್ ಮೆ|| ಎಚ್. ವಿ. ನಂಜುಂಡಯ್ಯನವರೂ ತಮ್ಮ ತಮ್ಮ ಆಫೀಸ್ ನೌಕರವರ್ಗಗಳ ಸಹಿತವಾಗಿ ರಾಜಧಾನಿಗೆ ದಯಮಾಡಿದರು. ಇಲ್ಲಿನ ಮುಖ್ಯಾಧಿಕಾರಿಗಳು ರೈಲ್ವೆ ಸ್ಟೇಷನ್‌ನಲ್ಲಿ ಕಾದಿದ್ದು ಅವರನ್ನು ಸನ್ಮಾನಪೂರ್ವಕವಾಗಿ ಎದುರುಗೊಂಡರು. ಇವರು ಗೆಸ್ಟ್ ಕ್ವಾರ್ಟರ್ಸ್ ಎಂಬ ಸರ್ಕಾರಿ ಬಂಗಲೆಯಲ್ಲಿ ಇಳುಕೊಂಡಿದ್ದಾರೆ. ಕಳೆದ ಭಾನುವಾರ ಮಧ್ಯಾಹ್ನ ಇವರಿಗೆ ಶ್ರೀಮನ್ಮಹಾರಾಜರವರ ಭೇಟಿಯು ಲಭಿಸಿತು. ಇವರು ಈ ದಿನ ವಾಪಸು ಬೆಂಗಳೂರಿಗೆ ಹೋಗುವವರಾಗಿದ್ದಾರೆ.

ಮಾರ್ಚಿ ೧೮ನೇ ತಾರೀಖಿನಲ್ಲಿ ಕೋ-ಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರವರು ಗುಬ್ಬಿಗೆ ಹೋಗಿದ್ದಾಗ ಅಲ್ಲಿನ ಕೆಲವು ದೊಡ್ಡ ಮನುಷ್ಯರು ಒಂದು ಕೋ-ಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸಬೇಕೆಂಬ ಕುತೂಹಲದಿಂದ ರೆಜಿಸ್ಟ್ರಾರವರನ್ನು ಸೊಸೈಟಿಗಳ ಪ್ರಯೋಜನದ ವಿಷಯವಾಗಿ ಉಪನ್ಯಾಸಮಾಡಬೇಕೆಂದು ಅಪೇಕ್ಷಿಸಿದ್ದರು. ಮೇಲೆ ೧೯ ನೇ ತಾರೀಖಿನ ಸಾಯಂಕಾಲ ಮಿಡ್ಲ್ ಸ್ಕೂಲ್ ಹಾಲಿನಲ್ಲಿ ರೆಜಿಸ್ಟ್ರಾರವರು ಒಂದು ಉಪನ್ಯಾಸವನ್ನು ಮಾಡಿದರು. ರೆಜಿಸ್ಟ್ರಾರವರು ಹೇಳಿದ ವಿಷಯಗಳನ್ನೆಲ್ಲಾ ತಿಳಿದನಂತರ ಆ ಊರಿನಲ್ಲಿ ಒಂದು ಸೊಸೈಟಿಯನ್ನು ಸ್ಥಾಪಿಸುವುದು ಅವಶ್ಯವೆಂದು ಸಭಿಕರಿಗೆ ತಿಳಿದು, ರೆಜಿಸ್ಟ್ರಾರವರ ಸಲಹೆಯ ಪ್ರಕಾರ ಷೇರು, ಮೆಂಬರು, ಮುಂತಾದವುಗಳನ್ನು ಗೊತ್ತುಮಾಡಿಕೊಂಡಿರುತ್ತಾರೆ.

ದೊಡ್ಡ ವಂಶಕ್ಕೆ ಸೇರಿ ಅರಮನೆ ಮುಸಾಹಿಬರಾಗಿ ಪೆನ್ಷನ್ ಪಡೆಯುತ್ತಿದ್ದ ಮೆ|| ಗಂಗಾಧರರಾಯರು ಮೊನ್ನೆ ಸೋಮವಾರ ರಾತ್ರಿ ಇಲ್ಲಿನ ಸ್ವಗೃಹದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಅವಸಾನಕಾಲದಲ್ಲಿ ಸುಮಾರು ೭೦ ವರುಷಗಳಾಗಿದ್ದವು. ಸುಮಾರು ಮೂರು ತಿಂಗಳ ಕಾಲ ಇವರು ಪಥ್ಯದಲ್ಲಿದ್ದರು. ಕಾಲವಾದರು. ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿರುವ ಮೆ|| ಎಂ. ಜಿ. ರಾಮರಾಯರೂ, ರಾಜಧಾನಿಯ ಮುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿರುವ ಮೆ|| ಎಂ. ಜಿ. ಕೃಷ್ಣಸಾಮಿರಾಯರೂ ಅವರ ಕುಮಾರರಾಗಿರುತ್ತಾರೆ. ಈ ರೀತಿ ಸ್ವಲ್ಪಕಾಲದಲ್ಲೇ ಅವರಿಗೆ ಮಾತಾಪಿತೃಗಳ ವಿಯೋಗ ದುಃಖವು ಪ್ರಾಪ್ತವಾಯಿತಲ್ಲಾ ಎಂದು ಸಂತಾಪಪಡುವೆವು. ಅವಸಾನಕಾಲದಲ್ಲಿ ಮೆ|| ರಾಮರಾಯರು ಡಿಸ್ಟ್ರಿಕ್ಟ್ ಫಾರೆಸ್ಟಿಗೆ ಸರ್ಕೀಟು ಹೋಗಿದ್ದರು. ಮೆ|| ದಳವಾಯಿ ದೇವರಾಜೇ ಅರಸಿನವರು ದಯವಿಟ್ಟು ತಮ್ಮ ಮೋಟಾರ್ ಗಾಡಿಯನ್ನು ಫಾರೆಸ್ಟ್ ಕ್ಯಾಂಪಿಗೆ ಕಳುಹಿಸಿಕೊಟ್ಟಿದ್ದರಿಂದ ಮೆ|| ರಾಮರಾಯರು ಮರುದಿನ ಬೆಳಿಗ್ಗೆ ಸುಮಾರು ೧೦ ಗಂಟೆಯಲ್ಲಿ ಸ್ವಗೃಹವನ್ನು ಸೇರಿದರು. ಆ ತರುವಾಯ ದಹನಾದಿಕಾರ್ಯಗಳು ನೆರವೇರಿದವು.

ಹೊಸ ದಿವಾನ್‌ರಾದ ಮೆ|| ಟಿ. ಆನಂದರಾಯರು ಕಳೆದ ಶನಿವಾರ ಮಧ್ಯಾಹ್ನ ಮೆಯಿಲ್ ಗಾಡಿಯಲ್ಲಿ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿದರು. ಮೆ|| ಗಳಾದ ಕಾಂತರಾಜೇ ಅರಸಿನವರು, ದೇವರಾಜೇ ಅರಸಿನವರು, ದಳವಾಯಿ ದೇವರಾಜೇ ಅರಸಿನವರು, ಸರ್ಕಾರಿ ಅಧಿಕಾರಿಗಳು, ಪ್ರಜೆಗಳ ಪ್ರತಿನಿಧಿಗಳು ಸ್ಟೇಷನ್‌ನಲ್ಲಿ ಹಾಜರಾಗಿದ್ದು ಹೊಸ ದಿವಾನ್‌ರವರನ್ನು ಎದುರುಗೊಂಡು ಅವರಿಗೆ ಸುಖಾಗಮನವನ್ನು ಬಯಸಿದರು. ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮೆ|| ಎಂ. ಜಿ. ಕೃಷ್ಣಸಾಮಿ ರಾಯರು ಮೆ|| ಆನಂದರಾಯರಿಗೆ ದಿವ್ಯವಾದ ಹಾರವನ್ನು ಒಪ್ಪಿಸಿದರು. ಮೆ|| ಆನಂದರಾಯರು ಅದನ್ನು ಸ್ವೀಕರಿಸಿ, ಎಲ್ಲರಿಗೂ ವಂದನೆಯನ್ನು ಮಾಡಿ ಹೊರಗಡೆ ಕಾದಿದ್ದ ಸರ್ಕಾರಿ ಗಾಡಿಯನ್ನು ಹತ್ತಿ ಸಿಲ್ಲೇದಾರ್ ಮರ್ಯಾದಾಸಹಿತವಾಗಿ ಹೊರಟು, ನಂಜರಾಜ ಬಹದ್ದೂರ ಛತ್ರದ ಎದುರಿಗಿರುವ ತಮ್ಮ ಸ್ವಂತ ಬಂಗಲೆಗೆ ದಯಮಾಡಿದರು. ದಿವಾನ್‌ರವರು ಶ್ರೀಮನ್ಮಹಾರಾಜರವರ ಭೇಟಿ ಮಾಡಿಕೊಂಡು ಬಂದರು. ಇವರು ಈ ದಿನವೋ ನಾಳೆಯೋ ಬೆಂಗಳೂರಿಗೆ ದಯಮಾಡಿ ಮತ್ತೆ ಮುಂದಿನ ವಾರ ರಾಜಧಾನಿಗೆ ಬರುವವರಾಗಿದ್ದಾರೆಂದು ಕೇಳುತ್ತೇವೆ.

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಮಾರ್ಚಿ ತಾ. 27 ಕ್ಕೆ ಅಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ — ಗಂಡಾಳು	ಹೆಣ್ಣಾಳು	ಮಕ್ಕಳು	ಕೂಲಿ ಕೊಟ್ಟದ್ದು ರೂ	ದರ್ಮಾಸ ಸಹಾಯ ಪಡೆದ ಜನರು
ಬೆಂಗಳೂರು	1,187	542	40	1,218	355
ಕೋಲಾರ	1,180	595	105	1,021	850
ತುಮಕೂರು	3,036	1,83[illegible]	112	2,230	592
ಮೈಸೂರು	641	781	81	318	608
ಹಾಸನ	290	280	82	332	5
ಶಿವಮೊಗ್ಗ	105	193	103	721	5
ಕಡೂರು	19	18		60	
ಚಿತ್ರದುರ್ಗ	494	266	87	916	620
ಮಾಂಕಣವೆ	148	130	27		
ಸ್ಯಾನಿಟರಿ	48	61		147	
ಒಟ್ಟು	7,746	4,701	941	8,498	3,035

ಎಣ್ಣೆ ಮತ್ತು ಎಣ್ಣೆಯ ಬೀಜಗಳು

ಕಳೆದ ಇಂಡಿಯನ್ ಇಂಡಸ್ಟ್ರಿಯಲ್ ಕಾನ್ಫರೆನ್ಸ್ ಸಭೆಯ ಪ್ರೆಸಿಡೆಂಟರಾದ ಮೆ|| ಮುಧೋಳ್ಕರ್ರವರು ಮೇಲ್ಕಂಡ ವಿಷಯವಾಗಿ ಹೇಳುವುದೇನೆಂದರೆ—ಈಗ ಕೆಲವು ವರುಷಗಳಿಂದಲೂ ಎಣ್ಣೆ ಬೀಜಗಳು ವಿಶೇಷವಾಗಿ ಅನ್ಯದೇಶಗಳಿಗೆ ರಫ್ತಾಗುತ್ತಿವೆ ೧೯೦೪ ೫ನೇ ಸಾಲಿನಲ್ಲಿ ೧೪ ಕೋಟಿ ರೂಪಾಯಿನ ಬೀಜಗಳು ರಫ್ತಾದವು ೧೯೦೭ ೮ ರಲ್ಲಿ ರಫ್ತಾದವುಗಳ ಬೆಲೆ ೧೬ ಕೋಟಿ ರೂಪಾಯಿಗಳು ಎಣ್ಣೆಯ ರಫ್ತು ವ್ಯಾಪಾರವಾದರೋ ಏಕಪ್ರಕಾರವಾಗಿ ಕ್ಷೀಣವಾಗುತ್ತಾ ಬಂದು, ಈಗ ೫ ವರುಷಗಳಲ್ಲಿ ೪೩|| ಲಕ್ಷ ರೂಪಾಯಿಂದ ೫೦ ಲಕ್ಷಕ್ಕೆ ಇಳಿದಿರುತ್ತದೆ ಆದರೆ ಇದರ ಆಮದು ವ್ಯಾಪಾರವು ೯| ಲಕ್ಷದಿಂದ ೩೭ ಲಕ್ಷಕ್ಕೆ ಏರಿರುತ್ತದೆ ಪಾಶ್ಚಿಮಾತ್ಯ ಜನಾಂಗದವರು ಶಾಸ್ತ್ರಬಲದಿಂದ ಇಲ್ಲಿನ ಕಚ್ಚಾ ಪದಾರ್ಥವನ್ನು ೬, ೦೦೦ ಮೈಲಿಗಳ ಫಾಸಲೆಗೆ ಸಾಗಿಸಿಕೊಂಡು ಹೋಗಿ ಅಲ್ಲಿ ಸಾಮಾನುಗಳನ್ನು ತಯಾರಿಸಿ ಪುನಃ ಅದೇ ಸಾಮಾನುಗಳನ್ನು ಈ ದೇಶಕ್ಕೆ ತಂದು ವಿಶೇಷ ಲಾಭ ಪಡೆಯುವಷ್ಟು ಸಮರ್ಥರಾಗಿರುತ್ತಾರೆ ಇವರು ವಿಶೇಷ ಶ್ರಮವಿಲ್ಲದೆ ಜಾಗ್ರತೆಯಾಗಿ ಕೆಲಸ ನಡೆಯುವಂತೆ ಒಳ್ಳೆ ಯಂತ್ರೋಪಕರಣಗಳನ್ನು ಪ್ರಯೋಗಿಸಿ ಮತ್ತು ಬೀಜದಿಂದ ಹೆಚ್ಚು ಎಣ್ಣೆಯನ್ನು ಹಿಂಡುವ ವಿಧಾನವನ್ನು ಕಂಡುಹಿಡಿದು, ಹಳ್ಳಿಯ ಗಾಣಿಗರೂ ಯಂತ್ರಶಕ್ತಿಯಿಂದ ಎಣ್ಣೆ ತೆಗೆಯುವವರೂ ಕೂಡ ಮಾಡುವುದಕ್ಕಿಂತಲೂ ಅಗ್ಗವಾಗಿ ಮಾರಬಲ್ಲವರಾಗಿರುತ್ತಾರೆ ಈ ದೇಶದ ಅನೇಕಾನೇಕ ಕಡೆಗಳಲ್ಲಿ ಎಣ್ಣೆಯ ಕಾರ್ಖಾನೆಗಳಿರುತ್ತವೆ ಆದರೆ ಇವು ಮೊದಲಿನ ಹಾಗೆ ಈಗ ಅಭಿವೃದ್ಧಿಸ್ಥಿತಿಯಲ್ಲಿಲ್ಲ ಈಗ ಬೀಜದ ಉತ್ಪತ್ತಿಯು ಕಡಮೆಯಾಗಿರುತ್ತದೆ ಮತ್ತು ಅದರ ರಫ್ತು ಸಹ ಕಿರಿದಾಗಿರುವುದು ಅಲ್ಲದೆ ಈ ವಿಚಾರದಲ್ಲಿ ಇಲ್ಲಿನ ಜನರು ಶಾಸ್ತ್ರಜ್ಞಾನ ಮತ್ತು ಶಿಕ್ಷೆಯೊಂದಿದವರಲ್ಲ ಈ ಕಾರಣಗಳಿಂದ ಈ ಕಸಬಿನಲ್ಲಿದ್ದ ಆದಾಯವು ಬಹಳವಾಗಿ ಕುಗ್ಗಿರುತ್ತದೆ ಈಗಿನ ಎಣ್ಣೆ ತೆಗೆಯುವ ಕ್ರಮಗಳನ್ನು ಉತ್ತಮಪಡಿಸಿ, ಈ ಕಸಬಿಗೆ ಸಂಬಂಧಪಟ್ಟ ಹಾಗೆ ವಿಧವಿಧವಾದ ಬಣ್ಣಗಳು, ವಾರ್ನಿಷು, ಮೇಣದ ಬತ್ತಿ, ಸಾಬೂನು ಮುಂತಾದವುಗಳನ್ನು ತಯಾರಿಸುವ ಉದ್ಯೋಗಗಳನ್ನು ಏರ್ಪಡಿಸಿದ್ದಾದರೆ ಈ ಕಸಬನ್ನು ಚಿರಸ್ಥಾಯಿಯಾಗಿ ಸ್ಥಾಪಿಸಲು ಸಾಧ್ಯವಾಗುತ್ತದೆ ಎಣ್ಣೆ ಬೀಜಗಳು ಹಾಲಿ ವಿಶೇಷವಾಗಿ ರಫ್ತಾಗುತ್ತಿರುವುದರಿಂದ ಎರಡು ತರದ ಅನಾನುಕೂಲಗಳುಂಟಾಗಿರುತ್ತವೆ ದನಕರುಗಳಿಗೆ ಆಹಾರವಾಗಿಯೂ ಜಮೀನಿಗೆ ಸರ್ವೋತ್ಕೃಷ್ಟವಾದ ಗೊಬ್ಬರವಾಗಿಯೂ ಇರುವ ಎಣ್ಣೆ ಹಿಂಡಿಯ ಸರಬರಾಯಿ ಕಡಮೆಯಾಗಿದೆ ಈ ಕಸಬನ್ನು ಅಭಿವೃದ್ಧಿಪಡಿಸುವುದರಿಂದ ವ್ಯವಸಾಯದ ಅಭಿವೃದ್ಧಿಗೂ ಪ್ರೋತ್ಸಾಹ ಕೊಟ್ಟಂತಾಗುವುದು

ಒಬ್ಬ ಮಹಾ ಪುರುಷನ ವರ್ಧಂತಿಯು.

ಹಿಂದುಸ್ಥಾನದಲ್ಲಿ ಪರೋಪಕಾರಕ್ಕೆ ಸಹಾಯವು.

ಪುಣ್ಯಪುರುಷನೂ ಪರೋಪಕಾರನಿರತನೂ ಆದ ಜನರಲ್ ಬೂತ್ ಎಂಬಾತನಿಗೆ ಈ ತಿಂಗಳ ೧೦ ನೇ ತಾರೀಖಿಗೆ ೮೦ ವರುಷಗಳು ತುಂಬುವವು ಈತನು ಕಳೆದ ೬೫ ಸಂವತ್ಸರಗಳಿಂದ ಪ್ರಪಂಚದ ನಾನಾ ಭಾಗಗಳಲ್ಲಿರುವ ಬಡಬಗ್ಗರಿಗೂ ಅನಾಥರಿಗೂ ತುಂಬಾ ಉಪಕಾರಿಯೆನಿಸಿಕೊಂಡಿರುವನು ಇಂಥಾ ಪರೋಪಕಾರಿಯ ೮೦ ನೆಯ ಜನ್ಮೋತ್ಸವವನ್ನು ಹಿಂದುಸ್ಥಾನದಲ್ಲಿ ಶಾಶ್ವತವಾಗಿ ನೆನಪಿನಲ್ಲಿರುವಂತೆ ಮಾಡಬೇಕೆಂದು ಕಮಿಷನರ್ ಬೂತ್ ಟಕರ್‌ಯವರು ಉದ್ದೇಶಪಟ್ಟು, ಈ ರಾಷ್ಟ್ರದ ಸಕಲ ಪ್ರಜೆಗಳಿಗೂ ತಿಳಿಯಪಡಿಸುವುದೇನೆಂದರೆ —

(೧) ಹಿಂದುಸ್ಥಾನದ ನೆಯ್ಗೆ ಕಸಬನ್ನು ಅಭಿವೃದ್ಧಿಗೆ ತರುವುದಕ್ಕೆ ಬೊಂಬಾಯಿನಲ್ಲಿರುವ ಸಾಲ್ವೇಷನ್ ಆರ್ಮಿ ಕಂಪನಿಯವರು ನೂತನವೂ ಸುಲಭಸಾಧ್ಯವೂ ಆದ ಮಗ್ಗಗಳನ್ನು ತಯಾರುಮಾಡಿ ವಿಕರಿಮಾಡುತ್ತಿದ್ದಾರಷ್ಟೆ ಈ ಮಗ್ಗಗಳು ೨೫ ರೂಪಾಯಿನಿಂದ ೧೦೦ ರೂಪಾಯಿ ವರೆಗೆ ಕ್ರಯವಾಗುವವು ಇಂಥಾ ಉತ್ಕೃಷ್ಟವಾದ ೧,೦೦೦ ಮಗ್ಗಗಳನ್ನು ತಯಾರುಮಾಡಿ, ನೆಯ್ಗೆಯವರಿಗೆ ವಿಕರಿಮಾಡಿ, ತಿಂಗಳಿಗೆ ಇಷ್ಟೆಂದು ಕಂತುಪ್ರಕಾರ ಹಣವನ್ನು ತೆಗೆದುಕೊಳ್ಳುವಂತೆ ಅವಕಾಶವಾದರೆ ನೆಯ್ಗೆಯವರಿಗೆ ಮಹದುಪಕಾರವಾಗುವುದು ಈ ಹಣವು ಕಂತುಗಳ ಪ್ರಕಾರ ವಸೂಲಾದ ಹಾಗೆಲ್ಲಾ ಇನ್ನೂ ಹೆಚ್ಚಾಗಿ ಮಗ್ಗಗಳನ್ನು ತಯಾರುಮಾಡಿ ವಿಕರಿಗೆ ಸಿದ್ಧಗೊಳಿಸಬಹುದಾಗಿದೆ ಈ ಪರೋಪಕಾರ ಕಾರ್ಯಕ್ಕೆ ೫೦,೦೦೦ ರೂಪಾಯಿ ಫಂಡು ಬೇಕಾಗಿರುವುದು ಈ ಪೈಕಿ ಧರ್ಮಾತ್ಮರಾದವರು ೧,೦೦೦ ಅಥವಾ ಅದಕ್ಕಿಂತಲೂ ಹೆಚ್ಚು ಹಣವನ್ನು ಕೊಟ್ಟು, ಇಂಥಾ ಊರಿನವರಿಗೆ ಮಗ್ಗಗಳನ್ನು ವಿಕರಿಮಾಡಬೇಕೆಂದು ಅಪೇಕ್ಷೆಪಡುವುದಾದರೆ ಆ ರೀತಿ ನಡೆಯುವಂತೆ ಏರ್ಪಾಡುಮಾಡಬಹುದಾಗಿದೆ

(೨) ಬಂದೀಖಾನೆಗಳಲ್ಲಿ ಬಿದ್ದು ಶಿಕ್ಷೆಯನ್ನನುಭವಿಸಿ ಬಿಡುಗಡೆಹೊಂದುವವರು ಮತ್ತೆ ಮತ್ತೆ ದುಷ್ಕೃತ್ಯಗಳನ್ನು ಮಾಡಿ ಕೆಟ್ಟು ಹೋಗುತ್ತಲಿದ್ದಾರೆ ಇಂಥವರನ್ನು ಸನ್ಮಾರ್ಗಕ್ಕೆ ತರುವುದು ಪರಮಾವಶ್ಯಕವಾಗಿರುವುದು ಪರೋಪಕಾರಿಗಳಾದ ದೇಶೀಯ ರಾಜರ್ಗಳಾದರೂ ಈ ಕೆಲಸಕ್ಕೆ ಕೆಲವು ಎಕರೆಗಳಷ್ಟು ಜಮೀನನ್ನು ಧರ್ಮಾರ್ಥವಾಗಿ ಕೊಟ್ಟ ಪಕ್ಷದಲ್ಲಿ ಅಂಥಾ ವ್ಯಕ್ತಿಗಳನ್ನು ಆ ಜಮೀನುಗಳಲ್ಲಿಟ್ಟುಕೊಂಡು ಅವರಿಗೆ ಹಿತಕರವಾದಂಥಾ ಕಸಬುಗಳನ್ನು ಕಲಿಸಿಕೊಟ್ಟು ಸತ್ಪ್ರಜೆಗಳನ್ನಾಗಿ ತರಬೇತು ಮಾಡುವಂತೆ ಏರ್ಪಾಡು ಮಾಡಬಹುದಾಗಿದೆ ಜಮೀನಲ್ಲದೆ ಈ ಕಾರ್ಯಕ್ಕೆ ಅವಶ್ಯವಾದ ಕಟ್ಟಡ ಮುಂತಾದ ಕೆಲಸಗಳಿಗೆ ೨೫,೦೦೦ ರೂಪಾಯಿ ಉಳ್ಳ ಒಂದು ಫಂಡನ್ನು ಒದಗಿಸಿಕೊಡಬೇಕಾಗಿರುವುದು ಅಮೇರಿಕದಲ್ಲಿ ಗವರ್ನ್‌ಮೆಂಟಿನವರು ವ್ಯಕ್ತಿಗಳಿಗೆ ಇಂಥಾ ಏರ್ಪಾಡುಮಾಡಲ್ಪಟ್ಟಿರೋಣದರಿಂದ ಒಂದಾವರ್ತಿ ಬಂದೀಖಾನೆಗೆ ಬಿದ್ದ ಮನುಷ್ಯನು ಮತ್ತೆ ಅಲ್ಲಿಗೆ ಹೋಗದೆ ಯಾವುದಾದರೊಂದು ಕಸಬಿನಿಂದ ಜೀವನ ಮಾಡುವಂತಾಗುವನು ಈ ರಾಷ್ಟ್ರದಲ್ಲೂ ಈ ವಿಧವಾದ ಏರ್ಪಾಡು ನಡೆದರೆ ದುಷ್ಕಾರ್ಯಗಳು ಕಡಮೆಯಾಗುವುದಕ್ಕೂ ಸತ್ಪ್ರಜೆಗಳು ಹುಟ್ಟುವುದಕ್ಕೂ ದೇಶೋನ್ನತಿಗೂ ತುಂಬಾ ಪ್ರೋತ್ಸಾಹವಾಗುತ್ತದೆ

(೩) ಕಸ್ಸಾವಾ ಎಂಬುವುದು ಬಹು ಒಳ್ಳೆಯದಾದ ಆಹಾರ ಪದಾರ್ಥವಾಗಿರುತ್ತದೆ ಅದನ್ನು ಮನುಷ್ಯನಿಗೂ ಗೋವು ಮೊದಲಾದ ಪಶುಗಳಿಗೂ ಕೊಡಬಹುದು ಮತ್ತು ಅದು ಬಹು ಅಗ್ಗವಾಗಿ ಸಿಕ್ಕುವುದು ಕ್ಷಾಮ ನಿವಾರಣೆಗೆ ಇದು ಸಹಕಾರಿಯಾದದ್ದು ಈ ಆಹಾರ ಪದಾರ್ಥವನ್ನು ನಾಲ್ಕೈದು ಸ್ಥಳಗಳಲ್ಲಿ ಬೆಳೆಮಾಡುವುದಕ್ಕೆ ಕೂಡಲೇ ಪ್ರಾರಂಭಿಸುವುದು ಉತ್ತಮ ಈ ಬೆಳೆಯು ಕೈಸೇರುವ ತನಕ ಒಂದು ಎಕರೆ ಭೂಮಿಗೆ ವಿಶೇಷವಾಗಿ ೩೦ ರೂಪಾಯಿಗೆ ೧೬ ರಿಂದ ೨೦ ಸೇರಿನ ತನಕ ಬಿತ್ತನೆ ಮಾಡಬಹುದಾಗಿದೆ ಇದಕ್ಕೋಸ್ಕರ ೨೫,೦೦೦ ರೂಪಾಯಿ ಫಂಡು ಬೇಕಾಗಿರುವುದು ಈ ಫಂಡಿನ ಹಣವನ್ನು ಮತ್ತೆಮತ್ತೆ ಉಪಯೋಗಿಸುತ್ತಾ ಆ ಬೆಳೆಯನ್ನು ಈ ರಾಷ್ಟ್ರದಲ್ಲಿ ಹೆಚ್ಚಿಸಬಹುದಾಗಿದೆ

(೪) ಅನೇಕ ಕಡೆಗಳಲ್ಲಿ ರೈತಪ್ರಜೆಗಳಿಗೆ ಸಹಾಯವಾಗುವ ಹಾಗೆ ಸಣ್ಣ ಸಣ್ಣ ಬ್ಯಾಂಕುಗಳು ಸ್ಥಾಪಿಸಲ್ಪಟ್ಟಿರುವವು ಈಗ ಮದ್ರಾಸ್ನಲ್ಲಿ ಒಂದು ದೊಡ್ಡ ಬ್ಯಾಂಕು ಏರ್ಪಾಟಾಗಿದೆ ಈ ಬ್ಯಾಂಕಿನಲ್ಲಿ ಹಣವಿಟ್ಟಿರುವವರಿಗೆ ಶೇಕಡಾ ವರುಷಕ್ಕೆ ೬ ರೂಪಾಯಿನಂತೆ ಬಡ್ಡಿ ಕೊಡಲಾಗುವುದು ಗ್ರಾಮಾಂತರಗಳಲ್ಲಿ ಹೊಸತಾಗಿ ಬಂದಿರುವ ವ್ಯವಸಾಯ ಮೊದಲಾದ ಕಸಬುಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಸಮರ್ಥರೂ ಪರೋಪಕಾರಿಗಳೂ ಆಗಿರುವಂಥಾ ಐಶ್ವರ್ಯವಂತರು ತಮ್ಮ ಹಣವನ್ನು ಈ ಮದ್ರಾಸ್ನ ಬ್ಯಾಂಕಿನಲ್ಲಿ ಹಾಕಿ ಸೇರುದಾರರಾಗಬೇಕೆಂದು ಪ್ರಾರ್ಥಿಸಲ್ಪಟ್ಟಿದೆ ಈಗ ರೈತರೇ ಮೊದಲಾದ ಕಸಬುದಾರರು ಸಾಹುಕಾರರಿಗೆ ಶೇಕಡಾ ವರುಷಕ್ಕೆ ೨೫ ರಿಂದ ೧೦೦ ರೂಪಾಯಿ ವರೆಗೆ ಬಡ್ಡಿಯನ್ನು ತೆತ್ತು ಬಡವರಾಗಿ ಕೆಟ್ಟು ಹೋಗುತ್ತಿದ್ದಾರೆ ಈ ಬ್ಯಾಂಕಿಗೆ ೫೦,೦೦೦ ರೂಪಾಯಿ ದಾನಕೊಟ್ಟಲ್ಲಿ ಇದರಿಂದ ರೈತರಿಗೆ ಸುಲಭ ಬಡ್ಡಿಗೆ ಹಣ ಒದಗಿಸುವುದಕ್ಕೆ ತುಂಬಾ ಸಹಾಯವಾಗುವುದು

ಮೈಸೂರು ಗೆಜೆಟ್ ಸಂಗ್ರಹ.

ವಿಶೇಷ ಪತ್ರಿಕೆ

ಪ್ರಕಟನೆ

ವಿಶ್ವನಾಥ ಪಟವರ್ಧನ್ ಮಾಧವರಾವ್, ಸಿ ಐ ಇ ಯವರು ಉದ್ಯೋಗದಿಂದ ನಿವೃತ್ತರಾದ ಪ್ರಯುಕ್ತ ಮೈಸೂರು ಸಂಸ್ಥಾನದ ದಿವಾನ್ ಕೆಲಸವು ಖಾಲಿಯಾಗುವುದರಿಂದ ನಾವು ತಂಜಾವೂರು ಮಾಧವರಾವ್ ಆನಂದರಾವ್, ಬಿ ಎ ಯವರ ರಾಜಭಕ್ತಿ ಕಾರ್ಯದಕ್ಷತೆ ಮತ್ತು ವಿವೇಕ ಇವುಗಳಲ್ಲಿ ಅಭಿಮಾನವಿಟ್ಟು ಮೈಸೂರು ಸಂಸ್ಥಾನದ ದಿವಾನ್ ಉದ್ಯೋಗಕ್ಕೆ ಮೇಲ್ಕಂಡ ತಂಜಾವೂರು ಮಾಧವರಾವ್ ಆನಂದರಾವ್, ಬಿ ಎ ಯವರನ್ನು ಈ ಮೂಲಕ ನೌಕರರ್ ಮಾಡಿರುತ್ತೇವೆ ಮತ್ತು ಉಪಯೋಗಪ್ರಯುಕ್ತ ಮಂತ್ರಾಲೋಚನಾ ಸಭಾಧ್ಯಕ್ಷರಾಗಿಯೂ ಸಹ ಮೇಲ್ಕಂಡ ತಂಜಾವೂರು ಮಾಧವರಾವ್ ಆನಂದರಾವ್, ಬಿ ಎ ಯವರನ್ನು ನಾವು ನೌಕರರ್ ಮಾಡಿರುತ್ತೇವೆ

ಇದೇ ೧೯೦೯ ನೇ ಇಸವಿ ಏಪ್ರಿಲ್ ೧ನೇ ತಾರೀಖಿನ ದಿವಸ ಮೈಸೂರಲ್ಲಿ ನಮ್ಮ ಮೊಹರ್ ದಸ್ತಖತ್ ಸಹಿ ಕೊಡಲ್ಪಟ್ಟಿರುತ್ತದೆ

ಕೃಷ್ಣರಾಜ ಒಡೆಯರ್

ಶ್ರೀಮನ್ ಮೈಸೂರು ಮಹಾರಾಜ ರಾಜಶ್ರೀ ಸಭೆಯವರು ಮೆ ಕೆ ಪಿ ಪುಟ್ಟಣ್ಣ ಸೆಟ್ಟಿಯವರನ್ನು ಮೊದಲನೆ ಕೌನ್ಸಿಲರನ್ನಾಗಿಯೂ, ಮೆ ಎಚ್ ವಿ ನಂಜುಂಡಯ್ಯ, ಎಂ ಎ, ಎಂ ಎಲ್ ಯವರನ್ನು ಎರಡನೆ ಕೌನ್ಸಿಲರನ್ನಾಗಿಯೂ ನೌಕರರ್ ಮಾಡಿ ಇರುತ್ತಾರೆ

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರಾಗಿದ್ದು ರಾಜೀನಾಮೆಯನ್ನು ಕೊಟ್ಟ ಮಹಾರಾಜಾ ಕಾಲೇಜ್ ಪ್ರಿನ್ಸಿಪಲ್‌ರವರಾದ ಮೆ ಜೆ ವೆಯರ್ ಯವರ ಸ್ಥಾನದಲ್ಲಿ ರೆವರೆಂಡ್ ಎಚ್ ಗಲ್ಲಿಫರ್ಡ್ ರವರನ್ನು ಮ್ಯುನಿಸಿಪಲ್ ಕೌನ್ಸಿಲರಾಗಿ ನೇಮಕ ಮಾಡಿದೆ

ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಕೆಲಸಮಾಡುವ ಸಬ್ ಅ ಸರ್ಜನ್ ಮೆ ಜ ಆಶೀರ್ವಾದಂ ಯವರಿಗೆ ಮಾರ್ಚಿ ತಾ ೩೦ ರ ಹದಿನೆದು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶ್ರೀಮನ್ ಮಹಾರಾಜರವರು ಮೆ ರಿಚರ್ಡ್ ಹಾಮಿಲ್ಟನ್ ಕ್ಯಾಂಬೆಲ್ ಐ ಸಿ ಎಸ್ ಯವರನ್ನು ತಮ್ಮ ಪ್ರೈವೆಟ್ ಸೆಕ್ರೆಟರಿಯ ಕೆಲಸಕ್ಕೆ ನೇಮಕ ಮಾಡಿಕೊಂಡಿದ್ದಾರೆ

ಅಮಲ್ದಾರ್ ಮೆ|| ಸಿ ವಿ ನಾರಾಯಣರಾಯರು ಪೆನ್ಷನ್ ಮೇಲೆ ಕೆಲಸಬಿಟ್ಟ ಸಬಬು ಹಾಸನದ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಬಿ ಟಿ ಸೀತಾರಾಮಯ್ಯನವರನ್ನು ಹೊಳೆನರಸೀಪುರದ ತಾಲ್ಲೂಕು ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದೆ

ಬೆಂಗಳೂರು ತಾಲ್ಲೂಕ್ ಅಮಲ್ದಾರ್ ಮೆ|| ಹೇಸ್‌ಯವರು ಇತರ ಕೆಲಸದ ಮೇಲಿರುವಾಗ್ಗೆ ಬೆಂಗಳೂರು ಡೆಪ್ಯುಟಿ ಕಮಿಷನರವರ ಆಫೀಸ್ ಜುಡಿಷಲ್ ಹೆಡ್ ಮುನ್ಷಿ ಎಂ ವೆಂಕಟಣ್ಣಾಚಾರ್ಯ ಆ ತಾಲ್ಲೂಕಿನ ಅಮಲ್ದಾರರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಆಕ್ಟಿಂಗ್ ಅಮಲ್ದಾರ್ ಮೆ|| ಬಿ ಮೊಹಿದೀನ್ ಷರೀಫ್ ಯವರು ಸಸ್ಪೆಂಡ್ ಮಾಡಲ್ಪಟ್ಟಿರುವುದರಿಂದ ನಂಜನಗೂಡು ಪೋಲೀಸ್ ಇನ್ಸ್‌ಪೆಕ್ಟರ್ ಆರ್ ಸುಂದರರಾಯರು ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಮೆ| ಆರ್ ಎಚ್ ಕ್ಯಾಂಬೆಲ್, ಐ ಸಿ ಎಸ್ ಯವರು ಮಾರ್ಚಿ ತಾ ೩೦ ನೇ ಮಧ್ಯಾಹ್ನ ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಕೆಲಸದ ಛಾರ್ಜನ್ನು ಮೆ| ಟಿ ವೆಂಕಟ್ರಾವ್, ಐ ಸಿ ಎಸ್ ಯವರಿಂದ ವಹಿಸಿಕೊಂಡಿರುತ್ತಾರೆ

ಶ್ರೀಮನ್ಮಹಾರಾಜರವರು ಮೈಸೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನ ಕಮಿಷನ್ ರ್ಯಾಂಕಿಯಲ್ಲಿ ಮುಂದೆ ಹೇಳುವ ಬಡ್ತಿಗಳನ್ನು ಕಳೆದ ಡಿಸೆಂಬರ್ ತಾ ೨೮ ರಿಂದ ಹುಕುಂಮಾಡಿರುತ್ತಾರೆ —(೧) ಟ್ರೂಪ್ ಕಮ್ಯಾಂಡರ್ ಮಹಮದ್ ನಸೀರ್ ಅಹಮದ್ ಯವರನ್ನು ೪ ರಿಂದ ೩ ನೇ ಗ್ರೇಡ್ ಜಮಾದಾರಿಗೆ (೨) ಡಿಟೋ ಪೀರ್ ಸಾಹುದೀನ್ ಯವರನ್ನು ೫ ರಿಂದ ೪ ನೇ ಗ್ರೇಡ್ ಜಮಾದಾರಿಗೆ

ಸುಬೇದಾರ್ ಮೇಜರ್ ಕೃಷ್ಣರಾಜೇ ಅರಸಿನವರನ್ನು ಮೈಸೂರು ಇನ್‌ಫೆಂಟ್ರಿ ೧ ನೇ ಬಟಾಲಿಯನ್ ಕಮಾಂಡೆಂಟರನ್ನಾಗಿ ಹುಕುಂಮಾಡಿದ್ದಾದದ್ದರಿಂದ ಸೈಯದ್ ಅಬ್ದುಲ್ ಜಾಫರ್ ಯವರನ್ನು ೧ ನೇ ಬಟಾಲಿಯನ್ ೧ ನೇ ಗ್ರೇಡ್ ಸುಬೇದಾರ್ ಮೇಜರ್ ಕೆಲಸದಲ್ಲಿ ಖಾಯಂಮಾಡಿದೆ

ವಿದೇಶ ವರ್ತಮಾನಗಳು

ಲಂಡನ್ ಪಟ್ಟಣದಲ್ಲಿ ಮೋಟಾರ್ ಗಾಡಿ ಮೋಟಾರ್ ಬೈಸಿಕಲ್‌ಗಳು ೯೬,೦೦೦ ಇರುತ್ತವೆ ಪ್ರಜೆಗಳು ಇಷ್ಟನ್ನೂ ಉಪಯೋಗಿಸುತ್ತಿರುವರು

ವಿಲಾಯಿತಿ ರಾಜ್ಯದಲ್ಲಿ ಮದ್ಯಪಾನಕಗಳು ವಿಕರಿ ಆಗುವುದು ವರುಷೇ ವರುಷ ಕಡಮೆಯಾಗುತ್ತಿದೆ ಹಿಂದಿನ ವರುಷಕ್ಕಿಂತ ಕಳೆದ ವರುಷದ ವಿಕರಿಯು ಅರವತ್ತು ಲಕ್ಷ ಪೌಂಡು ಕಡಮೆಯಾಯಿತು

ಲಂಡನ್ ಪಟ್ಟಣದಲ್ಲಿ ಮಕ್ಕಳಿಗೆ ಪ್ರಥಮ ವಿದ್ಯೆಯನ್ನು ಕಲಿಸುವುದಕ್ಕೆ ೫೭೦ ಲಕ್ಷ ರೂಪಾಯಿನ್ನೂ ಪಠನ ಭಾಗಗಳಿಗೆ ೧೬೫ ಲಕ್ಷ ರೂಪಾಯಿನ್ನೂ ಹಾಲಿ ಸಾಲಿನಲ್ಲಿ ವಿನಿಯೋಗಮಾಡುವವರಾಗಿದ್ದಾರೆ

ಸಂಯುಕ್ತ ಸಂಸ್ಥಾನದ ವಾಷಿಂಗ್ಟನ್ ನಗರದ ನ್ಯಾಯಾಲಯದ ಆಲೋಚನಾ ಸಭೆಯವರು ಸ್ತ್ರೀಯರಿಗೂ ಮೆಂಬರುಗಳ ಚುನಾವಣೆಯ ಹಕ್ಕನ್ನು ಕೊಡಬೇಕೆಂಬುದಾಗಿ ಕಾನೂನನ್ನು ಬದಲಾಯಿಸಿರುತ್ತಾರೆ

ಕನಡಾ ಸಂಸ್ಥಾನಕ್ಕೆ ಇತರ ಕಡೆಗಳಿಂದ ಆಗಂತುಕರಾದ ಬ್ರಿಟಿಷ್ ಪ್ರಜೆಗಳು ಹೋಗುವುದು ಹೆಚ್ಚಾಗುತ್ತಾ ಬಂದದ್ದರಿಂದ ಇನ್ನು ಮುಂದೆ ಹಾಗೆ ಬರತಕ್ಕವರು ತಲಾ ೭೫ ರೂಪಾಯಿನ್ನಾದರೂ ಕೈಲಿ ಇಡಬೇಕೆಂದು ಸರ್ಕಾರದವರು ವಿಧಾಯಕಮಾಡಿದ್ದಾರೆ

ನಮ್ಮ ಏಳನೇ ಎಡ್ವರ್ಡ್ ಚಕ್ರವರ್ತಿ ಸಾರ್ವಭೌಮರವರು ಶರೀರ ಸೌಖ್ಯಕ್ಕೋಸ್ಕರ ಈಗ ವಿಲಾಯಿತಿಯನ್ನು ಬಿಟ್ಟು ಫ್ರಾನ್ಸ್ ರಾಜ್ಯದ ದಕ್ಷಿಣಭಾಗದಲ್ಲಿರುವ ಬಾಷ್ ಎಂಬ ಆರೋಗ್ಯಕರವಾದ ಸ್ಥಳಕ್ಕೆ ದಯಮಾಡಿ ಅಲ್ಲಿ ವಿಹಾರಮಾಡುತ್ತಿರುವರು

ಇಂಗ್ಲಾಂಡಿಗೆ ಸೇರಿದ ಷಫೀಲ್ಡ್ ಪಟ್ಟಣದಲ್ಲಿ ಮೆ ಎಡ್ವರ್ಡ್ ಅಲೆನ್ ಎಂಬಾತನು ಒಂದೂವರೆ ಲಕ್ಷ ರೂಪಾಯಿ ವಿನಿಯೋಗಮಾಡಿ ಒಂದು ಪುಸ್ತಕ ಭಂಡಾರವನ್ನು ಸ್ಥಾಪಿಸಿದನು ಈ ಪರೋಪಕಾರ ನಿಲಯವನ್ನು ಪ್ರತಿಷ್ಠೆಮಾಡುವುದಾಗಿ ಪ್ರಿನ್ಸ್ ಆಫ್ ವೇಲ್ಸ್ ರವರು ಒಪ್ಪಿಕೊಂಡಿರುತ್ತಾರೆ

ಕಳೆದ ೧೯೦೭ ನೇ ಇಸವಿಯ ಆಗಾಮಿಯಲ್ಲಿ ಇಂಗ್ಲಾಂಡಿನಿಂದ ೬೦೦೦ ಸ್ತ್ರೀಯರು ದಕ್ಷಿಣ ಆಫ್ರಿಕದಲ್ಲಿರುವ ಇಂಗ್ಲೀಷ್ ಸಂಸ್ಥಾನಗಳಿಗೆ ಹೋಗಿ ನೆಲಸಿರುತ್ತಾರೆಂತಲೂ, ಅನೇಕರು ಅಲ್ಲಿ ಸಂಸಾರಿಗಳಾಗಿ ಉಪಾಧ್ಯಾಯಿನಿಯರ ಕೆಲಸಗಳಲ್ಲೂ ಹಲವರು ಸಂಸಾರದ ಚಿಕ್ಕೊಂದರೂ ಇರುತ್ತಾರೆಂತಲೂ ತಿಳಿದುಬರುತ್ತದೆ

ಅಮೇರಿಕಕ್ಕೆ ಸೇರಿದ ಕನಡಾ ಎಂಬ ಇಂಗ್ಲೀಷ್ ಸಂಸ್ಥಾನದಲ್ಲಿ ೩೮,೭೫೮ ಮಂದಿ ವಿದೇಶೀಯರ ಪ್ರಜೆಗಳು ನೆಲಸಿರುತ್ತಾರೆ ಈ ಸ್ಥಿತಿ ಬೆಳೆಯುವರು ೧೮,೫೪೦ ಹಿಂದುಸ್ಥಾನದವರು ೨,೫೮೦ ಜಪಾನಿನವರು ೧೩,೮೪೦ ಇದುವರೆಗೆ ವಿದೇಶೀಯರ ೬,೬೬೨ ಜನರು ಕನಡಾ ರಾಜ್ಯದ ಪ್ರಜೆಗಳಾಗಿ ಎಣಿಸಲ್ಪಟ್ಟಿರುವರು

ಲಂಡನ್ ಪಟ್ಟಣದ ಪಿಕಡಿಲಿ ಎಂಬ ಸಮುದ್ರ ತೀರದಲ್ಲಿ ಬೆಂಕಿಯು ಅನಾಯಾಸ ನಡೆದು ೧೫ ಲಕ್ಷ ರೂಪಾಯಿನ ವ್ಯಾಪಾರದ ಸರಕು ಸುಟ್ಟುಹೋಯಿತೆಂದು ಕಳೆದ ವಾರ ತಿಳಿದಿದೆ ಒಬ್ಬ ಕೂಲಿಯವನು ಒಬ್ಬ ಹುಡುಗನನ್ನು ಗಾಬರಿಪಡಿಸುವುದಕ್ಕೋಸ್ಕರ ಸಾಬೂನಿನ ಗಟ್ಟಿಗಳಿಗೆ ಬೆಂಕಿ ಹಾಕಿದ್ದೆನೆಂದು ಹೇಳಿ ಒಪ್ಪಿಕೊಂಡದ್ದರಿಂದ ಅವನನ್ನು ದಸ್ತಗಿರಿ ಮಾಡಿದ್ದಾರೆ

ಕನಡಾ ಸಂಸ್ಥಾನದಲ್ಲಿ ೩೧,೩೧೦ ಜನರು ೭೦ ವರುಷಕ್ಕೆ ಮೇಲ್ಪಟ್ಟ ವಯಸ್ಸಿನ ಮುದುಕರಾಗಿದ್ದಾರೆ ಇವರಿಗೆಲ್ಲಾ ಪ್ರತಿವಾರವೂ ತಲಾ ೫೦ ಆಣೆಯ ಪ್ರಕಾರ ಪೆನ್ಷನ್ ಕೊಟ್ಟು ಜೀವನಕ್ಕೆ ಮಾರ್ಗಮಾಡಿ ಕೊಡಬೇಕೆಂದು ಅಲ್ಲಿನ ಗವರ್ನ್‌ಮೆಂಟಿನವರು ಆಲೋಚನೆ ಮಾಡುತ್ತಿರುವರು ಈ ಪೆನ್ಷನ್‌ಗಾಗಿ ವರುಷಕ್ಕೆ ಮೂರುಕೋಟಿ ರೂಪಾಯಿ ಬೇಕಾಗುವುದೆಂದು ಅಂದಾಜು ಆಗಿರುತ್ತದೆ

ಇಂಗ್ಲಾಂಡಿಗೆ ಸೇರಿದ ಆರ್‌ಬ್ರಾತ್ ಎಂಬ ಪಟ್ಟಣದಲ್ಲಿದ್ದು ಕಾಲವಾದ ಮೆ| ಜೇಂಸ್ ಜಾನ್ಸನ್ ಎಂಬಾತನು ತನ್ನ ಆಸ್ತಿಯಿಂದ ಏಳೂವರೆ ಲಕ್ಷ

ಹಣವನ್ನು ಧರ್ಮಕೆಲಸಗಳಿಗೆ ವಿನಿಯೋಗಿಸಿರುತ್ತಾನೆ. ಆ ಪಟ್ಟಣದಲ್ಲಿ ಕಷ್ಟಮನುಷ್ಯರಾಗಿದ್ದು ಕಾರಣಾಂತರದಿಂದ ಬಡಸ್ಥಿತಿಗೆ ಬಂದಿರುವ ಗಂಡಸರೂ ಹೆಂಗಸರಿಗೂ ಈ ಹಣದಿಂದ ಜೀವನ ನಡಿಸಬೇಕೆಂದು ಆತನು ತಿಳಿಸಿರುತ್ತಾನೆ.

ವಿಲಾಯತಿಯ ಗವರ್ನಮೆಂಟಿನವರು ಅಲ್ಲಿನ ಸ್ತ್ರೀಯರಿಗೆ ಚುನಾವಣೆಯ ಹಕ್ಕನ್ನು ಕೊಡಬೇಕೆಂದು ಕೆಲವು ವಿದ್ಯಾವತಿಯರು ಸಾಹಸಪಡುತ್ತಿದ್ದಾರಷ್ಟೆ. ಈ ಸ್ತ್ರೀ ಕೆಲವರು ಕಳೆದ ವಾರ ಲಂಡನ್ ಪಟ್ಟಣದ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಯೊಳಕ್ಕೆ ಬಲಾತ್ಕಾರವಾಗಿ ನುಗ್ಗಿ ಹೋಗಬೇಕೆಂದು ಪ್ರಯತ್ನಪಟ್ಟರು. ಪೋಲೀಸಿನವರು ಹನ್ನೆರಡು ಮಂದಿ ಸ್ತ್ರೀಯರನ್ನು ದಸ್ತಗಿರಿ ಮಾಡಿರುತ್ತಾರೆ.

ಕಳೆದ ಫೆಬ್ರುವರಿ ೨೫ ನೇ ತಾ. ಬೆಳಗಿನಝಾವದಲ್ಲಿ ಐರ್ಲಾಂಡ್ ದ್ವೀಪಕ್ಕೆ ಸೇರಿದ ಪೋರ್ಟಡೌನ್ ಪಟ್ಟಣದಲ್ಲಿ ಕರೀಮಳೆ ಸುರಿದು ಪ್ರಜೆಗಳಿಗೆ ಆಶ್ಚರ್ಯವನ್ನುಂಟುಮಾಡಿತು. ಮಳೆ ಸುರಿದಾಗ ಆಕಾಶವೆಲ್ಲಾ ಕತ್ತಲು ಕವಿದಿತ್ತು. ಮಳೆ ನಿಂತ ಮೇಲೆ ಕೆರೆಕಟ್ಟೆಗಳ ನೀರು ಕಪ್ಪಾಗಿದ್ದಿತು. ನದಿಗಳ ನೀರೂ ಹಾಗೇ ಕಪ್ಪುವರ್ಣವಾಯಿತು. ವಿಲಾಯಿತಿಯ ಕಾರ್ಖಾನೆಗಳಿಂದ ಹೊರಡುವ ಕಪ್ಪು ಹೊಗೆಯು ಅಂತರಿಕ್ಷದಲ್ಲಿ ಬರಿದುಕೊಂಡು ಹೋಗಿ, ಮಳೆಯ ಕೂಡ ಬೆರೆದದ್ದೇ ಇದಕ್ಕೆ ಕಾರಣವಾಗಿದೆ.

ವಿಲಾಯಿತಿ ರಾಜ್ಯದಲ್ಲಿ ಕಳೆದ ವರುಷ ೧೫,೧೫,೭೪,೦೦೦ ಪೌಂಡು ತೂಕದ ಕೋಳಿಗಳು ಉತ್ಪತ್ತಿಯಾದವು. ಬಾಲ್ಟಿ ಸಾಲಿನ ಉತ್ಪತ್ತಿಯಲ್ಲಿ ೧೨೦-೧೩೦ ಲಕ್ಷ ಪೌಂಡು ಕಡಮೆಯಾದೀತೆಂದು ಊಹಿಸಲ್ಪಟ್ಟಿದೆ. ಇದಕ್ಕಾಗಿ ಸಾಲ ತೀರಿಸುವ ಪದ್ಧತಿಯಿಂದ ೪೦-೫೦ ಲಕ್ಷ ಪೌಂಡನ್ನು ಬಾಲ್ಟಿ ಖರ್ಚಿಗೆ ತೆಗೆದುಕೊಳ್ಳುವರು. ಮದ್ಯಗಳ ಮೇಲಣ ಸುಂಕವನ್ನು ಹೆಚ್ಚಿಸುವುದರಿಂದ ೬೦ ಲಕ್ಷ ಪೌಂಡೂ, ಆದಾಯದ ಮೇಲಣ ತೆರಿಗೆಯನ್ನು ಜಾಸ್ತಿ ಮಾಡಿದಲ್ಲಿ ೧೦ ಲಕ್ಷ ಪೌಂಡೂ ಉತ್ಪತ್ತಿ ಹೆಚ್ಚೀತೆಂದು ಊಹಿಸಲ್ಪಟ್ಟಿದೆ.

ರಷ್ಯಾ ದೇಶದ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿನಲ್ಲಿ ಸರಕಾರದವರು ಶೋಧನೆಮಾಡಿ, ಕೆಲವು ಜನರು ಬಚ್ಚಿಟ್ಟುಕೊಂಡಿದ್ದ ಅಪಾರವಾದ ಮದ್ದುಗುಂಡನ್ನು ಸ್ವಾಧೀನಪಡಿಸಿಕೊಂಡರು. ಆ ಜನರು ಪರ್ಷಾ ರಾಜ್ಯದಲ್ಲಿ ಫಿತೂರಿ ಮಾಡುವುದಕ್ಕಾಗಿ ಈ ರೀತಿ ಸಲಕರಣೆಗಳನ್ನು ಕೂಡಿಸಿಕೊಂಡಿದ್ದರೆಂದು ಮೊದಲು ಊಹಿಸಲ್ಪಟ್ಟಿತ್ತು. ಈಚೆಗೆ ಅದು ನಿಜವಲ್ಲವೆಂದೂ, ಪರ್ಷಿಯಾ ರಾಜ್ಯದಲ್ಲಿ ರಾಜ್ಯಭಾರವನ್ನು ವಹಿಕೊಳ್ಳುವ ಉದ್ದೇಶಕ್ಕೋಸ್ಕರ ಮದ್ದುಗುಂಡನ್ನು ಕೂಡಿಸಿ ಅಲ್ಲಿಗೆ ರವಾನೆ ಮಾಡಬೇಕೆಂದು ಏರ್ಪಾಟಾಗಿದ್ದಿತೆಂದೂ ಗೊತ್ತಾಯಿತು.

ಚೀನಾ ರಾಜ್ಯಕ್ಕೆ ಸೇರಿದ ಟೀಂಟ್ಸಿನ್ ಪಟ್ಟಣದಲ್ಲಿ ಚೀನಾ ಗವರ್ನಮೆಂಟಿನವರು ತಮ್ಮ ಸ್ತ್ರೀಯರಿಗಾಗಿ ಮೊದಲನೆಯ ಆಸ್ಪತ್ರೆಯನ್ನು ಸ್ಥಾಪಿಸಿರುತ್ತಾರೆ. ಡಾಕ್ಟರ್ ಕಿನ್ ಎಂಬಾಕೆಯೇ ಈ ಆಸ್ಪತ್ರೆಯ ಮುಖ್ಯಾಧಿಕಾರಿಯು. ಈಕೆ ಚೀನಾ ಸ್ತ್ರೀ, ಅಮೇರಿಕದಲ್ಲಿ ವೈದ್ಯಶಾಸ್ತ್ರವನ್ನು ಚನ್ನಾಗಿ ಕಲಿತು ಬಂದವಳು. ಆಕೆಯ ಸಹಾಯಕ್ಕೆ ಗವರ್ನಮೆಂಟಿನವರು ಡಾಕ್ಟರ್ ಲಿಟ್ಟನ್ ಹಿಲ್ಲ್ ಎಂಬ ಇಂಗ್ಲಿಷ್ ಸ್ತ್ರೀ ವೈದ್ಯಳನ್ನು ನೇಮಿಸಿರುತ್ತಾರೆ. ಚೀನಾಯರು ತಮ್ಮ ಸ್ತ್ರೀಯರ ಆರೋಗ್ಯಭಾಗ್ಯವನ್ನು ಕಾಪಾಡುವುದಕ್ಕೆ ಏರ್ಪಾಡುಮಾಡಿದ್ದು ಇದೇ ಮೊದಲಾಗಿರುತ್ತದೆ.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟಾಗಿ ಈಗತಾನೆ ಚುನಾಯಿಸಿ ನೇಮಕನಾಗಿರುವ ಮಿ ಟಾಫ್ಟ್ ಯವರು ಆ ಅಧಿಕಾರವನ್ನು ವಹಿಸಿದ ಕಾಲದಲ್ಲಿ ತಮ್ಮ ರಾಜಭಾರಕ ಮಂಗಳನ್ನು ಕುರಿತು ಒಂದು ಇಸ್ತಿಹಾರು ಕೊಟ್ಟಿರುತ್ತಾರೆ. ಅಲ್ಲಿನ ದೇಶೀಯ ಪ್ರಜೆಗಳಾದ ಕಪ್ಪು ಜನರಿಗೂ ಬಿಳಿಯ ಜನಗಳಿಂದೆಯೇ ವಿದ್ಯಾವಂತರಾಗಿರುವ ಪಕ್ಷದಲ್ಲಿ ಮೆಂಬರುಗಳನ್ನು ಚುನಾಯಿಸತಕ್ಕ ಹಕ್ಕನ್ನು ಉಂಟುಮಾಡಿಕೊಡುವುದಾಗಿಯೂ, ಬಿಳಿಯ ಜನರಿಗೂ ಕಪ್ಪು ಜನರಿಗೂ ನ್ಯಾಯಕ್ಕೆ ಪಾತ್ರವಾದ ಸೌಲಭ್ಯಗಳನ್ನು ಕಲ್ಪಿಸಿಕೊಡುವೆನೆಂದೂ, ಆ ಸಂಸ್ಥಾನಗಳ ಆಮದು ರಫ್ತಿನ ಮೇಲಿನ ಸುಂಕಗಳನ್ನು ಹಾಕಬೇಕೆಂದಿರುವುದಾಗಿಯೂ ತಿಳಿಸಿರುವರು.

ಜರ್ಮನಿ ರಾಜ್ಯದಲ್ಲಿ ಎಂ ಜೆಪ್ಪೆಲಿನ್ ಯವರು ಅಂತರಿಕ್ಷದಲ್ಲಿ ಸಂಚರಿಸುವಂಥಾ ಒಂದು ವಿಮಾನ (ಹಡಗು) ವನ್ನು ತಯಾರ್ಮಾಡಿ ಫ್ರೆಡ್ರಿಕ್ಸ್‌ಹೇವನ್ ಪಟ್ಟಣದಲ್ಲಿ ಕಳೆದ ಗುರುವಾರ ಬೆಳಗಿನ ಝಾವದ ೪ ಗಂಟೆ ಹೊತ್ತಿಗೆ ಹಾರಿಸಿದರು. ಅದು ಆಕಾಶದಲ್ಲೇ ಸಂಚಾರಮಾಡಿಕೊಂಡು ೯ ಗಂಟೆಯ ಹೊತ್ತಿಗೆ ಮ್ಯೂನಿಚ್ ಪಟ್ಟಣವನ್ನು ತಲಪಿತು. ಆದರೆ ಆಗ ಗಾಳಿಯು ಜೋರಾಗಿ ಬೀಸುತ್ತಿದ್ದದರಿಂದ ಅದು ಅಲ್ಲಿ ಇಳಿಯುವುದಕ್ಕಾಗದೆ ಅಂತರಿಕ್ಷದಲ್ಲೇ ವಾಯುವ್ಯಕ್ಕೆ ಎಳೆದುಕೊಂಡುಹೋಗಿ ಸಾಯಂಕಾಲ ೩ ಗಂಟೆ ಹೊತ್ತಿಗೆ ಬವೇರಿಯಾಕ್ಕೆ ಸೇರಿದ ಡಿಂಗೋಲ್‌ಫಿಂಗ್ ಪಟ್ಟಣದಲ್ಲಿ ಇಳಿಯಿತು. ಅಲ್ಲಿನ ತನಕ ಅದು ಗಾಳಿಯ ಬಲವನ್ನು ತಡೆದುಕೊಂಡು ಅಂತರಿಕ್ಷದಲ್ಲೇ ಸಂಚಾರಮಾಡುತ್ತಾ ಬಂದದ್ದು ಬಹು ಆಶ್ಚರ್ಯವನ್ನುಂಟುಮಾಡಿದೆ.

ನ್ಯೂಜೀಲಾಂಡ್ ಎಂಬ ಇಂಗ್ಲಿಷ್ ಸಾಮ್ರಾಜ್ಯಕ್ಕೆ ಸೇರಿದ ನಗೌರೂ ಎಂಬ ಅಗ್ನಿ ಪರ್ವತದಲ್ಲಿ ಕೆಲವು ಕಾಲದಿಂದ ಹೊಗೆಯಾಡುತ್ತಲೂ, ಬೂದಿ ಎರಚುತ್ತಲೂ ಇದೆ. ಬೂದಿಯು ಅಲ್ಲಿಂದ ೮,೦೦೦ ಅಡಿ ಪ್ರಮಾಣಕ್ಕೆ ಚಿಗಿಯುತ್ತಿರುವುದು. ಕೆಲವು ವೇಳೆಗಳಲ್ಲಿ ಆಕಾಶವೆಲ್ಲಾ ಈ ಬೂದಿಯ ದೆಸೆಯಿಂದ ಕಪ್ಪಾಗಿ ಸೂರ್ಯಕಿರಣಗಳು ಕಾಣದೆ ಕತ್ತಲು ಕವಿಯುತ್ತದೆ. ವಾಂಗಾನೂ ಎಂಬ ಊರು ಅಲ್ಲಿಂದ ೬೦ ಮೈಲಿ ದೂರದಲ್ಲಿದ್ದಾಗ್ಯೂ ಈ ಪಟ್ಟಣದಲ್ಲೂ ಆಗಾಗ್ಗೆ ಸೂರ್ಯರಶ್ಮಿಯು ಕಾಣುವುದಿಲ್ಲ. ಆ ಪರ್ವತದ ಗರ್ಭದಲ್ಲಿ ಹಾರುವ ಮತ್ತು ಗುಡುಗುವ ಧ್ವನಿಯು ಕೆಲವು ವೇಳೆ ನೂರಾರು ಮೈಲಿಗಳ ದೂರಕ್ಕೂ ಕೇಳಬರುವುದು. ಈ ಪರ್ವತವು ಈ ರೀತಿ ಅಗ್ನಿಯನ್ನು ಕಾರಿ ಇಲ್ಲಿಗೆ ೫೦ ವರುಷಗಳಾದವು. ಅದರೆ ಅದರ ಸಮೀಪದಲ್ಲಿ ಪಟ್ಟಣ ಊರು ಗ್ರಾಮಾದಿಗಳ್ಯಾವೂ ಇಲ್ಲದಿರೋಣದರಿಂದ ಯಾವ ವಿಧವಾದ ಭೀತಿಗೂ ಕಾರಣವಿಲ್ಲ.

ಆಫ್ರಿಕಕ್ಕೆ ಸೇರಿದ ಮೊರಾಕೊ ಪ್ರಾಂತ್ಯದಲ್ಲಿ ಸೈಯದ್ ಮಹಮದ್ ಎಂಬೊಬ್ಬ ಹೊಸ ಮಹಮದಿಯು ಹುಟ್ಟಿ ತುಂಬಾ ಗಲಭೆಯುಂಟಾಗಿದೆ. ಈತನು ಸೂಡಾನ್ ಪ್ರಾಂತ್ಯದ ಬರ್ಬರ್ ಪಟ್ಟಣದಲ್ಲಿ ವಿದ್ಯಾಭ್ಯಾಸ ಮಾಡಿ, ತನ್ನ ಸ್ವದೇಶವಾದ ಸಂಜಾತಿಗೆ ಬಂದು, ತಾನು ದೇವರ ಕಡೆಯಿಂದ ಬಂದವನೆಂದು ಜನರಿಗೆಲ್ಲಾ ಸಾರುತ್ತಾ ಅನೇಕರನ್ನು ಮರುಳು ಮಾಡಿರುವನು. ಈಗ ೨೫,೦೦೦ ಜನರು ಆತನ ಹಿಂಬಾಲಕರಾಗಿರುತ್ತಾರೆ. ಅವರ ಸಂಖ್ಯೆಯು ಇನ್ನೂ ದಿನೇದಿನೇ ಹೆಚ್ಚುತ್ತಿರುವುದು. ಆತನು ಪ್ರಪಂಚವನ್ನೆಲ್ಲಾ ಒಳ್ಳೇ ಸ್ಥಿತಿಗೆ ತರತಕ್ಕವನೆಂತಲೂ, ಸುಳ್ಳು ಹೇಳತಕ್ಕವರಿಗೆ ನಾಲಿಗೆಯನ್ನು ಕತ್ತರಿಸುವುದೇ ತಕ್ಕ ಶಿಕ್ಷೆ ಎಂತಲೂ, ಕದಿಯತಕ್ಕವರ ಕೈಗಳನ್ನು ಕತ್ತರಿಸಬೇಕೆಂತಲೂ ಬೋಧನೆ ಮಾಡುತ್ತಿರುವನು. ಗವರ್ನಮೆಂಟಿನವರು ಈತನಿಂದಲೂ ಈತನ ಹಿಂಬಾಲಕರಿಂದಲೂ ಆಗುತ್ತಿರುವ ಹಾವಳಿಯನ್ನು ಅಡಗಿಸುವುದಕ್ಕೆ ಸೈನ್ಯಗಳನ್ನು ಕಳುಹಿಸಿರುತ್ತಾರೆ.

ಇಂಗ್ಲಾಂಡಿನಲ್ಲಿ ವ್ಯವಸಾಯಾದಿಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಪ್ರಜೆಗಳು ಸೇರಿ ಪರಸ್ಪರಸಹಾಯದ ಸಂಘಗಳನ್ನು ಸ್ಥಾಪಿಸಿಕೊಳ್ಳುವುದು ಬಹಳ ವಾಡಿಕೆಯಾಗಿದೆ. ಇತರ ದೇಶಗಳಿಂದ ಅಲ್ಲಿಗೆ ಕೋಳಿಮೊಟ್ಟೆಗಳನ್ನು ತರ್ಗಿಸಿಕೊಳ್ಳುವುದನ್ನು ಕಡಮೆಮಾಡಿ, ಅಲ್ಲಿನ ಜನರೇ ಈ ಕೆಲಸವನ್ನು ನಡಿಸಿ ಮೊಟ್ಟೆಗಳನ್ನು ಒದಗಿಸಬೇಕೆಂದು ಸಫಕ್ ಡಿಸ್ಟ್ರಿಕ್ಟಿನ ರೈತಪ್ರಜೆಗಳು ಸೇರಿ ಷೇರುಗಳ ಮೂಲಕ ಸುಮಾರು ೨೦,೦೦೦ ರೂಪಾಯಿ ಕೂಡಿಸಿ, ಕೋಳಿಗಳನ್ನು ಸಾಕುವುದನ್ನು ಪ್ರೋತ್ಸಾಹಪಡಿಸುತ್ತಾ ಬಂದರು. ಈ ಸಂಘವು ಸ್ಥಾಪನೆಯಾಗಿ ಇಲ್ಲಿಗೆ ಆರು ವರುಷವಾಯಿತು. ಕಳೆದ ವರುಷ ಈ ಸಂಘದವರು ೨೧,೯೧,೮೦೮ ಮೊಟ್ಟೆಗಳನ್ನು ಬೇರೆದು ಬಿಕರಿಮಾಡಿ ೧,೫೦,೦೦೦ ರೂಪಾಯಿ ಹುಟ್ಟುವಳಿ ಮಾಡಿಕೊಂಡಿದಾರೆಂದೂ, ಸಂಘಕ್ಕೆ ಬಂದ ಲಾಭವನ್ನು ಶೇಕಡಾ ವರುಷಕ್ಕೆ ೧೮ ರೂಪಾಯಿಯಂತೆ ಷೇರುದಾರರಿಗೆ ಹಂಚಿಕೊಟ್ಟರೆಂದೂ ಅದರ ವಾರ್ಷಿಕ ರಿಪೋರ್ಟಿನಿಂದ ತಿಳಿದುಬಂದಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತಾ ಪಟ್ಟಣದಲ್ಲಿ "ಸೋನಾರ್ ಭಾರತ್" ಎಂಬ ದೇಶಭಾಷೆಯ ವರ್ತಮಾನ ಪತ್ರಿಕೆಯನ್ನು ಇನ್ನುಮೇಲೆ ಪ್ರಕಟಿಸಕೂಡದೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿರುತ್ತಾರೆ.

ಢಾಕಾ ಪಟ್ಟಣದಲ್ಲಿ ಸ್ವದೇಶೀ ಪಾರ್ಟಿಗೆ ಪ್ರತಿಕಕ್ಷಿಯಾಗಿದ್ದ ದೇವೇಂದ್ರನಾಥ ಮುಖರ್ಜಿ ಎಂಬಾತನ ಮನೆಗೆ ಯಾರೋ ಬೆಂಕಿಹಾಕಿ ಬಹಳ ಸಾಮಾನನ್ನು ಸುಟ್ಟುಬಿಟ್ಟರು. ಪೋಲೀಸಿನವರು ಪತ್ತೆಮಾಡುತ್ತಿದ್ದಾರೆ.

ಬೇಹಾರ್ ಪ್ರಾಂತ್ಯದ ಸದರಿ ಭಾಗಲ್ಪುರದಲ್ಲಿ ನಾಳೆಯೂ ನಾಡಿದ್ದೂ ನಡೆಯುವುದು. ಬ್ಯಾರಿಸ್ಟರ್ ಮಿ ಎಸ್ ಸಿನ್ಹರವರು ಸಭಾನಾಯಕರಾಗಿ ನಿಲ್ಲುತ್ತಾರೆ. ಮಿ ಗೋಪಾಲಕೃಷ್ಣಗೋಖಲೆಯವರು ಈ ಸಮಾಜದಲ್ಲಿ ಹಾಜರಾಗಿರುವರು.

ರಂಗೂನ್ ಪಟ್ಟಣದಲ್ಲಿ ಒಂದು ದೊಡ್ಡ ಬ್ಯಾಂಕು ಇರುತ್ತದೆ. ಈ ಬ್ಯಾಂಕಿನಲ್ಲಿ ಖಜಾನ್ಜಿಯಾಗಿದ್ದವನೂ ಇನ್ನೊಬ್ಬ ನೌಕರನೂ ಸೇರಿ ಬಹಳ ಹಣವನ್ನು ತಿಂದುಹಾಕಿ ಪರಾರಿಯಾಗಿರುತ್ತಾರೆಂದೂ ಅವರನ್ನು ಹಿಡಿದುಕೊಡುವವರಿಗೆ ೨,೫೦೦ ರೂ ಬಹುಮಾನ ಕೊಡುವುದಾಗಿಯೂ ಪ್ರಕಟಿಸಿರುತ್ತಾರೆ.

ವೈಸ್‌ರಾಯಿಯವರ ಎಗ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರಾಗಿ ನೇಮಿಸಲ್ಪಟ್ಟಿರುವ ಮಿ ಸಿಂಹರವರಿಗಾಗಿ ಮುಂಚಿನ ಬುಧವಾರದ ದಿನ ಕಲ್ಕತ್ತಾ ಪಟ್ಟಣದ ಹಿಂದೂ ಮಹಮದೀಯ ಮಹಾಜನರು ಅಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಒಂದು ಭಾರೀ ಸಂತೋಷೋತ್ಸವವನ್ನೂ ವಿತರಣವನ್ನೂ ನಡಿಸುವವರಾಗಿದ್ದಾರೆ.

ಕಲ್ಕತ್ತಾ ಪಟ್ಟಣದಲ್ಲಿ ಕಳುವುಗಳನ್ನು ನಡಿಸಿ ಎಂಟು ವರುಷ ಸಜಾಶಿಕ್ಷೆಯನ್ನು ಅನುಭವಿಸುತ್ತಿರುವ ಬ್ಲೂಮ್‌ಫೀಲ್ಡ್ ಎಂಬೊಬ್ಬ ರಷ್ಯಾ ದೇಶೀಯನನ್ನು ಆ ವಾಯಿದೆಯು ಕಳೆದ ವಾರ ಪೂರೈಸಿದ್ದರಿಂದ ಕಲ್ಕತ್ತೆಯಿಂದ ಸಿಲೋನ್ ದ್ವೀಪಕ್ಕೆ ಕರೆದುತಂದು ಅಲ್ಲಿ ಹಡಗು ಹತ್ತಿಸಿ ವ್ಲಾಡಿವೋಸ್ಟಾಕಿಗೆ ರವಾನೆ ಮಾಡಿದರು.

ಆಲಿಪುರ್ ಪಟ್ಟಣದ ಮುಕದ್ದಮೆಯು ಕೋರ್ಟಿನ ಮುಖ್ಯಾಧಿಕಾರಿಗೂ ಮೇಲ್ವಿಚಾರಣೆ ನಡಿಸುವವರಿಗೂ ಮನಸ್ತಾಪವುಂಟಾಗಿ ಆ ಮುಖ್ಯಾಧಿಕಾರಿಯು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದನು. ಈಚೆಗೆ ಆ ಮನಸ್ತಾಪಗಳೆಲ್ಲಾ ನಿವಾರಣೆಯಾದದ್ದರಿಂದ ಆತನು ಮತ್ತೆ ಕೆಲಸನಡಿಸುತ್ತಿದ್ದಾನೆಂದು ತಿಳಿದುಬಂದಿದೆ.

ಬರ್ಮಾ ಅಧಿಪತ್ಯದಲ್ಲಿ ಜೆ ಹ್ಯಾರಿಸನ್ ಎಂಬಾತನು ಮೂವರು ಹಿಂದುಸ್ಥಾನದವರನ್ನು ಕೊಂದನೆಂದು ಮೊಕದ್ದಮೆ ಆಗಿ ವಿಚಾರಣೆಯಲ್ಲಿ ಅಪರಾಧ ರುಜುವಾತಾಗಲಿಲ್ಲವೆಂದು ಆತನನ್ನು ಬಿಟ್ಟುಬಿಟ್ಟರು. ಈಗ ಬರ್ಮಾ ಗವರ್ನಮೆಂಟಿನವರು ಈ ಮೊಕದ್ದಮೆಯು ಹಟ್ಟನ್ನು ಚೀಫ್ ಕೋರ್ಟಿನಿಂದ ತರಿಸಿಕೊಂಡಿದ್ದಾರೆ.

ಬರೋಡಾ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮಿ ಪಿ ಬ್ಯಾನರ್ಜಿಯವರು ಕಳೆದ ವಾರ ಬೊಂಬಾಯಿಗೆ ಬರುತ್ತಿದ್ದಾಗ ಕಳ್ಳರ್ಯಾರೋ ಅವರಿದ್ದ ಗಾಡಿಯೊಳಕ್ಕೆ ನುಗ್ಗಿ ಅವರ ಜಾಬಿನ ಆರುನಲ್ಲಿ ಪಿಸ್ತೂಲನ್ನೂ ಎರಡು ತೋಟಾಗಳನ್ನೂ ಕೆಲವು ಗೋಪ್ಯ ಕಾಗದ ಪತ್ರಗಳನ್ನೂ ಅಪಹರಿಸಿ ಬಿಟ್ಟರು. ಪೋಲೀಸಿನವರು ಪತ್ತೆ ತರದೂದು ನಡಿಸುತ್ತಿದ್ದಾರೆ.

ಕೂಚ್‌ಬಿಹಾರ್ ರೈಲ್ವೆಯಲ್ಲಿ ಒಂದು ರೈಲ್ ಗಾಡಿಯು ಕಳೆದ ಮಂಗಳವಾರ ಬೆಳಗ್ಗೆ ಬಕ್ಸಾರ್ ರೋಡಿಗೂ ರಾಜಘಟಿಹಾನಾವಿಗೂ ನಡುವೆ ಇನ್ನೊಂದು ರೈಲ್ ಗಾಡಿಗೆ ಬಡಿದು ಅಪಘಾತವಾಯಿತು. ಮೂರು ಮಂದಿ ಮೃತಪಟ್ಟರು. ಆರು ಜನರಿಗೆ ಗಾಯಗಳಾದವು. ಎರಡು ಗಾಡಿಗಳ ಎಂಜಿನ್‌ಗಳು ಮುರಿದು ಹೋದವು. ಒಂಬತ್ತು ಸಾಮಾನ್ ಬಂಡಿಗಳು ಚೂರುಚೂರಾದವು.

ನೇಪಾಳ ಸಂಸ್ಥಾನದ ಪ್ರಾಂತ್ಯದಲ್ಲಿ ಕಾಡುಕಿಚ್ಚು ಹುಟ್ಟಿ ಟಾಂಫಿ ಮತ್ತು ಸಂದುಸಾಪು ಎಂಬ ಕಾಡುಗಳನ್ನು ದಹಿಸುತ್ತಲಿದೆ. ಸರ್ಕಾರಿ ಜಂಗಲಿಗೂ ಇದರಿಂದ ತುಂಬಾ ನಷ್ಟವಾಗುತ್ತಿರುವುದು. ಘಾಲೂತ್ ದಸ್ತೆಯಲ್ಲಿರುವ ಗವರ್ನಮೆಂಟ್ ಬಂಗಲೆಗಳೂ ಎಲ್ಲಿ ಸುಟ್ಟು ಹೋಗುವವೋ ಎಂದು ಭೀತಿಯುಂಟಾಗಿದೆ. ಸಿಮಿಂ ಸಂಸ್ಥಾನದ ರಬ್ಬರ್ ತೋಟಗಳು ಈ ಬೆಂಕಿಯ ದೆಸೆಯಿಂದ ಬಹಳ ನಷ್ಟಪಟ್ಟಿರುವವು.

ಉತ್ತರ ದೇಶಕ್ಕೆ ಸೇರಿದ ಈಟಾ ಎಂಬ ಪಟ್ಟಣಕ್ಕೆ ರಾಮಚರಣಲಾಲ ನೆಂಬಾತನು ಕಲ್ಕತ್ತೆಯಿಂದ ಹೋಗಿ ಸಭೆಗಳನ್ನು ನಡಿಸಿ ರಾಜದ್ರೋಹವಿಚಾರಗಳನ್ನು ಕುರಿತು ಉಪನ್ಯಾಸಮಾಡುತ್ತಾ, ಜನರ ಮತ್ತು ವಿದ್ಯಾರ್ಥಿಗಳ ಮನಸ್ಸನ್ನು ಕೆಡಿಸುತ್ತಾ ಬಂದದ್ದರಿಂದ ಸರ್ಕಾರದವರು ಆತನನ್ನು ಹಿಡಿದು ದಯಾಪ್ತಿಮಾಡಿದರು. ಅಲ್ಲಿನ ಸೆಷನ್ಸ್ ಜಡ್ಜರು ಆತನಿಗೆ ೧೦ ವರುಷ ಬಂದೀಖಾನೆ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಮಿಡ್ನಾಪುರದ ಪಿತೂರಿಯ ಮೊಕದ್ದಮೆಯಲ್ಲಿ ಅಪ್ರೂವರಾಗಿ ಅಪರಾಧಿಗಳ ಮೇಲೆ ಸಾಕ್ಷಿ ನುಡಿಯುತ್ತಿದ್ದ ರಾಹುಲ್ ಚಂದ್ರ ಲಾಲಾ ಎಂಬವನು ತಿರುಗಿಬಿದ್ದು ಅಪರಾಧಿಗಳಿಗೆ ಅನುಕೂಲವಾಗಿಯೂ ಸರ್ಕಾರಕ್ಕೆ ವಿರೋಧವಾಗಿಯೂ ಕೈಫಿಯತ್ತು ಕೊಟ್ಟನು. ಅವನನ್ನು ಸೆಷನ್ಸ್ ಜಡ್ಜರು ದಯಾಪ್ತಿ ಮಾಡಿ ಸುಳ್ಳು ಸಾಕ್ಷಿ ನುಡಿದದ್ದಕ್ಕೆ ಅವನಿಗೆ ಐದು ವರುಷ ಕಠಿಣ ಸಜವನ್ನೂ ೩,೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

ಬಂಗಾಳ ಅಧಿಪತ್ಯಕ್ಕೆ ಸೇರಿದ ಕಾಸಿಂಪುರದ ಜೋಗೇಂದ್ರನಾಥರಾಯಿ ಎಂಬ ಜಹಗೀರ್‌ದಾರರ ಬಹಳ ಸರ್ಕಾರಿ ಪತ್ರಗಳು ಕಳುವಾಗಿದ್ದವು. ಈ ಮೊಕದ್ದಮೆಯನ್ನು ದರ್ಯಾಪ್ತಿ ಮಾಡುವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಯಾರೋ ಕಳೆದ ವಾರ ೧,೦೦೦ ರೂಪಾಯಿನ ಬಾಬತು ೧೨೬ ಕರೆನ್ಸಿ ನೋಟುಗಳನ್ನು ಅಂಚೆಯ ಮೂಲಕ ಕಳುಹಿಸಿರುತ್ತಾರೆ. ಅದನ್ನೆಲ್ಲಾ ಅವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಬಳಿಗೆ ರವಾನೆ ಮಾಡಿದರು.

ಕಳೆದ ಮಾರ್ಚ್ ೩೦ ನೇ ತಾರೀಖಿಗೆ ಅಂತ್ಯವಾದ ಒಂದು ವಾರದಲ್ಲಿ ಹಿಂದುಸ್ಥಾನದಲ್ಲೆಲ್ಲಾ ೬,೭೫೯ ಜನರಿಗೆ ಪ್ಲೇಗ್ ತಗಲಿ ೫,೭೩೫ ಮಂದಿ ಕಾಲವಾಗಿರುತ್ತಾರೆ. ಈ ಪೈಕಿ ಬೊಂಬಾಯಿ ಅಧಿಪತ್ಯದಲ್ಲಿ ೧,೭೦೪ ಮರಣಗಳಾದವು. ಮದರಾಸ್ ಅಧಿಪತ್ಯ ೨೩, ಬಂಗಾಳಾ ಅಧಿಪತ್ಯ ೪೧೯, ಸಂಯುಕ್ತ ಅಧಿಪತ್ಯಗಳು ೯೨೫, ಪಂಜಾಬ್ ೧,೮೫೯, ಬರ್ಮಾ ೨೭೩, ಮಧ್ಯಪ್ರಾಂತ್ಯಗಳು ೭೬೫. ಮೈಸೂರು ಸಂಸ್ಥಾನ ೩೯, ರಾಜಪುಟಾನಾ ೨೭.

ಬರ್ಮಾ ಅಧಿಪತ್ಯಕ್ಕೆ ಸೇರಿದ ಮಾಂಡಲೇ ಪಟ್ಟಣದ ಚೆಗ್ಯೋ ಎಂಬ ಭಾಗದಲ್ಲಿ ಕಳೆದ ಗುರುವಾರ ರಾತ್ರಿ ೧೧ ಘಂಟೆಗೆ ಬೆಂಕಿ ಬಿದ್ದು ಸುಮಾರು ಐವತ್ತು ಮನೆಗಳು ಸುಟ್ಟುಹೋದವು. ಹಿಂದಿನ ದಿನ ಇನ್ನೊಂದು ಕಡೆ ಮನೆಗಳಿಗೆ ಬೆಂಕಿ ಹಾಕಬೇಕೆಂದು ಪ್ರಯತ್ನಪಟ್ಟದ್ದು ತಪ್ಪಿಹೋಯಿತು. ಬೇರೆ ಬೇರೆ ಮನೆಗಳನ್ನು ಬೆಂಕಿಯಿಂದ ಉರಿಸಿಬಿಡುವುದಾಗಿ ಅಲ್ಲಲ್ಲಿ ನೋಟೀಸುಗಳನ್ನು ಹಚ್ಚಿರುತ್ತಾರೆ. ಬಹಳ ಮಾಲುಗಳು ನಷ್ಟವಾದವು. ಅನೇಕಾನೇಕ ಪ್ರಜೆಗಳು ತುಂಬಾ ಗಾಬರಿಪಡುತ್ತಿದ್ದಾರೆ. ಸರ್ಕಾರದವರು ಆ ದುಷ್ಟರನ್ನು ಪತ್ತೆಮಾಡಬೇಕೆಂದು ಪ್ರಯತ್ನಪಡುತ್ತಿರುವರು.

ಹಿಂದುಸ್ಥಾನದ ರಾಜ್ಯಭಾರ ಕ್ರಮಗಳನ್ನು ಕಾಲಾನುಗುಣ್ಯವಾಗಿ ಬದಲಾವಣೆ ಮಾಡುವುದಕ್ಕೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಮಾರ್ಲೀಯವರು ಒಂದು ಮಸೂದೆ ಕಾನೂನ್ ಮಾಡಿ ವಿಲಾಯಿತಿಯ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಇಟ್ಟಿದ್ದಾರಷ್ಟೆ. ಕಳೆದ ಗುರುವಾರ ಪಾರ್ಲಿಮೆಂಟ್ ಮೆಂಬರುಗಳು ಆ ಮಸೂದೆಯನ್ನು ಎರಡನೆಯಾವರ್ತಿ ಓದಿ ಎಲ್ಲಾ ಸರಿಯಾಗಿದೆ ಎಂದು ಒಪ್ಪಿಕೊಂಡಿರುವರು. ಮಂತ್ರಿಯವರಾದ ಮಿ ಆಸ್ಕ್ವಿತ್ ಯವರೂ, ಮ್ಯಾಕ್‌ಡೊನಾಲ್ಡ್ ಯವರೂ ಅರ್ಲ್ ಪರ್ಸಿಯವರೇ ಮೊದಲಾದವರೂ ಈ ಮಸೂದೆಯನ್ನು ಬದಲಾವಣೆ ಮಾಡಬೇಕಾದದ್ದಿಲ್ಲವೆಂದು ಒಪ್ಪಿಕೊಂಡರು.

ಮದರಾಸ್ ಅಧಿಪತ್ಯಕ್ಕೆ ಸೇರಿದ ಪಂಡಿತ ರಾಮನಾರಾಯಣ ಯೋಗಿ ಶಾಸ್ತ್ರಿ ಎಂಬ ಜೋಯಿಸನು ಪ್ರಕಟಿಸಿದ ಪ್ರಕಾರ ರಂಗೂನ್ ಪಟ್ಟಣದಲ್ಲಿ ಕಳೆದ ತಾ ೨೬ ನೇ ಶುಕ್ರವಾರದ ದಿನ ಭೂಕಂಪವಾಗುವುದೆಂದು ನಂಬಿ ಆ ಪಟ್ಟಣದಲ್ಲಿ ಬಹು ಹಿಂದೂಗಳೂ, ಬರ್ಮೀಯರೂ ತಮ್ಮ ಮನೆಗಳನ್ನು ಬಿಟ್ಟು ಮೈದಾನಗಳಿಗೂ ತೋಟಗಳಿಗೂ ಹೊರಟುಹೋಗುತ್ತಿದ್ದರೆಂದು ರಂಗೂನ್ ಪಟ್ಟಣದ ಪೋಲೀಸಿನವರು ಸರ್ಕಾರಕ್ಕೆ ತಿಳಿಸಿರುತ್ತಾರೆ. ಆದರೆ ಆ ದಿನ ಆ ರೀತಿ ಭೂಕಂಪವೇನೂ ಪ್ರಾಪ್ತವಾಗಲಿಲ್ಲ. ಈ ರೀತಿ ಜನರನ್ನು ಅನಾವಶ್ಯಕವಾಗಿ ಗಾಬರಿಪಡಿಸುವುದು ಉಚಿತವಾದದ್ದಲ್ಲವೆಂದು ನಾವು ಹೇಳಬೇಕಾದದ್ದಿಲ್ಲ.

ಹಿಂದುಸ್ಥಾನದಿಂದ ವಿದ್ಯಾಭ್ಯಾಸದ ನಿಮಿತ್ತವಾಗಿ ಇಂಗ್ಲಾಂಡಿಗೆ ಹೋಗುವಂಥಾ ದೇಶೀಯ ಯೌವನಸ್ಥರನ್ನು ಸರಿಯಾದ ರೀತಿಯಲ್ಲಿ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳುವುದಕ್ಕೋಸ್ಕರ ಗವರ್ನಮೆಂಟಿನವರು ಇಂಗ್ಲಾಂಡಿನಲ್ಲಿ ಒಂದು ಕಮಿಟಿಯನ್ನು ನೇಮಕಮಾಡಿದ್ದಾರೆ. ಈ ಕಮಿಟಿಗೆ ಪ್ರೊಫೆಸರ್ ಥಾಮಸ್ ಆರ್ನಾಲ್ಡ್ ಯವರು ಮಾರ್ಗದರ್ಶಕರಾಗಿಯೂ, ಲಾರ್ಡ್ ಅಂಟ್ ಹಿಲ್‌ರವರು ಪ್ರೆಸಿಡೆಂಟರಾಗಿಯೂ, ಸರ್ ವಿಲ್ಯಂ ಕರ್ಜನ್ ವೈಲಿಯವರೂ ಮಿ॥ ಥಿಯೊಡೋರ್ ಮಾರಿಸನ್‌ರವರೂ ಮೆಂಬರುಗಳಾಗಿಯೂ ಇರುತ್ತಾರೆ. ಹಿಂದುಸ್ಥಾನದ ಯೌವನಸ್ಥರು ವಿಲಾಯಿತಿಯಲ್ಲಿ ದುಷ್ಟರ ಸಹವಾಸಕ್ಕೆ ಬೀಳದಂತೆ ಈ ರೀತಿ ಏರ್ಪಾಡು ಮಾಡಿದ್ದು ತುಂಬಾ ಸ್ತೋತ್ರಾರ್ಹವಾಗಿರುತ್ತದೆ.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ನಾಯಿಹಾಟಿ ಎಂಬ ಸ್ಥಳದಲ್ಲಿ ಮೆ॥ ಮರ್ಕನ್ಜಿಯವರು ಒಂದು ಕಾರ್ಖಾನೆಯ ಮ್ಯಾನೇಜರಾಗಿದ್ದು, ಕಳೆದವಾರ

ಅಲ್ಲಿನ ಕೂಲಿಯಾಳುಗಳ ಪೈಕಿ ಒಬ್ಬ ಹುಡುಗನನ್ನು ಅವನ ದುರ್ನಡತೆಗಾಗಿ ಹೊಡೆದರು ಅಲ್ಲಿ ಕೆಲಸ ಮಾಡುತ್ತಿದ್ದ ೧೫೦೦ ಜನರೂ ಅದಕ್ಕಾಗಿ ಕಾರ್ಖಾನೆಯನ್ನು ಬಿಟ್ಟು ಹೋದದ್ದಲ್ಲದೆ ಅವರಲ್ಲಿ ಕೆಲವರು ಆ ಮ್ಯಾನೇಜರವರ ಬಂಗಲೆಗೆ ಬೆಂಕಿ ಹಾಕಿ ಸುಮಾರು ೩,೦೦೦ ರೂಪಾಯಿನ ಸಾಮಾನುಗಳನ್ನು ಸುಟ್ಟು ಹಾಕಿದರು. ಕಾರ್ಖಾನೆಯಲ್ಲಿ ಸಂಪೂರ್ಣವಾಗಿ ಕೆಲಸ ನಿಂತುಹೋಯಿತು ಪೋಲೀಸಿನವರು ಆ ಕೂಲಿಯವರ ಪೈಕಿ ಮುಖಂಡರಾದ ೧೫—೨೦ ಜನರನ್ನು ದಸ್ತಗಿರಿ ಮಾಡಿರುತ್ತಾರೆ ಪ್ರಜಾಶಾಂತಿಗೆ ಭಂಗವುಂಟಾಗದಂತೆ ನೋಡಿಕೊಳ್ಳುವದಕ್ಕೆ ಸರ್ಕಾರದವರು ಹೆಚ್ಚು ಪೋಲೀಸ್ ಶಿಬ್ಬಂದಿಯನ್ನು ಅಲ್ಲಿಗೆ ಕಳುಹಿಸಿರುವರು

ಮೆ|| ಹಗ್ ಕ್ಲೆಮೆಂಟ್ಸ್ ಎಂಬ ಪಂಡಿತರು ದಕ್ಷಿಣ ದೇಶದಲ್ಲಿ ಈ ಸಲ ಜೂನ್ ತಿಂಗಳ ಮೊದಲನೆಯ ವಾರದಲ್ಲಿ ವರ್ಷಗಳು ಪ್ರಾರಂಭವಾಗಿ ಸೆಪ್ಟೆಂಬರ್ ತಿಂಗಳ ಕಡೆಯ ತನಕ ನಡೆಯುವವು ಎಂದು ತಿಳಿಸುತ್ತಾರೆ

ಕರಾಚಿ ಮ್ಯುನಿಸಿಪಾಲಿಟಿಯವರು ಹೊಸ ಮ್ಯುನಿಸಿಪಲ್ ಆಫೀಸನ್ನು ಕಟ್ಟಿಕೊಳ್ಳುವವರಾಗಿದ್ದಾರೆ. ಈ ಕಟ್ಟಡದ ನಕ್ಷೆಯನ್ನು ಸರ್ವೋತ್ಕೃಷ್ಟವಾಗಿ ಬರೆದು ಕಳುಹಿಸಿದವರಿಗೆ ಮ್ಯುನಿಸಿಪಾಲಿಟಿಯಿಂದ ೭,೫೦೦ ರೂಪಾಯಿ ಬಹುಮಾನ ಕೊಡುತ್ತೇವೆಂದು ತಿಳಿಸಿರುವರು

ಮೌರ್ವಿ ಸಂಸ್ಥಾನದ ಮಹಾರಾಜಾ ಠಾಕೂರ್ ಸಾಹೇಬ್ ಯವರ ಸಹೋದರರಾದ ಕುಮಾರ ಶ್ರೀ ಅಜಿತಸಿಂಗ್‌ಜಿ ಯವರು ವಿಲಾಯತಿಯಲ್ಲಿ ಆಕ್ಸ್‌ಫರ್ಡ್ ವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು ಇವರು ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆಂದು ಪ್ರಕಟವಾಗಿದೆ

ಹಿಂದುಸ್ಥಾನದ ಸರ್ವ ಸೇನಾಪತಿಯಾದ ಲಾರ್ಡ್ ಕಿಚ್ನರ್ ಯವರ ಅಧಿಕಾರದ ಅವಧಿಯು ಈ ವರುಷದ ಅಂತ್ಯಭಾಗಕ್ಕೆ ಮುಕ್ತಾಯವಾಗುವುದು ಆದರೂ ಅವರು ಮುಂದಿನ ಆಗೋಸ್ಟು ಅಥವಾ ಸೆಪ್ಟೆಂಬರಿನಲ್ಲಿ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಚೀನಾ ಜಪಾನ್ ಮುಂತಾದ ಪೂರ್ವ ದಿಕ್ಕಿನ ರಾಜ್ಯಗಳ ಮೇಲೆ ನಿಧಾನವಾಗಿ ಸಂಚಾರಮಾಡಿಕೊಂಡು, ಯೂರೋಪ್ ಖಂಡದ ರಾಜ್ಯಗಳ ಮುಖಾಂತರ ವಿಲಾಯತಿಗೆ ಹೋಗಿ ಸೇರುವವರಾಗಿದ್ದಾರೆಂದು ಪ್ರಕಟವಾಗಿದೆ. ಇವರ ಸ್ಥಾನಕ್ಕೆ ಜನರಲ್ ಸರ್ ಓಮೂರ್ ಕ್ರೀಗ್ ಯವರು ನೇಮಕವಾಗಿರುತ್ತಾರೆಂದು ಕಳೆದ ಗುರುವಾರ ತಂತಿ ವರ್ತಮಾನ ಬಂದಿರುವುದು ಇದಲ್ಲದೆ ಇನ್ನು ಮುಂದೆ ಹಿಂದುಸ್ಥಾನದ ಸೈನ್ಯಗಳ ಮೇಲ್ವಿಚಾರಣೆಯನ್ನು ಸಿವಿಲ್ ಅಧಿಪತಿಗಳು ಸೇರಿ ನೋಡಿಕೊಳ್ಳುವರೆಂದೂ, ಸರ್ವ ಸೇನಾಪತಿಯು ನೇಮಕವಾಗುವುದಿಲ್ಲವೆಂದೂ ಸಮಾಚಾರ ಹುಟ್ಟಿದೆ

ಲಂಡನ್ ಪಟ್ಟಣದ ಒಬ್ಬ ಭಾರಿ ವ್ಯಾಪಾರಿಯು ಕುರಿಗಳ ಒಣಗಿದ ಕರುಳಿಗೆ ಪೌಂಡು ಒಂದಕ್ಕೆ ೧೦—೧೨ ಸಿಲಿಂಗುಗಳಂತೆ (ರೂ ೭—೮—೦ ಯಿಂದ ೯ ರೂಪಾಯಿ ವರೆಗೆ) ಕೊಟ್ಟು ಕೊಂಡುಕೊಳ್ಳಲು ಸಿದ್ಧರಾಗಿರುತ್ತಾರೆ ಉದ್ದವಾದ ಕರುಳುಗಳನ್ನು ಚೆನ್ನಾಗಿ ತೊಳೆದು ಅಗಲವಾಗಿ ಸೀಳಿ ಚೌಕಟ್ಟುಗಳ ಮೇಲೆ ಒಣಗಿಸಿರಬೇಕು ಈ ಉದ್ಯೋಗದಲ್ಲಿ ವಿಶೇಷ ಶ್ರಮ ಪಡಬೇಕಾದದ್ದಿಲ್ಲ ಈ ಕರುಳನ್ನು ಈಗ ಈ ದೇಶದಲ್ಲಿ ಪ್ರಾಯಶಃ ಬಿಸಾಟು ಬಿಡುತ್ತಾರೆ. ಇದಕ್ಕೆ ಲಂಡನ್‌ನವರು ಕೊಡುತ್ತೇವೆನ್ನುವ ಬೆಲೆ ಬಹಳ ಧಾರಾಳವಾಗಿರುವ ಕಾರಣ ಈ ವ್ಯಾಪಾರದಲ್ಲಿ ಉಪಕ್ರಮಿಸುವುದು ಅನುಕೂಲವೇ ಸರಿ. ಇಷ್ಟವುಳ್ಳವರು ಕಲ್ಕತ್ತಾ ಪಟ್ಟಣದಲ್ಲಿ ಕ್ಲೈವ್ ಸ್ಟ್ರೀಟ್ ೫ ನೇ ನಂಬರು ಬಂಗಲೆಯಲ್ಲಿರುವ ಡೈರೆಕ್ಟರ್ ಜನರಲ್ ಆಫ್ ಕಮರ್ಷಿಯಲ್ ಇಂಟೆಲಿಜೆನ್ಸ್ ಎಂಬೀ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಅಫ್ಘಾನಿಸ್ಥಾನದ ಅಮೀರರ ಮೇಲೆ ಫಿತೂರಿ ನಡೆಸಿದವರನ್ನು ಅವರು ಹಿಡಿಸಿ, ತೋಪಿಗೆ ಕಟ್ಟಿಸಿ ಕೊಲ್ಲಿಸಿದರಷ್ಟೆ ಈ ಫಿತೂರಿ ನಡೆದದ್ದು ಹೇಗೆಂದರೆ, ಅಮೀರರು ಜಲಾಲಾಬಾದಿನಲ್ಲಿರುವಾಗ ರಾಜಧಾನಿಯಾದ ಕಾಬೂಲ್ ಪಟ್ಟಣದಲ್ಲಿದ್ದ ಬೇಬಿಸಾಲಿವಾನ ಎಂಬಾತನೂ ಸರದಾರ್ ಉಮ್ಮರ್ ಜಾನ್ ಎಂಬಾತನೂ ಏಕವಾಗಿ ಫಿತೂರಿಯನ್ನು ನಡೆಸಿದರು ಅಮೀರರಿಗೂ ಯುವರಾಜರಿಗೂ ನಸ್ರುಲ್ಲಾ ಖಾನ್ ರವರಿಗೂ ವಿಷಹಾಕಿ ಅವರನ್ನೆಲ್ಲಾ ಕೊಂದುಬಿಡಬೇಕೆಂದು ಗೊತ್ತುಮಾಡಿಕೊಂಡಿದ್ದರು ಆದರೆ ಇದು ನಡೆಯದೆಹೋಯಿತು ತರುವಾಯ ಸೈನ್ಯಾಧಿಪತಿಯನ್ನು ಕೊಲ್ಲಬೇಕೆಂದು ಮಸಲತ್ತು ಮಾಡಿದರು ಕಾಬೂಲ್ ಪಟ್ಟಣದಲ್ಲೂ ಜಲಾಲಾಬಾದಿನಲ್ಲೂ ಏಕಕಾಲದಲ್ಲಿ ದಂಗೆ ಏಳಬೇಕೆಂದು ನಿರ್ಧಾರವಾಗಿತ್ತು ಆದರೆ ಫಿತೂರಿಕೋರರ ಪೈಕಿ ಒಬ್ಬನು ಹೋಗಿ ಇನಾಯತ್ ಉಲ್ಲಾ ಖಾನ್‌ರವರಿಗೆ ಎಲ್ಲಾ ತಿಳಿಸಿಬಿಟ್ಟನು ಕೂಡಲೇ ಸರ್ಕಾರದವರು ಫಿತೂರಿಕೋರರನ್ನೆಲ್ಲಾ ಹಿಡಿದು ಕೊಲ್ಲಿಸಿದರು

ಕೃಷ್ಣಾ ಡಿಸ್ಟ್ರಿಕ್ಟಿಗೆ ಸೇರಿದ ಗುಂಟೂರು ತಾಲ್ಲೂಕಿನಲ್ಲಿ ಕಟ್ರಾವರಂ ಎಂಬ ಗ್ರಾಮವಿದೆ ಇದು ತೆನಾಲಿ ರೈಲ್ವೆ ಸ್ಟೇಷನ್ನಿಂದ ಒಂದು ಮೈಲಿ ದೂರದಲ್ಲಿರುವುದು ಆ ಗ್ರಾಮದ ಒಂದು ಬೀದಿಯ ಕೊನೆಯಲ್ಲಿ ಕಳೆದ ವಾರ ಒಂದು ದಿನ ಬೆಳಗೆ ಒಬ್ಬ ಹೊಲೆಯನು ಬೆಳಕು ಹರಿಯುವ ಸಮಯದಲ್ಲಿ ಹೋಗುತ್ತಿದ್ದಾಗ ಒಂದು ಉಂಡೆಯಾದ ಪದಾರ್ಥವು ಬಿದ್ದಿರುವುದನ್ನು ಕಂಡು, ಅದೇನಾಗಿರಬಹುದೆಂದು ಕುತೂಹಲಪಟ್ಟು ಹೋಗಿ ಅದನ್ನು ಹಿಡಿದು ಎಳೆದನು ಕೂಡಲೇ ಅದು ಒಡೆದು ಮಹಾ ಶಬ್ದದೊಡನೆ ಹಾರಿ ಹೊಲೆಯನನ್ನು ಛಿದ್ರಛಿದ್ರವಾಗಿ ಮಾಡಿ ಕೊಂದುಬಿಟ್ಟಿತು ಅದು ಹಾರಿದ ಶಬ್ದವು ಬಹು ದೂರದವರೆಗೆ ಕೇಳಬಂದಿತು. ಮೃತಪಟ್ಟವನ ಶರೀರವು ಕೆಲವು ಗಜಗಳ ದೂರಕ್ಕೆ ಹೋಗಿ ಬಿದ್ದಿತ್ತು ಈ ವರ್ತಮಾನವನ್ನು ಕೇಳಿ ಗ್ರಾಮ ಮುನ್ಸೀಫರೂ ಪೋಲೀಸಿನವರೂ ಮ್ಯಾಜಿಸ್ಟ್ರೇಟರೂ ಅಲ್ಲಿಗೆ ಹೋದರು ಪರೀಕ್ಷೆ ಮಾಡುವಾಗ್ಗೆ ಅದು ಸಿಡಿಮದ್ದಿನ ಗುಂಡೆಂದೂ, ಅದನ್ನು ಪರೀಕ್ಷಾರ್ಥವಾಗಿ ಅಲ್ಲಿ ಯಾರೋ ತಂದಿಟ್ಟಿದ್ದರೆಂದೂ ತಿಳಿಯಿತು. ಈ ಸಿಡಿಮದ್ದಿನ ಗುಂಡು ಮದರಾಸ್ ಆಧಿಪತ್ಯಕ್ಕೆ ಪ್ರವೇಶ ಮಾಡಿರಲಿಲ್ಲ. ಇದರ ಹಿಂದೆ ಅದು ಟುಟಿಕೋರಿನ್ ಪಟ್ಟಣದಲ್ಲಿ ಮೊದಲು ಕಾಣಿಸಿಕೊಂಡಿತ್ತು. ಈಗ ಎರಡನೆಯ ಸಲ ಅದು ಈ ಆಧಿಪತ್ಯದಲ್ಲಿ ಅನಾಹುತ ಮಾಡಿರುವುದನ್ನು ನೋಡಿ ಅನೇಕರು ಭೀತಿಪಡುತ್ತಲಿದ್ದಾರೆ ಆ ಮದ್ದಿನ ಗುಂಡನ್ನು ಪರೀಕ್ಷೆ ಮಾಡುವುದಕ್ಕೆ ಅಧಿಕಾರಿಗಳನ್ನು ಕರೆಸಿರುವರು. ಈ ಜಿಲ್ಲೆಯ ಕೆಲವು ಜನರಿಗೂ ಕಲ್ಕತ್ತೆಯವರಿಗೂ ಈ ವಿಚಾರದಲ್ಲಿ ಕಾಗದಪತ್ರಗಳು ನಡೆದಿರುವಂತೆಯೂ, ಇಲ್ಲಿನವರು ಕಲ್ಕತ್ತೆಗೆ ಆಗಾಗ್ಗೆ ಹೋಗಿ ಬರುತ್ತಿದ್ದ ಹಾಗೂ ವರ್ತಮಾನವಿದೆ

ರಾಜಧಾನಿಯಲ್ಲಿ ಸಿಡುಬು ಹಾಕುವ ಏರ್ಪಾಡು

ಪ್ರಜಾಕ್ಷೇಮಕರವಾದ ಕಾರ್ಯವು.

ಇದರಿಂದ ಮೈಸೂರು ಪಟ್ಟಣವಾಸಿಗಳಿಗೆ ತಿಳಿಯಪಡಿಸುವದೇನೆಂದರೆ, ೧೯೦೬ ನೇ ಇಸವಿಯ ಕಾನೂನು ಅನುಸರಿಸಿ ಮೈಸೂರು ಸರಕಾರದವರು ೧೯೦೮ ನೇ ಇಸವಿ ಜುಲೈ ೧ ರಿಂದ ಲಾಗಾಯಿತು ಒಂದು ವರುಷದ ವರೆಗೆ ಈ ಪಟ್ಟಣದಲ್ಲಿ ಸಿಡುಬುಹಾಕಿಸುವದು ನಿರ್ಬಂಧಮಾಡಿರುತ್ತೇವೆಂದು ಆರ್ಡರ್ ಮಾಡಿರುತ್ತಾರೆ ಈ ರೆಗ್ಯುಲೇಷನ್‌ನಲ್ಲಿ ಎಲ್ಲಾ ಮಕ್ಕಳಿಗೂ ೬ ತಿಂಗಳು ವಯಸ್ಸಿನ ಒಳಗಾಗಿ ಸಿಡುಬುಹಾಕಿಸುವದು ನಿರ್ಬಂಧವಾಗಿರುತ್ತೆ ಈ ಕಾನೂನ್ ಪ್ರಕಾರ ಸಿಡುಬು ಏಳದೆ ಆಗಲಿ, ಸಿಡುಬು ಹಾಕಿಸಿಕೊಳ್ಳದೆ ಆಗಲಿ, ಅಥವ ಸಿಡುಬು ಹಾಕಬೇಕಾದದ್ದು ಆವಶ್ಯಕವಿಲ್ಲವೆಂದು ಸರ್ಟಿಫಿಕೇಟು ಪಡೆಯದೆ ಆಗಲಿ ಇರುವ ಪ್ರತಿ ಒಬ್ಬ ಮನುಷ್ಯನೂ (ಅಂದರೆ. ಹೆಂಗಸಾಗಲಿ, ಗಂಡಸಾಗಲಿ) ಸಿಡುಬುಹಾಕಿಸಿಕೊಳ್ಳಬೇಕು ಸಿಡುಬು ಹಾಕಿಸಿಕೊಳ್ಳುವದು ನಿರ್ಬಂಧವಾಗಿರುವ ಸ್ಥಳಗಳಲ್ಲಿ ಜನರು ಒಂದು ತಿಂಗಳಿಗಿಂತ ಹೆಚ್ಚಾಗಿ ವಾಸವಾಗಿದ್ದಲ್ಲಿ ಅಂಥವರು ಸಿಡುಬು ಹಾಕುವ ಡಿಪೋಗೆ ಹೋಗಿ ಸಿಡುಬು ಹಾಕಿಸಿಕೊಳ್ಳಬೇಕು ಘೋಷಾ ಅಥವ ಪರದಾದಲ್ಲಿರುವ ಹೆಂಗಸರಿಗೆ ಸಿಡುಬುಹಾಕತಕ್ಕ ಹೆಂಗಸಿನಿಂದಲೇ ಸಿಡುಬುಹಾಕಿಸಲ್ಪಡುವದು.

ಸಿಡುಬಿನ ಸೂಪರಿಂಟೆಂಡೆಂಟರವರು (ಅಂದರೆ, ಹೆಲ್ತ್ ಆಫೀಸರು) ಯಾವ ಮನೆಗಾದರೂ ತನಿಖೆಗಾಗಿ ಹೋದಲ್ಲಿ ಆ ಮನೆಯ ಯಜಮಾನರೂ, ಇವರ ಗೈರ್ಹಾಜರಿಯಲ್ಲಿ ಮನೆಯಲ್ಲಿರುವ ವಯಸ್ಕರಾದವರೂ ಮನೆಯಲ್ಲಿರುವ ಎಲ್ಲರನ್ನೂ ಅವರು ನೋಡಲು ಹಾಜರ್ಮಾಡಿ ಅವರ ಹೆಸರು, ವಯಸ್ಸು ಮುಂತಾದ ಸಂಗತಿಗಳನ್ನು ಸರಿಯಾಗಿ ತಿಳಿಸಬೇಕು ೧೨ ವಯಸ್ಸಿಗೆ ಮೇಲ್ಪಟ್ಟ ಹೆಂಗಸರು ಮುಖ್ಯವಾಗಿ ಘೋಷಾ ಅಥವಾ ಪರದಾ ಜನರಲ್ಲಿ ಸೂಪರಿಂಟೆಂಡೆಂಟರ ಪರವಾಗಿ ಬರುವಂಥ ಹೆಂಗಸಿನಿಂದ ಅಜಮಾಯಿಷಿ ಮಾಡಲ್ಪಡುವರು ಈ ಕಾನೂನು ಜಾರಿಯಲ್ಲಿ ತರಲು ಈ ಕೆಳಗೆ ಕಾಣಿಸಿರುವ ಡಿಪೋಗಳು ದಿನವೂ ಬೆಳಿಗ್ಗೆ ೭ ಗಂಟೆ ಲಾಗಾಯಿತು ೧೦ ಗಂಟೆ ವರೆವಿಗೂ, ಮಧ್ಯಾಹ್ನ ೪ ಗಂಟೆ ಲಾಗಾಯಿತು ೬ ಗಂಟೆ ವರೆವಿಗೂ ಸಿಡುಬುಹಾಕಲು ಏರ್ಪಾಡಾಗಿರುತ್ತವೆ —(೧) ಟವನ್ ಹಾಲ್ ಬಂಗಲೆ (೨) ಚಾಮರಾಜ ರೋಡಿನಲ್ಲಿರುವ ಆಸ್ಪತ್ರೆ (೩) ವೀರನಗೆರೆಯಲ್ಲಿರುವ ಆಸ್ಪತ್ರೆ ಇದಲ್ಲದೆ ತಮ್ಮ ತಮ್ಮ ಮನೆಗಳಲ್ಲಿ ಸಿಡುಬು ಹಾಕಿಸಿಕೊಳ್ಳಬೇಕೆಂದು ಇಷ್ಟಪಡುವವರು ಮೈಸೂರು ಸಿಟಿ ಹೆಲ್ತ್ ಆಫೀಸರವರ ಮೂಲಕ ಏರ್ಪಾಡು ಮಾಡಿಕೊಳ್ಳಬಹುದು

ಮೇಲೆ ನಮೂದಿಸಿರುವ ರೆಗ್ಯುಲೇಷನ್ ಪ್ರಕಾರ ಸಿಡುಬು ಹಾಕಿಸದೆ, ಹಾಕಿಸಿಕೊಳ್ಳದೆ, ಅಥವಾ ಹಾಕಿಸಿಕೊಳ್ಳುವದು ಅನಾವಶ್ಯಕವೆಂಬ ಸರ್ಟಿಫಿಕೇಟನ್ನು ಪಡೆಯದೆ ಇರುವವರು ಮ್ಯಾಜಿಸ್ಟ್ರೇಟರವರ ಮೂಲಕ ೫೦ ರೂಪಾಯಿ ಜುಲ್ಮಾನೆ ಶಿಕ್ಷೆಗೆ ಗುರಿಮಾಡಲ್ಪಡುವರು

ದಿವಾನ್ ಮ|| ಟಿ. ಆನಂದರಾವ್, ಬಿ. ಎ. ಯವರು.

ಇವರ ಸಂಕ್ಷೇಪ ಚರಿತ್ರೆಯು.

ಈ ತಿಂಗಳ ೧ನೇ ತಾರೀಖಿನ ದಿನ ಮೈಸೂರು ಸಂಸ್ಥಾನದ ದಿವಾನ್‌ಗಿರಿಯ ಭಾರವನ್ನು ವಹಿಸಿಕೊಂಡಿರುವ ಮ|| ಟಿ ಆನಂದರಾಯರು ಕಳೆದ ೧೮೫೨ ನೇ ಇಸವಿ ಮೇ ತಿಂಗಳು ೨೭ ರಲ್ಲಿ ಚೀಫ್ ಸರ್ ಟಿ ಮಾಧವರಾಯರ ಜ್ಯೇಷ್ಠ ಪುತ್ರರಾಗಿ ಜನಿಸಿದರು ಚೀಫ್ ಸರ್ ಟಿ ಮಾಧವರಾಯರು ಪ್ರಸಿದ್ಧ ರಾಜತಂತ್ರಜ್ಞರಾಗಿದ್ದರೆಂಬುದೂ, ಅವರು ಐವತ್ತು ವರುಷಗಳ ಹಿಂದೆ ತಿರುವಾಂಕೂರು (ಅನಂತಶಯನ) ಮತ್ತು ಇಂದೂರ್ ಸಂಸ್ಥಾನಗಳಲ್ಲಿ ದಿವಾನ್‌ಗಿರಿ ಮಾಡಿದವರೆಂಬುದೂ ಜನಜನಿತವಾಗಿರುತ್ತದೆ ೧೬ ವರುಷಗಳು ತುಂಬಿರುವ ದಿವಾನ್ ಮ|| ಆನಂದರಾಯರು ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿದ್ಯಾಭ್ಯಾಸಮಾಡಿ, ತಮ್ಮ ತಂದೆಯವರು ತಿರುವಾಂಕೂರಿನಲ್ಲಿ ದಿವಾನರಾಗಿದ್ದಾಗ ಆ ಸಂಸ್ಥಾನದ ಮಹಾರಾಜಾ ಕಾಲೇಜಿನಿಂದ ೧೮೬೭ ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನೂ, ೧೮೬೯ ರಲ್ಲಿ ಎಫ್ ಎ ಪರೀಕ್ಷೆಯನ್ನೂ ಕೊಟ್ಟು ಉತ್ತೀರ್ಣರಾಗಿ, ಆ ತರುವಾಯ ೧೮೭೧ ರಲ್ಲಿ ಬಿ ಎ ಪರೀಕ್ಷೆಯಲ್ಲೂ ತೇರ್ಗಡೆಹೊಂದಿದರು ಬಳಿಕ ೧೮೭೩ನೆ ಇಸವಿ ನೊವೆಂಬರ್ ತಾ|| ರಲ್ಲಿ ಬೆಂಗಳೂರಿಗೆ ಬಂದು ಮೈಸೂರು ಗವರ್ನ್‌ಮೆಂಟಿನಲ್ಲಿ ಆಬಕಾರಿ ಎಂಬ ನೌಕರಿಗೆ ಸೇರಿಕೊಂಡು, ಆ ಲಾಗಾಯಿತು ಇಲ್ಲಿನ ತನಕ ಈ ಸಂಸ್ಥಾನದಲ್ಲೇ ಕೆಲಸ ಮಾಡುತ್ತಾ ಬಂದಿರುವರು ಆನಂದರಾಯರು ೧೮೭೬ ನೇ ಜೂನ್ ಲಾಗಾಯಿತು ಅಸಿಸ್ಟೆಂಟ್ ಕಮೀಷನರ್ ಸಬ್ ಡಿವಿಜನ್ ಆಫೀಸರ್, ಟೌನ್ ಮ್ಯಾಜಿಸ್ಟ್ರೇಟ್ ಕೆಲಸಗಳಿಗೆ ಹತ್ತಿ ಅಲ್ಲಿಂದ ೧೮೭೯ ನೇ ಮೇ ತಿಂಗಳಿಂದ ೧೮೮೩ ನೇ ಜನವರಿಯ ತನಕ ಅರಮನೆ ಇಲಾಖೆಯ ಕಂಟ್ರೋಲರಾಗಿದ್ದು ಅಲ್ಲಿ ಬಹಳ ಒಳ್ಳೆಯ ಏರ್ಪಾಡುಗಳನ್ನು ಮಾಡಿಟ್ಟರು ೧೮೮೩ ನೇ ಇಸವಿಯ ವರೆಗೆ ಅವರು ಸಬ್ ಡಿವಿಜನ್ ಆಫೀಸರಾಗಿದ್ದು ತರುವಾಯ ಡೆಪ್ಯುಟಿ ಕಮೀಷನರ್‌ರ ಪದವಿಗೂ, ೧೮೮೯ ರಲ್ಲಿ ಗವರ್ನ್‌ಮೆಂಟ್ ಚೀಫ್ ಸೆಕ್ರೆಟರಿ ಸ್ಥಾನಕ್ಕೂ ಬಡ್ತಿ ಹೊಂದಿದರು ಸುಮಾರು ೧೮೯೫ ನೇ ಇಸವಿಯಲ್ಲಿ ಅವರಿಗೆ ಕಣ್ಣಿನ ಬಾಧೆಯು ಹೆಚ್ಚಿದ್ದರಿಂದ ರಜಾ ಪಡೆದುಕೊಂಡಿರಬೇಕಾಯಿತು ರಜದಿಂದ ಬಂದ ಮೇಲೆ ಅವರು ಕೆಲವು ಕಾಲ ಸ್ಟಟಿಸ್ಟಿಕ್ಸ್ ಇಲಾಖಾ ಡೈರೆಕ್ಟರಾಗಿ ಕೆಲಸ ಮಾಡಿ, ಬಳಿಕ ೧೯೦೦ ನೇ ವರುಷದಲ್ಲಿ ಮೈಸೂರು ಸಂಸ್ಥಾನದ ಸರ್ವೆ ಕಮೀಷನರ್ ರಾದರು ತರುವಾಯ ಮ|| ಆನಂದರಾಯರು ರೆವಿನ್ಯೂ ಕಮೀಷನರಾಗಿ ೧೯೦೬ ನೇ ಏಪ್ರಿಲ್ ವರೆಗೆ ಕೆಲಸಮಾಡಿ. ಆ ತಾರೀಖಿನಲ್ಲಿ ಅಂದರೆ ಮ|| ಮಾಧವರಾಯರ ದಿವಾನ್‌ಗಿರಿಯಲ್ಲಿ ಮೊದಲನೇ ಕೌನ್ಸಿಲರಾಗಿ ನೇಮಿಸಲ್ಪಟ್ಟರು ಈ ರೀತಿ ಮೆ|| ಆನಂದರಾಯರ ವಂಶವೂ, ವಿದ್ಯೆಯೂ, ಅನುಭವವೂ, ಸಾಮರ್ಥ್ಯವೂ ಶ್ರೀಮನ್ಮಹಾರಾಜರವರ ಪ್ರೀತಿ ಗೌರವಗಳಿಗೆ ಪಾತ್ರವಾಗಿ, ಈಗ ಅವರಿಗೆ ಈ ಸಂಸ್ಥಾನದ ದಿವಾನ್‌ಗಿರಿಯನ್ನು ದೊರಕಿಸಿಕೊಟ್ಟಿರುತ್ತವೆ

ಜಪಾನ್‌ದೇಶದ ವ್ಯವಸಾಯ ಸಂಘಗಳು.

ನಮ್ಮ ದೇಶದ ಗ್ರಾಮಾಂತರಗಳಲ್ಲಿರುವ ವ್ಯವಸಾಯಗಾರರು ಜಪಾನ್ ರಾಜ್ಯದ ರೈತ ಸಂಘಗಳ ವಿಚಾರವನ್ನು ತಿಳಿದುಕೊಂಡು ಅವರಂತೆ ತಾವೂ ಸಂಘಗಳನ್ನು ಮಾಡಿಕೊಂಡು ಅಭಿವೃದ್ಧಿಗೆ ಬರಬೇಕೆಂಬ ಕುತೂಹಲವುಳ್ಳವರಾಗಿ ಕೆಳಗೆ ಕಂಡ ಸಂಗತಿಯನ್ನು ಎತ್ತಿ ಪ್ರಕಟಿಸಿರುತ್ತೇವೆ ಇದನ್ನು ಸಾವಧಾನದಿಂದ ಓದಿ ಗ್ರಹಿಸಿಕೊಂಡು ಪ್ರಯೋಜನ ಹೊಂದುವರೆಂದು ನಿರೀಕ್ಷಿಸುತ್ತೇವೆ

ಈ ವ್ಯವಸಾಯಸಂಘಗಳು ಜಪಾನ್ ದೇಶದಲ್ಲಿ ವೃದ್ಧಿಗೆ ಬಂದಿರುವಷ್ಟು ಪ್ರಪಂಚದಲ್ಲಿ ಮತ್ತಾವ ದೇಶದಲ್ಲಿಯೂ ಇಲ್ಲವೆಂದು ಹೇಳಬಹುದು ಗ್ರಾಮ ಸಂಘಗಳೆಂತಲೂ, ಕೌಂಟಿ ಅಥವ ತಾಲ್ಲೂಕು ಸಂಘಗಳೆಂತಲೂ, ಪ್ರಿಫೆಕ್ಚರ್ ಅಥವ ಡಿಸ್ಟ್ರಿಕ್ಟ್ ಸಂಘಗಳೆಂತಲೂ ಮೂರು ವಿಧಗಳುಂಟು. ಸಂಘಗಳು ಸ್ವಯಂ ಸರ್ವಸ್ವತಂತ್ರವಾದ್ದುಗಳಲ್ಲ. ಇವು ಆಯಾ ಡಿಸ್ಟ್ರಿಕ್ಟುಗಳಲ್ಲಿ ಒಂದಕ್ಕೊಂದಕ್ಕೆ ಅಧೀನವಾದವುಗಳು. ಪ್ರತಿ ಗ್ರಾಮ ಸಂಘಕ್ಕೂ ಆಯಾಯ ಗ್ರಾಮದ ರೈತರೆಲ್ಲರೂ ಮೆಂಬರುಗಳಾಗಿರುತ್ತಾರೆ ಪ್ರತಿ ಗ್ರಾಮಸಂಘದಿಂದಲೂ ಒಬ್ಬೊಬ್ಬ ಪ್ರತಿನಿಧಿಯು ಚುನಾಯಿಸಲ್ಪಟ್ಟು ಆ ಒಂದು ತಾಲ್ಲೂಕಿನಲ್ಲಿರುವ ಒಟ್ಟು ಗ್ರಾಮಸಂಘಗಳ ಪ್ರತಿನಿಧಿಗಳೆಲ್ಲರೂ ಸೇರಿ ತಾಲ್ಲೂಕ್ ಸಂಘವೆನಿಸುವದು ಅದರಂತೆಯೇ ಪ್ರತಿನಿಧಿಗಳು ಸೇರಿದ ಸಮಾಜವು ಡಿಸ್ಟ್ರಿಕ್ಟ್ ಸಂಘವೆನಿಸುವದು. ರಾಷ್ಟ್ರದ ಎಲ್ಲಾ ಡಿಸ್ಟ್ರಿಕ್ಟುಗಳಿಂದಲೂ ಪ್ರತಿನಿಧಿಗಳು ಸೇರಿದ ಸಮಾಜವು ರಾಷ್ಟ್ರೀಯ ವ್ಯವಸಾಯ ಸಭಾ ಎನಿಸುವದು. ಒಂದು ಗ್ರಾಮ ಸಂಘವನ್ನು ಮಾಡುವುದಕ್ಕೆ ಮುಂಚೆ ಗ್ರಾಮದಲ್ಲಿ ಮೆಂಬರಾಗಲು ಅರ್ಹರಾದವರಲ್ಲಿ ಮೂರನೇ ಎರಡು ಭಾಗದ ಜನಗಳು ಒಪ್ಪಬೇಕಲ್ಲದೆ ಅಂಥವರಿಗೆ ಸಾಗುವಳಿಗೆ ಅರ್ಹವಾದ ಜಮೀನ್ ಪೈಕಿ ಮೂರನೇ ಎರಡು ಭಾಗದ ಜಮೀನು ಹಿಡುವಳಿಯಲ್ಲಿರಬೇಕು. ಸಂಘವು ಏರ್ಪಟ್ಟನಂತರ ಅರ್ಹರಾದವರೆಲ್ಲರೂ ಮೆಂಬರುಗಳಾಗಿ ಸೇರಿಯೇ ತೀರಬೇಕು. ಸಂಘಗಳ ಕಾರಬಾರು ನಡೆಸುವದೂ, ಪ್ರತಿನಿಧಿಗಳನ್ನು ಚುನಾಯಿಸುವುದೂ, ಅಧಿಕಾರಿಗಳನ್ನೂ ಆನರರಿ ಮೆಂಬರುಗಳನ್ನು ಸಹ ಏರ್ಪಡಿಸುವುದೂ, ಇವೆಲ್ಲವೂ ಕಾನೂನಿನ ಪ್ರಕಾರ ನಿರ್ಧರಿಸಲ್ಪಡುತ್ತವೆ ಸಂಘಗಳ ವರಮಾನವು ಮೆಂಬರುಗಳಿಂದ ದ್ರವ್ಯರೂಪವಾಗಿಯಾದರೂ ಧಾನ್ಯರೂಪವಾಗಿಯಾದರೂ ವಸೂಲಾಗುತ್ತದೆ. ಸಂಘಗಳಲ್ಲಿರತಕ್ಕ ಆಯಾ ಮ್ಯುನಿಸಿಪಾಲಿಟಿಗಳು ಸಾಧ್ಯವಾದಷ್ಟು ಗ್ರ್ಯಾಂಟುಗಳನ್ನು ಕೊಡಲು ಅಭ್ಯಂತರವಿಲ್ಲ ಈ ಸಂಘಗಳು ವ್ಯವಸಾಯವಿಚಾರವಾದ ಮತ್ತು ಇತರ ಸಂಗತಿಗಳಲ್ಲಿ ವ್ಯವಸಾಯದ ಇಲಾಖೆಯ ಕೆಲಸಗಳಿಗೆ ಅವಶ್ಯಕವಾದ ಸಂಗತಿಗಳನ್ನು ತಿಳಿಸಬೇಕು ಸಂದರ್ಭಾನುಸಾರವಾಗಿ ಸಲಹೆಗಳನ್ನು ಕೊಡಬಹುದು ಸರ್ಕಾರದವರು ಸಂಘಗಳ ಲೆಕ್ಕಪತ್ರಗಳನ್ನು ಪರಿಶೀಲಿಸಿ ಯುಕ್ತತೋರುವ ಅಪ್ಪಣೆಯನ್ನು ಮಾಡಬಹುದು ಗ್ರಾಮಸಂಘಗಳು ಮೆಂಬರುಗಳು ಕೊಡುವ ಚಂದಾಹಣದಿಂದಲೂ ಉಚಿತಾರ್ಥವಾಗಿ ಕೊಡಲ್ಪಡುವ ಮೊಬಲಗಿನಿಂದಲೂ ಪೋಷಿಸಲ್ಪಡುತ್ತವೆ ತಾಲ್ಲೂಕು ಸಂಘಗಳು ಗ್ರಾಮಸಂಘಗಳಿಂದಲೂ, ಡಿಸ್ಟ್ರಿಕ್ಟ್ ಸಂಘಗಳು ತಾಲ್ಲೂಕು ಸಂಘಗಳಿಂದಲೂ ಪೋಷಿಸಲ್ಪಡೋಣದರಿಂದ ಎಲ್ಲಾ ಸಂಘಗಳೂ ರೈತರಿಂದಲೇ ನಿರ್ವಹಿಸಲ್ಪಟ್ಟಂತಾಯಿತು ಆದರೆ ಸರ್ಕಾರದವರು ಹೆಚ್ಚು ಔದಾರ್ಯದಿಂದ ಸಹಾಯದ್ರವ್ಯವನ್ನು ಕೊಡುವಮೂಲಕವಾಗಿ ವಿಶೇಷ ಸಹಾಯಮಾಡುತ್ತಾರೆ ೧೯೦೫ ನೇ ಇಸವಿಯಲ್ಲಿ ಡಿಸ್ಟ್ರಿಕ್ಟ್ ಸಂಘಗಳಿಗಾಗಿ ತಗಲಿದ ಒಟ್ಟು ಖರ್ಚು ೮—೯ ಲಕ್ಷ ರೂಪಾಯಿ ಈ ಪೈಕಿ ಅರ್ಧಕ್ಕೆ ಮೇಲ್ಪಟ್ಟ ಹಣವು ಸರ್ಕಾರದವರಿಂದ ಕೊಡಲ್ಪಟ್ಟ ಗ್ರ್ಯಾಂಟಾಗಿರುತ್ತದೆ ೪೭ ಡಿಸ್ಟ್ರಿಕ್ಟುಗಳೂ, ೬೩೮ ತಾಲ್ಲೂಕುಗಳೂ, ೧೩೫೦೯ ಊರು ಮತ್ತು ಗ್ರಾಮಗಳೂ, ಇವುಗಳಿಗನುಗುಣವಾಗಿ ದೇಶದ ಕಾನೂನು ಅನುಸರಿಸಿ ೪೬ ಡಿಸ್ಟ್ರಿಕ್ಟ್ ಸಂಘಗಳೂ, ೫೭೯ ತಾಲ್ಲೂಕು ಸಂಘಗಳೂ. ೧೧,೯೬೫ ಗ್ರಾಮಸಂಘಗಳೂ ಸಹ ಈಚೆಗೆ ಪ್ರಚಾರದಲ್ಲಿರುವಂತೆ ತಿಳಿಯಬರುತ್ತದೆ

ಜಪಾನ್ ದೇಶದಲ್ಲಿ ವ್ಯವಸಾಯ ಸಂಘಗಳು ಯಾವ ರೀತಿ ಮಾಡಲ್ಪಟ್ಟಿವೆ, ಅವುಗಳಿಂದ ರೈತರಿಗೂ ರಾಜ್ಯಕ್ಕೂ ಯಾವ ಪ್ರಯೋಜನಗಳುಂಟೆಂಬುವದು ಸ್ವಲ್ಪಮಟ್ಟಿಗೆ ವಿದಿತಪಡಬಹುದು ಆದರೆ ಜಪಾನ್ ದೇಶದವರು ಕೇವಲ ಉನ್ನತ ಸ್ಥಿತಿಯಲ್ಲಿರುವರು ಅಲ್ಲಿನ ರೈತರು ವ್ಯವಸಾಯ ವಿದ್ಯಾವಿಶಾರದರಾದುದರಿಂದ ಆ ದೇಶದಲ್ಲಿ ಅವರಿಗೆ ಸಾಧ್ಯವಾದುದು ನಮ್ಮ ದೇಶದ ರೈತರಿಗೆ ಹೇಗೆ ಸಾಧ್ಯವಾದೀತು ಎಂದು ಕೆಲವರು ಶಂಕಿಸಬಹುದು ಆದರೆ ಅಲ್ಲಿನ ಸಂಘಗಳ ನಿರ್ಬಂಧಗಳೆಂತಲೇ ನಮ್ಮಲ್ಲಿಯಂತೆ ಅಲ್ಲಿಯೂ ಪ್ರತಿಬಂಧಕಗಳೂ. ವಿಘ್ನಗಳೂ ಇರುವುದಾಗಿ ತಿಳಿಯಬರುತ್ತದೆ ದೇಶಾಂತರ ನಿದರ್ಶನಗಳು ಮಾತ್ರವೇ ಅಲ್ಲ ತುಮಕೂರು ಡಿಸ್ಟ್ರಿಕ್ಟಿನ ಎಲ್ಲೆಯಲ್ಲಿರುವ ಪೆನ್ನಗೊಂಡೆಯಲ್ಲಿ ಸ್ಥಾಪಿಸಿರುವ ವ್ಯವಸಾಯ ಸಂಘವೂ, ತಂಜಾವೂರು ಕುಂಭಕೋಣ ಮುಂತಾದ ಪ್ರಾಂತ್ಯಗಳಲ್ಲಿ ೩-೪ ವರ್ಷಗಳಿಂದೀಚೆಗೆ ಸ್ಥಾಪಿಸಲ್ಪಟ್ಟ ಸಂಘಗಳೂ ವ್ಯವಸಾಯ ವಿಷಯದಲ್ಲಿ ಅನೇಕ ಶ್ಲಾಘ್ಯವಾದ ಪ್ರಯತ್ನಗಳನ್ನು ಮಾಡಿರುತ್ತವೆ ಮಾಕ್ ಲೋ ಓಲ್ಡ್ ಯವರು ತಾತ್ಪರ್ಯಪಟ್ಟಿರುವುದೇನೆಂದರೆ, "ಉತ್ತಮರೀತಿಯಲ್ಲಿ ಬೇಸಾಯಮಾಡುವ ಇಂಡಿಯಾ ದೇಶದ ರೈತನು ಬ್ರಿಟಿಷ್ ರಾಜ್ಯದ ಸಾಧಾರಣ ಬೇಸಾಯಗಾರನಷ್ಟು ಸಮರ್ಥನಾಗಿರುವುದಲ್ಲದೆ ಕೆಲವು ಸಂದರ್ಭಗಳಲ್ಲಿ ಅವನಿಗಿಂತಲೂ ಉತ್ತಮನಾಗಿದ್ದಾನೆ ಕೇವಲ ಹೀನಸ್ಥಿತಿಯಲ್ಲಿರುವ ಇಲ್ಲಿನ ರೈತನು ತನ್ನ ಬುದ್ಧಿಶಕ್ತಿಗೆ ತಾನು ಜವಾಬ್ದಾರನಲ್ಲ ಏಕೆಂದರೆ ಹುಟ್ಟಾಗಿ ಸುಶಿಕ್ಷಿತನಾಗಲು ಅವನಿಗೆ ಸೌಕರ್ಯ ತಪ್ಪಿರುವಷ್ಟು ಪ್ರಾಯಶಃ ಮತ್ತಾವ ದೇಶದಲ್ಲೂ ಇರಲಾರದು ಅಲ್ಲದೆ ಮತ್ತಾರಿಗೂ ಸಾಧ್ಯವಿಲ್ಲದಿರುವಂತೆ ಅವನು ತನಗೆ ಬಂದ ತೊಂದರೆಗಳನ್ನೆಲ್ಲ ಸಹಿಸಿಕೊಂಡು ತಾಳ್ಮೆಯಿಂದಲೂ ನಿಸೂರಾಗಿ ಮಾತನಾಡದೆಯೂ ನಡೆಯುತ್ತಾನೆ" ಎಂಬೀ ಅಭಿಪ್ರಾಯಕ್ಕೆ ಪಾತ್ರನಾದ ನಮ್ಮ ದೇಶದ ರೈತನು ತಾನು ಮನಸ್ಸಿಟ್ಟು ಕೆಲಸ ಮಾಡುತ್ತಾ ಬಂದಲ್ಲಿ ವೃದ್ಧಿಗೆ ಬರುವುದರಲ್ಲಿ ಸಂದೇಹವಿಲ್ಲ ಮುಖ್ಯವಾಗಿ ಜನರು ಗ್ರಾಮಹಿತವನ್ನು ದೃಷ್ಟಿಸುತ್ತಾ ತಿಳಿದವರಲ್ಲಿ ನಂಬಿಕೆಯನ್ನಿಟ್ಟು ಸರಕಾರದವರ ಬುದ್ಧಿವಾದವನ್ನು ಪ್ರಚಾರದಲ್ಲಿ ತಂದು ಪರಸ್ಪರ ಮಿತ್ರಭಾವಗಳನ್ನು ಮಾಡದೆ ಬಿಟ್ಟರಲ್ಲಿ ಒಬ್ಬರು ಕಲೆತು ಪ್ರತಿಯೊಬ್ಬನೂ ಉದ್ಯೋಗನಿರತನಾಗಿ ಕೆಲಸ ಮಾಡುತ್ತಾ ಸ್ವಪ್ರಯೋಜನವನ್ನೂ ಪರಪ್ರಯೋಜನವನ್ನೂ ಸಹ ಸಾಧಿಸುತ್ತಾ ಬಂದಲ್ಲಿ ವ್ಯವಸಾಯ ಸಂಘಗಳು ವೃದ್ಧಿಯಾಗಿ ತನ್ಮೂಲಕ ಬಡ ರೈತರು ಭಾಗ್ಯವಂತರಾಗಿಯೂ, ಭಾಗ್ಯವಂತರು ಮಹದೈಶ್ವರ್ಯವಂತರಾಗಿಯೂ ದೇಶದಲ್ಲಿ ಕ್ಷಾಮೋಪದ್ರವವಿಲ್ಲದೆ ಜನರು ಸುಖಿಗಳಾಗುವುದರಲ್ಲಿ ಸಂದೇಹವಿಲ್ಲ.

ಕಾಣಿಕೆ.

ನಾವು ಒಬ್ಬ ದೊಡ್ಡ ಮನುಷ್ಯನನ್ನಾಗಲಿ ಗುರುಗಳನ್ನಾಗಲಿ ಕಾಣುವದಕ್ಕೆ ಹೋಗುವಾಗ ಅವರು ನಮ್ಮನ್ನು ನೋಡಿ ಸಂತೋಷಪಡಬೇಕೆಂದು ಅಥವಾ ನಮ್ಮನ್ನು ಸ್ವೀಕರಿಸಿ ಆಶೀರ್ವಾದ ಮಾಡಬೇಕೆಂದು ಅಪೇಕ್ಷಿಸುತ್ತೇವಷ್ಟೆ ಅವರು ನಮ್ಮನ್ನು ಸ್ವೀಕರಿಸಿ ಆಶೀರ್ವದಿಸಬೇಕಾದರೆ ನಾವು ಅವರಿಗೆ ವಿಧೇಯರೂ ಆಶೀರ್ವಾದವನ್ನಪೇಕ್ಷಿಸುವವರೂ ಆಗಿರುತ್ತೇವೆಂದು ಅವರ ಮನಸ್ಸಿಗೆ ಗೊತ್ತಾಗಬೇಕು ನಮ್ಮ ಭಕ್ತಿಯನ್ನೂ ನಮ್ರತೆಯನ್ನೂ ಬಾಯಿಮಾತಿನಿಂದ ಅವರಿಗೆ ಹೇಳಬಹುದು. ಬಾಯಿ ಮಾತಿನಿಂದ ಹೇಳುವದಕ್ಕಿಂತಲೂ ಉತ್ತಮವಾದ ವಿಧವು ಪ್ರಾಯಶಃ ನಮ್ಮೆಲ್ಲರಿಗೂ ಗೊತ್ತಿದೆ. ನಾವು ಕಾಣಬೇಕೆಂದು ಬಂದಿರುವ

ದೊಡ್ಡ ಮನುಷ್ಯರು ಮೆಚ್ಚುವ ಪುಷ್ಪಫಲಗಳಿಗೆ ಬಾಯಿಯಿಲ್ಲ. ಅವು ಮಾತನಾಡಿ ನಮ್ಮ ಅಪೇಕ್ಷೆಗಳನ್ನು ಅವರಿಗೆ ಹೇಳಲಾರವು. ಆದರೆ ಅವು ಮಾತನಾಡದೆ ನಮ್ಮ ಸಪ್ರಿತೆ, ಗುರುತ್ವ ಆಶಯಗಳನ್ನು ಬಹು ವಾಕ್ಚಾತುರ್ಯದಿಂದ ತಿಳಿಯಪಡಿಸುವವು. ಇದೇ "ಕಾಣಿಕೆ"

ಕಾಣಿಕೆಯ ಉದ್ದೇಶವು ಇಂತಹದಾಗಿರುವದರಿಂದ ಗುರು ಹಿರಿಯರ ಭೇಟಿಗೆ ನಾವು ಹೋಗುವಾಗ ಅವರನ್ನು ಸಂತೋಷಪಡಿಸಿ ನಮ್ಮ ಮನೋಭಾವವನ್ನು ಬಹು ಅಚ್ಚುಮೆಚ್ಚಾಗಿ ಅವರಿಗೆ ಗೋಚರಪಡಿಸುವಂಥಾ ಕಾಣಿಕೆಯನ್ನು ಯಥಾ ಯೋಗ್ಯವಾಗಿ ಸಲ್ಲಿಸುವದು ನ್ಯಾಯವಾಗಿದೆ. ಆದರೆ ಕಾಣಿಕೆಯು ದುರುಪಯೋಗಕ್ಕೆ ಬಳಸಲ್ಪಟ್ಟಿರುವದೂ ಉಂಟು. ಅಪರಾಧಿಯು ಅಧಿಕಾರಿಯನ್ನಾಗಲಿ ಅಥವಾ ನ್ಯಾಯಾಧಿಪತಿಯನ್ನಾಗಲಿ ಕಂಡು ಫಲಪುಷ್ಪಗಳನ್ನೂ ದುಡ್ಡನ್ನೂ ಅವನಿಗೆ ತೋರಿಸಿ ನ್ಯಾಯವನ್ನು ಆದರ ಆಶೆಯಿಂದ ಮಾರೆಮಾಡುವದಾಗಿ ನ್ಯಾಯಾಧಿಪತಿಯನ್ನು ಪ್ರೇರಿಸುವದು ಲೋಕದಲ್ಲಿ ರೂಢಿಯಾಗಿದೆ. ಇದು ಅಪರಾಧಿಯ ಭಕ್ತಿಯನ್ನಾಗಲಿ ಕೃತಜ್ಞತೆಯನ್ನಾಗಲಿ ತೋರಿಸುವದಿಲ್ಲ. ಅಪರಾಧವನ್ನು ಅರಿಕೆಮಾಡಿ ಕ್ಷಮೆ ಬೇಡಿಪ್ಪೂ ಅಲ್ಲ. ಆದ್ದರಿಂದ ಇದು ಕಾಣಿಕೆಯಲ್ಲ. ಬರೇ ಲಂಚ. ಈ ದುರ್ವ್ಯಾಡಿಕೆಯ ವಿಷಯದಲ್ಲಿ ಸತ್ಯವೇದವು ಹೇಳುವದೇನಂದರೆ—ಲಂಚ ತಕ್ಕೊಳ್ಳಬೇಡ, ಯಾಕಂದರೆ ಲಂಚವು ದೃಷ್ಟಿಯುಳ್ಳವರನ್ನು ಕುರುಡುಮಾಡಿ ನೀತಿವಂತರ ಮಾತುಗಳನ್ನು ಡೊಂಕುಮಾಡುತ್ತದೆ. ಮುಖದಾಕ್ಷಿಣ್ಯ ನೋಡಬೇಡ, ನ್ಯಾಯವನ್ನು ಮಾರೆಮಾಡಬೇಡ. ಜನಕ್ಕೆ ನೀತಿಯಿಂದ ನ್ಯಾಯ ತೀರಿಸಬೇಕು. ಬಡವನ ನ್ಯಾಯವನ್ನು ತಪ್ಪಿಸಬೇಡ ಎಂಬುವದೇ. ಈ ವಾಕ್ಯಗಳ ಅರ್ಥವು ಎಲ್ಲರಿಗೂ ಸುಲಭವಾಗಿದೆ.

ಆದರೆ ನಾವು ದೇವರಿಗೆ ಕಾಣಿಕೆ ಕೊಡಬೇಕೋ? ಆತನು ನಮ್ಮ ಗುರುಹಿರಿಯರಿಗಿಂತಲೂ ಮಾತಾಪಿತೃಗಳಿಗಿಂತಲೂ ಸರ್ವ ಶ್ರೇಷ್ಠನು. ಇದಲ್ಲದೆ ಆತನನ್ನು ನಾವು ಮೆಚ್ಚಿಸಿ ನಡೆಯಬೇಕೆಂಬುದಕ್ಕೆ ಎಷ್ಟು ಕಾರಣಗಳವೆ? ನಮ್ಮನ್ನು ಸೃಷ್ಟಿಸಿ ಕಾಪಾಡುತ್ತ ಬಂದಿರುವವನು ಆತನು. ಮುಂದೆ ಕಾಪಾಡಿ ತನ್ನ ಸನ್ನಿಧಾನದಲ್ಲಿ ನಮ್ಮನ್ನು ಅನಂತ ಸಂರಕ್ಷಿಸಬೇಕಾಗಿರುವಲ್ಲಿ ಆತನಿಗೆ ನಾವು ಕಾಣಿಕೆಯನ್ನು ಕೊಡುವದು ನ್ಯಾಯವೂ ಅವಶ್ಯವೂ ಆಗಿದೆ.

ಒಳ್ಳೇದು, ದೇವರಿಗೆ ನಾವು ಸಮರ್ಪಿಸಬೇಕಾದ ಕಾಣಿಕೆ ಯಾವದು? ಎಂಥಾ ಕಾಣಿಕೆಯು ಆತನನ್ನು ಮೆಚ್ಚಿಸುತ್ತದೆ. ಅದೆಷ್ಟು ಬೆಲೆಯುಳ್ಳದ್ದಾಗಿರಬೇಕು? ನಾವು ಒಬ್ಬ ದೊಡ್ಡ ಮನುಷ್ಯನ ಬಳಿಗೆ ಹೋಗುವಾಗ ಅವರಿಗೆ ಯಾವ ಕಾಣಿಕೆ? ಎಷ್ಟು ಬೆಲೆಯುಳ್ಳದ್ದು ತೆಗೆದುಕೊಂಡು ಹೋಗಬೇಕೆಂದು ಯೋಚಿಸುತ್ತೇವೆಯಷ್ಟೆ. ದೇವರು ಮೆಚ್ಚುವ ಕಾಣಿಕೆ ಎಂಥಾದ್ದೆಂಬ ವಿಚಾರಿಸುವುದು ಉಚಿತವಾಗಿದೆ. ಈ ದೇಶದಲ್ಲಿ ಹಣ್ಣುಕಾಯಿಗಳನ್ನೂ, ಹೂವು, ಗಂಧ, ಕರ್ಪೂರಗಳನ್ನೂ ದೇವರಿಗೆ ಅರ್ಪಿಸುವುದು ವಾಡಿಕೆಯಾಗಿದೆ. ಇನ್ನೂ ಕೆಲವರಲ್ಲಿ ಕುರಿ, ಕೋಳಿ, ಕೋಣಗಳನ್ನು ಬಲಿ ಅರ್ಪಿಸುವ ವಾಡಿಕೆಯುಂಟು. ಇದು ದೇವರ ನಿಜಸ್ವಭಾವವನ್ನೂ ಗುಣಲಕ್ಷಣಗಳನ್ನೂ ಅರಿಯದೆ ಪಾಮರರು ಮಾಡುವ ಸೇವೆಯಾಗಿದೆ. ಹಣ್ಣುಕಾಯಿ ಕುರಿ ಕೋಣಗಳನ್ನು ದೇವರು ತಿನ್ನುವುದಿಲ್ಲವೆಂಬುದು ಸರ್ವರಿಗೂ ವ್ಯಕ್ತವಾಗಿದೆ. ಆತನು ಆತ್ಮಸ್ವರೂಪಿಯು. ಆತನನ್ನು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸಬೇಕು.

ಅಬ್ರಹಾಮನೆಂಬ ಒಬ್ಬ ಭಕ್ತನು ಸರ್ವಜ್ಞನೂ ಸರ್ವಶಕ್ತನೂ ದಯಾಳುವೂ ಆಗಿರುವ ಒಬ್ಬನೆ ನಿಜದೇವರನ್ನು ಸೇವಿಸುತ್ತಿದ್ದನು. ಇವನ ಸುತ್ತುಮುತ್ತಲ ಜನಗಳು ವಿಗ್ರಹಾರಾಧಕರಾಗಿ ಆ ವಿಗ್ರಹಗಳಿಗೆ ಪಶು ಮೊದಲಾದವುಗಳನ್ನು ಮಾತ್ರವಲ್ಲ ನರಮೇಧಗಳನ್ನು ಮಾಡುತ್ತಲೂ ಇದ್ದರು. ಕೆಲವರು ತಮ್ಮ ಸ್ವಂತ ಮಕ್ಕಳನ್ನೆ ಗುಡಿಯ ಮುಂದೆ ಬೆಂಕಿಯಲ್ಲಿ ಸುಡುತ್ತಿದ್ದರು. ಅಬ್ರಹಾಮನು ಇದನ್ನೆಲ್ಲಾ ನೋಡಿ—ಈ ಜನಗಳು ತಮ್ಮ ಪ್ರೀತಿಪಾತ್ರವಾದ ಮಕ್ಕಳನ್ನೇ ಈ ವಿಗ್ರಹಗಳಿಗೆ ಅರ್ಪಿಸುವುದಕ್ಕೆ ಸಿದ್ಧರಾಗಿದ್ದಾರೆ. ಸದ್ದೇವರ ಭಕ್ತನಾದ ನಾನು ನನ್ನಲ್ಲಿರುವ ಯಾವುದನ್ನಾದರೂ ದೇವರಿಗೆ ಕೊಡಲಿಕ್ಕಿಲ್ಲ ಎಂತ ಹಿಂದೆಗೆಯಬಹುದೆ? ನನ್ನ ಅತ್ಯಂತ ಪ್ರೀತಿಗೆ ಪಾತ್ರವಾದದ್ದೇನಾದರೂ ಆಗಲಿ ನನ್ನ ಸ್ವಂತ ಜೀವವೇ ಆಗಲಿ ಆತನಿಗೆ ಸಮರ್ಪಿಸುವುದು ನ್ಯಾಯವಾಗಿದೆ ಎಂತ ಯೋಚಿಸುತ್ತಿದ್ದನು. ಈತನಿಗೆ ಬಹುಕಾಲ ಮಕ್ಕಳಿಲ್ಲದಿದ್ದು ಮುಪ್ಪಿನಲ್ಲಿ ಹುಟ್ಟಿದ ಒಬ್ಬನೇ ಒಬ್ಬ ಮಗನಿದ್ದನು. ಅವನ ಹೊರತು ಆತನಿಗೆ ಹೆಣ್ಣುಮಕ್ಕಳಾಗಲಿ ಗಂಡು ಮಕ್ಕಳಾಗಲಿ ಇರಲಿಲ್ಲ. ಅಬ್ರಹಾಮನು ನನಗೆ ಒಬ್ಬನೆ ಗಂಡು ಮಗನಿದ್ದಾನೆ. ನನ್ನ ಪ್ರಾಣಕ್ಕಿಂತ ಅವನನ್ನು ಹೆಚ್ಚಾಗಿ ನಾನು ಪ್ರೀತಿ ಮಾಡುವುದು ದೇವರಿಗೂ ಗೊತ್ತಿದೆ. ನಾನು ತಿಂದು ತೇಗಿ ಮಿಕ್ಕದ್ದನ್ನು ದೇವರಿಗೆ ಕೊಡುವದು ಬಹು ಸಾಧಾರಣ. ನನಗಿಂತಲೂ ಹೆಚ್ಚಾಗಿ ನಾನು ಆತನಿಗೆ ಋಣಿಯಾಗಿರುವಲ್ಲಿ ಒಕ್ಕುಮಿಕ್ಕದ್ದನ್ನು ಕೊಡುವುದು ಸರಿಯೆ? ನನ್ನ ಮಗನನ್ನೇ ಆತನಿಗೆ ಯಜ್ಞವಾಗಿ ಅರ್ಪಿಸುವೆನೆಂದು ತೆಗೆದುಕೊಂಡು ಒಂದು ಪರ್ವತವನ್ನೇರಿ ಅಲ್ಲಿ ಕಾಷ್ಟವನ್ನು ಒಟ್ಟಿ ಅದರ ಮೇಲೆ ಮುದ್ದು ಮಗನನ್ನು ಹತ್ತಿಸಿ ವಧೆಮಾಡಲಿಕ್ಕೆ ಕತ್ತಿಯನ್ನು ಎತ್ತಲು ದೇವರು ಎಲೈ ಅಬ್ರಹಾಮನೆ ನಿನ್ನ ಸರ್ವಶ್ರೇಷ್ಠವಾದ ಮಗನನ್ನು ನನಗ ಅರ್ಪಿಸಬೇಕು ಎಂಬ ಅಭಿಲಾಷೆ ನಿನ್ನಲ್ಲಿ ಹುಟ್ಟಿದ್ದು ನ್ಯಾಯವೆ? ನಾನು ನಿನ್ನ ಮಗನನ್ನು ಸ್ವೀಕರಿಸಿದ್ದೇನೆ. ಆದರೆ ಆತನನ್ನು ಕೊಂದು ದೇಹವನ್ನು ಸುಡಬೇಡ. ನನಗೆ ಬೇಕಾದಾಗು ಆಗಿಲ್ಲ. ಆತನನ್ನು ನೀನು ವಿದ್ಯಾಬುದ್ಧಿಗಳಲ್ಲಿ ಶಿಕ್ಷಿತನನ್ನು ಮಾಡಿ ನಾನು ಮೆಚ್ಚುವ ಸತ್ಯ ನೀತಿ ಪರೋಪಕಾರ ಪವಿತ್ರತೆಗಳನ್ನು ಕಲಿಸು. ಅವನು ಈ ಲೋಕದಲ್ಲಿ ಬಹಳಕಾಲ ಬದುಕಿ ಸಕಲರಿಗೂ ಮೇಲ್ಪಂಕ್ತಿಯಾಗಿರಲಿ. ಅವನ ಉತ್ತಮೋತ್ತಮವಾದ ನಡತೆಯು ಸಕಲರಿಗೂ ನನ್ನನ್ನು ಪ್ರಕಟಪಡಿಸಲಿ. ಹೀಗೆ ಅವನ ಮುಖಾಂತರ ಅನೇಕರು ನನ್ನನ್ನು ತಿಳಿದು ನನ್ನವರಾಗಿರುವುದೆ ಅದರ ಕುಮಾರನೆಯು ನನಗೆ ಪರಮೋತ್ತಮವಾದ ಬಲಿಯಾಗುವುದು. ಇಂಥಾ ಕಾಣಿಕೆಯನ್ನಲ್ಲದೆ ಪ್ರಾಣಹತ್ಯವನ್ನು ಮಾಡುವುದು ನನಗೆ ಬೇಕಿಲ್ಲ. ನೀತಿವಂತರೂ ಸತ್ಯವಂತರೂ ಪಾಪಭೀತರೂ ಪರೋಪಕಾರಿಗಳೂ ಆಗಿ ಮಾನವರು ಬದುಕುವುದೆ ನಾನು ಮೆಚ್ಚುವ ಕಾಣಿಕೆ ಎಂದು ನುಡಿದನಂತೆ. ದೇವರು ಮೆಚ್ಚುವ ಕಾಣಿಕೆ ಇದೇ ಅಲ್ಲವೆ?

ತಾಲ್ಲೋಕು ವರ್ತಮಾನಗಳು.

ಚಿಕ್ಕಬಳ್ಳಾಪುರ.—ಈ ಊರಿನಲ್ಲಿ ಟಪ್ಪಾಲು ವ್ಯವಸ್ಥೆ ಚೆನ್ನಾಗಿದೆ. ಪುರದ ಭಾವಿಯ ನೀರು ಕೆಟ್ಟುಹೋಗಿರುತ್ತೆ. ಆ ಭಾವಿಯ ನೀರನ್ನು ಕುಡಿಯುವ ಜನಗಳಿಗೆ ಆಗಬೇನೇ ನಾರು ಹುಣ್ಣು ಎಂಬ ಅಂಟು ರೋಗವು ಉಂಟು ಆಗಿರುತ್ತೆ. ಈ ವಿಷಯವನ್ನು ಮೆಡಿಕಲ್ ಡಿಪಾರ್ಟುಮೆಂಟಿನವರು ತುಂಬಾ ನಿಗಾ ಕೊಡು ತಕ್ಕ ಏರ್ಪಾಡನ್ನು ಮಾಡ್ತಾರೆಂದು ನಂಬಿದ್ದೇನೆ.—ವೇ. ಗುರಾಣದ ಗುರುಬಸವಯ್ಯಾರಾಧ್ಯರು ತಮ್ಮ ಎರಡು ಜನ ಗಂಡುಮಕ್ಕಳ ಲಗ್ನವನ್ನೂ ಬಹಳ ವಿಜೃಂಭಣೆಯಿಂದಲೂ ಉಟ್ಸಾಹದಿಂದಲೂ ಜನಗಳೆಲ್ಲ ಸಂತೋಷಪಡುವಹಾಗೆ ನಡೆಸಿದರು. ತಮ್ಮ ಮಠದ ಜನಗಳಿಗೂ ಮತ್ತು ಇತರ ಊರಿನ ಜನಗಳಿಗೂ ಭೋಜನ ಮಾಡಿಸಿ ತೃಪ್ತಿಪಡಿಸಿದರು.

ಕೊಪ್ಪ.—ಬಿಸಿಲಿನ ಝಳವು ದಿನೇ ದಿನೇ ಹೆಚ್ಚುತ್ತಾ ಬರುತ್ತಿದೆ. ಈಗ ೧೫ ದಿವಸಗಳಿಂದ ಆಕಾಶದಲ್ಲಿ ಮೋಡವೂ ಬಿಸಿಲೂ ಅತಿರೇಕವಾಗಿ ಪ್ರಬಲಿಸಿಕೊಂಡಿರುವುದರಿಂದ ಎಲ್ಲಿ ನೋಡಿದರೂ ಜ್ವರದ ಕಾಯಿಲೆಯು ಇದ್ದೇ ಇರುತ್ತೆ. ಇಲ್ಲಿ ನೀರಿಗೆ ತುಂಬಾ ಅನುಕೂಲವಾಗಿದ್ದರೂ ರೈತರು ಬಿತ್ತನೆ ಕೆಲಸವನ್ನು ಪ್ರಾರಂಭಿಸಲು ಮಳೆಯನ್ನೇ ಎದುರುನೋಡುತ್ತಿದ್ದಾರೆ. ಈ ಮಾಹೆ ೧ ನೇ ತಾರೀಖು ಗುರುವಾರದ ದಿವಸ ಸ್ವಲ್ಪ ಮಳೆ ಸುರಿಯಿತು.—ಇಲ್ಲಿ ವಾರದ ಮೊದಲನೇ ದಿವಸ (ಭಾನುವಾರ) ಸಂತೆಯು ನಡಿಯುತ್ತದೆ. ದಿನಸಿನ ಧಾರಣೆಯು ಕ್ಷಾಮವನ್ನೇ ಎದುರು ನೋಡುವುದು. ಅಕ್ಕಿ ರೂಪಾಯಿಗೆ ೭—೭॥ ಸೇರಿನಂತೆಯೂ, ರಾಗಿ ೧೧ ಸೇರಿನಂತೆಯೂ ವಿಕ್ರಯವಾಗುವುದು ನೋಡಿದರೆ ಬಡಬಗ್ಗರ ಜೀವನೋಪಾಯವು ಯಾವ ರೀತಿ ನಡಿಯುವುದೋ ಎಂದು ಯೋಚನೆ ಮಾಡುತ್ತಿದ್ದಾರೆ.—ಜನರ ಉಪಯೋಗಾರ್ಥವಾಗಿ ಮುನಿಸಿಪಾಲಿಟಿಯವರು ದೀಪದ ಕಂಬಗಳನ್ನು ಇಟ್ಟಿರುವುದು ಸರಿಯಷ್ಟೆ. ಇದಕ್ಕೆ ಕಡಮೆ ಕ್ರಯದ ಎಣ್ಣೆಯನ್ನು ಹಾಕಿ ಹಚ್ಚುವುದರಿಂದ ಕೃಷ್ಣಪಕ್ಷದ ಚಂದ್ರನಂತೆ ಉರಿಯುತ್ತಿರುವುದನ್ನು ಮೇಲ್ಪಟ್ಟ ಅಧಿಕಾರಸ್ಥರು ಪರಾಂಬರಿಸಿ, ಶುಕ್ಲಪಕ್ಷದ ಚಂದ್ರನಂತೆ ಮಾಡಿಸುವರೆಂದು ಹಾರೈಸುತ್ತೇನೆ.—ಇಲ್ಲಿನ ಪೋಸ್ಟು ಮಾಸ್ಟರು ಬಹಳ ಮುತುವರ್ಜಿಯಿಂದಲೂ ಮೆಹನತ್ತಿನಿಂದಲೂ ಕೆಲಸಮಾಡುತ್ತಾರೆಂದು ತಿಳಿಸಲು ಬಹಳ ಸಂತೋಷಪಡುವೆನು. ಇಲ್ಲಿಯ ಪೋಸ್ಟು ಆಫೀಸಿಗೆ ಎದುರುಗಡೆ ಇರುವ ತಂತಿ ಕಂಬವು ರಾತ್ರಿಕಾಲದಲ್ಲಿ ಆಫೀಸಿಗೆ ಬರತಕ್ಕ ಜನಗಳಿಗೆ ಅಪಾಯಮಾಡುವ ಹಾಗಿದೆ. ಅಧಿಕಾರಸ್ಥರು ತಂತಿ ಕಂಬವನ್ನು ಪರೀಕ್ಷಿಸಿ ಕಂಬದ ಮುಕ್ಕಾಲು ಭಾಗಕ್ಕೆ ಸುಣ್ಣವನ್ನಾಗಲೀ ಜೇಡಿಯನ್ನಾಗಲೀ ಬಳಿಸಿದರೆ ಅಂಥಾ ಅಪಾಯಕ್ಕೆ ಯಾರೂ ಗುರಿಯಾಗಲಾರರೆಂದು ಹಾರೈಸುತ್ತೇನೆ.—ಬರುವ ವೈಶಾಖ ಶುದ್ಧ ನವಮಿ ಬುಧವಾರ ಈ ಊರಿನ ಹಿಂಬ್ಲಾಪುರದ ದುರ್ಗಾಮ್ಮನವರ ರಥೋತ್ಸವವು ನಡಿಯುವುದೆಂದೂ, ಅಗ್ನಿ ಸಾವಿರಾರು ಜನರು ಬರುವರ ದೂ [illegible] ಈ ಬಗೆ ಸ್ಥಳೀಯ ಪೋಲೀಸಿನವರು ಗಲಾಟೆ ಜಗ ದೊಂಬಿ ನಡಿಯದಂತೆ ನಿಗಾ ಇಡುವರೆಂದು ನಂಬಿರುತ್ತೇನೆ.

ಚಿತ್ರದುರ್ಗ.—ಇಲ್ಲಿ ಚಳಿಯ ಎನ್ನು ಮುಂತಾದ ಜಾಡ್ಯಗಳು ಮೇವು ನೀರಿಲದೆ ಸಾಯುತ್ತಿದ್ದವು. ಕಾಲರೆಂಬ ಮಾರಿಗೆ ದೊಡ್ಡ ರೋಗವು ತಲೆಹಾಕಿ ಅನೇಕ ಪ್ರಾಣಿಗಳನ್ನು ಕೊಂದುಹಾಕುತ್ತಿದೆ. ಇದನ್ನು ತಿಳಿದು ಇಲ್ಲಿನ ಸರಕಾರಿ ಪಶುವೈದ್ಯರಿಂದ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರೂ ಮತ್ತು ಅಮಲ್ದಾರರೂ ಮುಂತಾದವರು ರೋಗನಿವಾರಣಾರ್ಥವಾದ ಔಷಧವನ್ನು ಹಾಕಿಸಿದರಿಂದ ಅವರ ದನಕರುಗಳಲ್ಲಿ ಈ ರೋಗ ವ್ಯಾಪಿಸಲಿಲ್ಲವಾಗಿಯೂ, ಈ ದೊಡ್ಡ ಮನುಷ್ಯರು ಬಾಕಿ ಜನಗಳಿಗೆ ಒಳ್ಳೇ ಮೇಲ್ಪಂಕ್ತಿ ಹಾಕಿಕೊಟ್ಟಂತೆಯೂ ಪಶುವೈದ್ಯರೇ ಹೇಳುತ್ತಾರೆ. ಇತರ ಜನಗಳು ಸಕಾಲಕ್ಕೆ ಸರಿಯಾಗಿ ರೋಗನಿವಾರಣಾರ್ಥಕ ಔಷಧವನ್ನು ಹಾಕಿಸುವದೂ ಇಲ್ಲ. ರೋಗ ಬಂದ ಕೂಡಲೇ ಅವುಗಳನ್ನು ಬೇರೆ ಸ್ಥಳವಾಗಿರುವ ದನಗಳಿಂದ ಪ್ರತ್ಯೇಕಿಸುವದೂ ಇಲ್ಲ. ದನಗಳ ಕೊಟ್ಟಿಗೆಗಳೆಂದರೋ ಸಗಣಿ ಗಂಜಳಗಳ ನಾತದಿಂದ ದುರ್ವಾಸನೆ ಬಡಿಯುವದರಿಂದ ಅಲ್ಲಿ ಮನುಷ್ಯರು ಅಡ್ಡಾಡಲಿಕ್ಕಾಗುವದಿಲ್ಲ. ರೋಗ ಬಂದ ಕೂಡಲೆ ತಕ್ಕ ಚಿಕಿತ್ಸೆ ಮಾಡಿಸದೆ ತಮಗೆ ತಿಳಿದದ್ದೂ ಇನ್ನು ಕೆಲವರು ಮೂಢರು ಹೇಳಿದ್ದೂ ಕೆಲಸ ಮಾಡುತ್ತಿದ್ದು, ಅನಂತರ ತೀರ ಸನ್ನಿಪಾತದ ಮೇಲೆ ಪಶುವೈದ್ಯರ ಬಳಿಗೆ ಒಂದರೆ ಅವರು ಏನು ಮಾಡುವರು? ಇನ್ನು ಮುಂದೆಯಾದರೂ ಎಚ್ಚರಿಕೆಯಿಂದ ರೋಗನಿವಾರಣಾರ್ಥಕವಾದ ಏರ್ಪಾಡನ್ನು ಈ ಮೂಗುಬೇಡಿಗಳಲ್ಲಿ ಮಾಡಬೇಕಾಗಿದೆ.—ಇಲ್ಲಿನ ನೀರು ಬಹಳ ಕಡಮೆಯಾಗಿಯೂ, ಕೆಡಗಿಯೂ ಪಾಚಿ ತುಂಬಿದೆ. ಅದನ್ನೇ ಯಂತ್ರಗಳ ಮೂಲಕ ಎತ್ತಿ ಊರಿಗೆ ಒದಗಿಸುತ್ತಾರೆ.—ಸರಕಾರದ ರಿಲೀಫ್ ಕಾಮಗಾರಿಯಿಂದ ಊರಿಗೆ ಸಮೀಪವಾಗಿರುವ ಕಾಮನ ಬಾವಿಯನ್ನು ಹೂಳೆತ್ತಿಸಿ ಜನಗಳಿಗೆ ಕುಡಿಯುವ ನೀರನ್ನು ಒದಗಿಸಬೇಕೆಂಬ ಪ್ರಯತ್ನವು ಜರುಗುತ್ತಾ ಇದೆ. ಇದನ್ನು ತಳದವರೆಗೂ ಚನ್ನಾಗಿ ಶೋಧಿಸಿ ಕೊಚ್ಚೆ ಸೊಪ್ಪು ಸದೆ ಪುನಃ ಅದಕ್ಕೆ ಬೀಳದಂತೆ ಕಾಪಾಡಿದರೆ ಪ್ರಯೋಜನವಾಗಿರುವುದು.—ಸುಬ್ರಹ್ಮಣ್ಯಚಾರ್ ಎಂಬ ಸುಮಾರು ೧೪ ವಯಸ್ಸಿನ ವಿದ್ಯಾರ್ಥಿಯೊಬ್ಬನು ಎಲ್ಲಿಯೋ ತಪ್ಪಿಸಿಕೊಂಡು ಹೋಗಿ ಇಲ್ಲಿಗೆ ಸುಮಾರು ಒಂದೂವರೆ ತಿಂಗಳಾಯಿತು. ಇವನು ಮಾಧ್ವ ಬ್ರಾಹ್ಮಣ. ಶಿಡುಬು ಎದ್ದಿದ್ದ ಗುರುತು ಮುಖದಲ್ಲಿ ಕಾಣಬರುತ್ತಿದೆ. ಇಂಥ ಹುಡುಗನ ಸುಳಿ ತಿಳಿದ ಮಹನೀಯರು ಸದರೀ ಹುಡುಗನ ಅಣ್ಣನಾದ ಚಿತ್ರದುರ್ಗದ ಎ. ವಿ. ಸ್ಕೂಲ್ ಮಾಸ್ಟರ್ ಪುಟ್ಟಾಚಾರ್ರಿಗೆ ತಿಳಿಸಿದರೆ ಬಹಳ ಉಪಕಾರಮಾಡಿದಂತಾಗುವದು.—ಕೆಲವು ಜನಗಳೇ ಮುಂತಾದವುಗಳನ್ನು ಕದ್ದು ಕೆಲವು ತಿಂಗಳ ಹಿಂದೆ ಬಿಟ್ಟಿದ್ದ ಗುಹೆಗಳಲ್ಲಿ ಬಚ್ಚಿಟ್ಟುಕೊಂಡಿದ್ದ ಕಳ್ಳನನ್ನು ಈಚೆಗೆ ಹಿಡಿದರೆಂಬಲ್ಲಿ. ಇವನನ್ನು ಹಿಡಿಯುವವರಲ್ಲಿ ಹಜೀಂ ಎಂಬ ಹಗಲು ದೀವಟಿಗೆ ಗಂಡಿಯುವನು ಬಹಳ ಸಾಹಸಪಟ್ಟನೆಂತಲೂ ವರ್ತಮಾನವಿದೆ.

ನಂಜನಗೂಡು.—ಇಲ್ಲಿ ಬಿಸಿಲಿನ ಝಳವು ಬಹು ಹೆಚ್ಚಾಗಿರುತ್ತದೆ. ಪಟ್ಟಣಕ್ಕೆ ಶವ ಆರೋಗ್ಯವಾಗಿದೆ. ಕಳೆದ ೩ನೇ ತಾರೀಖು ಶುಕ್ರವಾರ ಸಮಯ ಶ್ರೀಯಲ್ಲಿ ಮೊದಲು ವಿಶೇಷವಾದ ಬಿರುಗಾಳಿಯು ಎದ್ದಿತು. ತರುವಾಯ ೧॥ ಗಂಟೆಯಲ್ಲಿ ಒಂದು ಹದ ಒಳ್ಳೇ ಮಳೆಯಾಯಿತು. ಅಲ್ಲಲ್ಲಿ ಕೆರೆ ಕುಂಟೆಗಳಿಗೆ ತಕ್ಕಮಟ್ಟಿಗೆ ನೀರು ಬಂದಿವೆ. ರೈತರೇ ಮೊದಲಾಗಿ ಜನರು ಹಸನ್ಮುಖಿಗಳಾಗಿ ಉಲ್ಲಾಸದಿಂದ ಉಳುಮೆಯ ಕೆಲಸಗಳನ್ನು ಮಾಡುತ್ತಾ ಇದ್ದಾರೆ.—ಟವುನ್ ಸುತ್ತುಮುತ್ತ ತಿಪ್ಪೆ ಗುಂಡಿಗಳು ಹೆಚ್ಚಾಗಿವೆ. ಜನರಿಗೆ ಎಚ್ಚರಿಕೆಯನ್ನೂ ಬುದ್ಧಿವಾದವನ್ನೂ ಹೇಳಿ ಸ್ವಲ್ಪ ದೂರದಲ್ಲಿ ತಿಪ್ಪೆಗುಂಡಿಗಳನ್ನು ಮಾಡಿಕೊಳ್ಳುವಂತೆಯೂ, ಜನರು ಸಿಕ್ಕಿದ ಸ್ಥಳಗಳಲ್ಲಿ ಮಲ ಮೂತ್ರ ವಿಸರ್ಜನೆ ಮಾಡುತ್ತಾ ಇರುವದ್ದರಿಂದ ಕೆಲವು ಕಡೆ ಪಬ್ಲಿಕ್ ಕಕ್ಕಸುಗಳನ್ನು ಕಟ್ಟಿಸಿ ಇನ್ನು ಮುಂದೆ ಸಿಕ್ಕಿದ ಎಡೆಗಳಲ್ಲೆಲ್ಲಾ ಹೇಸಿಕೆ ಮಾಡುವುದನ್ನು ತಪ್ಪಿಸುವಂತೆಯೂ ಮುನಿಸಿಪಾಲಿಟಿಯವರು ನಿಗಾ ಕೊಟ್ಟರೆ ತುಂಬಾ ಪ್ರಯೋಜನವಾಗುವುದು.—ಬೆಂಗಳೂರು ಮುಂತಾದ ಸ್ಥಳಗಳಲ್ಲಿ ಮಾಂಸ ಮಾರುವ ಖಟೀಕರು ಹಿಂದಣ ದಿನ ಸಾಯಂಕಾಲ ಕುರಿಗಳನ್ನು ಕೊಯಿದು ಹಾಗೆಯೇ ತೂಗಹಾಕಿ ಮರುದಿನ ಬೆಳಿಗ್ಗೆ ಹೆಲ್ತ್ ಆಫೀಸರ ಅಪ್ಪಣೆಪಡೆದು ವಿಕ್ರಯಿಸುವುದು ರೂಢಿಯಲ್ಲಿರುತ್ತದೆ. ಹಾಗಿಲ್ಲದೆ ಕೊಯಿದ ದಿನವೇ ಮಾರಿದರೆ ಜುಲ್ಮಾನೆ ವಿಧಿಸುತ್ತಾರೆ. ಹಾಗೆ ಮಾಡುವುದು ಪ್ರಯೋಜನವೂ, ಆರೋಗ್ಯವೂ ಆಗಿರುತ್ತೆ. ಆದರೆ ಇಲ್ಲಿ ಹಾಗೆ ಮಾಡದೆ ಬೆಳಿಗ್ಗೆ ಕೊಯಿದು ಆಗಲೇ ವಿಕ್ರಯಿಸುತ್ತಾರೆ. ಇದು ತುಂಬಾ ಅನಾರೋಗ್ಯವೂ, ನಷ್ಟವೂ ಆಗಿದೆ. ಆದದ್ದರಿಂದ ಹೆಲ್ತ್ ಆಫೀಸರು ನಿಗಾಕೊಟ್ಟು ಬೆಂಗಳೂರು ಮುಂತಾದ ಕಡೆಗಳ ಏರ್ಪಾಡನ್ನು ಇಲ್ಲಿಯೂ ನಡೆಯುವ ಹಾಗೆ ಮಾಡುವದು ಒಳ್ಳೇದು.—ಕೆಲವು ದಿನಗಳ ಹಿಂದೆ ಮಾದಾಮಾರಿಯಲ್ಲಿ ಒಬ್ಬನನ್ನು ಕತ್ತಿಯಿಂದ ತಿವಿದಿದ್ದರು. ಆತನನ್ನು ಆಸ್ಪತ್ರೆಗೆ ತಂದಿದ್ದರು. ಆತನಿಗೆ ಉಪಚಾರಮಾಡಿಸಿಕೊಂಡು ಡೋಲಿಯಲ್ಲಿ ಹಿಂದಕ್ಕೆ ಹೊತ್ತುಕೊಂಡು ಹೋದರು.—ಕಳೆದ ವಾರ ಯಾರೋ ಒಬ್ಬ ಕ್ರೂರಾತ್ಮನು ಏನೋ ಕಾರಣದಿಂದ ಒಬ್ಬ ಹೆಂಗಸಿಗೆ ಕೈಕಾಲುಗಳ ಮೇಲೆ ಬರೆಯನ್ನು ಹಾಕಿದ್ದನು. ಆಕೆಯನ್ನು ಆಸ್ಪತ್ರೆಗೆ ತಂದಿದ್ದರು. ಇಲ್ಲಿನ ಡಾಕ್ಟರವರು ವಿಚಾರಣೆಗಾಗಿ ಆಕೆಯನ್ನು ಕೋರ್ಟಿಗೆ ಕಳುಹಿಸಿದರು. ಇಂಥಾ ಕಾಲದಲ್ಲೂ ಜನರು ತಮ್ಮ ಕಿರಾತ ನಡತೆಯನ್ನು ಬಿಡದೇ ಇರುವದು ತುಂಬಾ ಶೋಚನೀಯವೂ, ನೋಚನೀಯವೂ ಆಗಿದೆ.—ಕಳೆದ ವಾರ ರೈಲ್‌ವೆಯ ಇಬ್ಬರು ಪೋಲೀಸಿನವರಿಗೆ ರೈಲ್ ಗಾಡಿಯಲ್ಲಿ ವಾರಸುದಾರರು ಇಲ್ಲದಂಥ ಸುಮಾರು ೧೫೦ ರೂಪಾಯಿಗಳ ನಾಲುಗಳು ಸಿಕ್ಕಿದವು. ಅವರ ಹ್ಯಾಗಂದರೆ, ೭೫ ರೂಪಾಯಿ ನಗದು, ೨ ಅರ್ಧ ಸವರ್ಣಗಳು, ೧ ಬೆಳ್ಳಿಯ ಚಂಬು, ೧ ಕಂಪು, ಬಿಳೀ ರೇಷ್ಮೆಯ ಮಗುಟಗಳು, ೧ ಕಂಠಿ ಇವೇ. ಇವನ್ನು ಪೋಲೀಸಿನವರು ನಂಜನಗೂಡು ಸ್ಟೇಷನ್ ಮಾಸ್ಟರುಗಳಿಗೆ ತೋರಿಸಿ ಕ್ರಮವಾಗಿ ಬರೆಸಿ, ನಗದು ಹಣವನ್ನು ಡಿ. ಟಿ. ಎಸ್ ಯವರ ಆಫೀಸಿಗೆ ಪಾವತಿಮಾಡಿ, ಮಿಕ್ಕವುಗಳನ್ನು ತಮ್ಮಲ್ಲಿ ಇಟ್ಟುಕೊಂಡಿರುತ್ತಾರೆ. ಸರಿಯಾದ ವಾರಸುದಾರರು ಯಾರಾದರೂ ಇದ್ದರೆ ಅದಕ್ಕೆ ರುಜುವಾತು ಕೊಟ್ಟು ರೈಲ್‌ವೇ ಆಫೀಸರವರಿಂದ ಪಡೆಯಬಹುದು. ಈ ಸಂದರ್ಭದಲ್ಲಿ ಪೋಲೀಸಿನವರೂ, ಸ್ಟೇಷನ್ ಮಾಸ್ಟರುಗಳೂ ನಿರ್ವಂಚನೆಯಾಗಿಯೂ, ಯಥಾರ್ಥವಾಗಿಯೂ ತಮ್ಮ ಕರ್ತವ್ಯವನ್ನು ನೆರವೇರಿಸಿರುವದು ಸಂತೋಷಪ್ರದವಾಗಿದೆ. ಆ ಕಾನ್‌ಸ್ಟೇಬಲ್‌ಗಳಿಗೆ ತಕ್ಕ ಪ್ರೋತ್ಸಾಹವನ್ನು ಕೊಡುವದು ಉತ್ತಮ. ಹೀಗೆಯೇ ಇತರರೂ ಮಾಡುವಂತೆ ಉತ್ತೇಜನಪಡಿಸಿದಂತಾಗುವದು. ಇಂಥವರು ನಮ್ಮ ಮೈಸೂರು ಸೀಮೆಯ ಎಲ್ಲಾ ಕಡೆಗಳಲ್ಲೂ, ಎಲ್ಲಾ ಕಾಲಗಳಲ್ಲೂ ಹೆಚ್ಚುಟರೆ ಎಷ್ಟೋ ಪ್ರಯೋಜನವಾಗುವದು.—ಕಳೆದ ವಾರ ಈ ಊರಿನಲ್ಲಿ ನಡೆದ ಜಾತ್ರೆಗೆ ಬಾಸೆಲ್ ಮಿಷನ್ ಸಂಘದ ಉಪದೇಶಿಗಳೂ, ಸ್ತ್ರೀಯರೂ, ಪುಸ್ತಕ ಮಾರತಕ್ಕವರೂ ಬಂದು ನಾಲ್ಕಾರು ದಿನಗಳ ವರೆಗೆ ಇದ್ದು ಜನರಲ್ಲಿ ಸುವಾರ್ತೆಯನ್ನು ಪ್ರಸಂಗಮಾಡಿದರು. ಪುಸ್ತಕಗಳನ್ನು ವಿಕ್ರಯಮಾಡಿದ್ದಲ್ಲದೆ ಅನೇಕ ಚಿಕ್ಕಪತ್ರಿಕೆಗಳನ್ನು ಉಚಿತವಾಗಿ ಹಂಚಿದರು.

ಬಾತ್ಮೀದಾರರಿಗೆ ನೋಟೀಸು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಸಿ. ವಿ. ಜಿ.—ಕೋಲಾರ, ಮಿತ್ರ—ಹೊಸಕೋಟೆ.—ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇನೆ.

—ಎಡಿ.

ಕರೆಸ್ಪಾಂಡೆನ್ಸ್.

ತರೀಕೆರೆ ತಾಲ್ಲೂಕು ಬುಕ್ಕಾಂಬುದಿಯ ಕೆರೆಯು.

ಅಯ್ಯಾ,

ಈ ಬುಕ್ಕಾಂಬುದಿಯಲ್ಲಿ ಪುರಾತನವಾದ ಒಂದು ದೊಡ್ಡ ಕೆರೆ ಇದೆ. ಸುಮಾರು ನೂರಾರು ವರುಷದ ಹಿಂದೆ ಅದರ ಮಧ್ಯೆ ಒಡೆದು ಮುರಿದಾಗಿದೆ. ಪಶ್ಚಿಮ ಕಡೆಯಲ್ಲಿ ಒಂದೇ ಒಂದು ತೂಬು ಇರುವದು ಶಿಕಸ್ತಾಗಿ ಇದೆ. ಈ ಕೆರೆಯ ಕೆಳಗೆ ೪-೫ ಸಾವಿರ ರೂಪಾಯಿನ ತರಿ ಬಾಗಾಯಿತು ಇದೆ. ಸದರಿ ಜಮೀನ್‌ದಾರರು ಆಸ್ ಪಾಸ್ ೧೬-೧೫ ಗ್ರಾಮಗಳಲ್ಲಿ ವಾಸವಾಗಿದ್ದು, ವರುಷ ಒಂದಕ್ಕೆ ೧-೨ ದಫಾ ಗ್ರಾಮಕ್ಕೆ ಬಂದು ವಿಚಾರಿಸಿ ತಾತ್ಕಾಲಿಕ್ಕೆ ಬಂದಷ್ಟು ಪ್ರಯೋಜನಮಾತ್ರ ಹೊಂದುತ್ತಾ, ಕಂದಾಯದ ವಸೂಲಿ ವಗೈರೆ ಕಾಲದಲ್ಲಿ ತುಂಬಾ ಗಲಿಬಿಗೆ ತಂದು, ತಮ್ಮ ಆಸ್ತಿಗಳನ್ನು ಕಳಕೊಳ್ಳುತ್ತಾ, ಗ್ರಾಮದ ನಡವಳಿಕೆಗೆ ಕುಂದಕಪಡಿಸಿದಾರೆ. ಕೆಲವರು ಗ್ರಾಮದಲ್ಲಿ ಹಾಜರಿದಾರೆ. ಸರ್ಕಾರದವರು ದಯವಿಟ್ಟು ಈ ಕೆರೆಗೆ ೨ ವರುಷಗಳ ಕೆಳಗೆ ಸುಮಾರು ೧೦ ೧೫ ಸಾವಿರ ರೂಪಾಯಿ ಕಾಮಗಾರಿ ಮಾಡಿಸಿದಾರೆ. ಅಲ್ಲದೆ ಮಾಹೆಯಾನ ೮ ರೂಪಾಯಿ ಸಂಬಳದ ಒಬ್ಬ ನೌಕರನನ್ನು ಮೊಕರೂರು ಮಾಡಿ ಸಂಬಳ ಕೊಡುತ್ತಾ ಇದಾರೆ. ಈ ನೌಕರನಿಗೆ ಯಾವಕೆಲಸಕ್ಕೋಸ್ಕರ ಸಂಬಳ ಸಲ್ಲುತ್ತದೋ ಗೊತ್ತಾಗುವದಿಲ್ಲ. ಈ ಕೆರೆಯ ತೂಬು ದುರಸ್ತು ವಿಷಯದಲ್ಲಿ ಚರ್ಚೆಗೆ ಬಂದು ಬಾಕಿ ಇದೆ. ಈ ಸಾಲಿನಲ್ಲಿ ಮಳೆಯಿಲ್ಲದೆ ಕೆರೆಯಲ್ಲಿ ನೀರು ಪಾಲಿ ಹೋಗುವದು ೪-೫ ಅಡಿ ಇರಬಹುದು. ಈಗಲೂ ತೂಬು ದುರಸ್ತಿಗೆ ಒಳ್ಳೇ ಸಮಯವಾದದ್ದರಿಂದ ಗವರ್ನ್‌ಮೆಂಟಿನವರು ಶೀಘ್ರವಾಗಿ ಅಜಮಾಯಿಷಿ ಮಾಡಿಸತಕ್ಕ ಬಗ್ಗೆ ತಾಲ್ಲೂಕು ಮತ್ತು ಡಿಸ್ಟ್ರಿಕ್ಟುಗಳಿಗೆ ಗ್ರಾಮಸ್ಥರು ಕೇಳಿಕೊಂಡಿರುವಂತೆ ಜಾಹಿರಾತಿಗೆ ತರಬೇಕು. ಶಿವನಿ ರೈಲ್‌ವೆ ಸ್ಟೇಷನ್‌ಗೆ ಪಶ್ಚಿಮಕ್ಕೆ ೫ ಮೈಲಿಯಲ್ಲಿ ಈ ಗ್ರಾಮ ವ ಕೈ ಕೆರೆ ಇದೆ.

ನಿಮ್ಮ ಪತ್ರಿಕಾ ವಾಚಕ

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

2 15

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೀಟಿ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಒಳ್ಳೆ ರಂಗು ಹೋಗುವದಿಲ್ಲ. ಕಿರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಕೆನಡಾದಲ್ಲಿ ಪೆರೂನಾ ಸೇವನ ಮಾಡುವ ಒಂದಾನೊಂದು ಸಂಸಾರವು.

7 11

ಪೆರೂನಾವನ್ನು ಸಕಾಲದಲ್ಲಿ ಕೆಲವು ತೂತ್ತುಕೊಟ್ಟರೆ ದೊಡ್ಡ ಕಾಯಿಲೆಗಳನ್ನೆಲ್ಲಾ ಅದು ನಿವಾರಣೆ ಮಾಡಬಲ್ಲದೆಂದು ಮಕ್ಕಳುಳ್ಳ ಅನೇಕ ಸ್ತ್ರೀಯರು ಕಂಡುಕೊಂಡಿರುತ್ತಾರೆ.

ಮಿಸೆಸ್ ಎಟ್ಟ ಬೂಕರ್ ದಂಡರ್, ನಸ್ಸಿ ಎನ್ ಡಬ್ಲಿಯು ಟಿ ಕ್ಯಾನ್, ಈಕೆ ಬರೆಯುವುದು — ನನ್ನ ದೇಹದೊಳಗೆ ಕ್ಷಿತ್ಯರೋಗವು ಹುಟ್ಟಿ ನರಳಿದೆನು ಕಡೆಗೆ ಡಾ|| ಹಾರ್ಟ್ ಮನ್ ರನ್ನು ಕರೆಸಿಕೊಂಡು ಅವರು ಹೇಳಿದ ಔಷಧವನ್ನು ಸೇವನೆ ಮಾಡಿದ್ದರಿಂದ ನನ್ನ ಕೆಟ್ಟ ರೋಗವು ನಿವಾರಣೆಯಾಯಿತು ಇದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞಳಾಗಿರುತ್ತೇನೆ ಕ್ಷಿತ್ಯರೋಗಕ್ಕೆಲ್ಲಾ ಪೆರೂನಾ ಉತ್ತಮೋತ್ತಮವಾದ ಔಷಧವೆಂದು ನನಗೆ ತೋರುವುದು ಈಗ ನನಗಿರುವಷ್ಟು ಸ್ವಸ್ಥತಾ ಲವಲವಿಕೆಯೂ ಹಿಂದೆ ಯಾವಾಗಲೂ ಇರಲಿಲ್ಲ

ಮಿಸೆಸ್ ಬೂಕರ್ ಬರೆದಿರುವ ಇನ್ನೊಂದು ಕಾಗದದಲ್ಲಿ ಆಕೆ ಹೇಳುವುದೇನೆಂದರೆ — ಪೆರೂನಾ ಮಹಾ ಆಶ್ಚರ್ಯಕರವಾದ ಔಷಧವೆಂದು ಅನುಭವಪೂರ್ವಕವಾಗಿಯೂ ಯಥಾರ್ಥವಾಗಿಯೂ ಹೇಳಬಲ್ಲೆನು ನನ್ನ ಮಗಳು ಎಲ್ಲಿ ಬೂಕರಿಗೆ ಎಷ್ಟು ವಿಸ್ಟಿಗೆ ಆರೋಗ್ಯವಾಗಬೇಕೆಂದು ನಾನು ಶೀಘ್ರ ಪ್ರೇಮ ಅಷ್ಟು ಒಳ್ಳೇದಾಯಿತು ಆದ್ದರಿಂದ ಅವಳಿಗೆ ಪಾಲಾದ ವಿಷಯವನ್ನು ನೀವು ಪ್ರಕಟಿಸಬಹುದೆಂದು ಧಾರಾಳವಾಗಿ ಹೇಳುತ್ತೇನೆ

ಶೀತವಾಯುವಿನಿಂದ ನನ್ನ ಮಗುವು ನರಳುತ್ತಿದ್ದ ಇದನ್ನು ಸೇವಿಸಿದಾರಭ್ಯ ಅದಕ್ಕೆ ಆರೋಗ್ಯವಾಯಿತು ಅದಕ್ಕೆ ಬಲ ಉಂಟಾಯಿತು ಅದು ಚಿತ್ರದಲ್ಲಿ ಸರಿಯಾಗಿ ಈಗ ಮಗುವನ್ನು ನೋಡಿದರೆ ಚಿತ್ರಕ್ಕೆ ಯೋಗ್ಯವಾದ ಮಗುವಿನಂತೆ ಸುಖವಾಗಿದೆ.

ಅಜೀರ್ಣವಿದ್ದ ಮಗು

ಮಿಸೆಸ್ ಜಿ ಎಂ ಬ್ರೌನ್ ಡನ್ನಿಂಗ್ ಮಿಸ್ಸೌರಿ, ಯು ಎಸ್ ಎ, ಈಕೆ ಬರೆಯುವುದು —

ಮೂರು ವರುಷದ ನನ್ನ ಹೆಣ್ಣುಮಗುವಿಗೆ ಶೀತದಿಂದ ಕೆಟ್ಟ ಕೆಮ್ಮು ಹುಟ್ಟಿ ಅದರ ಮೇಲೆ ಜ್ವರವೂ ಬಂದು, ರಾತ್ರಿ ಹೊತ್ತು ವಿಶೇಷವಾಗಿ ಬಹಳ ಸಂಕಟ ಪಡುತ್ತಿದ್ದಳು ... ಹಾಗೇ ... ಕೆಮ್ಮುವು ... ಆಪರೇಷನ್ ಮಗು ಎಲ್ಲಿ ಪ್ರಾಣಬಿಡುವುದೋ ಎನ್ನುವಷ್ಟು ಕಷ್ಟಪಡುತ್ತಿತ್ತು ನಾವು ಕೊಟ್ಟ ಬಹಳ ಔಷಧಗಳಿಂದಲೂ ಮಗುವಿಗೆ ಗುಣವಾಗಲಿಲ್ಲ ಆಗ ನಾನು ಡಾ ಹಾರ್ಟ್ ಮೆನ್ ರ ಜೀವಮಾನದಲ್ಲಿ ಬರುವ ರೋಗಗಳು ಎಂಬ ಪುಸ್ತಕವನ್ನು ಓದಬೇಕೆಂದು ತರಿಸಿದೆನು ಪುಸ್ತಕ ದೊರಕಿತು ಆಗಲೇ ಪೆರೂನಾ ವನ್ನು ಮಗುವಿಗೆ ಕೊಡಲಾರಂಭಿಸಿದೆನು ಒಂದೇ ಬಾಟ್ಲಿಯ ಔಷಧವನ್ನು ಕೊಟ್ಟೆನು ಇದರಿಂದ ಮಗುವು ಸಂಪೂರ್ಣ ಗುಣವಾಗಿದೆ

ಈ ಮಗುವಿಗೆ ಹುಟ್ಟಿದಾರಭ್ಯ ಅಜೀರ್ಣರೋಗ ವಿತ್ತು ಅದರೆ ಪೆರೂನಾ ತೆಗೆದುಕೊಳ್ಳುತ್ತಾ ಬಂದ ಮೇಲೆ ಯಾವ ತರಹ ಆಹಾರವನ್ನು ತಿಂದರೂ ಅದಕ್ಕೆ ಅಜೀರ್ಣ ಗುಣವಿಲ್ಲ ಈಗ ಈ ಮಗು ಚೆನ್ನಾಗಿ ಆರೋಗ್ಯವಾಗಿದೆ ನನ್ನ ನೆರೆಯವರು ನನ್ನ ಮಗು ಬಹಳ ಚನ್ನಾಗಿದೆ ಎಂದು ಹೇಳಿದರೆ ಅದೆಲ್ಲಾ ಪೆರೂನಾ ದಿಂದ ಆದದ್ದು ಎಂದು ನಾನು ಅವರಿಗೆ ಹೇಳುತ್ತೇನೆ ಕೆಮ್ಮಿಗೂ ಅಜೀರ್ಣಕ್ಕೂ ಪೆರೂನಾ ಬಿಟ್ಟರೆ ಇನ್ನಾವುದೂ ಪ್ರಯೋಜನಕರವಾದದ್ದಲ್ಲವೆಂದು ನನಗೆ ತೋರುತ್ತದೆ ಮತ್ತು ಈ ರೋಗಗಳನ್ನು ಅನುಭವಿಸುವವರಿಗೆಲ್ಲಾ ಪೆರೂನಾವನ್ನೆ ಸೇವಿಸುವ ಶಿಫಾರಸು ಮಾಡುತ್ತೇನೆ

ಮಗುವಿಗೆ ಪೆರೂನಾ ಮಾಡಿದ್ದು

ಮಿಸೆಸ್ ಸಿ ಟೀ ರೂದಿ ಸಿ ಕ್ಯಾಸಲ್ ಇಲ್ಲಿನಾಯ್ಸ್ ಯು ಎಸ್ ಎ ಈಕೆ ಬರೆಯುವುದು

ನಾನು ನಿಜವಾಗಿ ಆರೋಗ್ಯವಾಗಿದೇನೆ ಈ ಮಾತು ... ಸಂತೋಷ ನನ್ನ ಒಂದು ಮಗು ಐದು ತಿಂಗಳ ಜ್ವರವನ್ನು ಅನುಭವಿಸಿತು ... ಆಗಲಿಲ್ಲ ... ಅವರು ಕೊಟ್ಟ ಔಷಧದಿಂದ ಸ್ವಲ್ಪವೂ ಪ್ರಯೋಜನವಾಗಲಿಲ್ಲ

ಆಗ ನಾನು ಪೆರೂನಾ ಕೊಡಬೇಕೆಂದು ಅದು ಮಗುವಿಗೆ ಗುಣಕೊಟ್ಟಿತು ಇದುವರೆಗೆ ಆ ಮಗು ... ಕಾಡಿದ್ದು

"ನಾನು ಡಾ ಹಾರ್ಟ್ ಮೆನ್ ರಿಗೆ ಕಾಗದಾ ಬರೆದಾಗ ನನ್ನ ಮನೆ ಕೆಲಸಗಳನ್ನು ಮಾಡಲಾರದಷ್ಟು ... ಯಲ್ಲಿದ್ದೆನು ಈಗ ನಾನು ಸಂಪೂರ್ಣವಾಗಿ ಆರೋಗ್ಯ ಹೊಂದಿರುತ್ತೇನೆ."

ಅವರ ಹುಡುಗನ ಪ್ರಾಣವನ್ನು ಕಾಪಾಡಿತು

ಮಿಸೆಸ್ ಅರ್ನೆಸ್ ಹಾಕ್ಮತ್ ೧೭೦ ಚಾಪಲ್ ಬೀದಿ ದೆಸ್ ಮಾಯಿನಸ್ ಅಯೋವಾ, ಯು ಎಸ್ ಎ, ಈಕೆ ಬರೆಯುವುದು

- ಎರಡು ವರುಷಗಳ ಹಿಂದೆ ಹರ್ಮನ್ ಎಂಬ ನನ್ನ ಚಿಕ್ಕ ಹುಡುಗನಿಗೆ ಕೆಟ್ಟ ಜ್ವರ ಬಂದು ಬಿದ್ದುಕೊಂಡನು ಅದರ ಜೊತೆಗೆ ಚಳಿಯೂ ಬಂತು ಬೊಬ್ಬೆಗಳು ಮೈಮೇಲೆ ಕಾಣಿಸಿಕೊಂಡದ್ದಲ್ಲದೆ ಅವನ ಗಂಟಲಿಗೂ ಹೊಟ್ಟೆಗೂ ವ್ಯಾಪಿಸಿದವು ಕೆಲವು ವಾರಗಳ ತನಕ ನಾವು ಪ್ರತಿ ಗಂಟೆ ... ಬದುಕಲಾರನೆಂದು ನಿರೀಕ್ಷಿಸಿ, ಅವನ ... ಕಾದಿದ್ದೆವು ಕಡೆಗೆ ಅವನಿಗೆ ... ಯಾಗಿ ... ಚೇತರಿಸಿಕೊಳ್ಳುತ್ತಿದ್ದನು ಆಗ ಅವನಿಗೆ ಕೆಮ್ಮು ಕಾಣಿಸಿಕೊಂಡು ಏನು ಮಾಡಿದರೂ ನಿಲ್ಲದೆ ಕ್ಷಯಿಸುತ್ತಾ ಬಂದನು ಆ ಕೆಮ್ಮು ಬಹಳ ಕಠಿಣವಾಗಿಯೂ ತುಂಬಾ ದೀರ್ಘವಾಗಿಯೂ ಇದ್ದು ಅವನ ... ತೊಂದರೆಯನ್ನು ಬಹಳ ಕೊಡುತ್ತಿತ್ತು ಅವನಿಗೆ ಕ್ಷಯರೋಗವೆಂದು ಎಲ್ಲರೂ ಊಹಿಸಿದರು ಆಗ ನಾವು ಇತರ ಔಷಧಗಳನ್ನು ಬಿಟ್ಟು ಪೆರೂನಾವನ್ನು ಕೊಟ್ಟು ನೋಡೋಣವೆಂದು ಒಂದು ಬಾಟ್ಲಿಯನ್ನು ಕೊಂಡು ತಂದು ಅದರಲ್ಲಿ ಹೇಳಿರುವ ಕ್ರಮದಂತೆ ಕೊಡುತ್ತಾ ಬಂದೆವು ಎರಡು ಬಾಟ್ಲಿ ಪೆರೂನಾ ಸೇವಿಸಿದ ಮೇಲೆ ಅವನಿಗೆ ಚೆನ್ನಾಗಿ ಗಾಬರಿಯಾಯಿತು ಅಂದಿನಿಂದ ಈಚೆಗೆ ಅವನು ... ಕಾಯಿಲೆಯನ್ನು ಕಾಣದೆ ಆರೋಗ್ಯವಾಗಿಯೂ ... ಮನೆ ... ನಾವು ನಮ್ಮ ಪೆರೂನಾವನ್ನು ... ತ್ತೇವೆ ... ಅದು ನಮ್ಮ ಹುಡುಗನ ಪ್ರಾಣವನ್ನು ಉಳಿಸಿತು

ಕಾಯಿಲೆ ಬೀಳುವ ಮಕ್ಕಳು

ಮಿಸೆಸ್ ... ಆಫ್ ... ಯು ಎಸ್ ಎ ಈಕೆ ಬರೆಯುವುದು

- ... ವರುಷ ... ನಾಲ್ಕು ವರುಷದ ಮಗಳು ... ಹುಟ್ಟಿದಾರಭ್ಯ ಕಾಯಿಲೆ ಬೀಳುತ್ತಿದ್ದಳು ಬಹಳ ಕೃಶವಾಗಿದ್ದಳು ಅವಳಿಗೆ ಅಳ್ಳಕಟ್ಟು ನೋಯುತ್ತಿದ್ದು ... ಬಂದ ... ಕೊಟ್ಟರೂ ... ಕಾರಣದಿಂದ ಪೆರೂನಾ ಕೊಡ ಲಾರಂಭಿಸಿದೆನು ಅವಳಿಗೆ ಆರೋಗ್ಯವಾಯಿತು ಶಕ್ತಿ ಕೂಡಿಕೊಂಡಿತ್ತು ಪೆರೂನಾ ಬಲ ಕರವಾದ ಔಷಧವಾಗಿರುತ್ತದೆ ... ಅದು ... ವಾದ ಔಷಧವನ್ನು ನಾನು ಯಾವಾಗಲೂ ಉಪಯೋಗ ಮಾಡಿಲ್ಲ

ನಾನು ಕೂಡಾ ಬಹಳ ದುರ್ಬಲಳಾಗಿದ್ದೆನು ... ಪೆರೂನಾ ಸೇವಿಸಲಾರಂಭಿಸಿದೆನು ನನ್ನ ದೇಹವೆಲ್ಲಾ ಶೀತದಿಂದ ನಡುಗುತ್ತಿತ್ತು ... ಔಷಧವು ನನಗೆ ಆರೋಗ್ಯವನ್ನು ಕೊಟ್ಟದೆ ... ಔಷಧವ ... ಮಾಡಿಲ್ಲ

"ಪೆರೂನಾ ನನ್ನ ಮಗುವನ್ನು ಬದುಕಿಸಿತು ಅದಕ್ಕೆ ... ಬರುತ್ತಿತ್ತು ಈಗ ಈ ಮಗು ದೊಡ್ಡವನಾಗಿ ... ಬಳೊಂದು ಆರೋಗ್ಯವಾಗಿದೆ ... ಕೊಡುತ್ತಿದ್ದೆ ... ಆರೋಗ್ಯವಾಗಿದ್ದಾನೆಂದು ... ತೋರುವುದು ... ಹೋಗಿವರೂ ... ಪತ್ತೆ ... ಮಾಡತಕ್ಕದ್ದಾಗಿದೆ

ಮಗು ಈಗ ಆರೋಗ್ಯವಾಗಿದೆ

ಮಿಸೆಸ್ ಎ ... ಉ ಎಸ್ ಎ ಈಕೆ ... ಬರೆಯುವುದು —

... ತುಂಬಿತು ಈ ಮಗುವಿಗೆ ಮೂತ್ರಕೋಶವು ಕೆಟ್ಟಿದೆ ... ಮಗುವು ... ಈ ಮಗು ಮೂರು ನಾಲ್ಕು ತಿಂಗಳ ಕಾಲ ... ಒಂದು ಬಾಟ್ಲಿ ಪೆರೂನಾ ದಲ್ಲಿ ಸಲ್ಪ ಭಾಗವನ್ನು ಮಾತ್ರ ಕೊಡುವಷ್ಟರಲ್ಲಿ ... ಮಗುವಿಗೆ ಆರೋಗ್ಯವಾಗಿದೆ

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದವನ್ನು ಇವರಿಂದಲೇ ತಿಳಿಯಬಹುದು

ವಿಳಾಸ: ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ

ಮೆಸ್ಸರ್ಸ ಹಿಚ್ ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

12—3—1909 ರಿಂದ 1?—3—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	14	10	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	29	18	0	0
ಮೈಸೂರು ,,	32	21	3	2
ಕೋಲಾರ್ ,,	*	*	*	*
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	1	0	11	7
ಚಿತ್ರದುರ್ಗ ,,	0	0	0	0
ಕಡೂರ್ ,	4	1	14	9
ಶಿವಮೊಗ್ಗಾ ,	*	*	*	*
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	80	50	28	18

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಚೈತ್ರ ಶುದ್ಧ ತದಿಗೆ ಗುರುವಾರದಿಂದ ಚೈತ್ರ ಬಹುಳ ನವಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಏಪ್ರಿಲ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತೇದಿ ಕುಂಭ ಮಾಸ
8	ಗುರು §	ತದಿಗೆ	57 2	ಭರಣಿ	60 0	27
9	ಶುಕ್ರ	ಚೌತಿ	57 52	ಭರಣಿ	2 11	28
10	ಶನಿವಾ	ಪಂಚಮಿ	58 4	ಕೃ	5 51	31
11	ರವಿವಾ	ಷ	56 32	ರೋ	7 12	30
12	ಚಂದ್ರ	ಸಪ್ತಮಿ	53 57	ಮೃಗ	7 14	31
13	ಕುಜ	ಅಷ್ಟಮಿ	50 26	ಪುನರ್ವ	6 12	1
14	ಬುಧ	ನವಮಿ	46 2	ಉತ್ತರಾ	4 10	2

§ ವಿಘ್ನೇಶ್ವರ ಗೌರೀಪೂಜ

ಸಂಕಷ್ಟ ಚತುರ್ಥಿ

ವರಾಹಜಯಂತಿ ಸೌರಸಂವತ್ಸರಾರಂಭ ಚಿತ್ರವಿಷುಪುಣ್ಯಕಾಲ

ಪೇಟೆ ಧಾರಣೆ

ವಿವಸಿ		ಮೈಸೂರು	ಬೆಂಗಳೂರು
ನಂಬ್ರ ೧ ಅಕ್ಕಿ ಪಲ್ಲ ೧ ಕ್ಕೆ	ರೂ	೧೪ ೨ ೦	೧೫ ೨ ೦
ಕೆಂಪು ಅಕ್ಕಿ ಅವಲ್		೧೬ ೯ ೨	೧೭ ೨ ೦
ಮಧ್ಯ		೧೩ ೧೨ ೦	೧೭ ೦ ೦
ಜಾಪಾನ್ ಅಕ್ಕಿ		೧೩ ೨ ೦	೨೨ ೨ ೦
ಸಣ್ಣ ಅವಲ್		೧೭ ೦	೨೦ ೦ ೦
ಮಧ್ಯ		೧೫ ೧೨ ೦	೧೯ ೦
ತೊಗರಿ ಬೇಳೆ ಪಲ್ಲ ೧ಕ್ಕೆ		೧೭ ೮ ೦	೧೭ ೨ ೦
ಮಧ್ಯ		೧೭ ೨ ೦	೧೫ ೮ ೦
ಪ್ರೆಂಚ್ ರಾಗಿ ಪಲ್ಲ ೧ಕ್ಕೆ		೮ ೮ ೦	೯ ೨ ೦
ಕಾರಾಗಿ		೮ ೯ ೦	೮ ೨ ೦
ಜೋಳ		೮ ೧೨ ೦	೯ ೫ ೦
ಹುರುಳಿ ಪಲ್ಲ ೧ಕ್ಕೆ		೧೪ ೪ ೦	೧೨ ೮ ೦
ಎಳ್ಳು ಅವರೆ		೧೧ ೪ ೦	೧೧ ೦ ೦
ಹೆಸರು		೧೪ ೨ ೦	೧೧ ೮ ೦
ಉದ್ದು		೧೪ ೯ ೦	೧೨ ೭ ೦
ಕಡಲೆ		೧೬ ೯ ೦	೧೩ ೧೨ ೦
ಎಳ್ಳು ೧ಕ್ಕೆ		೨ ೮ ೦	೨೨ ೭ ೬
ಹುರುಳಿ		೧೨-೪ ೦	೧೨ ೦ ೦
ಹರಳು ...		೧೧ ೦ ೦	೧೦ ೧೨ ೦
ಸೀಗೇಕಾಯಿ ಮಣ ೧ಕ್ಕೆ		೧ ೭ ೦	೧ ೬ ೦
ಮೆಣಸಿನಕಾಯಿ		೫ ೮ ೦	೯ ೦ ೦
ಮಧ್ಯ		೫ ೨ ೦	೩ ೯ ೦
... ಉಪ್ಪು		೬ ೦	ಮ ೧ ೧ ೦
ಒಳ್ಳೆ ... ಮಣ ೧ಕ್ಕೆ		೨ ೨ ೦	೫ ೪ ೦
ಹರಳೆಣ್ಣೆ		೪ ೭	೪ ೯ ೦
ಕೊತ್ತುಂಬರಿ ಪಲ್ಲ ೧ಕ್ಕೆ		೬ ೧೨ ೦	೮ ೫ ೦
ಉಪ್ಪು		೫ ೮ ೦	೯ ೧೪ ೦
ಹುಣಸೇ ಹಣ್ಣು		೧ ೮ ೦	೧ ೬ ೦
ಹಳೇದು		೧ ೯	೧ ೪ ೦
ಕುಸುಬೆ ಮಣ ೧ಕ್ಕೆ		೧೫ ೭ ೦	೧೪ ೦ ೦
ಸೀಮೆಎಣ್ಣೆ ಪೆಟ್ಟಿ ೧ಕ್ಕೆ		೪-೧೨ ೦	೪-೭ ೦
ತೆಂಗಿನಕಾಯಿ ೧ ಕ್ಕೆ		೯ ೮-೦	೪ ೮ ೦
ಅಡಿಕೆಕಾಯಿ ಮಣ ೧ಕ್ಕೆ		೧ ೨ ೦	೧ ೩ ೦
ಅಂಟುವಾಳದ ಕಾಯಿ ಮಣ ೧ಕ್ಕೆ		೧ ೨ ೦	೧ ೯-೦
ಚಿನ್ನ (ಪೌನ್) ಕೆಂಪು		೧೫ ೬-೦	೧೫ ೭ ೦
,, ಪಾವು		೧೬ ೦ ೦	೧೫ ೧೦-೦
,, ,, ಗಟ್ಟಿ ತೊಲ ೧ಕ್ಕೆ		೨೪-೮ ೦	೨೪-೬ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೪ ೦	೬೩ ೪-೦

Printed and Published by the Rev H Gulliford Proprietor and Manager, Wesleyan Mission Press Mysore. 8/4/1909

REGISTERED M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸೆ ೧೯೦೯ ನೇ ಇಸವಿ ಏಪ್ರೆಲ್ ತಾರೀಖು ೧೫ ನೇ ಗುರುವಾರ. ಸಂಚಿಕೆ ೪೬

WILLIAM & Co FORT, BOMBAY

ಅಮೃತಾಂಜನ.

ಹಿಂದೂಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

[illegible] 3015

[illegible]

ಗುಹ್ಯರೋಗದ ಮುಲಾಮು.

[illegible]

ವಜ್ರಗುಟಿಕೆ.

[illegible]

ವಿಲಿಯಂ ಮತ್ತು ಕಂಪೆನಿ ಫೋರ್ಟು ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು ಅಮೃತಾಂಜನ ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರ ಬೇಗ ಒದೆದು ತರಿಸಿಕೊಳ್ಳಿ.

111

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ [illegible] ಹಾಸನದಿಂದಲೇ ಎಂದು [illegible]

[illegible]

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಜ್ವರಸುಧಾ

81 28

ಒಂದು ಬಾಟ್ಲಿ ಕಿಮ್ಮತ್ತು ೮ ಆಣೆ—[illegible] ಭಾಜಾರ [illegible]

ಪ್ರತಿ ದಿನ ಬರುವ ಜ್ವರ ದಿನ ಬಿಟ್ಟು ದಿನ ಜ್ವರ ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ [illegible]

[illegible]

[illegible] ವನಹಳ್ಳಿ [illegible] ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಪ್ರಾಕ್ಟಿಷನರ್

ಜ್ವರಹರ

1811

ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ, ಪಿತ್ತಜ್ವರ, ಶೀತ ಜ್ವರ [illegible] ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗ [illegible]

[illegible]

ಓಮಂ ಕರ್ಪೂರ



ಈ ಔಷಧವು ಅಜೀರ್ಣ, [illegible] ಹೊಟ್ಟೆ ಕಳೆಯುವುದು, [illegible]

[illegible]

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

JUST RECEIVED! JUST RECEIVED!!

Stead's Books for the Bairns

Illustrated New Number [illegible] 5 15

STEAD'S PENNY POPULAR TALES Sixty four Pages in a coloured Picture Cover. Each number contains a story of thrilling interest. [illegible]

CALENDARS FOR 1909

Apply The Manager, C L S Book Depot, Mysore City

ವೃತ್ತಾಂತ ಪತ್ರಿಕೆ' ಚಂದಾ ನಿರ್ಣಯ

[illegible]

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

"ಚಿತ್ರಪತ್ರಾವಳಿ"

ವಿಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆ

[illegible]

383

ನಮ್ಮ ವಿಳಾಸ — ಚಿತ್ರಪತ್ರಾವಳಿ ಆಫೀಸ್,

[illegible] ಬೆಂಗಳೂರು ಸಿಟಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

289



೧. ಲೋಕಾಮೃತಮದ ಕಸ್ತೂರಿ ಮಾತ್ರೆ—ಈ ಮಾತ್ರೆಗಳನ್ನು [illegible] ಕಸ್ತೂರಿ ಮೊದಲಾದ [illegible]

[illegible]

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್ ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

WANTED, A MUNSHI,

For literary work, five afternoons a week. Ability to write a good Kannada style essential.

Apply M. S., 40-1
Wesleyan Mission Press, Mysore

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

46 1

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ನಿರ್ಮಾಣದಂತೆ ಖಂಡಿತವಾಗಿ ವಾಸಿಯಾಗುತ್ತದೆ. ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಶೀಘ್ರದಲ್ಲಿ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ. ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು. ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು. ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು. ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಬುಡಕ್ಕೇ ಹಾಳುಮಾಡುತ್ತದೆ.

ಕ್ರಯ ಶೀಸೆ ೧ಕ್ಕೆ ೧೨ ಆಣೆ. ಪ್ಯಾಕಿಂಗ್ ೪ ಆಣೆ. ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು. ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು. ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಯಮಾಡುತ್ತಾರೆ. ಮುಖ್ಯ ಏಜಂಟರ ವಿಳಾಸ—

ಎಸ್ ಪೀಟರ್ಸ್,
೨೭, ವೇದಮುತ್ತುಪಿಳ್ಳೆ ಬೀದಿ, ವೇಪೇರಿ, ಮದರಾಸ್

ನೋಡಿರಿ. "ಪ್ರೋತ್ಸಾಹ ಕೊಡಿರಿ." ತರಿಸಿರಿ.

94 21

ಈಗ ತಾನೇ ಸೀಮೆಯಿಂದ ಬಂದಿದ

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ.

೫,೦೦೦ ಹೊಸ ಟೋಪಿ ಹೊಲಿಯುವ ಸುಪೀರಿಯರ್ ಫ್ಲಾಸ್ ದಾರ

೧೨ ಟೋಪಿಯಾಗುವ ಫ್ಲಾಸ್ ಎಂಡಲ್ ೧ಕ್ಕೆ ೩ ೭ ೦. ೧ ಟೋಪಿಯಾಗುವ ಫ್ಲಾಸ್ ದಾರಕ್ಕೆ ೦ ೮ ೦. ಹಾಸ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ಕ್ಕೆ ೦ ೧ ... ೨ ೦ ... ಇಂಚಿನ ದೊಡ್ಡ ಕೈಜು ಬನಿಯನ್ ೧ಕ್ಕೆ ೦ ೮ ... ಜುಬ್ಬಿ ಹೋಸ್ಟು ಕಾಲರ್, ಡಬ್ಬಲ್ ಕಲರ್ ೧೦೦೦ಕ್ಕೆ ೧ ೮ ೦. ಸುಗಂಧ ಸಂಜೀವಿನಿ, ಭೃಂಗಾಮಲಕ ತೈಲ, ಸೀಸೆ ೧ಕ್ಕೆ ೦ ೮ ೦. ಮೆಂತಾಲ್ ತಲೆನೋವಿಗೆ ಅನುಕೂಲವಾದ ಔಷಧ, ಡಬ್ಬಿ ೧ಕ್ಕೆ ೦ ೩ ೦. ೩೦೦ ಮಾತ್ರೆಗಳು ಇರುವ ಸೀಸ್ ಸೀಸ್ ಪರಿಮಳದ ತಾಂಬೂಲಮಿತ್ರನು ಪ್ಯಾಕೆಟ್ ೧ಕ್ಕೆ ೦ ೪ ೦. ಲಿನನ್ ಕೈವಸ್ತ್ರಗಳು (ಚಂದವಾದದ್ದು) ೧ಕ್ಕೆ ೦ ೨ ೦. ರಾಸ್‌ಕೋಪ್ ಸ್ಟಾಯಿಲ್ ವಾಚು ೧ಕ್ಕೆ ೪ ೦ ೦. ಕೋರೆಯ ಬಾಚಣಿಗೆಗಳು ದೊಡ್ಡ ಸೈಜು, ಡಜನ್ ೧ಕ್ಕೆ ೧ ೧ ೦. ಗಜಲಕ್ಷ್ಮಿ ಮುಲಾಮು ಡಬ್ಬಿ ೧ಕ್ಕೆ ೦ ೬ ೦. ೨೮ ಇಂಗ್ಲೀಷು ಅಕ್ಷರಗಳದಗಿ ಇರುವ ಪೆಟ್ಟಿಗೆ ೧ಕ್ಕೆ ೨ ೮ ೦. ಪರಿಮಳ ಸದ್ವಿದಪ್ಪತಿ ಸೀಸೆ ೧ಕ್ಕೆ ೦ ೨ ೦ ... ಉಂಡೆಗಳಿರುವ ಪೆರುವಾ ಫ್ಲಾಸ್ ದಾರದ ಬಂಡಲ್ ೧ಕ್ಕೆ ೩ ೦ ೦. ಪೆರುವಾ ಫ್ಲಾಸ್ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ ೧೮ ೦ ೦. ಶೋಕ ಪ್ರಸಿದ್ಧವಾದ ಚೇಳಿನ ಔಷಧ ಸೀಸೆ ೧ಕ್ಕೆ ೦ ೪ ೦. ಕ್ಯಾಟಲಾಗನ್ನು ಕೇಳಿದವರಿಗೆ ಕಳುಹಿಸುತ್ತೇವೆ. ಪರಸ್ಥಳದವರಿಗೆ ವಿ. ಪಿ. ಯಿಂದಲೂ ರವಾನಿಸುತ್ತೇವೆ.

ವಿಳಾಸ —ಶ್ ವ್ಯಾಲನ್ ಮಾಟ್ಸ್, ಮಂಗಳೂರು

ನೋಟೀಸ್

11 1

ತುಮಕೂರು ಡಿಸ್ಟ್ರಿಕ್ಟ್ ಸೀರಾ ತಾಲ್ಲೂಕು ಎರಾ ಸಮ್ಮತು ಹಂದೇನಹಳ್ಳಿ ಗ್ರಾಮದಲ್ಲಿ ಇರುವ ಕುಂಚಿಟಿಗರ ಬೀರಲಿಂಗಪ್ಪನ ಮಗ ಮುದ್ದಣ್ಣನು ಇದರಿಂದ ಸರ್ವರಿಗೂ ತಿಳಿಯಪಡಿಸುವದು ಏನಂದರೆ—

ನನಗೆ ಬೀರಣ್ಣ, ಬೊಪ್ಪಯ್ಯ ಎಂಬ ಇಬ್ಬರು ತಮ್ಮಂದಿರು. ನಾವು ೩ ಜನರೂ ನಮ್ಮ ಪಿತ್ರಾರ್ಜಿತವಾದ ಚರಸ್ವತ್ತು ಮತ್ತು ಇದೇ ಗ್ರಾಮದ ಒಳಗೆ ನನ್ನ ಹೆಸರಿನಲ್ಲಿ ಖಾತೆ ಇರುವ ಸರ್ವೆ ನಂಬರು ೫೮-೫೯ನೇ ತೋಟದ ಜಮೀನು ಸಹಾ ಈಗ್ಗೆ ೩ ವರುಷದ ಕೆಳಗೆ ಪಂಚಾಯಿತರ ಸಮಕ್ಷಮ ೩ ಹಿಸ್ಸೆಯಂತೆ ಭಾಗ ಮಾಡಿಕೊಂಡು ಪ್ರತ್ಯೇಕನಾಗಿ ಇದ್ದುಕೊಂಡು ಅನುಭವಿಸುತ್ತಾ ಇದ್ದೇವೆ. ಈಗ್ಗೆ ೩ ತಿಂಗಳ ಕೆಳಗೆ ಚಿಕ್ಕ ತಮ್ಮನಾದ ಬೊಪ್ಪಯ್ಯನು ಫವತಿ ಆದನು. ಈತನಿಗೆ ೩೦ ವರುಷದ ಸಣ್ಣಮ್ಮನೆಂಬ ಹೆಂಡತಿಯೂ, ಮುದ್ದನೆಂಬ ೩ ವರುಷದ ಗಂಡುಹುಡುಗನೂ ಇದ್ದಾರೆ. ನಾವು ಯಾರಿಗೂ ಬಾಕೀ ವಗೈರೆ ಕೊಡತಕ್ಕದ್ದು ಇಲ್ಲ. ಅಡಿಕೆ ತೋಟದ ಗದ್ದೆಯಲ್ಲಿ ಆಗತಕ್ಕ ಉತ್ಪತ್ತಿಯಿಂದಲೇ ಸುಖವಾಗಿ ಜೀವನ ನಡಿಯುತ್ತ ಇಂಥಾದ್ದರಲ್ಲಿ ಸದರೀ ಸಣ್ಣಮ್ಮನು ತನ್ನ ಗಂಡನ ಪಾಲಿಗೆ ಮೇಲ್ಕಂಡ ನಂಬರುಗಳಲ್ಲಿ ಬಂದಿರತಕ್ಕ ಹಿಸ್ಸೆಯನ್ನು ಇತರರ ದುರ್ಬೋಧನೆಯಿಂದ ಕ್ರಯಾ ವಗೈರೆ ಮೂಲಕ ಪರಭಾರೆ ಮಾಡುವದಾಗಿ ವರ್ತಮಾನ ಹುಟ್ಟಿಯಿದೆ. ಈ ರೀತಿ ಮಾಡಲು ಮೈನರು ಸತ್ತಿದ್ದರಿಂದ ಸಣ್ಣಮ್ಮನಿಗೆ ಯಾವವಿಧವಾದ ಹಕ್ಕುಬಾಧ್ಯತೆಯೂ ಇರುವುದಿಲ್ಲ. ಅಂಥಾ ತಗಾದೇ ವಗೈರೆಗೆ ಕಾರಣವೂ ಇರುವದಿಲ್ಲ. ಇದರ ಮೇಲೂ ಜನರು ಚಿತಾವಣೆಯಿಂದ ಭರವಸೆ ಹೇಳಿ ಬರಿಸಿಕೊಂಡದ್ದೇ ಆದರೆ ಸದರಿ ಬರವಣಿಗೆಯು ಊರ್ಜಿತವಾಗದೆ ಮೊಬಲಗು ಏನಾದರೂ ಕೊಟ್ಟಿದ್ದು ಸಹಾ ಕಳಕೊಳ್ಳುತ್ತಾರೆಂದು ಈ ಮೂಲಕ ತಿಳಿಯಪಡಿಸಿ ಇರುತ್ತೇನೆ. ಒಂದು ಪಕ್ಷ ಸಣ್ಣಮ್ಮನು ಸ್ವತಃ ರೂಢಿಸಿಕೊಂಡು ಜೀವನಮಾಡಲು ಅಶಕ್ತಳಾದ ಭಾಗದಲ್ಲಿ ಸದರೀ ಮುದ್ದನಿಗೆ ಮೈನರು ತೀರುವ ವರಿವಿಗೂ ನಾನು ರೂಢಿಸಿ ಇವರನ್ನು ಕಾಪಾಡಿಕೊಂಡು ಬರುವದಕ್ಕೂ, ಮೈನರು ದೆಸೆ ಕಳೆದನಂತರ ಯಾವವಿಧವಾದ ಪ್ರತಿಫಲವೂ ಇಲ್ಲದೆ ವಾಪಸು ಬಿಡುವದಕ್ಕೂ ಕ್ರಮವಾಗಿ ಕರಾರು ಬರೆದುಕೊಟ್ಟು ಆ ರಂತೆ ನಡೆಸಲು ಕಟಿಬದ್ಧನಾಗಿ ಇದ್ದೇನೆ.

೯-೪-೧೯೦೯, ಸೀರಾ — x ಮುದ್ದಣ್ಣನ ಗುರ್ತಿನ ರುಜು

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

1 15



ಬೆನ್ನುಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಟಾ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ಎದ್ದಾಗ ತಡೆಯದೆ ಇರುವುದು—ಇದೇ. ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕರಯವಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ಸಂಜೀವಿನೀ ಔಷಧಾಲಯ, ಮೈಸೂರು.

2 10

ಎಂ. ಎಸ್. ಕುಮಾರಾಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು.—ಮರವೆ, ನಿಶ್ಶಕ್ತಿ, ಧ್ವಜಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋಮು, ವಾಯುನೋವುಗಳೂ, ಹಳೇ ಜ್ವರ, ಕ್ಷಯ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬಿಳಿಧಾತು, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಸ್ಥಿತಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಎದ್ದುಕಾದ. ಕ್ರಯ ಶೀಸೆ ೧ಕ್ಕೆ ೨ ರೂಪಾಯಿ.

ಸಂಜೀವಿನೀ ಮಾತ್ರೆ.—ನಾನಾ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ ಇವುಗಳಿಗೆ ಖಾತರಾದ ಔಷಧ. ... ವಿರಾರು ಮ ದಿ ... ನಿಸಂದೇಹ ಗುಣ ಕೊಡಿದಾರೆ ... ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ. ಕ್ರಯ ಪೆಟ್ಟಿಗೆ ೧ಕ್ಕೆ ೧ ರೂಪಾಯಿ.

ಕಾಲಕೂಟ ವಟಿಕ.—ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳೂ ಮೇಲೆ ಹಚ್ಚುವ ಔಷಧಿ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ.

ಸುಖನೇತ್ರ ಬಿಂದು.—ಉರಿಗಣ್ಣು, ಕೆಂಗಣ್ಣು, ಮಬ್ಬುಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ, ಕಣ್ಣಿಗೂ ಮೆದುಳಿಗೂ ... ಟುವಾದಿ ದೃಷ್ಟಿಪಾಟವವನ್ನೂ ಮರ್ದನ ರಕ್ತಿ ... ವೃದ್ಧಿಪಡಿಸುತ್ತದೆ. ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ.

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಕಡ್ಡಿ, ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ. ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟುಗಳೂ ಬೇಕು. ಅರ್ಜಿಗಳ್ ... ಇಟ್ಟು ಬರೆಯಿರಿ.

ಪಿ. ಕೆ. ಸ್ವಾಮಿ,
ಪ್ರೊಪ್ರೈಟರ್

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ತರಿಸಿರಿ.

30 10

"ಬ್ರಹ್ಮಚರ್ಯ" ವೆಂಬ ಮರ್ಮಶಾಸ್ತ್ರ. ಇದು ಲೋಕಪ್ರಸಿದ್ಧವಾದ ಪುಸ್ತಕ. ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು. ಕ್ರಯ ಮೂರಾಣೆ. ವಿ. ಪಿ. ಪಿ. ಮೂಲಕ, ಐದಾಣೆ.

"ಸ್ವಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ. ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು. ಈ ನಡುವೆ ಮದರಾಸ್ ಯೂನಿವರ್ಸಿಟಿ ಸಂಘದವರು ಸ್ವಪ್ರಯಾಸಫಲದೀಪಿಕೆಯನ್ನು ಒಂದು ಮುಖ್ಯವಾದ ಪರೀಕ್ಷೆಗೆ ಪಠ್ಯವಾಗಿ ನಿಯಮಿಸಿರುತ್ತಾರೆ. ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರವರಿಗೂ ಓದತಕ್ಕದ್ದು. ಕ್ರಯ ನಾಲ್ಕಾಣೆ. ವಿ. ಪಿ. ಪಿ. ಮೂಲಕ ಆರಾಣೆ.

"ವ್ಯಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಕವಾದದ್ದು. ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು. ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಂಜಕವಾಗಿರುತ್ತದೆ. ಇದನ್ನು ಎಲ್ಲರೂ ತರಿಸಿ ಓದಬೇಕು.

ಕ್ರಯ, ಒಂದಾಣೆ. ವಿ. ಪಿ. ಪಿ. ಮೂಲಕ ಮೂರಾಣೆ.

"ಆಗಸ್ಟೀನ್ ದಿನ್ನಪಂ" ಇದು ಲೋಕಪ್ರಸಿದ್ಧವಾದ ಪುಸ್ತಕವು. ಕ್ರೈಸ್ತ ಮತದಲ್ಲಿ ತಿಳಿಸುವ ಮಾನಸಾಂತರ ಪಾಪಮನುಷ್ಯನಿಗೆ ಪವಿತ್ರಾತ್ಮ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತ್ರೆಯಾಗಿರುತ್ತದೆ. ಇದನ್ನು ಎಲ್ಲರೂ ಓದಬೇಕು.

ಇದರ ಬೆಲೆ —ರೈಟಿನ ಬೈಂಡು ಪ್ರತಿ ಒಂದಕ್ಕೆ ೦—೧೦—೦
ಒಟ್ಟಿಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

2 14

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣ ಹೋಗುವದಿಲ್ಲ. ಕ್ರಯವು ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರು ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೧೧ ಆಣೆ ವರಿವಿಗೂ ಚಿಲ್ಲರೆಯಾಗಿ ಅಗಲೀ, ಒಟ್ಟಾಗಿ ಅಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪ್ರೋ, ಮೈಸೂರು

ಅತಿ ಆಶ್ಚರ್ಯ "ಎಲೆಕ್ಟ್ರಿಕ್ ದೀಪ ಸುಲಭ ದರದಿ"

9 1

ಈ ದೀಪವನ್ನು ಜೇಬಿನಲ್ಲಿ ಇಟ್ಟು ಕೊಳ್ಳುವಹಾಗೆ ಚಿಕ್ಕದಾಗಿ ಮಾಡಿಯಿರುತ್ತದೆ. ಇದಕ್ಕೆ ಬೆಂಕಿ, ಬತ್ತಿ, ಎಣ್ಣೆ ಸಹ ಆವಶ್ಯಕವಿಲ್ಲ. ಇದು ವಿದ್ಯುಚ್ಛಕ್ತಿಯಿಂದ ಉರಿಯುವುದು. ಇದರಿಂದ ಯಾವ ತರಹ ಅಪಾಯವು ಉಂಟಾಗದಿಲ್ಲ. ಇದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲವು ಮತ್ತು ಎಷ್ಟು ದೊಡ್ಡ ಗಾಳಿ ಬೀಸಿದಾಗ್ಯೂ ಆರುವುದಿಲ್ಲ. ಇದನ್ನು ಜನಗಳು ಕಾಡುಗಳಲ್ಲಿ ಪ್ರಯಾಣ ಮಾಡುವದಕ್ಕೆ ಬಹಳ ಉಪಯೋಗಿಸುತ್ತಿದ್ದಾರೆ.



ಬೇಕಾದ ಕಾಲದಲ್ಲಿ ಈ ಪೆಟ್ಟಿಗೆಯ ಮೇಲೆ ಇರುವ ಬಟನ್‌ನನ್ನು ಬೆರಳಿಂದ ಒತ್ತಿದ ಕೂಡಲೇ ದೀಪವು ಹತ್ತಿದರೆ ಎಷ್ಟು ಶಾಂತಿ ಕೊಡುವುದೋ ಅಷ್ಟು ಬೆಳಕನ್ನು ಕೊಡುವುದು. ಇದು ಎಷ್ಟು ದಿವಸಗಳು ಬೇಕಾದರು ಬಾಳಿಕೆ ಬರುವುದು. ಉಪಯೋಗಿಸತಕ್ಕ ವಿಧಾನವು ಇದರ ಸಂಗಡ ಬರುವ ಪಟ್ಟಿಯಲ್ಲಿ.

ಇದರ ಕ್ರಯ ರೂ ೩—೦—೦ ವಿ. ಪಿ. ಚಾರ್ಜ್ ರೂ ೦—೬—೦

ವಿ. ಮದರಾಸ್ ಎಲೆಕ್ಟ್ರಿಕ್ ಎಂಪೋರಿಯಂ ಸೌಕಾರ್‌ಪೇಟೆ, ಮದರಾಸ್

ಮಕ್ಕಳ ಆರೋಗ್ಯವನ್ನು

ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಹೇಳಿದಂತೆ ಕೇಳದ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 6 15

(ಸ್ಕಾಟ್ಸ್ ಇಮುಲ್ಷನ್)

ಎಂಬ ಸೇವನಾ ಔಷಧವನ್ನು ಕೊಡಬೇಕು.



ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ, ಕೊಟ್ಟ ಕೂಡಲೇ ದೊಡ್ಡ ಮತಾ ಸಹೋದರ ಮಾಡು.

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖವೃದ್ಧಿ ತೋರಿಸುವದು.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ವೃತ್ತಾಂತ ಪತ್ರಿಕೆ

ಸನ್ ೧೯೦೯ ನೇ ಇಸವಿ ಏಪ್ರೆಲ್ ತಾ ೧೫ ನೇ ಗುರುವಾರ

ಮೈಸೂರು ರಾಜ್ಯಭಾರವು.

ಮೈಸೂರು ಗವರ್ನ್‌ಮೆಂಟಿನ ದೊಡ್ಡ ಅಧಿಕಾರಗಳಲ್ಲಿ ಈಚೆಗೆ ಹಲವು ಬದಲಾವಣೆಗಳು ಆಗಿರುತ್ತವೆ. ಆದುದರಿಂದ ಪ್ರಜಾಪಾಲನೆಯು ದೇಶೋನ್ನತಿಗೂ ಪ್ರಜಾಹಿತಕ್ಕೂ ಅನುಕೂಲಿಸುವಂತೆ ಪರಿಣಮಿಸಲು ಗವರ್ನ್‌ಮೆಂಟಿಗೆ ಯಾವ ಉದ್ದೇಶಗಳು ಇರಬೇಕೆಂಬುವುದನ್ನು ಕುರಿತು ಸ್ವಲ್ಪ ನಮ್ಮಿಗೆ ಪ್ರಸ್ತಾಪ ಮಾಡುವವರಾಗಿದ್ದೇವೆ.

ಗವರ್ನ್‌ಮೆಂಟಿನಲ್ಲಿ ಅಧಿಕಾರಿಗಳಾಗಿಯೂ ನೌಕರಮಾನೆಯರಾಗಿಯೂ ನೇಮಿಸಲ್ಪಡತಕ್ಕವರು ಸ್ವಪ್ರಯೋಜನಕ್ಕಾಗಿ ಅಲ್ಲವೆಂಬುವುದನ್ನೂ ಪ್ರಜೆಗಳಿಗೆ ಹಿತವನ್ನುಂಟುಮಾಡಬೇಕೆಂಬ ಉದ್ದೇಶದಿಂದಲೇ ನೇಮಿಸಲ್ಪಡುತ್ತಾರೆಂಬುವುದನ್ನೂ ಎಷ್ಟು ಸಲ ಹೇಳಿದರೂ ಸಾಲದು. ಕೆಲವು ವೇಳೆ ಪ್ರಜೆಗಳು ತನಗೆ ಹಿತಕರವಾದದ್ದಾವುದೋ ಅದನ್ನೇ ತಿಳಿಯಲಾರರು; ಗವರ್ನ್‌ಮೆಂಟಿನವರು ಕಾನೂನುಗಳನ್ನು ಮಾಡಿ ಪ್ರಜೆಗಳ ಮೇಲೆ ಬಲಾತ್ಕಾರವನ್ನು ಪ್ರಯೋಗಿಸಿ ಅವರಿಗೆ ಹಿತವನ್ನೂ ಕ್ಷೇಮವನ್ನೂ ಉಂಟುಮಾಡಬೇಕಾಗಿದೆ. ಆದರೆ ಪ್ರತಿಯೊಬ್ಬ ಸರ್ಕಾರೀ ನೌಕರನೂ ತನ್ನ ಕರ್ತವ್ಯವನ್ನು ಮಾಡುವಾಗ್ಗೆ, "ನಾನು ಈ ಕೆಲಸವನ್ನು ಹೇಗೆ ಮಾಡಿದರೆ ಪ್ರಜೆಗಳಿಗೆ ತುಂಬಾ ಹಿತವಾದೀತು?" ಎಂಬುದಾಗಿ ತನ್ನಲ್ಲಿ ತಾನೇ ಸರ್ವದಾ ಪ್ರಶ್ನೆ ಮಾಡಿಕೊಳ್ಳುತ್ತಿರಬೇಕಾಗಿದೆ. ಈ ವಿಷಯವನ್ನು ನೌಕರರೂ ಅಧಿಕಾರಿಗಳೂ ಜ್ಞಾಪಕದಲ್ಲಿಟ್ಟುಕೊಂಡು ತಮ್ಮ ಕರ್ತವ್ಯಗಳನ್ನು ನಡಿಸುತ್ತಾ ಬಂದಪಕ್ಷದಲ್ಲಿ, ದೃಷ್ಟಾಂತಕ್ಕೆ, ಮೈಸೂರು ಪಟ್ಟಣದಲ್ಲಿ ನಡೆದಿರುವಂತಾ ಬಲಾತ್ಕಾರಪೂರ್ವಕವಾದ ಮನೆ, ಜಮೀನುಗಳನ್ನು ಕಿತ್ತುಕೊಳ್ಳುವಂಥಾ ಅಕ್ರಮ ಕಾರ್ಯಗಳು ಎಂದಿಗೂ ಕಂಡುಬರಲಾರವು. ಸತ್ಯವಂತನಾದ ಅಧಿಕಾರಿಗೆ ಸ್ವಪ್ರಯೋಜನದ ಮೇಲೆ ದೃಷ್ಟಿ ಇರುವುದಿಲ್ಲ; ಅವನು ತನ್ನ ಬಂಧುಬಳಗಗಳಿಗಾಗಲಿ ಸ್ನೇಹಿತರಿಗಾಗಲಿ ಅನುಕೂಲ ಮಾಡಿಕೊಡಬೇಕೆಂದು ಇಷ್ಟಪಡತಕ್ಕವನಲ್ಲ. ಪ್ರಜಾಹಿತಕ್ಕೋಸ್ಕರ ಅವನು ಯಾವುದು ಸರಿಯಾದದ್ದೋ, ಯಾವುದು ಧರ್ಮವಾದದ್ದೋ ಅಂಥಾದ್ದನ್ನೇ ತಪ್ಪದೆ ಮಾಡುವನು.

ಎರಡನೆಯದಾಗಿ, ದೊಡ್ಡ ದೊಡ್ಡ ಅಧಿಕಾರಿಗಳು ತಮ್ಮ ಕೈಕೆಳಗಿರುವ ಸಣ್ಣ ನೌಕರರಿಂದ ಪ್ರಜೆಗಳಿಗೆ ಯಾವವಿಧವಾದ ಕಷ್ಟನಷ್ಟಗಳೂ ಉಂಟಾಗದಂತೆ ಕಟ್ಟುನಿಟ್ಟಾದ ದರ್ಪವನ್ನಿಟ್ಟು ನೋಡಿಕೊಳ್ಳುತ್ತಾ ಇರಬೇಕಾಗಿದೆ. ಸಾಮಾನ್ಯವಾಗಿ ಈ ದೊಡ್ಡ ಅಧಿಕಾರಿಗಳು ಪಕ್ಷಪಾತಿಗಳಾಗಿಯೂ ಅನ್ಯಾಯಗಾರರಾಗಿಯೂ ಇರುವುದು ಅಪರೂಪವೇ ಸರಿ, ಆದರೆ ಅನೇಕ ಸಂದರ್ಭಗಳಲ್ಲಿ ಕೀಳುದರ್ಜೆಯ ನೌಕರರು ಈ ರೀತಿ ಇರುವುದಿಲ್ಲ. ಇವರು ಸ್ವಪ್ರಯೋಜಕರಾಗಿಯೂ ಕೆಡುಕರಾಗಿಯೂ ಇರುತ್ತಾರೆ. ಆದಕಾರಣ ಕೀಳುದರ್ಜೆಯ ನೌಕರರನ್ನು ಸರಿಯಾಗಿ ಹತೋಟಿಯಲ್ಲಿಟ್ಟುಕೊಂಡಿರಬೇಕು. ಮತ್ತು ಅವರನ್ನು ನೇಮಿಸಿರುವುದು ಸ್ವಪ್ರಯೋಜನಕ್ಕಾಗಿ ಅಲ್ಲ, ಪ್ರಜೆಗಳಿಗೆ ಹಿತವನ್ನುಂಟುಮಾಡುವುದಕ್ಕಾಗಿಯೇ ಎಂಬುವುದನ್ನು ಆಗಾಗ್ಗೆ ಅವರಿಗೆ ನೆನಪು ಕೊಡುತ್ತಿರಬೇಕು. ಪ್ರಜೆಗಳಲ್ಲಿ ಬಹುಭಾಗದವರು ವಿದ್ಯಾವಿಹೀನರಾಗಿಯೂ ಭೀತಿಪಡತಕ್ಕವರಾಗಿಯೂ ಇರೋಣದರಿಂದ ದುಷ್ಟರೂ ಸ್ವಾರ್ಥಪರರೂ ಆದ ನೌಕರರ ಬಾಯಿಗೆ ಬಹು ಸುಲಭವಾಗಿ ತುತ್ತಾಗುವರು. ಮೇಲ್ಪಟ್ಟ ಅಧಿಕಾರಿಯು ಸತ್ಯವಂತನಾಗಿದ್ದು ಅಂಥಾ ದುಷ್ಟತನವನ್ನು ನೋಡಿದಕೂಡಲೇ ಅಗತ್ಯವಾಗಿ ಅಡಗಿಸಿಬಿಡುವನು. ಇಲ್ಲವಾದರೆ ಆ ಕೀಳು ನೌಕರರ ದುರಾಚಾರವು ಶ್ರೀಮನ್ ಮಹಾರಾಜರವರ ಯಶಸ್ಸಿಗೆ ಅಪಕೀರ್ತಿಯನ್ನು ತರುವದು, ಮತ್ತು ಪ್ರಜೆಗಳಲ್ಲಿರಬೇಕಾದ ರಾಜಭಕ್ತಿಗೇನೇ ಕುಂದಕವನ್ನುಂಟುಮಾಡುವುದು. ಹಾಗಿಲ್ಲದೆ ಪ್ರಜೆಗಳು ಸಂತುಷ್ಟರಾಗಿರಬೇಕೆಂಬ ಪಕ್ಷದಲ್ಲಿ ಸರ್ಕಾರೀ ನೌಕರಮಾನೆಯರುಗಳು ತಮ್ಮ ಕರ್ತವ್ಯಗಳನ್ನು ಸತ್ಯವಾಗಿ ಮಾಡುತ್ತಾ ಬರಬೇಕಾಗಿದೆ ಎಂದು ಒತ್ತಿ ಹೇಳುತ್ತೇವೆ.

ಮೂರನೆಯದಾಗಿ, ನೌಕರಮಾನೆಯರುಗಳು ಘೂತದಸೆಯುಳ್ಳವರಾಗಿರಬೇಕು. ನೌಕರರ ಮೇಲೆ ನಿಜವಲ್ಲದ ಮತ್ತು ಬುದ್ಧಿಹೀನವಾದ ನೂರಾರು ಅಪವಾದಗಳು ಹೊರಿಸಲ್ಪಡುವುದೇನೋ ನಿಜ. ಇಂಥಾ ಅಪವಾದಗಳನ್ನು ತರತಕ್ಕವರು ಅನೇಕರಿರುತ್ತಾರೆ. ಅಂಥವರು ಬೈಗಳಿಗಾಗಿ ಮಾಡಿರುವ ಬಂದೀಖಾನೆಗಳಲ್ಲಿ ಇರುವುದಕ್ಕೆ ಯೋಗ್ಯರೇ ಹೊರತು ಶ್ರೀಮನ್ ಮಹಾರಾಜರವರ ಪ್ರಜೆಗಳ ಮಧ್ಯೆ ಇರಲು ಎಷ್ಟುಮಾತ್ರಕ್ಕೂ ಯೋಗ್ಯರಾಗಿರುವುದಿಲ್ಲ. ಆದಾಗ್ಯೂ ನ್ಯಾಯವಾದ ಮತ್ತು ಸಮಂಜಸವಾದ ಅಪವಾದಗಳನ್ನು ತರತಕ್ಕವರ ವಿಷಯದಲ್ಲಿ ಅಧಿಕಾರಿಗಳು ಶ್ರದ್ಧೆಯನ್ನೂ ಪ್ರೀತಿಯನ್ನೂ ತೋರಿಸುತ್ತಾ ಬಂದರೆ ಪ್ರಜೆಗಳಲ್ಲಿ ದುರಭಿಪ್ರಾಯಗಳೇನೂ ಹುಟ್ಟದೆ ಇದ್ದೀತು. ಪ್ರಜೆಗಳಿಗೂ ಅಧಿಕಾರಿಗಳಿಗೂ ಪರಸ್ಪರವಾದ ಪ್ರೀತಿ ವಿಶ್ವಾಸಗಳು ಹುಟ್ಟಿ ಹೆಚ್ಚುತ್ತಾ ಬಂದಾವು.

ಆದರೆ ಸದ್ಯದಲ್ಲಿ ಅವಶ್ಯವಾಗಿ ಆಗಬೇಕಾಗಿರುವುದೇನೆಂದರೆ, ಇಲಾಖೆಗಳ ಮೇಲ್ವಿಚಾರಣೆಗೆ ನೇಮಕವಾಗಿರುವಂಥಾ ದೊಡ್ಡ ಅಧಿಕಾರಿಗಳು ತಮ್ಮ ಕೋರ್ಟು ಕಚೇರಿಗಳಲ್ಲಿ ಬಹು ಖಂಡಿತವಾದ ಕ್ರಮವನ್ನೂ ದರ್ಪವನ್ನೂ ಭೀತಿಯನ್ನೂ ಇಟ್ಟುಕೊಂಡಿರುವಂತಾಗಬೇಕು. ಈ ಭಾಗವು ಸದ್ಯದಲ್ಲಿ ಸಡಿಲವಾಗಿರುವಂತೆ ನಮಗೆ ತೋರುವದು. ಅವಜ್ಞತೆಯ ಕಾರ್ಯಗಳು ನಡೆದಾಗ್ಯೂ ಯಾರಿಗೂ ಶಿಕ್ಷೆಯಾಗುವುದಿಲ್ಲ. ಅನ್ಯಾಯ ನಡೆದಿದೆ ಎಂದು ಸ್ಪಷ್ಟವಾಗಿ ಗೊತ್ತಾಗುವಂಥಾ ವಿಚಾರಗಳನ್ನು ತಿಳಿಸಿದ ಪಕ್ಷದಲ್ಲಿ ಗವರ್ನ್‌ಮೆಂಟಿನವರು ಅಂಥಾ ಮನುಷ್ಯನು ಅಧಿಕಾರಿಯಾಗಿರಲಿ ನೌಕರನಾಗಿರಲಿ ಸ್ವಲ್ಪವೂ ಎಣಿಸದೆ ಕೂಡಲೇ ಅವನನ್ನು ಕಂಪಾರಾ ಮಾಡಬೇಕು; ಇಲ್ಲವೇ ಕೆಲಸದಿಂದ ವಜಾ ಮಾಡಬೇಕು. ಹೀಗೆ ಮಾಡದೆ ಎಚ್ಚರಿಕೆ ಕೊಡುವಂಥಾ ಒಣ ಮಾತುಗಳ ಮೂಲಕ ಎಷ್ಟು ಆಗ್ರಹವನ್ನು ವ್ಯಕ್ತಪಡಿಸಿದರೂ ಪ್ರಯೋಜನವಾಗುವುದಿಲ್ಲ. ಇದೂ ಅಲ್ಲದೆ ಒಂದು ಕೆಲಸದಲ್ಲಿ ಅಯೋಗ್ಯತೆಯು ತೋರಿಬಂದ ಪಕ್ಷದಲ್ಲಿ ತಾರತಮ್ಯ ನೋಡದೆ ಅಂಥವನನ್ನು ಆ ಕೆಲಸದಿಂದ ತೆಗೆದುಬಿಡಬೇಕು.

ಮೊದಲನೆಯ ದಿವಾನರಾಗಿದ್ದ ಮೆ॥ ರಂಗಾಚಾರ್ಲುರವರ ಕಾಲದ ನಡವಳಿಕೆಯು ನಮಗೆ ಜ್ಞಾಪಕವಿರುತ್ತದೆ. ಅವರು ಅಧಿಕಾರಿಗಳಲ್ಲೂ ನೌಕರರಲ್ಲೂ ವಿಶೇಷವಾದ ಭೀತಿಯನ್ನೂ ದರ್ಪವನ್ನೂ ಇಟ್ಟುಕೊಂಡಿದ್ದರು. ಸೋಮಾರಿತನವಾಗಲಿ, ಅಲಕ್ಷ್ಯವಾಗಲಿ, ಅಯೋಗ್ಯತೆಯಾಗಲಿ, ಸ್ವಪ್ರಯೋಜನಾಪೇಕ್ಷೆಯಾಗಲಿ ಕಂಡುಬಂದ ಒಡನೆಯೇ ಅವರು ಖಂಡಿತವಾದ ಪ್ರತೀಕಾರವನ್ನೇ ಮಾಡುತ್ತಾ ಸರ್ಕಾರೀ ಸರ್ವಿಸಿನಲ್ಲಿರತಕ್ಕವರಿಗೆಲ್ಲಾ ಸಿಂಹಪ್ರಾಯರಾಗಿದ್ದರು. ಈಗಿನ ದಿವಾನರಾಗಿರುವ ಮೆ॥ ಟಿ. ಆನಂದರಾಯರೂ ಕೂಡ ತಮ್ಮ ಸದುದ್ದೇಶವನ್ನೂ ಸತ್ಯವೂ ಖಂಡಿತವೂ ಆದ ನಡವಳಿಕೆಯನ್ನೂ ತಾರತಮ್ಯ ನೋಡದೆ ಆಚರಿಸುತ್ತಾ ಬಂದಲ್ಲಿ, ಅವರ ದೆಸೆಯಿಂದ ಗವರ್ನ್‌ಮೆಂಟು ಸರ್ವಿಸಿನ ದರ್ಪವೂ ಬಿಗಿಯೂ ಹೆಚ್ಚೀತೆಂದೂ ನಂಬಿ ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು

ನಂಜನಗೂಡು ಟವುನಿನಲ್ಲಿ ಹೊಸ ಆಸ್ಪತ್ರೆಯನ್ನೂ ರೋಗಿಗಳಿರುವ ವಾರ್ಡುಗಳನ್ನೂ ಇತರ ಕೊಠಡಿಗಳನ್ನೂ ಕಟ್ಟಿಸಬೇಕೆಂದು ನಿಶ್ಚಯವಾಗಿದೆ

* * *

ಬೆಂಗಳೂರು ಸಿಟಿಯ ಹೆಲ್ತ್ ಕ್ಯಾಂಪಿನ ಬಳಿ ಕಚರಾ ಗುಡಿಸುವವರಿಗಾಗಿ ಸುಮಾರು ೩೦ ಮನೆಗಳನ್ನು ಮ್ಯುನಿಸಿಪಾಲಿಟಿಯವರು ಕಟ್ಟಿಸಿಕೊಡುವವರಾಗಿದ್ದಾರೆ

* * *

ಈ ಸಂಸ್ಥಾನದ ಸಿವಿಲ್ ಕೋರ್ಟುಗಳ ಬೇಸಿಗೆ ರಜವು ಈ ದಿನದಿಂದ ಪ್ರಾರಂಭವಾಗುವುದು. ಅವು ಮುಂದಿನ ತಿಂಗಳು ತಾ ೨೪ ಕ್ಕೆ ಪುನಃ ತರೆಯಲ್ಪಡುವವು

* * *

ಶಿವಮೊಗ್ಗೆ ಜಿಲ್ಲೆ ಸಾಗರದಲ್ಲೂ ಗೊಡಾಯಿಗಳ ರೋಗಚಿಕಿತ್ಸೆಗೆ ಏರ್ಪಡುವ ಆಸ್ಪತ್ರೆಗಳ ಖರ್ಚಿಗೆ ಡಿಸ್ಟ್ರಿಕ್ಟ್ ಫಂಡಿನಲ್ಲಿ ೩೦೦ ರೂಪಾಯಿ ಮಂಜೂರು ಮಾಡಬೇಕೆಂದು ಸರ್ಕಾರದವರು ತಿಳಿಸಿದ್ದಾರೆ

* * *

ಮಡಿಕೇರಿಯ ಸುತ್ತುಮುತ್ತಲೂ, ಆನೇಕಾಡು, ಅತ್ತೂರು, ಈ ಪ್ರಾಂತ್ಯಗಳಲ್ಲಿ ಕಳೆದ ಒಂದು ತಿಂಗಳಿಂದಲೂ ಕಾಡ್ಗಿಚ್ಚು ಹತ್ತಿ ಉರಿಯುತ್ತಾ ಇವೆ. ಕಾಡುಗಳು ಬಹಳಮಟ್ಟಿಗೆ ಉರಿದು ಹೋದವೆಂದು ತಿಳಿಯುವುದು

* * *

ಕಳೆದ ಮಂಗಳವಾರ ರಾತ್ರಿ ಬ್ರಿಟಿಷ್ ರೆಸಿಡೆಂಟರವರು ಸಕುಟುಂಬ ಪರಿವಾರ ಸಹಿತ ಬೆಂಗಳೂರಿನಿಂದ ನೀಲಗಿರಿಗೆ ಬೇಸಿಗೆಯ ಉದ್ದೇಶ್ಯ ತೆರಳಿದರು. ಅವರು ಅಲ್ಲಿ ಸುಮಾರು ಆರು ವಾರಗಳ ತನಕ ಇದ್ದು ಬರುವವರಾಗಿದ್ದಾರೆ

* * *

ಶಿವಮೊಗ್ಗಾ ಟವುನನ್ನು ಬಡಾವಣೆ ಮಾಡುವುದಕ್ಕೂ, ತರೀಕೆರೆ ತಾಲ್ಲೂಕು ಹರವನಹಳ್ಳಿ ಅಣೆಕಟ್ಟು ಮತ್ತು ನಾಲೆಯನ್ನು ದುರಸ್ತು ಮಾಡುವುದಕ್ಕೂ ಸರ್ಕಾರದವರು ಒಂದೆರಡು ತಿಂಗಳಲ್ಲೇ ಪ್ರಾರಂಭಮಾಡುವವರಾಗಿದ್ದಾರೆ

* * *

ರಾಜಧಾನಿಯಲ್ಲಿರುವ ಅಧಿಕಾರಿಗಳೂ ಲಾಯರುಗಳೂ ದೊಡ್ಡ ಮನುಷ್ಯರೂ ವಿಹಾರಾರ್ಥವಾಗಿ ಮಾಡಿಕೊಂಡಿರುವ ಕಾಸ್ಮಾಪಾಲಿಟನ್ ಕ್ಲಬ್ ಎಂಬ ಸಂಘದ ವಾರ್ಷಿಕೋತ್ಸವವು ಮುಂದಿನ ಶನಿವಾರ ನಡೆಯುವುದಾಗಿದೆ

* * *

ಈ ತಿಂಗಳ ಪ್ರಾರಂಭದಿಂದ ಫಾರೆಸ್ಟ್ ಇಲಾಖೆಯವರು ಗಂಧದ ತುಂಡುಗಳನ್ನು ಅರಸೀಕೆರೆ ಸ್ಟೇಷನ್ನಿಂದ ೫೦ ಮೈಲಿ ದೂರದಲ್ಲಿರುವ ಸಕಲೇಶಪುರಕ್ಕೆ ಸಾಗಿಸಿಕೊಡುವ ಹಾಗೆ ಮೆ॥ ಪಾಲಂಜಯವರಿಗೆ ಕಂಟ್ರ್ಯಾಕ್ಟು ವಹಿಸಿದ್ದಾರೆ

* * *

ಕಕ್ಷಿಗಾರರು ಲಾಯರುಗಳಿಗೆ ಒಂದು ಮೊಕದ್ದಮೆಯಲ್ಲಿ ಕೊಡುವ ಮೆಹನತ್ತಾನೆಯು ಆ ಮೊಕದ್ದಮೆಯಲ್ಲಿ ಚಾರ್ಜಿನ ವಡಿಸುವುದಕ್ಕೂ ಅನ್ವಯಿಸುವದೆಂದು ಚೀಫ್ ಕೋರ್ಟಿನವರು ಸರ್ಕ್ಯುಲರನ್ನು ಕೊಟ್ಟಿದ್ದಾರೆ

* * *

ಮೈಸೂರು ಸಂಸ್ಥಾನದ ಅ ಸಿವಿಲ್ ಸರ್ವಿಸ್ ದರ್ಜೆಗೆ ಇಬ್ಬರು ಉಮೇದುವಾರರನ್ನು ಸೇರಿಸಿಕೊಳ್ಳುವ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಈ ವರುಷ ನವಂಬರ್ ತಾ ೧೫ ರಿಂದ ಪ್ರಾರಂಭಿಸಲಾಗುವುದೆಂದು ಸರ್ಕಾರದವರು ಪ್ರಕಟಿಸಿದ್ದಾರೆ

* * *

ಕಡೂರು, ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಕಾಡಾನೆಗಳ ದೆಸೆಯಿಂದ ರೈತರಿಗೆ ಕಷ್ಟನಷ್ಟಗಳುಂಟಾಗುತ್ತವೆ ಎಂದು ತಿಳಿದುಬಂದದ್ದರಿಂದ ಅಲ್ಲಿನ ಆನೆಗಳನ್ನು ಕರ್ನಲ್ ಪೇಟರವರು ಹಿಡಿಯುವುದಕ್ಕೆ ಏರ್ಪಾಡು ಮಾಡಬೇಕೆಂದು ಸರ್ಕಾರದವರು ಅಪ್ಪಣೆಕೊಟ್ಟಿದ್ದಾರೆ

* * *

ಸಾಗರದ ತಾಲ್ಲೂಕ್ ಆನಂದಪುರದಲ್ಲಿ ಒಬ್ಬ ಒಕ್ಕಲಿಗ ವೆಂಕಟಾಚಲ ಎಂಬುವವನು ತನ್ನ ಮನೆ ಕಟ್ಟುವುದಕ್ಕೋಸ್ಕರ ಪಾಯ ತೆಗೆಯುವಾಗ್ಗೆ ಕೆಲವು ನಗನಾಣ್ಯಗಳು ಸಿಕ್ಕಿರುತ್ತವೆ. ಇದಲ್ಲದೆ ಚಿಕ್ಕಮಗಳೂರು ತಾಲ್ಲೂಕು ಮಾಗೋಡು ಗ್ರಾಮದಲ್ಲಿ ಸರ್ಕಾರೀ ಜಮೀನಿನೊಳಗಿರುವ ಒಂದು ಹುಣಿಸೆ ಮರದ ಬುಡದಲ್ಲಿ ಸುಮಾರು ೬೦೦ ರೂಪಾಯಿ ಅಂದಾಜು ಬಾಳುವ ನಗನಾಣ್ಯಗಳು ಸಿಕ್ಕಿರುವುದಾಗಿಯೂ, ಅವನ್ನೆಲ್ಲಾ ಮೇ ತಿಂಗಳ ೧ ನೇ ತಾ ಶನಿವಾರ ಶಿವಮೊಗ್ಗಾ ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ಹರಾಜು ಹಾಕುವದಾಗಿಯೂ ಸರ್ಕಾರದವರು ಪ್ರಕಟಿಸಿದ್ದಾರೆ

* * *

ಶಿವಮೊಗ್ಗಾ ಚಿನ್ನದ ಗಣಿ ಕಂಪನಿಯೆಂದು ಏರ್ಪಾಡಾಗಿ ಕೆಲಸ ನಡೆಯುತ್ತಿತ್ತು. ಈಚೆಗೆ ಈ ಕಂಪನಿಯನ್ನು ತೆಗೆದುಹಾಕಿ ಹೊಸ ಶಿವಮೊಗ್ಗಾ ಚಿನ್ನದ ಗಣಿ ಕಂಪನಿ ಎಂಬುವದನ್ನು ಏರ್ಪಾಡು ಮಾಡಿಕೊಂಡಿದ್ದಾರೆ. ಈ ಗಣಿಯಲ್ಲಿ ಚಿನ್ನವು ಸಿಕ್ಕುವುದೆಂದು ತಿಳಿದುಬಂದಿದೆ

* * *

ಸರ್ಕಾರದವರು ಬ್ರಾಂದಿ ಷರಾಬ್ ಮೊದಲಾದ ಮದ್ಯಗಳ ಇಜಾರೆಯನ್ನು ಇದುವರೆಗೆ ಒಂದೊಂದೇ ವರುಷಕ್ಕೆ ಕೊಡುತ್ತಿದ್ದರು. ಇನ್ನು ಮುಂದೆ ಅಂದರೆ ೧೯೦೯ ನೇ ಜುಲೈ ೧ ರಿಂದ ಮೂರು ವರುಷಕ್ಕೆ ಒಟ್ಟಾಗಿ ಸೇರಿಸಿ ಹರಾಜು ಹಾಕಬೇಕೆಂದು ನಿಷ್ಕರ್ಷೆಮಾಡಿರುತ್ತಾರೆ.

* * *

ಮಡಿಕೇರಿಯಲ್ಲಿರುವ ಪ್ರಜೆಗಳು ಜೋಯಿಸರ ವಾಕ್ಯವನ್ನು ನಂಬಿಕೊಂಡು ಕಳೆದ ೨ ನೇ ತಾರೀಖಿನ ದಿನ ಭೂಕಂಪವಾಗುವದೆಂದು ಗಾಬರಿಬಿದ್ದು ಆ ದಿನವೂ ಮರುದಿನವೂ ಬಹು ಮಂದಿ ಮನೆಗಳೊಳಗೆ ಮಲಗಿಕೊಳ್ಳಲಿಲ್ಲ. ಆದರೆ ಜೋಯಿಸರ ವಾಕ್ಯ ಅಪಹಾಸ್ಯಕರವಾಗಿ ಪರಿಣಮಿಸಿತು

* * *

ದಿವಾನ್ ಮೆ॥ ಟಿ. ಆನಂದರಾಯರೂ ಅವರ ಪ್ರೈವೆಟ್ ಸೆಕ್ರೆಟರಿ ಮೆ॥ ಜಿ. ಗೋವಿಂದರಾಯರೂ ಪರಿವಾರ ಸಹಿತ ಈ ದಿನ ಮೇಯಿಲ್ ಗಾಡಿಯಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ತೆರಳುವವರಾಗಿದ್ದಾರೆ. ರೆವಿನ್ಯೂ ಕಮಿಷನರ್ ಮೆ॥ ಎ. ರಂಗಸ್ವಾಮಯ್ಯಂಗಾರ್ಯರು ನಿನ್ನೆ ರಾಜಧಾನಿಗೆ ಬರುವವರಾಗಿದ್ದರು

* * *

ಬೆಂಗಳೂರಿನಲ್ಲಿರುವ ದೇವಾಂಗದ ಪ್ರಜೆಗಳು ತಮ್ಮ ಕಸಬನ್ನು ಅಭಿವೃದ್ಧಿ ಪಡಿಸಿಕೊಳ್ಳುವುದಕ್ಕೂ, ತಮ್ಮ ಬಾಲಕರಿಗೆ ವಿದ್ಯೆ ಕಲಿಸುವುದಕ್ಕೂ ಏರ್ಪಾಡುಮಾಡಿಕೊಳ್ಳುವವರಾಗಿದ್ದಾರೆ. ಆ ಪಂಗಡದಲ್ಲಿ ಮುಂದಾಳುಗಳಾಗಿರುವ ಕೆಲವು ದೊಡ್ಡ ಮನುಷ್ಯರು ಆ ಉದ್ದೇಶಕ್ಕಾಗಿ ಬೆಂಗಳೂರಿನಲ್ಲಿ ಒಂದೆರಡು ವೇಳೆ ಸೇರಿ ಪರ್ಯಾಲೋಚನೆ ಮಾಡಿರುವುದಾಗಿ ತಿಳಿದು ಬಂದಿದೆ.

* * *

ಮಹಾರಾಷ್ಟ್ರ ಜನರು ತಮ್ಮ ಬಾಲಕರ ವಿದ್ಯಾಭಿವೃದ್ಧಿಗೋಸ್ಕರ ಬೆಂಗಳೂರಿನಲ್ಲಿ ಒಂದು ಸಂಘವನ್ನು ಮಾಡಿಕೊಂಡಿರುತ್ತಾರೆಂದೂ, ಅದಕ್ಕೆ ಸಂಬಂಧಪಟ್ಟಂತೆ ಒಂದು ವಿದ್ಯಾರ್ಥಿ ನಿಲಯವನ್ನು ಏರ್ಪಾಡು ಮಾಡುವರೆಂದೂ, ಇದಕ್ಕಾಗಿ ಮೈಸೂರು ಸರ್ಕಾರದವರು ಅವರಿಗೆ ಶಂಕರಪುರದ ಬಡಾವಣೆಯಲ್ಲಿ ನಿವೇಶನವನ್ನು ಉಚಿತವಾಗಿ ಕೊಟ್ಟಿರುತ್ತಾರೆಂದೂ ಪ್ರಕಟವಾಗಿದೆ

* * *

ಕಳೆದ ವಾರ ಮೈಸೂರು, ಬೆಂಗಳೂರು, ಕೋಲಾರ, ಶಿವಮೊಗ್ಗ ಡಿಸ್ಟ್ರಿಕ್ಟುಗಳ ಕೆಲವು ಭಾಗಗಳಲ್ಲಿ ಒಳ್ಳೆಯ ಮಳೆ ಆಗಿದೆ ಎಂದೂ, ಇನ್ನೂ ಆಗುವ ಹಾಗಿದೆ ಎಂದೂ ಕೇಳಿ ಸಂತೋಷಪಡುತ್ತೇವೆ. ಚಿತ್ರದುರ್ಗದ ಕಡೆ ಮಳೆ ಸಹ ಬಿದ್ದು ಶೀತವಾದ ವಾಯು ಉಂಟಾಗಿರುವುದು. ಕಳೆದ ಶನಿವಾರ ರಾತ್ರಿ ಬೆಂಗಳೂರಿನಲ್ಲಿ ೩ ಅಂಗುಲ ಮಳೆ ಆಯಿತೆಂದೂ, ಒಂದು ಮರದ ಕೆಳಗೆ ನಿಂತಿದ್ದ ಒಬ್ಬ ಮನುಷ್ಯನಿಗೆ ಸಿಡಿಲು ಬಡಿದು ಮೃತಪಟ್ಟನೆಂದೂ ತಿಳಿದು ಬಂದಿದೆ

* * *

ಕಳೆದ ಭಾನುವಾರ ಇಲ್ಲಿನ ಲಾಯರ್ ಸಂಘದವರು ಆ ಸಂಘದ ಎರಡನೇ ವಾರ್ಷಿಕೋತ್ಸವವನ್ನು ನಡಿಸಿದರು. ಅದರ ನಿಮಿತ್ತವಾಗಿ ಅಡ್ವೊಕೇಟ್ ಮಿ ಎ. ರಾಮಣ್ಣನವರು ತಮ್ಮ ಬಂಗಲೆಯಲ್ಲಿ ಲಾಯರುಗಳಿಗೂ ಇತರ ದೊಡ್ಡ ಮನುಷ್ಯರಿಗೂ ದಿವ್ಯವಾದ ಔತಣವನ್ನು ಮಾಡಿ ಅತಿಥಿಗಳನ್ನು ಸತ್ಕರಿಸಿದರು. ದಿವಾನ್ ಮಿ ಟಿ ಆನಂದರಾಯರೂ ದಯಮಾಡಿದ್ದು, ತುಂಬಾ ಸಂತೋಷಪಟ್ಟುಕೊಂಡರು. ಸಂಗೀತ, ಕೋಲುವಾದ್ಯ, ಗ್ರಾಮೋಫೋನ್ ಮೊದಲಾದವು ನಡೆದು, ಅತಿಥಿಗಳಿಗೆ ಬಹಳ ಹರ್ಷವನ್ನುಂಟುಮಾಡಿದವು

* * *

ಈ ದಿನ ಶ್ರೀಮನ್ ಮಹಾರಾಜರವರೂ ಮಹಾ ಮಾತೃಶ್ರೀಯವರೂ ಪರಿವಾರ ಸಹಿತ ಮೋಟಾರ್ ಗಾಡಿಗಳಲ್ಲಿ ರಾಜಧಾನಿಯಿಂದ ಹೊರಟು ನಂಜನಗೂಡು ಮಾರ್ಗವಾಗಿ ತೆರಳಿ, ಸಾಯಂಕಾಲ ೫ ಘಂಟೆಗೆ ಬೆಟ್ಟದ ಮೇಲೆ ಪವನ್ ಹಿಲ್ ಎಂಬ ಅರಮನೆಯನ್ನು ಸೇರುವವರಾಗಿದ್ದಾರೆ. ಇನ್ನು ೫—೬ ವಾರಗಳ ತನಕ ಅವರು ಬೆಟ್ಟದ ಮೇಲಿದ್ದು ವಾಪಸು ಬರುವರು. ಸರ್ದಾರ್ ಲಕ್ಷ್ಮೀಕಾಂತರಾಜೇ ಅರಸಿನವರು ಯುವರಾಜ ಮಹಾರಾಜ ಕುಮಾರರವರ ಕೂಡ ನೆನ್ನೆ ರಾತ್ರಿ ರೈಲು ಹತ್ತಿ ನೀಲಗಿರಿಯನ್ನು ಕುರಿತು ಪ್ರಯಾಣಮಾಡಿದರು

* * *

ಮೊಖ್ತ್ಯಾರರುಗಳು ನಡಿಸಬೇಕೆಂದು ಗೊತ್ತುಮಾಡಿರುವ ಮೀಟಿಂಗಿನ ವಿಷಯವಾದ ಮುಂದೆ ಹೇಳುವ ನೋಟೀಸನ್ನು ನಮ್ಮಲ್ಲಿಗೆ ಪ್ರಕಟನೆಗಾಗಿ ಕಳುಹಿಸಿಕೊಟ್ಟಿದ್ದಾರೆ — ಮೈಸೂರು ಚೀಫ್ ಕೋರ್ಟಿನವರು ಮೊಖ್ತ್ಯಾರರುಗಳ ವಿಷಯದಲ್ಲಿ ಮಾಡಿರತಕ್ಕ ಹುಕುಮಿನಿಂದ ಅವರಿಗೆ ಉಂಟಾಗಿರುವ ತೊಂದರೆಯನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಚೀಫ್ ಕೋರ್ಟಿಗೆ ಅಹ್ವೋಕೇಟರ ಮೂಲಕ ಮೊಖ್ತ್ಯಾರರು ಏಕೀಭವಿಸಿ ವಿಜ್ಞಾಪನೆಯನ್ನು ಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ಈ ಸಂಸ್ಥಾನದಲ್ಲಿರುವ ಮೊಖ್ತ್ಯಾರರುಗಳೆಲ್ಲಾ ಈ ತಿಂಗಳು ೩೦ ನೇ ತಾ ಶುಕ್ರವಾರ ಬೆಳಿಗ್ಗೆ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ ಬಳಿ ಇರುವ ಮಿ ಗುಬ್ಬಿ ತೋಟದಪ್ಪನವರ ಧರ್ಮ ಸತ್ರದಲ್ಲಿ ಸಭೆ ಸೇರಿ ಮೇಲ್ಕಂಡ ವಿಷಯವನ್ನು ಚರ್ಚೆ ಮಾಡತಕ್ಕದ್ದೆಂದು ನಿಷ್ಕರ್ಷೆಯಾಗಿರುತ್ತದೆ. ಇಂಥಾ ಸಮಯವನ್ನು ಮೊಖ್ತ್ಯಾರರು ತಪ್ಪಿಸಿಕೊಳ್ಳದೆ ಖಂಡಿತವಾಗಿ ಅಲ್ಲಿಗೆ ಬಂದು ಸೇರಬೇಕು. ಈ ಮೀಟಿಂಗನ್ನು ಮೈಸೂರಿನಲ್ಲಿ ಮಾಡಬೇಕೆಂದು ಮೊದಲು ಗೊತ್ತುಮಾಡಿದ್ದದ್ದನ್ನು ತಪ್ಪಿಸಿ, ಮಧ್ಯಸ್ಥವಾದ ಬೆಂಗಳೂರಿನಲ್ಲಿ ನಡಿಸುವಂತೆ ತೀರ್ಮಾನ ಮಾಡಲಾಗಿದೆ. ಈ ಮೀಟಿಂಗಿಗೆ ಹೋಗತಕ್ಕವರು ಮುಂದೆ ಹೇಳುವ ಸೆಕ್ರೆಟರಿಗಳಿಗೆ ಮೊದಲೇ ಬರೆದು ತಿಳಿಸಬೇಕು — ಎಂ ವೆಂಕಟರಾಮಯ್ಯನವರು ಮತ್ತು ಟಿ ಎಸ್ ರಾಮಚಂದ್ರರಾಯರು, ಮೊಖ್ತ್ಯಾರರ ಸಂಘದ ಸೆಕ್ರೆಟರಿಗಳು. ಚಾಮರಾಜ ಮೊಹಲ್ಲಾ ನಂಜರಾಜ ಬಹದ್ದೂರರ ಅಗ್ರಹಾರ, ಮೈಸೂರು

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಏಪ್ರೆಲ್ ತಾ. 3 ಕ್ಕೆ ಅಪ್ಪೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು.	ಧರ್ಮಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು.	ಮಕ್ಕಳು.	ರೂ	
ಬೆಂಗಳೂರು	971	416	100	752	282
ಕೋಲಾರ	2,609	1,056	174	2,690	916
ತುಂಕೂರು	2,330	1,788	183	2,128	663
ಮೈಸೂರು	437	432	211	167	589
ಹಾಸನ	739	659	121	376	8
ಶಿವಮೊಗ್ಗ	296	241	59	325	6
ಕಡೂರು	187	203	2	172	..
ಚಿತ್ರದುರ್ಗ	1,532	1,757	513	723	691
ಮಾಂಕಣಿವೆ	256	286	45	134	.
ಸ್ಯಾನಿಟರಿ	150	186		250	..
ಒಟ್ಟು	9,906	7,324	1,111	7,816	3,154

ನೆಯ್ಗೆ ಕಸಬನ್ನು ಅಭಿವೃದ್ಧಿ ಪಡಿಸುವುದು.

ಮೆ|| ಎಚ್. ಎ. ತುಲಸೀರಾಂ ಬಿ. ಎ., ಬಿ. ಎಲ್. ರವರು ಮಧುರೆಯಲ್ಲಿ ನೆಯ್ಗೆ ಕಸಬಿನ ಮನೆತನಸ್ಥರು. ಇವರು ಅಲ್ಲಿನ ನೆಯ್ಗೆ ಕಸಬನ್ನು ಅಭಿವೃದ್ಧಿಗೆ ತರುವುದಕ್ಕೆ ಇದುವರೆಗೂ ತುಂಬಾ ಸಾಹಸಪಡುತ್ತಾ ಬಂದು, ನೆಯ್ಗೆ, ಬಿಚಾರ, ಬಣ್ಣ ಹಾಕುವುದು, ಕಲಾಪತ್ತು ತಯಾರುಮಾಡುವುದು, ಈ ಮೊದಲಾದ ಕಸಬನ್ನು ಶಾಸ್ತ್ರವತ್ತಾಗಿಯೂ ಸಾಕ್ಷಾತ್ತಾಗಿಯೂ ಇಂಗ್ಲಾಂಡ್ ಜರ್ಮನಿ ಮುಂತಾದ ಕಡೆಗಳಲ್ಲಿ ಕಲಿತು ಬರಬೇಕೆಂದು ಕಳೆದ ವಾರ ಅಲ್ಲಿಂದ ಹಡಗು ಹತ್ತಿ ಪ್ರಯಾಣಮಾಡಿದರು. ಆಗ್ಗೆ ಮಧುರೆಯ ಸೌರಾಷ್ಟ್ರ ಸಂಘದವರು ಮೆ|| ತುಲಸೀರಾಂಯವರಿಗೆ ದಿವ್ಯವಾದ ಔತಣವನ್ನು ಮಾಡಿದರು. ಆ ಸಮಯದಲ್ಲಿ ಮೆ|| ತುಲಸೀರಾಂಯವರು ನೆಯ್ಗೆ ಕಸಬಿನ ವಿಚಾರವಾಗಿ ಸಭಿಕರಿಗೆ ತಿಳಿಸಿದ ಅಭಿಪ್ರಾಯವೇನೆಂದರೆ --

ನಮ್ಮ ಸೌರಾಷ್ಟ್ರ ಪ್ರಜೆಗಳು ಇಲ್ಲಿ ತುಂಬಾ ಚಟುವಟಿಕೆಯುಳ್ಳವರು. ನೆಯ್ಗೆ ಕಸಬನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ನಾನು ಹೇಳಿದ ಪ್ರಕಾರ ಅವರು ನಡೆದುಕೊಳ್ಳುತ್ತಾ ಬಂದಿರುವುದು ನನಗೆ ತುಂಬಾ ಸಂತೋಷವನ್ನುಂಟುಮಾಡಿದೆ. ಮಧುರೆಯಲ್ಲಿ ಕೈ ಮಗ್ಗಗಳು ಅನೇಕವಾಗಿ ಕೆಲಸ ಮಾಡುತ್ತಿರುವವು, ಆದರೆ ಶಕ್ತಿಯ ಸಹಾಯದಿಂದ ಕೆಲಸವಾಗುವಂಥಾ ಮಗ್ಗಗಳ ಕೂಡ ಪೋಟಾಪೋಟಿಗೆ ನಿಲ್ಲಲಾರವು. ಇದಲ್ಲದೆ ಇಲ್ಲಿನವರೆಲ್ಲಾ ಆಕೃತಿಗಳನ್ನೂ, ಫೋಟೋ ಚಿತ್ರಗಳನ್ನೂ, ನಾನಾತರದ ಚಿತ್ರ ಕೆಲಸಗಳನ್ನೂ ನೆಯ್ಗೆಯಲ್ಲಿ ಹಾಕಲಾರದವರಾಗಿದ್ದಾರೆ. ಇದು ಬಹು ಲಾಭಕರವಾದ ಭಾಗವಾಗಿರುತ್ತದೆ. ಜರತಾರಿ ಕೆಲಸವು (ಕಲಾಪತ್ತಿನ ನೆಯ್ಗೆಯು) ಈಚೆಗೆ ಬಹಳವಾಗಿ ಹೆಚ್ಚಿ, ಇನ್ನೂ ಹೆಚ್ಚುತ್ತಿರುವುದು. ಮಧುರೆಯೊಂದರಲ್ಲೇ ವರುಷಕ್ಕೆ ೨೪ ಲಕ್ಷ ರೂಪಾಯಿನ ಕಲಾಪತ್ತನ್ನು ನೆಯ್ಗೆಯವರು ಕೊಂಡು ಉಪಯೋಗಿಸುತ್ತಾರೆ. ಈ ಕಲಾಪತ್ತಿನ ಕಸಬಿನಲ್ಲಿ ಅಪಾರವಾದ ಲಾಭವುಂಟೆಂದು ಕೆಲವು ಫ್ರೆಂಚ್ ವರ್ತಕರು ಹೇಳುತ್ತಾರೆ. ಇದನ್ನೂ ನೆಯ್ಗೆ ಕಸಬಿಗೆ ಸಂಬಂಧಪಟ್ಟ ಇತರ ಎಲ್ಲಾ ಭಾಗಗಳನ್ನೂ ಚೆನ್ನಾಗಿ ಕಲಿತು ಬರಬೇಕೆಂಬುವುದೇ ನನ್ನ ಮುಖ್ಯ ಉದ್ದೇಶವಾಗಿದೆ ಎಂಬುದೇ.

ಮೆ|| ತುಲಸೀರಾಂಯವರು ಮದುರೆಯಿಂದ ರೈಲಿನಲ್ಲಿ ಟುಟಿಕಾರಿನ್‌ಗೆ ಹೋಗಿ ಅಲ್ಲಿ ಹಡಗು ಹತ್ತಿ ಸೀಮೆಗೆ ಪ್ರಯಾಣಮಾಡಿದರು.

ಪಶುವೈದ್ಯ ವಿದ್ಯಾಶಾಲೆಯು.

ಬೊಂಬಾಯಿನಲ್ಲಿ ಆದ ಹೊಸ ಕಟ್ಟಡವು.

ಬೊಂಬಾಯಿ ಪಟ್ಟಣದ ಪಾರೇಲ್ ಎಂಬ ಭಾಗದಲ್ಲಿ ಬೊಂಬಾಯಿನ ಪಶುವೈದ್ಯ ವಿದ್ಯಾಶಾಲೆಯನ್ನು ಹೊಸದಾಗಿ ಕಟ್ಟಿದರು. ಇದನ್ನು ಕಳೆದ ವಾರ ಘನವಂತರಾದ ಮೆ|| ಜೆ. ಬಿ. ಜೆಂಕಿನ್ಸ್, ಸಿ. ಎಸ್. ಐ. ರವರು ಪ್ರತಿಷ್ಠೆ ಮಾಡಿದರು. ಕಳೆದ ೧೮೮೬ ನೇ ಇಸವಿಯಲ್ಲಿ ಬ್ಯಾರನ್ ಸರ್ ದಿನ್‌ಷಾ ಪೆಟಿಟ್ ಎಂಬ ಪಾರ್ಸಿ ಲಕ್ಷಾಧಿಪತಿಯು ಪಶುವೈದ್ಯ ವಿದ್ಯಾಶಾಲೆಗೋಸ್ಕರ ತನ್ನ ಮೂರು ದೊಡ್ಡ ಬಂಗಲೆಗಳನ್ನು ಉಚಿತವಾಗಿ ಒಪ್ಪಿಸಿ ಬಿಟ್ಟನು. ಆ ಲಾಗಾಯ್ತು ಇದುವರೆಗೂ ಆ ವಿದ್ಯಾಶಾಲೆಯನ್ನೂ ಆಸ್ಪತ್ರೆಯನ್ನೂ ಆ ಕಟ್ಟಡಗಳಲ್ಲೇ ನಡೆಸುತ್ತಾ ಬಂದರು. ಈ ಕಟ್ಟಡಗಳು ಈಗ ಸಾಲದೇ ಬಂದದ್ದರಿಂದ ವಿಸ್ತಾರವಾದ ಬೇರೆ ದೊಡ್ಡ ಬಂಗಲೆಗಳನ್ನು ಕಟ್ಟಬೇಕಾಯಿತು. ಈ ವೈದ್ಯ ವಿದ್ಯಾಶಾಲೆಯು ಪ್ರಾರಂಭವಾದ ಲಾಗಾಯ್ತು ೨೧೫ ಮಂದಿ ಅಲ್ಲಿ ಓದಿ ಪಶು ವೈದ್ಯದಲ್ಲಿ ತೇರ್ಗಡೆ ಹೊಂದಿ ಸರ್ಕಾರದ ಸರ್ವೀಸಿನಲ್ಲಿ ಸೇರಿಕೊಂಡಿರುತ್ತಾರೆ. ಹಲವರು ದೇಶೀಯ ಸಂಸ್ಥಾನಗಳಲ್ಲೂ ನೌಕರಿ ಮಾಡುತ್ತಿರುವರು. ಇನ್ನು ಕೆಲವು ಪಶುವೈದ್ಯರು ಸ್ಟ್ರೇಟ್ಸ್‌ಸೆಟಲ್‌ಮೆಂಟ್ಸ್, ಮಲಬಾರ ರಾಜ್ಯಗಳು, ಈ ಮೊದಲಾದ ಕಡೆಗಳಿಗೆ ಹೋಗಿ ಪಶುರೋಗ ಚಿಕಿತ್ಸಕರಾಗಿ ಹೆಸರು ಪಡೆದಿರುವರು. ಬೊಂಬಾಯಿನಲ್ಲಿ ಸ್ಥಾಪಿಸಲ್ಪಟ್ಟ ಪಶುವೈದ್ಯದ ಆಸ್ಪತ್ರೆಯೊಳಗೆ ಕಳೆದ ೧೮೮೩ ನೇ ಇಸವಿಯಿಂದ ೨೫,೦೦೦ ಕ್ಕಿಂತಲೂ ಹೆಚ್ಚು ಪಶು ಪ್ರಾಣಿಗಳಿಗೆ ಚಿಕಿತ್ಸೆ ನಡೆದಿರುವುದು. ಈ ಆಸ್ಪತ್ರೆಯಲ್ಲಿ ೮೦ ಕುದುರೆಗಳು, ೨೫೦ ಗೋಕಾಯಿಗಳು, ೨೫ ನಾಯಿಗಳು ಇದ್ದು ಚಿಕಿತ್ಸೆ ಹೊಂದುವುದಕ್ಕೆ ಅವಕಾಶವುಂಟು. ಪಶುವೈದ ವಿದ್ಯಾರ್ಥಿಗಳು ಈ ಆಸ್ಪತ್ರೆಯಲ್ಲಿ ಕಾಯಿಲೆಯಾಗಿರುವ ಮೂಗು ಪ್ರಾಣಿಗಳನ್ನು ಕಣ್ಣಾರ ನೋಡಿ, ರೋಗನಿವಾರಣೆಗೆ ಪುಸ್ತಕದಲ್ಲಿ ಓದಿ ಕಲಿತದ್ದನ್ನು ಕಾರ್ಯತಃ ಪ್ರಯೋಗಮಾಡಿ ಚಿಕಿತ್ಸೆ ಮುಂತಾದದ್ದನ್ನು ತಿಳಿದುಕೊಳ್ಳುವುದಕ್ಕೆ ತುಂಬಾ ಸಹಾಯವಾಗಿರುತ್ತದೆ.

ಕೆಲವು ಕಾಲದಿಂದೀಚೆಗೆ ಈ ವಿದ್ಯಾಶಾಲೆಯಲ್ಲಿ ಓದತಕ್ಕ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಾ ಬಂದು, ಸ್ಥಳವತಿಯು ಸಾಲದೆ ಹೋದದ್ದರಿಂದ ಗವರ್ನಮೆಂಟಿನವರು ಬೇರೊಂದು ಕಟ್ಟಡವನ್ನು ಕಟ್ಟಿಸಬೇಕೆಂದು ೧೯೦೭ ರಲ್ಲಿ ಸ್ಯಾಂಕ್ಷನ್ ಮಾಡಿದರು. ಇದಕ್ಕಾಗಿ ಆ ಕಟ್ಟಡದ ಸಮೀಪದಲ್ಲೇ ಸರ್ಕಾರದವರು ಒಂದು ಲಕ್ಷ ರೂಪಾಯಿ ಕೊಟ್ಟು ಜಮೀನನ್ನು ಕೊಂಡುಕೊಂಡು ಕಾಮಗಾರಿ ಮಾಡಿಸಿ ಕಟ್ಟಡಗಳನ್ನು ಸಿದ್ಧಪಡಿಸಿರುತ್ತಾರೆ. ಸದ್ಯ ಈ ವಿದ್ಯಾಶಾಲೆಯ ಮೂರು ತರಗತಿಗಳಲ್ಲೂ ಒಟ್ಟು ೧೦೭ ಮಂದಿ ವಿದ್ಯಾರ್ಥಿಗಳಿರುತ್ತಾರೆ. ಈ ಪೈಕಿ ೭೭ ಜನರು ಆ ವಿದ್ಯಾಶಾಲೆಯ ಒಳ ಕಟ್ಟಿರುವ ವಿದ್ಯಾರ್ಥಿನಿಲಯದಲ್ಲೇ ಇರುವರು. ಇವರೆಲ್ಲಾ ಒಂದು ಊರಿನವರಲ್ಲ. ಒಂದು ಜಾತಿಗಾಗಲಿ ಒಂದು ಮತಕ್ಕಾಗಲಿ ಸೇರಿದವರಲ್ಲ. ಹಿಂದೂಸ್ಥಾನದ ಎಲ್ಲಾ ಭಾಗಗಳಿಂದಲೂ ಎಲ್ಲಾ ಮತಸ್ಥರೂ ಹೋಗಿ ಅಲ್ಲಿ ಈ ಪಶುವೈದ್ಯವನ್ನು ಕಲಿತುಕೊಳ್ಳುತ್ತಿದ್ದಾರೆ.

ಮತಗಳ ಸಮಾಜವು

ಕಲ್ಕತ್ತಾ ಪಟ್ಟಣದಲ್ಲಿ ನಡೆದ ಸಭೆಯ ವೃತ್ತಾಂತವು.

ಕಳೆದ ಶುಕ್ರವಾರ ಮಧ್ಯಾಹ್ನ ಕಲ್ಕತ್ತಾ ಪಟ್ಟಣದ ಟೌನ್‌ಹಾಲ್ ಬಂಗಲೆಯಲ್ಲಿ ಹಿಂದುಸ್ಥಾನದ ಮತಗಳ ಸಮಾಜವು ಜರುಗಿತು. ಸುಮಾರು ೧,೫೦೦ ಮಂದಿ ಎಲ್ಲಾ ಕೋಮುಗಳ ಪ್ರತಿನಿಧಿಗಳೂ ಸಭೆಯಲ್ಲಿ ಹಾಜರಾಗಿದ್ದರು. ದರ್ಭಾಂಗದ ಮಹಾರಾಜರವರು ಸಭಾನಾಯಕರಾಗಿದ್ದರು.

ಕಲ್ಕತ್ತಾ ಹೈಕೋರ್ಟಿನ ಜಡ್ಜರಾಗಿದ್ದು ಪೆನ್‌ಷನ್ ಪಡೆದಿರುವ ಮಿಸ್ಟರ್ ಶಾರದಾ ಚರಣ ಮಿತ್ರರವರು ಕಮಿಟಿಯ ಪ್ರೆಸಿಡೆಂಟರಾಗಿ ನಿಂತು ಮೆಂಬರುಗಳಿಗೆ ಸುಸ್ವಾಗತವನ್ನು ಬಯಸಿ ತಿಳಿಸಿದ ಮುಖ್ಯಾಭಿಪ್ರಾಯಗಳೇನೆಂದರೆ — ಗತಿಸಿದ ಸ್ವಾಮಿ ವಿವೇಕಾನಂದರವರು ಇಂಥಾ ಮತಗಳ ಸಮಾಜವನ್ನು ನಡಿಸಿದ್ದರಿಂದ ಅವರು ಪ್ರಾರಂಭಿಸಿದ ಕಾರ್ಯವನ್ನು ನಾವು ಮುಂದರಿಸುವವರಾಗಿದ್ದೇವೆ. ಹಿಂದೂಸ್ಥಾನದಲ್ಲಿ ಮತಪಂಗಡಗಳು ಹೇರಳವಾಗಿದ್ದಾಗ್ಯೂ ನಮ್ಮನ್ನೆಲ್ಲಾ ಆಳುತ್ತಿರುವಂಥಾ ಇಂಗ್ಲಿಷ್ ಗವರ್ನಮೆಂಟಿನವರು ನಿಷ್ಪಕ್ಷಪಾತಿಗಳಾಗಿಯೂ ಮತವಿಚಾರದಲ್ಲಿ ಪ್ರವರ್ತಿಸದೆ ಪ್ರಜೆಗಳಿಗೆ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಕೊಟ್ಟಿರತಕ್ಕವರಾಗಿಯೂ ಇರುವ ದೆಸೆಯಿಂದ ನಾವು ಇಂಥಾ ಸಮಾಜವನ್ನು ನಡಿಸುವುದು ಸಾಧ್ಯವಾಗಿರುತ್ತದೆ. ಈ ಬೇರೆ ಬೇರೆ ಮತಸ್ಥರಲ್ಲಿ ಆಗಾಗ್ಗೆ ಪರಸ್ಪರವಾದ ವಿರೋಧ ವೈಷಮ್ಯಗಳು ಪ್ರಾಪ್ತವಾಗುತ್ತಾ ಪ್ರಜೆಗಳಲ್ಲಿರಬೇಕಾದ ಐಕ್ಯತೆಗೂ ಸೌಹಾರ್ದಕ್ಕೂ ಕುಂದಕವುಂಟಾಗುತ್ತಿರುವುದರಿಂದ ಇಂಥಾ ಸಮಾಜಗಳನ್ನು ನಡಿಸಿ ಆ ಕುಂದಕವನ್ನು ಹೋಗಲಾಡಿಸಿಕೊಳ್ಳಬೇಕಾದದ್ದು ಪರಮಾವಶ್ಯವಾಗಿರುತ್ತದೆ. ಈಗ ಸೇರಿರುವ ಕಮಿಟಿಯ ಈ ಉದ್ದೇಶವು ಸಾರ್ಥಕವಾದೀತೆಂದು ನಂಬಿ ನಿರೀಕ್ಷಿಸುವೆವು ಎಂಬುದೇ.

ತರುವಾಯ ಸಭಾನಾಯಕರಾದ ಮಹಾರಾಜರವರು ಮತಗಳನ್ನು ಕುರಿತು ಉಪನ್ಯಾಸಮಾಡಿ ಹೇಳಿದ್ದೇನೆಂದರೆ — ಪ್ರಾಚೀನ ಕಾಲಗಳಲ್ಲಿ ಹಿಂದೂಸ್ಥಾನದೊಳಗೆ ಇಂಥಾ ಸಮಾಜಗಳು ಆಗಾಗ್ಗೆ ನಡೆದಿರುತ್ತವೆ. ಮನುಷ್ಯವರ್ಗದವರೆಲ್ಲಾ ಸಕಲ ಜೀವರಾಶಿಗಳಿಗೂ ದೇವರೊಬ್ಬನೇ ತಂದೆಯಾಗಿರುತ್ತಾನೆ ತಿಳಿದೂ, ಎಲ್ಲರೂ ಭ್ರಾತೃವರ್ಗಕ್ಕೆ ಸೇರಿದವರೇ ಹೊರತು ಒಪ್ಪಿ ಆ ರೀತಿ ಅನುಸರಿಸಿಕೊಂಡು ಬರುವಂಥಾ ಏಕ ಮತಕ್ಕೆ ತಿರುಗಿಕೊಳ್ಳುತ್ತಾ ಬರುವೆವು. ಈ ಮತವನ್ನು ಸ್ಥಿರಪಡಿಸುವುದಕ್ಕೂ, ಅದರಂತೆ ಶಾಶ್ವತ ಸನಾತನ ಪ್ರೋತ್ಸಾಹಪಡಿಸುವುದಕ್ಕೂ ಈ ಸಮಾಜವು ಕೂಡಿದಂತಿರುವುದು. ಬಾಹ್ಯಾಚಾರ ರೂಪಾದಿಗಳ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಗರ್ಭಗುಡಿಯೊಳಕ್ಕೆ ಪ್ರವೇಶಿಸಿ ನೋಡಿದರೆ ಸಕಲ ಮತಗಳ ತತ್ವಗಳೂ ಒಂದೇ ಆಗಿರುವವು. ಕಾಲಕ್ರಮದಲ್ಲಿ ಈ ಏಕ ಮತವೇ ಸರ್ವತ್ರ ವ್ಯಾಪಿಸಿಯಾಗಿ ನಿರಪಟ್ಟಿಸಿಸುವುದಕ್ಕೆ ಸಂಶಯವಿಲ್ಲವೆಂದು ನನಗೆ ತೋರುತ್ತಿದೆ ಎಂಬ ರೀತಿಯಾಗಿ ಹೇಳಿದ ಬಳಿಕ ಅವರು ಪಾರಸೀಕರ, ಬೌದ್ಧರ, ಕ್ರೈಸ್ತರ, ಮಹಮ್ಮದೀಯರ, ಹಿಂದುಗಳ ಮತ ತತ್ವಗಳನ್ನು ಕೆಲವು ಮಟ್ಟಿಗೆ ಉದಾಹರಿಸಿ ತಿಳಿಸಿದರು.

ಅನಂತರ ಕೆಲವು ಪ್ರತಿನಿಧಿಗಳು ಯೆಹೂದ, ಪಾರಸೀ, ಬೌದ್ಧ, ಜೈನ, ಬ್ರಹ್ಮ ಸಮಾಜ ಮೊದಲಾದ ಮತಗಳನ್ನು ಕುರಿತು ಬರೆದು ತಂದಿದ್ದ ಉಪನ್ಯಾಸಗಳನ್ನು ಸಭೆಯಲ್ಲಿ ಓದಿ, ಮೊದಲನೇ ದಿವಸ ಕಾರ್ಯಗಳನ್ನು ಮುಕ್ತಾಯಮಾಡಿದರು.

ಹುಚ್ಚು ನಾಯಿ ಕಡಿದವರಿಗೆ ಚಿಕಿತ್ಸೆ ನಡಿಯುವ ಕೂನೂರ್ ಆಸ್ಪತ್ರೆಯು.

ಕಳೆದ ವರುಷ ನಡೆದ ಚಿಕಿತ್ಸಾ ಕಾರ್ಯಗಳು.

ದಕ್ಷಿಣ ದೇಶದಲ್ಲಿ ಹುಚ್ಚು ನಾಯಿ ನರಿ ಮೊದಲಾದ ಪ್ರಾಣಿಗಳಿಂದ ಕಡಿಸಿಕೊಂಡವರಿಗೆ ಚಿಕಿತ್ಸೆ ನಡಿಯುವುದಕ್ಕಾಗಿ ನೀಲಗಿರಿ ಬೆಟ್ಟದ ಬಳಿ ಇರುವ ಕೂನೂರಿನಲ್ಲಿ ಸರ್ಕಾರದವರು ಒಂದು ಆಸ್ಪತ್ರೆಯನ್ನು ಇಡಿಸಿ ಎರಡು ವರುಷಗಳಾದವು. ಚಿಕಿತ್ಸೆಯ ಕೆಲಸಗಳು ಬಹಳ ತೃಪ್ತಿಕರವಾಗಿ ನಡಿಯುತ್ತಿವೆ ಎಂದು ಕಳೆದ ವರುಷದ ರಿಪೋರ್ಟಿನಿಂದ ತಿಳಿದು ಬರುತ್ತದೆ. ಮೆ|| ಜೆ. ಡಬ್ಲ್ಯು. ಕಾರ್ನವಾಲ್ ಎಂಬುವರು ಈ ಆಸ್ಪತ್ರೆಯಲ್ಲಿ ಮುಖ್ಯ ಡಾಕ್ಟರಾಗಿರುತ್ತಾರೆ. ಪ್ರತಿ ವರುಷವೂ ಹೆಚ್ಚು ಜನರು ಅಲ್ಲಿಗೆ ಹೋಗಿ ಚಿಕಿತ್ಸೆ ಮಾಡಿಸಿಕೊಂಡು ಬರುತ್ತಿರುವುದರಿಂದ ಈ ಆಸ್ಪತ್ರೆಯು ಪ್ರಜೆಗಳ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿದೆ ಎಂದು ಧಾರಾಳವಾಗಿ ಹೇಳಬಹುದು. ಹಿಂದಿನ ವರುಷ ೧೪೮೦ ಮಂದಿಯೂ, ಕಳೆದ ವರುಷ ೩೪೦ ಮಂದಿಯೂ ಈ ಹೊಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿರುತ್ತಾರೆ. ಈ ಪೈಕಿ ಮದರಾಸ್ ಆಧಿಪತ್ಯದ ಪ್ರಜೆಗಳು ೧೭೩ ಮಂದಿ, ಅನಂತಪುರದವರು ೩, ಹೈದರಾಬಾದ್ ೧೭, ಸಿಲೋನ್ ೨೩, ಬೊಂಬಾಯಿ ೪೧, ಮೈಸೂರು ೩೫, ಬರ್ಮಾ ೨೭, ಬಂಗಾಳಾ ೯, ಪಾಂಡಿಚೆರಿ ೧೪, ಗೋವೆ ೧, ಈ ರೀತಿ ಜನರು ಕೂನೂರಿನಲ್ಲಿ ಚಿಕಿತ್ಸೆ ಮಾಡಿಸಿಕೊಂಡರು. ಇವರೆಲ್ಲಾ ಒಂದು ಜಾತಿ ಅಥವಾ ಮತದವರಲ್ಲ. ಹಿಂದುಗಳು, ಮಹಮ್ಮದಿಯರು, ದೇಶೀಯ ಕ್ರೈಸ್ತರು, ಪಾರಸೀಕರು, ಸಿಂಹಳೀಯರು, ಬರ್ಮೀಯರು, ಇವರೇ ೨೮೩ ಜನರಾಗುತ್ತಾರೆ. ಮತ್ತು ೫೧ ಮಂದಿ ಯೂರೋಪಿಯನ್ನರೂ ೩೯ ಮಂದಿ ಯೂರೇಷಿಯನ್ನರೂ ಚಿಕಿತ್ಸೆ ಮಾಡಿಸಿಕೊಂಡರು. ಈ ರೀತಿ ಚಿಕಿತ್ಸೆ ಮಾಡಿಸಿಕೊಂಡ ೩೭೩ ರೋಗಿಗಳಲ್ಲಿ ಇಬ್ಬರಿಗೆ ಮಾತ್ರ ಆ ಚಿಕಿತ್ಸೆಯಿಂದ ಪ್ರಯೋಜನವಾಗಲಿಲ್ಲ. ಉಳಿದವರೆಲ್ಲಾ ಗುಣಹೊಂದಿದರೆಂದು ಹೇಳುವಲ್ಲಿ ಅಲ್ಲಿನ ಡಾಕ್ಟರುಗಳು ಎಷ್ಟು ಮುತುವರ್ಜಿಯಾಗಿಯೂ ಪ್ರೀತಿ ಪೂರ್ವಕವಾಗಿಯೂ ಕೆಲಸ ಮಾಡುತ್ತಾರೋ, ಚಿಕಿತ್ಸೆಯು ಎಷ್ಟು ಉತ್ತಮ ತರವಾದದ್ದೋ ವೇದ್ಯವಾಗುವುದು. ಇಷ್ಟೇ ಅಲ್ಲ. ಇನ್ನು ಬೇರೆ ೩೮ ಮಂದಿ ಆ ಡಾಕ್ಟರಿಂದ ಪರೀಕ್ಷೆ ಮಾಡಿಸಿಕೊಂಡರು. ಆದರೆ ಇವರಿಗೆ ವಿಷ ಹಿಡಿಯಲಿಲ್ಲವೆಂದೂ ಚಿಕಿತ್ಸೆ ಅವಶ್ಯವಿಲ್ಲವೆಂದೂ ವೈದ್ಯರು ಹೇಳಿ ಕಳುಹಿಸಿದರು.

ಹಿಂದೂಸ್ಥಾನದ ಎಲ್ಲಾ ಆಧಿಪತ್ಯಗಳಿಂದಲೂ ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುವುದಕ್ಕೆ ಬರುತ್ತಿರುವುದರಿಂದ ಅದರ ಖರ್ಚಿಗೆ ಎಲ್ಲಾ ಆಧಿಪತ್ಯಗಳವರೂ ದ್ರವ್ಯ ಸಹಾಯಮಾಡಬೇಕಾಗಿರುತ್ತದೆ. ಈಗ ಸಹಾಯಮಾಡುತ್ತಿರುವವರು ಯಾರೆಂದರೆ — ಮದರಾಸ್ ಆಧಿಪತ್ಯಕ್ಕೆ ಸೇರಿದ ೨೧ ಡಿಸ್ಟ್ರಿಕ್ಟ್ ಬೋರ್ಡುಗಳು ೨,೫೦೦ ರೂಪಾಯನ್ನೂ, ೩೯ ಮ್ಯುನಿಸಿಪಾಲಿಟಿಗಳು ಸುಮಾರು ೧,೭೦೦ ರೂಪಾಯನ್ನೂ, ಬೊಂಬಾಯಿ ಆಧಿಪತ್ಯದ ಕೆಲವು ಡಿಸ್ಟ್ರಿಕ್ಟ್ ಲೋಕಲ್ ಬೋರ್ಡುಗಳು ೮೦೦ ರೂಪಾಯನ್ನೂ, ಅಲ್ಲಿನ ಮ್ಯುನಿಸಿಪಾಲಿಟಿಗಳು ೩೦೦ ರೂಪಾಯನ್ನೂ ಈ ಆಸ್ಪತ್ರೆಯ ಖರ್ಚಿಗೆ ಸಹಾಯಮಾಡಿರುತ್ತವೆ. ಇದಲ್ಲದೆ ಇಂಡಿಯಾ ಗವರ್ನಮೆಂಟಿನವರು ವರುಷಕ್ಕೆ ೪,೫೦೦ ರೂಪಾಯನ್ನೂ, ಮದರಾಸ್ ಗವರ್ನಮೆಂಟಿನವರು ೩,೫೦೦ ರೂಪಾಯನ್ನೂ ಕೊಡುತ್ತಾ ಬಂದಿದ್ದಾರೆ. ಅತ್ಲಾಗಿ ಬೊಂಬಾಯಿ ಗವರ್ನಮೆಂಟಿನವರು ೧೯೦೮ ರ ಲಾಗಾಯ್ತು ಮೂರು ವರುಷಗಳ ವರೆಗೆ ವರುಷಕ್ಕೆ ೧,೫೦೦ ರೂಪಾಯಿನಂತೆಯೂ, ಸಿಲೋನ್ ಗವರ್ನಮೆಂಟಿನವರು ವರುಷಕ್ಕೆ ೫೦೦ ರೂಪಾಯಿನಂತೆಯೂ ಕೊಡುವರು. ದೇಶೀಯ ಸಂಸ್ಥಾನಗಳ ಪೈಕಿ ಹೈದರಾಬಾದಿನಿಂದ ಆಸ್ಪತ್ರೆಯ ಖರ್ಚಿಗೆ ೧೯೦೭ ನೆ ಇಸವಿಯಿಂದ ಹತ್ತು ವರುಷಗಳ ತನಕ ಪ್ರತಿ ವರುಷವೂ ೧,೦೦೦ ರೂಪಾಯಿ, ಮೈಸೂರು ಸಂಸ್ಥಾನದಿಂದ ೧೯೦೭ನೆ ಇಸವಿ ಲಾಗಾಯ್ತು ಐದು ವರುಷಗಳ ತನಕ ವರುಷ ಒಂದಕ್ಕೆ ೫೦೦ ರೂಪಾಯಿ, ತಿರುವಾಂಕೂರು ಸಂಸ್ಥಾನದಿಂದ ೧೯೦೮ ರ ಲಾಗಾಯ್ತು ಐದು ವರುಷ ಕಾಲ ಪ್ರತಿ ವರುಷವೂ ೧೦೦ ರೂಪಾಯಿ, ಈ ರೀತಿ ವರ್ಷಾಶನಗಳು ಈ ಆಸ್ಪತ್ರೆಗೆ ದೊರಕುತ್ತಲಿವೆ. ಆದರೂ ಈ ಆಸ್ಪತ್ರೆಯಲ್ಲಿ ನಡಿಯುವ ಚಿಕಿತ್ಸಾ ಕಾರ್ಯಗಳಿಗೆ ಈ ಹಣವು ಸಾಕಾಗುವುದಿಲ್ಲವೆಂದೂ, ಪರೋಪಕಾರಿಗಳಾದ ಮಹನೀಯರು ಹೆಚ್ಚಾಗಿ ದ್ರವ್ಯಸಹಾಯ ಮಾಡಬೇಕೆಂದೂ ಅದರ ಮೇಲ್ವಿಚಾರಣೆಯ ಕಮಿಟಿಯವರು ಪ್ರಾರ್ಥಿಸುತ್ತಾರೆ.

ಶ್ರೀ ಕೃಷ್ಣರಾಜ ಕೃಷಿ ಶಿಲ್ಪಾಭಿವರ್ಧಕ ಸಮಾಜ, ಲಿಮಿಟೆಡ್ ಮೈಸೂರು

ಅರಿಸಿನ, ಶುಂಠಿ ವ್ಯವಸಾಯ ಕ್ರಮವು

ಅರಿಸಿನ ಕೆಂಪುಮಣ್ಣು ಗೋಡುಮಣ್ಣು, ಮರಳೂ, ಕಲ್ಲು, ಮರಳು, ಇವು ಅಧಿಕವಾಗಿರುವ ಜಮೀನುಗಳಲ್ಲಿ ಅರಿಸಿನವು ಚೆನ್ನಾಗಿ ಬೆಳೆಯುವುದಿಲ್ಲ. ಸಣ್ಣ ಮರಳು ಮತ್ತು ಸಣ್ಣ ಮರಳು ಎರಡೂ ಇರುವ ಮೃದುವಾದ ಜಮೀನಿನಲ್ಲಿ ಅವು ಚೆನ್ನಾಗಿ ಬೆಳೆಯುತ್ತದೆ. ಅರಿಸಿನ ಮತ್ತು ಶುಂಠಿ, ಈ ಎರಡರ ವ್ಯವಸಾಯವೂ ಬಹುಶಃ ಒಂದೇ ವಿಧವಾಗಿದೆ. ಈ ಫಸಲುಗಳು ನೆರಳು ಮತ್ತು ತೇವವಾಗಿರುವ ಸ್ಥಳಗಳಲ್ಲಿ ಚೆನ್ನಾಗಿ ಬೆಳೆಯುತ್ತವೆ.

ಜಮೀನನ್ನು ಕೊನೇ ಮಳೆಗಳಲ್ಲಿ, ಅಂದರೆ ನವೆಂಬರು ಡಿಸೆಂಬರು ತಿಂಗಳುಗಳಲ್ಲಿ ಅಗತ್ಯ ಮಳೆಗಳಲ್ಲಿ ಚೆನ್ನಾಗಿ ಉತ್ತು ಸಡಿಲುವ ಡಿ ಹುಲ್ಲೆ ಹೊಡೆದು ಮಟ್ಟಮಾಡಿ ಇಟ್ಟಿರಬೇಕು. ಮೇ ಮಾಸದಲ್ಲಿ, ಅಂದರೆ ಜ್ಯೇಷ್ಠ ಆಷಾಢ ಮಾಸಗಳಲ್ಲಿ ಮಳೆಯು ಚೆನ್ನಾಗಿ ಬಂದ ಕೂಡಲೆ ಅರಿಸಿನದ ಕೊಂಬುಗಳನ್ನು ಸಾಲುಸಾಲಾಗಿ ೯ ಅಂಗುಲದ ಲಾಗಾಯ್ತು ೧ ಅಡಿ ದೂರದಲ್ಲಿ ನೆಡಬೇಕು. ಒಂದು ಸಾಲಿಗೂ ಮತ್ತೊಂದು ಸಾಲಿಗೂ ಮಧ್ಯದಲ್ಲಿ ೨ ಅಡಿ ಲಾಗಾಯ್ತು ೩ ಅಡಿಯವರೆಗೆ ಜಾಗವನ್ನು ಬಿಡುವುದು ಅವಶ್ಯಕ. ಒಂದು ಎಕರೆ ಜಮೀನಿಗೆ ನಮ್ಮ ಸೀಮೆಯ ೨೦ ಮಣದ ತೂಕ ಅರಿಸಿನದ ಬೀಜದ ಕೊಂಬುಗಳು ಬೇಕಾಗುತ್ತವೆ. ಅರಿಸಿನಕ್ಕೆ ಸಾಮಾನ್ಯವಾಗಿ ಹೆಚ್ಚಾಗಿ ಗೊಬ್ಬರ ಹಾಕುವುದಿಲ್ಲ. ಎಕರೆ ೧ಕ್ಕೆ ೩ ಮಣವಷ್ಟು ಬೂದಿ, ೯ ಮಣ ಹಿಪ್ಪೆ, ಹೊಂಗೆ ಮೊದಲಾದ ಹಿಂಡಿ ಗೊಬ್ಬರ ಹಾಕಿದರೆ ಸಾಕು. ಅರಿಸಿನವನ್ನು ನಟ್ಟ ತರುವಾಯ ಬುಡದಲ್ಲಿ ಗೊಬ್ಬರವನ್ನು ಹಾಕಿ ಅರಿಸಿನದ ಸಸಿಗಳು ಸ್ವಲ್ಪ ಬೆಳೆದ ಕೂಡಲೆ ಮಣ್ಣು ಏರುಹಾಕಿದರೆ ಗೊಬ್ಬರ ಚೆನ್ನಾಗಿ ಪಕ್ವವಾಗಿ ಅರಿಸಿನದ ಫಸಲಿಗೆ ತುಂಬಾ ಫಾಯಿದೆಯನ್ನುಂಟುಮಾಡುತ್ತದೆ. ಅರಿಸಿನದ ಸಾಲುಗಳನ್ನು ನೀರು ಬಿಟ್ಟರೆ ಕಟ್ಟೆ ಮಾಡಿ, ಬುಡಗಳಲ್ಲಿ ಹೆಚ್ಚಾಗಿ ನೀರು ನಿಲ್ಲದಂತೆ ನೋಡಬೇಕು. ಅರಿಸಿನದ ಫಸಲಿಗೆ ೮-೯ ತಿಂಗಳು ಆಗಬೇಕು. ಕೀಳುವುದನ್ನು ತೆಗೆದುಹಾಕುತ್ತಾರೆ. ಈ ಫಸಲನ್ನು ಎಲೆ ಒಣಗಿದ ಕೂಡಲೆ ಅಗೆದು ಗೆಡ್ಡೆಗಳನ್ನು ತೆಗೆಯುತ್ತಾರೆ. ದೊಡ್ಡದಾಗಿರುವ ಗೆಡ್ಡೆಗಳ ಪಕ್ಕದಲ್ಲಿ ಚಿಕ್ಕ ಚಿಕ್ಕದಾಗಿ ಒಡೆದಿರುವ ಕೊಂಬುಗಳನ್ನು ತೆಗೆದು, ಒಣ ಹುಲ್ಲಿಗೆ ನೀರು ಹಾಕಿ ಅದರಲ್ಲಿ ಇಟ್ಟರೆ ಇವು ಬೀಜಕ್ಕೆ ಉಪಯೋಗವಾಗುತ್ತವೆ.

ಅರಿಸಿನದ ಕೊಂಬು ಅಗೆದ ಕೂಡಲೆ ಅದು ವಿಶೇಷ ಗಾತ್ರವಾಗಿದ್ದರೆ ಅದನ್ನು ಎರಡು ಭಾಗವಾಗಿ ಸೀಳಿ ಬೇಯಿಸುತ್ತಾರೆ. ಈ ರೀತಿ ತಯಾರಿಸಿದ ಕೊಂಬುಗಳನ್ನು ಸಗಣಿಯ ನೀರಿನಲ್ಲಿ ಕುದಿಸಿ ಬಿಸಿಲಿನಲ್ಲಿ ಒಣಗಿಸುತ್ತಾರೆ. ಇವುಗಳನ್ನು ಒಣಗಿಸುವಾಗ ಆಗಾಗ್ಗೆ ಉಜ್ಜುತ್ತಿದ್ದರೆ ಅವುಗಳ ಮೇಲೆ ಇರತಕ್ಕ ಕಲ್ಮಷಗಳೂ ಮತ್ತು ಬೇರೂ ಸಹಾ ಹೋಗಿ ನುಣ್ಣಗಾಗುತ್ತವೆ. ಪೂರ್ತಿ ಒಣಗಿದ ಮೇಲೆ ಅರಿಸಿನವು ಮಾರುವುದಕ್ಕೆ ಸಿದ್ಧವಾಗುತ್ತದೆ.

ಅರಿಸಿನದಲ್ಲಿ ಬಣ್ಣದ ಅರಿಸಿನ ಅಥವಾ ಹಚ್ಚುವ ಅರಿಸಿನವೆಂತಲೂ ಮತ್ತು ಅಡಿಗೆಯ ಅರಿಸಿನವೆಂತಲೂ ಎರಡು ಬಗೆಯುಂಟು. ಅಡಿಗೆಗೆ ಸಾಮಾನ್ಯವಾಗಿ ಅಡಿಗೆಯ ಅರಿಸಿನವನ್ನೇ ಉಪಯೋಗಿಸುತ್ತಾರೆ. ಅರಿಸಿನವು ಕ್ರಿಮಿಹರವೆಂದು ವೈದ್ಯರು ಹೇಳುತ್ತಾರೆ. ಮತ್ತು ಇದರ ಉಪಯೋಗದಿಂದ ಮನುಷ್ಯರ ಆಹಾರ ಪದಾರ್ಥಗಳಿಗೆ ರಂಗು ಉಂಟಾಗಿ ನೋಡುವುದಕ್ಕೆ ಆಹ್ಲಾದಕರವಾಗಿರುತ್ತದೆ.

ಒಂದು ಎಕರೆಗೆ ಸಾಮಾನ್ಯವಾಗಿ ಅರಿಸಿನದ ಫಸಲು ಚೆನ್ನಾಗಿ ಆದರೆ ೫೦ ಮಣದ ಲಾಗಾಯ್ತು ೬೦-೭೦ ಮಣದ ವರಿವಿಗೂ ಒಣಗಿದ ಅರಿಸಿನವಾಗುತ್ತದೆ. ಒಂದು ಎಕರೆ ಜಮೀನಿನಲ್ಲಿ ಅರಿಸಿನವನ್ನು ಹಾಕಿ ಬೆಳೆ ಮಾಡಬೇಕಾದರೆ ೩೦-೩೫ ರೂಪಾಯಿ ಲಾಗುವಡು ಆಗುತ್ತದೆ. ಅರಿಸಿನವನ್ನು ಬಿಸ್ಕೆ ಜಮೀನಿನಲ್ಲಿ ಬೆಳೆಯುವುದು ಬಹಳ ಅಪೂರ್ವ.

ಶುಂಠಿ — ಹಸೀಶುಂಠಿಯನ್ನು ಸಾಮಾನ್ಯವಾಗಿ ಈ ದೇಶದಲ್ಲಿ ಹಸಿಯಾಗಿಯೇ ಉಪಯೋಗಿಸುತ್ತಾರೆ. ಘಟ್ಟದ ಕೆಳಗೆ ಇದನ್ನು ಒಣಗಿಸಿ ಬೊಂಬಾಯಿ ಮೊದಲಾದ ಪ್ರಾಂತ್ಯಕ್ಕೆ ವಿಶೇಷವಾಗಿ ರಫ್ತುಮಾಡುವರು.

ಈ ಫಸಲುಗಳನ್ನು ಚಿಕ್ಕ ತಲಾವುಗಳ ಕೆಳಗೆ ವ್ಯವಸಾಯ ಮಾಡಿದರೆ ರೈತರಿಗೆ ಬಹಳ ಫಾಯಿದೆಯುಂಟು. ಇವಕ್ಕೆ ಬತ್ತದ ಗದ್ದೆಗೆ ಬೇಕಾಗುವಷ್ಟು ಗೊಬ್ಬರವಾಗಲಿ ನೀರೂ ಬೇಕಿಲ್ಲ. ಆಗಾಗ್ಗೆ ಅಂದರೆ ೮-೧೦ ದಿವಸಕ್ಕೆ ಒಂದು ಸಲ ನೀರು ಹಾಯಿಸಿದರೆ ಸಾಕಾಗಿದೆ. ಈ ಫಸಲುಗಳಿಂದ ಬತ್ತದ ವ್ಯವಸಾಯದಿಂದ

ಉಂಟಾಗುವಷ್ಟು ಘಾಯಿದೆಯುಂಟಾಗುವುದು. ಕೆಳಗೆ ರುಜುವಾತುಪಡಿಸುವವರು ಅನೇಕ ವರ್ಷಗಳನ್ನು ತಮ್ಮ ಸ್ವಂತ ಭೂಮಿಯಲ್ಲಿ ಬೆಳೆದಿರುವುದಲ್ಲದೆ ಬಾಜು ರೈತರುಗಳು ಬೆಳೆದಿರುವುದನ್ನೂ ಕೂಡ ನೋಡಿದವರಾಗಿರುತ್ತಾರೆ.

ಅಡ್ವೊಕೇಟ್ ಪಿ. ರಾಘವಾಚಾರ್, ಮೈಸೂರು.

ಬೊಂಬಾಯಿನ ಹತ್ತಿ ಕಾರ್ಖಾನೆಗಳು.

ವ್ಯಾಪಾರವೂ ಕಾರ್ಖಾನೆಗಳ ಸ್ಥಿತಿಗತಿಯೂ.

ಬೊಂಬಾಯಿ ಪಟ್ಟಣದಲ್ಲಿ ಹತ್ತಿ ಬಟ್ಟೆಗಳನ್ನು ತಯಾರುಮಾಡುವುದಕ್ಕೆ ಕಾರ್ಖಾನೆಗಳನ್ನು ಇಟ್ಟು ನಡಿಸುತ್ತಾ ಇರುವ ಸಾಹುಕಾರರು ಕಳೆದ ಬುಧವಾರ ಸಭೆ ಸೇರಿ ವಾರ್ಷಿಕ ರಿಪೋರ್ಟನ್ನು ಪ್ರಕಟಿಸಿದರು. ಸಭೆಯ ಅಧ್ಯಕ್ಷರಾಗಿದ್ದ ಮೆ| ಫಜೂಲ್‌ಭಾಯಿ ಕರೀಂಭಾಯಿ ಇಬ್ರಾಹಿಂರವರು ಸಭಾಸದರನ್ನು ಕುರಿತು ತಿಳಿಸಿದ ಅಭಿಪ್ರಾಯವೇನೆಂದರೆ:—

ವಿಲಾಯತಿಯ ವ್ಯಾಪಾರವೇ ನಮ್ಮ ಹಿಂಬಲವಾಗಿರುತ್ತದೆ. ಅದು ಈ ವರುಷ ಸ್ವಲ್ಪ ಕ್ಷೀಣಗತಿಗೆ ಬಂದಿರುವುದು. ಆದರೆ ಮುಂದೆ ಮಳೆ ಬೆಳೆಗಳು ತೃಪ್ತಿಕರವಾಗಿ ನಡಿಸಿದ ಪಕ್ಷದಲ್ಲಿ ಆ ವ್ಯಾಪಾರವು ಯಥಾಪ್ರಕಾರ ಬೇಗನೆ ಹೆಚ್ಚುತ್ತಾ ಬಂದೀತೆನ್ನುವುದಕ್ಕೆ ಸಂಶಯವಿಲ್ಲ. ಸದ್ಯ ಹಿಂದುಗಳಲ್ಲಿ ವಿವಾಹ ಮೊದಲಾದ ಉತ್ಸವಗಳು ನಡೆಯದೆ ನಿಂತುಹೋಗಿವೆ. ಹಲವು ಡಿಸ್ಟ್ರಿಕ್ಟುಗಳಲ್ಲಿ ಬೆಳೆಗಳು ಹಾಳಾಗಿರುತ್ತವೆ. ಇದರಿಂದ ಹಳ್ಳಿಗಾಡಿನ ಪ್ರಜೆಗಳು ಬಟ್ಟೆಬರೆಗಳನ್ನು ಕೊಂಡುಕೊಳ್ಳಲು ಚೈತನ್ಯವಿಲ್ಲದವರಾಗಿದ್ದಾರೆ. ಹಿಂದೂಸ್ಥಾನದಲ್ಲಿ ಈಗ ಅನೇಕ ಕಡೆಗಳಲ್ಲಿ ವಿಷಮಶೀತಜ್ವರವು ಪ್ರಬಲವಾಗಿರುತ್ತದೆ. ಆಹಾರ ಪದಾರ್ಥಗಳ ಧಾರಣೆಗಳು ತುಂಬಾ ಹೆಚ್ಚಿರುವವು. ನಮ್ಮ ಕಾರ್ಖಾನೆಗಳಲ್ಲಿ ಬಟ್ಟೆಬರೆಗಳು ಬಹಳ ಹೆಚ್ಚಾಗಿ ತಯಾರಾಗುತ್ತಲಿವೆ. ಈ ಕಾರಣಗಳಿಗೋಸ್ಕರ ಹತ್ತಿ ಬಟ್ಟೆಗಳು ಬಿಕರಿ ಆಗದೆ ಉಳಿದುಹೋಗಿರುವವು. ಈ ಸ್ಥಿತಿಯು ನಮ್ಮ ದೇಶಕ್ಕೆ ಮಾತ್ರವೇ ಅಲ್ಲ. ಇತರ ದೇಶಗಳಲ್ಲೂ ವ್ಯಾಪ್ತವಾಗಿರುವುದು. ಈಗ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾಲವನ್ನು ಸ್ವಲ್ಪ ಮಟ್ಟಿಗೆ ಕಡಮೆ ಮಾಡಿಬಿಟ್ಟರೆ ಈ ಕಷ್ಟದೆಸೆಯು ಪರಿಹಾರವಾಗುವುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಹೀಗೆ ಮಾಡುವುದು ಅವಶ್ಯವೆಂದು ನನಗೆ ತೋರುವುದಿಲ್ಲ. ಇದರಿಂದ ನಮ್ಮ ಕಸಬಿಗೆ ಕೊರತೆಯುಂಟಾದೀತೆಂದು ತೋರುತ್ತದೆ. ಪರದೇಶಗಳಿಂದ ಇಲ್ಲಿಗೆ ಹೆಚ್ಚಾಗಿ ಬರುವ ಸರಕನ್ನು ಗುರ್ತಿಸಿ ಬರಿರುವ ಇಂಥಾ ಸಮಯದಲ್ಲಿ ನಾವು ಬಟ್ಟೆ ತಯಾರುಮಾಡುವುದನ್ನು ಕಡಮೆ ಮಾಡುವುದು ಶ್ರೇಯಸ್ಕರವಾಗಲಾರದು. ಇದರಿಂದ ಮ್ಯಾಂಚೆಸ್ಟರ್ ಮತ್ತು ಲಂಕೆಷೈರುಗಳಿಗೆ ನಾವು ಸೋತುಹೋಗಿ ಅವರ ವಶವರ್ತಿಗಳಾದೇವು. ಹಿಂದೂಸ್ಥಾನವು ಹತ್ತಿ ಬೆಳೆಯುವ ಸೀಮೆಯಾಗಿದೆ. ನಾವು ವಿಶೇಷ ಬುದ್ಧಿಕುಶಲತೆಯನ್ನು ಆಗಾಗ ಕೆಲಸದಲ್ಲಿ ಪ್ರಯೋಗ ಮಾಡುತ್ತಾ ಬಂದಲ್ಲಿ ಇತರ ದೇಶಗಳ ಸರಕುಗಳನ್ನು ಕೂಡ ನಾವು ಪೋಟಿ ಪೋಟಿಯಲ್ಲಿ ನಿಂತು ಜಯಿಸಬಹುದಾಗಿದೆ. ಅದಕ್ಕೆ ಕಾಲವೇ ಒಳ್ಳೆ ಸಮಯವೆಂದು ನನಗೆ ತೋರುತ್ತದೆ. ನಾವು ಈಗಿನ ಸ್ವದೇಶೀ ಪ್ರಚಾರವನ್ನು ಅವಲಂಬಿಸುತ್ತಾ ಬಂದಿರುವುದು ಒಂದು ಶ್ಲಾಘನೀಯವಾಗಿದೆ.

ಈ ಹತ್ತಿ ಬಟ್ಟೆಗಳ ಕಾರ್ಖಾನೆಗಳು ಹಿಂದೂಸ್ಥಾನದಲ್ಲೆಲ್ಲಾ ಕಳೆದ ೧೮೭೮ನೇ ಇಸವಿಯಲ್ಲಿ ೫೦ ಮಾತ್ರ ಇದ್ದುವು. ಈಚೆಗೆ ೧೯೧೮ರಲ್ಲಿ ಈ ಕಾರ್ಖಾನೆಗಳ ಸಂಖ್ಯೆಯು ೧೫೦ಕ್ಕೂ ೧೯೨೬ರಲ್ಲಿ ೩೩೪ಕ್ಕೂ ಹೆಚ್ಚಿದುದ್ದವು. ಇವುಗಳಲ್ಲಿ ೫೭,೬೪,೩೪೬ ನೂಲುವ ರಾಟೆಗಳೂ ೬೭,೭೨೮ ನೆ. ಯ ಯಂತ್ರಗಳೂ ಇರುವವು. ಈ ಕಸಬಿಗೆ ಬೊಂಬಾಯಿ ಪಟ್ಟಣವೇ ಮೊದಲನೆಯ ಸ್ಥಾನವನ್ನು ಪಡೆದಿರುವುದು. ಹತ್ತಿ ಕಾರ್ಖಾನೆಗಳಲ್ಲಿ ಕಳೆದ ೧೯೨೫-೨೬ನೇ ಸಾಲಿನಲ್ಲಿ ಒಂದು ಕೋಟಿಯೂ ಇಪ್ಪತ್ತು ಸಾವಿರ ಪ್ರಜೆಗಳು ಸೇರಿಕೊಂಡು ಕೆಲಸ ಮಾಡುತ್ತಿದ್ದರು. ಕಳೆದ ೧೯೨೬-೨೭ನೇ ಸಾಲಿನಲ್ಲಾದರೋ ಎರಡೂ ಕಾಲುಕೋಟಿ ಜನರು ಈ ಕಸಬನ್ನು ನಡಿಸುತ್ತಿರುವರೆಂದೂ, ಇವಲ್ಲದೆ ಹತ್ತಿ ಬಿಡಿಸುವವರಲ್ಲೂ ಗಟ್ಟುಗಳಾಗಿ ಮಾಡುವವರಲ್ಲೂ ಒಂದು ಲಕ್ಷ ಪ್ರಜೆಗಳು ಸೇರಿ ಕೆಲಸಮಾಡುತ್ತಿದ್ದಾರೆಂದೂ ತಿಳಿದುಬಂದಿದೆ. ಕಳೆದ ಸಾಲಿನಲ್ಲಿ ಈ ಹತ್ತಿ ಕಾರ್ಖಾನೆಗಳ ಬಂಡವಾಳವೆಲ್ಲಾ ಒಟ್ಟು ೧೭ ಕೋಟಿ ರೂಪಾಯಿ ಆಗಿತ್ತು.

ಕೆಲವು ವರುಷಗಳಿಂದೀಚೆಗೆ ಹಿಂದೂಸ್ಥಾನದ ಕಾರ್ಖಾನೆಗಳಲ್ಲಿ ತಯಾರಾಗುವ ಬಟ್ಟೆಬರೆಗಳ ಬಿಕರಿಯು ಕ್ರಮೇಣ ಹೆಚ್ಚುತ್ತಾ ಬಂದಿದೆ. ನಮ್ಮ ಕಾರ್ಖಾನೆಗಳಲ್ಲಿ ಬಟ್ಟೆ ತಯಾರುಮಾಡುವುದಕ್ಕೇನೇ ಬಹಳ ಹೆಚ್ಚು ಹೆಚ್ಚಾಗಿ ಹತ್ತಿಯನ್ನು ಉಪಯೋಗಿಸಿಕೊಳ್ಳುತ್ತಾ ಬಂದಿದ್ದೇವಾದರೂ, ನಾವು ಈ ದೇಶದಿಂದ ೫೬ ಕೋಟಿ ರೂಪಾಯಿನ ಹಸಿ ಹತ್ತಿಯನ್ನು ಇತರ ಕಡೆಗಳಿಗೆ ರಫ್ತು ಮಾಡುತ್ತೇವೆ. ಮತ್ತು ಅನ್ಯದೇಶಗಳಿಂದ ವರುಷಕ್ಕೆ ೪೮ ಕೋಟಿ ರೂಪಾಯಿನ ಹತ್ತಿ ಬಟ್ಟೆಗಳನ್ನು ತರಿಸಿಕೊಳ್ಳುವೆವು. ಇದನ್ನು ನೋಡಿದರೆ ನಾವು ಈ ಕಸಬನ್ನು ಇನ್ನೂ ಹೆಚ್ಚಾಗಿ ಅಭಿವೃದ್ಧಿ ಮಾಡಬೇಕೆಂಬೂ. ಇದಕ್ಕಾಗಿ ನಾವು ತುಂಬಾ ಸಾಹಸ ಪಡಬೇಕಾದದ್ದು ಅವಶ್ಯವೆಂದೂ ನಾನು ಹೇಳಬೇಕಾದದ್ದಿಲ್ಲ ಎಂಬುವುದೇ.

ಪ್ರೆಸಿಡೆಂಟರಾದ ಮೆ| ಫಜೂಲ್‌ಭಾಯಿ ಕರೀಂಭಾಯಿ ಇಬ್ರಾಹಿಂರವರು ಸಭಿಕರನ್ನು ಕುರಿತು ಇನ್ನೂ ಹೇಳಿದ್ದೇನೆಂದರೆ:—ಹಿಂದೂಸ್ಥಾನದ ಕಾರ್ಖಾನೆಗಳಲ್ಲಿ ತಯಾರಾಗುವ ಬಟ್ಟೆಗಳ ಮೇಲೆ ಇಂಡಿಯಾ ಗವರ್ನ್‌ಮೆಂಟಿನವರು ಸುಂಕವನ್ನು ಹಾಕಿರುತ್ತಾರೆ. ಇದು ಬಹಳ ಅನ್ಯಾಯವೂ ಕಷ್ಟ ನಷ್ಟಕಾರಿಯೂ ಆದದ್ದರಿಂದ ನಾವು ಗವರ್ನ್‌ಮೆಂಟಿಗೆ ಅನೇಕ ವೇಳೆ ಅರಿಕೆ ಮಾಡಿಕೊಂಡಿದ್ದೇವೆ. ಆದರೆ ಈ ಸುಂಕ ಹಾಕಿರುವುದು ಹಿಂದೂಸ್ಥಾನದ ಆದಾಯವನ್ನು ಹೆಚ್ಚಿಸಬೇಕೆಂದಲ್ಲ, ವಿಲಾಯತಿಯ ಕಾರ್ಖಾನೆಗಳಿಗೆ ಪ್ರೋತ್ಸಾಹವಾಗಬೇಕೆಂಬ ಉದ್ದೇಶದಿಂದ ಆ ಗವರ್ನ್‌ಮೆಂಟಿನವರು ಕಳುಹಿಸಿದ ಅಪ್ಪಣೆಯ ಪ್ರಕಾರ ಈ ಸುಂಕವನ್ನು ಹಾಕಿರುತ್ತಾರೆ. ಇದನ್ನು ತೆಗೆದು ಹಾಕಬೇಕೆಂದು ಅನೇಕ ವೇಳೆ ನಾವು ಅರಿಕೆ ಮಾಡಿಕೊಂಡಿರುವೆವು. ಆದರೂ ನಮ್ಮ ರೋದನವೆಲ್ಲಾ ಕಾಡುಪಾಲಾಗಿದೆ. ಕಳೆದ ವರುಷ ಗವರ್ನ್‌ಮೆಂಟಿನವರು ಈ ಸುಂಕದ ರೂಪದಲ್ಲಿ ಕಾರ್ಖಾನೆಗಳಿಂದ ೩೩ ಲಕ್ಷ ರೂಪಾಯಿಗಳನ್ನು ವಸೂಲ್ಮಾಡಿಕೊಂಡರು. ಈ ಸುಂಕವು ನ್ಯಾಯವಾದದ್ದಲ್ಲವೆಂದು ಗವರ್ನ್‌ಮೆಂಟಿನವರೇ ಒಪ್ಪಿಕೊಂಡಿದ್ದಾರೆ. ವಿಲಾಯತಿ ಗವರ್ನ್‌ಮೆಂಟಿನವರು ಒತ್ತಾಯ ಮಾಡುತ್ತಿರುವುದರಿಂದ ನಮ್ಮ ಗವರ್ನ್‌ಮೆಂಟಿನವರು ಈ ಸುಂಕವನ್ನು ತೆಗೆದುಹಾಕುವುದಕ್ಕೆ ಅಸಮರ್ಥರಾಗಿದ್ದಾರೆ. ಈ ಸುಂಕವನ್ನು ವಸೂಲ್ಮಾಡಿದರೂ ಗವರ್ನ್‌ಮೆಂಟಿನವರು ಅದನ್ನು ಈ ದೇಶದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಕಾರ್ಖಾನೆಗಳನ್ನು ಇಡಿಸಿಯೂ, ವಿದ್ಯಾರ್ಥಿಗಳಿಗೆ ಕಸಬುಗಳನ್ನು ಕಲಿಸಿಯೂ, ಒಳ್ಳೆ ಹತ್ತಿಯ ವ್ಯವಸಾಯ ಮಾಡಿಸಿಯೂ ಕೊಡಬೇಕೆಂದು ನಮ್ಮ ಗವರ್ನ್‌ಮೆಂಟಿನವರನ್ನು ಬೇಡಿಕೊಂಡರೂ ಅವರು ಈ ರೀತಿ ಆ ಹಣವನ್ನು ವಿನಿಯೋಗ ಪಡಿಸಲಿಲ್ಲವೆಂದು ವಿಷಾದ ಪಡುತ್ತೇವೆ. ಜಪಾನಿಯವರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಇಂಡಿಯಾ ಗವರ್ನ್‌ಮೆಂಟಿನವರು ನಮ್ಮ ದೇಶದಲ್ಲಿ ಅವರ ಹೆಚ್ಚಿನ ಬೆಲೆಯನ್ನು ಕಡಮೆ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ. ಇದರಿಂದ ನಮ್ಮ ದೇಶದ ರೈತರಿಗೆ ನಷ್ಟವಾದರೂ ಆಗಲಿ ಎಂದು ಅಭಿಪ್ರಾಯ ಪಟ್ಟಿರುವರು. ಆದರೆ ನಮ್ಮ ದೇಶದ ಕಸಬಾದ ಈ ಹತ್ತಿ ಕಾರ್ಖಾನೆಗಳು ಅಭಿವೃದ್ಧಿಗೆ ಬರಲೆಂದು ಪ್ರೋತ್ಸಾಹಪಡಿಸುವುದಕ್ಕೆ ಪ್ರತಿಯಾಗಿ ಸರಕುಗಳ ಮೇಲೆ ಈ ಸುಂಕವನ್ನು ಹಾಕಿರುವುದು ಯಾವ ಧರ್ಮವೋ ತಿಳಿಯದು. ಆದರೂ ಈ ಸುಂಕವನ್ನು ತೆಗೆದು ಹಾಕುವ ತನಕ ನಾವು ಗವರ್ನ್‌ಮೆಂಟಿಗೆ ಅರಿಕೆ ಮಾಡಿಕೊಳ್ಳುತ್ತಲೇ ಬರಬೇಕಾಗಿದೆ. ಅವರು ತೆಗೆದು ಹಾಕಲಿಲ್ಲವೆಂದು ನಾವು ಅಧೈರ್ಯಪಟ್ಟು, ಕೇಳಿಕೊಳ್ಳುವುದನ್ನು ಬಿಟ್ಟುಬಿಡಬಾರದು ಎಂಬುವುದೇ.

ಕ್ಷಾಮನಿವಾರಣೆಯ ಕಾರ್ಯಗಳು.

ಮೈಸೂರು ಸರ್ಕಾರಿ ಹುಕುಮುಗಳು.

ತಿಪ್ಟೂರು-ಚನ್ನರಾಯಪಟ್ಟಣದ ರಸ್ತೆಯ ರಿಪೇರಿ.

ತಿಪ್ಟೂರು-ಚನ್ನರಾಯಪಟ್ಟಣದ ರಸ್ತೆಯನ್ನು ದುರಸ್ತು ಮಾಡುವುದಕ್ಕೆ ೧೧,೬೫೩ ರೂಪಾಯಿ ಅಂದಾಜು ಆಗಿರುತ್ತದೆ. ಅರಸೀಕೆರೆ, ಚನ್ನರಾಯಪಟ್ಟಣ, ಬೇಲೂರು, ಹೊಳೆನರಸೀಪುರ, ಈ ತಾಲ್ಲೂಕುಗಳಲ್ಲಿ ದುಷ್ಕಾಲದ ನಿಮಿತ್ತ ಕೂಲಿಕಾರರಿಗೆ ಕೆಲಸವಿಲ್ಲದೆ ಕಷ್ಟಪಡುತ್ತಿದ್ದಾರೆಂದೂ, ಈ ರಸ್ತೆ ರಿಪೇರಿ ಕೆಲಸವನ್ನು ಪ್ರಾರಂಭಿಸಬೇಕಾಗಿದೆ ಎಂದೂ ಹಾಸನದ ಡೆಪ್ಯುಟಿ ಕಮೀಷನರವರು ತಿಳಿಸುತ್ತಾರೆ. ಹಾಸನದ ಡಿಸ್ಟ್ರಿಕ್ಟಿನಲ್ಲಿ ಕಷ್ಟ ಪ್ರಾಪ್ತವಾಗಿರುವ ಪ್ರದೇಶದಲ್ಲಿ ಈ ರಸ್ತೆ ಇರೋಣದರಿಂದ ಗವರ್ನ್‌ಮೆಂಟಿನವರು ಅದರ ಕಾಮಗಾರಿಯನ್ನು ಪೂರೈಸಬೇಕೆಂದು ಒಪ್ಪಿಕೊಳ್ಳುತ್ತಾರೆ. ಈ ರಸ್ತೆಯ ಸಾಲಿಯಾನಾ ಕಾಮಗಾರಿಗೆ ೧,೨೬೦ ರೂಪಾಯಿ ಮ್ಯಾಂಕ್ಷನ್ ಆಗಿದೆಯಾದರೂ ಈ ಹಣವೆಲ್ಲಾ ಖರ್ಚಾಗಿ ಹೋಗಿರುವುದು. ಡಿಸ್ಟ್ರಿಕ್ಟ್ ಬೋರ್ಡಿನ ಫಂಡಿಗೆ ಒಂದಾನೊಂದು ಸನ್ನು ಫೆಬ್ರವರಿ, ಮಾರ್ಚಿ, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಬಹುಮಟ್ಟಿಗೆ ವಸೂಲಾಗುತ್ತಿದ್ದುದರಿಂದ ಆ ಬೋರ್ಡಿನವರೇ ಈ ಖರ್ಚನ್ನು ವಹಿಸಿಕೊಳ್ಳಬಹುದಾಗಿದೆ. ಆದರೂ ಸರ್ಕಾರದವರು ಈ ಕಾಮಗಾರಿಗೆ ೫,೦೦೦ ರೂಪಾಯಿ ಮ್ಯಾಂಕ್ಷನ್ ಮಾಡಿ, ಮುಂದೆ ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣ ಶೇಖರವಾದಮೇಲೆ ಈ ಹಣವನ್ನು ಗ್ರಾಂಟಿನಂತೆ ವಾಪಸು ಪಡೆಯುವರು.

ಸಂತೆಗಳ ಧಾರಣೆಧಾರಿಯನ್ನು ತಿಳಿಯುವುದು.

ಪ್ರತಿ ವಾರ ನಮಗೆ ದಿನಸಿಗಳ ಧಾರಣೆಧಾರಿಗಳು ಯಾವ ರೀತಿ ಹೆಚ್ಚಾಗುತ್ತವೆ ಎಂಬುವುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ರೆವಿನ್ಯೂ ಕಮೀಷನರವರು ಎಲ್ಲಾ ತಾಲ್ಲೂಕುಗಳಿಗೂ ಹುಕುಂ ಕಳುಹಿಸಿ, ಪ್ರತಿ ಒಂದು ತಾಲ್ಲೂಕಿನಲ್ಲೂ ನಡಿಯತಕ್ಕ ಎಲ್ಲಾ ಸಂತೆಗಳಿಗೂ ಸರ್ಕಾರಿ ನೌಕರರು ಹೋಗಿ ಪ್ರತಿ ಸಂತೆಯಲ್ಲೂ ಆಯಾ ತರದ ಅಕ್ಕಿ, ರಾಗಿ, ಜೋಳ, ಹುರುಳಿ, ಹುಲ್ಲು, ಇವುಗಳ ಬಿಕರಿ ಧಾರಣೆಯನ್ನು ಬರೆದು ರೆವಿನ್ಯೂ ಕಮೀಷನರವರ ಆಫೀಸಿಗೆ ತಿಳಿಸಬೇಕೆಂದು ಗೊತ್ತು ಮಾಡಿದ್ದಾರೆ. ಮತ್ತು ಅವರು ಹೀಗೆ ಸಂಸ್ಥಾನದಿಂದ ತಿಳಿದುಬರುವ ಧಾರಣೆಗಳನ್ನು ಕ್ರೋಡೀಕರಿಸಿ ಪ್ರತಿ ವಾರವೂ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸುತ್ತಾ ಬಂದಿರುವರು. ಗವರ್ನ್‌ಮೆಂಟಿನವರು ಈ ಏರ್ಪಾಡನ್ನು ಪರಿಶೀಲಿಸಿ, ಅದರಂತೆ ನಡೆಸಬಹುದೆಂದು ಒಪ್ಪಿಕೊಂಡಿರುತ್ತಾರೆ.

ತರೀ ಕಂದಾಯದ ಅರ್ಧ ರಿಮಿಷನ್.

ತುಮಕೂರು ಡಿಸ್ಟ್ರಿಕ್ಟಿನಲ್ಲಿ ಕೆರೆಗಳ ಕೆಳಗೆ ಆಗುತ್ತಿರುವ ತರಿ ಫಸಲು ಈ ಸಲ ನೀರಿಲ್ಲದ ದೆಸೆಯಿಂದ ಹಾಳಾಯಿತೆಂದೂ ಇಲ್ಲವೇ ನಾಲ್ಕಾಣೆಯಷ್ಟೂ ಆಗಲಿಲ್ಲವೆಂದೂ ಡೆಪ್ಯುಟಿ ಕಮೀಷನರವರು ತಿಳಿಸಿದ್ದರ ಮೇಲೆ ಗವರ್ನ್‌ಮೆಂಟಿನವರು ಅಂಥಾ ಭಾಗಗಳಲ್ಲಿ ಜಮೀನಿಗೆ ಹಾಕಿರುವ ತರೀ ಕಂದಾಯದಲ್ಲಿ ಅರೆವಾಸಿಯನ್ನು ರಿಮಿಷನ್ ಮಾಡಿ, ಉಳಿದ ಅರ್ಧ ಕಂದಾಯವನ್ನು ವಸೂಲ್ಮಾಡಬೇಕೆಂದು ಹುಕುಂ ಕೊಟ್ಟಿರು. ಎರಡನೆಯದಾಗಿ, ಆ ಪ್ರಾಂತ್ಯ ಕೆಲವು ಜಮೀನುಗಳು ಬಾಗಾಯಿತೆಂದು ಸಟ್ಟು ಆಗಿದ್ದರೂ ಅಂಥಾ ಜಮೀನುಗಳಲ್ಲಿ ರೈತರು ತಪ್ಪದೆ ಬತ್ತದ ಬೆಳೆಯನ್ನೇ ಮಾಡಿಕೊಂಡು ಬಂದಿರುತ್ತಾರೆಂತಲೂ, ಮಳೆ ಇಲ್ಲದ ನಿಮಿತ್ತ ಈ ಜಮೀನುಗಳಲ್ಲಿಯೂ ಬೆಳೆಗಳು ಹಾಳಾದವೆಂತಲೂ, ಈ ರೈತರಿಗೂ ಅರ್ಧ ರಿಮಿಷನ್ ಕೊಡಬಹುದೇ ಎಂತಲೂ ಪ್ರಶ್ನೆ ಮಾಡಿದರು. ಗವರ್ನ್‌ಮೆಂಟಿನವರು ಅದರಂತೆ ಒಪ್ಪಿ ಅಂಥಾ ಜಮೀನುಗಳಿಗೂ ಅರ್ಧ ಕಂದಾಯವನ್ನು ಮಾಫಿ ಬಿಡತಕ್ಕದ್ದೆಂದು ಸ್ಯಾಂಕ್ಷನ್ ಮಾಡಿರುತ್ತಾರೆ.

ಸಿಡಸಾಲೆ ಕೆರೆಯ ಕಾಮಗಾರಿಯು.

ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಸಿಡಸಾಲೆ ಕೆರೆಯನ್ನು ದುರಸ್ತು ಮಾಡಿಸುವುದಕ್ಕೆ ಮಟ್ಟ ಕಾಮಗಾರಿಯು ೫೬,೦೦೦ ಸಾವಿರ ರೂಪಾಯಿನಷ್ಟು ಆಗಬೇಕಾಗಿದೆ. ಆದರೆ ಆ ಡಿಸ್ಟ್ರಿಕ್ಟಿನಲ್ಲಿ ಅನೇಕವಾಗಿ ಗ್ರಾಮ ಕೆಲಸಗಳು ನಡೆಯುತ್ತಾ ಇರೋಣದರಿಂದ ಈ ಕೆರೆಯ ಕೆಲಸವನ್ನು ಈಗಲೇ ಪ್ರಾರಂಭಿಸಬೇಕಾದ ಅಗತ್ಯ ಕಂಡು ಬರುವುದಿಲ್ಲವೆಂದು ಡೆಪ್ಯುಟಿ ಕಮೀಷನರವರು ತಿಳಿಸುತ್ತಾರೆ. ಆದರೂ ರೆವಿನ್ಯೂ ಕಮೀಷನರವರೂ ಡೆಪ್ಯುಟಿ ಕಮೀಷನರವರೂ ಆ ಪ್ರಾಂತ್ಯದ ಕಾಲಸ್ಥಿತಿಯನ್ನು ಜಾಗರೂಕತೆಯಾಗಿ ನೋಡುತ್ತಾ ಬರಬೇಕೆಂತಲೂ, ಈಗಿನ ಕಷ್ಟದೆಸೆಯು ವಿಸ್ತಾರವಾಗಿಯೂ ವಿಶೇಷವಾಗಿಯೂ ಹೆಚ್ಚಿದ ಪಕ್ಷದಲ್ಲಿ ಗವರ್ನ್‌ಮೆಂಟಿಗೆ ಆ ಕೂಡಲೇ ತಿಳಿಸಬೇಕೆಂತಲೂ ಅಗ್ಗ ಗವರ್ನ್‌ಮೆಂಟಿನವರು ಈ ಕೆರೆಯ ಕಾಮಗಾರಿಗೆ ಹಣವನ್ನು ಸ್ಯಾಂಕ್ಷನ್ ಮಾಡುತ್ತಾರೆಂತಲೂ ಹುಕುಂ ಕೊಟ್ಟಿದ್ದಾರೆ.

ಕುಡಿಯುವ ನೀರಿನ ಬಾವಿಗಳನ್ನು ತೋಡಿಸುವುದು.

ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಜನರಿಗೂ ದನಕರುಗಳಿಗೂ ಕುಡಿಯುವ ನೀರಿಗೆ ಗೊಟ್ಟಾಗಿರುವ ಪ್ರದೇಶಗಳಲ್ಲಿ ಹಂಗಾಮಿಯಾದ ಬಾವಿಗಳನ್ನು ಸುಲಭ ಖರ್ಚಿನಿಂದ ತೆಗೆಸಿಕೊಡಬೇಕೆಂದು ಸರ್ಕಾರದವರು ಇದುವರೆಗೆ ಸಂಸ್ಥಾನದ ಮೂಲ ೪೮,೭೮೫ ರೂಪಾಯಿ ಸ್ಯಾಂಕ್ಷನ್ ಮಾಡಿದರು. ಈ ಹಣದಲ್ಲಿ ಡೆಪ್ಯುಟಿ ಕಮೀಷನರವರು ಅನೇಕ ಕಡೆಗಳಲ್ಲಿ ಅಂಥಾ ಬಾವಿಗಳನ್ನು ತೋಡಿಸಿರುವುದಲ್ಲದೆ, ತೊಂದರೆಗಳ ನಿವಾರಣೆ ಮುಂತಾದದ್ದಕ್ಕೆ ೧,೦೦೦ ರೂಪಾಯಿ ತೆಗೆದಿಟ್ಟಿದ್ದಾರೆ. ಈಗ ೧೨,೩೦೫ ರೂಪಾಯಿ ಆ ಹಣದಲ್ಲಿ ಉಳಿದಿರುವುದು. ಇದರಿಂದ ಕಚ್ಚಾ ಬಾವಿಗಳನ್ನು ಮಾತ್ರ ತೋಡಿಸಬೇಕಾಗಿರುತ್ತದೆ. ಈಗ ಕೆಲವು ಕಡೆಗಳಲ್ಲಿ ಪಕ್ಕಾ ಬಾವಿಗಳನ್ನು ಕಟ್ಟಿಸುವುದಕ್ಕೆ ೬,೫೦೦ ರೂಪಾಯಿ ಬೇಕಾಗಿದೆ ಎಂದು ಡೆಪ್ಯುಟಿ ಕಮೀಷನರವರು ಕೇಳುತ್ತಾರೆ. ಇಷ್ಟು ಹಣವನ್ನು ಆ ಶಿಲ್ಕಿನಿಂದ ಕೊಟ್ಟುಬಿಟ್ಟರೆ ಇತರ ಕಡೆಗಳಿಗೆ ಹಂಚಿಕೆ ಮಾಡುವುದಕ್ಕೆ ಹಣ ಸಾಲದೆಹೋಗುವುದಿಲ್ಲವೆಂದು ರೆವಿನ್ಯೂ ಕಮೀಷನರವರು ಗವರ್ನ್‌ಮೆಂಟಿನವರನ್ನು ಕೇಳಿದರು. ಅವರು ಹುಕುಂ ಕೊಟ್ಟಿರುವುದೇನೆಂದರೆ:—ಸದ್ಯ ಮಳೆ ಆಗದೆ ಈ ಸಾಲಿನಲ್ಲಿ ನೀರಿಗೆ ಅಭಾವವಾಗಿರುವಂಥಾ ಸ್ಥಳಗಳೊಳಗೇ ಹಂಗಾಮಿಯಾದ ಬಾವಿಗಳನ್ನು ಮಾತ್ರ ತೆಗಿಸುವಂತೆ ಹಣ ಸ್ಯಾಂಕ್ಷನ್ ಮಾಡಲಾಗಿದೆ. ಈ ಹಣದಿಂದ ಬರೀ ಶಿಖಾಳಿಗುನಂಥಾ ಪಕ್ಕಾ ಬಾವಿಗಳನ್ನು ತೆಗಿಸಿ ಕಾಮಗಾರಿಮಾಡಿಸಬೇಕಾದ ಅಗತ್ಯವಿಲ್ಲ. ಆದರೆ ಕಚ್ಚಾ ಬಾವಿಗಳನ್ನು ತೋಡಿಸುವುದಲ್ಲದೆ ಮುಂದೆ ಅವುಗಳನ್ನೇ ಪಕ್ಕಾ ಬಾವಿಗಳಾಗಿ ಮಾಡಿಕೊಳ್ಳುವುದಕ್ಕೆ ಅನುಕೂಲಿಸುವಂತೆ ನೋಡಿಕೊಳ್ಳಬೇಕು. ಇದಲ್ಲದೆ ಭೂಗುಣವು ಗಟ್ಟಿಯಾಗಿಲ್ಲದೆ ದಡಗಳು ಕುಸಿಯುವ ಹಾಗಿದ್ದ ಸಂದರ್ಭಗಳಲ್ಲಿ ಕಚ್ಚಾ ಬಾವಿಗಳಿಗೂ ದಡಗಳನ್ನು ಕಟ್ಟಿಸಿ ಹೆಚ್ಚು ಹಣ ಖರ್ಚು ಮಾಡಿ ಕಾಮಗಾರಿ ಡಿಸಬೇಕಾಗುವುದು. ಇಂಥಾ ಸಂದರ್ಭಗಳಲ್ಲಿ ಹೆಚ್ಚು ಹಣ ಮುಟ್ಟಿಸಬಹುದಾಗಿದೆ ಎಂಬುವುದೇ.

ಮಲೆನಾಡಿನ ಅಲೋಯನ್ಸು.

ಚಿಕ್ಕಮಗಳೂರು ತಾಲ್ಲೂಕಿಗೆ ಸೇರಿದ ಬಾಂಡ್ಯ, ಆವತಿ, ಆಲ್ದೂರು, ವಸ್ತಾರೆ, ಜಾಗರ ಎಂಬ ಹೋಬಳಿಗಳ ನೌಕರದಾರರಿಗೆ ಈಗ ತಿಂಗಳಿಗೆ ಒಂದು ರೂಪಾಯಿನಂತೆ ಅರ್ಧ ಮಲೆನಾಡಿನ ಅಲೋಯನ್ಸು ಪಾವತಿ ಆಗುತ್ತಿದೆ ಎಂದೂ ಆ ತಾಲ್ಲೂಕು ಪೂರಾ ಮಲೆನಾಡಾಗಿರೋಣದರಿಂದ ಅವರಿಗೆಲ್ಲಾ ಎರಡೆರಡು ರೂಪಾಯಿನಂತೆ ಅಲೋಯನ್ಸು ಕೊಡಬೇಕಾಗಿದೆ ಎಂದೂ ಕಡೂರು ಡೆಪ್ಯುಟಿ ಕಮೀಷನರವರು ಬರೆದದ್ದರ ಮೇಲೆ ರೆವಿನ್ಯೂ ಕಮೀಷನರವರು ಅದರಂತೆ ಅಭಿಪ್ರಾಯಪಟ್ಟು ಗವರ್ನ್‌ಮೆಂಟಿಗೆ ತಿಳಿಸಿದರು. ಗವರ್ನ್‌ಮೆಂಟಿನವರು ಅದರ ಮೇಲೆ ಹುಕುಂ ಕೊಟ್ಟಿರುವುದೇನೆಂದರೆ:—ಮಿಸ್ಟ್ ಬಂದಿಯನ್ನು ರದಾವು ಮಾಡುವುದಕ್ಕಾಗಿ ಇನ್ಸ್‌ಪೆಕ್ಷನ್ ಮಾಡಿದಾಗ ೧೮೯೧ರಲ್ಲಿ ಚಿಕ್ಕಮಗಳೂರು ತಾಲ್ಲೂಕನ್ನು ಮಲೆನಾಡಾಗಿ ನಿಷ್ಕರ್ಷೆಮಾಡಿದರು. ಆದರೆ ೧೮೯೭ರಲ್ಲಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ್ ಸಿಬ್ಬಂದಿಗಳನ್ನು ಪುನರ್ವಿಮರ್ಶೆ ಮಾಡುವಲ್ಲಿ ಗವರ್ನ್‌ಮೆಂಟಿನವರು ಆ ತಾಲ್ಲೂಕನ್ನು ಅರೆ ಮಲೆನಾಡೆಂದು ಗೊತ್ತುಮಾಡಿ, ನೌಕರದಾರರಿಗೆ ಒಂದು ರೂಪಾಯಿ ಅಲೋಯನ್ಸು ಸ್ಯಾಂಕ್ಷನ್ ಮಾಡಿರುತ್ತಾರೆ. ಆದರೂ ಈಗ ಮೇಲ್ಕಂಡ ಆಫೀಸರುಗಳು ಶಿಫಾರಸು ಮಾಡಿರುವ ಪ್ರಕಾರ ಗವರ್ನ್‌ಮೆಂಟಿನವರು ಒಪ್ಪಿಕೊಂಡು, ಆ ಐದು ಹೋಬಳಿಗಳ ನೌಕರದಾರರಿಗೂ ತಲಾ ಎರಡು ರೂಪಾಯಿನಂತೆ ಅಲೋಯನ್ಸು ಸ್ಯಾಂಕ್ಷನ್ ಮಾಡಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಕಾಂಕಿನಾರಾ ಪಟ್ಟಣದಲ್ಲಿ ಅಲೈಯನ್ಸ್ ಎಂಬ ಕಂಪನಿಯ ನಾರಿನ ಕಾರ್ಖಾನೆಗೆ ಕಳೆದ ವಾರ ಬೆಂಕಿ ಬಿದ್ದು ಸುಮಾರು ಎರಡು ಲಕ್ಷ ರೂಪಾಯಿನ ಸಾಮಾನು ಸುಟ್ಟುಹೋಯಿತು.

* * *

ಕೋಟಾ ಪುರ ಸಂಸ್ಥಾನದ ರಾಜಧಾನಿಯಲ್ಲಿ ಸರ್ಕಾರದವರು ವಾರಂಟು ಕೊಟ್ಟು ಪೋಲೀಸಿನವರ ಮೂಲಕ ಹದಿನೈದು ಮಂದಿ ದೊಡ್ಡ ಮನುಷ್ಯರ ಮನೆಗಳನ್ನು ಶೋಧನೆ ಮಾಡಿಸಿ, ಕೆಲವು ಕಾಗದಪತ್ರಗಳನ್ನು ತರಿಸಿಕೊಂಡಿದ್ದಾರೆ.

* * *

ಈಗ ಬಂಗಾಳಾ ಅಧಿಪತ್ಯದಲ್ಲಿ ಕ್ಷಾಮದ ಕಷ್ಟಗಳು ಉಂಟಾಗಿರುತ್ತವೆ. ಬಂಗಾಳಾದಲ್ಲಿ ಇತರ ದೇಶಗಳಲ್ಲಿ ೧,೦೮,೦೦೦ ಪ್ರಜೆಗಳು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದ್ದಾರೆಂದು ತಿಳಿಯುವುದು.

* * *

ಹೈದರಾಬಾದ್ ಗವರ್ನ್‌ಮೆಂಟಿನವರು ಸಿಕಂದರಾಬಾದಿನಲ್ಲಿ ಸರ್ಕಾರಿ ಆಫೀಸಿಗಾಗಿ ಅಸಾದ್ ಬಾಗ್ ಎಂಬ ಭಾರೀ ಬಂಗಲೆಯನ್ನೂ ಅದಕ್ಕೆ ಸೇರಿದ ಉದ್ಯಾನವನವನ್ನೂ ನವಾಬ್ ಸಕರುಲ್ ಮುಲ್ಕ್‌ರವರಿಂದ ಆರು ಲಕ್ಷ ರೂಪಾಯಿ ಕೊಟ್ಟು ಕೊಂಡುಕೊಂಡರು.

* * *

ವಾಯುವ್ಯ ಸರಹದ್ದಿನ ಪ್ರಾಂತ್ಯಕ್ಕೆ ಸೇರಿದ ರಾವಲ್‌ಪಿಂಡಿ ಪಟ್ಟಣದಲ್ಲಿ ಸಿಕ್ ಜನರು ತಮ್ಮ ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೋಸ್ಕರ ಒಂದು ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿ, ಅದಕ್ಕಾಗಿ ತಮ್ಮ ತಮ್ಮಲ್ಲೇ ೪೫,೦೦೦ ರೂಪಾಯಿ ಚಂದಾ ಕೂಡಿಸಿರುತ್ತಾರೆ.

* * *

ಆಗ್ರಾ ಪಟ್ಟಣದ ಸೆಂಟ್ರಲ್ ಜೈಲಿನಲ್ಲಿ ಮೂರು ಮಂದಿ ಖೈದಿಗಳು ಸೇರಿ ಬಂದೀಖಾನೆಯೊಳಗಿದ್ದ ಹಾಗೇ ಖೋಟಾ ನಾಣ್ಯಗಳನ್ನು ತಯಾರುಮಾಡುತ್ತಿದ್ದರೆಂದು ಕಳೆದ ಆಗಸ್ಟ್ ತಾ ೧೩ ರಲ್ಲಿ ತಿಳಿಯಿತು. ಅವರ ಬಳಿ ಕೆಲವು ಯಂತ್ರಗಳೂ ಇತರ ಸಾಧನಗಳೂ ಸಿಕ್ಕಿದವು. ಸೆಷನ್ಸ್ ಜಡ್ಜರು ಆ ಮೂರು ಮಂದಿಗೂ ತಲಾ ೫ ವರುಷದಂತೆ ಕಠಿಣ ಸಜಾ ವಿಧಿಸಿರುತ್ತಾರೆ.

* * *

ಮ್ಯುನಿಸಿಪಲ್ ಪೋಲೀಸಿನವರು ಕೆಲವು ಸಾಕ್ಷಿಗಳನ್ನು ಏರ್ಪಡಿಸಿ ಒಂದು ಮೋಕದ್ದಮೆಯಲ್ಲಿ ಕೈಫಿಯತ್ತು ಕೊಡಿಸಿದರು. ಆದರೆ ಅವರು ಪೋಲೀಸಿನವರ ಹಿಂಸೆ ಮೊದಲಾದದ್ದನ್ನು ವಿವರಿಸಿ, ಕೃತ್ಯನಡೆದದ್ದನ್ನು ತಾವು ಕಾಣಲಿಲ್ಲವೆಂದು ಹೇಳಿದ್ದರಿಂದ ಮ್ಯಾಜಿಸ್ಟ್ರೇಟರು ಅಪರಾಧಿಗಳನ್ನು ಖುಲಾಸ್ ಮಾಡಿ, ಆ ಪೋಲೀಸಿನವರ ನಡವಳಿಕೆಯನ್ನು ಮೇಲ್ಪಟ್ಟ ಅಧಿಕಾರಿಗಳು ಜಾಗ್ರತೆ ಮಾಡಬೇಕೆಂದು ತಿಳಿಸಿದಾರೆ.

* * *

ಕೇರಳ ದೇಶದ ನಾಯರ್ ಜನರ ಪುರೋಭಿವೃದ್ಧಿಗಾಗಿ ಮೂರನೆಯ ವಾರ್ಷಿಕ ಸಭೆಯನ್ನು ತ್ರಿಚೂರ್ ಪಟ್ಟಣದಲ್ಲಿ ಕಳೆದ ಶನಿವಾರ ಭಾನುವಾರಗಳಲ್ಲಿ ನಡಿಸಿದರು. ತಿರುವಾಂಕೂರು, ಕೊಚ್ಚಿ, ಮಲಬಾರ್ ಮೊದಲಾದ ಪ್ರದೇಶಗಳಲ್ಲಿರುವ ನಾಯರ್ ಜನರ ಮುಖಂಡರನೇಕರು ಈ ಸಭೆಗೆ ಹೋಗಿದ್ದರು. ಹೈಕೋರ್ಟ್ ಜಡ್ಜ್ ಮಿ| ಎ. ಗೋವಿಂದಪಿಳ್ಳೆಯವರು ಸಭೆಯ ಅಗ್ರಾಸನವನ್ನು ವಹಿಸಿದ್ದರು.

ಕಳೆದ ಮಾರ್ಚಿ ಆಖೈರಿಗೆ ಮುಕ್ತಾಯವಾದ ೧೨ ತಿಂಗಳಲ್ಲಿ ಗವರ್ನ್‌ಮೆಂಟಿನವರು ಹಿಂದುಸ್ಥಾನದಲ್ಲಿ ಹೊಸದಾಗಿ ೭೭೭ ಮೈಲಿ ರೈಲ್ ರಸ್ತೆಯನ್ನು ತಯಾರುಮಾಡಿಸಿದರು. ಈಗ ಒಟ್ಟು ಈ ದೇಶದಲ್ಲಿ ೩೧,೦೦೦ ಮೈಲಿ ರೈಲ್ ರಸ್ತೆ ಇರುವಂತೆ ಗೊತ್ತಾಗಿದೆ.

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಮಿ|| ರಮೇಶ ಚಂದ್ರ ದತ್ತರವರನ್ನು ತಮ್ಮ ಮಂತ್ರಿಯನ್ನಾಗಿ ನೇಮಿಸಿಕೊಂಡಿದ್ದಾರೆ. ಅವರು ಸದ್ಯ ಕಲ್ಕತ್ತೆಯಲ್ಲಿರುವರು; ಮುಂದಿನ ಜೂನ್ ತಿಂಗಳಲ್ಲಿ ಬರೋಡಕ್ಕೆ ಹೋಗಿ ಮಂತ್ರಿ ಪದವಿಯನ್ನು ವಹಿಸಿಕೊಳ್ಳುವರೆಂದು ಪ್ರಕಟವಾಗಿದೆ.

ಲಾಹೋರ್ ಪಟ್ಟಣದಲ್ಲಿ "ಹಿಂದುಸ್ಥಾನ್" ಎಂಬ ಉರುದು ವಾರಪತ್ರಿಕೆಯು ಪ್ರಕಟವಾಗುತ್ತಿದ್ದ ಅಚ್ಚಿನ ಕಾರ್ಖಾನೆಯನ್ನು ಪೋಲೀಸಿನವರು ಜಪ್ತಿಮಾಡಿ ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ. ಅದೇ ಪಟ್ಟಣದಲ್ಲಿ ಪ್ರಕಟವಾಗುತ್ತಿದ್ದ "ಇನ್‌ಕ್ವಿಲಾಬ್" ಎಂಬ ಪತ್ರಿಕೆಯನ್ನು ಸರ್ಕಾರದವರು ಹುಕುಂಕೊಟ್ಟು ನಿಲ್ಲಿಸಿಬಿಟ್ಟಿದ್ದಾರೆ.

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬ್ರಾಹ್ಮಣಬೇರಿಯದಲ್ಲಿ ಕಳೆದ ಶುಕ್ರವಾರದ ದಿನ ಬಹು ಬಲವಾದ ಸುಂಟರಗಾಳಿ ಬೀಸಿ, ಅಪಾರ ಮಳೆ ಸುರಿಯಿತೆಂದೂ ಅನೇಕ ಮನೆ ಮರಗಳು ಬಿದ್ದು ಹಾಳಾದವೆಂದೂ, ಹಲವು ಗಿಡಮರಗಳು ಬೇರು ಸಹಿತ ಕಿತ್ತು ಉರುಳಿಕೊಂಡವೆಂದೂ, ಆದರೆ ಪ್ರಾಣನಷ್ಟವೇನೂ ಆಗಲಿಲ್ಲವೆಂದೂ ತಂತೀ ವರ್ತಮಾನ ಬಂದಿದೆ.

ಮೇಟುಪಾಳ್ಯದ ಹತ್ತಿರ ಕೋಲಂಪಾಳ್ಯವೆಂಬ ಗ್ರಾಮದಲ್ಲಿ ಒಕ್ಕಲಿಗನ ಹೆಂಡತಿಯೊಬ್ಬಳು ಹೆಂಗಸು ೫ ವರುಷದ ಒಬ್ಬ ಹುಡುಗನನ್ನು ಸಮೀಪದಲ್ಲಿರುವ ಗುಡ್ಡದ ಮೇಲಕ್ಕೆ ಎತ್ತಿಕೊಂಡು ಹೋಗಿ, ಅವನ ಮೈಮೇಲಿದ್ದ ೧೨ ರೂಪಾಯಿನ ನಗಗಳನ್ನು ಕಿತ್ತುಕೊಂಡು, ಕಲ್ಲಿನಿಂದ ತಲೆಯನ್ನು ಜಜ್ಜಿ ಕೊಂದುಹಾಕಿದಳು. ಸೆಷನ್ಸ್ ಜಡ್ಜ್ ಮಿ|| ಆಸ್ಟಿನ್‌ರವರು ಅವಳಿಗೆ ಮರಣ ದಂಡನೆಯನ್ನು ವಿಧಿಸಿದ್ದಾರೆ.

ಕೊಯಮುತ್ತೂರಿನಲ್ಲಿ ಈಗೀಗ ಪ್ಲೇಗಿನ ಗಲಿಬಿಲಿಯು ಕಡಮೆಯಾಗುತ್ತಲಿದೆ. ಊರು ಬಿಟ್ಟು ಹೋಗಿದ್ದವರು ಕ್ರಮೇಣ ವಾಪಸು ಬಂದು ಸೇರಿಕೊಳ್ಳುತ್ತಿದ್ದಾರೆ. ಕಳೆದ ೭ನೇ ತಾರೀಖಿನ ವರೆಗೆ ಒಂದು ವಾರದಲ್ಲಿ ನಾಲ್ವರಿಗೆ ಮಾತ್ರ ಪ್ಲೇಗ್ ಕಾಣಿಸಿಕೊಂಡಿತು. ನಾಲ್ವರು ಆ ರೋಗದಲ್ಲಿ ಕಾಲವಾದರು. ಅಂದರೆ, ಇದುವರೆಗೆ ಆ ಪಟ್ಟಣದಲ್ಲಿ ೭೭ ಜನರಿಗೆ ಪ್ಲೇಗ್ ತಗಲಿತೆಂದೂ ೫೬ ಮರಣಗಳಾದವೆಂದೂ ಪ್ರಕಟವಾಗಿದೆ.

ಹಿಂದುಸ್ಥಾನದಲ್ಲೆಲ್ಲಾ ಪ್ಲೇಗ್ ಉಪದ್ರವದ ದೆಸೆಯಿಂದ ಕಳೆದ ವಾರ ೪,೭೮೪ ಮರಣಗಳಾದವು. ಹೇಗೆಂದರೆ, ಪಂಜಾಬ್ ಅಧಿಪತ್ಯ ೧,೫೮೯; ಬೊಂಬಾಯಿ ಅಧಿಪತ್ಯ ೯೫೪; ಸಂಯುಕ್ತ ಅಧಿಪತ್ಯಗಳು ೧,೩೪೭; ರಾಜಪುಟಾನಾ ೨೮೮, ಬಂಗಾಳಾ ೩೪೫, ಮದರಾಸ್ ಅಧಿಪತ್ಯ ೧೮; ಬರಾರ್ [illegible] ಮಧ್ಯಪ್ರಾಂತ್ಯಗಳು ೧೩೭; ಮೈಸೂರು ಸಂಸ್ಥಾನ ೨೮; ಹೈದರಾಬಾದ್ ಸಂಸ್ಥಾನ ೨; ಮಧ್ಯ ಇಂಡಿಯಾ ೨೦.

ತಿರುವಾಂಕೂರಿನಲ್ಲಿ ಕೆಲವು ವಿದ್ಯಾವಂತರಾದ ಹಿಂದುಗಳು ಸೇರಿ ಸಸ್ಯಾಹಾರ ಸಂಘವನ್ನು ಏರ್ಪಡಿಸಿಕೊಂಡಿದ್ದಾರೆ. ಈ ಸಂಘಕ್ಕೆ ಮಿ|| ಟಿ. ಸದಾಶಿವ ಐಯರವರು ಪ್ರೆಸಿಡೆಂಟರಾಗಿರುವರು. ಕಳೆದ ವಾರ ನಡೆದ ಸಭೆಯು ಕೂಡಿ ನಡೆದಾಗ್ಗೆ ಮಿ|| ಟಿ. ಲಕ್ಷ್ಮಣ ಪಿಳ್ಳೆಯವರು—ಸಕಲರೂ ಸಾತ್ವಿಕರಾಗಿ ಮಾಂಸ ಕೇಳದಿರಬೇಕೆಂದೂ, ಅವುಗಳನ್ನು ಕೊಂದು ತಿನ್ನಬಾರದೆಂದೂ, ಎಲ್ಲರೂ ಕಾಯಿಪಲ್ಯ ಧಾನ್ಯಾದಿಗಳನ್ನು ಆಹಾರ ಪದಾರ್ಥಗಳನ್ನಾಗಿ ಉಪಯೋಗಿಸಬೇಕೆಂದೂ ಉಪನ್ಯಾಸ ಮಾಡಿದರು.

ವೈದ್ಯವನ್ನೂ ಕಾನೂನುಗಳನ್ನೂ ಕಲಿತು ಬರುವುದಕ್ಕಾಗಿ ಹಿಂದುಸ್ಥಾನದಿಂದ ವಿಲಾಯಿತಿಯ ವಿಶ್ವವಿದ್ಯಾಲಯಗಳಿಗೆ ಹೋಗುವಂಥಾ ಯೌವನಸ್ಥರೆಲ್ಲಾ ಆ ವಿದ್ಯಾಶಾಲೆಗಳಲ್ಲಿರುವಾಗ್ಗೆ ಅಲ್ಲಿನ ನಿರಸುಗಳನ್ನೇ ಧರಿಸಿಕೊಳ್ಳಬೇಕೆಂಬ ವಿಧಿ ಇರುತ್ತದೆ. ಆದರೆ ಸಿಕ್ ಜನರ ಯೌವನಸ್ಥರು ಈ ವಿಧಿಯಿಂದ ಈಗತಾನೇ ವಿನಾಯಿತಿ ಮಾಡಲ್ಪಟ್ಟಿರುವರು. ಅವರು ಮಾತ್ರ ಆ ವಿದ್ಯಾಶಾಲೆಯಲ್ಲಿರುವಾಗಲೂ ತಮ್ಮ ಪದ್ಧತಿಯ ಪ್ರಕಾರ ಪೇಟ (ಮುಂಡಾಸು) ಯನ್ನು ಹಾಕಿಕೊಳ್ಳಬಹುದೆಂದು ಅವರಿಗೆ ರಿಯಾಯಿತಿ ತೋರಿಸಿರುವರು.

ಮಿಸ್ಸೂರಿಯ ಮ್ಯಾಜಿಸ್ಟ್ರೇಟ್ ಮಿ|| ಆರ್. ಜಿ. ಕೆಲ್ಲಿಯವರು ಕೋರ್ಟಿನಲ್ಲಿ ಒಂದು ಮೊಕದ್ದಮೆಯನ್ನು ವಿಚಾರಣೆ ಮಾಡುತ್ತಿದ್ದಾಗ ಒಂದು ಹುಚ್ಚುನಾಯಿ ನುಗ್ಗಿ ಒಬ್ಬ ಕೋರ್ಟು ಜವಾನನನ್ನು ಕಚ್ಚಿತು. ಆ ಕೂಡಲೇ ಮ್ಯಾಜಿಸ್ಟ್ರೇಟರು ಹೋಗಿ ಆ ಜವಾನನಿಗೆ ಗಾಯವಾದ ಸ್ಥಳದಲ್ಲಿ ತಮ್ಮ ಬಾಯಿ ಇಟ್ಟು ಕಚ್ಚಿ ವಿಷವನ್ನು ಹೀರಿ ಉಗಿದುಬಿಟ್ಟರು. ಆ ಜವಾನನಿಗೆ ಹುಚ್ಚು ಹಿಡಿಯಲಿಲ್ಲ. ಆದರೆ ಆ ಮ್ಯಾಜಿಸ್ಟ್ರೇಟರಿಗೆ ಆ ರೋಗ ತಗಲಿದ್ದರಿಂದ ಅವರು ಚಿಕಿತ್ಸೆ ಮಾಡಿಸಿಕೊಳ್ಳುವುದಕ್ಕೋಸ್ಕರ ಕಸೌಲಿ ಆಸ್ಪತ್ರೆಗೆ ಪ್ರಯಾಣ ಮಾಡಿದರು.

ಇಂಡಿಯಾ ಗವರ್ನ್‌ಮೆಂಟಿನವರು ಕೆಲವು ತಿಂಗಳ ಕೆಳಗೆ ಬಂಗಾಳದಲ್ಲಿ ಒಂಬತ್ತು ಮಂದಿ ವಿದ್ಯಾವಂತರೂ ಪ್ರಜೆಗಳ ಮುಖಂಡರೂ ಆಗಿದ್ದ ಬಂಗಾಳಿಗಳನ್ನು ಅವರಿಂದ ಪ್ರಜಾ ಶಾಂತಿಗೆ ಭಂಗವುಂಟಾಗುವುದೆಂಬ ಕಾರಣದಿಂದ ದಸ್ತಗಿರಿ ಮಾಡಿ, ಬೇರೆ ಬೇರೆ ಅಧಿಪತ್ಯಗಳ ಜೈಲ್‌ಖಾನೆಗಳಲ್ಲಿ ಇಟ್ಟಿರುತ್ತಾರಷ್ಟೆ. ಈ ವ್ಯಕ್ತಿ ಕೃಷ್ಣಕುಮಾರಮಿತ್ರ ಎಂಬುವರನ್ನು ಸೆರೆಯಿಂದ ಬಿಡುಗಡೆ ಮಾಡಿಕೊಡಬೇಕೆಂದು ಕಲ್ಕತ್ತಾಪಟ್ಟಣದಲ್ಲಿ ಒಂದು ಅರ್ಜಿಯನ್ನು ಬರೆದು ಅದಕ್ಕೆ ಅನೇಕ ಪ್ರಜೆಗಳು ರುಜುಮಾಡಿ, ವೈಸ್‌ರಾಯಿ ಪ್ರಭುಗಳಿಗೆ ಒಪ್ಪಿಸಿರುತ್ತಾರೆ.

ಕಲ್ಕತ್ತಾ ಪಟ್ಟಣದಲ್ಲಿ ಶ್ರೀಮತ್ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ಒಂದು ದಿವ್ಯವಾದ ಬಂಗಲೆಯು ಕಟ್ಟಲ್ಪಡುತ್ತಿದೆಯಷ್ಟೆ. ಈ ಕಟ್ಟಡದ ಫಂಡಿಗೆ ೫೬ ಲಕ್ಷ ರೂಪಾಯಿ ಚಂದಾ ಕೂಡಿರುವುದು. ಇದರಿಂದ ಕಳೆದ ಡಿಸೆಂಬರ್ ಆಖೈರು ವರೆಗೆ ೧೧ ೩೦,೦೦೦ ರೂ. ಬಡ್ಡಿ ಉತ್ಪತ್ತಿಯಾಗಿದೆ. ಈ ಫಂಡಿಗೆ ಇನ್ನೂ ೫,೫೩,೦೦೦ ರೂಪಾಯಿ ಚಂದಾ ವಸೂಲಾಗತಕ್ಕದ್ದಿದೆ ಎಂದೂ, ಇದುವರೆಗೆ ನಡೆದಿರುವ ಕೆಲಸಗಳಿಗೆ ಮುಂತಾದದ್ದಕ್ಕೆ ೧೦,೪೮,೦೦೦ ರೂಪಾಯಿ ಖರ್ಚಾಗಿದೆ ಎಂದೂ ತಿಳಿದು ಬಂದಿದೆ.

ಸಂಯುಕ್ತ ಅಧಿಪತ್ಯಗಳಿಗೆ ಸೇರಿದ ಕಾಯಸ್ಥ ಜಾತಿಯ ಹಿಂದುಗಳು ಕಳೆದ ಶನಿವಾರ ಅಲ್ಲಹಾಬಾದಿನ ಮೇಯೋಹಾಲ್ ಎಂಬ ಬಂಗಲೆಯಲ್ಲಿ ಮಹಾಸಭೆಯನ್ನು ನಡಿಸಿ, ತಮ್ಮ ಬಾಲಕರ ವಿದ್ಯಾಭ್ಯಾಸಕ್ಕಾಗಿ ಒಂದು ವಿದ್ಯಾಶಾಲೆಯನ್ನು ಇಟ್ಟು ನಡಿಸಬೇಕೆಂದು ತೀರ್ಮಾನಮಾಡಿದರು. ಮುನ್‌ಷಿ ನರಸಿಂಗ ಪ್ರಸಾದರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಆ ವಿದ್ಯಾಶಾಲೆಗೆ ೩೦,೦೦೦ ರೂಪಾಯಿ ಚಂದಾ ಕೂಡಿಸಲ್ಪಟ್ಟಿತು. ಈ ಸಂಘದವರು ಇತರರಿಂದ ೩ ಲಕ್ಷ ರೂಪಾಯಿ ಕೂಡಿಸಿದಲ್ಲಿ ಬಾಬು ಮಹದೇವ ಪ್ರಸಾದರವರು ಒಂದು ಲಕ್ಷ ರೂಪಾಯಿ ಚಂದಾ ಕೊಡುತ್ತೇವೆಂದು ವಾಗ್ದಾನಮಾಡಿದ್ದಾರೆ.

ಕಲ್ಕತ್ತಾ ಪಟ್ಟಣದಲ್ಲಿ ಕೆಲವರು ಸೇರಿ ಇಂಗ್ಲಿಷ್ ಗವರ್ನ್‌ಮೆಂಟಿನ ಮೇಲೆ ತಿರುಗಿಬೀಳಬೇಕೆಂದು ಪಿತೂರಿ ಮಾಡುತ್ತಿದ್ದರೆಂದು ಸರ್ಕಾರದವರು ಕೆಲವು ಬಂಗಾಳಿಗಳನ್ನು ಕಳೆದ ೧೯೦೮ ನೇ ಮೇ ತಿಂಗಳು ತಾ|| ೨ ರಲ್ಲಿ ಹಿಡಿದು ಆಲೀಪುರದ ಲಾಕಪ್‌ನಲ್ಲಿ ಇಟ್ಟರು. ಅವರನ್ನು ವಿಚಾರಣೆ ಮಾಡುತ್ತಿದ್ದಾರಷ್ಟೆ. ಈ ಮೊಕದ್ದಮೆಯ ವಿಚಾರಣೆಯೂ, ಅಪರಾಧಿಗಳ ಮತ್ತು ಸಾಕ್ಷಿಗಳ ಹೇಳಿಕೆಗಳೂ, ಉಭಯಪಕ್ಷದ ಲಾಯರುಗಳ ಆರ್ಗ್ಯುಮೆಂಟುಗಳೂ ನೆನ್ನೆಗೆ ಮುಕ್ತಾಯವಾದವು. ಈ ಮೊಕದ್ದಮೆಯನ್ನು ವಿಚಾರಣೆ ಮಾಡುತ್ತಿರುವ ಮಿ|| ಬೀಚ್‌ಕ್ರಾಫ್ಟ್ ಎಂಬ ಜಡ್ಜಿಯವರು ತೀರ್ಮಾನ ಹೇಳುವುದಕ್ಕೆ ಇನ್ನೂ ೩-೪ ವಾರಗಳಾಗಬಹುದೆಂದು ತಿಳಿದುಬಂದಿದೆ. ಅಲ್ಲಿಗೆ ಈ ಮೊಕದ್ದಮೆಯು ಪ್ರಾರಂಭವಾಗಿ ಒಂದು ವರುಷ ಪೂರೈಸುವುದು.

ಕಳೆದ ಶುಕ್ರವಾರ ಸಂಯುಕ್ತ ಅಧಿಪತ್ಯಗಳ ಪ್ರಾಂತಿಕ ಸಭೆಯು ಆಗ್ರಾ ಪಟ್ಟಣದಲ್ಲಿ ಪ್ರಾರಂಭವಾಯಿತು. ಸುಮಾರು ೧೦೦ ಜನ ವಿದ್ಯಾವಂತರಾದ ದೇಶೀಯ ಪ್ರತಿನಿಧಿಗಳು ಸಭೆಯಲ್ಲಿ ಮೆಂಬರುಗಳಾಗಿ ಕೂತಿದ್ದರು. ಅಲ್ಲಹಾಬಾದ್ ಹೈಕೋರ್ಟಿನ ಅಡ್ವೊಕೇಟ್ ಮಿ|| ಪಂಡಿತ ಮೋತೀಲಾಲ್ ನೇಹರುರವರು ಉಪನ್ಯಾಸಮಾಡಿ, ಸಭಿಕರಿಗೆ ಸ್ವಾಗತವನ್ನು ಬಯಸಿದರು. ಲಕ್ನೋ ಪಟ್ಟಣದಲ್ಲಿ "ಅಡ್ವೊಕೇಟ್" ಎಂಬ ಪತ್ರಿಕೆಯ ಎಡಿಟರಾಗಿರುವ ಬಾಬು ಗಂಗಾಪ್ರಸಾದವರ್ಮರವರು ಅಗ್ರಾಸನವನ್ನು ವಹಿಸಿ ಸಭೆಯನ್ನು ಜರುಗಿಸಿದರು. ಮಿ|| ಮದನಮೋಹನ ಮಾಳವೀಯರವರೂ ಇನ್ನೂ ಕೆಲವು ಹಿಂದು ವಿದ್ಯಾವಂತರೂ ಮಹಮ್ಮದೀಯ ದೊಡ್ಡ ಮನುಷ್ಯರೂ ಉಪನ್ಯಾಸಗಳನ್ನು ಮಾಡಿ ಎರಡೂ ಮಹಮ್ಮದೀಯರು ಹಿಂದುಗಳು ಸಹ ಪರಸ್ಪರ ಸ್ನೇಹಭಾವದಿಂದ ಭೇದವಿಲ್ಲದೆ ತಮ್ಮ ಸಹಕಾರ ಮಾಡಬೇಕೆಂದು ... ಉಭಯಪಕ್ಷದವರೂ ವಿನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸದೆ ರಾಜಕೀಯ ಸೌಲಭ್ಯಗಳನ್ನು ಕೇಳುತ್ತಾ ಬಂದಲ್ಲಿ ಇಂಗ್ಲಿಷ್ ಪ್ರಭುಗಳು ಅವರ ಪ್ರಾರ್ಥನೆಗಳನ್ನು ತಿರಸ್ಕಾರ ಮಾಡಲಾರರೆಂತಲೂ ತಿಳಿಸಿದರು. ಈ ಪ್ರಾಂತಿಕ ಸಭೆಯ ಅಂಗವಾಗಿ ಒಂದು ಪ್ರದರ್ಶನೋತ್ಸವವನ್ನು ನಡಿಸಿದರು. ಲೆಫ್ಟಿನೆಂಟ್ ಗವರ್ನರ್ ಸರ್ ಜಾನ್ ಹ್ಯೂಯಟ್ ಮತ್ತು ಮೈನ್ ಮಹಾರಾಜರವರು ಜನರಲ್ ಸೆಕ್ರೆಟರಿಯಾದ ರಾಯ್ ಬಹದೂರ್ ಲಾಲಾ ವೈದ್ಯನಾಥರವರು ಪ್ರದರ್ಶನ ಶಾಲೆಯನ್ನು ಉಪನ್ಯಾಸಪೂರ್ವಕವಾಗಿ ಪ್ರಾರಂಭಮಾಡಿದರು. ಅಲ್ಲಿ ಸಂಯುಕ್ತ ಅಧಿಪತ್ಯಗಳ ನಾನಾ ಕಸಬುದಾರಿ ಪದಾರ್ಥಗಳನ್ನು ಇಟ್ಟು ಪ್ರದರ್ಶನಮಾಡಿರುತ್ತಾರೆ.

ಖಾತ್ರಿದಾರರಿಗೆ ನೋಟೀಸು

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು — ಎಡಿಟರ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಕರೆಸ್ಪಾಂಡೆನ್ಸ್.

ಗುಂಡ್ಲು ತಾ|| ಬೊಂಬಳ್ಳಾಪುರದ ನಾಕೇಬಂದಿ ವಿಷಯ.

ಅಯ್ಯಾ,

ಗುಂಡ್ಲುಪೇಟೆ ತಾಲ್ಲೋಕು ಬೊಂಬಳ್ಳಾಪುರ ಗ್ರಾಮದಲ್ಲಿ ಸುಮಾರು ಒಂದೆರಡು ವರುಷದ ಲಾಗಾಯ್ತು ರಾತ್ರಿ ಕಾವಲು ನಡೆಯದೆ ಗ್ರಾಮದಲ್ಲಿ ರಾತ್ರಿವೇಳೆ ಕಳ್ಳರು ಮನೆ ನುಗ್ಗಿ ಕಳುವು ಮಾಡುವುದು ಮುಂತಾದ ಕೆಡುಕನ್ನು ನಡಿಸುತ್ತಾರೆ. ಈ ಗ್ರಾಮದ ಗಾಕೀಜಾ ವಿಷಯದಲ್ಲಿ ವಿವರಿಸಲಶಕ್ಯವಾಗಿದೆ. ಯಾವ ಕಡೆ ನೋಡಿದಾಗ್ಯೂ ದುರ್ಗಂಧ ಮಯವಾಗಿರುತ್ತೆ. ಮತ್ತು ಈ ಗ್ರಾಮದ ನಾಲ್ಕು ಕಡೆಗಳಲ್ಲೂ ಗೊಬ್ಬರದ ತಿಪ್ಪೆಗಳನ್ನು ಹಾಕಿ ತುಂಬಾ ಗಲೀಜು ಮಾಡಿ ಇರುವ ಕಾರಣ ಈ ಗ್ರಾಮಕ್ಕೆ ಅಂಟುರೋಗ ಪ್ರಾಪ್ತವಾಗಲು ಯಾವ ಸಂದೇಹವೂ ಇಲ್ಲ. ಈ ವಿಷಯದಲ್ಲಿ ನಮ್ಮ ತಾಲ್ಲೋಕು ಅಮಲ್ದಾರರು ಇಲ್ಲಿಗೆ ದಯಮಾಡಿಸಿದ್ದಾಗ್ಗೆ ಗೊಬ್ಬರ ತೆಗಿಸಿ ಗ್ರಾಮ ಶುದ್ಧಿಯಾಗುವಂತೆ ಮಾಡಬೇಕೆಂದು ಈ ಗ್ರಾಮದ ಶ್ಯಾನುಭೋಗ ಪಟೇಲರಿಗೆ ಅಪ್ಪಣೆ ಕೊಡಿಸಿದರು. ಅವರು ಗ್ರಾಮ ಶುಚಿಯಾಗುವಂತೆ ಮಾಡಲಿಲ್ಲ. ಈ ಗ್ರಾಮಕ್ಕೆ ಈ ಸಾಲಿನಲ್ಲಿ ಪ್ಲೇಗಿನ ದೃಷ್ಟಿಯು ಬೀಳಲಿಲ್ಲ. ಇದಕ್ಕಾಗಿ ತುಂಬಾ ಸಂತೋಷ ಪಡಬೇಕಾಗಿದೆ. ನಮ್ಮ ಗ್ರಾಮದಲ್ಲಿ ರಾತ್ರಿ ಕಾವಲೂ ಮತ್ತು ಗ್ರಾಮ ಶುಚಿಯಾಗುವಂತೆ ಮೇಲ್ಪಟ್ಟ ಆಫೀಸರುಗಳು ಮಾಡಿಯಾರೆಂದು ನಂಬಿದ್ದೇನೆ. ಅಲ್ಲದೆ ನಮ್ಮ ತಾಲ್ಲೂಕಿನ ಕೆಲವು ಕಡೆಗಳಲ್ಲಿ ೨—೩ ವರುಷದಿಂದ ಚೋಳ ವಗೈರೆ ಪೈರು ಸರಿಯಾಗಿ ಬೆಳೆಯದೆ ಬಡ ಪ್ರಜೆಗಳು ಪಡುವ ಕಷ್ಟವನ್ನು ವಿವರಿಸಲಶಕ್ಯವಾಗಿದೆ. ಮತ್ತು ಗೋವುಗಳ ಕಷ್ಟವನ್ನು ಹೇಳತೀರದು. ಕುಡಿಯುವುದಕ್ಕೆ ನೀರು ಮತ್ತು ಮೇಯುವುದಕ್ಕೆ ಹುಲ್ಲು ಇಲ್ಲದೆ ತುಂಬಾ ದನಗಳು ಸಾಯುತ್ತಿವೆ. ಇಂಥಾ ಕಾಲದಲ್ಲಿ ದನಗಳಿಗೆ ದೊಡ್ಡರೋಗ ಪ್ರಾಪ್ತವಾಗಿ ದಿನಕ್ಕೆ ೬—೭ ರ ಪ್ರಕಾರ ಸಾಯುತ್ತಾ ಇರುವುದನ್ನು ನೋಡಿ ತುಂಬಾ ವ್ಯಸನ ಪಡಬೇಕಾಗಿದೆ.

ಗ್ರಾಮವಾಸಿ

ಹಾಸನ್ ಡಿಸ್ಟ್ರಿಕ್ಟ್ ಬೇಲೂರು ವಿಷಯಗಳು.

ಅಯ್ಯಾ,

ಇಲ್ಲಿನ ಧಾರಣೆಗಳು ಜಾಸ್ತಿಯಾಗಿದೆ. ಕುಡಿಯುವುದಕ್ಕೆ ನೀರು ಇಲ್ಲದೆ ಗ್ರಾಮದ ಪ್ರಜೆಗಳು ಬಹಳ ಬೇಜಾರಾಗಿದ್ದಾರೆ. ಮತ್ತು ಈ ಊರಲ್ಲಿ ನಡೆಯುವ ಭಾರಿ ಸಂತೆ ೧೦-೧೫ ಸಾವಿರ ಜನರು ಒಟ್ಟುಗೂಡಿಯಿಂದ ಬರುತ್ತಾರೆ. ೨೦ ೩೦ ಸಾವಿರ ರೂಪಾಯಿನ ವ್ಯಾಪಾರ ನಡೆಯುತ್ತದೆ. ಇಲ್ಲಿಗೆ ದನಗಳೂ ಜನಗಳೂ ವಿಶೇಷ ಬರುವುದರಿಂದ ಈ ಸಂತೆಯ ಹತ್ತಿರ ಕುಡಿಯುವುದಕ್ಕೆ ನೀರಿಲ್ಲದೆ ಬಹಳ ವ್ಯಸನಪಡುತ್ತಾರೆ. ದಯಾಳುಗಳಾದ ಸರ್ಕಾರದವರು ಬಡವರ ಮೇಲೆ ಅಭಿಮಾನವಿಟ್ಟು ಒಂದು ಬಾವಿಯನ್ನು ತೋಡಿಸಿಕೊಟ್ಟಲ್ಲಿ ಇಷ್ಟು ಜನಗಳಿಗೆಲ್ಲಾ ಪ್ರಾಣ ಕೊಟ್ಟಷ್ಟು ಉಪಕಾರವಾಗುತ್ತೆ. ಸಂತೆಯಲ್ಲಿ ನೆರಳಿಲ್ಲದಿದ್ದರಿಂದ ಬಿಸಿಲಿನ ಬೇಗೆಯು ತಡೆಯುವುದಕ್ಕಾಗುವುದಿಲ್ಲ. ಊರಿನ ಜನರು ಬಿಟ್ಟರೆ ಒಗೆಯುವುದಕ್ಕೂ ಆ ಪಾಡು ಹೇಳಬೇಕಾದ್ದೇ ಇಲ್ಲ.

ಇಲ್ಲಿನ ಗವರ್ನ್‌ಮೆಂಟ್ ಕನ್ನಡ ಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿರುತ್ತೆ. ಹೆಡ್ ಮಾಸ್ಟರು ಮುತುವರ್ಜಿಯಿಂದ ಕೆಲಸವನ್ನು ಮಾಡುತ್ತಾರೆ. ಈಗ ಇರುವ ಇಬ್ಬರು ಮಾಸ್ಟರುಗಳಿಂದ ೮೦-೯೦ ಜನ ಹುಡುಗರಿಗೆ ಎಲ್ಲಾ ತರಗತಿಗೂ ಪಾಠ ಹೇಳುವುದು ಕಷ್ಟಸಾಧ್ಯವಾಗಿದೆ. ಆದ್ದರಿಂದ ಮೇಲ್ಪಟ್ಟ ಆಫೀಸರು ದಯವಿಟ್ಟು ಇಲ್ಲಿಗೆ ಇನ್ನೊಬ್ಬ ಮಾಸ್ಟರನ್ನು ದಯಪಾಲಿಸಿದರೆ ಸ್ಕೂಲು ಇನ್ನೂ ಬಹಳವಾಗಿ ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿಲ್ಲ. ಇಲ್ಲಿ ಮಾಸ್ಟರುಗಳ ಸಂಖ್ಯೆ ಕಡಮೆಯಾಗಿರುವುದರಿಂದ ೪-೫ ನೇ ತರಗತಿಗಳನ್ನು ಇಟ್ಟು ನಡಿಸಲು ತುಂಬಾ ತೊಂದರೆಯಾಗಿದೆ.

ಪ್ರಜಾ ಹಿತಚಿಂತಕ

ಭಾರತಪುತ್ರರ ಸಂಘವು.

ಅಯ್ಯಾ,

ಥಿಯೋಸಾಫಿಕಲ್ ಸೊಸೈಟಿ ಇನ್‌ಸ್ಪೆಕ್ಟರ್ ಮಿ|| ಬಂಗಾರುಕೋಟೆ ಶ್ರೀನಿವಾಸರಾಯರೆಂಬುವರು ಚಿತ್ರದುರ್ಗದಲ್ಲಿ ತಮ್ಮ ಮತದ ಉಪನ್ಯಾಸಮಾಡಿದ್ದಕ್ಕೆ ಅದರ ಜೊತೆಗೆ ಆನಿ ಬೆಸೆಂಟ್ ಅಮ್ಮನವರು ಕಾಶೀ ಪಟ್ಟಣದಲ್ಲಿ ಸ್ಥಾಪಿಸಿದ ಭಾರತಪುತ್ರರ ಸಂಘಕ್ಕೆ ಸೇರಿ ರಾಜಭಕ್ತರಾಗಿರಬೇಕೆಂದು ಪ್ರಜೆಗಳಿಗೆ ಬೋಧಿಸುತ್ತಿದ್ದಾರೆಂದು ಕೇಳಿದೆನು. ಇದು ಒಳ್ಳೇದೇ ಸರಿ. ಆ ಸಂಘದ ನಡವಳಿಕೆಯ ತಪಶೀಲನ್ನು ತಮ್ಮ ಪೇಪರಿನಲ್ಲಿ ಈ ಮೊದಲೇ ಪ್ರಕಟಮಾಡಿದ್ದಾರಾದ್ದರಿಂದ ಆ ವಿಷಯ ಪುನಃ ಈಗ ಹೇಳುವುದಿಲ್ಲ. ನನ್ನ ೬೨ ವಯಸ್ಸಿನ ಅನುಭವ, ಈಗಿನ ಸ್ಥಿತಿ, ಇವುಗಳಿಂದ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ.

ಇಂಡಿಯಾ ದೇಶದಲ್ಲಿರತಕ್ಕ ೩೦ ಕೋಟಿ ಪ್ರಜೆಗಳಿಗೂ ಇಂಗ್ಲಿಷ್ ರಾಜ್ಯಭಾರದಲ್ಲಿ ಮನಃಪೂರ್ವಕವಾದ ರಾಜಭಕ್ತಿಯು ಇದ್ದೇ ಇದೆ. ಆ ಗವರ್ನ್‌ಮೆಂಟು ಇಂಡಿಯಾಕ್ಕೆ ಬಂದಸಂಗತಿಯೇ ಈ ೩೦ ಕೋಟಿ ಪ್ರಜೆಗಳೂ ಅಜ್ಞಾನಾಂಧಕಾರದಿಂದ ಹೊರಕ್ಕೆ ಬಂದು ವಿದ್ಯಾವಂತರಾಗಿ ಲೋಕಜ್ಞಾನವನ್ನುಂಟುಮಾಡಿಕೊಂಡದ್ದು. ಈ ತಿಳುವಳಿಕೆಯು ಪ್ರತಿಯೊಬ್ಬರಿಗೂ ಇದ್ದೇ ಇದೆ. ೩,೦೦೦ ಜಿಲ್ಲರೆ ಭೇದಜಾತಿಗಳ ಪರಸ್ಪರ ಅನೈಕಮತ್ಯವುಳ್ಳ ಸರ್ಕಾರ ... ದ್ವೇಷಗಳು ಈ ಪ್ರಜೆಗಳಲ್ಲಿ ತುಂಬಿಹೋಗಿದೆಯೋ ಹೊರತು ಜಗಜ್ಜಾಹೀರಾಯಿತೆ ಇವರಿಗೆ ... ಇಂಗ್ಲಿಷ್ ಗವರ್ನ್‌ಮೆಂಟಿಗೆ ಅದು ಸ್ವಲ್ಪವೂ ತೋರಲಿಲ್ಲ. ಎಲ್ಲಾ ಪ್ರಜೆಗಳಿಗೂ ಅಚಲಿತವಾದ ರಾಜಭಕ್ತಿಯು ಇದ್ದೇ ಇದೆ. ಆದರೆ ಈ ೩೦ ಕೋಟಿ ಜನದಲ್ಲಿ ಪ್ರೌಢವಿದ್ಯಾವಂತರಾಗಿರತಕ್ಕವರ ಸಂಖ್ಯೆಯು ಅತ್ಯಲ್ಪವಾಗಿದ್ದು, ಅವರ ವಿದ್ಯಾಬಲವು ೩ ಸಾವಿರ ಜಿಲ್ಲರೆ ಜಾತಿಗಳಲ್ಲಿ ಸೇರಿರತಕ್ಕ ಪರಸ್ಪರ ದ್ವೇಷಗಳ ಒಡಂಬಡಿಕೆ ಜಾತಿಯನ್ನು ಅನುಸರಿಸಿದ್ದಾಗಿಯೂ, ಬಹಿರಂಗದಲ್ಲಿ ನಿಷ್ಕೃಷ್ಟವಾದ ಉಪನ್ಯಾಸಮಾಡತಕ್ಕದ್ದಾಗಿಯೂ ಇದೆಯೇ ಹೊರತು ಅದರಂತೆ ಅವರು ನಡೆದು ನಿಷ್ಕೃಷ್ಟಜಾತಿಗಳೆಂಬ ಖ್ಯಾತಿಯನ್ನು ಪ್ರಜೆಗಳಿಂದ ಪಡೆದದ್ದಾಗಿಲ್ಲ. ಹೀಗಿದ್ದಾಗ್ಯೂ ಅವರು ಪ್ರಜೆಗಳಿಗೆ ಸಂಬಂಧಪಟ್ಟ ದೊಡ್ಡ ಅಧಿಕಾರಗಳು ತಮಗೆ ಕೊಡಬೇಕೆಂದು ಕೇಳಿಕೊಳ್ಳತಕ್ಕ ಅವರ ಪ್ರಯತ್ನವು ನೆರವೇರಲು ಇಲ್ಲದ ಗಲಾಟೆ ಹುಟ್ಟಿದ್ದಾರೆಯೇ ಹೊರತು ಇವರಲ್ಲಿ ನಿಜತ್ವವೇನೂ ಇಲ್ಲ. ಹೀಗಿರತಕ್ಕದ್ದರಲ್ಲಿ ಇಂಥಾವರೇ ರಾಜಭಕ್ತರು, ಇಂಥಾವರು ರಾಜಭಕ್ತರಲ್ಲ ಎಂಬ ನಿರ್ದೇಶವನ್ನು ಈ ಸಂದರ್ಭದಲ್ಲಿ ಪ್ರಜೆಗಳಿಗೆ ಯಾಕೆ ಬೋಧಿಸಬೇಕು?

ಭಾರತ ಪುತ್ರರ ಸಂಘವು ಏರ್ಪಟ್ಟು ಅದರ ನಡವಳಿಕೆ, ಅದಕ್ಕೆ ಸೇರತಕ್ಕವರು ನಡೆಯಬೇಕಾದ ಸದ್ವೃತ್ತಿ, ಇವುಗಳನ್ನು ಕುರಿತು ಅನೇಕ ಪತ್ರಿಕೆಗಳು ಪ್ರಜೆಗಳಿಗೆ ಬೋಧಿಸಿವೆ. ಈ ವಿಷಯ ಬರತಮಿಂಡದಲ್ಲಿರತಕ್ಕ ಸಮಸ್ತ ಪ್ರಜೆಗಳಿಗೂ ತಿಳಿದೇ ಇದೆ. ಮನಃಪೂರ್ವಕವಾಗಿ ಈ ಸಂಘಕ್ಕೆ ಸೇರತಕ್ಕವರು ಅಪ್ಲಿಕೇಷನ್‌ಗಳನ್ನು ಕೊಟ್ಟೇ ಕೊಡುತ್ತಾರೆ. ಸಣ್ಣ ಹುಡುಗರಿಗೆ ವಿವೇಕ ಹೇಳಿ ಕೊಡತಕ್ಕ ಜವಾಬ್ದಾರಿಯು ಅವರ ತಂದೆ ತಾಯಿಗಳಿಗೂ ಸ್ಕೂಲ್ ಮಾಸ್ಟರುಗಳಿಗೂ ಸೇರಿದ್ದಾಗಿದೆ. ಆ ಹುಡುಗರು ವಿವೇಕಶಾಲಿಗಳಾಗಬೇಕೆಂಬ ಇರಾದೆಯಿಂದಲೇ ಇಂಗ್ಲೀಷ್ ಗವರ್ನ್‌ಮೆಂಟು ಅನೇಕ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ವೆಚ್ಚ ಮಾಡುತ್ತಿದ್ದ ಮೇಲಿನಂತೆ ವಿವೇಕಶಾಲಿಗಳಾಗದೆ ತಪ್ಪು ನಡೆದರೆ ರಾಜಶಾಸನಗಳು ಅಂಥಾವರನ್ನು ಶಿಕ್ಷಿಸಿ ಸನ್ಮಾರ್ಗಗಳನ್ನಾಗಿ ಮಾಡುವವು. ಆದ್ದರಿಂದ ಈ ವಿಷಯವನ್ನು ಬಹಿರಂಗದಲ್ಲಿ ಬೋಧಿಸತಕ್ಕದ್ದು ಚೆನ್ನಾಗಿ ಕಾಣುವುದಿಲ್ಲ. ಇದರಿಂದ ಗವರ್ನ್‌ಮೆಂಟಿನ ದೆಸೆಯ ಭೀತಿಯೂ ಕೆಟ್ಟ ತೆರದು ತೋರುತ್ತದೆ. ಭರತಖಂಡದ ಪ್ರಜೆಗಳಿಗೆ ತಂದೆ ತಾಯಿಗಳಂತೆ ಸಂಬಂಧ ಇರತಕ್ಕ ಇಂಗ್ಲಿಷ್ ಗವರ್ನ್‌ಮೆಂಟಿನ ಸುಖವನ್ನು ಯಾರೊಬ್ಬರು ಕಳೆದುಕೊಳ್ಳಲಾರರು. ಅವರ ಆ ಸ್ಥಿತಿಯ ವಿಚ್ಛಿತ್ತಿಗೆ ಬರತಕ್ಕ ಸಂಗ್ರಾಮವನ್ನು ಕಂಡರೆ ಅದಕ್ಕಾಗಿ ತಮ್ಮ ಪ್ರಾಣಗಳನ್ನಾದರೂ ಕೊಟ್ಟು, ತಮ್ಮ ಈಗಿನ ಸೌಖ್ಯವಾದ ಪ್ರಭುತ್ವವನ್ನು ಕಾಪಾಡಿಕೊಂಡಾರು. ಇದೇ ನಿಜ ತತ್ವವು.

ಈಚೆಗೆ ಸ್ವಕಾರ್ಯ ಧುರಂಧರರಾದ ವಿದ್ಯಾವಂತರ ದುಷ್ಟ ನಡವಳಿಯಿಂದ ಕೆಟ್ಟು ಹೋದ ಸನ್ಮಾರ್ಗಿಗಳು ನೋಡಿಕೊಳ್ಳತಕ್ಕ ಅನಾಹುತಗಳನ್ನು ಕೇಳದೆ ಇರತಕ್ಕ ದೋಷಕ್ಕೆ ಮಾತ್ರ ಇಂಗ್ಲೀಷ್ ಆಫೀಸರುಗಳು ಮುಂದೆ ಪಾತ್ರರಾದಾರೆಂಬಂತೆ ತೋರುತ್ತದೆ.

ಪೆನ್‌ಷನ್ ಆಫೀಸರ್

ಮೈಸೂರು ಗೆಜೆಟ್ ಸಂಗ್ರಹ.

ಫಾರೆಸ್ಟ್ ಅ|| ಕನ್ಸರ್‌ವೇಟರ್ ಮಿ|| ಕೆ. ಮುತ್ತಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತೆಂದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅಸಿಸ್ಟೆಂಟ್ ಕಮಿಷನರ್ ಮೈ|| ಆರ್ ನಾರಾಯಣರಾಯರನ್ನು ಮೈ|| ಟಿ ರಾಯಚೆಟ್ಟಿಯವರು ಮತ್ತೊಂದು ಕೆಲಸದ ಮೇಲಿರುವಾಗ್ಗೆ ಅಥವಾ ಇನ್ನೊಂದು ಹುಕುಂ ಕೊಡುವ ತನಕ ಬೆಂಗಳೂರು ಸಿವಿಲ್ ಆಫೀಸರಾಗಿ ಕೆಲಸ ನೋಡತಕ್ಕದ್ದೆಂದು ನೇಮಿಸಿದೆ.

ಮೈ|| ಹೌಸ್‌ಯವರನ್ನು ಸಿವಿಲ್ ಆಫೀಸರಾಗಿ ನೇಮಿಸಿದ ಎಂದು ಕೊಟ್ಟಿರುವ ಹುಕುಮನು ರದ್ದು ಮಾಡಲಾಗಿದೆ.

ತುಂಕೂರ್ ಡಿಸ್ಟ್ರಿಕ್ಟಿನಲ್ಲಿರುವ ರೆವಿನ್ಯೂ ಪ್ರೊಬೇಷನರ್ ಮೈ|| ಟಿ ಹನುಮಂತರಾಯರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಮೈ|| ಟಿ ಗೋವಿಂದರಾಯರನ್ನು ಮೈಸೂರು ಸಂಸ್ಥಾನದ ದಿವಾನರವರ ಪ್ರೈವೆಟ್ ಸೆಕ್ರೆಟರಿಯಾಗಿ ನೇಮಿಸಲಾಗಿದೆ.

ಗುಬ್ಬಿ ಸಬ್ ಡಿವಿಜನ್ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮೈ|| ಕೆ ಶ್ರೀನಿವಾಸರಾಯರಿಗೆ ೨ನೇ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರುಗಳ ತೀರ್ಮಾನದ ಮೇಲೆ ಅಪೀಲ್ ಹಿಡಿದು ವಿಚಾರಣೆ ಮಾಡುವ ಅಧಿಕಾರವನ್ನು ಕೊಡಲಾಗಿದೆ.

ಮೈ|| ಕೆ ಪಿ ಪುಟ್ಟಣ್ಣ ಚೆಟ್ಟಿಯವರು ಏಪ್ರಿಲ್ ತಾ ೧ರಲ್ಲಿ ಮೊದಲನೇ ಕೌನ್ಸಿಲರ್ ಕೆಲಸದ ಛಾರ್ಜನ್ನು ವಹಿಸಿಕೊಂಡರು.

ಮೈ|| ಎಚ್ ವಿ ನಂಜುಂಡಯ್ಯ, ಎಂ ಎ, ಎಂ ಎಲ್. ಯವರು ಏಪ್ರಿಲ್ ತಾ ೨ರಲ್ಲಿ ಎರಡನೇ ಕೌನ್ಸಿಲರ್ ಕೆಲಸದ ಛಾರ್ಜನ್ನು ವಹಿಸಿಕೊಂಡರು.

ಶ್ರೀಮನ್ಮಹಾರಾಜರವರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನ ಎ ಸ್ಕ್ವಾಡ್ರನ್ನಿನಲ್ಲಿ ಖಾಲಿ ಇರುವ ೫ನೇ ಗ್ರೇಡ್ ಟ್ರೂಪ್ ಕಮ್ಯಾಂಡರ್ ಕೆಲಸಕ್ಕೆ ದಫೇದಾರ್ ಅಬ್ದುಲ್ ರಹಿಮಾನ್ ಯವರನ್ನು ಮಾರ್ಚಿ ತಾ ೨೫ರ ಆರಭ್ಯ ಬಡ್ತಿ ಮಾಡಿರುತ್ತಾರೆ.

ಇಂಜನಿಯರ್ ಇಲಾಖಾ ಸೆಕ್ರೆಟರಿ ಆಫೀಸಿನಲ್ಲಿ ಚೀಫ್ ಅಸಿಸ್ಟೆಂಟರಾದ ಮೈ|| ಎಂ ತಿಂಗಳರಾಯರವರಿಗೆ ಎಂಟು ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಇಂಜನಿಯರ್ ಇಲಾಖೆಯಲ್ಲಿ ನಡೆದ ಕೆಳಗಿನ ಬಡ್ತಿ ಮತ್ತು ವರ್ಗಾವಣೆ ಹುಕುಂ ಮಾಡಲ್ಪಟ್ಟಿವೆ —

ಮೈ|| ಸಿ ರಂಗಸ್ವಾಮಿ ಐಯಂಗಾರ್ರು—ಎಗ್ಸಿಕ್ಯೂಟಿವ್ ಇಂಜನಿಯರ್ ೩ನೇ ಕ್ಲಾಸ್ ಎಯಿಂದ ೧ನೇ ಕ್ಲಾಸ್ ಬದಲಿ ಮೈ|| ಎಚ್ ಜಿ ಮಲ್ಲಾಪ್ಪ—ಎ ಇಂ ೩ನೇ ಕ್ಲಾಸ್ ಎಯಿಂದ ೨ನೇ ಕ್ಲಾಸ್ ಬದಲಿ, ಮೈ|| ವಿ ಪಾಂಡುರಂಗರಾಯರು—ಎ ಇಂ ೩ನೇ ಕ್ಲಾಸ್ ಬದಲಿ ಮೈ|| ಆರ್ ವಿ ಸುಂದರ ಐಯರವರೂ ಮೈ|| ವಿ ಬಿ ರಾಮಸ್ವಾಮಿ ಐಯಂಗಾರರೂ—ಎ ಇಂ ೩ನೇ ಕ್ಲಾಸ್ ಬದಲಿ ಮೈ|| ಗಳಾದ ಎಫ್ ಎ ನೋಲ್, ಆರ್ ಎಸ್ ನರಸಿಂಹ ಅಯ್ಯಂಗಾರರು—ಅ ಇಂಜನಿಯರ್ ೧ನೇ ಕ್ಲಾಸ್ ಮೈ|| ಗಳಾದ ಕೆ ಅನಂತಾಚಾರ್ಯರು, ಎನ್ ವೆಂಕಟರಾಯರು, ಕೆ ಸ್ವಾಮಿ ಐಯರು—ಅ ಇಂ|| ೨ನೇ ಕ್ಲಾಸ್ ಮೈ|| ಗಳಾದ ವಿ ನಂಜುಂಡರಾಧ್ಯರು, ವೈ ಅಶ್ವತ್ಥನಾರಾಯಣ ರಾಯರು, ಕೆ ಶ್ರೀನಿವಾಸ ಐಯಂಗಾರರು. ಕೆ ಆರ್ ಕೇಶವ ರಾವು—ಅ ಇಂ|| ೩ನೇ ಕ್ಲಾಸ್ ಮೈ|| ಎನ್ ಆನಂದಾಚಾರ್, ಎಂ ಜಿ ರಂಗಯ್ಯನವರು, ಕೆ ಎನ್ ವಾಸುದೇವರಾವ್, ವಿ ಸಿ ...., ಎ ರಾಮಸ್ವಾಮಿರಾಯರು—ಸಬ್ ಅ|| ಇಂ ೧ನೇ ಕ್ಲಾಸ್ ಮೈ|| ಟಿ ಎಸ್ ಶೇಷ ಐಯಂಗಾರ್ರು—ಅ|| ಇಂ|| ೧ನೇ ಕ್ಲಾಸ್ ಮೈ|| ಸಿ ಕೃಷ್ಣ ಐಯಂಗಾರ್ರು—ಅ|| ಇಂ|| ೨ನೇ ಕ್ಲಾಸ್

ಅರಕಲಗೂಡು ತಾಲ್ಲೂಕು ಅಮಲ್ದಾರ್ ಮೈ|| ಎಂ ಕೃಷ್ಣರಾಯರಿಗೆ ಕೊಟ್ಟದ್ದ ಪ್ರಿವಿಲೇಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾದಕಾರಣ ಡಿಟೋ ರಜವನ್ನು ಇನ್ನುಂದ ರದ್ದು ಮಾಡಿದೆ.

ಯೇಸುಕ್ರಿಸ್ತನ ಮರಣ ಮತ್ತು ಪುನರುತ್ಥಾನ

ಕಳೆದ ಶುಕ್ರವಾರ ಮತ್ತು ಆದಿತ್ಯವಾರಗಳಲ್ಲಿ ಭೂಲೋಕದಲ್ಲಿರುವ ಕ್ರೈಸ್ತ ಭಕ್ತಾದಿಗಳು ತಮ್ಮ ಗುರುವಿನ ಮರಣ ಮತ್ತು ಪುನರುತ್ಥಾನಗಳ ಹಬ್ಬಗಳನ್ನು ಆಚರಿಸಿದರು. ಕ್ರೈಸ್ತರು ಮಾತ್ರವಲ್ಲದೆ ಯೇಸುಕ್ರಿಸ್ತನನ್ನು ಮಹಾಬೋಧಕನೆಂದು ಯಾರಾರು ಸ್ಮರಿಸುತ್ತಾರೋ ಆ ಜನಗಳೆಲ್ಲರೂ ಆ ಎರಡು ದಿನಗಳನ್ನು ಬಹು ಗಾಂಭೀರ್ಯದಿಂದ ಕೊಂಡಾಡಿದರು.

ಯೇಸುಕ್ರಿಸ್ತನು ಕ್ರೈಸ್ತರಿಗೆ ಮಾತ್ರ ಗುರುವೆಂದು ಹೇಳಿಸಿಕೊಳ್ಳುವುದಿಲ್ಲ. ಆತನು ಜಗತ್ತಿಗೆಲ್ಲಾ ಗುರುವಾಗಿರುತ್ತಾನೆ. ಆತನು ನಮ್ಮನ್ನು ಸೃಷ್ಟಿಸಿದ ಭಗವಂತನ ಪ್ರೀತಿಯನ್ನೂ ಒಳ್ಳೆಯತನವನ್ನೂ ಜಗತ್ತಿಗೆ ಪ್ರಕಟಿಸಲೋಸುಗ ಅವತಾರವೆತ್ತಿದನು. ಇದೂ ಅಲ್ಲದೆ ಆತನು ಜನರ ಪಾಪಪರಿಹಾರಾರ್ಥವಾಗಿ ಶಿಲುಬೆಯ ಮೇಲೆ ಸತ್ತನು.

ಅನೇಕರು ಯೇಸುಕ್ರಿಸ್ತನನ್ನು ಒಬ್ಬ ಪ್ರಸಿದ್ಧನಾದ ಗುರುವೆಂತಲೂ ಮಹಾತ್ಮನೆಂತಲೂ ಭಾವಿಸುತ್ತಾರೆ. ಕ್ರೈಸ್ತರ ಸತ್ಯವೇದ ಗ್ರಂಥದಲ್ಲಿ ಹೇಳಿರುವ ರೀತಿ ಅಂದರೆ ಯೇಸುಸ್ವಾಮಿಯು ಜಗತ್ತಿನ ಪಾಪಪರಿಹಾರಾರ್ಥವಾಗಿ ಸತ್ತುಹೋದನೆಂಬುದನ್ನು ಅವರು ನಂಬುವುದಿಲ್ಲ. ಆದರೆ ಕ್ರೈಸ್ತ ಬೋಧನೆಗೆ ಕ್ರಿಸ್ತನ ಅರ್ಪಣೆಯ ಯಾಗವೇ ಮುಖ್ಯಾಧಾರವಾಗಿರುತ್ತದೆ. ಮನುಷ್ಯರೆಲ್ಲರೂ ಪಾಪ ಮಾಡಿರುತ್ತಾರೆಂಬುದಕ್ಕೆ ಸಂದೇಹವಿಲ್ಲ. ದೇವರು ಕೊಟ್ಟಿರುವ ಕಟ್ಟಳೆಗಳನ್ನು ಅವರು ಉಲ್ಲಂಘಿಸಿ ನಡೆದಿರುವುದು ನಿಜ. ಅವರ ಮನಸ್ಸಾಕ್ಷಿಯೇ ಇದನ್ನು ಸ್ಥಾಪಿಸಬಲ್ಲವು. ಕೊಂಡಿದ ಪಾಪಕ್ಕೆ ಜಲವೇ ಸಾಕ್ಷಿ, ಮಾಡಿದ ಪಾಪಕ್ಕೆ ಮನವೇ ಸಾಕ್ಷಿ ಎಂಬ ಗಾದೆಯು ಬಹು ಸತ್ಯವಾದುದು.

ನಾವು ಮಾಡಿದ ಪಾಪಗಳಿಗೆ ದೇವರು ನಮ್ಮನ್ನು ಶಿಕ್ಷಿಸುವನೋ ಇಲ್ಲವೆ ನಮಗೆ ಕ್ಷಮಾಪಣೆಯನ್ನು ಕೊಡುವನೋ ಎಂಬುದು ಜನರೊಳಗೆ ಮುಖ್ಯ ಪ್ರಶ್ನೆಯಾಗಿರುತ್ತದೆ. ಈ ವಿಶೇಷವಾದ ಪ್ರಶ್ನೆಯನ್ನು ಯೋಚಿಸುತ್ತಿರುವಲ್ಲಿ ಜನರು ಬಹಳ ಕಳವಳದಿಂದ ತುಂಬಿದವರಾಗಿರುವರು. ಕೆಲವು ಸಮಯಗಳಲ್ಲಿ ಅವರಿಗೆ ತಾವು ತಮ್ಮ ಪಾಪಗಳನ್ನು ಪರಿಹರಿಸಬಲ್ಲೆವೆಂಬುವ ಯೋಚನೆಯು ಹುಟ್ಟುವುದು. ಮತ್ತೆ ಕೆಲವು ಸಮಯಗಳಲ್ಲಿ ದೇವರು ತಮ್ಮ ಪಾಪಗಳಿಗೋಸ್ಕರ ತಮ್ಮನ್ನು ಶಿಕ್ಷಿಸುವನೆಂಬ ಭಾವನೆಯು ಅವರನ್ನು ಬಾಧಿಸುವುದು. ಇವುಗಳ ಯಾವುದು ನಿಜವಾಗಿ ತಿಳಿಯುವುದು ಮನುಷ್ಯನಿಗೆ ಅಸಾಧ್ಯವು. ದೇವರೇ ಮನುಷ್ಯನಿಗೆ ಈ ದಿವ್ಯಜ್ಞಾನವನ್ನು ಕೊಡಬೇಕಾಗಿದೆ. ಮತ್ತು ಅವನು ಯೇಸುಸ್ವಾಮಿಯ ಮೂಲಕ ಎಲ್ಲವನ್ನು ವಿಶದವಾಗಿ ತಿಳಿಸುತ್ತಾನೆ. ಯೇಸುಸ್ವಾಮಿಗೆ ಮನುಷ್ಯನ ಪಾಪದ ಶಿಕ್ಷೆಯೂ ಮನಸ್ಸಿನಲ್ಲಿ ಕಳವಳವನ್ನುಂಟುಮಾಡುತ್ತಿರುವ ಭಯವೂ ಚೆನ್ನಾಗಿ ಗೊತ್ತಾಗಿದೆ. ಇದಲ್ಲದೆ ಯೇಸುಕ್ರಿಸ್ತನು ಮನುಷ್ಯನ ಮೇಲಿರುವ ದೇವರ ಅತಿಶಯವಾದ ಪ್ರೀತಿಯನ್ನು ಚೆನ್ನಾಗಿ ಅರಿತಿರುತ್ತಾನೆ. ಈ ಪ್ರೀತಿಯನ್ನು ಪ್ರಕಟಪಡಿಸುವುದಕ್ಕೋಸ್ಕರ ಆತನು ಭೂಲೋಕಕ್ಕೆ ಬಂದನು. ಜನರ ಪಾಪಗಳನ್ನು ಪರಿಹರಿಸುವುದಕ್ಕೆ ಆತನು ತನ್ನ ಪ್ರಾಣವನ್ನು ಇಷ್ಟವಾಗಿ ಅರ್ಪಿಸಿದನು. ಯೇಸುಕ್ರಿಸ್ತನ ಮರಣದಲ್ಲಿ ನಾವು ಪಾಪವು ಕೆಟ್ಟದ್ದೆಂತಲೂ ಪಾಪಕ್ಕೆ ತಕ್ಕ ಶಿಕ್ಷೆಯಾಗಬೇಕೆಂ ಬ ತಿಳಿಯುವುದಲ್ಲದೆ ದೇವರು ಪಶ್ಚಾತ್ತಾಪ ಹೊಂದಿದವರಿಗೆ ಪಾಪಕ್ಷಮೆಯನ್ನು ಕೊಡುತ್ತಾನೆಂತಲೂ ತಿಳಿದುಕೊಳ್ಳುತ್ತೇವೆ. ಈ ಕಾರಣಗಳಿಂದಲೇ ಕ್ರೈಸ್ತರು ಯೇಸುಕ್ರಿಸ್ತನ ಮರಣ ದಿವಸವನ್ನು ಉತ್ಸವವಾಗಿ ಕೊಂಡಾಡುತ್ತಾರೆ. ಆ ದಿನದಲ್ಲಿ ಯೇಸುಕ್ರಿಸ್ತನು ತಮ್ಮ ಪಾಪಗಳಿಗಾಗಿ ಪ್ರಾಯಶ್ಚಿತ್ತ ಮಾಡಿದನೆಂತಲೂ ಹಾಗೆ ಮಾಡಿದರ ಮೂಲಕ ದೇವರ ಅತಿಶಯವಾದ ಪ್ರೀತಿಯನ್ನು ಪ್ರಕಟಿಸಿದನೆಂತಲೂ ಅವರು ತಿಳಿದುಕೊಂಡಿರುವರು.

ಯೇಸುಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತುಹೋದದ್ದು ನಿಜ. ಆದರೆ ಆವನು ಮನುಷ್ಯನಿಗೆ ಸಂಭವಿಸುವಂಥಾ ನಿತ್ಯವಾದ ಮರಣವನ್ನು ಪಡೆಯಲಿಲ್ಲ. ಆತನು ಸತ್ತು ಮೂರನೇ ದಿನದಲ್ಲಿ ಪುನರ್ಜೀವಿಯಾಗಿ ಎದ್ದು ಬಂದನು. ಆತನು ಈಗ ಪರಲೋಕದಲ್ಲಿ ವಾಸಮಾಡುತ್ತಾ ನಮ್ಮೆಲ್ಲರಿಗೆ ಆವಶ್ಯಕವಾದ ಶಕ್ತಿಯನ್ನೂ ಸಾಮರ್ಥ್ಯವನ್ನೂ ಕೊಡುವವನೂ ಆಗಿರುತ್ತಾನೆ. ಯೇಸುಕ್ರಿಸ್ತನು ಮರಣಕ್ಕೆ ಸೋಲಲಿಲ್ಲ. ಆತನು ಚಿರಂಜೀವಿಯಾಗಿ ಬದುಕುತ್ತಿರುತ್ತಾನೆ. ಆತನನ್ನು ಆಶ್ರಯಿಸಿಕೊಳ್ಳುವವರಿಗೆ ಆತನು ರಕ್ಷಕನಾಗಿರುತ್ತಾನೆ. ಆತನು ಮನುಷ್ಯರ ಮನಸ್ಸಾಕ್ಷಿಗಳನ್ನು ಬಲಪಡಿಸಿ ಪಾಪದ ಅರುಹನ್ನು ಹೆಚ್ಚಿಸುವನು. ಆತನು ಪಾಪದ ಅರುಹನ್ನು ಹುಟ್ಟಿಸುವುದಲ್ಲದೆ ಪಾಪಪರಿಹಾರವನ್ನು ಹೊಂದಿಕೊಳ್ಳುವ ರೀತಿಯನ್ನೂ ಪಾಪವಿಮುಕ್ತರಾಗಿ ಪವಿತ್ರತೆಯನ್ನು ಹೊಂದಿಕೊಳ್ಳುವ ಮಾರ್ಗವನ್ನೂ ತೋರಿಸಿಕೊಡುವನು.

ಈ ಮೊದಲಾದ ಕಾರಣಗಳಿಂದಲೇ ಕ್ರೈಸ್ತರು ಯೇಸುಕ್ರಿಸ್ತನ ಪುನರುತ್ಥಾನದ ದಿನವನ್ನು ಉತ್ಸವವಾಗಿ ಆಚರಿಸುತ್ತಾರೆ. ಯಾಕೆಂದರೆ ಆ ದಿನದಲ್ಲಿ ಯೇಸುಕ್ರಿಸ್ತನು ಮರಣದ ಶಕ್ತಿಯನ್ನು ಸೋಲಿಸಿ, ಮನುಷ್ಯರೊಳಗೆ ದೇವರ ಮೇಲಣ ವಿಶ್ವಾಸವನ್ನೂ ಮನುಷ್ಯರಿಗೆ ಮುಂದೆ ಸಿಕ್ಕತಕ್ಕ ಅಮರತ್ವ ಪದವಿಯನ್ನೂ ಪ್ರಕಟಿಸಿರುತ್ತಾನೆ.

ತಾಲ್ಲೂಕು ವರ್ತಮಾನ

ತುಮಕೂರು — ತಾಲ್ಲೂಕಿನಲ್ಲಿ ಶೇಕದಾರ್ ಅಮಲ್ದಾರಾಗಿದ್ದ ಮೈ|| ಚಿನ್ನಪ್ಪಾವು ಪಿಳ್ಳೆಯವರು ಸ್ವಗೃಹದಲ್ಲಿ ನಾಲ್ಕು ತಿಂಗಳಿಂದಲೂ ರೋಗಪೀಡಿತರಾಗಿದ್ದು ಏಪ್ರಿಲ್ ೬ನೇ ತಾ ಮಂಗಳವಾರ ಪೂರ್ವಾಹ್ನದಲ್ಲಿ ಸ್ವರ್ಗಸ್ಥರಾದರು. ಇವರು ಕುಮಾರಿನಿಂದ ಬಹುಕಾಲ ಪೋಲೀಸ್ ಆಫೀಸಿನಲ್ಲಿ ಕೆಲಸಮಾಡುತ್ತಿದ್ದು, ಅನಂತರ ಸಾವಗಡ ತಾಲ್ಲೂಕಿನಲ್ಲಿ ಶಿರಸ್ತೇದಾರರಾಗಿದ್ದರು. ಆಮೇಲೆ ಶೇಕದಾರ್ ಅಮಲ್ದಾರರಾಗಿ ಹುಳಿಯರಿನಲ್ಲಿ ಕೆಲಸ ನಡಿಸಿ, ತರುವಾಯ ಅಮಲ್ದಾರರಾಗಿ ಗುಬ್ಬಿ, ಪಾವಗಡ, ಹೊಸಹಳ್ಳಿ, ಶಿವನಸಮುದ್ರ, ಚನ್ನರಾಯಪಟ್ಟಣ ಮುಂತಾದ ತಾಲ್ಲೂಕುಗಳಲ್ಲಿ ೨೫ ವರ್ಷಗಳ ತನಕ ಅಮಲ್ದಾರಿಕೆಯನ್ನು ನಡೆಸಿದರು. ಇವರ ಅವಸಾನಕಾಲದಲ್ಲಿ ೬೦ ವರ್ಷ ವಯಸ್ಸಾಗಿತ್ತು. ಇವರಿಗೆ ಮೂವರು ಮಕ್ಕಳೂ, ಒಬ್ಬ ತಮ್ಮನೂ, ಕೆಲವು ಬಂಧುಮಿತ್ರರೂ ಇದ್ದಾರೆ. ಇವರು ಆನೇಕರಿಗೆ ನಾನಾ ರೀತಿಯಲ್ಲಿ ಉಪಕಾರಿಗಳಾಗಿದ್ದರು. ಅಲ್ಲದೆ ಕ್ರೈಸ್ತಸಭೆ ಪಳ್ಳಿಯೂ, ದೇವತಾ ಕಾರ್ಯಗಳಲ್ಲಿಯೂ ಸಹಾಯಕರಾಗಿದ್ದರು.— ಈ ಊರಿನಲ್ಲಿ ಜನ, ದನಗಳಿಗೆ ನೀರಿನ ತೊಂದರೆಯು ಬಹಳವಾಗಿದೆ. ಕೆರೆಯಲ್ಲಿದ್ದ ಸ್ವಲ್ಪ ನೀರು ಬತ್ತಿಹೋಯಿತು. ಕೋಟೆ, ಪೇಟೆಗಳಲ್ಲಿ ಕೆಲವು ದಿವಾನರು ಬಡವರಿಗೆ ಅನ್ನದಾನ ಮಾಡುತ್ತಿದ್ದಾರೆ. ಈ ಧರ್ಮಕಾರ್ಯವನ್ನು ಏಪ್ರಿಲ್ ತಿಂಗಳ ಅಂತ್ಯದವರೆಗೂ ನಡಿಸಿ ಅನಂತರ ನಿಲ್ಲಿಸುತ್ತಾರೆಂದು ಜನರು ಹೇಳಿಕೊಳ್ಳುತ್ತಾರೆ. ಆದರೆ ಆ ದಿವಾನರು ಇನ್ನೂ ಒಂದು ತಿಂಗಳು ಜಾಸ್ತಿ ನಡಿಸಿದರೆ ಒಳ್ಳೆ ದೊ, ಅಷ್ಟರೊಳಗೆ ಮಳೆಗಾಲವು ಒದಗಿ ಜನಗಳಿಗೆ ಕೂಲಿನಾಲಿ ದೊರಕುವದೆಂದೂ ಅಂದುಕೊಳ್ಳುತ್ತಾರೆ. ಈ ಸಂಗತಿಯನ್ನು ಆ ಧರ್ಮಾತ್ಮರು ಮರೆಯಬಾರದೆಂದು ಭಾವಿಸಲ್ಪಟ್ಟಿದೆ.— ಕಳೆದ ತಾ ೯ ರಾತ್ರಿ ಇಲ್ಲಿ ಕಣ್ಣಮುಟ್ಟಿಗೆ ಮಳೆ ಬಂದಿತು. ಇದು ಈ ವರ್ಷಕ್ಕೆ ಪ್ರಥಮವೂ, ಶುಭಸೂಚನೆಯೂ ಎಂದು ಹೇಳಬೇಕಾಗಿದೆ.

ಪರ್ಸಿಯಾ ರಾಜ್ಯದಲ್ಲಿ ಅರಾಜಕತ್ವವು.

ಕಳೆದ ವಾರ ಒದಗಿರುವ ತಂತಿ ವರ್ತಮಾನಗಳು

ಏಪ್ರಿಲ್, ತಾ ೬ನೇ ಮಂಗಳವಾರ —ಟೇಬ್ರಿಜ್ ಪಟ್ಟಣದಲ್ಲಿ ಒಬ್ಬ ಇಂಗ್ಲೆಂಡಿನವನೂ ಒಬ್ಬ ಅಮೇರಿಕದವನೂ ಪರರನ್ನು ಸ್ವೀಕರಿಸುವರಾಗಿ ಹೋರಾಡುತ್ತಿದಾರೆ. ಘೋರಕೃತ್ಯಗಳು ನಡೆಯುವಂತೆ ಕಾಣುವುದು. ಟೇಬ್ರಿಜ್ ಪಟ್ಟಣದ ಮುತ್ತಿಗೆಯು ದೀರ್ಘಕಾಲ ಹಿಡಿದರೆ ಒಳಗಿರುವ ಸಾವಿರಾರು ಪ್ರಜೆಗಳು ಹೊಟ್ಟೆಗಿಲ್ಲದೆ ಸಾಯುವರು. ಆ ಪಟ್ಟಣವು ವಶವಾದ ಪಕ್ಷದಲ್ಲಿ ಹತ್ತಾರು ಸಾವಿರ ಜನರು ಕೊಲ್ಲಲ್ಪಡುತ್ತಾರೆ.

ಏಪ್ರಿಲ್, ತಾ ೭ನೇ ಬುಧವಾರ —ಟೆಹೆರಾನ್ ಪಟ್ಟಣದಲ್ಲಿರುವ ಇಂಗ್ಲಿಷ್ ರಾಯಭಾರಿಯು ಟೇಬ್ರಿಜ್ ಪಟ್ಟಣದಲ್ಲಿರುವ ಇಂಗ್ಲಿಷ್ ಪ್ರಜೆಗಾಗಲಿ ಅವರ ಆಸ್ತಿಪಾಸ್ತಿಗಾಗಲಿ ಕಷ್ಟನಷ್ಟಗಳುಂಟಾದರೆ ಅದಕ್ಕೆ ಷಾ ಸುಲ್ತಾನರೇ ಜವಾಬ್ದಾರರಾಗಿರಬೇಕೆಂದು ಸುಲ್ತಾನರಿಗೆ ಎಚ್ಚರಿಕೆ ಕೊಟ್ಟಿರುತ್ತಾರೆ.

ಏಪ್ರಿಲ್ ತಾ ೮ನೇ ಗುರುವಾರ —ಪ್ರಜಾಪಕ್ಷದವರು ಉರೂಮಿಯಾದಲ್ಲಿರುವ ಸರ್ಕಾರಿ ಆಯುಧ ಮದ್ದುಗುಂಡಿನ ಮನೆಯನ್ನು ಸ್ವಾಧೀನ ಪಡಿಸಿಕೊಂಡಿರುವುದಲ್ಲದೆ ಮೊಹಮ್ಮದಾಲಿ ಸುಲ್ತಾನ್ ಎಂಬವನ್ನೂ ವಶಪಡಿಸಿಕೊಂಡಿದಾರೆ.

ನಿನ್ನೆ ಬುಷೈರಿನಲ್ಲಿ ಗಲಭೆಯುಂಟಾಯಿತು. ಟಾಂಜಿಸ್ತಾನ್ ಜನರು ಅಂಗಡಿ ಬೀದಿಯನ್ನು ಲೂಟಿ ಮಾಡಿದರು. ಇಂಗ್ಲಿಷ್ ವರ್ತಕರ ಸರಕುಗಳನ್ನೂ ಎತ್ತಿಕೊಂಡು ಹೋಗಿದಾರೆ. ಅಂಗಡಿಗಳೆಲ್ಲಾ ಮುಚ್ಚಿವೆ, ವ್ಯಾಪಾರವು ನಿಂತುಹೋಗಿದೆ.

ಏಪ್ರಿಲ್, ತಾ ೧೦ನೇ ಶನಿವಾರ —ಟೇಬ್ರಿಜ್ ಪಟ್ಟಣದಲ್ಲಿರುವ ರಷ್ಯಾ ರಾಯಭಾರಿಯು ತಿಳಿಸುವುದೇನೆಂದರೆ —೧೦೦೦೦ ಜನರು ಹೊಟ್ಟೆಗಿಲ್ಲದೆ ಕ್ಷೀಣ ಹೊಂದುತ್ತಿದ್ದಾರೆ. ಅವರು ಶರಣಾಗತರಾಗುವುದಕ್ಕೆ ಸಿದ್ಧರಾಗಿರುವರು. ಆದರೆ ಕೆಲಬೆಗಳು ಪ್ರಾರಂಭವಾಗಬಹುದೆಂದು ಹೆದರುವರು. ಘೋರಕೃತ್ಯಗಳೇನೂ ಆಗದಂತೆ ರಷ್ಯಾದವರು ಸಹಾಯ ಕಳುಹಬೇಕೆಂದು ಕಾಣುತ್ತದೆ.

ಟಾಂಜಿಸ್ತಾನ್ ಜನರು ಬುಷೈರಿನಲ್ಲಿ ಲೂಟಿಗಾಗಿ ಗಲಭೆಯನ್ನುಂಟು ಮಾಡಿರುವುದರಿಂದ ಪ್ರಜಾ ಪಕ್ಷದವರಿಗೆ ಭಂಗವುಂಟಾಗಿರುತ್ತದೆ. ಇಂಗ್ಲಿಷರು ತಮ್ಮ ಹಡಗಿನ ಸೈನ್ಯವನ್ನು ದಡಕ್ಕೆ ಇಳಿಸಿ ಕರೆದುಕೊಂಡು ಪಟ್ಟಣವನ್ನು ಸಂರಕ್ಷಣೆ ಮಾಡುತ್ತಿದಾರೆ. ಟಾಂಜಿಸ್ತಾನ್ ಜನರು ಆ ಡಿಸ್ಟ್ರಿಕ್ಟನ್ನು ಬಿಟ್ಟುಹೋಗುತ್ತಿರುವರು.

ಏಪ್ರಿಲ್, ತಾ ೧೧ನೇ ಭಾನುವಾರ —ಟೇಬ್ರಿಜ್ ಪಟ್ಟಣದೊಳಗೆ ಆಹಾರ ಸಾಮಗ್ರಿಗಳು ಅಪಾರವಾಗಿರುತ್ತವೆಂದೂ ಅವು ಕೆಲವು ತಿಂಗಳ ತನಕ ಸಾಕಾಗುವವೆಂದೂ, ಪರರಾಜ್ಯಗಳವರು ಷಾ ಸುಲ್ತಾನರಿಗೆ ಬೆಂಬಲವಾಗಿ ಬಂದು ನಿಲ್ಲದಿದ್ದರೆ ಅವರು ಟೇಬ್ರಿಜ್ ಪಟ್ಟಣವನ್ನು ವಶಪಡಿಸಿಕೊಳ್ಳಲಾರರೆಂದೂ ಸಾತಾರ್ ಖಾನ್ ಎಂಬ ಮುಖಂಡನು ತಿಳಿಸುತ್ತಾನೆ.

ಬುಷೈರಿನಲ್ಲಿರುವ ಇಂಗ್ಲಿಷ್ ರೆಸಿಡೆಂಟರು ಆ ಪ್ರಾಂತ್ಯದಲ್ಲೆಲ್ಲಾ ಒಂದು ಇಶ್ತಿಹಾರನ್ನು ಪ್ರಕಟಿಸಿದಾರೆ. ಅದರ ಅಭಿಪ್ರಾಯವೇನೆಂದರೆ —ಟಾಂಜಿಸ್ತಾನ್ ಜನರ ಹಾವಳಿಯನ್ನು ಅಡಗಿಸುವುದಕ್ಕೆ ಸಮರ್ಥರಾದ ಸರ್ಕಾರಿ ಅಧಿಕಾರಿಗಳ್ಯಾರೂ ಇರುವುದಿಲ್ಲ. ಪರರಾಜ್ಯಗಳ ಪ್ರಜೆಗಳಿಗೂ ಅವರ ಆಸ್ತಿಪಾಸ್ತಿಗಳಿಗೂ ನಷ್ಟವೇನೂ ಆಗದಂತೆ ಕಾಪಾಡುವುದಕ್ಕೋಸ್ಕರ ಇಂಗ್ಲಿಷ್ ಸೈನ್ಯವನ್ನು ನೇಮಕ ಮಾಡಿದೆ. ಪ್ರಜಾಪಕ್ಷದವರಿಗೆ ಭಂಗವುಂಟಾಗದೆಂಬ ಭರವಸೆಯು ಕಂಡುಬಂದ ಒಡನೆಯೇ ಆ ಸೈನ್ಯವನ್ನು ತೆಗೆದುಬಿಡುತ್ತೇವೆ ಎಂಬುದೇ.

ಒಕ್ಕಲಿಗರ ಮೂರನೇ ಮಹಾ ಸಭೆಯು

ಒಕ್ಕಲಿಗರ ಮಹಾಜನರಿಗೆಲ್ಲಾ ಪ್ರಾರ್ಥನೆ.

ಈ ಮಹಾಸಭೆಯು ಈ ತಿಂಗಳು ೨೮ ಮತ್ತು ೨೯ನೇ ತಾರೀಖು ಬುಧವಾರ ಮತ್ತು ಗುರುವಾರದ ದಿವಸ ಬೆಂಗಳೂರು ಕೋಟೆ ಒಳಗಿರುವ ಮನೋಹರ ಕಾರಿ ದೊಡ್ಡಣ್ಣನವರ ಪಾಠಶಾಲೆಯಲ್ಲಿ ನಡೆಯುವುದು. ಮೊದಲನೇ ದಿವಸ ನಮ್ಮ ಸಂಸ್ಥಾನದ ಹೊಸ ದಿವಾನ್‌ರಾದ ಮೈ|| ಟಿ ಆನಂದರಾವ್ ಬಿ ಎ ಯವರು ಮಹಾಸಭೆಯನ್ನು ಆರಂಭಿಸುವರು. ಮತ್ತು ಘನವನ್ನು ಹೊಂದಿದ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮೈ|| ಎಸ್ ಎಂ ಫ್ರೇಜರ್, ಐ ಸಿ ಎಸ್, ಸಿ ಎಸ್ ಐ ಯವರು ಒಕ್ಕಲಿಗ ಮಂಡಲಿಯ ಪ್ರಜೆಗಳಿಗೆ ಸೂಕ್ತಿಗರ್ಭಿತವಾದ ಒಂದು ಉಪನ್ಯಾಸವನ್ನು ಕಳುಹಿಸಿಕೊಡುವರು.

ನಮ್ಮ ಸಂಘದ ವಿದ್ಯಾನಿಲಯಕ್ಕೋಸ್ಕರ ಜಮೀನನ್ನು ಉಚಿತವಾಗಿ ಕೊಡಿಸಿ, ನಮ್ಮ ಶ್ರೀಮನ್ ಮಹಾರಾಜರವರ ಕೃಪಾಪೋಷಣೆಯನ್ನು ನಮ್ಮ ಸಂಘಕ್ಕೆ ಉಂಟುಮಾಡಿ ಇನ್ನೂ ಅನೇಕ ವಿಧವಾಗಿ ನಮ್ಮ ಸಂಘಕ್ಕೆ ತಮ್ಮ ಘನವಾದ ಸಹಾಯಸಂಪತ್ತಿಯನ್ನು ಕೊಟ್ಟ ಮಾಜಿ ದಿವಾನ್ ಮೈ|| ವಿ ಪಿ ಮಾಧವರಾವ್, ಸಿ ಐ ಇ ಯವರಿಗೆ ನಾವು ನಮ್ಮ ಕೃತಜ್ಞತೆಯನ್ನು ತೋರಿಸುವುದು ಯುಕ್ತವಾದುದರಿಂದ ಅವರಿಗೆ ಮೈಸೂರು ಸಂಸ್ಥಾನದ ಒಕ್ಕಲಿಗ ಪ್ರಜೆಗಳ ಪರವಾಗಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಂದು ಬೆಳ್ಳಿಯ ಕೈ ಪೆಟ್ಟಿಗೆಯಲ್ಲಿ ಇಟ್ಟು ಸಮರ್ಪಿಸಲಾಗುವುದು. ಮತ್ತು ನಮ್ಮ ನೂತನ ದಿವಾನ್‌ರವರಿಗೆ ಲಭಿಸಿರುವ ದೊಡ್ಡ ಪದವಿಗೋಸ್ಕರ ನಮ್ಮ ಸಂತೋಷಾತಿಶಯವನ್ನು ತೋರಪಡಿಸಿ ಅವರು ಈ ಸಂಸ್ಥಾನದ ಪ್ರಜೆಗಳಿಗೆ ಮಹದುಪಕಾರವನ್ನುಂಟುಮಾಡಿ ಕೀರ್ತಿವಂತರಾಗಬೇಕೆಂಬ ಪ್ರಾರ್ಥನೆಯಿಂದ ಅವರಿಗೆ ಸುಸ್ವಾಗತವನ್ನು ಬಯಸಿ ಒಂದು ವಿಜ್ಞಾಪನಾ ಪತ್ರಿಕೆಯೂ ಸಮರ್ಪಿಸಲ್ಪಡುವುದು.

ಈ ಮಹಾಸಭೆಯಲ್ಲಿ ನಮ್ಮ ಸಂಘಕ್ಕೆ ಒಕ್ಕಲಿಗ ಮಹನೀಯರು ಅನೇಕರು ಮೆಂಬರುಗಳಾಗಬೇಕೆಂಬುದು ಮುಖ್ಯ ಉದ್ದೇಶವಿರುವುದರಿಂದ ಸಭೆಗೆ ಬರತಕ್ಕವರೆಲ್ಲರೂ ಮೆಂಬರುಗಳಾಗಲು ಸನ್ನದ್ಧರಾಗಿ ದಯಮಾಡಿಸಬೇಕಾಗಿ ಪ್ರಾರ್ಥನೆ —ಒಂದುನೂರು ರೂಪಾಯಿ ಮತ್ತು ಅದಕ್ಕೆ ಮೇಲ್ಪಟ್ಟ ಮೊಬಲಗನ್ನು ಸಂಘಕ್ಕೆ ನಗದು ಕೊಡುವವರು ಯಾವಜ್ಜೀವ ಮೆಂಬರುಗಳಾಗುವುದಲ್ಲದೆ, ಸಂಘದ ಒಕ್ಕಲಿಗರ ಪತ್ರಿಕೆಯನ್ನು ಉಚಿತವಾಗಿ ಪಡೆಯುವರು. ವರ್ಷ ೧ಕ್ಕೆ ಕಡೇ ಪಕ್ಷ ನಾಲ್ಕು ರೂಪಾಯಿಗಳನ್ನು ಸಂಘಕ್ಕೆ ನಗದು ಕೊಡುತ್ತಾ ಬರುವವರು ಸಾಧಾರಣ ಮೆಂಬರುಗಳೆನ್ನಿಸಿಕೊಂಡು ಸಂಘದ ಪತ್ರಿಕೆಯನ್ನು ಉಚಿತವಾಗಿ ಪಡೆಯುವರು. ವರ್ಷ ೧ಕ್ಕೆ ಕಡೇ ಪಕ್ಷ ೨ ರೂಪಾಯಿಗಳನ್ನು ಕೊಡುತ್ತಾ ಬರುವವರೆಲ್ಲರೂ ಸಂಘಕ್ಕೆ ದಾಖಲಾದ ಮೆಂಬರುಗಳೆನ್ನಿಸಿಕೊಳ್ಳುವರು. ಈ ಮೂಲಕ ವರ್ಷಾಂಪ್ರತಿ ಸಂಘಕ್ಕೆ ಸ್ಥಿರೋದ್ಧಾರವಾದ ಆದಾಯವು ಬರುವಂತೆ ಆಗುವುದಾದುದರಿಂದ ಮಹಾಸಭೆಗೆ ಬರುವವರೆಲ್ಲರೂ ಮೆಂಬರುಗಳಾಗಬೇಕೆಂದೇ ನಮ್ಮ ಪ್ರಾರ್ಥನೆ.

ಪರಸ್ಥಳದಿಂದ ಮಹಾಸಭೆಗೆ ದಯಮಾಡಿಸುವ ಒಕ್ಕಲಿಗರ ಮಹಾಜನರೆಲ್ಲರಿಗೂ ಸಭೆಯು ನಡೆಯುವ ಎರಡು ದಿವಸಗಳೂ ಊಟ ಉಪಚಾರ ಮತ್ತು ಸ್ಥಳ ವಸತಿಗಳಿಗೆ ತಕ್ಕ ಏರ್ಪಾಡುಗಳು ಮಾಡಲ್ಪಟ್ಟಿರುವವು. ಸಂಘದ ಕಡೆಯ ಜನರು ಸಭೆಗೆ ಬರುವವರನ್ನು ರೈಲ್ವೆ ಸ್ಟೇಷನಿನಿಂದ ಬಿಡಾರಕ್ಕೆ ಕರೆದುಕೊಂಡು ಹೋಗುವರು.

ಈ ರೀತಿಯಲ್ಲಿ ಕಾಣಿಸಿರುವ ಸಂಗತಿಗಳನ್ನು ಓದಿಕೊಂಡು ಒಕ್ಕಲಿಗರ ದೊಡ್ಡ ಮನುಷ್ಯರೆಲ್ಲರೂ ಅವುಗಳನ್ನು ತಮ್ಮ ಸಹೋದರ ಒಕ್ಕಲಿಗ ಮಂಡಲಿಯಲ್ಲಿ ತಿಳಿಸಿ ಸಂಘದ ವಿಚಾರವಾಗಿ ಅವರಿಗೆ ಸ್ನೇಹಭಾವವನ್ನುಂಟುಮಾಡುವದಲ್ಲದೆ ಸಮಸ್ತ ಒಕ್ಕಲಿಗರೂ ಸಭೆಗೆ ದಯಮಾಡಿಸುವಂತೆ ಮಾಡಿ ಕಾರ್ಯವನ್ನು ಜಯಪಡಿಸಬೇಕೆಂದು ಕೋರುತ್ತೇನೆ.

ತಮ್ಮ ವಿಧೇಯ,

ಬೆಂಗಳೂರು, ಕೆ ಎಚ್ ರಾಮಯ್ಯ. ಬಿ ಎ.

ಏಪ್ರಿಲ್ ೧೯೦೯ ಜನರಲ್ ಸೆಕ್ರೆಟರಿ, ಒಕ್ಕಲಿಗರ ಸಂಘ

ನಿನಗೆ ಸ್ವಸ್ಥವಿಲ್ಲವೋ ?

ನಿನಗೆ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಶುದ್ಧಿಯಾಗುತ್ತಿದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಶುದ್ಧಿಯಾಗಿ ನಿನಗೆ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇ ಉಂಟಾಗುವವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ,—ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಚಿರಿ, ಅಶಕ್ತಿ, ಎದೆಯುರಿ, ಕಲ್ಲುಸ್ವರದ, ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗಿನ ಹುಟ್ಟು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ದೇಹದಲ್ಲಿರುವ ಮಲವನ್ನೂ ಕೆಟ್ಟದಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವಿಕ್ಕಲ್ಲಾ ಬಿಟ್ಟಿಯಾಗಿಯೂ ಹಿತವಾಗಿಯೂ ಇಟ್ಟು ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [೯೪ ೩೩]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ, ಡೋನ್ಸ್ ಪಿ. ಒ. ಬಾಕ್ಸ್ ೩೦, ಬೊಂಬಾಯಿ —ಇವರಲ್ಲಿ ದೊರೆಯುವುದು.

ಕನಡಾದಲ್ಲಿ ಪೆರೂನಾ ಸೇವನ ಮಾಡುವ ಒಂದಾನೊಂದು ಸಂಸಾರವು.

7 15

ಪೆರೂನಾವನ್ನು ಸಕಾಲದಲ್ಲಿ ಕಲಸು ಮಾತ್ರ ಕೊಟ್ಟರೆ ದೊಡ್ಡ ಕಾಯಿಲೆಗಳನ್ನೆಲ್ಲಾ ಅದು ನಿವಾರಣೆ ಮಾಡಬಲ್ಲದೆಂದು ಮಕ್ಕಳುಳ್ಳ ಅನೇಕ ಸ್ತ್ರೀಯರು ಕಂಡು ಕೊಂಡಿರುತ್ತಾರೆ.



ಮಿಸೆಸ್ ಎಟಾ ಬೂಕರ್ ಷಂವರ್ ಸ್ಟ್ರೀಟ್ ಎಸ್ ಡಬ್ಲ್ಯು ೪೧ ಕ್ವಾರ್ಕ್ ಈಕೆ ಬರೆಯುತ್ತಾರೆ — ನನ್ನ ದೇಹದೊಳಗೆ ಕ್ಷಿತ್ತರೋಗವು ಹುಟ್ಟಿ ಸರಳವೆನು ಕಡೆಗೆ ಡಾ|| ಹಾರ್ಟ್‌ಮನ್ನರನ್ನು ಕರೆಸಿಕೊಂಡು, ಅವರು ಹೇಳಿದ ಔಷಧವನ್ನು ಸೇವನೆ ಮಾಡಿದ್ದರಿಂದ ನನ್ನ ಹೊಟ್ಟೆರೋಗವು ನಿವಾರಣೆಯಾಯಿತು ಇದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞಳಾಗಿರುತ್ತೇನೆ ಕ್ಷಿತ್ತರೋಗಕ್ಕೆಲ್ಲಾ ಪೆರೂನಾ ಉತ್ತಮೋತ್ತಮವಾದ ಔಷಧವೆಂದು ನನಗೆ ತೋರುತ್ತದೆ ಈಗ ನನಗಿರುವಷ್ಟು ಸೌಖ್ಯವು ಲವಲವಿಕೆಯೂ ಹಿಂದೆ ಯಾವಾಗಲೂ ಇರಲಿಲ್ಲ

ಮಿಸೆಸ್ ಬೂಕರ್ ಬರೆದಿರುವ ಇನ್ನೊಂದು ಕಾಗದದಲ್ಲಿ ಆಕೆ ಹೇಳುವುದೇನೆಂದರೆ — ಪೆರೂನ ಮಹಾ ಆಶ್ಚರ್ಯಕರವಾದ ಔಷಧವೆಂದು ಅನುಭವಪೂರ್ವಕವಾಗಿಯೂ ಯಥಾರ್ಥವಾಗಿಯೂ ಹೇಳಬಲ್ಲೆನು ನನ್ನ ಮಗಳು ಎಲ್ಲಾ ಬಾಲಕರಿಗೆ ಎಷ್ಟು ಮಟ್ಟಿಗೆ ಆರೋಗ್ಯವಾಗಬೇಕೆಂದು ನಾನು [illegible] ಅಷ್ಟೂ ಒಳ್ಳೇದಾಯಿತು ಆದದ್ದರಿಂದ ಅವಳಿಗೆ ನ್ಯಾಯವಾದ [illegible]ವನ್ನು [illegible] ಪ್ರಕಟಿಸಬಹುದೆಂದು ಧಾರಾಳವಾಗಿ ಹೇಳುತ್ತೇನೆ"

ಶೀತವಾಯುವಿನಿಂದ ನನ್ನ ಮಗುವು ನರಳುತ್ತಿದ್ದಾಗ ಇದನ್ನು ಸೇವಿಸಿದಂತೆಲ್ಲ ಅದಕ್ಕೆ ಆರೋಗ್ಯವಾಯಿತು ಅದಕ್ಕೆ ಬಲ ಉಂಟಾಯಿತು ಅರುಚಿಯೆಲ್ಲಾ ಪರಿಹಾರವಾಗಿ ಈಗ ಮಗುವನ್ನು ನೋಡಿದರೆ ಚಿತ್ರಕ್ಕೆ ಹೋಗದಾದ ಮಗುವಿನಂತೆ ಸುಖವಾಗಿದೆ

ಅಜೀರ್ಣವಿದ್ದ ಮಗು

ಮಿಸೆಸ್ [illegible] ಎಸ್ ಈಕೆ ಬರೆಯುವುದು

ಮೂರು ವರುಷದ ನನ್ನ [illegible] ಮಗುವಿಗೆ ಹುಟ್ಟಿದಂದಿನಿಂದ [illegible] ಕೆಮ್ಮಲು ಹುಟ್ಟಿ ಅದರ [illegible] ಹೊಟ್ಟೆ ಬೇನೆಯಾಗಿ ಬಹಳ ಸಂಕಟ ಪಡುತ್ತಿತ್ತು ನಿದ್ದೆ ಮಾಡುತ್ತಿದ್ದ [illegible] ಕೆಮ್ಮು [illegible] ಅದರಲ್ಲಿ ಮಗು [illegible] ಕಷ್ಟಪಡುತ್ತಿತ್ತು ನಾವು ಕೊಟ್ಟ ಯಾವ ಔಷಧದಿಂದಲೂ ಮಗುವಿಗೆ [illegible] ಆಗ ನಾನು ಡಾ|| ಹಾರ್ಟ್‌ಮನ್ನರ ಜೀವನಾನಂದ ಬರುವ ರೋಗಗಳ ಎಂಬ ಪುಸ್ತಕವನ್ನು [illegible] ಪುಸ್ತಕ ದೊರಕಿತು ಆಗಲೇ ಪೆರೂನಾವನ್ನು ಮಗುವಿಗೆ ಕೊಡತೊಡಗಿದೆನು ಒಂದು ಬಾಟ್ಲಿಯ ಔಷಧವನ್ನು ಕೊಟ್ಟೆನು ಇದರಿಂದ ಮಗುವು ಸಂಪೂರ್ಣ ಗುಣವಾಗಿದೆ

"ಈ ಮಗುವಿಗೆ ಹುಟ್ಟಿದಾರಭ್ಯ ಅಜೀರ್ಣರೋಗವಿತ್ತು ಆದರೆ ಪೆರೂನ ತೆಗೆದುಕೊಳ್ಳುತ್ತ ಬಂದಾರಭ್ಯ [illegible] ತರಹ ಆಹಾರವನ್ನು ತಿಂದರೂ ಅದಕ್ಕೆ ಅಜೀರ್ಣವಾಗುವುದಿಲ್ಲ ಈಗ ಈ ಮಗು ಚೆನ್ನಾಗಿ ಆರೋಗ್ಯವಾಗಿದೆ ನನ್ನ ಸ್ನೇಹಿತರು ನನ್ನ ಮಗು ಬಹಳ ಚೆನ್ನಾಗಿದೆ ಎಂದು ಹೇಳಿದರೆ ಅದೆಲ್ಲಾ ಪೆರೂನಾದಿಂದ ಆದದ್ದು ಎಂದು ನಾನು ಅವರಿಗೆ ತಿಳಿಸುತ್ತೇನೆ ಕೆಮ್ಮಲಿಗೂ ಅಜೀರ್ಣಕ್ಕೂ ಪೆರೂನಾ ಬಿಟ್ಟರೆ ಇನ್ನಾವುದೂ ಪ್ರಯೋಜನಕರವಾದದ್ದಲ್ಲವೆಂದು ನನಗೆ ತೋರುತ್ತದೆ ಮತ್ತು ಈ ರೋಗಗಳನ್ನು ಅನುಭವಿಸುವವರಿಗೆಲ್ಲಾ ಪೆರೂನಾವನ್ನೇ ಸೇವಿಸುವಂತೆ ಶಿಫಾರಸು ಮಾಡುತ್ತೇನೆ

ಮಗುವಿಗೆ ಪೆರೂನಾ ಮಾಡಿದ್ದು

ಮಿಸೆಸ್ ಫ್ರಿಟ್ಸ್ ರೂಥಿ ಸಿಂಕ್ಸ್‌ವಿಲ್ಲೆ, ಇಲ್ಲಿನಾಯಿಸ್ ಯು ಎಸ್ ಎ ಈಕೆ ಬರೆಯುವುದು

"ನನ್ನ ಮಗು ನಿಜವಾಗಿ ಆರೋಗ್ಯವಾಗಿದೆ ಈ ವಾರ್ತೆಯನ್ನು ಹೇಳುವುದರಲ್ಲಿ ನನಗೆ ತುಂಬಾ ಸಂತೋಷ ನನ್ನ ಒಂದು ಮಗು ಐದು ತಿಂಗಳ ಜ್ವರವನ್ನು ಅನುಭವಿಸಿತು [illegible] ಮಾಡಿದರೂ ವಾಸಿಯಾಗಲಿಲ್ಲ ಅದು ಮಲೇರಿಯಾ ಎಂದು [illegible] ಒಬ್ಬರೆಂದು ಡಾಕ್ಟರು ಹೇಳಿದರು ಆದರೆ ಅವರು ಕೊಟ್ಟ ಔಷಧದಿಂದ [illegible] ಪ್ರಯೋಜನವಾಗಲಿಲ್ಲ

"ಆಗ ನಾನು ಪೆರೂನಾ ಕೊಟ್ಟೆನು ಕೂಡಲೇ ಅದು ಮಗುವಿಗೆ ಗುಣಕೊಟ್ಟಿತು ಇದುವರೆಗೆ ಆ ಮಗು ಜ್ವರವನ್ನು ಕಾಣದು

"ನಾನು ಡಾ|| ಹಾರ್ಟ್‌ಮನ್ನರಿಗೆ ಕಾಗದಾ ಬರೆದಾಗ ನಾನು ಮನೆ ಕೆಲಸಗಳನ್ನು ಮಾಡಲಾರದಷ್ಟು [illegible] ಯಲ್ಲಿದ್ದೆನು ಈಗ ನಾನು ಸಂಪೂರ್ಣವಾಗಿ ಆರೋಗ್ಯ ಹೊಂದಿರುತ್ತೇನೆ"

ಅವರ ಹುಡುಗನ ಪ್ರಾಣವನ್ನು ಕಾಪಾಡಿತು

ಮಿಸೆಸ್ ಆ[illegible] [illegible] ವಾಷರ್ ಬಿಡಿ ವಿಸ್ಕಾನ್ಸಿನ್ [illegible] ವಾ ಯು ಎಸ್ ಎ ಈಕೆ ಬರೆಯುವುದು

ಎರಡು ವರುಷಗಳ ಹಿಂದೆ [illegible] ಎಂಬ ನಮ್ಮ ಚಿಕ್ಕ ಹುಡುಗನಿಗೆ ಕೆಟ್ಟ [illegible] ಬಂದು ಬಿಗು ಕಾಣಿಸಿತು ಅದರ ಜೊತೆಗೆ ಜ್ವರ ಬಂತು [illegible] ಗಳು ನಮ್ಮ ಮನೆಗೆ ಬಂದು [illegible] ಅವನ [illegible] ಹೊಟ್ಟೆಗೂ [illegible] ಅವನ [illegible] ಕಡೆಗೆ [illegible] ಆಗ ಅವನಿಗೆ ಕೆಮ್ಮು [illegible] ಮಾಡಿದರೂ [illegible] ಆ ಕೆಮ್ಮು ಬಹಳ ಕಠಿಣ [illegible] ಅವನ [illegible] ಬಹಳ ಕೆಡಿಸಿತು [illegible] ಕ್ಷಯರೋಗವೆಂದು [illegible] ಆಗ ನಾವು ಇತರ ಔಷಧಗಳನ್ನು ಬಿಟ್ಟು ಪೆರೂನಾವನ್ನು ಕೊಟ್ಟು ನೋಡೋಣವೆಂದು ಒಂದು ಬಾಟ್ಲಿಯನ್ನು ಕೊಂಡು ತಂದು ಅದರಲ್ಲಿ ಹೇಳಿರುವ ಕ್ರಮದಂತೆ ಕೊಡುತ್ತಾ ಬಂದೆವು ಎರಡು ಬಾಟ್ಲಿ ತೀರುವಷ್ಟರಲ್ಲಿ ಮೇಲೆ ಅವನಿಗೆ ಚೆನ್ನಾಗಿ ವಾಸಿಯಾಯಿತು ಅಂದಿನಿಂದ ಈಗ ಅವನು ಒಂದು ದಿನವಾದರೂ ಕಾಯಿಲೆಯನ್ನು ಕಾಣದೆ ಆರೋಗ್ಯವಾಗಿಯೂ ಸಂತೋಷವಾಗಿಯೂ ಇರುತ್ತಾನೆ ನಾವು ಸರ್ವದಾ ಪೆರೂನಾವನ್ನು ಹೊಗಳುತ್ತೇವೆ ಏಕೆಂದರೆ ಅದು ನಮ್ಮ ಹುಡುಗನ ಪ್ರಾಣವನ್ನು ಉಳಿಸಿತು

ಕಾಯಿಲೆ ಬೀಳುವ ಮಕ್ಕಳು

ಮಿಸೆಸ್ [illegible], [illegible] ಸ್ಟ್ರೀಟ್ ಆಫ್ ಸೇಂಟ್ ಲೂಯಿಸ್, ಮಿಸೂರಿ ಯು ಎಸ್ ಎ ಈಕೆ ಬರೆಯುವುದು —

[illegible] ನನ್ನ ನಾಲ್ಕು ವರ್ಷದ ಮಗಳು [illegible] ವನ್ನು ನಮಗೆ [illegible] ಅಭಿಪ್ರಾಯ ಕೇಳಿದೆನು ಅವಳು ಹುಟ್ಟಿದಂದಿನಿಂದ ಕಾಯಿಲೆ ಬೀಳುತ್ತಾ ಬಹಳ ಕೃಶವಾಗಿದ್ದಳು ಅವಳಿಗೆ [illegible] ಬೀಳುವುದು [illegible] ಅವಳಿಗೆ [illegible] ಪೆರೂನಾ ಕೊಡ[illegible] ಆರೋಗ್ಯವಾಯಿತು [illegible] ಉಪಯೋಗ [illegible]

[illegible] ಬಹಳ ಮಕ್ಕಳಲ್ಲಿ [illegible] ನನ್ನ [illegible] ಮಗುವಿಗೆ [illegible] ಆರೋಗ್ಯವನ್ನು [illegible]

"ಪೆರೂನಾ ನನ್ನ ಮಗಳ ಮಗುವನ್ನು ಬದುಕಿಸಿತು ಅದಕ್ಕೆ [illegible] ಬಗ್ಗುತ್ತಿತ್ತು ಈಗ ಈ ಮಗು ದೊಡ್ಡದಾಗಿ [illegible] ಬೆಳೆದಿದೆ ಆಗಾಗ [illegible] ಕೊಡುತ್ತಿದ್ದೇನೆ ಅದರಿಂದಲೇ ಅವನು [illegible] ಆರೋಗ್ಯವಾಗಿರುವನೆಂದು ನನಗೆ ತೋರುತ್ತದೆ ಪೆರೂನಾವನ್ನು ಎಷ್ಟು ಹೊಗಳಿದರೂ ತೀರದು [illegible] ಉಪಯೋಗಿಸುತ್ತೇವೆ [illegible] ಬಹಳವಾಗಿ ಕೊಂಡ ಪದಾರ್ಥವಿದೆ

ಮಗು ಈಗ ಆರೋಗ್ಯವಾಗಿದೆ

ಮಿಸೆಸ್ ಪಿ ಡಬ್ಲ್ಯು [illegible] ಆಫ್ [illegible] ಯು ಎಸ್ ಎ ಈಕೆ ತನ್ನ ಕೆ ಮಗುವಿನ ವಿಷಯವಾಗಿ ಡಾ|| ಹಾರ್ಟ್‌ಮನ್ನರಿಗೆ ಬರೆಯುವುದು —

"[illegible] ನನ್ನ ಮಗುವಿಗೆ ಎರಡು ವರ್ಷ ತುಂಬಿತು ಈ ಮಗುವಿಗೆ ಮೂತ್ರಕೋಶವು ಕೆಟ್ಟುಹೋಗಿತ್ತು ಮಗುವು [illegible] [illegible] ನಾ ಯೋಚಿಸಿದ್ದೆ [illegible] ಚಿಸಿರಲಿಲ್ಲ ಈ ಮಗು ಮೂರು ನಾಲ್ಕು ತಿಂಗಳ ಕಾಲ ಕಾಯಿಲೆ ಬಿದ್ದಿತ್ತು ಒಂದು ಬಾಟ್ಲಿ ಪೆರೂನಾದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಕೊಡುವಷ್ಟರಲ್ಲೇ ಈ ಮಗುವಿಗೆ ಆರೋಗ್ಯವಾಗಿದೆ

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದ್ದನ್ನು ಇಶ್ತಿಹಾರಿಂದಲೇ ತಿಳಿಯಬಹುದು

ಹಿಂದೂಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

[illegible] ರಿಂದ [illegible] ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	16	13	0	0
ಮೈಸೂರು	1	0	0	0
ಬೆಂಗಳೂರು ಡಿಸ್ಟ್ರಿಕ್ಟು	7	(	7	3
ಮೈಸೂರು ,,	7	)	0	0
ಕೋಲಾರ್ ,,	0	0	9	4
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ	0	0	87	61
ಚಿತ್ರದುರ್ಗ ,,	0	0	0	0
ಕಡೂರ್	0	0	7	3
ಶಿವಮೊಗ್ಗಾ	6	2	1	3
* ಸಂಖ್ಯೆ ಕಾಣಿಸಲ್ಲ ಜುಮ್ಲಾ	17	20	111	71

ಶಾಲಿವಾಹನ ಶಕ ವರುಷಗಳು ೧೮೩೧ ನೇ ಸೌಮ್ಯನಾಮ ಸಂವತ್ಸರ ಚೈತ್ರ ಬಹುಳ ದಶಮಿ ಗುರುವಾರದಿಂದ ವೈಶಾಖ ಶುದ್ಧ ಪಾಡ್ಯಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಏಪ್ರಿಲ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಂದಿ ಕುಂಭ ಮಾಸ
16	ಗುರು	ದಶಮಿ	1 ? 0	[illegible]	1 2?	3
1?	ಶುಕ್ರ	ಏಕಾದಶಿ	1 2?	[illegible]	[illegible]	1
17	ಶನಿವಾರ	ದ್ವಾದಶಿ	2 ?	ಪೂರ್ವಾಭಾ	11 ?0	[illegible]
1?	ರವಿ	ತ್ರಯೋದಶಿ	33 1	ಉತ್ತರಾಭಾ	1? 1?	1
1?	ಸೋಮ	ಚತುರ್ದಶಿ	1? 1	ರೇ	11 ?	7
?	ಕುಜ	ಅಮಾವಾಸ್ಯೆ	11 1	ಅ	? 1?	4
?1	ಬುಧ	ಪಾಡ್ಯಮಿ	? 20	[illegible]	15 2	4

[illegible] ಏಕಾದಶಿ [illegible] ಮಹಾಪ್ರದೋಷ [illegible] ಅಮಾವಾಸ್ಯೆ [illegible] ರಂಗದ ರಂಗನಾಥಸ್ವಾಮಿ ರಥ [illegible] ಅಮಾವಾಸ್ಯೆ [illegible] ಚಂದ್ರೋದಯ

ರೇಟ್ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಟ್ಟು ಅಕ್ಕಿ ಪಲ್ಲಾ ೧ಕ್ಕೆ	ರೂ	೧೩ ೦ ೦	೧೨ ೦ ೦
ಕೆಂಪು ಅಕ್ಕಿ ಅವಲ್		೧೬ ೧೨ ೦	[illegible]
,, ಮುಂ..		೧೬ ೮ ೦	೧೬ ೦ ೦
ಜಪ್ಪಾನ್ ಅಕ್ಕಿ		೧೩ ೧೨ ೦	೨೦ ೦ ೦
ಸಣ್ಣಕ್ಕಿ ಅವಲ್		೧೭ ೮	೨೦ ೦ ೦
,, ಮುಂ..		೧೭ ೦ ೦	೧೯ ೦ ೦
ತೊಗರೀ ಬೇಳೆ ಪಲ್ಲ ೧ಕ್ಕೆ		೧೬ ೦ ೦	೧೬ ೦ ೦
,, ಮುಂ..		೧೫ ೮ ೦	೧೫ ೮ ೦
ಹೆ[illegible]ರಾಗಿ ಪಲ್ಲ ೧ಕ್ಕೆ		೮ ೮ ೦	೯ ೦ ೦
ಕೂದ್ರಾಗಿ		೮ ೬	೮ ೮ ೦
ಜೋಳ		೮ ೦ ೦	೯ ೮ ೦
ಹುಲಸಂದೆ ಪಲ್ಲ ೧ಕ್ಕೆ		೧೬ ೦ ೦	೧೭ ೮ ೦
ಬೇಳೆ ಅವರೆ		೧೧ ೦ ೦	೧೧ ೦ ೦
ಹೆಸರು		೧೪ ೪ ೦	೧೧ ೮ ೦
ಉದ್ದು		೧೫ ೦ ೦	೧೩ ೮ ೦
ಕಡಲೆ		೧೩ ೮ ೦	೧೩ ೧೨ ೦
ಎಳ್ಳು ಸೇ ೧೨೦ಕ್ಕೆ		೨೧ ೯ ೦	೨೦ ೮ ೦
ಹುರುಳಿ		೧೦ ೮ ೦	೧೦ ೦ ೦
ಹರಳು ೧೨೦ ಸೇರಿಗೆ		೧೦ ೦ ೦	೧೦ ೧೨ ೦
ಸೀಗೇಕಾಯಿ ಮಣ ೧ಕ್ಕೆ		೨ ೦ ೦	೧ ೮ ೦
ಮೆಣಸಿನಕಾಯಿ		೫ ೬ ೦	೪ ೦ ೦
,, ದುಂಡು		೫ ೦ ೦	೩ ೪ ೦
ಬೆಲ್ಲ ದೊಡ್ಡ ಅಚ್ಚು		೬ ೪ ೦	ಮ ೧ ೧೨ ೦
ಒಳ್ಳೆಣ್ಣೆ ಮಣ ೧ಕ್ಕೆ		೫ ೮ ೦	೫ ೬ ೦
ಹರಳೆಣ್ಣೆ		೫ ೦ ೦	೪ ೪ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೮ ೦ ೦	೮ ೮ ೦
ಉಪ್ಪು ,,		೫ ೮ ೦	೬ ೧೬ ೦
ಹುಣಸೇ ಹಣ್ಣು		೧ ೮ ೦	೧ ೬ ೦
,, ಹಳೆ ದು		೧ ೬	೧ ೪ ೦
ತುಪ್ಪ ಮಣ ೧ಕ್ಕೆ		೧೫ ೦ ೦	೧೬ ೨ ೦
ಸೀಮೆಎಣ್ಣೆ ಪೆಟಿ ೧ಕ್ಕೆ		೪ ೨ ೦	೪ ೨ ೦
ತೆಂಗಿನಕಾಯಿ ೧೦೦ಕ್ಕೆ		೭ ೦ ೦	೬ ೮ ೦
ಅಳಲೇಕಾಯಿ ಮಣ ೧ಕ್ಕೆ		೦ ೧೨ ೦	೧ ೪ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೧ ೬ ೦	೧ ೪ ೦
ಚಿನ್ನ (ಪೌನ್) ಕೆಂಪು		೧೫ ೬ ೦	೧೫ ೬ ೦
,, ಪಸಿಮೆ		೧೬ ೦ ೦	೧೫ ೧೦ ೦
,, ,, ಗಟ್ಟಿ ತೊಲ ೧ಕ್ಕೆ		೨೪ ೮ ೦	೨೪ ೬ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೬೭ ೦ ೦	೬೩ ೪ ೦

Printed and Published by the Rev H Gulliford Proprietor and Manager Wesleyan Mission Press Mysore 15/4/1909

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸ್ ೧೯೦೯ ನೇ ಇಸವಿ ಏಪ್ರಿಲ್ ತಾರೀಖು ೨೨ ನೇ ಗುರುವಾರ. ಸಂಚಿಕೆ ೪೭

ಜ್ವರಸುಧಾ.

81 29

ಒಂದು ಬಾಟ್ಲಿ ಕಿಮ್ಮತು ೮ ಆಣೆ—ವಿ. ಪಿ. ಖರ್ಚು ೬ರ.

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ವಿನಾ ಬೇರೆ ಔಷಧಿಯೇ ಆವಶ್ಯಕವಿಲ್ಲವೆಂದು ಅನುಭವಶಾಲಿಗಳಾದ ಡಾಕ್ಟರುಗಳು ಹೇಳುತ್ತಲಿದ್ದಾರೆ ಕೈಕಾಲು ತಲೆನೋವು ಅಜೀರ್ಣ, ಭೇದಿ, ವಾಂತಿ, ಕೆಮ್ಮು, ನೋವು ಮುಂತಾದವುಗಳನ್ನು ೧—೨ ಹೊತ್ತಿನಲ್ಲಿಯೇ ಮಂತ್ರಶಕ್ತಿಯಂತೆ ದಿನಾಂತರಕ್ಕೆ ಹೋಗಿಸಬಲ್ಲದು ಸುಧಾ ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವೂ ಇರಲಾರದು ಅಂಟುಪುಟ್ಟಿಲ್ಲವೋ ಹಾಗೆಯೇ ನಮ್ಮ ಜ್ವರಸುಧೆಯು ಎಲ್ಲಾ ವಿಧವಾದ ಜ್ವರಗಳನ್ನೂ ನಾಶಪಡಿಸುವುದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಸಲ ಔಷಧಿಯಲ್ಲಿ ಕಂಡು ಬರುವ ಅನುಭವಗುಣವನ್ನು ಹೆಚ್ಚು ವರ್ಣಿಸ ಬಾರದಾಗಿದೆ

ರಾಮಸ್ವಾಮಿ ... ಬೆಂಗಳೂರು ಸಿಟಿ.

ಮು. ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟೀಷನರ್

ಜ್ವರಹರಿ

15 13

ಸಾಧಾರಣ ಜ್ವರ, ಚಳಿಜ್ವರ, ಮಲೇರಿಯಾ ಜ್ವರ, ಪಿತ್ತಜ್ವರ, ಶೀತಜ್ವರ ... ಮುಂತಾದ ಜ್ವರಗಳನ್ನೂ ಬಹು ಬೇಗ ನಾಶಮಾಡುವದು

... ಅಯ್ಯರವರು—ನಾವು ಕೆಲವು ... ಕಳುಹಿಸಿ ಕೊಟ್ಟ ... ಔಷಧಿಯು ... ಇದು ಅನೇಕ ಮಂದಿ ... ಜನಗಳು ... ಉಪಕಾರವಾಗಿದೆ—ಎಂದು ಬರೆದಿದ್ದಾರೆ

... ೧—೮ ರೂ ... ರೂ ... ಪೋಸ್ಟೇಜು ... ಬೇರೆ ಬೀಳುವದು

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಹೊಟ್ಟೆ ನೋವು ... ಕಳೆಯುವದು, ಕಾಲರಾ ... ಮುಂತಾದ ಕೆಲ್ಲ ... ಇದು ಹೆಂಗಸರು ... ವ್ಯಾಧಿಗಳನ್ನು ಕಳೆದ ಗುಣಪಡಿಸುತ್ತದೆ. ... "ಓಮಂ ಕರ್ಪೂರ" ಎಂಬ ಔಷಧ ... ದೊರಕುವದು

... ಅಸಿಸ್ಟೆಂಟ್ ಸರ್ಜನ್ ... ಓಮಂ ಕರ್ಪೂರವನ್ನು ನಾನೂ ... ಆಸ್ಪತ್ರೆಯಲ್ಲಿ ... ಕಾಲರಾ, ಅಜೀರ್ಣ. ... ರೋಗದ ... ಗುಣವಾಗುತ್ತಲಿದೆ ... ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ... ವೈದ್ಯಶಾಲೆಗಳಲ್ಲೂ, ... ಕ್ರಯಕ್ಕೆ ಸಿಕ್ಕುತ್ತವೆ ... ಕೆಳಗಿನ ವಿಳಾಸ ... ವಿಳಾಸ —

ಮದ್ರಾಸು ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

JUST RECEIVED! JUST RECEIVED!!

Stead's Books for the Bairns

(Illustrated) New Numbers [5-16]

STEAD'S PENNY POPULAR TALES—Sixty-four Pages in a coloured Picture Cover. Each number contains a story of thrilling interest 24 numbers.

CALENDARS FOR 1909.

Apply—**The Manager, C. L. S. Book Depot, Mysore City.**

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲಿ ನಮ್ಮ ಏಜೆಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) ರೂ. ೧—೦—೦

ಪತ್ರ ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜು ಸೇರಿ ರೂ ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬಾರತಕ್ಕ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಹಾಕಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೆ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

"ವಿಕಟಪ್ರತಾಪ."

ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆ.

ವಾಗ್ವಿಲಾಸ — ಆನಂದಿಂದ ಉತ್ತಮಗುಣಗಳನ್ನುಳ್ಳ ಹಾಸ್ಯ, ... ವಿಪ್ರಲಾಪ, ಅನಾಥರ ವಿಲಾಪ, ಸೋಮಾರಿಗಳ ಪ್ರಲಾಪ, ಶ್ರೀಮಂತರ ಸಲ್ಲಾಪ, ರಸಿಕರ ಆಲಾಪ, ... ಆಲಾಪ, ... ಕೋಪ. ಈ ಕಲಾಪಗಳ ಚಿತ್ರಗಳಿಂದೊಪ್ಪಿರುವುದು ನಮ್ಮ ವಿಕಟಪ್ರತಾಪ.

ಹಾಸ್ಯರಸದಿಂದ ಕೂಡಿ, ಅಪೂರ್ವ ಚಿತ್ರಗಳಿಂದ ಪ್ರಕಾಶಿಸುವ ಈ ಪತ್ರಿಕೆಗೆ ... ತಾಲ್ಲೂಕು, ಹೋಬಳಿಗಳಲ್ಲಿಯೂ ಏಜೆಂಟರುಗಳು ಬೇಕಾಗಿದೆ ಏಜೆಂಟರುಗಳಿಗೆ ... ಕಮಿಷನ್ ಕೊಡಲ್ಪಡುವುದು

ಈ ವಿಕಟಪ್ರತಾಪವೆಂಬ ಮಾಸಪತ್ರಿಕೆಗೆ ಈ ಸಲ ... ಒಂದು ವರುಷ ಚಂದಾದಾರರಾಗುವವರಿಗೆ ... ವಿನೋದವಾದ ಕಥೆಯ ಪುಸ್ತಕವನ್ನು ಬಹುಮಾನವಾಗಿ ಕೊಡಲ್ಪಡುವುದು

ವಾರ್ಷಿಕ ಚಂದಾ ಸ್ಥಳದವರಿಗೆ ಮತ್ತು ಪರಸ್ಥಳದವರಿಗೆ

(ಅಂಚೆಸಹಿತ) ರೂ ೧—೨—೦

ಚಂದಾ ಹಣ ಮುಂಗಡವಾಗಿ ಬಾರದೆ ಯಾರಿಗೂ ಪತ್ರಿಕೆಯನ್ನು ಕಳುಹಿಸುವುದಿಲ್ಲ 38-1

ನಮ್ಮ ವಿಳಾಸ "ವಿಕಟಪ್ರತಾಪ" ಆಫೀಸ್,
... ಪೇಟೆ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28-10



೧. ಚೊಕ್ಕನಾಯಕರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು. ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ ಬಾಲಗ್ರಹ ಜ್ವರ. ಹೊಟ್ಟೆಯುಬ್ಬರ, ಸಂದುಗಳ ನೋವು, ಮೈಕೈ ಕಾಲು ಸೆಳೆತ (ಧಾರಿ), ಮೈನಡುಕ, ಶೀತವಾತಗಳ ... ಅಜೀರ್ಣ, ಅಗ್ನಿಮಾಂದ್ಯ, ತಲೆನೋವು, ಕೆಮ್ಮಲು, ನಿಗಿತ ... ಅರೋಚಕ. ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಚಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ... ಆಹಾರವನ್ನು ಮರೆ ಜೀರ್ಣಗೊಳಿಸಿ, ... ಬಾಯಿಗೂ ರುಚಿಕೊಡಲು ... ಸರಿಪಡಿಸಿ, ... ಬುದ್ಧಿ ವೃದ್ಧಿ ಪಡಿಸುತ್ತದೆ ... ಮಕ್ಕಳ ... ಜ್ವರ, ... ಜ್ವರ, ... ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ... ಯಾಗುವುದಿಲ್ಲ. ... ಶಕ್ತಿವರ್ಧಕವಾಗಿದೆ

ಅನುಪಾನವು ಔಷಧದ ಸಂಗಡಲೇ ಇರುತ್ತದೆ.

೨೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.
ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟಿದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30 9]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟು ನೋವು, ಅರ್ಧಾಂಗವಾಯು. ಎದೆಶೀತ, ಘಾಯ, ಚಳಿಯು, ಇತ್ಯಾದಿ.

ಅಭಿಪ್ರಾಯ.

ಆರ್ ಆರ್. ಗಂಗೋಲಿ, ೧ನೇ ಕ್ಲಾಸ್ ಸಬ್ ಜಡ್ಜ್, ಕಾರವಾರ — "ನಾನು ಅಮೃತಾಂಜನವನ್ನು ಸಂಧಿವ್ಯಾಧಿಗೂ, ಕೆಮ್ಮಿಗೂ, ವಾತದ ಬೇನೆಗೂ, ತಲೆನೋವಿಗೂ, ಉಪಯೋಗಿಸಿದ್ದೇನೆ. ಅಮೂಲ್ಯವಾದ ಔಷಧಿಯಾಗಿರುತ್ತದೆಂದು ನಂಬುತ್ತೇನೆ ಈ ಅಮೃತಾಂಜನವು ಮೇಲೆ ಹೇಳಿದ ಎಲ್ಲಾ ನೋವುಗಳಲ್ಲಿಯೂ ಅತ್ಯುತ್ತಮವಾಗಿ ಸರ್ವಜನರಿಂದಲೂ ಶ್ಲಾಘಿಸಲ್ಪಡುವದು"

ಗಜಕರ್ಣದ ಮುಲಾಮು.

ಮೂರು ಸಾರಿ ಹಾಕುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಬಟ್ಟೆಗೆ ಕರೆಯಾಗುವದಿಲ್ಲ ಡಬ್ಬಿ ಒಂದರ ಕಿಮ್ಮತು ೦-೬-೦. ೧೨ ಡಬ್ಬಿಗಳಿಗೆ ೪-೨-೦

ವಜ್ರಗುಟಿಕೆ.

ಧಾತುಪುಷ್ಟಿ, ರಕ್ತಶುದ್ಧಿ, ಬಾಟ್ಲಿ ಒಂದರ ಕಿಮ್ಮತು ರೂ ೧ ೨-೦

ಸುಂದರೀ ಮುಲಾಮು—ಮುಖದ ಬಿಗಳಿಗೆ ೦ ೪-೦

ದಂತಮಂಜನ—ಹಲ್ಲುಗಳು ಗಟ್ಟಿಯಾಗುತ್ತವೆ ೦-೩-೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು — 'ಅಮೃತಾಂಜನ,' ಮುಂಬಯಿ.

THE PLACE FOP HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ನಿಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಳಸಲಾಗುತ್ತಿರುವ ಟೋಪಿಗಳ ಪಾರವೆಲ್ಲಾ ಬೇಕಾದದ್ದು ಅದೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಳ್ಳುತ್ತ ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಪಾತವೆಲ್ಲಾ ಸೆಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೊಸೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ, ೧ ರೂ ೬ ಆ., ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧-೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ., ೧ ರೂ ೬ ಆ.

ಉಣ್ಣೆಯ ಟೋಪಿಗಳು ೧ ರೂ ೮ ಆ., ೧ ರೂ ೬ ಆ,

ಹುಡುಗರ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕೆತ್ತನೆ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಮನೆಯ ಹಕ್ಕುದಾರೀ ನೋಟೀಸು

13 1

ಮೈಸೂರು ಲಷ್ಕರ್ ಮೊಹಲ್ಲಾ ದೊಡ್ಡಪೇಟೆ ಕಡಲೇ ಸಂದಿನಲ್ಲಿ ಅರ್ಕಾಟ್ ನಾಗರತ್ನಾಸಾನಿ ಮಗಳು ವೆಂಕಟಸಾನಿಯಾದ ನಾನು ಡಿಟೋ ಕಡಲೆ ಸಂದಿನಲ್ಲಿ ನನ್ನ ಸ್ವಾಧೀನಾನುಭವದಲ್ಲಿ ಮ್ಯುನಿಸಿಪಲ್ ಡೋರ್ ೫೧೦ ನೇ ನಂಬರು ಮನೇ ಯು ನನ್ನ ಸ್ವಂತ ಸಂಪಾದನೆಗೆ ಸಂಬಂಧಪಟ್ಟ ನನ್ನ ಒಡವೆಗಳ ವಿಕ್ರಯದ ಮೊಬಲಗಿನಿಂದ ಕ್ರಯಕ್ಕೆ ಪಡೆದಿರುವ ನನ್ನ ಸ್ವಂತ ಸ್ವತ್ತಾಗಿರುತ್ತೆ ಇದರ ಕ್ರಯದ ದಸ್ತಾವೇಜು ನನ್ನ ಮಾತ್ರಕ್ಕೆ ನಮ್ಮ ತಾಯಿಯ ಹೆಸರಿನಲ್ಲಿ ಬರೆಸಲ್ಪಟ್ಟದೆಯೇ ಶಿವಾಯಿ ಸದರಿ ಸ್ವತ್ತಿನ ಮೇಲೆ ಆಕೆಗೆ (ನಾಗರತ್ನಾಸಾನಿಗೆ) ಯಾವ ವಿಧವಾದ ಹಕ್ಕೂ ಇರುವದಿಲ್ಲವೆಂಬ ಅಂಶವನ್ನು ಈಮೂಲಕ ಸಮಸ್ತರಿಗೂ ಪ್ರಸಿದ್ಧಪಡಿಸಿ ಇದೇನೆ

ಮೈಸೂರು, ೨೦-೪-೦೮ ವೆಂಕಟಸಾನಿ ರುಜು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

48 18

ತಲೆನೋವು, ವಾಯುನೋವು, ಸೆಳತ, ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಯಿಲ್ಲದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷಿಸಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅತ್ಯಂತ ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್ ಪೀಟರ್ಸ್,

೩೩, ವೇದವಲ್ಲಿ ಪಿಳ್ಳೆ ಬೀದಿ, ವೇಪೇರಿ, ಮದರಾಸ್

ನೋಡಿರಿ. "ಪ್ರೋತ್ಸಾಹ ಕೊಡಿರಿ." ತರಿಸಿರಿ.

98 22

ಈಗ ತಾನೇ ಸೀಮೆಯಿಂದ ಬಂದಿದೆ

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ

೫,೦೦೦ ಹಾಸನ್ ಟೋಪಿ ಹೊಲಿಯುವ ಸುಪೀರಿಯರ್ ವೂಲನ್ ದಾರ

೧೦ ಟೋಪಿಗಾಗುವ ವೂಲ್ ಬಂಡಲ್ ೧ಕ್ಕೆ ೩ ೭ ೦ ೧ ಟೋಪಿಯಾಗುವ ವೂಲ್ ದಾರಕ್ಕೆ ೦ ೮ ೦ ಹಾಸನ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ಕ್ಕೆ ೦-೧ ೬ ೨ ೦, ೩೦ ಇಂಚಿನ ದೊಡ್ಡ ಸೈಜು ಬೀಯಿಂಗ್ ೧ಕ್ಕೆ ೧ ೮ ೦ ಪಿಚ್ಚರ್ ಪೋಸ್ಟು ಕಾರ್ಡು, ಡಬಲ್ ಕಲರ್, ೧,೦೦೦ ಕ್ಕೆ ೧ ೮ ೦, ಸುಗಂಧ ಸಂಜೀವಿನಿ, ಭೃಂಗಾಮಲಕ ತೈಲ, ಸೀಸೆ ೧ಕ್ಕೆ ೦ ೮ ೦, ಪೌಂಟನ್ ಪೆನ್ನಿಗೆ ಅನುಕೂಲವಾದ ಔಷಧ, ಡಬ್ಬಿ ೧ಕ್ಕೆ ೦ ೩ ೦ ೩೦೦ ಮಾತ್ರೆಗಳು ಇರುವ ಸೀಸೆ, ಸೀಸೆ ಪರಿಮಳದ ತಾಂಬೂಲಮಿತ್ರನು, ಪ್ಯಾಕೆಟ್ ೧ಕ್ಕೆ ೦ ೩ ೦ ಲಿನನ್ ಕೈವಸ್ತ್ರಗಳು (ಚಂದವಾದದ್ದು) ೧ಕ್ಕೆ ೦ ೨ ೦ ರೋಸ್‌ಕೋಪ್ ಸ್ಟ್ಯಾಯಿಲ್ ವಾಚು ೧ಕ್ಕೆ ೪ ೦-೦, ಕೊಂಬಿನ ಬಾಚಣಿಗೆಗಳು, ದೊಡ್ಡ ಸೈಜು, ಡಜನ್ ೧ಕ್ಕೆ ೧೧ ೦ ೦ ಗಜಕರ್ಣದ ಮುಲಾಮು ಡಬ್ಬಿ ೧ಕ್ಕೆ ೦ ೬ ೦ ೨೮ ಇಂಗ್ಲೀಷು ಅಕ್ಷರಗಳಿರುವ ಪೆಟ್ಟಿಗೆ ೧ಕ್ಕೆ ೫ ೮ ೦, ಪರಿಮಳ ನಸ್ಯದಪುಡಿ ಸೀಸೆ ೧ಕ್ಕೆ ೦ ೨-೦, ೮ ಬಣ್ಣಗಳಿರುವ ಪೆರುಗಾ ವೂಲ್ ದಾರದ ಬಂಡಲ್ ೧ಕ್ಕೆ ೩ ೦ ೦, ಪೆರುಗಾ ವೂಲ್ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ ೧೮-೦ ೦, ರೋಗ ಪ್ರಸಿದ್ಧವಾದ ಚೇಳಿನ ಔಷಧ ಸೀಸೆ ೧ಕ್ಕೆ ೦ ४ ೦ ಕ್ಯಾಟಲಾಗನ್ನು ಕೇಳಿದವರಿಗೆ ಕಳುಹಿಸುತ್ತೇವೆ ಪರಸ್ಥಳದವರಿಗೆ ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ —ದಿ. ವೂಲನ್ ಮಾರ್ಟ್ ಮಂಗಳೂರು

ಭಾರತಿ ಸಂಪಂಗಿರಾಮಯ್ಯನವರಿಂದ ರಚಿಸಲ್ಪಟ್ಟ ಪುಸ್ತಕಗಳು

49 1

೪ನೆ ಭಾಗ —ತಾನಾಗಿ ಇಂಗ್ಲೀಷ್ ಕಲಿಯುವ ಪುಸ್ತಕ ಕ್ರಯ ೧ ೬ ೦ ಪುಟಗಳು ೨೯೩ ಎಷ್ಟೋ ಸಂಗ ಮುಗಿದುಹೋಗಬಹುದಾದ್ದರಿಂದ ಜಾಗ್ರತೆ ತರಿಸಿಕೊಳ್ಳಿರಿ! ಇಂಗ್ಲೀಷ್ ಭಾಷೆಯನ್ನು, ಓದುವದಕ್ಕೂ, ಬರೆಯುವದಕ್ಕೂ, ಮಾತಾಡುವದಕ್ಕೂ, ಬೋಧಕರ ಸಹಾಯವಿಲ್ಲದಂತೆ ೧ ೨ ಮಾಸಗಳಲ್ಲಿಯೇ ತಾನಾಗಿ ಕಲಿಸುವ ಅತ್ಯುತ್ತಮವಾದ ಪುಸ್ತಕವಿದು ಕ್ರಯ ೧ ೮ ೦

ಕನ್ನಡ ಕಥಾಸರಿತ್ಸಾಗರ ೧ನೆ ಸಂಪುಟ ಕ್ರಯ ೧ ೮ ೦ ಪು ೮೨। ಸಾಗರದ ಎನ್ ಶ್ರೀಕಂಠಯ್ಯನವರಿಂದ ಸೋಮದೇವನ ಸಂಸ್ಕೃತ ಗ್ರಂಥದಿಂದ ಕನ್ನಡದಲ್ಲಿ ಬರೆದು ಈಗಿನ ಶುಕಸಪ್ತತಿ, ವಿಕ್ರಮಾರ್ಕ ಮಂಜರಿ, ಅರೇಬಿಯನ್ ನೈಟ್ಸ್ ಮುಂತಾದ ಎಲ್ಲಾ ಕಥೆಗಳಿಗಿಂತಲೂ ಸ್ವಾರಸ್ಯವಾಗಿ, ಯಾವ ಪುಸ್ತಕದಲ್ಲಿರುವ ಸಂಗತಿಯೇ ಆಗಲಿ, ನದಿಗಳು ಎಲ್ಲಾ ಕಡೆಯಲ್ಲಿಯೂ ಹರಿದು ಕಡೆಗೆ ಸಮುದ್ರವನ್ನೇ ಸೇರುವಂತೆ ಯಾವ ಪುಸ್ತಕದ ಸಂಗತಿ ಆದರೂ ಬಂದು ಈ ಪುಸ್ತಕಕ್ಕೇ ಬಂದು ಸೇರುತ್ತದೆ ಆದ್ದರಿಂದ ಎಲ್ಲರೂ ತರಿಸಿ ಓದಬೇಕು ಕ್ರಯ ೧ ೮-೦ ಗೀತಾಮೃತಮಹೋದಧಿ ಕ್ರಯ ೦ ೮ ೦ ಶ್ರೀ ಕೃಷ್ಣಾರ್ಜುನ ಸಂವಾದವೆಂಬ ಗೀತಾಮೃತಪಾನ ಮಾಡಬೇಕೆಂಬವರಿಗಿದು ಸುಲಭವಾದ ಪುಸ್ತಕ ಕ್ರಯ ೦ ೮ ೦ ಪ್ರಶ್ನೋತ್ತರಚಿಂತಾಬೋಧಿನಿ ಪುಟಗಳು ೩೨೨ ಕ್ರಯ ೧ ೮ ೦ ಪೀನಲ್ ಕೋಡು, ಹಿಂದುಲಾ, ಮಹಮ್ಮದೀಯಲಾ, ಮೊದಲಾದ ಎಲ್ಲಾ ಆಕ್ಟುಗಳು, ಎಲ್ಲಾ ವಿಧವಾದ ಅರ್ಜಿಗಳು ಬರೆಯುವ ರೀತಿಯೇ ಮೊದಲಾದ ಲೋಕ ವ್ಯವಹಾರದ ಸಂಗತಿಯೆಲ್ಲಾ ತಿಳಿಸುತ್ತೆ ಕ್ರಯ ೧ ೮-೦ ಜಾಗ್ರತೆ ಇವರಿಗೆ ಬರೆದು ಮೇಲಿನ ಪುಸ್ತಕಗಳನ್ನು ತರಿಸಿಕೊಳ್ಳಿ। ವಿಳಾಸ -ಮ್ಯಾನೇಜರ್ ಕರ್ನಾಟಕ ಪುಸ್ತಕಶಾಲಾ, ಲಕ್ಷ್ಮೀಪುರ, ವಾಲಾಜಪೇಟೆ, ಕೋಲಾರ್

CHAMBERLAIN'S COLIC CHOLERA
AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

416



ಈ ಹೊಟ್ಟೆಯ ನೋವು, ಬರೀ ಭೇದಿಯಾಗುವುದು ಅಜೀರ್ಣತೆ, ನಾಡೀಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ರೋಗಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಕರವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ಜೀವನವನ್ನು ಬಾಧೆಯನ್ನು ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹುತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನು ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವಸ್ತುಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟದ ಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

21

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತಹವುಗಳಾಗಿವೆ ಬಣ್ಣವು ಹೋಗುವದಿಲ್ಲ ಸರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬॥ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ರೇಷ್ಮೆಗಳು ಮಾಸದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪ್ಪೋ, ಮೈಸೂರು

ಅತಿ ಅಶ್ಚರ್ಯ ಎಲೆಕ್ಟ್ರಿಕ್ ಪ್ರದೀಪ ಸುಲಭ ದರದಿ"

99 2



ಈ ದೀಪವನ್ನು ಜಾಕೆಟು ನಲ್ಲಿ ಬಿಟ್ಟು ಕಾಲುಪ್ಪಾಗ ಚಿಕ್ಕ ಸ್ವಿಚನ್ನು ಮಾಡಿದಮಾತ್ರದ ಇದಕ್ಕೆ ಎಣ್ಣೆ, ಬತ್ತಿ ಎಣ್ಣೆ ಸ್ವಲ್ಪವೂ ಆವಶ್ಯಕವಿಲ್ಲವು ಇದು ವಿದ್ಯುಚ್ಛಕ್ತಿಯಿಂದ ಉರಿಯುವುದು ಇದರಿಂದ ಬೆಂಕಿಯ ಅಪಾಯವು ಉಂಟಾಗಲಿಕ್ಕಿಲ್ಲ ಇದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲವು ಮತ್ತು ಎಂಥಾ ದೊಡ್ಡ ಗಾಳಿ ಬೀಸಿದಾಗಲೂ ಆರುವುದಿಲ್ಲವು ಇದನ್ನು ಸೂಜಿಗಳು, ಕಾಸುಗಳಲ್ಲಿ ಪ್ರಯಾಣದ ಪಡವದಕ್ಕೆ ಬಹಳ ಉಪಯೋಗಿಸುತ್ತಲಿದಾರೆ ಬೇಕಾದ ಕಾಲದಲ್ಲಿ ಈ ಪೆಟ್ಟಿಗೆಯು ಮೇಲಾಗದಲ್ಲಿಟ್ಟು ಬಿಟ್ಟನ್ನು ಒತ್ತಿ ಒತ್ತಿದ ಕೂಡಲೇ ೧೦೦ ದೀಪಗಳು ಹಚ್ಚಿದರೆ ಎಷ್ಟು ಕಾಂತಿ ಕೊಡುವವೋ ಅಷ್ಟು ಬೆಳಕನ್ನು ಕೊಡುವುದು ಇದು ಎಷ್ಟು ದಿವಸಗಳು ಬೇಕಾದರು ಬಾಳಿಕೆ ಬರುವದು ಉಪಯೋಗಿಸತಕ್ಕ ವಿಧಾನವು ಇದರ ಸಂಗಡ ಬರದು ಹುಟ್ಟಿಯದೆ

ಇದರ ಕ್ರಯ ರೂ ೩—೦—೦ ವಿ ಪಿ ಚಾರ್ಜ ರೂ ೦—೪—೦

ದಿ ಮದರಾಸ್ ಎಲೆಕ್ಟ್ರಿಕ್ ಎಂಪೋರಿಯಂ ಸೌಕಾರ್‌ಪೇಟ, ಮದರಾಸ್

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರುವುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು

ಶ್ವಾಸಕೋಶಗಳು ಬಲಹೀನವಾಗುವುದು. ಇದರಿಂದ ತೋರಿಬರುತ್ತವೆ ಅವನ್ನು ಬೇಗನೆ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 6-16
(ಸ್ಕಾಟ್ಸ್ ಇ ಮ ಲ್ ಷ ನ್)

ಎಂಬ ಈ ಔಷಧವು ಕೆಮ್ಮುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸುತ್ತದೆ

ಕೈಯಿಂದ ಮುಟ್ಟದೆ ತಯಾರಿಸಿದ್ದಲ್ಲಿ

ಎಲ್ಲಾ ಔಷಧ ಪಂಡಿತರ ಬಳಿಯೂ ದೊರಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಕೆಮಿಸ್ಟ್ ಕಾರ್ಖಾನೆ,
ಲಂಡನ್ ಇಂಗ್ಲೆಂಡ್

ಈ ಮಾನುಷನುಳ್ಳ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸಂಜೀವಿನೀ ಔಷಧಾಲಯ, ಮೈಸೂರು.

2. 11

ಎಂ ಎಸ್ ಕುಮಾರಾಯಿವರ ದಿವ್ಯೌಷಧಗಳು

ಸಂಜೀವಿನೀ ವಿಂಟೇ —ಮೂರ್ಛೆ, ಅಪಸ್ಮಾರ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜ್ವರ, ವಾಯುನೋವುಗಳೂ, ಹೊಟ್ಟೆ ಉರಿ, ಕ್ಷಯ, ಅಜೀರ್ಣ, ತಲೆನೋವು, ನೇತ್ರರೋಗ, ತಲೆಭಾರ, ಮಲಬಂಧ ಒಡ್ಡೆ ಪ್ರಮೇಹ ಮುಂಕುತನ ಅತಿಮೂತ್ರ ಸೋಮರೋಗ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹುಟ್ಟಿಸಿ, ಮಾಂಸಪಿಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ನಿರ್ದೋಷ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ವಿಧ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ ಇವುಗಳಿಗೆ ಖಾತರಿ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ —೪ ದಿವಸಕ್ಕೊಂದಾವರ್ತಿ ಸೇವಿಸುತ್ತದ್ದರೆ ಪ್ಲೇಗ್ ಬರುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ.

ಕಾಲಕೂಟ ವಟಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುದರ್ಶನ ಬಿಂದು —ಉರಿಗಣ್ಣು, ಕೆಂಗಣ್ಣು, ಮಾಚಗಣ್ಣು ತಲೆನೋವು, ಶಿರಶೂಲೆ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣುಗಳ ಮಿದುಳಿನ ತಂಪನ್ನುಂಟುಮಾಡಿ ದೃಷ್ಟಿ ಪಾಟವವನ್ನೂ ಮಿದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತಯಾರಾದ ಅರ್ಕಗಳೂ, ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಧಾಣೆ ಸ್ಟಾಂಪ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,
ಪ್ರೊಪ್ರೈಟರ್

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ತರಿಸಿ.

10 16

"ಬ್ರಹ್ಮಚರ್ಯ" ವೆಂಬ ಧರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಧರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯಾಸವಲಂಬಿಕೆ" ಎಂಬ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ. ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸವಲಂಬಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪಠ್ಯವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರ ವರಿವಿಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವಾಷಿಂಗ್ಟನ್‌ದಿಗ್ರಾಮನಯಾನದ ಚರಿತ್ರೆ" ಇದು ಸೊಗಸಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರೋಚಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುವು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಆಗಸ್ಟೀನ್ ಬಿನ್ನಹಂ" ಇದು ಲೋಕಪ್ರಸಿದ್ಧವಾದ ಪುಸ್ತಕ ಕ್ರೈಸ್ತ ಮತದಲ್ಲಿ ತಿಳಿಸುವ ಪಾಪಸಾಂತರ, ಪಾಪಮನ್ನಣೆ, ಪವಿತ್ರತೆ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತ್ರೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ರೈಟಿನ ಬೈಂಡು ಪ್ರತಿ ಒಂದಕ್ಕೆ ೦—೧೦—೦
ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪ್ಪೋ ಮೈಸೂರು

ವೃತ್ತಾಂತ ಪತ್ರಿಕೆ.

— o —

ಸನ್ ೧೯೦೯ ನೇ ಇಸವಿ ಏಪ್ರಿಲ್ ತಾ ೨೨ ನೇ ಗುರುವಾರ

ಮೈಸೂರು ವರ್ತಮಾನ ಪತ್ರಿಕೆಗಳ ಕಾನೂನು

ಮೈಸೂರು ಗವರ್ನಮೆಂಟಿನವರು ಸುಮಾರು ಒಂದು ವರುಷದ ಹಿಂದೆ ಜಾರಿಗೆ ತಂದಿರುವ ವರ್ತಮಾನ ಪತ್ರಿಕೆಗಳ ಕಾನೂನು ನಿರ್ಬಂಧಕವಾಯಿತೆಂದು ತಿಳಿಯಕೂಡದು. ಅದು ಜಾರಿಗೆ ಬಂದ ಮೇಲೆ ಕೆಲವರು ಪತ್ರಿಕೆಗಳನ್ನು ಹೊರಡಿಸುವುದಕ್ಕೆ ಸರ್ಕಾರದವರ ಅನುಜ್ಞೆಯನ್ನು ಕೇಳಿದ್ದನ್ನೂ, ಸರ್ಕಾರದವರು ಕೆಲವರಿಗೆ ಅಪ್ಪಣೆಯನ್ನು ಕೊಟ್ಟು, ಕೆಲವರಿಗೆ ಕೊಡದೆ ಹೋದದ್ದನ್ನೂ ವಾಚಕರಿಗೆ ಆಗಿಂದಾಗ್ಗೆ ತಿಳಿಸುತ್ತಾ ಬಂದಿರುವೆವು. ಈಚೆಗೆ ಇದೇ ವಿಷಯವಾಗಿ ಗವರ್ನಮೆಂಟಿಗೆ ತಲುಪಿದ ಎರಡು ಅರ್ಜಿಗಳ ವಿಷಯದಲ್ಲಿ ಅವರು ಕಳೆದ ಮಾರ್ಚಿ ತಾ. ೨೯ ರಲ್ಲಿ ಮಾಡಿರುವ ಹುಕುಮಿನ ಅಭಿಪ್ರಾಯವನ್ನು ಇಲ್ಲಿ ತಿಳಿಸುವೆವು:—

"ಬೊಕ್ಕಸಪ್ಪ ಹೆಬ್ಬಾರ್ ಎಂಬಾತನು 'ಮೈಸೂರು ಮಿರರ್ (ದರ್ಪಣ)' ಎಂಬ ದಿನವೂ ಹೊರಡುವಂಥಾ ವರ್ತಮಾನ ಪತ್ರಿಕೆಯನ್ನು ನಡಿಸುವುದಕ್ಕೆ ತನಗೆ ಅಪ್ಪಣೆ ಕೊಡಬೇಕೆಂದು ಕಳೆದ ನವಂಬರ್ ತಾ ೪ ರಲ್ಲಿ ಅರ್ಜಿ ಬರೆದುಕೊಂಡನು. ಗವರ್ನಮೆಂಟಿನವರು ಆತನ ಪೂರ್ವೋತ್ತರವನ್ನು ವಿಚಾರಿಸಿದ್ದರಲ್ಲಿ ಆತನಿಗೆ ಇನ್ನೂ ಇಪ್ಪತ್ತು ವರುಷ ತುಂಬಲಿಲ್ಲವೆಂದೂ, ಆತನು ಮೆಟ್ರಿಕ್ಯುಲೇಷನ್ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆಂದೂ ತಿಳಿದುಬಂದಿದೆ. ಇದನ್ನು ನೋಡಲಾಗಿ ಯಾರೋ ಕೆಲವರು ಹಿಂದೆ ನಿಂತು ಆ ಪತ್ರಿಕೆಯನ್ನು ನಡಿಸತಕ್ಕವರಾಗಿದ್ದಾರೆಂತಲೂ, ಅವರು ಹೆಸರು ಮಾತ್ರಕ್ಕೆ ಈತನನ್ನು ಎಡಿಟರಾಗಿ ಮುಂದೆ ನಿಲ್ಲಿಸುತ್ತಾರೆಂತಲೂ ಕಾಣಬರುತ್ತದೆ. ಅರ್ಜಿದಾರನು ವರ್ತಮಾನ ಪತ್ರಿಕೆಯನ್ನು ನಡಿಸುವದಕ್ಕೆ ಜವಾಬ್ದಾರಿಯನ್ನು ವಹಿಸಲು ಸಮರ್ಥನಾಗಿಲ್ಲವಾದ್ದರಿಂದ ಆತನಿಗೆ ಅಪ್ಪಣೆಯನ್ನು ಕೊಡಲಾಗುವುದಿಲ್ಲ."

"ಮೈಸೂರು ಪಬ್ಲಿಕ್ ಸರ್ವಿಸಿನ ಎಲ್. ರಾಮಚಂದ್ರರಾಯರು 'ದಿ ಮೈಸೂರು ಪೇಟ್ರಿಯಟ್ (ದೇಶಭಕ್ತ)' ಎಂಬ ವರ್ತಮಾನ ಪತ್ರಿಕೆಯನ್ನು ವಾರಕ್ಕೆ ಒಂದಾವರ್ತಿ ಇಂಗ್ಲಿಷ್ ಕನ್ನಡ ಸಹಿತವಾಗಿ ಪ್ರಕಟಿಸಬೇಕೆಂದು ಉದ್ದೇಶಪಟ್ಟು, ಅದಕ್ಕೆ ತಮಗೆ ಅಪ್ಪಣೆ ಕೊಡಬೇಕೆಂದು ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡರು. ಗವರ್ನಮೆಂಟಿನವರು ಎಲ್. ರಾಮಚಂದ್ರರಾಯರ ಸ್ಥಿತಿಗತಿ ಯೋಗ್ಯತೆ ಮುಂತಾದವನ್ನು ವಿಚಾರಿಸಿ ನೋಡಿದ್ದರಲ್ಲಿ ಅವರ ವಯಸ್ಸು ಸುಮಾರು ಇಪ್ಪತ್ತು ವರುಷವೆಂತಲೂ, ಗೌರವಯುಕ್ತವಾದ ವರ್ತಮಾನ ಪತ್ರಿಕೆಯನ್ನು ನಡಿಸುವುದಕ್ಕೆ ಅವರಿಗೆ ವಿದ್ಯಾದಿ ಸಾಮರ್ಥ್ಯಗಳು ಇರುವುದಿಲ್ಲವೆಂತಲೂ ಗೊತ್ತಾಯಿತು. ಇದಲ್ಲದೆ ಅರ್ಜಿದಾರರು ನಾಮ ಮಾತ್ರಕ್ಕೆ ಎಡಿಟರಾಗಿ ನಿಲ್ಲತಕ್ಕವರೆಂದೂ, ಕಾರಣಾಂತರಗಳಿಂದ ಹೆಸರು ಹೇಳದೆ ಹಿಂದೆ ಇದ್ದುಕೊಂಡು ಪತ್ರಿಕೆಯನ್ನು ನಡಿಸತಕ್ಕ ಬೇರೆಯವರು ಇರುತ್ತಾರೆಂದೂ ಊಹಿಸಲು ಕಾರಣವುಂಟು. ಆದಕಾರಣ ಇಂಥಾ ಸಂದರ್ಭಗಳಲ್ಲಿ — ಅಂದರೆ, ಜನರ ದೃಷ್ಟಿಗೆ ಪತ್ರಿಕೆಯನ್ನು ನಡಿಸುವ ಮುಂದಾಳುಗಳಾಗಿ ನಿಲ್ಲುವಂಥಾ ಮತ್ತು ಯೋಗ್ಯತಾ ವಿದ್ಯೆಯನ್ನು ಪಡೆಯಲಿಲ್ಲದಂಥಾ ಚಿಕ್ಕ ವಯಸ್ಸಿನವರಿಗೆ ವರ್ತಮಾನ ಪತ್ರಿಕೆಯನ್ನು ನಡಿಸಲು ಅನುಜ್ಞೆಯನ್ನು ಕೊಡುವ ವಿಷಯದಲ್ಲಿ ಗವರ್ನಮೆಂಟಿನವರು ಆ ಕಾನೂನಿನ ಪ್ರಕಾರ ವಹಿಸಿಕೊಂಡಿರುವ ವಿವೇಚನಾಧಿಕಾರವನ್ನು ಪ್ರಯೋಗಿಸಬೇಕಾಗಿರುತ್ತದೆ. ಆದಕಾರಣದಿಂದ ಅವರು ಕೇಳುವಂತೆ ಪತ್ರಿಕೆಯನ್ನು ನಡಿಸಲು ಅಪ್ಪಣೆಯನ್ನು ಕೊಡಲು ಆಗುವುದಿಲ್ಲ."

ಗವರ್ನಮೆಂಟಿನವರು ಕೊಟ್ಟಿರುವ ಮೇಲ್ಕಂಡ ಹುಕುಮುಗಳು ಯೋಗ್ಯವಾಗಿರುತ್ತವೆಂದು ನಮಗೆ ತೋರುವದು. ಹೈಸ್ಕೂಲ್ ತರಗತಿಗಳಲ್ಲಿ ವಿದ್ಯಾಭ್ಯಾಸಂಗ ಮಾಡುವವರುಗಳೂ, ಆಗತಾನೇ ವಿದ್ಯಾಶಾಲೆಯನ್ನು ಬಿಟ್ಟಿರತಕ್ಕವರುಗಳೂ 'ನಮ್ಮ ತಿಳಿವಳಿಕೆ ಏನು ಕಡಿಮೆ? ನಾವು ವರ್ತಮಾನ ಪತ್ರಿಕೆಗಳ ಮೂಲಕ ಪ್ರಜೆಗಳಿಗೆ ಬೇಕಾದಷ್ಟು ಉಪದೇಶವನ್ನು ಮಾಡಲಾರೆವೇ? ಪ್ರಪಂಚವನ್ನೇ ಸುಧಾರಿಸಲಾರೆವೇ?' ಎಂದು ತಮ್ಮ ಶಕ್ತಿಯನ್ನು ಅತಿಯಾಗಿ ಭಾವಿಸಿಕೊಂಡು ಹೊರಡುವುದುಂಟು. ನಾವು ಈ ರೀತಿ ಹೇಳುವುದನ್ನು ನೋಡಿ ವಾಚಕರು ನಮ್ಮ ಮೇಲೆ ಪತ್ರಿಕೆ ನಡಿಸುವವರನ್ನು ಅಧೈರ್ಯಪಡಿಸುತ್ತಾರೆಂಬ ಅಪವಾದವನ್ನು ಹೊರಿಸಬಾರದು. ಈ ರೀತಿ ಅಧೈರ್ಯವನ್ನುಂಟುಮಾಡುವುದು ನಮ್ಮ ಅಭಿಪ್ರಾಯವಲ್ಲ. ಮತ್ತು ಅಂಥಾ ಕುತೂಹಲವೂ ನಮಗಿರುವುದಿಲ್ಲ. ನಾವು ಹೇಳುವುದೇನೆಂದರೆ, ಅಂಥಾ ಚಿಕ್ಕ ವಯಸ್ಸಿನವರು ಮೊದಲು ಯಾವುದಾದರೊಂದು ವರ್ತಮಾನ ಪತ್ರಿಕೆಯ ಆಫೀಸಿನಲ್ಲಿ ಉಮೇದುವಾರರಾಗಿ ಸೇರಿ ಕೆಲವು ಕಾಲದ ವರೆಗೆ ಪತ್ರಿಕೆ ನಡಿಸತಕ್ಕ ಕೆಲಸದಲ್ಲಿ ತರಪೇತಾಗಿ ತಮ್ಮ ಬುದ್ಧಿ ಕುಶಲತೆಯನ್ನೂ ಯೋಗ್ಯತೆ ಅನುಭವಾದಿಗಳನ್ನೂ ವೃದ್ಧಿಪಡಿಸಿಕೊಂಡು, ತಮಗೆ ಸ್ವತಂತ್ರವಾಗಿ ಪತ್ರಿಕೆಗಳನ್ನು ನಡಿಸಬಲ್ಲೆವೆಂಬ ನಂಬಿಕೆ ಮತ್ತು ಜನರಿಗೆ ಆ ವಿಶ್ವಾಸ ಮುಂತಾದವನ್ನು ಸಂಪಾದಿಸಿಕೊಂಡು, ಆ ಮೇಲೆ ಸ್ವತಂತ್ರ ಮಾಡತಕ್ಕವರು ಈಗಿನಂತೆ ಹಿಂದೆ ನಿಂತು ಕೆಲಸಮಾಡುವುದಕ್ಕೆ ಪ್ರತಿಯಾಗಿ, ತಾವೇ ಮುಖಂಡರಾಗಿ ನಿಂತು ಇತರರ ಸಹಾಯವನ್ನು ಪಡೆದು ವರ್ತಮಾನ ಪತ್ರಿಕೆಗಳನ್ನು ತಾವೇ ಹೊರಡಿಸತಕ್ಕ ಜವಾಬ್ದಾರಿಯನ್ನು ವಹಿಸಬೇಕೆಂದು ಹೇಳಬೇಕು.

ಪ್ರಜೆಗಳ ಹಿತವನ್ನೂ ಸಂತೋಷವನ್ನೂ ಬಯಸುವ ಗವರ್ನಮೆಂಟನ್ನು ಬಯಸತಕ್ಕವರು ವರ್ತಮಾನ ಪತ್ರಿಕೆಗಳನ್ನು ನಡಿಸಬೇಕೆಂಬ ಅಪೇಕ್ಷೆಯುಳ್ಳವರಾಗಿದ್ದ ಪಕ್ಷದಲ್ಲಿ ಅಂಥವರು ಪ್ರಜೆಗಳ ವಿಶ್ವಾಸವನ್ನು ಸಂಪಾದಿಸಿಕೊಂಡಿರತಕ್ಕವರಾಗಬೇಕು. ಪ್ರಜೆಗಳ ಕುಂದುಕೊರತೆಗಳನ್ನು ಚೆನ್ನಾಗಿ ತಿಳಿದಿರುವಂಥವರಿಂದಲೇ ಪತ್ರಿಕೆಗಳನ್ನು ಬರೆಸಬೇಕು. ಯಾಕೆಂದರೆ ವರ್ತಮಾನ ಪತ್ರಿಕೆಗಳ ಉದ್ದೇಶವು ಜನರ ಮೇಲೆ ದೋಷಾರೋಪಣೆ ಮಾಡುವುದಕ್ಕಲ್ಲ, ಸ್ವಪ್ರಯೋಜನಕ್ಕಾಗಿಯೂ ಅಲ್ಲ. ಇಂಥಾ ಪತ್ರಿಕೆಗಳಿಂದ ಸಂಸ್ಥಾನಕ್ಕೆ ಎಷ್ಟು ಮಾತ್ರವೂ ಉಪಕಾರವಾಗಲಾರದು.

ಸ್ವಾರ್ಥರಹಿತವಾದ ಪರೋಪಕಾರ

ಕಳೆದ ಮಾರ್ಚಿ ತಿಂಗಳಲ್ಲಿ ಬಂಗಾಳದ ಶ್ರೀರಾಂಪುರದಲ್ಲಿರುವ ಒಂದಾನೊಂದು ಸ್ನಾನಘಟ್ಟಕ್ಕೆ ಒಬ್ಬ ಮಾರವಾಡಿ ಸ್ತ್ರೀಯೂ ಆಕೆಯ ಮಗಳೂ ಸ್ನಾನಕ್ಕೆ ಹೋಗಿದ್ದರು. ಅವರು ಅಲ್ಲಿ ಮಿಂದಾಗ ಅಕಸ್ಮಾತ್ ಕಾಲುಜಾರಿ ನದಿಯೊಳಕ್ಕೆ ಬಿದ್ದು ಮುಳುಗಿ ಸಾಯುವುದಕ್ಕಿದ್ದಾಗ ಘಟ್ಟಕ್ಕೆ ಸಮೀಪವಾಗಿದ್ದ ವಿದ್ಯಾಶಾಲೆಯ ವಠಾರದಲ್ಲಿ ನಿಂತಿದ್ದ ಒಬ್ಬ ವಿದ್ಯಾರ್ಥಿಯು ಅವರ ಸ್ಥಿತಿಯನ್ನು ನೋಡಿ ಗಾಬರಿಯಾಗಿ ಕೂಗಿಕೊಂಡನು. ಸಮೀಪದಲ್ಲಿ ಆಡುತ್ತಿದ್ದ ನಾಲ್ಕು ಮಂದಿ ವಿದ್ಯಾರ್ಥಿಗಳು ಪಾಠಶಾಲೆಯ ಅಧ್ಯಕ್ಷರೊಡನೆ ಘಟ್ಟದ ಬಳಿಗೆ ಓಡಿಬಂದರು. ತಕ್ಷಣ ಆ ವಿದ್ಯಾರ್ಥಿಗಳ ಪೈಕಿ ಒಬ್ಬನಾದ ಯೋಗೇಂದ್ರನಾಥ ಬಾಸಕ್ ಎಂಬವನು ಧೈರ್ಯದಿಂದ ಪ್ರಾಣಾಪೇಕ್ಷೆ ಬಿಟ್ಟು ಆ ಇಬ್ಬರು ಸ್ತ್ರೀಯರನ್ನು ದಡಕ್ಕೆ ಎಳೆದುಕೊಂಡುಬಂದು ರಕ್ಷಿಸಿದನು. ಈ ಸ್ತ್ರೀಯರ ಪ್ರಾಣಸಂರಕ್ಷಣೆಯನ್ನು ಮಾಡಿದ ನಾಲ್ಕು ಮಂದಿ ವಿದ್ಯಾರ್ಥಿಗಳು ಹಿಂದುಗಳು.

ಕಲ್ಕತ್ತಾಪಟ್ಟಣದ ಚರಂಡಿಗಳೊಳಗೆ ತುಂಬಿದ್ದ ಕಸವನ್ನು ತೆಗೆಯುವ ದಕ್ಕೋಸ್ಕರವಾಗಿ ಇಳಿದ ಕೂಲಿಯವರಾದ ಮುಸಲ್ಮಾನರು ವಿಷವಾಯುವನ್ನು ಆಘ್ರಾಣಿಸಿದ್ದರಿಂದ ಮೂರ್ಛೆಹೋಗಿ ಅಲ್ಲಿಯೇ ಬಿದ್ದು ಸಾಯಲಾಗಿದ್ದವರನ್ನು ರಕ್ಷಿಸಬೇಕೆಂದು ಒಳಕ್ಕೆ ಇಳಿದು ಮೃತಪಟ್ಟ ಒಬ್ಬಾನೊಬ್ಬ ಹಿಂದು ಯೌವನಸ್ಥನ ಸ್ವಪರಿತ್ಯಾಗವನ್ನೂ ಪರೋಪಕಾರವನ್ನೂ ಕುರಿತು ಇದೇ ಪತ್ರಿಕೆಯಲ್ಲಿ ಕೆಲ ಕಾಲಕ್ಕೆ ಮುಂಚೆ ಓದಿದ್ದನ್ನು ನಮ್ಮ ವಾಚಕರು ಮರೆತಿರಲಾರರು.

ಈ ಕಾಲದಲ್ಲಿ ಹಿಂದೂದೇಶದ ಯಾವ ದಿಕ್ಕಿನಲ್ಲಿ ನೋಡಿದರೂ "ಸ್ವದೇಶಿ" "ಸ್ವರಾಜ್ಯ"ವೆಂಬ ಮಾತುಗಳೇ ಪ್ರತಿಧ್ವನಿಗೊಳ್ಳುತ್ತಿವೆ. ಸ್ವದೇಶ ಸ್ವರಾಜ್ಯಗಳನ್ನು ಸಾಧಿಸಿಕೊಳ್ಳುವದಕ್ಕೋಸ್ಕರ ಹಲವು ಜನಗಳು ಹಲವುವಿಧ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಕೆಲವು ದೊಡ್ಡ ಮನುಷ್ಯರೆನ್ನಿಸಿಕೊಂಡವರು ಅವರ ಹಿಂದೆ ಅನೇಕಾನೇಕ ವಿದ್ಯಾರ್ಥಿಗಳೂ ಸ್ವದೇಶಿ, ಸ್ವರಾಜ್ಯವೆಂಬ ಮಾತುಗಳಿಗೆ ವಿದೇಶಿಗಳನ್ನು ಹಗೆಮಾಡುವದೂ ಸಾಧ್ಯವಾದರೆ ಅವರನ್ನು ದೇಶಭ್ರಷ್ಟರಾಗಿ ಓಡಿಸುವದೂ ತಪ್ಪಿದರೆ ಅವರನ್ನು ಯಾವವಿಧದಿಂದಲಾದರೂ ಕೊಲ್ಲುವದೂ ಎಂಬರ್ಥವನ್ನು ಬೋಧಿಸುತ್ತ ಈ ದುಷ್ಕಾರ್ಯಗಳಿಗೆ ಹಿಂದುಮುಂದು ಅರಿಯದ ವಿದ್ಯಾರ್ಥಿಗಳನ್ನು ಪ್ರೇರಿಸುವದು ಬಹು ಸಾಧಾರಣವಾಗಿದೆ. ಈ ಉದ್ದೇಶ ನೆರವೇರಿಸಿಕೊಳ್ಳಲಿಕ್ಕೋಸ್ಕರ ಖಡ್ಗ, ಕೋವಿ, ಭರ್ಜಿಗಳು, ಸಾಲದೆಂದು ಪಂಚಸೆಯಿಂದ ಜನಗಳನ್ನು ಇದ್ದಕ್ಕಿದ್ದ ಹಾಗೆಯೇ ಭಸ್ಮಮಾಡತಕ್ಕ ಸಿಡಿಮದ್ದಿನ ಗುಂಡುಗಳನ್ನು ಪ್ರಯೋಗಿಸಿದರು. ಅಕಟಾ ಭರತಖಂಡದ ಸ್ಥಿತಿಯು ಹೀಗೆ ಪರಿಣಮಿಸಿತಲ್ಲಾ ಎಂದು ಭರತ ಮಾತೆಯು ಸತ್ಪುತ್ರರು ಪ್ರಲಾಪಿಸುತ್ತ ಈ ಶೋಚನೀಯ ಪರಿಣಾಮವನ್ನು ನುಡುಕುತ್ತಿದ್ದಾರೆ.

ಹೀಗಿರುವ ಸ್ಥಿತಿಯಲ್ಲಿ ಕಳೆದ ಮಾರ್ಚಿ ತಿಂಗಳಲ್ಲಿ ಶ್ರೀರಾಂಪುರದ ಆ ವಿದ್ಯಾರ್ಥಿಗಳು ಮಾಡಿದ ಪರೋಪಕಾರವು ಆಫ್ರಿಕಾಖಂಡದ ಮರುಭೂಮಿಗಳಲ್ಲಿ ನೀರನ್ನು ಕಾಣದೆ ದಾಹದಿಂದ ಅಲೆಯುತ್ತಿರುವ ಪಥಿಕನಿಗೆ ಒಯೋಸಿಸ್ ಎಂಬ ತಿಳಿನೀರಿನ ಬುಗ್ಗೆಯು ಸಿಕ್ಕಿದಂತಿರುವದು. ದೇಶಾಭಿಮಾನವೆಂಬ ಪದ್ಯಾವನ್ನು ಜಗತ್ಕರ್ತನು ಎಲ್ಲರಿಗೂ ಕೊಟ್ಟಿದ್ದಾನೆ. ಅದಿಲ್ಲದಂಥವ ನರನಿಗಿಂತ ನೀಚನು ಇನ್ನಾರಿದ್ದಾನೆ. ಅದು ನಮ್ಮ ದೇಶಭಾಂಧವರಲ್ಲಿ ಹೆಚ್ಚಾಗಿ ವರ್ಧಿಸುತ್ತ ಬರಲಿ. ಆದರೆ ದೇಶಾಭಿಮಾನವೆಂದರೆ ಸ್ವಸುಖ, ಸಂಪತ್ತು, ಸ್ವೇಚ್ಛಾಪರತ್ವವೆಂತ ಎಂದೆಂದಿಗೂ ಭಾವಿಸಕೂಡದು. ಸ್ವದೇಶಾಭಿಮಾನವು ಅಧಿಕಾರಾಪೇಕ್ಷೆಯಾಗಿ ಪರಿಣಮಿಸಿದ ಇಷ್ಟೇ ಅಲ್ಲ, ಸ್ವದೇಶಾಭಿಮಾನವು ಹಗೆ, ವಂಚನೆ, ಪರರಾಜ್ಯದವರನ್ನು ಕೊಲ್ಲುವದು ಮಾತ್ರ ಪ್ರಾಯವಾಗಿರುವ ಸರಕಾರಕ್ಕೆ ವಿರೋಧವಾಗಿ ಪಿತೂರಿಮಾಡುವದು ಇತ್ಯಾದಿ ಅವಿವೇಕತ್ವಕ್ಕೆ ಕಾರಣವಾಗುವದು ಎಂದಿಗೂ ಸರಿಯಲ್ಲ. ಇವನ್ನು ಬಿಟ್ಟು ಸ್ವದೇಶಾಭಿಮಾನಿಗಳೆನ್ನಿಸಿಕೊಳ್ಳುವದಕ್ಕೆ ಆತುರಪಡುವ ನಾವು ಸತ್, ನೀತಿ, ದಯೆ, ಪರೋಪಕಾರಗಳಲ್ಲಿ ಒಬ್ಬರನ್ನೊಬ್ಬರು ಮೀರಿಸುವದಕ್ಕೆ ಪ್ರಯತ್ನಮಾಡಬೇಕಲ್ಲವೆ? ಜಾತಿಯ ಮತಭೇದಗಳಿಂದ ಉಂಟಾಗಿರುವ ಪಂಗಡಗಳವರು ಏಕಮತದಿಂದಲೂ ಪರಸ್ಪರ ಪ್ರೀತಿಯಿಂದಲೂ ಬಾಳುವದಕ್ಕೆ ಕಲಿಯಬೇಕು. ನಮ್ಮ ದೇಶದಲ್ಲಿ ಮೌಢ್ಯವೆಂಬ ಅಂಧಕಾರದಲ್ಲಿ ಮಾರ್ಗಕಾಣದೆ ತಡಕಾಡುತ್ತಿರುವ ಜನಸಾಮಾನ್ಯರನ್ನು ನೋಡಿ ಅವರ ಕಡೆಗೆ ನಮ್ಮ ದೇಶಬಾಂಧವರನ್ನು ತೋರಿಸುವ ಸ್ವದೇಶಿಗಳು ನಮ್ಮಲ್ಲಿ ಎಷ್ಟು ಮಂದಿ ಇದ್ದಾರೆ? ಅಂಥವರು ಎಷ್ಟು ಮಂದಿ ಇದ್ದಾರೆ? ಅವರೆಲ್ಲ ಏನು ಕೆಲಸ ಮಾಡುತ್ತಿದ್ದಾರೆ? ನಮ್ಮ ಬುದ್ಧಿಯನ್ನು ಈ ವಿಷಯಗಳಲ್ಲಿ ಓಡಿಸಿದರೆ ಸ್ವರಾಜ್ಯವು ನಮಗೆ ಅನಾಯಾಸವಾಗಿ ಬರುವಂತೆ ಆಗುವದು. ಸ್ವದೇಶಾಭಿಮಾನದಲ್ಲಿ ಮುಂದಾಳುಗಳೆನ್ನಿಸಿಕೊಳ್ಳಬೇಕೆಂದಿರುವ ವಿದ್ಯಾವಂತರು ಅವರ ಸಹೋದರರಾಗಿರುವ ಜನಸಾಮಾನ್ಯರ ಕಷ್ಟಗಳನ್ನು ತೆರೆದು ಅವರ ಹೃದಯಕ್ಕೆ ತಿಳುವಳಿಕೆ ಎಂಬ ಬೆಳಕನ್ನು ಕೊಟ್ಟು ಸನ್ಮಾರ್ಗಗಳನ್ನು ಸಾಧಿಸಲಿ, ಅನಾಥರಿಗೆ ಅನ್ನ ನೀರನ್ನು ಕೊಡಲಿ, ಪಾಪಿಷ್ಠರನ್ನು ಪವಿತ್ರಮಾರ್ಗಕ್ಕೆ ಕರೆತರಲಿ, ಅಸ್ವಸ್ಥರಾಗಿರುವವರನ್ನು ಆರೈಕೆಮಾಡಲಿ. ಲೌಕಿಕ ಜೀವನದ ಬಗೆಗೆ ಪರಮಾರ್ಥವನ್ನು ಕುರಿತು ಬೋಧಿಸಲಿ. ಯಾವಾತನು ಎಲ್ಲರಿಗಿಂತ ದೊಡ್ಡವನು, ಶ್ರೇಷ್ಠನು? ಯಾರು ತನ್ನನ್ನು ಸಣ್ಣವನೆಂದು ಎಣಿಸಿಕೊಳ್ಳುವನೋ ಅವನು ಎಲ್ಲರಿಗಿಂತ ದೊಡ್ಡವನು. ಎಲ್ಲರ ಸೇವೆ ಮಾಡುವವನೂ ಆಗಿರಬೇಕು. ಒಬ್ಬ ನವೀನ ರಾಜಕೀಯ ಅನಿಕಾರವನ್ನೂ ಕ್ಲೇಶ ಕುಲವನ್ನೂ ವಿಚಾರಿಸಿ ಅವನ ದೊಡ್ಡವನೆಂದು ಹೇಳುವ ಕಾಲವು ಹೀಗೆ ಸಂದುಹೋಗುವದು. ಒಬ್ಬನು ಮಾಡಿದ ಧರ್ಮ, ಪರೋಪಕಾರ ಸದ್ಗುಣಗಳನ್ನು ನೋಡಿ ಈತನೇ ದೊಡ್ಡವನೆಂದು ಭಾವಿಸುವ ಕಾಲವು ಹೀಗೆ ಉದಯವಾಗುವದು ಸಂದೇಹವಿಲ್ಲ.

ಬಹುದೇಶದ ವೃತ್ತಾಂತಗಳು.

ಕಳೆದ ವಾರ ಬೆಂಗಳೂರು ದಂಡಿನಲ್ಲಿ ಇಬ್ಬರು ವೈದ್ಯರು ಒಂದೇ ದಿನ ೪೦೦ ಜನ ಹೆಂಗಸರಿಗೂ ಗಂಡಸರಿಗೂ ಪ್ಲೇಗ್ ಚುಚ್ಚುಮದ್ದನ್ನು ಹಾಕಿದರು.

⁂

ಸರ್ಕಾರದವರು ಗ್ರಾಮಾಧಿಕಾರಿಗಳ ವಿಷಯವಾದ ಕಾನೂನನ್ನು ಮುಂದಿನ ಜುಲೈ ಪ್ರಾರಂಭದಿಂದ ಸಂಸ್ಥಾನದಾದ್ಯಂತ ಜಾರಿಗೆ ತರುವವರಾಗಿದ್ದಾರೆಂದು ಕೇಳುತ್ತೇವೆ.

⁂

ಕೋಲಾರ ಚಿನ್ನದ ಗಣಿಗಳ ಸೇರಿದ ಊರಿಗಮ ಟವುನಿಗೆ ರಾತ್ರಿ ಹೊತ್ತು ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚುವುದಕ್ಕೆ ಕಂಭಗಳನ್ನು ನೆಟ್ಟು ತಂತಿಗಳನ್ನು ಬಿಗಿಯುತ್ತಿದ್ದಾರೆ.

⁂

ನಾಗರದಲ್ಲಿರುವ ಇಂಡಸ್ಟ್ರಿಯಲ್ ಸ್ಕೂಲಿನ ಕಾರುಬಾರುಗಳನ್ನು ಆಗಿಂದಾಗ್ಗೆ ಹೋಗಿ ನೋಡಿ ಲೋಪದೋಷಗಳನ್ನು ಸೂಚಿಸುವುದಕ್ಕಾಗಿ ಸರ್ಕಾರದವರು ಒಂದು ಸೂಪರ್‌ವೈಸಿಂಗ್ ಕಮಿಟಿಯನ್ನು ನೇಮಕ ಮಾಡಿರುತ್ತಾರೆ.

⁂

ಮೈಸೂರು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್‌ಪೋರ್ಟ್ ಕೋರಿನ ಕಮಾಂಡೆಂಟರಾದ ಲೆಫ್ಟಿನೆಂಟ್ ಜೆ ಜಿ ಟೇಟ್‌ರವರು ೧೯೧೨ನೇ ಇಸವಿ ನೊವೆಂಬರ್ ಅಖೈರ್ ತನಕ ಅದೇ ಕೆಲಸದಲ್ಲಿ ಇರುವಂತೆ ಹುಕುಂ ಆಗಿದೆ.

⁂

ಕಳೆದ ಶುಕ್ರವಾರ ರಾತ್ರಿ ರಾಜಧಾನಿಯಲ್ಲಿ ಮುಕ್ಕಾಲು ಅಂಗುಲದಷ್ಟು ಮಳೆ ಬಿದ್ದಿತು. ಆದರೂ ಬಿಸಿಲಿನ ಧಗೆಯು ಹೆಚ್ಚಾಗಿದೆ. ದವಸಗಳ ಧಾರಣೆ ತಕ್ಕಷ್ಟಕ್ಕೆ ಇಳಿಯಲಿಲ್ಲ. ಪ್ಲೇಗಿನ ಉಪದ್ರದ ಹಾವಳಿಯು ಸ್ವಲ್ಪ ಕಡಮೆಯಾಗುತ್ತಿರುವುದು.

ದವಸಗಳ ಧಾರಣೆಯು ಪ್ರಿಯವಾಗಿರುವುದರಿಂದ ನಮ್ಮ ಗವರ್ನಮೆಂಟಿನವರು ಎಲ್ಲಾ ಇಲಾಖೆಗಳ ಸಣ್ಣ ನೌಕರಮಾನೇರುಗಳಿಗೂ ಧಾನ್ಯದ ಅಲೋಯನ್ಸನ್ನು ಸ್ಯಾಂಕ್ಷನ್ ಮಾಡಿರುತ್ತಾರಷ್ಟೆ. ಈಗ ಈ ಅಲೋಯನ್ಸು ಮೇ ತಿಂಗಳ ಅಖೈರ್ ತನಕ ಪಾವತಿ ಆಗಬೇಕೆಂದು ಹುಕುಂ ಕೊಟ್ಟಿರುವರು.

⁂

ಜಾಗ್ರತೆಯಾಗಿ ಕೊಯಿಲಿಗೆ ಬರುವಂಥಾ ಎರಡು ಹೊಸ ತರಹಾ ಬತ್ತದ ಬೀಜಗಳನ್ನು ಸರ್ಕಾರದವರು ತರಿಸಿರುತ್ತಾರೆ. ಅವನ್ನು ಸಾಗುವಳಿ ಮಾಡಿ ಅಜಮಾಯಿಷಿ ಮಾಡಲಪೇಕ್ಷಿಸುವವರು ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರಲ್ಲಿ ತಮಗೆ ಯಾವ ತರದ ಬತ್ತ ಎಷ್ಟು ಬೇಕೋ ಕೇಳಿ ಪಡೆದುಕೊಳ್ಳಬಹುದು.

⁂

ಮಾಜಿ ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು ಸದ್ಯ ಮದರಾಸಿನಲ್ಲೇ ಇರುತ್ತಾರೆಂತಲೂ, ಅವರು ಈಗ ಆರೋಗ್ಯವಾಗಿರುವರೆಂತಲೂ ತಿಳಿಸಲು ಸಂತೋಷಪಡುವೆವು. ಇಷ್ಟರಲ್ಲೇ ಅವರು ಅಲ್ಲಿಂದ ಬೆಂಗಳೂರಿಗೆ ಬರುವವರಾಗಿದ್ದಾರೆ. ಅವರ ಸಹೋದರರಾದ ಮ॥ ಪೂರ್ಣಯ್ಯನವರೂ ಈಗ ಮದರಾಸಿನಲ್ಲಿ ಇರುವರು.

⁂

ನಮ್ಮ ಸರ್ಕಾರದವರು ಮೈಸೂರಿನಿಂದ ಹಾಸನಕ್ಕೆ ರೈಲ್ವೆ ರಸ್ತೆಯನ್ನು ಹಾಕುವುದಕ್ಕಾಗಿ ಮಾರ್ಗವನ್ನು ಗೊತ್ತುಮಾಡಬೇಕೆಂದು ೩೨,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿ, ಈ ಕೆಲಸವನ್ನು ಮದರಾಸ್ ಮತ್ತು ದಕ್ಷಿಣ ಮರಾಠಾ ರೈಲ್ವೇ ಕಂಪನಿಯವರಿಗೆ ವಹಿಸಿದ್ದಾರೆ. ಮೈಸೂರಿನ ಕೆಲವು ಇಂಜನಿಯರುಗಳೂ ಆ ಕಂಪನಿಯವರ ಕೂಡ ಕಲೆತು ಸರ್ವೆ ಮುಂತಾದ ರೈಲ್ವೇ ಕೆಲಸಗಳನ್ನು ಕಲಿತುಕೊಳ್ಳುವವರಾಗಿದ್ದಾರೆ.

⁂

ಶ್ರೀಮಾನ್ ಯುವರಾಜರವರ ದೇಹಸ್ಥಿತಿಯನ್ನು ನೋಡಿಕೊಳ್ಳುವುದಕ್ಕಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಹೋಗಿದ್ದ ಡಾಕ್ಟರ್ ಆರುಮುಗಂ ಮೊದಲಿಯಾರ್‌ರಿಗೆ ನೀಲಗಿರಿಯ ಹವಾ ಅನುಕೂಲವಾಗದೆಹೋದದ್ದರಿಂದ ಅವರು ವಾಪಸು ಬಂದರು. ಮೈಸೂರು ಸಿವಿಲ್ ಸರ್ಜನ್‌ರಾದ ಮ॥ ಕೃಷ್ಣಸ್ವಾಮಿ ಐಯರವರು ನೀಲಗಿರಿಗೆ ಹೋಗಿರುತ್ತಾರೆ. ಮ॥ ಟಿ. ಎಸ್. ನಂಜಪ್ಪನವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಬಂದು ಮೈಸೂರು ಸಿವಿಲ್ ಆಸ್ಪತ್ರೆಯ ಛಾರ್ಜನ್ನು ವಹಿಸಿಕೊಂಡಿರುವರು.

⁂

ಹಿಂದಿನ ರವಿವಾರದ ರಾತ್ರಿ ಬೆಂಗಳೂರಿನಲ್ಲಿ ಸುಂಟರಗಾಳಿ ಮಳೆಗಳು ಪ್ರಾಪ್ತವಾಗಿ ಸೆಂಟ್ರಲ್ ಕಾಲೇಜಿನ ಬಳಿ ವಿದ್ಯುಚ್ಛಕ್ತಿಯ ತಂತೀ ಕಂಬವು ಉರುಳಿಕೊಂಡು, ತಂತಿಯು ಕಿತ್ತುಹೋಗಿ ನೆಲದ ಮೇಲೆ ಬಿದ್ದಿತ್ತು. ಮರುದಿನ ಬೆಳಿಗ್ಗೆ ಒಬ್ಬ ಹಿಂದೂ ಕೂಲಿಯವನು ಅದನ್ನು ತಿಳಿಯದೆ ಹಿಡಿದುಕೊಂಡನು. ಆ ತಂತಿಯಲ್ಲಿ ವಿದ್ಯುಚ್ಛಕ್ತಿಯು ಇದ್ದದ್ದರಿಂದ ಕೂಡಲೇ ಅವನನ್ನು ಕೊಂದು ಬಿಟ್ಟಿತು. ಅತ್ತಲಾಗಿ ಆ ರಾತ್ರಿ ಸಿಡಿಲು ಬಿದ್ದು ದಂಡಿನ ಸೈನಿಕರ ಒಂದು ಕೊಠಡಿಗೆ ಬಡಿದು ಅಪಾಯವನ್ನುಂಟು ಮಾಡಿತು. ಆದರೆ ಅಲ್ಲಿದ್ದ ಇಬ್ಬರು ಸೈನಿಕರಿಗೂ ಏನೂ ಬಾಧೆಯುಂಟಾಗಲಿಲ್ಲ.

⁂

ಬೆಂಗಳೂರಿನಲ್ಲಿ ಏರ್ಪಾಡಾಗಿರುವ ಮಹಾಸಭೆಯ ಸಂಘದ ಎರಡನೇ ವಾರ್ಷಿಕ ಕೂಟವು ಕಳೆದ ವಾರ ಮೋಹನ್ನನವರ ಹಾಲ್‌ನಲ್ಲಿ ನಡಿಸಲಾಯಿತು. ಮ॥ ಹಾಕೂಬ್ ಹುಸ್ನೇನ್ ಸೇಟರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಸಂಘದ ಸೆಕ್ರಟರಿ ಮ॥ ಮಹಮ್ಮದ್ ಅಬ್ದುಸ್ ಸತ್ತಾರ್‌ರವರು ಸಂಘದ ರಿಪೋರ್ಟನ್ನು ಓದಿ ಹೇಳಿದರು. ಈ ಸಂಘದಲ್ಲಿ ೫೦೦ ಮಂದಿ ಮೆಂಬರುಗಳಿರುತ್ತಾರೆ. ಈ ಸಂಘದ ಶಾಖೆಗಳು ಚಿಕ್ಕಮಗಳೂರು, ಚಿತ್ರದುರ್ಗ, ಕೋಲಾರಗಳಲ್ಲಿ ಏರ್ಪಾಡಾಗಿವೆ. ೧೨ ಮಂದಿ ಬಾಲಕರಿಗೆ ವೇತನ, ಸ್ಕೂಲ್ ಫೀ ಕೊಡುವರು. ಒಂದು ಬಾಲಿಕಾ ಶಾಲೆಯು ಏರ್ಪಾಡಾಗಿದೆ. ಕಳೆದ ಆಗಸ್ಟ್ ತಿಂಗಳಿಂದ ಒಂದು ರಾತ್ರೀ ಪಾಠಶಾಲೆಯನ್ನು ಇಟ್ಟು ನಡಿಸುತ್ತಿದ್ದಾರೆ.

⁂

ಈ ಸಂಸ್ಥಾನದಲ್ಲಿ ಆಪೋತಿಕೇರಿಗಳೂ ಡಾಕ್ಟರುಗಳೂ ನಿಶ್ಚಿತ ಸ್ಥಳಗಳಲ್ಲಿ ಪ್ರೈವೇಟ್ ಪ್ರಾಕ್ಟೀಸ್ ನಡಿಸುವುದಕ್ಕೆ ಜಡ್ಜಿಗಳೂ ಮ್ಯಾಜಿಸ್ಟ್ರೇಟರೂ ಅವಕಾಶಕೊಡಕೂಡದೆಂದು ಚೀಫ್ ಕೋರ್ಟಿನವರು ಸರ್ಕ್ಯುಲರನ್ನು ಕೊಟ್ಟಿರುವುದೂ, ಡಾಕ್ಟರುಗಳೆಲ್ಲಾ ಈ ತಿಂಗಳ ಅಂತ್ಯಭಾಗದಲ್ಲಿ ಬೆಂಗಳೂರಿನಲ್ಲಿ ಸಭೆ ಸೇರಿ ತಮ್ಮ ಕಷ್ಟನಷ್ಟಗಳನ್ನು ಚೀಫ್ ಕೋರ್ಟಿಗೆ ಅರಿಕೆಮಾಡಿಕೊಳ್ಳುವವರಾಗಿದ್ದಾರೆಂದೂ ವಾಚಕರಿಗೆ ತಿಳಿಸಿದೇವಷ್ಟೆ. ಈಗ ಕೆಲವು ಜನ ಡಾಕ್ಟರರು ಸೇರಿ, ಈ ವಿಚಾರದಲ್ಲಿ ಶ್ರೀಮನ್ಮಹಾರಾಜರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡಿದ್ದಾರೆಂದೂ, ಅವರು ಆ ಪತ್ರಿಕೆಯನ್ನು ಚೀಫ್ ಕೋರ್ಟಿಗೆ ಕಳುಹಿಸಿರುವುದಾಗಿಯೂ ತಿಳಿದುಬಂದಿದೆ.

⁂

ಹಿಬ್ರು ಪಾತ್ರಿಯವರು ಬರೆಯುವುದೇನೆಂದರೆ:— "ಬೆಳ್ಳಾರಿ ಟೌನ್ ಬ್ರೂಸ್ ಪೇಟೆಯಲ್ಲಿರುವ ರಾ॥ ಮುಳ್ಳಂಗಿ ದೊಡ್ಡಪ್ಪನವರು ಪುಣ್ಯಸಂಪಾದನೆಗೋಸ್ಕರ ಕುರುಡರು, ಕುಂಟರು ಕೇವಲ ಬಡವರು ಇತ್ಯಾದಿ ಜನಗಳಿಗೆ ಊಟಮಾಡಿಸಬೇಕೆನ್ನುವ ಕುತೂಹಲವುಳ್ಳವರಾಗಿ ಕಳೆದ ಚೈತ್ರ ಬಹುಳ ೬ ಭಾನುವಾರದ ದಿನ ಉದಯ ಕಾಲಕ್ಕೆ ಬೆಳ್ಳಾರಿಯಲ್ಲಿ ಡಂಗೂರದ ಮೂಲಕ ತಿಳಿಸಿ ಆ ದಿನ ಮಧ್ಯಾಹ್ನ ೧೨ ಘಂಟೆಯಿಂದ ಪ್ರಾರಂಭಮಾಡಿ ಸಾಯಂಕಾಲದವರೆಗೂ ಗುಂಪುಗುಂಪಾಗಿ ಬಂದ ಜನರು ಅಂದರೆ ಒಟ್ಟಿಗೆ ೯,೦೦೦ ಜನರ ವರಿಗೂ ಪರಮಾನ್ನದಿಂದ ಯುಕ್ತವಾದ ಊಟ ಮಾಡಿಸಿ ತೃಪ್ತಿಪಡಿಸಿರುತ್ತಾರೆ. ಈ ಕಾರ್ಯವು ಶ್ಲಾಘ್ಯವೂ ಪುಣ್ಯಕರವೂ ಆಗಿರುತ್ತದೆ" ಎಂಬುದೇ.

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಏಪ್ರಿಲ್ ತಾ 10 ಕ್ಕೆ ಅಖೈರಾದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು ರೂ	ಧರ್ಮಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು		
ಬೆಂಗಳೂರು	586	193	35	818	278
ಕೋಲಾರ	1,690	568	91	1,777	856
ತುಂಕೂರು	1,182	664	55	3,930	790
ಮೈಸೂರು	383	414	142	112	645
ಹಾಸನ	258	290	49	467	10
ಶಿವಮೊಗ್ಗ	180	85	26	406	5
ಕಡೂರು	61	91	5	45	1
ಚಿತ್ರದುರ್ಗ	580	415	75	1,302	477
ಮಾರಿಕಣಿವೆ	292	336	19	744	
ಸ್ಯಾನಿಟರಿ	116	131		290	
ಒಟ್ಟು	5,285	3,177	497	9,891	3,062

ಇಂಡಿಯಾ ದೇಶದ ವೃತ್ತಾಂತಗಳು.

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಕಳೆದ ಗುರುವಾರ ಬೊಂಬಾಯಿಗೆ ದಯಮಾಡಿದರು.

ಹಿಂದೂಸ್ಥಾನದಲ್ಲಿ ಜನಾಂಗದ ಆರೋಗ್ಯಾಭಿವರ್ಧಕ ಸಮಾಜವು ಕಲ್ಕತ್ತಾ ಪಟ್ಟಣದಲ್ಲಿ ಕಳೆದ ಶನಿವಾರ ಸ್ಥಾಪನೆಯಾಯಿತು. ದರ್ಭಾಂಗದ ಮಹಾರಾಜರವರು ಅಗ್ರಾಸನವನ್ನು ವಹಿಸಿ, ಸಮಾಜವನ್ನು ಪ್ರಾರಂಭಮಾಡಿರುತ್ತಾರೆ.

ಬಂಗಾಳಾ ಲೆಫ್ಟಿನೆಂಟ್ ಗವರ್ನರಾದ ಸರ್ ಎಡ್ವರ್ಡ್ ಬೇಕರ್‌ಯವರು ಎಲ್ಲಿಗೆ ಪ್ರಯಾಣ ಮಾಡಿದರೂ ಅವರ ಬೆಂಗಾವಲಿಗಾಗಿ ಕೆಲವು ಪೋಲೀಸಿನವರು ಹೋಗುತ್ತಿದ್ದರು. ಈಗ ಆ ಬೆಂಗಾವಲಿನ ಪೋಲೀಸ್ ಶಿಬ್ಬಂದಿಯನ್ನು ಅವಶ್ಯವಿಲ್ಲವೆಂದು ಹೇಳಿ ತೆಗೆದುಬಿಟ್ಟಿರುತ್ತಾರೆ.

ಹಿಂದುಸ್ಥಾನದ ಯಾವ ವಿಭಾಗದಲ್ಲಾದರೂ ಯಾರಿಗಾಗಲಿ ಸಿಡುಬುರೋಗವು ಪ್ರಾಪ್ತವಾಗಿದೆ ಎಂದು ತಿಳಿದು ಬಂದರೆ ಸ್ಥಳಾಧಿಕಾರಿಗಳು ಆ ಕೂಡಲೇ ಆ ಸಂಗತಿಯನ್ನು ಇಂಡಿಯಾ ಗವರ್ನಮೆಂಟಿನ ಸ್ಯಾನಿಟರಿ ಕಮಿಷನರನಿಗೆ ತಿಳಿಯಪಡಿಸಬೇಕೆಂದು ಹುಕುಂ ಕೊಟ್ಟಿದಾರೆ.

ಸಿಲೋನ್ ದ್ವೀಪದ ಮುಖ್ಯ ಪಟ್ಟಣವಾದ ಕೊಲಂಬೋ ನಗರದಲ್ಲಿ ನ್ಯಾಷನಲ್ ಬ್ಯಾಂಕಿನ ಸರಾಫರಾದ ಮ ಜಿ ಜ್ಞಾನಶೇಖರಂ ಯವರು ರೋಗಿಗಳಿಗೆ ಚಿಕಿತ್ಸೆ ನಡೆಯುವಂಥಾ ಆಸ್ಪತ್ರೆಗಳನ್ನು ಇಡಿಸಬೇಕೆಂದು ತಮ್ಮ ಆಸ್ತಿಯಿಂದ ೧೫,೦೦೦ ರೂಪಾಯನ್ನು ಗವರ್ನಮೆಂಟಿನವರ ವಶಕ್ಕೆ ಕೊಟ್ಟಿರುತ್ತಾರೆ.

ಕಲ್ಕತ್ತಾ ಪಟ್ಟಣದ ಮೈದಾನುಗಳಲ್ಲೂ ಅಜುಬಾಜೂ ಪುರಭಾಗಗಳಲ್ಲೂ ಸೂರ್ಯಾಸ್ತಮಯವಾದನಂತರ ಪಬ್ಲಿಕ್ ಸಭೆಗಳನ್ನು ನಡಿಸಕೂಡದೆಂದು ಗವರ್ನಮೆಂಟಿನವರು ಹುಕುಂ ಮಾಡಿ ಒಂದು ವರುಷವಾಯಿತು. ಈಗ ಈ ಹುಕುಮನ್ನು ಇನ್ನೊಂದು ವರುಷದ ತನಕ ಜಾರಿಯಲ್ಲಿಟ್ಟಿದೆ ಎಂದು ಸರ್ಕಾರದವರು ಸಾರಿಸಿರುತ್ತಾರೆ.

ನಾಗಪುರದಲ್ಲಿ ಗೋಪಾಲ ಅನಂತ ವಾಗಳೆ ಎಂಬ ಎಡಿಟರು "ದೇಶ ಸೇವಕ" ಎಂಬ ತನ್ನ ಪತ್ರಿಕೆಯಲ್ಲಿ ರಾಜದ್ರೋಹಕರವಾದ ಮತ್ತು ಅವಮಾನಕರವಾದ ಬಾತ್ಮಿಗಳನ್ನು ಬರೆದದ್ದಕ್ಕಾಗಿ, ಆತನಿಂದ ನೇಕಟಾಲಿಗೆ ೧,೦೦೦ ರೂಪಾಯಿನ ಬಾಬತು ಮೂರು ಜಾಮೀನುಗಳನ್ನು ತೆಗೆದುಕೊಳ್ಳಬೇಕೆಂದು ಆತನಿಗೆ ಸಮನ್ ಕೊಟ್ಟಿದಾರೆ. ಈ ವಾರ ಅದರ ವಿಚಾರಣೆ ನಡೆಯುವುದಾಗಿದೆ.

ನಾಗಪುರದಿಂದ ಚಿಂದ್ವಾರ ಪಟ್ಟಣದ ವರೆಗೆ ೯೯ ಮೈಲಿ ರೈಲ್ ರಸ್ತೆಯನ್ನು ಮಾಡಿಸಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸ್ಯಾಂಕ್ಷನ್ ಮಾಡಿದಾರೆ. ಇದಕ್ಕೆ ಒಟ್ಟು ೬೦ ಲಕ್ಷ ರೂಪಾಯಿ ಖರ್ಚಾಗ ಬಹುದೆಂದು ಅಂದಾಜು ಆಗಿದೆ. ಈ ಸೈಕಿ ಗವರ್ನಮೆಂಟಿನವರು ೧೦ ಲಕ್ಷ ರೂಪಾಯಿನ ಕಾಮಗಾರಿ ಈ ಸಾಲಿನಲ್ಲಿ ನಡೆಯಬೇಕೆಂದು ಗೊತ್ತುಮಾಡಿರುವರು.

ಮದರಾಸ್ ಆಧಿಪತ್ಯಕ್ಕೆ ಸೇರಿದ ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲೂ ಮ್ಯುನಿಸಿಪಾಲಿಟಿಗಳಲ್ಲೂ ಪ್ರಜಾ ಆರೋಗ್ಯಾಭಿವೃದ್ಧಿಗೆ ಅನುಕೂಲಿಸುವಂಥಾ ಕೆಲಸಗಳನ್ನು ಮಾಡಿಸುವುದಕ್ಕಾಗಿ ಗವರ್ನಮೆಂಟಿನವರು ೪,೯೭,೦೬೦ ರೂಪಾಯಿಗಳನ್ನು ಹಂಚಿ ಕೊಟ್ಟಿರುತ್ತಾರೆ. ಇದಲ್ಲದೆ ಎಲ್ಲಾ ಕಡೆಗಳಲ್ಲೂ ವಿದ್ಯಾಭಿವೃದ್ಧಿಯ ಕೆಲಸಗಳನ್ನು ನಡಿಸುವುದಕ್ಕೋಸ್ಕರ ಲೋಕಲ್ ಬೋರ್ಡುಗಳಿಗೆ ೧೧,೯೧,೯೩೩ ರೂಪಾಯಿಗಳನ್ನು ಕೊಟ್ಟಿರುವರು.

ಕಲ್ಕತ್ತಾ ಪಟ್ಟಣದಲ್ಲಿ ಕೆಲವು ಬಂಗಾಳಿಗಳ ಮೇಲೆ ಬಂದಿರುವ ಫಿತೂರಿ ಮೊಕದ್ದಮೆಯ ವಿಚಾರಣೆಯಲ್ಲಾ ಪೂರೈಸಿತು. ಅಸೆಸರುಗಳಾಗಿ ನೇಮಿಸಲ್ಪಟ್ಟಿರುವ ಮೆ|| ಕೇದರನಾಥ ಚಟರ್ಜಿ, ಮೆ|| ಗುರುದಾಸ ಬೋಸ್ ಎಂಬುವರು ಕೆಲವು ಅಪರಾಧಿಗಳು ತಪ್ಪಿತಸ್ಥರೆಂದೂ, ಕೆಲವರು ನಿರಪರಾಧಿಗಳೆಂದೂ, ತಮ್ಮ ಅಭಿಪ್ರಾಯವನ್ನು ಹೇಳಿದರು. ಮ್ಯಾಜಿಸ್ಟ್ರೇಟರಾದ ಮೆ|| ಬೀಚ್ ಕ್ರಾಫ್ಟ್ ಯವರು ಒಂದು ತಿಂಗಳಲ್ಲಿ ಜಡ್ಜ್‌ಮೆಂಟು ಹೇಳುವುದಾಗಿ ತಿಳಿಸಿರುತ್ತಾರೆ.

ಮಥುರೆಯಲ್ಲಿ ಸುಕಡೀ ಲಾಲಾ ಎಂಬಾತನು ಹತ್ತಾರು ಸಾವಿರ ರೂಪಾಯಿ ಖರ್ಚುಮಾಡಿ ಒಂದು ಧರ್ಮ ಸಾಲೆಯನ್ನು ಕಟ್ಟಿಸಿ, ಅದನ್ನು ಶಾಶ್ವತವಾಗಿ ನಡಿಸುವುದಕ್ಕೆ ೩,೦೦೦ ರೂಪಾಯಿ ಫಂಡು ಹಾಕಿರುತ್ತಾನೆ. ಈಚೆಗೆ ಅದರ ಹಣವು ದುರ್ವಿನಿಯೋಗವಾಗುತ್ತಿದೆ ಎಂದೂ, ಧರ್ಮಸಾಲೆಯು ಹೀನಸ್ಥಿತಿಗೆ ಬರುತ್ತಿದೆ ಎಂದೂ, ಸರ್ಕಾರಕ್ಕೆ ತಿಳಿದುಬಂದದ್ದರಿಂದ ಅವರು ಆ ಕಟ್ಟಡವನ್ನೂ ಧರ್ಮಫಂಡನ್ನೂ ಸುಭದ್ರಪಡಿಸುವಂತೆ ಅಲ್ಲಿನ ಮ್ಯುನಿಸಿಪಾಲಿಟಿಗೆ ವಹಿಸಿರುತ್ತಾರೆ.

ಪತ್ನಿ ಪುತ್ರಿಯರನ್ನು ಕಳೆದುಕೊಂಡು ಬಹಳ ವ್ಯಸನಾಕ್ರಾಂತರಾಗಿರುವ ಬೊಂಬಾಯಿ ಆಧಿಪತ್ಯದ ಗವರ್ನರಾದ ಸರ್ ಎಡ್ವರ್ಡ್ ಕ್ಲಾರ್ಕ್‌ಯವರು ಕೆಲವು ದಿನಗಳ ಮಟ್ಟಿಗೆ ಜಹಜು ಹತ್ತಿ ಏಡನ್ ಪಟ್ಟಣಕ್ಕೆ ಹೋಗಿ ಆ ಪ್ರಾಂತ್ಯ ಸಂಚಾರಮಾಡಿಕೊಂಡು ಕಳೆದ ವಾರ ವಾಪಸು ಬಂದರು. ಇಂಡಿಯಾ ಗವರ್ನಮೆಂಟಿನವರ ಅಪೇಕ್ಷೆಯ ಪ್ರಕಾರ ಗವರ್ನರವರು ಒಂದು ತಿಂಗಳ ತನಕ ಸಿಂಲಾ ಪಟ್ಟಣದಲ್ಲಿ ಇರುವಂತೆ ಒಪ್ಪಿಕೊಂಡಿರುತ್ತಾರೆ. ಇಬ್ಬರು ಸೆಕ್ರೆಟರಿಗಳು ಇವರ ಸಂಗಡ ಸಿಂಲಾಕ್ಕೆ ಹೋಗುವರು.

ಅಫ್ಘಾನಿಸ್ಥಾನದ ಅಮೀರರು ತಮ್ಮ ರಾಜಧಾನಿಯಾದ ಕಾಬೂಲ್ ಪಟ್ಟಣದಲ್ಲಿ ಒಂದು ವೈದ್ಯ ವಿದ್ಯಾಶಾಲೆಯನ್ನಿಟ್ಟು ನಡಿಸುತ್ತಾ ಬಂದು, ಈಚೆಗೆ ಅದಕ್ಕೆ ಅಲ್ಲಹಾಬಾದಿನಲ್ಲಿರುವ ಡಾಕ್ಟರ್ ಅಲ್ಲಾಜವಾಯಾ ಎಂಬ ವೈದ್ಯರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿಕೊಂಡರು. ಇವರು ಮೊದಲು ಅಲ್ಲಿಗೆ ಹೋಗುವುದಾಗಿ ಒಪ್ಪಿಕೊಂಡಿದ್ದು, ಈಗ ಹೋಗುವುದಿಲ್ಲವೆಂದು ಹೇಳಿ ರಾಜೀನಾಮೆ ಕೊಟ್ಟಿರುತ್ತಾರೆ. ಹಿಂದುಸ್ಥಾನದವರು ಅಲ್ಲಿ ಹೋಗಿರುವುದು ಸಾಧ್ಯವಲ್ಲವೆಂದು ಅಲ್ಲಿನ ಸ್ಥಿತಿಗತಿಯಿಂದ ತೋರುತ್ತದೆ.

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ಎಂಗರಡಿ ಎಂಬ ಸ್ಥಳದಲ್ಲಿ ಒಬ್ಬ ತಾಲ್ಲೂಕ್ದಾರನ ಮನೆಯಲ್ಲಿ ೩೦,೦೦೦ ರೂಪಾಯಿನ ಜವಾಹಿರ ನಗಗಳ ಒಂದು ಸಂದೂಕವು ಕಳುವಾಯಿತು. ಆಗ ತಾನೇ ಕೆಲವು ದಿನಗಳ ಹಿಂದೆ ಬಂದೀಖಾನೆಯಿಂದ ಬಿಡುಗಡೆ ಹೊಂದಿ ಬಂದಿದ್ದ ಇಬ್ಬರು ಖೈದಿಗಳನ್ನು ಪೋಲೀಸಿನವರು ಹಿಡಿದು ತನಿಖೆ ಮಾಡಿದರು. ಅವರೇ ಆ ಪೆಟ್ಟಿಗೆಯನ್ನು ಕಳುವು ಮಾಡಿದರೆಂದು ಗೊತ್ತಾಯಿತು. ಕಳುವಾಗಿದ್ದ ನಗಗಳೆಲ್ಲಾ ಅವರ ಬಳಿಯಲ್ಲಿ ಸಿಕ್ಕಿದವು. ಕದ್ದದ್ದು ಉಂಟೆಂದು ಅವರೇ ಒಪ್ಪಿಕೊಂಡರು.

ಕೊಯಮುತ್ತೂರು ಜಿಲ್ಲಾ ಅವಿನಾಶಿ ತಾಲ್ಲೂಕಿನ ದೇವಸ್ಥಾನದ ಇನ್‌ಸ್ಪೆಕ್ಟರ್ ಮೆ|| ಡಿ ವೆಂಕಟಪಿಳ್ಳೆ ಯವರು ಬರೆಯುವುದು —ಕಳೆದ ೧೨ ನೇ ತಾ ಸೋಮವಾರ ಮಧ್ಯಾಹ್ನ ೩ ಗಂಟೆ ಸುಮಾರಿಗೆ ಅವಿನಾಶಿಯಲ್ಲಿ ಜೋರಾಗಿ ಮಳೆ ಸುರಿಯಲಾರಂಭಿಸಿ, ಹತ್ತು ನಿಮಿಷಗಳ ತನಕ ಆನೆಕಲ್ಲು ಬಿದ್ದವು. ಈ ಕಲ್ಮಳೆಯು ದೆಸೆಯಿಂದ ಕೊಯಿಲಿಗೆ ಬಂದಿದ್ದ ಜೋಳದ ಪೈರು ಕೆಟ್ಟು ಹೋಯಿತು. ಆನೆಕಲ್ಲುಗಳು ನಿಂಬೇಕಾಯಿನ ಗಾತ್ರ ಇದ್ದವು. ಈ ಕಲ್ಮಳೆಯ ಏಟು ತಗಲಿ ಅನೇಕ ಕಾಗೆ ಮೊದಲಾದ ಪಕ್ಷಿ ಜಾತಿಗಳು ಸತ್ತು ಉದುರಿ ಹೋದವು ಎಂಬುದೇ.

ಉತ್ತರ ದೇಶದಲ್ಲಿ ಕಾಲಸ್ಥಿತಿಯು ಸಲ್ಪ ಕಳವಳವನ್ನುಂಟುಮಾಡುವಂತೆ ಕಾಣುತ್ತಿದೆ. ಹೊಲಗದ್ದೆಗಳಲ್ಲಿ ಕೂಲಿಮಾಡಿ ಜೀವಿಸತಕ್ಕ ಗ್ರಾಮಾಂತರ ಪ್ರಜೆಗಳು ಸರ್ಕಾರದವರ ಪೋಷಣೆಗೆ ಬಂದು ಸೇರಿಕೊಳ್ಳುವುದು ಹೆಚ್ಚುತ್ತಾ ಬಂದಿದೆ. ಪಶ್ಚಿಮ ಬಂಗಾಳದಲ್ಲೂ ಸಂಯುಕ್ತ ಆಧಿಪತ್ಯಗಳ ಪೂರ್ವ ದಿಗ್ಭಾಗದ ಡಿಸ್ಟ್ರಿಕ್ಟುಗಳಲ್ಲೂ ಕೂಲಿಕಾರರ ಕಷ್ಟವು ವಿಶೇಷವಾಗಿರುವುದು. ಅಂತು ಈಗ ೧,೩೩,೦೦೦ ಪ್ರಜೆಗಳು ಸರ್ಕಾರದವರ ಪೋಷಣೆಯಲ್ಲಿರುತ್ತಾರೆ. ಈ ಪೈಕಿ ಬಂಗಾಳಾ ೪೦,೦೦೦, ಸಂಯುಕ್ತ ಆಧಿಪತ್ಯಗಳು ೧೯,೦೦೦, ಪೂರ್ವ ಬಂಗಾಳಾ ಮತ್ತು ಅಸ್ಸಾಂ ೯೦,೦೦೦ ಎಂದು ತಿಳಿದು ಬಂದಿದೆ.

ಪ್ಲೇಗ್ ಉಪದ್ರವದ ಮರಣಗಳು ಎಲ್ಲಾ ಕಡೆಗಳಲ್ಲೂ ಕಡಮೆಯಾಗಿವೆ. ಯಾವದೂ ಪಂಜಾಬಿನಲ್ಲಿ ಮಾತ್ರ ಹೆಚ್ಚುತ್ತಾ ಬಂದಿದೆ. ಕಳೆದ ವಾರ ಹಿಂದೂಸ್ಥಾನದಲ್ಲೆಲ್ಲಾ ಆದ ಒಟ್ಟು ೪೩೧೯ ಪ್ಲೇಗ್ ಮರಣಗಳ ಪೈಕಿ ಪಂಜಾಬ್ ಆಧಿಪತ್ಯ ಒಂದರಲ್ಲೇ ೨,೮೪೪ ಮರಣಗಳಾದವು. ಇತರ ಕಡೆಗಳ ಮರಣ ಸಂಖ್ಯೆಗಳು ಎಷ್ಟೆಂದರೆ —ಬೊಂಬಾಯಿ ಆಧಿಪತ್ಯ ೭೩೧, ಸಂಯುಕ್ತ ಆಧಿಪತ್ಯಗಳು ೬೮೭, ರಾಜಪುಟಾನ ೪೭೧, ಬಂಗಾಳಾ ೨೬೯, ಬರ್ಮಾ ೮೩, ಮದರಾಸ್ ಆಧಿಪತ್ಯ ೬, ಮಧ್ಯಪ್ರಾಂತ್ಯಗಳು ಮತ್ತು ಬೀರಾರ್ ೪೧, ಮೈಸೂರು ಸಂಸ್ಥಾನ ೧೫, ಹೈದರಾಬಾದ್ ಸಂಸ್ಥಾನ ೩, ಮಧ್ಯ ಇಂಡಿಯ ೬೭.

ಹೈದರಾಬಾದ್ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾಗಿರುವ ಸರ್ ಚಾರ್ಲಸ್ ಬೆಯಿಲಿಯವರು ಕಳೆದ ಬುಧವಾರ ಶೀಮೆಗೆ ಪ್ರಯಾಣ ಮಾಡಿದರು. ಅದಕ್ಕೆ ಮುಂಚೆ ನೈಜಾಮರವರು ಅವರಿಗೆ ಫಾಲಕ್ನಾಮಾ ಅರಮನೆಯಲ್ಲಿ ಭಾರೀ ಔತಣವನ್ನು ಮಾಡಿ ಅಲ್ಲಿರುವ ಇತರ ಸರ್ದಾರರನ್ನೂ ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ಕರೆಸಿಕೊಂಡಿದ್ದರು. ಮಂತ್ರಿಯವರಾದ ಸರ್ ಕೃಷ್ಣಪ್ರಸಾದ ಬಹದ್ದೂರ್ ಯವರೂ ಸರ್ ಅಫ್ಸರುಲ್ ಮುಲ್ಕ್ ರವರೂ ಹಾಜರಾಗಿದ್ದರು. ಭೋಜನಾನಂತರ ನೈಜಾಮರವರು ಸರ್ ಚಾರ್ಲಸ್ ಬೆಯಿಲಿಯವರ ಗುಣಕಥನವನ್ನು ಮಾಡಿ ಅವರಿಗೆ ಕ್ಷೇಮಾಭಿವೃದ್ಧಿಗಳು ಲಭಿಸಲೆಂದು ಬಯಸಿದರು.

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ಶ್ರೀಮನ್ಮಹಾರಾಜರವರ ಬಾಲಿಕಾ ವಿದ್ಯಾಶಾಲೆಯಲ್ಲಿ ಕಳೆದ ಹದಿನಾಲ್ಕು ವರುಷಗಳಿಂದ ಅಧ್ಯಕ್ಷತೆಯನ್ನು ವಹಿಸಿ, ಆ ವಿದ್ಯಾಶಾಲೆಯನ್ನು ಬಹಳ ಅಭಿವೃದ್ಧಿ ಸ್ಥಿತಿಗೆ ತಂದಿರುವ ಮಿಸ್ ಎಸ್ ಬಿ ವಿಲ್ಲಿಯಂಸ್ ಎಂ ಎ ಯವರು ಕಳೆದ ವಾರ ಶೀಮೆಗೆ ಪ್ರಯಾಣಮಾಡಿದರು. ಆಕೆಗೆ ಅಲ್ಲಿನ ಪ್ರಜೆಗಳು ಬಹು ಆದರ ಪೂರ್ವಕವಾಗಿ ಸನ್ಮಾನವಾಡಿದ್ದಲ್ಲದೆ ಬಹು ಪದಾರ್ಥವಾದ ಕೆಲವು ಚಿತ್ರವಸ್ತುಗಳನ್ನು ಒಪ್ಪಿಸಿ ಆಕೆಯ ಗುಣಕಥನವನ್ನು ಮಾಡಿದರು. ಬ್ರಿಟಿಷ್ ರೆಸಿಡೆಂಟರು ಆ ದಿನ ಸಭೆಯಲ್ಲಿ ಹಾಜರಾಗಿದ್ದು ಆಕೆಯ ಸಾಹಸ ಕಾರ್ಯಗಳನ್ನು ಕೃತಜ್ಞತೆಯಿಂದ ವಿವರಿಸಿದರು.

ಅಲ್ಲಹಾಬಾದಿನಲ್ಲಿ ಕಾಯಸ್ಥ ಜನರ ಮಹಾ ಸಭೆಯು ಕಳೆದ ಸೋಮವಾರಕ್ಕೆ ಮುಕ್ತಾಯವಾಯಿತು. ಮೆ ಗೋಪಾಲ ಕೃಷ್ಣ ಗೋಖಲೆಯವರು ಆ ಸಭೆಯಲ್ಲಿ ಬಹು ಸ್ವಾರಸ್ಯವೂ ಹಿತಕಾರಿಯೂ ಆದ ಉಪನ್ಯಾಸವನ್ನು ಮಾಡಿದರು. ಕಡೆಯಲ್ಲಿ ಸಭಿಕರೆಲ್ಲಾ ಏಕ ವಾಕ್ಯತೆಯಿಂದ ನಿರ್ಧಾರಮಾಡಿಕೊಂಡು ಬರತಕ್ಕ ಕಾಯಸ್ಥ ಜನರನ್ನು ಜಾತಿಯಿಂದ ಹೊರಗೆ ಹಾಕದೆ ಸವ್ಯವಹಾರದಲ್ಲಿ ಇಟ್ಟುಕೊಳ್ಳಬೇಕೆಂತಲೂ ಒಳಪಂಗಡಗಳವರು ಭಿನ್ನಭೇದಗಳನ್ನೆಣಿಸದೆ ಹೆಣ್ಣು ಕೊಟ್ಟು ತರುವುದನ್ನು ರೂಢಿಸಬೇಕೆಂತಲೂ ತೀರ್ಮಾನಮಾಡಿಕೊಂಡರು. ಕಾಯಸ್ಥರ ವಿದ್ಯಾಶಾಲೆಯ ಫಂಡಿಗೆ ಆ ಸಭೆಯಲ್ಲಿ ೧,೯೯,೫೦೦ ರೂಪಾಯಿ ಚಂದಾ ವಸೂಲಾಯಿತು.

ಪೂನಾ ಪಟ್ಟಣಕ್ಕೆ ಬಂದು ಹೋಗಿಬರುತ್ತಿದ್ದ ಸಾಮಾನು ರೈಲುಗಾಡಿಗಳಿಗೆ ಬಹು ಕಾಲದಿಂದ ಕಳ್ಳರು ಬೀಳುತ್ತಾ, ಸರಕಿನ ಮೂಟೆಗಳನ್ನು ಅಪಹರಿಸುತ್ತಾ ಇದ್ದರು. ಅವರೆಲ್ಲಾ ಗ್ರಾಮವಾಸಿಗಳು. ಇವರು ರಾತ್ರಿ ಹೊತ್ತು ಮಾರ್ಗಬಂಡಿಗಳೊಳಗೆ ಅಡಗಿಕೊಂಡು, ಬೇಕಾದ ಸಾಮಾನುಗಳನ್ನು ಕತ್ತಲಲ್ಲಿ ಹೊರಕ್ಕೆ ಹಾಕಿ ಸಾಗಿಸುತ್ತಾ ಬಂದರು. ಕಳೆದ ವಾರ ಬಾಯು ರಂಗರೆಡ್ಡಿಯೆಂಬೊಬ್ಬ ಪೋಲೀಸ್ ಸಬ್ ಇನ್‌ಸ್ಪೆಕ್ಟರು ಭಿಕ್ಷುಕನಂತೆ ವೇಷಹಾಕಿಕೊಂಡು ಆ ಪ್ರಾಂತ್ಯದಲ್ಲಿ ತಿರುಗುತ್ತಾ ಆ ಕಳ್ಳರ ಕೃತ್ಯಗಳನ್ನು ನೋಡಿ ಕಂಡು ಹಿಡಿದನು. ಅವರ ಮನೆಗಳನ್ನು ಶೋಧಿಸುವಲ್ಲಿ ಸುಮಾರು ೬,೦೦೦ ರುಪಾಯಿನ ಸರಕು ಸಿಕ್ಕಿತು. ಈಗ ಅಲ್ಲಿನ ಮ್ಯಾಜಿಸ್ಟ್ರೇಟರು ಆ ಕಳ್ಳರನ್ನು ತನಿಖೆಮಾಡುತ್ತಿದ್ದಾರೆ.

ಮಧ್ಯಪ್ರಾಂತ್ಯಗಳಿಗೆ ಸೇರಿದ ರಾಯಪುರ ಮತ್ತು ದುರ್ಗ ಎಂಬ ಎರಡು ಡಿಸ್ಟ್ರಿಕ್ಟುಗಳಲ್ಲಿ ಕ್ಷಾಮಬಾಧೆಯು ಆಗಾಗ್ಗೆ ಪ್ರಾಪ್ತವಾಗಿ ಪ್ರಜೆಗಳು ದುರ್ಗತಿಗೆ ಬರುತ್ತಿರುವುದನ್ನು ತಪ್ಪಿಸಬೇಕೆಂದೂ, ಮಹಾನದಿ ತೆಂಡೂಲಾ ಎಂಬ ನದಿಗಳಿಂದ ನಾಲೆಗಳನ್ನು ತೆಗೆಸಿ ನೀರಾವರಿ ಕಾಮಗಾರಿ ಮಾಡಿಸಬೇಕೆಂದೂ ಏರ್ಪಾಡಾಗಿದೆ. ಈ ಕಾಮಗಾರಿಗಳಿಗೆ ಎರಡು ಕೋಟಿ ರೂಪಾಯಿ ಖರ್ಚಾಗಬಹುದೆಂದು ಅಂದಾಜಾಯಿತು. ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಆ ಎರಡರ ಪೈಕಿ ತೆಂಡೂಲಾ ನದಿಯ ನೀರಾವರಿ ಕಾಮಗಾರಿಯನ್ನು ಸ್ಯಾಂಕ್ಷನ್ ಮಾಡಿರುತ್ತಾರೆ. ಇದಕ್ಕೆ ೬೫ ಲಕ್ಷ ರೂಪಾಯಿ ಖರ್ಚಾಗುವುದು. ಕಾಮಗಾರಿಯು ಈ ವರುಷದ ಅಂತ್ಯಭಾಗದಲ್ಲಿ ಪ್ರಾರಂಭಿಸಲ್ಪಡುವುದಂತೆ. ಇದಕ್ಕಾಗಿ ಪ್ರತಿ ವರುಷವೂ ೧೫ ಲಕ್ಷ ರೂಪಾಯಿನಂತೆ ವಿನಿಯೋಗಿಸಲ್ಪಡುವುದೆಂತಲೂ ತಿಳಿದುಬಂದಿದೆ.

ಮಧ್ಯ ಇಂಡಿಯಾದಲ್ಲಿ ಪ್ರಸಿದ್ಧ ವಿಕ್ರಮಾದಿತ್ಯರಾಯನ ರಾಜಧಾನಿಯಾದ ಉಜ್ಜಯಿನಿ ಪಟ್ಟಣದಲ್ಲಿ ಈ ತಿಂಗಳ ೬ ನೇ ತಾರೀಖಿನಿಂದ ಸಿಂಹಸ್ಥವೆಂಬ ಜಾತ್ರೆಯು ನಡೆಯುತ್ತಿದೆ. ಪ್ರಯಾಗ (ಅಲ್ಲಹಾಬಾದ್) ಹರಿದ್ವಾರ, ನಾಸಿಕ, ಮೊದಲಾದ ಕಡೆಗಳಿಂದಲೂ ಅನೇಕ ಸಹಸ್ರ ಜನರು ಉಜ್ಜಯಿನಿಗೆ ಸೇರಿರುತ್ತಾರೆ. ಸರ್ಕಾರದವರು ಪ್ರತಿ ದಿನವೂ ೧೦,೦೦೦ ಸಾಧು ಜನರಿಗೆ ಅನ್ನದಾನಗಳನ್ನು ನಡಿಸುತ್ತಿರುವರು. ರಾತ್ರಿ ಹೊತ್ತು ಪಟ್ಟಣಕ್ಕೆಲ್ಲಾ ವಿದ್ಯುಚ್ಛಕ್ತಿಯ ದೀಪಗಳು ಹಚ್ಚಲ್ಪಡುತ್ತವೆ. ನಲ್ಲಿಗಳಲ್ಲಿ ನೀರನ್ನು ತಂದು ಹಲವು ಸಂದುಗೊಂದುಗಳಿಗೂ ಬಿಟ್ಟಿದಾರೆ. ಐದು ಕಡೆಗಳಲ್ಲಿ ಚಿಕಿತ್ಸೆ ನಡೆಯುವಂಥಾ ಆಸ್ಪತ್ರೆಗಳನ್ನು ಇಡಿಸಿದಾರೆ. ಹಲವು ಹೊಸ ರಸ್ತೆಗಳನ್ನು ಹಾಕಿ, ಸೇತುವೆಗಳನ್ನು ಮಾಡಿಸಿರುವರು. ಈ ಜಾತ್ರೆಯು ಒಂದು ತಿಂಗಳ ತನಕ ನಡೆಯುವುದು.

ಬಿಜಾಪುರದಲ್ಲಿ "ಸ್ವಾರಾಜ್ಯ" ಎಂಬ ಪತ್ರಿಕೆಯಲ್ಲಿ ರಾಜದ್ರೋಹಕರವಾದ ಬಾತ್ಮಿಗಳನ್ನು ಬರೆದದ್ದಕ್ಕಾಗಿ ಕೃಷ್ಣಾ ಡಿಸ್ಟ್ರಿಕ್ಟಿನ ಸೆಷನ್ಸ್ ಜಡ್ಜರವರು ಆ ಪತ್ರಿಕೆಯ ಎಡಿಟರಾಗಿದ್ದ ಬೋಡಿ ನಾರಾಯಣರಾಯನಿಗೂ, ಮಾಲೀಕ (ಪ್ರೊಪ್ರೈಟರ್) ಆಗಿದ್ದ ಜಿ ಹರಿಸರ್ವೋತ್ತಮ ರಾಯನಿಗೂ ಸಾಧಾರಣ ಸಜಾವನ್ನು ವಿಧಿಸಿದ್ದರು. ಈ ಮೊಕದ್ದಮೆಯಲ್ಲಿ ಅಪರಾಧಿಗಳಿಗೆ ಕೊಟ್ಟ ಶಿಕ್ಷೆಯನ್ನು ಹೆಚ್ಚು ಮಾಡಬೇಕೆಂದು ಸರ್ಕಾರದವರು ಮದರಾಸ್ ಹೈಕೋರ್ಟಿನಲ್ಲಿ ಅಪೀಲ್ ಮಾಡಿದರು. ಇಬ್ಬರು ಜಡ್ಜಿಗಳು ಕಳೆದ ವಾರ ಈ ಮೊಕದ್ದಮೆಯ ಕಟ್ಟನ್ನು ಪರಾಂಬರಿಸಿ, ಮೊದಲನೇ ಅಪರಾಧಿಗೆ ಆಗಿದ್ದ ೬ ತಿಂಗಳ ಸಾಧಾರಣ ಸಜವನ್ನು ಕಠಿಣ ಸಜಾ ಆಗಿಯೂ ಎರಡನೇ ಅಪರಾಧಿಗೆ ಆಗಿದ್ದ ೯ ತಿಂಗಳ ಸಾಧಾರಣ ಸಜಾವಿಗೆ ಪ್ರತಿಯಾಗಿ ಮೂರು ವರುಷ ಕಠಿಣ ಸಜಾ ಅನುಭವಿಸಬೇಕೆಂತಲೂ ತೀರ್ಮಾನಮಾಡಿದರು.

ಆಗ್ರಾ ಪಟ್ಟಣದಲ್ಲಿ ಸಂಯುಕ್ತ ಆಧಿಪತ್ಯಗಳ ಪ್ರಾಂತಿಕ ಸಭೆಯು ನವಮಿಯ ಮೇಲೆ, ಅಂದರೆ ಕಳೆದ ಭಾನುವಾರ, ಸಂಘ ಪರಿಷ್ಕರಣ ಸಮಾಜವು ಜರುಗಿತು. ಅಲ್ಲಹಾಬಾದಿನ ಪಂಡಿತ ಮೋತೀಲಾಲ ನೇಹರು ಯವರು ಸಭಾನಾಯಕರಾಗಿ ಬಹು ಖಂಡಿತವಾದ ಉಪನ್ಯಾಸವನ್ನು ಮಾಡಿದರು. ಅವರು ತಿಳಿಸಿದ ಮುಖ್ಯಾಭಿಪ್ರಾಯವು ಏನೆಂದರೆ —ರಾಜಕೀಯ ಬದಲಾವಣೆಗಳು ಎಷ್ಟು ಪ್ರಜಾರಂಜಕವಾಗಿಯೂ ಹಿತಕರವಾಗಿಯೂ ಮಾಡಿಟ್ಟಾಗ್ಯೂ ಅದರಿಂದ ಎಷ್ಟು ಮಾತ್ರಕ್ಕೂ ಪ್ರಜೆಗಳು ಅಭಿವೃದ್ಧಿ ಹೊಂದಲಾರರು. ಯಾಕೆಂದರೆ ಈಗ ಹಿಂದುಸ್ಥಾನದ ಜನರಲ್ಲಿ ಬಹು ಹೀನವಾದ ಅನೇಕ ಆಚಾರವ್ಯವಹಾರಗಳೂ ಮೂಢ ಭಕ್ತಿಯ ಕಾರ್ಯಗಳೂ ಇದ್ದು ಕೊಂಡಿವೆ. ಇಂಥಾ ದುಷ್ಟವಾದ ಪದ್ಧತಿಗಳನ್ನೂ ಆಚಾರಗಳನ್ನೂ ಪ್ರಜೆಗಳು ಮೊದಲು ತೊಡೆದುಕೊಳ್ಳಬೇಕು. ಇವೇ ಈಗ ಇಲ್ಲಿನ ಜನಾಂಗಗಳನ್ನು ವಿಕಾರಪಡಿಸಿರುತ್ತವೆ. ಸಾಂಸರ್ಗಿಕವಾದ ಪರಿಷ್ಕರಣಗಳನ್ನು ಪ್ರಜೆಗಳು ಮೊದಲು ಕ್ರಮಪಡಿಸಿಕೊಂಡು ತರುವಾಯ ರಾಜಕೀಯ ಬದಲಾವಣೆಗಳಿಗೆ ಕೈ ಹಾಕಬೇಕಾಗಿರುವುದು. ವಿದ್ಯಾವಂತರು ಈ ವಿಷಯಕ್ಕೆ ಪ್ರಾಮುಖ್ಯವಾದ ಗಮನವನ್ನು ಕೊಡದೆ ಇರುವುದನ್ನು ನೋಡಿ ತುಂಬಾ ಶೋಚಿಸಬೇಕಾಗಿದೆ. ಎಲ್ಲಾದಕ್ಕಿಂತಲೂ ಮೊದಲು ಜಾತಿಕಟ್ಟಿಗೂ ಘೋಷಾ ಪದ್ಧತಿಗೂ ಅಂತ್ಯವನ್ನು ಕಾಣಿಸಬೇಕು. ಇವೆರಡೂ ಪುರುಷರನ್ನೂ ಸ್ತ್ರೀಯರನ್ನೂ ಅಭಿವೃದ್ಧಿಗೆ ಬಾರದಂತೆ ಅಣಗಿಸಿಬಿಟ್ಟಿರುವವು ಎಂಬುದೇ.

ರಾಷ್ಟ್ರವಿಚಾರವನ್ನೂ ಕೈಗಾರಿಕೆಗಳನ್ನೂ ಹಿಂದುಸ್ಥಾನದ ಬಾಲಕರಿಗೆ ಕಲಿಸಿಕೊಡಬೇಕೆಂಬ ಉದ್ದೇಶವುಳ್ಳ ಒಂದು ಸಂಘವು ಕಲ್ಕತ್ತಾ ಪಟ್ಟಣದಲ್ಲಿ ವಿಸ್ತಾರವಾಗಿ ಐದು ವರುಷಗಳಿಂದ ನಡೆಯುತ್ತಾ ಬಂದಿದೆ. ಇದಕ್ಕೆ ಬಂಗಾಳಾ ಆಧಿಪತ್ಯದ ಬಹು ಮಂದಿ ಶ್ರೀಮಂತ ದೊಡ್ಡ ಮನುಷ್ಯರೂ ಹಣಗಾರರೂ ಸೇರಿಕೊಂಡಿರುವರು. ಕಳೆದ ವಾರ ಈ ಸಂಘದ ವಾರ್ಷಿಕೋತ್ಸವವು ನಡೆಯಿತು. "ಇಂಡಿಯನ್ ಮಿರರ್" ಎಂಬ ಪತ್ರಿಕೆಯ ಎಡಿಟರಾದ ಮೆ|| ನರೇಂದ್ರನಾಥ ಸೇನರವರು ಸಭೆಯ ಅಗ್ರಾಸನವನ್ನು ವಹಿಸಿ ಬಹು ರಸವತ್ತಾದ ಉಪನ್ಯಾಸವನ್ನು ಮಾಡಿದರು. ಈ ಉಪನ್ಯಾಸದ ಮುಖ್ಯಾಭಿಪ್ರಾಯವೇನೆಂದರೆ —ಈ

ದೇಶ್ಯದ ಪ್ರಜೆಗಳೂ ಹಣಗಾರರೂ ಕಸಬುಗಳನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ವಿಶೇಷ ಗಮನವನ್ನು ಕೊಡಬೇಕಾಗಿದೆ. ಗವರ್ನ್‌ಮೆಂಟಿನವರು ಇದಕ್ಕೆ ಪ್ರೋತ್ಸಾಹವಾಗುವಂತೆ ಸಹಾಯ ದ್ರವ್ಯವನ್ನು ಒದಗಿಸುತ್ತಾ ಬರಬೇಕು. ಹಿಂದುಸ್ಥಾನದ ಹಣಗಾರರಿಗೆ ವಿವೇಕವನ್ನು ಕಲಿಸಿ, ಅವರಿಂದ ಕಾರ್ಖಾನೆಗಳನ್ನು ಇಡಿಸಿ, ಪರದೇಶೀಯರನ್ನು ಬಿಟ್ಟು ಸ್ವದೇಶೀಯರಿಂದಲೇ ಕೆಲಸಗಳನ್ನು ಮಾಡಿಸಬೇಕು. ಮಧ್ಯ ತರಗತಿಗೆ ಸೇರಿದ ಹಿಂದುಸ್ಥಾನದ ಪ್ರಜೆಗಳು ವ್ಯವಸಾಯವನ್ನು ಕಲಿತು ಅದರಲ್ಲೇ ಪ್ರವರ್ತಿಸಿ ಜೀವನೋಪಾಯವನ್ನು ಸಂಪಾದಿಸಿಕೊಳ್ಳುವವರಾಗಬೇಕು. ವ್ಯವಸಾಯವೇ ಈ ರಾಷ್ಟ್ರದ ಮುಖ್ಯ ಕಸಬಾದುದರಿಂದ ಸಮಸ್ತ ಪಾಠಶಾಲೆಗಳಲ್ಲೂ ಬಾಲಕರಿಗೆ ಸರ್ವೋಪಯೋಗವಾದ ವಿದ್ಯೆಯನ್ನು ಕಲಿಸಿಕೊಡಬೇಕು. ಕಸಬುಗಳನ್ನು ಅಭಿವೃದ್ಧಿಗೆ ತರಬೇಕಾದರೆ ಫ್ರೆಂಚ್, ಜರ್ಮನ್, ಜಪಾನ್ ಭಾಷೆಗಳಲ್ಲಿ ಬರೆಯಲ್ಪಟ್ಟಿರುವ ಶಿಲ್ಪಶಾಸ್ತ್ರ ಗ್ರಂಥಗಳನ್ನು ಓದುಕೊಳ್ಳುವ ಪ್ರತಿಕೂಲ್ಯಸ್ಥರ ಸರ್ಕಾರದವರು ಆ ಭಾಷೆಗಳನ್ನು ಪಾಠಶಾಲೆಗಳಲ್ಲಿ ಕಲಿಸುತ್ತಾ ಬರಬೇಕು. ರೈತನಿಗೆ ವರುಷದಲ್ಲಿ ವಿರಾಮಕಾಲವು ಸಿಕ್ಕಿದಾಗ್ಗೆ ಅವನು ತನ್ನ ಮನೆಯಲ್ಲೇ ನೂಲುವ ಮತ್ತು ನೇಯುವ ಕಸಬನ್ನು ನಡಸಿಕೊಳ್ಳುವಂತೆ ಅವನಿಗೆ ಈ ಕಸಬನ್ನು ಕಲಿಸಿಕೊಡಬೇಕು. ದೀಪದ ಎಣ್ಣೆ, ಸೀಮೆಕಡ್ಡಿ, ಹೊಗೆಸೊಪ್ಪು, ಸಕ್ಕರೆ, ಹೆಣಿಗೆ, ಸಾಬೂನು, ಸುಗಂಧ ದ್ರವ್ಯಗಳು, ಕಾಗದ, ಕನ್ನಡಿ, ಚತ್ರಿ, ಬಿಸ್ಕತ್ತು, ಅಚ್ಚು ಕಾರ್ಖಾನೆಯಲ್ಲಿ ಉಪಯೋಗಿಸುವ ಶಾಯಿ, ಈ ಮೊದಲಾದವುಗಳನ್ನು ತಯಾರುಮಾಡುವುದನ್ನು ಜಪಾನಿನವರು ಕಲಿತು ಕಾರ್ಖಾನೆಗಳನ್ನು ಇಟ್ಟು ನಡಿಸುತ್ತಾ ತುಂಬಾ ಅಭಿವೃದ್ಧಿಗೆ ಬಂದಿರುತ್ತಾರಾದಕಾರಣ ಈ ದೇಶದ ಐಶ್ವರ್ಯವಂತರೂ ಅಂಥಾ ಕಾರ್ಖಾನೆಗಳನ್ನು ಇಟ್ಟು ನಡಿಸಿದರೆ ನಷ್ಟವೆಂದಿಗೂ ಆಗಲಾರದು. ಇಂಥವರಿಗೆ ಈ ಸಂಘದವರು ಬೇಕಾದ ಸಹಾಯ ಸಂಪತ್ತುಗಳನ್ನು ಒದಗಿಸಿಕೊಡುವುದಕ್ಕೆ ಸಿದ್ಧರಾಗಿರುತ್ತಾರೆ ಎಂಬುವುದೇ. ಈ ಸಂಘದವರು ಸಂಘದ ಹಣದಿಂದ ಈ ಸಲ ೧೨೦ ಮಂದಿ ಯುವಕರನ್ನು ಅನ್ಯ ದೇಶಗಳಿಗೆ ವೇತನ ಕೊಟ್ಟು ಕಳುಹಿಸುವಂತೆ ನಿಷ್ಕರ್ಷೆ ಮಾಡಿರುವರು. ಇವರೆಲ್ಲಾ ಕಸಬುಗಳನ್ನು ಕಲಿತುಕೊಂಡು ಬರುವವರಾಗಿದ್ದಾರೆ. ಹ್ಯಾಗೆಂದರೆ ೭೫ ಮಂದಿ ವಿಲಾಯತಿಗೂ, ೧೩ ಮಂದಿ ಜಪಾನಿಗೂ, ೩ ಮಂದಿ ಜರ್ಮನಿಗೂ, ಒಬ್ಬ ಸ್ವೀಡನ್ನಿಗೂ, ಒಬ್ಬ ಕೆನಡಾ ಸ್ವಾತಂತ್ರ್ಯಕ್ಕೂ, ೪ ಜನ ಅಮೇರಿಕಕ್ಕೂ, ಉಳಿದ ೬೦ ಜನ ಯೂರೋಪಿನ ಬೇರೆ ಬೇರೆ ದೇಶಗಳಿಗೂ ಹೋಗಿ ಬರುವಂತೆ ನಿಷ್ಕರ್ಷೆಯಾಗಿರುತ್ತದೆ. ಈ ಸಂಘದವರು ಇದೇ ಪ್ರಕಾರ ೪ ೫ ವರುಷಗಳಿಂದಲೂ ನೂರಾರು ಮಂದಿ ವಿದ್ಯಾರ್ಥಿಗಳನ್ನು ಅನ್ಯದೇಶಗಳಿಗೆ ವೇತನ ಕೊಟ್ಟು ಕಳುಹಿ ಕಸಬುಗಳನ್ನು ಕಲಿತು ಬರುವಂತೆ ಪ್ರೋತ್ಸಾಹಪಡಿಸುತ್ತಾ ಬಂದಿದ್ದಾರೆ.

ವಿದೇಶ ವರ್ತಮಾನಗಳು

ವಿಲಾಯತಿಯ ಪೋಸ್ಟ್ ಆಫೀಸುಗಳಲ್ಲಿ ನೌಕರಿಯನ್ನು ಅಪೇಕ್ಷಿಸುವವರೂ ನೌಕರರಾಗಿ ಕೆಲಸ ಮಾಡುತ್ತಿರುವವರೂ ಎಲ್ಲಾ ಒಂದಾವರ್ತಿಯಾದರೂ ಟೀಕೆ ಶಿಡುಬನ್ನು ಹಾಕಿಸಿಕೊಂಡೇ ತೀರಬೇಕೆಂದು ವಿಧಾಯಕಮಾಡಿರುತ್ತಾರೆ.

ಈ ನಡುವೆ ಇಂಗ್ಲಿಷ್ ಸ್ಕೂಲುಗಳಲ್ಲಿ ಸಕಲ ವಿದ್ಯಾರ್ಥಿಗಳಿಗೂ ಅಂಗಸಾಧನೆಯನ್ನೂ ಸೈನ್ಯಕ್ಕೆ ಅವಶ್ಯವಾದ ಕಸರತ್ತುಗಳನ್ನೂ ಕಲಿಸುಕೊಡುವುದಕ್ಕಾಗಿ ಲಾರ್ಡ್ ಸ್ಟ್ರಾತ್ಕೋನಾಯವರು ಏಳೂವರೆ ಲಕ್ಷ ರೂಪಾಯಿ ಕೊಟ್ಟಿದ್ದಾರೆ.

ಲಂಡನ್ ಪಟ್ಟಣದ ಕಿಂಗ್ಸ್ ಕಾಲೇಜ್ ಎಂಬ ವಿದ್ಯಾಶಾಲೆಯಲ್ಲಿ ೩೪ ವರುಷಗಳ ತನಕ ಗಣಿತಶಾಸ್ತ್ರ ಬೋಧಕರಾಗಿದ್ದು ಕಾಲವಾದ ರೆವ್ ಮೆ| ವಾಲ್ಟರ್ ಹೋಸ್‌ಯವರು ಅಲ್ಲಿರುವ ಗೈಸ್ ಆಸ್ಪತ್ರೆಯ ಫಂಡಿಗೆ ೩ ಲಕ್ಷ ೯೦ ಸಾವಿರ ರೂಪಾಯಿಯನ್ನು ತಮ್ಮ ಆಸ್ತಿಯಿಂದ ಉಚಿತವಾಗಿ ಕೊಡಬೇಕೆಂದು ಮರಣಶಾಸನವನ್ನು ಬರೆದಿರುತ್ತಾರೆ.

ಪರ್ಷಿಯಾ ರಾಜ್ಯದಲ್ಲಿ ರಾಜಕೀಯವಾದ ಗಲಭೆಯುಂಟಾಗಿರುವುದನ್ನು ನೋಡಿ ರಷ್ಯಾ ಗವರ್ನ್‌ಮೆಂಟಿನವರು ಆ ರಾಜ್ಯಕ್ಕೆ ಸೇರಿದ ಟೆಬ್ರಿಸ್ ಪಟ್ಟಣದಲ್ಲಿ ರಷ್ಯಾ ರಾಯಭಾರಿಗಳ ಮತ್ತು ಅವರ ವರ್ತಕರ ಕ್ಷೇಮವನ್ನು ಕಾಪಾಡುವುದಕ್ಕಾಗಿ ೭೫೫ ಮಂದಿ ಕಾಸಾಕ್ ಸೈನಿಕರನ್ನೂ ಎರಡು ಫಿರಂಗಿಗಳನ್ನೂ ಕಳುಹಿಸಿಕೊಟ್ಟಿದ್ದಾರೆ.

ಸೆಲಿಬೀಸ್ ದ್ವೀಪಗಳ ಬಳಿ ಇರುವ ಸಾಂಗೀರ್ ದ್ವೀಪಗಳ ಸಮೀಪದಲ್ಲಿ ಸ್ಟೀಮರ ಒಂದು ಹಡಗು ಹೋಗುತ್ತಿದ್ದಾಗ್ಗೆ ಸಮುದ್ರ ಕಳ್ಳರು ಅದರೊಳಕ್ಕೆ ನುಗ್ಗಿ ಲೂಟಿಮಾಡಿದ್ದಲ್ಲದೆ ಜನರ ಪೈಕಿ ೧೯ ಮಂದಿಯನ್ನು ಕೊಂದು ಹಾಕಿದರು. ಜೋಹೋರ್ ದ್ವೀಪದ ಸಮೀಪದಲ್ಲೂ ಸಮುದ್ರ ಕಳ್ಳರು ಒಂದು ದೊಡ್ಡ ದೋಣಿಯನ್ನು ಲೂಟಿಮಾಡಿ, ಎಳು ಜನರನ್ನು ಕೊಂದಿರುತ್ತಾರೆ.

ಜಪಾನ್‌ನವರಿಗೂ ಇಂಗ್ಲಿಷರಿಗೂ ನಡೆದಿರುವ ಸ್ನೇಹಭಾವದ ಕರಾರನ್ನು ಜಪಾನ್‌ನವರು ರದ್ದುಮಾಡಿ ಬಿಡುತ್ತಾರೆಂತಲೂ, ಇಂಗ್ಲಿಷರು ರಷ್ಯಾ ಅಮೇರಿಕ ರಾಜ್ಯಗಳವರ ಕೂಡ ಒಂದಾಗಿರುವರೇ ಇದಕ್ಕೆ ಕಾರಣವೆಂತಲೂ ಕಳೆದ ವಾರ ಜರ್ಮನಿ ಮತ್ತು ಆಸ್ಟ್ರಿಯಾ ರಾಜ್ಯಗಳ ರಾಜಧಾನಿಗಳಲ್ಲಿ ವರ್ತಮಾನ ಹುಟ್ಟಿ, ಇಂಗ್ಲಿಷ್ ಪ್ರಜೆಗಳಲ್ಲಿ ಚಿಂತೆಯುಂಟಾಗಿತ್ತು. ಇದನ್ನು ಕೇಳಿ ಅಲ್ಲಿರುವ ಜಪಾನ್ ರಾಯಭಾರಿಯಾದ ಮೆ| ಕೇಟೋರವರು— ಈ ವರ್ತಮಾನವು ಖಂಡಿತವಾಗಿ ನಿಜವಲ್ಲವೆಂದು ಪ್ರಕಟಮಾಡಿರುತ್ತಾರೆ.

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಮಿ ಸ್ಯಾಟನ್ ಎಂಬೊಬ್ಬ ವರ್ತಕನು ಗೋದಿಯನ್ನೆಲ್ಲಾ ತಾನೇ ಕೊಂಡುಕೊಂಡು, ಬೆಲೆಯನ್ನು ಹೆಚ್ಚಿಸಿ ಮಾರುವುದಕ್ಕಾರಂಭಿಸಿ ೪|| ಕೋಟಿ ರೂಪಾಯಿ ಸಂಪಾದಿಸಿದನು. ಆ ಧಾನ್ಯದಲ್ಲಿ ವ್ಯಾಪಾರಮಾಡುತ್ತಿದ್ದ ನ್ಯೂಯಾರ್ಕ್ ಪಟ್ಟಣದ ವರ್ತಕ ಕಂಪನಿಯು ಅದರ ದೆಸೆಯಿಂದ ದಿವಾಳಿ ಆಯಿತು. ಈ ಕಂಪನಿಗೆ ೬೫ ಲಕ್ಷ ರೂಪಾಯಿ ನಷ್ಟವಾಗಿರುತ್ತದೆಂದು ತಿಳಿದು ಬಂದಿದೆ. ಆದ್ದರಿಂದ ಲಂಡನ್ ಪಟ್ಟಣದಲ್ಲಿ ಗೋದಿ ಹಿಟ್ಟಿನ ಕ್ರಯವು ದಿನೇ ದಿನೇ ಹೆಚ್ಚುತ್ತಾ ಇದೆ. ನಾನ್‌ರೊಟ್ಟಿ ಮಾಡುವವರು ಒಂದು ಪೌಂಡು ತೂಕದ ನಾನ್‌ರೊಟ್ಟಿಯ ಕ್ರಯವನ್ನು ೬|| ಆಣೆಗೆ ಹೆಚ್ಚಿಸಿರುವರು. ಇಂಗ್ಲಿಷ್ ಪ್ರಜೆಗಳಿಗೆ ನಾನ್‌ರೊಟ್ಟಿಯೇ ಮುಖ್ಯಾಹಾರ ಪದಾರ್ಥವಾದದ್ದರಿಂದ ಅವರಿಗೆ ಕಷ್ಟವುಂಟಾಗಿದೆ. ರೊಟ್ಟಿಯ ಕ್ರಯವು ಕಳೆದ ಇಪ್ಪತ್ತು ವರುಷಗಳಿಂದ ಇಷ್ಟು ಹೆಚ್ಚಿರಲಿಲ್ಲ.

ಇಟಲಿ ರಾಜ್ಯದ ದೊರೆಯವರೂ ರಾಣಿಯವರೂ ಭೂಕಂಪ ಪ್ರಾಪ್ತವಾದ ಮೆಸ್ಸೀನಾ ಪ್ರಾಂತ್ಯದಲ್ಲಿ ಸಂಚಾರಮಾಡಿಕೊಂಡು ಬಂದರು. ತಮ್ಮ ಸಂಗಡ ಯಾವ ಅಧಿಕಾರಿಯೂ ಬಾರದಂತೆ ತಡೆಮಾಡಿದ್ದರು. ಭೂಕಂಪದಿಂದ ಅನಾಹುತ ಸಂಭವಿಸಿದ ಕಡೆಗಳಲ್ಲಿ ನಡೆದಿರುವ ರಿಲೀಫ್ ಕೆಲಸಗಳನ್ನೂ, ದೀಪ ರಸ್ತೆ ಆರೋಗ್ಯವಿಚಾರ ನೀರು ಇವೆಲ್ಲಾ ಅಕ್ರಮಸ್ಥಿತಿಯಲ್ಲಿರುವುದನ್ನೂ, ಜನರ ವಾಸಕ್ಕೆ ಮಾಡಿರುವ ಏರ್ಪಾಡನ್ನೂ ಆಹಾರವಿಚಾರವನ್ನೂ ಕಣ್ಣಾರ ನೋಡಿ ರಾಜದಂಪತಿಗಳಿಬ್ಬರೂ ಅತೃಪ್ತಿಪಟ್ಟುಕೊಂಡು ದಯಮಾಡಿದರೆಂದು ತಿಳಿದುಬಂದಿದೆ.

ಉತ್ತರ ಅಮೇರಿಕಕ್ಕೂ ದಕ್ಷಿಣ ಅಮೇರಿಕಕ್ಕೂ ನಡುವೆ ಪನಾಮಾ ಎಂಬ ಸಣ್ಣ ಭೂಕಂಠವಿರುತ್ತದೆ. ಅಮೇರಿಕದ ಗವರ್ನ್‌ಮೆಂಟಿನವರು ಈ ಭೂಕಂಠವನ್ನು ಒಡೆದು ಹಾಕಿ, ಅಟ್ಲಾಂಟಿಕ್ ಸಾಗರದಿಂದ ಪೆಸಿಫಿಕ್ ಸಾಗರಕ್ಕೆ ಹಡಗುಗಳು ಹೋಗಬಹುದುವಂತೆ ಭಾರಿಯಾದ ಜಲಮಾರ್ಗವನ್ನು ಮಾಡಿಸುತ್ತಿದ್ದಾರೆ. ಈ ಜಲಮಾರ್ಗವು ಐವತ್ತು ಮೈಲಿ ಉದ್ದವುಳ್ಳದಾಗಿಯೂ, ೪೫ ಅಡಿ ಆಳವುಳ್ಳದ್ದಾಗಿಯೂ ಆಗುವುದು. ಅನೇಕ ಸಾವಿರ ಜನರೂ ನೂರಾರು ಮಂದಿ ಇಂಜನೀಯರುಗಳೂ ನವೀನ ಯಂತ್ರಗಳನ್ನಿಟ್ಟುಕೊಂಡು ಈ ಕಾಮಗಾರಿಯನ್ನು ಮಾಡುತ್ತಿದ್ದಾರೆ. ಈ ಜಲಮಾರ್ಗವು ೧೯೧೫ ನೇ ಇಸವಿ ಜನವರಿ ೧ ನೇ ತಾರೀಖಿಗೆ ಸಿದ್ಧವಾಗಿ, ಆ ದಿನ ಹಡಗುಗಳ ಸಂಚಾರವು ಪ್ರಾರಂಭಿಸಲ್ಪಡುತ್ತೆಂತಲೂ, ಇದಕ್ಕೆಲ್ಲಾ ಒಟ್ಟು ೧೦೮ ಕೋಟಿ ರೂಪಾಯಿ ಖರ್ಚಾಗುವದೆಂತಲೂ ಅದನ್ನು ಹೋಗಿ ನೋಡಿಕೊಂಡು ಬಂದಿರುವ ಡಾ|| ಪಾರ್ಕರ್ ಆರ್ನಾಲ್ಡ್‌ಯವರು ತಿಳಿಸುತ್ತಾರೆ.

ಕೊಬ್ಬರಿಯಿಂದ ಮನುಷ್ಯನ ಆಹಾರಕ್ಕೆ ಯೋಗ್ಯವಾದಂಥಾ ಸತ್ವಯುಕ್ತವಾದ ತುಪ್ಪವನ್ನು ಜರ್ಮನಿಯ ಕೆಲವು ಶಾಸ್ತ್ರಜ್ಞರು ತಯಾರಿಸಲಾರಂಭಿಸಿದ್ದಾರೆ. ಈ ತುಪ್ಪವು ಸ್ವಚ್ಛವಾಗಿಯೂ ಘನವಾಗಿಯೂ ಆಗುತ್ತದೆ. ಇದನ್ನು ಅಡಿಗೆಗೆ ಉಪಯೋಗಿಸುವರು. ಮೊದಲು ಇದರ ಬೆಲೆಯು ಬಹಳ ಜಾಸ್ತಿಯಾಗಿತ್ತು. ಈಚೆಗೆ ಜರ್ಮನಿಯಲ್ಲಿ ಈ ತುಪ್ಪವು ಹಲವು ಕಾರ್ಖಾನೆಗಳಲ್ಲಿ ತಯಾರಾಗುತ್ತದೆ. ಮ್ಯಾನ್‌ಹೀಂ ನಗರದಲ್ಲಿರುವ ಕಾರ್ಖಾನೆಯೇ ಬಹಳ ಪ್ರಸಿದ್ಧವಾದದ್ದು. ಬೆಣ್ಣೆಗೆ ಪ್ರತಿಯಾಗಿ ಈ ತುಪ್ಪವನ್ನು ಅನೇಕರು ಕೊಂಡು ಉಪಯೋಗಿಸುವುದೂ ಉಂಟು. ಇತರ ತುಪ್ಪಗಳಿಗಿಂತಲೂ ಬೆಣ್ಣೆಗಿಂತಲೂ ಈ ಕೊಬ್ಬರಿಯ ತುಪ್ಪವು ಅಗ್ಗವಾಗಿಯೂ ಇದೆ. ವರುಷ ಒಂದಕ್ಕೆ ಎರಡು ಅಥವಾ ಎರಡೂವರೆ ಕೋಟಿ ಪೌಂಡ್ ತೂಕದಷ್ಟು ಕೊಬ್ಬರಿ ತುಪ್ಪವು ವಿಕ್ರಯವಾಗುತ್ತಿರುವುದು. ಇದಲ್ಲದೆ ಆ ತುಪ್ಪಕ್ಕಾಗಿ ಕಾರ್ಖಾನೆಗಳವರು ಬಹಳ ಹಣವನ್ನು ಅಡ್ವಾನ್ಸು ಕಟ್ಟಿರುತ್ತಾರಾದದ್ದರಿಂದ ಅದರ ವ್ಯಾಪಾರವು ಬಹಳವಾಗಿ ಹೆಚ್ಚುತ್ತಲಿದೆ. ಈ ತುಪ್ಪವು ಈಚೆಗೆ ಹಿಂದುಸ್ಥಾನದಲ್ಲೂ ತಯಾರಾಗುವುದು. ಇದು ಬೆಂಗಳೂರಿನಲ್ಲಿ ವಿಕ್ರಯ ಆಗುತ್ತದೆ.

ವಿಲಾಯತಿಯಲ್ಲಿ ವರ್ತಮಾನ ಪತ್ರಿಕೆಗಳನ್ನು ನಡಿಸುವವರೆಲ್ಲಾ ಸೇರಿ ಇಂಗ್ಲಿಷ್ ರಾಜ್ಯದ ಸಮಸ್ತ ಸ್ಥಾನಗಳಿಂದಲೂ ಮುಖ್ಯ ಮುಖ್ಯವಾದ ವರ್ತಮಾನ ಪತ್ರಿಕೆಗಳನ್ನು ನಡಿಸುವಂಥಾ ಎಡಿಟರುಗಳನ್ನು ಅವರ ಖರ್ಚನ್ನೆಲ್ಲಾ ಕೊಟ್ಟು ವಿಲಾಯತಿಗೆ ಕರೆಸಿಕೊಂಡು, ಅವರಿಗೆಲ್ಲಾ ಇಂಗ್ಲಿಷ್ ರಾಜ್ಯದ ಮಹತ್ವವನ್ನೂ, ಅದರ ಸ್ಥಿತಿಗತಿಯನ್ನೂ ಸಾಕ್ಷಾತ್ತಾಗಿ ತೋರಿಸಬೇಕೆಂದೂ ಎಡಿಟರುಗಳೆಲ್ಲಾ ಸೇರಿ ರಾಜ್ಯದ ಹಿತಕ್ಕೆ ಸಹಕಾರಿಗಳಾದ ವಿಷಯಗಳನ್ನು ಕುರಿತು ಸಂಭಾಷಣೆ, ಉಪನ್ಯಾಸಾದಿಗಳನ್ನು ನಡಿಸಬೇಕೆ ಎಂತಲೂ ಗೊತ್ತುಮಾಡಿರುತ್ತಾರೆ. ಈ ಸಭೆಗಳು ಮುಂದಿನ ಜೂನ್ ತಿಂಗಳಲ್ಲಿ ನಡಿಯುವವು. ಇದಕ್ಕಾಗಿ ಕ್ಯಾನಡಾದಿಂದ ೬ ಮಂದಿ, ಹಿಂದುಸ್ಥಾನದಿಂದ ೮ ಮಂದಿ, ವೆಸ್ಟ್ ಇಂಡೀಸ್‌ನಿಂದ ಒಬ್ಬ, ಆಸ್ಟ್ರೇಲಿಯಾದಿಂದ ೧೫, ನ್ಯೂಜೀಲಾಂಡ್ ೬, ದಕ್ಷಿಣ ಆಫ್ರಿಕಾದಿಂದ ೧೦ ಮಂದಿ, ಅಂತೂ ೫೬ ಮಂದಿ ಎಡಿಟರುಗಳು ವಿಲಾಯತಿಗೆ ಹೋಗುವವರಾಗಿದ್ದಾರೆ. ಇವರ ಹೋಗಿಬರುವ ಪ್ರಯಾಣದ ಖರ್ಚನ್ನೂ, ವಿಲಾಯತಿಯಲ್ಲಿ ಇವರ ಭೋಜನಾದಿಗಳ ಖರ್ಚನ್ನೂ ವಿಲಾಯತಿಯ ಪತ್ರಿಕಾಕರ್ತರುಗಳ ಸಂಘದವರೇ ವಹಿಸಿಕೊಳ್ಳುವರು. ಇವರು ವಿಲಾಯತಿಯಲ್ಲಿ ನಡಿಸುವ ಸಭೆಗಳಿಗೆ ಲಾರ್ಡ್ ಮಾರ್ಲೀ, ಮೆ| ಬಾಲ್ಫರ್, ಲಾರ್ಡ್ ಕ್ರೂ, ಈ ಮೊದಲಾದ ಮಹನೀಯರು ದಯಮಾಡುವರು. ಇದಲ್ಲದೆ ಇವರಿಗೆಲ್ಲಾ ಒಂದುದಿನ ಚಕ್ರವರ್ತಿ ಸಾರ್ವಭೌಮರವರು ಭೇಟಿಕೊಟ್ಟು, ತಮ್ಮ ಭವನದಲ್ಲಿ ಸತ್ಕಾರವನ್ನೂ ಮಾಡಿ ಕಳುಹಿಸುವರು. ಹಿಂದುಸ್ಥಾನದಿಂದ ಹೋಗುವಂಥಾ ಎಡಿಟರುಗಳು ಯಾರೆಂದರೆ —ಕಲ್ಕತ್ತಾ ಪಟ್ಟಣದ ಇಂಡಿಯನ್ ಡೆಯಿಲಿ ನ್ಯೂಸ್ ಪತ್ರಿಕೆಯ ಎಡಿಟರ್ ಮೆ| ಲಾಡಿಂಗ್ಯವರು, ಕಲ್ಕತ್ತೆಯ ಬಂಗಾಳಿ ಪತ್ರಿಕೆಯ ಎಡಿಟರ್ ಬಾಬು ಸುರೇಂದ್ರನಾಥ ಬ್ಯಾನರ್ಜಿಯವರು, ಬೊಂಬಾಯಿನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಎಡಿಟರ್ ಮೆ| ಎಚ್ ಎಸ್ ರೀಡ್‌ಯವರು, ಸಿಲೋನ್ ದ್ವೀಪದ ಟೈಮ್ಸ್ ಆಫ್ ಸಿಲೋನ್ ಪತ್ರಿಕೆಯ ಎಡಿಟರ್ ಮೆ| ಎಫ್ ರೋಜ್‌ಯವರು, ಮದರಾಸಿನ ಮದರಾಸ್ ಮೆಯಿಲ್ ಪತ್ರಿಕೆಯ ಎಡಿಟರ್ ಮೆ| ಎ ಇ ಲಾಸನ್‌ಯವರು, ಬರ್ಮಾ ಅಧಿಪತ್ಯದ ರಂಗೂನ್ ಟೈಮ್ಸ್ ಪತ್ರಿಕೆಯ ಎಡಿಟರ್ ಮೆ| ಪಿ ಸ್ಟುವರ್ಟ್ ಯವರು, ಸಿಂಗಪೂರ್ ಪ್ರೆಸ್ ಪತ್ರಿಕೆಯ ಎಡಿಟರ್ ಮೆ| ಡಬ್ಲ್ಯು ಜಿ ಸ್ಟೀರ್‌ಯವರು.

ತಾಲ್ಲೋಕು ವರ್ತಮಾನಗಳು

ದೊಡ್ಡಬಳ್ಳಾಪುರ —ತಾ ೯ ರಲ್ಲಿ ಒಂದು ಹದ ಮಳೆಯಾಯಿತು. ನೀರಿನ ತುಂಬಾ ಕಷ್ಟವಾಗಿದೆ. ಕುಡಿಯುವ ನೀರಿಗೆ ಮಹತ್ತು ಕಷ್ಟ. ಧಾನ್ಯಗಳು ಹೆಚ್ಚುವೆ. ರಾಗಿ ೧೧|-೧೨ ಸೇರು, ಅಕ್ಕಿ ೭ ೬ ಸೇರು ಮಾರುತ್ತಾರೆ. ಸ್ಥಳದ ಪಕ್ಕಿ ದೊರೆಯುವದು ಕಷ್ಟ. —ರೆವಿನ್ಯೂ ಕಮಿಷನರ್ ಮೆ ರಂಗನಾಥ ಮುದ್ರಂಗಾಚಾರ್ಯರೂ ಅ ಕಮಿಷನರ್ ಮೆ ಚಾಂಡಿಯವರೂ ಇಲ್ಲಿಗೆ ದಯಮಾಡಿ, ಎಲ್ಲವನ್ನೂ ನೋಡಿದರು. ಕಂದಾಯದ ರಿಮಿಷನ್ ವಿಷಯ ಯೋಚನೆ ಮಾಡುತ್ತೇವೆಂದು ಹೇಳಿದರೆಂದು ವರ್ತಮಾನವಿದೆ. ತೋಟ ಹೊಲಗಳಿಗೆ ದನಕರುಗಳನ್ನು ಬಿಟ್ಟು ನಷ್ಟಮಾಡುವ ವಿಷಯ ಇಲ್ಲನವರು ಕೇಳಿಕೊಂಡರು. ಅಮಲ್ದಾರ್ರವರು ಇದನ್ನು ವಿಚಾರಿಸಿ ಫೈಸಲ್ ಮಾಡುವಂತೆ ಹುಕುಂ ಕೊಟ್ಟಿರುತ್ತಾರೆಂದು ತಿಳಿಯಿತು.

ನೆಲಮಂಗಲ —ಈ ತಿಂಗಳ ೧೧ ನೇ ತಾ ಭಾನುವಾರ ರಾತ್ರಿ ಇಲ್ಲಿ ೩ ಅಂಗುಲ ಮಳೆ ಆಗಿ ಈ ಊರಿನ ಕೆರೆಗೆ ಸುಮಾರು ಮೂರು ತಿಂಗಳ ನೀರು ಬಂದಿದೆ. ದನಕರುಗಳಿಗೆ ಈ ಊರಲ್ಲಿಯೂ ಸುತ್ತುಮುತ್ತಲಿನ ಹಳ್ಳಿಗಳಲ್ಲಿಯೂ ಕುಡಿಯುವ ನೀರಿಗೆ ತುಂಬಾ ಅನಾನುಕೂಲವಾಗಿತ್ತು. —ಈ ತಿಂಗಳ ೪ ನೇ ತಾ ರಾತ್ರಿ ಸುಮಾರು ೭ ಘಂಟೆ ಸಮಯದಲ್ಲಿ ಇಲ್ಲಿನ ಪೋಸ್ಟ್ ಆಫೀಸಿನ ಬಾಗಲು ಬೀಗ ಹಾಕಿಕೊಂಡು ಪೋಸ್ಟ್ ಮಾಸ್ಟರು ಊಟಕ್ಕೆ ಹೋಗಿದ್ದ ಕಾಲದಲ್ಲಿ ಯಾರೋ ಆಫೀಸಿನ ಬಾಗಿಲನ್ನು ಕತ್ತರಿಸಿ ಆಫೀಸಿನಲ್ಲಿದ್ದ ೩೨೦ ಚಿಲ್ಲರೆ ರೂಪಾಯಿಗಳನ್ನು ಕಳುವು ಮಾಡಿಕೊಂಡು ಹೋಗಿರುತ್ತಾರೆ. ಪೋಸ್ಟ್ ಇನ್ಸ್‌ಪೆಕ್ಟರವರು ಮರುದಿನವೇ ಬಂದು ಚನ್ನಾಗಿ ವಿಚಾರಣೆಮಾಡಿ ಇದುವರೆಗೂ ಪತ್ತೆ ತರದೆ ನಡಿಸುತ್ತಾ ಇಲ್ಲಿಯೇ ಇರುತ್ತಾರೆ. ಪೋಸ್ಟ್ ಸೂಪರಿಂಟೆಂಡೆಂಟರವರೂ ಸಹಾ ಬಂದು ವಿಚಾರಣೆಮಾಡಿ ಇಲ್ಲಿನ ಪೋಸ್ಟ್ ರನ್ನರುಗಳಾದ ಸಂಜೀವ್ವೆಯ, ಬಸವ, ಇವರಿಬ್ಬರನ್ನು ಗುಮಾನೀ ಮೇಲೆ ಬೈದಿನಲ್ಲಿ ಇಡುತ್ತಾರೆ. ಅನೇಕ ಕಡೆ ಪೋಸ್ಟ್ ಮಾಸ್ಟರುಗಳು ಸ್ನೇಹಿತರನ್ನು ಆಫೀಸಿನ ಒಳಗೆ ಸೇರಿಸಿಕೊಳ್ಳುತ್ತಾರೆ. ಅಂಥವರು ಈ ವಿಷಯವನ್ನು ಸ್ವಲ್ಪ ಗಮನಕ್ಕೆ ತಂದುಕೊಳ್ಳುವದು ಒಳ್ಳೇದು.

ಮಂಡ್ಯ —ಇಲ್ಲಿ ಕಳೆದ ವಾರ ೩ ದಿನಗಳು ಸ್ವಲ್ಪ ಮಳೆ ಬಂದಾಗ್ಯೂ ಬಿಸಲಿನ ತಾಪವು ಜಾಸ್ತಿಯಾಗಿದೆ. ದನಕರುಗಳಿಗೆ ಸ್ವಲ್ಪ ನೀರಿನ ಆಶ್ರಯ ಉಂಟಾಯಿತು. —ಈಗ್ಗೆ ಮೂರು ತಿಂಗಳ ಹಿಂದೆ ಇಲ್ಲಿನ ರೈಲ್ವೆ ಅ|| ಸ್ಟೇಷನ್ ಮಾಸ್ಟರಾದ ಮೆ| ಶ್ರೀನಿವಾಸಯ್ಯಂಗಾರ್ಯವರ ಆಕಳು ಮತ್ತು ಕರು ಎರಡೂ ಕಳುವಾಯಿತು. ರೈಲ್ವೆ ಪೋಲೀಸ್ ಅಧಿಕಾರಿಗಳು ಅವುಗಳನ್ನು ಪತ್ತೆಮಾಡಿ ಕೊಳ್ಳೇಗಾಲದಲ್ಲಿ ಇಲ್ಲಿನ ಅರೆಕ್ಷೇತ್ರ ಮತ್ತು ನಂಜಾ ಎಂಬವರು ಒಬ್ಬ ಒಕ್ಕಲಿಗನಿಗೆ ಮಾರಿದ್ದನ್ನು ತೀಡಿ ಅಸ್ಥಳದಿಂದ ಇಲ್ಲಿಗೆ ಕಳೆದ ತಿಂಗಳಲ್ಲಿ ತಂದರು. ಮಾರಿದ ಆಸಾಮಿಗಳು ಈಗ ಸಿಕ್ಕಿದ್ದರಿಂದ ಕಳೆದ ಗುರುವಾರ ನಮ್ಮ ಅಮಲ್ದಾರರಲ್ಲಿ ವಿಚಾರಣೆ ನಡೆದು ಮಾಲೀಕರನ್ನು ಕರೆಸಿ ಅವರ ಎದುರಿಗೆ ಅಪರಾಧಿಗಳು ಕಳುವು ಮಾಡಿದ್ದೆವೆಂದು ಒಪ್ಪಿಕೊಂಡದರಿಂದ ಅವರಿಗೆ ಆರು ತಿಂಗಳ ಕಠಿಣ ಸಜಾ ಮತ್ತು ಐವತ್ತು ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿದೆ. —ನೆನ್ನೆ ಶನಿವಾರ ಮಧ್ಯಾಹ್ನ ಮೈಸೂರಿಂದ ಮೆಯಿಲ್ ಗಾಡಿಯು ಇಲ್ಲಿಗೆ ಬಂದಾಗ ನೂಲಿನ ಅಂಗಡಿ ಮುಚ್ಚಣ್ಣನವರು ಗಾಡಿಯಿಂದ ಇಳಿದಾಗ ಅವರ ಜೇಬಿನಲ್ಲಿ ೫ ರೂಪಾಯಿ ಕೆಳಗೆ ಬಿತ್ತು. ಇದು ಮತ್ತೊಬ್ಬ ಪ್ರಯಾಣಿಕನು ಗಾಡಿಯಿಂದ ಇಳಿದು ನೀರು ಕುಡಿಯುವದಕ್ಕೆ ಹೋದಾಗ ಅವನಿಗೆ ಸಿಕ್ಕಿ, ಅವನು ಅದನ್ನು ತೆಗೆದುಕೊಂಡನು. ಕಡೆಗೆ ಅವನನ್ನು ರೈಲ್ವೆ ಪೋಲೀಸಿನವರ ವಶಕ್ಕೆ ಒಪ್ಪಿಸಿದರು. ಇದಕ್ಕಾಗಿ ಗಾಡಿಯು ಬಹಳ ಹೊತ್ತಿನವರಿಗೂ ನಿಂತುಹೋಯಿತು. ಇಷ್ಟೆಲ್ಲಾ ಆದಾಗ್ಯೂ ಪೋಲೀಸ್ ಅಧಿಕಾರಿಯು ಅವನಿಗೆ ಶಿಕ್ಷೆಮಾಡಿಸದೆ ಮಾಲೀಕನಿಗೆ ಅವನಿಂದ ರೂಪಾಯಿ ಕೊಡಿಸಿ ಅವನನ್ನು ಬಿಟ್ಟುಬಿಟ್ಟರು. ಇನ್ನಾದರೂ ರೈಲ್ವೆ ಅಧಿಕಾರಿಗಳು ಇಂಥಾ ಸಂಗತಿಗಳನ್ನು ಸರಿಯಾಗಿ ವಿಚಾರಿಸಿ ನ್ಯಾಯವಾಗಿ ಅಪರಾಧಿಯನ್ನು ಶಿಕ್ಷಿಸಬೇಕಾಗಿದೆ.

ಮೈಸೂರು —ಬಿಸಲಿನ ಧಗೆಯು ಜಾಸ್ತಿಯಾಗಿದೆ. ಮಳೆಯು ಈ ಊರು ಸುತ್ತುಮುತ್ತ ಸಾಮಾನ್ಯವಾಗಿ ಬಿದ್ದಿರುತ್ತೆ. ಇಲ್ಲಿಗೆ ಸಮೀಪವಾಗಿರುವ ಮರಹಳ್ಳಿ ಸಂತೆಯಲ್ಲಿ ಧಾರಣೆವಾಸಿಗಳು ಚಡಾವಾಗಿರುವವು. ರೈತರು ಜೋಳ ಎಳ್ಳು ವಿತ್ತನೆ ಜಮೀನುಗಳನ್ನು ಉತ್ತು ಸಿದ್ಧಪಡಿಸಿಕೊಂಡು, ಮಳೆಯನ್ನು ಎದುರು ನೋಡುತ್ತಲಿರುತ್ತಾರೆ. ರೋಗಾದಿಗಳ ಬಾಧೆಯೇನೂ ಇಲ್ಲ. —ಕಳೆದ ಮೂರು ತಿಂಗಳಿಂದ ಇಲ್ಲಿ ಗ್ರಾಮವಾಸಿಗಳು ರಾಜಾಗಿ ಬಡರೈತರು ತೊಂದರೆಪಡುತ್ತಲಿದ್ದದ್ದನ್ನು ಈ ತಾಲ್ಲೂಕಿನ ಅಮಲ್ದಾರ್ ಮೆ| ಮಹಮದ್ ಪೀರ್ ಸಾಹೇಬರು ನೋಡಿ ಇಲ್ಲಿನ ಸಾಹುಕಾರರನ್ನು ಶ್ರೀಮಂತರಾದ ಜಹಗೀರ್ದಾರರಿಗೆ ಬರೆದು ಅವರಿಂದ ಕೆಲವು ಮೊಬಲಗು ಸ್ಯಾಂಕ್ಷನ್ ಮಾಡಿಸಿಕೊಂಡು, ಈ ಗ್ರಾಮದ ಮುಖಂಡರೆಲ್ಲರು ಸಭೆಸೇರಿ ಚಂದಾ ಮೂಲಕದಿಂದ ಒಂದು ಧಾನ್ಯದ ಮಂಡಿಯನ್ನು ಇಡುವದಕ್ಕೆ ಪ್ರೋತ್ಸಾಹಪಡಿಸಿ ಸಹಾಯಮಾಡಿದ್ದಾರೆ. ಈ ಮಂಡಿಯಲ್ಲಿ ಪ್ರತಿ ದಿನವೂ ಪೇಟೆಧಾರಣೆಗೆ ಸ್ವಲ್ಪ ಅಗ್ಗವಾಗಿ ಮಾರಲು ರಾಗಿ, ಜೋಳ, ಅಕ್ಕಿ ಸಹ ಕೇವಲ ಮೂರು ತಿಂಗಳಿಂದ ಸಹಾಯಮಾಡುತ್ತಿರುವದಲ್ಲದೆ ಅಸಂಖ್ಯರಾದ ಬಡವರಿಗೆ ಧರ್ಮಾರ್ಥವಾಗಿ ಪ್ರತಿ ದಿನವೂ ರಾಗಿ, ಅಕ್ಕಿ ಸಹ ಕೊಡಲು ಏರ್ಪಡಿಸಿ ಪ್ರತಿದಿನವೂ ಮೇಲ್ವಿಚಾರಣೆ ಸಹಾ ತೆಗೆದುಕೊಳ್ಳುತ್ತಿದ್ದಾರೆ. ಕಸಬಾ ಮುನಿಸಿಪಾಲಿಟಿ ವಿಚಾರಣೆಯು ಕ್ರಮವಾಗಿ ಜರುಗುತ್ತಲಿದೆ. ಮರಹಳ್ಳಿ ಸಂತೆಯಿಂದ ಯಳಂದೂರಿಗೆ ಬರತಕ್ಕ ರೋಡು ಸರಿಯಾದ ರಿಪೇರಿ ಇಲ್ಲದೆ ಇದ್ದದ್ದನ್ನು ಈಗ ಗ್ರಾವೆಲ್ ಮತ್ತು ಕಲ್ಲುಗಳನ್ನು ಹಾಕಿಸಿ ಅಮಲ್ದಾರ್ರವರು ಚನ್ನಾಗಿ ಕಾಮಗಾರಿ ಮಾಡಿಸಿರುತ್ತಾರೆ. ಇದರಿಂದ ಸಂತೆಗೆ ಹೋಗತಕ್ಕವರಿಗೆ ತುಂಬಾ ಅನುಕೂಲವಾಗಿರುತ್ತೆ. —ಇಲ್ಲಿಗೆ ಹೊಸಳೆ ವ್ಯಾಸರಾಯಮಠದ ಶ್ರೀ ಸ್ವಾಮಿಗಳವರ ಸವಾರಿಯು ಬಿತ್ತೈಸಿ ಸುಮಾರು ೨೦ ದಿವಸಗಳಾಗಿರುತ್ತೆ. ಶ್ರೀ ಮಠವು ಇನ್ನು ಕೆಲವು ದಿವಸ ಗೋಪಾಲ ಕೃಷ್ಣದೇವರ ಆರಾಧನೆಯನ್ನು ಶ್ರೀಮಂತರವರು ಹೊಸದಾಗಿ ಕಟ್ಟಿಸಿರತಕ್ಕ ಛತ್ರದಲ್ಲಿ ನಡಿಸುವವರಾಗಿರುತ್ತಾರೆ. —ಇಲ್ಲಿನ ಅಮಲ್ದಾರ್ ಮೆ| ಮಹಮ್ಮದ್ ಪೀರ್ ಯವರು ದಯಮಾಡಿ ವರುಷವಾಯಿತು. ಇವರು ಉದಾರಿಗಳು ತಾಳ್ಮೆಯುಳ್ಳವರು, ಜನಗಳ ಶೀಲಸ್ವಭಾವಗಳನ್ನು ಅರಿತು ನಡಿಯತಕ್ಕವರು. ಸರ್ಕಾರಿ ಕೆಲಸದಲ್ಲೂ ರೈತರಲ್ಲೂ ಪೂರ್ಣ ಅಭಿಮಾನವಿಟ್ಟಿದ್ದಾರೆ. ಇವರು ಅನ್ಯಮತಸ್ಥರಾದರೂ ಹಿಂದೂ ದೇವಾಲಯಗಳಲ್ಲೂ ಬ್ರಾಹ್ಮಣಾದಿಗಳಲ್ಲೂ ತುಂಬಾ ವಿಶ್ವಾಸವುಳ್ಳವರಾಗಿದ್ದಾರೆ.

ಪ್ರೆಂಚ್‌ರಾಕ್ಸ್ —ಕಳೆದ ವಾರದಲ್ಲಿ ಇಲ್ಲಿ ಒಂದು ಹದ ಒಳ್ಳೇ ಮಳೆಯಾದದ್ದರಿಂದ ಕೆಲವರು ಜೋಳ, ಎಳ್ಳು ಮುಂತಾದ ಬೀಜಗಳನ್ನು ಸೇರುವುವಾಡಿದರು. ಆದರೆ ಈಚೆಗೆ ಮಳೆಯ ಸೂಚನೆ ಕಾಣದಿರುವದನ್ನು ಯೋಚಿಸಿ ಚಿಂತೆಪಡುತ್ತಾರೆ. ಕೆರೆಯಲ್ಲಿ ನೀರು ಬತ್ತುತ್ತಾ ಬಂದದ್ದರಿಂದ ಡೆಪ್ಯುಟಿ ಕಮಿಷನರ್ ಸಾಹೇಬರು ಕೆರೆಯ ನೀರನ್ನು ಗದ್ದೆ ಫಸಲು ಮುಂತಾದದ್ದಕ್ಕೆ ಬಿಡಕೂಡದೆಂದು ಆರ್ಡರು ಮಾಡಿದ್ದಾರೆಂದು ಕೇಳುತ್ತೇನೆ. ಬಟ್ಟೆ ಮುಂತಾದದ್ದನ್ನು ಒಗೆದು ನೀರು ಕೊಳಕುಮಾಡುವವರನ್ನು ಶಿಕ್ಷೆಗೆ ಗುರಿಮಾಡಿ ಹತ್ತು ರೂಪಾಯಿ ಜುಲ್ಮಾನೆ ವಿಧಿಸಲ್ಪಡುತ್ತದೆಂಬ ಅರ್ಥಕ್ಕೆ ಕೆರೆಯ ಹತ್ತಿರ ಒಂದು ಬೋರ್ಡನ್ನು ಬರೆದು ನಿಲ್ಲಿಸಿದ್ದಾರೆ. —ಕಳೆದ ವಾರದಲ್ಲಿ ಆದ ಮಳೆಯ ದೆಸೆಯಿಂದ ೧೧ ನೇ ತಾ ಭಾನುವಾರ ಪ್ರಾತಃಕಾಲದ ರೈಲ್ ಗಾಡಿಗೆ ಒಳ್ಳೇ ನೀರು ಸಿಕ್ಕದ್ದರಿಂದ ಗಾಡಿಯು ಫ್ರೆಂಚ್‌ರಾಕ್ಸಿಗೆ ಸುಮಾರು ಎರಡು ಮೈಲು ದೂರದಲ್ಲಿ ನಿಂತಿತು.

ಯಿತು ಅನಂತರ ರೈಲಿನ ಗಾರ್ಡುಗಳು ಮುಂತಾದವರು ಸಾಹಯಿಂದ ಕೆಲವು ಗಡಿಗೆಗಳ ನೀರನ್ನು ಎತ್ತಿ ಹೊಯಿದು ಗಾಡಿಯನ್ನು ಮುಂದಕ್ಕೆ ಬಿಟ್ಟರೆಂದೂ ಆ ಹಿಂದಿನ ರಾತ್ರಿ ಶ್ರೀರಂಗಪಟ್ಟಣಕ್ಕೂ ಫ್ರೆಂಚ್‌ರಾಕ್ಸಿಗೂ ಮಧ್ಯೆ ರೈಲ್ ಬರುವಾಗ್ಗೆ ಮಳೆಯ ಬಿಸಿಯಿಂದ ಹಳಿಯು ಕದಲಿಹೋದದ್ದರಿಂದ ೫-೬ ನಿಮಿಷಗಳಲ್ಲಿ ಬರತಕ್ಕ ಗಾಡಿಯು ಸುಮಾರು ೪೫ ನಿಮಿಷಗಳನ್ನು ತಗೆದುಕೊಂಡಿತೆಂದೂ ಕೇಳುತ್ತೇನೆ — ಈ ಸಾರಿ ಮೇಳ್ಕೋಟೆಯ ಜಾತ್ರೆಗೆ ಹಿಂದಿನ ವರ್ಷದಷ್ಟು ಹೆಚ್ಚಿನ ಸಂಖ್ಯೆಯುಳ್ಳ ಜನರು ಬಂದಿದ್ದಾಗ್ಯೂ ಗಲಾಟೆಯೇನೂ ಇದ್ದಿಲ್ಲ ಇತ್ತ ಪೊಲೀಸ್ ಸೂಪರೇಂಟೆಂಡರಾದ ಮೆ| ಒಬ್ಬಾರ್ಟ್ ಸಾಹೇಬರು ಅಲ್ಲಿದ್ದುಕೊಂಡು ಪೊಲೀಸ್ ಬಂದೋಬಸ್ತನ್ನು ತಕ್ಕ ರೀತಿಯಲ್ಲಿ ಕ್ರಮಪಡಿಸಿದ್ದರಿಂದ ಕಳವು ಮುಂತಾದವುಗಳು ನಡೆಯುವುದಕ್ಕೆ ಅವಕಾಶವಿಲ್ಲದೇ ಹೋಯಿತು ಆದರೆ ಒಬ್ಬ ಹುಡುಗರ ಸುಮಾರು ೨೫ ವಯಸ್ಸುಳ್ಳ ಯುವಕನು ಮಾತ್ರ ಕಾಲುಜಾರಿ ಕಲ್ಯಾಣಿಯಲ್ಲಿ ಮುಳುಗಿ ಸತ್ತುಹೋದನೆಂತಲೂ, ಅವನನ್ನು ತಕ್ಷಣ ಎತ್ತಿ ದಹನ ಮಾಡಿದರೆಂತಲೂ ತಿಳಿದುಬಂದಿದೆ ಜನರು ಹಿಂತಿರಿಗಿ ಬರುವಾಗ್ಗೆ ರೈಲ್ ಸ್ಟೇಷನ್ ಬಳಿಯಲ್ಲಿ ತುಂಬಾ ಗಲಾಟೆಯಾದದ್ದರಿಂದ ಅಲ್ಲಿ ಒಂದೆರಡು ಕಳುವು ನಡೆಯಿತೆಂದು ಕೇಳುತ್ತೇನೆ ಜನರು ತಂಡೋಪತಂಡವಾಗಿ ರೈಲಿಗೆ ಬಂದಾಗೂ ರೈಲ್‌ವೆ ಸ್ಟೇಷನ್ ಆಫೀಸರುಗಳು ಬಂದ ಜನರನ್ನೆಲ್ಲಾ ಕೈಲಾದ ಮಟ್ಟಿಗೆ ಸುದಾರಿಸಿ, ಅವರವರು ಹೋಗಬೇಕಾದ ಸ್ಥಳಗಳಿಗೆ ಸರಿಯಾಗಿ ಕಳುಹಿಸಿಕೊಟ್ಟರೆಂದೂ ಕೇಳುತ್ತೇನೆ

ಅರಸೀಕೆರೆ — ಇಲ್ಲಿನ ಹವಾ ಬಹು ಧಗೆಯಾಗಿದೆ ಒಂದೆರಡು ದಿವಸ ಸ್ವಲ್ಪ ಮಳೆ ಆಯಿತು ಆದರೆ ಕೆರೆ ಕಟ್ಟೆಗಳಿಗೆ ನೀರು ಬರಲಿಲ್ಲ ದನಗಳಿಗೆ ಹಸರು ಬೆಳೆಯಲಿಲ್ಲ ಧಾರಾಳವಾಗಿ ಯಥಾಸ್ಥಿತಿಯಲ್ಲಿದೆ ಸರ್ಕಾರದವರು ರೈತರಿಗೆ ಅವಶ್ಯವಿದ್ದಷ್ಟು ಸಾಲವನ್ನು ಅಡ್ವಾನ್ಸು ಕೊಡುತ್ತಿದ್ದಾರೆ ಮಳೆ ಬಂದ ಮೇಲೆ ಬೀಜ ಬಿತ್ತುವದಕ್ಕೂ ಉಳುವದಕ್ಕೆ ದನಗಳನ್ನು ಕೊಳ್ಳಲಿಕ್ಕೂ ಅವುಗಳ ಮೇವಿಗೂ ಸ್ವಂತ ಹೊಟ್ಟೆಗೆ ರಾಗಿ ಕೊಳ್ಳಲಿಕ್ಕೂ ಈ ಸಾಲದ ಹಣವನ್ನು ಉಪಯೋಗವಾಡಬೇಕಾಗಿದೆ — ನಿ ದಿನ ಕ್ರಾಮಕ್ಕಾಗಿ ಅಲ್ಲಲ್ಲಿ ಹೊಸದಾಗಿ ಬಾವಿ ತೆಗಿಸಿ ತೀರಾ ಬಡವರಿಗೆ ಧರ್ಮ ಸಹಾಯ (ರಿಲೀಫ್) ಕಾಮಗಾರಿ ನಡೆಸುತ್ತಿದ್ದಾರೆ ಅಮಲ್ದಾರ್ ಮೆ ನಾರಾಯಣಸ್ವಾಮಿ ಮೊದಲಿಯಾರವರು ತುಂಬಾ ಮುತುವರ್ಜಿಯಿಂದ ಕೆಲಸವನ್ನು ನಡೆಸುತ್ತಿದ್ದಾರೆ ಇವರು ಪ್ರತಿದಿನವೂ ಹಗಲಿನಲ್ಲಿ ೧೧-೧೨ ಘಂಟೆಗಳ ಹೊತ್ತು ಗಿಯೂ ರಾತ್ರಿ [illegible] ಟವರಿಗೂ ಕಷ್ಟಪಟ್ಟು ಕೆಲಸ ಮಾಡುವರು ಇವರ ಕಾಲದಲ್ಲಿ ರೈತರಿಗೆ ಅನುಕೂಲನೇ ಸರಿ ಫಾರೆಸ್ಟ್ ರೇಂಜಿನ ಭಾರವನ್ನು ವಹಿಸುವ ಒಬ್ಬ ಫಾರೆಸ್ಟರವರು ತಮ್ಮ ಅಧಿಕಾರವನ್ನು ಸರಿಯಾಗಿ ಉಪಯೋಗಿಸಲಿಲ್ಲವೆಂತಲೂ ಇವರ ಕೈಕೆಳಗಿನ ಫಾರೆಸ್ಟ್ ಗಾರ್ಡುಗಳಿಗೂ ಇವರಿಗೂ ವಿರೋಧವುಂಟಾಗಿ ಇದ್ದ ಇವರು ಈ ರೇಂಜ್ ಆಫೀಸಿನಿಂದ ಹಾಸನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿಗೆ ಕಳುಹಿಸಲ್ಪಟ್ಟಿರುತ್ತಾರೆಂತಲೂ ಕೇಳುತ್ತೇನೆ — ಈ ಊರಿಗೆ ಕೆಲವು ಹೊಸಬರೂ ಪ್ಲೇಗಿನ ರೋಗಿಗಳೂ ಬಂದು ಬರುತ್ತಾರೆ ಅವರ ಮೇಲಣ ಬಂದೋಬಸ್ತನ್ನು ಪೊಲೀಸಿನವರು ನೋಡಿಕೊಳ್ಳಬೇಕು ಈ ಊರಿನಲ್ಲಿ ಎಲ್ಲಾ ಸ್ಥಳದ ಸತ್ರದ ಮೇಲ್ವಿಚಾರಣೆಯನ್ನು ಮ್ಯುನಿಸಿಪಲ್ ಬೋರ್ಡಿನವರು ನೋಡಿಕೊಳ್ಳುತ್ತಿದ್ದಾರೆ ದೇವಸ್ಥಾನ ಸತ್ರ ಮಸೀದಿಗಳಿಗೂ ಅವುಗಳ ಪೂಜಾರಿ [illegible] ಮುದ್ರಾದಿಸುವ ಮರೆ [illegible] ದೇವತಾ ಮನೆಗಳಿಗೂ ಕೆಂದಾಯ ಸಂಬಂಧವಾದುವ [illegible] ಅಗತ್ಯ ಸರಿ ಸಾಹುಕಾರ್ ಮೆ ಕೆಂಚಪ್ಪಶೆಟ್ಟಿ ರು [illegible] ಮೊದಲಾದ [illegible] ದ್ಯಾಗಿ ಇರುವ ಕಟ್ಟಡಗಳಿಗೆ ಮುನಿಸಿಪಲ್ ಕೌನ್ಸಿಲ್ [illegible] ಸರ್ಕಾರದವರು ಆಲೋಚಿಸುತ್ತಿದ್ದಾರೆ ಯಾಕೆಂದರೆ ಇವರು ಈ ಊರಿನ ಕಟ್ಟಡಗಳನ್ನು ಸರಿಯಾಗಿ ಮಾಡಬೇಕೆಂದು ಹೇಳುತ್ತಿರುವವರಿಂದ ಅದರ ವರ್ತನೆ ಮತ್ತು ಶಿವರಾತ್ರಿಯ ಬಗ್ಗೆ ಮುಲ್ಕಿನ ತೆಂಡಾಯದ ಹರಾಜು ನೋಕ್ಕವಾಗಿ ತೋರುತ್ತಿದೆ — ಮ್ಯುನಿಸಿಪಲ್ ನೋಟಿಫಿಕೇಷನ್ ಕಂದಾಯಗಳು ಸ್ವಲ್ಪವಾಗಿ ವಸೂಲಾಗುತ್ತಿದೆ ಈ ಬೀದಿ ಗುಡಿಸುವವರು ಕೆಲವು ದಿನ ತೆರೆಯದಿರುವರು ಚನ್ನಾಗಿ ಶುಚಿಯಾದರೆ ಒಳ್ಳೆಯದು ಕೊಳೆ ನೀರು ಮುನ್ಸಿಪಲಿಯಿಂದ ಕೂಡಿ ಅನಾರೋಗ್ಯವಾಗಿದೆ ನಮ್ಮ ನಾಗರಿಕರೂ ಅಮಲ್ದಾರರೂ ಮುನಿಸಿಪಲ್ ಮೆಂಬರುಗಳೂ ಮುನಿಸಿಪಲ್ ಭಾವಿ ಬಳಿ ಇದ್ದ ಕೊಳೆತ ಚರಂಡಿಯ ನಾಲೆಯನ್ನು ಕಡಮೆಮಾಡಿದ್ದಾರೆ ಆದರೆ ಬಾವಿಗಳ ಹೂಳು ತೆಗೆಸಿದರೆ ಜನರಿಗೆ ಅನುಕೂಲವಾಗುವದು ಭಾವಿಯಲ್ಲಿ ಮುಚ್ಚಿರುವ ಹೂಳನ್ನು ಮಯಾಬಿಟ್ಟು ತೆಗಿಸುವರೆಂದು ನಿರೀಕ್ಷೆಯುಂಟು ಮನುಷ್ಯರಿಗೆ ನೀರೇ ಸಾಕಾಗದಿರುವಾಗ ದನಗಳ ಪಾಡನ್ನು ತಿಳಿಸಲವಶ್ಯವಿಲ್ಲ — ಲಂಚ ತಿನ್ನುವವರುಗಳ ಆವಾಂತರ್ಯವೂ ಕದಿಯುವ ತೂಕದ ಬೊಟ್ಟುಗಳ ಕೊರೆಗಳೂ ಸ್ವಲ್ಪ ಕಮ್ಮಿ ಆಗುತ್ತಿದೆ ಗ್ರಾಮದ ಸ್ಥಿತಿ ಆರೋಗ್ಯವಾಗಿದೆ ಆದರೆ ಸಂತೆಯಲ್ಲಿ ಪಸಿಕೆ ಎತ್ತುವವರ ಆವಾಂತರ್ಯ ಅತಿ ಜಾಸ್ತಿಯಾಗಿದೆ ಪೊಲೀಸಿನವರು ದಯಮಾಡಿ ಈ ವಿಷಯವನ್ನು ಸ್ವಲ್ಪ ನೋಡಬೇಕಾಗಿದೆ ಎ ವಿ ಸ್ಕೂಲ್ ಪುಟ್‌ಬಾಲ್ ಕ್ಲಬ್ ಅಭಿವೃದ್ಧಿಗೆ ಬಂತು ಮತ್ತು ಲೋಕಲ್ ಫಂಡ್ ಸರಿಕಟ್ಟೆ [illegible] ಕಾಂತ ಮುಂದೆ ನೋಡಬೇಕು

ಚನ್ನರಾಯಪಟ್ಟಣ — ಈ ಊರಿನಲ್ಲಿ ಈಚೆಗೆ ಒಂದು ವಾರದಿಂದಲೂ ಮೋಡಕಟ್ಟುವುದು, ಸ್ವಲ್ಪ ಮಳೆ ಹನಿಹಾಕುವುದು, ಹಾಗೇ ನಿಂತುಹೋಗುವುದು, ಈ ರೀತಿ ಆಗುತಿದ್ದ ಇದೇಯೋ ಹೊರತು ಮಳೆ ಜೋರೆ ಸರಿಯಾಗಿ ಸುರಿಯಲಿಲ್ಲ ಜನಗಳಿಗೂ ನಾನಾ ರೋಗಗಳೂ ಕುಡಿಯುವ ನೀರಿನ ತೊಂದರೆಯನ್ನು ಹೇಳತೀರದು — ಈ ಊರು ಕೋಟೆ ಒಳಗಿರುವ ಭಾರೀ ಕಲ್ಯಾಣಿಯಲ್ಲಿ ಹುಳು ಹುತ್ತು ಕೆಟ್ಟುಹೋಗಿದ್ದ ನೀರನ್ನೇ ಕೆಲವು ಜನರು ಬಳಸುತ್ತಾ ಇದ್ದರು ಇಂಥಾ ಭಾರೀ ಕಲ್ಯಾಣಿಗೆ ತೊಂಬಭಾಗ ಕಲ್ಲು ಕಟ್ಟ ಇರುತ್ತಾರೆ ಇನ್ನೂ [illegible] ಆಳ ದ್ದ ದವರಿಗೂ ಮೆಟ್ಟಿಲುಗಳೇ ಇಲ್ಲ ನೀರಿನ ತೊಂದರೆಯನ್ನು ಕಂಡು ಆ ಕಟ್ಟನ್ನು ರನ್ನೇ ತರುವ ಉದ್ದೇಶ ಇಲ್ಲಿನ ಶ್ರೀ| ರಾಮಸ್ವಾಮಯ್ಯನವರ ಗೆಂಡತಿ ಗುಂಡಮ್ಮನೆಂಬುವರು ಕಲ್ಯಾಣಿಗೆ ಹೋಗಿ ಕಾಲುಜಾರಿ ಬಿದ್ದು ಒಂದೆರಡು ಸಾರಿ ಮುಳುಗಿ ಏಳುತ್ತಿರುವಾಗ್ಗೆ ಇದೇ ಕಸಬಾ ಪೊಲೀಸ್ ಕಾನ್‌ಸ್ಟೇಬಲ್ ಗೋವಿಂದರಾಯರು ನಿರಿಗೋಸ್ಕರ ಆ ಕಾಲದಲ್ಲಿ ಅದೇ ಕೊಳಕ್ಕೆ ಬಂದು ಅವರನ್ನು ಕಂಡು ಆ ಕ್ಷಣವೇ ಈಜುಬಿದ್ದು ಬಹಳ ಸಾಹಸಪಟ್ಟು ನೀರಿಗೆ ಬಿದ್ದವರನ್ನು ಮೇಲಕ್ಕೆ ಎಳೆದುಹಾಕಿ ಸುದಾರಿಸಿದ್ದರ ಮೇಲೆ ಅವರು ಈಗ ಬದುಕಿ ಸುಖವಾಗಿರುತ್ತಾರೆ ಸದರಿ ಗೋವಿಂದರಾಯರು ಎಷ್ಟೋ ಆವರ್ತಿ ಪರೋಪಕಾರ ಕೆಲಸವನ್ನು ಅಕ್ಟಿಂಗ್ ತರೀಖು ನಡೆಸಿರುತ್ತಾರೆ ಸರ್ಕಾರಿ ಕೆಲಸವನ್ನು ಬಹಳ ಶ್ರದ್ಧೆಯಿಂದ ನಡೆಸಿ ಮೇಲ್ಪಟ್ಟ ಆಫೀಸರಿಗೆ ಬಹಳ ಸಂತೋಷಪಡಿಸುತ್ತಾರೆ ಸರ್ಕಾರದವರು ಇವರಿಗೆ ಪ್ರಮೋಷನ್ ಕೊಡಬೇಕಾಗಿ ಪ್ರಾರ್ಥಿಸುತ್ತೇವೆ — ಈ ಊರಿನ ಖಾಯಂ ದಾಕ್ಟರಾದ ಮೆ| ಮಹಮದ್ ಮೂಸಾ ಎಂಬುವರು ರಜಾ ಪಡೆದು ಹೋಗಿದ್ದು ವಾಪಸು ಬಂದು ಇರುತ್ತಾರೆ ಈ ಊರಿನಲ್ಲಿರುವ ಹಿಂದೂ ಮುಸಲ್ಮಾನರು ಆದಿಯಾಗಿ ಸರ್ವರೂ ಇವರ ಜಾಣತನಕ್ಕೂ ಇವರ ಕೆಲಸದಲ್ಲಿನ ಉದಾಸೀನವಿಲ್ಲದೆಯೂ ಹೋಗಿ ತಮ್ಮ ತಮ್ಮ ರೋಗವನ್ನು ಅವರಿಗೆ ತಿಳಿಸಿದರೆ ಅವರು ಚೆನ್ನಾಗಿ ನೋಡಿ ಸರಿಯಾದ ಚಿಕಿತ್ಸೆ ಮಾಡುವುದರಲ್ಲಿ ಏನೂ ಸಂದೇಹವಿಲ್ಲ ನಮ್ಮಲ್ಲಿ ಕೆಲವು ಜನರು ತಮ್ಮ ಕಾಯಿಲೆಗಳನ್ನು ಚೆನ್ನಾಗಿ ಪರೀಕ್ಷೆ ಮಾಡದವರಿಗೆ ಹೇಳಿ ಅವರುಗಳಿಂದ ಔಷಧಿಯನ್ನು ಪಡೆದು ಗುಣಹೊಂದದೇ ರೋಗವನ್ನು ಬಲಪಡಿಸಿಕೊಂಡೂ ಇವರ ಬಳಿಗೆ ಬರುವ ಸಂದರ್ಭವೂ ಉಂಟು ಹಾಗೆ ಮಾಡದೆ ಕಾಯಿಲೆ ಬಂದ ಕೂಡಲೆ ನಮ್ಮ ಡಾಕ್ಟರ ಬಳಿಗೆ ಹೋಗಿ ತಿಳಿಸಿದರೆ ತಕ್ಕ ಔಷಧಿಯನ್ನು ಕೊಟ್ಟು ಗುಣಮಾಡುವುದರಲ್ಲಿ ಏನೂ ಸಂಶಯವಿಲ್ಲ ಇವರು ಕಾಯಿಲೆಯವರ ವಿಷಯದಲ್ಲಿ ತುಂಬಾ ಕನಿಕರವುಳ್ಳವರಾಗಿಯೂ ಅಂಥ ಕಾಯಿಲೆಯವರನ್ನು ಚಿಕಿತ್ಸೆ ಮಾಡುವುದರಲ್ಲಿ ಆಸಕ್ತಿಯುಳ್ಳವರಾಗಿಯೂ ಇರುತ್ತಾರೆ — ಈ ಊರಿಗೆ ೩-೪ ಮೈಲಿಯಲ್ಲಿರುವ ಬರಗೂರಿನಲ್ಲಿರುವ ದನಗಳಿಗೆ ರೋಗ ಪ್ರಾಪ್ತವಾಗಿ ಭಾರೀ ಬೆಲೆ ಬಾಳುವ ೧೦೦-೧೫೦ ದನಗಳು ಸತ್ತುಹೋದವು ಇದರಿಂದ ರೈತರಿಗೆ ತುಂಬಾ ಕಷ್ಟ ನಷ್ಟಗಳು ಸಂಭವಿಸಿವೆ ಇಂಥಾ ಕ್ಷಾಮಕಾಲದಲ್ಲಿ ಈ ಬಡ ರೈತರ ಮೇಲೆ ಕೃಪೆಯಿಟ್ಟು ನಮ್ಮ ಅಮಲ್ದಾರರು ಮೇಲ್ಪಟ್ಟ ಆಫೀಸರವರಿಗೆ ಬರೆದು ಯಾವದಾದರೂ ಒಂದು ತರವಾದ ರಿಯಾಯಿತಿಯನ್ನು ತೋರಿಸಿ, ಈ ಬಡ ಜನರ ಜೀವನವನ್ನು ಕಾಪಾಡಿಕೊಡಬೇಕಾಗಿ ಬೇಡುತ್ತೇವೆ — ಈ ಊರಿಗೆ ಸೇರಿದ ಗದ್ದೆ ಬಿಂಡೇನಹಳ್ಳಿ ಗ್ರಾಮದ ನೀರಗಂಟಿ ಕಾಳನ ಮಗ ೧೫ ವರ್ಷ ವಯಸ್ಸುಳ್ಳ ಕಾಳನೆಂಬುವನು ಈ ಮಾಸ ಗುರುವಾರ ಪ್ರಾತಃಕಾಲ ೯ ಘಂಟೆ ಸಮಯದಲ್ಲಿ ಗದ್ದೆಯಲ್ಲಿ ಹಾಕಿದ್ದ ಬನಸೇ ಗಿಡಕ್ಕೆ ನೀರು ಹಾಕುವುದಕ್ಕೆ ಹೋದವನು ವಾಪಸು ಮನೆಗೆ ಬಾರಲೇ ಇಲ್ಲ ತಂದೆತಾಯಿಗಳು ಬಹಳ ಘಾಬರಿಪಟ್ಟುಕೊಂಡು ಆ ದಿನದ ಲಾಗಾಯ್ತು ರಾತ್ರಿ ಹಗಲೂ ಎಷ್ಟು ಹುಡುಕಿದ್ದಾಗ್ಯೂ ಆ ಅಸಾಮಿಯು ಪತ್ತೆಯೇ ಇಲ್ಲ ವಿಚಾರವಾಡುವಲ್ಲಿ ಕಬ್ಬಿನ ಒಳಗೆ ಒಂದು ಚಿರುಬ ಬಂದು ಸೇರಿಕೊಂಡು ನಮ್ಮ ಊರಿನ ಒಂದೆರಡು ರಾಸುಗಳನ್ನು ಕೊಂದು ತಿಂದು ಇರುತ್ತದೆಯಾಗಿ ಸುಮಾರವ ಊರಿನವರಾದ ಮಾಚೇನಹಳ್ಳಿ ಗ್ರಾಮಸ್ಥರಿಂದ ತಿಳಿದು ಬಂದಿದೆ ಸರ್ಕಾರದವರು ಇವರ ವಿಷಯದಲ್ಲಿ ತುಂಬಾ ನಿಗಾ ಇಟ್ಟು ಆ ದುಷ್ಟ ಮೃಗವನ್ನು ನಾಶಮಾಡುವುದಕ್ಕೆ ಕೂಡಲೆ ಪ್ರಯತ್ನ ಮಾಡದಿದ್ದರೆ ತುಂಬಾ ಅನಾಹುತಕ್ಕೆ ಕಾರಣವಾಗುವುದು ಹುಡುಗನನ್ನು ಕಳೆದುಕೊಂಡ ತಂದೆ ತಾಯಿಗಳ ದುಃಖವನ್ನು ಹೇಳತೀರದಾಗಿದೆ

ಚಿತ್ರದುರ್ಗ — ಈ ಡಿಸ್ಟ್ರಿಕ್ಟಿನ ದಾವಣಗೆರೆ, ಹೊಳಲ್ಕೆರೆ, ಭರಮಸಾಗರ ಮುಂತಾದ ಪ್ರಾಂತ್ಯಗಳಲ್ಲಿ ತಕ್ಕ ಮಟ್ಟಿಗೆ ಮಳೆಯಾಗಿದ್ದರೂ ಟೌನ್ ನಲ್ಲಿಯೂ ಇದರ ಆಜೂಬಾಜೂಗಳಲ್ಲಿಯೂ ಈ ವರೆಗೂ ಸ್ವಲ್ಪವೂ ಮಳೆಯಾಗಿಲ್ಲ ನೀರಿನ ದುರ್ಭಿಕ್ಷವು ಬಹಳ ಸಂತಾಪಕರವಾಗಿದೆ ಒಡ್ಡಿನಲ್ಲಿ ಸುಮಾರು ಒಬ್ಬ ಮನುಷ್ಯ ಪಾದದ ನೀರು ಇರಬಹುದು ಇದು ಬಹಳ ಹಿಂದಾಗಿ ಮುಚ್ಚಿ ಕಾಚಿ ನಿಷ್ಪ್ರಯೋಜಕವಾಗಿಯೂ ಇದೆ ಇದನ್ನೇ ಎತ್ತಿ ಟವನಿಗೆ ಎಡುತ್ತಲಿವಾರೆ ನಲಿಗಳ ಬಳಿ ಕೂಗಾಟ ಹೊಡೆದಾಟಗಳನ್ನು ನೋಡಿದರೆ ಮನಸ್ಸಿಗೆ ಬಹಳ ವ್ಯಸನವಾಗುತ್ತದೆ ಒಂದೊಂದು ಕೇರಿಗಳಿಗೆ ನಾಲ್ಕು ಘಂಟೆ ಕಾಲ ನೀರು ಬಿಡಬೇಕೆಂದು ಗೊತ್ತುಮಾಡಿರುವಲ್ಲಿ ಅಕ್ಕಪಕ್ಕದವರಿಗೆ ನೀರು ಆರು ಘಂಟೆಯಿಂದ ಹತ್ತರವರೆಗೆ ಬಿಡುವದೆಂದು ಕ್ಲುಪ್ತಮಾಡಿದರೂ ಇದು ಸರಿ ಕ್ರಮವಾಗಿ ಬಿಡುವದಿಲ್ಲವೆಂದು ಬಹಳ ಪ್ರಸಿದ್ಧವಾಗಿದೆ ಕೆಲವು ದಿವಸಗಳ ವರಿಗೆ ಆರರಿಂದ ಒಂಭತ್ತು ಗಂಟೆವರೆಗಾದರೂ ನೀರಿರುತ್ತಿತ್ತು [illegible] ಅರ್ಧಗಂಟೆ ನೀರು ಬರುತ್ತದೆ ಮೊನ್ನೆ ಸೋಮವಾರ ಸಾಯಂಕಾಲ ಆರುಗಂಟೆಗೆ ನೀರು ಬಿಡುವರೆಂದು ಜನಗಳು ಕೊಡಗಳನ್ನು ಹಿಡಿದುಕೊಂಡು ಏಳು ಗಂಟೆಗೆ ನಲ್ಲಿ ಹತ್ತಿರ ಗುಂಪು ಸೇರುವುದಕ್ಕೆ ಆರಂಭವಾದರು ರಾತ್ರಿ ಹತ್ತು ಗಂಟೆವರೆಗೂ ಕಾದಿದ್ದರೂ ಸಹ [illegible] ಬಂದರೂ ಬರಲಿಲ್ಲ ಆಗ ನೀರು ಕುಡಿಯೋದಾದರೆ ಇಲ್ಲವಲ್ಲಾ ಅಡಿಗೆ ಮಾಡುವದಕ್ಕೆ [illegible] ಎಂದು ಆ ಗುಂಪಿನಲ್ಲಿದ್ದವರು ಬಹಳ ಸಂತಾಪಪಟ್ಟರು ಮುನಿಸಿಪಾಲಿಟಿಗೆ ಅಪಮಾನಕರವಾಗಿಯೂ ಇದೆ ಆ ದಿನ ಹಿಟ್ಟರು ಎಲ್ಲಿ ಹೋಗಿದ್ದರೋ ರಾತ್ರಿ ಹತ್ತು ಗಂಟೆವರೆಗೂ ನೀರು ಬಿಡಲಿಲ್ಲವೋ, ಇವನೊಬ್ಬನ ಅಜಾಗ್ರತೆಯಿಂದ ಊರೆಲ್ಲಾ ಕಷ್ಟ ಇಂಥಾ ಕಷ್ಟಕ್ಕೆ ಗುರಿಯಾಗಬೇಕೋ ವಿಚಾರಿಸುವವರು ಯಾರು [illegible] ಹೇಳಿಕೊಳ್ಳೋಕೂ ಯಾರೂ ಇಲ್ಲ — ಇಲ್ಲಿನ ಎ ವಿ ಸ್ಕೂಲಿನಲ್ಲಿ ರಾಮಸ್ವಾಮಾಚಾರ್ ಎಂಬ ಟೀಚರು ಸುಮಾರು ೧೬ ವರ್ಷದ ಒಬ್ಬ ಅಕ್ಕಸಾಲಿ ವಿದ್ಯಾರ್ಥಿಯನ್ನು ಎರಡು ಮೂರು ಕಡೆ ಬಾಸುಂಡೆ ಬಂದು ಬತ್ತುಕೊಳ್ಳುವ ಹಾಗೆ ಹೊಡೆಯಲು, ಅವನನ್ನು ಆಸ್ಪತ್ರೆಗೆ ಸಾಗಿಸಿ ಕೆಲವು ದಿನಗಳ ವರಿಗೂ ಇಲಾಜು ಮಾಡಿಸಬೇಕಾಯಿತು ತಂದೆ ತಾಯಿಗಳು ಇಷರ ದೊಡ್ಡ ಮನುಷ್ಯರು ಈ ವೃತ್ತಾಂತವನ್ನು ನೋಡಿ ಬಹಳವಾಗಿ ನರಳಿದರು ಈ ಶಾಲೆಯಲ್ಲಿಯೂ ಇಂಥಾ ನಡೆಯುಂಟೇ ಹೆಡ್ ಮಾಸ್ಟರೂ ಮೇಲ್ಪಟ್ಟ ಅಧಿಕಾರಿಗಳೂ ಇದಕ್ಕೆ ನಿಗಾ ಕೊಡುವರೆಂದು ನಿರೀಕ್ಷಿಸುತ್ತೇವೆ — ಶ್ರೀಮುರುಘರಾಜೇಂದ್ರ ಸ್ವಾಮಿಗಳು ಇತರ ಊರುಗಳ ಮೇಲೆ ಸಂಚಾರ ಹೊರಟಿದ್ದು ಮೊನ್ನೆ ತಾ ೯ನೇ ಶುಕ್ರವಾರ ಬೆಳಿಗ್ಗೆ ಪುರಪ್ರವೇಶವನ್ನು ಮಾಡಿದರು ಶ್ರೀ ಸ್ವಾಮಿಗಳ ಆಗಮನಕ್ಕಾಗಿ ವರ್ತಕರುಗಳು ಊರನ್ನೆಲ್ಲಾ ಶೃಂಗರಿಸಿ ಚಪ್ಪರ ತೋರಣಗಳನ್ನು ಕಟ್ಟಿಸಿದ್ದರು ಹಳ್ಳಿಗಳಿಂದ ಸಂತೋಷಪೂರ್ವಕವಾಗಿ ನೋಟಕರು ಬಂದಿದ್ದರು ಸ್ವಾಮಿಗಳನ್ನು ಮೊದಲು ಮೆ| ಸಾಹುಕಾರ ಕೆಂಚಪ್ಪನವರ ಚತ್ರದ ಹತ್ತಿರ ಮುನಿಸಿಪಲ್ ದೊಡ್ಡ ಮನುಷ್ಯರು ಎದುರುಗೊಂಡು ಅಡ್ರೆಸ್ಸನ್ನು ಒಪ್ಪಿಸಿದರು ಅನಂತರ ಸವಾರಿಯು ದೊಡ್ಡ ರಸ್ತೆಯಲ್ಲಿ ಹೊರಟು ಆರ್ಯವೈಶ್ಯ ಸ್ಟೂಡೆಂಟ್ಸ್ ಹೋಮಿನ ಬಳಿ ಹಾಕಿದ್ದ ಚಪ್ಪರಕ್ಕೆ ದಯಮಾಡಿಸಿ ಆ ಹೋಮಿನ ಪ್ರೆಸಿಡೆಂಟರಾದ ಮೆ| ಹನುಮಂತರಾಜಯ್ಯನವರೂ ಹೋಮಿನ ಕೆಲವು ಮೆಂಬರುಗಳೂ ವಿದ್ಯಾರ್ಥಿಗಳ ಸಹಿತವಾಗಿ ಕಾದಿದ್ದು ಒಪ್ಪಿಸಿದ ಅಡ್ರೆಸ್ಸನ್ನು ಸ್ವಾಮಿಗಳವರು ಬಹಳ ಆದರದಿಂದ ಕೇಳಿ ಪ್ರತ್ಯುತ್ತರವಾಗಿ — ಬಹಳ ಸಂತೋಷ ನೀವು ಬಂದು ನಮ್ಮನ್ನು ಮರೆಯಬಾರದು ಆಹಾರವೇ ಕಾಪಾಡಬೇಕು ಎಂದು ಅಪ್ಪಣೆಕೊಟ್ಟು ಮುಂದೆ ಬಿಜಯಮಾಡಿಸಿ ಮೇಲುದುರ್ಗದಲ್ಲಿರುವ ತಮ್ಮ ಮಠದಲ್ಲಿ ಇಳುಕೊಂಡು, ಸೋಮವಾರ ಪ್ರಾತಃಕಾಲದವರಿಗೂ ಅಲ್ಲೇ ಇದ್ದರು ಆಗ ಸಮಸ್ತ ಕೋಮಿನ ಜನಗಳಿಗೂ ಮಠದಲ್ಲಿಯೇ ಅತಿಥ್ಯವು ಜರುಗಿತು ಸೋಮವಾರ ಪ್ರಾತಃಕಾಲ ಜಗದ್ಗುರು ಮುರುಘಸ್ವಾಮಿಗಳ ಸವಾರಿಯು ಮೇಲು ದುರ್ಗದ ಮಠದಿಂದ ಇಳಿದು ಗಂಗಪ್ಪ ಸಾಹುಕಾರರ ಮನೆಗೆ ದಯಮಾಡಿಸಿ ಅವರ ಭಿಕ್ಷೆಯನ್ನು ಸ್ವೀಕರಿಸಿ ಅಲ್ಲಿಯೇ ಸಾಯಂಕಾಲದವರಿಗೂ ಉಪಹರಿಸಿ, ಅದೇ ಸಾಯಂಕಾಲ ನಿಜಮಠವನ್ನು ಸೇರಿದರು ಈ ಸಕಲ ಕಾರ್ಯಗಳೂ ಬಹು ಸಮಾಧಾನದಿಂದಲೂ ತೃಪ್ತಿಕರವಾಗಿಯೂ ನಡೆದವು

ಮೈಸೂರು ಗೆಜೆಟ್ ಸಂಗ್ರಹ

ಮುಂದೆ ಹೇಳುವ ಮ್ಯುನಿಸಿಪಲ್ ಸರಹದ್ದುಗಳಲ್ಲಿ ಬಲಾತ್ಕಾರವಾಗಿ ಪ್ಲೇಗ್ ನಿವಾರಣ ದಾಕ್ಟರು ಇನಾಕ್ಯುಲೇಷನ್ ಮಾಡುವ ವಿಷಯವನ್ನು ಜಂಗಮಬಿಟ್ಟ ೧೯೦೯ ನೇ ಜೂಲೈ ತಾ ೧ ರಿಂದ ಎರಡು ವರುಷಗಳ ತನಕ ಜಾರಿಯಲ್ಲಿ ತರಲ್ಪಡುವುದು —

ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಆನೆಕಲ್ಲು, ಮಾಗಡಿ, ಚನ್ನಪಟ್ಟಣ, ದೊಡ್ಡಬಳ್ಳಾಪುರ ನಲಮಂಗಲ ಮ್ಯುನಿಸಿಪಾಲಿಟಿಗಳು

ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೋರಿಬಿದನೂರು, ಬಾಗೇಪಲ್ಲಿ, ಗುಡಿಬಂಡೆ ಮ್ಯುನಿಸಿಪಾಲಿಟಿಗಳು

ಕಡೂರ್ ಡಿಸ್ಟ್ರಿಕ್ಟಿಗೆ ಸೇರಿದ ಚಿಕ್ಕಮಗಳೂರು, ಕಡೂರು, ಬೀರೂರು, ತರೀಕೆರೆ, ಕೊಪ್ಪ ಮೂಡಿಗೆರೆ ಮ್ಯುನಿಸಿಪಾಲಿಟಿಗಳು

ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಸೇರಿದ ಶಿವಮೊಗ್ಗ, ಕುಂಸಿ, ಚನ್ನಗಿರಿ, ಶಿಕಾರಿಪುರ, ಹೊಳ್ಳೆಹೊನ್ನೂರು, ತೀರ್ಥಹಳ್ಳಿ ಮ್ಯುನಿಸಿಪಾಲಿಟಿಗಳು

ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ಸೇರಿದ ಹೊಸದುರ್ಗ, ಮೊಳಕಾಲ್ಮುರು, ಚಳ್ಳಕೆರೆ ಮ್ಯುನಿಸಿಪಾಲಿಟಿಗಳು

ಮೆ ಅ ಮೆಕಾನಕಿ, ಐ ಸಿ ಎಸ್ ಯವರು ಹೊರಟುಹೋದ ಸಬಬು ಖಾಲಿಯಾದ ಮೈಸೂರು ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಮೆಂಬರ ಸ್ಥಾನಕ್ಕೆ ಮೆ| ಆರ್ ಎಚ್ ಕ್ಯಾಂಬೆಲ್, ಐ ಸಿ ಎಸ್ ಯವರನ್ನು ನೇಮಕ ಮಾಡಿದೆ

ಮೆ|| ಅ ಮೆಕಾನಕಿ, ಐ ಸಿ ಎಸ್ ಯವರು ಬಿಟ್ಟುಹೋದ ಸಬಬು ಖಾಲಿಯಾಗಿರುವ ಮೈಸೂರು ಗವರ್ನಮೆಂಟ್ ಇಂಡಸ್ಟ್ರಿಯಲ್ ಮತ್ತು ಇಂಜನಿಯರಿಂಗ್ ಸ್ಕೂಲುಗಳ ಮೇಲ್ವಿಚಾರಣೆಯ ಕಮಿಟಿ ಮೆಂಬರ ಸ್ಥಾನಕ್ಕೆ ಮೆ ಆರ್ ಎಚ್ ಕ್ಯಾಂಬೆಲ್, ಐ. ಸಿ ಎಸ್ ಯವರನ್ನು ನೇಮಕಮಾಡಿದೆ

ಬಿರಿಯಾಪಟ್ಟಣದ ಟೌನ್‌ನಲ್ಲಿ ಪೊಲೀಸ್ ಸ್ಟೇಷನ್ ಕಟ್ಟುವದಕ್ಕೆ ಸೈಟಿಗೆ ರಸ್ತೆಯನ್ನು ಹಾಕುವುದಕ್ಕೆ ಸಿಲ್ದೇದಾರ್ ನಾಗಪ್ಪಶೆಟ್ಟಿಯ ಮಿಸ್ಸಿ ಜಮೀನ್ ಪೈಕಿ ೨೩ ಗು ಟೆ ಜಮೀನು ಸರ್ಕಾರಕ್ಕೆ ಬೇಕಾಗಿದೆ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಪೊಲೀಸ್ ಅ| ಸೂಪರಿಂಟೆಂಡೆಂಟರಾಗಿ ಕೆಲಸ ನೋಡುತ್ತಿರುವ ಆಕ್ಟಿಂಗ್ ಅ|| ಕಮೀಷನರ್ ಮ್ಯ| ವಿ ರಾಮಸ್ವಾಮಯ್ಯನವರಿಗೆ ಏಪ್ರಿಲ್ ತಾ ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಹತ್ತೊಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಪೊಲೀಸ್ ಭಾರವನ್ನು ವಹಿಸಿರುವ ಅ|| ಕಮಿಷನರ್ ಮ್ಯ| ಮಹಮದ್ ರಜಾಯವರು ಮತ್ತೊಂದು ಹುಕುಂ ಕೊಡಲ್ಪಡುವತನಕ ಪೊಲೀಸ್ ಅ ಸೂಪರಿಂಟೆಂಡೆಂಟರಾಗಿ ಕೆಲಸ ನೋಡತಕ್ಕದ್ದು

ಅ ಕಮಿಷನರ್ ಮ| ಡಿ ಶ್ರೀನಿವಾಸಯ್ಯಂಗಾರು ಮತ್ತೊಂದು ಹುಕುಂ ಕೊಡಲ್ಪಡುವತನಕ ಚಿತ್ರದುರ್ಗದ ಡಿಸ್ಟ್ರಿಕ್ಟ್ ಖಜಾನೆಯ ಭಾರವನ್ನು ವಹಿಸಿರತಕ್ಕದ್ದು

ಗವರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್ ಮ್ಯ| ಸಿ ಎಚ್ ವಿಟ್ಸ್ ಯವರಿಗೆ ಮಾರ್ಚ್ ತಾ [illegible] ರಿಂದ ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅವರು ವಾಪಸು ಬರುವತನಕ ಮ| ಡಿ ಬಿ ರಾಮಚಂದ್ರ ಮೊದಲಿಯಾರ್ರು ಗವರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟರಾಗಿ ಬದಲಿ ನೋಡತಕ್ಕದ್ದು

ಆ ಕೆ ಟೂರ್ ಲರ್ ನು ಟಿ ಸತ್ಯರಾಜ ಒಡೆಯರಿಗೆ ಏಪ್ರಿಲ್ ತಾ ೧ ರಿಂದ ನಲ್ವತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ದೊಡ್ಡಬಳ್ಳಾಪುರದ ತಾಲ್ಲೂಕ್ ಅಮಲ್ದಾರ್ ಮ್ಯ| [illegible] ನಾಯುಡುಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಇಪ್ಪತ್ತೇಳು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ ಆಫೀಸ್ ೧ನೇ ಗ್ರೇಡ್ ಕ್ಲಾರ್ಕ್ ಎಂ ಮಾಧವರಾವು ಮತ್ತೊಂದು ಹುಕುಂ ಕೊಡಲ್ಪಡುವ ತನಕ ದೊಡ್ಡಬಳ್ಳಾಪುರದ ಅಮಲ್ದಾರ್ ಮತ್ತು ೩ನೇ [illegible] ಮ್ಯಾಜಿಸ್ಟ್ರೇಟಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

[illegible]

ಚಿಕ್ಕಬಳ್ಳಾಪುರದ ಮುನ್ಸಿಫ್ [illegible] ಬೆಂಗಳೂರು [illegible] ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು [illegible] ಕ್ರಿಮಿನಲ್ ಮೊಕದ್ದಮೆಗಳನ್ನು [illegible] ಅಪರಾಧಿಗಳನ್ನು [illegible] ವಿಚಾರಣೆ ಗುರಿಮಾಡುವ ಅಧಿಕಾರವನ್ನು ಅವರಿಗೆ ಕೊಟ್ಟಿದೆ

ಕೋಲಾರ ಡಿಸ್ಟ್ರಿಕ್ಟ್ ರೆವಿನ್ಯೂ ಪ್ಲೀಡರ್ ಕೆ [illegible] ಎಂಬುವರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ

ಗೋರಿಬಿದನೂರು ತಾಲ್ಲೂಕ್ ಸಬ್ ರಿಜಿಸ್ಟ್ರಾರ್ ಕೆ ದೊರೆಸ್ವಾಮಿ ಐಯ್ಯಂಗಾರ್ ಗೂ [illegible] ತಾಲ್ಲೂಕ್ ಸಬ್ ರಿಜಿಸ್ಟ್ರಾರ್ ವೆಂಕೋಬರಾಯರಿಗೂ ಸೆಂಗಾರಮಯ್ಯಗೆ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ

ಕೋಲಾರದ ಮುನ್ಸಿಫ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ|| ಜ [illegible] ರವರಿಗೆ ಕ್ರಿಮಿನಲ್ ಮೊಕದ್ದಮೆಗಳನ್ನು ತನಿಖೆ ಮಾಡಿ ಅಪರಾಧಿಗಳನ್ನು ಸೆಷನ್ಸ್ ವಿಚಾರಣೆಗೆ ಗುರಿಮಾಡುವ ಅಧಿಕಾರವನ್ನು ಕೊಟ್ಟಿದೆ

ಮೈಸೂರು ಗವರ್ನಮೆಂಟಿನಲ್ಲಿ ಸ್ಪೆಷಲ್ ಪೊಲಿಟಿಕಲ್ ಆಫೀಸರಾಗಿದ್ದ ಲೆಫ್ಟಿನೆಂಟ್ ಕರ್ನಲ್ ಎಚ್ ಡ ಪ್ರೋಬಿನ್ ಬ್ರಾಕ್ಲೆ, ಬಿ. ಎಂ ಎಸ್ ಯವರು ಮಾರ್ಚಿ ತಾ ೩೧ ರಲ್ಲಿ ಕೆಲಸದಿಂದ ಬಿಡುಗಡೆಯನ್ನು ಹೊಂದಿದರು

ಬಾತ್ಮೀದಾರರಿಗೆ ನೋಟೀಸು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮೀಗಳಿಗೆ ನಾವು ಜಾಗಾಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮೀಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂದವುಗಳಿಗೆ ನಾವು ಜಾಗಾ ಕೊಡಲಾರೆವು

ಚಿಕ್ಕಮಗಳೂರು ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ಅಕೃತ್ಯಗಳು ನಡೆಯುತ್ತಿವೆ ಎಂದು ಒಬ್ಬ ಬಾತ್ಮೀದಾರರು ನಮಗೆ ಬರೆದಿರುತ್ತಾರೆ ಅವರು ಅದೇ ವಿಷಯಗಳನ್ನು ಕುರಿತು ಅಲ್ಲಿನ ಪೊಲೀಸ್ ಇಲಾಖೆಗೂ ಡೆಪ್ಯುಟಿ ಕಮಿಷನರಿಗೂ ಬರೆದುಕೊಂಡಲ್ಲಿ ಅವರು ಸರಿಪಡಿಸಿಯಾರೆಂದು ನಂಬುತ್ತೇವೆ ಈ ಬಾತ್ಮೀಯನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಆಗತ್ಯ ಕಂಡುಬರುವದಿಲ್ಲ

ಮಾಗಡಿ ರಥೋತ್ಸವದ ಕಾಲದಲ್ಲಿ ನಡೆದ ಕೆಲವು ವಿದ್ಯಮಾನಗಳನ್ನು ಕುರಿತು ಆಕ್ಷೇಪಣೆಯುಳ್ಳ ಒಂದು ಬಾತ್ಮೀ ನಮಗೆ ಬಂದಿದೆ ಈ ಬಾತ್ಮೀದಾರರು ಅದನ್ನು ಮುಜರಾಯಿ ಸೂಪರಿಂಟೆಂಡೆಂಟರಿಗೆ ಬರೆದು ಕೊಂಡಲ್ಲಿ ಅವರು ತನಿಖೆಮಾಡಿಯಾರು

ಯಜಮಾನ್ ಕಾಡಿ, ಮಗ್ಗೆಹಳ್ಳಿ — ಈ ಬಾತ್ಮೀಯನ್ನು ಪ್ರಕಟಿಸಲಾರೆವು —ಎಡಿಟರ್

ಕರೆಸ್ಪಾಂಡೆನ್ಸ್.

ಜೈನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವು.

ಅಯ್ಯಾ,

ಬಿಡತೂರಿ ತಾಲ್ಲೋಕು ಸಾಲಿಗ್ರಾಮದಲ್ಲಿರುವ ಉಪಾಧ್ಯ ಶಾಂತಯ್ಯನವರ ಮಕ್ಕಳು ಸಾಹುಕಾರ್ ಮ|| ನಾಗಪ್ಪಯ್ಯನವರು ಮಹಾರಾಜಾ ಕಾಲೇಜಿನಲ್ಲಿ ಬಿ ಎ ತರಗತಿಯಲ್ಲಿ ಓದುವ ಒಬ್ಬ ಜೈನ ವಿದ್ಯಾರ್ಥಿಗೆ ತಿಂಗಳಿಗೆ ಐದು ರೂಪಾಯಿ ವೇತನವನ್ನು ಕೊಡುತ್ತೇನೆಂದೂ, ಹಾಗೆ ಬಿ ಎ ತರಗತಿಯಲ್ಲಿ ಜೈನ ವಿದ್ಯಾರ್ಥಿಗಳು ಇಲ್ಲದ ಪಕ್ಷದಲ್ಲಿ ಎಫ್ ಎ. ತರಗತಿಯಲ್ಲಿರುವ ಇಬ್ಬರು ಜೈನ ವಿದ್ಯಾರ್ಥಿಗಳಿಗೆ ಅದೇ ವೇತನವನ್ನು ಹಂಚಿ ಕೊಡತಕ್ಕೆಂದೂ ಮೈಸೂರು ಸರ್ಕಾರಕ್ಕೆ ಬರೆದುಕೊಂಡಿದಾರೆ. ಈ ಮಹನೀಯರು ಉತ್ತಮ ಮನಸ್ಸು ಮಾಡಿ ಕೇವಲ ಹಿಂದಾಗಿರುವ ಜೈನ ವಿದ್ಯಾರ್ಥಿಗಳಿಗೆ ಕೊಟ್ಟಿರುವ ಪ್ರೋತ್ಸಾಹಕ್ಕಾಗಿ ನಾವೆಲ್ಲರೂ ಬಹಳ ಸಂತೋಷ ಪಡುತ್ತೇವೆ. ಈ ರೀತಿಯಲ್ಲಿ ಇವರು ಈ ವೇತನವನ್ನು ಶಾಶ್ವತವಾಗಿ ನಡಿಸಿ ಜೈನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಮಾಡುವುದರ ಮೂಲಕ ಕೀರ್ತಿ ಭಾಜನರಾಗಬೇಕೆಂದು ಕೋರುತ್ತೇನೆ. ಇವರು ತಮ್ಮ ಸ್ಥಳದಲ್ಲಿ ಇದುವರೆಗೆ ಹಲವು ಧರ್ಮಕಾರ್ಯಗಳನ್ನು ಮಾಡಿ ಪುಣ್ಯ ಕೀರ್ತಿಗಳನ್ನು ಹೊಂದಿರುವರು

ಮಹಾಭಿಮಾನಿ.

ನೀರಿನ ಕ್ಷಾಮವು.

ಅಯ್ಯಾ,

ಚಿಕ್ಕಮಗಳೂರು ತಾಲ್ಲೋಕು ಕಸಬಾ ಹೋಬಳಿ ದಾಸರಹಳ್ಳಿ ಗ್ರಾಮಸ್ಥರಾದ ನಾವುಗಳು ಈ ಊರಿನಲ್ಲಿ ಸಂಭವಿಸಿರುವ ಸಾನದ ನೀರಿನ ಕ್ಷಾಮವನ್ನು ಜುಸಿಕೊಳ್ಳಲಾರದೆ ಡಿಸ್ಟ್ರಿಕ್ಟಿಗೂ ಮತ್ತು ತಾಲ್ಲೋಕಿಗೂ ಸಹ ಸದರಿ ವಿಷಯವನ್ನು ಕುರಿತು ೨—೩ ಅರ್ಜಿಗಳನ್ನು ಬರೆದುಕೊಂಡಾಗ್ಯೂ ನೀರಿನ ಕ್ಷಾಮವು ತಪ್ಪಲಿಲ್ಲ. ಮಳೆ ಸರಿಯಾಗಿ ನಡೆಸಿದರೂ ಈ ಗ್ರಾಮದಲ್ಲಿ ಮಳೆಗಾಲದಲ್ಲಿ ಮೂರು ನಾಲ್ಕು ತಿಂಗಳು ಮಾತ್ರ ಸಮಿಪದಲ್ಲಿ ನೀರು ಸಿಕ್ಕುತ್ತೆ. ಬಾಕಿ ಕಾಲದಲ್ಲಿ ಮುಕ್ಕಾಲು ಮೈಲಿ ಫಾಸಲೆಯಲ್ಲಿ ಸುಮಾರಾಗಿ ಹರಿಯುತ್ತಿದ್ದ ಒಂದು ಸಣ್ಣ ಹಳ್ಳದಿಂದ ನೀರು ತಂದುಕೊಳ್ಳುತ್ತಾ ಇದ್ದೆವು. ಈ ಸಾಲಿನಲ್ಲಿ ಮಳೆ ಬಾರದಿದ್ದುದರಿಂದ ಈ ನೀರು ಸಹ ಮುಂದಕ್ಕೆ ಹರಿಯದೆ ತಗ್ಗಾದ ಸ್ಥಳಗಳಲ್ಲಿ ಮಾತ್ರ ಸ್ವಲ್ಪ ಸ್ವಲ್ಪವಾಗಿ ನಿಂತಿದೆ. ಈ ಹಳ್ಳದ ಎರಡು ಕಡೆಗಳಲ್ಲಿರುವ ಮರದ ಎಲೆಗಳು ಉದುರುವಿಕೆಯಿಂದಲೂ, ದನ ಕರುಗಳಿಗೆ ಕುಡಿಯುವುದಕ್ಕೆ ಬೇರೆ ನೀರಿಲ್ಲದೆ ಇದೇ ನೀರನ್ನು ಕುಡಿಯಬೇಕಾದದ್ದರಿಂದಲೂ ನೀರು ಕೆಟ್ಟು ದುರ್ವಾಸನೆ ಬರುತ್ತಾ ಇದೆ.

ಮಳೆ ಇಲ್ಲದೆ ಪೈರು ನಷ್ಟವಾಗಿಹೋದದ್ದರಿಂದ ಈ ಊರಿನ ಒಕ್ಕಲಿಗರು ಜಾತಿಯವರಿಗೆ ಹೊಟ್ಟೆಗಿಲ್ಲದೆ ಸಹಿಸಲಾರದಷ್ಟು ಕ್ಲೇಶವನ್ನು ಅನುಭವಿಸುತ್ತಿದ್ದವರು. ಸಾಲೇಸಾಲ್ ಮಳೆ ನಡೆಸುತ್ತಿರುವ ಕಾಲದಲ್ಲಿ ಯಾರಾದರೂ ಇವರನ್ನು ಕೂಲಿಗೆ ಕರೆಯುತ್ತಿದ್ದರು. ಈ ಸಾಲಿನಲ್ಲಿ ಮಳೆಯಿಲ್ಲದೆ ಪೈರು ನಷ್ಟವಾದದ್ದರಿಂದ ಈ ಬಡಜನಗಳು ಜೀವವನ್ನು ಉಳಿಸಿಕೊಳ್ಳುವುದು ದುರ್ಲಭವಾಗಿರುತ್ತದೆ. ಆದದ್ದರಿಂದ ಘನವಾದ ದಯಾಳುಗಳಾದ ದಿವಾನ್ ಸಾಹೇಬ್ ಬಹದ್ದೂರವರು ಈ ವಿಷಯವನ್ನು ತಮ್ಮ ದಿವ್ಯಚಿತ್ತಕ್ಕೆ ತಂದುಕೊಂಡು, ಈ ಗ್ರಾಮದಲ್ಲಿ ಒಂದು ಭಾವಿಯನ್ನು ತೆಗೆಸಿಕೊಟ್ಟಲ್ಲಿ ಹಳೆಸಲಬಹುದಾದ ಈ ನೀರಿನ ಕ್ಷಾಮವು ನಿವಾರಣೆಯಾಗುವದಲ್ಲದೆ, ಮೇಲ್ಕಂಡ ಒಕ್ಕಲಿಗ ಜಾತಿಯವರಿಗೆ ಈ ಮೂಲಕ ಜೀವನೋಪಾಯವಾಗಬಹುದಾಗಿ ನಂಬುತ್ತೇನೆ.

ಗ್ರಾಮವಾಸಿ

ಮೈಸೂರು ಸರ್ಕಾರದ ಹುಕುಮುಗಳು.

ಕಬ್ಬಿನಿಂದ ಸಕ್ಕರೆಯನ್ನು ಮಾಡುವುದು.

ಇಂಡಿಯಾದಲ್ಲಿ ಹಾಲಿ ರೂಢಿಯಲ್ಲಿರುವ ಹಾಗೆ ಬೆಲ್ಲದಿಂದ ಸಕ್ಕರೆಯನ್ನು ತೆಗೆಯದೆ ಕಬ್ಬಿನಿಂದಲೇ ನೇರಾಗಿ ಸಕ್ಕರೆ ತೆಗೆಯುವ ವಿಧಾನವನ್ನು ಬೆಂಗಳೂರು ಸಮೀಪದಲ್ಲಿರುವ ಹೆಬ್ಬಾಳು ಎಕ್ಸ್‌ಪೆರಿಮೆಂಟಲ್ ಫಾರಂನಲ್ಲಿ ಬರುವ ಮೇ ತಿಂಗಳು ೩ನೇ ತಾರೀಖು ಸೋಮವಾರದಾರಭ್ಯ ೧೫ ದಿನಗಳ ಪರ್ಯಂತರ ಪ್ರತಿನಿತ್ಯವೂ ಬೆಳಿಗ್ಗೆ ೬ ಘಂಟೆ ಆರಂಭವಾಯಿತು ಸಾಯಂಕಾಲ ೬ ಘಂಟೆ ವರೆಗೆ ನಿದರ್ಶನಪೂರ್ವಕವಾಗಿ ತೋರಿಸುವ ಏರ್ಪಾಡಿಟ್ಟಿದೆಯಾಗಿ ಸಕ್ಕರೆ ಕಸುಬಿನಲ್ಲಿ ಆಸಕ್ತಿ ಉಳ್ಳವರು ಬಂದು ನೋಡಬಹುದು. ನಿದರ್ಶನಕಾಲದಲ್ಲಿ ಫಾರಂ ಮ್ಯಾನೇಜರು ಹಾಜರಿದ್ದು ಬಂದವರಿಗೆ ಕ್ರಮಗಳನ್ನು ಹೇಳಿಕೊಡುತ್ತಾರೆ.

ರೈತರೂ ಗಂಧದ ಮರಗಳ ಫಲವೂ.

ಗಂಧದ ಮರಗಳಿರುವ ಜಮೀನುಗಳನ್ನು ಹಿಡುವಳಿಯಾಗಿ ಕೊಡಬೇಕಾದರೆ ಅವುಗಳನ್ನು ಯಸಸಾಗಲೂ ಹರಾಜಿನ ಮೂಲಕ ಮಾರಬೇಕಿಲ್ಲದೆ, ಅಗ್ಗ ಈ ವಿಚಾರವಾಗಿ ಜಾರಿಯಲ್ಲಿರುವ ಸರ್ಕಾರಿ ಹುಕುಂಗಳ ಮೇರೆಗೆ ಸದರಿ ಜಮೀನುಗಳಲ್ಲಿ ಗಂಧದ ಮರಗಳು ಇರುವ ಪ್ರಯುಕ್ತ ದರಖಾಸ್ತುದಾರನು ಆ ಜಮೀನುಗಳ ವಾಲೀಕನಾದರೆ ತತ್ಕಾಲದಲ್ಲಿ ಎಷ್ಟು ಪರಿಹಾರದ್ರವ್ಯಕ್ಕೆ ಅರ್ಹನಾಗುತ್ತಾನೆಯೋ ಅಷ್ಟು ಮೊಬಲಗನ್ನೂ ಸದರಿ ಜಮೀನುಗಳಿಗೆ ಸರ್ಕಾರದವರು ಗೊತ್ತು ಮಾಡುವ ಪ್ರಥಮ ಸವಾಲಿನಲ್ಲಿ ಸೇರಿಸಿ ಚೆಕ್ಕ ಮಾಡಬೇಕು. ಯಾವ ಜಮೀನಿನಲ್ಲಿ ಅನೇಕ ಗಂಧದ ಮರಗಳಿರುತ್ತವೆಯೋ ಅಂಥಾ ಜಮೀನನ್ನು ಸಾಗುವಳಿಗಾಗಿ ಕೊಡುವುದಕ್ಕೆ ಮುಂಚಿತವಾಗಿ ಫಾರೆಸ್ಟ್ ಇಲಾಖೆಯವರ ಅಭಿಪ್ರಾಯವನ್ನು ಕೇಳಬೇಕು. ಆ ಸರ್ವೆ ನಂಬರಿನಲ್ಲೆಲ್ಲಾ ಗಂಧದ ಮರಗಳು ಬಹಳ ಒತ್ತಾಗಿ ಬೆಳೆದಿದ್ದರೆ, ಅಂಥಾ ನಂಬರನ್ನು ಸರ್ಕಾರಕ್ಕೆ ಉಳಿಸಿಟ್ಟುಕೊಳ್ಳಬೇಕು. ಸದರಿ ಸರ್ವೆ ನಂಬರಿನ ಒಂದು ಭಾಗದಲ್ಲಿ ಮಾತ್ರ ಗಂಧದ ಮರಗಳು ಬೆಳೆದಿದ್ದು ಮಿಕ್ಕ ಭಾಗದಲ್ಲಿ ಅಷ್ಟು ಮರಗಳಿಲ್ಲದೆ ಇದ್ದರೆ, ಆ ಮಿಕ್ಕ ಭಾಗವನ್ನು ಬೇರೆ ಸರ್ವೆ ನಂಬರಾಗಿ ಮಾಡಿ ಅದನ್ನು ಸಾಗುವಳಿಗೆ ಕೊಡಬಹುದು. ಪರಂತು ಇದರ ವಿಸ್ತೀರ್ಣವು ಅಂಥಾ ಪ್ರದೇಶದ ಕನಿಷ್ಠ ವಿಸ್ತೀರ್ಣಕ್ಕಿಂತ ಕಡಮೆಯಾಗಿರಕೂಡದು. ಗಂಧದ ಮರಗಳುಳ್ಳ ಭಾಗವನ್ನು ಗುರ್ತುಮಾಡಿ ಅದನ್ನು ಸರ್ಕಾರಕ್ಕೆ ಉಳಿಸಿಕೊಳ್ಳುವುದು ಸಾಧ್ಯವಾಗದಿರುವ ವಿಶೇಷ ಸಂದರ್ಭಗಳಲ್ಲಿ ಅಂಥಾ ಭಾಗವು ವಿಧಿಸಲ್ಪಟ್ಟಿರುವ ಕನಿಷ್ಠ ವಿಸ್ತೀರ್ಣಕ್ಕಿಂತ ಕಮ್ಮಿಯಾಗಿದ್ದರೂ ಅದನ್ನು ರೆವಿನ್ಯೂ ಕಮಿಷನರವರ ಮುಂಜೂರಾತಿಯಿಂದ ಪ್ರತ್ಯೇಕವಾಗಿ ಎಳೆಸಿ ಸರ್ಕಾರಕ್ಕೆ ಉಳಿಸಿಕೊಳ್ಳಬೇಕು. ಸದರಿ ಸರ್ವೆ ನಂಬರಿನ ಮಿಕ್ಕ ಭಾಗವನ್ನು ಮಾತ್ರ ದಾವಾಪಾಯಿ ಮೇರೆಗೆ ಕಂದಾಯವನ್ನು ಕಡಮೆಮಾಡಿ ಸಾಗುವಳಿಗೆ ಕೊಡಬೇಕು.

ಬುದ್ಧಿಭ್ರಮಣೆ ಹೊಂದಿದ ಅಪರಾಧಿಗಳು.

ಹುಚ್ಚು ಹಿಡಿದಂಥಾ ಅಪರಾಧಿಗಳ ಮೇಲೆ ತರಲ್ಪಟ್ಟ ಮೊಕದ್ದಮೆಗಳನ್ನು ಮ್ಯಾಜಿಸ್ಟ್ರೇಟರು ದರ್ಯಾಪ್ತಿಮಾಡಿ, ಕೆಲವು ಸಂದರ್ಭಗಳಲ್ಲಿ ಅಂಥವರನ್ನು ಹುಚ್ಚರಿಗಾಗಿ ಮಾಡಿರುವ ಆಸ್ಪತ್ರೆಗೆ ಕಳುಹಿಸಬೇಕೆಂದು ಗವರ್ನಮೆಂಟಿಗೆ ಬರೆಯುವುದೂ, ಗವರ್ನಮೆಂಟಿನ ಹುಕುಂ ಪ್ರಕಾರ ಅವರನ್ನು ಆ ಆಸ್ಪತ್ರೆಗೆ ಕಳುಹಿಸುವುದೂ ರೂಢಿಯಾಗಿದೆ. ಇಂಥಾ ರೋಗಿಗಳಿಗೆ ಯಾವ ರೀತಿಯಲ್ಲಿ ಹುಚ್ಚು ಹಿಡಿಯಿತೋ, ಅದರ ಪೂರ್ವೋತ್ತರವೇನೋ ತಿಳಿಯದೆ ಹೋಗೋಣದರಿಂದ ಅವರಿಗೆ ಆ ಆಸ್ಪತ್ರೆಯಲ್ಲಿ ಯಾವ ರೀತಿಯಾದ ಚಿಕಿತ್ಸೆ ಮಾಡಬೇಕೆಂಬುದು ಗೊತ್ತಾಗುವುದಿಲ್ಲವಾದದ್ದರಿಂದ ಇನ್ನು ಮುಂದೆ ಮ್ಯಾಜಿಸ್ಟ್ರೇಟರು ಈ ಸಂಗತಿಗಳನ್ನು ಡಾಕ್ಟರುಗಳಿಂದ ಬರೆಸಿ ಗವರ್ನಮೆಂಟಿಗೆ ತಿಳಿಯಪಡಿಸಬೇಕಾಗಿದೆ.

ದುಷ್ಕಾಲ ನಿಮಿತ್ತವಾದ ಕಾಮಗಾರಿಯು.

ಹಾಸನದ ಡಿಸ್ಟ್ರಿಕ್ಟಿಗೆ ಸೇರಿದ ಚಿಕ್ಕೇರಿ-ಇಪ್ಪಯ್ಯರಸ್ತೆಯು ಕೆಟ್ಟಿದೆ ಹೋದದ್ದರಿಂದ ಅದನ್ನು ದುರಸ್ತುಮಾಡಿಸುವುದಕ್ಕೆ ೯೩೮ ರೂಪಾಯಿ ಖರ್ಚಾಗುವುದೆಂದೂ, ಇಷ್ಟು ಹಣ ಡಿಸ್ಟ್ರಿಕ್ಟ್ ಬೋರ್ಡಿನ ಫಂಡಿನಲ್ಲಿ ಇಲ್ಲವೆಂದೂ. ಆ ಪ್ರಾಂತ್ಯದ ಪ್ರಜೆಗಳಿಗೆ ಕೂಲಿಕೆಲಸವನ್ನು ಒದಗಿಸಿಕೊಡಲು ಈ ಕಾಮಗಾರಿಯನ್ನು ಪ್ರಾರಂಭಿಸಬೇಕಾದದು ಅವಶ್ಯವಾಗಿರೋಣದರಿಂದ ಇದನ್ನು ಕೊಡತಕ್ಕ ಸ್ಯಾಂಕ್ಷನ್ ಮಾಡಬೇಕೆಂದೂ ಡೆಪ್ಯುಟಿ ಕಮಿಷನರವರು ಬರೆದದ್ದನ್ನು ರೆವಿನ್ಯೂ ಕಮಿಷನರವರು ಗವರ್ನಮೆಂಟಿಗೆ ತಿಳಿಸಿದರು. ಅದರ ಮೇಲೆ ಸರ್ಕಾರದವರು ಹುಕುಂ ಕೊಟ್ಟಿರುವುದೇನೆಂದರೆ—ಈ ಕಾಮಗಾರಿಗಾಗಿ ೯೩೮ ರೂಪಾಯಿ ಸ್ಯಾಂಕ್ಷನ್ ಮಾಡಲಾಗಿದೆ. ಗ್ರಾಮಾಂತರಗಳಲ್ಲಿ ನಡಿಸಬೇಕಾದ ಕೆಲಸಗಳೆಲ್ಲಾ ಪೂರೈಸಿ, ಇತರ ರಿಲೀಫ್ ಕಾಮಗಾರಿಗಳ್ಯಾವವೂ ಇಲ್ಲವೆಂದು ಗೊತ್ತಾದ ಮೇಲೆ ಈ ರಸ್ತೆಯನ್ನು ದುರಸ್ತುಮಾಡಿಸುವ ಕೆಲಸವನ್ನು ಪ್ರಾರಂಭಿಸಬೇಕು. ಈ ಖರ್ಚನ್ನು ಯಾವ ಬಾಬಿಗೆ ಸೇರಿಸಬೇಕೆಂಬ ವಿಷಯದಲ್ಲಿ ಬೇರೆ ಹುಕುಂ ಕೊಡಲಾಗುವುದು

ತುರ್ಕಿ ರಾಜ್ಯದಲ್ಲಿ ಗಲಭೆಯು.

ತುರ್ಕಿ ರಾಜ್ಯದಲ್ಲಿ ಸುಲ್ತಾನರವರು ಪ್ರಜೆಗಳ ಅಭಿಪ್ರಾಯವನ್ನು ಅನುಮೋದಿಸಿ. ಕೆಲವು ತಿಂಗಳ ಕೆಳಗೆ ಪಾರ್ಲಿಮೆಂಟು ಸಭೆಗಳನ್ನು ಏರ್ಪಡಿಸಿದರು. ಈಚೆಗೆ ಪ್ರಜೆಗಳಲ್ಲಿ ಕೆಲವು ಪಂಗಡಗಳುಂಟಾದವು. ಇವರಲ್ಲಿರುವ ಪರಸ್ಪರವಾದ ವಿರೋಧಾಭಿಪ್ರಾಯಗಳ ದೆಸೆಯಿಂದ ರಾಜ್ಯಭಾರಕಾರ್ಯಗಳು ಸರಾಗವಾಗಿ ನಡೆಯದೆ ಅಡಚಣೆಯುಂಟಾಗುತ್ತಾ ಬಂದಿದೆ. ಕಳೆದ ವಾರ ಅಲ್ಲಿಂದ ಬಂದಿರುವ ತಂತೀ ವರ್ತಮಾನಗಳು ಆ ರಾಜ್ಯದಲ್ಲಿ ಗವರ್ನಮೆಂಟಿನ್ನೇ ತಲೆಕೆಳಗೆ ಮಾಡತಕ್ಕ ಕಾರ್ಯಗಳು ಅನೇಕವಾಗಿ ನಡೆಯಲಾರಂಭವಾಗಿವೆ ಎಂದು ತಿಳಿಸುವವು. ಪಾರ್ಲಿಮೆಂಟಿನ ಮೆಂಬರುಗಳಿಗೂ ಮಂತ್ರಿಗಳಿಗೂ ಸರಿಹೋಗದೆ ಮೆಂಬರುಗಳ ಪಕ್ಷವನ್ನು ವಹಿಸಿದವರು ದಂಗೆಯೆದ್ದು ಆ ಮಂತ್ರಿಗಳನ್ನು ಕೆಲಸದಿಂದ ವಜಾಮಾಡಬೇಕೆಂದು ಕೇಳಿದರು. ಸುಲ್ತಾನರವರು ಅದೇ ರೀತಿ ಮೊದಲಿದ್ದ ಮಂತ್ರಿಗಳನ್ನು ವಜಾಮಾಡಿ, ಬೇರೆ ಮಂತ್ರಿಗಳನ್ನು ನೇಮಕಮಾಡಿದರು. ಇದಲ್ಲದೆ ಬೇರೆ ಬೇರೆ ಕಕ್ಷಿಗಳ ವೈಷಮ್ಯಗಳು ಹೆಚ್ಚಿದವು. ಒಬ್ಬ ಎಡಿಟರನ್ನು ಕೊಂದರು. ಕೆಲವು ಅಧಿಕಾರಿಗಳನ್ನು ಹಿಡಿದು ಹಿಂಸೆಪಡಿಸಿ ತೀರಿಸಿಬಿಟ್ಟರು. ಕೆಲಕೆಲವು ಸೈನಿಕರು ಬೇರೆ ಬೇರೆ ಕಕ್ಷಿಗಳ ಪಕ್ಷವನ್ನು ವಹಿಸಿ ಕ್ರೂರಕೃತ್ಯಗಳನ್ನು ನಡಿಸುತ್ತಾ ಬಂದಿದಾರೆ. ಆ ರಾಜ್ಯದ ಬೇರೆ ಬೇರೆ ಭಾಗಗಳಿಂದ ಸೈನ್ಯಗಳು ರಾಜಧಾನಿಗೆ ಹೋಗುತ್ತಿವೆ. ರಾಜಧಾನಿಯಲ್ಲಿ ದೊಂಬಿಕಲಹಗಳೂ, ಗುಂಡುಗಳ ಹಾರಾಟಗಳೂ ಪ್ರಾಪ್ತವಾಗಿ ನೂರಾರು ಮಂದಿ ಗಾಯಪಟ್ಟರು, ಅನೇಕರು ಪ್ರಾಣಗಳನ್ನು ಕಳದುಕೊಂಡರು. ಒಂದು ಪಕ್ಷದವರು ಸುಲ್ತಾನರಿಗೆ—ನೀವೇ ನಿಮ್ಮ ಮಾತಿನಂತೆ ನಡೆಯುತ್ತಾ ಇಲ್ಲವೆಂದು ತಂತೀವರ್ತಮಾನ ಕಳುಹಿಸಿದಾರೆ. ಸುಲ್ತಾನರಾದರೋ ಪ್ರಜಾ ನೇಮ್ಮದಿಯನ್ನು ಕಾಪಾಡಲು ಸಾಹಸಪಡುತ್ತಿದ್ದರೂ, ಇದು ಅವರಿಂದ ಸಾಧ್ಯವಾಗುವಹಾಗಿಲ್ಲವೆಂದು ಕಾಣುತ್ತಿರುವುದು. ಅವರು ಪ್ರಜಾರಂಜಕವಾದ ರೀತಿಯಲ್ಲಿ ಪಾರ್ಲಿಮೆಂಟನ್ನು ಸ್ಥಾಪಿಸಿಕೊಂಡು ರಾಜ್ಯಭಾರವನ್ನು ನಡಿಸುತ್ತಾ ಬರುತ್ತೇವೆಂದೂ, ಈ ಮಾತಿಗೆ ತಪ್ಪುವುದಿಲ್ಲವೆಂದೂ ತಿಳಿಸಿರುತ್ತಾರೆ. ಇದರ ಮೇಲೆ ಇಂಥಾ ಒಳ್ಳೆಯ ಅಭಿಪ್ರಾಯವನ್ನು ಸುಲ್ತಾನರವರು ಪಡೆದಿರುವ ತನಕ ಇಂಗ್ಲಿಷ್ ಗವರ್ನಮೆಂಟಿನವರು ಅವರಿಗೆ ಬೆಂಬಲ ಕೊಡುತ್ತಾ ಬರಬೇಕೆಂದೂ, ಸುಲ್ತಾನರು ಆ ರೀತಿ ನಡೆಯದೆಹೋದರೆ ಅವರಿಗೆ ಸಹಾಯಮಾಡಲಾಗುವುದಿಲ್ಲವೆಂದೂ ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಮಂತ್ರಿಯವರಾದ ಮ|| ಆಸ್ಕಿತ್‌ಯವರು ತಿಳಿಸಿದರು.

ಇತ್ತಲಾಗಿ ಏಷ್ಯಾ ಮೈನರಿಗೆ ಸೇರಿದ ಕೆಲವು ಸ್ಥಳಗಳಲ್ಲಿ ಪ್ರಜಾನೆಮ್ಮದಿಗೆ ಭಂಗವುಂಟಾಗಿದೆ. ಮುಸಲ್ಮಾನರಿಗೂ ಆರ್ಮೇನಿಯರಿಗೂ ಕಲಹ ಕದನಾಟಗಳು ಹುಟ್ಟಿವೆ. ಅಡಾನಾ, ಮರ್ಸಿನಾ, ಟಾರ್ಸಸ್, ಅಲೆಕ್ಸಾಂಡ್ರೆಟಾ, ಮೊದಲಾದ ಕಡೆಗಳಲ್ಲಿ ಕೊಲೆಗಳೂ, ಲೂಟಿಗಳೂ, ಮನೆಮಠಾದಿಗಳನ್ನು ಸುಡುವುದೂ ಹೆಚ್ಚುತ್ತಾ ಬಂದಿದೆ. ಇಂಗ್ಲಿಷರೂ, ಫ್ರೆಂಚರೂ ಆ ಪ್ರಾಂತ್ಯಕ್ಕೆ ಜಹಜುಗಳ ಮೇಲೆ ಸೈನ್ಯಗಳನ್ನು ಕಳುಹಿಸಿಕೊಟ್ಟಿದಾರೆ.

ಶ್ರೀ ಕೃಷ್ಣರಾಜ ಕೃಷಿಶಿಲ್ಪಾಭಿವರ್ಧಕ ಸಮಾಜ, ಲಿಮಿಟೆಡ್, ಮೈಸೂರು.

ಮೂರು ತಿಂಗಳಿಗಿಂತ ಹೆಚ್ಚಾಗಿ ನೀರು ಇಲ್ಲದೆ ಇರತಕ್ಕ ಕೆರೆಗಳ ಕೆಳಭಾಗದ ತರಿ ಜಮೀನುಗಳಲ್ಲಿ ಬೆಳೆಯತಕ್ಕ ಭತ್ತದ ವಿವರ, ಬಿಂದಿಗೆ, ಅಂಕುರ, ಅಥವಾ ನಾಟಿಹಾಕಿದ ೬೦ ದಿವಸಕ್ಕೆ ಸರಿಯಾಗಿ ಹೊಡೆಯಾಗಿ ೯೦ ದಿನಕ್ಕೆ ಕಟಾವಿಗೆ ಬರತಕ್ಕದ್ದು

ಒಟ್ಟು ಹುಯಿದು, ಅಗೆಹಾಕಿ ಪೈರುಮಾಡಿಕೊಳ್ಳತಕ್ಕ ವಿಧಾನ

ಮೊದಲು ಒಟ್ಟು (ಅಗೆ) ಮಾಡುವಷ್ಟು ಪ್ರದೇಶವನ್ನು ನೀರು ಕಟ್ಟಿಕೊಂಡು ಎರಡು ವೇಳೆ ಉತ್ತು ೩—೪ ದಿನ ಕೊಳಿಸಿ, ಪುನಹಾ ೨ನೇ ವೇಳೆ ಉತ್ತು ೨—೩ ದಿನ ಕೊಳಿಸಿ, ಮೂರನೇ ಸಲ ಉತ್ತು ಗೊಬ್ಬರವನ್ನಾಗಲೀ ಸೊಪ್ಪನ್ನಾಗಲೀ ತುಳಿದು ಮಟ್ಟಮಾಡಿ ಪಾತಿಯಲ್ಲಿ ೨ ಅಂಗುಲ ನೀರು ಕಟ್ಟಿ ಬೀಜವನ್ನು ಹದಮಾಡಿ ಎಕರೆಗೆ ೫೦ ಸೇರು ಚಲ್ಲಬೇಕು. ನೀರು ಆರದಂತೆ ಎರಡು ದಿನ ನೀರು ಕಟ್ಟಬೇಕು. ಅನಂತರ ನೀರನ್ನು ಹೊರಡಿಸಿ ಒಂದು ದಿನ ಆರಿಸಿ, ಪುನಹಾ ನೀರು ಕಟ್ಟುವುದು. ಹೀಗೆ ೨—೩ ದಿನ ಮಾಡಿದರೆ ಮೊಳಕೆ ಬರುತ್ತದೆ. ಆ ಮೇಲೆ ಪೈರು ಕೆಡದಂತೆ ಒಂದು ಅಂಗುಲ ನೀರು ಯಾವಾಗಲೂ ನಿಲ್ಲುವಂತೆ ಕಟ್ಟಿರಬೇಕು. ಹೀಗೆ ಮಾಡುತ್ತಿದ್ದರೆ ಪೈರು ೧೫ ದಿನಗಳಲ್ಲಿ ಚನ್ನಾಗಿ ಬೆಳೆದು ನಾಟಿ ಹಾಕುವುದಕ್ಕೆ ಹದವಾಗುತ್ತದೆ.

ಗದ್ದೆ ಹಸನುಮಾಡಿಕೊಂಡು ಪೈರು ಹಾಕತಕ್ಕ ವಿಧಾನ.

ಅಗೆ ಹುಯಿದ ೧೫ ದಿವಸಗಳಲ್ಲಿ ಗದ್ದೆಗೆಲ್ಲಾ ನೀರು ಕಟ್ಟಿ ಒಂದೆರಡು ದಿನ ಬಿಟ್ಟುಕೊಂಡು ಒಂದು ಉಳಮಾಡಿ ೨—೩ ದಿನ ಕೊಳಿಸಿ, ಪುನಹಾ ೨ ಉಳಮಾಡಿ ಮತ್ತೆ ೨—೩ ದಿನ ಕೊಳಿಸಿ, ಇನ್ನೊಂದು ಸಲ ೩ ಉಳವಾಡಿ ಕೆವಡೆ ಬಿಟ್ಟ, ಕೆನೆಹಲುಬೆ ಸವರಿ ಗೊಬ್ಬರ ಎರುಯಾಗಲೀ ಅಥವಾ ಹೊಂಗೆಸೊಪ್ಪು ಮೊದಲಾದ ಸೊಪ್ಪನ್ನು ಹಾಕಿ ತುಳಿದಾಗಲೀ ೧—೨ ದಿನ ಕೊಳಿಸಿ ಗದ್ದೆಯನ್ನು ಅಚ್ಚುಕಟ್ಟು ಮಾಡಿಕೊಂಡು ೨೦ ದಿನಕ್ಕೆ ಸರಿಯಾಗಿ ಪೈರನ್ನು ಕಿತ್ತು ಆ ದಿನವೇ ಒಂದು ಗೇಣು ದೂರಕ್ಕೆ ಎರಡೆರಡರಂತೆ ಪೈರನ್ನು ನಾಟಿಹಾಕಬೇಕು. ಆ ದಿನವೂ ಮತ್ತು ಮೂರನೇ ದಿನವೂ ನೀರು ಬಿಡಬಾರದು. ಅನಂತರ ಪಾತಿಗಳಲ್ಲಿ ೨ ಅಂಗುಲ ನೀರು ನಿಲ್ಲುವಂತೆ ನೀರು ಹಾಯಿಸಬೇಕು. ನಾಟಿಹಾಕಿದ ತಿಂಗಳಲ್ಲಿ ಕಳೆಯನ್ನು ಕೀಳಿಸಬೇಕು. ತರುವಾಯ ೧೫ ದಿನ ಬಿಟ್ಟು ಮತ್ತೊಂದುವೇಳೆ ಕಳೇ ಕೀಳಿಸಿ ಸರಿಯಾಗಿ ನೀರು ಹಾಯಿಸುತ್ತಾ ಇದ್ದರೆ ನಾಟಿಹಾಕಿದ ೬೦ ದಿವಸಕ್ಕೆ ಹೊಡೆಯಾಗಿ ೯೦ ದಿನಕ್ಕೆ ಸರಿಯಾಗಿ ಭತ್ತವು ಕೊಯಿಲಿಗೆ ಬರುತ್ತದೆ. ಈ ಭತ್ತವು ಮೈಸೂರು ಶಿವರಾಂಪೇಟೆಯಲ್ಲಿರುವ ಷಾಪ್ ಕೀಪರ್ ಮ|| ಕೆ. ನರಸಿಂಹಯ್ಯನವರಲ್ಲಿ ದೊರೆಯುವುದು. ಉತ್ಪತ್ತಿ ಉತ್ತಮ ಬೆಳೆಯಾದರೆ ೧೨ ಪಲ್ಲಾ, ಮಧ್ಯಮವಾದರೆ ಎಕರೆ ೧ಕ್ಕೆ ೮ ಪಲ್ಲಾ ಆಗುವುದು. ನೀರು ಸಾಕಾದಷ್ಟು ಇದ್ದರೆ ವರುಷಕ್ಕೆ ೩ ಬೆಳೆಯನ್ನು ಮಾಡಿಕೊಳ್ಳಬಹುದು.

ಹೊಸ ಕಬ್ಬಿನ ವ್ಯವಸಾಯವು

ದಕ್ಷಿಣ ಆರ್ಕಾಟಿನಲ್ಲಿ ಹಿಂದಿನ ವರುಷ ೬೦ ಎಕರೆ ಜಮೀನಿನಲ್ಲಿ ಮಾರಿಷಸ್ ಕಬ್ಬನ್ನು ಹಾಕಿತ್ತು. ಅಲ್ಲಿ ಅರೆದದ್ದರಲ್ಲಿ ಈ ರಕಮ ಕಬ್ಬಿನ ಹಾಲಿನಲ್ಲಿ ಹೆಚ್ಚು ಬೆಲ್ಲವೂ ಹೆಚ್ಚು ಸಕ್ಕರೆಯೂ ಇಳಿಯುವುದಾಗಿ ಕಂಡುಬಂತು. ಈ ವರುಷ ಆ ಪ್ರಾಂತ್ಯದಲ್ಲಿ ಈ ಕಬ್ಬಿನ ಬೆಳೆ ಇಟ್ಟಿದ್ದ ಜಮೀನಿನ ವಿಸ್ತೀರ್ಣವು ಹೋದ ವರುಷಕ್ಕಿಂತ ಮೂರರಷ್ಟು ಹೆಚ್ಚಾಗಿರುತ್ತದೆ. ಇದರಿಂದ ರೈತರು ಸ್ಥಳೀಯ ರಕಂಗಿಂತ ಇದು ಉತ್ತಮವಾದದ್ದೆಂದು ತಿಳಿದುಕೊಂಡಿರುತ್ತಾರೆ. ಈ ಕಬ್ಬಿನ ಬೀಜವನ್ನು ಕುಂಭಕೋಣದ ವ್ಯವಸಾಯ ಸಂಘದವರು ತರಿಸಿ, ತಮ್ಮ ಫಾರಂನಲ್ಲಿ ಬೆಳೆಮಾಡಿನೋಡಿದ್ದರಲ್ಲಿ ಬಹಳ ಹುಲುಸಾದ ಫಸಲಾಯಿತು. ಇದರ ವ್ಯವಸಾಯವು ಅಲ್ಲಲ್ಲಿ ವೃದ್ಧಿಹೊಂದುತ್ತಿದೆ. ಕಬ್ಬಿಗೆ ಕ್ರಮವಾಗಿ ಕೂಡಿಟ್ಟ ದನದ ಗೊಬ್ಬರವನ್ನು ಹಾಕಿದರೆ ಫಸಲಿನ ಉತ್ಪತ್ತಿಯು ಹೆಚ್ಚುತ್ತದೆ. ಹರಳಿನ ಹಿಂಡಿಗೆ ಸುಮಾರು ೬ ರೂಪಾಯಿ ಬೆಲೆಯಾಗುವಷ್ಟು ಎಲುಬಿನ ಪುಡಿಯನ್ನು ಬೆರಸಿ ಹಾಕಿದ್ದರಲ್ಲಿ ನಿವ್ವಳ ಆದಾಯವು ೫೦ ರೂಪಾಯಿ ಹೆಚ್ಚುತ್ತಿತ್ತು. ಈ ದೇಶದಿಂದ ಎಲುಬು ವಿಶೇಷವಾಗಿ ರಫ್ತಾಗುತ್ತಿದೆ. ಇದರಿಂದ ಇಲ್ಲಿನ ಭೂಮಿಯ ಸಾರವೇ ಕಡಮೆಯಾಗುವುದು ಎಂದು ಹೇಳಬಹುದು. ಇದನ್ನೆಲ್ಲಾ ಇಲ್ಲಿಯೇ ಉಪಯೋಗಿಸಿಕೊಂಡರೆ ಎಷ್ಟೋ ಅನುಕೂಲವಾದೀತು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಲ್ಲಿ ಛಳುಕು ; ನಿದ್ರೆಯಿಲ್ಲದೆ ಇರುವುದು , ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಸುಪಾಗಿಯೋ ಇಳಿಯುವುದು ; ಬಡವೆ ಬಾಯಾರಿಕೆ ; ಬಳಲಿಕೆ ; ಎದೆ ತಲ್ಲಣಿಸುವುದು , ತಲೆನೋವು ; ಗಾಬರಿ ; ಕೀಲು ನೋವು ; ತಲೆ ತಿರುಗುವಿಕೆ ; ಮೈನೋವು ಕೀಲುನೋವು ; ಮರವು ; ನಿದ್ರಾಭಂಗ ; ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-34]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೨—೮—೦ ; ಅಥವಾ ೬ ಬುಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ೨೦, ಪಿ ಓ ಬಾಕ್ಸ್ ಬೊಂಬಾಯಿ. —ಇವರಲ್ಲಿ ದೊರೆಯುವುದು

WANTED, A MUNSHI

For Literary and Translation Work. Applicants must have passed the F. A. Examination, and possess a thorough Knowledge of Kannada Literature. Apply to, 41-2

Miss PARSONS, Hardwicke, Mysore City.

WANTED

A Proof-Reader, competent both in English and Kanarese. Salary according to qualifications. Apply to 44-1

Wesleyan Mission Press, Mysore.

ಕನಡಾದಲ್ಲಿ ಪೆರೂನಾ ಸೇವನೆ ಮಾಡುವ ಒಂದಾನೊಂದು ಸಂಸಾರವು.

7-16

ಪೆರೂನಾವನ್ನು ಸಕಾಲದಲ್ಲಿ ಕೆಲವು ಹೊತ್ತು ಕೊಟ್ಟರೆ ದೊಡ್ಡ ಕಾಯಿಲೆಗಳನ್ನೆಲ್ಲಾ ಅದು ನಿವಾರಣೆ ಮಾಡಬಲ್ಲದೆಂದು ಮಕ್ಕಳುಳ್ಳ ಅನೇಕ ಸ್ತ್ರೀಯರು ಕಂಡುಕೊಂಡಿರುತ್ತಾರೆ.

ಮಿಸೆಸ್ ಎಟ್ಟಾ ಬೂಕರ್, ದಂಡಸ್, ಸನ್ನಿ ಎಕ್ ದಬ್ಲ್ಯು ಟಿ. ಕ್ಯಾನ್, ಈಕೆ ಬರೆಯುವುದು.— ನನ್ನ ದೇಹದೊಳಗೆ ಕೃತ್ಸ್ರರೋಗವು ಹುಟ್ಟಿ ನರಳಿದೆನು. ಕಡೆಗೆ ಡಾ|| ಹಾರ್ಟ್‌ಮೆನ್‌ರನ್ನು ಕರೆಸಿಕೊಂಡು, ಅವರು ಹೇಳಿದ ಔಷಧವನ್ನು ಸೇವನೆ ಮಾಡಿದ್ದರಿಂದ ನನ್ನ ಕೆಟ್ಟ ರೋಗವು ನಿವಾರಣೆಯಾಯಿತು. ಇದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞಳಾಗಿರುತ್ತೇನೆ. ಕೃತ್ಸ್ರರೋಗಕ್ಕೆಲ್ಲಾ ಪೆರೂನಾ ಉತ್ತಮೋತ್ತಮವಾದ ಔಷಧವೆಂದು ನನಗೆ ತೋರುವುದು. ಈಗ ನನಗಿರುವಷ್ಟು ಸೌಖ್ಯವು ಲವಲೇಶವೂ ಹಿಂದೆ ಯಾವಾಗಲೂ ಇರಲಿಲ್ಲ.

ಮಿಸೆಸ್ ಬೂಕರ್ ಬರೆದಿರುವ ಇನ್ನೊಂದು ಕಾಗದದಲ್ಲಿ ಆಕೆ ಹೇಳುವುದೇನೆಂದರೆ — "ಪೆರೂನಾ ಮಹಾ ಆಶ್ಚರ್ಯಕರವಾದ ಔಷಧವೆಂದು ಅನುಭವಪೂರ್ವಕವಾಗಿಯೂ ಯಥಾರ್ಥವಾಗಿಯೂ ಹೇಳಬಲ್ಲೆನು. ನನ್ನ ಮಗಳು ಎಲ್ಲಿ ಬೂಕರಿಗೆ ಎಷ್ಟು ಬೇಗನೆ ಆರೋಗ್ಯವಾಗಬೇಕೆಂದು ನಾನು ನಿರೀಕ್ಷಿಸಿದ್ದೆನೋ ಅಷ್ಟು ಬೇಗ ಆಯಿತು. ಆದದ್ದರಿಂದ ಅವಳಿಗೆ ವಾಸಿಯಾದ ವಿಷಯವನ್ನು ನೀವು ಪ್ರಕಟಿಸಬಹುದೆಂದು ದಾರಾಳವಾಗಿ ಹೇಳುತ್ತೇನೆ."

"ಶೀತವಾಯುವಿನಿಂದ ನನ್ನ ಮಗುವು ನರಳುತ್ತಿದ್ದದನ್ನು ಸೇವಿಸಿದಾರಭ್ಯ ಅದಕ್ಕೆ ಆರೋಗ್ಯವಾಯಿತು. ಅದಕ್ಕೆ ಬಲ ಉಂಟಾಯಿತು. ಅರುಚಿಯೆಲ್ಲಾ ಪರಿಹಾರವಾಗಿ, ಈಗ ಮಗುವನ್ನು ನೋಡಿದರೆ ಚಿತ್ರಕ್ಕೆ ಯೋಗ್ಯವಾದ ಮಗುವಿನಂತೆ ಸುಖವಾಗಿದೆ."

ಅಜೀರ್ಣವಿದ್ದ ಮಗು.

ಮಿಸೆಸ್ ಎ. ಎ. ಬ್ರೆಕ್, ದಸ್ಸಿಂಗ್, ಮಿಸೌರಿ, ಯು ಎಸ್. ಎ, ಈಕೆ ಬರೆಯುವುದು —

"ಮೂರು ವರುಷದ ನನ್ನ ಹೆಣ್ಣು ಮಗುವಿಗೆ ಶೀತದಿಂದ ಕೆಟ್ಟ ಕೆಮ್ಮಲು ಹುಟ್ಟಿ ಅದರ ಮೇಲೆ ಜ್ವರವೂ ಬಂದು, ರಾತ್ರಿ ಹೊತ್ತು ವಿಶೇಷವಾಗಿ ಬಹಳ ಸಂಕಟ ಪಡುತ್ತಿದ್ದಳು. ನಿದ್ದೆ ಮಾಡುತ್ತಿದ್ದ ಹಾಗೆ ಎಚ್ಚರವಾಗಿ ಕಷ್ಟವು ದಕ್ಕಾರಂಭಿಸಿದರೆ ಆವರಲ್ಲಿ ಮಗು ಎಲ್ಲಿ ಪ್ರಾಣಬಿಡುವುದೋ ಎನ್ನುವಷ್ಟು ಕಷ್ಟಪಡುತ್ತಿತ್ತು. ನಾವು ಕೊಟ್ಟ ಯಾವ ಔಷಧದಿಂದಲೂ ಮಗುವಿಗೆ ವಾಸಿಯಾಗಲಿಲ್ಲ. ಆಗ ನಾನು ಡಾ|| ಹಾರ್ಟ್‌ಮೆನ್‌ರ ಜೀವನಾವಧಿಯಲ್ಲಿ ಬರುವ ರೋಗಗಳು ಎಂಬ ಪುಸ್ತಕವನ್ನು ನೋಡೋಣವೆಂದು ತೆಗೆದುಕೊಂಡೆನು. ಪುಸ್ತಕ ದೊರಕಿತು. ಆಗಲೇ ಪೆರೂನಾವನ್ನು ಮಗುವಿಗೆ ಕೊಡಲಾರಂಭಿಸಿದೆನು. ಒಂದು ಬಾಟ್ಲು ವಿಷಯವನ್ನು ಕೊಟ್ಟೆನು. ಇದರಿಂದ ಮಗುವು ಸಂಪೂರ್ಣ ಗುಣವಾಗಿದೆ."

"ಈ ಮಗುವಿಗೆ ಹುಟ್ಟಿದಾರಭ್ಯ ಅಜೀರ್ಣರೋಗವಿತ್ತು. ಅದರ ನಿಮಿತ್ತ ತಗೆದುಕೊಳ್ಳುತ್ತಾ ಬಂದಾರಭ್ಯ ಯಾವ ತರಹ ಆಹಾರವನ್ನು ತಿಂದರೂ ಅದಕ್ಕೆ ಅಜೀರ್ಣವಾಗುತ್ತಿಲ್ಲ. ಈಗ ಈ ಮಗು ಚೆನ್ನಾಗಿ ಆರೋಗ್ಯವಾಗಿದೆ. ನನ್ನ ನೆರೆಹೊರೆಯವರು ನನ್ನ ಮಗು ಬಹಳ ಚೆನ್ನಾಗಿದೆ ಎಂದು ಹೇಳಿದರೆ ಅದೆಲ್ಲಾ ಪೆರೂನಾದಿಂದ ಆದದ್ದು ಎಂದು ನಾನು ಅವರಿಗೆ ತಿಳಿಸುತ್ತೇನೆ. ಕೆಮ್ಮಲಿಗೂ ಅಜೀರ್ಣಕ್ಕೂ ಪೆರೂನಾ ಚಿಟ್ಟರೆ ಇನ್ನಾವುದೂ ಪ್ರಯೋಜನಕಾರಿಯಾದದ್ದಲ್ಲವೆಂದು ನನಗೆ ತೋರುತ್ತದೆ. ಮತ್ತು ಈ ರೋಗಗಳನ್ನು ಅನುಭವಿಸುವವರೆಲ್ಲಾ ಪೆರೂನಾವನ್ನೇ ಸೇವಿಸುವಂತೆ ಶಿಫಾರಸು ಮಾಡುತ್ತೇನೆ."

ಮಗುವಿಗೆ ಪೆರೂನಾ ಮಾಡಿದ್ದು.

ಮಿಸೆಸ್ ಪ್ರೆಸ್ಟ್ ವಾಡಿ, ಸಿಂಕ್ಲೆವಿಲ್ಲ, ಇಲ್ಲಿನಾಯಿಸ್ ಯು ಎಸ್ ಎ, ಈಕೆ ಬರೆಯುವುದು —

"ನಾನು ನಿಜವಾಗಿ ಆರೋಗ್ಯವಾಗಿದ್ದೇನೆ. ಈ ಮಾತು ಹೇಳುವುದರಲ್ಲಿ ನನಗೆ ತುಂಬಾ ಸಂತೋಷ. ನನ್ನ ಒಂದು ಮಗು ಐದು ತಿಂಗಳ ಜ್ವರವನ್ನು ಅನುಭವಿಸಿತು. ವಿಷಮಜ್ವರದಿಂದ ವಾಸಿಯಾಗಲಿಲ್ಲ. ಅದು ಮಲೇರಿಯಾ ಎಂಬ ಶೀತಜ್ವರವೆಂದು ಡಾಕ್ಟರು ಹೇಳಿದರು. ಆದರೆ ಅವರು ಕೊಟ್ಟ ಔಷಧದಿಂದ ಸ್ವಲ್ಪವೂ ಪ್ರಯೋಜನವಾಗಲಿಲ್ಲ."

"ಆಗ ನಾನು ಪೆರೂನಾ ಕೊಟ್ಟೆನು. ಕೂಡಲೇ ಅದು ಮಗುವಿಗೆ ಗುಣಕೊಟ್ಟಿತು. ಇದುವರೆಗೆ ಆ ಮಗು ಜ್ವರವನ್ನು ಕಾಣದು."

"ನಾನು ಡಾ|| ಹಾರ್ಟ್‌ಮೆನ್‌ರಿಗೆ ಕಾಗದ ಬರೆದಾಗ ನಾನು ಮನೆ ಕೆಲಸಗಳನ್ನು ಮಾಡಲಾರದವಳಾಗಿದ್ದೆನು. ಈಗ ನಾನು ಸಂಪೂರ್ಣವಾಗಿ ಆರೋಗ್ಯ ಹೊಂದಿರುತ್ತೇನೆ."

ಅವರ ಹುಡುಗನ ಪ್ರಾಣವನ್ನು ಕಾಪಾಡಿತು.

ಮಿಸೆಸ್ ಅರ್ನೆಸ್ಟ್ ಹ್ಯಾಕೆಟ್, ೧೭೦ ನಾಪೆಲ್ ಸ್ಟ್ರೀಟ್, ಡೆಸ್‌ಮಾಯಿನ್ಸ್, ಅಯೋವಾ ಯು ಎಸ್ ಎ ಈಕೆ ಬರೆಯುವುದು

"ಎರಡು ವರುಷಗಳ ಹಿಂದೆ ಹರ್ಬರ್ಟ್ ಎಂಬ ನನ್ನ ಚಿಕ್ಕ ಹುಡುಗನಿಗೆ ಕೆಟ್ಟ ಜ್ವರ ಬಂದು ಬಿದ್ದುಕೊಂಡನು. ಅದರ ಜೊತೆಗೆ ಚಳಿಯೂ ಇತ್ತು. ಬೊಬ್ಬೆಗಳು ಮೈಮೇಲೆ ಎದ್ದುಕೊಂಡಿದ್ದವು. ಅವನ ದೇಹಕ್ಕೆ ನಾವು ಕೊಟ್ಟ ಔಷಧಗಳು ಹೊಟ್ಟೆಗೆ ಹಿಡಿಯದೆ ಕೆಲವು ವಾರಗಳ ತನಕ ಅವನ ಸ್ಥಿತಿ ಗಂಡಾಂತರವಾಗಿತ್ತು. ಅವನು ಬದುಕುವುದಿಲ್ಲವೆಂದು ತೋರುತ್ತಿತ್ತು. ಅವನ ಬಾಯಿಯಿಂದ ಕಡೆಗೆ ಅನ್ನ ಹೋಗದೆ ಕೂಡ ಬಹಳ ಕಷ್ಟವಾಗಿತ್ತು. ಅವನು ಕುಳಿತುಕೊಳ್ಳಲಾರದವನಾದನು. ಆಗ ಅವನ ಕೆಮ್ಮು ಕಡಿಮೆಯಾಗುವಂತೆ ಏನು ಮಾಡಿದರೂ ಇಲ್ಲದೆ, ಕ್ಷಯಿಸುತ್ತಾ ಬಂದನು. ಆ ಕೆಮ್ಮು ಬಹಳ ಕಠಿಣವಾಗಿಯೂ ತುಂಬಾ ದೀರ್ಘವಾಗಿಯೂ ಹೆಚ್ಚಿ, ಅವನ ಶರೀರವನ್ನು ಬಹಳ ಕೆಡಿಸಿತು. ಅವನಿಗೆ ಕ್ಷಯರೋಗವೆಂದು ಎಲ್ಲರೂ ಭಾವಿಸಿದರು. ಆಗ ನಾವು ಇತರ ಔಷಧಗಳನ್ನು ಬಿಟ್ಟು, ಪೆರೂನಾವನ್ನು ಕೊಟ್ಟು ನೋಡೋಣವೆಂದು ಒಂದು ಬಾಟ್ಲಿಯನ್ನು ಕೊಂಡು ತಂದು ಅದರಲ್ಲಿ ಹೇಳಿರುವ ಕ್ರಮದಂತೆ ಕೊಡುತ್ತಾ ಬಂದೆವು. ಎರಡು ಬಾಟ್ಲಿ ಸೇವನೆ ಮಾಡಿದ ಮೇಲೆ ಅವನಿಗೆ ಚೆನ್ನಾಗಿ ವಾಸಿಯಾಯಿತು. ಅಂದಿನಿಂದೀಚೆಗೆ ಅವನು ಒಂದು ದಿವಸವಾದರೂ ಕಾಯಿಲೆಯನ್ನು ಕಾಣನು. ಆರೋಗ್ಯವಾಗಿಯೂ ಸಂತೋಷದಿಂದಲೂ ಬಾಳುತ್ತಿದ್ದಾನೆ. ನಾವು ಸರ್ವದಾ ಪೆರೂನಾವನ್ನು ಹೊಗಳುತ್ತೇವೆ. ಏಕೆಂದರೆ ಅದು ನಮ್ಮ ಹುಡುಗನ ಪ್ರಾಣವನ್ನು ಉಳಿಸಿತು."

ಕಾಯಿಲೆ ಬೀಳುವ ಮಕ್ಕಳು.

ಮಿಸೆಸ್ ಪಾರ್ಸನ್, ೫೮೦ ಪ್ರೆಸ್ಪೆಕ್ಟ್ ಅವೆ, ಸೆಂಟ್ ಲೂಯಿಸ್, ಮಿಸೌರಿ ಯು ಎಸ್ ಎ ಈಕೆ ಬರೆಯುವುದು —

"ಹೋದ ವರುಷ ಪ್ರಾರಂಭದಲ್ಲಿ ನನ್ನ ನಾಲ್ಕು ವರ್ಷದ ಮಗಳು ಆಲಿಸ್ ಎಂಬುವನ್ನು ನಿಮಗೆ ಬರೆದು, ನಿಮ್ಮ ಅಭಿಪ್ರಾಯ ಕೇಳಿದೆನು. ಅವಳು ಹುಟ್ಟಿದಾರಭ್ಯ ಕಾಯಿಲೆ ಬೀಳುತ್ತಾ ಬಹಳ ಕೃಶವಾಗಿದ್ದಳು. ಅವಳಿಗೆ ಅಷ್ಟು ಕಟ್ಟು ಇಲ್ಲದ ಜ್ಞಾನ ತಪ್ಪುತ್ತಿರುವುದು, ಶೀತಜ್ವರಗಳು ಬರುವುದು ತಪ್ಪಲಿಲ್ಲ. ನಾನು ಅವಳಿಗೆ ಇತರ ಔಷಧಗಳನ್ನು ಕೊಟ್ಟು ವಾಸಿಯಾಗದ ನಂತರ ತಾವೇ ಪೆರೂನಾ ಕೊಡ ಆರಂಭಿಸಿದೆನು. ಅವಳಿಗೆ ಆರೋಗ್ಯವಾಯಿತು, ಶಕ್ತಿ ತುಂಬಿಕೊಂಡಿತು. ಪೆರೂನಾ ಬಲಕಾರಿಯಾದ ಔಷಧವಾಗಿರುತ್ತದೆ. ಇಂಥಾ ಅದ್ಭುತವಾದ ಔಷಧವನ್ನು ನಾನು ಯಾವಾಗಲೂ ಉಪಯೋಗ ಮಾಡಿಲ್ಲ."

"ನಾನು ಕೂಡಾ ಬಹಳ ದುರ್ಬಲಸ್ಥಿತಿಯಲ್ಲಿದ್ದೆನು. ಅದರಿಂದ ಪೆರೂನಾ ಸೇವಿಸಲಾರಂಭಿಸಿದೆನು. ನನ್ನ ದೇಹವೆಲ್ಲಾ ಶೀತವಾದ ನಡುಗುತ್ತಿತ್ತು. ದೇವರ ದಯೆಯಿಂದ ನಿಮ್ಮ ಔಷಧವು ನನಗೆ ಆರೋಗ್ಯವನ್ನು ಕೊಟ್ಟಿದೆ. ನನಗೆ ಇನ್ನಾವ ಔಷಧದ ಮೇಲೂ ಅಪೇಕ್ಷೆ ಇಲ್ಲ."

"ಪೆರೂನಾ ನನ್ನ ಎಳೇ ಮಗುವನ್ನು ಬದುಕಿಸಿತು. ಅದಕ್ಕೆ ಚಳಿಯೂ ಜ್ವರವೂ ಬರುತ್ತಿತ್ತು. ಈಗ ಈ ಮಗು ದೊಡ್ಡದಾಗಿ ಮೈತುಂಬಿಕೊಂಡು ಆರೋಗ್ಯವಾಗಿದೆ. ಅವನಿಗೆ ಹುಟ್ಟಿದಾರಭ್ಯ ಪೆರೂನಾವನ್ನು ಆಗಾಗ ಕೊಡುತ್ತಿದ್ದೇನೆ. ಅದರಿಂದಲೇ ಅವನು ಇಷ್ಟು ಆರೋಗ್ಯವಾಗಿದ್ದಾನೆಂದು ನನಗೆ ತೋರುವುದು. ಪೆರೂನಾವನ್ನು ಎಲ್ಲಾ ಹೊಸಗಿವರೂ ತಾಯಂದಿರೂ ಅದನ್ನು ಉಪಯೋಗಿಸುವುದಕ್ಕೆ ಪ್ರಾರಂಭಿಸಬಹುದು. ಒಬ್ಬ ಡಾಕ್ಟರಾದರೂ ನನ್ನ ಮನೆಗೆ ಬಂದಿಲ್ಲ. ಅದು ಬಹಳವಾಗಿ ಕೊಂಡುಕೊಳ್ಳತಕ್ಕದ್ದಾಗಿದೆ."

ಮಗು ಈಗ ಆರೋಗ್ಯವಾಗಿದೆ.

ಮಿಸೆಸ್ ಜಿ ಡಬ್ಲಿಯು ಹರ್ಟ್ ಅಫ್ ಪೋರ್ಟ್, ಟೆಕ್ಸಾಸ್. ಯು ಎಸ್ ಎ, ಈಕೆ ತನ್ನ ಕೈಮಗು ರೂಬಿ ವಿಷಯದಲ್ಲಿ ಡಾ|| ಹಾರ್ಟ್‌ಮೆನ್‌ರಿಗೆ ಬರೆಯುವುದು —

"ಇದೇ ಜನವರಿಗೆ ನನ್ನ ಮಗುವಿಗೆ ಎರಡು ವರ್ಷ ತುಂಬಿತು. ಈ ಮಗುವಿಗೆ ಮ್ಯೂಕೋಸಾ ಕೋಶಕ್ಕೆ ಕಟ್ಟು ಹೊರಟಿತ್ತು. ಮಗುವು ಒಂದು ಮೂಳೆಚಕ್ಕಳದಂತಾಗಿ ಅದು ಬದುಕಿರುವುದೆಂದು ನಾವಾರೂ ಯೋಚಿಸಲಿಲ್ಲ. ಈ ಮಗು ಮೂರು ನಾಲ್ಕು ತಿಂಗಳ ಕಾಲ ಕಾಯಿಲೆ ಬಿದ್ದಿತ್ತು. ಒಂದು ಬಾಟ್ಲಿ ಪೆರೂನಾ ಸ್ವಲ್ಪ ಸ್ವಲ್ಪ ಭಾಗವನ್ನು ಮಾತ್ರ ಕೊಡುವದರಲ್ಲಿ ಈ ಮಗುವಿನ ಆರೋಗ್ಯವಾಗಿದೆ."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದವುಗಳು ಇವರಿಂದಲೇ ತಿಳಿಯಬಹುದು.

ವಿಳಾಸ:—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

26—3—1909 ರಿಂದ 2—4—1909 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ		•	•	0	0
ಮೈಸೂರು	,,	0	1	0	0
ಬೆಂಗಳೂರು ಡಿಸ್ಟ್ರಿಕ್ಟು		1	1	0	0
ಮೈಸೂರು	,,	4	2	13	7
ಕೋಲಾರ್	,,	5	8	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಮಕೂರು ಡಿಸ್ಟ್ರಿಕ್ಟು		3	2	0	0
ಹಾಸನ	,,	0	0	23	14
ಚಿತ್ರದುರ್ಗ	,,	0	0	0	0
ಕಡೂರ್	,,	2	2	6	3
ಶಿವಮೊಗ್ಗಾ	,,	0	0	5	3
• ಸಂಖ್ಯೆ ಕಾಣಿಸಿಲ್ಲ	ಜುಮ್ಲಾ	17	16	47	72

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ವೈಶಾಖ ಶುದ್ಧ ಬಿದಿಗೆ ಗುರುವಾರದಿಂದ ವೈಶಾಖ ಶುದ್ಧ ನವಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೯ ನೇ ಏಪ್ರಿಲ್

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಧ ಕುಂಭ ಮಾಸ
22	ಗುರು ‡	ಬಿದಿಗೆ	1-48	ಭರಣಿ	57-12	10
23	ಶುಕ್ರ	ತದಿಗೆ	55-40	ರೋ	31-27	11
24	ಶನಿವಾ §	ಪಂಚಮಿ	61-11	ಮೃ	31-37	12
25	ರವಿವಾ *	ಷಷ್ಠಿ	53-58	ಆ	32-26	13
26	ಚಂದ್ರ	ಸಪ್ತಮಿ	54-56	ಪು	34-11	11
27	ಕುಜ	ಅಷ್ಟಮಿ	57-5	ಪು	38 1	15
28	ಬುಧ	ನವಮಿ	60-0	ಆಶ್ಲೆ	12-18	16

‡ ಅಕ್ಷಯತೃತೀಯ, ಬಸವಜಯಂತಿ, ಬಳಿಕ ಶಾಲಿ ಚಂದ್ರ ದರ್ಶನ
§ ಶ್ರೀ ಶಂಕರಭಗವತ್ಪಾದಾಚಾರ್ಯರ ಜಯಂತಿ
* ರಾಮಾನುಜಾಚಾರ್ಯರ ತಿರುನಕ್ಷತ್ರ

ಪೇಟೇ ಧಾರಣೆ

ವಿವರ			ಮೈಸೂರು	ಬೆಂಗಳೂರು
ಕಡಿಮೆ ಅಕ್ಕಿ ಪಲ್ಲ ೧ ಕ್ಕೆ		ರೂ	೧೫-೦-೦	೧೭ ೮ ೦
ಕೆಂಬೂತ ಅಕ್ಕಿ ಅವಲ್		.	೧೭-೪-೦	೧೬ ೮-೦
,, ಮಧ್ಯಮ		.	೧೬-೧೨-೦	೧೬-೦-೦
ಬಾಪ್ರಾಸ್ ಅಕ್ಕಿ	.	.	೧೯-೦ ೦	೧೭-೦ ೦
ಸಣ್ಣ ಅಕ್ಕಿ ಅವಲ್	..	..	೧೭-೦-೦	೧೮-೦-೦
ಮಧ್ಯಮ	..	..	೧೬-೦ ೦	೧೭ ೦ ೦
ತೊಗರಿ ಬೇಳೆ ಪಲ್ಲ ೧ ಕ್ಕೆ	.		೧೬-೦ ೦	೧೬-೦-೦
,, ಮಧ್ಯಮ	.	.	೧೫ ೦-೦	೧೫-೮-೦
ಹೆಸರು ಬೇಳೆ ಪಲ್ಲ ೧ ಕ್ಕೆ		..	೮-೮-೦	೯-೦-೦
ಕಾರಾಗಿ	.	...	೮-೪ ೦	೮-೮-೦
ಜೋಳ	...	..	೮-೦-೦	೯-೦-೦
ಹುಲಸಂದೆ ಪಲ್ಲ ೧ ಕ್ಕೆ	.	...	೧೪-೪-೦	೧೩ ೦-೦
ಬಿಳೀ ಅವರೆ		..	೧೧-೪-೦	೧೪-೦-೦
ಹೆಸರು	..	..	೧೪-೦-೦	೧೨-೮-೦
ಉದ್ದು	.		೧೪-೪-೦	೧೪-೦-೦
ಕಡಲೆ	...	..	೧೩-೬-೦	೧೩-೪-೦
ಎಳ್ಳು ಸೇರು ೧೭೭ ಕ್ಕೆ		..	೨೦ ೮ ೦	೨೦-೮-೦
ಹುರುಳಿ	.	.	೧೦-೧೨-೦	೧೦-೦-೦
ಹರಳು ೧೭೭ ಸೇರಿಗೆ	.	..	೧೧-೦-೦	೧೦-೮ ೦
ಸೀಗೇಕಾಯಿ ಮಣ ೧ ಕ್ಕೆ	.	.	೧-೧೨-೦	೧ ೧೨-೦
ಮೆಣಸಿನಕಾಯಿ	.	..	೫ ೮-೦	೪-೪-೦
,, ಮಧ್ಯಮ		..	೫-೦-೦	೩-೧೨-೦
ಬೆಲ್ಲ ದೊಡ್ಡ ಅಚ್ಚು		..	೬-೪-೦	ಮ ೧-೧೧-೦
ಒಳ್ಳೆಣ್ಣೆ ಮಣ ೧ ಕ್ಕೆ	..	.	೫-೦-೦	೫ ೪-೦
ಹರಳೆಣ್ಣೆ ,,	..	..	೪ ೮ ೦	೪-೪ ೦
ಕೊತ್ತುಂಬರಿ ಪಲ್ಲ ೧ ಕ್ಕೆ		.	೬ ೧೨-೦	೮-೮-೦
ಉಪ್ಪು	..	.	೫-೮-೦	೭ ೦-೦
ಹುಣಿಸೇ ಹಣ್ಣು		..	೧ ೮-೦	೧-೧೨ ೦
,, ಹಳೇದು			೧-೪-೦	೧-೮-೦
ತುಪ್ಪ ಮಣ ೧ ಕ್ಕೆ	.	.	೧೫-೮-೦	೧೪-೦-೦
ಸೀಮೆಯೆಣ್ಣೆ ಪೆಟ್ಟಿ ೧ ಕ್ಕೆ	..		೨-೦-೦	೩-೮-೦
ತೆಂಗಿನಕಾಯಿ ೧೦೦ ಕ್ಕೆ	...	...	೪-೮-೦	೪-೮ ೦
ಅಡಿಕೆ ಮಣ ೧ ಕ್ಕೆ	.	...	೦-೮-೦	೧ ೦-೦
ಅಂಟುವಳದ ಕಾಯಿ ಮಣ ೧ ಕ್ಕೆ		..	೧-೦-೦	೧-೪-೦
ಚಿನ್ನ (ಪೌನ್) ತೊಲ		.	೧೫-೬-೦	೧೫-೭-೦
,, ,, ಸವರಿನ್	..	.	೧೬-೦-೦	೧೫-೯-೦
,, ,, ಗಟ್ಟಿ ತೊಲ ೧ ಕ್ಕೆ		...	೨೪-೮-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	...	..	೬೭-೪-೦	೬೪-೪-೦

Printed and Published by the Rev. H GULLIFORD, Proprietor and Manager, Wesleyan Mission Press Mysore. 22/4/1909.

REGISTERED
M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸೆ ೧೯೧೯ ನೇ ಇಸವಿ ಏಪ್ರಿಲ್ ತಾರೀಖು ೨೫ ನೇ ಗುರುವಾರ. ಸಂಚಿಕೆ ೪೮

WILLIAM & Co. FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟಿದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30 10]

ತಲೆನೋವು, ಗಂಟು ಉಬ್ಬುವದು, ... ಸಂಧಿವಾತ, ಉಳುಕು, ... ಗಂಟು ನೋವು ಆಘಾತಗಳಾದುದು, ಎಟಿತ, ಘಾಯ, ಜಖಮು, ಇತ್ಯಾದಿ

ಅಭಿಪ್ರಾಯ

... ಕಾರವಾರ — ... ಅಮೃತಾಂಜನವನ್ನು ... ಅಮೂಲ್ಯವಾದ ... ಈ ಅಮೃತಾಂಜನವು ... ಅತ್ಯುತ್ತಮವಾಗಿ ಸರ್ವ ಜನರಿಂದಲೂ ಪ್ರಶಂಸಿಸಲ್ಪಡುವದು "

ಗಜಕರ್ಣದ ಮುಲಾಮು.

... ಗಜಕರ್ಣ, ಕುಂ, ಕಜ್ಜಿ ಮುಂತಾದವು ... ಉರಿಯು ಬರುವದಿಲ್ಲ ... ಒಂದರ ಕಿಮ್ಮತ್ತು ೦ ೬ ೦ ... ೧ ೦ ೦

ವಜ್ರಗುಟಿಕೆ.

ಧಾತುಪುಷ್ಟಿ, ರಕ್ತಶುದ್ಧಿ, ಬಾಟ್ಲು ಒಂದರ ಕಿಮ್ಮತ್ತು ರೂ ೧ ೦-೦
ಬಂದರೇ ಮುಂಬಾಯಿ—ಮುಟ್ಟಣಗಳಿಗೆ ೦ ೮ ೦
ನ ಕಮಿಂಜನ—ಹಲ್ಲುಗಳು ಗಟ್ಟಿ ... ೦-೬-೦

ಈ ಕಂಪನಿಯವರು ಹೆಚ್ಚು ... ಔಷಧಗಳನ್ನು ತಯಾರಿಸುವದ ... ಈ ಕೆಳಗಿನ ವಿಳಾಸಕ್ಕೆ ಬರೆಯಬೇಕಲ್ಲದೆ ... ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್ ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು — "ಅಮೃತಾಂಜನ" ಮುಂಬಯಿ

THE PLACE FOR HASSAN CAPS IS
HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆ ... ? ... ಹಾಸನದಿಂದಲೇ ಎಂದು ...

ಈಗ ಇತರ ಕಡೆಗಳಲ್ಲಿ ... ಟೋಪಿಗಳ ... ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ... ಟೋಪಿಗಳ ... (೨) ಟೋಪಿಗಳನ್ನು ... ಚೆನ್ನಾಗಿ ... ಚೆನ್ನಾಗಿ ... ಕಳುಹಿಸುತ್ತೇವೆ

ಒಳ್ಳೇದಾದ ಚೆನ್ನಾಗಿ ... ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೆ ಬೇಗ ಬರೆದು ತರಿಸಿಕೊಳ್ಳಿ ... ಚೆನ್ನಾಗಿಲ್ಲದ್ದು ... ನಮ್ಮಲ್ಲಿ ದೊರೆಯುವದಿಲ್ಲ

ಕಪ್ಪು, ಬಿಳಿ, ... ಟೋಪಿಗಳು ೧ ರೂ ೮ ೦ ...
... ಟೋಪಿಗಳು ...
... ಟೋಪಿಗಳು ...

ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಜ್ವರಸುಧಾ

81 30

ಒಂದು ಬಾಟ್ಲು ಕಿಮ್ಮತ್ತು ೮ ಆಣೆ ... ಬೇರೆ

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ ಮುಂತಾದ ಅನೇಕ ಜ್ವರಗಳನ್ನು ... ಬೇರೆ ಔಷಧಿ ... ಡಾಕ್ಟರುಗಳು ಹೇಳುತ್ತಿದ್ದಾರೆ ... ಕೈಕಾಲು ನೋವು ... ಮುಂತಾದವುಗಳನ್ನು ... "ಸುಧಾ" ಅಂದರೆ ಅಮೃತವನ್ನು ... ನಮ್ಮ ಜ್ವರಸುಧೆಯು ಎಲ್ಲಾ ವಿಧವಾದ ಜ್ವರಗಳನ್ನೂ ನಾಶಪಡಿಸುವುದರಲ್ಲಿ ಪ್ರಸಿದ್ಧಿ ಗೊಂಡಿದೆ ...

ದೇವನಹಳ್ಳಿ ... ಗೋವಿಂದಶೆಟ್ಟಿ,
ಬೆಂಗಳೂರು ... ಮೆಡಿಕಲ್ ಪ್ರಾಕ್ಟೀಷನರ್

ಜ್ವರಹರಿ

18-13



ಇದು ಸಾಧಾರಣ ಜ್ವರ, ಚಳಿಜ್ವರ, ದೊಡ್ಡಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ... ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ... ಮರಾಮತ್ ... ಆಯ್ಯರವರು—... ನಮ್ಮ ಔಷಧದಿಂದ ಅನೇಕ ... ಚೆನ್ನಾಗಿ ... ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ—... ೮ ಆಣೆ ... ರೂ ... ಡಜನ್ನುಗಳಿಗೆ ... ಕಳುಹಿಸಲಾಗುವದು

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮುಖ್ಯವಾಗಿ ... ಗುಣಕೊಡುವದು ... ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ... ಗುಣಪಡಿಸುತ್ತದೆ ... "ಜ್ವರಹರಿ" ಎಂಬ ಔಷಧದಂತೆಯೇ ... ದೊರಕುವದು

... ಅಸಿಸ್ಟೆಂಟ್ ಸರ್ಜನ್ ... ಓಮಂ ಕರ್ಪೂರವನ್ನು ... ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ... ಅಜೀರ್ಣ ರೋಗಿಗಳಿಗೆ ಕೊಡುತ್ತೇನೆ ... ಗುಣವಾಗುತ್ತಲಿದೆ ... ಬಹು ಒಳ್ಳೆ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ... ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ... ಕೆಳಗಿನ ವಿಳಾಸದಲ್ಲಿ ವಿಕ್ರಯ —

ಕೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಲೈನ್ ಬೀಚ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲಿ ಇತರ ಕಡೆಗಳಲ್ಲಿ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸಹ	ರೂ ೧—೧೪—೦
" " "	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ... ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

18 49

ತಲೆನೋವು, ವಾಯುನೋವು, ಸಳಕ, ಗಂಟುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂಧುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಮುಕ್ತಿ ... ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ... ಚಿಂತಿತರಾಗಿಯೂ ... ಈ ಔಷಧದ ಶಕ್ತಿಯು ... ಈ ಔಷಧವನ್ನು ... ಈ ಅಮೋಘವಾದ ತೈಲವು ... ಮೂಲಸ್ಥಾನವನ್ನು ಹಿಡಿದು ... ಹೋಗುವಂತೆ ಮಾಡುತ್ತದೆ

ಕ್ರಯ ... ಆಣೆ ... ಡಜನ್ ... ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ... ಡಾಕ್ಟರುಗಳಿಗೆ ... ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ವೈದ್ಯರೂ ... ಏಜಂಟರ ವಿಳಾಸ—

ಎಸ್. ಕ್ಲೆಮೆಂಟ್ಸ್,

೩೬, ಪೇದಮುಟ್ಟಿಪಿಳ್ಳೆ ಬೀದಿ, ಪೇರಿ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ಪರಾಂಬರಿಸಿ.

10 17

"ಬ್ರಹ್ಮಚರ್ಯ" ವೆಂಬ ... ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ... ಯೌವನಸ್ಥರು ಓದಿ ... ಕ್ರಯ ... ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ... ಜಪಾನ್ ದೇಶೀಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ಹೊಂದಿರುವರು ಈ ವರುಷ ಮದರಾಸ್ ಯೂನಿವರ್ಸಿಟಿ ... "ಸ್ವಪ್ರಯಾಸಫಲದೀಪಿಕೆ" ಯನ್ನು ... ಇದನ್ನು ಬಾಲಕರು ... ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನ ಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟಿದ್ದು ಮತ್ತು ಬಹು ರಸಿಕವಾದ್ದು ಇದರಲ್ಲಿ ಸೂಚಿಸುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುತ್ತದೆ. ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟಿನ ದಿನಸ್ಥಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ... ಮಹಾತ್ಮನ ಜೀವನಚರಿತ್ರೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ಕ್ಯಾಲಿಕೊ ಬೈಂಡು ಪ್ರತಿ ಒಂದಕ್ಕೆ ೦—೧೦—
ಪಟ್ಟಿಯ ಬೈಂಡು ಪ್ರತಿ ಒಂದಕ್ಕೆ ೦—೧೪—

ವಿಳಾಸ—ಮ್ಯಾನೇಜರ್, ... ಬುಕ್ ಡಿಪೋ ಮೈಸೂರು

WANTED

A Proof-Reader, competent both in English and Kanarese. Salary according to qualifications.—Apply to 44-2

Wesleyan Mission Press,
Mysore.

ಅತಿ ಆಶ್ಚರ್ಯ! ಎಲೆಕ್ಟ್ರಿಕ್ ಕ್ಯಾಂಡಲ್. ಸುಲಭ ಕರೀದಿ!

39-8

ಈ ದೀಪವನ್ನು ಪಾಕೆಟ್ಟಿನಲ್ಲಿ ಇಟ್ಟುಕೊಳ್ಳುವಹಾಗೆ ಚಿಕ್ಕ ಸೈಜಿನಲ್ಲಿ

ತಯಾರಿಸಿರುತ್ತದೆ. ಇದಕ್ಕೆ ಬೆಂಕಿ, ಬತ್ತಿ, ಎಣ್ಣೆ ಸ್ವಲ್ಪವೂ ಅವಶ್ಯಕವಿಲ್ಲವು. ಇದು ವಿದ್ಯುಚ್ಛಕ್ತಿಯಿಂದ ಉರಿಯುವುದು. ಇದರಿಂದ ಯಾವತರದ ಅಪಾಯವು ಉಂಟಾಗಲಿಕ್ಕಿಲ್ಲ. ಇದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲವು ಮತ್ತು ಎಂಥಾ ದೊಡ್ಡ ಗಾಳಿ ಬಡಿದಾಗ್ಯೂ ಆರುವುದಿಲ್ಲವು. ಇದನ್ನು ಸೋಜರುಗಳು ಕಾಡುಗಳಲ್ಲಿ ಪ್ರಯಾಣಮಾಡುವದಕ್ಕೆ ಬಹಳ ಉಪಯೋಗಿಸುತ್ತಲಿದಾರೆ. ಬೇಕಾದ ಕಾಲದಲ್ಲಿ ಈ ಪೆಟ್ಟಿಗೆಯ ಮೇಲ್ಗಡೆ ಇರುವ ಬಟ್ಟನ್‌ನನ್ನು ಬೆಟ್ಟಿನಿಂದ ಒತ್ತಿದ ಕೂಡಲೇ ೧೦೦ ದೀಪಗಳು ಹತ್ತಿದರೆ ಎಷ್ಟು ಕಾಂತಿ ಕೊಡುವುದೋ ಅಷ್ಟು ಬೆಳಕನ್ನು ಕೊಡುವುದು. ಇದು ಎಷ್ಟು ದಿವಸಗಳು ಬೇಕಾದರು ಬಾಳಿಕೆ ಬರುವುದು. ಉಪಯೋಗಿಸತಕ್ಕ ವಿಧಾನವು ಇದರ ಸಂಗಡ ಬರೆದು ಹಚ್ಚಿಯಿದೆ

ಇದರ ಕ್ರಯ ರೂ. ೩—೦—೦. ವಿ. ಪಿ. ಚಾರ್ಜ್ ರೂ. ೦—೪—೦

ದಿ ಮದರಾಸ್ ಎಲೆಕ್ಟ್ರಿಕ್ ಎಂಪೋರಿಯಂ, ಸೌಕಾರ್‌ಪೇಟೆ, ಮದರಾಸ್

ನೋಡಿರಿ. "ಪ್ರೋತ್ಸಾಹ ಕೊಡಿರಿ." ತರಿಸಿರಿ.

95 29

ಈಗ ತಾನೇ ಸೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ

೫,೦೦೦ ಹಾಸನ್ ಟೋಪಿ ಹೊಲಿಯುವ ಸುಪೀರಿಯರ್ ಸ್ಟ್ರಾಲನ್ ದಾರ

೧೦ ಟೋಪಿಯಾಗುವ ಪ್ರೂಫ್ ಬಂಡಲ್ ೧ಕ್ಕೆ ೩-೭-೦. ೧ ಟೋಪಿಯಾಗುವ ಪ್ರೂಫ್ ದಾರಕ್ಕೆ ೦-೮-೦; ಹಾಸನ್ ಟೋಪಿ ಹಾಕುವ ಕೊಕ್ಕೆ ಸೂಜಿ ೧ಕ್ಕೆ ೦-೧-೬, ... ೩೦ ಇಂಚಿನ ದೊಡ್ಡ ಸೈಜು ಬನಿಯನ್ ೧ಕ್ಕೆ ೦-೮-೦, ಪಾಲಿ ಪೋಸ್ಟ್ ಕಾರ್ಡು, ಡಬ್ಬಲ್ ಕಲರ್, ೧,೦೦೦ಕ್ಕೆ ೧-೮-೦, ಸುಗಂಧ ಸಂಜೀವಿನಿ, ಭೃಂಗಾಮಲಕ ತೈಲ, ಸೀಸೆ ೧ಕ್ಕೆ ೦-೮-೦ ಮೆಂತ್ಸಾಲ್, ತಲೆನೋವಿಗೆ ಅನುಕೂಲವಾದ ಔಷಧ, ಡಬ್ಬಿ ೧ಕ್ಕೆ ೦-೩-೦ ೩೦೦ ಮಾತ್ರೆಗಳು ಇರುವ ಸೇಕ್, ಸೇಕ್ ಪರಿಮಳದ ತಾಂಬೂಲಮಿಶ್ರವು, ಪ್ಯಾಕೆಟ್ ೧ಕ್ಕೆ ೦-೩-೦, ಲಿನನ್ ಕೈವಸ್ತ್ರಗಳು (ಚಂದವಾದದ್ದು) ೧ಕ್ಕೆ ೦-೭-೯, ರಾಸ್‌ಕೋಪ್ ಸ್ಟ್ಯಾಯಿಲ್ ವಾಚು ೧ಕ್ಕೆ ೪-೨-೦, ಕೋಟಿನ ಬೀಜಣಿಗೆಗಳು, ದೊಡ್ಡ ಸೈಜು, ಡಜನ್ ೧ಕ್ಕೆ ೧-೭-೦, ಗವರ್ನ್ಮೆಂಟ್ ಮುಲಾಮು ಡಬ್ಬಿ ೧ಕ್ಕೆ ೧-೬-೦, ೨೮ ಇಂಗ್ಲೀಷು ಅಕ್ಷರಗಳಡಗಿ ಇರುವ ಪೆಟ್ಟಿಗೆ ೧ಕ್ಕೆ ೨-೮-೦, ಪರಿಮಳ ಸಸ್ಯದಪುಡಿ ಸೀಸೆ ೧ಕ್ಕೆ ೦-೩-೦. ೮ ಲಡಿಗಳಿರುವ ಪೆರುವಿನ ಪ್ರೂಫ್ ದಾರದ ಬಂಡಲ್ ೧ಕ್ಕೆ ೩-೦-೦, ಪೆರುವಿನ ಪ್ರೂಫ್ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ ೧೮-೦-೦, ಕೋಕ ಪ್ರಸಿದ್ಧವಾದ ಚೀನ ಔಷಧ ಸೀಸೆ ೧ಕ್ಕೆ ೨-೪-೦. ಕ್ಯಾಟ್‌ಲಾಗನ್ನು ಕೇಳಿದವರಿಗೆ ಕಳುಹಿಸುತ್ತೇವೆ. ಪರಸ್ಥಳದವರಿಗೆ ವಿ. ಪಿ. ಯಿಂದಲೂ ರವಾನಿಸುತ್ತೇವೆ

ವಿಳಾಸ — ಡಿ. ಸ್ಟ್ರಾಲನ್ ಮಾರ್ಟ್, ಮಂಗಳೂರು

ಸಂಜೀವಿನೀ ಔಷಧಾಲಯ, ಮೈಸೂರು.

23-12

ಎಂ. ಎಸ್. ಕುಮಾರ್‌ರವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಕ್ಷಯ, ವಾಯುರೋಗಗಳೂ, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬದ್ಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಸೌಂದರ್ಯ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ. ಕ್ರಯ ಸೀಸೆ ೧ಕ್ಕೆ ೩ ರೂಪಾಯಿ.

ಸಂಜೀವಿನೀ ಮಾತ್ರೆ.—ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ. ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ. ೬-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ. ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ.

ಕಾಲಕೂಟವಟಿಕ:—ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಖನೇತ್ರ ಬಿಂದು.—ಉರಿಗಣ್ಣು, ಕೆಂಗಣ್ಣು, ಪಾಚಿಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ. ಕ್ರಯ ಸೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ.

ಇನ್ನೂ ಅನೇಕ ಔಷಧಗಳೂ, ಕರಾವಳಿ ಅತ್ತರುಗಳೂ, ಗಂಧದಬತ್ತಿ, ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ. ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು. ಅರ್ಥವಾಗದ ... ಇಟ್ಟು ಬರೆಯಿರಿ.

ಡಿ. ಕೆ. ಸ್ವಾಮಿ,
ಪ್ರೊಪ್ರೈಟರ್.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು.



1-17

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಖಾತ್ರಿಯಾದುದಾಗಿದೆ

ಆ ಕೆಮ್ಮನ್ನು ಅಲಕ್ಷ್ಯ ಮಾಡಬೇಡ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಶೀಘ್ರವಾಗಿ ನಿವಾರಣೆಮಾಡುತ್ತದೆ. ಉಸುರು ಹೋಗುವುದು ಕಷ್ಟವಾಗಿದ್ದರೆ ಅದನ್ನು ಕೂಡಲೆ ಸಂಹರಿಸುತ್ತದೆ. ಅಸಾಧ್ಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ ನಿದ್ರೆ ಸುಖವಾಗಿ ಬರುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವದಿಲ್ಲ.

ಈ ಔಷಧವು ಮಕ್ಕಳಿಗೆ ಕ್ಷೇಮ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

JUST RECEIVED! JUST RECEIVED!!

Stead's Books for the Bairns
(Illustrated) New Numbers 15-17

STEAD'S PENNY POPULAR TALES—Sixty-four Pages in a coloured Picture Cover. Each number contains a story of thrilling interest. 24 numbers

CALENDARS FOR 1909.

Apply—The Manager, C. L. S. Book Depot, Mysore City.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28 11

ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆನೋವು, ಸಂದುಗಳ ನೋವು, ಮೈ ಕೈ ತಾಪ, ... ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನಿಶ್ಶಕ್ತಿ, ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ತುಂಡಿಕವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಆಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಬಾಯಿ ಕಾಯಿಲೆಗೂ ದಾರಿ ... ಕೀಲು ಹಸಿವು ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ... ಕೃತ್ರಿಮಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ನಿಂತಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಸಹ ಔಷಧದ ಸಂಗಡಲೇ ಇರುತ್ತದೆ.

೬೦ ಮಾತ್ರೆಯುಳ್ಳ ಕುಪ್ಪಿ ೧ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಏರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಷ್ಟ್ರವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ.

SCOTT'S EMULSION 6-17
(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನು ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ



ಮೀನುಮನುಷ್ಯ ಇರುವ ಈ ಔಷಧದ ಗುರುತು

ಇದಕ್ಕೆ ಸಮಾನವಾದದ್ದು ಮತ್ತ್ಯಾವದೂ ಇಲ್ಲ.

ಈ ಔಷಧವನ್ನು ಸೇವಿಸ ಮಾಡುತ್ತಾ ಬಂದರೆ ಒಡನೆಯೇ ಅದರ ಗುಣಗಳು ಕಂಡುಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

WANTED, A MUNSHI

For Literary and Translation Work. Applicants must have passed the F. A. Examination, and possess a thorough knowledge of Kannada Literature. Apply to, 11 2

Miss PARSONS, Hardwicke, Mysore City.

WANTED

The Following Books:—

(1) Dr. Moegling's Coorg Memoirs, 1855 (English translation).
(2) Coorg and its Rajas, 1857, by 'An Officer formerly in the service of Vira Raja Wadiyar.' 15 1
(3) Any other books relating to Coorg

Please address

The Commissioner,
Mercara.

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!!

2 16

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಸ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಒಳ್ಳೆಯ ಗುಣವಿದ್ದ ಹೊರತು ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ೧ಕ್ಕೆ ೫ ಆಣೆಯಿಂದ ೭ ಆಣೆ ವರೆವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೊಡಗಿನ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪ್ಪೋ, ಮೈಸೂರು.

ನಿನಗೆ ಮೈ ಸ್ವಸ್ಥವಿಲ್ಲವೋ?

ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ— ಎಂದರೆ, ನನಗೆ ಯಾವ ನೋವೂ ಉಂಟಾಗಿರಲಿ—" ನನಗೆ ದಿನಕ್ಕೆ ಒಂದು ಸಲವಾದರೂ ಮಲಪ್ರವೃತ್ತಿಯಾಗುತ್ತದೆಯೇ ?" ಎಂದು ನನ್ನನ್ನು ನೀನೇ ಕೇಳಿಕೊ.



(೧೨ ಆಣೆ ಬುಡ್ಡಿ ಪರಿಮಾಣ)

ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲ ಪ್ರವೃತ್ತಿಯಾಗಿ ನನಗೆ ಮೈ ಸ್ವಸ್ಥವಾಗುವುದು. ಮಲಬದ್ಧವೆಂಬುವದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟ ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬದ್ಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ; ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಸಿ, ಅಶಕ್ತಿ, ಎದೆಯು ಕಲ್ಲೆದೆಸುವುದು, ತಲೆತಿರುಗುವುದು; ತಲೆನೋವು; ಹೊಟ್ಟೆಯುಬ್ಬರ, ಹುಳಿತೇಗು, ಹೊಟ್ಟೆ ಹಸಿವು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು. ಒಂದುವೇಳೆ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ನಿಧಾನವಾಗಿ ಕೆಲಸಮಾಡುವುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನು ಕ್ಷೇಮವಾಗಿ ಬೇಯಿಸುವ ಕ್ರಮದಲ್ಲಿ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಸುಖವಾಗಿಯೂ ಹಿತವಾಗಿಯೂ ಇಟ್ಟು ತಪ್ಪದೆ ಬೇಗ ಸೌಖ್ಯವನ್ನುಂಟುಮಾಡುವುವು. [69-35]

ಬೆಲೆ ೮ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೩೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ಡೋಯಿಂದ ಅಥವಾ ಡೋನ್ಸ್ ಪಿ. ಒ. ಬಾಕ್ಸ್ ೩೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ವೃತ್ತಾಂತ ಪತ್ರಿಕೆ.

———:೦.———

ಸ° ೧೯೦೯ ನೇ ಇಸವಿ ಏಪ್ರೆಲ್ ತಾ ೨೯ ನೇ ಗುರುವಾರ

ಮೈಸೂರು ಅಬಕಾರಿ ಇಲಾಖೆಯು.

ಮೈಸೂರು ಸಂಸ್ಥಾನದ ಅಬಕಾರಿ ಇಲಾಖೆಯ ೧೯೦೭-೦೮ ನೇ ಸಾಲಿನ ರಿಪೋರ್ಟನ್ನು ಗವರ್ನಮೆಂಟಿನವರು ಈಗತಾನೇ ಪ್ರಕಟಿಸಮಾಡಿರುತ್ತಾರೆ. ಇದರಲ್ಲಿ ವಿವರಿಸಿರುವ ಕೆಲವು ಸಂಗತಿಗಳು ನಮಗೆ ಸಂತೋಷವನ್ನುಂಟುಮಾಡಿವೆ. ಇನ್ನು ಕೆಲವಂಶಗಳನ್ನು ನೋಡಿ ನಾವು ವಿಷಾದಪಡುವೆವು.

ಗವರ್ನಮೆಂಟಿನವರು ಶೇಂದಿ ಸರಾಬುಗಳ ಮಾರಿಕೆಯ ದರಗಳನ್ನು ಹೆಚ್ಚಿಸಿರುವುದು ಸಂತೋಷಕರವಾಗಿದೆ. ಇದರಿಂದ ಈ ದ್ರವಪದಾರ್ಥಗಳು ಜನರಿಗೆ ಸುಲಭವಾಗಿ ಸಿಕ್ಕದಂತೆ ಅಡ್ಡಿಯಾಯಿತು. ಇವುಗಳ ಸೇವನೆಯು ದೇಹಕ್ಕೆ ಯಾವ ಹಿತವನ್ನೂ ಉಂಟುಮಾಡಲಾರದು: ಇವಕ್ಕೆ ಪ್ರತಿಯಾಗಿ ಬಹಳ ಕೆಡುಕೇ ಆದೀತೆನ್ನುವುದಕ್ಕೆ ಸಂಶಯವಿಲ್ಲ. ಶೇಂದಿ ಸರಾಬುಗಳನ್ನು ಬಿಕರಿಮಾಡುವ ದುಕಾನುಗಳ ಸಂಖ್ಯೆಯು ಸ್ವಲ್ಪಮಟ್ಟಿಗೆ ಕಡಮೆಯಾಗಿರುವುದನ್ನೂ, ಅವನ್ನು ಇನ್ನೂ ಕಡಮೆಮಾಡುವವರಾಗಿದ್ದಾರೆಂಬುವುದನ್ನೂ ತಿಳಿದು ಸಂತೋಷಪಡುತ್ತೇವೆ. ಬೆಂಗಳೂರು ದಂಡಿನಲ್ಲೂ ಸೋಜರುಗಳ ಕ್ಯಾಂಪಿನಲ್ಲೂ ಬೀರ್ ಎಂಬ ಮದ್ಯವು ಬಹಳ ಕಡಮೆಯಾಗಿ ಖರ್ಚಾಗಿರುವುದನ್ನು ನೋಡಿ ಇನ್ನೂ ಹೆಚ್ಚಾಗಿ ಸಂತೋಷಿಸುವೆವು. ಈ ಭಾಗಗಳಲ್ಲಾ ಹರ್ಷಯುಕ್ತವಾದವುಗಳೆಂದು ಕೃತಜ್ಞತೆಯೊಡನೆ ಒಪ್ಪಿಕೊಳ್ಳಬಹುದು ಆದರೆ ಇದಕ್ಕಿಂತಲೂ ದುಃಖವನ್ನೂ ಮನೋವ್ಯಥೆಯನ್ನೂ ಹುಟ್ಟಿಸುವ ವಿಷಯಗಳು ಹೆಚ್ಚಾಗಿರುವವು.

ಪ್ರಜೆಗಳು ಶೇಂದಿ ಸರಾಬುಗಳನ್ನು ಹೆಚ್ಚಾಗಿ ಕುಡಿಯುತ್ತಾರೆನ್ನುವುದಕ್ಕೆ ಸಂಶಯ ತೋರುವುದಿಲ್ಲ. ೧೯೦೬-೦೭ ನೇ ಸಾಲಿನಲ್ಲಿ ೩,೩೦,೩೯೩ ಗ್ಯಾಲನ್‌ಗಳ ಸರಾಬೂ, ೧೯೦೭-೦೮ ನೇ ಸಾಲಿನಲ್ಲಿ ಬಿಕರಿಯ ದರವು ಹೆಚ್ಚಿದಾಗ್ಯೂ, ೪,೨೪,೩೭೦ ಗ್ಯಾಲನ್‌ಗಳ ಸರಾಬೂ ಕುಡಿಯಲ್ಪಟ್ಟವು: ಅಂದರೆ ಹಿಂದಿನ ಸಾಲಿಗಿಂತ ಕಳೆದ ಸಾಲಿನಲ್ಲಿ ಶೇಕಡಾ ೨೪ ರಷ್ಟು ಹೆಚ್ಚಾಗಿರುತ್ತದೆ. ಹೀಗೆ ಸರಾಬು ಹೆಚ್ಚಾಗಿ ಬಿಕರಿಯಾದದ್ದಕ್ಕೆ ಗವರ್ನಮೆಂಟಿನವರು ಕಾರಣ ತೋರಿಸುವುದೇನೆಂದರೆ —(೧) ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಮ್ಯಾಂಗನೀಸ್ ಗಣಿಗಳಲ್ಲಿ ಕೆಲಸಮಾಡುವುದಕ್ಕೆ ಜನರು ಹೇರಳವಾಗಿ ಬಂದು ಸೇರಿಕೊಂಡರು, ಇವರಲ್ಲೇ ವಿಶೇಷವಾಗಿ ಸರಾಬು ಬಿಕರಿಯಾಗಿರುತ್ತದೆ. (೨) ಈ ಸಾಲಿನಲ್ಲಿ ಕೆಲವ್ರಕಡೆ ಶೇಂದಿಯು ಸಿಕ್ಕದೆಹೋದದ್ದರಿಂದ ಜನರು ಸಾರಾಯಿಯನ್ನೇ ಕೊಂಡು ಕೊಂಡರು (೩) ಶೃಂಗಗಿರಿಯ ಮಠದ ಬಡಾವಣೆ ಕಾಮಗಾರಿಗಳಿಗಾಗಿ ಕೂಲೀ ಜನರು ಬಹಳವಾಗಿ ಬಂದು ಇರುತ್ತಾರೆ ಇವರು ಸರಾಬನ್ನು ಕೊಂಡು ಉಪಯೋಗಿಸುವರು (೪) ಮುರುಘ ಮಠದ ಜಾತ್ರೆಯು ಈ ಸಾಲಿನಲ್ಲಿ ನಡೆದದ್ದರಿಂದ ಅಗಲೂ ವಿಶೇಷವಾಗಿ ಖರ್ಚಾಯಿತು ಎಂಬೀ ಕಾರಣಗಳು ಸೂಚಿಸಲ್ಪಟ್ಟಿವೆ.

ಶೇಂದಿಯನ್ನು ಇಳಿಸುವುದಕ್ಕೆ ಕಳೆದ ಸಾಲಿನಲ್ಲಿ ೬,೪೬,೬೯೧ ಈಚಲುಮರಗಳಿಗೂ ೨,೯೩೭ ತೆಂಗಿನಮರಗಳಿಗೂ ಲೈಸೆನ್ಸನ್ನು ಕೊಟ್ಟರು; ಈ ಸಾಲಿನಲ್ಲಾದರೋ ಇಜಾರದಾರರು ೬,೭೦ ೩೪೩೭ ಈಚಲುಮರಗಳಿಂದಲೂ, ೩ ೭೭೭ ತೆಂಗಿನಮರಗಳಿಂದಲೂ ಲೈಸೆನ್ಸು ಪಡೆದು ಶೇಂದಿಯನ್ನು ಇಳಿಸಿರುತ್ತಾರೆಂದು ತಿಳಿಯುವುದು ಈ ರೀತಿ ಶೇಂದಿಯೂ ಸರಾಬೂ ಹೆಚ್ಚು ಹೆಚ್ಚಾಗಿ ಖರ್ಚಾಗುತ್ತಿರುವುದರಿಂದ ಪ್ರಜೆಗಳು ಮದ್ಯಪಾನದಲ್ಲಿ ಬಿದ್ದು ಕೆಟ್ಟುಹೋಗಲು ತುಂಬಾ ಅವಕಾಶವುಂಟಾಗಿದೆ ಹೆಂಡವೂ ಸಾರಾಯಿಯೂ ದೇಹಕ್ಕೆ ಹಿತವನ್ನಾಗಲಿ ಪುಷ್ಟಿಯನ್ನಾಗಲಿ ಕೊಡತಕ್ಕವುಗಳಲ್ಲ. ಅವುಗಳನ್ನು ಸೇವಿಸುವವರು ಕೃಶರಾಗುತ್ತಾರೆ. ಅವರ ಆರೋಗ್ಯಸ್ಥಿತಿಯೂ ಮನಶ್ಶಕ್ತಿಯೂ ಕಡಿಮೆಯಾಗುವುವು.

ಗವರ್ನಮೆಂಟಿನವರು ಈ ಮದ್ಯಗಳನ್ನು ಬಿಕರಿಮಾಡುವ ಸ್ವಾತಂತ್ರ್ಯವನ್ನು ಮೊಸಿಕೊಂಡಿರುವ ವಿಷಯದಲ್ಲಿ ನಮ್ಮ ಆಕ್ಷೇಪಣೆಯೇನೂ ಇರುವುದಿಲ್ಲ. ಎಂದರೆ ಈ ಬಾಬಿನ ಸರ್ಕಾರಿ ಉತ್ಪತ್ತಿಯನ್ನು ಹೆಚ್ಚು ಮಾಡಿಕೊಳ್ಳಬೇಕೆಂಬ ಅಪೇಕ್ಷೆಯು ಅವರಿಗೆ ಕಡಮೆಯಾಗಿರಬೇಕೆಂತಲೂ, ಈ ಬಾಬನ್ನು ಪ್ರಜೆಗಳಿಗೆ ಹಿತಕರವಾದಂಥಾ ಮಾರ್ಗಗಳಲ್ಲಿ ನಡೆಸಬೇಕೆಂತಲೂ ಕೋರುವೆವು ಇವಕ್ಕೆ ಪ್ರತಿಯಾಗಿ ಸರ್ಕಾರದವರು ಶೇಂದಿಬಾಬಿನ ಉತ್ಪತ್ತಿಯನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ ಶೇಂದಿ ವನಗಳನ್ನು ವೃದ್ಧಿಮಾಡುವುದರಲ್ಲಿ ತುಂಬಾ ಶ್ರದ್ಧೆಯುಳ್ಳವರಾಗಿರುತ್ತಾರೆ. ಅದನ್ನು ನೋಡಿ ನಾವು ತುಂಬಾ ವಿಷಾದಪಡುತ್ತೇವೆ. ಈಚಲುಮರಗಳು ಶೇಂದಿ ಇಳಿಸೋಣವಿಂದ ಒಣಗಿಹೋದರೆ ಗವರ್ನಮೆಂಟಿನವರು ಹೊಸದಾಗಿ ಗಿಡಗಳನ್ನು ಬೆಳೆಯಿಸುವುದಕ್ಕೆ ಪ್ರತಿಯಾಗಿ ಅಂಥಾ ಜಮೀನುಗಳನ್ನು ರೈತರಿಗೆ ಸಾಗುವಳಿಗೆ ಕೊಡುತ್ತಾ ಬಂದಲ್ಲಿ ಅವರು ದವಸವನ್ನು ಬೆಳದು ಸುಖಜೀವಿಗಳಾಗಲು ಅನುಕೂಲವಾದೀತು. ಈಚಲುಗಿಡವಲ್ಲಿ ಯಾವ ಬಳ್ಳಿ ಫಲವೂ ಬೆಳೆಯುವುದಿಲ್ಲ ಈ ಗಿಡಗಳು ನಾಶಹೊಂದಿದ ಪಕ್ಷದಲ್ಲಿ ಕುಡುಕತನವೂ ಬಹುಮಟ್ಟಿಗೆ ಕಡಮೆಯಾದೀತು.

ಇದಲ್ಲದೆ ಗವರ್ನಮೆಂಟಿನವರು ಗಾಂಜಾ ಸಾಗುವಳಿಗೆ ಪ್ರೋತ್ಸಾಹ ಕೊಡುತ್ತಿರುವುದು ನಮಗೆ ವಿಷಾದವನ್ನುಂಟುಮಾಡಿದೆ. ಅದು ನಾಶಕರವಾದ ವಸ್ತುವು; ಅದರಿಂದ ವೈದ್ಯರಿಗಲ್ಲದೆ ಮತ್ಯಾರಿಗೂ ಪ್ರಯೋಜನವಿಲ್ಲ. ಇದನ್ನು ಬೆಳೆಯುವುದಕ್ಕೆ ಪ್ರೋತ್ಸಾಹ ಪಡಿಸುವುದರಿಂದ ಗವರ್ನಮೆಂಟಿನವರೇ ಪ್ರಜೆಗಳಿಗೆ ಕೆಡುಕನ್ನುಂಟುಮಾಡುವವರಾಗುತ್ತಾರೆ. ಅದಕಾರಣ ಈ ಭಾಗದಲ್ಲಿ ಗವರ್ನಮೆಂಟಿನವರು ಸಹಾಯಕರಾಗಿ ನಿಲ್ಲುವುದು ಯೋಗ್ಯವಾದದ್ದಲ್ಲ. ಅಫೀಮಿನ ಮತ್ತು ಗಾಂಜಾವಿನ ದರಗಳನ್ನು ಇನ್ನೂ ಬಹಳ ಮಟ್ಟಿಗೆ ಹೆಚ್ಚಿಸಿ, ಅವುಗಳ ಬೆಳೆಯನ್ನು ಕ್ರಮೇಣ ಕಡಮೆ ಮಾಡುತ್ತಾ ಬರಬೇಕಾಗಿದೆ ಹೀಗೆ ಮಾಡದೆ ಸರ್ಕಾರದವರು ಈ ನಾಶಕರವಾದ ಪದಾರ್ಥಗಳನ್ನು ಸುಲಭವಾಗಿ ಬೆಳೆ ಮಾಡುವ ವಿಧಾನವನ್ನು ಪರೀಕ್ಷಾರ್ಥವಾದ ಫಾರಂಗಳಲ್ಲಿ ಬೆಳಸಿ ರೈತರಿಗೆ ಕಲಿಸಿ ಕೊಡುವುದಕ್ಕೆ ಪ್ರಯತ್ನಪಡುತ್ತಾರೆ ಇದು ಎಷ್ಟುಮಾತ್ರವೂ ಯೋಗ್ಯವಾದ ಕಾರ್ಯವೆನಿಸಿಕೊಳ್ಳಲಾರದು.

ಸಾಮಾನ್ಯ ಪ್ರಜಾ ಸಂಖ್ಯೆಯನ್ನು ನೋಡಲಾಗಿ ಪ್ರತಿ ಗಂಡಸೂ, ಹೆಂಗಸೂ, ಮಗುವೂ ೩.೮ ಡ್ರಾಂ ಸಾರಾಯಿಯನ್ನೂ, ೧.೯ ಗ್ಯಾಲನ್ ಹೆಂಡವನ್ನೂ, ೧೦೦ ತೊಲಾದಷ್ಟು ಗಾಂಜಾವನ್ನೂ, ೦೧ ತೊಲದಷ್ಟು ಅಫೀಮನ್ನೂ ಸೇವಿಸುತ್ತಾರೆಂದು ಹೇಳಬಹುದಾಗಿದೆ.

ಈ ಅಬಕಾರಿ ಬಾಬಿನಿಂದ ಗವರ್ನಮೆಂಟಿಗೆ ಕಳೆದ ಸಾಲಿನಲ್ಲಿ ೬೧,೫೩,೭೫೪ ರೂಪಾಯಿ ಉತ್ಪತ್ತಿಯಾಗಿರುವುದು ಪ್ರಜೆಗಳು ಇಷ್ಟೊಂದು ಹಣವನ್ನು ನಿಷ್ಪ್ರಯೋಜನವಾಗಿಯೂ ತಮ್ಮ ಕೇಡಿಗೋಸ್ಕರಲೂ ಖರ್ಚು ಮಾಡಿದ್ದಾಗಿರುತ್ತದೆ. ಹೀಗೆ ಕುಡಿಯುವುದಕ್ಕೆ ಹಾಕಿ ಹಣವನ್ನು ಕಳೆದುಕೊಂಡು ತಾವೂ ಕೆಡುವುದಕ್ಕೆ ಬದಲು ಪ್ರಜೆಗಳು ಅದನ್ನು ಕಸಬುಗಳ ಅಭಿವೃದ್ಧಿಗೂ ಕೈಗಾರಿಕೆಗಳ ವಿದ್ಯಾ ಪ್ರೋತ್ಸಾಹಕ್ಕೂ ವಿನಿಯೋಗಿಸಿದ್ದ ಪಕ್ಷದಲ್ಲಿ ಈ ಸಂಸ್ಥಾನವು ಬಹು ಮಟ್ಟಿಗೆ ಶ್ರೇಯಸ್ಸಿಗೆ ಬರುತ್ತಿದ್ದಿತು. ಈಗಲಾದರೋ ಈ ಹಣ ವ್ಯಯವು ಸಂಸ್ಥಾನದ ಪ್ರಜೆಗಳಲ್ಲ, ಅನೀತಿಗೂ ಕ್ಷೀಣಗತಿಗೂ ಸಹಕಾರಿಯಾಗಿರುತ್ತದೆ.

ಒಂದೇ ಒಂದು ಮತವು.

ಕೆಲವು ವಾರಗಳ ಹಿಂದೆ ಕಲ್ಕತ್ತಾ ಪಟ್ಟಣದಲ್ಲಿ "ಮತಗಳ ಸಮ್ಮೇಳನ" ಎಂಬಭಿಧಾನದಿಂದ ಒಂದು ಸಭೆಯು ಜರುಗಿತು ಇದಕ್ಕೆ ಹಿಂದೂ ದೇಶದ ನಾನಾ ಮತಗಳ ಪ್ರತಿನಿಧಿಗಳು ಬಂದು ಹಾಜರಾಗಿದ್ದರು ತಮ್ಮ ತಮ್ಮ ಅನುಸರಿಸುವ ಮತ ತತ್ವಗಳನ್ನು ಕುರಿತಾದ ಕೆಲವು ಪ್ರಬಂಧಗಳನ್ನು ಸಭೆ ಓದಿದರು ದರ್ಭಾಂಗ ಮಹಾರಾಜರು ಈ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದು ಒಂದು ಉತ್ಕೃಷ್ಟವಾದ ಉಪನ್ಯಾಸವನ್ನು ಮಾಡಿದರು ಅವರು ತಮ್ಮ ಉಪನ್ಯಾಸದಲ್ಲಿ ಲೋಕದ ನಾನಾ ಮತಗಳ ಬೋಧನಾವಾಕ್ಯಗಳನ್ನು ಸೂಚಿಸಿ ಕಡೆಯಲ್ಲಿ ಅರ್ಥಗರ್ಭಿತವಾದ ತಮ್ಮ ಅಭಿಪ್ರಾಯವನ್ನು ಒಂದೆರಡು ಮಾತುಗಳಲ್ಲಿ ತಿಳಿಸಿದರು ಅವರ ಅಭಿಪ್ರಾಯವೇನೆಂದರೆ— "ಕಡೆಯಲ್ಲಿ ಒಂದೇ ಒಂದು ಮತವು ಮಾತ್ರ ಉಳಿಯುವುದು ಅದರ ತತ್ವವೇನೆಂದರೆ—ದೇವರ ಮೇಲೆ ಭಕ್ತಿಪೂರ್ವಕವಾದ ಪ್ರೀತಿ, ಮನುಷ್ಯರೊಳಗೆ ಪ್ರೀತಿಪೂರ್ವಕವಾದ ಸಹೋದರಭಾವ" ಎಂಬುದೇ.

ಈ ವಾರದ ಸಂಚಿಕೆಯಲ್ಲಿ ಕೊಲ್ಕಂಡ ಅಭಿಪ್ರಾಯದ ಪ್ರಥಮ ಭಾಗವನ್ನು ಅಂದರೆ ಕಡೆಯಲ್ಲಿ ಒಂದೇ ಒಂದು ಮತವು ಮಾತ್ರ ಉಳಿಯುವುದು ಎಂಬುವನ್ನು ಕುರಿತು ಪ್ರಸ್ತಾಪಿಸುವೆವು ದರ್ಭಾಂಗ ಮಹಾರಾಜರು ಕೊಟ್ಟಿರುವ ಈ ಅಭಿಪ್ರಾಯವು ಅನೇಕರಿಗೆ ವಿಸ್ಮಯವನ್ನುಂಟುಮಾಡುವುದು ಅಲ್ಲದೆ ಯಾರಾದರೂ ತಮ್ಮ ದೇಶೀಯರನ್ನು ಯಾವ ಮತವು ಒಳ್ಳೇದೆಂದು ಪ್ರಶ್ನೆಮಾಡಿದರೆ ಅವರು—"ಲೋಕದಲ್ಲಿರುವ ಮತಗಳೆಲ್ಲಾ ಒಳ್ಳೆಯವುಗಳೇ". ಪ್ರತಿಯೊಂದೂ ಮನುಷ್ಯರನ್ನು ದೇವರ ಬಳಿಗೆ ನಡೆಸುತ್ತವೆಂದು ಅವರು ಹೇಳುವುದು ಅಪರೂಪವಲ್ಲ ಆದರೆ ವಿವೇಕಿಗಳು ಈ ರೀತಿಯಾದ ಮಾತುಗಳನ್ನು ಒಪ್ಪಲಾರರು ಎರಡು ಉತ್ಕೃಷ್ಟವಾದ ಮತಗಳು ಒಂದೇ ಕಾಲದಲ್ಲಿ ಇರುವುದಾದರೆ ಪ್ರತಿಯೊಂದು ಮನುಷ್ಯರನ್ನು ದೇವರ ಬಳಿಗೆ ನಡೆಸಲಾರವು ಮನುಷ್ಯನನ್ನು ದೇವರ ಸಾನ್ನಿಧ್ಯಕ್ಕೆ ನಡೆಸುವುದು ಒಂದೇ ಒಂದು ಮತವು ಲೋಕಕ್ಕೆಲ್ಲಾ ಗಣಿತ ಶಾಸ್ತ್ರವು ಒಂದೇ ಅಲ್ಲವೆ ಇಂಡಿಯಾ ದೇಶಕ್ಕೆ ಒಂದು ವಿಧವಾದ ಗಣಿತ ಇಂಗ್ಲಾಂಡ್ ದೇಶಕ್ಕೆ ಒಂದು ವಿಧವಾದ ಗಣಿತ, ಅಮೆರಿಕ ದೇಶಕ್ಕೆ ಒಂದು ವಿಧವಾದ ಗಣಿತ ಹೀಗೆ ನಾನಾ ವಿಧವಾದ ಗಣಿತ ಶಾಸ್ತ್ರವು ಇರುವುದು ಅಸಾಧ್ಯ ಇದೇ ರೀತಿಯಲ್ಲಿ ಲೋಕಕ್ಕೆಲ್ಲಾ ಒಂದೇ ರಸಾಯನಶಾಸ್ತ್ರ, ಒಂದೇ ತರ್ಕಶಾಸ್ತ್ರ, ಒಂದೇ ಜ್ಯೋತಿಶ್ಶಾಸ್ತ್ರ ಇತ್ಯಾದಿ. ಅಸ್ತಿತ್ವ ಜ್ಞಾನಗಳ ಬಹು ಪ್ರಯಾಸ ಪಟ್ಟು ಸತ್ಯಾಸತ್ಯವನ್ನು ಕಂಡುಹಿಡಿಯುವರು ಹೀಗಿರುವುದರಿಂದ ಲೋಕದಲ್ಲಿ ಒಂದೇ ಮತವಿರಬೇಕೆಂಬುವುದಕ್ಕೆ ಸಂಶಯವೇನಿದೆ ಈ ಒಂದೇ ಮತವನ್ನು ಬಿಡಬಿಡದಿಗಳು ಹುಡುಕುತ್ತಿರುವರು.

ಹಿಂದೂ ದೇಶವನ್ನು ನೋಡುವಲ್ಲಿ ಯಾರಿಗೆ ತಾನೇ ಪರಿತಾಪ ಹುಟ್ಟಲಾರದು ಅವರಲ್ಲಿರುವ ಭೇದಗಳನ್ನು ವ್ಯಾಗಿತಾನೇ ವರ್ಣಿಸಬಹುದು ಹಿಂದೂ ಮತವನ್ನು ತೆಗೆದು ನೋಡಿದರೆ ಅ ಲ್ಲಿ ನೂರಾರು ಪಂಗಡಗಳಿದ್ದು ಜನರೊಳಗೆ ವೈಷಮ್ಯವನ್ನು ಹುಟ್ಟಿಸುತ್ತಿರುವವು ಕೆಲವರು ವಿಷ್ಣುಭಕ್ತರಾಗಿದ್ದುಕೊಂಡು ಶಿವಭಕ್ತರನ್ನು ಹಗೆಮಾಡುತ್ತಲೂ ಮತ್ತೆ ಕೆಲವರು ಶಿವಭಕ್ತರಾಗಿದ್ದುಕೊಂಡು ವಿಷ್ಣುಭಕ್ತರನ್ನು ಹಗೆಮಾಡುತ್ತಲೂ ಬರುವರು ಮತ್ತೆ ಕೆಲವರು ಮಾರಿ ಮಸಣಿ ದುರ್ಗೀ ಮೊದಲಾದ ದೇವತೆಗಳನ್ನು ಪೂಜಿಸುತ್ತಲೂ ಕೋಣ ಕುರಿ ಮುಂತಾದ ಪ್ರಾಣಿಗಳನ್ನು ಬಲಿ ಅರ್ಪಿಸುತ್ತಲೂ ಇರುವರು. ಹೀಗೆ ಹಿಂದೂ ಮತದಲ್ಲಿರುವ ಪಂಗಡಗಳನ್ನೂ ಉಪಪಂಗಡಗಳನ್ನೂ ವಿವರವಾಗಿ ಕಂಡುಹಿಡಿಯುವುದು ಸುಲಭಸಾಧ್ಯವಲ್ಲ. ಆದ್ದರಿಂದ ಹಿಂದೂಗಳೆಲ್ಲರೂ ಏಕಮತಾವಲಂಭಿಗಳಾಗುವುದು ಅತ್ಯಾವಶ್ಯಕವಾಗಿದೆ ಮಹಮದೀಯರಲ್ಲಿಯೂ ಕೂಡ ನಾನಾ ವಿಧವಾದ ಪಂಗಡಗಳಿದ್ದು ಗಲಿಬಿಲಿಗಳುಂಟಾಗಿರುತ್ತವೆ ಸುನ್ನಿಗಳು ಷಿಯಾಗಳನ್ನು ಹಗೆಮಾಡುತ್ತಲೂ ಷಿಯಾಗಳು ಸುನ್ನಿಗಳನ್ನು ಹಗೆಮಾಡುತ್ತಲೂ ಬರುವರು. ಈ ಮಧ್ಯೆ ಮಹಮದೀಯರೊಳಗೆ ಬಾಬಿ ಮುಸ್ತಾ ಇತರ ಪಂಗಡಗಳೆದ್ದಿರುವವು ಆದ್ದರಿಂದ ಮಹಮದೀಯರು ಕೂಡ ಏಕಮತಾವಲಂಭಿಗಳಾಗುವುದು ಅತ್ಯಾವಶ್ಯಕವಾಗಿರುತ್ತದೆ. ಕ್ರೈಸ್ತರಲ್ಲಿಯೂ ಕೂಡ ಕೆಲವು ಪಂಗಡಗಳಿರುತ್ತವೆ. ಅವರೊಳಗೆ ಪ್ರಾಟೆಸ್ಟಾಂಟರೆಂತಲೂ ರೋಮನ್ ಕೆಥೋಲಿಕರೆಂತಲೂ ಎರಡು ಪಂಗಡಗಳಿದ್ದು ಒಬ್ಬರಿಂದೊಬ್ಬರು ಪ್ರತ್ಯೇಕವಾಗಿರುವರು. ಇವರು ಸಹ ಒಂದಾಗುವುದು ಅತ್ಯಾವಶ್ಯಕವಾಗಿರುತ್ತದೆ. ಮತ ಸಂಬಂಧವಾದ ವಿಷಯಗಳಲ್ಲಿ ಈಗ್ಗೆ ಕಲಹಗಳು ಇರಲೇ ಕೂಡದು. ಪ್ರತಿಯೊಂದು ಪಂಗಡದವರು ಒಬ್ಬರನ್ನೊಬ್ಬರು ಚೆನ್ನಾಗಿ ಅರಿತು ಪ್ರೀತಿಸಬೇಕಾಗಿದೆ ಹೀಗೆ ಮಾಡುವುದರಿಂದ ಜನರೊಳಗೆ ಅನ್ಯೋನ್ಯತೆ ಹೆಚ್ಚುವುದು ಏಕಮತಾವಲಂಭನೆಗೆ ಕಾರಣವಾಗುವುದು.

ಇಷ್ಟೆಲ್ಲಾ ಹೇಳಿದ ಮೇಲೆ ಕಡೆಯಲ್ಲಿ ಉಳಿಯತಕ್ಕ ಆ ಮತವು ಯಾವುದು? ಅದನ್ನು ಹೊಂದಿಕೊಳ್ಳುವ ರೀತಿಯು ಹ್ಯಾಗೆ? ಎಂಬ ಸಂಗತಿಗಳನ್ನು ವಿಚಾರಿಸುವುದು ಅತ್ಯಾವಶ್ಯಕವಾಗಿರುತ್ತದೆ.

ಈಗ ಆಚರಣೆಯಲ್ಲಿರತಕ್ಕ ಪ್ರತಿಯೊಂದು ಮತದಲ್ಲಿಯೂ ಅಡಗಿರುವ ಒಳ್ಳೇ ಬೋಧನೆಗಳನ್ನು ಆರಿಸಿ ಬೇರೊಂದು ನೂತನ ಮತವನ್ನು ಕಲ್ಪಿಸುವುದು ವಿಹಿತವೆಂದು ಕೆಲವರು ಯೋಚಿಸುತ್ತಾರೆ ಈ ರೀತಿಯಾಗಿ ಬ್ರಂಹ್ಮ ಸಮಾಜದವರು ಪ್ರಯತ್ನಿಸಿರುತ್ತಾರೆ. ಬ್ರಂಹ್ಮ ಸಮಾಜದವರು ತಮ್ಮ ನೂತನ ಪ್ರಯತ್ನದಿಂದ ಅನೇಕ ಪ್ರಯೋಜನಗಳನ್ನುಂಟು ಮಾಡಿರುತ್ತಾರೆ. ಆದರೆ ಅವರು ಏಕಮತವನ್ನು ಮಾತ್ರ ಕಂಡುಹಿಡಿಯಲಿಲ್ಲ. ಅವರಲ್ಲೂ ಭಿನ್ನಾಭಿಪ್ರಾಯಗಳು ಹುಟ್ಟಿ ಏಕಮತ್ಯವು ತಪ್ಪಿಹೋಗಿರುತ್ತದೆ ಈಚೀಚೆಗೆ ಬ್ರಂಹ್ಮ ಸಮಾಜದ ಅಭಿವೃದ್ಧಿಯು ಕೂಡ ಕಡಿಮೆಯಾಗಿರುತ್ತದೆ.

ಕಡೆಯಲ್ಲಿ ಉಳಿಯತಕ್ಕ ಆ ಒಂದು ಮತವು ಮನುಷ್ಯ ಪ್ರಯತ್ನದಿಂದ ಸ್ಥಾಪಿಸಲ್ಪಟ್ಟದ್ದಾಗಿರಲಾರದು. ಮನುಷ್ಯನು ಬಲಹೀನನೂ ಅಸಂಪೂರ್ಣನಾದ ಜ್ಞಾನವುಳ್ಳವನೂ ಆಗಿರುತ್ತಾನೆನ್ನುವುದರಲ್ಲಿ ಸಂಶಯವಿಲ್ಲ ಹೀಗಿರುವವನು ಲೋಕವೆಲ್ಲಾ ಒಪ್ಪತಕ್ಕ ಏಕಮತವನ್ನು ಸ್ಥಾಪಿಸುವುದು ಸಾಧ್ಯವೇ? ಎಂದಿಗೂ ಸಾಧ್ಯವಲ್ಲ ದೇವರೊಬ್ಬನೇ ತನ್ನ ಅತಿಶಯವಾದ ಕರುಣೆಯಿಂದ ಮನುಷ್ಯರಿಗೆ ಏಕಮತವನ್ನು ಕೊಡಬೇಕಾಗಿರುತ್ತದೆ. ಹೀಗೆ ದೇವರಿಂದ ಕೊಡಲ್ಪಟ್ಟ ಮತವು ಸತ್ಯವಾಗಿಯೇ ಇರುವುದು. ಇದರ ಸತ್ಯತೆಯನ್ನು ಸ್ಥಾಪಿಸುವುದಕ್ಕೆ ಯಾರೂ ಚರ್ಚೆ ನಡೆಸಬೇಕಿಲ್ಲ ಇದರ ನಿಜತತ್ವಗಳು ಮನುಷ್ಯನ ಆತ್ಮಕ್ಕೂ ಅವನ ಮನಸ್ಸಾಕ್ಷಿಗೂ ಪರಿಷ್ಕಾರವಾಗಿ ಗೋಚರಿಸುವುದು ದೇವರು ಅವುಗಳ ಮೂಲಕ ಮನುಷ್ಯರೊಳಗೆ ತನ್ನನ್ನು ಪ್ರಕಟಪಡಿಸುವನು. ಆ ಒಂದೇ ಮತವು ದೇವರ ಮೇಲೆ ಭಕ್ತಿಪೂರ್ವಕವಾದ ಪ್ರೀತಿ, ಮನುಷ್ಯರ ಮೇಲೆ ಪ್ರೀತಿಪೂರ್ವಕವಾದ ಸಹೋದರ ಭಾವನೆ ಆ ಮತದ ತತ್ವಗಳಾಗಿರುವವು.

ಒಳನಾಡಿನ ವೃತ್ತಾಂತಗಳು.

ಒಕ್ಕಲಿಗರ ಮೂರನೇ ಮಹಾ ಸಭೆಯು ಮೇ ತಿಂಗಳು ೨ನೆಯ ತಾ ಪ್ರಾರಂಭವಾಗಿ ಈ ತಿನವೂ ಜರುಗುವುದಾಗಿದೆ.

ಮೇ ಏಳನೇ ರಾಜಧಾನಿಯ ಪುರಾಭಿವೃದ್ಧಿ ಸಂಘದ ಮೆಂಬರುಗಳು ಶೇರಿ ಚುನಾವಣೆಗಳು ಶಾಬರ ವಿಚಾರಣೆಯನ್ನು ನಡೆಸಿದರು.

ಕಳೆದ ವಾರ ರಾಜಧಾನಿಯಲ್ಲಿ ಎರಡು ದಿನಗಳಲ್ಲಿ ಸ್ವಲ್ಪ ಮಳೆ ಆಯಿತು ಆದರೂ ಇನ್ನೂ ಬಿಸಿಲಿನ ಧಗೆಯು ಕಡಮೆಯಾಗಲಿಲ್ಲ ಶಿಡುಬಿನ ಉಪದ್ರವು ಅಲ್ಲಲ್ಲಿ ಇದೆ ಎಂದು ವಾರ್ತಾಪ್ರತಿಗಳು ಇನ್ನೂ ಪ್ರಕಟನೆಗಾಗಿಯೇ ಇರುತ್ತವೆ.

ಕಳೆದ ವಾರ ಕೋಲಾರ ಚಿನ್ನದ ಗಣಿಗಳ ಪೈಕಿ ಉರಿಗದ ಗಣಿಯಲ್ಲಿ ಬಿದ್ದು ನಾಲ್ವರೊಳಗೆ ಕೂಲಿಯವರನ್ನು ಇಳಿಸುವ ತೊಟ್ಟಿಲು ಅಕಸ್ಮಾತ್ತಾಗಿ ಕೆಡೆದುಬಿದ್ದು ಇಬ್ಬರು ಕೂಲಿಯಾಳುಗಳು ಮೃತಪಟ್ಟರೆಂದೂ, ಒಬ್ಬನಿಗೆ ಗಾಯವಾಗಿದೆ ಎಂದೂ ತಿಳಿದುಬಂದಿದೆ.

ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜರಾದ ಮೆ|| ಸ್ಟಾನ್ಲಿ ಇಸ್ಮಯವರು ಪತ್ನಿ ಸಹಿತ ಬೇಸಿಗೆ ರಜವನ್ನು ಕಳೆಯುವುದಕ್ಕೋಸ್ಕರ ಕಳೆದ ವಾರ ಜಹಜು ಹತ್ತಿ ವಿಲಾಯಿತಿಗೆ ಪ್ರಯಾಣವಾಗಿದರು ಅವರು ಕೋರ್ಟಿನ ರಜಾ ಪೂರೈಸಿದ ಮೇಲೆ ಅಂದರೆ ಜೂನ್ ತಿಂಗಳಲ್ಲಿ ವಾಪಸು ಬರುವವರಾಗಿದ್ದಾರೆ.

ಕಳೆದ ಶನಿವಾರ ಬೆಳಿಗ್ಗೆ ರಾಜಧಾನಿಯ ಸ್ಥಾನಮಂಡಲಿಯ ಬ್ರಾಹ್ಮಣರು ಶ್ರೀಶೀಂಕರ ದೇವಸ್ಥಾನದಲ್ಲಿ ಸೇರಿ ಶ್ರೀಶಂಕರಜಯಂತಿಯ ಉತ್ಸವಾದಿಗಳನ್ನು ನಡೆಸಿದರು ಅಷ್ಟೋ ಕೇಟ್ ಮೆ ರಾಮಧ್ಯಾನರೇ ಮೊದಲಾದ ಕೆಲವು ಲೌಕಿಕರೂ, ವೈದಿಕ ವಿದ್ವಾಂಸರೂ ಉಪನ್ಯಾಸಗಳನ್ನು ನಡೆಸಿದರು ಅದ್ವೈತಮತ ಪ್ರಚಾರಣೆಗೋಸ್ಕರ ಒಂದು ಫಂಡನ್ನು ಕೂಡಿಸಬೇಕೆಂದು ತೀರ್ಮಾನ ಮಾಡಿಕೊಂಡರೆಂದು ಕೇಳುತ್ತೇವೆ.

ಬಳಗೋಳದಲ್ಲಿ ಕಾವೇರೀ ನೀರನ್ನು ಎತ್ತಿ ರಾಜಧಾನಿಗೆ ಕಳುಹಿಸುವುದಕ್ಕೆ ಸರ್ಕಾರದವರು ವಿದ್ಯುಚ್ಛಕ್ತಿಯ ಯಂತ್ರಗಳನ್ನು ತರಿಸಿ ಇಟ್ಟಿದ್ದಾಯಿತು ಈಗ ೩-೪ ದಿನಗಳಿಂದ ಈ ಯಂತ್ರಗಳ ಪೈಕಿ ಒಂದರಲ್ಲಿ ಕೆಲಸನಡಿಸಿ ನೀರನ್ನು ಎತ್ತಿ ಕಳುಹಿಸುವಂತೆ ಮಾಡಿದಾರೆ ಎತ್ತಿದ ನೀರು ಸ್ವಲ್ಪವೇ ಹೆಚ್ಚಾಗಿದೆ ಸಗ್ಗಗಳ ಮೂಲಕ ಬರುತ್ತಿರುವುದು ಒಂದೆರಡು ವಾರಗಳೊಳಗೆ ಯಂತ್ರಗಳೆಲ್ಲಾ ಕೆಲಸಮಾಡಲು ಸಿದ್ಧವಾಗುವುವು ಆ ತರುವಾಯ ರಾಜಧಾನಿಯಲ್ಲಿ ಕುಡಿಯುವ ನೀರು ಸಮೃದ್ಧಿಯಾಗಿ ಒದಗುವುದೆಂದು ಕೇಳುತ್ತೇವೆ.

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಏಪ್ರೆಲ್ ತಾ. 17 ಕ್ಕೆ ಪತ್ಯೆಗಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು ರೂ	ಧರ್ಮಸಹಾಯ ಪಡೆದ ಜನರು.
	ಗಂಡಾಳು.	ಹೆಣ್ಣಾಳು	ಮಕ್ಕಳು		
ಬೆಂಗಳೂರು	471	195	20	1,105	277
ಕೋಲಾರ	1,431	723	71	2,768	841
ತುಮಕೂರು	952	536	48	2,281	748
ಮೈಸೂರು	84	116	37	125	466
ಹಾಸನ	993	525	67	2,571	10
ಶಿವಮೊಗ್ಗ	79	16	8	169	5
ಕಡೂರು	37	43		56	
ಚಿತ್ರದುರ್ಗ	713	513	86	1,260	514
ಪಬ್ಲಿಕ್ ವರ್ಕ್ಸ್ ಡಿಪಾರ್ಟ್‍ಮೆಂಟು	127	106	1	307	.
ಒಟ್ಟು	4,287	2,791	346	10,832	2,897

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು ಮೊದಲು ಮಾರ್ಚಿ ತಿಂಗಳ ಜಮಾಖರ್ಚು ಮುಂತಾದ ಲೆಕ್ಕಗಳು ಓದಲ್ಪಟ್ಟವು ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ರೂ ೧೩,೮೨೫-೬-೧೧ ಮೈ ಉತ್ಪತ್ತಿಯಾಯಿತೆಂದೂ ರೂ ೧೦,೬೧೬-೧೧-೨ ಮೈ ಖರ್ಚಾಯಿತೆಂದೂ ತಿಳಿಯಿತು ಜನನ ೧೨೨ ಮರಣ—ಪ್ಲೇಗ್ ೭, ಸಿಡುಬು ೯೪, ಜ್ವರ ೧೬, ಇತರ ಕಾರಣಗಳು ೧೩೪ ಒಟ್ಟು ೨೫೧ ಆಗಿವೆ

ಆ ತಿಂಗಳ ಲೆಕ್ಕಗಳನ್ನು ಶೋಧಿಸಿದ ಆಡಿಟರುಗಳು ತಮ್ಮ ರಿಪೋರ್ಟಿನಲ್ಲಿ—ಹೆಬ್ಬಾಳ ಮೊದಲಾದವರು ನಜರ್‌ಬಾದು ಚಾಮರಾಜ ಮೊಹಲ್ಲೆಗಳಲ್ಲಿ ವಸೂಲಾದ ಕನ್ಸರ್ವೆನ್ಸಿ ಮೊಬಲಗನ್ನು ಮ್ಯುನಿಸಿಪಾಲಿಟಿಗೆ ಪಾವತಿಮಾಡಲಿಲ್ಲವೆಂತಲೂ, ಮೊಹತರ್ಫಾ ವಸೂಲಾತಿಯು ಹೋದ ವರುಷಕ್ಕಿಂತ ಕಡಮೆಯಾಗಿದೆ ಎಂದೂ, ಸಾಲುಸಾಲಾಗುತ್ತಾ ಬಂದಿದ್ದರೂ ಕಂದಾಯದ ವಸೂಲಾತಿಗೆ ತೃಪ್ತಿಕರವಾದ ಏರ್ಪಾಡು ಮಾಡಿಲ್ಲವೆಂದೂ, ಟೌನ್ ಹಾಲ್ ಬಂಗಲೆಯ ಜಮಾಖರ್ಚನ್ನು ಪ್ರತ್ಯೇಕವಾಗಿ ಇಡುವುದು ಉತ್ತಮವೆಂದೂ ಸೂಚಿಸಿದರು ಇದಕ್ಕೆ ಸಭಾಧ್ಯಕ್ಷರಾಗಿ ವೈಸ್ ಪ್ರೆಸಿಡೆಂಟರು—ಆಡಿಟರುಗಳು ಲೆಕ್ಕವನ್ನು ಶೋಧಿಸಿದ ಮೇಲೆ ಹೆಡ್ ಆಫೀಸಿನಿಂದ ಜವಾಬು ಬಂದಿರುತ್ತದೆ ಎಂತಲೂ, ತೆರಿಗೆ ವಸೂಲು ವಿಷಯದಲ್ಲಿ ಕೂಡಲೇ ತಕ್ಕ ಏರ್ಪಾಡು ಮಾಡುವುದಾಗಿಯೂ, ಟೌನ್ ಹಾಲ್ ಉತ್ಪತ್ತಿಯನ್ನು ಇನ್ನು ಮುಂದೆ ಪ್ರತ್ಯೇಕವಾಗಿ ಇಡುತ್ತೇವೆಂತಲೂ ಹೇಳಿದರು

ಮೊದಲು ಮ್ಯುನಿಸಿಪಲ್ ಇಂಜನಿಯರಾಗಿದ್ದ ಮಿ॥ ಲಕ್ಷ್ಮಣರಾಯರು ಮ್ಯುನಿಸಿಪಾಲಿಟಿಯಿಂದ ಕೆಲವು ಸಾಮಾನುಗಳನ್ನು ತಗೆದುಕೊಂಡು ಹೋಗಿದ್ದು ವಾಪಸ್ ಕಳುಹಿಸಿದ ಹಾಗೂ, ಆ ಸಾಮಾನು ಲೆಕ್ಕದಲ್ಲಿಲ್ಲವೆಂದೂ ಗೊತ್ತಾದದ್ದರಿಂದ ಈ ವಿಚಾರವನ್ನು ಚರ್ಚೆಗೆ ಇಡದೆ ಬಿಟ್ಟುಬಿಡಬೇಕೆಂದು ಮ್ಯಾನೇಜಿಂಗ್ ಕಮಿಟಿಯವರು ಇಷ್ಟಪಡುತ್ತಿದ್ದರು ಇದಲ್ಲದೆ ಅವರು ಒಂದು ವಾಟರ್ (ನೀರನ್ನು ಅಳತೆ ಮಾಡಿ ನೋಡುವ ಯಂತ್ರ) ತೆಗೆದುಕೊಂಡು ಹೋಗಿ ಎರಡು ವರುಷಗಳಾಗಿದ್ದರೂ ಅದು ವಾಪಸು ಮ್ಯುನಿಸಿಪಾಲಿಟಿಗೆ ಬಂದಿಲ್ಲವೆಂದೂ ಗೊತ್ತಾಯಿತು ಕೌನ್ಸಲರುಗಳು ಈ ವಿಷಯವನ್ನೆಲ್ಲಾ ಪುನಃ ಚರ್ಚೆಮಾಡಿ ಅವುಗಳನ್ನು ತರಿಸಿಕೊಳ್ಳುವುದಕ್ಕೆ ಏರ್ಪಾಡುಮಾಡಬೇಕೆಂದು ಮ್ಯಾನೇಜಿಂಗ್ ಕಮಿಟಿಯವರಿಗೆ ತಿಳಿಸಿರುತ್ತಾರೆ

ಮನೆಗಳಲ್ಲಿ ಪ್ರಜೆಗಳು ಇಡಿಸಿಕೊಂಡಿರುವ ನೀರಿನ ನಲ್ಲಿಗಳಿಗೆ ರಿಪೇರಿ ಮುಂತಾದದ್ದು ಮಾಡಿಕೊಳ್ಳಬೇಕಾದರೆ ಸರ್ಕಾರಿ ನೌಕರರಿಗೆ ತಿಳಿಸಿ ಅವರಿಂದಲೇ ಮಾಡಿಸಿಕೊಳ್ಳಬೇಕಾಗಿದೆ ದೇಶೀಯ ಕಾರೇಗಾರರಿಂದ ಮಾಡಿಸಿಕೊಳ್ಳಕೂಡದೆಂದು ಸರ್ಕಾರದವರು ತಿಳಿಸಿದ್ದಾರೆ ಯಾಕೆಂದರೆ ಆ ಕೆಲಸವನ್ನು ಸರಿಯಾಗಿ ಕಲಿತು ಯೋಗ್ಯತಾಪತ್ರಿಕೆಯನ್ನು ಪಡೆದಿರುವಂಥಾ ಕಾರೇಗಾರರು ಸರ್ಕಾರಿ ನೌಕರಿಯಲ್ಲಿರುತ್ತಾರಲ್ಲದೆ ಸ್ವತಂತ್ರವಾಗಿ ಅಂಗಡಿ ಇಟ್ಟು ಕೆಲಸ ಮಾಡತಕ್ಕವರು ದೊರಕುವುದಿಲ್ಲ

ಪ್ರಜೆಗಳಿಗೆ ಬಲಾತ್ಕಾರವಾಗಿ ದೇವೀ ಹಾಕಿಸಬೇಕೆಂಬ ಕಾನೂನನ್ನು ರಾಜಧಾನಿಯಲ್ಲಿ ಒಂದು ವರುಷದ ಮಟ್ಟಿಗೆ ಜಾರಿಗೆ ತಂದಿದ್ದರು ಇದು ಮುಂದಿನ ಜೂನ್ ಆಖೈರಿಗೆ ಮುಕ್ತಾಯವಾಗುತ್ತೆಂದೂ, ಇನ್ನೊಂದು ವರುಷ ಜಾರಿಯಲ್ಲಿಟ್ಟಿರಬೇಕೆಂದೂ ಸ್ಯಾನಿಟರಿ ಕಮಿಷನರವರು ತಿಳಿಸಿದ್ದರು ಕೌನ್ಸಲರುಗಳು ಅವಶ್ಯವಾಗಿ ಆ ರೀತಿ ಆಗಬಹುದೆಂದು ಒಪ್ಪಿಕೊಂಡಿದ್ದಾರೆ

ಇಲ್ಲಿನ ಗವರ್ನ್‍ಮೆಂಟ್ ಹೌಸ್ ಬಂಗಲೆ ರಸ್ತೆಗಳನ್ನು ಮ್ಯುನಿಸಿಪಾಲಿಟಿಯವರೇ ವಹಿಸಿಕೊಂಡು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದಕ್ಕಾದೀತೇ ಎಂದು ಅರಮನೆ ಆಫೀಸರವರು ಕೇಳಿದರು ಮ್ಯುನಿಸಿಪಾಲಿಟಿಗೆ ಈ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಚೈತನ್ಯವಿಲ್ಲವೆಂದು ಕೌನ್ಸಲರುಗಳು ತೀರ್ಮಾನ ಮಾಡಿದರು

ರೆವ್ ಮಿ॥ ಎಚ್. ಗಲ್ಲಿಫರ್ಡ್ ಯವರನ್ನು ಮೈಸೂರು ಮ್ಯುನಿಸಿಪಲ್ ಕೌನ್ಸಲರಾಗಿ ನೇಮಕಮಾಡಿ ಬಂದಿದ್ದ ಸರ್ಕಾರಿ ಹುಕುಮನ್ನು ಕೌನ್ಸಲರುಗಳು ರಿಕಾರ್ಡು ಮಾಡಿಕೊಂಡರು

ರಾಜಧಾನಿಯ ಮಾರ್ಕೆಟ್ಟಿನಲ್ಲಿ ಇಟ್ಟಿರುವ ಸರ್ಕಾರಿ ಕೌಂಟಿಕ ಆಸ್ಪತ್ರೆಯೊಳಗೆ ಔಷಧಿ ತಯಾರುಮಾಡಿಕೊಡುವಂಥಾ ವಿಶ್ವನಾಥಯ್ಯನವರಿಗೆ ತಿಂಗಳನ್ನು ೧೦ ರಿಂದ ೧೫ಕ್ಕೆ ಬಡ್ತಿಮಾಡಿ ಕೊಡಬೇಕೆಂದು ಹಿಂದೆ ಕೌನ್ಸಲರುಗಳು ತೀರ್ಮಾನ ಮಾಡಿದ್ದರು ಗವರ್ನ್‍ಮೆಂಟಿನವರು ಅವರಿಗೆ ಬಡ್ತಿ ಕೊಡಬೇಕಾದ ಅಗತ್ಯವಿಲ್ಲವೆಂದು ಹುಕುಂ ಕೊಟ್ಟಿದ್ದಾರೆ

ದುರ್ಭಿಕ್ಷದ ನಿಮಿತ್ತ ಸರ್ಕಾರಿ ಸಣ್ಣ ನೌಕರರಿಗೆ ಧಾನ್ಯದ ಅಲೋಯನ್ಸನ್ನು ಮೇ ತಿಂಗಳ ಆಖೈರಿನ ವರಿಗೆ ಕೊಡಬೇಕೆಂದು ಸ್ಯಾಂಕ್ಷನ್ ಮಾಡಿರುವ ಸರ್ಕಾರಿ ಹುಕುಮನ್ನು ರಿಕಾರ್ಡು ಮಾಡಿಕೊಂಡರು ಈ ಅಲೋಯನ್ಸು ಚಿತ್ರದುರ್ಗ ಮತ್ತು ಹಾಸನದ ಡಿಸ್ಟ್ರಿಕ್ಟುಗಳಲ್ಲಿ ಸಲ್ಲತಕ್ಕದ್ದಲ್ಲವೆಂದು ಗೊತ್ತಾಗಿದೆ

ಮೈಸೂರು ಡಿಸ್ಟ್ರಿಕ್ಟಿನಲ್ಲೂ ರಾಜಧಾನಿಯಲ್ಲೂ ನೆಯ್ಗೆಯವರಿಗೆ ಜೀವನೋಪಾಯ ನಡೆಯುವುದಕ್ಕೆ ಅವರಿಗೆ ಸರ್ಕಾರದಿಂದ ದ್ರವ್ಯ ಸಹಾಯಮಾಡಬೇಕಾಗಿದೆ ಎಂದು ಡೆಪ್ಯುಟಿ ಕಮಿಷನರವರು ಬರೆದದ್ದರ ಮೇಲೆ ಗವರ್ನ್‍ಮೆಂಟಿನಿಂದ ೫,೦೦೦ ರೂಪಾಯಿ ಸ್ಯಾಂಕ್ಷನ್ ಆಯಿತು ಅವರು ಈ ಸ್ಕೀಮನ್ನು ರಾಜಧಾನಿಯಲ್ಲಿ ನೆಯ್ಗೆಯವರಿಗೆ ಅಡ್ವಾನ್ಸು ಕೊಡುವ ಹಣವನ್ನು ಮ್ಯುನಿಸಿಪಾಲಿಟಿಯವರೇ ವಹಿಸಿಕೊಳ್ಳಬೇಕೆಂದು ಬರೆದು ಕೇಳಿದರು ಈಗ ಮ್ಯುನಿಸಿಪಾಲಿಟಿಯಿಂದ ಸುಮಾರು ೪,೦೦೦ ರೂಪಾಯಿ ವರೆಗೆ ಅಡ್ವಾನ್ಸು ಕೊಡಲಾಗಿದೆ, ಈ ಹಣವನ್ನೆಲ್ಲಾ ಹಿಂದೆ ನಡೆದ ಪ್ರಕಾರ ಮ್ಯುನಿಸಿಪಾಲಿಟಿಯವರು ಅವರಿಂದ ವಸೂಲ್ಮಾಡಿ ಕೊಡುವುದಾಗಿಯೂ, ಆ ಹಣವನ್ನು ತಾವೇ ವಹಿಸಿಕೊಳ್ಳುವುದಕ್ಕೆ ತಮಗೆ ಶಕ್ತಿ ಸಾಲದೆಂತಲೂ ಕೌನ್ಸಲರುಗಳು ತೀರ್ಮಾನ ಮಾಡಿದರು

ಹುಲಿಯೋ ಚಿರತೆಯೋ ?

ಸಿಕ್ಕದೆ ತಪ್ಪಿಸಿಕೊಂಡು ಹೋಯಿತು

ಮಳವಳ್ಳಿ ತಾಲ್ಲೂಕಿಗೆ ಸೇರಿದ ಸರ್ಗೂರನ್ನು ಅರೂವನಹಳ್ಳಿಯಲ್ಲಿ ತಾ ೨೧ನೇ ಬುಧವಾರ ಸಾಯಂಕಾಲ ಒಂದು ಹುಲಿಯು ಈ ಗ್ರಾಮಕ್ಕೆ ಆಗ್ನೇಯ ಭಾಗದಲ್ಲಿ ಇರುವ ತಿಪ್ಪೂರು ಕೋಣೆ ಗೌಡರ ತೆಂಗಿನ ತೋಟಕ್ಕೆ ಬಂದು ಸೇರಿತ್ತು, ಆ ತೋಟದ ವಾರೀಕನ ಮಗನಾದ ಕೆಂಪೇಗೌಡನು ತೋಟದ ಮುಂಬಾಗಿಲಿಗೆ ಬಂದನು ಅಷ್ಟರಲ್ಲಿ ಆ ಹುಲಿಯು ಅವನ ಮೇಲೆ ಬಿದ್ದಿತು ತಾ ೨೨ ನೇ ಬೃಹಸ್ಪತಿವಾರ ೭ ಗಂಟೆಯಿಂದ ಕಾಲುಗಂಟೆ ವರಿವಿಗೂ ಬಂಡಿಸಿದನು ಅಷ್ಟರೊಳಗೆ ಈ ಸುದ್ದಿಯು ಪಕ್ಕದಲ್ಲಿ ಇದ್ದ ಮೇಲ್‌ದಾಸನ ದೊಡ್ಡಿಗೆ ಮುಟ್ಟಿತು ಅಲ್ಲಿನ ಜನಗಳು ದೊಣ್ಣೆ ಹೊತ್ತುಕೊಂಡು ಬಂದು ಗಲಭೆ ಮಾಡಿದರು ಆದ್ದರಿಂದ ಅವನನ್ನು ಬಿಟ್ಟುಬಿಟ್ಟಿತು ಅನಂತರ ಅದು ಮುಂದಕ್ಕೆ ಹೊರಟು ಒಂದು ಸೂಲೀಮೆಳೆ ಪಕ್ಕದಲ್ಲಿ ಮಲಗಿಕೊಂಡಿತು ಕೆಂಪೇಗೌಡನಿಗೆ ತೋಳು ಭುಜವನ್ನು ಗಾಯಮಾಡಿದೆ ಜನಗಳೆಲ್ಲರೂ ಗುಂಪುಗುಂಪಾಗಿ ಅದನ್ನು ಹುಡುಕಿಕೊಂಡು ಸದ್ದುಮಾಡುತ್ತಾ ಬಂದರು ಅಷ್ಟರಲ್ಲಿ ಅದೇ ದೊಡ್ಡಿ ಗೌಡರುಗಳ ಹುಡುಗನೊಬ್ಬನು ಆ ಸೂಲೀಮೆಳೆ ಪಕ್ಕಕ್ಕೆ ಬಂದನು ಆ ಹುಲಿಯು ಅವನನ್ನು ನೋಡಿ ಅವನ ಮೇಲೆ ಬಿದ್ದು ಶರೀರವನ್ನೆಲ್ಲಾ ಗಾಯಮಾಡಿಬಿಟ್ಟಿತು ಅವನು ಬದುಕುವುದೇ ದುಸ್ಸಾಧ್ಯವಾಗಿದೆ ಹುಲಿಯು ಅಲ್ಲಿಂದ ಮುಂದೆ ಹೊರಟು ಇದೇ ಅರೂವನಹಳ್ಳಿ ಪಕ್ಕದಲ್ಲಿ ಇರುವ ಯಲೇತೂ ಓಕ್ಕೆ ಬಂದು ಸೇರಿತು ಈ ಗ್ರಾಮದ ಜಹಗೀರ್ದಾರರು ಈ ಸುದ್ದಿಯನ್ನು ಕೇಳಿ ಗ್ರಾಮದ ಜನಗಳನ್ನು ದೊಣ್ಣೆ ಕೊಡಲಿ ಮುಟ್ಟುಗಳ ಸಹಿತ ಕರೆದುಕೊಂಡು ಹೋಗಿ ಆ ತೋಟದ ಸುತ್ತಾ ನಿಂತುಕೊಂಡು ಗಲಭೆಮಾಡಿ ಹೊರಡಿಸುವುದಕ್ಕೆ ಪ್ರಯತ್ನಪಟ್ಟರು ಅದು ತೋಟವನ್ನು ಬಿಟ್ಟು ಮುಂದಕ್ಕೆ ಹೋಗಿ ಇದೇ ಗ್ರಾಮಕ್ಕೆ ಸೇರಿದ ಅಂಕೇಗೌಡರದೊಡ್ಡಿ ಮಂಚೇಗೌಡರು ನೋಡುತ್ತಾ ನಿಂತಿದ್ದಾಗ ಅವರನ್ನು ಕೆಳಕ್ಕೆ ಕೆಡಹಿ ಗಾಯಮಾಡಿ ಹೊಟ್ಟೆಯಲ್ಲಿ ಎರಡು ಬೆರಳು ನುಗ್ಗುವ ಹಾಗೆ ತೂತುಮಾಡಿಬಿಟ್ಟಿತು ಅವರ ಮನೆ ಜನಗಳೆಲ್ಲಾ ಬಹಳವಾಗಿ ಗೋಳಾಡುತ್ತಿದ್ದರು ಈ ಗ್ರಾಮದ ಜಹಗೀರ್ದಾರರು ಬೆಳ್ಳೂರು ಗ್ರಾಮಕ್ಕೆ ಸುದ್ದಿಕೊಟ್ಟು ಬಂದೂಕದವನನ್ನೂ ಅಲ್ಲಿನ ಜನಗಳನ್ನೂ ಕರತರಿಸಿದರು ಬಂದೂಕದವನು ಬಂದೂಕವನ್ನು ಹಾರಿಸಿದನು ಅದು ಹುಲಿಗೆ ತಗಲಲಿಲ್ಲ ಅಲ್ಲಿ ಸುಮಾರು ೫೦೦ ಜನಗಳು ಇದ್ದರೂ ಯಾರಿಗೂ ಅಸಾಧ್ಯವಾಯಿತು ಅಲ್ಲಿಗೆ ಸಾಯಂಕಾಲ ೬ ಗಂಟೆ ಆಯಿತು ಜನಗಳೆಲ್ಲರೂ ಊರಿಗೆ ಹೊರಟುಬಂದರು ಮುಂದೆ ಈ ಹುಲಿಯಿಂದ ಜನಗಳಿಗೆ ಏನು ಕಷ್ಟಗಳು ಸಂಭವಿಸುವವೋ ತಿಳಿಯದು

ಬಾತ್ಮಿದಾರ್

ಇನ್ನೊಬ್ಬ ಬಾತ್ಮಿದಾರರು ಬರೆದಿರುವುದು —ಈ ಪ್ರಾಂತ್ಯ ತಹಲ್ ಮರಿವಿಗೂ ಮುಂಗಾರು ಮಳೆ ಸುತರಾಂ ಇಲ್ಲ ಪ್ರತಿನಿತ್ಯವೂ ಆಕಾಶದಲ್ಲಿ ವಿಶೇಷವಾಗಿ ಮೋಡವಾಡುತ್ತಲೇ ಇರುತ್ತದೆ. ಆದರೆ ಮಳೆ ಬೀಳಲಿಲ್ಲ ಈಗ ಬಿಸಿಲಿನ ತಾಪವೂ, ಸೆಕೆಯೂ ಬಹು ವಿಶೇಷವಾಗಿದೆ ಈಗಿನವರೆಗೂ ಈ ಊರಿಗೆ ನೀರಿನ ಕಷ್ಟ ತಾಗಲಿಲ್ಲ ಇಲ್ಲಿನ ಜಲಾಶಯವಾದ ಕುಡಿಯುವ ನೀರಿನ ಕಟ್ಟೆಯಲ್ಲಿ ಜಲವು ಬತ್ತಿಹೋಗುತ್ತಿದೆ ಈಗಾಗಲೇ ಜನರು ನೀರಿಗೋಸ್ಕರ ಅತಿ ದಾಡುತ್ತಲಿರುವರು ಸುತ್ತುಮುತ್ತಲಿನ ಕೆಲವು ಗ್ರಾಮಗಳಲ್ಲಿ ಜನರು ನೀರಿಗೋಸ್ಕರ ಪಡುವ ಶ್ರಮವನ್ನು ಹೇಳತೀರದು ನೀರಿಲ್ಲದೆ ದನಕರುಗಳು ಮೃತಿಯನ್ನೈದುತ್ತಿರುವವು ಕೆಲವು ಗ್ರಾಮಗಳಲ್ಲಿ ಸರ್ಕಾರದವರು ಕ್ಷಾಮನಿಯಮಕವನ್ನು ಅನುಸರಿಸಿ ಕೆಲವು ಭಾವಿಗಳನ್ನು ತೆಗೆಸಲು ಉಪಕ್ರಮಿಸಿರುವಂತೆ ತೋರುತ್ತೆ —ಕ್ಷಾಮಬಾಧೆ ಎಲ್ಲೆಲ್ಲಿ ಉಂಟೆಂಬುವದನ್ನು ಸ್ವತಃ ಪರೀಕ್ಷಿಸಲು ಶ್ರೀಮಂತರೂ ಮತ್ತು ನಮ್ಮ ಡೆಪ್ಯುಟಿ ಕಮಿಷನ್ ಸಾಹೇಬರವರೂ ಆದ ಮಿ॥ ಕಾಂತರಾಜೇ ಅರಸಿನವರು ತಾ ೧೯ನೇ ಸೋಮವಾರ ಈ ಪ್ರಾಂತ್ಯ ಸಂಚಾರಕ್ಕೆ ದಯಮಾಡಿಸಿ, ಹಲಗೂರು ಮುಸಾಫರಿ ಬಂಗಲೆಯಲ್ಲಿ ಇಳಿದುಕೊಂಡಿದ್ದರು —ಅದೇ ದಿನ ಬೆಳಿಗ್ಗೆ ಇಲ್ಲಿಗೆ ಒಂದು ಮೈಲಿ ಫಾಸಲೆಯಲ್ಲಿರುವ ಬಸವಾಪುರದಲ್ಲಿ ಒಂದು ಚಿರತೆಯು ಒಂದು ಹಿತ್ತಲಿನಲ್ಲಿದ್ದ ಸುಮಾರು ೧೦ ೧೫ ಗಜ ಉದ್ದವುಳ್ಳ ಒಂದು ಆಲದ ಮರದ ತುದಿ ಕೊಂಬೆಯಲ್ಲಿ ಮಲಗಿದ್ದದ್ದನ್ನು ನೋಡಿ, ಭಯಪಟ್ಟು ಗ್ರಾಮಸ್ಥರು ಶಿಕಾರಿದಾರರನ್ನು ಕರೆತರಲು ಹೋದರು ಚಿರತೆಯು ೧೫ ಗಜ ಉದ್ದವುಳ್ಳ ಮರದ ತುದಿಯಲ್ಲಿ ಮಲಗಿರುವ ಪರಮಾಶ್ಚರ್ಯವನ್ನು ನೋಡಲು ಸುತ್ತುಮುತ್ತಲಿನ ಗ್ರಾಮಸ್ಥರು ತಂಡೋಪತಂಡವಾಗಿ ಸೇರಿದ್ದರು ಶಿಕಾರಿದಾರರು ಹೋಗುವಷ್ಟರಲ್ಲೇ ಮಧ್ಯಾಹ್ನ ೧೧ ಘಂಟೆಯಾಯಿತು ತರುವಾಯ ಚಿರತೆಯು ಜನರ ಗುಂಪನ್ನು ನೋಡಿ ಮರದಿಂದ ಮೆಲ್ಲಗೆ ಇಳಿದು ಹುಲ್ಲಿನ ಮೆದೆಯ ಕೆಳಗೆ ಮಲಗಿಕೊಂಡಿತು ಅಷ್ಟರೊಳಗೆ ಸ್ಪೆಷಲ್ ದಫೆದಾರರು ಬಂದು ಅದನ್ನು ಹೊರಡಿಸಲು ತಕ್ಕ ಏರ್ಪಾಡು ಮಾಡುತ್ತಿರುವಲ್ಲಿ ಚಿರತೆಯು ಜನಗಳ ಗುಂಪಿಗೆ ನುಗ್ಗಿ ಮೂರು ಜನರಿಗೆ ತುಂಬಾ ಜಖಂಮಾಡಿತು ಇದನ್ನು ನೋಡಿ ಅಲ್ಲಿಯೇ ನಿಂತಿದ್ದ ಶಿಟ್ಲೂರು ಟೀಪೂಸಾಬಿ ಎಂಬುವನು ತನ್ನ ಮೇಲೆ ಬೀಳುತ್ತದೆಂಬ ಗಾಬರಿಯಿಂದ ಕೈಯಲ್ಲಿದ್ದ ಬಂದೂಕವನ್ನು ಹಾರಿಸಲು ಅದು ಗುರಿತಪ್ಪಿ ಅಲ್ಲಿ ನಿಂತಿದ್ದವರಲ್ಲಿ ಒಬ್ಬನ ಮಂಡಿಗೆ ಗುಂಡುತಾಕಿ ಬಡಿದು ಮಂಡಿಯು ಎರಡು ಹೋಳುಗಳಾಗಿ ಸೀಳಿಹೋಗಿದೆ ಚಿರತೆಯು ಗಾಯಮಾಡಿದ್ದ ಮೂರು ಜನರ ಪೈಕಿ ಒಬ್ಬನು ಆ ದಿನವೇ ಮೃತಪಟ್ಟನು. ಇನ್ನಿಬ್ಬರು ಮಳವಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದರೂ ಬದುಕುವಂತಿಲ್ಲ ಗುಂಡೇಟು ತಿಂದವನನ್ನು ಬೆಂಗಳೂರು ಆಸ್ಪತ್ರೆಗೆ ಸಾಗಿಸಿಕೊಂಡು ಹೋಗಿರುತ್ತಾರೆ ಅವನೂ ಉಳಿಯುವ ಹಾಗಿಲ್ಲ ಗಾಯಪಟ್ಟವರನ್ನು ಉಪಚರಿಸುತ್ತಿರುವಲ್ಲಿ ಚಿರತೆಯು ತಪ್ಪಿಸಿಕೊಂಡೇಹೋಯಿತು. ಚಿರತೆಗೆ ಬಂದಿದ್ದ ಮರಣವು ಯಾರ್ಯಾರಿಗೆ ಪರಿಣಮಿಸಿತು, ನೋಡಿದಿರಾ!

ಒಬ್ಬ ಗೌಡನು

ಶ್ರೀ ಕೃಷ್ಣರಾಜ ಕೃಷಿಶಿಲ್ಪಾಭಿವರ್ಧಕ ಸಮಾಜ ಲಿಮಿಟೆಡ್, ಮೈಸೂರು

ಗೊಬ್ಬರದ ವಿಷಯ.

ಬೇರೆ ಬೇರೆ ವಿಧವಾದ ಫಸಲುಗಳಿಗೆ ಬೇರೆ ಬೇರೆ ತರಹಾ ಗೊಬ್ಬರ ಹಾಕಬೇಕೆಂಬುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ಅಂಶವಾಗಿಯೇ ಇದೆ ಆದರೆ ವ್ಯವಸಾಯ ಶಾಸ್ತ್ರದಲ್ಲಿ ಬಹಳ ಪ್ರವೀಣರಾದ ವಿಲಾಯತಿ ದೇಶದ ಲಾಸ್ ಮತ್ತು ಜಿಲ್‍ಬರ್ಟ್ ಎಂಬ ಇಬ್ಬರು ಶಾಸ್ತ್ರಜ್ಞರೂ ಗೊಬ್ಬರದ ಉಪಯೋಗದ ವಿಷಯದಲ್ಲಿ ಹೇಳಿರುವ ಮುಖ್ಯ ಅಂಶವೇನೆಂದರೆ —ಏಕದಳ ಧಾನ್ಯಗಳಿಗೆ ನೈಟ್ರೋಜನ್ ಎಂಬ ವಸ್ತು ಅಧಿಕವಾಗಿರುವ ಹಿಂಡಿ, ದನದ ಗೊಬ್ಬರ ಮೊದಲಾದದ್ದನ್ನು ಉಪಯೋಗಿಸಬೇಕು ಬೆಳೆಯುವ ದ್ವಿದಳ ಧಾನ್ಯಗಳಿಗೆ (ಅಂದರೆ, ತೊಗರಿ, ಹುರುಳಿ, ಮೊದಲಾದ ಧಾನ್ಯಗಳ ಬೆಳೆಗೆ) ಪೊಟಾಷ್ ಎಂಬ ವಸ್ತು ಜಾಸ್ತಿಯಾಗಿರುವ ಬೂದಿ ವಗೈರೆ ಗೊಬ್ಬರವನ್ನು ಉಪಯೋಗಿಸಬೇಕು, ಗೆಡ್ಡೆ ಗೆಣಸು ಮೊದಲಾದದ್ದು ಉಂಟಾಗುವ ಫಸಲುಗಳಿಗೆ ಫಾಸ್ಫೇಟ್ಸ್ ಎಂಬ ವಸ್ತು ಜಾಸ್ತಿಯಾಗಿರತಕ್ಕ ಮೂಳೆಗೊಬ್ಬರ ಮೊದಲಾದದ್ದನ್ನು ಉಪಯೋಗಿಸಬೇಕೆಂದು ತಿಳಿಸಿದ್ದಾರೆ

ಹೆಚ್ಚು ಬಿರುಸು ಮತ್ತು ಶ್ರಮವಿಲ್ಲದ ವಿಶೇಷ ಲಾಭ ಕೊಡುವ ಬೆಳೆ — ನೆಲಕಡಲೇಕಾಯಿ

ಉತ್ಪತ್ತಿಸ್ಥಾನ ನೆಲಕಡಲೇಕಾಯಿ ಮೊದಲು ಅಮೆರಿಕಾ ಖಂಡದಲ್ಲಿ ಬೆಳೆಯಲಾಯಿತೆಂದು ತಿಳಿದುಬರುತ್ತದೆ ಇದು ಇಂಡಿಯಾ ದೇಶಕ್ಕೆ ಬಂದು ಸುಮಾರು ೭೦ ಅಥವಾ ೧೦೦ ವರ್ಷಗಳಾಗಿರಬಹುದು ನೆಲಕಡಲೇಕಾಯಿಯಲ್ಲಿ ಅನೇಕ ವಿಧಗಳುಂಟು ಸ್ಪ್ಯಾನಿಷ್, ಜಪಾನ್, ಪಾಂಡಿಚೇರಿಯ, ಮಾರಿಷಸ್, ಪಶ್ಚಿಮ ಆಫ್ರಿಕಾ ಮತ್ತು ಸ್ವದೇಶಿ ಎಂಬಿವು ಅದು ಮುಖ್ಯ ವಿಧಗಳು ೩,೪ ವರ್ಷದಲ್ಲಿ ಇಂಡಿಯಾ ದೇಶದಲ್ಲಿ ವಿಶೇಷವಾಗಿ ರೈತರು ಬೆಳೆಯುತಕ್ಕ ನೆಲಕಡಲೇಕಾಯಿಯು ನಾಡಿನದು, ಅಥವಾ ಮಾರಿಷಸ್ ತರಹದವುಗಳು ದೇಶೀಯ ನೆಲಕಡಲೇಕಾಯಿ ಬಳ್ಳಿಯು ಹಾಗೆ ಹರಿದು ಅಲ್ಲಲ್ಲಿ ಹಂಬಿನಲ್ಲಿ ಭೂಮಿಯೊಳಗೆ ಕಾಯಿಬಿಡುತ್ತದೆ ಇದನ್ನು ಅಗೆದು ತೆಗೆಯುವುದಕ್ಕೆ ಬಹಳ ಕಷ್ಟವಾಗಿ ಮುಟ್ಟುತ್ತದೆ ಪಾಂಡಿಚೇರಿಯ ನೆಲಕಡಲೆಯು ಬಹಳ ಗಾತ್ರವಾಗಿಯೂ ಗಿಡ ಒಂದಕ್ಕೆ ಹೆಚ್ಚಾಗಿಯೂ ಫಲಕೊಡುತ್ತದೆ ಆದರೆ ಇದು ಬೆಳೆಯುವುದು ತಡವಾಗಿ ಮತ್ತು ಇದಕ್ಕೆ ನೀರೂ ಹೆಚ್ಚು ಬೇಕು ಸ್ಪ್ಯಾನಿಷ್ ಮತ್ತು ಜಪಾನ್ ದೇಶದ ಕಡಲೇಕಾಯಿಯನ್ನು ಮುಸ್ಸಂಜೆ ಜಮೀನಿನಲ್ಲಿ ಬೆಳೆಯಬಹುದು ಇವುಗಳ ಕಾಯಿಗಳೆಲ್ಲಾ ಬುಡದಲ್ಲಿಯೇ ಗುಂಪಾಗಿ ಬಿಡುವುದರಿಂದ ಇವುಗಳನ್ನು ಕಿತ್ತು ಬೇರ್ಪಡಿಸುವುದು ಬಹಳ ಅಗ್ಗವಾಗಿಯೂ ಸುಲಭವಾಗಿಯೂ ಇದೆ ಈ ತರಹಾ ಗಿಡಗಳಲ್ಲಿ ಫಸಲು ಸಹ ಜಾಸ್ತಿ ಈ ತರಹಾ ನೆಲಕಡಲೆಯು ಇಂಡಿಯಾ ದೇಶದಲ್ಲಿ ಕೆಲವು ವರ್ಷಗಳಿಂದ ಪ್ರಚಾರಕ್ಕೆ ಬರುತ್ತಾ ಇದೆ ಮಾರಿಷಸ್ ದೇಶದ ನೆಲಕಡಲೇಕಾಯಿಯನ್ನು ಮದ್ರಾಸು ಪ್ರೆಸಿಡೆನ್ಸಿಯಲ್ಲಿ ಮಳೆ ಪ್ರದೇಶದಲ್ಲಿ ವಿಶೇಷವಾಗಿ ಬೆಳೆಯುತ್ತಾರೆ ಇದು ಮುಸ್ಸಂಜೆ ಭೂಮಿಯಲ್ಲಿ ಮಳೆಗಾಲದಲ್ಲಿ ವರ್ಷಕ್ಕೆ ಒಂದು ಫಸಲನ್ನು ಬೆಳೆಯಬಹುದು ನೀರು ಹಾಯಿಸುವುದಕ್ಕೆ ಅವಕಾಶವುಳ್ಳ ಜಮೀನಿನಲ್ಲಿ ಇದನ್ನೂ, ಸ್ಪ್ಯಾನಿಷ್ ಮತ್ತು ಜಪಾನ್ ನೆಲಕಡಲೇಕಾಯಿಯನ್ನೂ ಸಾಗುಮಾಡಿ ವರ್ಷಕ್ಕೆ ಎರಡು ಫಸಲನ್ನು ತೆಗೆಯಬಹುದು ಒಂದೇ ಜಮೀನಿನಲ್ಲಿ ೩-೪ ವರ್ಷಗಳ ವರೆಗೆ ಇದೇ ಫಸಲನ್ನು ಇಟ್ಟರಾಗ್ಯೂ ಜಮೀನು ಕೆಟ್ಟುಹೋಗುವುದಿಲ್ಲ ೩-೪ ವರ್ಷಗಳಿಗಿಂತ ಹೆಚ್ಚಾಗಿ ಒಂದೇ ಜಮೀನಿನಲ್ಲಿ ಈ ಫಸಲನ್ನು ಮಾಡಿದರೆ ಬೀಜಕ್ಕೆ ರೋಗವುಂಟಾಗಿ ಫಸಲು ಕೆಟ್ಟುಹೋಗುವುದು

ನೆಲಕಡಲೇಕಾಯಿ ಹಾಕುವ ಕ್ರಮ — ಮರಳು ಮಿಶ್ರವಾದ ಭೂಮಿಯನ್ನು ಅಕ್ಟೋಬರು. ಅಥವಾ ಡಿಸೆಂಬರು ಆಖೈರು ಮಳೆಗಳಲ್ಲಿ ಚೆನ್ನಾಗಿ ಉತ್ತು ಬಿಡಬೇಕು ಆಗಾಗ್ಗೆ (ಅಂದರೆ, ೪ ವಾರಗಳಿಗೆ ಒಂದು, ಅಥವಾ ೩೦ ದಿನಗಳಿಗೆ ಒಂದು ಸಲ) ಬೇಸಿಗೆಯಲ್ಲಿ ಉಕ್ಕೆಮಾಡಿದರೆ, ಹುಲ್ಲು ಕಳೆ ಮೊದಲಾದ ಬೇರುಗಳು ಬಿಸಲಿನ ಝಳದಿಂದ ಸತ್ತುಹೋಗುತ್ತವೆ, ಮತ್ತು ಉತ್ತು ಬಿಸಿಲು ಕಾಯುವುದಕ್ಕೆ ಬಿಡೋಣದರಿಂದ ಭೂಮಿಯು ಬಹಳ ಸಾರವತ್ತಾಗುತ್ತದೆ ನೆಲಕಡಲೇಕಾಯಿಗೆ ಗೋಡುಮಣ್ಣು, ದನದ ಗೊಬ್ಬರ, ಬೂದಿ ಇವುಗಳು ಬಹಳ ಸಾರವತ್ತಾದ ಗೊಬ್ಬರಗಳು ಮೇ ತಿಂಗಳಲ್ಲಿ ಮಳೆ ಬಂದಕೂಡಲೇ ಭೂಮಿಯನ್ನು ಚೆನ್ನಾಗಿ ೧-೨ ಉಳು ಉತ್ತು ಕಡಾಗಿ ೯ ಅಂಗುಲ (ಅಥವಾ ೧ ಗೇಣು) ದೂರಕ್ಕೆ ಒಂದೆರಡು ಬಿತ್ತಗಳಂತೆ ಸಾಲುಸಾಲಾಗಿ ಬಿತ್ತಬೇಕು ಒಂದು ಸಾಲಿಗೂ ಮತ್ತೊಂದು ಸಾಲಿಗೂ ೧ ಅಡಿಯಿಂದ ೧ ಅಡಿ ಜಾಗಾ ಬಿಟ್ಟರೆ ಬಹಳ ಅನುಕೂಲ ಒಂದು ಎಕರೆಗೆ ನಮ್ಮ ಮೈಸೂರು ಸೀಮೆಯ ೧॥ ಮಣದ ಬೀಜವು ಬಿತ್ತುವುದಕ್ಕೆ ಬೇಕಾಗುತ್ತದೆ ಸುಮಾರು ಎಕರೆ ನೆಲಕಡಲೇಕಾಯಿಗೆ ಒಂದು ಮಣ ಬೀಜ ಬೇಕಾಗುವದು ಕಡಾಹಾಕಿದ ಮೇಲೆ ಹಲುಬೆಯನ್ನು ಹೊಡೆದು ಜಮೀನನ್ನು ಮಟ್ಟಮಾಡಿ ಬಿಡುತ್ತಾರೆ ನೆಲಕಡಲೇಕಾಯಿಯು ಸಸಿಯಾಗಿ ೫ ೬ ಎಲೆ ಬಿಟ್ಟಾಗ ಸಾಲುಗಳ ಮಧ್ಯದಲ್ಲಿ ಕುಂಟೆ ಹೊಡೆದು ಮಣ್ಣನ್ನು ಏರುಹಾಕಬೇಕು ಈ ರೀತಿ ಆಗಾಗ್ಗೆ ನೆಲಕಡಲೇ ಗಿಡದಲ್ಲಿ ಹೂವು ಬಿಡುವವರಿವಿಗೂ ಕುಂಟೆಯನ್ನು ಹೊಡೆಯುತ್ತಾ ಇದ್ದರೆ ಕಳೆಗಳು ಸತ್ತುಹೋಗಿ ಫಲವು ಬಹಳ ವೃದ್ಧಿಗೆ ಬರುತ್ತವೆ ಈ ಫಸಲಿನ ಎಲೆಯು ಅರಿಸಿನವಾಗಿ ಎಲೆಗಳಲ್ಲಿ ಚುಕ್ಕೆಗಳೂ ಉಂಟಾದಾಗ ಬೆಳೆಗೆ ಫಸಲು ಬಲಿಯಿತೆಂದು ಭಾವಿಸಬೇಕು ಅಥವಾ, ಬೇಕಾದರೂ ಒಂದು ಗಿಡವನ್ನು ಕಿತ್ತು ಕಾಯಿಯನ್ನು ನೋಡಿದರೆ ಕಾಯಿಗಳು ಬಲಿತಿರುವ ಸಂಗತಿ ಗೊತ್ತಾಗುತ್ತದೆ ಮಳೆ ಸರಿಯಾಗಿ ನಡಿಸಿದರೆ ಫಸಲು ನಾಲ್ಕು ತಿಂಗಳಲ್ಲಿ ಬಲಿಯುತ್ತದೆ ಫಸಲು ಬಲಿತ ಮೇಲೆ ಸುಮಾರಾಗಿ ಮಳೆ ಬಂದ ಮಾರನೇ ದಿನ, ಅಥವಾ ನೀರು ಎರಚಿ ಗಿಡಗಳನ್ನು ಬೇರುಸಮೇತ ಕಿತ್ತು ಗುಡ್ಡೆಹಾಕಿ ಕಾಯಿಯನ್ನು ಬಿಡಿಸಿ ನೆರಳಲ್ಲಿ ಒಣಗಿಸುತ್ತಾರೆ ಕಾಯಿಗಳಿಗೆ ವಿಶೇಷವಾಗಿ ಮಣ್ಣು ಹತ್ತಿರುವುದರಿಂದ ನೀರಿನಲ್ಲಿ ತೊಳೆದು ಚನ್ನಾಗಿ ಒಣಗಿಸಿ ಕೂಡಿ ಇಡುವುದುಂಟು ಈ ರೀತಿ ತೊಳೆಯುವುದ

ಲಿಂದ ಕಾಯಿ ಶುಭ್ರವಾಗಿ ಬಹಳ ಚನ್ನಾಗಿ ಆಗುತ್ತದೆ ಈ ನೆಲಕಡಲೇ ಫಸಲಿನ್ನಾ ಬೆಳೆತ ಮೇಲೆ ರೋಗ ಬರುವುದು ಅಸಾಧ್ಯ ಕೆಲವು ಗಿಡಗಳಲ್ಲಿ ಅರ್ಧ ಮುಕ್ಕಾಲು ಬಲಿಯದ ಕಾಯಿಗಳು ಇರುವಾಗ ಇನ್ನೂ ಕೆಲವುದರಲ್ಲಿ ಎಳೇಕಾಯಿ ಗಳಿರುತ್ತವೆ ಎಲ್ಲಾ ಕಾಯಿಗಳೂ ಬಲಿಯುವ ತನಕ ನಿರೀಕ್ಷಿಸಿದರೆ ಬಲಿತ ಕಾಯಿಗಳು ಮೊಳಕೆಬಿಡುತ್ತವೆ

ಈ ಫಸಲನ್ನು ಇಂಡಿಯಾ ದೇಶದಲ್ಲಿ ಮದ್ರಾಸು ಅಧಿಪತ್ಯದಲ್ಲಿ ವಿಶೇಷವಾಗಿ ಬೆಳೆಯುತ್ತಾರೆ ಇದನ್ನು ಯೂರೋಪ್ ದೇಶಕ್ಕೆ ವಿಶೇಷವಾಗಿ ರಫ್ತುಮಾಡುತ್ತಾರೆ ಫ್ರಾನ್ಸು ದೇಶಕ್ಕೆ ಪಾಂಡಿಚೆರಿ ಫ್ರೆಂಚರಿಯಿಂದ ವಿಶೇಷವಾಗಿ ನೆಲಕಡಲೇಕಾಯಿ ಸಾಗಿಹೋಗುತ್ತದೆ ನೆಲಕಡಲೇಕಾಯಿನ ಎಣ್ಣೆಯಲ್ಲಿ ಕೊಬ್ಬುತಗೆದು ಈ ಕೊಬ್ಬನ್ನು ಸೋಪು ಮಾಡುವುದರಲ್ಲಿ ಬಳಸುತ್ತಾರೆ ಮತ್ತು ಅದರ ಎಣ್ಣೆಯನ್ನು ದೀಪವಾಗಿಯೂ ಯಂತ್ರಗಳಿಗೆ ತರಬೆಯಾಗಿಯೂ ಉಪಯೋಗಪಡಿಸುತ್ತಾರೆ ನೆಲಕಡಲೇಕಾಯಿ ಬೀಜದಲ್ಲಿ ಶೇಕಡಾ ೪೦ ರಂತೆ ಎಣ್ಣೆಯನ್ನು ತೆಗೆಯುವರು ವರ್ಷಕ್ಕೆ ಕೋಟ್ಯಾಂತರ ರೂಪಾಯಿನ ನೆಲಕಡಲೇಕಾಯಿಯು ಯೂರೋಪ್ ಖಂಡಕ್ಕೆ ಇತರೆ ದೇಶಗಳಿಂದ ಸಾಗಿಹೋಗುವುದು ಇವರಲ್ಲಿ ಇಂಡಿಯಾದೇಶದಿಂದ ಹೋಗುವ ನೆಲಕಡಲೇಕಾಯಿಯೂ ಒಂದು ಭಾಗವಾಗಿದೆ ಈ ಕಾಯಿಯು ವಿಶೇಷವಾಗಿ ಪಶ್ಚಿಮ ಆಫ್ರಿಕಾದಿಂದ ಯೂರೋಪ್ ಖಂಡಕ್ಕೆ ಹೋಗುತ್ತದೆ

ನೆಲಕಡಲೇ ಬೀಜವನ್ನು ಸಾಧಾರಣವಾಗಿ ನಮ್ಮ ದೇಶದಲ್ಲಿ ಅನೇಕ ಬಡಜನಗಳು ಸಕ್ಕರೆ ಮಿಶ್ರವಾಗಿಯೂ ಬೆಲ್ಲ ಮಿಶ್ರವಾಗಿಯೂ, ಕೆಲವರು ಏನೂ ಮಿಶ್ರವಾದದೆಯೂ ತಿನ್ನುತ್ತಾರೆ ನೆಲಕಡಲೆ ಹಿಂಡಿಯನ್ನು ದನಗಳಿಗೆ ಹಾಕಿದರೆ ಬಹಳ ಜಾಗ್ರತೆಯಾಗಿ ಅವುಗಳಿಗೆ ಮೈಬಂದು ಪುಷ್ಟಿಯಾಗುತ್ತವೆ ಇದನ್ನು ಗೊಬ್ಬರವಾಗಿಯೂ ಸಹಾ ಉಪಯೋಗಿಸುವುದುಂಟು ನೆಲಕಡಲೇಕಾಯಿಯು ಮೈಸೂರು ದೇಶದಲ್ಲಿ ಮಣಕ್ಕೆ ಒಂದು ರೂಪಾಯಿನಂತೆ (ಅಥವಾ, ಪಲ್ಲಾಗಕ್ಕೆ ರೂ ೫ ರ ಲಾಗಾಯಿತು ರೂ ೭ ರಂತೆ ಬಿಕರಿ ಆಗುತ್ತದೆ ಈ ಫಸಲನ್ನು ಚನ್ನಾಗಿ ಮಳೆ ನಡೆದರೆ ಎಕರೆ ೧ಕ್ಕೆ ೮ ರ ಲಾಗಾಯಿತು ೧೨ ಪಲ್ಲಾದವರಿಗೂ ಬೆಳೆಯಬಹುದು ವ್ಯವಸಾಯದ ಖರ್ಚು ಎಕರೆ ೧ಕ್ಕೆ ೨೦ ರೂಪಾಯಿನವರೆಗೆ ತಗಲುತ್ತದೆ ನೆಲಕಡಲೇಕಾಯಿ ಬೆಳೆಯುವುದರಿಂದ ಆ ಜಮೀನು ವಾಯುಮಂಡಲದಿಂದ ವಿಶೇಷವಾಗಿ ನೈಟ್ರೋಜನ್ ಎಂಬ ವಸ್ತುವನ್ನು ಆಕರ್ಷಿಸಿ ಸಾರವತ್ತಾಗುತ್ತದೆ

ಸ್ಪ್ಯಾನಿಷ್ ಮತ್ತು ಜಪಾನ್ ಶೇನೆಯ ನೆಲಕಡಲೇಕಾಯಿ ಮೈಸೂರಲ್ಲಿರುವ ಅಡ್ವೊಕೇಟ್ ಮೆ|| ವಿ ರಾಘವಾಚಾರ್ಯರಲ್ಲಿ ದೊರೆಯುವುದು

ಇಂಡಿಯಾ ದೇಶದ ವೃತ್ತಾಂತಗಳು

ರೇವಾ ಮಹಾರಾಜರ ವಿಕ್ಟೋರಿಯಾದವರಿಗೆ ಸೆಕ್ರೆಟರಿಯಾಗಿದ್ದ ಹಾಫಿಸ್ ಅಬ್ದುಲ್ ಕರೀಂ, ಸಿ ಐ ಇ ಯವರು ಕಳೆದ ವಾರ ಆಗ್ರಾ ಪಟ್ಟಣದಲ್ಲಿ ಕಾಲವಾದರು

ಮದರಾಸ್ ಹೈಕೋರ್ಟಿನ ಜಡ್ಜರಾದ ಮೆ|| ಶಂಕರನ್ ನಾಯರ್ ಯವರು ಇತರ ಹೈಕೋರ್ಟ್ ಜಡ್ಜಿಗಳ ಕೂಡ ಬೇಸಿಗೆ ರಜಾ ಕಳೆಯುಕೊಂಡು ಬರುಷದಕ್ಕೆ ಕಳೆದ ವಾರ ಊಟಕಮಂಡಕ್ಕೆ ನಿಲಾಯತಿಗೆ ಪ್ರಯಾಣವಾಡಿದರು

ಕಲ್ಕತ್ತಾ ಪಟ್ಟಣದಲ್ಲಿ ನವೀನ ಚಂದ್ರಪಾಲ್ ಎಂಬಾತನು ಕೂಲಿಮಟುಜೂಜ ಎಂಬ ರಾಜದ್ರೋಹಕರವಾದ ಪುಸ್ತಕವನ್ನು ಅಚ್ಚು ಹಾಕಿಕೊಟ್ಟದ್ದಕ್ಕಾಗಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಆತನಿಗೆ ೫೦೦ ರೂಪಾಯಿ ಜುಲ್ಮಾನೆ ವಿಧಿಸಿದರು

ಅಫ್ಘಾನಿಸ್ಥಾನದ ಅಮೀರರವರು ಜಲಾಲಾಬಾದಿನಲ್ಲಿರುವಾಗ್ಗೆ ರಾಜಧಾನಿಯಾದ ಕಾಬೂಲ್ ನಗರಕ್ಕೆ ಬರುವಂತೆ ಅವರಿಗೆ ಆತುರವಾದ ಕಾಗದ ಬಂದ ಹಾಗೂ, ಅವರು ಅದೇ ಪ್ರಕಾರ ಕಾಬೂಲಿಗೆ ಪ್ರಯಾಣಮಾಡಿರುವ ಹಾಗೂ ತಂತಿ ವರ್ತಮಾನ ಬಂದಿದೆ

ಫಿಲಿಪ್ಪೈನ್ ಗವರ್ನಮೆಂಟಿನಿಂದ ಮೆ|| ಬಾಡ್ಸ್ಲೆ ಎಂಬೊಬ್ಬ ಇಂಜಿನಿಯರವರು ಹಿಂದೂಸ್ಥಾನದ ನೀರಾವರಿ ಕಾಮಗಾರಿಗಳನ್ನೂ ವ್ಯವಸಾಯದ ಸ್ಥಿತಿಗತಿಯನ್ನೂ ಅಜಮಾಯಿಷಿಮಾಡಿ ತಿಳಿದುಕೊಂಡು ಹೋಗುವುದಕ್ಕಾಗಿ ಅಲ್ಲಿಂದ ಬಂದು ಇರುತ್ತಾರೆ

ನಾಸಿಕ್ ಪಟ್ಟಣದಲ್ಲಿ ಗಣೇಶದಾಮೋದರ ಸಾವರ್ಕರ್ ಎಂಬ ವಿದ್ವಾಂಸನು ಲಘು ಅಭಿನವ ಭಾರತ ಮಾಲಾ ಎಂಬ ರಾಜದ್ರೋಹಕರವಾದ ಪುಸ್ತಕವನ್ನು ಬರೆದು ಪ್ರಕಟಿಸಿದ್ದಲ್ಲದೆ ಪ್ರಜೆಗಳನ್ನು ಗವರ್ನಮೆಂಟಿನ ಮೇಲೆ ಎತ್ತಿಕಟ್ಟುವ ಕೃತ್ಯಗಳನ್ನು ನಡಿಸಿದನೆಂದು ಮೊಕದ್ದಮೆ ಆಗಿ ಸೆಷನ್ಸ್ ವಿಚಾರಣೆ ನಡೆಯುವುದಾಗಿದೆ

ಹೈದರಾಬಾದ್ ಸಂಸ್ಥಾನದಲ್ಲಿ ಮೂವತ್ತು ವರುಷಗಳಿಂದ ನೌಕರಿಮಾಡಿ ಈಗ ಅ|| ರೆಸಿಡೆಂಟರ ಪದವಿಯಲ್ಲಿರುವ ಮೆ|| ಎಚ್ ವಾಕರ್ ಯವರನ್ನು ಗವರ್ನಮೆಂಟಿನವರು ಸಸ್ಪೆಂಡು ಮಾಡಿರುತ್ತಾರೆ ಇವರ ಮೇಲೆ ಯಾವ ಅಪವಾದ ಹೊರಿಸಲ್ಪಟ್ಟಿದೆಯೋ ಗೊತ್ತಾಗಲಿಲ್ಲ

ನಾಸಿಕ್ ಪಟ್ಟಣದಲ್ಲಿ ಈಗ ಸಿಂಹಸ್ಥಮೇಳ ಜಾತ್ರೆಯು ನಡೆಯುತ್ತಿದೆ ಆದರೆ ಅಲ್ಲಿ ವಾಂತಿಭೇದಿ ಉಪದ್ರವು ಪ್ರಾರಂಭವಾಗಿರೋಣದರಿಂದ ಯಾರೂ ಅಲ್ಲಿಗೆ ಹೋಗದಂತೆ ಜಾರಿ ತಡೆದೆ ಪಡಬೇಕೆಂದು ಮದರಾಸ್ ಗವರ್ನಮೆಂಟಿನವರು ಎಲ್ಲಾ ಡಿಸ್ಟ್ರಿಕ್ಟಧಿಕಾರಿಗಳಿಗೂ ಹುಕುಂ ಕೊಟ್ಟಿದಾರೆ

ವರ್ತಮಾನಗಳ ಸೂಚನೆಯನ್ನು ಕೊಡತಕ್ಕಂಥ ಯಂತ್ರಗಳನ್ನು ಎಂಬಾ ಪಟ್ಟಣದಲ್ಲಿ ಇಟ್ಟಿದಾರೆ ಈ ಪಟ್ಟಣದಿಂದ ಸುಮಾರು ೧,೫೦೦ ಮೈಲಿ ಫಾಸಲೆಯೊಳಗೆ ಯಾವುದೋ ಒಂದು ಸ್ಥಳದಲ್ಲಿ ಭೂಕಂಪನ ಸಾಧ್ಯವಾಗಿರುವಂತೆ ಕಳೆದ ವಾರ ಈ ಯಂತ್ರಚಲನೆಯಿಂದ ಗೊತ್ತಾಯಿತು.

ಗುಂಟೂರು ತಾಲೂಕಿನಲ್ಲಿ ತಾಡಿಪಲ್ಲಿ ಸ್ಟೇಷನ್ ಬಳಿ ಇರುವ ಅನಂತವರಪಾವ ಗ್ರಾಮದ ಗ್ರಾಮ ಮುನ್ಸೀಫರ ಮನೆಗೆ ಕಳೆದ ಶನಿವಾರ ಮಧ್ಯರಾತ್ರಿಯಲ್ಲಿ ಸುಮಾರು ೨೫ ಮಂದಿ ಪಂಜು ಕಳ್ಳರು ನುಗ್ಗಿ ಲೂಟಿ ಮಾಡಿಕೊಂಡು ಹೋದರು ಪೊಲೀಸಿನವರು ಪತ್ತೆ ತರದೂದು ನಡಿಸುತ್ತಿದಾರೆ

ಕಾನ್ಪುರದಲ್ಲಿ ರಾಂಪುರದ ನವಾಬರವರು ಮುಂದಾಳಾಗಿ ನಿಂತು ಒಂದು ಭಾರೀ ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪಿಸಿದಾರೆ ಈ ಕಾರ್ಖಾನೆಯಲ್ಲಿ ದಿನ ಒಂದಕ್ಕೆ ೪೦ ಟನ್ ತೂಕದಷ್ಟು ಕಬ್ಬಿಣವನ್ನು ಕರಗಿಸಿ ಬೇರೆ ಬೇರೆ ತರದ ಸಲಾಕಿ ಮೊದಲಾದ ಸಾಮಾನುಗಳನ್ನು ತಯಾರುಮಾಡುವರು

ಅಲಿಪುರದ ಸಿಡಿಮದ್ದಿನ ಗುಂಡುಗಳ ಮೊಕದ್ದಮೆಯಲ್ಲಿ ಇನ್ನೂ ನಾಲ್ಕು ಮಂದಿ ಸಿಕ್ಕಿ ಇಲ್ಲವೆಂದೂ, ಆ ಪೈಕಿ ಇಬ್ಬರನ್ನು ಹಿಡಿದುಕೊಡುವವರಿಗೆ ತಲಾ ೫೦೦ ರೂಪಾಯಿನಂತೆಯೂ, ಇನ್ನಿಬ್ಬರನ್ನು ಪತ್ತೆಮಾಡಿಕೊಡುವವರಿಗೆ ತಲಾ ೨೫೦ ರೂಪಾಯಿನಂತೆಯೂ ಇನಾಂ ಕೊಡುವುದಾಗಿ ಪ್ರಕಟಿಸಿದಾರೆ

ವೈಸ್‌ರಾಯಿಯವರ ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿ ನೇಮಕವಾಗಿರುವ ಮೆ|| ಸತ್ಯೇಂದ್ರಪ್ರಸನ್ನಸಿಂಹ ಎಂಬ ಬಂಗಾಳೀ ದೊಡ್ಡಮನುಷ್ಯರು ಕಳೆದ ವಾರ ಸಿಂಲಾ ಪಟ್ಟಣವನ್ನು ತಲುಪಿ ತಮ್ಮ ಕೆಲಸದ ಭಾರವನ್ನು ವಹಿಸಿಕೊಂಡರು ಆ ಪದವಿಗೆ ಸಲ್ಲುವ ೧೫ ತೋಪುಗಳು ಹಾರಿಸಲ್ಪಟ್ಟವು

ಕಳೆದ ವಾರ ಉತ್ತರ ದೇಶದಲ್ಲಿ ಬಹಳ ಮಳೆಗಳಾದವು ಪಂಜಾಬ್ ಅಧಿಪತ್ಯದಲ್ಲಿ ಮಾತ್ರ ದಿನಸಿಗಳ ಧಾರಣೆಯು ಇನ್ನೂ ಸ್ವಲ್ಪ ಹೆಚ್ಚಿಗುತ್ತದೆ ಹಿಂದಿನ ವಾರ ಅಲ್ಲಿ ಸರ್ಕಾರದವರ ಪೋಷಣೆಗೆ ಇನ್ನೂ ೫,೦೦೦ ಪ್ರಜೆಗಳು ಹೋಗಿ ಸೇರಿಕೊಂಡರು ಇತರ ಕಡೆಗಳ ಕಾಲಸ್ಥಿತಿಯು ಒಂದೇ ರೀತಿಯಲ್ಲಿರುವುದು

ಪಂಜಾಬ್ ಅಧಿಪತ್ಯದಲ್ಲಿ ಕಳೆದ ೧೯೦೮ ನೇ ಇಸವಿಯಲ್ಲಿ ವಿಷಮಶೀತಜ್ವರವು ಬಹು ಪ್ರಬಲವಾಗಿತ್ತು ಆ ಅಧಿಪತ್ಯದಲ್ಲಿ ಒಟ್ಟು ೧೦,೨೮,೦೦೦ ಪ್ರಜೆಗಳು ಮೃತಪಟ್ಟರು ಈ ಪೈಕಿ ವಿಷಮ ಶೀತಜ್ವರವೇ ಒಂದರಲ್ಲೇ ೬,೯೬,೨೦೦ ಜನರು ಕಾಲವಾಗಿರುತ್ತಾರೆಂದು ಅಲ್ಲಿನ ಸರ್ಕಾರಿ ಲೆಕ್ಕದಿಂದ ಗೊತ್ತಾಗುತ್ತದೆ

ಆಲಿಪುರದ ಸಿಡಿಮದ್ದಿನ ಗುಂಡುಗಳ ಮೊಕದ್ದಮೆಯಲ್ಲಿ ಅಪರಾಧಿಗಳ ಪಕ್ಷದಲ್ಲಿ ನಿಂತು ವಾದಿಸುತ್ತಿದ್ದ ಮೆ|| ಸಿ ಮಿತ್ರ ಎಂಬ ಬ್ಯಾರಿಸ್ಟರ ಮನೆಯನ್ನು ಪೊಲೀಸಿನವರು ಕಳೆದ ವಾರ ಶೋಧಿಸಿ ಕೆಲವು ಪದಾರ್ಥಗಳನ್ನೂ ಕಾಗದ ಪತ್ರಗಳನ್ನೂ ತೆಗೆದುಕೊಂಡು ಹೋದದ್ದಲ್ಲದೆ ಆ ಬ್ಯಾರಿಸ್ಟರನ್ನೂ ಹಿಡಿದು ಬಾಕಪ್ಪಿನಲ್ಲಿ ಹಾಕಿಕೊಂಡಿದಾರೆ

ಪೂರ್ವ ಬಂಗಾಳಾ ಮತ್ತು ಅಸ್ಸಾಂ ಪ್ರಾಂತ್ಯಕ್ಕೆ ಸೇರಿದ ಮಾಣಿಕ್ಯಗಂಜ್ ಎಂಬ ಪಟ್ಟಣದಲ್ಲಿ ಸಬ್ ಡಿವಿಜನ್ ಆಫೀಸರಾಗಿದ್ದು ಲಂಚ ತೆಗೆದುಕೊಂಡರೆಂದು ಮೊಕದ್ದಮೆ ಆಗಿದ್ದ ಮೌಲ್ವಿ ಅಸ್ಗರುದ್ದೀನ್ ಯವರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದರು ಜಡ್ಜಿಯವರು ಕೆಳಕೋರ್ಟಿನವರು ಕೊಟ್ಟಿದ್ದ ಶಿಕ್ಷೆಯನ್ನೇ ಖಾಯಂ ಮಾಡಿರುತ್ತಾರೆ

ಗುಂಟೂರು ತಾಲೂಕು ಪಾಟ್ನಾ ಎಂಬ ಪಟ್ಟಣದಲ್ಲಿ ಇಬ್ಬರು ಲಾಯರುಗಳೂ ಮೂರು ಮಂದಿ ವರ್ತಕರೂ ಜಮೀನ್‌ದಾರರೂ ಸೇರಿ ವಿಮಾ ಕಂಪನಿಯನ್ನು ಪ್ರಾರಂಭಿಸಿ, ಆ ಕಂಪನಿಯ ೧೦,೩೪೫ ರೂಪಾಯನ್ನು ತಿಂದು ಹಾಕಿದರೆಂದು ಮೊಕದ್ದಮೆ ಆಗಿದೆ ಈ ಕೇಸಿಗೆಯು ರಜಾ ಪೂರೈಸಿದ ಮೇಲೆ ಗುಂಟೂರಿನ ಸೆಷನ್ಸ್ ಜಡ್ಜಿ ಅವರನ್ನು ದರ್ಯಾಫ್ತು ಮಾಡುವರು

ಕಳೆದ ವಾರ ಬೊಂಬಾಯಿ ಪಟ್ಟಣದ ಸಮುದ್ರತೀರದಲ್ಲಿದ್ದ ಅಬ್ದುಕಿರ್ ಎಂಬ ಜಹಜಿನೊಳಗಿಂದ ಕೂಲೀ ಜನರು ಕಲ್ಲಿದ್ದಲನ್ನು ತೆಗೆದು ಹೊರಕ್ಕೆ ಸಾಗಿಸುತ್ತಿರುವಲ್ಲಿ ತಳಭಾಗದಲ್ಲಿ ಬೆಂಕಿಹುಟ್ಟಿ ೧೨ ಮಂದಿ ಗಂಡಸರೂ ಒಬ್ಬ ಹೆಂಗಸೂ ಸುಟ್ಟು ಗಾಯಪಟ್ಟರು ಉಳಿದವರೆಲ್ಲಾ ಅತ್ತಿತ್ತ ಹೋಗಿ ಬದುಕಿಕೊಂಡರು ಕಲ್ಲಿದ್ದಲ ಹಬೆಯಿಂದಲೇ ಈ ಬೆಂಕಿ ಹುಟ್ಟಿತೆಂದು ಊಹಿಸಲ್ಪಟ್ಟಿದೆ

ಕಾಶೀ ಪಟ್ಟಣದಲ್ಲಿರುವ ಭಾರೀ ಜಮೀನ್‌ದಾರರಾದ ಬಾಬು ಮೋತಿಚಂದ್‌ರವರು ಅಲ್ಲಿ ಕಟ್ಟಲ್ಪಡುತ್ತಿರುವ ಒಂದು ಧರ್ಮಾರ್ಥವಾದ ಆಸ್ಪತ್ರೆಗೆ ಇನ್ನೊಂದು ದೊಡ್ಡ ಕೊಠಡಿಯನ್ನು ಕಟ್ಟಿಸಬೇಕೆಂದು ಹೇಳಿ ಅದಕ್ಕಾಗಿ ೬,೦೦೦ ರೂಪಾಯಿ ಕೊಟ್ಟಿದಾರೆ ಗವರ್ನಮೆಂಟಿನವರು ಈ ಹಣವನ್ನು ಅಂಗೀಕರಿಸಿ ಆ ದೊಡ್ಡ ಮನುಷ್ಯರ ಧರ್ಮಕಾರ್ಯವನ್ನು ಕೊಂಡಾಡಿದರು

ಬೊಂಬಾಯಿ ಪಟ್ಟಣದ ರಸ್ತೆಗಳಲ್ಲಿ ಧೂಳು ಏಳದಂತೆ ಟಾರ್‌ಎಣ್ಣೆಗೆ ಸೀಮೆಎಣ್ಣೆಯನ್ನು ಬೆರಸಿ ಚಲ್ಲಬೇಕೆಂದು ಗೊತ್ತುಮಾಡಿದಾರೆ ಇದನ್ನು ಒಂದೆರಡು ಕಡೆ ಹಾಕಿನೋಡಿ, ಧೂಳು ಆಗಗುತ್ತದೆಂದು ಗೊತ್ತಾದರೆ ಇತರ ಕಡೆಗಳಿಗೂ ಎರಚಬೇಕೆಂದು ತೀರ್ಮಾನವಾಗಿದೆ ಇದಕ್ಕೆ ಖರ್ಚು ಹೆಚ್ಚಾಗುವುದಿಲ್ಲವೆಂದು ತಿಳಿದುಬಂದರೆ ಈಗ ನೀರುಹಾಕುವ ಏರ್ಪಾಡನ್ನು ನಿಲ್ಲಿಸಿಬಿಡುವರು

ಕಲ್ಕತ್ತಾ ಪಟ್ಟಣದಲ್ಲಿರುವ ಮಹಾರಾಜಾ ಮಣೀಂದ್ರ ಚಂದ್ರ ನಂದಿ ಯವರು ಅಲ್ಲಿ ಕೈಗಾರಿಕೆಗಳನ್ನು ಕಲಿಸುವಂಥಾ ಒಂದು ದೊಡ್ಡ ವಿದ್ಯಾಶಾಲೆಯನ್ನು ಸ್ಥಾಪಿಸಿ ನಡಿಸುವುದಕ್ಕಾಗಿ ವರುಷಕ್ಕೆ ಒಂದು ಲಕ್ಷ ರೂಪಾಯಿ ಉತ್ಪತ್ತಿಯಾಗುವಂಥಾ ಆಸ್ತಿಯನ್ನು ಗವರ್ನಮೆಂಟಿಗೆ ಉಚಿತವಾಗಿ ವಹಿಸುವವರಾಗಿದಾರೆ ಈಗ ಈ ವಿಷಯದಲ್ಲಿ ಅವರಿಗೂ ಗವರ್ನಮೆಂಟಿಗೂ ಕಾಗದ ಪತ್ರಗಳು ನಡೆಯುತ್ತಿರುವವು

ಮಧ್ಯಪ್ರಾಂತ್ಯಗಳಿಗೆ ಸೇರಿದ ಅಮರಾವತಿ ಪಟ್ಟಣದ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರೂ ಜಾಂಡಾ ಪಟ್ಟಣದ ಮ್ಯುನಿಸಿಪಲ್ ಪ್ರೆಸಿಡೆಂಟರೂ ಸರ್ಕಾರದವರ ಮೇಲೆ ಪ್ರಜೆಗಳಿಗೆ ಅಸಮಾಧಾನ ಅಪ್ರೀತಿಗಳುಂಟಾಗುವಂತೆ ದ್ರೋಹ ಚಿಂತನೆಯ ಕಾರ್ಯಗಳನ್ನು ನಡಿಸಿದರೆಂದು ತಿಳಿದುಬಂದದ್ದರಿಂದ ಚೀಫ್ ಕಮಿಷನರವರು ಇವರಿಬ್ಬರನ್ನೂ ಕೂಡಲೇ ಆಯಾ ಕೆಲಸದಿಂದ ವಜಾ ಮಾಡಿಬಿಟ್ಟರು

ಮದರಾಸ್ ಪಟ್ಟಣದಲ್ಲಿರುವ ಹೈಕೋರ್ಟ್ ಕಟ್ಟಡವನ್ನು ಬದಲಾವಣೆ ಮಾಡಲು ಕಳೆದ ಶನಿವಾರದಿಂದ ಕಾಮಗಾರಿಗೆ ಪ್ರಾರಂಭವಾಗಿದೆ ಕೋರ್ಟ್ ರಜಾ ಮುಗಿದ ಮೇಲೂ ಈ ಕಾಮಗಾರಿಯು ಬೆಳಗ್ಗೆ ೬ ರಿಂದ ೧೧ ಗಂಟೆಯವರೆಗೂ ತರುವಾಯ ಸಾಯಂಕಾಲ ೬ ರಿಂದ ರಾತ್ರಿ ೧೦ ಗಂಟೆಯ ವರೆಗೂ ನಡೆಯುವಂತೆ ಗೊತ್ತಾಗಿದೆ ರಾತ್ರಿ ಹೊತ್ತು ಹಾರಿಯಾದ ವಾಷಿಂಗ್ಟನ್ ದೀಪಗಳನ್ನಿಟ್ಟು ಕೆಲಸ ಮಾಡುವವರಾಗಿದಾರೆ

ಕಲ್ಕತ್ತಾ ಪಟ್ಟಣದ ವೈದ್ಯ ವಿದ್ಯಾಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷೆ ಮಾಡುತ್ತಿದ್ದಾಗ ಇಬ್ಬರು ವಿದ್ಯಾರ್ಥಿಗಳು ಮನೆಯಿಂದ ಕೆಲವು ವಿಷಯಗಳನ್ನು ಬರೆದುತಂದು, ಪರೀಕ್ಷೆಯಲ್ಲಿ ಅದನ್ನು ನೋಡಿ ಬರೆಯುತ್ತಿದ್ದರು ಒಬ್ಬನನ್ನು ಹಿಡಿದಾಗ ಅವನು ತನ್ನ ಬಳಿ ಇದ್ದ ಕಾಗದವನ್ನು ಮುದುರಿ ಬಾಯಿಗೆ ತುರುಕಿಕೊಂಡು ನುಂಗುವುದಕ್ಕೆ ಪ್ರಯತ್ನಪಟ್ಟನು ಅಷ್ಟರಲ್ಲೇ ಅವರಿಬ್ಬರನ್ನೂ ಪರೀಕ್ಷೆಯ ಮಂದಿರದಿಂದ ಹೊರಡಿಸಿಬಿಟ್ಟರು

ಕಳೆದ ವಾರ ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರವದಿಂದ ೪,೫೯೪ ಪ್ರಜೆಗಳು ಕಾಲವಾದರು ಈ ಪೈಕಿ ಪಂಜಾಬ್ ಅಧಿಪತ್ಯ ೨,೨೬೦, ಬೊಂಬಾಯಿ ಅಧಿಪತ್ಯ ೬೦೧ ಸಂಯುಕ್ತ ಅಧಿಪತ್ಯಗಳು ೭೨೭, ಬಂಗಾಳಾ ೨೨೭ ಮಧ್ಯಪ್ರಾಂತ್ಯಗಳು ಮತ್ತು ಬೇರಾರ ೧೦೨, ರಾಜಪುಟಾನಾ ೩೨೫, ಮದರಾಸ್ ಅಧಿಪತ್ಯ ೧೦ ಬರ್ಮಾ ೮೭ ಮೈಸೂರು ಸಂಸ್ಥಾನ ೧೧, ಮಧ್ಯ ಇಂಡಿಯಾ ೨ ಕಾಶ್ಮೀರ ೨ ಈ ರೀತಿ ಮರಣಗಳಾದವು

ಬಳ್ಳಾರಿ ತಾಲೂಕಿಗೆ ಸೇರಿದ ಎಪ್ಪತ್ತು ಗ್ರಾಮಗಳಲ್ಲಿ ದುಷ್ಕಾಲದ ನಿಮಿತ್ತವಾಗಿ ಚಾಲ್ತಿಸಾಲಿನ ಕಂದಾಯದ ಪೈಕಿ ೭೩,೪೨೪ ರೂಪಾಯನ್ನು ಸದ್ಯ ವಸೂಲ್ಮಾಡಬೇಕಾದದ್ದಿಲ್ಲವೆಂದೂ ಮುಂದೆ ಸುಭಿಕ್ಷವಾದಾಗ್ಗೆ ವಸೂಲ್ಮಾಡಬೇಕೆಂದೂ ಮದರಾಸ್ ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ ಇದಲ್ಲದೆ ಅದೇ ತಾಲೂಕಿಗೆ ಸೇರಿದ ಮೂವತ್ತುಮೂರು ಗ್ರಾಮಗಳಲ್ಲಿ ವಸೂಲಾಗದೆ ಬಾಕಿಯಲ್ಲಿದ್ದ ಹಿಂದಿನಸಾಲಿನ ೩೬,೪೧೪ ರೂಪಾಯಿ ಕಂದಾಯವನ್ನು ರಿಮಿಷನ್ ಮಾಡಿರುತ್ತಾರೆ

ಅಲ್ಲಹಾಬಾದಿನಲ್ಲಿ ಮೆ|| ಚಂದ್ರಸಿಂಗ್ ಎಂಬೊಬ್ಬ ಅಡ್ವೊಕೇಟರು ಒಬ್ಬ ಸಾಹುಕಾರನಿಂದ ಪತ್ರ ಬರೆಸಿಕೊಂಡು ಹಣವನ್ನು ಸಾಲವಾಗಿ ಕೊಟ್ಟು ಅವನ ಮೊಕದ್ದಮೆಯನ್ನು ತಾವೇ ನಡಿಸಿದರೆಂದು ಮೊಕದ್ದಮೆ ಆಯಿತು ಪಂಜಾಬಿನ ಚೀಫ್ ಕೋರ್ಟಿನವರು ಆ ಅಡ್ವೊಕೇಟರ ನಡವಳಿಕೆಯು ಕಾನೂನಿಗೆ ವಿರೋಧವಾದದ್ದೆಂದು ತೀರ್ಮಾನಿಸಿ, ಅವರು ಮೂರು ವರುಷ ಯಾವ ಕೋರ್ಟಿನಲ್ಲೂ ಮೊಕದ್ದಮೆಯನ್ನು ನಡಿಸ ಕೂಡದೆಂದು ಶಿಕ್ಷೆ ವಿಧಿಸಿದರು ಈಗ ಆ ಅಡ್ವೊಕೇಟರು ವಿಲಾಯತಿಯ ಪ್ರಿವಿ ಕೌನ್ಸಿಲ್ ಎಂಬ ಪ್ರಧಾನ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದಾರೆ

ನಾಲ್ಕು ಮಂದಿ ಬಂಗಾಳಿಗಳು ಕೆಲವು ದಿನಗಳ ಕೆಳಗೆ ಕಲ್ಕತ್ತಾ ಪಟ್ಟಣದ ಬಾಬು ಶಶಿಸಕಾರ್ ಎಂಬ ಸಾಹುಕಾರನ ಮನೆಗೆ ನುಗ್ಗಿ ೨೫-೩೦ ಸಾವಿರ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿಕೊಂಡುಹೋದರು ಇವರನ್ನು ಹಿಡಿಯಬೇಕೆಂದು ಎಂಟಾರು ಎಂಟುಮಂದಿ ಹಿಂಡಟ್ಟಿಸಿಕೊಂಡು ಐವತ್ತು ಮೈಲಿ ದೂರ ಹೋದಾಗ್ಯೂ ಅವರು ಸಿಕ್ಕಲಿಲ್ಲ ಹೀಗೆ ಅವರು ಓಡಿಹೋಗುವಾಗ್ಗೆ ತಮ್ಮನ್ನು ಹಿಡಿಯುವುದಕ್ಕೆ ಪ್ರಯತ್ನಪಟ್ಟ ಮೂರು ಮಂದಿಯನ್ನು ಗುಂಡಿನಿಂದ ಹೊಡೆದು ಕೊಂದುಬಿಟ್ಟರು ಈಗ ಈ ನಾಲ್ಕು ಜನರನ್ನೂ ಹೈಕೋರ್ಟಿನ ಸೆಷನ್ನಲ್ಲಿ ವಿಚಾರಣೆಮಾಡುತ್ತಿದಾರೆ

ಬೇಸಿಗೆಯಲ್ಲಿ ಕೇರೀ ನಾಯಿಗಳಿಗೆ ಹುಚ್ಚು ಹಿಡಿದು ಜನರನ್ನು ಕಡಿಯುವುದೂ, ಅದನ್ನು ತಪ್ಪಿಸುವುದಕ್ಕೆ ಎಲ್ಲಾ ನಗರಗಳಲ್ಲೂ ನಾಯಿಗಳನ್ನು ಮ್ಯುನಿಸಿಪಾಲಿಟಿಯವರು ಕೊಲ್ಲಿಸುವುದೂ ವಾಡಿಕೆಯಷ್ಟೆ ಈ ಸಲ ಮದರಾಸ್ ಪಟ್ಟಣದಲ್ಲಿ ಹೊಸ ಏರ್ಪಾಡನ್ನು ಮಾಡಿದ್ದಾರೆ ಕೇರೀ ನಾಯಿಗಳನ್ನು ಜೀವಸಹಿತ ಹಿಡಿದು ತಂದು ಕೊಡುವವರಿಗೆ ನಾಯಿ ಒಂದಕ್ಕೆ ೪ ಆಣೆಯಂತೆ ಇನಾಂ ಸಿಕ್ಕುವುದೆಂದು ಪ್ರಕಟಿಸಿದಾರೆ ಇದುವರೆಗೆ ನಾಯಿ ಕೊಂದವರಿಗೆ ಒಂದು ನಾಯಿಗೆ ೨ ಆಣೆಯಂತೆ ರುಸುಂ ಕೊಡುತ್ತಿದ್ದರು ಇದನ್ನು ತಪ್ಪಿಸಿ ಈ ಹೊಸ ಏರ್ಪಾಡು ಮಾಡಿದ್ದು ಎಷ್ಟೋ ಸಂತೋಷಕರವಾಗಿದೆ

ಸುಮಾರು ಮೂರು ವರುಷಗಳ ಹಿಂದೆ ಗುಂಟೂರು ಕಡೆಯಿಂದ ಪರಬ್ರಹ್ಮಶಾಸ್ತ್ರಿ ಎಂಬುವನು ಹೈದರಾಬಾದಿಗೆ ಹೋಗಿ ಒಂದು ವಿಮಾ ಕಂಪನಿಯನ್ನು ಪ್ರಾರಂಭಿಸಿ, ಈ ಕಂಪನಿಗೆ ತಿಂಗಳಿಗೆ ಒಂದು ರೂಪಾಯಿನಂತೆ ಚಂದಾ ಕೊಟ್ಟಲ್ಲಿ ಸತ್ತ ಮೇಲೆ ೨೦೦ ರೂಪಾಯಿ ಕೊಡುತ್ತೇನೆಂದು ಪ್ರಕಟಿಸಿ, ಆ ರೀತಿ ಜನರಿಂದ ಹಣವನ್ನು ವಸೂಲ್ಮಾಡುತ್ತಾ ಒಂದು ವರುಷ ಇದ್ದು ತರುವಾಯ ಓಡಿಹೋದನು ಪೊಲೀಸ್ ಇಲಾಖೆಯವರು ಅವನನ್ನು ಹಿಡಿದು ಮೊಕದ್ದಮೆ ಮಾಡಿದರು ಕಳೆದ ವಾರ ಬೆಜ್ವಾಡಾ ಮ್ಯಾಜಿಸ್ಟ್ರೇಟರು ಅಪರಾಧಿಗೆ ಮೂರು ವರುಷ ಕಠಿಣ ಸಜವನ್ನೂ ೧,೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ

ವಾಯುವ್ಯ ಸರಹದ್ದಿನ ಬಳಿ ಇರುವ ಪೋಕರೀ ಪಠಾಣರು ಎಲ್ಲಿಯೊ ಎತ್ತಿ ಬಂದು ಹಿಂದುಸ್ಥಾನದ ಪ್ರಜೆಗಳನ್ನು ಕಷ್ಟನಷ್ಟಗಳಿಗೆ ಗುರಿ ಮಾಡುವುದು ಈಗ ಗೊತ್ತಾಗಿ ಬಂದಿದೆ ಇಂಡಿಯಾ ಗವರ್ನಮೆಂಟಿನವರು ಹಿಂದುಸ್ಥಾನದಿಂದ ಆ ಬೇಲಿಯ ಮೂಲಕ ಯಾವ ಸರಕೂ ಹೋಗದಂತೆ ಅಡ್ಡಿ ಮಾಡಿಬಿಟ್ಟಿದ್ದರೆ ಇದರಿಂದ ಆ ಪಠಾಣರಿಗೂ ಅಫ್ಘಾನಿಸ್ಥಾನಕ್ಕೂ ಕುಂದೂ ನಷ್ಟವೂ ಅನಾನುಕೂಲವೂ ಉಂಟಾಗಿರುವುದು ಕಳೆದ ವಾರ ಇಂಗ್ಲಿಷ್ ಸೈನಿಕರು ಆ ಪ್ರಾಂತ್ಯದ ಒಂದು ಕಣಿವೆಯಲ್ಲಿ ಆಹಾರ ಪದಾರ್ಥಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದಾಗ ಆ ಪ್ರಾಂತ್ಯದ ಪಠಾಣರು ಅವರನ್ನು ತಡೆದು ೧೧ ಮಂದಿಯನ್ನು ಕೊಂದುಹಾಕಿದರು ಆ ಪಠಾಣರು ಯಾರೆಂದು ಇನ್ನೂ ಗೊತ್ತಾಗಲಿಲ್ಲ

ಜನರಲ್ ತಾಲೂಕ್ಕಿನ ನಜರಾಪುರದ ಮಸೀತಿಯು.

ಅಯ್ಯಾ,

ಈ ಊರಿನಲ್ಲಿ ಪೋಲೀಸ್ ಸ್ಟೇಷನ್ ಬಳಿ ಇರತಕ್ಕ ಮಸೀತಿಯು ಬಹು ಪುರಾತನ ಕಟ್ಟಡವಾಗಿರೋಣದರಿಂದ, ತುಂಬಾ ಶಿಥಿಲವಾಗಿ, ಗೋಡೆಗಳೆಲ್ಲಾ ಬಿರುಕುಬಿಟ್ಟು, ಮೇಲ್ಭಾವಣೆಯ ತೊಲೆಗಳು ಮುರಿದುಹೋಗಿರುತ್ತವೆ. ಇಂಥಾ ಕಟ್ಟಡದಲ್ಲಿ ಅನೇಕ ಮಹಮ್ಮದೀಯರು ರಾತ್ರಿ ಹಗಲೂ ನಮಾಜು ಮಾಡುತ್ತಾರೆ. ಈ ಕಟ್ಟಡವು ಮಳೆಗಾಲದಲ್ಲಿ ಇದ್ದಕ್ಕಿದ್ದಹಾಗೆಯೇ ಬಿದ್ದುಹೋಗುವದು ಅಪಾಯಕರವಾಗಿದೆ. ಈ ಊರಲ್ಲಿ ಸುಮಾರು ಮಹಮ್ಮದೀಯರ ಮನೆಗಳು ಒಂದು ನೂರಕ್ಕಿಂತ ಹೆಚ್ಚಾಗಿದೆ ಮತ್ತು ಈ ಕಟ್ಟಡದ ರಿಪೇರಿಗೋಸ್ಕರ ವಸೂಲಾದ ಹಣ ಸಹಾ ಇರುತ್ತದೆಂದು ಕೇಳುತ್ತೇನೆ. ಈ ಕಟ್ಟಡವು ಇಂಥಾ ಶಿಥಿಲವಾದ ಸ್ಥಿತಿಯಲ್ಲಿದ್ದಾಗ್ಯೂ ಮೇಲ್ಕಂಡವರು ಇದರ ರಿಪೇರಿಗೋಸ್ಕರ ಗಮನಕೊಡದೆ ಇರುವುದನ್ನು ನೋಡಿದರೆ ತುಂಬಾ ಆಶ್ಚರ್ಯವೂ ವ್ಯಸನವೂ ಆಗುತ್ತೆ. ಗಗೀಬರು ಈ ಸಂಗತಿ ವಿಷಯ ಎಚ್ಚರಿಸಿದರೆ ಹಣವಂತರು ಅಲ್ಲಲ್ಲಿಗೆ ಮುಚ್ಚಿಬಿಡುತ್ತಾರೆ. ಇದು ಪಬ್ಲಿಕ್ ಕಟ್ಟಡವಾದದ್ದರಿಂದ ದಯಾರಸಭರಿತರಾದ ನಮ್ಮ ತಾಲ್ಲೂಕು ಅಮಲ್ದಾರರಾದರೂ ಬಡ ಮಹಮ್ಮದೀಯರ ಮೇಲೆ ದಯವಿಟ್ಟು ಈ ಕಡೆ ಸರ್ಕೀಟು ಒಂದಾಗ್ಗೆ ಈ ವಿಷಯವನ್ನು ತನಿಖೆಮಾಡಿ ಇದಕ್ಕೆ ವಸೂಲಾದ ಹಣ ಯಾರಲ್ಲಿರುತ್ತೋ ಅವರ ಮೂಲಕ ಇದರ ರಿಪೇರಿಯನ್ನು ಮಾಡಿಸಿದರೆ ತುಂಬಾ ಕೀರ್ತಿ ಉಂಟಾಗುತ್ತೆ. ಇಲ್ಲದೆ ಹೋದರೆ ಈ ಕಟ್ಟಡವು ಕೆಲವು ಜನರನ್ನು ಆಹುತಿಯಾಗಿ ತೆಗೆದುಕೊಳ್ಳುವುದೆನ್ನುವುದಕ್ಕೆ ಯಾವ ಸಂಶಯವೂ ಕಾಣುವದಿಲ್ಲ.

ಒಬ್ಬ ಮಹಮ್ಮದೀಯ ವಾಚಕ

ಚನ್ನಪಟ್ಟಣದ ಸಂತೆ.

ಅಯ್ಯಾ,

ದಯಾಶೀಲರಾದ ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರಜೆಗಳ ಕಷ್ಟನಿವಾರಣೆಗಾಗಿ ತಮ್ಮ ಸಾಧ್ಯವಾದಷ್ಟು ಏರ್ಪಾಡುಗಳನ್ನು ಏರ್ಪಡಿಸುತ್ತಾ ಬರುವ ವಿಷಯದಲ್ಲಿ ನನ್ನ ಕೃತಜ್ಞತೆ ... ಈ ಚನ್ನಪಟ್ಟಣದಲ್ಲಿ ... ವ್ಯಾಪಾರಿಗಳು ಕಷ್ಟವನ್ನು ... ಸರ್ಕಾರದವರ ... ಸೂಚಿಸುತ್ತೇನೆ.

ಈಗ ಪಟ್ಟಣದ ದಕ್ಷಿಣ ಭಾಗದಲ್ಲಿ ... ಸಂತೆ ... ರಂಗನಾಥ ಸ್ವಾಮಿ ... ಸಂತೆ ... ಗಾಡಿಗಳು ... ಪೇಟೆಯ ... ಸರ್ಕಾರದವರು ಈ ವಿಷಯವನ್ನು ... ಸಂತೆಯನ್ನು ... ಜನರಿಗೆ ಅನುಕೂಲವಾದ ... ಸಂತೆ ಕೂಡುವುದು ... ಇದೇ ಜನರ ಅಪೇಕ್ಷೆ ... ಇಲ್ಲಿನ ವರ್ತಕರು ... ಸಂತೆಯನ್ನು ... ಗ್ರಾಮಗಳ ... ಜನರು ... ಪ್ರಜೆಗಳಿಗೆ ಪ್ರಯೋಜನವು ಆಗುತ್ತೆ. ಹಲವು ಊರು ಗ್ರಾಮಗಳಿಂದ ದವಸ ಧಾನ್ಯಗಳು ... ಸಂತೆಗಳಲ್ಲಿ ಪೇಟೆ ... ರೈತರು ... ಗ್ರಾಮಗಳಿಂದ ಬರುವ ... ಸಂತೆಯನ್ನು ಏರ್ಪಾಡು ಮಾಡುವುದು.

ಉತ್ತಮವು ಪ್ರಜೆಗಳಿಗೆ ತುಂಬಾ ಪ್ರಯೋಜನವು ಆಗುತ್ತೆ.

ಈ ಚನ್ನಪಟ್ಟಣಕ್ಕೆ ... ಸಂತೆ ... ಕಾರಣವಾಗಿರುತ್ತೆ. ... ಈ ಸಂತೆ ಏರ್ಪಾಡಾಗುವ ವಿಷಯಗಳು ... ಸಂತೆಗಳಿಂದ ಪ್ರಜೆಗಳಿಗೆ ತುಂಬಾ ಪ್ರಯೋಜನವಾಗುವದೆಂದಾಗಿ ತೋರುವದು. ಆದದರಿಂದ ನಮ್ಮ ಸರ್ಕಾರದವರು ಹ್ಯಾಗೂ ಇಲ್ಲಿ ಒಂದು ಸಂತೆಯನ್ನು ಮಾಡಿಕೊಟ್ಟು ಕೀರ್ತಿ ಪಡೆಯುವರೆಂದು ನಂಬುತ್ತೇನೆ.

ಒಬ್ಬ ವಾಚಕ.

[ಮ್ಯುನಿಸಿಪಲ್ ಮೀಟಿಂಗಿನಲ್ಲಿ ಮೆಂಬರುಗಳು ಈ ವಿಷಯವನ್ನು ಚರ್ಚೆಮಾಡಿ ಇತ್ತೀಚೆ ಪಡಿಸಬೇಕಾಗಿದೆ. ಸಂತೆ ಕಟ್ಟುವಂತೆ ಮಾಡಬೇಕೆಂದು ವಿಷಯ ನಿಲ್ಲಿ ... ಗವರ್ನಮೆಂಟಿಗೆ ರಿಪೋರ್ಟು ಮಾಡಿ ಅವರು ಅದನ್ನು ಸ್ವೀಕರಿಸಿ ಮಾಡಲು ಅನುಮಾನ ಕಾಣುವದಿಲ್ಲ. —ಎಡಿ.]

ತಾಲ್ಲೂಕು ವರ್ತಮಾನಗಳು.

ಚಿತ್ರದುರ್ಗ.—ಕಳೆದ ತಾ ೧೭ರಲ್ಲಿ ಇಲ್ಲಿನ ಆರ್ಯ ಸಭಾ ... ಹೋಯಿನ ಕಮಿಟಿ ಮೀಟಿಂಗು ನಡೆಯಿತು. ... ವಿದ್ಯಾರ್ಥಿಗಳು ... ಸ್ಕೂಲಿನ ಕಟ್ಟಡ ... ಹನುಮಂತರಾಯರವರು ... ಕೆಲವು ಪ್ರತಿನಿಧಿಗಳ ಕೂಡ ಶ್ರೀ ಮುರುಘಿ ಸ್ವಾಮಿಗಳ ಸನ್ನಿಧಿಗೆ ಹೋಗಿ ಬರಬೇಕೆಂದು ತೀರ್ಮಾನವಾಯಿತು. ಈ ಸ್ಟೂಡೆಂಟ್ಸ್ ಹೋಂನ ಪರವಾಗಿ ಮ್ಯಾನೇಜರ್ ಮ॥ ಹನುಮಂತರಾಯರವರು ಬೆಂಗಳೂರು ಒಕ್ಕಲಿಗರ ಸಂಘದ ಮಹಾ ಸಭೆಗೆ ಪ್ರತಿನಿಧಿಯಾಗಿ ಹೋಗಿ ಬರಬೇಕೆಂದು ಕಮಿಟಿಯವರು ಗೊತ್ತುಮಾಡಿದರು.

ಮಂಡ್ಯ.—ಕಳೆದ ಗುರುವಾರ ರಾತ್ರಿ ೯ ಗಂಟೆ ವರೆಗೂ ಬಲವಾಗಿ ಇಲ್ಲಿ ಒಳ್ಳೆ ಮಳೆ ಆಗಿರುತ್ತದೆ. ಕೆರೆ ಕೊಳಗಳು ತುಂಬುತ್ತಾ ಬರುತ್ತಲಿವೆ. ರೈತಾಪಿಜನರು ಸಂತೋಷದಿಂದ ತಮ್ಮ ಹೊಲದಲ್ಲಿ ಜೋಳ ಹುರುಳಿ ಮುಂತಾದದ್ದನ್ನು ಬಿತ್ತಿಕೊಂಡಿರುತ್ತಾರೆ.—ಇಲ್ಲಿನ ನಮ್ಮ ಅಮಲ್ದಾರ್ ಮ॥ ಬಿ. ನಾರಾಯಣರಾಯರವರು ಪ್ರಜೆಗಳಿಗೆ ಸಹಾಯಕರವಾದ ಕಾರ್ಯಗಳನ್ನೇ ಮಾಡುತ್ತಾ ಬಂದಿರುತ್ತಾರೆ. ರಾತ್ರಿಕಾಲದಲ್ಲಿ ಲಾಂತ್ರದ ಕಂಬಗಳು ಕಮ್ಮಿಯಾಗಿದೆ ಎಂದು ತಿಳಿದು ಸರ್ಕಾರದಿಂದ ಇನ್ನೂ ೨೦ ಲಾಂತ್ರಕಂಬಗಳನ್ನು ತರಿಸಿ, ಊರಿನಲ್ಲಿ ಇಡಿಸಿದ್ದಲ್ಲದೆ ಹೊಲಗೇರಿಯಲ್ಲಿ ಸ್ವಾಮ್ಯುಯಾಗಿ ಎರಡು ಲಾಂತ್ರಗಳನ್ನು ಒಂದು ಹೊಲಗೇರಿಗೆ ಹೋಗುವ ಭಾವಿಯ ಪಕ್ಕದಲ್ಲಿಯೂ ಮತ್ತೊಂದು ಮಿಷನ್ ಸ್ಕೂಲ್ ಎದುರಿನಲ್ಲಿಯೂ ಇಡಿಸಿರುತ್ತಾರೆ. ಇವರನ್ನು ಇದಕ್ಕಾಗಿ ಪ್ರಜೆಗಳು ಕೊಂಡಾಡುತ್ತಾರೆ.—ಕಳೆದ ೧೯ನೇ ತಾ ಸೋಮವಾರ ಇಲ್ಲಿನ ಅಬ್ಕಾರಿ ಅ॥ ಇನ್ಸ್‌ಪೆಕ್ಟರ್ ಮ॥ ಶ್ರೀನಿವಾಸ ಐಯಂಗಾರ‍್ಯ ಮತ್ತು ಅವರ ಗುಮಾಸ್ತೆಯವರು ಇಬ್ಬರೂ ಕೆಳಸದ ಉದ್ದೇಶ ಇಲ್ಲಿಂದ ಹನಕೆರೆಗೆ ತಮ್ಮ ಜಟ್ಕಾಗಾಡಿಯಲ್ಲಿ ಪ್ರಯಾಣಮಾಡಿ ವಾಪಸು ಬರುತ್ತಿರುವಾಗ ರಾತ್ರಿ ಸುಮಾರು ೯ ಗಂಟೆ ಹೊತ್ತಿನಲ್ಲಿ ಇವರಿಗೆ ಆಗದೆ ಇರುವಂಥ ನಾಲ್ಕು ಜನ ದುಷ್ಟರು ಚೆತುಕೊಂಡಿದ್ದು ಹನಕೆರೆ ಹಳ್ಳದ ಹಾದಿ ಹತ್ತಿರ ಇವರ ಗಾಡಿ ಒಂದಾಗ ಕಲ್ಲುಗಳನ್ನು ಎಸೆದರು. ಆ ಕಲ್ಲುಗಳು ಗಾಡಿಗೆ ತಗಲಿದವು. ತರುವಾಯ ಅವರ ಸೇವಕನು ಗಾಡಿಯಿಂದ ಇಳಿದು ನೋಡಿದಾಗ ಯಾರೂ ಕಾಣಲಿಲ್ಲ. ಅಷ್ಟರಲ್ಲಿಯೇ ಆ ದುಷ್ಟರಲ್ಲಿ ಒಬ್ಬನು ಒಂದು ದೊಣ್ಣೆಯಿಂದ ಅವರನ್ನು ಹೊಡೆದನು. ಇದಕ್ಕೆ ಹೋದಾಗ ಕುದುರೆಗೆ ಆ ಪೆಟ್ಟು ತಗಲಿ ಗಾಡಿ ಬಹು ವೇಗವಾಗಿ ಓಡುವದಕ್ಕೆ ಪ್ರಾರಂಭವಾದದ್ದರಿಂದ ಗಾಡಿಯ ಏಕ್ಸಲ್ಲು ಮುರಿದು ಚಕ್ರವು ಕಳಚಿಕೊಂಡು ... ಇನ್ಸ್‌ಪೆಕ್ಟರು ... ಪೋಲೀಸ್ ಅಧಿಕಾರಿಗಳು ... ಈ ವರ್ತಮಾನ ... ಇನ್ಸ್‌ಪೆಕ್ಟರಿಗೆ ಆಗಾಗ ಸಂದೇಹ ... ಪ್ರಯತ್ನ ಪಡುತ್ತಾರೆ.

ಚನ್ನಪಟ್ಟಣ.—ಬಿಸಿಲು ಸಕೆಯೂ ಬಹಳ ಹೆಚ್ಚಾಗಿ ತುಂಬಾ ಕಷ್ಟವಾಗಿದೆ. ಇಲ್ಲಿನ ಕಣ್ವ ನದಿ ಸಂಪೂರ್ಣವಾಗಿ ಒಣಗಿಹೋಗಿದೆ. ಜನರು ನೀರಿಗಾಗಿ ಅಲೆದಾಡುತ್ತಲಿರುವರು. ... ಕೆರೆಯ ... ಪ್ರಜೆಗಳು ... ಮುನಿಸಿಪಲ್ ... ಪ್ರೆಸಿಡೆಂಟರು ... ಸರ್ಕಾರ ... ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಮ॥ ... ಜನರಿಗೆ ... ಮುಂದೆಯೂ ಇವರ ... ಸರ್ಕಾರ ... ತಾ ೧೯ರಲ್ಲಿ ಇಲ್ಲಿನ ... ಸಂಕ್ರಾಂತಿ ... ಗ್ರಾಮದ ದೇವತೆಗಳ ಜಾತ್ರೆಗಳು ನಡೆದವು. ... ಕಾರ್ಯಗಳನ್ನು ನಡಿಸಿ, ನೂರಾರು ಜನರಿಗೆ ಊಟ ಉಪಚಾರಗಳನ್ನು ಮಾಡಿಸಿದರು. ... ಜಾತ್ರೆಯು ... ಮನೆಯಲ್ಲೂ ... ಜನರಿಗೆ ಭೋಜನಾದಿಗಳು ... ಭೋಜನಕ್ಕೆ ... ಜನರು ಜಾತ್ರೆಗೆ ಸೇರಿ ... ಗ್ರಾಮದ ಜನರು ... ಕೆಲವು ... ಗ್ರಾಮವಾಸಿಗಳು ... ಈ ವರುಷ ... ಜನರು ... ಆ ಪಾಂತ್ಯದಲ್ಲಿ ... ವ್ಯಾಪಾರ ... ಇಲ್ಲಿನ ಕೆಲವು ಪ್ರಜೆಗಳು ... ಒಡೆಯುವದು ... ಬಾಯಿಯಲ್ಲಿ ... ಹಾಕಿ ... ಈ ಊರಿನಲ್ಲಿ ... ಸಂತೆ, ಜಾತ್ರೆಗಳಲ್ಲೂ ... ಇತರ ... ಜನರನ್ನು ... ಪೋಲೀಸಿನವರು ಅವರ ಬಳ ... ನೋಡಿಕೊಂಡು ... ಈ ಎಡವಟ್ಟಿಗಳಿಗೆ ... ಬೇಕು.

ವಿದೇಶ ವರ್ತಮಾನಗಳು.

ಆಫ್ರಿಕದಲ್ಲಿ ಕೆಂಪುಸಮುದ್ರದ ತೀರದ ಬಳಿ ಜಿಂಸಾ ಎಂಬ ಸ್ಥಳದಲ್ಲಿ ಒಂದು ಕೀಮೆಯೆಣ್ಣೆಯ ಬಾವಿಯು ಸಿಕ್ಕಿರುತ್ತದೆ. ಇದರಲ್ಲಿ ೧೬೫೦ ಅಡಿ ಆಳದಿಂದ ದಿನ ಒಂದಕ್ಕೆ ೩೦೦ ಪೀಪಾಯಿಗಳಷ್ಟು ಎಣ್ಣೆಯನ್ನು ತೆಗೆಯುತ್ತಾರೆ.

ಪೋರ್ಚುಗಲ್ ರಾಜ್ಯದ ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ಕಳೆದ ಶುಕ್ರವಾರದ ದಿನ ಒಬ್ಬವಾದ ಭೂಕಂಪವಾಯಿತು. ಪ್ರಜೆಗಳೆಲ್ಲಾ ಗಾಬರಿಬಿದ್ದು ಮನೆ ಮಠಗಳನ್ನು ಬಿಟ್ಟು ಬೈಲಿಗೆ ಬಂದರು. ಅನೇಕ ಮನೆಗಳು ತುಂಬಾ ಬಿರುಕು ಬಿಟ್ಟವು. ಅದರೆ ಪ್ರಾಣ ನಷ್ಟವೇನೂ ಆಗಲಿಲ್ಲ.

ಆಫ್ರಿಕಾಖಂಡದಲ್ಲಿ ನೈಗರ್ ನದಿಯು ಹರಿಯುವ ಫ್ರಾಂಕ್ಯದಲ್ಲಿ ಕಾಗಾಸ್ ಪಟ್ಟಣದಿಂದ ಜಿಬ್ಬ ನಗರದ ವರೆಗೆ ೩೦೦ ಮೈಲಿ ರೈಲ್ ರಸ್ತೆಯು ಹಾಕಿ ಸಿದ್ಧಪಡಿಸಲ್ಪಟ್ಟಿತು. ಈಗ ಆ ರಸ್ತೆಯನ್ನು ಅಲ್ಲಿಂದ ಮುಂದಕ್ಕೆ ಕಾನೋ ಎಂಬ ಸ್ಥಳದ ತನಕ ಬಿಡುವನ ಮಾಡಬೇಕೆಂದು ಆತುರವಾಗಿ ಕಾಮಗಾರಿ ನಡೆಸುತ್ತಿರುವರು.

ಡಾಕ್ಟರ್ ಡಬ್ಲ್ಯು. ಎಸ್. ಬ್ರೂಸ್‌ಯವರು ದಕ್ಷಿಣಧ್ರುವವನ್ನು ಒಂದಾವರ್ತಿ ಹೋಗಿ ನೋಡಿಕೊಂಡು ಬಂದಿರುತ್ತಾರೆ. ಈಗ ಮತ್ತೆ ಅವರು ೧೯೧೧ ನೇ ಇಸವಿಯಲ್ಲಿ ಎರಡನೇ ಸಲ ಆ ಪ್ರಾಂತ್ಯದ ಸಂಚಾರಮಾಡಿಕೊಂಡು ಬರಬೇಕೆಂದು ಪ್ರಯತ್ನಪಡುತ್ತಿದಾರೆ. ಈ ಪ್ರಯಾಣಕ್ಕೆ ಐವತ್ತು ಲಕ್ಷ ರೂಪಾಯಿ ಖರ್ಚಾಗುವುದು.

ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಡೆನ್ಮಾರ್ಕ್ ರಾಜ್ಯದ ಆಳಿಕೆ ಇರುವ ಐಸ್ಲಾಂಡ್ ಎಂಬ ದ್ವೀಪದಲ್ಲಿ ಸರ್ಕಾರದವರು ಮದ್ಯಪಾನೀಯಗಳನ್ನು ಪರದೇಶಗಳಿಂದ ಬಾರದಂತೆ ಕಾನೂನ್ ಮಾಡಿ ತಡೆದುಬಿಟ್ಟಿದಾರೆ. ಮದ್ಯವನ್ನು ಉಪಯೋಗಿಸಿ ತಯಾರಿಸಲ್ಪಡುವ ಯಾವ ತಿಂಡಿಯ ಪದಾರ್ಥವನ್ನೂ ಯಾವ ವರ್ತಕರಾಗಲಿ ಇತರರಾಗಲಿ ತರಿಸಕೂಡದೆಂದು ನಿರ್ಧಾರಮಾಡಿರುವರು. ಈ ಕಾನೂನು ಅಲ್ಲಿನ ಪ್ರತಿನಿಧಿ ಸಭೆಯಲ್ಲಿ ಚರ್ಚೆಯಾಗುತ್ತಿದೆ.

ಆಫ್ರಿಕಾದ ಸಮುದ್ರ ತೀರದಲ್ಲಿರುವ ಅಲೆಕ್ಸಾಂಡ್ರಿಯಾ ಪಟ್ಟಣದಲ್ಲಿ ... ನಿಕ್ಕಾಲಿಯಾ ಮಹಾರಾಜ್ಞಿಯವರ ಹೆಸರಿನ ಮೇಲೆ ಒಂದು ದಿವ್ಯವಾದ ... ಕಟ್ಟಡವನ್ನು ಕಟ್ಟುವರು. ಇದಕ್ಕೆ ೧೫ ಲಕ್ಷ ರೂಪಾಯಿ ಖರ್ಚಾಗುತ್ತದೆ. ನಮ್ಮ ಚಕ್ರವರ್ತಿ ಸಾರ್ವಭೌಮರವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್‌ರವರು ಪತ್ನಿ ಪರಿವಾರ ಸಮೇತ ಹಾಜರಾಗಿದ್ದು, ಆ ಕಟ್ಟಡವನ್ನು ಮಾರ್ಚಿ ತಾ ೨೭ರಲ್ಲಿ ಪ್ರತಿಷ್ಠೆ ಮಾಡಿ ದಿವ್ಯವಾದ ಪ್ರೇಕ್ಷಾ ಮಹಾಶ್ಯಗಳನ್ನು ಅಪ್ಪಣೆ ಕೊಡಿಸಿದರು.

ನಿಜಾಮರು ಮಹಾರಾಜಾ ಚಕ್ರವರ್ತಿಯವರು ಮಹಾರಾಜ್ಞಿಯವರ ... ಪಟ್ಟದ ... ಕೆತ್ತ ... ಡ್ಯೂಕ್ ಆಫ್ ಕನ್ನಾಟ್‌ರವರು ಪತ್ನಿ ಸಹಿತ ... ಅವರನ್ನು ... ಅನೇಕ ಸಂತೋಷ ... ನಡೆಸಿದರು. ಕಳೆದ ಗುರುವಾರದ ದಿನ ಚಕ್ರವರ್ತಿ ಸಾರ್ವಭೌಮರವರು ಆ ಪಟ್ಟಣದಲ್ಲಿರುವ ... ಪೌಂಡ್ ... ಭೂ ... ನ್ನು ... ಅವರುಗಳು ... ಹೊರಟರು.

ಕಳೆದ ೧೯೦೮ ನೇ ಇಸವಿಯಲ್ಲಿ ಇಂಗ್ಲೆಂಡ್ ಮತ್ತು ವೇಲ್ಸ್ ನಲ್ಲಿ ೩,೩೫,೯೯೮ ಮದುವೆಗಳೂ, ೯,೪೦,೩೮೩ ಜನನಗಳೂ, ೫,೨೦,೪೫೬ ಮರಣಗಳೂ ಆದವು. ಜನನದಲ್ಲಿ ಗಂಡುಮಕ್ಕಳು ೪,೭೮,೬೨೯, ಹೆಣ್ಣುಮಕ್ಕಳು ೪,೬೧,೭೫೪. ಮರಣಗಳಲ್ಲಿ ಗಂಡಸರು ೨,೬೬,೫೩೭, ಹೆಂಗಸರು ೨,೫೩,೯೧೯. ಲಂಡನ್ ಎಂಬ ಒಂದು ಡಿಸ್ಟ್ರಿಕ್ಟಿನಲ್ಲಿರುವ ೪೭,೫೮,೭೨೮ ಪ್ರಜಾಸಂಖ್ಯೆಯಲ್ಲಿ ೩೯,೬೩೫ ಮದುವೆಗಳೂ, ೧,೨೨,೨೪೮ ಜನನಗಳೂ (ಗಂಡು ೬೨,೧೯೭, ಹೆಣ್ಣು ೬೦,೦೫೧), ೭೬,೩೪೪ ಮರಣಗಳೂ (ಗಂಡಸರು ೩೮,೮೦೪, ಹೆಂಗಸರು ೩೭,೫೪೦) ಆಗಿರುತ್ತವೆಂದು ಪ್ರಕಟವಾಗಿದೆ.

ಜರ್ಮನಿಯಲ್ಲಿ ಅಂತರಿಕ್ಷದಲ್ಲಿ ಸಂಚರಿಸುವಂಥಾ ವಿಮಾನಗಳನ್ನು ತಯಾರುಮಾಡುವುದರಲ್ಲಿ ಪ್ರಖ್ಯಾತಿಹೊಂದಿರುವ ಕೌಂಟ್ ಜೆಪ್ಪಿಲಿನ್ ಎಂಬ ಕಾರೀಗಾರನು ತನ್ನ ವ್ಯಾಪಾರದಲ್ಲಿ ಎಂಟುಮಂದಿಯನ್ನು ಒಂದು ವಿಮಾನದೊಳಗೆ ಕೂರಿಸಿಕೊಂಡು, ಪ್ರೆಡ್ರಿಕ್‌ಶಾಫನ್ ಪಟ್ಟಣದಲ್ಲಿ ಆಕಾಶಕ್ಕೆ ಏರಿದುಹೋಗಿ ಅಂತರಿಕ್ಷದಲ್ಲಿ ಸಂಚಾರಮಾಡುತ್ತಾ ಮ್ಯೂನಿಕ್ ಪಟ್ಟಣಕ್ಕೆ ಹೋದನು. ಅಲ್ಲಿಂದಲ್ಲಿಗೆ ೧೦೦ ಮೈಲಿ ದೂರವಾಗುತ್ತದೆ. ಅಷ್ಟು ದೂರವನ್ನು ಎರಡು ಗಂಟೆ ಹೊತ್ತಿನಲ್ಲಿ ಮುಗಿಸಿಬಿಟ್ಟನು. ಈ ಆಕಾಶ ಬುಟ್ಟಿಯು ಗಂಟೆಗೆ ೫೦ ಮೈಲಿಯಂತೆ ಬಹು ವೇಗವಾಗಿ ಹೋಯಿತು. ಆದರೆ ಕಡೆಯಲ್ಲಿ ಗಾಳಿಯು ಸ್ವಲ್ಪ ವಿರೋಧವಾಗಿ ಬೀಸುತ್ತಿದ್ದದರಿಂದ ಈ ವಿಮಾನವನ್ನು ಮ್ಯೂನಿಕ್ ಪಟ್ಟಣದಲ್ಲಿ ಇಳಿಸುವುದಕ್ಕೆ ಆಗದೆಹೋಯಿತು. ಆದು ಅಲ್ಲಿಂದ ೨೫ ಮೈಲಿ ದೂರದಲ್ಲಿರುವ ಲಾಂಡ್‌ಷಟ್ ಎಂಬ ಊರಿನಲ್ಲಿ ನೆರಿಯಾಗಿ ಇಳಿಯಿತು.

ಅಮೇರಿಕಕ್ಕೆ ಸೇರಿದ ನ್ಯೂಯಾರ್ಕ್ ಪಟ್ಟಣದಲ್ಲಿ ಒಂದು ದೊಡ್ಡ ಆಸ್ಪತ್ರೆಯೊಳಗೆ ವಾಯುಸೋಂಕಿಗೆ ಹೊಸ ತರಹಾ ಚಿಕಿತ್ಸೆಯನ್ನು ಮಾಡುತ್ತಾರೆ. ಒಬ್ಬ ರೋಗಿಯು ವಾಯುಸೋಂಕಿನಲ್ಲಿ ಬಹುಕಾಲ ಅಸ್ವಸ್ಥನಾಗಿ ಈ ಆಸ್ಪತ್ರೆಗೆ ಹೋದನು. ಆಸ್ಪತ್ರೆಯವರು ಕೆಲವು ಕಾಲದ ತನಕ ಬೇರೆ ಬೇರೆ ತರದ ಔಷಧಗಳನ್ನು ಮಾಡಿದರೂ ಅವನಿಗೆ ಗುಣವಾಗಲಿಲ್ಲ. ಆದಗ್ಗ ಕೆಲವು ಜೇನು ಹುಳುಗಳನ್ನು ಹಿಡಿದುತಂದು ಆ ರೋಗಿಯ ಮೈಮೇಲೆ ಬಿಟ್ಟು ಕಚ್ಚುವಂತೆ ಮಾಡಿದರು. ಹೀಗೆ ರೋಗಿಯು ಕಚ್ಚಿಸಿಕೊಂಡದ್ದರಿಂದ ... ಒಂದು ಸುಮಾರು ನಾಲ್ಕು ವಾರಗಳ ಹಿಂದೆ ಅಂಗಾಂಗಗಳ ... ವಾಯುವಿನ ... ಬಾಧೆಪಡುತ್ತಿದ್ದ ಒಬ್ಬ ಮನುಷ್ಯನು ತನ್ನ ತೋಟದಲ್ಲಿರುವಾಗ್ಗೆ ಒಂದು ಗುಂಪಿನ ಜೇನುಹುಳುಗಳು ಆಕಸ್ಮಾತ್ತಾಗಿ ಅವನನ್ನು ಮುತ್ತಿಕೊಂಡು ತುಂಬಾ ಕಚ್ಚಿಬಿಟ್ಟವು. ಆ ಕಡಿತದಿಂದ ಅವನಿಗೆ ಬಾಧೆಯುಂಟಾದರೂ ... ವಾಯುಸೋಂಕಿನಿಂದ ... ಈ ರೀತಿ ಜೇನಿನಿಂದ ಕಡಿಸಿಕೊಂಡು ವಾಯುಸೋಂಕನ್ನು ಪರಿಹರಿಸಿಕೊಳ್ಳುವುದು ಸುಮಾರು ೩,೦೦೦ ವರುಷಗಳ ಹಿಂದೆ ಯೂರೋಪ್ ಖಂಡದಲ್ಲಿ ವಾಡಿಕೆಯಾಗಿತ್ತು. ಈಗ ಮತ್ತೆ ಅದೇ ಚಿಕಿತ್ಸೆಯನ್ನು ಪ್ರಾರಂಭಿಸಿರುವುದು ಸಂತೋಷಪ್ರದವಾಗಿದೆ.

ಅನೇಕಲ್ ತಾಲ್ಲೂಕು ಸರ್ಜಾಪುರದ ಪೋಲೀಸ್ ಸ್ಟೇಷನ್ನಿನ ದುಸ್ಥಿತಿಯು.

ಅಯ್ಯಾ,

ಈ ಊರಿನಲ್ಲಿ ಪೋಲೀಸ್ ಸ್ಟೇಷನ್ ಬಳಿ ಇರತಕ್ಕ ಮಹೀತಿಯು ಬಹು ಪುರಾತನ ಕಟ್ಟಡವಾಗಿರೋಣದರಿಂದ, ತುಂಬಾ ಶಿಥಿಲವಾಗಿ, ಗೋಡೆಗಳೆಲ್ಲಾ ಬಿರುಕುಬಿಟ್ಟು, ಮೇಲ್ಛಾವಣಿಯ ತೊಲೆಗಳು ಮುರಿದುಹೋಗಿರುತ್ತವೆ ಇಂಥಾ ಕಟ್ಟಡದಲ್ಲಿ ಅನೇಕ ಮಹಮದೀಯರು ರಾತ್ರಿ ಹಗಲೂ ನಮಾಜು ಮಾಡುತ್ತಾರೆ. ಈ ಕಟ್ಟಡವು ಮಳೆಗಾಲದಲ್ಲಿ ಇದ್ದಕ್ಕಿದ್ದ ಹಾಗೆಯೇ ಬಿದ್ದು ಹೋಗುವದು ಅಪಾಯಕರವಾಗಿದೆ ಈ ಊರಲ್ಲಿ ಸುಮಾರು ಮಹಮದೀಯರ ಮನೆಗಳು ಒಂದು ನೂರಕ್ಕಿಂತ ಹೆಚ್ಚಾಗಿದೆ ಮತ್ತು ಈ ಕಟ್ಟಡದ ಜೀರ್ಣೋದ್ಧಾರ ಮಸೂಲಾದ ಹಣ ಸಹಾ ಇರುತ್ತದೆಂದು ಕೇಳುತ್ತೇನೆ ಈ ಕಟ್ಟಡವು ಇಂಥಾ ಶಿಥಿಲವಾದ ಸ್ಥಿತಿಯಲ್ಲಿದ್ದಾಗ್ಯೂ ಮೇಲ್ಕಂಡವರು ಇದರ ಜೀರ್ಣೋದ್ಧಾರ ಗಮನಕೊಡದೆ ಇರುವುದನ್ನು ನೋಡಿದರೆ ತುಂಬಾ ಆಶ್ಚರ್ಯವೂ ವ್ಯಸನವೂ ಆಗುತ್ತೆ. ಗಣೀಬಾಸು ಈ ಸಂಗತಿ ವಿಷಯ ಏನೂ ಅರಿಯದೆ ಹಣವಂತರು ಅಲ್ಲಲ್ಲಿಗ ಮುಚ್ಚಿಬಿಡುತ್ತಾರೆ ಇದು ಪಬ್ಲಿಕ್ ಕಟ್ಟಡವಾದದ್ದರಿಂದ ದಯಾವಂತರಾದ ನಮ್ಮ ತಾಲ್ಲೂಕು ಅಮಲ್ದಾರರಾದರೂ ಒಬ್ಬ ಮಹಮದೀಯ ಮೇಲೆ ವಹಿಸಿಬಿಟ್ಟು ಈ ಕಡೆ ಸರ್ಕೀಟು ಬಂದಾಗ್ಗೆ ಈ ವಿಷಯವನ್ನು ತನಿಖೆಮಾಡಿ ಇದಕ್ಕೆ ಮಸೂಲಾದ ಹಣ ಯಾರಲ್ಲಿರುತ್ತೋ ಅವರ ಮೂಲಕ ಇದರ ರಿಪೇರಿಯನ್ನು ಮಾಡಿಸಿದರೆ ತುಂಬಾ ಕೀರ್ತಿ ಉಂಟಾಗುತ್ತೆ. ಇಲ್ಲದೆ ಹೋದರೆ ಈ ಕಟ್ಟಡವು ಕೆಲವು ಜನರನ್ನು ಆಹುತಿಯಾಗಿ ತೆಗೆದುಕೊಳ್ಳುವುದೆನ್ನುವುದಕ್ಕೆ ಯಾವ ಸಂಶಯವೂ ಕಾಣುವದಿಲ್ಲ

ಒಬ್ಬ ಮಹಮದೀಯ ವಾಚಕ

ಚನ್ನಪಟ್ಟಣದ ಸಂತೆಯು.

ಅಯ್ಯಾ,

ನಮ್ಮ ಶ್ರೀಮತ್ ಮಹಾರಾಜರ ಸರ್ಕಾರದವರು ಪ್ರಜೆಗಳ ಕಷ್ಟ ನಿವಾರಣೆಗಾಗಿ ಅನುಕೂಲಕ್ಕಾಗಿ ಹಲವು ಏರ್ಪಾಡುಗಳನ್ನು ಏರ್ಪಡಿಸಲಾಗುತ್ತಿರುವ ವಿಷಯದಲ್ಲಿ ನಾವು ಕೃತಜ್ಞರಾಗಿರುವೆವು. ಈ ಚನ್ನಪಟ್ಟಣದಲ್ಲಿ ಆದಷ್ಟು ಒಂದು ಸಂತೆ ಏರ್ಪಾಡು ಮಾಡಿಕೊಟ್ಟು ಈ ತಾಲ್ಲೂಕಿನವರ ಕಷ್ಟವನ್ನು ನಿವಾರಿಸಬೇಕೆಂದು ಬಹಳ ಕೇಳಿಕೊಳ್ಳುತ್ತಾ ಬರೆಯುತ್ತಲಿದ್ದೇನೆ.

ಈಗ ಇಲ್ಲಿ ಪರಿಪರಿ ವಾರಗಳು ಏನೇನು ಪದಾರ್ಥಗಳು ಬೇಕಾದರೂ ಬೆಂಗಳೂರು ಇಕ್ಕೆ ರಾಮನಗರ ಮುಂತಾದ ಕಡೆ ಹೋಗಿ ತರಬೇಕಾಗುತ್ತೆ. ಇದರಿಂದ ಬಡಜನಗಳಿಗೆ ತುಂಬಾ ತೊಂದರೆಯಾಗುತ್ತೆ. ಈ ಸಂತೆಯು ಇಲ್ಲದೆ ಇರುವದರಿಂದ ಬಡವರಿಗೆ ಬಹು ಕಷ್ಟವಾಗಿರುವುದಲ್ಲದೆ ಒಂದು ಸಂತೆ ನಡೆಯುವ ಏರ್ಪಾಡು ಮಾಡಿಕೊಡಬೇಕೆಂಬ ಅರ್ಥಕ್ಕೆ ಪ್ರಜೆಗಳ ವಿಜ್ಞಾಪನಾ ಪತ್ರಗಳು ಸರ್ಕಾರಕ್ಕೆ ತಲುಪಿರುವದು. ನಮ್ಮ ಸರ್ಕಾರದವರು ಈ ವಿಷಯವನ್ನು ಪರಾಮರ್ಶಿಸಿ, ಇಲ್ಲಿನ ಅಮಲ್ದಾರ್ ಮೆ॥ ನಾರಾಯಣ ಅಯ್ಯಂಗಾರ್ಯರ ಕಾಲದಲ್ಲಿಯೇ ಇಲ್ಲಿ ಒಂದು ಸಂತೆಯನ್ನು ನಿರ್ಮಿಸಬಹುದೆಂದು ಅಪ್ಪಣೆ ಕೊಟ್ಟಿರುವುದಾಗಿಯೂ, ಸೋಮವಾರ ಅಥವಾ ಗುರುವಾರ ಸಂತೆ ಕೂಡುವುದು ಎಂದು ಜನರು ಹರುಷದಿಂದ ಹೇಳಿಕೊಳ್ಳುತ್ತಿದ್ದರು. ಆದರೆ ಈ ತನಕ ಎಲ್ಲಿಯೂ ಆ ಸಂತೆಯು ಕೂಡುವ ಇರುವದಕ್ಕೆ ಕಾರಣವೇನೋ ಗೊತ್ತಾಗಲಿಲ್ಲ. ಇಲ್ಲಿನ ವರ್ತಕರು ಮುಂತಾದವರು ಇಲ್ಲಿ ಒಂದು ಸಂತೆ ಆಗುವದರಿಂದ ತಮ್ಮಗಳ ಆದಾಯಕ್ಕೆ ಕುಂದಕ ಬಂದೀತೆಂಬ ಭಯದಿಂದ ಅಡ್ಡಿ ಮಾಡುತ್ತಲಿದ್ದಾರೆಂಬ ಊಹೆ ಜನಗಳಲ್ಲಿ ಉಂಟಾಗಿದೆ. ಪ್ರಾಯಶಃ ಇದು ಸಹಜವಾಗಿರಲಾರದು. ಹಾಗೂ ಇಲ್ಲಿ ಒಂದು ಸಂತೆ ನಡೆಯುವಂತೆ ಏರ್ಪಾಡು ಮಾಡುವುದರಿಂದ ನಮ್ಮ ಸರ್ಕಾರದವರಿಗೆ ಆದಾಯವೂ ಪ್ರಜೆಗಳಿಗೆ ಪ್ರಯೋಜನವೂ ಆಗುವುದು. ಹಲವು ಊರು ಗ್ರಾಮಗಳಿಂದ ದವಸ ಧಾನ್ಯಗಳು ದೊರೆಯುವ ಸಂತೆಗಳಲ್ಲಿ ಪೇಟೆ ಧಾರಣೆಗಳಿಗಿಂತ ಕಡಿಮೆಯಾಗಿಯೇ ಸಿಕ್ಕುವವು. ಅಲ್ಲದೆ ಪೇಟೆಗಳಲ್ಲಿ ಸಿಕ್ಕದ ಬಡವರ ಜೀವನಕ್ಕೆ ಅನುಕೂಲವಾದ ಹಲವು ಪದಾರ್ಥಗಳು ಸಂತೆಯಲ್ಲಿ ಸಿಕ್ಕುವವು. ಮತ್ತು ಈಗಿನ ಧಾರಣೆಯಾಸಿಗಳೇ ಬಡ ಪ್ರಜೆಗಳ ಜೀವನಕ್ಕೆ ಕಷ್ಟಕರವಾಗಿರುವಲ್ಲಿ ಮುಂದೆ ಸುಗ್ಗಿಕಾಲ ನೋಡುವವರೆಗೂ, ಧಾನ್ಯಗಳು ತುಟ್ಟಿಯಾಗುತ್ತಿರುವ ಈ ವರೆಗೂ ರೈತರು ಕಂದಾಯದ ಸಲುವಾಗಿ ಕಾಳು ಕಡ್ಡಿಗಳನ್ನು ಅಷ್ಟು ಇಷ್ಟು ಬಿಕರಿಗೆ ತರುತ್ತಾ ಇದ್ದರು. ಕಂದಾಯದ ತೊಂದರೆಗಳು ತಪ್ಪಿದ ಮೇಲೆ ಗ್ರಾಮಗಳಿಂದ ಧಾನ್ಯಗಳು ಅಷ್ಟಾಗಿ ಹೊರಕ್ಕೆ ಬರಲಾರವು. ಈಗಿರುವ ಸಂದರ್ಭದಲ್ಲಿ ತುಮಕೂರು, ಹಾಸನ, ಶಿವಮೊಗ್ಗ, ಶಿವಮೊಗ್ಗಾ. ಮುಂತಾದ ಕಡೆಗಳಲ್ಲಿರುವ ರೀತಿಯೇ ಇಲ್ಲೂ ಒಂದು ಸಂತೆಯನ್ನು ಏರ್ಪಾಡು ಮಾಡುವುದು ಉತ್ತಮವೂ ಪ್ರಜೆಗಳಿಗೆ ತುಂಬಾ ಪ್ರಯೋಜನವೂ ಆಗಿರುತ್ತೆ.

ಈ ಚನ್ನಪಟ್ಟಣಕ್ಕೆ ಬುಧವಾರ ಪೇಟೆ ಎಂಬದಾಗಿ ಹೆಸರಿರುವದು ಪೂರ್ವದಲ್ಲಿ ಇಲ್ಲಿ ಬುಧವಾರದ ದಿನ ಸಂತೆ ನಡೆಯುತ್ತಾ ಇದ್ದದ್ದೇ ಈ ಹೆಸರಿಗೆ ಕಾರಣವಾಗಿರುತ್ತೆ. ಸದರಿ ಬಗೆಯ ಸಂತೆಯು ಕೆಲವು ಕಾಲಕ್ಕೆ ಮುಂಚೆ ಹೊಸದಾಗಿ ಏರ್ಪಾಡಾಯಿತು. ಈಗಲೂ ಈ ಸಂತೆ ಏರ್ಪಾಡಾಗುವ ವಿಷಯಗಳೇ ಜನಗಳಲ್ಲಿ ಪ್ರಸ್ತಾಪವಾಗುತ್ತಲಿರುವದನ್ನು ನೋಡುವಾಗ ಸಂತೆಗಳಿಂದ ಪ್ರಜೆಗಳಿಗೆ ತುಂಬಾ ಪ್ರಯೋಜನವಾಗುವದೆಂಬದಾಗಿ ತೋರುವದು. ಆದದ್ದರಿಂದ ನಮ್ಮ ಸರ್ಕಾರದವರು ಬೇಗನೆ ಇಲ್ಲಿ ಒಂದು ಸಂತೆಯನ್ನು ಮಾಡಿಕೊಟ್ಟು ಕೀರ್ತಿ ಪಡೆಯುವರೆಂದು ನಂಬುತ್ತೇನೆ

ಒಬ್ಬ ವಾಚಕ

[ಮ್ಯುನಿಸಿಪಲ್ ಮೀಟಿಂಗಿನಲ್ಲಿ ಮೆಂಬರುಗಳು ಈ ವಿಷಯವನ್ನು ಚರ್ಚೆಮಾಡಿ ಇತ್ಯರ್ಥ ಪಡಿಸಬೇಕಾಗಿದೆ. ಸಂತೆ ಕಟ್ಟುವಂತೆ ಮಾಡಬೇಕೆಂದು ನಿರ್ಣಯಿಸಿ ಗಟ್ಟಿ ತೀರ್ಮಾನವಾಗಿ ಗವರ್ನ್ಮೆಂಟಿಗೆ ರಿಪೋರ್ಟ್ ಮಾಡಿದರೆ ಅವರು ಅದನ್ನು ಸ್ವೀಕರಿಸಿ ಮಾಡಲು ಅನುಮಾನ ಕಾಣುವುದಿಲ್ಲ —ಎಡಿ.]

ತಾಲ್ಲೂಕು ವರ್ತಮಾನಗಳು.

ಚಿತ್ರದುರ್ಗ.—ಕಳೆದ ತಾ. ೧೬ ರಲ್ಲಿ ಇಲ್ಲಿನ ಆರ್ಯನ್ ಸ್ಟೂಡೆಂಟ್ಸ್ ಹೋಮಿನ ಕಮಿಟಿ ಮೀಟಿಂಗು ನಡೆಯಿತು. ಈ ವ. ದಿನ ಜನರು ವಿದ್ಯಾರ್ಥಿಗಳ ಸ್ಥಿತಿ ಮಾಡುವುದಕ್ಕೆ ರಾವ್ ಸಾಹೇಬ್ ನಂಜುಂಡಯ್ಯನವರು ಆಹ್ವಾನವಾಗಿ ನೇಮಿಸಲ್ಪಟ್ಟರು. ಸ್ಟೂಡೆಂಟ್ಸ್ ಹೋಮಿನ ಚಾಲ್ತಿ ಖರ್ಚುಗೂ ಕಟ್ಟಡದ ಸಂಬಂಧ ದ್ರವ್ಯ ಸಹಾಯವನ್ನು ನೀಡುವಂತೆ ಕೇಳಿಕೊಳ್ಳುವುದಕ್ಕೆ ಮೆ॥ ಹನುಮಂತರಾಯುಡುವರು ಕೆಲವು ಪ್ರತಿನಿಧಿಗಳ ಕೂಡ ಶ್ರೀ ಮುರುಘಿ ಸ್ವಾಮಿಗಳ ಸನ್ನಿಧಿಗೆ ಹೋಗಿ ಬರಬೇಕೆಂದು ತೀರ್ಮಾನವಾಯಿತು. ಈ ಸ್ಟೂಡೆಂಟ್ಸ್ ಹೋಮಿನ ಪರವಾಗಿ ಮ್ಯಾನೇಜರ್ ಮೆ॥ ಹನುಮಂತರಾಯುಡುವರು ಬೆಂಗಳೂರು ಒಕ್ಕಲಿಗರ ಸಂಘದ ಮಹಾ ಸಭೆಗೆ ಪ್ರತಿನಿಧಿಯಾಗಿ ಹೋಗಿ ಬರಬೇಕೆಂದು ಕಮಿಟಿಯವರು ಗೊತ್ತುಮಾಡಿದಾರೆ

ಮಂಡ್ಯ.—ಕಳೆದ ಗುರುವಾರ ರಾತ್ರಿ ೪ ಗಂಟೆ ವರೆಗೂ ವಿಶೇಷವಾಗಿ ಇಲ್ಲಿ ಒಳ್ಳೇ ಮಳೆ ಆಗಿರುತ್ತದೆ. ಕೆರೆ ಕೊಳಗಳು ತುಂಬುತ್ತಾ ಬರುತ್ತಲಿವೆ. ರೈತಾಬಿಜನರು ಸಂತೋಷದಿಂದ ತಮ್ಮ ಹೊಲದಲ್ಲಿ ಜೋಳ ಹುರುಳಿ ಮುಂತಾದದ್ದನ್ನು ಬಿತ್ತಿಕೊಂಡಿರುತ್ತಾರೆ.—ಇಲ್ಲಿನ ನಮ್ಮ ಅಮಲ್ದಾರ್ ಮೆ॥ ಜಿ. ನಾರಾಯಣರಾಯರವರು ಪ್ರಜೆಗಳಿಗೆ ಸಹಾಯಕರವಾದ ಕಾರ್ಯಗಳನ್ನೇ ಮಾಡುತ್ತಾ ಬಂದಿರುತ್ತಾರೆ. ರಾತ್ರಿಕಾಲದಲ್ಲಿ ಲಾಂದ್ರದ ಕಂಬಗಳು ಕಮ್ಮಿಯಾಗಿದೆ ಎಂದು ತಿಳಿದು ಸರ್ಕಾರದಿಂದ ಇನ್ನೂ ೨೦ ಲಾಂದ್ರಕಂಬಗಳನ್ನು ತರಿಸಿ, ಊರಿನಲ್ಲಿ ಇಡಿಸಿದ್ದಲ್ಲದೆ ಹೊಲಗೇರಿಯಲ್ಲಿ ಪ್ರಾಮುಖ್ಯವಾಗಿ ಎರಡು ಲಾಂದ್ರಗಳನ್ನು ಒಂದು ಹೊಲಗೇರಿಗೆ ಹೋಗುವ ಭಾಗದ ಪಕ್ಕದಲ್ಲಿಯೂ ಮತ್ತೊಂದು ಮಿಷನ್ ಸ್ಕೂಲ್ ಎದುರಿನಲ್ಲಿಯೂ ಇಡಿಸಿರುತ್ತಾರೆ. ಇವರನ್ನು ಇದಕ್ಕಾಗಿ ಪ್ರಜೆಗಳು ಕೊಂಡಾಡುತ್ತಾರೆ.—ಕಳೆದ ೧೯ ನೇ ತಾ. ಸೋಮವಾರ ಇಲ್ಲಿನ ಅಬ್ಕಾರಿ ಅಸಿಸ್ಟೆಂಟ್ ಇನ್ಸ್ಪೆಕ್ಟರ್ ಮೆ॥ ಶ್ರೀನಿವಾಸ ಐಯಂಗಾರ್ಯರು ಮತ್ತು ಅವರ ಗುಮಾಸ್ತೆಯರು ಇಬ್ಬರೂ ಕೆಲಸದ ಉದ್ದೇಶ ಇಲ್ಲಿಂದ ಹನಕೆರೆಗೆ ತಮ್ಮ ಜಟ್ಕಾಗಾಡಿಯಲ್ಲಿ ಪ್ರಯಾಣವಾಗಿ ವಾಪಸು ಬರುತ್ತಿರುವಾಗ ರಾತ್ರಿ ಸುಮಾರು ೯ ಗಂಟೆ ಹೊತ್ತಿನಲ್ಲಿ ಇವರಿಗೆ ಆಗದೆ ಇರುವಂಥ ನಾಲ್ಕು ಜನ ದುಷ್ಟರು ಬಚ್ಚಿಟ್ಟುಕೊಂಡಿದ್ದು ಹನಕೆರೆ ಹಳ್ಳದ ಹಾದಿ ಹತ್ತಿರ ಇವರ ಗಾಡಿ ಬಂದಾಗ ಕಲ್ಲುಗಳನ್ನು ಎಸೆದರು. ಆ ಕಲ್ಲುಗಳು ಗಾಡಿಗೆ ತಗಲಿದವು. ತಕ್ಷಣವೇ ಅವರ ಸೇವಕನು ಗಾಡಿಯಿಂದ ಇಳಿದು ನೋಡಿದಾಗ ಯಾರೂ ಕಾಣಲಿಲ್ಲ. ಅಷ್ಟರಲ್ಲಿಯೇ ಆ ದುಷ್ಟರಲ್ಲಿ ಒಬ್ಬನು ಒಂದು ದೊಣ್ಣೆಯಿಂದ ಅವರನ್ನು ಹೊಡೆಯುವುದಕ್ಕೆ ಹೋದಾಗ ಕುದುರೆಗೆ ಆ ಪೆಟ್ಟು ತಗಲಿ ಗಾಡಿ ಬಿತ್ತು. ವೇಗವಾಗಿ ಓಡುವದಕ್ಕೆ ಪ್ರಾರಂಭವಾದದ್ದರಿಂದ ಗಾಡಿಯ ಏಳ್ಚಿಗಳು ಮುರಿದು ಚಕ್ರವು ಇನ್ಸ್ಪೆಕ್ಟರ ಮೇಲೆ ಹಾದದ್ದರಿಂದ ಅವರಿಗೆ ಜ್ಞಾನತಪ್ಪಿ ಹೋಗುವಹಾಗೆ ಗಾಯವಾದ್ದಲ್ಲದೆ ಅವರ ಕೈಗೂ ಕಾಲಿಗೂ ಎದೆಗೂ ವಿಶೇಷವಾದ ಗಾಯಗಳು ಆಗಿರುತ್ತವೆ. ಇಂಥಾ ಸ್ಥಿತಿಯಲ್ಲಿರುವ ಇವರನ್ನು ಆ ರಾತ್ರಿಯಲ್ಲಿಯೇ ಒಂದು ಗಾಡಿಯಲ್ಲಿ ಹಾಕಿಕೊಂಡು ಮಂಡ್ಯಕ್ಕೆ ಕರೆತಂದರು. ಮಾರನೇ ದಿನ ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟ್ ಸರ್ಜನ್ ರವರು ಉಪಚಾರ ಮಾಡಿ ಅವರಿಗೆ ಸಾಮಾನ್ಯವಾಗಿರುವ ಗಾಯಗಳು ವಾಸಿಯಾಗುವದಕ್ಕೆ ಇನ್ನು ೧೫ ದಿವಸಗಳು ಹಿಡಿಯುತ್ತವೆಂದು ಸರ್ಟಿಫಿಕೇಟು ಕೊಟ್ಟಿರುತ್ತಾರೆ. ಈ ಇನ್ಸ್ಪೆಕ್ಟರನ್ನು ಗಾಯಪಡಿಸಿದ ದುಷ್ಟರನ್ನು ಪೋಲೀಸ್ ಅಧಿಕಾರಿಗಳು ಹುಡುಕುತ್ತಲಿದ್ದಾರೆ. ಈ ವರೆಗೂ ಅವರು ಪತ್ತೆಯಾಗಲಿಲ್ಲ. ಇಂಥಾ ಅಪರಾಧಿಗಳು ಈ ಇನ್ಸ್ಪೆಕ್ಟರಿಗೆ ಆಗಾಗ ಸಂಬಂಧಪಟ್ಟವರೆಂದು ಕೇಳುತ್ತೇನೆ. ಇವರನ್ನು ಈ ಸ್ಥಳದಿಂದ ವರ್ಗಾಯಿಸಿದರೆ ಉತ್ತಮವೆಂದು ಇಲ್ಲಿನವರೆಲ್ಲರ ಅಭಿಪ್ರಾಯವಾಗಿರುತ್ತಾರೆ

ಚನ್ನಪಟ್ಟಣ.—ಬಿಸಿಲೂ ಸಕೆಯೂ ಜಾಸ್ತಿ. ನೀರಿಗೆ ತುಂಬಾ ಕಷ್ಟವಾಗಿದೆ. ಇಲ್ಲಿನ ಕುನ್ನಿ... ಕೆರೆ ಸಂಪೂರ್ಣವಾಗಿ ಒಣಗಿಹೋಗಿದೆ. ಜನರು ನೀರಿಗಾಗಿ ಅಲೆದಾಡುತ್ತಲಿರುವರು. ಮಳೆಯ ಚಿಹ್ನೆಗಳು ಕಾಣುತ್ತಲಿವೆ. ಆದರೂ ಒಂದು ಹದ ಮಳೆಯಾದರೂ ಇದುವರೆಗೂ ಆಗಲಿಲ್ಲ. ಕೆರೆಯ ಹಿಂಭಾಗದ ಸುತ್ತಲೂ ಮೈದಾನದಲ್ಲಿ ಎರಡು ಮೂರು ಬಾವಿಗಳಿದ್ದು ಮಹಮದೀಯರು ಇವುಗಳನ್ನು ನೀರು ತೆಗೆದುಕೊಳ್ಳದಂತೆ ಅಡ್ಡಿಮಾಡುತ್ತಿರುವದಾಗಿ ಕೇಳುತ್ತೇನೆ. ಮತ್ತು ಸದರಿ ಕೆರೆಯ ಪಕ್ಕದಲ್ಲೇ ಸರ್ಕಾರಿ ರೋಡಿನಲ್ಲಿ ಎರಡು ಬಾವಿಗಳಿರುವುವು. ಆದರೂ ಅವುಗಳಿಗೆ ಚಕ್ರಗಳಿಲ್ಲದ್ದರಿಂದ ಜಲಾಪೇಕ್ಷೆಗಳಿಗೆ ಅವುಗಳಿಂದ ಉಪಯೋಗವಿಲ್ಲವಾಗಿದೆ. ಇಲ್ಲಿನ ಮ್ಯುನಿಸಿಪಲ್ ಪ್ರೆಸಿಡೆಂಟರು ಈ ವಿಷಯಕ್ಕೆ ಗಮನ ಕೊಟ್ಟು ಸದರಿ ಬಾವಿಗಳಿಗೆ ಚಕ್ರಗಳನ್ನು ಹಾಕಿಸಿದರೆ ಬಹು ಜನರಿಗೆ ಪ್ರಯೋಜನವಾದೀತು.—ಇಲ್ಲಿನ ಪೋಲೀಸ್ ಇನ್ಸ್ಪೆಕ್ಟರ್ ಮೆ॥ ಸಬ್ಬರಾಯರವರಿಗೆ ನಂಜನಗೂಡಿಗೆ ವರ್ಗವಾಗಿರುವದಾಗಿ ತಿಳಿದುಬರುತ್ತೆ. ಇವರು ಇಲ್ಲಿ ದರ್ಪವನ್ನಿಟ್ಟುಕೊಂಡು ದುರ್ಜನರನ್ನು ಹತೋಟಿಯಲ್ಲಿರಿಸಿಕೊಂಡಿದ್ದರು. ಮುಂದೆಯೂ ಇವರ ಸ್ಥಾನಕ್ಕೆ ಬಂದಿರುವ ಹೊಸ ಇನ್ಸ್ಪೆಕ್ಟರೂ ಕೂಡ ತಮ್ಮ ಹಿಂದಿನವರ ಮಾದರಿಯನ್ನೇ ಅನುಸರಿಸಿ, ಪ್ರಜೆಗಳನ್ನು ಕಾಪಾಡಿಕೊಂಡು ಬರಬಾರದೆಂಬದಾಗಿ ಬರೆಯುತ್ತೇನೆ.—ಇದೇ ತಿಂಗಳು ತಾ. ೧೦ ೧೧ ರಲ್ಲಿ ಇಲ್ಲಿನ ಹೊರವಳಿಗಳಾದ ಸಂಕಲಗೆರೆ ಮತ್ತು ಚಕ್ಕೆರೆಗಳಲ್ಲಿ ಗ್ರಾಮ ದೇವತೆಗಳ ಜಾತ್ರೆಗಳು ನಡೆದವು. ಉಭಯ ಗ್ರಾಮಗಳ ಪಟೇಲರೂ ಬಹು ಮುತುವರ್ಜಿಯಿಂದ ಕಾರ್ಯಗಳನ್ನು ನಡಿಸಿ, ನೂರಾರು ಜನರಿಗೆ ಊಟ ಉಪಚಾರಗಳನ್ನು ಏರ್ಪಡಿಸಿದರು. ಇದರಲ್ಲಿ ಚಕ್ಕೆರೆ ಗ್ರಾಮದ ಜಾತ್ರೆಯು ವಿಶೇಷವಾಗಿತ್ತು. ಗ್ರಾಮಸ್ಥರ ನಂಟರಿಷ್ಟರಲ್ಲದೆ ಪ್ರತಿ ಒಂದು ಮನೆಯಲ್ಲೂ ೫೦ ೬೦ ಜನರಿಗೆ ಭೋಜನಾದಿಗಳು ನಡೆಸಲ್ಪಟ್ಟವಲ್ಲದೆ ಭೋಜನಕ್ಕೆ ಸೇರದ ನೂರಾರು ಜನರು ಜಾತ್ರೆಗೆ ಸೇರಿ ದಾಯನಕ್ಕೆ ಸಿಕ್ಕಲಿಲ್ಲದೆ ಮರ ಮಂಟಪಗಳ ಆಶ್ರಯದಲ್ಲಿದ್ದರು. ಗ್ರಾಮಸ್ಥ ಜನಸಮೂಹದಿಂದ ಒಂದು ಹಗಲೂ ರಾತ್ರಿಯೂ ಕಿಕ್ಕಿರಿಸುತ್ತಾ ಇತ್ತು. ೧೫೦ ರೂಪಾಯಿನ ಕರ್ಪೂರ ಮುಂತಾದ ಪಿಸಿಯೋಗಗಳು ಸಿದ್ಧವಾದ ಭಟ್ಟಿದ್ದವು. ಸದರಿ ಗ್ರಾಮವಾಸಿಗಳಾದ ಗರ್ನ ದರಂಬವರು ತಾವೇ ಸ್ವತಃ ತಯಾರುಮಾಡಿದ ಬಿಟಗಳೂ ಬಾಣ ಬಿರುಸೂ ಮದ್ದಿನ ಸ್ತಂಭಗಳೂ ನೋಟಕರಿಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿದವೆಂದು ಹೇಳುವರು. ಈ ಗ್ರಾಮದಲ್ಲಿ ಈ ವರುಷ ಸೇರಿದಷ್ಟು ಜನಸಂಖ್ಯೆಯೂ, ಮದ್ದಿನ ತಮಾಷಗಳೂ ಹಿಂದೆ ಯಾವ ವರುಷವೂ ನಡೆಯಲಿಲ್ಲವಂತೆ. ಈ ಪ್ರಾಂತ್ಯದಲ್ಲಿ ಪ್ರಸಿದ್ಧವಾಗಿದ್ದ ಹಾವು ಸಾರುಗಳ ರೋಗವು ಸಂಪೂರ್ಣವಾಗಿ ಹೋಗಿರುವದೆಂದು ತಿಳಿದುಬರುತ್ತೆ. ಇಲ್ಲಿನ ಕೆಲವು ಪ್ರಜೆಗಳು ಮೂಗ ಪ್ರಾಣಿಗಳ ವಿಚಾರದಲ್ಲಿ ಕಿರುಕು ಮಾಡುತ್ತಿರುವ ರೀತಿ ವಿಷಯವನ್ನು ತುಂಬಾ ವ್ಯಸನದಿಂದ ಸೂಚಿಸಬೇಕಾಗಿದೆ. ಹುಟ್ಟಿನ ಗಾಡಿಗೆ ೧೦ ೧೫ ಮೂಟೆಗಳನ್ನು ಹಾಕಿ ಎಳೆಸುವರು. ಕೆಲವು ಸಾರಿ ಎತ್ತು ಎಳೆಯಲಾರದೆ ಬಾಯಿಯಲ್ಲಿ ನೊರೆ ಸುರಿಸುತ್ತಾ ಇದ್ದರೂ ಚಾಟಿಯಿಂದ ಹೊಡೆಯುತ್ತಾ ಅದರ ಪಕ್ಕೆಯನ್ನು ಮಾರುತ್ತ ಕೋಲಿನಿಂದ ತಿವಿಯುತ್ತಾ ಬಾಲ ಮುರಿದು ಮುಂದಕ್ಕೆ ನೂಕುವವರನ್ನು ಈ ಊರಿನಲ್ಲಿ ಸರ್ವಸಾಧಾರಣವಾಗಿ ನೋಡಬಹುದು. ನಮ್ಮ ಅಮಲ್ದಾರರೂ ವರ್ತಕ ಮಂಡಲಿಯವರೂ ಈ ಪಂಚಾಯತಿಯ ಈ ವಿಷಯಕ್ಕೆ ಗಮನಕೊಟ್ಟು ಭೂತದಯಾಶೀಲರಾಗಿ ಸುಕೃತರಾಗಬೇಕೆಂದು ಕೋರುತ್ತೇನೆ.—ಪ್ರತಿ ಸಂತೆ, ಜಾತ್ರೆಗಳಲ್ಲೂ ಇಸ್ಪೀಟಿನ ಮೋಸ, ಇತರವಾದ ಮೋಸದ ಆಟಗಳನ್ನಾಡಿ ಜನರನ್ನು ಮೋಸಗೊಳಿಸುವ ಕುಜನರ ಹಾವಳಿಯು ಜಾಸ್ತಿಯಾಗುತ್ತಲಿದೆ. ಪೋಲೀಸಿನವರು ಅವರ ಬಳಿ ಸಿಂಪು ನೋಡಿಕೊಂಡೇ ಇರುವರಂತೆ. ಈ ದುರ್ವರ್ತನೆಗೆ ತಕ್ಕ ಪರಿಹಾರವಿಲ್ಲವೋ ಏನೋ

ವಿದೇಶ ವರ್ತಮಾನಗಳು.

ಆಫ್ರಿಕದಲ್ಲಿ ಕೆಂಪುಸಮುದ್ರದ ತೀರದ ಬಳಿ ಟೇಂಸಾ ಎಂಬ ಸ್ಥಳದಲ್ಲಿ ಒಂದು ಸೀಮೆಯೆಣ್ಣೆಯ ಬಾವಿಯು ಸಿಕ್ಕಿರುತ್ತದೆ. ಇದರಲ್ಲಿ ೧,೬೫೦ ಅಡಿ ಆಳದಿಂದ ದಿನ ಒಂದಕ್ಕೆ ೩೦೦ ಪೀಪಾಯಿಗಳಷ್ಟು ಎಣ್ಣೆಯನ್ನು ತೆಗೆಯುತ್ತಾರೆ

ಪೋರ್ಚುಗಲ್ ರಾಜ್ಯದ ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ಕಳೆದ ಶುಕ್ರವಾರದ ದಿನ ಬಲವಾದ ಭೂಕಂಪವಾಯಿತು. ಪ್ರಜೆಗಳೆಲ್ಲಾ ಗಾಬರಿಬಿದ್ದು ಮನೆ ಮಾರಗಳನ್ನು ಬಿಟ್ಟು ಬೈಲಿಗೆ ಬಂದರು. ಅನೇಕ ಮನೆಗಳು ತುಂಬಾ ಬಿರುಕು ಬಿಟ್ಟವು. ಆದರೆ ಪ್ರಾಣ ನಷ್ಟವೇನೂ ಆಗಲಿಲ್ಲ

ಆಫ್ರಿಕಾಖಂಡದಲ್ಲಿ ನೈಗರ್ ನದಿಯು ಹರಿಯುವ ಪ್ರಾಂತ್ಯದಲ್ಲಿ ಡಾಕಾರ್ ಪಟ್ಟಣದಿಂದ ಜೆನ್ನಾ ನಗರದ ವರೆಗೆ ೫೦೦ ಮೈಲಿ ರೈಲ್ ರಸ್ತೆಯು ಹಾಕಿ ಸಿದ್ಧಪಡಿಸಲ್ಪಟ್ಟಿತು. ಈಗ ಆ ರಸ್ತೆಯನ್ನು ಅಲ್ಲಿಂದ ಮುಂದಕ್ಕೆ ಕಾನೋ ಎಂಬ ಸ್ಥಳದ ತನಕ ಬಡಾವಣೆ ಮಾಡಬೇಕೆಂದು ಆತುರವಾಗಿ ಕಾಮಗಾರಿ ನಡಿಯುತ್ತಿರುವರು.

ಡಾಕ್ಟರ್ ಡಬ್ಲಿಯು ಎಸ್ ಬ್ರೂಸ್‌ಯವರು ದಕ್ಷಿಣಧ್ರುವವನ್ನು ಒಂದಾವರ್ತಿ ಹೋಗಿ ನೋಡಿಕೊಂಡು ಬಂದಿರುತ್ತಾರೆ. ಈಗ ಮತ್ತೆ ಅವರು ೧೯೧೧ ನೇ ಇಸವಿಯಲ್ಲಿ ಎರಡನೇ ಸಲ ಆ ಪ್ರಾಂತ್ಯದ ಸಂಚಾರಮಾಡಿಕೊಂಡು ಬರಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಈ ಪ್ರಯಾಣಕ್ಕೆ ಏಳೂವರೆ ಲಕ್ಷ ರೂಪಾಯಿ ಖರ್ಚಾಗುವುದು

ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಡೆನ್ಮಾರ್ಕ್ ರಾಜ್ಯದ ಆಡಳಿತದಲ್ಲಿರುವ ಐಸ್ಲಾಂಡ್ ಎಂಬ ದ್ವೀಪದಲ್ಲಿ ಸರ್ಕಾರದವರು ಮದ್ಯಪ್ರಾಶಕಗಳನ್ನು ಪರದೇಶಗಳಿಂದ ಬಾರದಂತೆ ಕಾನೂನ್ ಮಾಡಿ ತಡೆದುಬಿಟ್ಟಿದ್ದಾರೆ. ಮದ್ಯವನ್ನು ಔಷಧ ಯೋಗಕ್ಕೆ ತಯಾರುಮಾಡಿದಂಥಾ ಯಾವ ತಿಂಡಿಯ ಪದಾರ್ಥವನ್ನೂ ಯಾವ ವರ್ತಕನಾಗಲಿ ಇತರರಾಗಲಿ ತೆಗೆಯಕೂಡದೆಂದು ವಿಧಾಯಕಮಾಡಿರುವರು. ಈಗ ಈ ಕಾನೂನು ಅಲ್ಲಿನ ಪ್ರತಿನಿಧಿ ಸಭೆಯಲ್ಲಿ ಚರ್ಚೆಯಾಗುತ್ತಿದೆ

ಆಫ್ರಿಕಾ ಸಮುದ್ರ ತೀರದಲ್ಲಿರುವ ಅಲೆಕ್ಸಾಂಡ್ರಿಯಾ ಪಟ್ಟಣದಲ್ಲಿ ಲೇಟ್ ವಿಕ್ಟೋರಿಯಾ ಮಹಾರಾಜ್ಞಿಯವರ ಹೆಸರಿನ ಮೇಲೆ ಒಂದು ದಿವ್ಯವಾದ ವಿದ್ಯಾಶಾಲೆಯನ್ನು ಕಟ್ಟಿದರು. ಇದಕ್ಕೆ ೧೫ ಲಕ್ಷ ರೂಪಾಯಿ ಮುಟ್ಟಿರುತ್ತದೆ. ನಮ್ಮ ಚಕ್ರವರ್ತಿ ಸಾರ್ವಭೌಮರವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್‌ಯವರು ಪತ್ನೀಪರಿವಾರ ಸಮೇತ ಹಾಜರಾಗಿದ್ದು, ಈ ಕಟ್ಟಡವನ್ನು ಮಾರ್ಚಿ ತಾ. ೨೩ ರಲ್ಲಿ ಪ್ರತಿಷ್ಠೆ ಮಾಡಿ ದಿವ್ಯವಾದ ಪ್ರೋತ್ಸಾಹವಾಕ್ಯಗಳನ್ನು ಅಪ್ಪಣೆ ಕೊಡಿಸಿದರು.

ವಿಲಾಯಿತಿಯ ಮಹಾರಾಜಾ ಚಕ್ರವರ್ತಿಯವರು ಮಹಾರಾಜ್ಞಿಯವರ ಸಮೇತ ಮಾಲ್ಟಾ ದ್ವೀಪಕ್ಕೆ ಚಿತ್ತೈಸಿದರು. ಡ್ಯೂಕ್ ಆಫ್ ಕನ್ನಾಟ್‌ಯವರು ಪತ್ನಿ ಸಹಿತ ಕಾದಿದ್ದು ಅವರನ್ನು ಎದುರುಗೊಂಡರು. ಅನೇಕ ಸಂತೋಷೋತ್ಸವಗಳು ನಡೆದವು. ಕಳೆದ ಗುರುವಾರದ ದಿನ ಚಕ್ರವರ್ತಿ ಸಾರ್ವಭೌಮರವರು ಆ ಪಟ್ಟಣದಲ್ಲಿರುವ ೬,೦೦೦ ಹಡಗಿನ ಸ್ವಾರಿಕರನ್ನೂ ೧೦,೦೦೦ ಭೂ ಸೈನ್ಯವನ್ನೂ ಮೈದಾನಗಳಲ್ಲಿ ಸಂದಿಸಿ ಅವರುಗಳು ಮಾಡಿದ ಕವಾತು ಕಸರತ್ತುಗಳನ್ನು ಪರಾಂಬರಿಸಿ ಸಂತೋಷಪಟ್ಟರು.

ಕಳೆದ ೧೯೦೮ ನೇ ಇಸವಿಯಲ್ಲಿ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ೨,೬೪ ೭೬೭ ಮದುವೆಗಳೂ, ೯ ೪೦,೩೧೧ ಜನನಗಳೂ, ೫,೨೧,೭೪೪ ಮರಣಗಳೂ ಆದವು. ಜನನದಲ್ಲಿ ಗಂಡುಮಕ್ಕಳು ೪,೭೯,೭೧೪, ಹೆಣ್ಣುಮಕ್ಕಳು ೪ ೬೦,೫೯೭. ಮರಣಗಳಲ್ಲಿ ಗಂಡಸರು ೨,೬೯,೩೫೬ ಹೆಂಗಸರು ೨,೫೨,೨೮೮ ಲಂಡನ್ ಎಂಬ ಒಂದೇ ಡಿಸ್ಟ್ರಿಕ್ಟಿನಲ್ಲಿರುವ ೪೭,೯೫,೭೫೭ ಪ್ರಜಾಸಂಖ್ಯೆಯಲ್ಲಿ ೪೮,೩೯೦ ಮದುವೆಗಳೂ, ೧,೩೩,೬೪೪ ಜನನಗಳೂ (ಗಂಡು ೬೭,೧೯೭ ಹೆಣ್ಣು ೬೬,೪೪೭), ೭೮,೩೩೯ ಮರಣಗಳೂ (ಗಂಡಸರು ೩೯,೪೦೭. ಹೆಂಗಸರು ೩೮,೯೩೨) ಆಗಿರುತ್ತವೆಂದು ಪ್ರಕಟವಾಗಿದೆ.

ಜರ್ಮನಿಯಲ್ಲಿ ಅಂತರಿಕ್ಷದಲ್ಲಿ ಸಂಚರಿಸುವಂಥಾ ವಿಮಾನಗಳನ್ನು ತಯಾರುಮಾಡುವುದರಲ್ಲಿ ಪ್ರಖ್ಯಾತಿಹೊಂದಿರುವ ಕೌಂಟ್ ಜೆಪ್ಪೆಲಿನ್ ಎಂಬ ಕಾರೀಗಾರನು ಈ ತಿಂಗಳ ಪ್ರಾರಂಭದಲ್ಲಿ ಎಂಟುಮಂದಿಯನ್ನು ಒಂದು ವಿಮಾನದೊಳಗೆ ಕೂರಿಸಿಕೊಂಡು ಫ್ರೆಡ್ರಿಕ್‌ಸ್‌ಹಾಫನ್ ಪಟ್ಟಣದಲ್ಲಿ ಆಕಾಶಕ್ಕೆ ಹಾರಿಹೋಗಿ ಅಂತರಿಕ್ಷದಲ್ಲೇ ಸಂಚಾರಮಾಡುತ್ತಾ ಮ್ಯೂನಿಚ್ ಪಟ್ಟಣಕ್ಕೆ ಹೋದನು. ಅಲ್ಲಿಂದಲ್ಲಿಗೆ ೧೫೦ ಮೈಲಿ ದೂರವಾಗುತ್ತದೆ. ಅಷ್ಟು ದೂರವನ್ನು ಎರಡು ಗಂಟೆ ಹೊತ್ತಿನಲ್ಲಿ ಮುಗಿಸಿಬಿಟ್ಟನು. ಈ ಆಕಾಶ ಬುಟ್ಟಿಯು ಗಂಟೆಗೆ ೫೦ ಮೈಲಿಯಂತೆ ಬಹು ವೇಗವಾಗಿ ಹೋಯಿತು. ಆದರೆ ಕಡೆಯಲ್ಲಿ ಗಾಳಿಯು ಸ್ವಲ್ಪ ವಿರೋಧವಾಗಿ ಬೀಸುತ್ತಿದ್ದದ್ದರಿಂದ ಈ ವಿಮಾನವನ್ನು ಮ್ಯೂನಿಚ್ ಪಟ್ಟಣದಲ್ಲೇ ಇಳಿಸುವುದಕ್ಕೆ ಆಗದೆಹೋಯಿತು. ಅದು ಅಲ್ಲಿಂದ ೩೫ ಮೈಲಿ ದೂರದಲ್ಲಿರುವ ಲಾಂಡ್‌ಷಟ್ ಎಂಬ ಊರಿನಲ್ಲಿ ಸರಿಯಾಗಿ ಇಳಿಯಿತು

ಅಮೇರಿಕಕ್ಕೆ ಸೇರಿದ ನ್ಯೂಯಾರ್ಕ್ ಪಟ್ಟಣದಲ್ಲಿ ಒಂದು ದೊಡ್ಡ ಆಸ್ಪತ್ರೆಯೊಳಗೆ ವಾಯುರೋಗಕ್ಕೆ ಹೊಸ ತರಹಾ ಚಿಕಿತ್ಸೆಯನ್ನು ಮಾಡುತ್ತಿದ್ದಾರೆ. ಒಬ್ಬ ರೋಗಿಯು ವಾಯುರೋಗದಲ್ಲಿ ಬಹುಕಾಲ ಅನುಭವಿಸಿ ಈ ಆಸ್ಪತ್ರೆಗೆ ಹೋದನು. ಆಸ್ಪತ್ರೆಯವರು ಕೆಲವು ಕಾಲದ ತನಕ ಬೇರೆ ಬೇರೆ ತರದ ಔಷಧಗಳನ್ನು ಮಾಡಿದರೂ ಅವನಿಗೆ ಗುಣವಾಗದೆಹೋಯಿತು. ಕಡೆಗೆ ಕೆಲವು ಜೇನು ಹುಳಗಳನ್ನು ಹಿಡಿದುತಂದು ಆ ರೋಗಿಯ ಮೈಮೇಲೆ ಬಿಟ್ಟು ಕಚ್ಚುವಂತೆ ಮಾಡಿದರು. ಹೀಗೆ ರೋಗಿಯು ಕಚ್ಚಿಸಿಕೊಂಡಾದ್ಮೇಲೆ ಸೌಖ್ಯಹೊಂದಿದನು. ಸುಮಾರು ನಾಲ್ಕು ವರುಷಗಳ ಹಿಂದೆ ಅಂಗಾಂಗಗಳ ಕೀಲುಗಳೆಲ್ಲಾ ವಾಯುವಿನಿಂದ ನೋಯುತ್ತಾ ಬಹಳ ಬಾಧೆಪಡುತ್ತಿದ್ದ ಒಬ್ಬ ಮನುಷ್ಯನು ತನ್ನ ತೋಟದಲ್ಲಿರುವಾಗ್ಗೆ ಒಂದು ಗುಂಪಿನ ಜೇನುಹುಳಗಳು ಅಕಸ್ಮಾತ್ತಾಗಿ ಅವನನ್ನು ಮುತ್ತಿಕೊಂಡು ತುಂಬಾ ಕಚ್ಚಿಬಿಟ್ಟವು. ಆ ಕಡಿತದಿಂದ ಅವನಿಗೆ ಬಾಧೆಯುಂಟಾಗುವುದಕ್ಕೆ ಪ್ರತಿಯಾಗಿ ಅವನಿಗಿದ್ದ ವಾಯುರೋಗವೆಲ್ಲಾ ಸಂಪೂರ್ಣವಾಗಿ ವಾಸಿಯಾಯಿತು. ಈ ರೀತಿ ಜೇನಿನಿಂದ ಕಡಿಸಿಕೊಂಡು ವಾಯುರೋಗವನ್ನು ಪರಿಹರಿಸಿಕೊಳ್ಳುವುದು ಸುಮಾರು ೨,೦೦೦ ವರುಷಗಳ ಹಿಂದೆ ಯೂರೋಪಿನಿಂದದಲ್ಲಿ ವಾಡಿಕೆಯಾಗಿತ್ತು. ಈಗ ಮತ್ತೆ ಆ ಚಿಕಿತ್ಸೆಯನ್ನು ಪ್ರಾರಂಭಿಸಿರುವುದು ಸಂತೋಷಪ್ರದವಾಗಿದೆ

ಆನೇಕಲ್ ತಾಲ್ಲೂಕು ಸರ್ಜಾಪುರದ ಸುಸ್ಥಿತಿಯು

ಅಯ್ಯಾ,

ಈ ಊರಿನಲ್ಲಿ ಪೋಲೀಸ್ ಸ್ಟೇಷನ್ ಬಳಿ ಇರತಕ್ಕ ಮಸೀತಿಯು ಬಹು ಪುರಾತನ ಕಟ್ಟಡವಾಗಿರೋಣದರಿಂದ ತುಂಬಾ ಶಿಥಿಲವಾಗಿ ಗೋಡೆಗಳೆಲ್ಲಾ ಬಿರುಕುಬಿಟ್ಟು, ಮೇಲ್ಛಾವಣಿ ಯ ತರಾಯಿಗಳು ಮುರಿದುಹೋಗಿರುತ್ತವೆ. ಇಂಥಾ ಕಟ್ಟಡದಲ್ಲಿ ಅನೇಕ ಮಹಮದ್ದೀಯರು ರಾತ್ರಿ ಹಗಲೂ ನಮಾಜು ಮಾಡುತ್ತಾರೆ. ಈ ಕಟ್ಟಡವು ಮಳೆಗಾಲದಲ್ಲಿ ಇದ್ದಕ್ಕಿದ್ದಹಾಗೆಯೇ ಬಿದ್ದು ಹೋಗುವದು ಅಪಾಯಕರವಾಗಿದೆ. ಈ ಊರಲ್ಲಿ ಸುಮಾರು ಮಹಮದೀಯರ ಮನೆಗಳು ಒಂದು ನೂರಕ್ಕಿಂತ ಹೆಚ್ಚಾಗಿದೆ. ಮತ್ತು ಈ ಕಟ್ಟಡದ ರಿಪೇರಿಗೋಸ್ಕರ ವಸೂಲಾದ ಹಣ ಸಹಾ ಇರುತ್ತದೆಂದು ಕೇಳುತ್ತೇನೆ. ಈ ಕಟ್ಟಡವು ಇಂಥಾ ಶಿಥಿಲವಾದ ಸ್ಥಿತಿಯಲ್ಲಿದ್ದಾಗ್ಯೂ ಮೇಲ್ಕಂಡವರು ಇದರ ರಿಪೇರಿಗೋಸ್ಕರ ಗಮನಕೊಡದೆ ಇರುವುದನ್ನು ನೋಡಿದರೆ ತುಂಬಾ ಆಶ್ಚರ್ಯವೂ ವ್ಯಸನವೂ ಆಗುತ್ತೆ. ಆಗಾಗ್ಗೆ ಈ ಸಂಗತಿ ವಿಷಯ ಎತ್ತಿದರೆ ಹಣವಂತರು ಅಲ್ಲಲ್ಲಿಗೆ ಮುಚ್ಚಿಬಿಡುತ್ತಾರೆ. ಇದು ಪಬ್ಲಿಕ್ ಕಟ್ಟಡವಾದದ್ದರಿಂದ ದಯಾವತ್ಸಭರಿತರಾದ ನಮ್ಮ ತಾಲ್ಲೂಕು ಅಮಲ್ದಾರರಾದರೂ ಒಬ್ಬ ಮಹಮ್ಮದೀಯ ಮೇಲ್ವಿಚಾರಣೆ ಈ ಕಡೆ ಸರ್ಕಾರು ಒಂದಾಗಿ ಈ ವಿಷಯವನ್ನು ತನಿಖೆಮಾಡಿ ಇದಕ್ಕೆ ವಸೂಲಾದ ಹಣ ಯಾರಲ್ಲಿರುತ್ತೋ ಅವರ ಮೂಲಕ ಇದರ ರಿಪೇರಿಯನ್ನು ಮಾಡಿಸಿದರೆ ತುಂಬಾ ಕೀರ್ತಿ ಉಂಟಾಗುತ್ತೆ. ಇಲ್ಲದ ಹೋದರೆ ಈ ಕಟ್ಟಡವು ಕೆಲವು ದಿವಸದಲ್ಲಿ ಆಹುತಿಯಾಗಿ ತೆಗೆದುಕೊಳ್ಳುವುದು ನಿಶ್ಚಯಕ್ಕೆ ಯಾವ ಸಂಶಯವೂ ಕಾಣುವದಿಲ್ಲ.

ಒಬ್ಬ ಮಹಮ್ಮದೀಯ ವಾಚಕ

ಚನ್ನಪಟ್ಟಣದ ಸಂತೆಯು.

ಅಯ್ಯಾ,

ಮಹಾ ಶ್ರೀ ಮಹಾರಾಜಾ ಪ್ರಭುಗಳವರ ಸರ್ಕಾರದವರು ಪ್ರಜೆಗಳ ಕಷ್ಟನಿವಾರಣೆಗಾಗಿ ಅನೇಕ ಸಾರ್ವಜನಿಕ ಉಪಯೋಗದ ಕಾರ್ಯಗಳನ್ನು ಏರ್ಪಡಿಸಿರುವುದು ಸರ್ವರಿಗೂ ತಿಳಿದ ವಿಷಯವೇ. ಈ ಚನ್ನಪಟ್ಟಣದಲ್ಲಿ ಸಂತೆ ಏರ್ಪಾಡು ಮಾಡಿದ್ದರಿಂದ ಜನರಿಗೆ ಬಹಳ ಅನುಕೂಲವಾಗಿದೆ. ಈ ತಾಲ್ಲೂಕಿನ ಜನರ ಕಷ್ಟವನ್ನು ಸಹ ನೀಗಿದಂತಾಗಿ ಬಹಳ ಕೀರ್ತಿಯು ಸರ್ಕಾರಕ್ಕೆ ಸಲ್ಲುತ್ತಲಿದೆ.

ಈಗ ಕೆಲವು ದಿವಸದ ಹಿಂದೆ ಇಲ್ಲಿ ಸರ್ಕಾರಿ ಪ್ರಿನ್ಸಿಪಾಲ್ ಹೊಸ ಕಟ್ಟಡಗಳನ್ನು ಕಟ್ಟಿಸಿ ಮತ್ತು ಅಲ್ಲಿ ಸಂತೆ ನಡೆಯುವಂತೆ ಏರ್ಪಡಿಸಿರುತ್ತಾರೆ. ಅದರಿಂದ ಕೆಲವು ವರ್ತಕರಿಗೆ ತೊಂದರೆ ಆಗಿ, ಅವರುಗಳು ಹಳೇ ಸ್ಥಳದಲ್ಲಿ ಸಂತೆ ನಡೆಯುವಂತೆ ಅರ್ಜಿ ಕೊಟ್ಟಿದ್ದಾರೆ. ಈ ಅರ್ಜಿಯ ಮೇಲೆ ಡೆಪ್ಯುಟಿ ಕಮೀಷನರ್ ರವರು ವಿಚಾರಣೆ ನಡೆಸುತ್ತಿದ್ದಾರೆ. ಸಂತೆ ಸ್ಥಳವನ್ನು ಬದಲಾಯಿಸುವ ಏರ್ಪಾಡು ಮಾಡಿಕೊಡಬೇಕೆಂಬ ಅರ್ಜಿಗೆ ಪ್ರಜೆಗಳ ವಿಶ್ವಾಸ ಪತ್ರಗಳು ಸರ್ಕಾರಕ್ಕೆ ಕಳುಹಿಸಲ್ಪಟ್ಟಿವೆ. ಸರ್ಕಾರದವರು ಈ ವಿಷಯವನ್ನು ಪರ್ಯಾಲೋಚಿಸಿ, ಇಲ್ಲಿನ ಅಮಲ್ದಾರ್ ರವರ ಖಾಸಾ ಶಿಫಾರಸು ಮೇರೆಗೆ ಹೊಸ ಸಂತೆ ಸ್ಥಳದಲ್ಲಿಯೇ ಇಲ್ಲಿ ಈ ಸಂತೆಯನ್ನು ನಡೆಸಬೇಕಾದದ್ದು ಎಂದು ಆರ್ಡರು ಕೊಟ್ಟಿರುವುದಾಗಿಯೂ, ಶನಿವಾರ ಆಚೆ ಸಂತೆ ಕೂಡುವುದು ಎಂದು ಜನರು ಹೇಳುತ್ತಿದ್ದಾರೆ. ಹೊಸ ಸಂತೆ ಸ್ಥಳವು ಊರಿಗೆ ದೂರ. ಆದರೆ ಈ ಶನಿವಾರ ಆ ಸಂತೆಯು ಕೂಡದೆ ಇದ್ದರೆ ಪ್ರಜೆಗಳಿಗೆ ಬಹಳ ತೊಂದರೆ ಆಗುವುದು. ಇಲ್ಲಿನ ವರ್ತಕರುಗಳೆಲ್ಲರೂ ಇಲ್ಲಿ ಒಂದು ಸಂತೆ ಆಗುವುದರ ತನಗಳ ಆದಾಯಕ್ಕೆ ಕುಂದಕ ಬಂದೀತೆಂಬ ಹೆದರಿಕೆಯಿಂದ ಬಹು ಪಾಡುಪಡುತ್ತಲಿದ್ದಾರೆ. ಊರ ಜನಗಳಲ್ಲಿ ಉಂಟಾಗಿರುವ ಅಭಿಪ್ರಾಯವು ಇದು ಸಹಜವಾಗಿರಲಾರದು. ಹಾಗೆ ಇಲ್ಲಿ ಒಂದು ಸಂತೆ ನಡೆಯುವಂತೆ ಏರ್ಪಾಡು ಮಾಡುವುದರಿಂದ ಸರ್ಕಾರದವರಿಗೆ ಆದಾಯವೂ ಪ್ರಜೆಗಳಿಗೆ ಪ್ರಯೋಜನವೂ ಆಗುತ್ತೆ. ಹಲವು ಊರು ಗ್ರಾಮಗಳಿಂದ ದವಸ ಧಾನ್ಯಗಳು ದೀಪದ ಎಣ್ಣೆ ಮುಂತಾದ್ದಲ್ಲದೆ ಮೇವು ಧಾರೆಗಳಿಗಿಂತ ಸಮುದಾಯವನ್ನು ಸಿಕ್ಕುವವು. ಅಲ್ಲದೆ ಬೆಲೆಗಳು ಕಡಿಮೆ ಇದ್ದು ಜೀವನಕ್ಕೆ ಅನುಕೂಲವಾದ ಹಲವು ಪದಾರ್ಥಗಳು ಸಂತೆಯಲ್ಲಿ ಸಿಕ್ಕುವವು. ಮತ್ತು ಈಗಿನ ಧಾರಣೆವಾಸಿಗಳು ಒಡ ಪ್ರಜೆಗಳು ಜೀವನಕ್ಕೆ ಕಷ್ಟಕರವಾಗಿರುವಲ್ಲಿ ಮುಂದೆ ಸುಗ್ಗಿ ಕಾಲ ಬರುವವರೆಗೂ, ದಿನಗಳು ಕಷ್ಟವಾಗುವುದು. ಈ ವರ್ಗದ ರೈತರು ಕಡಲೆಕಾಯಿ ಕಾಳುಗಳನ್ನು ಅಷ್ಟು ಇಷ್ಟು ಬಿಕರಿ ಮಾಡುತ್ತಾ ಇದ್ದರು. ಕಳ್ಳ ಸಂತೆಯ ತೊಂದರೆಗಳು ತಪ್ಪಿದ ಮೇಲೆ ಗ್ರಾಮಗಳಿಂದ ದಿನಗಳು ಅಷ್ಟಾಗಿ ಹೊರಕ್ಕೆ ಬರಲಾರವು. ಹೀಗಿರುವ ಸಂದರ್ಭದಲ್ಲಿ ಮಹಾಸ್ವಾಮಿ, ಹಾಸನ, ತಿಪಟೂರು, ನಿಡಗಲ್, ಮುಂತಾದ ಕಡೆಗಳಲ್ಲಿರುವ ಹಾಗೆ ಇಲ್ಲಿ ಒಂದು ಸಂತೆಯನ್ನು ಏರ್ಪಾಡು ಮಾಡುವುದು ಉತ್ತಮವೂ ಪ್ರಜೆಗಳಿಗೆ ತುಂಬಾ ಪ್ರಯೋಜನವೂ ಆಗುತ್ತೆ.

ಈ ಚನ್ನಪಟ್ಟಣ ತಾಲ್ಲೂಕಿನ ಸರ್ಕಾರಿ ಕಚೇರಿಗಳು ಊರಿನಲ್ಲಿಯೇ ಇರುವುದರಿಂದ ಈ ಸಂತೆಗೆ ಕಾರಣವಾಗಿರುತ್ತೆ. ಆದ್ದರಿಂದ ಸಂತೆಯು ಕೆಲವು ಕಾಲಕ್ಕೆ ಮುಂಚೆ ಹೊಸ ಜಾಗಕ್ಕೆ ಬದಲಾಗಿಯೂ ಈಗಲೂ ಈ ಸಂತೆ ಏರ್ಪಾಡಾಗುವ ವಿಷಯಗಳ ಅನೇಕ ಜನಗಳಲ್ಲಿ ಪ್ರಸ್ತಾಪವಾಗುತ್ತಲಿರುವುದನ್ನು ನೋಡುವಾಗ ಸಂತೆಯಿಂದ ಪ್ರಜೆಗಳಿಗೆ ತುಂಬಾ ಪ್ರಯೋಜನವಾಗುವದೆಂದಾಗಿ ತೋರುವದು. ಆದ್ದರಿಂದ ನಮ್ಮ ಸರ್ಕಾರದವರು ಹ್ಯಾಗಾದರೂ ಇಲ್ಲಿ ಒಂದು ಸಂತೆಯನ್ನು ಮಾಡಿಕೊಟ್ಟು ಕೀರ್ತಿ ಪಡೆಯುವರೆಂದು ನಂಬುತ್ತೇನೆ.

ಒಬ್ಬ ವಾಚಕ

[ಮ್ಯುನಿಸಿಪಲ್ ಮೀಟಿಂಗಿನಲ್ಲಿ ಮೆಂಬರುಗಳು ಈ ವಿಷಯವನ್ನು ಚರ್ಚೆ ಮಾಡಿ ಇತ್ಯರ್ಥ ಪಡಿಸಬೇಕಾಗಿದೆ. ಸಂತೆ ಕಟ್ಟುವಂತೆ ಮಾಡಬೇಕೆಂದು ವಿಷಯ ಗಿನಲ್ಲಿ ತೀರ್ಮಾನವಾಗಿ ಗವರ್ನ್‌ಮೆಂಟಿಗೆ ರಿಫೋರ್ಟುಮಾಡಿದರೆ ಅವರು ಅದನ್ನು ಸ್ಯಾಂಕ್ಷನ್ ಮಾಡಲು ಅನುಮಾನ ಕಾಣುವುದಿಲ್ಲ. ಎಡಿ.]

ತಾಲ್ಲೂಕು ವರ್ತಮಾನಗಳು

ಚಿತ್ರದುರ್ಗ.—ಕಳೆದ ತಾ॥ ೧೦ರಲ್ಲಿ ಇಲ್ಲಿನ ಆರ್ಯ ಸಮಾಜದ ಹುಡುಗರ ಸಮಿತಿ ಮೀಟಿಂಗು ನಡೆಯಿತು. ಈ ಸಭೆ ಬಹಳ ಜನರಿಂದ ತುಂಬಿತ್ತು. ಅದರಲ್ಲಿ ರಿಪೋರ್ಟು ಓದಿ ತಿಳಿಸಲಾಯಿತು. ಈ ಸಭೆಗೆ ಆಗ ಬಂದಿದ್ದ ಸ್ಟೂಡೆಂಟ್ಸ್ ಹಾಸ್ಟಲು ಪಾಲ್ಗೊಂಡಿತು. ಕಟ್ಟಡದ ಸಂಬಂಧ ಪ್ರಶ್ನೆ ನಡೆಯಿತು. ಸಂಗ್ರಹ ವಿಷಯವನ್ನು ಕೇಳಿಕೊಳ್ಳುವುದಕ್ಕೆ ಮೆ॥ ಹನುಮಂತರಾಯರು ಮತ್ತು ಕೆಲವು ಪ್ರಸಿದ್ಧರುಗಳ ಕೂಡ ಶ್ರೀ ಮುರುಘಾ ಸ್ವಾಮಿಗಳ ಸನ್ನಿಧಿಗೆ ಹೋಗಿ ಬರಬೇಕೆಂದು ತೀರ್ಮಾನವಾಯಿತು. ಈ ಸ್ಟೂಡೆಂಟ್ಸ್ ಹೋಮಿನ ಸರದಾರ ಮ್ಯಾನೇಜರ್ ಮ॥ ಹನುಮಂತರಾಯರವರು ಬೆಂಗಳೂರು ಒಕ್ಕಲಿಗರ ಸಂಘದ ಮಹಾ ಸಭೆಗೆ ಪ್ರತಿನಿಧಿಯಾಗಿ ಹೋಗಿ ಬರಬೇಕೆಂದು ಕಮಿಟಿಯವರು ಗೊತ್ತುಮಾಡಿದರು.

ಮಂಡ್ಯ.—ಕಳೆದ ಗುರುವಾರ ರಾತ್ರಿ ೯ ಗಂಟೆ ವರೆಗೂ ವಿಶೇಷವಾಗಿ ಇಲ್ಲಿ ಒಳ್ಳೆ ಮಳೆ ಆಗಿರುತ್ತದೆ. ಕೆರೆ ಕೊಳಗಳು ತುಂಬುತ್ತಾ ಬರುತ್ತಲಿವೆ. ರೈತಾಪಿಜನರು ಸಂತೋಷದಿಂದ ತಮ್ಮ ಹೊಲದಲ್ಲಿ ಜೋಳ ಹುರುಳಿ ಮುಂತಾದದ್ದನ್ನು ಬಿತ್ತಿಕೊಂಡಿರುತ್ತಾರೆ.—ಇಲ್ಲಿನ ನಮ್ಮ ಅಮಲ್ದಾರ್ ಮೆ॥ ಬಿ. ನಾರಾಯಣರಾಯರವರು ಪ್ರಜೆಗಳಿಗೆ ಸಹಾಯಕರವಾದ ಕಾರ್ಯಗಳನ್ನೇ ಮಾಡುತ್ತಾ ಬಂದಿರುತ್ತಾರೆ. ರಾತ್ರಿ ಕಾಲದಲ್ಲಿ ಲಾಂಧ್ರದ ಕಂಬಗಳು ಕಮ್ಮಿಯಾಗಿದೆ ಎಂದು ತಿಳಿದು ಸರ್ಕಾರದಿಂದ ಇನ್ನೂ ೨೦ ಲಾಂಧ್ರಕಂಬಗಳನ್ನು ತರಿಸಿ, ಊರಿನಲ್ಲಿ ಇಡಿಸಿದ್ದಲ್ಲದೆ ಹೊಲಗೇರಿಯಲ್ಲಿ ಪ್ರಾಮುಖ್ಯವಾಗಿ ಎರಡು ಲಾಂಧ್ರಗಳನ್ನು ಒಂದು ಹೊಲಗೇರಿಗೆ ಹೋಗುವ ಭಾಗದ ಪಕ್ಕದಲ್ಲಿಯೂ ಮತ್ತೊಂದು ಮಿಡ್ಲ್ ಸ್ಕೂಲ್ ಎದುರಿನಲ್ಲಿಯೂ ಇಡಿಸಿರುತ್ತಾರೆ. ಇವರನ್ನು ಇದಕ್ಕಾಗಿ ಪ್ರಜೆಗಳು ಕೊಂಡಾಡುತ್ತಾರೆ.—ಕಳೆದ ೧೫ ನೇ ತಾ॥ ಸೋಮವಾರ ಇಲ್ಲಿನ ಅಬ್ಕಾರಿ ಅ॥ ಇನ್ಸ್‌ಪೆಕ್ಟರ್ ಮೆ॥ ಶ್ರೀನಿವಾಸ ಐಯ್ಯಂಗಾರ್‌ರವರು ರುತ್ತು ಅವರ ಗುಮಾಸ್ತೆಯರು ಇಬ್ಬರೂ ಕೆಲಸದ ಉದ್ದೇಶ ಇಲ್ಲಿಂದ ಹನಕೆರೆಗೆ ತಮ್ಮ ಜಟ್ಕಾಗಾಡಿ ಎಲ್ಲಿ ಪ್ರಯಾಣವಾಗಿ ವಾಪಸು ಬರುತ್ತಿರುವಾಗ ರಾತ್ರಿ ಸುಮಾರು ೯ ಗಂಟೆ ಹೊತ್ತಿನಲ್ಲಿ ಇವರಿಗೆ ಆಗದೆ ಇರುವಂಥ ಇಲ್ಲಿಯ ಕಾದು ದುಷ್ಟರು ಬೆಂಕೆಯಿಂದ ಹನಕೆರೆ ಹತ್ತಿರ ಹಾದಿ ಹತ್ತಿರ ಇವರ ಗಾಡಿ ಬಂದಾಗ ಕಲ್ಲುಗಳನ್ನು ಎಸೆದರು. ಆ ಕಲ್ಲುಗಳು ಗಾಡಿಗೆ ತಗಲಿದವು. ತಕ್ಷಣವೇ ಅವರ ಸೇವಕನು ಗಾಡಿಯಿಂದ ಇಳಿದು ನೋಡಿದಾಗ ಯಾರೂ ಕಾಣಲಿಲ್ಲ. ಆಷ್ಟರಲ್ಲಿಯೇ ಆ ದುಷ್ಟರಲ್ಲಿ ಒಬ್ಬನು ಒಂದು ದೊಣ್ಣೆಯಿಂದ ಅವನನ್ನು ಹೊಡೆದನು. ಇದಕ್ಕೆ ಹೊಡೆದ ಶಬ್ದದಿಂದ ಆ ಪೆಟ್ಟು ತಗಲಿ ಬಿದ್ದ ಬಳಿಕ ವೇಗವಾಗಿ ಓಡುವುದಕ್ಕೆ ಪ್ರಾರಂಭವಾದುದರಿಂದ ಗಾಡಿಯು ಎತ್ತುಗಳು ಮುಂದು ಬೆಕ್ಕಸ ಇನ್ಸ್‌ಪೆಕ್ಟರ ಮೇಲೆ ಹೋಗದ್ದರಿಂದ ಅವರಿಗೆ ಜಾಸ್ತಿ ಪೆಟ್ಟಾಗಿ ಸಹಜವಾಗಿ ಗಾಯಗೊಂಡಿದ್ದರು. ಆದರೆ ಅವರ ಕೈಗೂ ಕಾಲಿಗೂ ನಡುವೆ ವಿಶೇಷವಾದ ಗಾಯಗಳು ಆಗಿರುತ್ತವೆ. ತಕ್ಷಣ ಕೂಗಾಟ ಕೇಳಿ ಹನಕೆರೆ ಜನರು ಬಂದು ಆ ಸ್ಥಿತಿಯಲ್ಲಿಯೇ ಒಂದು ಗಾಡಿಯಲ್ಲಿ ಹಾಕಿಕೊಂಡು ಮಂಡ್ಯಕ್ಕೆ ಕರೆತಂದರು. ವಾರ್ತೆಯು ಇಲ್ಲಿನ ಆಸ್ಪತ್ರೆಗೆ ಮುಟ್ಟಿತು. ಇನ್ಸ್‌ಪೆಕ್ಟರ ರನ್ನು ಆಸ್ಪತ್ರೆಯಲ್ಲಿ ಇರಿಸಿ ಅವರಿಗೆ ಪ್ರಾಣಾಪಾಯವಾಗದೆಂದು ವೈದ್ಯರು ಹೇಳುವುದರಿಂದ ಅವರಿಗೆ ೧೫ ದಿವಸಗಳು ಚಿಕಿತ್ಸೆ ಆಗುವುದೆಂದು ಡಾಕ್ಟರು ತಿಳಿಸಿರುತ್ತಾರೆ. ಈ ಇನ್ಸ್‌ಪೆಕ್ಟರ ರನ್ನು ಗಾಯಪಡಿಸಿದ ದುಷ್ಟರನ್ನು ಪೋಲೀಸ್ ಅಧಿಕಾರಿಗಳು ಹುಡುಕುತ್ತಲಿದ್ದಾರೆ. ಈ ಹರಿವಿಗೂ ಅವರು ಪತ್ತೆಯಾಗಿಲ್ಲ. ಇದು ಅಬ್ಕಾರಿ ಇನ್ಸ್‌ಪೆಕ್ಟರ ರಿಗೆ ತಮ್ಮ ಸಂಬಂಧವಿರುವ ರೀತಿಯಲ್ಲಿ ದ್ವೇಷ ಹೊಂದಿರುವ ಯಾರೋ ದುಷ್ಟರೇ ಮಾಡಿರುವಂತೆ ಕಾಣುತ್ತದೆ. ಇಲ್ಲಿನವರೆಲ್ಲಾ ಈ ದುಷ್ಟರುಗಳನ್ನು ಪತ್ತೆ ಹಚ್ಚಿ ತಕ್ಕ ಶಿಕ್ಷೆಯನ್ನು ಕೊಡಿಸಬೇಕೆಂದು ಆಪೇಕ್ಷೆಪಡುತ್ತಾರೆ.

ಚನ್ನಪಟ್ಟಣ.—ಮಳೆಯ ಕೊರತೆಯಿಂದ ಇಲ್ಲಿ ನೀರಿಗೆ ತುಂಬಾ ಕಷ್ಟವಾಗಿದೆ. ಇಲ್ಲಿನ ಕಣ್ವ ಕೆರೆ ಸಂಪೂರ್ಣವಾಗಿ ಒಣಗಿಹೋಗಿದೆ. ಈ ಊರು ನೀರಿಗಾಗಿ ಅಲೆದಾಡುತ್ತಲಿರುವರು. ಮಳೆಯ ಕೊರತೆಯಿಂದ ದನಕರುಗಳಿಗೆ ಮೇವಿಲ್ಲದೆ ಆದರೂ ಒಂದು ಕಡೆ ಮಳೆಯಾದರೂ ಎಂದೆಂದು ನೋಡುತ್ತಾರೆ. ಕೆರೆಯ ಈ ಭಾಗದ ಸುತ್ತಮುತ್ತಲಿನ ಪ್ರದೇಶದಲ್ಲಿ ಎಲ್ಲಿಯೂ ನೀರಿಲ್ಲದೆ ಭಾವಿಗಳಿಂದಲೂ ಸಹ ಮಹಾ ದುಃಖದಿಂದ ನೀರನ್ನು ತಗೆದುಕೊಳ್ಳಬೇಕಾಗಿದೆ. ಅದ್ದರಿಂದ ಇದನ್ನು ತ್ವರಿತವಾಗಿ ಕೇಳುತ್ತೇವೆ. ಮತ್ತು ಸದರಿ ಕೆರೆಯ ಪಕ್ಕದಲ್ಲಿ ಸರ್ಕಾರಿ ತೋಟದಲ್ಲಿ ಇರುವ ಭಾವಿಗಳಿಂದ ನೀರು ಎಲ್ಲರಿಗೂ ಪ್ರಯೋಜನಕ್ಕೆ ಬರುವಂತೆ ಮಾಡಿದರೆ ಆ ಬಡ ಜನರುಗಳಿಗೆ ಉಪಯೋಗವಾಗುವ ವಿಶೇಷ ಕೆಲಸವಾಗುವುದು. ಇಲ್ಲಿ ಸುಮಾರು ಐದು ಮೈಲಿಗಳಲ್ಲಿ ಈ ವಿಷಯದಲ್ಲಿ ಸರ್ಕಾರದವರು ಗಮನಿಸಿ ನೀರಿನ ಭಾವಿಗಳಿಗೆ ಬೇಕಾದ ಸಾಧನಗಳನ್ನು ಮಾಡಿಕೊಡಲು ಬಹಳ ಜರೂರಾಗಿ ಪ್ರಯೋಜನವಾಗುತ್ತದೆ.—ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಮೆ॥ ಸುಬ್ಬರಾಯರವರಿಗೆ ಶಿರಸ್ತೇದಾರರಾಗಿ ವರ್ಗವಾಗಿರುವುದರಿಂದ ೨೯ ದುಡಿಯುತ್ತಿರುವ ಇವರು ಇಲ್ಲಿ ದರ್ಶನವನ್ನು ಕೊಂಡು ದುರ್ಜನರನ್ನು ಹತೋಟಿಯಲ್ಲಿರಿಸಿಕೊಂಡಿದ್ದರು. ಮುಂದೆಯೂ ಇವರ ಸ್ಥಾನಕ್ಕೆ ಬಂದಿರುವ ಹೊಸ ಇನ್ಸ್‌ಪೆಕ್ಟರು ಕೂಡ ತಮ್ಮ ಹಿಂದಿನವರ ವಿಧಾನವನ್ನೇ ಅನುಸರಿಸಿ ಪ್ರಜೆಗಳ ಕಾಪಾಡಿಕೊಂಡು ಬರುವರೆಂದು ನಂಬಿಕೊಳ್ಳುತ್ತೇನೆ. ಇವರ ಬಂಗಲೆ ತಾ॥ ೧೧ರಲ್ಲಿ ಇಲ್ಲಿನ ಹೂವಳೆಗಳಾದ ಸಂಕಲಿಗಳ ಮತ್ತು ಚಿಕ್ಕ ರೀತಿಯ ಗ್ರಾಮ ದೇವತೆಗಳ ಜಾತ್ರೆಗಳು ನಡೆದವು. ಉತ್ಸವ ಗ್ರಾಮಗಳ ವರ್ತಕರೂ ಬಹು ಮುಖ್ಯವಾಗಿಯೂ ಕಾರ್ಯಗಳನ್ನು ನಡೆಸಿ ನೂರಾರು ಜನರಿಗೆ ಊಟ ಉಪಚಾರಗಳನ್ನು ಮಾಡಿದರು. ಇದರಲ್ಲಿ ಚಿಕ್ಕ ಕೆರೆಗ್ರಾಮದ ಜಾತ್ರೆಯು ವಿಶೇಷವಾಗಿತ್ತು. ಗ್ರಾಮಸ್ಥರ ಸಂತೋಷದಲ್ಲಿ ಪ್ರತಿ ಒಂದು ಮನೆಯಲ್ಲೂ ಕಡೇ ಜನರಿಗೆ ಬಂಧುಜನರುಗಳು ನೆಲೆಸಲ್ಪಟ್ಟಿದ್ದಲ್ಲದೆ ಬೋವಿಸಕ್ಕೆ ಸೇರಿದ ನೂರಾರು ಜನರು ಜಾತ್ರೆಗೆ ಸೇರಿ ರಥೋತ್ಸವಕ್ಕೆ ಸಹಾಯಕರಾಗಿ ಮರದ ಮಂಟಪಗಳ ಅಲಂಕಾರದಲ್ಲಿ ಗ್ರಾಮದ ಜನರೆಲ್ಲರೂ ಒಂದು ಹಗಲೂ ರಾತ್ರಿಯೂ ಕೆಲಸ ಮಾಡುತ್ತಿದ್ದರು. ೧೦೦ ರೂಪಾಯಿ ಖರ್ಚು ಮಾಡಿ ನಡೆಸಲಾದ ಈ ಜಾತ್ರೆಯ ಬಿರುದಾವಳಿಗಳ ಸದರಿ ಗ್ರಾಮದ ಮುಖಂಡರಾದ ಗೌಡರು ಗ್ರಾಮದೇವತೆಯ ಪಟ್ಟವನ್ನು ಅಲಂಕರಿಸಿದರು. ತಾನೇ ಸ್ವತಃ ಅದರ ಜವಾಬ್ದಾರಿಯನ್ನು ವಹಿಸಿಕೊಂಡು ಬಹಳ ವಿಜೃಂಭಣೆಯಿಂದ ನಡೆಸಿದರು. ಈ ಗ್ರಾಮದಲ್ಲಿ ಈ ವರುಷ ಕೆರೆಯ ಜನಸಂಖ್ಯೆಯೂ, ದವಸ ಧಾನ್ಯಗಳ ಬೆಳೆಯೂ ಹಿಂದೆ ಯಾವ ವರುಷವೂ ಇಲ್ಲದಂತೆ ಈ ಪ್ರಾಂತ್ಯದಲ್ಲಿ ಪ್ರಸಿದ್ಧವಾಗಿದೆ. ಜಾನುವಾರುಗಳ ರೋಗವು ಎಲ್ಲಾ ಕಡೆ ಹರಡಿಬರುತ್ತಿದೆ. ಇಲ್ಲಿನ ಕೆಲವು ಪ್ರಜೆಗಳು ತಮ್ಮ ದನಕರುಗಳ ಆರೋಗ್ಯಕ್ಕಾಗಿ ವಿಚಾರದಲ್ಲಿ ಕೆಲವು ನಿಬಂಧನೆಗಳನ್ನು ಇಟ್ಟುಕೊಂಡಿರುವರು. ಈ ರೋಗ ವಿಷಯವನ್ನು ತುಂಬಾ ವಿಚಾರಿಸಿ ಸರ್ಕಾರದವರು ಔಷಧಿಗಳನ್ನು ಕೊಟ್ಟು ರೋಗದ ಗಾಡಿಗೆ ಇಷ್ಟು ಸಹಾಯ ಮಾಡಿದರೆ ಪ್ರಜೆಗಳಿಗೆ ಬಹಳ ಅನುಕೂಲವಾಗುವುದು. ಈ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕಾಗಿದೆ. ಈ ಊರಿನಲ್ಲಿ ನಡೆಯುವ ಸಂತೆ ಮುಂದು ಮಾಡಿಕೊಂಡು ಬಂದಿರುವ ಜನರ ಪಕ್ಕ ಊರುಗಳನ್ನು ಎಲ್ಲಾ ಊರುಗಳಿಗೆ ಸಮಾಚಾರ ಕೊಟ್ಟು ಜನರನ್ನು ಮುಂದಿನ ಕಾರ್ಯವನ್ನು ಮಾಡುವಂತೆ ಸೇರಿಸಿಕೊಂಡು ನಮ್ಮ ಊರಿನಲ್ಲಿ ಸಮಾಚಾರವನ್ನು ನೋಡಿ ತುಂಬಾ ಅನುಕೂಲವಾಗಿ ವರ್ತಕ ಮಂಡಳಿಯವರೂ ಈ ವರ್ತಮಾನಪತ್ರಿಕೆಯ ವಿಷಯಕ್ಕೆ ನಿಗಾಕೊಟ್ಟು ಪ್ರಯತ್ನಪಡಬೇಕೆಂದು ಕೋರುತ್ತೇವೆ.—ಪ್ರತಿ ಸಂತೆ, ಜಾತ್ರೆಗಳಲ್ಲಿ ಇನ್ನೂ ಬೇಕಾದ ಸೌಕರ್ಯಗಳನ್ನು ಜನರು ಅನುಭವಿಸುತ್ತಲಿದ್ದಾರೆ. ಪೋಲೀಸಿನವರು ಅವರ ಬಳಿ ಸಂತೆ ನೋಡಿ ಕೊಂಡು ಇರುವವರು. ಈ ವಿಷಯವಾಗಿ ತಕ್ಕ ಏರ್ಪಾಡಿಲ್ಲವಾಗಿದೆ.

ವಿದೇಶ ವರ್ತಮಾನಗಳು.

ಆಫ್ರಿಕದಲ್ಲಿ ಕೆಂಪುಸಮುದ್ರದ ತೀರದ ಬಳಿ ಚೀಂಪಾ ಎಂಬ ಸ್ಥಳದಲ್ಲಿ ಒಂದು ಸೀಮೆಯೆಣ್ಣೆಯ ಬಾವಿಯು ಸಿಕ್ಕಿರುತ್ತದೆ. ಅದರಲ್ಲಿ ೧,೫೦೦ ಅಡಿ ಆಳದಿಂದ ದಿನ ಒಂದಕ್ಕೆ ೩೦೦ ಪೀಪಾಯಿಗಳಷ್ಟು ಎಣ್ಣೆಯನ್ನು ತೆಗೆಯುತ್ತಾರೆ.

ಪೋರ್ಚುಗಲ್ ರಾಜ್ಯದ ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ಕಳೆದ ಶುಕ್ರವಾರದ ದಿನ ಒಬ್ಬನಿಂದ ಭೂಕಂಪವಾಯಿತು. ಪ್ರಜೆಗಳೆಲ್ಲಾ ಗಾಬರಿ ಬಿದ್ದು ಮನೆ ಮಾರಗಳನ್ನು ಬಿಟ್ಟು ಬೈಲಿಗೆ ಬಂದರು. ಅನೇಕ ಮನೆಗಳು ತುಂಬಾ ಬಿರುಕು ಬಿಟ್ಟವು. ಆದರೆ ಪ್ರಾಣ ನಷ್ಟವೇನೂ ಆಗಲಿಲ್ಲ.

ಆಫ್ರಿಕಾಖಂಡದಲ್ಲಿ ನೈಗರ್ ನದಿಯು ಹರಿಯುವ ಪ್ರಾಂತ್ಯದಲ್ಲಿ ಲಾಗಾಸ್ ಪಟ್ಟಣದಿಂದ ಜೆಬ್ಬ ನಗರದ ವರೆಗೆ ೩೦೦ ಮೈಲಿ ರೈಲ್ ರಸ್ತೆಯು ಹಾಕಿ ಸಿದ್ಧಪಡಿಸಿದ್ದಾಯಿತು. ಈಗ ಆಗ ರಸ್ತೆಯನ್ನು ಅಲ್ಲಿಂದ ಮುಂದಕ್ಕೆ ಕಾನೋ ಎಂಬ ಸ್ಥಳದ ತನಕ ಬಡಾವಣೆ ಮಾಡಬೇಕೆಂದು ಆತುರವಾಗಿ ಕಾಮಗಾರಿ ನಡೆಸುತ್ತಿರುವರು.

ಡಾಕ್ಟರ್ ಡಬ್ಲ್ಯು ಎಸ್ ಬ್ರೂಸ್‌ಯವರು ಪಕ್ಷಿ ಜಾತ್ಯವನ್ನು ಒದಗಿಸಲು ಹೋಗಿ ನೋಡಿಕೊಂಡು ಬಂದಿರುತ್ತಾರೆ. ಈಗ ಮತ್ತೆ ಅವರು ೧೯೧೧ ನೇ ಇಸವಿಯಲ್ಲಿ ಎರಡನೇ ಸಲ ಆ ಪ್ರಾಂತ್ಯದ ಸಂಚಾರಮಾಡಿಕೊಂಡು ಬರಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಈ ಪ್ರಯಾಣಕ್ಕೆ ಐವತ್ತು ಲಕ್ಷ ರೂಪಾಯಿ ಖರ್ಚಾಗುವುದು.

ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಡೆನ್ಮಾರ್ಕ್ ರಾಜ್ಯದ ಆಡಳಿತ ಇರುವ ಐಸ್ಲ್ಯಾಂಡ್ ಎಂಬ ದ್ವೀಪದಲ್ಲಿ ಸರ್ಕಾರದವರು ಮದ್ಯಪ್ರಾಶನಗಳನ್ನು ಪರದೇಶಗಳಿಂದ ಬಾರದಂತೆ ಕಾನೂನ್ ಮಾಡಿ ತಡೆದುಬಿಟ್ಟಿದ್ದಾರೆ. ಮದ್ಯವನ್ನು ಊಟ ಬೆರಸಿ ತಯಾರುಮಾಡಿದಂಥಾ ಯಾವ ತಿಂಡಿಯ ಪದಾರ್ಥವನ್ನೂ ಯಾವ ವರ್ತಕರಾಗಲಿ ಇತರರಾಗಲಿ ತರಿಸಕೂಡದೆಂದು ನಿಷೇಧಮಾಡಿರುವರು. ಈಗ ಈ ಕಾನೂನು ಅಲ್ಲಿನ ಪ್ರತಿನಿಧಿ ಸಭೆಯಲ್ಲಿ ಚರ್ಚೆಯಾಗುತ್ತಿದೆ.

ಅಟ್ಲಾಂಟಿಕ್ ಸಮುದ್ರ ತೀರದಲ್ಲಿರುವ ಅಟ್ಲಾಂಟಿಕ್‌ಸಿಟಿ ಪಟ್ಟಣದಲ್ಲಿ ಅಲ್ಲಿನ ನಿಕ್ಕೋಲಸ್ ಮಹಾರಾಜರವರ ಹೆಸರಿನ ಮೇಲೆ ಒಂದು ವಿಸ್ತಾರವಾದ ಹೋಟೆಲನ್ನು ಕಟ್ಟಿದರು. ಇದಕ್ಕೆ ೧೫ ಲಕ್ಷ ರೂಪಾಯಿ ವೆಚ್ಚವಾಗುತ್ತದೆ. ನಮ್ಮ ಚಕ್ರವರ್ತಿ ಸಾರ್ವಭೌಮರವರ ಕಾಂಗ್ರಸದರವಾದ ಡ್ಯೂಕ್ ಆಫ್ ಕನ್ನಾಟ್‌ರವರು ಪಕ್ಷ ಪರಿವಾರ ಸಮೇತ ಹಾಜರಾಗಿದ್ದು, ಈ ಕಟ್ಟಡವನ್ನು ಮಾಡಿದ ಕಾಲದಲ್ಲಿ ಪ್ರತಿನಿಧಿಗಳು ದಿವ್ಯವಾದ ಶುಭೇಚ್ಛೆಯ ಪಾತ್ರಗಳನ್ನು ಅಪ್ಪಣೆ ಕೊಡಿಸಿದರು.

ಹಿಂದೂಸ್ಥಾನದ ಮಹಾರಾಜರಾದ ಚಕ್ರವರ್ತಿಯವರು ಮಹಾರಾಜ್ಞೀಯವರ ಸಮೇತ ಪಾಲ್ಗೊಂಡಿದ್ದಕ್ಕೆ ಚೆನ್ನೈನವರು ಡ್ಯೂಕ್ ಆಫ್ ಕನ್ನಾಟ್‌ರವರು ಪಕ್ಷ ಸಹಿತ ಕಾದಿದ್ದು ಅವರನ್ನು ಎದುರುಗೊಂಡರು. ಅನೇಕ ಸಂತೋಷ ಕೂಟಗಳು ನಡೆದವು. ಕಳೆದ ಗುರುವಾರದ ದಿನ ಚಕ್ರವರ್ತಿ ಸಾರ್ವಭೌಮರವರು ಆ ಪಟ್ಟಣದಲ್ಲಿರುವ ೨,೫೦೦ ಹಡಗಿನ ಸ್ವಾಸಿಕರನ್ನೂ ೧೦,೦೦೦ ಭೂ ಸೈನ್ಯವನ್ನೂ ಪರಿಶೀಲನೆ ಮಾಡಿ ಸಂತೋಷಿಸಿದರು. ಅವರುಗಳು ಮಾಡಿದ ಕವಾತು ಕಸರತ್ತುಗಳನ್ನು ನೋಡಿ ಬಹಳ ಸಂತೋಷಪಟ್ಟರು.

ಕಳೆದ ೧೯೦೮ ನೇ ಇಸವಿಯಲ್ಲಿ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ೯,೪೦,೬೦೭ ಮದುವೆಗಳೂ ೯,೧೮,೧೦೦ ಜನನಗಳೂ ೫,೨೦,೪೫೬ ಮರಣಗಳೂ ಆದವು. ಜನರಲ್ಲಿ ಗಂಡುಮಕ್ಕಳು ೪,೬೭,೮೭೦, ಹೆಣ್ಣುಮಕ್ಕಳು ೪,೫೦,೨೩೦. ಮರಣಗಳಲ್ಲಿ ಗಂಡಸರು ೨,೬೭,೪೯೩, ಹೆಂಗಸರು ೨,೫೨,೯೬೩. ಲಂಡನ್ ಎಂಬ ಒಂದೇ ಡಿಸ್ಟ್ರಿಕ್ಟಿನಲ್ಲಿರುವ ೪೭,೫೩,೭೫೭ ಪ್ರಜಾಸಂಖ್ಯೆಯಲ್ಲಿ ೪೧,೫೧೫ ಮದುವೆಗಳೂ, ೧೧೪,೬೯೭ ಜನನಗಳೂ (ಗಂಡು ೫೮,೧೯೭ ಹೆಣ್ಣು ೫೬,೫೦೦), ೭೦,೪೯೯ ಮರಣಗಳೂ (ಗಂಡಸರು ೩೬,೧೮೯ ಹೆಂಗಸರು ೩೪,೩೧೦) ಆಗಿರುತ್ತವೆಂದು ಪ್ರಕಟವಾಗಿದೆ.

ಜರ್ಮನಿಯಲ್ಲಿ ಅಂತರಿಕ್ಷದಲ್ಲಿ ಸಂಚರಿಸುವಂಥಾ ವಿಮಾನಗಳನ್ನು ತಯಾರುಮಾಡುವುದರಲ್ಲಿ ಪ್ರಖ್ಯಾತಿಯಿಂದಿರುವ ಕೌಂಟ್ ಜೆಪ್ಪಲಿನ್ ಎಂಬ ಕಾರಿಗಾರನು ಈ ತಿಂಗಳ ಪ್ರಾರಂಭದಲ್ಲಿ ಎಂಟುಮಂದಿಯನ್ನು ಒಂದು ವಿಮಾನದೊಳಗೆ ಕೂಡಿಸಿಕೊಂಡು ಫ್ರೆಡ್ರಿಕ್‌ಶಾಫೆನ್ ಪಟ್ಟಣದಲ್ಲಿ ಆಕಾಶಕ್ಕೆ ಚಿಗಿದುಹೋಗಿ ಅಂತರಿಕ್ಷದಲ್ಲಿ ಸಂಚಾರಮಾಡುತ್ತಾ ಮ್ಯೂನಿಕ್ ಪಟ್ಟಣಕ್ಕೆ ಹೋದನು. ಅಲ್ಲಿಂದಲ್ಲಿಗೆ ೧೦೦ ಮೈಲಿ ದೂರವಾಗುತ್ತದೆ. ಅಷ್ಟು ದೂರವನ್ನು ಎರಡು ಗಂಟೆ ಹೊತ್ತಿನಲ್ಲಿ ಮುಗಿಸಿಬಿಟ್ಟನು. ಈ ಆಕಾಶ ಬುಟ್ಟಿಯು ಗಂಟೆಗೆ ೫೦ ಮೈಲಿಯಂತೆ ಬಹು ವೇಗವಾಗಿ ಹೋಯಿತು. ಆದರೆ ಕಡೆಯಲ್ಲಿ ಗಾಳಿಯು ಸ್ವಲ್ಪ ವಿರೋಧವಾಗಿ ಬೀಸುತ್ತಿದ್ದದ್ದರಿಂದ ಈ ವಿಮಾನವನ್ನು ಮ್ಯೂನಿಕ್ ಪಟ್ಟಣದಲ್ಲಿ ಇಳಿಸುವುದಕ್ಕೆ ಆಗದೆಹೋಯಿತು. ಅದು ಅಲ್ಲಿಂದ ೨೫ ಮೈಲಿ ದೂರದಲ್ಲಿರುವ ಲ್ಯಾಂಡ್‌ಶಟ್ ಎಂಬ ಊರಿನಲ್ಲಿ ಸರಿಯಾಗಿ ಇಳಿಯಿತು.

ಅಮೆರಿಕಕ್ಕೆ ಸೇರಿದ ನ್ಯೂಯಾರ್ಕ್ ಪಟ್ಟಣದಲ್ಲಿ ಒಂದು ದೊಡ್ಡ ಆಸ್ಪತ್ರೆಯೊಳಗೆ ವಾಯುಸೋಕಿನ ಹೊಸ ತರಹಾ ಚಿಕಿತ್ಸೆಯನ್ನು ಮಾಡುತ್ತಿದ್ದಾರೆ. ಒಬ್ಬ ರೋಗಿಯು ವಾಯುಸೋಕಿನಲ್ಲಿ ಬಹುಕಾಲ ಅನುಭವಿಸಿ ಈ ಆಸ್ಪತ್ರೆಗೆ ಹೋದನು. ಆಸ್ಪತ್ರೆಯವರು ಕೆಲವು ಕಾಲದ ತನಕ ಬೇರೆ ಬೇರೆ ತರದ ಔಷಧಗಳನ್ನು ಮಾಡಿದರೂ ಅವನಿಗೆ ಗುಣವಾಗದೆಹೋಯಿತು. ಆದ್ದರಿಂದ ಕೆಲವು ಜೇನು ಹುಳಗಳನ್ನು ಹಿಡಿದುತಂದು ಆ ರೋಗಿಯ ಮೈಮೇಲೆ ಬಿಟ್ಟು ಕಚ್ಚುವಂತೆ ಮಾಡಿದರು. ಹೀಗೆ ರೋಗಿಯು ಕಚ್ಚಿಸಿಕೊಂಡದ್ದರಿಂದ ಸ್ವಲ್ಪ ಹೊತ್ತಿನಲ್ಲಿ ಸುಮಾರು ನಾಲ್ಕು ವರುಷದ ಹಿಂದೆ ಅಂಗಾಂಗಗಳ ಕೀಲುಗಳೆಲ್ಲಾ ವಾಯುಸೋಕಿನಿಂದ ನೋಯುತ್ತಾ ಇದ್ದ ಬಾಧೆಯಿಂದ ಒಬ್ಬ ಮನುಷ್ಯನ ಹ್ಯಾಗೆ ತೋರಿದರೋ ಹಾಗೆ ಒಂದು ಗುಂಪಿನ ಜೇನುಹುಳಗಳು ಆಸ್ಪತ್ರೆಗಾಗಿ ಅವನನ್ನು ಮುತ್ತಿಕೊಂಡು ತುಂಬಾ ಕಚ್ಚಿಬಿಟ್ಟವು. ಆ ಕಡಿತದಿಂದ ಅವನಿಗೆ ಬಹಳವಾಗಿ ಉಪಶಮನವಾಯಿತು. ಆಗಿನಿಂದ ಅವನಿಗೆ ವಾಯುಸೋಕು ನಿವಾರಣೆಯಾಯಿತು. ಈ ರೀತಿ ಜೇನಿನಿಂದ ಕಡಿಸಿಕೊಂಡು ವಾಯುಸೋಕನ್ನು ಪರಿಹರಿಸಿಕೊಳ್ಳುವುದು ಸುಮಾರು ೩,೦೦೦ ವರುಷಗಳ ಹಿಂದೆ ಯೂರೋಪಿನಲ್ಲಿ ಪ್ರಚಾರದಲ್ಲಿತ್ತೆಂದು ತಿಳಿದು ಬಂದಿರುತ್ತದೆ. ಈಗ ಮತ್ತೆ ಈ ಚಿಕಿತ್ಸೆಯನ್ನು ಪ್ರಾರಂಭಿಸುವುದು ಸಂತೋಷಪ್ರದವಾಗಿದೆ.

ಕನಡಾದಲ್ಲಿ ಪೆರೂನಾ ಸೇವನ ಮಾಡುವ ಒಂಬೈನೂರೊಂದು ಸಂಸಾರವು.

7 17

ಪೆರೂನಾವನ್ನು ಸಕಾಲದಲ್ಲಿ ಸೇವಿಸುತ್ತಿದ್ದರೆ ದೊಡ್ಡ ಕಾಯಿಲೆಗಳನ್ನೆಲ್ಲಾ ಅದು ನಿವಾರಣೆ ಮಾಡಬಲ್ಲುದೆಂದು ಮಕ್ಕಳನ್ನು ಅನೇಕ ಸ್ತ್ರೀಯರು ಕಂಡುಕೊಂಡಿರುತ್ತಾರೆ.

ಮಿಸೆಸ್ ಎಟ್ಟಾ ಬೂಕರ್ ದಂಡಕ್, ನಸ್ಸ ಎಡಬ್ಲ್ಯು ಟಿ ಕ್ಯಾನ್ ಈಕೆ ಬರೆಯುವುದು — ನನ್ನ ದೇಹದೊಳಗೆ ಕ್ಷೀಣರೋಗವು ಹುಟ್ಟಿ ನರಳಿದೆನು ಕಡೆಗೆ ಡಾ॥ ಹಾರ್ಟ್‌ಮನ್ ರನ್ನು ಕರೆಸಿಕೊಂಡು, ಅವರು ಹೇಳಿದ ಔಷಧವನ್ನು ಸೇವನೆ ಮಾಡಿದ್ದರಿಂದ ನನ್ನ ಕೆಟ್ಟ ರೋಗವು ನಿವಾರಣೆಯಾಯಿತು ಇದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞಳಾಗಿರುತ್ತೇನೆ ಕ್ಷೀಣರೋಗಕ್ಕೆಲ್ಲಾ ಪೆರೂನಾ ಉತ್ತಮೋತ್ತಮವಾದ ಔಷಧವೆಂದು ನನಗೆ ತೋರುವುದು. ಈಗ ನನಗಿರುವಷ್ಟು ಸೌಖ್ಯವೂ ಬಲವಿಕೆಯೂ ಹಿಂದೆ ಯಾವಾಗಲೂ ಇರಲಿಲ್ಲ

ಮಿಸೆಸ್ ಬೂಕರ್ ಬರೆದಿರುವ ಇನ್ನೊಂದು ಕಾಗದದಲ್ಲಿ ಆಕೆ ಹೇಳುವುದೇನೆಂದರೆ ಪೆರೂನಾ ಮಹಾ ಆಶ್ಚರ್ಯಕರವಾದ ಔಷಧವೆಂದು ಅನುಭವಪೂರ್ವಕವಾಗಿಯೂ ಯಥಾರ್ಥವಾಗಿಯೂ ಹೇಳಬಲ್ಲೆನು ನನ್ನ ಮಗಳು ಎಲ್ಲಿ ಬೂಕರಿಗೆ ಎಷ್ಟುಮಟ್ಟಿಗೆ ಆರೋಗ್ಯವಾಗಬೇಕೆಂದು ನಾನು ನಿರೀಕ್ಷಿಸಿದ್ದೆನೋ ಅಷ್ಟು ಒಳ್ಳೇದಾಯಿತು ಆದದ್ದರಿಂದ ಅವಳ ವಾಸಿಯಾದ ವಿಷಯವನ್ನು ನೀವು ಪ್ರಕಟಿಸಬಹುದೆಂದು ಧಾರಾಳವಾಗಿ ಹೇಳುತ್ತೇನೆ"

ಶೀತವಾಯುವಿನಿಂದ ನನ್ನ ಮಗುವು ನರಳಿತು ಇದನ್ನು ಸೇವಿಸಿದಾರಭ್ಯ ಅದಕ್ಕೆ ಆರೋಗ್ಯವಾಯಿತು ಅದಕ್ಕೆ ಬಲ ಉಂಟಾಯಿತು ಅರುಚಿಯೆಲ್ಲಾ ಪರಿಹಾರವಾಗಿ, ಈಗ ಮಗುವನ್ನು ನೋಡಿದರೆ ಚಿತ್ರಕ್ಕೆ ಯೋಗ್ಯವಾದ ಮಗುವಿನಂತೆ ಸುಖವಾಗಿದೆ"

ಅಜೀರ್ಣವಿದ್ದ ಮಗು

ಮಿಸೆಸ್ ಜೆ ಎಂ ಬ್ರೈನ್, ದಸ್ಕಿಗನ್ ಮಿಸೌರಿ ಯು ಎಸ್ ಎ ಈಕೆ ಬರೆಯುವುದು —

"ಮೂರು ವರುಷದ ನನ್ನ ಹೆಣ್ಣುಮಗುವಿಗೆ ಶೀತದಿಂದ ಕೆಟ್ಟ ಕೆಮ್ಮಲು ಹುಟ್ಟಿ ಅದರ ನೋಟ ಜ್ವರವೂ ಬಂದು, ರಾತ್ರಿ ಹೊತ್ತು ವಿಶೇಷವಾಗಿ ಬಹಳ ಸಂಕಟ ಪಡುತ್ತಿದ್ದಳು ನಿದ್ದೆ ಮಾಡುತ್ತಿದ್ದ ಹಾಗೇ ಎಚ್ಚರವಾಗಿ ಕೆಮ್ಮುವುದಕ್ಕಾರಂಭಿಸಿದರೆ ಅದರಲ್ಲೇ ಮಗು ಎಲ್ಲಿ ಪ್ರಾಣಬಿಡುವುದೋ ಎನ್ನುವಷ್ಟು ಕಷ್ಟಪಡುತ್ತಿತ್ತು ನಾವು ಕೊಟ್ಟ ಯಾವ ಔಷಧದಿಂದಲೂ ಮಗುವಿಗೆ ವಾಸಿಯಾಗಲಿಲ್ಲ ಆಗ ನಾನು ಡಾ॥ ಹಾರ್ಟ್‌ಮನ್‌ರ ಜೀವನಪಾಠದಲ್ಲಿ ಬರುವ ರೋಗಗಳು ಎಂಬ ಪುಸ್ತಕವನ್ನು ಕಳುಹಿಸಬೇಕೆಂದು ಹೇಳಿಕಳಿಸಿದೆನು ಪುಸ್ತಕ ದೊರಕಿತು ಆಗಲೇ ಪೆರೂನಾವನ್ನು ಮಗುವಿಗೆ ಕೊಡಲಾರಂಭಿಸಿದೆನು ಒಂದೇ ಬಾಟ್ಲಿಯ ಔಷಧವನ್ನು ಕೊಟ್ಟೆನು ಇದರಿಂದ ಮಗುವಿಗೆ ಸಂಪೂರ್ಣ ಗುಣವಾಗಿದೆ

ಈ ಮಗುವಿಗೆ ಹುಟ್ಟಿದಾರಭ್ಯ ಅಜೀರ್ಣರೋಗವಿತ್ತು ಆದರೆ ಪೆರೂನಾ ತೆಗೆದುಕೊಳ್ಳುತ್ತಾ ಬಂದಾರಭ್ಯ ಯಾವ ತರಹ ಆಹಾರವನ್ನು ತಿಂದರೂ ಅದಕ್ಕೆ ಅಜೀರ್ಣವಾಗುವುದಿಲ್ಲ ಈಗ ಈ ಮಗು ಚೆನ್ನಾಗಿ ಆರೋಗ್ಯವಾಗಿದೆ ನನ್ನ ಸ್ನೇಹಿತರು ನನ್ನ ಮಗು ಬಹಳ ಚೆನ್ನಾಗಿದೆ ಎಂದು ಹೇಳಿದರೆ ಅದೆಲ್ಲಾ ಪೆರೂನಾದಿಂದ ಆದದ್ದು ಎಂದು ನಾನು ಅವರಿಗೆ ತಿಳಿಸುತ್ತೇನೆ ಕೆಮ್ಮಲಿಗೂ ಅಜೀರ್ಣಕ್ಕೂ ಪೆರೂನಾ ಬಿಟ್ಟರೆ ಇನ್ನಾವುದೂ ಪ್ರಯೋಜನಕರವಾದದ್ದಲ್ಲವೆಂದು ನನಗೆ ತೋರುತ್ತದೆ ಮತ್ತು ಈ ರೋಗಗಳನ್ನು ಅನುಭವಿಸುವವರಿಗೆಲ್ಲಾ ಪೆರೂನಾವನ್ನೇ ಸೇವಿಸುವಂತೆ ಶಿಫಾರಸು ಮಾಡುತ್ತೇನೆ

ಮಗುವಿಗೆ ಪೆರೂನಾ ಮಾಡಿದ್ದು

ಮಿಸೆಸ್ ಕ್ರಿಟ್ಸ್‌ರೂಫ್, ಸಿಂಕ್ಲಿವಿಲ್ಲೆ, ಇಲ್ಲಿನಾಯಿಸ್ ಯು ಎಸ್ ಎ ಈಕೆ ಬರೆಯುವುದು

"ನಾನು ನಿಜವಾಗಿ ಆರೋಗ್ಯವಾಗಿದೇನೆ ಈ ಮಾತು ಹೇಳುವುದರಲ್ಲಿ ನನಗೆ ತುಂಬಾ ಸಂತೋಷ ನನ್ನ ಒಂದು ಮಗು ಐದು ತಿಂಗಳ ಜ್ವರವನ್ನು ಅನುಭವಿಸಿತು ಏನುಮಾಡಿದರೂ ವಾಸಿಯಾಗಲಿಲ್ಲ ಅದು ಮಲೇರಿಯಾ ಎಂಬ ಶೀತ ಜ್ವರವೆಂದು ಡಾಕ್ಟರು ಹೇಳಿದರು ಆದರೆ ಅವರು ಕೊಟ್ಟ ಔಷಧದಿಂದ ಸ್ವಲ್ಪವೂ ಪ್ರಯೋಜನವಾಗಲಿಲ್ಲ

"ಆಗ ನಾನು ಪೆರೂನಾ ಕೊಟ್ಟೆನು ಕೂಡಲೇ ಅದು ಮಗುವಿಗೆ ಗುಣಕೊಟ್ಟಿತು ಇದುವರೆಗೆ ಆ ಮಗು ಜ್ವರವನ್ನು ಕಾಣದು

"ನಾನು ಡಾ ಹಾರ್ಟ್‌ಮನ್‌ರಿಗೆ ಕಾಗದ ಬರೆದಾಗ ನಾನು ಮನೇ ಕೆಲಸಗಳನ್ನು ಮಾಡಲಾರದಷ್ಟು ಹೀನಸ್ಥಿತಿಯಲ್ಲಿದ್ದೆನು ಈಗ ನಾನು ಸಂಪೂರ್ಣವಾಗಿ ಆರೋಗ್ಯ ಹೊಂದಿರುತ್ತೇನೆ"

ಅವರ ಹುಡುಗನ ಪ್ರಾಣವನ್ನು ಕಾಪಾಡಿತು.

ಮಿಸೆಸ್ ಅರ್ನೆಸ್ಟ್ ಹ [illegible] ವಾಸಲ್ ಬೀಚ್ ಡಕ್‌ವೆಲ್ ಯಿಲ್ಲಿ [illegible] ನಾ, ಯು ಎಸ್ ಎ ಈಕೆ ಬರೆಯುವುದು

"ಎರಡು ವರುಷಗಳ ಹಿಂದೆ ಹಸನ್ [illegible] ಎಂಬ ನಮ್ಮ ಚಿಕ್ಕ ಹುಡುಗನಿಗೆ ಕೆಟ್ಟ ಜ್ವರ ಬಂದು ಬಿದ್ದುಕೊಂಡನು ಅದು ಜೊತೆಗೆ ಆಳ [illegible] ಯೂ ಬಂತು ಬೊಕ್ಕೆಗಳು ತುಂಬಿ [illegible] ಸಿಕೊಂಡದ್ದಲ್ಲದೆ ಅವನ [illegible] ಹೊಟ್ಟೆಗೂ ವ್ಯಾಪಿಸಿದವು [illegible] ಶನಕ ನಾವು ಪ್ರತಿ [illegible] ಲಾರನೆಂದು ನಿರೀಕ್ಷಿ [illegible] ಕಾಪಿಟ್ಟೆವು ಕಡೆಗೆ ಅವನ [illegible] ಯನ್ನು ಎದ್ದು ಕುಳಿತುಕೊಳ್ಳುವಂತೆ [illegible] ಆಗ ಅವನಿಗೆ ಕೆಮ್ಮು [illegible] ಮಾಡಿದರೂ ನಿಲ್ಲದೆ [illegible] ಆ ಕೆಮ್ಮು ಬಹು [illegible] ದೀರ್ಘವಾಗಿ [illegible] ಕೋಶವನ್ನು ಬಹಳ ಕೆಡಿಸಿತು [illegible] ಕ್ಷಯರೋಗವೆಂದು ಎಲ್ಲರೂ [illegible] ಆಗ ನಾವು ಇತರ ಔಷಧಗಳನ್ನು ಬಿಟ್ಟು ಪೆರೂನಾವನ್ನು ಕೊಟ್ಟು ನೋಡಿದೆವು ಒಂದು ಬಾಟ್ಲಿಯನ್ನು ಕೊಂಡು ತಂದು ಅದರಲ್ಲಿ ಹೇಳಿರುವ ಕ್ರಮದಂತೆ ಕೊಡುತ್ತಾ ಬಂದೆವು ಎರಡು ಬಾಟ್ಲಿ ಪೆರೂನಾ ಸೇವಿಸಿದ ಮೇಲೆ ಅವನಿಗೆ ಚೆನ್ನಾಗಿ ವಾಸಿಯಾಯಿತು ಅಂದಿನಿಂದೀಚೆಗೆ ಅವನು ಒಂದು ದಿವಸವಾದರೂ ಕಾಯಿಲೆಯನ್ನು ಕಾಣನು ಆರೋಗ್ಯವಾಗಿಯೂ ಸಂತೋಷದಿಂದಲೂ ಬೆಳೆಯುತ್ತಿದ್ದಾನೆ ನಾವು ಸರ್ವದಾ ಪೆರೂನಾವನ್ನು ಹೊಗಳುತ್ತೇವೆ ಏಕೆಂದರೆ ಅದು ನಮ್ಮ ಹುಡುಗನ ಪ್ರಾಣವನ್ನು ಉಳಿಸಿತು

ಕಾಯಿಲೆ ಬೀಳುವ ಮಕ್ಕಳು

ಮಿಸೆಸ್ ಡಾಫರ್ [illegible] ಅವ್, ಸಂಟ್ ಲೂಯಿಸ್, ಮಿಸೌರಿ, ಯು ಎಸ್ ಎ, ಈಕೆ ಬರೆಯುವುದು

"ಹೋದ ವರುಷ ಪ್ರಾರಂಭದಲ್ಲಿ ನನ್ನ ನಾಲ್ಕು ವರ್ಷದ ಮಗಳು ಆಲಿ [illegible] ವಿಷಯವನ್ನು ನಿಮಗೆ ಬರೆದು ನಿಮ್ಮ ಅಭಿಪ್ರಾಯ ಕೇಳಿದೆನು ಅವಳು ಹುಟ್ಟಿದಂದಿನಿಂದ ಕಾಯಿಲೆ ಬೀಳುತ್ತಾ ಬಹಳ ಕೃಶವಾಗಿದ್ದಳು ಅವಳಿಗೆ ಅಜೀರ್ಣ [illegible]

[illegible] ಕ್ಷಯ [illegible] ಶೀತವ್ಯಾಧಿ [illegible] ಎಲ್ಲ [illegible] ಹಾಗೂ ಅವಳಿಗೆ ನಾನಾ ಔಷಧಗಳನ್ನು [illegible] ಪೆರೂನಾ ಕೊಡ [illegible] ಆರೋಗ್ಯವಾಯಿತು [illegible] ಪೆರೂನಾ ಬಲ [illegible] ಔಷಧ [illegible] ಅದ್ಭುತ [illegible] ಉಪಯೋಗ [illegible]

ನಾನು ಕೂಡ ಬಹಳ ದುರ್ಬಲಸ್ಥಿತಿಯಲ್ಲಿದ್ದೆನು [illegible] ನನ್ನ ದೇಹದಲ್ಲಿ ಶೀತ [illegible] ನಡುಗುತ್ತಿತ್ತು [illegible] ಆರೋಗ್ಯವನ್ನು ಕೊಡ [illegible]

ಪೆರೂನಾ ನನ್ನ ಚಿಕ್ಕ ಮಗುವನ್ನು ಬದುಕಿಸಿತು ಅದಕ್ಕೆ ಬೆಳವಣಿಗೆ ಪ್ರಾರಂಭವಾಗುತ್ತಿತ್ತು ಈಗ ಈ ಮಗು ದೊಡ್ಡದಾಗಿ ಬೆಳೆದು ತುಂಬಿಕೊಂಡು ಆರೋಗ್ಯವಾಗಿದೆ ಅವನಿಗೆ ಹುಟ್ಟಿದಾರಭ್ಯ ಪೆರೂನಾವನ್ನು ಆಗಾಗ ಕೊಡುತ್ತಿದ್ದೇನೆ ಆದದ್ದರಿಂದಲೇ ಅವನು ಇಷ್ಟು ಆರೋಗ್ಯವಾಗಿದ್ದಾನೆಂದು ನನಗೆ ತೋರುವುದು ಪೆರೂನಾವನ್ನು ಎಷ್ಟು ಹೊಗಳಿದರೂ ತೀರದು ಅದನ್ನು ಉಪಯೋಗಿಸುವುದಕ್ಕೆ ಪ್ರಾರಂಭಿಸಲಾಯಿತು ಒಬ್ಬ ಡಾಕ್ಟರೂ ನಮ್ಮ ಮನೆಗೆ ಬಂದಿಲ್ಲ ಅದು ಬಹಳವಾಗಿ ಕೊಂಡಾಡತಕ್ಕದಾಗಿದೆ

ಮಗು ಈಗ ಆರೋಗ್ಯವಾಗಿದೆ

ಮಿಸೆಸ್ ಡಬ್ಲಿಯು ಹರ್ಟ್ ಆಫ್ ಹರ್ಟ್, [illegible] ಯು ಎಸ್ ಎ ಈಕೆ ತನ್ನ ಕೈಮಗುವಿನ ವಿಷಯದಲ್ಲಿ ಡಾ॥ ಹಾರ್ಟ್‌ಮನ್‌ರಿಗೆ ಬರೆಯುವುದು

ಇದ ಜನವರಿ [illegible] ನನ್ನ ಮಗುವಿಗೆ ಎರಡು ವರ್ಷ ತುಂಬಿತು ಈ ಮಗುವಿನ ಮೂತ್ರಕೋಶವು ಕೆಟ್ಟುಹೋಗಿತ್ತು ಮಗುವು ಒಂದು ವರುಷದವಳಾಗಿದ್ದಳು ವಾಸಿಯಾಗದೆಂದು ನಾವ್ಯಾರೂ ಯೋಚಿಸಿರಲಿಲ್ಲ ಈ ಮಗು ಮೂರು ನಾಲ್ಕು ತಿಂಗಳ ಕಾಲ ಕಾಯಿಲೆ ಬಿದ್ದಿತ್ತು ಒಂದು ಬಾಟ್ಲಿ ಪೆರೂನಾದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಕೊಡುವಷ್ಟರಲ್ಲಿ ಈ ಮಗುವಿಗೆ ಆರೋಗ್ಯವಾಗಿದೆ

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದದ್ದೂ ಇವರಿಂದಲೇ ತಿಳಿಯಬಹುದು

ವಿಳಾಸ —ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೧—೪—1909 ರಿಂದ 16—4—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	0	0	25	22
ಕೋಲಾರ್ ,,	2	2	28	16
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	15	8
ಹಾಸನ ,,	3	2	32	21
ಚಿತ್ರದುರ್ಗ ,	0	0	0	0
ಕಡೂರ್ ,	1	1	1	1
ಶಿವಮೊಗ್ಗಾ ,	0	0	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	6	6	99	70

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಚೈತ್ರಮಾಸ ಶುದ್ಧ ನವಮಿ ಗುರುವಾರದಿಂದ ಚೈತ್ರಮಾಸ ಶುದ್ಧ ಪೌರ್ಣಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಏಪ್ರಿಲ್ ಮತ್ತು ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ ಮೇಷ ಮಾಸ
29	ಗುರು ‡	ನವಮಿ	0 16	ಮ	48 20	17
30	ಶುಕ್ರ	ದಶಮಿ	4 46	ಪು	51 30	18
1	ಶನಿವಾರ §	ಏಕಾದಶಿ	9 10	ಪು	40 0	19
2	ರವಿವಾರ *	ದ್ವಾದಶಿ	14-18	ಪು	0-54	20
3	ಚಂದ	ತ್ರಯೋದಶಿ	19 16	ಹ	7 18	21
4	*ಕುಜ †	ಚತುರ್ದಶಿ	24-58	ಚಿ	13 28	22
5	ಬುಧ	ಪೌರ್ಣಮಿ	27 17	ಸ್ವಾ	18 11	23

‡ ಮಹೋತ್ಸವ [illegible] ಮೇಲುಕೋಟೆಯಲ್ಲಿ [illegible] ಸ್ವಾಮಿ ರಥ § ಉತ್ಪಾತ ಯೋಗ ಸರ್ವತ್ರ ಏಕಾದಶಿ * ಪಕ್ಷಯೋಗ ಪ್ರದೋಷ ಅಗ್ನಿನಕ್ಷತ್ರಪ್ರವೇಶ [illegible] ಚಂದ್ರ [illegible] ಜಯಂತಿ, ಚತುರ್ದಶೀತಿಥಿ [illegible] ಸ್ವಾಮಿ ರಥ † ಪೌರ್ಣಮಿ ಬೇಗೂರಿ ರಂಗನಾಥಸ್ವಾಮಿ ರಥ [illegible] ಶ್ರೀರಂಗಪಟ್ಟಣದಲ್ಲಿ ಗರುಡೋತ್ಸವ

ಪೇಟೇ ಧಾರಣೆ

ವಿವರ	ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಸಲಗೆ ಕ್ಕೆ ಸೇರು	[illegible]	[illegible]
ಕೆಂಬೂತ ಅಕ್ಕಿ ಅವಲ	[illegible]	[illegible]
,, ಮಧ್ಯ	[illegible]	[illegible]
ಜಾಜಾ ಗ ಅಕ್ಕಿ	[illegible]	[illegible]
ಸಣ್ಣಕ್ಕಿ ಅವಲ್	[illegible]	[illegible]
,, ದುಯ್ಯ	[illegible]	[illegible]
ತೊಗರಿ ಬೇಳೆ ಸಲಗೆ ಕ್ಕೆ	[illegible]	[illegible]
,, ಮಧ್ಯ	[illegible]	[illegible]
ಹೈದ್ರಾಗಿ ಸಲ್ಲಾಗೆ ಕ್ಕೆ	[illegible]	[illegible]
ಕಾರ್ರಾಗಿ	[illegible]	[illegible]
ಜೋಳ	[illegible]	[illegible]
ಹಲಸಂದೆ ಸಲ್ಲಾಗೆ ಕ್ಕೆ	[illegible]	[illegible]
ಬಿಳೀ ಅವರೆ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆ	[illegible]	[illegible]
ಎಳ್ಳು ಸೇರು ಗೆ ಕ್ಕೆ	[illegible]	[illegible]
ಹುರುಳಿ	[illegible]	[illegible]
ಹರಳು ೧೦೦ ಸೇರಿಗೆ	[illegible]	[illegible]
ಸೀಗೇಕಾಯಿ ಮಣ ೧ಕ್ಕೆ	[illegible]	[illegible]
ಮೆಣಸಿನಕಾಯಿ	[illegible]	[illegible]
,, ಮಧ್ಯ	[illegible]	[illegible]
ಬೆಲ್ಲ ದೊಡ್ಡ ಅಚ್ಚು	[illegible]	[illegible]
ಒಳ್ಳೆಣ್ಣೆ ಮಣ ೧ಕ್ಕೆ	[illegible]	[illegible]
ಹರಳೆಣ್ಣೆ	[illegible]	[illegible]
ಕೊತ್ತುಂಬರಿ ಸಲ್ಲಾಗೆ ಕ್ಕೆ	[illegible]	[illegible]
ಉಪ್ಪು ,	[illegible]	[illegible]
ಹುಣಸೇ ಹಣ್ಣು	[illegible]	[illegible]
,, ಹಳೇದು	[illegible]	[illegible]
ತುಪ್ಪ ಮಣ ೧ಕ್ಕೆ	[illegible]	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	[illegible]	[illegible]
ತೆಂಗಿನಕಾಯಿ ೧೦೦ ಕ್ಕೆ	[illegible]	[illegible]
ಅಳಲೇಕಾಯಿ ಮಣ ೧ಕ್ಕೆ	[illegible]	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	[illegible]	[illegible]
ಚಿನ್ನ (ಪೌನ್) ಕೆಂಪು ,	[illegible]	[illegible]
,, , ಪಸಿಮೆ	[illegible]	[illegible]
,, , ಗಟ್ಟಿ ತೊಲ ೧ಕ್ಕೆ	[illegible]	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	[illegible]	[illegible]

Printed and Published by the Rev H Gulliford, Proprietor and Manager Wesleyan Mission Press Mysore 29/4/1909

REGISTERED
M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೯ ನೇ ಇಸವಿ ಮೇ ತಾರೀಖು ೬ ನೇ ಗುರುವಾರ. ಸಂಚಿಕೆ ೪೯

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸಿದಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣುತ್ತಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೆ ನಮೂದಿಸತಕ್ಕದ್ದು ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

48 50

ತಲೆನೋವು, ವಾಯುನೋವು ಸೆಳತ, ಗಂಟುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು ಶೀತರೋಗಗಳು ಬೆನ್ನುನೋವು ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ಕೆಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತವೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆ ದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆ ಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ ವೈದ್ಯರೂ ವಿಕರಿಯ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್ ಪೀಟರ್ಸ್,

೨೭, ವೇದವಲ್ಲಿಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ತರಿಸಿ.

10 18

"ಬ್ರಹ್ಮಚರ್ಯ" ವೆಂಬ ಮರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ಆವರ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶೀಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪ್ರೈಸಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರ ವರೆಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುವು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಂಜಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟೀನ್ ದಿನ್ನಮ್" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರಿಸ್ತ ಮತದಲ್ಲಿ ತಿಳಿಸುವ ಮಾನಸಾಂತರ, ಪಾಪಮನ್ನಣೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ರೈಟಿನ ಬೈಂಡು ಪ್ರತಿ ಒಂದಕ್ಕೆ ೦—೧೦—೦

ಒಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

WILLIAM & Co. FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ಶಕ್ತವಾದ ಗುಣಕಾರಿಯು [30 11]

ತಲೆನೋವು, ಗಂಟು ಉಬ್ಬುವ ವಾತ, ಸಂಧಿವಾತ ಉಳುಕು, ಅಬಲು ಗಂಟು, ಗಂಟುನೋವು, ಅರ್ಧಾಂಗವಾಯು, ಎದೆಶೀತ, ಗಾಯ, ಜಖಮು, ಇತ್ಯಾದಿ

ಅಭಿಪ್ರಾಯ

ಆರ್ ಆರ್ ಗಂಗೋಲಿ, ಗನೆ ಕ್ಲಾಸ್ ಸಬ್ ಜಡ್ಜ್, ಕಾರವಾರ —

"ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ ಕೆಮ್ಮಿಗೂ ವಾತದ ಬೇನೆಗಳಿಗೂ, ತಲೆನೋವಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ ಈ ಅಮೃತಾಂಜನವು ಮೇಲೆ ಹೇಳಿದ ಎಲ್ಲಾ ನೋವುಗಳಲ್ಲಿಯೂ ಅತ್ಯುತ್ತಮವಾಗಿ ಸರ್ವಜನರಿಂದಲೂ ಶ್ಲಾಘಿಸಲ್ಪಡುವದು"

ಗಜಕರ್ಣದ ಮುಲಾಮು.

ಮೈರು ನಾರಿ ತಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮಕ್ಕೆ ಕಪ್ಪಾಗುವದಿಲ್ಲ ದಪ್ಪ ಒಂದರ ಕಿಮ್ಮತು ೦ ೬ ೦ ೧೨ ದಬ್ಬಿಗಳಿಗೆ ೪ ೦ ೦

ವಜ್ರಗುಟಿಕ.

ಧಾತುಪುಷ್ಟಿ, ರಕ್ತಶುದ್ಧಿ, ಬಾಟ್ಲು ಒಂದರ ಕಿಮ್ಮತು ರೂ ೧ ೦ ೦

ಸುಂದರೀ ಮುಲಾಮು—ಮುದ್ದು ಜಗಳಿಗೆ ೦ ೪ ೦

ದಂತಮಂಜನ—ಹಲ್ಲುಗಳು ಗಟ್ಟಿಯಾಗುತ್ತವೆ ೦ ೩ ೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು — "ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

11

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇವಾದ, ಚನ್ನಾಗಿ ಹೆಣಿದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮ ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ ೧ ರೂ ೬ ಆ

ಕುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ ,

ಕೊಡಗಿನ ಟೋಪಿ, ಪೂರ್ಣ ಸಾಕ್ಸು ಜೋಡು, ಅರ್ಧ ಸಾಕ್ಸುಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಜ್ವರಸುಧಾ

81 31

ಒಂದು ಬಾಟ್ಲ ಕಿಮ್ಮತು ೮ ಆಣೆ —ವಿ ಪಿ ಛಾರ್ಜು ಬೇರೆ

ಪ್ರತಿ ದಿನ ಬರುವ ಜ್ವರ, ದಿನ ಬಿಟ್ಟು ದಿನ ಜ್ವರ, ಚಾತುರ್ಥಿಕ ಜ್ವರ, ಪ್ಲೇಗ್ ಜ್ವರ, ಮಲೆನಾಡು ಜ್ವರ ಮುಂತಾದ ಅನೇಕ ಜ್ವರಗಳನ್ನು ಧ್ವಂಸಮಾಡಲು ಇದರ ವಿನಹ ಬೇರೆ ಔಷಧಿ ಲೋಕದಲ್ಲೇ ಇಲ್ಲವೆಂದು ಅನುಭವಿಕರಾದ ಡಾಕ್ಟರುಗಳು ಹೇಳುತ್ತಲಿದ್ದಾರೆ ಕೈ, ಕಾಲು, ತಲೆನೋವು ಅರೆತಲೆನೋವು, ಬೆನ್ನುಛಳುಕು, ಕೈಕಾಲು ನೋವು ಮುಂತಾದವುಗಳನ್ನು ೧—೨ ಹೊತ್ತಿನಲ್ಲಿಯೇ ಡ ನಿರ್ಮೂಲನಂತೆ ದಿಗಂತರಕ್ಕೆ ಹಾರಿಸಬಲ್ಲದು "ಸುಧಾ" ಅಂದರೆ ಅಮೃತವನ್ನು ಸೇವಿಸಿದಲ್ಲಿ ಯಾವ ವಿಧವಾದ ರೋಗವೂ ಹೇಗೆ ಮೈ ಅಂಟುವದಿಲ್ಲವೋ ಹಾಗೆಯೇ ನಮ್ಮ ಜ್ವರಸುಧವು ಎಲ್ಲಾ ವಿಧವಾದ ಜ್ವರಗಳನ್ನು ನಾಶಪಡಿಸುವದರಲ್ಲಿ ಪ್ರಸಿದ್ಧಿಗೊಂಡಿದೆ ಒಂದು ಸೀಸೆ ಔಷಧಿಯಲ್ಲಿ ಕಂಡುಬರುವ ಅಮೃತ ಗುಣವನ್ನು ಹೆಚ್ಚು ವರ್ಣನೆ ಮಾಡಲಾರೆವು

ದೇವನಹಳ್ಳಿ ಟವನ್, ಬೆಂಗಳೂರು ಡಿಸ್ಟ್ರಿಕ್ಟ್ — ಬಿ ಗೋವಿಂದಶೆಟ್ಟಿ, ಮೆಡಿಕಲ್ ಪ್ರಾಕ್ಟಿಷನರ್

ಜ್ವರಹರಿ

18 14

ಇದು ಸಾಧಾರಣ ಜ್ವರ, ಹಳೇಜ್ವರ ವಿಷಮಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿನಗಳ ಹಿಂದೆ ಕಳುಹಿಸಿ ಕೊಟ್ಟ ೩೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೩೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ ೧—೮ ರೂ , ರೂ ೨—೧೨ ಆ ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಅಮೃತ ಕರ್ಪೂರ.

am Carpoor

ಈ ಔಷಧವು ಅಜೀರ್ಣ, ಶೀತಭೇದಿ, ನಿಘಾತಾ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪಾಲರಾಯರು—ಹೆನ್ರಿಯ ಅಮೃತಕರ್ಪೂರವನ್ನು ನಾನೂ ನನ್ನ ಕಾರ್ಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

WANTED

A Proof-Reader, competent both in English and Kanarese Salary according to qualifications.—Apply to 44 3

Wesleyan Mission Press,
Mysore.

ಮ|| ರಾ|| ಭಾರತಿ ಸಂಪಂಗಿ ರಾಮಯ್ಯನವರಿಂದ ರಚಿತವಾದ ಪುಸ್ತಕಗಳು

ಇನೇ ಛಾಪೆ ತಾವಾಗಿ ಇಂಗ್ಲಿಷು ಕಲಿಯುವಿಕೆ ಕ್ರಯ ೧ ೮ ೦ ಇಂಗ್ಲಿಷ್ ಭಾಷೆಯನ್ನು ಓದುವುದಕ್ಕೂ, ಮಾತನಾಡುವುದಕ್ಕೂ ಬೋಧಕ ಸಹಾಯವಿಲ್ಲದೆ ೧-೨ ತಿಂಗಳುಗಳಲ್ಲಿಯೇ ಇಂಗ್ಲೀಷನ್ನು ಕಲಿಸುವ ಉತ್ತಮ ಪುಸ್ತಕವಿದು ಕ್ರಯ ಒಂದು ರೂಪಾಯಿ ಎಂಟಾಣೆ

ಸಾಗರದ ಹೆಡ್‌ಮಾಸ್ಟರಾಗಿದ್ದ ಮ|| ರಾ|| ಎಸ್ ಶ್ರೀಕಂಠಯ್ಯನವರಿಂದ ಪೂರ್ವಕವಿ ಸೋಮದೇವನ ಸಂಸ್ಕೃತ ಗ್ರಂಥದಿಂದ ರಚಿಸಲ್ಪಟ್ಟ ೬೬೧ ಪುಟ ಪುಳ್ಳ ಕನ್ನಡ ಕಥಾಸರಿತ್ಸಾಗರ ಕ್ರಯ ೧ ೮ ೦ ಸ್ವಲ್ಪ ಪ್ರತಿಗಳೇ ನಿಂತಿವೆ ಬೇಗ ಕೆಳಗಿನ ವಿಳಾಸದಾರರಿಗೆ ಬರದಲ್ಲಿ ಸಿಕ್ಕುತ್ತೆ ಜಾಗ್ರತೆ ತರಿಸಿಕೊಳ್ಳಿರಿ ಈಗ ಓದುವುದಕ್ಕೆ ಪ್ರಚಾರದಲ್ಲಿರುವ ಶುಕಸಪ್ತತಿ, ಅರೇಬಿಯನ್‌ನೈಟ್ಸ್, ಬೃಹತ್ಕಥಾಮಂಜರಿ, ಮೊದಲಾದ ಯಲ್ಲವಕ್ಕಿಂತಲೂ ಸ್ವಾರಸ್ಯವಾಗಿ ಯಾವ ಹೊಳೆಯ ನೀರೇ ಆಗಲಿ ಹರಿದು ಕೊನೆಗೆ ಸಮುದ್ರವನ್ನೇ ಸೇರುವಂತೆ ಯಾವ ಪುಸ್ತಕದಲ್ಲಿನ ಸಂಗತಿಯೇ ಆಗಲಿ ಈ ಪುಸ್ತಕಕ್ಕೆ ಬಂದು ಸೇರುತ್ತದೆ

ಕ್ರಯ ೧ ೮ ೦ ೧ ೭ನೇ ಸಂಪುಟಸಿದ್ಧವಾಗಿದೆ ಕ್ರಯ ೩೬ ೪ ೯ ೮

ಗೀತಾಮೃತಮಹೋದಧಿ ಕ್ರಯ ೮ ೮ ೦

ಶ್ರೀ ಕೃಷ್ಣಾರ್ಜುನ ಸಂವಾದವೆಂಬ ಗೀತೆಯನ್ನು ಓದಿ ಧನ್ಯರಾಗಬೇಕೆಂಬ ಸಂಸ್ಕೃತ ತಿಳಿಯದೆ ಇರುವವರಿಗೆ ಇದು ಅತ್ಯಂತ ಉಪಕಾರಿ ಪುಸ್ತಕವು ಕ್ರಯ ೦ ೮ ೦ ಮೇಲಿನ ಪುಸ್ತಕಗಳನು ಈ ವಿಳಾಸದಾರರಿಂದ ತರಿಸಿಕೊಳ್ಳಿರಿ — [16-1]

ವಿಳಾಸ —ಮ್ಯಾನೇಜರ್, ಕರ್ನಾಟಕ ಪುಸ್ತಕಶಾಲಾ,
ಲಕ್ಷ್ಮೀರ್ ಪ್ರೆಸ್ಸು ಮಾರ್ಕೆಟ್, ಕೋಲಾರ

ನೋಡಿರಿ. “ಪ್ರೋತ್ಸಾಹ ಕೊಡಿರಿ.” ತರಿಸಿರಿ.

98 21

ಈಗ ತಾನೇ ಸೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತಿದೇವೆ

೫,೦೦೦ ಹಾಸನ್ ಟೋಪಿ ಹೊಲಿಯುವ ಸುಪೀರಿಯರ್ ಫ್ಲೂಲನ್ ದಾರ

೧೦ ಟೋಪಿಯಾಗುವ ಫ್ಲಾಲನ್ ಬಂಡಲ್ ೧ಕ್ಕೆ ೩-೬ ೦ ೧ ಟೋಪಿ ಯಾಗುವ ಫ್ಲಾಲನ್ ದಾರಕ್ಕೆ ೦ ೮ ೦ ಹಾಸನ್ ಟೋಪಿ ಹಾಕುವ ಕೆಚ್ಚೆ ಸೂಜಿ ೧ಕ್ಕೆ ೦ ೧ ೬, ೮-೨ ೦ ೩೦ ಇಂಚಿನ ದೊಡ್ಡ ಸೈಜು ಬನಿಯನ್ ೧ಕ್ಕೆ ೦ ೮ ೦ ಬಿಳಿ ಫೋಸ್ಟು ಕಾರ್ಡು, ಡಬ್ಬಲ್ ಕಲರ್, ೧೦೦೦ ಕ್ಕೆ ೧ ೮ ೦ ಸುಗಂಧ ಸಂಜೀವಿನಿ, ಭೃಂಗ ಮಲಕ ತೈಲ, ಸೀಸೆ ೧ಕ್ಕೆ ೦ ೮ ೦ ಮೆಂತ್ಯಾಲ್, ತಲೆನೋವಿಗೆ ಅನುಕೂಲವಾದ ಔಷಧ ಡಬ್ಬಿ ೧ಕ್ಕೆ ೦ ೪ ೦ ೩೦೦ ಮಾತ್ರೆಗಳು ಇರುವ ಸೇಟ್, ಸೇಟ್ ಪರಿಮಳದ ತಾಂಬೂಲಮಿತ್ರವನ್ನು ಪ್ಯಾಕೆಟ್ ೧ಕ್ಕೆ ೦ ೨ ೦ ಲಿನನ್ ಕೈವಸ್ತ್ರಗಳು (ಚಂದವಾದದ್ದು) ೧ಕ್ಕೆ ೦ ೨ ೦ ರಾಸ್‌ಕೋಪ್ ಸ್ಟಾಯಿಲ್ ವಾಚು ೧ಕ್ಕೆ ೪ ೦ ೦, ಕೋಟಿನ ಬಾಟಣಿಗೆಗಳು, ದೊಡ್ಡ ಸೈಜು, ಡಜನ್ ೧ಕ್ಕೆ ೧೧-೦ ೦ ಗಜಕರ್ಣದ ಮುಲಾಮು ಡಬ್ಬಿ ೧ಕ್ಕೆ ೦ ೬-೦, ೨೮ ಇಂಗ್ಲೀಷು ಅಕ್ಷರಗಳಡಗಿ ಇರುವ ಪೆಟ್ಟಿಗೆ ೧ಕ್ಕೆ ೭ ೬ ೦ ಪರಿಮಳ ದ್ರವ್ಯದ ಪುಡಿ ಸೀಸೆ ೧ಕ್ಕೆ ೦-೨ ೦, ೮ ಲಡಿಗಳಿರುವ ಪೆರುಮಾ ಫ್ಲಾಲನ್ ದಾರದ ಬಂಡಲ್ ೧ಕ್ಕೆ ೩ ೦ ೦ ಪೆರುಮಾ ಫ್ಲಾಲನ್ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ ೧೮ ೦ ೦, ಲೋಕ ಪ್ರಸಿದ್ಧವಾದ ಚೇಳಿನ ಔಷಧ ಸೀಸೆ ೧ಕ್ಕೆ ೦ ೪ ೦ ಕ್ಯಾಟ್‌ಲಾಗನ್ನು ಕೇಳುವವರಿಗೆ ಕಳುಹಿಸುತೇವೆ ಪರಸ್ಥಳದವರಿಗೆ ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ —ದಿ ಫ್ಲೂಲನ್ ಮಾರ್ಟ್ ಮಂಗಳೂರು

ಸಂಜೀವಿನೀ ಔಷಧಾಲಯ, ಮೈಸೂರು.

23 13

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ವಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋನು, ವಾಯುನೋವುಗಳೂ, ಹಳೇ ಜ್ವರ, ಬೈರತ್ವ, ಅಜೀರ್ಣ, ತಲೆನೋವು, ಸೆತ್ತಿಗೆಯಿರಿ, ತಲೆಭಾರ, ಮಲಬಂಧ, ಬುದ್ಧಿ ಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹುಟ್ಟಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಸೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೇ ಜ್ವರಗಳೂ, ಪ್ಲೇಗು ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ ೭ ೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಕಾಲಕೂಟ ವಟಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಮನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪಿಚ್ಚುಗಣ್ಣು, ತಲೆನೋವು ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿ ಸಾಮರ್ಥ್ಯವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಸೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬಿಲ್ಲೆ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗೆ ಸ್ಟಾಂಪ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,
ಪ್ರೊಪ್ರೈಟರ್.

CHAMBERLAIN'S PAIN BALM.

ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವು

4 18

ಬೆನ್ನುಲುಬಿನ ನೋವು, ಪಕ್ಕಗಳಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಬಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇವೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಇಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು | ಸಣ್ಣ ಶೀಸೆಗೆ ೧ ರೂಪಾಯಿ | ದೊಡ್ಡ ಶೀಸೆಗೆ ೨ ರೂಪಾಯಿ

WANTED, A MUNSHI

For Literary and Translation Work Applicants must have passed the F. A Examination, and possess a thorough knowledge of Kannada Literature. Apply to, 41 3

Miss PARSONS, Hardwicke, Mysore City

WANTED

The Following Books —

(1) Dr. Moegling's Coorg Memoirs, 1855 (English translation)

(2) Coorg and its Rajas, 1857, by 'An Officer formerly in the service of Vira Raja Wadiyar' 15 2

(3) Any other books relating to Coorg.

Please address

The Commissioner,
Mercara

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 17

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಡೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತಹವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬|| ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,
ಸಿ ಎಲ್ ಎಸ್ ಬುಕ್ ಡಿಪ್ಪೋ, ಮೈಸೂರು

ಸನ್ ೧೮೭೬ ರಿಂದ ೧೯೦೬ ವರೆಗೆ

ಕಾಲದ ಪರೀಕ್ಷೆ

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 6-18

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದಬರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಣಗಳು ನಾನಾ ತರದ ಕೆಮ್ಮಲು

ಸಕಲವಿಧ ಕ್ಷಯಗಳು, ಮಾಂಸಖಂಡಗಳ ಕ್ಷೀಣತೆ



ಆಹಾರದಲ್ಲಿ ಅರುಚಿ

ಇವೆಲ್ಲದಕ್ಕೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಯುವ ಸೇವನಾ ಔಷಧವು ಇದೇ

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

JUST RECEIVED! JUST RECEIVED!

Stead's Books for the Bairns

Illustrated) New Numbers 5 18]

STEAD'S PENNY POPULAR TALES—Sixty four Pages in a coloured Picture Cover Each number contains a story of thrilling interest 24 numbers

CALENDARS FOR 1909

Apply—The Manager, C L S Book Depot, Mysore City

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

28 12



೧ ಲೋಕಾಮಯಹರ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ ಚಳಿಜ್ವರ ಜ್ವರ, ಹೊಟ್ಟೆನೋವು, ಸಂದುಗಳ ನೋವು, ಮೈ ಕಾಲು ಕೊಡತ (ಜಾಡ್ಯ), ಮೈ ನಡುಕ, ಶೀತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ ನಿಶ್ಶಕ್ತಿ ಅತಿಸಾರ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ನಿಶ್ಚಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲ, ಮಕ್ಕಳ ಎಳವು, ಜ್ವರ, ಪಚ್ಚುಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ನಿಶ್ಚಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೬ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್,
ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವದು ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ ಕಣ್ಣು ಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು ಮರವು ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರ ಮೂತ್ರಾಶ್ಮರಿ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವವು [61 36]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವವು



ರೂ ೨—೦—೦, ಅಥವಾ ೬ ಬುಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೨೦ ಪಿ ಒ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

ವೃತ್ತಾಂತ ಪತ್ರಿಕೆ.

— o —

೫೭ ೧೯೦೯ ನೇ ಇಸವಿ ಮೇ ತಾ ೬ ನೇ ಗುರುವಾರ

ತುರ್ಕಿಯಲ್ಲಿ ರಾಜ್ಯಭಾರ ರೂಪಾಂತರವು

ತುರ್ಕಿ ರಾಜ್ಯದಲ್ಲಿ ನಡೆದಿರುವ ವಿದ್ಯಮಾನಗಳನ್ನು ಕೆಲವು ಮಾತುಗಳಲ್ಲಿ ಹೇಳಿ ಮುಗಿಸುವುದಕ್ಕಾಗುವುದಿಲ್ಲ ಈಗ ನಡೆದಿರುವ ವಿಷಯಗಳು ನೂರಾರು ಸಂವತ್ಸರಗಳ ಹಿಂದೆ ನಡೆದ ಸಂಗತಿಗಳನ್ನು ಜ್ಞಾಪಕಪಡಿಸುವವುಗಳಾಗಿವೆ ಮೊದಲಿದ್ದ ದೊರೆಯನ್ನು ಬಹು ಸ್ವಲ್ಪಕಾಲದೊಳಗಾಗಿ ಸಿಂಹಾಸನದಿಂದ ಇಳಿಸಿ, ಆ ಸ್ಥಾನಕ್ಕೆ ಇನ್ನೊಬ್ಬನನ್ನು ತಂದು ಕೂರಿಸಿ ಪಟ್ಟಕಟ್ಟಿದರು ಆಗಿನ ಕಾಲದಲ್ಲಿ ಸೈನ್ಯವು ಬಹಳ ಪ್ರಬಲದೆಸೆಯನ್ನು ಹೊಂದಿತ್ತು, ಈಗಲಾದರೋ ಸೈನ್ಯದ ಬೆಂಬಲದಿಂದಲೇ ದೊರೆತನವನ್ನು ಬದಲಾವಣೆ ಮಾಡಿರುತ್ತಾರೆ

ಅಬ್ದುಲ್ ಹಾಮಿದ್ ಯವರು ೧೮೭೬ ನೇ ಇಸವಿಯಲ್ಲಿ ತುರ್ಕಿ ರಾಜ್ಯದ ಸುಲ್ತಾನರಾದರು ಅವರು ಅಷ್ಟೇನೂ ವಿಶೇಷ ವಿದ್ಯಾವಂತರಾಗಿರಲಿಲ್ಲ, ಆದರೂ ಅವರಲ್ಲಿ ಸ್ವಭಾವಜನ್ಯವಾದ ಸಾಮರ್ಥ್ಯವಿದ್ದಿತು ಅವರು ತಮ್ಮ ಬಳಿಯಣ ಅಧಿಕಾರಿಗಳ ಮೇಲೂ ಇತರರ ಮೇಲೂ ಬಹಳ ಸಂಶಯವುಳ್ಳವರಾಗಿದ್ದರು ಈ ಕಾರಣದಿಂದಲೇ ಅವರು ಅನೇಕರನ್ನು ಗುಪ್ತಚಾರರನ್ನಾಗಿ ಮಾಡಿಸಿದರು ಬಹುಮಂದಿಯನ್ನು ಕೊಲ್ಲಿಸಿಬಿಟ್ಟರು ರಾಜ್ಯಭಾರವನ್ನು ನಡೆಸುವುದರಲ್ಲಾದರೋ ಎಲ್ಲಾ ಅಧಿಕಾರವನ್ನೂ ಸ್ವಾತಂತ್ರ್ಯವನ್ನೂ ತಾವೇ ವಹಿಸಿಕೊಂಡಿರಬೇಕೆಂದು ಕುತೂಹಲಪಡುತ್ತಿದ್ದರು ಇವರ ಆಳ್ವಿಕೆಯಲ್ಲಿ ಮುಸಲ್ಮಾನರು ಕ್ರೈಸ್ತ ಪ್ರಜೆಗಳನ್ನು ಅನೇಕಾವರ್ತಿ ಕೊಂದುಹಾಕಿರುವರು

ಈಗಿನಕಾಲದ ಬಹುಮಂದಿ ತುರ್ಕಿಯವರು ಸುಲ್ತಾನರವರ ಆಳ್ವಿಕೆಯ ಕಾರುಬಾರುಗಳನ್ನು ಬಹು ಕಠಿಣವಾಗಿ ಪ್ರತಿಭಟಿಸುತ್ತಾ ಅಬ್ದುಲ್ ಹಾಮಿದ್ ಯವರು ಸುಲ್ತಾನ್ ಪದವಿಗೆ ಬರುವಾಗ್ಗೆ ಇದ್ದಂಥಾ ಪಾರ್ಲಿಮೆಂಟ್ ಸಭೆಯು ರಾಜ್ಯದಲ್ಲಿ ಏರ್ಪಡಬೇಕೆಂದು ಕೇಳುತ್ತಾ ಬಂದರು ಸುಲ್ತಾನರವರೋ ಪ್ರಜಾರಂಜಕವಾದ ಅಂಥಾ ಸಭೆಯನ್ನು ಸ್ಥಾಪಿಸುವುದಕ್ಕೆ ಇಷ್ಟಪಡದೆ ಪ್ರಜೆಗಳ ಇಷ್ಟಾರ್ಥವನ್ನು ಭಂಗಮಾಡಿದರು ಆದರೆ ಬೇರೆ ಹಿತಚಿಂತಕರಾದ ನವೀನ ಪಂಗಡದ ಪ್ರಜೆಗಳಿಗೆ ಸೈನಿಕರೂ ಬೆಂಬಲಕೊಡುತ್ತಿದ್ದಾರೆಂಬುದನ್ನು ತಿಳಿದ ಬಳಿಕ ಅಂದರೆ ಕೆಲವು ತಿಂಗಳ ಹಿಂದೆ, ಸುಲ್ತಾನರವರು ತಮ್ಮ ಹಟವನ್ನು ಬಿಟ್ಟು ಪಾರ್ಲಿಮೆಂಟ್ ಸಭೆಯವರು ಸೇರಬಹುದೆಂದು ಅಪ್ಪಣೆ ಕೊಟ್ಟರು ಪ್ರಜಾಪ್ರತಿನಿಧಿಗಳು ಪಾರ್ಲಿಮೆಂಟಿನಲ್ಲಿ ಸೇರಿ, ರಾಜ್ಯಭಾರದ ಕಾರ್ಯಗಳನ್ನು ಬಹು ಪ್ರಜಾಸಮ್ಮತವಾದ ರೀತಿಯಲ್ಲಿ ನಡೆಸುತ್ತಾ ಬಂದರು ಈ ರೀತಿಯಾದ ರಾಜ್ಯಭಾರವು ಸುಲ್ತಾನ್ ಅಬ್ದುಲ್ ಹಾಮಿದ್ ಯವರಿಗಾಗಲಿ, ಅವರಿಗೆ ಬೆಂಬಲಕೊಡುತ್ತಿದ್ದವರಿಗಾಗಲಿ ತೃಪ್ತಿಕರವಾಗಿರಲಿಲ್ಲ ಇದನ್ನು ನೋಡಿ ಪ್ರಜಾಪಕ್ಷದವರು ಕೆಲವು ಭಾರೀ ಮುಖಂಡರನ್ನು ಕೆಲಸ ಮಾಡಲು ಅಡ್ಡಿಯಾಗಿದ್ದ ಇಬ್ಬರು ಮೂವರನ್ನು ಕೊಂದುಹಾಕಿಬಿಟ್ಟರು ಆಗ ಸುಲ್ತಾನರ ಪಕ್ಷವನ್ನು ವಹಿಸಿದ್ದವರು ಪಾರ್ಲಿಮೆಂಟನ್ನೇ ತೆಗೆದುಹಾಕಬೇಕೆಂದೂ, ಮೊದಲಿನಂತೆ ಸುಲ್ತಾನರಿಗೆ ನಿರಂಕುಶವಾದ ಸ್ವತಂತ್ರಾಧಿಕಾರವನ್ನು ದೊರಕಿಸಿಕೊಡಬೇಕೆಂದೂ ಪ್ರಯತ್ನಪಟ್ಟರು

ಆದರೆ ದೇಶಾಭ್ಯುದಯ ಕಾಂಕ್ಷಿಗಳಾದ ಪ್ರಜಾಪಕ್ಷದವರು ಸುಲ್ತಾನರಿಗೂ ಅವರ ಪಕ್ಷವರ್ತಿಗಳಿಗೂ ಅವಕಾಶ ಕೊಡದಂತೆ ವಿರೋಧಿಸಿ ಕೆಲವು ಕಾರ್ಯಗಳನ್ನು ನಡೆಸಲಾರಂಭಿಸಿದರು ರಾಜಧಾನಿಯೊಳಗೇ ಸೈನ್ಯದ ಮೇಲೆ ಭರವಸೆ ಇಡುವುದು ಅನುಮಾನವಾಗಿದ್ದರೂ ಹೊರಗಡೆ ಡಿಸ್ಟ್ರಿಕ್ಟುಗಳಲ್ಲಿ ಇರತಕ್ಕ ಸೈನ್ಯವೇನೋ ಪ್ರಜೆಗಳ ಪಕ್ಷವನ್ನೇ ವಹಿಸಿದೆ ಎಂಬುವುದನ್ನು ಪ್ರಜಾಪಕ್ಷದವರು ತಿಳಿದುಕೊಂಡರು ಪ್ರಜಾಪಕ್ಷದವರು ಸುಲ್ತಾನರಿಗೆ ಹೇಳಿ ಕಳುಹಿಸಿ ಅವರು ನೇಮಕಮಾಡಿದ್ದಂಥಾ ಅಧಿಕಾರಿಗಳನ್ನು ಕಿತ್ತುಹಾಕಬೇಕೆಂದೂ, ಪ್ರಜೆಗಳ ಸ್ವಾತಂತ್ರ್ಯಕ್ಕೂ ದೇಶೋನ್ನತಿಗೂ ಸಹಾಯಕರಾದಂಥಾ ಅಧಿಕಾರಿಗಳನ್ನು ಇರಿಸಿಕೊಳ್ಳಬೇಕೆಂದೂ ಕೇಳಿದರು ಸುಲ್ತಾನರವರು ಆ ರೀತಿ ನಡೆದುಕೊಳ್ಳದ ಸೂಚಕಾತಮಾತ್ತಾ ಬಂದರು. ಇದನ್ನು ನೋಡಿ ಪ್ರಜಾಪಕ್ಷದವರು ಡಿಸ್ಟ್ರಿಕ್ಟುಗಳಿಂದ ಬಂದಿದ್ದ ಸೈನ್ಯವನ್ನು ಕಾನ್ಸ್ಟಾಂಟಿನೋಪಲ್ಲಿಗೆ ಕರೆಸಿ ಪಟ್ಟಣದ ಸುತ್ತಾ ನಿಲ್ಲಿಸಿದರು ರಾಜಪಕ್ಷದವರಿಗೂ ಪ್ರಜಾಪಕ್ಷದವರಿಗೂ ಇದ್ದ ಮನಸ್ತಾಪಗಳನ್ನು ವರ್ಜಿಸಿ ಸಮಾಧಾನಪಡಿಸಿಕೊಳ್ಳೋಣವೆಂದು ಮಾತುಕತೆಗಳು ನಡೆದರೂ ಪ್ರಯೋಜನವೇನೂ ಆಗಲಿಲ್ಲ ಸೈನ್ಯದವರು ರಾಜಧಾನಿಯ ಮೇಲೆ ನುಗ್ಗಿಬಂದರು ಒಳಗಿದ್ದ ಸೈನಿಕರು ಸುಲ್ತಾನರ ಪಕ್ಷವನ್ನು ವಹಿಸುವುದರಲ್ಲಿ ಅರೆಮನಸ್ಸಿನವರಾಗಿದ್ದರು ಯುದ್ಧ ನಡೆಯಿತು ನೂರಾರುಮಂದಿ ಮಡಿದುಹೋದರು ಆಗ ಸುಲ್ತಾನರು ಅಡಿಯಾಳಾಗಿ ಬಂದರು. ಪ್ರಜಾಪಕ್ಷದವರು ಅವರಿಗೆ ರಾಜ್ಯಾಧಿಕಾರವನ್ನು ತಪ್ಪಿಸಿ, ಅವರನ್ನು ಸಂಸಾರಸಹಿತ ರಾಜಧಾನಿಯಿಂದ ಹೊರಡಿಸಿಬಿಟ್ಟು, ಅವರ ತಮ್ಮಂದಿರಾದ ರೆಷದ್ ಎಫೆಂಡಿಯವರನ್ನು ಕರೆದುತಂದು ರಾಜ್ಯಾಭಿಷೇಕವನ್ನು ಮಾಡಿ ಅವರಿಗೆ ಐದನೆಯ ಮಹಮ್ಮದ್ ಸುಲ್ತಾನ್ ಎಂಬ ಅಂಕಿತವನ್ನು ಕೊಟ್ಟರು ಇಷ್ಟಾದರೂ ತುರ್ಕಿ ರಾಜ್ಯಕ್ಕೆ ಪ್ರಜಾಸ್ವಾತಂತ್ರ್ಯವೂ ಅಭಿವೃದ್ಧಿಯೂ ಲಭ್ಯವಾಗಿದೆಯೋ ಇಲ್ಲವೋ ಮುಂದೆ ನಡೆಯತಕ್ಕ ಕಾರುಬಾರುಗಳಿಂದ ಗೊತ್ತಾಗಬೇಕಾಗಿದೆ

ಈ ರಾಜ್ಯಭಾರದ ರೂಪಾಂತರದಲ್ಲಿ ಒಂದು ವಿಷಯವು ಶುಭಸೂಚನೆಯಾಗಿ ಕಂಡುಬರುತ್ತಿದೆ ಈಗ ಪ್ರಜಾಪಕ್ಷವನ್ನು ವಹಿಸಿ ಕಾರ್ಯಗಳನ್ನು ನಡೆಸುತ್ತಿರುವವರಲ್ಲಿ ಮುಸಲ್ಮಾನರೂ. ಕ್ರೈಸ್ತರೂ, ಯಹೂದ್ಯರೂ ಒಂದಾಗಿರುವರು ಇದನ್ನು ನೋಡಿದರೆ ಈಗ ರಾಜ್ಯಭಾರವನ್ನು ಬದಲಾವಣೆ ಮಾಡಿರತಕ್ಕವರು ಯಾವ ಒಂದು ಮತಕ್ಕೂ ಸೇರಿದವರಲ್ಲವೆಂದೂ, ಎಲ್ಲಾ ಪಂಗಡಗಳವರೂ ಏಕೀಭವಿಸುತ್ತಾರೆಂದೂ, ರಾಜ್ಯಾಭಿವೃದ್ಧಿಯೇ ಇವರ ಮುಖ್ಯ ಉದ್ದೇಶವಾಗಿದೆ ಎಂದೂ ಗೊತ್ತಾಗುವುದು. ಇಂಥಾ ಶ್ರೇಷ್ಠವಾದ ಉದ್ದೇಶವನ್ನು ಸಾರ್ಥಕಪಡಿಸುವುದಕ್ಕಾಗಿ ಮುಸಲ್ಮಾನರೂ, ಕ್ರೈಸ್ತರೂ, ಯಹೂದ್ಯರೂ ಒಂದಾಗಿರುವ ಪಕ್ಷಕ್ಕೆ ಇದು ಶುಭಸೂಚನೆಯೆಂದೇ ಹೇಳಬಹುದು ಆದರೂ ತುರ್ಕಿ ರಾಜ್ಯದ ಕಷ್ಟಗಳೆಲ್ಲಾ ನಿವೃತ್ತಿಹೊಂದಿದವು ಎಂದು ಇಷ್ಟುಬೇಗನೆ ಯಾರೇ ಆಗಲಿ ಧೈರ್ಯವಾಗಿ ಹೇಳಲೂ ಸಂಬಲೂ ಆಗಲಾರದು

ಆದರೆ ಈ ರಾಜ್ಯಭಾರದ ಗಲಿಬಿಲಿಯಲ್ಲಿ ಒಂದು ಸಂಗತಿಯು ಬಹು ದುಃಖವಾದದ್ದಾಗಿದೆ ಏಷ್ಯಾಮೈನರೆಂಬ ಪ್ರದೇಶದಲ್ಲಿ ಮುಸಲ್ಮಾನರು ಸಾವಿರಾರು ಕ್ರೈಸ್ತ ಪ್ರಜೆಗಳನ್ನು ಕೊಂದುಹಾಕಿರುವರು ತುರ್ಕಿ ರಾಜ್ಯದಲ್ಲಿ ನೆಮ್ಮದಿ ಸುಖಸಂತೋಷಾದಿಗಳು ನೆಲೆಗೊಂಡು ಅಭಿವೃದ್ಧಿಗೆ ಬರಬೇಕಾದರೆ ಮುಸಲ್ಮಾನರೂ ಕ್ರೈಸ್ತರೂ ಪರಸ್ಪರ ಪ್ರೀತಿವಿಶ್ವಾಸಗಳನ್ನು ಪಡೆದು ಬಾಳುತ್ತಾ ಬರಬೇಕೆಂಬುವುದು ಅವಶ್ಯವಾಗಿರುತ್ತದೆ

ದೇವರ ಮೇಲಣ ಪ್ರೀತಿ

ದರ್ಭಾಂಗ ಮಹಾರಾಜರು ಕಲ್ಕತ್ತಾ ಪಟ್ಟಣದಲ್ಲಿ ನಡೆದ ಮತಗಳ ಸಮ್ಮೇಳನದಲ್ಲಿ ಕೊಟ್ಟಂಥಾ ಅಭಿಪ್ರಾಯದ ಪ್ರಥಮಭಾಗವನ್ನು ಅಂದರೆ ಕಡೆಯಲ್ಲಿ ಒಂದೇ ಮತವು ಮಾತ್ರ ಉಳಿಯುವುದು ಎಂಬ ಭಾಗವನ್ನು ನಾವು ಕಳೆದ ಸಂಚಿಕೆಯಲ್ಲಿ ಸಂಕ್ಷೇಪವಾಗಿ ಪ್ರಸ್ತಾಪಿಸಿದೆವಷ್ಟೆ ಏಕಮತವು ಅತ್ಯಾವಶ್ಯವೆಂತಲೂ ಅದನ್ನು ಎಲ್ಲರೂ ಹುಡುಕಿ ಪಡೆದುಕೊಳ್ಳಬೇಕೆಂತಲೂ ನಾವು ತಿಳಿಸಿದೆವು

ಮನುಷ್ಯರು ದೇವರಮೇಲಿಡತಕ್ಕ ಭಕ್ತಿ ಪುರಸ್ಸರವಾದ ಪ್ರೀತಿಯ ವಿಷಯ ಈ ವಾರ ತಿಳಿಸಬೇಕೆಂದಿರುತ್ತೇವೆ ದೇವರ ಮೇಲಿಡತಕ್ಕ ಪ್ರೀತಿ ಎಂದು ಹೇಳುವಾಗ್ಗೆ ಇದರ ಅರ್ಥವೇನೆಂಬುವನ್ನು ನಾವು ಚೆನ್ನಾಗಿ ಗ್ರಹಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿರಬೇಕು

ಇದರ ವ್ಯಾಖ್ಯಾನವೇನೆಂದರೆ —(೧) ದೇವರು ಮನುಷ್ಯನಲ್ಲ ಆತನು ಮನುಷ್ಯನಾಗಿರದೆ ಬೇರೆ ಪುರುಷನಾಗಿರುತ್ತಾನೆ ಆತನಿಗೂ ಮನುಷ್ಯನಿಗೂ ಪರಿಷ್ಕಾರವಾದ ಮತ್ತು ಗೋಚರವಾದ ವ್ಯತ್ಯಾಸವುಂಟು ಪ್ರೀತಿ ಎಂಬತಕ್ಕ ಗುಣವು ವ್ಯತ್ಯಸ್ತವಾದ ಎರಡು ವ್ಯಕ್ತಿಗಳಲ್ಲಿರಬೇಕು ಕೆಲವರು ಇದನ್ನು ಒಪ್ಪದೆ ಮನುಷ್ಯನು ಸ್ವಾರ್ಥಪರನಾಗಿ ತನ್ನನ್ನು ಪ್ರೀತಿಮಾಡಿಕೊಳ್ಳುವದಿಲ್ಲವೇ ಎಂಬುದಾಗಿ ಪ್ರಶ್ನೆಮಾಡಬಹುದು ಆದರೆ ನಾವು ಇದರ ವಿಷಯ ದೀರ್ಘವಾಗಿ ಯೋಚನೆಮಾಡಿದರೆ ಮನುಷ್ಯನು ತನ್ನ ದೇಹವನ್ನಾಗಲೀ ಇಲ್ಲವೇ ತನ್ನ ಆಸ್ತಿಪಾಸ್ತಿ ಮಾನಮರ್ಯಾದೆಗಳನ್ನಾಗಲೀ ಪ್ರೀತಿಮಾಡುವನೇ ಹೊರತು ಅಗೋಚರವಾದ "ತನ್ನನ್ನು" ಎಂಬತಕ್ಕದ್ದನ್ನು ಪ್ರೀತಿಸುವದಿಲ್ಲವಷ್ಟೆ ಹೀಗೆ ಪ್ರೀತಿಸುವುದು ಅಸಾಧ್ಯ ಮನುಷ್ಯನು ತನ್ನಲ್ಲಿರುವ ಅಗೋಚರನಾದ ಆತ್ಮನನ್ನು ಪ್ರೀತಿಸುವುದಕ್ಕಾದೀತೇ ಇದು ಅಸಾಧ್ಯವಷ್ಟೆ

(೨) ದೇವರ ಮೇಲಿಡತಕ್ಕ ಪ್ರೀತಿ ಎನ್ನುವಾಗ್ಗೆ ದೇವರು ಪುರುಷನಾಗಿರಬೇಕಷ್ಟೆ ಹೀಗಿದ್ದರೇನೆ ಆತನು ಭಕ್ತಾದಿಗಳ ಪ್ರೀತಿಯನ್ನು ಅಂಗೀಕರಿಸುವನು ಆತನು ಬರೀಶಕ್ತಿಯೂ ನಿರ್ಗುಣನೂ ಆಗಿರನು ವೇದಾಂತಬೋಧನೆಯು ದೇವರು ಪುರುಷ ಸ್ವರೂಪಿಯಾಗಿಲ್ಲವೆಂತಲೂ ಆತನು ಒಂದು ಶಕ್ತಿಯುಳ್ಳವನೆಂದೂ ನಿರ್ಗುಣನಾಗಿರುತ್ತಾನೆಂತಲೂ ತಿಳಿಸುತ್ತದೆ ದೇವರಿಗೆ ಪ್ರೀತಿಯರ್ಪಣೆಯಾಗಬೇಕಾದರೆ ಆತನು ಸಗುಣಪರಬ್ರಹ್ಮನಾಗಿರಬೇಕು ಆತನು ಒಂದು ವ್ಯಕ್ತಿಯಾಗಿದ್ದು ಪ್ರೀತಿಯನ್ನು ಅಂಗೀಕರಿಸುತ್ತಲೂ ಪ್ರೀತಿಸುತ್ತಲೂ ಬರಬೇಕು

(೩) ದೇವರ ಮೇಲಣ ಪ್ರೀತಿ ಎನ್ನುವಾಗ್ಗೆ ಆತನು ಮನುಷ್ಯನಿಂದ ವ್ಯತ್ಯಸ್ತನಾಗಿದ್ದರೂ ಮನುಷ್ಯನಲ್ಲಿರುವ ಉನ್ನತ ಮತ್ತು ದೈವೀಕ ಸ್ವಭಾವಗಳು ಆತನಲ್ಲಿಯೂ ಇರಬೇಕು ದೇವರು ಮನುಷ್ಯನಲ್ಲ, ಮನುಷ್ಯನು ದೇವರಲ್ಲ ಹೀಗಿದ್ದರೂ ಇವರಿಬ್ಬರಲ್ಲಿ ಪರಸ್ಪರ ಪ್ರೀತಿ ಇರಬೇಕಾದರೆ ಇವರಿಬ್ಬರೊಳಗೆ ಕೆಲವು ಉನ್ನತ ಗುಣಸ್ವಭಾವಗಳಿರಬೇಕು ಇವರಿಬ್ಬರೊಳಗೆ ತಿಳುವಳಿಕೆ ಜ್ಞಾನ ಚಿತ್ತ ಮೊದಲಾದ ಗುಣಗಳಿರಬೇಕು ಈ ಗುಣಗಳು ಮನುಷ್ಯನಲ್ಲಿ ಪೂರ್ಣವಾಗಿರದಿದ್ದರೂ ದೇವರೊಳಗೆ ವಿಶಾಲವಾಗಿರುವವು ಹೀಗಿರುವುದರಿಂದಲೇ ದೇವರಿಗೂ ಮನುಷ್ಯರಿಗೂ ಪ್ರೀತಿಯ ಸಂಬಂಧವಿರುವುದು

ಒಬ್ಬನು ತನ್ನ ಹಸುವನ್ನಾಗಲೀ ತನ್ನ ಮನೆಯನ್ನಾಗಲೀ ಪ್ರೀತಿಮಾಡಬಹುದು ಆದರೆ ಹಸುವಾಗಲೀ ಅಥವಾ ತನ್ನ ಮನೆಯಾಗಲೀ ತನ್ನ ಯಜಮಾನನನ್ನು ಪರಿಪೂರ್ಣವಾಗಿ ಪ್ರೀತಿಮಾಡಲಾರವು ಯಾತಕ್ಕೆಂದರೆ ಅವುಗಳ ಗುಣಸ್ವಭಾವಕ್ಕೂ ಮನುಷ್ಯನ ಗುಣಸ್ವಭಾವಕ್ಕೂ ಅಜಗಜಾಂತರ ವ್ಯತ್ಯಾಸವಿರುತ್ತದೆ

(೪) ದೇವರ ಮೇಲಿಡತಕ್ಕ ಪ್ರೀತಿಯೆನ್ನುವಾಗ್ಗೆ ಅದನ್ನು ಭಕ್ತಾದಿಗಳು ದೇವರಿಗೆ ಅರ್ಪಿಸತಕ್ಕ ವಿಧಾನವನ್ನು ಯೋಚಿಸಬೇಕಲ್ಲವೇ ನಾವು ಆತನನ್ನು ಪ್ರೀತಿಮಾಡಲಪೇಕ್ಷಿಸಿದರೆ ಆತನನ್ನು ಯಾವ ರೀತಿಯಲ್ಲಿ ಪ್ರೀತಿಮಾಡಬೇಕೆಂಬುದನ್ನು ತಿಳಿದುಕೊಳ್ಳುವುದು ಅತ್ಯಾವಶ್ಯಕ ನಮ್ಮಲ್ಲಿ ಪ್ರಾರ್ಥನೆ, ವಿಶ್ವಾಸ, ಭಕ್ತಿ ಮೊದಲಾದ ಗುಣಗಳಿದ್ದರೆ ದೇವರನ್ನು ಪ್ರೀತಿಮಾಡುವುದಕ್ಕಾಗುವುದು

(೫) ನಾವು ದೇವರನ್ನು ನಿಜವಾಗಿ ಪ್ರೀತಿಮಾಡಿದರೆ ನಾವು ನಮ್ಮ ನಡತೆಯಲ್ಲಿ ಆತನನ್ನು ಹೋಲುವೆವು ದೇವರು ಅತಿ ಪವಿತ್ರನು ಆತನು ಎಲ್ಲಾ ವಿಧವಾದ ಪಾಪಗಳನ್ನೂ ದ್ವೇಷಿಸತಕ್ಕವನು ಆತನು ಸತ್ಯವನ್ನೂ ಪವಿತ್ರತೆಯನ್ನೂ ಎಲ್ಲಾ ವಿಧವಾದ ಒಳ್ಳೆಯತನವನ್ನೂ ಪ್ರೀತಿಸುವನು ನಾವು ದೇವರನ್ನು ಪ್ರೀತಿಸುವವರಾದರೆ ಮೊದಲು ನಮ್ಮ ಪಾಪಗಳನ್ನು ತಿಳಿದುಕೊಂಡು ಅವುಗಳಿಗೋಸ್ಕರ ದುಃಖಪಟ್ಟು ಅವುಗಳನ್ನು ಸಂಪೂರ್ಣವಾಗಿ ವರ್ಜಿಸಬೇಕಾಗಿರುತ್ತದೆ ನಮ್ಮಲ್ಲಿ ಸುಳ್ಳು, ಮೋಸ, ಕಳ್ಳತನ, ಹಾದರ, ಸ್ವಾರ್ಥತ್ವ ಮೊದಲಾದ ಪಾಪಗಳಿರಕೂಡದು ನಾವು ಸತ್ಯವಂತರೂ ಸಚ್ಚರಿತರೂ ನೀತಿಪರರೂ ಭಕ್ತರೂ ಆಗಿರಬೇಕು

ಒಬ್ಬನು ನಿಜವಾಗಿಯೂ ದೇವರನ್ನು ಪ್ರೀತಿಸಿದರೆ ಅವನ ನಡತೆಯು ಮಾರ್ಪಡುವುದು ಅದು ಪಾಪದಿಂದ ಪವಿತ್ರತೆಗೆ ಬರುವುದು ಕೆಟ್ಟದನ್ನು ಬಿಟ್ಟು ಒಳ್ಳೆಯದಕ್ಕೆ ತಿರುಗುವುದು ಈ ಅರ್ಥಕ್ಕೆ ಯೇಸುಕ್ರಿಸ್ತನು ತನ್ನನ್ನು ನೋಡುವುದಕ್ಕೆ ಬಂದ ಒಬ್ಬ ಮನುಷ್ಯನಿಗೆ ಈ ರೀತಿಯಲ್ಲಿ ಹೇಳಿದನು ಅದೇನಂದರೆ— "ನಿನ್ನ ಪ್ರಭುವಾದ ದೇವರನ್ನು ನಿನ್ನ ಪೂರ್ಣಮನಸ್ಸಿನಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸು" ಎಂಬುದೇ

ಒಳದೇಶದ ವೃತ್ತಾಂತಗಳು

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಗೆ ಆರೋಗ್ಯವಿಚಾರಗಳನ್ನು ತಿಳಿದಿರುವಂಥಾ ಒಬ್ಬ ಇಂಜನಿಯರನ್ನು ೩೫೦ ರೂಪಾಯಿ ಸಂಬಳ ಕೊಟ್ಟು ನೇಮಿಸಿಕೊಳ್ಳಬೇಕೆಂದು ಮ್ಯುನಿಸಿಪಲ್ ಕೌನ್ಸೆಲರುಗಳು ತೀರ್ಮಾನ ಮಾಡಿರುತ್ತಾರೆ

ಕಳೆದ ವಾರ ಸರ್ದಾರ್ ಲಕ್ಷ್ಮೀಕಾಂತರಾಜೇ ಅರಸಿನವರೂ, ಎಂ ಗೋಪಾಲರಾಜೇ ಅರಸಿನವರೂ, ಎಚ್ ಲಿಂಗರಾಜೇ ಅರಸಿನವರೂ, ಬಾಲರಾಜೇ ಅರಸಿನವರೂ ಬೇರೆ ಬೇರೆ ರಾಜಧಾನಿಯಿಂದ ಮೋಟಾರ್ ಗಾಡಿಗಳಲ್ಲಿ ನೀಲಗಿರಿಗೆ ಶ್ರೀಮನ್ ಮಹಾರಾಜರವರ ಕ್ಯಾಂಪಿಗೆ ಪ್ರಯಾಣಮಾಡಿದರು

ಈ ತಿಂಗಳು ತಾ ೨೪ ನೇ ಸೋಮವಾರದ ದಿನ ಕಡೂರು ಡಿಸ್ಟ್ರಿಕ್ಟಿನ ವ್ಯವಸಾಯ ಮತ್ತು ಕೈಗಾರಿಕೆಗಳ ಸಂಘದ ಮೊದಲನೇ ವಾರ್ಷಿಕ ಸಭೆಯು ಚಿಕ್ಕಮಗಳೂರಿನಲ್ಲಿ ನಡೆಯುವುದೆಂತಲೂ, ಆಗ್ಗೆ ಕೆಲವು ಉಪನ್ಯಾಸಗಳು ನಡೆಯುವುದಲ್ಲದೆ ಆ ಸಂಘದ ವಾರ್ಷಿಕ ರಿಪೋರ್ಟ್ ಮುಂತಾದದ್ದು ಓದಲಾಗುವದೆಂತಲೂ ಕೇಳುತ್ತೇವೆ

ನೆನ್ನೆಯೂ ಮೊನ್ನೆಯೂ ರಾಜಧಾನಿಯಲ್ಲಿ ಮೋಡ ಕವಿದುಕೊಂಡು ಸೋನೆ ಮಳೆ ಸುರಿಯಿತು ಬೇಸಿಗೆಯ ಬಿಸಿಲು ಕಮ್ಮಿಯಾಗಿ ಶೀತ ಹವಾ ಹುಟ್ಟಿದೆ ಪ್ಲೇಗಿನ ಉಪದ್ರವು ಇನ್ನೂ ಶಮನವಾಗಲಿಲ್ಲ ಕಳೆದ ಏಪ್ರಿಲ್ ತಿಂಗಳಲ್ಲಿ ಸುಮಾರು ೧೮೦ ಮಂದಿಗೆ ಪ್ಲೇಗು ಬಂದಿತು ಅವರುಗಳಲ್ಲಿ ೧೫೦ ಮರಣಗಳಾಗಿರುವವೆಂದು ಕೇಳುತ್ತೇವೆ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ಪೋಲೀಸಿನವರು ಒಬ್ಬ ಹೆಂಗಸನ್ನು ಸೀರೆ ಕದ್ದದ್ದಕ್ಕಾಗಿ ಹಿಡಿದು ಲಾಕಪ್ಪಿನಲ್ಲಿ ಇಟ್ಟಿದ್ದರು ಅವಳು ನಡುರಾತ್ರಿಯಲ್ಲಿ ಹೊರಕ್ಕೆ ಬಂದು ಒಂದು ಬಾವಿಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡಳು ಪೋಲೀಸಿನವರ ನಿಗಾವು ಸಡಿಲವಾಗಿದೆ ಎಂದು ವ್ಯಾಜಿಸ್ಟ್ರೇಟರು ಮಹಜರಿನಲ್ಲಿ ಬರೆದಿರುವಂತೆ ಕೇಳುತ್ತೇವೆ

ಶ್ರೀಮನ್ ಯುವರಾಜರವರ ವರ್ಷವರ್ಧಂತಿಯು ಈ ಸಲ ತಾ ೧೫ ನೇ ಶನಿವಾರ ನೀಲಗಿರಿ ಬೆಟ್ಟದ ಮೇಲೆಯೇ ನಡೆಸಲ್ಪಡುತ್ತದೆ ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವವು ಈ ತಿಂಗಳ ತಾ ೩೦ ನೇ ಭಾನುವಾರ ನಡೆಯುವುದಾದ್ದರಿಂದ ರಾಜ ಮನೆತನದವರೆಲ್ಲಾ ಸುಮಾರು ತಾ ೨೪ಕ್ಕೆ ರಾಜಧಾನಿಗೆ ದಯಮಾಡುವರೆಂದು ಕೇಳುತ್ತೇವೆ

ಈ ವಾರ ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ನೀಲಗಿರಿಗೆ ಹೋಗುವ ಉದ್ದಿಶ್ಯ ಪರಿವಾರ ಸಹಿತ ರಾಜಧಾನಿಗೆ ಬಂದು ಇಲ್ಲಿ ಭೋಜನ ತೀರಿಸಿಕೊಂಡು ಮೋಟಾರ್ ಗಾಡಿಗಳಲ್ಲಿ ನಂಜನಗೂಡಿನ ಮಾರ್ಗವಾಗಿ ತೆರಳುವರೆಂದು ಕೇಳುತ್ತೇವೆ ಅರಮನೆ ಇಲಾಖೆಯವರು ಇಲ್ಲೂ ಬೆಂಗಳೂರಿನಲ್ಲೂ ನಂಜನಗೂಡಿನಲ್ಲೂ ಅವರಿಗಾಗಿ ಏರ್ಪಾಡುಗಳನ್ನು ಮಾಡಿರುವರು

ಮೈಸೂರು ಸರ್ಕಾರದವರು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಪರಸ್ಪರ ಸಹಾಯಕ ಸಂಘಗಳನ್ನು ಏರ್ಪಡಿಸಿಕೊಳ್ಳುವಂತೆ ಪ್ರಜೆಗಳಿಗೆ ತಿಳುವಳಿಕೆಯನ್ನು ಹೇಳುವುದಕ್ಕೂ, ಈಗ ಇರತಕ್ಕ ಸಂಘಗಳ ಲೆಕ್ಕಪತ್ರಗಳನ್ನೂ ನಡವಳಿಕೆಗಳನ್ನೂ ಆಗಿಂದಾಗ್ಗೆ ತನಿಖೆ ಮಾಡುವುದಕ್ಕೂ ಪೆನ್ಷನ್ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ ॥ ಡಿ ರಾಮಸ್ವಾಮಯ್ಯನವರನ್ನು ನೇಮಕಮಾಡಿದಾರೆ

ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಸಣ್ಣ ಮೊಕದ್ದಮೆಗಳನ್ನು ಹಿಡಿದು ತನಿಖೆ ಮಾಡಿ ಫೈಸಲ್ ಮಾಡುವುದಕ್ಕೆ ಬೆಂಚ್ ಆಫ್ ಮ್ಯಾಜಿಸ್ಟ್ರೇಟ್ ಎಂಬ ಒಂದೊಂದು ಕೋರ್ಟನ್ನು ಸರ್ಕಾರದವರು ಹೊಸದಾಗಿ ನೇಮಕಮಾಡುವವರಾಗಿದಾರೆ ಯಾರ್ಯಾರನ್ನು ಈ ಮ್ಯಾಜಿಸ್ಟ್ರೇಟ್ ಕೆಲಸಕ್ಕೆ ನೇಮಿಸಬಹುದೋ, ಅವರಿಗೆ ಎಷ್ಟು ಶಿಬ್ಬಂದಿ ಬೇಕಾಗಿದೆಯೋ, ಈ ವಿಷಯವನ್ನೆಲ್ಲಾ ದೆಪ್ಯುಟಿ ಕಮಿಷನರು ಗವರ್ನ್ಮೆಂಟಿಗೆ ತಿಳಿಸಬೇಕೆಂದು ಹುಕುಂ ಬಂದಿದೆ

ಪೆನ್ಷನ್ ಅಸಿಸ್ಟಂಟ್ ಕಮಿಷನರಾಗಿಯೂ ಹುಜೂರು ಮುನಷೀಯಾಗಿಯೂ ಇರುವ ಮಿ ॥ ಟಿ ಎಚ್ ಮೀರ್ ಕಮಾಲುದ್ದೀನ್ ಅಲ್ಲಿ ಖಾನವರ ಎರಡನೇ ಕುಮಾರ ಮೀರ್ ಬಸೀತ್ ಅಲ್ಲಿ ಖಾನ್ ಎಂಬಾತನಿಗೆ ಶ್ರೀಮನ್ ಮಹಾರಾಜರವರು ವರುಷಕ್ಕೆ ೨೦೦ ಪೌಂಡಿನಪ್ರಕಾರ ವಿದ್ಯಾರ್ಥಿವೇತನವನ್ನು ಮೂರು ವರುಷ ಕೊಡಿಸುವಂತೆ ಸ್ಯಾಂಕ್ಷನ್ ಮಾಡಿದರು ಆತನು ವಿಲಾಯಿತಿಯಲ್ಲಿದ್ದು ಬ್ಯಾರಿಸ್ಟರ್ ಪರೀಕ್ಷೆಗೆ ಓದುವನು ಕಳೆದ ವಾರ ಆ ಯವನನಿಗೆ ಮೈಸೂರಿನಲ್ಲೂ, ಶ್ರೀರಂಗಪಟ್ಟಣದಲ್ಲೂ, ಬೆಂಗಳೂರಿನಲ್ಲೂ ಮಹಮದೀಯರು ಔತಣವನ್ನು ಮಾಡಿ ಕಳುಹಿಸಿಕೊಟ್ಟರು

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಏಪ್ರಿಲ್ ತಾ. 24 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು	ಧರ್ಮಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು	ರೂ	
ಬೆಂಗಳೂರು	438	214	22	396	231
ಕೋಲಾರ	1,811	854	56	5,819	773
ತುಮಕೂರು	1,166	743	65	4,270	677
ಮೈಸೂರು	103	113	27	363	388
ಹಾಸನ	361	105	90	1,085	3
ಶಿವಮೊಗ್ಗ	110	50	15	447	5
ಕಡೂರು	224	203	2	129	
ಚಿತ್ರದುರ್ಗ	616	631	97	607	464
ಮಾರಿಕಣಿವೆ	256	334	10	750	.
ಸ್ಯಾನಿಟರಿ	107	120	..	398	.
ಒಟ್ಟು	5,386	4,167	384	14,259	2,541

ಒಕ್ಕಲಿಗರ ಮೂರನೆಯ ಮಹಾಸಭೆಯು

ಮೊದಲನೇ ದಿವಸದ ನಡವಳಿಕೆಗಳು.

ಮೈಸೂರು ಸಂಸ್ಥಾನದ ಒಕ್ಕಲಿಗರ ಮೂರನೆ ಮಹಾಸಭೆಯು ಕಳೆದ ತಾ ೨೮ ನೇ ಬುಧವಾರ ಪ್ರಾರಂಭವಾಯಿತು ಸಭೆಯು ನಡೆಯಬೇಕೆಂದು ಗೊತ್ತು ಮಾಡಲ್ಪಟ್ಟಿದ್ದ ಗವೀಪುರದಲ್ಲಿ ಸಕಲ ಏರ್ಪಾಡುಗಳೂ ಮಾಡಲ್ಪಟ್ಟಿದ್ದುವು ಸಭೆಗೆ ಬರುವ ಮಹಾಜನರು ಇಳಿದುಕೊಳ್ಳುವುದಕ್ಕೂ, ಪ್ರೆಸಿಡೆಂಟರ ಬಿಡಾರಕ್ಕೂ, ಊಟ ಉಪಚಾರಂಗಳಿಗೋಸ್ಕರವೂ ಅಲ್ಲಿನ ಛತ್ರಗಳೆಲ್ಲಾ ಬಿಡಿಸಿಕೊಳ್ಳಲ್ಪಟ್ಟಿದ್ದುವು ಮಹಾಸಭೆಯು ನಡೆಯುವುದಕ್ಕೆ ಒಂದು ಬಾರಿ ಶಾಮಿಯಾನಾ ಹಾಕಲ್ಪಟ್ಟಿತ್ತು ಲಾಂದ್ರಗಳೂ, ವಾಸ್ಗಾಲೈಟ್ ಲೈಟ್ ಎಂಬ ಮಹಾ ಪ್ರಕಾಶಮಾನವಾದ ದೀಪಗಳೂ ಎಲ್ಲಾ ಕಡೆಯಲ್ಲಿಯೂ ಇಡಿಸಲ್ಪಟ್ಟು, ರಾತ್ರಿವೇಳೆ ಸ್ಥಳವನ್ನೆಲ್ಲಾ ಬೆಳಕುಮಾಡಿ ಹರ್ಷವನ್ನು ಕೊಡುತ್ತಿದ್ದುವು ಗವಿಪುರದಿಂದ ಚಾಮರಾಜಪೇಟೆಯವರೆವಿಗೂ ರಸ್ತೆಯಲ್ಲೆಲ್ಲಾ ಬಾವುಟಗಳ ಸ್ತಂಭಗಳಿಂದಲೂ ತೋರಣಗಳಿಂದಲೂ ಅಲಂಕರಿಸಲ್ಪಟ್ಟಿದ್ದವು ಚಾಮರಾಜಪೇಟೆಯ ದ್ವಾರದಲ್ಲಿಯೂ ಗವೀಪುರದ ಬೀದಿಯಲ್ಲಿಯೂ ಸುಸ್ವಾಗತವೆಂಬುವ ಎರಡು ಬರೆಯಲ್ಪಟ್ಟಿದ್ದ ಮೇಲ್ಕಟ್ಟುಗಳು ಕಟ್ಟಲ್ಪಟ್ಟಿದ್ದವು

ಪ್ರೆಸಿಡೆಂಟರ ಆಗಮನವು

ಬುಧವಾರದ ಬೆಳಗ್ಗೆ ೬ ಗಂಟೆಗೆ ಸರಿಯಾಗಿ ಮಹಾಸಭೆಯ ಪ್ರೆಸಿಡೆಂಟರಾದ ನೀಲಗಿರಿ ಸಾಹುಕಾರ್ ಮ ರಾ ಶ್ರೀ ರಂಗಯ್ಯಗೌಡರವರು ದಯಮಾಡಿಸಿದರು ಒಕ್ಕಲಿಗ ಮಹಾಜನರ ಪ್ರಮುಖರು ಅವರನ್ನು ಸ್ಟೇಷನ್ ಬಳಿ ಎದುರ್ಗೊಂಡು ಸನ್ಮಾನದಿಂದ ಬರಮಾಡಿಕೊಂಡರು ಸುಮಾರು ೮ ಘಂಟೆಯ ಸಮಯದಲ್ಲಿ ೫೦೦ ಮಂದಿಗೆ ಮೇಲ್ಪಟ್ಟು ಒಕ್ಕಲಿಗ ಮಹಾಜನರು ಸೇರಿದಿರಲು ಪ್ರೆಸಿಡೆಂಟರವರು ಗವೀಪುರಕ್ಕೆ ಹೊರಡಲು ಸನ್ನದ್ಧರಾದರು ಆಗ ಒಕ್ಕಲಿಗರ ಸಂಘದ ಎಗ್ಸಿಕ್ಯೂಟಿವ್ ಮೆಂಬರುಗಳೂ ಮತ್ತು ಪ್ರಮುಖರೂ ಸಹ ಅವರಿಗೆ ದಿವ್ಯವಾದ ಹಾರ ತುರಾಯಿಗಳನ್ನು ಸಮರ್ಪಿಸಿದರು ಪ್ರೆಸಿಡೆಂಟರು ಧರಿಸಿದ್ದ ಪುಷ್ಪಹಾರಗಳಲ್ಲಿ ಅವರ ಮುಖ ಮಾತ್ರ ದರ್ಶನವಾಗುತ್ತಿದ್ದಿತು ಆಗ ಇಂಪಾದ ವಾದ್ಯವು ಮೊಳಗುತ್ತಿರಲು ಮಹಾಜನರೆಲ್ಲರೂ ಪ್ರೆಸಿಡೆಂಟರನ್ನು ಬಿಜಮಾಡಿಸಿಕೊಂಡು ಕರೆತಂದು, ಸಂಸ್ಥಾನದ ಮೊದಲನೆ ಕೌನ್ಸಿಲರವರಾದ ಮ ಪುಟ್ಟಣ್ಣಶೆಟ್ಟರವರು ಅತ್ಯಂತ ವಿಶ್ವಾಸದಿಂದ ಕಳುಹಿಸಿಕೊಟ್ಟಿದ್ದ ದಿವ್ಯವಾದ ಎರಡು ಅಶ್ವಗಳನ್ನು ಕಟ್ಟಿದ್ದ ರಥದಲ್ಲಿ ಕುಳ್ಳಿರಿಸಿದರು ಪ್ರೆಸಿಡೆಂಟರ ಪಕ್ಕದಲ್ಲಿ ಒಕ್ಕಲಿಗರ ಒಂದನೇ ಮಹಾಸಭೆಯ ಪ್ರೆಸಿಡೆಂಟರಾದ ಮ ವಿ ಎಸ್ ಮಾರಪ್ಪನವರೂ, ಇವರೀರ್ವರ ಎದುರುಪಾರ್ಶ್ವದಲ್ಲಿ ಎರಡನೇ ಮಹಾಸಭೆಯ ಪ್ರೆಸಿಡೆಂಟರಾದ ಮೆ|| ಬಿ ನಾಗಪ್ಪನವರೂ ಮತ್ತು ಧಾರವಾಡದಲ್ಲಿ ರಡ್ಡಿಜನರ ಸಂಘವನ್ನು ಏರ್ಪಡಿಸಿರುವ ಮ ಪಕೀರಪ್ಪ ನಲವಡಿಯವರೂ ಕುಳಿತುಕೊಂಡರು ಮೆರವಣಿಗೆಯು ವಿಜೃಂಭಣೆಯಿಂದ ಅರಳೇಪೇಟೆ, ಚಿಕ್ಕಪೇಟೆ, ದೊಡ್ಡಪೇಟೆ, ಕೋಟೆಗಳನ್ನು ಹಾದು ಚಾಮರಾಜಪೇಟೆಯಿಂದ ಗವೀಪುರಕ್ಕೆ ಹೋಗುವ ದ್ವಾರಕ್ಕೆ ಬರಲು, ಸಂಸ್ಥಾನದ ಮೊದಲನೆ ಕೌನ್ಸಿಲರ್ ಮೆ ಪುಟ್ಟಣ್ಣಶೆಟ್ಟರವರು ಬಂದು ಪ್ರೆಸಿಡೆಂಟರವರೊಡನೆ ಸಂಭಾಷಣೆ ಮಾಡಿದ ನಂತರ ಮೆರವಣಿಗೆಯು ಗವೀಪುರವನ್ನು ಸೇರಲು ಅಲ್ಲಿ ಮ ಸಿ ರಾಮಲಿಂಗರಡ್ಡಿಯವರು ಮುಂತಾದ ಒಕ್ಕಲಿಗ ಮಹಾಜನರು ಅವರನ್ನು ಬರಮಾಡಿಕೊಂಡು ಬಿಡಾರದಲ್ಲಿ ಇಳಿಸಿದರು

ಮಹಾಸಭೆಯು.

ಸಾಯಂಕಾಲ ೬|| ಘಂಟೆಗೆ ಸಭಾಮಂದಿರದಲ್ಲಿ ಮಹಾಸಭೆಯು ಕೂಡಿತು ಒಕ್ಕಲಿಗರ ಸಂಘದಿಂದ ಆಹ್ವಾನಪತ್ರಿಕೆಗಳ ಮೂಲಕ ಬರಹೇಳಲ್ಪಟ್ಟಿದ್ದ ಅನೇಕ ದೊಡ್ಡ ಮನುಷ್ಯರು ನೆರೆದಿದ್ದರು ಬೆಂಗಳೂರು ಪಟ್ಟಣದಲ್ಲಿರುವ ಬಹು ಮಂದಿ ಸರ್ಕಾರಿ ಅಧಿಕಾರಿಗಳೂ, ಉದ್ಯೋಗಸ್ಥರೂ, ವೀರಶೈವ, ವೈಶ್ಯ, ದೇವಾಂಗ, ಜ್ಯೋತಿನಗರ, ಮಹಾರಾಷ್ಟ್ರ ಮುಂತಾದ ಮಂಡಲಿಯ ಮುಖಸ್ಥರೂ, ಒಕ್ಕಲಿಗ ಮಹಾಜನರೂ ವಿದ್ಯಾರ್ಥಿಗಳೂ ಮೊದಲಾದ ಸಾವಿರಾರು ಮಂದಿ ನಿಯಾಮಕವಾದ ಕಾಲಕ್ಕೆ ಶತಪೂರ್ವವೇ ಬಂದು ಸೇರಿದ್ದರು ಸುಮಾರು ಎರಡುಸಾವಿರ ಜನರವರೆವಿಗೂ ಬಂದಿರಬಹುದೆಂದು ಧಾರಾಳವಾಗಿ ಹೇಳಬಹುದು ಸಭೆಯಲ್ಲಿ ಪ್ರಾಮುಖ್ಯವಾಗಿ ಮ ವಿ ಪಿ ಮಾಧವರಾಯರು, ಮಾಜಿ ದಿವಾನ್‌ರು ಮ|| ಟಿ ಆನಂದರಾಯರು, ಪ್ರಕೃತ ದಿವಾನ್‌ರು, ಮೆ|| ಕೆ ಪಿ ಪುಟ್ಟಣ್ಣಶೆಟ್ಟರು, ಮೊದಲನೆ ಕೌನ್ಸಿಲರು, ಮ|| ಎಚ್ ವಿ ನಂಜುಂಡಯ್ಯನವರು, ಎರಡನೆ ಕೌನ್ಸಿಲರು, ಮ ಚಕ್ರವರ್ತಿರಾಯರು, ಕಂಟ್ರೋಲರು, ಮೆ|| ಚಂದ್ರಶೇಖರಯ್ಯನವರು, ಚೀಫ್ ಸೆಕ್ರೆಟರಿ, ಮೆ|| ಬಿ ಜಿ ಕುಮಾರಸ್ವಾಮಿನಾಯಕರು, ಡೆಪ್ಯುಟಿ ಕಮಿಷನರು ಡಾಕ್ಟರ್ ಟ್ರಾವರ್ಸ್ ದೊರೆಯವರು ಶಾಲೆಗಳ ಅಧ್ಯಕ್ಷರು, ಮ ರಿಚರ್ಡ್ಸ್‌ಯವರು, ದಂಡಿನ ಡಿ|| ಮೆಜಿಸ್ಟ್ರೇಟರು, ಮೆ|| ಭಾಭಾ ಸಾಹೇಬರು, ವಿದ್ಯಾಭ್ಯಾಸದ ಇಲಾಖಾ ಅಧ್ಯಕ್ಷಕರು, ವ್ಯವಸಾಯ ಇಲಾಖಾ ಅಧ್ಯಕ್ಷಕರು, ಡಾ|| ಕೋಲ್‌ಮನ್‌ಯವರು, ಮೆ|| ಸ್ಪಾರ್ಕ್ಸ್ ಸಾಹೇಬರು, ಎಕ್ಸೈಸ್ ಕಮಿಷನರು ಅಂಡರ್ ಸೆಕ್ರೆಟರಿಗಳು, ಲಾಯರುಗಳು ವರ್ತಕರು, ಮುಂತಾದ ಅನೇಕ ದೊಡ್ಡ ಮನುಷ್ಯರು ನೆರೆದಿದ್ದರು

ಮೆ|| ಬಿ ನಾಗಪ್ಪನವರು ಎದ್ದು ಮೆ|| ರಂಗಯ್ಯಗೌಡರನ್ನು ಮಹಾಸಭೆಯ ಪ್ರೆಸಿಡೆಂಟರನ್ನಾಗಿ ಚುನಾಯಿಸತಕ್ಕದ್ದೆಂದು ಉದ್ದೇಶಿಸಿದರು ಇದನ್ನು ಮೆ|| ಸಿ ರಾಮಲಿಂಗರಡ್ಡಿಯವರು ಅನುಮೋದಿಸಿದರು ಸರ್ವರೂ ಒಪ್ಪಲು ಮೆ|| ರಂಗಯ್ಯಗೌಡರು ಅಗ್ರಾಸನವನ್ನು ವಹಿಸಿದರು ಇವರ ಬಲಪಾರ್ಶ್ವದಲ್ಲಿ ಪ್ರಕೃತ ದಿವಾನ್‌ರೂ ಎಡಪಾರ್ಶ್ವದಲ್ಲಿ ಮೆ|| ವಿ. ಪಿ ಮಾಧವರಾಯರೂ ಕುಳಿತುಕೊಂಡರು.

ರಾಜಭಕ್ತಿ ಪ್ರದರ್ಶನ

ಅನಂತರ ಮೆ|| ರಂಗಯ್ಯಗೌಡರು ಎದ್ದು ತಮ್ಮನ್ನು ಮಹಾಸಭೆಯ ಪ್ರೆಸಿಡೆಂಟರನ್ನಾಗಿ ಚುನಾಯಿಸಿದುದಕ್ಕೋಸ್ಕರ ತಮ್ಮ ವಂದನೆಗಳನ್ನು ಸಮರ್ಪಿಸಿ, ಶ್ರೀಮನ್ ಮಹಾರಾಜರವರಿಗೆ ಒಕ್ಕಲಿಗ ಮಂಡಲಿಯ ರಾಜಭಕ್ತಿಯನ್ನು ಪ್ರದರ್ಶಿಸಿ ಒಂದು ತಂತೀವರ್ತಮಾನವನ್ನು ಕೊಡಬೇಕಾಗಿರುತ್ತದೆಂತಲೂ, ಅದನ್ನು ಮೆ|| ರಾಮಯ್ಯನವರು ಓದುವರೆಂತಲೂ ಹೇಳಿದರು ಅನಂತರ ಮೆ|| ರಾಮಯ್ಯನವರು ಈ ಪ್ರಕಾರ ತಂತೀವರ್ತಮಾನವನ್ನು ಓದಿಹೇಳಿದರು — ಒಕ್ಕಲಿಗರ ಮೂರನೇ ಮಹಾಸಭೆಯಲ್ಲಿ ನೆರೆದಿರುವ ಒಕ್ಕಲಿಗಮಂಡಲಿಯ ಪ್ರತಿನಿಧಿಗಳಾದ ನಾವು ಮಹಾಸ್ವಾಮಿಯವರಿಗೂ ಮತ್ತು ಮಹಾಸ್ವಾಮಿಯವರ ರಾಜವಂಶದವರಿಗೂ ನಮ್ಮ ದೃಢವಾದ ರಾಜಭಕ್ತಿಯನ್ನು ತೋರ್ಪಡಿಸುತ್ತೇವೆ ಒಕ್ಕಲಿಗರ ಸಂಘಕ್ಕೆ ಒಂದು ವಿಸ್ತಾರವಾದ ಜಮೀನನ್ನು ಕೊಟ್ಟು ಮಹಾಸ್ವಾಮಿಯವರು ಉಪಕಾರಮಾಡಿದುದಕ್ಕೋಸ್ಕರ ನಾವೆಲ್ಲರೂ ಅತ್ಯಂತ ಕೃತಜ್ಞರಾಗಿದ್ದೇವೆ ಇದನ್ನು ಓದುವಾಗ ಸಭಿಕರೆಲ್ಲರೂ ಎದ್ದು ನಿಂತುಕೊಂಡು ಸನ್ಮಾನ ಮಾಡಿದರು

ಸಂಘದ ರಿಪೋರ್ಟು.

ಮೆ|| ಬಿ ಪುಟ್ಟಯ್ಯನವರು ಸಂಘದ ರಿಪೋರ್ಟನ್ನು ಮಹಾ ಸಭೆಯಲ್ಲಿ ಓದಿ ಹೇಳಿದರು ಅದರಲ್ಲಿ ಕಂಡುಬರುವ ಮುಖ್ಯ ವಿಚಾರಗಳೇನೆಂದರೆ —

ಗ್ರಾಮಾಂತರಗಳಲ್ಲಿ ಸಂಘಕ್ಕೋಸ್ಕರ ವಸೂಲಾದ ಹಣವನ್ನು ಸಂಸ್ಥಾನದ ಖಜಾನೆಗಳಲ್ಲೆಲ್ಲಾ ದಿನವಹಿ ತೆಗೆದುಕೊಂಡು ಅದನ್ನು ರೆಮಿಟೆನ್ಸ್ ರಸೀದಿಗಳ ಮೂಲಕ ಬೆಂಗಳೂರಿಗೆ ಸಂಘಕ್ಕೆ ಕಳುಹಿಸಿಕೊಡುವಂತೆ ಅಪ್ಪಣೆ ದಯಪಾಲಿಸಬೇಕೆಂದು ನಾವು ಸರ್ಕಾರದವರನ್ನು ಕೇಳಿಕೊಂಡಿದ್ದೆವು ಇದನ್ನು ಸ್ವಲ್ಪಮಟ್ಟಿಗೆ ನಡೆಸಿಕೊಟ್ಟಿರುವರು ಏನೆಂದರೆ, ಸಂಘದ ಪರವಾಗಿ ಗ್ರಾಮಾಂತರಗಳಿಗೆ ಕಳುಹಿಸಲ್ಪಡುವ ಏಜೆಂಟರು ತಾವು ವಸೂಲುಮಾಡಿದ ಹಣವನ್ನು ಒಂದು ಕ್ಲುಪ್ತವಾದ ದಿವಸ ಆಯಾ ಡಿಸ್ಟ್ರಿಕ್ಟು ಟ್ರೆಜರಿಗಳಿಗೆ ಜರಸಾಲುಮಾಡಿದರೆ ಆ ಹಣವನ್ನು ಸದರಿ ಖಜಾನೆಯವರು ತೆಗೆದುಕೊಂಡು ಸಂಘಕ್ಕೆ ರೆಮಿಟೆನ್ಸ್ ರಸೀದಿಗಳ ಮೂಲಕ ರವಾನಿಸುವರು ನಮ್ಮ ಜನರಲ್ಲಿ ಮುಂದರಿದವರು ಬಹುಮಂದಿ ಮುಖ್ಯವಾಗಿ ಗ್ರಾಮಾಂತರಗಳಲ್ಲಿ ವಾಸಮಾಡುತ್ತಿರುವುದರಿಂದ ಈ ಸೌಕರ್ಯವನ್ನು ತಾಲ್ಲೂಕು ಖಜಾನೆಗಳಿಗೆ ಕನ್ನಯಿಸುವಂತೆ ಮಾಡಿಕೊಟ್ಟಿದ್ದರೆ ಚೆನ್ನಾಗಿತ್ತು

ಸಂಘಕ್ಕೋಸ್ಕರ ದಾನಮಾಡಿದ ಜಮೀನು — ಈ ಸಂಘದ ಕಟ್ಟಡಕ್ಕಾಗಿ ಬೋರ್ಡಿಂಗ್ ನವಿಗ್ ಬೆಂಗಳೂರು ಕೋಟೆಗೂ ಮತ್ತು ಬಸವನಗುಡಿಗೂ ಮಧ್ಯೆ ಕೋಟೆರಸ್ತೆಗೆ ಪಶ್ಚಿಮದಲ್ಲಿರುವ ೪೦ ಎಕರೆ ಜಮೀನು ಬೇಕಾಗಿರುತ್ತದೆಂದು ಕೇಳಿಕೊಂಡಿದ್ದೆವು ಸರ್ಕಾರದವರು ಕಳೆದ ೦ಂಗಳಲ್ಲಿ ಕೋಟೆರಸ್ತೆಗೆ ಪೂರ್ವದಲ್ಲಿರುವ ೧೭ ಎಕರೆ ೧೬ ಗುಂಟೆ ನಿಸ್ತೀರ್ಣವುಳ್ಳ ಸರ್ಕಾರಿ ಮತ್ತು ಹಿಡುವಳಿ ಜಮೀನನ್ನೂ, ಇದನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಖರ್ಚಾಗಬೇಕಾಗಿರುವ ೩,೫೦೦ ರೂಪಾಯಿಗಳನ್ನೂ ಕೊಡುವುದಾಗಿ ಉದಾರಮನಸ್ಸಿನಿಂದ ಒಂದು ಹುಕುಮನ್ನು ದಯಪಾಲಿಸಿರುತ್ತಾರೆ ಈಗ ದಯಪಾಲಿಸಿರುವ ಆರ್ಡರಿನಲ್ಲಿ ಸದರಿ ಜಮೀನಿನ ಮೇಲೆ ಮತ್ಯಾವ ಕಟ್ಟಡವನ್ನೂ ಕಟ್ಟಗೊಡಿಸುವುದಿಲ್ಲವೆಂತಲೂ, ಅದು ಒಕ್ಕಲಿಗರ ಮತ್ತು ಇತರ ವಿದ್ಯಾರ್ಥಿಗಳಿಗೆ ಆಟದ ಮೈದಾನವಾಗಿ ಬಿಟ್ಟುಕೊಡಲ್ಪಡುವುದೆಂತಲೂ ವಾಗ್ದಾನಮಾಡಿದ್ದಾರೆ ಮತ್ತು ನಮ್ಮ ವಿದ್ಯಾರ್ಥಿನಿಲಯಕ್ಕೋಸ್ಕರ ಈಗ ಕಟ್ಟಡಕ್ಕಾಗಿ ಕೊಟ್ಟಿರುವ ಜಮೀನಿನ ಪಕ್ಕದಲ್ಲೇ ಬೇರೊಂದು ಜಮೀನನ್ನು ಕೊಡುವುದಾಗಿಯೂ ಹೇಳಿದ್ದಾರೆ ಆದುದರಿಂದ ಈಗ ಹುಟ್ಟಿರುವ ಆರ್ಡರು ಸರ್ವವಿಧದಲ್ಲಿಯೂ ತೃಪ್ತಿಕರವಾಗಿರುವುದು ಇದಕ್ಕಾಗಿ ನಾವು ನಮ್ಮ ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತುಂಬಾ ಕೃತಜ್ಞರಾಗಿರುವೆವು

- ಒಕ್ಕಲಿಗರ ಸಂಘವು ಪ್ರಜಾಕ್ಷೇಮಾಭಿಲಾಷೆಯನ್ನು ವಿಶೇಷವಾಗಿ ತೋರಿಸಿರುತ್ತದೆ ಮತ್ತು ಒಕ್ಕಲಿಗರ ಜನರನ್ನು ಸಾಮಾಜಿಕ, ನೈತಿಕ ಮತ್ತು ಪ್ರಾಪಂಚಿಕ ವ್ಯವಹಾರಗಳಲ್ಲಿ ಅಭಿವೃದ್ಧಿಗೆ ತರಬೇಕೆಂದು ಆ ಸಮುದಾಯತ್ತೇ ನ ಸಾಹಸಪಡುತ್ತಿರುವುದು ಸಕಲ ವಿಧಪ್ರೋತ್ಸಾಹಾರ್ಹವಾದುದೆಂದು ಸರ್ಕಾರದವರು ಅಭಿಪ್ರಾಯಪಡುತ್ತಾರೆ ಮುಂದೆ ಪ್ರವರ್ತಮಾನರಾಗುವ ಬಾಲಕರಿಗೆ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೂ ಮತ್ತು ಒಕ್ಕಲಿಗರಂತಹ ಮುಖ್ಯ ವರ್ಗದವರ ಕ್ಷೇಮಾಭಿವೃದ್ಧಿಯನ್ನು ಮಾಡುವುದಕ್ಕೂ, ಸಂಘದವರು ಮಾಡುತ್ತಿರುವ ಪ್ರಯತ್ನಗಳಿಗೆ ಪ್ರೋತ್ಸಾಹವನ್ನುಂಟುಮಾಡಲು ಸರ್ಕಾರದವರು ಕೇವಲ ಕುತೂಹಲಯುಕ್ತರಾಗಿದ್ದಾರೆ ಈ ಕುತೂಹಲವನ್ನು ತೋರ್ಪಡಿಸುವುದಕ್ಕೋಸ್ಕರವೇ ಜಮೀನನ್ನು ಧರ್ಮಾರ್ಥವಾಗಿ ಸಂಘಕ್ಕೆ ಕೊಡಲು ಅನುಮತಿಯನ್ನು ದಯಪಾಲಿಸಿರುತ್ತಾರೆ

ಒಕ್ಕಲಿಗರ ಸಂಘದ ಮುದ್ರಾಲಯವು — ಸನ್ ೧೯೦೭ ನೆ ಇಸ್ವಿಯಲ್ಲಿ ನಡೆದ ಒಕ್ಕಲಿಗರ ಒಂದನೆ ಮಹಾಸಭೆಯಲ್ಲಿ ಒಕ್ಕಲಿಗ ಮಂಡಲಿಯಲ್ಲಿ ಒಳ್ಳೆ ತಿಳುವಳಿಕೆಯು ಹರಡುವುದಕ್ಕೆ ಸಹಾಯ ಮಾಡುವ ಒಕ್ಕಲಿಗರ ಪತ್ರಿಕೆ ಮುಂತಾದ ಪ್ರಕಟನೆಗಳನ್ನು ಮುದ್ರಿಸಿ ಪ್ರಕಟಿಸುವುದಕ್ಕೋಸ್ಕರ ಸಂಘದಿಂದ ಒಂದು ಸ್ವಂತ ಮುದ್ರಾಲಯವನ್ನು ಇಟ್ಟಿದ್ದಾಯಿತು ಮೈಸೂರು ಸರ್ಕಾರಿ ಮುದ್ರಾಲಯದ ಸೂಪರಿಂಟೆಂಡೆಂಟರಾದ ಮೆ|| ಸಿ ಎಚ್ ಪಿಟ್ಸ್ ದೊರೆಯವರ ಅನುಭವಯುಕ್ತವಾದ ಶಿಫಾರಸ್ಸಿನ ಮೇರೆ ಮುದ್ರಣ ಯಂತ್ರಗಳೂ, ಮೊಳೆಗಳೂ ಮತ್ತು ಇತರ ಸಾಮಗ್ರಿಗಳೂ ಸಹ ಸುಮಾರು ಹತ್ತು ಸಾವಿರ ರೂಪಾಯಿಗಳವರೆವಿಗೂ ಖರೀದಿಮಾಡಿ ಕೊಳ್ಳಲ್ಪಟ್ಟವು ಮುದ್ರಾಲಯದಲ್ಲಿ ಸನ್ ೧೯೦೮ ನೇ ಇಸ್ವಿ ಜುಲೈ ೧ ನೇ ತಾ ಸ ದಿವಸ ಕೆಲಸವು ಉಪಕ್ರಮಿಸಲ್ಪಟ್ಟಿತು ಅಂದಿನಿಂದ ಒಕ್ಕಲಿಗರ ಪತ್ರಿಕೆಯು ಕ್ರಮವಾಗಿ ಅಚ್ಚುಹಾಕಲ್ಪಟ್ಟು ಪ್ರಕಟಿಸಲ್ಪಡುತ್ತಾ ಬಂದಿರುವುದು ಮತ್ತು ಕೆಲವು ಪುಸ್ತಕಗಳೂ ಮತ್ತು ಚಿಲ್ಲರೆ ಕೆಲಸಗಳೂ ನಡೆದಿರುವುವು ಮೆ|| ಪಿಟ್ಸ್ ಸಾಹೇಬರು ಆಗಾಗ್ಗೆ ಮುದ್ರಾಲಯದಲ್ಲಿ ಮಾಡಿದ ಕೆಲಸವನ್ನು ಪರೀಕ್ಷಿಸುತ್ತಾ ಅದನ್ನು ಉತ್ಕೃಷ್ಟವಾಗಿ ಮಾಡುವ ವಿಚಾರವಾಗಿ ಸಲಹೆಗಳನ್ನು ಕೊಡುತ್ತಿದ್ದರು ಈ ಮುದ್ರಾಲಯದಲ್ಲಿ ಆಗಲೇ ಪಟೇಲರ ಕರ್ತವ್ಯ, ಪಟೇಲರ ಮ್ಯಾನುಯಲ್ ಮುಂತಾದ ಪುಸ್ತಕಗಳು ಮುದ್ರಿಸಲ್ಪಟ್ಟಿರುತ್ತವೆ ಉತ್ತರೋತ್ತರ ಈ ಮುದ್ರಾಲಯವು ಇಂತಹ ಪ್ರಕಟನೆಗಳನ್ನು ಅನೇಕವಾಗಿ ಪ್ರಕಟಿಸಿ, ಇವುಗಳ ಮತ್ತು ದಿನವಹಿ ಹೆಚ್ಚುತ್ತಿರುವ ಒಕ್ಕಲಿಗರ ಪತ್ರಿಕೆಯ ಮೂಲಕ ಜನರಿಗೆ ವಿದ್ಯೆಯನ್ನೂ ತಿಳುವಳಿಕೆಯನ್ನೂ ಉಂಟುಮಾಡಿಕೊಡುವುದಕ್ಕೆ ಸಹಕಾರಿಯಾಗುವುವೆಂದು ನಿರೀಕ್ಷಿಸಬಹುದು ಅಚ್ಚು ಕೆಲಸವನ್ನು ನಮ್ಮ ಮುದ್ರಾಲಯದಲ್ಲಿ ಕೆಲವರು ಹುಡುಗರು ಕಲಿತುಕೊಳ್ಳುತ್ತಿದ್ದಾರೆ ನಮ್ಮ ಸಂಘದ ಪರವಾಗಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದ ಮೇಲೆ ಇವರಂತೆಯೇ ಇನ್ನೂ ಅನೇಕ ಉಮೇದುವಾರರು ಈ ಕೆಲಸವನ್ನು ಕಲಿಯುವುದಕ್ಕೆ ಬರುವರೆಂಬುದರಲ್ಲಿ ಸಂಶಯವಿರುವುದಿಲ್ಲ.

ಒಕ್ಕಲಿಗರ ಪತ್ರಿಕೆಯು — ಸನ್ ೧೯೦೭ ನೆ ಇಸವಿಯಲ್ಲಿ ಪ್ರತ್ಯೇಕವಾದ ಒಂದು ಅಚ್ಚು ಆಫೀಸಿನಿಂದ ಪ್ರಕಟಿಸಲ್ಪಡುತ್ತಿದ್ದ ಒಕ್ಕಲಿಗರ ಪತ್ರಿಕೆಯು ಜುಲೈ ೧ ನೆ ತಾ, ನಿಂದ ಸಂಘದ ಸ್ವಂತ ಮುದ್ರಾಲಯದಿಂದ ಪ್ರಚುರವಾಗಲು ಪ್ರಾರಂಭವಾಯಿತು ಅದರಲ್ಲಿ ಮುಖ್ಯವಾಗಿ ಜನರಿಗೆ ತಿಳುವಳಿಕೆಯನ್ನುಂಟುಮಾಡುವಂತಹ ವಾರ್ತೆಗಳು, ಅಂದರೆ ವ್ಯವಸಾಯ, ಆರೋಗ್ಯ, ವಿದ್ಯಾಭಿವೃದ್ಧಿ, ಮತ ಮತ್ತು ಜನಸಂಬಂಧವಾದ ವಿಷಯಗಳು ತುಂಬಿರುವುವು ಇವುಗಳ ಜೊತೆಗೆ ಸರ್ಕಾರಿ ಆಡಳಿತದ ವಿಚಾರವೂ ಮತ್ತು ವರ್ತಮಾನ ಸಂಗ್ರಹವೂ ಪ್ರಕಟಿಸಲ್ಪಡುವುವು ಇದನ್ನು ಜನರು ವಿಶೇಷವಾಗಿ ಮೆಚ್ಚಿಕೊಳ್ಳುತ್ತಿದ್ದಾರೆ ಮತ್ತು ಅದರ ವ್ಯಾಪನೆಯು ದಿನವಹಿ ಹೆಚ್ಚುತ್ತಿದೆ ಈಗ ಸುಮಾರು ೧,೬೦೦ ಚಂದಾದಾರರಿರುತ್ತಾರೆ

ಮದ್ಯಪಾನ ನಿರೋಧಕವಾದ ಒಂದು ವಿಶೇಷವಾದ ಏರ್ಪಾಡು — ಹಾಸನ ಡಿ|| ನಲ್ಲಿರುವ ತಿಳುವಳಿಕೆಯಿಲ್ಲದ ಒಕ್ಕಲಿಗರಲ್ಲಿ ಮದ್ಯಪಾನವು ತುಂಬಾ ರೂಢಿಯಲ್ಲಿರುವುದು ಬಹಳ ಶೋಚನೀಯವಾಗಿರುವುದು ಒಕ್ಕಲಿಗರ ಪತ್ರಿಕೆಯಲ್ಲಿ ಈ ದುರಭ್ಯಾಸವನ್ನು ನಿಲ್ಲಿಸುವ ವಿಚಾರವಾಗಿ ಬರಯಲ್ಪಟ್ಟ ಅನೇಕ ಲೇಖನಗಳನ್ನು ನೋಡಿಯೂ, ಹಾಸನದ ಕೆಲವರು ಪ್ರಮುಖರು ಹೇಳಿದ ಬುದ್ಧಿವಾದವನ್ನು ಕೇಳಿಯೂ, ಅಲ್ಲಿನ ಜನರು ತಮ್ಮ ತಮ್ಮ ಕಟ್ಟೇಮನೆ ಯಜಮಾನರ ಅಧಿಪತ್ಯದಲ್ಲಿ ದೇವಸ್ಥಾನಗಳಲ್ಲಿ ಸಭೆಗಳನ್ನು ನಡೆಸಿ, ತಾವು ಇನ್ನು ಮುಂದೆ ಮದ್ಯಪಾನವನ್ನು ಮಾಡುವುದಿಲ್ಲವೆಂದು ಕಟ್ಟುಮಾಡಿಕೊಂಡು, ಈ ಕಟ್ಟು ಪಾಡಿನಂತೆ ನಡೆದುಕೊಳ್ಳದವರಿಗೆ ದಂಡವನ್ನು ವಿಧಿಸುವುದಾಗಿ ಗೊತ್ತುಮಾಡಿಕೊಂಡರು ತಮ್ಮ ನ್ಯಾಯಸಭೆಗಳನ್ನು ಪುನರ್ಘಟಿಸಿಕೊಳ್ಳಲು ನಮ್ಮ ಜನರು ಎಂದಿಗೂ ಇಷ್ಟು ಒಳ್ಳೆಯ ಸಂದರ್ಭವೀವ ಕೊಡಿರಲಿಲ್ಲ ಮತ್ತು ಅವರು ನಡೆಸಿದ ಮೀಟಿಂಗುಗಳ ನಡವಳಿಕೆಗಳ ಪತ್ರಿಕೆಗಳು ನಮಗೆ ತಲುಪಿರುವುವು ಸಂಘದ ಪ್ರಯೋಜನವು ಈ ಪ್ರಕಾರವಾಗಿ ಒಕ್ಕಲಿಗಮಂಡಲಿಯ ಜನಸಮುದಾಯದಲ್ಲಿ ನಿಧಾನವಾಗಿ ವ್ಯಾಪಿಸಿ, ಅವರು ತಮ್ಮ ಅಭಿವೃದ್ಧಿಯಲ್ಲಿ ಆಸಕ್ತರಾಗುವಂತೆ ಮಾಡಿರುವುದಕ್ಕೆ ಮದ್ಯಪಾನವನ್ನು ಬಿಟ್ಟುಬಿಡಲು ನಡೆದಿರುವ ಈ ಏರ್ಪಾಡು ಒಂದು ಪ್ರತ್ಯಕ್ಷವಾದ ನಿದರ್ಶನವಾಗಿರುವುದು

ನಮ್ಮ ವಿದ್ಯಾರ್ಥಿನಿಲಯವು — ಬೆಂಗಳೂರಿನಲ್ಲಿ ಓದುವ ಒಕ್ಕಲಿಗರ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಒಂದು ವಿದ್ಯಾರ್ಥಿನಿಲಯವನ್ನು ನಾವು ಇನ್ನೂ ಸ್ಥಾಪಿಸಲು ಅನಾನುಕೂಲವಾಗಿರುವುದು ಬಹಳ ಶೋಚನೀಯವಾದುದಾಗಿದೆ ವಿದ್ಯಾರ್ಥಿಗಳ ವಿಹಾರಕ್ಕೆ ತಕ್ಕ ಮನೆಯು ಇಲ್ಲದುದೂ, ಖರ್ಚುಗಳಿಗೆ ಹಣವು ಸಾಲದೆ ಇರುವುದೂ ಇದಕ್ಕೆ ಪ್ರತಿಬಂಧಕಗಳಾಗಿ ಪರಿಣಮಿಸಿವೆ ಆದರೆ ಕೆಲವು ದಿವಸಗಳ ಹಿಂದೆ ನಮ್ಮ ಸಂಘದ ಪ್ರೆಸಿಡೆಂಟರಾದ ಮೆ|| ಟಿ ಬಯ್ಯಣ್ಣನವರು ಉದಾರಮನಸ್ಸಿನಿಂದ ಈಗ ಅವರು ಸಂಘದ ಮುದ್ರಾಲಯಕ್ಕೋಸ್ಕರ ಬಿಟ್ಟುಕೊಟ್ಟಿರುವ ಮನೆಯ ಪಕ್ಕದಲ್ಲಿರುವ ಅವರ ಸ್ವಗೃಹವನ್ನು ವಿದ್ಯಾರ್ಥಿನಿಲಯಕ್ಕೆ ಬಿಟ್ಟುಕೊಡಲು ಸಿದ್ಧರಾದರು ಈ ಮಹಾಸಭೆಯಲ್ಲಿ ನೆರೆದಿರತಕ್ಕ ಒಕ್ಕಲಿಗ ಮಹಾಜನರೆಲ್ಲರೂ ಯಥೋಚಿತವಾಗಿ ದ್ರವ್ಯಸಹಾಯಮಾಡಿ ಈ ವಿದ್ಯಾರ್ಥಿನಿಲಯವು ಈ ಮಹಾಸಭೆಯು ಮುಗಿದಕೂಡಲೆ ಎಷ್ಟು ಚಿಕ್ಕದಾಗಿಯಾದರೂ ಪ್ರಾರಂಭವಾಗುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇವೆ ಸಂಘದಿಂದ ಸ್ವಂತವಾಗಿ ವಿದ್ಯಾರ್ಥಿನಿಲಯವನ್ನು ಕಟ್ಟುವುದಕ್ಕೋಸ್ಕರ ಸರ್ಕಾರದವರು ಜಮೀನನ್ನು ಕೊಟ್ಟಿರುತ್ತಾರೆ ಮ ರಂಗಪ್ಪನವರೂ, ಮ ಮುನಿಸ್ವಾಮಪ್ಪನವರೂ ಉದಾರಚಿತ್ತದಿಂದ ವಾಗ್ದಾನಮಾಡಿರುವಂತೆ ಆ ಜಮೀನಿನ ಮೇಲೆ ಕಟ್ಟಡವನ್ನು ಶೀಘ್ರವಾಗಿ ಕಟ್ಟಿಸಲು ಉಪಕ್ರಮಿಸುವರೆಂದು ನಿರೀಕ್ಷಿಸುತ್ತೇವೆ

ಬ್ರಿಟಿಷ್ ರೆಸಿಡೆಂಟರವರು ಬರೆದ ಕಾಗದ.

ಬ್ರಿಟಿಷ್ ರೆಸಿಡೆಂಟರವರು ನೀಲಗಿರಿಯಲ್ಲಿದ್ದುಕೊಂಡು ಈ ಸಂಘದ ಹಿತವನ್ನು ಬಯಸಿ ಒಂದು ಕಾಗದವನ್ನು ಬರೆದಿದ್ದರು ಅದರ ಮುಖ್ಯಾಭಿಪ್ರಾಯವೇನೆಂದರೆ —

. ಒಕ್ಕಲಿಗರ ವಿದ್ಯಾರ್ಥಿಗಳಿಗೋಸ್ಕರವಾಗಿಯೇ ಪ್ರತ್ಯೇಕವಾದ ಪಾಠಶಾಲೆಗಳನ್ನು ಏರ್ಪಡಿಸಬೇಕೆಂಬ ಯೋಚನೆಯನ್ನು ಬಿಟ್ಟುಬಿಡಿರಿ ಈಗ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿರುವ ಪಾಠಶಾಲೆಗಳನ್ನು — ಮುಖ್ಯವಾಗಿ ಗ್ರಾಮ ಪಾಠಶಾಲೆಗಳನ್ನು ನಿಮ್ಮ ಜನರು ಉಪಯೋಗಿಸುವಂತೆ ಅವರನ್ನು ಪ್ರೋತ್ಸಾಹಪಡಿಸುವುದನ್ನು ನಿಮ್ಮ ಮುಖ್ಯಕೆಲಸವಾಗಿಟ್ಟುಕೊಳ್ಳಿರಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಮೊದಲನೆ ತರಗತಿಗಳಲ್ಲಿ ಉಚಿತವಾಗಿ ವಿದ್ಯೆಯನ್ನು ಕಲಿಸಿಕೊಡುವ ವರವನ್ನೂ ಮತ್ತು ಉತ್ಕೃಷ್ಟವಾದ ಗ್ರಾಮಪಾಠಶಾಲೆಗಳನ್ನೂ ದಯಪಾಲಿಸಿರುತ್ತಾರೆ ಈ ಪಾಠಶಾಲೆಗಳಲ್ಲಿ ಓದಬೇಕಾದ ಅರ್ಧಪಾಲಿನಷ್ಟು ಹುಡುಗರುಕೂಡ ಇವುಗಳಲ್ಲಿ ಓದುವುದಕ್ಕೆ ಹೋಗುತ್ತಿರುವುದಿಲ್ಲವು ಇದನ್ನು ಆಲೋಚಿಸಿರಿ ಗ್ರಾಮದ ಬ್ರಾಹ್ಮಣ ಹುಡುಗರೆಲ್ಲರೂ ಅಲ್ಲಿನ ಮಠಕ್ಕೆ ಹೋಗುತ್ತಾರೆ ರೈತರ ಮಕ್ಕಳಾದರೋ ಮೂರರಲ್ಲಿ ಒಬ್ಬರೂ ಇಲ್ಲ ಆದುದರಿಂದ ಸದ್ಯದಲ್ಲಿ ಒಕ್ಕಲಿಗರ ವಿದ್ಯಾಭ್ಯಾಸಕ್ಕೆ ಹೊಸ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾದುದು ಅವಶ್ಯಕವಿಲ್ಲ, ಅವರನ್ನು ಈಗ ಇರುವ ಪಾಠಶಾಲೆಗಳಿಗೆ ಹೋಗುವಂತೆ ಮಾಡಿದರೆ ಸಾಕಾಗಿರುವುದು ಈ ಕೆಲಸವು ಮಾಡುವುದಕ್ಕೆ ಸಿದ್ಧವಾಗಿದೆ ಹಣ ಕೂಡಿಹಾಕಬೇಕೆಂದು ಒಂದು ದಿವಸವಾದರೂ ತಾಮಸಮಾಡಬೇಕಾದುದಿಲ್ಲವು ಆದರೆ ಅದನ್ನು ಮಾಡುವುದಕ್ಕೆ ಸನ್ನದ್ಧರಾಗಿರುವ ಮನುಷ್ಯರೂ ಮತ್ತು ಏರ್ಪಾಡೂ ಮಾತ್ರ ಬೇಕಾಗಿರುವುದು

ಇಷ್ಟರಲ್ಲಿ ಕೆಲವರು ಪೋಷಕರು ಇರುತ್ತಾರೆಂದು ತಿಳಿದು ಬರುತ್ತದೆ ಇವರು ನೀಲಗಿರಿ, ಕೊಯಮುತ್ತೂರು, ಬಿಜಾಪುರ, ಧಾರವಾಡ

ಮುಂತಾದ ದೂರಪ್ರದೇಶಗಳಲ್ಲಿ ಬಹಳ ಪ್ರಯೋಜನ ಉಂಟಾಗುವಂತೆ ಉಪನ್ಯಾಸಗಳನ್ನು ಕೊಟ್ಟಿರುತ್ತಾರೆಂದು ಗೊತ್ತಾಗುತ್ತದೆ. ಆದರೆ ನಿಮ್ಮ ಸಾಹಸಗಳನ್ನೆಲ್ಲಾ ಒಂದೇ ಪ್ರದೇಶದಲ್ಲಿ ವಿನಿಯೋಗಿಸುವುದು ಒಳ್ಳೇದು. ನಿಮ್ಮ ಪತ್ರಿಕೆಯನ್ನು ಬೊಂಬಾಯಿ ಮುಂತಾದ ಕಡೆಯ ಆಂಗ್ಲಪತ್ರಿಕೆಗಳಲ್ಲಿ ಪ್ರಚುರಗೊಳ್ಳುವಂತೆ ಖಂಡಿತವಾಗಿ ಮಾಡಿರಿ ಅದಕ್ಕೇನೂ ಅಭ್ಯಂತರವಿಲ್ಲ, ಆದರೆ ನಿಮ್ಮಲ್ಲಿರುವ ಕೆಲವರು ಬೋಧಕರನ್ನು ಸ್ಥಳದಲ್ಲೇ ಇರಿಸಿಕೊಂಡು ಕೆಲಸ ಮಾಡಿಸಿರಿ ಏಕೆಂದರೆ ಮೈಸೂರು ಸಂಸ್ಥಾನದಲ್ಲಿಯೇ ಅವರು ಮಾಡುವುದಕ್ಕೆ ಸಾಕಾದಷ್ಟು ಕೆಲಸವಿರುವುದು. ನೀವು ಈ ದಶಕ್ಕೆ ಕೆಲಸವನ್ನು ಒಂದು ಕ್ರಮಕ್ಕೆ ತಂದಿಟ್ಟುಕೊಳ್ಳಿರಿ. ಪುಷ್ಕಳವಾದ ಪೈರನ್ನು ಪಡೆಯಬೇಕಾದರೆ ಬೀಜಗಳನ್ನು ಸಿಕ್ಕಿದಕಡೆ ಎರಚುವುದನ್ನು ಬಿಟ್ಟು, ಅವುಗಳನ್ನು ಅನುಕೂಲವಾದ ಭೂಮಿಯಲ್ಲಿ ಕ್ರಮವಾಗಿ ಬಿತ್ತಿ, ಹುಟ್ಟಿದ ಎಳೇ ಪೈರುಗಳನ್ನು ಕಾಳು ಬಲಿಯುವವರೆವಿಗೂ ಕ್ರಮವಾಗಿ ಕಾಪಾಡಬೇಕೆಂಬುದು ಪ್ರತಿಯೊಬ್ಬ ಒಕ್ಕಲಿಗನಿಗೂ ತಿಳಿದಿಯುಷ್ಟೆ. ಅದೇಪ್ರಕಾರವಾಗಿ ಒಂದು ಗ್ರಾಮದ ಜನರು ಸಂಘಕ್ಕೆ ಸಹಾಯವನ್ನು ಕೊಡಲು ಸನ್ನದ್ಧರಾಗಿದ್ದಾರೆಂಬುದನ್ನು ಬೋಧಕನು ಕಂಡಕೂಡಲೆ, ಅವರನ್ನು ಸಂಘಕ್ಕೆ ಮೆಂಬರುಗಳನ್ನಾಗಿ ದಾಖಲ್ಮಾಡಿಕೊಂಡು, ತಮ್ಮ ತಮ್ಮ ಮಕ್ಕಳನ್ನು ಮಠಕ್ಕೆ ಕಳುಹಿಸುವಂತೆ ಅದರಿಂದ ವಾಗ್ದಾನವನ್ನು ತೆಗೆದುಕೊಂಡು, ಅವರಲ್ಲಿ ಮುಖಂಡನಾದ ಮನುಷ್ಯನನ್ನು ಮಠದ ಮೇಲ್ವಿಚಾರಣಾ ಕರ್ತರಲ್ಲೊಬ್ಬನಾಗುವಂತೆ ನೇಮಕ ಮಾಡಿಸುವ ವರೆವಿಗೂ ಆ ಗ್ರಾಮವನ್ನು ಬಿಟ್ಟು ಮುಂದಕ್ಕೆ ಪ್ರಯಾಣ ಮಾಡಬಾರದು ಬೋಧಕನು ಈ ಪ್ರಕಾರ ಮಾಡಿದುದೆಲ್ಲವೂ ಊರ್ಜಿತವಾಗುವುದೆಂಬುದನ್ನು ದೃಢಪಡಿಸಿಕೊಂಡು ಮುಂದಕ್ಕೆ ತೆರಳಬೇಕು ಸಂಘಕ್ಕೆ ಮೆಂಬರುಗಳಾಗಿ ಸೇರಿದವರು ತಮ್ಮ ಮಕ್ಕಳನ್ನು ಮಠಗಳಿಗೆ ಕಳುಹಿಸಿಕೊಡುವಂತೆ ಮಾಡಿದ ವಾಗ್ದಾನವನ್ನು ತಪ್ಪದೆ ನಡೆಸುವಂತೆ ಉಪಸಂಘಗಳು ಅವರೊಡನೆ ನಿರಂತರವೂ ಸಂಬಂಧವನ್ನು ಇಟ್ಟುಕೊಂಡಿರಬೇಕೆಂದು ಒಂದು ಹೊಸ ನಿಬಂಧನೆಯನ್ನು ಉಪಸಂಘಗಳ ನಿಬಂಧನೆಗಳಿಗೆ ಸೇರಿಸುವುದು ಯುಕ್ತವಾಗಿದೆ. ತಾಲ್ಲೂಕು ತಾಲ್ಲೂಕಿಗೂ ಈ ಪ್ರಕಾರವಾದ ಒಂದು ಕ್ರಮವನ್ನು ಆಚರಣೆಗೆ ತಂದು ಮೆಂಬರುಗಳು ಮಾಡಬೇಕಾದ ಕಾರ್ಯವನ್ನು ಅವರ ನೆನಪಿಗೆ ತರಲು ಅವರಲ್ಲಿ ಸಂಬಂಧವನ್ನಿಟ್ಟುಕೊಂಡಿದ್ದರೆ ಈಗ ಒಕ್ಕಲಿಗರ ಸಂಘದ ಮೂಲಕ ಒಕ್ಕಲಿಗರಲ್ಲಿ ವಿದ್ಯಾಭ್ಯಾಸವೂ ನಿಜವಾಗಿ ಅಭಿವೃದ್ಧಿಗೆ ಬರುವುದನ್ನು ನಾವು ನಿರೀಕ್ಷಿಸಬಹುದು

.. .. ರಾಷ್ಟ್ರೀಯವಾಗಿ ವಿದ್ಯಾಲಯಗಳನ್ನು ಏರ್ಪಡಿಸುವುದನ್ನು ನೀವು ಸದ್ಯದಲ್ಲಿ ಯೋಚಿಸಬಾರದು ಸರ್ಕಾರದವರು ವ್ಯವಸಾಯ ಕ್ರಮಗಳ ಜೀವನಗೋಸ್ಕರ ಈಗ ಏನು ಅನುಕೂಲಗಳನ್ನು ಕಲ್ಪಿಸಿಕೊಟ್ಟಿರುವರೋ ಅವುಗಳನ್ನು ವಿಶೇಷವಾಗಿ ಉಪಯೋಗಿಸಿಕೊಳ್ಳುವುದು ಒಳ್ಳೇದು ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಮಿ। ತಾತಾಯವರ ರೇಷ್ಮೆ ಕಾರ್ಖಾನೆಯಿಂದ ವ್ಯವಸಾಯಗಾರರು ಪ್ರತ್ಯಕ್ಷವಾದ ಪ್ರಯೋಜನವನ್ನು ಪಡೆಯುವುದಕ್ಕೆ ಸಹಾಯ ಮಾಡಬೇಕೆಂದು ನಿಮ್ಮ ಸಂಘದವರು ಕೇಳಿದ್ದಾರೆಯೆ. ರೇಷ್ಮೆ ವ್ಯವಸಾಯವು ಮೈಸೂರು ಸಂಸ್ಥಾನದ ಕಸಬುಗಳ ಪೈಕಿ ಬಹಳ ಲಾಭಕರವಾದ ಕಸಬಾಗಿರುವುದು ಇದನ್ನು ಬೋಧಿಸುವುದಕ್ಕೆ ಕಾರ್ಖಾನೆಯು ಸಿದ್ಧವಾಗಿದೆ ಆದರೆ ಒಕ್ಕಲಿಗರು ಅದರಿಂದ ಪ್ರಯೋಜನವನ್ನು ಪಡೆಯುವುದಕ್ಕೋಸ್ಕರ ನೀವು ಏನು ಸಹಾಯವನ್ನು ಒದಗಿಸಿಕೊಡುತ್ತಿದ್ದೀರಿ ?

ನಿಮ್ಮ ಬೋಧಕರು ಜನರಿಗೆ ಸರ್ಕಾರದ ಪರಸ್ಪರ ಸಹಾಯಕ ಸಂಘಗಳ ಉದ್ದೇಶಗಳನ್ನೂ ಮತ್ತು ಪ್ರಯೋಜನಗಳನ್ನೂ ವಿವರಿಸಿ ತಿಳುವಳಿಕೆಯನ್ನು ಕೊಡುವುದು ಬಹಳ ಒಳ್ಳೇದು ವ್ಯವಸಾಯಗಾರರು ಧನಿಕರಾಗಲು ಬಹು ಮುಖ್ಯವಾಗಿ ಬೇಕಾಗಿರುವ ಬಂಡವಾಳವನ್ನು ಪರಸ್ಪರ ಸಹಾಯದಿಂದ ಉಂಟುಮಾಡುವುದಕ್ಕೆ ಈ ಸಂಘಗಳಿಂದ ಲಭಿಸುವ ಅನುಕೂಲಗಳನ್ನು ಪ್ರತಿಯೊಬ್ಬ ಒಕ್ಕಲಿಗನೂ ಪಡೆಯುವಂತೆ ಪ್ರೋತ್ಸಾಹಪಡಿಸಬೇಕು. ಸಂಘದವರು ನೆರವೇರಿಸಬೇಕೆಂದು ಸಂಕಲ್ಪ ಮಾಡಿಕೊಂಡಿರುವ ಉದ್ದೇಶಗಳಲ್ಲಿ ಪರಸ್ಪರ ಸಹಾಯಕ ಸಂಘಗಳನ್ನು ಏರ್ಪಡಿಸುವಂತೆ ಪ್ರೋತ್ಸಾಹಕೊಡುವುದನ್ನು ಒಂದು ಉದ್ದೇಶವಾಗಿಟ್ಟುಕೊಳ್ಳುವುದು ಯುಕ್ತವಾಗಿರುವುದೆಂದು ನನ್ನ ಅಭಿಪ್ರಾಯವಾಗಿರುತ್ತದೆ

ಒಕ್ಕಲಿಗರ ಪತ್ರಿಕೆಯ ಬೋಧನೆಯ ಮೂಲಕ ನಾಗರ ಡಿಸ್ಟ್ರಿಕ್ಟಿನಲ್ಲಿ ಕೆಲವು ಸ್ಥಳಗಳಲ್ಲಿ ಜನರು ಏಕೀಭವಿಸಿ ಮದ್ಯಪಾನವನ್ನು ಬಿಟ್ಟುಬಿಡಲು ಸಂಕಲ್ಪಮಾಡಿಕೊಂಡು ಇದಕ್ಕೆ ತಪ್ಪಿದವರಿಗೆ ದಂಡವನ್ನು ವಿಧಿಸುವುದಾಗಿ ಕಟ್ಟುಮಾಡಿಕೊಂಡಿರುವ ಸಮಾಚಾರವು ನನಗೆ ಬಹು ಸಂತೋಷವನ್ನುಂಟುಮಾಡಿರುತ್ತದೆ. ಮದ್ಯಪಾನ ನಿರೋಧಕ ಏರ್ಪಾಡನ್ನು ಸಾರ್ಥಕಪಡಿಸುವುದಕ್ಕೆ ಇದೇ ಸರಿಯಾದ ಮಾರ್ಗವು ಮದ್ಯಪಾನವು ಹರಡದಂತೆ ಮಾಡುವುದು ಸರ್ಕಾರದವರ ಅಭಿಮತವಾದರೂ ಅವರು ಮಾಡತಕ್ಕ ಏರ್ಪಾಡೆಲ್ಲವೂ ಪರೋಕ್ಷವಾದುದಾಗಿರುವುದು ಜನರ ನಡತೆಗಳಲ್ಲಿ ನಿಶ್ಚಿತವಾದ ಬದಲಾವಣೆಗಳುಂಟಾಗಬೇಕಾದರೆ ಆ ನಡತೆಗಳ ವಿಷಯವಾಗಿ ಆ ಜನರ ಅಭಿಪ್ರಾಯವೇ ಬದಲಾಗುವುದು ಅವಶ್ಯಕ ಗ್ರಾಮಾಧಿಕಾರಿಗಳ ಮತ್ತು ಕಟ್ಟೆಮನೆ ಯಜಮಾನರುಗಳ ಅಧಿಕಾರವನ್ನು ಬಲಿಷ್ಠಪಡಿಸಿ, ತನ್ಮೂಲಕ ವ್ಯವಸಾಯಗಾರರಲ್ಲಿ ನೆಲೆಗೊಂಡಿರುವ ಕುಮಾರ್ಗತನವನ್ನು ತಪ್ಪಿಸಲು ಪ್ರಯತ್ನಪಡಿರಿ ಈ ಭಾಗದಲ್ಲಿ ಕ್ರಮವಾದ ಏರ್ಪಾಡುಗಳನ್ನು ನಡೆಸಿರುವುದನ್ನು ಮುಂದಿನ ರಿಪೋರ್ಟುಗಳಲ್ಲಿ ನಮೂದಿಸುತ್ತಾ ಬರುತ್ತೀರೆಂದು ನಂಬಿದ್ದೇನೆ

ಒಕ್ಕಲಿಗರ ಮಂಡಲಿಯು ಪ್ರಜೆಗಳನ್ನು ನೀತಿಪರರನ್ನಾಗಿಯೂ, ವಿದ್ಯಾವಂತರನ್ನಾಗಿಯೂ ಮತ್ತು ಸಮೃದ್ಧಿಯುಳ್ಳವರನ್ನಾಗಿಯೂ ಮಾಡಿ, ಅವರನ್ನು ಏಳಿಗೆಗೆ ತರಬೇಕೆಂಬುದೇ ನಿಮ್ಮ ಸಂಘದ ಮುಖ್ಯವಾದ ಉದ್ದೇಶವಾಗಿರುವುದು ಈ ಉದ್ದೇಶಕ್ಕಿಂತಲೂ ಘನವಾದ ಮತ್ತು ಜನವಾತ್ಸಲ್ಯವುಳ್ಳ ಉದ್ದೇಶವನ್ನು ಯಾವ ಸಂಘವೂ ಮಾಡಿಕೊಳ್ಳಲಾರದು ಆದುದರಿಂದ ಮೈಸೂರು ಸಂಸ್ಥಾನದ ಕ್ಷೇಮಾಭ್ಯುದಯವನ್ನು ಬಯಸುವ ಪ್ರತಿಯೊಬ್ಬ ನಿಜವಾದ ಹಿತಚಿಂತಕನಂತೆ ನಾನು ನಿಮ್ಮ ಪ್ರಯತ್ನಗಳಿಗೆ ಭಗವದನುಗ್ರಹದಿಂದ ಜಯವು ಉಂಟಾಗಲೆಂದು ಪ್ರಾರ್ಥಿಸುತ್ತೇನೆ

ಮಿ| ವಿ. ಪಿ. ಮಾಧವರಾಯರ ವಾಕ್ಯಗಳು

ತರುವಾಯ ಮಿ|| ಕೆ. ಎಚ್ ರಾಮಯ್ಯನವರು ಮಾಜಿ ದಿವಾನ್ ಮಿ|| ವಿ ಪಿ ಮಾಧವರಾಯರಿಗೆ ಸಂಘದ ಪರವಾಗಿ ಒಂದು ಅಡ್ರೆಸ್ಸನ್ನು ಓದಿ ಹೇಳಿದರು ಆದಿಯಿಂದಲೂ ಮಿ|| ಮಾಧವರಾಯರು ಈ ಸಂಘಕ್ಕೆ ಮಾಡುತ್ತಾ ಬಂದಿರುವ ಸಹಾಯ ಪ್ರೋತ್ಸಾಹಾದಿಗಳನ್ನು ಈ ಅಡ್ರೆಸ್ಸಿನಲ್ಲಿ ಕಾಣಿಸಿರುತ್ತಾರೆ ಚೌಕಟ್ಟಿನಲ್ಲಿ ಹಾಕಿ ತಸ್ವೀರಾಗಿ ಮಾಡಿದ್ದ ಅಡ್ರೆಸನ್ನು ಮಿ|| ಟಿ ಬೈಯಣ್ಣನವರು ಅವರಿಗೆ ಒಪ್ಪಿಸಿದರು ಮಿ ಬಿ. ಎಸ್. ಮಾದಪ್ಪನವರು ಮಿ|| ಮಾಧವರಾಯರಿಗೆ ಒಂದು ನವ್ಯವಾದ ಬೆಳ್ಳಿ ಪೆಟ್ಟಿಗೆಯನ್ನು ಒಪ್ಪಿಸಿದರು. ಅದರ ಮೇಲೆ "ಒಕ್ಕಲಿಗರ ಸಂಘದ ಅಭಿವೃದ್ಧಿಯಲ್ಲಿ ಪೂರ್ಣ ವಿಶ್ವಾಸವನ್ನಿಟ್ಟು ಅದಕ್ಕೆ ಸಹಾಯಮಾಡಿದ್ದರ ಜ್ಞಾಪಕಾರ್ಥವಾಗಿ ಈ ಪೆಟ್ಟಿಗೆಯು ಒಕ್ಕಲಿಗರ ಮೂರನೆ ಮಹಾಸಭೆಯಲ್ಲಿ ಮಿ|| ವಿ ಪಿ ಮಾಧವರಾಯರಿಗೆ ಒಪ್ಪಿಸಲ್ಪಟ್ಟಿತು" ಎಂಬ ಅಕ್ಷರಗಳನ್ನು ಕೆತ್ತಿರುತ್ತದೆ. ಮಿ|| ಮಾಧವರಾಯರು ಅದನ್ನು ಸ್ವೀಕರಿಸಿ, ಪ್ರತ್ಯುತ್ತರವಾಗಿ ಆ ಸಂಘದವರನ್ನು ಕುರಿತು ಹೇಳಿದ ಅಭಿಪ್ರಾಯವೇನೆಂದರೆ.—

. . .. ಶ್ರೀಮನ್ಮಹಾರಾಜರವರು ವ್ಯವಸಾಯಗಾರರ ಮತ್ತು ಕಸಬುದಾರರ ಕ್ಷೇಮಚಿಂತನೆಯಲ್ಲಿ ಎಷ್ಟು ಪೂರ್ಣ ಆಸಕ್ತಿಯುಳ್ಳವರಾಗಿದ್ದಾರೆಂಬುದೂ ಮತ್ತು ಸಂಸ್ಥಾನದ ಆಡಳಿತ ಕ್ರಮದ ಯಾವ ದೊಡ್ಡ ವಿಷಯವನ್ನಾದರೂ ಆ ಜನರಿಗೆ ಅದು ಯಾವ ರೀತಿ ಪ್ರಯೋಜನಕಾರಿಯಾಗುವುದೆಂಬುದಾಗಿ ಅವರು ನೋಡುವುದೂ ಸಹ ಆ ಮಹಾಸ್ವಾಮಿಯವರ ಜವಾಬ್ದಾರಿ ಅಧಿಕಾರಿಗಳಾದ ನನಗೆ ಪ್ರತ್ಯಕ್ಷವಾಗಿರುವುದನ್ನು ನಾನು ಬಹಿರಂಗವಾಗಿ ಹೇಳದೇ ಇರಲಾರೆನು .... ನೀವು ಮುಂದೆ ಮಾಡಬೇಕಾದುದು ಬಹಳವಾಗಿರುವುದು; ಮತ್ತು ನಿಮ್ಮ ಎದುರಿಗೆ ಅನೇಕ ಅಭ್ಯಂತರಗಳೂ ಇರುವವು. ಇವುಗಳೆಲ್ಲವನ್ನೂ ನೀವು ಪೌರುಷದಿಂದ ನಿರ್ವಹಿಸುವಿರೆಂದು ನಂಬಿದ್ದೇನೆ. ಐಕಮತ್ಯವು ಒಡೆದುಹೋಗದಂತೆ ಎಚ್ಚರವಾಗಿರಿ. ನಮ್ಮಲ್ಲಿ ಐಕಮತ್ಯವಿಲ್ಲದೇ ಇರುವುದು ಸಾಧಾರಣವಾಗಿದೆ ಆದುದರಿಂದ ನಿಮ್ಮಲ್ಲಿಯೂ ಇದು ಸ್ವಲ್ಪಮಟ್ಟಿಗೆ ಇರಬಹುದೆಂದು ನನಗೆ ಸಂಶಯವಾಗಿದೆ ಒಬ್ಬರ ಮೇಲೊಬ್ಬರು ಅಸೂಯೆ ಪಡದಂತೆ ಜಾಗರೂಕರಾಗಿರಿ ಸಂಘವು ಉದ್ಧಾರವಾಗುವುದನ್ನೇ ಮುಂದಾಗಿಟ್ಟುಕೊಂಡು ನಿಮ್ಮ ನಿಮ್ಮ ಸ್ವಾರ್ಥಗಳನ್ನು ಮುಚ್ಚಿಕೊಳ್ಳಿರಿ ನಿಮ್ಮಲ್ಲಿ ಯಾರಾದರೂ ಒಬ್ಬರೊಡನೆ ಮತ್ತೊಬ್ಬರು ಕೆಲಸಮಾಡಲು ಇಷ್ಟಪಡದಿದ್ದರೆ ಸರ್ವಸಾಮಾನ್ಯವಾದ ಉದ್ದೇಶಕ್ಕೋಸ್ಕರ ಕೆಲಸ ಮಾಡಬೇಕಾಗಿರುತ್ತದೆಂದು ಪ್ರೋತ್ಸಾಹವನ್ನು ವಹಿಸಿಕೊಳ್ಳಿರಿ ಸಂಘವು ಒಂದುಸಾರಿ ಭದ್ರವಾದ ಅಸ್ತಿಭಾರದ ಮೇಲೆ ನಿಂತುಬಿಟ್ಟರೆ ಮುಂದಕ್ಕೆ ಅದು ತಾನಾಗಿಯೇ ತನಗೆ ಪ್ರಯೋಜನಕಾರಿಯಾದ ಮಾರ್ಗದಲ್ಲಿ ಪ್ರವರ್ತಿಸುತ್ತಿರುವುದು ಅಲ್ಲಿವರೆವಿಗೂ ಆತ್ಮಪ್ರತಿಷ್ಠೆಯನ್ನು ಮುಂದಕ್ಕೆ ಬಿಡದೆ ಕಾಪಾಡಿಕೊಂಡಿರಬೇಕು ಕೋಪ, ಸ್ವಾರ್ಥತೆ, ಸಂದೇಹ, ಅಸೂಯೆ ಮುಂತಾದ ಅನೇಕ ಭೇದ ಬುದ್ಧಿಗಳನ್ನು ನಿಗ್ರಹಿಸಿ ಈ ಸಂಘಕ್ಕೆ ಪ್ರಾಣಪ್ರಾಯವಾಗಿರುವ ಜನಾನುರಾಗವನ್ನು ವೃದ್ಧಿಮಾಡಿಕೊಳ್ಳಿರಿ .. ಧಾರವಾಡದ ಮತ್ತು ಮದರಾಸು ಡಿಸ್ಟ್ರಿಕ್ಟುಗಳಿಂದ ಜನರು ನಿಮ್ಮ ಮಹಾಸಭೆಗೆ ಬಂದು ಕಾರ್ಯಭಾರವನ್ನು ವಹಿಸಿಕೊಂಡಿರುವುದು ನನಗೆ ತುಂಬಾ ಸಂತೋಷಕರವಾಗಿದೆ ರಕ್ತಸಂಬಂಧವು ಬಹಳ ಭದ್ರವಾದುದು ಅದು ದೇಶಭೇದಗಳನ್ನು ಎಣಿಸುವುದಿಲ್ಲವು ನಿಮ್ಮಲ್ಲಿ ಈಗ ಉಂಟಾಗಿರುವ ಒಗ್ಗಟ್ಟು ದಿನೇದಿನೇ ಹೆಚ್ಚಾಗುತ್ತಾ ಬರಬೇಕೆಂದು ಅಪೇಕ್ಷಿಸುತ್ತೇನೆ . . ...

ಪ್ರಜಾಸಾಮಾನ್ಯದ ಸೇವೆಯನ್ನು ಮಾಡುವುದು ಅತ್ಯಂತ ಪವಿತ್ರವಾದ ಕಾರ್ಯವಾಗಿರುವುದು. ನಿಮಗಿಂತಲೂ ಹೀನಸ್ಥಿತಿಯಲ್ಲಿರುವವರ ಗತಿಯನ್ನು ಯೋಚಿಸಿ ಅವರು ನಿಮ್ಮ ಸ್ಥಾನಕ್ಕೆ ಏರುವಂತೆ ಅವರಿಗೆ ಸಹಾಯಮಾಡುವುದು ನಿಜವಾದ ಪ್ರಜಾನುಕೂಲಿಗಳು ಮಾಡತಕ್ಕ ಕೆಲಸವಾಗಿರುವುದು ಆದುದರಿಂದ ನಾನು ನಿಮಗೆ ಹೇಳುವುದೇನೆಂದರೆ —ನೀವು ಎಷ್ಟು ಬುದ್ಧಿವಂತರಾದರೂ, ಎಷ್ಟು ಮಂದಿ ಬಿ ಎ ಪರೀಕ್ಷೆಯನ್ನು ಪಾಸುಮಾಡಿದವರನ್ನು ಪಡೆದರೂ ನೀವು ನಿಮ್ಮ ಕಾರ್ಯಗಳಲ್ಲಿಯೂ ಮತ್ತು ನೀವು ಅವಲಂಬಿಸುವ ಮಾರ್ಗಗಳ ಪರ್ಯಾಲೋಚನೆಯಲ್ಲಿಯೂ ನಿಮಗಿಂತಲೂ ಹೀನಸ್ಥಿತಿಯಲ್ಲಿರುವವರಲ್ಲಿ ಪ್ರೇಮವಿಲ್ಲದವರೂ, ಅವರ ಅಭಿಲಾಷೆ ಮತ್ತು ಕುತೂಹಲಗಳಲ್ಲಿ ಅನುರಾಗವಿಲ್ಲದವರೂ ಆದರೆ ನಿಮ್ಮ ಬುದ್ಧಿವಂತಿಕೆಯೂ ನಿಮ್ಮ ವಿದ್ಯೆಯೂ ನಿಸ್ಸಾರವಾಗುವುದು ; ಮತ್ತು ಇಂಡಿಯಾ ದೇಶೀಯರನ್ನು ಒಂದು ಜನಾಂಗದವರನ್ನಾಗಿ ಮಾಡುವ ಸಂಭವವು ಹಿಮ್ಮೆಟ್ಟುವುದು ಆದುದರಿಂದ ನೀವು ಮತ್ತು ನಿಮ್ಮಂತೆ ಪ್ರಜಾಭಿವೃದ್ಧಿಗೋಸ್ಕರ ಸಂಘಗಳನ್ನು ಮಾಡಿಕೊಂಡಿರುವವರೂ ಸಹ ಈ ಕಡೆಗೆ ಬೀಳದಂತೆ ನೋಡಿಕೊಳ್ಳಬೇಕು. ಅದು ಅವರಿಗೂ ದೇಶಕ್ಕೂ ಅಪಾಯಕರವಾಗುವುದು ಈ ವಿಜ್ಞಾಪನೆಯ ಮೂಲಕ ಈ ಭಾಷಣವನ್ನು ಮುಗಿಸಬಯಸುತ್ತೇನೆ ನಿಮಗೋಸ್ಕರ ಕೆಲಸಮಾಡಿರಿ, ಇದು ಒಳ್ಳೆಯದು. ಮತ್ತು ನಿಮಗಿಂತಲೂ ಅಶಕ್ತರಾಗಿಯೂ ಅದೃಷ್ಟಹೀನರಾಗಿಯೂ ಇರುವವರಿಗೋಸ್ಕರವೂ ಕೆಲಸ ಮಾಡಬೇಕು. ಅದು ನಿಮ್ಮ ಸ್ವಂತ ಕರ್ತವ್ಯಕ್ಕಿಂತಲೂ ಉತ್ಕೃಷ್ಟವಾದ ಮತ್ತು ಘನತರವಾದ ಮಾರ್ಗವಾಗಿರುವುದು. ಮತ್ತು ಪ್ರಜಾಕ್ಷೇಮಕ್ಕೋಸ್ಕರ ಸ್ವಾರ್ಥತೆಯನ್ನು ಬಿಟ್ಟು ಕೆಲಸ ಮಾಡಿದುದರಿಂದ ಉಂಟಾಗುವ ಸಂತೋಷವು ಅದರಿಂದ ಲಭಿಸುವುದು.

ಎರಡನೇ ದಿನದ ನಡವಳಿಕೆಗಳು.

ಮಾರುದಿನ ಮಧ್ಯಾಹ್ನ ಮಹಾಸಭೆಯು ಮತ್ತೆ ಸೇರಿತು ಮಾಜಿ ದಿವಾನ್‌ರವರಾದ ಮಿ ವಿ ಪಿ ಮಾಧವರಾಯರೂ, ಸಂಸ್ಥಾನದ ಮೊದಲನೇ ಕೌನ್ಸಿಲರವರಾದ ಮಿ| ಕೆ ಪಿ ಪುಟ್ಟಣ್ಣಶೆಟ್ಟರವರೂ ಮಹಾಸಭೆಗೆ ದಯಮಾಡಿದ್ದರು ಒಕ್ಕಲಿಗರ ಪ್ರತಿನಿಧಿಗಳು ಸುಮಾರು ೫೦೦ ಮಂದಿಯವರಿಗೂ ಸಭೆಯಲ್ಲಿ ನೆರವಿದ್ದರು ಮಿ ರಂಗೈಯಗೌಡರು ಅಗ್ರಾಸನವನ್ನು ವಹಿಸಿ, ತಮ್ಮ ಭಾಷಣವನ್ನು ಸೆಕ್ರೆಟರಿಯವರಾದ ಮಿ|| ಕೆ ಎಚ್ ರಾಮಯ್ಯನವರಿಂದ ಓದಿಸಿದರು

ಪ್ರೆಸಿಡೆಂಟರ ಉಪನ್ಯಾಸ ಸಾರ.

ಮಹಾಸಭೆಯ ಪ್ರೆಸಿಡೆಂಟರಾದ ಮಿ। ರಂಗೈಯಗೌಡರು ತಮ್ಮ ಉಪನ್ಯಾಸದಲ್ಲಿ—ಶ್ರೀಮನ್ ಮಹಾರಾಜರವರಲ್ಲಿ ರಾಜಭಕ್ತಿ, ಸಂಘದ ಪ್ರಯೋಜನಗಳು, ಒಕ್ಕಲಿಗರ ಸಂಘದ ಉಪಯೋಗ, ವಿದ್ಯೆಯ ಆವಶ್ಯಕತೆ ದಾನಧರ್ಮಪರೋಪಕಾರ, ಒಕ್ಕಲಿಗರ ಸಂಘಕ್ಕೆ ಸೇರಿ ಮಾಡಬೇಕಾದ ಸಹಾಯ, ಈ ಸಂಘದಿಂದ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಕಳುಹಿಸುವ ವಿಚಾರ, ವ್ಯವಸಾಯ ವಿದ್ಯಾಶಾಲೆಯನ್ನೂ ವೇತನಗಳನ್ನೂ ಸ್ಥಾಪಿಸಬೇಕೆಂಬ ವಿಷಯ, ಈ ಮೊದಲಾದ ಸಂಗತಿಗಳನ್ನು ಕುರಿತು ಪ್ರಸ್ತಾಪಮಾಡಿ, ಕಡೆಯಲ್ಲಿ ತಿಳಿಸಿದ್ದೇನೆಂದರೆ —

ರಾಜ್ಯದ ಸಮೃದ್ಧಿಸ್ಥಿತಿಗೆ ಭೂವ್ಯವಸಾಯಮಾಡತಕ್ಕ ಜನಗಳೇ ಮೂಲಾಧಾರರಾಗಿರುತ್ತಾರೆ. ಈ ವ್ಯವಸಾಯಗಾರರು ಈ ಭರತಖಂಡದಲ್ಲಿ ಎಲ್ಲೆಲ್ಲಿಯೂ ಒಂದೇ ಸ್ಥಿತಿಯಲ್ಲಿದ್ದಾರೆ. ಒಂದು ಕಡೆ ಇವರ ಅಭಿವೃದ್ಧಿಗೋಸ್ಕರ ಏರ್ಪಾಡುಗಳು ನಡೆದರೆ ಅವು ಏಸು ದೂರದಲ್ಲಿರುವವರಿಗೂ ಅನ್ವಯಿಸುವವು ಮೈಸೂರು ಸಂಸ್ಥಾನದಲ್ಲಿ ಒಕ್ಕಲಿಗರ ಸಂಘವು ಏರ್ಪಾಡಾಗಿರುವುದು ಕೊಯಮುತ್ತೂರು, ನೀಲಗಿರಿ, ಹೈದರಾಬಾದು, ಧಾರವಾಡ, ಬಿಜಾಪುರ, ಬೆಳಗಾವ ಮುಂತಾದ ಪ್ರದೇಶಗಳಲ್ಲಿರುವ ವ್ಯವಸಾಯಗಾರರೆಲ್ಲರನ್ನೂ ಒಗ್ಗಟ್ಟು ಮಾಡಿರುತ್ತದೆ. ಇದು ಒಂದು ಅಪೂರ್ವವಾದ ಮತ್ತು ಅಪೇಕ್ಷಣೀಯವಾದ ಸಂಭವವಲ್ಲವೇ? ಇದರಿಂದ ದೇಶಭೇದಗಳಿಲ್ಲದೆ ಒಂದೇ ಸ್ಥಿತಿಯಲ್ಲಿರುವ ನಾವೆಲ್ಲರೂ ಏಕೀಭವಿಸಿ ಪರಸ್ಪರ ಭ್ರಾತೃಭಾವವನ್ನು ಪ್ರದರ್ಶಿಸುವುದಕ್ಕೆ ಸಹಾಯವಾಯಿತು ಈ ಮಹಾಸಭೆಯು ಈ ಸಂಘದವರಿಂದ ನಡೆದುದಕ್ಕೋಸ್ಕರ ಒಕ್ಕಲಿಗರೆಲ್ಲರೂ ಅಣ್ಣತಮ್ಮಂದಿರಂತೆ ವರ್ತಿಸುತ್ತಾ, ಎಲ್ಲರೂ ತಮ್ಮ ಏಳಿಗೆಯಲ್ಲಿ ಆಸಕ್ತರಾಗಿ ಒಗ್ಗಟ್ಟಾಗುವುದಕ್ಕೆ ಕಾರಣವಾಗಿರುವುದು. ಇದು ಒಕ್ಕಲಿಗರ ಸಂಘದಿಂದ ಉಂಟಾದ ಅಮೂಲ್ಯವಾದ ಪ್ರಯೋಜನವೆಂದು ಹೇಳುತ್ತೇನೆ. ಇಂತಹ ಸಂಘದ ಅಭಿವೃದ್ಧಿಯು ಪ್ರತಿಯೊಬ್ಬ ಒಕ್ಕಲಿಗನ ಮುಖ್ಯ ಚಿಂತನೆಯಾಗಿರಬೇಕು. ಆದುದರಿಂದ ಈ ಸಂಘವನ್ನು ಭಗವಂತನು ಶಾಶ್ವತವಾದ ಅಭಿವೃದ್ಧಿಗೆ ತಂದು ಕಾಪಾಡಲೆಂದು ಶ್ರದ್ಧಾಭಕ್ತಿಯಿಂದ ಪ್ರಾರ್ಥಿಸುತ್ತೇನೆ

ಇದಾದ ಮೇಲೆ ಮಿ|| ರಂಗೈಯಗೌಡರವರು ಸಂಘದ ಮೂಲಧನಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಬಹು ಉದಾರಭಾವದಿಂದ ಅಪ್ಪಣೆ ಕೊಡಿಸಿದರು ಮೊದಲನೆ ಮಹಾಸಭೆಯ ಅಧ್ಯಕ್ಷರಾಗಿದ್ದ ಮಿ|| ಬಿ. ಎಸ್. ಮಾದಪ್ಪನವರು ಎದ್ದುನಿಂತು. ತಾವು ಮೊದಲೇ ವಾಗ್ದಾನಮಾಡಿದ್ದಂತೆ ಈಗ ಸರ್ಕಾರದಿಂದ ಕೊಡಲ್ಪಟ್ಟಿರುವ ಜಮೀನಿನ ಮೇಲೆ ಸಂಘದ ಕಟ್ಟಡಗಳನ್ನು ೩೦ ಸಾವಿರ ರೂಪಾಯಿಗಳ ಖರ್ಚಿನಿಂದ ಕಟ್ಟಿಸಲು ಶೀಘ್ರದಲ್ಲಿಯೇ ಪ್ರಾರಂಭಿಸುವುದಾಗಿ ಸಭಿಕರಿಗೆ ತಿಳಿಯಪಡಿಸಿದರು ಸಂಘದ ಎಗ್ಜಿಕ್ಯುಟಿವ್ ಕೌನ್ಸಿಲ್ ಪ್ರೆಸಿಡೆಂಟರಾದ ಮಿ। ಟಿ. ಬೈಯಣ್ಣನವರು ವಿದ್ಯಾರ್ಥಿನಿಲಯವನ್ನು ಕೂಡಲೇ ಸ್ಥಾಪಿಸಬೇಕಾಗಿರುವುದರಿಂದ ಸಂಘದ ಖಾಯಂ ಕಟ್ಟಡಗಳು ತಯಾರಾಗುವವರೆಗೂ ಅರಳೇಪೇಟೆಯಲ್ಲಿರುವ ತಮ್ಮ ಕಟ್ಟಡಗಳನ್ನು ವಿದ್ಯಾರ್ಥಿನಿಲಯಕ್ಕಾಗಿ ಪ್ರತಿಫಲವಿಲ್ಲದೆ ಬಿಟ್ಟುಕೊಡುವುದಾಗಿ ಹೇಳಿದರು

ತುರ್ಕಿ ರಾಜ್ಯದ ಸ್ಥಿತಿಯು.

ತಂತೀವರ್ತಮಾನಗಳ ಸಾರವು.

ತುರ್ಕಿ ರಾಜ್ಯದಲ್ಲಿ ಸುಲ್ತಾನರಾಗಿರುವ ಅಬ್ದುಲ್ ಹಮೀದ್ ಎಂಬುವರು ಕೆಲವು ತಿಂಗಳ ಕೆಳಗೆ ಪ್ರಜೆಗಳ ಕೋರಿಕೆಯ ಪ್ರಕಾರ ಪಾರ್ಲಿಮೆಂಟನ್ನು ಸ್ಥಾಪಿಸಿ, ಪ್ರಜಾ ಪ್ರತಿನಿಧಿಗಳ ಅಭಿಪ್ರಾಯಾನುಸಾರವಾಗಿ ರಾಜ್ಯಭಾರವನ್ನು ನಡೆಸುವುದಾಗಿ ಒಪ್ಪಿಕೊಂಡರು. ಪಾರ್ಲಿಮೆಂಟು ಏರ್ಪಾಡಾಯಿತು ಆದರೆ ಕೆಲವು ಕಾಲದೊಳಗಾಗಿ ರಾಜಪಕ್ಷದವರಿಗೂ ಪ್ರಜಾಪಕ್ಷದವರಿಗೂ ವಿರೋಧಗಳುಂಟಾದವು. ಪ್ರಜಾಪಕ್ಷದವರು ಒಬ್ಬ ಮಂತ್ರಿಯನ್ನು ಕೊಂದುಹಾಕಿ, ಕೆಲವರನ್ನು ಹಿಡಿದಿಟ್ಟರು ಹೀಗೆಯೇ ಜಗಳಕದನಗಳು ಹೆಚ್ಚಿದವು. ಹೊರಗಣ ಪ್ರಾಂತ್ಯಗಳಿಂದ ಪ್ರಜಾಪಕ್ಷದವರ ಸಹಾಯಕ್ಕಾಗಿ ರಾಜಧಾನಿಗೆ ಸೈನ್ಯಗಳನ್ನು ಕಳುಹಿಸಿಕೊಟ್ಟರು —ಅತ್ತಲಾಗಿ ಏಷ್ಯಾಮೈನರೆಂಬ ಅಧಿಪತ್ಯದಲ್ಲಿ ಮುಸಲ್ಮಾನರಿಗೂ ಕ್ರೈಸ್ತರಿಗೂ ಇದ್ದ ವೈಷಮ್ಯಗಳು ಹೆಚ್ಚಿ, ಮುಸಲ್ಮಾನರು ಸುಲ್ತಾನರನ್ನು ಮೆಚ್ಚಿಸುವುದಕ್ಕಾಗಿ ಕ್ರೈಸ್ತ ಪ್ರಜೆಗಳನ್ನು ಬಹಳವಾಗಿ ಕೊಂದುಬಿಟ್ಟಿರುವಂತೆ ವರ್ತಮಾನ ಬಂದಿದೆ. ರಾಜಧಾನಿಯಲ್ಲೂ, ಹೊರಪ್ರದೇಶಗಳಲ್ಲೂ ನಡೆದಿರುವ ಕಾರುಬಾರುಗಳನ್ನು ಮುಂದೆ ಹೇಳುವ ತಂತೀವರ್ತಮಾನಗಳು ವಿಶದಪಡಿಸುತ್ತವೆ.

ಸಿರಿಯಾದಲ್ಲಿರುವ ಪಟ್ಟಣ ಗ್ರಾಮಗಳೊಳಗೆ ಸುಮಾರು ೧೦,೦೦೦ ಅರ್ಮೇನಿಯದವರನ್ನು ಕೊಂದಿರುವಂತೆ ವರ್ತಮಾನ ಬಂದಿದೆ ಮೃತಪಟ್ಟವರು ೧೫,೦೦೦ ಪ್ರಜೆಗಳು ಎಂದು ಇನ್ನೊಂದು ವರ್ತಮಾನ ಹೇಳುವುದು ತುರ್ಕಿಯ ಅಧಿಪತಿಗಳೂ ಗಣ್ಯರಾದ ದೊಡ್ಡ ಮನುಷ್ಯರೂ ಸ್ಯಾನ್‌ಸ್ಟೆಫನೋದಲ್ಲಿ ಸಭೆಸೇರಿ ಮಸಲತ್ತುಮಾಡುತ್ತಿದ್ದಾರೆ. ಶೆವ್ಕೆಟ್ ಪಾಷಾಯವರೂ ಅಲಿರಜಾಯವರೂ ಸೈನ್ಯವನ್ನು ತಂದು ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದ ಸುತ್ತಲೂ ಮುತ್ತಿಗೆ ಹಾಕಿದಾರೆ ತಾ. ೨೪ —ಪ್ರಜಾಪಕ್ಷದ ಮೆಂಬರುಗಳು ರಿಷದ್ ಎಫೆಂಡಿಯವರನ್ನು ಸುಲ್ತಾನರನ್ನಾಗಿ ನೇಮಕಮಾಡಬೇಕೆಂದು ಅವರ ಕೂಡ ಮಾತನಾಡಿ ಗೊತ್ತುಮಾಡಿಕೊಂಡಿದ್ದಾರೆ ಪೇರಾ ಎಂಬ ಭಾಗದಲ್ಲಿ ಸಲೋನಿಕಾ ಸೈನಿಕರಿಗೂ ಇಲ್‌ದಿಸ್ ಸೈನಿಕರಿಗೂ ಯುದ್ಧನಡೆಯಲಾರಂಭವಾಗಿದೆ ಸಾಯಂಕಾಲ ೪ ಗಂಟೆಯೊಳಗೆ ರಾಜಧಾನಿಯು ತಮ್ಮ ಸ್ವಾಧೀನವಾಗಬೇಕೆಂದು ಶೆವ್ಕೆಟ್ ಪಾಷಾರವರು ತಿಳಿಸಿರುತ್ತಾರೆ. ಯುದ್ಧನಡೆದದ್ದರಲ್ಲಿ ಸುಮಾರು ೧,೦೦೦ ಜನರು ಮೃತಪಟ್ಟಿರುವಂತೆ ವರ್ತಮಾನವಿದೆ. ಸಲೋನಿಕಾ ಸೈನಿಕರು ಗುಂಡುಹೊಡೆದು ನುಗ್ಗಿ ರಾಜಧಾನಿಯನ್ನು ಸ್ವಾಧೀನಪಡಿಸಿಕೊಂಡರು ಈಚೆಗೆ ಎಲ್ಲಾ ಶಾಂತವಾಗಿದೆ —ಅದಾನಾ ವಿಲಾಯತ್ತಿನಲ್ಲಿ ೧೫,೦೦೦ ಜನರು ಮನೆಮಠಗಳನ್ನು ಕಳೆದುಕೊಂಡು, ತಿನ್ನುವುದಕ್ಕಿಲ್ಲದೆ ಸಂಕಟಪಡುತ್ತಿದ್ದಾರೆ ಸಾವಿರಾರು ಮಂದಿ ಅನಾಥರಾದರು. ೧೯ ಮಂದಿ ಕ್ರೈಸ್ತಬೋಧಕರು ಕೊಲ್ಲಲ್ಪಟ್ಟರು ತಾ ೨೫ —ರಾಜಧಾನಿಯಲ್ಲಿ ರವಿವಾರ ನೆಮ್ಮದಿಯಾಗಿತ್ತು ಲೂಟಿ ಮಾಡುತ್ತಿದ್ದವರನ್ನು ಸೈನಿಕರು ಹಿಡಿದು ಕಡಿದುಹಾಕಿದರು ಟಾಕ್ಸಿಂ ಎಂಬಲ್ಲಿ ಶುಕ್ರವಾರ ಮೂರು ಗಂಟೆಯ ಹೊತ್ತು ಘೋರಯುದ್ಧವಾಯಿತು ಈ ಯುದ್ಧದಲ್ಲಿ ೧,೦೦೦ ಜನರು ಕೊಲೆಯಾದರು. ಅದೇ ರೀತಿ ತಾಸ್ಕಿಷ್ಲಾ ಎಂಬ ಮಠೀಕಿಯ ಬಳಿಯಲ್ಲೂ ದೊಡ್ಡ ಕದನವಾಯಿತು. ತಾ ೨೬ —ಸೆಲೀಮಿ ಸೈನಿಕರು ಸುಮಾರು ೪,೦೦೦ ಮಂದಿ ಶರಣಾಗತರಾದರು ಪಟ್ಟಣವೆಲ್ಲಾ ಪ್ರಜಾಪಕ್ಷದ ಸೈನಿಕರ ವಶದಲ್ಲಿರುತ್ತದೆ. ದಂಗೆಯನ್ನು ನಡಿಸಿದ್ದಕ್ಕೂ ಮಂತ್ರಿಗಳನ್ನು ಕೊಂದದ್ದಕ್ಕೂ ಕಾರಣಭೂತರಾದವರನ್ನು ಸೈನಿಕರು ಮನೆಮನೆಗೆ ಹೋಗಿ ಹುಡುಕಿ ಹಿಡಿಯುತ್ತಿದ್ದಾರೆ. ಅರಮನೆಯ ಪಹರೆಯವರ ಬಳಿ ಇದ್ದ ಮದ್ದು ಗುಂಡನ್ನು ಕಿತ್ತುಕೊಂಡರು. ಸುಲ್ತಾನರ ಪಕ್ಷದ ಅಧಿಕಾರಿಗಳು ಅಡ್ಡಿಮಾಡದೆ ಪ್ರಜಾಪಕ್ಷದವರಿಗೆ ಶರಣಾಗತರಾಗುತ್ತಿದ್ದಾರೆ. ಸುಲ್ತಾನರವರು—ಯಾರೂ ಪ್ರಜಾಪಕ್ಷದವರಿಗೆ ವಿರೋಧಿಗಳಾಗಿ ನಿಲ್ಲಕೂಡದೆಂದೂ, ತಮ್ಮ ಮೇಲೆ ಕಾರ್ಯಭಾರ ನಡಿಸುತ್ತಿರುವವರೆಲ್ಲಾ ತಮ್ಮ ಮಕ್ಕಳೆಂದೂ, ಇನ್ನು ಹೆಚ್ಚಾಗಿ ರಕ್ತಪ್ರವಾಹವನ್ನು ಹರಿಸುವುದು ತಮಗೆ ಇಷ್ಟವಿಲ್ಲವೆಂದೂ ತಿಳಿಸಿದ್ದಾರೆ ಅದಕ್ಕೆ ಕಾರಣವೆಂದು ಹೇಳುತ್ತಾರೆ ಪ್ರಜಾಪಕ್ಷದಲ್ಲಿ ಮ್ಯಾಸಿಡೋನಿಯಾದವರೂ, ಕ್ರೈಸ್ತರೂ, ಯಹೂದ್ಯರೂ, ಇತರ ಪಂಗಡಗಳವರೂ ಒಂದಾಗಿ ಸೇರಿಕೊಂಡಿರುವರು ಪ್ರಜಾಪಕ್ಷದ ಮುಖಂಡರು—ರಾಜ್ಯದಲ್ಲಿ ದಂಗೆಯನ್ನು ಹುಟ್ಟಿಸಿ ಕ್ರೂರಕೃತ್ಯಗಳನ್ನು ನಡಿಸುವುದು ತಮ್ಮ ಅಭಿಮತವಲ್ಲವೆಂದೂ, ಈ ದುಷ್ಟಕೆಲಸವನ್ನು ಮಾಡಿದವರು ರಾಜದ್ರೋಹಿಗಳೆಂದೂ, ರಾಜ್ಯಭಾರವನ್ನು ಕಾಪಾಡಿಕೊಂಡು ಬರುವುದೇ ತಮ್ಮ ಮುಖ್ಯ ಉದ್ದೇಶವೆಂದೂ ಸಾರಿಸಿರುತ್ತಾರೆ ಸುಲ್ತಾನರ ಅಂಗರಕ್ಷಕರಾಗಿದ್ದ ಸೈನಿಕರು ಎಮರುಸ್ಥೈರ್ಯದ ಪರಾಕ್ರಮವನ್ನು

ನೋಡಿ ಶರಣಾಗತರಾದರು ಈಸಾರಿಯಿಂದ ಈಚೆಗೆ ೧೬,೦೦೦ ಜನರು ಟ್ರಿಬಿನಲ್ಲಿ ಇಡಲ್ಪಟ್ಟಿದ್ದಾರೆ ಪ್ರಜಾಪಕ್ಷದವರು ಪಾರ್ಲಿಮೆಂಟ್ ಸಭಾಮನೆಯಲ್ಲಿ ಸೇರಿ ಮಂತ್ರಾಲೋಚನೆ ಮಾಡುತ್ತಿದ್ದಾರೆ ಸಾವಿರಾರು ಪ್ರಜೆಗಳು ಸಭಾಮನೆಯ ಬಳಿ ಆತುರದಿಂದ ಕಾದುಕೊಂಡಿರುವರು

ಏಪ್ರೆಲ್, ತಾ ೨೭—ದಂಗೆ ಕೃತ್ಯಗಳನ್ನು ನಡಿಸಿದ ಸೈನಿಕರನ್ನು ದಂಡನೆಗೆ ಗುರಿಮಾಡುವುದಕ್ಕೆ ಮೂರು ಮಿಲಿಟರಿ ಕೋರ್ಟುಗಳು ಏರ್ಪಾಡಾಗಿ ತನಿಖೆಗಳು ನಡೆಯುತ್ತಾ ಇವೆ ಟೆವ್ಫಿಕ್ ಪಾಷಾಯವರು ಇಸ್ತಿಹಾರು ಕೊಟ್ಟು ಕ್ರೂರಕೃತ್ಯಗಳನ್ನು ನಡಿಸುವಂತೆ ಚಿತಾವಣೆ ಮಾಡಿದವರನ್ನೆಲ್ಲಾ ರಾಜ್ಯದ ಶತ್ರುಗಳಂತೆ ಎಣಿಸಿ ಅವರನ್ನು ಕೊಲ್ಲಿಸಿ ಬಿಡುತ್ತೇವೆ ಎಂದು ತಿಳಿಸಿದ್ದಾರೆ ರಾಜಧಾನಿಯಲ್ಲಿ ಯುದ್ಧವಾಯಿತು ಮಡಿದುಹೋದ ಪ್ರಜಾಪಕ್ಷದ ಮುನ್ನೂರು ಜನರ ಹೆಣಗಳನ್ನು ಒಂದೇ ಗುಣಿಯಲ್ಲಿ ಹಾಕಿ ಸಮಾಧಿ ಮಾಡಿದರು ರೆಷದ್ ಎಫೆಂಡಿಯವರೇ ಸುಲ್ತಾನರೆಂದು ಸಾರಿಸಿದ್ದಾಯಿತು

ಏಪ್ರೆಲ್, ತಾ ೨೮—ತುರ್ಕಿ ಸುಲ್ತಾನರಾಗಿದ್ದ ಅಬ್ದುಲ್ ಹಾಮಿದ್ ಯವರು ಮುಸಲ್ಮಾನರ ಶಾಸ್ತ್ರವಚನಗಳನ್ನು ಕೆಡಿಸಿ, ಅನೇಕ ನಿರಪರಾಧಿಗಳನ್ನು ಕೊಲ್ಲಿಸಿರುತ್ತಾರೆ ಎಂಬ ಸಂಗತಿಯನ್ನು ಷೇಕ್ ಉಲ್ ಇಸ್ಲಾಂ ಸಂಘದ ಘತ್ವಾದಲ್ಲಿ ಪ್ರಕಟಿಸಿರುವುದನ್ನು ಪ್ರಜಾ ಸಂಘದವರು ಕೇಳಿ "ಅವರನ್ನು ಸಿಂಹಾಸನದಿಂದ ತಳ್ಳಬೇಕು" ಎಂದು ಕೂಗಿಕೊಂಡರು ಕೆಲವು ಪ್ರಮುಖರು ಹೋಗಿ ಸುಲ್ತಾನ್ ಅಬ್ದುಲ್ ಹಾಮಿದ್‌ಯವರನ್ನು ಕಾಣಿಸಿಕೊಂಡಾಗ ಸುಲ್ತಾನರು ಅವರನ್ನು ಕುರಿತು—"ನನಗೆ ರಾಜ್ಯಪದವಿಯು ತಪ್ಪಿಹೋಗುತ್ತದೆಂದು ತಿಳಿದುಕೊಂಡಿದ್ದೆನು ಅದು ನನ್ನ ಅದೃಷ್ಟ" ಎಂದು ಹೇಳಿದ್ದಲ್ಲದೆ, ನನ್ನ ಪ್ರಾಣವನ್ನೂ ನನ್ನ ಹೆಂಡರು ಮಕ್ಕಳ ಪ್ರಾಣಗಳನ್ನೂ ಕಾಪಾಡಬೇಕೆಂದೂ ನಾವು ಚಿರಾಘಾನ್ ಅರಮನೆಯಲ್ಲಿ (ಅವರು ಹುಟ್ಟಿದ ಬಂಗಲೆ) ವಾಸಮಾಡಿಕೊಂಡಿರುವಂತೆ ನಮಗೆ ಅವಕಾಶಕೊಡಬೇಕೆಂದೂ ಕೇಳಿಕೊಂಡರು—ರೆಷದ್ ಎಫೆಂಡಿಯವರನ್ನು ಐದನೇ ಮಹಮದ್ ಎಂಬ ಹೆಸರನ್ನಿಟ್ಟು ಪಟ್ಟಕಟ್ಟಿದರು ಅವರು ಯುದ್ಧದ ಇಲಾಖಾ ಆಫೀಸಿನಲ್ಲಿ ಸಭೆಯ ಮಧ್ಯದಲ್ಲಿ ನಿಂತು—"ರಾಜ್ಯಭಾರವನ್ನು ಪ್ರಜಾ ಸಮ್ಮತನಾಗಿ ನಡಿಸುತ್ತೇನೆ" ಎಂದು ಭಾಷೆಯನ್ನು ತಟ್ಟಿ ಕೊಂಡರು ಪ್ರಜೆಗಳು ಅವರನ್ನು ತಮ್ಮ ಸುಲ್ತಾನರೆಂದು ಕೋಲಾಹಲದೊಡನೆ ಒಪ್ಪಿಕೊಂಡರು ಮತ್ತು ಅವರು ಪ್ರಜಾಪ್ರತಿನಿಧಿಗಳನ್ನು ಕರೆಸಿಕೊಂಡು ಅವರಿಗೆ—"ಪ್ರಜಾಸಮ್ಮತನಾಗಿ ರಾಜ್ಯಭಾರನಡಿಸುವುದರಲ್ಲಿ ನಾನೇ ಮೊದಲನೆಯ ಸುಲ್ತಾನನೆಂದು ಸಂತೋಷಪಡುತ್ತೇನೆ ಹಿಂದಿನ ರಾಜ್ಯಭಾರದಲ್ಲಿ ನಿಮ್ಮಂತೆಯೇ ನಾನೂ ಹಿಂಸೆ ಮೊದಲಾದ ಕಷ್ಟಗಳನ್ನು ಅನುಭವಿಸಿರುವೆನು" ಎಂದು ತಿಳಿಸಿದರು ಹೊಸ ಸುಲ್ತಾನರು ಬೀದಿಯಲ್ಲಿ ಹೊರಟಾಗ ಹರ್ಷಯುಕ್ತರಾದ ಸೈನಿಕರು ಜಯಘೋಷಗಳನ್ನು ಮಾಡುತ್ತಾ ಬಂದೂಕುಗಳನ್ನು ಆಕಾಶಕ್ಕೆ ಹಾರಿಸಿದರು ಪಟ್ಟಣವೆಲ್ಲಾ ನೇತ್ರಾನಂದಕರವಾಗಿ ಶೃಂಗಾರವಾಗಿದ್ದು ಧ್ವಜಪತಾಕೆಗಳಿಂದ ಅಲಂಕರಿಸಿದ್ದರು ಹೊಸ ಸುಲ್ತಾನರು ಡೋಲ್ಮಾಬಾಗ್ಚಿ ಎಂಬ ಅರಮನೆಯಲ್ಲಿ ಇರುತ್ತಾರೆ ಇವರು ರಾಜ್ಯಭಾರವನ್ನು ನಡಿಸುವ ವಿಷಯದಲ್ಲಿ ತಾಳಿರುವುದನ್ನೂ ಅವರ ಲಕ್ಷಣಗಳನ್ನೂ ಪ್ರಜೆಗಳು ನೋಡಿ ಮೆಚ್ಚಿಕೊಂಡಿದ್ದಾರೆ—ಬಹು ಸಮರ್ಥರಾದ ಅಬ್ದುಲ್ ಹಾಮಿದ್ ಯವರನ್ನು ಇಷ್ಟು ಸುಲಭವಾಗಿಯೂ ಗಲಭೆಯಿಲ್ಲದೆಯೂ ತುರ್ಕಿಯ ಪ್ರಜೆಗಳು ಸಿಂಹಾಸನದಿಂದ ಇಳಿಸಿಬಿಟ್ಟದ್ದನ್ನೂ, ಹೊಸ ಸುಲ್ತಾನರನ್ನು ನೇಮಕಮಾಡಿಕೊಂಡಿರುವುದನ್ನೂ ನೋಡಿ ಪರರಾಜಗಳವರು ಆಶ್ಚರ್ಯಪಡುತ್ತಿದ್ದಾರೆ—ಅದಾನಾ ಪ್ರಾಂತ್ಯದಲ್ಲಿ ಮತ್ತೆ ಗಲಭೆಯುಂಟಾಗಿದೆ ಎಂದು ವರ್ತಮಾನ ಬಂದಿದೆ ಒಂದು ಗ್ರಾಮದಲ್ಲಿ ೧೦೦ ಮಂದಿ ಕ್ರೈಸ್ತಮತ ಪ್ರಸಾರಕರನ್ನು ಒಂದು ದೇವಾಲಯದೊಳಗೆ ಜೀವಸಹಿತ ಸುಟ್ಟುಹಾಕಿದರೆಂದೂ ಕಸ್ಸಾಬಾ ಎಂಬ ಪಟ್ಟಣವನ್ನು ಸಂಪೂರ್ಣವಾಗಿ ನಾಶಮಾಡಿದರೆಂದೂ ಹೇಳುತ್ತಾರೆ ೫೨೦ ಮಂದಿ ಆರ್ಮೀನಿಯ ಜನರು ಬೇರೂಟಿನೊಳಗೆ ಆಶ್ರಯವನ್ನು ಪಡೆದಿರುವರು ಇವರಿಗೆ ತಿನ್ನುವುದಕ್ಕೇನೂ ಇಲ್ಲದೆ ಕಷ್ಟಪಡುತ್ತಿದ್ದಾರೆ—ಅಬ್ದುಲ್ ಹಾಮಿದ್ ಯವರನ್ನೂ ಅವರ ೧೮ ಮಂದಿ ಜನಾನಾ ಸ್ತ್ರೀಯರನ್ನೂ, ಇಬ್ಬರು ಸಣ್ಣ ಮಕ್ಕಳನ್ನೂ ನೆನ್ನೆ ರಾತ್ರಿ ಸೆಲೋನಿಕಾವಿಗೆ ಕರೆದುಕೊಂಡು ಹೋಗಿ ಅಲ್ಲಾತಿನಿ ಎಂಬ ಅರಮನೆಯೊಳಗೆ ಇಟ್ಟಿರುತ್ತಾರೆ

ಏಪ್ರೆಲ್, ತಾ ೨೯—ಅದಾನಾದಲ್ಲಿ ಉಂಟಾಗಿರುವ ಗಲಭೆಯನ್ನು ಶಮನಮಾಡುವುದಕ್ಕೆ ಸರಕಾರದವರು ಎರಡು ರಿಜಿಮೆಂಟಿನ ಸೈನ್ಯವನ್ನು ಕಳುಹಿಸಿಕೊಟ್ಟಿದ್ದಾರೆ ಅಲ್ಲಿ ಕೊಲೆಗಳು ಮತ್ತೆ ಪ್ರಾರಂಭವಾಗಿವೆ ಸಾವಿರಾರು ಜನ ಆರ್ಮೀನಿಯದವರನ್ನು ಜೀವಸಹಿತ ಸುಟ್ಟುಬಿಟ್ಟರು ಆ ಅಧಿಪತ್ಯದೊಳಗೆ ಸುಮಾರು ೩೦,೦೦೦ ಪ್ರಜೆಗಳು ಕೊಲ್ಲಲ್ಪಟ್ಟಿರುವರೆಂದು ತಿಳಿದು ಬಂದಿದೆ—ಫ್ರಾನ್ಸ್ ರಾಜ್ಯದ ಪ್ರೆಸಿಡೆಂಟ್ ಫಾಲಿಯರೀಸ್‌ಯವರೂ, ಅಮೇರಿಕದ ಪ್ರೆಸಿಡೆಂಟ್ ಟಾಫ್ಟ್‌ಯವರೂ ವಿಲಾಯತಿಯ ಚಕ್ರವರ್ತಿಸಾರ್ವಭೌಮರವರೂ ಹೊಸ ಸುಲ್ತಾನರವರಿಗೆ ತಂತಿವರ್ತಮಾನಗಳನ್ನು ಕಳುಹಿಸಿ ತಮ್ಮ ಸಂತೋಷವನ್ನು ತಿಳಿಸಿರುತ್ತಾರೆ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿ ಎಲ್ಲಾ ಶಾಂತವಾಯಿತು ಸೈನಿಕರೂ ಪ್ರಜೆಗಳೂ ತಮ್ಮ ತಮ್ಮ ಉದ್ಯೋಗಗಳಲ್ಲಿ ನಿರತರಾಗಿದ್ದಾರೆ ಪ್ರಜಾಪಾಲನೆಯು ನಿರುಪಾಧಿಕವಾಗಿ ನಡೆಯುತ್ತಲಿದೆ

ಮೇ ತಾ ೧—ತೌಫಿಕ್ ಪಾಷಾಯವರು ಮಂತ್ರಿಗಳಾಗಿರುವುದೇ ಸದ್ಯಕ್ಕೆ ಉತ್ತಮ ಬಹುಶಾ ಇವರ ಅಧಿಕಾರವು ಬಹುಕಾಲ ನಡೆಯಲಾರದು ಈಗಿನ ನಾಗರಿಕ ತುರ್ಕಿಯವರಲ್ಲೀ ಎಲ್ಲಾ ಇಲಾಖೆಗಳ ಮಂತ್ರಿಸ್ಥಾನಗಳನ್ನೂ ವಹಿಸುವದಕ್ಕೆ ಸಮರ್ಥರೂ ಅನುಭವಸ್ಥರೂ ಆದವರು ನಿಶ್ಚಯವಾಗಿ ಇನ್ನೂ ಕಷ್ಟವಾಗಿದೆ ತಾ ೨—ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್‌ನಲ್ಲಿ ಮಿಲಿಟರಿ ಕೋರ್ಟಿನ ಜಡ್ಜಿಗಳು ಹತ್ತುಮಂದಿ ಹುದ್ದೆದಾರರನ್ನು ಗಲ್ಲಿಗೆ ಹಾಕಬೇಕೆಂದು ತೀರ್ಮಾನಮಾಡಿದರು ಇವರು ದಂಗೆ ಎದ್ದರೆಂದೂ ನ್ಯಾಯಾಧಿಪತಿಯನ್ನು ಕೊಂದರೆಂದೂ, ಒಬ್ಬ ಸೈನ್ಯಾಧಿಪತಿಯನ್ನು ಕಡಿದುಹಾಕಿದರೆಂದೂ ನೋಕದ್ದಮೆ ಹುಟ್ಟಿ ವಿಚಾರಣೆ ಆಯಿತು

ನೆನ್ನೆ ಸುಲ್ತಾನರವರು ತೆರೆದ ಸಾರೋಟಿನಲ್ಲಿ ಕುಳಿತು ಆಸ್ಪತ್ರೆಗಳಿಗೆ ದಯಮಾಡಿ, ಗಾಯಪಟ್ಟು ಚಿಕಿತ್ಸೆಹೊಂದುತ್ತಿದ್ದ ಸಲೋನಿಕಾ ಸೈನಿಕರನ್ನು ನೋಡಿಕೊಂಡು ಬಂದರು ರಸ್ತೆಗಳಲ್ಲಿ ಪ್ರಜೆಗಳು ನಿಂತು ಸುಲ್ತಾನರ ಹೆಸರು ಹೇಳಿ ಜಯಘೋಷವನ್ನು ಮಾಡಿದರು

ಒಕ್ಕಲಿಗರ ಮೂರನೇ ಮಹಾಸಭೆಯು

ಚಿತ್ರದುರ್ಗದ ಆರ್ಯನ್ ಸ್ಟೂಡೆಂಟ್ಸ್ ಹೋಂ.

ಒಕ್ಕಲಿಗರ ಮೂರನೇ ಮಹಾಸಭೆಯು ಬೆಂಗಳೂರಿನಲ್ಲಿ ನಡೆದ ವೃತ್ತಾಂತವನ್ನು ಒಬ್ಬ ಬಾತ್ಮೀದಾರರು ಬರೆದು ಕಳುಹಿಸಿದ್ದಾರೆ ಇವರ ಬರವಣಿಗೆಯ ಎಲ್ಲಾ ಭಾಗಗಳೂ ನಾವು ಇನ್ನೊಂದು ಕಡೆ ಪ್ರಕಟಿಸಿರುವಂತೆಯೇ ಇರುತ್ತವೆ ಆದರೆ ಇವರು ತಿಳಿಸುವ ಕೆಲವು ಹೊಸ ಸಂಗತಿಗಳನ್ನು ಇಲ್ಲಿ ಪ್ರಕಟಮಾಡುವೆವು

ಈ ಮಹಾ ಸಭೆಯನ್ನು ಮೇಲ್ಪಂಕ್ತಿಯಾಗಿಟ್ಟುಕೊಂಡು ಸ್ಟೂಡೆಂಟ್ಸ್ ಹೋಂ ಸ್ಥಾಪಿಸಿರುವುದರ ಜ್ಞಾಪಕಾರ್ಥವಾಗಿ ಚಿತ್ರದುರ್ಗದ ಆರ್ಯನ್ ಸ್ಟೂಡೆಂಟ್ಸ್ ಹೋಮಿನ ಮ್ಯಾನೇಜರ್ ಮಿ ಎಸ್ ವಿ ಹನುಮಂತರಾಜುಯವರು ಒಂದು ಅಡ್ರೆಸ್ಸನ್ನು ಸಭೆಯಲ್ಲಿ ಪ್ರೆಸಿಡೆಂಟರವರಿಗೆ ಒಪ್ಪಿಸಿದರು ಈ ವಿಷಯವನ್ನು ಕೇಳಿ ಸಭಿಕರೆಲ್ಲರೂ ಸಂತೋಷಪಟ್ಟು ಬೆಳಗ್ಗೆ ಆಲೋಚಿಸಲು ನಿಶ್ಚಯಿಸಿದರು ತಾ ೩೦ನೇ ಪ್ರಾತಃಕಾಲ ಪುನಃ ಸಭೆ ಸೇರಿತು ಒಕ್ಕಲಿಗಮಂಡಲಿಯಲ್ಲಿ ಕೆಲವರು ಮದ್ಯಪಾಯಿಗಳಾಗಿ ಕೆಡುತ್ತಿರುವುದನ್ನು ಹಾಸನದ ಡಿಸ್ಟ್ರಿಕ್ಟಿನ ಪ್ರತಿನಿಧಿಗಳು ಸೂಚಿಸಿದ್ದನ್ನು ಸಭಿಕರು ಕೇಳಿ ವಿಷಾದಪಟ್ಟು ನಮ್ಮ ಜನರು ಮದ್ಯಪಾನ ವಿಸರ್ಜನೆ ಮಾಡಲು ಕಟ್ಟುಪಾಡನ್ನು ಕಲ್ಪಿಸತಕ್ಕದ್ದು, ಸಂಘದ ಶ್ರೇಯೋಭಿವೃದ್ಧಿಗೆ ಹಣ ಜಮಾಯಿಸಲು ಗ್ರಾಮಾಂತರಗಳ ಮೇಲೆ ಬೋಧಕರನ್ನು ಕಳುಹಿಸುವುದು, ಜಾಗ್ರತೆಯಾಗಿ ಸ್ಟೂಡೆಂಟ್ಸ್ ಹೋಂ ಸ್ಥಾಪಿಸುವುದು ಒಕ್ಕಲಿಗರ ಪತ್ರಿಕೆಯಲ್ಲಿ ತಮಿಳು ತೆನುಗು ಕನ್ನಡ, ಇಂಗ್ಲಿಷ್, ಈ ನಾಲ್ಕು ಭಾಷೆಗಳು ಇರುವಂತೆ ಪತ್ರಿಕೆಯನ್ನು ದೊಡ್ಡದು ಮಾಡುವುದು, ಇತ್ಯಾದಿ ವಿಷಯಗಳನ್ನು ತೀರ್ಮಾನಿಸಿ ಚಿತ್ರದುರ್ಗದ ಆರ್ಯನ್ ಸ್ಟೂಡೆಂಟ್ಸ್ ಹೋಮಿಗೆ ಭಟ್ಟರಾಜು ವಂಗಡದವರು ಕಟ್ಟುತ್ತಿರುವ ಸೇವಾಸದನವೆಂಬ ಕಟ್ಟಡಕ್ಕೆ ದ್ರವ್ಯ ಸಹಾಯ ಮಾಡಬೇಕಾಗಿ ಮೆ॥ ಟಿ ಬಯ್ಯಣ್ಣನವರು ಸೂಚಿಸಿದ್ದನ್ನು ಸಭಿಕರೆಲ್ಲರೂ ಒಪ್ಪಿದರು ಇದಕ್ಕಾಗಿ ಕೂಡಲೆ ಒಂದು ಧರ್ಮದ ಚಂದಾಪಟ್ಟಿ ಹಾಕಿದ್ದಾಯಿತು ಸುಮಾರು ೫೦೦ ರೂಪಾಯಿ ಹುಟ್ಟಿದವು ಆಯಿತು ಇದಾದನಂತರ ಶ್ರೇಯಃಪ್ರಾರ್ಥನೆಗಳು ನಡೆದು ಸಭೆಯು ಮುಕ್ತಾಯ ಮಾಡಲ್ಪಟ್ಟಿತು

ಚಿತ್ರದುರ್ಗದ ಆರ್ಯನ್ ಸ್ಟೂಡೆಂಟ್ಸ್ ಹೋಮಿಗೆ ಬೆಂಗಳೂರು ಒಕ್ಕಲಿಗರ ಸಂಘದ ೩ನೇ ಮಹಾಸಭೆಯಲ್ಲಿ ಆದ ಧರ್ಮದ ಚಂದಾಪಟ್ಟಿ—ಮೆ॥ ಗಳಾದ ಎ ರಂಗೇಗೌಡರವರು, ಕೋಲಾರ ರೂ ೨೦೦ ಟಿ ಬಯ್ಯಣ್ಣನವರು, ಬೆಂಗಳೂರು ಸಿಟಿ ರೂ ೧೫೦ ಎಚ್ ಚನ್ನಯ್ಯನವರು, ಸಬ್‌ಜಡ್ಜ್, ಮಡಿಕೇರಿ ರೂ ೫೦ ಎಮ್ ಸುಬ್ಬಯ್ಯ, ಮುದ್ರಪ್ಪ ಅಂಡ್ ಸನ್ಸ್ ಬೆಂಗಳೂರು ಸಿಟಿ ರೂ ೨೫ ಎಚ್ ಮುತ್ತಪ್ಪನವರು, ರಿಟೈರ್ಡ್ ಅ॥ ಕನ್ಸರ್ವೇಟರ್, ಹಾಸನ ರೂ ೨೦ ಬಂಡಿಸೋಲ್ ಕರಿಗೌಡರು, ನೀಲಗಿರಿ ರೂ ೧೫ ಎಚ್ ಮಹಲಿಂಗಣ್ಣನವರು, ರಿಟೈರ್ಡ್ ಡಿಸ್ಟ್ರಿಕ್ಟ್ ಟ್ರಿಜರರ್, ಹಾಸನ ರೂ ೧೦ ಎಂ ವೆಂಕಟಸಾಮಿ ಕಂಟ್ರಾಕ್ಟರ್, ಹಲಸೂರು, ಬೆಂಗಳೂರು ರೂ ೫ ಸಾಸಲು ತಿಮ್ಮೇಗೌಡರು, ಮಂಚಿಕಲ್ಲು ಕುಪ್ಪೇಗೌಡರು ರೂ ೩ ಪಟೇಲ್ ಲಿಂಗೇಗೌಡರು, ದೊಡ್ಡಕಜ್ಜಾಲ್ ರೂ ೨ ಎಮ್ ಎಲ್ ಶಂಕ್ರಯ್ಯನವರು, ಮದ್ದೂರು ಹನಕೆರೆ ಇನಾಂದಾರ್ ಬಿ ತಿಮ್ಮೇಗೌಡರು, ಬೆಂಗಳೂರು ಮಳೀಗೆ ತಿಮ್ಮಯ್ಯನವರು, ಶ್ರೀರಂಗಪಟ್ಟಣ ಚನ್ನಬೋರೇಗೌಡರು, ಮದ್ದೂರು ರಾಮೇಗೌಡರು, ಕೊಯಮುತ್ತೂರು—ತಲಾ ರೂ ೧ ಈ ರೀತಿ ಕೊಡತಕ್ಕ ಮೊಬಲಗನ್ನು ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿ ಮೆ॥ ಕೆ ಎಚ್ ರಾಮಯ್ಯನವರ ಮುಖಾಂತರ ಚಿತ್ರದುರ್ಗಕ್ಕೆ ಆ ಸ್ಟೂಡೆಂಟ್ಸ್ ಹೋಂ ಮ್ಯಾನೇಜರವರಿಗೆ ಪಾವತಿ ಆಗುವಂತೆ ಮಾಡಬೇಕಾಗಿ ಸಭಿಕರು ತೀರ್ಮಾನಿಸಿದರು

ಮೊಖ್ತಾರರುಗಳ ಸಭೆಯು

ಬೆಂಗಳೂರಿನಲ್ಲಿ ನಡೆಯಿತು.

ಮೈಸೂರು ಸಂಸ್ಥಾನದ ಮೊಖ್ತಾರರುಗಳು ಅಂದರೆ ಕ್ರಿಮಿನಲ್ ಕೋರ್ಟ್ ವಕೀಲರು ಕಳೆದ ಏಪ್ರೆಲ್ ತಾ ೩೦ನೇ ಶುಕ್ರವಾರ ಬೆಳಗ್ಗೆ ಬೆಂಗಳೂರು ಸಿಟಿ, ಸ್ಪೆನ್ಸರ್ ಬಳಿ ಇರುವ ಸಾಹುಕಾರ್ ಮೆ ಗುಬ್ಬಿ ತೋಟದಪ್ಪನವರ ಸತ್ರದ ಮಹಡಿಯ ಮೇಲೆ ಸೇರಿ ಸಭೆಯನ್ನು ನಡಿಸಿದರು ಮೈಸೂರು ನಂಜನಗೂಡು, ಗುಂಡ್ಲುಪೇಟೆ, ಬೆಂಗಳೂರು, ಮಾಗಡಿ, ಚನ್ನಪಟ್ಟಣ ಮಂಡ್ಯ, ಚಾಮರಾಜನಗರ, ಮುಳಬಾಗಲು ಚಿಕ್ಕನಾಯಕನಹಳ್ಳಿ ಹೊಸಕೋಟೆ, ಚಿಂತಾಮಣಿ, ಮಾಲೂರು, ಮಳವಳ್ಳಿ ಶಿಡ್ಲಘಟ್ಟ ಈ ಮೊದಲಾದ ಕಡೆಗಳ ಮೊಖ್ತಾರರು ಬಂದಿದ್ದರು ಇನ್ನು ಕೆಲವರು ಸಭೆಗೆ ಬರಲು ತಮಗಿದ್ದ ಅನಾನುಕೂಲಗಳನ್ನು ತಿಳಿಸಿದರು

ಹಾಜರಿದ್ದ ಮೆಂಬರುಗಳು ಮೆ ಟಿ ಎಚ್ ರಾಮಚಂದ್ರರಾಯರನ್ನು ಸಭೆಯ ಪ್ರೆಸಿಡೆಂಟರಾಗಿ ನೇಮಿಸಿಕೊಂಡರು ಮೆ॥ ಗಳಾದ ವಾಸುದೇವರಾಯರು, ಸಿದ್ದಪ್ಪನವರು, ಮನ್ನಾರೈಯನವರು, ರಾಘವೇಂದ್ರಾಚಾರ್ರು, ರಾಮಚಂದ್ರರಾಯರು, ವೆಂಕಟರಾಮ್ಮಯ್ಯನವರು ಕಮಿಟಿ ಮೆಂಬರಾಗಿರಬೇಕೆಂದೂ ಮೆ ಮನ್ನಾರೈಯನವರು ಟ್ರೆಜರರಾಗಿರಬೇಕೆಂದೂ, ಮೆ ವೆಂಕಟರಾಮ್ಮಯ್ಯನವರು ಸೆಕ್ರೆಟರಿಯಾಗಿರಬೇಕೆಂದೂ ಗೊತ್ತುಮಾಡಲ್ಪಟ್ಟಿತು

ತೀರ್ಮಾನಗಳು

ಪ್ರೆಸಿಡೆಂಟರು ಮೊಖ್ತಾರರುಗಳಿಗೆ ಉಂಟಾಗಿರುವ ಅನಾನುಕೂಲವನ್ನು ಕುರಿತು ಉಪನ್ಯಾಸಮಾಡಿ ಶ್ರೀಮನ್ ಮಹಾರಾಜರವರಿಗೆ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆಯನ್ನು ಸಭೆಯಲ್ಲಿ ಓದಿ ಹೇಳಿದರು ಬಳಿಕ ಮೊಖ್ತಾರರ ಸಂಘವು ಸ್ಥಾಪಿಸಲ್ಪಟ್ಟು, ಅದಕ್ಕೆ ಸಂಬಂಧಪಟ್ಟ ಸಕಲ ಕಾರ್ಯಗಳನ್ನೂ ಮೇಲ್ಕಂಡ ಕಮಿಟಿಯವರೇ ನಡಿಸಬಹುದೆಂದು ತೀರ್ಮಾನವಾಯಿತು ಈ ಸಂಘದ ಕಾರ್ಯಗಳನ್ನು ನಡಿಸುವುದಕ್ಕೆ ಮೆಂಬರುಗಳೆಲ್ಲಾ ಚಂದಾ ಕೊಡಬೇಕೆಂದು ನಿರ್ಧಾರವಾಯಿತು ಮೊಖ್ತಾರರುಗಳಿಗೆ ಉಂಟಾಗಿರುವ ತೊಂದರೆಗಳನ್ನು ಕುರಿತು ಚೀಫ್ ಕೋರ್ಟಿಗೆ ಅಲಾಯಿದಾ ಅರ್ಜಿ ಕೊಡಬೇಕೆಂದೂ, ದಿವಾನ್ ಸಾಹೇಬರಿಗೂ, ಕೌನ್ಸಿಲ್ ಮೆಂಬರುಗಳಿಗೂ, ಮಿ ಜಸ್ಟಿಸ್ ಪಿ ಎಸ್ ಕೃಷ್ಣರಾಯರಿಗೂ ಅರಿಕೆಮಾಡಿಕೊಳ್ಳಬೇಕೆಂದೂ ಗೊತ್ತುಮಾಡಿದರು ಈ ಮೀಟಿಂಗು ನಡೆದ ವಿಚಾರವನ್ನು ಮೆ ವೆಂಕಟರಾಮ್ಮಯ್ಯನವರು ಊರೂರಿನ ಮೇಲೆ ಸಂಚಾರಮಾಡಿ ಇತರ ಮೆಂಬರುಗಳಿಗೆ ತಿಳಿಯಪಡಿಸಬೇಕೆಂದು ನೇಮಿಸಲ್ಪಟ್ಟಿದ್ದಾರೆ ಮತ್ತು ಈ ರೀತಿ ಸಭೆ ಸೇರಲು ಮೆಂಬರುಗಳಿಗೆ ಅನಾನುಕೂಲವಾಗಬಹುದಾದ್ದರಿಂದ ಈಗ ಸೇರಿರತಕ್ಕ ಮೆಂಬರುಗಳೆಲ್ಲಾ ಲಾಯರಿಗೆ ಮೊಖ್ತಾರುನಾಮಾ ಕೊಡಲು ಅಡ್ವೊಕೇಟ್ ಮೆ ಸಿ ವೇದೋಜಿರಾವ್ ಸಾಹೇಬರವರ ರೂಬರೂಬು ವಕಾಲತ್ತಿಗೆ ರುಜುಹಾಕಿ ಹೋಗತಕ್ಕದ್ದೆಂದು ತೀರ್ಮಾನಮಾಡಿದರು

ಕಡೆಯಲ್ಲಿ ಸಭೆಯವರೆಲ್ಲಾ ಎದ್ದುನಿಂತುಕೊಂಡು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ, ಸಭೆ ಸೇರಲು ಸ್ಥಳವಸತಿಯನ್ನು ಉಂಟುಮಾಡಿಕೊಟ್ಟ ಸಾಹುಕಾರ್ ಮೆ॥ ಗುಬ್ಬಿ ತೋಟದಪ್ಪನವರಿಗೆ ವಂದನೆಯನ್ನು ಸಮರ್ಪಿಸಿ ಸಭೆಯನ್ನು ಮುಕ್ತಾಯಮಾಡಿದರು

ಮೈಸೂರು ಸರ್ಕಾರಿ ಮುಖ್ಯಾಂಶಗಳು

ತಕಾವಿ ಅಡ್ವಾನ್ಸು ಕೊಡುವ ಅಧಿಕಾರವು

ಸರ್ಕಾರದವರು ರೈತ ಪ್ರಜೆಗಳಿಗೆ ಜಮೀನನ್ನು ಅಭಿವೃದ್ಧಿಮಾಡಿಕೊಳ್ಳುವದಕ್ಕೆ ಸಾಲವನ್ನೂ, ತಕಾವಿ ಅಡ್ವಾನ್ಸನ್ನೂ ಕೊಡುತ್ತಾರಷ್ಟೆ ಈ ಹಣ ಕೊಡುವ ಅಧಿಕಾರವನ್ನು ಗುಬ್ಬಿಯಲ್ಲಿರುವ ರೆವಿನ್ಯೂ ಪ್ರೊಬೇಷನರ್ ಮೆ॥ ಟಿ ಹನುಮಂತರಾಯರಿಗೆ ವಹಿಸಬಹುದೆಂದು ತುಂಕೂರು ಡೆಪ್ಯುಟಿ ಕಮಿಷನರವರು ಬರೆದಿದ್ದರ ಮೇಲೆ ರೆವಿನ್ಯೂ ಕಮಿಷನರವರೂ ಶಿಫಾರಸು ಮಾಡಿದ್ದರು. ಈ ವಿಚಾರದಲ್ಲಿ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿರುವುದೇನಂದರೆ—ಸಾಲಗಳನ್ನು ಸ್ಯಾಂಕ್ಷನ್ ಮಾಡತಕ್ಕ ಅಧಿಕಾರಿಗಳು ಹಳಬರಾಗಿಯೂ ಅನುಭವದಾರರಾಗಿಯೂ ಇರಬೇಕು ಮತ್ತು ಅರ್ಜಿದಾರರ ಸ್ಥಿತಿಗತಿ, ಅವರಿಗಿರುವ ಜಮೀನುಗಳ ಯೋಗ್ಯತೆ ಮುಂತಾದದ್ದನ್ನು ವಿವೇಚಿಸತಕ್ಕಷ್ಟು ಸಮರ್ಥರಾಗಿರಬೇಕು ಇದಲ್ಲದೆ ಪತ್ರಗಳನ್ನು ರೈತರುಗಳಿಂದ ಕ್ರಮವಾದ ರೀತಿಯಲ್ಲಿ ಬರೆಸಿಕೊಳ್ಳಬೇಕಾಗಿರುತ್ತದೆ ರೆವಿನ್ಯೂ ಪ್ರೊಬೇಷನರುಗಳಿಗೆ ಇಂಥಾ ಸಾಮರ್ಥ್ಯ ಸಾಲದೆಂದು ಗವರ್ನ್‌ಮೆಂಟಿನವರು ಅಭಿಪ್ರಾಯ ಪಡುತ್ತಾರೆ ಆದರೆ ಅಮಲ್ದಾರರಿಗಿರುವ ಚಿಲ್ಲರೆ ಕೆಲಸಗಳ ಜವಾಬ್ದಾರಿಯನ್ನು ಇವರಿಗೆ ವಹಿಸಿದಲ್ಲಿ ಅಮಲ್ದಾರರು ರೈತರ ಸಾಲದ ಅರ್ಜಿಗಳನ್ನು ಬೇಗ ಬೇಗನೆ ತನಿಖೆ ಮಾಡಿ ಇತ್ಯರ್ಥಮಾಡುವುದಕ್ಕೆ ತುಂಬಾ ಅನುಕೂಲವಾಗುವುದು ಎಂಬುದೇ

ಒಂದು ವಿದ್ಯಾರ್ಥಿವೇತನವು.

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಪ್ರಿನ್ಸಿಪಲ್ ಆಗಿದ್ದ ಮೆ॥ ವಾಟರ್ಸ್‌ಯವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಒಂದು ಫಂಡು ಏರ್ಪಾಡಾಯಿತು ಮೆ॥ ವೈ ಶ್ರೀನಿವಾಸರಾಯರು ಆ ಫಂಡಿನ ಸೆಕ್ರೆಟರಿಯಾಗಿ ನಿಂತು ಚಂದಾಹಣವನ್ನು ಕೂಡಿಸಿದರು ಈಗ ವಸೂಲಾಗಿರುವ ೧,೫೦೦ ರೂಪಾಯನ್ನು ಸರ್ಕಾರಕ್ಕೆ ಪಾವತಿಮಾಡುವುದಾಗಿಯೂ, ಒಂದು ವರುಷದೊಳಗಾಗಿ ಇನ್ನೂ ೫೦೦ ರೂಪಾಯಿ ಕೊಡುವುದಾಗಿಯೂ, ಇದಲ್ಲದೆ ಎರಡು ವರುಷಕಾಲ ೬೦ ರೂಪಾಯಿನಂತೆ ಬೇರೆ ಕೊಡುವುದಾಗಿಯೂ ಅವರು ವಾಗ್ದಾನಮಾಡಿ, ಈ ಹಣದಲ್ಲಿ ಮೇಲ್ಕಂಡ ಮೆ ವಾಟರ್ಸ್‌ಯವರ ಹೆಸರಿನ ಮೇಲೆ ಬಿ ಎ ತರಗತಿಯಲ್ಲಿ ವಿದ್ಯಾಭ್ಯಾಸಮಾಡುವಂಥಾ ಒಬ್ಬ ವಿದ್ಯಾರ್ಥಿಗೆ ತಿಂಗಳಿಗೆ ೫ ರೂಪಾಯಿನಂತೆ ವೇತನವನ್ನು ಕೊಡಿಸುವಂತೆ ಏರ್ಪಾಡುಮಾಡಬೇಕೆಂದು ಕೇಳಿಕೊಂಡರು ಗವರ್ನ್‌ಮೆಂಟಿನವರು ಆ ಹಣವನ್ನು ಅಂಗೀಕರಿಸಿ, ಅವರು ತಿಳಿಸಿರುವಂತೆ ವೇತನವನ್ನು ಕೊಡಿಸುತ್ತಾ ಬರುವುದಾಗಿ ಹುಕುಂ ಕೊಟ್ಟಿದ್ದಾರೆ

೧೯೦೯ ನೇ ವರುಷದ ಪ್ರತಿನಿಧಿ ಸಭೆಯು

ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಮೂರು ವರುಷಕ್ಕೊಂದಾವರ್ತಿ ಹೊಸ ಮೆಂಬರುಗಳನ್ನು ಚುನಾಯಿಸಬೇಕಷ್ಟೆ ಈ ಸಾಲಿನಲ್ಲಿ ಆ ಹೊಸ ಚುನಾವಣೆಯು ನಡೆಯಬೇಕಾಗಿದೆ ಈ ಚುನಾವಣೆಯು ಕ್ರಮ ಮುಂತಾದದ್ದನ್ನು ಮುಂದೆ ಹೇಳುವಂತೆ ಜರುಗಿಸತಕ್ಕದ್ದು—ತಾಲ್ಲೂಕುಗಳಲ್ಲಿ ಮೆಂಬರನ್ನು ಚುನಾಯಿಸುವಂಥಾ ಹಕ್ಕುಳ್ಳವರ ಮತ್ತು ಮೆಂಬರಾಗತಕ್ಕವರ ಹೆಸರಿನ ಪಟ್ಟಿಗಳನ್ನು ಜೂನ್ ತಿಂಗಳ ೫ (ಜೂನ್ ೮) ರೊಳಗಾಗಿ ಗವರ್ನ್‌ಮೆಂಟ್ ಸೆಕ್ರೆಟರಿಯವರ ಆಫೀಸಿಗೆ ಕಳುಹಿಸತಕ್ಕದ್ದು ಸೆಕ್ರೆಟರಿ ಆಫೀಸಿನಲ್ಲಿ ಈ ಪಟ್ಟಿಗಳನ್ನು ತನಿಖೆಮಾಡಿ, ಜೂಲೈ ೧ ನೇ ತಾ ಗುರುವಾರದ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲಾಗುವುದು ಚುನಾವಣೆಯ ಹಕ್ಕನ್ನು ಪಡೆದಿರುವಂಥಾ ಮೆಂಬರುಗಳಿಗೆ ಜೂಲೈ ೪ ರೊಳಗೆ ನೋಟೀಸ್ ಹೊರಡುವುದು ಆಗಸ್ಟ್ ತಿಂಗಳಲ್ಲಿ ಮೆಂಬರುಗಳು ಯೋಗ್ಯತೆ ಗಳಿಸಿರತಕ್ಕವರೆಲ್ಲಾ ತಾಲ್ಲೂಕ್ ಹೆಡ್ ಕ್ವಾರ್ಟರ್ಸಿನಲ್ಲಿ ಸಭೆ ಸೇರಿ ಚುನಾವಣೆಯು ನಡೆಯತಕ್ಕದ್ದು ಹೀಗೆ ಚುನಾಯಿಸಲ್ಪಟ್ಟವರು ಮೂರು ವರುಷ ಮೆಂಬರಾಗಿ ಎಣಿಸಲ್ಪಡುತ್ತಾರೆ ಲೋಕಲ್ ಫಂಡ್ ಬೋರ್ಡುಗಳಿಂದಲೂ, ಮ್ಯುನಿಸಿಪಲ್ ಕೌನ್ಸಿಲ್‌ಗಳಿಂದಲೂ ಗೊತ್ತಾದ ಸಂಘಗಳಿಂದಲೂ ಮೆಂಬರಾಗಿ ಬರತಕ್ಕವರ ಹೆಸರನ್ನು ಡೆಪ್ಯುಟಿ ಕಮಿಷನರುಗಳಿಗೆ ತಿಳಿಯಪಡಿಸಬೇಕು ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ತರುವಂಥಾ ವಿಷಯಗಳನ್ನು ಮೆಂಬರುಗಳು ಆಗಸ್ಟ್ ತಾ ೧೫ ರೊಳಗೆ ಡೆಪ್ಯುಟಿ ಕಮಿಷನರಿಗೆ ತಿಳಿಸಬೇಕು ಡೆಪ್ಯುಟಿ ಕಮಿಷನರು ಸೆಪ್ಟಂಬರ್ ತಾ ೪ ರೊಳಗೆ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿ ಸಭೆ ನಡಿಸಿ ವಿಷಯಗಳನ್ನು ಚರ್ಚೆಯಿಂದ ಗೊತ್ತುಮಾಡಿ ಗವರ್ನ್‌ಮೆಂಟಿಗೆ ಕಳುಹಿಸಬೇಕು ಅಕ್ಟೋಬರ್ ತಾ ೨೫ ರೊಳಗಾಗಿ ಅಡ್ರೆಸ್ಸುಗಳ ನಕಲುಗಳು ಸೆಕ್ರೆಟರಿಯವರ ಆಫೀಸಿಗೆ ತಲುಪಬೇಕು ಪ್ರಜಾ ಪ್ರತಿನಿಧಿ ಸಭೆಯು ಅಕ್ಟೋಬರ್ ತಾ ೨೭ನೇ ಬುಧವಾರ ಪ್ರಾರಂಭವಾಗುವುದು

ಮೈಸೂರು ಗೆಜೆಟ್ ಸಂಗ್ರಹ

ಗವರ್ನ್‌ಮೆಂಟಿನವರು ಚಾಮರಾಜನಗರವನ್ನು ಹೊಸ ಕಾನೂನ್ ಪ್ರಕಾರ ಮ್ಯುನಿಸಿಪಾಲಿಟಿಯಾಗಿ ಮುಂದಿನ ಜೂಲೈ ೮ ೧೯೦೯ ಅಂಗೀಕರಿಸಿರುತ್ತಾರೆ ರಾಮಸಮುದ್ರವು ಈ ಮ್ಯುನಿಸಿಪಾಲಿಟಿಗೆ ಸೇರಿರುವುದು

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್‌ನಲ್ಲಿ ಈಗಿರುವವರೇ ಈ ವರುಷದ ಆಗಸ್ಟು ಅಖೈರಾಗುವವರೆಗೆ ಮೆಂಬರುಗಳಾಗಿರತಕ್ಕದ್ದೆಂದೂ, ಮೆ॥ ಮೊರಸ್ ಪಿ ಐಯರವರ ಅವಧಿಯು ಅಕ್ಟೋಬರ್ ತಾ ೨೫ ಕ್ಕೆ ಪೂರೈಸುವುದೆಂದೂ ಪ್ರಕಟಮಾಡಿದೆ

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಅ॥ ಸರ್ಜನ್ ಮೆ॥ ಸಿ ಎ ನಂಜಪ್ಪನವರಿಗೆ ಮೇ ತಾ ೧ ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಅ ಸರ್ಜನ್ ಮೆ॥ ಎಂ ಜಗನ್ನಾಥಂ ಪಿಳ್ಳೆಯವರು ಆ ಆಸ್ಪತ್ರೆಯಲ್ಲಿ ಮೆ ಸಿ ಎ ನಂಜಪ್ಪನವರ ಕೆಲಸದ ಛಾರ್ಜನ್ನು ವಹಿಸಿರತಕ್ಕದ್ದು

ಶ ಕಂಟ್ರೋಲರ್ ಮೆ ಟಿ ಸೀತಾರಾಜಚೆಟ್ಟಿಯವರಿಗೆ ಕೊಟ್ಟಿದ್ದ ರಜವನ್ನು ಅವರು ಉಪಯೋಗಿಸಿಕೊಳ್ಳದೆ ಇರುವ ಕಾರಣ ರದ್ದುಮಾಡಿದೆ

ಮುಂದೆ ಹೇಳುವವರಿಗೆ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನು ವಹಿಸಿದೆ - ಬೆಂಗಳೂರು ಸಬ್ ಜಡ್ಜ್ ಮೆ ಟಿ ಆರ್ ಅನಂತರಾಮ ಐಯರವರು, ಮತ್ತು ಬೆಂಗಳೂರು ಪ್ರಿನ್ಸಿಪಲ್ ಮುನ್ಸಿಫ್ ಮೆ॥ ಎಂ ಎಲ್ ಶ್ರೀಕಂಠೇಗೌಡರವರು

ಕುಣಿಗಲ್ ಸಬ್ ರೆಜಿಸ್ಟ್ರಾರ್ ಮೆ॥ ಬಿ ಆನಂದರಾಯರಿಗೆ ಹಂಗಾಮಿಯಾಗಿ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಕೊಟ್ಟಿದೆ

ಶಿವಮೊಗ್ಗ ಡಿವಿಜನ್ ಎಗ್ಜಿಕ್ಯುಟಿವ್ ಇಂಜಿನಿಯರ್ ಮೆ ಆರ್ ಪಿ. ಸುಂದರಂ ಐಯರವರಿಗೆ ಹದಿಮೂರು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಸಬ್ ಅ|| ಇಂಜನಿಯರ್ ಮೆ|| ಎಸ್. ಶ್ರೀನಿವಾಸ ಐಯಂಗಾರವರನ್ನು ನಾಲಾ ಸರ್ವೇಸಿ ಡಿವೀಜನ್ನಿಂದ ಅರಮನೆ ಡಿವಿಜನ್ನಿಗೆ ವರ್ಗವಾಗಿದೆ

ಮುಂದೆ ಹೇಳುವ ಬಡ್ತಿಗಳು ಹುಕುಂ ಪಡೆದಲ್ಪಟ್ಟಿವೆ.—ಸೂಪರ್‌ವೈಜರ್ ೨ ನೇ ಕ್ಲಾಸಿಗೆ ಮೆ|| ಎ. ವಿ. ಕೃಷ್ಣಸ್ವಾಮಿ ಅಯ್ಯಂಗಾರ್‌ರವರೂ, ಮೆ|| ರಾಮಕೃಷ್ಣಯ್ಯನವರೂ, ಸೂಪರ್‌ವೈಜರ್ ೩ ನೇ ಕ್ಲಾಸಿಗೆ ಮೆ|| ಜಿ. ಆರ್. ನರಸಿಂಹ ಐಯಂಗಾರ್ಯರೂ, ಮೆ|| ಕೆ. ಆನಂದರಾಯರೂ, ಮೆ|| ಎಂ. ಕೃಷ್ಣರಾಯರೂ, ಓವರ್‌ಸಿಯರ್ ೧ ನೇ ಕ್ಲಾಸಿಗೆ ಮೆ|| ಎಂ. ವೆಂಕಟರಾಯರು.

ಬಾತ್ಮಿದಾರರಿಗೆ ನೋಟೀಸು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್

ಗೋಮುಖವ್ಯಾಘ್ರ, ಬೆಂಗಳೂರು; ಸಜ್ಜನದಾಸ, ಚಿಕವಾಡಿ; ಅಜ್ಞಾಯಕಲು, ಚಾಮರಾಜನಗರ, ಗ್ರಾಮವಾಸಿ, ದೊಡ್ಡಬಳ್ಳಾಪುರ, ಪೋಸ್ಟ್ ಆಫೀಸ್.—ಸ್ಥಳ ಸಂಕೋಚದಿಂದ ಈ ಬಾತ್ಮಿಗಳನ್ನು ಪ್ರಕಟಿಸದೆ ನಿರಾಕರಿಸಬೇಕಾಗಿದೆ.—ಎಡಿ।

ಕರೆಸ್ಪಾಂಡೆನ್ಸ್.

ಮೊಳಕಾಲ್ಮುರು ತಾಲ್ಲೂಕು ಕೋನಸಾಗರ.

ಅಯ್ಯಾ,

ಈ ಗ್ರಾಮಕ್ಕೆ ಮಳೆಯಿಲ್ಲ. ಮೋಡಗಳೇನೋ ಕವಿದುಕೊಂಡು ಮಳೆ ಬರುವುದಕ್ಕೆ ಸೂಚನೆಯನ್ನು ತೋರುತ್ತಿವೆ. ಈಗ್ಗೆ ೧೫—೨೦ ದಿನಗಳ ಕೆಳಗೆ ಸ್ವಲ್ಪ ಸೋನೆಯ ಮಳೆಯು ಮಾತ್ರ ಬಂದುದರಿಂದ ರೈತರು ತಮ್ಮ ತಮ್ಮ ಭೂಮಿಗಳನ್ನು ಬಿತ್ತನೆಗೆ ಸಿದ್ಧಪಡಿಸಿಕೊಂಡು, ಮಳೆಯನ್ನೇ ಇದಿರುನೋಡುತ್ತಿದ್ದಾರೆ. ನೀರಿನ ಅಭಾವವು ದಿನದಿನಕ್ಕೆ ಹೆಚ್ಚುತ್ತಲೇ ಇದೆ. ಈ ದೊಡ್ಡ ಗ್ರಾಮಕ್ಕೆಲ್ಲಾ ಒಂದೇ ಒಂದು ಸೇದುವ ಭಾವಿಯಲ್ಲಿ ಮಾತ್ರ ನೀರು ತಕ್ಕಮಟ್ಟಿಗೆ ಇರುತ್ತದೆ. ಉಳಿದ ೩—೪ ಬಾವಿಗಳಲ್ಲಿ ಸುತರಾಂ ನೀರು ಇಲ್ಲದಿರುವುದರಿಂದ ಜನರು ತುಂಬುವ ಭಾವಿಗಳಿಗೆ ಹೋಗಲು ಯತ್ನಿಸುತ್ತಾರೆ. ಆ ಭಾವಿಗಳಲ್ಲೂ ಸಹ ನೀರು ಅಷ್ಟಕ್ಕಷ್ಟೇ ಇರುತ್ತದೆ. ಗ್ರಾಮವಾಸಿಗಳು ಕ್ಷಾಮವನ್ನೇ ನಿರೀಕ್ಷಿಸುತ್ತಿವೆ. ಗ್ರಾಮ ಶುಚಿ ವಿಷಯ ಹೇಳಬೇಕಾಗಿಯೇ ಇಲ್ಲ. ಸಂದುಗೊಂದುಗಳಲ್ಲಿ ಗಂಜಳ, ಕಸ ಮುಂತಾದವು ತುಂಬಿಕೊಂಡು ಇರುವುದರಿಂದ ಆಯಾ ಮನೆಯ ರೈತರೇ ಗುಡಿಸಿ ಹಾಕಬೇಕಾಗಿದೆ. ಈ ವಿಷಯವು ಯಾವ ಆಫೀಸರ ಗಮನಕ್ಕೆ ಬಾರದಿರುವುದು ತುಂಬಾ ಶೋಚನೀಯವಾಗಿದೆ. ಈಗಲಾದರೂ ಅಧಿಕಾರಿಗಳು ಗ್ರಾಮಾರೋಗ್ಯವಿಷಯದಲ್ಲಿ ನಿಗಾ ಕೊಡುವರೆಂದು ಹಾರೈಸುತ್ತೇನೆ.

ನಮ್ಮ ರೈತರಿಗೆ ವಸೂಲು ಆಬಾದು ಮಾಡಲಿಕ್ಕೂ ಬಾವಿ ವಗೈರೆ ದುರಸ್ತು ಮಾಡಿಸಲಿಕ್ಕೂ ಈ ಮೊಳಕಾಲ್ಮುರು ತಾಲ್ಲೂಕಿನಲ್ಲಿ ೧—೨ ಗ್ರಾಮದವರಿಗೂ ಸಹ ತಕಾವಿ ಹಣವನ್ನು ಕೊಟ್ಟಿರುವುದಿಲ್ಲವೆಂಬುದನ್ನು ಕೇಳಿದರೆ ತುಂಬಾ ಆಶ್ಚರ್ಯವೂ ವ್ಯಸನಕರವೂ ಆಗಿದೆ. ಕ್ರಮೇಣ ಒಬ್ಬ ರೈತನು ತಕಾವಿ ಹಣದ ಸಾಲಕ್ಕಾಗಿ ತಾಲ್ಲೂಕ್ ಕಛೇರಿಗೆ ಹೋದರೆ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುವುದು. ಈಗ ನಮ್ಮ ದಯಾಳು ಗವರ್ನ್‌ಮೆಂಟಿನವರು ಕ್ಷಾಮನಿವಾರಣೆಗಾಗಿ ಮಾಡಿರುವ ಮುಖ್ಯವಾದ ಏರ್ಪಾಡುಗಳು ಯಾವುವೆಂದರೆ—೧ ನೇದಾಗಿ ಕಂದಾಯದ ರಿಮಿಷನ್ ವಿಚಾರ, ೨ ನೇದಾಗಿ ರಿಲೀಫ್ ಕಾಮಗಾರಿಗಳನ್ನು ನಡೆಸುವುದು, ೩ ನೇದಾಗಿ ರೈತರಿಗೆ ಸಾಲವನ್ನು ಕೊಡುವುದು. ಈ ಮೂರು ಮಾತ್ರವೇ ಅಲ್ಲದೆ ಇತರ ವಿಧವಾದ ಸಹಾಯಗಳನ್ನೂ ಅನೇಕ ಮಾಡಿದ್ದಾರೆ, ಈಗಲೂ ಮಾಡುತ್ತಲೂ ಇದ್ದಾರೆ. ಈ ತಾಲ್ಲೂಕಿನಲ್ಲಿ ಕಂದಾಯ ರಿಮಿಷನ್ ಮಾಡುವುದು ಮತ್ತು ರಿಲೀಫ್ ಕಾಮಗಾರಿಯನ್ನು ನಡೆಸುವುದು ಹಾಗೆ ಇರಲಿ, ರೈತರಿಗೆ ಕೊಟ್ಟಿರುವ ತಕಾವಿ ಹಣದ ಸಾಲವು ತ್ರಿಶತಕ್ಕಾದರೂ ಬಂದಿಲ್ಲವೆಂಬುದನ್ನು ಕೇಳಿದರೆ ನಮ್ಮ ರೈತರ ದುರ್ಭಾಗ್ಯವೆಂದೇ ಭಾವಿಸಬೇಕಾಗಿದೆ. ಇನ್ನುಮೇಲಾದರೂ ನಮ್ಮ ಅಮಲ್ದಾರರು ಈ ವಿಷಯಕ್ಕೆ ಕ್ಷಿಪ್ರದಲ್ಲಿಯೇ ಗಮನವನ್ನು ಕೊಟ್ಟು ಕೇವಲ ಗರೀಬರಾದ ಈ ಗ್ರಾಮದ ರೈತರಿಗೆ ಯಾವ ಬಾಧಕವೂ ಉಂಟಾಗದಂತೆ ತಕಾವಿ ಸಾಲವನ್ನಾದರೂ ಕೊಡಿಸುವರೆಂದು ನಂಬಿದೇನೆ.

ಕಳೆದ ಮಾರ್ಚಿ ತಿಂಗಳಲ್ಲಿ ಸ್ಕೂಲುಗಳ ಅ. ಡೆಪ್ಯುಟಿ ಇನ್ಸ್‌ಪೆಕ್ಟರವರು ಈ ಗ್ರಾಮದ ಸ್ಕೂಲನ್ನು ಪರೀಕ್ಷಿಸಿಕೊಂಡು ಹೋದರು. ವಿದ್ಯಾಭಿವೃದ್ಧಿ ವಿಷಯವು ತೃಪ್ತಿಕರವಾಗಿದೆ ಎಂದು ಸಂತೋಷಪಟ್ಟರು. ಪ್ರತ್ಯೇಕವಾದ ಸ್ಕೂಲು ಮನೆಯು ಇಲ್ಲದಿರುವುದರಿಂದ ಉಂಟಾಗಿರುವ ಕೊಂದರೆಯು ವರ್ಣಿಸಲಶಕ್ಯವಾಗಿದೆ. ಆದುದರಿಂದ ಗವರ್ನ್‌ಮೆಂಟಿನವರು ಬೇಗನೆ ಈ ವಿಷಯವನ್ನು ಅನುಸ್ಥಾನಕ್ಕೆ ತಂದುಕೊಂಡು ಕಟ್ಟಡ ತಯಾರುಮಾಡಿಸಲು ಹುಕುಮಾದರೆ ಬಡವಾಯಿಗಳಾದ ಪ್ರಜೆಗಳ ಜೀವನಕ್ಕೂ ಬಾಲಕರ ವಿದ್ಯಾಭಿವೃದ್ಧಿಗೂ ಕೊರತೆಯಾಗದಂತೆ ಮತ್ತಷ್ಟು ಅನುಕೂಲವಾದೀತು.

ಪ್ರಜಾ ಹಿತಚಿಂತಕ.

ತಾಲ್ಲೂಕು ವರ್ತಮಾನಗಳು.

ಹೊಳೆನರಸೀಪುರ.—ಇದೇ ತಾಲ್ಲೂಕು ಕೆರಗೋಡು ಗ್ರಾಮದ ಕುರುಬರ ನಿಂಗಣ್ಣ ಎಂಬುವನ ಒಂದು ಘೋರವಾದ ರೋಗದಿಂದ ಅಂದರೆ, ಒಂದು ದುರ್ಮಾಂಸವು ಬೆಳೆದು ಸುಮಾರು ಹತ್ತು ವರುಷಗಳಿಂದಲೂ ಅನೇಕ ದೇಶೀಯ ವೈದ್ಯರಿಂದ ಹಲವು ಚಿಕಿತ್ಸೆಗಳನ್ನು ಹೊಂದಿದರೂ ಏನೂ ಪ್ರಯೋಜನವಾಗದೆ ಕಡೆಗೆ ಒಂದು ತಿಂಗಳ ಕೆಳಗೆ ಇಲ್ಲಿನ ಆಸ್ಪತ್ರೆಗೆ ಬಂದು ತನ್ನ ಸ್ಥಿತಿಯನ್ನೆಲ್ಲಾ ಡಾಕ್ಟರಿಗೆ ವಿಸ್ತಾರವಾಗಿ ತಿಳಿಸಿದನು. ಅವರು ಚೆನ್ನಾಗಿ ಪರೀಕ್ಷಿಸಿ ಅವನ ದೇಹಕ್ಕೆ ಶಕ್ತಿ ಬರುವ ಔಷಧವನ್ನು ೧೫ ದಿನಗಳವರೆಗೂ ಕೊಟ್ಟು, ಏಪ್ರಿಲ್ ೭ ನೇ ತಾರೀಖು ಶಸ್ತ್ರಪ್ರಯೋಗ ಮಾಡಿದರು. ಆ ದುರ್ಮಾಂಸವು ೮ ರೂಪಾಯಿ ತೂಕವಿತ್ತು. ರೋಗಿಗೆ ಏನಾದರೂ ಅಪಾಯ ಸಂಭವಿಸೀತೆಂದು ಡಾಕ್ಟರವರೂ ಕಂಪೌಂಡರೂ ಹಗಲೂ ರಾತ್ರಿ ೮ ದಿನಗಳು ಅವನ ಹತ್ತಿರವೇ ಇದ್ದು ಅವನಿಗೆ ಚಿಕಿತ್ಸೆ ಮಾಡುತ್ತಾ ಬಂದರು. ಈಗ ರೋಗಿಯು ತಕ್ಕಷ್ಟು ಆರೋಗ್ಯವಾಗಿರುತ್ತಾನೆ. ಇನ್ನು ೮ ದಿನಗಳಲ್ಲಿ ಸಂಪೂರ್ಣ ಸ್ವಸ್ಥವನ್ನು ಹೊಂದಿ ತನ್ನ ಊರಿಗೆ ಹೋಗಬಹುದೆಂಬ ಭರವಸವಿದೆ. ಈ ವಿಚಾರವು ಅನೇಕರಿಗೆ ತಿಳಿದಿರಲಾರದು. ಇದು ದೊಡ್ಡ ಆಸ್ಪತ್ರೆಯಲ್ಲಿ ನಾಲ್ಕಾರು ಜನ ಪರಿಪಕ್ವ ಡಾಕ್ಟರುಗಳಿಂದ ಬಹಳ ಎಚ್ಚರಿಕೆಯಿಂದ ನಡಿಸಬೇಕಾದ ಕೆಲಸವಾಗಿದೆ. ಇದನ್ನು ಇಂಥಾ ಚಿಕ್ಕ ಆಸ್ಪತ್ರೆಯಲ್ಲಿ ಡಾಕ್ಟರೂ ಸ್ವಲ್ಪ ತಿಳುವಳಿಕೆಯುಳ್ಳ ಒಬ್ಬ ಕಾಂಪೌಂಡರ ಸಹಾಯದಿಂದ ಮಾಡಿರುವುದು ಸಂತೋಷಕರವಾಗಿದೆ. ಇವರ ದೆಸೆಯಿಂದ ಅನೇಕ ರೋಗಿಗಳು ಬಂದು ಇಲ್ಲಿ ಚಿಕಿತ್ಸೆ ಹೊಂದುವದಕ್ಕೆ ಒಳ್ಳೇ ಮಲ್ಲಜ್ಞಾದಾಯಿತು.

ದಾವಣಗೆರೆ.—ಈಗ್ಗೆ ೧೦—೧೨ ದಿನಗಳ ಕೆಳಗೆ ಇಲ್ಲಿನ ಮಾರ್ವಾಡಿ ದೇವರಾಜು ಪೊಮ್ರಾಜ ಎಂಬುವರ ಅಂಗಡಿಯಲ್ಲಿ ೨,೭೦೧ ರೂಪಾಯಿನ ನೋಟು ಕಳುವಾಯಿತು. ಹ್ಯಾಗಂದರೆ ರಾತ್ರಿ ೮ ಗಂಟೆ ಸಮಯದಲ್ಲಿ ೩,೭೦೦ ರೂಪಾಯಿ ಇಟ್ಟಿದ್ದ ಒಂದು ಲಕೋಟೆಯನ್ನು ಪೆಟ್ಟಿಗೆಯಿಂದ ಈಚೆಗೆ ತೆಗೆದು ೧,೦೦೦ ರೂಪಾಯಿ ನೋಟನ್ನು ಮಾತ್ರ ತೆಗೆದುಕೊಂಡು, ರೂಪಾಯಿ ಕರುವ ಉದ್ದಿಶ್ಯ ಬೇರೆಯವರ ಬಳಿಗೆ ಹೋದರು. ಅಂಗಡಿಯಲ್ಲಿ ಸ್ವಲ್ಪ ಕುಟುಂಬ ಜಾಗರತಕ್ಕವರು ಮಾತ್ರ ಇದ್ದರು. ಆ ಕಾಲದಲ್ಲಿ ಬೇತೂರು ಚನ್ನಪ್ಪನೆಂಬುವ ವರ್ತಕನು ಆ ಪೆಟ್ಟಿಗೆಯ ಸಮೀಪದಲ್ಲಿಯೇ ಕುಳಿತುಕೊಂಡು ಹಣವನ್ನು ಕೇಳಿದನಂತೆ. ನೋಟು ಕಳಗೆ ಇಟ್ಟ ಸಂಗತಿಯನ್ನು ಹಣವನ್ನು ತರುವದಕ್ಕೆ ಹೋದವನು ಅಂಗಡಿಯಲ್ಲಿದ್ದವನಿಗೆ ಯಾವ ಸ್ಥಳದಲ್ಲಿ ಇಟ್ಟದೇನೆಂಬುವ ಸಂಗತಿಯನ್ನು ತಿಳಿಸಿ ಹೋದನು. ಆ ನೋಟು ಚನ್ನಪ್ಪನು ಕುಳಿತುಕೊಂಡ ತಡಿಯ ಕೆಳಭಾಗದ ಮಗುಲಲ್ಲಿ ಇಟ್ಟಿದ್ದನಂತೆ. ಹಣವನ್ನು ತೆಗೆದುಕೊಂಡು ಬಂದು ನೋಟನ್ನು ನೋಡುವಾಗ್ಗೆ ನೋಟು (ಅಂದರೆ, ೨,೭೦೦ ರೂ.) ಇರಲಿಲ್ಲ. ತಕ್ಷಣವೇ ಆತನು ರಾತ್ರಿ ೧೦ ಗಂಟೆಗೆ ಚೀಫ್ ಪೋಲೀಸ್ ಜಮೇದಾರರ ಬಳಿಗೆ ಹೋಗಿ ಮೇಲ್ಕಂಡ ಆಸಾಮಿಯೇ ತೆಗೆದುಕೊಂಡಿದ್ದಾನೆಂದು ರಿಪೋರ್ಟು ಮಾಡಿದ ಮೇಲೆ ಸದರಿ ಚನ್ನಪ್ಪನನ್ನು ಕರೆಸಿ ೨—೩ ಗಂಟೆ ಕಾಲ ಲಾಕಪ್ಪಿನಲ್ಲಿಟ್ಟುಕೊಂಡಿದ್ದು ಅವನನ್ನು ಬಿಟ್ಟುಬಿಟ್ಟರಂತೆ. ಬೆಳಗ್ಗೆ ೧೦—೧೧ ಗಂಟೆಯಲ್ಲಿ ಆತನ ಮನೆಯನ್ನು ಜಪ್ತಿಮಾಡಿದರು. ಪೊಂಮಾಜಿ ದೇವರಾಜ ಎಂಬುವರೇ ಮೇಲಿನ ಅಧಿಕಾರಿಗಳಿಗೆ ತಂತಿವರ್ತಮಾನ ಕೊಟ್ಟು ತಿಳಿಸಿದರೆಂದು ಗೊತ್ತಾಯಿತು. ಈಗ ಆಸಾಮಿಯನ್ನು ಲಾಕಪ್ಪಿನಲ್ಲಿ ಇಟ್ಟಿದ್ದಾರೆ. ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರು ಆ ದಿನ ಊರಿನಲ್ಲಿ ಇರಲಿಲ್ಲ. ಇವರು ತುಂಬಾ ಗಟ್ಟಿಗರು. ಅನೇಕ ಕಡೆ ಇಂಥಾ ಸಂಗತಿಗಳನ್ನು ಪತ್ತೆ ಮಾಡಿದವರು. ಇವರು ಇದನ್ನೂ ಸರಿಯಾಗಿ ಪತ್ತೆ ಮಾಡಿ ಕೀರ್ತಿ ಪಡೆಯುವರೆಂದು ನಂಬಿದೇನೆ.

ಚಿತ್ರದುರ್ಗ.—ನಮ್ಮ ಮ್ಯುನಿಸಿಪಾಲಿಟಿ ಪ್ರೆಸಿಡೆಂಟರಾದ ಮೆ|| ಎಂ. ಚೆಂಗಯ್ಯಶೆಟ್ಟಿಯವರು ಕಳೆದ ವಾರ ಅಲ್ಲಲ್ಲಿರುವ ಬಾವಿಗಳನ್ನು ಪರೀಕ್ಷೆ ಮಾಡಿ ಹೂಳನ್ನು ತೆಗೆಸಿ ಅವುಗಳನ್ನೆಲ್ಲಾ ಶುಚಿಮಾಡಿಸಬೇಕೆಂದು ಅಪ್ಪಣೆಕೊಡಿಸಿದರು. ಬುರುಜನಹಟ್ಟಿಯ ಹೊಂಡವೆಲ್ಲಾ ಒಣಗಿ ಹೋಗಿರುವದರಿಂದ ಆ ಹೊಂಡದಲ್ಲಿ ಇನ್ನೊಂದು ಭಾವಿಯನ್ನು ತೆಗೆಯಬೇಕೆಂದು ಹುಕುಂ ಮಾಡಿದರು. ನೀರನ್ನು ಪಂಪಿನಿಂದ ಎತ್ತುವ ಕೆಲಸವನ್ನು ಸದ್ಯ ಒಂದು ದಿನ ನಿಲ್ಲಿಸಿ ಒಡ್ಡಿನ ಭಾವಿಯಲ್ಲಿರುವ ಹೂಳನ್ನೆಲ್ಲಾ ಚೆನ್ನಾಗಿ ತೆಗಿಸಿರುವದರಿಂದ ಅಲ್ಲಿರುವ ನೀರು ಇನ್ನು ಕೆಲವು ದಿನ ಬಂದೀತು. ಅದು ಮುಗಿಯುವದರೊಳಗಾಗಿ ಮಳೆ ಬಾರದೆ ಇದ್ದರೆ ಊರಿಗೆ ನೀರಿನಲ್ಲಿ ಸರಬರಾಯಿಗೆ ಬಹಳ ಕಷ್ಟವಾಗುವದೆಂದು ಹೇಳಬೇಕು. ದೊಡ್ಡಕೆರೆಯಲ್ಲಿ ಒಂದು ವಿಸ್ತಾರವಾದ ಭಾವಿಯನ್ನು ತೆಗೆಸಿದ್ದರಲ್ಲಿ ಅದರಲ್ಲಿ ನೀರು ಬಹು ತೃಪ್ತಿಕರವಾಗಿ ಸಿಕ್ಕಿತ್ತು. ಇದನ್ನು ಒಂದೆರಡು ದಿನಗಳಲ್ಲಿ ಅಲ್ಲಿಂದಲೇ ನೀರು ಎತ್ತಿಸಬಹುದೆಂಬ ನಿರೀಕ್ಷೆ ಇತ್ತು. ಆದರೆ ಅನೇ ದಿನ ಸಾಯಂಕಾಲ ಅದರ ಪಡುವಲ ಕಡೆಯ ದಡವು ಕುಸಿದು ಹೋಯಿತು. ಇವನ್ನೆಲ್ಲಾ ತೆಗೆಸಿ ನೀರನ್ನು ಅಲ್ಲಿಂದ ಎತ್ತಿಸುವದಕ್ಕೆ ಸಾವಕಾಶವಾಗುವುದು. ಅಂತೂ ನಮ್ಮ ಡೆಪ್ಯುಟಿ ಕಮಿಷನರವರು ಟೌನ್ ನೀರಿನ ಸರಬರಾಯಿಗಾಗಿ ತಮ್ಮಿಂದ ಆದಮಟ್ಟಿಗೂ ಸಾಹಸಪಡುತ್ತಿರುವದು ಬಹು ಸ್ತೋತ್ರಾರ್ಹವಾಗಿದೆ. ಪ್ರಜೆಗಳ ಕಷ್ಟವು ಸಂಪೂರ್ಣವಾಗಿ ಅವರಿಗೆ ಅನುಭವಕ್ಕೆ ಬಂದಿದೆ. ಕಳೆದ ವಾರ ಇಲ್ಲಿ ಸ್ವಲ್ಪ ಮಳೆ ಆಯಿತು. ಆದರೂ ಅದರಿಂದೇನೂ ವಿಶೇಷ ಪ್ರಯೋಜನವಾಗಲಿಲ್ಲ. ಬಿಸಿಲು ಸೆಕೆ ಹೆಚ್ಚಾಗಿದೆ. ಇನ್ನು ಜಾಗ್ರತೆ ಮಳೆ ಬರುವದೆಂಬ ನಿರೀಕ್ಷೆ ಇದೆ.—ಹಿಂದಣ ವಾರ ಇಲ್ಲಿನ ಒಂದು ನಲ್ಲಿ ಬಳಿಯಲ್ಲಿ ಕೆಲವು ಬ್ರಾಹ್ಮಣರಿಗೂ ಆಸ್ಪತ್ರೆ ನೌಕರನಾದ ಒಬ್ಬ ಕುರುಬನಿಗೂ ನೀರಿನ ವಿಷಯವಾಗಿ ಜಗಳ ನಡೆದು ಕೈಕೈ ಬೆರೆದು ಒಬ್ಬ ಬ್ರಾಹ್ಮಣನಿಗೆ ಹಲ್ಲು ಮುರಿದು ಹೋಯಿತೆಂದೂ, ಉಭಯ ಪಕ್ಷದವರೂ ಕ್ರಿಮಿನಲ್ ಕೇಸು ಅರ್ಜಿ ಹಾಕಿರುವದಾಗಿಯೂ ತಿಳಿದು ಬಂದಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದ ಶನಿವಾರ ಮಧ್ಯಾಹ್ನ ಬೊಂಬಾಯಿ ಗವರ್ನರಾದ ಸರ್ ಜಾರ್ಜ್ ಕ್ಲಾರ್ಕ್ ಯವರು ಪರಿವಾರ ಸಹಿತ ರೈಲು ಹತ್ತಿ ಸಿಂಲಾ ಪಟ್ಟಣವನ್ನು ಕುರಿತು ಪ್ರಯಾಣ ಮಾಡಿದರು.

ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಶನಿವಾರದ ದಿನ ಪರಿವಾರ ಸಹಿತ ದೇಶಸಂಚಾರವನ್ನು ತೀರಿಸಿಕೊಂಡು ಮೋಟಾರ್ ಗಾಡಿಯಲ್ಲಿ ಸಿಂಲಾ ಪಟ್ಟಣವನ್ನು ತಲುಪಿದರು.

ಮಧುರಾ ಡಿಸ್ಟ್ರಿಕ್ಟ್ ಮೇಲೂರು ಡಿವಿಜನ್ ಡೆಪ್ಯುಟಿ ಕಲೆಕ್ಟರ್ ಮೆ|| ಎನ್. ಎಸ್. ಸೋಮಸುಂದರ ಶಾಸ್ತ್ರಿಯವರು ಖಜಾನೆಯ ಭಾರವನ್ನು ವಹಿಸಿದ್ದ ಕಾಲದಲ್ಲಿ ಕೆಲವು ಅಕ್ರಮಗಳು ನಡೆದದರಿಂದ ಗವರ್ನ್‌ಮೆಂಟಿನವರು ಅವರನ್ನು ಸಸ್ಪೆಂಡ್ ಮಾಡಿರುತ್ತಾರೆ. ಸರ್ಕಾರಿ ಅಧಿಕಾರಿಗಳು ತನಿಖೆ ಮಾಡುತ್ತಿರುವರು.

ಮದರಾಸ್ ಗವರ್ನ್‌ಮೆಂಟಿನವರು ದಿನಸಿಗಳ ಧಾರಣೆ ಹೆಚ್ಚಿರುವುದರಿಂದ ೩೦ ರೂಪಾಯಿನೊಳಗೆ ಸಂಬಳ ಪಡೆಯುವ ಸರ್ಕಾರಿ ನೌಕರದಾರರಿಗೆಲ್ಲಾ ಧಾನ್ಯದ ಅಲೋಯನ್ಸನ್ನು ಕೊಡಬೇಕೆಂದು ಹಿಂದೆಯೇ ಹುಕುಂ ಮಾಡಿ ಕೊಡಿಸುತ್ತಿದ್ದಾರಷ್ಟೆ. ಈ ಅಲೋಯನ್ಸನ್ನು ೧೯೦೯ ನೇ ಇಸವಿ ಸೆಪ್ಟೆಂಬರ್ ಆಖೈರುವರೆಗೆ ಜಾರಿಮಾಡಬೇಕೆಂದೂ, ಕರ್ನೂಲ್ ಡಿಸ್ಟ್ರಿಕ್ಟಿನಲ್ಲಿ ಮಾತ್ರ ಕೊಡಬೇಕಾದದಿಲ್ಲವೆಂದೂ ಈಗ ಹುಕುಂ ಕೊಟ್ಟಿರುವರು.

ಬೊಂಬಾಯಿನಲ್ಲಿ ಕಳೆದ ಗುರುವಾರ ಮುಸಲ್ಮಾನರೊಳಗೆ ಒಂದು ಮದುವೆಯಾಯಿತು. ಅಲ್ಲಿಂದ ಕೆಲವು ಭೋಜನಪದಾರ್ಥಗಳನ್ನು ತಾಂಬ್ರದ ಪಾತ್ರೆಗಳಲ್ಲಿ ತುಂಬಿ ಪೂನಾದಲ್ಲಿರುವ ಕೆಲವು ಮುಸಲ್ಮಾನರಿಗೆ ಕಳುಹಿಸಿದರು. ಇದನ್ನು ಊಟಮಾಡಿದವರ ಪೈಕಿ ಹದಿನೈದು ಮಂದಿಗೆ ಕೆಲುಬಿನ ವಿಷ ಕಾಣಿಸಿಕೊಂಡು ವಾಂತಿ ಹುಟ್ಟಿ, ಆಸ್ಪತ್ರೆಗೆ ಹೋದರು. ೮ ಮಂದಿ ಗುಣಹೊಂದಿದರೆಂದೂ, ಇನ್ನೂ ೭ ಜನರು ಆಸ್ಪತ್ರೆಯೊಳಗೆ ಚಿಕಿತ್ಸೆ ಹೊಂದುತ್ತಿದ್ದಾರೆಂದೂ ತಂತಿವರ್ತಮಾನ ಬಂದಿದೆ.

ಕಲ್ಕತ್ತೆಯಲ್ಲಿ ಹಾರಾಣ ಚಟರ್ಜಿ ಎಂಬ ಕವಿಯು ಹಲವು ನಾಟಕಗಳನ್ನು ಬರೆದಿರುತ್ತಾನೆ. ಈ ಪುಸ್ತಕಗಳನ್ನು ಕೊಂಡುಕೊಂಡು ಜನರು ನಾಟಕಗಳನ್ನು ಆಡುವರು. “ರಣಜಿತನ ಜೀವನ ಯಜ್ಞ” ಎಂಬ ನಾಟಕವು ರಾಜದ್ರೋಹಕರವಾದದೆಂದು ಕಂಡುಬಂದದರಿಂದ ಪೋಲೀಸಿನವರು ಒಂದು ಪುಸ್ತಕದ ಅಂಗಡಿಗೆ ನುಗ್ಗಿ ಆ ನಾಟಕದ ಪ್ರತಿಗಳನ್ನೆಲ್ಲಾ ಎತ್ತಿಕೊಂಡು ಹೋದರು. ಹರಿದಾಸನನ್ನು ದಸ್ತಗಿರಿ ಮಾಡಿದರು. ತಾನೇ ಆ ನಾಟಕವನ್ನು ಬರೆದವನೆಂದು ಆತನು ಒಪ್ಪಿಕೊಂಡಿದ್ದಾನೆ. ಈಗ ಅವನನ್ನು ಜಾಮೀನಿನ ಮೇಲೆ ಬಿಟ್ಟಿಲ್ಲ.

ಮದರಾಸ್ ಪಟ್ಟಣದಲ್ಲಿ ಮ. ಪಿ. ಸುಬ್ರಹ್ಮಣ್ಯಂ ಮತ್ತು ಮೆ|| ಎಂ. ಪುರುಷೋತ್ತಮನಾಯುಡು ಎಂಬುವರು ಬ್ರಾಹ್ಮಣೇತರರ ವಿದ್ಯಾಪ್ರೋತ್ಸಾಹಕ ಸಂಘವೆಂಬ ಸಭೆಯನ್ನು ಸ್ಥಾಪಿಸಿಕೊಂಡಿದ್ದಾರೆ. ಇದರ ಶಾಖೆಗಳನ್ನು ಪ್ರತಿ ಡಿಸ್ಟ್ರಿಕ್ಟಿನಲ್ಲೂ ಏರ್ಪಡಿಸುವುದಾಗಿಯೂ, ಬ್ರಾಹ್ಮಣೇತರರೆಲ್ಲಾ ವರುಷಕ್ಕೆ ತಲಾ ಒಂದು ರೂಪಾಯಿನಂತೆ ಈ ಸಂಘಕ್ಕೆ ದ್ರವ್ಯಸಹಾಯ ಮಾಡುತ್ತಾ ಬಂದರೆ ಈ ಹಣವನ್ನು ಬ್ರಾಹ್ಮಣೇತರರಲ್ಲಿ ಬಡಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೂ, ಕಸಬುಗಳನ್ನು ಹೇಳಿಕೊಡುವುದಕ್ಕೂ, ಅವರನ್ನು ಅನ್ಯದೇಶಗಳಿಗೆ ಕಳುಹಿಸಿ ತರಬೇತು ಮಾಡಿಸುವುದಕ್ಕೂ ವಿನಿಯೋಗಿಸುವುದಾಗಿಯೂ ಪ್ರಕಟಮಾಡಿರುತ್ತಾರೆ. ಇದು ದೇಶಾಭ್ಯುದಯಕ್ಕೆ ಸಹಕಾರಿಯಾದ ಏರ್ಪಾಡಾಗಿರುವುದು. ಇಂಥಾ ಸಂಘಕ್ಕೆ ಎಲ್ಲರೂ ಸಹಾಯ ಮಾಡಿಯಾರೆಂದು ನಿರೀಕ್ಷಿಸುತ್ತೇವೆ.

ಹೈದರಾಬಾದ್ ಸಂಸ್ಥಾನದಲ್ಲಿ ರಾಯಬಹದೂರ್ ಸೇಟ್ ರಾಂಗೋಪಾಲ್ ಎಂಬೊಬ್ಬ ಸಾಹುಕಾರನು ಪರದೇಶದಿಂದ ಅಪಾರವಾಗಿ ಬೆಳ್ಳಿಯನ್ನು ತರಿಸಿದನೆಂದೂ, ಅದರ ಮೇಲೆ ಅವನು ಹೈದರಾಬಾದ್ ಸರ್ಕಾರಕ್ಕೆ ಕೊಡಬೇಕಾಗಿದ್ದ ಸುಂಕವನ್ನು ಕೊಡದೆ ಮೋಸಮಾಡಿದನೆಂದೂ ಮೊಕದ್ದಮೆ ಬಂದಿತು. ಈ ವಿಚಾರವನ್ನು ತನಿಖೆ ಮಾಡುವುದಕ್ಕೆ ಕೆಲವು ಜನರನ್ನು ಪಂಚಾಯಿತರನ್ನಾಗಿ ನೇಮಿಸಿದರು. ಅವರು ವಿಚಾರಣೆ ಮಾಡಿ ಆ ಸಾಹುಕಾರನಿಗೆ ನಾಲ್ಕೂವರೆ ಲಕ್ಷ ರೂಪಾಯಿ ಜುಲ್ಮಾನೆ ವಿಧಿಸಬೇಕೆಂದು ತೀರ್ಮಾನ ಮಾಡಿದರು. ಈಚೆಗೆ ಹೈದರಾಬಾದಿನಲ್ಲಿ ಪ್ರವಾಹದ ದೆಸೆಯಿಂದ ಅನೇಕರು ಮನೆಮಠಗಳನ್ನು ಕಳೆದುಕೊಂಡರಷ್ಟೆ. ಈ ಸಾಹುಕಾರನು ತನ್ನ ಸ್ವಂತ ಹಣವನ್ನು ಮುಟ್ಟಿಸಿ ೧೫೦ ಮನೆಗಳನ್ನು ಧರ್ಮಾರ್ಥವಾಗಿ ಬಡಬಗ್ಗರಿಗೋಸ್ಕರ ಕಟ್ಟಿಸಿಕೊಟ್ಟನು. ಇದನ್ನು ನೋಡಿ ಹೈದರಾಬಾದಿನ ನೈಜಾಮರವರು ತುಂಬಾ ಸಂತೋಷಪಟ್ಟು, ಮೇಲ್ಕಂಡ ಪಂಚಾಯಿತರು ವಿಧಿಸಿದ್ದ ನಾಲ್ಕೂವರೆ ಲಕ್ಷ ರೂಪಾಯಿ ಜುಲ್ಮಾನೆಯನ್ನು ಮಾಫಿ ಬಿಟ್ಟುಬಿಡಬೇಕೆಂದು ಹುಕುಂ ಕೊಟ್ಟಿದ್ದಾರೆ.

ವಿದೇಶ ವರ್ತಮಾನಗಳು.

ಲಂಡನ್ ಪಟ್ಟಣದಲ್ಲಿ ಡ್ಯೂಕ್ ಆಫ್ ನಾರ್ಫೋಕ್ ಯವರು ತಮ್ಮ ಬಳಿ ಇದ್ದ ಚರಿತ್ರಾರ್ಹವಾದ ಒಂದು ಪ್ರಸಿದ್ಧವಾದ ತಸ್ವೀರನ್ನು ಒಂಬತ್ತು ಲಕ್ಷ ರೂಪಾಯಿಗೆ ಮಾರಿಬಿಟ್ಟರು.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಪೈಕಿ ದಕ್ಷಿಣ ಭಾಗದಲ್ಲಿರುವ ಕೆಲವು ಡಿಸ್ಟ್ರಿಕ್ಟುಗಳೊಳಗೆ ಕಳೆದ ವಾರ ವಿಶೇಷ ಸುಂಟರಗಾಳಿಯೂ ಮಳೆಯೂ ಪ್ರಾಪ್ತವಾಗಿ ೭೪ ಜನರು ಮೃತಪಟ್ಟರು. ಪೈರುಪಚ್ಚೆಗಳು ಬಹಳ ಮಟ್ಟಿಗೆ ಕೆಟ್ಟು ಹೋದವು.

ಆಫ್ರಿಕಕ್ಕೆ ಸೇರಿದ ಸೋಮಾಲಿಲಾಂಡಿನಲ್ಲಿ ಮುಲ್ಲಾನಿನ ಕಡೆಯ ಜನರಲ್ಲಿ ಬಹು ಭಯಂಕರವಾದ ಗಲಭೆಯುಂಟಾಯಿತು. ಯುದ್ಧಗಳು ನಡೆದು ಅನೇಕರು ಹತರಾದರು. ಸುಮಾರು ೧,೨೦೦ ಜನರು ಮುಲ್ಲಾನಿನ ಪಕ್ಷವನ್ನು ಬಿಟ್ಟು ಬಂದು ಇಂಗ್ಲೀಷರ ಆಶ್ರಯದಲ್ಲಿರುತ್ತಾರೆ.

ಗತಿಸಿದ ಚೀನಾ ಚಕ್ರವರ್ತಿಯವರ ಶವವನ್ನು ರಾಜಧಾನಿಯಾದ ಪೀಕಿಂಗ್ ನಗರದಿಂದ ೮೦ ಮೈಲಿ ದೂರದಲ್ಲಿರುವ ಸಮಾಧಿ ಮಂಟಪಕ್ಕೆ ಬಹು ಆಡಂಬರದೊಡನೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ. ಈ ಮೆರವಣಿಗೆಯು ಎರಡು ಮೈಲಿ ಉದ್ದಕ್ಕೆ ಹೋಗುತ್ತಿರುವುದು.

ಈ ತಿಂಗಳ ಮೊದಲನೇ ತಾರೀಖಿನಲ್ಲಿ ಬ್ಯೂನಸ್ ಏರಸ್ ಪಟ್ಟಣದಲ್ಲಿ ಪದ್ಧತಿಯ ಪ್ರಕಾರ ವಿಶೇಷವಾದ ಸಂತೋಷೋತ್ಸವಗಳು ನಡೆದವು. ಆ ದಿನ ಪೋಲೀಸಿನವರಿಗೂ ಉತ್ಸವದಲ್ಲಿನ ಪ್ರಜೆಗಳಿಗೂ ಜಗಳ ಕದನಗಳು ಹುಟ್ಟಿ ೧೨ ಜನರು ಮೃತಪಟ್ಟರು, ೧೦೮ ಮಂದಿಗೆ ಗಾಯಗಳಾಗಿವೆ.

ಹಾಲೆಂಡಿನ ಮಹಾರಾಜ್ಞಿ ವಿಲ್ಹೆಲ್‌ಮಿನಾಯವರು ಕಳೆದ ವಾರ ಹೆಣ್ಣು ಶಿಶುವನ್ನು ಹೆತ್ತರು. ಪಾರ್ಲಿಮೆಂಟ್ ಮೆಂಬರುಗಳೂ ಪ್ರಜೆಗಳೂ ಸಂತೋಷಪಟ್ಟು ಅನೇಕ ಉತ್ಸವಗಳನ್ನು ರಾಜಧಾನಿಯಲ್ಲಿ ನಡಿಸುತ್ತಿದ್ದಾರೆ. ಶಿಶುವಿಗೆ ಜೂಲಿಯಾನಾ ಲೂಯಿ ಎಮ್ಮಾ ಮೇರಿ ವಿಲ್ಹೆಮಿನಾ ಎಂಬದಾಗಿ ನಾಮಕರಣ ಮಾಡಲ್ಪಟ್ಟಿತು.

ಪರ್ಷಿಯಾ ರಾಜ್ಯದಲ್ಲಿ ಪ್ರಜಾಪಕ್ಷದವರಿಗೂ ಸುಲ್ತಾನರ ಪಕ್ಷದವರಿಗೂ ಇನ್ನೂ ಸಮಾಧಾನ ಉಂಟಾಗಲಿಲ್ಲ. ಷಾಸುಲ್ತಾನರವರು ತಮ್ಮ ಮುಖ್ಯಮಂತ್ರಿಯನ್ನೂ ಯುದ್ಧದ ಇಲಾಖೆಯ ಮಂತ್ರಿಯನ್ನೂ ಕೆಲಸದಿಂದ ವಜಾ ಮಾಡಿ, ಎರಡು ಅಧಿಕಾರಗಳನ್ನೂ ಸಾಯಬೇ ಸುಲ್ತಾನೆ ಎಂಬಾತನಿಗೆ ವಹಿಸಿರುತ್ತಾರೆ. ಈತನು ಪ್ರಜಾಪಕ್ಷದವನಲ್ಲ. ಇಂಗ್ಲೀಷ್ ಮತ್ತು ರಷ್ಯಾ ರಾಯಭಾರಿಗಳು ಈ ಬದಲಾವಣೆಯು ನ್ಯಾಯವಾದದಲ್ಲವೆಂದು ಸುಲ್ತಾನರಿಗೆ ತಿಳಿಸಿದರು. ಇಗಲ್ಲದೆ ನಾಸರ್ ಚೌಲಾ ಎಂಬ ಅಧಿಕಾರಿಯು ಪ್ರಜಾಪಕ್ಷವನ್ನು ವಹಿಸಿರುತ್ತಾನೆಂದು ತಿಳಿದು ಸುಲ್ತಾನರು ಆತನನ್ನು ಕೆಲಸದಿಂದ ವಜಾ ಮಾಡಿದರು. ರಷ್ಯಾದವರು ೪೦೦ ಮಂದಿ ಸೈನಿಕರನ್ನು ಟೇಬ್ರಿಸ್ ಪಟ್ಟಣದಲ್ಲಿ ತಂದಿಳಿಸಿದರು, ೧,೦೦೦ ಕುದುರೇ ಸವಾರರನ್ನು ೨೪ ಫಿರಂಗಿಗಳ ಸಹಿತ ಅಜತ್ಲಾಯಿ ಎಂಬ ಸೇತುವೇ ಬಳಿ ಇಟ್ಟಿದ್ದಾರೆ. ಟೇಬ್ರಿಸ್ ಪಟ್ಟಣದಲ್ಲಿ ಈಗ ನೆಮ್ಮದಿಯುಂಟಾಗಿದೆ. ಆಹಾರವಸ್ತುಗಳು ಧಾರಾಳವಾಗಿ ಬರುತ್ತಿರುವವು. ಸುಲ್ತಾನರ ಕಡೆಯ ಸೈನ್ಯವು ಟೇಬ್ರಿಸ್‌ನಿಂದ ಒಂಬತ್ತು ಮೈಲಿದೂರ ಹಿಮ್ಮೆಟ್ಟಿ ಹೋಯಿತು. ಅಂಬೆ ಬಸ್ತುಗಳ ಉಸ್ತುವಾರಿಗಾಗಿ ನೇಮಕವಾಗಿದ್ದ ರಷ್ಯಾ ಸೈನಿಕರನ್ನು ಕರಡಾಗಿ ಎಂಬ ಜನರು ತಡೆದು ಒಬ್ಬನನ್ನು ಕೊಂದು ಹಾಕಿದರು. ರಷ್ಯಾ ಸೈನಿಕರು ಕರಡಾಗಿ ಜನರಲ್ಲಿ ೩೦ ಮಂದಿಯನ್ನು ಕೈಸೆರೆ ಹಿಡಿದಿರುತ್ತಾರೆ. ಇದಲ್ಲದೆ ಮೆಸ್ಡ್ ಪಟ್ಟಣದಲ್ಲಿ ರಷ್ಯಾರಾಯಭಾರಿಯ ಸಂರಕ್ಷಣೆಗೋಸ್ಕರ ರಷ್ಯಾ ಸೈನಿಕರು ಹೋಗಿರುವರು.

ಅತಿ ಆಶ್ಚರ್ಯ! ಎಲೆಕ್ಟ್ರಿಕ್ ಕೈದೀಪ. ಸುಲಭ ಬೆಲೆ!!

30 4

ಈ ದೀಪವನ್ನು ಪಾಕೆಟ್ಟಿನಲ್ಲಿ ಇಟ್ಟುಕೊಳ್ಳುವಹಾಗೆ ಚಿಕ್ಕ ಸೈಜಿನಲ್ಲಿ



ಮಾಡಿಯಿರುತ್ತದೆ. ಇದಕ್ಕೆ ಬೆಂಕಿ, ಬತ್ತಿ, ಎಣ್ಣೆ ಸ್ವಲ್ಪವೂ ಅವಶ್ಯಕವಿಲ್ಲವು. ಇದು ವಿದ್ಯುಚ್ಛಕ್ತಿಯಿಂದ ಉರಿಯುವುದು. ಇದರಿಂದ ಯಾವ ತರಹ ಅಪಾಯವೂ ಉಂಟಾಗಲಿಕ್ಕಿಲ್ಲ. ಇದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲವು. ಮತ್ತು ಎಂಥಾ ದೊಡ್ಡ ಗಾಳಿ ಬಡಿದಾಗ್ಯೂ ಆರುವುದಿಲ್ಲವು. ಇವನ್ನು ಸೋಜಲುಗಳು ಕಾಡುಗಳಲ್ಲಿ ಪ್ರಯಾಣಮಾಡುವದಕ್ಕೆ ಬಹಳ ಉಪಯೋಗಿಸುತ್ತಲಿದ್ದಾರೆ. ಬೇಕಾದ ಕಾಲದಲ್ಲಿ ಈ ಪೆಟ್ಟಿಗೆಯ ಮೇಲ್ಭಾಗದಲ್ಲಿಟ್ಟಿರುವ ಬಟ್ಟನ್‌ನನ್ನು ಬೆರಳಿಂದ ಒತ್ತಿದ ಕೂಡಲೇ ೧೦೦ ದೀಪಗಳು ಹಚ್ಚಿದರೆ ಎಷ್ಟು ಕಾಂತಿ ಕೊಡುವುವೋ ಅಷ್ಟು ಬೆಳಕನ್ನು ಕೊಡುವುದು. ಇದು ಎಷ್ಟು ದಿವಸಗಳು ಬೇಕಾದರೂ ಬಾಳಿಕೆ ಬರುವುದು. ಉಪಯೋಗಿಸತಕ್ಕ ವಿಧಾನವು ಇದರ ಸಂಗಡ ಬರೆದು ಹಚ್ಚಿಯಿದೆ.

ಇದರ ಕ್ರಯ ರೂ. ೩—೦—೦. ವಿ. ಪಿ. ಚಾರ್ಜ್ ರೂ. ೦—೪—೦.

ದಿ ಮದರಾಸ್ ಎಲೆಕ್ಟ್ರಿಕ್ ಎಂಪೋರಿಯಂ, ಸೌಕಾರ್‌ಪೇಟೆ, ಮದರಾಸ್.

ಅಲಾರ್ಕಾನ್ ಗವರ್ನರ್ ಮೊರಲಾಸ್‌ಯವರು.

ಪೆ-ರೂ ನಾ ಶೈತ್ಯದಿಂದ ಉಂಟಾಗುವ ಸಮಸ್ತ ರೋಗಗಳಿಗೂ ತಕ್ಕ ಔಷಧವೆಂದೂ ಸಂಪೂರ್ಣವಾದ ಆರೋಗ್ಯವನ್ನೂ ಸಹಜವಾದ ಕಾಯಪುಷ್ಟಿಯನ್ನೂ ಕೊಡತಕ್ಕ ಔಷಧವೆಂದೂ ಮೆಕ್ಸಿಕೋ ರಾಜ್ಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೂ ಉತ್ತರದಿಂದ ದಕ್ಷಿಣಕ್ಕೂ ಎಲ್ಲಾ ಪ್ರದೇಶಗಳಲ್ಲೂ ಪ್ರಖ್ಯಾತವಾಗಿದೆ



ಘನ ಮಾ ನು ಯಲ್ ಅಲಾರ್ಕಾನ್ ಮೊರಲಾಸ್ ಗವರ್ನರು ಮೆಕ್ಸಿಕೋ

ಡಾ ಎಸ್ ಬಿ ಹಾರ್ಟ್‌ಮನ್‌ರಿಗೆ 7 18

ಕೊಲಂಬಸ್ ಓಹಿಯೋ ಅಮೆರಿಕ

ಅನೇಕ ಜನನ್ನು ನಿಮ್ಮ ಔಷಧಿ ಸೇವಿಸುವ ತೆ ಪ್ರೋತ್ಸಹಪಡಿ ದ್ದು ಅವರಿಗೆ ಉಪಕಾರವಾ ವಿಷಯವಾ ಸ್ಥ ಳಗಳ ಗ ತಿಳಿಸುತ್ತೇನೆ ಇದರಿಂದ ಫಲವನ್ನು ನಾ ಪಡೆ ದವು ಕೊಟ್ಟಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ

ಮೊರಲಾಸ್ ನಿಮ್ಮ ಪ್ರೀತಿಪಾತ್ರನಾದ

ಡಿಸೆಂ ೨ ೧ ೦೫ ಮಾನ್ಯುಯಲ್ ಅಲಕಾರ್ನ್

ಪೆರೂನಾವಿನ ದೊಡ್ಡ ಪರೀಕ್ಷೆ

ಪ್ರತಿ ಒಂದು ದೇಶದ ಹವಾಸ್ಥಿತಿಯೂ ಆದದಕ್ಕೆ ಅನುಗುಣವಾಗಿಯೂ ವಿಜಾತೀಯವಾಗಿಯೂ, ಆದದ್ದರಿಂದ ಅಲ್ಲಲ್ಲಿಗೆ ತಕ್ಕ ರೋಗಗಳನ್ನುಳ್ಳದ್ದಾಗಿಯೂ ಇವೆ

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಯನ್ನು ಪಡೆದಿರುವ ಪೆರೂನಾವಿನ ಗುಣಗಳನ್ನು ಪರಿಕ್ಷಾರ್ಥವಾಗಿ ಪರೀಕ್ಷೆಮಾಡುವುದಕ್ಕೆ ಮೆಕ್ಸಿಕೋ ರಾಜ್ಯ ಒಂದೇ ಸಾಕಾಗಿದೆ ಆ ರಾಜ್ಯದಲ್ಲಿ ಅನಂತ ಶೈತ್ಯವೂ, ಅತ್ಯಂತ ಉಷ್ಣವೂ ಸಾಧಾರಣವೂ ಮಧ್ಯಸ್ಥವೂ ಆದ ಹವಾಗುಣವೂ ಉಳ್ಳ ಪ್ರದೇಶಗಳೆಲ್ಲಾ ವಿಶೇಷವಾಗಿರುತ್ತವೆ

ಮೆಕ್ಸಿಕೋದಲ್ಲಿ ಬಹಳವಾಗಿ ಹುಟ್ಟುವ ಶೈತ್ಯರೋಗಗಳಿಗೂ ಉತ್ತರದೇಶದ ಪ್ರಾಂತಗಳಲ್ಲಿ ಹುಟ್ಟತಕ್ಕ ಶೈತ್ಯ ರೋಗಗಳಿಗೂ ತಾರತಮ್ಯವಿರುತ್ತದೆ

ಚಳಿರಾಜ್ಯಗಳಲ್ಲಿ ಜನಗಳಿಗೆ ವಿಶೇಷವಾಗಿ ಮೂಗು ಮತ್ತು ಗಂಟಲುಗಳಲ್ಲಿ ಶೀತ ಹುಟ್ಟಿ ಪ್ರಬಲವಾಗುವುದು ಉಷ್ಣರಾಜ್ಯಗಳಲ್ಲಿ ಶೀತರೋಗಗಳೆಲ್ಲಾ ಮನುಷ್ಯನ ಹೊಟ್ಟೆಯೊಳಗಿರುವಂಥಾ ಅನ್ನಕೋಶ ಪಿತ್ತಕೋಶ, ಮಲಕೋಶ ಜಲಬಂಧೆಯಕೋಶ, ಈ ಮೊದಲಾದವುಗಳಿಗೆ ಶೈತ್ಯಹಿಡಿದು ಅಂತರ್ಯವಾದ ನಾನಾ ರೋಗಗಳನ್ನು ಹುಟ್ಟಿಸುತ್ತೆ

ಈ ಪ್ರಕಾರ ಅವರ ಲಕ್ಷಣಗಳು ನಾನಾ ಪ್ರಕಾರವಾಗಿದ್ದರೂ ರೋಗಕ್ಕೆ ಕಾರಣವೇನೋ ಒಂದೇ ಆಗಿದೆ ಈ ಶೈತ್ಯವು ನೆತ್ತಿಯತ್ತಿರಬಹುದು ಗಂಟಲು ಹಿಡಿದಿರಬಹುದು ಒಳಹೊಟ್ಟೆ ಅಬ್ಬೊಟ್ಟೆಗಳನ್ನು ಅಂಟಿಕೊಂಡಿರಬಹುದು ಆದರೂ ಶೀತವೆ ಅಷ್ಟಕ್ಕೂ ಕಾರಣವು

ಶೀತರಾಜ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೆ ಪೆರೂನಾವು ಎಷ್ಟು ಖಂಡಿತ ಗುಣಕಾರಿಯಾಗಿ ಕಂಡುಬಂದಿರುವುದೋ ಅದೇ ರೀತಿ ಉಷ್ಣರಾಜ್ಯಗಳ ಶೀತರೋಗಗಳಿಗೂ ನಮಾ ಗುಣಕಾರಿಯಾದ ಔಷಧವೆಂದು ಪ್ರಸಿದ್ಧಿಗೊಂಡಿದೆ

ಪೆರೂನಾವು ಶೈತ್ಯರೋಗಗಳಿಗೆ ಪರಮೌಷಧವಾಗಿರುವುದು ಮಾತ್ರವೇ ಅಲ್ಲ ಅದು ಮಹಾ ಬಲಕಾರಿಯಾದ ಮತ್ತು ಪುಷ್ಟಿಕೊಡುವ ಸೇವನಾ ಔಷಧವೆಂದೂ ಯಶಸ್ಸನ್ನು ಪಡೆದಿರುತ್ತದೆ

ಪೆರೂನಾದಲ್ಲಿ ಬಲವನ್ನೂ ಕಾಯಪುಷ್ಟಿಯನ್ನೂ ಕೊಡುವಂಥಾ ಗುಣಗಳಿರುವುದರಿಂದಲೇ ಉಷ್ಣರಾಜ್ಯಗಳವರು ಅದನ್ನು ವಿಶೇಷವಾಗಿ ಪ್ರೀತಿಸಿ ಉಪಯೋಗಿಸಿ ಹೊಗಳುತ್ತಾರೆ

ಪೆರೂನಾ ಸ್ವಭಾವಸಿದ್ಧವಾದ ಬಲಕೊಡುವ ಸೇವನಾ ಔಷಧವಾಗಿರುತ್ತದೆ ಅದು ದೇಹದೊಳಗಿರತಕ್ಕ ನಾನಾ ಕೋಶಗಳ ಕಾರ್ಯಗಳನ್ನು ಕ್ರಮಕ್ಕೆ ತಂದಿಟ್ಟು ಪುಷ್ಟಿಮಾಡತಕ್ಕದ್ದಾಗಿದೆ

ಅದು ಪಕ್ವದ ಚಲನೆಗೆ ಚಟುವಟಿಕೆಯನ್ನು ಕೊಡುತ್ತದೆ ತಿಂದ ಆಹಾರವನ್ನು ಅದು ಜೀರ್ಣಗಿ ಆರೋಗ್ಯ ಪರಿಪ್ಕಾರವಾಗಿ ದೇಹದ ಅಂಗಾಂಗಗಳಿಗೆ ವ್ಯಾಪಿಸುವಂತೆಯೂ ಅದನ್ನು ಎಲಕಡಿಸುವಂತೆ ಎರ ಕೆಲಸವಾದುವುದು

ಅದು ಬಲವನ್ನು ಕೊಟ್ಟು ಶರೀರ ದಮ್ಮವನ್ನು ವೃದ್ಧಿಮಾಡುವುದಲ್ಲದೆ ದೇಹ ದನ್ನೂ ಮನಸ್ಸಿನ ಅಸ್ವಸ್ಥತೆಯನ್ನೂ ನಿವಾರಣೆಮಾಡುತ್ತದೆ ಆದರೆ ಇದು ಮದವ್ಯ ಪ್ರತಿಕೆಗಳಂತೆ ಕ್ಷಣಿಕವಾದ ರಸ್ತಿಯನ್ನು ಕೊಡುವಂಥಾದ್ದಲ್ಲವು

ಚಟುವಟಿಕೆಯೂ ಆರೋಗ್ಯವೂ

ಮಿ| ರಿಚರ್ಡ್ ಕ್ಯಾಲ್ವರ್ಟ್ ಎವೆಂಡ್ರಾರ್ ಬೀದಿ ಬ್ರೂಕ್ಲಿನ್ ನ್ಯೂಯಾರ್ಕ್ ಅಮೇರಿಕ ಈತ ಬರೆಯುವುದು —

ಹಸಿವನಿಗೆ ಆಹಾರ ಹ್ಯಾಗೋ ಬಾಯಾರಿದವನಿಗೆ ನೀರು ಹ್ಯಾಗೋ ಹಾಗೆ ಕಾಯಿಲೆಯವನಿಗೆ ಪೆರೂನಾವು ಇರುವುದೆಂದು ತಿಳಿಯಿರಿ

ಡಾಕ್ಟರುಗಳಿಗಿಂತಲೂ ಪೆರೂನಾವು ಅತಿ ಸುಲಕ್ಷಣವಾಗಿ ರೋಗವನ್ನು ವಾಸಿಮಾಡತಕ್ಕದ್ದೆಂದು ನನ್ನ ಮನಸ್ಸಿಗೆ ತೋರಿದೆ

ಅನೇಕ ವರುಷಗಳ ತನಕ ನನಗಾ ಆಹಾರ ಜೀರ್ಣವಾಗುತ್ತಿರಲಿಲ್ಲ ನನ್ನ ಪಿತ್ತಕೋಶವು ಮಂದಗತಿಯಲ್ಲಿತ್ತು

ಆಗಾಗ್ಗೆ ರುಚಿಯು ಹಾಗದೆ ಕಟ್ಟಿ, ಭೇದಿಯಾಗುತ್ತಲೂ ಹೊಟ್ಟೆ ನೋಯುತ್ತಲೂ ಇದ್ದಿತು

ನನಗೆ ಅನುಕೂಲ ಮಾಡಬೇಕೆಂದು ಡಾಕ್ಟರುಗಳು ತಮ್ಮ ಕೈಲಾದ ಮಟ್ಟಿಗೂ ಪ್ರಯತ್ನಪಟ್ಟರು ಅವರೆ ನನಗಿದ್ದ ನಿಜವಾದ ರೋಗಲಕ್ಷಣವೇ ಅವರಿಗೆ ತಿಳಿಯದೆಹೋಯಿತೋ ಅಥವಾ ಅವರು ಸರಿಯಾದ ಔಷಧವನ್ನು ಕೊಡದಹೊ ದರೇ

ಇಷ್ಟೊಂದು ದಿವಸಗಳಲ್ಲಿ ಪೆರೂನಾವು ನನಗೆ ವಾಸಿಮಾಡಿತು ಅದು ನನ್ನನ್ನು ಚಟುವಟಿಕೆಯುಳ್ಳವನಾಗಿಯೂ ಆರೋಗ್ಯವಾಗಿಯೂ ಮಾಡಿತು ನಿಜವಾಗಿಯೂ ನಿಮಗೆ ನಾನು ಕೃತಜ್ಞನಾಗಿರುವೆನು

ಸ್ನೇಹಿತನು ಪೆರೂನಾ ಸೇವಿಸೆಂದು ಹೇಳಿದನು

ಮಿ ಚಾರ್ಲ್ಸ್ ಗ್ ಫ್ಲೆಚ್‌ವೇಲ್ ಟೆನ್ನಿ ಅಮೇರಿಕ ಈತ ಬರೆಯುವುದು —

ಎರಡು ವರುಷಕಾಲ ಎಸ ಸ್ತ್ರಿಗೆ ಶಿತಬಡಿದಿತ್ತು ಒಬ ಸ್ನೇಹಿತನು ಬಂದು ಪೆರೂನಾ ಸೇವಿಸು ಎಂದು ನನಗೆ ಹೇಳಿದನು ಅದರ ಫಲದ ಸಂಪೂರ್ಣವಾಗಿ ವಾಸಿಯಾಯಿತೆಂದು ಲಿಖಿ ಪಡುತ್ತ

ಏಳು ವರುಷದ ಶೈತ್ಯರೋಗವು

ಮಿ ಅಂಡರಿಕಸ್ ಗಾಡಿ ಸ ೧ ನೇ ಬೀದಿ ಕ್ಯಾರ್ಕ ಸ್ ಪಟ್ಟಣ ಮಿಸೌರಿ ಅಮೇರಿಕ ಈತ ಬರೆಯುವುದು —

ನನಗೆ ವಾಸಿಯಾದದ್ದಕ್ಕೆ ನಿಮನ್ನು ಎಷ್ಟು ವಂದಿಸಿದರೂ ತೀರದು ನಾನು ಏಳು ವರುಷಗಳ ವರೆಗೆ ಶೀತ ನೆಗಡಿ ಕೆಮ್ಮು ಅನುಭವಿಸಿ ನೂರಾರು ದ್ರವ್ಯವನ್ನು ಖರ್ಚುಮಾಡಿ ಔಷಧಿಗಳನ್ನು ಸೇವಿಸಿದೆನು ಆದರೂ ನನ್ನ ಶೈತ್ಯರೋಗವು ಕೇಳಲಿಯೂ ವಿನಹಾ ಕಡಮೆಯಾಗಲಿಲ್ಲ

ನನಗೆ ಔಷಧಿ ಕೊಡುತ್ತಿದ್ದವರಲ್ಲಿ ಕೆಲವು ಡಾಕ್ಟರುಗಳು ಬಹಳ ಪ್ರಖ್ಯಾತಿಪಡೆದವರಾಗಿದ್ದರೂ ನನಗೆ ಅತಿ ಕಠಿಣವಾದ ಕೆಮ್ಮು ಇದ್ದೇ ಇದ್ದಿತು ಈ ಕೆಮ್ಮಿನ ಕಷ್ಟವನ್ನು ನಾನು ವಾಸಿಮಾಡಿಕೊಂಡೇನೆಂಬ ಭರವಸೆ ಇರಲೇ ಇಲ್ಲ

ಆಗ ನಾನು ಒಂದು ಬಾಟಿಲ್ಲು ಪೆರೂನಾ ಕೊಂಡು ತಂದು ಅದರಲ್ಲಿ ಹೇಳಿರುವ ಕ್ರಮಗಳ ಪ್ರಕಾರ ಆ ದಿನ ರಾತ್ರಿ ಸೇವಿಸಿದೆನು ಮರುದಿನ ಬೆಳಗ್ಗೆಯೇ ನನಗೆ ಸ್ವಲ್ಪ ಗುಣವಾದಂತೆ ತೋರಿತು

ಮೂರು ದಿನ ಸೇವಿಸಿದ ಮೇಲೆ ನನಗೆ ತುಂಬಾ ಅನುಕೂಲವಾಯಿತು ಈಗಲಾದರೋ ನಾಲ್ಕು ಸೀಸೆಯ ಔಷಧವನ್ನು ಮುಗಿಸಿದ ಮೇಲೆ ನಾನು ಸಂಪೂರ್ಣವಾಗಿ ಆರೋಗ್ಯಹೊಂದಿರುತ್ತೇನೆ

ಈ ಸರ್ವಶ್ರೇಷ್ಠವಾದ ಔಷಧವನ್ನು ಸೇವಿಸುವಂತೆ ಪ್ರತಿ ಒಬ್ಬನಿಗೂ ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುವೆನು

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯುತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದದ್ದು ಇವರಿಂದಲೇ ತಿಳಿಯಬಹುದು

ವಿಳಾಸ — ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿ

14—4—1909 ರಿಂದ 23—4—1909 ರ ವರೆಗೆ

ಸ್ಥಳ	ಪ್ಲೇಗ್ ಬಂದಿದ್ದು	ಸತ್ತದ್ದು	ತೀರಿದ್ದು
ಬೆಂಗಳೂರು ಪಟ್ಟಣ	1	1	0
ಮೈಸೂರು	(	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0
ಮೈಸೂರು ,,	3	3	20
ಕೋಲಾರ್ ,,	0	0	1
ಕೋಲಾರ್ ಚಿನ್ನದ ಗಣಿಗಳು	0	0	)
ತುಂಕೂರು ಡಿಸ್ಟ್ರಿಕ್ಟು	0	0	8
ಹಾಸನ ,,	2	2	47
ಚಿತ್ರದುರ್ಗ ,,	0	0	0
ಕಡೂರ್ ,,	0	0	1
ಶಿವಮೊಗ್ಗ	1	0	6
• ಸಂಖ್ಯೆ ಕಾಣೆಸಿಲ್ಲ ಜುಮಾ	7	6	89

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂ ವೈಶಾಖ ಬಹುಳ ಪಾಡ್ಯಮಿ ಗುರುವಾರದಿಂದ ವೈಶಾಖ ಬಹುಳ ಸಪ್ತಮಿ ರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
	ಗುರು	ಪಾಡ್ಯಮಿ	2 10	ವಿಶಾ	22
	ಶುಕ್ರ	ಬಿದಿಗೆ	3 11	ಅ	20
8	ಶನಿ	ತದಿಗೆ	3		2 2
	ರವಿ	ಚೌತಿ	29 19	ಮೂಲ	2
10	ಚಂದ್ರ	ಪಂಚಮಿ	2 10	ಪೂಷಾ	
11	ಕುಜ	ಷಷ್ಠಿ	3 19	ಉಷಾ	1 31
12	ಬುಧ	ಸಪ್ತಮಿ	18 20	ಶ್ರ	21

ಲಕ್ಷ್ಮೀನಾರಾಯಣಸ್ವಾಮಿ ರಥ

ಸಂಕಷ್ಟಚತುರ್ಥಿ

ಮದ್ದೂರು ನೃಸಿಂಹಸ್ವಾಮಿ ರಥ

ತಿಥಿದ್ವಯಂ ಮಹಾವ್ಯತೀಪಾತ ಅಷ್ಟಮಿ ತಿಥಿ

ಪೇಟೆ ಧಾರಣೆ

ದಿನಸಿ		ಮೈಸೂರು
ಕಡ್ಡಿ • ಅಕ್ಕಿ ಪಲ್ಲ ೧ ಕ್ಕೆ	ರೂ	೧೬ ೦ ೦
ಕೆಂಬತ್ತಿ ಅಕ್ಕಿ ಅವಲ್		೧೪ ೮ ೦
,, ದುಯ್ಯಂ		೧೫ ೦ ೦
ದಾಪ್ರಾಜಿ ಅಕ್ಕಿ		೧ ೮ ೦
ಸಣ್ಣಕ್ಕಿ ಅವಲ್		೧೭ ೮ ೦
ದುಯ್ಯಂ		೧೬ ೮ ೦
ತೊಗರಿ ಬೇಳೆ ಪಲ್ಲ ೧ ಕ್ಕೆ		೧೧ ೦ ೦
ದುಯ್ಯಂ		೧೫ ೦ ೦
ಹೈಗ್ರಾರಾಗಿ ಪಲ್ಲ ೧ ಕ್ಕೆ		೯ ೦ ೦
ಕಾರ್ರಾಗಿ		೮ ೮ ೦
ಜೋಳ		೮ ೮ ೦
ಹುಲಸಂದಿ ಪಲ್ಲ ೧ ಕ್ಕೆ		೧ ೬ ೦
ಬಿಳಿ ಅವರೆ		೧೧ ೨ ೦
ಹೆಸರು		೧೪ ೨ ೦
ಉದ್ದು		೧೭ ೮ ೦
ಕಡಲೆ		೧೪ ೮ ೦
ಎಳ್ಳು ಸೇ ೧೨೦ ಕ್ಕೆ		೨೨ ೨ ೦
ಹುರುಳಿ		೧೧ ೪ ೦
ಹರಳು ೧೨೦ ಸೇರಿಗೆ		೧೧ ೦ ೦
ಸೀಗೆಕಾಯಿ ಮಣ ೧ ಕ್ಕೆ		೨ ೪ ೦
ಮೆಣಸಿನಕಾಯಿ		೫ ೮ ೦
,, ದುಯ್ಯಂ		೫ ೦ ೦
ಬೆಲ್ಲ ದೊಡ್ಡ ಅಚ್ಚು		೬ ೪ ೦
ಒಳ್ಳೆಣ್ಣೆ ಮಣ ೧ ಕ್ಕೆ		೫ ೦ ೦
ಹರಳೆಣ್ಣೆ		೪ ೮ ೦
ಕೊತ್ತುಂಬರಿ ಪಲ್ಲ ೧ ಕ್ಕೆ		೮ ೦ ೦
ಉಪ್ಪು		೫ ೨ ೦
ಹುಣಸೇ ಹಣ್ಣು		೧ ೨ ೦
,, ಹಳೇದು		೧ ೮ ೦
ತುಪ್ಪ ಮಣ ೧ ಕ್ಕೆ		೧೫ ೮ ೦
ಸೀಮೆಯೆಣ್ಣೆ ಪೆಟ್ಟಿ ೧ ಕ್ಕೆ		೫ ೪ ೦
ತೆಂಗಿನಕಾಯಿ ೧೦೦ ಕ್ಕೆ		೪ ೮ ೦
ಅಳಲೇಕಾಯಿ ಮಣ ೧ ಕ್ಕೆ		೦ ೮ ೦
ಅಂಟ್ವಾಳದ ಕಾಯಿ ಮಣ ೧ ಕ್ಕೆ		೧ ೦ ೦
ಚಿನ್ನ (ಪೌನ್) ಕೆಂಪು		೧೫ – ೦
,, ಪಸಿಮೆ		೧೬ ೦ ೦
,, ಗಟ್ಟಿ ತೊಲ ೧ ಕ್ಕೆ		೨೪ ೮ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೪ ೦

Printed and Published by the Re GULLIFORD Proprietor and Manag Wesleyan ion Press Mysore 6/5/1909

REGISTERED M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೯ ನೇ ಇಸವಿ ಮೇ ತಾರೀಖು ೧೩ ನೇ ಗುರುವಾರ. ಸಂಚಿಕೆ ೫೦

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28 13

೧ ಲೋಕಾಮಯಹರ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ ಜ್ವರ, ಹೊಟ್ಟೆಹುಳಿ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ, ಶ್ವಾಸನಾಳಗಳ ಬಾಧೆ, ಅಜೀರ್ಣ, ಅಗ್ನಿನಷ್ಟ ಹಲ್ಲುನೋವು, ಕೆಮ್ಮಲು, ನೆಗಡಿ ನಿಶ್ಶಕ್ತಿ, ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳು ಹಳಿಗಳ ಬದಲಾವಣೆಯನ್ನು ಸರಿಪಡಿಸಿ ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಹಚ್ಚು ಜ್ವರ, ಕ್ಷಯತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತವೆ

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೫೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ—ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್. ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಜ್ವರಹರಿ

16 15

ಇದು ಸಾಧಾರಣ ಜ್ವರ, ಹಳೇಜ್ವರ ಮರೋಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ, ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ—ಸೀಸೆ ೧ ಕ್ಕೆ ೮ ಆಣೆ ೧ ರೂ, ೧—೮ ರೂ ಮೂ ೨—೧೨ ಆ ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಅಮೃತಕರ್ಪೂರ.

Amrut Karpoor

ಈ ಔಷಧವು ಅಜೀರ್ಣ ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ಕಾಂತಿಭೇದಿ ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು „ ಜ್ವರಹರಿ ” ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ, ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ಎರಡು ಔಷಧಗಳು ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಔಷಧ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದುದ್ದಲ್ಲಿ ವಿಶೇಷ —

ಹೆಸ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ, ಸೆಕೆಂಡ್ ಬೀಚ್ ಲೈನ್, ಮದರಾಸ್

„ ವೃತ್ತಾಂತ ಪತ್ರಿಕೆ” ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು)	ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ ೧—೧೪—೦
„ „ ೬ „ „	„ ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪ್ರಾಪ್ತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

48 51

ತಲೆನೋವು, ವಾಯುನೋವು, ಸೆಳತ ಗಂಟಲನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿನಿಯಮದಿಂದ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಇದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಇದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆರಕ್ಕೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್ ಪೀಟರ್ಸ್‌,

೩೩, ಪೇದನಾಯಕನಪೇಟೆ ಬೀದಿ, ಪೇಟೆ, ಮದರಾಸ್

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ತರಿಸಿರಿ.

10 19

„ ಬ್ರಹ್ಮಚರ್ಯ ” ವೆಂಬ ಮರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

„ ಸ್ವಪ್ನಯಾಸಫಲದೀಪಿಕೆ ” ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು „ ಸ್ವಪ್ನಯಾಸಫಲದೀಪಿಕೆಯನ್ನು ” ಒಂದು ಮುಖ್ಯವಾದ ಪರೀಕ್ಷೆಗೆ ಪ್ರೋಸಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರವರೆಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

„ ವ್ಯಾಸ್ಕೋಡಿಗಾಮನಯಾನದ ಚರಿತ್ರೆ ” ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂತಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುವು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

„ ಅಗಸ್ಟೀನ್ ಬಿನ್ನಪ ” ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಮಾನಸಾಂತರ ಪಾಪವನ್ನಣೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತ್ರೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ಲೈಟಿನ ಬೈಂಡು ಪ್ರತಿ ಒಂದಕ್ಕೆ ೦—೧೦—೦

ಒಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ—ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30 12]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟುನೋವು, ಅರ್ಧಾಂಗವಾಯು ಎದೆಶೀತ, ಘಾಯ, ಹವಿಮು, ಇತ್ಯಾದಿ

ಅಭಿಪ್ರಾಯ

ಆರ್ ಆರ್ ಗಂಗೋಲಿ, ೧ನೇ ಕ್ಲಾಸ್ ಸಬ್ ಜಡ್ಜ್, ಕಾರವಾರ — „ ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ, ಕೆಮ್ಮಿಗೂ, ವಾತದ ಬೇನೆಗಳಿಗೂ, ತಲೆನೋವಿಗೂ ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ ಈ ಅಮೃತಾಂಜನವು ಮೇಲೆ ಹೇಳಿದ ಎಲ್ಲಾ ನೋವುಗಳಲ್ಲಿಯೂ ಅತ್ಯುತ್ತಮವಾಗಿ ಸರ್ವಜನರಿಂದಲೂ ಶ್ಲಾಘಿಸಲ್ಪಡುವದು ”

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತು ೦-೬-೦ ೧೨ ಡಬ್ಬಿಗಳಿಗೆ ೪ ೦ ೦

ವಜ್ರಗುಟಿಕೆ.

ಧಾತುಪುಷ್ಟಿ, ರಕ್ತಶುದ್ಧಿ ಬಾಟ್ಲಿ ಒಂದರ ಕಿಮ್ಮತು ರೂ	೧ ೦ ೦
ಸುಂದರೀ ಮುಲಾಮು—ಮುಖ ಹಾಗಳಿಗೆ	೦-೮ ೦
ದಂತಮಂಜನ—ಹಲ್ಲುಗಳು ಗಟ್ಟಿಯಾಗುತ್ತವೆ	೬ ೨ ೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು ವಿಳಾಸ —

ವಿಲಿಯಂ ಮತ್ತು ಕಂಪನಿ, ಫ್ರೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು — ಅಮೃತಾಂಜನ,' ಮುಂಬಯಿ

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 18

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ತಯಾರಿ ಬಿಕರಿಯಾಗುತ್ತಿರುವ ಟೋಪಿಗಳ ದಾರದಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಈಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧ ೫ ರೂ ೧ ೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

* ಕೊಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

WANTED

The Following Books:—

(1) Dr. Moegling's Coorg Memoirs, 1855 (English translation).

(2) Coorg and its Rajas, 1857, by 'An Officer formerly in the service of Vira Raja Wadiyar.' 45-3

(3) Any other books relating to Coorg.

Please address

The Commissioner,
Mercara.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 18

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕ್ ಬಟ್ಟೆಗಳು ಸಾಹಜಿಕವಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತಹವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೬|| ಆಣೆ ವರೆಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಮಕ್ಕಳ ಹಿತಕಾರಿ

ಎಂದು

SCOTT'S EMULSION 6-19

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯವಾಗಿಡುತ್ತದೆ, ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕ್ರಮೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸಂಜೀವಿನೀ ಔಷಧಾಲಯ, ಮೈಸೂರು.

28-14

ಎಂ. ಎಸ್. ಕುಮಾರ್‌ಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು.—ಮರೆವೆ, ನರುತ್ಸಾಹ, ಸಿದ್ರಾಭಂಗ, ವಿಸ್ಮೃತಿ, ರಕ್ತದೋಷ, ಚರ್ಮವ್ಯಾಧಿ, ಬೋಸು, ವಾಯುನೋವುಗಳೂ, ಹಳೇ ಜ್ವರ, ಕ್ಷಯತ್ವ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ. ಕ್ರಯ ಶೀಸೆ ೧ ಕ್ಕೆ ೨ ರೂಪಾಯಿ.

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಲ ೧ ಕ್ಕೆ ೧ ರೂಪಾಯಿ

ಕಾಲಕೂಟವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ. ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ.

ಸುಮಿತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪೊರೆಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮಿದುಳಿಗೂ ತಂಪನ್ನುಂಟುಮಾಡಿ ದೃಷ್ಟಿಸಾಮರ್ಥ್ಯವನ್ನೂ ಮಿದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ಶರಾಬಿನ ಅತ್ತರುಗಳೂ, ಗಂಧದಬಟ್ಟಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ. ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳು ಬೇಕು. ಜಾಹೀರಾತಿ ಲೇಬಲ್ ಇಟ್ಟು ಬರೆಯಿರಿ

ಡಿ. ಕೆ. ಸ್ವಾಮಿ,

ಪ್ರೊಪ್ರೈಟರ್.

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



1 19

ಕಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನಂನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ

WANTED

A Proof-Reader, competent both in English and Kanarese. Salary according to qualifications.—Apply to 14 3

Wesleyan Mission Press,
Mysore.

WANTED, A MUNSHI

For Literary and Translation Work. Applicants must have passed the F. A. Examination, and possess a thorough knowledge of Kannada Literature. Apply to, 41-3

Miss PARSONS, Hardwicke, Mysore City.

ನೋಡಿರಿ· ಪ್ರೋತ್ಸಾಹ ಕೊಡಿರಿ· ತರಿಸಿರಿ

98 25

ಈಗ ತಾನೇ ಸೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ. ಸುರಕ್ಷಿಸಿರಿ, ನಮ್ಮಲ್ಲಿಯ ಉಲ್ ದಾರದಂತಹ ಉಲ್ ದಾರ ಎಲ್ಲಿಯೂ ದೊರೆಯದು. ೫,೦೦೦ ಹಾಸನ್ ಟೋಪಿಹೋಲಿಯುವ ಸುಪೀರಿಯರ್ ಉಲ್‌ದಾರ

೧೦ ಟೋಪಿಯಾಗುವ ಸೂಪೀರಿಯರ್ ಉಲ್ ಬಂಡಲ್ ೧ಕ್ಕೆ ೩-೬-೦

೧೨ ಲಡಿಗಳಿರುವ ಸೂಪರ್ ಫೈಯಿನ್ ಉಲ್ ಬಂಡಲ್ ೧ಕ್ಕೆ ೫-೪-೦

೮ ಲಡಿಗಳಿರುವ ಮಿಶ್ರ ಸೂಪೀರಿಯರ್ ಉಲ್ ಬಂಡಲ್ ೧ಕ್ಕೆ ೩-೪-೦

ದಪ್ಪದ ಉಲ್ ದಾರಗಳು.

೮ ಲಡಿಗಳಿರುವ ಬಂಡಲ್ ೧ಕ್ಕೆ ೩-೭-೦, ೩-೧೨-೦ ಮತ್ತು ೪-೮-೦

೩೦ ಇಂಚಿನ ಕಾಟನ್ ಬನಿಯನ್ ೧ಕ್ಕೆ ೦-೮-೦

ಉಲನ್ ೩೬ ಇಂಚಿನದಕ್ಕೆ ೨-೮-೦

ಲಿನನ್ ಕೈವಸ್ತ್ರ ೧ಕ್ಕೆ ೦-೨-೦ ಪರಿಮಳ ನಸ್ಯದ ಶೀಶೆ ೧ಕ್ಕೆ ೦-೨-೦

೩೦೦ ಮಾತ್ರೆಗಳಿರುವ ಸೇನ್‌ಸೇನ್ ತಾಂಬೂಲ ಮಿತ್ರನು ಪ್ಯಾಕೆಟ್‌೧ಕ್ಕೆ ೦-೩-೦

ರಾಯಲ್ ದಂತಮಂಜನದಬ್ಬಿ ೧ಕ್ಕೆ ೦-೧-೬ ರೋಮನಾಶಕ ಸಾಬೂನು ಪಟ್ಟಿಗೆ ೧ಕ್ಕೆ ೦-೬-೦. ಕೂಸುಗಳ ಟೋಪಿ, ಪೂರ್ತಿ ಮೇಜೋಡು ಬೇಕಾದಲ್ಲಿ ಕ್ರಯದ ಪಟ್ಟಿ ತರಿಸಿರಿ

ವಿಳಾಸ:—ದಿ ವೂಲನ್ ಮಾರ್ಟ್. ೬೩ ಎ. ಮಂಗಳೂರು

ನಿನಗೆ ಮೈ ಸ್ವಸ್ಥವಿಲ್ಲವೋ ?

ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನನಗೆ ಯಾವ ನೋವೇ ಉಂಟಾಗಿರಲಿ—" ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನನಗೆ ಮೈ ಸ್ವಸ್ಥವಾಗುವದು. ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ ; ಪಿತ್ತ ; ಪಿತ್ತಜ್ವರ , ಅಜೀರ್ಣ , ಅಗ್ನಿಮಾಂದ್ಯ , ಗಾಬರಿ , ಅಶಕ್ತಿ ; ಎದೆಯು ಕಲ್ಲೆನಿಸುವದು ; ತಲೆತಿರುಗುವುದು , ತಲೆನೋವು ; ಹೊಟ್ಟೆಯುಬ್ಬರ ; ಸೊಂಟದ ಹೊಟ್ಟೆನೋವು ; ಹೆಂಗಸರ ವ್ಯಾಧಿಗಳು , ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು



(೧೨ ಆಣೆ ಬುಡ್ಡಿ ಪರಿಮಾಣ.)

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವವು [69-37]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ, ಡೋನ್ಸ್, ಪಿ. ಓ. ಬಾಕ್ಸ್ ೩೦, ಬೊಂಬಾಯಿ —ಇವರಲ್ಲಿ ದೊರೆಯುವುದು.

JUST RECEIVED! JUST RECEIVED!!

Stead's Books for the Bairns

Illustrated New Numbers [5-19.

STEAD'S PENNY POPULAR TALES—Sixty-four Pages in a coloured Picture Cover. Each number contains a story of thrilling interest 24 numbers

CALENDARS FOR 1909.

Apply—The Manager, C.L.S. Book Depot, Mysore City.

ವೃತ್ತಾಂತ ಪತ್ರಿಕೆ.

—o:—

ಸನ್ ೧೯೦೯ ನೇ ಇಸವಿ ಮೇ ತಾ ೧೩ ನೇ ಗುರುವಾರ

ಒಕ್ಕಲಿಗರ ಸಂಘವು.

ಒಕ್ಕಲಿಗರ ಮೂರನೇ ಮಹಾಸಭೆಯ ವೃತ್ತಾಂತವನ್ನು ಓದಿ ನಾವು ತುಂಬಾ ಸಂತೋಷಪಟ್ಟೆವು. ರೈತ ಪ್ರಜೆಗಳು ತಮ್ಮ ಕಸಬನ್ನೂ ತಮ್ಮ ಸ್ಥಿತಿಗತಿಯನ್ನೂ ಅಭಿವೃದ್ಧಿಪಡಿಸಿಕೊಳ್ಳುವುದಕ್ಕೆ ಪರಸ್ಪರವಾಗಿ ಸಹಾಯಮಾಡಲು ಒಂದಾದರಲ್ಲಾ ಎಂದು ಆನಂದಪಡುತ್ತೇವೆ. ಅವರಲ್ಲಿ ಪುಷ್ಟರಾದ ಕೆಲವು ಜನರು ಈ ಸಂಘದ ನಿಧಿಗೆ ಹೆಚ್ಚಾಗಿ ದ್ರವ್ಯಸಹಾಯ ಮಾಡುತ್ತಾರೆ ಮೈಸೂರು ಗವರ್ನ್‌ಮೆಂಟಿನವರೂ ಬ್ರಿಟಿಷ್ ರೆಸಿಡೆಂಟರವರೂ ಅವರಿಗೆ ಬಹಳ ಸಹಾಯವನ್ನೂ ವಿಶೇಷವಾದ ಹಿತೋಕ್ತಿಗಳನ್ನೂ ದಯಪಾಲಿಸಿರುವರು. ಆದಕಾರಣ ಒಕ್ಕಲ ಮಕ್ಕಳು ಅಭಿವೃದ್ಧಿಗೆ ಬರುವುದಕ್ಕೆ ತುಂಬಾ ಅವಕಾಶವುಂಟಾಗಿರುವುದು.

ಬ್ರಿಟಿಷ್ ರೆಸಿಡೆಂಟ್ ಮ|| ಫ್ರೇಸರ್‌ಯವರೂ ಹಾಜಿ ದಿವಾನ್ ಮ|| ಮಾಧವರಾಯರವರೂ ಒಕ್ಕಲಿಗರಿಗೆ ಹೇಳಿರುವ ಹಿತವಾದವು ಸಮಯೋಚಿತವಾದದ್ದಾಗಿಯೂ ಅನುಕೂಲವಾದದ್ದಾಗಿಯೂ ಇದುತ್ತದ. ಮಹಾಸಭೆಯು ನೆರವೇರುವಾಗ್ಗೆ ಕಂಡುಬಂದ ಉತ್ಸಾಹವು ನೈಜವಾದ ಅಭ್ಯುದಯ ಚಿಂತನೆಯನ್ನು ಸೂಚಿಸುವುದು. ಈ ಹಿತೋಕ್ತಿಗಳು ಕಾರ್ಯನಿರ್ವಾಹಕ ಮಾಸತಕ್ಕವರಿಗೆ ಉತ್ಸಾಹದಿಂದ ಕೆಲಸ ಮಾಡುವಂತೆ ಪ್ರೋತ್ಸಾಹಪಡಿಸುವವೆಂದು ನಂಬುತ್ತೇವೆ.

ಈ ಸಂಘದ ಉದ್ದೇಶಗಳೇನು ? ಇವು ಸಫಲವಾಗುವ ಬಗೆ ಹ್ಯಾಗೆ ? ಒಕ್ಕಲಿಗರು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಬೇಕಾದದ್ದು ಅವಶ್ಯವೆಂದು ಮ|| ಫ್ರೇಸರ್ ಯವರು ಹೇಳಿರುವುದು ನ್ಯಾಯವಾಗಿರುತ್ತದೆ. ಮೂರರಲ್ಲ ಒಂದು ಪಾಲಿನ ಹುಡುಗರೂ ಪಾಠಶಾಲೆಗೆ ಹೋಗುತ್ತಾ ಇಲ್ಲ. ಮ|| ಫ್ರೇಸರ್‌ಯವರು ಸೂಚಿಸಿರುವಂತೆ ಕಾರ್ಯನಿರ್ವಾಹಕರು ಗ್ರಾಮದಿಂದ ಗ್ರಾಮಕ್ಕೆ ಹೋಗಿ ಜನರಿಗೆ ವಿಷಯವನ್ನು ಹೇಳಿ, ಜನರು ತಮ್ಮ ಮಕ್ಕಳನ್ನು ಪಾಠಶಾಲೆಗೆ ಕಳುಹಿಸುವಂತೆ ಸಾಹಸಪಡಬಾರದೇ. ಹೀಗೆ ಮಾಡುವುದಕ್ಕೆ ಹಣ ಖರ್ಚೇನೂ ಆಗಲಾರದು. ಯಾಕಂದರೆ ಬಾಲ್ಯಪಾಠಗಳನ್ನು ಫೀಜು ಕೊಡದೇನೇ ಮುಫತ್ತಾಗಿ ಹೇಳಿಕೊಡುವಂತೆ ಸರ್ಕಾರದವರು ಅಪ್ಪಣೆ ಕೊಟ್ಟಿರುವರು ಹುಡುಗರೂ ಹುಡುಗಿಯರೂ ವಿದ್ಯೆ ಕಲಿಯದೆಹೋದರೆ ಮುಂದಕ್ಕೆ ಅವರ ತಂದೆ ತಾಯಿಗಳಂತೆಯೇ ಆಗುವರಲ್ಲದೆ ಅವರಿಗಿಂತ ಅಭಿವೃದ್ಧಿಸ್ಥಿತಿಗೆ ಬರಲಾರರು. ಪ್ರೌಢವಾದ ವಿದ್ಯಾಭ್ಯಾಸವೇನೂ ಮಾಡಬೇಕಾದ ಅಗತ್ಯವಿಲ್ಲ ಅವರಿಗೆ ವಿಶೇಷ ಇಂಗ್ಲಿಷನ್ನು ಕಲಿಸಿದ್ದಾದರೆ ಅವರು ತಮ್ಮ ಜಮೀನುಗಳನ್ನು ತ್ಯಜಿಸಿಬಿಟ್ಟು ಗುಮಾಸ್ತರೋ ಸರ್ಕಾರಿ ನೌಕರರೋ ಆಗುತ್ತಾರೆ. ಆದಕಾರಣ ಅವರಿಗೆ ಕನ್ನಡವನ್ನು ಚೆನ್ನಾಗಿ ಕಲಿಸಿಕೊಟ್ಟು, ವ್ಯವಸಾಯದ ಮಾದರಿ ಫಾರಂಗಳಲ್ಲಿ ಬಳಸಲ್ಪಡುವ ವ್ಯವಸಾಯ ಕ್ರಮಗಳನ್ನು ತಿಳಿದುಕೊಂಡು ವ್ಯವಸಾಯವನ್ನು ಅಭಿವೃದ್ಧಿಗೆ ತರುವಹಾಗಾದರೆ ಸಾಕಾಗಿದೆ. ಈ ಭಾಗದಲ್ಲಿ ಸರ್ಕಾರದವರೇ ತುಂಬಾ ಸಹಾಯಮಾಡುತ್ತಿರುವುದರಿಂದ ಈ ಸಂಘದವರು ಅದಕ್ಕಾಗಿ ಹಣವನ್ನೇನೂ ಖರ್ಚುಮಾಡಬೇಕಾದದ್ದಿಲ್ಲ.

ಎರಡನೆಯದಾಗಿ ರೈತಪ್ರಜೆಗಳು ತಮ್ಮ ಹಣವನ್ನು ಮಿತವ್ಯಯ ಮಾಡಿಕೊಂಡು ದೇಹದಾರ್ಢ್ಯವನ್ನೂ ಪಡೆಸಿಕೊಳ್ಳುವಂಥಾ ಅಭ್ಯಾಸ

ಪದ್ಧತಿ ಆಚಾರಾದಿಗಳನ್ನು ಸ್ಥಾಪಿಸಿಬಿಡಬೇಕು. ಅನೇಕಾನೇಕರು ಬಹುಮಟ್ಟಿಗೆ ಕುಡಿಯುವುದನ್ನು ಬಿಟ್ಟುಬಿಡುತ್ತಾ ಬಂದಿದ್ದಾರೆಂದು ಕೇಳಿ ಬಹಳ ಸಂತೋಷಪಡುತ್ತೇವೆ. ಕಂಡ ಸಾರಾಯಿ ಬೀರ್ ಮೊದಲಾದ ಮದ್ಯಗಳನ್ನು ಸಮಸ್ತ ರೈತರೂ ಮುಟ್ಟದೆ ನಿರಾಕರಿಸುವರೆಂದು ನಂಬುತ್ತೇವೆ, ಮತ್ತು ಇವರು ಮದುವೆ ಹಬ್ಬಹರಿದಿನಗಳಲ್ಲಿ ತಮ್ಮ ಕಷ್ಟಾರ್ಜಿತವನ್ನು ಯಥೇಷ್ಟವಾಗಿ ಖರ್ಚು ಮಾಡುವುದನ್ನು ಬಿಟ್ಟುಬಿಡಬೇಕು. ಒಳ್ಳೇ ದನಗಳನ್ನೂ ಉತ್ತಮತರದ ನೇಗಿಲು ಮೊದಲಾದ ವ್ಯವಸಾಯದ ಮುಟ್ಟುಗಳನ್ನೂ ಹುಲುಸಾಗ ಬಿತ್ತನೇಬೀಜ ಮತ್ತು ಗೊಬ್ಬರಗಳನ್ನೂ ಕೊಳ್ಳುವುದಕ್ಕೆ ಹಣವು ಬೇಕಾಗಿರುವುದು. ರೈತನು ಈ ವಿಷಯಗಳಿಗೆ ಹಣವನ್ನು ಹಾಕಿಕೊಂಡು ಜಮೀನನ್ನು ವ್ಯವಸಾಯ ಮಾಡುತ್ತಾ ಬಂದ ಪಕ್ಷದಲ್ಲಿ ಕಾಲಕ್ರಮದಲ್ಲಿ ಪುಷ್ಟರೂ ಪುಣ್ಯವಂತರೂ ಆಗುವರೆನ್ನುವುದಕ್ಕೆ ಸಂಶಯವಿಲ್ಲ. ಈ ವಿಚಾರಗಳನ್ನೆಲ್ಲಾ ರೈತಪ್ರಜೆಗಳಿಗೆ ವಿವರವಾಗಿ ಹೇಳಿ ವಿವೇಕ ಕಲಿಸುವುದಕ್ಕೆ ಸಂಘದವರು ಶಿಕ್ಷಕರನ್ನೋ ಉಪನ್ಯಾಸಕರನ್ನೋ ಸಂಸ್ಥಾನದ ಗ್ರಾಮಾಂತರಗಳ ಮೇಲೆ ಕಳುಹಿಸಿಕೊಡಬೇಕಾಗಿದೆ. ಈ ಸಂಘದವರು ಉತ್ಸಾಹಶೀಲರಾಗಿ ಇಂಥಾ ಕಾರ್ಯಗಳನ್ನು ನಡಿಸುತ್ತಾ ಬಂದರೆ ರೈತನಿಗೆ ಉಪಕಾರವೂ ಸಂಸ್ಥಾನಕ್ಕೆ ಅಭ್ಯುದಯವೂ ಲಭ್ಯವಾಗುವವು.

ಮೆ|| ಮಾಧವರಾಯರವರು ತಿಳಿಸಿರುವ ಹಿತೋಕ್ತಿಗಳನ್ನು ಸಂಘದವರು ಮನೋಗತವುಗಳಲ್ಲ ಒಗ್ಗಟ್ಟಿನಿಂದಲೇ ಸಮಸ್ತ ಶ್ರೇಯಸ್ಸುಗಳೂ ಉಂಟಾಗುತ್ತವೆ. ಮುಂದಾಳುಗಳಾಗಿ ನಿಂತು ಕಾರ್ಯಭಾಗಗಳನ್ನು ನಡಿಸತಕ್ಕವರಿಗೆ ಬೆಂಬಲದೊರಕಿ ಎಲ್ಲರೂ ಪರಸ್ಪರ ಸಹಾಯ ಮಾಡುತ್ತಾ ಬಂದ ಪಕ್ಷದಲ್ಲಿ ಸರ್ವತ್ರ ಹಿತವಾಗುವುದು. ಒಕ್ಕಲಿಗರ ಸಂಘವು ವಿಶೇಷ ಶ್ರೇಯಸ್ಸಿಗೆ ಬರಲೆಂದೂ, ಅದರ ಉದ್ದೇಶಗಳು ಈ ಪರಿಷತ್ ಸಾರ್ಥಕವಾಗುವಂತೆ ಪ್ರೋತ್ಸಾಹವುಂಟಾಗಲೆಂದೂ ಹಾರೈಸುತ್ತೇವೆ.

ಮೈಸೂರು ಸಂಸ್ಥಾನದ ರೆವಿನ್ಯೂ ಇಲಾಖೆಯು

ಮೈಸೂರು ಗವರ್ನ್‌ಮೆಂಟಿನವರು ಪ್ರಕಟಿಸುವಂಥಾ ವಾರ್ಷಿಕ ರಿಪೋರ್ಟುಗಳನ್ನು ಓದು ಒಸರು ಓದುವುದಿಲ್ಲವೆಂದು ನಮಗೆ ತೋರುತ್ತದೆ. ಈ ರಿಪೋರ್ಟುಗಳಲ್ಲಿ ವಿಶೇಷ ಸಂಗತಿಗಳು ಅನೇಕವಾಗಿರುವವು. ಆದರೆ ಬಹಳ ಸಮಯವನ್ನೂ ವಿಶೇಷ ಜ್ಞಾನವನ್ನೂ ವಿನಿಯೋಗಿಸಿ ಇಷ್ಟು ದೊಡ್ಡ ರಿಪೋರ್ಟುಗಳನ್ನು ಓದುವುದು ಸಾರ್ಥಕವಾದದ್ದೇ ಎಂದು ಯಾರಿಗಾದರೂ ತೋರದೆ ಇರಲಾರದು.

೧೯೦೭-೦೮ ನೇ ಸಾಲು ಸಂಸ್ಥಾನದಲ್ಲಿ ವ್ಯವಸಾಯ ಕಾರ್ಯಗಳಿಗೆ ಅನುಕೂಲವಾಗಿರಲಿಲ್ಲ. ಮಳೆಗಳೇನೋ ತೃಪ್ತಿಕರವಾದಷ್ಟು ಆದವು, ಆದರೆ ಕಾಲಕಾಲಕ್ಕೆ ಆಗಲಿಲ್ಲ. ಇದರಿಂದ ಪೈರು ಪಚ್ಚೆಗಳು ಹುಲುಸಾಗದೆಹೋಯಿತು. ವರುಷದ ಆರಂಭದಲ್ಲಿ ಮಳೆಯ ಸೂಚನೆಗಳು ಚೆನ್ನಾಗಿದ್ದುದರಿಂದ ಹಿಂದಿನ ಸಾಲಿಗಿಂತಲೂ ಹೆಚ್ಚು ಜಮೀನು ಸಾಗುವಳಿ ಆಯಿತು. ಪದಸುಗಳು ಅಷ್ಟು ಚೆನ್ನಾಗಿ ಬೆಳೆಯಾಗದೆಹೋದರೂ ಜಮೀನಿನ ಕಂದಾಯವು ೧,೦೭,೧೦,೧೮೦ ರೂಪಾಯಿ, ಅಂದರೆ ಹಿಂದಿನ ಸಾಲಿಗಿಂತ ೩,೮೧,೨೮೦ ರೂಪಾಯಿ ಜಾಸ್ತಿ ಉತ್ಪತ್ತಿಯಾಯಿತು. ಗುದಸ್ತಾ ಸಾಲುಗಳ ಕಂದಾಯದ ಬಾಕಿಗಳು ಬಹುಮಟ್ಟಿಗೆ ವಸೂಲಾದವು. ಈ ಸಾಲಿನಲ್ಲಿ ಜಮೀನ್ ಕಂದಾಯದ ಬಾಕಿಗಾಗಿ ೭,೮೩೩ ಹರಾಜುಗಳು ನಡೆದಿರುತ್ತವೆ. ಒಟ್ಟು ಹರಾಜು ಅಮಲುಗಳು ನಡಿಸುವುದಕ್ಕಾಗಿ ನೋಟೀಸ್ ಹುಟ್ಟಿದ ಮಾತ್ರಕ್ಕೇ ರೈತರು ಅನೇಕ ಸಲ ಕಂದಾಯಗಳನ್ನು ಪಾವತಿಮಾಡುತ್ತಾರೆಂದು ಗೊತ್ತಾಗುವುದು.

ಸಾಗುವಳಿಗೆ ಜಮೀನು ಬೇಕೆಂದು ದರಖಾಸ್ತು ಕೊಟ್ಟ ರೈತರು ಬಹು ದೀರ್ಘಕಾಲ ಕಾಯುತ್ತಿರಬೇಕಾಗಿದೆ. ಸುಮಾರು ೪೪೬ ಸಂದರ್ಭಗಳಲ್ಲಿ ದರಖಾಸ್ತಿನ ಅರ್ಜಿಗಳು ಇತ್ಯರ್ಥವಾಗದೆ ಮೂರು ವರುಷಕ್ಕಿಂತಲೂ ಹೆಚ್ಚಾಗಿ ತಾಮಸವಾಗಿರುವುದು. ಹೀಗೆ ನಿಸ್ತೆಯಾಗುವುದು ಅಧಿಕಾರಿಗಳ ಅಸಡ್ಡೆಗೆ ಕಾರಣವಾಗಿದೆ ಎಂದೂ, ಅಂಥಾ ಅಧಿಕಾರಿಗಳ ಹೆಸರುಗಳನ್ನು ಗವರ್ನ್‌ಮೆಂಟಿನವರಿಗೆ ತಿಳಿಸಬೇಕೆಂದೂ ಸರ್ಕಾರದವರು ಹೇಳುತ್ತಾರೆ. ಇಂಥಾ ಅಧಿಕಾರಿಗಳಿಗೆ ಸಿಜಾವಾಗಿಯೂ ಏನಾದರೂ ಆಗುವುದೇ? ಪ್ರಜೆಗಳ ಅಹವಾಲುಗಳಿಗೆ ಸರಿಯಾಗಿ ಗಮನ ಕೊಡುವ ಜಾಗರೂಕತೆಯಿಲ್ಲದೆ ಅಂಥಾ ಅಲಕ್ಷ್ಯಭಾವವುಳ್ಳ ಅಧಿಕಾರಿಗಳಲ್ಲಿ ಕೆಲವರಿಗಾದರೂ ಏನಾದರೂ ಖಂಡಿತವಾಗಿ ಆಗಲೇಬೇಕು. ಇದರಿಂದ ಇತರ ಅಧಿಕಾರಿಗಳಲ್ಲಿ ಚಟುವಟಿಕೆಯೂ ಕರ್ತವ್ಯಜ್ಞಾನವೂ ಉಂಟಾಗುತ್ತವೆ.

ವ್ಯವಸಾಯಾಭಿವೃದ್ಧಿಗೆ ಈ ಸಾಲಿನಲ್ಲಿ ಅಷ್ಟೇನೂ ಹೆಚ್ಚು ಹಣ ಸಾಲ ಕೊಡಲಿಲ್ಲ. ಈ ಭಾಗದಲ್ಲಿ ಜಿಲ್ಲೆಯ ಸ್ಥಳೀಯ ನೌಕರರಿಂದ ಚಟುವಟಿಕೆಯಾಗಿ ಕೆಲಸಮಾಡಿಸಿಕೊಳ್ಳುವುದು ಅಸಾಧ್ಯವೆಂದು ಕೇಳುತ್ತೇವೆ. ಈ ವಿಚಾರಕ್ಕೆ ಸರಿಯಾಗಿ ಗಮನಕೊಟ್ಟಿರುವುದಿಲ್ಲವೆಂದು ನಮ್ಮ ಮುಂದಿರುವ ರಿಪೋರ್ಟೇ ಹೇಳಿ ಒಪ್ಪಿಕೊಳ್ಳುತ್ತದೆ. ಆದರೆ ರೈತರಿಗೆ ಬೇಗಬೇಗನೆ ಸಾಲಕೊಟ್ಟು, ಅವರಲ್ಲಿ ಸಾಲಮಾಡುವದೆಂಬ ಆಶೆಯನ್ನು ಹೆಚ್ಚಿಸಬೇಕೆಂಬುವುದು ನಮ್ಮ ಅಭಿಮತವಲ್ಲ. ಯಾಕೆಂದರೆ ಹಾಗೆ ಸಾಲಪಡೆದುಕೊಂಡವರಲ್ಲಿ ಅನೇಕರು ಅದನ್ನು ತೀರಿಸುವ ಯೋಚನೆಯನ್ನೇ ಮಾಡರು. ಸಾಲಗಳು ವಸೂಲಾಗದೆ ಬಹಳವಾಗಿ ಬಾಕಿನಿಂತುಕೊಳ್ಳುವವು. ಈ ಸಾಲಿನಲ್ಲಿ ವಸೂಲಾಗಬೇಕಾಗಿದ್ದ ಸಾಲದ ಪೈಕಿ ಶೇಕಡಾ ೫೭ ರಷ್ಟು ಮಾತ್ರ ವಸೂಲಾಗಿರುತ್ತದೆ. ಆದರೂ ಅನೇಕ ಸಂದರ್ಭಗಳಲ್ಲಿ ಸರಿಯಾದ ವಿವೇಚನೆಯಿಂದ ಸಾಲಕೊಟ್ಟರೆ ಎಷ್ಟೋ ಪ್ರಯೋಜನವೂ ಉಪಕಾರವೂ ಆಗುವುದು.

ಈ ಸಾಲಿನಲ್ಲಿ ಪ್ರಜೆಗಳ ಸ್ಥಿತಿಗತಿಯು ಚೆನ್ನಾಗಿರಲಿಲ್ಲ. ಯಾಕೆಂದರೆ ಆಹಾರ ದಿನಸಿಗಳ ಧಾರಣೆಯು ಹೆಚ್ಚಿತ್ತು; ಪ್ಲೇಗ್ ಉಪದ್ರವು ತಕ್ಕಮಟ್ಟಿಗೂ ಪ್ರಬಲವಾಗಿತ್ತು. ಜನನಕ್ಕಿಂತಲೂ ಮರಣ ಸಂಖ್ಯೆಯೇ ಹೆಚ್ಚು. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಾದರೋ ಪ್ರಜಾಸಂಖ್ಯೆಯು ಕ್ರಮೇಣ ಕಡಮೆಯಾಗುತ್ತಿರುವಂತೆ ತಿಳಿದುಬರುತ್ತದೆ. ಪ್ರಜೆಗಳು ಇಷ್ಟು ವಿಶೇಷವಾಗಿ ಲಯವಾಗುತ್ತಿರುವ ಸಂಗತಿಯನ್ನು ಚೆನ್ನಾಗಿ ಆಜಮಾಯಿಷಿ ಮಾಡಿಸಬೇಕಾದದ್ದು ಪರಮಾವಶ್ಯವೆಂದು ನಮಗೆ ತೋರುವುದು. ಪ್ರಜೆಗಳು ಹೀಗೆ ಕ್ಷಯಿಸುತ್ತಾ ಬಂದ ಪಕ್ಷದಲ್ಲಿ ಸಂಸ್ಥಾನಕ್ಕೆ ಶ್ರೇಯಸ್ಸು ಉಂಟಾಗಲಾರದು.

ಗ್ರಾಮಾಂತರದ ಆರೋಗ್ಯವಿಚಾರಕ್ಕೂ ನೀರನ್ನು ಒದಗಿಸುವುದಕ್ಕೂ ಗವರ್ನ್‌ಮೆಂಟಿನವರು ಗಮನಕೊಡುತ್ತಲಿದ್ದಾರೆ. ಪ್ರತಿ ಒಂದು ಗ್ರಾಮದಲ್ಲೂ ಪ್ರಜೆಗಳಿಗೆ ಒಳ್ಳೆಯದಾದ ಕುಡಿಯುವ ನೀರು ಸಿಕ್ಕುವಂತಾಗಬೇಕು; ಮತ್ತು ಬೀದಿಗಳೂ, ಸಂದುಗೊಂದುಗಳೂ, ಮನೆ ಹಿತ್ತಲು ವಠಾರಗಳೂ ಸ್ವಲ್ಪವೂ ಕೊಳಕಿಲ್ಲದಂತೆ ಚೊಕ್ಕಟವಾಗಿರಬೇಕು. ಇದಕ್ಕೋಸ್ಕರ ಸರ್ಕಾರದವರೂ ಪ್ರಜೆಗಳೂ ಏಕೀಭವಿಸಿ ಇನ್ನೂ ಹೆಚ್ಚಾಗಿ ಶ್ರಮಪಡಬೇಕಾಗಿದೆ. ಈ ಭಾಗದಲ್ಲಿ ಕೋಲಾರದ ಡೆಪ್ಯುಟಿ ಕಮೀಷನರ್‌ರವರು ವಿಶೇಷವಾದ ಶ್ರದ್ಧೆಯನ್ನು ವಹಿಸಿ ಕೆಲಸ ಮಾಡಿರುತ್ತಾರೆಂದು ಕಂಡುಬರುತ್ತದೆ.

ಕೆರೆಗಳ ವಿಷಯದಲ್ಲಿ ವಿಶೇಷವಾದ ಗಮನವನ್ನು ಕೊಟ್ಟಿರುವರು. ಈಗ ಅನೇಕ ಕೆರೆಗಳು ಸಾರ್ಥಕವಾದ ಸ್ಥಿತಿಯಲ್ಲಿರುವವು. ಮಾರಿಕಣಿವೆ ತಲಾವಿನ ಕೆಳಗೆ ನಿರೀಕ್ಷಿಸಿದ್ದಷ್ಟು ಜಮೀನು ಇನ್ನೂ ವ್ಯವಸಾಯಕ್ಕೆ ಬಂದಿಲ್ಲ. ಕೆರೆಯೊಳಗೇನೋ ನೀರು ತುಂಬಾ ಇದೆ, ಆದರೆ ವಿಸ್ತಾರವಾದ ಜಮೀನುಗಳನ್ನು ಪಡೆದಿರತಕ್ಕವರು ಇನ್ನೂ ವ್ಯವಸಾಯವನ್ನು ಆರಂಭಿಸಿರುವುದಿಲ್ಲ. ಸ್ವತಃ ವ್ಯವಸಾಯ ಮಾಡದೆ ಇಟ್ಟುಕೊಂಡಿದ್ದು ಲಾಭಕ್ಕೆ ವಿಕರಿ ಮಾಡಬೇಕೆಂಬುವವರಿಗೆ ಜಮೀನು ಕೊಡುವುದು ಸರಿಯಲ್ಲ.

ಈ ಸಾಲಿನಲ್ಲಿ ಗೋಕಾಮಿಗಳು ಬಹಳವಾಗಿ ಮೃತಪಟ್ಟಿರುತ್ತವೆ. ಇದರಿಂದ ರೈತರಿಗೆ ಸಾಗುವಳಿ ಮುಂತಾದ ಕೆಲಸಗಳು ನಡೆಯದಂತೆ ನಷ್ಟವುಂಟಾಗಿರುವುದು.

ವರುಷಾಂತ್ಯದಲ್ಲಿ ಕಾಲಸ್ಥಿತಿಯು ಸಂತೋಷಪ್ರದವಾಗಿರಲಿಲ್ಲ. ಈಚೆಗೆ-ಜಾಸ್ತಿ ಸಾಲಿನಲ್ಲಿ ದುಸ್ಕಾಲವು ಈ ಸಂಸ್ಥಾನವನ್ನು ಆವರಿಸಿ, ಕ್ಷಾಮವು ತಲೆದೋರುತಲಿತ್ತು. ಭಾಗ್ಯವಶಾತ್ತು ಸಂಸ್ಥಾನದಲ್ಲಿ ತಕ್ಕಮಟ್ಟಿಗೆ ಮಳೆಯು ಸಮೃದ್ಧಿಯಾಗಿ, ಎಲ್ಲಾ ಕಡೆಗಳಲ್ಲೂ ಪ್ರಜೆಗಳಿಗೂ ಪಶುಪ್ರಾಣಿಗಳಿಗೂ ನೀರು ದೊರಕಿರುವುದು. ಗೋಕಾಮಿಗಳ ಮೇವಿಗೆ ಬಹಳ ಅನುಕೂಲವಾಯಿತು. ಹೀಗೆಯೇ ಕಾಲಾನುಗುಣ್ಯವಾಗಿ ಮುಂದೆಯೂ ಮಳೆಗಳು ಸುರಿದು ಕ್ಷಾಮದ ಹೆದರಿಕೆಯನ್ನು ಈ ಸಂಸ್ಥಾನದಲ್ಲಿ ತೊಡೆದುಬಿಡುವವೆಂದು ನಂಬಿ ಹಾರೈಸುತ್ತೇವೆ.

ಧರ್ಮ

ಧರ್ಮಕ್ಕೆ ವಿರೋಧಿಗಳು ಯಾರೂ ಇಲ್ಲ. ಅದು ಎಲ್ಲರೂ ಮಾಡಬೇಕಾದುದಾಗಿಯೂ ಯಾರು ಮಾಡಿದರೂ ಸ್ತೋತ್ರಾರ್ಹವಾಗಿಯೂ ಇರುವದು. ಹಿಂದೂಮತದ ಕೆಲವು ತತ್ವಗಳನ್ನು ಮುಸಲ್ಮಾನರು ಒಪ್ಪುವದಿಲ್ಲ. ಮುಸಲ್ಮಾನರ ಮತ ತತ್ವಗಳನ್ನು ಹಿಂದುಗಳು ಒಪ್ಪಲಾರರು. ಹಾಗೆಯೆ ಬೇರೆ ಬೇರೆ ಮತ ತತ್ವಗಳು ಪರಸ್ಪರ ವಿರುದ್ಧವಾಗಿರುತ್ತವೆ. ಈ ವಿರೋಧಗಳಿಂದ ಆಗಾಗ್ಯೆ ಒಬ್ಬರಿಗೊಬ್ಬರಿಗೆ ದ್ವೇಷ ಅಸೂಯೆಗಳು ಹುಟ್ಟಿ ಕಲಹಕ್ಕೆ ಕಾರಣಗಳಾಗಿರುವುದೂ ಉಂಟು. ಆದರೆ ಯಾವ ಮತದವರೇ ಆಗಲಿ ಅವರ ದೇಶ ಬಣ್ಣ ಭಾಷೆ ಕುಲಗೋತ್ರಗಳು ಎಂಥವಾಗಿರಲಿ ಧರ್ಮಿಷ್ಟನಿಗೆ ಮಾನಕೊಟ್ಟು ಆತನ ಧರ್ಮಶೀಲಗಳನ್ನು ಮೆಚ್ಚಿಕೊಳ್ಳುವರು. ಒಂದು ಮತದ ತತ್ವಗಳು ದೇವರಿಂದ ನಿಯಮಿಸಲ್ಪಟ್ಟು ಆತನ ಚಿತ್ತಕ್ಕೆ ಅನುಸಾರವಾಗಿವೆಯೋ ಇಲ್ಲವೋ ಎಂತ ನಿರ್ಣಯಿಸುವದು ಕೆಲವುವೇಳೆ ಬಹು ಕಷ್ಟವಾಗಿರುವುದು. ಆದರೆ ಧರ್ಮವು ದೇವರಿಂದಲೇ ನೇಮಕವಾಗಿ ಆತನ ದಿವ್ಯಚಿತ್ತಕ್ಕೆ ಅನುಸಾರವಾಗಿಯೇ ಇರುವದರಿಂದ ಎಲ್ಲರೂ ಧರ್ಮಕಾರ್ಯಗಳನ್ನು ಮಾಡಬೇಕೆಂದೂ ಮಾಡದೆಹೋದರೆ ಇರುವವರು ದೇವರನ್ನು ಮೆಚ್ಚಿಸಲಾರರೆಂದೂ ಸರ್ವರೂ ಒಪ್ಪುತ್ತಾರೆ. ಆದರೆ ಧರ್ಮವೆಂದರೇನು? ಅದನ್ನು ಯಾರಿಗೆ ಮಾಡಬೇಕು ಎಂಬ ವಿಷಯಗಳಲ್ಲಿ ಮಾತ್ರ ನಮ್ಮ ದೇಶದಲ್ಲಿ ಕೆಲವು ವಿರೋಧಾಭಿಪ್ರಾಯಗಳಿರುವವು. ಮುಸಲಾ ಧರ್ಮವೆಂದರೆ ಮಠ್ಠ, ಬಟ್ಟೆಬರೆ, ಅನ್ನವಸ್ತ್ರಗಳನ್ನು ಕೊಡುವದು ಎಂತ ಎಲ್ಲರೂ ತಿಳಿದಿರುವರು. ಇದು ಸರಿ. ಆದರೆ ದಾರಿ ತಪ್ಪಿ ಹೋಗಿ ಅಲೆಯುತ್ತಿರುವವನಿಗೂ ಕುರುಡರಿಗೂ ದಾರಿ ತೋರಿಸುವದು ಧರ್ಮವಲ್ಲವೆ? ರೋಗಿಗಳಿಗೆ ಔಷಧೋಪಚಾರಮಾಡುವದು, ಬಾಲಕರಿಗೆ ವಿದ್ಯೆ ಹೇಳುವದು, ಪ್ರಿಯರನ್ನು ಕಳಕೊಂಡು ವಿಯೋಗತಾಪದಿಂದ ಶೋಕಿಸುತ್ತಿರುವವನಲ್ಲಿ ಸಂತಾಪಪಟ್ಟು ಅವರಿಗೆ ತಕ್ಕ ಆದರಣೆ ಹೇಳುವದು, ದೇವರನ್ನು ತಿಳಿಯದೆ ಆತನನ್ನು ಸೇವಿಸದೆ ಪ್ರೀತಿಸದೆ ಅನಿತ್ಯವಾದ ಲೋಕದಲ್ಲಿ ಸಂಪಾದಿಸಿ, ಸಂಪಾದಿಸಿದ್ದನ್ನು ಭೋಗಿಸುವದೂ ಮಾತ್ರ ಮೋಕ್ಷವೆಂದು ಅಜ್ಞಾನದಲ್ಲಿಯೂ ಪಾಪದಲ್ಲಿಯೂ ಸಿಲುಕಿರುವವರಿಗೆ ಜ್ಞಾನಮಾರ್ಗವನ್ನು ಬೋಧಿಸಿ ಮುಮುಕ್ಷುಗಳನ್ನು ಮಾಡುವದು, ಇವೆಲ್ಲಾ ಧರ್ಮಕಾರ್ಯಗಳಲ್ಲವೆ? ಐಶ್ವರ್ಯವಂತನು ಬಡವರಿಗೆ ಅನ್ನವಸ್ತ್ರಗಳನ್ನು ಕೊಡಲಿ. ಅದು ಆತನ ಪಾಲಿಗೆ ದೇವರು ನೇಮಿಸಿರುವ ಧರ್ಮಕಾರ್ಯ. ಆದರೆ ಲೋಕದಲ್ಲಿ ಧರ್ಮಮಾಡಬೇಕೆಂಬ ಇಚ್ಛೆಯುಳ್ಳವರೆಲ್ಲರೂ ಐಶ್ವರ್ಯವಂತರಾಗಿರುವದಿಲ್ಲ. ಅದ್ದರಿಂದ ಧರ್ಮಮಾಡಬೇಕೆಂಬ ಇಚ್ಛೆಯುಳ್ಳವರಾಗಿದ್ದು ಐಶ್ವರ್ಯಹೀನರಾಗಿರುವವರೂ ಧರ್ಮಗುಣವನ್ನು ಸಾಧಿಸಿಕೊಳ್ಳಲಿ ಎಂತ ದೇವರು ಬೇರೆ ವಿಧವಾದ ಧರ್ಮಮಾರ್ಗಗಳನ್ನೂ ನೇಮಿಸಿರುವನು. ಅದ್ದರಿಂದ ಶಕ್ತನು ಅಶಕ್ತರನ್ನು ರಕ್ಷಿಸುವದು, ವೈದ್ಯನು ರೋಗಿಗಳನ್ನು ಗುಣಪಡಿಸುವದು, ಉಪಾಧ್ಯಾಯನು ಬಾಲಕರಿಗೆ ಬೋಧಿಸುವದು, ಜ್ಞಾನಿಯು ಅಜ್ಞಾನಿಗೆ ಸತ್ಯಬೋಧನೆ ಮಾಡುವದು, ದೇವರು ಅವನವನ ಶಕ್ತ್ಯಾನುಸಾರ ಧರ್ಮಮಾಡುವದಕ್ಕೆ ನೇಮಿಸಿದ ಮಾರ್ಗಗಳಾಗಿವೆ. ಅದ್ದರಿಂದ ಧರ್ಮಬುದ್ಧಿಯುಳ್ಳ ಯಾರಾದರೂ ನನಗೆ ಧರ್ಮಮಾಡಲಿಕ್ಕೆ ಮನಸ್ಸುಂಟು ಆದರೆ ಶಕ್ತಿಯಿಲ್ಲವಲ್ಲಾ ಎಂತ ಅಂಗಲಾಚಕೂಡದೆಂದೂ ನಿರುತ್ಸಾಹಪಡಕೂಡದೆಂದೂ ಇದರಿಂದ ವ್ಯಕ್ತವಾಗುವದಿಲ್ಲವೆ? ದೇವರು ಧರ್ಮಗುಣವುಳ್ಳವನಾಗಿ ನಾವು ನಮ್ಮ ಶಕ್ತಿಯಿಂದಲಾದರೂ ಹಣದಿಂದಲಾದರೂ ಸಂಪಾದಿಸಿಕೊಳ್ಳಲಾರದ ಗಾಳಿ, ಬೆಳಕು, ಮಳೆ ಮುಂತಾದ ಆತನ ವರಗಳನ್ನು ಉಚಿತವಾಗಿ ಕೊಟ್ಟು ಇದ್ದಾನೆ. ಈ ವರಗಳಿಲ್ಲದೆ ನಾವು ಬದುಕುವದೇ ಅಸಾಧ್ಯವಷ್ಟೆ. ಆದರೂ ಅವು ನಮಗೆ ಶ್ರಮವಿಲ್ಲದೆ ಕ್ರಯವಿಲ್ಲದೆ ದೊರಕುವದು ಆತನ ಧರ್ಮಗುಣದಿಂದಲ್ಲವೆ? ಆತನ ಸನ್ನಿಧಾನದಲ್ಲಿ ಇರಬೇಕೆಂದು ಅಭಿಲಾಷೆಪಡುವವರು ಆತನಲ್ಲಿ ಸಂಪೂರ್ಣವಾಗಿ ವ್ಯಕ್ತವಾಗುವ ಈ ಧರ್ಮಬುದ್ಧಿಯನ್ನು ತಮ್ಮ ಶಕ್ತಿಯುಳ್ಳದಮಟ್ಟಿಗೂ ಸಾಧಿಸಬೇಕು.

ಆದರೆ ಯಾರಿಗೆ ಧರ್ಮಮಾಡಬೇಕು? ಯಾಕೆ? ಜೋಗಿಗಳೂ ಜಂಗಮಯ್ಯಗಳೂ ದಾಸರೂ ಬ್ರಾಹ್ಮಣರೂ ಇಲ್ಲವೆ? ಇವರೇ ಧರ್ಮಕ್ಕೆ ಪಾತ್ರರು. ಬ್ರಾಹ್ಮಣರಿಗೆ ಗೋದಾನ, ಭೂದಾನ, ವಸ್ತ್ರದಾನಗಳನ್ನು ಮಾಡಿದರೆ ಪುಣ್ಯ ಬರುವದಿಲ್ಲವೆ ಎಂತ ವಾಚಕರು ಉತ್ತರ ಹೇಳ್ಯಾರು. ಮತ್ತು ಇಂಥಾ ಧರ್ಮಗಳನ್ನು ಮಾಡುವಾಗ ಕೊಂಬು ಕಹಳೆ ಊದಿಸಿ ವಾದ್ಯಗಳನ್ನು ಬಾರಿಸಿ ಹೊಗಳಿಸಿಕೊಳ್ಳುವದುಂಟು. ಇದು ಅಧರ್ಮವೇ ಹೊರತು ಧರ್ಮವಲ್ಲವೆಂತ ನಾವು ಖಂಡಿತವಾಗಿ ಹೇಳುತ್ತೇವೆ. ಇದರಲ್ಲಿ ಧರ್ಮಮಾಡುವವನು ಸ್ತೋತ್ರಪ್ರಿಯನಾಗಿ ಎಲ್ಲರಿಂದ ಹೊಗಳಿಸಿಕೊಳ್ಳಲು ಅಪೇಕ್ಷಿಸುತ್ತಾನೆ. ಇದು ತಪ್ಪು. ಧರ್ಮ ಸ್ವೀಕರಿಸಿದ ಜೋಗಿ ಜಂಗಮರಿಗೆ ಮೈಗಳ್ಳರಾಗಿಯೂ ಅಪ್ರಯೋಜಕರಾಗಿಯೂ ದೇವರು ಕೊಟ್ಟಿರುವ ಬುದ್ಧಿ ಶಕ್ತಿಗಳನ್ನು ಪ್ರಯೋಗಿಸದೆ ಕೆಟ್ಟು ಹೋಗಿರಿ ಎಂತ ಕಲಿಸಿದ ಹಾಗಾಯಿತು.

ಧರ್ಮವನ್ನು ಯಾರಿಗೆ ಹ್ಯಾಗೆ ಮಾಡಬೇಕೆಂಬ ವಿಷಯದಲ್ಲಿ ಒಂದು ಕಥೆಯುಂಟು. ಮೈಸೂರಿಂದ ಮಡಿಕೇರಿಗೆ ಹೋಗುತ್ತಿದ್ದವನನ್ನು ಕಳ್ಳರು ಹಿಡಿದು, ಇದ್ದಬದ್ದದ್ದನ್ನೆಲ್ಲಾ ಕಿತ್ತುಕೊಂಡು ಅರೆಪ್ರಾಣವಾಗುವ ವರೆಗೂ ಹೊಡೆದು ಚರಂಡಿಯಲ್ಲಿ ಹಾಕಿದ್ದರು. ಬಂದಬಂದ ಪ್ರಯಾಣಿಕರು ಅವನ ದುಸ್ಥಿತಿಯನ್ನು ನೋಡಿದರೂ ನಮಗ್ಯಾಕೆ ಈ ತಂಟೆ? ಎಂದು ಮಾತಾಡಿಸದ ದಾರಿಯಾಗಿ ಹೋದರು. ಆದರೆ ಕಡೆಯಲ್ಲಿ ಒಬ್ಬನು ಬಂದು ಅವನನ್ನು ಕನಿಕರಿಸಿ ಅವನು ಯಾವ ಜಾತಿಯವನು ಎಂತ ವಿಚಾರಿಸದೆ ಅವನನ್ನು ಎತ್ತಿ ಗಾಯಗಳನ್ನು ತೊಳೆದು ಹತ್ತಿರದ ಊರಿಗೆ ವೈದು ಆತನನ್ನು ಪರಾಮರಿಸಿದನು. ಇದರಿಂದ ಯಾರು ಯಾವಾಗ ಎಂಥಾ ಆಪತ್ತಿಗೆ ಸಿಕ್ಕಿರುತ್ತಾರೋ ಅವರನ್ನು ಆ ಕೊರತೆಯಿಂದ ಆಗಲಿ ಬಿಡಿಸುವದಕ್ಕೆ ಪ್ರಯತ್ನಮಾಡುವದೇ ಧರ್ಮವೆಂದು ತಿಳಿಯಬೇಕು.

ಇಂಥಾ ಧರ್ಮವನ್ನು ನಾವೆಲ್ಲರೂ ಕೈಕೊಳ್ಳಬೇಕೆಂಬದಕ್ಕೆ ಒಂದು ಮಹತ್ತಾದ ಗುರುತುಉಂಟು. ಏನಂದರೆ, ದೇವರು ಕಡೆಯಲ್ಲಿ ಎಲ್ಲಾ ಮನುಷ್ಯರನ್ನು ಒಟ್ಟುಗೂಡಿಸಿ ಅವರವರನ್ನು ವಿಚಾರಿಸಿ ಶಿಕ್ಷೆ ರಕ್ಷೆಗಳನ್ನು ಅವರವರ ಕ್ರಿಯೆಗಳ ಸರಿಯಾಗಿ ವಿಧಿಸುವನು. ಆಗ ಆತನು ನೀನು ಮುಸಲ್ಮಾನನೋ? ಹಿಂದುವೋ? ಬೌದ್ಧನೋ? ಕ್ರೈಸ್ತನೋ? ಎಂದು ವಿಚಾರಿಸದೆ ಧರ್ಮಿಷ್ಟನಿಗೆ—ಆಶೀರ್ವಾದಪಾತ್ರನೇ, ನನ್ನ ಸನ್ನಿಧಾನವನ್ನು ಹೊಂದು. ಯಾಕೆಂದರೆ, ನಾನು ಹಸಿದಿದ್ದೆನು ನೀನು ಊಟಮಾಡಿಸಿದಿ. ಬಾಯಾರಿದ್ದೆನು, ನೀರುಕೊಟ್ಟಿ. ಪರದೇಶಿಯಾಗಿದ್ದೆನು ನನ್ನನ್ನು ಸ್ವೀಕರಿಸಿದಿ, ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡಿದಿ ಎಂದು ಹೇಳುವನು. ಆತನು ನನಗೆ ನಾನು ಯಾವಾಗ ಇದನ್ನು ಮಾಡಿದೆನು ಸ್ವಾಮಿ ಎಂದು ಕೇಳಿದಕ್ಕೆ ನನ್ನ ಸಹೋದರರಲ್ಲಿ ಅಲ್ಪನಿಗೆ ನೀನು ಇದನ್ನು ಮಾಡಿದ್ದರಿಂದ ಅದು ನನಗೆ ಮಾಡಿದಂತಾಯಿತು ಅನ್ನುವನು. ಅಧರ್ಮಿಗೆ—ನಾನು ಹಸಿದು ಬಾಯಾರಿ ರೋಗಿಯಾಗಿ ಪರದೇಶಿಯಾಗಿ ನಿನ್ನೆದುರಿಗೆ ಇದ್ದರೂ ನೀನು ನನಗೆ ಸಹಾಯಮಾಡಲಿಲ್ಲ ಅನ್ನುವನು. ಅಧರ್ಮಿಯು—ಸ್ವಾಮಿ, ನಾನು ನಿನ್ನನ್ನು ಕಾಣಲೆ ಇಲ್ಲ. ಕಂಡಿದ್ದರೆ ಎಲ್ಲಾ ಮಾಡುತ್ತಿದ್ದೆ ಎಂದು ಹೇಳಲು— ನೀನು ಕೇವಲ ಅಲ್ಪನಾದವನೆಂದು ಗತಿಹೀನನಿಗೆ ಏನೂ ಮಾಡದೆ ತಿರಸ್ಕರಿಸಿದಿಯೋ ಅದೆಲ್ಲಾ ನನಗೂ ಮಾಡದೆ ನನ್ನನ್ನೇ ತಿರಸ್ಕರಿಸಿದಂತಾಯಿತೆಂದು ಹೇಳುವನು. ಹೀಗೆ ಧರ್ಮಿಷ್ಟರು ದೇವರನ್ನು ಸೇವಿಸಿದವರು ಅಧರ್ಮಿಗಳು ದೇವರನ್ನೇ ಕಂಡು ತಿರಸ್ಕರಿಸಿದವರೂ ಎಂತ ಭಾವಿಸಲ್ಪಡುವರು.

ಮೈಸೂರು ಗೆಜೆಟ್ ಸಂಗ್ರಹ.

ರೆವ್ ಎ ಬ್ರಾಕ್ ಬ್ಯಾಂಕ್ಸ್‌ಯವರನ್ನು ಶಿವಮೊಗ್ಗಾ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರಾಗಿ ನೇಮಕಮಾಡಿದೆ.

ಮೆ|| ಕುಮರೆಗುಂಡಿ ತಿಮ್ಮಶೆಟ್ಟಿಯವರನ್ನು ಮೂಡಿಗೆರೆ ತಾಲ್ಲೂಕ್ ಬೋರ್ಡಿನ ಮೆಂಬರಾಗಿ ನೇಮಕಮಾಡಿದೆ.

ಕನ್ನಡಾ ಸ್ಕೂಲ್ ಹೆಡ್ ಮಾಸ್ಟರ್ ಮೆ|| ಎಂ ರಾಮಕೃಷ್ಣಯ್ಯನವರನ್ನು ಕೃಷ್ಣರಾಜಪೇಟೆ ತಾಲ್ಲೂಕು ತೆಕ್ಕೇರಿ ಯೂನಿಯನ್‌ಗೆ ಪಂಚಾಯತಿದಾರನ್ನಾಗಿ ನೇಮಕಮಾಡಿದೆ.

ಗವರ್ನ್‌ಮೆಂಟ್ ಪ್ರೆಸ್ಸಿನ ಸೂಪರಿಂಟೆಂಡೆಂಟ್ ಮ|| ಪಿ ಎಚ್ ಯೇಟ್ಸ್‌ಯವರಿಗೆ ಎರಡು ತಿಂಗಳು ಹದಿನೆಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಹಿಂದೆ ಅವರಿಗೆ ಕೊಟ್ಟಿರುವ ಆರು ವಾರಗಳ ರಜವು ಇದರಲ್ಲಿ ಸೇರಿರುವುದು. ಅವರು ರಜದ ಮೇಲಿರುವಾಗ್ಗೆ ಹಿಂದೆ ಹುಕುಂ ಕೊಟ್ಟಿರುವಂತೆ ಅವರ ಕೆಲಸಗಳು ಜರುಗತಕ್ಕದ್ದು.

ಮೇ ತಿಂಗಳ ತಾ ೨೭ ರಿಂದ ಮುಂದೆ ಹೇಳುವ ಮುನ್ಸೀಫರುಗಳ ವರ್ಗಾವರ್ಗಿ ಹುಕುಂ ಮಾಡಿದೆ — ಮೆ|| ಎಂ ನರಸಪ್ಪಯ್ಯನವರನ್ನು ಹೊಳೆನರಸೀಪುರದಿಂದ ಶಿವಮೊಗ್ಗೆಗೆ, ಮೆ|| ಪಿ ಮಹದೇವಯ್ಯನವರನ್ನು ಸಾಗರದಿಂದ ಹೊಳೆನರಸೀಪುರಕ್ಕೆ, ಮೆ|| ಕೆ ಎನ್ ನಾರಾಯಣ ಅಯ್ಯಂಗಾರ್ರನ್ನು ಶಿವಮೊಗ್ಗೆಯಿಂದ ಸಾಗರಕ್ಕೆ.

ಬೆಂಗಳೂರು ಸಬ್ ಜಡ್ಜ್ ಮತ್ತು ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ|| ಟಿ ಇ ಜಯರಾಮ ಅಯ್ಯರವರು ದಿವಾನಿಯಲ್ಲಿ ನಡಿಯುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಹೇಳಿಕೆಯನ್ನು ಸ್ವಹಸ್ತ ಇಂಗ್ಲೀಷಿನಲ್ಲಿ ಬರೆದುಕೊಳ್ಳುವ ಅಧಿಕಾರ ಕೊಡಲ್ಪಟ್ಟಿದಾರೆ.

ಶಿವಮೊಗ್ಗಾ ಡಿವಿಜನ್ ಅ|| ಇಂಜನಿಯರ್ ಮೆ|| ಬಿ ಸಿ ಶ್ರೀನಿವಾಸಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಮೇ ತಾ. 1 ಕ್ಕೆ ಅಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು	ಧರ್ಮಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು	ರೂ	
ಬೆಂಗಳೂರು	461	184	38	309	257
ಕೋಲಾರ	1,929	956	75	4,739	777
ತುಮಕೂರು	1,989	745	81	2,113	696
ಮೈಸೂರು	126	96	14	201	368
ಹಾಸನ	580	918	135	1,389	
ಶಿವಮೊಗ್ಗ	92	68	8	558	5
ಕಡೂರು	117	89	2	294	
ಚಿತ್ರದುರ್ಗ	700	608	112	1,091	528
ಮಾರಿಕಣಿವೆ	159	172	7	373	
ಸ್ಯಾನಿಟರಿ	109	79		135	
ಒಟ್ಟು	5,662	3,975	502	11,192	2,631

ಚಾಮರಾಜನಗರದಲ್ಲಿ ಎರಡು ಹುಲಿಗಳನ್ನು ಹಿಡಿದದ್ದು.

[ಒಬ್ಬ ಬಾತ್ಮಿದಾರರಿಂದ]

ಹುಲಿಯ ಮುತ್ತಿಗೆ ವಿಷಯದಲ್ಲಿ ಮಹಾರಾಜರವರಿಂದ ಅಪ್ಪಣೆಹೊಂದಿದವರಾಗಿ ಏಪ್ರಿಲ್ ತಾ ೧೩ ಕ್ಕೆ ಮ ಮುತ್ತಯ್ಯನವರು ದಯಮಾಡಿದರು. ಸಿಕಾರಿದಾರರನ್ನೆಲ್ಲಾ ಒಟ್ಟುಗೂಡಿಸಿ ತಾ ೨೮ರ ವರಿಗೂ ಕಾಡಿನಲ್ಲಿ ಹುಲಿ ಹೆಜ್ಜೆಗಳನ್ನು ಪತ್ತೆ ಮಾಡುತ್ತಿದ್ದು, ಹುಲಿಗಳು ಇರುವ ಸ್ಥಳವನ್ನು ಗೊತ್ತು ಮಾಡಿಕೊಂಡು ತಾ ೧೩ರಲ್ಲಿ ಮುತ್ತಿಗೆ ಹಾಕಿ ಬಿಗಿಬಿಟ್ಟು ಒಳಗೆ ನಾಲ್ಕು ಹುಲಿಗಳನ್ನು ಸೇರಿಸಿಕೊಂಡರು. ೧೪ರಂದು ಸೂಪರ್‌ವೈಸರ್ ಮ ಚೆಂಗಪ್ಪನವರು ತುಬಾಕಿಯನ್ನು ತೆಗೆದುಕೊಂಡು ಈಟಿ ವಗೈರೆ ಆಯುಧ ಸಮೇತರಾದ ಕೆಲವು ಸಿಕಾರಿದಾರರನ್ನು ಸಂಗಡ ಕರೆದುಕೊಂಡು ಬಲೆಯೊಳಗೆ ನುಗ್ಗಿ ಹುಲಿಗಳು ಅಡಗಿರುವ ಸ್ಥಳವನ್ನು ಪತ್ತೆಮಾಡಿಕೊಂಡು ಅದರ ಸುತ್ತಲೂ ಟ್ರೆಂಚ್ ಕತರಾಯಿಸಿ ಮತ್ತೊಂದು ಬಲೆಯನ್ನು ಬಿಟ್ಟರು. ಇಷ್ಟರಲ್ಲಿ ಒಂದು ಗಂಡು ಹುಲಿಯು ತಪ್ಪಿಸಿಕೊಂಡು ಓಡಿಹೋಯಿತು. ತಾ ೧೪ರಲ್ಲಿ ಪುನಹ ಟ್ರೆಂಚ್ ಕತರಾಯಿಸಿಕೊಂಡು ಬಲೆಯನ್ನು ಚಿಕ್ಕದಾಗಿ ಬಿಡಿಸಿ ಹುಲಿಯನ್ನು ಬೋನಿಗೆ ಬೀಳಿಸುವ ಪ್ರಯತ್ನದಿಂದ ಬೋನನ್ನು ಇಟ್ಟರು. ಹುಲಿಯನ್ನು ಎಳೆಸಲು ಮೇಲ್ಕಂಡ ಚೆಂಗಪ್ಪನವರು ಬಂದೂಕ ಮೊದಲನೆ ಒಂಟಿಯಾಗಿ ಕಿರಿದಾಗಿ ಬಿಟ್ಟದ್ದ ಬಲೆಯೊಳಕ್ಕೆ ಹೋಗಲು ಅಡಗಿದ್ದ ಹುಲಿಗಳ ಪೈಕಿ ಒಂದು ಈ ಸೂಪರ್‌ವೈಜರನ್ನು ಕಂಡು ಅವರ ಮೇಲೆ ಹಾರಲು ಅವರು ಯುಕ್ತಿಯಿಂದ ತಪ್ಪಿಸಿಕೊಂಡು ಹುಸಿ ಮದ್ದನ್ನು ಹಾರಿಸಿ ಹೊರಕ್ಕೆ ಬಂದರು. ತಾ ೧೫ ರಲ್ಲಿ ಹುಲಿಯು ಗೂಡಿಗೆ ಬೀಳದಿರಲು ಪುನಹ ಬಲೆಯನ್ನು ಕೇವಲ ಕಿರಿದಾಗಿ ಮಾಡಿಕೊಂಡು ಗೂಡನ್ನು ಮೊದಲಿದ್ದ ಸ್ಥಳದಿಂದ ಬದಲಾಯಿಸಿ ಇಟ್ಟರು. ತಾ ೧೬ ರಲ್ಲಿ ಮೊದಲು ಬಿಟ್ಟಿದ್ದ ಮೂರು ಟ್ರೆಂಚ್ ಬಲೆಗಳ ಮೇಲೆ ಮತ್ತೊಂದು ಬಲೆಯನ್ನು ಟ್ರೆಂಚ್ ಕತರಾಯಿಸಿ ಚಿಕ್ಕ ಕೋಣೆಯಂತೆ ಮಾಡಿ ಬಲೆಗಳ ಸುತ್ತಲೂ ಜನರು ಕಾದು ಇದ್ದರು.

ಆ ರಾತ್ರಿ ಹುಲಿಗಳು ಜನಗಳ ಕೂಗಿನಿಂದಲೂ ಯಾವ ಆಹಾರವೂ ಇಲ್ಲದೆಯೂ ಎಲ್ಲಿಯೂ ಹೊಗದಂತೆಯೂ ಇರುವುದನ್ನು ನೋಡಿ ತಪ್ಪಿಸಿಕೊಳ್ಳಲು ಯತ್ನಮಾಡ ತೊಡಗಿದವು. ಕೊನೆಗೆ ಅವು ಮಾಡಿದ ಆರ್ಭಟಗಳೂ, ಪ್ರಯತ್ನಗಳೂ ನಿಷ್ಪ್ರಯೋಜನವಾಗಲು, ಅರ್ಧರಾತ್ರಿಯ ಸಮಯದಲ್ಲಿ ಹೆಣ್ಣು ಹುಲಿಯು ಬಲೆಯನ್ನು ಕಚ್ಚಿ ದಾರಿಯನ್ನು ಮಾಡಿಕೊಂಡು ಹೊರಕ್ಕೆ ಓಡಿಹೋಯಿತು. ಅಷ್ಟರಲ್ಲೇ ಸಿಕಾರಿದಾರರು ಎಚ್ಚತ್ತು ಓಡಿಹೋದ ಹುಲಿಗೆ ಬದಲಾಗಿ ಮಿಕ್ಕವುಗಳನ್ನು ಬಹು ಬಂದೋಬಸ್ತಿನಿಂದ ನೋಡಿಕೊಳ್ಳಲೆತ್ನಿಸಿದರು. ಮ ಮುತ್ತಯ್ಯನವರಿಗೂ ಚೆಂಗಪ್ಪನವರಿಗೂ ಕೂಗಳತೆ ಗಂಟೆಲ್ಲಾ ಕಿತ್ತುಹೋಗಿ ಬಹು ಶ್ರಮಪಡುತ್ತಿದ್ದರು. ಹುಲಿಗಳ ಸುತ್ತಲೂ ಜೋಡು ಬಲೆ ಬಿಡಿಸಿ ಕಾದು ಇದ್ದರು. ತಾ ೧೮ನೇ ರಾತ್ರಿ ಬೆಳಗಿನ ಝಾವ ಸುಮಾರು ೪ ಘಂಟೆ ಹೊತ್ತಿನಲ್ಲಿ ಒಂದು ಹುಲಿಯು ಬೋನಿಗೆ ಬಿತ್ತು. ಬಿದ್ದ ಶಬ್ದವನ್ನು ಕೇಳಿ ಮ|| ಮುತ್ತಯ್ಯನವರೂ, ಚೆಂಗಪ್ಪನವರೂ ಗೂಡಿನ ಬಳಿ ಹೋಗಿ ನೋಡಿ ಗೂಡನ್ನು ಬಂದೋಬಸ್ತು ಮಾಡಿ ಬರುವ ವೇಳೆ ಹೊರಗೆ ಉಳಿದಿದ್ದ ಹುಲಿಯು ಚೆಂಗಪ್ಪನವರ ಮೇಲೆ ಬೀಳುವ ಪ್ರಯತ್ನದಲ್ಲಿರಲು ಉಪಾಯದಿಂದ ತಪ್ಪಿಸಿಕೊಂಡು ಹೊರಗ ಬಂದರು. ತಾ ೨೦ರ ವರಿಗೂ ಬೋನಿಗೆ ಬಿದ್ದ ಹುಲಿಯನ್ನು ಕಾಪಾಡಿಕೊಂಡು ಇದ್ದರು. ತಾ ೨೧ನೇ ರಾತ್ರಿ ಮಳೆ ಬಿದ್ದು ಹೊಳೆಯಲ್ಲಿ ನೀರು ಬಂದು ಹೊಳೆಯನ್ನು ಅನುಸರಿಸಿ ಹಾಕಿದ್ದ ಬಲೆಗಳೆಲ್ಲಾ ನೀರಿಗೆ ಕೊಚ್ಚಿಹೋಗಿ ಸಿಕಾರಿದಾರರ ಮತ್ತು ಆಫೀಸರ ಸಾಮಾನುಗಳೆಲ್ಲಾ ನೀರಿನಿಂದ ಹಾಳಾದವು. ಈ ಸಮಯದಲ್ಲಿ ಮಳೆಯು ಬಿಡದೆ ನಿಲ್ಲಲಾರದೆ ಮುನ್ನೂರು ನಾನೂರು ಸಿಕಾರಿ ಆಳುಗಳು ಒಂದು ಕಡೆ ಚಿಟ್ಟಗೆ ಸೇರಿಕೊಂಡರು. ಆಗ ಬಾಕಿ ಹುಲಿಗಳು ಓಡಿಹೋಗುವಷ್ಟು ಅಪಾಯ ಸ್ಥಿತಿಯಲ್ಲಿದ್ದವು. ಆ ಕಾಲದಲ್ಲಿ ಚೆಂಗಪ್ಪನವರು ಒಬ್ಬರೇ ಬಂದೂಕವನ್ನು ಹೊತ್ತು ಅಲ್ಲಲ್ಲಿ ಉಸ್ತುವಾರಿ ಮಾಡುತ್ತಾ ಮಳೆಯಲ್ಲಿ ನೆನದು ಮುದ್ದೆಯಾಗಿದ್ದರೂ ಬಿಡದೆ ಬೆಳಗಿನ ವರಿಗೂ ಕಾದು ಸಿಕಾರಿದಾರರನ್ನೆಲ್ಲಾ ಎಚ್ಚರಿಸಿ ಪುನಹ ಮೊದಲಿನಂತೆ ಬಂದೋಬಸ್ತು ಮಾಡಿದರು. ತಾ ೨೪, ೨೫, ೨೬ರ ವರಿಗೂ ಹುಲಿ ಬೀಳದೆಯೂ ಹೆಣ್ಣು ಹುಲಿಯ ಅವಾಂತ್ರದಿಂದಲೂ ಜನರು ಬಹು ತೊಂದರೆಪಡುತ್ತಿದ್ದರು. ಅನ್ನ ನೀರಿಲ್ಲದೆ ಮುತ್ತಯ್ಯನವರು ಮುತುವರ್ಜಿ ಮಾಡುತ್ತಿದ್ದರು. ಕೊನೆಗೆ ತಾ ೨೭ರಲ್ಲಿ ಮತ್ತೊಂದು ಹುಲಿಯೂ ಬೋನಿಗೆ ಬಿತ್ತು. ಆಗ ಜನರೆಲ್ಲರೂ ಉತ್ಸಾಹಿತರಾಗಿ ಬಲೆಗಳನ್ನು ಕಿತ್ತು ಗೂಡುಗಳನ್ನು ಬಂದೋಬಸ್ತು ಮಾಡಿ ಅರಮನೆಯ ಗಾಡೀ ಮೇಲೆ ಹೇರಿಸಿ ಮೈಸೂರಿಗೆ ರವಾನೆಮಾಡಿದರು. ಈ ಮುತ್ತಿಗೆಯಲ್ಲಿ ಮುತ್ತಯ್ಯನವರೂ ಚೆಂಗಪ್ಪನವರೂ ಜನಗಳೂ ಬಹು ಮೆಹನತ್ತು ಮಾಡಿದಾರೆ. ರೈತರೆಲ್ಲರೂ ಇವರ ಏರ್ಪಾಡುಗಳಿಗೆ ಸಹಾಯಕರಾಗಿ ತಮಗೆ ಒದಗಿದ ಕಷ್ಟ ಪರಂಪರೆಗಳಿಗೆ ಎದೆಗೊಟ್ಟು ಸಾಹಸಮಾಡಿರುತ್ತಾರೆ.

ಮೈಸೂರು ಸರ್ಕಾರಿ ಹುಕುಮುಗಳು

ಮುಜರಾಯಿ ಇಲಾಖೆ.

ಅತ್ತವುಳ್ಳ ಷಾ ದರ್ಗಾವು ಬೆಂಗಳೂರು ಸಿಟಿಯಲ್ಲಿ ಲಾಲ್ ಬಾಗ್ ಬಳಿ ಇರುತ್ತದೆ. ಅದು ಮುಜರಾಯಿ ಇಲಾಖೆಗೆ ಸೇರಿದ್ದು. ಅದಕ್ಕೆ ಬೆಂಗಳೂರು ಮತ್ತು ಆನೆಕಲ್ ತಾಲ್ಲೂಕುಗಳಲ್ಲಿ ಇನಾಮುಗಳಿರುತ್ತವೆ. ಸೈಯದ್ ಷಾ ಅಹಮದ್ ಹುಸ್ಸೇನಿ ಸಜ್ಜಾದ ಎಂಬ ಆ ದರ್ಗಾವಿನ ಮುಕ್ತೇದಾರರು ಕಳೆದ ೧೯೦೭ ನೇ ಜೂನ್ ೨೭ ರಲ್ಲಿ ಮದರಾಸಿನಲ್ಲಿ ಕಾಲವಾದರೆಂದೂ, ಅವರಿಗೆ ಏಳು ವರುಷದ ಸೈಯದ್ ಷಾ ಗುಲಾಂ ಆಲಿ ಸಾಹೆಬ್ ಎಂಬ ಮೈನರ್ ಮಗನು ಇರುತ್ತಾನೆಂದೂ, ಅತನ ಪೋಷಣೆ, ವಿದ್ಯಾಭ್ಯಾಸ ಮೊದಲಾದ ವಿಷಯದಲ್ಲಿ ಸರಿಯಾದ ಏರ್ಪಾಡು ಮಾಡಿದೆ ಎಂದೂ, ಈತನನ್ನು ಆ ದರ್ಗಾವಿಗೆ ಮುಕ್ತೇದಾರನನ್ನಾಗಿ ನೇಮಿಸುವ ಭಾಗದಲ್ಲಿ ಮುಸಲ್ಮಾನ್ ಜಂಗಡದವರು ಸಮ್ಮತಿಪಟ್ಟಿದ್ದಾರೆಂದೂ, ಈತನ ಹೆಸರಿಗೆ ಆ ಕೆಲಸವು ಸ್ಯಾಂಕ್ಷನ್ ಆಗಬೇಕೆಂದೂ ಬೆಂಗಳೂರು ಡೆಪ್ಯುಟಿ ಕಮಿಷನರ್‌ರವರು ಗವರ್ನ್‌ಮೆಂಟಿಗೆ ಬರೆದರು. ಗವರ್ನ್‌ಮೆಂಟಿನವರು ಅದೇ ರೀತಿ ಒಪ್ಪಿಕೊಂಡು ಸ್ಯಾಂಕ್ಷನ್ ಮಾಡಿರುತ್ತಾರೆ.

ಅರಸೀಕೆರೆಯ ಮ|| ನರಸಿಂಹಶೆಟ್ಟಿರವರು ಅಲ್ಲಿ ಒಂದು ಶಿವದೇವಸ್ಥಾನವನ್ನು ಹೊಸದಾಗಿ ಕಟ್ಟಿಸಿ, ಅದರಲ್ಲಿ ಪಡಿತರ ದೀಪಾರಾಧನೆ ಮುಂತಾದದ್ದು ನಡೆಯುವಂತೆ ೩,೦೦೦ ರೂಪಾಯನ್ನೂ, ದೇವಸ್ಥಾನದ ರಿಪೇರಿ ಮುಂತಾದದ್ದಕ್ಕೆ ೨,೦೦೦ ರೂಪಾಯನ್ನೂ ಮೂಲಧನ ಕೊಟ್ಟು, ಗವರ್ನ್‌ಮೆಂಟಿಗೆ ಅರಿಕೆಮಾಡಿಕೊಂಡರು. ಗವರ್ನ್‌ಮೆಂಟಿನವರು ಆ ೫,೦೦೦ ರೂಪಾಯನ್ನೂ ಸ್ವೀಕರಿಸಿ, ಅದಕ್ಕೆ ಶೇಕಡಾ ವರುಷಕ್ಕೆ ೪ ರೂಪಾಯಿನಂತೆ ಬಡ್ಡಿ ಕೊಡಬೇಕೆಂದೂ, ಆ ದೇವಸ್ಥಾನದ ಮೇಲ್ವಿಚಾರಣೆ, ನಿತ್ಯಕಟ್ಟಳೆ ಮೊದಲಾದದ್ದನ್ನೆಲ್ಲಾ ನಡಿಸುವುದನ್ನು ಮ| ನರಸಿಂಹಶೆಟ್ಟರಿಗೂ ಅವರ ತರುವಾಯ ಅವರ ವಂಶೀಕರಿಗೂ ವಹಿಸಬೇಕೆಂತಲೂ, ಅವರು ದೇವಸ್ಥಾನದ ಕಾರುಬಾರುಗಳನ್ನು ತೃಪ್ತಿಕರವಾಗಿ ನೋಡಿಕೊಳ್ಳದೆ ತಪ್ಪಿದಾಗ್ಗೆ ಮುಜರಾಯಿ ಇಲಾಖೆಯವರು ಬೇರೆ ಏರ್ಪಾಡು ಮಾಡತಕ್ಕದ್ದೆಂತಲೂ ಹುಕುಂ ಕೊಟ್ಟಿದಾರೆ.

ದೊಡ್ಡಬಳ್ಳಾಪುರದ ತಾಲ್ಲೂಕು ಮೆಳೆಕೋಟೆಯಲ್ಲಿ ಮ| ಕೋಡಿಹಳ್ಳಿ ರಾಮಣ್ಣನವರು ರಾಮದೇವರ ಮತ್ತು ಆಂಜನೇಯ ದೇವರ ದೇವಸ್ಥಾನಗಳಿಗೂ, ಅವರು ಹೊಸದಾಗಿ ಕಟ್ಟಿಸಿರುವ ಸತ್ರಕ್ಕೂ ೪,೦೦೦ ರೂಪಾಯಿ ಮೂಲಧನವನ್ನು ಕೊಟ್ಟು, ಅವುಗಳನ್ನು ಈ ಹಣದ ಬಡ್ಡಿಯಿಂದ ನಡಿಸುತ್ತಾ ಬರಬೇಕೆಂದು ಸರ್ಕಾರದವರನ್ನು ಕೇಳಿಕೊಂಡರು. ಗವರ್ನ್‌ಮೆಂಟಿನವರು ಆ ಹಣವನ್ನು ಅಂಗೀಕರಿಸಿ ಅದಕ್ಕೆ ಶೇಕಡಾ ವರುಷಕ್ಕೆ ೪ ರೂಪಾಯಿನಂತೆ ಬಡ್ಡಿ ಕೊಡತಕ್ಕದ್ದೆಂದೂ ಈ ಬಡ್ಡಿ ಹಣದಿಂದ ಆ ಧರ್ಮಕೆಲಸಗಳನ್ನು ನಡಿಸುತ್ತಾ ಬರಬೇಕೆಂದೂ ಸ್ಯಾಂಕ್ಷನ್ ಮಾಡಿರುತ್ತಾರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಂಡೀಹೊಳೆಯಲ್ಲಿರುವ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಇನಾಮತಿ ಮುಂತಾದದ್ದರ ಪರವಾನವು ಗುರುತುಹೋಗವಾಗುತ್ತಿದೆ ಎಂದೂ, ಅದನ್ನೂ ಇನಾಮತಿ ಮುಂತಾದದ್ದನ್ನೂ ಸರ್ಕಾರಕ್ಕೆ ಸೇರಿಸಿಕೊಂಡು ನಡಿಸಬೇಕೆಂದೂ ಮ ವ್ಯಾಸರಾಯರು ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಂಡರು. ಈ ದೇವಸ್ಥಾನಕ್ಕೆ ವರುಷಕ್ಕೆ ೧೨೦ ರೂಪಾಯಿ ವರಮಾನವುಳ್ಳ ವೃತ್ತಿಗಳು ಇರುತ್ತವೆ. ಇವುಗಳನ್ನು ಶ್ರೀಮನ್ ಮಹಾರಾಜರವರು ವಹಿಸಿಕೊಟ್ಟರು. ೧೮೭೫—೧೮೯೦ರ ತನಕ ಸರ್ಕಾರಿಯಾಗಿ ನೇಮಕವಾದ ಒಬ್ಬ ಏಜಂಟು ಕಂದಾಯಗಳನ್ನು ವಸೂಲ್ಮಾಡಿ ಸರಿಯಾಗಿ ದೇವಸ್ಥಾನದ ಕೆಲಸಕ್ಕೆ ವಿನಿಯೋಗಿಸಿಲ್ಲವೆಂದು ತನಿಖೆಯಾಗುತ್ತಿದೆ ಎಂದು ಡೆಪ್ಯುಟಿ ಕಮಿಷನರ್‌ರವರು ತಿಳಿಸಿದರು. ಗವರ್ನ್‌ಮೆಂಟಿನವರು ಆ ವೃತ್ತಿಗಳನ್ನೂ ದೇವಸ್ಥಾನವನ್ನೂ ಮುಜರಾಯಿಗೆ ಸೇರಿಸಿಕೊಳ್ಳಬೇಕೆಂದು ಹುಕುಂ ಕೊಟ್ಟಿದಾರೆ.

ನೆಲಮಂಗಲದ ತಾಲ್ಲೂಕು ತ್ಯಾಮಗೊಂಡ್ಲಿನಲ್ಲಿರುವ ಮ, ರಾಜಾ ಸುಬ್ಬಶೆಟ್ಟಿರವರು ತಮ್ಮ ಆಸ್ತಿಯಲ್ಲಿ ೬,೦೦೦ ರೂಪಾಯನ್ನು ಸರ್ಕಾರಕ್ಕೆ ವಹಿಸಿ, ಅದಕ್ಕೆ ಶೇಕಡಾ ವರುಷಕ್ಕೆ ೪ ರೂಪಾಯಿನಂತೆ ಬಡ್ಡಿ ಕೊಡಬೇಕೆಂದೂ, ಶಿವಗಂಗೆಯಲ್ಲಿ ತಾವು ಕಟ್ಟಿಸಿರುವ ಸತ್ರದಲ್ಲಿ ಗಂಗಾಧರೇಶ್ವರಸ್ವಾಮಿ ದೇವಸ್ಥಾನದೊಳಗೆ ಗಿರಿಜಾ ಕಲ್ಯಾಣವಾಗುವಾಗ್ಗೆ ಅಲ್ಲಿಗೆ ಹೋಗುವಂಥಾ ವೈಶ್ಯ ಪ್ರಜೆಗಳಿಗೆ ಆ ಬಡ್ಡಿ ಹಣದಿಂದ ಅನ್ನಸತ್ರವನ್ನು ಇಟ್ಟು ನಡಿಸುತ್ತಾ ಬರಬೇಕೆಂದೂ ಕೇಳಿಕೊಂಡರು. ಗವರ್ನ್‌ಮೆಂಟಿನವರು ಆ ಹಣವನ್ನು ಅಂಗೀಕರಿಸಿ, ಅದಕ್ಕೆ ಅವರು ಕೇಳುವಂತೆ ಬಡ್ಡಿ ಕೊಡಬೇಕೆಂದೂ, ಆ ಸತ್ರದ ಮೇಲ್ವಿಚಾರಣೆಯನ್ನು ಮ ರಾಜಾ ಸುಬ್ಬಶೆಟ್ಟರಿಗೂ, ಅವರ ಅನಂತರ ಅವರ ವಂಶೀಕರಿಗೂ ವಹಿಸಬೇಕೆಂದೂ, ಸಂತರ್ಪಣೆ ಮುಂತಾದದ್ದನ್ನು ಅವರು ತೃಪ್ತಿಕರವಾಗಿ ನಡಿಸದಿದ್ದಲ್ಲಿ ಅದರ ಮೇಲ್ವಿಚಾರಣೆಗೆ ಬೇರೆ ಏರ್ಪಾಡು ಮಾಡಲಾಗುವುದೆಂತಲೂ ಹುಕುಂ ಕೊಟ್ಟಿದಾರೆ.

ಶ್ರೀ ಕೃಷ್ಣರಾಜ ಕೃಷಿ ಶಿಲ್ಪಾಭಿವರ್ಧಕ ಸಮಾಜ ಲಿಮಿಟೆಡ್, ಮೈಸೂರು

ಗೆಣಸಿನ ವ್ಯವಸಾಯ

ಗೆಣಸು ದಕ್ಷಿಣ ಅಮೆರಿಕಾ ದೇಶದಲ್ಲಿ ಉತ್ಪತ್ತಿಯಾದ ವಸ್ತುವೆಂದು ತಿಳಿಯಬಂದು ಇದೆ. ಈಗ್ಗೆ, ಅಂದರೆ 17 ನೇ ಶತಮಾನದಲ್ಲಿ ಇಂಡಿಯಾ ದೇಶಕ್ಕೆ ಅಮೆರಿಕಾ ದೇಶದಿಂದ ಇದನ್ನು ತಂದು ಬೆಳೆಯುವುದಕ್ಕೆ ಪ್ರಾರಂಭವಾಯಿತೆಂದೂ ಗ್ರಂಥಕರ್ತರು ಹೇಳುತ್ತಾರೆ.

ಗೆಣಸಿನಲ್ಲಿ ೨ ಜಾತಿ ಅಂದರೆ ಕೆಂಪು, ಬಿಳುಪು ಉಂಟು. ಬಿಳಿ ಗೆಣಸಿಗಿಂತ ಕೆಂಪು ಗೆಣಸು ಮೃದುವಾಗಿಯೂ ಸಿಹಿಯಾಗಿಯೂ ಇರುವುದು ಎಲ್ಲರಿಗೂ ಗೊತ್ತಾಗಿಯೇ ಇದೆ. ಬಿಳಿ ಗೆಣಸಿನಲ್ಲಿ ಈಚೆಗೆ ಒಂದು ದೊಡ್ಡ ಜಾತಿ ಗೆಣಸು ನಮ್ಮ ದೇಶದಲ್ಲಿ ಬೆಳೆಯುತ್ತಾರೆ. ಇದನ್ನು ಸೀಮೆ ಗೆಣಸೆಂದು ಕರೆಯುವುದುಂಟು. ಕೆಂಪು ಗೆಣಸು ಚೆನ್ನಾಗಿ ವ್ಯವಸಾಯಮಾಡಿ ಶಕ್ತಿಯುಳ್ಳ ಭೂಮಿಯಲ್ಲಿ ಬೆಳೆಸಿದರೆ ಅರದ ಲಾಗಾಯಿತು ಎಂಟು ಅಂಗುಲ ದಪ್ಪವಾಗಿ ಆಗುತ್ತೆ. ಸಾಮಾನ್ಯವಾದ ಜಮೀನುಗಳಲ್ಲಿ 3 ರಿಂದ 5 ಅಂಗುಲದ ವರಿವಿಗೆ ಗಾತ್ರವುಳ್ಳದ್ದಾಗಿರುತ್ತೆ. ಸೀಮೆಯ ಗೆಣಸು ಇದಕ್ಕಿಂತಲೂ ಬಹಳ ಗಾತ್ರವಾಗಿಯೂ ಉದ್ದವಾಗಿಯೂ ಆಗುವದುಂಟು. ಇದು ಯಾವಾಗಲೂ ಬಿಳಿ ಗೆಣಸು. ಗೆಣಸು ಸಾಮಾನ್ಯವಾಗಿ ಮೃದುವಾದ ಮರಳುಜಮೀನಿನಲ್ಲಿ ಗೊಬ್ಬರ ಹಾಕಿ ಬೆಳೆಸಿದರೆ ಚೆನ್ನಾಗಿ ಬೆಳೆಯುತ್ತದೆ. ಗೆಣಸು ಹಾಕತಕ್ಕ ಭೂಮಿಯನ್ನು 9 4 ತಿಂಗಳಿಂದ ಚೆನ್ನಾಗಿ ಉತ್ತು ಹಾಳುಮಾಡಿ ಗೊಬ್ಬರ ಹಾಕಿರಬೇಕು. ಗೆಣಸನ್ನು ಬಳ್ಳಿಗಳ ತುಂಡುಗಳನ್ನು ನೆಟ್ಟು ಬೆಳೆಯುತ್ತಾರೆ. ಇದು ಬಲಿತ ಮಧ್ಯಭಾಗದ ಬಳ್ಳಿಯಿಂದ ಈ ತುಂಡನ್ನು ತೆಗೆಯುತ್ತಾರೆ. ಒಂದೊಂದು ಬೀಜದ ಬಳ್ಳಿಗೆ ಸುಮಾರು 2 ಗೇಣನ್ನು ಭೂಮಿಯ ಒಳಕ್ಕೆ 2 ಅಥವಾ 3 ಅಂಗುಲ ಆಳದಲ್ಲಿ ಹೂಳುತ್ತಾರೆ. ಇವುಗಳನ್ನು ಸಮಭೂಮಿಯಲ್ಲಿಯಾಗಲೀ ಸುಮಾರಾಗಿ ಎತ್ತರವಾಗಿರುವ ತೆವರುಗಳ ಮೇಲಾಗಲೀ ನೆಡುವುದುಂಟು. ಇವುಗಳನ್ನು ಸಾಲುಸಾಲಾಗಿ ನೆಡುತ್ತಾರೆ. ಒಂದು ಸಾಲಿಗೂ ಮತ್ತೊಂದು ಸಾಲಿಗೂ ೧|| ಅಡಿ ಸ್ಥಳ ಬಿಟ್ಟಿರಬೇಕು. ಸಾಲಿನಲ್ಲಿ ಒಂದು ಗೇಣು ಲಾಗಾಯಿತು ಒಂದು ಅಡಿ ದೂರವಾಗಿ ಬೀಜದ ಬಳ್ಳಿಯನ್ನು ನೆಡಬೇಕು. ಈ ಪಸಲು ಯಾವಾಗ್ಲೂ ತರೀಭೂಮಿಯಲ್ಲಿಯೇ ಹಾಕಿ ನೀರುಹಾಯಿಸತಕ್ಕದ್ದಾಗಿದೆ. ಕಾಲುವೆ ಮಾಡಿ ಪಕ್ಕದಲ್ಲಿ 3 4 ಸಾಲುಗಳುಳ್ಳ 6 ಅಡಿ ಲಾಗಾಯಿತು 9 ಅಡಿ ಉದ್ದವುಳ್ಳ ಪಾತಿಗಳನ್ನು ಮಾಡುತ್ತಾರೆ. ಬಳ್ಳಿಗಳು ಬೆಳೆದು ಉದ್ದವಾದ ಮೇಲೆ ಅದರ ಗಣ್ಣುಗಳಲ್ಲಿ ಪುನಹಾ ಬೇರು ಹುಟ್ಟಿ ಭೂಮಿಯಲ್ಲಿ ಪ್ರವೇಶಿಸುವುದರಿಂದ ಬಳ್ಳಿಯನ್ನು ಆಗಾಗ್ಗೆ ತಿರುವಿಹಾಕುತ್ತಾ ಇರಬೇಕು. ಸಾಲುಬಳ್ಳಿ ಅಥವಾ ಬಳ್ಳಿಗಳ ಮಧ್ಯೆ ಕಚರಾ, ಕಳೆ ವಗೈರೆ ಇಲ್ಲದೆ ಆಗಾಗ್ಗೆ ಅಗೆದು ಹಾಳುಮಾಡುತ್ತಾ ಇರಬೇಕು. ಕಾಲೋಚಿತವಾಗಿಯೂ ದೇಶೋಚಿತವಾಗಿಯೂ ಆಗಾಗ್ಗೆ ಗೆಣಸಿನ ಗದ್ದೆಗೆ ಒಣಗಿಹೋಗದಂತೆ ನೀರುಹಾಯಿಸಬೇಕು. ಬಳ್ಳಿಗಳು ಬಹಳ ಉದ್ದವಾಗಿ ಬೆಳೆದರೆ ಕೊನೆಗಳನ್ನು ಕತ್ತರಿಸಿಹಾಕಬಹುದು. ಇದು ದನಗಳಿಗೆ ಬಹಳ ಒಳ್ಳೆ ಮೇವು. ಗೆಣಸಿನ ಫಸಲನ್ನು ನಮ್ಮ ದೇಶದಲ್ಲಿ ಜೂಲೈ ಆಗಸ್ಟ್ ತಿಂಗಳಲ್ಲಿ ಹಾಕುತ್ತಾರೆ. ಈ ಪಸಲು 6 ತಿಂಗಳಿಗೆ ಬಲಿಯುತ್ತವೆ. ಗೆಣಸಿನ ಪಸಲು ಬಲಿತದ್ದು ಎರಡು ವಿಧದಲ್ಲಿ ತಿಳಿಯಬಹುದು. ಬುಡವನ್ನು ಅಗೆದು ನೋಡಿ ತಿಳಿಯುವುದು ಒಂದು ವಿಧ. ಬಲಿತ ಗೆಣಸಿನ ಬಳ್ಳಿಯಲ್ಲಿ ಸಾಮಾನ್ಯವಾಗಿ ಎಲೆಗಳು ಅರಿಸಿನಬಣ್ಣವಾಗಿ ಉದುರುವುದಕ್ಕೆ ಪ್ರಾರಂಭವಾಗುತ್ತವೆ. ಮತ್ತು ಒಳ್ಳೆ ಕೊನೆಗಳಲ್ಲಿ ಎಲೆಗಳು ದಪ್ಪವಾಗಿ ಒರಟಾಗುತ್ತದೆ. ಇದರಿಂದಲೂ ಗೆಣಸು ಬಲಿಯಿತೆಂದು ನಿಶ್ಚಯಿಸಬಹುದು. ಗೆಣಸು ಬಲಿತಾಗ ಬಳ್ಳಿಯನ್ನು ಬುಡಕ್ಕೆ ಕೊಯಿದು ಅವುಗಳಿಂದ ಮಧ್ಯಪ್ರದೇಶದ ಬಳ್ಳಿಗಳನ್ನು ಮುಂದೆ ಬೀಜಕ್ಕೆ ಉಳಿಸಿಕೊಂಡು, ಮಿಕ್ಕ ಮೂದಲ ಕೊನೆ ಪ್ರದೇಶವನ್ನು ದನಗಳ ಮೇವಿಗೆ ವಿನಿಯೋಗಿಸಬಹುದು. ಗೆಣಸು ಬಲಿಯಿತೆಂದು ತಿಳಿದಕೂಡಲೆ ಗೆಣಸಿಗೆ ನೀರುಹಾಯಿಸುವುದನ್ನು ನಿಲ್ಲಿಸಬೇಕು. ಭೂಮಿಯು ಒತ್ತಾಗಿರುವ ಸಲಿಕೆ ಗೆಣಸನ್ನು ಅಗದು ರಾಶಿಗಳನ್ನು ಮಾಡಿ ನೀರಿನಿಂದ ತೊಳೆದು ಶುಭ್ರವಾಗಿ ಇಡಬೇಕು.

ಗೆಣಸು ಚೆನ್ನಾಗಿ ಫಸಲಾದರೆ ಎಕರೆ ಒಂದಕ್ಕೆ 100 ರ ಲಾಗಾಯಿತು 350 ಮಣದವರಿವಿಗೂ ಆಗುತ್ತದೆ. ಸಾಮಾನ್ಯವಾಗಿ ಪೇಟೆ ಧಾರಣೆ ಪ್ರಕಾರ ಎಕರೆಗೆ ಧಾರಾಳವಾಗಿ 200 ರೂಪಾಯಿ ದೊರೆಯಬಹುದು. ಇದರಲ್ಲಿ ಖರ್ಚು ಕಳೆಯಬೇಕಾಗುತ್ತದೆ. ರೈತನೇ ಸ್ವಂತವಾಗಿ ವ್ಯವಸಾಯಮಾಡಿದರೆ ಅವನಿಗೆ ವಿಶೇಷ ಖರ್ಚು ತಗಲುವುದಿಲ್ಲ. ಸಾಮಾನ್ಯವಾಗಿ ಗೆಣಸನ್ನು ವರ್ಷಕ್ಕೆ ಒಂದೇ ಭೂಮಿಯಲ್ಲಿ ಒಂದು ಪಸಲಿಗಿಂತ ಹೆಚ್ಚಾಗಿ ಯಾರೂ ಬೆಳೆಮಾಡುವುದಿಲ್ಲ. ಗೆಣಸಿಗೆ ಸಾಮಾನ್ಯವಾಗಿ ದನದಗೊಬ್ಬರ, ಬೂದಿ ಮತ್ತು ಮೂಳೇಪುಡಿಯನ್ನು ಗೊಬ್ಬರವಾಗಿ ಉಪಯೋಗಿಸುತ್ತಾರೆ. ಈ ಗೆಣಸಿಗೆ ವ್ಯವಸಾಯದ ಎಲ್ಲಾ ಪಸಲುಗಳಿಗೆ ಉಂಟಾಗುವ ಹಾಗೆ ಜಾಡ್ಯಗಳು ತಗಲುವುದುಂಟು. ಅದನ್ನು ನಿವೃತ್ತಿ ಮಾಡುವುದಕ್ಕೆ ಅನೇಕ ಉಪಾಯಗಳುಂಟು.

ಗೆಣಸಿನ ಉಪಯೋಗ — ಇದನ್ನು ಬಿಸ್ಲಿಬಿಸ್ಲಿಯಾಗಿ ಅಥವಾ ಉಪ್ಪುದ್ದವಾಗಿ ಕೊಯಿದು ಸುಟ್ಟು ತಿನ್ನುತ್ತಾರೆ. ಅಥವಾ ಪಲ್ಯಗಳಾಗಿ ಮತ್ತು ಹುಳಿ ಮೊದಲಾದ ಪದಾರ್ಥಗಳನ್ನು ಮಾಡಿ ಭೋಜನಕ್ಕೆ ಉಪಯೋಗಿಸುತ್ತಾರೆ. ಈ ನಮ್ಮ ಹಿಂದೂಸ್ಥಾನದಲ್ಲಿ ಗೆಣಸನ್ನು ಬಿಲ್ಲೆಬಿಲ್ಲೆಯಾಗಿ ಕತ್ತರಿಸಿ ಒಣಗಿಸಿ ಕುಟ್ಟಿ ಹಿಟ್ಟುಮಾಡಿ ರೊಟ್ಟಿಮಾಡಿ ತಿನ್ನುವುದುಂಟು. ಅನೇಕ ಜನರು ಉಪವಾಸದ ದಿವಸ ಇದನ್ನು ಫಲಹಾರದಂತೆ ತಿನ್ನುವುದಕ್ಕೆ ಉಪಯೋಗಿಸುತ್ತಾರೆ.

ಮೈಸೂರು ಅಡ್ವೋಕೇಟ್ ವಿ ರಾಘವಾಚಾರ್

ಮೈಸೂರು ಸಂಸ್ಥಾನದ ದೇವಸ್ಥಾನಗಳೂ ನಾಟ್ಯಗಾತಿಯರೂ

ಮೈಸೂರು ಗವರ್ನ್‌ಮೆಂಟಿನವರು ಸಂಸ್ಥಾನದ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳಲ್ಲಿ ದೇವದಾಸಿಯರನ್ನು ಸೇವಾವೃತ್ತಿಗೆ ನೇಮಿಸಕೂಡದೆಂದೂ, ಈಗಿರುವ ದೇವದಾಸಿಯರಿಂದ ಅಂಥಾ ಸೇವೆಯನ್ನು ಮಾಡಿಸಿಕೊಳ್ಳಕೂಡದೆಂದೂ ಹುಕುಂ ಕೊಟ್ಟಿರುತ್ತಾರೆ. ಈ ಭಾಗದಲ್ಲಿ ನಮಗೆ ಬಹಳ ಸಂತೋಷವುಂಟಾಗಿರುತ್ತದೆ. ಆ ಸರ್ಕಾರಿ ಹುಕುಮಿನ ಮುಖ್ಯ ಸಂಗತಿಯನ್ನು ವಾಚಕರ ತಿಳುವಳಿಕೆಗಾಗಿ ಪ್ರಕಟಿಸಿರುವೆವು. ಈ ಹುಕುಮು ಸಂಸ್ಥಾನದ ಅಭ್ಯುದಯಕ್ಕೆ ಸಹಕಾರಿಯಾದದ್ದೆಂದು ಹೇಳುವುದಲ್ಲದೆ ಅದನ್ನು ರೂಢಿಸುವುದಕ್ಕೆ ಸರ್ಕಾರದವರು ಹುಕುಂ ಮಾಡಿದ್ದನ್ನು ನೋಡಿ ನಾವು ಅವರನ್ನು ಕೊಂಡಾಡುವೆವು.

ಈ ಹುಕುಮಿನ ಸಾರಾಂಶವೇನೆಂದರೆ —

ಕಳೆದ ೧೮೯೧ ನೇ ಇಸವಿಯಲ್ಲಿ ಮುಜರಾಯಿ ಇಲಾಖೆಯ ಸೂಪರಿಂಟೆಂಡೆಂಟರೂ ಸೆಕ್ರೆಟರಿಯೂ ಆಗಿದ್ದ ರಾಯಿ ಬಹದೂರ್ ಮ|| ಎ ಶ್ರೀನಿವಾಸಾಚಾರ್ಯರವರು ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ತಸದೀಕು ಪಟ್ಟಿಯನ್ನು ಪುನಃ ಪರಿಷ್ಕರಣ ಮಾಡಿದಾಗ ಅವರು ಆ ದೇವಸ್ಥಾನದ ಸಿಬ್ಬಂದಿಗೆ ಸೇರಿದ ನಾಟ್ಯಗಾತಿಯರಿಂದ ದೇವಸ್ಥಾನದೊಳಗೆ ತಾಳಿ ಕಟ್ಟಿಸಕೂಡದಂತಲೂ, ಅವರಿಗೆ ಸಲ್ಲುವ ಸಂಬಳ ಮುಂತಾದದ್ದನ್ನು ಅವರ ಜೀವಮಾನದ ಪರ್ಯಂತರ ಅವರಿಗೆ ಸಲ್ಲಿಸುತ್ತಾ ಬರಬೇಕೆಂತಲೂ, ಅವರು ಕಾಲವಾದ ತರುವಾಯ ಅವರ ಕೆಲಸಕ್ಕೆ ಇತರರನ್ನು ನೇಮಕ ಮಾಡಬೇಕೂಡದೆಂತಲೂ ಹುಕುಂ ಕೊಟ್ಟಿದ್ದರು. ಇದರ ಮೇಲೆ ಅಲ್ಲಿನ ಕೆಲವು ನಾಟ್ಯಗಾತಿಯರು ಶ್ರೀಮನ್ ಮಹಾರಾಜರವರಿಗೂ ಗವರ್ನ್‌ಮೆಂಟಿಗೂ ವಿಜ್ಞಾಪನಾ ಪತ್ರಿಕೆಗಳನ್ನು ಬರೆದುಕೊಂಡು ದೇವರ ಸೇವೆಯನ್ನು ನಡಿಸುವುದಕ್ಕೂ ಗಿರಿಜಾಕಲ್ಯಾಣ ಮೊದಲಾದ ಮುಖ್ಯ ಉತ್ಸವ ಕಾಲಗಳಲ್ಲಿ ತಾಳಿ ಕಟ್ಟುವುದಕ್ಕೂ ಅಪ್ಪಣೆ ಕೊಡಿಸ

ಬೇಕೆಂತಲೂ, ತನಗೆ ಸಲ್ಲುತ್ತಿರುವ ಸಂಬಳ ಮುಂತಾದದ್ದನ್ನು ತನ್ನ ವಂಶ ಪಾರಂಪರ್ಯವಾಗಿ ನಡಿಸಿಕೊಂಡು ಬರಬೇಕೆಂತಲೂ ಕೇಳಿಕೊಂಡಿದಾರೆ.

ಮುಜರಾಯಿ ಸೆಕ್ರೆಟರಿ ಆಫೀಸಿನಲ್ಲಿ ಇರುವಂಥಾ ಇಬ್ಬರು ಅಗಮಿಕರನ್ನು ಕೇಳಿದ್ದರಲ್ಲಿ ಅವರು ಕೆಲವು ಶಾಸ್ತ್ರ ಆಧಾರಗಳನ್ನು ತೋರಿಸುತ್ತಾರೆ ಹಿಂದೂ ದೇವಸ್ಥಾನಗಳಲ್ಲಿ ದೇವದಾಸಿಯರ ಸೇವೆಯು ನಡೆಯಬೇಕೆಂತಲೂ, ಸಂಗೀತವೂ ನಾಟ್ಯವೂ ದೇವರ ಸನ್ನಿಧಿಯಲ್ಲಿ ನಡೆಯಬೇಕೆಂತಲೂ ಆ ಶಾಸ್ತ್ರ ವಚನಗಳು ಹೇಳುವವು ಆ ದೇವದಾಸಿಯರಾದರೋ ನಿರ್ದೋಷಿಗಳಾಗಿಯೂ, ಸಚ್ಚರಿತ್ರೆಯರಾಗಿಯೂ, ಅವಿವಾಹಿತೆಯರಾಗಿರುತ್ತೇವೆಂಬ ಸಂಕಲ್ಪವುಳ್ಳವರಾಗಿಯೂ ಇರಬೇಕೆಂದು ಆ ವಚನಗಳು ತಿಳಿಸುತ್ತವೆ ಈ ಉತ್ಕೃಷ್ಟವಾದ ಉದ್ದೇಶಗಳು ಪೂರ್ವಕಾಲದಲ್ಲಿ ಆಚರಣೆಯಲ್ಲಿದ್ದವು ಈಗಳಾದರೋ ಅದು ಬಹಳ ಕ್ಷೀಣಗತಿಗೆ ಬಂದಿರುತ್ತದೆ ಈಗ ದೇವದಾಸಿಯರೆಂಬುವ ಸ್ತ್ರೀಯರ ನಡತೆಯೂ ಅವರ ಚರ್ಯೆಯೂ ಅಸಹ್ಯಕರಗಳಾಗಿರುವವು

ದೇವದಾಸಿಯರು ದೇವಸ್ಥಾನಗಳಲ್ಲಿ ಇರಬೇಕೆಂಬ ಪೂರ್ವಕಾಲದ ಏರ್ಪಾಟಿನ ಉದ್ದೇಶವು ಎಂಥಾದ್ದಾಗಿದ್ದರೂ ಈಗ ದೇವಸ್ಥಾನಗಳ ನೌಕರಮಾನೆಯರಲ್ಲಿ ತುಂಬಾ ದೂಷ್ಯವಾದ ನಡತೆ ಆಚಾರಗಳು ಕಂಡು ಬರುತ್ತಲಿವೆ ಆದಕಾರಣ ದೇವಸ್ಥಾನಗಳಂಥಾ ಪರಿಶುದ್ಧವಾದ ಸ್ಥಳಗಳಲ್ಲಿ ದೇವದಾಸಿಯರನ್ನು ಯಾವ ತರದ ಕೆಲಸಕ್ಕೂ ನೇಮಿಸಿಕೊಳ್ಳಕೂಡದೆಂದು ಗವರ್ನ್‌ಮೆಂಟಿನವರು ತೀರ್ಮಾನ ಮಾಡಿರುವುದು ನ್ಯಾಯವಾಗಿರುತ್ತದೆ ಕೆಲವು ದೇವಸ್ಥಾನಗಳಲ್ಲಿ ದೇವದಾಸಿಯರನ್ನು ತೆಗೆದುಹಾಕಿ ಹದಿನೈದು ವರುಷಗಳಾಗಿದ್ದರೂ ಭಕ್ತಾದಿಗಳು ದೇವದಾಸಿಯರ ಸೇವೆ ಇಲ್ಲದೇನೇ ಪೂಜೆ ಮುಂತಾದದ್ದನ್ನು ನಡಿಸುವುದು ಆಚರಣೆಗೆ ಬಂದಿವೆ ಈಗ ಅರ್ಜಿದಾರರು ಕೇಳಿಕೊಂಡಿರುವ ಪ್ರಕಾರ ಇದನ್ನು ಬದಲಾಯಿಸಿ ಪೂರ್ವದ ಪದ್ಧತಿಯನ್ನು ಮತ್ತೆ ಜಾರಿಗೆ ತರುವ ವಿಷಯದಲ್ಲಿ ಗವರ್ನ್‌ಮೆಂಟಿಗೆ ಅಗತ್ಯ ಕಾಣುವುದಿಲ್ಲ ಆದರೂ ದೇವದಾಸಿಯರು ದೇವಸ್ಥಾನಕ್ಕೆ ಹೋಗಿ ಇತರ ಭಕ್ತಾದಿಗಳಂತೆ ಪೂಜೆ ಮುಂತಾದದ್ದನ್ನು ಮಾಡಿಸಿ ಕಪ್ಪಕಾಣಿಕೆಗಳನ್ನು ಒಪ್ಪಿಸ ಬಹುದಾಗಿದೆ

ದೇವಸ್ಥಾನಗಳಲ್ಲಿ ತಾಳೆ ಕಟ್ಟುವುದಕ್ಕೆ ಜವಾನಾಗಲಿ ಇತರ ಇನಾಮತಿಗಳಾಗಲಿ ಬೇರೆ ಯಾರಿಗಾದರೂ ಇರುವ ಪಕ್ಷಕ್ಕೆ ಅಂಥಾ ಇನಾಮತಿಗಳನ್ನು ಅವರ ಹೆಸರಿಗೆ ಪಟ್ಟಿ ಮಾಡಿ ವಹಿಸ ಬಹುದಾಗಿದೆ ಅವರು ಅಂಥಾ ಜಮೀನುಗಳನ್ನು ಪರಭಾರೆ ಮಾಡಲು ಅಧಿಕಾರವನ್ನು ಹೊಂದಿರುವರು ಅಂಥಾ ಜಮೀನಿಗೆ ಕ್ವಿಟ್‌ರೆಂಟ್ ಡಬಲ್ ಮಾಡಿ ಸರ್ಕಾರಕ್ಕೆ ವಸೂಲ್ಮಾಡತಕ್ಕದ್ದು ಈ ಕ್ವಿಟ್‌ರೆಂಟನ್ನು ದೇವಸ್ಥಾನದ ನಗದೀಯಾತಿಗೆ ಗವರ್ನ್‌ಮೆಂಟಿನಿಂದ ಕೊಡಲ್ಪಡುವುದು ಒಂದು ವೇಳೆ ಅಂಥಾ ಜಮೀನನು ದೇವಾದಾಯಕ್ಕೆ ಸೇರಿ, ತಾಳೆ ಕಟ್ಟುವುದಕ್ಕಾಗಿ ಯಾರ ಅನುಭವದಲ್ಲಾದರೂ ಇದ್ದರೆ ತಾಳೆ ಕಟ್ಟುವುದನ್ನೇ ವಜಾಮಾಡಿ ಜಮೀನನ್ನು ದೇವಸ್ಥಾನಕ್ಕೆ ಸೇರಿಸಿಕೊಳ್ಳಬೇಕು ಅಥವಾ ಆ ಸೇವೆಗಾಗಿ ಇನ್ಯಾವ ಪ್ರತಿಫಲವಾದರೂ ನಾವತಿ ಆಗುತ್ತಿದ್ದಲ್ಲಿ ಅದನ್ನು ನಿಲ್ಲಿಸಿಬಿಡಬೇಕು ಆದರೆ ಈಗ ತಾಳೆ ಕಟ್ಟುವ ನೌಕರಿಗಾಗಿ ಸಲ್ಲುವಂಥಾ ಪ್ರತಿಫಲವನ್ನು ಈಗ ಪಡೆಯುತ್ತಿರುವವರಿಗೆ ಅವರ ಜೀವಾವಧಿ ಕೊಡುತ್ತಾ ಬಂದು, ಅವರ ತರುವಾಯ ನಿಲ್ಲಿಸಿಬಿಡಬೇಕು ಅವರಿಂದ ಆ ನೌಕರಿಯನ್ನು ದೇವಸ್ಥಾನಗಳಲ್ಲಿ ಮಾಡಿಸಕೂಡದು

ಈಗ ಸಂಸ್ಥಾನಾವಳಿ ತಸದೀಕು ಪಟ್ಟಿಗಳನ್ನು ಪುನರ್ವಿಮರ್ಶೆ ಮಾಡಿ ಕ್ರಮ ಪಡಿಸಿರುವ ದೇವಸ್ಥಾನಗಳಲ್ಲಿ ದೇವದಾಸಿಯರ ನೌಕರಿಯು ಇಲ್ಲದಂತೆ ಮಾಡಿರುತ್ತದೆ ಇದೇ ರೀತಿ ಇತರ ಎಲ್ಲಾ ದೇವಸ್ಥಾನಗಳಲ್ಲೂ ದೇವದಾಸಿಯರ ನೌಕರಿಯನ್ನು ತಸದೀಕು ಪಟ್ಟಿಗಳಿಂದ ವಜಾ ಮಾಡಬೇಕಾಗಿದೆ ಆದಕಾರಣ ಈ ಸಂಸ್ಥಾನದ ಮುಜರಾಯಿ ದೇವಸ್ಥಾನಗಳಲ್ಲಿ ದೇವದಾಸಿಯರನ್ನು ನೌಕರಿಗೆ ಸೇರಿಸಿಕೊಳ್ಳಕೂಡದೆಂದೂ, ಇನ್ನತ್ತ ಕಡೆ ಆ ನೌಕರಿಯನ್ನು ವಜಾಮಾಡಬೇಕೆಂದೂ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿರುವರು

ತಾಲ್ಲೋಕು ವರ್ತಮಾನಗಳು

ಹೊಳೆನರಸೀಪುರ —೧೩—೧೪ ದಿನಗಳಿಂದ ಹಿಡಿದ ಮಳೆ ಬಿಡಲಿಲ್ಲ ಟೌನಿನಲ್ಲಿ ಮ್ಯುನಿಸಿಪಲ್ ಕೆಲಸಗಳು ಸರಿಯಾಗಿಲ್ಲ ಚರಂಡಿಗಳಲ್ಲಿ ನೀರು ಹೊರಗೆ ಹೋಗದೆ, ಎದ್ದ ಕಶ್ಮಲಗಳೆಲ್ಲಾ ಕೊಳೆತು ನಾರುವುದಕ್ಕೆ ಕಾರಣವಾಗಿದೆ ಜಾಡಮಾಲಿಗಳು ಸರಿಯಾಗಿ ಗುಡಿಸುವುದಿಲ್ಲ ನಾಲ್ಕು ಸಿನೇಮನಗಳಲ್ಲಿ ಬಿದ್ದ ಕಸವೆಲ್ಲಾ ಅಲ್ಲಿಯೇ ಕೊಳೆಯುತ್ತಾ ಅನಾರೋಗ್ಯಕ್ಕೆ ಕಾರಣವಾಗಿದೆ ಅಮಲ್ದಾರರು ನಿಗಾ ಕೊಡಬೇಕಾಗಿದೆ ಮ್ಯುನಿಸಿಪಲ್ ಲಾಂದ್ರಗಳು ಉರಿಯುವುದಿಲ್ಲ ಬೈನಿಗರ ಬೀದಿಗೆ ಲಾಂದ್ರವೇ ಇಲ್ಲ ಇದರಿಂದ ಕೃಷ್ಣಪಕ್ಷದಲ್ಲಿ ಒಬ್ಬರಿಗೊಬ್ಬರು ಢಕ್ಕಾ ಹೊಡಿಯುತ್ತಾರೆ ಕೆಲವು ಸ್ಥಳಗಳಲ್ಲಿ ಯಾರಾಗಲೂ ಇದ್ದ ಲಾಂದ್ರಗಳನ್ನು ತೆಗೆದು ಬಿಟಿದ್ದಾರೆ ವಿಚಾರಿಸುವವರೇ ಇಲ್ಲ —ಆಸ್ಪತ್ರೆ ಅಸಿಸ್ಟೆಂಟರಾದ ಮೆ॥ ರಾಮಚಂದ್ರರಾಯರು ಕಾಯಿಲೆಯವರಿಗೆ ಬಹು ಮುತುವರ್ಜಿಯಿಂದ ಚಿಕಿತ್ಸೆ ಮಾಡುವದರಿಂದ ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗಿರುತ್ತಾರೆ ಒಬ್ಬನು ೧೦ ವರುಷಗಳಿಂದ ತನ್ನ ತೊಡೆಯಲ್ಲಿ ದುರ್ಮಾಂಸ ಬೆಳಸಿಕೊಂಡು ಬಹಳ ಬಾಧೆ ಪಡುವವನಾಗಿ ಕಳೆದ ತಿಂಗಳು ಆಸ್ಪತ್ರೆಗೆ ಬಂದು ಚಿಕಿತ್ಸೆ ಹೊಂದಿ ಸ್ವಸ್ಥನಾಗಿ ಹೋದನು —ತಕ್ಕ ಕಾಲದಲ್ಲಿ ಮಳೆ ಬಂದ ಕಾರಣ ರೈತರಿಗೆಲ್ಲಾ ಸಂತೋಷವಾಗಿದೆ ಅವರು ಬಹು ಆಸಕ್ತಿಯಿಂದ ತಮ್ಮ ಹೊಲಗಳಲ್ಲಿ ಬೀಜ ಬಿತ್ತುತ್ತಾ ಇರುತ್ತಾರೆ

ತಿಪಟೂರು —ಈ ತಿಂಗಳು ೮ ನೇ ತಾ ಶನಿವಾರ ಮಧ್ಯಾಹ್ನ ೧ ಗಂಟೆ ಸಮಯದಲ್ಲಿ ಈ ಊರು ಪುರಪ್ರಮುಖರಾಗಿಯೂ, ಸಾಹುಕಾರರಾಗಿಯೂ, ಪ್ರಜಾ ಹಿತಚಿಂತಕರಾಗಿಯೂ, ಲೋಕಲ್ ಬೋರ್ಡ್ ಮೆಂಬರಾಗಿಯೂ ಇದ್ದ ಮೆ॥ ಶಿಂಗ್ರಿ ನಂಜಪ್ಪನವರು ೨ ತಿಂಗಳಿಂದಲೂ ಕಾಯಿಲೆಯಿಂದ ನರಳುತ್ತಲಿದ್ದು ದೈವಾಧೀನರಾದರು ಇವರ ಮರಣವಾರ್ತೆಯನ್ನು ಕೇಳಿ ಸಂತೆಯಲ್ಲಿ ಸೇರಿದ್ದ ಪ್ರಜೆಗಳೆಲ್ಲರೂ ಸಾಹುಕಾರರ ಮನೆ ಮುಂದೆ ನಿಂತು ಸಾಹುಕಾರರ ಸುಗುಣಗಳನ್ನು ಕೊಂಡಾಡುತ್ತಾ ಬಹಳವಾಗಿ ವಿಷಾದಿಸಿದರು ಇವರಿಗೆ ಅವಸಾನಕಾಲದಲ್ಲಿ ೪೮ ವರ್ಷ ವಯಸ್ಸಿತ್ತು ಇವರ ವಿಯೋಗ ದುಃಖಕ್ಕೆ ಇವರ ತಮ್ಮಂದಿರೂ, ಪತ್ನಿಯವರೂ, ೨ ಚಿಕ್ಕ ಗಂಡು ಮಕ್ಕಳೂ, ಹೆಣ್ಣು ಮಕ್ಕಳೂ ಇರುತ್ತಾರೆ ಈ ಘನ ವರ್ತಕಮಹನೀಯರು ಈ ಕ್ಷಾಮಕಾಲದಲ್ಲಿ ಬಡಜನಕ್ಕೆ ಉಪಕಾರ ಮಾಡಿರುವುದಲ್ಲದೆ ನ್ಯಾಯ ಕಡಿಮೆಯಿಂದ ರಾಗಿ, ಜೋಳ ತರಿಸಿಕೊಟ್ಟು ಬಹಳ ಜನ ರೈತರನ್ನು ಕಾಪಾಡಿದ್ದಾರೆ ಇಂಥಾ ಮಹನೀಯರನ್ನು ಕಳೆದುಕೊಂಡದ್ದಕ್ಕಾಗಿ ಈ ತಿಪಟೂರೆಂಬ ಗ್ರಾಮಕ್ಕೆ ಒಂದು ಭೂಷಣ ಹೋದಂತೆ ಆಯಿತು ಇವರ ಜೀವನದಾನ ಇದ್ದರೆ ಒಂದು ಶಿವಪ್ರತಿಷ್ಠೆ ಮಾಡಿಸಿದರು ಕೆಲವು ವರ್ಷಗಳಿಂದಲೂ ಒಂದು ಆರ್ಯಬಾಲಿಕಾ ಪಾಠಶಾಲೆಯನ್ನೇರ್ಪಡಿಸಿ ಇದ್ದರು ಇಂಥಾ ಮಹನೀಯರನ್ನು ಕಳೆದುಕೊಂಡದ್ದಕ್ಕಾಗಿ ವಿಷಾದಿಸಬೇಕಾಗಿರುತ್ತೆ

ತರೀಕೆರೆ ತಾ॥ ಅಜ್ಜಂಪುರ —ಈ ಗ್ರಾಮದಲ್ಲಿ ಮಳೆ ಇಲ್ಲದೆ ನೀರಿಗೆ ಬಹಳ ಅನಾನುಕೂಲವಾಗಿತ್ತು ಈಗ ೨ ೩ ದಿವಸಗಳಿಂದ ಮಳೆಯು ಬಂದಿರುತ್ತಾದ್ದರಿಂದ ಈಗ ನೀರಿಗೆ ಅಂಥ ಅನಾನುಕೂಲವೇನೂ ಇರುವದಿಲ್ಲ ಜನಗಳೆಲ್ಲರು ಜಮೀನುಗಳನ್ನು ಗೇಮೆಮಾಡಲು ಪ್ರಾರಂಭವಾಡಿರುತ್ತಾರೆ ಇದಲ್ಲದೆ ಈ ಮಳೆಯಿಂದ ಹಳ್ಳಕೊಳ್ಳಗಳೆಲ್ಲವೂ ತುಂಬಿ ಪ್ರಯಾಣಿಕರು ಹಾಯಲು ಅಸಾಧ್ಯವಾಗಿರುತ್ತದೆ —ಈ ವಾರದ ಸಂತೆಯಲ್ಲಿ ರೂಪಾಯಿಗೆ ರಾಗಿ ೧೨ ೧೩ ಸೇರಿನಂತೆಯೂ, ಅಕ್ಕಿ ೭-೭॥ ಸೇರಿನಂತೆಯೂ ಮಾರಾಟ ಮಾಡಲ್ಪಟ್ಟವು ಸಂತೆಯಲ್ಲಿ ವರ್ತಕರು ಕಮ್ಮಿಯಾದ ಸೇರುಗಳನ್ನೂ, ಕಮ್ಮಿ ತೂಕದ ಕಲ್ಲುಗಳನ್ನೂ ಇಟ್ಟುಕೊಂಡು ವ್ಯಾಪಾರಮಾಡುತ್ತಾರೆ ಇದಕ್ಕೆ ಸರ್ಕಾರದವರು ನಿಗಾ ಕೊಡದೆ ಇರುವರು ಇದಲ್ಲದೆ ಹಳ್ಳಿಯಿಂದ ತಂದ ಜನರಿಂದ ಹೆಚ್ಚಿನ ಸೇರಿನಲ್ಲಿ ದವಸಗಳನ್ನು ಇಲ್ಲಿನ ವರ್ತಕರು ಅಳೆದುಕೊಳ್ಳುತ್ತಾರೆ ಇದರಿಂದ ಹಳ್ಳಿಯ ಜನಗಳು ಹೆದರಿ ಸಂತೆಗಳಿಗೆ ದವಸಧಾನ್ಯಗಳನ್ನು ತಂದು ಮಾರಾಟ ಮಾಡಲು ಹಿಂತೆಗೆಯುವರು —ಈಗ ೨ ೩ ದಿವಸಗಳಿಂದ ಮಳೆಯು ಹಿಡಿದಿರುವುದರಿಂದ ಊರಿನ ಸಂದಿಗೊಂದಿಗಳಲ್ಲಿ ನೋಡಲು ಬಹಳ ಅಸಹ್ಯವಾಗಿರುವುದು ಗ್ರಾಮಸಾಕೀಜಾ ವಿಷಯದಲ್ಲಿ ಕಟಾ ತೆಗೆಸುವ ಮುನ್ಸಿದ್ದಿಗಳು ಬಹಳವಾಗಿ ನಿಗಾ ಕೊಡಬೇಕಾಗಿರುತ್ತದೆ ಈಗ ಸುಮಾರು ೭-೮ ತಿಂಗಳಿಂದ ಪ್ಲೇಗ್ ಗಲಾಟೆ ಏನೂ ಇರುವುದಿಲ್ಲ

ತೀರ್ಥಹಳ್ಳಿ —ಇಲ್ಲಿ ಬುಧವಾರ ಬೃಹಸ್ಪತಿವಾರಗಳಲ್ಲಿ ಬಿದ್ದ ಮಳೆಯು ಸುಮಾರು ಮೂರು ಅಂಗುಲ ಆಗಿರುವದಾಗಿ ವರ್ತಮಾನ ಇದರ ದೆಸೆಯಿಂದ ಹವ ತಂಪಾಗಿಯೂ, ಈ ಪ್ರಾಂತ್ಯದ ರೈತರು ತಮ್ಮ ಗದ್ದೆಗಳಿಗೆ ಬತ್ತವನ್ನು ಸೇರಿಸುವ ಮಾಡುವದಕ್ಕೆ ಅನುಕೂಲವಾಗಿಯೂ ಇರುವದು ಈ ಪ್ರಾಂತ್ಯದ ಜನರು ಮುಂದಿನ ಜೂನ್ ಜೂಲೈ, ಆಗಸ್ಟು ತಿಂಗಳುಗಳಲ್ಲಿ ವಿರಾಮವಿಲ್ಲದೆ ಹಿಡಿಯುವ ಮಳೆಗಾಗಿ ಈಗಲೇ ಆಹಾರ ಸಾಮಗ್ರಿಗಳನ್ನು ಸಂಗ್ರಹಮಾಡುತ್ತಿರುವರು —ನಮ್ಮ ಶಿವಮೊಗ್ಗ ಮೈದಾನ ಪ್ರದೇಶಗಳಲ್ಲಿ ಮನುಷ್ಯನು ತನ್ನ ಬೆನ್ನಿನ ಚರ್ಮಕ್ಕೆ ಕಬ್ಬಿಣದ ಕೊಂಡಿಗಳನ್ನು ಸಿಕ್ಕಿಸಿ, ಆ ಕೊಂಡಿಗಳನ್ನು ಸಿಡಿಮರದಲ್ಲಿರುವ ಕೊಂಡಿಗಳಿಗೆ ತಗಲಿಸಿ ಸಿಡಿ ಆಡುವದು ಕಾನೂನಿಗೆ ವಿರೋಧವಾದದ್ದೆಂದು ಸರಕಾರದವರು ತಪ್ಪಿಸಿರುವರು ಆದರೆ ಈ ಮಲೆನಾಡು ಪ್ರಾಂತ್ಯದಲ್ಲಿ ಮಾತ್ರ ಆ ಕಾನೂನು ಜಾರಿಯಲ್ಲಿಲ್ಲವೆಂದು ತೋರುತ್ತದೆ ಇಲ್ಲಿ ಅನೇಕ ಕಡೆಗಳಲ್ಲಿ ಈಗಲೂ ಸಿಡಿ ಚುಚ್ಚಿಕೊಂಡು ಆಡುವದು ವಾಡಿಕೆಯಾಗಿದೆ —ಇಲ್ಲಿನ ಪರಾಟ್ ಕೋಟೆಯಲ್ಲಿ ಹರಿಯು ಭರ್ತಿಯಾಗಿದ್ದ ಪೀಪಾಯಿಗಳ ಪೈಕಿ ಒಂದು ಪೀಪಾಯಿಯಲ್ಲಿ ಬರೀ ನೀರು ಭರ್ತಿಯಾಗಿದ್ದಂತೆಯೂ, ಒಸ್ಕಿಂದಲ್ಲಿ ಇಪ್ಪತ್ತು ಡಿಗ್ರಿ ಇರುವದಕ್ಕೆ ಬದಲಾಗಿ ಮೂವತ್ತು ಡಿಗ್ರಿ ಇರುವಷ್ಟು ಇರುವದಾಗಿಯೂ, ಇದನ್ನು ಶಿವಮೊಗ್ಗಾ ಡೆಪ್ಯುಟಿ ಕಮಿಷನರ್ ಸಾಹೇಬರು ಇಲ್ಲಿಗೆ ಎರಡು ವಾರಗಳ ಹಿಂದೆ ಬಂದಿದ್ದಾಗ ಅಜಮಾಯಿಷಿ ಮಾಡಿಕೊಂಡು ಹೋಗಿರುವದಾಗಿಯೂ ವರ್ತಮಾನ ಹೀಗಿರುವ ಹರಾಬಿನಿಂದ ಸರಕಾರಕ್ಕೆ ಸುಮಾರು ಒಂದು ಸಾವಿರ ರೂಪಾಯಿ ನಷ್ಟವೆಂದು ಹೇಳುತ್ತಾರೆ

ಕೊಪ್ಪ —ಈ ಊರಿನಲ್ಲಿ ಎರಡು ವಾರಗಳಿಂದ ಮೋಡಕಟ್ಟುವದೂ, ಸ್ವಲ್ಪ ಮಳೆ ಹನಿ ಹಾಕುವದೂ, ಹಾಗೆಯೇ ನಿಂತುಹೋಗುವದೂ, ಈ ರೀತಿ ಆಗುತ್ತಾ ಇತ್ತು ಈಚೆಗೆ ಇದೇ ಮಾಹೆ ತಾ ೫ ರ ಮೊದಲುಗೊಂಡು ೯ ರವರೆಗೆ ಏಕರೀತಿ ಮಳೆ ಸುರಿಯಿತು ಈ ದಿವಸಗಳಲ್ಲಿ ಸುರಿದ ಮಳೆಯು ಸುಮಾರು ೪ ಅಂಗುಲವಷ್ಟು ಆಗಿರಬಹುದು ಜನಗಳಿಗೂ ಜಾನುವಾರುಗಳಿಗೂ ಕುಡಿಯುವ ನೀರಿನ ಕೊರತೆಯು ಇದುವರಿವಿಗೂ ಕಂಡುಬರಲಿಲ್ಲ —ಜನಗಳಿಗೆ ಬರುತ್ತಿದ್ದ ಜ್ವರದ ಕಾಟವೂ, ಹಳ್ಳಿಗಳಲ್ಲಿ ದನಗಳಿಗೆ ಬಂದಿದ್ದ ದೊಡ್ಡ ರೋಗವೂ ದೇವರ ದಯದಿಂದ ಕಡಮೆ ಆಗಿದೆ ವೈಶಾಖಕಾಲವಾದ ಈ ಸಮಯದಲ್ಲಿ ಮಳೆ ಸುರಿಯುತ್ತಿರುವದರಿಂದ ಪಚ್ಚೆ ಪೈರುಗಳಿಗೂ, ದನಕರುಗಳ ಮೇವಿಗೂ ತುಂಬಾ ಅನುಕೂಲವೇ ಸರಿ —ಜಿನಿಸಿನ ಧಾರಣೆಯು ಏಕರೀತಿಯಲ್ಲಿದೆ ಅಕ್ಕಿ ರೂಪಾಯಿಗೆ ೭ ೭ ಸೇರು, ರಾಗಿ ೧೦-೧೧ ಸೇರು, ಗೋಧಿ ೫॥ ಸೇರು, ಈ ರೀತಿ ವಿಕ್ರಯಿಸುತ್ತಾರೆ ಬಡವರು ಜೀವಿಸುವದು ಅತಿ ಕಷ್ಟ ಕೂಲಿ ಆಳುಗಳಾದರೋ ಕೆಲಸವೇ ಇಲ್ಲ ಬರಿ ಅನ್ನಕ್ಕೇನೇ ಕೆಲಸಮಾಡುತ್ತೇನೆಂದರೂ ಮಾಡಿಸುವವರೇ ಇಲ್ಲ —ಕಳೆದ ತಾ ೭ ನೇ ಭಾನುವಾರ ಒಬ್ಬ ಆಸಾಮಿಯು ಒಂದು ಮಾವಿನ ಹಣ್ಣನ್ನು ತಿನ್ನುತ್ತಿರುವಾಗ ಅಕಸ್ಮಾತಾಗಿ ಹಣ್ಣಿನ ಗೊರಟು ಗಂಟಲಿಗೆ ಸಿಕ್ಕಿ ಶ್ವಾಸಕಟ್ಟಿದ್ದರಿಂದಲೂ, ಮಾತನಾಡುವದಕ್ಕೆ ಅವಕಾಶ ದೊರೆಯದೆಯೂ ಒಂದು ತಾಸಿನೊಳಗೇನೇ ಮೃತಪಟ್ಟನು ಗಂಟಲಿಗೆ ಸಿಕ್ಕಿದ್ದ ಗೊರಟು ತೆಗೆಯಲು ಪ್ರಯತ್ನಿಸಿದರೂ ಸಾಗಲಿಲ್ಲ ಇವನ ವಯಸ್ಸು ೩೫ ವರುಷ ಈತನ ಕುಟುಂಬದವರ ಜೀವನೋಪಾಯವು ಯಾವ ರೀತಿ ನಡೆಯುವುದೋ ಎಂದು ಮರುಗುತ್ತಿರುವರು

ಮಾಗಡಿ ತಾ॥ ಹುಲಿಕಲ್ಲು —ಬೆಂಗಳೂರು ಡಿ॥ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮೆ ವೀರಭದ್ರಯ್ಯನವರು ಸ್ಕೂಲ್ ಪರೀಕ್ಷಾರ್ಥ ಇಲ್ಲಿಗೆ ದಯಮಾಡಿದರು ತಾ ೩ ನೇ ಸೋಮವಾರ ಬೆಳಗ್ಗೆ ಸ್ಕೂಲ್ ಕಟ್ಟಡವು ಅಲಂಕರಿಸಲ್ಪಟ್ಟು, ಕಮಿಟಿ ಮೆಂಬರುಗಳೂ, ಇತರ ಗ್ರಾಮಸ್ಥರೂ ನೆರೆದಿದ್ದರು ಮೊದಲು ದೇವರ ಪ್ರಾರ್ಥನೆ ಮಂಗಳಾದಿಗಳು ಬಾಲಕ ಬಾಲಕಿಯರಿಂದ ನಡೆದವು ಇನ್ಸ್‌ಪೆಕ್ಟರವರು ಇಲ್ಲಿನ ಸ್ಕೂಲಿನಲ್ಲಿದ್ದ ಮತ್ತು ಹೊಸದಾಗಿ ಸೇರಿದ ೩೦ ಮಂದಿ ವಿದ್ಯಾರ್ಥಿನಿಯರನ್ನು ಸೇರಿಸಿ ಸ್ಕೂಲಿನ ಮತ್ತೊಂದು ಭಾಗದಲ್ಲಿ ಬಾಲಿಕಾ ಪಾಠಶಾಲೆಯೊಂದನ್ನು ಸ್ಥಾಪಿಸಿ, ಆ ವಿದ್ಯಾರ್ಥಿನಿಯರ ಯೋಗ್ಯತಾನುಸಾರ ತರಗತಿಗಳನ್ನು ವಿಂಗಡಿಸಿಕೊಟ್ಟರು ತರುವಾಯ ಸ್ಕೂಲ್ ಪರೀಕ್ಷೆಯು ಕ್ರಮವಾಗಿ ನಡೆಯಿತು ಸ್ಕೂಲ್ ಹೆಡ್ ಮಾಸ್ಟರ್ ಮೆ ಅಶ್ವತ್ಥಶಾಸ್ತ್ರಿಗಳು ಸ್ಕೂಲ್ ರಿಪೋರ್ಟನ್ನು ಓದಿದರು ಬಳಿಕ ಗ್ರಾಮಸ್ಥರೆಲ್ಲ ಸ್ಕೂಲಿಗೆ ತಕ್ಕಷ್ಟು ಮಾಸ್ಟರುಗಳ ಸಹಾಯವಿಲ್ಲದಿರುವುದರಿಂದ ಉಂಟಾಗಿರುವ ಕೊರತೆಯನ್ನು ಅರಿಕೆ ಮಾಡಿದರು ಇನ್ಸ್‌ಪೆಕ್ಟರವರು ಮೊದಲು ಸ್ತ್ರೀ ವಿದ್ಯಾಭ್ಯಾಸದಿಂದ ಪ್ರಜೆಗಳಿಗುಂಟಾಗಿರುವ ಪ್ರಯೋಜನಗಳನ್ನು ತಿಳಿಸಿ, ಅನಂತರ ಸ್ಕೂಲು ವಾಚಕರೊಳಗೆ ಕೆಲವು ವಿದ್ಯಾರ್ಥಿನಿಯರು ಬಾಲಕರೊಂದಿಗೆ ಓದುತ್ತಿದ್ದ ಕಾರಣ ಇವರನ್ನು ಪ್ರತ್ಯೇಕಿಸಿ ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಿದ್ದಾಯಿತು ಇದಕ್ಕಾಗಿ ಕೆಲವು ಸಾಮಾನೂ ಸಂಗೀತದ ಮಾಸ್ಟರೂ ಆಗಬೇಕು ಈ ವಿಷಯಗಳಲ್ಲಿ ಸರ್ಕಾರದವರು ಮುಂದೆ ಸಹಾಯಮಾಡುವರು ಈಗ ಸರ್ಕಾರದವರು ಉಂಟುಮಾಡಿರುವ ಪ್ರೋತ್ಸಾಹವನ್ನು ಗ್ರಾಮಸ್ಥರು ವೃದ್ಧಿ ಪಡಿಸಿಕೊಳ್ಳಬೇಕು ಮತ್ತು ಇದಕ್ಕಾಗಿ ಪ್ರತ್ಯೇಕವಾದ ಒಂದು ಕಟ್ಟಡವನ್ನು ಗ್ರಾಮಸ್ಥರು ತುರ್ತು ಮಾಡಿಕೊಡಬೇಕು. ಹಾಲಿ ಬಾಲಕರ ಸ್ಕೂಲಿನಲ್ಲಿ ಮೂರೇ ಜನ ಮಾಸ್ಟರುಗಳು ಕೆಲಸ ಮಾಡುತ್ತಿರುವುದು ಕೇವಲ ಅಸಾಧ್ಯವಾಗಿರುತ್ತದೆ ಇಷ್ಟರಲ್ಲೇ ಇಬ್ಬಿಬ್ಬರು ಮಾಸ್ಟರುಗಳನ್ನು ಸಹಾಯಕ್ಕೆ ಕೊಡುತ್ತೇವೆ ಮೆ॥ ಅಶ್ವತ್ಥಶಾಸ್ತ್ರಿಗಳು ಇಲ್ಲಿಗೆ ಬಂದ ಮೇಲೆ ಲೋವರ್ ಸೆಕೆಂಡರಿ ಪರೀಕ್ಷೆಯ ವರೆಗೂ ತರಗತಿಗಳು ಏರ್ಪಟ್ಟು ಗ್ರಾಮಸ್ಥರ ಪ್ರೋತ್ಸಾಹಕ್ಕೆ ಆಸ್ಪದವಾಗಿದೆ ಇಲ್ಲಿನ ಆ॥ ಮಾ॥ ಶ್ಯಾಮಣ್ಣನವರನ್ನೇ ಬಾಲಿಕಾ ಪಾಠಶಾಲೆಗೆ ಮಾಸ್ಟರನ್ನಾಗಿ ನೇಮಕಮಾಡಲಾಗುತ್ತೆ ಗ್ರಾಮಸ್ಥರು ಸ್ಕೂಲ್ ವಿಷಯದಲ್ಲಿ ಇಷ್ಟು ಆಸಕ್ತಿಯನ್ನು ತೋರಿಸುತ್ತಲಿರುವುದು ಕೇವಲ ಶ್ಲಾಘನೀಯವಾದದ್ದು ಎಂದು ಅಪ್ಪಣೆಕೊಡಿಸಿದ ತರುವಾಯ ಬಾಲಕ ಬಾಲಕಿಯರಿಗೆ ತಿಂಡಿಯನ್ನೂ ಇನ್ಸ್‌ಪೆಕ್ಟರಿಗೂ ಸಭಿಕರಿಗೂ ಗಂಧ ಪುಷ್ಪ ತಾಂಬೂಲಗಳನ್ನೂ ವಿನಿಯೋಗಿಸಿ ಸಭೆಯನ್ನು ಮುಕ್ತಾಯಮಾಡಿದರು

ಅರಸೀಕೆರೆ —ಈ ವಾರದಲ್ಲಿ ಈ ತಾಲ್ಲೋಕಿನಲ್ಲೂ ಟೌನಿನಲ್ಲೂ ಕಸಬೆಯಲ್ಲೂ ಸಮೃದ್ಧಿಯಾಗಿ ಮಳೆ ಬಂದು ಕೆರೆಗಳೆಲ್ಲಾ ಅರ್ಧ ಮುಕ್ಕಾಲು ಮಟ್ಟಿಗೂ ನೀರು ತುಂಬಿರುವದನ್ನು ಜನರು ಕಂಡು ಮಹದಾನಂದ ಭರಿತರಾಗಿ ಕ್ಷಾಮಕಾಲದ ಕಷ್ಟವನ್ನು ಮರೆಯುತ್ತಾ ಭಗವಂತನನ್ನು ಕೊಂಡಾಡುತ್ತಾರೆ ಈ ಮಳೆಯು ಕಳೆದ ಮೂರು ನಾಲ್ಕು ದಿವಸಗಳಿಂದಲೂ ರಾತ್ರಿ ಹಗಲೂ ಸುರಿಯುತ್ತಿರುವದರಿಂದ ಜನರೆಲ್ಲಾ ಹರ್ಷಿತರಾಗಿ ರಿಲೀಫ್ ಕಾಮಗಾರಿ ಕೆಲಸ ಬಿಟ್ಟು ಹೊಲಗಳ ಕಡೆಗೆ ತಿರುಗುತ್ತಿದಾರೆ ಜಮೀನುಗಳಿಗೂ ಗಿಡಗಳಿಗೂ ತೃಪ್ತಿಕರವಾಗಿ ಮಳೆ ಆಗಿದೆ ತುಮಕೂರು ಲಾಗಾಯಿತು ಈ ತಾಲ್ಲೋಕಿನ ವರೆಗೂ ಮುಂದಕ್ಕೂ ಪ್ರಬಲ ಮಳೆ ಆಗಿದೆ —ಇಲ್ಲಿನ ಆಸ್ಪತ್ರೆಯಲ್ಲಿ ಕಳೆದ ೫ ವರುಷಗಳಿಂದ ವೈದ್ಯರಾಗಿದ್ದು ಈಗ ಕಡೂರಿಗೆ ವರ್ಗವಾಗಿರುವ ಆಸ್ಪತ್ರೆ ಅಸಿಸ್ಟೆಂಟ್ ಮೆ॥ ಅಣ್ಣಾವು ಶೆಟ್ಟಿಯವರು ಅರಸೀಕೆರೆ ತಾಲ್ಲೋಕು ಪ್ರಜೆಗಳಿಗೆ ಕಳೆದ ೫ ವರುಷಗಳಲ್ಲಿ ಮಾಡಿರುವ ಉಪಕಾರವು ಚಿರಕಾಲ ಸ್ಮರಣೀಯವಾಗಿದೆ ಇವರು ಗುಣವುಳ್ಳ ಕೆಲಸದಲ್ಲೂ ತುಂಬಾ ಗಣನೆಗೆ ಪಾತ್ರರಾಗಿ ಪ್ರತಿಯೊಬ್ಬರಿಗೂ ರೈಲ್ವೆ ಇಲಾಖೆಯವರಿಗೂ ತುಂಬಾ ಮಮತೆಯುಳ್ಳವರಾಗಿದ್ದುದರಿಂದ ಇವರು ವರ್ಗಪಟ್ಟದ್ದು ವ್ಯಸನಕರವಾಗಿದೆ ಇವರ ವಿಷಯದಲ್ಲಿ ಈ ಅರಸೀಕೆರೆ ದೊಡ್ಡ ಮನುಷ್ಯರೂ ಇತರರೂ ಸ್ಥಳಾಧಿಕಾರಿಗಳೂ ತಮ್ಮ ಪ್ರೀತಿಯನ್ನೂ ಗೌರವವನ್ನೂ ಪ್ರಕಟಿಸುವಂತೆ ನಾಳೆ ಮಧ್ಯಾಹ್ನ ಇವರಿಗೆ ರೀಡಿಂಗ್‌ರೂಂ ಹಾಲ್‌ನಲ್ಲಿ ಭೋಜನವೂ ತರುವಾಯ ಅವರಿಗೂ ಅವರ ಕುಟುಂಬಕ್ಕೂ ವಸ್ತ್ರಾಭರಣಗಳೂ ಬಹುಮಾನವಾಗಿ ಕೊಡುವಂತೆಯೂ, ಅಗ್ರಹಾರ ವಿಷಯ ಜನರು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವಂತೆಯೂ ಏರ್ಪಾಡಾಗಿದೆ ಮೆ ಗಳೂದ ಅಬ್ಕಾರಿ ಚೌಡಪ್ಪನವರೂ, ಕೊಲ್ಲಾ ಕೆಂಚರಾಯ ಶೆಟ್ಟರೂ, ಕೊಲ್ಲಾ ಚಿನ್ನಯ್ಯ ಶೆಟ್ಟರೂ, ಜಹಗೀರ್‌ದಾರ್ ಸಾದತವುಲ್ಲಾಖಾನ್ ಸಾಹೇಬರೂ ಮುಂದಾಳುಗಳಾಗಿದಾರೆ —ಈ ಕ್ಷಾಮ ಕಾಲದ ಜಲಸೌಕರ್ಯಕ್ಕೋಸ್ಕರ ಕಟ್ಟಲ್ಪಡುತ್ತಿರುವ ಭಾವಿಯಲ್ಲಿ ಕೆಲಸಗಳೂ ಕಲ್ಲುಕಟ್ಟು ಕಾಮಗಾರಿಗಳೂ ಶೀಘ್ರವಾಗಿ ಮುಗಿಯುತ್ತಿರುವದರಿಂದ ಸರ್ಕಾರದ ಹಣವು ವ್ಯರ್ಥವಾಗುವದಿಲ್ಲವೆಂಬ ನಂಬಿಕೆ ಜನರಲ್ಲಿ ಧಾರಾಳವಾಗಿದೆ. ಅಂತೂ ಮುಂದಣ ಕೆಲಸಗಳು ಆದಷ್ಟು ಬೇಗನೆ ಮುಗಿಯಬೇಕಾಗಿವೆ —ಈ ದಿನ ಈ ಊರು ಭಾನಿಸಂತೆಯು ಮಳೆಯಿಂದ ಸಂಕೋಚವಾಗಿದೆ ಮುನಿಸಿಪಾಲಿಟಿ ವಿಷಯ ಅಮಲ್ದಾರರವರು ದಯವಿಟ್ಟು ಸ್ವಲ್ಪ ಹೆಚ್ಚಿಗಮನ ಕೊಟ್ಟರೆ ಅನುಕೂಲ ಇವರಿಗೆ ಇರುವ ಕೆಲಸಗಳೂ ಕೆಲವು ಮಾತ್ರವಲ್ಲ ಆದಾಗ್ಯೂ ಮುನಿಸಿಪಾಲಿಟಿ ಮೇಲೆ ಕೊಂಚ ಕೃಪೆಯಿಡುವದು ಅವಶ್ಯ ಊರೆಲ್ಲಾ ಕೊಳೆಯಿಂದ ತುಂಬಿರುವದರಲ್ಲಿ ಅನುಮಾನವಿಲ್ಲ —ಕಲ್ಯಾಣ ಕಟ್ಟೆ ಕೋಟೆ ನೀರು ಊರೊಳಗಿನ ಮನೆಗಳ ಮುಂದೆ ದೊಡ್ಡ ಕಾಲುವೆಯೋಪಾದಿ ಬರುತ್ತಿದೆ ಇದು ಮಕ್ಕಳಿಗೆ ಅಪಾಯಕರವಾಗಿದೆ ಜನರು ರಾತ್ರಿ ವೇಳೆ ತಿರುಗುವುದಕ್ಕೆ ಅಡಚಣೆ ಈ ದೊಡ್ಡ ಆಳವೂ ಅಗಲವೂ ಆಗಿರುವ ನಾಲೆಯೋಪಾದಿ ಇರುವ ಚರಂಡಿಯು ಮನೆಗಳ ಸಮೀಪದಲ್ಲೇ ಇರುವದು ತುಂಬಾ ಅಪಾಯಕರವಾಗಿದೆ ಆದದರಿಂದ ಮುನಿಸಿಪಾಲಿಟಿಯವರು ಇದನ್ನು ಲಕ್ಷ್ಯಕ್ಕೆ ತಂದುಕೊಂಡು ಅದರ ಮೇಲೆ ಚಪ್ಪಡಿ ಕಲ್ಲುಗಳನ್ನು ಹಾಸಿ ಮಣ್ಣು ಮುಚ್ಚಿಸಿದರೆ ತುಂಬಾ ಅನುಕೂಲವಾದೀತು

ತುಮಕೂರು ತಾ॥ ಕೆರಡಿಗೆರೆ —ಈಗ್ಗೆ ೧೪-೧೫ ದಿವಸದಲ್ಲಿ ಎರಡು ದಿವಸ ಮೂರು ಅಂಗುಲದ ಮಟ್ಟಿಗೆ ಮಳೆ ಆಗಿ ಕೆರೆ ಕಟ್ಟೆಗಳಿಗೆ ೧-೨ ತಿಂಗಳ ನೀರು ಶೇಖರವಾಗಿರುತ್ತೆ ಇದೇ ರೀತಿ ಇನ್ನು ಎರಡು ಹದ ಮಳೆ ಆಗಿದ್ದರೆ ದನಕರುಗಳಿಗೆ ಮಹದುಪಕಾರವಾಗುತ್ತಿತ್ತು ಈ ಪ್ರಾಂತ್ಯ ಪ್ಲವಂಗ, ಕೀಲಕ, ಈ ಎರಡು ಸಾಲಿನಿಂದಲೂ ಮಳೆಯಿಲ್ಲದೆ ದುರ್ಭಿಕ್ಷವು ವ್ಯಾಪಿಸಿ ನಷ್ಟಪಟ್ಟರ ತಕ್ಕ ಸಂಗತಿ ವರ್ಣಿಸಲು ಅಳವಲ್ಲವಾಗಿದೆ ಪ್ರತಿ ಒಂದು ಊರಿನಲ್ಲಿಯೂ ಬಲಿಷ್ಠರಾದವರು ದಿನಾಲು ೩೦-೪೦ ಜನಗಳಂತೆ ಗುಂಪು ಕೂಡಿಕೊಂಡು ಕಾಫಿ ತೋಟ, ಊಗದ ಚಿನ್ನದ ಗಣಿ ಮುಂತಾದ ಕಡೆಗಳಿಗೆ ಜೀವನೋಪಾಯಕ್ಕೆ ಹೊರಟುಹೋದವರು ಈ ವರೆಗೂ ಬಂದಿರುವದಿಲ್ಲ ದಯಾಳು ಸರ್ಕಾರದವರು ಗರೀಬರ ಅಹವಾಲನ್ನು ಲಾಲಿಸಿ ಸಮೀಪವಾದ ಬೆಳ್ಳಿಗೆರೆ, ವಾಕನಹಳ್ಳಿ ವಗೈರೆ ಕೆರೆಗಳು ನಾಡುವನ್ನು ಆಗಿದ್ದದ್ದನ್ನು ರಿಲೀಫ್ ಕಾಮಗಾರಿ ಮಾಡಿಸಿದ್ದರಿಂದ ಬಡಜನಗಳ ಜೀವನವು ಅಂಧಕಾರದಲ್ಲಿ ಮಿಂಚು ಸುಳಿದು ಸ್ವಲ್ಪ ಬೆಳಕಾದಂತೆ ತಕ್ಕಮಟ್ಟಿಗೆ ಆಯಿತು ಇನ್ನುಮುಂದೆಯಾದರೂ ಸಾರ್ವೋದ್ಧಾರವಾಗಿ ಮಳೆ ಬಂದು ದೇಶವು ಸುಭಿಕ್ಷವಾದೀತೆಂದು ಎದುರುನೋಡುತ್ತೇವೆ —ಜಾನುವಾರುಗಳಿಗೆ ಹುಲ್ಲು ಇಲ್ಲದೆ ಆಲದಸೊಪ್ಪು ವಗೈರೆ ತಿಂದು ಬಡಕಲಾಗಿ ನಡೆಯಲಾರದೆ ತಬ್ಬಾಡುತ್ತಿವೆ ವ್ಯವಸಾಯ ತ್ಯಾಗ ಮಾಡೋಣವೋ ಎಂದು ಸಮಸ್ತ ರೈತಾಬಿ ಜನರೂ ಚಿಂತೆಯಲ್ಲೇ ಮಗ್ನರಾಗಿರುತ್ತಾರೆ —ಹಿಂದೆ ಕುಣಿಗಲ್ ತಾಲ್ಲೂಕು ಚಿಟ್ಟಿಗೆರೆಗೆ ಸಮೀಪದ ಸೂಳೇಕುಪ್ಪೆ ಗ್ರಾಮದಲ್ಲಿ ಕುಡಿಯುವದಕ್ಕೆ ನೀರಿಲ್ಲದೆ ವ್ಯಥೆಪಡುತ್ತಿದ್ದವರಿಗೆ ಭಾವಿಯೂ, ಪರಸ್ಥಳೀಕರು ಬಂದು ಇಳಿಯಲು ಒಂದು ವರಪೂ ಕಟ್ಟಿಸಿ ಪರೋಪಕಾರಿಗಳೆಂದು ಹೆಸರುಪಡೆದ ಗಂಗಾಧರ ಸ್ವಾಮಿಗಳು ಈ ಗ್ರಾಮಕ್ಕೆ ದಯಮಾಡಿಸಿ ಇಲ್ಲಿ ನೀರಿಗಾಗಿ ಪಡುತ್ತಿದ್ದ ಶ್ರಮೆಯನ್ನು ಪಟೇಲ್ ಓಬೇಗೌಡರು, ಬೈರಪ್ಪನವರು, ಚಿಕ್ಕ ವೀರಪ್ಪನವರು, ಇನ್ನು ಮುಂತಾದವರ ಸಹಾಯವನ್ನು ಪಡೆದು ಎಂಟು ಆಳು ಪ್ರಮಾಣದ ಕಲ್ಲು ಕಟ್ಟಡದ ಸೇದುವ ಭಾವಿಯನ್ನು ಕಟ್ಟಿಸಿದರು ಈ ಕ್ಷಾಮಕಾಲದಲ್ಲಿಯೂ ಆರು ಗಜ ನೀರು ಸಮೃದ್ಧಿಯಾಗಿರುತ್ತೆ ದಿನಂಪ್ರತಿ ಸಾವಿರ ಕೊಡ ನೀರು ತೆಗೆದಾಗ್ಯೂ ಒಂದು ಮೆಟ್ಟಲು ಕಮ್ಮಿ ಆಗದಂತೆ ಜಲ ಇರುತ್ತೆ ನಾಲ್ಕು ತಿಂಗಳ ಕೆಳಗೆ ಸ್ವಾಮಿಗಳು ಒಂದು ಅಳವನ್ನು ಇಟ್ಟು ಬಾವಿ ಬಳಿ ತೋಟವನ್ನು ಮಾಡಿಸಿ ಜನರನ್ನು

ವಾರುಗಳು ಕುಡಿಯಲು ನೀರು ಸಿಗಿಕಾಕುವಂತೆ ಗೊತ್ತುಮಾಡಿದ್ದಾರೆ ದಿನಂಪ್ರತಿಯೂ ಸಾವಿರಕ್ಕೆ ಕಮ್ಮಿ ಇಲ್ಲದಂತೆ ಗೋಕಾಯಿಗಳು ಜಲಪಾನವನ್ನು ಮಾಡಿಹೋಗುತ್ತವೆ ಸ್ವಾರ್ಥವನ್ನು ಬಯಸದೆ ಪರಂತಾರ್ಥಕ್ಕೆ ಸಾಹಸಪಡತಕ್ಕ ಈ ಗಂಗಾಧರ ಸ್ವಾಮಿಗಳ ಗುಣಾತಿಶಯಗಳನ್ನು ಎಷ್ಟು ವಿವರವಾಗಿ ವರ್ಣಿಸಿದರೂ ಸಾಲದು ಭಾವಿ ಸಮೀಪದಲ್ಲೇ ಒಂದು ಮಠವನ್ನು ಕಟ್ಟಿಸಬೇಕೆಂದು ಅಸ್ತಿಭಾರ ಹಾಕಿರುತ್ತಾರೆ ಕೆಲವು ತಿಂಗಳೊಳಗಾಗಿ ಪೂರೈಸಲು ಸಂದೇಹವಿಲ್ಲ ಏಪ್ರಿಲ್ ತಾ ೨೬ನೇ ಸೋಮವಾರ ದೇವರ ಹೆಸರಿನ ಮೇಲೆ ಭೂರಿಸಂತರ್ಪಣೆ ಮಾಡಿಸಿದರು ನೂರಾರು ಜನ ಊಟಮಾಡಿ ತೃಪ್ತಿಪಟ್ಟರು ೯೦ ವರುಷಕ್ಕೆ ಮೇಲ್ಪಟ್ಟ ವಯಸ್ಸುಳ್ಳ ಈ ಸ್ವಾಮಿಗಳು ಚಿರಾಯುಗಳಾಗಲೆಂದು ಸರ್ವದಾ ಪ್ರಾರ್ಥಿಸುತ್ತೇವೆ

ಮಧುಗಿರಿ — ಯುಗಾದಿ ಹೋದ ಲಾಗಾಯ್ತು ಬಿರುಸಾದ ಒಂದು ತುಂತುರು ಮಳೆಯಾದರೂ ಆಗದೆ, ಬಿಸಲು ಬಹು ಜೋರಾಗಿತ್ತು ಧಗೆಯನ್ನು ಸಹಿಸಲಾಗುತ್ತಿರಲಿಲ್ಲ ಬೆಳಿಗ್ಗೆ ೯ ಘಂಟೆಯಲ್ಲಿಯೇ ನೆಲದ ಮೇಲೆ ನಡೆಯಲಾರದಷ್ಟು ಸುಡುತ್ತಿತ್ತು ದೈವಾನುಗ್ರಹದಿಂದ ನೆನ್ನೆ ಮೊನ್ನೆಯಿಂದ ಮಲೆನಾಡಿನಂತೆ ಹನಿಗಳು ಬೀಳುತ್ತಿವೆ ನೀರು ಮಾತ್ರ ಹರಿಯಲಿಲ್ಲ, ಭೂಮಿಗೆ ಹದವಾಗಲಿಲ್ಲ ಇದೇ ರೀತಿ ಇನ್ನು ಮೇಲೆ ಮಳೆ ಹಿಡಿದರೆ ಸುಮಾರು ಹದವಾದೀತು ಜೋರಾಗಿ ಮಳೆ ಬಂದರೆ ಸೊಗಸಾಗಿ ಹದವಾಗುವದು ಮುಂಗಾರು ಮಳೆಯಲ್ಲಿ ಇಂಥಾ ಜಡಿಯ ಮಳೆಯನ್ನು ನೋಡಲಿಲ್ಲವೆಂದು ಅನೇಕ ವೃದ್ಧರು ಹೇಳುವರು — ಈ ಕ್ಷಾಮಕಾಲದಲ್ಲಿ ಪ್ರಜೆಗಳಿಗೆ ಅನೇಕ ವಿಧವಾದ ಸಹಾಯಗಳನ್ನು ದಯಾಳುಗಳಾದ ಸರ್ಕಾರದವರು ಮಾಡಿರುವರೆಂದೂ, ಇನ್ನೂ ಮಾಡುತ್ತಿರುವರೆಂದೂ ನಮಗೆಲ್ಲಾ ಗೊತ್ತಾಗಿದೆ ಈ ಪ್ರಾಂತ್ಯ ಅನೇಕ ಕಡೆ ಎರಡು ವರ್ಷಗಳಿಂದಲೂ ಮುಷ್ಟಿ ಬೆಳೆ ಆಗದೆ ಹೊಲಗಳಿಗೆ ಕಂದುಗೋಲುಗಳನ್ನು ಹಾಕಲಿಲ್ಲ ತರಿ ಬೆಳೆಯಿಲ್ಲದ ಬಡ ರೈತರು ಜೀವನಕ್ಕೆ ಬಹು ತೊಂದರೆ ಪಡುತ್ತಿರುವರು ನಮ್ಮ ಊರಿನಲ್ಲಿ ಒಂದು ಮನೆಯವರಿಗೆ ಜೀವನಕ್ಕೆ ಬಹು ತೊಂದರೆ ಎಂದು ಅಮಲ್ದಾರ್ರವರಲ್ಲಿ ಪಟೇಲ್ ಶ್ಯಾನುಭೋಗರು ತಿಳಿಸಿದಾಗ ಆತನ ವಿಷಯವೆಲ್ಲಾ ಬರೆದುಕೊಂಡು ಹೋದರು ಯಾವ ಕಾರಣದಿಂದಲೋ ಆತನಿಗೆ ಸಹಾಯ ದೊರೆಯಲಿಲ್ಲ ಆತನು ಊರಲ್ಲಿ ಯಾಚನೆ ಅಥವಾ ಕೂಲಿಯಿಂದ ಜೀವನ ಮಾಡುತ್ತಿರುವನು ಇವನು ಮನೆ ಕಂದಾಯ ಕೊಡಬೇಕು ಕೊಡಲು ಶಕ್ತಿಯಿಲ್ಲ ಇಂಥಾ ಎಡವರಿಂದ ಖಿಸ್ತುವಾರಾಗಲಿ ಅಥವಾ ಮುಂದಲಿನ ಸಾಲಿಗಾಗಲಿ ಕಂದಾಯ ಕೊಡುವ ಏರ್ಪಾಡು ಮಾಡಿದರೆ ಉತ್ತಮ ಹೊಟ್ಟೆಗಿಲ್ಲದುದು ಒಂದು, ಕಂದಾಯದ ತಗಾದೆ ಮಾಡುವದು ಒಂದು, ಖಿಸ್ತುವಾರು ಕೊಡದಿದ್ದಲ್ಲಿ ನೋಟೀಸುದಾರರ ಫೀಜು ಮತ್ತು ಜಪ್ತಿಪಟ್ಟಿ ಫೀಜು ಇವುಗಳು ಒಂದು ಬಡರೈತರಿಗೆ ಇದರಿಂದ ಹೆಚ್ಚಿನ ಭಾರ ಹಾಕಿದಂತಾಯಿತು ಮೇಲ್ಪಟ್ಟ ಅಧಿಕಾರಿಗಳು ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಒಳ್ಳೆ ಆದ ವರುಷದ ವರೆಗಾದರೂ ಅವಧಿ ಕೊಟ್ಟು ವಸೂಲ್ ಮಾಡುವಂತೆ ಅಪ್ಪಣೆ ಕೊಡಿಸ್ಯಾರೆಂದು ಪ್ರಾರ್ಥಿಸುವೆವು — ಸರ್ಕಾರದವರು ಕೇವಲ ನಿರ್ಗತಿಕರಿಗೆ ಅಂದರೆ ಯಾರೂ ದಿಕ್ಕಿಲ್ಲದವರಿಗೆ ದಿನ ಒಂದಕ್ಕೆ ೧೨ ಚಿಬಾಕು ರಾಗಿಯನ್ನು ಕೊಡುವಂತೆ ಅಪ್ಪಣೆ ಮಾಡಿದರು ಸಣ್ಣ ಹಳ್ಳಿಯಲ್ಲಿ ಈ ರೀತಿ ಒಬ್ಬಳಿಗೆ ಕೊಡುತ್ತಿದ್ದರು ಈಗ ಕೆಲವು ದಿನಗಳ ಹಿಂದೆ ಕೊಡದೆ ನಿಲ್ಲಿಸಿರುವರು ಬಿಟ್ಟಿದ್ದರಲ್ಲಿ ಆಕೆಗೆ ಅಡಿಗೆ ಮಾಡಿ ಹಾಕುತ್ತಿದ್ದವನು ನಮಗೆ ಸರ್ಕಾರದಿಂದ ಆಕೆಯ ಶಿಕ್ಷಾಬಾರದಂತೆಯಾದರೂ ಚಾಜನ್ನು ಕೊಡದಿದ್ದ ದಿನ ಇದುವರೆಗೆ ಇಟ್ಟು ತನಗೆ ಪರ್ಮ ಬಂದಂತಾಯಿತು ಇನ್ನುಮೇಲೆ ಕೊಡಲಾಗದೆಂದು ನಿಲ್ಲಿಸಿರುವನು ಸುಮಾರು ಮೂರು ತಿಂಗಳಿಂದಲೂ ಹಾಗೆ ಊಟ ಮಾಡಿಸಿರುವನು ಈ ಕಾಲದಲ್ಲಿ ಕಷ್ಟವೇ ಸರಿ ನಮ್ಮ ಡೆಪ್ಯುಟಿ ಕಮೀಷನರ್ ಸಾಹೇಬರವರು ತಮ್ಮ ವಿಮರ್ಶೆ ಚಿತ್ತಕ್ಕೆ ಇಂಥಾ ವಿಷಯಗಳನ್ನು ತೆಗೆದುಕೊಂಡು ವಿಚಾರಿಸಿದ್ದಲ್ಲಿ ನಿರ್ಗತಿಕರಿಗೆ ಪ್ರಾಣ ಉಳಿಯುವದಿಲ್ಲ ಯಾವ ಕಾರಣದಿಂದ ೧೨ ಚಿಬಾಕು ರಾಗಿ ನಿಲ್ಲಿಸಿರುವರೋ ಗೊತ್ತಿಲ್ಲ ಧಾರಣೆ ಪಾಸಿಗಳು ತಗ್ಗಿಲ್ಲ ಆಕೆಗೆ ಅದನ್ನು ತಪ್ಪಿಸಿದರೆ ಅಗತ್ಯ ಅನ್ನವಿಲ್ಲದೆ ಸಾಯುವಳು ಎಂದು ಹೇಳಬಹುದು — ಮಧುಗಿರಿಗೆ ಸೇರಿದ ಹಂಚಾಪುರವೆಂಬ ಗ್ರಾಮದಲ್ಲಿ ವಾಸಪ್ಪನ ಮನೆಯಲ್ಲಿ ಆತನ ಬಂಧುಗಳಾದ ದೊಡ್ಡ ನರಸ ಮತ್ತು ಕಾಮ ಎಂಬುವವರು ಸುಮಾರು ೩೦೦ ರೂಪಾಯಿ ನಗಗಳನ್ನು ಕಳುವು ಮಾಡಿದ್ದರೆಂದೂ ಇವರಲ್ಲಿ ಒಬ್ಬನು ತನ್ನ ಜಿಸ್ಸಿಗೆ ತೆಗೆದುಕೊಂಡಿದ್ದ ಒಡವೆಗಳನ್ನು ಸೊಪ್ಪಿನ ಮಡಿಯಲ್ಲೂ ಬೀರೆಯವನು ಆ ಊರು ಪಟೇಲರ ಮನೆಯಲ್ಲೂ ಇಟ್ಟಿದ್ದರೆಂದೂ ಈ ವಿಚಾರವನ್ನು ಪಟೇಲರು ರಿಪೋರ್ಟು ಮಾಡದಿದ್ದರೂ ಮಾಲೀಕನು ರಿಪೋರ್ಟು ಮಾಡಿದ್ದರ ಮೇಲೆ ಮಧುಗಿರಿ ಜಮೇದಾರರೂ ಇನ್ನೂ ಅಧಿಕಾರಿಗಳೂ ಬಂದು ವಿಚಾರಿಸಲಲ್ಲಿ ಆಯಾ ಸ್ಥಳಗಳಲ್ಲಿ ಇಟ್ಟಿದ್ದವುಗಳನ್ನು ತೋರಿಸಿದರೆಂದೂ, ಈಗ ಅವರನ್ನು ವಿಚಾರಣೆ ಮಾಡುತ್ತಿರುವರೆಂದೂ ವರ್ತಮಾನ ಬಂದಿದೆ ಪಟೇಲರು ರಿಪೋರ್ಟು ಮಾಡದೆ ಇದ್ದದ್ದೂ, ಅವರ ಮನೆಯಲ್ಲಿ ಕಳುವಿನ ಮಾಲುಗಳು ಸಿಕ್ಕಿದ್ದೂ ನೋಡಿದರೆ ತುಂಬಾ ಆಶ್ಚರ್ಯವಾಗುತ್ತದೆ ಇನ್ನೂ ಅಲ್ಲಲ್ಲಿ ಕಳವುಗಳು ನಡೆದಿರುವ ವರ್ತಮಾನಗಳು ತಿಳಿಯಬಂದಿವೆ ಆದರೆ ರಾತ್ರಿ ಕಾಲಗಳಲ್ಲಿ ಗ್ರಾಮಾಂತರಗಳಲ್ಲಿ ಸರಿಯಾದ ಕಾವಲು ಇರುವಂತೆ ಪಟೇಲರು ಎಚ್ಚರಿಕೆಯಾಗಿರುವದು ಒಳ್ಳೇದು ಕೆಲವು ಕಡೆ ಕಾವಲು ಕ್ರಮವಾಗಿ ನಡೆಯುವದಿಲ್ಲ ಮೇಲಿನ ಅಧಿಕಾರಿಗಳು ಈ ವಿಷಯಕ್ಕೆ ಚಿತ್ತ ಕೊಡುವರೆಂದು ನಂಬಿರುವೆವು — ಇಲ್ಲಿ ಬಿಸಲಿನ ತಾಪವು ಜಾಸ್ತಿಯಾಗಿ ಕುಡಿಯುವ ನೀರಿಗೆ ಬಹಳ ಪ್ರಯಾಸವಾಗಿರುತ್ತೆ ಇದರಿಂದ ಪಶುಪಕ್ಷ್ಯಾದಿಗಳು ಪಡುವ ಶ್ರಮವನ್ನು ನೋಡಲಾರದೆ ನಮ್ಮ ಸಾಹುಕಾರ್ ಕೆ ಆದಿನಾರಾಯಣ ಶೆಟ್ಟಿ ತಿಂಗಳಿಗೆ ೭ ರೂಪಾಯಿ ಸಂಬಳ ಕೊಟ್ಟು ತಮ್ಮ ಮನೆಯ ಮುಂದೆ ದೊಡ್ಡ ಕೊಪ್ಪರಿಗೆಯನ್ನಿರಿಸಿ ನೀರು ಹಾಕಿಸುತ್ತಾ ಇರುವ ದೆಸೆಯಿಂದ ಗೋಕಾಯಿಗಳಿಗೆ ತುಂಬಾ ಅನುಕೂಲವಾಯಿತು ಅವರು ಮಾಡಿರುವ ಧರ್ಮಕೆಲಸವು ಶ್ಲಾಘನೀಯವಾಗಿರುತ್ತೆ — ಇಲ್ಲಿ ಮಲ್ಲೇಶ್ವರ ಮತ್ತು ವೆಂಕಟರಮಣಸ್ವಾಮಿ ಮಹೋತ್ಸವ ಕಾಲಗಳಲ್ಲಿ ಸಂತರ್ಪಣೆ ಮಾಡಿಸಬೇಕಾದರೆ ತುಂಬಾ ಪ್ರಯಾಸವಾಗುತ್ತಾ ಇತ್ತು ಈ ಕಷ್ಟವನ್ನು ನೋಡಲಾರದೆ ನಮ್ಮ ಸಾಹುಕಾರ್ ಹೊ ಕಾ ನಂಜುಂಡಯ್ಯನವರು ಸುಮಾರು ೫೦೦ ಜನ ಬ್ರಾಹ್ಮಣಾದಿ ಕ್ಷತ್ರಿಯ ಜನರಿಗೆ ಸಂತರ್ಪಣೆಗಳನ್ನು ಮಾಡಿಸಿದರು — ದಂಡಿನ ಮಾರಮ್ಮನ ಜಾತ್ರೆಯಲ್ಲಿ ಸೇರತಕ್ಕ ಅರ್ಚಕರು, ಕುಂಟರು, ಕುರುಡರೇ ಮೊದಲಾದವರಿಗೆಲ್ಲಾ ಅನ್ನೋದಕಗಳಿಗೆ ತುಂಬಾ ತೊಂದರೆ ಎಂದು ಭಾವಿಸಿ ರಾಮಣ್ಣಯ್ಯನೆಂಬಾತನು ಗ್ರಾಮಾಂತರಗಳ ಮೇಲೆ ತಿರುಗಿ ರಾಗಿ ಮೊದಲಾದ ಧಾನ್ಯ ಮತ್ತು ದ್ರವ್ಯಸಹಾಯ ಹೊಂದಿ ಈ ಮಹೋತ್ಸವದಲ್ಲಿ ಸೇರಿದ್ದ ಸುಮಾರು ೫—೬ ಸಾವಿರ ಪ್ರಜೆಗಳಿಗೆ ಮಧ್ಯಾಹ್ನ ೩ ಗಂಟೆ ಲಾಗಾಯ್ತು ಸಾಯಂಕಾಲ ೮ ಗಂಟೆ ವರೆಗೆ ಮೂರು ದಿನಗಳಲ್ಲಿ ಅನ್ನದಾನವನ್ನು ಮಾಡಿಸಿದನು ಈ ಜಾತ್ರೆಗೆ ತುಂಕೂರು ಮೊದಲಾದ ಗ್ರಾಮಾಂತರಗಳಿಂದ ಅಂಗಡಿಗಳು ಬಂದಿದ್ದವು ಈ ವರ್ಷ ವ್ಯಾಪಾರ ನಡೆಯಲಿಲ್ಲವೆಂದು ವ್ಯಾಪಾರಸ್ಥರು ಗುಣಗುಟ್ಟುತ್ತಾ ಇದ್ದಾಗ್ಯೂ ತಲಾ ಸುಮಾರು ೭೦—೮೦ ರೂಪಾಯಿಗೆ ಕಡಮೆ ಇಲ್ಲದೆ ವ್ಯಾಪಾರವಾಗಿರಬಹುದೆಂದು ತೋರುತ್ತೆ — ಈಚೆಗೆ ೫—೬—೭ನೇ ತಾರೀಖುಗಳಲ್ಲಿ ಪೂರಾ ಹದ ಮಳೆ ಆದದ್ದರಿಂದ ಧಗೆಯಡಗಿ ಹವಾಕಾರವು ಶಾಂತವಾಗಿ ಬೇಸಾಯ ಕೆಲಸಗಳಿಗೆ ಅವಕಾಶವಾಗಿರುತ್ತೆ ಆಸುಪಾಸ್ ಗ್ರಾಮಾಂತರಗಳ ಕೆರೆಕಟ್ಟೆಗಳಿಗೆ ಕೊಂಚಕೊಂಚ ನೀರು ಬಂದಿರುವದಾಗಿ ತಿಳಿಯಬರುತ್ತೆ

ಬಾತ್ಮಿದಾರರಿಗೆ ನೋಟೀಸು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರ್, ಗುಬ್ಬಿ ದೇಶಾಭಿಮಾನಿ ಮತ್ತು ಪ್ರಜಾಹಿತಚಿಂತಕ, ದಾವಣಗೆರೆ — ಈ ಬಾತ್ಮಿಗಳನ್ನು ಪ್ರಕಟಿಸಲಾರೆವು

ಸ್ವಾಮಿಭೃತ್ಯ, ಚಿತ್ರದುರ್ಗ — ಯಾವ ಪತ್ರಿಕೆಯಲ್ಲಿ ಆಕ್ಷೇಪಣೆ ಮತ್ತು ದೂಷಣೆಗಳು ಪ್ರಕಟವಾದವೋ ಅದೇ ಪತ್ರಿಕೆಗೆ ನಿಮ್ಮ ಸಮಾಧಾನಗಳನ್ನು ಬರೆದು ತಿಳಿಸಬೇಕು

ಕರೆಸ್ಪಾಂಡೆನ್ಸ್.

ಮಳೆಯ ನಿರೀಕ್ಷೆಯು

ಅಯ್ಯಾ,

ತೀರ್ಥಹಳ್ಳಿ ತಾಲ್ಲೂಕು ಪ್ರಾಂತ್ಯ ಬಿಸಲಿನ ಧಗೆಯು ಹೆಚ್ಚಾಗಿದೆ ರೈತರೆಲ್ಲರೂ ಗದ್ದೆಗಳನ್ನು ಹದಗೊಳಿಸಿಕೊಂಡು ಆಕಾಶವನ್ನೇ ಎದುರುನೋಡುತ್ತಿದ್ದಾರೆ ಆದರೆ ೮ ೧೦ ದಿನಗಳಿಂದಲೂ ಸ್ವಲ್ಪ ಮೋಡವಾಗುತ್ತಾ ಇದ್ದ ದೇವರ ದಯದಿಂದ ಸದ್ಯದಲ್ಲಿ ಮಳೆಯು ಬರುವಂತೆ ತೋರುತ್ತೆ ಆದರೆ ಸಕಾಲಕ್ಕೆ ದೊರೆಯದೆಹೋಯಿತು ಪ್ರತಿ ವರುಷವೂ ಈ ಕಾಲದಲ್ಲಿ ಬೀಜಗಳನ್ನು ಬಿತ್ತಿ ಪೂರೈಸಿಕೊಳ್ಳುತ್ತಾ ಇದ್ದರು ಈ ವರ್ಷ ಸಕಾಲಕ್ಕೆ ಪೂರೈಸಲು ಅನುಕೂಲವಿಲ್ಲದೆ ರೈತರು ತೊಂದರೆಪಡುತ್ತಿರುವದನ್ನು ನೋಡಿ ವಿಷಾದಪಡುತ್ತೇವೆ [ಈಚೆಗೆ ಮಳೆ ಆಗಿರಬಹುದೆಂದು ನಂಬುತ್ತೇವೆ —ಎಡಿ]

ತೀರ್ಥಹಳ್ಳಿ ತಾಲ್ಲೂಕಿಗೆ ೧೦ ಮೈಲಿ ಫಾಸಲೆಯಲ್ಲಿ ಕಟ್ಟೆಹೊಳೆಬಾಗಿಲು ಎಂಬ ಗ್ರಾಮದಲ್ಲಿ ಒಂದು ಸ್ಕೂಲು ಇದೆ ಇದು ಬಹಳ ದೀನಸ್ಥಿತಿಯಲ್ಲಿದೆ ಈ ಮೊದಲು ಈ ಸ್ಕೂಲಿಗೆ ಸರಿಯಾದ ಟೀಚರನ್ನು ನೇಮಿಸಿದಂತೆ ತೋರುವದಿಲ್ಲ ಎಂಬುವದಕ್ಕೆ ಬಾಲಕರ ವಿದ್ಯಾಭಿವೃದ್ಧಿಯಿಂದಲೇ ಗೊತ್ತಾಗುತ್ತೆ ಆ ಬಾಲಕರಿಗೆ ಒಬ್ಬರೇ ಟೀಚರನ್ನು ೩ ೪ ವರ್ಷಗಳಿಂದಲೂ ನೇಮಿಸಿ ಇರುವದು ಕಾರಣವೆಂದು ಈ ಊರಿನ ಜನಗಳು ಆಡಿಕೊಳ್ಳುತ್ತಾರೆ ಆದ್ದರಿಂದ ಈಚೆಗೆ ಏಪ್ರಿಲ್ ೩೦ರಲ್ಲು ವರ್ಗಮಾಡಲ್ಪಟ್ಟು ಹಾಜರಾಗಿರುವ ಟೀಚರು ಇಂಥಾ ಆ ನಾಗರಿಕತ್ವಕ್ಕೆ ಅವಕಾಶವನ್ನು ಕೊಡದೆ ಅಭಿವೃದ್ಧಿಗೆ ತರ್ಕ ಮಾರ್ಗದಲ್ಲಿ ನಡೆಸುವರೆಂದು ನಂಬಿದೇವೆ

ಈ ಗ್ರಾಮವು ಪೂರ್ವದಲ್ಲಿ ಅತಿ ಉನ್ನತಸ್ಥಿತಿಯಲ್ಲಿದ್ದಾಗ ಅನೇಕ ಪ್ರಜೆಗಳಿಂದ ಕೂಡಿತ್ತೆಂಬುದಾಗಿ ತಿಳಿದುಬರುತ್ತದೆ ಈ ಗ್ರಾಮವು ನಗರದ ತಾಲ್ಲೂಕು ಅಂತ್ಯಭಾಗದಲ್ಲಿ ಎರಡು ತಾಲ್ಲೂಕುಗಳಿಗೂ ಒಳಪಟ್ಟಿರುತ್ತದೆ ಸುತ್ತ ೧ ೩ ಮೈಲಿಗಳಲ್ಲಿ ಬಹಳ ಗ್ರಾಮಗಳು ಉಂಟು ಈ ಊರಿನ ಸ್ಕೂಲಿಗೆ ಬರತಕ್ಕ ಬಾಲಕರಿಗೂ ಪ್ರಯಾಣಸ್ಥರಿಗೂ ಸರ್ವೆ ಆಫೀಸರುಗಳಿಗೂ ಕೋಟೆ ಕೊಳಗಳನ್ನು ನೋಡತಕ್ಕ ಮೇಲ್ ಆಫೀಸರುಗಳಿಗೂ ಸಹ ಅನಾನುಕೂಲವಾಗಿರುವ ೪ ೫ ಮೈಲಿ ಘಟ್ಟ ಇರುವ ಕಡಿದಾದ ಕಲ್ಲು ಹಾದಿಯನ್ನು ದಾಟಿಕೊಂಡು ಬರುವದಕ್ಕೆ ತುಂಬಾ ಪ್ರಯಾಸಪಡುತ್ತಾರೆ ಅಲ್ಲದೆ ಅಲ್ಲಲ್ಲಿ ಸಂದುಗೊಂದುಗಳಲ್ಲಿ ಹುಲಿ, ಕರಡಿ ಮೊದಲಾದ ದುಷ್ಟಮೃಗಗಳ ಭಯವಂತೂ ಹೇಳಲಶಕ್ಯವಾಗಿದೆ ಆದ್ದರಿಂದ ಜನಗಳು ನಿರ್ಭಯವಾಗಿ ಸಂಚಾರ ಮಾಡಲು ಹಿಂಜರಿಯುತ್ತಾರೆ ಇಂಥಾ ಅಸಂದರ್ಭವಿರುವ ಪುರಾತನ ಸ್ಥಳದ ವಿಷಯವನ್ನು ಸರ್ಕಾರದವರು ಚಿತ್ತಕ್ಕೆ ತೆಗೆದುಕೊಳ್ಳದೆ ಇರುವುದು ತುಂಬಾ ಶೋಚನೀಯವಾಗಿದೆ ಇಂಥಾ ಅಸಂದರ್ಭದಲ್ಲಿ ನಗರದ ತಾಲ್ಲೂಕು ಅಮಲ್ದಾರವರು ಮೇ ತಾ ೨ರಲ್ಲಿ ಮಧ್ಯಾಹ್ನ ೧೦ ಗಂಟೆಗೆ ಕೋಳವಾಡಿ ಮೊಕ್ಕಾಮಿನಿಂದ ಇಲ್ಲಿನ ಕೋಟೆಗೆ ಚಿತ್ತೈಸಿರುವಾಗ್ಯೆ ಈ ಗ್ರಾಮಸ್ಥರು ರಹಬರೂಬು ಹೇಳಿಕೊಂಡದ್ದರ ಮೇಲೆ ಪ್ರಸಹ ಚಿತ್ತೈಸುವಾಗ ಇದು ಆ ಸ್ಥಳವನ್ನು ಪರಾಂಬರಿಸಿಕೊಂಡು ಈ ವಿಷಯವನ್ನು ಮುಂದೆ ಸಮಾಲೋಚಿಸಿ ಆರ್ಡರು ದಯಪಾಲಿಸುವದಾಗಿ ಅಪ್ಪಣೆಕೊಡಿಸಿ ಮುಂದಕ್ಕೆ ತೆರಳಿದರು ಇದೇ ರೀತಿಯಲ್ಲಿ ನಮ್ಮ ತಾಲ್ಲೂಕು ಅಮಲ್ದಾರ್ರವರು ಚಿತ್ತಕ್ಕೆ ತೆಗೆದುಕೊಂಡರೆ ಶೀಘ್ರದಲ್ಲಿ ನಡೆಯಲು ಸಂದೇಹವಿಲ್ಲವೆಂದು ನಂಬುತ್ತೇವೆ

ಕೆ ರಂಗಪ್ಪನಾಯಕ

ಸ್ವತಂತ್ರ ಪತ್ರಿಕೆಗಳನ್ನು ನಡಿಸುವ ಶಕ್ತಿಯು

ಅಯ್ಯಾ,

ಏಪ್ರಿಲ್ ೨೨ನೇ ತಾರೀಖಿನ ತಮ್ಮ ಪತ್ರಿಕೆಯಲ್ಲಿ ಮೈಸೂರು ಗವರ್ನಮೆಂಟಿನವರು ನನ್ನ ವಿಷಯವಾಗಿ ಕೊಟ್ಟಿರುವ ಪ್ರೊಸೀಡಿಂಗ್ಸನ್ನು ಪ್ರಕಟಿಸಿ ಅದರ ಮೇಲೆ ನಿಮ್ಮ ಅಭಿಪ್ರಾಯವನ್ನೂ ತಿಳಿಸಿರುವಿರಿ ತಮಗೆ ನಾನು ಅಪರಿಚಿತನಲ್ಲ ನನಗೆ ೪೫ ವರುಷ ವಯಸ್ಸಾಗಿರುವುದು ಸರ್ಕಾರದ ರಿಕಾರ್ಡಿನಲ್ಲಿಯೇ ಇರುವುದು ಹೀಗಿದ್ದಾಗ್ಯೂ ಗವರ್ನಮೆಂಟಿನವರಂತೆ ನೀವು ನನಗೆ ಇಪ್ಪತ್ತು ವಯಸ್ಸೆಂದು ತಿಳಿದುಕೊಂಡು ಗವರ್ನಮೆಂಟ್ ಪ್ರೊಸೀಡಿಂಗ್ಸನ್ನು ಪುಷ್ಟೀಕರಿಸಿರುತ್ತೀರಿ ಪತ್ರಿಕೆಗಳನ್ನು ನಡಿಸುವುದಕ್ಕೆ ಬೇಕಾದ ವೈದುಷ್ಯವು ನನಗೆ ಇಲ್ಲವೆಂದು ನೀವು ಅಭಿಪ್ರಾಯ ಪಟ್ಟಿರುವಿರಿ ನಾನು ಕೆಲವು ವರುಷಗಳಿಂದ ಅನೇಕ ಪತ್ರಿಕೆಗಳಿಗೆ ಈ ಊರಿನಲ್ಲಿ ಬಾತ್ಮಿದಾರನಾಗಿರುವುದು ಅನೇಕರು ಬಲ್ಲರು ಪತ್ರಿಕೆಗಳನ್ನು ನಡೆಸುವುದಕ್ಕೆ ನನಗಿರತಕ್ಕ ಶಕ್ತಿಯು ನಿಮಗೂ ಸ್ವಲ್ಪಮಟ್ಟಿಗೆ ಗೊತ್ತಾಗಿರಬಹುದು ಅದು ಹೇಗಾದರೂ ಇರಲಿ ನಾನು ಪ್ರಶ್ನೆನ್ನು ಇಟ್ಟುಕೊಂಡಿರುವುದು ನಿಮಗೆ ತಿಳಿಯದೋ ? ಜನರಲ್ ಏಜನ್ಸಿ ನಾಮವನ್ನು ಇಟ್ಟಿರುವುದು ನಿಮಗೆ ತಿಳಿಯದೋ ? ಈ ಪಟ್ಟಣದ ವರ್ತಕರಲ್ಲಿ ನಾನೂ ಒಬ್ಬನಾಗಿರುವುದು ನಿಮಗೆ ತಿಳಿಯದೋ ? ಕನ್ನಡ ಭಾಷೆಯನ್ನು ತಿಳಿಯದೇ ಇರತಕ್ಕ ಎಷ್ಟೋ ಮಂದಿಗಳು ಕನ್ನಡ ಪತ್ರಿಕೆಗಳನ್ನು ನಡೆಸುತ್ತಲಿಲ್ಲವೇ ? ಅವರಿಗೆ ಕನ್ನಡ ತಿಳಿಯುವುದಕ್ಕಿಂತಲೂ ಹೆಚ್ಚಾಗಿ ನನಗೆ ಇಂಗ್ಲೀಷ್ ತಿಳಿಯದೇ ? ಅವರಿಗೆ ಇಂಗ್ಲೀಷ್ ತಿಳಿದಷ್ಟು ನನಗೆ ನನ್ನ ಸ್ವಂತ ಭಾಷೆಯು ತಿಳಿಯದೋ ? ಜನಗಳ ಯೋಗಕ್ಷೇಮ ಚಿಂತನೆಯನ್ನು ಚನ್ನಾಗಿ ಮಾಡತಕ್ಕ ದೇಶೀಯ ಪತ್ರಿಕೆಯು ಇರಬೇಕೆಂದು ನಾನು ದರಖಾಸ್ತು ಮಾಡಿಕೊಂಡದ್ದಕ್ಕೆ ಸರ್ಕಾರದವರು ಅಪ್ಪಣೆಯನ್ನು ಕೊಡುವುದಿಲ್ಲವೆಂದು ಪ್ರೊಸೀಡಿಂಗ್ಸು ಮಾಡಿದರು ಯಾರೋ ಕೆಲವು ಜನಗಳು ನನ್ನನ್ನು ಮುಂದಾಳಾಗಿಟ್ಟು ಪತ್ರಿಕೆಯನ್ನು ನಡಿಸಬೇಕೆಂದಿದ್ದಾರೆಂದು ಗವರ್ನಮೆಂಟ್ ಪ್ರೊಸೀಡಿಂಗ್ಸು ಮಾಡಿದರು ಗವರ್ನಮೆಂಟಿನವರು ಸ್ವಂತ ಕಣ್ಣಿನಿಂದ ನೋಡದೆ ಸ್ವಂತ ಕಿವಿಯಿಂದ ಕೇಳದೆ ಹೇಳಿದವರ ಮಾತನ್ನು ಕೇಳಿ ಈ ರೀತಿಯಲ್ಲಿ ನಿಜವಲ್ಲದ ಪ್ರೊಸೀಡಿಂಗ್ಸನ್ನು ಮಾಡಿದರು ನೀವು ಸ್ವತಃ ಕರಾಗಿದ್ದಾಗ್ಯೂ ವಾಸ್ತವಾಂಶವನ್ನು ತಿಳಿದುಕೊಳ್ಳದೆ ಗವರ್ನಮೆಂಟಿನವರಂತೆಯೇ ನನಗೆ ೨೦ ವರುಷ ವಯಸ್ಸೆಂದು ನೀವು ನಂಬಿದಿರಿ ಬ್ರಿಟಿಷ್ ಎಡಿಟರುಗಳು ಬಹಳ ಧರ್ಮಿಷ್ಠರೆಂದು ನಾನು ತಿಳಿದುಕೊಂಡಿದ್ದೇನೆ ನಿಮ್ಮ ಧರ್ಮವನ್ನು ತೋರಿಸಿ ನೀವು ಬರೆದಿರತಕ್ಕ ತಪ್ಪು ಬರವಣಿಗೆಯನ್ನು ತಿದ್ದಿ ಈ ಲೇಖನದ ಜೊತೆಯಲ್ಲಿ ನಿಜಾಂಶವನ್ನು ಮುದ್ರಿಸುವಿರೆಂದು ನಂಬಿ ಇದ್ದೇನೆ ನಾನು ಸ್ಥತಿ ಕ್ವಾಟರಿನಲ್ಲಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಕಳುಹಿಸತಕ್ಕ ರಿಟರ್ನುಗಳನ್ನು ತರಿಸಿ ನೋಡಿದರೆ ನಿಜಾಂಶವು ನಿಮಗೆ ಗೊತ್ತಾಗುವದು ದಯವಿಟ್ಟು ಈ ನನ್ನ ಲೇಖನವನ್ನು ನಿಮ್ಮ ಮುಂದಿನ ಪತ್ರಿಕೆಯಲ್ಲಿ ಮುದ್ರಿಸಬೇಕೆಂದು ಪ್ರಾರ್ಥಿಸುತ್ತೇನೆ

ಎಲ್ ರಾಮಚಂದ್ರರಾವ್

[ನಾವು ಸರ್ಕಾರದ ಹುಕುಮನ್ನು ಪ್ರಕಟಿಸಿ, ಪತ್ರಿಕೆಯನ್ನು ನಡಿಸುವುದಕ್ಕೆ ಅಪ್ಪಣೆ ಕೊಡದಿರಲು ಗವರ್ನಮೆಂಟಿನವರು ತೋರಿಸಿದ ಕಾರಣಗಳು ನ್ಯಾಯವಾದವುಗಳೆಂದು ಭಾವಿಸಿಕೊಂಡಿದ್ದೆವು ನಮ್ಮ ಬಾತ್ಮೀದಾರರ ವಯಸ್ಸು ಗವರ್ನಮೆಂಟ್ ಆರ್ಡರಿನಲ್ಲಿ ನಮೂದಾಗಿರುವುದಕ್ಕಿಂತ ಹೆಚ್ಚಾಗಿರಬಹುದು ಗವರ್ನಮೆಂಟಿನವರು ತಪ್ಪುಮಾಡಿದ್ದರೆ, ಬಾತ್ಮಿದಾರರು ಅವರಿಗೆ ತಿಳಿಸಬೇಕು ಅನೇಕ ಜನರು ಪತ್ರಿಕೆಗಳನ್ನು ನಡಿಸುತ್ತಾರೆ ಸರಿ ಆದರೆ ಅವರಿಗೆ ತಕ್ಕಷ್ಟು ಜ್ಞಾನವಿಲ್ಲದೆ ಇರುವದರಿಂದ ಅವರು ಪ್ರಜೆಗಳಿಗೆ ಬೆಳಕನ್ನು ತೋರಿಸದೆ, ಉಪಕಾರವನ್ನು ಮಾಡದೆ, ಅವರ ಅಂಧಕಾರವನ್ನು ಹೆಚ್ಚಿಸಿ ಅವರನ್ನು ಕೆಡಿಸುತ್ತಾರೆ ಪತ್ರಿಕೆಯನ್ನು ನಡಿಸುವುದಕ್ಕೆ ತಮಗೆ ಶಕ್ತಿಯುಂಟೆಂಬ ಭಾಗದಲ್ಲಿ ಇವರು ಬರೆದು ಕಳುಹಿಸಿರುವ ಬಾತ್ಮಿಯನ್ನು ನಾವು ಧಾರಾಳವಾಗಿಯೂ ಸಂತೋಷದಿಂದಲೂ ಪ್ರಕಟಿಸಿರುವೆವು ಇವರಿಗೆ ಸಾಮರ್ಥ್ಯವಿರುವುದೋ ಇಲ್ಲವೋ ವಾಚಕರೇ ತಿಳಿದುಕೊಳ್ಳಲಿ —ಎಡಿ]

ಅಲಿಪುರದ ಸಿಡಿಮದ್ದಿನ ಮೊಕದ್ದಮೆಯ ತೀರ್ಮಾನವು

ಕಳೆದ ೧ ವರ್ಷದಿಂದಲೂ ನಡೆಯುತಲಿದ್ದ ಈ ವಾಜ್ಯದ ಮೊದಲ ತೀರ್ಮಾನವನ್ನು ಮಿ ಬೀಚ್‌ಕ್ರಾಫ್ಟ್ ರವರು ಕಳೆದ ತಾ ೬ರಲ್ಲಿ ಹೇಳಿದುದರಲ್ಲಿ ಬಾರೀಂದ್ರಕುಮಾರಘೋಷ್ ಮತ್ತು ಉಲ್ಲಾಸಕರದತ್ತ ಇವರಿಗೆ ಮರಣದಂಡನೆಯು ವಿಧಿಸಲ್ಪಟ್ಟು, ಅಪೀಲಿಗೆ ೧ ೮ ವಾರ ಅವಧಿಯನ್ನು ಕೊಟ್ಟಿದ್ದಾರೆ ಉಪೇಂದ್ರನಾಥಬ್ಯಾನರ್ಜಿ, ವಿಭೂತಿಭೂಷಣಸರಕಾರ್, ಹೃಷಿಕೇಶಕಾಂಜಿಲಾಲ, ವೀರೇಂದ್ರಚಂದ್ರಸೇನ, ಸುಧೀರಕುಮಾರಸರ್ಕಾರ್, ಇಂದ್ರನಾಥನಂದಿ, ಅವಿನಾಶಚಂದ್ರಭಟ್ಟಾಚಾರ್ಯ, ಶೈಲೇಂದ್ರನಾಥಬೋಸ್, ಹೇಮಚಂದ್ರದಾಸ ಮತ್ತು ಇಂದ್ರಭೂಷಣರಾಯ್ ಇಷ್ಟು ಜನರೂ ತಮ್ಮ ಇಷ್ಟು ಆಸ್ತಿಯನ್ನೂ ಬಿಟ್ಟುಬಿಟ್ಟು ಜನ್ಮಾವಧಿ ದ್ವೀಪಾಂತರವಾಸ ಶಿಕ್ಷೆಯನ್ನು ಅನುಭವಿಸಬೇಕೆಂದು ವಿಧಿಸಲ್ಪಟ್ಟಿದೆ ಪರೇಶಚಂದ್ರಮುಲಿಕ್, ಸುಶೀಲಕುಮಾರಘೋಷ್ ಮತ್ತು ನಿರಾಪದರಾಯ್ ಇವರುಗಳು ತಮ್ಮ ಎಲ್ಲಾ ಆಸ್ತಿಯನ್ನೂ ಬಿಟ್ಟುಬಿಟ್ಟು ೧೦ ವರ್ಷ ದ್ವೀಪಾಂತರವಾಸ ಶಿಕ್ಷೆಯನ್ನನುಭವಿಸಬೇಕೆಂದು ವಿಧಿಸಲ್ಪಟ್ಟಿದೆ ಅಶೋಕಚಂದ್ರನಂದಿ, ಬಾಲಕೃಷ್ಣಹರಿಕಾಣೆ ಮತ್ತು ಸುಶೀಲಕುಮಾರಸೇನ ಈ ಮೂವರಿಗೂ ೭ ವರ್ಷ ಮತ್ತು ಕೃಷ್ಣಜೀವನಸಾನ್ಯಲ್‌ಗೆ ೧ ವರ್ಷ ದ್ವೀಪಾಂತರವಾಸ ಶಿಕ್ಷೆಯು ವಿಧಿಸಲ್ಪಟ್ಟು ಬಾಬು ಅರವಿಂದಘೋಷರವರು, ನಲಿನಕಾಂತಸರ್ಕಾರ್ ಗುಪ್ತ, ಶಚೀಂದ್ರಕುಮಾರಸೇನ, ಕುಂಜಲಾಲವಿಜಯಕುಮಾರನಾಗ, ನರೇಂದ್ರನಾಥಭಕ್ಷಿ, ಪೂರ್ಣಚಂದ್ರಸೇನ ಹೇಮೇಂದ್ರನಾಥಘೋಷ್, ದೀನದಯಾಳುಬೋಸ್, ವೀರೇಂದ್ರನಾಥಘೋಷ್, ಧರಣೀನಾಥಗುಪ್ತ, ನಾಗೇಂದ್ರನಾಥಗುಪ್ತ, ಮೋತಿಲಾಲಬೋಸ್, ಹೇಮಚಂದ್ರಸೇನ, ದೇವವ್ರತಬೋಸ್, ನಿಖಿಲೇಶ್ವರರಾಯ್, ವಿಜಯಚಂದ್ರಭಟ್ಟಾಚಾರ್ಜಿ ಮತ್ತು ಪ್ರಭಾಸಚಂದ್ರದೇವ ಈ ೧೬ ಜನರೂ ನಿರ್ದೋಷಿಗಳೆಂದು ಬಿಡಲ್ಪಟ್ಟರು ಕೋರ್ಟಿನಿಂದ ಹೊರಗೆ ಬಂದಾಗ ಇವರನ್ನು ನೋಡಲು ಜನರು ನುಗ್ಗಿ ಬರುತಲಿದ್ದರು ದೋಷಮುಕ್ತರಾದ ಅರವಿಂದಘೋಷ್ ಮೊದಲಾದವರು ಬಂಡಿಗಳಲ್ಲಿ ಕುಳಿತು ಕಾಳಿಘಟ್ಟಕ್ಕೆ ಹೋಗಿ ಗಂಗೆಯಲ್ಲಿ ಮಿಂದು ಮಹಾಕಾಳಿಯ ಪೂಜೆಯನ್ನು ಮಾಡಿಕೊಂಡು ತಮ್ಮತಮ್ಮ ಮನೆಗಳಿಗೆ ತೆರಳಿದರು ಈ ಜಡ್ಜಮೆಂಟು ಹೇಳುವಾಗ್ಗೆ ಜನರ ಗದ್ದಲವಾಗದಂತೆ ಅನೇಕ ಪೋಲೀಸರು ಕೋರ್ಟಿಗೆ ಬಂದು ಬಹಳ ಎಚ್ಚರದಿಂದ ನೋಡಿಕೊಳ್ಳುತ್ತಿದ್ದರು ಪ್ರಭಾಸಚಂದ್ರದೇವನು ಸೆರೆಯಿಂದ ಬಿಡಲ್ಪಟ್ಟಮೇಲೆ ಮರಳಿ, 'ವೇಶಸೇವೆ' ಎಂಬ ಹೆಸರಿನಿಂದ ರಾಜದ್ರೋಹಕರವಾದ ಪುಸ್ತಕವನ್ನು ಪ್ರಕಟಿಸಿರುವನೆಂಬ ಅಪರಾಧದ ಮೇಲೆ ಹಿಡಿಯಲ್ಪಟ್ಟನು ಈ ವಿವಾದದಲ್ಲಿ ೧೫೦೦ ಕಾಗದಪತ್ರಗಳು ಒದಗಿಸಲ್ಪಟ್ಟು ೨೦೦ ಸಾಕ್ಷಿಗಳ ವಿಚಾರಣೆಯು ೧೨೫ ದಿನಗಳವರೆಗೆ ನಡೆಯಿತು ಶಿಕ್ಷೆಯನ್ನು ಹೊಂದಿದ ೨೦ ಜನರಲ್ಲಿ ಒಬ್ಬನು ಮಾತ್ರ ೧೮ ವರ್ಷದವನು ಬಾಕಿಯವರು ೨೦ ವರ್ಷದೊಳಗಿನವರು ಅರವಿಂದಘೋಷರವರು ಈ ವಿವಾದದಲ್ಲಿ ಸಿಕ್ಕಿದ್ದುದರಿಂದ ಇದರ ವಿಚಾರಣೆಯು ಇಷ್ಟು ದೀರ್ಘಕಾಲ ಹಿಡಿಯಿತೆಂದು ಜಡ್ಜಿಯವರು ತಿಳಿಸಿರುವರಲ್ಲದೆ ದೋಷಮುಕ್ತರಾಗಿರುವವರು ತಾವು ತಿಳಿದುಕೊಳ್ಳಲಾರದ ವಿಚಾರದಲ್ಲಿ ಇನ್ನು ಮುಂದೆ ಸೇರದಂತೆ ಅವರ ತಂದೆತಾಯಿಗಳು ಎಚ್ಚರದಿಂದ ನೋಡಿಕೊಳ್ಳಬೇಕೆಂದು ಸೂಚಿಸಿರುವರು ಮಿ, ಬೀಚ್‌ಕ್ರಾಫ್ಟ್‌ರವರು ಜಡ್ಜಮೆಂಟನ್ನು ಹೇಳಿದ ಸಾಯಂಕಾಲವೇ ಕಲ್ಕತ್ತೆಯಿಂದ ರೈಲ್‌ಗಾಡಿಯನ್ನು ಹತ್ತಿ ಸೀಮೆಗೆ ಹೋಗಲು ಬೊಂಬಾಯಿಗೆ ಪ್ರಯಾಣಮಾಡಿದರು ಇವರಿಗೆ ಯಾವ ಅಪಾಯವೂ ಸಂಭವಿಸದಂತೆ ಎಚ್ಚರದಿಂದ ನೋಡಿಕೊಳ್ಳಲು ದಾರಿಯುದ್ದಕ್ಕೂ ಪೋಲೀಸಿನವರನ್ನು ನೇಮಿಸಿದ್ದರು

ಒಳದೇಶದ ವೃತ್ತಾಂತಗಳು.

ಚಿತ್ರದುರ್ಗದ ಡಿಸ್ಟ್ರಿಕ್ಟು ಮಾರೀಕಣಿವೆ ಕಲಾವಿನ ನಾಲೆಗಳ ಕೆಳಗೆ ಸಾಗುವಳಿಗೆ ಸಿದ್ಧವಾಗಿರುವ ಜಮೀನುಗಳನ್ನು ಸರ್ಕಾರದವರು ಪ್ರಕಟಮಾಡಿರುತ್ತಾರೆ.

• ಬೆಂಗಳೂರಿನಲ್ಲಿ ಕಳೆದ ವಾರ ೪—೫ ದಿನಗಳ ತನಕ ಒಳ್ಳೇ ಮಳೆ ಸುರಿಯಿತು ಒಟ್ಟು ೬॥ ಅಂಗುಲ ಮಳೆ ಆಗಿ ಕೆರೆ ಕಟ್ಟೆಗಳಿಗೆ ಹೆಚ್ಚಾಗಿ ನೀರು ಬಂದಿದೆ

ಹಾಸನದ ಡಿಸ್ಟ್ರಿಕ್ಟಿಗೆ ಸೇರಿದ ಯೂನಿಯನ್ ಪಂಚಾಯತಿಗಳಲ್ಲಿ ಇನ್ನು ಮೂರು ವರುಷಗಳ ತನಕ ನೋಟೀಸ್ ಫೀಜನ್ನು ಹಾಕಿ ವಸೂಲ್ಮಾಡಬೇಕಾದದ್ದಿಲ್ಲವೆಂದೂ, ಆ ತರುವಾಯ ಈ ವಿಚಾರವನ್ನು ಯೋಚಿಸಬಹುದೆಂದೂ ಸರ್ಕಾರದವರು ಹುಕುಂ ಕೊಟ್ಟದಾರೆ

ಹೊಸದುರ್ಗದ ತಾಲ್ಲೂಕು ಮತ್ತೋಡು ಹೋಬಳಿ ಕಾರೇಹಳ್ಳಿ ಗ್ರಾಮದಲ್ಲಿ ಒಬ್ಬ ಕುರುಬನು ಕುರಿಗಳನ್ನು ಮೇಯಿಸುತ್ತಿರುವಾಗ ಮಳೆ ಸುರಿದು ಸಿಡಿಲು ಬಿದ್ದಿತು ಅದಕ್ಕೆ ಸಿಕ್ಕಿ ಆ ಕುರುಬನೂ ಅವನ ೧೨ ಕುರಿಗಳೂ ೧ ನಾಯಿಯೂ ಮೃತಪಟ್ಟಂತೆ ಪ್ರಕಟವಾಗಿದೆ

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಖೈದಿಗಳಾದ ಹೆಂಗಸರಿಗೆ ವಿಚಾರಿಸುವುದಕ್ಕೂ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೂ ಒಬ್ಬ ಸ್ತ್ರೀ ಅಧಿಕಾರಿಯನ್ನು ನೇಮಿಸಿಕೊಳ್ಳುವವರಾಗಿದಾರೆ ಅಪೇಕ್ಷೆಯುಳ್ಳ ಸ್ತ್ರೀಯರು ಆ ಜೈಲಿನ ಸೂಪರಿಂಟೆಂಡೆಂಟರಿಗೆ ಅರ್ಜಿ ಬರೆದುಕೊಳ್ಳಬಹುದಾಗಿದೆ.

ಹಾಸನದ ಡಿಸ್ಟ್ರಿಕ್ಟು ಹಿರೀಸಾವೆಯಲ್ಲಿ ಒಂದು ವೈದ್ಯಶಾಲೆಯನ್ನಿಡಿಸಿಕೊಡಬೇಕೆಂದು ಕೇಳಿದ್ದಕ್ಕೆ ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನವರು ಅದಕ್ಕೆ ಹಣವಿಲ್ಲವೆಂಬೂ, ೧೦ ಮೈಲಿ ದೂರದಲ್ಲಿರುವ ಶ್ರವಣಬೆಳ್ಗೊಳಕ್ಕೆ ರೋಗಿಗಳು ಹೋಗಿ ಅಲ್ಲಿನ ವೈದ್ಯಶಾಲೆಯಲ್ಲಿ ಔಷಧಾದಿಗಳನ್ನು ಪಡೆಯಬೇಕೆಂದೂ ತೀರ್ಮಾನ ಮಾಡಿದಾರೆ

ಜಗಲೂರು ತಾಲ್ಲೂಕು ಕೆಂಚೇನಹಳ್ಳಿಯಲ್ಲಿ ಆರು ಮಂದಿ ಒಡ್ಡರು ಒಂದು ಕಡೆ ಮಲಗಿರುವಾಗ್ಗೆ ಕಳ್ಳರುಬಿದ್ದು ಅವರನ್ನು ಹಿಡಿದು ಬಹಳವಾಗಿ ಹೊಡೆದರೆಂದೂ, ಆ ಪೈಕಿ ಮೂರು ಮಂದಿ ಸತ್ತುಹೋದರೆಂದೂ, ಉಳಿದವರಿಗೂ ಪೂರಾ ಗಾಯವಾಗಿದೆ ಎಂದೂ, ಈಚೆಗೆ ಪೋಲೀಸಿನವರು ಐದು ಮಂದಿಯನ್ನು ದಸ್ತಗಿರಿ ಮಾಡಿದಾರೆಂದೂ ತಿಳಿದುಬಂದಿದೆ

ಬೆಂಗಳೂರಿನಲ್ಲಿ ಮ ಜನೋಪಕಾರಿ ದೊಡ್ಡಣ್ಣನವರು ಕೋಟೆಯ ಬಳಿ ಕಟ್ಟಿಸಿರುವ ಸ್ಕೂಲಿಗೆ ಇನ್ನೂ ಸ್ವಲ್ಪ ಹೆಚ್ಚು ಸ್ಥಳವನ್ನು ಕೊಡಿಸಿಕೊಡಬೇಕೆಂದು ಕೇಳಿದ್ದರು ಮ್ಯುನಿಸಿಪಲ್ ಕೌನ್ಸಿಲರುಗಳು ಅವರಿಗೆ ಸ್ಥಳವನ್ನು ಕೊಡಬಹುದೆಂದೂ, ಕಂಪೌಂಡು ಗೋಡೆಯನ್ನು ಅಂದವಾಗಿ ಕಟ್ಟಿಕೊಳ್ಳುವುದಕ್ಕೋಸ್ಕರ ಮ್ಯುನಿಸಿಪಾಲಿಟಿಯಿಂದ ೧,೦೦೦ ರೂಪಾಯನ್ನೂ, ಕೋಟೆಯ ಕಲ್ಲುಗಳನ್ನೂ ಕೊಡಬಹುದೆಂದೂ ತೀರ್ಮಾನ ಮಾಡಿದಾರೆ

ಕಳೆದ ತಾ ೪ ನೇ ಮಂಗಳವಾರದಿಂದ ರಾಜಧಾನಿಯಲ್ಲಿ ಮೋಡ ಹಾಕಿಕೊಂಡು ತಾ ೭ ನೇ ಶುಕ್ರವಾರದ ತನಕ ನಾಲ್ಕು ದಿನಗಳು ಮಳೆ ಸುರಿಯಿತು ಒಟ್ಟು ೩ ಅಂಗುಲ ಮಳೆಯಾಗಿರುತ್ತದೆ ಅಲ್ಲಿಂದೀಚೆಗೆ ಬಿಸಲು ಕಾಯುತ್ತಿರುವುದು ಕೆರೆ ಕಟ್ಟೆ ಕೊಳಗಳಿಗೆ ತಕ್ಕಮಟ್ಟಿಗೆ ನೀರು ಬಂದಿರುವುದು ಗೋಕಾಯಿಗಳ ಮೇವಿಗೆ ಸಮೃದ್ಧಿಯುಂಟಾಯಿತು ದಿನಸಿನ ಧಾರಣೆಯೇನೋ ಮೊದಲಿನಂತೆಯೇ ಹೆಚ್ಚಾಗಿರುತ್ತದೆ ಮುಂದಿನ ಸುಗ್ಗೀ ಕಾಲದ ವರೆಗೆ ಧಾರಣೆಗಳು ಇಳಿಯುವ ಹಾಗೆ ತೋರುತ್ತದಿಲ್ಲ

ಒಬ್ಬ ಬಾತ್ಮೀದಾರರು ಬರೆಯುವುದೇನೆಂದರೆ —ನಂಜರಾಜ ಪಟ್ಟಣ ತಾಲ್ಲೂಕು ಕಣಿವೇ ಹೋಬಳಿ ತೊರೆನೂರು ಗದ್ದೆ ಹೊಸಹಳ್ಳಿ ಪ್ರಾಂತ್ಯದಲ್ಲಿ ಕಳೆದ ತಾ ೨೮ ನೇ ಬುಧವಾರದ ದಿನ ಮಧ್ಯಾಹ್ನ ೪ ಗಂಟೆ ಸಮಯದಲ್ಲಿ ಮಳೆ ಸುರಿಯಿತು ಆ ದಿನವೇ ಆನೆಕಲ್ಲು ಬಹಳವಾಗಿ ಸುರಿಯಿತು ಇಂಥಾ ಆನೆಕಲ್ಲು ಈ ನಮ್ಮ ಒಳದೇಶದಲ್ಲಿ ಹಿಂದೆ ಯಾವಾಗಲೂ ಬಿದ್ದಿದ್ದಿಲ್ಲವೆಂದು ಹಿರಿಯರು ಸಹ ಹೇಳಿ ಆಶ್ಚರ್ಯಪಡುತ್ತಾರೆ ಬುಧವಾರ ಮಧ್ಯಾಹ್ನ ಬಿದ್ದ ಆನೆಕಲ್ಲು ಶುಕ್ರವಾರ ಮಧ್ಯಾಹ್ನದ ತನಕ ಕರಗಲಿಲ್ಲ ಆನೆಕಲ್ಲುಗಳು ತೆಂಗಿನಕಾಯಿ ಗಾತ್ರದಷ್ಟಿದ್ದವು ಎಂಬುವುದೇ

ಬೆಂಗಳೂರು ಶ್ರೀನಿವಾಸ ಮಂದಿರದ ಮೇಲ್ವಿಚಾರಕರು ಬರೆಯುವುದೇನೆಂದರೆ — ನಮ್ಮ ಸ್ತ್ರೀಸಮಾಜದ ಮುಖ್ಯ ಪ್ರವರ್ತಕರಾಗಿಯೂ, ಅಭಿಮಾನವುಳ್ಳವರಾಗಿಯೂ ಇರುವ ಸ್ರೀ ಸುಂದರಬಾಯಮ್ಮನವರ ಯಜಮಾನರಾದ ಮ॥ ರಾ ಟಿ ಆನಂದರಾಯರವರು ಈ ಸಂಸ್ಥಾನದ ಸಚಿವಸ್ಥಾನವನ್ನು ವಹಿಸಿರುವ ಶುಭವರ್ತಮಾನವು ಎಲ್ಲರಿಗೂ ತಿಳಿದೇ ಇರುತ್ತೆ ಈ ಸಂದರ್ಭದಲ್ಲಿ ನಮ್ಮ ಮಿತ್ರರಾದ ಸ್ರೀ॥ ಸುಂದರಬಾಯಮ್ಮನವರಿಗೆ ನಾವೆಲ್ಲರೂ ಸೇರಿ ಮುಖ ಸ್ತುತವನ್ನು ಮಾಡುವುದು ನಮ್ಮ ಕರ್ತವ್ಯವಾದದ್ದರಿಂದ ಈ ತಿಂಗಳು ತಾ ೧೪ ನೇ ಶುಕ್ರವಾರ ಮಧ್ಯಾಹ್ನ ೩ ೪। ಘಂಟೆಗೆ ಮ ಜನೋಪಕಾರಿ ದೊಡ್ಡಣ್ಣನವರ ಹಾಲಿನಲ್ಲಿ ಸ್ತ್ರೀಸಮಾಜ ಸಭೆಯು ಸೇರಲು ನಿಶ್ಚಯಿಸಿರುತ್ತೆ ಆ ಕಾಲಕ್ಕೆ ಅಭಿಮಾನಶಾಲಿಗಳು ವಿಶ್ವಾಸದಿಂದ ದಯಮಾಡಿಸಬೇಕೆಂದು ಪ್ರಾರ್ಥಿಸುವೆನು" ಎಂಬುವುದೇ.

ನಂಜನಗೂಡು ಸಬ್ ಡಿವಿಜನ್ ಅ॥ ಕಮಿಷನರಾಗಿದ್ದು ೨—೩ ತಿಂಗಳ ಕೆಳಗೆ ಕೆಲಸದಿಂದ ನಿವೃತ್ತರಾಗಿದ್ದ ಮ॥ ಎಸ್ ವೈದ್ಯನಾಥ ಅಯ್ಯರವರು ಕಳೆದ ವಾರ ಬೆಂಗಳೂರಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರಿಗೆ ಅವಸಾನ ಕಾಲದಲ್ಲಿ ೫೭ ವರುಷ ವಯಸ್ಸಾಗಿತ್ತು ಇವರು ಕಳೆದ ೧೮೮೫ ನೇ ಇಸವಿ ಮಾರ್ಚಿ ತಿಂಗಳಲ್ಲಿ ದಿವಾನರವರ ಪ್ರೈವೇಟ್ ಸೆಕ್ರೆಟರಿಯಾಗಿ ಕೆಲಸಕ್ಕೆ ಸೇರಿ, ೧೮೯೩ ನೇ ಇಸವಿಯ ತನಕ ರವಿನ್ಯೂ ಅ॥ ಕಮಿಷನರಾಗಿ ಕೆಲಸಮಾಡಿ, ತರುವಾಯ ಬಹುಕಾಲ ಬೆಂಗಳೂರಿನಲ್ಲಿ ಟೌನ್ ಮ್ಯಾಜಿಸ್ಟ್ರೇಟರಾಗಿದ್ದರು ಈಚೆಗೆ ಅವರು ನಂಜನಗೂಡು ಸಬ್ ಡಿವಿಜನ್‍ಗೆ ವರ್ಗಪಟ್ಟು ಅ॥ ಕಮಿಷನರಾಗಿ ಕೆಲಸ ಮಾಡುತ್ತಾ ಬಂದರು ಹೋದ ವರುಷ ಅಲ್ಲಿ ಮೊಹರಂ ಹಬ್ಬದ ಕಡೇ ದಿನದ ಉತ್ಸವದ ಗಲಭೆಯಲ್ಲಿ ಅಚಾತುರ್ಯ ನಡೆದು, ಮೆ॥ ವೈದ್ಯನಾಥ ಅಯ್ಯರವರು ಕೆಲಸದಿಂದ ನಿವೃತ್ತರಾದರು ಇಷ್ಟು ಬೇಗನೆ ಇವರು ತೀರಿಹೋದದ್ದು ವಿಷಾದಕರವಾಗಿದೆ.

ಬರೋಡಾ ಸಂಸ್ಥಾನದ ಗಾಯಕವಾಡಿ ಮಹಾರಾಜರವರು ಪತ್ನಿ ಪರಿವಾರ ಸಹಿತ ನೀಲಗಿರಿಗೆ ಹೋಗುವುದಕ್ಕಾಗಿ ಮೋಟಾರ್ ಗಾಡಿಗಳಲ್ಲಿ ಕಳೆದ ಸೋಮವಾರ ಬೆಂಗಳೂರಿಗೆ ಬಂದು ಅರಮನೆಯಲ್ಲಿ ಇಳುಕೊಂಡಿದ್ದರು ಆ ರಾತ್ರಿಯೇ ಮಹಾರಾಣಿಯವರು ರೈಲು ಹತ್ತಿ ನೀಲಗಿರಿಗೆ ಪ್ರಯಾಣಮಾಡಿದರು. ಗಾಯಕವಾಡಿ ಮಹಾರಾಜರವರು ಮರುದಿನವೂ ಅಲ್ಲಿ ಇದ್ದು ಮೋಟಾರ್ ಗಾಡಿಯಲ್ಲಿ ನೆನ್ನೆ ಬೆಳಗ್ಗೆ ರಾಜಧಾನಿಗೆ ಬಂದು, ರೆಸಿಡೆನ್ಸಿ ಬಂಗಲೆಯಲ್ಲಿ ಅರಮನೆ ಅಧಿಕಾರಿಯವರು ಮಾಡಿದ ಮರ್ಯಾದೆಗಳನ್ನೂ ಸತ್ಕಾರಗಳನ್ನೂ ಸ್ವೀಕರಿಸಿ ಸ್ವಲ್ಪ ಹೊತ್ತು ಮಾತ್ರ ಇದ್ದು, ಅದೇ ಮೋಟಾರ್ ಗಾಡಿಗಳನ್ನು ಹತ್ತಿ ನಂಜನಗೂಡು ಮಾರ್ಗವಾಗಿ ತೆರಳಿದರು. ಅವರಿಗೆ ನಂಜನಗೂಡಿನ ರೆಸಿಡೆನ್ಸಿ ಬಂಗಲೆಯಲ್ಲಿ ಬೀಗಿನ ಸತ್ಕಾರಗಳು ನಡೆಯುವವೆಂಬೂ, ಅಲ್ಲಿಂದ ಮುಂದೆ ಸೀಗೂರಿನಲ್ಲಿ ಭೋಜನಾದಿಗಳು ಜರುಗುವವೆಂದೂ, ಅವರು ನೆನ್ನೆ ಮಧ್ಯಾಹ್ನ ಸುಮಾರು ೩-೪ ಗಂಟೆಯ ಹೊತ್ತಿಗೆ ನೀಲಗಿರಿ ಬೆಟ್ಟವನ್ನು ತಲಪುವವರಾಗಿದ್ದರೆಂದೂ ಕೇಳುತ್ತೇವೆ ನಮ್ಮ ಡೆಪ್ಟಿ ಕಮಿಷನರ್ ಮೆ॥ ಕಾಂತರಾಜೇ ಅರಸಿನವರು ಇಲ್ಲಿಂದ ಅವರ ಕೂಡ ಸೀಗೂರಿನ ತನಕ ಹೋಗಿಬರುವವರಾಗಿದ್ದರು

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಗವರ್ನಮೆಂಟಿನವರು ಪೋರಬಂದರ್ ಎಂಬ ದೇಶೀಯ ಸಂಸ್ಥಾನದ ಕಾರುಬಾರುಗಳನ್ನು ಕ್ರಮಪಡಿಸುವುದಕ್ಕೆ ಇಬ್ಬರು ದೊಡ್ಡ ಮನುಷ್ಯರನ್ನು ನೇಮಕಮಾಡಿದಾರೆ

ಕಳೆದ ಮಾರ್ಚಿ ಆಖೈರಿಗೆ ಮುಕ್ತಾಯವಾದ ಒಂದು ವರುಷದಲ್ಲಿ ಹಿಂದುಸ್ಥಾನಕ್ಕೆ ಹೊರಗಿನಿಂದ ನಾಲ್ಕು ಕೋಟಿ ರೂಪಾಯಿನ ಚಿನ್ನವೂ, ಹನ್ನೆರಡು ಕೋಟಿ ರೂಪಾಯಿನ ಬೆಳ್ಳಿಯೂ ರಫ್ತಾಗಿ ಬಂದಿರುತ್ತವೆ

ನಾರಾಯಣಗಂಜ್ ಪಟ್ಟಣದಿಂದ ಲಾಖಿಪುರದ ತನಕ ಹೋಗಿ ಬರುವಂಥಾ ಸ್ವದೇಶೀ ಜಹಜಿನ ಕಂಪನಿಯೊಂದು ಏರ್ಪಾಡಾಗಿದೆ. ಪ್ರಯಾಣಿಕರು ಆ ಜಹಜಿನಲ್ಲಿ ಹೋಗುತ್ತಿದಾರೆ ಈ ಕಂಪನಿಯನ್ನು ಅಲ್ಲಿನ ಕೆಲವು ವಕೀಲರು ಸೇರಿ ಪ್ರಾರಂಭಿಸಿರುವಂತೆ ಪ್ರಕಟವಾಗಿದೆ

ಈ ತಿಂಗಳ ತಾ ೨೭ ರಿಂದ ಪೂನಾ ಪಟ್ಟಣದಲ್ಲಿ ಶ್ವೇತಾಂಬರ ಜೈನರ ಏಳನೇ ಮಹಾಸಭೆಯು ಪ್ರಾರಂಭವಾಗಿ ಮೂರುದಿನ ನಡೆಯುವುದಾಗಿದೆ. ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳೂ ಪ್ರೇಕ್ಷಕರೂ ಸುಮಾರು ೬,೦೦೦ ಜನರು ಸೇರುವರೆಂದು ನಿರೀಕ್ಷಿಸಲ್ಪಟ್ಟಿದೆ

ಸುಮಾರು ೧೬ ವರುಷ ವಯಸ್ಸುಳ್ಳ ಸರಸ್ವತೀಬಾಯಿ ಎಂಬೊಬ್ಬ ಹುಡುಗಿಯು ತಂಜಾವೂರಿನಲ್ಲಿ ತಮಿಳಿನಲ್ಲಿ ಹರಿಕಥೆಯನ್ನು ಮಾಡುತ್ತಿದಾಳೆಂದೂ, ಅಲ್ಲಿನ ಹಿಂದೂ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಆಕೆಯ ಸಾಮರ್ಥ್ಯವನ್ನು ನೋಡಿ ಆಶ್ಚರ್ಯಪಡುತ್ತಿದಾರೆಂದು ತಿಳಿದುಬಂದಿದೆ

ಮದರಾಸ್ ಪಟ್ಟಣದ ಬಳಿ ತಿರುತಣ್ಣಿ ಎಂಬ ಸ್ಥಳದಲ್ಲಿ ಕಳೆದ ಶನಿವಾರ ಐದು ಜನರು ಸೇರಿ ಒಂದು ಉತ್ಸವಕ್ಕಾಗಿ ಮದ್ದಿನಲ್ಲಿ ಬಾಣ ಬಿರುಸುಗಳನ್ನು ತಯಾರುಮಾಡುತ್ತಿದ್ದಾಗ ಆ ಮದ್ದು ಹತ್ತಿಕೊಂಡು ನಾಲ್ಕು ಜನರು ಸತ್ತುಹೋದರು ಒಬ್ಬನು ಆಸ್ಪತ್ರೆಯಲ್ಲಿದಾನೆ ಇವನೂ ಬದುಕುವುದು ಕಷ್ಟವಾಗಿದೆ

ಉತ್ತರ ದೇಶದಲ್ಲಿ ಈಚೆಗೆ ಮಳೆಗಳು ಚೆನ್ನಾಗಿ ಆಗಿರುತ್ತವೆ ಬಂಗಾಳದಲ್ಲಿ ೫೦,೦೦೦ ಜನರು ರಿಲೀಫ್ ಕಾಮಗಾರಿಗಳನ್ನು ಬಿಟ್ಟು ಜಮೀನ್ ವ್ಯವಸಾಯಕ್ಕೆ ಹೋದರು ಈಗ ೧,೦೬,೦೦೦ ಜನರು ಇನ್ನೂ ಸರ್ಕಾರದವರ ಪೋಷಣೆಯಲ್ಲಿದಾರೆ ಇತರ ಕಡೆಗಳಲ್ಲಿ ಬಹಳ ಮಳೆ ಸುರಿದದ್ದರಿಂದ ಜಮೀನಿನಲ್ಲಿ ಬೆಳೆದಾಗಿದ್ದ ಪಸಲು ನಷ್ಟವಾಗಿರುತ್ತದೆ

ಕಳೆದ ವಾರ ಹಿಂದುಸ್ಥಾನದಲ್ಲಿ ೪,೪೧೧ ಜನರು ಪ್ಲೇಗ್ ತಗಲಿ ಕಾಲವಾದರು ಈ ಪೈಕಿ ಪಂಜಾಬಿನಲ್ಲಿ ೩,೭೧೩ ಬೊಂಬಾಯಿ ಅಧಿಪತ್ಯ ೭೦೮ ಸಂಯುಕ್ತ ಅಧಿಪತ್ಯಗಳು ೪೦೮ ಬಂಗಾಳ ೫೧೩ ; ರಾಜಪುಟಾನ ೧೮೯, ಮದರಾಸ್ ಅಧಿಪತ್ಯ ೧೦ , ಬರ್ಮಾ ೬ , ಮಧ್ಯ ಪ್ರಾಂತ್ಯಗಳು ಮತ್ತು ಬೀರಾರ್ ೬೭ , ಮೈಸೂರು ಸಂಸ್ಥಾನ ೧೧ , ಮಧ್ಯ ಇಂಡಿಯಾ ೩ , ಕಾಶ್ಮೀರ ೬ , ಈ ರೀತಿ ಮರಣಗಳಾಗಿವೆ

ಕಳೆದ ಗುರುವಾರವೂ ಶುಕ್ರವಾರವೂ ಕಲ್ಲಿಕೋಟೆ, ಮಲಬಾರು, ಕನ್ನಾನೂರು, ತಲಚೇರಿ, ಮಂಗಳೂರು, ಈ ಪ್ರಾಂತ್ಯಗಳಲ್ಲಿ ಅಪಾರವಾದ ಮಳೆಯು ಸುರಿಯಿತು ಸಮುದ್ರ ತೀರದಲ್ಲಿದ್ದ ಹಡಗುಗಳೂ ಜಾಲೀ ದೋಣಿಗಳೂ ಬಡಿದುಕೊಂಡು ಹೋದವು ಕೆಲವು ಲಕ್ಷ ರೂಪಾಯಿಗಳ ವ್ಯಾಪಾರ ಸರಕುಗಳು ನಷ್ಟವಾಗಿರುತ್ತವೆ ತಾ ೩ ರಿಂದ ಈಚೆಗೆ ಆ ಪ್ರಾಂತ್ಯದಲ್ಲಿ ೨೬ ಅಂಗುಲ ಮಳೆಯಾಗಿರುವುದು ಅನೇಕ ಮನೆಮಠಗಳೂ ಸಾವಿರಾರು ಗಿಡಮರಗಳೂ ಸುಂಟರಗಾಳಿಗೆ ಸಿಕ್ಕಿ ಮುರಿದು ಬಿದ್ದವು. ಇದುವರೆಗೆ ಇಬ್ಬರು ಮಾತ್ರ ಮೃತಪಟ್ಟಂತೆ ತಿಳಿದು ಬಂದಿದೆ ನೀಲಂಬೂರಿನಲ್ಲಿ ನದಿಯೊಳಗೆ ೧೬ ಅಡಿ ನೀರು ಬಂದಿರುತ್ತದೆ ಮಂಗಳೂರಿಗೆ ಹೋಗುವ ತಂತೀ ಕಂಬಗಳು ಕಿತ್ತು ಬಿದ್ದಿವೆ

ಪಂಜಾಬಿನ ಪರ್ವತ ಪ್ರಾಂತ್ಯಗಳಲ್ಲಿರುವ ಮಂಡೀ ಎಂಬ ದೇಶೀಯ ಸಂಸ್ಥಾನದಲ್ಲಿ ಜಮೀನ್‍ದಾರರು ತಮ್ಮ ಕಷ್ಟ ನಷ್ಟಗಳನ್ನು ಸರ್ಕಾರದವರಿಗೆ ಹೇಳಿಕೊಂಡ ಹಾಗೂ, ಸರ್ಕಾರದವರು ಅವುಗಳನ್ನು ಪರಿಹರಿಸಿ ಕೊಡದೆ ಹೋದದ್ದನ್ನು ನೋಡಿ, ಎಲ್ಲರೂ ದಂಗೆ ಎದ್ದು ಪಟ್ಟಣವನ್ನು ಸ್ವಾಧೀನ ಪಡಿಸಿಕೊಂಡು ನೌಕರ ಮಾನೆಯರನ್ನು ಕೈಸೆರೆ ಹಿಡಿದು ಇಟ್ಟುಕೊಂಡದ್ದಲ್ಲದೆ ಸರ್ಕಾರದ ಖಜಾನೆಯನ್ನು ಲೂಟಿ ಮಾಡಿದ ಹಾಗೂ ತಂತೀ ವರ್ತಮಾನ ಬಂದಿದೆ

ವಿಶೇಷ ವಾರ್ತೆಗಳು.

ಸ್ಕಾಟ್ಲೆಂಡಿನಲ್ಲಿ ಕುಷ್ಠರೋಗಿಗಳಿಗೆ ಚಿಕಿತ್ಸೆ ಮಾಡುವುದಕ್ಕೆ ಒಂದು ಆಸ್ಪತ್ರೆಯನ್ನು ಇಟ್ಟದಾರೆ. ಕಳೆದ ವಾರ ಒಬ್ಬ ರೋಗಿಯು ಗುಣಹೊಂದಿ ಮನೆಗೆ ಹೋದನು ಇನ್ನಿಬ್ಬರು ಇಷ್ಟರಲ್ಲೇ ಆರೋಗ್ಯವಾಗುವುದರಲ್ಲಿದಾರೆ. ಇವರಿಗೆಲ್ಲಾ ನಾಸ್ಟಿನ್ ಎಂಬ ಹೊಸ ಚಿಕಿತ್ಸೆಯನ್ನು ಮಾಡುತ್ತಿರುವರು.

ಲಾರ್ಡ್ ಮಿಂಟೋ ಪ್ರಭುಗಳು ಹಿಂದುಸ್ಥಾನದ ವೈಸರಾಯಿ ಪದವಿಯನ್ನು ಬಿಟ್ಟುಹೋದ ಮೇಲೆ ಮೆ॥ ವಿನ್ಸ್ಟನ್ ಚರ್ಚಿಲ್ ಯವರಿಗೆ ಆ ಪದವಿಯು ನೇಮಕವಾಗುವುದೆಂದೂ, ಇವರು ಕನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಗವರ್ನರ್ ಜನರಲ್ಲಾಗಿ ಹೋಗಲು ಇಷ್ಟಪಡಲಿಲ್ಲವೆಂದೂ ಕೆಲವರು ಊಹಿಸುತ್ತಾರೆ.

ತುರ್ಕೀ ಸುಲ್ತಾನರಾಗಿದ್ದು ಸಿಂಹಾಸನಪದಚ್ಯುತಿಯನ್ನು ಹೊಂದಿದ ಅಬ್ದುಲ್ ಹಾಮಿದ್ ಯವರ ಯೆಲ್ಡಿಸ್ ಕಯೋಸ್ಕ್ ಎಂಬ ಅರಮನೆಯನ್ನು ಈಗಿನ ಸುಲ್ತಾನರ ಕಡೆಯ ಅಧಿಕಾರಿಗಳು ಅಜಮಾಯಿಷಿ ಮಾಡಿ, ಅಲ್ಲಿ ಸಿಕ್ಕಿದ ನಗನಾಣ್ಯ ಮೊದಲಾದವುಗಳನ್ನು ತೆಗೆಸಿಡುತ್ತಿದಾರೆ ಅಲ್ಲಿ ಲೇಟ್ ಸುಲ್ತಾನರು ಅಪಾರವಾದ ಆಸ್ತಿಯನ್ನು ಕೂಡಿಸಿದ್ದದ್ದು ಸಿಕ್ಕಿರುವುದು - ನಾಲ್ಕುವರೆ ಲಕ್ಷ ಪೌಂಡಿನ ಬ್ಯಾಂಕ್ ನೋಟುಗಳೂ, ಬಹಳ ಜವಾಹಿರಿ ನಗಗಳೂ, ೭೫,೦೦೦ ಪೌಂಡು ಬೆಲೆಬಾಳುವ ಒಂದು ರುದ್ರಾಕ್ಷಿ ಸರವೂ ದೊರಕಿದವು ಮಾಜಿಸುಲ್ತಾನ್ ಅಬ್ದುಲ್ ಹಾಮಿದ್ ಯವರು ಪರರಾಜ್ಯಗಳ ಬ್ಯಾಂಕುಗಳಲ್ಲಿ ಬಹಳ ಹಣವನ್ನು ಇಟ್ಟುಕೊಂಡಿದಾರೆಂಬುವುದಕ್ಕೆ ಕಾಗದಪತ್ರಗಳು ಸಿಕ್ಕಿರುತ್ತವೆ ಆತ್ತಲಾಗಿ ಏಷ್ಯಾಮೈನರಿನಲ್ಲಿ ಅರಾಜಕಕೃತ್ಯಗಳನ್ನು ನಿಲ್ಲಿಸುವುದಕ್ಕಾಗಿ ಹೊಸ ಸುಲ್ತಾನರು ಅಲ್ಲಿಗೆ ಕೆಲವು ಸೈನ್ಯಗಳನ್ನು ಕಳುಹಿಸಿಕೊಟ್ಟರು ಹಿಲ್ಮಿಪಾಷಾ ಯವರು ಮುಖ್ಯ ಮಂತ್ರಿಯಾಗಿ ನಿಂತು ದೊಡ್ಡ ದೊಡ್ಡ ಇಲಾಖಾ ಅಧಿಕಾರಗಳನ್ನು ಪ್ರಜೆಗಳ ಮುಖಂಡರಿಗೆ ವಹಿಸಿ, ರಾಜ್ಯಭಾರವನ್ನು ನಡಿಸುತ್ತಾ ಬಂದಿದಾರೆ. ಮುಲ್ಲಾ ಸಾಹೇಬ್ ಎಂಬುವರಿಗೆ ಸೇಕ್ ಉಲ್ ಇಸ್ಲಾಂ ಎಂಬ ಪದವಿಯು ವಹಿಸಲ್ಪಟ್ಟಿದೆ. ಐದನೇಸುಲ್ತಾನ್ ಮಹಮದ್ ಯವರು ಪ್ರಜೆಗಳ ಇಷ್ಟಾರ್ಥಗಳನ್ನು ನೆರವೇರಿಸುವುದಕ್ಕೆ ಬೇರೆ ಬೇರೆ ಕಡೆಗಳಿಗೆ ಹೋಗುವುದಾಗಿ ಒಪ್ಪಿಕೊಂಡಿದಾರೆ

ಪರ್ಷಿಯಾ ರಾಜ್ಯದಲ್ಲಿ ಇಂಗ್ಲಿಷ್ ಮತ್ತು ರಷ್ಯಾದವರ ಹಿತೋಕ್ತಿಗಳನ್ನು ಕೇಳಿ ಷಾ ಸುಲ್ತಾನರವರು ಪ್ರಜಾರಂಜಕನಾಗಿ ರಾಜ್ಯಭಾರ ನಡಿಸುತ್ತೇವೆಂದು ಒಪ್ಪಿಕೊಂಡು, ಪ್ರಜೆಗಳ ಅಪೇಕ್ಷೆಯ ಪ್ರಕಾರ ಪ್ರತಿನಿಧಿ ಸಭೆಗಳನ್ನು ಪುನಃ ಸ್ಥಾಪಿಸುವಂತೆ ಇಸ್ತಿಹಾರ್‍ಮೆಯನ್ನು ಪ್ರಕಟಿಸಿರುತ್ತಾರೆ ಮೊದಲು ಮಂತ್ರಿಯಾಗಿದ್ದು ಸುಲ್ತಾನರವರಿಂದ ವಜಾಮಾಡಲ್ಪಟ್ಟಿದ್ದ ಸಾದುದ್ ದೌಲಾ ಯವರೇ ಮತ್ತೆ ಮಂತ್ರಿ ಪದವಿಗೆ ನೇಮಕವಾಗಿದಾರೆ ಇವರು ತಮಗೆ ಬೇಕಾದ ದೊಡ್ಡ ಮನುಷ್ಯರನ್ನು ಕರೆದು ಮುಖ್ಯ ಮುಖ್ಯ ಅಧಿಕಾರಗಳಿಗೆ ನೇಮಿಸಿಕೊಂಡರು ತಲೆ ತಪ್ಪಿಸಿಕೊಂಡುಹೋಗಿ ಯೂರೋಪಿನಲ್ಲಿರುವ ನಸ್ಸೀರುಲ್ ಮುಲ್ಕ್ ಯವರನ್ನು ಸುಲ್ತಾನರವರು ಸಾದುದ್ ದೌಲಾಯವರ ಶಿಫಾರಸಿನ ಮೇಲೆ ವಾಪಸ್ ಕರೆಸಿ ಮುಖ್ಯ ಮಂತ್ರಿಯನ್ನಾಗಿ ನೇಮಕಮಾಡಿದರು ಇದಲ್ಲದೆ ಷಾ ಸುಲ್ತಾನರು—ಪಾರ್ಲಿಮೆಂಟ್ ಸಭೆ ಮನೆಗಳನ್ನು ಮತ್ತೆ ಏರ್ಪಾಡು ಮಾಡಿದೆ ಎಂದೂ, ಗವರ್ನಮೆಂಟಿನ ಮೇಲೆ ತಿರುಗಿಬಿದ್ದು ಕ್ರೂರಕೃತ್ಯಗಳನ್ನು ನಡಿಸಿದ ಪ್ರಜಾಪಕ್ಷದವರಿಗೆಲ್ಲಾ ಕ್ಷಮಾಪಣೆಯನ್ನು ಕೊಟ್ಟಿದೆ ಎಂದು ಟೇಬ್ರಿಸ್ ಪ್ರಾಂತ್ಯದಲ್ಲಿ ಸುಲ್ತಾನರ ಪಕ್ಷವನ್ನು ವಹಿಸಿ ಯುದ್ಧಕಾರ್ಯಗಳನ್ನು ನಡಿಸುತ್ತಿರುವವರೆಲ್ಲಾ ಅಲ್ಲಿಂದ ವಾಪಸು ಬಂದುಬಿಡಬೇಕೆಂದೂ ಇಸ್ತಿಹಾರು ಕೊಟ್ಟದಾರೆ

ಕಳೆದ ವಾರ ವಿಲಾಯತಿಯಲ್ಲಿ ಪಾರ್ಲಿಮೆಂಟಿನ ೧೪೬ ಮೆಂಬರುಗಳು ಇಂಗ್ಲಿಷ್ ರಾಜ್ಯಭಾರದ ಮಂತ್ರಿ ಕ್ರೀಷ್ಟರಾದ ಮೆ॥ ಆಸ್ಕ್ವಿತ್‍ಯವರ ಬಳಿಗೆ ಹೋಗಿ, ಹಿಂದುಸ್ಥಾನದಲ್ಲಿ ಗವರ್ನಮೆಂಟಿನವರು ಕೆಲವು ಮುಖಂಡರನ್ನು ಗಡೀಪಾರು ಮಾಡಿರುವ ವಿಷಯದಲ್ಲಿ ಒಂದು ವಿಜ್ಞಾಪನೆಯನ್ನು ಬರೆದು ಅವರಿಗೆ ಒಪ್ಪಿಸಿದರು. ಮಂತ್ರಿಯವರು ಅವರಿಗೆ ಪ್ರತ್ಯುತ್ತರ ಕೊಟ್ಟದ್ದೇನೆಂದರೆ — ಗಡೀಪಾರು ಮಾಡುವುದು ಶಿಕ್ಷಾ ಪ್ರಕರಣಕ್ಕೆ ಸೇರುವುದಿಲ್ಲ , ಕೆಡುಕಾಗದಂತೆ ತಡೆಯುವುದಕ್ಕಾಗಿ ಗಡೀಪಾರು ಮಾಡುತ್ತಾರೆ ದೇಶದಲ್ಲಿ ಪ್ರಜಾನೆಮ್ಮದಿಗೆ ಭಂಗವುಂಟಾಗದ ಹಾಗೆ ಕಾಪಾಡಿಕೊಳ್ಳುವುದಕ್ಕೋಸ್ಕರವೇ ಈ ಏರ್ಪಾಡು ಇಟ್ಟಿದೆ ಗಡೀಪಾರು ಮಾಡಿದವರನ್ನು ಎಷ್ಟು ದಿನದ ತನಕ ಬಿಡುಗಡೆ ಮಾಡಕೂಡದೋ, ಯಾವಾಗ ಅವರನ್ನು ಬಿಡತಕ್ಕದ್ದೋ, ಇದರ ಜವಾಬ್ದಾರಿಯನ್ನು ಹಿಂದುಸ್ಥಾನದ ಆಳ್ವಿಕೆಯನ್ನು ವಹಿಸಿರುವಂಥಾವರಿಗೇನೇ ಬಿಟ್ಟಿದೆ ಇಂಡಿಯಾ ಗವರ್ನಮೆಂಟಿನವರೂ ಲಾರ್ಡ್ ಮಾರ್ಲೀಯವರೂ ಅಲ್ಲಿನ ಸ್ಥಿತಿ ಗತಿಯನ್ನು ತಿಳಿದಿರುತ್ತಾರಾದ್ದರಿಂದ ಅದರ ತೀರ್ಮಾನವು ಅವರದಾಗಿರುತ್ತದೆ ಆಳ್ವಿಕೆಯನ್ನು ಪ್ರಜಾ ಸಮ್ಮತವಾದ ರೀತಿಯಲ್ಲಿ ಬದಲಾವಣೆ ಮಾಡಿರುವಾಗಲೂ ಕ್ರೂರ ಕೃತ್ಯಗಳೂ ಅರಾಜಕ ಕಾರ್ಯಗಳೂ ನಡೆಯುವುದು ಸಹಿಸಲಶಕ್ಯವಾಗಿರುವುದು ಇಂಥಾ ಕೃತ್ಯಗಳನ್ನು ಅಡಗಿಸುವುದಕ್ಕೆ ಗವರ್ನಮೆಂಟಿನವರು ಗಡೀಪಾರು ಮಾಡುವ ಅಧಿಕಾರವನ್ನು ವಹಿಸಿರಬೇಕಾದದ್ದು ಅವಶ್ಯಕವಾಗಿರುತ್ತದೆ ಈ ಅಧಿಕಾರವನ್ನು ಅವರಿಗೆ ತಪ್ಪಿಸುವುದು ಯೋಗ್ಯವಾಗಿರಲಾರದು ಎಂಬುದೇ

ಅಲಾರ್ಕಾನ್ ಗವರ್ನರ್ ಮೊರಲಾಸ್‌ಯವರು.

ಹೆ-ರೂ-ನಾ ಶೈತ್ಯದಿಂದ ಉಂಟಾಗುವ ಸಮಸ್ತ ರೋಗಗಳಿಗೂ ತಕ್ಕ ಔಷಧವೆಂದೂ, ನಂಬಿಕೆಯಾದ ಆರೋಗ್ಯವನ್ನೂ ಸಹಜವಾದ ಕಾಯಪುಷ್ಟಿಯನ್ನೂ ಕೊಡತಕ್ಕ ಔಷಧವೆಂದೂ ಮೆಕ್ಸಿಕೋ ರಾಜ್ಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೂ ಉತ್ತರದಿಂದ ದಕ್ಷಿಣಕ್ಕೂ ಎಲ್ಲಾ ಪ್ರದೇಶಗಳಲ್ಲೂ ಪ್ರಖ್ಯಾತವಾಗಿದೆ.



ಘನ ಮ್ಯಾನ್ಯುಯಲ್ ಅಲಾರ್ಕಾನ್ ಮೊರೆಲಾಸ್ ಗವರ್ನರು, ಮೆಕ್ಸಿಕೊ.

ಪೆರೂನಾವಿನ ದೊಡ್ಡ ಪರೀಕ್ಷೆ.

ಪ್ರತಿ ಒಂದು ದೇಶದ ಹವಾಸ್ಥಿತಿಯೂ ಅದಕ್ಕೆ ಅನುಗುಣವಾಗಿಯೂ ವಿಜಾತೀಯವಾಗಿಯೂ, ಆದದ್ದರಿಂದ ಅಲ್ಲಲ್ಲಿಗೆ ತಕ್ಕ ರೋಗಗಳನ್ನುಳ್ಳದ್ದಾಗಿಯೂ ಇದೆ.

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಯನ್ನು ಪಡೆದಿರುವ ಪೆರೂನಾವಿನ ಗುಣಗಳನ್ನು ಪರಿಷ್ಕಾರವಾಗಿ ಪರೀಕ್ಷೆಮಾಡುವುದಕ್ಕೆ ಮೆಕ್ಸಿಕೋ ರಾಜ್ಯ ಒಂದೇ ಸಾಕಾಗಿದೆ. ಆ ರಾಜ್ಯದಲ್ಲಿ ಅತ್ಯಂತ ಶೈತ್ಯವೂ, ಅತ್ಯಂತ ಉಷ್ಣವೂ, ಸಾಮಾನ್ಯವೂ ಮಧ್ಯಸ್ಥವೂ ಆದ ಹವಾಗುಣವೂ ಉಳ್ಳ ಪ್ರದೇಶಗಳೆಲ್ಲಾ ವಿಶೇಷವಾಗಿರುತ್ತವೆ.

ಮೆಕ್ಸಿಕೋದಲ್ಲಿ ಬಹಳವಾಗಿ ಹುಟ್ಟುವ ಶೈತ್ಯರೋಗಗಳಿಗೂ ಉತ್ತರಧ್ರುವ ಪ್ರಾಂತ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೂ ಕಾರಣವು ಒಂದೇ.

ಚಳಿರಾಜ್ಯಗಳಲ್ಲಿ ಜನರಿಗೆ ವಿಶೇಷವಾಗಿ ಮೂಗು ಮತ್ತು ಗಂಟಲುಗಳಲ್ಲಿ ಶೀತ ಹುಟ್ಟಿ, ಪ್ರಬಲವಾಗುವದು. ಉಷ್ಣರಾಜ್ಯಗಳಲ್ಲಿ ಶೀತರೋಗಗಳೆಲ್ಲಾ ಮನುಷ್ಯನ ಹೊಟ್ಟೆಯೊಳಗಿರುವಂಥಾ ಅನ್ನಕೋಶ, ಪಿತ್ತಕೋಶ, ಮಲಕೋಶ, ಜಲಬಾಧೆಯ ಕೋಶ, ಈ ಮೊದಲಾದವುಗಳಿಗೆ ಶೈತ್ಯ ಹಿಡಿದು ಅಂತರ್ಯವಾದ ನಾನಾ ರೋಗಗಳನ್ನು ಹುಟ್ಟಿಸುತ್ತೆ.

ಈ ಪ್ರಕಾರ ಅದರ ಲಕ್ಷಣಗಳು ನಾನಾ ಪ್ರಕಾರವಾಗಿದ್ದರೂ ರೋಗಕ್ಕೆ ಕಾರಣವೇನೋ ಒಂದೇ ಆಗಿದೆ. ಈ ಶೈತ್ಯವು ನೆತ್ತಿ ಹತ್ತಿರಬಹುದು, ಗಂಟಲು ಹಿಡಿದಿರಬಹುದು, ಒಳಹೊಟ್ಟೆ ಕಿಬ್ಬೊಟ್ಟೆಗಳನ್ನು ಅಂಟಿಕೊಂಡಿರಬಹುದು. ಆದರೂ ಶೀತವೇ ಅಸ್ವಸ್ಥಕ್ಕೂ ಕಾರಣವು.

ಶೀತರಾಜ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೆ ಪೆರೂನಾವು ಎಷ್ಟು ಖಂಡಿತ ಗುಣಕಾರಿಯಾಗಿ ಕಂಡುಬಂದಿರುವುದೋ ಅದೇ ರೀತಿ ಉಷ್ಣರಾಜ್ಯಗಳ ಶೀತರೋಗಗಳಿಗೂ ಮಹಾ ಗುಣಕಾರಿಯಾದ ಔಷಧವೆಂದು ಪ್ರಸಿದ್ಧಿಗೊಂಡಿದೆ.

ಪೆರೂನಾವು ಶೈತ್ಯರೋಗಗಳಿಗೆ ಪರಮೌಷಧವಾಗಿರುವುದು ಮಾತ್ರವೇ ಅಲ್ಲ, ಅದು ಮಹಾ ಬಲಕಾರಿಯಾದ ಮತ್ತು ಪುಷ್ಟಿಕೊಡುವ ಸೇವನಾ ಔಷಧವೆಂದೂ ಯಶಸ್ಸನ್ನು ಪಡೆದಿರುತ್ತದೆ.

ಪೆರೂನಾದಲ್ಲಿ ಬಲವನ್ನೂ ಕಾಯಪುಷ್ಟಿಯನ್ನೂ ಕೊಡುವಂಥಾ ಗುಣಗಳಿರೋಣವರಿಂದಲೇ ಉಷ್ಣರಾಜ್ಯಗಳವರು ಅದನ್ನು ವಿಶೇಷವಾಗಿ ಪ್ರೀತಿಸಿ ಉಪಯೋಗಿಸಿ ಹೊಗಳುತ್ತಾರೆ.

ಪೆರೂನಾ ಸ್ವಭಾವಸಿದ್ಧವಾದ ಬಲ ಕೊಡುವ ಸೇವನಾ ಔಷಧವಾಗಿರುತ್ತದೆ. ಅದು ದೇಹದೊಳಗಿರತಕ್ಕ ನಾನಾ ಕೋಶಗಳ ಕಾರ್ಯಗಳನ್ನು ಕ್ರಮಕ್ಕೆ ತಂದಿಟ್ಟು ಪುಷ್ಟಿಮಾಡತಕ್ಕದ್ದಾಗಿದೆ.

ಅದು ರಕ್ತದ ಚಲನೆಗೆ ಚಟುವಟಿಕೆಯನ್ನು ಕೊಡುತ್ತದೆ. ತಿಂದ ಆಹಾರವನ್ನು ಅದು ಚನ್ನಾಗಿ ಅರಗಿಸಿ, ಸರಿಯಾಗಿ ದೇಹದ ಅಂಗಾಂಗಗಳಿಗೆ ವ್ಯಾಪಿಸುವಂತೆಯೂ ಅವನ್ನು ಬಲಪಡಿಸುವಂತೆಯೂ ಕೆಲಸಮಾಡುವುದು.

ಅದು ಬಲವನ್ನು ಕೊಟ್ಟು ಶರೀರ ಮರ್ಮವನ್ನು ವೃದ್ಧಿಮಾಡುವುದಲ್ಲದೆ ದೌರ್ಬಲ್ಯವನ್ನೂ ಮನಸ್ಸಿನ ಖಿನ್ನತೆಯನ್ನೂ ನಿವಾರಣೆಮಾಡುತ್ತದೆ. ಆದರೆ ಇದು ಮಧ್ಯಪಾನಕಗಳಂತೆ ಕ್ಷಣಿಕವಾದ ಶಕ್ತಿಯನ್ನು ಕೊಡುವಂಥಾದ್ದಲ್ಲವು.

ಚಟುವಟಿಕೆಯೂ ಆರೋಗ್ಯವೂ

ಮಿ ರಿಚರ್ಡ್ ಕಾಲ್ಬರ್ಟ್, ... ಬೀದಿ ಬ್ರೂಕ್ಲಿನ್, ನ್ಯೂಯಾರ್ಕ್, ಅಮೇರಿಕ, ಈತ ಬರೆಯುವುದು —

"ಹಸಿದವನಿಗೆ ಆಹಾರ ಹ್ಯಾಗೋ, ಬಾಯಾರಿದವನಿಗೆ ನೀರು ಹ್ಯಾಗೋ, ಹಾಗೆ ಕಾಯಿಲೆಯವನಿಗೆ ಪೆರೂನಾವು ಇರುವುದೆಂದು ತಿಳಿಯಿರಿ.

"ಡಾಕ್ಟರುಗಳಿಗಿಂತಲೂ ಪೆರೂನಾವು ಅತಿ ಸೂಕ್ಷ್ಮವಾಗಿ ರೋಗವನ್ನು ನಾಶಮಾಡತಕ್ಕದ್ದೆಂದು ನನ್ನ ಮನಸ್ಸಿಗೆ ತೋರಿದೆ.

"ಅನೇಕ ವರುಷಗಳ ತನಕ ನನಗೆ ಆಹಾರ ಜೀರ್ಣವಾಗುತ್ತಿರಲಿಲ್ಲ, ನನ್ನ ಪಿತ್ತಕೋಶವು ಮಂದಗತಿಯಲ್ಲಿತ್ತು.

"ಆಗಾಗ್ಗೆ ನುಲಿವು ಹಾಗೂ ಕಟ್ಟಿ, ಭೇದಿಯಾಗುತ್ತಲೂ, ಕಿಬ್ಬೊಟ್ಟೆ ನೋಯುತ್ತಲೂ ಇದ್ದಿತು.

"ನನಗೆ ಅನುಕೂಲ ಮಾಡಬೇಕೆಂದು ಡಾಕ್ಟರುಗಳು ತಮ್ಮ ಕೈಲಾದ ಮಟ್ಟಿಗೂ ಪ್ರಯತ್ನಪಟ್ಟರು. ಆದರೆ ನನಗಿದ್ದ ನೈಜವಾದ ರೋಗಲಕ್ಷಣವೇ ಅವರಿಗೆ ತಿಳಿಯದೆಹೋಯಿತೋ, ಅಥವಾ ಅವರು ಸರಿಯಾದ ಔಷಧವನ್ನು ಕೊಡದೆಹೋದರೋ.

"ಹನ್ನೊಂದು ವಾರಗಳಲ್ಲಿ ಪೆರೂನಾವು ನನಗೆ ವಾಸಿಮಾಡಿತು. ಅದು ನನ್ನನ್ನು ಚಟುವಟಿಕೆಯಾಗಿಯೂ ಆರೋಗ್ಯವಾಗಿಯೂ ಮಾಡಿತು. ಸಹಜವಾಗಿಯೂ ನಿಮಗೆ ನಾನು ಕೃತಜ್ಞನಾಗಿರುವೆನು."

ಡಾ. ಎಸ್ ಬಿ ಹಾರ್ಟ್‌ಮನ್‌ರಿಗೆ, 7-19

ಕೊಲಂಬಸ್. ಓಹಿಯೋ ಅಮೆರಿಕ

ಅಯ್ಯಾ,—ನಾನು ಅನೇಕ ಜನರನ್ನು ನಿಮ್ಮ ಔಷಧಿ ಸೇವಿಸುವಂತೆ ಪ್ರೋತ್ಸಾಹಪಡಿಸಿದೆನು. ಅವರಿಗೆ ಅನುಕೂಲವಾದ ವಿಷಯವನ್ನು ಧಾರಾಳವಾಗಿ ತಿಳಿಸುತ್ತೇನೆ. ಇಂಥಾ ಫಲವನ್ನು ನಿಮ್ಮ ಔಷಧವು ಕೊಟ್ಟಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ.

ಮೊರೆಲಾಸ್, ನಿಮ್ಮ ಪ್ರೀತಿಪಾತ್ರನಾದ

ಡಿಸೆಂ ೫, ೧೯೦೫ ಮ್ಯಾನ್ಯುಯಲ್ ಅಲರ್ಕಾನ್

ಸ್ನೇಹಿತನು ಪೆರೂನಾ ಸೇವಿಸೆಂದು ಹೇಳಿದನು

ಮಿ ಬಾಸ್‌ಕ್ರೀಗ್, ಫ್ರೆ. ಕ್ರೀವೆಲ್ ಟೆನ್ನ., ಅಮೆರಿಕ, ಈತ ಬರೆಯುವುದು —

"ಎರಡು ವರುಷಕಾಲ ನನ್ನ ಸ್ನೇಹಿತ ... ದಿತ್ತು. ಒಬ್ಬ ಸ್ನೇಹಿತನು ಬಂದು ಪೆರೂನಾ ಸೇವಿಸು ಎಂದು ನನಗೆ ಹೇಳಿದನು. ಅದರಿಂದ ನನಗೆ ಸಂಪೂರ್ಣವಾಗಿ ಗುಣವಾಯಿತೆಂದು ಅತ್ಯಾದರಪಡುತ್ತೇನೆ.

ಏಳು ವರುಷದ ಶೈತ್ಯರೋಗವು

ಮಿ ಆಂಡ್ರೂ ಕೇನ್, ೧೧೨೩ ೧೩ನೇ ಬೀದಿ ಬ್ಲಾಕ್‌ಸ್ಟಾನ್ ಪಟ್ಟಣ, ಮಿಸ್ರಿ, ಅಮೇರಿಕ ಈತ ಬರೆಯುವುದು —

"ನನಗೆ ವಾಸಿಯಾದಷ್ಟಕ್ಕೆ ನನ್ನನ್ನು ಎಷ್ಟು ವಂದಿಸಿದರೂ ತೀರದು. ನಾನು ಏಳು ವರುಷಗಳ ವರೆಗೆ ಶೀತ ನೆಗಡಿ ಕೆಮ್ಮು ಅನುಭವಿಸಿ, ನೂರಾರು ದ್ರವ್ಯವನ್ನು ಖರ್ಚುಮಾಡಿ ಔಷಧಿಗಳನ್ನು ಸೇವಿಸಿದೆನು. ಆದರೂ ನನ್ನ ಶೈತ್ಯರೋಗವು ಹೆಚ್ಚಾಯಿತೇ ವಿನಹಾ ಕಡಿಮೆಯಾಗಲಿಲ್ಲ.

"ನನಗೆ ಔಷಧಿ ಕೊಡುತ್ತಿದ್ದವರಲ್ಲಿ ಕೆಲವು ಡಾಕ್ಟರುಗಳು ಬಹಳ ಪ್ರಖ್ಯಾತಿಪಡೆದವರಾಗಿದ್ದರೂ ನನಗೆ ಅತಿ ಕಠಿಣವಾದ ಕೆಮ್ಮು ಇದ್ದೇ ಇದ್ದಿತು. ಈ ಕೆಮ್ಮಿನ ಕಷ್ಟವನ್ನು ನಾನು ವಾಸಿಮಾಡಿಕೊಂಡೇನೆಂಬ ಭರವಸೆ ಇರಲೇ ಇಲ್ಲ.

"ಆಗ ನಾನು ಒಂದು ಬಾಟ್ಲು ಪೆರೂನಾ ಕೊಂಡು ತಂದು, ಅದರಲ್ಲಿ ಹೇಳಿರುವ ಕ್ರಮಗಳ ಪ್ರಕಾರ ಆ ದಿನ ರಾತ್ರಿ ಸೇವಿಸಿದೆನು. ಮರುದಿನ ಬೆಳಗ್ಗೆಯೇ ನನಗೆ ಸ್ವಲ್ಪ ಗುಣವಾದಂತೆ ತೋರಿತು.

ಮೂರು ದಿನ ಸೇವಿಸಿದ ಮೇಲೆ ನನಗೆ ತುಂಬಾ ಅನುಕೂಲವಾಯಿತು. ಈಗಲಾದರೋ ನಾಲ್ಕನೇ ಸೀಸೆಯ ದಿವಸವನ್ನು ಮುಗಿಸಿದ ಮೇಲೆ ನಾನು ಸಂಪೂರ್ಣವಾಗಿ ಆರೋಗ್ಯಹೊಂದಿರುತ್ತೇನೆ.

"ಈ ಸರ್ವ ಶ್ರೇಷ್ಠವಾದ ಔಷಧವನ್ನು ಸೇವಿಸುವಂತೆ ಪ್ರತಿ ಒಬ್ಬರಿಗೂ ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುವೆನು."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದವೂ ಇವರಿಂದಲೇ ತಿಳಿಯಬಹುದು.

ವಿಳಾಸ—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21—4—1909 ರಿಂದ 30—4—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	6	3	31	26
ಕೋಲಾರ್ ,,	0	0	1	1
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	2	1	2	2
ಹಾಸನ ,,	0	0	50	29
ಚಿತ್ರದುರ್ಗ ,,	0	0	0	0
ಕಡೂರ್ ,,	1	1	0	0
ಶಿವಮೊಗ್ಗ ,,	*	*	0	0
* ಸಂಖ್ಯೆ ಕಾಣಿಸಿಲ್ಲ. ಜುಮ್ಲ	9	5	86	68

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ವೈಶಾಖ ಬಹುಳ ಅಷ್ಟಮಿ ಗುರುವಾರದಿಂದ ವೈಶಾಖ ಬಹುಳ ಅಮಾವಾಸ್ಯೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೯ ನೇ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಧಿ ಮೇಷ ಮಾಸ
13	ಗುರು	ಅಷ್ಟಮಿ	12-10	ಧ	18-38	31
14	ಶುಕ್ರ ‡	ನವಮಿ	7-30	ಶ	14-50	1
15	ಶನಿವಾ §	ದಶಮಿ	1-28	ಉಪಾ	53-54	2
16	ರವಿವಾ *	ದ್ವಾದಶಿ	49-12	ಪೂಭಾ	6-34	3
17	ಚಂದ್ರ	ತ್ರಯೋದಶಿ	42-10	ರೆ	1-58	4
18	ಕುಜ †	ಚತುರ್ದಶಿ	38-18	ಭ	55-51	5
19	ಬುಧ ,,	ಅಮಾವಾಸ್ಯೆ	32-39	ಕೃ	53-2	6

‡ ವಿಷ್ಣುಪದಪುಣ್ಯಕಾಲ § ಸ್ಮಾರ್ತರ ಏಕಾದಶಿ, ಯುವರಾಜರವರ ವರ್ಧಂತಿ.
* ವೈಷ್ಣವ ಏಕಾದಶಿ, ಹರಿವಾಸರ, ದಗ್ಧಯೋಗ ಸೋಮಪ್ರದೋಷ.
† ಕೃಷ್ಣಾಂಗಾರಕ ಚತುರ್ದಶಿ, ಮಾಸಶಿವರಾತ್ರಿ ,, ಸರ್ವತ್ರ ಅಮಾವಾಸ್ಯೆ, ವೃಷಭೆ ಪಂಚಗ್ರಹಯೋಗ-ರ ಚಂ ಬು ಶು ಕೇ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಡಿಮೆ ಅಕ್ಕಿ ಪಲ್ಲ ೧ ಕ್ಕೆ ರೂ	೧೬-೨-೦	೧೬-೨-೦
ಕೆಂಬೂತಿ ಅಕ್ಕಿ ಅವಲ್	೧೫-೮-೦	೧೫-೮-೦
,, ಮುಯಂ	೧೫ ೨-೦	೧೫-೦-೦
ಜಾಪಾನ್ ಅಕ್ಕಿ	೧೪-೮-೦	೧೫-೮-೦
ಸಣ್ಣಕ್ಕಿ ಅವಲ್	೧೭-೮-೦	೧೭ ೦-೦
,, ದುಯಂ	೧೬-೮-೦	೧೬-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ	೧೬-೦-೦	೧೬-೦-೦
,, ದುಯಂ	೧೫ ೦ ೦	೧೫-೮-೦
ಹೈ[illegible] ರಾಗಿ ಪಲ್ಲ ೧ಕ್ಕೆ	೯-೦-೦	೯-೦-೦
ಕಾರಾಗಿ	೮-೮-೦	೮-೮-೦
ಜೋಳ	೮-೮-೦	೯-೦-೦
ಹಲಸಂದೆ ಪಲ್ಲ ೧ಕ್ಕೆ	೧೪-೮-೦	೧೩ ೪-೦
ಬಿಳೀ ಅವರೆ	೧೧-೮-೦	೧೩-೮-೦
ಹೆಸರು	೧೪-೮-೦	೧೩-೦-೦
ಉದ್ದು	೧೪-೮-೦	೧೩-೧೨-೦
ಕಡಲೆ	೧೩ ೮-೦	೧೨-೧೨-೦
ಎಳ್ಳು ಸೇ ೧೨೭ ಕ್ಕೆ	೨೨ ೯-೦	೧೯-೦ ೦
ಹುರುಳಿ	೧೧-೪-೦	೧೦-೮-೦
ಹರಳು ೧೨೭ ಸೇರಿಗೆ	೧೧-೨-೦	೧೦-೮-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೧-೧೫-೦
ಮೆಣಸಿನಕಾಯಿ	೫-೮-೦	೪-೯-೦
,, ದುಯಂ	೫-೦-೦	೩-೮ ೦
ಬೆಲ್ಲ ದೊಡ್ಡ ಅಚ್ಚು	೬-೪-೦	ಮ ೧ ೧೨-೦
ಒಳ್ಳೆಣ್ಣೆ ಮಣ ೧ಕ್ಕೆ	೫-೦-೦	೫-೪ ೦
ಹರಳೆಣ್ಣೆ ,,	೪ ೮ ೦	೪-೪ ೦
ಕೊತ್ತುಂಬರಿ ಪಲ್ಲ ೧ಕ್ಕೆ	೮-೦ ೦	೮ ೦-೦
ಉಪ್ಪು ,,	೫-೮-೦	೫ ೦-೦
ಹುಣಸೇ ಹಣ್ಣು	೧ ೧೨-೦	೧-೧೦-೦
,, ಹಳೇದು	೧ ೮-೦	೧-೬-೦
ತುಪ್ಪ ಮಣ ೧ಕ್ಕೆ	೧೫-೮-೦	೧೪-೦-೦
ಸೀಮೆಯೆಣ್ಣೆ ಪಿಟ್ಟ ೧ಕ್ಕೆ	೨-೪-೧	೪ ೨-೦
ತೆಂಗಿನಕಾಯಿ ೧೦೦ ಕ್ಕೆ	೪ ೮ ೦	೪-೧೦-೦
ಅಲಬೇಕಾಯಿ ಮಣ ೧ಕ್ಕೆ	೦-೮-೦	೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೧-೦-೦	೧-೧-೦
ಚಿನ್ನ (ಪೌನ್) ಕೆಂಪು	೧೫-೬-೦	೧೫ ೬-೦
,, ,, ಪಸಿಮೆ	೧೬-೦-೦	೧೫-೧೦-೦
,, ,, ಗಟ್ಟಿ ತೊಲ ೧ಕ್ಕೆ	೨೪-೮-೦	೨೪-೪-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೭-೪-೦	೬೪-೧-೦

Printed and Published by the Rev H Gulliford, Proprietor and Manager, Wesleyan Mission Press, Mysore. 13/5/1909

REGISTERED
M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೦೯ ನೇ ಇಸವಿ ಮೇ ತಾರೀಖು ೨೦ ನೇ ಗುರುವಾರ. ಸಂಚಿಕೆ ೫೧

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು 30 13

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟಲು ನೋವು, ಅರ್ಧಾಂಗವಾಯು, ಎದೆನೋವು, ಪಾದ ಪಡಿಮು, ಇತ್ಯಾದಿ

ಅಭಿಪ್ರಾಯ.

ಆರ್ ಆರ್ ಗಂಗೋಲಿ, ೧ನೇ ಕ್ಲಾಸ್ ಸಬ್ ಜಡ್ಜ್, ಕಾರವಾರ — ನಾನು ಅಮೃತಾಂಜನವನ್ನು ಮೂಲವ್ಯಾಧಿಗೂ ಕಟ್ಟುಗೂ, ವಾತದ ಬೇನೆಗಳಿಗೂ, ತಲೆನೋವಿಗೂ, ಉಪಯೋಗಿಸಿದಲ್ಲಿ ಇದು ಅನುಕೂಲವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ ಈ ಅಮೃತಾಂಜನವು ಮೇಲೆ ಹೇಳಿದ ಎಲ್ಲಾ ನೋವುಗಳಲ್ಲಿಯೂ ಅತ್ಯುತ್ಕೃಷ್ಟವಾಗಿ ಸರ್ವಜನರಿಂದಲೂ ಸ್ವೀಕರಿಸಲ್ಪಡುವದು.

ಗಜಕರ್ಣದ ಮುಲಾಮು.

ಮೂರು ಸಾರಿ ಹಚ್ಚಿಕೊಳ್ಳುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ವಜ್ರಗುಟಿಕೆ.

ಧಾತುಪುಷ್ಟಿ, ರಕ್ತಶುದ್ಧಿ, ಬಾಟ್ಲಿ ಒಂದರ ಕಿಮ್ಮತ್ತು ರೂ ೧ ೦ ೦
ಸುಂದರೀ ಮುಲಾಮು—ಮುದ್ದು ಜಗಳಿಗೆ ೦-೮-೦
ದಂತಮಂಜನ—ಹಲ್ಲುಗಳು ಗಟ್ಟಿಯಾಗುತ್ತವೆ ೦-೩-೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 10

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರೆಯವು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ಮಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬೆರಕೆ, ಕಾಪಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ
ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧ ೧೨
ಸಿಲ್ಕ್ ಚುಕ್ಕಿಯುಳ್ಳ ಟೋಪಿಗಳು ರೂ ೨
ಜರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ
ಸಾಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಶಕ್ತಿನ ಟೈ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28 14

೧ ಲೋಕಾಮಯಹರ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆನೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಭಾರ), ಮೈ ನಡುಕ ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನಿಶ್ಶಕ್ತಿ. ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತ ಬಂದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಬಾಯಿರುಚಿ ಕೊಡದೆ, ನೀರು ದಾಹಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಮುಟ್ಟುನೋವೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್.

ವೈದ್ಯಶಾಲೂ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ

18-16

ಇದು ಸಾಧಾರಣ ಜ್ವರ ಹಳೆ ಜ್ವರ, ಮರೋಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಟಿಕ್ಕಿನ ಸೀಸೆಯು ಏರಿತೋರಿಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಟಿಕ್ಕಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ ೧—೮ ರೂ, ರೂ ೨—೧೨ ಆ, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓಮಂ ಕರ್ಪೂರ.

ಈ ಔಷಧವು ಅಜೀರ್ಣ ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದವು ಕೈಲಾ ಮಹತ್ತರವಾಗಿ ಪರಿಣಮಿಸಿ ಕೊಡಲೇ ಗುಣಕೊಡುವವು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪತಿ ರಾವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಕಾರರಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಿಂದಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ ರೂ ೧—೧೪—೦
" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

48 52

ತಲೆನೋವು, ವಾಯುನೋವು ಸೆಳತ ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಚೇಳುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿನಿವಾರಿವಂತ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿದ್ದಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಜನಗಳು ಇದರಿಂದಲೇ ಇದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಕೊಳ್ಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ನಾಶಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೬ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಳಸುವವರಾಗುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್ ಪೀಟರ್ಸ್,

೩೩, ಮೇದರಮುತ್ತುಳ್ಳ ಬೀದಿ, ವೇಪೇರಿ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ಪರಾಂಬರಿಸಿ.

10 20

"ಬ್ರಹ್ಮಚರ್ಯ" ವೆಂಬ ಧರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಧರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ. ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ಹೊಂದಿಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪ್ರೈಸಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರ ವರೆಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುವು. ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಆಗಸ್ಟಿನ್ ದಿನ್ನಪಂ" ಇದು ಲೋಕಪ್ರಸಿದ್ಧವಾದ ಪುಸ್ತಕವು. ಕ್ರೈಸ್ತ ಮತದಲ್ಲಿ ತಿಳಿಸುವ ಮಾನಸಾಂತರ, ಪಾಪಮನ್ನಣೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತ್ರೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ಕೈಟಿನ ಬೈಂಡು ಪ್ರತಿ ಒಂದಕ್ಕೆ ೦—೧೧—೦
ಒಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು.

JUST RECEIVED! JUST RECEIVED!!

Stead's Books for the Bairns

(illustrated) New Numbers 15-20

STEAD'S PENNY POPULAR TALES Sixty four Pages in a coloured Picture Cover. Each number contains a story of thrilling interest. 24 numbers.

CALENDARS FOR 1909.

Apply—The Manager, C.L.S. Book Depot, Mysore City.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 19

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ಸಾದಾ ಆಗಿ ತಯಾರಿಸಲ್ಪಟ್ಟು ಬಹಳ ಬಾಳಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ. ಆಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬ ಆಣೆ ವರೆವಿಗೂ ಚಲ್ಲಣವಾಗಿ ಆಗಲೀ ಒಟ್ಟಾಗಿ ಆಗಲೀ ವಸಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ ಎಲ್. ಎಸ್ ಬುಕ್ ಡಿಪ್ರೋ, ಮೈಸೂರು.

ಔಷಧಿ ತೆಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 6-20

(ಸ್ಕಾಟ್ಸ್ ಇಮಲ್ಷನ್)

ಘಟ್ಟ ಶರೀರವುಳ್ಳವರ್‍ಯಾರೂ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಆಗತ್ಯವಿಲ್ಲ.

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ಬಗಲಿ ಹಿಡಿಯುತ್ತದೆ

ಇಸ್ಕಾಟ್ಸ್ ನನ್ನು ದೇಹ ಸೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಿಷ್ಠಾಗ ಗೊಳಿಸಿ, ಸಂಪೂರ್ಣ ಆರೋಗ್ಯವನ್ನು ಉಂಟು ಮಾಡುತ್ತದೆ

ಕೈಸೇರಿಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷದಗಳ ಕಾರ್ಖಾನೆ

ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧ ವನ್ನೇ ತೊಂಡುಕೊಳ್ಳಿ

ಸಂಜೀವಿನೀ ಔಷಧಾಲಯ, ಮೈಸೂರು.

23 15

ಎಂ. ಎಸ್ ಕುಮಾರಯ್ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಬೋಮು, ವಾಯುನೋವುಗಳೂ, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿ ಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ವ್ಯಾಪಾರಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ. ಕ್ರಯ ಶೀಸೆ ೧ ಕ್ಕೆ ೭ ರೂಪಾಯಿ.

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ ಕ್ಕೆ ೧ ರೂಪಾಯಿ

ಕಾಲಕೂಟವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ.

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಪಾಚಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದಳಿಗೂ ತಂಪನ್ನುಂಟುಮಾಡಿ ದೃಷ್ಟಿ ಸಾಟವವನ್ನೂ ಮೆದಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತವೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳು, ಪರಿಮಳದ ಅತ್ತರುಗಳೂ, ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳು ಬೇಕು. ಅರ್ಜಿಗೆ ಲೇಬಲ್ ಇಟ್ಟು ಬರೆಯಿರಿ

ಬಿ ಕೆ. ಸ್ವಾಮಿ,

ಪ್ರೊಪ್ರೈಟರ್.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು.

1-20

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಕಫವನ್ನು ಸಡಿಲಿಸುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷದದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

WANTED

A Proof-Reader, competent both in English and Kanarese. Salary according to qualifications.—Apply to 14-4

Wesleyan Mission Press,
Mysore.

WANTED, A MUNSHI

For Literary and Translation Work. Applicants must have passed the F. A. Examination, and possess a thorough knowledge of Kannada Literature. Apply to, 11-4

Miss PARSONS, Hardwicke, Mysore City.

ನೋಡಿರಿ ಪ್ರೋತ್ಸಾಹ ಕೊಡಿರಿ. ತರಿಸಿರಿ

18 26

ಈಗ ತಾನೇ ಸೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ ಸುಲಕ್ಷಿಸಿರಿ, ನಮ್ಮಲ್ಲಿಯ ಉಲ್ ದಾರದಂತಹ ಉಲ್ ದಾರ ಎಲ್ಲಿಯೂ ದೊರಿಯದು. ೫,೦೦೦ ಹಾಸನ್ ಟೋಪಿಹೊಲಿಯುವ ಸೂಪೀರಿಯರ್ ಉಲ್‌ದಾರ

೧೦ ಟೋಪಿಯಾಗುವ ಸೂಪೀರಿಯರ್ ಉಲ್ ಬಂಡಲ್ ೧ಕ್ಕೆ ೩-೭-೦

೧೨ ಲಡಿಗಳಿರುವ ಸೂಪರ್ ಫೈನ್ ಉಲ್ ಬಂಡಲ್ ೧ಕ್ಕೆ ೫ ೪ ೦

೮ ಲಡಿಗಳಿರುವ ಮಿಶ್ರ ಸೂಪೀರಿಯರ್ ಉಲ್ ಬಂಡಲ್ ೧ಕ್ಕೆ ೩-೪ ೦

ದಪ್ಪದ ಉಲ್ ದಾರಗಳು

೮ ಲಡಿಗಳಿರುವ ಬಂಡಲ್ ೧ಕ್ಕೆ ೩-೭-೦, ೩ ೧೨ ೦ ಮತ್ತು ೪ ೮ ೦

೩೦ ಇಂಚಿನ ಕಾರ್ಪೆಟ್‌ಬಣಬ್ ೧ಕ್ಕೆ ೦-೮ ೦

ಉಲನ್ ೩೬ ಇಂಚಿನದಕ್ಕೆ ೨-೮-೦

ಲಿನನ್ ಕೈವಸ್ತ್ರ ೧ಕ್ಕೆ ೦ ೭-೦ ಪರಿಮಳ ಸಪ್ಪದ ಶೀಶೆ ೧ಕ್ಕೆ ೦ ೨ ೦

೩೦೦ ಮಾತ್ರೆಗಳಿರುವ ಸೀಗ್‌ರೆಟ್ ತಾಂಬೂಲ ಮಿತ್ರನು ಪ್ಯಾಕೆಟ್‌ಗಳಕ್ಕೆ ೦ ೩-೦

ರಾಯಲ್ ದಂತಮಂಜನಡಬ್ಬಿ ೧ಕ್ಕೆ ೦-೧-೬ ರೋಮನಾಶಕ ಸಾಬೂನು ಪೆಟ್ಟಿಗೆ ೧ಕ್ಕೆ ೦-೬-೦ ಕೂಸುಗಳ ಟೋಪಿ, ಪೂರ್ತಿ ಮೇಜೋಡು ಬೇಕಾದಲ್ಲಿ ಕ್ರಯದ ಪಟ್ಟಿ ತರಿಸಿರಿ

ವಿಳಾಸ —ಫೂಲನ್ ಮಾರ್ಟ್, 64 ಎ. ಮಂಗಳೂರು

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣು ಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು; ಮರವು, ನಿತ್ರಾಣ, ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [69-38]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು, ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



೨-೩ ೦—೦ ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦ ಔಷಧಿಗಳನ್ನು ಮಾರುವವರಲ್ಲೆಲ್ಲಾಯೂ ದೊರೆಯುವುವು. ಅಥವಾ ಡೋನ್ಸ್, ೨೦, ಪಿ ೬ ಬಾಕ್ಸ್ ಬೊಂಬಾಯಿ. —ಇವರಲ್ಲಿ ದೊರೆಯುವುವು

ವೃತ್ತಾಂತ ಪತ್ರಿಕೆ.

ಸನ್ ೧೯೦೯ ನೇ ಇಸವಿ ಮೇ ತಾ| ೨೦ ನೇ ಗುರುವಾರ

ಗವರ್ನಮೆಂಟಿನಲ್ಲಿ ಸಾವಕಾಶವಾಗುವುದು.

ಸರ್ಕಾರಿ ಉದ್ಯೋಗದಲ್ಲಿದ್ದು ನಿವೃತ್ತರಾಗುವವರಿಗೆ ಪೆನ್‌ಷನ್ ಕೊಡುವ ವಿಷಯದಲ್ಲಿ ಸಾವಕಾಶವಾಗುತ್ತಿದ್ದ ಈ ರೀತಿ ಕಾಗದಪತ್ರಗಳು ನಿದಾನವಾಗಿ ಇತ್ಯರ್ಥವಾಗುವುದನ್ನು ಗವರ್ನಮೆಂಟಿನವರು ಖಂಡಿಸಿ, ಜಾಗ್ರತೆಪಡಿಸಬೇಕೆಂದು ಎಲ್ಲಾ ಅಧಿಕಾರಿಗಳಿಗೂ ತಿಳಿಸಿರುತ್ತಾರೆ ಇಂಥಾ ಉಚಿತವಾದ ಹುಕುಮು ಈ ವಾರದ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ ಇದನ್ನು ಓದಿ ನಾವು ತುಂಬಾ ಸಂತೋಷಪಟ್ಟೆವು ಅನೇಕ ವೇಳೆ ಸಣ್ಣ ನೌಕರರು ಕೆಲಸ ಬಿಟ್ಟು ಮೂರು ವರುಷಗಳೇ ಕಳೆದುಹೋಗಿದ್ದರೂ ಅವರಿಗೆ ಪೆನ್‌ಷನ್ ಸ್ಯಾಂಕ್ಷನ್ ಆಗಿ ಏನಾದರೂ ಆಗದೆ ಇರುತ್ತದೆ ಕೆಲಸಕಾರ್ಯಗಳು ಕ್ರಮವಾಗಿ ನಡೆಯುವಂತೆ ತಿದ್ದುಪಾಟಾಗಿರುವ ಯಾವ ಗವರ್ನಮೆಂಟಿಗಾಗಲಿ ಹೀಗಾಗುವುದು ಅವಮಾನಕರವಾಗಿರುತ್ತದೆ.

ಸರ್ವಿಸ್ ರೆಜಿಸ್ಟರುಗಳನ್ನು ಆಗಿಂದಾಗ್ಗೆ ಕ್ರಮವಾಗಿ ಬರೆಯಿಡುವುದಿಲ್ಲವೆಂತಲೂ, ಇದರಿಂದ ನೌಕರರನ್ನು ಕಳುಹಿಸಬಿಡುವ ಕಾಲದಲ್ಲಿ ಅವರಿಗೆ ಪೆನ್‌ಷನ್ ಎಷ್ಟು ಸಲ್ಲಬೇಕೋ ಗೊತ್ತುಮಾಡುವುದು ಸಾಧ್ಯವಲ್ಲವೆಂತಲೂ ತಿಳಿದುಬರುತ್ತದೆ. ಪೆನ್‌ಷನ್ ದಾರನು ತನ್ನ ಪೆನ್‌ಷನ್ ಪಡೆಯುವುದಕ್ಕೆ ವರುಷಗಟ್ಟಲೆ ಕಾಯಬೇಕಾಗಿರೋದರಿಂದ ಆ ಕಾಲದಲ್ಲಿ ಜೀವನಕ್ಕೆ ಬಹಳ ಕಷ್ಟಪಡುವನು

ಇನ್ನು ಮುಂದೆ ಇಂಥಾ ಲೋಪಕ್ಕೂ ಸಾವಕಾಶಕ್ಕೂ ಅವಕಾಶವಾಗದಂತೆ ಪ್ರತಿ ಒಂದು ಇಲಾಖೆಯ ಮುಖ್ಯಾಧಿಕಾರಿಯೂ ಸರ್ವಿಸ್ ರೆಜಿಸ್ಟರುಗಳೇ ಮೊದಲಾದ ಕಾಗದ ಪತ್ರಗಳನ್ನು ಕ್ರಮವಾಗಿ ಬರೆಯಿಸುವುದಕ್ಕೆ ಜವಾಬ್ದಾರರಾಗಿರಬೇಕೆಂತಲೂ, ಕೆಲಸ ಬಿಟ್ಟ ಒಂದು ತಿಂಗಳೊಳಗಾಗಿ ನೌಕರರ ಪೆನ್‌ಷನ್ ಕಾಗದಗಳು ಇತ್ಯರ್ಥವಾಗಬೇಕೆಂತಲೂ ಗವರ್ನಮೆಂಟಿನವರು ಈಗ ಹುಕುಂ ಕೊಟ್ಟಿದಾರೆ ಈ ರೀತಿ ಹುಕುಂ ಕೊಡಬೇಕಾದದ್ದೇನೋ ಅವಶ್ಯವೇ, ಆದರೆ ಆ ಪ್ರಕಾರ ನಡೆಯದೆ ತಪ್ಪಿದರೆ ಯಾರನ್ನು ಶಿಕ್ಷಿಸುತ್ತಾರೋ ತಿಳಿಯಲಿಲ್ಲ. ಉಚಿತವಾದ ಹುಕುಂಗಳನ್ನು ಕೊಟ್ಟರೆ ಅನುಕೂಲವೇ ಹೌದು, ಆದರೆ ಸಾವಕಾಶವನ್ನೂ ಸೋಮಾರಿತನವನ್ನೂ ಅಲಕ್ಷ್ಯಭಾವವನ್ನೂ ಸರ್ಕಾರಿ ನೌಕರನಾದಯರಲ್ಲಿ ತಪ್ಪಿಸಬೇಕಾದರೆ ಗವರ್ನಮೆಂಟಿನವರು ಇನ್ನೂ ಕಠಿಣವಾದ ಏರ್ಪಾಡುಗಳನ್ನು ಮಾಡಿಟ್ಟು ತಮ್ಮ ನಿರ್ಧಾರವನ್ನು ಕಾರ್ಯದಲ್ಲಿ ತೋರ್ಪಡಿಸುತ್ತಾ ಬರಬೇಕಾಗಿದೆ ಗವರ್ನಮೆಂಟಿನಲ್ಲಿ ೨೦-೩೦ ವರುಷಗಳ ವರೆಗೆ ನೌಕರಿ ಮಾಡಿದವರ ವಿಷಯದಲ್ಲೇ ಅವರ ಪೆನ್‌ಷನ್ ಮೊದಲಾದ ಕಾಗದ ಪತ್ರಗಳು ಇತ್ಯರ್ಥವಾಗುವುದು ಇಷ್ಟು ಸಾವಕಾಶವಾಗುತ್ತಿರುವುದಾದರೆ ರೈತರೇ ಮೊದಲಾದ ಪ್ರಜೆಗಳ ಅಹವಾಲುಗಳೂ ಅರ್ಜಿಗಳೂ ಇತ್ಯರ್ಥಪಡುವುದಕ್ಕೆ ಇನ್ನೆಷ್ಟು ದೀರ್ಘಕಾಲ ಹಿಡಿಯುವುದೋ ಎಂದು ಸಂಶಯಿಸಬೇಕಾಗಿದೆ. ಆದಕಾರಣ ಸರ್ಕಾರಿ ಇಲಾಖೆಗಳಲ್ಲಿ ಕೆಲಸಕಾರ್ಯಗಳು ಬಹಳ ಮಟ್ಟಿಗೆ ಚುರುಕಾಗಿಯೂ ದಕ್ಷತೆಯಿಂದಲೂ ನಡೆಯುವಂತಾದರೆ ಗವರ್ನಮೆಂಟಿಗೂ ಪ್ರಜೆಗಳಿಗೂ ತುಂಬಾ ಉಪಕಾರವಾಗುವುದು.

ಡಕಾಯಿತಿ ಕಳ್ಳರನ್ನು ಹಿಡಿದದ್ದು.

ಕಳೆದ ವರುಷ ಅಕ್ಟೋಬರ್ ೧ ನೇ ತಾರೀಖಿನಲ್ಲಿ ಮೈಸೂರು ಪೋಲೀಸ್ ಇಲಾಖೆಯವರು ವಾಸೋಲಿಗಳು ಇಲ್ಲವೇ ಕಳ್ಳಕೊರವರೆಂಬ ಕಳ್ಳರ ಗುಂಪಿನ ದುಷ್ಟ ಜನರನ್ನು ಹಿಡಿದಿರುತ್ತಾರೆ. ಈ ವಿಚಾರದಲ್ಲಿ ಗವರ್ನಮೆಂಟಿನವರು ಬಹು ಸ್ವಾರಸ್ಯವಾದ ರಿಪೋರ್ಟ್

ನ್ನು ಈಗತಾನೇ ಪ್ರಕಟಪಡಿಸಿರುವರು. ಕಡೂರು, ಶಿವಮೊಗ್ಗೆ, ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಅನೇಕ ಭಾಗಗಳಲ್ಲಿ ಹಲವು ಕಳ್ಳತನಗಳೂ ದರೋಡೆಗಳೂ ನಡೆಯುತ್ತಲೂ, ಬಹಳ ನಗ ನಾಣ್ಯಗಳು ಕಳುವಾಗುತ್ತಲೂ ಇದ್ದವು. ಈ ದರೋಡೆಕೋರರು ಬಹಳ ಯುಕ್ತಿಯುಳ್ಳವರಾಗಿಯೂ, ತುಂಬಾ ಕ್ರೂರತನದಿಂದಲೂ ಅನೇಕ ಘೋರ ಕೃತ್ಯಗಳನ್ನು ನಡಿಸುತ್ತಿದ್ದರು. ಅವರು ಸಂಸ್ಥಾನದ ಎಲ್ಲೆಕಟ್ಟಿನಲ್ಲಿದ್ದುಕೊಂಡು ಒಂದು ಸಲ ಮೈಸೂರು ಪ್ರಾಂತ್ಯದಲ್ಲೂ ಇನ್ನೊಂದು ಸಲ ಕುಂಪಣೀ ದೇಶದಲ್ಲೂ ದರೋಡೆ ಮುಂತಾದ ಕೃತ್ಯಗಳನ್ನು ಮಾಡುತ್ತಾ ಬಂದಿದ್ದರು.

ಅವರನ್ನು ಹಿಡಿಯುವ ವಿಷಯದಲ್ಲಿ ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರವರು ಆ ಡಿಸ್ಟ್ರಿಕ್ಟುಗಳ ಪೋಲೀಸ್ ಅಧಿಕಾರಿಗಳ ಸಂಗಡ ಕಲೆತು ಹಲವು ವೇಳೆ ಆಲೋಚನೆಗಳನ್ನು ಮಾಡಿ, ಕಡೆಯಲ್ಲಿ ಆ ಗುಂಪುಗಳನ್ನೆಲ್ಲಾ ಏಕಕಾಲದಲ್ಲಿ ಸುತ್ತಿಕೊಂಡು ದಸ್ತಗಿರಿ ಮಾಡುವುದಕ್ಕೆ ಏರ್ಪಾಡು ಮಾಡಿದರು. ಈ ಏರ್ಪಾಡು ಸಾರ್ಥಕವಾಗಿ ನೆರವೇರಿತು. ಆ ರಾತ್ರಿಯೂ ಅಲ್ಲಿಂದೀಚೆಗೆ ಕೆಲವು ದಿನಗಳಲ್ಲೂ ಅವರು ಮೂವತ್ತೆಂಟು ಮಂದಿ ಕಳ್ಳರನ್ನು ಹಿಡಿದು, ಅವರನ್ನು ದಸ್ತಗಿರಿಗೆ ಗುರಿಮಾಡಿದರು. ಅಲ್ಲಿಂದೀಚೆಗೆ ಆ ಪ್ರಾಂತ್ಯಗಳಲ್ಲಿ ದರೋಡೆಗಳಾಗಲಿ ಕ್ರೂರಕೃತ್ಯಗಳಾಗಲಿ ಭಾರೀ ಕಳ್ಳತನಗಳಾಗಲಿ ನಡೆಯುತ್ತಾ ಇಲ್ಲ.

ಈ ಕಳ್ಳ ಕೊರಮರಿಗೆ ಬೇಕಾದಷ್ಟು ಧೈರ್ಯಸಾಹಸವಿರುವುದು. ಅವರು ವೇಷ ಮರೆಸಿಕೊಂಡು ಸಾಧಾರಣ ಜನರಂತೆ ಸಂಚಾರ ಮಾಡುತ್ತಾರೆ. ದಸ್ತಗಿರಿ ಮಾಡಿ ಶಿಕ್ಷೆ ಮಾಡಿದಾಗ ಅವರು ಕಿವುಡು ಮೂಗರಾಗಿ ನಟಿಸುವರು. ಅವರ ಬಾಯಿಂದ ಯಾವ ಮಾತು ಹೊರಡಿಸುವುದೂ ಬಹಳ ಕಷ್ಟ. ಅವರು ತಮ್ಮ ದೇವತೆಗೆ ಕುರಿಯನ್ನು ಬಲಿ ಅರ್ಪಿಸಿ ದೇವತೆಯು ತಮಗೆ ಸಹಾಯ ಮಾಡುತ್ತಾಳೆಂದು ಘೋರವಾದ ಕ್ರೂರಕೃತ್ಯಗಳನ್ನು ನಡಿಸತಕ್ಕವರಾಗಿದ್ದಾರೆ. ಕುಡಿಯುವುದರಲ್ಲಿ ಅವರಿಗೆ ಬಹಳ ಇಷ್ಟ. ಅನೇಕ ವೇಳೆ ಅವರು ಕುಡಿದು ಪ್ರಜ್ಞೆಯಿಲ್ಲದೆ ಬಿದ್ದುಕೊಳ್ಳುವುದೂ ಉಂಟು. ಅವರಿಗೆ ವಾಸಮಾಡುವ ಸ್ಥಳ ಇಂಥಾದ್ದೆಂದು ನಿಷ್ಕರ್ಷೆಯಿಲ್ಲ. ಸಮಯ ಬಂದರೆ ಬಹುಬೇಗ ತಪ್ಪಿಸಿಕೊಂಡು ಜಂಗಲಿಗೆ ಹೋಗಿ ಸೇರಿಕೊಳ್ಳುವುದಕ್ಕೆ ಅನುಕೂಲವಾದಂಥಾ ಸ್ಥಳಗಳಲ್ಲೇ ಅವರು ಜೋಪಡಿ ಹಾಕಿಕೊಂಡಿರುವುದೇ ವಿಶೇಷ. ಇಂಥಾ ದುರ್ಮಾರ್ಗಿಗಳಾಗಿ ತಾವೂ ಕಷ್ಟ ಇತರ ಪ್ರಜೆಗಳಿಗೂ ಕಂಟಕರಾಗಿರುವ ಜನರನ್ನು ತಕ್ಕಹಾಗೆ ನಾಗರಿಕರನ್ನಾಗಿ ಮಾಡಿ ಯಾವ ಸ್ಥಳಗಳಲ್ಲಾದರೂ ಮನೆ ಮಠಗಳನ್ನು ಕಟ್ಟಿಕೊಂಡು ಧರ್ಮವಾದ ಕಸುಬುಗಳನ್ನು ಅವಲಂಬಿಸಿಕೊಂಡು ಜೀವನ ಮಾಡಿಕೊಂಡು ಬರುವಂತೆ ಪ್ರೇರೇಪಿಸಿದ ಪಕ್ಷದಲ್ಲಿ ಸಂಸ್ಥಾನಕ್ಕೆ ತುಂಬಾ ಉಪಕಾರವಾದೀತು. ಕೆಲವು ಜನ ಕೊರಮರು ಅಲ್ಲಲ್ಲಿ ನೆಲಸಿ ಜೀವನ ಮಾಡುತ್ತಿದ್ದಾರೆ. ಅವರೆಲ್ಲ ಜನರಲ್ಲಿರುವ ದುರಾಚಾರತನವನ್ನೂ ದುಷ್ಕಾರ್ಯಪ್ರವರ್ತನೆಯನ್ನೂ ನಿರ್ಮೂಲ ಮಾಡುವುದಕ್ಕೆ ಅವರಿಗೆ ತಕ್ಕ ಹಿತಬೋಧನೆಯು ದೊರಕಬೇಕಾಗಿದೆ. ಅವರಿಗೆ ವಿದ್ಯೆ ಬುದ್ಧಿ ಕಸಬುಗಳನ್ನು ಕ್ರಮವಾಗಿ ಕಲಿಸುತ್ತಾ ಬಂದ ಪಕ್ಷದಲ್ಲಿ ಅವರು ಸ್ವಭಾವವನ್ನು ಸ್ವಲ್ಪ ಸ್ವಲ್ಪ ಬೇಗ ಬದಲಾಯಿಸುವುದಕ್ಕೆ ಸಂಶಯವಿಲ್ಲ.

ಈ ರೀತಿ ದುರ್ಮಾರ್ಗಗಳನ್ನು ನಡಿಸಿ ಪ್ರಜಾಕಂಟಕರಾಗಿದ್ದ ಈ ಕಳ್ಳ ಕೊರಮರ ಗುಂಪುಗಳನ್ನು ನಮ್ಮ ಪೋಲೀಸಿನವರು ಹಿಡಿದಿರುವ ಭಾಗದಲ್ಲಿ ನಾವು ತುಂಬಾ ಸಂತೋಷವುಳ್ಳವರಾಗಿದ್ದೇವೆ.

ಪ್ರೀತಿಪುರಸ್ಸರವಾದ ಸಹೋದರಭಾವ.

ದರ್ಭಾಂಗ ಮಹಾರಾಜರವರು ಕಲ್ಕತ್ತಾ ಪಟ್ಟಣದಲ್ಲಿ ಜರುಗಿದ ಮತಗಳ ಸಮ್ಮೇಳನದಲ್ಲಿ ತಿಳಿಸಿದ ಅಭಿಪ್ರಾಯದ ಒಂದಂಶವನ್ನು ಅಂದರೆ-- "ದೇವರ ಮೇಲೆ ಪ್ರೀತಿಪುರಸ್ಸರವಾದ ಭಕ್ತಿ" ಎಂಬುದನ್ನು ಎರಡು ವಾರಗಳ ಹಿಂದೆ ಪ್ರಸ್ತಾಪಿಸಿದ್ದೇವಷ್ಟೆ. ಈ ವಾರ ಅವರ ಅಭಿಪ್ರಾಯದ ಮತ್ತೊಂದಂಶವನ್ನು ಅಂದರೆ "ಪ್ರೀತಿಪುರಸ್ಸರವಾದ ಸಹೋದರಭಾವ" ಎಂಬುದನ್ನು ಕುರಿತು ತಿಳಿಸುವೆವು.

ಸಹೋದರ ಭಾವವನ್ನು ಕುರಿತು ಸಕಲರೂ ಸಾಧಾರಣವಾಗಿ ಮಾತನಾಡಿಕೊಳ್ಳುತ್ತಾರೆ, ಮತ್ತು ಎಲ್ಲರೂ ಅಂಥಾ ಅಭಿಪ್ರಾಯವನ್ನು ಶ್ಲಾಘಿಸುತ್ತಾರೆ. ಹೀಗಿದ್ದರೂ ಅದರ ನಿಜಾರ್ಥವನ್ನು ತಿಳಿದಿರುವವರು ಕೆಲವರೇ ಆಗಿರುವರು. ಅದರಂತೆ ನಡೆದುಕೊಳ್ಳುವವರು ಬಹು ಕೊಂಚಮಂದಿಯಾಗಿರುತ್ತಾರೆ. ಹಾಗಾದರೆ ನಾವು ಅದರ ಅರ್ಥವೇನೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸೋಣ.

(೧) ಇದು ಪ್ರತಿಯೊಬ್ಬ ಮನುಷ್ಯನೂ ನಮ್ಮ ಸಹೋದರನಾಗಿರುತ್ತಾನೆಂದು ಅರ್ಥಕೊಡುತ್ತದೆ. ದೇವರು ನಮ್ಮೆಲ್ಲರನ್ನು ಒಂದೇ ರಕ್ತಮಾಂಸವುಳ್ಳವರನ್ನಾಗಿ ಸೃಷ್ಟಿಸಿರುತ್ತಾನೆ. ಯಾವ ಮನುಷ್ಯನ ರಕ್ತವನ್ನಾಗಲಿ ಪರೀಕ್ಷೆ ಮಾಡಿ, ಇವನು ಬ್ರಾಹ್ಮಣನು, ಇವನು ಹೊಲೆಯನು, ಇವನು ಬೆಳ್ಳಗಿರುವನು, ಇವನು ಕರ್ರಗಿರುವನು ಎಂದು ಹೇಳುವುದಕ್ಕಾದೀತೇ? ಎಂದಿಗೂ ಆಗಲಾರದು. ಬುದ್ಧಿವಂತಿಕೆ, ಗುಣ ಸ್ವಭಾವಗಳಲ್ಲಿ ವ್ಯತ್ಯಾಸಗಳಿರಬಹುದು. ಆದರೆ ಮನುಷ್ಯರೆಲ್ಲರೂ ಮಾನುಷ ಕುಲಕ್ಕೆ ಸೇರಿರುತ್ತಾರೆಂಬುದರಲ್ಲಿ ಸಂಶಯವೇನಿದೆ? ನಾವು ಸಹೋದರಭಾವವನ್ನು ಸಂಪೂರ್ಣವಾಗಿ ನಂಬಿದರೆ ಈ ದೇಶದಲ್ಲಿ ಹಾನಿಕರವಾಗಿ ಪರಿಣಮಿಸಿರುವ ಜಾತಿ ಭೇದವನ್ನು ವರ್ಜಿಸಬೇಕಾಗಿರುತ್ತದೆ.

(೨) ಸಹೋದರಭಾವವೆಂದರೆ ಅನ್ಯೋನ್ಯಸಮಾನ ಅರ್ಥವಾಗುತ್ತದೆ. ಅನ್ಯೋನ್ಯಸಮಾನರಲ್ಲಿ ಭೇದವಿಲ್ಲದಿರುವುದು. ನಾವು ಸಹೋದರರಾಗಿರುವ ಪಕ್ಷದಲ್ಲಿ ಇವನು ಉತ್ತಮನು, ಅವನು ಕನಿಷ್ಟನು, ಇವನಿಗೆ ವಿಶೇಷವಾದ ಹಕ್ಕಿರಬೇಕು, ಅವನಿಗೆ ಯಾವ ತರವಾದ ಹಕ್ಕೂ ದೊರಕಬಾರದೆಂದು ಹೇಳುವುದಕ್ಕಾಗದು. ನಾವು ಸಹೋದರರಾಗಿರುವ ಪಕ್ಷದಲ್ಲಿ ಒಬ್ಬನನ್ನಾದರೂ ಅವಮಾನದಿಂದಲಾಗಲೀ ಅಹಂಕಾರದಿಂದಲಾಗಲೀ ಕಾಣಕೂಡದಷ್ಟೆ. ನಾವು ಎಲ್ಲರನ್ನು ದಯೆಯಿಂದ ಕಾಣಬೇಕು. ಎಲ್ಲರನ್ನು ಪ್ರೀತಿಸಬೇಕು. ನಮ್ಮ ಹೃದಯವು ಕನಿಕರಪೂರಿತವಾದುದಾಗಿರಬೇಕು. ನಾವೆಲ್ಲರು ವಿಶೇಷವಾಗಿ ಈ ಜಗತ್ತಿನ ಜನರೆಲ್ಲರು ಯೋಗ್ಯರಾಗಿಯೂ ಪವಿತ್ರರಾಗಿಯೂ ಪರೋಪಕಾರಿಗಳಾಗಿಯೂ ನಡೆದುಕೊಳ್ಳುವಂತೆ ಪ್ರಯತ್ನಿಸಬೇಕು.

(೩) ಸಹೋದರಭಾವವೆಂದರೆ ಪರಸ್ಪರ ಸಹಾಯವೆಂಬರ್ಥವಾಗುತ್ತದೆ. ಪರಸ್ಪರಸಹಾಯವೆನ್ನುವಾಗ್ಗೆ ರೋಗಾರ್ತರಿಗೆ ಸಹಾಯ ಮಾಡಿ ಅವರನ್ನು ಮತ್ತಷ್ಟು ಸೋಮಾರಿಗಳನ್ನಾಗಿ ಮಾಡಬೇಕೆಂಬುದು ನಮ್ಮ ಅರ್ಥವಲ್ಲ. ಅವರವರಿಗೆ ದೇವರು ಕೊಟ್ಟಿರತಕ್ಕ ವರಗಳನ್ನು ಉಪಯೋಗಿಸಿಕೊಳ್ಳುವಂತೆ ಮಾಡುವುದೇ ಸಹಾಯವೆನ್ನಿಸಿಕೊಳ್ಳುವುದು. ನಾವೆಲ್ಲರೂ ನಮ್ಮ ಶಕ್ತ್ಯಾನುಸಾರ ಕೆಲಸ ಮಾಡಬೇಕೆಂದು ದೇವರು ಇಷ್ಟಪಡುತ್ತಾನೆ. ಕೆಲವರು ಬೀದಿ ಗುಡಿಸಬೇಕಾಗುವುದು, ಮತ್ತೆ ಕೆಲವರು ಆರಂಭ ಮಾಡಬೇಕಾಗುವುದು, ಇನ್ನು ಕೆಲವರು ಗಾಡಿ ಹೊಡೆಯುವವರಾಗಿಯೂ, ಉಪಾಧ್ಯಾಯರಾಗಿಯೂ, ವರ್ತಕರಾಗಿಯೂ ಜೀವಿಸುತ್ತಿರಬಹುದು. ಏನೇ ಜನಾಭಿವೃದ್ಧಿಗೆ ಎಲ್ಲರೂ ಸೇರಿ ಕಾರ್ಯಭಾಗ ಮಾಡಬೇಕಾಗಿರುತ್ತದೆ. ಯಾರಾದರೂ ಸರಿ ಮತ್ತೊಬ್ಬನ ವೃತ್ತಿಯನ್ನು ನೋಡಿ ಅಲ್ಲಗಳೆಯ ಕೂಡದು. ಆಯಾ ವೃತ್ತಿಯವನು ದೇವರು ಈ ಲೋಕದಲ್ಲಿ ತನಗೆ ನೇಮಿಸಿರುವ ಕೆಲಸವನ್ನು ಮಾಡಿ ಆತನ ಚಿತ್ತವನ್ನು ನೆರವೇರಿಸುತ್ತಿರುವನೇ ವಿನಾ ಮತ್ತೇನನ್ನೂ ಮಾಡುತ್ತಿಲ್ಲವು.

ಸಹೋದರಭಾವದ ನಿಜಾರ್ಥವು ನಮ್ಮ ದೇಶೀಯರಲ್ಲಿರುವುದಾದರೆ ಜಾತಿಯ ಅಹಂಕಾರ, ಕುಲದ ಅಹಂಕಾರ, ಜ್ಞಾನದ ಅಹಂಕಾರ, ಐಶ್ವರ್ಯದ ಅಹಂಕಾರ ಈ ಮೊದಲಾದ ಅಹಂಕಾರಗಳೆಲ್ಲಾ ಮೊದಲು ತ್ಯಜಿಸಲ್ಪಡಬೇಕು. ಪ್ರತಿಯೊಬ್ಬನು ದೇವರು ತನಗೆ ಕೊಟ್ಟಿರುವ ವರಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನಿಸಬೇಕು, ಮತ್ತು ತನ್ನ ಜೊತೆ ಸೃಷ್ಟಿಗಳನ್ನು ಪ್ರೀತಿಸಿ ಅವರ ಕಷ್ಟ ಕೊರತೆಗಳಲ್ಲಿ ಸಹಾಯ ಮಾಡಲು ಸಿದ್ಧನಾಗಿರಬೇಕು. ಸಹೋದರಭಾವದ ನಿಜಾರ್ಥವನ್ನು ಯೇಸುಕ್ರಿಸ್ತನು ಸಂಗ್ರಹಿಸಿ ಈ ರೀತಿಯಾಗಿ ತಿಳಿಸಿರುತ್ತಾನೆ.-- "ನೀನು ನಿನ್ನನ್ನು ಪ್ರೀತಿಸಿಕೊಳ್ಳುವಂತೆ ನಿನ್ನ ನೆರೆಯವನನ್ನು ಪ್ರೀತಿಸಬೇಕು" ಎಂಬುದೆ.

"ನೆರೆಯವನು" ಎಂದು ಯೇಸುಕ್ರಿಸ್ತನು ಹೇಳಿದಾಗ್ಗೆ ಆತನು ನಮ್ಮ ಜೊತೆ ಸಹೋದರರಾದ ಎಲ್ಲಾ ಮನುಷ್ಯರನ್ನು ಸೇರಿಸಿ ತಿಳಿಸುತ್ತಾನೆ.

ಒಳದೇಶದ ವೃತ್ತಾಂತಗಳು.

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಬಾಲಘಾಟಿನ ಗಣಿಯಲ್ಲಿ ಒಂದು ಅನಾಹುತ ನಡೆದು ೧೨ ಮಂದಿ ಕೂಲಿ ಆಳುಗಳು ಮೃತಪಟ್ಟಿರುತ್ತಾರೆ.

ದಿವಾನ್ ಮಿ. ವಿ. ಆನಂದರಾಯರವರು ಸರ್ಕಾರಿ ಕೆಲಸದ ನಿಮಿತ್ತವಾಗಿ ಕಳೆದ ಸೋಮವಾರದ ದಿನ ಬೆಂಗಳೂರಿನಿಂದ ನೀಲಗಿರಿಗೆ ಪ್ರಯಾಣ ಮಾಡಿರುತ್ತಾರೆ.

ಬೆಂಗಳೂರು ಮಲ್ಲೇಶ್ವರದ ಬಳಿ ಹೊಸ ಬಡಾವಣೆಯನ್ನು ಮಾಡಬೇಕೆಂದು ಸರ್ಕಾರದವರು ತೀರ್ಮಾನಿಸಿ, ಅದಕ್ಕಾಗಿ ೭೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

ಮಿ. ಎಂ. ಮುತ್ತಣ್ಣನವರು ಇನ್ನೂ ಮೂರು ವರುಷದ ತನಕ ಈ ಸಂಸ್ಥಾನದ ಫಾರೆಸ್ಟ್ ಕನ್ಸರ್ವೇಟರಾಗಿ ಕೆಲಸ ಮಾಡುವಂತೆ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ.

ಕಳೆದ ವಾರ ರಾಜಧಾನಿಯಲ್ಲಿ ಒಂದು ದಿನ ೨ ಅಂಗುಲ ಮಳೆ ಆಯಿತು. ಈಚೆಗೆ ದಿನವೂ ರಾತ್ರಿ ಹೊತ್ತು ಮಳೆ ಬರುತ್ತದೆ. ಹವಾ ತಂಪಾಗಿಯೂ ಆರೋಗ್ಯಜನಕವಾಗಿಯೂ ಇರುತ್ತದೆ.

ಬೆಂಗಳೂರಿನಲ್ಲಿ ಕೆಲವು ವಿದ್ಯಾರ್ಥಿಗಳು ಸೇರಿ ಚಂದಾ ಹಾಕಿಕೊಂಡು ಧಾನ್ಯವನ್ನೂ ಬಟ್ಟೆಗಳನ್ನೂ ಕೊಂಡುತಂದು, ಅಲ್ಲಿನ ಬಡ ಜನರಿಗೆ ಹಂಚಿಕೊಟ್ಟರೆಂದು ಕೇಳಿ ತುಂಬಾ ಸಂತೋಷಪಡುತ್ತೇವೆ.

ನೀಲಗಿರಿಯಲ್ಲಿ ಕಳೆದ ವಾರ ನಡೆದ ಕುದುರೆಗಳ ಪಂದ್ಯದಲ್ಲಿ ನಮ್ಮ ಮಹಾರಾಜರವರ, ಕರ್ನಲ್ ದೇಸರಾಜೇ ಅರಸಿನವರ ಮತ್ತು ಸರ್ದಾರ್ ಲಕ್ಷ್ಮೀಕಾಂತರಾಜೇ ಅರಸಿನವರ ಕುದುರೆಗಳು ಗೆದ್ದು ಬಹುಮಾನಗಳನ್ನು ಪಡೆದಿರುತ್ತವೆ.

ಮದರಾಸ್ ಅಧಿಪತ್ಯಕ್ಕೆ ಸೇರಿದ ಕಾಕಿನಾಡಾ ಪಟ್ಟಣದಲ್ಲಿ ಮುಂದಿನ ಜೂನ್ ೫, ೬, ೭ನೇ ತಾರೀಖುಗಳಲ್ಲಿ ಮೂರನೇ ಆಯುರ್ವೇದ ಮಹಾ ಸಭೆಯು ನಡೆಯುವುದೆಂತಲೂ, ಇದಕ್ಕೆ ಈ ಸಂಸ್ಥಾನದಿಂದಲೂ ಕೆಲವು ವೈದ್ಯ ಪ್ರತಿನಿಧಿಗಳು ಹೋಗಿ ಬರುವವರಾಗಿದ್ದಾರೆಂತಲೂ ಕೇಳುತ್ತೇವೆ.

ಶ್ರೀಮನ್ಮಹಾರಾಜರವರು ಮಹಾಮಾತೃಶ್ರೀಯವರೇ ಮೊದಲಾಗಿ ರಾಜವರ್ಗದವರೊಡನೆ ತಾ. ೨೬ನೇ ಬುಧವಾರ ನೀಲಗಿರಿಯಿಂದ ರಾಜಧಾನಿಗೆ ದಯಮಾಡುವರು. ರಾಜಧಾನಿಯಲ್ಲಿ ತಾ. ೩೦ನೇ ಭಾನುವಾರದ ದಿನ ಮಹಾರಾಜರವರ ೨೫ನೇ ವರುಷದ ವರ್ಧಂತಿ ಉತ್ಸವವೂ ದರ್ಬಾರೂ ಪದ್ಧತಿಯ ಪ್ರಕಾರ ನೆರವೇರುವವು.

ಸಾಮಾನ್ಯವಾಗಿ ಐದು ವೈದ್ಯದ ಆಸ್ಪತ್ರೆಗಳ ಖರ್ಚನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಬೇಕೆಂತಲೂ, ಅಂಥಾ ಆಸ್ಪತ್ರೆಗಳು ಮ್ಯುನಿಸಿಪಲ್ ಟೌನುಗಳಲ್ಲಿ ಇದ್ದರೆ ಅವುಗಳ ಖರ್ಚಿನಲ್ಲಿ ಎರಡು ಪಾಲನ್ನು ಮ್ಯುನಿಸಿಪಾಲಿಟಿಗಳೂ ಒಂದು ಪಾಲನ್ನು ಡಿಸ್ಟ್ರಿಕ್ಟ್ ಫಂಡುಗಳೂ ವಹಿಸಿಕೊಳ್ಳಬೇಕೆಂತಲೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

ಕಳೆದ ಶನಿವಾರ ಬೆಳಿಗ್ಗೆ ಬೆಂಗಳೂರು ಪಂಡಿನಲಿ ನಾಲ್ಕು ಡಾಕ್ಟರುಗಳು ಸೇರಿ ೭೦೦ ಜನರಿಗೆ ಪ್ಲೇಗ್ ಚುಚ್ಚುಮದ್ದನ್ನು ಹಾಕಿದರು. ಮಿ. ನವಾಬ್ ಜಾನ್‌ರವರು ಚುಚ್ಚುಹಾಕಿಸಿಕೊಂಡವರಿಗೆಲ್ಲಾ ಫಲಾಹಾರಗಳನ್ನೂ ಹಣವನ್ನೂ ಉಚಿತವಾಗಿ ಕೊಟ್ಟು ಸಂತೋಷಪಡಿಸಿದರು. ಬೆಳಿಗ್ಗೆ ೭ ಗಂಟೆಯಿಂದ ೧೧ ಗಂಟೆಯೊಳಗಾಗಿ ಅಷ್ಟು ಜನರಿಗೆ ಚುಚ್ಚು ಹಾಕಿದ್ದು ವಿಶೇಷವೇ ಸರಿ.

ಕೊಡಗು ಪ್ರಾಂತ್ಯದಲ್ಲಿ ದೊಡ್ಡ ಜಮೀನುದಾರರೂ ಪ್ರಖ್ಯಾತರೂ ಮುಖಂಡರೂ ಆಗಿದ್ದ ರಾಯಬಹದೂರ್ ಮಿ. ಚಪ್ಪುಡೀರ ಸೋಮಯ್ಯನವರು ಹಿಂದಿನ ವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಅನೇಕ ಧರ್ಮಗಳನ್ನು ಮಾಡಿ ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು. ಮಡಿಕೇರಿಯ ಪ್ರಜೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಗೆ ಇವರು ೧೫,೦೦೦ ರೂಪಾಯಿಯನ್ನು ಕೊಟ್ಟಿರುತ್ತಾರೆ.

ಕಳೆದ ಮಾರ್ಚಿ ತಿಂಗಳಲ್ಲಿ ಸರ್ಕಾರಿ ವೈದ್ಯರು ಬೆಂಗಳೂರಿನಲ್ಲಿ ೮೬ ಜನರಿಗೂ, ಮೈಸೂರಿನಲ್ಲಿ ೫೮ ಮಂದಿಗೂ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ೨ ಮಂದಿಗೂ, ಒಟ್ಟು ೩೬೫ ಜನರಿಗೆ ಪ್ಲೇಗ್ ಚುಚ್ಚುಮದ್ದನ್ನು ಹಾಕಿರುತ್ತಾರೆಂದೂ, ಮಾರ್ಚಿ ತಾ. ೪೦ಕ್ಕೆ ಆಖೈರಾದ ಎರಡು ವಾರಗಳಲ್ಲಿ ಮೈಸೂರು ಸೀಮೆಯಲ್ಲೆಲ್ಲಾ ೧೧,೦೭೪ ಹೆಗ್ಗಣಗಳನ್ನು ಕೊಲ್ಲಿಸಿದ್ದಾರೆಂದೂ ಪ್ರಕಟವಾಗಿದೆ.

ಕಳೆದ ಏಪ್ರಿಲ್ ತಿಂಗಳಲ್ಲಿ ಹೊಸದಾಗಿ ಐದು ಪರಸ್ಪರ ಸಹಾಯಕ ಸಂಘಗಳು ಸ್ಥಾಪಿಸಲ್ಪಟ್ಟು ರಿಜಿಸ್ಟರಾಗಿರುತ್ತವೆ. ಅವು ಯಾವುವೆಂದರೆ--ಗುಬ್ಬಿ ಶ್ರೀಕೃಷ್ಣರಾಜ ಪರಸ್ಪರ ಸಹಾಯಕ ಸಂಘ, ಮೋಬ್ಯಾಟಿ ವ್ಯವಸಾಯಾಭಿವರ್ಧಕ ಸಂಘ, ಮೋಬ್ಯಾಟಿ ಸಂಪತ್ಕುಮಾರ ವ್ಯಾಪಾರವರ್ಧನ ಪರಸ್ಪರ ಸಹಾಯ ಸಂಘ; ಚಿಕ್ಕನಾಯಕನಹಳ್ಳಿ ಪರಸ್ಪರ ಸಹಾಯಕ ಸಂಘ, ತುಂಕೂರು ತಾಲ್ಲೂಕು ಹೆಬ್ಬೂರು ಪರಸ್ಪರ ಸಹಾಯಕ ಸಂಘ ಎಂಬವು.

ದುಷ್ಕಾಲದ ನಿಮಿತ್ತವಾಗಿ ದನಗಳಿಗೆ ಹುಲ್ಲನ್ನು ಒದಗಿಸುವ ವಿಷಯದಲ್ಲಿ ಮೈಸೂರು ಸರ್ಕಾರದವರು ಹುಕುಂ ಕೊಟ್ಟಿರುವುದೇನೆಂದರೆ--ರೈತ ಪ್ರಜೆಗಳಿಗೆ ಕತ್ತರಿಸಿದ ಹುಲ್ಲನ್ನು ಮುಫತ್ತಾಗಿ ಕೊಡಿಸುವುದು ಸಾಧ್ಯವಲ್ಲ. ಕತ್ತರಿಸಿದ ಕೂಲಿಯನ್ನಾದರೂ ಅವರಿಂದ ವಸೂಲ್ಮಾಡಬೇಕು. ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಒಂದು ಗಾಡಿ ಹುಲ್ಲು ೨॥ ರೂಪಾಯಿಗೆ ಸಿಕ್ಕುವಂತೆ ಫಾರೆಸ್ಟ್ ಕನ್ಸರ್ವೇಟರವರು ಏರ್ಪಾಡು ಮಾಡಿರುವುದು ಸಂತೋಷಕರವಾಗಿದೆ. ಜೋಳದಹಳ್ಳದಲ್ಲಿ ಹುಲ್ಲನ್ನು ಕೂಡಿಸಿಟ್ಟಿದ್ದಾರೆ. ರೈತರು ಅಲ್ಲಿಂದ ಸ್ವಂತ ಖರ್ಚಿಟ್ಟು ಸಾಗಿಸಿಕೊಂಡು ಹೋಗಬಹುದಾಗಿದೆ ಎಂಬುದೇ.

ಸರ್ಕಾರದವರು ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್‌ರವರ ಶಿಫಾರಸನ್ನು ಅಂಗೀಕರಿಸಿ ಈ ಸಾಲಿನ ಆಖೈರಿನೊಳಗಾಗಿ ಅಂದರೆ ಮುಂದಿನ ಜೂನ್ ತಾ. ೩೦ರೊಳಗೆ ಹೊಸದಾಗಿ ಇಪ್ಪತ್ತಾರು ಗ್ರಾಮ ಪಾಠಶಾಲೆಗಳನ್ನು ಸ್ಥಾಪಿಸಬೇಕೆಂತಲೂ, ಅವುಗಳಿಗೆ ಮಾಸೆಯಾನಾ ೩೦೪ ರೂಪಾಯಿ ಖರ್ಚು ಮಾಡಬಹುದೆಂತಲೂ ಸ್ಯಾಂಕ್ಷನ್ ಮಾಡಿದ್ದಾರೆ. ಆ ಪೈಕಿ ೨೩ ಪಾಠಶಾಲೆಗಳ ಕಟ್ಟಡಗಳು ಸಿದ್ಧವಾಗಿರುತ್ತವೆ. ಇನ್ನು ಮೂರು ಪಾಠಶಾಲೆಗಳಿಗೆ ಕಟ್ಟಡಗಳನ್ನು ಇಷ್ಟರಲ್ಲೇ ಸಿದ್ಧಪಡಿಸಿ ಕೊಡುವುದಾಗಿ ಒಪ್ಪಂದವಾಗಿರುವುದು. ಪಾಠಶಾಲೆಗಳ ವಿವರ ವಾಸ್ತಗಂಡರೆ-- ಹಿಂದುಸ್ಥಾನಿ ಗಂಡು ಮಕ್ಕಳ ಪಾಠಶಾಲೆಗಳು ೨, ಹೆಣ್ಣು ಮಕ್ಕಳಿಗೆ ೨, ಪಂಚಮರ ಗಂಡು ಹುಡುಗರಿಗೆ ೧, ಬೇಗಾರಿ ಗಂಡು ಹುಡುಗರಿಗೆ ೨, ಇತರ ಗ್ರಾಮ ಪಾಠಶಾಲೆಗಳು ಗಂಡು ಹುಡುಗರಿಗೆ ೧೩, ಹೆಣ್ಣು ಮಕ್ಕಳಿಗೆ ೬. ಅಂತು ಗಂಡು ಹುಡುಗರಿಗೆ ೧೮ ಪಾಠಶಾಲೆಗಳೂ, ಹೆಣ್ಣು ಮಕ್ಕಳಿಗೆ ೮ ಪಾಠಶಾಲೆಗಳೂ ಸ್ಥಾಪಿಸಲ್ಪಡುತ್ತವೆ.

ಮೈಸೂರು ಗೆಜೆಟ್ ಸಂಗ್ರಹ

ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಮಿ. ಸಿ. ಪಲ್ಲುಯವರಿಗೆ ಮೇ ತಾ. ೧೯ರಿಂದ ಹದಿಮೂರು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಇವರ ಗೈರ್ಹಾಜರಿಯಲ್ಲಿ ಮಿ. ಎ. ಕೆ. ಪಾಂಡುಯವರು ತಮ್ಮ ಇತರ ಕೆಲಸಗಳೊಂದಿಗೆ ಡೆಪ್ಯುಟಿ ಸ್ಯಾನಿಟರಿ ಕಮಿಷನರ ಕೆಲಸಗಳನ್ನೂ ನಡಿಸತಕ್ಕದ್ದು.

ಕಡೂರು ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ॥ ಟಿ. ಎಫ್. ವಿಲ್ಕಿನ್‌ಸನ್‌ರವರಿಗೆ ಕೊಟ್ಟಿರುವ ಹತ್ತು ದಿನಗಳ ಪ್ರಿವಿಲೇಜ್ ರಜವನ್ನು ಇನ್ನೂ ಐದು ದಿನಗಳಿಗೆ ವಿಸ್ತರಿಸಲಾಗಿದೆ.

ಮೈಸೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಡೆಪ್ಯುಟಿ ಕನ್ಸರ್ವೇಟರ್ ಮಿ. ಎ. ಜಿ. ರಂಗರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಇವರ ಗೈರ್ಹಾಜರಿಯಲ್ಲಿ ಹೆಗ್ಗಡದೇವನಕೋಟೆ ಸಬ್ ಡಿವಿಜನ್ ಆಫೀಸರ್ ಮಿ॥ ಪಿ. ಎಸ್. ಗೋವಿಂದರಾಯರು ತಮ್ಮ ಇತರ ಕೆಲಸಗಳೊಂದಿಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನ ಛಾರ್ಜನ್ನೂ ವಹಿಸತಕ್ಕದ್ದು.

ಸಾಗರದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮಿ॥ ಎ. ಶ್ರೀನಿವಾಸಮೂರ್ತಿಯವರಿಗೆ ಹನ್ನೊಂದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ॥ ಎಂ. ಚಂಗೈಯಚೆಟ್ಟಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹನ್ನೆರಡು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಇವರ ಗೈರ್ಹಾಜರಿಯಲ್ಲಿ ದಾವಣಗೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮಿ॥ ಎನ್. ಸುಬ್ಬರಾಯರು ತಮ್ಮ ಇತರ ಕೆಲಸಗಳೊಂದಿಗೆ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಛಾರ್ಜನ್ನೂ ವಹಿಸತಕ್ಕದ್ದು.

ಸಾಗರದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮಿ॥ ಎಂ. ಶ್ರೀನಿವಾಸಮೂರ್ತಿಯವರಿಗೆ ಮೇ ತಾ. ೧೦ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಇವರ ಗೈರ್ಹಾಜರಿಯಲ್ಲಿ ಅಸಿಸ್ಟೆಂಟ್ ಕಮಿಷನರ್ ಮಿ॥ ಆರ್. ಟಿ. ಮಹದೇವರಾಯರು ತಮ್ಮ ಇತರ ಕೆಲಸಗಳೊಂದಿಗೆ ಸಾಗರದ ಸಬ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು.

ಮಿ॥ ಬಿ. ಎಲ್. ಮಾನ್‌ಕರ್‌ಯವರನ್ನು ಕಳೆದ ಸೆಪ್ಟೆಂಬರ್ ತಾ. ೨೪ರಿಂದ ಮೈಸೂರು ಸಿಟಿ ಹೆಲ್ತ್ ಆಫೀಸರಾಗಿ ಖಾಯಂ ಮಾಡಿದೆ.

ಶ್ರೀಮನ್ಮಹಾರಾಜರವರು ೪ನೇ ಗ್ರೇಡ್ ಜಮಾದಾರ್ ಗೋಪಾಲರಾಯರನ್ನು ಲೋಕಲ್ ಸರ್ವಿಸ್ ರೆಜಿಮೆಂಟಿನಿಂದ ಶ್ರೀಮನ್ಮಹಾರಾಜರವರ ಬಾಡಿಗಾರ್ಡಿಗೆ ವರ್ಗಮಾಡಿ, ದಫೇದಾರ್ ಸುಬ್ಬರಾವ್ ಚಿನ್ಮಯರವರನ್ನು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ೪ನೇ ಗ್ರೇಡ್ ಜಮಾದಾರಿಗೆ ಏರ್ಪಡಿಸಿರುತ್ತಾರೆ.

ಗವರ್ನ್‌ಮೆಂಟ್ ತೋಟಗಳ ಸೂಪರಿಂಟೆಂಡೆಂಟ್ ಮಿ॥ ಆರ್. ಡಬ್ಲ್ಯು ಎಲ್ಲಿಕ್ ಮಿ॥ ಅವರನ್ನು ಮೈಸೂರು ಸ್ಟೇಟ್ ನ್ಯಾಯದ ಚೀಫ್ ಬಟನಿಸ್ಟ್ ಆಫೀಸರಾಗಿ ನೇಮಕ ಮಾಡಿರುತ್ತಾರೆ.

ತರೀಕೆರೆಯಲ್ಲಿರುವ ಮುಜರಾಯಿ ಛತ್ರದ ವಸ್ತುಗಳಿಗೆ ಮುಂದೆ [illegible] ದರ್ಖಾಸ್ತುಗಳಿಗಾಗಿ [illegible]

[illegible]

[illegible]

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಮೇ ತಾ. 8 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು.	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು	ಧರ್ಮಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು.	ಮಕ್ಕಳು.	ರೂ	
ಬೆಂಗಳೂರು	282	144	11	287	250
ಕೋಲಾರ	1,203	654	103	1,794	721
ತುಮಕೂರು	1,114	524	57	1,662	785
ಮೈಸೂರು	61	39	6	35	325
ಹಾಸನ	596	635	65	801	62
ಶಿವಮೊಗ್ಗ	63	.	.	127	5
ಕಡೂರು	76	28	..	30	
ಚಿತ್ರದುರ್ಗ	624	634	124	1,084	466
ಮಾಂಕಾಣೆವೆ	163	223	3	356	..
ಸ್ಯಾನಿಟರಿ	63	73	..	114	...
ಒಟ್ಟು	4,334	2,954	368	6,249	2,614

ಅತ್ಯುತ್ತಮವಾದ ಜೀವನವು

ಬುದ್ಧಿಬಲದಿಂದಲೂ ದೇಹಬಲದಿಂದಲೂ ಪ್ರಾಮಾಣಿಕವಾಗಿ ಕೆಲಸ ಮಾಡಿ ಜೀವಿಸತಕ್ಕ ಜೀವನವೇ ಅತ್ಯುತ್ತಮವಾದದ್ದು. ಕೆಲಸಗಾರರಿಂದ ಈ ಪ್ರಪಂಚವು ಇಷ್ಟು ಉತ್ಕೃಷ್ಟಸ್ಥಿತಿಗೆ ಬಂದಿರುವುದು. ಈಗ ನಿರ್ಮಾಣವಾಗಿರತಕ್ಕ ಯಂತ್ರಗಳಲ್ಲಿ ಪ್ರತಿ ಒಂದೂ ನೂರಾರು ಜನಗಳು ಮಾಡತಕ್ಕ ಕೆಲಸವನ್ನು ಮಾಡುವವು. ಈ ಯಂತ್ರಗಳನ್ನು ನಿರ್ಮಾಣ ಮಾಡಿದವರು ಯಾರು? ಮನುಷ್ಯರಲ್ಲವೇ? ಸ್ಟೀಮ್ ಯಂತ್ರವನ್ನೂ, ಬಟ್ಟೆ ಬಟ್ಟೆಗಳನ್ನು ನೇಯುತಕ್ಕ ಯಂತ್ರವನ್ನೂ, ರೈಲುಗಾಡಿ ಎಳೆಯುತಕ್ಕ ಯಂತ್ರವನ್ನೂ, ವಿದ್ಯುಚ್ಛಕ್ತಿಯ ಯಂತ್ರಗಳನ್ನೂ ಮಾಡಿದವರು ಯಾರು? ಮನುಷ್ಯಮಾತ್ರರೇ ಅಲ್ಲವೇ? ಜಾರ್ಜ್ ಸ್ಟೀವನ್ಸನ್ ಎಂಬುವನು ಬೆಂಕಿಯ ಯಂತ್ರಗಳನ್ನು ನಡೆಸತಕ್ಕವನಾಗಿದ್ದನು. ವಾಟ್ ಎಂಬುವನು ಯಂತ್ರಗಳನ್ನು ನಿರ್ಮಾಣ ಮಾಡತಕ್ಕವನಾಗಿದ್ದನು. ನ್ಯೂಕಮ್ ಎಂಬುವವನು ಕಮ್ಮಾರನಾಗಿದ್ದನು. ನೇಯುವ ಯಂತ್ರವನ್ನು ನಿರ್ಮಾಣ ಮಾಡಿದ ಆರ್ಕ್‌ರೈಟ್ ಎಂಬುವನು ಕ್ಷೌರಿಕನಾಗಿದ್ದನು. ರೇಷ್ಮೆ ಯಂತ್ರಗಳನ್ನು ಕಂಡುಹಿಡಿದ ಜಾಕರ್ಡ್ ಎಂಬುವನು ನೇಯುವವನಾಗಿದ್ದನು. ಸ್ಟೀಮ್ ದೋಣಿಯನ್ನು ನಿರ್ಮಾಣ ಮಾಡಿದ ಫುಲ್ಟನ್ ಎಂಬುವನು ಚಿತ್ರಗಾರನಾಗಿದ್ದನು. ಪ್ರಿಂಟಿಂಗ್ ಪ್ರೆಸ್ ಮೊದಲಾದವುಗಳನ್ನು ನಿರ್ಮಾಣ ಮಾಡಿದ ಕೋಲರ್ ಎಂಬುವನೂ, ರಾಬರ್ಟ್ ಹೋ ಎಂಬುವನೂ ಕಮ್ಮಾರರಾಗಿದ್ದರು. ವಿದ್ಯುಚ್ಛಕ್ತಿಯನ್ನು ಕಂಡುಹಿಡಿದ ಬೆಂಜಮಿನ್ ಫ್ರಾಂಕ್ಲಿನ್ ಎಂಬುವನು ಪ್ರಿಂಟರಾಗಿದ್ದನು. ಟೆಲಿಫೋನ್, ಗ್ರಾಮೋಫೋನ್ ಮೊದಲಾದ ಅನೇಕ ಸಾವಿರ ಯಂತ್ರಗಳನ್ನು ನಿರ್ಮಾಣ ಮಾಡಿ ಇನ್ನೂ ಅನೇಕ ಯಂತ್ರಗಳನ್ನು ಕಂಡುಹಿಡಿಯುತ್ತಲಿರುವ ಎಡಿಸನ್ ಎಂಬಾತನು ವರ್ತಮಾನ ಪತ್ರಿಕೆಗಳ ಆಫೀಸಿನಲ್ಲಿಯೂ ಟೆಲಿಗ್ರಾಫ್ ಆಫೀಸಿನಲ್ಲಿಯೂ ಕೆಲಸ ಮಾಡತಕ್ಕವನಾಗಿದ್ದನು. ಈ ಜನಗಳೆಲ್ಲರೂ ಸ್ವಶಕ್ತಿಯಿಂದ ಅಹೋರಾತ್ರಿಯಲ್ಲಿಯೂ ಕೆಲಸ ಮಾಡಿ ಪ್ರಯೋಜನಕರವಾದ ಯಂತ್ರಗಳನ್ನು ನಿರ್ಮಾಣ ಮಾಡಿ ಲೋಕಕ್ಕೆ ಉಪಕಾರವನ್ನು ಮಾಡಿದ್ದಲ್ಲದೆ ತಾವೂ ಆಚಂದ್ರಾರ್ಕವಾದ ಕೀರ್ತಿಯನ್ನು ಸಂಪಾದಿಸಿದರು. ಒಬ್ಬರು ಮಾಡುವ ಕೆಲಸವನ್ನು ಪರಿಶೀಲಿಸಿ ಸರಿಯಾಗಿ ತಿಳಿದುಕೊಂಡರೆ ಮತ್ತೊಬ್ಬರು ಮಾಡುವುದೇನೂ ಕಷ್ಟವಲ್ಲ. ಮೇಧಾವಿಗಳಾದವರು ಈ ಕೆಲಸವನ್ನು ಮಾಡುವುದರಲ್ಲಿ ಅತ್ಯಂತ ಪ್ರಯೋಜನಕರವಾದ ಹೊಸ ಯಂತ್ರಗಳನ್ನೂ ಕೂಡ ನಿರ್ಮಾಣ ಮಾಡುವರು. ಈ ವಿಶೇಷಶಕ್ತಿಯ ಅರ್ಜನೆಯು ಕಷ್ಟವಾದದ್ದಲ್ಲ. ನೂರಾರು ವರುಷಗಳಲ್ಲಿ ಅನೇಕರಾಷ್ಟ್ರಗಳು ಸೇರಿದ ಸಂಯುಕ್ತ ಪ್ರಾಂತ್ಯದ ಜನಗಳು ಈ ಪ್ರಪಂಚದಲ್ಲಿ ಅದ್ವಿತೀಯರೆಂದೆನ್ನಿಸಿಕೊಂಡರು. ಜರ್ಮನ್ ದೇಶದವರು ಕಳೆದ ೫೦ ವರುಷಗಳಲ್ಲಿ ಅಮೇರಿಕಾಖಂಡದವರನ್ನು ಕೂಡಾ ಮೀರಿಸುತ್ತಾ ಬಂದಿದಾರೆ. ಜರ್ಮನೀ ದೇಶದವರು ಬಹುಕಾಲದಿಂದ ಈ ಬಾಬಿನಲ್ಲಿ ಮೆಹನತ್ತು ಮಾಡಿ ಈಗಲೂ ಅಗ್ರಗಣ್ಯರೆಂದೆನ್ನಿಸಿಕೊಳ್ಳುತ್ತಲಿರುವರು.

ನಮ್ಮ ಜನಗಳು ಒಂದು ಸೂಜಿಯನ್ನೂ, ಒಂದು ದೀಪದ ಕಡ್ಡಿಯನ್ನೂ ಕೂಡ ತಾವಾಗಿ ತಯಾರು ಮಾಡಿಕೊಳ್ಳುವುದಕ್ಕೆ ತಿಳಿಯದೆ ಪರಾಧೀನರಾಗಿರುವರು. ದೀಪದ ಚಿಮ್ನಿಗಳೂ ಕೂಡ ಪರದೇಶದಿಂದ ಬಂದ ಹೊರತು ನಮಗೆ ಗತಿಯಿಲ್ಲ. ನಮ್ಮ ಸುತ್ತುಮುತ್ತಲೂ ಇರತಕ್ಕ ಲೋಕದವರೆಲ್ಲಾ ವೃದ್ಧಿಗೆ ಬರುತ್ತಲಿರುವಾಗ್ಯೆ ನಾವು ಇಷ್ಟು ಹೀನಸ್ಥಿತಿಯಲ್ಲಿರುವುದನ್ನು ನೋಡಿದರೆ ಯಾರಿಗೆತಾನೇ ವಿಷಾದವಾಗುವುದಿಲ್ಲ. ನಮ್ಮ ವಿದ್ಯಾರ್ಥಿಗಳೇ ಉತ್ತರೋತ್ತರ ನಮ್ಮ ದೇಶದ ಭಾರವನ್ನು ವಹಿಸತಕ್ಕವರಾಗಿರುತ್ತಾರೆ. ಇವರು ಸಾಧ್ಯವಾದ ಸಾಧನಗಳನ್ನೆಲ್ಲಾ ಮಾಡಿ ದೇಶಾಂತರದಿಂದ ಯಾವ ಯಾವ ಯಂತ್ರಗಳೂ, ದೇಶಾಂತರದಲ್ಲಿ ಕೈಗಾರಿಕೆಯಿಂದ ಮಾಡಲ್ಪಟ್ಟ ಯಾವ ಯಾವ ಪದಾರ್ಥಗಳೂ ನಮ್ಮ ದೇಶಕ್ಕೆ ರಫ್ತಾಗುವವೋ ಅವನ್ನೆಲ್ಲಾ ಪರಿಶೀಲಿಸಿ ಅವುಗಳನ್ನು ತಾವೇ ತಯಾರುಮಾಡಿಕೊಳ್ಳುವ ಶಕ್ತಿಯನ್ನು ಸಂಪಾದಿಸಿಕೊಂಡು ಆ ವಿದ್ಯೆಗಳನ್ನು ನಮ್ಮ ದೇಶೀಯರಿಗೆ ಲಭ್ಯವಾಗುವಂತೆ ಮಾಡಿದರೆ ನಮ್ಮ ಹೀನಸ್ಥಿತಿಯು ಪರಿಹಾರವಾಗುವುದು.

ದಕ್ಷಿಣ ದೇಶದ ಅಪೂರ್ವ ಸುಳಿಗಾಳಿ

ಪುತ್ತೂರು.

ತಾ. ೪ ರಿಂದ ೮ ನೇ ತಾರೀಖಿನ ತನಕ ಪ್ರಚಂಡ ಗಾಳಿ ಮಳೆ ಆಯಿತು. ಬಲವಾರಿನಲ್ಲಿ ೫ ದೊಡ್ಡ ಗೋಣಿ ಮರಗಳು ಬೇರು ಸಮೇತ ಕಿತ್ತು ಮಾರ್ಗಕ್ಕೆ ಬಿದ್ದು ಜನ ಸಂಚಾರಕ್ಕೆ ಆತಂಕವಾಗಿ ೩-೪ ದಿನ ಗಾಡಿ ವಗೈರೆ ಮಾರ್ಗದಲ್ಲಿ ಓಡಾಟವಾಡಲಿಲ್ಲ. ತಂತಿ ಟಪ್ಪಾಲಿನ ತಂತಿ ಸಹ ಹರಿದುಬಿದ್ದಿದೆ. ದುರಸ್ತು ಮಾಡುತ್ತಾರೆ. ಬಾವಿಗಳಲ್ಲಿ ನೀರಿಗಾಗಿ ಜನರ ತಾಪ ಪರಿಹಾರವಾದಂತಾಯಿತು. ಇದೇ ಮಳೆಗಾಲದ ಪ್ರಾರಂಭವೋ ಎಂಬಂತೆ ತೋರುತ್ತದೆ. ಕೆಲವು ಹಳೇ ಮನೆಗಳು ಸೋರುವದರಿಂದಲೂ, ಹೊಸ ಮನೆಗಳಿಗೆ ಮಾಡು ಮಾಡದ್ದರಿಂದಲೂ ಬಿದ್ದು ಮಣ್ಣಿನ ಪಾಲಾದವು.

ತಲಚೇರಿ.

ಇಲ್ಲಿ ವಿಶೇಷವಾದ ಸುಂಟರಗಾಳಿ ಮಳೆಯು ದೆಸೆಯಿಂದ ಸಮುದ್ರ ತೀರದಲ್ಲಿದ್ದ ಇಪ್ಪತ್ತು ದೇಶೀಯ ಪತ್ತೆಮಾರುಗಳು ದಡಕ್ಕೆ ಬಡಿದು ಒಡೆದು ಹೋದವು. ಸುತ್ತುಮುತ್ತಲೂ ಬಹಳ ನಷ್ಟ ಸಂಭವಿಸಿದೆ. ಇಬ್ಬರು ವ್ಯಾಪಾರಿಗಳ ವ್ಯಾಪಾರ ಸರಕುಗಳು ಸುಮಾರು ೫೦,೦೦೦ ರೂಪಾಯಿವರೆಗೆ ನಾಶವಾದವು. ಸಾಮಾನನ್ನು ಹಡಗಿಗೆ ತುಂಬಿಸುವುದಕ್ಕೂ, ಹಡಗಿನಿಂದ ಇಳಿಸುವದಕ್ಕೂ ಇದ್ದ ಯಾನಗಳು ಮುಂದು ನೋಡದ್ದರಿಂದ ವರ್ತಕರಿಗೆ ಬಹಳ ತೊಂದರೆಯಾಗಿದೆ. ಅಜೀಕಲ್‌ನಲ್ಲಿ ಮೂರು ಪತ್ತೆಮಾರುಗಳು ಮುರಿದು ಹೋದವು. ಅತ್ತ ಪೊನ್ನಾನಿ ತಾಲ್ಲೂಕಿಗೆ ಸೇರಿದ ಎನಮಾಕಲ್ ಎಂಬಲ್ಲಿ ಪ್ರವಾಹದ ದೆಸೆಯಿಂದ ಅಪಾರ ನಷ್ಟ ಸಂಭವಿಸಿದೆ. ಈ ಪ್ರಾಂತ್ಯ ರೈತರು ಬಹಳ ಕಷ್ಟಪಟ್ಟು ಕೋಲೀ ಎಂಬ ಒಂದು ವಿಜಾತೀಯವಾದ ಭತ್ತವನ್ನು ಬೆಳೆಯುತ್ತಾರೆ. ಅವರು ಬಹಳ ಶ್ರಮಪಟ್ಟು ತುಂಬಾ ಹಣ ಖರ್ಚುಮಾಡಿ ಈ ಸಲ ವ್ಯವಸಾಯ ಮಾಡಿದ್ದರು. ದೊಡ್ಡ ದೊಡ್ಡ ಜಮೀನ್ದಾರರಿಗೆಲ್ಲಾ ಸುಮಾರು ೨೫,೦೦೦ ರೂಪಾಯಿನ ಫಸಲು ನಷ್ಟವಾಗಿರುವದು. ಅನೇಕ ಸಣ್ಣ ವ್ಯವಸಾಯಗಾರರು ಈ ಪ್ರವಾಹದ ದೆಸೆಯಿಂದ ಭಿಕ್ಷುಕರಾಗಿದಾರೆ. ಡಿಸ್ಟ್ರಿಕ್ಟಿನಲ್ಲೆಲ್ಲಾ ಸಾಮಾನ್ಯವಾಗಿ ಬಹಳ ಭತ್ತದ ಬೆಳೆಯು ಕೊಚ್ಚಿಹೋಯಿತು.

ಒಂಟ್ವಾಳ

ಇದೇ ತಿಂಗಳ ತಾರೀಕು ೬ ಕ್ಕೆ ಮಳೆ ಆರಂಭಿಸುತ್ತಾ ೭ ನೇ ತಾರೀಕಿನ ರಾತ್ರಿ ಪ್ರಚಂಡ ಬಿರುಗಾಳಿ ಬೀಸಿ ಈ ಸರಹದ್ದಿನೊಳಗೆ ಅನೇಕ ಮನೆ ಮರಗಳು ಬಿದ್ದು ನೆಲಸಮವಾದವು. ಒಂದೇ ರಾತ್ರಿಯ ಗಾಳಿ ಮಳೆಯಿಂದ ನದಿಯಲ್ಲಿ ದೋಣಿ ನಡೆಸಲಿಕ್ಕೆ ನೀರು ಇಲ್ಲದಿರುತ್ತಾ ಫಕ್ಕನೆ ಹೊಳೆ ತುಂಬಿ ಆಗಸ್ಟ್ ತಿಂಗಳಲ್ಲಿ ಪ್ರವಾಹ ಬರುವಂತೆ ಸಣ್ಣ ನೆರೆ ಬಂದು ನಾಡನೇ ದಿನ ಇಳಿಯಿತು. ಈಗ ಕೆರೆ ಬಾವಿಗಳಲ್ಲಿ ತುಂಬಾ ನೀರು ಇದೆ. ಬಂಟ್ವಾಳದ ಸಮೀಪ ೧೫ ಮೈಲಿ ಕಲ್ಲಿನ ಹತ್ತಿರ ಇರುವ ಸಂಕವು ಮೇಲಿನ ಗುಡ್ಡೆಯ ನೀರಿನ ರಭಸಕ್ಕೆ ಮುರಿದು ಪೂರಾ ಬಿದ್ದಿದೆ. ನೀರಿನ ಸಂಗಡ ಅನೇಕ ಜಾತಿಯ ಮರ ಹಲಿಗೆ ಮುಂತಾದವು ಕೊಚ್ಚಿಕೊಂಡು ಬಂದು ಸಂಕದ ಕಮಾನಿಗೆ ಅಡ್ಡಲಾಗಿ ಬಿದ್ದು ನೀರು ಕಟ್ಟಿದ್ದೇ ಇದಕ್ಕೆ ಕಾರಣವು. ಪಾಣೆಮಂಗಳೂರು ಸಮೀಪ ಕಡವಿನ ಹತ್ತಿರ ಹುಲ್ಲು ತುಂಬಿದ್ದ ಕೆಲವು ಗಾಡಿಗಳು ನೊಯಿಗೆಯಲ್ಲಿ ಹೂತು ಹೋಗಿವೆ. ನದಿಯಲ್ಲಿ ಬಂಟ್ವಾಳಕ್ಕೆ ಮೇಲ್ಗಡೆಯಲ್ಲಿಟ್ಟ ಸುಮಾರು ೧೦೦ ದೋಣಿಗಳನ್ನು ನೀರು ಕೆಳಗೆ ಕೊಚ್ಚಿಕೊಂಡು ಹೋಗಿದೆ. ಬಂಟ್ವಾಳ ಟವನ್ನಿನೊಳಗೆ ಅನೇಕ ಮನೆಗಳ ಮಾಡೂ ಗೋಡೆಗಳೂ ಬಿದ್ದು ಹೋಗಿವೆ. ಮೂಡಬಿದ್ರೆಯಿಂದ ಒಂದು ಗಾಡಿ ಬರಬೇಕಾದರೆ ಸುಮಾರು ೩೦ ಸ್ಥಳಗಳಲ್ಲಿ ದಾರಿಯಲ್ಲಿ ಬಿದ್ದ ಮರಗಳನ್ನು ಕಡಿದು ಹಾಕಿ ಬರಬೇಕಾಯಿತಂತೆ. ತಂತಿಕಂಭಗಳು ಬಿದ್ದು ಬಿಟ್ಟಿವೆ.

ಮಂಗಳೂರು.

ಇದೇ ತಿಂಗಳ ೭ನೇ ತಾ ಶುಕ್ರವಾರ ರಾತ್ರಿ ಮಂಗಳೂರಿನಲ್ಲಿ ಬಿರುಗಾಳಿಯಿಂದ ಬಹಳ ಹಾವಳಿ ಉಂಟಾಗಿದೆ. ಇಂಥಾ ಬಿರುಗಾಳಿ ಬಂದದ್ದನ್ನು ೬೦ ವರ್ಷದ ಮುದುಕರೂ ಕೂಡ ಕಾಣಲಿಲ್ಲ ಎಂದು ಹೇಳುತ್ತಾರೆ.

೮ನೇ ತಾರೀಖಿನಿಂದ ದಿನಾಲೂ ಸಾಯಂಕಾಲದ ಮೇಲೆ ಒಳ್ಳೇ ಮಳೆ ಸುರಿಯುತ್ತಲೇ ಇತ್ತು. ಬಿರುಗಾಳಿಗೆ ೨ ದಿನ ಮೊದಲು ಒಂದು ಸುಂಟರಗಾಳಿಯು ಮಂಗಳೂರನ್ನು ನೆರೆಹೊರೆಯುವರನ್ನೂ ದಾಟಿ ಹೋಗುತ್ತದೆ ಎಂಬದಾಗಿ ಮದ್ರಾಸಿನಿಂದ ತಂತಿ ಬಂದಿತ್ತು. ಶುಕ್ರವಾರ ಮಧ್ಯಾಹ್ನದ ಮೇಲೆ ಜೋರು ಮಳೆ ಹೊಡೆಯುತ್ತಾ ಸಾಯಂಕಾಲ ೭—೮ ಗಂಟೆಗೆ ಬಲವಾದ ಗಾಳಿಯು ಗುಮುಗುಮು ಬೀಸುತ್ತಾ ಸಣ್ಣ ಸಣ್ಣ ಮರಗಳನ್ನೂ ಹಲವು ಮಾವಿನ ಹೆಮ್ಮರಗಳನ್ನೂ ಕಿತ್ತು ಬೀಳಿಸುವದಾಯಿತು. ಒಳಕೆ ಗಾಳಿಯು ಮತ್ತಷ್ಟು ಬಲವಾಗಿ ಬೀಸುತ್ತಿರಲು, ೧೦ ಗಂಟೆಗೆ ದೊಡ್ಡ ದೊಡ್ಡ ಮರದ ಕೊಂಬೆಗಳು ಲಟಕ್ಕನೆ ಮುರಿದು ಬೀಳುವ ಶಬ್ದವು ಕೇಳಿಸಿತು. ಮಧ್ಯರಾತ್ರಿಯ ಮೇಲೆ ೩–೪ ಗಂಟೆ ಬಿರುಗಾಳಿಯ ಪೂರ್ಣ ಬಲವು ಕಾಣಿಸಿತು. ಆಗ್ಯೆ ಸಮುದ್ರದಲ್ಲಿ ಮಹಾ ತೆರೆಗಳು ಎದ್ದು ಒಡೆಯುವಂತೆ ಮಹಾ ಘೋಷದಿಂದ ಗಾಳಿಯು ಘರ್ಜಿಸುತ್ತಾ ಬೀಸುತ್ತಿರಲು, ಅನೇಕ ದೊಡ್ಡ ಮನೆಗಳಲ್ಲಿದ್ದವರು ಸಹ ಮನೆಯು ಈಗ ಬೀಳುತ್ತದೋ, ಮತ್ತೆ ಬೀಳುತ್ತದೋ ಎಂದು ಹೆದರಿ ದೀಪಹಚ್ಚಿಕೊಂಡು ಜಾಗರಣೆ ಮಾಡಿದರು. ಮಾರನೇ ದಿವಸ ಬೆಳಗ್ಗೆ ಇದರಿಂದಾದ ಹಾವಳಿಯು ಪ್ರಕಟವಾಯಿತು. ದೊಡ್ಡ ಮರಗಳು ಹೆಚ್ಚುಕಡಮೆ ಎಲ್ಲಾ ದಾರಿಗಳಲ್ಲಿಯೂ ತೋಟಗಳಲ್ಲಿಯೂ ಉರುಳಿಬಿದ್ದು ಬಂಡಿಗಳ ಸಂಚಾರಕ್ಕೆ ಅಭ್ಯಂತರವಾಯಿತು. ಅನೇಕ ಮನೆಗಳ ಹಂಚುಗಳೂ ಮಾಡುಗಳೂ ಹಾರಿಹೋಗಿದ್ದವು. ಅಲ್ಲಲ್ಲಿ ಸಣ್ಣ ದೊಡ್ಡ ಮನೆಗಳೂ ಉರುಳಿ ಬಿದ್ದಿದ್ದವು. ತಂತಿಟಪ್ಪಾಲು, ಟೆಲಿಫೋನ್, ಮುನಿಸಿಪಾಲ್ ಲಾಂದ್ರ ಮೊದಲಾದವುಗಳ ಸ್ತಂಭಗಳು ನೆಲವನ್ನು ಮುದ್ದಿಡುತ್ತಿದ್ದವು. ಇಂಗ್ಲಿಷ್ ದೇವಾಲಯದ ಮೈದಾನದಲ್ಲಿ ನೂರಾರು ಕಾಗೆಗಳು ಸತ್ತುಬಿದ್ದವು. ಯಾವದೊಂದು ತರದ ನಷ್ಟ ಹೊಂದದ ಮನೆಯು ಪಟ್ಟಣದಲ್ಲಿ ಇಲ್ಲ. ಬಿಜಾಪುರದಲ್ಲಿಯೇ ಸುಮಾರು ೫೦೦ ತೆಂಗಿನ ಮರಗಳು ಬಿದ್ದವು. ಅಡಿಕೆತೋಟಗಳಲ್ಲಿ ಅತ್ಯಧಿಕ ನಷ್ಟವಾಗಿದೆ. ಕಿತ್ತುಬಿದ್ದ ಹಸಿ ತೆಂಗಿನ ಮಡಲುಗಳಿಗೆ ಲೆಕ್ಕವೇ ಇಲ್ಲ. ಇಷ್ಟೇ ಅಲ್ಲದೆ ಆ ರಾತ್ರಿಯಲ್ಲೆಲ್ಲಾ ಕುಂಭದ್ರೋಣವಾಗಿ ಮಳೆ ಸುರಿದ ಜೆಸೆಯಿಂದ ಹೊಳೆಯ ಬದಿಯಲ್ಲಿ ಫಕ್ಕನೆ ಪ್ರವಾಹ ಬಂದು ಕೆಲವು ಬಡವರ ಮನೆಗಳು ಬಿದ್ದು ಅಕ್ಕಿ, ಹುಲ್ಲು, ಜಾನುವಾರು ಮೊದಲಾದವುಗಳು ನಷ್ಟವಾಗಿವೆ ಎಂದು ಕೇಳುತ್ತೇವೆ. ಮಂಗಳೂರಿನ ಬಂದರದಲ್ಲಿ ಕೆಲವು ದೋಣಿಗಳು ಮಳೆನೀರು ತುಂಬಿ ಮುಳುಗಿ ಹೋದವು. ಸಮುದ್ರದಲ್ಲಿ ಉಪ್ಪು ತುಂಬಿಕೊಂಡು ಬಂದ ಒಂದು ಕೋಟ್ಯವು ಒಡೆದುಹೋಗಿ ಅದರಲ್ಲಿದ್ದ ಕಲಾಸಿಗಳ ಪೈಕಿ ಕೆಲವು ಮಂದಿ ಮಾತ್ರ ಕರೆಗೆ ಸೇರಿರುವರು, ಉಳಿದ ಮಂದಿ ಏನಾದರೆಂದು ಗೊತ್ತಾಗಲಿಲ್ಲ. ಇನ್ನೂ ಎಷ್ಟೆಲ್ಲಾ ಹಾವಳಿ ಆಯಿತೆಂದು ವರ್ತಮಾನವಿಲ್ಲ.

ಅಲ್ಲಲ್ಲಿ ಮಹಾ ಬಿರುಗಾಳಿ ಉಂಟಾಗಿ ಲಕ್ಷೋಪಲಕ್ಷ ರೂಪಾಯಿಯ ಆಸ್ತಿ ನಷ್ಟವಾಯಿತು ಎಂದು ವರ್ತಮಾನ ಪತ್ರಿಕೆಗಳಲ್ಲಿ ಓದುವಾಗ್ಯೆ ಈ ಪ್ರದೇಶದಲ್ಲಿರುವವರಿಗೆ ಅದರ ಸರಿಯಾದ ಅರ್ಥವು ತಿಳಿಯಲಿಲ್ಲ. ಈಗ ಒಂದಿಷ್ಟು ಅನುಭವವಾಯಿತು. ಮಳೆಯು ೯ನೇ ತಾರೀಖಿನ ವರೆಗೆ ಸುರಿಯುತ್ತಲೇ ಇತ್ತು. ಸೋಮವಾರ ಹೊಳವಾಯಿತು. ಆ ಒಂದೇ ರಾತ್ರಿ ಮಂಗಳೂರಿನಲ್ಲಿ ೧೫ ಇಂಚು ಮಳೆ ಬಿದ್ದಿದೆ. ಬತ್ತಿಹೋಗಿದ್ದ ಬಾವಿಗಳಿಗೆ ನೀರು ಬಂದದ್ದು ಅನೇಕ ಜನರಿಗೆ ಮಹೋಪಕಾರವಾಯಿತು. ಒಂದು ಲಕ್ಷ ರೂಪಾಯಿಯ ಆಸ್ತಿ ನಷ್ಟವಾಗಿರಬಹುದೆಂದು ಹೇಳುತ್ತಾರೆ. ಈ ವರೆಗೆ ಒಟ್ಟು ೨೫ ಇಂಚು ಮಳೆಯಾಯಿತು.

ಈ ಬಿರುಗಾಳಿಯು ೭ನೇ, ೮ನೇ ತಾರೀಖುಗಳಲ್ಲಿ ಮಲಬಾರಿನ ಕರೆಯಲ್ಲಿ ಮಹಾ ಹಾವಳಿಯನ್ನುಂಟುಮಾಡಿಯದೆ ಎಂತಲೂ ವರ್ತಮಾನ ಬಂದಿದೆ. ಕಲ್ಲಿಕೋಟೆಯ ಬಂದರದಲ್ಲಿದ್ದ ೪೧ ಪತ್ತೆಮಾರುಗಳಲ್ಲಿ ೧೫ ಕರೆಗೆ ಬಂದು ತಗಲಿ ಒಡೆದುಹೋದವು. ಕೆಲವು ಸಮುದ್ರದಲ್ಲಿಯೇ ಮುಳುಗಿಹೋದವು, ಬಾಕಿಯವು ಎಲ್ಲಿಹೋದವೋ ಗೊತ್ತೇ ಇಲ್ಲ. ಆ ೪೧ ಪತ್ತೆಮಾರುಗಳಲ್ಲಿ ಒಂದೂ ಉಳಿಯಲಿಲ್ಲ. ಅಕ್ಕಿ ಮೊದಲಾದ ದವಸಧಾನ್ಯಗಳು ಬಹಳವಾಗಿ ನಷ್ಟವಾಗಿವೆ. ಒಡೆದುಹೋದ ಪತ್ತೆಮಾರಿನ ಕಲಾಸಿಗಳು ಬಂದರಿನಲ್ಲಿ ನಿರಾಶ್ರಿತರಾಗಿ ಕುಳಿತುಕೊಂಡು ದುಃಖಪಡುತ್ತಿದಾರೆ. ಕಲಾಸಿಗಳಲ್ಲಿ ಇಬ್ಬರು ಮಾತ್ರ ಕಾಣುವದಿಲ್ಲ. ಅನೇಕರು ಆಶ್ಚರ್ಯಕರವಾದ ರೀತಿಯಾಗಿ ಜೀವ ಉಳಿಸಿಕೊಂಡರು. ೩ನೇ ತಾರೀಖಿನಿಂದ ೭ನೇ ತಾರೀಖು ವರೆಗೆ ಕಲ್ಲಿಕೋಟೆಯಲ್ಲಿ ೨೬ ಇಂಚು ಮಳೆ ಬಂತು. ಈ ಒಂದೇ ಬಂದರದಲ್ಲಿ ಏನಿಲ್ಲವೆಂದರೂ ಕೆಲವು ಲಕ್ಷ ರೂಪಾಯಿ ನಷ್ಟವಾಗಿರುತ್ತದೆ. ಬೇರೆ ಬಂದರುಗಳ ವರ್ತಮಾನವೇನೆಂದರೆ:- ತಿರೂರಿನಲ್ಲಿ ೩, ಬಡಗರದಲ್ಲಿ ೬, ಪೊನ್ನಾನಿಯಲ್ಲಿ ೭ ಪತ್ತೆಮಾರುಗಳು ಒಡೆದುಹೋಗಿವೆ, ಕನ್ನಾನೂರು, ತಲಚೇರಿಗಳಲ್ಲಿ ಇನ್ನಷ್ಟು ಹೆಚ್ಚು ನಷ್ಟವಾಗಿರಬೇಕೆಂದು ಊಹಿಸುತ್ತಾರೆ. ವರ್ತಮಾನವಿಲ್ಲ. ಈ ಜಿಲ್ಲೆಯಲ್ಲೆಲ್ಲಾ ಅನೇಕ ಮನೆಗಳೂ ಲೆಕ್ಕವಿಲ್ಲದಷ್ಟು ಮರಗಳೂ ಕೆಡವಿ ಬಿದ್ದಿವೆ. ಮಂಗಳೂರಿಗೂ ಕಲ್ಲಿಕೋಟೆಗೂ ತಂತಿವರ್ತಮಾನ ನಿಂತುಹೋಯಿತು. ಸ

ಇಂಡಿಯಾ ದೇಶದ ವೃತ್ತಾಂತಗಳು

ಜಯಪುರ ಸಂಸ್ಥಾನದ ಮುಖ್ಯ ಮಂತ್ರಿಯಾಗಿದ್ದ ಸಂಸಾರ ಚಂದ್ರಸೇನರವರು ಕಳೆದ ವಾರ ಕಾಲವಾದರೆಂದು ಪ್ರಕಟವಾಗಿದೆ.

ಪಂಜಾಬ್ ಆಧಿಪತ್ಯದ ಲೆಫ್ಟಿನೆಂಟ್ ಗವರ್ನರಾದ ಸರ್ ಜಾರ್ಜ್ ಹೂಯಿಟ್‌ರವರು ತೆರಾಯಿ ಜಂಗಲಿನಲ್ಲಿ ಸಂಚಾರಮಾಡಿ, ಐದು ಹುಲಿಗಳನ್ನು ಶಿಕಾರಿಮಾಡಿದರು.

ಅಫ್ಘಾನಿಸ್ಥಾನದ ಅಮೀರರವರು ತಮ್ಮ ಹಿರಿಯ ಮಗನೂ ಯುವರಾಜನೂ ಆದ ಸರ್ದಾರ್ ಇನಾಯತ್ ಉಲ್ಲಾ ಖಾನ್ ಎಂಬವರಿಗೆ ಅಫ್ಘಾನಿಸ್ಥಾನದ ಸರ್ವ ಸೈನ್ಯಾಧಿಪತ್ಯವನ್ನು ವಹಿಸಿದ್ದಾರೆಂದು ಪ್ರಕಟವಾಗಿದೆ.

ಜನರಲ್ ಸರ್ ಓ'ಮೂರ್ ಕ್ರೀಗ್‌ರವರು ಸೆಪ್ಟೆಂಬರ್ ತಿಂಗಳಲ್ಲಿ ಶ್ರೀಮೆಯಿಂದ ಬೊಂಬಾಯಿಗೆ ಬಂದು ಇಳಿದು, ಸಿಮ್ಲಾ ಪಟ್ಟಣಕ್ಕೆ ಹೋಗಿ ಲಾರ್ಡ್ ಕಿಚ್ನರ್‌ರವರಿಂದ ಹಿಂದೂಸ್ಥಾನದ ಸರ್ವಸೈನ್ಯಾಧಿಪತ್ಯವನ್ನು ವಹಿಸಿಕೊಳ್ಳುವವರಾಗಿದಾರೆ.

ಬರೋಡಾ ಸಂಸ್ಥಾನದ ಗಾಯಕವಾಡಿ ಮಹಾರಾಜರವರು ಸಂಸಾರ ಸಹಿತ ಇನ್ನೂ ೬ ದಿನ ತಿಂಗಳು ನೀಲಗಿರಿ ಬೆಟ್ಟದ ಮೇಲಿದ್ದು, ಅಲ್ಲಿಂದ ಪೂನಾ ಪಟ್ಟಣಕ್ಕೆ ಹೋಗಿ ಅಲ್ಲಿ ೭ ದಿನ ತಂಗಿದ್ದು ಕಳೆದು ತರುವಾಯ ತಮ್ಮ ರಾಜಧಾನಿಗೆ ಪ್ರಯಾಣ ಮಾಡುವರೆಂದು ಪ್ರಕಟವಾಗಿದೆ.

ತಿರುವಾಂಕೂರು (ಅನಂತಶಯನ) ಸಂಸ್ಥಾನದ ದಿವಾನ್ ದಿವಾನ್ ಬಹದ್ದೂರ್ ಮ ರಾಜಗೋಪಾಲಾಚಾರ್ಯರವರು ಎರಡು ತಿಂಗಳ ರಜಾ ಪಡೆದು ಮದರಾಸಿನಲ್ಲಿ ಒಂದು ವಿಶ್ರಾಂತಿಯನ್ನು ಹೊಂದುತ್ತಿದಾರೆ. ಮ ಪದ್ಮನಾಭ ಐಯರವರು ದಿವಾನಗಿರಿಯನ್ನು ಬದಲಿ ನೋಡುತ್ತಿರುವರು.

ಹೈದರಾಬಾದಿನ ನೈಜಾಮರವರು ಮುಂದಿನ ವರುಷ ಬೇಸಗೆ ಕಾಲದಲ್ಲಿ ನೀಲಗಿರಿ ಬೆಟ್ಟಕ್ಕೆ ಹೋಗುವರು. ಅಲ್ಲಿರುವ ಅವರ ಸೀಡರ್ಸ್ ಎಂಬ ಭವನವನ್ನು ಏಳು ಲಕ್ಷ ರೂಪಾಯಿ ಮುಟ್ಟಿಸಿ ಕಾಮಗಾರಿ ಮಾಡಿಸುವಂತೆ ಅಪ್ಪಣೆ ಕೊಟ್ಟು ಇಬ್ಬರು ಇಂಜನಿಯರುಗಳನ್ನು ಅಲ್ಲಿಗೆ ಕಳುಹಿಸಿದಾರೆ.

ಮಲೆಯಾ ಸಂಸ್ಥಾನಗಳ ಪೈಕಿ ಇಪೋಹಾ ಎಂಬ ಸ್ಥಳದಲ್ಲಿ ಸ್ಯಾನಿಟರಿ ಇಲಾಖೆಯ ಡೆಪ್ಯುಟಿ ರೆಜಿಸ್ಟ್ರಾರಾದ ಮೆ॥ ಟಿ. ಎಂ. ಕ್ಲಾರ್ಕ್ ಎಂಬ ಅಧಿಕಾರಿಯು ಲಂಚ ತೆಗೆದುಕೊಂಡನೆಂದು ರುಜುವಾತಾದದ್ದರಿಂದ ಆತನಿಗೆ ಆರು ತಿಂಗಳ ಸಜಪೂ ೫೦೦ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು.

ಕಲ್ಕತ್ತಾಪಟ್ಟಣದಲ್ಲಿ "ಬಂಗಾಳಿ" ಎಂಬ ಪತ್ರಿಕೆಯ ಮಾಲೀಕರೂ ಎಡಿಟರೂ ಆದ ಬಾಬು ಸುರೇಂದ್ರನಾಥ ಬಾನರ್ಜಿಯವರು ಕಳೆದ ರವಿವಾರ ಬೊಂಬಾಯಿಗೆ ಬಂದು ಜಹಜು ಹತ್ತಿ ವಿಲಾಯಿತಿಗೆ ಹೋಗುವುದಕ್ಕಿಂತ ಮುಂಚೆ ಆ ಪಟ್ಟಣದಲ್ಲಿ ಹಿಂದೂ ಪರಸ್ಪರ ಸಹಾಯಕ ಸ್ವದೇಶೀ ಸರಕುಗಳ ಅಂಗಡಿಯನ್ನು ಪ್ರವೇಶ ಮಾಡಿದರು.

ಮೊರಾದಾಬಾದಿನಲ್ಲಿ ಮೂರು ಜನ ಮುಸಲ್ಮಾನ ಮೌಲ್ವಿಗಳ ಮನೆಯನ್ನು ಸರ್ಕಾರದವರು ಶೋಧನೆಮಾಡಿದಾಗ ಕೆಲವು ಬಂದೂಕು, ಪಿಸ್ತೂಲು, ಮದ್ದುಗುಂಡುಗಳು ಸಿಕ್ಕಿದ್ದರಿಂದ ಅವರಲ್ಲಿ ಅವುಗಳಿಗೆ ಲೈಸೆನ್ಸು ಇಲ್ಲದಿರುವುದನ್ನು ತಿಳಿದು ಅವರಿಗೆ ತಲಾ ೬ ತಿಂಗಳ ಕಠಿಣ ಸಜವನ್ನೂ ೫೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

ಗ್ವಾಲಿಯರ್ ಸಂಸ್ಥಾನದ ಜಯ ಆರೋಗ್ಯ ಆಸ್ಪತ್ರೆಯಲ್ಲಿ ಕೆಲಸ ಮಾಡುವುದಕ್ಕೆ ಇಬ್ಬರು ಸ್ತ್ರೀಯರಾದ ಆಸ್ಪತ್ರೆ ಅಸಿಸ್ಟೆಂಟರು ಬೇಕಾಗಿದೆ ಎಂದೂ, ಇವರಿಗೆ ತಿಂಗಳಿಗೆ ೫೦ ರೂಪಾಯಿ ಸಂಬಳ ಕೊಡುವುದಲ್ಲದೆ ವಾಸಕ್ಕೆ ಮನೆಯನ್ನೂ ಕೊಡಿಸುವುದಾಗಿಯೂ ಪ್ರಕಟಿಸಿರುತ್ತಾರೆ. ಯೋಗ್ಯತೆಯುಳ್ಳ ಸ್ತ್ರೀಯರು ಅಲ್ಲಿನ ವೈದ್ಯರಿಗೆ ಬರೆದುಕೊಳ್ಳಬಹುದಾಗಿದೆ.

ಕಳೆದ ವಾರ ಹಿಂದುಸ್ಥಾನದಲ್ಲಿ ೩,೦೭೪ ಪ್ಲೇಗ್ ಮರಣಗಳಾದವು. ಈ ಪೈಕಿ ಪಂಜಾಬ್ ೨,೫೫೫, ಸಂಯುಕ್ತ ಆಧಿಪತ್ಯಗಳು ೭೪೮, ಬೊಂಬಾಯಿ

ಅಧಿಪತ್ಯ ೫,೨೩೩, ಬಂಗಾಳಾ ೪೧೯, ಮಧ್ಯಪ್ರಾಂತ್ಯಗಳು ಮತ್ತು ಬೀರಾರ್ ೭೫ ಎವರ್ಗ ೪೬, ಮದರಾಸ್ ಅಧಿಪತ್ಯ ೫, ಮೈಸೂರುಸಂಸ್ಥಾನ ೩, ಈ ರೀತಿ ಮರಣಗಳು ಸಂಭವಿಸಿವೆ

ರಂಗೂನ್ ಪಟ್ಟಣದ ತವರ್ನ ಬಂಗಲಿಯಲ್ಲಿಟ್ಟಿರುವ "ಪುರು" ಎಂಬ ಬಿಳಿಯ ಆನೆಯು ಕಳೆದ ವಾರ ಒಂದು ಒಂಟಿಯ ಕತ್ತನ್ನು ಮುರಿದು ಕೊಂದು ಹಾಕಿ, ಓಡಿಹೋಗುತ್ತಾ ಒಂದು ಹಳ್ಳದಲ್ಲಿ ಬಿದ್ದು ಕೊಂಡಿತು ಬಹಳ ಶ್ರಮ ಪಟ್ಟು ಅದನ್ನು ಮೇಲಕ್ಕೆ ಎತ್ತಿ ಕಟ್ಟಿಹಾಕಿದರು ಈ ಆನೆಯು ಸುಮಾರು ಮೂವತ್ತು ವರುಷಗಳ ಹಿಂದೆ ಮದಹತ್ತಿ ಕೆಲವು ಜನರನ್ನು ಕೊಂದಿದೆ ಎಂದು ತಿಳಿಯುವುದು.

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಬೆಲ್ಗಾವ, ದಾಹಾರ್, ಮೊದಲಾದ ಪಟ್ಟಣಗಳಲ್ಲಿ ಕಳೆದ ವಾರ ಪೋಲೀಸಿನವರೂ ಸರ್ಕಾರಿ ಅಧಿಕಾರಿಗಳೂ ವಾರಂಟು ಗಳನ್ನು ಪಡೆದು ದೊಡ್ಡ ವಕೀಲರ ಮನೆಗಳಿಗೂ, ಸಾಹುಕಾರರ ಮನೆಗಳಿಗೂ, ವಾಚಕಮಂದಿರ ಪಾಠಶಾಲೆ ಮೊದಲಾದ ಪಬ್ಲಿಕ್ ಕಟ್ಟಡಗಳಿಗೂ ಹೋಗಿ ಶೋಧನೆ ಮಾಡಿ, ಅಲ್ಲಲ್ಲಿ ದೊರಕಿದ ರಾಜದ್ರೋಹಕರವಾದ ಕಾಗದ ಪತ್ರಗಳನ್ನು ತೆಗೆದು ಕೊಂಡು ಹೋದರೆಂದೂ, ಕೆಲವು ದೊಡ್ಡ ಮನುಷ್ಯರನ್ನು ದಸ್ತಗಿರಿ ಮಾಡಿರು ತ್ತಾರೆಂದೂ ಅಲ್ಲಿನ ಪತ್ರಿಕೆಯು ತಿಳಿಸುತ್ತದೆ

ಕರ್ಪೂರವನ್ನು ಈಚೆಗೆ ಸಿಲೋನ್ (ಲಂಕಾ) ದ್ವೀಪದಲ್ಲಿ ತಯಾರುಮಾಡು ವುದು ಹೆಚ್ಚುತ್ತಾ ಬಂದಿದೆ ಕಳೆದ ವರುಷ ಅಲ್ಲಿ ಕರ್ಪೂರದ ಗಿಡಗಳ ತೋಟ ಗಳು ೧,೦೦೦ ಕ್ಕಿಂತಲೂ ಹೆಚ್ಚಾಗಿದ್ದವು ಈಚೆಗೆ ಇನ್ನೂ ಹೆಚ್ಚಾಗಿವೆ ಎಂದು ತಿಳಿದುಬರುತ್ತದೆ ಅಮೇರಿಕದಲ್ಲಿ ಒಂದು ದ್ರಾವಕದಿಂದ ಕರ್ಪೂರವನ್ನು ತಯಾರುಮಾಡುವುದು ರೂಢಿಗೆ ಬಂದಿದೆ ಸಿಲೋನ್ ದ್ವೀಪದಲ್ಲಿ ಇನ್ನು ಮುಂದ ಕ್ಕೆ ಬಹಳವಾಗಿ ಕರ್ಪೂರವು ತಯಾರಾಗಿ, ಜಪಾನಿನಿಂದ ಬರುವ ಕರ್ಪೂರಕ್ಕಿಂತ ಕಡಿಮೆ ಕ್ರಯಕ್ಕೆ ವಿಕ್ರಯವಾದೀತೆಂದು ಊಹಿಸಲ್ಪಟ್ಟಿದೆ

ಸಿಮ್ಲಾ ಪಟ್ಟಣದಲ್ಲಿ ವೈಸ್‌ರಾಯಿಯವರ ಮೋಟಾರ್ ಗಾಡಿಗಳನ್ನು ನಡೆ ಸುವವನ ಒಂದು ನಾಯಿಗೆ ಹುಚ್ಚು ಹಿಡಿದು ಅದು ವೈಸ್‌ರಾಯಿಯವರ ಬಂಗ ಲೆಯ ದಾಸಿಯನ್ನು ಕಳೆದ ವಾರ ಕಚ್ಚಿ ತರುವಾಯ ವೈಸ್‌ರಾಯಿಯವರ ನ ಮಗನನ್ನು ಕಚ್ಚುವುದಕ್ಕೆ ಪ್ರಯತ್ನಪಟ್ಟಿತು ವೈಸ್‌ರಾಯಿಯವರೂ ಅವರ ಪತ್ನಿಯವರೂ ತಮ್ಮ ನಾಯಿಯನ್ನು ಎತ್ತಿ ಬಚ್ಚಿಟ್ಟುಕೊಂಡರು ಆ ಸಂದರ್ಭ ದಲ್ಲಿ ಆ ಹುಚ್ಚುನಾಯಿಯ ಜೊಲ್ಲು ಅವರ ಕೈಗಳ ಮೇಲೆ ಬಿದ್ದಿತು ಅದ ರಿಂದ ಅವರಿಗೆ ಕೆಡಕೇನೂ ಆಗದಂತೆ ಕಸೌಲಿ ಆಸ್ಪತ್ರೆಯ ಮುಖ್ಯ ಡಾಕ್ಟ ರಾದ ಕ್ಯಾಪ್ಟನ್ ಕಾರ್ಟರ್‌ಯವರು ಸಿಮ್ಲಾಗೆ ಹೋಗಿ ಚಿಕಿತ್ಸೆ ಮಾಡುತ್ತ ದ್ದಾರೆ

ವಾಯುವ್ಯ ಪ್ರಾಂತ್ಯಕ್ಕೆ ಸೇರಿದ ರಸಿಕೇಶ ಹರಿದ್ವಾರ ಮೊದಲಾದ ಸ್ಥಳಗ ಳಲ್ಲಿ ಭಾರತಧರ್ಮ ಮಹಾ ಮಂಡಲಿಯವರು ಸಾಧುವಿದ್ಯಾ ನಿಲಯವನ್ನೂ ಒಂದೊಂದು ವಿದ್ಯಾರ್ಥಿ ನಿಲಯವನ್ನೂ ಸ್ಥಾಪಿಸಿ, ಸಾಧುಗಳನ್ನು ತಂಪೇತು ಮಾಡು ತ್ತಿದ್ದಾರೆ ರಾವಲ್‌ಪಿಂಡಿಯ ಸರ್ದಾರ್ ಘೂತ್‌ಸಿಂಗ್‌ಜಿಯವರು ಅವರ ಮಾಲ್ಟಿ ಚಾರಿಕೆಯನ್ನು ನೋಡಿಕೊಳ್ಳುತ್ತಾ ಇದಾರಲ್ಲದೆ ಬೇಕಾದ ಸಹಾಯವನ್ನು ಮಾಡುವರು ಹರಿದ್ವಾರದಲ್ಲಿರುವ ಬ್ರಹ್ಮಚಾರಿಗಳ ಆಶ್ರಮದ ಫಂಡಿಗೆ ಉದಯ ಪುರದ ಮಹಾರಾಣಾ ಬಹದ್ದೂರ್‌ಯವರು ೧೦,೦೦೦ ರೂಪಾಯಿ ಚಂದಾ ಕೊಟ್ಟಿದ್ದಾರೆ

ಕಳೆದ ವಾರ ದರ್ಭಾಂಗದಲ್ಲಿ ಎರಡು ದಿನ ವಿದ್ಯಾರ್ಥಿಗಳ ಕೂಟವು ನಡೆ ಯಿತು ಅಲ್ಲಿ ವಕೀಲರಾಗಿರುವ ಮಿ ಧಾರೀಧರು ಎಂಬುವರು ಸಭೆಯ ಅಗ್ರಾಸನವನ್ನು ವಹಿಸಿ, ಸಭಾಸದರಾಗಿದ್ದ ಸುಮಾರು ೩೦೦ ವಿದ್ಯಾರ್ಥಿಗಳಿಗೆ ಕೆಲವು ಬುದ್ಧಿ ಮಾತುಗಳನ್ನು ಹೇಳಿದರು ವಿದ್ಯಾರ್ಥಿಗಳಿಗೂ ರಾಜಕೀಯ ವಿಚಾರಗಳಿಗೂ ಯಾವ ಸಂಬಂಧವೂ ಇಲ್ಲ ವ್ಯಾಸಂಗ ಮಾಡುವುದರಲ್ಲೇ ನಿರತ ನಾಗಿರುವುದು ವಿದ್ಯಾರ್ಥಿಗಳ ಪ್ರಥಮ ಧರ್ಮವಾಗಿರುತ್ತದೆ ಅವರು ರಾಜಕೀಯ ವಿಚಾರಗಳನ್ನು ಹಿರಿಯರಿಗೆ ವಹಿಸಬೇಕು, ಅವುಗಳಲ್ಲಿ ತಾವು ಸ್ವಲ್ಪವಾದರೂ ಪ್ರವರ್ತಿಸಕೂಡದು ಎಂದು ಹೇಳಿದರು

ರಂಗೂನ್ ಪಟ್ಟಣದಲ್ಲಿ ಒಂದು ಜಗಳದ ಮೊಕದ್ದಮೆಯಲ್ಲಿ ಐಶ್ವರ್ಯ ವಂತರಾದ ಇಬ್ಬರು ಚೀನಿಯವರು ಸಿಕ್ಕಿಬಿದ್ದರು ಅವರ ಮೇಲೆ ಮೊಕದ್ದಮೆ ದರ್ಯಾಫ್ತಿ ಆಗಿ ಜಡ್ಜಿಮೆಂಟು ಹೇಳುವುದಕ್ಕೆ ಮ್ಯಾಜಿಸ್ಟ್ರೇಟರು ಇಟ್ಟುಕೊಂ ಡಿದ್ದರು ಆಗ ಆ ಅಪರಾಧಿಗಳಿಬ್ಬರೂ ಆ ಮ್ಯಾಜಿಸ್ಟ್ರೇಟರಿಗೆ ಅವರ ಕುಶಿನ ಯವನ ಮೂಲಕ ೫೦೦ ರೂಪಾಯಿ ಲಂಚ ಕೊಡುವುದಾಗಿಯೂ, ತಮ್ಮನ್ನು ಖುಲಾಸ್ ಮಾಡಿಸಬೇಕೆಂತಲೂ ಹೇಳಿಕಳುಹಿಸಿದರು ಹೀಗೆ ಇವರು ಲಂಚ ಕೊಡುವುದಕ್ಕೆ ಪ್ರಯತ್ನಪಟ್ಟದು ರುಜುವಾತಾದದ್ದರಿಂದ ಅವರಿಬ್ಬರಿಗೂ ತಲಾ ೫೦೦ ರೂಪಾಯಿನಂತೆ ಜುಲ್ಮಾನೆ ಹಾಕಿರುತ್ತಾರೆ

ನಾಯಿ ನರಿ ಮೊದಲಾದ ಪ್ರಾಣಿಗಳಿಂದ ಕಡಿಸಿಕೊಂಡ ರೋಗಿಗಳಿಗೆ ಚಿಕಿತ್ಸೆ ಮಾಡುವುದಕ್ಕೆ ಕಸೌಲಿ ಪಟ್ಟಣದಲ್ಲಿ ೧೯೦೦ನೇ ಇಸವಿಯಲ್ಲಿ ಒಂದು ಆಸ್ಪತ್ರೆಯನ್ನು ಪ್ರಾರಂಭಿಸಿ ಆ ಲಾಗಾಯಿತು ನಡಿಸುತ್ತಾ ಬಂದಿದಾರಷ್ಟೆ ಈ ಆಸ್ಪತ್ರೆಯು ದಿನೇದಿನೇ ಪ್ರಬಲಸ್ಥಿತಿಗೆ ಬರುತ್ತಲಿದೆ ೧೯೦೧ನೇ ಇಸವಿಯಲ್ಲಿ ೩೨೧ ಮಂದಿ ರೋಗಿಗಳು ಮಾತ್ರ ಅಲ್ಲಿ ಚಿಕಿತ್ಸೆ ಮಾಡಿಸಿಕೊಂಡರು ೧೯೦೭ನೇ ಇಸವಿಯಲ್ಲಾದರೋ ೧,೩೪೯ ಜನರಿಗೆ ಅಲ್ಲಿ ಚಿಕಿತ್ಸೆ ನಡೆದಿರುತ್ತದೆ ಈ ವ್ಯಕ್ತಿ ೯೧೬ ಜನರು ಹಿಂದುಸ್ಥಾನದವರು ದಕ್ಷಿಣ ದೇಶಕ್ಕೆ ಸೇರಿದ ಕೂನೂರಿನಲ್ಲಿ ಇಂಥಾ ಆಸ್ಪತ್ರೆಯೊಂದು ಈಚೆಗೆ ಏರ್ಪಾಡಾಗಿದ್ದಾಗ್ಯೂ ಕಸೌಲಿ ಆಸ್ಪತ್ರೆಯೂ ದಿನೇದಿನೇ ವೃದ್ಧಿಹೊಂದುತ್ತಿರುವುದು.

ಮುಕುಂದ ಲಾಲದಾಸನೆಂಬೊಬ್ಬ ಬಂಗಾಳಿ ಕವಿಯು "ಮಾತೃಪೂಜಾ" ಎಂಬ ನಾಟಕವನ್ನು ಬರೆದು ಪ್ರಕಟಿಸಿದನು ಅದನ್ನು ಬಂಗಾಳಿಗಳು ಕೊಂಡು ಕೊಂಡು ವೇಷಗಳನ್ನು ಹಾಕಿಕೊಂಡು ನಾಟಕಗಳನ್ನಾಡುತ್ತಾ ಬಂದರು. ಅದ ರಲ್ಲಿರುವ ಕಥೆಯ ಸಂದರ್ಭವೂ ಹಾಡುಗಳೂ ರಾಜದ್ರೋಹಕರಗಳಾಗಿದ್ದಷ್ಟ ರಿಂದ ಸರ್ಕಾರದವರು ಆ ಕವಿಯನ್ನು ಹಿಡಿದು ಮೊಕದ್ದಮೆ ಮಾಡಿದರು ಅವ ನಿಗೆ ಎರಡು ವರುಷ ಕಠಿಣ ಸಜಾವೂ ೩೦೦ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪ ಟ್ಟಿತು ಅದರ ಮೇಲೆ ಅವನು ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿ ದ್ದನು ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ವಿದ್ಯಮಾನಗಳನ್ನು ಪರಿಶೋ ಧನೆಮಾಡಿ, ಕೆಳ ಕೋರ್ಟಿನ ತೀರ್ಮಾನ ಅಂದರೆ ಶಿಕ್ಷೆಯನ್ನು, ಖಾಯಂ ಮಾಡಿರುತ್ತಾರೆ

ಅಫ್ಘಾನಿಸ್ಥಾನದ ಅಮೀರರವರು ಜಲಾಲಾಬಾದಿನಲ್ಲಿದ್ದಾಗ್ಗೆ ರಾಜಧಾನಿ ಯಾದ ಕಾಬೂಲ್ ಪಟ್ಟಣದಲ್ಲಿ ಒಂದು ಫಿತೂರಿ ನಡೆಯಿತೆಂದೂ, ಈ ಫಿತೂರಿ ಕೋರರು ಅನೇಕ ಕ್ರೂರ ಕೃತ್ಯಗಳನ್ನು ನಡಿಸುವವರಾಗಿದ್ದರೆಂದೂ ಪ್ರಕಟವಾ ಯಿತಷ್ಟೆ ಈ ಫಿತೂರಿಯು ಪತ್ತೆ ಆದ ಮೇಲೆ ಅವರಲ್ಲಿ ಮುಖಂಡರಾಗಿದ್ದವ ರನ್ನು ಹಿಡಿದು, ಸುನ್ನಿ, ಷಿಯಾ, ಹಿಂದೂ, ಮುಲ್ಲಾ ಈ ಪ್ರತಿನಿಧಿಗಳ ಪಂಚಾ ಯಿತಿಯನ್ನು ಸೇರಿಸಿ ಮಹಮದೀಯ ಲಾವಿನ ಪ್ರಕಾರ ದರ್ಯಾಫ್ತಿ ಮಾಡಿಸಿದರು ಮೂರು ಮಂದಿ ಮುಖಂಡರನ್ನು ಗುಂಡಿನ ಬಾಯಿಗೆ ಕಟ್ಟಿಸಿ ಕೊಲ್ಲಿಸಿದರು ಅಮೀರರವರು ಕಾಬೂಲಿನಲ್ಲಿ ಬಹಿರಂಗವಾದ ದರ್ಬಾರ್ ಮಾಡಿ, ಒಪ್ಪಿಗೆಯ ಕ್ರಿಯತ್ನನ್ನು ಕೊಟ್ಟಿರುವ ಕೆಲವು ಫಿತೂರಿಕೋರರ ವಿಷಯವನ್ನು ಇತ್ಯರ್ಥ ಮಾಡುವವರಾಗಿದಾರೆಂದು ವರ್ತಮಾನ ಬಂದಿದೆ

ಧರ್ ಸಂಸ್ಥಾನದ ಮಹಾರಾಜರವರು ಕೆಲವು ಸರ್ದಾರರೊಡನೆ ಕಾಡಿಗೆ ಹೋಗಿ ಹನ್ನೆರಡು ದಿನಗಳ ತನಕ ಷಿಕಾರಿ ಮಾಡಿ ಚಿರತೆ ಹುಲಿ, ಕರಡಿ, ಕಾಡು ಕೋಣ ಮೊದಲಾದ ೧೪ ದುಷ್ಟ ಮೃಗಗಳನ್ನು ಕೊಂದುಹಾಕಿದರು ಒಂದು ಕರಡಿಯು ಮಹಾರಾಜರವರನ್ನು ಕಚ್ಚಬೇಕೆಂದು ಬಹು ಕ್ರೂರವಾಗಿ ಅವರ ಮೇಲೆ ನುಗ್ಗಿತು ಅದು ಎರಡು ಗಜ ದೂರಕ್ಕೆ ಬರುವಷ್ಟರಲ್ಲಿ ಮಹಾರಾಜರ ವರು ಬಹು ಧೈರ್ಯದಿಂದ ಗುಂಡು ಹೊಡೆದು ಅದನ್ನು ಕೊಂದುಬಿಟ್ಟರು ಒಂದು ಹುಲಿಯು ಮಹಾರಾಜರ ಕೈಯಿಂದ ಗುಂಡೇಟು ತಿಂದು ಸರ್ದಾರ್ ಮಾಕರ್ಣದರವರ ಮೇಲೆ ನುಗ್ಗಿತು ಅದು ಎರಡು ಗಜ ದೂರದಲ್ಲಿರುವಾಗ ಸರ್ದಾರರು ಅದನ್ನು ಹೊಡೆದು ಕೊಂದರು ಇವರಿಬ್ಬರೂ ಹೀಗೆ ತುಂಬಾ ಪ್ರಯಾಸಪಡುತ್ತಿದ್ದದ್ದು ತಪ್ಪಿ ಹೋಯಿತು

ಬೊಂಬಾಯಿ ಪಟ್ಟಣದಲ್ಲಿ ಕಾಳಿದಾಸ ಪಿ ತೆಂಬರ ಮೊರ್‌ಹಾಲ್ ಹರಿಚಂದ್ ಡಾಕ್ಟರ್ ವಿಟ್ಠಲ ರಾವ್ ಪಿ ವರ್ ಧರ್ಮಜ ಸೋಂಗಕ್ ಎಂಬ ನಾಲ್ವರು ದೊಡ್ಡ ಮನುಷ್ಯರೂ ಘನ ವರ್ತಕರೂ ಸ್ಟೇಷನ್‌ನ ಮೊದಲು ಕೋರ್ಟಿನಲ್ಲಿ ಅಮಲಿನ ಪದಾರ್ಥವನ್ನು ಅಂಗಡಿಗಳಲ್ಲಿ ವಿಕ್ರಯ ಮಾಡುತ್ತಾ ಇದ್ದರು ಇದು ಪತ್ತೆ ಆಗಿ ಆ ನಾಲ್ವರಿಗೂ ಕಳೆದ ವಾರ ಮೂರು ತಿಂಗಳಂತೆ ಸಜಾ ಶಿಕ್ಷೆಯೂ ಸಾವಿರ ರೂಪಾಯಿನಂತೆ ಜುಲ್ಮಾನೆ ಯೂ ವಿಧಿಸಲ್ಪಟ್ಟಿತು ಇವರಿಗೆ ಸಜಾ ಆಗದೆ ಕೇವಲ ಎಷ್ಟಾದರೂ ಜುಲ್ಮಾನೆ ಹಾಕುವಂತೆಯೂ ಇವರ ಕಡೆಯ ವಕೀಲರು ಹೇಳಿದರು ಮ್ಯಾಜಿಸ್ಟ್ರೇಟರು ಅವರ ಮಾತನ್ನು ಕೇಳದೆ ಇಂದು ಅಪರಾಧಿಗಳನ್ನು ತಕ್ಕದಾಗಿ ಶಿಕ್ಷಿಸದಿದ್ದರೆ ಧರ್ಮಕ್ಕೆ ಲೋಪವಾಗುವುದೆಂದು ಹೀಗೆ ಸಜಾ ಶಿಕ್ಷೆಯನ್ನೂ ವಿಧಿಸಿರುತ್ತಾರೆ

ಉದಯಪುರ ಪಟ್ಟಣದಲ್ಲಿ ಕುಂಭಮೇಳ ಎಂಬ ಜಾತ್ರೆಯು ಒಂದು ತಿಂಗಳು ನಡೆಯಿತು ಮಹಾರಾಣಾ ಮಹಾರಾಜರವರು ಜಾತ್ರೆಯ ಜನರಿಗೆ ಅನೇಕ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು, ತಾವೇ ಮುಂದಾಳಾಗಿ ನಿಂತು ಆಗಾಗ್ಗೆ ಹೋಗಿ ಮೇಲ್ವಿಚಾರಣೆ ತೆಗೆದುಕೊಳ್ಳುತ್ತಿದ್ದರು ಸುಮಾರು ಒಂದು ತಿಂಗಳ ತನಕ ಪ್ರತಿ ದಿನವೂ ೪೦,೦೦೦ ಸಾಧುಗಳೇ ಮೊದಲಾದ ಜಾತ್ರೆ ಜನರಿಗೆ ಸುಖ ವಾಗಿ ಭೋಜನಾದಿಗಳು ನಡೆಯುತ್ತಿದ್ದವು ಜಾತ್ರೆ ಕಡೇ ದಿನ ಆರು ಲಕ್ಷ ಜನರಿಗೆ ದೊಡ್ಡ ಸಮಾರಾಧನೆಯನ್ನು ಮಾಡಿ, ಭೋಜನಾನಂತರ ಮಹಾರಾಜ ರವರು ಸಾವಿರ ಜನರಿಗೆ ಉಡುಗೊರೆಗಳನ್ನೂ ದಕ್ಷಿಣೆಯನ್ನೂ ತಾವೇ ಕೊಟ್ಟರು ಈ ಜಾತ್ರೆಗೆ ಸರ್ಕಾರದಿಂದ ಎರಡೂವರೆ ಲಕ್ಷ ರೂಪಾಯಿಗೆ ಕಡಿಮೆಯಿಲ್ಲದೆ ಖರ್ಚಾಗಿರುತ್ತದೆ ಇಂಥಾ ಜನರ ಕೂಟದಲ್ಲಿ ಅಂಟು ಜಾಡ್ಯಗಳೇನೂ ಪ್ರಾಪ್ತವಾಗದಂತೆ ಸಂಸ್ಥಾನದ ಅಧಿಕಾರಿಗಳು ಏರ್ಪಾಡು ಮಾಡಿ ಬಹು ಮುತು ವರ್ಜಿಯಿಂದ ನೋಡಿಕೊಳ್ಳುತ್ತಿದ್ದರೆಂದು ತಿಳಿಯುವುದು

ಪೂನಾ ಪಟ್ಟಣದ ದೇಶೀಯ ಸೈನಿಕರಲ್ಲಿ ಒಬ್ಬ ಶಿಪಾಯಿಯ ಹೆಣ್ಣು ಮಗಳು ಎಲ್ಲಿಯೋ ತಪ್ಪಿಸಿಕೊಂಡು ಹೋಗಿ ಮೂರು ತಿಂಗಳಿನಿಂದ ಸಿಕ್ಕಿರಲಿಲ್ಲ ಕಳೆದ ವಾರ ಆವಳ ಹೆಣವು ಸಿಕ್ಕಿದ ರೀತಿ ಹ್ಯಾಗೆಂದರೆ ಅದೇ ಸೈನಿಕರಲ್ಲಿ ಚೋಟು ಎಂಬೊಬ್ಬ ಶಿಪಾಯಿಯು ಮೃತಪಟ್ಟವಳ ತಾಯಿಯ ಬಳಿಗೆ ಹೋಗಿ ತಾನು ಮಂತ್ರಶಕ್ತಿಯಿಂದ ಆ ಹುಡುಗಿಯನ್ನು ಪತ್ತೇಮಾಡಿ ಕೊಡುತ್ತೇನೆಂದು ಹೇಳಿ ಒಪ್ಪಿಸಿ, ಏನೇನೋ ಮಂತ್ರಗಳನ್ನು ಹೇಳಿ ಆಟಕಟ್ಟಿ, ಸೈನಿಕರ ಲೈನ್ ಮನೆಗಳ ಬಳಿ ಇರುವ ನಾಲೆಯ ಹತ್ತಿರ ಶವವು ಸಿಕ್ಕುತ್ತೆಂದು ಹೇಳಿದನು ತಂದೆಯೂ ಇತರರೂ ಹೋಗಿ ಆ ಸ್ಥಳದಲ್ಲಿ ಅಗೆದು ನೋಡಿದಾಗ ಅಂಗಿಯಲ್ಲಿ ಸುತ್ತಿದ್ದ ಆ ಹುಡುಗಿಯ ಹೆಣವು ದೊರಕಿತು ಹುಡುಗಿಯ ಮೈಮೇಲೆ ಇದ್ದ ಆಭರಣಗಳ್ಯಾವೂ ಇರಲಿಲ್ಲ ಕೂಡಲೇ ಪೋಲೀಸಿನವರು ಈ ಸಂಗತಿಯನ್ನು ತಿಳಿದು ಚೋಟು ಎಂಬ ಆ ಮಾಟಗಾರನನ್ನು ದಸ್ತಗಿರಿ ಮಾಡಿದರು ಅವನು ಒಡವೆಗಳನ್ನು ಒಬ್ಬ ಮಾರ್ವಾಡಿಗೆ ವಿಕರಿ ಮಾಡಿದ್ದದ್ದೂ ಪತ್ತೆ ಆಯಿತು ಅವನೂ ಇನ್ನು ಕೆಲವರೂ ಸೇರಿ ಈ ಅಕೃತ್ಯವನ್ನು ನಡಿಸಿರುವುದಾಗಿ ಮ್ಯಾಜಿ ಸ್ಟ್ರೇಟರ ಮುಂದೆ ಕ್ಷಮಿಸಿಹತ್ತು ಕೊಟ್ಟಿರುತ್ತಾನೆ

ಹಿಂದುಸ್ಥಾನದಲ್ಲಿ ಜನರು ತುಪ್ಪವನ್ನು ಉಪಯೋಗಿಸುವುದು ಹೆಚ್ಚು ಆದರೆ ಈಚೆಗೆ ಅದರ ಧಾರಣೆಯು ಬಹಳವಾಗಿ ಅಂದರೆ ಕೇಳದ ಎರಡರಷ್ಟು ಜಾಸ್ತಿಯಾಗಿರುತ್ತದೆ ಇದಲ್ಲದೆ ಈ ಆಹಾರ ಪದಾರ್ಥವನ್ನು ಕೊಬ್ಬು ಮೊದ ಲಾದ ವಸ್ತುಗಳನ್ನು ಬೆರಸಿ ತಯಾರುಮಾಡುವರು ಅದಕಾರಣ ಸಾಮಾನ್ಯ ಪ್ರಜೆ ಗಳಿಗೆ ಒಳ್ಳೆಯದಾದ ತುಪ್ಪ ದೊರಕುವುದು ದುರ್ಲಭವಾಗುತ್ತದೆ ಈಗ ಈ ತುಪ್ಪಕ್ಕೆ ಪ್ರತಿಯಾಗಿ ಅಮೇರಿಕದಿಂದ ಇನ್ನೊಂದು ಕರಾಬಾ ಪದಾರ್ಥವು ರಫ್ತಾ ಗಿ ಬರಲಾರಂಭವಾಗಿದೆ ಅಲ್ಲಿನ ಕಾರ್ಖಾನೆಗಳಲ್ಲಿ ಹತ್ತಿಯ ಬೀಜದಿಂದ ಬಿಳೀ ತುಪ್ಪವನ್ನು ತಯಾರುಮಾಡುತ್ತಾರೆ ಅದು ಈ ದೇಶಕ್ಕೆ ಬಂದು ವಿಕರಿ ಆಗು ತ್ತಿರುವುದು ಆದರೆ ಜನರಲ್ಲಿ ಅದಕ್ಕೆ ಯಾವ ಪದಾರ್ಥಗಳನ್ನು ಬೆರಕೆ ಮಾಡು ತ್ತಾರೋ ಎಂಬ ಸಂಶಯವಿರೋಣದರಿಂದ ಅದು ಅಷ್ಟು ಹೆಚ್ಚಾಗಿ ವಿಕರಿ ಆಗು ತ್ತಾ ಇಲ್ಲ ಇದನ್ನು ನೋಡಿ ಕಲ್ಕತ್ತೆಯಲ್ಲಿ ಕೆಲವು ದೇಶೀಯ ಜನರು ಹತ್ತಿ ಬೀಜದಿಂದ ತುಪ್ಪವನ್ನು ತೆಗೆದು ವಿಕರಿ ಮಾಡಬೇಕೆಂದು ಆಲೋಚನೆ ಮಾಡಿ ದಾರೆ ಷೇರುಗಳ ಮೂಲಕ ಹಣವನ್ನು ಕೂಡಿಸಿ, ಯಂತ್ರಗಳನ್ನು ಅಮೇರಿಕ ದಿಂದ ತರಿಸಿಕೊಂಡು ಈ ಆಹಾರ ಪದಾರ್ಥವನ್ನು ಒದಗಿಸಬೇಕೆಂಬುವುದೇ ಅವರ ಉದ್ದೇಶವಾಗಿದೆ

ಸಂಯುಕ್ತ ಅಧಿಪತ್ಯಗಳಿಗೆ ಸೇರಿದ ಕೇನ್ ಎಂಬ ನಾಲೆಯ ಕಾಮಗಾ ರಿಯು ಪೂರೈಸುತ್ತಾ ಬಂದಿದೆ ಮೊದಲು ಅದರ ಕೆಳಗೆ ೫೬,೦೦೦ ಎಕರೆ ಜಮೀ ನು ತರೀ ವ್ಯವಸಾಯಕ್ಕೆ ಬರುವಂತೆ ಅಂದಾಜು ಮಾಡಿ, ಈ ಕಾಮಗಾರಿಗೆ ೪೯,೪೫,೩೩೮ ರೂಪಾಯಿ ಸ್ಯಾಂಕ್ಷನ್ ಮಾಡಿದ್ದರು ಮತ್ತು ನಾಲೆಯು ೮೬ ಮೈಲಿ ಉದ್ದವಾಗಿಯೂ, ಶಾಖಾ ನಾಲೆಗಳು ೨೪೫ ಮೈಲಿ ಉದ್ದವಾಗಿಯೂ ತಯಾರುಮಾಡಿ, ೧೯೦೭ನೇ ಇಸವಿಯಲ್ಲಿ ಅದರಲ್ಲಿ ನೀರು ಹಾಯಿಸಿದರು, ಇದರಿಂದ ಸುಮಾರು ೪೦ ಸಾವಿರ ಎಕರೆ ಜಮೀನು ತರೀ ವ್ಯವಸಾಯಕ್ಕೆ ಬಂದಿ ತು ಅದರೆ ಅದೇ ನದಿಯ ಮೇಲ್ಭಾಗದಲ್ಲಿ ಸುಮಾರು ೩೦ ಮೈಲಿ ದೂರದಲ್ಲಿ ಎರಡು ಬೆಟ್ಟಗಳನ್ನು ಜೋಡಿಸಿ ಕಟ್ಟೆ ಹಾಕಿದರೆ ಭಾರೀ ಕೆರೆಯಾಗುವುದೆಂದೂ, ಈ ಕೆರೆಯ ನೀರಿನಿಂದ ೧,೨೭,೬೫೪ ಎಕರೆ ಜಮೀನು ಹೆಚ್ಚಾಗಿ ತರೀ ವ್ಯವಸಾ ಯಕ್ಕೆ ಬರುವುದೆಂದೂ ಅಂದಾಜುಹಾಕಿ ಕಾಮಗಾರಿ ಮಾಡಿಸಬೇಕೆಂದು ಗೊ ತ್ತುಮಾಡಿದರು ಈ ಪ್ರಾಂತ್ಯದಲ್ಲಿ ಆಗಾಗ್ಗೆ ಕ್ಷಾಮ ಪ್ರಾಪ್ತವಾಗುತ್ತಿದೆ. ಕಳೆದ ೧೮೯೬-೯೭ನೇ ಸಾಲಿನಲ್ಲಿ ಸರ್ಕಾರದವರು ಕ್ಷಾಮನಿವಾರಣೆಗಾಗಿ ೩೩ ಲಕ್ಷ ರೂಪಾಯಿ ಖರ್ಚು ಮಾಡಬೇಕಾಯಿತು ಈ ಕೆರೆಯನ್ನು ಕಟ್ಟಿ ನಾಲೆಗ ಳನ್ನು ತೋಡಿದರೆ ಅಲ್ಲಿ ಕ್ಷಾಮದ ಹೆಸರು ನಿರ್ನಾಮವಾಗುವುದೆಂದು ಕಂಡುಬಂದ ಕಾರಣ ಇದರ ಕಾಮಗಾರಿಗಾಗಿ ಗವರ್ನ್‌ಮೆಂಟಿನವರು ೬೮,೮೬,೦೦೦ ರೂಪಾ ಯಿ ಅಂದಾಜು ಪಟ್ಟಿಯನ್ನು ಸ್ಯಾಂಕ್ಷನ್ ಮಾಡಿರುತ್ತಾರೆ ಅದರ ಕೆಳಗೆ ತರೀ ಜಮೀನುಗಳ ವರಮಾನವು ಮೂಲಧನದ ಮೇಲೆ ಶೇಕಡಾ ವರುಷಕ್ಕೆ ೩.೫೬ ರೂಪಾಯಿನಂತೆ ಬಡ್ಡಿ ಉತ್ಪತ್ತಿಯಾಗುತ್ತದೆಂದು ಗೊತ್ತುಮಾಡಲ್ಪಟ್ಟಿದೆ

ಲಕ್ನೋ ಪಟ್ಟಣದ ಬಳಿ ಒಸ್ಕೇಟ್ ಎಂಬ ಪ್ರಾಂತ್ಯದಲ್ಲಿ ಪೋಲೀಸಿನವರು ಒಂದು ವಿಚಿತ್ರವಾದ ನಡವಳಿಕೆಯನ್ನು ನಡಿಸಿರುತ್ತಾರೆ ಆ ಪ್ರಾಂತ್ಯ ಕೆಲವು ಕಾಲದಿಂದ ಕಳುವು ದರೋಡೆಗಳು ನಡೆಯುತ್ತಿದ್ದವು ಪೋಲೀಸಿನವರು ಪತ್ತೇ ಮಾಡಲಿಲ್ಲವೆಂಬ ಅಪವಾದ ಉಂಟಾಯಿತು ಆಗ ಇಬ್ಬರು ಪೋಲೀಸ್ ಸಬ್ ಇನ್‌ಸ್ಪೆಕ್ಟರುಗಳು ಆ ಕಡೆಯ ಎರಡು ಗುಂಪನ್ನು ತಯಾರು ಮಾಡಿ, ಒಂದು ಗುಂಪಿನವರಿಗೆ ಕಳ್ಳರಂತೆ ವೇಷಹಾಕಿ ಪಂಜುಗಳನ್ನು ಕೊಟ್ಟು ಜಂಗಲಿನಲ್ಲಿ ಓಡುಹೋಗುತ್ತಿರುವಹಾಗೂ, ಇನ್ನೊಂದು ಗುಂಪಿನವರಿಗೆ ಪೋಲೀಸಿನವರ ವೇಷ ಹಾಕಿ ಆ ಕಳ್ಳರನ್ನು ಪತ್ತೆಮಾಡಿ ಹಿಡಿದು ತರುವಹಾಗೂ ಮಾಡಿದರು ಈ ಎರಡು ಗುಂಪಿನವರೂ ಒಬ್ಬರನ್ನೊಬ್ಬರು ಸಂಧಿಸಿ, ಜಗಳವಾಡಿದಂತೆ ಮಾಡಿದರು ಅವರನ್ನು ಹಿಡಿಯುವುದಕ್ಕೆ ಕೆಲವು ಮಂದಿ ಜಮೀನ್ದಾರರ ಸಹಾಯ ದೊರ ಯುವಂತೆ ಮಾಡಿದರು ವೇಷ ಹಾಕಿಕೊಂಡಿದ್ದ ಕಳ್ಳರನ್ನು ಪೋಲೀಸಿನವರು ಹಿಡಿಯುವ ಸಂದರ್ಭದಲ್ಲಿ ಅವರನ್ನು ಬಿಟ್ಟುಬಿಟ್ಟು, ತಮಗೆ ಸಹಾಯಕರಾಗಿ ಬಂದಿದ್ದ ಜಮೀನ್ದಾರರನ್ನು ದಸ್ತಗಿರಿ ಮಾಡಿ, ಈ ಜಮೀನ್ದಾರರೇ ಕಳ್ಳರೆಂದು ಹೇಳಿ ಅವರ ಮೇಲೆ ಮೊಕದ್ದಮೆ ತಂದು ರುಜುವಾತನ್ನು ಸೃಷ್ಟಿಸಿದರು ಮೊಕದ್ದಮೆಯು ರುಜುವಾತಾಯಿತೆಂದು ಮ್ಯಾಜಿಸ್ಟ್ರೇಟರು ಆ ನಿರಪರಾಧಿಗ ಳಾದ ಜಮೀನ್ದಾರರಿಗೆಲ್ಲಾ ಶಿಕ್ಷೆಯನ್ನು ವಿಧಿಸಿಬಿಟ್ಟರು ಕೆಲವು ದಿನ ಕಳೆದ ಮೇಲೆ ಲೆಫ್ಟಿನೆಂಟ್ ಗವರ್ನರವರು ಆ ಪ್ರಾಂತ್ಯ ಸಂಚಾರಕ್ಕೆ ಹೋಗಿದ್ದರು ಆಗ ಅಲ್ಲಿ ನಡೆದ ಮೇಲ್ಕಂಡ ಪೋಲೀಸಿನವರ ಮೋಸಕೃತ್ಯಗಳೆಲ್ಲಾ ಅವರಿಗೆ ತಿಳಿದುಬಂತು ಅದರ ನಿಜಸ್ಥಿತಿಯನ್ನು ತನಿಖೆ ಮಾಡಿಸಿದರು ಒಬ್ಬ ಪೋಲೀಸಿನ ವನೂ, ವೈಸ್‌ರಾಯಿಯವರ ಬಾಡಿಗಾರ್ಡ್ ಸವಾರರ ಪೈಕಿ ಖಾನ್‌ಬಹದೂರ್ ಅಬ್ದುಲ್ ಕರೀಂ ಎಂಬಾತನ ಮಗನಾದ ಪೋಲೀಸ್ ಇನ್‌ಸ್ಪೆಕ್ಟರ್ ಅಬ್ದುಲ್ ಹಕೀಂ ಎಂಬುವನೂ ಪೋಲೀಸಿನವರು ಮಾಡಿದ ಕೃತ್ಯವನ್ನೆಲ್ಲಾ ವಿವರವಾಗಿ ಹೇಳಿ ದರು ಇದಲ್ಲದೆ ಆ ಇನ್‌ಸ್ಪೆಕ್ಟರು ಇನ್ನು ತನಗೆ ಅವಮಾನವಾಗುವುದೆಂದು ಆತ್ಮಹತ್ಯವನ್ನು ಮಾಡಿಕೊಂಡನು ಈಗ ಸರ್ಕಾರದವರು ಆ ಇಬ್ಬರು ಸಬ್ ಇನ್‌ಸ್ಪೆಕ್ಟರುಗಳನ್ನೂ ಆರು ಮಂದಿ ಪೋಲೀಸಿನವರನ್ನೂ ಹಿಡಿದು ದರ್ಯಾಫ್ತಿ ಮಾಡುತ್ತಿದಾರೆ

ತಾಲ್ಲೋಕು ವರ್ತಮಾನಗಳು

ಮಂಡ್ಯ.—ಕಳೆದ ಗುರುವಾರ ಸಾಯಂಕಾಲ ಇಲ್ಲಿ ಎರಡು ಅಂಗುಲ ಕ್ಕಿಂತಲೂ ಹೆಚ್ಚಾಗಿ ಒಳ್ಳೇ ಮಳೆ ಸುರಿಯಿತು ಆದಾಗ್ಯೂ ಬಿಸಲಿನ ಧಗೆಯು ಅಧಿಕವಾಗಿದೆ. ಧಾರಣೆವಾಸಿಗಳು ಇನ್ನೂ ಇಳಿತರಕ್ಕೆ ಬಂದಿಲ್ಲ —ಈ ಊರಿನ ಲ್ಲಿ ಆಗಾಗ್ಗೆ ಒಬ್ಬರಿಗೊಬ್ಬರು ವ್ಯಾಪಾರದ ವೈಷಮ್ಯದಿಂದ ಮೂಗರ್ಜಿಗಳನ್ನು ಬರೆಯುತ್ತಲೂ ಮನೆಗಳ ಮೇಲೆ ಕತ್ತಲೆ ವೇಳೆಯಲ್ಲಿ ಕಲ್ಲುಗಳನ್ನು ಎಸೆಯು ತ್ತಲೂ, ವ್ಯಾಪಾರಸ್ಥರ ಅಂಗಡಿ ಎದುರಿಗೆ ಅವರಿಗೆ ವಿರೋಧವಾಗಿ ಬೇರೆ ಅಂಗಡಿ ಗಳನ್ನು ಇಟ್ಟು ದರಗಳನ್ನು ಕಮ್ಮಿ ಮಾಡುತ್ತಲೂ, ಸಾಯಂಕಾಲಗಳಲ್ಲಿ ಹೊಂ ಚುಹಾಕಿಕೊಂಡು ಒಂಟಿಯಾಗಿ ಸಿಕ್ಕುವಂಥವರನ್ನು ಹೊಡೆಯಬೇಕೆಂತಲೂ ಕಾದುಕೊಂಡಿರುತ್ತಾರೆ ಹೀಗೆಯೇ ಇಲ್ಲಿ ಎರಡು ವಾರಗಳ ಕೆಳಗೆ ಒಬ್ಬ ಸಾಹು ಕಾರೀ ವ್ಯಾಪಾರಸ್ಥರ ಮೇಲೆ ಒಂದು ಆಶ್ಚರ್ಯಕರವಾದ ಕಾರ್ಯವನ್ನು ನಡೆ ಸಿ ತಂದೆಯು ಮಗನಿಗೆ ವಿರೋಧವಾಗಿರುವ ಹಾಗೆ ಒಬ್ಬನು ಒಂದು ಮೂಗರ್ಜಿ ಯನ್ನು ಬರೆದು ಪೋಸ್ಟ್ ಮೂಲಕ ಹಾಕಿದನೆಂದು ಕೇಳುತ್ತೇನೆ ಇಂಥಾವರ ವಿಷಯದಲ್ಲಿ ಪೋಲೀಸಿನವರು ನಿಗಾ ಇಡಬೇಕಾಗಿದೆ —ಈಚೆಗೆ ಎರಡು ತಿಂಗಳಿಂದ ಇಲ್ಲಿನ ಜೈನ ಮಠಸ್ಥರಲ್ಲಿ ಸಾಹುಕಾರರಾದ ಮೆ। ಧರಣಪ್ಪ ಎಂಬವರು ಒಂದು ಕನ್ನಡ ಮುದ್ರಾಕ್ಷರಶಾಲೆಯನ್ನು ಸ್ಥಾಪಿಸಿ, ಅದಕ್ಕೆ ಸನಾತನ ಧರ್ಮಪ್ರಚಾರ ಮುದ್ರಾಲಯ ಎಂಬ ಹೆಸರನ್ನಿಟ್ಟಿರುತ್ತಾರೆ ಈ ಮುದ್ರಾಲಯದಲ್ಲಿ ಈಗ ತಾನೇ ಕೆಲಸವು ಪ್ರಾರಂಭವಾಗಿ ಶ್ರವಣಬೆಳ್ಗೊಳದಲ್ಲಿರುವ ಜೈನ ಮಠಸ್ಥರಿಂದ ಸಹಸ್ರನಾಮ ಮಂತ್ರದ ಪುಸ್ತಕವನ್ನು ಛಾಪಿಸುವಹಾಗೆ ಕಳುಹಿಸಿರುತ್ತಾರೆ. ಈ ಆಲಯವು ದಿನೇದಿನೇ ಅಭಿವೃದ್ಧಿಗೆ ಬಂದೀತೆಂದು ಹಾರೈಸುತ್ತೇವೆ.

ಕೊಪ್ಪ.—ಕೊಪ್ಪದ ಗೌ। ಸ್ಕೂಲಿನಲ್ಲಿ ಬುಕ್ ಡಿಪೋ ಇರುವದರಿಂದ ಯಾರೊಬ್ಬರೂ ಯಾವಾಗ ಹೋಗಿ ಸ್ಕೂಲ್ ಪುಸ್ತಕಗಳನ್ನು ಕೇಳಿದರೂ ಪುಸ್ತಕ ಗಳು ದೊರಕುತ್ತಿದ್ದವು ಆದರೆ ಈಗ ೨-೩ ತಿಂಗಳಿಂದಲೂ ಸ್ಕೂಲ್ ಸಂಬಂಧ ವಾದ ಯಾವ ಪುಸ್ತಕಗಳನ್ನು ಕೇಳಿದರೂ ಇಲ್ಲವೆಂದೇ ಹೇಳು

ತ್ತಾರೆ. ಇದರಿಂದ ಈ ತಾಲೋಕಿನ ಲೋಕಲ್ ಸ್ಕೂಲುಗಳಿಗೂ, ಮಿಷನ್ ಸ್ಕೂಲುಗಳಿಗೂ ಪ್ರೈವೇಟ್ ಸ್ಕೂಲುಗಳಿಗೂ ಬಹಳ ತೊಂದರೆಯುಂಟಾಗಿರುತ್ತದೆ. ಈ ತೊಂದರೆಯು ತಪ್ಪಿ ಹಿಂದೆ ಅಪೇಕ್ಷಿಸಿದ ಕಾಲದಲ್ಲಿ ಪುಸ್ತಕಗಳು ದೊರಕುತ್ತಿದ್ದಂತೆ ಮೇಲ್ಪಟ್ಟ ಅಧಿಕಾರಿಗಳು ಈ ಡಿಪೋವಿಗೆ ಪುಸ್ತಕಗಳನ್ನು ಕಳುಹಿಸಿಕೊಟ್ಟು ಬಾಲಕರುಗಳಿಗೆ ಉಂಟಾಗುತ್ತಿರುವ ತೊಂದರೆಯನ್ನು ನಿವಾರಣೆ ಮಾಡುವರೆಂದು ನಿರೀಕ್ಷಿಸುತ್ತೇನೆ.—ಇಲ್ಲಿ ಮಾವಿನ ಗೊರಟೆ ಸಿಕ್ಕಿ ಸತ್ತ ಮನುಷ್ಯನು ೭-೮ ತಿಂಗಳಿಂದಲೂ ತುಂಬಾ ಕಾಯಿಲೆಯಾಗಿ ಕೇವಲ ಬಲಹೀನನಾಗಿದ್ದನು. ಅಲ್ಲದೆ ಅವನಿಗೆ ಅನೇಕ ದಿನಗಳಿಂದಲೂ ಬುದ್ಧಿಯು ಸ್ಥಿಮಿತವಾಗಿರಲಿಲ್ಲ; ತಾನಾಗಿದ್ದು ಬೀಳುವ ಮರಕ್ಕೆ ಕೊಡಲಿಯಿಟ್ಟಂತೆ ಮಾವಿನ ಗೊರಟೆಯು ಇವನ ಮರಣಕ್ಕೆ ಕಾರಣವಾಯಿತು.—ಇನ್ನುಮುಂದೆ ಇಲ್ಲಿ ವಿಶೇಷ ಮಳೆ ಪ್ರಾಪ್ತವಾಗುವದರಿಂದ ಯಡಹಳ್ಳಿಯಿಂದ ಮಾತ್ರ ನಾಲ್ಕಾರು ಅಕ್ಕಿ ಗಾಡಿಗಳು ಇಲ್ಲಿಯ ಸಂತೆಗೆ ಬರುವದು ದುಸ್ತರ. ಎಂದರೂ ಇಲ್ಲಿನ ಕೆಲವು ಜನರು ಗಾಡಿಯವರಿಗೆ ಎಡೆ ಕೊಟ್ಟು, ತಾವು ಸಹಿತ ಮಾಡಿಕೊಂಡು ಕಡಿಮೆ ಸಡೆಯಿಟ್ಟು ಮಾರುತ್ತಾರೆ. ರೂಪಾಯಿಗೆ ೭ ಸೇರು ಅಕ್ಕಿ ತಂದು ಮನೆಯಲ್ಲಿ ಅಳೆದರೆ ೬॥ ಸೇರು ಆಗುತ್ತದೆ. ಇದು ಒಡಕಲಕ್ಕಿಯಾದದ್ದರಿಂದ ಅದನ್ನು ಕುಟ್ಟಿ ಕೇರಿದರೆ ೫॥-೫॥। ಸೇರು ಆಗುವದು ಕಷ್ಟ. ಇಷ್ಟು ಕುಟ್ಟಿಯಾದ ಅಕ್ಕಿಯನ್ನು ತಂದು ಬಡ ಜನರು ಹ್ಯಾಗೆ ಜೀವಿಸಬೇಕೋ ತಿಳಿಯದು. ನಮ್ಮ ತಾಲ್ಲೋಕು ಅಮಲ್ದಾರ್ರವರು ಕೃಪೆಯಿಟ್ಟು ಸಂತೆಗೆ ದಯಮಾಡಿ, ಅಕ್ಕಿ ತಂದ ಗಾಡಿಯವರೇ ಸರಿಯಾದ ಅಳತೆಯಿಂದ ಮಾರುವಂತೆ ಮಾಡಿದಾರೆ ಅವರ ಉಪಕಾರ ಸ್ಮರಣೀಯವಾದೀತು.

ಚಿತ್ರದುರ್ಗ.—ಸಂಸ್ಥಾನದ ಎಲ್ಲಾ ಕಡೆಯೂ ಆಗಿರುವಂತೆ ಇಲ್ಲಿಯೂ ತಕ್ಕಮಟ್ಟಿಗೆ ಮಳೆ ಆಗಿದೆ. ಆದರೂ ಭೂಮಿಗೆ ಹದವಾಗಿ ಸ್ವಲ್ಪ ಹುಲ್ಲು ಬಿದ್ದು ಗುಂಡಿಗಳಲ್ಲಿ ನೀರು ಸ್ವಲ್ಪಮಟ್ಟಿಗೆ ನಿಂತರೆ ಹೊರತು ಇನ್ನೇನೂ ವಿಶೇಷ ಫಲವಾಗಲಿಲ್ಲ. ಅಂದರೆ, ಕೆರೆಗಾದರೂ ಹಳ್ಳಿಗಾದರೂ ನೀರು ಬರಲಿಲ್ಲ. ಇದಕ್ಕೆ ಬಂದ ಮಳೆಯು ಕಟ್ಟಿಯಾಗಿಬಿದ್ದಿಲ್ಲ. ನೆನ್ನೆ ಮಳೆಯಾಗಿ ಬಿದ್ದದ್ದು ಕೆರೆಗೆ ನೀರು ಬರುವ ಮುಖ್ಯ ಹಳ್ಳದಲ್ಲಿ ಉದ್ದಕ್ಕೂ ನಾಲ್ಕೈದು ಆಳುದ್ದ ಮರಳು ತುಂಬಿರುವದು ಕಾರಣಗಳಾಗಿವೆ. ಈಚೆಗೆ ಪುನಹ ಮೋಡಗಳು ಆಡುತ್ತಾ ಗುಡುಗು ಮಿಂಚು ರಾತ್ರೀ ವೇಳೆಯಲ್ಲಿ ಆರ್ಭಟ ಮಾಡುತ್ತವೆ. ಬಿಸಿಲಿನ ತಾಪವು ಅಧಿಕವಾಗಿವೆ. ಕ್ಷಿಪ್ರದಲ್ಲಿಯೇ ಮಳೆ ಬಂದು ಟವನ್ನಿಗೆ ನೀರಿನ ಆಶ್ರಯವಾದಂಥಾ ಕೆರೆ, ಬಾವಿ, ಹೊಂಡಗಳನ್ನು ತುಂಬಿಸುವದೆಂದು ನಿರೀಕ್ಷಿಸುತ್ತೇವೆ.—ಇಲ್ಲಿ ಕ್ಷಾಮ ನಿವಾರಣೆಗಾಗಿ ತೋಡಲ್ಪಡುತ್ತಿದ್ದ ಕಾಮನ ಭಾವಿ ನೀರು ಬಹಳ ಒಳ್ಳೇ ನೀರೆಂತಲೂ, ಒಂದಾಗಿತಕ್ಕೆ ಆ ನೀರನ್ನೇ ಕುಡಿದಾಗ್ಯೂ ಯಾರಿಗೂ ಯಾವ ವಿಧವಾದ ಕಾಯಿಲೆಯೂ ಬರಲಿಲ್ಲವೆಂದೂ, ಇನ್ನೂ ಸ್ಥಿರವಾಗಿ ಇರುವಂತೆ ಕಾಪಾಡಬೇಕೆಂದೂ ಮಂದಿಯ ಅಭಿಪ್ರಾಯವಿದೆ. ಪಶ್ಚಿಮ ಕಡೆಯಿಂದ ಜಲವು ಈಗಲೂ ಭಾವಿಗೆ ಬಂದು ಸೇರುತ್ತಾ ಇದೆ. ನಮ್ಮ ಡೆಪ್ಯುಟಿ ಕಮಿಷನರ್ ಮೆ॥ ಚಂಗಯ್ಯ ಶೆಟ್ಟರು ಇದನ್ನೆಲ್ಲಾ ತಿಳಿದು ಅಚ್ಚುಕಟ್ಟಾಗಿ ಕಟ್ಟು ಕೊಡಿಸುವುದಾಗಿ ತಿಳಿದು ಬರುತ್ತೆ.—ಗಾಯಕವಾಡಿ ಮಹಾರಾಜರವರು ಈಗ ಕೆಲವು ದಿನಗಳಿಗೆ ಮುಂಚೆ ಮಾರೀಕಣಿವೆ ತಲಾವು ನೋಡಲಿಕ್ಕೆ ಈ ಮಾರ್ಗವಾಗಿ ಬಂದಿದ್ದು ಪುನಹ ಹಿಂಗಿರುಗಿ ದಯಮಾಡಿದರು.

ಚಿಕ್ಕಮಗಳೂರು:—ಒಂದು ವಾರದಿಂದಲೂ ಒಳ್ಳೇ ಮಳೆ ಆಗಿ ಎಲ್ಲಿ ನೋಡಿದರೂ ಜಲಮಯವಾಗಿದೆ. ರೈತರು ಬೀಜ ಸೇರಾವಿಗೆ ಎದುರು ನೋಡುತ್ತಿದ್ದಾರೆ. ಮಳೆಯಾದರೋ ಅವಕಾಶ ಕೊಡದೆ ಸುರಿಯುತ್ತಾ ಇದೆ. ಭೂಮಿಯೆಲ್ಲಾ ಮನೋಹರವಾದ ಹಸುರು ಬಣ್ಣದಿಂದ ತೋರುತ್ತಿದೆ. ಬಡ ಪ್ರಾಣಿಗಳಾದ ದನಗರುಗಳಿಗೆ ಒಳ್ಳೇ ಮೇವು ದೊರಕಿತು. ನಮ್ಮ ಟವನ್ನಿಗೆ ಸೇರಿದ ಹೊಸಳ್ಳಿಯಲ್ಲಿ ೧೪ ವರುಷದ ಹುಡುಗಿಯೊಬ್ಬಳು ಕೆಲವು ದಿನಗಳಿಗೆ ಮುಂಚೆ ಆತ್ಮಹತ್ಯ ಮಾಡಿಕೊಂಡಳು. ಕಾರಣ ಅಸ್ಪಷ್ಟವಾಗಿ ತೋರುವುದು. ಅಲ್ಲದೆ ಸಮೀಪ ಗ್ರಾಮದಲ್ಲಿ ಒಂದು ಖೂನಿ ನಡೆದಿದ್ದು ವಿಚಾರಣೆಯಾಗುತ್ತಲಿದೆ. ಇಲ್ಲಿನ ಕಾಫಿ ತೋಟದ ದೊರೆಗಳು ಮಡಿಕೇರಿ ಕುದುರೆ ಜೂಜನ್ನು ತೀರಿಸಿಕೊಂಡು, ನಮ್ಮ ಚಿಕ್ಕಮಗಳೂರಿಗೂ ಬಂದು ಒಂದು ವಾರದಿಂದಲೂ ಜಿಮ್‌ಖಾನ ಎಂಬ ಬಂದೋಕದ ಪದರಕ್ಕೆ, ಸಂಜೆ ವೇಳೆಯಲ್ಲಿ ಕುದುರೇ ಜೂಜೂ ಮೊದಲಾದ ವಿನೋದಗಳಲ್ಲಿ ಆಸಕ್ತರಾಗಿದಾರೆ. ಅಲ್ಲದೆ ಸಿಪಾಯಿಗಳಿಗೂ, ಪೊಲೀಸಿನವರಿಗೂ, ಪಾಠಶಾಲೆಯ ಮಕ್ಕಳಿಗೂ ಬೆಟ್ಟಿ, ಕುಸ್ತಿ, ಹಗ್ಗ ಎಳೆಯೋದು ಮೊದಲಾದ ಆಟಗಳನ್ನು ಆಡಿಸಿ ಜಯಹೊಂದಿದವರಿಗೆ ರೂಪಾಯಿಗಳನ್ನು ಇನಾಂ ಕೊಟ್ಟು ಪ್ರಜೆಗಳಿಗೆ ಸಂತೋಷವನ್ನುಂಟುಮಾಡುತ್ತಾ ಇದಾರೆ.—ನೆನ್ನೆ ದಿನ ಮೈಸೂರು ಸೀಮೆಯ ಹಜರತ್ತು ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರು ಇಲ್ಲಿಗೆ ದಯಮಾಡಿದರು. ಈ ಹೊತ್ತು ಪ್ಲಾಂಟರುಗಳು ಕುದುರೆ ಮೊದಲಾದ ಆಟಗಳನ್ನು ಆಡುತ್ತಿದ್ದ ಮೈದಾನಿಗೆ ದಯಮಾಡಿ ನೋಡಿ ಸಂತೋಷಚಿತ್ತರಾದರು. ಪೋಲೀಸ್ ಇಲಾಖೆಯವರು ಸಹ ಆಯುಧಪಾಣಿಗಳಾಗಿ ಕವಾತು ಮಾಡಿದರು.

"ವೃತ್ತಾಂತಪತ್ರಿಕೆ"ಯ ಎಡಿಟರವರಾಗಿದ್ದು ಈಗ ಗುಬ್ಬಿಗೆ ವರ್ಗವಾಗಿ ಹೋಗಿರುವ ಘನ ಟೀಚರ್ಸ್ ಬೋಧಕರು ಚಿಕ್ಕಮಗಳೂರಿಗೆ ದಯಮಾಡಿದಾರೆ. ಇಲ್ಲಿನ ವೆಸ್ಲಿಯನ್ ಮಿಷನ್ ಕ್ರೈಸ್ತಮಂಡಲಿಯವರಿಗೆ ಬುಧವಾರ ಬೆಳಗ್ಗೆ ಅನುಕೂಲ್ಯವಾದ ಉಪನ್ಯಾಸ ಮಾಡಿದರು. ಮುಂದಿನ ವಾರ ಬೇಲೂರು, ಹಳೇಬೀಡು ಮೊದಲಾದ ಸ್ಥಳಗಳನ್ನು ಸಂಚರಿಸಬೇಕೆಂದಿರುವರು. ಈ ದಿನ ಬಾಬಾಬುಡನ್‌ಗಿರಿಯ ಬುಡದ ವರೆಗೆ ಹೋಗಿ ಬಂದರು.—ಇಲ್ಲಿನ ಮೈಸ್ಕೂಲಿನಲ್ಲಿ ೩ನೇ ತಾರೀಖಿನಿಂದ ಉಪಾಧ್ಯಾಯರುಗಳಿಗೆ ಕಾರ್ಡ್ ಬೋರ್ಡಿನ ಕೆಲಸ ನಡೆಯುತ್ತಿದೆ. ಇದನ್ನು ಇಲ್ಲಿನ ಹೈ ಸ್ಕೂಲ್ ಮಾಸ್ಟರುಗಳಾದ ಮೆ॥ ವಿಶ್ವೇಶ್ವರಯ್ಯ ಮತ್ತು ಗೋಪಾಲಶಾಸ್ತ್ರಿಗಳೆಂಬುವರು ಕಲಿಸುತ್ತಿದಾರೆ. ಇದು ನಾಳೆ ೧೭ನೇ ತಾರೀಖಿಗೆ ಮುಗಿಯುವುದು. ಇದನ್ನು ಕಲಿಯಬೇಕೆಂದು ಶೃಂಗೇರಿಯೇ ಮೊದಲಾದ ದೂರ ಪ್ರದೇಶಗಳಿಂದ ಉಪಾಧ್ಯಾಯರುಗಳೂ ಬಂದಿದಾರೆ. ಅಲ್ಲಿಗೆ ಗ್ರಾಂಟ್ ಶಾಲಾ ಉಪಾಧ್ಯಾಯರುಗಳೂ, ಹೋಬಳಿ ಮಾಸ್ತರುಗಳೂ ಒಟ್ಟು ೩೭ ಮಂದಿ ಕಲಿಯುವರು. ಇದು ಮುಗಿದನಂತರ ಸೋಮವಾರದಿಂದ ಒಂದು ವಾರದ ವರೆಗೆ ಚಿತ್ರ ಭೂಗೋಳದ ನೂತನ ಬೋಧನಾ ಕ್ರಮಗಳ ವಿಷಯದಲ್ಲಿ ಡಿಪ್ಟೋ ಮಾಸ್ಟರುಗಳಿಗೆ ಉಪನ್ಯಾಸ ನಡೆಯುವದು. ಉಪಾಧ್ಯಾಯರು ಬಹಳ ಹರ್ಷದಿಂದ ಹೊಸ ನಮೂನೆ ಚಿತ್ರ ವಿಚಿತ್ರ ಕೆಲಸಗಳನ್ನು ಕಲಿಯುತ್ತಿದಾರೆ. ಇದರಿಂದ ಉತ್ತರೋತ್ತರ ಬಾಲಕರಿಗೆ ಬಹಳ ಪ್ರಯೋಜನವಾಗುವದರಲ್ಲಿ ಯಾವ ಅನುಮಾನವಿಲ್ಲ.

ಎಮ್ಮೆಗಳು.

ಎಮ್ಮೆಗಳಲ್ಲಿ ಕಾಡೆಮ್ಮೆಗಳೆಂತಲೂ, ಊರೆಮ್ಮೆಗಳೆಂತಲೂ ಎರಡು ವಿಧ. ಕಾಡೆಮ್ಮೆಗಳು ನಾವ ಸ್ವಭಾವಗಿ ಎಲ್ಲಾ ಉಷ್ಣಪ್ರದೇಶದ ಜಂಗಲುಗಳಲ್ಲಿ ಹುಲ್ಲು, ಕೆಸರು ಮತ್ತು ನೀರು ವಿಶೇಷವಾಗಿ ಇರುವ ಸ್ಥಳಗಳಲ್ಲಿ ವಾಸವಾಗಿವೆ. ಇವು ದೊಡ್ಡ ಕಾಡುಗಳ ಮಧ್ಯದಲ್ಲಿರುವುದಿಲ್ಲ. ಇವುಗಳು ಊರೆಮ್ಮೆಗಿಂತಲೂ ಬಹಳ ಬಲವಾಗಿಯೂ, ಕ್ರೂರವಾಗಿಯೂ ಇರುತ್ತವೆ. ಇವುಗಳನ್ನು ಅನೇಕ ಯೂರೋಪಿಯನ್ ದೇಶದ ಜನಗಳು ಸಿಕಾರಿ ಮಾಡುತ್ತಾರೆ.

ಜನಗಳು ಕಾಡೆಮ್ಮೆಗಳನ್ನು ಸಾಕು ಮಾಡಿ ಊರೆಮ್ಮೆಗಳನ್ನು ಬೆಳೆಸಿರುವರೆಂದು ಶಾಸ್ತ್ರಜ್ಞರು ನಿರ್ಣಯಿಸಿರುತ್ತಾರೆ. ಇಂಡಿಯಾ ದೇಶದ ಎಲ್ಲಾ ಪ್ರಾಂತ್ಯಗಳಲ್ಲೂ, ದೇಶಗಳಲ್ಲೂ ಜನಗಳು ಎಮ್ಮೆಗಳನ್ನು ಅವುಗಳ ಹಾಲಿಗೋಸ್ಕರವಾಗಿ ಸಾಕುತ್ತಾರೆ. ಎಮ್ಮೆಗಳು ಯಾವಾಗ್ಲೂ ಕೆಸರು ಮತ್ತು ನೀರನ್ನು ಕಂಡರೆ ಅವುಗಳಲ್ಲಿ ಬಹಳ ಸಂತೋಷವಾಗಿ ಹೊರಳಾಡುತ್ತವೆ ಮತ್ತು ಈಜುತ್ತವೆ. ಇಂಡಿಯಾ ದೇಶದಲ್ಲಿ ಇತರ ಸ್ಥಳಗಳಿಗಿಂತ ಬೊಂಬಾಯಿ ಇಲಾಖೆಯಲ್ಲಿ ಧಾರವಾಡ, ಹುಬ್ಬಳ್ಳಿ, ಗುಜರಾತ್, ಬರೋಡ, ಬೊಂಬಾಯಿ ಮೊದಲಾದ ಸ್ಥಳಗಳಲ್ಲಿ ಶ್ಲಾಘ್ಯವಾದ, ದೊಡ್ಡದಾದ, ಜಾಸ್ತಿಯಾಗಿ ಹಾಲು ಕೊಡುವ ಎಮ್ಮೆಗಳು ಇರುವವು. ಎಮ್ಮೆಗಳ ಹಾಲು ಹಸುವಿನ ಹಾಲಿಗಿಂತ ರುಚಿಯಾಗಿರುತ್ತವೆ. ಇದರಲ್ಲಿ ಹಸುವಿನ ಹಾಲಿಗಿಂತ ಹೆಚ್ಚಾಗಿ ಬೆಣ್ಣೆ ಬರುತ್ತದೆ. ಆದರೆ ಹಾಲು ವಾಯುಕಾರಿ, ಜೀರ್ಣವಾಗುವುದು ಕಷ್ಟ. ಎಮ್ಮೆಗಳು ೬ ಸೇರು ಲಾಗಾಯ್ತು ೧೫ ಸೇರು ವರಿಗೂ ಹಾಲು ಕೊಡುವುದಾಗಿ ತಿಳಿದು ಬಂದು ಇದೆ.

ಎಮ್ಮೆಯು ನಾಲ್ಕು ವರ್ಷದಲ್ಲಿ ಕರು ಹಾಕುತ್ತದೆ. ಎಮ್ಮೆಗಳು ವರ್ಷಕ್ಕೆ ಒಂದು ಸಲ ೩ ವರ್ಷಕ್ಕೆ ಒಂದು ಸಲ, ಸಾಮಾನ್ಯವಾಗಿ ೨ ವರ್ಷಕ್ಕೆ ಒಂದು ಸಲ ಕರು ಹಾಕುತ್ತವೆ. ಕೆಲವು ಎಮ್ಮೆಗಳು ವರ್ಷಕ್ಕೆ ಒಂದು ಸಲ ಕರು ಹಾಕುವುದುಂಟು. ಎಮ್ಮೆಯು ಗರ್ಭವಾದ ಲಾಗಾಯ್ತು ೩೧೫ ದಿವಸಗಳ ಮೇಲೆ ೩೩೦ ದಿವಸಗಳೊಳಗಾಗಿ ಕರು ಹಾಕುತ್ತದೆಂದು ಶಾಸ್ತ್ರಜ್ಞರು ನಿರ್ಣಯಿಸಿರುತ್ತಾರೆ. ಸಾಮಾನ್ಯವಾಗಿ ೬ ಕರುಗಳನ್ನು ಹಾಕಿದಮೇಲೆ ಎಮ್ಮೆಯು ಮುದಿ ಎಂದು ಹೇಳಬೇಕು. ಎಮ್ಮೆಗಳು ಆಹಾರದಲ್ಲಿ ಒರಟಾದ ಮತ್ತು ಕಟುರವಾದ ಹುಲ್ಲುಗಳನ್ನು ಕೂಡ ತಿನ್ನುತ್ತವೆ. ಎಮ್ಮೆಗಳು ತಿಪ್ಪೆಗಳ ಮೇಲಿನ ಕಸ, ಚೊಂಡು ಮೊದಲಾದವನ್ನು ಮೇಯುವುದು ಸಾಮಾನ್ಯವಾಗಿ ತಿಳಿದ ವಿಷಯವಾಗಿಯೇ ಇದೆ. ಆದರೆ ಕರೆಯುವ ಎಮ್ಮೆಗಳಿಗೆ ಜೋಳದಕಡ್ಡಿ, ತೌಡು, ಹಿಂಡಿ, ಹತ್ತಿಯಬೀಜ ಮೊದಲಾದ ಒಳ್ಳೇ ಆಹಾರವನ್ನು ಹಾಕಿದರೆ ಹೆಚ್ಚಾದ ಮತ್ತು ಶುದ್ಧವಾದ ಹಾಲು ಕೊಡುತ್ತವೆ. ಎಮ್ಮೆಗಳಿಗೆ ಆಗಾಗ್ಗೆ ತಣ್ಣೀರಿನಲ್ಲಿ ಮೈ ತೊಳೆಯುವುದು ಒಳ್ಳೇದು.

ಜಾತಿ ಎಮ್ಮೆಗಳ ಹಿಂಭಾಗವು ಮುಂಭಾಗಕ್ಕಿಂತ ವಿಸ್ತಾರವಾಗಿಯೂ, ದೊಡ್ಡದಾಗಿಯೂ ಇರುತ್ತವೆ. ಚರ್ಮವು ತೆಳ್ಳಗೂ, ನುಣ್ಣಗೂ ಮತ್ತು ಮಿಂಚುತ್ತಲೂ ಇರುತ್ತದೆ. ಕೊದಲು ಮೃದುವಾಗಿಯೂ, ಕಡಿಮೆಯಾಗಿಯೂ ಇರುತ್ತವೆ. ಹೊಟ್ಟೆಯು ಮತ್ತು ಕೆಚ್ಚಲು ದಪ್ಪವಾಗಿರುವವು. ಕಾಲುಗಳೂ ಮಾಂಸಖಂಡಗಳೂ ಬಲವಾಗಿ ನೇರವಾಗಿ ಇರುತ್ತವೆ.

ಎಮ್ಮೆಗಳು ಕೋಣನನ್ನು ತೆಗೆದುಕೊಳ್ಳುವುದು ಬಹಳ ನಾವಕಾಶವಾದದ್ದರಿಂದ ಇದಕ್ಕೆ ಕವಾಡಿಗರು ಅನೇಕ ವಿಧವಾದ ಔಷಧಗಳನ್ನು ಕೊಡುತ್ತಾರೆ. ಎಳ್ಳಿನ ಗಿಡದ ಹೂವುಗಳು ಮತ್ತು ಎಲೆಗಳು ಒಂದು ಸಾವಿರವನ್ನು ಅರೆದು ಕುಡಿಸಿದರೆ ಬೆದೆಯುಂಟಾಗುತ್ತೆಂದೂ ಕವಾಡಿಗರು ಹೇಳುತ್ತಾರೆ.

ಎಮ್ಮೆಯ ವಯಸ್ಸನ್ನು ಅದರ ಕೊಂಬುಗಳಲ್ಲಿರುವ ಗೆಣ್ಣುಗಳಿಂದ ನಿರ್ಣಯಿಸಬಹುದು. ಒಂದು ಗೆಣ್ಣಿಗೆ ಒಂದು ವರುಷವೆಂದು ೩ ವರ್ಷದನಂತರ ಲೆಕ್ಕಮಾಡುತ್ತಾರೆ. ಎಮ್ಮೆಗಳಿಗೆ ೨ ವರ್ಷಕ್ಕೆ ಹಾಲಿನ ಹಲ್ಲು ಬಿದ್ದು ಹೋಗಿ ೬ ವರ್ಷಕ್ಕೆ ಪೂರಾ ಹಲ್ಲು ಬರುವುದರಿಂದ ೨ ವರ್ಷವಾದ ಮೇಲೆ ಪ್ರತಿ ವರ್ಷದಲ್ಲೂ ೨ ಹಲ್ಲು ಹುಟ್ಟುತ್ತದೆ. ಇದರಿಂದಲೂ ಎಮ್ಮೆಯ ವಯಸ್ಸು ಗೊತ್ತು ಮಾಡಬಹುದು. ಅಂದರೆ, ೩ ವರ್ಷದ ಮೇಲೆ ಎಷ್ಟು ಜೊತೆ ಹೊಸ ಹಲ್ಲುಗಳಿರುತ್ತವೆಯೋ ಅಷ್ಟು ವರ್ಷಗಳೆಂದು ನಿರ್ಣಯಿಸಬಹುದು.

ಹಸುಗಳಿಗೆ ಬರತಕ್ಕ ಎಲ್ಲಾ ಜಾಡ್ಯಗಳೂ ಎಮ್ಮೆಗಳಿಗೂ ಬರುತ್ತವೆ. ಮತ್ತು ಹಸುಗಳ ಜಾಡ್ಯಕ್ಕೆ ಯಾವ ಔಷಧವೋ ಅದೇ ಔಷಧವನ್ನು ಇವುಗಳಿಗೂ ಕೊಡಬೇಕು. ಎಮ್ಮೆಗಳಿಗೆ ಆಹಾರದ ನಿಯಮವು ವಿಶೇಷವಲ್ಲದಿರುವುದರಿಂದ ಹೊಟ್ಟೆಯಲ್ಲಿ ಹುಳಗಳು ಬಿದ್ದು ಹೆಚ್ಚಾಗಿ ಉಪಾಧಿಯುಂಟಾಗುತ್ತವೆ.

ಕೋಣಗಳು ರೈತರಿಗೆ ಉಳುವುದಕ್ಕೂ, ಗಾಡಿ ವಗೈರೆ ಎಳೆಯುವುದಕ್ಕೂ, ಭಾರ ಹೊರುವುದಕ್ಕೂ ಬಹಳ ಉಪಯೋಗಕಾರಿ. ಮೈಸೂರು ಸೀಮೆಯಲ್ಲಿ ಅನೇಕ ತಾಲ್ಲೋಕುಗಳಲ್ಲಿ ಅಡಿಕೆಗಳು ಮತ್ತು ಒಡ್ಡು ಕೋಣಗಳನ್ನು ವಿಶೇಷವಾಗಿ ಕೆರೆಗಳಿಗೆ ಮಣ್ಣು ಹಾಕುವುದಕ್ಕೂ ಮತ್ತು ಇತರ ಕೆಲಸಗಳಲ್ಲಿಯೂ ಉಪಯೋಗಿಸುತ್ತಾರೆ. ಆದರೆ ಕೋಣಗಳು ಬಿಸಿಲು ಹೊತ್ತಿನಲ್ಲಿ ಕೆಲಸ ಮಾಡಲಾರವು ಮತ್ತು ನಡೆವುದು ನಿಧಾನ. ಇವುಗಳ ಬೆಲೆ ಎತ್ತುಗಳ ಬೆಲೆಗಿಂತ ಬಹಳ ಕಡಮೆ. ಆದರೆ ಎತ್ತುಗಳಷ್ಟು ಚುರುಕಾಗಿಯೂ ರಕ್ತಿಯಿಂದಲೂ ಕೋಣಗಳು ಕೆಲಸಮಾಡುವುದಿಲ್ಲ.

ಅಡ್ವೊಕೇಟ್ ವಿ. ರಾಘವಾಚಾರ್, ಮೈಸೂರು.

ಬೆಂಗಳೂರು ಸ್ತ್ರೀಯರ ಕೂಟವು

ದಿವಾನ್‌ರವರ ಪತ್ನೀರವರಿಗೆ ಮಾಡಿದ ಸನ್ಮಾನವು.

ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀ ಮಂಡಲಿಯವರು ಮೆ॥ ವಿ. ಪಿ. ಆನಂದರಾಯರವರಿಗೆ ಈ ಸಂಸ್ಥಾನದ ದಿವಾನ್‌ಗಿರಿಯು ಆದದ್ದಕ್ಕಾಗಿ ತಮ್ಮ ಆನಂದವನ್ನು ಅವರ ಪತ್ನೀರಾದ ಸೌ॥ ಸುಂದರಾಬಾಯಮ್ಮನವರಿಗೆ ತಿಳಿಯಪಡಿಸುವುದಕ್ಕೆ ಕಳೆದ ಶುಕ್ರವಾರ ಸಾಯಂಕಾಲ ೪ ಘಂಟೆಯವರನ್ನು ಕರೆಸಿಕೊಂಡು ಅಲ್ಲಿನ ಮೆ॥ ಜನೋಪಕಾರಿ ದೊಡ್ಡಣ್ಣನವರ ಕಟ್ಟಡದಲ್ಲಿ ಬಹಿರಂಗವಾದ ಸಭೆಯನ್ನು ನಡೆಸಿದರು. ಮೆ॥ ವೈ. ಶ್ರೀನಿವಾಸರಾಯರವರ ಪತ್ನೀರಾದ ಸೌ॥ ಕಮಲಾಬಾಯಮ್ಮನವರು ಅಗ್ರಾಸನವನ್ನು ವಹಿಸಿದ್ದರು. ಸಭೆಯಲ್ಲಿ ಗಣ್ಯರಾದ ಇಂಗ್ಲಿಷ್, ಪಾರ್ಸಿ, ಗುಜರಾತಿ, ಬಂಗಾಳಿ, ಕ್ರೈಸ್ತ, ಜೈನ, ಹಿಂದು ಸ್ತ್ರೀಯರು ಸುಮಾರು ಒಂದು ಸಾವಿರ ಮಂದಿಯ ತನಕ ಹಾಜರಾಗಿದ್ದರು. ವೀಣಾದಿ ವಾದ್ಯಗಳ ಗಾಯನವೂ ಫಲಾಹಾರಾದಿಗಳೂ ವಿಸ್ತಾರವಾಗಿ ವಿತರಣೆಯಿಂದ ನಡೆಸಲ್ಪಟ್ಟವು. ಆಗ ಸ್ತ್ರೀ ಸಂಘದವರು ಸೌ॥ ಸುಂದರಾಬಾಯಮ್ಮನವರಿಗೆ ಕನ್ನಡದಲ್ಲಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ತಮ್ಮ ಸಂತೋಷವನ್ನೂ ಕೃತಜ್ಞತೆಯನ್ನೂ ಪ್ರಕಾಶಪಡಿಸಿದರು.

ವಿಜ್ಞಾಪನಾ ಪತ್ರಿಕೆಯ ಮುಖ್ಯ ಭಾಗವು.

"ತಾವು ಈ ಮಹಿಸೂರು ರಾಜ್ಯಕ್ಕೆ ಹೊಸಬರಲ್ಲ. ಈ ದೇಶದಲ್ಲಿ ಚಿರಕಾಲ ವಾಸಮಾಡಿದವರಾಗಿ ಇಲ್ಲಿನ ಪ್ರಜೆಗಳನ್ನು ಚೆನ್ನಾಗಿ ತಿಳಿದವರಾಗಿರುತ್ತೀರಲ್ಲದೆ, ಅವರನ್ನು ವಿಶ್ವಾಸದಿಂದ ನೋಡುವವರಾಗಿರುತ್ತೀರಿ. ಆದರೆ ತಮ್ಮ ಸೋದರಿಗಳಾದ ಅನೇಕರು ತಮ್ಮ ಪರಿಚಯಕ್ಕೆ ಅವಕಾಶವಿಲ್ಲದವರಾಗಿ ತಮ್ಮ ಸುಗುಣಗಳನ್ನು ಮಾತ್ರ ಕೇಳುತಲಿರುವರು. ಈ ಸ್ತ್ರೀಶಾಲೆಯ ದೆಸೆಯಿಂದ ಪ್ರಕೃತ ತಮ್ಮನ್ನು ಸಾಕ್ಷಾತ್ತಾಗಿ ನೋಡಲೂ, ತಮ್ಮ ಪ್ರಿಯವಿನ್ಯಾಸಗಳನ್ನು ಅನುಭವಿಸಲೂ ಉಂಟಾದ ಅನುಕೂಲ್ಯಗಳಿಗೆ ನಾವೆಲ್ಲರೂ ಬಹಳ ಹರ್ಷಿಸುವೆವು. ತಮ್ಮ ಪತಿಗಳಾದ ಮ॥ ರಾ॥ ರಾಜಶ್ರೀ ವಿ. ಪಿ. ಆನಂದರಾಯರವರು ಮಹಾಬುದ್ಧಿಶಾಲಿಗಳು, ಪ್ರಖ್ಯಾತವಾದ ವಂಶದಲ್ಲಿ ಜನಿಸಿದವರು. ಈ ಸಂಸ್ಥಾನದಲ್ಲಿ ಬಹಳ ಖ್ಯಾತಿಯನ್ನು ಪಡೆದಿರುವರು. ಇವರ ನಿಷ್ಪಕ್ಷಪಾತತೆ, ಧೈರ್ಯ, ಶಾಂತಿ, ಪರೋಪಕಾರ ಮತ್ತು ರಾಜಭಕ್ತಿ ವಿಶ್ವಾಸಗಳು ಪ್ರಜೆಗಳ ಸ್ತೋತ್ರಕ್ಕೆ ಅರ್ಹಗಳಾಗಿರುತ್ತವೆ. ಈ ಮಹನೀಯರು ಈ ವರೆಗೆ ಈ ಸಂಸ್ಥಾನದಲ್ಲಿ ೩೩-೩೪ ವರುಷಗಳ ಕಾಲ ಅಧಿಕಾರ ಮಾಡಿರುವರು. ಪ್ರಕೃತದಲ್ಲಿ ಈ ರಾಜ್ಯಕ್ಕೆ ಅವರು ಮಂತ್ರಿ [illegible]ರಾಗಿ ಬಂದದ್ದು ನಮ್ಮೆಲ್ಲರಿಗೂ ಆನಂದವನ್ನುಂಟುಮಾಡಿದೆ. ತಾವು ಅವರ ಧರ್ಮಪತ್ನಿಗಳಾದದ್ದರಿಂದ ಅವರ ಸಂತೋಷ ಯಶಃಕೀರ್ತಿಗಳು ತಮ್ಮವೇ ಆಗಿರುವಕಾರಣ ಈ ಶುಭ ಸಮಯದಲ್ಲಿ ತಮ್ಮನ್ನು ಶುಭವಾಚನದಿಂದ ಸ್ತುತಿಸಲು ಬಹಳ ಆಹ್ಲಾದಚಿತ್ತರಾಗಿರುತ್ತೇವೆ. ಅವರಿಗೂ, ತಮಗೂ [illegible] ಸೇರಿದವರೆಲ್ಲರಿಗೂ ಸರ್ವೇಶ್ವರನಾದ ಶ್ರೀಜಗನ್ನಾಯಕನು ಆಯುರಾರೋಗ್ಯಂಗಳಂ ಕೊಟ್ಟು ತಮಗೆ ಸರ್ವದಾ ಶುಭವನ್ನುಂಟುಮಾಡಲಿ ಎಂದು ಪ್ರಾರ್ಥಿಸುವೆವಲ್ಲದೆ ಈ ಸ್ತ್ರೀ ಶಾಲೆಯು ತಮ್ಮ ಕಾಲದಲ್ಲಿ ಶಾಶ್ವತವಾಗಿ ನೆಲೆಗೊಳ್ಳಲು ಬೇಕಾದ ಸಾಧನ ಸಂಪತ್ತುಗಳನ್ನು ಪಡೆಯುವುದೆಂಬ ನಂಬಿಕೆಯುಳ್ಳವರಾಗಿ ಇಲ್ಲಿಗೆ ವಿರಮಿಸುತ್ತೇವೆ."

ಸೌ॥ ಸುಂದರಾಬಾಯಮ್ಮನವರ ಪ್ರತ್ಯುತ್ತರವು.

"ಸಹೋದರಿಯರೇ,—ತಾವುಗಳೆಲ್ಲರೂ ನನಗಾಗಿ ತಮ್ಮ ತಮ್ಮ ಕೆಲಸಗಳಿಂದ ಪುರಸತ್ತು ಮಾಡಿಕೊಂಡು ಇಷ್ಟು ದೂರ ದಯಮಾಡಿಸಿ ನುಡಿದ ವಿಶ್ವಾಸಪೂರ್ವಕವಾದ ಮಾತುಗಳಿಗೆ ನಾನು ಕೃತಜ್ಞಳಾಗಿರುವೆನು. ನನ್ನ ಮತ್ತು ನನ್ನವರ ವಿಷಯದಲ್ಲಿ ಆಡಿದ ಘನ ನುಡಿಗಳಿಗೆ ನಾವು ಅರ್ಹರಲ್ಲವೆಂದು ತಿಳಿದಿರುವೆವು. ಈ ಸ್ತ್ರೀಶಾಲೆಯ ದ್ವಾರಾ ಇಷ್ಟು ಮಂದಿ ಸ್ತ್ರೀ ಸಹೋದರಿಯರುಗಳ ಪರಿಚಯವೂ ಪರಸ್ಪರ ವಿಶ್ವಾಸವೂ ಉಂಟಾಗಿರುವ ವಿಷಯದಲ್ಲಿ ನಾನು ತುಂಬಾ ಸಂತೋಷಿಸುವೆನು. ಈ ಸ್ತ್ರೀಶಾಲೆಗೆ ಪರಸ್ಪರ ಸಹಾಯವು ಇಲ್ಲದೆ ನಡೆಯಲಾರದು. ಮುಖ್ಯವಾಗಿ ಇದಕ್ಕೆ ಐಕಮತ್ಯವೇ ಭೂಷಣವಾಗಿರುವುದು. ಅದನ್ನು ಸರ್ವ ಪ್ರಯತ್ನದಿಂದಲೂ ಸಂಪಾದಿಸಿ ಕಾಪಾಡಿ ಅಭಿವೃದ್ಧಿ ಪಡಿಸಿಕೊಂಡು ಬಂದಲ್ಲಿ ನಮ್ಮ ದೇಶಕ್ಕೂ ನಮಗೂ ಮೇಲು ಉಂಟಾಗುವುದೆಂದು ನಂಬುತ್ತೇನೆ. ಈ ವಿಷಯದಲ್ಲಿ ನನ್ನಿಂದಾಗುವ ಅನುಕೂಲ್ಯಗಳನ್ನು ಮಾಡಲು ಹಿಂತೆಗೆಯುವುದಿಲ್ಲದೆ ಭಗವಂತನು ಈ ಸಂಘವನ್ನು ಶಾಶ್ವತವಾಗಿ ನಡಿಸಿಕೊಂಡು ಬರುವನೆಂದು ಪ್ರಾರ್ಥಿಸುತ್ತೇನೆ. ನಿಮ್ಮಗಳ ವಿಶ್ವಾಸಕ್ಕಾಗಿ ನಿಮ್ಮಗಳನ್ನು ಪುನಃ ಪುನಃ ವಂದಿಸುವೆನು."

ಕಡೆಯಲ್ಲಿ ಸಭೆಯೊಳಗೆ ಹಾಜರಿದ್ದ ಸ್ತ್ರೀಯರಿಗೆಲ್ಲಾ ಗಂಧ ಪುಷ್ಪಾದಿಗಳನ್ನೂ ಅರಿಶಿನ ಮಂಗಳ ದ್ರವ್ಯಾದಿಗಳನ್ನೂ ಹಂಚಿ, ಆ ಸಂತೋಷಯುಕ್ತವಾದ ಕೂಟವನ್ನು ಮುಕ್ತಾಯಮಾಡಿದರು.

ಬಾತ್ಮಿದಾರರಿಗೆ ನೋಟೀಸು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

"ಸುಪಾರಿ ಹಾಲತ್ತಿನ ವಿಚಾರ"—ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿಲ್ಲ.

ಗೋರಿಬಿದನೂರು ತಾಲ್ಲೂಕು ಮುದುಗೆರೆ ದೇವಸ್ಥಾನದ ವಿಷಯದಲ್ಲಿ ಬರೆದು ಬಂದಿರುವ ಬಾತ್ಮಿಯನ್ನು ಪ್ರಕಟಿಸಲಾರೆವು. ಬಾತ್ಮಿದಾರರು ಈ ವಿಚಾರವಾಗಿ ಮುಜರಾಯಿ ಸೂಪರಿಂಟೆಂಡೆಂಟರಿಗೆ ಅರ್ಜಿ ಬರೆದುಕೊಂಡಲ್ಲಿ ಅವರು ಇತ್ಯರ್ಥಪಡಿಸುತ್ತಾರೆ.

"ಚಾಮರಾಜನಗರದಲ್ಲಿ ವರ್ತಕರು ತಮ್ಮ ಅಂಗಡಿಗಳ ಮುಂಭಾಗದಲ್ಲಿ ಕಟ್ಟಿಕೊಂಡಿದ್ದ ತಟ್ಟಿಗಳನ್ನೂ ಟಿನ್‌ಗಳಿಂದ ಮಾಡಿದ ಮೇಲ್ಛಾವಣಿಗಳನ್ನೂ ಸ್ಥಳಾಧಿಕಾರಿಗಳು ಜುಲುಮಿನಿಂದ ಕೀಳಿಸಿ ಹಾಕಿಸಿದರೆಂದೂ, ಈ ವಿಷಯವನ್ನು ಕುರಿತು ಆ ವರ್ತಕರು ಡೆಪ್ಯುಟಿ ಕಮಿಷನರ್‌ರವರಿಗೆ ಅರ್ಜಿ ಬರೆದುಕೊಂಡಿದ್ದಾರೆಂದೂ ಒಬ್ಬ ಬಾತ್ಮಿದಾರರು ತಿಳಿಸಿ, ಅರ್ಜಿಯ ನಕಲನ್ನು ಪ್ರಕಟನೆಗಾಗಿ ನಮ್ಮಲ್ಲಿಗೆ ಕಳುಹಿಸಿದಾರೆ. ಈ ವಿಚಾರವನ್ನು ಡೆಪ್ಯುಟಿ ಕಮಿಷನರ್‌ರವರು ವಿಚಾರಣೆಮಾಡಿ ಸರ್ಕಾರದ ಕಾನೂನಿಗೆ ಅನುಸಾರವಾಗಿಯೂ ವರ್ತಕ ಪ್ರಜೆಗಳಿಗೆ ಕಷ್ಟನಷ್ಟಗಳಾಗದಂತೆಯೂ ಹುಕುಂ ಕೊಡುತ್ತಾರೆಂದು ನಿರೀಕ್ಷಿಸುತ್ತೇವೆ.

—ಎಡಿ॥

ಕರೆಸ್ಪಾಂಡೆನ್ಸ್.

ಅಜ್ಜಂಪುರದ ರೀಡಿಂಗ್ ರೂಂ.

ಅಯ್ಯಾ,

ಈ ವಾಚಕ ಶಾಲೆಯು ಕಳೆದ ೧೯೦೮ ಫೆಬ್ರವರಿ ೩೧ನೇ ತಿಂಗಳಲ್ಲಿ ಪ್ರಾರಂಭಿಸಲ್ಪಟ್ಟು, ಮೂರೇ ತಿಂಗಳು ಕ್ರಮವಾಗಿ ನಡೆದು, ಅಕಸ್ಮಾತ್ ಪ್ರಾಪ್ತವಾದ ಪ್ಲೇಗ್ ರೋಗದ ದೆಸೆಯಿಂದ ಸದರಿ ಶಾಲೆಯು ಉಜ್ಜೀವನವು ವಿಸ್ತರವೆಂಬುದು ವಿಸ್ಮರಣೆಗಾಗಿ ಇದೇ ಊರು ಆಸ್ಪತ್ರೆ ಅಸಿಸ್ಟೆಂಟ್ ಮೆ॥ ಸುಬ್ಬರಾಯರೂ ಮೆ॥ ಅಶ್ವತ್ಥರಾಯರೂ ಇವರನ್ನು ಉತ್ತಮರೆಂದು ತಿಳಿದು ಇಲ್ಲಿನ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಸಭೆಕೂಡಿಸಿದರು. ಸಭೆಕರ ಅನುಮೋದನೆ ಮೆ॥ ಸುಬ್ಬರಾಯರು ಅಗ್ರಾಸನಾಧಿಪತಿಗಳಾದರು. ಸ್ಕೂಲ್ ಹೆಡ್ ಮಾಸ್ತರ್ ಮೆ॥ ಕೆ. ಕೃಷ್ಣಪ್ಪನವರು ರೀಡಿಂಗ್ ರೂಮಿನ ರಿಪೋರ್ಟನ್ನು ಓದಿದರು. ಇನ್ನು ಮುಂದೆ ಈ ವಾಚಕ ಶಾಲೆಯು ಕ್ರಮವಾಗಿ ನಡೆಯುವುದಕ್ಕೆ ಒಳ್ಳೆ ಸೆಕ್ರೆಟರಿ ಸ್ಥಾನವನ್ನು ಮೆ॥ ಸುಬ್ಬರಾಯರೂ ಮೆ॥ ಅಶ್ವತ್ಥರಾಯರೂ, ಟ್ರೆಜರರ್ ಸ್ಥಾನವನ್ನು ಮೆ॥ ಕೆ. ಶಂಕರಪ್ಪನವರೂ ಸಹ ಸೇರಿದ್ದ ಮೆಂಬರುಗಳ ಅಭಿಪ್ರಾಯದಂತೆ ವಹಿಸಿದರು. ಕೆಲವು ರೂಪಾಯಿಗಳ ಚಂದಾ ಪಟ್ಟಿಯೂ ತಯಾರಿಸಲ್ಪಟ್ಟಿತು. ಕಂಟ್ರಾಕ್ಟರ್ ಮೆ॥ ಹೀರಾಜಿ ಶೇಟರವರು ಕೆಲವು ದಿವಸಗಳ ವರಿಗೆ ತಮ್ಮ ಹೊಸ ಕಟ್ಟಡವನ್ನು ವಾಚಕ ಶಾಲೆಯ ಬಗ್ಗೆ ಕೊಡುವುದಕ್ಕಾಗಿ ವಾಗ್ದಾನಮಾಡಿ ಮೆಂಬರುಗಳ ಕೃತಜ್ಞತೆಗೆ ಪಾತ್ರರಾದರು.

ಒಬ್ಬ ವಾಚಕ.

ಪರೋಪಕಾರದ ಕೆಲಸವು.

ಅಯ್ಯಾ,

ದೇವನಹಳ್ಳಿ ಗ್ರಾಮದಲ್ಲಿ ಮಳೆಗಳು ಇಲ್ಲದೆ ಕುಡಿಯುವ ನೀರಿಗೆ ಬಹಳ ಅವಸ್ಥೆಯಾಗಿಯೂ ದನ ಕರುಗಳ ಕುಡಿಯುವ ನೀರಿಗೆ ಬಹಳ ತಪ್ಪವಾಗಿಯೂ, ೧-೨ ಮೈಲಿ ಫಾಸಲೆ ಹೋದಾಗ್ಯೂ ನೀರು ದೊರೆಯುವದು ದುಸ್ತರವಾಗಿಯೂ ಇತ್ತು. ಇಂಥಾದ್ದರಲ್ಲಿ ಇದೇ ಟವನ್ ಆಯುರ್ವೇದ ವೈದ್ಯಶಾಲಾಧ್ಯಕ್ಷರು ನೇ॥ ನಂದಿಗಿರಿ ದೀಕ್ಷಿತರೆಂಬುವರು ಈ ಊರು ಕೋಟೆ ಬಾಗಿಲು ಬಳಿ ಒಂದು ಸೇದುವ ಬಾವಿಯನ್ನು ತೆಗಿಸಿದ್ದರಲ್ಲಿ ಅತಿಂದವಾದ ಉತ್ಕೃಷ್ಟ ಜಲವು ಬಿದ್ದಿತು. ಅದಕ್ಕೆ ಕಲ್ಲು ಕಟ್ಟಡವನ್ನು ಕಟ್ಟಿಸಿ ಬಂಡಿ ಹಾಕಿ ಪ್ರತಿಷ್ಠಿಸಿದರು. ಆ ಲಾಗಾಯ್ತು ಪ್ರಾತಃಕಾಲ ೪ ಘಂಟೆ ಲಾಗಾಯ್ತು ರಾತ್ರಿ ೧೨ ಘಂಟೆ ವರಿಗೂ ವಿರಾಮವಿಲ್ಲದೆ ಈ ಟವನ್ ಅರ್ಧ ಜನಗಳು ಸೇದುತ್ತಾ ಇದ್ದಾಗ್ಯೂ ಸ್ವಲ್ಪವೂ ನೀರು ತೆಗೆಯದೆ ಸಂಪೂರ್ಣವಾಗಿರುತ್ತೆ. ಈ ಕಾಲದಲ್ಲಿ ಉದಾರ ಮನಸ್ಸಿನಿಂದ ಇವರು ಈ ಕಾರ್ಯವನ್ನು ಮಾಡಿದ್ದು ಬಹಳ ಶ್ಲಾಘನೀಯವಾಗಿರುತ್ತದೆ.

ಇಲ್ಲಿ ಸೇಟೆ ಧಾರಣೆಗಳು ಇನ್ನೂ ಇಳಿಯಲಿಲ್ಲ. ನೆನ್ನೆ ಮೊನ್ನೆ ಸ್ವಲ್ಪ ಮಳೆಯಾದದ್ದರಿಂದ ಜನಗಳು ಹೊಲಗಳ ಉಳುವ ಕೆಲಸಗಳನ್ನು ನಡೆಸುತ್ತಾ ಇರುತ್ತಾರೆ. ಇಲ್ಲಿನ ಅಮಲ್ದಾರ್ ಮೆ॥ ಸುಬ್ಬರಾಯರು ಬಹಳ ಚುರುಕು ಬುದ್ಧಿಯಿಂದ ಪ್ರಜಾನುರಾಗಿಗಳಾಗಿ ಕೆಲಸ ಮಾಡುತ್ತಿದಾರೆ.

ಪ್ರಜಾ ಹಿತಚಿಂತಕ.

ಜಿಸೆಕ್ಷನ್ ಶ್ರಾಲಜ್ಞಸ್ ಮಹಿಮ್ಮ ಪತ್ರ

ಅಯ್ಯಾ,

ಮೈಸೂರು ಲೋಕಲ್ ಸರ್ವಿಸ್ ಎಂಬ ಮಿಲಿಟರಿ ಇಲಾಖೆಯಲ್ಲಿ ಕ್ಯಾಪ್ಟನ್ ಮೇಜರ್ ಎಂಬ ಹುದ್ದೆಯಲ್ಲಿದ್ದು ಪೆನ್ಶನ್ ಪಡೆದ ಪಠೇಲ್‌ಖಾನ್ [illegible]ಸಾಹೇಬರೆಂಬುವವರು ಈ ಊರಲ್ಲಿ ಬಂದು ವಾಸವಾಗಿರುತ್ತಾರೆ. ಇವರು

ಮಿಲಿಟರಿ ಇಲಾಖೆಯಲ್ಲಿದ್ದಾಗ್ಗೆ ಕೆಲವು ಕಾಲ ಮದ್ರಾಸಿ ಇಲಾಖೆಯಲ್ಲಿ ಕೆಲಸ ಮಾಡಿ ಪಶು ರೋಗ ಚಿಕಿತ್ಸೆ ವಿಷಯದಲ್ಲಿ ತುಂಬಾ ಅನುಭವಶಾಲಿಗಳಾಗಿದಾರೆ. ಇವರು ಈ ಊರಿನಲ್ಲಿ ನಿಂತಾರಭ್ಯ ಈ ಊರಿನ ಸುತ್ತುಮುತ್ತ ಗ್ರಾಮಗಳ ಅನೇಕ ರೈತರ ದನಗಳಿಗೆ ಚಿಕಿತ್ಸೆ ಮಾಡಿದಾರೆ. ಇವರು ಚಿಕಿತ್ಸೆ ಮಾಡಿದ ದನಗಳೆಲ್ಲಾ ಬಹುಮಟ್ಟಿಗೆ ಗುಣಹೊಂದಿರುತ್ತವೆ. ಬೆಂಗಳೂರು, ಹೊಸಕೋಟೆ, ಆನೆಕಲ್ ತಾಲ್ಲೂಕುಗಳಿಗೆ ಈ ಊರು ಮಧ್ಯಪ್ರದೇಶವಾಗಿರುತ್ತೆ. ಅನೇಕ ರೈತರು ರೋಗ ಪೀಡಿತವಾದ ತಮ್ಮ ದನಗಳನ್ನು ಚಿಕಿತ್ಸೆಬಗ್ಗೆ ಇವರ ಬಳಿಗೆ ತರುತ್ತಾರೆ. ಸದರಿ ರೈತರಲ್ಲನೇಕರು ತುಂಬಾ ಬಡವರಾಗಿರೋಣದರಿಂದ ಔಷಧದ ಖರ್ಚುಗಳನ್ನು ಕೊಡಲು ಅಶಕ್ತರಾಗುತ್ತಾರೆ. ದಯಾಳು ಸರ್ಕಾರದವರು ಅನೇಕ ಕಡೆ ಪಶು ಚಿಕಿತ್ಸಾಲಯಗಳನ್ನಿಟ್ಟು ಬಡ ರೈತರಿಗೆ ಸಹಾಯಮಾಡಿ ಕೀರ್ತಿ ಪಡೆದಿರುತ್ತಾರೆ. ಮೇಲ್ಕಂಡ ವಲೀಲ್‌ಖಾನ್ ಸಾಹೇಬರು ಸರ್ಕಾರದವರು ಔಷಧಗಳ ಸಹಾಯ್ಯವನ್ನು ಮಾಡಿದರೆ ತಾವು ಸಂಬಳವಿಲ್ಲದೆ ಧರ್ಮಕ್ಕಾಗಿ ಬಡ ರೈತರ ದನಗಳಿಗೆ ಚಿಕಿತ್ಸೆ ಮಾಡುವುದಾಗಿ ತಾಲ್ಲೂಕು ಅಮಲ್ದಾರರಲ್ಲಿ ಅರ್ಜಿಮಾಡಿಕೊಂಡಿರುವಂತೆ ಕೇಳುತ್ತೇನೆ. ದಯಾರಸಭರಿತರಾದ ಅಮಲ್ದಾರರು ಸದರಿ ಅರ್ಜಿಯನ್ನು ಶಿಫಾರಸಿನ ಮೇಲೆ ಗವರ್ನಮೆಂಟಿನವರ ಪರಾಂಬರಿಕೆ ಬಗ್ಗೆ ರವಾನಿಸಿ, ಇಲ್ಲಿ ಪಶು ಚಿಕಿತ್ಸಾಲಯವು ಪ್ರಾರಂಭವಾಗುವಂತೆ ಏರ್ಪಾಡು ಮಾಡುವುದರಿಂದ ಬಡ ರೈತರಿಗೆ ಸಹಾಯಮಾಡುವರೆಂದು ನಂಬುತ್ತೇನೆ.

ಅ. ಕ.

ಕೃಷ್ಣರಾಜಪೇಟೆ ಕಾರ್ಕಾನಹಳ್ಳಿ ಜಟ್ಕಾ ಗಾಡಿಗಳು.

ಅಯ್ಯಾ,

ಕಾನಕಾನಹಳ್ಳಿಯ ಕೆಲವು ಮುಸಲ್ಮಾನರು ಸೇರಿ ಒಂದು ಜಟ್ಕಾ ಕಂಪನಿ ಏರ್ಪಡಿಸಿ, ಪ್ರತಿದಿನವೂ ಕ್ಲೋಸ್‌ಪೇಟೆಯಿಂದ ಕಾನಕಾನಹಳ್ಳಿಗೂ, ಕಾನಕಾನಹಳ್ಳಿಯಿಂದ ಕ್ಲೋಸ್‌ಪೇಟೆಗೂ ಜಟ್ಕಾಗಾಡಿ ಬಿಡುತ್ತಾರೆ. ಕ್ಲೋಸ್‌ಪೇಟೆಯಿಂದ ಕಾನಕಾನಹಳ್ಳಿಗೆ ೧೭ ಮೈಲಿ ಫಾಸಲೆ ಇದೆ. ಕ್ಲೋಸ್‌ಪೇಟೆಗೆ ೭ ಮೈಲಿ ದೂರದಲ್ಲಿ ಸದರಿ ಕಂಪನಿ ಮುಸಲ್ಮಾನರು ಒಂದು ದೊಡ್ಡಿ ಕಟ್ಟಿಕೊಂಡು, ಅಲ್ಲಿ ಕುದುರೆಗಳನ್ನು ಬದಲಾಯಿಸುತ್ತಾರೆ. ತಲೆಯೊಂದಕ್ಕೆ ೮ ಆಣೆ ಛಾರ್ಜು ವಸೂಲು ಮಾಡುತ್ತಾರೆ. ಜಟ್ಕಾ ಗಾಡಿಗಳು ಕೇವಲ ಹದಿಲವಾಗಿ, ಬಹಳ ಅಪಾಯ ಸ್ಥಿತಿಯಲ್ಲಿರುತ್ತವೆ. ನಾನು ಸುಮಾರು ಒಂದು ವರುಷದಿಂದಲೂ ಅಲ್ಲಿಗೆ ಹೋಗಿ ಬರುವುದುಂಟು. ಈಗಲೂ ಅದೇ ಸ್ಥಿತಿಯಲ್ಲಿರುತ್ತವೆ. ಇಂಥಾ ಸ್ಥಿತಿಯಲ್ಲಿರುವ ಜಟ್ಕಾ ಗಾಡಿಗಳಲ್ಲಿ ಪ್ರತಿಯೊಂದು ಗಾಡಿಗೆ ಅನೇಕ ವೇಳೆ ೭ ಜನ ೭ ಜನಗಳನ್ನು ಕೂಡಿಸುವುದನ್ನು ನೋಡಿದೇನೆ. ಅನೇಕ ವೇಳೆ ಗಾಡಿಗಳು ಮುರಿದು ಹೋಗಿ ಜನಗಳು ಬಿದ್ದು ಗಾಯ ಹೊಂದಿದಾರೆ. ನಾನು ಸಹ ಅನುಭವಿಸಿದಾಗ್ಯೂ ಅದರ ದೈವ ಕೃಪೆಯಿಂದ ಇದುವರೆಗೆ ಪ್ರಾಣಹಾನಿಯೇನೂ ಆಗಿಲ್ಲ. ಕೆಲವುವೇಳೆ ಮಧ್ಯದಲ್ಲಿ ಗಾಡಿ ಮುರಿದುಹೋಗಿ ಪ್ರಯಾಣಿಕರು ನಡೆದುಕೊಂಡು ಹೋಗಿ ಕಷ್ಟಪಟ್ಟದಾರೆ. ತೆಗೆದುಕೊಂಡ ಛಾರ್ಜನ್ನು ಪುನಃ ಅವರಿಗೆ ಕೊಡುವುದಿಲ್ಲ. ಈ ರೀತಿಯಲ್ಲಿ ಅವರು, ಅಂದರೆ ಪ್ರಯಾಣಿಕರು, ನಷ್ಟಪಡಬೇಕಾಗಿದೆ. ಹೀಗಿರುವಲ್ಲಿ ಇದುವರೆಗೆ ತಾಲ್ಲೂಕು ಅಧಿಕಾರಿಗಳು ಗಮನ ಕೊಡದೆ ಉದಾಸೀನರಾಗಿರುವುದು ಆಶ್ಚರ್ಯಕರವಾದದ್ದಾಗಿಯೂ, ವಿಷಾದಕರವಾದದ್ದಾಗಿಯೂ ಇದೆ. ಈಗಲಾದರೂ ಅವರು ಇದಕ್ಕೆ ಗಮನ ಕೊಟ್ಟು ಪ್ರತಿಯೊಂದು ಜಟ್ಕಾ ಗಾಡಿಯಲ್ಲೂ ೪ ಮಂದಿಗಿಂತ ಹೆಚ್ಚಾಗಿ ಕೂರಿಸದ ಹಾಗೂ, ಭದ್ರವಾದ ಗಾಡಿಗಳನ್ನು ಇಡುವ ಹಾಗೂ ಆ ಕಂಪೆನಿಯ ಮುಖ್ಯಸ್ಥರಿಗೆ ತಾಕೀತು ಮಾಡಿ, ಹೀಗೆ ಒರಕಕ್ಕೆ ಪ್ರಯಾಣಿಕರಿಗೆ ಅನುಕೂಲವನ್ನು ಕಲ್ಪಿಸಿ, ಆ ಮೂಲಕ ಕೀರ್ತಿ ಪಡೆಯುವರೆಂದು ಧೃಢವಾಗಿ ನಂಬಿದೇನೆ.

ಒಬ್ಬ ಪ್ರಯಾಣಿಕ

ಮಾರಿಯ ಪರಿಷೆಯೂ, ಜನಗಳ ಉತ್ಸಾಹವೂ.

ಅಯ್ಯಾ,

ಕಳೆದ ಮಂಗಳವಾರದ ದಿನ ನಮ್ಮ ಗ್ರಾಮಕ್ಕೆ ೧-೧॥ ಮೈಲಿ ದೂರದಲ್ಲಿರುವ ಪಟ್ಟೀಕೆರೆ ಎಂಬ ಗ್ರಾಮದಲ್ಲಿ ಮಾರಮ್ಮನ ಪರಿಷೆಯು ಪ್ರಾರಂಭವಾಯಿತು. ಭಕ್ತಾದಿಗಳ ಸಮೂಹವು ಶತಮಾನಕ್ಕೆ ಒಂದು ಸೊನ್ನೆ ಕಡಿಮೆಯಾಗಿತ್ತೆಂದು ಧಾರಾಳವಾಗಿ ಹೇಳಬಹುದು. ಹಳ್ಳಿಗಳಲ್ಲಿ ಪ್ರತಿ ವರ್ಷವೂ ಮೇಲ್ಕಂಡ ಜಾತ್ರೆಯು ನಡೆಯುವುದು ವಾಡಿಕೆಯಾಗಿಯೇ ಇದೆಯಷ್ಟೆ. ಅದರಂತೆ ಮಂಗಳವಾರ ಸಾಯಂಕಾಲ ಗುಡಿಯ ಮುನ್ನೆಲ್ಲಿ ಒಂದು ಹೆಣ್ಣು ಪ್ರತಿಮೆಯನ್ನು ತಿದ್ದಿ ಅದಕ್ಕೆ ಹೂವು, ಗಂಧ, ಅಕ್ಷತೆ, ಅರಿಸಿನ, ಕುಂಕುಮ ವಗೈರೆ ಇಟ್ಟು ಗ್ರಾಮದ ಮುಖಂಡರನೇಕರು ವಾದ್ಯ ಘೋಷದೊಡನೆ ಮೆರವಣಿಗೆ ಹೊರಟರು. ಆ ಜನಗಳ ಸಂದಣಿಯು ನನ್ನ ಕಣ್ಣುಗಳು ಅಂಧಕಾರದಲ್ಲಿ ಮುಚ್ಚಿಕೊಂಡಿರುವ ವರಿಗೂ ಕಾಣಿಸುತ್ತಿದ್ದಿತು. ಆ ದೇವತೆಯ ಮುಂಭಾಗದಲ್ಲಿ ಭೂತ ಬೇತಾಳಗಳೇ ಮೊದಲಾದ ಶಾಕಿನಿ ಢಾಕಿನಿಯರು ಆನಂದಿಸುವಂತೆ ಬಡಿಗುವ ವಾದ್ಯಘೋಷವನ್ನು ಕೇಳುವಾಗ ನನ್ನ ಕೈಯಿಂದಲೂ ನನ್ನ ಕಿವಿಗಳೆರಡೂ ಮುಚ್ಚಿಹೋದವು. ಆ ದೇವತೆಯನ್ನು ಹೊತ್ತಿದ್ದವರಿಗೆ ಅಲ್ಲಲ್ಲಿಗೆ ಅಮ್ಮನವರು ಮೈಮೇಲೆ ಬರುತ್ತಿದ್ದದ್ದನ್ನು ಆ ಅನಾಗರೀಕರಾದ ಜನಸಮೂಹವು ನೋಡಿ ಅಡ್ಡಬಿದ್ದು ಕೈ ಮುಗಿದು ಹೆಜ್ಜೆಗೆ ಒಂದು ತೆಂಗಿನಕಾಯಿಯನ್ನು ಈಡುಗಾಯಿ ಹಾಕುತ್ತಿದ್ದರು. ಅಲ್ಲದೆ ಅಮ್ಮನವರಿಗೆ ಪದೇಪದೇ ಮುನಿಸು ಬಂದು ಹಿಂದಕ್ಕೆ ಹೋಗುತ್ತಿದ್ದಳು. ಆಗ ಅಲ್ಲಿ ಸೇರಿದ್ದ ಶತಮಾನಕ್ಕೆ ಒಂದು ಸೊನ್ನೆ ಕಡಿಮೆಯಾದ ಭಕ್ತಾದಿಗಳು— "ಏನೆಲಾ! ಅಮ್ಮನವರಿಗೆ ನಡೆಮುಡಿ ಹಾಕಲಿಲ್ಲಾ" "ಅಮ್ಮನವರಿಗೆ ನಡೆಮುಡಿ ಹಾಕಲಿಲ್ಲ ಕಾಣಲಾ" "ಅಕ್ಕೆ ಮುನ್ನು ಕೊಂಡು ಹೋಗಲೇ ತೆಕ್ಕೊಂಡು ಬಾರಲಾ" "ಯಲ್ಲಿ ಸಾಯೇನಾ" ಎಂದು ಆ ಗ್ರಾಮದ ಮಡಿವಾಳ ಯನ್ನು ಕೂಗಿಕೊಂಡರು. ಆಗ ಮಡಿವಾಳಿಯು — "ಬುದಿ ಬುದಿ ಯಲ್ಲಾ ನೀವೇನು ನನ್ನೆ ಯಾವಳೋ ಒಕ್ಕರು ಯಂತ ಕೊಟ್ಟನ್ನೆ ಅವ್ವ, ಯಾಂಗೆ ಕೊಟ್ಟನ್ನೋ? ಬಂಗೋಸಿ ಮರಗನ್ನಿ" ಎಂದು ಹೇಳಿ ನಡೆಮುಡಿಯನ್ನು ಹಾಕಿದನು. ಅನಂತರ ಆ ನಾಲ್ಕು ನಡೆಮುಡಿಯ ಮೇಲೆ ಮೇಲ್ಕಂಡ ಕರ್ಣ ಕಠೋರವಾದ ವಾದ್ಯಘೋಷದೊಡನೆ ತನ್ನ ಬಿಡಾರವಾದ ಒಂದು ಮೋಟಾವಸೆ ಇಲ್ಲದ ಜಗಲಿಯ ಮೇಲಕ್ಕೆ ಬಿಜಯಮಾಡಿದಳು. ಅಷ್ಟರೊಳಾಗಿ ಪೈಮಸುಗ್ರಹದ ಮೇಲೆಯೇ ಸಿಡಿಲು ಗುಡುಗು ಮಿಂಚು ಇವುಗಳ ಆರ್ಭಟದೊಡನೆ ಕಾರಿ ವಿಪರೀತವಾಗಿ ಸುರಿಯಲು ಆರಂಭವಾಯಿತು. ಅಷ್ಟರಲ್ಲಿಯೇ ಬಂದಿದ್ದ ಭಕ್ತಾದಿಗಳೆಲ್ಲರೂ ಮಳೆಯ ದೆಸೆಯಿಂದ ಪಲಾಯನವಾದರು. ಆ ಅಮ್ಮನವರು ಮಾತ್ರ ಅಲ್ಲೇ ನೆನೆದು ನೆನೆದು ಸಾಕಾಯಿತು. ಅಷ್ಟರಲ್ಲೇ ಯಜಮಾನರೊಬ್ಬ ಪುಣ್ಯಾತ್ಮನು ಅಮ್ಮನವರ ಮೇಲೆ ಕೃಪಾಭರಿತನಾದಂತೆ ಒಂದು ಗೊಂಗಡಿ (ಹಳ್ಳಿಯವರು ಮಳೆಗಾಲದಲ್ಲಿ ಜೊಂಡು ಹುಲ್ಲಿನಿಂದ ಹೆಣೆದುಕೊಂಡಿರುವ ಗೊರಬು) ಯನ್ನು ತಂದು ಅಮ್ಮನವರ ಮೇಲೆ ಮಳೆ ಹನಿ ಬೀಳದಂತೆ ಇಟ್ಟು ಜಾಗ್ರತೆ ಓಡಿಹೋಗಿ— "ಅಮ್ಮನು ನೆನ್ನವಳೆ ಕಾಣಲಾ! ಈ ವತ್ತಿಗೆ ಯಲ್ಲು ದಿನದೊಳಗೇನ ನೋಡಲಾ! ಈ ಊರು ಆಳುವವಳ್ ಇಲ್ಲವಲಾ" ಅಂದನಂತೆ. ಆ ಮೇಲೆ ಮಳೆಯು ಸ್ವಲ್ಪ ನಿಲ್ಲಲು ಎಲ್ಲರೂ ಈಚೆಗೆ ಬಂದು— "ಯಾಂಗಾದರೂ ಮಾತಿ ಉತ್ಸವ ಮಾಡಿ ಬಿಡುವ" ಎಂದು ಸೇರಿ ವಾದ್ಯ ಘೋಷದೊಡನೆ ಮೇಲ್ಕಂಡ ಜಗಲಿಯ ಬಳಿಗೆ ಬಂದು ನೋಡುವಾಗ್ಗೆ ಮಾರಮ್ಮನವರು ಗಂಗಮ್ಮನವರ ಪಾಲಾಗಿದ್ದರು. ಆಕಾರವೆಲ್ಲವೂ ವಿಕಾರವಾಗಿ ಕಾಣುತ್ತಿತ್ತು. ಅಷ್ಟರಲ್ಲೇ ಎಲ್ಲರೂ ಸೇರಿ ಒಂದೇ ಆಕಾರವಾಗಿ ಕಾಣುತ್ತಿರುವ ಅಂಥ ಅಮ್ಮನವರನ್ನೇ ಮೆರವಣಿಗೆ ಮಾಡಿ ಸಾಗಹಾಕಿದರು.

ಹಾಲಿನ ಮನೋರಥಯುಳ್ಳ, ಅಂಥಾ ನವನಾಗರೀಕ ಕಾಲದಲ್ಲಿ ಜನಗಳು ತಮ್ಮ ಬಾಲಕರನ್ನು ವಿದ್ಯಾವಂತರನ್ನಾಗಿ ಮಾಡದೆ, ಅಂಥಾ ಹಾಸ್ಯಾಸ್ಪದವಾದ ಕಾರ್ಯಗಳಲ್ಲಿ ಉದ್ಯುಕ್ತರಾಗುತ್ತಿರುವುದನ್ನು ನೋಡಿದರೆ ಯಾರಿಗೆ ತಾನೇ ನಗುವೂ ದುಃಖವೂ ಬಾರದೆ ಇದ್ದೀತು! ಅಂಥಾ ಶೋಚನೀಯರಾದ ಬಹು ಮಂದಿ ಪುತ್ರರೊಡನೆ ಕೂಡಿರುವ ಈ ನಮ್ಮ ಭಾರತ ಮಾತೆಯ ಸಂತಾಪವು ಶಾಂತವಾಗಿ ನಾವೆಲ್ಲರೂ ಒಂದು ಜನಾಂಗದವರಾಗಿ ಒಬ್ಬರನ್ನೊಬ್ಬರು ಪ್ರೀತಿಸುವ ಭ್ರಾತೃಮಾತ್ಸರ್ಯವು ಉಂಟಾಗಿ ಬದುಕುವ ಸುದಿನವನ್ನು ಎಂದಿಗೆ ನೋಡುತ್ತೇವೆಯೋ ಅಂಥಾ ಸುದಿನವನ್ನು ಭಗವಂತನು ಜಾಗ್ರತೆ ಅನುಗ್ರಹಿಸಲೆಂದು ಪ್ರಾರ್ಥಿಸುವ

ಬಾಲಕರ ಹಿತೈಷಿ.

ವಿದೇಶ ವರ್ತಮಾನಗಳು.

ಗ್ರೀಸ್ ರಾಜ್ಯದಲ್ಲಿ ಮರಣದಂಡನೆಯನ್ನು ವಿಧಿಸಿದ ಎರಡು ವರುಷಗಳ ಮೇಲೆ ಖೈದಿಯನ್ನು ಗಲ್ಲಿಗೆ ಹಾಕುವ ಪದ್ಧತಿಯುಂಟು.

ನಾರ್ವೇ ರಾಜ್ಯದಲ್ಲಿ ಯಾರೇ ಆಗಲಿ ಮದ್ಯಪಾನ ಮಾಡುವುದಕ್ಕೆ ಒಂದು ಸಲಕ್ಕೆ ೩॥ ಆಣೆಗಿಂತ ಹೆಚ್ಚಾಗಿ ಖರ್ಚು ಮಾಡಕೂಡದೆಂದು ವಿಧಿಸಿರುತ್ತಾರೆ.

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಗಾಯಿಲೆಯಾದ ಪಕ್ಷಿಗಳನ್ನು ಇಟ್ಟುಕೊಂಡು ಚಿಕಿತ್ಸೆ ಮಾಡುವುದಕ್ಕೆ ಒಂದು ಆಸ್ಪತ್ರೆಯನ್ನು ಇಟ್ಟುಕೊಂಡಿದಾರೆ.

ಕಳೆದ ಬುಧವಾರ ತುರ್ಕೀ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿ ೨೧ ಮಂದಿಯನ್ನು ಸರ್ಕಾರದ ಆಜ್ಞೆಯ ಪ್ರಕಾರ ಗಲ್ಲಿಗೆ ಹಾಕಿದರು. ಸಾವಿರಾರು ಜನರು ಗುಂಪುಕಟ್ಟಿ ನಿಂತು ನೋಡಿದರು.

ಆಸ್ಟ್ರೇಲಿಯಕ್ಕೆ ಸೇರಿದ ಮಾಂಗೋಲಿಯಾ ಮಾಂಚೂರಿಯಾ ಪ್ರಾಂತ್ಯಗಳಲ್ಲಿ ಜನರು ನಾಯಿಗಳನ್ನು ಅಪಾರವಾಗಿ ಸಾಕಿ, ಅವುಗಳ ತುಪ್ಪಟವನ್ನು ಕತ್ತರಿಸಿ ಬಿಕರಿ ಮಾಡುತ್ತಾರೆ. ಈ ಕಸುಬಿನಿಂದ ಸಾವಿರಾರು ಜನರು ಜೀವನ ಮಾಡುವರು.

ರಷ್ಯಾ ರಾಜ್ಯದಲ್ಲಿ ಗವರ್ನಮೆಂಟಿನವರು ಗೂಢಚಾರರನ್ನು ಸಂಬಳ ಕೊಟ್ಟು ನೇಮಿಸಿಕೊಂಡಿದಾರೆ. ಈ ಗೂಢಚಾರರಲ್ಲಿ ೬,೮೦೦ ಮಂದಿ ಸ್ತ್ರೀಯರಾಗಿರುವರು. ಇವರಿಗೆ ವರುಷಕ್ಕೆ ೩೦ ಸಾವಿರ ರೂಪಾಯಿ ಸಂಬಳ ಪಾವತಿ ಆಗುತ್ತಿದೆ.

ಪರ್ಷಿಯಾ ಪ್ರಾಂತ್ಯದಿಂದ ೪೦೦ ಒಂಟೆಗಳ ಮೇಲೆ ಯುದ್ಧದ ಸಾಮಗ್ರಿಗಳನ್ನು ತುಂಬಿಸಿ ಸೀಸ್ತಾನ್ ಮೂಲಕ ಅಫ್ಘಾನಿಸ್ತಾನಕ್ಕೆ ರವಾನೆ ಮಾಡಿದರೆಂದೂ, ಈ ಒಂಟೆ ಸೈನ್ಯವನ್ನು ತಡೆದು ನಿಲ್ಲಿಸುವುದಕ್ಕಾಗದೆ ಹೋಯಿತೆಂದೂ ತಂತಿ ವರ್ತಮಾನ ಬಂದಿದೆ.

ಅಮೇರಿಕಕ್ಕೆ ಸೇರಿದ ಮೆಯಿನ್ ಎಂಬ ಡಿಸ್ಟ್ರಿಕ್ಟಿನಲ್ಲಿ ಮೂವತ್ತು ವರುಷಕ್ಕೆ ಮೇಲ್ಪಟ್ಟ ವಯಸ್ಸಿನ ಗಂಡಸರು ಮದುವೆ ಮಾಡಿಕೊಳ್ಳದೆ ಇದ್ದ ಪಕ್ಷದಲ್ಲಿ ಅಂಥವರೆಲ್ಲಾ ತಲಾ ವರುಷಕ್ಕೆ ೩೦ ರೂಪಾಯಿಯಂತೆ ಸರ್ಕಾರಕ್ಕೆ ತೆರಿಗೆ ಕೊಡಬೇಕೆಂದು ವಿಧಿಸುವವರಾಗಿದಾರೆ.

ಹಿಂದುಸ್ಥಾನದ ಸೈನ್ಯದಲ್ಲಿ ಬಹು ಕಾಲ ಹುದ್ದೇದಾರನಾಗಿದ್ದು, ಪೆನ್ಷನ್ ಪಡೆದು ಲಂಡನ್ ಪಟ್ಟಣಕ್ಕೆ ಹೋಗಿ ದಳ್ವಾಯಿಯಾಗಿದ್ದ ಮೆ॥ ಎಸ್. ಪಕಲ್ ಎಂಬಾತನು ತನ್ನ ಆಸ್ತಿಯಲ್ಲಿ ಎರಡೂವರೆ ಲಕ್ಷ ರೂಪಾಯಿಯನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾನೆ.

ಅಮೇರಿಕದಲ್ಲಿ ಮುಖ್ಯ ಪಟ್ಟಣವಾದ ನ್ಯೂಯಾರ್ಕ್ ನಗರದಿಂದ ನ್ಯೂಜರ್ಸಿ ಪಟ್ಟಣಕ್ಕೆ ಅಮದು ರಫ್ತಿಗಾಗಿ ನಡುವೆ ಹರಿಯುವ ಹಡ್ಸನ್ ನದಿಯ ಮೇಲೆ ಒಂದು ಸೇತುವೆಯನ್ನು ಕಟ್ಟುವವರಾಗಿದಾರೆ. ಇದು ೭,೪೦೦ ಅಡಿ ಉದ್ದವುಳ್ಳದ್ದಾಗುವುದು. ಈ ಸೇತುವೆಗೆ ೯½ ಕೋಟಿ ರೂಪಾಯಿ ಖರ್ಚಾಗುತ್ತದೆ.

ತುರ್ಕೀ ರಾಜಧಾನಿಯಲ್ಲಿ ಡಾಕ್ಟರ್ ರೆವಾಜ ಎಂಬೊಬ್ಬ ವರ್ತಮಾನ ಪತ್ರಿಕೆಯ ಮಾಲೀಕನು ಪ್ರಜೆಗಳನ್ನು ಸರ್ಕಾರದವರ ಮೇಲೆ ಎತ್ತಿಕಟ್ಟುವಂಥಾ ದ್ರೋಹಯುಕ್ತವಾದ ಪತ್ರಿಕೆಗಳನ್ನು ಬರೆದು ಪ್ರಕಟಿಸಿದನೆಂದು ಹೇಳಿ ಸರ್ಕಾರದವರು ಆತನಿಗೆ ಯಾವಜ್ಜೀವವೂ ಸೆರೆ ಅನುಭವಿಸಬೇಕೆಂಬ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಫ್ರಾನ್ಸ್ ರಾಜ್ಯಕ್ಕೆ ಸೇರಿದ ಸ್ಟ್ರೆಲಾನ್ ಎಂಬ ಪಟ್ಟಣದ ಬೈಲಿನಲ್ಲಿ ಒಂದಿಷ್ಟು ನಡು ಕಳೆದ ತಿಂಗಳಲ್ಲಿ ದಂಗೆ ಎದ್ದು ಎರಡು ದಿನ ಬಹಳ ಗಾಬರಿಯನ್ನುಂಟುಮಾಡಿದರು. ಸೈನಿಕರು ಹೋಗಿ ಅವರನ್ನು ಸುತ್ತಿಕೊಂಡು ಹಿಡಿದು ಬಂದನದಲ್ಲಿ ಇಟ್ಟರೂ ಈ ಗಲಭೆಯಲ್ಲಿ ೧೭ ಮಂದಿ ಬಂಧೀಖಾನೆಯವರು ತಪ್ಪಿಸಿಕೊಂಡು ಹೋಗಿರುತ್ತಾರೆ.

[illegible] ರಾಜ್ಯದ ಮುಖ್ಯ ಪಟ್ಟಣವಾದ [illegible] ಇತರ ಕಡೆಗಳಲ್ಲಿ [illegible] ಟೆಲಿಗ್ರಾಫ್ ಆಫೀಸುಗಳ ನೌಕರರು ಕೆಲಸಕ್ಕೆ ಹೋಗದೆ ಹಟ ಹಿಡಿದು ನಿಂತರು. ದಾರಿ ಸರ್ಕಾರದವರು ಇವರನ್ನು [illegible] ಕೆಲಸದಿಂದ ಬಿಡಿಸಿ [illegible] ಆಫೀಸುಗಳಲ್ಲೂ [illegible] ಗಳಲ್ಲೂ ಸೈನಿಕರನ್ನು ನೇಮಿಸಿರುತ್ತಾರೆ.

ಜರ್ಮನಿ ಚಕ್ರವರ್ತಿನಿಯವರು ಪತ್ನಿ ಪರಿವಾರ ಸಹಿತ ಇಟಲಿ ರಾಜ್ಯಕ್ಕೆ ದಯಮಾಡಿದರು. ಕಳೆದ ವಾರ ಅಲ್ಲಿನ ದೊರೆಗಳವರೂ ರಾಣಿಯವರೂ ಜಹಜಿನಲ್ಲಿ ಹೋಗಿ ಚಕ್ರವರ್ತಿಯವರನ್ನು ಕಂಡು ಅವರಿಗೆ ಸುಸ್ವಾಗತವನ್ನು ಬಯಸಿದರು. ಇಟಲಿಯ ಸರ್ಕಾರದವರೂ ಪ್ರಜೆಗಳೂ ಜರ್ಮನಿ ಚಕ್ರವರ್ತಿಯವರಿಗೆ ನಾನಾ ಸಂತೋಷೋತ್ಸವಗಳನ್ನು ಕಲ್ಪಿಸಿ ನಡಿಸುತ್ತಿದಾರೆ. ಉಭಯ ರಾಜರುಗಳೂ ಒಂದು ಜಹಜಿನಲ್ಲಿ ಕಲೆತು ದೀರ್ಘಸಲ್ಲಾಪವನ್ನು ನಡಿಸಿದರೆಂದು ತಂತಿ ವರ್ತಮಾನ ಬಂದಿದೆ.

ರಷ್ಯಾ ರಾಜ್ಯದ ಬಂದೀಖಾನೆಗಳಲ್ಲಿ ಬಹು ಭಯಂಕರವಾದ ಕ್ರೂರಕೃತ್ಯಗಳು ನಡೆದಿರುವಂತೆ ಪ್ರಕಟವಾಗಿದೆ. ಅನೇಕ ಖೈದಿಗಳನ್ನು ಹಿಂಸೆಪಡಿಸಿ ಕೊಂದುಹಾಕಿದರೆಂತಲೂ, ವಿಷಮಶೀತಜ್ವರವೇ ಮೊದಲಾದ ಅಂಟುರೋಗಗಳು ಪ್ರಬಲವಾಗಿ ಖೈದಿಗಳು ಬಹಳ ಸಂಕಟಪಡುತ್ತಿದಾರೆಂತಲೂ, ಹುಚ್ಚುಗಳಿದ್ದರೂ ಅವುಗಳ ಮೇಲೆಯೇ ಸಂಕೋಲೆಗಳನ್ನು ಹಾಕಿರೋಣದರಿಂದ ಬಂದೀಖಾನೆಯವರು ನರಳಿ ಸಾಯುತ್ತಿದಾರೆಂತಲೂ ಕೆಲವು ಮೆಂಬರುಗಳು ಅಲ್ಲಿನ ಡ್ಯೂಮಾ ಪಾರ್ಲಿಮೆಂಟಿನಲ್ಲಿ ಕಳೆದ ವಾರ ವಿವರಿಸಿದರು.

ಇಂಗ್ಲಿಷ್ ರಾಜ್ಯಭಾರದ ಪಾರ್ಲಿಮೆಂಟ್ ಮೆಂಬರುಗಳಿಗೆ ಸರ್ಕಾರದಿಂದ ಸಂಬಳ ಮುಂತಾದದ್ದೇನೂ ಪಾವತಿ ಆಗುವುದಿಲ್ಲ. ಅವರಿಗೆ ಏನಾದರೂ ರುಸುಮನ್ನು ಕೊಡಬೇಕೆಂದು ಆಗಾಗ್ಗೆ ಚರ್ಚೆಯಾಗಿ ಹಾಗೇ ನಿಂತುಹೋಗುತ್ತಿತ್ತು. ಕಳೆದ ವಾರ ಈ ವಿಚಾರವು ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಚರ್ಚೆಯಾದಾಗ್ಗೆ ಪಾರ್ಲಿಮೆಂಟ್ ಮೆಂಬರುಗಳಿಗೆ ವರುಷಕ್ಕೆ ೪,೫೦೦ ರೂಪಾಯಿಯಂತೆ ರುಸುಂ ಸರ್ಕಾರದಿಂದ ಪಾವತಿ ಆಗಬೇಕೆಂದು ತೀರ್ಮಾನವಾಗಿರುತ್ತದೆ. ಇಂಗ್ಲಿಷ್ ಗವರ್ನಮೆಂಟಿನವರು ಈ ತೀರ್ಮಾನವನ್ನು ಒಪ್ಪಿಕೊಂಡಿರುತ್ತಾರೆಂದು ತಂತೀ ವರ್ತಮಾನ ಬಂದಿದೆ.

ಆಫ್ರಿಕಕ್ಕೆ ಸೇರಿದ ಉತ್ತರ ನೈಗೀರಿಯಾದಲ್ಲಿ ಬುಂಗೇರೂ ಪ್ರಾಂತ್ಯದೊಳಗೆ ಒಬ್ಬ ದೇಶೀಯ ರಾಜನಿಗೆ ರಾಜ್ಯಾಭಿಷೇಕವನ್ನು ಮಾಡುವುದಕ್ಕೋಸ್ಕರ ರೆಸಿಡೆಂಟರಾದ ಮೆ॥ ಮ್ಯಾಕ್‌ಲೀನ್‌ರವರು ಮೂರು ಮಂದಿ ಯೂರೋಪಿಯನ್ನರನ್ನೂ ೩೫ ಮಂದಿ ಪೋಲೀಸಿನವರನ್ನೂ ಸಂಗಡ ಕರೆದುಕೊಂಡು ಹೋಗುತ್ತಿದ್ದರು. ಆದರೆ ದಾರಿಯಲ್ಲಿ ಅಡಗಿದ್ದ ದೇಶೀಯ ಜನರು ಇವರನ್ನು ಸುತ್ತಿಕೊಂಡು ಮೆ॥ ಮ್ಯಾಕ್‌ಲೀನ್‌ರವರನ್ನೂ, ದೇಶೀಯ ರಾಜನನ್ನೂ ೧೧ ಮಂದಿ ಪೋಲೀಸಿನವರನ್ನೂ ಹೊಡೆದು ಕೊಂದುಹಾಕಿದರು. ಆ ದುಷ್ಟ ಜನರನ್ನು ಶಿಕ್ಷಿಸುವುದಕ್ಕೋಸ್ಕರ ಅಲ್ಲಿಗೆ ಕೆಲವು ಸೈನ್ಯಗಳು ಕಳುಹಿಸಲ್ಪಟ್ಟಿವೆ ಎಂಬದಾಗಿ ತಂತೀ ವರ್ತಮಾನ ಬಂದಿದೆ.

ಜರ್ಮನಿ ರಾಜ್ಯಕ್ಕೆ ಸೇರಿದ ಎಸೆನ್ ಪಟ್ಟಣದಲ್ಲಿ ಯುದ್ಧ ಸಾಮಗ್ರಿಗಳನ್ನು ತಯಾರುಮಾಡುವ ಕ್ರುಪ್ ಎಂಬ ಪ್ರಸಿದ್ಧ ಕಂಪನಿಯವರು ಗಾಟಿಂಜನ್ ಪಟ್ಟಣದ ಪೀಟರ್ಸ್ ಎಂಬ ಪಂಡಿತನಿಗೆ ವರುಷಕ್ಕೆ ೭,೫೦೦ ರೂಪಾಯಿಯಂತೆ ದ್ರವ್ಯಸಹಾಯ ಮಾಡುತ್ತಾ ಬರುವುದಾಗಿ ತಿಳಿಸಿದಾರೆ. ಆ ಪಂಡಿತನು ಅಂತರಿಕ್ಷದಲ್ಲಿ ನಿಮಿಷಕ್ಕೆ ಏಳೂವರೆ ಮೈಲಿಯ ಪ್ರಕಾರ ವೇಗವಾಗಿ ಸಂಚರಿಸುವಂಥಾ ವಿಮಾನಗಳನ್ನು ತಯಾರುಮಾಡುವವನಾಗಿದಾನೆ. ಅವನು ಅದರ ರಚನೆಯನ್ನು ಪರೀಕ್ಷೆಗಳ ಮೂಲಕ ಕಂಡುಹಿಡಿಯಲೆಂದು ಮೇಲ್ಕಂಡ ಕಂಪನಿಯವರು ಈ ವರ್ಷಾಸನವನ್ನು ಕೊಡುವರು. ಆತನ ಕಾರ್ಯಸಾಧನೆಗೆ ಈ ದ್ರವ್ಯಸಹಾಯವು ತುಂಬಾ ಪ್ರೋತ್ಸಾಹಕರವಾಗಿರುತ್ತದೆ.

ಆಸ್ಯಾ ಮೈನರಿನಲ್ಲಿರುವ ಮುಸಲ್ಮಾನ್ ಪ್ರಜೆಗಳು ಆರ್ಮೇನಿಯಾ ಪ್ರಜೆಗಳನ್ನು ಕೊಂದುಹಾಕುತ್ತಲೂ ಅನೇಕ ಕ್ರೂರಕೃತ್ಯಗಳನ್ನು ನಡಿಸುತ್ತಲೂ ಇದ್ದಾರಷ್ಟೆ. ಆ ಅರ್ಮೇನಿಯಾ ಪ್ರಜೆಗಳ ಮುಖಂಡರು ಸೇರಿ ತುರ್ಕೀ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ಹೋಗಿ ಹೊಸ ಸುಲ್ತಾನರವರನ್ನು ಕಂಡು, ತಮ್ಮ ಕಷ್ಟಗಳನ್ನು ಅರಿಕೆ ಮಾಡಿಕೊಂಡರು. ಸುಲ್ತಾನರವರು ಅವರನ್ನು ಆದರಿಸಿ—ಇನ್ನು ಮುಂದೆ ಮುಸಲ್ಮಾನರು ಕೊಳ್ಳೆ ಹೊಡೆಯುವುದನ್ನೂ ಕೊಲೆ ಮೊದಲಾದ ಕ್ರೂರಕೃತ್ಯಗಳನ್ನೂ ಮಾಡಕೂಡದೆಂದೂ, ಅವರು ಇತರ ಪಂಗಡಗಳಿಗೆ ಸೇರಿದ ಪ್ರಜೆಗಳ ಕೂಡ ಐಕಮತ್ಯವುಳ್ಳವರಾಗಿ ಬಾಳಬೇಕೆಂದೂ ಆಸ್ತಿಹಾನಿಯನ್ನು ಕೊಡುತ್ತೇವೆ ಎಂಬದಾಗಿ ಪ್ರತ್ಯುತ್ತರವನ್ನು ದಯಪಾಲಿಸಿರುತ್ತಾರೆ.

ಚೀನಾ ರಾಜ್ಯದಲ್ಲಿ ರೈಲ್ ರಸ್ತೆಗಳನ್ನು ಹಾಕುವ ವಿಷಯದಲ್ಲಿ ಪರರಾಜ್ಯಗಳವರು ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಸಭೆ ಸೇರಿ ತೀರ್ಮಾನ ಮಾಡಿಕೊಂಡಿರುವುದೇನೆಂದರೆ—ಹಾಂಕೋ ಚೆಂಗ್ಟು ರೈಲ್ವೆಯ ಚೀಫ್ ಇಂಜನಿಯರ್ ಕೆಲಸಕ್ಕೆ ಒಬ್ಬ ಜರ್ಮನಿಯ ಅಧಿಕಾರಿಯನ್ನೂ, ಹಾಂಕೋ ಕ್ಯಾಂಟನ್ ರೈಲ್ವೆಯ ಚೀಫ್ ಇಂಜನಿಯರ್ ಕೆಲಸಕ್ಕೆ ಒಬ್ಬ ಇಂಗ್ಲಿಷ್ ಅಧಿಕಾರಿಯನ್ನೂ ನೇಮಕ ಮಾಡಬೇಕು. ಚೆಂಗ್ಟು ರೈಲನ್ನು ಬದಲಾವಣೆ ಮಾಡುವುದಾದರೆ ಅದಕ್ಕೆ ಒಬ್ಬ ಫ್ರೆಂಚ್ ಇಂಜನಿಯರನ್ನೋ ಇಂಗ್ಲಿಷ್ ಇಂಜನಿಯರನ್ನೋ ನೇಮಕ ಮಾಡಬಹುದು. ಈ ರೈಲ್ ರಸ್ತೆ ಮೊದಲಾದದ್ದಕ್ಕೆ ಬೇಕಾಗುವ ಸಾಮಾನುಗಳನ್ನೆಲ್ಲಾ ಜರ್ಮನಿಯವರೂ, ಇಂಗ್ಲಿಷರೂ, ಫ್ರೆಂಚರೂ ಸಮಭಾಗವಾಗಿ ಹಂಚಿಕೊಂಡು ಒದಗಿಸಬೇಕು. ಈ ರೈಲ್ವೆ ಕಾಮಗಾರಿಗಳಿಗೆ ಬೇಕಾದವರು ೬೫೫ ಲಕ್ಷ ರೂಪಾಯಿ ಸಾಲ ಮಾಡುವರು. ಈ ಹಣವನ್ನು ಅಲ್ಲಿರುವ ಪರರಾಜ್ಯಗಳ ಬ್ಯಾಂಕುಗಳವರು ಸಮಭಾಗವಾಗಿ ವಹಿಸಿ ಸಾಲಕೊಡಬೇಕೆಂದು ಗೊತ್ತಾಗಿದೆ.

ರಷ್ಯಾ ರಾಜ್ಯದ ಹಡಗಿನ ಸೈನ್ಯದ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಬೇಕೆಂದು ಚಕ್ರವರ್ತಿಯವರೂ, ಎಂ. ಸ್ಟೋಲಿಪಿನ್ ಎಂಬ ಮಂತ್ರಿಯವರೂ, ಡೂಮಾ ಪಾರ್ಲಿಮೆಂಟಿನವರೂ ಅಭಿಪ್ರಾಯಪಟ್ಟು, ಅದಕ್ಕೆ ಒಂದು ಕಾನೂನು ಮಾಡಬಹುದೆಂದು ಒಪ್ಪಿಕೊಂಡರು. ಮಂತ್ರಿಯವರು ಈಚೆಗೆ ಕಾಯಿಲೆ ಬಿದ್ದುಕೊಂಡಾಗ್ಗೆ ಕೆಲವು ರಾಜಪಕ್ಷದವರು ಚಕ್ರವರ್ತಿಯವರನ್ನು ಕಂಡು, ಈ ಕಾನೂನನ್ನು ಜಾರಿಗೆ ತಂದರೆ ಚಕ್ರವರ್ತಿಯವರ ಸ್ವತಂತ್ರಾಧಿಕಾರಕ್ಕೆ ಕುಂದಕವುಂಟಾಗುವುದಾದ್ದರಿಂದ ಅದಕ್ಕೆ ಸಮ್ಮತಿ ಕೊಡದಂತೆ ಚಕ್ರವರ್ತಿಯವರಿಗೆ ಬೋಧನೆ ಮಾಡಿದರು. ಡ್ಯೂಮಾ ಪಾರ್ಲಿಮೆಂಟಿನವರು ಆ ಕಾನೂನನ್ನು ಒಪ್ಪಿ ಚಕ್ರವರ್ತಿಯವರ ಒಪ್ಪಿಗೆಯನ್ನು ಪಡೆಯುವುದಕ್ಕೋಸ್ಕರ ಕಳುಹಿಕೊಟ್ಟರು. ಚಕ್ರವರ್ತಿಯವರು ಆ ಕಾನೂನು ಅವಶ್ಯವಿಲ್ಲವೆಂದು ತಿರಸ್ಕಾರ ಮಾಡಿದರು. ಆಗ ಮಂತ್ರಿ ಸಭೆಯವರು ತಮ್ಮ ಅಭಿಪ್ರಾಯವನ್ನು ಚಕ್ರವರ್ತಿಯವರು ಒಪ್ಪಲಿಲ್ಲವೆಂದು ಹೇಳಿ ಕೂಡಲೇ ಎಲ್ಲರೂ ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟರು. ಆದರೆ ಚಕ್ರವರ್ತಿಯವರು ಅವರ ರಾಜೀನಾಮೆಯನ್ನು ಅಂಗೀಕರಿಸುವುದಿಲ್ಲವೆಂದು ತಿಳಿಸಿರುತ್ತಾರೆ. ಇದರ ಪರ್ಯವಸಾನವೇನೋ ಮುಂದೆ ತಿಳಿಯಬೇಕು.

ಅಲಾರ್ಕಾನ್ ಗವರ್ನರ್ ಮೊರಾಲ್ಸ್‌ರವರು.

ಪೆ-ರೂ-ನಾ ಶೈತ್ಯದಿಂದ ಉಂಟಾಗುವ ಸಕಲ ರೋಗಗಳಿಗೂ ತಕ್ಕ ಔಷಧವೆಂದೂ, ಶರೀರಕ್ಕೆ ಆರೋಗ್ಯವನ್ನೂ ಸಹಜವಾದ ಕಾಯಪುಷ್ಟಿಯನ್ನೂ ಕೊಡತಕ್ಕ ಔಷಧವೆಂದೂ ಮೆಕ್ಸಿಕೋ ರಾಜ್ಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೂ ಉತ್ತರದಿಂದ ದಕ್ಷಿಣಕ್ಕೂ ಎಲ್ಲಾ ಪ್ರದೇಶಗಳಲ್ಲೂ ಪ್ರಖ್ಯಾತವಾಗಿದೆ



ಘನ ಮ್ಯಾನ್ಯುಯಲ್ ಅಲಾರ್ಕಾನ್ ಗವರ್ನರು ...

ಪೆರೂನಾವಿನ ದೊಡ್ಡ ಪರೀಕ್ಷೆ

ಪ್ರತಿ ಒಂದು ದೇಶದ ಹವಾಸ್ಥಿತಿಯೂ ಅದರಲ್ಲಿ ಅನುಗುಣವಾಗಿಯೂ ವಿಜಾತೀಯವಾಗಿಯೂ ಆದದ್ದರಿಂದ ಅಲ್ಲಲ್ಲಿಗೆ ತಕ್ಕ ರೋಗಗಳನ್ನುಳ್ಳದ್ದಾಗಿಯೂ ಇದೆ

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಯನ್ನು ಪಡೆಯುವ ಪೆರೂನಾವಿನ ಗುಣಗಳನ್ನು ಪರಿಷ್ಕಾರವಾಗಿ ಪರೀಕ್ಷೆಮಾಡುವುದಕ್ಕೆ ಮೆಕ್ಸಿಕೋ ರಾಜ್ಯ ಒಂದೇ ಸಾಕಾಗಿದೆ ಆ ರಾಜ್ಯದಲ್ಲಿ ಅತ್ಯಂತ ಶೈತ್ಯವೂ ಅತ್ಯಂತ ಉಷ್ಣವೂ ಸಾಧಾರಣ್ಯವೂ ಮಧ್ಯಸ್ಥವೂ ಆದ ಹವಾಗುಣವೂ ಉಳ್ಳ ಪ್ರದೇಶಗಳೆಲ್ಲಾ ವಿಶೇಷವಾಗಿರುತ್ತವೆ

ಮೆಕ್ಸಿಕೋದಲ್ಲಿ ಬಹಳವಾಗಿ ಹುಟ್ಟುವ ಶೈತ್ಯರೋಗಗಳಿಗೂ ಉತ್ತರದ ಪ್ರಾಂತ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೂ ತಾರತಮ್ಯವಿರುತ್ತದೆ

ಚಳಿರಾಜ್ಯಗಳಲ್ಲಿ ಜನರಿಗೆ ವಿಶೇಷವಾಗಿ ಮೂಗು ಮತ್ತು ಗಂಟಲುಗಳಲ್ಲಿ ಶೀತ ಮುಟ್ಟಿ ಪ್ರಬಲವಾಗುವುದು ಉಷ್ಣರಾಜ್ಯಗಳಲ್ಲಿ ಶೀತರೋಗಗಳೆಲ್ಲಾ ಮನುಷ್ಯನ ಹೊಟ್ಟೆಯೊಳಗಿರುವಂಥಾ ಅನ್ನಕೋಶ, ಪಿತ್ತಕೋಶ ಮಲಕೋಶ, ಜಲಬಾಧೆಯಕೋಶ, ಈ ಮೊದಲಾದವುಗಳಿಗೆ ಶೈತ್ಯಹಿಡಿದು, ಅಂತರ್ಯವಾದ ನಾನಾ ರೋಗಗಳನ್ನು ಹುಟ್ಟಿಸುತ್ತೆ

ಈ ಪ್ರಕಾರ ಅವರ ಲಕ್ಷಣಗಳು ನಾನಾ ಪ್ರಕಾರವಾಗಿದ್ದರೂ ರೋಗಕ್ಕೆ ಕಾರಣವೇನೋ ಒಂದೇ ಆಗಿದೆ ಈ ಶೈತ್ಯವು ನೆತ್ತಿಯಲ್ಲಿರಬಹುದು ಗಂಟಲು ಹಿಡಿದಿರಬಹುದು ಒಳಹೊಟ್ಟೆ ಕಿಬ್ಬೊಟ್ಟೆಗಳನ್ನು ಅಂಟಿಕೊಂಡಿರಬಹುದು ಆದರೂ ಶೀತವೇ ಅವೆಲ್ಲಕ್ಕೂ ಕಾರಣವು

ಶೀತರಾಜ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೆ ಪೆರೂನಾವು ಎಷ್ಟು ಮಾತ್ರ ಗುಣಕಾರಿಯಾಗಿ ಕಂಡುಬಂದಿರುವುದೋ ಅದೇ ರೀತಿ ಉಷ್ಣರಾಜ್ಯಗಳ ಶೀತರೋಗಗಳಿಗೂ ಮಹಾ ಗುಣಕಾರಿಯಾದ ಔಷಧವೆಂದು ಪ್ರಸಿದ್ಧಿಗೊಂಡಿದೆ

ಪೆರೂನಾವು ಶೈತ್ಯರೋಗಗಳಿಗೆ ಪರಮೌಷಧವಾಗಿರುವುದು ಮಾತ್ರವೇ ಅಲ್ಲ. ಅದು ಮಹಾ ಬಲಕಾರಿಯಾದ ಮತ್ತು ಪುಷ್ಟಿಕೊಡುವ ಸೇವನಾ ಔಷಧವೆಂದೂ ಯಶಸ್ಸನ್ನು ಪಡೆದಿರುತ್ತದೆ

ಪೆರೂನಾದಲ್ಲಿ ಬಲವನ್ನೂ ಕಾಯಪುಷ್ಟಿಯನ್ನೂ ಕೊಡುವಂಥಾ ಗುಣಗಳಿರೋಣದರಿಂದಲೇ ಉಷ್ಣರಾಜ್ಯಗಳವರು ಅದನ್ನು ವಿಶೇಷವಾಗಿ ಪ್ರೀತಿಯಿಂದ ಉಪಯೋಗಿಸಿ ಕೊಳ್ಳುತ್ತಾರೆ

ಪೆರೂನಾ ಸ್ವಭಾವಸಿದ್ಧವಾದ ಬಲಕೊಡುವ ಸೇವನಾ ಔಷಧವಾಗಿರುತ್ತದೆ ಅದು ದೇಹದೊಳಗಿರತಕ್ಕ ನಾನಾ ಕೋಶಗಳ ಕಾರ್ಯಗಳನ್ನು ಕ್ರಮಕ್ಕೆ ತಂದಿಟ್ಟು ಪುಷ್ಟಿಮಾಡತಕ್ಕದ್ದಾಗಿದೆ

ಅದು ರಕ್ತದ ಚಲನೆಗೆ ಚಟುವಟಿಕೆಯನ್ನು ಕೊಡುತ್ತದೆ ತಿಂದ ಆಹಾರವನ್ನು ಅದು ಚೆನ್ನಾಗಿ ಅರಗಿಸಿ ಪರಿಪಕ್ವ ... ದೇಹದ ... ಗಳಿಗೆ ವ್ಯಾಪಿಸುವಂತೆಯೂ ಅದನ್ನು ಬಲಪಡಿಸಿ ಪ ... ಕೆಲಸವ ಮಾಡುವದು

ಅದು ಬಲವನ್ನು ಕೊಟ್ಟು ಶರೀರ ದಮ್ಮನ್ನು ವೃದ್ಧಿ ಮಾಡುವುದಲ್ಲದೆ ... ಮಾ ... ಸಿನ ... ನಿವಾರಣೆ ಮಾಡುತ್ತದೆ ಆದರೆ ಇದು ಮದಪ್ರಾಪ್ತಕಗಳಂತೆ ಕೆಡುಕಾದ ಶಕ್ತಿಯನ್ನು ಕೊಡುವಂಥಾದ್ದಲ್ಲವು

ಚಟುವಟಿಕೆಯೂ ಆರೋಗ್ಯವೂ

ಮಿ ರಿಚರ್ಡ್ ಕ್ಯಾಲ್ಯಟ್ ... ಬೀದಿ ಬ್ರೂಕ್ಲಿನ್ ನ್ಯೂಯಾರ್ಕ್ ಅಮೇರಿಕ ಈತ ಬರೆಯುವುದು —

"ತಿಂದದ್ದನಗೆ ಆಹಾರ ಹ್ಯಾಗೋ ... ರಿವನಿಗೆ ನೀರು ಹ್ಯಾಗೋ ಹಾಗೆ ಕಾಯಿಲೆಯವನಿಗೆ ಪೆರೂನಾವು ಇರುತ್ತದೆಂದು ತಿಳಿಯಿರಿ

ಡಾಕ್ಟರುಗಳಿಗಿಂತಲೂ ಪೆರೂನಾವು ಅತಿ ಶೀಘ್ರವಾಗಿ ರೋಗವನ್ನು ವಾಸಿಮಾಡತಕ್ಕದ್ದೆಂದು ನನ್ನ ಮನಸ್ಸಿಗೆ ತೋರಿದೆ

"ಅನೇಕ ವರುಷಗಳ ತನಕ ನನಗೆ ಆಹಾರ **ಜೀರ್ಣವಾಗುತ್ತಿರಲಿಲ್ಲ, ನನ್ನ ಪಿತ್ತಕೋಶವು ಮುಂದಗತಿಯಲ್ಲಿತ್ತು**

"ಆಗಾಗ್ಗೆ ಮಲವು ಸಾಗದೆ ಕಟ್ಟಿ ಬೇಧಿಯಾಗುತ್ತಲೂ ಕಿಬ್ಬೊಟ್ಟೆ ನೋಯುತ್ತಲೂ ಇದ್ದಿತು

"ನನಗೆ ಅನುಕೂಲ ಮಾಡಬೇಕೆಂದು ಡಾಕ್ಟರುಗಳು ತಮ್ಮ ಕೈಲಾದ ಮಟ್ಟಿಗೂ ಪ್ರಯತ್ನಪಟ್ಟರು ಆದರೆ ನನಗಿದ್ದ ನಿಜವಾದ ರೋಗವಾವುದೆಂದು ಅವರಿಗೆ ತಿಳಿಯದೆಹೋಯಿತೂ, ಅಥವಾ ಅವರು ಸರಿಯಾದ ಔಷಧವನ್ನು ಕೊಡದೆಹೋದರೋ

"ಇಷ್ಟೇ ದಿನಗಳಲ್ಲಿ **ಪೆರೂನಾವು ನನಗೆ ವಾಸಿಮಾಡಿತು** ಅದು ನನ್ನನ್ನು **ಚಟುವಟಿಕೆಯುಳ್ಳವನಾಗಿಯೂ ಆರೋಗ್ಯವಾಗಿಯೂ** ಮಾಡಿತು ನಿಜವಾಗಿಯೂ ನಿಮಗೆ ನಾನು ಕೃತಜ್ಞನಾಗಿರುವೆನು"

ಶೈತ್ಯಕ್ಕೆ ನನು ಪೆರೂನಾ ಸೇವಿಸೆಂದು ಹೇಳಿದನು

ಮಿ ... ಅಮೇರಿಕ ಈತ ಬರೆಯುವದು —

ಎರಡು ವರುಷಕಾಲ ನನಗೆ ... ಇತ್ತು ಒಬ್ಬ ಸ್ನೇಹಿತನು ಬಂದು ಪೆರೂನಾ ಸೇವಿಸು ಎಂದು ನನಗೆ ಹೇಳಿದನು ಅದರ ... ಆಗುವುದೆಂದು ಆಶ್ಚರ್ಯಪಡುತ್ತೇನೆ

ಏಳು ವರುಷದ ಶೈತ್ಯರೋಗವು

ಮಿ| ... ಕ್ಯಾಲಿಫೋರ್ನಿಯಾ ... ಬರೆಯುವುದು —

"ನನಗೆ ಜ್ಞಾಪಕವಾದಷ್ಟಕ್ಕೆ ... ಏಳು ವರುಷಗಳವರೆಗೆ ಶೀತ ನೆಗಡಿ ಕೆಮ್ಮು ಅನುಭವಿಸಿದೆನು ನೂರಾರು ದ್ರವ್ಯವನ್ನು ಖರ್ಚುಮಾಡಿ ಔಷಧಿಗಳನ್ನು ಸೇವಿಸಿದೆನು ಆದರೂ ನನ್ನ ಶೈತ್ಯರೋಗವು ಹೋಗಲಿಲ್ಲ

"ನನಗೆ ಔಷಧಿ ಕೊಡುತ್ತಿದ್ದವರಲ್ಲಿ ಕೆಲವು ಡಾಕ್ಟರುಗಳು ಬಹಳ ಪ್ರಖ್ಯಾತಿಪಡೆದವರಾಗಿದ್ದರೂ ನನಗೆ ಅತಿ ಕಠಿಣವಾದ ಕೆಮ್ಮು ಇದ್ದೇ ಇದ್ದಿತು "ಈ ಕೆಮ್ಮಿನ ಕಷ್ಟವನ್ನು ನಾನು ವಾಸಿಮಾಡಿಕೊಂಡೇನೆಂಬ ಭರವಸೆ ಇರಲಿಲ್ಲ

"ಆಗ ನಾನು ಒಂದು ಬಾಟ್ಲು ಪೆರೂನಾ ಕೊಂಡು ತಂದು ಅದರಲ್ಲಿ ಹೇಳಿರುವ ಕ್ರಮಗಳ ಪ್ರಕಾರ ಆ ದಿನ ರಾತ್ರಿ ಸೇವಿಸಿದೆನು ಮರುದಿನ ವೇಳೆಗೆ ನನಗೆ ಸ್ವಲ್ಪ ಗುಣವಾದ ಹಾಗೆ ತೋರಿತು

ಮೂರು ದಿನ ಸೇವಿಸಿದ ಮೇಲೆ ನನಗೆ ತುಂಬಾ ಅನುಕೂಲವಾಯಿತು ಈಗಲಾದರೋ ನಾಲ್ಕನೆ ಶೀಸೆಯ ಔಷಧವನ್ನು ಮುಗಿಸಿದ ಮೇಲೆ ನಾನು ಸಂಪೂರ್ಣವಾಗಿ ಆರೋಗ್ಯಹೊಂದಿರುತ್ತೇನೆ

ಈ ಸರ್ವಶ್ರೇಷ್ಠವಾದ ಔಷಧವನ್ನು ಸೇವಿಸುವಂತೆ ಪ್ರತಿ ಒಬ್ಬನಿಗೂ ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುವೆನು"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯುತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ ಕ್ರಯ ಮುಂತಾದದ್ದೂ ಇವರಿಂದಲೇ ತಿಳಿಯಬಹುದು

ವಿಳಾಸ —ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ—

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

23—4—1909 ರಿಂದ 30—4—1909 ವರೆಗೆ

ಸ್ಥಳ	ಪ್ಲೇಗ್ ಹಿಡಿದದ್ದು	ಪ್ಲೇಗ್ ಸತ್ತದ್ದು	ಕಾಲರಾ ಹಿಡಿದದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	[illegible]
ಮೈಸೂರು	6	4	11	2[illegible]
ಕೋಲಾರ್ ,,	0	0	1	1
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	2	4	2	[illegible]
ಹಾಸನ ,,	0	0	50	29
ಚಿತ್ರದುರ್ಗ ,,	0	0	0	0
ಕಡೂರ್ ,,	1	1	0	0
ಶಿವಮೊಗ್ಗಾ ,,	*	*	0	[illegible]
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	9	5	86	58

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರ ಜ್ಯೇಷ್ಠ ಶುದ್ಧ ಪಾಡ್ಯಮಿ ಗುರುವಾರದಿಂದ ಜ್ಯೇಷ್ಠ ಶುದ್ಧ ಸಪ್ತಮಿ ಬುಧವಾರದವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇದಿ ಮಿಷ ಮಾಸ
20	ಗುರು	ಪಾಡ್ಯಮಿ	31 [illegible]	ರೋ	[illegible]	7
21	ಶುಕ್ರ	ಬಿದಿಗೆ	27 10	ಮೃ	[illegible] 28	[illegible]
22	ಶನಿವಾರ §	ತದಿಗೆ	2[illegible] 30	ಆ	[illegible] 12	[illegible]
23	ರವಿವಾ	ಚೌತಿ	2[illegible]	ಪು	[illegible] 2	10
24	ಚಂದ್ರ	ಪಂಚಮಿ	2[illegible] 1	ಪ	[illegible]7 20	11
25	ಕುಜ	ಷಷ್ಠಿ	27 50	ಆ	60 0	12
26	ಬುಧ	ಸಪ್ತಮಿ	31 20	ಮ	1 2[illegible]	1[illegible]

ಉತ್ತಮ ಯೋಗ

ಚಂದ್ರೋದಯವು

§ ಬನವಾಸಿಲವಲ್ ಚ ಮ ಗ

* ವಿಧುವಾಮುವನಗತೋ ರಾ

ಪಾತ ಭಾವ

ಪೇಟೇ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೫ ೦ ೦	೧೬ ೯
ಕೆಂಪು ಅಕ್ಕಿ ಅವಲ್		೧೪ ೮ ೦	೧೫ ೮
ಮಧ್ಯಮ		೧೩ ೦ ೦	೧೪ ೦
ಜಾಪಾನ್ಗ ಅಕ್ಕಿ		೧೩ ೦ ೦	೧೫ ೮
ಸಣ್ಣಕ್ಕಿ ಅವಲ್		೧೬ ೦	೧೭ ೦
ಮಧ್ಯಮ		೧೬ ೦ ೦	೧೬ ೦
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೬ ೦ ೦	೧೬ ೦
ಮಧ್ಯ		೧೫ ೦ ೦	೧೫ ೮
ಹೆಸರುಗಾಳು ಪಲ್ಲಾ ೧ಕ್ಕೆ		೯ ೪ ೦	೮ ೮
ರಾಗಿ		೮ ೧೨-೦	೮ ೦
ಜೋಳ		೮ ೮ ೦	೯ ೦
ಹುರುಳಿ ಪಲ್ಲಾ ೧ಕ್ಕೆ		೧೪ ೮ ೦	೧೩ ೮
ಬೇಳೆ ಅವರೆ		೧೧ ೦-೦	೧೨ ೮
ತೌರು		೧೪ ೦ ೦	೧೨ ೦
ಉದ್ದು		೧೭ ೮ ೦	೧೩ ೪
ಕಡಲೆ		೧೩ ೮-೦	೧೨ ೯
ಎಳ್ಳು ಸೇರು ೧೨೭ ಕ್ಕೆ		೨೨ ೮ ೦	೧೯ ೮
ಹುಚ್ಚೆಳ್ಳು		೧೧ ೪ ೦	೧೧ ೦
ಹರಳು ೧೨೭ ಸೇರಿಗೆ		೧೧ ೦ ೦	೧೦ ೯
ಸೀಗೇಕಾಯಿ ಮಣ ೧ಕ್ಕೆ		೨ ೪ ೦	೨ ೦
ಮೆಣಸಿನಕಾಯಿ		೫ ೮ ೦	೪ ೪
,, ಮಧ್ಯಮ		೫ ೦ ೦	೪ ೧೨
ಬೆಲ್ಲ ದೊಡ್ಡ ಅಚ್ಚು		೬ ೪ ೦	ಮ ೧ ೧೪
ಒಳ್ಳೆಣ್ಣೆ ಮಣ ೧ಕ್ಕೆ		೫ ೦ ೦	೫ ೯
ಹರಳೆಣ್ಣೆ ,,		೪ ೮ ೦	೪-೪
ಕೊತ್ತುಂಬರಿ ಪಲ್ಲಾ ೧ಕ್ಕೆ		೯ ೦ ೦	೭ ೧
ಉಪ್ಪು ,,		೫ ೮ ೦	೪ ೧೨-
ಹುಣಸೇ ಹಣ್ಣು		೧ ೧೨ ೦	೧ ೧೦-
,, ಹಳೇ ದು		೧ ೮-೦	೧ ೮
ತುಪ್ಪ ಮಣ ೧ಕ್ಕೆ		೧೫ ೦ ೦	೧೩ ೮
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೭ ೪ ೦	೪ ೧೯
ತೆಂಗಿನಕಾಯಿ ೧೦೦ ಕ್ಕೆ		೭ ೮ ೦	೪ ೮
ಅಡಿಕೆಕಾಯಿ ಮಣ ೧ಕ್ಕೆ		೦ ೮ ೦	೦ ೧೪-
ಆಟ್ಟ್ಯಳದ ಕಾಯಿ ಮಣ ೧ಕ್ಕೆ		೧ ೦ ೦	೦ ೧೫
ಚಿನ್ನ (ಶೇರ್) ತೊಲ		೧೫-೬ ೦	೧೫ ೬
,, ,, ಪವನು		೧೬ ೦ ೦	೧೫ ೧೮-
,, ,, ಗಟ್ಟಿ ತೊಲ ೧ಕ್ಕೆ		೨೪ ೮ ೦	೨೪ ೨-
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೪ ೦	೬೬ ೮-

Printed and Published by the Rev H GULLIFORD Proprietor and Manager, Wesleyan Mission Press Mysore. 20 5/1909

REGISTERED
M 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸ ೧೯೧೯ ನೇ ಇಸವಿ ಮೇ ತಾರೀಖು ೨೨ ನೇ ಗುರುವಾರ. ಸಂಚಿಕೆ ೫೦

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ಶಕ್ತವಾದ ಗುಣಕಾರಿಯು [30 14]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲು ನೋವು, ಅರ್ಧಾಂಗವಾಯು ಎದೆಶೀತ, ಗಾಯ, ಜಹಿಮು, ಇತ್ಯಾದಿ

ಅಭಿಪ್ರಾಯ.

ಆರ್ ಆರ್ ಗಂಗೋಲಿ, ೧ನೇ ಕ್ಲಾಸ್ ಸಬ್ ಜಡ್ಜ್, ಕಾರವಾರ — "ನಾನು ಅಮೃತಾಂಜನವನ್ನು ಮಲವ್ಯಾಧಿಗೂ, ಕೆಮ್ಮಿಗೂ ವಾತದ ಬೇನೆಗಳಿಗೂ, ತಲೆನೋವಿಗೂ, ಉಪಯೋಗಿಸಿದಲ್ಲಿ ಇದು ಅಮೂಲ್ಯವಾದ ಬೇನೆಹಾರಿಯಾಗಿರುತ್ತದೆಂದು ನಂಬುತ್ತೇನೆ ಈ ಅಮೃತಾಂಜನವು ಮೇಲೆ ಹೇಳಿದ ಎಲ್ಲಾ ನೋವುಗಳಲ್ಲಿಯೂ ಅತ್ಯುತ್ತಮವಾಗಿ ಸರ್ವಜನರಿಂದಲೂ ಶ್ಲಾಘಿಸಲ್ಪಡುವದು"

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಉರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦ ೬ ೦ ೧೨ ಡಬ್ಬಿಗಳಿಗೆ ೪ ೦ ೦

ವಜ್ರಗುಟಿಕೆ.

ಧಾತುಪುಷ್ಟಿ, ರಕ್ತಶುದ್ಧಿ, ಬಾಟ್ಲಿ ಒಂದರ ಕಿಮ್ಮತ್ತು ರೂ ೧ ೦ ೦
ಸುಂದರೀ ಮುಲಾಮು—ಮುಖದ ಬಗೆಗೆ ೦-೮ ೦
ದಂತಮಂಜನ—ಹಲ್ಲುಗಳು ಗಟ್ಟಿಯಾಗುತ್ತವೆ ೦-೨ ೦

ಈ ಕಂಪನಿಯವರು ಹೆಚ್ಚು ನಮೂನೆಯ ಔಷಧಗಳನ್ನು ತಯಾರಿಸುವದರಿಂದ ಕ್ಯಾಟಲಾಗು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು ವಿಳಾಸ —

ವಿಲಿಯಂ ಮತ್ತು ಕಂಪನಿ ಫ್ರೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —'ಅಮೃತಾಂಜನ,' ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 20

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ತಯಾರಿ ಮಾಡಲಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರೆಯದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನಟ್ಟಿಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ನೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧ ೮ ರೂ ೧ ೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ಹಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಕಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು ಇತ್ಯಾದಿಗಳು, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಶಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

28-15

೧ ಲೋಕಾಮಯಹರ ಕಸ್ತೂರೀ ಮಾತ್ರೆ — ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ ಮೂಲ ಕಾಯಿಲೆಗೂ ದಾರಿಕೊಡದೆ, ನೀರು ಹೋಗಳ ಬವಲಾವಣೆಯನ್ನು ಸರಿಪಡಿಸಿ. ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ಪಟ್ಟು ಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ. ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ — ಶಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್ ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಜ್ವರಹರಿ.

18 17



ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ ವಾತಜ್ವರ, ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ನಾಶಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಜಾಹೀರು ಕೇಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗುವದು—ಎಂದು ಬರೆದಿದ್ದಾರೆ

ಕ್ರಯ — ಸೀಸೆ ೧ ಕ್ಕೆ ೮ ಆಣೆ, ೧ ರೂ ೧—೮ ರೂ, ರೂ ೨—೧೨ ಆ ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓಮಂಕರ್ಪೂರ.

Indian Camphor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವಿವರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಈಸವದ ಅಸಿಸ್ಟೆಂಟ್ ಸರ್ಜನ್ ಗಣಪತಿ—ಯವರು—ಯೆನ್ರಿಯ ಓಮಂಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅದಲ್ಲದೆ ಕೆಳಗಿನ ವಿಳಾಸದವರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ ೧—೧೪—

" " ೬ " " " ೦—೧೫—

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು ನಮ್ಮ ವಿಳಾಸ — ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಕ್ಲೆಮೆಂಟರ ಮ್ಯಾಜಿಕ್ ಬಾಮ್ ತೈಲವು

47-1

ತಲೆನೋವು, ವಾಯುನೋವು, ಸೆಳತ ಗಂಟ್ಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳು ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಯಿಂದ ಮಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಬುಡಸಹಿತ ನಾಶಮಾಡುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೭, ವೇದಮುತ್ತುಪಿಳ್ಳೆ ಬೀದಿ ಪೇಟೆ, ಮದರಾಸ್

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ತರಿಸಿ.

10 21

"ಬ್ರಹ್ಮಚರ್ಯ" ಎಂಬ ಮರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶೀಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಭೆಯವರು "ಸ್ವಪ್ರಯಾಸಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪಠ್ಯವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರವರೆಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನ ಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟೀನ್ ದಿನ್ನಪಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಮಾನಸಾಂತರ, ಪಾಪಮನ್ನಣೆ, ಪವಿತ್ರತೆ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ರೈಟಿನ ಬೈಂಡು ಪ್ರತಿ ಒಂದಕ್ಕೆ ೦—೧೦—೦
ಒಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

JUST RECEIVED! JUST RECEIVED!

Stead's Books for the Bairns

(Illustrated) New Numbers [5 21]

STEAD'S PENNY POPULAR TALES—Sixty-four Pages in a coloured Picture Cover. Each number contains a story of thrilling interest 24 numbers.

CALENDARS FOR 1909.

Apply—The Manager, C.L.S. Book Depot, Mysore City.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 20

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕ್ ಬಟ್ಟೆಗಳು ನಾಟಾ ಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ, ಒಟ್ಟಿನ ಹೋ ಗುವದಿಲ್ಲ ಕ್ರಯ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾ ದವುಗಳು ಅದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುತ್ತದೆ ಗಜ ಒಂದಕ್ಕೆ ೫ ಆಣೆಯಿಂದ ೬ ಆಣೆ ವರಿವಿಗೂ ಬೆಲ್ಲರವಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ. ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕುಸುಗುರ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯ ಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು

ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 6-21

(ಸ್ಕಾಟ್ಸ್ ಇಮಲ್ ಷನ್)

ಎಂಬ ಸೇವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ, ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸತೋರು ವದು

ಅದು ಸಂತೋಷವೂ ಆನಂದವೂ ಪಡುವ ದಾಗಿ ಆಹಾರದ ರುಚಿ ಹೊಂದಿ ಸುಖಚಿಹ್ನೆ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕು ತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸಂಜೀವಿನೀ ಔಷಧಾಲಯ, ಮೈಸೂರು.

23 16

ಎಂ ಎಸ್. ಕುಮಾರಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಕ್ಷೋಣ, ವಾಯುನೋವುಗಳು, ಹಳೇಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿ ಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಪಿಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೩ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಚಿತವಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ ೩-೪ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟ ೧ಕ್ಕೆ ೧ ರೂಪಾಯಿ

ಕಾಲಕೂಟವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗ ಳಿಗೂ ಮೇಲೆ ಹಚ್ಚುವ ಔಷಧಿ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ.

ಸುಖನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಮಾಚಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿ ಸುತ್ತದೆ. ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ.

ಇನ್ನೂ ಅನೇಕ ಔಷಧಗಳೂ, ತಂತಾವಣಿ ಅತ್ತರುಗಳೂ, ಗಂಧದಬಿಲ್ಲೆ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳು ಬೇಕು. ಅರ್ಜಿಗಳ ಲೇಬಲ್ ಇಟ್ಟು ಬರೆಯಿರಿ.

ಡಿ. ಕೆ. ಸ್ವಾಮಿ,

ಪ್ರೊಪ್ರೈಟರ್.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

4-21

ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಮಂಡಿಗಳಲ್ಲಿ ಹುಟ್ಟುವ ನೋವು, ತಲೆನೋವು, ಬಚ್ಚಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಪಿಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ಸದ್ದೆ ಹತ್ತದ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇ ಇಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

WANTED

A Proof-Reader, competent both in English and Kanarese. Salary according to qualifications.—Apply to 41 5

Wesleyan Mission Press,

Mysore.

WANTED, A MUNSHI

For Literary and Translation Work. Applicants must have passed the F. A Examination, and possess a thorough knowledge of Kannada Literature. Apply to, 41 5

Miss PARSONS, Hardwicke, Mysore City.

ನೋಡಿರಿ ಪ್ರೋತ್ಸಾಹ ಕೊಡಿರಿ ತರಿಸಿರಿ

98 27

ಈಗ ತಾನೇ ಸೀಮೆಯಿಂದ ಬಂದಿದೆ.

ಮೊದಲಿನ ಕ್ರಮಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ ಸುರಕ್ಷಿಸಿ, ನಮ್ಮಲ್ಲಿರುವ ಉಲ್ ದಾರದಂತಹ ಉಲ್ ದಾರ ಎಲ್ಲಿಯೂ ದೊರೆ ಯದು ೫೦೦ ಹಾಸನ್ ಟೋಪಿಯೊಳಿಯದ ಸೂಪೀರಿಯರ್ ಉಲ್‌ದಾರ

೧೦ ಟೋಪಿಯಾಗುವ ಸೂಪೀರಿಯರ್ ಉಲ್ ಬಂಡಲ್ ೧ಕ್ಕೆ ೩-೭-೦

೧೨ ಅಡಿಗಳಿರುವ ಸೂಪರ್ ಫೈನ್ ಉಲ್ ಬಂಡಲ್ ೧ಕ್ಕೆ ೩-೮-೦

೮ ಅಡಿಗಳಿರುವ ಮಿಶ್ರ ಸೂಪೀರಿಯರ್ ಉಲ್ ಬಂಡಲ್ ೧ಕ್ಕೆ ೨-೮-೦

ದಪ್ಪದ ಉಲ್ ದಾರಗಳು

೮ ಅಡಿಗಳಿರುವ ಬಂಡಲ್ ೧ಕ್ಕೆ ೩ ೭ ೦ ೨-೧೨-೦ ಮತ್ತು ೧ ೮ ೦

೪೦ ಇಂಚಿನ ಶಾಲ್ ಒಂದಕ್ಕೆ ೦-೮-೦

ಉಲ್ ಕ್ಯಾಪ್ ಒಂದಕ್ಕೆ ೦ ೮ ೦

ಲಿನನ್ ಕೈವಸ್ತ್ರ ೧ಕ್ಕೆ ೦-೩ ೦ ಪರಿಮಳ ನಸ್ಯದ ಶೀಸೆ ೧ಕ್ಕೆ ೦-೩-೦

೩೦೦ ವಾಶ್ ಗಳಿರುವ ಸೇಪ್‌ಟೀ ತಂಬೂಲ ಮಿತ್ರನು ಪ್ಯಾಕೆಟ್ ೧ಕ್ಕೆ ೦-೩-೦

ರಾಯಲ್ ದಂತಮಂಜನಡಬ್ಬಾ ೧ಕ್ಕೆ ೦-೧-೬ ರೋಮನಾಶಕ ಸಾಬೂನು ಪಟ್ಟಿಗೆ ೧ಕ್ಕೆ ೦ ೬ ೦ ಕುಸುಗುರ ಟೋಪಿ, ಪೂರ್ತಿ ಮೋಜೋಡು ಬೇಕಾದ ಲ್ಲಿ ಕ್ರಯದ ಪಟ್ಟಿ ತರಿಸಿರಿ

ವಿಳಾಸ —ದಿ ವೂಲನ್ ಮಾರ್ಟ್. ೬೪ ಎ. ಮಂಗಳೂರು.

ನಿಮಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ಕೇಳಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿದೆ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿ ದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಡಿನ್ನರ್‌ಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುವವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ಕಲ್ಲಡಿಸುವುದು, ಕಲಿತುರುಗುವುದು, ತಲೆನೋವು, ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು, ಬಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬೆಟ್ಟಬೆಟ್ಟನೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಡಿನ್ನರ್ ಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಕರುಳಿನಲ್ಲಿರುವ ಮಲವನ್ನು ಕಟ್ಟಬಾರದ ವಾಯುವನ್ನು ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು ಕಸ್ತದ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [69-39]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು. ಅಥವಾ, ಡೋನ್ಸ್, ಪಿ. ಒ. ಬಾಕ್ಸ್ ೫೦, ಬೊಂಬಾಯಿ —ಇವರಲ್ಲಿ ದೊರೆಯುವುವು

ನೋಟೀಸ್.

46-1

೧೨ನೇ ತಾ ನಲ್ಲಿ ಮಂಡ್ಯದ ತಾಲ್ಲೋಕು ಕೊತ್ತತ್ತಿ ಹೋ ಕಾರಸವಾಡಿ ಗ್ರಾಮ ದಲ್ಲಿರುವ ಮೆ. ಜ ನಾರಾಯಣರಾಯರವರ ಒಂದು ಹೆಣ್ಣುಕುದುರೆಯು ತಪ್ಪಿಸಿ ಕೊಂಡು ಹೋಗಿ ೬ ಟು ದಿನಗಳಾಗಿರುತ್ತದೆ ಇದು ೩|| ಅಡಿ ಎತ್ತರ, ಬಣ್ಣ ಕೆಂಪು ಮತ್ತು ಬಿಳುಪು ಮಿಶ್ರ ಮುಂದಿನ ಕೊಡಲು ಕತ್ತರಿಸಿ ಸೆಲ್ಲಿಗೆ ಸಂಚರಿಸುತ್ತದೆ ಬಾಲ ತುಂಡು ಪತ್ತೆಮಾಡುವವರಿಗೆ ೫ ರೂಪಾಯಿ ಬಹುಮಾನ ಕೊಡಲ್ಪಡುತ್ತದೆ

ಮ ಮಂಡ್ಯದ ಕಂಟ್ರಾಕ್ಟರ್ ಜ ನಾರಾಯಣರಾವ್

ವೃತ್ತಾಂತ ಪತ್ರಿಕೆ

೦

ಸನ್ ೧೯೦೯ನೇ ಇಸವಿ ಮೇ ತಾ ೨೭ ನೇ ಗುರುವಾರ

ಮೈಸೂರು ಸಂಸ್ಥಾನದ ಸೇವಿಂಗ್ಸ್ ಬ್ಯಾಂಕು

ಮೈಸೂರು ಸರಕಾರದವರು ಒಂದು ಸೇವಿಂಗ್ಸ್ ಬ್ಯಾಂಕನ್ನು ಏರ್ಪಡಿಸಿ ಡಿಪಾಜಿಟರುಗಳಿಂದ ಹಣವನ್ನು ತೆಗೆದುಕೊಳ್ಳುತ್ತಲೂ ಅವರಿಗೆ ಬಡ್ಡಿ ಪಾವತಿ ಮಾಡುತ್ತಲೂ ಇರುವರು ಡಿಪಾಜಿಟರುಗಳ ಸಂಖ್ಯೆಯನ್ನು ನೋಡಿದರೆ ಅಷ್ಟೇನು ಹೆಚ್ಚಾಗಿಲ್ಲವೆಂದು ತೋರುತ್ತದೆ. ೧೯೦೭-೦೮ [redacted] ದಲ್ಲಿ ಡಿಪಾಜಿಟರುಗಳಿರುತ್ತಾರೆಂತಲೂ ಅವರಿಂದ ೭,೫೦,೫೦೦ ರೂಪಾಯಿ ಶೇಖರವಾಗಿದೆ ಎಂತಲೂ ೩,೬೨,೭೮೦ ರೂಪಾಯಿ ಬಡ್ಡಿಯ ರೂಪವಾಗಿ ಕೊಡಲ್ಪಟ್ಟಿದೆ ಎಂತಲೂ ಕಂಡುಬಂತು. ಇವುಗಳನ್ನೆಲ್ಲಾ ನೋಡಿದರೆ ಜನರು ಮಿತಾನುಭವಿಗಳಾಗಿರುತ್ತಾರೋ ಇಲ್ಲವೋ ಎಂಬ ಸಂಗತಿಯನ್ನು ತಿಳಿಯುವುದು ಕಷ್ಟ. ಅನೇಕರು ತಮ್ಮ ಹಣವನ್ನು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಾಕುತ್ತಿರಬಹುದು. ಈ ವಿಚಾರದಲ್ಲಿ ಗವರ್ನ್‌ಮೆಂಟ್ ಸೇವಿಂಗ್ಸ್ ಬ್ಯಾಂಕಿಗಿಂತ ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕೇ ಜನಗಳಿಗೆ ಅನೇಕ ವಿಷಯಗಳಲ್ಲಿ ಅನುಕೂಲವಾಗಿದೆ. ಅನೇಕ ಜನರು ತಮ್ಮಲ್ಲಿರುವ ಹಣವನ್ನು ಯಾವ ಬ್ಯಾಂಕಿನಲ್ಲೂ ಹಾಕದೆ ತಮ್ಮಲ್ಲೇ ಒಡವೆಗಳ ರೂಪದಲ್ಲೋ ನಾಣ್ಯರೂಪದಲ್ಲೋ ಇಟ್ಟುಕೊಂಡಿರುವರು. ಹೀಗೆ ಮಾಡುವುದು ಕಳ್ಳರಿಗೆ ಅನುಕೂಲವಾಗಿರುತ್ತದೆ

ಕಷ್ಟಕಾಲಗಳ ಉಪಯೋಗಕ್ಕೋಸ್ಕರ ಒಡತಕ್ಕ ಆದಾಯದಲ್ಲಿ ಅಲ್ಪಸ್ವಲ್ಪ ಹಣವನ್ನು ಬ್ಯಾಂಕಿನಲ್ಲಿ ಹಾಕುವುದು ಲೇಸು. ಸರಕಾರಿ ಸೇವಿಂಗ್ಸ್ ಬ್ಯಾಂಕಿನವರಾಗಲೀ ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕಿನವರಾಗಲೀ ಲೆಕ್ಕವನ್ನಿಟ್ಟುಕೊಂಡರೆ ಅವಸರ ಬಂದಾಗ್ಗೆ ಸುಲಭವಾಗಿ ಹಣವನ್ನು ತೆಗೆದುಕೊಳ್ಳಬಹುದು. ಮೇಲ್ಕಂಡ ಬ್ಯಾಂಕುಗಳಲ್ಲಿ ಬಡ್ಡಿಯು ಕಡಿಮೆಯಾಗಿದ್ದರೂ ನಾವು ಹಾಕಿರುವ ಹಣಕ್ಕೆ ಯಾವ ತರವಾದ ಅಪಾಯವೂ ಸಂಭವಿಸುವುದಿಲ್ಲ.

ಮೈಸೂರು ಸಂಸ್ಥಾನದ ಪ್ಲೇಗ್ ಇಲಾಖೆಯ ರಿಪೋರ್ಟು

೧೯೦೭-೦೮ನೇ ವರುಷದಲ್ಲಿ ಪ್ಲೇಗ್ ಜಾಡ್ಯವು ಮೈಸೂರು ಸಂಸ್ಥಾನದಲ್ಲೆಲ್ಲಾ ಹೆಚ್ಚಿನ ಹಾವಳಿಯನ್ನುಂಟುಮಾಡಿದೆಯೆಂದು ಸರಕಾರದ ರಿಪೋರ್ಟಿನಿಂದ ಗೊತ್ತಾಗುತ್ತದೆ ಕಳೆದ ವರುಷ ಈ ಜಾಡ್ಯವು ೧೯೦೭ನೇ ಮುಂದಿಗೆ ತಗಲಿತೆಂತಲೂ ೧೪೦೫೯ ಮಂದಿ ಇದರಿಂದ ಸತ್ತುಹೋದರೆಂತಲೂ ಕಂಡುಬರುತ್ತದೆ. ಪ್ಲೇಗ್ ರೋಗವು ಮೈಸೂರು ಸೀಮೆಯಲ್ಲಿ ಪ್ರಾರಂಭವಾದಂದಿನಿಂದ ನಾಲ್ಕಾವರ್ತಿ ಮಾತ್ರ ಈ ರೀತಿಯಾಗಿ ಜನಗಳು ಸತ್ತುಹೋದರೆಂದು ತಿಳಿಯತಕ್ಕದ್ದು. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಇದರ ಹಾವಳಿಯು ಜೋರಾಗಿದ್ದಿತು. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ೧೯೦೮ ಪ್ಲೇಗ್ ಮರಣಗಳು ಮಾತ್ರವಾದವು ಹಾಸನ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಇದರ ಹಾವಳಿಯು ವಿಶೇಷವಾಗಿರಲಿಲ್ಲ. ವೈಶ್ಯರೂ ಮುಸಲ್ಮಾನರೂ ಬ್ರಾಹ್ಮಣರೂ ಇದರ ದೆಸೆಯಿಂದ ಹೆಚ್ಚಾಗಿ ಸತ್ತರುವರೆಂದು ಸದರಿ ರಿಪೋರ್ಟು ತಿಳಿಸುತ್ತದೆ. ಯೂರೋಪಿಯನ್ನರಲ್ಲಾದ ಮರಣದ ಸಂಖ್ಯೆಯು ಕಡಿಮೆಯಾಗಿರುತ್ತದೆ.

ಪ್ಲೇಗ್ ಜಾಡ್ಯವು ಇಲಿಗಳ ಮೂಲಕ ಹರಡುವುದೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಮನೆಗಳಲ್ಲಿ ಇವು ಹೆಚ್ಚಾಗಿ ಸೇರುವುದರಿಂದಲೇ ವೈಶ್ಯರಲ್ಲಿ ಮಡಿದುಹೋದವರ ಸಂಖ್ಯೆಯು ಹೆಚ್ಚಾಗಿದೆಯೆಂದು ಹೇಳಿದರೂ ಹೇಳಬಹುದು. ಆದರೆ ಮುಸಲ್ಮಾನರಲ್ಲಿಯೂ ಬ್ರಾಹ್ಮಣರಲ್ಲಿಯೂ ಸತ್ತುಹೋದವರ ಸಂಖ್ಯೆ ಹೆಚ್ಚಾಗುವುದಕ್ಕೆ ಸರಿಯಾದ ಕಾರಣವು ಗೊತ್ತಾಗಲಿಲ್ಲ.

ಇಲಿಗಳನ್ನು ಕೊಲ್ಲುವುದಕ್ಕೆ ನಾನಾ ಪ್ರಯತ್ನಗಳು ಮಾಡಲ್ಪಟ್ಟವು. ಈ ಪ್ರಯತ್ನಗಳಲ್ಲಿ ೯೦,೩೪೧ ಇಲಿ ಹೆಗ್ಗಣಗಳು ಕೊಲ್ಲಲ್ಪಟ್ಟವು. ಪ್ಲೇಗ್ ಸೋಂಕಿದ್ದ ಮನೆಗಳನ್ನು ಡಿಸ್‌ಇನ್‌ಫೆಕ್ಟ್ ಮಾಡಿದರೆಂತಲೂ ಒಂದು ತರವಾದ ಸೀಮೆ ಎಣ್ಣೆಯ ಮಿಶ್ರವೇ ಪ್ಲೇಗ್ ಜಾಡ್ಯಕ್ಕೆ ಕಾರಣಭೂತವಾಗಿರುವ ಇಲಿಯ ಚಿಗಟಗಳನ್ನು ನಾಶನ ಮಾಡುವುದಕ್ಕೆ ತಕ್ಕ ಸಾಹಿತ್ಯವೆಂತಲೂ ಸರ್ಕಾರದವರು ತಿಳಿಸಿರುವರು. ಪ್ಲೇಗ್ ಚುಚ್ಚುಮದ್ದನ್ನು ಹಾಕುವುದಕ್ಕೆ ಹೆಚ್ಚಾದ ಅನುಕೂಲಗಳು ಕಲ್ಪಿಸಲ್ಪಟ್ಟಿದ್ದರೂ ಕೊಂಚಮಂದಿ ಮಾತ್ರ ಇದನ್ನು ಹಾಕಿಸಿಕೊಂಡರೆಂದು ಕಂಡುಬರುತ್ತದೆ. ಪ್ಲೇಗ್ ಚುಚ್ಚುಮದ್ದನ್ನು ಎಲ್ಲರೂ ಹಾಕಿಸಿಕೊಳ್ಳುವುದು ಸರ್ವೋತ್ತಮ ಯಾತಕ್ಕೆಂದರೆ ಇದನ್ನು ಹಾಕಿಸಿಕೊಳ್ಳುವುದರಿಂದ ಪ್ಲೇಗ್ ತಗಲುವುದಿಲ್ಲ, ಹಾಗೆ ಒಂದು ವೇಳೆ ತಗಲಿದರೂ ಪ್ರಾಣಾಪಾಯವೇನೂ ಆಗಲಾರದು. ಗ್ರಾಮಗಳಿಗೆ ಪ್ಲೇಗ್ ಬರುವುದಾದರೆ ಅವುಗಳನ್ನು ಕೆಲವು ಕಾಲ ಬಿಟ್ಟಿರುವುದು ಒಳ್ಳೆಯದು. ಇದರಿಂದಾಗುವ ಪ್ರಯೋಜನವನ್ನು ಗ್ರಾಮಸ್ಥರು ತಿಳಿದು ಸೋಂಕಿರುವ ಗ್ರಾಮಗಳನ್ನು ಬಿಟ್ಟು ಕೊಂಚಕಾಲ ಬೈಲಿನಲ್ಲಿ ವಾಸಮಾಡುವುದಕ್ಕೆ ಇಷ್ಟಪಡುತ್ತಾರೆ.

ಈ ವರುಷ ಪ್ಲೇಗ್ ಜಾಡ್ಯದಿಂದ ಅಷ್ಟೇನೂ ನಷ್ಟವಾಗಿಲ್ಲ. ಈ ರೀತಿಯಾಗಿ ಈ ವರುಷವೆಲ್ಲಾ ಇರುವುದೆಂದು ಹಾರೈಸುತ್ತೇವೆ. ಹೋದ ವರುಷ ಪ್ಲೇಗ್ ಇಲಾಖೆಯಿಂದ ಸರ್ಕಾರಕ್ಕೆ ರೂ. ೭೫,೩೧೨-೯-೭ ಖರ್ಚಾಗಿರುವುದು.

ಸೇವಾಸದನ

- ಮೈಸೂರು ಗವರ್ನ್‌ಮೆಂಟಿನವರು ಸಂಸ್ಥಾನದ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳಲ್ಲಿ ದೇವದಾಸಿಯರನ್ನು ಸೇವಾವೃತ್ತಿಗೆ ನೇಮಿಸಕೂಡದೆಂದೂ ಈಗಿರುವ ದೇವದಾಸಿಯರಿಂದ ಅಂಥಾ ಸೇವೆಯನ್ನು ಮಾಡಿಸಿಕೊಳ್ಳಕೂಡದೆಂದು ತಸದೀಕುಪಟ್ಟಿಗಳನ್ನು ಪುನರ್ವಿಮರ್ಶೆ ಮಾಡಿ ದೇವದಾಸಿಯರ ನೌಕರಿಯು ಇಲ್ಲದಂತೆ ಮಾಡಿರುತ್ತದೆ. ಇದೇ ರೀತಿ ಇತರ ಎಲ್ಲಾ ದೇವಸ್ಥಾನಗಳಲ್ಲಿಯೂ ದೇವದಾಸಿಯರ ನೌಕರಿಯನ್ನು ತಸದೀಕು ಪಟ್ಟಿಗಳಿಂದ ವಜಾ ಮಾಡಬೇಕಾಗಿದೆ.

ದೇವರನ್ನು ತ್ರಿಕರಣ ಶುದ್ಧಿಯಾಗಿ ಭಕ್ತರು ಆರಾಧಿಸುವ ದೇವಸ್ಥಾನಗಳಲ್ಲಿ ಅವರ ಮನಸ್ಸುಗಳನ್ನು ಆಕರ್ಷಿಸಿ ದುರಿಚ್ಛೆಗಳಿಗೆ ಅವರನ್ನು ಸೆಳೆಯುತಕ್ಕ ನಾಟ್ಯಗಾತಿಯರು ಇರಬಾರದೆಂತಲೂ ಹಾಗೆ ಇರುವದು ದೇವಸ್ಥಾನಕ್ಕೂ ದೇವರಿಗೂ ಅಲ್ಲಿ ದೇವರನ್ನು ಆರಾಧಿಸುವ ಭಕ್ತರಿಗೂ ಕೇವಲ ಅವಮಾನಸ್ಪದವಾಗಿರುವದಲ್ಲದೆ ಅನೇಕ ಪಾಪಾಚರಣೆಗಳಿಗೆ ಆಕರವಾಗಿರುತ್ತದೆ. ಇವನ್ನು ವಜಾ ಮಾಡಿಸಬೇಕೆಂದು ಈ ಸೀಮೆಯಲ್ಲಿ ಅನೇಕ ಸತ್ಪುರುಷರೂ ಇಂಡಿಯಾ ದೇಶದ ಇತರ ಕಡೆಗಳಲ್ಲಿರುವ ಅನೇಕ ದೊಡ್ಡ ಮನುಷ್ಯರೂ ಬಹಳ ಕುತೂಹಲವುಳ್ಳವರಾಗಿ ಸರ್ಕಾರಕ್ಕೆ ಅರ್ಜಿಗಳನ್ನು ಸಹ ಹಾಕಿದರು. ನಮ್ಮ ಮೈಸೂರು ಸರಕಾರದವರು ಈ ವಿಷಯವನ್ನು ಕೂಲಂಕುಷವಾಗಿ ಪರ್ಯಾಲೋಚಿಸಿ ಒಂದೇ ಪೆಟ್ಟಿನಲ್ಲಿ ಈ ಕಳಂಕವನ್ನು ನಿರ್ಮೂಲವಾಗಿ ತೊಡೆದು ಬಿಟ್ಟಿರುವದು ಸರಕಾರಕ್ಕೆ ಪ್ರೋತ್ಸಾಹಕವಾಗಿಯೂ ನಾವು ಸಹ ನರಿಗೆ ಸಂತೋಷಕರವಾಗಿಯೂ ಇದೆ.

ಮುಂದೆ ಈ ದೇವದಾಸಿಯರ ಮತ್ತು ಇದೇ ವೃತ್ತಿಗೆ ತರಬೇತಾಗುತ್ತಿರುವ ಇವರ ಮಕ್ಕಳ ಗತಿಯೇನು. ಅವರು ಯಾವ ವೃತ್ತಿಯಲ್ಲಿ ಜೀವನ ಮಾಡಬೇಕು - ಅವರಿಗೆ ಉಪಯೋಗಕರವಾದ ಯಾವುದಾದರೊಂದು ವೃತ್ತಿಯು ಇಲ್ಲವೇ ಈ ಪ್ರಶ್ನೆಗಳು ಮುಖ್ಯವಾದವು. ಮತ್ತು ದೇಶಾಭಿಮಾನಿಗಳಾದ ಸಜ್ಜನರು ಲಕ್ಷ್ಯಕೊಡಬೇಕಾಗಿದೆ. ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್ ಮುಂತಾದ ಅನೇಕ ದೇಶಗಳಲ್ಲಿ ಅವಿವಾಹಿತೆಯರಾದ ಅನೇಕ ತರ - ಸ್ತ್ರೀಯರು ಜೀವಾವಧಿ ಹಾಗೆಯೆ ಇದ್ದುಕೊಂಡು ಲೋಕೋಪಕಾರವಾದ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಇವರ ಪೈಕಿ ಎಂಟು ಹತ್ತು ಅಥವಾ ಇನ್ನೂ ಹೆಚ್ಚಾದ ಸ್ತ್ರೀಯರು ಒಂದೇ ಮನೆ ಮಾಡಿಕೊಂಡು ಎಲ್ಲರೂ ಏಕೀಭವಿಸಿ ಸಹೋದರಿಯರಂತೆ ವಾಸಮಾಡುತ್ತಾರೆ. ಇವರ ಲೋಕೋಪಕಾರವಾದ ಕೆಲಸಗಳು ಎಲ್ಲರಿಂದಲೂ ಇವರಿಗೆ ಸನ್ಮಾನವನ್ನು ತಂದಿರುವವು. ಕೆಲವರು ಆಸ್ಪತ್ರೆಗಳಲ್ಲಿಯೂ ಮನೆಗಳಲ್ಲಿಯೂ ಇರುವ ರೋಗಿಗಳನ್ನು ನೋಡಿ ಉಪಚರಿಸುವದನ್ನೆ ತಮ್ಮ ಜೀವನಾಧಾರ ಕೆಲಸವೂ ತಮ್ಮ ಇಷ್ಟ ಪತಿಯೂ ಎಂದು ಭಾವಿಸಿರುವರು. ಬೇರೆ ಕೆಲವರು ಬಡವ ಮುಗ್ಧರಾದ ಹುಡುಗ ಹುಡುಗಿಯರನ್ನು ಕೂಡಿಸಿಕೊಂಡು ವಿದ್ಯೆ ಹೇಳುತ್ತಿರುವರು. ಇನ್ನೂ ಕೆಲವರು ಸಂದು ಗೊಂದುಗಳಲ್ಲಿ ಅನಾಗರಿಕರಾಗಿ ಅಜ್ಞಾನದಲ್ಲಿಯೂ ಕುಡಿತತನದಲ್ಲಿಯೂ ಬದುಕುತ್ತಿರುವ ಸ್ತ್ರೀಯರನ್ನು ಸಂಧಿಸಿ ಅವರಿಗೆ ಬುದ್ಧಿಮಾತುಗಳನ್ನು ಹೇಳಿ ಅವರನ್ನು ನೀತಿಯ ಹಾದಿಗೆ ತಿರುಗಿಸುತ್ತಿರುವರು. ಇಂಥ ಪರೋಪಕಾರ ಬುದ್ಧಿಯುಳ್ಳ ಸ್ತ್ರೀಯರು ವಿಲಾಯಿತಿ ಮುಂತಾದ ದೇಶಗಳಿಂದ ನಮ್ಮ ದೇಶಕ್ಕೂ ಬಂದು ಆಸ್ಪತ್ರೆ ರೋಗಿಗಳನ್ನು ಪರಾಮರಿಸುತ್ತ ಬಾಲಕಿಯರ ಪಾಠಶಾಲೆಗಳನ್ನಿಟ್ಟು ವಿದ್ಯೆ ಹೇಳುತ್ತ ಇರುವದನ್ನು ವಾಚಕರು ಬೆಂಗಳೂರು, ಮೈಸೂರು ಮುಂತಾದ ದೊಡ್ಡ ಪಟ್ಟಣಗಳಲ್ಲಿ ನೋಡಿರಬಹುದು.

ಹಿಂದೂ ದೇಶದಲ್ಲಿಯೂ ಮೈಸೂರು ಸೀಮೆಯಲ್ಲಿಯೂ ಇಂಥಾ ಲೋಕೋಪಕಾರವಾದ ಸ್ತ್ರೀ ಮಂಡಲಿಗಳು ಅವಶ್ಯಕವಾಗಿಲ್ಲವೇ. ಅಂಥಾ ಸ್ತ್ರೀ ಮಂಡಲಿಗಳನ್ನು ಈ ದೇಶದಲ್ಲಿ ಸ್ಥಾಪಿಸುವದಕ್ಕೆ ದೇವದಾಸಿಗಳ ಸೇವೆಯನ್ನು ದೇವಸ್ಥಾನಗಳಲ್ಲಿ ಕೂಡದೆಂದು ತಪ್ಪಿಸುವದಕ್ಕೆ ಹೋರಾಡಿದಂಥ ಮಹನೀಯರು ಪ್ರಯತ್ನಪಟ್ಟಲ್ಲಿ ಸಾಧ್ಯವಾಗಲಾರದೇ. ಈಗ ದೇವದಾಸಿಗಳು ದೇವಸ್ಥಾನಗಳಲ್ಲಿ ಕೂಡದೆಂದು ಆಜ್ಞಾಪಿಸಿರುವದು ಒಳ್ಳೇದೇ. ಸುಳ್ಳು ಹೇಳಬೇಡ, ಕಳವು ಮಾಡಬೇಡ, ವ್ಯಭಿಚಾರ ಮಾಡಬೇಡ ಎಂದು ನಿಷೇಧಾಜ್ಞೆ ಕೊಡುವದು ಸುಲಭ. ಆದರೆ ಸುಳ್ಳು ಹೇಳುವವರನ್ನು ಸತ್ಯವಂತರನ್ನಾಗಿ ಮಾಡುವದೂ ವ್ಯಭಿಚಾರಿಗಳನ್ನು ಸದಾಚಾರಿಗಳನ್ನಾಗಿ ಮಾಡುವದೂ ಕಷ್ಟ. ಆದರೂ ಹೀಗೆ ಮಾಡುವುದು ಬಹಳ ಅವಶ್ಯಕ, ಕೈ ಕಾಲುಗಳು ಕೆಲಸ ಮಾಡುವದಕ್ಕೂ ನಡೆಯುವದಕ್ಕೂ ಬುದ್ಧಿಯು ಯೋಚಿಸಲಿಕ್ಕೂ ಕೊಡೋಣವಾಗಿದೆ. ಆದರೆ ಕೆಲವರು ತಮ್ಮ ಬುದ್ಧಿಯನ್ನು ಕೆಟ್ಟ ಯೋಚನೆ ಮಾಡಲಿಕ್ಕೂ ಕೈ ಕಾಲುಗಳನ್ನು ಕೆಟ್ಟ ಕೆಲಸ ಮಾಡಲಿಕ್ಕೂ ಪ್ರಯೋಗಿಸಿದ್ದರಿಂದ ಯೋಚನೆ ಮಾಡಕೂಡದೆಂತ ಬುದ್ಧಿಯನ್ನು ತಡೆಯುವದೂ ಕೆಲಸವನ್ನೇ ಮಾಡಕೂಡದೆಂತ ಕೈಗಳನ್ನು ತಡೆಯುವದೂ ನ್ಯಾಯವಲ್ಲವಷ್ಟೆ. ಹಾಗೆಯೆ ದೇವದಾಸಿಯರನ್ನು ನಾಟ್ಯ ಮಾಡಕೂಡದೆಂದು ಅಡ್ಡಿ ಮಾಡಿರುವದು ಸರಿಯಾದರೂ ಅವರಿಗೆ ತಕ್ಕ ಕೆಲಸಗಳನ್ನು ಕಲ್ಪಿಸಿ ಅವರ ಬುದ್ಧಿ ಯೋಚನೆಗಳು ಒಳ್ಳೆ ಕಾರ್ಯಗಳಲ್ಲಿ ತಿರುಗುವಂತೆ ಮಾಡುವದು ಬಹಳ ಅವಶ್ಯವಾಗಿದೆ.

ಬೊಂಬಾಯಿನಲ್ಲಿ ದೇಶಬಾಂಧವರಾದ ಕೆಲವು ದೊಡ್ಡ ಮನುಷ್ಯರು ಈ ವಿಷಯವನ್ನು ಕುರಿತು "ಸೇವಾಸದನ"ವೆಂಬ ಆಲಯವನ್ನು ಸ್ಥಾಪಿಸಿ ನಡೆಸುತ್ತಿರುವರು. ಇದರಲ್ಲಿ ಯಾವ ಸ್ತ್ರೀಯರಾದರೂ ತಮ್ಮ ದುರ್ನಡತೆಯನ್ನು ತ್ಯಜಿಸಿ ಧರ್ಮವೃತ್ತಿಯಲ್ಲಿ ನಡೆಯಬೇಕೆಂಬ ಕಾಂಕ್ಷೆಯಿಂದ ಅವರಲ್ಲಿ ಸೇರಬಹುದು, ತನಗೆ ಹಿತಕರವಾಗಿಯೂ ಪರರಿಗೆ ಉಪಕಾರಿಯಾಗಿಯೂ ಬದುಕುವದಕ್ಕೆ ತಕ್ಕ ಅನುಕೂಲಗಳನ್ನು ಅಲ್ಲಿ ಮಾಡಿರುವರು. ಈಗ ಕೆಲವು ದಿವಸಗಳಿಗೆ ಮುಂಚೆ ಬಿಕನೀರ್ ದೇಶದ ಮಹಾರಾಜರು ಈ ಸೇವಾಸದನಕ್ಕೆ ಸಹಾಯವಾಗಿ ೫೦೦೦ ರೂಪಾಯಿಗಳನ್ನು ಕೊಟ್ಟರಂತೆ. ಪೂನಾಪುರಿನಲ್ಲಿ ವಿಲ್ಸನ್ ಕಾಮಿಕೆಲ್ ಎಂಬ ನಾರೀಮಣಿಯು ಸುಮಾರು ೧೦೦ ಮಂದಿ ಹುಡುಗಿಯರನ್ನು ಆಸ್ಪತ್ರೆ ನರ್ಸುಗಳಾಗಿಯೂ ಉಪಾಧ್ಯಾಯಿನಿಯರಾಗಿಯೂ ಬಾಳುವದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿ ನಡೆಸುತ್ತಿರುವಳು. ಈ ಹುಡುಗಿಯರ ಪೈಕಿ ಅನೇಕರನ್ನು ದೇವದಾಸಿಗಳಾದ ಅವರ ಮಾತೆಯರೇ ಇಷ್ಟಪೂರ್ವಕವಾಗಿ ಆ ಸದನಕ್ಕೆ ಕಳುಹಿಸಿದಾರೆ. ಅನೇಕ ಹಿಂದೂ ದೊಡ್ಡ ಮನುಷ್ಯರು ಮುಂದೆ ಇವರಿಂದ ಎಂಥಾ ಪರೋಪಕಾರಿಗಳು ಹೊರಡುವರೋ ಎಂದು ನಿರೀಕ್ಷಿಸುತ್ತಿದ್ದಾರೆ. ನಮ್ಮ ಮೈಸೂರು ಸೀಮೆಯಲ್ಲಿಯೂ ದೇಶಾಭಿಮಾನಿಗಳಾದ ಸಜ್ಜನರು ಆ ಸೇವಾಸದನಗಳ ಮೇಲ್ಪಂಕ್ತಿಯನ್ನನುಸರಿಸಿ ಇದ್ದ ಸ್ಥಿತಿಯನ್ನು ಕಳೆದುಕೊಂಡೆವಲ್ಲಾ! ಮುಂದೇನು ಮಾಡೋಣ ಎಂದು ಚಿಂತಿಸುತ್ತಿರುವ ಆರ್ಯ ಮಹಿಳೆಯರಿಗೆ ಆಶ್ರಯದಾತರಾಗಿ ಅವರನ್ನು ನಿಜ ದೇವದಾಸಿಯರನ್ನಾಗಿ ಮಾಡ್ಯಾರೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಕಳೆದ ವಾರ ದಂಡಿನಲ್ಲಿ ಮುನ್ನೂರು ಜನರು ಪ್ಲೇಗ್ ಚುಚ್ಚುಮದ್ದನ್ನು ಹಾಕಿಸಿಕೊಂಡಿರುತ್ತಾರೆ.

ರಾಜಧಾನಿಯಲ್ಲಿರುವ ವಸಂತಮಹಲ್ ಬಂಗಲೆಯನ್ನು ವಿದ್ಯುಚ್ಛಕ್ತಿಯ ದೀಪಗಳಿಂದ ಬೆಳಗಿಸುವುದಕ್ಕೆ ೨,೭೩೭ ರೂಪಾಯಿ ಸ್ಯಾಂಕ್ಷನ್ ಆಗಿರುತ್ತದೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಅರಬ್ಬೀ ಭಾಷೆಯನ್ನು ಹೇಳಿಕೊಡುವುದಕ್ಕೋಸ್ಕರ ಒಬ್ಬ ಪಂಡಿತನನ್ನು ಸರಕಾರದವರು ನೇಮಿಸಿ ಕೊಳ್ಳುವವರಾಗಿದ್ದಾರೆ.

ದೊಡ್ಡಬಳ್ಳಾಪುರದಲ್ಲಿ ವಿಧವೆಗಳಿಗೂ ಅನಾಥರಾದ ಮಕ್ಕಳಿಗೂ ಅನ್ನಶಾಲೆಗಳನ್ನು ಏರ್ಪಡಿಸಿ ನಡೆಸುತ್ತಿದ್ದಂಥ ಮಿಸೆಸ್ ಮೋರಿಬಾಯಿ ಐಸಾಕ್ ಎಂಬಾಕೆಯು ಅಮೆರಿಕಾ ದೇಶಕ್ಕೆ ಹೊರಟಿರುವರು.

ಫ್ರಾನ್ಸ್ ದೇಶದ ಪ್ರದರ್ಶನಕ್ಕೆ ಕಳುಹಿಸಲ್ಪಟ್ಟಿದ್ದ ಮೈಸೂರು ದೇಶದ ವಿಚಿತ್ರವಾದ ಗಂಧದ ಸಾಮಾನುಗಳು ದಸರಾ ಕಾಲದಲ್ಲಿ ನಡೆಯುವುದಕ್ಕಿರುವ ವಸ್ತುಪ್ರದರ್ಶನದಲ್ಲಿ ಇಡಲ್ಪಡುವವೆಂದು ಕೇಳುತ್ತೇವೆ.

ಮೈಸೂರು ಸರಕಾರದ ವಿದ್ಯುಚ್ಛಕ್ತಿಯ ಇಲಾಖೆಯಲ್ಲಿ ಚೀಫ್ ಇಂಜನಿಯರಾಗಿರುವ ಮೆ|| ಗಿಬ್ಸ್‌ರವರನ್ನು ಸರಕಾರದವರು ಇನ್ನೂ ಎರಡು ವರುಷ ಕಾಲ ನೌಕರಿಯಲ್ಲಿರುವಂತೆ ಕೇಳಿಕೊಳ್ಳುವರೆಂದು ತೋರುತ್ತದೆ.

ಬೆಂಗಳೂರಿನಲ್ಲಿ ಏರ್ಪಡಾಗುತ್ತಿರುವ ಟಾಟಾ ಸೇಟರ ವಸ್ತುವಿಜ್ಞಾನ ಶಾಸ್ತ್ರದ ಕಾರ್ಯಾಲಯಕ್ಕೆ ಸಂಬಂಧಪಟ್ಟ ಇಂಡಿಯಾ ಗವರ್ನ್‌ಮೆಂಟಿನ ಕಾರ್ಯಗಳೆಲ್ಲಾ ಸಿಮ್ಲಾ ಪಟ್ಟಣದಲ್ಲಿ ತೀರ್ಮಾನವಾದವೆಂದು ಕೇಳುತ್ತೇವೆ.

ಹೋದ ಗುರುವಾರ ರಾತ್ರೆ ನಮ್ಮ ಮಹಾರಾಜರವರು ನೀಲಗಿರಿಯ ಫರ್ನ್ ಹಿಲ್ ಬಂಗಲೆಯಲ್ಲಿ ಯುರೋಪಿಯನ್ ಸರದಾರರಿಗೆಲ್ಲಾ ದೊಡ್ಡ ಔತಣವನ್ನು ಮಾಡಿಸಿದರು. ಔತಣವಾದ ಮೇಲೆ ಬಾಲ್ ನರ್ತನವು ನಡೆಯಿತು.

ಭಾವಿಗಳನ್ನು ಕೊರೆಯುವುದಕ್ಕೋಸ್ಕರ ಉಪಯೋಗಿಸುವ ೬ ಯಂತ್ರಗಳನ್ನು ೬,೪೩೦ ರೂಪಾಯಿಗಳಿಗೆ ಕೊಂಡುಕೊಳ್ಳಬಹುದೆಂದು ಸರ್ಕಾರದವರು ಮಂಜೂರ್ಮಾಡಿದಾರೆ. ಒಂದು ಯಂತ್ರವು ಕಡೂರು ಚಿತ್ರದುರ್ಗ ಡೆಪ್ಯುಟಿ ಕಮಿಷನರವರ ಸುಪರ್ದಿಗೆ ಮಾಡಲ್ಪಡುವುದು.

ಸಂಸ್ಥಾನದ ಸೀನಿಯರ್ ಸರ್ಜನರಾದ ಡಾಕ್ಟರ್ ಸ್ಮಿತ್ ಸಾಹೇಬರೂ ಎಕ್ಸೈಜ್ ಕಮಿಷನರಾದ ಮೆ|| ಸ್ಟಾರ್ಕ್‌ರವರೂ ಚೀಫ್ ಎಂಜನಿಯರಾದ ಕ್ಯಾಪ್ಟನ್ ಡಾಸ್‌ರವರೂ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮೆ|| ದೇವರಾಜ ಅರಸಿನವರೂ ಕಡೂರು ಡಿಸ್ಟ್ರಿಕ್ಟಿನಲ್ಲಿ ಮಾಮೂಲಿ ಪ್ರವಾಸದಲ್ಲಿರುವರೆಂದು ಕಂಡುಬರುತ್ತದೆ.

ಬೆಂಗಳೂರು ದಂಡಿನಲ್ಲಿರುವ ದೇಶೀಯ ಕುದುರೆ ಸ್ಪೆನ್ಸರಲ್ಲಿ ಗುಮಾಸ್ತನಾಗಿದ್ದ ಜೋಸೆಫ್ ಆರ್ಲ್ಯಾಂಡ್ ಎಂಬುವನು ತನ್ನ ವಶಕ್ಕೆ ಕೊಡಲ್ಪಟ್ಟಿದ್ದ ಹಣದಲ್ಲಿ ೧೧೧ ರೂಪಾಯಿಗಳನ್ನು ದುರುಪಯೋಗ ಪಡಿಸಿಕೊಂಡನೆಂದು ದಂಡಿನ ಮ್ಯಾಜಿಸ್ಟ್ರೇಟರಲ್ಲಿ ಮೊಕದ್ದಮೆ ತರಲ್ಪಟ್ಟಿತು. ಸದರಿ ಗುಮಾಸ್ತನು ಹಣವನ್ನು ದುರುಪಯೋಗ ಪಡಿಸಿಕೊಂಡುದು ರುಜುವಾತಾದ ಮೇಲೆ ಅವನಿಗೆ ಮ್ಯಾಜಿಸ್ಟ್ರೇಟರು ಒಂದು ವರುಷದ ಕಠಿಣ ಸಜಾ ವಿಧಿಸಿದರು.

ರಾಜಧಾನಿಯಲ್ಲಿ ಸರಕಾರದ ಪರವಾಗಿ ದೇಶೀಯ ಅತಿಥಿಗಳು ಬಂದರೆ ಅವರನ್ನು ಸತ್ಕರಿಸುವುದಕ್ಕೆ ಒಂದು ಬಂಗಲೆಯು ಇರುವುದಷ್ಟೆ. ಹೆಚ್ಚಾಗಿ ಅತಿಥಿಗಳು ಬಂದಾಗ್ಗೆ ಇದರಲ್ಲಿ ಸ್ಥಳ ಸಂಕೋಚವಾಗಿರುವುದರಿಂದ ಸರಕಾರದವರು ಮರಿಮಲ್ಲಪ್ಪ ಹೈಸ್ಕೂಲ್ ಪ್ರಿನ್ಸಿಪಾಲರಾದ ಮೆ|| ವೆಂಕಟಕೃಷ್ಣಯ್ಯನವರ ಬಂಗಲೆಯನ್ನು ಕ್ರಯಕ್ಕೆ ತೆಗೆದುಕೊಂಡು ಅದರಲ್ಲಿ ಇನ್ನುಮುಂದೆ ಹೆಚ್ಚಾಗಿ ಬರುವ ಅತಿಥಿಗಳನ್ನು ಸತ್ಕರಿಸುವರೆಂದು ಕೇಳುತ್ತೇವೆ.

ಈ ವರುಷದ ಆದಿಭಾಗದಲ್ಲಿ ಇಂಡಿಯಾ ದೇಶದ ವೈಸರಾಯರಾದ ಲಾರ್ಡ್ ಮಿಂಟೋ ಪ್ರಭುಗಳು ಮೈಸೂರು ದೇಶಕ್ಕೆ ದಯಮಾಡಿಸುವರು. ಇವರು ಕೋಲಾರದ ಚಿನ್ನದಗಣಿ ಕೆಲಸಗಳನ್ನೂ ಶಿವನಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆಗಳನ್ನು ನೋಡಿಕೊಂಡು ಖೆಡ್ಡಾಕ್ಕೆ ದಯಮಾಡಿಸಿ ಅಲ್ಲಿ ಕಾಡಾನೆಗಳನ್ನು ಹಿಡಿಯುವ ರೀತಿಯನ್ನು ಪರಾಂಬರಿಸುವರು. ಈ ಪ್ರಯಾಣದಲ್ಲಿ ಪ್ರಭುಗಳು ಕೆಲವು ದಿನಗಳನ್ನು ಬೆಂಗಳೂರಿನಲ್ಲೂ ರಾಜಧಾನಿಯಲ್ಲೂ ಕಳೆಯುವರು.

ಮೊನ್ನೆ ಮಂಗಳವಾರ ಸಾಯಂಕಾಲ ಸ್ಪೆಷಲ್ ಟ್ರೇನಿನಲ್ಲಿ ಮಾತುಶ್ರೀ ವಾಣಿವಿಲಾಸ ಸನ್ನಿಧಾನದ ಮಹಾರಾಣಿಯವರು ರಾಜಪರಿವಾರ ಸಮೇತರಾಗಿ ರಾಜಧಾನಿಗೆ ದಯಮಾಡಿಸಿದರು. ಇವರನ್ನು ಇದಿರುಗೊಳ್ಳಲು ಸರಕಾರದ ಉದ್ಯೋಗಸ್ಥರೂ ಇತರ ದೊಡ್ಡ ಮನುಷ್ಯರೂ ರೇಲ್ವೆ ಸ್ಟೇಷನ್ ಬಳಿ ಕಾದಿದ್ದರು. ನಿನ್ನೆ ಮಧ್ಯಾಹ್ನ ಮಹಾರಾಜರವರೂ ಯುವರಾಜರವರೂ ಗುಂಡ್ಲುಪೇಟೆ ನಂಜನಗೂಡು ಮಾರ್ಗವಾಗಿ ಮೋಟರ್ ಗಾಡಿಗಳಲ್ಲಿ ರಾಜಧಾನಿಯನ್ನು ಸೇರಿದರು.

ಬೆಂಗಳೂರಲ್ಲಿರುವ ಸಾಹುಕಾರ್ ದೊಡ್ಡಣ್ಣನವರ ಪಾಠಶಾಲೆಯ ಪಕ್ಕದಲ್ಲಿ ಮುಚ್ಚಿರುವ ಕೋಟೆ ಕಂದಕದ ಮೇಲ್ಗಡೆಯ ಜಮೀನನ್ನು ಮೆ|| ದೊಡ್ಡಣ್ಣನವರಿಗೆ ಸರ್ಕಾರದವರು ಕೊಟ್ಟಿರುವರು. ಈ ಜಮೀನಿನ ಮೇಲೆ ಮೆ|| ದೊಡ್ಡಣ್ಣನವರು ಒಂದು ಕಸುಬಿನ ಪಾಠಶಾಲೆಯನ್ನು ಕಟ್ಟಿಸುವರು. ಕೋಟೆ ಗೋಡೆಯ ಕಲ್ಲುಗಳನ್ನು ಮತ್ತು ಒಂದು ಸಾವಿರ ರೂಪಾಯಿಗಳನ್ನೂ ಕೊಟ್ಟು ಅದರಲ್ಲಿ ಪಾಠಶಾಲೆಯ ಕಾಂಪೌಂಡು ಗೋಡೆಯನ್ನು ಪುನಃ ಕಟ್ಟಿಸಬಹುದೆಂದು ಸರ್ಕಾರದವರು ಅಪ್ಪಣೆ ಮಾಡಿದ್ದಾರೆ.

ಹೋದ ಭಾನುವಾರದ ಸಾಯಂಕಾಲ ರಾಜಧಾನಿಯಲ್ಲಿ ಒಳ್ಳೇ ಹದವಾದ ಮಳೆಯಾಯಿತು. ಬಿಸಿಲು ತಕ್ಕಮಟ್ಟಿಗೂ ಶಾಂತವಾದ ಹಾಗೆ ತೋರುತ್ತದೆ. ಅಂಟುಜಾಡ್ಯವ್ಯಾವುದೂ ವ್ಯಾಪಿಸಲಿಲ್ಲವು. ರಾಜಧಾನಿಯಲ್ಲಿ ಕಟ್ಟುತ್ತಿರುವ ಹೊಸ ಅರಮನೆಯು ಈ ವರುಷವೂ ಪೂರೈಸುವಂತೆ ಕಾಣುವುದಿಲ್ಲ. ದರ್ಬಾರ್ ಹಾಲಿನಲ್ಲೂ ಇತರ ಕಡೆಗಳಲ್ಲೂ ಕೆಲವು ನೂತನವಾದ ಬದಲಾವಣೆಗಳಾಗಬೇಕಾಗಿವೆಯೆಂತಲೂ ಸದರಿ ಬದಲಾವಣೆಗಳಿಗೆ ಎರಡು ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿರುವುದೆಂತಲೂ ತೋರುತ್ತದೆ. ಕೆಲಸಗಳು ತರಾತುರಿಯಾಗಿ ನಡೆಯುತ್ತಿದ್ದರೂ ಈ ವರುಷದ ದಸರಾ ಮಹೋತ್ಸವವು ಓಲ್ಡ್ ಮೋಹನ್ ರಾಜಭವನದಲ್ಲಿ ಜರುಗುವುದೆಂದು ನಂಬಿಯಿರುವುದು.

ದಿವಾಳಿಯಾದ ಅರ್ಬತ್‌ನಾಟ್ ಕಂಪನಿಗೆ ಸೇರಿದ ಕೆಲವು ಜಮೀನುಗಳು ಈ ತಿಂಗಳು ೧೦ ನೇ ತಾರೀಖಿನ ದಿವಸ ಮದರಾಸಿನಲ್ಲಿ ಹರಾಜಾದವು. ಮೈಸೂರು ಸಂಸ್ಥಾನದ ಜಮೀನುಗಳ ಪೈಕಿ ಮರ್ಕರ ಗುಡ್ಡ ಎಂಬುದನ್ನು ಹಾಜಿ ಇಸ್ಮಾಯಿಲ್ ಸೇಟರು ೧ ಲಕ್ಷದ ೬ ಸಾವಿರ ರೂಪಾಯಿಗಳಿಗೆ ಕೊಂಡುಕೊಂಡರು. ಕುಲ್‌ಮುಡಿ ಎಂಬುವನ್ನು ೯,೫೦೦ ರೂಪಾಯಿಗಳಿಗೆ ಹಾಜಿ ಫಕೀರ್ ಮಹಮ್ಮದ್ ಕಂಪನಿಯವರು ತೆಗೆದುಕೊಂಡರು. ಇದೇ ಕಂಪನಿಯವರು ಅಂಬಿನಕೋಡಿಗೆ ಜಮೀನನ್ನು ೩,೩೦೦ ರೂಪಾಯಿಗಳಿಗೆ ತೆಗೆದುಕೊಂಡರು. ಹಿರೇಹಳ್ಳಿ ಎಸ್ಟೇಟನ್ನು ಮೆ|| ಪುಟ್ಟೇಗೌಡರು ೪,೯೦೦ ರೂಪಾಯಿಗಳಿಗೆ ತೆಗೆದುಕೊಂಡರು. ಇವರು ೧೫,೩೦೦ ರೂಪಾಯಿಗಳಿಗೆ ಕರ್ಕೋಟೆ ಎಸ್ಟೇಟನ್ನು ಕೊಂಡುಕೊಂಡರು. ಬೈತಳ್ಳಿ ಜಮೀನನ್ನು ಮೆ|| ಸೊಣ್ಣೇಗೌಡರು ೧೬,೨೦೦ ರೂಪಾಯಿಗೂ, ಹಿರೇಗುಣಗೆಯನ್ನು ಮೆ|| ಮಹಮ್ಮದ್ ಹಬೀಬುಲ್ಲಾ ಯವರು ೨೯ ಸಾವಿರ ರೂಪಾಯಿಗೂ, ಉತಲಬ್ಬೆ ಜಮೀನನ್ನು ಮೆ|| ಮಹಮದ್ ಹುಸೇನರು ೧೭ ಸಾವಿರ ರೂಪಾಯಿಗೂ ಕೊಂಡುಕೊಂಡರು.

ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರೂ ಸಿವಿಲ್ ಆಫೀಸರೂ ಆಗಿರುವ ಮೆ|| ರಾಯಲು ಶೆಟ್ಟಿಯವರು ಮೇ ೩ನೇ ತಾರೀಖಿನಲ್ಲಿ ಡ್ಯೂಟಿ ಮೇಲೆ ಬಂದಕಾರಣ ಅವರು ಉಪಯೋಗಿಸದೆ ಇರುವ ರಜಾ ದಿನಗಳು ಇದರಿಂದ ವಜಾ ಮಾಡಲ್ಪಟ್ಟವೆ.

ಬೆಂಗಳೂರು ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರಾದ ಮೆ|| ನಾರಾಯಣಸ್ವಾಮಿ ನಾಯುಡುರವರಿಗೆ ಎರಡು ತಿಂಗಳು ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುವುದು.

ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿರುವ ಮೆ|| ತ್ಯಾಗರಾಜಯ್ಯರು ಖಾಯಲೆ ರಜಾದಲ್ಲಿರುವರಷ್ಟೆ. ಇವರು ರಜಾ ಪೂರೈಸಿದ ಮೇಲೆ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಕೆಲಸ ನೋಡತಕ್ಕದ್ದು.

ಆಲೂರು ಆಕ್ಟಿಂಗ್ ಅಮಲ್ದಾರರಾದ ಮೆ|| ಮಹಮದ್ ಸ್ಟ್ಯುವರ್ಡ್ ಪಾಷರು ಕೊಪ್ಪ ತಾಲೋಕಿಗೆ ಆಕ್ಟಿಂಗ್ ಅಮಲ್ದಾರರಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ.

ಕೊಪ್ಪ ತಾಲೋಕಿಗೆ ಆಕ್ಟಿಂಗ್ ಅಮಲ್ದಾರರಾಗಿದ್ದ ಮೆ|| ಅನಂತ ರಾಮಯ್ಯಂಗಾರರು ತಮ್ಮ ಖಾಯಂ ಕೆಲಸದ ಮೇಲೆ ಆಲೂರಿಗೆ ಅಮಲ್ದಾರರಾಗಿ ವರ್ಗವಾಗಿರುತ್ತಾರೆ.

ಮೆ|| ನರಸಿಂಗರಾವ್ ಪೂರ್ಣಯ್ಯನವರನ್ನು ಎರಡನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರ್ ದರ್ಜೆಗೆ ಪ್ರಮೋಷನ್ ಮಾಡಿರುತ್ತೆ.

ಅಸಿಸ್ಟೆಂಟ್ ಕಮಿಷನರಾದ ಮೆ|| ರಾಜಗೋಪಾಲ ಒಂಟಿಯವರು ಮಳವಳ್ಳಿ ತಾಲೋಕಿನ ಖಜಾನೆಯಲ್ಲಿ ಕಳೆದು

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಮೇ ತಾ. 16 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು.	ರಿಲೀಫ್ ಕೆಲಸ ಮಾಡುವವರ ಸಂಖ್ಯೆ.			ಕೂಲಿ ಕೊಟ್ಟದ್ದು.	ಧರ್ಮಸಹಾಯ ಪಡೆದ ಜನರು.
	ಗಂಡಾಳು	ಹೆಣ್ಣಾಳು	ಮಕ್ಕಳು.	ರೂ.	
ಬೆಂಗಳೂರು	261	146	16	567	192
ಕೋಲಾರ	1,230	669	111	2,934	744
ತುಮಕೂರು	1,119	691	11	1,443	709
ಮೈಸೂರು	364	258	37	1,126	374
ಹಾಸನ	58	64	8	67	323
ಶಿವಮೊಗ್ಗ	921	1,918	147	1,568	63
ಕಡೂರು	82	33	4	230	5
ಚಿತ್ರದುರ್ಗ	92	45	2	189	.
ಮಾರಿಕಣಿವೆ	..	..	..	..	..
ಸ್ಯಾನಿಟರಿ	15	25	..	200	40
ಒಟ್ಟು	4,142	3,648	356	8,314	2,450

ಆರೋಗ್ಯಶಾಸ್ತ್ರ.

ಹಾಲನ್ನು ಶುದ್ಧಿಮಾಡುವ ವಿಧ.

(ಕ್ಯಾಪ್ಟನ್ ಗ್ಲೆನ್‌ಲಿಸ್ಟರ್ ಎಂಬ ಪ್ರಸಿದ್ಧ ವೈದ್ಯರು ಮಾಡಿದ ಉಪನ್ಯಾಸದ ಒಂದು ಭಾಗ).—ಹಾಲನ್ನು ಧೂಳುಬೀಳುವಂತೆಯೂ ನೊಣಗಳು ಭೇಟಿ ಮಾಡುವಂತೆಯೂ ತೆರೆದ ಪಾತ್ರೆಗಳಲ್ಲಿ ಎಂದಿಗೂ ಇಡಕೂಡದು. ಹಾಲು ಕಾಯಿಸುವದಕ್ಕೆ ಪ್ರತ್ಯೇಕವಾಗಿ ಒಂದು ಪಾತ್ರೆಯನ್ನು ಇಟ್ಟಿರಬೇಕು. ಅದನ್ನು ಮತ್ಯಾವ ಕೆಲಸಕ್ಕೂ ಉಪಯೋಗಿಸಕೂಡದು ಕಾದ ಹಾಲನ್ನು ಅದರಲ್ಲಿಯೇ ಮುಚ್ಚಿಟ್ಟಿದ್ದು ಬೇಕಾದಾಗ ತೆಗೆದು ಉಪಯೋಗಿಸಬೇಕು ಆ ಪಾತ್ರೆಯಿಂದ ಹಾಲನ್ನು ಇತರ ಪಾತ್ರೆಗಳಲ್ಲಿ ಆಗಾಗ್ಗೆ ಹಾಕಿ ಉಪಯೋಗಿಸುವ ವಾಡಿಕೆಯನ್ನು ಬಿಟ್ಟುಬಿಡಬೇಕು. ಏಕೆಂದರೆ ಹಾಲನ್ನು ಒಂದು ಪಾತ್ರೆಯಿಂದ ಮತ್ತೊಂದು ಪಾತ್ರೆಗೆ ಹಾಕುತ್ತಾ ಹಾಕುತ್ತಾ ಅದರಲ್ಲಿರುವ ಕ್ರಿಮಿಗಳು ಹೆಚ್ಚುತ್ತ ಬರುತ್ತವೆ. ಎಚ್ಚರಿಕೆಯಾಗಿರೋಣದರಿಂದ ಹಾಲು ಉಪಯೋಗಿಸುವವರ ಮನೆಯಲ್ಲಿ ಉಂಟಾಗಬಹುದಾದ ಕೇಡನ್ನು ತಪ್ಪಿಸಿಕೊಳ್ಳಬಹುದು ಆದರೆ ಮನೆಗೆ ಬರುವದಕ್ಕೆ ಮುಂಚೆ ಹಾಲಿಗುಂಟಾದ ಕೇಡನ್ನು ತಿಳಿಯುವದು ಹ್ಯಾಗೆ? ಅದನ್ನು ಕಳೆಯದಿದ್ದರೆ ನಾವು ಮನೆಯಲ್ಲಿ ಎಷ್ಟು ಜಾಗರೂಕರಾಗಿದ್ದರೂ ಪ್ರಯೋಜನವೇನು? ಬೀದಿ ಬಚ್ಚಲಿನಲ್ಲಿ ಹೋಗುವ ಬಚ್ಚಲುನೀರನ್ನು ಒಳ್ಳೇ ಪಾತ್ರೆಯಲ್ಲಿ ಹಾಕಿ ಜಾಗರೂಕತೆಯಿಂದ ಕಾಯಿಸಿ ಕುಡಿದಂತಾಗುವದಿಲ್ಲವೇ? ಹಾಲನ್ನು ಶುದ್ಧಿಮಾಡುವದಕ್ಕೆ ಎರಡು ಮಾರ್ಗಗಳುಂಟು—ಹಾಲನ್ನು ಅತಿ ಶೀತಳ ಮಾಡುವುದು ಅತಿ ಶೀತಳ ಮಾಡುವುದರಿಂದ ಹಾಲಿನಲ್ಲಿರುವ ಕ್ರಿಮಿಗಳು ಹೆಚ್ಚದಂತೆಯೂ ಮುಂದೆ ಕೆಟ್ಟ ಕ್ರಿಮಿಗಳು ಸೇರದಂತೆಯೂ ಆಗುವದು ಈ ಪದ್ಧತಿಯು ಈಗ ವಿಲಾಯಿತಿಯಲ್ಲಿ ವಾಡಿಕೆಗೆ ಬರುತ್ತಾ ಇದೆ ಮತ್ತೊಂದು ಮಾರ್ಗವಾಗಿ ಹಾಲನ್ನು ಅತಿ ಕಾಯಿ ಮಾಡುವುದರಿಂದ ಹಾಲು ಕರೆಯುವ ಮತ್ತು ಮುಂತಾದ ಕಾಲಗಳಲ್ಲಿ ಹಾಲಿನಲ್ಲಿ ಸೇರಬಹುದಾದ ಕ್ರಿಮಿಗಳನ್ನೆಲ್ಲಾ ಓಡಿಸಿ ಅಥವಾ ಸಾಯಿಸಿ ಕಾದ ಹಾಲನ್ನು ಭದ್ರವಾಗಿ ಮುಚ್ಚಿಟ್ಟು ಬೇಕಾದಾಗ ಉಪಯೋಗಿಸಬಹುದು ಹಾಲನ್ನು ಶೀತಳ ಮಾಡುವ ಪದ್ಧತಿಯು ಈ ಉಷ್ಣರಾಜ್ಯದಲ್ಲಿ ಬಹಳ ಕಷ್ಟ, ಮತ್ತು ದ್ರವ್ಯಸಾಧ್ಯವಾದ್ದರಿಂದ ಕಾಯಿ ಮಾಡುವ ಪದ್ಧತಿಯನ್ನೇ ಇಟ್ಟುಕೊಳ್ಳಬೇಕು ಹೀಗೆ ಕಾಯಿ ಮಾಡುವದನ್ನು ಶಾಸ್ತ್ರೀಯವಾಗಿ ಮಾಡುವದಕ್ಕೆ ಒಂದು ಕಂಪನಿಯು ಏರ್ಪಾಡಾದರೆ ಬಹಳ ಒಳ್ಳೇದು ಮತ್ತು ದನ ಕಟ್ಟುವವರಿಗೆ ಒಳ್ಳೇ ಜಾಗಗಳನ್ನು ಕೊಟ್ಟು ದನಗಳನ್ನೂ ಅವು ತಿನ್ನುವ ಆಹಾರವನ್ನೂ ಕರೆಯುವ ಹಾಲನ್ನೂ ಹಾಲು ಕರೆಯುವವನನ್ನೂ ಉಸ್ತುವಾರಿ ನೋಡಿಕೊಳ್ಳುವದಕ್ಕೆ ಸರ್ಕಾರದ ಅಧಿಕಾರಿ ಒಬ್ಬನಿರಬೇಕು ಹೀಗೆ ಮಾಡಿದಲ್ಲಿ ಮನುಷ್ಯಪ್ರಯತ್ನದಲ್ಲಿ ಸಾಧ್ಯವಾದಷ್ಟು ಶುದ್ಧವಾದ ಹಾಲು ದೊರಕುವದರಲ್ಲಿ ಸಂದೇಹವಿಲ್ಲ

ತುಪ್ಪದ ಕೈಗಾರಿಕೆ.

ತುಪ್ಪದ ಕ್ರಯವು ಇತ್ತಲಾಗಿ ಇಡೀ ಹಿಂದುಸ್ಥಾನದಲ್ಲಿ ಸೇಕಡಾ ೧೨೫ ರಂತೆ ಜಾಸ್ತಿಯಾಗಿರುವುದು ಅಗ್ಗವಾಗಿದ್ದಾಗ ಇದನ್ನು ಉಪಯೋಗಿಸುತ್ತಿದ್ದ ಬಹಳ ಮಂದಿ ಬಡಬಗ್ಗರಕೈ ಈಗ ತುಪ್ಪಕ್ಕೆ ನಿಲುಕದು ಕಳೆದ ವರುಷದಲ್ಲಿ ಆರು ನೂರು ಲಕ್ಷ ರೂಪಾಯಿಗಳ ಮೌಲ್ಯದ ತುಪ್ಪವು ತಯಾರಿಸಲ್ಪಟ್ಟಿತ್ತು ಇಷ್ಟೆಲ್ಲ ತುಪ್ಪವು ಹಿಂದೂಸ್ಥಾನದ ಜನರಿಗೆ ಸಾಲದೆಂಬುದು ಈ ಜಾಸ್ತಿ ಕ್ರಯದಿಂದ ಗೊತ್ತಾಗುವುದು ತಿನ್ನುವ ತುಪ್ಪವನ್ನು ಬೇರೆಯಾದರೂ ವನಸ್ಪತಿಗಳ ಎಣ್ಣೆಯಿಂದ ತಯಾರಿಸಿದ್ದಲ್ಲಿ ಈ ಕೈಗಾರಿಕೆಯು ಬಹಳ ಪ್ರಯೋಜನವುಳ್ಳದ್ದಾಗಿ ತೋರಿಬರುವುದು ತುಪ್ಪವನ್ನು ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲಿ ಹೇರಳವಾಗಿ ತಯಾರಿಸುವರು ಸಿಂಧು ನದಿಯು ಸಮುದ್ರಕ್ಕೆ ಕೂಡುವಲ್ಲಿ ಇರುವ ಊರುಗಳಲ್ಲಿ ಉತ್ಕೃಷ್ಟವಾದ ತುಪ್ಪವು ತಯಾರಿಸಲ್ಪಟ್ಟು ಕರಾಚಿಯಿಂದ ಬೇರೆ ಎಲ್ಲಾ ದಿಕ್ಕುಗಳಿಗೂ ವಿಕ್ರಯಿಸಲ್ಪಡುತ್ತದೆ ಹಿಂದೂದೇಶದ ನಿವಾಸಿಗಳಲ್ಲಿ ಕೆಲವರು ಬೆಣ್ಣೆಯನ್ನು ಉಪಯೋಗಿಸುವವರಾದರೂ ತುಪ್ಪವು ಹೆಚ್ಚಾಗಿ ಖರ್ಚಾಗುವುದು ಅವರಲ್ಲಿಯೂ ದಕ್ಷಿಣ ಹಿಂದೂಸ್ಥಾನದ ಜನರು ತುಪ್ಪವನ್ನೇ ಅಧಿಕವಾಗಿ ಉಪಯೋಗಿಸುವರು. ಬೆಣ್ಣೆಯನ್ನು ಬಿಸಿಮಾಡಿ ಅದರಲ್ಲಿರುವ ನೀರು ಹನಿಗಳು ಯಾವೊತ್ತು ಪೂರ್ಣವಾಗಿ ಹೋಗುವ ತನಕ ಆಗಾಗ್ಗೆ ನೊರೆ ತೆಗದು ತುಪ್ಪವನ್ನು ತಯಾರು ಮಾಡುವರು ಹೀಗೆ ಬಹಳ ಜಾಗ್ರತೆಯಿಂದ ತಯಾರಿಸಿದ ತುಪ್ಪವು ಎಷ್ಟು ವರ್ಷಗಳಾದರೂ ಕಮಟಾಗುವುದಿಲ್ಲ. ಹಾಳಾದ ಕೋಟೆಗಳಲ್ಲಿಯೂ ಅರಮನೆಗಳಲ್ಲಿಯೂ ಸಹ ೨೦೦ ವರುಷಗಳ ಹಿಂದಿನ ತುಪ್ಪವು ಏನೂ ಕಮಟಾಗದೆ ಸಿಕ್ಕಿದ ದಾಖಲೆಗಳಿರುವವು ಹಿಂದೆ ೧೮೭೬-೭ ವರುಷಗಳಲ್ಲಿ ಹಿಂದುಸ್ಥಾನದಿಂದ ಆಸ್ಟ್ರೇಲಿಯಾ ದಕ್ಷಿಣಕ್ಕೂ ಪೂರ್ವಕ್ಕೂ ತುಪ್ಪವು ರಫ್ತಾಗುತ್ತಿತ್ತು. ೧೮೭೯-೮೦ ವರುಷಗಳಲ್ಲಿ ೧೩,೪೬,೪೪೩ ರಾತ್ತಲು, ೧೯೦೭-೦೮ ವರುಷಗಳಲ್ಲಿ ೪,೦೬,೫೫೫ ರಾತ್ತಲು ತುಪ್ಪವನ್ನು ಹೊರದೇಶಗಳಿಗೆ ಕಳುಹಿಸಿದ್ದಾಗಿ ತಿಳಿದುಬರುತ್ತದೆ ಹೀಗೆ ಪರದೇಶಗಳಿಗೆ ರಫ್ತಾಗುವ ತುಪ್ಪವು ಬಹಳ ಕಡಿಮೆಯಾಗಿರುವುದೆಂದೂ, ಇಂಡ್ಯಾದ ಜನರಿಗೇನೇ ತುಪ್ಪವು ಸಿಕುವುದು ಕಷ್ಟಸಾಧ್ಯವೆಂದೂ ತಿಳಿದುಬರುವುದು. ತುಪ್ಪದ ಖರ್ಚಿಗಿಂತ ಉತ್ಪತ್ತಿಯು ಕಡಿಮೆಯಾಗಿರುವುದೇ ಇದರ ಮುಖ್ಯ ಕಾರಣವಾಗಿರುವುದು. ಗಿರಾಕಿಗೆ ತಕ್ಕಷ್ಟು ಹಸನು ತುಪ್ಪ ದೊರೆಯದೇ ಇದರ ಧಾರಣೆ ಹೆಚ್ಚಿರುತ್ತೆ ಈ ಕಾರಣದಿಂದ ಜನರು ನಾತದ ತುಪ್ಪವನ್ನು ಕೊಂಡು ಉಪಯೋಗಿಸಲು ಅವಕಾಶವಾಗಿರುತ್ತೆ ಈಚೆಗೆ ಸುಮಾರು ೧೫ ವರುಷಗಳಿಂದಲೂ ಅಮೇರಿಕಾ ದೇಶದಲ್ಲಿ ನೆಲಗಡ್ಲೆಯಿಂದ ಬೆಣ್ಣೆಯನ್ನು ತೆಗೆಯುತ್ತಲಿದ್ದಾರೆ. ಈ ಉದ್ಯೋಗವು ಅಲ್ಲಿ ಬಹಳ ವೃದ್ಧಿ ಹೊಂದಿರುತ್ತೆ ಇದನ್ನು ನೋಡಿದರೆ ನೆಲಗಡ್ಲೆಯ ಬೆಣ್ಣೆಯು ದೇಹಕ್ಕೆ ಆರೋಗ್ಯಕರವಾದದ್ದೆಂದು ದೃಢಪಡುತ್ತದೆ ಆದಕಾರಣ ಇಂಡಿಯಾ ದೇಶದಲ್ಲಿ ನೆಲಗಡ್ಲೆಯು ವಿಶೇಷವಾಗಿ ಬೆಳೆದು ಪರಸ್ಥಳಗಳಿಗೆ ರಫ್ತಾಗುತ್ತಿರುವುದರಿಂದ ಬೆಣ್ಣೆ ತೆಗೆಯುವ ಈ ಹೊಸ ಕಸಬನ್ನು ಇಲ್ಲೇ ಸ್ಥಾಪಿಸುವದು ಆದಾಯಕರ ಮೊದಲು ಅಜಮಾಯಿಸಿ ಬಗ್ಗೆ ಬೆಣ್ಣೆಯನ್ನು ಈ ರೀತಿ ತಯಾರು ಮಾಡಿ ನೋಡಬಹುದು. ಬೀಜವನ್ನು ಚೆನ್ನಾಗಿ ಹುರಿದು ಹೊಟ್ಟು ತೆಗೆದು ಒರಳಿನಲ್ಲಿ ನುಣ್ಣಗೆ ಕುಟ್ಟುವುದರಿಂದ ಬೆಣ್ಣೆಯಂತೆ ಆಗುತ್ತೆ ಇದು ಅಡಿಗೆಯಲ್ಲಿ ಉಪಯೋಗಿಸುವುದಕ್ಕೆ ಲಾಯಖಾಗಿರುತ್ತೆ ಈ ಕಸಬನ್ನು ಭಾರಿಯಾಗಿ ನಡೆಸಿ ವ್ಯಾಪಾರ ಮಾಡಬೇಕಾದರೆ ಅಮೇರಿಕಾ ದೇಶದಲ್ಲಿ ರೂಢಿಯಲ್ಲಿರುವ ತಕ್ಕ ಯಂತ್ರಗಳನ್ನುಪಯೋಗಿಸಬಹುದು ಇದರ ಕ್ರಯ ಸುಮಾರು ೧,೬೦೦ ರೂಪಾಯಿ ಆಗುತ್ತೆ

ಕರ್ಪೂರದ ವಿಷಯವು.

ಕರ್ಪೂರಗಿಡ –ಪಚ್ಚಕರ್ಪೂರ ಎಳಸು ಕಿ ಬಾಳೇಗಿಡದ ರಸದಲ್ಲಿ ಉಂಟಾಗುತ್ತೆಂದು ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಪ್ರವಾದವಿದೆ ಆದರೆ ಕರ್ಪೂರವನ್ನು ವ್ಯಾಪಾರ ಮಾಡುವವರಿಂದಲೂ, ಸಾಮಾನ್ಯವಾಗಿ ಕರ್ಪೂರವನ್ನು ತಯಾರು ಮಾಡುವ ಜನರ ಮೂಲಕವಾಗಿಯೂ ಮತ್ತು ಇತರ ಶಾಸ್ತ್ರಜ್ಞರು ಬರೆದಿರುವ ಬರವಣಿಗೆಯಿಂದಲೂ, ಈ ಪ್ರವಾದವು ಸರಿಯಾದದ್ದಲ್ಲವೆಂದು ತಿಳಿದು ಬಂದು ಇದೆ

ಕರ್ಪೂರದ ಗಿಡಗಳು ಚೀನಾ, ಜಪಾನ್ ಮತ್ತು ಫಾರ್ಮೋಸಾ, ಲ್ಯೂಚೂ ದ್ವೀಪಗಳಲ್ಲಿ ಬೆಟ್ಟಗಳ ಪಕ್ಕದಲ್ಲಿಯೂ, ಮತ್ತು ಮಳೆಯು ಅಧಿಕವಾಗಿರುವಂಥ ಸಮಭೂಮಿಗಳಲ್ಲಿಯೂ ಸಹ ತಮ್ಮಷ್ಟಕ್ಕೆ ತಾವೇ ಸ್ವಾಭಾವಿಕವಾಗಿ ಬೆಳೆಯುವಂತೆ ಗೊತ್ತಾಗಿದೆ ಈ ಗಿಡವು ಸಾಮಾನ್ಯವಾಗಿ ೫೦ ೬೦ ಅಡಿ ಎತ್ತರ ಬೆಳೆಯುತ್ತದೆ ಇದರ ಬುಡದ ಸುತ್ತಳತೆಯು ೨೦-೪೦ ಅಂಗುಲಗಳು ಇರುತ್ತದೆ ಈ ಗಿಡಗಳನ್ನು ಕೆಲವು ವರ್ಷಗಳಿಂದ ಈಜಿಪ್ಟು, ಇಟಲಿ ಮತ್ತು ಫ್ರಾನ್ಸು ದೇಶಗಳಲ್ಲಿ ಬೆಳೆಸಿರುವುದಾಗಿ ತಿಳಿದು ಬಂದು ಇದೆ ಇದನ್ನು ಚೆನ್ನಾಗಿ ಕಾಪಾಡಿದರೆ ೧೦ ವರ್ಷದಲ್ಲಿ ೩೦ ಅಡಿ ಎತ್ತರ ಬೆಳೆಯುತ್ತದೆ ಕರ್ಪೂರದ ಮರದ ಹಲಗೆಗಳನ್ನು ನಕಾಸು ಮತ್ತು ಚಿತ್ರದ ಕೆಲಸಕ್ಕೆ ಉಪಯೋಗಿಸುತ್ತಾರೆ ಈ ಗಿಡಗಳನ್ನು ಕೊಂಬೆ ನೆಡುವುದರ ಮೂಲಕವಾಗಿಯೂ, ಅಥವಾ ಬೀಜವನ್ನು ಹಾಕುವುದರಿಂದಲೂ, ವೃದ್ಧಿ ಪಡಿಸಬಹುದು ಈ ಮರವನ್ನು ಇಂಡಿಯಾ ದೇಶದಲ್ಲಿ ಉತ್ತರ ಬಂಗಾಳಾ ಮತ್ತು ಅಸ್ಸಾಂ ಸೀಮೆಗಳಲ್ಲಿ ಬೆಳೆಸಿರುವುದಾಗಿ ತಿಳಿದು ಬರುತ್ತೆ ನಮ್ಮ ಮೈಸೂರು ದೇಶದಲ್ಲೂ ಈ ಗಿಡಗಳನ್ನು ಕೆಲವು ಪ್ರಾಂತ್ಯಗಳಲ್ಲಿ ಬೆಳೆಸಲಿಕ್ಕೆ ಬಹಳ ಒಳ್ಳೆಯ ಭೂಮಿಯೂ ಮತ್ತು ಮಳೆಯ ಅನುಕೂಲವೂ ಸಹಾ ಉಂಟು.

ಈ ಮರಗಳನ್ನು ಕತ್ತರಿಸಿ ತುಂಡುಗಳನ್ನು ಮಾಡಿ, ತುಂಡುಗಳಲ್ಲಿ ಭಟ್ಟಿ ಮೂಲಕ ಕರ್ಪೂರವನ್ನು ತೆಗೆಯುವುದಾಗಿ ತಿಳಿದು ಬಂದು ಇದೆ ಈ ಕರ್ಪೂರವು ವಿಶೇಷವಾಗಿ ಬೇರುಗಳನ್ನು ಭಟ್ಟಿ ಹಿಡಿಯುವುದರ ಮೂಲಕ ಸಿಕ್ಕುವುದಾಗಿ ತಿಳಿದಂಥವರು ಬರೆದಿರುತ್ತಾರೆ ಬಲಿತ ಕೊಂಬೆಗಳಲ್ಲಿಯೂ, ರೆಂಬೆಗಳಲ್ಲಿಯೂ, ಎಲೆಗಳಲ್ಲಿಯೂ ಸಹಾ ಕರ್ಪೂರವು ದೊರೆಯುತ್ತದೆ ಎಲೆಗಳಲ್ಲಿಯೂ ಮತ್ತು ರೆಂಬೆಗಳಲ್ಲಿಯೂ ೮೦ ಪೌನು ತೂಕ ಭಟ್ಟಿ ಹಾಕಿದರೆ ೧ ಪೌನು ಕಚ್ಚಾ ಕರ್ಪೂರವು ಸಿಕ್ಕುವುದು. ಚೀನಾ, ಜಪಾನ್, ಫಾರ್ಮೋಸಾ ಈ ದ್ವೀಪಗಳಲ್ಲಿ ಕಚ್ಚಾ ಕರ್ಪೂರವನ್ನು ಮಾತ್ರ ತಯಾರು ಮಾಡುತ್ತಾರೆ ಈ ಕಚ್ಚಾ ಕರ್ಪೂರವು ಯೂರೋಪ್ ದೇಶಕ್ಕೆ ರಫ್ತಾಗಿ ಅಲ್ಲಿ ಅದನ್ನು ಪಕ್ವಮಾಡಿ ಫೀಟ್ ಕರ್ಪೂರವನ್ನು ಇಳಿಸುತ್ತಾರೆ

ಕರ್ಪೂರವು ಬಹಳ ಸುಗಂಧವಾದ ವಸ್ತುವಾಗಿದೆ ಇದನ್ನು ಔಷಧಗಳಿಗೆ ವಿಶೇಷವಾಗಿ ಉಪಯೋಗಿಸುತ್ತಾರೆ ಎಂಬುವ ಸಂಗತಿ ಎಲ್ಲರಿಗೂ ತಿಳಿದದ್ದಾಗಿಯೇ ಇದೆ ಈ ಮರವನ್ನು ೫೦ ಇಂಚ್ ಮೇಲ್ಪಟ್ಟ ಮಳೆ ಬೀಳತಕ್ಕಂಥ ಸ್ಥಳಗಳಲ್ಲಿ ಬೆಳೆಸಬೇಕಾಗಿರುವುದರಿಂದ ನಮ್ಮ ದೇಶದಲ್ಲಿ ಮಲೆನಾಡು ಸೀಮೆಯ ರೈತರು ಮತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಬೆಳೆಸಿದರೆ ಬಹಳ ಫಾಯಿದೆ ಉಂಟಾಗುತ್ತೆಂತ ತೋರುತ್ತಿದೆ

ಕರ್ಪೂರದ ಗಿಡಗಳ ಬಿತ್ತವನ್ನು ಅಪೇಕ್ಷಿಸತಕ್ಕವರು ಮದರಾಸಿನಲ್ಲಿರುವ ಜಪಾನ್ ಚಕ್ರವರ್ತಿಯವರ ಕಾನ್‌ಸಲ್‌ರವರಿಗೆ ಬರೆದರೆ ಅವರು ಕಳುಹಿಸಿಕೊಟ್ಟಾರು ಅಥವಾ ನಮ್ಮ ಮೈಸೂರು ಸರ್ಕಾರದವರು ಬೇರೆ ವಿಧವಾಗಿ ನಮ್ಮ ರೈತರ ಉಪಯೋಗಕ್ಕಾಗಿ ಕೊಡಬಹುದು

ವಿ. ರಾಘವಾಚಾರ್, ಅಡ್ವೊಕೇಟ್, ಮೈಸೂರು.

ಭಾರತಪುತ್ರಮಂಡಲಿ

ಹಿಂದೂಮತದ ಪ್ರಸಿದ್ಧ ಬೋಧಕಿಯರಾದ ಮಿಸೆಸ್ ಅನಿಬೆಸಂಟರವರು "ಭಾರತಪುತ್ರಮಂಡಲಿ" ಎಂಬಭಿಧಾನದಿಂದ ಒಂದು ಸಂಘವನ್ನು ಏರ್ಪಡಿಸಿರುವರೆಂತಲೂ ಈ ಸಂಘದ ಉದ್ದೇಶಗಳನ್ನು ನಮ್ಮ ಘನತೆಯುಳ್ಳ ವೈಸರಾಯರಾದ ಲಾರ್ಡ್ ಮಿಂಟೋಯವರು ಶ್ಲಾಘಿಸಿರುವರೆಂತಲೂ ನಾವು ಹಿಂದೆ ತಿಳಿಸಿದ್ದೆವಷ್ಟೆ ಈ ಸಂಘದ ಒಂದು ಶಾಖೆಯು ಮೈಸೂರಿನಲ್ಲಿ ಏರ್ಪಾಡಾಗುವಂತಿದೆ ಸಂಘದ ಪ್ರಮುಖರು ಈ ರೀತಿಯಲ್ಲಿ ತಿಳಿಸುವರು —ನಮ್ಮ ಭಾರತೀಯರ ಪ್ರಕೃತಸ್ಥಿತಿಯು ಅಷ್ಟು ತೃಪ್ತಿಕರವಾದದ್ದಲ್ಲವೆಂದು ಎಲ್ಲರೂ ಒಪ್ಪುತ್ತಾರೆ. ದೇಶದ ರಾಜ್ಯಭಾರಕಾರ್ಯವು ಬಹು ಮಟ್ಟಿಗೆ ಇವರ ಹಸ್ತಗತವಾಗಬೇಕೆಂತಲೂ ಹಾಗೆ ರಾಜ್ಯಭಾರವು ತಮ್ಮ ಹಸ್ತಗತವಾದರೆ ಜನಕ್ಕೆಲ್ಲಾ ಸೌಖ್ಯಉಂಟಾಗುವುದೆಂತಲೂ ಅನೇಕರು ಹೇಳುತ್ತಾರೆ ಅಧಿಕಾರ ಮಾಡುವ ಸಾಮರ್ಥ್ಯವನ್ನು ಇವರು ಪಡೆಯಬೇಕೆಂಬುದೂ, ಕಾರ್ಯಕ್ರಮವನ್ನು ತಿಳಿಯದೆ ಕಾರ್ಯದಲ್ಲಿ ಪ್ರವರ್ತಿಸಿದರೆ ಅನರ್ಥ ಉಂಟಾಗಬಹುದೆಂಬುದೂ ಎಲ್ಲರೂ ಒಪ್ಪಬೇಕಾದ ಅಂಶಗಳಾಗಿವೆ. ಒಂದು ಮಣ ಭಾರವನ್ನು ಹೊರಲು ಅಪೇಕ್ಷಿಸುವವನು, ಆದಿಯಲ್ಲಿ ಅರೆಸೇರನ್ನು ಹೊತ್ತು ಅನಂತರ ಪಂಚೇರು, ಧಡಿಯು, ಅರ್ಧಮಣ, ಈ ರೀತಿ ಕ್ರಮಕ್ರಮವಾಗಿ ಹೆಚ್ಚು ತೂಕಗಳನ್ನು ಎತ್ತಲು ಅಭ್ಯಾಸ ಮಾಡಿಕೊಳ್ಳಬೇಕು ಹೀಗೆ ಅಭ್ಯಾಸ ಮಾಡಿದರೆ ಕ್ರಮಕ್ರಮವಾಗಿ ಇವನ ಶರೀರದಾರ್ಢ್ಯವು ಹೆಚ್ಚಿ ಮಣಭಾರವನ್ನು ಸುಲಭವಾಗಿ ಎತ್ತಲು ಇವನಿಗೆ ಚೈತನ್ಯ ಉಂಟಾಗುವುದು ಹಾಗಿಲ್ಲದೆ ಸಾಧಕದಿಂದ ಶರೀರದಾರ್ಢ್ಯವನ್ನು ಹೆಚ್ಚಿಸುವುದಕ್ಕೆ ಮುಂಚೆಯೇ ಇವನು ಮಣಭಾರವನ್ನು ಬೆನ್ನಿನಮೇಲೆ ಇಟ್ಟುಕೊಂಡರೆ ಇವನ ಬೆನ್ನಿನ ಮೂಳೆಯು ಮುರಿದು ಹೋಗುವುದು ಅನಂತರ ಇವನು ಎಷ್ಟು ಸಾಧಕ ಮಾಡಿದಾಗ್ಯೂ ಪುನಃ ಈ ದೇಹಕ್ಕೆ ಮಣಭಾರವನ್ನು ಎತ್ತುವ ಸಾಮರ್ಥ್ಯವು ಬಾರದೆಯೇ ಹೋಗಬಹುದು ರಾಜ್ಯಭಾರವು ಬಹಳ ಭಾರವಾದ ಹೊರೆಯು. ಇದನ್ನು ಸರಿಯಾಗಿ ನಿರ್ವಹಿಸುವುದಕ್ಕೆ ಬುದ್ಧಿಕುಶಲತೆ, ಧೈರ್ಯ, ಸಾಮರ್ಥ್ಯ, ಅನಾಲಸ್ಯ, ಮುಂದಾಲೋಚನೆ, ಸ್ವಾರ್ಥತ್ಯಾಗ, ದಯೆ, ಪಕ್ಷಪಾತ್ರವಿಲ್ಲದಿರುವಿಕೆ, ಸೌಹಾರ್ದ, ಜನಗಳೊಂದಿಗೆ ಹೊಂದಿಕೊಳ್ಳುವ ಸ್ವಭಾವ, ತಾಳ್ಮೆ, ಮೊದಲಾದ ಅನೇಕ ಸುಗುಣಗಳು ಇರಬೇಕು ರಾಜ್ಯಭಾರವು ಸರಿಯಾಗಿ ನಡೆದರೆ ಪ್ರಜೆಗಳಿಗೆ ಸರ್ವಸೌಖ್ಯವುಂಟಾಗುವುದು ಸರಿಯಾಗಿ ನಡೆಯದಿದ್ದರೆ ಪ್ರಜೆಗಳಿಗೆ ಅರ್ಥ, ಪ್ರಾಣ, ಮಾನಹಾನಿಗಳೇ ಮೊದಲಾದ ಅನರ್ಥಪರಂಪರೆಗಳೂ ಸಹ ಉಂಟಾಗುವುವು ಆದ್ದರಿಂದ ರಾಜ್ಯಭಾರವನ್ನು ವಹಿಸತಕ್ಕವರು ಚೆನ್ನಾಗಿ ಶಿಕ್ಷಿಸಲ್ಪಟ್ಟವರಾಗಬೇಕು. ಸ್ಟೀಮ್ ಎಂಜಿನ್, ಎಲೆಕ್ಟ್ರಿಸಿಟಿ, ಮುಂತಾದ ಯಂತ್ರಗಳ ಕಾರ್ಖಾನೆಯ ಮಾಲೀಕನು, ಆ ಯಂತ್ರಗಳ ಯಾಜಮಾನ್ಯವನ್ನು ವಹಿಸುವುದಕ್ಕೆ ಅವುಗಳಲ್ಲಿ ಶಿಕ್ಷಿತನಾಗಿಯೂ ಬುದ್ಧಿವಂತನೆನ್ನಿಸಿಕೊಂಡವನಾಗಿಯೂ ಇರುವವನನ್ನು ಹುಡುಕುವನೇ ಹೊರತು ಅನಭ್ಯಾಸಿಯನ್ನು ಎಂದಿಗೂ ಇಟ್ಟುಕೊಳ್ಳುವುದಿಲ್ಲ. ಒಂದು ಕಾರ್ಖಾನೆಯ ಯಂತ್ರಗಳ ಯಜಮಾನನಿಕೆಗೇ ಹೀಗಾದರೆ ಮನುಷ್ಯರೆಂಬ ಅತ್ಯಂತ ಸೂಕ್ಷ್ಮವಾದ ಲಕ್ಷೋಪಲಕ್ಷ ಯಂತ್ರಗಳುಳ್ಳ ರಾಜ್ಯಭಾರವೆಂಬ ಕಾರ್ಖಾನೆಯ ಯಾಜಮಾನ್ಯಕ್ಕೆ ಹೇಳಬೇಕಾದದ್ದೇನು?

ಮಂಡಲಿಯ ಪ್ರತಿಜ್ಞೆ.

೧ ಭರತಖಂಡದ ಯಾವ ದೇಶಕ್ಕಾಗಲೀ ಯಾವ ಮತಕ್ಕಾಗಲೀ ಸೇರಿದ ಭಾರತೀಯರನ್ನು ಸಹೋದರರಂತೆ ಕಾಣುತ್ತೇನೆಂತಲೂ, ೨ ಕೈಂಕರ್ಯವನ್ನು (ಜನೋಪಯೋಗವಾದ ಸೇವೆಯನ್ನು) ನನ್ನ ಜೀವಮಾನದ ಮುಖ್ಯೋದ್ದೇಶವನ್ನಾಗಿ ಮಾಡಿಕೊಳ್ಳುತ್ತೇನಂತಲೂ, ೩ ಆತ್ಮಲಾಭಕ್ಕೆಂತಲೂ (ಸ್ವಾರ್ಥಕ್ಕೆಂತಲೂ) ಜನಾಂಗದ ಕ್ಷೇಮಕ್ಕೆ ಹೆಚ್ಚು ದೃಷ್ಟಿ ಕೊಡುತ್ತೇನೆಂತಲೂ, ೪ ಶಕ್ತಿಲ್ಲದವರಿಗೆ ಸಹಾಯ ಮಾಡುತ್ತೇನೆ, ಪೀಡಿಸಲ್ಪಟ್ಟವರನ್ನು ರಕ್ಷಿಸುತ್ತೇನೆ ತಿಳುವಳಿಕೆ ಇಲ್ಲದವರಿಗೆ ತಿಳುವಳಿಕೆ ಉಂಟುಮಾಡುತ್ತೇನೆ, ಕೆಳಗೆ ಬಿದ್ದಿರುವವರನ್ನು ಉದ್ಧರಿಸುತ್ತೇನೆಂತಲೂ, ೫ ದೇಶಕ್ಕೆ (ಜನಾಂಗಕ್ಕೆ) ಉಪಯುಕ್ತವಾದ ಯಾವುದಾದರೂ ಒಂದು ಕಾರ್ಯಸರಣಿಯನ್ನು ಹುಡುಕಿ ಪ್ರತಿ ದಿವಸವೂ ಆ ಮಾರ್ಗದಲ್ಲಿ ಕೆಲಸ ಮಾಡುತ್ತೇನೆಂತಲೂ, ೬ ಪ್ರತಿದಿವಸವೂ ಕನಿಷ್ಠಪಕ್ಷ ಒಂದಾದರೂ ಪರೋಪಕಾರ ಕಾರ್ಯವನ್ನು ಮಾಡುತ್ತೇನೆಂತಲೂ, ೭ ನನ್ನ ಉದ್ದೇಶ ಸಾಫಲ್ಯಕ್ಕಾಗಿ ನ್ಯಾಯ ಮತ್ತು ಕಾನೂನು ಸಮ್ಮತವಾದ ಮಾರ್ಗಗಳಲ್ಲಿಯೇ ವರ್ತಿಸುತ್ತೇನೆಂತಲೂ, ೮ ನನ್ನ ಗ್ರಾಮದಲ್ಲಿಯೂ ಡಿಸ್ಟ್ರಿಕ್ಟಿನಲ್ಲಿಯೂ, ದೇಶದಲ್ಲಿಯೂ ರಾಜ್ಯದಲ್ಲಿಯೂ ಒಳ್ಳೇ ನಿವಾಸಿ (Citizen) ಯಾಗಿರುವೆನೆಂತಲೂ ವಾಗ್ದಾನ ಮಾಡುತ್ತೇನೆ ೯ ನಾನು ನಿಜವಾದ ಭಾರತ ಪುತ್ರನಾಗುವುದಕ್ಕೋಸ್ಕರ ಈ ಮೇಲೆ ಹೇಳಿರುವದನ್ನೆಲ್ಲಾ ಆಚರಿಸುತ್ತೇನೆಂದು ಪರಮೇಶ್ವರನ, ನಮ್ಮ ಪ್ರಮುಖರ, ಮಂಡಲಿಯ ಮತ್ತು ದೇಶದ ಸನ್ನಿಧಿಯಲ್ಲಿ ಪ್ರತಿಜ್ಞೆಯನ್ನು ಕೈಗೊಳ್ಳುತ್ತೇನೆ

ವ್ಯವಸಾಯ ವಾರ್ತೆ

ಬತ್ತದ ಸಾಗುವಳಿಯಲ್ಲಿ ನೂತನಕ್ರಮಗಳು.

ತಿನ್ನವಲ್ಲಿ ಡಿಸ್ಟ್ರಿಕ್ಟು ಶಿವಗಿರಿ ಹೋಂ ಫಾರಮಿನಲ್ಲಿ ಬತ್ತದ ಸಾಗುವಳಿಯಲ್ಲಿ ನುಸರಿಸಿರುವ ಅನೇಕ ನೂತನ ಕ್ರಮಗಳ ಪೈಕಿ ಮುಖ್ಯವಾದವುಗಳ್ಯಾವವೆಂದರೆ—

ಕಾಡು ನೀಲಿ ಸೊಪ್ಪಿನ ಗೊಬ್ಬರ —ಇದರ ಬೀಜವನ್ನು ಜುಲೈ ತಿಂಗಳ ಸುಮಾರಿನಲ್ಲಿ ಒಂದು ಸೇರು ಬೀಜಕ್ಕೆ ಒಂದು ಸೇರು ಬತ್ತ ಕೂಲಿ ಕೊಟ್ಟು ಬಂಜರು ಜಮೀನುಗಳಿಂದ ಆರಿಸಿ ಜಮಾಯಿಸುತ್ತಾರೆ ಬೀಜವನ್ನು ಫೆಬ್ರವರಿ, ಮಾರ್ಚಿ ವರೆಗೆ ಆಗಾಗ್ಗೆ ಬಿಸಲಿನಲ್ಲಿ ಒಣಗಿಸಿ ತಂಪಾದ ಪ್ರದೇಶದಲ್ಲಿಟ್ಟಿರುತ್ತಾರೆ ಬತ್ತದ ಪೈರು ಕಟಾವಾದ ಕೂಡಲೆ ಜಮೀನನ್ನು ಒಂದೆರಡುಸಲ ಉಳಬೇಕು. ಭೂಮಿಯು ಬಹಳ ಒಣಗಲಾಗಿ ಗಟ್ಟಿಯಾಗಿದ್ದರೆ ಮೊದಲು ಮಳೆ ಬಿದ್ದಕೂಡಲೆ ಉಳಬಹುದು ಅಂದರೆ ಎಷ್ಟು ಜಾಗ್ರತೆ ಉತ್ತು ನೀಲಿ ಬೀಜವನ್ನು ಚೆಲ್ಲಿದರೆ ಅಷ್ಟು ಚನ್ನಾಗಿ ಮೊಳೆಯುತ್ತದೆ ನಂತರ ೩ ರಿಂದ ೪ ಮರದ ರಾಸು ಸೇರು ಬೀಜವನ್ನು ಚೆಲ್ಲಿ ಒಂದೆರಡು ಸಾಲು ಉತ್ತು ಮಣ್ಣು ಮುಚ್ಚಿದರೆ ಸಾಕು ಮುಂದೆ ಇದಕ್ಕೆ ಇನ್ಯಾವ ವ್ಯವಸಾಯವೂ ಅವಶ್ಯಕವಿರುವದಿಲ್ಲ ಇದಕ್ಕೆ ನೀರನ್ನು ಹಾಯಿಸಬಾರದು ಆಗಸ್ಟ್, ಸೆಪ್ಟಂಬರು ತಿಂಗಳುಗಳಲ್ಲಿ ಪುನಃ ಪೈರು ನಡುವೆ ಉತ್ತು ಕಳೆ ಯಬ್ಬಿಸಿ ಜಮೀನಿನಲ್ಲಿ ಗಾಳಿಯಾಡುವಂತೆ ಮಾಡಬೇಕು. ಈ ಗಿಡವು ಬಹಳ ಆಳವಾಗಿ ಬೇರೂರುವದರಿಂದ ಇದಕ್ಕೆ ಬಾಧಕವೇನೂ ಆಗುವದಿಲ್ಲ ಗಿಡ ಚನ್ನಾಗಿ ಬೆಳೆಯುವದಲ್ಲದೆ ಮೊಳೆಯದೆ ಇದ್ದ ಬೀಜಗಳು ಮೊಳೆಯುತ್ತವೆ. ಅಕ್ಟೋಬರು ತಿಂಗಳಲ್ಲಿ ಜಮೀನಿಗೆ ನೀರುಕಟ್ಟಿ ಗಿಡಗಳನ್ನು ಕೆಸರಿನಲ್ಲಿ ಉತ್ತುಬಿಡಬೇಕು ಗಿಡಗಳು ಒತ್ತಾಗಿದ್ದು ಉದ್ದವಾಗಿ ಬೆಳದಿದ್ದರೆ, ನೀರು ಕಟ್ಟಿದನಂತರ ಅವುಗಳನ್ನು ಬೇರು ಸಹಿತ ಕಿತ್ತು ಜಮೀನಿನ ಮೇಲೆ ಒಂದೇ ಸಮನಾಗಿ ಹರಡಿ ನಂತರ ಉಕ್ಕೆ ಮಾಡುವದರಿಂದ ಎತ್ತು ಮತ್ತು ಆಳುಗಳ ತುಳಿತಕ್ಕೆ ಸಿಕ್ಕಿ ಕೆಸರಿನಲ್ಲಿ ಬೆರತುಹೋಗುತ್ತೆ ಹೀಗೆ ಆರು ಆಣೆ ಖರ್ಚು ಮಾಡಿ, ಬೇಸಿಗೆಯಲ್ಲಿ ರೈತರು ಅರಂಬ ಕೆಲಸ ಇಲ್ಲದೆ ಇರುವಾಗ ಸ್ವಲ್ಪ ಶ್ರಮ ತೆಗೆದುಕೊಂಡರೆ, ಮುಂದೆ ಹಿಂಡಿ ಅಥವಾ ಕಾಡು ಸೊಪ್ಪಿಗಾಗಿ ವೆಚ್ಚ ಮಾಡಬೇಕಾದ ಎಕರೆಗೆ ಸುಮಾರು ೧೦-೧೫ ರೂಪಾಯಿ ಮಿಗುವದಲ್ಲದೆ ಕಾಲವೂ ಸಹ ಕೂಡಿಬರುತ್ತದೆ ಕಾಡು ನೀಲಿ ಒಂದು ಭೂಮಿಯಲ್ಲಿ ಬಹಳ ಚೆನ್ನಾಗಿ ಬೆಳೆಯುತ್ತೆ. ಜೌಗು ಪ್ರದೇಶಗಳಲ್ಲಿ, ಜೇಡು ಭೂಮಿಯಲ್ಲಿ ಆಗುವದಿಲ್ಲ.

ಬಿತ್ತನೆ ಕ್ರಮ —ಬತ್ತದ ಸಸಿಗಳನ್ನು ಗುತ್ತಿಗುತ್ತಿಯಾಗಿ ಹಾಕದೆ ಒಂದೊಂದೇ ಹಾಕಿದರೆ ಬೀಜದ ಖರ್ಚು ಕಮ್ಮಿಯಾಗುವದಲ್ಲದೆ ಹುಟ್ಟುವಳಿಯಲ್ಲಿ ಏನೂ ಕಡಿಮೆಯಾಗುವದಿಲ್ಲ ಹೇಗಂದರೆ, ಒಂದೊಂದೇ ಸಸಿ ಹಾಕುವ

-ದರಿಂದ ಸಸಿಯಲ್ಲಿ ಕವಲುಗಳು ಹೆಚ್ಚಾಗಿ ಒಡೆಯುತ್ತವೆ. ಮೊದಲು ಕೂಲಿಯವರಿಗೆ ಈ ಕ್ರಮವನ್ನು ಕಲಿಸುವದು ಪ್ರಯಾಸ. ಅವರು ಕಲತ ಮೇಲೆ ಉತ್ಪತ್ತಿ ಒಂದೆ ಸಮನಾಗಿದ್ದರೂ ಬೀಜದ ಖರ್ಚಿನಲ್ಲಿ ಕೂಡ ಬರುವದೇನೋ ಖಂಡಿತ. ಅಗೆ ಹಾಕುವದರಲ್ಲಿ ಜಾಸ್ತಿ ಬೀಜವನ್ನು ಹಾಕಬಾರದು. ಏಕಂದರೆ ಸಸಿಗಳು ಒತ್ತಾಗಿ ಬೆಳೆದು ಬೇರುಗಳು ಒಂದಕ್ಕೊಂದು ಹೆಣಕೊಂಡುಹೋಗಿ ನಂತರ ಸಸಿಯನ್ನು ಬಿಡಿಸುವದು ಕಷ್ಟವಾಗುತ್ತೆ. ಎಕರೆಗೆ ೧೦೦ ಮದರಾಸು ಸೇರಿಗೆ ವಿಾರದಂತೆ ಅಗೆಯಲ್ಲಿ ಒಟ್ಟು ಹಾಕಬೇಕು. ಶಿವಗಿರಿ ಫಾರಂನಲ್ಲಿ ಎಕರೆಗೆ ಸುಮಾರು ೧೬ ಮದರಾಸು ಸೇರು ಬಿತ್ತವನ್ನು ಉಪಯೋಗಿಸುತ್ತಾರೆ. ಅಳುಗಳು ಸರಿಯಾಗಿ ತರಬೇತು ಆದನಂತರ ಇದನ್ನು ೮ ಸೇರಿಗೆ ಇಳಿಸಬಹುದಂತೆ.

ಬೀಜದ ಚುನಾವಣೆ.—ಬಿತ್ತವನ್ನು ಉತ್ತಮವಾದ ಸ್ಥಳೀಯ ರಖಂ ಮತ್ತು ಸಾಗುವಳಿ ಮಾಡಿರುವ ಹೊಸ ರಖಂಗಳ ಪೈಕಿ ಚುನಾಯಿಸುತ್ತಾರೆ. ಫಸಲು ಕಟಾವು ಆದಕೂಡಲೆ ಪುಲ್ಲಿನ ಕಂತೆಗಳು ಇನ್ನು ಗದ್ದೆಯಲ್ಲಿರುವಾಗಲೇ ಒಳ್ಳೆ ತೆನೆಗಳನ್ನು ಆರಿಸಿಕೊಂಡು ಬೇರೆಯಾಗಿ ಬಡಿದು ಬೀಜವನ್ನು ಬಿಸಲಿನಲ್ಲಿ ಚೆನ್ನಾಗಿ ಒಣಗಿಸಿ ಗುಡಾಣಗಳಲ್ಲಿ ಕೂಡಿಡುತ್ತಾರೆ. ತೆನೆಗಳನ್ನು ಆರಿಸುವದರಲ್ಲಿ ಪೂರ್ತಿ ವೈಶ್ಯವಾಗದರೀತಿ ರೋಗ ತಗಲದಿರುವುಗಳನ್ನೆ ಚುನಾಯಿಸುತ್ತಾರೆ. ಕಾಳೆಲ್ಲಾ ಚೆನ್ನಾಗಿ ಬಲಿತಿರುವ ತೆನೆಗಳನ್ನೇ ಹುಡುಕುತ್ತಾರೆ. ಕಾಳು ಉದುರಿಹೋಗಿರುವ ಮತ್ತು ಜೊಳ್ಳಾಗಿರುವ ತೆನೆಗಳನ್ನು ಬಿಟ್ಟುಬಿಡುತ್ತಾರೆ. ನೀರು ಚೆನ್ನಾಗಿ ಬಸಿದು ಹೋಗದಿರುವ ತಾಕುಗಳಲ್ಲಿನ ತೆನೆಗಳನ್ನು ಚುನಾಯಿಸುವದಿಲ್ಲ. ಆದರೆ ಇವು ಜೌಗು ಭೂಮಿಗೆ ಅನುಕೂಲಿಸುವದಾದರೆ ಇಟ್ಟುಕೊಳ್ಳುತ್ತಾರೆ. ನೀರು ಕಮ್ಮಿಬಿದ್ದ ತಾಕುಗಳಲ್ಲಿ ಬೆಳೆದ ತೆನೆಗಳನ್ನು ಇತರ ಕಡೆ ಬೆಳೆದಿರುವದಕ್ಕಿಂತಲೂ ಅವು ಸಣ್ಣದಾಗಿಯೂ ಮತ್ತು ಒಳ್ಳೇದಾಗಿಲ್ಲದಿದ್ದರೂ ಕೂಡ ಅವನ್ನೇ ಚುನಾಯಿಸುತ್ತಾರೆ. ಈ ವಿಚಾರದಲ್ಲಿ ಮುಖ್ಯವಾದ ಅಂಶವೇನಂದರೆ, ಪೈರಿನಲ್ಲಿ ನೀರು ಕಮ್ಮಿಯಾದರೂ ತಡೆದು ಬೆಳೆಯುವ ಗುಣವನ್ನು ಹೆಚ್ಚಿಸುವರೀತಿ ಬಿತ್ತದ ರಖಂ ಚುನಾಯಿಸಬೇಕು. ಹೀಗೆ ಮಾಡುವದರಲ್ಲಿ ಫಸಲುತ್ಪತ್ತಿಯು ಕೊಂಚ ಕಮ್ಮಿಯಾದರೂ ಚಿಂತೆಯಿಲ್ಲ.

ಮರಳು ಜಮೀನು ಇರುವ ಮಿಕ್ಕ ಗದ್ದೆಗಳಲ್ಲಿ ಮುಕ್ಕಿ ವ್ಯವಸಾಯ ಮಾಡಿದರೆ ಬಹಳ ಅನುಕೂಲ. ಹೇಗಂದರೆ —

(೧) ಇದರಿಂದ ಮುಂದೆ ಇಡುವ ಬೆಳೆಗೆ ಹೆಚ್ಚಾಗಿ ಸಸ್ಯಾಹಾರವು ಒದಗುತ್ತದೆ. (೨) ಜಮೀನಿನಲ್ಲಿ ಚೆನ್ನಾಗಿ ಗೊಬ್ಬರಾಡಿ ಬಿತ್ತದ ಪೈರು ಆಳವಾಗಿ ಬೇರೂರಲು ಅವಕಾಶವಾಗುವದರಿಂದ ನೀರು ಕಮ್ಮಿಯಾದರೂ ಪೈರು ಕೆಡಿಯುತ್ತದಲ್ಲದೆ ಸಸಿಗೆ ಆಹಾರ ಒದಗಿಸುವ ನಿಸ್ತೀರ್ಣವೂ ಹೆಚ್ಚುತ್ತದೆ. (೩) ಜಮೀನಿನಲ್ಲಿನ ಕಳೆಗಳು ನಾಶವಾಗುತ್ತವೆ.

ಗಿಡಗಳನ್ನು ಕಸಿ ಮಾಡುವದು

ಗಿಡಗಳನ್ನು ಕಸಿ ಮಾಡುವದರ ಉದ್ದೇಶವೇನಂದರೆ — ೧ ವೃಕ್ಷದ ರೂಪಿನಲ್ಲಿ ನಮಗೆ ಇಷ್ಟಬಂದ ಬದಲಾವಣೆಗಳುಂಟಾಗುವಂತೆ ಮಾಡಬಹುದು. ೨ ಗಿಡಕ್ಕೆ ವಿಷದ ರೋಗಗಳನ್ನು ಚುಮುಕಿಸುವದಕ್ಕೂ ಮತ್ತು ಹಣ್ಣು ಬಿಡಿಸಿಕೊಳ್ಳುವದಕ್ಕೂ ಬಹಳ ಸೌಲಭ್ಯ ಉಂಟಾಗುತ್ತದೆ. ೩ ಗಿಡಗಳಲ್ಲಿ ಎಲೆಗಳು ಹೆಣ್ಣುಗಳು ಚೆನ್ನಾಗಿ ಹಿಡಿಯುವ ರೀತಿ ಗಾಳಿ ಬೆಳಕು ಸಲೀಸಾಗಿ ಆಡಲು ಅನುಕೂಲಿಸುತ್ತೆ. ಅಂದರೆ ವೃಕ್ಷದ ಫಲ ಬಿಡುವಿಕೆಯನ್ನು ಒಂದು ಕ್ರಮಕ್ಕೆ ತರುವದೂ ಮತ್ತು ವೃಕ್ಷದಲ್ಲಿನ ಮರದ ಅಂಶವನ್ನು ವೃದ್ಧಿಪಡಿಸುವದೇ ಈ ಕಸಿ ಮಾಡುವದರ ಮುಖ್ಯೋದ್ದೇಶವೆಂದು ಸಂಕ್ಷೇಪವಾಗಿ ಹೇಳಬಹುದು. ಫಲವೃಕ್ಷಗಳ ಬೆಳವಳಿಕೆಯಲ್ಲಿ ಸಮ್ಮತವಾದ ಕೆಲವು ತತ್ವಗಳಿರುತ್ತವೆ. ಅವನ್ನು ಈ ಕೆಳಗೆ ಸಂಕ್ಷೇಪವಾಗಿ ಸೂಚಿಸುತ್ತೇವೆ.

(೧) ಗಿಡ ಅಥವಾ ಮೋಳಿಕೆಯ ಎಲೆಗಳು ಅಗಲವಾಗಿದ್ದ ಹಾಗೆಲ್ಲಾ ಇದರ ಬೆಳವಳಿಕೆಯಲ್ಲಿ ಹುಲುಸು ಹೆಚ್ಚುತ್ತದೆ. ಹೇಗಂದರೆ, ಗಿಡಕ್ಕೆ ಎಲೆಗಳೇ ಶ್ವಾಸಕೋಶ ಮತ್ತು ಅನ್ನಕೋಶಗಳಾಗಿರುವ ಕಾರಣ ಯಾವ ಗಿಡಕ್ಕೆ ಆಹಾರ ಹೆಚ್ಚಾಗಿ ಒದಗಿ ಜೀರ್ಣಶಕ್ತಿಯೂ ಹೆಚ್ಚಾಗಿರುತ್ತದೆಯೋ ಆ ಗಿಡವು ಕೇವಲ ಹುಲುಸಾಗಿ ಬೆಳೆಯುತ್ತದೆ. ಗಿಡದ ಬೆಳವಳಿಕೆಯ ಕಾಲದಲ್ಲಿ ಕಸಿ ಮಾಡುವ ಕ್ರಮವನ್ನನುಸರಿಸುವಾಗ ಈ ಅಂಶವನ್ನು ನೆನಪಿನಲ್ಲಿಡಬೇಕು. (೨) ಕುಡಿಯು ಡೊಂಕಾಗಿಲ್ಲದೆ ನೆಟ್ಟಗೆ ಇದ್ದ ಹಾಗೆಲ್ಲಾ ಗಿಡವು ಬೆಳವಳಿಕೆಯಲ್ಲಿ ಬಲವಾಗುತ್ತದೆ. ಹ್ಯಾಗಂದರೆ, ಗಿಡದಲ್ಲಿನ ರಸವು ಯಾವಾಗಲೂ ಕುಡಿಯ ಎತ್ತರವಾದ ಭಾಗಕ್ಕೆ ಏರುತ್ತದೆ. (೩) ಕುಡಿಯು ಬಗ್ಗಿ ನೆಲಸಮನಾಗಿ ಬೆಳೆದ ಹಾಗೆಲ್ಲಾ ಇದರ ಬಲವು ಕುಂದುತ್ತದೆ. ಮೇಲೆ ಹೇಳಿದ ಕಾರಣವೇ ಇದಕ್ಕೂ ಅನ್ವಯಿಸುತ್ತದೆ. ಗಿಡವನ್ನು ಹಣ್ಣಿಗಾಗಿ ಬೆಳೆಸಬೇಕೇ ಅಥವಾ ಅದರಲ್ಲಿನ ಮರ ಬಲವಾಗುವಂತೆ ಬೆಳೆಸಬೇಕೇ ಎಂಬುವದನ್ನು ನಿರ್ಧರಿಸಿಕೊಂಡು ಅದಕ್ಕನುಸಾರವಾಗಿ ಮೇಲೆ ಹೇಳಿದ ಎರಡು ಅಂಶಗಳನ್ನು ನೆನಪಿನಲ್ಲಿಟ್ಟುಕೊಂಡು ತಕ್ಕ ಚಿಗುರುಗಳನ್ನು ಚುನಾಯಿಸಬೇಕು. ಕುಡಿಗಳು ನೆಟ್ಟಗಿರುವ ಗಿಡಗಳು ಸಾಧಾರಣವಾಗಿ ಬಲವಾದ ಮರವಾಗಿ ಬೆಳೆಯುತ್ತವೆ. ಬಗ್ಗಿರುವವು ಹೆಚ್ಚು ಫಲ ಬಿಡುವವುಗಳಾಗುತ್ತವೆ. ಅಂದರೆ ಫಲ ಬಿಡುವದಕ್ಕೆ ಗಿಡದ ಸಾಮಾನ್ಯ ಬಲಹೀನತೆಯೇ ಕಾರಣವೆಂದು ಹೇಳಬಹುದು. (೪) ಒಂದು ರೆಂಬೆಯಲ್ಲಿ ಕುಡಿಗಳು ಕಡಿಮೆಯಾಗಿದ್ದ ಹಾಗೆಲ್ಲಾ ಇದರಲ್ಲಿ ಹೊರಟ ಚಿಗುರು ಬಲವಾಗಿರುತ್ತದೆ. ಗಿಡದ ತುದಿಗಳನ್ನು ಬಹಳ ಸವರುವದರಿಂದ ಇವರಲ್ಲಿನ ಮರದ ಅಂಶವು ಬಲವಾಗಿ ಬೆಳೆಯುತ್ತದೆ. ಸ್ವಾಭಾವಿಕವಾಗಿ ಗಿಡದ ತುದಿ ಮತ್ತು ಬೇರೂ ಒಂದಕ್ಕೊಂದು ಸಾರವನ್ನು ಒದಗಿಸುತ್ತೆ. ಇಂಥಾದ್ದರಲ್ಲಿ ಇದ್ದಕ್ಕಿದ್ದ ಹಾಗೆ ಗಿಡದ ತಲೆಯನ್ನು ಸವರಿದರೆ ಉಳಿದ ಕುಡಿಗಳು ಬುಡದಿಂದ ಹೆಚ್ಚಾಗಿ ಬರುವ ರಸವನ್ನು ಉಪಯೋಗಿಸಿಕೊಳ್ಳುತ್ತವೆ. ಈ ಕಾರಣದಿಂದಲೇ ಹೊಸದಾಗಿಟ್ಟ ಗಿಡವನ್ನು ಕಸಿ ಮಾಡುವದರಲ್ಲಿ ಇದರ ತಲೆಯನ್ನು ಸವರುವ ಮೂಲಕ ಕುಡಿಗಳನ್ನು ಕಮ್ಮಿ ಮಾಡುತ್ತಾರೆ. (೫) ಬೇರು ಹಂಚಿಕೊಳ್ಳುವದನ್ನು ಕಮ್ಮಿ ಮಾಡಿದ ಹಾಗೆಲ್ಲಾ ಗಿಡದ ಮೇಲ್ಭಾಗದ ಬೆಳವಳಿಕೆಯು ಕಮ್ಮಿಯಾಗುತ್ತದೆ. ಈ ಕಾರಣದಿಂದಲೇ ವಿಶೇಷವಾಗಿ ಬೆಳೆದು ಫಲ ಬಿಡದಿರುವ ಗಿಡಗಳ ಬೇರುಗಳನ್ನು ಕತ್ತರಿಸುತ್ತಾರೆ. ಎಳೆ ಸಸಿಗಳನ್ನು ಬೇರೆಕಡೆ ಹಾಕುವದಕ್ಕಾಗಿ ಅಗೆಯಿಂದ ತೆಗೆಯುವಾಗ ಅನೇಕವಾಗಿ ಬೇರುಗಳು ಅಲ್ಲಲ್ಲಿ ಮುರಿದುಹೋಗುತ್ತವೆ. ಇದಕ್ಕೆ ಸರಿಯಾಗಿ ಸಸಿಯ ತಲೆಯನ್ನು ಸವರದೇ ಹೋದರೆ ಮುಂದೆ ಗಿಡದ ಬೆಳವಳಿಕೆಯು ಕೆಡುತ್ತದೆ. (೬) ಗಿಡಗಳಲ್ಲಿ ಒಂದೆ ಮಟ್ಟದಲ್ಲಿ ಚಿಗುರುಗಳೊಡೆಯದೆ ಮೇಲೆ ಕೆಳಗೆ ಒಡೆದಿದ್ದರೆ ಮೇಲಿನ ಕುಡಿಗಳು ಗಿಡದಂದ ರಸವನ್ನು ವಿಶೇಷವಾಗಿ ಹೀರಿ ಕೆಳಗಿನ ಕುಡಿಗಳಿಗಿಂತಲೂ ಜಾಗ್ರತೆ ವೃದ್ಧಿಹೊಂದುತ್ತವೆ. ಇಂಥಾ ಸಂದರ್ಭಗಳಲ್ಲಿ ಈ ರೀತಿ ಬೆಳೆಯುವ ಮೇಲಿನ ಕುಡಿಗಳನು ಚಿಗುಟುವ ವಾಡಿಕೆ ಇದೆ. ಹೀಗೆ ಮಾಡುವದರಿಂದ ಕೆಳಗಣ ಕುಡಿಗಳು ಬಲವಾಗಿ ಬೆಳೆಯುತ್ತವೆ. (೭) ಗಿಡಗಳಲ್ಲಿ ಎಲೆಗಳು ಹುಲುಸಾಗಿ ಬೆಳೆದ ಹಾಗೆಲ್ಲಾ ಫಲ ಬಿಡುವದು ಕಮ್ಮಿ. ಅಂದರೆ ವೃಕ್ಷವು ಬಹಳ ಸೊಂಪಾಗಿ ಬೆಳೆಯುತ್ತಿದ್ದರೆ ಇದರಲ್ಲಿ ಹಣ್ಣು ಬಿಡುವದು ಕಮ್ಮಿ. ಇದರಿಂದ ಗಿಡದಲ್ಲಿ ಫಲ ಬಿಡುವ ಸ್ವಭಾವವು ಮೇಲೆ ಹೇಳಿದಂತೆ ಅದರ ಬಲಹೀನತೆಯಿಂದ ಉಂಟಾಗುತ್ತದೆಂಬುದು ವ್ಯಕ್ತಪಡುತ್ತದೆ. ಈ ಅಂಶವನ್ನು ಸಾಮಾನ್ಯವಾಗಿ ಕಿತ್ತಲೆ ಗಿಡಗಳಲ್ಲಿ ನೋಡಬಹುದು. ಈ ಗಿಡದಲ್ಲಿ ಹಣ್ಣು ಅತಿಯಾಗಿ ಬಿಟ್ಟರೆ ಇದು ಗಿಡ ಕೆಡಲು ಶುರುವಾಗಿರುವದಕ್ಕೆ ಚಿಹ್ನೆಯೆಂದು ಸಾಮಾನ್ಯವಾಗಿ ತಿಳಿಯುತ್ತಾರೆ. (೮) ಗಿಡದಲ್ಲಿ ಹಣ್ಣುಗಳು ಎಷ್ಟು ಕಮ್ಮಿ ಬಿಡುತ್ತವೋ ಅವು ಅಷ್ಟು ಗಾತ್ರವಾಗುತ್ತವೆ, ಮತ್ತು ಅವಕ್ಕೆ ಒಳ್ಳೇ ಬೆಲೆಯೂ ದೊರೆಯುವದುಂಟು. ಆದ್ದರಿಂದಲೆ ಹಣ್ಣು ಹಂಪಲು ಬೆಳೆಯುತಕ್ಕವರು ಗಿಡದಲ್ಲಿ ವಿಶೇಷ ಹೀಚು ಬಿಟ್ಟಿದ್ದರೆ, ಅವು ಎಳೇದಾಗಿರುವಾಗಲೇ ಉದುರಿಸಿ ಕಮ್ಮಿ ಮಾಡುತ್ತಾರೆ. ಕಸಿ ಮಾಡುವ ಉದ್ದೇಶವೂ ಹೀಗೆಯೇ ಇರುತ್ತೆ. ಫಲ ಬಿಡುವ ಭಾಗಗಳನ್ನು ಕಡಿಮೆಮಾಡುವದರಿಂದ ಉಳಿದವುಗಳಿಗೆ ಸಸ್ಯಹಾರವು ಹೆಚ್ಚಾಗಿ ಒದಗುತ್ತದೆ.

ವಿದೇಶ ವರ್ತಮಾನಗಳು

ಇಂಡಿಯಾ ದೇಶದ ಧಾರಣೆನಾಶಿಗಳು ಏರುವದನ್ನು ವಿಚಾರಿಸುವುದಾಗಿ ಸ್ಟೇಟ್ ಸೆಕ್ರೆಟರಿಗಳಾದ ಲಾರ್ಡ್ ಮಾರ್ಲೀ ಪ್ರಭುಗಳು ತಿಳಿಸಿರುತ್ತಾರೆ.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರಮುಖನಾದೊಬ್ಬರಾದ ಮಿ. ಬುಕಾನನ್ ರವರು ಸಬ್ ಕಾಯಿಲೆಯಾಗಿರುತ್ತಾರೆಂದು ವರ್ತಮಾನ ಬಂದಿರುತ್ತದೆ.

ಪ್ರಿನ್ಸ್ ಆಫ್ ವೇಲ್ಸ್ ಯುವರಾಜರ ಮಗನು ತನ್ನ ವಿದ್ಯಾಭ್ಯಾಸವನ್ನು ಪೂರೈಯಿಸಿ ಹಡಗಿನ ಕೆಲಸ ಕಲಿಯಲು ಸಾಧಾರಣವಾದ ಸಿಪಾಯಿಯಂತೆ ಸೇರಿರುವನು.

ಪರ್ಶಿಯಾ ದೇಶದಲ್ಲಿ ನಡೆಯುತ್ತಿದ್ದ ಗಲಭೆಯು ಶಮನಕ್ಕೆ ಬರುವಂತಿದೆ. ಅಲ್ಲಿದ್ದ ಇಂಗ್ಲಿಷ್ ನೌಕಾ ಸಿಪಾಯಿಗಳು ವಾಪಸು ಬಂದುಬಿಟ್ಟರು. ಶೀಘ್ರದಲ್ಲೇ ರಷ್ಯಾ ಸೈನಿಕರು ಹಿಂದಕ್ಕೆ ಕರೆಸಲ್ಪಡುವರು.

ಫ್ರಾನ್ಸ್ ದೇಶದಲ್ಲಿ ಕೆಲಸಕ್ಕೆ ಹರತಾಳ ಹೂಡಿರುವ ಕೂಲೀಜನಗಳೂ ಅಲ್ಲಿನ ನೌಕರಿ ನಿಮಿತ್ತ ದಂಗೆ ಕೂಲಿಗಳು ಕೈಗೆ ಸಿಕ್ಕಿದ ಗಾಜಿನ ಬುಟ್ಟಿಗಳು ಕುರ್ಚಿ ಮೊದಲಾದುವುಗಳನ್ನು ಪೋಲೀಸಿನವರ ಮೇಲೆ ಎಸೆದರು. ಕೊನೆಯಲ್ಲಿ ಸಿಪಾಯಿಗಳು ಬಂದು ಈ ಪುಂಡರನ್ನು ಚದುರಿಸ ಬೇಕಾಯಿತು.

ಸೊಮಾಲಿ ಲ್ಯಾಂಡಿನಲ್ಲಿ ಇಂಗ್ಲಿಷ್ ಸೈನ್ಯದವರು ಅಲ್ಲಿ ದಂಗೆ ಎದ್ದಿರುವ ಮುಲ್ಲಾವಿನ ಮೇಲೆ ಯುದ್ಧಮಾಡಿ ಅವನ ಅನೇಕ ಒಂಟೆಗಳನ್ನು ತೆಗೆದುಕೊಂಡರು. ಈ ಯುದ್ಧದಲ್ಲಿ ಇಂಗ್ಲಿಷರ ಆರು ಮಂದಿ ನೇಟಿವ್ ಸಿಪಾಯಿಗಳು ಮಡಿದರೆಂದು ಸಮಾಚಾರ ಬಂದಿರುವುದು.

ಕಳೆದ ಶುಕ್ರವಾರ ತುರ್ಕೀ ರಾಜ್ಯದ ಹೊಸ ಸುಲ್ತಾನರು ಪಾರ್ಲಿಮೆಂಟ್ ರಾಜಸಭಾಮಂದಿರಕ್ಕೆ ಹೋಗಿ ಅಲ್ಲಿ ಪಾರ್ಲಿಮೆಂಟಿನವರ ಅಭಿಪ್ರಾಯಗಳಿಗನುಸಾರವಾಗಿ ರಾಜ್ಯಭಾರವಾಡುತ್ತೇನೆಂದು ಭಾಷಣಮಾಡಿದ್ದರು ಮತ್ತು ಆಸ್ಟ್ರಿಯಾ ತುರ್ಕೀಯಲ್ಲಿ ದುಷ್ಟರ ದಂಗೆಯಿಂದಾದ ಪ್ರಜಾ ನಷ್ಟಕ್ಕೆ ತುಂಬಾ ವ್ಯಥೆಪಡುತ್ತೇವೆಂತಲೂ ಇನ್ನು ಮುಂದೆ ಅಂಥಾ ಗಲಭೆಗಳಾಗಲಾರವೆಂತಲೂ ತಿಳಿಸಿದರು.

ವಿಲಾಯಿತಿಯಲ್ಲಿ ನ್ಯಾಯ ಶಾಸ್ತ್ರವನ್ನು ಓದುತ್ತಿದ್ದ ಇಬ್ಬರು ಭಾರತೀಯರ ನಡತೆಯು ಅಲ್ಲಿನ ಅಧಿಕಾರಿಗಳಿಗೆ ಅತೃಪ್ತಿಕರವಾಗಿ ಕಂಡು ಬಂದುದರಿಂದ ಅವರಿಗೆ ಪ್ರಶಸ್ತಿಯ ಯೋಗ್ಯತಾ ಪತ್ರವನ್ನು ಕೊಡದೆ ಇರುತ್ತಾರೆ. ಈ ಇಬ್ಬರು ಯೌವನಸ್ಥರು ಬ್ರಿಟಿಷ್ ಸರಕಾರಕ್ಕೆ ವಿರೋಧವಾಗಿ ರಾಜದ್ರೋಹಕರವಾದ ಸಂಗತಿಗಳನ್ನು ಬರೆದು ಪ್ರಕಟಿಸುತ್ತಿರುವ ಕೃಷ್ಣವರ್ಮ ಎಂಬುವರ ಸಂಗಾತಿಗಳಾಗಿದ್ದರೆಂದು ಕಂಡುಬಂತು.

ಕ್ರೈಸ್ತರ ವೇದ ಗ್ರಂಥವನ್ನು (ಬೈಬಲನ್ನು) ಲೋಕದ ನಾನಾ ಭಾಷೆಗಳಲ್ಲಿ ಪ್ರಕಟಿಸಿ ಮಾರುತ್ತಿರುವ ಒಂದು ಪ್ರಸಿದ್ಧವಾದ ಸಂಘವು ವಿಲಾಯಿತಿಯಲ್ಲಿರುವುದು. ಈ ಸಂಘದ ರಿಪೋರ್ಟಿನ ಪ್ರಕಾರ ಬೈಬಲ್ ಗ್ರಂಥವು ೪೧೮ ಭಾಷೆಗಳಲ್ಲಿ ತರ್ಜುಮೆ ಯಾಗಿದೆಯೆಂತಲೂ ಹೋದ ವರುಷ ಆರವತ್ತು ಲಕ್ಷ ಪ್ರತಿಗಳು ಅಚ್ಚಾದವೆಂತಲೂ ಇಷ್ಟು ಪ್ರತಿಗಳನ್ನು ಪ್ರಕಟಿಸುವುದಕ್ಕೆ ಸುಮಾರು ೩೫ ಲಕ್ಷ ರೂಪಾಯಿಗಳು ಖರ್ಚಾದವೆಂತಲೂ ಅವುಗಳ ವಿಕ್ರಯಿಂದ ಸುಮಾರು ೨೬ ಲಕ್ಷ ರೂಪಾಯಿಗಳು ವಸೂಲಾದವೆಂದಲೂ ಕಂಡು ಬರುತ್ತದೆ.

ಆಸ್ಟ್ರಿಯಾ ಹಂಗೇರಿ ರಾಜ್ಯದ ಬೂಡಾ ಪೆಸ್ತ್ ಎಂಬ ಪಟ್ಟಣದಲ್ಲಿ ವೈದ್ಯ ವಿದ್ವಾಂಸರ ಒಂದು ದೊಡ್ಡ ಕೂಟವು ಜರುಗುವುದು. ಇದನ್ನು ಆ ದೇಶದ ಚಕ್ರವರ್ತಿಗಳೇ ನಿಂತು ನಡಿಸುವವರಾಗಿದ್ದಾರೆ. ಈ ಕೂಟದ ವಿಷಯ ಇಪ್ಪತ್ತು ಸಾವಿರ ವೈದ್ಯರಿಗೆ ಆಹ್ವಾನ ಪತ್ರಿಕೆಗಳು ಕಳುಹಿಸಲ್ಪಟ್ಟಿವೆ. ವೈದ್ಯ ಶಾಸ್ತ್ರ ಸಂಬಂಧವಾದ ಸಕಲ ಸಂಗತಿಗಳು ಚರ್ಚಿಸಲ್ಪಡುವುದಕ್ಕೆ ನಾನೂರು ಉಪನ್ಯಾಸಗಳೂ ಎಂಟುನೂರು ಪ್ರಬಂಧಗಳೂ ಓದಲ್ಪಡುವುವಂತೆ. ಇಂಥಾ ಕೂಟಕ್ಕೆ ಲೋಕದ ನಾಲ್ಕು ಕಡೆಗಳಿಂದ ವೈದ್ಯ ವಿದ್ವಾಂಸರು ಬರುವವರಾಗಿರುತ್ತಾರೆ.

ತುರ್ಕೀ ರಾಜ್ಯದ ಪದಚ್ಯುತ ಸುಲ್ತಾನರಾದ ಅಬ್ದುಲ್ ಹಾಮಿದ್‌ರವರು ತಮ್ಮ ಸ್ವಂತ ಹಣದ ಮೇಲೆ ಬ್ಯಾಂಕಿನಲ್ಲಿ ಹಾಕಿದ್ದ ನೂರೈವತ್ತು ಲಕ್ಷ ರೂಪಾಯಿಗಳನ್ನು ಸರಕಾರಕ್ಕೆ ವಾಪಸು ಕೊಟ್ಟುಬಿಟ್ಟರು. ಹೊಸದಾಗಿ ಸುಲ್ತಾನ್ ಪದವಿಗೆ ಬಂದಿರುವ ಮಹಮ್ಮದ್ ರೆಶಾದ್ ಸುಲ್ತಾನರು ತಮಗೆ ತಿಂಗಳು ಗಟ್ಟಲೆ ಸಲ್ಲುತ್ತಿದ್ದ ಅರಮನೆ ಖರ್ಚಿನ ಹಣದಲ್ಲಿ ಕೆಲವು ಭಾಗವನ್ನು ದೇಶದೇಳಿಗೆಗಾಗಿ ವಿನಿಯೋಗಿಸತಕ್ಕದ್ದೆಂದು ಸರಕಾರಕ್ಕೆ ಕೊಟ್ಟುಬಿಟ್ಟರು. ಇವರ ಉದಾರವಾದ ಗುಣವನ್ನು ಪ್ರಜೆಗಳೆಲ್ಲರೂ ಶ್ಲಾಘಿಸುತ್ತಿರುವರು.

ಅಮೆರಿಕಾ ಖಂಡದಲ್ಲಿ ಮುಖ್ಯ ಪಟ್ಟಣವಾಗಿರುವ ನ್ಯೂಯಾರ್ಕ್ ಪಟ್ಟಣದಲ್ಲಿ ಕ್ವೀನ್ಸ್‌ಬರೊ ಎಂಬ ಹೆಸರುಳ್ಳ ಒಂದು ಸೇತುವೆಯು ಇರುವುದು. ಇದನ್ನು ೧೯೦೩ನೇ ಇಸ್ವಿಯಲ್ಲಿ ಕಟ್ಟಲು ಪ್ರಾರಂಭವಾಯಿತು. ಇದಕ್ಕೆ ೬ ಕೋಟಿ ರೂಪಾಯಿಗಳು ಖರ್ಚಾಗಿರುವುದು. ಇದರ ಉದ್ದ ೭೭೩೬ ಅಡಿಗಳು. ಇದರ ಮೇಲೆ ನಾಲ್ಕು ಟ್ರ್ಯಾಂ ಬಂಡಿಗಳು ಓಡುವ ಮಾರ್ಗಗಳು ಎರಡು ರೈಲು ಬಂಡಿ ಓಡುವ ಮಾರ್ಗಗಳು, ೫೩ ಅಡಿ ಅಗಲವುಳ್ಳ ಒಂದು ರಸ್ತೆಯೂ, ೧೬ ಅಡಿ ಅಗಲವುಳ್ಳ ಎರಡೊಂದು ಕಾಲು ದಾರಿಗಳು ಇರುವವು. ಇದರ ಎತ್ತರವು ೧೩೫ ಅಡಿಗಳು.

ಉತ್ತಮತರಗತಿಯ ವಿದ್ಯಾಭ್ಯಾಸಕ್ಕೋಸ್ಕರ ವಿಲಾಯಿತಿಗೆ ಅನೇಕ ಮಂದಿ ಭಾರತೀಯರು ಹೋಗುತ್ತಿರುವರಷ್ಟೆ. ಈ ಯೌವನಸ್ಥರ ವಿದ್ಯಾಭ್ಯಾಸವನ್ನು ನೋಡಿಕೊಳ್ಳುವುದಕ್ಕೂ ಇವರು ದುರ್ಮಾರ್ಗದಲ್ಲಿ ಬೀಳದಂತೆ ವಿಚಾರಿಸಿಕೊಳ್ಳುವುದಕ್ಕೂ ಇವರನ್ನು ಗುಣಾಢ್ಯರೂ ದೊಡ್ಡಮನೆತನಕ್ಕೆ ಸೇರಿದವರೂ ಆದ ಆಂಗ್ಲೇಯರಿಗೆ ಪರಿಚಯಮಾಡುವುದಕ್ಕೂ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಮಾರ್ಲೀ ಪ್ರಭುಗಳು ಒಂದು ಸಂಘವನ್ನು ಏರ್ಪಡಿಸಿರುತ್ತಾರೆ. ಈ ಸಂಘಕ್ಕೆ ಪ್ರಮುಖರಾದ ಆಂಗ್ಲೇಯ ಮತ್ತು ಭಾರತೀಯ ದೊಡ್ಡ ಮನುಷ್ಯರು ಸೇರಿರುವರು. ಈ ಸಂಘದಿಂದ ವಿಲಾಯಿತಿಗೆ ಹೋಗಿರುವ ನಮ್ಮ ದೇಶೀಯ ಯೌವನಸ್ಥರಿಗೆ ಅಪಾರವಾದ ಪ್ರಯೋಜನವಾಗುತ್ತೆನ್ನುವುದರಲ್ಲಿ ಸಂಶಯವಿಲ್ಲ.

ರಷ್ಯಾ ಜಪಾನ್ ಯುದ್ಧದಲ್ಲಿ ಪೋರ್ಟ್ ಆರ್ಥರ್ ಎಂಬ ರಷ್ಯನರ ಕೋಟೆಯನ್ನು ಬಹು ಸಾಹಸದಿಂದ ಕಾಪಾಡಿ ಕೊನೆಗೆ ಚೈತನ್ಯವಿಲ್ಲದೆ ಜಪಾನೀಯರ ವಶಮಾಡಿದ ಜನರಲ್ ಸ್ಟೋಸೆಲ್ ಎಂಬ ದಳಪತಿಯನ್ನೂ ನೌಕಾಯುದ್ಧದಲ್ಲಿ ಪರಾಜಿತನಾದ ನಿಬೋಗಟಾಫ್ ಎಂಬ ನೌಕಾಧಿಕಾರಿಯನ್ನೂ ರಷ್ಯಾ ಗವರ್ನಮೆಂಟಿನವರು ಸೆರೆಯಿಂದ ಬಿಡುಗಡೆ ಮಾಡಿರುತ್ತಾರೆ. ಯುದ್ಧವು ಮುಗಿದ ತರುವಾಯದಲ್ಲಿ ಈ ಮೇಲ್ಕಂಡ ಇಬ್ಬರು ಅಧಿಪತಿಗಳ ಮೇಲೆ ರಷ್ಯಾ ಸರ್ಕಾರದವರು ಅಸಮಾಧಾನಗೊಂಡು ಸ್ಟೋಸೆಲ್‌ರವರನ್ನು ಮರಣ ದಂಡನೆಗೂ ನಿಬೋಗಟಾಫ್ ರವರನ್ನು ಜೀವಾವಧಿ ಕಾರಾಗೃಹವಾಸಕ್ಕೂ ಗುರಿ ಮಾಡಿದ್ದರು. ಆದರೆ ರಷ್ಯಾ ಚಕ್ರವರ್ತಿಯವರು ಇವರಿಗೆ ಕ್ಷಮಾಪಣೆಯನ್ನು ಕೊಟ್ಟು ಸೆರೆಯಿಂದ ಬಿಡಿಸಿರುವರು.

ಯೂರೋಪ್ ದೇಶದಲ್ಲಿ ಆಕಾಶ ವಿಮಾನಗಳನ್ನು ತಯಾರ್ಮಾಡುವ ಕಸಬು ಕೆಲವು ಕಾಲದಿಂದೀಚೆಗೆ ಪ್ರಾರಂಭವಾಗಿರುತ್ತದೆ. ಜರ್ಮನಿ ದೇಶದವರು ಯುದ್ಧ ಕಾಲಗಳಲ್ಲಿ ಉಪಯೋಗವಾಗತಕ್ಕಂಥಾ ವಿಮಾನಗಳನ್ನು ಕಟ್ಟಿಸುತ್ತಿರುವರೆಂದು ಪತ್ರಿಕೆಗಳು ತಿಳಿಸುತ್ತವೆ. ಇವುಗಳ ಸಹಾಯದಿಂದ ಸಿಡಿಯುವ ಗುಂಡುಗಳನ್ನೆಸೆದು ಶತ್ರುಗಳ ದೊಡ್ಡ ದೊಡ್ಡ ಊರುಗಳನ್ನು ನಾಶಮಾಡಬಹುದಂತೆ, ಅಂತರಿಕ್ಷದಿಂದ ಕೋಟೆ ಕೊತ್ತಲಗಳ ಗುಟ್ಟನ್ನೆಲ್ಲಾ ಫೋಟೋ ತೆಗೆದುಕೊಳ್ಳುವರಂತೆ, ಇವುಗಳ ಸಹಾಯದಿಂದ ಶತ್ರುಸೈನ್ಯಗಳ ಸಂಚಾರವೆಲ್ಲಾ ಗೋಚರವಾಗುವುದಂತೆ. ಆಕಾಶವಿಮಾನಗಳ ವಿಶೇಷತ್ವವನ್ನು ಬ್ರಿಟಿಷ್ ಸರ್ಕಾರದವರು ತಿಳಿದು ಇವುಗಳನ್ನು ತಯಾರ್ಮಾಡುವ ಒಂದು ಇಲಾಖೆಯನ್ನು ಏರ್ಪಡಿಸಿರುತ್ತಾರೆ. ಈ ಇಲಾಖೆಗೆ ವಸ್ತು ವಿಜ್ಞಾನ ಶಾಸ್ತ್ರದ ಕೆಲವು ಪಂಡಿತರು ಮೆಂಬರುಗಳಾಗಿದ್ದು ವಿಮಾನ ಕಟ್ಟುವಿಕೆಯ ಮತ್ತು ನಡಿಸುವಿಕೆಯ ಗುಟ್ಟುಗಳನ್ನು ಪರೀಕ್ಷಿಸುವರು. ಈ ಕೆಲಸಕ್ಕೋಸ್ಕರ ವಿಲಾಯಿತಿಯಲ್ಲಿ ಆಗಲೆ ಒಂದು ಸಲಕರಣೆಗಳ ಕಾರ್ಖಾನೆಯನ್ನು ಏರ್ಪಡಿಸಿರುವರು.

ಇಂಡಿಯಾ ದೇಶದ ವೃತ್ತಾಂತಗಳು

ಕಳೆದ ಶುಕ್ರವಾರ ಭಾಗಲ್‌ಪೂರ್, ಪುರೂಲಿಯ ಮತ್ತು ಕಲ್ಕತ್ತಾ ಪಟ್ಟಣಗಳಲ್ಲಿ ಭೂಕಂಪವಾಯಿತೆಂದು ಸಮಾಚಾರ ಬಂದಿರುತ್ತದೆ.

ರಾಜದ್ರೋಹದ ಮೊಕದ್ದಮೆಗೆ ಗುರಿಮಾಡಲ್ಪಟ್ಟು ಬಿಡುಗಡೆ ಹೊಂದಿದ ಮಿ. ಅರವಿಂದ ಘೋಷರು ಬಂಗಾಳಿ ಪತ್ರಿಕೆಯ ಸಂಪಾದಕರಲ್ಲೊಬ್ಬರಾಗುವರೆಂದು ವದಂತಿ ಇದೆ.

ಸೋಗಾಡ್ ಕಾಡಿನಲ್ಲಿ ಬೇಟೆಯಾಡುವುದಕ್ಕೆ ಹೋಗಿದ್ದ ಬರೋಡ ಮಹಾರಾಣಿಯವರು ಒಂದು ಹುಲಿಯನ್ನು ಗುಂಡಿನಿಂದ ಹೊಡೆದು ಕೊಂದರೆಂದು ಒಂದಾನೊಂದು ದೇಶೀಯ ಪತ್ರಿಕೆಯು ತಿಳಿಸುವುದು.

ಲಾರ್ಡ್ ಮಿಂಟೋಯವರು ಇಂಡಿಯ ದೇಶದ ವೈಸ್‌ರಾಯಿ ಪದವಿಯನ್ನು ಬರುವ ವರ್ಷ ಬಿಡುವರೆಂತಲೂ ಈ ಸ್ಥಾನಕ್ಕೆ ಮಿ. ವಿನ್‌ಸ್ಟನ್ ಚರ್ಚಿಲ್ ಎಂಬುವರು ಬರುವರೆಂತಲೂ ಒಂದು ವದಂತಿಯು ಹುಟ್ಟಿರುವುದು.

ಟ್ವೀಡಲ್ ಎಂಬ ಆಂಗ್ಲೇಯ ದೊಡ್ಡಮನುಷ್ಯರು ತಮ್ಮನ್ನು "ಫರಂಗಿ" ಎಂಬ ಅವಮಾನವಾದ ಹೆಸರಿನಿಂದ ಕಲ್ಯಾಣಿ ಎಂಬ ಮಾಸಪತ್ರಿಕೆಯು ಕರೆದುದಕ್ಕಾಗಿ ಸದರಿ ಪತ್ರಿಕೆಯ ಮೇಲೆ ಮಾನನಷ್ಟಕ್ಕೆ ದಾವಾ ತಂದಿರುತ್ತಾರೆ.

ಕಳೆದ ವಾರ ಬೊಂಬಾಯಿ ಪಟ್ಟಣದಲ್ಲಿ ಪೇಶ್‌ಮೆನ್ಸ್ ಎಂಬ ಬೀದಿಯಲ್ಲಿದ್ದ ಒಂದು ಮನೆಗೆ ಬೆಂಕಿಬಿದ್ದು ಮಾಲೀಕರಿಗೆ ಬಹಳ ನಷ್ಟವನ್ನುಂಟುಮಾಡಿದೆ. ಸುಟ್ಟು ಹೋದ ಮನೆಯಲ್ಲಿ ವಿಪರೀತವಾದ ರೇಷ್ಮೆ ಮೂಟೆಗಳಿದ್ದವಂತೆ.

ಜೈನ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಬೊಂಬಾಯಿ ಪಟ್ಟಣದಲ್ಲಿ ಜೈನರು ಒಂದು ಪಾಠಶಾಲೆಯನ್ನು ಕಟ್ಟುತ್ತಿರುವರು. ಈ ಕಟ್ಟಡಕ್ಕೆ ಗೋಕುಲಭಾಯಿ ಲಾಲಚಂದರೆಂಬ ಒಬ್ಬ ಜೈನ ದಮ್ಮಪ್ರಭು ತಮ್ಮ ಮರಣಶಾಸನದಲ್ಲಿ ಎಂಟು ಲಕ್ಷ ರೂಪಾಯಿಗಳನ್ನು ಬರೆದಿಟ್ಟಿರುವರು.

ಬರುವ ಜೂನ್ ತಿಂಗಳಿಂದ ಸಾಹುಕಾರಿ ಟೆಲಿಗ್ರಾಮುಗಳನ್ನು ಒಂದೂರಿಂದ ಇನ್ನೊಂದೂರಿಗೆ ಬದಲಾಯಿಸಬೇಕಾದರೆ ಇಲ್ಲವೆ ವಿಳಾಸವನ್ನು ಬದಲಾಯಿಸಬೇಕಾದರೆ ಅವುಗಳಿಗೆ ಟೆಲಿಗ್ರಾಫ್ ದರದ ಪ್ರಕಾರ ಹಣಕೊಡಬೇಕೆಂತಲೂ ಅವುಗಳನ್ನು ಇದುವರಿಗೆ ಮುಫತ್ತಾಗಿ ಕಳುಹಿಸುತಿದ್ದಂತೆ ಕಳುಹಿಸುವುದಕ್ಕಾಗುವದಿಲ್ಲವೆಂತಲೂ ಟೆಲಿಗ್ರಾಫ್ ಡಿಪಾರ್ಟಮೆಂಟಿನವರು ತಿಳಿಸುತ್ತಾರೆ.

ಸಿಂವ್ಲಾ ಪಟ್ಟಣದಲ್ಲಿ ಧಾನ್ಯ ಭರ್ತಿಯಾಗಿದ್ದ ನಾಲ್ಕು ಅಂತಸ್ತಿನ ಮನೆಗೆ ಬೆಂಕಿಬಿದ್ದು ಮಾಲೀಕರಿಗೆ ಬಹಳ ನಷ್ಟವಾಗಿರುತ್ತದೆ

ಕಾರಾಗೃಹವಾಸಿಗಳಾಗಿರುವ ಮೆ|| ತಿಲಕರ ಫೋಟೋಗಳನ್ನು ಸಂಗಮೇಶ್ವರದಲ್ಲಿ ಯಾರೂ ಮಾರಕೂಡದೆಂದು ಮ್ಯಾಜಿಸ್ಟ್ರೇಟರು ಆಜ್ಞೆ ವಿಧಿಸಿರುತ್ತಾರೆ

ಕಳೆದ ಶನಿವಾರದ ದಿವಸ ನೀಲಗಿರಿ ಬೆಟ್ಟದ ಮೇಲಿರುವ ಉದಕ ಮಂಡಲ ಪಟ್ಟಣದ ಜಾನೇಷುಮಾರಿ ಲೆಖ್ಖವು ಮಾಡಲ್ಪಟ್ಟಿತು ಆ ಪಟ್ಟಣದಲ್ಲಿ ೨೫ ಸಾವಿರ ಪ್ರಜೆಗಳಿರುತ್ತಾರೆಂದು ಕಂಡುಬಂದಿದೆ

ಕಲಿಯುಗದ ಭೀಮನೆನ್ನಿಸಿಕೊಂಡಿರುವ ಮೆ|| ರಾಮಮೂರ್ತಿ ಜೆಟ್ಟಿಗಳು ರಂಗೂನಿಗೆ ಹೋಗಿ ತಮಗಿರುವ ಅಪಾರವಾದ ಶಕ್ತಿಯನ್ನು ಜನಗಳಿಗೆ ಪ್ರದರ್ಶನ ಪಡಿಸಿದರು ಜನಗಳು ಇವರ ಸಾಮರ್ಥ್ಯಕ್ಕೆ ಮೆಚ್ಚಿ ೫ ಭಂಗಾರದ ಮೆಡಲ್‌ಗಳನ್ನು ಕೊಟ್ಟರು

ಸಿಕಿಂದ್ರಾಬಾದಿನಲ್ಲಿ ಬ್ಯಾರಿಸ್ಟರಾಗಿರುವ ಮೆ|| ಏ ಎಸ್ ನಾಯುಡುಯವರು ಸಹಾಯಶೂನ್ಯರಾದ ಬಡಜನರಿಗೆ ದಿನವೂ ಅನ್ನವನ್ನು ಹಾಕಿಸಬೇಕೆಂದು ಏರ್ಪಾಡುಮಾಡುತ್ತಿದ್ದಾರೆ ಈ ಧರ್ಮ ಸಹಾಯಕ್ಕೆ ಜನರ ಸಹಾಯವನ್ನು ಕೇಳುತ್ತಿದ್ದಾರೆ

ಅಲಿಪೂರದ ಮೇಲೆ ಫಿತೂರಿ ನಡಿಸಿದ ಜನರೆಲ್ಲರು ಸಿಕ್ಕಿ ಬಿದ್ದಿರುವರೆಂತಲೂ ಇವರಲ್ಲಿ ಯಾರೂ ಜನರೊಳಗೆ ಪ್ರಮುಖರಲ್ಲವೆಂತಲೂ ಕಂಡು ಬಂತು ಹಿಂದೂ ದೇಶದಿಂದ ಹೋಗಿದ್ದವರ ಪ್ರೇರಿತ ಪಿತೂರಿಗೆ ಒಳಗಾಗಿದ್ದವರನ್ನು ಅಲಿಪೂರರು ಬಿಟ್ಟು ಬಿಟ್ಟರೆಂದು ಕೇಳುತ್ತೇವೆ

ಡೇರಾಡೂನಿಗೆ ಹೋಗುತ್ತಿದ್ದ ರೈಲ್‌ಗಾಡಿಯು ಇದುರುಗಡೆಯಿಂದ ಬರುತ್ತಿದ್ದ ಬೇರೊಂದು ಗಾಡಿಯೊಂದಿಗೆ ಢಕ್ಕಾ ಬಡಿದು ಏಳು ಮಂದಿ ಹತರಾದರು ಒಂಭತ್ತು ಮಂದಿಗೆ ಘೋರ ಜಖಂ ಆಗಿರುತ್ತದೆ ಈ ಅಪಾಯತವನ್ನು ಪೂರ್ತಿಯಾಗಿ ವಿಚಾರಣೆ ಮಾಡಲು ರೈಲ್ವೆಬೋರ್ಡಿಗೆ ಮುಖ್ಯಸ್ಥರಾದ ಮೆ ಫಿನ್ನಿಮವರು ಅಲ್ಲಿಗೆ ಹೋಗಿರುತ್ತಾರೆ

ಇಂಡಿಯಾ ದೇಶದ ದೇಶೀಯ ಪ್ರಮುಖರಲ್ಲಿ ಪ್ರಸಿದ್ಧರಾದ ಮೆ ದಾದಾಬಾಯಿ ನವರೋಜಿಯವರ ಧರ್ಮಪತ್ನಿಯವರಾದ ಬಾಯಿಗುಲ್ ಬಾಯಿಯವರು ಕಳೆದ ಶನಿವಾರ ಕಾಲವಾದರೆಂಬ ಸಂಗತಿಯು ಅನೇಕರಲ್ಲಿ ವಿಷಾದವನ್ನುಂಟು ಮಾಡಿದೆ ಇವರು ತಮ್ಮ ಪತಿಯೊಂದಿಗೆ ಅನೇಕ ವರ್ಷ ಕಾಲ ಇಂಗ್ಲಾಂಡಿನಲ್ಲಿದ್ದು ಅಲ್ಲಿನ ಜನರೊಳಗೆ ವಿಶೇಷವಾದ ಗೌರವವನ್ನು ಸಂಪಾದಿಸಿದ್ದರು ಇವರಿಗೆ ಮರಣಕಾಲದಲ್ಲಿ ೭೯ ವರುಷ ವಯಸ್ಸಿದ್ದಿತು

ಚಿತ್ರಗೊಂದದ ರಾಜದ್ರೋಹ ಮೊಕದ್ದಮ್ಮೆಯಲ್ಲಿ ಗುರಿಮಾಡಲ್ಪಟ್ಟ ರಾವಣ ಮೋಹನದಾಸನಿಗೂ ಬರೋಡ ಕುಮಾರ ಚಕ್ರವರ್ತಿಗೂ ನ್ಯಾಯಾಧೀಶರು ಶಿಕ್ಷೆಯನ್ನು ವಿಧಿಸಿರುವರು ಮೊದಲನೇ ಅಪರಾಧಿಗೆ ಒಂದು ವರ್ಷದ ಕಠಿಣಸಜವೂ ಎರಡನೇ ಅಪರಾಧಿಗೆ ಮೂರು ತಿಂಗಳಿನ ಕಠಿಣಸಜವೂ ವಿಧಿಸಲ್ಪಟ್ಟಿವೆ ಈ ಇಬ್ಬರು ಅಪರಾಧಿಗಳು ಸೇರಿಕೊಂಡು ವಂದೇ ಮಾತರಂ ಸಂಗೀತವೆಂಬ ರಾಜದ್ರೋಹಕರವಾದ ಪುಸ್ತಕವನ್ನು ರಚಿಸಿದ್ದರು

ಬಿಳೀ ಹುಲಿಯನ್ನು ಯಾರೂ ನೋಡಿರಲಾರರೆಂದು ತೋರುತ್ತದೆ ಆದರೆ ಒರಿಸ್ಸಾ (ಓಢ್ರದೇಶ) ಪ್ರಾಂತದಲ್ಲಿರುವ ಧೆಂಕಲ್ ಸಂಸ್ಥಾನದ ಕಾಡಿನಲ್ಲಿ ೮ ಅಡಿ ೮ ಅಂಗುಲ ಉದ್ದವುಳ್ಳ ಒಂದು ಬಿಳೀ ಹುಲಿಯು ದೊರಕಿರುವುದು ಬಿಳೀ ಬಣ್ಣದ ಮೇಲೆ ಕೆಂಪು ಮಿಶ್ರವಾದ ಕಪ್ಪು ಪಟ್ಟೆಗಳು ಇರುವವು ಈ ಹುಲಿಯನ್ನು ಕೆಲವು ಶಿಕಾರಿಗಾರರು ಕೊಂದು ಧೆಂಕಲ್ ರಾಜರಿಗೆ ಬಹುಮಾನವಾಗಿ ಕೊಟ್ಟಿದ್ದಾರೆ ಅವರು ಅದರ ಚರ್ಮವನ್ನು ತಮ್ಮ ಅರಮನೆಯಲ್ಲಿಟ್ಟಿರುವರು

ಇಂಡಿಯಾ ದೇಶದಿಂದ ಗಡೀಪಾರಾಗಿರುವ ಮೆ. ಮಲ್ಲಿಕ್ ಯವರನ್ನು ಬಿಡುಗಡೆ ಮಾಡುವರೆಂದು ಉತ್ತರ ದೇಶದ ಒಂದು ಪತ್ರಿಕೆಯು ತಿಳಿಸುವುದು ಮೆ|| ಮಲ್ಲಿಕರು ಬಿಡುಗಡೆ ಹೊಂದಿದ ಮೇಲೆ ಯುರೋಪ್ ದೇಶಕ್ಕೆ ಹೋಗಿ ಅಲ್ಲಿಯೇ ನಿಂತು ಹೋಗುವರೆಂತಲೂ ಅವರು ಆಗಲೇ ಕಲ್ಕತ್ತಾ ಪಟ್ಟಣದಲ್ಲಿರುವ ತಮ್ಮ ಮನೆಯನ್ನು ಮಾರಿ ಬಿಡುವದಕ್ಕೆ ಒಪ್ಪಿರುತ್ತಾರೆಂತಲೂ ತಿಳಿದು ಬಂದಿದೆ ಆದರೆ ಇವರ ವಿಷಯ ಸರಕಾರದವರು ಯಾವ ಸಂಗತಿಯನ್ನಾದರೂ ಪ್ರಕಟಿಸಿಲ್ಲ

ಹೋದವಾರ ಇಂಡಿಯಾ ದೇಶದಲ್ಲೆಲ್ಲಾ ೪,೫೭೬ ಪ್ಲೇಗ್ ಮರಣಗಳಾಗಿರುವವು ಈ ಸಂಖ್ಯೆಯಲ್ಲಿ ೨,೭೩೬ ಮರಣಗಳು ಪಂಜಾಬ್ ದೇಶದಲ್ಲಿ ಆಗಿರುತ್ತವೆ ಸಂಯುಕ್ತ ಸಂಸ್ಥಾನದಲ್ಲಿ ೭೫೨ ಮರಣಗಳೂ ಬೊಂಬಾಯಿ ಪ್ರಾಂತ್ಯದಲ್ಲಿ ೪೪೭ ಮರಣಗಳೂ ಬಂಗಾಳಾದಲ್ಲಿ ೨೬೩ ಮರಣಗಳೂ ರಾಜಪುಟಾಣದಲ್ಲಿ ೨೪೯ ಮರಣಗಳೂ ಆಗಿರುತ್ತವೆಂತಲೂ ಬಿಲೂಚಿಸ್ತಾನ ಉತ್ತರದೇಶದ ತೀರ ಪ್ರಾಂತ್ಯ, ಅಸ್ಸಾಂ ಮತ್ತು ಹೈದರಾಬಾದು ಸೀಮೆಗಳಲ್ಲಿ ಪ್ಲೇಗ್ ಜಾಢ್ಯವಿಲ್ಲವೆಂತಲೂ ರಿಪೋರ್ಟಾಗಿದೆ

ಪೂನಾ ಪಟ್ಟಣದಲ್ಲಿ ಜೈನ ಮತಸ್ಥರು ಒಂದು ಪರಿಷತ್ತನ್ನು ನಡಿಸುತ್ತಿದ್ದಾರೆ ಈ ಪರಿಷತ್ತಿಗೆ ಸಂಬಂಧಪಟ್ಟ ಒಂದು ಸ್ತ್ರೀಯರ ಕೂಟವು ಜರಗುವುದು ಈ ಕೂಟಕ್ಕೆ ಸ್ವಮತಿಬಾಯಿ ಎಂಬವರು ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿರುವರು ಇವರನ್ನು ಇದಿರುಗೊಳ್ಳಲು ಬಹುಮಂದಿ ಜೈನ ಸ್ತ್ರೀಯರು ಬೆಲೆಯಾದ ವಸ್ತ್ರಾಭರಣಗಳನ್ನು ಧರಿಸಿ ಪೂನಾ ರೈಲ್ವೆ ಸ್ಟೇಷನಿನಲ್ಲಿ ಕಾದಿದ್ದರು ಪ್ರೆಸಿಡೆಂಟರು ಬಂದೊಡನೆ ಜಯಘೋಷಗಳಾದವು ಇವರನ್ನು ಅಲ್ಲಿ ನೆರೆದಿದ್ದ ಸ್ತ್ರೀಯರೆಲ್ಲರೂ ಮೆರವಣಿಗೆ ಮಾಡಿಕೊಂಡು ಅವರ ಬಿಡಾರಕ್ಕೆ ಕರೆತಂದರು

ತಿರುವಾಂಕೂರು ದಿವಾನರಾದ ಮೆ|| ಪಿ ರಾಜಗೋಪಾಲಾಚಾರ್ಯರ ಪುತ್ರರಾದ ಮೆ|| ವರದಾಚಾರರು ವಿದ್ಯುಚ್ಛಕ್ತಿಯ ಶಾಸ್ತ್ರದಲ್ಲಿ ಹೆಚ್ಚಿನ ಪರಿಚಯವನ್ನು ವಿಲಾಯತಿಗೆ ಪ್ರಯಾಣಬೆಳಸಿದರು ಇವರು ಮೊದಲೇ ಬೊಂಬಾಯಿಯಲ್ಲಿರುವ ವಿಕ್ಟೋರಿಯಾ ಜೂಬಿಲಿ ಕೈಗಾರಿಕೆ ಶಾಲೆಯಲ್ಲಿ ಪ್ರಶಸ್ತ್ಯವನ್ನು ಪಡೆದಿದ್ದರು ಇವರು ಲಂಡನ್ ಪಟ್ಟಣಕ್ಕೆ ಹೋಗಿ ಅಲ್ಲಿರುವ ಪ್ರಸಿದ್ಧ ಕೈಗಾರಿಕೆ ಶಾಲೆಯಲ್ಲಿ ಮೂರು ವರುಷಗಳು ಓದಿದ ನಂತರ ಜರ್ಮನಿ ಮತ್ತು ಅಮೆರಿಕಾ ದೇಶಗಳಿಗೆ ಹೋಗುವರು

ಕಳೆದ ವಾರ ಡಂಡಂ ಪಟ್ಟಣದ ಸರಕಾರದ ಮದ್ದು ಗುಂಡುಗಳ ಕಾರ್ಖಾನೆಯಲ್ಲಿ ಕಳ್ಳರು ಬಿದ್ದು ಸುಮಾರು ೯,೫೦೦ ತೋಟಾಗಳನ್ನು ಕದ್ದುಕೊಂಡು ಹೋಗಿದ್ದರು ಕಳ್ಳರನ್ನು ಪತ್ತೆಮಾಡಲು ಪೋಲೀಸಿನವರಿಗೆ ರಿಪೋರ್ಟು ಮಾಡಿದ್ದಾಯಿತು ಈಚೆಗೆ ಕಾರ್ಖಾನೆಯ ಹತ್ತಿರವಿದ್ದ ಒಂದು ಕೆರೆಯೊಳಕ್ಕೆ ಕಳುವಾಗಿದ್ದ ತೋಟಾಗಳಲ್ಲಿ ಒಂದು ಸಾವಿರ ತೋಟಾಗಳು ಸಿಕ್ಕಿದವೆಂದು ತಿಳಿದುಬರುತ್ತದೆ ಇವು ಕೆರೆಯಲ್ಲಿ ಹಾಕಲ್ಪಟ್ಟಿರುವುದನ್ನು ಇಬ್ಬರು ಪೋಲೀಸಿಗೆ ತಿಳಿಸಿದರು ಈಗ ಇವರಿಬ್ಬರನ್ನು ಪೋಲೀಸಿನವರು ಪತ್ತೆ ತರಮೂದಿಗೋಸ್ಕರ ಲಾಕಪ್ಪಿನಲ್ಲಿಟ್ಟಿರುವರು

ಕಳೆದ ಮಾರ್ಚ ೩೧ ಕ್ಕೆ ಕೊನೆಯಾದ ೧ ವರುಷದಲ್ಲಿ ಭರತಖಂಡಕ್ಕೆ ಹೊರಗಿನಿಂದ ಮುಕ್ಕಾಲು ಕೋಟಿ ರೂಪಾಯಿಗಳ ಬೆಂಕಿಕಡ್ಡಿಯ ಪೆಟ್ಟಿಗೆಗಳು ಬಂದಿರುತ್ತವೆ ಸ್ವೀಡನ್, ಜಪಾನ್, ಸ್ಟ್ರೇಟ್ಸ್‌ಸೆಟಲ್ಮೆಂಟ್ ಇವುಗಳಿಂದಲೇ ಹೆಚ್ಚಾಗಿ ಬಂದಿರತಕ್ಕದ್ದು ಇಂಡಿಯಾ ದೇಶದಲ್ಲೂ ಇದನ್ನು ಮಾಡುವ ಕಾರ್ಖಾನೆಗಳನ್ನು ಅಲ್ಲಲ್ಲಿ ಸ್ಥಾಪಿಸಿ ಕಾರ್ಯ ನಡಿಸುತ್ತಿರುವರು ಆದರೆ ಅದು ಪೂರ್ಣವಾಗಿ ಫಲವನ್ನು ಕೊಟ್ಟು ಜಯಶೀಲವಾಗದೆ ಇರುವುದಕ್ಕೆ ಅದಕ್ಕೆ ತಕ್ಕ ಮರಗಳು ಸಮೃದ್ಧಿಯಾಗಿ ಈ ದೇಶದಲ್ಲಿ ದೊರೆಯದೆ ಇರುವುದೇ ಕಾರಣವಾಗಿದೆ ಡೇರಾ ಡೂನಿನಲ್ಲಿರುವ ಅಡವಿಯ ಶಾಖೆಯ ಅಧಿಕಾರಿಗಳು ಈ ಕಡ್ಡಿಗಳಿಗೆ ತಕ್ಕದಾದ ಮರಗಳನ್ನು ಪರಿಶೋಧನೆಮಾಡುತ್ತಲಿದ್ದಾರೆ

ಲಂಡನ್ ಪಟ್ಟಣದಲ್ಲಿ ಅರ್ಥಶಾಸ್ತ್ರವನ್ನೂ ರಾಜಕೀಯ ತತ್ವಗಳನ್ನೂ ಬೋಧಿಸುವುದಕ್ಕೆ ಒಂದು ಪ್ರಸಿದ್ಧವಾದ ಕಾಲೇಜಿರುತ್ತದೆ ಇದರ ಪಂಡಿತರಾದ ಪ್ರೊಫೆಸರ್ ಲೀಸ್ ಸ್ಮಿತ್ ಎಂಬವರು ಕಳೆದ ವರುಷದ ಆದಿಭಾಗದಲ್ಲಿ ಹಿಂದೂ ದೇಶದಲ್ಲೆಲ್ಲಾ ಸಂಚಾರ ಮಾಡಿ ಜನರ ಸ್ಥಿತಿಗತಿಗಳನ್ನು ತಿಳಿದುಕೊಂಡು ಹಿಂತಿರುಗಿದರು ಇಂಡಿಯಾ ದೇಶದ ಯೌವನಸ್ಥರು ಮೇಲ್ಕಂಡ ಶಾಸ್ತ್ರಗಳನ್ನು ಕಲಿತುಕೊಳ್ಳಬೇಕೆಂದಿದ್ದರೆ ಅಂಥವರಿಗೆ ಪ್ರೊಫೆಸರ್ ಲೀಸ್‌ಸ್ಮಿತ್‌ರು ಬೇಕಾದ ಅನುಕೂಲಗಳನ್ನು ಕಲ್ಪಿಸಿ ಕೊಡುವುದಾಗಿ ತಿಳಿಸಿರುತ್ತಾರೆ ನಮ್ಮ ದೇಶದಲ್ಲಿ ವರ್ತಮಾನ ಪತ್ರಿಕೆಗಳ ಸಂಪಾದಕರಾಗಿರುವ ಅನೇಕ ಯೌವನಸ್ಥರಿಗೆ ಮೇಲ್ಕಂಡ ಶಾಸ್ತ್ರಗಳ ಹೆಚ್ಚಿನ ಪರಿಚಯವು ಆಗಬೇಕಾಗಿರುತ್ತದೆ ಇಂಥವರು ವಿಲಾಯತಿಗೆ ಹೋಗಿ ಅರ್ಥಶಾಸ್ತ್ರದಲ್ಲೂ ರಾಜಕೀಯ ತತ್ವದಲ್ಲೂ ಅಲ್ಲಿನ ಘನ ವಿದ್ವಾಂಸರಿಂದ ಕೆಲವು ಕಾಲ ಶಿಕ್ಷಿತರಾದರೆ ದೇಶಕ್ಕೆ ಪರಮ ಉಪಯೋಗವು ರಾಜಕೀಯ ವಿಷಯದಲ್ಲಿ ಅಲ್ಲಲ್ಲಿ ಹರಡಿಕೊಳ್ಳುತ್ತಿರುವ ತಪ್ಪಾದ ಅಭಿಪ್ರಾಯಗಳು ನಿರ್ನಾಮವಾಗುವವು ಇಲ್ಲಿಂದ ಹೊಗತಕ್ಕವರಾದ ವಿದ್ಯಾರ್ಥಿಗಳನ್ನು ಉತ್ತಮ ತರಗತಿಯ ಇಂಗ್ಲೀಷರ ಮನೆಗಳಲ್ಲಿ ವಾಸಮಾಡುವಂತೆ ಅನುಕೂಲಪಡಿಸುವರು ವಿದ್ಯಾಭ್ಯಾಸವೂ ಊಟ ಭತ್ತಿಗಳು ಮಾತ್ರ ಬಿಟ್ಟು ಮಿಕ್ಕುದನ್ನು ಪೂರೈಸುವುದಕ್ಕೆ ೩೦೦ ರೂಪಾಯಿಗಳು ಖರ್ಚಾಗಬಹುದು

ಇಂಡಿಯಾ ದೇಶದಿಂದ ಲಂಡನ್ ಪಟ್ಟಣಕ್ಕೆ ಕಾಗದಗಳನ್ನು ಬರೆಯಬೇಕಾದರೆ ವಾರಕ್ಕೊಂದಾವರ್ತಿ ಬರೆಯಬೇಕಾಗಿರುವುದು ಏಕೆಂದರೆ ಬೊಂಬಾಯಿ ಪಟ್ಟಣದಿಂದ ಪ್ರತಿವಾರವೂ ಒಂದು ಹಡಗು ಟಪಾಲನ್ನು ಲಂಡನ್‌ಗೆ ತೆಗೆದುಕೊಂಡು ಹೋಗುತ್ತಿರುವುದು ಮೈಸೂರಿಂದ ಲಂಡನ್‌ಗೆ ಕಾಗದ ಬರೆಯಬೇಕಾದರೆ ಬೊಂಬಾಯಿ ಮೇಲ್ ಹಡಗು ಹೊರಡುವುದಕ್ಕೆ ಎರಡು ದಿವಸಗಳು ಮುಂಚಿತವಾಗಿ ಕಾಗದವನ್ನು ಎರಡು ಟಪಾಲಿನಲ್ಲಿ ಕೊಡಬೇಕು ಏಕೆಂದರೆ ಕಾಗದವು ರೈಲಿನಲ್ಲಿ ಎರಡು ದಿವಸಗಳು ಪ್ರಯಾಣಮಾಡಿ ಬೊಂಬಾಯನ್ನು ತಲುಪಬೇಕಾಗಿರುವುದು ಆದರೆ ಹಡಗು ಬೊಂಬಾಯನ್ನು ಯಾವ ದಿವಸ ಬಿಡುತ್ತದೋ ಅದೇ ದಿವಸ ಮೈಸೂರಿನ ಬೊಂಬಾಯಿಗೆ ನಾವು ಲಂಡನ್‌ಗೆ ಬರೆಯಬೇಕಾದ ಸಂಗತಿಯನ್ನು ಟೆಲಿಗ್ರಾಂ ಮೂಲಕ ತಿಳಿಸಿದರೆ ಆ ಟೆಲಿಗ್ರಾಮು ಆ ದಿವಸ ಹೊರಡುವ ಹಡಗಿನಲ್ಲಿ ಲಂಡನ್ ಪಟ್ಟಣಕ್ಕೆ ಒಯ್ಯಲ್ಪಡುವುದು ಇದರಿಂದ ರಾಜಧಾನಿಯಲ್ಲಿರುವವರಿಗೆ ಎರಡು ದಿವಸ ಕೂಡಿಬಂದಂತಾಯಿತು ಇನ್ನುಮೇಲೆ ಇದನ್ನು ಆಚರಣೆಯಲ್ಲಿ ತರಬಹುದೆಂದು ಇಂಡಿಯಾ ಸರ್ಕಾರದವರು ಆರ್ಡರು ಮಾಡಿದ್ದಾರೆ ಲಂಡನ್ ಪಟ್ಟಣಕ್ಕೆ ಕಾಗದವನ್ನು ಬರೆದು ಟಪಾಲಿನಲ್ಲಿ ಹಾಕಿದ ಮೇಲೆ ಇನ್ನೇನಾದರೂ ಜರೂರು ವಿಷಯವನ್ನು ಬರೆದು ತಿಳಿಸಬೇಕಾದರೆ ಈಗಿನ ಪದ್ಧತಿಯ ಪ್ರಕಾರ ಒಂದು ವಾರ ಕಾಯಬೇಕಾಗಿರುವುದು ಇದಕ್ಕೆ ಬದಲಾಗಿ ಬೊಂಬಾಯಿಗೆ ಕೂಡಲೆ ಟೆಲಿಗ್ರಾಮನ್ನು ಕೊಟ್ಟರೆ ಅದು ಹಡಗು ಹೊರಡುವುದರೊಳಗಾಗಿ ಬೊಂಬಾಯನ್ನು ತಲುಪಿ ನೆನಪಿನ ಟಪಾಲು ಕಾಗದವು ಹೊರಟಾಗಲೇ ಈ ಟೆಲಿಗ್ರಾಮೂ ಸಹಾ ಕಳುಹಿಸಲ್ಪಡುವುದು ಇದರಿಂದ ಒಂದು ವಾರವು ಕೂಡಿಬರುವುದು

ಹಿಂದೂದೇಶದಲ್ಲಿ ಇಂಗ್ಲೀಷರ ಆಳಿಕೆ

ಅಮೆರಿಕಾ ದೇಶದ ಮಾಜಿ ಪ್ರೆಸಿಡೆಂಟರೂ ಕೀರ್ತಿ ಶಾಲಿಗಳೂ ಆದ ಮೆ|| ರೂಸ್ವೆಲ್ಟರು ಹಿಂದೂ ದೇಶದ ಆಡಳಿತದ ವಿಷಯ ಒಂದು ಅರ್ಥಗರ್ಭಿತವಾದ ಪ್ರಸಂಗವನ್ನು ಮಾಡಿದರೆಂದು ಗೊತ್ತಾಗುತ್ತದೆ ಅವರು ಹೇಳಿದ್ದೇನೆಂದರೆ — ಅನ್ಯದೇಶೀಯರಾದ ಆಂಗ್ಲೇಯರು ನಾನಾ ಜನಾಂಗದವರಿಂದ ಕೂಡಿದ ಇಂಡಿಯಾ ದೇಶವನ್ನು ಬಹು ಅದ್ಭುತವಾದ ರೀತಿಯಲ್ಲಿ ಆಳುತ್ತಾ ಬರುವರು ರೋಮನ್ ರಾಜ್ಯವು ಹಾಳಾದಂದಿನಿಂದ ಇದುವರಿವಿಗೂ ಇಂಥಾ ಕಷ್ಟತರವಾದ ಕೆಲಸವನ್ನು ಯಾವ ಜನಾಂಗದವರೂ ಮಾಡಿಲ್ಲವೆಂದು ತೋರುತ್ತದೆ ಸರಕಾರದಲ್ಲಿ ತಪ್ಪುಗಳೇ ಇಲ್ಲವೆಂದು ನಾನು ಹೇಳುವುದಿಲ್ಲ ಇಂಥಾ ದೊಡ್ಡ ಕಾರ್ಯಕ್ಕೆ ಕೈಹಾಕಿರುವಾಗ ತಪ್ಪುಗಳು ಬರುವುದು ಆಶ್ಚರ್ಯವಲ್ಲ ಆದರೆ ಇಂಡಿಯಾ ಚಕ್ರಾಧಿಪತ್ಯವನ್ನು ಬ್ರಿಟೀಷರು ಬಹು ಚೆನ್ನಾಗಿ ಆಳುತ್ತಾ ಬಂದಿರುವರು ದೇಶದಲ್ಲಿ ಆಗಾಗ್ಗೆ ಕ್ಷಾಮದೂರದಲ್ಲೋ ಇಲ್ಲವೆ ಅಂಟುಜಾಡ್ಯಗಳ ರೂಪದಲ್ಲೋ ತೊಂದರೆಗಳು ಸಂಭವಿಸಿರುತ್ತವೆ ಇದಕ್ಕೆ ನ್ಯಾಯವಾಗಿಯೂ ಸರಕಾರದವರು ಜವಾಬ್ದಾರರಲ್ಲ ಇಂಗ್ಲೀಷರಿಗೆ ಮುಂಚೆ ಇದ್ದ ದೇಶೀಯ ಅಧಿಪತಿಗಳು ತಮ್ಮ ಪರ ರಾಜ್ಯಭಾರದಲ್ಲಿ ಬಡವರಿಗೂ ಐಶ್ವರ್ಯವಂತರಿಗೂ ಏಕರೀತಿಯಲ್ಲಿ ನ್ಯಾಯವು ದೊರೆಯುವುದು ಇಂಡಿಯಾ ದೇಶವು ಇಂಗ್ಲಾಂಡ್ ದೇಶಕ್ಕೆ ಒಂದು ಕಾಸಿನ ಪೊಗದಿಯನ್ನಾದರೂ ಕೊಡುವುದಿಲ್ಲ ಇಂಡಿಯಾ ದೇಶದಲ್ಲಿ ವಸೂಲಾಗುವ ಪ್ರತಿಯೊಂದುಕಾಸೂ ಅಲ್ಲಿನ ಪ್ರಜೆಗಳ ಪ್ರಯೋಜನಕ್ಕೋಸ್ಕರವೇ ವಿನಿಯೋಗಿಸಲ್ಪಡುತ್ತದೆ ಇಂಡಿಯಾ ದೇಶದಲ್ಲಿ ಪೂರ್ವದಲ್ಲಿ ಅನುಕೂಲವಿಲ್ಲ ಲೂಟಿಯಿಂದ ಜೀವನಮಾಡುತ್ತಿದ್ದ ಅಧಿಪತಿಗಳು ಈಗ ನಿರ್ನಾಮವಾಗಿರುತ್ತಾರೆ ಅನೇಕ ಸಮಯಗಳಲ್ಲಿ ಹಿಂದೂ ಅಥವಾ ಮೊಗಲಾಯಿ ಚಕ್ರವರ್ತಿಗಳು ಪ್ರಜೆಗಳ ಹಣದಿಂದ ಸುಖಭೋಗಿಗಳಾಗಿ ಜೀವಿಸುತ್ತಿರುವಲ್ಲಿ ಪ್ರಜೆಗಳು ಮಹಾ ಬಡತನದಲ್ಲಿ ಜೀವಿಸುತ್ತಿದ್ದರು ಈಗಲಾದರೋ ಸಾಧಾರಣವಾಗಿ ಇಂಡಿಯಾ ಪ್ರಜೆಗಳೆಲ್ಲರೂ ಪೂರ್ವಕ್ಕಿಂತ ತೃಪ್ತರಾಗಿಯೇ ಇರುವರು ಈಗ್ಗೆ ಇಂಗ್ಲೀಷರು ಇಂಡಿಯಾ ದೇಶವನ್ನು ಬಿಟ್ಟು ಹೋಗುವುದಾದರೆ ಪುನಃ ದೇಶದೊಳಗೆಲ್ಲಾ ಭಯಂಕರವಾದ ಅನಾಹುತಗಳು ಸಂಭವಿಸುವವು ಸಭ್ಯರೂ ಸಾಧುಗಳೂ ಆದ ಜನರನ್ನು ವಿಪರೀತವಾಗಿ ಹಿಂಸೆಪಡಿಸಲು ಪುಂಡರು ದಂಗೆ ಏಳುವರು ದೇಶದಲ್ಲೆಲ್ಲಾ ರಕ್ತಪ್ರವಾಹವು ಉಂಟಾಗುವುದು ಇಂಡಿಯಾ ದೇಶದಲ್ಲಿ ರಾಜಕೀಯ ಬದಲಾವಣೆಗಳು ಆಗುತ್ತಿರುವುದು ಒಳ್ಳೇದೆ ಅವರು ವಿದ್ಯಾವಂತರಾದ ಹಾಗೆಲ್ಲಾ ಇದು ಆಗಲೇಬೇಕಾಗಿರುತ್ತದೆ ಇಂಡಿಯಾ ದೇಶವನ್ನು ಇಂಗ್ಲೀಷರು ಜನೋಪಯೋಗಕ್ಕಾಗಿಯೇ ಆಳುತ್ತಿರುವರು ಎಂಬುದೇ

ಸಿಂಹ್ಯಾಲಿಗಳ ಮೂಢಭಕ್ತಿ

ಪ್ರತಿಯೊಂದು ಜನಾಂಗದಲ್ಲಿಯೂ ಜನರು ಕೆಲವು ಮೂಢಭಕ್ತಿಗಳನ್ನಿಟ್ಟುಕೊಂಡಿರುವರು ಸಿಲೋನ್ ದ್ವೀಪದಲ್ಲಿರುವ ಸಿಂಹ್ಯಾಲಿ ಜನಗಳಲ್ಲಿ ಈ ವಿಧವಾದ ಮೂಢ ಭಕ್ತಿಯು ವಿಶೇಷವಾಗಿರುವುದು ಅವರು ಅನುಸರಿಸುವ ಮೂಢ ಭಕ್ತಿಗಳಲ್ಲಿ ಕೆಲವನ್ನು ಇಲ್ಲಿ ತಿಳಿಸುವೆವು —

ಪ್ರಯಾಣ ಹೊರಡುವಾಗ್ಗೆ ದಾರಿಯಲ್ಲಿ ಒಬ್ಬ ಬೌದ್ಧ ಪೂಜಾರಿ ಬರುವುದಾದರೂ ಇಲ್ಲವೇ ಒಬ್ಬನು ಖಾಲಿ ಗಡಿಗೆಯನ್ನು ಹೊತ್ತುಕೊಂಡು ಬರುವುದಾಗಲಿ ಇಲ್ಲವೇ ಒಂದು ನಾಯಿಯು ತನ್ನ ಕಿವಿಯನ್ನು ಅಲ್ಲಾಡಿಸಿ ಬೊಗಳಿದ್ದಾಗಲೂ ಅಪಶಕುನವಂತೆ ಪ್ರಯಾಣಿಕರು ಮೇಲ್ಕಂಡ ಯಾವುದಾದರೊಂದನ್ನು ನೋಡಿದರೆ ತತ್ಕ್ಷಣವೇ ಹಿಂತಿರುಗುವರು ಪುನಃ ಪ್ರಯಾಣ ಬೆಳಸಬೇಕಾದರೆ ಕೆಲವು ಘಂಟೆಗಳೋ ಇಲ್ಲವೇ ದಿನಗಳೋ ಹಿಡಿಯುವುವಂತೆ ಒಣಗಿದ ರೆಂಬೆಯ ಮೇಲೆ ಕಾಗೆಯು ಕೂತು ಕೂಗಿದರೆ ಕೆಟ್ಟ ಸಮಾಚಾರವು ಬರುವುದಂತೆ ಮನೆಯಲ್ಲಿರುವ ಯಾವುದಾದರೊಂದು ಕಂಬವು ಉರುಳಿ ಬಿದ್ದರೆ ಮನೆಯಲ್ಲಿರುವವರಲ್ಲಿ ಯಾರಾದರೂ ಸಾಯುವರಂತೆ ಮನೆಯಲ್ಲಿ ತೂಗಾಡುವ ದೀಪವು ಆರಿ ಹೋದರೆ ಯಾವುದೋ ಭಯಂಕರವಾದ ಅನಾಹುತವಾಗುವುದಂತೆ ದಾರಿಯಲ್ಲಿ ಯಾರಾದರೂ ಖಾಲಿಯಾದ ಕೊಡವನ್ನು ಹೊತ್ತುಕೊಂಡು ಹೋಗುತ್ತಿದ್ದರೆ ಅದನ್ನು ನೋಡಿದವರಿಗೆ ಒಳ್ಳೇ ಶಕುನವಂತೆ ಮದುವೆಯ ಮೊದಲಿಗೆ ಮತ್ತು ಬಾವಿಯನ್ನು ಇದಿರುಗೊಂಡಿಗೆ ಮಗು ಸತ್ತಿರುವ ಹೆಂಗಸು ಸೇರುವುದಂತೆ ಸಿಂಹ್ಯಾಲಿಗಳು ವ್ಯವಸಾಯ ಮಾಡುವವರು ತಮ್ಮ ಹೊಲಗಳನ್ನು ಉಳುವಾಗ ಕೇವಲ ಧೈರ್ಯದಿಂದಾಗಿ ತಮ್ಮ ಮೂಢ ಭಕ್ತಿಗಳನ್ನು ಆಚರಿಸುವರು ನೇಗಿಲಿಗೆ ಕಟ್ಟಿದ್ದ ಎತ್ತುಗಳು ತಿರುಗಿ ನಿಂತರೆ ಅಶುಭವಂತೆ ಇದಕ್ಕೆ ಬದಲಾಗಿ ಅವು ಅತ್ತಕಡೆ ಇತ್ತಕಡೆ ಎಳೆದರೆ ಹೊಲದ ವಾಲೀಕರು ಸತ್ತುಹೋಗುವರಂತೆ ಇಲ್ಲವೇ ಹೊಲದ ಉತ್ಪತ್ತಿಯನ್ನು ಅವರು ಅನುಭವಿಸಲಾರರಂತೆ ಅದರಿಂದ ಎತ್ತುಗಳನ್ನು ನೇಗಲಿಗೆ ಹೂಡುವಾಗ ಅವು ನೇರವಾಗಿ ನಡೆದುಕೊಳ್ಳುವ ಹಾಗೆ ತರಬೇತು ಮಾಡಿರುವರು ಹೊಲವನ್ನು ಉತ್ತ ಮೇಲೆ ಧಾನ್ಯವನ್ನು ಚೆಲ್ಲುವುದಕ್ಕೆ ಮುಂಚೆ ಕೆಲವು ಶಾಸ್ತ್ರಗಳು ನಡೆಯಬೇಕಾಗಿರುತ್ತವೆ ಒಳ್ಳೇ ಸಮೃದ್ಧಿಯಾದ ಪೈರು ಬೆಳೆಯುವುದಕ್ಕೆ ಹೊಲದ ಮಧ್ಯದಲ್ಲಿ ಬೆಳಗಿದ ಪುಷ್ಪವು ನೆಡಲ್ಪಡುವುದು ಭತ್ತದ ಗದ್ದೆಗಳ ಅಕ್ಕಪಕ್ಕಗಳಲ್ಲಿ ಹುಲ್ಲು ಹೇರಳವಾಗಿ ಬೆಳೆಯುವುದಿಲ್ಲ ಇದನ್ನು ಕತ್ತರಿಸಬೇಕಾದರೆ ಒಳ್ಳೇ ದಿವಸವು ಬರಬೇಕಾಗುವುದು ಹಾಗೆ ಶುಭದಿನದಲ್ಲಿ ಕತ್ತರಿಸದೆ ಬೇರೆ ಯಾವ ದಿವಸದಲ್ಲಾದರೂ ಕತ್ತರಿಸಿದರೆ ಇಲಿಗಳು ನಕ್ಷತ್ರದ ಪೈರುಗಳನ್ನೆಲ್ಲಾ ನಾಶ ಮಾಡಿಬಿಡುವುವಂತೆ ಪೈರು ಕೊಯ್ಯಲಿಗೆ ಬಂದಾಗ್ಗೆ ಅದನ್ನು ಹೆಂಗಸರು ಮಾತ್ರ ಕಣಕ್ಕೆ ಹೊತ್ತುಕೊಂಡು ಬರಬೇಕಂತೆ ಗಂಡಸರಿಂದಲೂ ಅದನ್ನು ಮುಟ್ಟಕೂಡದಂತೆ ಪ್ರಥಮದಲ್ಲಿ ತರತಕ್ಕ ಕಂತೆಗಳನ್ನು ಮೊದಲು ಕಣದ ಸುತ್ತಲೂ ಏಳಾವರ್ತಿ ಹೆಂಗಸರ ತಲೆಗಳ ಮೇಲೆ ಸುತ್ತಿಸಿ ಆ ಮೇಲೆ ಅದನ್ನು ಕಣದಲ್ಲಿ ಇಳಿಸಬೇಕಂತೆ ಕಣದ ಮಧ್ಯದಲ್ಲಿ ಒಂದು ತುಂಡು ಕಬ್ಬಿಣ ಒಂದು ದೊಡ್ಡ ಕಲ್ಲು ಒಂದು ತುಂಡು ಹುಣಸೇ ರೆಂಬೆ ಕೆಲವು ಭತ್ತದ ಪೈರು ಒಂದು ರಾಶಿ ಮತ್ತು ಸಾಧಾರಣ ಸ್ವಲ್ಪ ಚಿಕ್ಕ ಇವುಗಳನ್ನು ಇಡುವರು ಹೀಗೆ ಮಾಡಿದರೆ ಪಿಶಾಚಿಗಳು ಬಂದು ಕಣದಲ್ಲಿ ಕೂಡಿಹಾಕಿರುವ ಧಾನ್ಯಗಳನ್ನು ಕದ್ದುಕೊಂಡು ಹೋಗುವುದಿಲ್ಲವಂತೆ ಭತ್ತವನ್ನು ಕುಟ್ಟಿ ಅಕ್ಕಿ ಮಾಡಿದ ಮೇಲೆ ಮೊದಲು ಸ್ವಲ್ಪ ಅನ್ನವನ್ನು ಹಾಲಿನಲ್ಲಿ ಬೇಯಿಸಿ ಅದನ್ನು ಪೂಜಾರಿಗೆ ತಿನ್ನಿಸುವರು ಸಿಂಹ್ಯಾಲಿಗಳು ಬೌದ್ಧ ಮತಸ್ಥರು ಆದರೂ ಇವರಲ್ಲಿ ಸಿಡಿಮದ್ದಿನ ಅಭ್ಯಾಸವನ್ನಿಟ್ಟುಕೊಂಡಿರುತ್ತಾರೆ ಬುದ್ಧನ ಬೋಧನೆಯ ಪ್ರಕಾರ ಯಾರೂ ಪ್ರಾಣಹಾನಿ ಮಾಡಬಾರದೆಂದು ಆಜ್ಞೆ ಇದೆಯಷ್ಟೆ ಸಿಂಹ್ಯಾಲಿ ಜನಗಳು ತುಪಾಕಿಗಳಿಗೆ ಮಾಟ ಮಾಡಬಹುದೆಂದು ನಂಬುತ್ತಾರೆ ಸ್ವಲ್ಪ ಸುಣ್ಣವನ್ನು ಬಾಗಿಲಿನ ಮೇಲುಗಡೆ ಹಚ್ಚಿದರೆ ತುಪಾಕಿಯು ಪಕ್ಷಿಗಳನ್ನು ಕೊಲ್ಲಲಾರದಂತೆ ಬಾಗಿಲ ಕೆಳಗಡೆ ಸುಣ್ಣವನ್ನು ಹಚ್ಚಿದರೆ ತುಪಾಕಿಯು ಮೃಗಗಳನ್ನು ಕೊಲ್ಲುವುದಿಲ್ಲವಂತೆ ವಿದ್ಯಾಬುದ್ಧಿಯು ಹೆಚ್ಚಿದಹಾಗೆಲ್ಲಾ ಲೋಕದಲ್ಲಿ ಹಾನಿಕರವಾಗಿ ಪರಿಣಮಿಸಿರುವ ಮೂಢಭಕ್ತಿಗಳು ನಿರ್ನಾಮವಾಗುವವು

ತಾಲ್ಲೋಕು ವರ್ತಮಾನಗಳು

ದೊಡ್ಡಬಳ್ಳಾಪುರ —ಇಲ್ಲಿ ಈ ಮೇ ತಿಂಗಳ ಪ್ರಾರಂಭದಲ್ಲಿ ೬ ೭ ದಿವಸ ಮಳೆಯಾಯಿತು ಕೆಲವು ಕೆರೆಗಳಿಗೆ ೨-೩ ತಿಂಗಳ ನೀರುಬಂತು ರೈತರುಗಳಿಗೆ ಬಹಳ ಉಪಕಾರವಾಯಿತು ದೊಡ್ಡವಾರದ ಹೋಬಳಿ ಕಡೆ ೭ ಎಂಟು ಕೆರೆಗಳು ಒಡೆದುಹೋದದ್ದರಿಂದ ಮಧುರೆ ಕೆರೆಗೆ ನೀರು ಬಂತು ಎಂದು ಹೇಳುತ್ತಾರೆ ಕಿಂಡರ್‌ಗಾರ್ಟೆನ್ ಮೊದಲಾದ ಕುಶಲವಿದ್ಯೆಗಳನ್ನು ಈ ಪ್ರಾಂತ್ಯದ ಉಪಾಧ್ಯಾಯರು ಕಲಿತು ತಮ್ಮ ಸ್ಕೂಲಿನ ಮಕ್ಕಳಿಗೆ ಸಹ ಕಲಿಸುವದಕ್ಕೆ ಅನುಕೂಲವಾಗುವಹಾಗೆ ಮೆ|| ಕೊಂಗಾಡಿಯಪ್ಪನವರು ಒಂದು ಒಳ್ಳೇ ಏರ್ಪಾಡ

ಗ್ರಾಮಾಂತರಗಳಿಂದ ಸುಮಾರು ೬೪ ಮಂದಿ ಉಪಾಧ್ಯಾಯರನ್ನು ಬರಮಾಡಿಕೊಂಡು ೧೫ ದಿವಸಗಳ ವರೆಗೆ ಎಡೆಬಿಡದೆ ಮುತುವರ್ಜಿಯಿಂದ ಈ ವಿದ್ಯೆಗಳನ್ನು ತಮ್ಮ ತಮ್ಮಂದಿರ ಮೂಲಕ ಕಲಿಸಿದರು. ಈಗ ಉಪಾಧ್ಯಾಯರೆಲ್ಲಾ ತಮ್ಮ ಸ್ಥಳಗಳಿಗೆ ಹೊರಟುಹೋದರು. ಈ ಬಳ್ಳಾಪುರಕ್ಕೆ ನೀರಿನ ನಲ್ಲಿಯನ್ನು ಇಡಿಸಿಕೊಡುವಂತೆ ಇಲ್ಲಿನ ಪ್ರಜೆಗಳು ಎಷ್ಟೋ ಅರ್ಜಿಗಳನ್ನು ಬರೆದುಕೊಂಡರೂ ಸಾರ್ಥಕವಾಗಲಿಲ್ಲವೆಂದು ವ್ಯಸನಪಟ್ಟುಕೊಂಡು ಈಗ ತಿರಿಗಿ ಇದಕ್ಕಾಗಿ ಅರ್ಜಿಯನ್ನು ಬರೆದುಕೊಳ್ಳುತ್ತಾ ಇದ್ದಾರೆ. ಒಂದು ವರ್ಷದ ಹಿಂದೆ ನಲ್ಲಿ ಇಡಿಸುವ ಏರ್ಪಾಡಿಗೆ ಅಳತೆಯನ್ನು ಮಾಡಿಸಿದರು. ತಿರಿಗಿ ಇದರ ಪ್ರಸ್ತಾಪವೇ ಇಲ್ಲ. ಯಾವ ಕಾಲಕ್ಕೆ ಬರಬಹುದೋ? ಎಂದು ವ್ಯಸನವುಳ್ಳವರಾಗಿದ್ದಾರೆ.

ತರೀಕೆರೆ.——ಇದೇ ತಿಂಗಳು ೫, ೬, ೭ನೇ ತಾರೀಖುಗಳಲ್ಲಿ ಸುರಿದ ಮಳೆಯ ವೇಗದಿಂದ ಕೆರೆ ಕಟ್ಟೆಗಳಿಗೆ ತಕ್ಕಮಟ್ಟಿಗೂ ನೀರು ಬಂದು, ದನ ಕರುಗಳಿಗೂ, ಜನರಿಗೂ ಕುಡಿಯುವದಕ್ಕೆ ನೀರು ಅನುಕೂಲವಾಯಿತು. ಮಳೆಯಿಲ್ಲದೆ ತಮ್ಮ ಮುಖಗಳನ್ನು ಬಾಡಿಸಿಕೊಂಡು, ಯಾವಾಗಲೂ ಮುಗಿಲನ್ನೇ ಎದುರುನೋಡುತ್ತಿದ್ದ ರೈತರು ಹಸನ್ಮುಖಿಗಳಾಗಿ ಬಹು ತವಕದಿಂದ ತಮ್ಮ ಹೊಲ ಗದ್ದೆಗಳನ್ನು ಉತ್ತು, ಗೊಬ್ಬರ ಚೆಲ್ಲಿ, ಬೀಜ ಬಿತ್ತುವದಕ್ಕೆ ಸಿದ್ಧರಾಗಿರುತ್ತಾರೆ. ಎಲ್ಲಿ ನೋಡಿದರೂ ಹಸರನ್ನೇ ನೋಡಬಹುದು. ಮಳೆ ಇಲ್ಲದೆ ತಮ್ಮ ಹೊಟ್ಟೆ ಹೊರಕೊಳ್ಳುವದಕ್ಕೆ ಬೇರೆ ಬೇರೆ ಕಡೆಯ ಇಲ್ಲಿರುವ ಚಿನ್ನದ ಗಣಿಗಳಲ್ಲಿಯೂ, ಮ್ಯಾಗನೀಸ್ ಗಣಿಗಳಲ್ಲಿಯೂ ಕೆಲಸ ಮಾಡುತ್ತಿದ್ದ ಅನೇಕ ರೈತಾಪಿ ಜನರು ತಮ್ಮ ಊರುಗಳಲ್ಲಿ ಮಳೆ ಬಿತ್ತೆಂಬ ಸಂಗತಿಯನ್ನು ಕೇಳಿದ ಒಡನೆಯೇ ಕೆಲಸಗಳನ್ನು ಬಿಟ್ಟು ತಮ್ಮ ತಮ್ಮ ಊರುಗಳಿಗೆ ಹೊರಟುಹೋದರು. ಎಲ್ಲಾ ಕಡೆಗಳಲ್ಲಿ ಕಾಮನ ದಹನ ಮಾಡಿ ಎರಡು ತಿಂಗಳಾದಾಗ್ಯೂ ವ್ಯಾಜ್ಯದ ದೆಸೆಯಿಂದ ಈ ಊರಿನಲ್ಲಿ ಇನ್ನು ಕಾಮದಹನ ಮಾಡದೆ ಹಾಗೆಯೇ ಇಟ್ಟುಕೊಂಡಿರುತ್ತಾರೆ. ಈ ವರ್ಷದಲ್ಲೇ ಮಾಡುತ್ತಾರೆಯೋ ಅಥವ ಮುಂದಿನ ವರ್ಷಕ್ಕೇನೇ ದಹನ ಮಾಡುತ್ತಾರೆಯೋ ತಿಳಿಯಲಿಲ್ಲ. ಮಳೆಯ ವೇಗದಿಂದ ಟೌನಿನಲ್ಲಿದ್ದ ದುರ್ವಾಸನೆಯೂ, ಕೊಳಕೂ, ತಕ್ಕಮಟ್ಟಿಗೂ ಕಮ್ಮಿಯಾಯಿತು. ಮುನಿಸಿಪಾಲಿಟಿಯು ತಕ್ಕಮಟ್ಟಿಗೂ ತೃಪ್ತಿಕರವಾಗಿದ್ದಾಗ್ಯೂ ಟೌನ್ ಮಧ್ಯೆ ಅಲ್ಲಲ್ಲೇ ಹೇರಳವಾಗಿ ಬೆಳೆದಿರುವ ಗಿಡಗಳನ್ನು ಕತ್ತರಾಯಿಸಿಬಿಟ್ಟರೆ ಬಹು ಉತ್ತಮವಾಗಿರುವದು. ನಮ್ಮ ಅಮಲ್ದಾರರವರು ಆಗಾಗ್ಯೆ ಮುನಿಸಿಪಾಲಿಟಿ ಸಾಕೀಜಾ ವಿಷಯ ನಿಗಾಕೊಡುತ್ತಾ ಬಂದರೆ ಬಹು ಉತ್ತಮವಾಗಿರುವದು. ಕಳೆದ ವಾರ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರು ಈ ಊರಿಗೆ ವಿಸಿಟ್ ಕೊಟ್ಟು ಎಲ್ಲಾ ಇನ್‌ಸ್ಪೆಕ್ಷನ್ ಮಾಡಿಕೊಂಡು ಮೋಟರ್ ಗಾಡಿಯಲ್ಲಿ ಕುಳಿತುಕೊಂಡು ಶಿವಮೊಗ್ಗೆ ಕಡೆ ಪ್ರಯಾಣ ಬೆಳಸಿದರು.

ಚನ್ನರಾಯಪಟ್ಟಣ.——ಈಚೆಗೆ ಇಲ್ಲಿ ೩ ೪ ಹದ ಮಳೆಯಾಗಿ ಜನಗಳೆಲ್ಲರೂ ತುಂಬಾ ಹರುಷದಿಂದಿರುತ್ತಾರೆ. ರೈತರೆಲ್ಲರೂ ಹಸನ್ಮುಖಿಗಳಾಗಿ ಜಮೀನುಗಳನ್ನು ಹಸನು ವಗೈರೆಯನ್ನು ಮಾಡಿ ಬಿತ್ತನೆ ಕೆಲಸದಲ್ಲಿರುತ್ತಾರೆ. ಕೆರೆ ಕಟ್ಟೆಗಳಿಗೆ ಕೊಂಚ ನೀರು ಬಂದು ಜನಗಳು ಪಡುತ್ತಿದ್ದ ನೀರಿನ ಕಷ್ಟವೆಲ್ಲಾ ಪರಿಹಾರವಾಗಿರುತ್ತೆ. ದಿನಸಿ ಧಾರಣೆಗಳು ಇನ್ನೂ ತಗ್ಗಿನ ಮಾರಾಟವಲ್ಲವಾಗಿರುತ್ತೆ. ಇಲ್ಲಿಗೆ ಈ ಮಾಸ ೧೬ನೇ ತಾ ಸೋಮವಾರ ಹಾಸನದ ವೆಸ್ಲಿಯನ್ ಮಿಷನ್ ಪಾದ್ರಿಗಳಾದ ರೆ ಸ್ಪೆನ್ಸರ್ ಸಾಹೇಬರೂ, ಅವರ ಪತ್ನಿಯವರು ಅವರ ಮಗು ಇನ್ನೂ ಅವರ ಇಷ್ಟ ಮಿತ್ರರೊಂದೊಡಗೂಡಿ ಬಂದು ಇಲ್ಲಿನ ವೆಸ್ಲಿಯನ್ ಮಿಷನ್ ಗರ್ಲ್ಸ್ ಸ್ಕೂಲನ್ನು ಪರೀಕ್ಷೆ ಮಾಡಿ ತುಂಬಾ ಸಂತೋಷಪಟ್ಟುಕೊಂಡು ಇಲ್ಲಿಗೆ ೭ ಮೈಲಿ ದೂರದಲ್ಲಿರುವ ಶ್ರವಣಬೆಳಗೊಳಕ್ಕೆ ಹೋಗಿ ಅಲ್ಲಿ ಪ್ರಸಿದ್ಧವಾದ ಗೋಮಟೇಶ್ವರ ಶಿಲಾ ಪ್ರತಿಮೆಯನ್ನೂ ನೋಡಿಕೊಂಡು ವಾಪಸು ಹಾಸನಕ್ಕೆ ಪ್ರಯಾಣಮಾಡಿಸಿದರು. ಅದೇ ದಿವಸ ಮುಜರಾಯಿ ಸೂಪರಿಂಟೆಂಡೆಂಟ್ ಮಿ ಸುಬ್ರಹ್ಮಣ್ಯ ಅಯ್ಯರ್ ರವರು ದಯಮಾಡಿ ಇಲ್ಲಿನ ಛತ್ರ, ದೇವಸ್ಥಾನಗಳನ್ನು ಪರೀಕ್ಷೆ ಮಾಡಿಕೊಂಡು ಹಾಸನದ ಮಾರ್ಗವಾಗಿ ಪ್ರಯಾಣಮಾಡಿದರು. ಈ ಗ್ರಾಮದಲ್ಲಿ ಬಹು ದಿವಸದಿಂದ ನಡೆಯದೆ ನಿಂತುಹೋಗಿದ್ದ ಶ್ರೀ ಕೇಶವದೇವಸ್ವಾಮಿಯವರ ರಥೋತ್ಸವವನ್ನು ನಮ್ಮ ಅಮಲ್ದಾರ್ ಮಿ. ಶ್ರೀನಿವಾಸರಾಯರು ನೋಡಿ ಒಮ್ಮತವಿಲ್ಲದ ಬ್ರಾಹ್ಮಣರು ಇರತಕ್ಕ ಗ್ರಾಮದಲ್ಲಿ ದೇವರ ಸೇವೆ ನಿಂತು ಹೋಗುವಾದು ಎಂದು ಗ್ರಾಮಸ್ಥರಲ್ಲಿ ಕೆಲವು ಜನಗಳನ್ನು ಕರೆಸಿಕೊಂಡು ಆಲೋಚಿಸಿ ಕಾರ್ಯಾಂತರದಿಂದ ಬ್ರಾಹ್ಮಣರಲ್ಲಿ ೨ ಪಾರ್ಟಿ ಆಗಿ ದೇವಸ್ಥಾನಗಳಲ್ಲಿ ಸರಿಯಾಗಿ ಕೆಲಸ ಕಾರ್ಯಗಳು ನಡೆಯದೆ ತೊಂದರೆಯಾಗಿದ್ದದನ್ನು ಕಂಡು ಉಭಯ ಪಾರ್ಟಿಯವರನ್ನೂ ಕರೆಸಿಕೊಂಡು ವ್ಯಾಜ್ಯಕ್ಕೆ ಕಾರಣವನ್ನೆಲ್ಲಾ ವಿಚಾರಿಸಿ, ಆ ದಿವಸ ಸಾಯಂಕಾಲ ೪ ಘಂಟೆವರಿಗೂ ಉಪವಾಸದಿಂದ ಕೂತಿದ್ದು ಬಿಟ್ಟು ಎರಡು ಪಾರ್ಟಿಯವರು ಏಕಮತ್ಯವಾಗಿ ಹೋಗಿ ಒಬ್ಬರೊಬ್ಬರಿಗೆ ದ್ವೇಷ ಪಡತಕ್ಕದ್ದು ಯೋಗ್ಯವಾದದ್ದಲ್ಲಾ ವ್ಯಾಜ್ಯ ಮಾಡಿಕೊಂಡು ಕೋರ್ಟು ವಗೈರೆಗಳಿಗೆ ಹೋದರೆ ಉಭಯ ಪಾರ್ಟಿಯವರು ಅನೇಕ ಕಷ್ಟ ನಷ್ಟಗಳಿಗೆ ಗುರಿಯಾಗಬೇಕಾಗುತ್ತೆ. ಇದನ್ನೆಲ್ಲಾ ಬಿಟ್ಟು ಅನ್ಯೋನ್ಯವಾಗಿ ಸರ್ವರೂ ಕೂಡಿ ಈಗ ಪ್ರಾಪ್ತವಾಗಿರುವ ಶ್ರೀ ಕೇಶವದೇವರ ರಥೋತ್ಸವವನ್ನೂ ನಂತರ, ಶ್ರೀ ರಾಮೇಶ್ವರ ಸ್ವಾಮಿಯವರ ರಥೋತ್ಸವದ ಸೇವೆಯನ್ನೂ ನಡಿಸುವುದಕ್ಕೆ ಪ್ರಯತ್ನ ಮಾಡಿ ಸತ್ಕಾಲಕ್ಷೇಪದಲ್ಲಿ ಕಾಲವನ್ನು ಕಳೆಯೋಣ ವೆಂಬ ಬುದ್ಧಿವಾದಗಳನ್ನೂ ವೈದೀಕರಿಗೂ, ಮತ್ತು ಲೌಕೀಕರಿಗೂ ಸಹಾ ಹೇಳಿ ಪಾರ್ಟಿಗಳನ್ನು ಒಂದುಮಾಡಿ ಒಬ್ಬರ ಮನೆಗೆ ಮತ್ತೊಬ್ಬರು ಹೋಗಕೂಡದು ಎಂದು ಪಾರ್ಟಿಗಳಲ್ಲಿ ಕಟ್ಟು ಮಾಡಿಕೊಂಡಿದ್ದನ್ನು ತಪ್ಪಿಸಿ, ಮದುವೆ, ಮುಂಜಿ ವಗೈರೆಗಳಿಗೂ, ಊಟ, ಉಪಚಾರಗಳಿಗೂ, ಸಂತೋಷದಿಂದ ಹೋಗಿ ಬರುವಂತೆ ಮಾಡಿರುವುದಲ್ಲದೆ ರಥೋತ್ಸವದ ಕೆಲಸವನ್ನು ಬಹಳ ಮುತುವರ್ಜಿ ವಹಿಸಿ ಬಹಳ ವಿಜೃಂಭಣೆಯಿಂದ ನೆರವೇರಿಸಿದ್ದಕ್ಕಾಗಿ ಸರ್ವರೂ ಅವರಿಗೆ ಕೃತಜ್ಞರಾಗಿ ಅವರನ್ನ ಕೊಂಡಾಡುತ್ತಾ ಇರುತ್ತಾರೆ.

ವಿವಿಧ ವರ್ತಮಾನಗಳು

ಬ್ರಿಟಿಷ್ ಪೋಸ್ಟಾಫೀಸಿನಲ್ಲಿ ೧೮೭೦ ನೇ ವರುಷದಲ್ಲಿ ಹೆಂಗಸರನ್ನು ಮೊದಲು ನೌಕರಿಗೆ ಸೇರಿಸಿಕೊಂಡರು. ಈಗ ಬ್ರಿಟಿಷ್ ಪೋಸ್ಟ್ ಸರ್ವೀಸಿನಲ್ಲಿ ಒಂದು ಲಕ್ಷದ ಐದು ಸಾವಿರ ಹೆಂಗಸರು ಇರುವರಂತೆ.

ಕಾಗದವನ್ನು ಬೆಂಕಿಯಲ್ಲಿ ಸುಡದೆ ಇರುವ ಹಾಗೆ ಮಾಡಬೇಕಾದರೆ ಮೊದಲು ಅದನ್ನು ಮಂದವಾಗಿರುವ ಸ್ಫಟಿಕದ ನೀರಿನಲ್ಲಿ ಅದ್ದಿ ಒಣಗಿಸಿದರೆ ಅದು ಬೆಂಕಿಯಿಂದ ಸುಟ್ಟು ಹೋಗಲಾರದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಲಂಡನ್ ಪಟ್ಟಣದ ಕಾರ್ಖಾನೆಗಳಲ್ಲಿ ಪ್ರತಿ ವರುಷವೂ ೫೦ ಸಾವಿರ ಟನ್‌ಗಳ ತೂಕದಷ್ಟು ಹೊಗೆಯ ಧೂಳು ಬೀಳುವುದು. ಇದನ್ನು ಗೊಬ್ಬರವಾಗಿ ಉಪಯೋಗಿಸುವುದರಿಂದ ಈ ಧೂಳಿಗೆ ಆರು ಲಕ್ಷ ರೂಪಾಯಿ ಬೆಲೆಯಾಗುವುದು.

ರಷ್ಯಾ ದೇಶದ ಒಡೆಸ್ಸಾ ಪಟ್ಟಣದಲ್ಲಿ ಒಬ್ಬ ಪರಮ ಲೋಭಿಯು ಕೇವಲ ಬಡವನೆನ್ನಿಸಿಕೊಂಡು ಬದುಕುತ್ತಿದ್ದನು. ಇವನು ಸತ್ತ ತರುವಾಯ ಸರಕಾರದವರು ವಿಚಾರಿಸಲು ಇವನ ವಶದಲ್ಲಿ ನಾನೂರು ಲಕ್ಷ ರೂಪಾಯಿಗಳಿದ್ದವೆಂದು ಕಂಡುಬಂತು.

ಇಂಗ್ಲಾಂಡ್ ದೇಶದಲ್ಲಿ ಕ್ರಿಸ್ಟಲ್ ಪ್ಯಾಲೆಸ್ ಎಂಬದೊಂದು ಕನ್ನಡಿಯ ಅರಮನೆ ಇರುವುದು. ಈ ಕಟ್ಟಡವೇ ಲೋಕದಲೆಲ್ಲಾ ವಿಸ್ತಾರವಾದ ಕಟ್ಟಡವೆನ್ನಿಸಿಕೊಳ್ಳುವುದು. ಇದರೊಳಗೆ ಒಂದೇ ಕಾಲದಲ್ಲಿ ಒಂದು ಲಕ್ಷ ಜನರು ತಿರುಗಾಡಬಹುದು.

ಜಪಾನ್ ದೇಶದಲ್ಲಿ ವಧುವಿಗೆ ವಿವಾಹ ಕಾಲದಲ್ಲಿ ಬರತಕ್ಕ ಉಡುಗೆರೆಗಳನ್ನೆಲ್ಲಾ ಆಕೆಯು ತನ್ನ ತಂದೆ ತಾಯಿಗಳಿಗೆ ಕೊಟ್ಟುಬಿಡುವಳಂತೆ. ಈ ಕಾರ್ಯವನ್ನು ತನ್ನನ್ನು ಬಾಲ್ಯದಿಂದ ಸಾಕಿದ ತಂದೆ ತಾಯಿಗಳ ಮಹೋಪಕಾರಕ್ಕಾಗಿ ಅರ್ಪಿಸುವ ಒಂದು ಅಲ್ಪವಾದ ಕಾಣಿಕೆಯೆಂದು ಭಾವಿಸುವಳು.

ಚೀನಿಯರು ತಮ್ಮ ಅಂಗಿಗಳಿಗೆ ಐದು ಗುಂಡಿಗಳನ್ನು ಮಾತ್ರ ಹಾಕುವರು. ಈ ಐದು ಗುಂಡಿಗಳು ತಮ್ಮ ಪ್ರಸಿದ್ಧ ಗುರುವಾದ ಕೆಂಫ್ಯೂಸಿಯಸ್‌ನು ತಿಳಿಸಿದ ಐದು ಮತ ಕಟ್ಟಳೆಗಳನ್ನು ಯಾವಾಗಲೂ ಜ್ಞಾಪಕಕ್ಕೆ ತರುವುವಂತೆ. ಅವು ಯಾವವೆಂದರೆ ದಯೆ, ನ್ಯಾಯ, ಜ್ಞಾನ, ಕ್ರಮ ಮತ್ತು ಪಾಪ ಭೀತಿ.

ಮೀನನ್ನು ಆಹಾರವಾಗಿ ಉಪಯೋಗಿಸುವುದು ಸಾಧಾರಣವಾಗಿದೆಯಷ್ಟೆ. ಮೀನಿನ ಚರ್ಮವನ್ನು ಉಡುಪಾಗಿ ಧರಿಸಿಕೊಳ್ಳುವುದನ್ನು ಕೇಳಿದರೆ ಎಲ್ಲರಿಗೂ ಆಶ್ಚರ್ಯವಾಗುವುದು. ಚೀನಾ ದೇಶದ ಮಾಂಚೂರಿಯಾ ಪ್ರಾಂತ್ಯದಲ್ಲಿ ಒಂದು ಬಗೆಯ ಜನಗಳು ಮೀನಿನ ಚರ್ಮವನ್ನು ಉಡುಪಾಗಿ ಧರಿಸಿಕೊಳ್ಳುವರು.

ಇಂಗ್ಲಾಂಡ್ ದೇಶದ ಪ್ರಸಿದ್ಧರಾದ ಚಿತ್ರಗಾರರ ಪಟಗಳಿಗೆ ವಿಪರೀತವಾದ ಬೆಲೆಯನ್ನು ಕಟ್ಟುತ್ತಿದ್ದರಂತೆ. ಕೆಲವು ವಾರಗಳ ಹಿಂದೆ ವಿಲಾಯಿತಿಯಲ್ಲಿ ಕೆಲವು ಪಟಗಳು ಹರಾಜಾದವು. ಎರಡು ಅಡಿ ಉದ್ದವೂ ನೂರು ಅಡಿ ಅಗಲವೂ ಇದ್ದ ಒಂದು ಪಟವನ್ನು ಸುಮಾರು ಇಪ್ಪತ್ತೆರಡು ಸಾವಿರ ರೂಪಾಯಿಗೆ ಸೂಲ್ಸ್ ಎಂಬುವನು ಬೀಟ್ ಮಾಡಿ ಕೊಂಡುಕೊಂಡನು.

ಕಳೆದ ತಿಂಗಳು ಹದಿನೈದನೇ ತಾರೀಖಿನಲ್ಲಿ ಇಂಗ್ಲಾಂಡ್ ದೇಶಕ್ಕೆ ಮಂತ್ರಿಶ್ರೇಷ್ಠರಾಗಿದ್ದ ಲಾರ್ಡ್ ರೋಸ್‌ಬರಿಯವರ ಕುಮಾರನಿಗೆ ವಿವಾಹವಾಯಿತು. ವಿವಾಹ ಕಾಲದಲ್ಲಿ ವಧೂವರರಿಗೆ ಸಿಕ್ಕಿದ ಬಹುಮಾನಗಳು ಮೂವತ್ತೈದು ಲಕ್ಷ ರೂಪಾಯಿ ಬೆಲೆತಕ್ಕವುಗಳಾಗಿದ್ದುವು. ಇಷ್ಟಲ್ಲದೆ ಲಾರ್ಡ್ ರೋಸ್‌ಬರಿಯವರು ತಮ್ಮ ಸೊಸೆಗೆ ರತ್ನಖಚಿತವಾದ ಅನೇಕ ನಗಗಳನ್ನು ಕೊಟ್ಟರಂತೆ.

ಚೀನಿಯರು ನವೀನ ನಾಗರೀಕತೆಯಲ್ಲಿ ಬಹು ಮಟ್ಟಿಗೆ ಅಭಿವೃದ್ಧಿ ಹೊಂದುತ್ತಿರುವರು. ಚೀನಾ ದೇಶದಲ್ಲಿ ಭೂಗತಮಾರ್ಗಗಳು ಅಲ್ಲಲ್ಲಿ ಹರಡಿಕೊಳ್ಳುತ್ತಿರುವವು. ವಿದ್ಯುಚ್ಛಕ್ತಿಯಿಂದ ನಡೆಯುವ ಟ್ರಾಂ, ಬೈಸಿಕಲ್ ಗಾಡಿಗಳು, ಮೋಟರ್‌ಗಾಡಿಗಳು, ಟೆಲಿಫೋನ್ ಟೆಲಿಗ್ರಾಫ್ ಮುಂತಾದ ಸೌಕರ್ಯಗಳು ಅವರಲ್ಲಿ ಹೆಚ್ಚುತ್ತಿರುವವು. ವಿದ್ಯುಚ್ಛಕ್ತಿಯ ಕಾರ್ಖಾನೆಗಳಲ್ಲಿ ಚೀನಿಯ ಕೆಲಸಗಾರರು ಪ್ರಸಿದ್ಧರಾಗಿರುತ್ತಾರೆ.

ತುರ್ಕಿ ರಾಜ್ಯದ ಚೀಟ್ ಸುಲ್ತಾನರಾದ ಅಬ್ದುಲ್ ಹಾಮಿದ್‌ರವರು ಬಹು ಶ್ರಮಸ್ಥರಾಗಿದ್ದರು. ಇವರು ಸ್ವಾತಂತ್ರ ಕಾಲದಲ್ಲಿ ಎಲ್ಲರಿಗೆ ಮುಂಚೆ ಏಳುವರು. ಅವರು ಮಿತಾಹಾರಿಗಳಾಗಿದ್ದರು. ಚೆನ್ನಾಗಿ ಓದುವುದೂ ಜ್ಯೋತಿಷ ಶಾಸ್ತ್ರದ ವಿಷಯವನ್ನು ಪಂಡಿತರೊಂದಿಗೆ ಸಂಭಾಷಣೆ ಮಾಡುವುದೂ ಅವರಿಗೆ ಪ್ರಿಯಕರವಾಗಿದ್ದುವು. ಅವರು ಚಿತ್ರ ಬರೆಯುವುದರಲ್ಲಿಯೂ ಮರಗೆಲಸ ಮಾಡುವುದರಲ್ಲಿಯೂ ಪ್ರವೀಣರಾಗಿದ್ದರು.

ಪೀಟರ್ ಜೆನಿಲಾನ್ ಕಾಲಿಯರ್ ಎಂಬುವನು ತನ್ನ ಬಾಲ್ಯದಲ್ಲಿ ಕೇವಲ ಬಡವನಾಗಿದ್ದನು. ಇವನು ಪ್ರಾರಂಭದಲ್ಲಿ ಗಂಟೆಗಳನ್ನು ತೊಳೆದು ಶುಚಿ ಮಾಡುವ ಕೆಲಸಕ್ಕೆ ಸೇರಿದ್ದನು. ತನ್ನ ಹದಿನೇಳನೇ ವಯಸ್ಸಿನಲ್ಲಿ ಸ್ವಲ್ಪ ಹಣವನ್ನು ಕೂಡಿಸಿಕೊಂಡು ವಿದ್ಯಾಭ್ಯಾಸ ಮಾಡಿದನು. ಆ ಮೇಲೆ ಪುಸ್ತಕ ಮಾರುವ ಅಂಗಡಿಯಲ್ಲಿ ಒಂದು ಸಣ್ಣ ನೌಕರಿಗೆ ಸೇರಿ ಕೆಲವುಕಾಲವಾದನಂತರ ಪುಸ್ತಕಗಳನ್ನು ತಾನೇ ಬಿಕರಿಸುವುದಕ್ಕೆ ತೊಡಗಿದನು. ಈ ಉದ್ಯೋಗದಿಂದ ಇವನಿಗೆ ವರುಷಕ್ಕೆ ಎರಡು ಲಕ್ಷದ ಎಪ್ಪತ್ತು ಸಾವಿರ ರೂಪಾಯಿಗಳು ಉತ್ಪತ್ತಿಯಾಗುತ್ತಿದ್ದುವಂತೆ.

ರಷ್ಯಾದೇಶದ ಒಬ್ಬ ವರ್ತಕನ ಬಳಿಯಲ್ಲಿ ಒಂದು ಆಶ್ಚರ್ಯವಾದ ಕೈಗಡಿಯಾರವು ಇರುವುದು. ಇದರ ಕ್ರಯ ಸುಮಾರು ಎಂಭತ್ತು ಸಾವಿರ ರೂಪಾಯಿಗಳು. ಇದರ ಅಗಲ ಕಾಲು ಅಂಗುಲಕ್ಕಿಂತ ಕಡಿಮೆ. ಇದನ್ನು ಭಂಗಾರದ ಉಂಗುರದಲ್ಲಿಟ್ಟಿರುವರು. ಇಂಥಾ ಆಶ್ಚರ್ಯಕರವಾದ ಗಡಿಯಾರವನ್ನು ಬ್ರೆಜಿಲ್ ದೇಶದ ರಾಣಿಯು ಕೆಲವು ಶತಮಾನಗಳ ಹಿಂದೆ ತನ್ನ ಉಪಯೋಗಕ್ಕಾಗಿ ಮಾಡಿಸಿದ್ದರು. ಇದನ್ನು ಜಿನೀವ ಪಟ್ಟಣದಲ್ಲಿ ಪ್ರಖ್ಯಾತಿ ಪಡೆದ ಒಬ್ಬ ಕಾರೀಗಾರನು ಮೂರು ವರುಷಗಳ ಕಾಲದಲ್ಲಿ ಎಡಬಿಡದೆ ಕೂತು ಮಾಡಿದ ನಂತರ ಈ ಕೆಲಸದಲ್ಲಿ ಅವನ ಕಣ್ಣುದೃಷ್ಟಿಯೂ ಕೆಟ್ಟುಹೋಯಿತು.

ಜಪಾನ್ ದೇಶೀಯರು ಕಾಯಶಕ್ತಿಯನ್ನು ಅಭಿವೃದ್ಧಿ ಮಾಡುವುದರಲ್ಲಿ ಬಹಳ ಆಸಕ್ತರು. ಕುಸ್ತಿ ಮಾಡುವುದು ಅವರಲ್ಲಿ ವಾಡಿಕೆಯಾಗಿರುತ್ತದೆ. ಪ್ರತಿಯೊಂದು ವರುಷವೂ ಟೋಕಿಯೋ ಪಟ್ಟಣದಲ್ಲಿ ಜನಾಂಗಕ್ಕೆ ಸಂಬಂಧಪಟ್ಟ ಒಂದು ಭಾರೀ ಕುಸ್ತಿಯು ಜರುಗುವುದು. ಇದರಲ್ಲಿ ಗೆದ್ದ ಜೋಡಿಯು ಬರುವ ವರುಷಕ್ಕೂ ಕುಸ್ತಿಗೆ ನಿಲ್ಲಬೇಕಾಗುವುದು. ಇವನನ್ನು ಜನರು ಒಂದು ವಾರದ ವರೆಗೆ ತಮ್ಮ ಮನೆಗಳಲ್ಲಿಟ್ಟುಕೊಂಡು ಸತ್ಕರಿಸುವರು. ಜಪಾನ್ ದೇಶದ ಅನೇಕ ಶತಮಾನಗಳ ಚರಿತ್ರೆಯಲ್ಲಿ ಹೀಗೆ ಗೆದ್ದವನು ಒಂದಾವರ್ತಿಯಾದರೂ ಪುನಃ ಕುಸ್ತಿಗೆ ನಿಲ್ಲಲು ತಪ್ಪಿಸಿಕೊಳ್ಳಲಿಲ್ಲವೆಂದು ಗೊತ್ತಾಗುತ್ತದೆ. ಇದಲ್ಲನೇ ಪ್ರಾಮಾಣಿಕತೆ.

ವಿಲಾಯಿತಿಯಲ್ಲಿರುವ ರೈತರು ತಮ್ಮ ಕೆಲಸವನ್ನು ಸುಲಭವಾಗಿ ಸಾಗಿಸುವುದಕ್ಕೆ ನಾನಾ ಯಂತ್ರಗಳನ್ನು ಕಲ್ಪಿಸಿರುವರಷ್ಟೆ. ಈಚೀಚೆಗೆ ಹಸುವಿನಿಂದ ಹಾಲನ್ನು ಯಂತ್ರಗಳ ಮೂಲಕ ಕರೆಯುವರು. ಈ ಯಂತ್ರಗಳ ಸಹಾಯದಿಂದ ಒಬ್ಬನು ನಾಲ್ಕು ಹಸುಗಳನ್ನು ಒಂದೇ ಸಮಯದಲ್ಲಿ ಹಾಲುಕರೆಯಬಹುದಂತೆ. ಯಂತ್ರದ ಮೂಲಕ ಬರತಕ್ಕ ರಬ್ಬರ್ ಕೊಳವೆಗಳನ್ನು ಬಹು ಉಪಾಯಾಂತರವಾಗಿ ಹಸುಗಳ ಕೆಚ್ಚಲಿಗೆ ಸಿಕ್ಕಿಸುವರು. ಇವುಗಳಿಂದ ಹಸುಗಳಿಗೇನೂ ಬಾಧಕವಾಗುವುದಿಲ್ಲ. ಒಂದಾನೊಂದು ಕೊಟ್ಟಿಗೆಯಲ್ಲಿ ನೂರು ಹಸುಗಳನ್ನು ಯಂತ್ರದ ಮೂಲಕ ಹಾಲುಕರೆಯುತ್ತಿರುವಲ್ಲಿ ಒಂದು ಹಸು ಮಾತ್ರ ಸ್ವಲ್ಪ ತಂಟೆಕೊಟ್ಟಿತಂತೆ. ಮನುಷ್ಯನ ಕೈಯಿಂದ ಹಾಲುಕರೆಯುವದು ಯಾವಾಗಲೂ ತೃಪ್ತಿಕರವಾಗಿರಲಾರದು. ಕೆಲವು ಅಂಟು ಜಾಡ್ಯದ ಕ್ರಿಮಿಗಳು ಕೈಯಲ್ಲಿ ಅಂಟಿಕೊಳ್ಳಬಹುದಾದುದರಿಂದ ಅವು ಹಾಲಿನಲ್ಲಿ ಸೇರುವ ಸಂಭವವಿದೆ. ಮತ್ತೆ ಕೆಲವು ಸಮಯದಲ್ಲಿ ಕೈಯನ್ನು ಒರಟಾಗಿ ಉಪಯೋಗಿಸುವದರಿಂದ ಕೆಚ್ಚಲಿಗೆ ಗಾಯವಾಗಿ ಹಸುವಿಗೆ ಬಾಧೆಯುಂಟಾಗ ಬಹುದು.

ಬಾತ್ಮೀದಾರರಿಗೆ ನೋಟೀಸು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.——ಎಡಿಟರ್.

"ಸುಮಾರಿಹಾಲತ್ತಿನ ವಿಚಾರ"——ನಿಮ್ಮ ಬಾತ್ಮಿಯನ್ನು ಪ್ರಕಟಿಸಲಾರೆವು. ನೀವು ನಿಮ್ಮ ಅಹವಾಲನ್ನು ಡೆಪ್ಯುಟಿ ಕಮಿಷನರವರಲ್ಲಿ ಹೇಳಿಕೊಂಡರೆ ಪ್ರಯೋಜನವಾದೀತು.

ಆಗುಂಬೆಯಿಂದ ಬಂದಿರುವ ಚಿಡಿಂಬುಟ್ಟಿ ವಿಕ್ರಯ ವಿಷಯವಾಗಿರುವ ಬಾತ್ಮಿಯನ್ನು ಈಗ ಪ್ರಕಟಿಸಲಾರೆವು.

ಕೊರಟಗೆರೆ ಸಬ್ ತಾಲೋಕು ತೋವಿನಕೆರೆ ಗ್ರಾಮದ ವೀರಭದ್ರ ದೇವಾಲಯದ ಸಂಗತಿಯನ್ನು ಇಲ್ಲಿ ಪ್ರಕಟಿಸುವುದರಿಂದ ಪ್ರಯೋಜನವೇನೂ ಆಗಲಾರದು. ನೀವು ಮುಜರಾಯಿ ಇಲಾಖೆಗೆ ಒಂದು ಅರ್ಜಿಯನ್ನು ಕೊಟ್ಟರೆ ಪ್ರಯೋಜನವಾದೀತು.

"ಯಾವದು ರುಚಿ" ಎಂಬ ಶಿರೋನಾಮವುಳ್ಳ ಒಂದು ವರ್ತಮಾನಪತ್ರಿಕೆಯಲ್ಲಿ ಪ್ರಕಟವಾಗಿದ್ದರ ವಿಷಯ ಅದನ್ನು ಬರೆದವರು ಕೆಲವು ವಿವರಣೆಗಳನ್ನು ಬರೆದು ನಮ್ಮಲ್ಲಿಗೆ ಕಳುಹಿಸಿರುತ್ತಾರೆ. ಇವುಗಳನ್ನು ಪ್ರಕಟಿಸುವುದರಿಂದ ವಾಚಕರಿಗೆ ಯಾವ ಪ್ರಯೋಜನವೂ ಆಗಲಾರದೆಂದು ನಂಬಿರುತ್ತೇವೆ.

——ಎಡಿ.]

ಕರೆಸ್ಪಾಂಡೆನ್ಸ್.

ಗುಂಡ್ಲುಪೇಟೆ ತಾ|| ಗೆ ಸೇರಿದ ಬೊಂಬ್ಬಾಪುರದ ವಿಚಾರಗಳು.

ಅಯ್ಯಾ,

ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದ ಬೊಂಬ್ಬಾಪುರದ ಗ್ರಾಮದಲ್ಲಿ ಜಾನುವಾರುಗಳಿಗೆ ದೊಡ್ಡ ರೋಗ ವ್ಯಾಪ್ತವಾಗಿ ದಿನ ಒಂದಕ್ಕೆ ೬—೭ ರ ಪ್ರಕಾರ ಸಾಯುತ್ತಾ ಇವೆ. ಇಂಥಾ ಜಾನುವಾರುಗಳನ್ನು ಕಳೆದುಕೊಂಡು ನಿರ್ಗತಿಕರಾಗಿ ವ್ಯವಸಾಯ ಮಾಡಲು ಎತ್ತುಗಳು ಇಲ್ಲದೆ ಉಳುವುದಕ್ಕೆ ಮಾರ್ಗವಿಲ್ಲದೆ ಪೇಚಾಡುವ ಬಡ ರೈತರ ಗೋಳನ್ನು ಹೇಳಕೂಡದು. ಈ ಗ್ರಾಮದ ಅನಾರೋಗ್ಯ ಸ್ಥಿತಿಯನ್ನು ವಿವರಿಸಲಶಕ್ಯವಾಗಿದೆ. ಏನೆಂದರೆ ಈ ಗ್ರಾಮದ ನಾಲ್ಕು ಕಡೆಗಳಲ್ಲೂ ಗೊಬ್ಬರದ ತಿಪ್ಪೆಗಳನ್ನು ಹಾಕಿ ತುಂಬಾ ಗಲೀಜು ಮಾಡಿರೋಣದರಿಂದ ಈ ಕಶ್ಮಲವನ್ನು ತೆಗೆಸಿ ಗ್ರಾಮ ಶುಚಿಯಾಗುವಂತೆ ನಮ್ಮ ತಾ|| ವು ಇನ್‌ಸ್ಪೆಕ್ಟರವರು ಮಾಡಬೇಕೆಂದು ಕೋರುತ್ತೇನೆ. ಮತ್ತು ಈ ಗ್ರಾಮದಲ್ಲಿ ಈ ಮಾಹೆ ತಾರೀಖು ೪ ನೇ ಮಂಗಳವಾರದ ಲಾಗಾಯ್ತು ೭ ನೇ ಶುಕ್ರವಾರದ ಬೆಳಗಿನ ೬ ಘಂಟೆ ವರಿಗೂ ಬಿಡದೆ ಒಂದೇ ಸಮನಾಗಿ ಜಡಿಮಳೆ ಹಿಡಿದದ್ದರಿಂದ ರೈತರುಗಳೆಲ್ಲಾ ತಮ್ಮ ತಮ್ಮ ಜಮೀನುಗಳನ್ನು ಉತ್ತು ಜೋಳ, ಎಳ್ಳು ವಗೈರೆ ಫಸಲ್ ಬಿತ್ತಿದರೂ ಆ ಲಾಗಾಯ್ತು ಮಳೆಯಿಲ್ಲದೆ ಪುಷ್ಯ ಬಿಸಲಿನ ಝಳವು ತುಂಬಾ ಜೋರಾಗಿ ಜೋಳ ವಗೈರೆ ಪೈರುಗಳೆಲ್ಲಾ ಒಣಗುತ್ತಾ ರೈತರುಗಳೆಲ್ಲಾ ಮಳೆ ಹುಯ್ಯುವಿಕೆಯನ್ನ ಎದುರು ನೋಡುತ್ತಾ ಇದ್ದರು. ಹೀಗೆ ಇರುವಲ್ಲಿ ಮಾಹೆ ೧೭ ನೇ ತಾರೀಖು ಸೋಮವಾರ ರಾತ್ರಿ ೮ ಘಂಟೆ ಸಮಯದಲ್ಲಿ ಮಳೆ ಬಂದು ಒಂದೆರಡು ಹದ ಮಳೆಯಾದ್ದರಿಂದ ಜೋಳ ವಗೈರೆ ಪೈರುಗಳೆಲ್ಲಾ ಈಗಿನ ಮಟ್ಟಿಗೆ ಚೆನ್ನಾಗಿರುತ್ತೆ. ಈ ಗ್ರಾಮಕ್ಕೆ ಶೋಭಕೃತು ಸಂವತ್ಸರದ ಲಾಗಾಯ್ತು ಮಳೆ ಸರಿಯಾಗಿ ಬಾರದೆ ಹೊಲಗಳಲ್ಲಿ ಫಸಲ್‌ಗಳು ಚನ್ನಾಗಿ ಬೆಳೆಯದೆ ಬಡ ರೈತರುಗಳು ಅನ್ನಕ್ಕಾಗಿ ಪಡುವ ಶ್ರಮವನ್ನು ಹೇಳತೀರದು. ಈ ಗ್ರಾಮದ ಕಾಲುಪಾಲು ರೈತರುಗಳೆಲ್ಲಾ ಕೇವಲ ಹೀನಸ್ಥಿತಿಯಲ್ಲಿರುತ್ತಾರೆ. ಇವರಲ್ಲಿ ಅನೇಕರು ದಿನದ ಕಾಲಕ್ಷೇಪವನ್ನು ಕಳೆಯುವುದು ತುಂಬಾ ಪ್ರಯಾಸವಾಗಿದೆ. ಈ ಗ್ರಾಮಕ್ಕೆ ದೊಡ್ಡ ರೋಗ ವ್ಯಾಪ್ತವಾಗಿ ಸುಮಾರು ೫—೬ ತಿಂಗಳುಗಳಾಗುತ್ತಾ ಬಂದಾಗ್ಯೂ ಇದುವರಿಗೂ ಸ್ವಲ್ಪ ಮಟ್ಟಿಗಾದರೂ ಶಮನವಾಗದೆ ಇರತಕ್ಕದ್ದು ನೋಡಿ ತುಂಬಾ ವ್ಯಸನಪಡಬೇಕಾಗಿದೆ. ಈ ದೊಡ್ಡ ರೋಗದಿಂದ ಇದುವರಿಗೆ ೨೦೦—೩೦೦ ರಾಸುಗಳು ಮೃತಪಟ್ಟಿರುತ್ತದಲ್ಲದೆ ಈ ಗ್ರಾಮಕ್ಕೆ ಸಮೀಪದಲ್ಲಿರುವ ಅಂತಹಳ್ಳಿ—ಬಾಚಹಳ್ಳಿ—ಕೆಬ್ಬೆಪುರ—ಶೆಟ್ಟಿಹಳ್ಳಿ ವಗೈರೆ ಗ್ರಾಮಗಳಲ್ಲಿಯೂ ದನಗಳಿಗೆ ದೊಡ್ಡ ರೋಗ ವ್ಯಾಪ್ತವಾಗಿ ದಿನೇ ದಿನೇ ಜಾನುವಾರುಗಳು ಮೃತಪಡುತ್ತಿರುವದನ್ನು ನೋಡಿ ಸಹಿಸಲಶಕ್ಯವಾಗಿದೆ. ಇದೇ ಗ್ರಾಮದಲ್ಲಿರುವ ಹೊಲೀಪುರದ ತಾ|| ಕೃಷ್ಣಪ್ಪನವರ ಮನೆಗೆ ಅವರಿಗೆ ದ್ವೇಷಿಗಳಾದ ಕೆಲವರು ಇವರ ಮನೆಗೆ ಕನ್ನಹಾಕಿ ಸಾಮಾನುಗಳನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಕಳೆದ ಏಪ್ರಿಲ್ ತಾ|| ೧೨ ನೇ ಶನಿವಾರ ರಾತ್ರೆ ಸುಮಾರು ೮ ಘಂಟೆ ಸಮಯದಲ್ಲಿ ಯಾವನೋ ಒಬ್ಬನು ಹಿತ್ತಲಿನಲ್ಲಿ ಒಂದುನಿಂತಿದ್ದ ಹಾಗೂ ಗಾಬರಿಯಾದ ಕೂಡಲೆ ಕದ್ದು ಓಡಿದ ಹಾಗೂ ತಿಳಿಯಿತು. ಆಸಾಮಿ ಮಾತ್ರ ಯಾರೋ ಎಂಬುವುದು ಗೊತ್ತಾಗಲಿಲ್ಲ. ಇಂಥಾ ದುಷ್ಟರನ್ನು ನಮ್ಮ ತಾ|| ವು, ಇನ್‌ಸ್ಪೆಕ್ಟರವರೂ ತಲಾಷ್ ಮಾಡಿ ಪತ್ತೆ ಹಚ್ಚುವುದರಿಂದ ಬಂದೋಬಸ್ತು ಮಾಡಿಸಿ ಬಡರೈತರುಗಳ ಕಷ್ಟನಷ್ಟವನ್ನು ಹೋಗಲಾಡಿಸುವರೆಂದು ನಂಬಿದ್ದೇನೆ. ಇಲ್ಲಿ ರಾತ್ರೆ ಕಾವಲು ನಡೆಯದೇ ಇರುವದರಿಂದ ಕೆಲವು ದುಷ್ಟರು ರಾತ್ರೆ ಮನೆಗಳ ಮೇಲೆ ಕಲ್ಲು ಎಸೆಯುತ್ತಾ ಜನರನ್ನು ತುಂಬಾ ಭಯಪಡಿಸುತ್ತಾ ಇದ್ದಾರೆ. ಇಂಥಾ ದುಷ್ಟರನ್ನು ದಯಾಳುಗಳಾದ ಪೊಲೀಸ್ ಇನ್‌ಸ್ಪೆಕ್ಟರವರು ತಲಾಷ್ ಮಾಡಿ ಶಿಕ್ಷಿಸಿ ಬಡ ರೈತರುಗಳ ಭಯವನ್ನ ತಪ್ಪಿಸಿ ಕಾಪಾಡುವರೆಂದು ನಂಬಿದೇನೆ.

ಗ್ರಾಮವಾಸಿ ಬೊಂಬ್ಬಾಪುರ

ಅಲಾರ್ಕಾನ್ ಗವರ್ನರ್ ಮೊರೆಲಾಸ್‌ಯವರು

ಪೆ-ರೂ-ನಾ ಶೈತ್ಯದಿಂದ ಉಂಟಾಗುವ ಸಮಸ್ತ ರೋಗಗಳಿಗೂ ತಕ್ಕ ಔಷಧವೆಂದೂ, ನಂಬಿಕೆಯಾದ ಆರೋಗ್ಯವನ್ನು ಸಹಜವಾದ ಕಾಯಪುಷ್ಟಿಯನ್ನು ಕೊಡತಕ್ಕ ಔಷಧವೆಂದೂ ಮೆಕ್ಸಿಕೋ ರಾಜ್ಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೂ ಉತ್ತರದಿಂದ ದಕ್ಷಿಣಕ್ಕೂ ಎಲ್ಲಾ ಪ್ರದೇಶಗಳಲ್ಲೂ ಪ್ರಖ್ಯಾತವಾಗಿದೆ.



ಘನ ಮ್ಯಾನ್ಯುಯಲ್ ಅಲಾರ್ಕಾನ್, ಮೊರೆಲಾಸ್ ಗವರ್ನರು, ಮೆಕ್ಸಿಕೋ.

ಪೆರೂನಾ ಕಂಪೆನಿಯವರಿಗೆ. 7-21
ಕೊಲಂಬಸ್, ಓಹಿಯೋ, ಅಮೆರಿಕ

ಅಯ್ಯಾ — ನಾನು ಅನೇಕ ಜನರನ್ನು ನಿಮ್ಮ ಔಷಧಿ ಸೇವಿಸುವಂತೆ ಪ್ರೋತ್ಸಾಹಪಡಿಸಿದೆನು ಅವರಿಗೆ ಅನುಕೂಲವಾದ ವಿಷಯವನ್ನು ಧಾರಾಳವಾಗಿ ತಿಳಿಸುತ್ತೇನೆ ಇಂಥಾ ಫಲವನ್ನು ನಿಮ್ಮ ಔಷಧವು ಕೊಟ್ಟಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ

ಮೊರೆಲಾಸ್, ನಿಮ್ಮ ಪ್ರೀತಿಪಾತ್ರನಾದ
ಡಿಸೆಂ ೫, ೧೯೦೫ ಮ್ಯಾನ್ಯುಯಲ್ ಅಲಾರ್ಕಾನ್

ಪೆರೂನಾವಿನ ದೊಡ್ಡ ಪರೀಕ್ಷೆ.

ಪ್ರತಿ ಒಂದು ದೇಶದ ಹವಾಸ್ಥಿತಿಯೂ ಅದರಕ್ಕೆ ಅನುಗುಣವಾಗಿಯೂ ವಿಜಾತೀಯವಾಗಿಯೂ, ಆದದ್ದರಿಂದ ಅಲ್ಲಲ್ಲಿಗೆ ತಕ್ಕ ರೋಗಗಳನ್ನುಳ್ಳದ್ದಾಗಿಯೂ ಇದೆ

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಯನ್ನು ಪಡೆದಿರುವ ಪೆರೂನಾವಿನ ಗುಣಗಳನ್ನು ಪರಿಷ್ಕಾರವಾಗಿ ಪರೀಕ್ಷೆ ಮಾಡುವುದಕ್ಕೆ ಮೆಕ್ಸಿಕೋ ರಾಜ್ಯ ಒಂದೇ ಸಾಕಾಗಿದೆ ಆ ರಾಜ್ಯದಲ್ಲಿ ಅತ್ಯಂತ ಶೈತ್ಯವೂ, ಅತ್ಯಂತ ಉಷ್ಣವೂ, ಸಾಮಾನ್ಯವೂ ಮಧ್ಯಸ್ಥವೂ ಆದ ಹವಾಗುಣವೂ ಉಳ್ಳ ಪ್ರದೇಶಗಳೆಲ್ಲಾ ವಿಶೇಷವಾಗಿರುತ್ತವೆ.

ಮೆಕ್ಸಿಕೋದಲ್ಲಿ ಬಹಳವಾಗಿ ಹುಟ್ಟುವ ಶೈತ್ಯರೋಗಗಳಿಗೂ ಉತ್ತರಧ್ರುವ ಪ್ರಾಂತ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೂ ತಾರತಮ್ಯವಿರುತ್ತದೆ.

ಚಳಿರಾಜ್ಯಗಳಲ್ಲಿ ಜನರಿಗೆ ವಿಶೇಷವಾಗಿ ಮೂಗು ಮತ್ತು ಗಂಟಲುಗಳಲ್ಲೇ ಶೀತ ಹುಟ್ಟಿ, ಪ್ರಬಲವಾಗುವುದು ಉಷ್ಣರಾಜ್ಯಗಳಲ್ಲಿ ಶೀತರೋಗಗಳೆಲ್ಲಾ ಮನುಷ್ಯನ ಹೊಟ್ಟೆಯೊಳಗಿರುವಂಥಾ ಅನ್ನಕೋಶ, ಪಿತ್ತಕೋಶ ಮಲಕೋಶ, ಜಲಬಾಧೆಯ ಕೋಶ, ಈ ಮೊದಲಾದವುಗಳಿಗೆ ಶೈತ್ಯಹಿಡಿದು ಅಂತರ್ಯವಾದ ನಾನಾ ರೋಗಗಳನ್ನು ಹುಟ್ಟಿಸುತ್ತೆ

ಈ ಪ್ರಕಾರ ಅದರ ಲಕ್ಷಣಗಳು ನಾನಾ ಪ್ರಕಾರವಾಗಿದ್ದರೂ ರೋಗಕ್ಕೆ ಕಾರಣವೇನೋ ಒಂದೇ ಆಗಿದೆ ಈ ಶೈತ್ಯವು ನೆತ್ತಿಹತ್ತಿರಬಹುದು, ಗಂಟಲು ಹಿಡಿದಿರಬಹುದು, ಒಳಹೊಟ್ಟೆ ಕಿಬ್ಬೊಟ್ಟೆಗಳನ್ನು ಅಂಟಿಕೊಂಡಿರಬಹುದು ಆದರೂ ಶೀತವೇ ಅಷ್ಟಕ್ಕೂ ಕಾರಣವು

ಶೀತರಾಜ್ಯಗಳಲ್ಲಿ ಹುಟ್ಟತಕ್ಕ ಶೈತ್ಯರೋಗಗಳಿಗೆ ಪೆರೂನಾವು ಎಷ್ಟು ಖಂಡಿತ ಗುಣಕಾರಿಯಾಗಿ ಕಂಡುಬಂದಿರುವುದೋ ಅದೇ ರೀತಿ ಉಷ್ಣರಾಜ್ಯಗಳ ಶೀತರೋಗಗಳಿಗೂ ಮಹಾ ಗುಣಕಾರಿಯಾದ ಔಷಧವೆಂದು ಪ್ರಸಿದ್ಧಿಗೊಂಡಿದೆ

ಪೆರೂನಾವು ಶೈತ್ಯರೋಗಗಳಿಗೆ ಪರಮೌಷಧವಾಗಿರುವುದು ಮಾತ್ರವೇ ಅಲ್ಲ, ಅದು ಮಹಾ ಬಲಕಾರಿಯಾದ ಮತ್ತು ಪುಷ್ಟಿಕೊಡುವ ಸೇವನಾ ಔಷಧವೆಂದೂ ಯಶಸ್ಸನ್ನು ಪಡೆದಿರುತ್ತದೆ

ಪೆರೂನಾದಲ್ಲಿ ಬಲವನ್ನೂ ಕಾಯಪುಷ್ಟಿಯನ್ನೂ ಕೊಡುವಂಥಾ ಗುಣಗಳಿರುವದರಿಂದಲೇ ಉಷ್ಣರಾಜ್ಯಗಳವರು ಅದನ್ನು ವಿಶೇಷವಾಗಿ ಪ್ರೀತಿಸಿ ಉಪಯೋಗಿಸಿ ಹೊಗಳುತ್ತಾರೆ

ಪೆರೂನಾ ಸ್ವಭಾವಸಿದ್ಧವಾದ ಬಲಕೊಡುವ ಸೇವನಾ ಔಷಧವಾಗಿರುತ್ತದೆ, ಅದು ದೇಹದೊಳಗಿರತಕ್ಕ ನಾನಾ ಕೋಶಗಳ ಕಾರ್ಯಗಳನ್ನು ಕ್ರಮಕ್ಕೆ ತಂದಿಟ್ಟು ಪುಷ್ಟಿಮಾಡತಕ್ಕದ್ದಾಗಿದೆ.

ಅದು ರಕ್ತದ ಚಲನೆಗೆ ಚಟುವಟಿಕೆಯನ್ನು ಕೊಡುತ್ತದೆ, ತಿಂದ ಆಹಾರವನ್ನು ಅದು ಚನ್ನಾಗಿ ಅರಗಿಸಿ, ಪರಿಷ್ಕಾರವಾಗಿ ದೇಹದ ಅಂಗಾಂಗಗಳಿಗೆ ವ್ಯಾಪಿಸುವಂತೆಯೂ ಅವನ್ನು ಬಲಪಡಿಸುವಂತೆಯೂ ಕೆಲಸಮಾಡುವುದು

ಅದು ಬಲವನ್ನು ಕೊಟ್ಟು ಶರೀರ ಧರ್ಮವನ್ನು ವೃದ್ಧಿಮಾಡುವುದಲ್ಲದೆ ಬೇಜಾರನ್ನೂ ಮನಸ್ಸಿನ ಖಿನ್ನತೆಯನ್ನೂ ನಿವಾರಣೆಮಾಡುತ್ತದೆ ಆದರೆ ಇದು ಮದ್ಯಪಾನಕಗಳಂತೆ ಕ್ಷಣಿಕವಾದ ಶಕ್ತಿಯನ್ನು ಕೊಡುವಂಥಾದ್ದಲ್ಲವು

ಚಟುವಟಿಕೆಯೂ ಆರೋಗ್ಯವೂ

ಮೇ॥ ರಿಚರ್ಡ್ ಕ್ಯಾಲ್ವರ್ಟ್, ೬೩೩ ಬೀದಿ, ಬ್ರೂಕ್ಲಿನ್, ನ್ಯೂಯಾರ್ಕ್, ಅಮೇರಿಕ. ಈತ ಬರೆಯುವುದು —

"ಹಸಿದವನಿಗೆ ಆಹಾರ ಹ್ಯಾಗೋ, ಬಾಯಾರಿದವನಿಗೆ ನೀರು ಹ್ಯಾಗೋ, ಹಾಗೆ ಕಾಯಿಲೆಯವನಿಗೆ ಪೆರೂನಾವು ಇರುವುದೆಂದು ತಿಳಿಯಿರಿ

"ದಾಕ್ತರುಗಳಿಗಿಂತಲೂ ಪೆರೂನಾವು ಅತಿ ಸೂಕ್ಷ್ಮವಾಗಿ ರೋಗವನ್ನು ವಾಸಿಮಾಡತಕ್ಕದ್ದೆಂದು ನನ್ನ ಮನಸ್ಸಿಗೆ ತೋರಿತು.

"ಆರೇಳು ವರುಷಗಳ ತನಕ ನನಗೆ ಆಹಾರ ಜೀರ್ಣವಾಗುತ್ತಿರಲಿಲ್ಲ; ನನ್ನ ಪಿತ್ತಕೋಶವು ಮಂದಗತಿಯಲ್ಲಿತ್ತು

"ಆಗಾಗ ಮಲವು ಸಾಗದೆ ಕಟ್ಟಿ, ಬೇದಿಯಾಗುತ್ತಲೂ, ಕಿಬ್ಬೊಟ್ಟೆ ನೋಯುತ್ತಲೂ ಇದ್ದಿತು

"ನನಗೆ ಅನುಕೂಲ ಮಾಡಬೇಕೆಂದು ದಾಕ್ತರುಗಳು ತಮ್ಮ ಕೈಲಾದ ಮಟ್ಟಿಗೂ ಪ್ರಯತ್ನಪಟ್ಟರು ಆದರೆ ನನಗಿದ್ದ ನಿಜವಾದ ರೋಗಲಕ್ಷಣವೇ ಅವರಿಗೆ ತಿಳಿಯದೆಹೋಯಿತೋ, ಅಥವಾ ಅನರು ಸರಿಯಾದ ಔಷಧವನ್ನು ಕೊಡದೆಹೋದರೋ

"ಹದಿನೈದು ವಾರಗಳಲ್ಲಿ ಪೆರೂನಾವು ನನಗೆ ವಾಸಿಮಾಡಿತು, ಅದು ನನ್ನನ್ನು ಚಟುವಟಿಕೆಯಾಗಿಯೂ ಆರೋಗ್ಯವಾಗಿಯೂ ಮಾಡಿತು ನಿಜವಾಗಿಯೂ ನಿಮಗೆ ನಾನು ಕೃತಜ್ಞನಾಗಿರುವೆನು"

ಸ್ನೇಹಿತನು ಪೆರೂನಾ ಸೇವಿಸೆಂದು ಹೇಳಿದನು.

ಮೆ ಜಾರ್ಜ್ ಕ್ರಾಗ್, ಪೋರ್ಟರ್‌ವಿಲ್, ಟೆನ್ನಸಿ. ಅಮೆರಿಕ. ಈತ ಬರೆಯುವುದು —

"ಎರಡು ವರುಷಗಳ ಹಿಂದೆ ನನಗೆ ಶೀತಹಿಡಿದಿತ್ತು ಒಬ್ಬ ಸ್ನೇಹಿತನು ಬಂದು ಪೆರೂನಾ ಸೇವಿಸು ಎಂದು ನನಗೆ ಹೇಳಿದನು ಅದರಿಂದ ನನಗೆ ಸಂಪೂರ್ಣವಾಗಿ ವಾಸಿಯಾಯಿತೆಂದು ಆಶ್ಚರ್ಯಪಡುತ್ತೇನೆ

ಏಳು ವರುಷದ ಶೈತ್ಯರೋಗವು

ಮೆ ಆಂಡ ರೋಕಿಸ್, ೩೦೬೫ ಗ್ರಾನೈಟ್ ಬೀದಿ ಕ್ಯಾರೊಂಡೆಲೆಟ್ ಸ್ಟೇಷನ್, ಮಿಸೌರಿ, ಅಮೇರಿಕ. ಈತ ಬರೆಯುವುದು —

"ನನಗೆ ವಾಸಿಯಾದದ್ದಕ್ಕೆ ನಿಮ್ಮನ್ನು ಎಷ್ಟು ವಂದಿಸಿದರೂ ತೀರದು ನಾನು ಏಳು ವರುಷಗಳ ವರೆಗೆ ಶೀತ ನೆಗಡಿ ಕೆಮ್ಮು ಅನುಭವಿಸಿ. ನೂರಾರು ದ್ರವ್ಯವನ್ನು ಖರ್ಚುಮಾಡಿ ಔಷಧಿಗಳನ್ನು ಸೇವಿಸಿದೆನು ಆದರೂ ನನ್ನ ಶೈತ್ಯರೋಗವು ಪಟ್ಟಿಯನ್ನೇ ಬಿಡದೆ ಕಡಮೆಯಾಗಲಿಲ್ಲ

"ನನಗೆ ಔಷಧಿ ಕೊಡುತ್ತಿದ್ದವರಲ್ಲಿ ಕೆಲವು ದಾಕ್ತರುಗಳು ಬಹಳ ಪ್ರಖ್ಯಾತಿಪಡೆದವರಾಗಿದ್ದರೂ ನನಗೆ ಅಂಥ ಕಠಿಣವಾದ ಕೆಮ್ಮು ಇದ್ದಿತು ಈ ಕೆಮ್ಮಿನ ಕಷ್ಟವನ್ನು ನಾನು ವಾಸಿಮಾಡಿಕೊಂಡೇನೆಂಬ ಭರವಸೆ ಇರಲೇ ಇಲ್ಲ

"ಆಗ ನಾನು ಒಂದು ಬಾಟ್ಲು ಪೆರೂನಾ ಕೊಂಡು ತಂದು, ಅದರಲ್ಲಿ ಹೇಳಿರುವ ಕ್ರಮಗಳ ಪ್ರಕಾರ ಆ ದಿನ ರಾತ್ರಿ ಸೇವಿಸಿದೆನು ಮರುದಿನ ಬೆಳಗ್ಗೆಯೇ ನನಗೆ ಸ್ವಲ್ಪ ಗುಣವಾದಂತೆ ತೋರಿತು

ಮೂರು ದಿನ ಸೇವಿಸಿದ ಮೇಲೆ ನನಗೆ ತುಂಬಾ ಅನುಕೂಲವಾಯಿತು ಈಗಲಾದರೋ ನಾಲ್ಕನೆ ಶೀಸೆಯ ಔಷಧವನ್ನು ಮುಗಿಸಿದ ಮೇಲೆ ನಾನು ಸಂಪೂರ್ಣವಾಗಿ ಆರೋಗ್ಯಹೊಂದಿರುತ್ತೇನೆ.

"ಈ ಸರ್ವಶ್ರೇಷ್ಠವಾದ ಔಷಧವನ್ನು ಸೇವಿಸುವಂತೆ ಪ್ರತಿ ಒಬ್ಬನಿಗೂ ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುವೆನು"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದದ್ದು ಇವರಿಂದಲೇ ತಿಳಿಯಬಹುದು.

ವಿಳಾಸ —ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

30—4—1909 ರಿಂದ 7—5—1909 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	13	13
ಮೈಸೂರು ,,	2	2	19	15
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	7	3
ಹಾಸನ ,,	0	0	37	19
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿವಮೊಗ್ಗ ,,	0	0	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	2	2	76	50

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಜೇಷ್ಠ ಶುದ್ಧ ಅಷ್ಟಮಿ ಗುರುವಾರದಿಂದ ಜೇಷ್ಠ ಶುದ್ಧ ಚತುರ್ದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಮೇ, ಮತ್ತು ಜೂನ್

ತಾ.	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ತೇದಿ ವೃಷಭ ಮಾಸ
27	ಗುರು	ಅಷ್ಟಮಿ	35-28	ಮಖ	6-48	14
28	ಶುಕ್ರ ‡	ನವಮಿ	10-10	ಪು	12-16	15
29	ಶನಿವಾ §	ದಶಮಿ	15-15	ಉ	19-22	16
30	ರವಿವಾ *	ಏಕಾದಶಿ	50-5	ಹ	25-45	17
31	ಚಂದ್ರ †	ದ್ವಾದಶಿ	54-20	ಚಿ	31-56	18
1	ಕುಜ	ತ್ರಯೋದಶಿ	56-30	ಸ್ವಾ	37-34	19
2	ಬುಧ	ಚತುರ್ದಶಿ	60-0	ವಿ	41-30	20

‡ ಅಮೃತಯೋಗ
§ ಉತ್ಪಾತಯೋಗ
* ಸರ್ವತ್ರ ಏಕಾದಶಿ, ಶ್ರೀಮನ್ಮಹಾರಾಜರವರ ವರ್ಧಂತಿ
† ಕೂರ್ಮಜಯಂತಿ.
ಕಾಂಚೀ ಗರುಡೋತ್ಸವ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೫-೦-೦	೧೬-೪-೦
ಕಿಂಬುತಿ ಅಕ್ಕಿ ಅವಲ್		೧೪-೮-೦	೧೫-೮-೦
,, ಮಧ್ಯಮ		೧೬-೦-೦	೧೭-೨-೦
ಜಾಸ್ರಾಣಿ ಅಕ್ಕಿ		೧೭-೦-೦	೧೮-೮-೦
ಸಣ್ಣಕ್ಕಿ ಅವಲ್		೧೬-[illegible]	೧೭-೨-೦
,, ಮಧ್ಯಮ		೧೬-೦-೦	೧೬-೦-೦
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೬-೦-೦	೧೬-೦-೦
,, ಮಧ್ಯ		೧೫-೦-೦	೧೫-೪-೦
ಹೈನ್ ರಾಗಿ ಪಲ್ಲಾ ೧ಕ್ಕೆ		೯-೪-೦	೮-೮-೦
ಕಾರಾಗಿ		೮-೧೨-೦	೮-೦-೦
ಜೋಳ		೯-೦-೦	೯-೨-೦
ಹುಲಸಂದೆ ಪಲ್ಲಾ ೧ಕ್ಕೆ		೧೬-೮-೦	೧೩-೮-೦
ಬೇಳೆ ಅವರೆ		೧೧-೦-೦	೧೨-೮-೦
ಹೆಸರು		೧೪-೦-೦	೧೩-೨-೦
ಉದ್ದು		೧೪-೮-೦	೧೩-೪-೦
ಕಡಲೆ		೧೩-೮-೦	೧೨-೪-೦
ಎಳ್ಳು ಸೇ ೧೨೭ ಕ್ಕೆ		೨೨-೮-೦	೧೯-೮-೦
ಹುರುಳಿ		೧೧-೪-೦	೧೧-೨-೦
ಹರಳು ೧೨೭ ಸೇರಿಗೆ		೧೧-೦-೦	೧೦-೮-೦
ಸೀಗೇಕಾಯಿ ಮಣ ೧ಕ್ಕೆ		೨-೮-೦	೨-೦-೦
ಮೆಣಸಿನಕಾಯಿ		೫-೮-೦	೪-೪-೦
,, ಮಧ್ಯಮ		೫-೦-೦	೩-೧೨-೦
ಬೆಲ್ಲ ದೊಡ್ಡ ಅಚ್ಚು		೬-೪-೦	ಮ ೧-೧೪-೦
ಒಳ್ಳೆಣ್ಣೆ ಮಣ ೧ಕ್ಕೆ		೫-೦-೦	೫-೪-೦
ಹರಳೆಣ್ಣೆ ,,		೪-೮-೦	೪-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೯-೪-೦	೭-೧೪-೦
ಉಪ್ಪು ,,		೫-೮-೦	೪-೧೨-೦
ಹುಣಸೇ ಹಣ್ಣು		೧-೧೨-೦	೧-೧೦-೦
,, ಹಳೇದು		೧-೮-೦	೧-೮-೦
ತುಪ್ಪ ಮಣ ೧ಕ್ಕೆ		೧೫-೦-೦	೧೩-೮-೦
ನೀರುಳ್ಳಿ ಪೆಟ್ಟಿ ೧ಕ್ಕೆ		೫-೪-೦	೩-೧೪-೦
ತೆಂಗಿನಕಾಯಿ ೧೦೦ಕ್ಕೆ		೪-೮-೦	೪-೮-೦
ಆಲೇಕಾಯಿ ಮಣ ೧ಕ್ಕೆ		೦-೮-೦	೦-೧೪-೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೧-೦-೦	೦-೧೫-೦
ಚಿನ್ನ (ಸೌ) ಕೆಂಪು		೧೫-೬-೦	೧೫-೬-೦
,, ,, ಪಸಿಮೆ		೧೬-೦-೦	೧೫-೧೦-೦
,, ,, ಗಟ್ಟಿ ತೊಲ ೧ಕ್ಕೆ		೨೪-೮-೦	೨೪-೨-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೬೭-೪-೦	೬೬-೦-೦

Printed and Published by the Rev. H GULLIFORD, Proprietor and Manager, Wesleyan Mission Press Mysore. 27/5/1909.

[redacted]







FLASHNO-

3









Vol - 9

June 1909
to May 1910

NOT TO BE LENT

NOT TO BE LENT

ತ್ತಲೂ ಮನೆಗಳನ್ನು ಶುಚಿಯಾಗಿಟ್ಟುಕೊಳ್ಳುತ್ತಲೂ ಬರುವುದಾದರೆ ಪ್ಲೇಗ್ ಜಾಡ್ಯವು ನಿಂತುಹೋಗುವುದು ಪ್ಲೇಗ್ ಸೋಂಕಿದ್ದ ಮನೆಗಳನ್ನು ದ್ರಾವಕಗಳ ಮೂಲಕ ಶುಚಿಮಾಡುವಾಗ್ಗೆ ಅದರಲ್ಲಿ ಇಲಿ ಚಿಗಟಗಳಿಲ್ಲದಂತೆ ಎಚ್ಚರಿಕೆಯಾಗಿ ಶುಚಿಮಾಡಬೇಕು

ಮೈಸೂರು ಸಂಸ್ಥಾನದ ಸ್ಥಿತಿಗತಿಗಳನ್ನು ನೋಡಿದರೆ ಅಷ್ಟೇನೂ ಗಾಬರಿಪಡತಕ್ಕ ಅವಶ್ಯವಿಲ್ಲ ಆದರೆ ಸಂಕ್ರಾಮಿಕ ಜಾಡ್ಯಗಳು ಬಾರದಂತೆ ಜನಗಳು ಎಚ್ಚರಿಕೆಯಾಗಿರುವುದು ಅವರ ಮುಖ್ಯ ಕರ್ತವ್ಯವಾಗಿದೆ ಭಗವಂತನು ದಯಾಪೂರ್ವಕವಾಗಿ ನಮ್ಮೆಲ್ಲರನ್ನು ನೋಡಿ ನಮ್ಮ ದೇಶದ ಮೇಲೆಲ್ಲಾ ಬೇಕಾದಷ್ಟು ಮಳೆಯನ್ನು ಸುರಿಸಿ ಒಳ್ಳೇ ಸುಗ್ಗಿಯನ್ನು ಕೊಡಲೆಂದು ನಾವೆಲ್ಲರೂ ಭಕ್ತಿಪೂರ್ವಕವಾಗಿ ಪ್ರಾರ್ಥಿಸುವ

ಸತ್ಯವಂತನಾಗುವದಕ್ಕೆ ಉತ್ತಮವಾದ ಮಾದರಿಯು ಅವಶ್ಯವಾಗಿದೆ

ಪ್ರಪಂಚದಲ್ಲಿ ಮನುಷ್ಯರು ಹಣವಂತರಾಗುವದಕ್ಕೂ ಕುಶಲವಿದ್ಯೆಗಳನ್ನು ಕಲಿಯುವದಕ್ಕೂ ವಿದ್ಯಾಸಂಪನ್ನರಾಗುವದಕ್ಕೂ ನಾನಾ ಪ್ರಯತ್ನಗಳನ್ನು ಮಾಡಿ, ಆಯಾ ವಿದ್ಯೆಗಳಲ್ಲಿ ನಿಸ್ಸೀಮರನ್ನು ಕಂಡುಹಿಡಿದು ಅವರ ಸೇವೆಯನ್ನು ಮಾಡಿದನಂತರ ತಾವು ಸಹ ಅವರಂತೆ ಆಗುವದುಂಟು ಪಾರಮಾರ್ಥಿಕ ವಿಷಯದಲ್ಲಿ ಯೋಚಿಸಿ ನೋಡುವದಾದರೆ, ನರಮನುಷ್ಯರು ಎಷ್ಟೋ ತಪ್ಪಾಗಿ ನಡೆಯುತ್ತಾ ಇದ್ದಾರೆಂದು ಪರಿಷ್ಕಾರವಾಗಿ ಕಂಡುಬರುವದು ಹ್ಯಾಗಂದರೆ, ಕೆಲವರು ಮೋಸದ ಮಾರ್ಗದಲ್ಲಿ ನಡೆಯುತ್ತೇವೆಂದು ಹೇಳಿ ನರಕಕ್ಕೆ ಹೋಗತಕ್ಕ ದುರ್ಮಾರ್ಗಗಳಲ್ಲಿ ಜೀವಿಸುತ್ತಿದ್ದಾರೆ ಕೋಟ್ಯಾನುಕೋಟಿ ಜನಗಳು ಉತ್ತಮವಾದ ರೀತಿಯಲ್ಲಿ ಭಗವಂತನನ್ನು ಪೂಜಿಸದೆ ನಾನಾ ಕಲ್ಪಿತ ಮಾರ್ಗಗಳಲ್ಲಿ ಸಿಕ್ಕಿ ಮೋಸಹೋಗಿದ್ದಾರೆ ಉಪದೇಶ ಮಾಡತಕ್ಕಂಥ ಅನೇಕರು ನಿಜಗುರುವನ್ನು ತೋರಿಸುವದಕ್ಕೆ ಬದಲಾಗಿ ತಾವೇ ಮನುಷ್ಯರಿಂದ ಸತ್ಕೀರ್ತಿಯನ್ನು ಹೊಂದುವದನ್ನು ಬಯಸುತ್ತಾರೆ ಮನುಷ್ಯರು ಮನೋವಾಕ್ಕಾಯಗಳಲ್ಲಿಯೂ ದೇವರು ಮೆಚ್ಚುವಂಥ ಸದ್ಗುಣಗಳಲ್ಲಿಯೂ ಪರಿಶುದ್ಧ ಭಾವವನ್ನು ಅನುಸರಿಸುವದಕ್ಕೆ ಬದಲಾಗಿ, ದೇಹಸಮ್ಮಂದವಾದ ಆಚಾರ ಉಡಿಗೆ ತೊಡಿಗೆ ಮಾನ ಮರ್[illegible] [illegible]ವಷಯಗಳಲ್ಲಿ ಹೆಸರಾಗಿ ಪಡೆಯುವದು ಗೌರವವೆಂದು [illegible] ಇನ್ನು ಅನೇಕರು ಹುಟ್ಟಿದ್ದಕ್ಕೆ ಮುಕ್ತಿ [illegible] ಯೋಚಿಸಿ ನಾನಾ ವೈರಾ[illegible] [illegible]ಗತಿಗಳನ್ನು [illegible] [illegible]ಗೆ

ಸತ್ಯವಂತನಾಗದೆಹೋದರೆ ಗತಿಮುಟ್ಟುವದು ಅಸಾಧ್ಯ ಆದ್ದರಿಂದ ಮನುಷ್ಯರು ಅಸಾಧ್ಯವೆಂದು ಹೇಳುವ ಸತ್ಯವನ್ನು ಮನುಷ್ಯರ ಕೈಯಲ್ಲಿಯೇ ಮಾಡಿಸುವದಕ್ಕೂ ಪಾಪವು ಪ್ರಸಿದ್ಧಿಯಾಗಿರುವ ಸ್ಥಳದಲ್ಲೆಲ್ಲಾ ಸತ್ಯವನ್ನು ನೆಲೆಗೊಳಿಸುವದಕ್ಕೂ, ಜನರು ಸತ್ಯವನ್ನೇ ಮೆಲ್ಪಂಕ್ತಿಯಾಗಿಟ್ಟುಕೊಳ್ಳುವಂತೆ ಮಾಡುವದಕ್ಕೂ ದೇವರು ಅವತರಿಸಿ ಬಂದನು ಯೇಸುಕ್ರಿಸ್ತನು ಸತ್ಯವೆಂಬ ಪಾಠವನ್ನು ಪ್ರಾರಂಭಿಸುವ ಸ್ಥಾನ ಯಾವದಂದರೆ ಶಿಷ್ಯನ ಹೃದಯದಲ್ಲಿಯೇ ಅನೇಕ ಶತಮಾನಗಳಿಂದಲೂ ಮಹಾ ಜ್ಞಾನಿಗಳು ಕೂಡ, ಪಾಪವನ್ನು ಜೈಸಲಾರೆವು, ಸತ್ಯವನ್ನು ಅನುಸರಿಸಲು ನಮ್ಮ ಕೈಲಾಗದು ಎಂದು ಮೊರೆ ಇಟ್ಟರು ಈಗಲಾದರೋ ಕಡು ಪಾಪಿಗಳಾಗಿದ್ದವರು, ಕೂಡ ಸತ್ಯಮೂರ್ತಿಯ ಶಿಕ್ಷಣದ ಫಲದಿಂದ ಕತ್ತಲೆಗೆ ಸಮಾನವಾದ ಅಸತ್ಯವು ತೊಲಗಿಹೋಗಿ ಸತ್ಯಗುರುವಿನ ಮಾದರಿಯಂತೆ ನಡೆಯುತ್ತಿದ್ದಾರೆ ಅವರ ಹಿಂದಿನ ಹಳೇ ಪಾಪದ ದುರ್ಮಾರ್ಗಗಳು ಹಿಮ್ಮೆಟ್ಟಿವೆ ಪರಲೋಕದಿಂದ ಬಂದ ದೇವ ಗುರುವಿನ ಸತ್ಯಸ್ವಭಾವವೇ ಅವರ ಜೀವಾಧಾರವಾಗಿದೆ ಪಾಪವು ಒಂದು ದೃಶ್ಯವಾದ ಹುಲಿಯಲ್ಲ, ಹಾಗಿದ್ದರೆ ತಕ್ಷಣವೇ ಬಂದೂಕಿನಿಂದ ಸುಡಬಹುದು ಇಲ್ಲವೆ ನಾಗರಹಾವಿನಂತೆ ನಮ್ಮ ಕಾಲಿಗೆ ಸುತ್ತಿಕೊಳ್ಳುವ ಪ್ರತ್ಯಕ್ಷ ವಸ್ತುವಲ್ಲ, ಹಾಗಿದ್ದರೆ ಕ್ಷಣಮಾತ್ರದಲ್ಲಿ ಅದನ್ನು ಕಿತ್ತುಹಾಕಬಹುದು ಆದರೆ ಪಾಪವು ಒಂದು ದುಷ್ಟ ಇಚ್ಛೆಯಾಗಿದೆ, ಅಂದರೆ ದೇವರಿಗೆ ವಿಧೇಯವಾಗದಂತೆ ಜೀವಾತ್ಮನನ್ನು ಬಂಧಿಸಿರುವಂಥ ಕಠೋರ ಶಕ್ತಿಯಾಗಿದೆ ಮನುಷ್ಯರೆಲ್ಲರು ಇದಕ್ಕೆ ಸೋತುಹೋದ್ದರಿಂದ ಯೇಸುಸ್ವಾಮಿಯು ಬಂದು ಜಯಹೊಂದಿದನು ಒಂದು ಪಾಪದ ಇಚ್ಛೆಯಾದರೂ ಆತನಲ್ಲಿ ಹುಟ್ಟಲಿಲ್ಲ ಆತನು ಮದುವೆಯಾಗಲಿಲ್ಲವಾದ್ದರಿಂದ ನಮಗೆ ಆ ವಿಷಯದಲ್ಲಿ ಮಾದರಿ ತೋರಿಸುವದು ತಪ್ಪಿತೆಂದು ಕೆಲವರು ವಾದಮಾಡಿಕೊಳ್ಳುವರು ಆದರೆ ಜನರು ಮದುವೆ ಮಾಡಿಕೊಳ್ಳುವದಾದರೂ ಮದುವೆ ಇಲ್ಲದೆ ಇರುವದಾದರೂ ಮುಕ್ತಿ ಹೊಂದುವದಕ್ಕೆ ನಿಜಕಾರಣವಲ್ಲ, ಯಾವ ಸ್ಥಿತಿಯಲ್ಲಿದ್ದಾಗ್ಯೂ ಸತ್ಯವನ್ನು ಅನುಸರಿಸುವದರಿಂದಲೇ ಮುಕ್ತಿಗೆ ಬಾಧ್ಯನಾಗುತ್ತಾನೆ ಪಾಪಿಯಾದ ಮನುಷ್ಯನು ದಿನಾಲು ಈ ಸತ್ಯ ಗುರುವನ್ನು ಹಿಂಬಾಲಿಸುತ್ತಾ ಆತನು ನಡೆದು ತೋರಿಸಿರುವ ಪರಿಶುದ್ಧ ಹೆಜ್ಜೆಗಳ ಮೇಲೆ ನಮ್ಮ ಹೆಜ್ಜೆಗಳನ್ನಿಡುತ್ತಾ ನಡೆಯುವದಕ್ಕೆ ಆಶೆಪಟ್ಟರೆ ತಕ್ಷಣವೇ ಆತನು ನಮ್ಮ ಹೃದಯದಲ್ಲಿ ಸತ್ಯದ ಉಪಾಧ್ಯನಾಗಿ ಕುಳಿತುಕೊಂಡು ನಮ್ಮನ್ನು ಸತ್ಯದಲ್ಲಿ ಬೆಳೆಸುವನು

ಒಳದೇಶದ ವೃತ್ತಾಂತಗಳು

ಪ್ಲೇಗ್ ರೋಗವು ರಾಜಧಾನಿಯಲ್ಲಿ ಪುನಃ ಕಾಣಿಸಿಕೊಂಡಿರುವುದು ಇದುವರಿವಿಗೂ ೪—೬ ಮರಣಗಳಾಗಿರುತ್ತವೆ

ಮಂಡ್ಯದ ತಾಲ್ಲೋಕಿಗೆ ಸೇರಿದ ಶಿವಪುರದ ಮುಸಾಫರಖಾನೆಯನ್ನು ಬದಲಾಯಿಸುವುದಕ್ಕೆ ೧೬೪೫ ರೂಪಾಯಿ ಸ್ಯಾಂಕ್ಷನ್ ಆಗಿರುತ್ತವೆ

ರಾಜಧಾನಿಯ ವೀರಣ್ಣನ [illegible]ನಲ್ಲಿಯೂ ನಜರಬಾದಿನಲ್ಲಿಯೂ ಸರಕಾರಿ [illegible] ಕಟ ಡಗಳನ್ನು [illegible] [illegible]ಕ್ಕೆ ಸರಕಾರದವರು ಒಪ್ಪಿರುತ್ತಾರೆ

ಶಿವಮೊಗ್ಗೆ ಟವನ್‌ಗೆ ನಲ್ಲಿಗಳ ಮೂಲಕ ನೀರು ಸರಬರಾಯಿಮಾಡುವ ಕಾಮಗಾರಿಯು ಪ್ರಾರಂಭವಾಗಿರುತ್ತದೆ ಆಗಲೇ ನೂರಾರು ಒಡ್ಡರು ಕೂಲಿಕ್ಕೆ ನಿಂತಿರುತ್ತಾರೆ ಅನೇಕ ದಿನಗಳಿಂದ ಅಪೇಕ್ಷಿಸಲ್ಪಟ್ಟ ಕಾರ್ಯವು ಕೈಗೂಡುವಂತಿದೆಯೆಂದು ಶಿವಮೊಗ್ಗೆಯ ಪ್ರಜೆಗಳು ಸಂತೋಷಪಡುತ್ತಿರುವರು

ದಸರಾ ಉತ್ಸವಕ್ಕೆ ಯೂರೋಪಿಯನ್ ಅತಿಥಿಗಳ ಸಂಖ್ಯೆ ಬಹಳಿಲ್ಲವಷ್ಟೆ ಇವರು ಇದೇ ತಿಂಗಳು ಹದಿನೈದನೇ ತಾರೀಖಿನ ದಿನ ರಾಜಧಾನಿಯನ್ನು ತಲಪುವರು ಇಲ್ಲಿ ಹನ್ನೆರಡು ದಿನಗಳಿದ್ದು ಕುದುರೆ ಜೂಜು, ಪೋಲೋ ಚೆಂಡಾಟ, ಜಂಪಾನದ ಆಟ ಮೊದಲಾದ ವಿನೋದಗಳನ್ನು ನೋಡುವರು ಸ್ಕೇಟಿಂಗ್ ರಿಂಕ್ ಮತ್ತು ಬಾಲ್ ನರ್ತನವಿರುತ್ತದೆ ಈ ಸಲ ಸುಮಾರು ೮೦ ಮಂದಿ ಅತಿಥಿಗಳು ಬರುವರೆಂದು ಕೇಳುತ್ತೇವೆ

ದೊಡ್ಡಬಳ್ಳಾಪುರದ ಕೆಮ್ಪಣ್ಣ ವಿದ್ಯಾ ಬಳಿ ತಾ ೨೫ ರಲ್ಲಿ ಒಂದು ಶ್ರವದ ತಲೆಬುರುಡೆ ಒಂದು ಕಡೆ, ಕೈಕಾಲುಗಳು ಒಂದು ಕಡೆ, ಕೂದಲು ಗಳು ಒಂದು ಕಡೆ, ಮತ್ತೊಂದು ಕಡೆ ಶ್ರವದ ಕೋಟುಗಳು ಬ್ಯಾಗ್ ಸಹಿತ ಇದ್ದವು ಆ ಕೋಟಿನಲ್ಲಿ ೧೬ ನೇ ತಾರೀಖಿನಲ್ಲಿ ಪಡೆದ ಪ್ಯಾಸ್‌ಪೋರ್ಟ್ ೧೭ ನೇ ತಾರೀಖಿನ ಗುಂತಕಲ್ಲಿನಿಂದ ಬೆಂಗಳೂರಿಗೆ ಟಿಕೇಟು ಸಹ ಇತ್ತು ಆತನ ಸ್ಥಳ ವಗೈರೆ ಇನ್ನು ಪತ್ತೆ ಆಗಲಿಲ್ಲ ಈ ರೀತಿ ಬಿದ್ದಿದ್ದ ಶ್ರವವನ್ನು ನೋಡಿ ಎಲ್ಲರೂ ಮಹಾ ದುಃಖಪಟ್ಟರು ಶ್ರವದ ತಲೆಬುರುಡೆ ಕೈಕಾಲುಗಳು ಜಮಾಯಿಸಿ ಬಗ್ಗೆ ಅಲ್ಲಿನ ಆಸ್ಪತ್ರೆಯಲ್ಲಿ ಇಟ್ಟಿರುತ್ತಾರೆ

ಎರಡು ಮೂರು ವಾರಗಳ ಹಿಂದೆ ಮೈಸೂರು ದೇಶದಲೆಲ್ಲಾ ಭಾರಿ ಮಳೆಗಳಾದವಷ್ಟೆ ಈ ಮಳೆಗಳಿಂದ ಕಾವೇರಿ ನದಿಯಲ್ಲಿಯೂ ಕಪಿಲಾ ನದಿಯಲ್ಲಿಯೂ ವಿಪರೀತವಾದ ಪ್ರವಾಹಗಳು ಬಂದು ಕೆಲವು ಅನಾಹುತಗಳನ್ನು ಮಾಡಿವೆ ಕನ್ನಂಬಾಡಿ ಹತ್ತಿರವಿರುವ ಕೃಷ್ಣರಾಜಕಟ್ಟೆ ಅಣೆಕಟ್ಟು ಒಡೆದು ಹೋಗಿರುವುದರಿಂದ ಸುಮಾರು ೫೦೦೦ ಎಕರೆ ತರೀಜಮೀನು ಪಾಳು ಬೀಳುವಂತಿದೆ ಈ ಕಟ್ಟೆಯನ್ನು ರಿಪೇರಿಮಾಡುವುದಕ್ಕೆ ೨೦೦೦ ಕೂಲಿಗಳೂ ಆರು ಮಂದಿ ಎಂಜಿನಿಯರುಗಳೂ ಕೆಲಸ ಮಾಡುತ್ತಿರುತ್ತಾರೆ ನಂಜನಗೂಡು ತಾಲ್ಲೋಕಿನ ಹತ್ತಿರವಿರುವ ಹುಲ್ಲಹಳ್ಳಿ ಗ್ರಾಮದ ಕಪಿಲಾ ನದಿಯ ಅಣೆಕಟ್ಟು ಸ್ವಲ್ಪ ಒಡೆದು ಹೋಗಿದೆಯೆಂದು ಸಮಾಚಾರ ಬಂದಿರುವುದು.

ಚಾಮರಾಜನಗರದ ಒಬ್ಬ ಬಾತ್ಮಿದಾರರು ಈ ರೀತಿ ಬರೆಯುತ್ತಾರೆ —ಹುಲಿ ಮುತ್ತಿಗೆಯಿಂದ ತಪ್ಪಿಸಿಕೊಂಡು ಓಡಿಹೋದ ಹುಲಿಯು ತಾಲ್ಲೂಕಿನಲ್ಲೆಲ್ಲಾ ಬಹು ಹಾವಳಿಮಾಡಿ ಜನರನ್ನು ಹೊಡೆಯುತ್ತಲೂ ದನಕರುಗಳನ್ನು ಕೊಲ್ಲುತ್ತಲೂ ಇರುವುದರಿಂದ ರೈತರಿಗೂ ಗೋಕಾಯಿಗಳಿಗೂ ಅತಿ ತೊಂದರೆಯಾಗಿರುತ್ತೆ ಜಂಗಲಿಗೆ ಹೋಗಲು ತುಂಬಾ ಭಯವಾಗಿದೆ ಆಗಲೆ ಇದರಿಂದ ಏಟು ತಿಂದ ೨—೩ ಜನರು ಸತ್ತುಹೋದರು ಜನರು ತಲ್ಲಣಿಸುತ್ತಿರುವುದನ್ನು ನೋಡಿ ಅ|| ಕ|| ಸಾಹೇಬರು ಹಿಂದೆ ಹುಲಿ ಮುತ್ತಿಗೆಯಲ್ಲಿ ನೆರವಾಗಿ ಮಾಡಿ ಕೀರ್ತಿಪಡೆದ ಗೇಂ ಸೂಪರ್‌ವೈಜರ್ ಮ|| ಚಂಗಪ್ಪನವರಿಗೆ ಹುಲಿ ಹೊಡೆಯಲು ಅಪ್ಪಣೆಕೊಟ್ಟಿರುವರೆಂತ ವರ್ತಮಾನ ಕೇಳುತ್ತೇವೆ ಇಂಥ ಹುಲಿಯನ್ನು ಬೇಗ ಹೊಡೆಯುವರಾಗಿ ನಂಬಿದ್ದೇವೆ

ಆನೆಕಲ್ಲಿನಲ್ಲಿ ಲಂಡನ್ ಮಿಷನ್ ಸಂಘದವರು ಸುಮಾರು ೨೨ ವರ್ಷಗ[illegible] [illegible]ದೇಸ ರ ಒಂದು ಸ್ಕೂಲನ್ನು ಸ್ಥಾಪಿಸಿ ನಡಿಸುತ್ತಿದ್ದರಷ್ಟೆ [illegible] [illegible]ದರಾದ ಎಡಗ್ಗೆ ಕೆಂಚಪ್ಪನೆಂ[illegible]

[illegible] ಒಬ್ಬ

ಕ[illegible] ಅಜಾಗ್ರತೆಯಿಂದ ಎಂಜಿನ್‌ಗೆ ಸಿಕ್ಕಿ ಮೃತನಾದನು ತಂದೆತಾಯಿಗಳು ತಕ್ಕ ಎಚ್ಚರಿಕೆ ಇಲ್ಲದೆ ಹುಡುಗನನ್ನು ಅಪಾಯಕ್ಕೆ ಸಿಕ್ಕಿಸಿದ ಹಾಗಾಯಿತು ಮುನಿಸಿಪಾಲಿಟಿ ಒಳಗೆ ಕೆಲವರು ಚರ್ಮದ ಮಂಡಿಗಳನ್ನಿಟ್ಟು ನೀರು ಸೇದುವದಕ್ಕೆ ಹೋಗುವವರಿಗೆ ಬಹು ಅಸಹ್ಯವನ್ನು ಅನಾರೋಗ್ಯವಾದ ಕೆಟ್ಟನಾತವನ್ನು ಕೊಡುತ್ತಿರುವದನ್ನು ಆಗಾಗ್ಗೆ ವೈಸ್‌ಪ್ರೆಸಿಡೆಂಟರವರ ಗಮನಕ್ಕೆ ತಂದಾಗ್ಯೂ ಈ ಬಾಧೆ ನಿವಾರಣೆಯಾಗಲಿಲ್ಲ ಅಲ್ಲದೆ ಅಲ್ಲಲ್ಲಿ ಕೊಳೆತು ನಾರುವ ನೀರು ತುಂಬಾ ಅನಾರೋಗ್ಯವಾಗಿದೆ ಮುಖ್ಯವಾಗಿ ಸಂತೆ ರಸ್ತೆಗಳಲ್ಲಿ ಈ ಅಸಹ್ಯಕರವಾದ ನೀರು ಯಾವಾಗಲೂ ನಿಂತಿರುತ್ತೆ ಅನೇಕ ವರ್ತಕರ ಮತ್ತು ಇತರರ ಮಕ್ಕಳು ಬೀದಿಗಳಲ್ಲಿ ಅಸಹ್ಯಪಡುತ್ತಾರೆ ಮಾರ್ಗದಲ್ಲಿ ತಿರುಗುವವರು ಮೂಗುಗಳನ್ನು ಹಿಡಿದುಕೊಂಡು ತಿರುಗಾಡಬೇಕಾಗಿದೆ ಕುಳ್ಳನಕಟ್ಟೆಯಿಂದ ಹರಿಯುವ ಕೋಡಿನೀರಿನ ಕಾಲುವೆ ತುಂಬಿ ಕೆಲವು ವೈಶ್ಯರ ಅಂಗಳದೊಳಕ್ಕೆ ಹರಿಯುತ್ತದೆ ಇದರಿಂದ ಮನೆಗಳು ಶೀತವಾಗಿ ಅನಾರೋಗ್ಯಕ್ಕೆ ಆಸ್ಪದವಾಗುವದು ಬುಧವಾರದ ಸಂತೆಯಲ್ಲಿ ಒಬ್ಬ ಒಕ್ಕಲಿಗನು ಮಂಕ್ರಿ ತುಂಬಾ ದೊಡ್ಡ ಪರಂಗಿ ಹಣ್ಣುಗಳನ್ನು ಮಾರುವದಕ್ಕೆ ತಂದಾಗ್ಗೆ ಕೆಲವು ಮುಸಲ್ಮಾನರೂ ಇತರರೂ ಸೇರಿ ಲೂಟಿಮಾಡಿದಂತೆಯೂ ಆ ಬಡ ಮನುಷ್ಯನು ತುಂಬಾ ಗೋಳಾಟಮಾಡಿದ ಹಾಗೂ ಕೇಳಲಾಗಿದೆ ಪೋಲೀಸಿನವರು ಅಲ್ಲಿ ಇದ್ದಾಗ್ಯೂ ಸಂತೆಯಲ್ಲಿ ಇಂಥ ಅನ್ಯಾಯ ಲೂಟಿ ನಡೆದದ್ದು ಆಶ್ಚರ್ಯವಾಗಿದೆ ಇಂಗ್ಲಿಷ್ ಸರ್ಕಾರದವರ ಕಾಲದಲ್ಲಿ ಇನ್ನೂ ಕಂಟಕರಿಗೆ ಅವಕಾಶವಿರುವುದು ಮಹಾ ವ್ಯಸನಕರವಾಗಿದೆ ಈ ಊರಿಗೆ ತಂಜಾವೂರು ಪ್ರಸಿದ್ಧ ಸಂಗೀತ ವಿದ್ವಾಂಸರಾದ ವೇದಮಣಿಶಾಸ್ತ್ರಿಯವರು ಬಂದು ವೆಸ್ಲಿಯನ್ ಚರ್ಚಿನಲ್ಲೂ ಕೃಷ್ಣರಾಜ ರೀಡಿಂಗ್ ರೂಮಿನಲ್ಲೂ ಭಜನೆ ನಡಿಸಿದರು ಇವರು ಅರವ ಭಾಷೆಯಲ್ಲಿ ತಿಳಿಸಿ ವಿವರಿಸಿದ ಭಗವಂತನ ಲಕ್ಷಣಗಳೂ ಎಲ್ಲಾ ಸಭಿಕರಿಗೆ ತೃಪ್ತಿಕರವಾಗಿದ್ದವು ಇವರ ಸಂಗೀತವು ಬಹು ಚೆನ್ನಾಗಿತ್ತು ಆದ್ದರಿಂದ ಇವರ ವಿಷಯ ನಮ್ಮ ಅಮುಲ್ದಾರರವರೂ ಇತರ ದೊಡ್ಡ ಮನುಷ್ಯರೂ ತುಂಬಾ ಪ್ರೀತಿಯನ್ನೂ ಮರ್ಯಾದೆಯನ್ನೂ ಪ್ರಕಟಿಸತಕ್ಕ ದ್ರವ್ಯ ಸಹಾಯವನ್ನು ಮಾಡಲಾಯಿತು ಈ ಶಾಸ್ತ್ರಿಗಳು ತಂಜಾವೂರು ಕ್ರೈಸ್ತ ವೇದನಾಯಗಂ ಶಾಸ್ತ್ರಿಗಳವರ ಮೊಮ್ಮಕ್ಕಳಾಗಿ ಭಗವಂತನ ಸೇವೆಯಲ್ಲಿ ಕುಟುಂಬಸಮೇತ ದೇಶಸಂಚಾರ ಮಾಡತಕ್ಕವರಾಗಿದ್ದಾರೆ ಇಲ್ಲಿನ ಕಸಾಬರು ಯಾವಾಗಲೂ ಒಳ್ಳೆ ಮಾಂಸ[illegible]ವುದಿಲ್ಲ, ಕ್ರಯ ಜಾಸ್ತಿಯಾಗಿದ್ದರೂ ಕೆಟ್ಟದನ್ನೇ ಮಾರುತ್ತಾರೆ

ಮದ್ದಗಿರಿ —ಕೆಲವು ದಿವಸಗಳ ಕೆಳಗೆ ಸೋನೆ ಮಳೆ ಬಂತೆಂದೂ, ತಕ್ಕ ಹದವಿಲ್ಲವೆಂದೂ ಬರೆಯುತ್ತಲ್ಲ. ಸೋನೆ ಮಳೆ ನಿಂದ ಕೂಡಲೇ ಒಂದು ರಾತ್ರಿ ವಿಶೇಷ ಮಳೆ ಬಂದು ಕೆಲವು ಕೆರೆಗಳಿಗೆ ೧—೨—೩ ತಿಂಗಳುಗಳ ನೀರು ಬಂತು ಈಚೆಗೆ ತಿರುಗಿ ಮಳೆ ಬಾರದೆ ನಿಂತು ಹೋಗಿದೆ ಬಿಸಲು ಬಹು ಜೋರಾಗಿದೆ ಶಾಖ ಸಹಿಸಲಾಗದು ಈ ದಿನ ಮಾತ್ರ ಬೆಳಗಿನಿಂದ ಮೋಡಗಳು ಮುತ್ತಿಕೊಂಡಿವೆ ಹನಿಗಳು ಮಾತ್ರ ಇಲ್ಲ ಮುಂದೆ ಬಂದಾವು ಸಂಪಾಪುರದಲ್ಲಿ ಇಬ್ಬರು ಕಳವು ಮಾಡಿ ಶಿಕ್ಷೆದರೆಂದು ಬರದು ಇತ್ತಲ್ಲಾ, ಅವರಿಗೆ ಮೂರು ತಿಂಗಳುಗಳ ಸಜ ವಿಧಿಸಲ್ಪಟ್ಟಿದೆ ಎಂದು ಕೇಳುತ್ತೇವೆ ನಿಟ್ರಹಳ್ಳಿಯಲ್ಲಿರುವ ತಿಮ್ಮಕ್ಕ ಎಂಬವಳಿಗೆ ಸರ್ಕಾರದವರು, ನಿರ್ಗತಿಕಳೆಂದು ತಿಳಿದು, ದಿನ ೧ ಕ್ಕೆ ೧೨ ಚಟಾಕು ರಾಗಿ ಕೊಡಿಸುತ್ತಿದ್ದರು ಯಾವ ಕಾರಣದಿಂದಲೋ ನಿಲ್ಲಿಸಿರುವರು ಧಾರಣಮಾಸಿಗಳು ಜಡಾವಾಗಿಯೇ ಇವೆ ಅವಳು ಸಾಯುವ ವರಗೂ

ವವಸ್ಥೆ ಬ್ರಿಟಿಷ್ ರಾಜ ಭಾರತ[illegible] [illegible]ಸುವ ಉದಬೂರು ಗ್ರಾಮದಲ್ಲಿ [illegible] ಕುರಿತು ಒಂದು ಉಪನ್ಯಾಸವನ್ನು ಮಾಡಿ ರಾಜಭಕ್ತ[illegible] [illegible]ಗುಸಾರ ರ[illegible] ಕ್ತರಾಗಿರಬೇಕೆಂದೂ ನಾವು ಆಚರಿಸುವ ಈ ಉತ್ಸವವು ನಮ್ಮ ರಾಜಭಕ್ತಿಗೆ ಒಂದು ಗುರುತಾಗಿರುತ್ತದೆಂದೂ ತಿಳಿಸಿದರು ತರುವಾಯ ರಾಜನಂ ರಕ್ಷಿಸು ಎಂಬ ಸಂಗೀತವು ಪಾಠೋಣವಾಯಿತು ಆಗ್ಗೆ ಕೆಲವರು ಹೊರಗ ಪಟಾಕಿಗಳನ್ನು ಹಾರಿಸಿದರು ವಾದ್ಯಗಾರರು ವಾದ್ಯವನ್ನು ಬಾರಿಸಿದರು ಬಾಲಕರಿಯರಿಗೂ ಸರ್ವರಿಗೂ ಸಕ್ಕರೆ ಕಡ್ಲೆ ಬುರುಗು ಗಂಧ ಹೂವು ತಾಂಬೂಲ ಹಂಚೋಣವಾಯ್ತು ಸರ್ವರೂ ಈ ಎಂಪೈರ್‌ಡೇ ಉತ್ಸವಕ್ಕಾಗಿ ಹರ್ಷಿತರಾಗಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು

ಮಂಡ್ಯ.

ಎಂಪೈರ್ ಡೇ ಮಹೋತ್ಸವವು ಆಂಗ್ಲೇಯ ಸಾರ್ವಭೌಮರಿಂ ದೊರೆಯುತ್ತಲಿರುವ ಆಕ್ಸ್ತಿಯವಾದ ಸುಖ ಸಂಪತ್ತನ್ನು ಅತ್ಯಾನಂದದಿಂದ ಅನುಭವಿಸಿರುವುದರಿಂದ ಸಾರ್ವಭೌಮರ ರಾಜ್ಯಭಾರದ ಜ್ಞಾಪಕಾರ್ಥವಾಗಿ ಇಲ್ಲಿನ ವೆಸ್ಲಿಯನ್ ಮಿಷನ್ ಇಂಗ್ಲೀಷ್ ಸ್ಕೂಲ್ ಕಟ್ಟಡದಲ್ಲಿ ಗೌ|| ಕನ್ನಡ ಹಿಂದೂಸ್ಥಾನಿ ವಿದ್ಯಾರ್ಥಿಗಳೆಲ್ಲರೂ ಕಳೆದ ಸೋಮವಾರ ೨೪ ನೇ ತಾ|| ಸಾಯಂಕಾಲ ಕೃತಜ್ಞತಾಭಾವದಿಂದ ತಮ್ಮಲ್ಲಿರುವ ರಾಜ ಭಕ್ತಿ ವಿಶ್ವಾಸಗಳನ್ನು ತೋರ್ಪಡಿಸಿಕೊಳ್ಳುವ ಹಾಗೆ ಕೂಡಿ ಬಂದಿದ್ದರು ಆ ಸಮಯದಲ್ಲಿ ಇಲ್ಲಿನ ಉಪದೇಶಿಯವರು ಅಗ್ರಾಸನವನ್ನು ಅಲಂಕರಿಸಿ ಪ್ರಾರ್ಥನೆಯ ಮೂಲಕ ಮಹೋತ್ಸವವನ್ನು ಪ್ರಾರಂಭಿಸಿದರು ಇಂಗ್ಲೀಷ್ ಸ್ಕೂಲ್ ಹೆಡ್ಮಾಸ್ಟರಾದ ಮ|| ಶ್ರೀಕಂಠಯ್ಯನವರು ದಿವಂಗತರಾದ ವಿಕ್ಟೋರಿಯಾ ಮಹಾರಾಜ್ಞಿಯವರ ಮತ್ತು ಈಗಿನ ಸಾರ್ವಭೌಮರವರ ಗುಣ ಕಥನವನ್ನು ಮಾಡಿ ಈ ಮಹೋತ್ಸವದ ದಿನದ ಉದ್ದೇಶ್ಯವನ್ನು ತಿಳಿಸಿದ್ದಲ್ಲದೆ ಸಾರ್ವಭೌಮರವರಿಗೂ ನಮ್ಮನ್ನಾಳುವಂಥ ಮಹಾರಾಜರವರಿಗೂ ಮಂಗಳವನ್ನುಂಟು ಮಾಡಲೆಂದು ನೂತನವಾಗಿ ಮಾಡಿದ್ದ ಒಂದು ಶ್ಲೋಕವನ್ನು ಹೇಳಿ ಭಗವಂತನನ್ನು ಪ್ರಾರ್ಥಿಸಿದರು ಅಲ್ಲದೆ ಇಂಗ್ಲೀಷ್ ಸ್ಕೂಲ್ ವಿದ್ಯಾರ್ಥಿಗಳಲ್ಲಿ ಒಬ್ಬನು ಇಂಗ್ಲೀಷ್ ಪದ್ಯಗಳನ್ನು ಮತ್ತೊಬ್ಬನು ಸಾರ್ವಭೌಮರ ವಿಷಯವಾಗಿ ಕನ್ನಡ ಪದ್ಯವನ್ನು ಸಭಿಕರಿಗೆ ತಿಳಿಸಿ ಮಹದಾನಂದವನ್ನುಂಟುಮಾಡಿದರು ಇಲ್ಲಿನ ರೈಲ್ವೆ ಸ್ಟೇಷನ್ ಮಾಸ್ಟರಾದ ಮ|| ರಾಜುಗೋಪಾಲ್ ನಾಯಿಡು ಯವರು ಮತ್ತು ಅವರ ಅಸಿಸ್ಟೆಂಟರು ಇಬ್ಬರು ಉತ್ಸವಕ್ಕೆ ದಯಮಾಡಿಸಿ ಅವರುಗಳು ಪ್ರೀತಿಯಿಂದ ತಮ್ಮಲ್ಲಿರತಕ್ಕಂಥ ಗ್ರಾಮಫೋನ್ ವಾದ್ಯ ಮತ್ತು ಗಾನಗಳನ್ನು ವಿದ್ಯಾರ್ಥಿಗಳಿಗೆ ತೋರಿಸಿದ್ದಲ್ಲದೆ ನೆರದಿದ್ದ ಸಭಿಕರಿಗೆ ಮಹಾನಂದವನ್ನುಂಟುಮಾಡಿದರು ಕಡೆಯಲ್ಲಿ ಉಪದೇಶಿಗಳವರು ಸಾರ್ವಭೌಮರವರಿಗೂ ನಮ್ಮ ಮಹಾರಾಜರವರಿಗೂ ಆಯುರಾರೋಗ್ಯ ಸಂಪತ್ತುಗಳನ್ನುಂಟುಮಾಡಲೆಂದು ಬಯಸಿದರು ಸಭಿಕರು ಜಯಘೋಷವನ್ನು ಮಾಡುತ್ತಿರುವಾಗ್ಗೆ ಎಲ್ಲರಿಗೂ ಸಕ್ಕರೆ ಪುಷ್ಪತಾಂಬೂಲಾದಿಗಳು ಹಂಚಲ್ಪಟ್ಟವು

ಅಜ್ಜಂಪುರ.

ಈ ಮಹೋತ್ಸವವು, ಇಲ್ಲಿನ ಟಿ ಬಿ ಸ್ಕೂಲ್ ಕಟ್ಟಡದಲ್ಲಿ ನಡೆಸಲ್ಪಟ್ಟಿತು ಇದರ ನಿಶ್ಯಬ್ಧತೆಯು ಸಕಲರ ರಾಜಭಕ್ತಿಯನ್ನೂ ಪ್ರಕಟಗೊಳಿಸುತ್ತಿತ್ತು ಕಟ್ಟಡವು ನಾನಾ ವಿಧದ ರಮಣೀಯ ವಸ್ತುಗಳಿಂದ ಮನೋಹರವಾಗಿ ಕಂಗೊಳಿಸುತ್ತಿತ್ತು ಮೇಲ್ಭಾಗದಲ್ಲಿ ಬಾವುಟವು ಸಾರ್ವಭೌಮರ ಯಶಸ್ಸನ್ನು

ಮೇ ೨೪ ನೇ ತಾರೀಖು ಸೋಮವಾರವೆಂ[illegible] ಪುರದಲ್ಲಿರುವ ಸ್ಕೂಲುಗಳ ವಿದ್ಯಾರ್ಥಿಗಳು ನಡಿಸಿದ ಎಂಪೈರ್‌ಡೇ [illegible] ಹಳೇದಾಮುದರಿಂದ[illegible] ವನ್ನು ನಡಿಸಿದ ವಿವರಗಳನ್ನು ಈ ಕೆಳಗೆ ವ್ಯಕ್ತಪಡಿಸುತ್ತೇನೆ ಈ ಮಹೋತ್ಸವವನ್ನು ನಡಿಸಲು ಹಳೇ ತಾಲ್ಲೂಕ್ ಕಚ್ಚೇರಿಯ ಕಟ್ಟಡವನ್ನು ಯಥಾ ಯೋಗ್ಯವಾಗಿ ಅಲಂಕರಿಸಿತ್ತು ಅಲ್ಲಿ ನಡೆದ ಕೆಲಸಗಳು —ಹಳೇ ಕಚ್ಚೇರಿ ಕಟ್ಟಡದ ಮುಂಭಾಗದಲ್ಲಿ ಯೂನಿಯನ್ ಜಾಕ್ ಮತ್ತು ಮೈಸೂರು ಗೌರನ್ಮೆಂಟ್ ಬಾವುಟಗಳು ಅಲಂಕಾರವಾಗಿ ಕಟ್ಟಿದ್ದವು ಅಲ್ಲಿಗೆ ಅಮಲ್ದಾರರು ಮಹಾರಾಜ ಶ್ರೀ ಎಂ ಸದಾಶಿವರಾಯರು ಬಿ ಎ, ಬಿ ಎಲ್, ರವರೂ, ಶಟ್ಟಿವರ್ತಕರೂ, ವೈದಿಕರೂ, ತಾಲ್ಲೂಕ್ ಕಚ್ಚೇರಿಯ ಉದ್ಯೋಗಸ್ಥರೂ ಊರಿನ ಪ್ರಮುಖರೂ, ಎಲ್ಲಾ ಸ್ಕೂಲುಗಳ ಮೇಷ್ಟರುಗಳೂ, ವಿದ್ಯಾರ್ಥಿಗಳೂ ಹಾಜರಾಗಿದ್ದರು ಸರ್ವರೂ ಮಂಗಳ ವಾದ್ಯಗಳ ಸಮೇತ ಯೂನಿಯನ್ ಜಾಕಿನ ಬಳಿಗೆ ಬಂದು ನಿಂತರು ಕೂಡಲೇ ಸ್ಕೂಲ್ ವಿದ್ಯಾರ್ಥಿಗಳು ಬಂದು ಶ್ರೀ ಬ್ರಿಟಿಷ್ ಸಾರ್ವಭೌಮರ ನ್ಯಾಷನಲ್ ಆಂಥಂ ಶ್ರೀ ಮೈಸೂರು ನ್ಯಾಷನಲ್ ಆಂಥಂ ಇವುಗಳನ್ನು ಹೇಳಿ ವಂದಿಸಿದರು ಕೂಡಲೇ ನೆರೆದಿದ್ದ ಜನರು ಯೂನಿಯನ್ ಜಾಕಿಗೆ ಭಕ್ತಿಪೂರ್ವಕವಾಗಿ ವಂದಿಸಿದರು ಸಮಸ್ತ ಮಂಗಳ ವಾದ್ಯಗಳೂ ಘೋರ್ಗರೆದವು ಬಳಿಕ ಹಿಂದೂಸ್ಥಾನಿ ಸ್ಕೂಲ್ ಹಾಲಿನಲ್ಲಿ ಅಲಂಕರಿಸಿದ್ದ ದರ್ಬಾರ್ ಮಂಟಪದಲ್ಲಿ ಅಮಲ್ದಾರ್ ಮ|| ರಾ|| ಎಂ ಸದಾಶಿವರಾಯರು ಅಗ್ರಾಸನವನ್ನು ಅಲಂಕರಿಸಿದರು ಉಳಿದವರು ತಮ್ಮ ತಮ್ಮ ಉಚಿತಾಸನಗಳನ್ನು ಸ್ವೀಕರಿಸಲು ವಾದ್ಯಗಳಾದವು ಗೌ ಎ ವಿ ಸ್ಕೂಲ್ ಹೆ ಮಾಸ್ಟರ್ ಮ|| ರಾ|| ಡಿ ಎಂ ರಾಮಯ್ಯನವರು ಅಗ್ರಾಸನಾಧಿಪತಿಗಳ ಅಪ್ಪಣೆಯಂತೆ ಬ್ರಿಟಿಷ್ ಚಕ್ರಾಧಿಪತ್ಯದ ದೇಶಗಳು, ವಿಸ್ತೀರ್ಣ, ಜನಸಂಖ್ಯೆ, ಉತ್ಪತ್ತಿ, ವ್ಯಾಪಾರ, ಖನಿಜಗಳು ಮುಂತಾದ ವಿವರಣೆಗಳನ್ನೂ ೧೬೦೦ ೧೯೦೯ ರ ವರಿಗಿನ ಮುನ್ನೂರು ವರ್ಷಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯಾಧಿಪತಿಗಳು ಈ ಹಿಂದೂಸ್ಥಾನದಲ್ಲಿ ನಡಿಸಿರುವ ಪ್ರಾಮುಖ್ಯವಾದ ರಾಜ್ಯಭಾರದ ಬದಲಾವಣೆ ಮಾಡಿರುವದನ್ನೂ ಬ್ರಿಟಿಷ್ ಚಕ್ರಾಧಿಪತ್ಯದಿಂದ ನಮಗೆ ಪ್ರಾಪ್ತವಾಗಿರುವ ಅಪಾರವಾದ ಪ್ರಯೋಜನಗಳು ಎಂಬ ವಿಷಯಗಳನ್ನು ವಿಶದವಾಗಿಯೂ, ಗಂಭೀರವಾಗಿಯೂ ವಿವರಿಸಿದರು ಮ|| ರಾ|| ಆಲಂಪಲ್ಲಿ ವೆಂಕಟನಾರಣಯ್ಯ ಶಟ್ಟರು ಬ್ರಿಟಿಷ್ ನಾಗರೀಕ ಮತ್ತು ಬ್ರಿಟಿಷ್ ನಾಗರೀಕ ತನದ ಕರ್ತವ್ಯಗಳೂ ಯಾವವು ಎಂಬ ವಿಷಯಗಳನ್ನು ಲಲಿತವಾಗಿಯೂ ಸ್ವಾರಸ್ಯವಾಗಿಯೂ ವಿವರಿಸಿದರು ಮ|| ರಾ|| ಅಮಲ್ದಾರ್ ಎಂ ಸದಾಶಿವರಾಯರು ಎಂಪೈರ್‌ಡೇ ಮಹೋತ್ಸವವನ್ನು ನಡಿಯಿಸಬೇಕಾದುದು ಏತಕ್ಕೆ, ಬ್ರಿಟಿಷ್ ಸಾರ್ವಭೌಮರ ಹಿಂದಣ ಪ್ರಭುತ್ವದಲ್ಲಿ ಜನರ ಸ್ಥಿತಿ ಹೇಗೆ ಇತ್ತು ಈ ಮಹಾ ಪ್ರಭುಗಳ ಕಾಲದಲ್ಲಿ ನಮಗೆ ಲಭ್ಯವಾಗಿರುವ ಮಹೋಪಕಾರಗಳಿಂದ ನಾವು ಎಷ್ಟು ಉನ್ನತಸ್ಥಿತಿಯಲ್ಲಿರುವರು ನಾವು ರಾಜಭಕ್ತಿ ನಿರತರಾಗಿರುವುದು ಏತಕ್ಕೆ ಆವಶ್ಯ, ದೇವಭಕ್ತಿ ನಿರತರಾಗಿರುವದು ಎಷ್ಟು ಪ್ರಾಧಾನ್ಯವೋ ಆ ರೀತಿ ರಾಜಭಕ್ತಿಯೂ ಅತ್ಯಂತ ಪ್ರಾಶಸ್ತ್ಯವಾದುದು, ಇತ್ಯಾದಿ ಅನೇಕ ವಿಷಯಗಳನ್ನು ಒಳಗೊಂಡು ಅತ್ಯಂತ

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಮೇ ತಾ 22 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು ರೂ	ಧರ್ಮಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು		
ಬೆಂಗಳೂರು	505	124	11	665	121
ಕೋಲಾರ	1,082	559	30	1,936	707
ತುಮಕೂರು	903	655	69	2,022	494
ಮೈಸೂರು	278	383	17	570	248
ಹಾಸನ	611	854	36	2,314	10
ಶಿವಮೊಗ್ಗ	343	925	121	1,357	5
ಕಡೂರು	33	36		100	
ಚಿತ್ರದುರ್ಗ	262	147	4	1 508	301
ಮಾರಿಕಣಿವೆ ಸ್ಯಾನಿಟರಿಂ	157	211		141	
ಒಟ್ಟು	1,164	3,897	281	10,121	1,886

ಗುಂಟೂರು ದಂಗೆಯ ವಿಷಯ ಸರಕಾರಿ ಹುಕುಂ

ಗುಂಟೂರು ದಂಗೆಯಲ್ಲಿ ಸರಕಾರಿ ನೌಕರರ ನಡತೆಯ ವಿಷಯ ರಿಪೋರ್ಟ್ ಬರೆವುದಕ್ಕೆ ಮಿ॥ ಹಾರ್ಟ್ ಎಂಬವರನ್ನು ಮದರಾಸ್ ಸರಕಾರದವರು ನೇಮಿಸಿದ್ದರು. ಇವರು ಎಲ್ಲವನ್ನು ವಿಚಾರಿಸಿ ರಿಪೋರ್ಟ್ ಕೊಟ್ಟಿರುವುದೇನೆಂದರೆ —

ಮ್ಯಾಜಿಸ್ಟ್ರೇಟರಾದ ಕರ್ಸಾಸ್ಪ್ರ ನಡತೆ (ಇವರು ಪಾರಸಿಯವರು) ದಂಗೆಯಾಗುತ್ತಿರುವ ಸುದ್ದಿಯನ್ನು ಕೇಳಿ ಮಿ ಕರ್ಸಾಸ್ಪ್ರು ಕಾಲವಿಳಂಬ ಮಾಡದೆ ದಂಗೆಯ ಸ್ಥಳಕ್ಕೆ ಹೋದರು. ಆದರೆ ಅಲ್ಲಿ ಅವರು ದಂಗೆಯನ್ನು ನಿಲ್ಲಿಸುವುದಕ್ಕೋಸ್ಕರ ಯಾವ ಪ್ರಯತ್ನವನ್ನು ಮಾಡಿದಂತೆ ಕಾಣುವುದಿಲ್ಲ. ವಿಪರೀತವಾದ ದೊಂಬಿಯಾಗುತ್ತಿರುವಾಗ ಇವರು ಛತ್ರದಲ್ಲಿ ಅವಿತುಕೊಂಡು ಎಲ್ಲವನ್ನು ವಿಚಾರಿಸುತ್ತ ನಿಂತಿದ್ದಾಗಿ ತಿಳಿಸಿದರು. ಯಾವಾಗ ದಂಗೆಕೋರರು ಮ್ಯಾಜಿಸ್ಟ್ರೇಟರ ಬೆಂಗಾವಲಿಗಾಗಿ ಬಂದಿದ್ದ ಜವಾನರನ್ನು ಹೊಡೆದರೋ ಅದೇ ಸಮಯದಲ್ಲಿ ಮಿ॥ ಕರ್ಸಾಸ್ಪ್ರು ಬಾಗಿಲನ್ನು ಹಾಕಿಕೊಂಡು ವೇಷ ಮರಿಸಿಕೊಂಡು ಯಾರಿಗೂ ಗೊತ್ತಾಗದಂತೆ ಜಾರಿಕೊಂಡು ಗ್ರಾಮಕ್ಕೆ ಹೋಗಿ ರಾತ್ರಿಯನ್ನೆಲ್ಲಾ ಕಳೆದರು. ಪೋಲೀಸ್ ಸೂಪರೆಂಟರಾದ ಮಿ ಸುಬ್ಬರಾಯರಿಗೆ ಫರ್ಮಾಯಿಸಿ ಆಗಿರುವಾಗ್ಗೆ ಮಿ॥ ಕರ್ಸಾಸ್ಪ್ರು ಧೈರ್ಯಶಾಲಿಯಾಗಿ ತಮ್ಮ ಡ್ಯೂಟಿಯ ಮೇಲೆ ನಿಲ್ಲದೆ ಹೋದದ್ದು ಅವರಲ್ಲಿರುವ ಅಸಾಮರ್ಥ್ಯವನ್ನೂ ಹೇಡಿತನವನ್ನೂ ವ್ಯಕ್ತಪಡಿಸುತ್ತದೆಂಬದಾಗಿ ಸರಕಾರದವರು ಅಭಿಪ್ರಾಯಪಟ್ಟು ಅವರನ್ನು ಅಸಿಸ್ಟೆಂಟ್ ಕಲೆಕ್ಟರ್ ದರ್ಜೆಗೆ ರಿವರ್ಸ್ ಮಾಡಿರುತ್ತಾರೆ. ಅವರಿಗೆ ಸ್ವತಂತ್ರವಾದ ಮ್ಯಾಜಿಸ್ಟ್ರೇಟರ ಅಧಿಕಾರವಿಲ್ಲ.

ಪೋಲೀಸ್ ಸೂಪರಿಂಟೆಂಡೆಂಟ್ ಮಿ॥ ಸುಬ್ಬರಾಯರ ನಡತೆ ಅನಂತರ ಮಹಾ ಸುದ್ದಿಯನ್ನು ಕೇಳಿ ದಂಗೆಯಸ್ಥಳಕ್ಕೆ ... ಬಾಲಕ ಬಾಲಿಕೆಯರು ಬಂದರು. ಆದರೆ ..., ಹೊಂಬಿನಹಣ್ಣು ಹಂಚಲ್ಪಟ್ಟವು. ಅತಿ ಸಂತೋಷದಿಂದ ಸಭೆಯು ಬರಖಾಸ್ತಾಯಿತು.

ಚನ್ನರಾಯಪಟ್ಟಣ

ಈ ವಾರ ೨೪ ನೇ ಸೋಮವಾರ ದಿವಸ ಎಂಪೈರ್ ಡೆ ಮಹೋತ್ಸವವನ್ನು ನಮ್ಮ ಅಮಲ್ದಾರರು, ಎ ವಿ ಸ್ಕೂಲು ಹೆಡ್ಮಾಸ್ಟರು ಸ ವಿಜನ್ ...ರರು ಡಾಕ್ಟರು, ಯಲ್ಲಿಯ ಸಬ್ರಿಜಿಸ್ಟ್ರಾರ್. ಸ್ಕೂಲು ಮಾಸ್ಟರುಗಳು ಸಹಾ ಎಲ್ಲರೂ ಸೇರಿ ಇಲ್ಲಿನ ಮುಸಾಫರ ಬಂಗಲೆಯಲ್ಲಿ ಆ ದಿವಸ ಮಧ್ಯಾಹ್ನ ೩ ಘಂಟೆ ಹೊತ್ತಿನಲ್ಲಿ ಬಾಲಕರಿಂದ ನಾನಾ ವಿಧವಾದ ಆಟಗಳನ್ನು ಆಡಿಸಿ ಸಂತೋಷಪಟ್ಟು ಸಾಯಂಕಾಲ ೬ ಘಂಟೆ ಹೊತ್ತಿನಲ್ಲಿ ನಮ್ಮ ಅಮಲ್ದಾರ್ ಮೆ॥ ಶ್ರೀನಿವಾಸರಾಯರು ಬಂಗಲೆ ಮುಂಭಾಗಕ್ಕೆ ಸರ್ವರನ್ನೂ ಬರಮಾಡಿಕೊಂಡು ಕ್ವೀನ್ ವಿಕ್ಟೋರಿಯಾ ಮಹಾರಾಜ್ಞಿಯವರ ಚರಿತ್ರೆಯನ್ನೂ, ಎಡ್ವರ್ಡ್ ಸಾರ್ವಭೌಮರ ರಾಜ್ಯಭಾರದ ವಿಚಾರಗಳನ್ನೂ, ಸರ್ವರಿಗೂ ತಿಳಿಯುವಂತೆ ಕನ್ನಡದಲ್ಲಿ ಹೇಳಿ ಅವರುಗಳ ಭಾವ ಚಿತ್ರ ಪಟಗಳನ್ನೂ ನಮ್ಮ ಶ್ರೀಮನ್ ಮಹಾರಾಜ ಕೃಷ್ಣರಾಜ ವಡೆಯರ್ ಬಹದ್ದೂರ್ ಜಿ ಸಿ ಯಸ್ ಐ ರವರ ಭಾವ ಚಿತ್ರವನ್ನೂ ಸಹ ತರಿಸಿ ಆ ಪಟಗಳಿಗೆ ವಿಧವಿಧವಾಗಿ ಹೂವಿನ ಹಾರಗಳನ್ನು ಹಾಕಿ ಇಲ್ಲಿನ ವೆಸ್ಲಿಯನ್ ಮಿಷನ್ ಗರ್ಲ್ಸ್ ಸ್ಕೂಲು ಬಾಲಕಿಯರಿಂದ ಎಡ್ವರ್ಡ್ ಸಾರ್ವಭೌಮರ ಮತ್ತು ನಮ್ಮ ಮಹಾರಾಜರವರ ಶ್ರೇಯಃಪ್ರಾರ್ಥನೆ, ಮತ್ತು ಮಂಗಳ ಮುಂತಾದ ಹಾಡುಗಳನ್ನು ಸರ್ವರಿಗೂ ಆನಂದವುಂಟಾಗುವಂತೆ ಹಾಡಿಸಿದರು. ನಂತರ ಸರ್ವರು ತಮ್ಮ ತಮ್ಮ ರಾಜಭಕ್ತಿವಿಶ್ವಾಸಗಳನ್ನು ನಡಿಸಿದ ಬಳಿಕ ಸರ್ವರೂ ೩ ಬಾರಿ ಸಂತೋಷಸೂಚಕವಾದ ಜಯಘೋಷಗಳನ್ನು ಮಾಡಿದರು. ಬ್ಯಾಂಡ್‌ವಾದ್ಯಗಳು ಮೊಳಗುತ್ತಾಯಿದ್ದವು. ಆಟದಲ್ಲಿ ಹುಡುಗರಿಗೆಲ್ಲಾ ಬಹುಮಾನಗಳನ್ನು ಕೊಟ್ಟಬಳಿಕ ಬಾಲಕ ಬಾಲಕಿಯರೇ ಆದಿಯಾಗಿ ಸರ್ವರಿಗೂ ಮಿಠಾಯಿ, ಪಟಾಕಿ, ಹೊಂಬಿನಹಣ್ಣು ಮುಂತಾದ್ದೆಲ್ಲಾ ಹಂಚಲ್ಪಟ್ಟು ಬ್ಯಾಂಡಿನವರ ಕೈಯಲ್ಲಿ ಮಹೋ ಹರವಾಗಿ ಸಲಾಂಬಾಜಾ ಮಾಡಿಸಿ ಸಂತೋಷದಿಂದ ಸರ್ವರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ದೇವನಹಳ್ಳಿ, ತಾಲ್ಲೋಕ, ಗಂಗಾವಾರದ ಹೋಬಳಿ ಸ್ಕೂಲ್

ಇದೇ ಇಸ್ವಿ ಮೆ ೨೪ ನೇ ತಾರೀಖು ಸೋಮವಾರ ಗತಿಸಿದ ಘನವನ್ನು ಹೊಂದಿದ ವಿಕ್ಟೋರಿಯ ಮಹಾರಾಜ್ಞಿಯವರ ಜನನ ದಿನವಾದ್ದರಿಂದ ಅವರ ಜ್ಞಾಪಕಾರ್ಥವಾಗಿ ಸದರಿ ಸ್ಕೂಲ್ ಮಾಸ್ಟರ್ ಮ ರಾ ಬಿ ವೆಂಕಟಪ್ಪನವರು ಸ್ಕೂಲ್ ಕಮಿಟಿ ಮೆಂಬರುಗಳು ಸಹ ಎಂಪೈರ್‌ಡೆ ಉತ್ಸವವನ್ನು ಈ ಕೆಳಗೆ ತೋರುವ ರೀತಿಯಲ್ಲಿ ಬಹಳ ವಿಜೃಂಭಣೆಯಿಂದ ನಡಿಸಿದರು. ಮ॥ ರಾ॥ ಸ್ಕೂ... ಬಿ ನರಸಪ್ಪನವರು ಬಹಳ ಮೆಹನತ್ತು ತೆಗೆದುಕೊಂಡು ಸ್ಕೂಲ್ ಕಟ್ಟಡವನ್ನು ಪೌವಿನ ತೋರಣಗಳಿಂದಲೂ ಕದಳಿ ಸ್ತಂಭಗಳಿಂದಲೂ, ಒಳಗಡೆ ಘನವನ್ನು ಹೊಂದಿದ ವಿಕ್ಟೋರಿಯ ಮಹಾರಾಜ್ಞಿಯವರ ಎಡ್ವರ್ಡ್ ಸಾರ್ವಭೌಮ ೭ ಅಲೆಕ್ಸಾಂಡ್ರಾ ಮಹಾರಾಣಿಯವರ ಮತ್ತು ಶ್ರೀಮನ್ ಮಹಾರಾಜ... ಇವರ ಪ್ರಮಾಣಿಕತೆಗೂ ಮೆಹನತ್ತಿಗೂ ಸರಕಾರದವರು ಮೆಚ್ಚಿ ಇವರಿಗೆ ಭಂಗಾರದ ಕೈಬಳೆಯನ್ನಾಗಲೀ ಇಲ್ಲವೇ ಭಂಗಾರದ ಗಡಿಯಾರವನ್ನಾಗಲೀ ಅವರು ಅಪೇಕ್ಷಿಸುವ ವಸ್ತುಗಳಾವುದಾದರೊಂದನ್ನು ಉಚಿತವಾದ ಮರ್ಯಾದೆಗಳೊಡನೆ ಕೊಡಬೇಕೆಂದು ಹುಕುಂ ಆಗಿರುತ್ತದೆ ಎಂಬುದೇ.

ವಿಲಾಯಿತಿಯಲ್ಲಿಯೂ ಇಂಡಿಯಾ ದೇಶದಲ್ಲಿಯೂ ದೇಶಿಯರಿಗೆ ಸರಕಾರದ ದೊಡ್ಡ ದೊಡ್ಡ ನೌಕರಿಗಳನ್ನು ಕೊಡಬೇಕೆಂದು ನಾನಾ ಪ್ರಯತ್ನಗಳು ನಡೆಯುತ್ತಿರುವಲ್ಲಿ ಈ ಬಾತ್ಮಿಯಲ್ಲಿ ಸೂಚಿಸಿರುವ ನಾಲ್ಕು ಮಂದಿ ದೇಶಿಯ ದೊಡ್ಡ ಅಧಿಕಾರಿಗಳ ನಡತೆಯು ಎಲ್ಲರಲ್ಲಿಯೂ ಹೆಚ್ಚಾದ ವಿಷಾದವನ್ನುಂಟು ಮಾಡಿರುತ್ತದೆ.

ವ್ಯವಸಾಯ ಶಾಸ್ತ್ರ

ಆಲೂಗೆಡ್ಡೆ (ಉರಳೂಗಡ್ಡೆ)

ಈ ಗಡ್ಡೆಗಳು ದಕ್ಷಿಣ ಅಮೇರಿಕಾ ಖಂಡದಲ್ಲಿ ಚಿಲ್ಲಿ ಎಂಬ ದೇಶದಿಂದ ಇತರ ದೇಶಗಳಿಗೆ ೧೬ ನೇ ಶತಮಾನದಲ್ಲಿ ಹೊಸದಾಗಿ ತಂದದ್ದಾಗಿ ತಿಳಿಯುತ್ತದೆ. ಸಂಸ್ಕೃತದಲ್ಲಿ ಈ ಆಲೂಗಡ್ಡೆಗೆ ಹೆಸರಿಲ್ಲವಾದ್ದರಿಂದಲೂ, ಮತ್ತು ಇದರ ವ್ಯವಸಾಯ ಸರ್ವಸಾಮಾನ್ಯವಾಗಿ ಇಂಡಿಯಾ ದೇಶದ ಎಲ್ಲಾ ಪ್ರಾಂತ್ಯದ ರೈತರು ಮಾಡದೇ ಇರುವುದರಿಂದಲೂ ಇದು ಇಂಡಿಯಾ ದೇಶಕ್ಕೆ ಹೊಸದಾಗಿ ತರಲ್ಪಟ್ಟಿತ್ತೆಂದೂ ಸ್ಪಷ್ಟವಾಗಿ ಗೊತ್ತಾಗುತ್ತೆ. ಪ್ರಕೃತದಲ್ಲಿ ಇದನ್ನು ನಮ್ಮ ಮೈಸೂರು ಸೀಮೆಯಲ್ಲಿ ಬೆಂಗಳೂರು ಮತ್ತು ಕೋಲಾರ ಡಿಸ್ಟ್ರಿಕ್ಟುಗಳಲ್ಲಿ ಮಾತ್ರ ತರೀ ಭೂಮಿಗಳಲ್ಲಿ ರೈತರು ಬೆಳೆ ಮಾಡುತ್ತಾರೆ. ಈ ಗಡ್ಡೆಗಳನ್ನು ಜನಗಳೂ ತರಕಾರಿಯಂತೆ ಮಾತ್ರ ಉಪಯೋಗಿಸುತ್ತಾರೆ. ಈ ಗಡ್ಡೆಗಳನ್ನು ಅನೇಕ ದೇಶಗಳಲ್ಲಿ ಪ್ರತಿ ದಿವಸದ ಆಹಾರವಾಗಿ ಜನಗಳು ತಿನ್ನುತ್ತಾರೆ. ಇದು ನೀಲಗಿರಿ ಹಿಮವತ್ಪರ್ವತ ಮಹಾಬಲೇಶ್ವರ ಮೊದಲಾದ ಎಟ್ಟ ಪ್ರದೇಶಗಳಲ್ಲಿ ಬಹಳ ಪುಷ್ಟಿಯಾಗಿಯೂ ಮತ್ತು ಗಾತ್ರವಾಗಿಯೂ ಬೆಳೆಯುತ್ತದೆ. ಮೈದಾನದಲ್ಲಿ ಅಷ್ಟು ಚೆನ್ನಾಗಿ ಆಗುವದಿಲ್ಲ.

ಈ ಗಡ್ಡೆಗಳಲ್ಲಿ ಅನೇಕ ವಿಧಗಳುಂಟು. ಗಾತ್ರದಲ್ಲಿಯೂ, ಬಣ್ಣದಲ್ಲಿಯೂ, ಆಕಾರದಲ್ಲಿಯೂ, ಸಿಪ್ಪೆ ಮತ್ತು ತಿರುಳಿನ ಬಣ್ಣಗಳ ವ್ಯತ್ಯಾಸದಿಂದಲೂ ಇವುಗಳ ಜಾತಿಯನ್ನು ತಿಳಿಯಬಹುದು. ಕೆಲವು ಜಾತಿ ಗಡ್ಡೆಗಳು ತ್ವರ್ರವಾಗಿ ಬೆಳೆಯುತ್ತವೆ. ಕೆಲವು ನಿಧಾನವಾಗಿ ಬೆಳೆಯುತ್ತವೆ. ಕೆಲವುಬಗೆ ಗಡ್ಡೆಗಳಲ್ಲಿ ಉತ್ಪತ್ತಿ ಜಾಸ್ತಿಯಾಗುತ್ತದೆ. ಕೆಲವುದರಲ್ಲಿ ರುಚಿ ಜಾಸ್ತಿ.

ಆಲೂಗೆಡ್ಡೆ ಮಸ್ತಿ ಇಲ್ಲದ ಆಳವಾದ ಮರಳು ಮಿಶ್ರವಾದ ಖಂಡವಾಸಿಯಾದ ಜಮೀನುಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಬರೀ ಮರಳು, ಕಲ್ಲು, ಜೇಡಿ, ಚೆಟ್ಟು ಜಮೀನುಗಳಲ್ಲಿ ಈ ಪಸಲು ಚನ್ನಾಗಿ ಬೆಳೆಯುವುದಿಲ್ಲ. ...ಗು ನೆಲದಲ್ಲಿ ಆಲೂಗೆಡ್ಡೆಗಳು ಕೊಳೆತುಹೋಗುತ್ತವೆ. ಇತರ ದೇಶಗಳಲ್ಲಿ ಸಪ್ಟಂಬರು ಮೊದಲು ಅಕ್ಟೋಬರು ತಿಂಗಳಲ್ಲಿ ಈ ಫಸಲನ್ನು ಪೇರಾವ ಮಾಡುತ್ತಾರೆ. ಮೈಸೂರು ಸೀಮೆಯ ಬೆಂಗಳೂರು ಪ್ರಾಂತ್ಯದಲ್ಲಿ ಜ್ಯೇಷ್ಠ ಮಾಸ... ಇದನ್ನು ಹಾಕುವ ಪದ್ಧತಿಯುಂಟು. ...ಹೆಚ್ಚು ... ಕೆಟ್ಟುಹೋಗುತ್ತವೆ. ... ಸ ಮಾಡಿದರು. ಕೂಡಲೆ

ಬೀಜ — ಗಡ್ಡೆಗಳು ... ಯವರು ಈ ದಿನ ಸ್ಕೂಲಿನಲ್ಲಿ ನಡಿಸಿ ಜ್ಞಾನೋತ್ಸವಕಾರ್ಯಗಳ ವಿಷಯವಾಗಿಯೂ ಪ್ರಜೆಗಳಿಗಿರುವ ರಾಜಭಕ್ತಿ ವಿಷಯವಾಗಿಯೂ ಮ॥ ರಾ॥ ಸ್ಕೂ ಮಾ ಬಿ ನರಸಪ್ಪನವರು ಈ ಸ್ಕೂಲನ್ನು ಬಹಳ ಅಭಿವೃದ್ಧಿಸ್ಥಿತಿಗೆ ತಂದರೆಂಬ ವಿಷಯವಾಗಿಯೂ ಉಪನ್ಯಾಸ ಮಾಡಿ ದಿನೇ ದಿನೇ ಪೂರ್ಣ ಚಂದ್ರನಂತೆ ಈ ಸ್ಕೂಲ್ ಶಾಶ್ವತವಾಗಿ ವೃದ್ಧಿಗೆ ಬರಲೆಂದು ಹರಸಿದರು. ಇವಾದ ಕೂಡಲೇ ವಿನೋದಕರವಾದ ನಕಲೆಯು ಮ ರಾ ರಾಮಣ್ಣನವರಿಂದ ನಡೆಯಿತು. ಭಜನೆ ನಡೆಯಿತು. ಜಯಘೋಷಗಳೊಡನೆ ಮಂಗಳವಾಯಿತು. ಸ್ಕೂ ಮಾ ವೆ... ನರಸಪ್ಪನವರು ಸಭೆಯವರಿಗೂ ಸಭಾಧ್ಯಕ್ಷರಿಗೂ ತಮ್ಮ ವಂದನೆಗಳನ್ನು ಸಮರ್ಪಿಸಿದರು. ಕೂಡಲೆ ಗಂಧ ಪುಷ್ಪ ತಾಂಬೂಲಗಳೂ ಸಕ್ಕರೆ ಪೊಟ್ಟಣಗಳೂ ಸರ್ವರಿಗೂ ಹಂಚಿದ ಕೂಡಲೇ ಸಭೆಯು ಬರಖಾಸ್ತಾಯಿತು.

ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವವು

ರಾಜಧಾನಿಯಲ್ಲಿ

ಕಳೆದ ತಾ ೩೦ ನೆ ಭಾನುವಾರ ಶ್ರೀಮನ್ಮಹಾರಾಜರವರ ೨೬ ನೆ ವರ್ಷ ವರ್ಧಂತಿ ಉತ್ಸವವು ರಾಜಧಾನಿಯಲ್ಲಿ ನೆರವೇರಿತು. ಆ ದಿನ ಬೆಳಿಗ್ಗೆ ಕೋಟೆಕೊತ್ತಲುಗಳಿಂದ ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು. ಅರಮನೆಯಲ್ಲಿ ಶ್ರೀಮನ್ಮಹಾರಾಜರವರು ನಡಿಸಿ, ದಿವ್ಯವಾದ ವಸ್ತ್ರಭೂಷಣಾಲಂಕೃತರಾಗಿ ೧೧॥ ಗಂಟೆಗೆ ಅಂಬಾವಿಲಾಸವೆಂಬುವ ಕಳಕಳಿಸುವ ದರ್ಬಾರ್ ಮಂದಿರಕ್ಕೆ ಚಿತ್ತೈಸಿ ವಾದ್ಯಘೋಷವಾಗುತ್ತಿ ಇವಲ್ಲಿ ಶ್ರೇಷ್ಠತರವಾದ ಭದ್ರಾಸನವನ್ನಲಂಕರಿಸಿದರು. ಕುಲಗುರುಗಳಾದ ಶ್ರೀಪರಕಾಲೀ ಮಠದ ಸ್ವಾಮಿಗಳು ದಯಮಾಡಿ ವಿಧಿ ಪೂರ್ವಕವಾಗಿ ಶ್ರೀಮನ್ಮಹಾರಾಜರವರಿಂದ ಪಾದಪೂಜಾದಿಗಳನ್ನು ಸ್ವೀಕರಿಸಿ, ಆಶೀರ್ವಾದ ಮಾಡಿ ತೆರಳಿದರು. ತರುವಾಯ ವೈದಿಕಮಂಡಲಿಯವರು ಶ್ರೀಮನ್ಮಹಾರಾಜರವರಿಗೆ ಫಲಗಳನ್ನೊಪ್ಪಿಸಿ ಆಶೀರ್ವಚನಪೂರ್ವಕವಾದ ಮಂಗಳಾಕ್ಷತೆಗಳನ್ನು ತಳಿದರು. ಲೌಕಿಕರಾದ ಸರ್ದಾರರು, ರಾಜಬಂಧುಗಳು ದಿವಾನರವರು, ಕೌನ್ಸಿಲ್ ಮೆಂಬರುಗಳು ಸರಕಾರಿ ಇಲಾಖೆಗಳ ಮುಖ್ಯಸ್ಥರುಗಳು, ಚೀಫ್ ಕೋರ್ಟ್ ಜಡ್ಜಿಗಳು ಸೆಕ್ರೆಟರಿಗಳು ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಕಮ್ಮಿಷನರುಗಳು ಮುಸಾಹೇಬರು ಪೇರ್ಪೇದಾರರು, ಶಿಷ್ಟವರ್ತಕರು ಇವರೇ ಮೊದಲಾದ ಎಲ್ಲಾ ಕೋಮುಗಳ ದೊಡ್ಡ ಮನುಷ್ಯರು, ಮಿಲಿಟರಿ ಇಲಾಖೆಯ ಹುದ್ದೆದಾರರು ಮೊದಲಾದವರೆಲ್ಲಾ ಶ್ರೀಮನ್ಮಹಾರಾಜರವರಿಗೆ ರಾಜಭಕ್ತಿಪೂರ್ವಕವಾಗಿ ಮುಜರೆ ಮಾಡಿ ನ ಉಚಿತಾಸನಗಳಲ್ಲಿ ಕುಳಿತರು. ಸಂಗೀತಗಾರರ ಹಾಡು, ಭಟರಾಜರ ಸ್ತುತಿಪಾಠಗಳು ಮನೋಹರವಾಗಿ ನಡೆಯುತ್ತಿರುವಲ್ಲಿ ರಾಜಪುರೋಹಿತರು ಶ್ರೀಮನ್ಮಹಾರಾಜರವರಿಂದ ವಿಧಿ ಪೂರ್ವಕವಾಗಿ ಫಲಪೂಜೆ ಫಲದಾನಾದಿಗಳನ್ನು ಮಾಡಿಸಿದರು. ಸುಮಂಗಲಿಯರು ಶ್ರೀಮನ್ಮಹಾರಾಜರವರಿಗೆ ಫಲಾದಿ ಮಂಗಳದ್ರವ್ಯಗಳನ್ನೊಪ್ಪಿಸಿ ಆರತಿಯನ್ನು ಬೆಳಗಿದರು, ಶ್ರೀಮನ್ಮಹಾರಾಜರವರಿಗೆ ಹಾರತುರಾಯಿಗಳನ್ನೊಪ್ಪಿಸಿದ ತರುವಾಯ, ವೈದಿಕ ಲೌಕಿಕ ಮಂಡಲಿಗೆ ಪುಷ್ಪಮಾಲಿಕೆ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟು ಮುಜುರೆಗಳು ನಡೆದವು. ಸಲಾಂಬಾಜಾ ಆಗುತ್ತಿರುವಲ್ಲಿ ದರ್ಬಾರನ್ನು ಮುಕ್ತಾಯ ಮಾಡಿ ಶ್ರೀಮನ್ಮಹಾರಾಜರವರು ಚಿತ್ತೈಸಿದರು. ರಾತ್ರಿ ನೀರಿನಲ್ಲಿ ೪—೬ ಘಂಟೆಗಳ ಮಟ್ಟಿಗೆ ನೆನಿಸಿ ಹಾಕಿದರೆ ಇವುಗಳನ್ನು ಹುಳಗಳು ತಿನ್ನುವುದಿಲ್ಲ. ಎಕರೆ ೧ ಕ್ಕೆ ಸುಮಾರು ೨೦೦ ಪೌಂಡಗಳ ಲಾಭಾಯ ೧,೦೦೦ ಪೌಂಡುಗಳಷ್ಟು ಬೀಜ ಬೇಕು. ಈ ಫಸಲು ಕೆಲವು ಪ್ರಾಂತ್ಯಗಳಲ್ಲಿ ೩॥ ತಿಂಗಳಿಗೆ ಕೈಗೆ ಬರುತ್ತದೆ. ಬೇರೆ ಪ್ರಾಂತ್ಯಗಳಲ್ಲಿ ೪॥—೫ ತಿಂಗಳ ವರಿಗೂ ಅವಕಾಶವಾಗುವುದುಂಟು. ಫಸಲು ಒಳಗೆ ಚೆನ್ನಾಗಿ ಬಲಿತ ಮೇಲೆ ಎಲೆಗಳು ಮತ್ತು ಬುಡಗಳು ಸಹ ಚೆನ್ನಾಗಿ ಒಣಗಿಹೋಗುತ್ತವೆ. ಇವುಗಳನ್ನು ಆಳವಾಗಿ ಗುದ್ದಲಿಯಿಂದ ಅಗೆದು ಅಥವಾ ನೇಗಿಲಲ್ಲಿ ಉತ್ತು ಅದು ಜಮಾಯಿಸುವುದುಂಟು.

ಫಸಲು ಜಮಾಯಿಸಿದ ಮೇಲೆ ಗಡ್ಡೆಗಳನ್ನು ಆಕಾರಕ್ಕನುಸಾರವಾಗಿ ರಬಂವಾರು ವಿಂಗಡಿಸಿ ಮಾರುತ್ತಾರೆ. ಇವುಗಳನ್ನು ಕೆಲವು ಸೀಮೆಗಳಲ್ಲಿ ೪—೬ ತಿಂಗಳು ಕೆಟ್ಟುಹೋಗದಂತೆ ಮಡಗಬಹುದು. ಉಷ್ಣ ದೇಶಗಳಲ್ಲಿ ಕೆಡದಂತೆ ಬಹಳ ದಿವಸಗಳು ಕಾಪಾಡುವುದು ಕಷ್ಟ. ಕೆಳಗೆ ಧೂಳು ಅಥವಾ ಸಣ್ಣ ಮರಳು ಹಾಕಿ ಅದರ ಮೇಲೆ ಚಿಕ್ಕ ಚಿಕ್ಕ ರಾಶಿಗಳನ್ನಾಗಿ ಮಾಡಿ ಮೇಲೆ ಸುಮಾರಾಗಿ ಮರಳು ಸುರಿದು ಕತ್ತಲೆಯಾಗಿಯೂ ಮತ್ತು ಶೀತವಾಗಿರುವ ಸ್ಥಳದಲ್ಲಿ ಮಡಗಿದರೆ ಬಹಳ ದಿವಸಗಳು ಕೆಡದೆ ಇರುತ್ತದೆ. ಈ ಪೈರಿಗೆ ಅನೇಕವಾಗಿ ರೋಗಗಳು ಬರುವುದುಂಟು. ಇದಕ್ಕೆ ಮೈಲುತುತ್ತವನ್ನು ಸೆಟ್ಟಾದ ನೀರಿನಲ್ಲಿ ಹಾಕಿ ಈ ನೀರನ್ನು ಪೈರಿಗೆ ಪಿಚಕಾರಿ ಮೂಲಕ ಹಾಕಿದರೆ ರೋಗ ನಿವೃತ್ತಿ ಆಗುತ್ತೆಂದು ತಿಳಿದವರು ಬರೆದಿದ್ದಾರೆ.

ಈ ಫಸಲನ್ನು ಕೈಯಿಂದ ಕೂಲಿ ಹಾಕಿ ವ್ಯವಸಾಯ ಮಾಡಿಸಿದರೆ ಎಕರೆ ೧ ಕ್ಕೆ ಬೀಜ ಸಹಿತ ೧೦೦—೧೫೦ ರೂಪಾಯಿ ಲಾಗವಾಡು ಆಗುತ್ತೆ. ಸ್ವಂತವಾಗಿ ವ್ಯವಸಾಯ ಮಾಡುವವರಿಗೆ ಈ ಲಾಗವಾಡು ತಗಲುವುದಿಲ್ಲ. ಎಕರೆ ೧ ಕ್ಕೆ ೩ ೦ ರ ಲಾಗಾಯ್ತು ನಮ್ಮ ಸೀಮೆಯ ೬೦೦ ಮಣದ ವರಿಗೆ ಫಸಲಾಗುತ್ತೆ. ಮಣ ೧ ಕ್ಕೆ ೧೦ ಆಣೆ ಅಥವಾ ೧೨ ಆಣೆ ... ಬೆಲೆ ಆದರೆ ಎಕರೆಗೆ ಸುಮಾರು ೩೫೦ ರೂಪಾಯಿ ಉತ್ಪತ್ತಿ ಆಗುತ್ತೆ. ಈ ಬೀಜ ಬೆಂಗಳೂರು ಮತ್ತು ಚಿಕ್ಕಬಳ್ಳಾಪುರ ವಗೈರೆ ಸ್ಥಳಗಳಲ್ಲಿ ಪೈರನ್ನು ಮಾಡುವ ರೈತರಲ್ಲಿ ವಿಶೇಷವಾಗಿ ದೊರೆಯುತ್ತವೆ.

ವಿ ರಾಘವಾಚಾರ್ ಅಡ್ವೊಕೇಟ್

ಇಂಡಿಯಾ ದೇಶದಲ್ಲಿ ಸಕ್ಕರೆ ತಯಾರಿ

ಇಂಡಿಯಾ ದೇಶವು ಸಕ್ಕರೆ ತಯಾರಾಗುವ ದೇಶಗಳಲ್ಲೊಂದಾಗಿ ಇನ್ನೂ ಎಣಿಸಲ್ಪಟ್ಟಿರುವುದಿಲ್ಲ. ಈ ದೇಶ... ...ಗಳಿಗೆ ರಫ್ತಾಗುವುದಿಲ್ಲ. ಆದರೆ ಇಲ್ಲಿ ... ...ರಾಗಿ ಸ್ಥಳದಲ್ಲಿಯೇ ಉಪಯೋಗ... ...೪೦ ಟನ್ ...

... ಮೈಸೂರು ಪ್ರಿಮಿಕ್ ... ಇದನ್ನು ಆಶಿಕರು ಪ್ರಜೆಗಳೂ ಉದ್ಯೋಗಸ್ಥರೂ ಸಂಭ್ರಮವಾಗಿ ಆಚರಿಸುವರು. ... ಚಂದಾ ರೂಪವಾಗಿ ಹಣ ... ಎಲ್ಲಾ ದೇವಸ್ಥಾನಗಳಲ್ಲಿ ಮಹಾರಾಜರವ... ಮತ್ತು ಅವರ ಎಲ್ಲಾ ಕುಟುಂಬದವರ ಶ್ರೇಯಃ ಪ್ರಾರ್ಥನೋತ್ಸವ ಭಗವಂತನನ್ನು ಬೇಡಿಕೊಳ್ಳುವಂತೆ ಆರಾಧನೆಗಳು ಪರ್ವಾದಾದವು. ಮತ್ತು ಕೆಲವು ಬಡವರಿಗೆ ಭೋಜನವು, ಎಲ್ಲಾ ಪಾಠಶಾಲಾ ವಿದ್ಯಾರ್ಥಿಗಳಿಗೆ ಆಟಪಾಟಗಳೂ ವಿನೋದಗಳೂ ವಿಜೃಂಭಣೆಯಾಗಿ ನೆರವೇರಲ್ಪಟ್ಟಿತು. ಮತ್ತು ಸ್ಥಳ ದೊಡ್ಡ ... ಸ್ಯರಿಗೆ ಉಪಾಹಾರವೂ ವಿದ್ಯಾರ್ಥಿಗಳಿಗೆಲ್ಲಾ ತಿಂಡಿ ಹಣ್ಣುಗಳೂ ತೃಪ್ತಿಕರವಾ... ಕೊಡಲ್ಪಟ್ಟವು. ... ವಿಶೇಷಗಳೂ ಮೈಸೂರಿನಿಂದ ಬಂದಿರುವ ಕಿ... ಮಣಿಗರ ಸಂಗೀತವೂ ಆಯಿತು. ಕಡೆಯಲ್ಲಿ ಎಲ್ಲರೂ ಏಕಮನಸ್ಸಾಗಿ ಶ್ರೀಮ... ಮಹಾರಾಜರವರ ಮತ್ತು ಇಂಡಿಯಾ ಚಕ್ರವರ್ತಿಯವರ ಹೆಸರುಗಳನ್ನು ಹೇ... ಜಯಘೋಷಮಾಡಿದರು. ಈ ಉತ್ಸವಾದಿಗಳು ನಡೆಯುವಲ್ಲಿ ಮಳೆ ಬಂದದರಿಂ... ಈ ವರ್ಷ ಶ್ರೀಮನ್ಮಹಾರಾಜರವರಿಗೂ ಮೈಸೂರು ಪ್ರಜೆಗಳಿಗೂ ಶುಭಸೂ... ವೆಂಬಂತೆ ಸಮಸ್ತರೂ ಮಹದಾನಂದ ಭರಿತರಾದರು.

ತರೀಕೆರೆ

ಮೇ ತಿಂಗಳು ೩೦ ನೇ ತಾ॥ ಮಹಾರಾಜರ ವರ್ಧಂತಿಯ ದಿವಸವ... ಬಹು ಸಂತೋಷದಿಂದ ಕಳೆಯುವ ಹಾಗೆ ನಮ್ಮ ಅಮಲ್ದಾರರವರೂ ... ರವರೂ, ಶಿರಸ್ತೇದಾರರೂ ಎಕ್ಸೈಸ್ ಇನ್ಸ್‌ಪೆಕ್ಟರವರೂ, ಪೋ॥ ಇನ್ಸ್‌... ರವರೂ, ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮುಂತಾದವರೆಲ್ಲಾ ಸೇ... ಸಾಯಂಕಾಲ ನಾಲ್ಕು ಘಂಟೆಗೆ ಸ್ಕೂಲ್ ಬಾಲಕರನ್ನೂ ಬಾಲಿಯರನ್ನೂ ತಾಲ್ಲೋಕು ಕಛೇರಿ ಮುಂಭಾಗದ ಮೈದಾನದಲ್ಲಿ ಕೂಡಿ ಓಡಿಸುವದು, ಹಗ್ಗ ಎಳೆಯುವದು ಕತ್ತೆಗಳ ಮೇಲೆ ಸವಾರಿ ಮಾಡಿಸುವದು ಕಣ್ಣು ಕಟ್ಟಿಕೊಂಡು ತಲೆ ಮೇಲೆ ಗಡಿಗೆ ಹೊತ್ತುಕೊಂಡು ಓಡುವದು ಇನ್ನೂ ಅನೇಕ ವಿಧವಾದ ಆಟಗಳನ್ನು ಆಡಿಸಿ, ಗೆದ್ದವರಿಗೆ ಬಹುಮಾನವನ್ನು ಕೊಟ್ಟದ್ದು ಮಾತ್ರವಲ್ಲದೆ ಮಹಾರಾಜರ ಫೋಟೋವನ್ನು ಅಲಂಕರಿಸಿ, ಕಛೇರಿ ಬಾಗಲಲ್ಲಿ ಒಂದು ಎತ್ತರವಾದ ಸ್ಥಳದಲ್ಲಿಟ್ಟು ... ಕೋರ್ಟಿನಲ್ಲಿ ಕಂಡಿಬಂದ್ದಂಥ ಮಹನೀಯರೆಲ್ಲಾ ಆ ತಸ್ವೀರಿನ ಎದುರು ಬಂಗದಲ್ಲಿ ಚಕ್ರಾಕಾರವಾಗಿ ಕುಳಿತುಕೊಂಡನಂತ್ರ ಗುಮಾಸ್ತರು ಟಿಕಡವರು ಬಹು ಇಂಪಾದ ಗಾನವನ್ನು ಮಾಡಿದನಂತ್ರ ಸಭಿಕರಿಗೆಲ್ಲಾ ತಾಂಬೂಲ ಪುಷ್ಪ ಗಂಧ ಕೊಡಲ್ಪಟ್ಟಿತು. ಇಲ್ಲಿಗೆ ಸಭೆಯು ಬರಖಾಸ್ತಾಯಿತು.

ಬೆಂಗಳೂರು

ಶ್ರೀನಿವಾಸಮಂದಿರದ ಪ್ರಾರ್ಥನಾಶಾಲೆಯಲ್ಲಿ ೨೯ ನೇ ಶನಿವಾರ ಸಾಯಂಕಾಲ ಪ್ರಕಾರವಾಗಿ ಶ್ರೀ ಬಿ ಲಕ್ಷ್ಮಮ್ಮನವರು ಆರೋಗ್ಯ ವಿಷಯವನ್ನು ಕುರಿತು ಉಪನ್ಯಾಸವನ್ನು ಕೊಟ್ಟರು. ೩೦ ನೇ ತಾರೀಖು ಶ್ರೀಮನ್ಮಹಾರಾಜರವರ ವರ್ಷ ವರ್ಧಂತಿಗಾಗಿ ಸುಮಾರು ೨೦ ಸ್ತ್ರೀಯರ ಮೇಳ ಸೇರಿದ್ದವು. ರಾಜಭಕ್ತಿ ವಿಷಯವನ್ನು ಕುರಿತು ಶ್ರೀ ಶಾರದಾಬಾಯಿ ಸ್ತ್ರೀಯರಿಗೆ ಒಂದು ಸಾರಸ್ಯವಾದ ಉಪನ್ಯಾಸವನ್ನು ಕೊಟ್ಟರು. ಶ್ರೀ॥ ಸೀತಮ್ಮನವರು ಮಹಾರಾಜರವರಿಗೆ ಆಯುರಾರೋಗ್ಯಭಾಗ್ಯಗಳನ್ನು ಈಶ್ವರನು ಕರುಣಿಸಿ ಕೊಡಲಿ ಎಂಬ ಅರ್ಥವುಳ್ಳ ಪಂಚರತ್ನಗಳೆಂಬ ಐದು ಪದ್ಯಗಳನ್ನು ಹೇಳಿದರು. ಕೆಲವರು ಸ್ತ್ರೀಯರು ವಿ ಜಿ ಹಾಸ್ಟೆಲ್ಲಿಯವರು ಮೊದಲಾದವರುಗಳಿಂದ ಮನೋಹರವಾಗಿ ಹಾಡಿದರು. ಸಭಿಕರೆಲ್ಲರಿಗೂ ಗಂಧ ಪುಷ್ಪ ಸಕ್ಕರೆ ಮೊದಲಾದವು

ಫಕೀರನು ಕ್ಲೋಸ್ ಪೇಟೆಯಲ್ಲಿ ಹೀಗೆಯೇ ಮಾಡಿದ್ದರಿಂದ ಹುಡುಗರು ಕಲ್ಲುಗಳಿಂದ ಹೊಡೆದರೆಂಬದಾಗಿ ಹೇಳುತ್ತಾರೆ ಈತನು ಜನರನ್ನು ಮೋಸಗೊಳಿಸಿ ಹಣ ಸಂಪಾದಿಸಲು ಕೆಲವು ದುಷ್ಟ ಶಿಷ್ಯರನ್ನು ಸಂಗ್ರಹಿಸಿ, ಋಷಿ ಎಂಬ ವೇಷ ಧರಿಸಿರುವದಾಗಿ ನೋಡುತ್ತಲೇ ಊಹಿಸ ಬಹುದು ಈ ವಿಷಯ ಜನರು ಜಾಗ್ರತೆ ಹೊಂದ್ಯಾರೆಂದು ನಂಬಿದ್ದೇವೆ

ಚಿಕ್ಕಬಳ್ಳಾಪುರ.—ಈ ಊರಿನಲ್ಲಿ ೧೦—೧೫ ದಿವಸಗಳ ಕೆಳಗೆ ಒಂದು ಭಾರಿ ಮಳೆ ಬಂದದ್ದು ಏನಃ ಇದುವರೆಗೂ ಮಳೆಯು ಬಂದಿಲ್ಲವು ರೈತರುಗಳೆಲ್ಲಾ ಭೂಮಿಯನ್ನು ಉತ್ತು ಬಿತ್ತಿರುತ್ತಾರೆ ಈ ವಾರದ ಸಂತೆಯಲ್ಲಿ ರಾಗಿಯು ರೂ ೧ಕ್ಕೆ ೧೧ ಸೇರಿನಂತೆಯೂ ಅಕ್ಕಿಯು ರೂ ೧ಕ್ಕೆ ೬||—೭ ಸೇರಿನಂತೆಯೂ ಮಾರಾಟವಾಗುತ್ತದೆ ಸಂತೆಯಲ್ಲಿ ಜನಗಳು ದಿನಸು ದವಸಗಳನ್ನು ತಂದು ಮನೆಯಲ್ಲಿ ಅಳದರೆ ೧ ಸೇರು ೧|| ಸೇರು ಕಮ್ಮಿ ಬಾರದೆ ಇರಲಾರದು ಈ ವಿಷಯದಲ್ಲಿ ಸರ್ಕಾರದವರು ಸಿಗಾ ಕೊಡಬೇಕಾಗಿದೆ ಮತ್ತು ಈ ಊರಿನಲ್ಲಿ ತಾ| ೨೬—೫—೦೯ ನೇ ಬುಧವಾರ ರಾತ್ರಿಯಲ್ಲಿ ಈ ಊರ ಪೇಟೆ ಬಸವಣ್ಣ ದೇವರ ದೇವಸ್ಥಾನದಲ್ಲಿ ಬೆಂಗಳೂರು ಬ್ರಹ್ಮಸಮಾಜದ ಶ್ರೀಸ್ವಯಂ ಬ್ರಹ್ಮಾನಂದ ಸ್ವಾಮಿಗಳು ರಾತ್ರಿ ೭ ಗಂಟೆ ಆರಾಭಿಸಿತು ೧೦ ಗಂಟೆಗಳ ವರೆಗೂ ಸತ್ಸಂಗದ ವಿಷಯವಾಗಿಯೂ ಮಾತಾಪಿತೃಗಳಲ್ಲಿ ಭಕ್ತಿವಿಶ್ವಾಸಗಳುಳ್ಳವರಾಗಿರಬೇಕೆಂಬ ವಿಷಯದಲ್ಲಿಯೂ ಈ ಊರಿನ ಜನಗಳನ್ನು ಸೇರಿಸಿಕೊಂಡು ಉಪನ್ಯಾಸ ಮಾಡಿದರು ಈ ಉಪನ್ಯಾಸ ಮಾಡಲ್ಪಟ್ಟ ದೇವಾಲಯವು ಮಾವಿನ ತಳಿರುಗಳ ಮತ್ತು ಕೆಂಪಾದ ಹೂವುಗಳ ತೋರಣಗಳಿಂದಲೂ ಸುವಾಸನೆಯನ್ನು ಕೊಡತಕ್ಕ ಊದಿನ ಕಡ್ಡಿಗಳಿಂದಲೂ ಸರ್ಕಾರಿ ನೌಕರರುಗಳಿಂದಲೂ ಸೆಟ್ಟಿವರ್ತಕರುಗಳಿಂದಲೂ ಬ್ರಹ್ಮ, ಕ್ಷತ್ರಿ, ವೈಶ್ಯ, ಶೂದ್ರ ಇತ್ಯಾದಿಯಾದ ಮತದವರುಗಳಿಂದಲೂ, ಶಿವಿಗಿಂಪಾದ ವಾದ್ಯದಿಂದಲೂ ಶೋಭಾಯಮಾನವಾಗಿದ್ದಿತು ಈ ಸಭೆಯ ಅಗ್ರಾಸನಾಧಿಪತ್ಯವನ್ನು ಸರ್ದಾರ್ ಪೋಲೀಸ್ ಇನ್ಸ್‌ಪೆಕ್ಟರವರು ವಹಿಸಿದ್ದರು ಈ ಶ್ರೀಸ್ವಯಂಬ್ರಹ್ಮಾನಂದ ಸ್ವಾಮಿಗಳಿಂದ ಉಪನ್ಯಾಸ ಮಾಡಲ್ಪಟ್ಟದ್ದಲ್ಲದೆ ಈ ಊರಿನ ಸ್ಕೂಲ್ ಹೆಡ್ಮಾಸ್ಟರ್ ಮ ಶಂಕರಪ್ಪನವರು ಉಪನ್ಯಾಸವೇನೆಂದರೇನು ಎನ್ನುವ ವಿಷಯದಲ್ಲಿಯೂ ವಿದ್ಯೆಯು ಸರ್ವವಸ್ತುಗಳಲ್ಲಿಯೂ ಶ್ರೇಷ್ಠವೆನ್ನುವುದಕ್ಕೂ ಅದರಿಂದಾಗತಕ್ಕ ಉಪಯೋಗಗಳ ವಿಷಯದಲ್ಲಿಯೂ, ಮಾತಾಪಿತೃಗಳಲ್ಲಿ ಮಾರಾಯಣತ್ವಳ್ಳವರಾಗಿರಬೇಕೆನ್ನುವುದಕ್ಕೂ ಅದರಿಂದಾಗತಕ್ಕ ಪ್ರಯೋಜನದ ವಿಷಯವಾಗಿಯೂ ಉಪನ್ಯಾಸ ಮಾಡಲ್ಪಟ್ಟಿತು ಈ ಎರಡು ಉಪನ್ಯಾಸಗಳು ಜರುಗಿದ ನಂತರ ಸಭೆಯು ಮುಕ್ತಾಯವಾಯಿತು ಈ ಶ್ರೀಸ್ವಯಂಬ್ರಹ್ಮಾನಂದ ಸ್ವಾಮಿಗಳು ಇಲ್ಲಿಗೆ ಬಂದು ಈ ಉಪನ್ಯಾಸವನ್ನು ಜರುಗಿಸಲು ಕಾರಣವೇನೆಂದರೆ ಬೆಂಗಳೂರಿನಲ್ಲಿ ಒಂದು ಉಪನ್ಯಾಸ ದೇವಾಲಯವನ್ನು ಕಟ್ಟಿಸಲು ದ್ರವ್ಯಸಹಾಯವು ಬೇಕಾದದ್ದೇ ಈ ಮೇರೆ ಇಲ್ಲಿನ ಕೆಲವು ಜನಗಳು ಸೇರಿ ದ್ರವ್ಯಸಹಾಯ ಮಾಡುವುದಾಗಿ ಇರಾರೆ

ಅರಸೀಕೆರೆ.—ಮಳೆ ಇಲ್ಲದೆ ಪೈರುಗಳು ಒಣಗಲಾಗಿವೆ ಆದರೆ ಕುಡಿಯುವ ನೀರಿಗೆ ತೊಂದರೆ ಇಲ್ಲ ದನಕರುಗಳಿಗೆ ಸ್ವಲ್ಪಮಟ್ಟಿಗೆ ಆಹಾರಕ್ಕಾನು ... ಅರವ ಹುಡುಗನು ... ಸರ್ಕಾರಕ್ಕೆ ... ಜನಗಳಿಗೂ ... ಕಾರವಾದ ನಷ್ಟವನ್ನುಂಟುಮಾಡಿರುತ್ತದೆ ಟ್ರೇನ್ ಗಾಡಿಗಳು ಸಮಯಕ್ಕೆ ಹೋಗಿ ಬರುವುದಕ್ಕೆ ಅಡಚಣೆಯಾಗಿರುವುದರಿಂದ ಪ್ರಯಾಣಿಕರಿಗೆ ಹೇಳಕೂಡದಷ್ಟು ಅನಾನುಕೂಲಗಳು ಪ್ರಾಪ್ತವಾಗಿವೆ ಡ್ರೈವರುಗಳು ಕೆಲಸಕ್ಕೆ ಹೋಗದೆ ನಿಂತುಹೋಗುವುದಕ್ಕೆ ಕಾರಣವೇನೆಂದರೆ ರೈಲ್ವೆಯಲ್ಲಿ ಡ್ರೈವರುಗಳು ೮ ಘಂಟೆ ಕೆಲಸಮಾಡಬೇಕೆಂಬ ವಿಧಿ ಇರುತ್ತದೆ ಇದಕ್ಕಿಂತ ಹೆಚ್ಚಾಗಿ ಮಾಡಿದರೆ ಹೆಚ್ಚಿನ ಸಂಬಳವನ್ನು ಕಂಪನಿಯವರು ಕೊಡುತ್ತಿರಲಿಲ್ಲ ಇದನ್ನು ಡ್ರೈವರುಗಳು ನೋಡಿ ಫಿರ್ಯಾದು ಮಾಡುವುದಕ್ಕೆ ಶುರುಮಾಡಿದರು ಅನೇಕ ಅರ್ಜಿಗಳು ರೈಲ್ವೆ ನೌಕರರಿಗೆ ಹೋದವು ಆದರೆ ಯಾವತರವಾದ ಹುಕುಂ ಆಗಲಿಲ್ಲವಂತೆ ಕಾರ್ಯಗಳು ಈರೀತಿ ಇರುವಾಗ್ಗೆ ಕಂಪನಿಯವರು ಮ| ಪಿಗೆಟ್ ಎಂಬವರನ್ನು ಅರಕೋಣಕ್ಕೆ ಲೋಕೊಫ಼ೊ ರ್ಮನ್ ಉದ್ಯೋಗಕ್ಕೆ ನೇಮಿಸಿದರು ಇವರು ಡ್ರೈವರುಗಳನ್ನು ಮಾಟಾಮಗೋಚರವಾಗಿ ಬೈದರಂತೆ ಇದೂ ಅಲ್ಲದೆ ಡ್ರೈವರುಗಳಿಗೆ ಈಗ ಬರುತ್ತಿರುವ ಸಂಬಳವು ಸಾಕಾಗಿದೆ ಎಂತಲೂ ತಿಳಿಸಿದರೆಂದು ಡ್ರೈವರುಗಳೆಲ್ಲಾ ಆಗ್ರಹಗೊಂಡು ಕೆಲಸಕ್ಕೆ ಹೋಗದೆ ನಿಂತುಹೋಗುವುದಕ್ಕೆ ಪ್ರಸಾದು ಮಾಡಿಕೊಂಡರು ಇದನ್ನು ಕೇಳಿ ಲೋಕೊ ಸೂಪರೆಂಟರು ಅರಕೋಣಕ್ಕೆ ಹೋಗಿ ಡ್ರೈವರುಗಳ ಸಂಗಡ ಮಾತುಗಳನ್ನಾಡಿದರು “ನೀವೆಲ್ಲರೂ ಕೆಲಸಕ್ಕೆ ಹಾಜರಾಗದಿದ್ದರೆ ನಿಮ್ಮನ್ನು ೨೪ ಗಂಟೆಗಳೊಳಗಾಗಿ ಡಿಸ್‌ಮಿಸ್ ಮಾಡಲು ಮೇಲಿನ ಅಧಿಕಾರಿಗಳಿಗೆ ಬರೆಯುತ್ತೇನೆಂಬದಾಗಿ ತಿಳಿಸಿದರಂತೆ ಡ್ರೈವರುಗಳು ಇವರ ಮಾತನ್ನು ಕೇಳಿ ಕೆಲಸಕ್ಕೆ ಹೋಗಲಿಲ್ಲ ಡ್ರೈವರುಗಳ ಅಹವಾಲನ್ನು ಕೇಳುವುದಕ್ಕೆ ಕಂಪನಿಯವರು ಒಂದು ಮೀಟಿಂಗ್ ಮಾಡಿದ್ದರು ಈ ಮೀಟಿಂಗಿನಲ್ಲಿ ಕಂಪನಿಯ ಮುಖ್ಯಾಧಿಕಾರಿಯು ಡ್ರೈವರುಗಳಿಗಿರುವ ನಿಜವಾದ ತೊಂದರೆಗಳನ್ನು ಹೋಗಲಾಡಿಸುವರೆಂದು ಭಾಷೆ ಕೊಟ್ಟರೂ ಅವರು ಮಿತಿಮೀರಿ ಕೇಳಿರುವ ಕೆಲವು ರಿಯಾಯಿತಿಗಳನ್ನು ಕೊಡಲಾಗುವುದಿಲ್ಲವೆಂದು ಖಂಡಿತವಾಗಿಯೂ ತಿಳಿಸಿದರು ಜೋಲಾರಪೇಟೆ, ಬಿಟ್ರಗುಂಟ, ಗುತ್ತಿ, ರಾಜಮಹೇಂದ್ರಿ, ಬೆಂಗಳೂರುಗಳಲ್ಲಿದ್ದ ಡ್ರೈವರುಗಳೆಲ್ಲಾ ಕೆಲಸಕ್ಕೆ ಹೋಗದೆ ನಿಂತುಬಿಟ್ಟರು ರೈಲ್ವಿಗೆ ಪ್ರಮುಖ ಅಧಿಕಾರಿಯಾದ ಏಜಂಟರು ಪ್ರಯಾಣಮಾಡಲು ಅಸಾಧ್ಯವಾಯಿತು ಅತ್ಯವಶ್ಯಕವಾಗಿದ್ದ ಒಂದೆರಡು ಗಾಡಿಗಳನ್ನು ರೈಲ್ವೆ ಭಾರಿ ನೌಕರರೇ ಎಂಜನ್ ಗಾಡಿಗಳಲ್ಲಿ ಹತ್ತಿ ಡ್ರೈವರುಗಳಂತೆ ನಡಿಸುತ್ತಾರೆ ಅರಕೋಣದಲ್ಲಿ ಕೇ ... ಇರುವ ದೇಶೀಯ ಡ್ರೈವರುಗಳಿಗೆ ಮುಷ್ಕರಹೂಡಿರುವ ... ಯಾವ ಅಪಾಯವು ಸಂಭವಿಸದಂತೆ ಪೋಲೀಸಿನವರು ಎಂಜನ್ ಗಾಡಿಗಳ ಮೇಲೆ ಕಾವಲಿರುತ್ತಾರೆ ರೈಲ್ವೆ ಕಂಪನಿಯ ಅಧಿಕಾರಿಗಳು ಧೈರ್ಯಗುಂದದೆ ಡ್ರೈವರುಗಳ ಮುಷ್ಕರಕ್ಕೆ ಜಗ್ಗದೆ ರಾತ್ರಿ ಹಗಲೂ ಕೆಲಸ ಮಾಡುತ್ತಲೂ ಹೇರಳವಾದ ಸಾಮಾನುಗಳನ್ನು ಸಾಗಿಸುವ ಪ್ರಯತ್ನ ಮಾಡುತ್ತಲೂ ಬರುತ್ತಿದ್ದಾರೆ ಇಂಡಿಯಾ ದೇಶದಲ್ಲಿ ನಾನಾ ರೈಲ್ವೆ ಕಂಪನಿಗಳ ಡ್ರೈವರುಗಳ ಸಹಾಯವನ್ನು ಕೇಳಿದಾರೆ ಮದರಾಸು ಗೂಡ್ಸ್ ಕಟ್ಟಡದಲ್ಲಿ ೬೦೦ ವ್ಯಾಗನ್ ಭರ್ತಿಗಳ ತುಂಬಾ ಸಾಮಾನುಗಳು ಸಾಗದೆ ಬಿದ್ದಿವೆ ಹೊಸದಾಗಿ ಸಾಮಾನುಗಳನ್ನು ತೆಗೆದುಕೊಳ್ಳುವದಿಲ್ಲವಂತೆ ದಿನಕ್ಕೆ ಒಂದೆರಡು ಗೂಡ್ಸ್ ಗಾಡಿಗಳನ್ನು ಮಾತ್ರ ಬಿಡುತ್ತಾರೆ ಇವುಗಳಿಗೆ ಸುಮಾರು ೮೫ ವ್ಯಾಗನುಗಳನ್ನು ಸಿಕ್ಕಿಸುತ್ತಾರೆ ಜನಗಳು ಪ್ರಯಾಣ ಮಾಡುವ ಟ್ರೇನ್‌ಗಳಿಗೆ ೬೦ ಪ್ಯಾಸೆಂಜರ್ ಗಾಡಿಗಳನ್ನು ಸಿಕ್ಕಿಸುತ್ತಾರೆ ರೈಲ್ವೆ ಕಟ್ಟಡಗಳನ್ನು ಕಾಯುವುದಕ್ಕೆ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸಿರುತ್ತಾರೆ

ಇಂಥಾ ಸಹಾಯಕ್ಕೆ ತಕ್ಕವಳಾಗಿದ್ದಾಳೆಂಬುವುದಕ್ಕೆ ಯಾವ ಅನುಮಾನವೂ ಇಲ್ಲ ಆಕೆಗೆ ಜ್ಞಾನ ಸ್ವಾಧೀನವಿಲ್ಲವು, ಕಡತಲ್ಲಿಯೇ ಸುಮ್ಮನೆ ಮಾತಾಡಿಕೊಂಡಿರುವಳು, ಆದರೆ ಯಾರಿಗೂ ಏನೂ ಕೇಡು ಮಾಡುವವಳಲ್ಲ ಸರ್ಕಾರದವರ ಧರ್ಮ ಜೀವನಕ್ಕೆ ಇವಳು ತಕ್ಕವಳಲ್ಲದೆ ಇನ್ನೆಂಥವರಿಗೆ ತಾನೇ ಮಾಡಿದರೆ ಧರ್ಮಸಹಾಯವಾಗುವದು? ತುಪಾಕಿಗಳ ವಿಷಯ:—ಲೈಸನ್ಸ್ ಸಾಹೇಬರವರು ಅಂತೀತರುಇಟ್ಟು ಯಾವ ಕಾರಣದಿಂದ ಈಕೆಗೆ ನಡಿಸುತ್ತಿದ್ದ ಸಹಾಯವು ನಿಂತಿತ್ತೆಂದು ವಿಚಾರಿಸಿ, ಸಕಾರಣವೆಲ್ಲವನ್ನು ಅಂಥವರಿಗೆ ಎಚ್ಚರಿಕೆ ಕೊಟ್ಟು ಮುಂದೆ ಆಕೆಯ ಜೀವನಕ್ಕೆ ತಕ್ಕ ಏರ್ಪಾಡು ಮಾಡಿ ಪ್ರಾಣಸಂರಕ್ಷಣೆ ಮಾಡ್ಯಾರೆಂದು ಹಾರೈಸುವೆವು ತುಪಾಕಿ ಲೈಸನ್ಸ್‌ದಾರರುಗಳು ಲೈಸನ್ಸ್ ಮಾಯಿದೆ ತೀರುವ ಡಿಸೆಂಬರು ತಿಂಗಳುಗಳಲ್ಲಿಯೇ ಬೇರೆ ಲೈಸನ್ಸಿಗೆ ಅರ್ಜಿ ಬರೆದುಕೊಳ್ಳದೆ ಹೋದಲ್ಲಿ ಅಂಥವರ, ತುಪಾಕಿಗಳನ್ನು ಸರ್ಕಾರದ ವಶಕ್ಕೆ ತೆಗೆದು ಇಟ್ಟುಕೊಳ್ಳುವರು ಇದರಿಂದ ಆಯುಧಪಾಣಿಗಳ ವಿಷಯದಲ್ಲಿ ಸರ್ಕಾರದವರು ಎಷ್ಟು ಖಂಡಿತವಾಗಿದಾರೆ ಮುಂದಲ ಸಾಲಿಗೆ ಹೊಸ ಲೈಸನ್ಸ್‌ಗಳಿಗೆ ಅರ್ಜಿ ಕೊಟ್ಟಿದ್ದರೂ ಈ ವರಿಗೂ ಲೈಸನ್ಸ್‌ಗಳು ಆಯುಧಪಾಣಿಗಳಿಗೆ ಬಂದಿಲ್ಲ ಇದು ಎಂಥಾ ನ್ಯಾಯ? ಕ್ಷಾಮ ಕಾಲಗಳಲ್ಲಿ ಕಳ್ಳಕಾಕರ ಅವಾಂತರಕ್ಕೂ, ಪ್ರಯಾಣ ಮಾಡುವಾಗ್ಗೆ ಉಂಟಾಗುವ ಪ್ರಾಣಾಪಾಯಗಳಿಗೂ ಅವರು ತಪ್ಪಿಸಿಕೊಳ್ಳುವುದು ಹ್ಯಾಗೆ? ಒಂದುವೇಳೆ ಲೈಸನ್ಸಿಲ್ಲದೆ ಆಯುಧಗಳನ್ನು ಹಿಡಿದರೆ ಲೈಸನ್ಸ್ ತೋರಿಸಿರೆಂದು ಕೇಳಿ ಇಲ್ಲದಲ್ಲಿ ಅವರಿಗೆ ಶಿಕ್ಷೆಗೆ ಗುರಿಮಾಡುವರಲ್ಲವೇ? ಹೊಸ ಲೈಸನ್ಸಿಗೆ ಅರ್ಜಿ ಕೊಡುವುದು ನಿಧಾನವಾದರೆ ಜಾಗ್ರತೆ ವಿಚಾರಿಸುವಂತೆಯೇ ಈವರಿಗೆ ಲೈಸನ್ಸ್ ಪಾವತಿ ಮಾಡುವಾಗಲೂ ಬಹಳ ಜಾಗರೂಕತೆ ಇರಬಾರದು ಇಲ್ಲವೇ ಲೈಸನ್ಸ್ ಕೊಡುವದು ನಿಧಾನವಾದರೂ ಆಯುಧಗಳನ್ನು ಹಿಡಿಯಬಹುದೆಂದಾದರೂ ಅಪ್ಪಣೆ ಕೊಡಿಸಬಾರದೇ? ಇವೆರಡೂ ಇಲ್ಲದಲ್ಲಿ ಲೈಸನ್ಸ್‌ದಾರರಿಗಿರುವ ತೊಂದರೆಯನ್ನು ಯೋಚಿಸಿ ಜಾಗ್ರತೆ ಕೊಡುವಂತೆ ಏರ್ಪಡಿಸುವರೆಂದು ನಂಬಿರುವೆವು

ಎಂಪೈರ್ ಡೇ ಉತ್ಸವವು

ಅರಸೀಕೆರೆ.

೨೪ನೇ ತಾರೀಖಿನ ದಿನ ಎಂಪೈರ್ ಡೇ ದಿವಸವಾದ್ದರಿಂದ ಈ ಊರಿನ ದೊಡ್ಡಮನುಷ್ಯರೆಲ್ಲರೂ ಸಭೆನಡಿಸಿ ಉತ್ಸವಾದಿಗಳನ್ನು ಮಾಡಿ ಸ್ಕೂಲ್ ಹುಡುಗ ಹುಡುಗಿಯರೆಲ್ಲರಿಗೆ ಆಟಪಾಟಗಳನ್ನು ಆಡಿಸಿ ಬಹುಮಾನಗಳನ್ನು ತಿಂಡಿಪದಾರ್ಥಗಳನ್ನು ಹಂಚಿದರು

ಮಂಚೇನಹಳ್ಳಿ

ಮೇ ತಿಂಗಳ ೨೪ ರಲ್ಲು ಲಂಡನ್ ಮಿಷನ್ ಗರ್ಲ್ಸ್ ಸ್ಕೂಲಿನಲ್ಲಿ ಎಂಪೈರ್ ಡೇ ಉತ್ಸವವು ನಡೆಯಿತು ಮಧ್ಯಾಹ್ನದ ಮೇಲೆ ೩ ಗಂಟೆಗೆ ಬಾಲಕಿಯರು ಅಲಂಕೃತರಾಗಿ ಸ್ಕೂಲಿಗೆ ಬಂದರು ಕರೆಯಲ್ಪಟ್ಟ ಕೆಲವು ಗೃಹಸ್ಥರೂ ಬಂದರು ಉಪಾಧ್ಯಾಯರು ಬಾಲಕಿಯರಿಂದ ಮಹಾರಾಜರ ಶ್ರೇಯಃ ಪ್ರಾರ್ಥನೆ ... ಪಾಡಿಸಿದನಂತರ ... ಎಂಪೈರ್‌ಡೆ ಉತ್ಸವ ... ಗಳು ಅನುಭವಿಸುವ ಮೇಲುಗಳನ್ನೂ ಹಾವು ಕಚ್ಚಿದ ಜಾಗದ ಮೇಲೆ ಶಸ್ತ್ರದಿಂದ ... ನಾವೆಲ್ಲರೂ ಅಸ ಊಜ್ಜಿದರೆ ಕಚ್ಚಲ್ಪಟ್ಟವನು ಬದುಕಿಕೊಳ್ಳುವನೆಂದು ತಿಳಿ... ಕ್ರಮದಂತೆ ಪಂಜಾಬ್ ದೇಶದ ಫಿರೋಜ್ ಡಿಸ್ಟ್ರಿಕ್ಟಿನಲ್ಲಿ ೭೩೫ ಮಂದಿ ಹಾವು ಕಡಿಸಿಕೊಂಡವರಿಗೆ ಔಷಧವನ್ನು ಊಜ್ಜಿದ್ದರಿಂದ ೧೭೭ ಮಂದಿ ಉಳಿಕೊಂಡರು

ಕಲ್ಕತ್ತಾ ಪಟ್ಟಣದಲ್ಲಿ ಜೇಮ್ಸ್ ಕ್ರಿಸ್ಟಿಪಾ ಎಂಬ ಬಂಗಾಳಿಯ ಅಂಗಡಿಯಲ್ಲಿ ಒಂದು ಭಯಂಕರವಾದ ಅಪಾಯವಾಯಿತು ಅಂಗಡಿಯಲ್ಲಿಡಲ್ಪಟ್ಟಿದ್ದ ಎರಡು ಮದದ್ರವ್ಯಗಳು ತುಂಬಿದ್ದ ಬುಟ್ಟಿಗಳಿಗೆ ಹ್ಯಾಗೋ ಬೆಂಕಿ ಹತ್ತಿ ವಿಪರೀತವಾದ ರಭಸದೊಂದಿಗೆ ಸಿಡಿದು ಅಂಗಡಿಯೊಳಗಿದ್ದ ಇಬ್ಬರನ್ನು ಕೊಂದು ಬಿಟ್ಟಿತ್ತು ದಾರಿಯಲ್ಲಿ ಓಡುತ್ತಿದ್ದ ಟ್ರಾಂಗಾಡಿಯ ಡ್ರೈವರಿಗೂ ಇನ್ನೂ ನಾಲ್ಕು ಮಂದಿಗೂ ಜಖಂ ಆಗಿರುತ್ತದೆ

ತಿರುವಾಂಕೂರಿಗೆ ಸೇರಿದ ಕೋಟ್ಟಯಂ ಊರಿನಲ್ಲಿ ಒಂದು ಮೆರವಣಿಗೆಯಲ್ಲಿ ಬರುತ್ತಿದ್ದ ಒಬ್ಬ ಹುಡುಗನ ಜೇಬಿನ ತುಂಬಾ ಕಲ್ಲುಪಟಾಕಿಗಳದ್ದವು ಆ ಹುಡುಗನು ಹ್ಯಾಗೋ ಆಕಸ್ಮಿಕವಾಗಿ ಎಡವಿ ಕೆಳಕ್ಕೆ ಬಿದ್ದುಬಿಟ್ಟನು ಅವನ ಜೇಬಿನ ತುಂಬಾ ಇದ್ದ ಪಟಾಕಿಗಳು ಬಹು ರಭಸದೊಡನೆ ಸಿಡಿದು ಹುಡುಗನನ್ನೂ ಇನ್ನೂ ಬೇರೆ ಎಂಟು ಮಂದಿಯನ್ನೂ ಗಾಯಪಡಿಸಿದವು ಹುಡುಗನು ಆ ರಾತ್ರಿಯಲ್ಲೇ ಆಸ್ಪತ್ರೆಯಲ್ಲಿ ಸತ್ತುಹೋದನು

ಪೂನಾಪಟ್ಟಣದ ಹತ್ತಿರವಿರುವ ಕೋರು ಎಂಬ ಗ್ರಾಮದಲ್ಲಿ ಒಂದು ಮದುವೆಯಾಗುತ್ತಿರುವಾಗ್ಗೆ ಕೆರೋಸಿನ್ ಎಣ್ಣೆ ಡಬ್ಬಾಕ್ಕೆ ಬೆಂಕಿ ಬಿದ್ದು ನಾಲ್ಕು ಮಂದಿಗೆ ಭಯಂಕರವಾದ ಗಾಯಗಳುಂಟಾಗಿವೆ ಇವರು ಬದುಕಲಾರರೆಂದು ತೋರುತ್ತದೆ ಯಾವನೋ ಕೇವಲ ಬುದ್ಧಿಹೀನನಾದವನು ತನ್ನ ಹಾರಿಹೋದ ಪಂಜನ್ನು ಉರಿಯ ಮಾಡುವುದಕ್ಕೆ ಕೆರೋಸಿನ್ ಡಬ್ಬಿಯೊಳಕ್ಕೆ ಅದ್ದಿದ್ದೇ ಈ ದೊಡ್ಡ ಅನಾಹುತಕ್ಕೆ ಕಾರಣವಾಯಿತೆಂದು ಕಂಡು ಬರುತ್ತದೆ

ಅನಕಪಲ್ಲಿಯಲ್ಲಿ ಸೀಸದ ಕಡ್ಡಿಗಳನ್ನು ತಯಾರುಮಾಡುವುದಕ್ಕೆ ಒಂದು ಕಾರ್ಖಾನೆಯನ್ನು ದೇಶೀಯ ಪ್ರಮುಖರು ಏರ್ಪಡಿಸುವರೆಂದು ಹಿಂದೆಯೇ ತಿಳಿಸಿದ್ದೆವಷ್ಟೆ ಹೋದ ಆದಿತ್ಯವಾರ ಸದರಿ ಕಾರ್ಖಾನೆಯಲಿ ಪೆನ್ಸಿಲ್‌ಗಳು ತಯಾರಾಗುವುದಕ್ಕೆ ಪ್ರಾರಂಭವಾಯಿತು ಅನೇಕರು ಇದನ್ನು ನೋಡುವುದಕ್ಕೆ ಹೋಗಿದ್ದರು ಜರ್ಮನ್ ದೇಶದ ಒಂದಾನೊಂದು ಪೆನ್ಸಿಲ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಮ ಸೀ ಎಂಬವರು ಈ ಹೊಸ ಕಾರ್ಖಾನೆಗೆ ವ್ಯಾನೇಜರಾಗಿರುತ್ತಾರೆ

ಅನೇಕ ಸಮಯಗಳಲ್ಲಿ ಪ್ರಯಾಣಿಕರಿಗೆ ಜಟ್ಕಾಗಾಡಿ ಹೊಡೆಯುವವರ ತಂಟೆತಕರಾರು ಸಹಿಸುವುದು ಕಷ್ಟವಷ್ಟೆ ಮದರಾಸ್ ಹತ್ತಿರವಿರುವ ಪೂನಮಲೆ ಎಂಬ ರೈಲ್ವೆ ಸ್ಟೇಷನ್ನಲ್ಲಿ ಗಾಡಿ ಒಂದಕ್ಕೆ ಆರು ಆಣೆಗಳನ್ನು ವಸೂಲ್ ಮಾಡುವ ಕ್ರಮವಿರುತ್ತದೆ ಕೆಲವು ದಿನಗಳ ಹಿಂದೆ ಒಬ್ಬ ಜಟ್ಕಾಗಾಡಿಯವನು ಒಬ್ಬ ಪ್ರಯಾಣಿಕನ ಅವಸರಮಯವನ್ನು ತಿಳಿದು ಅವನಿಂದ ಒಂದುವರೆ

ಎಲ್ಲಾ ಕಡೆಗೂ ಸೂಚಿಸುತ್ತಿತ್ತು ಗೋಡೆಗಳಲ್ಲಿಡಲ್ಪಟ್ಟ ಅಲಂಕೃತಗಳಾದ ಶ್ರೀಮದಿಂಡಿಯಾ ಚಕ್ರವರ್ತಿಗಳ ಮತ್ತು ಶ್ರೀಮನ್ಮಹಾರಾಣಿಯವರ ಫೋಟೋಗಳು ಮಂಡಲೀಶ್ವರರ ಸಾಕ್ಷಾದರ್ಶನ ಸುಖವನ್ನು ಬೀರುತ್ತಿದ್ದುವು ಸೊಸ್ಲೆ ಕಡೂರಿನಲ್ಲಿ ನಡೆದ ವಸ್ತುಪ್ರದರ್ಶನಕ್ಕೆ ಇಲ್ಲಿನ ಸ್ಕೂಲ್ ವಿದ್ಯಾರ್ಥಿಗಳಿಂದ ತಯಾರಿಸಿ ಕಳುಹಿಸಲ್ಪಟ್ಟಿದ್ದ ಹಸ್ತಕೌಶಲವಸ್ತುಗಳು ಈ ಮಂಟಪದಲ್ಲಿ ಶೋಭಿಸುತ್ತಿದ್ದವು ಸ್ಕೂಲ್ ಹೆಡ್ ಮಾಸ್ಟರ್ ಮ| ಕೆ ಶಂಕರಪ್ಪನವರ ಕೋರಿಕೆಯಂತೆ ಹರೀಕರೆ ತಾ|| ಪೋ| ಇನ್ಸ್‌ಪೆಕ್ಟರ್ ಮ|| ಡಿ ಮಹಮದ್ ಬೇಗ್ ಯವರು, ಇಲ್ಲಿನ ಜಮಾದಾರ್ ಮ ಅಪ್ಪಾರಾಯರವರೂ ಅ|| ಅ|| ಮ|| ಸುಬ್ಬರಾಯರವರೂ, ಶೇಕದಾರ್ ಮ| ಕಾಶೀಪತ್ಯಯ್ಯನವರೂ, ತಾ|| ಮೇಸ್ತ್ರಿಗಳು ಮ|| ಬಾಲಕೃಷ್ಣಮೊದಲಿಯಾರ್ರವರೂ ಪಟೇಲರು ಮ|| ಚಿ ಕೆ ವೆಂಕಟಸುಬ್ಬಯ್ಯನವರೂ, ತಾ| ಸು ಸೀತಾರಾಮಯ್ಯನವರೂ ರೈಲ್ವೆಸ್ಟೇಷನ್ ಅ|| ಮ ಮ| ಸುಬ್ಬರಾಯರವರೇ ಮೊದಲಾದ ಅಧಿಕಾರಿವರ್ಗವೂ, ಯೂನಿಯನ್ ಮೆಂಬರುಗಳೂ, ಸಾಹುಕಾರರೂ, ವರ್ತಕರೂ, ಮೊದಲಾದ ಮಹನೀಯರುಗಳೆಲ್ಲರೂ ರಾಜಗೌರವಾನುಗುಣವಾದ ಉಡಿಗೆತೊಡಿಗೆಗಳಿಂದ ದಯಮಾಡಿ ಭಕ್ತಿಯುಕ್ತರಾಗಿ ಉಚಿತಾಸನಗಳನ್ನಲಂಕರಿಸಿದ್ದರು ವಿದ್ಯಾರ್ಥಿಗಳಿಂದ ಡ್ರಿಲ್ ಮಾಡಿಸಲ್ಪಟ್ಟು “ಯೂನಿಯನ್ ಜಾಕ್” (ಬ್ರಿಟಿಷ್ ಸರಕಾರದ ಬಾವುಟ)ಗೆ ಸೆಲ್ಯೂಟ್ ಮಾಡಲ್ಪಟ್ಟಿತು ಪೋ ಇ ಮ|| ಡಿ ಮಹಮ್ಮದ್‌ಬೇಗ್‌ಯವರ ಕೋರಿಕೆಯಂತೆ, ಸಭಿಕರ ಇಷ್ಟವನ್ನನುಸರಿಸಿ ಅ ಅ ಮ|| ಸುಬ್ಬರಾಯರು ಅಗ್ರಾಸನಾಸೀನರಾದರು ಮ| ಕೆ ಶಂಕರಪ್ಪನವರಿಂದ “ಎಂಪೈರ್‌ಡೆ” ಮಹೋತ್ಸವ ವಿಷಯವಾಗಿಯೂ, ಅ| ಮ|| ಸುಬ್ಬರಾಯರಿಂದ ರಾಜಭಕ್ತಿಯ ವಿಷಯವಾಗಿಯೂ, ೫ ನೆ ತರಗತಿ ವಿದ್ಯಾರ್ಥಿ ಬಿ ಲಕ್ಷ್ಮೀಪತಯ್ಯನಿಂದ ಆಂಗ್ಲೇಯ ರಾಜ್ಯಭಾರ ಸೌಕರ್ಯ ವಿಷಯವಾಗಿಯೂ, ಸರಸವಾದ ಉಪನ್ಯಾಸಗಳು ಓದಲ್ಪಟ್ಟವು ಈ ಸ್ಕೂಲ್ ಅಭಿವೃದ್ಧಿಗೆ ಒಂದು ಸ್ಕೂಲ್ ಕಟ್ಟಡವಿಲ್ಲ ಸ್ಥಳ ಸಾಲದೆ ದೇವಸ್ಥಾನದಲ್ಲಿ ಕೆಲವು ತರಗತಿಗಳನ್ನಿಟ್ಟು ತುಂಬಾ ತೊಂದರೆ ಪಡುತ್ತಿರುವುದರಿಂದ ಪೇಟೆಯಲ್ಲಿರುವ ಹಳೇ ಅಂಚೆ ಮನೆಯನ್ನು ರಿಪೇರಿ ಮಾಡಿಸಿ ಅನುಕೂಲ ಪಡಿಸಿಕೊಡುವ ಬಗ್ಗೆ ಗ್ರಾಮಸ್ಥರೆಲ್ಲರೂ ಯಥೋಚಿತ ದ್ರವ್ಯ ಸಹಾಯವನ್ನು ದಯಪಾಲಿಸಿ ಕೀರ್ತಿಭಾಗಿಗಳಾಗಬೇಕೆಂಬ ವಿಷಯವನ್ನು ಯೂನಿಯನ್ ಮೆಂಬರು ಮ| ಬಾಳನಕಟ್ಟೆ ಪುಟ್ಟಪ್ಪನವರು ಸೂಚಿಸಿದರು ಬೆಂಗಳೂರು ಬ್ರಹ್ಮಸಮಾಜದ ಮೆಂಬರು ಶ್ರೀಸ್ವಯಂಬ್ರಹ್ಮಾನಂದರು ಚಕ್ರವರ್ತಿಗಳ ಮತ್ತು ಇವರ ವಾತ್ಸಲ್ಯಶ್ರೀಯವರ ಗುಣಕಥನ ಮಾಡಿದರು ಸಭಾಧ್ಯಕ್ಷರೂ ರಾಜಭಕ್ತಿಯವಶ್ಯವೆಂಬುದನ್ನು ಪುಷ್ಟೀಕರಿಸಿದರು ವಿದ್ಯಾರ್ಥಿಗಳಿಂದ ಇಂಗ್ಲಿಷ್ ಮತ್ತು ಹಿಂದೂ ತರಹ ಆಹ್ಲಾದಕರವಾದ ಆಟಗಳು ನಡಿಸಲ್ಪಟ್ಟು, ಬಾಲಕರುಗಳ ಗಾನದಿಂದ ಆನಂದಪರರಾಗಿ, ಆಟದಲ್ಲಿ ಗೆದ್ದವರಿಗೂ ಬಾಲಕಿಯರಿಗೂ, ಮ| ಶಂಕರಪ್ಪನವರಿಂದ ರಚಿತವಾದ ಪುಸ್ತಕಗಳು ಬಹುಮಾನವಾಗಿ ಕೊಡಲ್ಪಟ್ಟವು ಮ ವಿ ಕೆ ವೆಂಕಟಸುಬ್ಬಯ್ಯನವರ ಗ್ರಾಮಾಫೋನ್ ಸಂಗೀತವೂ ಮ ಸುಬ್ಬರಾಯರ ರಾಜಭಕ್ತಿ ಪೂರಿತವಾದ ಹಾಡಿಕೆಯೂ ಆನಂದಗೊಳಿಸಿತು ಗಂಧ ಪುಷ್ಪ ತಾಂಬೂಲ ಫಲಾಹಾರಗಳು ಹಂಚಲ್ಪಟ್ಟು, ಚಕ್ರವರ್ತಿಗಳ ಮತ್ತು ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನಾ ಪೂರ್ವಕ ಮ| ಕೆ ಶಂಕರಪ್ಪನವರು ಸಭಾಧ್ಯಕ್ಷರಿಗೆ ಗೌರವವನ್ನಿತ್ತು ಆಸ್ತ್ರಯುದಾಯಕರಾದ ಸಭಿಕರ ಗುಣ ಕಥನ ಮಾಡಿದರು ಮುಖ್ಯೋಪಾಧ್ಯಾಯರ, ಸಹಾಯೋಪಾಧ್ಯಾಯರುಗಳ, ಚಟುವಟಿಕೆಯು ಶ್ಲಾಘ್ಯವಾಗಿತ್ತು ಆನಂದದಿಂದ ಸಭೆ ಪೂರ್ಣವಾಯಿತು

... ಚಿಕ್ಕಬಳ್ಳಾಪುರ ... ಅವರಿಗೆ ಸೆರೆಯಿಂದ ಬಿಡುಗಡೆ ... ಶುಭದಿಂದಲ್ಲಿ ದೊಡ್ಡಬಳ್ಳಾ...

ಅಮೇರಿಕಾ ದೇಶದವರು ಪನಾಮಾ ಕಾಲುವೆಯನ್ನು ಹೇರಳವಾದ ವೆಚ್ಚಮಾಡಿ ತೋಡುತ್ತಿರುವರಷ್ಟೆ ಯುದ್ಧಕಾಲಗಳಲ್ಲಿ ಈ ಕಾಲುವೆಯು ಶತ್ರುಗಳ ವಶವಾಗದಂತೆ ಅದನ್ನು ಕಾಪಾಡಿಕೊಳ್ಳಲು ಅದರ ಹತ್ತಿರ ಕೋಟೆ ಕೊತ್ತಳಗಳನ್ನು ಕಟ್ಟಿಸುವುದಕ್ಕೆ ಸುಮಾರು ನೂರೆಪ್ಪತ್ತೈದು ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ

ಪರ್ಷಿಯಾ ದೇಶದಲ್ಲಿ ಗಲಭೆ ಮಾಡುತ್ತಿರುವ ಅಂಕುಶಪ್ರಭುತ್ವದವರು ರಷ್ಯಾ ಸರ್ಕಾರಕ್ಕೆ ಸೇರಿದ ಒಂದು ರಸ್ತೆಯನ್ನು ಹಾಳುಮಾಡಿರುತ್ತಾರೆ ರಷ್ಯಾ ಸರ್ಕಾರದವರು ಮೇಲ್ಕಂಡ ಪಂಗಡಕ್ಕೆ ಸೇರಿದ ಸವಾರ್‌ಖಾನ್ ಎಂಬವನನ್ನು ಹಿಡಿದುಕೊಂಡು ತಮಗೆ ನಷ್ಟವಾಗಿರತಕ್ಕ ನಾಲ್ಕುವರೆ ಲಕ್ಷ ರೂಪಾಯಿಗಳನ್ನು ಕಟ್ಟಿಕೊಡಬೇಕೆಂಬದಾಗಿ ಕೇಳುತ್ತಿದಾರೆ

ವೆಸ್ಲಿಯನ್ ಮೆಥೋಡಿಸ್ಟ್ ಕ್ರೈಸ್ತ ಸಂಘದವರು ವಿಲಾಯಿತಿಯಲ್ಲಿ ವಾರ್ಷಿಕ ಮೀಟಿಂಗನ್ನು ನಡಿಸಿದರು ಅಗ್ಗ ಅಲ್ಲಿ ಫೀಜಿ ದ್ವೀಪದಿಂದ ಬಂದ ಒಂದು ವಿಶೇಷವಾದ ಕಾಗದವು ಓದಲ್ಪಟ್ಟಿತು ಈ ಕಾಗದವನ್ನು ಅಲ್ಲಿನ ಚೀಫ್ ಜಡ್ಜ್ ರವರು ಬರೆದಿರುತ್ತಾರೆ ಕೆಲವು ವರುಷಗಳ ಹಿಂದೆ ಫೀಜಿ ನಿವಾಸಿಗಳು ನರಮಾಂಸ ಭಕ್ಷಕರಾಗಿದ್ದರೆಂತಲೂ ಇಂಥಾ ಕಿರಾತರನ್ನು ಕ್ರೈಸ್ತ ಪಾದ್ರಿಗಳು ಕೆಲವು ವರುಷಗಳೊಳಗಾಗಿಯೇ ಸಭ್ಯರೂ ಯೋಗ್ಯರೂ ಆದವರನ್ನಾಗಿ ಮಾಡಿರುವರೆಂತಲೂ ಕೃತಜ್ಞತಾ ಪೂರ್ವಕವಾಗಿ ಬರೆದಿರುವರು.

ಈಚೆಗೆ ಅಮೇರಿಕಾ ದೇಶದ ಪೆನ್ಸಿಲ್‌ವೇನಿಯ ಡಿಸ್ಟ್ರಿಕ್ಟಿನಲ್ಲಿ ಸ್ಥಳದಿಂದ ಸ್ಥಳಕ್ಕೆ ಸಂಚಾರಮಾಡಿ ವ್ಯವಸಾಯ ಸಂಬಂಧವಾದ ಸಂಗತಿಗಳನ್ನು ಜನಗಳಿಗೆ ಬೋಧಿಸುವ ಒಂದು ಕ್ರಮವು ಏರ್ಪಾಡಾಗಿದೆ ಇದರಿಂದ ಬಹಳ ಅನುಕೂಲ ಕಂಡುಬಂದು ಈ ಕ್ರಮವು ಅನೇಕ ಕಡೆ ರೂಢಿಯಲ್ಲಿ ಬರುವಂತಿದೆ “ಫಾರ್ಮರ್ಸ್ ಸ್ಪೆಷಲ್” (Farmers' Special) ಎಂಬ ರೈತರ ಉಪಯೋಗಕ್ಕಾಗಿಯೇ ಒಂದು ರೈಲು ಗಾಡಿಯು ಏರ್ಪಟ್ಟು ಅದರಲ್ಲಿ ಆರು ಜನ ವ್ಯವಸಾಯ ಶಾಸ್ತ್ರಜ್ಞರು ಪ್ರಯಾಣ ಮಾಡಿ ಅಲ್ಲಲ್ಲಿ ಮೊಕ್ಕಾಂ ಮಾಡುತ್ತಾರೆ ಇವರುಗಳು ಮೊಕ್ಕಾಂ ಮಾಡಿದ ವೇಳೆ ಧಾನ್ಯ ಬೆಳೆಯುವದು, ದನಗಳ ಸಾಕುವಿಕೆ, ಗೊಬ್ಬರ ಹಾಕುವದು ಮುಂತಾದ ವಿಷಯಗಳಲ್ಲಿ ರೈತರಿಗೆ ಉಪಯೋಗವಾಗಿರುವಂತೆ ಸಣ್ಣ ಉಪನ್ಯಾಸಗಳನ್ನು ಮಾಡುವರು ಈ ಸ್ಪೆಷಲ್ ಗಾಡಿ ಬರುವ ವೇಳೆಯನ್ನು ರೈತರಿಗೆ ಮುಂದಾಗಿ ತಿಳಿಸುವರು ರೈತರು ಈ ಗಾಡಿ ನಿಲ್ಲುವ ಸ್ಥಳಕ್ಕೆ ಅನೇಕವಾಗಿ ಬರುವರು ೧೯—೨೦ ವಯಸ್ಸಿನವರು ಮೊದಲುಗೊಂಡು ಮುದುಕರು ಕೂಡಿ ಸುಮಾರು ಮೂರು ಸಾವಿರ ರೈತರಿಗೆ ಕಡಿಮೆ ಇಲ್ಲದೆ ಈ ಉಪನ್ಯಾಸಗಳನ್ನು ಕೇಳುವುದಕ್ಕೆ ಬರುವರಂತೆ

ಸ್ಯವುಳ್ಳ ಉಪನ್ಯಾಸವನ್ನು ಅಪ್ಪಣೆ ಕೊಡಿಸಿದರು. ಈ ಉಪನ್ಯಾಸವು ಅತ್ಯಂತ ಮನೋಹರವಾಗಿಯೂ, ಹರ್ಷಕರವಾಗಿಯೂ ಇತ್ತು ಬಳಿಕ ಸಭಿಕರಿಗೆ ಗಂಧ, ಪುಷ್ಪ, ತಾಂಬೂಲಾದಿಗಳು ಕೊಡಲ್ಪಟ್ಟವು ಅವಶ್ಯವಾದ ಪ್ರತಿಯೊಂದು ಸಂದರ್ಭದಲ್ಲಿಯೂ ಮಂಗಳ ವಾದ್ಯಗಳು ಆಗುತ್ತಿದ್ದವು. ಅಮಲ್ದಾರ್ ಮ॥ ರಾ॥ ಎಂ ಸದಾಶಿವರಾಯರು ಈ ಮಹೋತ್ಸವದ ಜ್ಞಾಪಕಾರ್ಥವಾಗಿ ಕ್ರಿಕೆಟ್ ಸಾಮಾನುಗಳನ್ನು ಉಚಿತವಾಗಿ ಎ ವಿ ಸ್ಕೂಲಿಗೆ ಅಪ್ಪಣೆ ಕೊಡಿಸಿದರು. ಮ॥ ರಾ॥ ಅಮಲ್ದಾರರವರ ಅಪ್ಪಣೆ ಮೇರೆಗೆ ೨೫ನೇ ಮಂಗಳವಾರ ಪ್ರಾತಃಕಾಲದಲ್ಲಿ ಎ ವಿ ಸ್ಕೂಲ್, ಕನ್ನಡ ಗರಲ್ಸ್ ಸ್ಕೂಲ್, ಹಿಂದೂಸ್ತಾನಿ ಬಾಯ್ಸ್ ಸ್ಕೂಲ್ ಮತ್ತು ಗರಲ್ಸ್ ಸ್ಕೂಲ್, ಇಂಡಸ್ಟ್ರಿಯಲ್ ಸ್ಕೂಲ್, ಹೊಲೆಯರ ಸ್ಕೂಲ್, ಮಾದಿಗರ ಸ್ಕೂಲ್, ರೋಜಿಪುರದ ಸ್ಕೂಲ್, ಆಳಮಲ್ಲಿಗೆ ಸ್ಕೂಲ್, ತೊಡಿಗೆಹಳ್ಳಿ ಸ್ಕೂಲ್, ಈ ಸ್ಕೂಲುಗಳ ವಿದ್ಯಾರ್ಥಿಗಳು ಸುಮಾರು ೮೦೦ ವಿದ್ಯಾರ್ಥಿಗಳಿಗೆ ಸಕ್ಕರೆ ಹಂಚಿದುದಾಯಿತು ಈ ಶುಭ ದಿವವನ್ನು ಸಂತೋಷವಾಗಿ ಕಳೆಯುವಂತೆ ಸರ್ಕಾರದವರು ಅನುಗ್ರಹಪೂರ್ವಕವಾಗಿ ಏರ್ಪಾಡು ಮಾಡಿಕೊಟ್ಟದುದಕ್ಕಾಗಿ ಸರ್ವರೂ ಕೃತಾಂಜಲೀಬದ್ಧರಾಗಿ ಭಕ್ತಿಪೂರ್ವಕವಾಗಿ ವಂದಿಸಿದರು

ತರೀಕೆರೆ.

ಕಳೆದ ತಿಂಗಳು ೨೪ನೇ ತಾ॥ ಎಂಪೈರ್‌ಡೇ ಯಾದ್ದರಿಂದ ಎಲ್ಲಾ ಸ್ಕೂಲುಗಳಿಗೂ ರಜಾ ಕೊಡಲ್ಪಟ್ಟಿತು ಆ ದಿನವು ಒಂದು ವಿಶೇಷವಾದ ದಿನವೆಂದು ಸ್ಕೂಲ್ ಬಾಲಕರು ತಿಳಿದುಕೊಳ್ಳುವ ಹಾಗೆ ಇಲ್ಲಿನ ಎ ವಿ. ಸ್ಕೂಲ್ ಹೆಡ್ ಮಾಸ್ಟರಾದ ಮ॥ ಜಿ ಅಪ್ಪಾಜಿಯವರು ತುಂಬಾ ಶ್ರಮ ತೆಗೆದುಕೊಂಡು, ಚಂದಾ ವಸೂಲ್ ಮಾಡಿ, ಆದಿನ ಸಾಯಂಕಾಲ ಮೌಲ್ಕಂಡ ಸ್ಕೂಲ್ ಕಾಂಪೌಂಡಿನಲ್ಲಿ ಎಲ್ಲಾ ವಿದ್ಯಾರ್ಥಿಗಳನ್ನು ಸೇರಿಸಿ ಬೇರೆ ಬೇರೆ ವಿಧವಾದ ಆಟಗಳನ್ನಾಡಿಸಿ ಗೆದ್ದವರಿಗೆ ಬಹುಮಾನವನ್ನೂ, ಬಾಕಿಯವರಿಗೆಲ್ಲಾ ತಿಂಡಿಯನ್ನೂ ಹಂಚಿ, ತಮ್ಮ ಸಂತೋಷವನ್ನು ತೋರ್ಪಡಿಸುವುದಕ್ಕಾಗಿಯೂ, ಚಕ್ರವರ್ತಿಯವರಿಗೆ ಮತ್ತು ಶ್ರೀಮನ್ ಮಹಾರಾಜರಿಗೆ ಶ್ರೇಯಸ್ಸುಂಟಾಗುವ ಹಾಗೆ ಆರಾವರ್ತಿ ಚಪ್ಪಾಳೆ ಮಾಡಿದರು

ಹೆಗ್ಗಡದೇವನಕೋಟೆ

ಇದೇ ತಿಂಗಳು ೨೪ನೇ ತಾರೀಖಿನ ದಿವಸ ಗೌ ಇಂಗ್ಲೀಷ್ ಸ್ಕೂಲಿನಲ್ಲಿ ಮೇಲೆ ಹೇಳಿದ ಮಹೋತ್ಸವು ಅತಿವಿಜೃಂಭಣೆಯಿಂದ ಜರಗಿತು ಆ ದಿವಸ ಸ್ಕೂಲು ಬಾಳೇ ಕಂಭದಿಂದಲೂ, ತೋರಣದಿಂದಲೂ, ಬಾವುಟದಿಂದಲೂ ಅಲಂಕರಿಸಲ್ಪಟ್ಟಿತು ಬಾಗಿಲ ಮುಂದೆ ಎಲೆಯಿಂದಲೂ, ಕಾಗದದಿಂದಲೂ ಕತ್ತರಿಸಲ್ಪಟ್ಟ ಚಿತ್ರಗಳು ನೋಟಕರಿಗೆ ನೇತ್ರಾನಂದಕರವಾಗಿದ್ದಿತು ಮಧ್ಯಾಹ್ನ ೪ ಘಂಟೆಗೆ ಸರಿಯಾಗಿ ಬಾಲಕರೆಲ್ಲರೂ ಸ್ಕೂಲಿನ ಹಿಂಭಾಗದಲ್ಲಿ ಬಂದು ಸೇರಿದರು ಓಡುವದು, ಹಾರುವದು, ಹಗ್ಗ ಎಳೆಯೋಣವೇ ಮೊದಲಾದ ಆಟಗಳು ಸುಮಾರು ೧ ಘಂಟೆ ಪರ್ಯಂತರ ನಡೆದವು ಆ ಮೇಲೆ ಬಾಲಕರು ಸ್ಕೂಲಿಗೆ ಒಯ್ಯಲ್ಪಟ್ಟರು ಹೆಡ್‌ಮಾಸ್ಟರು, ಅಸಿಸ್ಟೆಂಟ್‌ಮಾಸ್ಟರುಗಳೇ ಮೊದಲಾದವರು ಹಾಜರಾಗಿದ್ದರು ಮ॥ ರಾ॥ ಶ್ರೀಕಂಠಶಾಸ್ತ್ರಿಗಳೆಂಬುವರು ಅಗ್ರಾಸನಾಧಿಪತಿಯಾಗಿದ್ದರು ಅಸಿಸ್ಟೆಂಟುಮಾಸ್ಟರುಗಳಲ್ಲೊಬ್ಬರಾದ ವೆಂಕಟರಾಮಶೆಟ್ಟಿಯವರು ಬ್ರಿಟಿಷರಿಂದ ನಮಗೆ ಆಗಿರತಕ್ಕ ಪ್ರಯೋಜನಗಳನ್ನು (ರೈಲ್ವೆ ಅಂಚೆ ಆಫೀಸು, ಟೆಲಿಗ್ರಾಫ್) ತಿಳಿಸಿ ನಾವು ಅವರ ವಿಷಯದಲ್ಲಿ ಎಷ್ಟು ಕೃತಜ್ಞರಾಗಿರಬೇಕೆಂಬುದರ ವಿಷಯವಾಗಿ ಕೆಲವು ಮಾತುಗಳನ್ನಾಡಿದರು ಆಗ ಬಾಲಕಿಯರು ಹಾಡಿದ ಇಂಪಾದರಾಗಗಳು ಸಭಿಕರಿಗೆ ಕರ್ಣಾನಂದಕರವಾಗಿದ್ದವು ಕಡೆಗೆ ಚಕ್ರವರ್ತಿ ಮಹಾರಾಜರ ಮತ್ತು ಯುವರಾಜ ಸಂಬಳಿಗೆ ಆಶೀರ್ವಾದ ಕೈಕೊಂಡ ಶಿಷ್ಯರೆಂದು ಒಪ್ಪಿಕೆಯರಿಗೆ ಮುಗಿಯಿತು

ವವರ ತಸ್ವೀರುಗಳಿಂದಲೂ, ಅಲಂಕರಿಸಿ ಸದರಿ ೨೪ನೇ ತಾ॥ ಪ್ರಾತಃಕಾಲ ೭ ಗಂಟೆಗೆ ಸ್ಕೂಲ್ ಕಟ್ಟಡದ ಮೇಲೆ ಬ್ರಿಟಿಷ್ ಬಾವುಟವನ್ನು ಸ್ಥಾಪಿಸಿದರು ಅಲಂಕರಿಸಲ್ಪಟ್ಟ ಮುಂಭಾಗದ ವರಾಂಡದಲ್ಲಿ ಬಾಲಕರನ್ನೆಲ್ಲಾ ಕವಾತ್ ವಗೈರೆ ನಡಿಸಿ ಸದರಿ ಬಾಲಕರನ್ನು ಸ್ಕೂಲಿನ ಒಳಕ್ಕೆ ಬಿಟ್ಟರು. ಮಧ್ಯಾಹ್ನ ಮ॥ ರಾ॥ ವ್ಯಾಸಬಾಗ ನಂಜಪ್ಪನವರು ಶ್ರೀ ನೀಲಕಂಠೇಶ್ವರ ದೇವಸ್ಥಾನದಲ್ಲಿ ಅಭಿಷೇಕ ಬ್ರಾಹ್ಮಣ ಸಮಾರಾಧನೆ ವಗೈರೆ ನಡಿಸಿದರು ಮಧ್ಯಾಹ್ನಾನಂತರ ಸ್ಕೂಲ್ ಮೆಂಬರುಗಳೇ ಮುಂತಾದ ಗ್ರಾಮಸ್ಥರನ್ನೂ ಬೂದಿಗೆರೆ ಗ್ರಾಮಸ್ಥರನ್ನೂ ಅಜೂಬಾಜೂ ಗ್ರಾಮಗಳ ಮುಖ್ಯಸ್ಥರನ್ನೂ ಸಹ ಬರಮಾಡಿಕೊಂಡು ವಿಕ್ಟೋರಿಯ ಮಹಾರಾಜ್ಞಿಯವರ ತಸ್ವೀರನ್ನೂ, ಎಡ್ವರ್ಡ್ ಸಾರ್ವಭೌಮರವರ ದಂಪತಿಗಳ ಮತ್ತು ಸ್ವೇನ್ಯದವರ ತಸ್ವೀರುಗಳನ್ನೂ ಸ್ಕೂಲಿನಲ್ಲಿ ಅಲಂಕರಿಸಿ ಉತ್ಸವಕ್ಕಾಗಿ ಸ್ಥಳವನ್ನು ಬಿಟ್ಟಕೂಡಲೇ ಬಂದೂಕಿನಿಂದ ತೋಪುಗಳು ಹಾರಿಸಲ್ಪಟ್ಟು ವಾದ್ಯಘೋಷಗಳೊಡನೆ ಬೀದಿ ಬೀದಿಗಳಲ್ಲಿಯೂ ಉತ್ಸವವನ್ನು ನಡಿಸಿಕೊಂಡು ಸ್ಕೂಲನ್ನು ತಲಪಿದ ಕೂಡಲೆ ಬಂದೂಕಿನಿಂದ ಪುನಃ ತೋಪುಗಳು ಹಾರಿಸಲ್ಪಟ್ಟವು. ನಂತರ ಸರ್ವರೂ ಒಳಗೆ ಬಂದು ಸಭೆ ಸೇರಿದರು. ಸ್ಕೂಲ್ ಬಾಲಕರು ದೇವರ ಸ್ತೋತ್ರಗಳನ್ನೂ ಶ್ರೀಮದಿಂಡಿಯಾ ಚಕ್ರವರ್ತಿಯವರಾದ ಎಡ್ವರ್ಡ್ ಸಾರ್ವಭೌಮರವರ ಶ್ರೀಮನ್ಮಹಿಸೂರು ಮಹಾರಾಜರವರ ಮೈಸೂರು ಭಾಭಾ ಸಾಹೇಬರವರುಗಳ ಶ್ರೇಯೋಭಿವೃದ್ಧಿ ಹಾಡುಗಳನ್ನು ಗಾಯನ ಮಾಡಿದರು ಸ್ಕೂಲ್ ಮಾಸ್ಟರ್ ನರಸಪ್ಪನವರು ಸಭೆಯವರ ಸಂತೋಷದಂತೆ ಮ॥ ರಾ॥ ಬೂದಿಗೆರೆ ಜಮೀನ್‌ದಾರ್ ಗುಂಡೂರಾಯರವರನ್ನು ಸಭಾಧ್ಯಕ್ಷರನ್ನಾಗಿ ಮಾಡಿ ಬ್ರಿಟಿಷ್ ಗೌರ್ನಮೆಂಟಿನವರಿಗೆ ಸೇರಿರುವ ರಾಜ್ಯಗಳ ವಿಷಯವಾಗಿಯೂ ಅವರು ಪ್ರಜೆಗಳಿಗೆ ಉಂಟುಮಾಡಿರುವ ಸೌಕರ್ಯಗಳ ವಿಷಯವಾಗಿಯೂ ವಿಕ್ಟೋರಿಯಾ ಮಹಾರಾಜ್ಞಿಯವರು ತಮ್ಮ ಆಳ್ವಿಕೆಯಲ್ಲಿ ಪ್ರಜೆಗಳ ಕಷ್ಟಗಳನ್ನು ಪರಿಹಾರಮಾಡಿರುವ ವಿಷಯವಾಗಿಯೂ ಈಗ ಎಡ್ವರ್ಡ್ ಸಾರ್ವಭೌಮರವರು ಸತ್ಯದಿಂದ ಪ್ರಜಾಪಾಲನೆಯನ್ನೇ ಯೋಚಿಸುತ್ತಿರುವ ವಿಷಯವಾಗಿಯೂ ನಮ್ಮನ್ನು ಪಾಲಿಸುತ್ತಿರುವ ಶ್ರೀಮನ್ಮಹಾರಾಜರವರು ಪ್ರಜೆಗಳ ಕಷ್ಟಸುಖಗಳನ್ನು ತಮ್ಮ ಘನವಾದ ಚಿತ್ತದಲ್ಲಿ ಯೋಚಿಸುತ್ತ ಈ ಮಳೆಬೆಳೆಗಳಿಲ್ಲದ ಕಾಲದಲ್ಲಿ ಅನೇಕ ವಿಧಗಳಲ್ಲಿ ಪ್ರಜೆಗಳಿಗೆ ಉಪಕಾರವನ್ನಾಡುತ್ತಾ ಧರ್ಮದಿಂದ ರಾಜ್ಯಸಂಪಾಲನೆಯನ್ನು ಮಾಡುತ್ತಿರುವ ವಿಷಯವಾಗಿಯೂ ಚೀಫ್ ದಿವಾನ್ ಸಾಹೇಬರಾದ ಮ॥ ವಿ ಪಿ ಮಾಧವರಾಯರು ಈ ಸೀಮೆಯ ಸ್ಕೂಲ್ ಮಾಸ್ಟರುಗಳಿಗೆ ಹತ್ತು ರೂಪಾಯಿಗೆ ಕಡಮೆ ಇಲ್ಲದೆ ಬಡ್ತಿ ಮಾಡಿಸಿಕೊಟ್ಟು ಕಾಪಾಡಿದ ವಿಷಯವಾಗಿಯೂ ಮೈ ಭಾಭಾ ಸಾಹೇಬರವರು ಅಪೇಕ್ಷಿಸಿದ ಸಣ್ಣ ಸಣ್ಣ ಗ್ರಾಮಗಳಲ್ಲೆಲ್ಲಾ ಸ್ಕೂಲುಗಳನ್ನು ಕೊಟ್ಟು ಪ್ರಜೆಗಳ ವಿದ್ಯಾಭಿವೃದ್ಧಿ ವಿಷಯವನ್ನೇ ಯೋಚಿಸುತ್ತಿರುವ ವಿಷಯವಾಗಿಯೂ ಉಪನ್ಯಾಸವನ್ನಾಡಿ ಈ ಮಹನೀಯರವರುಗಳಿಗೆ ಭಗವಂತನು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಕೊಟ್ಟು ಸರ್ವದಾ ಕಾಪಾಡಲೆಂದು ಹರಸಿದ ಕೂಡಲೆ ಜಯಘೋಷಗಳು ಮಾಡಲ್ಪಟ್ಟವು ನಂತರ ತಮ್ಮ ಸ್ಕೂಲ್ ಅಭಿವೃದ್ಧಿ ವಿಷಯವಾಗಿಯೂ ಉಪನ್ಯಾಸ ಮಾಡಿದರು ನಂತರ ಜೋತಿಪುರದ ಸ್ಕೂ ಮಾ ಮ॥ ರಾ॥ ರಾಮಣ್ಣನವರು ಲಾರ್ಡ್ ಡಾಲ್‌ಹೌಸಿ ಕಾಲದಲ್ಲಿ ನಡೆದ ಬದಲಾವಣೆ ವಿಷಯವಾಗಿಯೂ ಯೂನಿವರ್‌ಸಿಟಿಗಳ ವಿಷಯವಾಗಿಯೂ ಉಪನ್ಯಾಸ ಕೇಳಿ, ಅದನ್ನು ಎರಡು ತಿಂಗಳು ಉಪಾಧ್ಯಕ್ಷರಾದ ಮ॥ ... ಸೇವಿಸಿ, ಅದರಿಂದ ನನಗೆ ಎಷ್ಟು ಮಟ್ಟಿಗೆ ಒಳ್ಳೆಯದಾಯಿತೆಂದು ನೋಡೋಣವೆಂದು ನಿಶ್ಚಯಿಸಿಕೊಂಡೆನು.

ಥಾನಿಯ ಮಸೀತಿಗಳಲ್ಲೂ, ದೇವಸ್ಥಾನಗಳಲ್ಲೂ, ಸಂಸ್ಥಾನದ ಮಳೆ ಮುಜರಾಯಿ ದೇವಸ್ಥಾನ ಮಸೀತಿಗಳಲ್ಲೂ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನಾ ಅಭಿಷೇಕ ಅರ್ಚನಾದಿ ಉತ್ಸವಗಳು ನಡೆದವು. ಸಮಾರಾಧನೆಯು ಛತ್ರ ಮತ್ತು ಗುರುಗಳ ಮಠದಲ್ಲಿ ಜರುಗಿತು ಸಾವಿರಾರು ಜನರು ಸುಖಭೋಜನ ಮಾಡಿದರು.

ವರ್ಧಂತಿ ಕಟ್ಲೆಯ ಮೆರವಣಿಗೆಯು.

ಮಧ್ಯಾಹ್ನಾನಂತರ ಸುಮಾರು ೫ ಗಂಟೆಗೆ ಶ್ರೀಮನ್ಮಹಾರಾಜರವರು ಮೆರವಣಿಗೆಯು ಬರುವದಕ್ಕಿದ್ದಿತು ಆಗ ಮಳೆಯು ವಿಶೇಷವಾಗಿದ್ದುದರಿಂದ ಮಳೆಯು ಕೊಂಚ ನಿಂತ ಮೇಲೆ ೭ ಗಂಟೆಗೆ ಶ್ರೀಮನ್ಮಹಾರಾಜರವರು ಸಕಲ ಸನ್ನಾನ ಬಿರುದು ಸೈನ್ಯಗಳೊಡನೆ ಮೆರವಣಿಗೆ ಹೊರಟರು ರಸ್ತೆಗಳ ಉಭಯ ಪಾರ್ಶ್ವಗಳಲ್ಲೂ ಬಾವುಟಾವುಗಳೂ ತೋರಣಾದಿಗಳೂ ಕಟ್ಟಿ ಅಲಂಕಾರ ಮಾಡಲ್ಪಟ್ಟದ್ದುವು ವರ್ತಕರು ತಮ್ಮ ಅಂಗಡಿಗಳ ಮುಂದೆಯೂ ಮೇಲ್ಭಾಗದಲ್ಲೂ ನಾನಾ ಪ್ರಕಾರ ಶೃಂಗರಿಸಿ ನೇತ್ರಾನಂದಕರವಾಗಿ ಮಾಡಿದ್ದರು ಉತ್ಸವವು ಅರಮನೆಯ ಕಂಕಲ್ಲು ತೊಟ್ಟಿಯಿಂದ ಹೊರಟು ಪಶ್ಚಿಮ ಕೋಟೆಬಾಗಿಲು ನುಗ್ಗಿ ಬಂದು ಕರ್ಜನ್ ಪಾರ್ಕಿನೊಳಕ್ಕೆ ದಕ್ಷಿಣ ದ್ವಾರದಿಂದ ಪ್ರವೇಶಿಸಿ, ವಿಕ್ಟರ್ ರಸ್ತೆಯಲ್ಲಿ ಹೊರಟು, ದೊಡ್ಡ ಗಡಿಯಾರದ ಬಳಿ ಪಾರ್ಕಿನಿಂದ ದೊಡ್ಡ ಪೇಟೆಯನ್ನು ಪ್ರವೇಶಿಸಿ ನೆಟ್ಟಗೆ ಉದ್ದಕ್ಕೂ ಹೋಗಿ ಬಲಗಡೆಗೆ ತಿರುಗಿಕೊಂಡು ಕಮಾನ್ ದರ್ವಾಜಾ ಎಂಬ ದ್ವಾರವನ್ನು ದಾಟಿ ಗವರ್ನಮೆಂಟ್ ಹೌಸ್ ಬಂಗಲೆಯನ್ನು ತಲಪಿತು ಉತ್ಸವವು ಚತುರಂಗಬಲದಿಂದ ಕೂಡಿತ್ತು ಸಮಸ್ತ ಬಿರುದುಗಳೂ, ಜಲ್ಲಿಭಲ್ಲದವರೂ, ರಾಹುತರವರೂ ಇಂಗ್ಲಿಷ್ ಮತ್ತು ಕರ್ನಾಟಕ ಬ್ಯಾಂಡು ಮತ್ತು ತಂಜಾವೂರು ಓಲಗದವರೂ ಇದ್ದರು. ಶ್ರೀಮನ್ಮಹಾರಾಜರವರು ದಿವ್ಯವಾದ ಕಿಂಖಾಪು ಅಂಗರೇಖು ಅಮೂಲ್ಯವಾದ ರುಮಾಲು ಶಿರಪೇಚು ಹಸ್ತಾಭರಣ ಕಂಠಾಭರಣಗಳೇ ಮೊದಲಾದವುಗಳಿಂದಲಂಕೃತರಾಗಿ ಶ್ರೇಷ್ಠವಾದ ಅಶ್ವವನ್ನು ಹತ್ತಿ ಶ್ವೇತಚ್ಛತ್ರಚಾಮರಗಳನ್ನು ಹಿಡಿಸಿಕೊಂಡು ಶ್ರೀಮದ್ಯುವರಾಜರ ವಾಮಭಾಗದಲ್ಲಿ ಮೆರವಣಿಗೆ ಬರುತ್ತಿದ್ದರು ಅಂಗಡಿ ಬೀದಿಯಲ್ಲಿ ಅನೇಕ ವರ್ತಕ ದೊಡ್ಡ ಮನುಷ್ಯರು ಶ್ರೀಮನ್ಮಹಾರಾಜರವರಿಗೆ ಹಾರಾತುರಾಯಿಗಳನ್ನರ್ಪಿಸಿ ತಮ್ಮ ರಾಜಭಕ್ತಿಯನ್ನು ಪ್ರಕಾಶಪಡಿಸಿದರು. ಗವರ್ನ್‌ಮೆಂಟ್ ಹೌಸ್ ಬಂಗಲೆಯಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡ ಮೇಲೆ ಶ್ರೀಮನ್ಮಹಾರಾಜರವರು ಅಶ್ವಾರೂಢರಾಗಿ ಮೈದಾನಕ್ಕೆ ದಯಮಾಡಿ ಚಂದ್ರಗಳ ಮತ್ತು ಹಗಲು ಬತ್ತಿಗಳ ಬೆಳಕಿನಲ್ಲಿ ಸೈನಿಕರ ಕವಾತು ಮುಂತಾದ್ದನ್ನು ಮಾಡಿಸಿ ಪರಾಂಬರಿಸಿದರು ಅಲ್ಲಿ ಗೌರವಾರ್ಥವಾದ ತೋಪುಗಳೂ ಸಂತೋಷಸೂಚಕವಾದ ಸುರಟುಗಳು ಅದನಂತರ ಸೈನಿಕರೆಲ್ಲಾ ಕ್ರಮವಾಗಿ ಎದುರಿಗೆ ಬಂದು ಶ್ರೀಮನ್ಮಹಾರಾಜರವರಿಗೆ ಪದ್ಧತಿಯ ಪ್ರಕಾರ ಮುಜುರೆ ಮಾಡಿದರು ಶ್ರೀಮನ್ಮಹಾರಾಜರವರು ಹಿಂತಿರುಗಿ ಬಂಗಲೆಯಲ್ಲಿ ಕೊಂಚ ವಿಶ್ರಮಿಸಿಕೊಂಡಿದ್ದು, ಮೆರವಣಿಗೆ ಹೊರಟು ರಾತ್ರಿ ಸುಮಾರು ೧೧ ಗಂಟೆಗೆ ಅರಮನೆಗೆ ಚಿತ್ತೈಸಿ ಶಿಷ್ಟವತ್ತಾಗಿ ಆರತಕ್ಷತೆ ನಡೆದ ಮೇಲೆ ಆ ದಿನದ ಉತ್ಸವಾದಿಗಳನ್ನು ಮುಕ್ತಾಯ ಮಾಡಿದರು

ಅರಸೀಕೆರೆ.

... ಮಹಾರಾಜವರ ಜನ್ಮದಿನವಾದ ೦೭ ...

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೫-೦-೦	೧೬-೦-೦
ಕೆಂಬೂತಿ ಅಕ್ಕಿ ಅವಲ್		೧೪-೮-೦	೧೫-೦-೦
,, ದುಯ್ಯಂ		೧೪-೦-೦	೧೪-೮-೦
ಜಾಸ್ಪತ್ರೆ ಅಕ್ಕಿ		೧೪-೦-೦	೧೫-೮-೦
ಸಣ್ಣಕ್ಕಿ ಅವಲ್		೧೭-೦-೦	೧೭-೦-೦
,, ದುಯ್ಯಂ		೧೬-೦-೦	೧೬-೦-೦
ತೊಗರಿ ಬೇಳೆ ಪಲ್ಲಾ ೧ ಕ್ಕೆ		೧೬-೦-೦	೧೬-೦-೦
,, ದುಯ್ಯಂ		೧೫-೦-೦	೧೫-೦-೦
ಹೈನ್ ರಾಗಿ ಪಲ್ಲಾ ೧ ಕ್ಕೆ		೯-೪-೦	೮-೧೨-೦
ಕಾರ್‍ರಾಗಿ		೮-೧೨-೦	೮-೦-೦
ಜೋಳ		೯-೦-೦	೯-೦-೦
ಹಲಸಂದೆ ಪಲ್ಲಾ ೧ ಕ್ಕೆ		೧೪-೮-೦	೧೩-೦-೦
ಬಿಳೀ ಅವರೆ		೧೧-೦-೦	೧೨-೦-೦
ಹೆಸರು		೧೪-೦-೦	೧೨-೮-೦
ಉದ್ದು		೧೪-೮-೦	೧೩-೦-೦
ಕಡಲೆ		೧೩-೮-೦	೧೨-೪-೦
ಎಳ್ಳು ಸೇ ೧೨೭ ಕ್ಕೆ		೨೨-೮-೦	೧೯-೮-೦
ಹುರುಳಿ		೧೧-೪-೦	೧೧-೦-೦
ಹರಳು ೧೨೭ ಸೇರಿಗೆ		೧೧-೦-೦	೧೦-೦-೦
ಸೀಗೇಕಾಯಿ ಮಣ ೧ ಕ್ಕೆ		೨-೮-೦	೨-೬-೦
ಮೆಣಸಿನಕಾಯಿ		೫-೮-೦	೪-೮-೦
,, ದುಯ್ಯಂ		೫-೦-೦	೪-೦-೦
ಬೆಲ್ಲ ದೊಡ್ಡ ಅಚ್ಚು		೬-೪-೦	ಮ ೨-೦-೦
ಒಳ್ಳೆಣ್ಣೆ ಮಣ ೧ ಕ್ಕೆ		೫-೦-೦	೫-೦-೦
ಹರಳೆಣ್ಣೆ ,,		೪-೮-೦	೪-೨-೦
ಕೊತ್ತುಂಬರಿ ಪಲ್ಲಾ ೧ ಕ್ಕೆ		೯-೪-೦	೯-೦-೦
ಉಪ್ಪು ,,		೫-೮-೦	೪-೧೪-೦
ಹುಣಸೇ ಹಣ್ಣು		೧-[illegible]	೧-೧೨-೦
,, ಹಳೇದು		೧-[illegible]	೧-೧೦-೦
ತುಪ್ಪ ಮಣ ೧ ಕ್ಕೆ		೧೫-೦-೦	೧೫-೪-೦
ಸೀಮೆಯೆಣ್ಣೆ ಡಬ್ಬಿ ೧ ಕ್ಕೆ		೫-೪-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ		೪-೮-೦	೪-೮-೦
ಅಳಲೇಕಾಯಿ ಮಣ ೧ ಕ್ಕೆ		೦-೮-೦	೦-೧೪-೦
ಅಂಟ್ವಾಳದ ಕಾಯಿ ಮಣ ೧ ಕ್ಕೆ		೧-೦-೦	೦-೧೨-೦
ಚಿನ್ನ (ಪೌನ್) ಕೆಂಪು		೧೫-೬-೦	೧೫-೯-೦
,, ,, ಪಸಿಮೆ		೧೬-೦-೦	೧೫-೧೦-೦
,, ,, ಗಟ್ಟಿ ತೊಲ ೧ ಕ್ಕೆ		೨೪-೮-೦	೨೪-೭-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭-೪-೦	೬೭-೦-೦

ಅನೇಕ ಸಣ್ಣ ಸಣ್ಣ ಕಾಯಿಲೆಗಳಿಗೆ ಪೆರೂನಾವು ಒಳ್ಳೇ ಔಷಧವಾಗಿರುತ್ತದೆ ಶೀತದಿಂದ ಹುಟ್ಟುವ ಅನೇಕ ಕೆಟ್ಟ ಕಾಯಿಲೆಗಳನ್ನು ಹೆಂಗಸರಿಗೆ ಸಾಮಾನ್ಯವಾಗಿ ಉಂಟಾಗುವ ಶರೀರದ ಅಕ್ರಮಗಳನ್ನೂ ಪೆರೂನಾವು ಕಡಮೆಮಾಡಬಲ್ಲುದೆಂದು ಸಂಕೇತಕ್ಕದ್ದಾಗಿದೆ ಶೈತ್ಯದಿಂದ ಹುಟ್ಟುವ ಸಮಸ್ತವಾದ ರೋಗಗಳನ್ನೂ ಪೆರೂನಾದಲ್ಲಿರುವ ಗುಣದಿಂದ ವಾಸಿಮಾಡಿಕೊಳ್ಳಬಹುದು

ತಲೆ, ಹೊಟ್ಟೆ, ಶ್ವಾಸಕೋಶಗಳು.

ಮಿಸ್ ಓಲಿವೈನ್ ಪೆರ್ರಾಲ್ಟ್, ೩೩೫ ಡೇವಿಡ್ಸನ್ ಬೀದಿ, ಬೊಲಿವಾರ್ಡ್ ಸೇಂಟ್ ಪಾಲ್, ಮಾಂಟ್ರೀಲ್, ಕ್ಯಾನ್, ಈಕೆ ಬರೆಯುವುದು

"ನಮ್ಮ ಪ್ರಸಿದ್ಧವಾದ ಪೆರೂನಾವನ್ನು ಹೊಗಳಿ ಸಂತೋಷದಿಂದ ನಿಮಗೆ ಈ ಕಾಗದ ಬರೆಯುತ್ತೇನೆ ನಾನು ಬೇರೆ ಔಷಧಗಳನ್ನು ಪರೀಕ್ಷೆಮಾಡಿದೆನು ಆದರೆ ನನ್ನ ಶೀತವು ಸ್ವಲ್ಪವೂ ವಾಸಿಯಾಗಲಿಲ್ಲ ನನಗೆ ಕ್ಷಯಹಿಡಿಯುವುದೋ ಎಂದು ಹೆದರಿಕೆಯುಂಟಾಗಿತ್ತು

"ನನ್ನ ತಲೆಯ ಮತ್ತು ಹೊಟ್ಟೆಯ ಸ್ಥಿತಿಯು ನನಗೆ ಚಿಂತೆಯನ್ನುಂಟುಮಾಡಿತ್ತು ಇದಕ್ಕಿದ್ದ ಹಾಗೇ ಹವಾ ಬದಲಾವಣೆಯಾದ್ದರಿಂದ ನನಗೆ ಶೀತವಾಗಿ ಮೂರು ತಿಂಗಳ ತನಕ ಹಗಲೂ ರಾತ್ರಿ ಕೆಮ್ಮಲುಂಟಾಗಿತ್ತು

"ನನ್ನ ಸಹೋದರನಿಗೆ ಪೆರೂನಾದಿಂದ ವಾಸಿಯಾಗಿದ್ದದರಿಂದ ಅವನು ಅದನ್ನು ಸೇವಿಸೆಂದು ನನಗೆ ಹೇಳಿದನು ಅದರಂತೆ ನಾನು ಕ್ರಮವಾಗಿ ಸೇವಿಸಿ, ದಿನೇ ದಿನೇ ಗುಣಹೊಂದುತ್ತಾ ಬಂದೆನು ಈಗ ನಾನು ಮೂರು ಬಾಟ್ಲಿ ಔಷಧ ಸೇವಿಸಿ ಮುಗಿಯಿತು ನಾನು ಸಂಪೂರ್ಣವಾಗಿ ಗುಣಹೊಂದಿರುತ್ತೇನೆ"

ಕಾಯಿಲೆಯಾದ ಹೆಂಗಸರಿಗೆ

"ಪೆರೂನಾದಿಂದ ನನಗೆ ಆಗಿರುವ ಪ್ರಯೋಜನವನ್ನು ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿದೇನೆ ಸ್ವಲ್ಪ ಹೆಚ್ಚು ಕಡಮೆ ನಾನು ಅರುವರ್ಷಗಳ ಕಾಲ ನರಳಿದೆನು ಹಲವು ಡಾಕ್ಟರುಗಳಿಂದ ಪರೀಕ್ಷೆ ಮಾಡಿ, ಅವರ ಔಷಧಗಳನ್ನು ಸೇವಿಸಿದೆನು ಅದರಿಂದ ನನಗೆ ಸ್ವಲ್ಪಮಾತ್ರ ಉಪಶಮನವಾಯಿತಲ್ಲದೆ ಆ ಔಷಧಗಳು ನನ್ನ ರೋಗವನ್ನು ವಾಸಿಮಾಡಲಿಲ್ಲ ನಾನು ಬಹಳ ಬಾಧೆಯನ್ನನುಭವಿಸಿದವಳು ನನ್ನ ಔಷಧಕ್ಕಾಗಿ ನನ್ನ ಗಂಡನು ಬಹಳ ಹಣವನ್ನು ಖರ್ಚುಮಾಡಿರುತ್ತಾನೆ ಕಡೆಯಾಗಿ ಕೊನೆಯಲ್ಲಿ ಪೆರೂನಾವನ್ನು ತೆಗೆದುಕೊಂಡು ಪರೀಕ್ಷೆಮಾಡೋಣವೆಂದು ನೆನಸಿ, ಸೇವಿಸಲಾರಂಭಿಸಿದೆನು ನಿಮ್ಮ ಹೇಳಿಕೆಯ ಪ್ರಕಾರ ಒಂದು ಬಾಟ್ಲಿ ಔಷಧ ಮುಗಿಯುವಷ್ಟರೊಳಗೆ ನನಗೆ ಸ್ವಲ್ಪ ಉಪಶಮನವಾಯಿತು ಆಗಿನಿಂದ ನನಗೆ ಬೆನ್ನು ನೋವು ಇಲ್ಲವೇ ಇಲ್ಲ ಈಚೆಗೂ ಪೆರೂನಾ ಸೇವಿಸಿದೇನೆ ಈಗ ನಮ್ಮ ಮನೆಗೆ ಡಾಕ್ಟರು ಬರುವುದು ಅಪರೂಪ ಪೆರೂನಾದಿಂದ ನನ್ನ ಸಂಸಾರಕ್ಕೆ ಎಷ್ಟು ಉಪಕಾರವಾಗಿದೆಯೋ ವಿವರಿಸಿದರೆ ಒಂದು ಪುಸ್ತಕವಾದೀತು ನಾನು ತಮ್ಮನ್ನು ಅತ್ಯಂತ ಹರ್ಷವಾಗಿ ಕೃತಜ್ಞತಾಭಾವದಿಂದ ವಂದಿಸುತ್ತೇನೆ

ಒಂದು ತಿಂಗಳು ಸೇವಿಸುವುದರೊಳಗಾಗಿ ನನಗೆ ಬಹಳ ವಾಸಿಯಾಯಿತು ಎರಡನೇ ತಿಂಗಳ ಅಂತ್ಯದಲ್ಲಿ ನಾನು ಹೊಸ ಹೆಂಗಸಾದೆನು ಅದೇ ರೀತಿ ನಾನು ಕಾಯಿಲೆ ಪುಸ್ತಿ ಹೊಂದುತ್ತಾ, ಸಂಪೂರ್ಣ ಆರೋಗ್ಯವನ್ನು ಹೊಂದಿದೆನು ಅದನ್ನೇ ಸೇವಿಸುವಂತೆ ನನ್ನ ಅನೇಕ ಸ್ನೇಹಿತೆಯರಿಗೆ ಹೇಳಿದೇನೆ ಎಲ್ಲರೂ ಅದರ ಪ್ರಯೋಜನವನ್ನು ನೋಡಿ ಸಂತೋಷಪಡುತ್ತಾರೆ"

ಅನೇಕ ವೇಳೆ ನಿಮ್ಮ ಔಷಧವನ್ನು ಇತರರಿಗೆ ತೋರಿಸುತ್ತೇನೆ ಅವರೆಲ್ಲಾ ಸೇವಿಸಿ ಸಂತೋಷಪಡುತ್ತಾರೆ ಕಾಯಿಲೆಯಾಗಿದ್ದೇನೆಂದು ಯಾವ ಹೆಂಗಸಾದರೂ ನನಗೆ ಬರೆದರೆ, ಅಥವಾ ನನ್ನ ಬಳಿಗೆ ಬಂದು ಕೇಳಿದರೆ ಅವರಿಗೆಲ್ಲ ಪೆರೂನಾವಿನ ಯೋಗ್ಯತೆಯನ್ನು ವಿವರಿಸಿ ಅದನ್ನು ಸೇವಿಸುವಂತೆ ಶಿಫಾರಸು ಮಾಡುತ್ತೇನೆ"—ಎಂಬದಾಗಿ ಮಿಸೆಸ್ ಮಾರ್ಥಾ ಫೆಡ್ರಿಕ್, ಸೆಂಟ್ರಲ್ ಪಾರ್ಕ್, ಲಾಂಗ್ ಐಲೆಂಡ್, ನ್ಯೂಯಾರ್ಕ್ ಸಿಟಿ, ಯು ಎಸ್ ಎ ಎಂಬ ಹೆಂಗಸು ಬರೆದಿರುತ್ತಾಳೆ

ಒಬ್ಬ ಹೆಂಗಸಿನ ಅನುಭವವು.

"ಕೆಳ ಹೊಟ್ಟೆಯ ಅಶಕ್ತಿಯಿಂದ ನಾನು ಕಳೆದ ... ಬಾಧೆ ಪಟ್ಟೆನು ಅದರಿಂದ ನನ್ನ ಶಕ್ತಿಯೆಲ್ಲಾ ಕುಂದಿ ನನ್ನ ಬುದ್ಧಿಯು ಕೆಟ್ಟುಹೋದೀತೆಂದು ಹೆದರಿಕೊಂಡೆನು ನನ್ನ ಬೆನ್ನೆಲುಬು ಎಡಗಾಲಿನ ತನಕ ಬಹಳವಾಗಿ ಬಾಧೆಪಡಿಸುತ್ತಿತ್ತು ಈ ಬಾಧೆಯನ್ನು ಅನುಭವಿಸುವದಕ್ಕಿಂತ ಸಾಯುವುದೇ ಉತ್ತಮವೆನ್ನುವಂತಿತ್ತು ಪೆರೂನಾವು ಈ ನನ್ನ ಕಾಯಿಲೆಯನ್ನು ವಾಸಿಮಾಡಿತು ಆದದರಿಂದ ಅದು ಉತ್ಕೃಷ್ಟವಾದದ್ದೆಂದು ನಾನು ಹೇಳುವುದೇನೂ ಆತಿಶಯವಲ್ಲ ಈ ನನ್ನ ರೋಗವು ನಿವಾರಣೆಯಾಗಿ ಈಗ ಎರಡು ವರುಷ ತುಂಬುವುದಲ್ಲದೆ ಮತ್ತೆ ಆ ರೋಗದ ಸುಳಿಯನ್ನೇ ಕಾಣೆನು"

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದದ್ದೂ ಇವರಿಂದಲೇ ತಿಳಿಯಬಹುದು.

ವಿಳಾಸ — ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ —

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

Printed and Published by the Rev H Gulliford, Proprietor and Manager, Wesleyan Mission Press. Mysore. 3,6'1909.

ಗಳು ಹಂಚಲ್ಪಟ್ಟವು ಕ್ರಮ ಪ್ರಕಾರವಾಗಿ ದೇವರಿಗೆ ಅಭಿಷೇಕಾರ್ಚನೆ ಮೊದಲಾದವುಗಳು ಇದಲ್ಲದೆ ಅನಾಥ ಬಾಲಕರಿಗೆ ಮೃಷ್ಟಾನ್ನಭೋಜನವು ಫಲಾದಿಗಳು ಕೊಡಿಸಿದರು ಎಲ್ಲರೂ ಸೇರಿ ಶ್ರೀ ದೇವರಸಾನ್ನಿಧ್ಯದಲ್ಲಿ ಶ್ರೀಮನ್ ಮಹಾರಾಜರವರಿಗೆ ಮಂಗಳ ಉಂಟಾಗಲಿ ಎಂದಾಗಿ ಪ್ರಾರ್ಥಿಸಿದರು ಇಲ್ಲಿನ ಹೊಸ ತರಗುಪ್ಪಾಟೆ ಮಂಡಿ ವರ್ತಕರು ಮೈಸೂರು ಶ್ರೀಮನ್ ಮಹಾರಾಜರವರ ವರ್ಷ ವರ್ಧಂತಿಯ ಜ್ಞಾಪಕಾರ್ಥವಾಗಿ ಹಿಂದೂ ವರ್ತಕರು ೫,೦೦೦ ರೂಪಾಯಿಗಳನ್ನು ವಿನಿಯೋಗಿಸಿ ಹಿಂದೂ ಬಡವರಿಗೂ ಮಹಮದೀಯ ವರ್ತಕರು ೪,೦೦೦ ರೂಪಾಯಿಗಳನ್ನು ವಿನಿಯೋಗಿಸಿ ಮಹಮದೀಯ ಬಡವರಿಗೂ ಭೋಜನ ನಡಿಸಿ ರುತ್ತಾರೆ ಮತ್ತು ಅವರ ರಾಜಭಕ್ತಿಯನ್ನು ಮಹಾರಾಜರವರಿಗೆ ತಂತಿ ಮೂಲಕ ವಿಜ್ಞಾಪಿಸಿಕೊಂಡಿರುತ್ತಾರೆ

ಚನ್ನಪಟ್ಟಣ.

ಇದೇ ತಾ|| ೩೦ ನೇ ಭಾನುವಾರ ೧೨ ಘಂಟೆಗೆ ಸರಿಯಾಗಿ ನಮ್ಮ ಶ್ರೀಮನ್ ಮಹಾರಾಜ ಕೃಷ್ಣರಾಜ ಒಡೆಯ ಬಹದೂರವರ ಪಟ್ಟಾಭಿಷೇಕೋತ್ಸವದ ಸಂತೋಷಕ್ಕಾಗಿ ಇಲ್ಲಿನ ತಾಲ್ಲೋಕ್ ಕಛೇರಿಯ ಮೇಲಂತಸ್ತಿನ ಶೃಂಗಾರ ಭವನದಲ್ಲಿ ಒಂದು ಮಹಾ ಸಭೆಯು ನೆರೆದಿತ್ತು ತಾಲ್ಲೋಕ್ ಅಮಲ್ದಾರರೂ ಸಿರಸ್ತೆದಾರರೇ ಮೊದಲಾದ ಅಧಿಕಾರಿಗಳೂ, ಪೋಸ್ಟ್ ಮಾಸ್ಟರರೂ, ಗ|| ಕನ್ನಡ ಇಂಗ್ಲಿಷ್ ಸ್ಕೂಲ್ ಮಾಸ್ಟರುಗಳೂ ವರ್ತಕ ಮಂಡಲಿಯವರೂ ಗೌಡರೂ ಸಭೆಯನ್ನಲಂಕರಿಸಿದ್ದರು ಕ್ವೀನ್ ವಿಕ್ಟೋರಿಯಾ ಮಹಾರಾಜ್ಞಿ, ಎಡ್ವರ್ಡ್ ಸಾರ್ವಭೌಮರು ಶ್ರೀಮನ್ ರಾಜರುಗಳ ಭಾವ ಚಿತ್ರಗಳಿಂದ ಅಲಂಕರಿಸಲ್ಪಟ್ಟಿತ್ತು ಈ ಮಹಾ ಸಭೆಯಲ್ಲಿ ನಮ್ಮ ಅಮಲ್ದಾರರವರೇ ಛೇರ್ಮನ್‌ರಾಗಿದ್ದರು ಮೆ|| ಶಿರಸ್ತೆದಾರ್ ನರಸಿಂಹನಾಯ್ಕರವರು ಪ್ರೆಸಿಡೆಂಟರಾಗಿದ್ದು ಕಳೆದ ರಾಯಲ್ ಪ್ರಾಕ್ಲಮೇಷನ್‌ಗಾಗಿ ವಸೂಲಾಗಿದ್ದ ಮೊಬಲಗಿನ ಪೈಕಿ ಉಳಿದು ಇದ್ದ ೧೧೦ ರೂಪಾಯಿಗಳನ್ನು ಯಾವದಕ್ಕಾಗಿ ವಿನಿಯೋಗಿಸಬೇಕೆಂಬರ್ಥಕ್ಕೆ ಕಳೆದ ನವಂಬರು ತಿಂಗಳಲ್ಲಿಯೇ ಪ್ರತ್ಯೇಕ ಕಮಿಟಿ ಮೆಂಬರುಗಳು ಅನುಮೋದಿಸಿದ್ದ ಪ್ರಕಾರವಾಗಿ ೬೦ ರೂಪಾಯಿಗಳ ಬೆಲೆಬಾಳುವ ನಮ್ಮ ಶ್ರೀಮನ್ ಮಹಾರಾಜರವರ ಭಾವ ಚಿತ್ರವನ್ನು ತರಿಸಿರುವುದಾಗಿಯೂ, ಸದರಿ ಭಾವ ಚಿತ್ರವನ್ನು ಈ ದಿವಸ ಸಭೆಯಲ್ಲಿ ಪ್ರತಿಷ್ಠಿಸುವುದಕ್ಕಾಗಿ ಆದ ಖರ್ಚು ಕಳೆದು ಉಳಿದ ಮೊಬಲಗು ೪೯ ರೂಪಾಯಿಗಳನ್ನು ಇಲ್ಲಿನ ಜುಬಿಲಿ ಸ್ಕೂಲ್ ಕಟ್ಟಡದ ಸಹಾಯ ನಿಧಿಗೆ ಸೇರಿ ಸದರಿ ಸ್ಕೂಲ್ ಅಧ್ಯಕ್ಷರ ವಶಕ್ಕೆ ಇದೇ ದಿನ ಸಂದಾಯ ಮಾಡುವುದಾಗಿಯೂ ಇಂಗ್ಲೀಷ್ ಕನ್ನಡ ಭಾಷೆಗಳ ರಿಪೋರ್ಟುಗಳು ಓದಲ್ಪಟ್ಟವು ಪೋಲೀಸ್ ಕಾನಿಸ್ಟೇಬಲ್ ಸೈಯದ್ ನೂರ್ ಎಂಬಾತನು ಹಿಂದುಸ್ಥಾನಿಯಲ್ಲಿಯೂ ಇಲ್ಲಿ ಸಂಸ್ಕೃತ ಪಂಡಿತರಾದ ಮೇ ಸಾಂಬಶಿವ ಶಾಸ್ತ್ರಿಗಳು ಸಂಸ್ಕೃತದಲ್ಲಿಯೂ ತಮತಮಗಳ ಮೂಲಕ ಶ್ರೀಮನ್ ಮಹಾರಾಜರಿಗೆ ಭಗವತ್ಪ್ರಾರ್ಥನೆಗಳನ್ನು ಆಯುರಾರೋಗ್ಯ ಭಾಗ್ಯಗಳನ್ನು ಒಯಿಸಿದರು ನಂತರ ಶಿವ ಮಂಗಳ ಕವಾಜು, ಬ್ಯಾಂಡ್ ವಾದ್ಯಗಳೂ ಆದಮೇಲೆ ಗಂಧ ಪುಷ್ಪ ತಾಂಬೂಲಗಳಿಂದ ಸಭೆಯು ಭಂಗವಾಯ್ತು

ಎಂಜಿನ್ ನಡಿಸುವ ಡ್ರೈವರುಗಳ ಗಲಾಟೆ

ಮದರಾಸು ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆಗಳ ಡ್ರೈವರುಗಳು ಕೆಲಸಕ್ಕೆ ಹೋಗದೆ [illegible]

[illegible] ಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅನರ್ಘ್ಯವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹೋಗಲಾಡಿಸುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ವಿಕ್ರಯಿಸುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಹಿಟರ್ಸ್,

೩೩, ವೇದವಲ್ಲಿಪ್ಪಿಳ್ಳೆ ಬೀದಿ, ವೇಪೇರಿ, ಮದರಾಸ್

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ಪರಾಂಬರಿಸಿ.

10 23

"ಬ್ರಹ್ಮಚರ್ಯ" ವೆಂಬ ಗ್ರಂಥವು ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯಾಸನಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸನಲದೀಪಿಕೆ"ಯನ್ನು ಒಂದು ಮುಖ್ಯವಾದ ಪರೀಕ್ಷೆಗೋಸ್ಕರ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರವರಿಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಆಗಸ್ಟಿನ್ ದಿನ್ನಪಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರಿಸ್ತ ಮತದಲ್ಲಿ ತಿಳಿಸುವ ಏಕಾಂತಧ್ಯಾನ, ಪಾಪವನ್ನರಿಕೆ, ಪಶ್ಚಾತ್ತಾಪ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ರೈಟಿನ ಬೈಂಡು ಪ್ರತಿ ಒಂದಕ್ಕೆ ೦—೧—೦

ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ಇಂಡಿಯಾ ದೇಶದ ವೃತ್ತಾಂತಗಳು.

ಹೈದರಾಬಾದಿನಲ್ಲಿ ಕಲರಾ ಉಪದ್ರವ ಉಲ್ಬಣಸ್ಥಿತಿಯಲ್ಲಿರುವುದು

ಮುಸಫರ್‌ಪೂರ್ ಸುಳ್ಳುಸಾಕ್ಷಿ ಮೊಕದ್ದಮೆಯಲ್ಲಿ ಸಿಕ್ಕಿ ಪರಾರಿಯಾಗಿದ್ದ ಜಾಡುಲಾಲ್ ಸಾಹು ಎಂಬವನು ನೇಪಾಲ್ ದೇಶದ ಟೆರಾಯಿ ಕಾಡಿನಲ್ಲಿ ಅವಿತುಕೊಂಡಿರುವನಂತೆ

ಹೋದ ವಾರ ತಿಳಿಸಿದ ಪ್ರಕಾರ ಡೇರಾಘಾಜೀ ರೇಲ್ವೆ ಅಪಘಾತದಲ್ಲಿ ಸರ್ವೆ ಸೂಪರಿಂಟೆಂಟರಾದ ಮೆ|| ರಾಚಿಂಮುದಲ್ಲಾ ಎಂಬ ಭಾರತೀಯರು ಸಿಕ್ಕಿ ಕೊಲ್ಲಲ್ಪಟ್ಟಿರುವರು

ಬೊಂಬಾಯಿ ಗೌರ್ನರವರು ಮೆ|| ಗೋಖಲೆಯವರನ್ನು ಬೊಂಬಾಯಿ ಗೌರ್ನಮೆಂಟಿಗೆ ಮೆಂಬರರಾಗಿ ಚುನಾಯಿಸಬೇಕೆಂದು ಇಚ್ಛೆವುಳ್ಳವರಾಗಿರುತ್ತಾರೆಂದು ಉತ್ತರ ದೇಶದ ಪತ್ರಿಕೆಗಳು ತಿಳಿಸುತ್ತವೆ

ಚೈನಾ ದೇಶದಲ್ಲಿ ಸರ್ವೆ ಮಾಡುತ್ತಿದ್ದ ರಾಯ್ ಸಾಹೇಬ್ ಅಂದಲಾಲ್ ಸಿಂಗರಿಗೆ ಅವರ ಕೆಲಸವನ್ನು ಮೆಚ್ಚಿ ವಿಲಾಯತಿಯ ಭೂಗೋಳ ಶಾಸ್ತ್ರಸಂಘದವರು ಒಂದು ಭಂಗಾರದ ಮೆಡಲನ್ನು ಕೊಟ್ಟಿರುವರು

ತಿರುವಾಂಕೂರು ದಂಗೆ ಮೊಕದ್ದಮೆಯಲ್ಲಿ ಸುಳ್ಳು ಸಾಕ್ಷಿಗಳನ್ನು ಏರ್ಪಡಿಸಿದ್ದ ಸ್ವಾಮಿನಾಥಶಾಸ್ತ್ರಿ ಎಂಬ ಪೊಲೀಸ್ ಸೂಪರಿಂಟೆಂಡೆಂಟರ ಮೇಲೂ ಎಂಟು ಮಂದಿ ಪೊಲೀಸ್ ಜವಾನರ ಮೇಲೂ ಸರಕಾರದವರು ಲೆಕ್ಕಿಸಿ ನಡಿಸುವುದಕ್ಕೆ ತೊಡಗಿರುತ್ತಾರೆ

ಅಲಿಪೂರ್ ನಿಡಿಮದ್ದಿನ ಮೊಕದ್ದಮೆಯಲ್ಲಿ ಶಿಕ್ಷೆಗೆ ಗುರಿಯಾದ ೧೯ ಮಂದಿ ತಮ್ಮ ಲಾಯರುಗಳ ಮೂಲಕ ಚೀಫ್ ಕೋರ್ಟಿಗೆ ಅಪೀಲ್ ಮಾಡಿಕೊಂಡರು ಇವರೆಲ್ಲರ ಅಪೀಲುಗಳನ್ನು ಚೀಫ್ ಕೋರ್ಟಿನವರು ಅಂಗೀಕರಿಸಿರುತ್ತಾರೆ ಆದರೆ ಯಾರನ್ನೂ ಜಾಮೀನಿನ ಮೇಲೆ ಬಿಡಲಿಲ್ಲ

ಮೈಸೂರಿನವರಾದ ಬಾರ್ಗಿ ಮಿಂಟೊ ಪ್ರಭುಗಳ ಮತ್ತು ಅವರ ಪತ್ನಿಯರ ಕೈಗಳ ಮೇಲೆ ಹುಚ್ಚು ನಾಯಿಯು ಬೊಗಳಿ ಕಚ್ಚಿಂದು ಮೂರು ವಾರಗಳ ಹಿಂದೆ ತಿಳಿಸಿದ್ದೆವಷ್ಟೆ ಅವರು ಇದುವರೆಗೂ ವೈದ್ಯರಿಂದ ಚಿಕಿತ್ಸೆ ಮಾಡುತ್ತಿದ್ದರು ಈಗ್ಗೆ ಅವರ ಆರೋಗ್ಯಕ್ಕೆ ಯಾವ ಭಯವೂ ಇಲ್ಲವೆಂದು ಡಾಕ್ಟರುಗಳು ತಿಳಿಸಿರುತ್ತಾರೆ

ಮದರಾಸು ವೈದ್ಯಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಶ್ರೀರಾಮುಲು ಎಂಬೊಬ್ಬ ಯೌವನಸ್ಥನನ್ನು ಭಾಗಲ್‌ಪೂರ್ ಪೊಲೀಸಿನವರು ಇವನು ಅರಾಜಕ ಕೂಟಕ್ಕೆ ಸಂಬಂಧಪಟ್ಟವನೆಂದು ದಸ್ತಗಿರಿ ಮಾಡಿದ್ದರು ಆದರೆ ಇವನನ್ನು ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ಬಿಟ್ಟುಬಿಟ್ಟಿದ್ದರು ಆದರೆ ಪುನಃ ಇವನ ಮೇಲೆ ಪುನಃ ಜುಮಾನೆಯಿಟ್ಟು ದಸ್ತಗಿರಿ ಮಾಡಿರುತ್ತಾರೆ

ಜುಲಾಬು [illegible]ಡರ್‌ಪ್ರೈಟ್ ಎಂಬೊಬ್ಬ ಪ್ರಸಿದ್ಧ ವೈದ್ಯರು

ನೇತ್ರಾಂಜನ	[illegible] ಲ ಕೊರೆದುಹಾಕಿ ಔಷಧವನ್ನು	
ಬಿಜ್ಜ ಮುಲಾಮು	[illegible] ಇವರ	
ಕೇಶವರ್ಧನೀ ತೈಲ		೧ ೦ ೦
ಕಫನಾಶಕ ಚೂರ್ಣ		೦ ೮ ೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫ್ರೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —'ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 22

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯಿಸುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ

೧ ರೂ ೩ ಆ , ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮ , ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜರಿದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಕುಸುರಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ ,

ಕೊಸುಗರ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕೈಚೀಲ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ರೂಪಾಯಿ ವಸೂಲ್ ಮಾಡುವುದಕ್ಕೆ ತೊಡಗಿದನು ಇವನ ನಡತೆಯು ಮ್ಯಾಜಿಸ್ಟ್ರೇಟರಲ್ಲಿ ಫಿರ್ಯಾದಾಗಿ ಇವನಿಗೆ ಇಪ್ಪತ್ತು ರೂಪಾಯಿಗಳ ದಂಡವು ವಿಧಿಸಲ್ಪಟ್ಟಿತು

ಕಾಕಿನಾಡಾ ಪಟ್ಟಣದಲ್ಲಿ ವೈಶ್ಯರ ಒಂದು ಸಂಘವು ಬರುವ ತಿಂಗಳು ಕೂಡುವುದಕ್ಕಿದೆ ಈ ಸಂಘಕ್ಕೆ ಪ್ರತಿನಿಧಿಗಳನ್ನು ಚುನಾಯಿಸುವುದಕ್ಕೆ ರಾಜಮಹೇಂದ್ರಿಯಲ್ಲಿ ಒಂದು ಕೂಟವು ಜರುಗಿತು ಆ ಕೂಟದಲ್ಲಿ ಕೆಳಗೆ ಕಂಡ ತೀರ್ಮಾನಗಳನ್ನು ಕಾಕಿನಾಡದಲ್ಲಿ ಕೂಡುವ ದೊಡ್ಡ ಸಂಘದಲ್ಲಿ ಚರ್ಚಿಸಬೇಕೆಂದು ತೀರ್ಮಾನ ಮಾಡಿಕೊಂಡರು ತೀರ್ಮಾನಗಳ್ಯಾವುವೆಂದರೆ —(೧) ಕೈಗಾರಿಕೆ ಪಾಠಶಾಲೆಗಳನ್ನು ಏರ್ಪಡಿಸುವುದು (೨) ವಿವಾಹ ಕಾಲಗಳಲ್ಲೂ ದೇವಸ್ಥಾನಗಳಲ್ಲೂ ಸೂಳೆಯರ ನಾಟ್ಯವನ್ನು ಕಟ್ಟಿಸದಿರುವುದು, (೩) ವಿಧವೆಯರಾದ ಕನ್ನಿಕೆಗಳಿಗೆ ಪುನರ್ವಿವಾಹ ಮಾಡುವುದು, (೪) ಮದರಾಸಿನಲ್ಲಿರುವ ಶ್ರೀ ಕನ್ನಿಕಾಪರಮೇಶ್ವರಿ ಧರ್ಮದ ಹಣದಲ್ಲಿ ಹೆಚ್ಚಿನ ವಿದ್ಯವನ್ನು ಕಲಿಯುವುದಕ್ಕೆ ಯೌವನಸ್ಥರನ್ನು ವಿದೇಶಗಳಿಗೆ ಕಳುಹಿಸುವುದು, (೫) ಉಪಪಂಗಡಗಳನ್ನು ಒಂದಾಗಿ ಕೂಡಿಸುವುದು, (೬) ಸ್ತ್ರೀ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವುದು

ವಿದೇಶ ವರ್ತಮಾನಗಳು.

ಅಲೆಕ್ಸಾಂಡ್ರಾ ಮಹಾರಾಣಿಯವರು ಇಟಲಿ ದೇಶವನ್ನು ಬಿಟ್ಟು ವಿಲಾಯತಿಗೆ ಪ್ರಯಾಣ ಬೆಳಸಿದರು

ಚಕ್ರವರ್ತಿಗಳು ಜರ್ಮನೀ ದೇಶದ ಪುರಾಧಿಪತಿಗಳನ್ನು ಬರಮಾಡಿಕೊಂಡು ಅವರನ್ನು ತಮ್ಮ ಅರಮನೆಯಲ್ಲಿ ಸತ್ಕರಿಸಿದರು

ಚಕ್ರವರ್ತಿಗಳ ತಮ್ಮಂದಿರಾದ ಕನಾಟ್ ಪ್ರಭುಗಳೂ ಅವರ ಪತ್ನಿಯವರೂ ಸ್ಪೇನ್ ದೇಶಕ್ಕೆ ಹೋಗಿ ಅಲ್ಲಿ ಸಂಚರಿಸುತ್ತಿರುತ್ತಾರೆ

ಹಿಂದೂದೇಶದಿಂದ ಚಕ್ರವರ್ತಿಯ ದರ್ಶನಕ್ಕಾಗಿ ಹೋಗಿರುವ ದೇಶಾಯಿಯವರನ್ನು ದೊರೆ ಪ್ರಿನ್ಸ್ ಆಫ್ ವೇಲ್ಸ್ ಯುವರಾಜರ ಭೇಟಿಯನ್ನು ತೆಗೆದುಕೊಂಡರು

ಸರೆಯಲ್ಲಿರುವ ತುರ್ಕಿ ಬೌಟ್ ಸುಲ್ತಾನರಾದ ಮೆ|| ಅಬ್ದುಲ್ ಹಾಮಿದ್ ರಿಗೆ ಮಂತ್ರಿಗಳಾಗಿದ್ದವರನ್ನು ತುರ್ಕಿ ದೇಶದ ಹತ್ತಿರವಿರುವ ದ್ವೀಪವೊಂದಕ್ಕೆ ಗಡೀಪಾರು ಮಾಡಿರುತ್ತಾರೆ

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಚರ್ಚೆಯಾಗಿ ತೀರ್ಮಾನಕ್ಕೆ ಬಂದಿರುವ ಇಂಡಿಯಾ ದೇಶದ ಪ್ರಜಾ ಪ್ರತಿನಿಧಿಗಳ ಸಭೆ ಶಾಸನಕ್ಕೆ ಚಕ್ರವರ್ತಿಗಳು ಒಡಂಬಟ್ಟಿರುವರೆಂದು ಕೇಳುತ್ತೇವೆ

ಹಿಂದೂ ದೇಶದಿಂದ ಗಡೀಪಾರಾಗಿರುವ ಬಂಗಾಳಿಗಳ ವಿಷಯ ಹೋದ ವಾರದ ಪಾರ್ಲಿಮೆಂಟ್ ಸಭೆಯಲ್ಲಿ ಪುನಃ ಚರ್ಚೆಯಾಯಿತು ಇವರನ್ನು ಸದ್ಯಕ್ಕೆ ಬಿಡುಗಡೆಮಾಡುವ ಸಂಭವವಿಲ್ಲವೆಂದು ಸರ್ಕಾರದವರು ಅಪ್ಪಣೆ ಕೊಟ್ಟಿರುತ್ತಾರೆ

ಆಫ್ರಿಕಾ ದೇಶಕ್ಕೆ ಸ್ವಾರಾರು ಇಂಡಿಯಾ ದೇಶದ ಪ್ರಜೆಗಳು ಹೋಗಿರುವರಷ್ಟೆ ಇವರಿಗೆಲ್ಲಾ ಪ್ರಮುಖರಾದ ಮೇ ಗಾಂಧಿಯವರು ಅಲ್ಲಿನ ಸರ್ಕಾರಿ ನ್ಯಾಯಕ್ಕೆ ವಿರುದ್ಧವಾಗಿ ನಡೆದುದ್ದರಿಂದ ಸೆರೆಯಲ್ಲಿ ಹಾಕಲ್ಪಟ್ಟಿದ್ದರು ಈಗ [illegible] ಬಿಡುಗಡೆಯಾಗುವುದು



ಇದು ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಅಪೇಕ್ಷಿಸುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ ೨—೧೨ ಆ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಬಿ ಮಂಕಪ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹಾ ಶಕ್ತವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವಿವರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೈದ್ರಾಯ ಓಮು ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರ, ಅಜೀರ್ಣಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂದು ಬರೆದಿದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲು ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಲ್ಲಿಯೂ ವಿಕ್ರಯ —

ಹೈದ್ರಾಯರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಸುಶಿಕ್ಷಿತ ಸ್ತ್ರೀಯರು ಪರಾನಾವನ್ನು ಹೊಗಳುತ್ತಾರೆ

ಪೆರೂನಾ ಪ್ರಖ್ಯಾತಿಹೊಂದಿರುವುದು ಅದರ ಗುಣದಿಂದ, ಬರೀ ಜಾಹಿರಾತಿನಿಂದಲ್ಲ. [7 22]

ಚಿಕ್ಕವರೂ ದೊಡ್ಡವರೂ ಒಂದೇ ರೀತಿ ಪೆರೂನಾವನ್ನು ಹೊಗಳುತ್ತಾರೆ. ಹೆಣ್ಣುಮಕ್ಕಳೂ ಹೆಂಗಸರೂ ಪೆರೂನಾದಿಂದ ಗುಣವನ್ನು ಹೊಂದಿದಾರೆ. ಹೆಣ್ಣುಮಕ್ಕಳೂ ಹೆಂಗಸರೂ ತಮ್ಮ ತಮ್ಮ ದೇಹಾರೋಗ್ಯಕ್ಕಾದ ಕಾಯಿಲೆಗಳಲ್ಲಿ ಬಿದ್ದು ಪೆರೂನಾದ ಸಹಾಯವನ್ನು ಹೊಂದಿರುತ್ತಾರೆ.

ಲಕ್ಷಾಂತರ ಹೆಣ್ಣುಮಕ್ಕಳೂ, ಸುಂದರಿಯರಾದ ಸ್ತ್ರೀಯರೂ, ಬಲಹೀನರಾದ ಹೆಣ್ಣುಮಕ್ಕಳೂ ರೋಗದಿಂದ ದೇಶದ ಎಲ್ಲಾ ಪ್ರದೇಶಗಳಲ್ಲಿ ಪೆರೂನಾ ಸೇವಿಸಿ ತಮ್ಮ ಸ್ವಭಾವಕ್ಕೆ ಅನುಗುಣವಾದ ಕಾಯಿಲೆಗಳಲ್ಲಿ ನಿವಾರಣೆ ಹೊಂದಿ ಅದರ ಗುಣವನ್ನು ತಿಳಿದಿರುತ್ತಾರೆ. ಮುದಿ ಅಜ್ಜಿಯರು ಮೊದಲುಗೊಂಡು ಎಳೇ ಹೆಣ್ಣುಮಗುವಿನ ತನಕ ಅಬಲೆಯರೆಲ್ಲಾ ಅನೇಕ ಕಾಲಗಳಲ್ಲಿ ಪೆರೂನಾಗೆ ಕೃತಜ್ಞರಾಗಿರುವರು.

ಇದೂ ಯಥಾರ್ಥವಾಗಿರುತ್ತದೆ. ಗುಣವಿಲ್ಲದ ಹೆಂಗಸು ಅದನ್ನು ಹೊಗಳುವದಕ್ಕೆ ಹಿಂತೆಗೆಯುವುದಿಲ್ಲ. ಅವಳ ನಾಲಗೆ ... ಹೆಸರು ... ನಾವಿನ ಹೆಸರುವಾಸಿ ... ಪೆರೂನಾದ ಪ್ರೀತಿಪೂರ್ವಕವಾ...

ಬೇಸಿಗೆಯಲ್ಲಿ ಮುಂಜಾಗ್ರತೆ

... ಯಾವತ್ತೂ ... ಬಿಸಿಲ ... ದೇಹದಲ್ಲಿ ... ಸ್ವಭಾವ ... ಅಂಗಗಳು ... ಈ ಕಾಲ ... ಗುಣವುಳ್ಳದ್ದು ...

ಈ ಕಾಲದಲ್ಲಿ ... ಗುಣಕಾರಿಯಾದ ... ಸಾಧ್ಯವಾಗಿ ...

ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಏನಾದರೂ ಅಥವಾ ಮಾಮೂಲು ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೊಂಡರೆ ನಾಳೆ ದಿನ ಬೆಳಿಗ್ಗೆ ಸುಖವಾಗಿ ಕಾಲ ಪ್ರವೃತ್ತಿಯಾಗಿ ಸನಗೆ ಮೈ ಸ್ವಸ್ಥವಾಗಿ ಇರುವುದು. ಮಲಬದ್ಧವಿರುವುದರ ಅರ್ಥವೇನೆಂದರೆ ಮಲವು ಹೊರಗೆ ಬಾರದೆ ಅಲ್ಲಿಯೇ ಒಳಗೆ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೆಲ್ಲಕ್ಕೆ ಅರ್ಧಕಕ್ಕಿಂತ ಹೆಚ್ಚು ಮೂಲ ಕಾರಣವಾಗಿರುವುದು. ಮಲಬದ್ಧದಿಂದ ರೋಗಗಳಿಗೆ ಉಂಟಾಗುವುದೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ — ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಸಿ, ಅರುಚಿ, ವಿಬಿಯ ಕಲ್ಲಾಗುವುದು, ತಲೆಸುತ್ತುವುದು, ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗು, ಹೊಟ್ಟೆನೋವು, ಹೆಂಗಸರ ವ್ಯಾಧಿಗಳು ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ನಿಧಾನವಾಗಿ ಕೆಲಸಮಾಡಿ ಕರುಳನ್ನು ಶುದ್ಧಿಮಾಡುವುವು. ಗಂಡಸರಿಗಾಗಲೀ ಹೆಂಗಸರಿಗಾಗಲೀ ಮಕ್ಕಳಿಗಾಗಲೀ ಶರೀರದಲ್ಲಿರುವ ಮಲವನ್ನು ಕಳ್ಳವಾದ ವಿಷವನ್ನು ಮಲಾಶಯದಿಂದ ಹೊರಕ್ಕೆ ತಳ್ಳಿ ಪಿತ್ತಕೋಶವನ್ನು ಬಲಪಡಿಸಿ ಪಿತ್ತರಸವು ಚೆನ್ನಾಗಿ ಇಳಿಯುವಂತೆ ಮಾಡಿ ಅಂಗಾಂಗಗಳಲ್ಲಾ ಶುದ್ಧಿಯಾಗಿಯೂ ಹಿತವಾಗಿಯೂ ಇಟ್ಟು ಶಕ್ತಿಯ ಬೇಗ ರೋಗವನ್ನು ಪರಿಹರಿಸಿ ಆರೋಗ್ಯವನ್ನುಂಟುಮಾಡುವುವು. [69 41]

ಬೆಲೆ ೪ ಆಣೆ, ೬ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬ ಆಣೆ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು. ಅಥವಾ ಡೋನ್ ಪಿ ಓ ಬಾಕ್ಸ್ ೧೧ ಬೊಂಬಾಯಿ — ಇವರಲ್ಲಿ ದೊರೆಯುವುದು.

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ವಿಕ್ರಯವಾಗುತ್ತದೆ.

ಸ್ಕಾಟ್ ಅಂಡ್ ಬೋನ್ ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್ ಇಂಗ್ಲೆಂಡ್

ಮೀನುಹೊತ್ತು ಇರುವ ಈ ಔಷಧದ ಗುರುತು

ಸಂಜೀವಿನೀ ಔಷಧಾಲಯ, ಮೈಸೂರು.

93 18

ಎಂ. ಎಸ್. ಕುಮಾರಯ್ಯನವರ ದಿವ್ಯಾಷಧಗಳು

ಸಂಜೀವಿನೀ ಬಿಂದು — ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜ್ವರ, ವಾಯುನೋವುಗಳು, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು, ಪಿತ್ತ, ಮೂರ್ಛೆ, ತಲೆಭಾರ, ಮಲಬದ್ಧ, ಬುದ್ಧಿ ಭ್ರಮಣೆ, ಮಂಕುತನ, ಅತಿಮೂತ್ರ, ಸೋಮರೋಗ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ಎಳೆಗ ಪುಷ್ಟಿ, ರಕ್ತಪುಷ್ಟಿಗಳನ್ನು ಹುಟ್ಟಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ. ಕ್ರಯ ಶೀಸೆ ೧ಕ್ಕೆ ೩ ರೂಪಾಯಿ.

ಸಂಜೀವಿನೀ ಮಾತ್ರೆ — ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಎಲಾದರ ಔಷಧ. ಸಾವಿರಾರು ಮಂದಿ ಪ್ಲೇಗಿನಿಂದ ಗುಣ ಹೊಂದಿದಾರೆ. ೩ ದಿವಸಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ. ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ.

ಕಾಲಕೂಟವಟಿಕೆ — ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲ್ಪಟ್ಟ ಹಚ್ಚುವ ಔಷಧಿ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ.

ನಯನಾಮೃತ ಬಿಂದು — ಉರಿಗಣ್ಣು, ಕೆಂಗಣ್ಣು, ಪಾರೆಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ. ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ.

ಇನ್ನೂ ಅನೇಕ ಔಷಧಗಳೂ, ತರುವಾರಿ ಅತ್ತರುಗಳೂ, ಗಂಧದಬತ್ತಿ ಊದಿಕಡ್ಡಿಗಳೂ ನಮ್ಮಲ್ಲಿ ಸಿಕ್ಕುತ್ತವೆ. ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜೆಂಟರುಗಳೂ ಬೇಕು. ಅರ್ಜಿಗೆ ಲೇಬಲ್ ಇಟ್ಟು ಬರೆಯಿರಿ.

ಡಿ. ಕೆ. ಸ್ವಾಮಿ,
ಪ್ರೊಪ್ರೈಟರ್.

ವೃತ್ತಾಂತ ಪತ್ರಿಕೆ

ಸನ್ ೧೯೦೯ ನೇ ಇಸವಿ ಜೂನ್ ತಾ ೧೦ ನೇ ಗುರುವಾರ

ಸಾಂಕ್ರಾಮಿಕಜಾಡ್ಯಗಳು

ಕೆಲವು ಜಾಡ್ಯಗಳು ಏಕಕಾಲದಲ್ಲಿ ಬ್ಬರಿಂದೊಬ್ಬರಿಗೆ ಅಂಟುವುದುಂಟು. ಇಂಥಾ ಜಾಡ್ಯಗಳು ಹೊ ಭಯಂಕರವಾದುವುಗಳು. ಪ್ಲೇಗಾದಿರೋಗ, ಕಾಲರಾಬೇಧಿ ಮತ್ತು ಸಿಡುಬು ಒಹು ನಷ್ಟಕರವಾದ ಸಾಂಕ್ರಾಮಿಕಜಾಡ್ಯಗಳಾಗಿರುತ್ತವೆ. ಇವುಗಳಿಗೆ ನಮ್ಮ ದೇಶದಲ್ಲಿ ಅನೇಕ ಸಹಸ್ರಮಂದಿ ಸಾಯುತ್ತಿರುವರೆಂಬುದು ಎಲ್ಲರಿಗೂ ಗೊತ್ತಾದ ಸಂಗತಿಯಾಗಿರುತ್ತದೆ.

ಅದೃಷ್ಟವು ದೇಶದಿಂದ ಮೇಲ್ಕಂಡ ರೋಗಗಳಿಗೆ ಜನರು ಸಿಕ್ಕಿ ಸಾಯುತ್ತಾರೆಂದು ಕೆಲವರು ನಂಬುತ್ತಾರೆ. ಇದು ಕೇವಲ ತಪ್ಪಾದ ಅಭಿಪ್ರಾಯವೆಂದು ನಾವು ತಿಳಿಸುವೆವು. ಜನರಲ್ಲಿರುವ ಮೌಢ್ಯವೂ ಅನಾಚಾರವೂ ಇದಕ್ಕೆ ಕಾರಣವಾಗಿರುವುದು. ಇದಕ್ಕೇನೂ ಸಂಶಯವಿಲ್ಲ. ಪೂರ್ವಕಾಲದಲ್ಲಿ ಅಂಟುಜಾಡ್ಯಗಳ ದೆಸೆಯಿಂದ ... ಗಾಡಿಗಳಲ್ಲಿ ... ಗಾಡಿ ... ಪ್ರಯಾಣಮಾಡದಂತೆ ... ಕೆಲಸ ... ಕೆಲವು ಪ್ರಾಣಿಗಳು ಕೂಡ ... ಉಂಟುಮಾಡುವುದು.

ಮೈಸೂರು ಸರಕಾರದವರು ಪ್ಲೇಗ್ ... ಮತ್ತು ... ಉಪದ್ರವ ... ಸಹಾಯವಿಲ್ಲದಿದ್ದರೆ ... ಪ್ರಯತ್ನದಿಂದ ಪ್ರಯೋಜನ ... ಸರಕಾರದವರು ಜಾಡ್ಯಗಳನ್ನು ತಡೆಯುವುದಕ್ಕೆ ಕೆಲವು ಕಾನೂನುಗಳನ್ನು ಮಾಡಿರುತ್ತಾರೆ. ಮೇಲ್ಕಂಡ ಕಾನೂನುಗಳು ಕೆಲವರಿಗೆ ... ಇರಬಹುದು. ಆದರೆ ಆಯಾ ಕಾನೂನುಗಳನ್ನು ಎಲ್ಲರೂ ಮನಃಪೂರ್ವಕವಾಗಿ ಸ್ವೀಕರಿಸಿದರೆ ... ಜಾಡ್ಯಗಳು ... ಬೇಗ ಹೋಗುವುವು.

ಸರಕಾರದವರು ಅಲಾಸ್ವತ್ರ... ಹಾಕುತ್ತಾರೆ ... ಕೆಲವರು ಪ್ರಶ್ನೆ ಮಾಡಬಹುದು. ಸಿಡುಬು ಹಾಕಿಸಿಕೊಳ್ಳುವವರಿಂದ ಆ ರೋಗವು ತಗಲುವುದಿಲ್ಲ. ಪ್ರತಿ ... ಸಿಡುಬು ಹಾಕಿಸಿಕೊಂಡರೆ ... ಮೈಸೂರು ದೇಶದಲ್ಲೆಲ್ಲಾ ... ಸಿಡುಬು ಹಾಕಿಸಿಕೊಳ್ಳುವುದರಿಂದ ಸಿಡುಬಿನ ಹಾವಳಿಯು ಆಯಾ ದೇಶಗಳಲ್ಲಿ ... ನಮ್ಮ ಮೈಸೂರು ಸರಕಾರದವರು ಒಳ್ಳೆ ... ಸಿಡುಬು ಹಾಕುವುದ ... ಪ್ರಯೋಜನಕಾರಿಯಾದ ಕೆಲಸವಾಗಿರುತ್ತದೆ. ಈ ಹೊಸ ... ಎಲ್ಲರೂ ಸಂತೋಷದಿಂದ ಒಪ್ಪಿಕೊಳ್ಳುವರೆಂದು ಹಾರೈಸುತ್ತೇವೆ.

ಅಂಟುಜಾಡ್ಯಗಳು ಕಾಣಿಸಿಕೊಂಡ ಕೂಡಲೇ ಅವುಗಳ ವಿಷಯ ... ಕೊಡಬೇಕೆಂದು ಅಪ್ಪಣೆಯಾಗಿದೆ. ಹೀಗೆ ಮಾಡುವುದು ಯಾತಕ್ಕೆಂದು ಕೆಲವರು ಪ್ರಶ್ನೆಮಾಡುವರು. ಒಂದು ಮನೆಯಲ್ಲಿ ಅಂಟುಜಾಡ್ಯ ಕಾಣಿಸಿಕೊಂಡರೆ ... ಬಂದು ಚಿಕಿತ್ಸಾಕ್ರಮವನ್ನು ತೋರಿಸಿಕೊಡುವರು. ಇಲ್ಲವೆ ... ಜನಗಳಿಗೆ ಹಾಸಿವಾರದಂತೆ ಕಾರ್ಯಭಾಗ ನಡೆಸುವರು. ಜನಗಳ ... ಸ್ವತಃ ಸರಕಾರದವರು ಕಾನೂನುಗಳನ್ನು ಮಾಡುತ್ತಾರೆಂದು ಅನೇಕರು ಅವಿವೇಕದಿಂದ ಮಾತನಾಡಿಕೊಳ್ಳುವುದುಂಟು. ಸರಕಾರದವರು ಜನಗಳ ಪ್ರಯೋಜನಕ್ಕಾಗಿಯೇ ಕೆಲಸ ಮಾಡುತ್ತಾರೆ. ಜನ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

7 — 11 ರಿಂದ 11 — — ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ಹಿಡಿದದ್ದು	ಸತ್ತದ್ದು	ಹಿಡಿದದ್ದು	ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	1	2	[illegible]	2
ಕೋಲಾರ್ ,,	0	[illegible]	2[illegible]	20
ಕೋಲಾರ್ ಚಿನ್ನದ ಗಣಿ (ಆ)	0	0	0	0
ತುಂಕೂರು ಡಿಸ್ಟ್ರಿಕ್ಟು	0	0	[illegible]	0
ಹಾಸನ ,,	0	0	9	8
ಚಿತ್ರದುರ್ಗ ,,	0	0	0	0
ಕಡೂರ್ ,,	1	1	0	0
ಶಿವಮೊಗ್ಗಾ ,,	0	0	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	5	3	12	30

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಜ್ಯೇಷ್ಠ ಶುದ್ಧ ಚತುರ್ದಶಿ ಗುರುವಾರದಿಂದ ಜ್ಯೇಷ್ಠ ಬಹುಳ ಷಷ್ಠಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಜೂನ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇದಿ ವೃಷಭ ಮಾಸ
3	ಗುರು ‡	ಚತುರ್ದಶಿ	0 10	ಅ	11 31	21
[illegible]	ಶುಕ್ರ	ಪೌರ್ಣಮಿ	2 18	ಜ್ಯೇ	10 13	22
[illegible]	ಶನಿ §	ಪಾಡ್ಯ	1 10	ಮೂಲ	[illegible]	23
6	ರವಿ *	ಬಿದಿಗೆ	5[illegible] 18	ಪೂರ್ವಾ	16 18	24
7	ಚಂದ್ರ †	ತದಿಗೆ	[illegible] 2	ಉತ್ತರಾ	11 [illegible]8	2[illegible]
8	ಕುಜ	ಚತುರ್ಥಿ	18 12	ಶ್ರ	12 23	2[illegible]
[illegible]	ಬುಧ	ಪಂ	13 16	ಧ	3[illegible] 1[illegible]	[illegible]7

‡ ರಾತ್ರಿ ಚಾಪೆ ಹರಿಕ ಗ್ರಹಸ್ಥ ಭೂಮಿ ಪೂರ್ಣಿಮ
§ ಚೈತ್ರಾ ಪೂರ್ವ ಪುಣ್ಯದಿನ
* ಕಾಂಚೀಪುರ ವರದರಾಜಸ್ವಾಮಿರಥ, ಮಾರಿದಲ್ಲಿ ಶರಣ್ಯಸಾಮಿರಥ, ರಘೋತ್ತಮತೀರ್ಥರ ಪುಣ್ಯದಿನ
† ಸಂಕಷ್ಟಹರಚತುರ್ಥೀ ವ್ರತ

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩. ಮೈಸೂರು—ಸನ್ ೧೯೦೯ ನೇ ಇಸವಿ ಜೂನ್ ತಾರೀಖು ೧೦ ನೇ ಗುರುವಾರ. ಸಂಚಿಕೆ ೨

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ ರೂ. ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾಸ್ತ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

47 3

ತಲೆನೋವು, ವಾಯುನೋವು, ಸಳಕ, ಗಂಟಿನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆ ಲ್ಲಾ ಈ ತೈಲವನ್ನು ಹಚ್ಚಿದರೆ ಮಂತ್ರ ನಿವಾರಿಸಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ವಿಷಯವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ [illegible] ಎಲ್ಲಾ ಔಷಧಿಗಳನ್ನೂ ನಿವಾರಣೆಮಾಡುವುದರಲ್ಲಿ ಈ [illegible]

[illegible] ರಾಗಿರುತ್ತಾರೆಂತಲೂ ತಿಳಿದನು ಅತನು ದೇವರ ಬಳಿಯ ಏಕ ಜಂಮ ದೇವರ ಗುಣಾತಿಶಯಗಳನ್ನು ಮನುಷ್ಯರಿಗೆ ಪ್ರಕಟಿಸುತ್ತಾನೆ ಅತನು ಸರಾವತಾರ ವೆತ್ತ ಮನುಷ್ಯರ ಮಧ್ಯೆ ಸಂಚರಿಸುತ್ತಾ ಮನುಷ್ಯರು ಮಾಡಿದ ಪಾಪಗಳ ನಿಮಿತ್ತ ದೇವರು ಕಲ್ಪಿಸಿದ ರಕ್ಷಣೆ ವರಗಳನ್ನು ಸಂಪಾದಿಸಿ ಕೊಂಡುದನ್ನು ತೋರಿಸಿರುತ್ತಾನೆ

ಯೇಸುಕ್ರಿಸ್ತನು ಸತ್ಯವಾದ ತತ್ವಗಳನ್ನು ಎರಡು ವಚನಗಳಲ್ಲಿ ಅಡಗಿಸಿರುತ್ತಾನೆ ಮೊದಲನೆ ವಚನದ ಸ್ವಭಾವವೇನೆಂದರೆ—ಕರ್ತನಾದ ದೇವರು ಒಬ್ಬನೇ, ನೀನು ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಮನಸ್ಸಿನಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು

ಎರಡನೇಯ ವಚನವು ಏನೆಂದರೆ—ನಿನ್ನನ್ನು ಪ್ರೀತಿಸಿಕೊಳ್ಳುವಂತೆಯೇ ನೀನು ನಿನ್ನ ನೆರೆಯವರನ್ನು ಪ್ರೀತಿಸಬೇಕು ಎಂಬುದೇ ನಮ್ಮ ನೆರೆಯವರು ಎಂದು ಹೇಳಿದಾಗ್ಯೆ ನಮ್ಮ ತಂದೆ ಸೃಷ್ಟಿಗಳಾದ ಎಲ್ಲಾ ಮನುಷ್ಯರು ಎಂಬುದಾಗಿ ಯೇಸುಕ್ರಿಸ್ತನು ತಿಳಿಸಿದನು ಮೇಲ್ಕಂಡ ಎರಡು ಆಜ್ಞೆಗಳಿಗೆ ಸಮಾನವಾದ ಕಟ್ಟಳೆಯು ಇಲ್ಲವೆಂದನು

ಯೇಸುಕ್ರಿಸ್ತನ ಜೀವಚರಿತ್ರೆಯನ್ನೂ ಅತನ ಬೋಧನೆಯನ್ನೂ ನಾವು ತಿಳಿದುಕೊಳ್ಳಬೇಕಾದರೆ ಸತ್ಯವೇದಗ್ರಂಥದ ದ್ವಿತೀಯಭಾಗವಾದ ಹೊಸ ಒಡಂಬಡಿಕೆ ಎಂಬ ಪುಸ್ತಕವನ್ನು ಓದಬೇಕು ಮೇಲೆ ಹೇಳಿದ ವಚನಗಳು ಹೊಸ ಒಡಂಬಡಿಕೆಯ ಎರಡನೇಯ ಪುಸ್ತಕವಾದ ಮಾರ್ಕನ ಸುವಾರ್ತೆಯ ೧೨ ನೇಯ ಅಧ್ಯಾಯ ೨೯-೩೧ ವಚನಗಳಲ್ಲಿ ಸಿಕ್ಕುತ್ತದೆ ದುರ್ಭಾಗ್ಯ ಮಹಾ ರಾಜರು ತಿಳಿಸಿರುವ ವಿಶಾಲತವನ್ನು ಸಂಪಾದಿಸಿಕೊಳ್ಳುವುದಕ್ಕೆ ಪ್ರಯತ್ನಪಡುವವರು ಹೊಸ ಒಡಂಬಡಿಕೆಯ ಸುವಾರ್ತೆಗಳನ್ನು ಓದಿದರೆ ಅಲ್ಲಿ ಮನುಷ್ಯರ ತಾರತಮ್ಯವನ್ನು ಎತ್ತಿದ ಯೇಸುಕ್ರಿಸ್ತನ ಏಸಿಯ ಎಲ್ಲಾ ಸಂಗತಿಗಳನ್ನು ತಿಳಿದುಕೊಳ್ಳಬಹುದು ಈತನು ಸಾರಾತತ್ವಾವನ್ನು ಮಾನವರೆಲ್ಲರಿಗೆ ದೇವರ ಪ್ರೀತಿಯನ್ನು ಪ್ರಕಟಿಸಿದನು

ಅನೇಕ ಸಂದರ್ಭಗಳಲ್ಲಿ ಯೇಸುಕ್ರಿಸ್ತನ ಹಿಂಬಾಲಕರು ತಮ್ಮ ಗುರುವಿನ ಬೋಧನೆಯಂತೆ ನಡೆದುಕೊಂಡಿಲ್ಲ ಇವರ ನಡತೆಯಿಂದ ಏಕಮತವು ಇಂಡಿಯಾ ದೇಶದಲ್ಲಿಯೂ ಇತರ ಕಡೆಗಳಲ್ಲಿಯೂ ನಿಸ್ತರಿಸಿಕೊಳ್ಳುವುದಕ್ಕೆ ಅನೇಕ ವಿಘ್ನವಾಗಿರುತ್ತದೆ ಆದರೆ ಸತ್ಯಮಾದ ಒಂದೇ ಮತವನ್ನು ಯೇಸುಕ್ರಿಸ್ತನು ಸ್ಥಾಪಿಸಿ ಅದರ ತತ್ವಗಳನ್ನು ಎಲ್ಲರಿಗೂ ಪ್ರಕಟಿಸಿರುತ್ತಾನೆ ಆ ಒಂದೇ ಮತದ ಆಶೀರ್ವಾದಗಳನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನಮಾಡುವವರೆಲ್ಲರೂ ಎಲ್ಲಾ ಬೇಧವಾದ ದುಷ್ಟತನಗಳನ್ನು ಬಿಟ್ಟು ದೇವರನ್ನು ತಮ್ಮ ತಂದೆಯೆಂದು ನಂಬಿ ಯೇಸುಕ್ರಿಸ್ತನ ಮೂಲಕ ಕ್ಷಮೆಯನ್ನೂ ಆತ್ಮದ ಬಲವನ್ನೂ ಪಡೆದುಕೊಳ್ಳುವುದಕ್ಕೆ ಪ್ರಯತ್ನಪಡಬೇಕು ಯೇಸುಕ್ರಿಸ್ತನ ಮೂಲಕವೇ ಲೋಕದ ಎಲ್ಲಾ ಮನುಷ್ಯರೂ ಸತ್ಯಮಾದ ಒಂದೇ ಮತವನ್ನು ಪಡೆದುಕೊಳ್ಳಬೇಕಾಗಿದೆ

ಬಳಿದೇಶದ ವೃತ್ತಾಂತಗಳು.

ಹೋದ ಭಾನುವಾರ ದಿವಾನರಾದ ಮೆ|| ಆನಂದರಾಯರೂ ಎರಡನೇ ಕೌನ್ಸಿಲರಾದ ಮೆ|| ಪಂಪುಂಡಯ್ಯನವರೂ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿಸಿದರು.

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ. ಮತ್ತು ಕೆಳಗ ನಮೂದಿಸಿರುವ ರೋಗಗಳಿಗೆ ಶಕ್ಯವಾದ ಗುಣಕಾರಿಯು [30 10,

ತಲೆನೋವು ಗಂಟು ಉಬ್ಬುವದು, ವಾತ. ಸಂಧಿವಾತ, ಉಳುಕು, ಅಬಲು ಗಂಟು. ಗಟ್ಟುನೋವು, ಅರ್ಧಾಂಗವಾಯು, ಎದೆಶೀತ. ಘಾಯ, ಜಖಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ. ಬಾಟ್ಲಿ ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ. ದಬ್ಬಿ ಒಂದರ ಕಿಮ್ಮತ್ತು ೦-೩-೦ ೧೨ ದಬ್ಬಿಗಳಿಗೆ ೪ ೦ ೦

ಮನೋಹರ ಅತ್ತರು —ಸುವಾಸಿಕ ಅತ್ತರು ½ ತೋಲಕ್ಕೆ	೧-೦-೦
" " " ¼ ತೋಲಕ್ಕೆ	೦-೧೨-೦
ಚೇಳುಕಡತದ ಮದ್ದು	೦-೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದಿ ಜಗಳಿಗೆ	೦-೮-೦
[illegible]	೦-೮-೦
	೦-೪-೦
	೦-೩-೦

ರಾಜಧಾನಿಯಲ್ಲಿ ವರ್ಧಂತಿ ಉತ್ಸವ—

ಮುನ್ ಅತಿಥಿಗಳಿಗೆ ಅಸ್ಪರ್ ಮತ್ತು ಡಿನ್ನರ್ ಕೆಸಿ. ದಿನವಲ್ಲಿ ಅನೇಕ ವಿನೋದಗಳನ್ನು ಮಾಡಿಸಿರುತ್ತಾರೆ. ಕುಸ್ತಿ ಸಂಸ್ಥಾನ [illegible] ೧೯ ಮತ್ತು ೨೦ ನೇ ತಾರೀಖುಗಳಲ್ಲಿ ನಡೆಯುವುದು. ಆಗಾಗ್ಗೆ ಫೋಲೋ ಚೆಂಡಾಟವು ನಡೆಯುವುದು ಇಷ್ಟಲ್ಲದೆ ಅತಿಥಿಗಳು ಶ್ರೀರಂಗಪಟ್ಟಣ ಮೊದಲಾದ ಸ್ಥಳಗಳಿಗೆ ಹೋಗಿ ಬರುವಂತೆಯೂ ಬ್ಯಾಡ್ಮಿಂಟನ್, ಟೆನಿಸ್, ಗಾಲ್ಫ್ ಮೊದಲಾದ ಆಟಗಳನ್ನು ಆಡಿ ಸಂತೋಷಪಡುವಂತೆಯೂ ನಾನಾ ಏರ್ಪಾಡುಗಳು ನಡೆಯುತ್ತಿವೆ ರಾಜಧಾನಿಯಲ್ಲಿ ತುಂತುರು ಮಳೆ ಆಗಾಗ್ಗೆ ಬೀಳುತ್ತಿದ್ದಾಗ್ಯೂ ಹವವು ಚನ್ನಾಗಿರುತ್ತದೆ

ಸರಕಾರಿ ಹುಕುಂಗಳು.

ಕೀಲಿಕಸಂವತ್ಸರದ ಕಂದಾಯದ ಪಿರ್ಯಾದ

೧. ಹರೀ ಖಿಸಾನಾಗಿ ಬಿಂಗಡಿಸಲ್ಪಟ್ಟ ಜಮೀನುಗಳ ಕಂದಾಯ.— ನೀರಿನ ಆಸರೆ ಯಾವ ಮೂಲಕವಾಗಿಯಾದರೂ ಇರಲಿ, ತರೀಯಾಗಿ ಬಿಂಗಡಿಸಲ್ಪಟ್ಟ ಜಮೀನುಗಳಲ್ಲಿ ೧೯೦೮—೦೯ ನೆ ಕೀಲಕ ಸಾಲಿನಲ್ಲಿ ತರೀ ಫಸಲು ಬಿದ್ದಾಗ್ಯಾಗಿ ಆಗದೆ ಇದ್ದರೂ ಅಥವಾ ಸಾಧಾರಣ ಸಾಲಿನ ಸಸಲಿನಲ್ಲಿ ಕಾಲು ಅರ್ಧ ಭಾಗಕ್ಕೆ ವಿರಿವನ್ನು ಫಸಲು ಅಂದರೆ ಸಾಧಾರಣ ೧೬ ಆಣೆ ಬೆಳೆಯಲ್ಲಿ ೪ ಆಣೆಗೆ ಕಡಿಮೆಯನ್ನು ಫಸಲು ಆಗಿದ್ದರೂ ಸರಿಯೆ, ಅರ್ಧ ಕಂದಾಯವನ್ನು ರಿಮಿಷನ್ ಮಾಡಿ ಮುಜರೆ ಕೊಟ್ಟು ಬಾಕಿ ಅರ್ಧ ಕಂದಾಯವನ್ನು ವಸೂಲು ಮಾಡತಕ್ಕದ್ದು

೨. ಫಸಲು ಬಿದ್ದಾಗ್ಯಾಗಿ ಆಗದೆ ಇರುವ ಜಮೀನುಗಳಿಗೆ ಮುಜರೆ ಕೊಡುವಂತೆ ಅದೇ ಪ್ರದೇಶದಲ್ಲಿರುವ ಹಿಡುವಳಿ ಬಂಜರು ಜಮೀನುಗಳೂ ಅದೇ ದರ ರಿಮಿಷನ್ ಕೊಡಬೇಕು ಆದರೆ ಮಾಮೂಲು ಬಂಜರು ಜಮೀನು ಗಳಿಗೆ ಅಂದರೆ, ಕ್ರಮವಾಗಿ ಸಾಧಾರಣ ಸಾಲಿನಲ್ಲಿ ಬೆಳೆ ಇಡಲ್ಪಡದ ಹಿಡುವಳಿಯ ಜಮೀನುಗಳಿದ್ದು ಈ ವರ್ಷವು ಸಾಧಾರಣ ಬೆಳೆಯಾಗಿದ್ದ ಪಕ್ಷದಲ್ಲಿ ಅಂಥಾ ಜಮೀನು ಬಂಜರಾಗಿಯೇ ಇರುತ್ತಿದ್ದಂತೆ ಊಹಿಸಬಹುದಾದ ಜಮೀನುಗಳಿಗೆ ರಿಮಿಷನ್ ಕೊಡತಕ್ಕದ್ದಲ್ಲ

೩. ತರಿಯಾಗಿ ಬಿಂಗಡಿಸಲ್ಪಟ್ಟ ಜಮೀನಿನಲ್ಲಿ ಸರ್ಕಾರಿ ನೀರಿನ ಆಸರೆಯಿಂದ ಅಥವಾ ಅಂಥಾ ಆಸರೆ ಇಲ್ಲದೆ ಖುಷ್ಕಿ ಫಸಲನ್ನು ಬೆಳೆದಿದ್ದರೆ, ೧೯೦೯ ನ್ಯಾರಾದಲ್ಲಿ ಕಂಡ ರಿಯಾಯಿತಿಯನ್ನು ಇದಕ್ಕೂ ತೋರಿಸಬೇಕು ಆದರೆ ಅಂಥಾ ಗ್ರಾಮದಲ್ಲಿ ವಸೂಲಾಗುತ್ತಿರುವ ಖುಷ್ಕಿ ಕಂದಾಯದ ಸರಾಸರಿ ದರವನ್ನು ಸಹಾ ಖುಷ್ಕಿ ಬೆಳೆ ಬೆಳೆದ ಸದರಿ ಜಮೀನಿನ ಮೇಲೆ ವಸೂಲು ಮಾಡಬೇಕು ಈ ಜಮೀನುಗಳನ್ನು ಅಳತೆ ಮಾಡಬೇಕಾದ್ದಿಲ್ಲ . ಆದರೆ ಒಂದು ಪೂರಾ ಸರ್ವೆ ನಂಬರನ್ನಾಗಲಿ ಅಥವಾ ಒಂದು ಸರ್ವೆ ನಂಬರಿನ ಒಂದು ಪ್ರತ್ಯೇಕ ಭಾಗವನ್ನಾಗಲಿ, ಪೂರ್ತಿ ಇದ್ದಂತೆ ಭಾವಿಸತಕ್ಕದ್ದು. ಖುಷ್ಕಿ ಬೆಳೆಯು ಶುದ್ಧಾಂಗವಾಗಿ ಆಗಿದ್ದರೆ ಅಂಥಾ ಖುಷ್ಕಿ ಬೆಳೆಗಾಗಿ ಹೆಚ್ಚು ತೆರಿಗೆಯನ್ನು ವಸೂಲು ಮಾಡತಕ್ಕದ್ದಿಲ್ಲ

೪. ಖುಷ್ಕಿಯಾಗಿ ಬಿಂಗಡಿಸಲ್ಪಟ್ಟ ಜಮೀನುಗಳ ಕಂದಾಯ —ಖುಷ್ಕಿಯಾಗಿ ಬಿಂಗಡಿಸಲ್ಪಟ್ಟ ಜಮೀನುಗಳಲ್ಲಿ ಖುಷ್ಕಿ ಬೆಳೆ ಶುದ್ಧಾಂಗವಾಗಿ ಆಗದಿದ್ದ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28-17



೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ.

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊಡತ (ಘಾಟ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ ಪಿತ್ತ. ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನಾರು ಹನಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಟ್ಟುಜ್ವರ, ಕೃತಕ್ಷಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು.

೨ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ. 18-19

[illegible]

೧೨ ವಸೂಲಾಗಬೇಕಾದ ಅರ್ಧ ಕಂದಾಯ [illegible] ಕೊಡಬೇಕೆಂದು ಸಂದರ್ಭದಲ್ಲಿ ಬಾಕಿ ಅರ್ಧ ಕಂದಾಯವನ್ನು [illegible] ವದಿಲ್ಲವೆಂತ ಯಾವುದಾದರೂ ಒಂದೊಂದು ಸಂದರ್ಭದಲ್ಲಿ ದೆಪ್ಯುಟಿ ಕಮಿಷನರಿಗೆ ಸಬ್ ಡಿವಿಜನ್ ಆಫೀಸರುಗಳಿ ತಿಳಿಸಬಹುದು

೧೯ ಮೇಲ್ಕಂಡ ಹುಕುಂಗಳು ಈ ಕೆಳಗೆ ತೋರಿಸಿರುವ ತಾಲ್ಲೂಕು ಹೋಬಳಿಗಳಲ್ಲಿ ಜಾರಿಯಲ್ಲಿ ಬರತಕ್ಕದ್ದು —

ಬೆಂಗಳೂರು ಡಿಸ್ಟ್ರಿಕ್ಟು

೧ ಬೆಂಗಳೂರು—ಹೆಸರುಘಟ್ಟ, ೨ ಹೊಸಕೋಟೆ ಕಸಬಾ ಹೋಬಳಿ, ಜಡಿಗೇನಹಳ್ಳಿ, ನಂದಗುಡಿ, ಸೂಲಿಬೆಲೆ, ೩ ದೇವನಹಳ್ಳಿ ತಾಲ್ಲೂಕಲ್ಲಾ, ೪ ದೊಡ್ಡಬಳ್ಳಾಪುರ, ಮಧುರೆ, ದೊಡ್ಡಬೆಳವಂಗಲ, ಕಸಬಾ ಹೋಬಳಿ, ೫ ನೆಲಮಂಗಲ, ಕಸಬಾ ಹೋಬಳಿ, ದಾಸನಪುರ, ತ್ಯಾಮಗೊಂಡ್ಲು, ೬ ಮಾಗಡಿ, ತಿಪ್ಪಸಂದ್ರ, ಕುದೂರು, ಸೋಲೂರು. ೭ ಚನ್ನಪಟ್ಟಣ, ವಿರುಪಾಕ್ಷಿಪುರ, ಕಸಬಾ ಹೋಬಳಿ, ಮಳೂರು

ತುಮಕೂರು ಡಿಸ್ಟ್ರಿಕ್ಟು

ಕೋಲಾರ ಡಿಸ್ಟ್ರಿಕ್ಟು

ಕೋಲಾರ ಡಿಸ್ಟ್ರಿಕ್ಟು.

ಹಾಸನ ಡಿಸ್ಟ್ರಿಕ್ಟು

ಮೈಸೂರು ಡಿಸ್ಟ್ರಿಕ್ಟು

೧ ನಾಗಮಂಗಲ—ತಮಾಂ ತಾಲ್ಲೂಕು, ೨ ಕೃಷ್ಣರಾಜಪೇಟೆ, ಸಂತೆ ಬಾಚಹಳ್ಳಿ, ಕಿಕ್ಕೇರಿ, ಕಸಬಾ ಹೋಬಳಿ ೩ ಮಂಡ್ಯ—ತಮಾಂ ತಾಲ್ಲೂಕು,

ಹಾಸನ ಡಿಸ್ಟ್ರಿಕ್ಟು

೧ ಅರಸೀಕೆರೆ—ತಮಾಂ ತಾಲ್ಲೂಕು, ೨ ಚನ್ನರಾಯಪಟ್ಟಣ, ಕಸಬಾ ಹೋಬಳಿ ಬಾಗೂರು, ಆಣತಿ, ನುಗ್ಗೆಹಳ್ಳಿ, ಹಿರಿಸಾವೆ, ಶ್ರವಣಬೆಳಗೊಳ, ೩ ಹೊಳೆನರಸೀಪುರ, ಕಸಬಾ ಹೋಬಳಿ, ದೊಡ್ಡಕಾಡನೂರು, ೪. ಬೇಲೂರು, ಹಳೇಬೀಡು, ಮಾದಿಹಳ್ಳಿ

ಶಿವಮೊಗ್ಗಾ ಡಿಸ್ಟ್ರಿಕ್ಟು

೧ ಶಿವಮೊಗ್ಗಾ—ತಾಲ್ಲೂಕೆಲ್ಲಾ, ೨ ಚನ್ನಗಿರಿ—ತಾಲ್ಲೂಕೆಲ್ಲಾ, ೩ ಹೊನ್ನಾಳಿ, ಸಾಸವೆಹಳ್ಳಿ

ಕಡೂರು ಡಿಸ್ಟ್ರಿಕ್ಟು.

೧ ಚಿಕ್ಕಮಗಳೂರು—ಲಕ್ಯ, ೨ ಕಡೂರು—ತಾಲ್ಲೂಕೆಲ್ಲಾ

ಚಿತ್ರದುರ್ಗ ಡಿಸ್ಟ್ರಿಕ್ಟು

೧. ಚಿತ್ರದುರ್ಗ—ಕಸಬಾ ಹೋಬಳಿ, ತುರುವನೂರು, ೨ ಚಳ್ಳಕೆರೆ-ತಾಲ್ಲೂಕೆಲ್ಲಾ, ೩. ಹಿರಿಯೂರು—ತಾಲ್ಲೂಕೆಲ್ಲಾ, ೪. ದಾವಣಗೆರೆ—ಕಸಬಾ ಹೋಬಳಿ ಹಂಡಿ, ೫ ಜಗಲೂರು—ಜಗಲೂರು ಹೋಬಳಿ, ೬. ಹೊಸದುರ್ಗ—ಹೊಸದುರ್ಗ, ಮಾಡಕೆರೆ, ಬಾಗೂರು, ಮಾಡದಕೆರೆ, ೭. ಹರಿಹರ (ಸಬ್ ತಾಲ್ಲೂಕು)—ಕಸಬಾ ಹೋಬಳಿ, ಮಲೆಬೆನ್ನೂರು.

JUST RECEIVED! JUST RECEIVED!!

Stead's Books for the Bairns

(illustrated) New Numbers [5 23]

STEAD'S PENNY POPULAR TALES—Sixty four Pages in a coloured Picture Cover. Each number contains a story of thrilling interest. 24 numbers

CALENDARS FOR 1909

Apply—The Manager, C. L. S. Book Depot, Mysore City.

ನೋಡಿರಿ ಪ್ರೋತ್ಸಾಹ ಕೊಡಿರಿ ತರಿಸಿರಿ.

98 29

ಈಗ ತಾನೇ ಶೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತಿದೇವೆ ತುರಕ್ಕಿಸಿರಿ, ನಮ್ಮಲ್ಲಿಯು ಉಲ್ ದಾರದಂತಹ ಉಲ್ ದಾರ ಎಲ್ಲಿಯೂ ದೊರೆಯದು. ೫,೦೦೦ ಹಾಸನ್ ಟೋಪಿಹೊಲಿಯುವ ಸೂಪೀರಿಯರ್ ಉಲ್‌ದಾರ

೧೦ ಟೋಪಿಯಾಗುವ ಸೂಪೀರಿಯರ್ ಉಲ್ ಬಂಡಲ್ ೧ಕ್ಕೆ ೩ ೭-೦

೧೨ ಲಡಿಗಳಿರುವ ಸೂಪರ್ ಫೈನ್ ಉಲ್ ಬಂಡಲ್ ೧ಕ್ಕೆ ೫ ೪ ೦

೮ ಲಡಿಗಳಿರುವ ಮಿಶ್ರ ಸೂಪೀರಿಯರ್ ಉಲ್ ಬಂಡಲ್ ೧ಕ್ಕೆ ೩ ೪ ೦

ದಪ್ಪದ ಉಲ್ ದಾರಗಳು.

೮ ಲಡಿಗಳಿರುವ ಬಂಡಲ್ ೧ಕ್ಕೆ ೩ ೭ ೦ ೩ ೧೨ ೦ ಮತ್ತು ೪-೮-೦

೩೦ ಇಂಚಿನ ಕಾಟನ್ ಬನಿಯನ್ ೧ಕ್ಕೆ ೦ ೮ ೦

ಉಲನ್ ೩೬ ಇಂಚಿನವಕ್ಕೆ ೨ ೮ ೦

ಲಿನನ್ ಕೈವಸ್ತ್ರ ೧ಕ್ಕೆ ೦ ೨ ೦ ಪರಿಮಳ ನಸ್ಯದ ಸೀಶೆ ೧ಕ್ಕೆ ೦-೨ ೦

೩೦೦ ಪಾತ್ರಗಳಿರುವ ಸೇಪ್ಟಿ ತಾಂಬೂಲ ಮಿತ್ರನು ಪ್ಯಾಕೆಟ್ ೧ಕ್ಕೆ ೬ ೩ ೦

ರಾಯಲ್ ದಂತಮಂಜನದಬ್ಬಿ ೧ಕ್ಕೆ ೦-೧ ೬ ರೋಮನಾಶಕ ಸಾಬೂನು ಪೆಟ್ಟಿಗೆ ೧ಕ್ಕೆ ೦ ೬-೦ ಕೂಸುಗಳ ಟೋಪಿ, ಪೂರ್ತಿ ಮೋಜೋಡು ಬೇಕಾದಲ್ಲಿ ಕ್ರಯದ ಪಟ್ಟಿ ತರಿಸಿರಿ

ವಿಳಾಸ —ದಿ ವೂಲನ್ ಮಾರ್ಟ್, 64 ಎ ಮಂಗಳೂರು

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣಪ್ರಾಧಾನ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 6 23

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತ್ಯಾವುದೂ ಇಲ್ಲ

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ... ಒದಗುವವು ... ಜನಪಾದ ಕೆಲಸಗಳನ್ನು ಆಗಲೇ ನಡಿಸಿ ... ಒಬ್ಬೆನಕಳ್ಳಯಲ್ಲಿ ಇಂಥಾ ಕೊರಮರನೇಕರು ಈಗ ಸತ್ಯಜೀಗಳಾಗಿ ಲೋಕಕಂಟಕರಾಗಿರುವದನ್ನು ಬಿಟ್ಟು ಸಾಧುವೃತ್ತಿಯನ್ನು ಅನುಸರಿಸಿ ವಿದ್ಯಾವಂತರೂ ದೇವಭಕ್ತರೂ ಪಾಪಭೀತರೂ ಆಗಿ ನಮ್ರರಾಗಿ ಬಾಳುತ್ತಿರುವವನ್ನು ವಾಚಕರು ಕೇಳಿಯೂ ನೋಡಿಯೂ ಇರಬಹುದು

ಹಿಂದೂದೇಶದ ಒಂದು ತೆಲುಗು ನಾಡಿನಲ್ಲಿ ದೊಂಗದಾಸರಿ ವಾಂಡ್ಲು ಎಂಬ ಜನಗಳಿದ್ದಾರೆ ದೊಂಗ ಅಂದರೆ ಕಳ್ಳರು ಎಂಬದು ಇವರ ಜಾತಿ ಕಳ್ಳತನವೆ ಇವರ ಕುಲ ಕಸುಬು ವೇಶ್ಯಾಸ್ತ್ರೀಯರಿಗೆ ಅವರ ದುರ್ವೃತ್ತಿಯೆ ಕಸುಬಾಗಿ ಅವರು ತಮ್ಮ ಮಕ್ಕಳನ್ನು ಅದೇ ಕಸಬಿಗೆ ಹ್ಯಾಗೆ ಸಿದ್ಧಪಡಿಸುತ್ತಿರುತ್ತಾರೋ ಹಾಗೆ ಇವರು ತಮ್ಮ ಮಕ್ಕಳನ್ನು ಕಳ್ಳತನ, ಲೂಟಗಳಿಗೆ ಚಿಕ್ಕಂದಿನಿಂದ ವಳವಡಿಸುತ್ತಿದ್ದಾರೆ ಒಬ್ಬ ಯುವಕನು ಈ ಕಸುಬಿನಲ್ಲಿ ಚಮತ್ಕಾರಿ, ಸಮರ್ಥ, ಎಂಬದಾಗಿ ತಿಳಿದುಬಂದರೆ ಅವನನ್ನು ತನ್ನ ಪ್ರೇಮಪಾತ್ರನಾದ ಗಂಡನೆಂದು ಸ್ವೀಕರಿಸುವದಕ್ಕೆ ಸ್ಪರ್ಧೆಯಿಂದ ಅವರಲ್ಲಿ ಯೌವನಸ್ಥರಾದ ಹುಡುಗಿಯರು ಪ್ರಯತ್ನಪಡುವರಂತೆ ಸರಕಾರದವರು ಇವರ ಪುಂಡನ್ನ ಅಡಗಿಸಬೇಕೆಂದು ಅನೇಕ ವಿಧಗಳಿಂದ ಪ್ರಯತ್ನಗಳನ್ನು ಪಟ್ಟರೂ ಅದೇನೂ ಜಯತೊಂದಲಿಲ್ಲ ಇಂಥವರಿಗೆ ಬಹಳ ಆಶ್ಚರ್ಯವಿಧವಾಗಿ ಕ್ರಿಸ್ತನ ಶಿಷ್ಯರಾದ ಪಾದ್ರಿಗಳ ಸಹವಾಸವು ದೊರೆಯಿತು ಈಗ ಎರಡು ವರ್ಷಗಳಿಗೆ ಮುಂಚೆ ಒಂದು ರಾತ್ರಿಯಲ್ಲಿ ಈ ದೊಂಗದಾಸರಿ ವಾಂಡ್ಲು ಎಂಬವರಲ್ಲಿ ಕೆಲವರು ಅಲ್ಲಿ ಒಬ್ಬ ಉಪದೇಶಿಯ ಮನೆಯನ್ನು ಹೊಕ್ಕು ಕೆಲವು ಬಟ್ಟೆಬರೆಗಳನ್ನು ನೂರು ರೂಪಾಯಿಗಳನ್ನು ಕದ್ದುಕೊಂಡರು ಈ ನೂರು ರೂಪಾಯಿಗಳು ಧರ್ಮದ ಕೆಲಸಕ್ಕಾಗಿ ಸಂಗ್ರಹವಾಗಿತ್ತು ಇದು ಹೀಗೆ ನಡೆದು ಒಂದುವಾರ ಕಳೆದ ಮೇಲೆ ಕೆಲವು ಜನರು ಅವರ ದಾರಿಯನ್ನು ಪತ್ತೆಮಾಡಿ ಪೊಲೀಸಿನವರು ಇವರ ಸಹಾಯಕ್ಕೆ ಬರುವದಕ್ಕೆ ಮುಂಚೆ ಅವರನ್ನು ಹಿಡಿದರು ವಿಚಾರಣೆಯಿಂದ ಇವರಿಗೆ ಸಜಾ ಆಯಿತು ಇವರು ಸಜಾಶಿಕ್ಷೆಯನ್ನನುಭವಿಸುವ ಕಾಲದಲ್ಲಿ ಇವರ ಹೆಂಗಸರು ಪಾದ್ರಿಗಳೆಡೆಗೆ ಬಂದು ಸಹಾಯ ಬೇಡುವವರಾದರು ಪಾದ್ರಿಗಳು ಅವರಿಗೆ ಸಹಾಯ ಮಾಡಿ ಅವರ ಗಂಡಸರೂ ಅವರೂ ಮಾಡುತ್ತಿರುವ ಕಾರ್ಯಗಳು ತಪ್ಪಾಗಿಯೂ ಪಾಪಕೃತ್ಯಗಳಾಗಿಯೂ ಇವೆ ಎಂದು ಬೋಧಿಸಿ ರಕ್ಷಕನಾದ ಕ್ರಿಸ್ತನ ಸತ್ಯೋಪದೇಶವನ್ನು ಅವರಿಗೆ ಬೋಧಿಸುತ್ತಿದ್ದರು ಹೀಗೆ ಆ ಹೆಂಗಸರು ಪಾದ್ರಿಗಳ ಬಳಿಗೆ ಬಂದು ಅವರ ಬೋಧೆಯನ್ನು ಕೇಳುವದು ಸಾಧಾರಣವಾಗಿ ನಡೆಯುತ್ತಲೇ ಇತ್ತು ಇದರಿಂದ ಅವರಿಗೆ ತಕ್ಕ ಜ್ಞಾನಿಕೆಯು ಬಂದು ಸನ್ಮಾರ್ಗಿಗಳಾಗಿ ಬದುಕುವದಕ್ಕೆ ಕ ...ಯಾಯಿತು ಇವರನ್ನು ನೋಡಿ ಅಲ್ಲಿಂದ ಎಂಟು ಹತ್ತು ಮೈಲಿಗಳ ದೂರದಲ್ಲಿದ್ದ ಇನ್ನೊಂದು ಗುಂಪಿನ ದೊಂಗದಾಸರಿ ವಾಂಡ್ಲು ತಮ್ಮ ಬಂಧುಗಳನ್ನು ಅನುಸರಿಸಿ ತಾವೂ ಸತ್ಯೋಪದೇಶವನ್ನು ಹೊಂದಬೇಕೆಂದು ಒಬ್ಬ ಕ್ರೈಸ್ತ ಬೋಧಕನನ್ನು ಕರೆ... ಒಂದು ಶಾಲೆಯನ್ನೇರ್ಪಡಿಸಿ ಅದರಲ್ಲಿ ತಮ್ಮ ಬಾಲಕರಿಗೆ ವಿದ್ಯಾಬುದ್ಧಿಗಳನ್ನೂ ಸತ್ಯೋಪದೇಶವನ್ನೂ ಕಲಿಸು

CHAMBERLAIN'S COUGH REMEDY.



ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

4 23

ಶೀತದ ಕೆಮ್ಮು, ಗಂಟ್ಲು ಗೂರೆನ್ನುವದು, ಹುಡಿಗೆಮ್ಮು, ನಾಯಿಗೆಮ್ಮು, ... ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯ ಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವದು ಪರಿಣಾಯ ... ರಕ್ತ ... ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವದನ್ನೂ ಕ್ಷೀಣ್ಮ ಬೀಳುವದನ್ನೂ ಹಿಂದಿ ಕವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವದು ಕಷ್ಟವಾಗಿದ್ದರೆ ಅದನ್ನು ಕೂಡಲೇ ... ಅಪಾಯಕರವಾದ ಕೆಮ್ಮಿನ ಪಟ್ಟವನ್ನು ಗಿಲ್ಲಿಸಿಬಿಡುತ್ತದೆ ಎಗೆ ಬರುಗುವಂಥಾ ಕಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ಶೀಘ್ರ ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲಿಲ್ಲೂ ಬಿಕರಿಯಾಗುವದು | ಸಣ್ಣ ಶೀಸೆಗೆ ೧ ರೂಪಾಯಿ | ದೊಡ್ಡ ಶೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 22

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಟರ್ಕಿ ಬಟ್ಟೆಗಳು ನಾವೂ ಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವದು ಗಜ ಒಂದಕ್ಕೆ ೫ ಆಣೆಯಿಂದ ೬| ರ ವರೆವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮಗುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್. ಬುಕ್ ಡಿಪ್ಪೋ, ಮೈಸೂರು

ನಿಮ್ಮ ಸ್ವಸ್ಥವಿಲ್ಲವೋ ?

ನನಗೆ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ ನನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೊ ... ಹಾಗೆ ...

ಕೆಲವು ದೇಶಗಳಲ್ಲಿ ... ಜನರು ಮಡಿದುಹೋಗುತ್ತಿದ್ದರು ಈಗಲಾದರೋ ಆ ದೇಶಗಳಲ್ಲಿ ... ಕಲೆದೋರುವದೂ ಇಲ್ಲ, ಜನಗಳು ಸಾಯುವದೂ ಇಲ್ಲ ಆಯಾ ದೇಶದ ಜನಗಳು ವಿದ್ಯಾವಂತರಾಗಿರುವದೇ ಇದಕ್ಕೆ ಕಾರಣವಾಗಿದೆ. ಅವರು ಜಾಡ ... ಕಾಲಗಳಲ್ಲಿ ವೈದ್ಯರು ಹೇಳಿದ ಪ್ರಕಾರ ನಡೆದುಕೊಳ್ಳುವರು

ಆ ದೇಶಗಳಲ್ಲಿ ಜನಗಳನ್ನು ಸಾಂಕ್ರಾಮಿಕವ್ಯಾಧಿಗಳಿಂದ ಕಾಪಾಡಲು ಕಲವು ಕಠಿಣವಾದ ಕಾನೂನುಗಳಿರುತ್ತವೆ ... ವ್ಯಾಧಿಯಿರುವ ರೋಗಿಯನ್ನು ... ಬೇರೆ ಇರಿಸುವರು ... ರೋಗಿಯು ... ಆಸ್ಪತ್ರೆಗೆ ... ರೋಗಿಯನ್ನು ... ವನ್ನು ... ರೋಗಿಯನ್ನು ... ಆಸ್ಪತ್ರೆಗೆ ... ತಾವೆ ... ಕೊಳ್ಳುವರು ...

... ಪ್ಲೇಗು ... ಶೀ ...

ಚ ... ತರುವಾಯ ಸಹ ... ಬರೆಹ

ತೀರ್ಥಹಳ್ಳಿ

... ಎ ... ಸ್ಕೂಲ್ ಹೆಡ್ ಮಾಸ್ಟರ್ ... ಶ್ರೀ ... ಈ ಪತ್ರಿಕೆಯ ... ಅಪರಿಚಿತ ... ಮತ ... ಹಬ್ಬದ ... ಚಂದಾ ... ಎಂಪೈರ್ ಡೇ ದಿವಸದ ಸಂತೋಷವನ್ನು ಸುಖವಾಗಿ ಕಳೆಯುವದಕ್ಕೆ ಬಾಲಕರಿಗೆ ಕೆಲವು ಆಟಪಾಟ ವಿನೋದಗಳನ್ನು ಕಲ್ಪಿಸಿ ಸಾಯಂಕಾಲ ೪ ಘಂಟೆಗೆ ಬಾಲಕರೆಲ್ಲ ... ಆಟಗಳಿಗೆ ... ಸರ್ಕಾರ ... ದಲ್ಲಿರುವ ಮೈದಾನದಲ್ಲಿ ಸೇರಿಸಿದರು ... ದೊಡ್ಡಮನುಷ್ಯರಿಗೆ ... ಕೊಟ್ಟದ್ದರಿಂದ ಅವರೆಲ್ಲಾ ... ಸಮಸ್ತರೂ ಮೈದಾನಕ್ಕೆ ... ತಮ್ಮ ತಮ್ಮ ಸೀರೆಗಳನ್ನು ಅಲಂಕರಿಸಿದರು ... ಮನೋಹರವಾಗಿ ಬಾರಿಸಲ್ಪಟ್ಟಿತು ... ಬಾಲಕರು ಆಟಗಳಿಗೆ ... ದರು ... ಆಟಗಳಲ್ಲಿ, ಓಡುವದು ... ಕುಪ್ಪಳಿಸುವದು ... ಮಡಕೆ ... ಹಿಡಿಯುವದು ಹಗ್ಗದ ಎಳೆದಾಟ ವಗೈರೆ ಆಟಗಳು ಮನೋಹರವಾಗಿದ್ದವು ಕೆಲವು ಬಾಲಕರು ತಮ್ಮ ತಮ್ಮ ... ಮಕ್ಕಳನ್ನು ಹೊತ್ತುಕೊಂಡು ಓಡಿದ್ದೂ ಕೆಲವು ದೂರ ಓಡಿ ... ಹಣ್ಣುಗಳನ್ನು ತಿಂದು ತಮ್ಮ ತಮ್ಮ ಪೋಷಾಕುಗಳನ್ನು ಬದಲಾಯಿ... ಇಕ್ಕಟ್ಟಿನ ... ಸುಸಿದು ಒಬ್ಬರಿಗಿಂತ ಒಬ್ಬರು ಚಮತ್ಕಾರವನ್ನು ತೋರಿಸಿದ್ದು ನೋಡುವವರಿಗೆ ಹೃದಯಾನಂದವಾಗಿತ್ತು ಕೊನೆಯಲ್ಲಿ ... ಗೆದ್ದವರಿಗೆ ... ಅಮಲ್ದಾರರು ಬಹುಮಾನಗಳನ್ನು ಹಂಚಿದರು ಅಷ್ಟಕ್ಕೆ ಸಾಯಂಕಾಲವಾಗಲು ಎಲ್ಲರೂ ಅವರವರ ಮನೆಗಳಿಗೆ ತೆರಳಿದರು

... ಟಿಪ್ತ ... ರಿವರ್ಸ್ ... ಎಂಬ ಇಂಗ್ಲೀಷ್ ... ರಾಜಗೋಪಾಲಯ್ಯಂಗಾರರಿಂದ, ಮತ್ತು ಇಂಗ್ಲೀಷಿನಲ್ಲಿ ಮರ್ಚೆಂಟ್ ಆಫ್ ವೆನಿಸ್ ಎಂಬ ನಾಟಕದ ಕೋರ್ಟು ಸೀನು, ಕನ್ನಡದಲ್ಲಿ ಒಂದು ಸಂವಾದವೂ ಜನಗಳ ಮನಸ್ಸಂತೋಷಪಡಿಸಿದವು

ನಂತರ ಸಭಾಧ್ಯಕ್ಷರು ರಾಜಭಕ್ತಿ ಮತ್ತು ಪ್ರಜೆಗಳ ಕರ್ತವ್ಯ ಮುಂತಾದ ಸಂಗತಿಗಳನ್ನು ಕುರಿತು ಸಲಲಿತವಾಗಿ ಉಪನ್ಯಾಸಮಾಡಿದರು ನಂತರ ಸಾರ್ವಭೌಮರಿಗೂ ಮತ್ತು ಮಹಾರಾಜರವರಿಗೂ ಶ್ರೇಯಪ್ರಾರ್ಥನಾರೂಪವಾದ ಮಂಗಳಗಾನಗಳು ಮಾಡಲ್ಪಟ್ಟವು ನಂತರ ಹುಡುಗರಿಗೆ ಮಿಠಾಯಿ ಹಂಚಲ್ಪಟ್ಟಿತು ಮಹಾರಾಜರವರ ... ತಾಲ್ಲೂಕ್ ಆಫೀಸರುಗಳೂ ಮತ್ತು ಗ್ರಾಮಸ್ಥರೂ ಐಕಮತ್ಯದಿಂದ ನಡಿಸಿದರು ಇದೇ ಪ್ರಕಾರ ಇತರ ತಾಲ್ಲೂಕಿನವರೂ ಐಕಮತ್ಯವುಳ್ಳವರಾಗಿರುವರೆಂದು ನಂಬಿದ್ದೇವೆ

ಅರಸೀಕೆರೆ ತಾಲ್ಲೂಕು ದೊಡ್ಡಮೇಟಿಕುರ್ಕೆ

ಮೇ ತಿಂಗಳು ೩೦ನೇ ತಾರೀಖು ಭಾನುವಾರ ಶ್ರೀಮನ್ ಮಹಾರಾಜಾಧಿರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದೂರ್ ಜಿ. ಸಿ. ಎಸ್. ಐ ಮಹಾಸ್ವಾಮಿಯವರ ವರ್ಷವರ್ಧಂತಿ ಮಹೋತ್ಸವದ ಉದ್ದೇಶ ರಾಜಭಕ್ತಿ ನಿಷ್ಠರಾದ ಪ್ರಜೆಗಳು ಶ್ರೀಮನ್‌ಯವರಿಗೆ ತಮ್ಮ ಸಂತೋಷಾತಿಶಯವನ್ನು ತೋರ್ಪಡಿಸಲು ಜಮೀನ್‌ದಾರ್ ಮ ... ಹಿರಿಯಣ್ಣನವರ ಪ್ರೋತ್ಸಾಹದಮೇಲೆ ಗವರ್ನಮೆಂಟ್ ಸ್ಕೂಲ್ ಹಾಲಿನಲ್ಲಿ ಸಾಯಂಕಾಲ ೬ ಘಂಟೆಗೆ ಸಭೆ ಕೂಡಿದರು ಸ್ಕೂಲ್ ಕಟ್ಟಡವು ಮನೋಹರವಾದ ತಳಿರು ತೋರಣಗಳಿಂದಲೂ, ಮೊಲ್ಕಟ್ಟುಗಳಿಂದಲೂ ಶೃಂಗಾರವಾಗಿ ಅಲಂಕರಿಸಲ್ಪಟ್ಟಿತ್ತು ಹಾಲಿನಲ್ಲಿ ವ್ಯಾಕ್ಯಗಳು ಅಂದವಾಗಿ ಗೋಡೆಗೆ ನೇತುಹಾಕಲ್ಪಟ್ಟವು ಮುಂಭಾಗದ ಎದುರಿನಲ್ಲಿ ಅಲಂಕಾರವಾದ ಸಿಂಹಾಸನವನ್ನು ತಯಾರು ಮಾಡಿ ಶ್ರೀಮನ್ ಮಹಾರಾಜರವರ ತಸ್ವೀರನ್ನು ಇಟ್ಟು ಮನೋಹರವಾದ ಪುಷ್ಪಮಾಲಿಕೆಗಳಿಂದ ಅಲಂಕಾರ ಮಾಡಿದ್ದರು ಮಡಲಿ ... ಪತ್ರಿಕೆಗಳ ಮೂಲಕ ಬರತೋಕ್ತ ಪ್ರಕಾರ ಅನೇಕ ದೊಡ್ಡ ಮನುಷ್ಯರುಗಳು ಸಭೆಯನ್ನು ಅಲಂಕರಿಸಿದರು ಹಲ್ಲೂರು ಸ್ಕೂಲ್ ಮಾಸ್ಟರ್ ಮ|| ... ಕಲ್ಲಯ್ಯನವರು ಎದ್ದುನಿಂತು ಸಭೆಯಲ್ಲಿ ನೆರೆದಿರತಕ್ಕ ಸರ್ವರೂ ಶ್ರೀಮನ್‌ಯವರಿಗೆ ವಂದನೆಗಳನ್ನು ಅರ್ಪಿಸಿ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಬೇಕೆಂದು ತಿಳಿಸಿದರು ಸರ್ವರೂ ಅದಬ್ಬಿನಿಂದ ವಂದನೆಗಳನ್ನು ಅರ್ಪಿಸಿ ಕೂತರು ನಂತರ ಸ್ಕೂಲ್ ಮಾಸ್ಟರ್ ಕೆ ಕೃಷ್ಣಮೂರ್ತಿಯವರು ಎದ್ದು ಸಭೆಯವರಿಗೆ ವಂದಿಸಿ ಈ ದಿವಸ ಶ್ರೀಮನ್‌ಯವರ ವರ್ಷವರ್ಧಂತಿ ಮಹೋತ್ಸವದ ಸಂತೋಷ ಕಾಲದಲ್ಲಿ ನಮ್ಮಗಳ ರಾಜಭಕ್ತಿಯನ್ನು ಪ್ರದರ್ಶಿಸಲು ನೆರೆದಿರುವ ಸಭೆಗೆ ಶಾ|| ಮ ಹರಿ ... ನವರು ಅಧ್ಯಕ್ಷರಾಗಿ ಸಭೆಯ ... ವನ್ನು ನಡೆಸಿಕೊಡಬೇಕೆಂತ ಕೇಳಿದರು ಇದನ್ನು ಹೊಳಲ್ಕೆರೆ ಶ್ಯಾನುಭೋಗ್, ಸಾಹುಕಾರ್ ತೀರ್ಥರಾಮಯ್ಯನವರ ಮಕ್ಕಳು ಅನುಮೋದಿಸಿದರು ಸರ್ವರೂ ಒಪ್ಪಲು ಮ|| ರಾ|| ಹರಿಯಪ್ಪನವರು ಶ್ರೀಮನ್‌ಯವರ ತಸ್ವೀರಿನ ಎಡಭಾಗ

ಶಿಕಾರಿಪುರದ ತಾಲ್ಲೂಕು ... ಕೊಪ್ಪ

ಇಲ್ಲಿ ಮೇ ೩೦ನೇ ಸೋಮವಾರ ಎಡ್ವರ್ಡ್ ಸಾರ್ವಭೌಮರವರ ಎಂಪೈರ್‌ಡೇ ಮಹೋತ್ಸವವು ಬಾಯಿಸ್ ಸ್ಕೂಲ್ ಕಟ್ಟಡದಲ್ಲಿ ... ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಕನ್ನಡ ಮತ್ತು ಹಿಂದೂಸ್ತಾನಿ ಸ್ಕೂಲಿನ ಬಾಲಕ ಬಾಲಕಿಯರುಗಳು ಮುಂಭಾಗದ ಮೈದಾನದಲ್ಲಿ ಸಾಲುಸಾಲಾಗಿ ನಿಂತಿದ್ದರು ಮ ಅಸ್ಸಿಸ್ಟೆಂಟ್ ... ಮ ಪೋಲೀಸ್ ಜಮೇದಾರರು ಮೈ ಸಬ್ ಓವರ್‌ಸಿಯರ್ ಭದ್ರಸಿಂಗರವರು ಮೈ ಸ್ಕೂಲ್ ಮಾಸ್ಟರುಗಳು ಮ ಚೌಧಾಯಿ ಸೋಮರಾಯರು ವೊದಲಾದ ಬ್ರಾಹ್ಮಣ ದೊಡ್ಡಮನುಷ್ಯರು ಮ ... ಉಪ್ಪಶೆಟ್ಟಿ ವೊದಲಾದ ... ವರ್ತಕರು ... ದೊಡ್ಡಮನುಷ್ಯರು ದಯಮಾಡಿಸಿದ್ದರು ಆ ಕಾಲದಲ್ಲಿ ಕೆಲವು ... ಎತ್ತರವಾದ ಕಂಬದಲ್ಲಿ ಯೂನಿಯನ್ ಜಾಕ್ ಬಾವುಟವನ್ನು ... ಮೊದಲು ಎತ್ತಿದರು ವಿದ್ಯಾರ್ಥಿಗಳು ಚಕ್ರವರ್ತಿ ಸಾರ್ವಭೌಮರವರ ಮತ್ತು ಪ್ರಿನ್ಸ್ ಆಫ್ ವೇಲ್ಸ್‌ರವರ ... ವಾದ ... ಎಡ್ವರ್ಡ್ ... ಸಂಗೀತವನ್ನು ಹಾಡಿ, ಜಯಘೋಷ ಮೊದಲೆ, ಸರ್ವರೂ ವಂದಿಸಿದರು ಅನಂತರ ಮಧ್ಯಾಹ್ನ ೪ ಘಂಟೆಗೆ ಸ್ಕೂಲ್

ಗಳ ಸುಖವನ್ನೇ ಅವರು ಬಯಸುವರು. ಜನಗಳನ್ನು ಜಾಡ್ಯಗಳ ಹಾವಳಿಯಿಂದ ತಪ್ಪಿಸುವುದಕ್ಕೂ ಜನರ ಮೌಢ್ಯದಿಂದ ಆಜುಬಾಜಿನ ಜನಗಳಿಗೆ ರೋಗ ತಗಲದಂತೆ ನೋಡಿಕೊಳ್ಳುವುದಕ್ಕೂ ಸರಕಾರದವರು ಎಡಬಿಡದೆ ಕೆಲಸಮಾಡುತ್ತಿರುವರು.

ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ಮ್ಯುನಿಸಿಪಾಲಿಟಿಯವರು ಬಲಾತ್ಕಾರದಿಂದ ಜನಗಳಿಗೆ ಚುಚ್ಚು ಹಾಕಿಸುವ ಅಧಿಕಾರವನ್ನು ಪಡೆದಿರುತ್ತಾರೆ. ಇದಲ್ಲದೆ ಯಾರ ಮನೆಯಲ್ಲಾದರೂ ಅಂಟುಜಾಡ್ಯಗಳು ಕಾಣಿಸಿಕೊಂಡ ಪಕ್ಷದಲ್ಲಿ ಅಂಥಾ ಸಂಗತಿಯನ್ನು ಸದರಿ ಮನೆಯವರು ಸರಕಾರಕ್ಕೆ ತಕ್ಷಣವೇ ತಿಳಿಸಬೇಕಾಗಿದೆ. ಜನರು ಮೇಲ್ಕಂಡ ಕಾನೂನಿಗೆ ವಿಧೇಯರಾಗಬೇಕು. ಜನರ ಕ್ಷೇಮಕ್ಕೋಸ್ಕರವೇ ಅದು ಏರ್ಪಾಡಾಗಿರುವುದು. ಜನರೆಲ್ಲರೂ ಏಕೀಭವಿಸಿ ಸರಕಾರಕ್ಕೆ ಸಹಾಯಮಾಡುವುದಾದರೆ ಸಾಂಕ್ರಾಮಿಕ ಜಾಡ್ಯಗಳು ಮೈಸೂರು ಸಂಸ್ಥಾನವನ್ನು ಬಿಟ್ಟು ತೊಲಗುವವು. ಮೈಸೂರು ದೇಶಕ್ಕೆಲ್ಲಾ ಸುಖವು ಪ್ರಾಪ್ತವಾಗುವುದು.

ಸತ್ಯವಾದ ಒಂದೇ ಮತವು

ಕಲ್ಕತ್ತಾ ಪಟ್ಟಣದಲ್ಲಿ ಜರುಗಿದ ಮತಗಳ ಸಮ್ಮೇಳನದಲ್ಲಿ ದರ್ಭಾಂಗ ಮಹಾರಾಜರು—ಕಡೆಯಲ್ಲಿ ? ನೇ ಒಂದು ಮತವು ಉಳಿಯುವದೆಂತಲೂ ಆ ಮತವು ದೇವರ ಮೇಲೆ ಭಕ್ತಿಪುರಸ್ಸರವಾದ ಪ್ರೀತಿಯನ್ನೂ ಜನರೊಳಗೆ ಪ್ರೀತಿಪುರಸ್ಸರವಾದ ಸಹೋದರಭಾವವನ್ನೂ ಬೋಧಿಸುವದೆಂತಲೂ ತಿಳಿಸಿದ್ದರಷ್ಟೆ. ಮೇಲ್ಕಂಡ ಬೋಧನೆಯನ್ನು ಇನ್ನೂ ಸಂಗ್ರಹಿಸಿ ಹೇಳುವುದಾದರೆ ದೇವರು ಎಲ್ಲರಿಗೆ ತಂದೆಯಾಗಿರುತ್ತಾನೆಂತಲೂ ಮನುಷ್ಯರು ಒಬ್ಬರಿಗೊಬ್ಬರು ಸಹೋದರರಂತಿರುತ್ತಾರೆಂತಲೂ ನಾವು ತಿಳಿಯತಕ್ಕದ್ದು. ನಮ್ಮನ್ನು ಸೃಷ್ಟಿಸಿದ ದೇವರು ಅರೂಪಿಯೂ ಅಗೋಚರನೂ ಸದಾ ಇರುವವನೂ ಸರ್ವಾಂತರ್ಯಾಮಿಯೂ ಆಗಿರುವ ನಮ್ಮ ತಂದೆಯಾಗಿರುತ್ತಾನೆ. ದೇವರಿಗೆ ನಾವು ಪ್ರೀತಿ, ಮರ್ಯಾದೆ ಮತ್ತು ವಿಧೇಯತೆ ಇವುಗಳನ್ನು ಕಾಣಿಕೆಯಾಗಿ ಅರ್ಪಿಸಬೇಕಾಗಿದೆ. ನಮ್ಮ ಜೊತೆ ಸೃಷ್ಟಿಗಳೆಲ್ಲರನ್ನು ನಾವು ಒಂದೇ ಕುಟುಂಬಕ್ಕೆ ಸೇರಿದ ಸಹೋದರರಂತೆ ಭಾವಿಸಿ ಅವರನ್ನು ಕೈಲಾದಮಟ್ಟಿಗೂ ಸುಖವಂತರನ್ನಾಗಿ ಮಾಡುವುದಕ್ಕೆ ಪ್ರಯತ್ನಿಸಬೇಕು. ನಮ್ಮೊಳಗೆ ಜಾತಿಭೇದವಾಗಲೀ ಕುಲಭೇದವಾಗಲೀ ಇರಕೂಡದು. ನಾವು ಅಸ್ವಸ್ಥತೆಯಲ್ಲಿರುವವರಿಗೆ ಆದರಿಸುತ್ತಲೂ ಬಡವರಿಗೆ ಸಹಾಯ ಮಾಡುತ್ತಲೂ ಎಲ್ಲರನ್ನು ಪವಿತ್ರರನ್ನಾಗಿಯೂ ಒಳ್ಳೆಯವರನ್ನಾಗಿಯೂ ಮಾಡುವುದಕ್ಕೆ ಪ್ರಯತ್ನಿಸುತ್ತಲೂ ಬರಬೇಕು.

ಹಾಗಾದರೆ ಮೇಲ್ಕಂಡ ಕಾರ್ಯಗಳನ್ನೆಲ್ಲಾ ಎಡಬಿಡದೆ ಸಾಧಿಸಕೊಂಡು ಬರತಕ್ಕ ಮತವು ಲೋಕದಲ್ಲಿರುವುದೇ ಎಂಬದಾಗಿ ಕೆಲವರು ಪ್ರಶ್ನೆ ಮಾಡುವರು. ಖಂಡಿತವಾಗಿಯೂ ಅಂಥಾ ಮತವು ಭೂಲೋಕದಲ್ಲಿ ಇದೆಯೆಂದು ಹೇಳುವೆವು. ಒಂದು ವೇಳೆ ಅದನ್ನು ಅನುಸರಿಸತಕ್ಕ ಜನಗಳು ಅದರ ತತ್ವಗಳ ಹಾಗೆಯೇ ನಡೆಯದಿರಲೂಬಹುದು. ಆದರೆ ಆ ಮತವು ಇರುವುದಂತೂ ಸತ್ಯ. ಎರಡು ಸಾವಿರ ವರುಷಗಳ ಹಿಂದೆ ಯೇಸುಕ್ರಿಸ್ತನು ನಮ್ಮನ್ನು ಸೃಷ್ಟಿಸಿದ ದೇವರು ನಮ್ಮ ತಂದೆಯಾಗಿರುತ್ತಾನೆಂತಲೂ ನಾವೆಲ್ಲರೂ ಒಬ್ಬರಿಗೊಬ್ಬರು ಸಹೋದರರಾಗಿರುತ್ತೇವೆಂತಲೂ ಬೋಧಿಸಿದನು. ಅತನು ದೇವರ ಒಳ್ಳೆಯ ಮಗ ಎಂದು ದೇವರ [illegible] ನೆರವೇರಿಸುತ್ತಿದ್ದನು ... ಮನುಷ್ಯನಾಗಿ ... ಅತನು ನಡೆದ ... ಪಾಪ ... ಅಂಥವನು ಇವುಗಳಿಗಿಂತ ... ಶ್ರೇಷ್ಠನಾಗಿರುವ ... ಸಂಪಾದಿಸಿಕೊಳ್ಳಬಹುದು. ಯಾವನು ತನ್ನ ನಿಜವಾದ ... ದೊರೆಕಿರುವ ... ರೀತಿಯಲ್ಲಿ ಕಾರ್ಯಗತ ... ಅ ಫಲ ... ನಡತೆಯನ್ನು ಅಭಿವೃದ್ಧಿಪಡಿಸುತ್ತಿರುವನು. ಅನೇಕರು ... ಬದಲಾಗಿ ತಮ್ಮ ಉತ್ತಮವಾದ ನಡತೆ ... ಭಾವಿಸುವರು. ... ದೊಡ್ಡ ಮನಸ್ಸನು— ... ಒಂದು ಒಳ್ಳೆ ನಡತೆಯೇ ಶ್ರೇಷ್ಠವೆಂದು ತಿಳಿದಿರುತ್ತಾನೆ. ವಿದ್ಯೆಯಾಗಲೀ ಇಲ್ಲವೆ ಹಣವನ್ನಾಗಲೀ ... ನಮ್ಮ ಅರ್ಥವಲ್ಲ. ಆದರೆ ಇವೆಲ್ಲವುಗಳಿಗಿಂತ ನಡತೆಯೇ ಶ್ರೇಷ್ಠವಾದುದೆಂದು ತಿಳಿಸುವೆವು. ಅನೇಕ ಸಂದರ್ಭಗಳಲ್ಲಿ ಹೆಚ್ಚಿನ ವಿದ್ಯೆಯನ್ನು ಪಡೆದಿರುವವರು ಕೇವಲ ದುಷ್ಟರಾಗಿರುವರೆಂದು ಕಂಡು ಬರುತ್ತದೆ. ಒಬ್ಬನು ನಾನಾ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದರೂ ಅವನು ಯೋಗ್ಯತೆ, ಚಿತ್ತಶುದ್ಧಿ, ಸತ್ಯತೆ ಇವುಗಳನ್ನು ಪಡೆಯದಿದ್ದರೆ ಅವನ ಪಾಂಡಿತ್ಯದಿಂದ ಪ್ರಯೋಜನವಿಲ್ಲ. ಅವನು ಎಲ್ಲರಿಗಿಂತಲೂ ಕೀಳಾದವನಾಗಿರುತ್ತಾನೆ.

ಅನೇಕರು ಬಡತನದಲ್ಲಿ ಒಳ್ಳೆಯ ನಡತೆಯನ್ನು ಸಂಪಾದಿಸುವುದು ಕಷ್ಟವೆಂದು ಹೇಳುತ್ತಾರೆ. ಆದರೆ ಇದು ಒಪ್ಪತಕ್ಕ ಸಂಗತಿಯಲ್ಲ. ಅನೇಕ ಸಂದರ್ಭಗಳಲ್ಲಿ ಹಣವು ಮನುಷ್ಯನನ್ನು ನಾನಾ ಕೇಡುಗಳಿಗೆ ಗುರಿಮಾಡಿರುತ್ತದೆ. ಘನವಾದ ಉದ್ದೇಶ ನಡತೆ ಇವುಗಳಿಲ್ಲದವನ ಕೈಯಲ್ಲಿ ಹಣವಿರುವುದು ಆತನಿಗೂ ಇತರರಿಗೂ ಕೇವಲ ಅಪಾಯಕರವೆಂದು ತಿಳಿಯತಕ್ಕದ್ದು. ಎದರನವು ಯೋಗ್ಯವಾದ ನಡತೆಯನ್ನು ... ಸರಿಯಾದ ... ತಿಯಾಗಿರುತ್ತದೆ. ಮತಪರಿಷ್ಕಾರಕನಾದ ... ಸಾಯುವಾಗ ಅವನ ಹತ್ತಿರ ಯಾವ ಆಸ್ತಿಯೂ ಇರಲಿಲ್ಲ. ಆದರೆ ಅವನಲ್ಲಿದ್ದ ನಡತೆಯು ಯೂರೋಪ್ ದೇಶದಲ್ಲೆಲ್ಲಾ ಅದು ತನಾದ ಕಾರ್ಯ ನಡೆಸಿತು. ಈಗಿನವರಿಗೂ ಅವನ ಹೆಸರು ಸುಪ್ರಸಿದ್ಧವಾಗಿರುತ್ತದೆ. ... ಮನುಷ್ಯನ ಜೀವಮಾನವನ್ನು ... ತಕ್ಕ ಸಾಹಿತವಾಗಿರುತ್ತದೆ. ಎಲ್ಲರೂ ಐಶ್ವರ್ಯವಂತರಾಗಬೇಕೆಂದು ಲೋಕವು ಕೋರುವುದಿಲ್ಲ. ಆದರೆ ಎಲ್ಲರೂ ಗುಣವಂತರಾಗಬೇಕೆಂದು ಲೋಕವು ಬಯಸುತ್ತದೆ. ನಡತೆಯನ್ನು ಅಭಿವೃದ್ಧಿಮಾಡಬೇಕಾದರೆ ನಮ್ಮ ಉದ್ದೇಶಗಳು ಘನವಾದವುಗಳಾಗಿರಬೇಕು. ಅನೇಕರು ತಪ್ಪಾದ ಉದ್ದೇಶಗಳಿಂದ ತಮ್ಮ ನಡತೆಯನ್ನು ಕೆಡಿಸಿಕೊಂಡಿರುತ್ತಾರೆ. ನಡತೆಯು ಸಮುದ್ರದ ಮೇಲೆ ತೇಲುತ್ತಿರುವ ಹಡಗಿನಂತಿರುತ್ತದೆ. ಹಡಗನಡೆಸುವ ಯಜಮಾನನು ತಿಳುವಳಿಕೆ ಇಲ್ಲದವನಾದರೆ ಹಡಗು ಬಿರುಗಾಳಿಗೆ ಸಿಕ್ಕಿ ನಾಶವಾಗುವುದು. ನಡತೆಯು ಸಹ ಹಡಗಿನಂತಿದ್ದು ಎಚ್ಚರಿಕೆಯಿಂದ ನಡೆಸಲ್ಪಡಬೇಕಾಗಿರುತ್ತದೆ. ಹಿಂದೂದೇಶವು ಪ್ರವರ್ಧಮಾನಕ್ಕೆ ಬರಬೇಕಾದರೆ ಅದರಲ್ಲಿನ ಜನಗಳು ಯೋಗ್ಯರಾಗಿರಬೇಕು.

ದೇಶೀಯರೆನಿಸತಕ್ಕ ಜನವು ದೇಶೀಯರಲ್ಲಿ ಹೆಚ್ಚಾದ ನಂಬಿಕೆಯನ್ನು ಹುಟ್ಟಿಸುವುದಿಲ್ಲ. ಜನಗಳು ಇಂಗ್ಲೀಷರಿಂದ ಸ್ಥಾಪಿಸಲ್ಪಟ್ಟ ಬ್ಯಾಂಕುಗಳಲ್ಲಿ ತಮ್ಮ ಹಣವನ್ನು ಹಾಕುವರೇ ವಿನಹ ದೇಶೀಯ ಬ್ಯಾಂಕುಗಳಲ್ಲಿ ಹಣವನ್ನು

ಇದೇ ತಿಂಗಳು ಇಪ್ಪತ್ತೈದನೇ ತಾರೀಖಿನಲ್ಲಿ ಮೈಸೂರು ಸಂಸ್ಥಾನದ ಚೀಫ್ ಕೋರ್ಟು ತೆರೆಯಲ್ಪಡುವುದು.

* * *

ಚಿಕ್ಕಮಗಳೂರು ಡಿ ಸರ್ಜನ್‌ರಾದ ಡಾ|| ಮುತ್ತುಸ್ವಾಮಿದಾಸರು ಬೈಸಿಕಲ್ ಗಾಡಿಯ ಮೇಲೆ ಹೋಗುತ್ತಿದ್ದಾಗ್ಗೆ ಅಕಸ್ಮಾತ್ತಾಗಿ ಕೆಳಗೆ ಬಿದ್ದುಬಿಟ್ಟರು. ಅವರ ಕೈಗಳಿಗೆ ಜಖಂ ಆಗಿರುತ್ತದೆ.

* * *

ಬ್ರಿಟಿಷ್ ರೆಸಿಡೆಂಟರಾದ ಮೇ। ಫ್ರೇಜರವರೂ ಅವರ ಪತ್ನಿಯವರೂ ಮೊನ್ನೆ ಬೆಂಗಳೂರಿಗೆ ದಯಮಾಡಿಸಿದರು. ಇವರು ವರ್ಷಂತಿ ಉತ್ಸವದ ಸಂತೋಷಕ್ಕಾಗಿ ಬರುವ ವಾರ ರಾಜಧಾನಿಗೆ ದಯಮಾಡಿಸುವರು.

* * *

ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಮಹಾರಾಣಿಯವರ ಶಿಲಾಪ್ರತಿಮೆಯ ಸುತ್ತಲೂ ಮನೋಹರವಾದ ಒಂದು ಉದ್ಯಾನವನವನ್ನು ಕಟ್ಟಿಸಬೇಕೆಂದು ಉಭಯ ಸರಕಾರದವರು ಸೇರಿ ಯೋಚಿಸುತ್ತಲಿರುವರು.

* * *

ಬೆಂಗಳೂರು ಆರ್‍ಯ ಬಾಲಿಕಾ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿಯರಾಗಿದ್ದ ಮಿಸ್ ರಾಜಗೋಪಾಲ್ ಎಂಬಾಕೆಗೆ ಸರಕಾರದವರು ಆಕೆಯ ಕೆಲಸವನ್ನು ಮೆಚ್ಚಿ ೨೪ ರೂಪಾಯಿಗಳಿಗೆ ಬದಲಾಗಿ ೪೦ ರೂಪಾಯಿಗಳ ಪೆನ್ಷನ್ ಕೊಡುವಂತೆ ಒಪ್ಪಿರುತ್ತಾರೆ.

* * *

ಕಳೆದ ಶನಿವಾರ ಬೆಂಗಳೂರು ಶ್ರೀನಿವಾಸಮಂದಿರದ ಸ್ತ್ರೀಯರ ಕೂಟದಲ್ಲಿ ಶ್ರೀಮತಿ ಮಹಾಲಕ್ಷ್ಮಮ್ಮನವರು, ಜವಾದ ಭಕ್ತಿಯನ್ನು ಕುರಿತು ಉಪನ್ಯಾಸವನ್ನು ಮಾಡಿದರು. ಉಪನ್ಯಾಸವನ್ನು ಕೇಳಿದ ಸಭಿಕರೆಲ್ಲಾ ಉಪನ್ಯಾಸಕರನ್ನು ಬಹಳವಾಗಿ ಕೊಂಡಾಡಿದರು.

* * *

ಮೈಸೂರಿನಿಂದ ಹಾಸನಕ್ಕೆ ರೈಲು ಹಾಕುವುದಕ್ಕೆ ಸರ್ವೆ ಮಾಡಬೇಕಾಗಿದೆಯೆಂತಲೂ ಸದರಿ ಸರ್ವೆ ಆಗುವಾಗ್ಗೆ ಸರ್ವೆ ಅಧಿಕಾರಿಗಳಿಗೆ ಕಾನೂನು ಪ್ರಕಾರ ಎಲ್ಲಾ ತರವಾದ ಸಹಾಯಗಳನ್ನು ಕಲ್ಪಿಸಿಕೊಡುತ್ತಿದ್ದಾಗಿಯೂ ಮೈಸೂರು ಸರಕಾರದವರು ಹುಕುಂ ಕೊಟ್ಟಿರುತ್ತಾರೆ.

* * *

ಈ ವರುಷದ ಅಂತ್ಯದಲ್ಲಿ ಇಂಡಿಯಾ ದೇಶದ ವೈಸರಾಯರು ಮೈಸೂರು ಸಂಸ್ಥಾನಕ್ಕೆ ಬರುವರಷ್ಟೆ. ಅವರು ಬಂದಾಗ್ಗೆ ಬೆಂಗಳೂರಿನಲ್ಲಿ ಕಟ್ಟುತ್ತಿರುವ ತಾತಾರವರ ವಸ್ತುವಿಜ್ಞಾನಶಾಸ್ತ್ರದ ಕಾರ್ಖಾನೆಯನ್ನೂ, ರಾಜಧಾನಿಯಲ್ಲಿ ಸ್ಥಾಪಿತವಾಗುವ ಲೇಟ್ ಮಹಾರಾಜರ ಪ್ರತಿಮೆಯನ್ನೂ ಪ್ರತಿಷ್ಠಿಸುವರು.

* * *

ಸನ್ ೧೯೦೯ ನೇ ಜೂನ್ ಮಾಹೆ ತಾರೀಖು ೧೦ ರಿಂದ ಈ ರಾಜಧಾನಿಗೆ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಬರತಕ್ಕ ಜೈನ ವಿದ್ಯಾರ್ಥಿಗಳಿಗೆ ಭೋಜನವೇ ಮೊದಲಾದ ಕೆಲವು ಅನುಕೂಲ್ಯಗಳನ್ನು ಸದ್ಯದಲ್ಲಿ ಮೋತಿಖಾನೆ ಲಕ್ಷ್ಮೀಪತಿಶೆಟ್ಟಿಯವರ ಛತ್ರದಲ್ಲಿ ಕಲ್ಪಿಸಿರುತ್ತಾದ್ದರಿಂದ ಬರಲು ಇಷ್ಟಪಡುವವರು ಸೆಕ್ರೆಟರಿಗಳಾದ ಮು ರಾ ಮೋತಿಖಾನೆ ಲಕ್ಷ್ಮೀಪತಿಶೆಟ್ಟಿಯವರ ಅಳಿಯಂದಿರು ಚನ್ನಪ್ಪನವರಿಗೆ ಅರ್ಜಿ ಫಾರಮನ್ನು ಬರೆದು ಕಳುಹಿಸಬೇಕು. ಇನ್ನಾವತ್ತು ವಿಶೇಷ ಸಂಗತಿಗಳನ್ನು ತಿಳಿಯಬೇಕಾದರೂ ಮೇಲ್ಕಂಡ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು.

* * *

ರಾಜಧಾನಿಯಲ್ಲಿ ವರ್ಷಂತಿ ಉತ್ಸವಕ್ಕೆ ಬರುವುದಕ್ಕಿರುವ ಯೂರೋಪಿಯನ್ ಅತಿಥಿಗಳಿಗೆ ಅಪ್ಸರ್ ಮತ್ತು ಲೋವರ್ ಲೇಡೆಂಸಿ ಬಂಗಲೆಗಳು ...

... ಹದ ಉಂಡೆ ... ಮಳೆ ಬಿದ್ದರೆ ... ಆಳ ... ಸೇರುತ್ತವೆಂದು ... ಇದ್ದರೆ.

... ಭೂಮಿಯ ಮೇಲೆ ... ಅಳ ಮಣ್ಣು ಉಪ್ಪು ... ಬಿಟ್ಟರೆ ಭೂಮಿಯು ಒಣಗಿರುವ ತೇವ ... ಎಷ್ಟು ಜಾಗ್ರತೆಯಲ್ಲಿ ... ಅಷ್ಟು ಜಾಗ್ರತೆಯಲ್ಲಿ ಅಷ್ಟು ಜಾಗ್ರತೆಯಲ್ಲಿ ... ಸಾಧಕವಾಗಿ ಅರುತ್ತದೆ. ಈ ವಿಷಯ ರೈತರು ಮುಖ್ಯವಾಗಿ ಮನಸ್ಸಿನಲ್ಲಿ ಜ್ಞಾಪಕವಿಟ್ಟಿರಬೇಕಾದದ್ದು. ಏತಕೆಂದರೆ ಉತ್ತ ಭೂಮಿಯ ಮೇಲೆ ಮಳೆ ಬಿದ್ದು ... ನೇಗಿಲಿನಿಂದ ಕೆರದು ಬಿಟ್ಟರೆ ಆ ಜಮೀನಿನ ತೇವವು ಜಾಗ್ರತೆಯಾಗಿ ಆರುವುದಿಲ್ಲ. ಈ ವಿಷಯ ನಮ್ಮ ರೈತರಿಗೆ ಸ್ಪಷ್ಟವಾಗಿ ತಿಳಿಯದೇ ಇದ್ದಾಗ್ಯೂ ಸಾಮಾನ್ಯವಾಗಿ ಆಚರಣೆಯಲ್ಲಿ ತಂದಿರುತ್ತಾರೆ. ... ಸಾಮಾನ್ಯವಾಗಿ ಅರಿದ ಮೇಲೆ ರೈತರು ಹರಗುವುದರಿಂದ ... ಇಂಚು ... ಭೂಮಿಯು ... ಒಳಗಿನ ತೇವವನ್ನು ಆರುವುದಕ್ಕೆ ಅವಕಾಶ ಕೊಡುವುದಿಲ್ಲ. ಇದರಿಂದಲೇ ರೈತರು ಹೊಲಗಳನ್ನು ಹರಗುವುದು ಅತ್ಯಾವಶ್ಯಕವೆಂದು ಹೇಳುತ್ತಾರೆ. ಇದಲ್ಲದೆ ಹರಗುವುದರಿಂದ ಸಸಿಗಳ ಬೇರುಗಳು ನಾಲ್ಕು ಕಡೆಗೂ ಹರಿಯುವುದಕ್ಕೆ ಭೂಮಿಯು ಮೃದುವಾಗುತ್ತದೆ. ಮತ್ತು ಬೇರುಗಳಿಗೆ ವಾಯು, ಬೆಳಕು, ರವಿ, ತಗಲುವುದಕ್ಕೆ ಅನುಕೂಲವಾಗುತ್ತೆ. ಇದರಿಂದ ಬೇರುಗಳು ಚೆನ್ನಾಗಿ ವೃದ್ಧಿ ಹೊಂದಿ ಸಸಿಗಳಿಗೆ ಭೂಮಿಯಲ್ಲಿರುವ ಸಾರವನ್ನು ಪೋಷಣವಾಗಿ ಒದಗಿಸಿ ಕೊಡುತ್ತೆ.

ವಿ ರಾಘವಾಚಾರ್ ಅಡ್ವೊಕೇಟ್

ಸಿಂಬೆಗಿಡದ ವ್ಯವಸಾಯ

ಸಿಂಬೆ ಗಿಡಗಳನ್ನು ಹಾಕುವುದಕ್ಕೆ ಜೂನ್‌ನಿಂದ ಡಿಸೆಂಬರು ತಿಂಗಳವರೆಗೆ ಒಳ್ಳೆಯ ಸಮಯ ಪರಂತು ಈ ಮಧ್ಯ ಎಷ್ಟು ಜಾಗ್ರತೆಯಾಗಿ ಹಾಕಿದರೆ ಅಷ್ಟೂ ಅನುಕೂಲ. ನೆಲವನ್ನು ಚೆನ್ನಾಗಿ ಅಗೆದು ಸುತ್ತಲ ಜಮೀನಿಗಿಂತ ಸ್ವಲ್ಪ ಎತ್ತರವಾಗಿ ಸಣ್ಣ ಸಣ್ಣ ಪಾತಿಗಳನ್ನು ಮಾಡಿಕೊಳ್ಳಬೇಕು. ಸಸಿಗಳು 1½ ಅಥವಾ 1½ ಅಡಿ ಉದ್ದ ಬೆಳೆದ ಮೇಲೆ ಅವುಗಳನ್ನು ಕಿತ್ತು ಬೇರೆ ಸ್ಥಳಗಳಲ್ಲಿ ನಾಟಬಹುದು. ಅವುಗಳನ್ನು ಅಗೆದಿಂದ ಬಹಳ ಹುಷಾರಾಗಿ ಎಷ್ಟು ಸಾಧ್ಯವೋ ... ಬೇರುಗಳಿಗೆ ನೀರು ಹಾಕುತ್ತಿದ್ದು ಅವು ಒಣಗದಂತೆ ನೋಡಿಕೊಳ್ಳಬೇಕು. ಸಸಿಗಳನ್ನು ನೆಡುವುದರಲ್ಲಿ ಅವು ಅಗೆಗಳಲ್ಲಿ ಎಷ್ಟು ಆಳ ಬೇರು ಬಿಟ್ಟಿದ್ದವೋ ಅಷ್ಟು ಆಳದಲ್ಲಿ ಅಥವಾ ಇನ್ನೂ ಸ್ವಲ್ಪ ಆಳವಾಗಿ ನೆಟ್ಟು ಪಕ್ಕಗಳಲ್ಲಿನ ಸಣ್ಣ ಬೇರುಗಳನ್ನು ನೆಲದಲ್ಲಿ ಹರಡಿ ಮಣ್ಣು ಮುಚ್ಚಿ ಚೆನ್ನಾಗಿ ಕೆಳಕ್ಕೆ ಅದಮಬೇಕು. ನಂತರ ಪಾತಿಗಳಲ್ಲಿ ನೀರು ಸುತ್ತಲ ಮಣ್ಣನ್ನು ಹಾಕಿ ಪಕ್ಕದ ಜಮೀನಿಗಿಂತಲೂ ಎತ್ತರವಾಗಿ ಮಾಡಬೇಕು.

ದ ಅಥವಾ ಅದ ಬೆಳೆ ಸಾಧಾರಣ ಸಾಲಿನ ಬೆಳೆಯಲ್ಲಿ ಶೇಕಡಾ ೨೫ ರಷ್ಟಕ್ಕೆ ಮೀರದಂತೆ ಆಗಿದ್ದರೂ (ಅಂದರೆ ಸಾಧಾರಣ ೧೬ ಆಣೆ ಪೈಕಿ ೪ ಆಣೆಗೆ ಮೀರದಂತ ಬೆಳೆ ಆಗಿದ್ದರೂ) ಅರ್ಧ ಕಂದಾಯವನ್ನು ನಿಲ್ಲಿಸಿಬಿಟ್ಟು ಬಾಕಿ ಅರ್ಧವನ್ನು ವಸೂಲ್ಮಾಡಬೇಕು.

೫ ಖುಷ್ಕಿ ಜಮೀನಾಗಿ ವಿಂಗಡಿಸಲ್ಪಟ್ಟು ಸರ್ಕಾರದ ನೀರು ಉಪಯೋಗಿಸಿಕೊಳ್ಳುವುದಕ್ಕಾಗಿ ಅದರ ಮೇಲೆ ನೀರು ಸರದಿ ಕಂದಾಯವನ್ನು ತರೀ ಕಂದಾಯಕ್ಕೆ ಸೇರಿಸದೆ ಪ್ರತ್ಯೇಕವಾಗಿ ವಸೂಲಾಗುತ್ತಿದ್ದರೆ, ಅಂಥಾ ಜಮೀನುಗಳಿಗೆ ತರಿಯಾಗಿ ವಿಂಗಡಿಸಲ್ಪಟ್ಟು ತರಿ ಕಂದಾಯ ತೆರುವ ಜಮೀನುಗಳಿಗೆ ತೋರಿಸುವಂಥಾ ರಿಯಾಯಿತಿಗಳನ್ನು ತೋರಿಸಬೇಕು.

೬ ಬಾಗಾಯತು ಜಮೀನೆಂತ ವಿಂಗಡಿಸಿದ ಜಮೀನುಗಳ ಕಂದಾಯ — ಬಾಗಾಯತು ಜಮೀನುಗಳೆಂತ ತರಗತಿ ವಿಂಗಡಿಸಿರುವ ಜಮೀನುಗಳಲ್ಲಿ ಸಾಮಾನ್ಯವಾಗಿ ತರಿ ಫಸಲನ್ನು ಇಡುತ್ತಾ ಇದ್ದರೆ, ಅಂಥಾ ಜಮೀನುಗಳಿಗೆ ತರಿ ಜಮೀನುಗಳಿಗೆ ಮೇಲೆ ತೋರಿಸಿರುವ ರಿಯಾಯಿತಿಯನ್ನೇ ತೋರಿಸತಕ್ಕದ್ದು.

೭ ಅಡಿಕೆ ಮರಗಳಾಗಲಿ ತೆಂಗಿನ ಮರಗಳಾಗಲಿ ಅಥವಾ ಅವುಗಳ ಫಸಲಾಗಲಿ ಬಹಳವಾಗಿ ನಷ್ಟವಾಗಿದ್ದರೆ, ಡೆಪ್ಯುಟಿ ಕಮಿಷನರು, ಅಂಥಾ ಜಮೀನಿನ ಅರ್ಧ ಕಂದಾಯದ ವಸೂಲಾತಿಯನ್ನು ಕೆಲವು ಕಾಲ ನಿಲ್ಲಿಸಬಹುದು. ಇದಕ್ಕೆ ಕಾರಣಗಳನ್ನು ರಿಕಾರ್ಡು ಮಾಡಬೇಕು.

೮ ಲೋಕಲ್ ಸೆಸ್ಸುಗಳು — ಕಂದಾಯವನ್ನು ಮಾಫ್ ಮಾಡಿದ ಮಾತ್ರಕ್ಕೆ ಲೋಕಲ್ ಸೆಸ್ಸನ್ನು ಮಾಫ್ ಮಾಡಕೂಡದು. ಲೋಕಲ್ ಸೆಸ್ಸುಗಳನ್ನು ಮಾಮೂಲ್ ಮೇರೆಗೆ ಒಟ್ಟು ಕಂದಾಯದ ಮೇಲೆ ವಸೂಲ್ಮಾಡಬೇಕು (ಮಾಫ್ ಮಾಡಿದ ಭಾಗದ ಕಂದಾಯದ ಮೇಲೂ ಈ ಸೆಸ್ಸನ್ನು ವಸೂಲ್ಮಾಡಬೇಕು), ಈ ಸೆಸ್ಸುಗಳ ವಸೂಲಾತಿಯನ್ನು ಕೆಲವುಕಾಲ ನಿಲ್ಲಿಸಿ ರಿಯಾಯಿತಿ ತೋರಿಸುವುದು ಅವಶ್ಯಕವೆಂದು ಡೆಪ್ಯುಟಿ ಕಮಿಷನರಿಗೆ ತೋರಿದರೆ ಅಂಥಾ ವಿಶೇಷ ಸಂದರ್ಭಗಳಲ್ಲಿ ಮಾತ್ರ ಕೆಲವುಕಾಲ ವಸೂಲಾತಿಯನ್ನು ನಿಲ್ಲಿಸಬಹುದು.

೯ ಮೈನರ್ ಯಾ ಚಿಲ್ಲರೆ ಇನಾಂ ಜಮೀನುಗಳು — ಕಂದಾಯ ವಸೂಲಾತಿಯನ್ನು ಕೆಲವು ಕಾಲ ನಿಲ್ಲಿಸಿರುವ ವಿಚಾರದಲ್ಲಿಯೂ ಕಂದಾಯವನ್ನು ಮಾಫ್ ಮಾಡುವ ವಿಚಾರದಲ್ಲಿಯೂ, ಕೊಟ್ಟಿರುವ ಮೇಲ್ಕಂಡ ಹುಕುಮುಗಳು, ಸಂಪೂರ್ಣ ಕಂದಾಯ ದಾಖಲಾದ ಚಿಲ್ಲರೆ ಇನಾಮು ಜಮೀನುಗಳಿಗೂ ಅಥವಾ ಸರ್ವೆ ಸೆಟ್ಲ್‌ಮೆಂಟಿನಲ್ಲಿ ಬೆರಿ ನಿಷ್ಕರ್ಷೆಯಾದ ಮೊಬಲಗಿಗೆ ಸಮಾನವಾದ ಅಥವಾ ಹೆಚ್ಚಾದ ಕ್ವಿಟ್‌ರೆಂಟ್ ಯಾ ಜೋಡಿ ದಾಖಲಾದ ಚಿಲ್ಲರೆ ಇನಾಮು ಜಮೀನುಗಳಿಗೂ ಸಹ ಲಗಾವಾಗತಕ್ಕದ್ದು.

೧೦ ಖುಲ್ಲಾ ಇನಾಂ ಗ್ರಾಮಗಳು—ಸರ್ಕಾರದ ಆಡಳಿತದಲ್ಲಿರುವ ಖುಲ್ಲಾ ಇನಾಂ ಗ್ರಾಮಗಳಿಗೂ ಸಹ ಮೇಲ್ಕಂಡ ಹುಕುಂಗಳು ಲಗಾವಾಗುತ್ತವೆ.

೧೧ ಸಾವಜನಿಕವಾದ ಪ್ರಕಟನೆಗಳು—ಈ ಹುಕುಂ ಪ್ರಕಾರ ಮಾಫ್ ಮಾಡಿದ ಕಂದಾಯಗಳನ್ನೆಲ್ಲಾ ಚೆನ್ನಾಗಿ ಪ್ರಕಟಿಸಿ ಅವುಗಳನ್ನು ರೈತರ ಪಟ್ಟೆದಾ ಬುಕ್ಕುಗಳಲ್ಲಿ ದಾಖಲ್ಮಾಡಿಸುವಂತೆ ಜಮಾಬಂದಿ ಆಫೀಸರುಗಳು ಹುಷಾರಿಯಿಂದ ನೋಡಿಕೊಳ್ಳಬೇಕು.

೧೨ ಗ್ರಾಮಗಳಿಗೂ ಒಂದೇ ತರಹೆಯ ಪ್ರದೇಶಗಳಿಗೂ ಎಲ್ಲಾ ಒಟ್ಟಾಗಿ ಕಂದಾಯವನ್ನು ಮಾಫ್ ಮಾಡಬೇಕು (ಕಂದಾಯವನ್ನು ಮಾಫ್ ಮಾಡುವುದರಲ್ಲಿಯೇ ಆಗಲಿ, ಅಥವಾ ಅದರ ವಸೂಲಾತಿಯನ್ನು ಕೆಲವು ಕಾಲ ನಿಲ್ಲಿಸುವುದರಲ್ಲಿಯೇ ಆಗಲಿ, ಇಂಥಾ ರಿಯಾಯಿತಿಯನ್ನು ತೋರಿಸುವಾಗ್ಗೆ) ಸಮಿ... ಜಮೀನಿನಲ್ಲಿ ಉತ್ಪತ್ತಿಯಾದ ಸಸಿಗಳನ್ನು ... ಮಾಡತಕ್ಕದ್ದೇ ಹೊರತು ಮತ್ತು ... ಸಿದ್ಧವಾದ ... ಸ್ಥಿತಿಯನ್ನು ... ಮಾಡತಕ್ಕದ್ದಲ್ಲ. ಚೆನ್ನಾಗಿ ಕಲಸುತ್ತದೆ. ನಂತರ ಇದನ್ನು ... ಕಾಲಕ್ಕೆ ಸರಿಯಾಗಿ ಕೊಡದು ... ಒಣಗಲಾಗಿರುವಾಗಲೂ ... ಜಮೀನಿನಲ್ಲಿ ನೇಗಿಲು ... ಗಳಲ್ಲಿ ಗೇಣಿಗೆ ಒಂದು ಹಿಡಿಯಂತೆ ಈ ಸೊಪ್ಪು ... ಬೆರತ ಚಿತ್ತವನ್ನು ಹಾಕುತ್ತಾರೆ. ಇದರಿಂದ ಪೈರು ನಾಟಿ ಮಾಡಿದ ಗದ್ದೆಗಳಲ್ಲಿ ಹೊರದು ... ಹುಲುಸಾಗಿ ಬೆಳೆಯುತ್ತದೆ. ಎಳೆ ಸಸಿಗಳು ವಿಶೇಷ ಒತ್ತಾಗಿರುವದರಿಂದ ... ಕಳೆ ತೆಗೆಯುವದು ಬೀಜ ಚೆಲ್ಲಿ ಪೈರು ಮಾಡುವ ಗದ್ದೆಗಳಲ್ಲಾಗುವದಕ್ಕಿಂತಲೂ ಸುಲಭವಾಗಿರುತ್ತದೆ.

ತಾಲ್ಲೋಕು ವರ್ತಮಾನಗಳು

ಚಾಮರಾಜನಗರ—ಕಳೆದ ತಾ ೩ ರಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರ ವರ್ಷಂತ್ಯುತ್ಸವದ ವಿಜೃಂಭಣೆಯು ಸಂತೋಷದಾಯಕವಾಗಿತ್ತು. ಮೈದಾನವನ್ನು ಬಾವುಟ, ತೋರಣಗಳಿಂದ ಅಲಂಕರಿಸಿ, ಕಸ ಕಡ್ಡಿಗಳನ್ನು ಹೊರಗೆ ಹಾಕಿ ನೋಡುವುದಕ್ಕೆ ಅಂದಮಾಡಿದ್ದರು. ಎಂದಿನಂತೆ ದೊಡ್ಡಮನುಷ್ಯರು ... ಬಾಲಕರ ಆಟಪಾಟಗಳನ್ನು ಪರಾಂಬರಿಸಿ ಸಂತೋಷಪಟ್ಟು ಮೆ|| ಶ್ರೀನಿವಾಸರಾಯರನ್ನು ಹೊಗಳುತ್ತಾ ಇದ್ದರು. ನಮ್ಮ ಅಮಲ್ದಾರರು ಈ ತರಹ ಪಬ್ಲಿಕ್ ಕೆಲಸಗಳಿಗೆ ಮುಂದೆ ನಿಂತು ಬಾಲಕರಿಗೆ ಪ್ರೋತ್ಸಾಹ ಕೊಟ್ಟು ಪ್ರೀತಿಯನ್ನು ಸಂಪಾದಿಸಿಕೊಂಡಿರುವುದಕ್ಕೆ ಬಾಲಕರಾದಿಯಾಗಿ ಎಲ್ಲರೂ ಕೃತಜ್ಞರಾಗಿದ್ದಾರೆ. ನಮ್ಮ ಹೆಡ್ಮಾಸ್ಟರು ಪ್ರತಿ ಉತ್ಸವದಿನದಲ್ಲೂ ತಮ್ಮ ರಾಜಭಕ್ತಿ ವಿಶ್ವಾಸಗಳನ್ನು ಪ್ರದರ್ಶಿಸಿ ತಮ್ಮ ಶಿಷ್ಯರಿಗೆ ಸದುಪದೇಶರೂಪವಾದ ಪಾಠಕ್ರಮಗಳನ್ನು ಕಲ್ಪಿಸಿ, ಪುರವಾಸಿಗಳಿಗೆ ಸಂತೋಷವನ್ನುಂಟುಮಾಡಿ, ತಾವು ಕೃತಕೃತ್ಯರಾಗುತ್ತಿರುವುದು ಸ್ತೋತ್ರಾರ್ಹವಾಗಿದೆ.

ಶ್ರೀನಿವಾಸಪುರ.—ಈ ಊರಿನಲ್ಲಿ ೨೦ ದಿವಸಗಳ ಮುಂಚೆ ಧುಮಾರಾಗಿ ಮಳೆ ಬಿತ್ತು. ಆಮೇಲೆ ಅದರ ಸುದ್ದಿಯೇ ಇಲ್ಲ. ರೂಪಾಯಿಗೆ ೫|೬|| ಸೇರು ಅಕ್ಕಿ, ೧೦ ಸೇರು ರಾಗಿ, ಜೋಳ ತುಟ್ಟಿಯಾಗಿದೆ. ದನಕರುಗಳಿಗೆ ಹುಲ್ಲು ... ಬೇಸಾಯ ... ಅವರ ಜೀವನಮಾಡಿಕೊಳ್ಳುವದು ಬಹಳ ಕಷ್ಟವಾಗಿದೆ. ದಯಾಳುಗಳಾದ ಅಮಲ್ದಾರ್ ಮೆ|| ನರಸಿಂಗರಾಯರವರು ಮತ್ತು ಮೆ ಶಿರಸ್ತೇದಾರ್ ರಾಘವಾಚಾರ್ಯರವರು ಮತ್ತು ಇತರ ಮುಖ್ಯಸ್ಥರುಗಳೂ ಸಂತೆಗಳಲ್ಲಿ ಇದುವರೆಗೂ ರಾಗಿ ರೂಪಾಯಿಗೆ ೧೨-೧೩ ಸೇರುಗಳ ಪ್ರಕಾರ ಮಾರುವ ಹಾಗೆ ಏರ್ಪಾಡು ಮಾಡಿದ್ದರು. ಈಗ ೧೫ ದಿವಸಗಳಿಂದ, ಅಂದರೆ ಈ ಕೊಂಚ ಮಳೆ ಬಿದ್ದಲಾಗಾಯಿತು ಈ ಏರ್ಪಾಡು ಸಹ ನಿಂತುಹೋಯಿತು. ಬಡವರ ಕಷ್ಟ ಹೇಳಲು ಅಸಾಧ್ಯವಾಗಿದೆ. ಆದ್ದರಿಂದ ದಯಾಳುಗಳು ದೊಡ್ಡಮನಸ್ಸು ಮಾಡಿ ಈ ಏರ್ಪಾಡು ಇನ್ನೂ ೧೨ ತಿಂಗಳವರೆಗೂ ನಡೆಯುವಹಾಗೆ ಮಾಡಿದರೆ ಬಹಳ ಒಳ್ಳೇದು. ಈ ಊರಿನಲ್ಲಿ ಕಟಬಹಳ ಹೆಚ್ಚಾಗಿದೆ. ಬೀದಿನ ಕಾಟ ಬಹಳ ಜಾಸ್ತಿಯಾಗಿದೆ.

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಮೇ ತಾ 29 ಕ್ಕೆ ಒಪ್ಪೆರಾದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟ್ಸು	ರಿಲೀಫ್ ಕೆಲಸ ಮಾಡಿದವರ ಸಂಖ್ಯೆ			ಕೂಲಿ ಕೊಟ್ಟಿದ್ದು	ಧರ್ಮಾಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು	ರೂ	
ಬೆಂಗಳೂರು	918	196	13	1,169	197
ಕೋಲಾರ	1,437	825	34	2,922	570
ತುಂಕೂರು	1,056	631	105	2,163	138
ಮೈಸೂರು	294	344	23	573	202
ಹಾಸನ	474	638	30	127	3
ಶಿವಮೊಗ್ಗ	404	1,193	110	1,120	5
ಕಡೂರು	166	2		167	
ಚಿತ್ರದುರ್ಗ	245	81	15	339	227
ಮಾಂಕಾಣಿವೆ	109	238	2	164	
ಸ್ಯಾನಿಟಂ				1,028	
ಒಟ್ಟು	4,031	4,148	352	10,671	1,642

ದೊಂಗದಾಸರಿ ವಾಂಡ್ಲು

ಕಾಮುತಿಯರು ಎಂಬ ಕೊರಚ ಜಾತಿಯ ಕಳ್ಳರು ನಮ್ಮ ಸೀಮೆಯ ಚಿತ್ರದುರ್ಗ, ಶಿವಮೊಗ್ಗ, ಕಡೂರು ಡಿಸ್ಟ್ರಿಕ್ಟುಗಳಲ್ಲಿ ಸೇರಿಕೊಂಡು ಅನೇಕ ಛಳಾಯಿತಗಳನ್ನು ನಡಿಸಿ ಅನೇಕ ಪ್ರಜೆಗಳ ಪ್ರಾಣ, ಮಾನ, ಧನಗಳನ್ನು ನಷ್ಟಪಡಿಸುತ್ತಿದ್ದರು. ಈಚೆಗೆ ಪೊಲೀಸ್ ಅಧಿಕಾರಿಗಳು ಅವರನ್ನು ಬಹಳ ಸಾಹಸದಿಂದ ಹಿಡಿದು ಪ್ರಜಾಕ್ಷೇಮಕ್ಕೆ ನೆಮ್ಮದಿಯನ್ನುಂಟುಮಾಡಿದರೆಂದು ವಾಚಕರು ಪತ್ರಿಕೆಗಳಲ್ಲಿ ಓದಿರಬಹುದು. ಪೊಲೀಸಿನವರು ಅವರನ್ನು ಹಿಡಿದು ಶಿಕ್ಷೆಗೆ ಗುರಿಮಾಡಿರುವದು ಬಹಳ ಒಳ್ಳೆ ಕೆಲಸ. ಆದರೆ ಹೀಗೆ ಕೊರಮರನ್ನು ಹಿಡಿದು ಶಿಕ್ಷೆ ಮಾಡಿರುವದು ಇದೇ ಮೊದಲನೇಸಾರಿಯಲ್ಲ. ಎಷ್ಟೋ ಸಾರಿ ಸರಕಾರದವರು ಅವರಿಗೆ ಜುಲ್ಮಾನೆ ಸಜಾ ಶಿಕ್ಷೆಗಳನ್ನು ವಿಧಿಸಿದ್ದಾಗ್ಯೂ ಆ ಕೊರಮರಲ್ಲಿ ರಕ್ತಗತವಾಗಿರುವ ಈ ದುರ್ಬುದ್ಧಿಯು ಬೇರೆ ಅವರನ್ನು ಬಿಟ್ಟುಹೋಗಲಿಲ್ಲ. ಇದರಿಂದ ಸರಕಾರದವರೂ ಪ್ರಜೆಗಳೂ ಒಂದು ವಿಷಯವನ್ನು ಚನ್ನಾಗಿ ತಿಳಿಯಕೊಳ್ಳಬಹುದು. ಅದೇನಂದರೆ ಕೊರಚರನ್ನು ಹಿಡಿದು ಜುಲ್ಮಾನೆ ಸಜಾ ಶಿಕ್ಷೆಗಳನ್ನು ಕೊಡುವದು ಅವರನ್ನು ತಿದ್ದುಪಾಟಿಗೆ ತಂದು ಅವರು ಯಾವದಾದರೂ ಒಂದು ಕಸಬನ್ನು ಕಲಿತು, ಸಂತು ಕಳ್ಳತನ, ಲೂಟಿ ಮುಂತಾದ ದುರ್ವೃತ್ತಿಗಳನ್ನು ತ್ಯಜಿಸಿ, ಒಕ್ಕಲು ಮುಂತಾದ ಸಾಧುವೃತ್ತಿಯನ್ನನುಸರಿಸಿದ ಸತ್ಪ್ರಜೆಗಳಾಗಿ ಬದುಕುವದಕ್ಕೆ ಸಹಕಾರಿಯಾಗಲಿಲ್ಲ. ಸರಕಾರದವರು ಈ ದುಷ್ಟರನ್ನು ಹಿಡಿದು ಶಿಕ್ಷಿಸುವದು ಸಾಲದು. ಅವರಿಗೆ ತಕ್ಕ ವಸತಿಯಾದ ಸ್ಥಳವನ್ನು ಕಲ್ಪಿಸಿ ಜೀವನೋಪಾಯಕ್ಕೆ ಸಾಧುವೃತ್ತಿಗಳನ್ನು ಕಲಿಸಿ ಅವರಿಗೂ ಅವರ ಮಕ್ಕಳಿಗೂ ತಕ್ಕ ವಿದ್ಯಾದಾನವನ್ನು ಮಾಡಿ ಅವರ ದುಷ್ಕೃತ್ಯಗಳಿಂದ ಅವರಿಗೂ ಇತರ ಪ್ರಜಾಸಮೂಹಕ್ಕೂ ಆಗತಕ್ಕ ನಷ್ಟವನ್ನೂ ಕೇಡನ್ನೂ ತೋರಿಸಿ ಸನ್ಮಾರ್ಗವನ್ನೂ ನೀತಿಯನ್ನೂ ದೇವರ ಭಕ್ತಿಯನ್ನೂ ಕಲಿಸುವ ಪ್ರಯತ್ನ ಮಾಡಿದರೆ ಆ ಜನಗಳು ಕ್ರಮೇಣ ದಾರಿಗೆ ಬಂದಾರು. ಇಂತಹ ಕೆಲಸವನು ... ಕೊಂಡು ಒಂದೆರಡು ಕಡೆ ಬಹಳ ... ... ಜನಗಳ ಆ ದಾರಿ ಅರ್ ...

... ತಾಂಡವೆಯಾಗಿರುತ್ತೆ. ಈ ವಿಚಾರದಲ್ಲಿ ತಾಲೋಕು ಅಮಲ್ದಾರರವರು ತುಂಬಾ ಗಮನಕೊಟ್ಟಿರೆಂದು ನಂಬಿದ್ದೇನೆ. ಅಲ್ಲದೆ ಈ ತಾಲ್ಲೋಕು ಟರ್ಕ್ ಪೊಲೀಸ್ ಕಾನ್ಸ್ಟೇಬಲ್‌ಗಳೂ ಮತ್ತು ಪೊಲೀಸ್ ಜಮಾದಾರರವರು ಮತ್ತು ದಫೆದಾರ್ ವಗೈರೆ ಆಫೀಸರುಗಳು ರಾತ್ರೆ ಬಹು ಮುತವರ್ಜಿಯಿಂದ ಗಸ್ತುಮಾಡುವುದರಿಂದ ಕಳ್ಳಕಾಕರ ಭಯವಿಲ್ಲದೆ ಜನಗಳು ಯಾವಾಗ್ಯೂ ಸುಭಿಕ್ಷದಲ್ಲಿ ಇದ್ದಾಗ್ಯೂ ಕೆಲ್ಸವಿಯ ಕಾಲದಲ್ಲಿ ಈಪ್ರಕಾರ ಪ್ರಕಾಶವಿಲ್ಲದ ತಾಲ್ಲೋಕು ಆಫೀಸರುಗಳಿಗೂ ಬೇರೆ ಇರುವ ಪ್ರಮುಖ ಜನಗಳು ಭೀತರಾಗಿದ್ದಾರೆ. ಪರಸ್ಪರ ಜನಗಳಿಗೆ ಈ ವಿಚಾರದಲ್ಲಿ ತುಂಬಾ ತಾಪವಿರುವದರಿಂದ ಈ ಚಾತುರ್ಯವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವರೆಂದು ನಂಬಿದ್ದೇನೆ.

ಸಾಲಿಗ್ರಾಮದ ಶಿವೆ ಗೌಡ

ಇಂಡಿಯಾ ದೇಶದ ವೃತ್ತಾಂತಗಳು

ಉತ್ತರ ದೇಶದ ಲಕ್ನೋ ಪಟ್ಟಣದಲ್ಲಿ ಕಾಲರಾ ಉಪದ್ರವಿಂದ ಕಳೆದ ವಾರ ೧೧೩ ಜನರು ತೀರಿಹೋಗಿರುತ್ತಾರೆ.

ಹೋದ ವಾರದಿಂದ ಉತ್ತರ ದೇಶದಲ್ಲಿರುವ ಮುಸ್ಲೀಮರು ಪಟ ಇವನ್ನು ಮಿಂಚಿನ ದೀಪಗಳಿಂದ ಬೇಗ ಮಾಡುತ್ತಿರುತ್ತಾರೆ.

ಡೆಹರಾಡೂನ್ ರೈಲ್ವೆ ಅನಾಹುತಕ್ಕೆ ಕಾರಣರಾದ ಇಬ್ಬರು ಗಾರ್ಡುಗಳನ್ನೂ ಒಬ್ಬ ಸ್ಟೇಷನ್ ಮಾಸ್ಟರನ್ನೂ ವಿಚಾರಣೆಗೆ ಗುರಿಮಾಡಿರುತ್ತಾರೆ.

ಮದರಾಸ್ ಹೈಕೋರ್ಟಿಗೆ ಈಗಿರುವ ಐದು ಮಂದಿ ನ್ಯಾಯಾಧಿಪರು ಸಾಲದೆ ಆರನೆಯವರನ್ನು ನೇಮಿಸಿಕೊಳ್ಳುವುದಕ್ಕೆ ಸರಕಾರದವರು ಒಪ್ಪಿರುವರು.

ಹೈದರಾಬಾದ್ ನಿಜಾಮರು ತಮ್ಮ ನ್ಯಾಯವಿಧಾಯಕ ಸಭೆಗೆ ನವಾಬ್ ಜೀಯುನಲ್ಲಿ ಜಿತಾಯ ಎಂಬ ಪಾರಸಿ ದೊಡ್ಡ ಮನುಷ್ಯರನ್ನು ನೇಮಿಸಿರುವರು.

ಇಂಡಿಯಾ ದೇಶದ ಸಂಯುಕ್ತ ಸಂಸ್ಥಾನಗಳಲ್ಲಿ ಕ್ಷಾಮಪೀಡಿತರಾದ ೩೭,೦೦೦ ಜನರು ಸರಕಾರದ ಕಾಮಗಾರಿಯಲ್ಲಿ ಕೆಲಸಗಳನ್ನು ಮಾಡಿ ಜೀವಿಸುತ್ತಿರುವರು.

ಅಲಿಘಾಡಿನಲ್ಲಿ ಬಹು ಕಾಲದಿಂದ ವೈದ್ಯರಾಗಿದ್ದು ಜನರೊಳಗೆ ವಿಶೇಷವಾದ ಅನುರಾಗವನ್ನು ಪಡೆದಿದ್ದ ಹಕೀಮ್ ಬಲ್ಲಿಲ್‌ರಾಸ್ತೆಯವರು ಹೋದವಾರ ಕಾಲವಾದರು.

ತ್ತಿದ್ದಾರೆ. ಆ ಬೋಧಕನೂ ಬಹಳ ಆಸಕ್ತಿಯಿಂದ ಅವರಲ್ಲಿ ಬೆರತು ಅವರನ್ನು ಸನ್ಮಾರ್ಗಪ್ರವರ್ತಕರನ್ನಾಗಿ ಮಾಡುತ್ತಿದ್ದಾನೆ. ಹುಡುಗರು ಬಹು ಶ್ರದ್ಧೆಯಿಂದ ಒಂದು ವಿಷಯವೂ ತಪ್ಪಿಸಿಕೊಳ್ಳದೆ ಕ್ರಮವಾಗಿ ಸಂತೋಷದಿಂದ ಶಾಲೆಗೆ ಬಂದು ದೇವರ ಕೀರ್ತನೆಗಳನ್ನು ಸತ್ಯವೇದ ಪಾಠಗಳನ್ನು ಕಲಿಯುತ್ತಾರೆ. ಅವರ ಹಿರಿಯರಾದರೂ ಅವರ ಸುತ್ತಲೂ ಕೂತುಕೊಂಡು ಹೆಚ್ಚರಿಂದ ಆ ಹುಡುಗರ ಅಭಿವೃದ್ಧಿಯನ್ನು ನೋಡುತ್ತ ಹೊತ್ತುಕಳೆಯುತ್ತಾರೆ. ಆದರೆ ಸತ್ಯವೇದವು ನಮ್ಮಲ್ಲಿ ಪಾರಂಪರ್ಯವಾಗಿ ನಡೆಯುತ್ತಿರುವ ನಮ್ಮ ಕುಲ ಕಸಬನ್ನೇ ನಿರ್ಮೂಲ ಮಾಡುವದಾಗಿ ಕೋರುತ್ತೇವೆಯಲ್ಲಾ ಎಂದು ಆಶ್ಚರ್ಯಪಡುತ್ತಿದ್ದಾರೆ. ಇದಲ್ಲವೇ ಕಳ್ಳರಿಗೆ ಬುದ್ಧಿ ಕಲಿಸುವ ಮಾರ್ಗ? ದೊಂಗದಾಸರಿ ವಾಂಡ್ಲನ್ನು ಜೀವದಾಸರನ್ನಾಗ ಮಾಡುವ ವಿಧಾನ.

ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವವು

ಚಾಮರಾಜನಗರ.

ಕಳೆದ ತಾ ೩೦ ರಲ್ಲಿ ಶ್ರೀಮನ್ಮಹಾರಾಜರವರ ವರ್ಧಂತಿಯು ಮೈದಾನದಲ್ಲಿ ಎಂದಿಗಿಂತ ಹೊಸತರವಾದ ಏರ್ಪಾಡುಗಳಿಂದ ನೆರವೇರಿಸಲಾಗಿತ್ತು. ಆದರೆ ಆ ದಿವಸ ಮಳೆ ಬೀಳಲು ಶುರುವಾದದ್ದರಿಂದಲೂ, ಬಾಲಕರ ಆಟಪಾಟಗಳಿಗೆ ಅನಾನುಕೂಲವಾದ್ದರಿಂದಲೂ, ಆ ದಿವಸದ ಏರ್ಪಾಡನ್ನು ಅತಿ ವ್ಯಸನದಿಂದ ಮುಂದೆ ಇಡಬೇಕಾಯ್ತು. ವರ್ಧಂತ್ಯುತ್ಸವದಲ್ಲಿ ಮಳೆಬಿದ್ದು ಎಲ್ಲರಿಗೂ ಸಂತೋಷವಾದ್ದರಿಂದ ಅವರವರ ಮನೆಗಳಲ್ಲೂ, ದೇವಸ್ಥಾನಗಳಲ್ಲೂ ಮಹಾರಾಜರ ಶ್ರೇಯಸ್ಸಿಗಾಗಿ ಪ್ರಾರ್ಥನೆಮಾಡಿ ಸುಖಭೋಜನಮಾಡಿದರು. ಆ ದಿನಸದ ಏರ್ಪಾಡುಗಳು ಎ. ವಿ. ಸ್ಕೂಲ್ ಹಾಲ್‌ನಲ್ಲಿ ಸ್ವಲ್ಪವಾಗಿ ನಡಿಸಿ ತೃಪ್ತಿಪಟ್ಟಾಯಿತು.

ತೀರ್ಥಹಳ್ಳಿ

೩೦ನೇ ತಾರೀಖಿನಲ್ಲಿ ಇಲ್ಲಿನ ಸ್ಕೂಲಿನಲ್ಲಿ ಸಭೆಯು ಸೇರಿತ್ತು. ಅಮಲ್ದಾರರವರು ಸಭೆಯ ಅಗ್ರಾಸನವನ್ನು ವಹಿಸಿದರು. ಆ ಕಾಲದಲ್ಲಿ ಸ್ಕೂಲಿನ ಬಾಲಕರಿಂದ ಕೆಲವು ವಿನೋದವಾದ ನಾಟಕರೀತಿಯ ಆಟವೂ, ಪ್ರತಿ ಆಟಕ್ಕೂ ಮಧ್ಯದಲ್ಲಿ ಗ್ರಾಮಫೋನ್ ಸಂಗೀತವೂ ಕಡೆಯಲ್ಲಿ ಅನ್ಯಾಸಕರ ಭಾಷಣವೂ ಆಯಿತು. ಅನಂತರ ಎಲ್ಲರಿಗೂ ಗಂಧ ಪುಷ್ಪ ತಾಂಬೂಲಾದಿಗಳು ಕೊಟ್ಟನಂತರ ಎಲ್ಲರೂ ಮೈದಾನದಲ್ಲಿ ಚಾರ್ ಸಿಪಾಯಿಗಳೂ ಪೊಲೀಸಿನವರೂ ಸೇರಿ ಸುರುಟಿ ಮಾಡಿದ್ದನ್ನು ನೋಡಿ ಸಂತೋಷಪಟ್ಟು ತಮ್ಮ ತಮ್ಮ ಮನೆಗೆ ಸಾರಿದರು. ಈ ಉತ್ಸವದಲ್ಲಿ ಹೆ. ... ಮೆ. ... ರಾಮಣ್ಣನವರೂ ಅದರ ಅಸಿಸ್ಟೆಂಟ್ ಮ್ಯಾಸ್ಟರುಗಳು ಸೇರಿ ಎಲ್ಲವೂ ಕ್ರಮವಾಗಿ ನಡೆಯುವಂತೆ ಏರ್ಪಡಿಸಿದ್ದಕ್ಕಾಗಿ ಸಭಿಕರು ಸಂತೋಷಪಟ್ಟರು. ರಿಟೈರ್ಡ್ ಮುನ್ಸಿ ಮ. ಸುಬ್ಬರಾಯರು ಸಭೆಯಲ್ಲಿ ಸೇರಿದ್ದರು.

ಶ್ರೀನಿವಾಸಪುರ

ಶ್ರೀಮನ್ಮಹಾರಾಜರವರ ವರ್ಧಂತಿ ದಿವಸ ಸಾಯಂಕಾಲ ೪ ಗಂಟೆಯಿಂದ ೭ ಗಂಟೆಯವರೆವಿಗೂ ಆಟಪಾಟಗಳು ನಡೆದವು. ನಂತರ ಸ್ಕೂಲ್ ಹಾಲ್‌ನಲ್ಲಿ ಸಭೆ ಸೇರಿತು. ಡಿಸ್ಟ್ರಿಕ್ಟ್ ಪ್ರಾಫೆಸ್ಟ್ ಆಫೀಸರ್ ಮ. ರಾ. ಟಿ. ರಾಮಯ್ಯನವರು ಅಗ್ರಾಸನವನ್ನು ವಹಿಸಿದರು. ಆ ದಿವಸವೂ ರಾಜಭಕ್ತಿ ವಿಷಯವಾಗಿಯೂ ಮತ್ತು ಮೈಸೂರ್ ಪ್ರಾವಿನ್ಸ್ ವಿಷಯವಾಗಿಯೂ ಮ. ರಾ. ಹೆಡ್ಮ್ಯಾಸ್ಟರಿಂದಲೂ ಮತ್ತು ಮ. ರಾ. ಹಾಸ್ಪಿಟಲ್ ಅಸಿಸ್ಟೆಂಟರಿಂ...

... ಪ್ರತಿಪತ್ರಿಕೆಗಳಿಂದಲೂ ...

ಕಾಶ್ಮೀರದಲ್ಲಿ ಕೆಲವು ಹಿಂದೂ ಜನಗಳು ಸೇರಿಕೊಂಡು ಕೆಲ ಟಾನಾಗಳನ್ನು ತಯಾರಿಸುತ್ತಿದ್ದರು. ಪೊಲೀಸಿನವರು ಬಹು ಪ್ರಯಾಸಪಟ್ಟು ಇವರನ್ನು ಹಿಡಿದು ನ್ಯಾಯದ ವಶಕ್ಕೆ ಒಪ್ಪಿಸಿಕೊಡುತ್ತಾರೆ. ಒಬ್ಬನಿಗೆ ಐದು ವರುಷ ಮತ್ತು ಒಬ್ಬನಿಗೆ ಮೂರು ವರುಷ ಠಂಕೋಲ್ ಸಜಾ ವಿಧಿಸಲ್ಪಟ್ಟಿತು.

ಮಿಡ್ನಾಪೂರಿನ ಬಿಡಿಬಿಡಿ ನಮೋಕದಮೆಯಲ್ಲಿ ಪೊಲೀಸಿನವರು ನಾನಾತರವಾದ ಅಕ್ರಮ ರೀತಿಗಳನ್ನು ನಡಿಸಿ ಕೆಲವರನ್ನು ದಸ್ತಗಿರಿ ಮಾಡಿದರೆಂದು ಕಲ್ಕತ್ತಾ ಜಡ್ಜ್ ಜಡ್ಜರು ಹೇಳಿದರು. ಬಂಗಾಳ ಸರಕಾರದವರು ಪೊಲೀಸರ ನಡತೆಯನ್ನು ವಿಚಾರಿಸಲು ಒಬ್ಬ ಅಧಿಕಾರಿಯನ್ನು ನೇಮಿಸಿರುವರೆಂದು ವರ್ತಮಾನವಿದೆ.

ಹೋದವಾರ ಭೋಪಾಲ್ ಸಂಸ್ಥಾನಕ್ಕೆ ಸೇರಿದ ಏಲಿಚಪುರದ ಮಹಾರಾಜನಿಗೆ ಇಂಡಿಯಾ ಸರಕಾರದವರು ನವಾಬ ಬಿರುದನ್ನು ಕೊಡುವರು. ಈ ಜನರ ಪೂರ್ವಿಕರಿಗೆ ಗವರ್ನರ್ ಜನರಲ್ ಹಿಂದೆ ನವಾಬ್ ಬಿರುದು ... ಸಂಸ್ಥಾನವು ... ದರ್ಜೆಯದಾಗಿದ್ದು, ಮತ್ತು ೧೦ ಲಕ್ಷ ರೂಪಾಯಿಗಳ ಉತ್ಪತ್ತಿಯಾಗುತ್ತದೆ.

ಢಿಲ್ಲಿ ಪಟ್ಟಣದಲ್ಲಿ ಆರ್ಯಸಮಾಜದ ವಾರ್ಷಿಕೋತ್ಸವವು ಬಹು ವಿಜೃಂಭಣೆಯಿಂದ ಜರುಗಿತು. ನಮರು ಸಮಾಜಕ್ಕೆ ೪,೦೦೦ ಮಂದಿಯೂ ೬೦೦ ಹಿಂದೂಗಳೂ ಸೇರಿದ್ದರು. ರಂಭ್ರಾಂಪುದತ್ತ ಚೌಧ್ರಿಯವರು ಅಗ್ರಾಸನವನ್ನು ವಹಿಸಿ ಕಾರ್ಯಗಳನ್ನು ನಡಿಸಿದರು. ಆ ದಿನ ಹಿಂದೂಗಳೂ ಮುಸಲ್ಮಾನರೂ ಬಹು ಅನ್ಯೋನ್ಯದಿಂದ ನಡೆದುಕೊಂಡರು.

ಸತೀಶ್‌ಚಂದ್ರ ಭಕ್ತ್ ಎಂಬ ಬಂಗಾಳಿಯು ನಾನಾತರವಾದ ವೇಷಗಳನ್ನು ಹಾಕಿಕೊಂಡು ರೈಲ್ ಗಾಡಿಗಳಲ್ಲಿ ಸುಗ್ಗಿ ಕಳುವು ಮಾಡುತ್ತಿದ್ದನು. ಇವನು ಪೊಲೀಸ್ ಅಧಿಕಾರಿಗಳಿಗೆ ವೇಷ ಹಾಕಿಕೊಂಡು ತಿರುಗುತ್ತಿದ್ದದ್ದೂ ಉಂಟಂತೆ. ಹೋದ ವಾರ ಈ ಬೋರ ಪೊಲೀಸಿಗೆ ಸಿಕ್ಕಿ ಬಿದ್ದನು. ಇವನಿಗೆ ನಾಲ್ಕು ವರ್ಷಗಳ ಸಜಾ ವಿಧಿಸಲ್ಪಟ್ಟಿತ್ತು.

ಕಳೆದ ಮಂಗಳವಾರ ಸಿಕಂದ್ರಾಬಾದಿನಲ್ಲಿ ಸುಂಟರಗಾಳಿಯು ಎದ್ದು ಅನೇಕ ಮನೆಗಳನ್ನೂ ಮರಗಳನ್ನೂ ಕೆಡಿಸಿಹಾಕಿರುವುದು. ಸುಂಟರಗಾಳಿಯ ಜೊತೆಯಲ್ಲಿ ವಿಪರೀತವಾದ ಮಳೆಯು ಸಹ ಬಂತು. ನಿಂಡಿಸಲ್ಪಟ್ಟ ಕುದುರೆ ಲಾಯವು ಬಿದ್ದು ಹೋದುದರಿಂದ ನಾಲ್ಕು ಕುದುರೆಗಳು ಸತ್ತು ಹೋದುದಲ್ಲದೆ ಒಬ್ಬ ಕುದುರೆಯವನು ಸಹ ಪ್ರಾಣಕಳೆದುಕೊಂಡನು.

ದಲ್ಲಿ ಕುರ್ಚಿಯ ಮೇಲೆ ಕುಳಿತುಕೊಂಡು ಮೆಮ್ಮರಿಯ ... ತಮ್ಮನ್ನು ಸಭೆಯ ಅಧ್ಯಕ್ಷರನ್ನಾಗಿ ಆರಿಸಿದ್ದಕ್ಕೋಸ್ಕರ ... ರಾಜರವರಿಗೂ ಸಭಿಕರಿಗೂ ವಂದಿಸಿ ಮಹಾಸ್ವಾಮಿಯವರ ... ಎಷ್ಟು ಗಂಭೀರವಾಗಿದೆ ಎಂಬುವದನ್ನು ಸರ್ವರಿಗೂ ಹೃದಯಂಗಮವಾಗ ... ವರು. ನಂತರ ಜಮಾನ್ದಾರ್ ಮ. ಎಂ. ಎಚ್. ಹರಿಯಣ್ಣನವರು ಎದ್ದು ಮಹಾಸ್ವಾಮಿಯವರಿಗೆ ಆದಿಯಿಂದ ಆನಂದ ಸಲಹೆಗೆ ಘಂಟೆಯೋಷವಾಗಿ ತಿಳಿಯುವಂತೆ ವಿದ್ಯದ ಪ್ರಯೋಜನವನ್ನು ಕುರಿತು ೧ ಘಂಟೆ ಉಪನ್ಯಾಸಿಸಿದರು. ತರುವಾಯ ಸ್ಕೂಲ್ ವಿದ್ಯಾರ್ಥಿಗಳು ಒಂದು ಚಿಕ್ಕ ಕಥೆಯನ್ನು ನಾಟಕರೂಪವಾಗಿ ಮಾಡಿಕೊಂಡು ಅಭಿನಯ ಪೂರ್ವಕವಾಗಿ ತೋರಿಸಿದರು. ಸಭಿಕರಿಗೆಲ್ಲಾ ಬಹಳ ಆನಂದವನ್ನುಂಟು ಮಾಡುವಂತೆ ಇಬ್ಬರು ಬಾಲಕಿಯರು ಶ್ರೀಮನ್ಮಹಾರಾಜರ ಮೇಲಿನ ಕೀರ್ತನೆಗಳನ್ನು ಮಂಗಳವನ್ನು ಇಂಪಾಗಿ ಹಾಡಿದರು. ಬಾಲಕರಿಗೆ ಸಕ್ಕರೆಯೂ, ಸಭೆಯವರಿಗೆಲ್ಲಾ ಪಾನ್‌ಸುಪಾರಿಯೂ ಹಂಚಲ್ಪಟ್ಟಿತು.

ಎಂಪೈರ್ ಡೇ ಉತ್ಸವವು

ಶ್ರೀನಿವಾಸಪುರ

ಹೋದ ಮೇ ತಿಂಗಳು ೨೪ ನೇ ತಾ ದಿನ ಎಂಪೈರ್ ಡೇ ಗೋಸ್ಕರ ಎ. ವಿ. ಸ್ಕೂಲ್ ಬಹಳ ಚನ್ನಾಗಿ ಅಲಂಕರಿಸಲ್ಪಟ್ಟಿತ್ತು. ಎಂಪೈರ್‌ಡೇ ದಿವಸ ಬೆಳಗಿ ಮ. ರಾ. ಹೆಡ್ಮಾಸ್ಟರ್ ರಂಗಪ್ಪನವರು ಮ. ರಾ|| ಶಿರಸ್ತೇದಾರ್ ರಾಮಚಂದ್ರರಾವರವರು, ಮ. ರಾ. ಡ. ಕೆ. ಟಿ. ಗೋಪಾಲಪಿಳ್ಳೆಯವರು ಮತ್ತು ಮ. ರಾ. ಪ್ರಿಯಸ್ಕಾಲ್ ಸ್ಕೂಲ್ ಮಾಸ್ಟರ್ ಕೇಶವರಾಯರು ಬ್ರಿಟಿಷ್ ರಾಜ್ಯದ ವಿಷಯವಾಗಿ ಉಪನ್ಯಾಸ ಮಾಡಿದರು. ಅನಂತರ ನೆ. ರಾಜಗೋಪಾಲಯ್ಯಂಗಾರಿಂದ ಇಂಗ್ಲಿಷ್ ರೆಸಿಟೇಷನ್ ಮತ್ತು ಸ್ಕೂಲ್ ಹುಡುಗರಿಂದ ಸಂವಾದವೂ (ಕನ್ನಡ ಮತ್ತು ಇಂಗ್ಲಿಷ್) ನಡೆಯಿತು. ಬ್ರಿಟಿಷ್ ನ್ಯಾಷನಲ್ ಆಂಥೆಮ್ ಸ್ಕೂಲ್ ಹುಡುಗರಿಂದಲೂ ಮತ್ತು ಹುಡುಗಿಯರಿಂದಲೂ ಸಹ ಹಾಡಲ್ಪಟ್ಟಿತು. ಅನಂತರ ತಾಲ್ಲೋಕು ಅಮಲ್ದಾರ್ ಮ. ರಾ. ಸರ್ಕಾರ್ ರವರಿಂದಲೂ ಇತರ ಒಂದು ಉಪನ್ಯಾಸ ನಡೆದ ಮೇಲೆ ಸಭೆಯು ಭರಕಾಸ್ತು ಆಯಿತು. ಸಾಯಂಕಾಲ ಆಟಪಾಟಗಳು ನಡೆದವು.

ಕಾಮರಾಜನಗರ

ಈ ಊರಿನ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಮೇ ೨೪ ನೇ ತಾರೀಖಿನಲ್ಲಿ ಎಂಪೈರ್ ಡೇ ಉತ್ಸವವು ಬಹು ಸಂಭ್ರಮವಾಗಿ ಆಚರಿಸಲ್ಪಟ್ಟಿತು. ಎಂಪೈರ್ ಡೇ ದಿನದಲ್ಲಿ ... ಕುಲಾಚಾರರ ಮ. ಸ. ರಂಗಸ್ವಾಮಿ ... ಐದ ಉಪನ್ಯಾಸವನ್ನು ಸ್ಕೂಲ್ ಹೆಡ್ಮಾಸ್ಟರ್ ವೆಂಕಣ್ಣನವರು ಓದಿದರು. ಅದರಲ್ಲಿ ಇಂಗ್ಲಿಷ್ ರಾಜ್ಯದಲ್ಲಿ ಪ್ರಜೆಗಳಿಗಿರುವ ಸುಖಸೌಭಾಗ್ಯ ಸ್ವತಂತ್ರಾದಿಗಳೂ ಪ್ರಜೆಗಳ ಅನುಕೂಲಕ್ಕಾಗಿ ಏರ್ಪಡಿಸಿರುವ ಸಾಧನಗಳ ಮಹಿಮೆಯ ವಿಸ್ತಾರಗಳನ್ನೂ ಸ್ಪಷ್ಟವಾಗಿ ಚೆನ್ನಾಗಿ ಬರೆದಿದ್ದರು. ಅನಂತರ ಆ ದಿನದ ಸಭೆಯಲ್ಲಿ ಅಗ್ರಾಸನವನ್ನು ವಹಿಸಿದ್ದ ಎಕ್ಸೈಸ್ ಆ ಕಮಿಷನರ್ ಮ. ಪೀಟರ್ ರಾಮರಾವರವರು ಇದೇ ವಿಷಯವಾಗಿ ಒಂದು ಒಳ್ಳೇ ಉಪನ್ಯಾಸವನ್ನು ಮಾಡಿದರು. ಅನಂತರ ಹುಡುಗರಿಂದಲೂ ಹುಡುಗಿಯರಿಂದಲೂ ಕೆಲವು ಹಾಡುಗಳನ್ನು ಮಂಗಳವನ್ನೂ ಹಾಡಿಸಿದ ನಂತರ ಸೇರಿದ್ದ ಜನರ ಎಲ್ಲರಿಗೂ ಗಂಧ ಪುಷ್ಪ ತಾಂಬೂಲಾದಿಗಳು ... ಮಹಾದೇವ ಮಹದೇವ ಎಂಬವರಾಗಿ ಸ್ಪಷ್ಟೀಕರಿಸುತ್ತ ... ಇವರ ಕಡೆಗೆ ಮಹದೇವನು ಬರಲಿಲ್ಲ. ಮಂತ್ರಗಳನ್ನು ಪಠಿಸಿದರು. ಆದರೂ ಮಹದೇವನು ಬರಲಿಲ್ಲ. ... ಮಧ್ಯ ತಮ್ಮ ಕುತ್ತಿಗೆಗಳನ್ನು ಚೂರಿಯಿಂದ ಕತ್ತರಿಸಿಕೊಂಡರೆ ಮಹದೇವನು ಪ್ರಸನ್ನನಾಗುವನು ಎಂದರಿತು ತಮ್ಮ ಕುತ್ತಿಗೆಗಳನ್ನು ಕತ್ತರಿಸಿಕೊಂಡು ಸತ್ತುಹೋದರು. ಮಹದೇವನಾದರೂ ಬರಲಿಲ್ಲ. ... ಜಾತಿಯ ಹುಡುಗನು ಮೂರ್ಛೆಗೊಂಡನು. ಮತ್ತೊಬ್ಬ ಕರುಣು ಮನೆಗೆ ಓಡಿ ಈ ಸಂಗತಿಗಳನ್ನು ತಿಳಿಸಿದನು. ಇಂಥಾ ಅಜ್ಞಾನಿಗಳಿಗೇನು ಕಾಲದಲ್ಲಿ ಮೂಢ ಭಕ್ತಿಯು ಜನರನ್ನು ಪೀಡಿಸುತ್ತಿರುವದು.

ಒಂದೂ ದೇವರಾವ್ ಮುತ್ತೈಪಜ್ ... ಒಂದು ಸ್ವಗಡದ ಕ್ರೈಸ್ತ ಪ್ರಾದವರು ದೇವರ ಧರ್ಮಗಳನ್ನು ಅಭಿವೃದ್ಧಿಪಡಿಸಲು ಒಂದು ಹೊಸ ತರಹ ಕೈಮಗ್ಗವನ್ನು ತಯಾರಿಸಿರುತ್ತಾರೆ. ಈ ಮಗ್ಗವು ಸಾಧಾರಣವಾಗಿದ್ದರೂ ಎಲ್ಲ ಗಳನ್ನು ... ಜಾಗ ತಯಾರಿಸಿ ... ಇದರ ಮೂಲಕ ಕೆಲಸವನ್ನು ಕಲಿಸುವುದಕ್ಕೆ ಒಂದು ಪಟ್ಟಣದಲ್ಲಿ ಒಂದು ಶಾಲೆ ... ಇವರು ಏರ್ಪಡಿಸಿರುವರು. ಈ ಶಾಲೆಯಲ್ಲಿ ಇದು ಬರೆಗೂ ನೂರಾರು ಮಂದಿ ವಿದ್ಯಾರ್ಥಿಗಳು ಕೈಮಗ್ಗ ಕಸಬನ್ನು ಕಲಿತಿದ್ದಾರೆ. ಸರಕಾರದ ದೇಣ್ಣಿಂದ ಸಬ್‌ಜಡ್ಜರು ಈ ಮಗ್ಗದಿಂದ ತಯಾರಾದ ಬಟ್ಟೆಗಳನ್ನು ವ್ಯಾಪಾರಿಯರ ಪ್ರದರ್ಶನದಲ್ಲಿ ... ಪ್ರದರ್ಶನ ಪಡಿಸಿದರು. ಬಿ. ಡಿ. ಪಿಂಟೋಯವರು ಎಲ್ಲವನ್ನು ನೋಡಿ ಬಹಳ ಸಂತೋಷಪಟ್ಟು ಬಟ್ಟೆಗಳನ್ನು ಇನ್ನೂ ಅಲಂಕಾರವಾಗಿ ನೇಯಬೇಕೆಂತೆ ತಿಳಿಸಿದರು.

ಜಪಾನ್ ದೇಶದಲ್ಲಿ ತಯಾರಾಗುವ ಕಾಲುಚೀಲ ಮುಂತಾದವುಗಳ ವ್ಯಾಪಾರವು ಇಂಡಿಯಾ ದೇಶದಲ್ಲಿ ಪ್ರಬಲವಾಗುತ್ತಿದೆ. ಇದಕ್ಕೆ ಕಾರಣವೇನಂದರೆ, ಜಪಾನ್ ದೇಶೀಯರು ಈ ಸಾಮಾನುಗಳನ್ನು ತಯಾರಿಸುವುದರಲ್ಲಿ ಹೆಚ್ಚು ಕೌಶಲ್ಯವನ್ನು ತೋರಿಸುತ್ತಿರುವರು. ಇವರು ಉಪಯೋಗಿಸುವ ಯಂತ್ರಗಳು ಮತ್ತು ಇವುಗಳಲ್ಲಿ ಕೆಲಸಮಾಡುವ ವಿಧಾನವು ಕೇವಲ ಸುಲಭವಾ... ... ವಿಶೇಷ ಖರ್ಚಿಲ್ಲದೆ ಮಾಡಬಹುದು. ಅಲ್ಲಿ ಕೂಲಿ ಜನರು ಸಹ ಸುಲಭವಾಗಿ ಸಿಕ್ಕುತ್ತಾರೆ. ಇಷ್ಟೇ ಅಲ್ಲದೆ ಇದಕ್ಕೆ ಇಂಡಿಯಾ ದೇಶದಲ್ಲಿರುವ ಗಿರಾಕಿಯನ್ನು ಸಹ ಚನ್ನಾಗಿ ತಿಳಿದು ಮುಂದಿಟ್ಟು ಮಾಡಿಕೊಂಡಿರುತ್ತಾರೆ. ಜಪಾನ್ ಸರಕಾರದವರು ಇತರ ದೇಶಗಳಲ್ಲಿ ಈ ವ್ಯಾಪಾರವನ್ನು ಯಾವರೀತಿ ಪ್ರಚುರಪಡಿಸಬೇಕೆಂಬುವದನ್ನು ಕಸಬುಗಾರರಿಗೆ ಸಹಾಯ ಹೇಳಿಕೊಡುವರು. ಜಪಾನ್ ನ ಪಟ್ಟಣ ಈ ವ್ಯಾಪಾರವು ಬಹಳ ಜಾಗ್ರತೆಯಾಗಿ ಅಭಿವೃದ್ಧಿಗೆ ಬಂದಿರುತ್ತೆ. ೧೯೦೩ನೇ ಸಾಲಿನಲ್ಲಿ ೩೩,೦೦೦ ಪೌಂಡ್ ಬಾಳುವ ಸರಕುಗಳು ಅಲ್ಲಿಂದ ರಫ್ತಾದವು. ೧೯೦೭ರಲ್ಲಿ ೩,೭೬,೦೦೦ ಪೌಂಡ್ ಬಾಳುವ ಸರಕುಗಳು ರಫ್ತಾಗಿರುತ್ತೆ. (ಪೌಂಡಿಗೆ ೧೫ ರೂಪಾಯಿ ಬೆಲೆ) ಈ ಸರಕುಗಳಿಗೆ ಇಂಡಿಯಾ ದೇಶದಲ್ಲಿ ಗಿರಾಕಿ ಜಾಸ್ತಿಯಾಗಿರುವುದು.

ಬಾಲಕರ ಆಟಗಳು ನಡೆದವು. ಬಾಯಿಸ್ ಸ್ಕೂಲ್ ಹೆಡ್‌ಮಾಸ್ಟರ್ ಕೆ. ಚನ್ನಮಲ್ಲಪ್ಪನವರು ರಾಜಭಕ್ತಿಯನ್ನು ತೋರಿಸುವದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವೆಂದು ಇಂಗ್ಲೀಷ್ ಸಾರ್ವಭೌಮರವರಿಂದ ಪಡೆದ ಸೌಲಭ್ಯಲಾಭಗಳದೆಸೆಯಿಂದ ಅವರಲ್ಲಿ ರಾಜಭಕ್ತಿಯನ್ನು ತೋರಿಸುವದು ಅತ್ಯವಶ್ಯಕವೆಂದು ಗಂಭೀರವಾಗಿ ಸರಸವಾದ ಸಂಭಾಷಣೆಯನ್ನು ಮಾಡಿದರು. ಮತ್ತು ಅ. ಮಾ. ಜಿ. ಯಜ್. ರಾಮರಾಯರು ಇಂಗ್ಲೀಷರ ಆಳ್ವಿಕೆಯಿಂದ ಇಂಡಿಯಾದೇಶಕ್ಕೆ ಉಂಟಾದ ಪ್ರಯೋಜನ ವಿಷಯವಾಗಿ ಉಪನ್ಯಾಸಮಾಡಿದರು. ಅನಂತರ ಎಡ್ವರ್ಡ್ ಸಾರ್ವಭೌಮರವರ ಕ್ರಿ... ಸ್ವಾ...ನಾರೂಪವಾದ ಜಯಘೋಷವು ಮಾಡಲ್ಪಟ್ಟಿತು. ಸ್ಕೂಲ್ ವಿದ್ಯಾರ್ಥಿಗಳಿಗೆ ಇನಾಮ್ ಮತ್ತು ಮಿಠಾಯಿಗಳನ್ನು ನೆರದಿದ್ದ ದೊಡ್ಡ ಮನುಷ್ಯರುಗಳಿಗೆ ಹಾರ, ಪುಷ್ಪ, ಗಂಧ, ತಾಂಬೂಲಗಳು ಹಂಚುವದರಲ್ಲಿ ಯಂಪೈರ್ ಡೇ ಮಹೋತ್ಸವವು ಮುಗಿಯಿತು.

ಹಿಂದೂ ದೇಶಾಭಿವೃದ್ಧಿಯ ಗುಟ್ಟು.

ನಡತೆ.

ಮತ ಪರಿಷ್ಕಾರಕರಲ್ಲಿ ಅಗ್ರಗಣ್ಯನಾದ ಮಾರ್ಟಿನ್ ಲೂಥರನು—ಯಾವ ದೇಶವಾದರೂ ಪ್ರಸಿದ್ಧಿಯನ್ನು ಪಡೆಯಬೇಕಾದರೆ ಅದರಲ್ಲಿನ ಜನಗಳು ಯೋಗ್ಯರಾಗಿಯೂ ವಿದ್ಯಾವಂತರಾಗಿಯೂ ಶೀಲಸ್ವಭಾವ ಉಳ್ಳವರಾಗಿಯೂ ಇರಬೇಕು ಎಲ್ಲಾ ವಿಧವಾದ ಕೋಟೆ ಕೊತ್ತಳಗಳಿಗಿಂತಲೂ ರಾಜಾದಾಯಕ್ಕಿಂತಲೂ ಅಲಂಕಾರವಾದ ಕಟ್ಟಡಗಳಿಗಿಂತಲೂ ಯೋಗ್ಯರಾದ ಪ್ರಜೆಗಳೇ ದೇಶಾಭಿವೃದ್ಧಿಗೆ ಮೂಲ ಕಾರಣರೆಂದು ತಿಳಿಸಿರುತ್ತಾನೆ. ಮ್ಯಗಳ್ಳನಾಗಿರದೆ ಕೆಲಸ ಮಾಡುವವನೂ ಕೊಟ್ಟ ಭಾಷೆಯನ್ನು ...ವವನೂ ಸತ್ಯವನ್ನರಿತು ಕಾರ್ಯಭಾಗ ಮಾಡುವವನೂ ಜನ ಸನ ...ದಲ್ಲಿ ಮರ್ಯಾದೆಯನ್ನು ಸಂಪಾದಿಸುವುದು ಆಶ್ಚರ್ಯವಲ್ಲ. ಜನರೊಳಗೆ ಅ ಥವರ ಮೇಲೆ ಹೆಚ್ಚಾದ ಭರವಸವಿರುವುದು.

ಭೂಲೋಕದಲ್ಲಿ ... ...ರದವರೂ ಅಗಣ್ಯ ಶ್ರೀಮಂತರೂ ರಣಧೀರರೂ ತತ್ವಜ್ಞಾನಿಗಳೂ ಬದುಕಿರುವುದುಂಟು. ಆದರೆ ಇವರಿಗಿರುವ ಯಶಸ್ಸಿಗಿಂತ ನಡತೆಯೇ ಶ್ರೇಷ್ಠ. ಕಡೆಯಲ್ಲಿ ಹೃದಯಾಂತರ್ಯದಲ್ಲಿ ಹುಟ್ಟುವ ನಡತೆಯೇ ಮನುಷ್ಯನ ಜೀವಮಾನವನ್ನು ಕಾಪಾಡುವುದು. ವಿದ್ಯಾವಂತನು ಒಂದು ವೇಳೆ ಮೆಚ್ಚಿಕೆಗೆ ಯೋಗ್ಯನಾಗಿರಬಹುದು. ಆದರೆ ಗುಣವಂತನು ಎಲ್ಲರ ಅನುಸರಣೆಗೆ ಪಾದರಿಯಾಗಿರುತ್ತಾನೆ. ಭೂಲೋಕದಲ್ಲಿ ಪ್ರಖ್ಯಾತನೆನ್ನಿಸಿಕೊಳ್ಳುವವರು ಕೆಲವರೇ ಆಗಿರುತ್ತಾರೆ. ಎಲ್ಲರೂ ಮಹ...ಗಳಾಗುವುದು ಅಸಾಧ್ಯವಷ್ಟೆ. ಆದರೆ ಎಲ್ಲರೂ ಗುಣವಂತರಾಗಬಹುದು. ನಡತೆಯು ನಮ್ಮ ಪ್ರತಿ ದಿನದ ಕೆಲಸ ಕಾರ್ಯಗಳಲ್ಲಿ ತೋರ್ಪಡಿಸಿಕೊಳ್ಳತಕ್ಕ ಗುಣವಾಗಿರುತ್ತದೆ.

ಆಬೆಟ್ ಎಂಬ ಪಂಡಿತನು ಇಂಗ್ಲಾಂಡ್ ದೇಶದ ಪ್ರಧಾನ ಗುರುವಾಗಿದ್ದನು. ಈತನು ತನ್ನ ಸ್ನೇಹಿತನಾದ ಟಾಮಸ್ ಸಾಕ್ಲಿ ಎಂಬುವನ ವಿಷಯ ಮಾತನಾಡುವಾಗ್ಗೆ ಈ ರೀತಿ ತಿಳಿಸಿರುತ್ತಾನೆ. ನನ್ನ ಸ್ನೇಹಿತನು ಮಂತ್ರಿಯಾಗಿದ್ದನೆಂಬುದಾಗಲಿ ಇಲ್ಲವೆ ಕವಿಶ್ರೇಷ್ಠನಾಗಿದ್ದನೆಂಬುದಾಗಲಿ ನಾನು ತಿಳಿಸಿ ಸಂತೋಷಪಡುವದಿಲ್ಲ. ಆದರೆ ಆ... ಅಶ್ಚರ್ಯವಾದ ಗುಣಗಳಿದ್ದವು. ಅವನು ತನ್ನ ...ಯನ್ನು ತನ್ನಂತೆ ಪ್ರೀತಿಸುತ್ತಿದ್ದನು. ತನ್ನ ಮಕ್ಕಳಿಗೆ ದಯಾಳು ... ಗಳನ್ನು ಕಲಿಸುತ್ತಿದ್ದನು. ತಾನು ಕೊಟ್ಟ ಭಾಷೆ... ...ಗೆ ಒಂದು ವೇಳೆ ಅಸ್ತಿ...

* * *

ಪರ್ಷಿಯಾ ದೇಶದಲ್ಲಿ ಅಂಕುಶವುಳ್ಳ ಪ್ರಭುತ್ವವು ಏರ್ಪಾಡಾಗುವಂತಿದೆ. ...ಕೀಯ ಸಭೆಗೆ ೧೨೦ ಜನರನ್ನು ಚುನಾಯಿಸಬಹುದೆಂದು ಷಾರವರು ತಿಳಿಸಿರುತ್ತಾರೆ. ಆದರೆ ಜನರೂ ಕ್ರೈಸ್ತರೂ ಯೆಹೂದ್ಯರೂ ತಮ್ಮ ಕಡೆ ಒಬ್ಬೊಬ್ಬ ಪ್ರತಿನಿಧಿಯನ್ನು ಚುನಾಯಿಸಿಕೊಳ್ಳುವಂತೆ ಅಪ್ಪಣೆಯಾಗಿದೆ.

* * *

ಇಂಗ್ಲಾಂಡ್ ದೇಶದಲ್ಲಿ ಕಾವ್ಯಗಳನ್ನು ರಚಿಸುವುದರಲ್ಲಿ ಪ್ರಸಿದ್ಧನಾದ ಜಾರ್ಜ್ ಮರಿಡಿತನೆಂಬ ಪಂಡಿತನು ಕಾಲವಾಗಿ ಕೆಲವು ದಿನಗಳಾದುವು. ಇವನ ದೇಹವನ್ನು ತನ್ನಿಷ್ಟದ ಪ್ರಕಾರ ದಹನ ಮಾಡಿದರು. ಇಂಥಾ ಪ್ರಸಿದ್ಧನಾದ ವಿದ್ವಾಂಸನನ್ನು ಕಳೆದು ಕೊಂಡದ್ದಕ್ಕಾಗಿ ಚಕ್ರವರ್ತಿಗಳು ತಮ್ಮ ವ್ಯಸನವನ್ನು ಸೂಚಿಸಿರುತ್ತಾರೆ.

* * *

ಜಪಾನ್ ದೇಶದ ರಾಜವಂಶಕ್ಕೆ ಸೇರಿದ ನಾಶಿಮಟೊ ಮತ್ತು ಇವರ ಪತ್ನಿಯವರು ಜರ್ಮನಿ ದೇಶಕ್ಕೆ ಹೋಗಿ ಅಲ್ಲಿನ ಚಕ್ರವರ್ತಿಗಳ ಆತಿಥ್ಯವನ್ನು ಸ್ವೀಕರಿಸಿರುವರು. ಸೋಮವಾರ ಇವರ ಎದುರಿನಲ್ಲಿ ಜರ್ಮನ್ ಸೈನ್ಯದ ಕವಾತು ನಡೆಯಿತು. ಚಕ್ರವರ್ತಿಯವರು ನಾಶಿಮಟೊ ರಾಜಪುತ್ರರಿಗೆ ಒಂದು ದೊಡ್ಡ ಬಿರುದನ್ನು ದಯಪಾಲಿಸಿದರು.

* * *

ಫ್ರಾನ್ಸ್ ದೇಶದ ಮಾರ್ಸೇಲ್ಸ್ ಪಟ್ಟಣದಲ್ಲಿ ಕೆಲಸಮಾಡುತ್ತಿದ್ದ ನಾವಿಕರುಗಳು (ಹಡಗು ನಡಿಸುವವರು) ಕೆಲಸಕ್ಕೆ ಹೋಗದೆ ಮುಷ್ಕರಹಿಡಿದಿರುವದರಿಂದ ನಾಲ್ಕು ಸಾವಿರ ಪ್ರಯಾಣಿಕರು ಪ್ರಯಾಣಮಾಡದೆ ನಿಂತುಹೋಗಿರುತ್ತಾರೆ. ಇವರಲ್ಲಿ ಕೆಲವರಿಗೆ ನಿದ್ರೆಮಾಡುವುದಕ್ಕೆ ಸ್ಥಳವಿಲ್ಲದೆ ಹೊರಗ ಭೂಮಿಯ ಮೇಲೆ ಬಿದ್ದುಕೊಂಡು ನಿದ್ರಿಸುವರು.

* * *

ಸ್ಕಾಟ್ಲೆಂಡ್ ದೇಶದ ರಾಜಧಾನಿ ಪಟ್ಟಣವಾದ ಎಡಿಂಬರೋನಲ್ಲಿ ಪಾರ್ಸಿ ಜನಗಳು ಒಂದು ಕೂಟವನ್ನು ಏರ್ಪಡಿಸಿಕೊಂಡಿರುತ್ತಾರೆ. ಈ ಕೂಟಕ್ಕೆ ಸಂಬಂಧಪಟ್ಟ ಒಂದು ಕಟ್ಟಡವು ಇರುವುದು. ಈ ಕಟ್ಟಡದ ಖರ್ಚಿಗಾಗಿ ಬೊಂಬಾಯಿ ವರ್ತಕರಲ್ಲಿ ಪ್ರಸಿದ್ಧರಾದ ಮೆ. ಬರೋಚಾರವರು ಹದಿನೈದು ಸಾವಿರ ರೂಪಾಯಿಗಳನ್ನು ಕೊಟ್ಟಿರುವರು.

* * *

ನ್ಯೂಫೌಂಡ್‌ಲ್ಯಾಂಡಿನ ಪಶ್ಚಿಮ ಸಮುದ್ರದ ಮೇಲೆ ಹಿಮದ ಬೆಟ್ಟಗಳೋ ಪಾದಿಯಲ್ಲಿ ತೇಲುತ್ತಿರುವುದನ್ನು ಆ ಸಮುದ್ರದ ನಲ್ಲೀಸೋ ಭೂಕಂಪನಮಾದದೂ ಅಲ್ಲಿನ ಹಿಮದ ಗಡ್ಡೆಗಳು ವಿಶೇಷವಾಗಿ ತೇಲಿಕೊಂಡು ನಾವಿಕರಿಗೆ ಹೆಚ್ಚಾದ ಭೀತಿಯನ್ನುಂಟುಮಾಡುವ ಹಾಗೂ ಸಮಾಚಾರ ಬಂದಿರುವುದು. ಕಳೆದ ವಾರ ಈ ಮಂಜಿನಗಡ್ಡೆಗಳಿಗೆ ಎರಡು ಹಡಗುಗಳು ತಗಲಿ ಮುಳುಗಿಹೋದವು.

* * *

ವಿಲಾಯತಿಯಲ್ಲಿ ಕಾಲವಾದ ಜೇಮ್ಸ್ ಡಂಕನ್ ಎಂಬ ವ್ಯಾಪಾರಿಯು ಸುಮಾರು ಎಂಭತ್ತೆರಡು ಲಕ್ಷ ರೂಪಾಯಿನ ಆಸ್ತಿಯನ್ನು ಬಿಟ್ಟುಹೋಗಿದ್ದಾನೆ.

ಧೈರ್ಯವಾಗಿ ಹಾಕುವದು ದುರ್ಲಭ. ಇದಕ್ಕೆ ಕಾರಣವೇನೆಂದರೆ, ನಮ್ಮ ದೇಶದಲ್ಲಿ ಸಾಧಾರಣವಾಗಿ ನಡತೆಯಿಲ್ಲದಿರುವುದೇ. ಅನೇಕರು ತಾವಿಟ್ಟಿರುವ ಅಂಗಡಿಗಳಿಗೆ ವಿದೇಶೀಯರ ಹೆಸರಿಟ್ಟರೆ ಜನರು ಧಾರಾಳವಾಗಿ ಒಂದು ವ್ಯಾಪಾರ ಮಾಡುವರೆಂದು ನಂಬುತ್ತಾರೆ. ನಮ್ಮ ದೇಶದ ಅಂಗಡಿಗಳಲ್ಲಿ ಚೌಕಶೀಮಾಡುವುದು ಸಾಧಾರಣವಷ್ಟೆ. ಇದರ ಕಾರಣವೇನು? ವ್ಯಾಪಾರಮಾಡುವವನ ಮೇಲೆ ನಂಬಿಕೆ ಇಲ್ಲದಿರುವುದೇ ಇದಕ್ಕೆ ಕಾರಣವಾಗಿರುತ್ತದೆ. ಸತ್ಯವಂತನಾದ ಅಂಗಡಿಯವನು ತನಗೆ ಬರತಕ್ಕ ನ್ಯಾಯವಾದ ಲಾಭವನ್ನು ಸೇರಿಸಿ ಪದಾರ್ಥಗಳನ್ನು ಒಂದೇ ಕ್ರಯಕ್ಕೆ ಯಾರಿಗಾದರೂ ಸರಿಯೆ ಮಾರುವುದು ನ್ಯಾಯವಾಗಿದೆ. ಆದರೆ ಯಾವಾಗ ವ್ಯಾಪಾರದಲ್ಲಿ ಅಸತ್ಯವೂ ಅಧರ್ಮವೂ ಸೇರಿಕೊಳ್ಳುವುದೋ ಅದೇ ಸಮಯದಲ್ಲಿ ದೇಶದೇಳಿಗೆಗೆ ಕಾರಣಭೂತರಾಗಿರುವ ವ್ಯಾಪಾರಿಗಳು ಕ್ಷೀಣದಶೆಗೆ ಬರುವರು. ದರ್ಜಿಗಳು, ಚಿನಿವಾರರು, ಅಕ್ಕಸಾಲಿಗರು, ಕಟ್ಟಡಕೆಲಸ ಮಾಡುವವರು, ಕಮ್ಮಾರರು ಮತ್ತು ಉದ್ಯೋಗದಲ್ಲಿಯೂ ನಡೆನುಡಿ ಕ್ರಿಯೆಗಳಲ್ಲಿಯೂ ಯೋಗ್ಯರಾಗಿರದೇ ಹೋದರೆ ದೇಶವು ಉನ್ನತಸ್ಥಿತಿಗೆ ಬರಲಾರದು. ಪೋಲೀಸಿನವರು, ವಿದ್ಯಾವಂತರಾದ ಲಾಯರುಗಳು, ವೈದ್ಯರು, ನ್ಯಾಯಾಧೀಶರು, ಅದ್ಭುತವಾದ ನಡತೆಯುಳ್ಳವರಾಗಿರಬೇಕಾಗಿರುತ್ತದೆ.

ನಡತೆ ಇಲ್ಲದೆ ಹೋದರೆ ಯಾವ ಕಾರ್ಯವಾದರೂ ಬಿದ್ದು ಹೋಗುವುದು. ನಡತೆ ಇಲ್ಲದವನು ದೇಶೋನ್ನತಿಯನ್ನು ಬಯಸುವುದು ವ್ಯರ್ಥ. ಪುರಾತನ ಗ್ರೀಸ್ ದೇಶದಲ್ಲಿ ಜನರು ನಾಟಕಗಳನ್ನು ನೋಡುವುದಕ್ಕೆ ತಂಡೋಪತಂಡವಾಗಿ ಹೋಗುತ್ತಿದ್ದರು. ಒಂದಾನೊಂದು ದಿನ ನಾಟಕವಾಗುತ್ತಿರುವಾಗ್ಗೆ ಒಬ್ಬ ಸತ್ಯಸಂಧನ ವಿಷಯ ಗಾನವಾಯಿತು. ನಾಟಕದಲ್ಲಿದ್ದವರೆಲ್ಲರೂ ಗಾನವನ್ನು ಕೇಳಿ ಅಲ್ಲಿಗೆ ಬಂದಿದ್ದ ಒಬ್ಬ ಅಧಿಕಾರಿಯ ಮುಖವನ್ನು ನೋಡುತ್ತಿದ್ದರಂತೆ. ಆ ಅಧಿಕಾರಿಯು ತನ್ನ ನಡತೆಯಲ್ಲಿ ಶ್ರೇಷ್ಠನಾದುದರಿಂದಲೇ ಜನರೆಲ್ಲರೂ ಅವನ ಕಡೆಗೆ ತಿರುಗಿ ನೋಡುತ್ತಿದ್ದರು. ನಮ್ಮ ದೇಶೀಯ ಪ್ರಮುಖರಲ್ಲಿ ಇಂಥಾ ನಡತೆಯು ಅತ್ಯಾವಶ್ಯಕವಾಗಿದೆ. ವಿದೇಶೀಯರನ್ನು ದೂಷಿಸಿದರೆ ಪ್ರಯೋಜನವೇನು? ಹಾಗೆ ಮಾಡುವುದರಿಂದ ಈ ದೇಶವು ಉತ್ಕೃಷ್ಟಸ್ಥಿತಿಗೆ ಬರಲಾರದು. ಆದರೆ ಸ್ವಂತ ನಡತೆಯನ್ನು ತಿದ್ದಿ ಸರಿ ಪಡಿಸಿಕೊಂಡು ಅದನ್ನು ಅಭಿವೃದ್ಧಿಗೆ ತರುವುದೇ ದೇಶಾಭಿವೃದ್ಧಿಗೆ ಮೊದಲನೇ ಅಂತಸ್ತಾಗಿದೆ.

ವ್ಯವಸಾಯ ಶಾಸ್ತ್ರ.

ಸಂಕ್ಷೇಪ ವಿಷಯಗಳು:—ವ್ಯವಸಾಯದ ಭೂಮಿಯ ತೂಕ

೧ ಉತ್ತಮವಾದ ತೋಟದ ಭೂಮಿಯ ಮಣ್ಣು ೧ ಘನ ಅಡಿಗೆ ೭೦ ಪೌನು ತೂಕವಾಗುತ್ತದೆ. ಇನ್ನೂ ಹೊಲ ಮುಂತಾದ ವ್ಯವಸಾಯದ ಜಮೀನು ೧ ಘನ ಅಡಿಗೆ ೮೦ ರ ಲಾಗಾಯಿತು ೯೦ ಪೌನು ತೂಕವಿರುತ್ತದೆ. ಮರಳು ೧೧೦ ಪೌನು ತೂಕವಿರುತ್ತದೆ.

೧ ಎಕರೆ ಜಮೀನು (ಅಡಿ ಆಳವಾಗಿ ಅಗೆದು ಆ ಮಣ್ಣೆಲ್ಲಾ ಸೇರಿಸಿ ತೂಕ ಮಾಡಿದರೆ ಭೂಮಿಯ ಸರಾಸರಿಗಣವಾಗಿ ೧೭ ಲಕ್ಷಗಳ ಲಾಗಾಯಿತು ೫೦ ಲಕ್ಷ ಪೌನು ತೂಕವಿರುತ್ತದೆ. ೧ ಎಕರೆಯ ೧ ಅಡಿ ಆಳದ ಮಣ್ಣು ನೀರಿಲ್ಲದೆ ಚನ್ನಾಗಿ ಒಣಗಿಸಿ ತೂಕ ಮಾಡಿದರೆ ೩೧ ಲಕ್ಷ ಪೌನುಗಳ ತೂಕವಿರುತ್ತೆ. ೧ ಇಂಚು ಮಳೆಯಿಂದ ೧ ಎಕರೆ ಮೇಲೆ ಬೀಳುವ ... ೧೦೦ ಟನ್ನುಗಳು ಅಂದರೆ ೩ ಲಕ್ಷ ... ಸಾವಿರ ಪೌನುಗಳ ತೂಕವಿರುತ್ತೆಂದು ವಿದ್ವಾಂಸರು ನಿರ್ಣಯಿಸಿ ಬರೆದಿದ್ದಾರೆ.

... ಚನ್ನಾಗಿ ಒಣಗಿದ ಭೂಮಿಯ ಮೇಲೆ ... ಇದ ಅಂದರೆ ... ಇಂಚು ಮಾಡಿರುವರು. ಆದರೆ ಅಲ್ಲ ... ...ಯುತ ದೆಂದು ...

ಅವರನ್ನು ತುರ್ಕೀ ರಾಜ್ಯದ ಹತ್ತಿರವಿರುವ ದ್ವೀಪ ಸಮುದಾಯಗಳಿಗೆ ಗಡೀಪಾರು ಮಾಡಬೇಕೆಂದು ತುರ್ಕೀ ಹೊಸ ಸರಕಾರದವರು ಯೋಚಿಸುತ್ತಿರುತ್ತಾರೆ.

* * *

ತುರ್ಕೀ ಸುಲ್ತಾನರಾದ ಅಬ್ದುಲ್ ಹಾಮಿದರು ಸೆರೆಯಲ್ಲಿರುವರಷ್ಟೆ. ಹೊಸ ಸರಕಾರದವರು ಅವರು ವಾಸವಾಗಿದ್ದ ಅರಮನೆಯ ಕೊಠಡಿಗಳನ್ನೆಲ್ಲಾ ಪರಿಶೋಧಿಸಿದಾಗ್ಗೆ ಅವರಿಗೆ ವಿಶೇಷವಾದ ಎರಡು ಕಾಗದ ಪತ್ರಗಳು ಸಿಕ್ಕಿದವಂತೆ. ಒಂದನೇ ಪತ್ರದಲ್ಲಿ ಚೀಫ್ ಸುಲ್ತಾನರು ಯಾರಯಾರ ಮೇಲೆ ಗುಮಾನಿ ಇಟ್ಟು ಹೊಂಚು ಕಾಯುತ್ತಿದ್ದರೋ ಅವರ ಹೆಸರುಗಳೆಲ್ಲವೂ ಬರೆದಿರುವುದು. ಎರಡನೇ ಪಟ್ಟಿಯಲ್ಲಿ ಸುಲ್ತಾನರಿಗೆ ಪ್ರತಿ ದಿನವೂ ಇದ್ದ ಮತ್ತು ಇಲ್ಲದ ಸಂಗತಿಗಳನ್ನು ತಂದು ಹೇಳುತ್ತಿದ್ದ ಚಾಡಿಗಾರರ ಸಮಾಚಾರವೆಲ್ಲಾ ಬರೆದಿರುವುದು. ಹೊಸ ಸರಕಾರದವರು ಆ ಪಟ್ಟಿಗಳಿಗೆ ಕಾರಣಭೂತರಾದ ಜನಗಳಿಗೆ ಏನುಮಾಡುವರೋ ತಿಳಿಯದು.

* * *

ಲಂಡನ್ ಮಹಾನಗರದಲ್ಲಿ ಪತ್ರಿಕಾಕರ್ತರ ಪರಿಷತ್ತು ಹೋದ ಶನಿವಾರ ಪ್ರಾರಂಭವಾಯಿತು. ಬ್ರಿಟಿಷ್ ಚಕ್ರಾಧಿಪತ್ಯದ ನಾನಾ ದೇಶಗಳಿಂದ ಪ್ರತಿನಿಧಿಗಳು ಹಾಜರಾಗಿದ್ದರು. ವಿಲಾಯಿತಿಯ ೬೦೦ ಪತ್ರಿಕಾ ಪ್ರತಿನಿಧಿಗಳು ಸಹ ಕೂಟದಲ್ಲಿ ಹಾಜರಾಗಿದ್ದರು. ಬ್ರಿಟಿಷ್ ವಸತಿಗಳಿಂದ ಹೋಗಿರುವ ಪ್ರತಿನಿಧಿಗಳಿಗೆ ಅನೇಕತರವಾದ ಸೌಕರ್ಯಗಳನ್ನು ಏರ್ಪಡಿಸಿರುತ್ತಾರೆ. ಚಕ್ರವರ್ತಿಸಾರ್ವಭೌಮರು ಮೇಲ್ಕಂಡ ಪರಿಷತ್ತಿಗೆ ಸಂಬಂಧಪಟ್ಟ ಪ್ರತಿನಿಧಿಗಳಿಗೆಲ್ಲಾ ಒಂದು ದಿನ ತಮ್ಮ ಅರಮನೆಯಲ್ಲಿ ಸತ್ಕರಿಸುವರು. ಆಲ್ಡರ್‌ಷಾಟ್ ಎಂಬ ಸ್ಥಳದಲ್ಲಿ ಪ್ರತಿನಿಧಿಗಳು ನೋಡುವದಕ್ಕಾಗಿ ಅನೇಕ ಸಾವಿರ ಸಿಪಾಯಿಗಳು ಕವಾಯಿತುಮಾಡುವರು. ಯುದ್ಧದ ಹಡಗು ಸೈನ್ಯದ ಕವಾತು ಸಹ ನಡೆಯುವುದು. ಆಕ್ಸ್‌ಫರ್ಡ್ ಕಲಾಶಾಲೆಗೆ ಪ್ರತಿನಿಧಿಗಳು ಬಂದು ಆತಿಥ್ಯ ಸ್ವೀಕರಿಸುವಂತೆ ಲಾರ್ಡ್ ಕರ್ಜನ್ ಪ್ರಭುಗಳು ಕೇಳಿಕೊಂಡಿರುತ್ತಾರೆ. ಪ್ರತಿನಿಧಿಗಳು ಇಂಗ್ಲಾಂಡ್ ದೇಶದ ದೊಡ್ಡ ದೊಡ್ಡ ಊರುಗಳಿಗೆ ಹೋಗಿ ನೋಡತಕ್ಕದ್ದನ್ನೆಲ್ಲಾ ನೋಡುವರು. ಪರಿಷತ್ತು ಪ್ರಾರಂಭವಾದ ದಿನ ಇಂಗ್ಲಾಂಡ್ ದೇಶಕ್ಕೆ ಮಂತ್ರಿಶ್ರೇಷ್ಠರಾಗಿದ್ದ ಲಾರ್ಡ್ ರೋಸ್‌ಬರಿಯವರು ಅಗ್ರಾಸನವನ್ನು ವಹಿಸಿ ಹೃದಯಂಗಮವಾಗುವ ಒಂದು ಉಪನ್ಯಾಸವನ್ನು ಮಾಡಿದರು. ಅವರು ತಮ್ಮ ಉಪನ್ಯಾಸದಲ್ಲಿ ತಿಳಿಸಿದ್ದೇನೆಂದರೆ— ಇಂಗ್ಲಾಂಡ್ ದೇಶವು ತನ್ನನ್ನು ಭದ್ರವಾಗಿ ಕಾಪಾಡಿಕೊಳ್ಳಬೇಕಾಗಿದೆ. ಅನ್ಯ ದೇಶಗಳಲ್ಲಿ ಜನರು ವಿಪರೀತವಾದ ಯುದ್ಧಸನ್ನಾಹಗಳನ್ನು ಮಾಡುತ್ತಿರುವುದರಿಂದ ಇಂಗ್ಲಾಂಡ್ ದೇಶವು ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡುತ್ತಿರುವುದು. ಬ್ರಿಟಿಷ್ ಪ್ರಜೆಯಾಗಿರುವ ಪ್ರತಿಯೊಬ್ಬನೂ ತನ್ನ ದೇಶವನ್ನು ಕಾಪಾಡುವುದು ತನ್ನ ಕರ್ತವ್ಯವೆಂದು ಭಾವಿಸಬೇಕು. ಇಲ್ಲಿ ಸೇರಿರತಕ್ಕ ಸಂಘವು ಬಹು ವಿಶೇಷವಾದುದು. ಮಂತ್ರಿ

ಸಾಧಾರಣವಾಗಿ ಗಿಡದಿಂದ ಗಿಡಕ್ಕೆ ೧೫—೧೬ ಅಡಿ ಬಿಟ್ಟಿರಬೇಕು. ಈ ರೀತಿ ಎಕರೆಗೆ ೧೯೩ ಗಿಡಗಳನ್ನು ನಾಟಬಹುದು. ಎಷ್ಟು ದೂರದೂರವಾಗಿ ನಾಟಿದರೆ ಅಷ್ಟು ಒಳ್ಳೇದು. ಸಿಂಪೆತೋಟವು ೮—೧೦ ವರುಷಗಳಲ್ಲಿ ಪೂರ್ತಿಯಾಗಿ ಫಲಕ್ಕೆ ಬರುತ್ತದೆ.

ಸಿಂಪೆ ಮರಗಳಿಗೆ ವಿಶೇಷ ಕಸಿಮಾಡುವುದು ಅವಶ್ಯವಿಲ್ಲ. ಆದರೆ ಬೇರುಗಳಲ್ಲಿ ಒಡೆಯುವ ಕೌಲುಗಳನ್ನು ಮತ್ತು ಒಣಗಿದ ಕೊಂಬೆಗಳನ್ನೆಲ್ಲಾ ತೆಗೆದು ಹಾಕಬೇಕು. ಮೇಲಿನ ಕೊಂಬೆಗಳೇ ಚೆನ್ನಾಗಿ ಬಲಿತುಕೊಂಡರೆ ಕೆಳಗಿನ ಎಳೆ ರೆಂಬೆಗಳನ್ನು ಕತ್ತರಿಸಿ ಗೊಬ್ಬರವಾಗಿ ಉಪಯೋಗಿಸಬಹುದು. ಸಿಂಪೆ ಹಣ್ಣುಗಳ ಸಿಪ್ಪೆಯನ್ನು ದನಕ್ಕೆ ತಿನ್ನಲಿಕ್ಕೊ ಅಥವಾ ಹವಿನಾಗೆ ಗೊಬ್ಬರಕ್ಕೊ ಹಾಕಬಹುದು. ಈ ವ್ಯವಸಾಯದಲ್ಲಿ ಪುಗಡ ಬೂದಿಯನ್ನು ಗೊಬ್ಬರವಾಗಿ ಉಪಯೋಗಿಸಬಹುದು.

ಗದ್ದೆಗಳಲ್ಲಿ ಕಳೆ ತೆಗೆಯುವುದು.

ಕ್ರಮವಾಗಿ ಕೆಸರುಮಾಡಿ ನಾಟಿ ಹಾಕಿದ ಗದ್ದೆಗಳಲ್ಲಿ ಸಾಮಾನ್ಯವಾಗಿ ಕಳೆ ವಿಶೇಷ ಬೆಳೆಯುವದಿಲ್ಲ. ಈ ಕಾರಣದಿಂದಲೇ ಕೆಲವು ಗದ್ದೆಗಳಲ್ಲಿ ಮಾತ್ರ ಬತ್ತವನ್ನು ನಾಟಿ ಹಾಕುತ್ತಾರೆ. ಕೆಲವು ಗದ್ದೆಗಳಲ್ಲಿ ಈ ರೀತಿ ಮಾಡುವದಿಲ್ಲ. ಇಂಥಾ ನಾಟಿ ಗದ್ದೆಗಳಲ್ಲಿಯೂ ಕೂಡ ಕಳೆ ಅಲ್ಪಸ್ವಲ್ಪ ಬೆಳೆಯುವದರಿಂದ ಫಸಲು ಉತ್ಪತ್ತಿಯು ಕಡಿಮೆಯಾಗುತ್ತದೆ. ಈ ಕಳೆಗಳು ಅನೇಕವಾಗಿ ಬತ್ತದ ಸಸಿಗಳೊಂದಿಗೆ ಸೇರಿಕೊಂಡು ಬೆಳೆಯುತ್ತವೆ. ಮತ್ತು ಒಂದಕ್ಕೊಂದಕ್ಕೆ ವ್ಯತ್ಯಾಸವೇ ತಿಳಿಯುವದಿಲ್ಲ. ಕಳೆ ಬೆಳೆಯುವದನ್ನು ತಪ್ಪಿಸಬೇಕಾದರೆ ಒಂದು ಉಪಾಯವನ್ನು ಮಾಡಬಹುದು. ಫಸಲು ಕಟಾವು ಮಾಡಿದನಂತರ ಒಳ್ಳೆ ತೆನೆಗಳನ್ನೇ ಕತ್ತರಿಸಿ ಮುಂದಲ ವರ್ಷದ ಬೀಜಕ್ಕೆ ಇವುಗಳನ್ನು ಪ್ರತ್ಯೇಕವಾಗಿ ಇಟ್ಟಿರಬೇಕು. ನಂತರ ಬೀಜಗಳು ಬೆರಕೆಯಾಗದ ರೀತಿ ಶುಚಿಯಾಗಿರುವ ಕಣದ ಒಂದು ಭಾಗದಲ್ಲಿ ಬಡಿದು ಬೀಜವನ್ನು ಕೂಡಿಡಬೇಕು. ಹೀಗೆ ಮಾಡುವುದರಿಂದ ಕಳೆ ಬೆಳೆಯುವದನ್ನು ತಪ್ಪಿಸಬಹುದಲ್ಲದೆ ಬಿತ್ತನೆ ಕೆಲಸಕ್ಕೆ ಸರ್ವೋತ್ತಮವಾದ ಬೀಜ ಒದಗಿ ಫಸಲು ಉತ್ಪತ್ತಿಯೂ ಸಹ ಹೆಚ್ಚುತ್ತದೆ. ಗದ್ದೆಗಳಲ್ಲಿ ಸಸಿಗಳನ್ನು ಗುತ್ತಿಗುತ್ತಿಯಾಗಿ ನಾಟದೆ ಒಂದೊಂದಾಗಿಯೇ ನಾಟುವ ವಿಧಾನವನ್ನು ಅನುಸರಿಸಿದರೂ ಕಳೆ ಬೆಳೆಯುವದು ಬಹಳ ಕಡಮೆಯಾಗುತ್ತದೆ. ನಾಟ ಮಾಡದೆ ಬೀಜ ಚೆಲ್ಲಿ ಪೈರು ಮಾಡುವ ಗದ್ದೆಗಳಲ್ಲಂತು ಕಳೆ ಕಸರು ಬೆಳೆಯುವದು ಹೆಚ್ಚು. ಇವು ಬತ್ತದ ಸಸಿಗಳಿಗಿಂತಲೂ ಜಾಗ್ರತೆ ಬೆಳೆಯುವದರಿಂದ ಬತ್ತದ ಸಸಿಗಳ ಬೆಳವಳಿಗೆ ತಡೆಯುಂಟಾಗುತ್ತದೆ. ಕೆರೆಗಳು ತುಂಬುವದಕ್ಕೆ ಪೂರ್ವ ಬತ್ತವನ್ನು ಎರಡು ಮೂರು ತಿಂಗಳುಕಾಲ ಕುಮ್ಕಿ ಪೈರಿನಂತೆ ಬೆಳೆಯುವ ಸಂದರ್ಭಗಳಲ್ಲಿ ಕೆಲವು ಕಡೆ ಬತ್ತವನ್ನು ಕೂರಿಗೆಗಳಲ್ಲಿ ಬಿತ್ತುತ್ತಾರಾದ ಪ್ರಯುಕ್ತ ಪೈರು ಸಾಲು ಸಾಲಾಗಿ ಬಂದು ಕಳೆ ಕೀಳುವ ಕೆಲಸವು ಬಹಳ ಸುಲಭವಾಗುತ್ತದೆ. ಹೀಗೆ ಕೂರಿಗೆಗಳಲ್ಲಿ ಬಿತ್ತುವ ವಾಡಿಕೆ ಇಲ್ಲದಿರುವ ಪ್ರದೇಶಗಳಲ್ಲೂ ಕೂಡ ನೇಗಿಲು ಸಾಲುಗಳಲ್ಲಿ ಬೀಜವನ್ನು ಗೇಣಿಗೆ ೩—೪ ರಂತೆ ಉದರಿಸಿ ಬಿತ್ತನೆ ಮಾಡಿದರೆ ಕಳೆ ತೆಗೆಯುವ ಕೆಲಸವು ಸುಲಭವಾಗುವುದು. ಈ ರೀತಿ ಚೆಲ್ಲಬೇಕಾದರೆ ಬೀಜವನ್ನು ಪುಡಿಮಣ್ಣಿನೊಂದಿಗೆ ಬೆರಸಿ ಹಾಕಿದಲ್ಲಿ ಒಂದೇ ಕಡೆ ಬೀಜಗಳು ಹೆಚ್ಚಾಗಿ ಬೀಳುವದಿಲ್ಲ. ನಾಗುವಳಿಗೆ ನೀರು ನಿರಧಾರವು ಆಗುವದಕ್ಕೆ ೩ ವಾರ ಅಥವಾ ಒಂದು ತಿಂಗಳಿಗೆ ಮುಂಚೆಯೇ ಬತ್ತದ ಬಿತ್ತನೆ ಮಾಡುವ ಪ್ರದೇಶಗಳಲ್ಲಿ ದಕ್ಷಿಣಕನ್ನಡಾ ಪ್ರಾಂತ್ಯದಲ್ಲಿ ರೂಢಿಯಲ್ಲಿರುವ ಕ್ರಮವು ಸರ್ವೋತ್ತಮವಾದದ್ದಾದಕಾರಣ ಅದನ್ನು ಅನುಸರಿಸಿದರೆ ಒಳ್ಳೇದು. ಅದೇನೆಂದರೆ, ಬೀಜದ ಬತ್ತವನ್ನು ಚೆನ್ನಾಗಿ ಕೊಳೆತ ಸೊಪ್ಪು ಮತ್ತು ದನದ ಗೊಬ್ಬರದೊಂದಿಗೆ ಬೆರಸಿ ಹಿಡಿಗೆ ೪—೫ ಬೀಜ ಇರುವಂತೆ ... ನಂತರ ಇದನ್ನು ನೇಗಿಲು ಮಕ್ಕರಿಗಳಲ್ಲಿ ತುಂಬಿ ...

ಅಮೇರಿಕಾ ದೇಶದ ಓರಿಗನ್ ಪಟ್ಟಣದಲ್ಲಿ ... ...ಳಾದ ಹೆಂಗಸಿರುವಳು. ಈಕೆಯು ೧೭೮೭ ನೇ ವರುಷದಲ್ಲಿ ಹುಟ್ಟಿದಳು. ಶ್ರೀರಂಗಪಟ್ಟಣವನ್ನು ಇಂಗ್ಲೀಷರು ಹಿಡಿದುಕೊಂಡಾಗ್ಗೆ ಈಕೆಗೆ ಹನ್ನೆರಡು ವರುಷ ವಯಸ್ಸಾಗಿತ್ತು. ಅಮೇರಿಕಾ ದೇಶಕ್ಕೆ ಮೊದಲು ರೈಲ್ ರಸ್ತೆ ಹಾಕಿದಾಗ್ಗೆ ಈಕೆಗೆ ೪೦ ವರುಷ ವಯಸ್ಸಾಗಿತ್ತು. ಈಕೆಯ ಮಗಳಿಗೆ ಸಾಯುವಾಗ್ಗೆ ೯೦ ವರುಷ ವಯಸ್ಸಾಗಿತ್ತು. ಈಕೆಗೆ ಈಗ್ಗೆ ೧೨೨ ವರುಷ ವಯಸ್ಸಿರುವುದು.

ಲಂಡನ್ ಪಟ್ಟಣದಲ್ಲಿ ಕಿವುಡರಿಗೂ ಮೂಕರಿಗೂ ಒಂದು ಪ್ರಸಿದ್ಧವಾದ ದೇವಾಲಯವಿರುವುದು. ಅವರಲ್ಲಿ ದೇವಾರಾಧನೆಗೆ ಸುಮಾರು ೨,೦೦೦ ಭಕ್ತಾದಿಗಳು ಪ್ರತಿವಾರವೂ ಸೇರುವರು. ಇವರಿಗೆ ಪ್ರಸಂಗ ಮಾಡುವುದಕ್ಕೆ ಅಭಿನಯಗಳಲ್ಲಿ ಪ್ರಸಿದ್ಧರಾದ ಒಬ್ಬ ಪಾದ್ರಿಯವರಿರುವರು. ಇವರು ಅಭಿನಯಗಳಿಂದಲೇ ತಮ್ಮೆದುರಿನಲ್ಲಿರುವ ಸಭಿಕರಿಗೆ ಪ್ರಸಂಗಮಾಡುವರು. ದೇವಾರಾಧನೆಯು ಮುಗಿದ ಮೇಲೆ ಮೇಲ್ಕಂಡ ಕಿವುಡ ಮೂಕ ಸಭೆಯವರು ಸೌಜ್ಞೆಗಳ ಮೂಲಕ ಒಬ್ಬರ ಸಂಗಡಒಬ್ಬರು ಮಾತನಾಡಿಕೊಳ್ಳುವರು.

ತಂತಿ ಇಲ್ಲದೆ ಸಮಾಚಾರಗಳನ್ನು ಕಳುಹಿಸುವ ಉಪಾಯವನ್ನು ಮಾರ್ಕೋನಿ ಎಂಬ ಶಾಸ್ತ್ರಜ್ಞನು ಕಂಡು ಹಿಡಿದಿರುವನಷ್ಟೆ. ಇವನ ರೀತಿಯ ಪ್ರಕಾರ ವಿದ್ಯುಚ್ಛಕ್ತಿಯು ದೂರದಲ್ಲಿಟ್ಟಿರುವ ಸೂಕ್ಷ್ಮ ಯಂತ್ರದ ಸೂಜಿಯನ್ನು ತಿರುಗಿಸಿ ಸಂಜ್ಞೆ ಮಾಡುವುದು. ಅದರ ಸಂಜ್ಞೆಯನ್ನು ನೋಡಿ ಅದು ಸೂಚಿಸುವ ಅಕ್ಷರಗಳನ್ನು ಬರೆದು ಓದಿಕೊಳ್ಳುತ್ತಿರುವರು. ಈಚೆಗೆ ಇಬ್ಬರು ಫ್ರೆಂಚ್ ಶಾಸ್ತ್ರಜ್ಞರು ತಂತಿಯ ಸಹಾಯವಿಲ್ಲದೆ ವಿದ್ಯುಚ್ಛಕ್ತಿಯು ಸಮಾಚಾರಗಳನ್ನು ಕೈಬರವಣಿಗೆಯಂತೆ ಬರೆದುಕೊಡುವ ಉಪಾಯವನ್ನು ಕಲ್ಪಿಸಿರುವರು.

ಲಂಡನ್ ಪಟ್ಟಣದ ಮಾರ್ಕೆಟ್ಟಿನಲ್ಲಿ ಧರ್ಮಕಾರ್ಯಗಳಿಗಾಗಿ ಚಂದಾ ಕೂಡಿಸುವುದಕ್ಕೆ ಒಂದು ಬಾತನ್ನು ಸಾಕಿರುತ್ತಾರೆ. ಈ ಬಾತಿನ ಕುತ್ತಿಗೆಗೆ ಒಂದು ಕುಕ್ಕೆಯು ಕಟ್ಟಲ್ಪಟ್ಟಿರುವುದು. ಯಾವ ಯಾವ ಧರ್ಮಕಾರ್ಯಗಳಿಗೆ ಹಣವು ವಿನಿಯೋಗಿಸಲ್ಪಡಬೇಕೋ ಅದನ್ನು ಒಂದು ತುಂಡುಕಾಗದದಲ್ಲಿ ಬರೆದು ಕುಕ್ಕೆಯ ಮೇಲೆ ಅಂಟಿಸುತ್ತಾರೆ. ಮಾರ್ಕೆಟ್ಟಿಗೆ ಹೋಗುವ ಜನರ ಮುಂದೆ ಈ ಬಾತು ಹಾರಿಹೋಗಿ ನಿಂತುಕೊಳ್ಳುವುದು. ಮನುಷ್ಯರು ಕುಕ್ಕೆಯ ಮೇಲ್ಗಡೆ ಅಂಟಿಸಿರುವ ಚೀಟಿಯನ್ನು ಓದಿ ಕುಕ್ಕೆಯೊಳಕ್ಕೆ ಹಣವನ್ನು ಹಾಕುವರು. ಮೇಲ್ಕಂಡ ಬಾತು ಈ ರೀತಿ ಎರಡು ಸಾವಿರ ಹಣವನ್ನು ಧರ್ಮಕಾರ್ಯಗಳಿಗೆ ಕೂಡಿಸಿರುವುದು.

ದೊಡ್ಡಬಳ್ಳಾಪುರ.—೩ ನೇ ತಾರೀಖಿನಲ್ಲಿ ಒಂದು ಹದ ಮಳೆಯಾಯಿತು. ಬೆಂಗಳೂರಿನ ವಿಜಯರಾಘವಶೆಟ್ಟರೆಂಬವರು ರಾಜಗೆಟ್ಟದ ಆಂಜನೇಯಸ್ವಾಮಿಯ ಉತ್ಸವವನ್ನು ತಾ ೨೩ ರಲ್ಲಿ ಬಹು ವಿಜೃಂಭಣೆಯಾಗಿ ಮಾಡಿಸಿದರು. ಅದಿನ ಈ ಜಾತ್ರೆಗೆ ಸಾವಿರಾರು ಜನ ಸೇರಿದ್ದರು. ಬ್ರಾಹ್ಮಣರಿಗೂ, ಲಿಂಗಾಯಿತರಿಗೂ, ಒಕ್ಕಲಿಗರಿಗೂ, ಇನ್ನು ಕೆಲವು ಜಂಗಮರವರಿಗೂ ಭೋಜನಮಾಡಿಸಿದ್ದರು. ಇದಲ್ಲದೆ ಕೋತಿಯವರಿಗೂ ವಾದಿಗರಿಗೂ ಬಡಜನರಿಗೂ ತಿಂಡಿ ಹಾಕಿಸುವ ಸುದ್ದಿಯನ್ನು ಹುಟ್ಟಿಸಿದ್ದರಂತೆ. ಆದರೆ ಈ ಪಾಪಿ ಜನರು ಗಳು ಅನ್ನದ ಆಶೆಯಿಂದ ಬಂದು ನಿರಾಶೆಯಾಗಿ ಹೊರಟುಹೋದರಂತೆ. ದೊಡ್ಡಬಳ್ಳಾಪುರದಲ್ಲಿ ಇರುವ ನಗರ್ತರ ದೊಡ್ಡಮನುಷ್ಯರು ಈ ಪ್ರೈಕಿ ಎಲ್ಲರೂ ಸೇರಿ, ನಗರೇಶ್ವರನ ಉತ್ಸವವನ್ನು ಬಹು ಸಂಭ್ರಮದಿಂದ ನಡಿಸುವದಕ್ಕೆ ಎಲ್ಲಾ ಕಾರ್ಯಗಳನ್ನು ಮಾಡುತ್ತಾ ಇದ್ದಾರೆ. ಈಗ ದೇವಸ್ಥಾನಗಳಿಂದ ದೇವದಾಸಿಗಳನ್ನು ಸರ್ಕಾರದವರು ವಜಾ ಮಾಡಿರುವದು ಸಜ್ಜನರಿಗೆ ತುಂಬಾ ಸಂತೋಷವಾಯಿತು. ಆದರೆ ಸಾಹುಕಾರ ದೇವಸ್ಥಾನಗಳಿಂದ ದೇವದಾಸಿಯರನ್ನು ಸಾಹುಕಾರ ದೊಡ್ಡಮನುಷ್ಯರು ಇನ್ನೂ ವಜಾಮಾಡಿದಹಾಗೆ ಕಾಣಲಿಲ್ಲವಾದ್ದರಿಂದ ಘನವುಳ್ಳ ಸರ್ಕಾರದವರು ಸತ್ಕವಿತು ನಾಡಿರುವ ರೀತಿಯನ್ನು ಸಾಹುಕಾರಿ ದೊಡ್ಡಮನುಷ್ಯರು ಸಹ ದೀರ್ಘವಾಗಿ ಯೋಚನೆಮಾಡಿ ದೇವದಾಸಿಯರನ್ನು ದೇವಸ್ಥಾನಗಳಿಂದ ವಜಾಮಾಡಿದರೆ ಎಷ್ಟೋ ಒಳ್ಳೇದು. ಕೆಲವು ದಿನಗಳ ಹಿಂದೆ ಪಶಾಶಿಪುರದಲ್ಲಿ ಒಬ್ಬ ಮುಸಲ್ಮಾನರವನು ಗಲ್ಲಿಗೆಹಾಕಿಕೊಂಡು ಸತ್ತನು. ಕಸಾಗಟ್ಟದಲ್ಲಿ ಒಬ್ಬ ಶಿವಾಚಾರದವನನ್ನು ೨೭ನೇ ರಾತ್ರಿ ಮನೆ ನುಗ್ಗಿ ಖೂನ್ ಮಾಡಿದರು. ಹೆಂಡತಿಯು ಪಕ್ಕದಲ್ಲೇ ಇದ್ದಳಂತೆ. ಇವಳನ್ನು ಕೈ ಕಾಲು ಕಟ್ಟಿಹಾಕಿದ್ದರಂತೆ. ೩ ಜನರು ಸಿಕ್ಕಿ ಲಾಕಪ್ಪಿನಲ್ಲಿ ಇದ್ದಾರೆ.

ಬಾತ್ಮೀದಾರರಿಗೆ ನೋಟೀಸು

ಬಾತ್ಮೀದಾರರು ಪದುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿಟರ್.

ದೇವರ ಬೆಟ್ಟಗೆರೆ ವಾಸಸ್ಥರಿಂದ ಬಂದ ಬಾತ್ಮಿ.—ನೀವು ಯಾರಿಗೆ ಅರ್ಜಿ ಕೊಟ್ಟಿರುವಿರಿ? ನೀವು ಅಮಲ್ದಾರರಿಗೂ ಡೆಪ್ಯುಟಿಕಮಿಷನರಿಗೂ ಆಗುವ ಕಷ್ಟಗಳನ್ನು ಅರ್ಜಿಮೂಲಕ ತಿಳಿಸಿದರೆ ಪ್ರಯೋಜನವಾದೀತು.

ಮೈಸೂರು ಭಕ್ತಿ ನರಸಪ್ಪನವರ ಅಗ್ರಹಾರದಲ್ಲಿ ವಾಸವಾಡುವ ಬಾತ್ಮೀದಾರರಿಂದ ಬಂದ ಬಾತ್ಮಿ.—ವಿದ್ಯುಚ್ಛಕ್ತಿಯ ದೀಪಗಳು ಆಗಾಗ್ಗೆ ನಂದುಹೋಗುತ್ತಿದ್ದಕ್ಕೆ ಸರಿಯಾದ ಕಾರಣಗಳು ಕಂಡುಬಂದಿರುತ್ತವೆ. ತಂತಿಗಳನ್ನು ಮರಳ ಹತ್ತಿರ ಕಟ್ಟಿರುವುದರಿಂದ ಆಗಾಗ್ಗೆ ವಿದ್ಯುಚ್ಛಕ್ತಿಯು ನಂದುಹೋಗುತ್ತದೆ. ಸರಕಾರದವರು ಈಗ್ಗೆ ತಂತಿಗಳನ್ನು ದೂರವಾಗಿ ಪ್ರಾರಂಭಿಸುತ್ತಾರೆ. ಹೀಗೆ ಕಟ್ಟಿದ ಮೇಲೆ ಯಾವತರನಾದ ತೊಂದರೆ ಆಗ ಇರಲಾರದು.

ಕರೆಸ್ಪಾಂಡೆನ್ಸ್

ಸಾಲಿಗ್ರಾಮದ ತಿರೆಗೌಡನ ವಿಜ್ಞಾಪನೆಗಳು

ಅಯ್ಯಾ,

ನಾನು ಬುಡತೊರೆ ತಾಲ್ಲೂಕು ಸಾಲಿಗ್ರಾಮದಿಂದ ಸಂಜನಗೂಡಿಗೆ ದೇವರ ದರ್ಶನಕ್ಕಾಗಿ ಬಂದು ಈಗ್ಗೆ ೬ ದಿವಸಗಳಾಯಿತು. ಒಂದು ದಿನ ನಾನು ಪಿರಿ ತೀರಕ್ಕೆ ರಾತ್ರಿ ೧೦ ಘಂಟೆ ಸಮಯದಲ್ಲಿ ಹೋದೆನು. ಈ ಊರು ಟೌನ್‌ನಲ್ಲಿ ರಸ್ತೆಗೆ ಮುನಿಸಿಪಾಲಟಿ ಲಾಂದ್ರಗಳು ಮಿಂಚು ಹುಳಗಳಹಾಗೆ ಮಿಣುಗುಟ್ಟುತ್ತವೆಯೇ ಹೊರತು ಪ್ರಕಾಶವಾಗಿರುವದಿಲ್ಲ. ಈ ವಿಚಾರದಲ್ಲಿ ಮುನಿಸಿಪಲ್ ಇಲಾಖೆಯವರು ಗಮನಕೊಡದೆ ಇರುವದು ಬಹು ಅತೃಪ್ತಿಕರವಾಗಿರುತ್ತದೆ. ಸಾಲಿ ಮೋಡಕಾಲ ರಾತ ...

... ಸುತ್ತಾರೆ.

ಪಾಲ್ಘಾಟ್ ಮ್ಯುನಿಸಿಪಾಲಿಟಿಯವರು ಕುನ್ನೂರಿನಲ್ಲಿರುವ ಹುಚ್ಚು ನಾಯಿ ಕಡಿತಕ್ಕೆ ಔಷಧ ಹಾಕುವ ಆಸ್ಪತ್ರೆಗೆ ವರುಷಕ್ಕೆ ೫೦ ರೂಪಾಯಿ ಕೊಡುವಂತೆ ಒಪ್ಪಿರುತ್ತಾರೆ.

ಮೊರಾದಾಬಾದಿನಲ್ಲಿ ಮೂರು ಮಂದಿ ಮಹಮ್ಮದೀಯ ಮೌಲ್ವಿಗಳು ಲೈಸೆನ್ಸ್ ಇಲ್ಲದೆ ತಮ್ಮ ಹತ್ತಿರ ಬಂದೂಕ ಮೊದಲಾದ ಆಯುಧಗಳನ್ನು ಇಟ್ಟುಕೊಂಡಿದ್ದರೆಂದು ವಿಚಾರಣೆಗೆ ಗುರಿಯಾಗಿರುತ್ತಾರೆ.

ಇದೇ ತಿಂಗಳು ಮೂರನೇ ತಾರೀಖಿನಲ್ಲಿ ಪೂನಾ ಪಟ್ಟಣದಲ್ಲಿ ವಿಪರೀತವಾದ ಮಳೆಯಾಗಿ ಒಂದು ಮನೆಯು ಕುಸಿದು ಬಿದ್ದುಹೋಯಿತು. ಇದರಿಂದ ಒಬ್ಬನು ಒಳಕ್ಕೆ ಸಿಕ್ಕಿ ಮೃತನಾಗಿರುತ್ತಾನೆ. ಇನ್ನಿಬ್ಬರಿಗೆ ಜಖಂ ಆಗಿರುತ್ತದೆ.

ಬೊಂಬಾಯಿ ಸರಕಾರದಲ್ಲಿ ಶಪ್ರೀಮ್ ಡಿಪಾರ್ಟಮೆಂಟಿಗೆ ಸೇರಿದ್ದ ಮಿ ಜೋಷಿ ಎಂಬ ಮಹಾರಾಷ್ಟ್ರ ವಿದ್ವಾಂಸರು ವಿಸಜ್ಯರಿಂದ ತೀರಿಹೋದರು. ಮಿ ತಿಲಕರ ಮೊಕದ್ದಮೆ ನಡೆಯುವಾಗ್ಗೆ ಮಿ ಜೋಷಿಯವರು ಸರಕಾರದ ಪರವಾಗಿ ನಿಂತು ವಾದಿಸಿದರು.

ಪಾಳ್ಯಂಕೋಟೆಯಲ್ಲಿ ಶಿವುಡರ ಮತ್ತು ಮೂಕರ ಪಾಠಶಾಲೆಯನ್ನು ಕ್ರೈಸ್ತ ಪಾದ್ರಿಗಳು ಏರ್ಪಡಿಸಿ ನಡಿಸುತ್ತಿರುವರಷ್ಟೆ. ಈ ಪಾಠಶಾಲೆಗೆ ಕೊಯಂಬತ್ತೂರು ಮ್ಯುನಿಸಿಪಾಲಿಟಿಯವರು ಸಾಲಿಯಾನ ನೂರು ರೂಪಾಯಿಗಳನ್ನು ಕೊಡುವುದಾಗಿ ಒಪ್ಪಿರುತ್ತಾರೆ.

ಟಿಪ್ಪೆರಾಚೆಟ್ಟಿ ಸಂಸ್ಥಾನಕ್ಕೆ ಬಿರೇಂದ್ರಕಿಶೋರ್ ಮಾಣಿಕ್ಯ ಎಂಬವರನ್ನು ಮಹಾರಾಜರನ್ನಾಗಿ ಇಂಡಿಯಾ ಸರಕಾರದವರು ನೇಮಿಸಿರುತ್ತಾರೆ. ಈ ವಾರ್ತೆಯನ್ನು ಕೇಳಿ ಸದರಿ ಸಂಸ್ಥಾನದ ರಾಜಧಾನಿಯಾದ ಕೋಮಿಲ ಪಟ್ಟಣದಲ್ಲಿ ಜನರು ಉತ್ಸವಗಳನ್ನು ನಡಿಸಿದರು.

ಬೊಂಬಾಯಿಗೆ ಸೇರಿದ ಜ್ವರ ಮುನಿಸಿಪಾಲಿಟಿಯ ನೌಕರರು ತಮ್ಮ ವಶಕ್ಕೆ ಒಪ್ಪಿಸಲ್ಪಟ್ಟ ಹಣವನ್ನು ದುರುಪಯೋಗಪಡಿಸಿಕೊಂಡದ್ದರಿಂದ ಸದರಿ ಮ್ಯುನಿಸಿಪಾಲಟಿಯನ್ನು ಮೂರು ವರ್ಷಗಳ ತನಕ ಬರ್‌ತರಫ್ ಮಾಡಿದ ಯೆಂದು ಸರಕಾರಿ ಹುಕುಂ ಆಗಿರುತ್ತದೆ.

ಹೊಸದಾಗಿ ಏರ್ಪಡಿಸಿರುವ ರಾಜಕೀಯ ಸಂಗಗಳಲ್ಲಿಯೂ ಸರಕಾರಿ ಉದ್ಯೋಗಗಳಲ್ಲಿಯೂ ದೇಶೀಯ ಕ್ರೈಸ್ತರನ್ನು ಈಗಿರುವಕ್ಕಿಂತಲೂ ಹೆಚ್ಚಾಗಿ ನೇಮಿಸಿಕೊಳ್ಳಬೇಕೆಂದು ಅವರ ಪ್ರತಿನಿಧಿಗಳಾದ ರಾಜಾ ಸರ್ ಹರ್ನಾಮ್‌ಸಿಂಗರೂ ಕಾಲಿಚರಣಬಾನರ್ಜಿಯವರೂ ಯತ್ನಪಡುತ್ತಲಿರುವರು.

ಹೋದ ತಿಂಗಳು ಲಂಡನ್ ಪಟ್ಟಣದಲ್ಲಿ ಒಂದು ವಿಶೇಷವಾದ ಪಿಟೀಲು ಹರಾಜಿಗೆ ಬಂದಿತ್ತು. ಇದರ ಉದ್ದ ೧೪ ಅಂಗುಲ. ಇದನ್ನು ೧೬೯೯ ನೇ ವರುಷದಲ್ಲಿ ಮಾಡಿದಂತೆ ತೋರುತ್ತದೆ. ಇದನ್ನು ಪೀಲಿಕ್ಸ್ ವರ್ಮಾನ್ ಎಂಬವನು ೧೫ ಸಾವಿರ ರೂಪಾಯಿಗಳಿಗೆ ಕೊಂಡುಕೊಂಡನು.

ಲಕ್ನೋ ಪಟ್ಟಣದಲ್ಲಿ ಅರಬ್ಬಿ ಭಾಷೆಯನ್ನು ಕಲಿಯುವುದಕ್ಕೆ ಒಂದು ಕಲಾಶಾಲೆಯನ್ನು ಏರ್ಪಡಿಸುವರು. ಅಲಿಗಡ್ ಕಾಲೇಜಿನಲ್ಲಿ ಪಂಡಿತರಾಗಿದ್ದ ಮಿ. ಶಾಲ್‌ಮಹ್ ಮುಸೇನ್, ಎಂ. ಎ., ಯವರು ಸದರಿ ಕಲಾಶಾಲೆಯ ಮುಖ್ಯೋಪಾಧ್ಯಾಯರಾಗಿ ನೇಮಕನಾಗಿರುವರು.

ಕಾರ್ಕಳದಲ್ಲಿ ಅಸ್ಪೃಶ್ಯ ಗರ್ಣೆಯ ಪ್ರಮುಖರೆಲ್ಲರೂ ಸೇರಿ ಒಂದು ಕೋ ಆಪರೇಟಿವ್ ಸಹಾಯಕ ಸಂಘವನ್ನು ಏರ್ಪಡಿಸಿರುತ್ತಾರೆ. ಹೋದ ವಾರ ಕಾರ್ಕಳದ ಕಮಿಷನರಾದ ಮಿ ಪಿಂಕಾರ್ಡ್ ಎಂಬ ಆಂಗ್ಲೇಯ ದೊಡ್ಡ ಮನುಷ್ಯರು ಮೇಲ್ಕಂಡ ಸಂಗವನ್ನು ಪ್ರತಿಷ್ಠಿಸಿದರು. ಬಾಬು ಗೋಪಾಲಚಂದ್ರ ಬಾನರ್ಜಿಯವರು ಸಂಘದ ರಿಪೋರ್ಟನ್ನು ಬಹು ಸ್ವಾರಸ್ಯವಾಗಿ ಬರೆದು ಓದಿದರು.

ಹಿಂದೂ ದೇಶದಲ್ಲಿ ಇದುವರಿವಿಗೂ ಸರಕಾರದ ವೈದ್ಯ ಇಲಾಖೆಯಲ್ಲಿ ದೊಡ್ಡ ದೊಡ್ಡ ಉದ್ಯೋಗಗಳನ್ನು ವಿಲಾಯಿತಿಯಲ್ಲಿ ವೈದ್ಯ ಶಾಸ್ತ್ರವನ್ನು ಕಲಿತವರಿಗೆ ಮಾತ್ರ ಕೊಡುತ್ತಿದ್ದರು. ಆದರೆ ಇನ್ನು ಮುಂದಕ್ಕೆ ಇಂಡಿಯಾ ದೇಶದ ವೈದ್ಯ ಕಾಲೇಜುಗಳಲ್ಲಿ ಓದಿ ಪ್ರಶಸ್ತಿಯನ್ನು ಪಡೆದ ಜನಗಳಿಗೆ ಭಾರಿ ಉದ್ಯೋಗಗಳನ್ನು ಕೊಡುವುದಾಗಿ ಇಂಡಿಯಾ ಮಂತ್ರಿಗಳಾದ ಲಾರ್ಡ್ ಮಾರ್ಲಿಯವರು ತಿಳಿಸಿರುತ್ತಾರೆ.

ಅಂಡಮಾನ್ ದ್ವೀಪಕ್ಕೆ ಖೈದಿಗಳನ್ನು ಸಾಗಿಸಿಕೊಂಡು ಹೋಗುತ್ತಿರುವಲ್ಲಿ ಐದು ಮಂದಿ ಖೈದಿಗಳು ತಮ್ಮ ಮೇಲೆ ಉಸ್ತುವಾರಿ ಮಾಡುತ್ತಿದ್ದ ಗಾರ್ಡನ್ನು ಕಟ್ಟಿಹಾಕಿ ಹಡಗದಿಂದ ಒಂದು ದೋಣಿಯನ್ನು ಸಮುದ್ರದ ಮೇಲೆ ಇಳಿಸಿ ಅದರಲ್ಲಿ ಕೂತು ಎಲ್ಲೋ ಪರಾರಿಯಾಗಿರುತ್ತಾರೆ. ಈ ಖೈದಿಗಳು ಎರಡು ಬಂದೂಕಗಳನ್ನೂ ಕೆಲವು ತೋಟಾಗಳನ್ನು ತೆಗೆದುಕೊಂಡು ಹೋಗಿರುವರು.

ಪಟಿಯಾಲಾ ಸರಕಾರದವರು ಮೈಮಲಬಾರಿಯವರಿಗೆ ಕ್ಷಯರೋಗಿಗಳ ಚಿಕಿತ್ಸಾಲಯವನ್ನು ಕಟ್ಟುವುದಕ್ಕೆ ಒಂದು ದೊಡ್ಡ ಜಮೀನನ್ನು ಬಿಟ್ಟುಕೊಟ್ಟಿರುತ್ತಾರೆ. ಮೈಮಲಬಾರಿಯವರು ಕ್ಷಯರೋಗಿಗಳ ಕ್ಷೇಮಕ್ಕೋಸ್ಕರ ಹೆಚ್ಚಾಗಿ ಪ್ರಯಾಸಪಟ್ಟು ಅವರಿಗೋಸ್ಕರ ಒಂದು ಚಿಕಿತ್ಸಾಲಯವನ್ನು ಕಟ್ಟುವುದಕ್ಕೆ ಚಂದಾಕೂಡಿಸುತ್ತಿರುವರು. ಇದುವರಿಗೆ ಸುಮಾರು ೫೦ ಸಾವಿರ ರೂಪಾಯಿಗಳು ವಸೂಲಾಗಿರುತ್ತವೆ. ಗ್ವಾಲಿಯರ್ ಸಂಸ್ಥಾನದ ಮಹಾರಾಜರು ಈ ಧರ್ಮಕಾರ್ಯಕ್ಕೆ ೩೫ ಸಾವಿರ ರೂಪಾಯಿಗಳನ್ನು ಚಂದಾಕೊಟ್ಟಿರುತ್ತಾರೆ.

ಬರೋಡ ದೇಶದಿಂದ ಮಿ ಪಂಡಿತರೆಂಬವರು ಅಮೆರಿಕಾ ದೇಶಕ್ಕೆ ಹೋಗಿ ಅಲ್ಲಿ ಅತ್ತಿ ಬೀಜದಿಂದ ಎಣ್ಣೆ ತೆಗೆಯುವ ವಿಧಾನವನ್ನು ಕಲಿತುಕೊಳ್ಳುತ್ತಲಿರುವರು. ಇವರಿಗೆ ಬರೋಡ ಮಹಾರಾಜರವರು ವೇತನವನ್ನು ಕೊಟ್ಟು ಕಳುಹಿಸಿರುವರಂತೆ. ಹಿಂದೂದೇಶದ ಸಾಹುಕಾರರು ತಮ್ಮ ದೇಶದಲ್ಲಿ ಮೂರು ಕಾರ್ಖಾನೆಗಳನ್ನು ಸ್ಥಾಪಿಸಿ ಹತ್ತಿಯ ಬೀಜದಿಂದ ಎಣ್ಣೆಯನ್ನು ತೆಗೆದು ವ್ಯಾಪಾರಕ್ಕೆ ಉಪಯೋಗಿಸುವರೆಂದು ಮಿ ಪಂಡಿತರು ತಿಳಿಸಿರುತ್ತಾರೆ. ಹೋದ ವರುಷ ಇಂಡಿಯಾ ದೇಶದಿಂದ ಅನ್ಯದೇಶಗಳಿಗೆ ಸುಮಾರು ೧೫೦ ಲಕ್ಷ ರೂಪಾಯಿ ಬಾಳತಕ್ಕ ಹತ್ತಿ ಬೀಜವು ರಫ್ತಾಗಿತ್ತು.

ಗೋರಕಪುರದಲ್ಲಿ ಬ್ರಾಹ್ಮಣಜಾತಿಗೆ ಸೇರಿದ ಒಬ್ಬ ಯುವಕನೂ ಅಹಿರ್ ಜಾತಿಗೆ ಸೇರಿದ ಒಬ್ಬ ಯುವಕನೂ ದೇವರ ಪ್ರಸನ್ನತೆಯನ್ನು ಪಡೆಯುವುದಕ್ಕೆ ಅಲ್ಲಿನ ನದಿಯ ಒಳಗೆ ಹೋ ... ಕೊಂಡರು.

ಅನೇಕ ಸಣ್ಣ ಸಣ್ಣ ಕಾಯಿಲೆಗಳಿಗೆ ಪೆರೂನಾವು ಒಳ್ಳೇ ಔಷಧವಾಗಿರುತ್ತದೆ. ಶೀತದಿಂದ ಹುಟ್ಟುವ ಅನೇಕ ಕೆಟ್ಟ ಕಾಯಿಲೆಗಳನ್ನೂ ಹೆಂಗಸರಿಗೆ ಸಾಮಾನ್ಯವಾಗಿ ಉಂಟಾಗುವ ಬಲಹೀನ ಅಕ್ರಮಗಳನ್ನೂ ಪೆರೂನಾವು ಕಡಮೆಮಾಡಬಲ್ಲುದೆಂದು ನಂಬತಕ್ಕದ್ದಾಗಿದೆ. ಶೀತದಿಂದ ಹುಟ್ಟುವ ಸಮಸ್ತವಾದ ರೋಗಗಳನ್ನೂ ಪೆರೂನಾದಲ್ಲಿರುವ ಗುಣದಿಂದ ವಾಸಿಮಾಡಿಕೊಳ್ಳಬಹುದು.

ತಲೆ, ಹೊಟ್ಟೆ, ಶ್ವಾಸಕೋಶಗಳು.

ಮಿಸ್ ಓಲಿವ್ ವೆರ್ಡ್ರೆಲ್, ೩೪೫ ಡೇವ್ಲಿನ್ ಬೀದಿ, ಪೋಲಿವಾರ್ಡ್ ಸೆಂಟ್ ಪಾಲ್, ಮಾಂಟ್ರೀಲ್, ಕ್ಯಾನ್, ಈಕೆ ಬರೆಯುವುದು:

"ನಿಮ್ಮ ಪ್ರಸಿದ್ಧವಾದ ಪೆರೂನಾವನ್ನು ಹೊಗಳಿ ಸಂತೋಷದಿಂದ ನಿಮಗೆ ಈ ಕಾಗದ ಬರೆಯುತ್ತೇನೆ. ನಾನು ಬೇರೆ ಔಷಧಗಳನ್ನು ಪರೀಕ್ಷೆಮಾಡಿದೆನು. ಆದರೆ ನನ್ನ ಶೀತವು ಸ್ವಲ್ಪವು ವಾಸಿಯಾಗಲಿಲ್ಲ. ನನಗೆ ಕ್ಷಯಹಿಡಿಯುವುದೋ ಎಂದು ಹೆದರಿಕೆಯುಂಟಾಗಿತ್ತು.

"ನನ್ನ ತಲೆಯು ಮತ್ತು ಹೊಟ್ಟೆಯ ಸ್ಥಿತಿಯು ನನಗೆ ಚಿಂತೆಯನ್ನುಂಟುಮಾಡಿತ್ತು. ಇದ್ದಕ್ಕಿದ್ದ ಹಾಗೆ ಹವಾ ಬದಲಾವಣೆಯಾದದ್ದರಿಂದ ನನಗೆ ಶೀತವಾಗಿ ಮೂರು ತಿಂಗಳ ತನಕ ಹಗಲೂ ರಾತ್ರಿ ಕೆಮ್ಮುಳ್ಳದ್ದಾಗಿತ್ತು.

"ನನ್ನ ಸಹೋದರನಿಗೆ ಪೆರೂನಾದಿಂದ ವಾಸಿಯಾಗಿದ್ದರಿಂದ ಅವನು ಅದನ್ನು ಸೇವಿಸೆಂದು ನನಗೆ ಹೇಳಿದನು. ಅದರಂತೆ ನಾನು ಕ್ರಮವಾಗಿ ಸೇವಿಸಿ, ದಿನೇ ದಿನೇ ಗುಣಹೊಂದುತ್ತಾ ಬಂದೆನು. ಈಗ ನಾನು ಮೂರು ಬಾಟ್ಲಿ ಔಷಧ ಸೇವಿಸಿ ಮುಗಿಯಿತು. ನಾನು ಸಂಪೂರ್ಣವಾಗಿ ಗುಣಹೊಂದಿರುತ್ತೇನೆ."

ಕಾಯಿಲೆಯಾದ ಹೆಂಗಸರಿಗೆ

"ಪೆರೂನಾದಿಂದ ನನಗೆ ಆಗಿರುವ ಪ್ರಯೋಜನವನ್ನು ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿದಿದೇನೆ. ಸ್ವಲ್ಪ ಹೆಚ್ಚು ಕಡಮೆ ನಾನು ಆರುವರ್ಷಗಳ ಕಾಲ ನರಳಿದೆನು. ಹಲವು ಡಾಕ್ಟರುಗಳ ದ ಪರೀಕ್ಷೆ ಮಾಡಿ, ಅವರ ಔಷಧಗಳನ್ನು ಸೇವಿಸಿದೆನು. ಅದರಿಂದ ನನಗೆ ಸ್ವಲ್ಪಮಾತ್ರ ಉಪಶಮನ ವಾಯಿತಲ್ಲದೆ ಆ ಔಷಧಗಳು ನನ್ನ ರೋಗವನ್ನು ವಾಸಿಮಾಡಲಿಲ್ಲ. ನಾನು ಬಹಳ ಬಾಧೆಯನ್ನನುಭವಿಸಿದವಳು. ನನ್ನ ಔಷಧಕ್ಕಾಗಿ ನನ್ನ ಗಂಡನು ಬಹಳ ಹಣವನ್ನು ಖರ್ಚುಮಾಡಿರುತ್ತಾನೆ. ನಿರಾಶೆಯಾಗಿ ಕಡೆಯಲ್ಲಿ ಪೆರೂನಾವನ್ನು ತೆಗೆದುಕೊಂಡು ಪರೀಕ್ಷೆ ಮಾಡೋಣವೆಂದು ನೆನಸಿ, ಸೇವಿಸಲು ಪ್ರಾರಂಭಿಸಿದೆನು. ನಿಮ್ಮ ಹೇಳಿಕೆಯ ಪ್ರಕಾರ ಒಂದು ಬಾಟ್ಲಿ ಔಷಧ ಮುಗಿಯುವಷ್ಟರೊಳಗೆ ನನಗೆ ಸ್ವಲ್ಪ ಉಪಶಮನವಾಯಿತು. ಆಗಿನಿಂದ ನನಗೆ ಚೆನ್ನಾಗಿ ತೋರಿತು ಇಲ್ಲವೇ ಇಲ್ಲ. ಈಚೆಗೂ ಪೆರೂನಾ ಸೇವಿಸಿದೆನು. ಈಗ ನಮ್ಮ ಮನೆಗೆ ಡಾಕ್ಟರು ಬರುವುದು ಅಪರೂಪ. ಪೆರೂನಾದಿಂದ ನಮ್ಮ ಸಂಸಾರಕ್ಕೆ ಎಷ್ಟು ಉಪಕಾರವಾಗಿದೆಯೋ ವಿವರಿಸಿದರೆ ಒಂದು ಪುಸ್ತಕವಾದೀತು. ನಾನು ತಮ್ಮನ್ನು ಅತ್ಯಂತ ವಿಶೇಷವಾಗಿ ಕೃತಜ್ಞತಾಭಾವದಿಂದ ವಂದಿಸುತ್ತೇನೆ. ನಾನು ಹೊಸ ಹೆಂಗಸಾದೆನು. ಆರೋಗ್ಯವನ್ನು ಹೊಂದಿದೆನು. ಇದನ್ನೇ ಸೇವಿಸುವಂತೆ ನನ್ನ ಅನೇಕ ಸ್ನೇಹಿತೆಯರಿಗೆ ಹೇಳಿದೇನೆ. ಎಲ್ಲರೂ ಅದರ ಪ್ರಯೋಜನವನ್ನು ನೋಡಿ ಸಂತೋಷಪಡುತ್ತಾರೆ. ಅನೇಕ ವೇಳೆ ನಿಮ್ಮ ಔಷಧವನ್ನು ಇತರರಿಗೆ ತೋರಿಸುತ್ತೇನೆ. ಅವರೆಲ್ಲಾ ಸೇವಿಸಿ ಸಂತೋಷಪಡುತ್ತಾರೆ. ಕಾಯಿಲೆಯಾಗಿದ್ದೇನೆಂದು ಯಾವ ಹೆಂಗಸಾದರೂ ನನಗೆ ಬರೆದರೆ, ಅಥವಾ ನನ್ನ ಬಳಿಗೆ ಬಂದು ಕೇಳಿದರೆ ಅವರಿಗೆಲ್ಲಾ ಪೆರೂನಾವಿನ ಯೋಗ್ಯತೆಯನ್ನು ವಿವರಿಸಿ ಅದನ್ನು ಸೇವಿಸುವಂತೆ ಶಿಫಾರಸು ಮಾಡುತ್ತೇನೆ."—ಎಂಬದಾಗಿ ಮಿಸೆಸ್ ಮಾರ್ಥಾ ಪೆಡ್ರಿಕ್, ಸೆಂಟ್ರಲ್ ಪಾರ್ಕ್, ಲಾಂಗ್ ದ್ವೀಪ, ನ್ಯೂಯಾರ್ಕ್ ಸಿಟಿ, ಯು ಎಸ್ ಎ ಎಂಬ ಹೆಂಗಸು ಬರೆದಿರುತ್ತಾಳೆ.

ಒಬ್ಬ ಹೆಂಗಸಿನ ಅನುಭವವು.

"ಕೆಳ ಹೊಟ್ಟೆಯ ಸಿರ ಕ್ರಿಯಿಂದ ನಾನು ತುಂಬಾ ಬಾಧೆ ಪಟ್ಟೆನು. ಇದರಿಂದ ನನ್ನ ಶಕ್ತಿಯೆಲ್ಲಾ ಕುಂದಿ ನನ್ನ ಬುದ್ಧಿಯು ಕೆಟ್ಟುಹೋದೀತೆಂದು ಹೆದರಿಕೊಂಡೆನು. ನನ್ನ ಬೆನ್ನೆಲುಬು ಎದೆಗಾಲಿನ ತನಕ ಬಹಳವಾಗಿ ಬಾಧೆಪಡಿಸುತ್ತಿತ್ತು. ಈ ಬಾಧೆಯನ್ನು ಅನುಭವಿಸುವದಕ್ಕಿಂತ ಸಾಯುವುದೇ ಉತ್ತಮವೆನ್ನುವಂತಿತ್ತು. ಪೆರೂನಾವು ಈ ನನ್ನ ಕಾಯಿಲೆಯನ್ನು ವಾಸಿಮಾಡಿತು. ಆದ್ದರಿಂದ ಅದು ಉತ್ಕೃಷ್ಟವಾದದ್ದೆಂದು ನಾನು ಹೇಳುವುದೇನೂ ಅತಿಶಯವಲ್ಲ. ಈ ನನ್ನ ರೋಗವು ನಿವಾರಣೆಯಾಗಿ ಈಗ ಎರಡು ವರುಷ ತುಂಬುವುದರಲ್ಲಿದೆ. ಮತ್ತೆ ಆ ರೋಗದ ಸೇಲೆಯನ್ನೇ ಕಾಣೆನು."

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದದ್ದು ಇವರಿಂದಲೇ ತಿಳಿಯಬಹುದು.

ವಿಳಾಸ—ಹಿಂದುಸ್ಥಾನದಲ್ಲೆಲ್ಲಾ ಈ ಔಷದ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ—

ಮೆಸ್ಸರ್ಸ್. ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

...	೧೫ ೨-೦	೧೬ ೦-೦
... ಅವಲ್	೧ ೨-೦	೧೫-೦-೦
,, ಮಧ್ಯಮ	... ೨-೦	೧೪-೮-೦
ಜಾಪಾನ್ ಅಕ್ಕಿ	೧... ೦	೧೫-೮-೦
ಸಣ್ಣಕ್ಕಿ ಅವಲ್	೧... ೦	೧೨-೦-೦
,, ಮಧ್ಯಮ	೧... ೦	೧೬-೦-೦
ತೊಗರಿ ಬೇಳೆ ಪಲ್ಲಾ ೧ಕ್ಕೆ	೧೬-೦-೦	೧೬-೦-೦
,, ಮಧ್ಯಮ	೧೫ ೨-೦	೧೫-೦-೦
ಹೈನ್ ರಾಗಿ ಪಲ್ಲಾ ೧ಕ್ಕೆ	೯ ೪-೦	೮-೧೨-೦
ಜವಾರಿ	೮ ೧೨-೦	೮-೦-೦
ಜೋಳ	೯ ... ೦	೯-೦-೦
ಹುಲಸಂದೆ ಪಲ್ಲಾ ೧ಕ್ಕೆ	೧೪ ೮-೦	೧೩-೦-೦
ಬಿಳೀ ಅವರೆ	೧೧-೦-೦	೧೨-೨-೦
ಹೆಸರು	... -೨-೦	೧೨-೮-೦
ಉದ್ದು	೧೭-೮-೦	೧೩-೦-೦
ಕಡಲೆ	೧೩-೮-೦	೧೨-೪-೦
ಎಳ್ಳು ಸೇ ೧೨೭ ಕ್ಕೆ	೨೨-೮-೦	೧೯-೮-೦
ಹುರುಳಿ	೧೧-೪-೦	೧೧-೦-೦
ಹರಳು ೧೨೭ ಸೇರಿಗೆ	೧೧ ...-೦	೧೦-೦-೦
ಸೀಗೇಕಾಯಿ ಮಣ ೧ಕ್ಕೆ	೨ ೮-೦	೨-೬-೦
ಮೆಣಸಿನಕಾಯಿ ...	೫-೮-೦	೪-೮-೦
,, ಮಧ್ಯಮ	೫-೨-೦	೬-೦-೦
ಬೆಲ್ಲ ದೊಡ್ಡ ಅಚ್ಚು	೬ ೨-೦	೫ ೨-೦-೦
ಒಳ್ಳೆಣ್ಣೆ ಮಣ ೧ಕ್ಕೆ	೫-೨-೦	೫-೦-೦
ಹರಳೆಣ್ಣೆ ,,	೪ ೮ ೦	೪-೨-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೯ ೪-೦	೯-೦-೦
ಉಪ್ಪು ,,	೫-೮-೦	೪ ೧೪-೦
ಹುಣಸೇ ಹಣ್ಣು	೧-೧೨-೦	೧-೧೨-೦
,, ಹಳೇದು	೧ ೪ ೦	೧-೧೦-೦
ತುಪ್ಪ ಮಣ ೧ಕ್ಕೆ	೧೫-೨-೦	೧೩ ೪-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೪ ೪-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	೪ ೮-೦	೪-೮-೦
ಅಳಲೇಕಾಯಿ ಮಣ ೧ಕ್ಕೆ	೦-೮-೦	೦ ೧೪-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೧-೦-೦	೦-೧೨-೦
ಚಿನ್ನ (ಪೌನ್) ಕೆಂಪು	೧೫-೬-೦	೧೫-೯-೦
,, ,, ಪಸಿಮೆ	೧೬-೨-೦	೧೫-೧೦-೦
,, ,, ಗಟ್ಟಿ ತೊಲ ೧ಕ್ಕೆ	೨೪-೯-೦	೨೪ ೭-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೭-೪-೦	೬೭-೦-೦

Printed and Published by the Rev H GULLIFORD, Proprietor and Manager, Wesleyan Mission Press Mysore. 10/6/1909

ಇಂಡಿಯಾ ದೇಶದ ರೈಲ್ವೆ ರಿಪೋರ್ಟು ಪ್ರಕಟವಾಗಿರುವುದು ಈ ಸಲದ ರಿಪೋರ್ಟಿಗೆ ಒಂದು ಸೊಗಸಾದ ನಕ್ಷೆಯನ್ನು ಸೇರಿಸಿರುತ್ತಾರೆ ರೈಲ್ವೆ ಸಾರು ವಾರುಗಳನ್ನು ಓದಿದರೆ ಹೋದ ವರುಷ ಆದಾಯಕ್ಕಿಂತ ಖರ್ಚು ಹೆಚ್ಚಾಗಿದೆ ಯೆಂದು ಕಂಡು ಬರುವುದು ಹೋದ ವರುಷ ೩,೨೦೦ ಲಕ್ಷ ಪ್ರಜೆಗಳು ಪ್ರಯಾಣ ಮಾಡಿರುತ್ತಾರೆ ಆಚೆ ವರುಷ ಸಾಗಿಹೋದ ಸಾಮಾನುಗಳಿಗಿಂತಲೂ ಹೋದ ವರುಷ ೪೦೦,೦೦೦ ಟನ್ ತೂಕದ ಸಾಮಾನು ಹೆಚ್ಚಾಗಿ ಸಾಗಿ ಹೋಗಿರುತ್ತದೆ ಹೀಗೆ ಹೆಚ್ಚಾಗಿ ಸಾಮಾನು ಸಾಗಿಹೋದರೂ ಕಂಪನಿಗೆ ಈ ಬಾಬಿನಲ್ಲಿ ೧೯೭ ಲಕ್ಷ ರೂಪಾಯಿ ಹುಟ್ಟುವಳಿ ಕಡಿಮೆಯಾಗಿರುವುದು ಇಂಡಿಯಾ ದೇಶದಲ್ಲಿ ಕ್ಷಾಮವಿದ್ದುದರಿಂದ ದವಸ ಧಾನ್ಯಗಳೇನೂ ವಿಶೇಷವಾಗಿ ರಫ್ತಾಗಲಿಲ್ಲ ದೇಶದಲ್ಲಿ ಉತ್ಪತ್ತಿಯಾದ ಕಲ್ಲಿದ್ದಲನ್ನು ಆಚೆ ವರುಷಕ್ಕಿಂತ ಹೋದ ವರುಷ ಸುಮಾರು ೬೦,೦೦೦ ಟನ್‌ಗಳ ತೂಕದಷ್ಟನ್ನು ಹೆಚ್ಚಾಗಿ ಉಪಯೋಗಿಸಿರುತ್ತಾರೆ ಕಲ್ಲಿದ್ದಲನ್ನು ಸಾಗಿಸಿದ್ದರಿಂದ ಕಂಪನಿಯವರಿಗೆ ಆಚೆ ವರುಷಕ್ಕಿಂತ ಹೋದ ವರುಷ ೪೦ ಲಕ್ಷ ರೂಪಾಯಿಗಳ ಹೆಚ್ಚಿನ ವ್ಯಾಪಾರವು ನಡೆದಿರುತ್ತದೆ ಇಂಡಿಯಾ ದೇಶದಲ್ಲಿ ತಯಾರಾಗುವ ಸಾಮಾನುಗಳನ್ನು ಕಂಪನಿಯವರು ಉಪಯೋಗಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುತ್ತಲಿರುತ್ತಾರೆ

ವಿದೇಶ ವರ್ತಮಾನಗಳು

ಪರ್ಶಿಯಾ ದೇಶದ ಸರಹದ್ದುಗಳನ್ನು ತುರ್ಕಿ ಸೈನ್ಯದವರು ಆಕ್ರಮಿಸಿಕೊಂಡಿರುತ್ತಾರೆ

⁂

ಪ್ರಿನ್ಸ್ ಹೆನ್ರಿ ಎಂಬ ರಾಜಪುತ್ರನು ವ್ಯಾಪಾರಿಯಾಗುವುದಕ್ಕೆ ವ್ಯಾಪಾರ ಕಲಾಶಾಲೆಯಲ್ಲಿ ವ್ಯಾಸಂಗಮಾಡ ತೊಡಗಿರುತ್ತಾನೆ

⁂

ಅಮೆರಿಕಾ ದೇಶದ ಕೋಟ್ಯಾಧೀಶ್ವರರಾದ ಮಿ|| ಕಾರ್ನೆಗಿಯವರು ಫ್ರಾನ್ಸ್ ದೇಶದ ಧೀರರ ಜ್ಞಾಪಕಾರ್ಥವಾಗಿ ಮೂವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ

⁂

ಫ್ರಾನ್ಸ್ ರಾಜ್ಯದ ಪ್ಯಾರಿಸ್ ಪಟ್ಟಣದಲ್ಲಿ ಅನಾಯಕಸಂಘದವರು ತಮ್ಮ ಉದ್ದೇಶಗಳನ್ನು ಸುಲಭವಾಗಿ ಸಾಧಿಸಲು ಅಲ್ಲಿನ ಟೆಲಿಗ್ರಾಫ್ ಮತ್ತು ಟೆಲಿಫೋನ್ ತಂತಿಗಳನ್ನು ಕತ್ತರಿಸಿ ಹಾಕಿರುತ್ತಾರೆ

⁂

ಇಂಗ್ಲಾಂಡ್ ದೇಶದ ಅಕ್ಕಸಾಲಿಗರ ಒಂದು ಕಂಪನಿಯು ಇರುವುದು ಈ ಕಂಪನಿಯವರು ಲಂಡನ್ ಪಟ್ಟಣದಲ್ಲಿರುವ ಕೈಗಾರಿಕೆಯ ಪಾಠಶಾಲೆಗೆ ೭ ಲಕ್ಷ ರೂಪಾಯಿಗಳ ಚಂದಾ ಕೊಟ್ಟಿರುವರು

⁂

ತುರ್ಕಿ ರಾಜ್ಯದ ಅಂಕುಶ ಪ್ರಭುತ್ವದವರು ರಾಜ್ಯಾಡಳಿತದಲ್ಲಿ ವಿಶೇಷವಾದ ಬದಲಾವಣೆಗಳನ್ನು ಮಾಡುತ್ತಿರುವರು ಕೆಲಸಕ್ಕೆ ಬೇಡದ ೧,೩೦೦ ಅಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಿರುತ್ತಾರೆ ಈ ಬಾಬಿನಲ್ಲಿ ಸರಕಾರಕ್ಕೆ ಸುಮಾರು ೨೦ ಲಕ್ಷ ರೂಪಾಯಿ ಉಳಿದು ಬರುವುದು

⁂

ಪರ್ಶಿಯಾ ದೇಶದಲ್ಲಿ ಅಂಕುಶದ ಮತ್ತೆ ಏರ್ಪಾಡಾಗುವಂತೆ ರಾಜಕೀಯ ಸಭೆಗೆ ಜನರನ್ನು ಚುನಾಯಿಸಬಹುದೆಂದು ಷಾಹನು ತಿಳಿಸಿರುತ್ತಾನೆ

ಕ್ರಯ ಶೀಸೆ ೧ಕ್ಕೆ [illegible] ಕೂದಲು ತಮ್ಮ ಕಪ್ಪು ಒಳ್ಳೆ ಬಣ್ಣ ಕಪ್ಪಾಗಿ ಒಂದೇ ಸಲ [illegible] ಕೊಳ್ಳುವವರಿಗೆ ಸಾಕು.
ಲಭ್ಯವಾಗುವುದು ವಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವಾಪಾರಿಗಳೂ ಸ್ವಂತ ವಿಕ್ರಯ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್

೩೩, ವೇದಮುತ್ತು ಬೀದಿ, ವೇಪೇರಿ, ಮದರಾಸ್.

ಪ್ರಸಿದ್ಧವಾದ ಈ ಪುಸ್ತಕಗಳನ್ನು ತರಿಸಿರಿ.

10 94

“ಬ್ರಹ್ಮಚರ್ಯ” ಅಥವಾ ಮನೋನಿಗ್ರಹ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ವಿವರವಾಗಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

“ಸ್ವಪ್ನಯಾನಸ್ವಲದೀಪಿಕೆ” ಈ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ಹೊಂದಿಕೊಂಡರು ಈ ಸಂ— ಮದರಾಸ್ ಯೂನಿವರ್ಸಿಟಿ ಸಂಘದವರು ಸ್ವಪ್ನಯಾನಸ್ವಲದೀಪಿಕೆಯನ್ನು ಒಂದು ಮುಖ್ಯವಾದ ಪರೀಕ್ಷೆಗೆ ಪಠ್ಯವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ವೃದ್ಧರವರೆವಿಗೂ ಓದತಕ್ಕದ್ದು ಕ್ರಯ ಹನ್ನೆರಡಾಣೆ ವಿ ಪಿ ಪಿ ಮೂಲಕ ಆರಾಣೆ

“ವ್ಯಾಸ್ಕೋಡಿಗಾಮನಯಾನದ ಚರಿತ್ರೆ” ಇದು ನೂತನವಾಗಿ ರಚಿಸಲ್ಪಟ್ಟಿದ್ದು ಮತ್ತು ಬಹು ರಂಜಕವಾದದ್ದು ಇದರಲ್ಲಿ ಸೂಚಿಸುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಂಜಕವಾಗಿರುತ್ತದೆ ಇದನ್ನು ಎಲ್ಲರೂ ಕೊಂಡು ಓದಬೇಕು

ಕ್ರಯ ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

“ಆಗಸ್ಟೀನ್ ದಿನ್ನನಂ” ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ಸೇರುವ ಮೊದಲು ಮತ್ತು ನಂತರ ಪಾಪಮುಕ್ತನಾಗಿ ಪವಿತ್ರನಾದ ಈ ಮಹಾತ್ಮನು ಜಗತ್ತಿಗೆ ಅನುಭವಿಸಿದ ಮಹಾತ್ಮನ ಜೀವಚರಿತ್ರೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ ಕೈಕವರ್ ಬೈಂಡು ಪ್ರತಿ ಒಂದಕ್ಕೆ ೦—೧೦—೦

ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, [illegible] ಎಸ್ ಬುಕ್ ಡಿಪೋ ಬೆಂಗಳೂರು

ತ್ತಾನೆ ಡಂಡಿ ಪಟ್ಟಣದಲ್ಲಿ ಸೆಣಬು, ಮಂಗಲಸ, ಪೋಷದ [illegible] ಗಳನ್ನು ಮಾಡುವ ಕೆಲಸ ಈ ಮುಂತಾದ ಕಸಬುಗಳನ್ನು ಕಲಿಸುವುದಕ್ಕೆ ಒಂದು ಪಾಠಶಾಲೆಯನ್ನು ಏರ್ಪಡಿಸಲು ೯ ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಮರಣಶಾಸನ ಬರೆದಿರುವನು

⁂

ವಿಲಾಯಿತಿಯಲ್ಲಿ ಚುಟ್ಟಾ ಸಿಗರೆಟ್ ಮೊದಲಾದ ಬತ್ತಿಗಳನ್ನು ಸೇದಿ ಹುಡುಗರು ಕೆಟ್ಟು ಹೋಗುತ್ತಿರುವರು ಇಂಥಾ ದುರಭ್ಯಾಸವನ್ನು ತಪ್ಪಿಸುವುದಕ್ಕೆ ಪಾರ್ಲಿಮೆಂಟ್ ಸಂಗದವರು ಒಂದು ಕಾನೂನನ್ನು ಏರ್ಪಡಿಸಿ ಹದಿನಾರು ವಯಸ್ಸಿಗಿಂತ ಕಡಿಮೆಯಾಗಿರುವ ಹುಡುಗನಿಗಾಗಲೀ ಹುಡುಗಿಗಾಗಲೀ ಹೊಗೆಯ ಬತ್ತಿಗಳನ್ನು ಮಾರಿದರೆ ಅಂಥವನಿಗೆ ಶಿಕ್ಷೆಯಾಗುವದೆಂದು ತಿಳಿಸಿರುತ್ತಾರೆ ಹಿಂದೂದೇಶದಲ್ಲಿಯೂ ಇಂಥಾ ಕಾನೂನಾದರೆ ಪ್ರಯೋಜನವಾದೀತು

⁂

ಪೋರ್ಚುಗಲ್ ದೇಶದ ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ಗೂಳಕಾಳಗಕ್ಕೆ ಎರಡು ಭಯಂಕರವಾದ ಗೂಳಿಗಳನ್ನು ಕೂಡಿ ಹಾಕಿದ್ದರು ಅವು ಹ್ಯಾಗೋ ತಪ್ಪಿಸಿಕೊಂಡು ಊರೊಳಕ್ಕೆ ನುಗ್ಗಿ ವಿಪರೀತವಾದ ದೊಂಬಿ ನಡಿಸಿದವು ಜನರೆಲ್ಲರೂ ಹೆದರಿಕೆಯಿಂದ ಕೂಡಿದವರಾಗಿ ದಿಕ್ಕಾಪಾಲಾಗಿ ಓಡಿಹೋದರು ಕೆಲವರು ಹತ್ತಿರವಿದ್ದ ಲಾಂದ್ರ ಮತ್ತು ಟೆಲಿಗ್ರಾಫ್ ಕಂಭಗಳನ್ನು ಹತ್ತಿಕೊಂಡರು ಈ ಗೂಳಿಗಳು ನಾಲ್ಕು ಜನರನ್ನು ತಿವಿದು ಕೊಂದದ್ದಲ್ಲದೆ ಇಪ್ಪತ್ತು ಮಂದಿಗೆ ಗಾಯ ಮಾಡಿರುತ್ತವೆ

⁂

ಇಂಗ್ಲಾಂಡ್ ದೇಶದ ಬ್ರಿಸ್ಟಲ್ ಪಟ್ಟಣದಲ್ಲಿ ಒಂದು ಸರ್ವಕಲಾಶಾಲೆಯನ್ನು ಸ್ಥಾಪಿಸುವುದಕ್ಕೆ ಚಕ್ರವರ್ತಿಗಳು ತಮ್ಮ ಅನುಮತಿಯನ್ನು ಕೊಟ್ಟಿರುತ್ತಾರೆ ಮೇಲ್ಕಂಡ ಶಾಲೆಯನ್ನು ಸ್ಥಾಪಿಸುವುದಕ್ಕೆ ಆಗಲೇ ೩೦ ಲಕ್ಷ ರೂಪಾಯಿ ಚಂದಾ ವಸೂಲಾಗಿರುತ್ತದೆ ಈ ಹಣದಲ್ಲಿ ಹದಿನೈದು ಲಕ್ಷ ರೂಪಾಯಿಗಳನ್ನು ಹೊಗೆಸೊಪ್ಪು ವ್ಯಾಪಾರ ಮಾಡುತ್ತಿದ್ದ ಹೆನ್ರಿವಿಲ್ಸ್ ಎಂಬವನು ಕೊಟ್ಟಿರುತ್ತಾನೆ ಸರ್ವಕಲಾ ಶಾಲೆಯು ಸ್ಥಾಪಿತವಾದಾಗ್ಯೆ ಇವನನ್ನು ಅದಕ್ಕೆ ಮೊದಲನೆ ಸರ್ವಾಧಿಕಾರಿಯಾಗಿ ನೇಮಿಸುವರು

⁂

ಕಳೆದ ಏಪ್ರಿಲ್ ತಿಂಗಳು ಬಹಾಮಾಸ್ ದ್ವೀಪದ ಹತ್ತಿರ ಒಂದು ಹಡಗು ಒಡೆದುಹೋಯಿತೆಂಬ ಸುದ್ದಿಯು ಈಗ್ಗೆ ಪ್ರಕಟವಾಗಿದೆ ಅದರೊಳಗಿದ್ದ ೯ ಜನರು ಒಡೆದುಹೋದ ಹಡಗದಲ್ಲಿ ಒಂದ ದಿನವೆಲ್ಲಾ ಇದ್ದು ಒಂದು ನಿರ್ಜನವಾದ ಪ್ರದೇಶಕ್ಕೆ ಬಂದು ಅನ್ನ ನೀರು ಕಾಣದ ನೂರು ಮೈಲಿ ದೂರದಲ್ಲಿರುವ ಮತ್ತೊಂದು ಸ್ಥಳಕ್ಕೆ ಒಂದ [illegible] ದೋಣಿಯಲ್ಲಿ ಪ್ರಯಾಣ ಮಾಡಿದರಂತೆ ಭಯಂಕರವಾದ ಸಮುದ್ರದ ಮೇಲೆ ಒಂದು ಸಣ್ಣ ದೋಣಿಯಲ್ಲಿ ಕುಳಿತು ಪ್ರಯಾಣ ಮಾಡಿದ್ದು ಅವರಲ್ಲಿದ್ದ ಧೈರ್ಯವನ್ನು ಪ್ರಕಾಶ ಪಡಿಸುತ್ತದೆ

⁂

ತುರ್ಕಿ ದೇಶದಲ್ಲಿ ಅಂಕುಶ ಪ್ರಭುತ್ವದವರು ಅಬ್ದುಲ್ ಹಾಮಿದರ ಪರವಾಗಿ ನಿಂತು ಯುದ್ಧ ಮಾಡುತ್ತಿದ್ದ [illegible] ಮಂದಿ ಜನರನ್ನು ಗಲ್ಲಿಗೆ ಏರಿಸಿದರು ಅವರೊಳಗೆ ಲೆಫ್ಟಿನೆಂಟ್ ಸುಲ್ತಾನರಿಗೆ ಆಪ್ತನಾಗಿದ್ದವನೊಬ್ಬನು ಇದ್ದನಂತೆ ಈಗ್ಗೆ ಅಬ್ದುಲ್ ಹಾಮಿದರನ್ನು ಸಲೋನಿಕಾ ಎಂಬ ಪಟ್ಟಣದಲ್ಲಿ ಇಟ್ಟು ಮಾಡಿರುವರು ಆದರೆ ಅಲ್ಲಿನವರೂ ಕೊಂದಾರೆಂಬ ಭೀತಿಯಿಂದ ಅವರನ್ನು ತುರ್ಕಿ ರಾಜ್ಯದ ಹತ್ತಿರವಿರುವ ದ್ವೀಪ ಸಮುದಾಯಗಳಿಗೆ ಗಡೀ

ಮಹಾ [illegible] ಕಸ್ತೂರಿ ಮೃತ್ಯುಂಜಯಾಂಜನ, ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 23

ಒಳ್ಳೇ ಟೋಪಿಗಳು ಯಾವವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ನಿಂತಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಸಾಗುತ್ತಿರುವ ಟೋಪಿಗಳ ಧಾರಣೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಧಾರಣೆಲ್ಲಾ ಸೆಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು ಕಪ್ಪು ಬಿಳಿ ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮ ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ , ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಗಳು ಬದಲಾಯಿಸಲ್ಪಟ್ಟರೂ ಹೊಸದೀತಿಯಾದ ಆಡಳಿತಗಳು ಏರ್ಪಟ್ಟರೂ ಯೋಗ್ಯವಾದ ವರ್ತಮಾನಪತ್ರಿಕೆಗಳು ಮಾತ್ರ ಸದಾಕಾಲ ನಿಲ್ಲುವವು ಇಂಗ್ಲಾಂಡ್ ದೇಶವು ಬಹು ಪುರಾತನವಾದುದು ಅದರ ಚರಿತ್ರೆಯು ಬಹು ವಿಶೇಷವಾದುದು ಹಿಂದೂದೇಶದಿಂದ ಬಂದಿರತಕ್ಕ ಪ್ರತಿನಿಧಿಗಳೇ ಪುರಾತನ ನಾಗರೀಕತೆಯುಳ್ಳ ನಮ್ಮ ದೇಶವನ್ನು ಆಳತಕ್ಕ ವಿಷಯದಲ್ಲಿ ನಮಗೆ ಹೆಚ್ಚಾದ ತಿಳುವಳಿಕೆಯನ್ನು ಕೊಡುವರೆಂದು ಪ್ರಾರ್ಥಿಸುತ್ತೇವೆ ಎಂಬುದೇ

ವಿವಿಧ ವರ್ತಮಾನಗಳು

ನಿಮಿಷಕ್ಕೆ ಒಂದು ಸಾವಿರ ಮಾತುಗಳನ್ನು ತಂತಿಯ ಮೂಲಕ ಕಳುಹಿಸುವ ಉಪಾಯವನ್ನು ಕಂಡುಹಿಡಿದಿರುತ್ತಾರೆ

ಫ್ರಾನ್ಸ್ ದೇಶದ ಒಬ್ಬ ಪೋಲೀಸ್ ಅಧಿಕಾರಿಯು ಬೆನ್ನಿನ ಹಿಂದೆ ನಡೆಯತಕ್ಕ ಸಂಗತಿಗಳನ್ನೆಲ್ಲಾ ತಿಳಿದುಕೊಳ್ಳುವುದಕ್ಕೆ ಪ್ರಯೋಜನವಾಗತಕ್ಕ ಕನ್ನಡಕಗಳನ್ನು ಕಂಡುಹಿಡಿದಿರುತ್ತಾನೆ

ಮೆಸ್ಸಿನಾ ಪಟ್ಟಣದಲ್ಲಾದ ಭೂಕಂಪದ ದೆಸೆಯಿಂದ ೩,೦೦೦ ಮಂದಿ ಮಕ್ಕಳು ಅನಾಥರಾಗಿ ಹೋದರು ಇವರನ್ನು ಕಾಪಾಡುವುದಕ್ಕೋಸ್ಕರ ಪಾದ್ರಿಗಳು ಸಕಲ ವಿಧವಾದ ಪ್ರಯತ್ನಗಳನ್ನು ಮಾಡುತ್ತಿರುವರು

ಅಮೆರಿಕಾ ದೇಶದ ಕೆನಡಾ ಪ್ರಾಂತ್ಯದ ಗವರ್ನರ್ ಜನರಲ್‌ರವರು ಬಹಳ ವಿದ್ವಾಂಸರು ಇವರಿಗೆ ಭೂಲೋಕದ ಪುರಾತನ ಚರಿತ್ರೆಯು ಬಹು ಚೆನ್ನಾಗಿ ಬರುವುದು ಲೋಕಸಂಚಾರವನ್ನು ಅನೇಕ ಸಲ ಮಾಡಿರುವರು ಸಂಗೀತಶಾಸ್ತ್ರದಲ್ಲಿ ನಿಪುಣತೆಯನ್ನು ಹೊಂದಿರುವರು

ಹಾಲನ್ನು ಕುಡಿದರೆ ಕೆಲವರಿಗೆ ಅಜೀರ್ಣವಾಗುವುದುಂಟು ಹಾಲನ್ನು ಜಾಗ್ರತೆಯಾಗಿ ಕುಡಿಯುವುದರಿಂದ ಅಜೀರ್ಣ ಉಂಟಾಗುವುದೆಂತಲೂ ಅದನ್ನು ನಿಧಾನವಾಗಿ ಸಣ್ಣ ಸಣ್ಣ ಗುಟುಕುಗಳಾಗಿ ತೆಗೆದುಕೊಂಡರೆ ಯಾವವಿಧವಾದ ತೊಂದರೆಗಳಾಗುವದಿಲ್ಲವೆಂತಲೂ ವೈದ್ಯರು ತಿಳಿಸುವರು

ಸಯಾಂ ದೇಶದ ಬೌದ್ಧರ ದೇವಾಲಯದಲ್ಲಿ ಯಾವಾಗಲೂ ಆರಿಹೋಗದ ದೀಪವನ್ನು ಉರಿಸುತ್ತಿರುವರು ದೀಪವು ಉರಿಯುತ್ತಿರುವ ಪಾತ್ರೆಯಲ್ಲಿ ಬೂದಿ ಮುಚ್ಚಿಕೊಂಡರೆ ಹೊಸ ಹಣತೆಯನ್ನು ತಂದು ಅದಕ್ಕೆ ಹಳೆ ದೀಪವನ್ನು ಹತ್ತಿಸಿ ಪಾತ್ರೆಯನ್ನು ಬದಲಾಯಿಸುವರು ಈ ರೀತಿಯಲ್ಲಿ ಸುಮಾರು ಇನ್ನೂರು ವರುಷಗಳಿಂದ ಮಾಡುತ್ತಿರುವರಂತೆ

ನ್ಯೂಜಿಲಾಂಡ್ ದ್ವೀಪದಿಂದ ಆಕ್ಲಂಡಿಗೆ ಕಾಗದಗಳನ್ನು ಪಾರಿವಾಳಗಳ ಮೂಲಕ ಸಾಗಿಸುವರು ತೆಳುವಾದ ಕಾಗದದಲ್ಲಿ ಸಮಾಚಾರಗಳನ್ನು ಬರೆದು ಪಾರಿವಾಳದ ಕುತ್ತಿಗೆಗೆ ಕಟ್ಟುವರು ಪಾರಿವಾಳವು ನಿಮಿಷಕ್ಕೆ ಒಂದು ಮೈಲಿಯಂತೆ ಹಾರಿ ಹೋಗಿ ಮಾಲೀಕರಿಗೆ ಕಾಗದವನ್ನು ತಲಪಿಸುವುದು ಇಷ್ಟು ಜಾಗ್ರತೆಯಾಗಿ ಹೋಗುವಷ್ಟು ರೈಲಾದರೂ ಹಡಗವಾದರೂ ಹೋಗುವದಿಲ್ಲವಂತ

[illegible] ಜ್ವರ [illegible]

ಇದು ಸಾಧಾರಣ ಜ್ವರ, ಚಳಿಜ್ವರ, ದೊರೆಜ್ವರ ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇರಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು— ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ [illegible] ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇಲ್ಲಿ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು [illegible] ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುತ್ತಾರೆ

ಕ್ರಯ —ಸೀಸೆ ೧ಕ್ಕೆ ೦ ಆಣೆ, [illegible] ರೂ ೧—೮ ರೂ ರೂ ೨—೧೨ ಆ , ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

⁂

ಓ ನಿಯಂ ಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದದ್ದಕ್ಕೆಲ್ಲಾ ಮಹತ್ತರವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವಗೈರೆ ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿ ರಾಯರು—ಹೆನ್ರಿಯ ಓನಿಯಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾವುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅದಲ್ಲದೆ ಕೆಳಗಿನ ವಿಳಾಸದಾತ್ರಲಿ ವಿಕ್ರಯ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್

ಸುಖಿಪಟ್ಟ ಸ್ತ್ರೀಯರು ಪೆರೂನಾವನ್ನು ಹೊಗಳುತ್ತಾರೆ

ಸರ್ವತ್ರ ಪ್ರಖ್ಯಾತಿಹೊಂದಿರುವುದು, ಆದರ ಗುಣದಿಂದ, ಬರೀ ಜಾಹಿರಿಂದಲ್ಲ.

[2]

ತಿಕ್ಕವರೂ ದೊಡ್ಡವರೂ ಒಂದೇ ರೀತಿ ಪೆರೂನಾವನ್ನು ಹೊಗಳುತ್ತಾರೆ. ಹೆಣ್ಣುಮಕ್ಕಳೂ ಹೆಂಗಸರೂ ಪೆರೂನಾದ ಗುಣವನ್ನು ಕಂಡುಕೊಂಡಿದ್ದಾರೆ. ಹೆಣ್ಣುಮಕ್ಕಳೂ ಹೆಂಗಸರೂ ತಮ್ಮ ತಮ್ಮ ದೇಹಾನುಗುಣವಾದ ಆಯುರ್ವೇದ ವಿಧಾನ ಪೆರೂನಾ ದಿನದಿಂದ ಸ್ವಸ್ಥ ಹೊಂದಿರುತ್ತಾರೆ.

ಲಕ್ಷಣವಾಗಿರುವ ಹೆಣ್ಣುಮಕ್ಕಳೂ ಸುಂದರಿಯರಾದ ಸ್ತ್ರೀಯರೂ, ಬಲಿಷ್ಠರಾದ ಹೆಣ್ಣುಮಕ್ಕಳೂ ರೋಗಗ್ರಸ್ತರಾದ ಹೆಂಗಸರೂ ದೇಶದ ಎಲ್ಲಾ ಪ್ರದೇಶಗಳಲ್ಲೂ ಪೆರೂನಾ ಸೇವಿಸಿ ತಮ್ಮ ಸ್ವಭಾವಕ್ಕೆ ಅನುಗುಣವಾದ ಕಾಯಿಲೆಗಳನ್ನೆಲ್ಲಾ ನಿವಾರಣೆಮಾಡಿಕೊಂಡು ಅದರ ಗುಣವನ್ನು ತಿಳಿದಿರುತ್ತಾರೆ. ಮುದಿ ಅಜ್ಜಿಯ ವೊದಲುಗೊಂಡು ಎಳೇ ಹೆಣ್ಣುಮಗುವಿನ ತನಕ ಅಬಲೆಯರೆಲ್ಲಾ ಅನೇಕವಿಧಗಳಲ್ಲಿ ಪೆರೂನಾದಿಗೆ ಕೃತಜ್ಞರಾಗಿರುವರು.

ಇದೆಲ್ಲಾ ಯಥಾರ್ಥವಾಗಿರುತ್ತದೆ ಗುಣದಿಂದಲ್ಲದೆ ಹೆಂಗಸು ಅವಳನ್ನು ಹೆಚ್ಚುದಕ್ಕೆ ಹಿಂತೆಗೆಯುವುದಿಲ್ಲ. ಅವಳ ವಾಕ್ಕು ಕೇಳಿ ಇತರ ಹೆಂಗಸರು ಸಹ ಬರುತ್ತಾರೆ. ಅವಳು ಪೆರೂನಾವಿನ ಹೆಸರನ್ನು ಮನೆಯಿಂದ ಮನೆಗೆ ಹರಡುತ್ತಾಳೆ. ಬೇರೆಯವರು ಪೆರೂನಾವು ಪ್ರೀತಿಪೂರ್ವಕವಾದದ್ದು ಎಂದು ಬರೆಗೆ ಅರ್ಹವಾದದ್ದು ಎಂದು ಒಪ್ಪಿಕೊಳ್ಳುತ್ತಾರೆ.

ಅನೇಕ ಸಣ್ಣ ಸಣ್ಣ ಕಾಯಿಲೆಗಳಿಗೆ ಪೆರೂನಾವು ಒಳ್ಳೇ ಔಷಧವಾಗಿರುತ್ತದೆ. ಶೀತದಿಂದ ಹುಟ್ಟುವ ಅನೇಕ ಕಷ್ಟ ಕಾಯಿಲೆಗಳನ್ನೂ ಹೆಂಗಸರಿಗೆ ಸ್ವಾಭಾವಿಕವಾಗಿ ಬರುವ ಶರೀರದ ಅಕ್ರಮಗಳನ್ನೂ ಪೆರೂನಾವು ಕಳೆಯುವದಾದಬಲ್ಲದೆಂದು ಸಾಬೀತಕ್ಕಾಗಿದೆ. ಶೀತದಿಂದ ಹುಟ್ಟುವ ಸಮಸ್ತವಾದ ರೋಗಗಳನ್ನೂ ಪೆರೂನಾದಲ್ಲಿರುವ ಗುಣದಿ ದೇಹದ ಚಿಕಿತ್ಸೆ ಮಾಡುವುದು.

ತಲೆ, ಹೊಟ್ಟೆ, ಶ್ವಾಸಕೋಶಗಳು

ಮಿಸ್ ಓಲಿವೈನ್ ಪೆರ್ರಾಲ್ಟ್ ೪೩೪ ಡೇವಿಡ್ಸನ್ ಬೀದಿ, ಪೊಲಿಮಾಡ್ಸ್ ಸೆಂಟ್ ಪಾಲ್ ಮಾಂಟ್ರಿಯಲ್ ಕ್ಯಾನ — ಈಕೆ ಬರೆಯುವುದು.

ಇಷ್ಟು ಪ್ರಸಿದ್ಧವಾದ ಪೆರೂನಾವನ್ನು ಹೊಗಳಿ ಸಂತೋಷದಿಂದ ನಿಮಗೆ ಈ ಕಾಗದ ಬರೆಯುತ್ತೇನೆ. ನಾನು ಬೇರೆ ಔಷಧಗಳನ್ನು ಸಂಪೂರ್ಣ ಸೇವಿಸಿದೆನು. ಆದರೆ ನನ್ನ ಶೀತಕ್ಕೆ ಸ್ವಲ್ಪವೂ ವಾಸಿಯಾಗಲಿಲ್ಲ. ನನಗೆ ಕ್ಷಯ ಹಿಡಿಯುವುದೋ ಎಂದು ಹೆದರಿಕೆಯುಂಟಾಗಿತ್ತು.

ನನ್ನ ತಲೆಯು ಮತ್ತು ಹೊಟ್ಟೆಯ ಸ್ಥಿತಿಯು ನನಗೆ ಚಿಂತೆಯನ್ನುಂಟುಮಾಡಿತ್ತು. ಇದಕ್ಕೆ ಹಾಗೇ ಹವಾ ಬದಲಾವಣೆಯಾದದರಿಂದ ನನಗೆ ಶೀತವಾಗಿ ಮೂರು ತಿಂಗಳ ತನಕ ಹಗಲೂ ರಾತ್ರಿ ಕೆಮ್ಮುಲ್ಲುಂಟಾಗಿತ್ತು.

ನನ್ನ ಸಹೋದರನಿಗೆ ಪೆರೂನಾದಿಂದ ವಾಸಿಯಾಗಿದ್ದದರಿಂದ ಅವನು ಅದನ್ನು ಸೇವಿಸೆಂದು ನನಗೆ ಹೇಳಿದನು. ಅದರಂತೆ ನಾನು ಕ್ರಮವಾಗಿ ಸೇವಿಸಿ, ದಿನೇ ದಿನೇ ಗುಣಹೊಂದುತ್ತಾ ಬಂದೆನು. ಈಗ ನಾನು ಮೂರು ಬಾಟ್ಲಿ ಔಷಧ ಸೇವಿಸಿ ಮುಗಿಯಿತು. ನಾನು ಸಂಪೂರ್ಣವಾಗಿ ಗುಣಹೊಂದಿರುತ್ತೇನೆ.

ಕಾಯಿಲೆಯವಾದ ಹೆಂಗಸರಿಗೆ

ಪೆರೂನಾದಿಂದ ನನಗೆ ಆಗಿರುವ ಪ್ರಯೋಜನವನ್ನು ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ. ಸುಮಾರು ಹತ್ತು ಕಡಮೆ ನಾಲ್ಕು ವರುಷಗಳ ಕಾಲ ನರಳಿದೆನು. ಹಲವು ಡಾಕ್ಟರುಗಳ ದ ಪರೀಕ್ಷೆ ಮಾಡಿ, ಅವರ ಔಷಧಗಳನ್ನು ಸೇವಿಸಿದೆನು. ಅದರಿಂದ ನನಗೆ ಸ್ವಲ್ಪವಾದರೂ ಉಪಶಮನವಾಯಿತಲ್ಲದೆ ಆ ಔಷಧಗಳು ನನ್ನ ರೋಗವನ್ನು ವಾಸಿಮಾಡಿಲ್ಲ. ನಾನು ಎಷ್ಟು ಬಾಧೆಯನ್ನು ಪಡುವವಳು ನನ್ನ ಔಷಧಕ್ಕಾಗಿ ನನ್ನ ಗಂಡನು ಎಷ್ಟು ಹಣವನ್ನು ಖರ್ಚುಮಾಡಿರುತ್ತಾನೆ. ನಿರಾಶೆಯಾಗಿ ಕಡೆಯಲ್ಲಿ ಪೆರೂನಾವನ್ನು ತೆಗೆದುಕೊಂಡು ಪರೀಕ್ಷೆ ಮಾಡ್ತಿನೋಡವೆಂದು ನೆನೆದು ಶೋಧಿಸಲು ಆರಂಭಿಸಿದೆನು. ನಿಮ್ಮ ಹೇಳಿಕೆಯ ಪ್ರಕಾರ ಒಂದು ಬಾಟ್ಲಿ ಔಷಧ ಮುಗಿಯುವಷ್ಟರೊಳಗೆ ನನಗೆ ಸ್ವಲ್ಪ ಉಪಶಮನವಾಯಿತು. ಆಗಿನಿಂದ ನನಗೆ ಬೆನ್ನು ನೋವು ಇಲ್ಲವೇ ಇಲ್ಲ. ಈಚೆಗೆ ಪೆರೂನಾ ಸೇವಿಸಿದೇನೆ. ಈಗ ನಮ್ಮ ಮನೆಗೆ ಡಾಕ್ಟರು ಬರುವುದು ಅಪರೂಪ. ಪೆರೂನಾದಿಂದ ನಮ್ಮ ಸಂಸಾರಕ್ಕೆ ಎಷ್ಟು ಉಪಕಾರವಾಗಿದೆಯೋ ವಿವರಿಸಿದರೆ ಒಂದು ಪುಸ್ತಕವಾದೀತು. ನಾನು ತಮ್ಮನ್ನು ಅತ್ಯಂತ ವಿಶೇಷವಾಗಿ ಕೃತಜ್ಞತಾಭಾವದಿಂದ ವಂದಿಸುತ್ತೇನೆ.

ದೇಹದೊಳಗಿನ ಶೀತವು

ಮಿಸೆಸ್ ಫ್ರೆಡ್ ವೆಬ್ಬರ್ ೧೯೦೯ ಸೆಪ್ಟೆಂಬರ್ ಬ್ರಾಡ್ವೇ ಓಪೀ ಎಲಾಂ ನೆಕ್ಲೆಟ್ ಸ್ಟ್ರೀಟ್ ಕನ್ಸಾಸ್ ಸಿಟಿ ಸಂಸ್ಥಾನ — ಈಕೆ ಬರೆಯುವದು.

ಈ ಸಲ ನಾನು ಕಾಯಿಲೆ ಬಿದ್ದಾಗ ನನಗೆ ಬಹಳ ಶರೀರದ ಶೀತ ಹಿಡಿಯಿತು. ಅದು ನನ್ನ ದೇಹದ ಅಂಗಗಳು ರೋಗಗ್ರಸ್ತವು. ಬಹು ಕಠಿಣವಾದ ನೋವಾಗುತ್ತಿತ್ತು. ದಿನೇ ದಿನೇ ನನ್ನ ಸ್ಥಿತಿ ಕೆಡುತ್ತಾ ಬಂದು ಶುಷ್ಕವಾಗಿ ಆಹಾರವೇ ಬೇಡವಾಯಿತು.

ಪೆರೂನಾ ವಿಷಯ ಪತ್ರಿಕೆಗಳಲ್ಲಿ ರೋಗಗಳು ಗುಣವಾಗಿರುವುದನ್ನು ನಾನು ಓದಿ ಅದನ್ನು ಒಂದು ತಿಂಗಳ ವರೆಗೆ ಸೇವಿಸಿ ಅದರ ಪರಿಣಾಮ ನೋಡುವೆನೆಂದು ನಿಶ್ಚಯಿಸಿ ನಾನು ಪ್ರಯೋಗಿಸಿದೆನು.

ಒಂದು ತಿಂಗಳು ಸೇವಿಸುವುದರೊಳಗಾಗಿ ನನಗೆ ಬಹಳ ವಾಸಿಯಾಯಿತು. ಎರಡನೆ ತಿಂಗಳ ಅಂತದಲ್ಲಿ ನಾನು ಹೊಸ ಹೆಂಗಸಾದೆನು. ಈಗ ನಾನು ಪುಷ್ಟಿಹೊಂದುತ್ತಾ ಸಂಪೂರ್ಣ ಆರೋಗ್ಯವನ್ನು ಹೊಂದಿದೆನು. ಅದನ್ನು ಸೇವಿಸುವಂತೆ ನಾನು ಅನೇಕ ಸ್ನೇಹಿತೆಯರಿಗೆ ಹೇಳಿದೆನು. ಎಲ್ಲರೂ ಅದರ ಪ್ರಯೋಜನವನ್ನು ನೋಡಿ ಸಂತೋಷಪಡುತ್ತಾರೆ.

ಅನೇಕ ವೇಳೆ ನಿಮ್ಮ ಔಷಧವನ್ನು ಇತರರಿಗೆ ತೋರಿಸುತ್ತೇನೆ. ಅವರೆಲ್ಲಾ ಸೇವಿಸಿ ಸಂತೋಷಪಡುತ್ತಾರೆ. ಕಾಯಿಲೆಯಾಗಿದ್ದೇನೆಂದು ಯಾವ ಹೆಂಗಸಾದರೂ ನನಗೆ ಬರೆದರೆ ಅಥವಾ ನನ್ನ ಬಳಿಗೆ ಬಂದು ಕೇಳಿದರೆ ಅವರಿಗೆಲ್ಲಾ ಪೆರೂನಾದ ಯೋಗ್ಯತೆಯನ್ನು ವಿವರಿಸಿ ಅದನ್ನು ಸೇವಿಸುವಂತೆ ಶಿಫಾರಸು ಮಾಡುತ್ತೇನೆ — ಎಂಬುದಾಗಿ ಮಿಸೆಸ್ ಮಾರ್ಥಾ ಫ್ರೆಡ್ರಿಕ್ ಸೆಂಟ್ರಲ್ ಪಾರ್ಕ್ ಬಾಂಗ್ ದಿ ಪ ನ್ಯೂಯಾರ್ಕ್ ಸಿಟಿ, ಯು ಎಸ್ ಎ ಎಂಬ ಹೆಂಗಸು ಬರೆದಿರುತ್ತಾಳೆ.

ಒಬ್ಬ ಹೆಂಗಸಿನ ಅನುಭವವು

ಕೆಳ ಹೊಟ್ಟೆಯ ಎಡ ಭಾಗದಿಂದ ನಾನು ಸುಮಾರು ಒಂದು ಪಟ್ಟಿನು. ಅದರಿಂದ ನನ್ನ ರಕ್ತವೆಲ್ಲಾ ಕುಂದಿ ನನ್ನ ಬುದ್ಧಿಯು ಕೆಟ್ಟು ಹೋದಿತೆಂದು ಹೆದರಿಕೊಂಡೆನು. ನನ್ನ ಬೆನ್ನೆಲುಬು ಎದೆಗೂಡಿನ ತನಕ ಬಹಳವಾಗಿ ಬಾಧೆಪಡಿಸುತ್ತಿತ್ತು. ಈ ಬಾಧೆಯನ್ನು ಅನುಭವಿಸುವದಕ್ಕಿಂತ ಸಾಯುವುದೇ ಉತ್ತಮವೆನ್ನುವಂತಿತ್ತು. ಪೆರೂನಾವು ಈ ನನ್ನ ಕಾಯಿಲೆಯನ್ನು ವಾಸಿಮಾಡಿತು. ಅದರಿಂದ ಅದು ಉತ್ತಮವಾದದ್ದೆಂದು ನಾನು ಹೇಳ ಬಯಸುತ್ತೇನೆ. ನನ್ನ ರೋಗವು ನಿವಾರಣೆಯಾಗಿ ಈಗ ಎರಡು ವರುಷ ತುಂಬುವುದರಲ್ಲಿದೆ. ಮತ್ತೆ ಆ ರೋಗದ ಸೆಳೆಯನ್ನೇ ಕಾಣೆನು.

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ, ಇಂಗ್ಲೀಷು, ತೆಲುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದದ್ದು ಇವರಿಂದಲೇ ತಿಳಿಯಬಹುದು.

ವಿಳಾಸ.—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ—

ಮೆಸ್ಸರ್ಸ್ ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು

HITCHCOCK AND SONS, BANGALORE, SOUTH INDIA

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

21—5—1909 ರಿಂದ 29—5—1909 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ಬಂದದ್ದು	ಸತ್ತದ್ದು	ಬಂದದ್ದು	ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	5	3	0	0
ಬೆಂಗಳೂರು ಡಿಸ್ಟ್ರಿಕ್ಟು	3	3	11	12
ಮೈಸೂರು ,,	8	6	11	13
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	1	2	0	0
ಚಿತ್ರದುರ್ಗ ,,	0	0	0	0
ಕಡೂರ್ ,,	1	1	0	0
ಶಿವಮೊಗ್ಗ ,,	0	0	0	0
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	18	16	23	25

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯ ನಾಮ ಸಂವತ್ಸರದ ಜ್ಯೇಷ್ಠ ಬಹುಳ ಸಪ್ತಮಿ ಗುರುವಾರದಿಂದ ಜ್ಯೇಷ್ಠ ಬಹುಳ ತ್ರಯೋದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಜೂನ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಂದಿ ಮಿಥುನ ಮಾಸ
10	ಗುರು	ಸಪ್ತಮಿ	37 27	ಶ್ರ	36 20	29
11	ಶುಕ್ರ ‡	ಅಷ್ಟಮಿ	31 57	ಪೂ ಭಾ	31 30	29
12	ಶನಿವಾ §	ನವಮಿ	25 20	ಪೂ ಭ	27 28	30
13	ರವಿವಾ *	ದಶಮಿ	19 20	ರೇ	23 21	31
14	ಚಂದ್ರ †	ಏಕಾದಶಿ	13 10	ಅ	19 1	1
15	ಕುಜ	ದ್ವಾದಶಿ	9 6	ಭ	16 20	2
16	ಬುಧ	ತ್ರಯೋದಶಿ	3 21	ಕೃತ್ತಿ	66 0	3

‡ ಸ್ವರ್ಣಗೌರಿ ಪೂಜೆ
§ ತಿಥಿದ್ವಯಂ
* ಏಕಾದಶಿ ತಿಥಿ ಲಿಂಗಾಂಬುಧಿ ವ್ರತ
† ಷಡಶೀತಿ ಪುಣ್ಯಕಾಲ ಸರ್ವತ್ರ ಏಕಾದಶಿ ವೃಷಭ ಕೂರ್ಮಜಯಂತಿ

ಪೇಟೆ ಧಾರಣೆ

ವಿವರ	ಮೈಸೂರು	ಬೆಂಗಳೂರು
ವಡ್ಡಿ ಅಕ್ಕಿ ಪಲ್ಲ ೧ ಕ್ಕೆ	೧೫ ೨ ೦	೧೬ ೮ ೦
ಕೆಂಪು ಕೆಂಪಕ್ಕಿ ಅವಲ್	೧ ೫ ೨	೧೫ ೦ ೦
ದುಮ್ಮ	೨ ೦	೧೬ ೮ ೦
ಜಾಪ್ರಿ ಅಕ್ಕಿ	೧ ೨	೧೫ ೮ ೦
ಸಣ್ಣಕ್ಕಿ ಅವಲ್	೧	೧೭ ೦ ೦
ದುಮ್ಮ	೧೭ ೦	೧೭ ೦ ೦
ತೊಗರಿ ಬೇಳೆ ಪಲ್ಲ ೧ ಕ್ಕೆ	೧೬ ೨ ೦	೧೭ ೦ ೦
ದುಮ್ಮ	೧೫ ೦ ೦	೧೫ ೦ ೦
ಹೈದರಾಗಿ ಪಲ್ಲ ೧ ಕ್ಕೆ	೯ ೪ ೦	೮ ೧೨ ೦
ಕಾರಾಗಿ	೮ ೧೨ ೦	೮ ೦ ೦
ಜೋಳ	೧ ೦	೯ ೦ ೦
ಹುರುಳಿ ಪಲ್ಲ ೧ ಕ್ಕೆ	೧ ೮ ೦	೧೪ ೦ ೦
ಬಿಳಿ ಅವರೆ	೧೧ ೦	೧೩ ೨ ೦
ಹೆಸರು	೬ ೦	೧೩ ೮ ೦
ಉದ್ದು	೧ ೮ ೦	೧೪ ೨ ೦
ಕಡಲೆ	೧೩ ೮ ೦	೧೨ ೪ ೦
ಎಳ್ಳು ಸೇ ೧೨೭ ಕ್ಕೆ	೧೭ ೮ ೦	೧೯ ೮
ಹುರುಳಿ	೧೧ ೪ ೦	೧೧ ೨ ೦
ಹರಳು ೧೨೭ ಸೇರಿಗೆ	೧೧ ೦	೧೦ ೦ ೦
ತೆಂಗಿನಕಾಯಿ ಮಣ ೧ ಕ್ಕೆ	೨ ೮ ೦	೩ ೬ ೦
ಮೆಣಸಿನಕಾಯಿ	೫ ೮ ೦	೬ ೮ ೦
ದುಮ್ಮ	೫ ೨ ೦	೬ ೦ ೦
ಬೆಲ್ಲ ಗೆಂಡೆ ಅಚ್ಚು	೬ ೪ ೦	೫ ೨ ೦
ಒಳ್ಳೆ ಮಣ ೧ ಕ್ಕೆ	೫ ೨ ೦	೫ ೦ ೦
ಹವಳೆಣ್ಣೆ ,,	೬ ೮ ೦	೪ ೩ ೦
ಕೊತ್ತುಂಬರಿ ಪಲ್ಲ ೧ ಕ್ಕೆ	೯ ೪ ೦	೯ ೦ ೦
ಉಪ್ಪು	೫ ೮ ೦	೬ ೧೪ ೦
ಹುಣಸೇ ಹಣ್ಣು	೧ ೧೨ ೦	೧ ೧೨ ೧
ಹಳೇದು	೧ ೨ ೦	೧ ೧೦ ೦
ತುಪ್ಪ ಮಣ ೧ ಕ್ಕೆ	೧೫ ೨ ೦	೧೩ ೪ ೦
ಹರಳೆಣ್ಣೆ ಪೆಟ್ಟಿ ೧ ಕ್ಕೆ	೫ ೦	೪ ೦ ೦
ತೆಂಗಿನಕಾಯಿ ೧೦೦ ಕ್ಕೆ	೪ ೮ ೦	೪ ೮ ೦
ಅಡಿಕೆಕಾಯಿ ಮಣ ೧ ಕ್ಕೆ	೦ ೮ ೦	೦ ೧೪ ೦
ಅಂಟುವಾಳದ ಕಾಯಿ ಮಣ ೧ ಕ್ಕೆ	೧ ೦	೦ ೧೩ ೦
ಚಿನ್ನ (ಪವನ್) ಕೆಂಪು	೧೫ ೬ ೦	೧೫ ೯ ೦
,, ,, ಹಸಿರು	೧೭ ೦ ೦	೧೫ ೧೦ ೦
,, ,, ಗಟ್ಟಿ ತೊಲ ೧ ಕ್ಕೆ	೨೪ ೮ ೦	೨೪ ೬ ೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೭ ೪ ೦	೬೭ ೦ ೦

Printed and Published by the Rev H GULLIFORD, Proprietor and Manager Wesleyan Mission Press Mysore 10 6,1909

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸ ೧೯೦೯ ನೇ ಇಸವಿ ಜೂನ್ ತಾರೀಖು ೧೭ ನೇ ಗುರುವಾರ. ಸಂಚಿಕೆ ೩

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . ರೂ ೧—೨—೦

ಪರಸ್ಥಳದವರು ಅಂಚೆಯ ಮೂಲಕ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸಲ್ ಸೇರಿ ರೂ ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುತ್ತಿರುವ ಪತ್ರಿಕೆಯ ವಿಳಾಸದಲ್ಲಿ ಬರೆದಿರುವ ರಿಜಿಸ್ಟರ್ ನಂಬರನ್ನು ಮರೆಯದೆ ನಮೂದಿಸತಕ್ಕದ್ದು

ನಮ್ಮ ವಿಳಾಸ— ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮಂಟರ ಮ್ಯಾಜಿಕ್ ಬಾಂ ತೈಲವು

47 1

ತಲೆನೋವು ಹಾಯಿನೋವು ಕೆಳತ ೧ ಟ್ರನೋವು ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು ಶೀತರೋಗಗಳು, ಮೈನೋವು, ಕೀಲುಗಳ ಸಂದುಕಟ್ಟುಗಳ ನೋವು ಬೇಳು ಕಡಿದ ನೋವು ಹಲ್ಲುನೋವು—ಇವುಗಳೆಲ್ಲಾ ಈ ತೈಲವನ್ನು ಹಚ್ಚಿದರೆ ಚಕ್ಕಿತರಾಗುವಂತೆ ಖಂಡಿತವಾಗಿ ವಾಸಿಯಾಗುತ್ತವೆ ಈ ಔಷಧವನ್ನು ದೇಶದ ಎಲ್ಲಾ ಭಾಗಗಳ ಡಾಕ್ಟರು ಜನರು ಪರೀಕ್ಷೆ ಮಾಡಿ ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆ ಮಾಡುವದರಲ್ಲಿ ಈ ಔಷಧದ ಶಕ್ತಿಯು ಅಮೋಘವಾದದ್ದು ಆದದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಉಪಯೋಗಿಸುವರು ಈ ಔಷಧವನ್ನು ಒಂದಾವರ್ತಿ ತರಿಸಿ ಉಪಯೋಗಿಸಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಒಡೆದು ಅದರ ಹುಟ್ಟನ್ನೇ ನಾಶಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೬ ಆಣೆ ಅದಲ್ಲದೆ ವಿ ಪಿ ಛಾರ್ಜು ಬೇರೆ ಒಂದೇ ಸಲ ೬ ಶೀಸೆ ತೆಗೆದುಕೊಳ್ಳುವವರಿಗೆ ಪ್ಯಾಕಿಂಗ್ ಛಾರ್ಜು ಮಾಫಿ ಮಾಡಲಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತೆಗೆದುಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವಾ ಪಾರಿಗಳೂ ಮಾರುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್ ಪೀಟರ್ಸ್

೩೩, ಮೇದರಮಟ್ಟಿ ಬೀದಿ, ಪೇಟೆ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ತರಿಸಿ ಓದಿರಿ.

10 21

"ಬ್ರಹ್ಮಚರ್ಯ" ಎಂಬ ಮನುಷ್ಯನಿಗೆ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯತ್ನದಿಂದಲೆ ದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ನಡುವೆ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯತ್ನದಿಂದಲೆ ದೀಪಿಕೆ"ಯನ್ನು ಎಫ್ ಎ ಮುಖ್ಯವಾದ ಪರೀಕ್ಷೆಗೆ ಪಠ್ಯವಾಗಿ ನಿಯಮಿಸಿರುತ್ತಾರೆ ಇದನ್ನು ಹುಡುಗರು ಮೊದಲುಗೊಂಡು ದೊಡ್ಡವರವರೆಗೂ ಓದತಕ್ಕದ್ದು ಕ್ರಯ ೬ ಆಣೆ ವಿ ಪಿ ಪಿ ಮೂಲಕ ಆಠಾಣೆ

"ವ್ಯಾಸ್ಕೋಡಿಗಾಮನ ಯಾತ್ರೆಯ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಂಜಕವಾದದ್ದು ಇದರಲ್ಲಿ ಸೂಚಿಸುವ ಸಂಗತಿಗಳು ಎಂಥಾ ಹೇಡಿಯನ್ನು ಕೂಡ ಧೈರ್ಯವಂತನನ್ನಾಗಿ ಮಾಡುವುವು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟೀನ್ ದಿನ್ನಪ್ಪಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಮತಾಂತರ, ಪಾಪವನ್ನಳಿಸಿ ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತ್ರವಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು.

ಇದರ ಬೆಲೆ —ಕೈಟಿನ ಬೈಂಡು ಪ್ರತಿ ಒಂದಕ್ಕೆ ೦—೧೦—೦

ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [ಅ 17

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲುನೋವು ಅಥವಾ ಗಾಯ ಎದೆನೋವು, ಘಾಯ, ಜಡಿಮು, ಇತ್ಯಾದಿ

ಇದರ ನಿಜಯವಾಗಿ ಸರ್ವಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮೂರು ರಾತ್ರಿ ಹಚ್ಚುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೩-೦ ೧೨ ಡಬ್ಬಿಗಳಿಗೆ ೪-೦-೦

ಮನೋಹರ ಅತ್ತರು —ಸುವಾಸಕ ಅತ್ತರು ½ ತೊಲಕ್ಕೆ	೧-೦-೦
" " ¼ ತೊಲಕ್ಕೆ	೦-೧೦-೦
ಬಾಲಕರಕ್ಷಕ ಮದ್ದು	೦-೮-೦
ವಜ್ರಗುಟಿಕ - ಧಾತುಪುಷ್ಟಿ - ರಕ್ತಶುದ್ಧಿ	೧-೦-೦
ಮುಂದಲ ತೈಲ —ಮುಡಿ ಉಗಳ	೦ ೮-೦
ಜ್ವರಹರ ಮಾತ್ರೆ	೦-೮-೦
ನೇತ್ರಾಂಜನ	೦-೪-೦
ವಿಜ ಮುಲಾಮು	೦ ೨-೦
ಕೇಶವರ್ಧಿನಿ ತೈಲ	೧-೦-೦
ಕಫನಾಶಕ ಚೂರ್ಣ	೧ ೮-೦

ಪಟ್ಟಿಯನ್ನು ಕಾಗದ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 21

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನಾವೇ ಸ್ವಂತ ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೆ ದಾರ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು ಕಪ್ಪು, ಜಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ. ೬ ಆ , ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮ , ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೩

ವಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ.

ಹುಡುಗರ ಟೋಪಿಗಳು ೧ ರೂ ೮ ಆ. , ೧ ರೂ ೬ ಆ ,

ಕಿವಿಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

28-18



೧. ಲೋಕಾಮಯಹರ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆರಿಹ, ಸಂದುಗಳ ನೋವು, ಮೈ ಕೈ ಕಾಲು ಕೊಡತ (ಭಾರ). ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ಸಿಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ದೇಹದ ಕಾಯಿಲೆಗೂ ವಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸಂಪಡಿಸಿ. ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಸೂತಕದೋಷ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕ್ಷಯಗಳನ್ನು ಬಹು ಬೇಗನೆ ಗುಣಪಡಿಸುತ್ತವೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ:—ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್. ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ.

19 20

ಇದು ಸಾಧಾರಣ ಜ್ವರ, ಚಳಿಜ್ವರ, ಮರುಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು, ಎಂಬ ನಾನಾ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ ೨—೧೨ ಆ , ೧೧ ರೂ ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವಿವರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಶ್ರೀಯುತ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಸ್ಥರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೆ ಔಷಧವೆಂತ ಬರೆದಿದಾರೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ —

ಹೆಡ್ ಆಫೀಸಿನ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

JUST RECEIVED! JUST RECEIVED!!

Stead's Books for the Bairns

(Illustrated) New Numbers [5 24]

STEAD'S PENNY POPULAR TALES—Sixty four Pages in a coloured Picture Cover Each number contains a story of thrilling interest 24 numbers

CALENDARS FOR 1909.

Apply—The Manager, C L S. Book Depot, Mysore City.

ನೋಡಿರಿ ಪ್ರೋತ್ಸಾಹ ಕೊಡಿರಿ. ತರಿಸಿರಿ.

98 30

ಈಗ ತಾನೇ ಸೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತಿದೇವೆ ಹುರಕ್ಷಿಸಿರಿ, ನಮ್ಮಲ್ಲಿಯು ಉಲ್ ದಾರದಂತಹ ಉಲ್ ದಾರ ಎಲ್ಲಿಯೂ ದೊರಿಯದು ೫,೦೦೦ ಹಾಸನ್ ಟೋಪಿಹೋಲಿಯುವ ಸೂಪೀರಿಯರ್ ಉಲ್‌ದಾರ

೧೦ ಟೋಪಿಯಾಗುವ ಸೂಪೀರಿಯರ್ ಉಲ್ ಬಂಡಲ್ ೧ಕ್ಕೆ ೩-೭-೦

೧೨ ಲಡಿಗಳಿರುವ ಸೂಪರ್ ಫೈಯಿನ್ ಉಲ್ ಬಂಡಲ್ ೧ಕ್ಕೆ ೫ ೪-೦

೮ ಲಡಿಗಳಿರುವ ಮಿಶ್ರ ಸೂಪೀರಿಯರ್ ಉಲ್ ಬಂಡಲ್ ೧ಕ್ಕೆ ೩ ೪ ೦

ದಪ್ಪದ ಉಲ್ ದಾರಗಳು

೮ ಲಡಿಗಳಿರುವ ಬಂಡಲ್ ೧ಕ್ಕೆ ೨ ೬ ೦, ೩ ೧೨ ೦ ಮತ್ತು ೪ ೮ ೦

೩೦ ಇಂಚಿನ ಕಾಟನ್ ಬನಿಯನ್ ೧ಕ್ಕೆ ೦-೮-೦

ಉಲನ್ ೩೬ ಇಂಚಿನದಕ್ಕೆ ೨-೮ ೦

ಲಿನನ್ ಕೈವಸ್ತ್ರ ೧ಕ್ಕೆ ೦ ೨-೦ ಪರಿಮಳ ನಶ್ಯದ ಸೀಸೆ ೧ಕ್ಕೆ ೦-೨ ೦

೩೦೦ ಪದಾರ್ಥಗಳಿರುವ ಸೇಸ್‌ಕೇಸ್ ತಾಂಬೂಲ ಮಿಶ್ರನು ಪ್ಯಾಕೆಟ್ ೧ಕ್ಕೆ ೦ ೩ ೦

ರಾಯಲ್ ದಂತಮಂಜನಡಬ್ಬಿ ೧ಕ್ಕೆ ೦ ೯ ೬ ರೋಮನಾಶಕ ಸಾಬೂನು ಪೆಟ್ಟಿಗೆ ೧ಕ್ಕೆ ೦ ೬ ೦ ಕೂಸುಗಳ ಟೋಪಿ, ಪೂಟ್ಸ್ ಮೇಜೋಡು ಬೇಕಾದಲ್ಲಿ ಕ್ರಯದ ಪಟ್ಟಿ ತರಿಸಿರಿ

ವಿಳಾಸ —— ಪೋಲನ್ ಮಾರ್ಟ್, ೬೭ ಎ ಮಂಗಳೂರು

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಕೀಲುಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇದೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಬಹುದು ನೂಕಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದ ಬಾಯಾರಿಕೆ, ಬಳಲಿಕೆ, ಎದೆ ಕಲ್ಲುಸುವುದು, ತಲೆನೋವು ಗಾಬರಿ, ಕಣ್ಣು ಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು ಮರವು ನಿಶ್ಶಕ್ತಿ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರಾಂಶವುಳ್ಳ ವಾಯು ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [69-42]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦ ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦, ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೨೦, ಪಿ ಓ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

ಸನ್ ೧೮೭೬ ರಿಂದ ೧೯೦೬ ವರೆಗೆ

ಕಾಲದ ಪರೀಕ್ಷೆ '

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 6-21

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇವನಾ ಔಷಧಿಯನ್ನು ನೂರ ಪಂಡಿತರೆಲ್ಲಾ ಅನೇಕ ವೇಳೆ ಪರೀಕ್ಷೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಗಳು, ನಾನಾ ತರದ ಕೆಮ್ಮುಗಳು

ಸಕಲವಿಧ ಕ್ಷಯಗಳು ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ

ಇವಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವು ಇದೇ

ಕ್ರಯೋಸೋಟ್ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಈ ವಿಶಾಪವನ್ನು ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 23

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಕು ಬಟ್ಟೆಗಳು ಶಾಲೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಅಗ್ಗವು ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬| ಆಣೆ ವರಿವಿಗೂ ಚಿಲ್ಲರೆಯಾಗಿ ಅಗಲೀ ಒಟ್ಟಾಗಿ ಆಗಲೀ ದೊರಕಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಸಂಜೀವಿನೀ ಔಷಧಾಲಯ, ಮೈಸೂರು.

23 19

ಎಂ ಎಸ್ ಕುಮಾರ್ ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮದನೋತ್ಪತ್ತಿ, ನಿದ್ರಾಭಂಗ, ನಿಶ್ಶಕ್ತಿ ರಕ್ತದೋಷ, ಚರ್ಮವ್ಯಾಧಿ, ಜೀರ್ಣ ವಾಯುರೋಗಗಳೂ, ಹಳೇ ಜ್ವರ ಕೃಶತ್ವ, ಅಜೀರ್ಣ ಹೊಟ್ಟೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮೂತ್ರಕೃಚ್ಛ್ರ, ಉರಿಮೂತ್ರ, ಸೋಮರೋಗ ಇವುಗಳನ್ನು ಗುಣಪಡಿಸಿ ದೇಹದಲ್ಲಿ ಜೀವಕತ್ವವನ್ನು ತುಂಬಿ, ಸರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸವಿಂದ, ಬಲ, ಧೈರ್ಯ, ಕಾಂತಿ ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವವರಲ್ಲಿ ಇದು ಸಿದ್ಧವಾದ ಕ್ರಯ ಸೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೆ ಜ್ವರಗಳೂ, ಪ್ಲೇಗು ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨ ೩ ದಿವಸಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಕಾಲಕೂಟವಟಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೭ ಆಣೆ

ಸುಲೋಚನ ಬಿಂದು —ಉರಿಗಣ್ಣು, ಕೆಂಗಣ್ಣು, ಮಂಜುಗಣ್ಣು, ತಲೆನೋವು ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿ ಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಸೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಜಿಗಳಿಗೆ ಸ್ಟಾಂಪ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,

ಪ್ರೊಪ್ರೈಟರ್

ವೃತ್ತಾಂತ ಪತ್ರಿಕೆ

.0

ಸನ್ ೧೯೦೯ ನೇ ಇಸವಿ ಜೂನ್ ತಾ|| ೧೭ ನೇ ಗುರುವಾರ

ಮೈಸೂರು ಸರ್ಕಾರಿ ಹುಕುಮುಗಳು

ಮೈಸೂರು ಸಂಸ್ಥಾನದ ಬೇರೆ ಬೇರೆ ಇಲಾಖೆಗಳಲ್ಲಿ ವರುಷಾವಧಿ ನಡೆಯುವ ಕಾರ್ಯಾದಿಗಳ ರಿಪೋರ್ಟನ್ನು ಆಯಾ ಇಲಾಖೆಯ ಮುಖ್ಯಾಧಿಕಾರಿಗಳು ಬರೆದು ಗವರ್ನಮೆಂಟಿಗೆ ಕಳುಹಿಸುವರು ಆ ರಿಪೋರ್ಟುಗಳನ್ನು ಪರಾಂಬರಿಸಿ ಗವರ್ನಮೆಂಟಿನವರು ಹುಕುಮುಗಳನ್ನು ಬರೆದು ತಿಳಿಸುತ್ತಾರೆ ಈ ಕೆಲಸವೇ ಸರ್ಕಾರದವರಿಗೆ ತಕ್ಕ ಮಟ್ಟಿಗೆ ವಿಶೇಷವಾಗಿರುವುದು ಗವರ್ನಮೆಂಟಿನವರು ತಮ್ಮ ಕೈಕೆಳಗಿನ ಅಧಿಕಾರಿಗಳ ನಿದಾನವನ್ನೂ ಅನಪ್ಪಣೆಯನ್ನೂ ಕುರಿತು ಆಕ್ಷೇಪಣೆ ಮಾಡುವುದು ಸಹ ಅಪರೂಪವಿಲ್ಲ ಕಳೆದ ವಾರ ನಮ್ಮಲ್ಲಿಗೆ ಬಂದಿರುವ ಸರ್ಕಾರಿ ಹುಕುಮುಗಳಲ್ಲಿ ಗವರ್ನಮೆಂಟಿನವರು ಸರ್ವಸಾಧಾರಣವಾಗಿ ದಂಡನಾವಾಕ್ಯಗಳನ್ನು ಬರೆದಿರುತ್ತಾರಲ್ಲದೆ ತಪ್ಪಿತಸ್ಥನಾದ ಅಧಿಕಾರಿಯು ಇಂಥವನೇ ಆಗಲಿ, ಆತನಿಗೆ ಇಂಥಾ ಶಿಕ್ಷೆ ಮಾಡಿದೆ ಎಂದಾಗಲಿ ನಮೂದುಮಾಡಿರುವುದಿಲ್ಲ

ಅಮೃತಮಹಲ್ ಕಾನೂನಿನ ಮತಾರದವಾದ ರಿಪೋರ್ಟಿನಲ್ಲಿ ಗವರ್ನಮೆಂಟಿನವರು ಸಾಮಾನ್ಯವಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದ ಕಾಲಕ್ಕೆ ಸರಿಯಾಗಿ ವಾರ್ಷಿಕ ರಿಪೋರ್ಟುಗಳು ಕಳುಹಲ್ಪಡಲಿಲ್ಲ ಹಾಗೂ, ಹಾಸನದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದ ಬಂದ ರಿಪೋರ್ಟು ಮಂಜೂರು ಅವಕಾಶವಾಯಿತೆಂದು ಆಕ್ಷೇಪಣೆ ಮಾಡಿರುತ್ತಾರೆ ಹೀಗೆ ಅವಕಾಶವಾದದ್ದಕ್ಕೆ ಯಾವ ಪ್ರತೀಕಾರವನ್ನೂ ಮಾಡದೆ "ಇನ್ನು ಮುಂದೆ ಇಂಥ ಅವಕಾಶವಾಗಲಾರದೆಂದು ನಂಬುತ್ತೇವೆ" ಎಂಬ ಮಾತುಗಳಿಂದ ತಮ್ಮ ಅಸಂತೋಷವನ್ನು ಪ್ರಕಾಶಪಡಿಸಿರುವರು

ಕಡೆಗೆ, ಈ ಸಂಸ್ಥಾನದ ಜಡ್ಜಿಗಳ ಕಾರ್ಯಾಚಾರಗಳನ್ನು ಕುರಿತ ವಾರ್ಷಿಕ ರಿಪೋರ್ಟಿನಲ್ಲಿ ಗವರ್ನಮೆಂಟಿನವರು ತಮ್ಮ ಅಸಮಾಧಾನವನ್ನು ತೋರ್ಪಡಿಸಿ ಹೊರಡಿಸಿರುವ ಹುಕುಂ ಕೊಟ್ಟಿರುವರು ಈ ಹುಕುಮಿನ ಅಭಿಪ್ರಾಯವೇನೆಂದರೆ —

ಒಂದೆರಡು ಹಿರಿಯ ಅಧಿಕಾರಿಗಳು ರೋಗಿಗಳು, ಹಾಜರಿ ಮೊದಲಾದ ವಿಷಯಗಳಲ್ಲಿ ಆಕ್ಷೇಪಣೆಗೆ ಸವಾಲು ಕೊಡುವುದು, ಲೆಕ್ಕಾಚಾರದಲ್ಲಿ ಹೊಂದಿಕೆ ಇಲ್ಲದಿರುವುದು ಲೆಕ್ಕದಲ್ಲಿ ಕೈಬಿಟ್ಟಿರುವುದು ಇವೆಲ್ಲಾ ನೂ ಬರದೆ ಗವರ್ನಮೆಂಟಿನವರು ಮರುಷವರುಷ ಎತ್ತಿ ತೋರಿಸಿ ಬಂದಿದ್ದಾಗ್ಯೂ ಇವು ತೃಪ್ತಿಕರವಾದ ಸ್ಥಿತಿಯಲ್ಲಿ ಬಂದಿಲ್ಲ ಹೀಗಾಗುವುದು ಮುಖ್ಯಸ್ಥರ ಮೇಲ್ವಿಚಾರಣೆ ಅಧಿಕಾರಿಗಳಿಗೆ ಡಿಸ್ಟ್ರಿಕ್ಟಿನ ಕೆಲಸ ಕಾರ್ಯಗಳು ಚಟುವಟಿಕೆಯಾಗಿ ನಡೆಯುವ ಬಗೆಯಲ್ಲಿ ಪೂರ್ಣವಾದ ಅರಿವು ಇಲ್ಲದಿರುವುದು ಕಾರಣವೆಂದು ಶಿರಸ್ತೇದಾರುಗಳು ಕಟ್ಟಿ ಹಸರು ಬರುವುದಕ್ಕೆ ಕಾರಣವಾಗಿದೆ ಮಾಮೂಲು ರಿಜಿಸ್ಟರುಗಳು ತಪ್ಪಿಲ್ಲದಂತೆ ಇಡುವ ಬಗ್ಗೆ ಅವರು ಕಂಟ್ರೋಲರವರಿಗೆ ಕಳುಹಿಸಬೇಕಾಗಿರುವ ಕ್ಯಾಷ್ ಸರಿ ಇರುವ ಬಗ್ಗೆ ಪರಿಶೀಲನೆ ನಡೆಸುವುದು ಅಧಿಕಾರಿಗಳು ಸ್ವತಃ ಮಾಡುತ್ತಿರುವರು ಮತ್ತು ತೋಡಮೊಬಲಾಗಿ ಆವರು ಡೆಪ್ಯುಟಿ ಕಮಿಷನರುಗಳಿಗೆ ಕೂಡಲೇ ತಿಳಿಯಪಡಿಸಬೇಕು ಡೆಪ್ಯುಟಿ ಕಮಿಷನರುಗಳು ಸಬ್ ಟ್ರೆಜರಿಗಳಲ್ಲಿ ಕಂಡುಬರುವ ನ್ಯೂನಾತಿರಿಕ್ತಗಳನ್ನು ತಿದ್ದುವುದಕ್ಕೆ ತಮ್ಮ ದರ್ಪವನ್ನು ನಿಯಮಿತ ಪ್ರಕಾರ ನಡೆಸಿರುವುದಿಲ್ಲ ಖಜಾನೆಗಳ ಹೆಡ್ ಅಕೌಂಟೆಂಟರೂ ಇತರ ನೌಕರರುಗಳೂ ಕೆಲಸ ಬಲ್ಲ ಶಕ್ತರಾದವರುಗಳಲ್ಲಿ ಕಂಡ ಪ್ರಕಾರ ಪಾತ್ರರಾದವರಾಗಿಯೂ ಕಾಲಕ್ಕೆ ಸರಿಯಾಗಿಯೂ ವಿಚಾರಣೆ ಮಾಡಿ ಖಜಾನೆಗಳ ಲೆಕ್ಕಗಳನ್ನು ಸ್ವಲ್ಪವೂ ತಪ್ಪಿಲ್ಲದಂತೆ ಕಂಟ್ರೋಲರವರಿಗೆ ಕಳುಹಿಸುವಂತೆ ಅವರಿಗೆ ಜವಾಬ್ದಾರಿಯನ್ನು ವಹಿಸಬೇಕು ಡೆಪ್ಯುಟಿ ಕಮಿಷನರುಗಳೂ ಖಜಾನೆಯ ಆಫೀಸರುಗಳೂ ಡಿಸ್ಟ್ರಿಕ್ಟ್ ಖಜಾನಾ ಆಫೀಸುಗಳಲ್ಲಿ ಕೆಲಸಕಾರ್ಯಗಳು ತೃಪ್ತಿಕರವಾಗಿಯೂ ಚಟುವಟಿಕೆಯಿಂದಲೂ ನಡೆಯುವಂತೆ ಬಿಗಿಯಾದ ಮೇಲ್ವಿಚಾರಣೆ ಇಟ್ಟು, ತಪ್ಪಿತಸ್ಥರನ್ನು ಕೂಡಲೇ ತಕ್ಕದಾಗಿ ಶಿಕ್ಷಿಸಬೇಕು ನೌಕರನಾದವನು ಯಾರಾದರೂ ಅಯೋಗ್ಯನಾಗಿರುವ ಪಕ್ಷದಲ್ಲಿ ಅಂಥವರನ್ನು ಇತರಕಡೆಗಳಿಗೆ ವರ್ಗಮಾಡಿ, ತಪ್ಪು ಮಾಡಿದವರನ್ನು ಕಠಿಣವಾಗಿ ಶಿಕ್ಷಿಸಬೇಕು, ಅವಶ್ಯವಿದ್ದರೆ ಅಂಥಾ ನೌಕರರನ್ನು ಕೆಲಸದಿಂದಲೇ ವಜಾಮಾಡಿಬಿಡಬಹುದು

ಸಂಸ್ಥಾನದ ಕಂಟ್ರೋಲರವರು ಮೇಲೆ ಹೇಳಿದ ಡಿಸ್ಟ್ರಿಕ್ಟ್ ಖಜಾನೆಯ ನ್ಯೂನಾತಿರಿಕ್ತಗಳನ್ನು ಎತ್ತಿಹಾಕಿ ವಿವರಿಸುತ್ತಾರೆ ಈ ವಿಷಯಗಳಿಗೆ ಡೆಪ್ಯುಟಿ ಕಮಿಷನರವರು ಗಮನಕೊಡಬೇಕಾಗಿದೆ ೧೯೦೭ ೦೮ ನೇ ಸಾಲಿನ ಹನ್ನೆರಡು ತಿಂಗಳ ಮೈಸೂರ್ ಡಿಸ್ಟ್ರಿಕ್ಟಿನ ಬರ್ಮಿಂಗ್‌ಹ್ಯಾಂ ಡಿಸ್ಟ್ರಿಕ್ಟ್ ಖಜಾನೆಯ ಲೆಕ್ಕವನ್ನು ಪರಿಶೀಲಿಸಿದರೆ ಆ ಕಾಲದಲ್ಲಿ ಖಜಾನೆಯ ಕೆಲಸಕಾರ್ಯಗಳಲ್ಲಿ ಅನೇಕ ಲೋಪದೋಷಗಳು ಕಂಡುಬಂದಿರುವುದು ಅತ್ಯಂತವಾದ ಅಸಮಾಧಾನವನ್ನುಂಟುಮಾಡಿದೆ ಡೆಪ್ಯುಟಿ ಕಮಿಷನರವರು ಈ ಖಜಾನೆಯ ಕೆಲಸಗಳ ಬಾಬತ್ತಿನಲ್ಲಿ ಸ್ಪೆಷಲ್ ತನಿಖೆಯನ್ನು ಮಾಡಿ, ಕೆಲಸ ತೃಪ್ತಿಕರವಾಗಿ ನಡೆಯುವಂತೆ ಸರಿಯಾದ ಏರ್ಪಾಡು ಮಾಡಬೇಕು

ಮೇಲ್ಕಂಡ ಸರ್ಕಾರಿ ಹುಕುಮಿನಿಂದ ಗವರ್ನಮೆಂಟಿನವರು ತಮ್ಮ ಅಧಿಕಾರಿಗಳನ್ನು ಹಿಂದಿಕ್ಕುತ್ತಾರಾದರೂ ಅಯೋಗ್ಯತೆಗೆ ನಿಜವಾಗಿಯೂ ತಕ್ಕ ಶಿಕ್ಷೆಯನ್ನು ವಿಧಿಸದೆ ಹೋಗಿರುತ್ತಾರೆಂಬುವುದು ಗೊತ್ತಾಗುತ್ತದೆ

ಇನ್ನೊಂದು ರಿಪೋರ್ಟನ್ನು ಓದಿನೋಡಿದವು ಅದು ಮೈಸೂರು ಸಂಸ್ಥಾನದ ಸರ್ವೆ ಇಲಾಖೆಯ ವಾರ್ಷಿಕ ರಿಪೋರ್ಟಾಗಿದೆ,

ಇದರಲ್ಲೂ ಸರ್ಕಾರದವರು ಒಂದೆರಡು ಕಠಿಣತರವಾದ ಮಾತುಗಳನ್ನು ಪ್ರಯೋಗಿಸಿ ತಮ್ಮ ಆಗ್ರಹವನ್ನು ಪ್ರಕಾಶಪಡಿಸಿರುತ್ತಾರೆ ಹ್ಯಾಗೆಂದರೆ—

“ಗ್ರಾಮಾಂತರಗಳಲ್ಲಿ ‘ ಜನರು ಅಲಕ್ಷ್ಯವುಳ್ಳವರಾದದ್ದರಿಂದಲೂ, ಹದ್ದುಬಸ್ತುಗಳ ಗುರುತು (ಬೌಂಡರಿ ಮಾರ್ಕು)ಗಳು ಇಲ್ಲದೆ ಹೋದದ್ದರಿಂದಲೂ ಸರ್ವೆ ಇಲಾಖೆಯ ನೌಕರಮಾನೇರುಗಳ ಕೆಲಸಗಳು ಮುಂದರಿಯದಂತೆ ತುಂಬಾ ಅಡ್ಡಿಯಾಯಿತು ಇವೆರಡು ಕಾರಣಗಳೂ ರೆವಿನ್ಯೂ ಇಲಾಖೆಯ ಅಧಿಕಾರಿಗಳಿಗೆ ಅಪಮಾನವನ್ನು ತರುವುದಕ್ಕೆ ಸಾಕ್ಷಿಭೂತಗಳಾಗಿರುತ್ತವೆ ತಮ್ಮ ನ್ಯಾಯವೂ ಸಹಜವೂ ಆದ ಕರ್ತವ್ಯಗಳನ್ನು ನೆರವೇರಿಸದೆ ತಪ್ಪಿಹೋಗಿರುವಂಥಾ ಅಮಲ್ದಾರರನ್ನೂ ಅಸಿಸ್ಟೆಂಟ್ ಕಮಿಷನರುಗಳನ್ನೂ ದಂಡನೆಗೆ ಗುರಿ ಮಾಡಬೇಕಾದ ಕಾಲವು ಸಮೀಪಿಸಿರುವಂತೆ ಕಾಣುತ್ತದೆ ”

ಈ ರೀತಿಯಾದ ಆಕ್ಷೇಪಣೆಗಳನ್ನು ನೋಡುವಲ್ಲಿ ಸರ್ಕಾರಿ ಅಧಿಕಾರಿಗಳಲ್ಲೂ ನೌಕರಮಾನೆಯರಲ್ಲೂ ಅಲಕ್ಷ್ಯಭಾವವೂ ತಾಮಸಸ್ವಭಾವವೂ ಅಯೋಗ್ಯತೆಯೂ ಉಂಟಾಗುವುದು ಗವರ್ನ್‌ಮೆಂಟಿನವರಿಗೇನೇ ಚೆನ್ನಾಗಿ ಗೊತ್ತಾಗಿದೆ ಎಂದು ಕಂಡುಬರುತ್ತದೆ. ನೋಟ್ಸ್‌ಗಳಂತೆ ಎಚ್ಚರಿಕೆಯ ಮಾತುಗಳನ್ನು ಹುಕುಮಿನಲ್ಲಿ ಬರೆದಿಟ್ಟರೆ ಆ ಲೋಪಗಳೆಲ್ಲಾ ಸರಿಹೋಗುತ್ತವೆಂದು ಊಹಿಸಿರುವಂತೆಯೂ ಕಾಣುವುದು ನಾವಾದರೋ ಗವರ್ನ್‌ಮೆಂಟಿನವರು ತಮ್ಮ ದರ್ಪವನ್ನು ಇನ್ನೂ ಕಠಿಣತರವಾದ ರೀತಿಯಲ್ಲಿ ಪ್ರಕಾಶಪಡಿಸದಿದ್ದರೆ ಸರ್ಕಾರಿ ಕೆಲಸಗಳು ಕ್ರಮಪಡಲಾರವೆಂದು ಚೆನ್ನಾಗಿ ತಿಳಿದಿದ್ದೇವೆ. ಅಪ್ಪಣೆಯ ಪ್ರಕಾರ ನಡೆಯಲಿಲ್ಲವೆಂದು ಹೇಳಿ ಇಲ್ಲೊಬ್ಬ ಅಲ್ಲೊಬ್ಬ ಗುಮಾಸ್ತನನ್ನು ಕೆಲಸದಿಂದ ವಜಾಮಾಡಿದರೆ ಪ್ರಯೋಜನವಾಗಲಾರದು ಹೆಚ್ಚಾದ ಜವಾಬ್ದಾರಿಯನ್ನು ವಹಿಸಿರುವಂಥಾ ಅಧಿಕಾರಿಗಳಿಗೆ ಅವರು ತಮ್ಮ ಕರ್ತವ್ಯವನ್ನು ಚೆನ್ನಾಗಿಯೂ ತೃಪ್ತಿಕರವಾಗಿಯೂ ನೆರವೇರಿಸದಿದ್ದರೆ ಕೆಲಸದಿಂದ ವಜಾಮಾಡಲ್ಪಡುವರು ಎಂಬ ತಿಳುವಳಿಕೆಯು ಅವರ ಮನಸ್ಸಿಗೆ ಬರುವಂತೆ ಮಾಡಬೇಕಾಗಿದೆ ಎಂದು ನಂಬಿ ಈ ಸಂದರ್ಭದಲ್ಲಿ ಸೂಚಿಸುತ್ತೇವೆ

ಸತ್ಯವಾದ ಮತವು ಈ ದೇಶದಲ್ಲಿ ವ್ಯಾಪಿಸುತ್ತಿದೆ

ದೇವರನ್ನು ಸರ್ವ ಹೃದಯದಿಂದಲೂ ಬುದ್ಧಿಯಿಂದಲೂ ಶಕ್ತಿಯಿಂದಲೂ ಪ್ರೀತಿಸಿ ಆತನನ್ನೇ ಆರಾಧಿಸುವದು ಎಲ್ಲಾ ಮನುಷ್ಯರನ್ನು ಯಾವ ಜಾತಿ ಕುಲ ಕಸುಬುಗಳಲ್ಲಿರುವ ತನ್ನಂತೆಯೇ ಪ್ರೀತಿಮಾಡುವದು ಇವೆರಡನ್ನು ಬೋಧಿಸುವ ಮತವೇ ಉತ್ತಮೋತ್ತಮವಾದುದೆಂದು ಸಕಲರೂ ಒಪ್ಪುವರು ಆದರೆ ಯೇಸು ಕ್ರಿಸ್ತನ ಮತದಲ್ಲಿ ಮಾತ್ರ ಈ ಸಮೋಪದೇಶಗಳು ಪರಿಷ್ಕಾರವಾಗಿ ದೊರೆಯುತ್ತವೆ ಆತನ ಮತಕ್ಕೆ ಇವೆರಡೆ ಮುಖ್ಯ ಕಟ್ಟಳೆಗಳು ಪಂಡಿತರು ಪಾಮರರೂ ಬಾಲಕರೂ ಸ್ತ್ರೀಯರೂ ಓದು ಬಲ್ಲವರೂ ಇರುವ ಸಕಲ ಜನರ ... ಆತನ ... ಕ್ರಿಸ್ತನು ತನ್ನ ಮತತತ್ವಗಳನ್ನು ಇದು ಸುಲಭವಾಗಿ ಬೋಧಿಸಿದನು ದೇವರ ವಚನಗಳೆಲ್ಲಾ ... ಸುಲಭವಾಗಿ ಗ್ರಹಿಸತಕ್ಕವುಗಳಾಗಿಯೂ ಸಮಸ್ತ ... ಆಗಿವೆ ... ನೋಡುವ ನಮ್ಮ ... ಸ್ವಭಾವದ ... ಕೊಡುತ್ತದೆ ... ತಿಳುಕೊಳ್ಳಬಲ್ಲ ... ಇಲ್ಲ ಆದರೆ ... ಸ್ವಭಾವವನ್ನೂ ಆಧಾರವನ್ನೂ ... ಆದನ್ನು ತಿಳಿಯದ ... ಬಾಲಕರೂ ... ಅದನ್ನು ಅನುಭವಿಸಿ ... ನಡೆಯುತ್ತವೆಂಬದು ... ಆದರೆ ಅದನ್ನು ತಿಳಿಯಲಾರದವರು ... ದೇವರ ... ಸ್ವಭಾವಗುಣಗಳನ್ನು ಸಂಪೂರ್ಣವಾಗಿ ತಿಳಿಯುವದು ... ಆಗದು ಕೆಲವರು ... ಬುದ್ಧಿಗಳಿಂದ ಆತನ ವಿಷಯ ... ತಿಳಿಕೊಂಡಿರುವುದು ಆದರೆ ಅನೇಕರಿಗೆ ಅದು ಅಸಾಧ್ಯವಾಗಿದೆ ಆದರೆ ನನ್ನ ವಿಷಯವಾಗಿ ಚೆನ್ನಾಗಿ ... ಸಂಪೂರ್ಣವಾಗಿ ನನ್ನನ್ನು ತಿಳಿದವನೇ ನನ್ನ ಪ್ರೀತಿಪಾತ್ರನೆಂದು ಹೇಳದೆ ನನ್ನನ್ನು ... ಪೂರ್ಣ ಬುದ್ಧಿ ಶಕ್ತಿಗಳಿಂದ ಪ್ರೀತಿಸು ... ಸೃಷ್ಟಿಗಳಾದ ಸರ್ವರನ್ನೂ ನಿನ್ನಂತೆಯೇ ಪ್ರೀತಿಸಿ ... ಮಾಡುವವನೇ ನನ್ನರು, ನನ್ನ ಪ್ರೀತಿಗೆ ಪಾತ್ರರೆಂದು ದೇವರು ಆಜ್ಞಾಪಿಸುವದು ಎಷ್ಟು ಸುಲಭವಾಯಿತು ! ಅಗಾಧವಾದ ಅಗೋಚರವಾದ ಅಸಾಧ್ಯವಾದ ಕೆಲಸ ... ಸಾವಿರಾರು ... ನಮಗೆ ... ದೇವರನ್ನು ಸಂಪೂರ್ಣವಾಗಿ ತಿಳಿಯಬೇಕೆಂಬ ಅಸಾಧ್ಯವಾದ ಕೆಲಸವನ್ನು ನಮಗೆ ಆತನು ಕೊಡದೆ ನಿನ್ನ ... ನನ್ನನ್ನೂ ನಿನ್ನ ಸಹೋದರರಾದ ಮನುಷ್ಯರನ್ನೂ ಪ್ರೀತಿಸು ಎಂದು ಆಜ್ಞಾಪಿಸಿದ್ದಾನೆ ... ದೇವರು ... ಅದೇನಂದರೆ— ನನ್ನ ... ನಿನಗೆ ... ಅದು ... ಆಕಾಶಕ್ಕೆ ಏರಿಹೋಗಿ ಅದನ್ನು ತಿಳುಕೊಂಡು ಬಂದು ನಮಗೆ ತಿಳಿಸ... ಎಂದು ... ಅದು ಆಕಾಶದಲ್ಲಿರುವಂಥಾದ್ದಲ್ಲ ... ಅದನ್ನು ಮಾಡುವದಕ್ಕೆ ನಮಗೋಸ್ಕರ ... ಸಮುದ್ರವನ್ನು ದಾಟಿ ಅದನ್ನು ತಕ್ಕೊಂಡು ಎಂದು ನಮಗೆ ... ಬೇಡ ಅದು ಸಮುದ್ರದ ಆಚೆ ಇರುವಂಥಾದ್ದಲ್ಲ ಆ ವಾಕ್ಯವು ನಿನಗೆ ಬಹು ಸಮೀಪವಾಗಿದೆ ಅದನ್ನು ಮಾಡುವ ಹಾಗೆ ನಿನ್ನ ಬಾಯಿಯಲ್ಲಿಯೂ ಹೃದಯದಲ್ಲಿಯೂ ಇದೆ

ಹೀಗಿರುವದರಿಂದ ಕ್ರಿಸ್ತನ ಮತಕ್ಕೆ ಎಲ್ಲರೂ ಸೇರುತ್ತಿರುವರು ಅವಿದ್ಯಾವಂತರಾದ ... ಕೊರಚರೂ ವಡ್ಡರೂ ಈ ದೇಶದ ಮತದಲ್ಲಿ ಆಶ್ರಯವನ್ನು ಹುಡುಕುತ್ತಿರುವರು ಯಾಕಂದರೆ ಈ ಕೀಳುಜಾತಿಯವರಿಗೆ ಹಿಂದೂಮತದಲ್ಲಿ ಸಹೋದರಭಾವವು ಸಿಕ್ಕಲಿಲ್ಲ ಜಾತಿಭೇದಗಳಿರುವ ಕಡೆ ಜಾತಿಹೀನರನ್ನು ಸಹೋದರರಂತೆ ಹ್ಯಾಗೆ ಭಾವಿಸಬಹುದು ? ವೇದವೇದಾಂಗಳನ್ನು ತತ್ವಗಳನ್ನೂ ತಿಳಿಯದವರಿಗೆ ಹಿಂದೂಮತದಲ್ಲಿ ಗತಿಯೂ ನಿರೀಕ್ಷೆಯೂ ಇಲ್ಲ ಆದ್ದರಿಂದ ಅವರು ಅದನ್ನು ಬಿಟ್ಟು ತಮ್ಮನ್ನು ಸರ್ವ ವಿಷಯಗಳಲ್ಲೂ ಸುಲಭಸಾಧ್ಯವಾಗಿರುವ ಕ್ರಿಸ್ತನ ಮತವನ್ನು ಸೇರುವರು , ಕೆಲವರು ವಿದ್ಯಾವಂತರು ಇದನ್ನು ನೋಡಿ ಕ್ರೈಸ್ತ ಮತವು ಅವಿದ್ಯಾವಂತರಿಗೂ ನೀಚ ಜಾತಿಯವರಿಗೂ ಒಳ್ಳೇದಿರಬಹುದು ಅವರೇ ಅದರಲ್ಲಿ ಸೇರುತ್ತಾರೆ ಎಂದು ಹಾಸ್ಯ ಮಾಡಬಹುದು ಮಾಡಲಿ ಅದು ಕ್ರಿಸ್ತನ ಮತಕ್ಕೆ ಗೌರವವೇ ಹೊರತು ಅವಮಾನವಲ್ಲ ಕ್ರಿಸ್ತನ ಮತವು ಮೊದಲಿನಿಂದಲೂ ಪಾಮರರನ್ನೂ ನೀಚಜಾತಿಯವರನ್ನೂ ಹುಡುಕಿ ಅವರು ತಿಪ್ಪೆಯಲ್ಲಿ ಬಿದ್ದು ಮಣ್ಣಾಗಿರುವ ರತ್ನಗಳೆಂದು ಭಾವಿಸಿ ಅವರನ್ನು ಸ್ವೀಕರಿಸುತ್ತದೆ ರತ್ನವು ತಿಪ್ಪೆಯಲ್ಲಿ ಬಿದ್ದು ಮಾಸಿಹೋಗಿದ್ದರೆ ರತ್ನದ ಬೆಲೆಯೇನಾದರೂ ಕಡಮೆಯಾಗುವದೇ ? ಹಂದಿಯು ಮಾತ್ರ ಅದರ ಅಮೂಲ್ಯತ್ವವನ್ನು ತಿಳಿಯದೆ ಕಾಲುಗಳಿಂದ ತುಳಿದಾಡುವದು ಬುದ್ಧಿಯುಳ್ಳ ಮನುಷ್ಯನು ಹಾಗೆ ಮಾಡನು ಕ್ರಿಸ್ತನು ಮೊದಲು ಶಾಸ್ತ್ರಿಗಳಿಗೂ ಶಾಸ್ತ್ರಜ್ಞರಿಗೂ ಹೋಗಿ ತನ್ನ ಮತವನ್ನು ಬೋಧಿಸಲಿಲ್ಲ ಅವರು ತನ್ನನ್ನು ತಿರಸ್ಕರಿಸುವರೆಂದು ಆತನಿಗೆ ತಿಳಿದಿತ್ತು ಆತನು ಬಡವರೂ ಅಜ್ಞಾನಿಗಳೂ ನೀಚರೂ ಆದವರ ಬಳಿಗೆ ಹೋಗಿ ಇವರನ್ನು ತನ್ನ ಶಿಷ್ಯರನ್ನಾಗಿ ಮಾಡಿಕೊಂಡನು ಆದರೆ ಆ ನೀಚ ಜನಗಳಾಗಿದ್ದವರು ಕ್ರಿಸ್ತನ ಉಪದೇಶ ಹೊಂದಿದ ಮೇಲೆ ಬರೆದದ್ದು ಇಂಗ್ಲಂಡ್ ಜರ್ಮನಿ ಸಂಯುಕ್ತ ಸಂಸ್ಥಾನಗಳೆಂಬ ಸನನಾಗರೀಕರಿಗೆ ಈಗ ನೀತಿ ಸೂತ್ರವಾಗಿದೆ. ಬುದ್ಧಿಯುಳ್ಳ ಮನುಷ್ಯನು ತಿಪ್ಪೆಯಲ್ಲಿ ಬಿದ್ದಿರುವ ರತ್ನವನ್ನು ನೋಡಿ ಮೆಚ್ಚುಹೋಗುವ ಹಾಗೆ ತೊಳೆದು ಶುಚಿ ಮಾಡುತ್ತಾನೆ ಇದರಂತೆ ಈ ದೇಶದಲ್ಲಿಯೂ ಆಗುವದು ಕೂಲಿನಾಲಿ ಮಾಡಿ ಬದುಕುತ್ತ ಮುಗ್ಧರಾಗಿದ್ದ ಪೇತ್ರ, ಅನ್ದ್ರೇಯ, ಮತ್ತಾಯರನ್ನು ತನ್ನ ಪರಮೋಪದೇಶದಿಂದ ಸವನಾಗರೀಕರಾದ ಇಪ್ಪತ್ತನೇ ಶತಮಾನದ ವಿದ್ವಾಂಸರಿಗೆ ಬೋಧಕರನ್ನಾಗಿ ಕ್ರಿಸ್ತನು ನೇಮಿಸಿದನು

ಕಡೆಗೆ ಈ ದೇಶದಲ್ಲಿಯೂ ಹಾಗೆಯೇ ಆಗುವದು ಈಗಾಗಲೇ ನೂರಾರು ಮಂದಿ ಹೊಲೆ ಮಾದಿಗರೂ ಕೊರಮ ಕುಂಬಾರರೂ ಹಿಂದೂ ಮತದಲ್ಲಿ ನಿರೀಕ್ಷೆಯನ್ನು ಕಾಣದೆ ಕ್ರಿಸ್ತನನ್ನು ಆಶ್ರಯಿಸಿ ಆತನ ಭಕ್ತರಾಗಿದ್ದಾರೆ ಅವರಲ್ಲಿ ಕೆಲವರ ಈಗಿನ ಸ್ಥಿತಿಯನ್ನು ಮುಂಚೆ ಹಿಂದೂ ಮತದಲ್ಲಿ ಅವರಿದ್ದ ಸ್ಥಿತಿಯನ್ನು ಪರೀಕ್ಷಿಸಿದರೆ ನಿರಕ್ಷರಕುಕ್ಷಿಗಳಾಗಿದ್ದವರು ವಿದ್ವಾಂಸರ ಮಂಡಲಿಯಲ್ಲಿ ಪುರಸ್ಕರಿಸಿಕೊಂಡಿರುವರು ಭಕ್ತಿ ನೀತಿ ಪರೋಪಕಾರಗಳನ್ನು ಮಾಡುವ ವಾಸನೆಯನ್ನೇ ಅರಿಯದವರಾಗಿದ್ದವರು ಭಕ್ತಿಪೂರ್ಣರೂ ನೀತಿಯನ್ನು ಉಪದೇಶಿಸುವ ಬೋಧಕರೂ ಸ್ವಾರ್ಥತ್ಯಾಗಿಗಳಾದ ಪರೋಪಕಾರಿಗಳೂ ಆಗಿ ವಿರಾಜಿಸುತ್ತಿದ್ದಾರೆ ವಾಚಕರೇ ಕ್ರಿಸ್ತನ ಶಕ್ತಿಯನ್ನು ನೋಡಿದಿರೋ ? ಆತನು ಈಗಲೂ ತನ್ನ ಜನಗಳ ನಡುವೆ ಇದ್ದು ಇಂಥಾ ಮಹತ್ತನ್ನು ನಡಿಸುತ್ತಿರುವನು ಕೊರಚರೂ ವಡ್ಡರೂ ಹೊಲೆಯರೂ ಕಳ್ಳತನ ದರೋಡೆ ಸುಲಿಗೆ ಹೆಂಡ ಕುಡಿಕತನಗಳನ್ನು ಬಿಟ್ಟು ನಾಗರೀಕರೂ ಸಚ್ಚರಿತರೂ ಪರೋಪಕಾರಿಗಳೂ ಆಗಿ, ತಮ್ಮ ಕುಲಕೃತ್ಯಗಳನ್ನೆಲ್ಲಾ ಅಸಹ್ಯಿಸಿ ಬಿಟ್ಟುಬಿಡುವಂತೆ ಮಾಡುವದು ಕ್ರಿಸ್ತನ ಕೆಲಸವಾಗಿದೆ ಇದು ಮಹಾ ಅದ್ಭುತವಲ್ಲವೇ ?

ಬಳಿದೇಶದ ವೃತ್ತಾಂತಗಳು

ಕಳೆದ ಶನಿವಾರ ವಿಸ್ಕೌಂಟ್ ಮ ಟ ಆನ್ ದೇಯರು ಪರಿವಾರ ಸಹಿತ ರಾಜಧಾನಿಗೆ ದಯಮಾಡಿರುತ್ತಾರೆ

• • •

ಬೆಂಗಳೂರು ಪೇಟೆಯಲ್ಲಿ ಕೆಲವು ಸ್ವೀಕರು ಈಚೆಗೆ ಅಂಗಡಿಗಳಿಗೂ ಮನೆಗಳಿಗೂ ನುಗ್ಗಿ ಕನ್ನಾಕಳುವು ಮಾಡುತ್ತಾ ಬಂದಿದ್ದಾರೆ ಇದುವರೆಗೆ ೩—೪ ಮಂದಿಗೆ ಪೂರಾ ಶಿಕ್ಷೆಯಾಗಿ, ಸ್ಥಳದಿಂದ ಓಡಿಸಲ್ಪಟ್ಟರು ಇನ್ನು ಕೆಲವರನ್ನು ದಸ್ತಗಿರಿ ಮಾಡುತ್ತಿದ್ದಾರೆ

• • •

ಬೆಂಗಳೂರು ತಾಲ್ಲೂಕು ಒಂದು ಗ್ರಾಮದಲ್ಲಿ ಒಬ್ಬ ಮಾರ್ವಾಡಿಯು ಒಬ್ಬನಿಗೆ ಕದ್ದು ತಂದ ಕೆಲವು ಒಡವೆಗಳನ್ನೂ ಇತರ ಪದಾರ್ಥಗಳನ್ನೂ ಅಡವಿಟ್ಟುಕೊಂಡನು ೬ ತಿಂಗಳು ಸಜಾ ಆಯಿತು ಮಾರ್ವಾಡಿಗೂ ೬ ತಿಂಗಳ ಸಜಾ ವಿಧಿಸಲ್ಪಟ್ಟಿತು ಇವನು ಶಿಕ್ಷೆಯನ್ನು ಕೇಳಿ ಕೋರ್ಟಿನಲ್ಲಿ ಗೋಳೋ ಎಂದು ಪ್ರಲಾಪಿಸುತ್ತಾ ಜೈಲಿಗೆ ಹೋದನು

• • •

ಮುಂದಿನ ನವರಾತ್ರಿ ಕಾಲದಲ್ಲಿ ರಾಜಧಾನಿಯಲ್ಲಿ ಪದ್ಧತಿಯ ಪ್ರಕಾರ ಪ್ರದರ್ಶನೋತ್ಸವವು ನಡೆಯುವುದಷ್ಟೆ ಅದಕ್ಕೆ ಸರ್ಕಾರದವರು ಮೆ॥ ಕ್ರಂಬೀಗಲ್ ಯವರನ್ನು ಮುಖ್ಯಸ್ಥರನ್ನಾಗಿ ನೇಮಕಮಾಡಿಕೊಂಡಿದ್ದಾರೆ ಇವರು ಈ ಪ್ರದರ್ಶನವನ್ನು ವಿಲಾಯತಿ ಮುಂತಾದ ಕಡೆಗಳಲ್ಲಿ ನಡೆಯುವ ಪ್ರಕಾರ ಹೊಸ ಕ್ರಮದಲ್ಲಿ ನಡಿಸುವರೆಂದು ಕೇಳುತ್ತೇವೆ

• • •

ಕಳೆದ ಶನಿವಾರ ಬೆಳಿಗ್ಗೆ ಬೆಂಗಳೂರು ದಂಡಿನಲ್ಲಿ ನೂರಾರು ಮಂದಿ ವಾಕ್ಸರುಗಳು ವರ್ತಕರ ಸಹಾಯ ಪ್ರೋತ್ಸಾಹಗಳನ್ನು ಪಡೆದು ೩ ಗಂಟೆ ಹೊತ್ತಿನಲ್ಲಿ ೭೦೦ ಮಂದಿ ಪ್ರಜೆಗಳಿಗೆ ಪ್ಲೇಗ್ ಶಿಡುಬನ್ನು ಹಾಕಿದರು ಬ್ರಿಟಿಷ್ ರೆಸಿಡೆಂಟರೇ ಮೊದಲಾದವರೆಲ್ಲಾ ಹಾಜರಾಗಿದ್ದರು ಶಿಡುಬು ಹಾಕಿಸಿಕೊಂಡ ಜನರಿಗೆ ಬಹುಮಾನವನ್ನೂ ತಿಂಡಿಯನ್ನೂ ಹಂಚಿಕೊಟ್ಟರು

• • •

ವಡಿಗೇನಹಳ್ಳಿಯ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ವೆಂಕಟದಾಯನ ಯವರು ಬಾಲಕರಿಗೆ ಉಪಯುಕ್ತವಾದ ಕೆಲವು ಬಾಲನೀತಿಗಳನ್ನು ಪಾಡಿನ ರೂಪದಲ್ಲಿ ರಚಿಸಿ, ಅಚ್ಚು ಹಾಕಿಸಿ ನಮಗೆ ಒಂದು ಪ್ರತಿಯನ್ನು ಕಳುಹಿಸಿ ಕೊಟ್ಟಿದ್ದಾರೆ ಮಾತುಗಳು ಬಹು ಸುಲಭವಾಗಿವೆ ಈ ನೀತಿವಾಕ್ಯಗಳನ್ನು ಮಕ್ಕಳು ಕಲಿತು ಅಭ್ಯಾಸ ಮಾಡುತ್ತಾ ಬಂದರೆ ಪ್ರಯೋಜನವಾಗುವುದು

• • •

ಶಾಶೀಕ ಮತ್ತು ವೈರಾಜಪೇಟೆ ಎರಡು ಪೇಟೆಗಳ ಸೇರಿ ನಾಲ್ಕಾರೆಗಿಂತ ಹೆಚ್ಚಾಗಿ ಆಗದೆಹೋದಲ್ಲಿ ಅಂಥಾ ಪ್ರದೇಶವು ಮುನ್ಸಿಪಾಲಿಟಿಗೆ ಒಳಪಡದ ಪ್ರದೇಶವೆಂದು ಎಣಿಸಿ, ಅಂಥಾ ಪ್ರದೇಶದಲ್ಲಿರುವ ಜಮೀನುಗಳಿಗೆ ಕಂದಾಯದ ರಿಮಿಷನ್ ಮಾಡಬಹುದೆಂದು ಕೆಲವು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ ಸರ್ಕಾರದವರು ಈ ವಿಚಾರವನ್ನು ಎಲ್ಲಾ ಡೆಪ್ಯುಟಿ ಕಮಿಷನರುಗಳಿಗೂ ಸಬ್ ಡಿವಿಜನ್ ಆಫೀಸರುಗಳಿಗೂ ತಿಳಿಸಿ ಅವರ ಅಭಿಪ್ರಾಯವನ್ನು ತರಿಸಿಕೊಳ್ಳಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ. ಇದರ ತೀರ್ಮಾನವು ಇನ್ನು ಮುಂದೇನಾದರೂ ಶ್ಲಾಘನೀಯ ಭೀತಿಯುಂಟಾದರೆ ಆಗ್ಗೆ ಜಾರಿಗೆ ಬರುತ್ತಿದಾಗಿದೆ

• • •

ಮೊನ್ನೆ ಸೋಮವಾರದಿಂದ ಈಚೆಗೆ ಬ್ರಿಟಿಷ್ ರೆಸಿಡೆಂಟರಾದ ಮೆ॥ ಎಸ್. ಎಂ. ಫ್ರೇಸರ್ ಯವರೂ ಯೂರೋಪಿಯನ್ ಸರ್ದಾರರುಗಳೂ ರಾಜಧಾನಿಗೆ ದಯಮಾಡಿರುತ್ತಾರೆ ಶ್ರೀಮನ್ ಮಹಾರಾಜರವರು ಅವರಿಗೆಲ್ಲಾ ತಮ್ಮ ವರ್ಧಂತಿ ಕಟ್ಟಳೆಯ ಔತಣವನ್ನು ಬರುವ ಶುಕ್ರವಾರ ರಾತ್ರಿ ಮಾಡಿಸುತ್ತಾರೆ. ಈ ಸರ್ದಾರರು ಇನ್ನೊಂದು ವಾರದ ತನಕ ರಾಜಧಾನಿಯಲ್ಲಿ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಾ ಇರುವರು. ಇವರ ಸಂತೋಷಾರ್ಥವಾಗಿ ಈ ವಾರವೆಲ್ಲಾ ರಾಜಧಾನಿಯಲ್ಲಿ ಕುದುರೆಗಳ ಜೂಜೂ, ಪೋಲೋ ಎಂಬ ಪಂದ್ಯಗಳೂ, ಇತರ ವಿನೋದಗಳೂ ನಡೆಯುವಂತೆ ಏರ್ಪಾಡಾಗಿದೆ

• • •

ಅರಕಲಗೂಡು ತಾಲ್ಲೂಕು ಕಟ್ಟೇಪುರದಲ್ಲಿದ್ದ ಕೃಷ್ಣರಾಜಕಟ್ಟೆ ಎಂಬ ಭಾರೀ ಅಣೆಯು ಹೊಳೆ ಬಂದದ್ದರಿಂದ ಕೊಚ್ಚಿಹೋಯಿತೆಂದೂ, ಅದನ್ನು ಮತ್ತೆ ಹಾಕುವುದಕ್ಕೆ ಸಾವಿರಾರು ಕೂಲಿ ಆಳುಗಳೂ ಇಂಜನಿಯರುಗಳೂ ಅಲ್ಲಿ ಸೇರಿ ಕಾಮಗಾರಿ ಮಾಡುತ್ತಿದ್ದಾರೆಂತಲೂ ತಿಳಿಸಿದ್ದೆವಷ್ಟೆ ಈಚೆಗೆ ಅಲ್ಲಿ ಚೀಲಗಳಲ್ಲಿ ಮರಳು ತುಂಬಿ ಅಡ್ಡಕಟ್ಟೆಯನ್ನು ಹಾಕುತ್ತಿದ್ದರು ಈ ತಿಂಗಳ ಪ್ರಾರಂಭದಲ್ಲಿ ಎರಡನೇ ಸಲ ಅಕಸ್ಮಾತ್ತಾಗಿ ಹೊಳೆ ಬಂದು ಹೊಸದಾಗಿ ಹಾಕಿದ್ದ ಕಟ್ಟೆಯನ್ನೆಲ್ಲಾ ಒಂದೇ ಸಲಕ್ಕೆ ಹೊಡೆದುಕೊಂಡು ಹೋಯಿತೆಂದೂ, ಇದರಿಂದ ಸರ್ಕಾರಕ್ಕೆ ಸುಮಾರು ೨೦ ಸಾವಿರ ರೂಪಾಯಿನ ತನಕ ನಷ್ಟವಾಯಿತೆಂದೂ ಕೇಳುತ್ತೇವೆ

• • •

ಬರುವ ಜೂಲೈ ತಾ ೧ ರಿಂದ ಸರ್ಕಾರದವರು ಮುಂದೆ ಹೇಳುವ ಅಧಿಕಾರಿಗಳನ್ನು ಪೆನ್ಷನ್ ಕೊಟ್ಟು ಕೆಲಸ ಬಿಡಿಸುವವರಾಗಿದ್ದಾರೆ —ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮೆ॥ ಎಸ್. ರಂಗಾಚಾರ್ಯರವರು, ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟರಾದ ಮೆ॥ ಸಿ ವಾಸುದೇವೈಯನವರು, ಡೆಪ್ಯುಟಿ ಕಮಿಷನರ್ ಮೆ॥ ಎಂ ನಾರಾಯಣರಾಯರು ನವೆಂಬರ್ ೨೫ ರಿಂದ, ಅ॥ ಕಮಿಷನರ್ ಮೆ॥ ಮಹಮದ್ ರಜಾಯವರು ಸೆಪ್ಟೆಂಬರ್ ೨೮ ರಿಂದ, ಅ॥ ಕಮಿಷನರ್ ಮೆ॥ ಟಿ ಎಫ್ ಪಿಲ್ಕಿಂಗ್ಟನ್‌ರವರು ನವೆಂಬರ್ ೨೯ ರಿಂದ, ಸಿಟಿ ಮ್ಯಾಜಿಸ್ಟ್ರೇಟ್ ಮೆ॥ ಜಿ ಹಚ್ಚಿಂಸನ್‌ಯವರು ೧೯೧೦ನೇ ಜನವರಿ ೨೩ ರಿಂದ ಮುಂದೆ ಹೇಳುವ ಅಧಿಕಾರಿಗಳು ೧೯೧೦ನೇ ಜೂಲೈ ೧ ರ ತನಕ ಕೆಲಸದ ಮೇಲೆ ಇರುವಂತೆ ಹುಕುಂ ಆಗಿದೆ —ಮಿಲ್ಟರಿ ಇಲಾಖೆಯ ಮೆ॥ ಎಚ್ ವಾರ್ಡಯವರು, ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ್ ಮೆ॥ ಡಿ ರಾಮರಾಯರು, ರೆವಿನ್ಯೂ ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟ್ ಮೆ॥ ಆರ್ ರಾಮಸ್ವಾಮಯ್ಯಂಗಾರ್ಯರು, ಶ್ರೀಮನ್ ಮಹಾರಾಜರವರ ಏಡಿಕಾಂಗರಾದ ಮೆ॥ ಆಗಾ ಜಾನ್‌ಯವರು

• • •

ಕಳೆದ ಭಾನುವಾರ ಬೆಳಿಗ್ಗೆ ಮೆ॥ ಕಾಂತರಾಜೇ ಅರಸಿನವರ ಮೋಟಾರ್ ಗಾಡಿಯನ್ನು ಅವರ ಸೇವಕನೊಬ್ಬನು ರಾಜಧಾನಿಯಿಂದ ಬೆಳಕೆರೆಗೆ ನಡಿಸಿಕೊಂಡು ಹೋಗುತ್ತಿರುವಾಗ್ಗೆ ದಾರಿಯಲ್ಲಿ ಇಬ್ಬರು ಹುಡುಗರು ಕುರಿಗಳನ್ನು ಬಿಟ್ಟಿದ್ದರು ಈ ಗಾಡಿಯು ಬಹು ದೂರದಿಂದ ಬರುತ್ತ ಡಿಕ್ಕಿಯಾಗದು ಹೋಗುತ್ತಿದ್ದರೂ ಒಬ್ಬ ಹುಡುಗನು ದೂರ ಹೋಗದೆ ಗಾಡಿಯ ಸಮೀಪಕ್ಕೆ ಬಂದದ್ದನ್ನು ನೋಡಿ ರಸ್ತೆಯ ಎದುರು ಪಕ್ಕಕ್ಕೆ ಓಡಿಹೋಗಲು ಪ್ರಯತ್ನಪಟ್ಟನು ಅಷ್ಟರೊಳಗೇ ಗಾಡಿಯು ಮುಂದೆ ಹೋದದ್ದರಿಂದ ಅವನು ಅದರ ಕೆಳಗೆ ಸಿಕ್ಕಿ ಬಿದ್ದುಬಿಟ್ಟನು ಗಾಡಿ ನಡಿಸುವವನು ಕೂಡಲೇ ಗಾಡಿಯನ್ನು ತಿರುಗಿಸಿ ನಿಲ್ಲಿಸಿಕೊಂಡು, ಆ ಬಿದ್ದ ಹುಡುಗನಿಗೆ ಉಪಚಾರಮಾಡಿ ಅಷ್ಟರೊಳಗೆ ಅಲ್ಲಿ ಸೇರಿದ ಜನರಿಗೆಲ್ಲಾ ಸಮಾಧಾನ ಹೇಳಿ ಗಾಡಿಯನ್ನು ಬೆಳಕೆರೆಗೆ ತೆಗೆದುಕೊಂಡು ಹೋಗಿ, ಮೆ॥ ಕಾಂತರಾಜೇ ಅರಸಿನವರನ್ನು ಕೂರಿಸಿಕೊಂಡು ವಾಪಸು ಕರೆದುಕೊಂಡು ಬಂದನು ಆ ಹುಡುಗನು ಸತ್ತುಹೋದನು ಮೆ॥ ಕಾಂತರಾಜೇ ಅರಸಿನವರು ಅಲ್ಲಿ ಸೇರಿದ್ದ ಜನರನ್ನು ಸಮಾಧಾನಪಡಿಸಿ ರಾಜಧಾನಿಗೆ ದಯಮಾಡಿಸಿದರು ಈಚೆಗೆ ಆ ಗಾಡಿ ನಡಿಸಿಕೊಂಡು ಹೋದ ಸೇವಕನನ್ನು ಇಲ್ಲಿನ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಮೆ॥ ಹಚ್ಲೀಕರ್ ಯವರ ಕೋರ್ಟಿನಲ್ಲಿ ದೂರ್ನಾಸ್ತಿ ಮಾಡುತ್ತಿದ್ದಾರೆ

• • •

ಕಳೆದ ವಾರ ರಾಜಧಾನಿಯಲ್ಲಿ ಹತ್ತಾರು ಉಪನಯನಗಳೂ ವಿವಾಹಗಳೂ ನಡೆದವು ಈ ಪೈಕಿ ಮುಖ್ಯವಾದವುಗಳಾವವೆಂದರೆ—ಮೈಸೂರು ಇಂಪೀರಿಯಲ್ ಸರ್ವಿಸ್ ಸೈನ್ಯದ ರೆಜಿಮೆಂಟ್‌ದಾರ್ ಮೆ॥ ಎ ಚಾಮರಾಜೇ ಅರಸಿನವರು ತಮ್ಮ ಪುತ್ರಿಯನ್ನು ಅಜ್ಜಪುರದ ಮೆ॥ ಬಸವರಾಜೇ ಅರಸಿನವರ ಕುಮಾರರಿಗೆ ಕೊಟ್ಟು ವಿವಾಹ ಮಾಡಿದರು ಶ್ರೀಮನ್ ಮಹಾರಾಜರವರು ವಿಶೇಷ ಅಭಿಮಾನವಿಟ್ಟು ಆ ಉಪನಯನ ಮಹೋತ್ಸವಗಳನ್ನು ದಯಪಾಲಿಸಿದ್ದರು ಅರಸುಗಳೂ ಅಧಿಕಾರಸ್ಥರೂ ಯೂರೋಪಿಯನ್ ಸರ್ದಾರರೂ ಕರೆಸಲ್ಪಟ್ಟಿದ್ದರು ಮೆರವಣಿಗೆಗಳು ಬಹು ನೇತ್ರಾನಂದಕರವಾಗಿಯೂ ಅಟ್ಟಹಾಸದಿಂದಲೂ ನಡೆದವು ಪೊಲೀಸ್ ಇನ್ಸ್‌ಪೆಕ್ಟರ್ ಮೆ॥ ಎಂ ಆರ್ ರಂಗರಾಜೇ ಅರಸಿನವರು ತಮ್ಮ ಕುಮಾರಿಯನ್ನು ಕೋಟೆ ... ಟಿ ವಿ ನಿಪ್ಪರಾಜೇ ಅರಸಿನವರಿಗೆ ಕೊಟ್ಟು ಬೆಳೆಸಿದ ವಿವಾಹವೂ ಅದೇ ರೀತಿ ಬಹಳ ವಿಜೃಂಭಣೆಯಾಗಿ ನೆರವೇರಿತು ಇಲ್ಲಿನ ನಾರ್ಮಲ್ ಸ್ಕೂಲಿನ ಮೆ॥ ವೆಂಕಟಸುಬ್ಬಯ್ಯನವರು ತಮ್ಮ ಕುಮಾರನಿಗೆ ಉಪನಯನವನ್ನೂ ಕುಮಾರಿಗೆ ವಿವಾಹವನ್ನೂ ಬೆಳೆಸಿದರು ಮ್ಯುನಿಸಿಪಲ್ ಕೌನ್ಸಿಲರ್ ಮೆ॥ ಕೆ ಶ್ರೀಕಂಠಯ್ಯನವರು, ಸಾಹುಕಾರ್ ಮೆ॥ ನಾರಾಯಣಸ್ವಾಮಿಯವರೂ ತಮ್ಮ ಕುಮಾರರುಗಳಿಗೆ ವಿವಾಹ ಮಹೋತ್ಸವವು ಬಹು ಸಂತೋಷಕರವಾಗಿ ನೆರವೇರಿತು ಮಿಲ್ಟರಿ ಇಲಾಖೆಯ ಮೆ॥ ಆರ್ ಪುಟ್ಟಣ್ಣನವರು ತಮ್ಮ ತಮ್ಮಂದಿರಿಗೆ ಸಿವಿಲ್ ಸರ್ಜನ್ ಮೆ॥ ಟಿ ಎಸ್ ನಂಜಪ್ಪನವರ ಕುಮಾರಿಯನ್ನು ತಂದುಕೊಂಡು ವಿವಾಹವನ್ನು ಬೆಳೆಸಿದರು ಅವರು ನಿಯಂತ ಮಯೂರಗಳು ಬಂದಿದ್ದವು ಅರಸುಗಳೂ ಮಿಲಿಟರಿ ಇಲಾಖೆಯ ಹುದ್ದೇದಾರರೂ ಸರ್ದಾರರೂ ವಿವಾಹ ಕಾಲದಲ್ಲಿ ಹಾಜರಾಗಿದ್ದರು ಮೆರವಣಿಗೆ ಮೊದಲಾದವುಗಳು ಬಹು ನೇತ್ರಾನಂದಕರವಾಗಿ ನಡೆದವು

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಜೂನ್ ತಾ 8 ಕ್ಕೆ ಅಖೈರಾದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು	ಧರ್ಮಾರ್ಥ ಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು	ರೂ	
ಬೆಂಗಳೂರು	211	131	8	550	202
ಕೋಲಾರ	1,005	590	68	2,81.	586
ತುಂಕೂರು	695	551	15	1,558	717
ಮೈಸೂರು	54	75	..	39	38
ಹಾಸನ	426	387	98	1,261	
ಶಿವಮೊಗ್ಗ	125	28		625	5
ಕಡೂರು	38	50		129	
ಚಿತ್ರದುರ್ಗ	199	181	37	1,059	170
ನಾಂಕಣಿವೆ	174	214	3	512	.
ಸ್ಯಾನಿಟರಿ	.				..
ಒಟ್ಟು	3,385	2,510	219	8,578	1,718

ಹತ್ತಿಬೀಜವನ್ನು ಕೂರಿಗೆಯಲ್ಲಿ ಬಿತ್ತುವವರ ಅನುಕೂಲತೆ

ಮದರಾಸ್ ಆಧಿನತ್ವದ ದಕ್ಷಿಣ ಜಿಲ್ಲೆಗಳಲ್ಲಿ ಹತ್ತಿ ಬೆಳೆಯನ್ನು ಹಿಂಗಾರು ಮಳೆಯಲ್ಲಿ ಆರಂಭಿಸುತ್ತಾರೆ. ಏಕೆಂದರೆ ರೈತರು ಮೊದಲು ಆದಾರಕ್ಕೋಸ್ಕರವೂ ಅನುಕೂಲಿಸುವಂತೆ ಕಾಳುಪೈರನ್ನೂ ಮತ್ತು ಜೋಳದ ಪೈರನ್ನೂ ಇಡುತ್ತಾರೆ. ಹಿಂಗಾರು ಮತ್ತು ಅವುಗಳು ಸಾಕಷ್ಟು ಕಾಲವಷ್ಟು ಬರುತ್ತವಾದ ಕಾರಣ ಹತ್ತಿ ಬಿತ್ತನೆಗೆ ಸಾಕಾದಷ್ಟು ವ್ಯವಧಾನವಿರುವದಿಲ್ಲ. ಆದದ್ದರಿಂದ ಶೀಘ್ರದಲ್ಲಿ ಬಿತ್ತನೆ ಕೆಲಸವನ್ನು ಪೂರೈಸುವದಕ್ಕೆ ಯಾವದಾದರೂ ಒಂದು ಉಪಾಯವನ್ನು ಕಂಡುಹಿಡಿದಲ್ಲಿ ಇದರಿಂದ ಬಹಳ ಪ್ರಯೋಜನವಾಗುತ್ತದೆ. ತಿನ್ನವೆಲ್ಲಿ ಡಿಸ್ಟ್ರಿಕ್ಟುಗಳಲ್ಲಿ ಒಂದು ಕುಂಟೆ, ಒಂದು ಕೂರಿಗೆ ಮತ್ತು ಒಂದು ಜೊತೆ ಎತ್ತಿನಿಂದ ೪೦ ಎಕರೆ ಹತ್ತಿ ಹೊಲವನ್ನು ಬಿತ್ತಿ ಸಾಗುಮಾಡಬಹುದೆಂದು ಸಾಮಾನ್ಯವಾಗಿ ಹೇಳುತ್ತಾರೆ. ಬೀಜವನ್ನು ಚೆಲ್ಲಿ ನೇಗಿಲಿನಿಂದ ಮುಚ್ಚುವದಾದರೆ ಒಳ್ಳೇ ಒಂದು ಜೊತೆ ಎತ್ತಿನಿಂದ ದಿನ ಒಂದಕ್ಕೆ ೧ ಎಕರೆ ಪೂರೈಸುವದು ಪ್ರಯಾಸ. ಹೀಗೆ ೪೦ ಎಕರೆಗೆ ೪೦ ದಿನಗಳು ಬೇಕು. ಅಂದರೆ ಇಷ್ಟು ಕಾಲ ನೆಲವು ಬಿತ್ತನೆಗೆ ಲಾಯಖಾಗಿರಬೇಕಾಗುತ್ತದೆ. ಅದಲ್ಲದೆ ಸುಬಿಕ್ಷ ಕಾಲಗಳಲ್ಲಿಯೂ ಕೂಡ ಇದು ಸಾಧ್ಯವಲ್ಲ. ಕಾಲದಲ್ಲಿ ಎಷ್ಟು ಜಾಗ್ರತೆ ಬಿತ್ತನೆಯಾದರೆ ಫಸಲಿನ ಉತ್ಪತ್ತಿಯು ಅಷ್ಟು ಮಟ್ಟಿಗೆ ಹೆಚ್ಚುತ್ತದೆಂಬುದು ಎಲ್ಲರಿಗೂ ತಿಳಿದಿರುತ್ತದೆ. ೨ ಜೊತೆ ಎತ್ತು ಕಟ್ಟಿ ಹಲುಬೆ, ಕೂರಿಗೆಯಲ್ಲಿ ದಿನ ೧ ಕ್ಕೆ ೪—೫ ಎಕರೆಗಳಿಗೆ ಬಿತ್ತನೆ ಮಾಡಿದ್ದರೆ ಬಿತ್ತನೆ ಕೆಲಸವು ಬೀಜಚೆಲ್ಲಿ ನೇಗಿಲಿನಿಂದ ಮುಚ್ಚುವದಕ್ಕಿಂತಲೂ ಬಹಳ ಜಾಗ್ರತೆ ಪೂರೈಸುತ್ತದೆ.

ಕೂರಿಗೆಯಿಂದ ಬಿತ್ತುವದರಲ್ಲಿ ಮತ್ತೊಂದು ಅನುಕೂಲವೇನಂದರೆ,— ಪೈರು ಸಾಲುಸಾಲಾಗಿ ಬೆಳೆಯುವದರಿಂದ ಎತ್ತು ಕಟ್ಟಿ ಸಾಲುಗಳ ಮಧ್ಯ ಕುಂಟೆಗಳಿಂದ ಅಡಗಬಹುದು. ಇಬ್ಬರು ಹುಡುಗರು, ಅಥವಾ ಹೆಂಗಸರು ಮತ್ತು ಒಬ್ಬ ಗಂಡಾಳು ಇಂಥ ಮೂರು ಕುಂಟೆಗಳಿಗೆ ಒಂದು ಜೋಡಿ ಎತ್ತು ಕಟ್ಟಿ ದಿನ ೧ ಕ್ಕೆ ೬—೮ ಎಕರೆ ವರೆಗೆ ಅಡಗಬಹುದು. ಬೀಜ ಚೆಲ್ಲಿ ಪೈರು ಬೆಳೆಯುವದರಲ್ಲಿ ಸಾಧಾರಣವಾಗಿ ಮೂರು ಸಲ ಹಲುಬೆ ಅಥವಾ ಕೈಮಟ್ಟಿಯಿಂದ ಅಡಗುವ ವಾಡಿಕೆ ಇದೆ. ಇದು ನಿಧಾನವಾಗುವ ಕಾರಣ ಅನೇಕವಾಗಿ ಕೆಲಸ ಪೂರೈಸುವದರೊಳಗೆ ಭೂಮಿ ಒಣಗಿ ಬಿರುಕು ಬಿಡುತ್ತದೆ. ಎತ್ತು ಕಟ್ಟಿ ಅಡಗುವದರಿಂದ ಭೂಮಿ ಇನ್ನೂ ತಂಪಿರುವಾಗಲೇ ಈ ಕೆಲಸವನ್ನು ಪೂರೈಸಬಹುದು. ಇದಕ್ಕೆ ಬಾಗವಡೂ ಕಡಮೆ. ರೈತನು ಅವಶ್ಯಬಿದ್ದ ಹಾಗೆಲ್ಲಾ ಅಂದರೆ ಮಳೆ ಬಿದ್ದು ಭೂಮಿ ಒಣಗಿದ ಕೂಡಲೆ ಈ ಕೆಲಸವನ್ನು ಮಾಡುತ್ತಿರಬಹುದು. ಇದರಿಂದ ಭೂಮಿಯಲ್ಲಿ ತನುವು ನಿಂತು ಪೈರು ಅತಿ ಜಾಗ್ರತೆಯಾಗಿ ಕಟಾವಿಗೆ ಬರುವದು ತಪ್ಪುತ್ತದೆ. ಬಿಸಿಲಿನಲ್ಲಿ ಒಣಗಿ ಕಟಾವಿಗೆ ಬರುವ ಪೈರು ಸಕಾಲದಲ್ಲಿ ಕಟಾವಿಗೆ ಬರುವ ಪೈರಿನಷ್ಟು ಎಂದಿಗೂ ಉತ್ಪತ್ತಿ ಕೊಡುವದಿಲ್ಲವೆಂಬುವದು ಎಲ್ಲರಿಗೂ ತಿಳಿದಿರುತ್ತದೆ.

ಕೂರಿಗೆ ಬಿತ್ತನೆಯನ್ನು ನವಂಬರು ತಿಂಗಳ ೨ನೇ ವಾರದೊಳಗೆ ಪೂರೈಸಬೇಕು. ಯಾಕೆಂದರೆ ಹೀಗೆ ಬಿತ್ತಿದ ಪೈರು ಚೆಲ್ಲಿ ಬೆಳೆದ ಪೈರಿಗಿಂತಲೂ ಬೇಗನೆ ಬೆಳೆಯುವದರಿಂದ ಬಿತ್ತನೆಯೂ ಹಿಂದಾದರೆ ಹತ್ತಿಯು ಮೇ ತಿಂಗಳಲ್ಲಿ ಮಂಜು ಶುರುವಾಗುವದಕ್ಕೆ ಮುಂಚೆ ಬಲಿಯುವ ಬುಡ್ಡೆಗಳು ಅರಳುವದಿಲ್ಲ. ಕೊಯಿಲ್ ಪಟ್ಟಿ ಅಗ್ರಿಕಲ್ಚರಲ್ ಸ್ಟೇಷನ್‌ನಲ್ಲಿ ೬೦ ಎಕರೆಗಳಲ್ಲಿ ಕೂರಿಗೆಯಿಂದ ಬೀಜ ಹಾಕಿ ಬೆಳೆದದ್ದರಲ್ಲಿ ಸರಾಸರಿ ಹೋದ ವರುಷ ೩೦೧೦ ಪೌಂಡು ತೂಕ ಹತ್ತಿ ಉತ್ಪತ್ತಿಯಾಯಿತು. ಈ ಸ್ಥಳಗಳಲ್ಲೆಲ್ಲಾ ಒಂದು ವರುಷ ಜೋಳ ಅಥವಾ ಕಂಬು, ಮತ್ತೊಂದು ವರುಷ ಹತ್ತಿ, ಈ ರೀತಿ ಪರಿವರ್ತನೆಯಿಂದ ಬೆಳೆಯುತ್ತಿದ್ದಾರೆ. ಗೊಬ್ಬರಕ್ಕಾಗಿ ಒಂದು ಎಕರೆಗೆ ಒಂದು ಸಾವಿರ ಕುರಿಗಳಂತೆ ಒಂದು ರಾತ್ರಿ ಮಂದೆ ನಿಲ್ಲಿಸುತ್ತಾರೆ. ತಿನ್ನವೆಲ್ಲಿ ಡಿಸ್ಟ್ರಿಕ್ಟಿನಲ್ಲಿ ಈ ರೀತಿ ಕೂರಿಗೆಯಲ್ಲಿ ಬಿತ್ತುವದರ ಅನುಕೂಲವನ್ನು ತಿಳಿದುಕೊಂಡಿರುವರು. ಒಂದು ಗ್ರಾಮದಲ್ಲಿ ಒಬ್ಬ ರೈತನು ಹೋದ ವರ್ಷ ಕೂರಿಗೆಯಲ್ಲಿ ಬಿತ್ತಿ ಹತ್ತಿಯ ಸಾಗುವಳಿ ಮಾಡಿದನು. ಈ ಹೊಸ ಪದ್ಧತಿಯನ್ನನುಸರಿಸಿದ್ದಕ್ಕಾಗಿ ಇವನು ಗ್ರಾಮಸ್ಥರ ಅಸಮಾಧಾನಕ್ಕೆ ಗುರಿಯಾದನು. ಆದರೆ ಗ್ರಾಮಸ್ಥರು ಇವನಿಗೆ ಈ ಪದ್ಧತಿಯನ್ನನುಸರಿಸಿದ್ದರಿಂದ ಲಾಭಬಂದದ್ದು ನೋಡಿ ತಾವುಗಳೂ ಇದೇ ರೀತಿ ವ್ಯವಸಾಯ ಮಾಡುವದರಲ್ಲಿ ಕುತೂಹಲವನ್ನು ತೋರಿಸುತ್ತಿದ್ದಾರೆ.

ದನಗಳನ್ನು ಸಾಕುವದು ಮತ್ತು ಹೈನು ತಯಾರಿ

ಮನುಷ್ಯರ ಆರೋಗ್ಯಕ್ಕೆ ಶುಚಿಯಾದ ಹಾಲು ಮತ್ತು ಬೆಣ್ಣೆ ಆವಶ್ಯಕವಾದದ್ದರಿಂದ ಉತ್ತಮ ಕ್ರಮದಲ್ಲಿ ಕ್ಷೀರಾಗಾರವನ್ನು ಏರ್ಪಡಿಸುವದು ಅವಶ್ಯಕ. ಮನುಷ್ಯ ದೇಹದ ಪೋಷಣೆಗೆ ಬೇಕಾದ ಪದಾರ್ಥಗಳು ಹಾಲಿನಲ್ಲಿ ಕ್ರಮವಾಗಿ ಸೇರಿವೆ. ಹಾಲು ಶುಚಿಯಾಗಿರಬೇಕಾದರೆ ಕರೆಯುವ ಪಾತ್ರೆಗಳು, ಕೊಟ್ಟಿಗೆ, ಮೇವು, ನೀರು, ಮೊದಲಾದವುಗಳೆಲ್ಲಾ ಶುಚಿಯಾಗಿರಬೇಕು.

ಈ ಏರ್ಪಾಡಿನಲ್ಲಿ ಮುಖ್ಯವಾಗಿ ಯಾವ ಸ್ಥಳದಲ್ಲಿ ಇದನ್ನು ಸ್ಥಾಪಿಸಿದರೆ ಅನುಕೂಲವೆಂಬುವದನ್ನು ಯೋಚಿಸತಕ್ಕದ್ದು. ದೊಡ್ಡ ಪಟ್ಟಣ ಅಥವಾ ಕಂಟೋನ್ಮೆಂಟ್ ಸಮೀಪದಲ್ಲಿ ಇಡುವದಾದರೆ ಬಹಳ ಫಾಯಿದೆಕರ.

ಕ್ಷೀರಾಗಾರದ ಏರ್ಪಾಡಿಗೆ ಕರೆಯುವ ಹಸುಗಳೂ ಎಮ್ಮೆಗಳೂ ಬೇಕಾಗುತ್ತವೆ. ೪೦ ೪೦ ಹಸುಗಳಿಗೆ ಒಂದು ಹೋರಿ ಅವಶ್ಯ. ಹಸುವು ೨೦ ವರ್ಷಗಳೂ, ಎಮ್ಮೆಯು ೨೫ ವರ್ಷಗಳೂ ಜೀವಿಸುತ್ತವೆ.

ದನಗಳ ಕೊಟ್ಟಿಗೆ.—ಕರೆಯುವ ರಾಸುಗಳಿಗೆ ಕೊಟ್ಟಿಗೆ ಕಟ್ಟುವದರಲ್ಲಿ ಈ ಅಂಶಗಳಿಗೆ ಗಮನಕೊಡಬೇಕು. ನೆಲವು ಎತ್ತರವಾಗಿರಬೇಕು. ಗಾಳಿ ಹೊಡೆಯುವ ಕಡೆ ಬಿಟ್ಟು ಎದುರು ಕಡೆ ಬಾಗಿಲು ಇಡಬೇಕು. ಪ್ರತಿ ಹಸುವಿಗೂ ೪ ಅಡಿ ಅಗಲ, ೮ ಅಡಿ ಉದ್ದವುಳ್ಳ ಸ್ಥಳ ಅವಶ್ಯಕ. ಆದದ್ದರಿಂದ ೨೦೦ ಅಡಿ ಉದ್ದ, ೪೭ ಅಡಿ ಅಗಲವುಳ್ಳ ಕೊಟ್ಟಿಗೆಯಲ್ಲಿ ನಡುವೆ ಮೇವಿನ ತೊಟ್ಟಿ, ತಿರುಗುವ ದಾರಿ ಮತ್ತು ಕರುಗಳ ಗಾಳಿವರೆಯಾಗಿ ಒಂದಂಕಣ ಏರ್ಪಡಿಸಿ ೧೦೦ ದನಗಳನ್ನು ಗಾಳಿ, ಮಳೆಗೆ ಮರೆಯಾಗಿ ಎರಡು ಸಾಲಿನಲ್ಲಿ ಕಟ್ಟಬಹುದು.

ಮೇವು.—ದನಗಳಿಗೆ ಹುಲ್ಲೇ ಮೇವು ಮುಖ್ಯ. ಇದಕ್ಕಾಗಿ ಹುಲ್ಲುಗಾವಲುಗಳನ್ನು ಇಟ್ಟುಕೊಳ್ಳುವದು ಒಳ್ಳೇದು. ಒಳ್ಳೆ ಹುಲ್ಲುಗಾವಲು ಇದ್ದಲ್ಲಿ ಒಂದು ರಾಸಿಗೆ ೩ ಎಕರೆ ಸಾಕಾಗುತ್ತೆ. ಹೊಟ್ಟು, ಹಿಂಡಿ, ರಾಗಿ ಅಥವಾ ಬತ್ತದ ಹುಲ್ಲು ಮುಂತಾದವುಗಳ ಮಿಶ್ರಣ ಕಡಮೆ. ದನಗಳನ್ನು ಕಾಲಾಡಲು ಹೊರಕ್ಕೆ ಕರೆದುಕೊಂಡು ಹೋಗುವ ತೊಂದರೆಯೂ ಇಲ್ಲ. ಇದರ ಜೊತೆಗೆ ಬೇರೆ ಮೇವನ್ನೂ ಒದಗಿಸಬೇಕಾಗುತ್ತದೆ. ನೀರು ಹಾಯಿಸುವ ಸ್ಥಳದಲ್ಲಿ ೧೦೦ ದನಗಳಿಗೆ ೨೫ ಎಕರೆ ಬೇಕು. ಇಲ್ಲವಾದರೆ ಇದಕ್ಕೆ ಎರಡರಷ್ಟು ಬೇಕು. ಹುಲ್ಲೂ ಮೇವೂ ವಿಶೇಷವಾಗಿರುವಾಗ ಕರೆಯುವ ದನ ಒಂದಕ್ಕೆ ೧ ಪೌಂಡು ಹಿಂಡಿ ಮತ್ತು ಸ್ವಲ್ಪ ಉಪ್ಪು ಹಾಕಿದರೆ ಸಾಕು. ಕರೆಯುವ ದನಕ್ಕೆ ಪೂರಾ ಹಾಕುವದರಲ್ಲಿ ೩ ರಲ್ಲಿ ೧ ಭಾಗ ಬೇಕು.

ದನಗಳನ್ನು ತಪ್ಪದೆ ಬೆಳಗ್ಗೆ ಸಾಯಂಕಾಲ ಮೇಯುವದಕ್ಕಾಗಲಿ ಅಥವಾ ಕಾಲಾಡುವದಕ್ಕಾಗಲಿ ಹೊರಕ್ಕೆ ಬಿಟ್ಟುಕೊಂಡು ಹೋಗಬೇಕು. ೨ ತಿಂಗಳ ಕರುಗಳನ್ನೂ ಹಾಗೆಯೇ ಬಿಟ್ಟುಕೊಂಡು ಹೋಗಬೇಕು.

ಎಮ್ಮೆಗಳನ್ನು ನಿತ್ಯವೂ ತೊಳೆಯಬೇಕು. ಹಾಗಿಲ್ಲದಿದ್ದರೆ ನದಿಯಲ್ಲಾಗಲಿ ಕಾಲುವೆಯಲ್ಲಾಗಲಿ ಈಜುವುದಕ್ಕೆ ಬಿಡಬೇಕು. ಹಸುಗಳನ್ನು ತೊಳೆಯುವ ಅವಶ್ಯಕವಿಲ್ಲ. ಕೆಚ್ಚಲೂ ಪಾರ್ಶ್ವವನ್ನೂ ಮಾತ್ರ ತೊಳೆದು ಇತರ ಭಾಗಗಳನ್ನು ತಿಕ್ಕಿದರೆ ಸಾಕು. ತಣ್ಣೀರಿನಲ್ಲಿ ತೊಳೆಯುವದರಿಂದ ಅಕಸ್ಮಾತ್ತಾಗಿ ಬೆಳಗ್ಗೆ ಮುಂಚೆ ಹಾಲು ಕಡಮೆಯಾಗಬಹುದು. ದನಗಳಿಗೆ ಸಮೃದ್ಧವಾದ ನೀರನ್ನು ಕುಡಿಯುವದಕ್ಕೆ ಇಡಬೇಕು. ದನಗಳು ಹೊರಕ್ಕೆ ಹೋಗಿರುವಾಗ ಕೊಟ್ಟಿಗೆ, ತೊಟ್ಟಿ ಮುಂತಾದವುಗಳನ್ನೆಲ್ಲಾ ಚೆನ್ನಾಗಿ ತೊಳೆದು, ಆ ನೀರು ಗೊಬ್ಬರದ ಗುಂಡಿಗೆ ಬೀಳುವಂತೆ ಮಾಡಬೇಕು. ದನಗಳು ಮನೆಗೆ ಬಂದೊಡನೆ ಮೈ ತಿಕ್ಕಬೇಕು. ಮುಂಚೆಗಾಗಿಟ್ಟ ಬೀಜದ ಹೋರಿಯನ್ನಲ್ಲದೆ ಇತರ ದನವನ್ನೂ ದನಗಳ ಜೊತೆಯಲ್ಲಿ ಸೇರಿಸಬಾರದು. ಇಂಥ ಬೀಜದ ಹೋರಿಗಳನ್ನು ಗೊಬ್ಬರದ ಗಾಡಿ ಅಥವಾ ಹುಲ್ಲುಗಾಡಿಗೆ ಕಟ್ಟಬಹುದು. ಇವುಗಳಿಗೆ ಸೂಕ್ಷ್ಮವಾಗಿ ಕೆಲಸ ಕೊಡದಿದ್ದರೆ ಕೆಡುತ್ತವೆ.

ಹಾಲು ಕರೆಯುವದಕ್ಕೆ ಮುಂಚೆ ಕೆಚ್ಚಲನ್ನು ಚೆನ್ನಾಗಿ ತೊಳೆದು ಒರಸುವದಲ್ಲದೆ ಪಾರ್ಶ್ವಗಳನ್ನು ಒದ್ದೆ ಬಟ್ಟೆಯಿಂದ ಒರಸಬೇಕು. ಇದರಿಂದ ಹಾಲಿನಲ್ಲಿ ಕೊಳೆ ಬೀಳಲು ಅವಕಾಶವಿರುವದಿಲ್ಲ. ಪ್ರತಿಯೊಂದು ಹಸುವಿನ ಹಾಲನ್ನೂ ತೂಕಮಾಡಿ ತಿಳಿದುಕೊಳ್ಳಬೇಕು. ಏಕೆಂದರೆ ಯಾವದು ಕಡಮೆಯಾಗಿ ಕರೆಯುತ್ತೆ ಅದನ್ನು ತಿಳಿಯಬಹುದು. ಕರೆಯುವಾಗ ಸಮಾನ್ಯವಾಗಿ ತೌಡು, ಹಿಂಡಿ ಮತ್ತು ಹತ್ತಿಬೀಜ ಇವುಗಳನ್ನು ಕಲಸಿ ತಿನ್ನಿಸುತ್ತಾರೆ. ಹಾಲು ಕೊಡುವದರ ಮೇಲೆ ಹಸುವಿಗೆ ಇಷ್ಟು ಮತ್ತು ಇಷ್ಟು ಹಿಂಡಿ ಕೊಡಬೇಕೆಂಬುವದನ್ನು ಅರಿಯಬಹುದು.

ಕರು ಹಾಕುವದಕ್ಕೆ ೧ ತಿಂಗಳು ಮುಂಚೆ ಹುಲ್ಲಿನ ಜೊತೆಗೆ ೨ ಪೌಂಡು ತೌಡು, ೨ ಪೌಂಡು ಹಿಂಡಿ ಮತ್ತು ೨ ಪೌಂಡು ಹತ್ತಿ ಬೀಜ ಕಲಸಿ ನಿತ್ಯವೂ ತಿನ್ನಿಸಬೇಕು. ಕರು ಹಾಕಿದ ಮೇಲೆ ೬ ದಿನಗಳವರೆಗೆ ಸಲೀಸಾಗಿ ಮಲವಿಸರ್ಜನೆ ಆಗುವ ಪದಾರ್ಥಗಳನ್ನು ಸೇರಿಸಿ ತಿನ್ನಿಸಬೇಕು. ಕರೆಯುವ ಹಸುಗಳಿಗೆ ಒಂದು ದಿನದೊಳಗೆ ಒಂದು ಹಿಂಡಿಯನ್ನು ತಿನ್ನಿಸಿದರೆ ಒಳ್ಳೇದು.

ವ್ಯವಸಾಯ ವಿಚಾರವು

ಹೊಗೆಸೊಪ್ಪು.—೧.

ಹೊಗೆಸೊಪ್ಪು ನಮ್ಮ ಇಂಡಿಯಾ ದೇಶಕ್ಕೆ ಬೇರೆ ದೇಶಗಳಿಂದ ಬಂದಿದ್ದು ಇದು ಸ್ವದೇಶಿಯಲ್ಲ. ಇದನ್ನು ಮೊದಲು ಸ್ಪೇನ್ ದೇಶದ ನಾವಿಕನಾದ ಕೊಲಂಬಸ್ ಎಂಬುವರು ಪಶ್ಚಿಮ ಇಂಡಿಯಾ ದ್ವೀಪಗಳನ್ನು ಕಂಡುಹಿಡಿದಾಗ ಆ ದೇಶದ ಜನಗಳು ಈ ಸೊಪ್ಪನ್ನು ಸುರುಳಿಸುತ್ತಿ ಒಂದು ಕಡೆಗೆ ಬೆಂಕಿ ಹಚ್ಚಿ ಮತ್ತೊಂದು ಕಡೆಯನ್ನು ಬಾಯಿಯಲ್ಲಿಟ್ಟುಕೊಂಡು ಹೊಗೆ ಸೇದುತ್ತಿದ್ದರು. ಕ್ರಮೇಣ ೧೫-೧೬ ನೇ ಶತಮಾನದಲ್ಲಿ ಪಶ್ಚಿಮ ಇಂಡಿಯಾ ದ್ವೀಪಗಳಿಂದ ಯೂರೋಪ್ ಖಂಡಕ್ಕೆ ತರಲ್ಪಟ್ಟು ಅಲ್ಲಿಂದ ಇಂಡಿಯಾ ದೇಶಕ್ಕೆ ಬಂದದ್ದಾಗಿ ತಿಳಿಯಬರುತ್ತದೆ.

ಈ ಸೊಪ್ಪನ್ನು ಔಷಧಕ್ಕೆ ಉಪಯೋಗಿಸುತ್ತಾರೆ. ನಸ್ಯವಾಗಿಯೂ, ಗುಡಿಗುಡಿ ಸೇದುವುದಕ್ಕೂ, ಮತ್ತು ಹೊಗೆಬತ್ತಿಯಾಗಿಯೂ ಸಹ ಉಪಯೋಗಿಸುವರು. ಇದರಲ್ಲಿ ಒಂದು ವಿಧವಾದ ವಿಷವು ಇರುವದು. ಹೆಚ್ಚಾಗಿ ಉಪಯೋಗಿಸಿದರೆ ಇದರಿಂದ ಮನುಷ್ಯರಿಗೆ ಕಾಯಿಲೆಯುಂಟಾಗುತ್ತದೆ. ತಕ್ಕಷ್ಟುಗೆ ಉಪಯೋಗಿಸಿದರೆ ಮನುಷ್ಯರಿಗೆ ಹರ್ಷವನ್ನುಂಟುಮಾಡುವದು ಮತ್ತು ಕೆಲವು ಜಂತುಗಳನ್ನು ಸಹ ಅದು ಗುಣಮಾಡುತ್ತೆಂದೂ ಅನೇಕ ವೈದ್ಯರು ಅಭಿಪ್ರಾಯ ಪಟ್ಟಿದ್ದಾರೆ. ಇನ್ನು ಕೆಲವರು ಅಂದರೆ ಅಮೇರಿಕಾ ದೇಶದ ವೈದ್ಯರು ಇದರ ಉಪಯೋಗದಿಂದ ಜನರಿಗೆ ಬಹು ಕಾಯಿಲೆ ಉಂಟಾಗಿ ಒಂದು ಸತ್ತು ಹೋಗುತ್ತಾರೆಂದು ಹೇಳುತ್ತಾರೆ. ಈ ಹೊಗೆಸೊಪ್ಪು ಕೋಟ್ಯಂತರ ಜನಸ್ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಖರ್ಚಾಗುತ್ತದೆ. ಈ ಸೊಪ್ಪನ್ನು ಅನೇಕ ಜನಗಳು ಬಾಯಿಯಲ್ಲಿ ಹಾಕಿಕೊಂಡು ಅಗಿಯುವದು ಸಹ ಉಂಟು. ಅದರಿಂದ ಒಂದು ತರಹ ನಶಾ ಉಂಟಾಗುತ್ತೆಂದು ತಿಳಿದು ಬರುತ್ತದೆ.

ಇಂಡಿಯಾ ದೇಶದಲ್ಲಿ ಸುಮಾರು ೭ ಲಕ್ಷ ಎಕರೆಗಳ ಜಮೀನಿನಲ್ಲಿ ಹೊಗೆಸೊಪ್ಪನ್ನು ಬೆಳೆಯುತ್ತಾರೆ. ಈ ಹೊಗೆಸೊಪ್ಪಿನಲ್ಲಿ ಸುಮಾರು ೫೦ ೬೦ ಬಗೆ ಉಂಟೆಂದು ತಿಳಿಯಬಂದಿದೆ. ನಸ್ಯದ ಹೊಗೆಸೊಪ್ಪು ಬತ್ತಿಗೂ, ಬತ್ತಿ ಹೊಗೆಸೊಪ್ಪು ಗುಡಿಗುಡಿಗೂ, ಗುಡಿಗುಡಿಯ ಹೊಗೆಸೊಪ್ಪು ಅಗಿಯುವುದಕ್ಕೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಒಂದೊಂದು ಕೆಲಸಕ್ಕೆ ಬೇರೆ ಬೇರೆ ಶಕ್ತಿಯುಳ್ಳ ಹೊಗೆಸೊಪ್ಪೇ ಬೇಕೆಂದು ತಿಳಿದವರು ಹೇಳುತ್ತಾರೆ. ಒಂದೇ ತರಹಾ ಹೊಗೆಸೊಪ್ಪು ಎಲ್ಲಾ ಕೆಲಸಕ್ಕೂ ಉಪಯೋಗಕ್ಕೆ ಬರುತ್ತೆಂಬ ತಿಳುವಳಿಕೆಯು ತಪ್ಪಾದದ್ದು. ಅತಿಶ್ರೇಷ್ಠವಾದ ಹೊಗೆಸೊಪ್ಪನ್ನು ವಿಶೇಷವಾಗಿ ಉತ್ತರ ಅಮೇರಿಕಾ ದೇಶದ ದಕ್ಷಿಣ ಪ್ರಾಂತ್ಯಗಳಲ್ಲಿ ಬೆಳೆಯುತ್ತಾರೆ. ಯೂರೋಪ್ ಖಂಡದಲ್ಲಿ ಕೂಡ ಕೆಲವು ಮೊದಲಾದ ಸ್ಥಳಗಳಲ್ಲಿಯೂ ಇದನ್ನು ಬೆಳೆಯುವುದುಂಟು.

ಇದರ ವ್ಯವಸಾಯವು ಹವ, ಕಾಲ, ಋತು, ಮತ್ತು ಮಳೆ ಇವು ಭೇದದಿಂದ ಅನೇಕ ದೇಶಗಳಲ್ಲಿ ಬೇರೆ ಬೇರೆ ವಿಧವಾಗಿ ಇರುವುದು. ಆದರೆ ಇದು ಬೆಳೆಯತಕ್ಕ ಭೂಮಿ, ಇದಕ್ಕೆ ಹಾಕತಕ್ಕ ಗೊಬ್ಬರ, ಇದಕ್ಕಾಗಿ ಮಾಡುವ ವ್ಯವಸಾಯ, ಇದನ್ನು ಬೆಳೆಸುವ ರೀತಿ, ಇವೆಲ್ಲಾ ಎಲ್ಲಾ ದೇಶದಲ್ಲಿಯೂ ಒಂದೇ ವಿಧವಾಗಿರುತ್ತದೆ.

ಹೊಗೆಸೊಪ್ಪಿಗೆ ಹಿಂದಿನಾದ ಮರಳು, ದಪ್ಪ ಮಣ್ಣು ವಗೈರೆ ಮಿಶ್ರವಾಗಿ ಇರುವ ಮೃದುವಾಗಿರುವ ಭೂಮಿಯು ಬಹಳ ಒಳ್ಳೇದು. ಈ ತರಹಾ ಅಲ್ಲದೆ ಬೇರೆ ಕಠಿಣ ಭೂಮಿಗಳಲ್ಲಿಯೂ ಬೆಳೆಯುವುದುಂಟು. ಆದರೆ ಅಂತಹ ಭೂಮಿಯಲ್ಲಿ ಬೆಳೆಯತಕ್ಕ ಹೊಗೆಸೊಪ್ಪು ಶ್ಲಾಘ್ಯವಾಗಿರುವುದಿಲ್ಲ. ನಮ್ಮ ಮೈಸೂರು ದೇಶದಲ್ಲಿ ಚಿಕ್ಕಬಳ್ಳಾಪುರ ಮೊದಲಾದ ಪ್ರಾಂತ್ಯಗಳಲ್ಲಿ ಬೆಳೆಯುವ ಹೊಗೆಸೊಪ್ಪನ್ನು ನೀರುಕಟ್ಟಿ ಬೇಸಿಗೆ ಫಸಲಾಗಿ ಬೆಳೆಯುತ್ತಾರೆ. ಮತ್ತು ಇತರ ಕೆಲವು ಪ್ರಾಂತ್ಯಗಳಲ್ಲಿಯೂ ಮಳೆ ಫಸಲಾಗಿಯೂ ಬೆಳೆಯುವರು. ಆದರೆ ಅನೇಕ ಪ್ರಾಂತ್ಯಗಳಲ್ಲಿ ಇದನ್ನು ನೀರಿನ ಆಸರೆಯಿಂದ ಬೆಳೆಯುತ್ತಾರೆ. ಇಂಡಿಯಾ ದೇಶದಲ್ಲಿ ಗುಜರಾತ್ ಸೀಮೆಯ ಒಂದು ಭಾಗವಾದ ಬರೋಡಾ ಸಂಸ್ಥಾನದ ಪೆಟ್ಲಾಡ್ ಎಂಬುವ ಸ್ಥಳದಲ್ಲಿ ಅತಿಶ್ರೇಷ್ಠವಾದ ಟರ್ಕಿ ಮತ್ತು ವರ್ಜೀನಿಯಾ ದೇಶಗಳಲ್ಲಿ ಬೆಳೆಯುವ ಹೊಗೆಸೊಪ್ಪಿಗೆ ಸಮಾನವಾದ ಹೊಗೆಸೊಪ್ಪನ್ನು ಬೆಳೆಯುವುದಾಗಿ ತಿಳಿದುಬಂದಿದೆ. ಹೊಗೆಸೊಪ್ಪು ಹಾಕುವ ಜಮೀನನ್ನು ಮಳೆ ಬಿದ್ದ ಕೂಡಲೆ ಬಹಳ ಆಳವಾಗಿ ೬ ಸಲಕ್ಕೆ ಕಡಮೆಯಿಲ್ಲದೆ ಉತ್ತು, ಹರ ಹುಲ್ಲು ಸಾಯಿಸಿ ಬಹಳ ಮೃದುವಾಗಿ ಹೆಂಟೆ ವಗೈರೆ ಇಲ್ಲದೆ ಜಮೀನನ್ನು ಮಟ್ಟಮಾಡಬೇಕು. ಒಂದು ಎಕರೆಗೆ ೨೫ ರ ಲಾಗಾಯ್ತು ೩೦ ಗಾಡಿ ತಿಪ್ಪೆಗೊಬ್ಬರವನ್ನಾಗಲಿ ಚೆನ್ನಾಗಿ ಪಕ್ವವಾದ ದನ ಕುರಿ ಮೊದಲಾದ ಗೊಬ್ಬರಗಳ ಮಿಶ್ರವನ್ನಾಗಲಿ ಹಾಕುತ್ತಾರೆ. ಹೊಗೆಸೊಪ್ಪನ್ನು ಬೆಳೆಸುವ ಜಮೀನನ್ನು ಸಾಧಾರಣವಾಗಿ ಕೆಲವು ಸ್ಥಳಗಳಲ್ಲಿ ಕುರಿಗಳನ್ನು ನಿಲ್ಲಿಸಿ ಹಾಕುವುದುಂಟು. ಒಂದು ಎಕರೆ ಜಮೀನಿನ ಮೇಲೆ ೧೦೦೦ ೨೦೦೦ ಕುರಿಗಳು ಒಂದು ವಾರದ ತನಕ ಮಲಗಿದರೆ ಸಾಕಷ್ಟು ಗೊಬ್ಬರವಾಗುತ್ತೆ. ಆದರೆ ಎಲ್ಲವರು ಅನುಭವದಿಂದ ತಿಳಿದು ಇದಾರೆ. ಇದಕ್ಕೆ ಚೆನ್ನಾಗಿ ಬೂದಿ, ಹಿಂಡಿ, ಗೋಮೂತ್ರ, ಕುರಿಮೂತ್ರ ಮೊದಲಾದ ಗೊಬ್ಬರಗಳು ಒಳ್ಳೆಯವುಗಳೆಂದು ಚೆನ್ನಾಗಿ ವ್ಯವಸಾಯಬಲ್ಲ ರೈತರು ತಿಳಿದು ಇವನ್ನು ಉಪಯೋಗಿಸುವರು. ಆದರೆ ಹೊಗೆಸೊಪ್ಪಿನ ಫಸಲಿಗೆ ಅಗತ್ಯ ಗೊಬ್ಬರವನ್ನು ಅದರ ಉಪಯೋಗಾನುಸಾರವಾಗಿ ಏರ್ಪಡಿಸಬೇಕಾಗಿದೆ. ಅಂದರೆ ಆ ಉಪಯೋಗಕ್ಕೆ ಬೆಳೆಸುವ ಹೊಗೆಸೊಪ್ಪಿಗೆ ಆವಶ್ಯಕವಾಗಿ ಬೇಕಾಗುವ ಗೊಬ್ಬರವನ್ನು ಬಿಟ್ಟು ಆಗುವ ಸೊಪ್ಪಿಗೆ ಹಾಕಿದರೆ ಅಷ್ಟು ಪ್ರಯೋಜನವಾಗುವುದಿಲ್ಲ.

ಹೊಗೆಸೊಪ್ಪಿನ ಬೀಜವನ್ನು ಎತ್ತರವಾಗಿರುವ, ನೀರು ಇಲ್ಲದ ಮತ್ತು ನೆಟ್ಟುವದಕ್ಕೆ ಅವಕಾಶವಿಲ್ಲದ ಪ್ರದೇಶಗಳಲ್ಲಿ ಚೆನ್ನಾಗಿ ಪಾತಿಗಳನ್ನು ಮಾಡಿ ಗೊಬ್ಬರ ಹಾಕಿಯೂ ಪಾತಿಗಳಲ್ಲಿ ಒಟ್ಟು ಹಾಕಿಯೂ ಸಸಿಯನ್ನು ಬೆಳೆಸಬೇಕು. ಹೊಗೆಸೊಪ್ಪಿನ ಬೀಜವು ಬಹಳ ಸೂಕ್ಷ್ಮವಾಗಿರುವುದರಿಂದ ಅದನ್ನು ಸಣ್ಣಗಿರುವ ಮರಳಿನ ಜೊತೆಗೆ ಬೆರಸಿ ಪಾತಿಗಳಲ್ಲಿ ಚೆಲ್ಲಿ ಮೇಲೆಯಿಂದ ಬೆರಳಿನಿಂದಲೂ ಕೆಟ್ಟು ಹೋಗುವದಕ್ಕೆ ಅವಕಾಶಕೊಡದಂತೆ ಪಾತಿಗಳ ಮೇಲೆ ಸೊಪ್ಪು ಹಾಕಬೇಕು. ಸಸಿಗಳಲ್ಲಿ ಸಣ್ಣ ಹುಳುಗಳು ಹುಟ್ಟಿದ ಮೇಲೆ ಆ ಸಸಿಗಳು ಜಮೀನಿನಲ್ಲಿ ನೆಡುವುದಕ್ಕೆ ಸಿದ್ಧವಾಗಿವೆ ಎಂದು ತಿಳಿಯಬೇಕು. ಇಂತಹ ಪೈರುಗಳನ್ನು ಕಿತ್ತು ಹಸನುವ ಬೆಳೆವ ಜಮೀನಿನಲ್ಲಿ ನೆಡಬೇಕು.

ಬಿ. ರಾಮರಾವ್, ಅಗ್ರಿ ಕಾಲೇಜ್, ಮೈಸೂರು

ಮೈಸೂರು ಸರ್ಕಾರದ ಹುಕುಮುಗಳು

ರೆವಿನ್ಯೂ ಕಟ್ಟಡಗಳಿಗಾಗಿ ಒಂದು ಕಮಿಟಿಯು

ಹೊಸದಾಗಿ ತಾಲ್ಲೂಕ್ ಕಚೇರಿಗಳನ್ನೂ ಇತರ ರೆವಿನ್ಯೂ ಕಟ್ಟಡಗಳನ್ನೂ ಕಟ್ಟಬೇಕಾಗಿರುವ ಸ್ಥಳಗಳನ್ನು ಗೊತ್ತು ಮಾಡುವದಕ್ಕೆ ಕಳೆದ ಮೇ ತಿಂಗಳಲ್ಲಿ ಸರ್ಕಾರದವರು ಹುಕುಂ ಕೊಟ್ಟಿರುವುದೇನಂದರೆ—ರೆವಿನ್ಯೂ ಕಮಿಷನರ್ ಚೀಫ್ ಇಂಜಿನಿಯರವರೂ, ಡೆಪ್ಯುಟಿ ಕಮಿಷನರುಗಳೂ ರಾಜಧಾನಿಯಲ್ಲಿ ಜೂನ್ ತಿಂಗಳಲ್ಲಿ ಸಭೆ ಸೇರಿ ಆಲೋಚನೆಮಾಡಿ, ಇನ್ನು ಮುಂದೆ ಹತ್ತು ವರುಷಗಳಲ್ಲಿ ಸರ್ಕಾರವು ಕಟ್ಟಬೇಕಾಗುವ ರೆವಿನ್ಯೂ ಕಟ್ಟಡಗಳನ್ನು ಗೊತ್ತುಮಾಡಬೇಕು, ಮತ್ತು ಮುಂದಿನ ಎರಡು ವರುಷಗಳಲ್ಲಿ ಆ ಪೈಕಿ ಯಾವ ಕಟ್ಟಡಗಳನ್ನು ಮೊದಲು ಆರಂಭಿಸಿ ಪೂರೈಸಬೇಕಾಗಿದೆಯೋ ಅದನ್ನೂ ನಿರ್ಧರಿಸಬೇಕು. ಈ ತೀರ್ಮಾನದ ರಿಪೋರ್ಟನ್ನು ಗವರ್ನಮೆಂಟಿಗೆ ಕಳುಹಿಕೊಟ್ಟಲ್ಲಿ ಅವರು ಆ ಕ್ರಮದಂತೆ ಕಾಮಗಾರಿ ಪ್ರಾರಂಭಿಸುವ ವಿಷಯದಲ್ಲಿ ಸ್ಯಾಂಕ್ಷನ್ ಮಾಡುವರು.

ಬಿತ್ತನೆಗೆ ಧಾನ್ಯವನ್ನು ಕೊಂಡಿರುವುದು

ಬಿತ್ತನೆಗೆ ಯೋಗ್ಯವಾದ ಒಳ್ಳೇ ರಾಗಿಯು ಆನೆಕಲ್ಲು, ಕಾನಕಾನಹಳ್ಳಿ, ದೊಡ್ಡಬಳ್ಳಾಪುರ, ಮಾಗಡಿ, ಈ ತಾಲೂಕುಗಳಲ್ಲಿ ದೊರಕುವುದೆಂತಲೂ, ಅದನ್ನು ಕೊಂಡಿಟ್ಟು ಬಿತ್ತನೆಯ ಕಾಲದಲ್ಲಿ ರೈತರಿಗೆ ವಿತರಣೆ ಮಾಡಬೇಕೆಂತಲೂ, ಇದಕ್ಕೆ ಸುಮಾರು ೨,೦೦೦ ರೂಪಾಯಿ ಬೇಕಾಗಿದೆ ಎಂದೂ ಬೆಂಗಳೂರು ಡೆಪ್ಯುಟಿ ಕಮಿಷನರವರು ಬರೆದು ಸರ್ಕಾರಕ್ಕೆ ತಿಳಿಸಿದರು. ಕೋಲಾರದ ಡೆಪ್ಯುಟಿ ಕಮಿಷನರವರು ಬರಗಾಲದ ನಿಮಿತ್ತವಾಗಿ ರೈತರು ಮೂಲಕವೂ ಒಳ್ಳೇ ಬಿತ್ತನೆ ಬೀಜಗಳನ್ನು ಖರೀದಿಸುವದಕ್ಕೆ ೬,೦೦೦ ರೂಪಾಯಿ ಬೇಕೆಂದು ಕೇಳಿದರು. ಗವರ್ನಮೆಂಟಿನವರು ಬಿತ್ತನೆ ಬೀಜವನ್ನು ಕೊಂಡಿರುವದಕ್ಕೆ ಕಳೆದ ಏಪ್ರಿಲ್ ತಿಂಗಳಲ್ಲಿ ೧೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ. ರೆವಿನ್ಯೂ ಕಮಿಷನರವರು ಅದರಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿಗೆ ೩,೫೦೦ ರೂಪಾಯಿಯನ್ನೂ, ಕೋಲಾರ್

ಡಿಸ್ಟ್ರಿಕ್ಟಿಗೆ ಸದ್ಯದಲ್ಲಿ ೨,೦೦೦ ರೂಪಾಯನ್ನು ಸ್ಯಾಂಕ್ಷನ್ ಮಾಡಿ, ಡೆಪ್ಯುಟಿ ಕಮಿಷನರುಗಳಿಗೆ ತಿಳಿಸಿರುವುದೇನಂದರೆ—ಬಿತ್ತನೆ ಬೀಜವನ್ನು ಕೊಂಡು ಪಟೇಲ್ ಅಥವಾ ಅಮಲ್ದಾರರ ಸ್ವಾಧೀನದಲ್ಲಿ ಇಟ್ಟದ್ದು, ಅದು ಕೆಡದಂತೆ ನೋಡಿಕೊಳ್ಳಬೇಕು. ಬಿತ್ತನೆಯ ಕಾಲವು ಸಮೀಪಿಸಿದಾಗ್ಗೆ ಆ ಬೀಜವನ್ನು ಕ್ರಯ ಒಳ್ಳೇ ಹಸನಾದ ಕಾಳನ್ನು ರೈತರಿಗೆ ಹಂಚಿಕೆ ಮಾಡಿಕೊಡಬೇಕು. ಹೀಗೆ ಕೊಟ್ಟ ಧಾನ್ಯದ ಕ್ರಯವನ್ನು ರೈತರಿಂದ ವಸೂಲ್ಮಾಡಿಕೊಳ್ಳುವುದಕ್ಕೆ ಸರಿಯಾದ ಏರ್ಪಾಡು ಮಾಡಬೇಕು.

ಕಾಲಸ್ಥಿತಿಯ ರಿಪೋರ್ಟು.

ಮೈಸೂರು ಸರ್ಕಾರದವರು ಕಳೆದ ಮೇ ತಿಂಗಳ ಮಧ್ಯಭಾಗದಲ್ಲಿ ಎಲ್ಲಾ ಡಿಸ್ಟ್ರಿಕ್ಟ್ ಕಮಿಷನರುಗಳಿಗೂ ಸರ್ಕ್ಯುಲರ್ ಹುಕುಂ ಕೊಟ್ಟಿರುವುದೇನೆಂದರೆ— ಕೆಲವು ವಾರಗಳಿಂದ ಸಂಸ್ಥಾನಾದ್ಯಂತ ಒಳ್ಳೇ ಮಳೆಗಳು ಸುರಿದಿರುತ್ತವೆಂದು ತಿಳಿದು ಬಂದಿದೆ. ಇದರ ಮೇಲೆ ಈಗ ಕಾಲಸ್ಥಿತಿಯು ಬಹು ಮಟ್ಟಿಗೆ ಚೆನ್ನಾಗಿರಬೇಕೆಂದು ತೋರುವುದು. ಈ ಮಳೆಗಳಿಂದ ಎಷ್ಟು ಮಟ್ಟಿಗೆ ಅನುಕೂಲವಾಗಿದೆ ಎಂಬ ಅಂಶಕ್ಕೆ ಡಿಸ್ಟ್ರಿಕ್ಟ್ ಕಮಿಷನರುಗಳು ಗವರ್ನ್‌ಮೆಂಟಿಗೆ ಒಂದು ರಿಪೋರ್ಟನ್ನು ಕಳುಹಿಸಬೇಕಾಗಿದೆ. ಈ ರಿಪೋರ್ಟಿನಲ್ಲಿ ಅವರು ನಮೂದು ಮಾಡಬೇಕಾಗಿರುವ ಭಾಗಗಳ್ಯಾವವೆಂದರೆ—(೧) ದುಷ್ಕಾಲಪ್ರಾಪ್ತವಾಗಿದ್ದ ಪ್ರದೇಶಗಳಲ್ಲಿ ವ್ಯವಸಾಯ ಮತ್ತು ಪ್ರಜೆಗಳ ಸ್ಥಿತಿಗತಿಯು ಹ್ಯಾಗಿದೆ? (೨) ಕಷ್ಟನಿವಾರಣೆಗಾಗಿ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ ಬೇರೆ ಬೇರೆ ಏರ್ಪಾಡುಗಳು ಎಷ್ಟು ಮಟ್ಟಿಗೆ ನಡಿಸಲ್ಪಟ್ಟವೆ, ಯಾವ ಪ್ರದೇಶದಲ್ಲಿ ಇನ್ನೂ ಎಷ್ಟು ಮಟ್ಟಿಗೆ ಆ ಏರ್ಪಾಡುಗಳನ್ನು ಇಟ್ಟು ಇರಬೇಕು? (೩) ಆಹಾರಧಾನ್ಯಗಳು ದೊರಕುತ್ತವೆಯೇ; ಧಾರಣೆವಾಸಿಗಳು ಹ್ಯಾಗಿವೆ, ವ್ಯಾಪಾರವು ಎಷ್ಟು ಮಟ್ಟಿಗೆ ನಡೆಯುತ್ತಿದೆ? (೪) ಜಾನುವಾರುಗಳ ಸ್ಥಿತಿಗತಿ ಎಷ್ಟು ಮಟ್ಟಿನಲ್ಲಿದೆ, ಅವುಗಳ ಮೇವಿಗೂ ನೀರಿಗೂ ಅನುಕೂಲತೆಯುಂಟಾಗಿದೆಯೋ ಇಲ್ಲವೋ? (೫) ಪ್ರಜೆಗಳ ಆರೋಗ್ಯಸ್ಥಿತಿ ಹ್ಯಾಗಿದೆ? (೬) ಮುಂದಿನ ಸ್ಥಿತಿಯು ಹ್ಯಾಗಾಗಬಹುದು; ಇನ್ನೇನಾದರೂ ವಿಶೇಷವಾದ ಸಂಗತಿಗಳುಂಟೋ? ಈ ವಿಚಾರವನ್ನೆಲ್ಲಾ ಕುರಿತು ರಿಪೋರ್ಟು ಬರೆದು ಕಳುಹಿಸಬೇಕಾಗಿದೆ.

೧೯೦೮ ನೇ ಇಸವಿಯ ಮಳೆಗಾಲವು.

ಸಂಸ್ಥಾನಾದ್ಯಂತ ಸರ್ಕಾರದವರು ೨೧೬ ಸ್ಥಳಗಳಲ್ಲಿ ಮಳೆಯ ಲೆಕ್ಕವನ್ನು ಗೊತ್ತುಮಾಡುವಂಥಾ ಮಳೆಮಾಪಕ (ಗೇಜ್) ಗಳನ್ನು ಏರ್ಪಡಿಸಿದ್ದಾರೆ. ಕಳೆದ ೧೯೦೮ ನೇ ವರುಷದಲ್ಲಿ ಸರಾಸರಿಯಾಗಿ ೨೯.೯೪ ಅಂಗುಲ ಮಳೆ ಆಯಿತು. ಹಿಂದಿನ ವರುಷ ೩೯.೬೬ ಅಂಗುಲ ಮಳೆಯಾಗಿತ್ತು. ಮತ್ತು ಕಳೆದ ೩೮ ವರುಷಗಳ ಸರಾಸರಿಯನ್ನು ನೋಡಿದರೆ ೩೬.೭೯ ಅಂಗುಲ ಪ್ರಮಾಣದಷ್ಟು ಮಳೆ ಬರಬೇಕಾಗಿತ್ತು. ಈ ಸಂವತ್ಸರದಲ್ಲಿ ಕ್ರಾಗಿ ೬ ಬೆಳೆಯೇ ಮುಖ್ಯವಾದದ್ದು. ಇದಕ್ಕೆ ಜೂನ್ ಮೊದಲಾಗಿ ಅಕ್ಟೋಬರ್ ವರೆಗೆ ಮಳೆ ಸುರಿಯಬೇಕಾಗಿದೆ. ಕಳೆದ ೧೯೦೮ ನೇ ವರುಷದಲ್ಲಿ ಜೂನ್‌ನಿಂದ ಅಕ್ಟೋಬರ್ ವರೆಗೆ ೨೩.೫೩ ಅಂಗುಲದಷ್ಟು ಮಳೆ ಸುರಿಯಿತು. ಆದರೆ ಇದು ಕಳೆದ ೩೮ ವರುಷಗಳ ಸರಾಸರಿ ಮಳೆಗಿಂತ ೪.೮೭ ಅಂಗುಲದಷ್ಟು ಕಡಮೆಯಾಗಿರುತ್ತದೆ. ಕಳೆದ ವರುಷ ಜುಲೈ ತಿಂಗಳವರೆಗೆ ಮಳೆ ಚೆನ್ನಾಗಿಯೇ ಸುರಿಯಿತು. ಅಲ್ಲಿಂದೀಚೆಗೆ ಬಹಳ ಕಡಮೆಯಾಯಿತು. ಶಿವಮೊಗ್ಗೆಯಲ್ಲೂ ಮಳೆಗಳು ಕಾಲಕ್ಕೆ ಸರಿಯಾಗಿ ನಡೆಯಲಿಲ್ಲ. ಇತರ ಡಿಸ್ಟ್ರಿಕ್ಟುಗಳಲ್ಲಿ ಬಂದ ಮಳೆಯು ತೃಪ್ತಿಕರವಾಗಿರಲಿಲ್ಲ. ಬೆಳೆಗೆ ಅವಶ್ಯವಾದ ಮಳೆಗಳು ಜುಲೈ ತಿಂಗಳಿಂದೀಚೆಗೆ ನಡಿಸಲಿಲ್ಲವಾದಕಾರಣ ಸಂಸ್ಥಾನಾದ್ಯಂತ ಬೆಳೆಗಳು ಕೆಟ್ಟು ಹೋಗಿ ಫೆಮಿನ್ ರಿಲೀಫ್ ಕಾರ್ಯಗಳನ್ನು ಪ್ರಾರಂಭಿಸಬೇಕಾಯಿತು. ನದಿಗಳ ಸುತ್ತುಮುತ್ತಲೂ ಮಳೆ ಆಗಲಿಲ್ಲ. ಕಾವೇರಿ, ಪೆನ್ನಾರು, ಪಾಲಾರು ನದಿಗಳಲ್ಲೂ ಅವುಗಳ ಕಾಲುವೆಗಳಲ್ಲೂ ನೀರು ಕಡಮೆಯಾಯಿತು. ಈ ಸಂಸ್ಥಾನದ ವ್ಯವಸಾಯಕ್ಕೆ ಈ ನದಿಗಳ ನೀರು ಮುಖ್ಯಾಧಾರವಾಗಿರುತ್ತದೆ. ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಸೇರಿದ ಆಗುಂಬೆಯಲ್ಲಿ ಕಳೆದ ವರುಷ ೩೧೮.೭೪ ಅಂಗುಲ ಪ್ರಮಾಣದಷ್ಟು ಮಳೆ ಆಯಿತು. ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ಸೇರಿದ ತಲಕಿನಲ್ಲಿ ಬಹಳ ಕೊಂಚ ಅಂದರೆ ೪.೮೯ ಅಂಗುಲ ಮಳೆ ಆಗಿದೆ.

ಮೈಸೂರು ಸಂಸ್ಥಾನದ ಆಯುಧಗಳ ಕಾನೂನು.

ಪ್ರಜೆಗಳು ಆಯುಧಗಳನ್ನು ಇಟ್ಟುಕೊಳ್ಳುವುದಕ್ಕೆ ಮೈಸೂರು ಸರ್ಕಾರದವರಿಂದ ಲೈಸೆನ್ಸನ್ನು ಪಡೆದುಕೊಳ್ಳಬೇಕಾಗಿದೆ. ಗವರ್ನ್‌ಮೆಂಟಿನವರು ಎಂಥಾ ಸಂದರ್ಭಗಳಲ್ಲಿ ಪ್ರಜೆಗಳಿಗೆ ಲೈಸೆನ್ಸು ಕೊಡುತ್ತಾರೆಂದರೆ—(೧) ಆಯುಧಗಳನ್ನೂ ಸೈನ್ಯದ ಸರಕುಗಳನ್ನೂ ತರಿಸಿ ಸಾಗಿಸುವುದು, (೨) ಆಯುಧಗಳನ್ನೂ ಸೈನ್ಯದ ಸರಕುಗಳನ್ನೂ ತಯಾರಿ ಇಟ್ಟುಕೊಂಡು ಬಿಕರಿ ಮಾಡುವುದು, (೩) ಆಯುಧಗಳನ್ನೂ ಸೈನ್ಯದ ಸರಕುಗಳನ್ನೂ ಅಂಗಡಿಯಲ್ಲಿಟ್ಟು ವಿಕ್ರಯಿಸುವುದು, (೪) ಶಿಕಾರಿಮಾಡುವುದಕ್ಕಾಗಿ ಆಯುಧ ಸಮೇತ ಹೋಗುವದು, (೫) ಪ್ರಯಾಣಕಾಲದಲ್ಲಿ ಆಯುಧ ಸಮೇತರಾಗಿ ಹೋಗುವುದು, (೬) ಆಯುಧಗಳನ್ನೂ ಯುದ್ಧದ ಸಾಮಗ್ರಿಗಳನ್ನೂ ಇಟ್ಟುಕೊಂಡಿರುವುದು, (೭) ದುಷ್ಟಮೃಗಗಳನ್ನು ಕೊಲ್ಲುವುದಕ್ಕೆ ಆಯುಧಗಳನ್ನೂ ಯುದ್ಧಸಾಮಗ್ರಿಗಳನ್ನೂ ಇಟ್ಟುಕೊಂಡಿರುವುದು. ಈ ಏಳು ಕಾರಣಗಳಿಗೆ ಲೈಸೆನ್ಸನ್ನು ಕೊಡುತ್ತಾರೆ. ಕಳೆದ ವರುಷ ೧೯,೯೯೪ ಮದ್ದಿನ ಆಯುಧಗಳನ್ನಿಟ್ಟುಕೊಂಡಿದ್ದಕ್ಕೆ ಸರ್ಕಾರದವರು ಪ್ರಜೆಗಳಿಗೆ ೧೯,೪೦೦ ಲೈಸೆನ್ಸುಗಳನ್ನು ಕೊಟ್ಟರು, ಅಂದರೆ, ಹಿಂದಿನ ವರುಷ ಕೊಟ್ಟ ಲೈಸೆನ್ಸುಗಳಿಗಿಂತ ೩,೨೬೨ ಹೆಚ್ಚಾಯಿತು. ಸಂತೋಷಾರ್ಥವಾಗಿ ಶಿಕಾರಿಮಾಡುವುದಕ್ಕೂ ದುಷ್ಟಮೃಗಗಳನ್ನು ಕೊಲ್ಲುವುದಕ್ಕೂ ಕೊಟ್ಟ ಲೈಸೆನ್ಸುಗಳ ಸಂಖ್ಯೆಯೇ ಬಹಳ ಇದ್ದಿತಲ್ಲದೆ ಈ ಎರಡನೆಯ ಕಾರಣಕ್ಕೆ ಹಿಂದಿನ ವರುಷ ೫೪೪ ಲೈಸೆನ್ಸು ಕೊಟ್ಟಿದ್ದರು, ಕಳೆದ ವರುಷ ೩,೦೬೯ ಲೈಸೆನ್ಸುಗಳು ಕೊಡಲ್ಪಟ್ಟವು. ಹೀಗೆ ಹೆಚ್ಚಾಗುವುದಕ್ಕೆ ಕಾರಣವೇನೆಂದರೆ, ಹಿಂದಿನ ವರುಷ ಅನೇಕಜನರು ಮದ್ದಿನ ಆಯುಧಗಳನ್ನು ಪಡೆದಿದ್ದರೂ ಅವರು ಅವುಗಳಿಗಾಗಿ ಲೈಸೆನ್ಸುಗಳನ್ನು ತೆಗೆದುಕೊಂಡಿರಲಿಲ್ಲ.

ಈ ಪತ್ರ್ಯಗಳ ಕಾನೂನನ್ನು ಅತಿಕ್ರಮಿಸಿದವರೆಂದು ಸರ್ಕಾರದವರು ಕಳೆದ ವರುಷ ೫೧ ಜನರನ್ನು ಹಿಡಿದು, ೧೭ ಮೊಕದ್ದಮೆ ಮಾಡಿದರು. ಆ ಪೈಕಿ ೩೮ ಮೊಕದ್ದಮೆಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿರುತ್ತದೆ. ಈ ಕಾನೂನಿನ ಕೆಲಸಗಳೇನೂ ತೃಪ್ತಿಕರವಾಗಿಯೇ ನಡೆದಿರುವಂತೆ ಹೇಳಬಹುದು.

ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳಿಂದ ರಿಪೋರ್ಟುಗಳು ಬರುವುದು ಸಾವಕಾಶವಾಯಿತೆಂದು ಗವರ್ನ್‌ಮೆಂಟಿನವರು ಆಕ್ಷೇಪಣೆ ಮಾಡುತ್ತಾರೆ. ಈ ಸಾಮಾನ್ಯವಾದ ವಾಚಾ ಆಕ್ಷೇಪಣೆಯಲ್ಲದೆ ತಪ್ಪಿತಸ್ಥರಿಗೆ ಶಿಕ್ಷೆಯೇನೂ ಆಗಿರುವುದಿಲ್ಲ.

ಗೋಶಾಲೆಗಳ ಮರಣಸಂಖ್ಯೆಗಳು.

ಕಳೆದ ಡಿಸೆಂಬರ್ ಆಖರಿಗೆ ಮುಕ್ತಾಯವಾದ ಮೂರು ತಿಂಗಳಲ್ಲಿ ಸಂಸ್ಥಾನಾದ್ಯಂತ ಸತ್ತುಹೋದ ಜಾನುವಾರುಗಳ ಲೆಕ್ಕ ಮುಂತಾದದ್ದನ್ನು ಸರ್ಕಾರದವರು ಈಗ ಪ್ರಕಟಿಸಿರುತ್ತಾರೆ. ಈ ರಿಪೋರ್ಟಿನಲ್ಲಿ ಕಂಡುಬರುವ ಮುಖ್ಯವಿಚಾರಗಳೇನೆಂದರೆ—ಆ ಮೂರು ತಿಂಗಳಲ್ಲಿ ಎಲ್ಲಾ ಕಾರಣಗಳಿಂದಲೂ ೩೪,೫೫೭ ಗೋಶಾಲೆಗಳು ಮೃತಪಟ್ಟಿರುತ್ತವೆ; ಅಂದರೆ, ಹೋದವರುಷ ಅದೇ ಮೂರು ತಿಂಗಳಲ್ಲಿ ಮೃತಪಟ್ಟ ಗೋಶಾಲೆಗಳ ಸಂಖ್ಯೆಗಿಂತಲೂ ೮,೪೬೩ ರಾಸುಗಳು ಹೆಚ್ಚಾಗಿ ಲಯವಾದವು. ಈ ಪೈಕಿ ರೋಗಗಳು ತಗಲಿ ಸತ್ತುಹೋದ ರಾಸುಗಳು ೨೧,೩೭೭. ಬೆಂಗಳೂರು, ಕೋಲಾರ ತುಮಕೂರು, ಮೈಸೂರು ಡಿಸ್ಟ್ರಿಕ್ಟುಗಳಲ್ಲಿ ಅಂಟುಜಾಡ್ಯಗಳು ಪ್ರಬಲವಾಗಿದ್ದದ್ದರಿಂದ ಅಷ್ಟು ಹೆಚ್ಚು ಗೋಶಾಲೆಗಳು ಮೃತಪಡಲು ಕಾರಣವಾಯಿತು. ಉಳಿದ ಡಿಸ್ಟ್ರಿಕ್ಟುಗಳಲ್ಲೂ ರೋಗಗಳು ಸ್ವಲ್ಪಮಟ್ಟಿಗೆ ಹರಡಿದ್ದವು. ಆ ಮೂರು ತಿಂಗಳಲ್ಲಿ ರೋಗತಗಲದಂತೆ ಶಿಡುಬು ಹಾಕಿದ ರಾಸುಗಳ ಸಂಖ್ಯೆ ಎಷ್ಟೆಂದರೆ— ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ೮೪, ಮೈಸೂರು ೧,೯೬೧, ಹಾಸನ ೮೮೦; ಕಡೂರು ೩೩೪. ರೋಗತಗಲಿದ ರಾಸುಗಳನ್ನು ಪ್ರತ್ಯೇಕವಾಗಿಡುವುದು, ಉಳಿದ ರಾಸುಗಳಿಗೆ ಶಿಡುಬು ಹಾಕಿಸುವುದು, ರೋಗತಗಲಿ ಸತ್ತುಹೋದ ದನಗಳ ಶವಗಳನ್ನು ಗ್ರಾಮದಿಂದ ಆಚೆ ದೂರಸ್ಥಳದಲ್ಲಿ ಆಳವಾದ ಗುಣಿಗಳಲ್ಲಿ ಹೂಳಿಡುವುದು, ಮಾದಿಗರು ಅವುಗಳ ಚರ್ಮಗಳನ್ನು ತೆಗೆದುಕೊಳ್ಳದಂತೆ ಎಚ್ಚರಿಕೆ ನೋಡಿಕೊಳ್ಳುವುದು—ಈ ವಿಚಾರಗಳನ್ನು ಸರ್ಕಾರದವರು ಪ್ರಜೆಗಳಿಗೆ ಸರಿಯಾಗಿ ಆಗಿಂದಾಗ್ಗೆ ತಿಳುವಳಿಕೆ ಕೊಡುತ್ತಾ ಬರುತ್ತಾರೆ. ಸಂಸ್ಥಾನಾದ್ಯಂತ ಅಂಟುಜಾಡ್ಯಗಳಿಂದಲೂ, ದುಷ್ಟಮೃಗಗಳಿಂದಲೂ, ಆಹಾರಾಭಾವದಿಂದಲೂ ಮೊದಲಾದ ಇತರ ಕಾರಣಗಳಿಂದಲೂ ಮೃತಪಟ್ಟ ಗೋಶಾಲೆಗಳ ಸಂಖ್ಯೆಗಳು ಎಷ್ಟೆಂದರೆ—

ರಾಸುಗಳು	ಈ ಸಲ	ಹೋದಸಲ
ಎತ್ತುಗಳು	೧೧,೬೧೩	೭,೫೯೩
ದನಗಳು	೮,೩೦೪	೬,೭೫೧
ಕೋಣಗಳು	೧,೭೦೯	೧,೩೯೬
ಎಮ್ಮೆಗಳು	೫,೪೧೬	೩,೬೬೦
ಕುರಿ ಮೇಕೆಗಳು	೭,೬೩೦	೫,೩೭೯
ಕುದುರೆಗಳು	೧೧೮	೫೯
ಕತ್ತೆಗಳು	೧೩೪	೮೫
ಒಟ್ಟು	೩೪,೫೫೭	೨೬,೦೯೪

ತಾಲ್ಲೂಕು ವರ್ತಮಾನಗಳು.

ಚಿಕ್ಕನಾಯಕನಹಳ್ಳಿ.—ಇದೇ ತಾಲ್ಲೂಕ್ ಕಸಬಾದಲ್ಲಿ ಸುಮಾರು ೧೦–೧೫ ದಿನಗಳ ಮುಂಚೆ ಸುಮಾರಾಗಿ ಮಳೆ ಬಂದು ಆದ ಕಾರ್ತೆಗಳಿಗೆ ನೀರು ಸಹ ಬಿದ್ದು ಜಾನುವಾರುಗಳಿಗೂ ಜನಗಳಿಗೂ ಸಹ ನೀರಿನ ಕಷ್ಟ ತಪ್ಪಿರುತ್ತೆ. ಅಲ್ಲಲ್ಲಿ ಮುಂಗಾರು ಬೆಳೆಗಳು ಬಿತ್ತನೆಯಾಗಿ ಹುಲುಸಾಗಿರುವವು ಆದರೆ ಜನಗಳಿಗೆಲ್ಲಾ ಕಣ್ಣು ಬಾಧೆಯು ಹೆಚ್ಚಾಗಿದೆ—ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟ್‌ರಾದ ಮ ಚೆಂಗಲ್ರಾಯರವರು ಜನಗಳ ಕಷ್ಟವನ್ನು ತಿಳಿದು ಬಾಜಾರಿನಲ್ಲಿರುವ ಈ ತಾಲ್ಲೂಕಾಫೀಸು ಮೊದಲು ಮಾಡಿಕೊಂಡು ಹೋಗಿ ಬಹಳ ಮುತುವರ್ಜಿಯಿಂದ ಔಷಧಗಳನ್ನು ಕೊಡುತ್ತಾ ಇದ್ದಾರೆ. ಕೆಲವರಿಗೆ ರಾತ್ರಿ ಹೊತ್ತು ಕಾಯಿಲೆಯು ಹೆಚ್ಚಾದರೂ ಆ ಕೂಡಲೇ ಅವರ ಮನೆಗಳಿಗೆ ಹೋಗಿ ಔಷಧಗಳನ್ನು ಕೊಟ್ಟು ಬರುತ್ತಾರೆ. ಸರ್ಕಾರದವರು ಇವರನ್ನು ಇಲ್ಲಿಯೇ ಇಟ್ಟುಕೊಟ್ಟು ಬಡರೈತರನ್ನು ಕಾಪಾಡಿ ಕೀರ್ತಿ ಸಂಪಾದಿಸುವರೆಂದು ನಂಬಿದೇವೆ.

ಕೃಷ್ಣರಾಜಪೇಟೆ.—ಈ ಸ್ಥಳದ ಮುನಿಸಿಪಾಲಿಟಿಯು ಎಲ್ಲಾ ವಿಷಯಗಳಲ್ಲಿಯೂ ತಕ್ಕಮಟ್ಟಿಗೆ ಅನುಕೂಲವಾಗಿದೆಯೆಂದೂ, ಈ ವಿಷಯದಲ್ಲಿ ನಮ್ಮ ಅಮಲ್ದಾರರಾದ ಮ ರಾ ವಿಶ್ವನಾಥರಾಯರು ಬಹು ಮುತುವರ್ಜಿಯನ್ನು ವಹಿಸುವದರಿಂದ ಯಾವ ಅಂಟುಜಾಡ್ಯವೂ ಕಂಡುಬಂದಿಲ್ಲವೆಂದೂ ತಿಳಿಯುತ್ತದೆ. ಈಚೆಗೆ ಎರಡು ವಾರ ಒಳ್ಳೇ ಮಳೆಗಳಾದದ್ದರಿಂದ ರೈತರು ತಮ್ಮ ಹೊಲಗಳನ್ನು ಹಸನು ಮಾಡಿಕೊಳ್ಳುತಿದ್ದಾರೆ. ಈ ತಾಲೂಕಿನಲ್ಲಿ ಬೇಕಾದಷ್ಟು ಇರುವುದರಿಂದ ಜನರ ವಿಶೇಷ ಕಾರ್ಯಗಳಿಗೂ ಅನುಕೂಲವಾಗಿದೆ.—ಈ ಸ್ಥಳದ ಮುನಿಸಿಪಾಲಿಟಿಯಲ್ಲಿ ಒಮ್ಮೆ ಸಿನಿಂದ ಕಲ್ಲು ಅಕ್ಕಿ, ೬೦೦ ರೂಪಾಯಿನ ತುಪ್ಪ, ೧೦೦ ರೂಪಾಯಿನ ವಿಂಸ ಮೊದಲಾದ ಸಾಮಾನನ್ನು ಹೇರಳವಾದ ಹಿತೈಸಿಯದ ಕೂಡಿಸಿ ಸುಮಾರು ಎರಡು ಸಾವಿರ ಜನರಿಗೆ ಸಮಾರಾಧನ ಮಾಡಿಸಿ ಪರೋಪಕಾರಿಗಳೆನಿಸಿಕೊಂಡದ್ದು ಸ್ತೋತ್ರಾರ್ಹವಾಗಿರುತ್ತದೆ.—ಕಳೆದ ೬ ತಿಂಗಳಿಂದಲೂ ನಮ್ಮ ಪ್ರಜೆಗಳಿಗೂ ಪರೋಪಕಾರಿಗಳಾಗಿದ್ದ ಡಾಕ್ಟರ್ ನಾರಾಯಣರಾಯರು ಇಲ್ಲಿಂದ ಕನಕಪುರಕ್ಕೆ ವರ್ಗವಾದದ್ದರಿಂದ ಅನೇಕರು ವ್ಯಸನಪಡುತ್ತಾರೆ. ಅವರ ಸ್ಥಾನಕ್ಕೆ ಬಂದಿರುವ ಡಾಕ್ಟರೂ ಕೂಡ ಅವರಂತೆಯೇ ಪರೋಪಕಾರಿಗಳಾಗಿದ್ದು ಕೀರ್ತಿಪಡೆದಾರೆಂದು ನಿರೀಕ್ಷಿಸಲ್ಪಟ್ಟಿದೆ.

ಚನ್ನರಾಯಪಟ್ಟಣ.—ಈಚೆಗೆ ಒಂದು ವಾರದಿಂದ ಒಳ್ಳೇ ಸೋನೆ ಮಳೆ ಹಿಡಿದಿರುತ್ತೆ. ರೈತರೆಲ್ಲರೂ ಹೊಲಗಳಲ್ಲಿ ಎಳ್ಳು ಜೋಳ ವಗೈರೆಯನ್ನು ಬಿತ್ತುತ್ತಾರೆ. ಈ ಪಟ್ಟಣದಲ್ಲಿ ಕೈಸರುವಾಗಿಯೂ, ಜಾನುವಾರುಗಳಿಗೆ ಮೇವಿಗೆ ತುಂಬಾ ಗೊಬ್ಬರಿಗಿರುತ್ತೆ.—ಇಲ್ಲಿನ ಮುಜರಾಯಿ ಇನ್ಸ್ಪೆಕ್ಟರ್ ಇವರ ಕಡೆಗಳಲ್ಲಿ ಇರುವ ಧರ್ಮದೇವಾಲಯಗಳನ್ನು ಗಮನಿಸುವವರು ಇಲ್ಲ ನೋಡುವವರಿಲ್ಲ. ನಮ್ಮ ಅಮಲ್ದಾರ್ ಮ ಶ್ರೀನಿವಾಸರಾಯರು ಕಷ್ಟಪಟ್ಟು ಸರಿಪಡಿಸಿ ಮಾಡುತ್ತಾರೆಂತ ನಂಬಿದ್ದೇವೆ—ಇಲ್ಲಿನ ಮುನಿಸಿಪಲ್ ಒಬ್ಬರು ತಾಲ್ಲೂಕು ಆಫೀಸಿಗಳು ಒಂದು ರೀಡಿಂಗ್‌ರೂಮನ್ನು ಸ್ಥಾಪಿಸಿ ಕಳೆದ ವಾರದ ಆರಂಭದ ಸಹ ನಡಿಸುತ್ತಿದ್ದಾರೆ—ಇಲ್ಲಿನ ಮುನಿಸಿಪಲ್ ಉದ್ಯಾನಗಳಿಗೆ ದಿನವಹಿ ನೀರು ಕಾಲು ೬ ಘಂಟೆಗೆ ಸಹಾಯವಿದೆ.

ಪ್ರಯಾಣಿಕರು ಬೇಗನೆ ಸಂತೆಗೆ ಹೋಗಬಹುದಾದ ಗಾಡಿಗಳಿಗೆ ರಾತ್ರಿವೇಳೆ ತುಂಬ ತೊಂದರೆಯಾಗಿರುತ್ತೆ. ನಾಯಿ, ಕತ್ತೆ, ಇವುಗಳನ್ನು ಎಡವಿ ಕತ್ತಲೆಯಲ್ಲಿ ಜನರು ಮುಂದಕ್ಕೆ ಮುಗ್ಗರಿಸಿ ಬೀಳುತ್ತಿರುತ್ತಾರೆ. ನಮ್ಮ ಅಮಲ್ದಾರರೂ, ಮುನಿಸಿಪಲ್ ಮೆಂಬರುಗಳೂ ಇದಕ್ಕೆ ಗಮನಕೊಟ್ಟು ಜನಗಳಿಗೂ, ಜಾನುವಾರುಗಳಿಗೂ ಅವೇಳೆ ಹೊತ್ತಿನಲ್ಲಿ ಸಂತೆ ವಗೈರೆಯಿಂದ ಬರುವ ಗಾಡಿಗಳಿಗೂ ಕ್ಷೇಮವನ್ನುಂಟುಮಾಡಿಕೊಡುತ್ತಾರೆಂದು ನಂಬಿದ್ದೇವೆ.

ಜನಸೇಹಳ್ಳಿ.—ಈಗ ಸುಮಾರು ೬–೮ ದಿನಗಳ ಬಾಗಾಯಿತು ಸೋನೆಗಳು ಆಡುತ್ತಾ ಇವೆ. ಮಳೆ ಮಾತ್ರ ಬೀಳಲಿಲ್ಲ. ಕೆರೆಗಳಿಗೆ ನೀರಿಲ್ಲದೆ ಗದ್ದೆಗಳ ಸಾಗುವಳಿಗೆ ಅನಾನುಕೂಲವಾಗಿರುತ್ತೆ. ಹವಾ ವಿಷಯ ಜನರಿಗೆ ತಕ್ಕಮಟ್ಟಿಗೆ ಆರೋಗ್ಯಕರವಾಗಿರುತ್ತೆ. ಹೊಲಗಳೆಲ್ಲಾ ಉಳುವಾಗಿ ಬಿತ್ತನೆಗೆ ಕಾದಿಯಿದ್ದಾರೆ.—ಪಾಲಸಮುದ್ರದಿಂದ ಬೆಂಗಳೂರಿಗೆ ರೈಲು ಹಾಕಬೇಕೆಂದು ಸ್ಟ್ರೀಟ್ ಕಂಪನಿಯವರು ಈಗ ಸುಮಾರು ೬ ವರುಷದ ಕೆಳಗೆ ಆನೇಕಲ್ ಕಸಬೆಗೆ ಸಮೀಪವಾಗಿ ಲೈನ್ ಸರ್ವೇ ಮಾಡಿಕೊಂಡು ಹೋಗಿದ್ದರು. ಈಗ ಸದರಿ ಕಾರ್ಯಕ್ಕೆ ಪ್ರಾರಂಭಿಸಿ ಹೊಸೂರಿನ ವರಿವಿಗೂ ಬಂದು, ಅಲ್ಲಿಂದ ಬೆಂಗಳೂರಿಗೆ ಹಾಕತಕ್ಕ ಲೈನನ್ನು ಈ ಟೌನ್ ಬಳಿ ಹಾಕದೆ ಬಹಳ ದೂರವಾಗಿ ಪ್ರತ್ಯೇಕ ಮಾರ್ಗವೇರ್ಪಡಿಸಿದ್ದು ಈ ಊರಿನ ಪ್ರಜೆಗಳಿಗೆ ತಿಳಿದು ಚಿಂತೆಪಡುತ್ತಾ, ಈ ಸಂಗತಿಯನ್ನು ಕುರಿತು ಸದರಿ ರೈಲ್ವೇ ಕಂಪನಿ ಏಜಂಟರವರಿಗೆ ಅರ್ಜಿಯನ್ನು ಬರೆದುಕೊಂಡಿರುತ್ತಾರೆ. ನಮ್ಮ ಮೈಸೂರು ಸರ್ಕಾರದವರಾದರೂ ಈ ಟೌನಿಗೆ ಸಮೀಪವಾಗಿ ರೈಲು ಹಾಕದೆ ಇರುವ ವಿಷಯವನ್ನು ಮನಸ್ಸಿಗೆ ತಂದುಕೊಂಡು ತಾಲ್ಲೂಕ್ ಜಾಗವಾಗಿಯೂ ಭಾರೀ ಟೌನಾಗಿಯೂ ಇರುವ ಈ ಊರಿನ ಸಮೀಪದಲ್ಲಿ ರೈಲು ಹಾಕುವಂತೆ ಸದರಿ ಕಂಪನಿಯವರಿಗೆ ಸೂಚಿಸಿ, ಈ ಪ್ರಾಂತ್ಯದ ಪ್ರಜೆಗಳಿಗೆ ಅನುಕೂಲವನ್ನುಮಾಡಿಕೊಡುವರೆಂದು ಪ್ರಾರ್ಥಿಸುತ್ತಾರೆ.

ತೀರ್ಥಹಳ್ಳಿ.—ಇಲ್ಲಿ ಮಳೆಯು ಇದೇ ತಿಂಗಳು ೪ ನೇ ತಾರೀಖಿನಿಂದ ಶುರುವಾಗಿ ಪ್ರತಿನಿತ್ಯದಲ್ಲೂ ಎರಡು, ಮೂರು ಅಂಗುಲ ಮಳೆಯಾಗುತ್ತಾ ಇದೆ. ತುಂಗಾ ನದಿಯು ಸಾಧಾರಣವಾಗಿ ಹೊಸನೀರಿನಿಂದ ಕೂಡಿ ಹರಿಯುತ್ತಿರುವದು. ಈ ತಿಂಗಳ ಅಂತ್ಯದೊಳಗೆ ತುಂಬಿ ಹರಿಯುವದಾಗಿದೆ.—ಶಿವಮೊಗ್ಗದಿಂದ ಆಗುಂಬೆಘಾಟಿಯ ಟೋಲ್ ಗೇಟಿನ ಹರಾಜಿಗಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿಸಿದ್ದರು. ಟೋಲ್‌ಗೇಟು ಹರಾಜಿನಲ್ಲಿ ೩,೮೦೦ ರೂಪಾಯಿಗೆ ಆಗುಂಬೆ ಎಂಬುವರೇ ತೆಗೆದುಕೊಂಡರೆಂದು ವರ್ತಮಾನವಿದೆ. ಅದೇ ೧೦ ನೇ ತಾರೀಖಿನಲ್ಲಿ ಇಲ್ಲಿನ ಗವರ್ನ್‌ಮೆಂಟ್ ಕನ್ನಡ ಬಾಲಿಕೆಯರ ಸ್ಕೂಲಿಗೆ ಎ ವಿ. ಸ್ಕೂಲ್ ಕಟ್ಟಡದಲ್ಲಿ ಇನಾಮುಗಳನ್ನು ಕೊಟ್ಟರು. ಆ ಕಾಲದಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರು ಅಗ್ರಾಸನವನ್ನು ವಹಿಸಿದ್ದರು. ಮೊದಲು ನಮ್ಮ ತಾಲ್ಲೂಕ್ ಅಮಲ್ದಾರರು ಆ ಸ್ಕೂಲಿನ ವಿಷಯದಲ್ಲಿ ಮಾತನಾಡಿದನಂತರ ಸ್ಕೂಲಿನ ರಿಪೋರ್ಟು ಓದಲಾಯಿತು. ಆ ಬಳಿಕ ಡೆಪ್ಯುಟಿ ಕಮಿಷನರವರು ಪಟ್ಟಿಯಲ್ಲಿ ಸೂಚಿಸಿದ ಪ್ರಕಾರ ಹುಡುಗಿಯರಿಗೆ ಬೇರೆ ಬೇರೆ ಬಹಳ ಸಾಮಾನುಗಳನ್ನೂ, ಗಾಜಿನ ಬೊಂಬೆಗಳನ್ನೂ, ಇವುಗಳ ಜೊತೆಯಲ್ಲಿ ಪ್ರತಿಯೊಬ್ಬ ಹುಡುಗಿಗೂ ಒಂದೊಂದು ಪುಸ್ತಕವನ್ನೂ ಕೊಟ್ಟರು. ಕೆಲವು ಹುಡುಗಿಯರು ಚೆನ್ನಾಗಿ ಹಾಡಿದರು. ಇನಾಮುಗಳನ್ನು ಕೊಟ್ಟ ಮೇಲೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಸ್ತ್ರೀ ವಿದ್ಯಾಭ್ಯಾಸದ ವಿಷಯವಾಗಿ ಕೆಲವು ಮಾತುಗಳನ್ನಾಡಿದರು. ಕಡೆಯಾಯ ಎಲ್ಲರಿಗೂ ಗಂಧ ಪುಷ್ಪ ತಾಂಬೂಲಾದಿಗಳೂ, ಮಕ್ಕಳಿಗೆ ತಿಂಡಿಯೂ ಹಂಚಿಕೆ ಆದನಂತರ ಸಭೆಯು ವಿಸರ್ಜಿಸಲ್ಪಾಯಿತು. ಇದಕ್ಕಾಗಿ ಮುನಿಸಿಪಾಲಿಟಿ ಹಣವನ್ನು ವಸೂಲ್ ಮಾಡಿ ವಿದ್ಯಾ ಪ್ರೋತ್ಸಾಹದ ಸಂತೋಷಕೂಟವನ್ನು ನಡಿಸಲು ಪ್ರಯತ್ನಿಸಿದ ನಮ್ಮ ಅಮಲ್ದಾರರ ಮತ್ತು ಆ ಸ್ಕೂಲ್ ಹೆಡ್ ಮಾಸ್ಟರವರ ವಿಷಯದಲ್ಲಿ ಕೂಡಿದ್ದ ಸಭಿಕರು ತುಂಬಾ ಸಂತೋಷಪಟ್ಟರು.

ಮಾಗಡಿ.—ಇಲ್ಲಿ ಮೇ ತಿಂಗಳ ಅಂತ್ಯದಲ್ಲಿ ಟೌನಿನಲ್ಲಿಯೂ ಸುತ್ತುಮುತ್ತು ಇರುವ ಗ್ರಾಮಗಳಲ್ಲಿಯೂ ಒಳ್ಳೇ ಮಳೆ ಬಂತು. ಕೆರೆಗಳೆಲ್ಲಾ ಅರ್ಧ ಮಟ್ಟಕ್ಕೆ ತುಂಬಿರುವುದನ್ನು ಜನರು ಕಂಡು ಮಹದಾನಂದಭರಿತರಾಗಿದ್ದಾರೆ. ಒಂದು ರಾತ್ರಿ ಒಂದು ಗಂಟೆ ಹೊತ್ತು ಮಳೆ ಸುರಿಯಿತು. ಸರ್ಕಾರಿ ಲೆಕ್ಕದ ಪ್ರಕಾರ ೪ ಅಂಗುಲ ಆಗಿರುವದಾಗಿ ಕೇಳಿದೆವು. ಆ ದಿವಸವೆ ಸಂಪೂರ್ಣವಾಗಿ ಒಣಗಿ ಹೋಗಿರುವ ದೊಡ್ಡ ಕೆರೆಗೂ ಚಿಕ್ಕ ಕೆರೆಗೂ ಮೂರು ತಿಂಗಳ ನೀರು ಬಂದಿರುತ್ತದೆ. ಜನಗಳಿಗೂ ಜಾನುವಾರುಗಳಿಗೂ ಕುಡಿಯುವ ನೀರಿನ ಕಷ್ಟವು ಬಹಳವಾಗಿತ್ತು. ಈ ಕಷ್ಟವು ತಪ್ಪಿತಲ್ಲ ಎಂದು ಜನರು ಸಂತೋಷಪಡುತ್ತಾರೆ. ರಾಗಿ ಮಳೆ ಬರಲಿಲ್ಲ. ಇಷ್ಟು ಮಳೆ ಬಂದರೂ ಧಾರಣೆ ತಗ್ಗಲಿಲ್ಲ. ಪೇಟೆ ರೀತಿಯಲ್ಲಿ ರಾಗಿ ರೂಪಾಯಿಗೆ ೧೧ ಸೇರು, ಅಕ್ಕಿ ೬ ಸೇರು, ಬರಗೂರು ಅಕ್ಕಿ ೭–೭ ಸೇರು ಮಾರುತ್ತಾರೆ. ಬಡಬಗ್ಗರು ಜೀವಿಸುವದು ಬಹಳ ಕಷ್ಟ.—ಈ ಊರಿನಲ್ಲಿ ನೀರು ಬೆಣ್ಣೆಗೆ ನೀರು ಬೆರಸಿ ಮಾರುತ್ತಾರೆ. ಸರ್ಕಾರದವರು ಈ ವಿಷಯಕ್ಕೆ ಗಮನ ಕೊಟ್ಟರೆ ಉತ್ತಮ.—ನಮ್ಮ ಅಮಲ್ದಾರ್ ಮ ಗುರುರಾಯರು ರಜಾ ತೆಗೆದುಕೊಂಡು ಹೋಗಿದಾರೆ. ಅವರ ಕೆಲಸವನ್ನು ಶಿರಸ್ತೇದಾರ್ ಮ ವಿ ಕೆ ಚನ್ನಸ್ವಾಮಿ ನಾಯಡು ಯವರು ಇನ್‌ಚಾರ್ಜ್ ಆಫೀಸರಾಗಿ ನೇಮಿಸಲ್ಪಟ್ಟಿದ್ದಾರೆ.—ಈ ಸಂದರ್ಭದಲ್ಲಿ ಇದೇ ತಾಲ್ಲೂಕು ವಿರದಲ್ಲಿ ಹೊಸಬಳ ಬಸವಿ ಎಂಬ ಗ್ರಾಮದಲ್ಲಿ ಇದ್ದರು. ಹೆಂಗಸರಿಗೆ ರಾಮಚಂದ್ರ ಹಣ ಒಂದು ಗಡಿಗೆ ಸಿಕ್ಕಿರುತ್ತದೆಂದು ವರ್ತಮಾನ ಕೇಳಿ, ಇನ್‌ಚಾರ್ಜ್ ಆಫೀಸರಾಗಿರುವ ಶಿರಸ್ತೇದಾರರು, ಪೊಲೀಸು ಇನ್ಸ್‌ಪೆಕ್ಟರವರೂ, ಪಟೇಲರೂ ಪತ್ತೆಮಾಡಿ ಕೆಲವು ಹಣಗಳನ್ನು ತಂದು ಡಿಸ್ಟ್ರಿಕ್ಟ್ ಆಫೀಸಿಗೆ ಕಳುಹಿಸುವದಾಗಿ ವರ್ತಮಾನ ಕೇಳುತ್ತೇವೆ. ಇನ್ನೂ ಪತ್ತೆಮಾಡುವದಕ್ಕಾಗಿ ಆ ಅಧಿಕಾರಿಗಳು ೧೧ ನೇ ತಾರೀಖಿಗೆ ಬಸವಿ ಗ್ರಾಮಕ್ಕೆ ಹೋಗಿರುತ್ತಾರೆ.

ಮಳವಳ್ಳಿ.—ಕಳೆದ ವಾರ ಒಂದು ಹದ ಮಳೆ ಆಗಿ ಕೆರೆಕಟ್ಟೆಗಳೆಲ್ಲಾ ಮುಕ್ಕಾಲುಪಾಲು ತುಂಬಿರುತ್ತವೆ.—ಮೊನ್ನೆಯ ದಿವಸ ಇಲ್ಲಿಯ ಪುರಾತನವಾದ ಶ್ರೀ ಸಾಲೆ ಹಳ್ಳಿ ಸ್ವಾಮಿಯ ರಥೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು. ಧರ್ಮ ಮತ್ತು ಇತರ ಏರ್ಪಾಡುಗಳು ಚೆನ್ನಾಗಿದ್ದವು.—ನಮ್ಮ ಎ ವಿ ಸ್ಕೂಲ್ ಹೆಡ್ಮಾಸ್ಟರ್ ಮ ಎಂ ಸಿ. ವರದರಾಜಯ್ಯಂಗಾರ್ಯರನ್ನು ಬೆಂಗಳೂರು ಎ ವಿ ಸ್ಕೂಲ್ ಅಸಿಸ್ಟೆಂಟುಮಾಸ್ಟರನ್ನಾಗಿ ವರ್ಗಮಾಡಿರುತ್ತಾರೆ. ಇವರ ಕಾಲದಲ್ಲಿ ಸ್ಕೂಲುಗಳಲ್ಲಿಯೂ ಇಂಗ್ಲೀಷಿನಲ್ಲಿ ಒಂದೆರಡು ವಿದ್ಯಾರ್ಥಿಗಳು ತೇರ್ಗಡೆಯ ಗುಣದಿಂದ ದುರ್ಲಭವಾಗಿ ಸ್ಥಳಿಕರಾದ ಅನೇಕ ಹುಡುಗರು ಪರಸ್ಥಳದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇವರ ವರ್ಗಕ್ಕೆ ದೊಡ್ಡ

ನವರು ಬಂದು ತಾ॥ ೧ರಲ್ಲಿ ಸ್ಕೂಲಿನ ಭೋಜನವನ್ನು ವಹಿಸಿ, ಮೂರು ದಿವಸದಲ್ಲಿಯೇ ವಿದ್ಯಾರ್ಥಿಗಳಿಗೆ ಸ್ಕೂಲು ಫೀ ಮಾಫಿಮಾಡಿ ಆಟಪಾಠಗಳಿಗೆ ತಕ್ಕ ತರದೊದು ಮಾಡಿರುತ್ತಾರೆಂದು ಕೇಳಲು ತುಂಬಾ ಸಂತೋಷವೇ ಸರಿ — ಈಚೆಗೆ ಇಲ್ಲಿಯ ಮುನಿಸಿಪಾಲಿಟಿಯಲ್ಲಿ ಬಹಳ ಕಾಮಗಾರಿಗಳು ನಡೆಯುತ್ತಾ ಇವೆ ಪೋಸ್ಟ್ ಆಫೀಸಿನ ಮುಂಭಾಗದಲ್ಲಿ ಸುಮಾರು ೩೦೦ ರೂಪಾಯಿ ಲಾಗವಡಿಯಿಂದ ಸೊಗಸಾದ ಚರಂಡಿಯನ್ನು ಕಟ್ಟಿಸಿದ್ದಾರೆ ಎಲ್ಲಕ್ಕಿಂತಲೂ ಹೆಚ್ಚಾಗಿ ಊರೆಲ್ಲಾ ಪ್ರಬಲಿಸಿಕೊಂಡು ಸಮ್ಮೆ ಟಿವಸನ್ನೇ ಹಾಳುಮಾಡುತ್ತಿದ್ದ ಪಾಪಾಸು ಕಳ್ಳಿಯನ್ನು ಕತರಾಯಿಸಿ ಸರ್ಕಾರದವರು ೪೦೦ ರೂಪಾಯಿ ಖರ್ಚುಮಾಡುವುದು ಪುರವಾಸಿಗಳಿಗೆಲ್ಲಾ ಮಹೋಪಕಾರವಾಗಿರುತ್ತದೆ ಗ್ರಾತ್ರಿಯ ಕಾಲದಲ್ಲಿ ದೀಪದ ತೊಂದರೆಯು ದಿನೇ ದಿನೇ ಹೆಚ್ಚುತ್ತಾ ಬಂದಿರುವುದರಿಂದ ಸರ್ಕಾರದವರು ಈ ವಿಷಯದಲ್ಲಿ ಗಮನಕೊಡಬೇಕಾಗಿದೆ ಅಕ್ಕಾರಿಯ ಇಲಾಖೆಗೆ ಮುಕ್ತಸ್ತೃಯ ಎರ್ಪಾಡಾದದ್ದು ಫಾಯಿದೆಕರವಾಗಿದೆ ಈ ಸ್ಥಳದಲ್ಲಿ ಒಂದು ಟೋಲ್ ಗೇಟು ಇಟ್ಟರೆ ತುಂಬಾ ಅನುಕೂಲವುಂಟು ಈ ವಿಷಯವನ್ನು ಮುನಿಸಿಪಲ್ ಮೆಂಬರುಗಳು ಆಲೋಚಿಸುವರೆಂದು ನಂಬಿರುವೆನು

ದೊಡ್ಡಬಳ್ಳಾಪುರ. — ಹೋದ ವಾರ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರು ಇಲ್ಲಿಗೆ ದಯಮಾಡಿಸಿ ಒಂದೆರಡುದಿನ ಇದ್ದು ಪುನಹ ಬೆಂಗಳೂರಿಗೆ ಹೋದರು ಪೊ॥ ಸೂಪರಿಂಟೆಂಡೆಂಟರವರು ಸಹ ಬಂದು ಇದ್ದರು ೧೨ ನೇ ತಾ. ಸಾಯಂಕಾಲ ಡೆಪುಟಿ ಕಮಿಷನರ್ ಸಾಹೇಬರು ಇಲ್ಲಿಗೆ ಬಂದು ಇವಾರೆ ಇವರು ಒಂದೆರಡುದಿನವಿದ್ದು ವಾಪಸ್ ಹೋಗಬಹುದೆಂದು ಕಾಣುತ್ತೆ — ಈಗ ಬಿರುಗಾಳಿಯು ಜೋರಾಗಿದೆ ಬರುವ ಮಳೆಯನ್ನು ಸಹ ಹೊಡೆದುಕೊಂಡು ಹೋಗುತ್ತೆ ರೈತರು ಉಳ್ಳಿಯನ್ನು ತಯಾರ್ಮಾಡಿಕೊಂಡು ಬಿತ್ತುವದಕ್ಕೆ ಮಳೆಗಾಗಿ ಕಾದುಕೊಂಡಿದ್ದಾರೆ — ಹೋದ ವಾರ ಒಂದು ಹುಚ್ಚುನಾಯಿ ಸುಮಾರು ೮ ಜನರನ್ನು ಕಡಿಯಿತಂತೆ ಇವರಲ್ಲಿ ಇಬ್ಬರು ಮುದುಕಿಯರೆಂದೂ, ಮಿಕ್ಕವರು ಹುಡುಗರೆಂದೂ ತಿಳಿಯಿತು ಆ ಪೈಕಿ ೬ ಜನರು ಪ್ರಾರಂಭದಲ್ಲಿ ಆಸ್ಪತ್ರೆಗೆ ಬಂದು ಇಲಾಜುಮಾಡಿಸಿಕೊಂಡರು ಈಗ ಇವರು ಬೇರೆ ಹಳ್ಳಿಯವರ ಹತ್ರ ಮದ್ದು ಹಾಕಿಸಿಕೊಳ್ಳುತ್ತಾರಂತೆ ಇವರು ಹೀಗೆ ಮಾಡದೆ ಸರ್ಕಾರದವರು ಅನುಕೂಲಮಾಡಿಕೊಟ್ಟಿರುವ ಕುನ್ನೂರು ಆಸ್ಪತ್ರೆಗೆ ಹೋದರೆ ಉತ್ತಮವಾಗಿರುವದು ಆ ನಾಯಿಯನ್ನು ಹೊಡೆದುಹಾಕಿದರು

ಮೂಡಿಗೆರೆ — ಈಗ್ಗೆ ಸುಮಾರು ೧೦—೧೨ ದಿನಗಳಿಂದಲೂ ಸೋನೆ ಮಳೆಗೆ ಪ್ರಾರಂಭವಾಗಿ ಹಗಲೂ ರಾತ್ರಿಯಲ್ಲು ಏಕರೀತಿಯಿಂದ ಸುರಿಯುತ್ತಾ ಇದೆ ಸಂಪೂರ್ಣವಾಗಿ ಇಂಗಿ ಹೋಗಿದ್ದ ಈ ಊರಿನ ಕೆಲವು ಭಾವಿಗಳಿಗೆ ಈ ಮಳೆಯ ದೆಸೆಯಿಂದ ಕೊಂಚಮಟ್ಟಿಗೆ ನೀರು ಬಂದು, ಇದಕ್ಕಾಗಿ ಜನಗಳು ಪಡುತ್ತಿದ್ದ ಅಪಾರವಾದ ತೊಂದರೆಯು ಸ್ವಲ್ಪ ಕಡಮೆಯಾಯಿತೆಂದು ಹೇಳಬೇಕು ಇದೇ ರೀತಿಯಾಗಿ ಮೈಲ್ ತರಹ ಮಳೆ ಅನುಕೂಲವಾಗಿ ಆಗುತ್ತಾ ಇರುವದರಿಂದ ಅಲ್ಲಿಂದ ಇಲ್ಲಿನ ಕಾಫಿ ತೋಟಗಳ ಕೆಲಸಗಳಿಗಾಗಿ ಬಂದಿದ್ದ ಜನರಸೇಕರು ತಮ್ಮ ತಮ್ಮ ಊರುಗಳಿಗೆ ಹೊರಡುತ್ತಾ ಇದ್ದಾರೆ ಧಿನಸಿ ಧಾರಣೆಯಂತು ಯಥಾಪ್ರಕಾರವಾಗಿಯೇ ಇದೆ ಸುಗಿ ಕಾಲ ಬರುವ ವರೆಗೂ ಈ ಧಾರಣೆ ಕಡಮೆಯಾಗಲಾರದೆಂದು ಹೇಳುತ್ತಾರೆ ಅಂತೂ ಅಪ್ಪ ಬರಗೆ ಬಡ ಜನಗಳಿಗೆ ತುಂಬಾ ಕಷ್ಟ — ಈ ಊರಿಂದ ಬೇಲೂರಿಗೆ ಹೋಗುವ ರಸ್ತೆಯನ್ನು ನೋಡಿದರೆ ತುಂಬಾ ಶೋಚನೀಯವಾಗಿದೆ ವರ್ಷಂ ಪ್ರತಿಯಲ್ಲು ತಪ್ಪದೆ ಈ ರಸ್ತೆಗೆ ಮಟ್ಟಿ ಕಾಮಗಾರಿ ನಡೆಯುತ್ತಾ ಇದ್ದಾಗ್ಯೂ ಕೂಡ ಇಂಥಾ ಮಳೆಗಾಲಗಳಲ್ಲಿ ರಸ್ತೆಯು ಹೂಡಿದ ಗದ್ದೆಯಂತಾಗಿ ಜನರು ಮತ್ತು ಬಂಡಿ ಮುಂತಾದವುಗಳು ತಿರುಗಲಿಕ್ಕೆ ಅನುವಿಲ್ಲ ಈ ತೊಂದರೆಯನ್ನು ನಿವಾರಿಸತಕ್ಕದು ಈ ರಸ್ತೆಯನ್ನು ಕಂಟ್ರಾಕ್ಟು ವಹಿಸುವವರು ಇನ್ನು ಮುಂದೆಯಾದರೂ ದೀರ್ಘಾಲೋಚನೆಯಿಂದ ಸರಿಯಾದ ಕಂಟ್ರಾಕ್ಟರಿಗೆ ವಹಿಸಿಕೊಟ್ಟು ಚನ್ನಾಗಿ ಮಾಡಿಸಿ ಅನುಕೂಲಪಡಿಸುವರೆಂದು ನಂಬಿದ್ದೇನೆ

ಚಿತ್ರದುರ್ಗ — ಈಚೀಚೆಗೆ ಚಿರತೆಗಳು ಊರ ಒಳಗೆ ಬರಲಿಕ್ಕೆ ಆರಂಭವಾಗಿದೆ ಈಗ ಕೆಲವು ದಿನಗಳಿಗೆ ಮುಂಚೆ ಒಂದು ರಾತ್ರಿಯಲ್ಲಿ ಹಿತ್ತಲಲ್ಲಿ ಕಟ್ಟಿದ್ದ ಮೇಕೆಯನ್ನು ಕೊಂದು ರಕ್ತಕುಡಿದು ಹೋಗಿತ್ತು ಸಮರ್ಥರಾದ ಶಿಕಾರಿದಾರರು ಈ ವಿಷಯಕ್ಕೆ ನಿಗಾ ಕೊಡಬೇಕಾಗಿದೆ — ಕಳೆದ ತಾ ೬೨ ೩೬ ರಲ್ಲಿ ಸೀನಿಯರ್ ಸರ್ಜನ್ ರ ದ ಮಿ ಸ್ಮಿತ್ ದೊರೆಗಳು ಇಲ್ಲಿಗೆ ಬಂದಿದ್ದು ಸಿವಿಲ್ ಆಸ್ಪತ್ರೆ ಹೆಂಗಸರ ಆಸ್ಪತ್ರೆಗಳನ್ನು ಅಜಮಾಯಿಷಿಮಾಡಿಕೊಂಡು ಹೋದರು ಎರಡನೆಯ ಪಂಡಿತ ವೆಂಕಟರಮಣಪ್ಪನವರ ಕೆಲಸ ಕಾರ್ಯಗಳನ್ನು ನೋಡಿ ಬಹಳ ಸಂತೋಷಪಟ್ಟರು ಅವರಿಗೆ ಈಚೆಗೆ ತಕ್ಕ ಬಡತಿ ಆಗುವ ಶಿಫಾರ್ಸು ಆಗಿದೆಯೆಂಬ ವರ್ತಮಾನವು ಸಂತೋಷಕರವಾಗಿದೆ ಊರಿನ ಅಕ್ಕಸಾಲಿಗರ ಬೀದಿಯಲ್ಲಿರುವ ಪಂಡಿತ ಕೃಷ್ಣಸಿಂಗಪ್ಪನವರು ಬಡವರುಗಳಿಗೆ ಉಚಿತವಾಗಿ ಔಷಧ ಮುಂತಾದದ್ದು ಕೊಟ್ಟು ಬಹಳ ಸಹಾಯವಾಗುತ್ತಿದ್ದಾರೆ ಇವರಿಗೂ ಸರಕಾರದವರು ಪ್ರೋತ್ಸಾಹಕೊಟ್ಟರೆ ಇನ್ನೂ ಅನೇಕ ಬಡವರಿಗೆ ಇವರಿಂದ ಉಪಯೋಗವಾಗಬಹುದು — ಇಲ್ಲಿ ಮಳೆ ಇನ್ನೂ ಚೆನ್ನಾಗಿ ಆಗಲಿಲ್ಲವಾಗಿ ಕುಡಿಯುವ ನೀರಿನ ತೊಂದರೆಯು ಇನ್ನೂ ಬಹಳ ಹೆಚ್ಚಾಗಿದೆ ನೀರನ್ನು ಎತ್ತಿ ನೆ ಸಿನಿಂದ ಬಿಡುವದು ತಪ್ಪಲಿಲ್ಲ ಅದೂ ಎಷ್ಟೋ ಸ್ವಲ್ಪಹೊತ್ತು ಮಾತ್ರ ಬಿಡುವರು ಇದೂ ಕ್ರಮವಾಗಿ ನಡೆಯುವದಿಲ್ಲವೆಂದು ವಿಚಾರಿಸಬೇಕಾಗಿದೆ — ರಿಲೀಫ್ ಕಾಮಗಾರಿಗಾಗಿ ಇಲ್ಲಿನ ಕಂದಕದಲ್ಲಿ ತೋಡಿಸಿದ ಕಾಮನ ಬಾವಿಯು ಊರಿನ ಜನಗಳಿಗೆ ಸದ್ಯ ಕಾಮಧೇನುವಾಗಿದೆ ಕೆರೆ ಕುಂಟೆಗಳಿಗೂ ಒಟ್ಟಿಗೂ ನೀರು ತರುವಂಥ ಮಳೆಯು ನಮಗೆ ಇನ್ನೂ ಒಂದಿಲ್ಲ ಕೆರೆಯಲ್ಲಿ ತೋಡಿಸಿರುವ ಭಾವಿಯ ನೀರು ನಿರ್ಮಲವಾಗಿ ಪಾನಕ್ಕೆ ಉತ್ಕೃಷ್ಟವಾಗಿದ್ದಾಗ್ಯೂ ಇನ್ನೂ ಯಂತ್ರದಿಂದ ಎತ್ತಿ ನಲ್ಲಿಯಲ್ಲಿ ಸಾಗಿಸಬೇಕಾದದ್ದರಿಂದ ನೀರು ಒಬ್ಬರಿಗೆ ಸಿಕ್ಕಿದರೆ ಇನ್ನೊಬ್ಬರಿಗೆ ಸಿಕ್ಕುವದಿಲ್ಲ ಆದರೂ ಮುನಿಸಿಪಾಲಿಟಿಯವರು ೩—೪ ತಿಂಗಳುಗಳಿಂದ ಏಕರೀತಿಯಾಗಿ ಬಹಳ ದ್ರವ್ಯವನ್ನು ಖರ್ಚುಮಾಡಿ ಟವನ್ನಿಗೆ ನೀರು ಸರಬರಾಯಿ ಮಾಡುತ್ತಿರುವದು ಸ್ತೋತ್ರಾರ್ಹವಾಗಿದೆ ಇಂಥಾ ಕಷ್ಟದಲ್ಲಿ ಕಾಮನ ಭಾವಿಯ ನೀರು ನಮಗೆಲ್ಲಾ ಉಪಯೋಗವಾಗಿದೆ. ಇದನ್ನು ೨೦೧ ಹಣವಿದ್ದು ಮುಚ್ಚಿಹೋಗದಂತೆ ಕಲ್ಲು ಕಟ್ಟಿ ಭದ್ರಪಡಿಸುತ್ತಿರುವದು ಪ್ರಜೋಪಕಾರವಾಗಿದೆ — ಮಾರೀಕಣಿವೆ ಕೆಳಗ ಹುಲ್ಲಿನಲ್ಲಿಯೋ ಬೊಂದಿನಲ್ಲಿಯೋ ಒಂದು ವಿಧವಾದ ಹುಳುಗಳು ಬಿದ್ದು ದನಗಳು ಅದನ್ನು ತಿನ್ನುವದರಿಂದ ರೋಗಗ್ರಸ್ತವಾಗಿ ಸಾಯುತ್ತಲಿವೆಯೆಂದು ಇಲ್ಲಿನ ಪಶುವೈದ್ಯದ ಇನ್ಸ್‌ಪೆಕ್ಟರು ಅಜಮಾಯಿಷಿ ಬಗ್ಗೆ ಅಲ್ಲಿಗೆ ಹೋಗಿದ್ದರು ಈ ರೋಗ ನಿವಾರಣಾರ್ಥವಾಗಿ ಏನಾದರೂ ಚಿಕಿತ್ಸೆ ಕಂಡು ಹಿಡಿದರೆ ಪಶುವೈದ್ಯರಿಗೆ ಬಹಳ ಕೀರ್ತಿಯನ್ನು ಉಂಟಾಗುವದು — ರಾಮನಾಥ ಪ್ರೆಸ್ ಎಂಬ ಒಂದು ಮುದ್ರಾಲಯವು ಏರ್ಪಟ್ಟು ನಡೆಯುತ್ತಾ ಇದೆ ಇನ್ನು ಮುಂದೆ ಇದು ಅಭಿವೃದ್ಧಿಯಾದೀತೆಂಬ ನಿರೀಕ್ಷೆ ಇದೆ ಸಂತೆಯಲ್ಲಿ ಬೇರೆ ಬೇರೆ ಕಡೆ ಮಳೆಗಳಾಗಿ ರಾಗಿ, ಅಕ್ಕಿ ಮುಂತಾದ ದವಸ ಧಾನ್ಯಗಳು ತಕ್ಕ ಮಟ್ಟಿಗೆ ಅಗ್ಗವಾಗಿವೆ ಅಕ್ಕಿ ರೂಪಾಯಿಗೆ ೭—೮ ಸೇರು, ಗೋಧಿ ೮ ಸೇರು, ರಾಗಿ ೧೨—೧೩ ಸೇರು, ಜೋಳ ೧೨—೧೩ ಸೇರು ಮಾರುತ್ತಿದೆ — ಕಳೆದ ಸೋಮವಾರ ೧೪ ನೇ ತಾರೀಖಿನಲ್ಲಿ ವೆಸ್ಲಿಯನ್ ಮಿಷನ್ ಪಾದ್ರಿಗಳಾದ ಘನ ಟ್ರೆವೆಲ್ಲಾ ಬೋಧಕರು ಇಲ್ಲಿಗೆ ಬಂದಿದ್ದು ದೇವಾರಾಧನೆ ನಡಿಸಿ ದಾವಣಗೆರೆಗೆ ದಯಮಾಡಿಸಿದರು

ಮೈಸೂರು ಗೆಜೆಟ್ ಸಂಗ್ರಹ

ಮೈಸೂರು ಪಟ್ಟಣದಲ್ಲೂ ಬೆಂಗಳೂರು ಸಿಟಿಯಲ್ಲೂ ಮುಂದಿನ ಜುಲೈ ತಾ ೧ ರಿಂದ ಲಾಗಾಯಿತು ಇನ್ನೊಂದು ವರುಷದ ತನಕ ಬಲಾತ್ಕಾರಪೂರ್ವಕವಾಗಿ ದೇವೀಶಿಡುಬನ್ನು ಹಾಕುವ ಕಾನೂನನ್ನು ಜಾರಿಯಲ್ಲಿ ಇಡಲಾಗುವುದು

ಕೋಲಾರದ ಮುನ್ಸಿಫ್ ಮೆ॥ ಜ ಶ್ರೀನಿವಾಸ ಐಯರವರಿಗೆ ಜೂನ್ ತಾ ೭ ರಿಂದ ಹನ್ನೆರಡು ದಿನಗಳ ಪೂರಾ ಸಂಬಳದ ಪ್ರಿವಿಲೆಜ್ ರಜಾ ಕೊಟ್ಟಿದೆ

ಚೀಫ್ ಕೋರ್ಟ ಡೆಪ್ಟಿ ಕ್ಲಾರ್ಕ ಡಿ ಅಳಿಂಗ್ರಾಚಾರ್ಯರವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕೋಲಾರದಲ್ಲಿ ಸೆಕೆಂಡ್ ಕ್ಲಾಸಿನ ಮುನ್ಸಿಫರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಪೋಲೀಸ್ ಪ್ರೊ॥ ಅ॥ ಸೂಪರಿಂಟೆಂಡೆಂಟ್ ಮಿ ಟಿಪ್ಪು ಸುಲ್ತಾನ್ ಅಲ್ಲಿಖಾನ್ ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಇಪ್ಪತ್ತೆಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರಿನಲ್ಲೂ ನಂಜನಗೂಡಿನಲ್ಲೂ ಇರುವ ಬೊಮ್ಮಯ್ಯನವರ ಧರ್ಮಗಳನ್ನು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಕೆಳಗೆ ಹೇಳಿರುವವರನ್ನು ಧರ್ಮದರ್ಶಿಗಳಾಗಿ ನೇಮಕಮಾಡಿದೆ — ಮ ರಾ ಗಣ್ಯ ಸಾಹುಕಾರ್ ಬಸವಯ್ಯನವರು, ಅಂಬಳೆ ಅಣ್ಣಯ್ಯ ಪಂಡಿತರು, ದೊಡ್ಡಮಲ್ಲಣ್ಣನವರು, ಹೊಟ್ಟೆ ರಂಗಣ್ಣನವರು, ನೀಲಗಿರಿ ಮುದ್ದಣ್ಣನವರು, ಉರುಫ್ ಮೊಗಣ್ಣನವರು, ಸಾಹುಕಾರ್ ಬಜ್ಜಣ್ಣನವರು, ಗುಂಜಾನರಸಿಂಹಯ್ಯನವರು

ಚನ್ನಗಿರಿಯಲ್ಲಿರುವ ಕೋಟೆ ರಂಗನಾಥ ದೇವರ ದೇವಸ್ಥಾನಕ್ಕೆ ಮ್ಯುರಾ ಪಟೇಲ್ ಚನ್ನಬಸಪ್ಪನವರನ್ನೂ ಮ ರಾ॥ ವೆಂಕಟಭಟ್ಟರನ್ನೂ ಮುದ್ದೇನಹಳ್ಳಿ ಪ್ರಾಣದೇವರ ದೇವಸ್ಥಾನಕ್ಕೆ ಮ ರಾ ಪಟೇಲ್ ಸುಬ್ಬಾಭಟ್ಟರನ್ನೂ ಮ॥ ರಾ ಭೀಮಾಚಾರ್ಯರನ್ನೂ ಧರ್ಮದರ್ಶಿಗಳಾಗಿ ನೇಮಕಮಾಡಿದೆ

ಮೈಸೂರ್ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಸಬ್ ಡಿವಿಜನ್ ಆಫೀಸರಾದ ಮಿ॥ ಎಚ್ ಎಫ್ ವಾರ್ಕರ್ ಯವರನ್ನು ಕಳೆದ ತಿಂಗಳ ತಾ ೨೯ ರಿಂದ ೧೦೦ ರೂಪಾಯಿ ಸಂಬಳದ ಮೇಲೆ ೩ ನೇ ಕ್ಲಾಸ್ ಸಬ್ ಅ ಇಂಜಿನಿಯರಾಗಿ ಖಾಯಂಮಾಡಿದೆ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅವರು ಮೈಸೂರು ಸಿಟಿ ಇದಲ್ಲೇ ಕೆಲಸ ಮಾಡತಕ್ಕದ್ದು

ಇಂಜನಿಯರ್ ಇಲಾಖೆ ಸೆಕ್ರಿಟರಿ ಆಫೀಸಿನ ಚೀಫ್ ಅಸಿಸ್ಟೆಂಟ್ ಮಿ ಎಂ ಸಿಂಗಾರವೇಲು ಮೊದಲಿಯಾರ್ರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಈ ತಿಂಗಳ ತಾ ೨೮ ರ ವರಿಗೆ ಜಾಸ್ತಿಮಾಡಿದೆ

ಇಂಡಿಯಾ ಗವರ್ನ್‌ಮೆಂಟ್ ಗೆಜೆಟ್ಟಿನಲ್ಲಿ ಪ್ರಾಯಿಸಾಗಿರುವುದು — ರೈಲ ಇಲಾಖೆಯಲ್ಲಿ ೧ ನೇ ಕ್ಲಾಸ್ ಚೀಫ್ ಇನ್ಸ್‌ಪೆಕ್ಟರಾಗಿರುವ ಮಿ॥ ಡಬ್ಲಿಯು ಮೆಕ್ಕಂಜಿಯವರು ಮೇ ತಿಂಗಳ ತಾ ೨೦ ರಿಂದ ಸರ್ಕಾರಿ ಮೋಂ ಕೆಲಸ ಬಿಟ್ಟಿರುತ್ತಾರೆ

ಮೈಸೂರು ಸರ್ಕಾರಿ ವಿಶೇಷ ಪತ್ರಿಕೆಯು

ಇಸ್ತಿಹಾರ್ನಾಮು

ತಾ ೪ ನೇ ಜೂನ್, ೧೯೦೯ ನೇ ಇಸವಿ

ಚೀಫ್ ಜಡ್ಜ್ ಮಿ ಜಸ್ಟಿಸ್ ಇಸ್ಟೆಸ್ ರವರಿಗೆ ಜೂನ್ ತಾ ೧೯ ರಿಂದ ಇಪ್ಪತ್ತೇಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿರೋದರಿಂದ ಶ್ರೀ ಮನ್ಮಹಾರಾಜರವರು ಮುಂದೆ ಹೇಳುವ ಬದಲಿ ಏರ್ಪಾಡನ್ನು ಸ್ಯಾಂಕ್ಷನ್ ಮಾಡಿರುತ್ತಾರೆ —

೧ ಮ ಇಸ್ಕ್ವೈರ್ ಪಿ ಎಸ್ ಕೃಷ್ಣರಾವ್, ರಾವ್ ಬಹದೂರ್ ಯವರು ಚೀಫ್ ಜಡ್ಜಿಯಾಗಿ ಬದಲಿ ನೋಡತಕ್ಕದ್ದು

೨ ಗವರ್ನ್‌ಮೆಂಟಿನ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ ಮಿ ಕೆ ಎಸ್ ಚಂದ್ರಶೇಖರ ಐಯರವರು ಚೀಫ್ ಕೋರ್ಟಿನ ಜಡ್ಜಿಯಾಗಿ ಬದಲಿ ನೋಡತಕ್ಕದ್ದು

ಬಾತ್ಮೀದಾರರಿಗೆ ನೋಟೀಸು

ಬಾತ್ಮೀದಾರರು ಒದುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು — ಎಡಿಟರ್

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಕರೆಸ್ಪಾಂಡೆನ್ಸ್.

ಒಂದು ಪ್ರಶ್ನೆಯು

ಅಯ್ಯಾ,

ಹಾಸನದ ಸಂದಲ್ ಕೋಠಿಯಲ್ಲಿ ಗಂಧದ ಮರಗಳನ್ನು ಕೆತ್ತಿಸುವ ಕಂಟ್ರಾಕ್ಟುದಾರರು ಗಂಧದ ಪುಸ್ತಕಗಳನ್ನು ಮಾಡಿಸಿದರೆಂತಲೂ, ಅವರನ್ನು ಮಾಲು ಸಹಿತ ಇಲ್ಲಿನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ಚಲಾವಣೆ ಮಾಡುತ್ತಿದ್ದಾರೆಂತಲೂ ಕೇಳುತ್ತೇನೆ ಇದರ ವಿಷಯದಲ್ಲಿ ಜನರು ಅಭಿಪ್ರಾಯ ಪಡುವದೇನಂದರೆ — ಮೈಸೂರು ದೇಶದಲ್ಲಿ ಸೊರಬದಲ್ಲಿ ಹೊರತು ಬೇರೆ ಯಾವ ಕಡೆಯಲ್ಲಾದರೂ ಗಂಧದ ಮರದ ಕೆಲಸಗಳನ್ನು ಮಾಡಿಸಲು ಅಪ್ಪಣೆ ಇಲ್ಲವೆಂದು ಕೆಲವರು ತಿಳಿದುಕೊಂಡಿದ್ದಾರೆ ಮತ್ತೆ ಕೆಲವರು ಹೇಳುವದೇನಂದರೆ — ಯಾವ ಕಡೆಯಲ್ಲಾದರೂ ಮಾಡಬಹುದು ಎಂದು ಹೇಳುತ್ತಾರೆ. ಆದರೆ ಈ ಉಭಯತ್ರರ ಭಿನ್ನಾಭಿಪ್ರಾಯಗಳನ್ನು ಗೌರ್ನ್‌ಮೆಂಟಿನವರು ಹೋಗಲಾಡಿಸಿ, ಇದರ ನಿಜಾಂಶವನ್ನು ಎಲ್ಲರ ತಿಳುವಳಿಕೆಯ ಬಗ್ಗೆ ಪ್ರಚಾರಪಡಿಸಿದರೆ ಇದರಿಂದ ಪ್ರಜೆಗಳಿಗೆ ತುಂಬಾ ಪ್ರಯೋಜನವಾಗುವದೆಂದು ನಂಬುತ್ತೇವೆ

ಡಿ ಸತ್ಯಾನ್ವೇಷಿಯು

ದಾವಣಗೆರೆ ಮುನಿಸಿಪಲ್ ವಿಷಯ

ಅಯ್ಯಾ,

ಮುನಿಸಿಪಾಲಿಟಿಗೆ ತುಂಬಾ ಅನುಕೂಲಗಳೂ, ಹೆಚ್ಚಾದ ಫಾಯಿದೆಯೂ ಆಗ್ಗಿ ಯಲ್ಲದೆ ಆಗತಕ್ಕಂಥ ಚಾಮರಾಜಪೇಟೆ ಬಂಗ್ಲೆಗಳ ಸೈಡಿನಲ್ಲಿ ಇರತಕ್ಕ ಹೆಚ್ಚಾದ ಬಯಲು ಜಾಗವನ್ನು ಬಿಟ್ಟು ಸದ್ವಿನಿಯೋಗಕ್ಕೆ ಇಟ್ಟುಕೊಂಡು ಇರುವ ಸರ್ವೆ ೭೩—೭೪—೭೫ ನೇ ನಂಬರ್ ಜಮೀನುಗಳನ್ನು ತೆಗೆದುಕೊಂಡು ಆ ಪೈಕಿ ೭೪—೭೫ ನೇ ನಂಬರುಗಳಲ್ಲಿ ಭಾರಿಯಾಗಿ ಹಣ ಮುಚ್ಚಿಸಿ ತಯಾರಿಸಿದ ವಸ್ತುಗಳನ್ನೂ ಜನ ಬರುವುದಾರುಗಳಿಗೆ ಅವಕಾಶವಿಲ್ಲದಂತೆಯೂ ಕಳ್ಳಿ, ಮುಳ್ಳುಗಳ ಮೂಲಕ ಬಹು ದಿವಸದಿಂದ ಜೋಪಾನಮಾಡಿಕೊಂಡಿದ್ದ ಭದ್ರತೆಗಳನ್ನೆಲ್ಲಾ ಮುನಿಸಿಪಾಲಿಟಿಯವರು ಹೋಗಲಾಡಿಸಿ ಏಲಂದಾರನಿಗೆ ಸಾಗುವಳಿ ಮೂಲಕ ಹೊಂದತಕ್ಕ ಫಾಯಿದೆಗೂ ಸದ್ವಿನಿಯೋಗಕ್ಕೂ ಅಂದರೆ ಛತ್ರ, ಭಾವಿ, ದೇವಸ್ಥಾನಗಳನ್ನು ಊರ್ಜಿತಸ್ಥಿತಿಗೆ ತರುವುದಕ್ಕೆ ತೊಂದರೆ ಕೊಟ್ಟಿರುವ ವಿಷಯವನ್ನು ಕೇಳುವಲ್ಲಿ ತುಂಬಾ ವಿಷಾದಪಡಬೇಕಾಗಿದೆ ಇಂಥಾ ತೊಂದರೆಗಳನ್ನೆಲ್ಲಾ ಪರಿಹರಿಸಿ ಸಂತೋಷವನ್ನುಂಟುಮಾಡುವುದಕ್ಕೆ ಪ್ರಭುಗಳಾದವರು ಯಾವಾಗಲಾದರೂ ಕಂಕಣ ಬದ್ಧರಾಗಿ ಇರಬೇಕೆಂಬುವುದೇ ಪ್ರಜೆಗಳ ಆಶೆಯಾಗಿರುತ್ತೆ

ಬಳ್ಳಾರಿ ಚನ್ನಪ್ಪ

ಬೆಂಗಳೂರು ಬಸವನಗುಡಿಯ ಬಾಲಿಕಾ ಪಾಠಶಾಲೆಯು.

ಅಯ್ಯಾ,

ಬೆಂಗಳೂರು ಬಸವನಗುಡಿಯಲ್ಲಿರುವ ದೊಡ್ಡ ಮನುಷ್ಯರಿಗೆಲ್ಲಾ ವಂದಿಸಿ ಈ ಕೆಳಗೆ ರುಜು ಮಾಡಿರುವವನಾದ ನಾನು ಹೇಳುವಂಥ ವಿಜ್ಞಾಪನೆ ಏನೆಂದರೆ — ಇಲ್ಲಿ ವಾಸಿಸುವಂಥ ಹಲವು ದೊಡ್ಡ ಮನುಷ್ಯರುಗಳು ತಮ್ಮ ತಮ್ಮ ಹೆಣ್ಣು ಮಕ್ಕಳ ವಿದ್ಯಾಭಿವೃದ್ಧಿಗಾಗಿ ಪೇಟೆಯಲ್ಲಿ ಲೋಯರ್ ಸೆಕೆಂಡರಿ ಕ್ಲಾಸ್ ಇರುವಂಥ ಸ್ಕೂಲುಗಳಿಗೆ ಕಳುಹಿಸಿಕೊಡುವವರಾಗಿರುತ್ತಾರೆ ಇದಕ್ಕೆ ಬಸವನಗುಡಿಯಲ್ಲಿರುವ ವೆಸ್ಲಿಯನ್ ಮಿಷನ್ ಗರಲ್ಸ್ ಸ್ಕೂಲಿನಲ್ಲಿ ಇದುವರಿವಿಗೂ ಲೋಯರ್ ಸೆಕೆಂಡರಿ ಕ್ಲಾಸ್ ಇಲ್ಲದೆ ಇದ್ದದ್ದೇ ಕಾರಣ ಈಗ ಅಂಥ ಮಕ್ಕಳ ಪ್ರಯಾಸಗಳನ್ನು ತಪ್ಪಿಸಲು ಅನುಕೂಲವಾದ ಸಮಯವು ದೊರಕಿರುತ್ತದೆ ಬಸವನ ಗುಡಿಯಲ್ಲಿರುವ ವೆಸ್ಲಿಯನ್ ಮಿಷನ್ ಗರಲ್ಸ್ ಸ್ಕೂಲಿನಲ್ಲಿ ೧೯೦೯ ನೇ ಇಸವಿ ಜೂನ್ ೩ ಗಳ ಲಾಗಾಯಿತು ಕನ್ನಡ ಲೋಯರ್ ಸೆಕೆಂಡರಿ ಕ್ಲಾಸನ್ನು ಪ್ರಾರಂಭ ಮಾಡಲ್ಪಟ್ಟಿರುತ್ತದೆ ಆದದ್ದರಿಂದ ಮೇಲೆ ಹೇಳಿದ ಮಹನೀಯರುಗಳು ತಮ್ಮ ತಮ್ಮ ಪುತ್ರಿಯರನ್ನು ಸದರಿ ಸ್ಕೂಲಿಗೆ ಕಳುಹಿಸಿಕೊಡುವದಾದರೆ ಮಕ್ಕಳ ಪ್ರಯಾಸಗಳು ತಪ್ಪುವುದಲ್ಲದೆ ಅವರ ವಿದ್ಯಾಭಿವೃದ್ಧಿಗೆ ತಕ್ಕ ಸಲಕರಣೆಗಳನ್ನು ಒದಗಿಸುವುದು ಲೋಯರ್ ಸೆಕೆಂಡರಿ ವಿದ್ಯಾರ್ಥಿನಿಯರ ಸಂಖ್ಯೆಯ ವಿಷಯವನ್ನು ಕುರಿತು ಸದರಿ ಸ್ಕೂಲಿನ ಲೇಡಿ ಸೂಪರಿಂಟೆಂಡೆಂಟ್ ರವರ ಮಿ [illegible] ರವರಿಗೆ ಬರೆದುಕೊಂಡಲ್ಲಿ ವ್ಯಕ್ತವಾಗುವದು

ಬಸವನಗುಡಿ, ಬೆಂಗಳೂರು — ಎಂ ದೇವಸಹಾಯಂ, ಹೆಡ್ ಮಾಸ್ಟರ್

[illegible] ಸಂರಕ್ಷಣೆ

ಅಯ್ಯಾ

ಪ್ರಾಣಿಗಳಿಗೆ ಪಶುಗಳಿಂದಲೂ ಪಕ್ಷಿಗಳಿಂದಲೂ ಆಗತಕ್ಕ ಪ್ರಯೋಜನ ವಸ್ತು ಸಹಾಯವನ್ನು ಎಷ್ಟು ಹೇಳಿದಾಗ್ಯೂ ಸ್ವಲ್ಪವೆ ಅವು ಹುಟ್ಟಿದಾರಭ್ಯ ಸಾಯುವ ತನಕ ಮನುಷ್ಯನಿಗೆ ಉಪಕಾರಗಳಿಗಿಯೂ ಸಹಾಯಗಳಾಗಿಯೂ ಇರುತ್ತವೆ ಸತ್ತಮೇಲೂ ಕೂಡ ಅವುಗಳ ಕೊಂಬು ಮತ್ತು ಚರ್ಮಗಳು ಮನುಷ್ಯನಿಗೆ ಉಪಯೋಗವಾಗುತ್ತವೆ ಹೀಗಿದ್ದಾಗ್ಯೂ ಅನೇಕ ಜನರು ಅವುಗಳ ಮೇಲೆ ಸ್ವಲ್ಪವೂ ಕರುಣವಿಲ್ಲದೆ ಅವುಗಳಿಗೆ ಆಹಾರವನ್ನು ಕೊಡದೆ ಇರುವುದು, ಹೊಡೆವುದು, ಇದೇ ವಿಧವಾದ ಅನೇಕ ಹಿಂಸೆಗಳನ್ನು ಮಾಡುತ್ತಾರೆ ಇನ್ನೂ ಏನು ನಡೆಯುತ್ತಾರೆಂದರೆ — ರೈತಾಪಿಜನಗಳು ಅವುಗಳಿಂದ ತಮಗೆ ಆದ ಅಪಾರ ಉಪಕಾರಗಳನ್ನೆಲ್ಲಾ ಲಕ್ಷ್ಯಕ್ಕೆ ತರದೆ ಇನ್ನು ಮುಂದೆ ಅವುಗಳಿಂದ ತಮಗೆ ಯಾವ ವಿಧವಾದ ಉಪಕಾರವೂ ಆಗುವದಿಲ್ಲವೆಂದು ತಿಳಿದುಬಂದಾಗ, ಅಂದರೆ ಅವುಗಳು ಮುದಿಯಾದ ಮೇಲೆ ಕಟುಕರಿಗೂ ಮಾದಿಗರಿಗೂ ಅಲ್ಪ ಸ್ವಲ್ಪ ದುಡ್ಡಿನ ಆಸೆಗೆ ಮಾರಿಬಿಡುತ್ತಾರೆ ಮತ್ತೊಬ್ಬರು ಜೀವನಕ್ಕೆ [illegible] ತೊಂದರೆ ಕೊಟ್ಟಾಗ್ಯೂ ಅವನ್ನು ನಾವು ಮನೆಗೆ ತಂದುಕೊಳ್ಳದೆ [illegible] ಬದಲಾಗಿ ನಾವು ಅವರಿಗೆ ಉಪಕಾರ ಮಾಡಬೇಕೆಂಬುವುದು ಧರ್ಮ [illegible] ಈ ಪಶುಗಳಿಂದ ನಾನಾವಿಧವಲ್ಲೂ ಉಪಯೋಗ ಹೊಂದಿರುವಾಗ ಅವುಗಳನ್ನು ನಾವು [illegible] ಇನಾಗಿ ಕೊಲ್ಲುವುದು ಬಹಳ ತಪ್ಪು ಬೊಂಬಾಯಿ, ಮದರಾಸು ಮುಂ[illegible] ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮುದಿಯಾಗಿ ಸಾಯುವಾಗಿರುವ ಮತ್ತು [illegible] ಬಾಗಿರುವ ಪ್ರಾಣಿಗಳಿಂದ ಯಾರಾದರೂ ಕೆಲಸ ತೆಗೆದುಕೊಳ್ಳುತ್ತಿರುವುದ[illegible] ನೋಡಿದರೆ ಆ ಮನುಷ್ಯನಿಗೆ ಸರ್ಕಾರದವರು ಶಿಕ್ಷೆ ಮಾಡುತ್ತಾರೆ ಅಂಥಾ ಮುದಿ ಪ್ರಾಣಿಗಳಿಗೋಸ್ಕರ ಒಂದು ಕಟ್ಟಡವನ್ನು ಕಟ್ಟಿಸಿ ಅಲ್ಲಿ [illegible] ಗಳನ್ನು ಇಟ್ಟು ಸುಖವಾಗಿ ಕಾಪಾಡುತ್ತಾರೆ ಈ ವಿಧವಾದ ಏರ್ಪಾಡ[illegible] ನಮ್ಮ ಮೈಸೂರು ಸರ್ಕಾರದವರೂ ಈ ರಾಜ್ಯದಲ್ಲಿಯೂ ಮಾಡಿ ಇನ್ನು ಮುಂದೆ ದನಗಳು ಅಂಥಾ ಅಕ್ಷತ್ರಕ್ಕೆ ಪ್ರವೇಶವಾದಂತೆ ಕಡೆಯನ್ನು ಕಲ್ಪಿಸಬೇಕು ಮತ್ತು ಈ ನನ್ನ ವಿಜ್ಞಾಪನೆಗೆ ನಮ್ಮ ದೇಶದಲ್ಲಿರುವ ದೊಡ್ಡ ದೊಡ್ಡ ನೌಕರರೂ ಮತ್ತು ಸಾಹುಕಾರರೂ ಗಮನಕೊಟ್ಟು ಪರ್ಯಾಲೋಚಿಸಿ ಅವರವರ

ಶಕ್ತ್ಯನುಸಾರ ಹಣವನ್ನು ಸಹಾಯಮಾಡಿ, ಸರ್ಕಾರದವರಿಗೆ ಈ ಏರ್ಪಾಡನ್ನು ಮಾಡುವುದಕ್ಕೆ ಪ್ರೋತ್ಸಾಹಪಡಿಸುತ್ತಾರೆಂದು ಪ್ರಾರ್ಥಿಸುವ

ಎಂ ಎ ವೆಂಕಟರಾವ್

[ರಾಜಧಾನಿಯಲ್ಲಿ ಕೆಲವು ದಿನಗಳ ಹಿಂದೆ ಕೆಲವು ಅರಸುಗಳೂ, ಸಾಹುಕಾರರೂ ಅಧಿಕಾರಿಗಳೇ ಮೊದಲಾದವರೂ ಸೇರಿ ಒಂದು ಗೋರಕ್ಷಣೆಯ ಸಭೆಯನ್ನು ಸ್ಥಾಪಿಸುವುದಾಗಿ ಗೊತ್ತುಮಾಡಿದರು. ಯಾವ ಕಾರಣದಿಂದಲೋ ಈ ಏರ್ಪಾಡು ನಡೆಯದೆ ನಿಂತುಹೋಯಿತು ಪಶುರಕ್ಷಣಾಲಯಗಳನ್ನು ಮದರಾಸ್ ಬೊಂಬಾಯಿಗಳಲ್ಲಿ ಇಟ್ಟು ನಡಿಸತಕ್ಕವರು ಸರ್ಕಾರದವರಲ್ಲ ಆಯಾ ಕಡೆಗಳ ಧರ್ಮಿಷ್ಟರಿಂದ ಪ್ರಜೆಗಳು ಏಕೀಭವಿಸಿ ದ್ರವ್ಯವನ್ನು ಕೂಡಿಸಿ, ಆಲಯಗಳನ್ನು ಕಟ್ಟಿಸಿ ಶಕ್ತಿಕುಂದಿದ, ರೋಗಹಿಡಿದ ಮತ್ತು ಗಾಯಪಟ್ಟು ಕೆಲಸ ಮಾಡಲಾರದ ಪಶುಪ್ರಾಣಿಗಳನ್ನು ಇಟ್ಟು ಕಾಪಾಡುತ್ತಾರೆ

ಮೂಗು ಪ್ರಾಣಿಗಳನ್ನು ಹಿಂಸೆಪಡಿಸುವುದನ್ನು ಪ್ರಜೆಗಳಲ್ಲಿ ಯಾರು ಎಲ್ಲಿ ಕಂಡರೂ ಪೊಲೀಸಿಗೆ ತಿಳಿಸಿದರೆ ಅವರು ನೋಕದ್ದಮೆ ತಂದು ಹಿಂಸೆಪಡಿಸಿದವರಿಗೆ ಶಿಕ್ಷೆಯಾಗುವಂತೆ ಮಾಡುವರು. ಈ ಅರ್ಥಕ್ಕೆ ನಮ್ಮ ಸರ್ಕಾರದವರು ಒಂದು ಕಾನೂನ್ ಮಾಡಿ ಮುಖ್ಯ ಮುಖ್ಯವಾದ ದೊಡ್ಡ ಪಟ್ಟಣಗಳಲ್ಲಿ ಜಾರಿಗೆ ತಂದಿರುತ್ತಾರೆಂದು ಕೇಳಿದೆವು

—ಎಡಿ]

ಸತ್ಯ

ಸುಗುಣಗಳಲ್ಲಿ ಸತ್ಯವು ಶ್ರೇಷ್ಠಪ್ರಾಯವಾದುದು ಸತ್ಯವಂತರನ್ನು ಮರ್ಯಾದೆಯಿಂದ ಕಾಣುವಷ್ಟು ಮತ್ತೆ ಯಾರನ್ನೂ ಕಾಣುತ್ತಿಲ್ಲ ಮನಸ್ಸಿನಲ್ಲಿ ನೆನಸಿದಂತೆ ಮಾತಿನಲ್ಲಿಯೂ ಆಡುವುದು, ಮಾತಿನಲ್ಲಿ ಆಡಿದಂತೆ ಕೆಲಸದಲ್ಲಿಯೂ ನಡೆವುದು, ನೋಡಿದುದನ್ನು ನೋಡಿದಂತೆಯೇ ವರ್ಣಿಸುವುದು ಕೇಳಿದುದನ್ನು ಕೇಳಿದಂತೆಯೇ ಹೇಳುವುದು, ಮಾಡಿದುದನ್ನು ಮಾಡಿದಂತೆಯೇ ಸ್ವಲ್ಪವೂ ಹೆಚ್ಚು ಕಡಮೆಯಿಲ್ಲದೆ ನುಡಿವುದು ಇವು ಮೊದಲಾದುವು ಸತ್ಯದ ಬಗೆಬಗೆಯ ಸ್ವರೂಪಗಳು ಬಹಳ ನಷ್ಟಪಟ್ಟಿರುವವನನ್ನು ಕಂಡು "ಅಯ್ಯೋ ಪಾಪ" ಎಂದು ಬಾಯಿಯಲ್ಲಿ ಅನುತಾಪಪಡುತ್ತ, ಮನಸ್ಸಿನಲ್ಲಿ "ಹಾಗೆಯೇ ಆಗಬೇಕು" ಎಂದು ಯೋಚಿಸುವುದೂ, ಯಾವ ಸಹಾಯ ಬೇಕಾದರೂ ಮಾಡುವುದಾಗಿ ವಾಗ್ದಾನಮಾಡಿ ಸಹಾಯವನ್ನು ಮಾಡಬೇಕಾಗಿಬಂದಾಗ ನೆವಗಳನ್ನು ಹೇಳಿ ತಪ್ಪಿಸಿಕೊಳ್ಳುವುದೂ, ಯೋಗ್ಯತೆಯಿಲ್ಲದಿದ್ದರೂ ಮಾತು ಉಡುಪು ಮುಂತಾದವುಗಳಲ್ಲಿ ಆಡಂಬರ ಮಾಡಿಕೊಂಡು ಬಲುಗಟ್ಟಿಗನಂತೆ ನಟಿಸುವುದೂ ಸತ್ಯಕ್ಕೆ ವಿರುದ್ಧಗಳಾದ ಕಾರ್ಯಗಳು ಇವುಗಳೆಲ್ಲ ಸುಳ್ಳೆಂದು ಹೆಸರು ಎಡೆಸಿಂದಾಗಲಿ, ಅಜ್ಞಾನದಿಂದಾಗಲಿ ಸುಳ್ಳು ಹೇಳಿದರೆ ಅದನ್ನು ಕ್ಷಮಿಸಬಹುದು ಮೋಸಮಾಡುವ ಉದ್ದೇಶದಿಂದ ಆಡಿದ ಸುಳ್ಳು ಪರಮನಿಂದ್ಯವಾದುದು [illegible] ನ್ಯಾಯಸ್ಥಾನಗಳಲ್ಲಿ ಇಂತಹ ಸುಳ್ಳಿಗೆ ತಕ್ಕ ಶಿಕ್ಷೆಯನ್ನು [illegible]

"ಸತ್ಯಮೇವ ಜಯತೇ ನಾನೃತಂ" ಎಂಬ ಉಪನಿಷದ್ವಾಕ್ಯದಂತೆ ಸತ್ಯಕ್ಕೆ ಯಾವಾಗಲೂ ಗೆಲುವು ಉಂಟಾಗುವುದು, ಸುಳ್ಳಿಗೆ ಎಂದಿಗೂ ಜಯವಾಗಲಾರದು ಸುಳ್ಳಾಡುವುದರಿಂದ ಸ್ವಲ್ಪಕಾಲ ಇತರರನ್ನು ಮೋಸಮಾಡಿ ಸ್ವಪ್ರಯೋಜನವನ್ನು ಪಡೆಯಬಹುದು, ಆದರೆ ಕೊನೆಗೆ ಸುಳ್ಳು ಹೊರಪಟ್ಟು ಅದರಿಂದ ತಕ್ಕ ಅವಮಾನವು ಆಗಿಯೇ ಆಗುವುದು ಹಾಗಲ್ಲದೆ, ಹೊರಗಿನ ಆಡಂಬರದಿಂದ ಕೆಲ್ಲ ದಿವಸ ಯೋಗ್ಯತೆಯನ್ನು ತೋರಿ ಕೊಳ್ಳುವುದಕ್ಕೆ ಮೊದಲುಮಾಡಿದರೆ, ಎಷ್ಟು ದಿನದ ವರೆಗೆ ನಡೆದೀತು? ವ್ಯಕ್ತಿ ಎಳ್ಳಿನ ಮುಲಾಮು ಮಾಡಿದರೆ, ಎಳ್ಳಿನಂತೆ ಎಲ್ಲ ಯತನಕ[illegible] ಅಂತಹ ತಾವು ಮನ್ನ [illegible] ಒಂದರೆ, ಅವರ ನಿಜವಾದ ಯೋಗ್ಯತೆ ಸ್ವಲ್ಪದಿನದಲ್ಲಿಯೇ ಗೊತ್ತಾಗುವುದು

ಸುಳ್ಳಾಡುವುದು ಬಹಳ ಕಷ್ಟ. ಇದ್ದುದನ್ನು ಇದ್ದಹಾಗೆ ಹೇಳುತ್ತಿರುವ ಸುಲಭ ಒಂದು ಸುಳ್ಳಾಡಿದರೆ, ಅದನ್ನು ಸಾಧಿಸಲು ಹಲವು ಸುಳ್ಳುಗಳನ್ನು ಆಡಬೇಕಾಗುವುದು ಸತ್ಯವೆ ಮಾತು ಬಾಯಿಯಲ್ಲಿ ಧಾರಾಳವಾಗಿ ತಡೆಯಿಲ್ಲದೆ ಹೊರಟು ಹೋಗುವುದು ಮನಃಪೂರ್ವಕವಾಗಿ ಸುಳ್ಳಾಡುವವನಿಗೆ, ಎಲ್ಲಿ ಸಿಕ್ಕಬೇಕಾಗುವುದೋ ಎಂಬ ಭಯದಿಂದ ಎದೆ ಡವಡವನೆ ಬಡಿದುಕೊಳ್ಳುತ್ತಿರುವುದು ಸುಳ್ಳಿಗೆ ಸತ್ಯದ ಬಣ್ಣವನ್ನು ಕೊಟ್ಟು ಹೇಳಬೇಕಾದರೆ ಬಹಳ ಬಲವಾದ ನೆನಪೂ, ಚಾತುರ್ಯವೂ, ಎಚ್ಚರಿಕೆಯೂ ಬೇಕು ಸುಳ್ಳುಗಾರನಿಗೆ ಧೈರ್ಯವು ಕಡಮೆ, ಅವನು ಸತ್ಯವಾದಿಯಂತೆ ಧೈರ್ಯವಾಗಿ ಮಾತನಾಡುವುದಕ್ಕಾಗದೆ, ಯಾವಾಗಲೂ ಅವನಂತೆ ಚಿಂತೆಯಿಲ್ಲದೆ ಸಂತೋಷವಾಗಿರುವುದಕ್ಕಾಗುವುದಿಲ್ಲ ಆದುದರಿಂದ ಸುಳ್ಳಾಡುವುದು ಎಂತಹ ಮಹಾ ಕಷ್ಟ!

ಸತ್ಯವನ್ನು ಮೀರಿ ನಡೆದುಕೊಳ್ಳಲು ಲಾಭದಮೇಲೆ ಆಸೆ ಹೇಡಿತನ, ಅಹಂಕಾರ, ಪುಂಡತನ ಇವು ಮುಖ್ಯಕಾರಣಗಳು ಲಾಭವನ್ನು ಪಡೆಯಲು ವರ್ತಕರು ಹರಿದ ಸರಕುಗಳನ್ನು ಕೂಡ ತಮ್ಮ ಸಾಮಾನುಗಳಲ್ಲಿ ಇಲ್ಲದಿರುವ ಗುಣಗಳನ್ನಾರೋಪಿಸುವರು ಕೆಲವು ಲೆಕ್ಕಗಳನ್ನು ಮಾಡಿಕೊಂಡು ಬಾರೆಂದು ಒಬ್ಬ ಹುಡುಗನಿಗೆ ಆಜ್ಞಾಪಿಸಿದರೆ ಅವನು ತನ್ನ ಜತೆಯ ಹುಡುಗನು ಮಾಡಿರುವುದನ್ನು ನೋಡಿ ಮಾಡಿಕೊಂಡು ಬರುವುದು ಮೈಬೊಗ್ಗಿ ಕೆಲಸವಾದಷ್ಟು ಸೋಮಾರಿಯಾದುದರಿಂದ, ತನಗೆ ಸಾಮಾನ್ಯವಾದ ಯೋಗ್ಯತೆ ಇದ್ದರೂ, ತನ್ನ ಸಮಾನರಿಲ್ಲ, ತಾನೇ ಘನಪಂಡಿತ, ತನಗೆ ತಿಳಿಯದ ವಿಷಯಗಳೇ ಅಪೂರ್ವ ಎಂದು ಪ್ರತಿಷ್ಠೆ ಹೊಡೆದುಕೊಳ್ಳುವದು ದೊಡ್ಡ ಸುಳ್ಳು ಇದು ಅಹಂಕಾರವೆಂಬ ದುರ್ಗುಣದಿಂದ ಆದುದು ಇಂತಹ ಸುಳ್ಳಿಗೆ ವಿಶೇಷವಾಗಿ ಗುರಿಯಾಗತಕ್ಕವರು ಯಾರೆಂದರೆ, ಮೂರ್ಖರು ಅನುಭವವಿಲ್ಲದ ಚಿಕ್ಕವರು, ಮತ್ತು ಕೂಸಕೂರ್ಕ್ರದಂತೆ ಇಷ್ಟದೆಯಲ್ಲಿಯೇ ಇರುವವರು ತಪ್ಪುಮಾಡಿದ್ದರೂ ತಪ್ಪು ಮಾಡಲಿಲ್ಲವೆನ್ನುವುದೂ, ಹೇಳಿದ ಕೆಲಸವನ್ನು ಒಬ್ಬ ಸೇವಕನು ಮಾಡಿಲ್ಲದಿದ್ದರೂ ಮಾಡಿದೆನೆನ್ನುವುದೂ ಶಿಕ್ಷೆಯ ಭೀತಿಯಿಂದ ಇವಲ್ಲದೆ ಮನಸ್ಸಿಗೆ ತೋರಿದ ಅಭಿಪ್ರಾಯಗಳನ್ನು ವ್ಯಕ್ತವಾಗಿ ಎಲ್ಲರಿಗೂ ತಿಳಿಯಪಡಿಸುವುದಕ್ಕೆ ಹಿಂದೆಗೆವುದೂ ಹೇಡಿತನದಿಂದ ಆಗುವುದು

ಸುಳ್ಳನ್ನು ಎಂದಿಗೂ ಆಡಬಾರದು ದೇವರು ನಮಗೆ ನಾಲಿಗೆಯನ್ನು ಕೊಟ್ಟಿರುವುದು ದಿಟವನ್ನು ಆಡುವುದಕ್ಕೇ ಹೊರತು ಸುಳ್ಳಾಡುವುದಕ್ಕಲ್ಲ ಆದುದರಿಂದ ಸುಳ್ಳಾಡುವುದು ದೊಡ್ಡ ಪಾಪವು ಸುಳ್ಳಾಡುವುದರಿಂದ ನಾವು ಸ್ವಜಾತಿಗೇ ಅಪರಾಧ ಮಾಡಿದಂತಾಗುವುದು ಯಾವ ಜನರಲ್ಲಿ ಸುಳ್ಳೆಂಬೋ ಅವರಲ್ಲಿ ಪರಸ್ಪರ ಸ್ನೇಹದಿಂದ ಕೂಡಿದ ಒಡನಾಟವಿರಲಾರದು ವಿಶ್ವಾಸವು ತಪ್ಪಿ ಅವರಿಗೆ ಬಲು ಕ್ಷೀಣದೆಸೆ ಬರುವುದು ಸುಳ್ಳಾಡುವವನಿಗೇ ಅದರಿಂದ ಬಾಧೆಗಳುಂಟು ಮಾನಭಂಗವಾಗುವುದಲ್ಲದೆ, ಸುಳ್ಳಾಡಲು ಸ್ವಲ್ಪವಾದರೂ ಆವಶ್ಯಕತೆಯಿಲ್ಲದಿದ್ದಾಗಲೂ ಅವನು ಸುಳ್ಳನ್ನು ಬಿಟ್ಟು ದಿಟವನ್ನು ನುಡಿವುದಕ್ಕೆ ಪ್ರಯತ್ನಿಸಿದರೂ ಆಗಲಾರದಷ್ಟು ಅವನ ಮನಸ್ಸು ನೀಚವಾಗುವುದು ಸುಳ್ಳುಗಾರನು ಒಂದು ವೇಳೆ ದಿಟ ಹೇಳಿದರೂ ಅವನ ಮಾತನ್ನು ಯಾರೂ ನಂಬುವುದಿಲ್ಲ, ಕಡೆಗೆ ತಾನು ಯಾವಾಗ ಸುಳ್ಳಾಡುವನೋ ಅದು ಅವನಿಗೇ ತಿಳಿಯದೆ ಹೋಗುವಷ್ಟು ಅವನಲ್ಲಿ ಸುಳ್ಳಾಡುವ ವಾಡಿಕೆ ನೆಲೆಗೊಳ್ಳುವುದು

ಹಿಂದೆ ಹಿಂದೂದೇಶದಲ್ಲಿ ಸತ್ಯಸಂಧತೆ ಬಲು ಪ್ರಧಾನವಾಗಿದ್ದಿತು ದಶರಥರಾಯನು ಸುಳ್ಳುಗಾರನೆಂಬ ಅಪಖ್ಯಾತಿಯು ಬಂದೀತೆಂಬ ಭಯದಿಂದ ಆಡಿದ ಮಾತಿಗೆ ತಪ್ಪದೆ ತನ್ನ ಪ್ರೀತಿಪಾತ್ರನಾದ ಮಗನನ್ನು ಕಾಡಿಗೆ ಕಳುಹಿಸಲಿಲ್ಲವೇ? ಹಾಗೆಯೇ ಶಿಬಿಚಕ್ರವರ್ತಿ ತನ್ನ ದೇಹವನ್ನು ಕಪೋತಪಕ್ಷಿಗಾಗಿ ಕೊಯ್ದು ಕೊಡಲಿಲ್ಲವೇ? ಇಂತಹ ಸತ್ಯಸಂಧರು ಎಷ್ಟೋ ಮಂದಿ ಇದ್ದರೆಂದು ಗ್ರಂಥಗಳಿಂದ ಗೊತ್ತಾಗುತ್ತದೆ ಸತ್ಯವೊಂದಿದ್ದರೆ, ಧೈರ್ಯ, ಶಮ, ದಮ, ಪರೋಪಕಾರಬುದ್ಧಿ ಮುಂತಾದ ಮಿಕ್ಕೆಲ್ಲ ಸುಗುಣಗಳೂ ಜತೆಯಲ್ಲಿಯೇ ಬರುವುವು ಆದುದರಿಂದ ನಮ್ಮ ಪ್ರಾಚೀನರ ಚರಿತ್ರೆಯನ್ನು ಮೇಲ್ಪಂಕ್ತಿಯಾಗಿಟ್ಟುಕೊಂಡು ನಾವೆಲ್ಲರೂ "ಸತ್ಯಂವದ, ಧರ್ಮಂಚರ" ಎಂಬ ಪ್ರಸಿದ್ಧವಾದ ಉಪನಿಷದ್ವಚನವನ್ನು ಸ್ಮರಿಸಿಕೊಳ್ಳುತ್ತಾ, ಪ್ರತಿಯೊಬ್ಬರೂ ಯಾವಾಗಲೂ ಸತ್ಯವನ್ನು ಹೇಳಬೇಕು "ಸತ್ಯವಿದ್ದರೆ ಎತ್ತಲೂ ಭಯವಿಲ್ಲ"

ಇಂಡಿಯಾ ದೇಶದ ವೃತ್ತಾಂತಗಳು.

ಪಂಜಾಬ್ ಅಧಿಪತ್ಯದಲ್ಲಿ ಕಳೆದ ವಾರ ರೈಲ್ವೆ ಅನಾಹುತ ಸಂಭವಿಸಿ ಇದುವರೆಗೆ [illegible] ಮಂದಿ ಮೃತಪಟ್ಟರು ಇನ್ನು ಕೆಲವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ

* * *

ಕಲ್ಕತ್ತೆಯಲ್ಲಿ ಅಜೂಲಿ ಎಂಬೊಬ್ಬನು ಒಂದು ಸುಳ್ಳು ಕಂಪನಿಯ ಹೆಸರು ಹೇಳಿ ಜನರಿಗೆ ಮೋಸಮಾಡಿ ಅವರಿಂದ ಹಣವನ್ನು ವಸೂಲ್ಮಾಡಿಕೊಂಡನು ಇದು ಪ್ರಕಾಶಕ್ಕೆ ಬಂದು, ಈಗ ಅವನಿಗೆ ಎರಡು ವರುಷ ಕಠಿಣ ಸಜಾ ವಿಧಿಸಲ್ಪಟ್ಟಿದೆ

* * *

ಅಫ್ಘಾನಿಸ್ಥಾನದ ಅಮೀರರಿಗೆ ಉಬ್ಬಸರೋಗದ ವಿಕೋಪದಿಂದ ಅವರು ಇಂಗ್ಲಿಷ್ ಡಾಕ್ಟರಿಂದ ಔಷಧವನ್ನು ಪಡೆಯಬೇಕೆಂದು ಅಭಿಪ್ರಾಯಪಟ್ಟರು ಇಂಡಿಯಾ ಗವರ್ನ್‌ಮೆಂಟಿನವರು ಮೇಜರ್ [illegible] ಎಂಬ ವೈದ್ಯರನ್ನು ಕಾಬೂಲಿಗೆ ಕಳುಹಿಸಿರುತ್ತಾರೆ

* * *

ಡೀಸಾವರ್ ಪಟ್ಟಣದ ಒಳ ಒಂದು ಗ್ರಾಮದಲ್ಲಿ ಬೆಂಕಿ ಬಿದ್ದು ಎಂಟು [illegible] ಮನೆಗಳು ಸಾಮಾನುಸಹಿತ ಸುಟ್ಟು ಹೋದವು ಒಂದು ಮಗು ಸತ್ತು ಹೋಯಿತು ಒಬ್ಬ ಗಂಡಸು ಒಬ್ಬ ಹೆಂಗಸೂ ಗಾಬರಿಯಿಂದ ಮನೆಗಳಲ್ಲಿ ಸಿಕ್ಕಿಕೊಂಡು ಗಾಯಪಟ್ಟು ಚಿಕಿತ್ಸೆ ಹೊಂದುತ್ತಿದ್ದಾರೆ

* * *

ಕಲ್ಕತ್ತೆಯಲ್ಲಿ ರಸಾಯನಶಾಸ್ತ್ರ ಪಂಡಿತನಾಗಿರುವ ಒಬ್ಬ ಬಂಗಾಳಿ ಬಾಬುವು ಅಂತರಿಕ್ಷದಲ್ಲಿ ಸಂಚರಿಸತಕ್ಕ ವಿಮಾನವನ್ನು ತಯಾರುಮಾಡಿ ಅದರ ಯೋಗ್ಯತೆ ಶಕ್ತಿ ಮೊದಲಾದದನ್ನು ಪರೀಕ್ಷೆ ಮಾಡುವುದಕ್ಕೆ ವಿಸ್ತಾರವಾದ ಸ್ಥಳವನ್ನು ಸರ್ಕಾರದವರಿಂದ ಪಡೆಯಬೇಕೆಂದು ಪ್ರಯತ್ನಪಡುತ್ತಾನೆ

* * *

ಬೊಂಬಾಯಿ ಹೈಕೋರ್ಟಿನ ಜಡ್ಜರಾದ ಮಿ॥ ಜಸ್ಟಿಸ್ ಚಂದಾವರ್ಕರ್ ಅವರನ್ನೋ ಇಲ್ಲವೆ ಅಹಮದಾಬಾದಿನ ಸರ್ದಾರ್ ಜಡ್ಜರಾದ ಮಿ॥ ದಯಾರಾಂ ಗಿಡುಮಾಲ್ ಅವರನ್ನೋ ಬೊಂಬಾಯಿ ಗವರ್ನ್‌ಮೆಂಟಿನ ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿ ನೇಮಕ ಮಾಡಬಹುದೆಂದು ಅಲ್ಲಿನ ಪತ್ರಿಕೆಯು ಸೂಚಿಸುತ್ತದೆ

* * *

ಈಚೆಗೆ ಉತ್ತರ ದೇಶದಲ್ಲಿ ಅಂದರೆ ಬಂಗಾಳಾ ಮತ್ತು ಸಂಯುಕ್ತ ಅಧಿಪತ್ಯಗಳಲ್ಲಿ ಮಳೆಗಳು ಚೆನ್ನಾಗಿ ಆದದ್ದರಿಂದ ಕ್ಷಾಮಪೀಡಿತರಾಗಿದ್ದ ಪ್ರಜೆಗಳು ವ್ಯವಸಾಯವನ್ನು ಕುರಿತು ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು ಹಿಂದೂಸ್ಥಾನದಲ್ಲೆಲ್ಲಾ [illegible] ಪ್ರಜೆಗಳು ರಿಲೀಫ್ ಕಾಮಗಾರಿಗಳನ್ನು ಮಾಡುತ್ತಿದ್ದಾರೆ

* * *

ಪುದುಕೋಟೆಯ ದಿವಾನ್‌ರಾಗಿದ್ದು ಕೆಲಸದಿಂದ ನಿವೃತ್ತರಾದ ದಿವಾನ್ ಬಹದೂರ್ ಎಸ್ ವೆಂಕಟರಾಮದಾಸ್ ನಾಯುಡು ಅವರಿಗೆ ಮದರಾಸ್ ಗವರ್ನ್‌ಮೆಂಟಿನವರು ಗವರ್ನ್‌ಮೆಂಟಿನ ಅ ಸೆಕ್ರೆಟರಿ ಕೆಲಸವನ್ನು ದಯಪಾಲಿಸಿರುತ್ತಾರೆ ದಕ್ಷಿಣದ ದೊಡ್ಡ ಮನುಷ್ಯರು ಈ ಕೆಲಸಕ್ಕೆ ನೇಮಕವಾದುದು ಅನೇಕರಿಗೆ ಸಂತೋಷವನ್ನುಂಟುಮಾಡಿದೆ

* * *

ಹೋದ ವಾರ ಹಿಂದೂಸ್ಥಾನದಲ್ಲೆಲ್ಲಾ [illegible] ಜನರು ಪ್ಲೇಗ್ ಉಪದ್ರವದಲ್ಲಿ ಕಾಲವಾದರು ಈ ಪೈಕಿ ಪಂಜಾಬಿನಲ್ಲಿ [illegible] ಸಂಯುಕ್ತ ಅಧಿಪತ್ಯಗಳು [illegible], ಬೊಂಬಾಯಿ ಅಧಿಪತ್ಯ [illegible], ಬಂಗಾಳಾ [illegible] ರಾಜಪುಟಾನಾ [illegible] ಬರ್ಮಾ [illegible], ಮೈಸೂರು ಸಂಸ್ಥಾನ [illegible], ಮದರಾಸ್ ಅಧಿಪತ್ಯ ೧೦, ಮಧ್ಯಪ್ರಾಂತ್ಯಗಳು [illegible] ಉಳಿದ ಪ್ರಾಂತ್ಯಗಳಲ್ಲಿ ಪ್ಲೇಗಿನ ಹೆಸರು ನಿಂತಿದೆ

* * *

ಸಂಯುಕ್ತ ಅಧಿಪತ್ಯಗಳಲ್ಲಿ ಹರಿಯುವ ಗಂಗಾ ನದಿಯಿಂದ ನಾಲೆಗಳನ್ನು ತೋಡಿ, ಅಲಿಘಡ, ಈಟಾ, ಆಗ್ರಾ ಜಿಲ್ಲೆಗಳಿಗೆ ಮೂಲಕ ನೀರನ್ನು ತರುವ ವಿಷಯದಲ್ಲಿ ಕಾಮಗಾರಿಯು ಪ್ರಾರಂಭವಾಗುವುದಲ್ಲದೆ ಇದರಿಂದ ಆ ಪ್ರಾಂತದ ವ್ಯವಸಾಯವು ಬಹುಮಟ್ಟಿಗೆ ಅಭಿವೃದ್ಧಿ ಹೊಂದಿ, ಪ್ರಜೆಗಳಿಗೆ ಕ್ಷಾಮದ ಭೀತಿಯು ನಿವಾರಣೆಯಾಗುವುದು ಈ ನಾಲೆಗಳ ಕಾಮಗಾರಿಗೆ ೧೭,೩೩,೫೦೦ ರೂಪಾಯಿ ಖರ್ಚು ಮಾಡಬಹುದೆಂದು ಸ್ಯಾಂಕ್ಷನ್ ಆಗಿರುತ್ತದೆ ನಾಲೆ ಕೆಳಗಣ ಜಮೀನು ವ್ಯವಸಾಯಕ್ಕೆ ಬರೋಣದರಿಂದ ಗವರ್ನ್‌ಮೆಂಟಿಗೆ ಪ್ರತಿ ವರುಷವೂ ೩॥ ಲಕ್ಷ ರೂಪಾಯಿ ಕಂದಾಯ ಉತ್ಪತ್ತಿಯಾಗುವುದು.

* * *

ಬೊಂಬಾಯಿನಿಂದ ಹೆಜ್ಜಾಸ್ ಎಂಬ ಮಹಮದೀಯರ ಯಾತ್ರಾಸ್ಥಾನಕ್ಕೆ ಹೋಗಿ ಬರುತ್ತಿದ್ದ ಶೇಕ್ ಆಲಂ ಎಂಬ ಜಹಜು ಕಳೆದ ೧೦ ನೇ ತಾರೀಖಿನಲ್ಲಿ ಗೋಗೋ ಬಂದರಿನ ಬಳಿ ಸುಂಟರಗಾಳಿ ಅಲೆಗಳಿಗೆ ಸಿಕ್ಕಿ ಮುರಿದು ಹೋಯಿತು ಅದರಲ್ಲಿದ್ದ ೭೧ ಜನರೂ ದೋಣಿಗಳಲ್ಲಿ ಕುಳಿತು ಬದುಕಿ ಬಂದರು ಆದರೆ ಅದರಲ್ಲಿ ಭರ್ತಿಮಾಡಿದ್ದ ೪೦,೦೦೦ ಮೂಟೆಗಳ ರಂಗೂನ್ ಅಕ್ಕಿಯೂ ಇತರ ಸಾಮಾನುಗಳೂ ಸಮುದ್ರದಪಾಲಾದವು ಈ ಅಕ್ಕಿಯನ್ನು ಭಾವಾನಗರದ ವರ್ತಕರು ತರಿಸುತ್ತಿದ್ದರು

ವಿದೇಶ ವರ್ತಮಾನಗಳು.

ಪುದುಕೋಟೆಯ ರಾಜರವರು ಇದುವರೆಗೆ ಯೂರೋಪಿನ ರಾಜ್ಯಗಳಲ್ಲಿ ಸಂಚಾರಮಾಡುತ್ತಿದ್ದು ಕಳೆದ ವಾರ ಲಂಡನ್ ಪಟ್ಟಣವನ್ನು ಸೇರಿದರು

* * *

ಲಂಡನ್ ಪಟ್ಟಣದಲ್ಲಿ ಬಹಳ ವ್ಯಾಪಾರಗಾರನಾಗಿದ್ದು ಕಾಲವಾದ ಫ್ರೆಡರಿಕ್ ಗಾರಿಂಗ್ ಎಂಬ ಪುಣ್ಯಾತ್ಮನು ತನ್ನ ಆಸ್ತಿಯಿಂದ ೬೦ ಲಕ್ಷ ರೂಪಾಯನ್ನು ಎಂಟು ಧರ್ಮ ಕಾರ್ಯಗಳಿಗೆ ಹಂಚಿಕೆ ಮಾಡಿಕೊಡಬೇಕೆಂದು ಮರಣಶಾಸನವನ್ನು ಬರೆದಿರುತ್ತಾನೆ.

* * *

ಪರ್ಷಿಯಾ ರಾಜ್ಯಕ್ಕೆ ಸೇರಿದ ಸಾಲ್ಮಾರ್ ಎಂಬ ಪಟ್ಟಣದಲ್ಲಿ ರಷ್ಯಾ ಮತ್ತು ಪರ್ಷಿಯಾ ಸೈನಿಕರಿಗೆ ಸಣ್ಣ ಕದನವು ನಡೆಯಿತು ತುರ್ಕಿ ಸೈನಿಕರಲ್ಲಿ ೧೪ ಮಂದಿ ಕೊಲೆಯಾದರು, ಕೆಲವರಿಗೆ ಗಾಯಗಳಾದವು, ೩೦ ಮಂದಿ ಸೆರೆಯಾದರು ರಷ್ಯಾ ಸೈನಿಕರಲ್ಲಿ ೧೭ ಮಂದಿ ಮೃತಪಟ್ಟರು.

* * *

ಹಿಂದೂಸ್ಥಾನದ ಸರ್ವ ಸೇನಾಪತಿಯ ಕೆಲಸಕ್ಕೆ ಹೊಸದಾಗಿ ನೇಮಿಸಲ್ಪಟ್ಟಿರುವ ಸರ್ ಓಮೂರ್ ಕ್ರೀಗ್ ಅವರಿಗೆ ಚಕ್ರವರ್ತಿ ಸಾರ್ವಭೌಮರವರು ಕಳೆದ ವಾರದ ದಿನ ಕರೆಸಿಕೊಂಡು ಭೇಟಿ ಕೊಟ್ಟರು ಈ ಅಧಿಕಾರಿಯು ಸೆಪ್ಟೆಂಬರ್ ತಿಂಗಳಲ್ಲಿ ಹಿಂದೂಸ್ಥಾನಕ್ಕೆ ದಯಮಾಡುವವರಾಗಿದ್ದಾರೆ

* * *

ಹೊನಲೂಲೂ ಎಂಬ ದ್ವೀಪದಲ್ಲಿ ಕೂಲಿ ಕೆಲಸಗಳನ್ನು ಮಾಡಿಕೊಂಡಿರುವ [illegible] ಜಪಾನ್ ಜನರು ತಮ್ಮ ಮುಖಂಡರ ಮಾತಿನ ಪ್ರಕಾರ ಕೆಲಸಕ್ಕೆ ಹೋಗದೆ ಬಂಗೆ ಮಾಡಿದರು ಸರ್ಕಾರದವರು ಆ ಮುಖಂಡರನ್ನೆಲ್ಲಾ ದಸ್ತಗಿರಿ ಮಾಡಿರುತ್ತಾರೆ ಇವರು ಓಹು ಎಂಬ ದ್ವೀಪವನ್ನು ತಾವೇ ಆಕ್ರಮಿಸಿಕೊಂಡು, ಅಲ್ಲಿರುವ ಬಿಳಿಯ ಜನರನ್ನೆಲ್ಲಾ ಓಡಿಸಿಬಿಡಬೇಕೆಂದು ಪಿತೂರಿ ಮಾಡಿದ್ದರೆಂದು ತಿಳಿಯುತ್ತದೆ

* * *

ಸುಮಾತ್ರಾ ಎಂಬ ದೊಡ್ಡ ದ್ವೀಪದೊಳಗೆ ಭೂಕಂಪವು ಪ್ರಾಪ್ತವಾಗಿ ಹಲವು ಗ್ರಾಮಗಳು ನಾಶಹೊಂದಿದವು ನದಿಗಳಲ್ಲಿ ಪ್ರವಾಹಗಳು ಬಂದು ಮನೆಮಠ ಪೈರುಪಚ್ಚೆಗಳನ್ನು ಕೊಚ್ಚಿಬಿಟ್ಟವು ಇದುವರೆಗೆ ೨೩೦ ಮಂದಿ ಪ್ರಜೆಗಳು ಮೃತಪಟ್ಟರು ಅನೇಕರಿಗೆ ಗಾಯಗಳಾಗಿವೆ ಪೀನಾಂಗ್ ಡಿಸ್ಟ್ರಿಕ್ಟಿನಲ್ಲೂ ಭೂಕಂಪವು ಪ್ರಾಪ್ತವಾಯಿತೆಂದೂ, ಅಲ್ಲಿಯೂ ಬಹಳ ಕಷ್ಟನಷ್ಟಗಳುಂಟಾಗಿರುವವೆಂದೂ ವರ್ತಮಾನವಿದೆ

* * *

ಫ್ರಾನ್ಸ್ ರಾಜ್ಯದ ದಕ್ಷಿಣಭಾಗಕ್ಕೆ ಸೇರಿದ ಕೆಲವು ಪ್ರದೇಶಗಳಲ್ಲಿ ಕಳೆದ ವಾರ ಬಹು ಭಯಂಕರವಾದ ಭೂಕಂಪವಾಯಿತೆಂದು ತಂತೀವರ್ತಮಾನ ಬಂದಿದೆ ಅನೇಕ ಗ್ರಾಮಗಳು ಹಾಳಾದವು ಒಂದು ಗುಡ್ಡವು ಕಳಚಿ ಬಿದ್ದದ್ದರಿಂದ ಒಂದು ಗ್ರಾಮವೇ ನಿರ್ನಾಮವಾಯಿತು ಒಟ್ಟು [illegible] ಪ್ರಜೆಗಳು ಮೃತಪಟ್ಟರೆಂತಲೂ, ೩೦೦ ಜನರಿಗೆ ಪೆಟ್ಟು ಆಗಿದೆ ಎಂತಲೂ ತಿಳಿದುಬಂದಿದೆ. ದೊಡ್ಡ ಊರುಗಳಲ್ಲಿ ಅಷ್ಟೇನೂ ವಿಶೇಷ ನಷ್ಟ ಸಂಭವಿಸಲಿಲ್ಲ, ಗ್ರಾಮಾಂತರಗಳೇ ಈ ಅನಾಹುತಕ್ಕೆ ಸಿಕ್ಕಿರುತ್ತವೆ

ಪ್ರಕಟನೆಗಳು

ಬಲು ಅಗ್ಗ! ಸುಸಮಯ!! ತ್ವರೆಪಡಿರಿ!!!

50—1

ಶ್ರೀಮನ್ಮಹಾರಾಜರ ವರ್ಷವರ್ಧಂತಿಯ ಸಂತೋಷಸೂಚಕವಾಗಿ ಇದಡಿ ಕಂಡ ಪುಸ್ತಕಗಳು ಅರ್ಧ ಬೆಲೆಗೆ ಮಾರಲ್ಪಡುವುವು ಪ್ರತಿಗಳು ಸ್ವಲ್ಪವೇ ಇವೆ ಎರಡನೇ ಪುಸ್ತಕದ ನೋಟ್ಸ್ ೧ ಆಣೆ. ಮೂರನೇ ಪುಸ್ತಕದ ನೋಟ್ಸ್ ಅರ್ಧಾಣೆ

ಕೆ. ರಾಮಸ್ವಾಮ್ಯಯ್ಯಂಗಾರ್, ಮಾಗಡಿ.

ಗೃಹಕೃತ್ಯದ ನೋಟೀಸು

51—1

ಬಿಡದಿ ಗಟ್ಟ ತಾಲ್ಲೂಕು ಉಡಿಗಾಲದ ಗ್ರಾಮದಲ್ಲಿರುವ ಫಣಿಪದ ಕುನ್ನಮ್ಮಯ್ಯನ ಹೆಂಡತಿ ಮಗ ಲಿಂಗಪ್ಪನಿಗೆ ಗುರುಲಿಂಗಪ್ಪ ನೆಂಬ ಒಬ್ಬ ಮೈನರು ಮಗನಿರುತ್ತಾನೆ ಈ ಹುಡುಗನ ಪಿತಾಮಹಾರ್ಜಿತವಾದ ಸ್ಥಿರಸ್ವತ್ತುಗಳನ್ನು ಕುನ್ನಮ್ಮಯ್ಯನ ಹೆಂಡತಿಯನು ಇಟ್ಟುಕೊಂಡ ವಳ ಮಕ್ಕಳಾದ ದೇವಮ್ಮ ವಗೈರೆಯವರು ಮೈನರಿಗೆ ಮೋಸಪಡಿಸಲು ಮಾರುವದಕ್ಕೂ, ಆಧಾರ, ಭೋಗ್ಯ ವಗೈರೆ ಪರಾಧೀನ ಮಾಡಲೂ ಪ್ರಯತ್ನ ಮಾಡುತ್ತಾರೆ ಆ ಸ್ವತ್ತುಗಳಿಗೆ ಈ ಮೈನರು ಗುರುಲಿಂಗಪ್ಪನೇ ಹಕ್ಕುದಾರನಾದ್ದರಿಂದ ಇವನ ಗಾರ್ಡಿಯನ್ ಸಮ್ಮತಿ ಇಲ್ಲದೆ ಕ್ರಯಕ್ಕೆ ಪಡೆದರೆ ಅಥವಾ ಆಧಾರ ಭೋಗ್ಯಕ್ಕೆ ಪಡೆದರೆ ಅವರಿಗೆ ಸ್ವತ್ತುಗಳಲ್ಲಿ ಬಾಧ್ಯತೆ ಬರಲಾರದೆಂದು ಮೂಲಕ ಎಲ್ಲರೂ ತಿಳಿಯತಕ್ಕದ್ದು

ಉಡಿಗಾಲಗ್ರಾಮ, ೦ ಮಿಣ್ಣಮ್ಮನ ಗುರುತಿನ ರುಜು,

೧೪ ೬-೧೯೦೯ ಮೈನರ್ ಗುರುಲಿಂಗಪ್ಪನ ಗಾರ್ಡಿಯನ್ ಮತ್ತು ತಾಯಿ

ಸುಶಿಕ್ಷಿತ ಸ್ತ್ರೀಯರು ಪೆರೂನಾವನ್ನು ಹೊಗಳುತ್ತಾರೆ

ಪೆರೂನಾ ಪ್ರಖ್ಯಾತಿಹೊಂದಿರುವುದು ಅದರ ಗುಣದಿಂದ, ಬರೀ ಖ್ಯಾತಿಯಿಂದಲ್ಲ. [7-24]

ಚಿಕ್ಕವರೂ ದೊಡ್ಡವರೂ ಒಂದೇ ರೀತಿ ಪೆರೂನಾವನ್ನು ಹೊಗಳುತ್ತಾರೆ. ಹೆಣ್ಣುಮಕ್ಕಳೂ ಹೆಂಗಸರೂ ಪೆರೂನಾದ ಗುಣವನ್ನು ಕಂಡು ಕೊಂಡಿದ್ದಾರೆ. ಹೆಣ್ಣುಮಕ್ಕಳೂ ಹೆಂಗಸರೂ ತಮ್ಮ ತಮ್ಮ ದೇಹಾನುಗುಣ್ಯವಾದ ಕಾಯಿಲೆಗಳಲ್ಲಿ ಬದ್ದು, ಪೆರೂನಾ ಸೇವನೆಯಿಂದ ಸೌಖ್ಯ ಹೊಂದಿರುತ್ತಾರೆ.

ಲಕ್ಷಣವಾಗಿರುವ ಹೆಣ್ಣುಮಕ್ಕಳೂ, ಸುಂದರಿಯರಾದ ಸ್ತ್ರೀಯರೂ, ಬಲಹೀನರಾದ ಹೆಣ್ಣುಮಕ್ಕಳೂ, ರೋಗದಿ ಜಿಗುಪ್ಸಿತರಾದ ತಾಯಂದಿರೂ ಎಲ್ಲಾ ಪ್ರದೇಶಗಳಲ್ಲೂ ಪೆರೂನಾ ಸೇವಿಸಿ, ತಮ್ಮ ಸ್ವಭಾವಕ್ಕೆ ಅನುಗುಣವಾದ ಕಾಯಿಲೆಗಳನ್ನೆಲ್ಲಾ ನಿವಾರಿಸಿ ಬಿಟ್ಟಿರುವ ಅದರ ಗುಣವನ್ನು ತಿಳಿದಿರುತ್ತಾರೆ. ಮುದಿ ಅಜ್ಜಿಯ ತೊಡೆಯಿಂದ ಚಿಕ್ಕ ಹೆಣ್ಣುಮಗುವಿನ ತನಕ ಅವರೆಲ್ಲರೂ ಅನೇಕವಿಧಗಳಲ್ಲಿ ಪೆರೂನಾಗೆ ಕೃತಜ್ಞರಾಗಿರುವರು.

MRS. FRED WEBBER.

MISS OLIVINE PERRAULT

ಇದೆಲ್ಲಾ ಯಥಾರ್ಥವಾಗಿರುತ್ತದೆ. ಗುಣಹೊಂದಿದ ಹೆಂಗಸು ಅದನ್ನು ಹೇಳುವುದಕ್ಕೆ ಚಿಂತೆಗೊಳ್ಳುವುದಿಲ್ಲ. ಅವಳ ಮಾತು ಕೇಳಿ ಇತರ ಹೆಂಗಸರು ನಂಬುತ್ತಾರೆ. ಈ ರೀತಿ ಪೆರೂನಾದ ಹೆಸರು ಬಾಯಿಂದ ಬಾಯಿಗೆ ಹಬ್ಬುತ್ತದೆ. ಹೀಗೆ ಲಕ್ಷಾಂತರ ಮನೆಗಳವರು ಪೆರೂನಾವು ಪ್ರೀತಿಪೂರ್ವಕವಾದ ಮಂಜಿಕೆಗೆ ಅರ್ಹವಾದ ಕೃತಜ್ಞದ ಔಷಧವೆಂದು ಒಪ್ಪಿಕೊಳ್ಳುತ್ತಾರೆ.

ಅನೇಕ ಸಣ್ಣ ಸಣ್ಣ ಕಾಯಿಲೆಗಳಿಗೆ ಪೆರೂನಾವು ಒಳ್ಳೇ ಔಷಧವಾಗಿರುತ್ತದೆ. ಶೀತದಿಂದ ಹುಟ್ಟುವ ಅನೇಕ ಕೆಟ್ಟ ಕಾಯಿಲೆಗಳನ್ನೂ ಹೆಂಗಸರಿಗೆ ಸಾಮಾನ್ಯವಾಗಿ ಉಂಟಾಗುವ ದೇಹದ ಅಸ್ವಸ್ಥತೆಗಳನ್ನೂ ಪೆರೂನಾ ಕಡಿಮೆಮಾಡಬಲ್ಲುದೆಂದು ನಂಬತಕ್ಕದ್ದಾಗಿದೆ. ಶೀತದಿಂದ ಹುಟ್ಟುವ ಸಮಸ್ತವಾದ ರೋಗಗಳನ್ನೂ ಪೆರೂನಾದಲ್ಲಿರುವ ಗುಣದಿಂದ ವಾಸಿಮಾಡಿಕೊಳ್ಳಬಹುದು.

ತಲೆ, ಹೊಟ್ಟೆ, ಶ್ವಾಸಕೋಶಗಳು.

ಮಿಸ್ ಓಲಿವೈನ್ ಪೆರ್ರಾಲ್ಟ್, ೩೧೫ ದೇವಿ ಡ್ಯೂ ಬೀದಿ, ಬೌಲೆವಾರ್ಡ್ ಸೇಂಟ್ ಪಾಲ್, ಮಾಂಟ್ರಿಯಲ್, ಕ್ಯಾನ್., ಈಕೆ ಬರೆಯುವುದು

“ನನ್ನ ಪ್ರಸಿದ್ಧವಾದ ಪೆರೂನಾವನ್ನು ಹೊಗಳುವ ಸಂತೋಷದಿಂದ ನಿಮಗೆ ಈ ಕಾಗದ ಬರೆಯುತ್ತೇನೆ. ನಾನು ಬೇರೆ ಔಷಧಗಳನ್ನು ಪರೀಕ್ಷೆಮಾಡಿದೆನು. ಆದರೆ ನನ್ನ ಶೀತವು ಸ್ವಲ್ಪವೂ ವಾಸಿಯಾಗಲಿಲ್ಲ. ನನಗೆ ಕ್ಷಯರೋಗವಿರುವುದೋ ಎಂದು ಹೆದರಿಕೆಯುಂಟಾಗಿತ್ತು.

ನನ್ನ ತಲೆಯು ಮತ್ತು ಹೊಟ್ಟೆಯ ಸ್ಥಿತಿಯು ನನಗೆ ಚಿಂತೆಯನ್ನುಂಟುಮಾಡಿತ್ತು. ಇದ್ದಕ್ಕಿದ್ದ ಹಾಗೆ ಹವಾ ಬದಲಾವಣೆಯಾದ ದರಿಂದ ನನಗೆ ಶೀತವಾಗಿ ಮೂರು ತಿಂಗಳ ತನಕ ಹಗಲೂ ರಾತ್ರಿ ಕೆಮ್ಮಲುಂಟಾಗಿತ್ತು.

“ನನ್ನ ಸಹೋದರನಿಗೆ ಪೆರೂನಾದಿಂದ ವಾಸಿಯಾಗಿದ್ದದರಿಂದ ಅವನು ಅದನ್ನು ಸೇವಿಸೆಂದು ನನಗೆ ಹೇಳಿದನು. ಅದರಂತೆ ನಾನು ಕ್ರಮವಾಗಿ ಸೇವಿಸಿ, ದಿನೇ ದಿನೇ ಗುಣಹೊಂದುತ್ತಾ ಬಂದೆನು. ಈಗ ನಾನು ಮೂರು ಬಾಟ್ಲಿ ಔಷಧ ಸೇವಿಸಿ ಮುಗಿಯಿತು. ನಾನು ಸಂಪೂರ್ಣವಾಗಿ ಗುಣಹೊಂದಿರುತ್ತೇನೆ.”

ಕಾಯಿಲೆಯಾದ ಹೆಂಗಸರಿಗೆ.

“ಪೆರೂನಾದಿಂದ ನನಗೆ ಆಗಿರುವ ಪ್ರಯೋಜನವನ್ನು ತಿಳಿಸುವುದು ನನ್ನ ಕರ್ತವ್ಯವೆಂದು ಎಣಿಸಿದೆನು. ಸ್ವಲ್ಪ ಹೊತ್ತು ಕಡಮೆ ನಾನು ಆರುವರ್ಷಗಳ ಕಾಲ ನರಳಿದೆನು. ಹಲವು ಡಾಕ್ಟರುಗಳಿಂದ ಪರೀಕ್ಷೆ ಮಾಡಿ, ಅವರ ಔಷಧಗಳನ್ನು ಸೇವಿಸಿದೆನು. ಅದರಿಂದ ನನಗೆ ಸ್ವಲ್ಪಮಾತ್ರ ಉಪಶಮನವಾಯಿತಲ್ಲದೆ ಆ ಔಷಧಗಳು ನನ್ನ ರೋಗವನ್ನು ವಾಸಿಮಾಡಲಿಲ್ಲ. ನಾನು ಬಹಳ ಬಾಧೆಯನ್ನನುಭವಿಸಿದವಳು. ನನ್ನ ಔಷಧಕ್ಕಾಗಿ ನನ್ನ ಗಂಡನು ಬಹಳ ಹಣವನ್ನು ಖರ್ಚುಮಾಡಿರುತ್ತಾನೆ. ಸದಾ ಸಂತೋಷಗಳ ಕಾಲದಲ್ಲಿ ಪೆರೂನಾವನ್ನು ತೆಗೆದುಕೊಂಡು ಪರೀಕ್ಷೆಮಾಡಬೇಕೆಂದು ನೆನಸಿ, ಸೇವಿಸಲು ಪ್ರಾರಂಭಿಸಿದೆನು. ನಿಮ್ಮ ಹೇಳಿಕೆಯ ಪ್ರಕಾರ ಒಂದು ಬಾಟ್ಲಿ ಔಷಧ ಮುಗಿಯುವಷ್ಟರೊಳಗೆ ನನಗೆ ಸ್ವಲ್ಪ ಉಪಶಮನವಾಯಿತು. ಆಗಿನಿಂದ ನನಗೆ ಚೆನ್ನಾಗಿ ಸೊಂಪು ಇಲ್ಲದೇ ಇಲ್ಲ. ಈವರೆಗೆ ಪೆರೂನಾ ಸೇವಿಸಿದೆನು. ಈಗ ನನ್ನ ಮನೆಗೆ ಡಾಕ್ಟರು ಬರುವುದು ಅಪರೂಪ. ಪೆರೂನಾದಿಂದ ನನ್ನ ಸಂಸಾರಕ್ಕೆ ಎಷ್ಟು ಉಪಕಾರವಾಗಿದೆಯೋ ವಿವರಿಸಿದರೆ ಒಂದು ಪುಸ್ತಕವಾದೀತು. ನಾನು ತಮ್ಮನ್ನು ಅತ್ಯಂತ ವಿನೀತನಾಗಿ ಕೃತಜ್ಞತಾಪೂರ್ವಕದಿಂದ ವಂದಿಸುತ್ತೇನೆ.

ಅನೇಕ ಪೇಳಿ ನಿಮ್ಮ ಔಷಧವನ್ನು ಇತರರಿಗೆ ತೋರಿಸುತ್ತೇನೆ. ಅವರೆಲ್ಲಾ ಸೇವಿಸಿ ಸಂತೋಷಪಡುತ್ತಾರೆ. ಕಾಯಿಲೆಯಾಗಿದ್ದೇನೆಂದು ಯಾವ ಹೆಂಗಸಾದರೂ ನನಗೆ ಬರೆದರೆ, ಅಥವಾ ನನ್ನ ಬಳಿಗೆ ಬಂದು ಕೇಳಿದರೆ ಅವರಿಗೆಲ್ಲಾ ಪೆರೂನಾದ ಯೋಗ್ಯತೆಯನ್ನು ವಿವರಿಸಿ ಅದನ್ನು ಸೇವಿಸುವಂತೆ ಶಿಫಾರಸು ಮಾಡುತ್ತೇನೆ”—ಎಂಬದಾಗಿ ಮಿಸೆಸ್ ನಾರ್ಥಾ ಫೆಡ್ರಿಕ್, ಸೆಂಟ್ರಲ್ ಪಾರ್ಕ್, ಲಾಂಗ್ ದ್ವೀಪ, ನ್ಯೂಯಾರ್ಕ್ ಸಿಟಿ, ಯು ಎಸ್ ಎ ಎಂಬೀ ಹೆಂಗಸು ಬರೆದಿರುತ್ತಾಳೆ.

ದೇಹದೊಳಗಿನ ಶೀತವು

ಮಿಸೆಸ್ ಫ್ರೆಡ್ ವೆಬರ್, ೧೯ ವೆಲ್ಲಿಂಗ್‌ಟನ್ ಬೀದಿ, ಬ್ರಾಂಟ್‌ಫರ್ಡ್, ಓಂಟ್, ಎರಡನೇ ವೈಸ್‌ಪ್ರೆಸಿಡೆಂಟ್, ಸ್ತ್ರೀಯರ ಕಸಬುದಾರಿ ಸಂಘ, ಈಕೆ ಬರೆಯುವುದು

ಈ ಸಲ ನಾನು ಕಾಯಿಲೆ ಬಿದ್ದಾಗ ನನಗೆ ಬಹಳ ಕಠಿಣವಾದ ಶೀತ ಹಿಡಿಯಿತು. ಆದರಿಂದ ನನ್ನ ದೇಹದ ಅಂಗಗಳು ರೋಗಗ್ರಸ್ತವಾದವು. ಬಹಳ ಕಠಿಣವಾದ ನೋವಾಗುತ್ತಿತ್ತು. ದಿನೇ ದಿನೇ ನನ್ನ ಸ್ಥಿತಿಯು ಕೆಡುತ್ತಾ ಬಂದು, ವಾಸಿಯಾಗುವ ಆಸೆಯೇ ಹೋಯಿತು.

“ಪೆರೂನಾದಿಂದ ಆಶ್ಚರ್ಯಕರವಾಗಿ ರೋಗಗಳು ಗುಣವಾಗಿರುವುದನ್ನು ನಾನು ಕೇಳಿ, ಅದನ್ನು ಎರಡು ತಿಂಗಳ ವರೆಗೆ ಸೇವಿಸಿ, ಆದರಿಂದ ನನಗೆ ಎಷ್ಟುಮಟ್ಟಿಗೆ ಒಳ್ಳೇದಾಯಿತೆಂದು ನೋಡೋಣವೆಂದು ನಿಶ್ಚಯಿಸಿಕೊಂಡೆನು.

“ಒಂದು ತಿಂಗಳು ಸೇವಿಸುವುದರೊಳಗಾಗಿ ನನಗೆ ಬಹಳ ವಾಸಿಯಾಯಿತು. ಎರಡನೇ ತಿಂಗಳ ಅಂತ್ಯದಲ್ಲಿ ನಾನು ಹೊಸ ಹೆಂಗಸಾದೆನು. ಅದೇ ರೀತಿ ನಾನು ಕಾಂತಿಪುಷ್ಟಿ ಹೊಂದುತ್ತಾ, ಸಂಪೂರ್ಣ ಆರೋಗ್ಯವನ್ನು ಹೊಂದಿದೆನು. ಅದನ್ನೇ ಸೇವಿಸುವಂತೆ ನನ್ನ ಅನೇಕ ಸ್ನೇಹಿತೆಯರಿಗೆ ಹೇಳಿದೆನು. ಎಲ್ಲರೂ ಅದರ ಪ್ರಯೋಜನವನ್ನು ನೋಡಿ ಸಂತೋಷಪಡುತ್ತಾರೆ.”

ಒಬ್ಬ ಹೆಂಗಸಿನ ಅನುಭವವು.

“ಕೆಳ ಹೊಟ್ಟೆಯ ಶಸ್ತ್ರಕ್ರಿಯೆಯಿಂದ ನಾನು ತುಂಬಾ ಬಾಧೆಪಟ್ಟೆನು. ಆದರಿಂದ ನನ್ನ ಶಕ್ತಿಯೆಲ್ಲಾ ಕುಂದಿ, ನನ್ನ ಬುದ್ಧಿಯು ಕೆಟ್ಟು ಹೋಯಿತೆಂದು ಹೆದರಿಕೊಂಡೆನು. ನನ್ನ ಜೀರ್ಣಶಕ್ತಿಯು ಎಡಗಾಲಿನ ತನಕ ಬಹಳವಾಗಿ ಬಾಧೆಪಡಿಸುತ್ತಿತ್ತು. ಈ ಬಾಧೆಯನ್ನು ಅನುಭವಿಸುವುದಕ್ಕಿಂತ ಸಾಯುವುದೇ ಉತ್ತಮವೆನ್ನುತ್ತಿತ್ತು. ಪೆರೂನಾವು ಈ ನನ್ನ ಕಾಯಿಲೆಯನ್ನು ವಾಸಿಮಾಡಿತು. ಅದರಿಂದ ಅದು ಉತ್ಕೃಷ್ಟವಾದದ್ದೆಂದು ನಾನು ಹೇಳುವುದೇನೂ ಅತಿಶಯವಲ್ಲ. ಈ ನನ್ನ ರೋಗವು ನಿವಾರಣೆಯಾಗಿ ಈಗ ಎರಡು ವರುಷ ತುಂಬುವುದರಲ್ಲಿದೆ. ಮತ್ತೆ ಆ ರೋಗದ ಸುಳಿಯನ್ನೇ ಕಾಣೆನು.”

ಪೆರೂನಾ ಕಳುಹಿಸಬೇಕೆಂದು ಕಾಗದ ಬರೆಯತಕ್ಕವರು ಕನ್ನಡದಲ್ಲಿ ಬರೆದರೆ ಪ್ರಯೋಜನವಿಲ್ಲ; ಇಂಗ್ಲೀಷು, ತೆನುಗು, ಅಥವಾ ತಮಿಳು ಭಾಷೆಯಲ್ಲಿ ಕಾಗದ ಬರೆದಲ್ಲಿ ಕಳುಹಿಸುತ್ತೇವೆ. ಕ್ರಯ ಮುಂತಾದದ್ದು ಇವರಿಂದಲೇ ತಿಳಿಯಬಹುದು.

ವಿಳಾಸ—ಹಿಂದುಸ್ಥಾನದಲ್ಲೆಲ್ಲಾ ಈ ಔಷಧ ಸಿಕ್ಕುವ ಒಂದೇ ಒಂದು ಸ್ಥಳವಾವುದೆಂದರೆ—

ಮೆಸ್ಸರ್ಸ್, ಹಿಚ್‌ಕಾಕ್ ಅಂಡ್ ಸನ್ಸ್, ಬೆಂಗಳೂರು.

HITCHCOCK AND SONS, BANGALORE, SOUTH INDIA.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

29—5—1909 ರಿಂದ 4—6—1909 ರ ವರೆಗೆ

ಸ್ಥಳ	ಪ್ಲೇಗ್ ಜಾಡ್ಯ	ಸತ್ತದ್ದು	ಕಾಲರಾ ಜಾಡ್ಯ	ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	7	5	0	0
ಬೆಂಗಳೂರು ಡಿಸ್ಟ್ರಿಕ್ಟು	1	1	3	3
ಮೈಸೂರು ,,	*	*	*	*
ಕೋಲಾರ್ ,,	0	0	17	11
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	4	4	0	0
ಶಿವಮೊಗ್ಗ ,,	0	0	11	7
* ಸಂಖ್ಯೆ ಬಂದಿಲ್ಲ ಜುಮ್ಲಾ	12	10	31	21

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಜ್ಯೇಷ್ಠ ಬಹುಳ ಅಮಾವಾಸ್ಯೆ ಗುರುವಾರದಿಂದ ಆಷಾಢ ಶುದ್ಧ ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಜೂನ್.

ತಾ.	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ಮಿಥುನ ಮಾಸ
17	ಗುರು †	ಅಮಾವಾಸ್ಯೆ	57-30	ರೋ	11-55	4
18	ಶುಕ್ರ	ಪಾಡ್ಯಮಿ	54-55	ಮೃ	10-36	5
19	ಶನಿವಾ §	ಬಿದಿಗೆ	53-51	ಆರ್ದ್ರ	11-31	6
20	ರವಿವಾ	ತದಿಗೆ	54-56	ಪು	13-2	7
21	ಚಂದ್ರ	ಚೌತಿ	57-2	ಪು	16-5	8
22	ಕುಜ *	ಪಂಚಮಿ	60-0	ಶ್ಲೇ	20-2	9
23	ಬುಧ	ಪಂಚಮಿ	0-14	ಮ	24-51	10

† ವಟಸಾವಿತ್ರೀವ್ರತಂ, ಸರ್ವತ್ರ ಅಮಾವಾಸ್ಯೆ

§ ನಂಜನಗೂಡಿನಲ್ಲಿ ಮಾರ್ಕಂಡೇಯ ಉತ್ಸವ.

* ಪವನಗೌರೀವ್ರತಂ, ದೇವೀಬುಧಿರ ರಥ.

ಪೇಟೇ ಧಾರಣೆ.

ವಿವರ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಸಣ್ಣ ೧ ಕ್ಕೆ	ರೂ.	೧೫-೦-೦	೧೬-೦-೦
ಕೆಂಪು ಅಕ್ಕಿ ಅಸಲ್	... ...	೧೪-೮-೦	೧೫-೦-೦
,, ದುಯಂ	... ...	೧೩-೦-೦	೧೪-೮-೦
ಜಾಪ್ರಾನ್ ಅಕ್ಕಿ	.	೧೪-೦-೦	೧೫-೮-೦
ಸ್ಪೆಷ್ಯಲ್ ಅವಲ್	. ..	೧೭-೦-೦	೧೮-೦-೦
,, ದುಯಂ	.. ...	೧೬-೦-೦	೧೭-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ	... ..	೧೬-೦-೦	೧೬-೦-೦
,, ದುಯಂ	. ..	೧೫-೦-೦	೧೫-೦-೦
ಹೈಕ್ ರಾಗಿ ಪಲ್ಲ ೧ಕ್ಕೆ	... ...	೯-೪-೦	೮-೧೨-೦
ಕಾಡ್ರಾಗಿ	.. ..	೮-೧೨-೦	೮-೮-೦
ಜೋಳ	.. ..	೯-೦-೦	೯-೦-೦
ಹಲಸಂದೆ ಪಲ್ಲ ೧ಕ್ಕೆ	... ...	೧೪-೮-೦	೧೨-೮-೦
ಬೇಳೆ ಅವರೆ	... . ..	೧೧-೦-೦	೧೨-೦-೦
ಹೆಸರು	... ...	೧೪-೦-೦	೧೨-೮-೦
ಉದ್ದು	. ...	೧೪-೮-೦	೧೩-೦-೦
ಕಡಲೆ	.. ..	೧೩-೮-೦	೧೨-೪-೦
ಎಳ್ಳು ಸೇ. ೧೨೭ ಕ್ಕೆ	... ...	೨೨-೮-೦	೧೯-೦-೦
ಹುರುಳಿ	.. ..	೧೧-೪-೦	೧೧-೦-೦
ಹರಳು ೧೨೭ ಸೇರಿಗೆ	... ...	೧೧-೦-೦	೧೦-೦-೦
ಸೀಗೇಕಾಯಿ ಮಣ ೧ಕ್ಕೆ	... ..	೨-೮-೦	೩-೮-೦
ಮೆಣಸಿನಕಾಯಿ	... ...	೫-೮-೦	೪-೮-೦
,, ದುಯಂ	. ..	೫-೦-೦	೪-೦-೦
ಬೆಲ್ಲ ದೊಡ್ಡ ಅಚ್ಚು	.. ..	೬-೪-೦	ಮ ೨-೨-೦
ಒಳ್ಳೆಣ್ಣೆ ಮಣ ೧ಕ್ಕೆ	... ...	೫-೦-೦	೫-೪-೦
ಹರಳೆಣ್ಣೆ ,,	... ...	೪-೮-೦	೪-೪-೦
ಕೊತ್ತುಂಬರಿ ಪಲ್ಲ ೧ಕ್ಕೆ	... ..	೯-೪-೦	೯-೬-೦
ಉಪ್ಪು ,,	... .	೫-೮-೦	೪-೧೨-೦
ಹುಣಿಸೇ ಹಣ್ಣು	... ...	೧-೧೨-೦	೧-೧೨-೦
,, ಹಳೇದು	... ...	೧-೫-೦	೧-೮-೦
ತುಪ್ಪ ಮಣ ೧ಕ್ಕೆ	. .	೧೫-೦-೦	೧೩-೮-೦
ಸೀಮೆಯೆಣ್ಣೆ ಪಟ್ಟ ೧ಕ್ಕೆ	... ..	೫-೪-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ	. ..	೪-೮-೦	೪-೮-೦
ಅಡಕೇಕಾಯಿ ಮಣ ೧ಕ್ಕೆ	... ...	೦-೮-೦	೦-೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೧-೦-೦	೦-೧೨-೦
ಚಿನ್ನ (ಪೌನ್) ಕೆಂಪು	... ...	೧೫-೬-೦	೧೫-೭-೦
,, ,, ಪಸಿಮೆ	... ...	೧೬-೦-೦	೧೫-೧೦-೦
,, ,, ಗಟ್ಟಿ ತೊಲ ೧ಕ್ಕೆ	...	೨೪-೮-೦	೨೪-೭-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	... ...	೬೭-೪-೦	೬೬-೦-೦

Printed and Published by the Rev. H. GULLIFORD, Proprietor and Manager, Wesleyan Mission Press. Mysore. 17/6/1909.

REGISTERED M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸನ್ ೧೯[illegible] ನೇ ಇಸವಿ ಜೂನ್ ತಾರೀಖು ೨೮ ನೇ ಗುರುವಾರ. ಸಂಚಿಕೆ ೪

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

28 10

೧ ಬೊಕಾಮಯದ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆ ಬಾಳುವ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ



ಚಳಿಜ್ವರ ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕೈಕಾಲು ಸೆಳತ (ಭಾರ), ಮೈ ನಡುಕ, ಶೀತದಿಂದ ಗಳ ಬಾರದೆ ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನಿಗಡಿ ಎಕ್ಕಿಕ್ಕಿ, ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ನಿಶ್ಚಯವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತ ಬಂದರೆ ಬಹಳ ಹೊತ್ತು ಸುವಾಸನೆಯಿರುತ್ತದೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, [illegible] ಕಾಯಿಲೆಗೂ ದಾರಿ ಕೊಡದೆ, [illegible] ಬಲಹೀನತೆಯನ್ನು ಗುಣಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸು[illegible] ಸ್ತ್ರೀಯರ ಉಬ್ಬಸ, ಮಕ್ಕಳ ಎಳವು, ಜ್ವರ, ಪಟ್ಟ ಜ್ವರ, ಕೃಮಿಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇವನ್ನು ಸೇವಿಸುತ್ತಿರುವವರು ನಿಶ್ಚಯವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ವೈದ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್,
ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ.

18 21



[illegible] ಜ್ವರ, ಚಳಿಜ್ವರ, ಮಲೇರಿಯಾಜ್ವರ, [illegible] ಜ್ವರ ವಾತಜ್ವರ [illegible] ಮುಂತಾದ [illegible] ರೋಗಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ [illegible] ವೆಂಕಟರಾಯರವರು—ನಿಮ್ಮ ಕೆಲವು ತಿಂಗಳ ಹಿಂದೆ ಕಳುಹಿಸಿಕೊಟ್ಟ [illegible] ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ [illegible] ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ [illegible] ಹೇಳುತ್ತಿರುವುದರಿಂದ ದಯವಿಟ್ಟು ಇನ್ನೊಂದು [illegible] ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ ೧ ರೂ ೧—[illegible] ರೂ ರೂ ೨—೧೨ ೮, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಾಪಸು ಬಿಡಲಾಗುವದು

ಅಮೃತಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ ಕ್ಲೇಶ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗಿನ ಹೊಟ್ಟೆ ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವಿವರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತೆನ್ನಿಯ [illegible] ಕರ್ಪೂರವನ್ನು ನಾನೂ ನನ್ನ ಶಾಖೋಪಾತದಲ್ಲೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದುರ್ರಲ್ಲಿ ವಿಶೇಷ —

ಹನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿಯಮ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ ರೂ ೧—೧೪—೦

" " ೬ " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ ಚಂದಾ ಕಟ್ಟುವಾಗಲೂ ತಮಗೆ ಬಾಕಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರು, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 5

ತಲೆನೋವು, ವಾಯುನೋವು, ಸೆಳತ ಗಂಟ್ಲುನೋವು, ಪಾರ್ಶ್ವವಾಯು ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು—ಇವುಗಳೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಯಿಂದಾಡಿದಂತೆ ನಿಶ್ಚಯವಾಗಿ ವಾಸಿಯಾಗುತ್ತದೆ ಈ ಔಷಧವನ್ನು [illegible] ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷಿಸಿ ನಿಶ್ಚಯವಾಗಿಯೂ [illegible] ಗುಣಕೊಡುತ್ತದೆ [illegible] ಹೇಳುತ್ತಾರೆ [illegible] ಎಲ್ಲಾ ಬಾಧೆಗಳಿಗೂ [illegible] ಈ ಔಷಧದ ಶಕ್ತಿಯು [illegible] ಅದನ್ನು [illegible] ವಿಶೇಷ ಪ್ರೀತಿಯಿಂದ [illegible] ಉಪಯೋಗಿಸುವರು ಈ ಔಷಧವನ್ನು [illegible] ತರಿಸಿ ಪರೀಕ್ಷಿಸದವರಿಲ್ಲ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅನೇಕ [illegible] ತೈಲವು ನೋವಿನ ಮೂಲವನ್ನು ಹಿಡಿದು ಅದರ [illegible] ಪಡಿಸುತ್ತದೆ

ಕ್ರಯ ಸೀಸೆ ೧ಕ್ಕೆ ೧೨ ಆಣೆ [illegible] ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ವಾಪಸು ಮಾಡಲಾಗುವುದು [illegible] ಈ ತೈಲವನ್ನು ಎಲ್ಲಾ [illegible] ವ್ಯಾಪಾರಿಗಳೂ [illegible] ಮುಖ್ಯ ಏಜಂಟರ ವಿಳಾಸ—

ಎಸ್ ಪೀಟರ್ಸ್

ತಿಕ್ಕಿ ಮೇದನಮುಲ್ ಪಿಳ್ಳೆ ಬೀದಿ, ವೇಪೇರಿ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ತರಿಸಿರಿ.

10 25

"ಬ್ರಹ್ಮಚರ್ಯ" ಎಂಬ ಮರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ ಐದಾಣೆ

"ಸ್ವಪ್ರಯಾಸಫಲದೀಪಿಕೆ" ಎಂಬ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶೀಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು [illegible] ಸ್ವಪ್ರಯಾಸಫಲದೀಪಿಕೆಯನ್ನು [illegible] ಮುಖ್ಯವಾದ ಪರೀಕ್ಷೆಗೆ ಪಠ್ಯವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರ ವರೆಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನ ಯಾತ್ರೆಯ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟಿದ್ದು ಮತ್ತು ಬಹು ರಂಜಕವಾದದ್ದು ಇದರಲ್ಲಿ ನಡೆದಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುವು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟಿನ್ ದಿನಚರಿ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಮಾನಸಿಕ ಪಾಪವನ್ನೂ, ಪವಿತ್ರತೆ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ರೈಟಿಂಗ್ ಬೈಂಡು ಪ್ರತಿ ಒಂದಕ್ಕೆ ೦—೧೦—೦

ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಪಿ ಎಲ್ ಎಸ್ ಬುಕ್ ಡಿಪೋ ಮೈಸೂರು

WILLIAM & Co, FORT, BOMBAY.

ಅಮೃತಾಂಜನ.

ಹಿಂದೂಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು 30 18,

ತಲೆನೋವು ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲು ನೋವು ಅರ್ಧಾಂಗವಾಯು, ಎದೆಶೀತ, ಗಾಯ, ಒಡೆದು, [illegible]

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತ್ತು ೦ ೮-೦

ಗಜಕರ್ಣದ ಮುಲಾಮು.

ಮೂರು ನಾಲ್ಕು ಸಾರಿ ಹಚ್ಚಿಸುವದರೊಳಗೆ ಗಜಕರ್ಣ ತುರಿ ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಬಟ್ಟೆಯು ಕರೆಯಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೨-೦ ೧೨ ಡಬ್ಬಿಗಳಿಗೆ ೧-೦-೦

ಆಸ್ಮಾ ಸಿಗರೇಟು	೨ ೦ ೦
ಜೇಡುಗಡಿತದ ಮದ್ದು	೦ ೮-೦
ಪುಷ್ಟಿಕಾರಕ ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುವಾಸನೆ ತೈಲ—ಮುಡಿ ಗಳಿಗೆ	೦ ೧ ೦
ಮುಟ್ಟಿನ ಮಾತ್ರೆ ಮಲಬದ್ಧ	೦-೮-೦
[illegible]	೦ ೬-೦
[illegible]	[illegible]
ಕೇಶವರ್ಧಕ ತೈಲ [illegible]	೧ ೦ ೦
[illegible]	[illegible]

[illegible]

ವಿಲಿಯಂ ಮತ್ತು ಕಂಪೆನಿ. [illegible]

ಟೆಲಿಗ್ರಾಫ್ ಅಡ್ರೆಸ್ಸು [illegible]

THE PLACE FOR HASSAN CAPS IS HASSAN

ನಿಮ್ಮ ತಲೆಯು ಬೋಳಾಗಿದೆಯೇನು?

ಹಾಸನದ ಟೋಪಿ ಇಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 21

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ನಿಶ್ಚಯವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಗೆ ಇಟ್ಟಿರುವ ಟೋಪಿಗಳ ದಾರದಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಮಿತ್ತಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ೪, ೧ ರೂ ೬ ೪, ೧ ರೂ ೪ ೪

ಚುಕ್ಕೆಯುಳ್ಳ ಟೋಪಿಗಳು ರೂ ೧ ೪, ರೂ ೧ ೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ೪ ೧ ರೂ ೮ ೪, ೧ ರೂ ೬ ೪

ಉಸುಕಿನ ಟೋಪಿಗಳು ೧ ರೂ ೮ ೪ ೧ ರೂ ೬ ೪.

ಕೂಸುಗಳ ಟೋಪಿ, ಫುಲ್ ಮೋಜೋಡು, ಅರ್ಧ ಮೋಜೋಡು, ಕಸೂತಿ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವ ಜನರಿಗೆ ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

JUST RECEIVED! JUST RECEIVED!!

Stead's Books for the Bairns

(Illustrated) New Numbers [5-2?]

STEAD'S PENNY POPULAR TALES—Sixty four Pages in a coloured Picture Cover Each number contains a story of thrilling interest 24 numbers

CALENDARS FOR 1909.

Apply—The Manager, C.L.S. Book Depot, Mysore City.

ನೋಡಿರಿ. ಪ್ರೋತ್ಸಾಹ ಕೊಡಿರಿ. ತರಿಸಿರಿ.

98 81

ಈಗ ತಾನೇ ಶೀಮೆಯಿಂದ ಬಂದಿದೆ.

ಮೊದಲಿನ ಕ್ರಯಕ್ಕಿಂತಲೂ ಈಗ ಬಹಳ ಕಮ್ಮಿ ದರದಲ್ಲಿ ಮಾರುತ್ತೇವೆ

ಆಸುರಕ್ತಿಸಿರಿ, ಸಮ್ಮಲ್ಲಿಯು ಉಲ್ ದಾರದಂತಹ ಉಲ್ ದಾರ ಎಲ್ಲಿಯೂ ದೊರಿಯದು ೫,೦೦೦ ಹಾಸನ್ ಟೋಪಿಹೊಲಿಯುವ ಸೂಪೀರಿಯರ್ ಉಲ್‌ದಾರ

೧೦ ಟೋಪಿಯಾಗುವ ಸೂಪೀರಿಯರ್ ಉಲ್ ಬಂಡಲ್ ೧ಕ್ಕೆ ೩-೭-೦

೧೨ ಲಡಿಗಳಿರುವ ಸೂಪರ್ ಫೈಯಿನ್ ಉಲ್ ಬಂಡಲ್ ೧ಕ್ಕೆ ೫-೪-೦

೮ ಲಡಿಗಳಿರುವ ಮಿಶ್ರ ಸೂಪೀರಿಯರ್ ಉಲ್ ಬಂಡಲ್ ೧ಕ್ಕೆ ೩-೪-೦

ಮಸ್ಸಿನ ಉಲ್ ದಾರಗಳು.

೮ ಲಡಿಗಳಿರುವ ಬಂಡಲ್ ೧ಕ್ಕೆ [illegible] ೧೨-೦ ಮತ್ತು ೪-೮-೦

೩೦ ಇಂಚಿನ ಕಾರ್ಪೆಟ್ ಬನಿಯನ್ ೧ಕ್ಕೆ [illegible]

ಉಲ್ [illegible]

[illegible] ೧ಕ್ಕೆ [illegible] ೧ಕ್ಕೆ [illegible]

೩೦೦ [illegible] ಗಳಿರುವ [illegible] ಚಿತ್ರ [illegible] ಕೆಟ್‌ಗಳಿಗೆ [illegible]

[illegible] ೧ಕ್ಕೆ [illegible] ರೋಮನಾಶಕ [illegible]

[illegible] ೧ಕ್ಕೆ [illegible] ಟೋಪಿ, ಫ್ಲಾನಲ್ ಮೊಜೊ [illegible] ಬೇಕಾದ [illegible]

ವಿಳಾಸ [illegible] ಮಾರ್ಕೆಟ್, [illegible] ಮಂಗಳೂರು.

ನಿಮಗೆ ಸ್ವಸ್ಥವಿಲ್ಲವೋ ?

ನನಗೆ ಸ್ವಸ್ಥವಿಲ್ಲವೆಂದು ತೋರಿದಾಗ ಎಂದರೆ ನನಗೆ ಯಾವ ರೋಗವೂ ಉಂಟಾಗಿರದೆ ನನಗೆ ದಿನಕ್ಕೆ [illegible] ಕಾಲಪ್ರವೃತ್ತಿಯಾಗುತ್ತದೆಯೇ ?" ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ. ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೊಳ್ಳಿ. [illegible] ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ [illegible]

[illegible] ಆಣೆ ಬುದ್ದಿ ಬೆಲೆ [illegible]

[illegible] ಮಲಬದ್ಧತೆಯ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ [illegible] ಬಹಳ ಹೊತ್ತು ಶರೀರದಲ್ಲಿಟ್ಟು ವಿಷವಾಗಿ, ಪರಿಣಮಿಸುವುದು ಈ ವಿಷವು ಪ್ರಪಂಚದ ರೋಗಗಳೊಳಗೆ ಅರ್ಧದಷ್ಟಕ್ಕೆ ಮೂಲ ಕಾರಣವಾಗಿರುವುದು [illegible] ರೋಗಗಳು ಉಂಟಾಗುವವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ ಪಿತ್ತಕೋಶ ರೋಗ ಪಿತ್ತ [illegible] ಅಗ್ನಿಮಾಂದ್ಯ [illegible] ಕಲ್ಲುಗಳು [illegible] ಗುಲ್ಮರೋಗ [illegible] ಹೊಟ್ಟೆ [illegible] ಮುಂತಾದ ವ್ಯಾಧಿಗಳು ಇವೇ ಮೊದಲಾದವು [illegible] ಬಿಟ್ಟು ಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು [illegible] ಮಕ್ಕಳಿಗಾಗಲಿ [illegible] ಮಲವನ್ನು ಕಷ್ಟವಿಲ್ಲದೆ [illegible] ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ ಅಂಗವಸ್ತ್ರಿಕ್ಕೆ ರುಚಿಯಾಗಿಯೂ ಹಿತವಾಗಿಯೂ [illegible] ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟು ಮಾಡುವುವು [69-43]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೪ ಆಣೆ ಬುದ್ದಿಗಳಲ್ಲಿ [illegible] ಮಾತ್ರೆಗಳು ಎಂದರೆ ೪ ಆಣೆ ಬುದ್ದಿಗಳಲ್ಲಿರುವುದಕ್ಕೆ [illegible] ಹೆಚ್ಚು ಮಾತ್ರೆಗಳಿರುವವು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ಸ್, [illegible] ಬಾಕ್ಸ್ [illegible] ಬೊಂಬಾಯಿ ಇವರಲ್ಲಿ ದೊರೆಯುವುದು

ಮಕ್ಕಳ ಹಿತಕಾರಿ

ಎಂದು

SCOTT'S EMULSION 6-25

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನಾ ಔಷಧಕ್ಕೆ ಕೊ [illegible] ಹೆಸರಿಟ್ಟಿದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸುತ್ತದೆ

ಇದು [illegible] ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನಮಾಡುತ್ತಾರೆ

ಇದು [illegible] ಮಕ್ಕಳನ್ನು ಆರೋಗ್ಯವಾಗುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ವಿಣಾನುಮನುಷ್ಯ ಇರುವ [illegible]

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

4 25



ಕಿಬ್ಬೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕಾಲುಗಳ ನೋವು, ಹೊಟ್ಟೆಯ ನಾನಾ ತರದ ರೋಗಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಡೋಸು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವಸ್ತ್ರಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

1 21

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು [illegible] ಕಾಗಿ [illegible] ಬಹಳ ಬಾಳಿಕೆ [illegible] ಬಣ್ಣವು ಹೋಗುವುದಿಲ್ಲ [illegible] ಬಹಳ ಕಡಮೆ [illegible] ಗಳು ಕೋಲಾರದಲ್ಲಿ [illegible] ವವುಗಳು [illegible] ಈ ಬಟ್ಟೆಗಳನ್ನು [illegible] ಈ ಬಟ್ಟೆಗಳ [illegible] ಗೊತ್ತಾಗುವುದು [illegible] ಒಂದಕ್ಕೆ [illegible] ಬಟ್ಟೆಗಳು, [illegible] ಟೋಪಿ, [illegible] ನಮ್ಮಲ್ಲಿ ಬಹಳ [illegible] ಕ್ಕೆ ಸಿಕ್ಕುತ್ತವೆ

ವಿಳಾಸ: ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

ವೃತ್ತಾಂತ ಪತ್ರಿಕೆ

ಸಕ [illegible] ನೇ ಜೂನ್ ತಾ [illegible] ನೇ ಗುರುವಾರ

ಕಿಸಾನ್ ನ್ಯಾಯ ಸಿಕ್ಕಿತು

ಮೈಸೂರು ಗವರ್ನಮೆಂಟಿನವರು ಕಳೆದ ಮೇ ತಾರೀಖು [illegible] ರಲ್ಲಿ ಒಂದು ಉತ್ತರ್ವಾದ ಹುಕುಮನ್ನು ಪ್ರಕಟಿಸಿದಾರೆ [illegible] ತಾಲ್ಲೂಕು ಚಿಕ್ಕಹಳ್ಳಿ [illegible] ಗ್ರಾಮದಲ್ಲಿ, ರಾಜಾ [illegible] ಶೆಟ್ಟರಿಗೆ ಸೇರಿದ ಕೆಲವು ಜಮೀನುಗಳನ್ನು ಕಂದಾಯದ ಬಾಕಿಗಾಗಿ ಹರಾಜು ಹಾಕಿದರು ಈ ಹರಾಜನ್ನು ರದ್ದು ಮಾಡುವುದಿಲ್ಲವೆಂದು ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ತಿರಸ್ಕಾರ ಮಾಡಿದರು. ಆದರ ಮೇಲೆ ಶೆಟ್ಟರು ಗವರ್ನಮೆಂಟಿನಲ್ಲಿ ಅಪೀಲ್ ಮಾಡಿಕೊಂಡರು. ಗವರ್ನಮೆಂಟಿನವರು ಈ ಮೊಕದ್ದಮೆಯನ್ನು ವಿಮರ್ಶೆ ಮಾಡಿ ಮೇಲ್ಕಂಡ ಹುಕುಮನ್ನು ದಯಪಾಲಿಸಿರುತ್ತಾರೆ.

ಈ ಮೊಕದ್ದಮೆಯ ವಿದ್ಯಮಾನಗಳೇನೆಂದರೆ—ಅಸ್ಸಂತ್ಯಯನೆಂಬುವನಿಗೆ ಕೆಲವು ಜಮೀನುಗಳಿದ್ದವು. ಆತನು [illegible] ನೇ ಸಾಲಿನ ಆ ಜಮೀನುಗಳ ಬಾಬತ್ತು [illegible] ರೂಪಾಯಿ ಕಂದಾಯವನ್ನು ಪಾವತಿ ಮಾಡದ ತಪ್ಪಿಬಿಟ್ಟನು. ಆತನ ಮೇಲೆ ಕಂದಾಯದ ನೋಟೀಸು ಜಾರಿ ಆಯಿತು. ಆತನು ಆಗಲೂ ಕಂದಾಯವನ್ನು ಕಟ್ಟಲಿಲ್ಲವಾದಕಾರಣ ಆತನ ಜಮೀನುಗಳನ್ನು ಸರ್ಕಾರದವರು ಜಪ್ತಿ ಮಾಡಿದರು ಈ ಸಂದರ್ಭದಲ್ಲಿ ಶ್ರೀಮನ್ಮಹಾರಾಜಾ ಸರ್ಕಾರದ ನೌಕರರು ಎರಡು ಅಕೃತ್ಯಗಳನ್ನು ನಡಿಸಿದರು. ಜಮೀನಿನ ಆಂದಾಜು ಮೊಬಲಗು ಇಷ್ಟೆಂದು ಗೊತ್ತು ಮಾಡಲಿಲ್ಲ ; ಮತ್ತು ಅದರ ಹರಾಜು ಕ್ರಮ ಜರುಗಿಸುವುದನ್ನು ಶೇಕ್ದಾರನಿಗೆ ವಹಿಸಿದರು. ಆ ಪ್ರಕಾರ ಒಂದು ಜಮೀನು ೪೦೦ ರೂಪಾಯಿ ಬಾಳುವುದಾಗಿದ್ದದ್ದರಿಂದ ಆ ನೌಕರನಿಗೆ ಅದನ್ನು ಹರಾಜು ಮಾಡಿಸುವುದಕ್ಕೆ ಅಧಿಕಾರವೇ ಇರಲಿಲ್ಲ. ಸರ್ಕಾರಿ ನೌಕರರು ಮಾಡಿದ ಎರಡನೆಯ ತಪ್ಪೇನೆಂದರೆ, ಆ ಜಮೀನು ಇನ್ನೊಬ್ಬನಿಗೆ ಆಧಾರವಾಗಿತ್ತು. ಈ ಸಂಗತಿಯನ್ನು ಆಧಾರದಾರನು [illegible] ನೇ ಜೂಲೈ ತಿಂಗಳಲ್ಲಿ ತಿಳಿಸಿ ತಾಲ್ಲೂಕಿನ ಸ್ಪೆಷಲ್ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ದಾಖಲ್ ಮಾಡಿಸಿಕೊಂಡಿದ್ದನಾದರೂ ಮೇಲ್ಕಂಡ ಹರಾಜು ನೋಟೀಸನ್ನು ಆ ಆಧಾರದಾರನಿಗೆ ಕಳುಹಿಸಲಿಲ್ಲ. ೪೦೦ ರೂಪಾಯಿ ಬಾಳು ರೂಪಾಯಿಗೆ ಹರಾಜು ಮಾಡಿಬಿಟ್ಟರು ಈ ಹರಾಜನ್ನು ಕಾಲಕ್ರಮದಲ್ಲಿ ಆ ಕಮಿಷನರವರು [illegible] ಮಾಡಿದ್ದು ಆಯಿತು

ಮೇಲ್ಕಂಡ [illegible] [illegible] ನೇ ಆಗಸ್ಟ್ ತಾ [illegible] ರಲ್ಲಿ ತನ್ನ [illegible] ನೇ ಜಮೀನು ಹರಾಜು ಮಾಡಿದ್ದರಿಂದ ಅಕ್ರಮವಾಗಿ ನಡೆದಿರುವ ಆ ಹರಾಜನ್ನು ರದ್ದು ಮಾಡಬೇಕೆಂದು ಅರ್ಜಿ ಹಾಕಿಕೊಂಡನು ಅದರ [illegible] ಕಮಿಷನರವರು [illegible] ಆದುದರಿಂದ [illegible] [illegible] [illegible] ಕಮಿಷನರು [illegible] ಕಳುಹಿಸಿಕೊಟ್ಟರು [illegible] ಕಮಿಷನರವರ [illegible] ನೇ ಆಗಸ್ಟ್ ತಾ [illegible] ರಲ್ಲಿ [illegible] ಕಮಿಷನರವರು ಆ [illegible] ತರಿಸಿಕೊಂಡು [illegible] ಅಕ್ರಮವಾಗಿಯೇ ನಡೆದಿದೆ ಎಂದು ಒಪ್ಪಿಕೊಂಡರು [illegible] ಅದನ್ನು ತಿದ್ದುವುದರಲ್ಲಿ ತಮಗೆ ಎಷ್ಟು [illegible] ಅಧಿಕಾರವುಂಟೋ ಅದನ್ನು ಅರಿಯದ [illegible] ಹರಾಜನ್ನು ರಾಜೀ ಮಾಡಿಸುವುದಕ್ಕೆ ಪ್ರಯತ್ನಪಟ್ಟರು [illegible] ರೂಪಾಯಿಗೆ ಹರಾಜನ್ನು ೧೦೦ ರೂಪಾಯಿಗೆ ಕೊಂಡುಕೊಂಡ [illegible] ಪ್ರತಿಫಲವಿಲ್ಲದೆ [illegible] ಬಿಟ್ಟುಕೊಡುತ್ತಾನೆಯೇ ! ಈ ಕಕ್ಷಿಗಾರರು ರಾಜೀ ಮಾಡಿಕೊಳ್ಳಲಿಲ್ಲವೆಂದು ಗೊತ್ತಾದಾಗ ಡೆಪ್ಯುಟಿ ಕಮಿಷನರವರು [illegible] ನೇ ಜೂಲೈ ತಾ [illegible] ರಲ್ಲಿ ಅಂದರೆ ಸುಮಾರು ಹನ್ನೆರಡು ತಿಂಗಳು ಕಳೆದುಹೋದ ತರುವಾಯ, ಹರಾಜಿನ ನಡವಳಿಕೆಯನ್ನು ರದ್ದು ಮಾಡುವುದಿಲ್ಲವೆಂದು ಹುಕುಂಕೊಟ್ಟರು.

ಆದರ ಮೇಲೆ ಶೆಟ್ಟರು ಯಾವಾಗ ಅಪೀಲ್ ಮಾಡಿದರೋ ನಮ್ಮ ಮುಂದಿರುವ ಸರ್ಕಾರಿ ಹುಕುಮಿನಲ್ಲಿ ಕಾಣೆಸಿಲ್ಲ ಈ ಅಪೀಲು [illegible] ನೇ ಮೇ ತಾ [illegible] ರಲ್ಲಿ ವಿಚಾರಕ್ಕೆ ಬಂದಿತ್ತು, ಅಂದರೆ, ಅಲ್ಲಿಗೆ ಶೆಟ್ಟರು ಅರ್ಜಿಕೊಟ್ಟ ತಾರೀಖಿನಿಂದ ಹತ್ತು ದೀರ್ಘ ವರುಷಗಳು ಗತಿಸಿಹೋದವು ! ಗವರ್ನಮೆಂಟಿನವರು ತಾಮಸ ಮಾಡದೇನೂ ಅನುಮಾನಿಸದೇನೂ ಹರಾಜುಕ್ರಮ ನಡೆದದ್ದು ಸರಿಯಲ್ಲವೆಂದು ಅದನ್ನು ರದ್ದುಮಾಡಿ, ಶೆಟ್ಟರು ೧೦೦ ರೂಪಾಯನ್ನು ಒಂದು ತಿಂಗಳೊಳಗಾಗಿ ಅಮಲ್ದಾರರಲ್ಲಿ ಕಟ್ಟಬೇಕೆಂದು ಹುಕುಂ ಕೊಟ್ಟರು

ಇಷ್ಟು ದೊಡ್ಡ ಅನ್ಯಾಯ ನಡೆದ ಮೇಲೆ ಈ ಅಕ್ರಮ ನಡವಳಿಕೆಗೂ ಸಾವಕಾಶಕ್ಕೂ ಯಾರಾದರೂ ಶಿಕ್ಷಿಸಲ್ಪಡುವರೇನೋ ಎಂದು ನಿರೀಕ್ಷಿಸಿದ್ದೆವು, ಆದರೆ ಆ ಶಿಕ್ಷಾಪ್ರಕರಣವೆಲ್ಲಾ ಮುಂದಿನ ಮಾತಿನಲ್ಲೇ ಮುಕ್ತಾಯವಾಗಿದೆ ಏನೆಂದರೆ—"ಈ ಮೊಕದ್ದಮೆಯು ಇತ್ಯರ್ಥವಾಗುವುದಕ್ಕೆ ಹತ್ತು ವರುಷ ಕಾಲ ಹಿಡಿಯಿತಲ್ಲಾ ಎಂತಲೂ, ತಾಲ್ಲೂಕ್ ಮತ್ತು ಡಿಸ್ಟ್ರಿಕ್ಟ್ ಆಫೀಸುಗಳಲ್ಲಿ ಇಷ್ಟು ವಿಶೇಷ ತಿರಸ್ಕಾರದಿಂದ ಕೆಲಸಗಳು ನಡೆಯುವವಲ್ಲಾ ಎಂತಲೂ" ಗವರ್ನಮೆಂಟಿನ

"ವಿಶೇಷ ತಿರಸ್ಕಾರ" ವಿರುವ ಕಡೆಯಲ್ಲಿ ಸಾಮಾನ್ಯವಾಗಿಯೂ, ಗವರ್ನ್‌ಮೆಂಟಿನ ಘನತೆಗೆ ಕುಂದಕವುಂಟಾಗುವ ಸಂದರ್ಭದಲ್ಲಿ ವಿಶೇಷವಾಗಿಯೂ ಶಿಕ್ಷೆಯಾಗಬೇಕಾದದ್ದೇ ಸಹಜವಾಗಿದೆ ಸಾಮಾನ್ಯವಾಗಿ ಸಾಹುಕಾರಿಯಾದ ಕಾರ್ಖಾನೆ, ಅಂಗಡಿ ಮುಂತಾದ ಕಡೆಗಳಲ್ಲಿ ಇಷ್ಟು ಮಟ್ಟಿನ ಅಶ್ರದ್ಧೆಯನ್ನೂ ತಿರಸ್ಕಾರಭಾವನೆಯನ್ನೂ ಕಂಡಕೂಡಲೇ ಯಜಮಾನರು ಅಂಥ ನೌಕರರನ್ನು ಕೆಲಸದಿಂದ ವಜಾಮಾಡಿಬಿಡುತ್ತಾರೆ ಅವರ ಉಲಕ್ಷ್ಯದಿಂದ ಕೆಲಸ ಮಾಡುವ ಅಯೋಗ್ಯರಾದ ಸರ್ಕಾರಿ ನೌಕರರುಗಳು ಕೋರ್ಟು ಕಚೇರಿಗಳಲ್ಲಿ ಸುಖದಿಂದ ಇದ್ದುಕೊಂಡು, ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರ ಗವರ್ನ್‌ಮೆಂಟಿನ ಯಶಸ್ಸನ್ನು ಇನ್ನೂ ಹೆಚ್ಚಾಗಿ ಕೆಡಿಸಿ ಅಪಮಾನವನ್ನುಂಟುಮಾಡಲಿ ಎಂದು ನಡಿಸಿಕೊಂಡು ಬರುತ್ತಿದ್ದಾರೆ ಇದು ಇತರ ಸಂಸ್ಥಾನಗಳಿಗೆ ಮೇಲ್ಪಂಕ್ತಿಯನ್ನು ಹಾಕಿಕೊಡುವ ಸಂಸ್ಥಾನವೋ?

ಮುಕ್ತಿ

ನಿಜವಾದ ಆನಂದಕ್ಕೆ ದೇವರೇ ಕಾರಣನಾಗಿರುತ್ತಾನೆಂಬುವನ್ನು ಮನುಷ್ಯನ ಆತ್ಮವು ಕೆಲವು ಕಾಲ ಮರೆತು ಇಹಕ್ಕೆ ಸಂಬಂಧಪಟ್ಟ ಭೋಗಗಳಲ್ಲಿ ಕೆಲವು ದಿನಗಳು ಸುಖವನ್ನು ಹೊಂದಬಹುದು ಆದರೆ ಮನುಷ್ಯನಿಗೆ ಐಹಿಕ ಸುಖಭೋಗಗಳಲ್ಲಿ ಸಂತೋಷವಿಲ್ಲವೆಂತಲೂ ಅವುಗಳಿಂದ ತನ್ನಾತ್ಮಕ್ಕೆ ನಿಜವಾದ ಆನಂದ ಸಮಾಧಾನಗಳು ಲಭಿಸುವದಿಲ್ಲವೆಂತಲೂ ಅವನು ತಿಳಿದುಕೊಳ್ಳುವ ಕಾಲವು ಬಂದೇ ಬರುವುದೆನ್ನುವುದರಲ್ಲಿ ಸಂಶಯವೇನೂ ಇಲ್ಲ ಆಗ್ಗೆ ಅವನು ಎಲ್ಲವೂ ವ್ಯರ್ಥವಾಗಿವೆನ್ನುವನು ಆಗ ಅವನಿಗೆ ಭೂಲೋಕದ ಸುಖಸಂಪತ್ತುಗಳೆಲ್ಲವೂ ಅಸ್ಥಿರವಾದವುಗಳೆಂದು ಕಂಡುಬಂದರೂ ಅವನು ದೇವರನ್ನು ಹುಡುಕಿ ಆತನಿಂದ ತನಗೆ ದೊರಕುವ ಆನಂದ ಶಾಂತಿಯನ್ನು ಪಡೆದುಕೊಳ್ಳಲು ಪ್ರಯತ್ನಿಸುವದಿಲ್ಲ

ದೇವರನ್ನು ಹುಡುಕಿ ಆತನನ್ನು ಕಾಣಬೇಕೆಂಬ ಅವಲವಿಕೆಯು ಲೋಕದಲ್ಲಿ ವಿಸ್ತರಿಸಿಕೊಂಡಿರುವುದು ಸುಷುಪ್ತಿಯ ಸ್ಥಿತಿಯು ಆತನು ದೇವರ ಸಂಗಡ ಐಕ್ಯನಾಗಿರುತ್ತಾನೆಂಬುವನ್ನು ವ್ಯಕ್ತಪಡಿಸುತ್ತದೆಂದು ಉಪನಿಷತ್ತುಗಳಲ್ಲಿ ಓದುವುದು ಆದರೆ ಮನುಷ್ಯನ ಗ್ರಹಿಕೆಗೆ ತಾಕದಿರುವಂಥ ಆನಂದವು ಆನಂದವೇ ಅಲ್ಲವೆಂದು ಮನುಷ್ಯನು ಭಾವಿಸುವನು ಅದು ಅವನಿಗೆ ಅತೀತವಾಗಿರುವುದು ಮನುಷ್ಯನು ದೇವರೊಡನೆ ಐಕ್ಯವಾಗತಕ್ಕ ಆನಂದವನ್ನು ಅನುಭವಿಸಬೇಕಾದರೆ ಅವನಲ್ಲಿ ... ಅಹಂಕಾರವಿರಬೇಕೆಂದು ರಾಮಕೃಷ್ಣ ಪರಮಹಂಸರು ತಿಳಿಸುತ್ತಾರೆ ... ದೇವರ ಪ್ರತ್ಯಕ್ಷ ... ಮಾಣಿಕ್ಯವಾಸಗರ್, ಚೈತನ್ಯ, ತುಳಸೀದಾಸ್ ಮೊದಲಾದವರು ದೇವರ ದರ್ಶನವನ್ನು ಹೊಂದಿ ಆತನ ... ಬಯಸುವರು ಅವರು ಮುಕ್ತಿಯು ... ತೊರೆಗಳನ್ನು ... ಬಯಸುವದೂ ಹಾಗೆಯೇ ... ಬಯಸುತ್ತಿದ್ದ, ದೇವರೇ ... ದೇವರಿಗೋಸ್ಕರ ನಷ್ಟಪ್ರಾಯವಾಗಿ ... ದೇವರ ಮುಂದೆ ... ಕೊಳ್ಳುವೆವು ಎಂದು ... ಪ್ರಸಾದವಿರುವಂತೆ ಇದ್ದರು ಮನುಷ್ಯನು ತನ್ನ ... ಕೊರತೆಯನ್ನು ತಿಳಿದುಕೊಂಡವನಾದರೆ ಅವನು ದೇವರನ್ನು ... ದೇವರನ್ನು ತಿಳಿದು ಆತನಲ್ಲಿ ಐಕ್ಯನಾಗುವುದೇ ಮುಕ್ತಿಯೆಂದು ... ಅಭಿಪ್ರಾಯ ಪಡುವರು

ಇನ್ನೆಲ್ಲ ... ನಮ್ಮ ಕೇಳತಕ್ಕ ಪ್ರಶ್ನೆ ಯೊಂದಿರುವುದು ಅದೇನೆಂದರೆ ದೇವರು ಮನುಷ್ಯನನ್ನು ಹುಡುಕುತ್ತಾನೋ ದೇವರು ಮನುಷ್ಯನನ್ನು ಅಂಗೀಕರಿಸಿ ಆತನಿಗೆ ಮುಕ್ತಿಯನ್ನು ದಯಪಾಲಿಸುವುದಕ್ಕೆ ಇಷ್ಟಪಡುತ್ತಾನೋ ಈ ವಿಚಾರಗಳಿಗೆ ತಕ್ಕ ಉತ್ತರವನ್ನು ನಾನಾ ಮತಗಳಲ್ಲಿ ಹುಡುಕಿದರೂ ಒಂದು ಮತದಲ್ಲಿ ಮಾತ್ರವೇ ನಮಗೆ ಸರಿಯಾದ ಉತ್ತರವು ದೊರಕುವುದು ಆ ಮತದ ಬೋಧಕರು ದೇವರು ಮನುಷ್ಯನನ್ನು ನಿಜವಾಗಿಯೂ ಹುಡುಕಿ ಅವನ ಪಕ್ಷವನ್ನು ಪ್ರೀತಿಯಿಂದ ಬಯಸುತ್ತಾನೆಂದು ತಿಳಿಸುತ್ತಾನೆ

ಉಪನಿಷತ್ತುಗಳಲ್ಲಿಯೂ ಷಡ್ದರ್ಶನಗಳಲ್ಲಿಯೂ ಕಂಡು ಬರುವ ತತ್ವಗಳು ಮುಕ್ತಿಯ ವಿಷಯ ಬಹಳವಾಗಿ ತಿಳಿಸುತ್ತವೆ ಆದರೆ ಅನೇಕ ಸಂದರ್ಭಗಳಲ್ಲಿ ಅವು ದೇವರ ವಿಷಯ ಮನುಷ್ಯನು ಗ್ರಹಿಸದಂತೆಯೂ ನಂಬಿಕೆ ಇಡಲಾರದ ರೀತಿಯಲ್ಲಿಯೂ ಬೋಧಿಸುತ್ತವೆ ಅವು ದೇವರು ಪರಮಾತ್ಮನಾಗಿದ್ದುಕೊಂಡು ಮನುಷ್ಯನ ಸಂಪರ್ಕದಲ್ಲಿಲ್ಲವೆಂದೂ ಆತನು ನಿರ್ಗುಣನೆಂತಲೂ ಮನುಷ್ಯನಾದವನು ಬರೀ ಮಾಯೆಯೆಂತಲೂ ಬೋಧಿಸುತ್ತವೆ ಮನುಷ್ಯನು ಮುಕ್ತಿಯನ್ನು ಹೊಂದಬಯಸಿದರೆ ಅವನು ಸಾಧಾರಣವಾದ ಮನುಷ್ಯನಂತಿರಕೂಡದಂತೆ ಅವನು ಗೃಹಸ್ಥಾಶ್ರಮವನ್ನು ತೊರೆದು ... ಸನ್ಯಾಸತ್ವವನ್ನು ಧರಿಸಬೇಕೆಂಬ ವಿಧಿ ಇರುವುದು ಭೂಲೋಕದವರೆಲ್ಲರೂ ಈರೀತಿ ಮಾಡಿದರೆ ಭೂಲೋಕವೇ ಇರಲಾರದು ಮೇಲ್ಕಂಡ ತತ್ವದ ಮೂಲಕ ಸಾಧಾರಣವಾದ ಮನುಷ್ಯನು ದೇವರೊಂದಿಗೆ ಐಕ್ಯವನ್ನು ಪಡೆಯುವುದಕ್ಕೆ ಅಸಾಧ್ಯವಾಗುವುದು

ಮಹಾಜ್ಞಾನಿಯರ ಅಭಿಪ್ರಾಯದಂತೆ ದೇವರೊಂದಿಗೆ ಅನ್ಯೋನ್ಯವಾಗುವುದು ಅಸಾಧ್ಯವು ಆತನು ಸರ್ವಶಕ್ತನಾಗಿರುವುದರಿಂದ ತನ್ನಿಷ್ಟದ ಪ್ರಕಾರ ಮನುಷ್ಯನನ್ನು ಆಶೀರ್ವದಿಸಲೂ ಬಹುದು ನಾಶ ಮಾಡಲೂ ಬಹುದು ಮನುಷ್ಯನು ಯಾವ ವಾದವಿಲ್ಲದೆ ವಿಧೇಯನಾಗಬೇಕೆಂದು ಮಹಮ್ಮದೀಯ ಮತವು ತಿಳಿಸುತ್ತದೆ ಹೀಗಿರುವದರಿಂದ ದೇವರಿಗೂ ಮನುಷ್ಯರಿಗೂ ಅನ್ಯೋನ್ಯವಾಗುವದು ಹೇಗೆ?

ಆದರೆ ದೇವರು ಮನುಷ್ಯನನ್ನು ನಿಜವಾಗಿಯೂ ಪ್ರೀತಿಸಿ ಅವನನ್ನು ತನ್ನ ಬಳಿಗೆ ಕರೆಯುತ್ತಾನೆ ಮಹಾ ಬೋಧಕನಾದ ಯೇಸುಕ್ರಿಸ್ತನು ಇದನ್ನು ಬಹು ಪರಿಸ್ಕಾರವಾಗಿ ತಿಳಿಸಿರುತ್ತಾನೆ ಆತನು ದೇವರ ಬಳಿಯಿಂದ ಬಂದು ದೇವರು ಮನುಷ್ಯನನ್ನು ತಂದೆಯೋಪಾದಿಯಲ್ಲಿ ಪ್ರೀತಿಸಿ ಅವನನ್ನು ಕಾಪಾಡುತ್ತಾ ಬರುತ್ತಿರುವನೆಂದು ತಿಳಿಸಿರುತ್ತಾನೆ ಯೇಸುಕ್ರಿಸ್ತನು ನರಾವತಾರವೆತ್ತಿ ಮನುಷ್ಯನಾಗಿ ಬಂದವರಿಂದ ಅವನು ನರಕುಲವನ್ನು ಪ್ರೀತಿಸಿ ಅವರಿಗೋಸ್ಕರ ಬಡತನವನ್ನೂ ಹಿಂಸೆಗಳನ್ನೂ ಅವಮಾನವನ್ನೂ ಕಡೆಯಲ್ಲಿ ಮರಣವನ್ನೂ ಅನುಭವಿಸಿದನು ಆತನ ಜೀವಮಾನದಿಂದಲೂ ಆತನ ಮರಣದಿಂದಲೂ ದೇವರು ಮನುಷ್ಯನನ್ನು ಪ್ರೀತಿ ಮಾಡುತ್ತಾನೆಂಬ ಸಂಗತಿಯು ವ್ಯಕ್ತಪಡುತ್ತದೆ ದೇವರು ಮನುಷ್ಯನನ್ನು ಅವನು ಯಾವ ಸ್ಥಿತಿಯಲ್ಲಿದ್ದರೂ ಕರೆಯುತ್ತಾನೆ ಆತನ ಕರೆಯುವಿಕೆಗೆ ಮನುಷ್ಯನು ಮನೆ, ಮಠ, ಹೆಂಡತಿ, ಮಕ್ಕಳು ಇವರನ್ನು ಬಿಟ್ಟು ಯೋಗಿಯಾಗಿ ಹೋಗಬೇಕಾದ್ದಿಲ್ಲ ನಾವು ಇರುವ ಸ್ಥಿತಿಯಲ್ಲಿಯೇ ಯೇಸುಕ್ರಿಸ್ತನ ಬಳಿಗೆ ಹೋಗ ಬಹುದು ಆತನು ನಮ್ಮಿಂದ ಕೇಳುವ ಕಾಣಿಕೆಯು ಯಾವುದೆಂದರೆ ನಮ್ಮ ಪ್ರೀತಿಯೇ ಈ ಪ್ರೀತಿಯು ಭಕ್ತಿಯನ್ನೇ ದೇವರು ಕೋರುತ್ತಾನೆ

ನಮ್ಮಲ್ಲಿ ನಿಜವಾದ ಭಕ್ತಿ ಇರುವುದಾದರೆ ದೇವರು ನಮ್ಮನ್ನು ಸತ್ಯಕ್ಕೆ ಮಾರ್ಗದರ್ಶನು ನಾವು ದೇವರ ಕಟ್ಟಳೆಗಳನ್ನು ಮೀರುವುದು ಬಹು ಭಯಂಕರವಾದ ಪಾಪವೆಂದು ತಿಳಿದುಕೊಳ್ಳುವೆವು ನಮ್ಮಲ್ಲಿ ಭಕ್ತಿ ಇದ್ದರೆ ಸುಳ್ಳು, ಮೋಸ, ಕಳ್ಳತನ, ಹಾದರ ಇವೇ ಮೊದಲಾದ ಹೇಯವಾದ ಪಾಪಕೃತ್ಯಗಳಿಗೆ ದೂರನಾಗಿರುವೆವು ನಾವು ದೇವರನ್ನು ಕಂಡು ಆತನನ್ನು ಪ್ರೀತಿಸುವೆವು ಈ ಮೂಲಕ ನಾವು ದೇವರೊಡನೆ ಐಕ್ಯವನ್ನು ಪಡೆದುಕೊಳ್ಳುವೆವು ಯೇಸುಕ್ರಿಸ್ತನೇ ಎಲ್ಲರಿಗೆ ಉಚಿತಾರ್ಥವಾಗಿ ಮುಕ್ತಿಯನ್ನು ದಯಪಾಲಿಸುವ ಗುರುವಾಗಿದ್ದಾನೆ

ಸ್ವದೇಶದ ವೃತ್ತಾಂತಗಳು

ಮಾಜಿ ದಿವಾನ್ ಮೆ| ವಿ ಪಿ ಮಾಧವರಾಯರು ಈ ತಿಂಗಳ ಕಡೆಯವರೆಗೆ ನೀಲಗಿರಿ ಬೆಟ್ಟದ ಮೇಲಿದ್ದು ಬಳಿಕ ದಕ್ಷಿಣ ದೇಶಕ್ಕೆ ಸೇರಿದ ಕೊಡೈಕೆನಾಲ್ ಎಂಬ ಊರಿಗೆ ಹೋಗಿಬರುವವರಾಗಿದ್ದಾರೆ

ದಾವಣಗೆರೆ ತಾಲ್ಲೂಕು ಹೊಸಕೋಟೆಯಲ್ಲಿ ಕರ್ನಾಟಕ ವಿದ್ಯಾಶಾಲೆಯನ್ನು ಮುಂದಿನ ಜುಲೈ ತಿಂಗಳಿಂದ ಇಟ್ಟು ನಡಿಸಬೇಕೆಂದು ಕುಂಕೂರು ಡಿಸ್ಟ್ರಿಕ್ಟ್ ಬೋರ್ಡಿನವರು ಗೊತ್ತುಮಾಡಿ ಸರ್ಕಾರಕ್ಕೆ ಬರೆದಿದ್ದಾರೆ

ಬೆಂಗಳೂರು ದಂಡಿನಲ್ಲಿ ೧೦೭ ವರುಷ ವಯಸ್ಸಿನ ಮೆ| ಸೆಂಟ್‌ಮಾಗೋ ಎಂಬೊಬ್ಬ ರೋಮನ್ ಕ್ರೈಸ್ತನು ಕಾಲವಾದನೆಂದೂ, ಈತನು ೫ ವರುಷಗಳ ಕೆಳಗೆ ಬೋಧಕೋದ್ಯೋಗವನ್ನು ತ್ಯಜಿಸಿ ವಿರಾಮವಾಗಿದ್ದನೆಂದೂ ಪ್ರಕಟವಾಗಿದೆ

ರಾಜಧಾನಿಯ ಮ್ಯುನಿಸಿಪಲ್ ಫಂಡ್ ವಗೈರೆ ಮತ್ತು ಬಿಚ್ಚು ಚಾಮುಗಳನ್ನು ಸರಿಯಾಗಿ ಮೆಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಸರ್ಕಾರದವರು ಇಷ್ಟರೊಳಗೆ ಪ್ರತ್ಯೇಕವಾದ ಒಬ್ಬ ಅಧಿಕಾರಿಯನ್ನು ನೇಮಕಮಾಡುವವರಾಗಿದ್ದಾರೆಂದು ಕೇಳುತ್ತೇವೆ

ಮೈಸೂರಿನಿಂದ ಎಡ್ವರ್ಡ್, ವಿಕ್ಟೋರಿಯಾ ಟೆರ್ರೇಸ್ ಮೇಲೆ ಮಾನಕೇರಿಯಿಂದ ಕಲ್ಲಹಳ್ಳಿ ಶರಕ ದಿಸ್ಪೆನ್ಸರಿ ... ಬಿಡುವಂತೆ ಏರ್ಪಾಡು ಮಾಡುವುದಲ್ಲದೆ ಇದು ಈ ವರುಷದ ಅಂತ್ಯಭಾಗದಲ್ಲಿ ಸಿದ್ಧವಾಗಬಹುದು ಎಂದು ನಿರೀಕ್ಷಿಸಲ್ಪಟ್ಟಿದೆ

... ಪಡೆದಿರುವವರು ... ಮೊದಲಾದ ಪಶುರುಗಳ ಸಮೇತ ರೈಲ್ ಗಾಡಿಗಳಲ್ಲಿ ಪ್ರಯಾಣಮಾಡಕೂಡದೆಂದೂ ಅಂಥಾ ಪಶುರುಗಳನ್ನು ಪಾರ್ಸಲ್ ಮಾಡಿ ಗಾಡಿಗಳ ಪಕ್ಕೆ ಕಳುಹಿಸಬೇಕೆಂತಲೂ ಸರ್ಕಾರದವರು ವಿಧಿಸಿರುತ್ತಾರೆ

ಶೃಂಗೇರಿ ಮಠದ ಜಗದ್ಗುರು ಸ್ವಾಮಿಗಳು ಕಳೆದ ಎರಡು ತಿಂಗಳುಗಳಿಂದಲೂ ಬಾಗಲಕೋಟೆ ಜಿಲ್ಲೆಯಲ್ಲಿ ಸಂಚಾರಮಾಡುತ್ತಿದ್ದು ಈಗ ... ಎಂಬ ಜಲಪಾತದ ಬಳಿ ಇರುತ್ತಾರೆ ಇವರು ವಾಪಸು ಬರಲು ಇನ್ನು ೩ ೪ ತಿಂಗಳಾಗಬಹುದೆಂದು ಕೇಳುತ್ತೇವೆ

ಇನ್ನು ಮುಂದೆ ಚೀಫ್ ಕೋರ್ಟಿನ ಚೀಫ್ ಜಡ್ಜಿಗೂ, ಕೌನ್ಸಿಲ್ ಮೆಂಬರುಗಳಿಗೂ ಮಾತ್ರವೇ ಪೂರಾ ಸರ್ವಿಸ್ ಆದ ಮೇಲೆ ತಿಂಗಳಿಗೆ ೫೦೦ ರೂಪಾಯಿ ಪೆನ್ಷನ್ ಕೊಡಲಾಗುವುದೆಂತಲೂ ಇತರ ಅಧಿಕಾರಿಗಳಿಗೆ ಅಷ್ಟು ದೊರಕಲಾರದೆಂತಲೂ ಸರ್ಕಾರದವರು ತೀರ್ಮಾನಿಸಿರುತ್ತಾರೆ

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು ಜೂಲೈ ತಾ ೧೨ ನೇ ಸೋಮವಾರ ಬೆಳಗೆ ಪ್ರಾರಂಭವಾಗಿ ತಾ ೧೫ ನೇ ಗುರುವಾರದ ಬೆಳಗಿನ ವರಿಗೂ ನಡೆಯುವುವೆಂತಲೂ, ವೈಸ್ ಪ್ರೆಸಿಡೆಂಟ್ ಮೆ ಎಂ ಜಿ ಕೃಷ್ಣಸ್ವಾಮಿರಾಯರು ಚುನಾವಣೆಯ ಕಾಲದಲ್ಲಿ ಹಾಜರಾಗಿರುವರೆಂತಲೂ ಪ್ರಕಟವಾಗಿದೆ

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಮಾರಿಕುಪ್ಪದ ಹತ್ತಿರ ಒಂದು ಗ್ರಾಮಕ್ಕೆ ಕಳೆದ ಶನಿವಾರ ರಾತ್ರಿ ೬೦ ಮಂದಿ ಪಂಜುಕಳ್ಳರು ನುಗ್ಗಿ ಶ್ರಾನುಭೋಗರ ಮನೆಯನ್ನು ಲೂಟಿಮಾಡಿ ಸುಮಾರು ಒಂದು ಸಾವಿರ ರೂಪಾಯಿನ ಸ್ವತ್ತನ್ನು ಅಪಹರಿಸಿಕೊಂಡು ಹೋದರು ಇದುವರೆಗೂ ಅವರ ಸುಳಿವೇ ಗೊತ್ತಾಗಲಿಲ್ಲ

ರಾಜಧಾನಿಯಲ್ಲಿರುವ ಸಾಹುಕಾರ್ ಮೆ ಪುರುಷೋತ್ತಮಾನಂದಗಿರಿ ಗೋಸಾಯಿಯವರ ಮೇಲೆ ಒಂದು ಕ್ರಿಮಿನಲ್ ಮೊಕದ್ದಮೆ ಬಂದು, ಪೋಲೀಸಿನವರು ಅವರನ್ನು ವಾರಂಟಿನಲ್ಲಿ ಹಿಡಿದಿದ್ದರು ಮರುದಿನ ಅವರ ಕಡೆ ಲಾಯರು ಮ್ಯಾಜಿಸ್ಟ್ರೇಟರಲ್ಲಿ ಅರ್ಜಿ ಕೊಟ್ಟು ಮೆ ಗೋಸಾಯಿಯವರನ್ನು ಜಾಮೀನಿನ ಮೇಲೆ ಬಿಡಿಸಿರುತ್ತಾರೆ

ಮಡಿಕೇರಿಗೆ ಸೇರಿದ ಸೋಮವಾರಪೇಟೆಯಲ್ಲಿ ಸಾಹುಕಾರ್ ಮೆ ವೆಂಕಟರಾಮಶೆಟ್ಟರು ಕಾಡಿನಲ್ಲಿ ಏಕಾಂಗಿಯಾಗಿ ಹೋಗುತ್ತಿದ್ದಾಗ ಆ ಮಾರ್ಗವಾಗಿ ಬರುತ್ತಿದ್ದ ಅಂಚೆ ಜವಾನನಿಗೆ ಗುಂಡಿನೇಟು ತಗಲಿ ಮೃತಪಟ್ಟನು ಕೂಡಲೇ ಈ ಸಂಗತಿಯನ್ನು ಶೆಟ್ಟರೇ ಹೋಗಿ ಪೋಲೀಸಿಗೆ ತಿಳಿಸಿದರು ಅವರು ಅಕಸ್ಮಾತ್ತು ಸಂಭವಿಸಿದ ಮರಣವೆಂದು ತೀರ್ಮಾನಮಾಡಿದರು

ರಾಜಧಾನಿಯ ಹಳೇ ಅಗ್ರಹಾರದಲ್ಲಿರುವ ವಸೂರೆ ಅಂಗಡಿ ವರ್ತಕ ಮೆ| ಸಿದ್ದಪ್ಪನವರು ಕಳೆದ ೧೦ ನೇ ತಾ ಗುರುವಾರ ಏಕಕಾಲದಲ್ಲಿ ಐದು ಮದುವೆಗಳನ್ನು ಸ್ವಂತಖರ್ಚಿನಿಂದ ಮಾಡಿಸಿರುತ್ತಾರೆ. ಗಂಡುಹೆಣ್ಣುಗಳಿಗೆ ತಕ್ಕನಾಗಿ ಉಡಿಗೆತೊಡಿಗೆಗಳನ್ನು ಮಾಡಿಸಿಕೊಟ್ಟರು ಇವಕ್ಕೆಲ್ಲಾ ಅವರಿಗೆ ಸುಮಾರು ೩೦೦-೪೦೦ ರೂಪಾಯಿ ಖರ್ಚಾಗಿರಬಹುದೆಂದು ಕೇಳುತ್ತೇವೆ

ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ಸಣ್ಣ ರೈಲನ್ನು ಹಾಕಬಹುದೆಂದು ಇಂಡಿಯಾ ಗವರನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ ಈ ರೈಲ್ ರಸ್ತೆಯು ೩೮ ಮೈಲಿ ದೂರ ಹಾಕಲ್ಪಡುವುವು ಇದಕ್ಕಾಗಿ ಒಂದು ಸಾಹುಕಾರ ಕಂಪನಿ ಏರ್ಪಾಡಾಗಿ ಅನೇಕರು ಷೇರುಗಳನ್ನು ಕೊಂಡುಕೊಂಡಿರುವುದು ವಾಚಕರಿಗೆ ತಿಳಿದೇ ಇದೆ ಅದರ ಕಾಮಗಾರಿಯನ್ನು ಕಂಪನಿಯವರು ಬೇಗನೆ ಮಾಡಿಸಿ ಪೂರೈಸುವರೆಂದು ನಿರೀಕ್ಷಿಸಲ್ಪಟ್ಟಿದೆ

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಭಾವಹಳ್ಳಿ ಎಂಬ ಗ್ರಾಮದಲ್ಲಿ ಒಬ್ಬ ಹೆಂಗಸಿಗೆ ಒಂದು ಪಾತ್ರೆಯ ತುಂಬಾ ಪೂರ್ವಕಾಲದ ಚಿನ್ನದ ನಾಣ್ಯಗಳು ದೊರೆತವು ಅವಳು ಒಂದೊಂದಾಗಿ ೨ ೩ ರೂಪಾಯಿಗೆ ಬಿಕರಿ ಮಾಡುತ್ತಿದ್ದಳು ಆ ನಾಣ್ಯಗಳೆಲ್ಲಾ ಸುಮಾರು ೫,೦೦೦ ರೂಪಾಯಿ ಬೆಲೆಯಾಗಬಹುದು ಪೋಲೀಸಿನವರು ಪತ್ತೆಮಾಡಿ ಅವಳ ಬಳಿ ಇದ್ದ ನಾಣ್ಯಗಳನ್ನೆಲ್ಲಾ ಸರ್ಕಾರಕ್ಕೆ ವಶಪಡಿಸಿಕೊಂಡು ತನಿಖೆಮಾಡುತ್ತಿದ್ದಾರೆ

ಕಳೆದ ವಾರವೆಲ್ಲಾ ರಾಜಧಾನಿಯಲ್ಲಿ ಫೋಟೋ ಷಂಟ ಗಳೂ, ಕುದುರೆಗಳ ಜೂಜೂ ನಡೆದವು ರಾಜಪಗಡದವರೂ ಯೂರೋಪಿಯನ್ ಸರ್ದಾರರು ಪಟ್ಟಣದ ಪ್ರಜೆಗಳೂ ಮೈದಾನದಲ್ಲಿ ಸೇರಿ ಆ ವಿನೋದಗಳನ್ನು ನೋಡಿದರು ಫೋಟೋ ಷಂಟದಲ್ಲಿ ಮೈಸೂರು ಜವಾನರುಗಳು ಚನ್ನಾಗಿ ಆಡದೆ ಸೋತುಹೋದರು ಕುದುರೆಗಳ ಜೂಜಿನಲ್ಲೂ ಮೈಸೂರಿನ ಕುದುರೆಗಳು ವಿಶೇಷವಾಗಿ ಗೆಲ್ಲಲಿಲ್ಲ ಯೂರೋಪಿಯನ್ ಅತಿಥಿಗಳಿಗೆ ಕಳೆದ ಬುಧವಾರ ರಾತ್ರಿ ಗವರ್ನ್‌ಮೆಂಟ್ ಹೌಸ್ ಬಂಗಲೆಯಲ್ಲಿ ಶ್ರೀಮನ್ಮಹಾರಾಜರವರು ... ಮಾಡಿಸಿದರು ಸುಮಾರು ೧೦೦ ಮಂದಿ ಸಮಾರಂಭದ ... ಕುಳಿತು ಭೋಜನ ಮಾಡಿದರು ಬಳಿಕ ಅವರೆಲ್ಲಾ ... ಹೋಗಿ ಬಯಸ್ಕೋಪ್ ... ನೋಟವನ್ನು ನೋಡಿದರು ... ಅರಮನೆ ... ಅರಮನೆಯ ... ಜಲತರಂಗ, ಪಡಕೋಲಾಟ ... ಸಂಗೀತ ... ಸೋಮವಾರ ರಾತ್ರಿ ಅರಮನೆಯಲ್ಲಿ ... ರಂಗಮಾಲಿನ ಸಂಗೀತ ... ಕೆ ಮನೆಗೆ ಜನರನ್ನು ... ಮೊದಲಾದ ... ವಹಗಳನ್ನು ... ಯೂರೋಪಿಯನ್ ಅತಿಥಿಗಳು ಈ ವಾರದಲ್ಲಿ ತಮ್ಮ ತಮ್ಮ ಸ್ಥಳಗಳನ್ನು ಕುರಿತು ... ಹೋಗುವವರಾಗಿದ್ದಾರೆ

ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಸಿಟಿಯ ಮ್ಯುನಿಸಿಪಲ್ ಕೌನ್ಸಿಲ್ಲಿನಲ್ಲಿ ಈಗಿರುವ ನೇಮಕರುಗಳ ಅವಧಿಯನ್ನು ಮುಂದಿನ ಸೆಪ್ಟೆಂಬರ್ ಆಖೈರ್ ವರೆಗೆ ಹೆಚ್ಚು ಮಾಡಿದೆ

ಹಿಂದೂಸ್ಥಾನದ ಚಕ್ರವರ್ತಿ ಸಾರ್ವಭೌಮರವರ ಜನ್ಮದಿನವನ್ನು ಜೂನ್ ತಾ ೨೬ ರಲ್ಲಿ ಆಚರಿಸಬೇಕೆಂದು ಸರ್ಕಾರಿ ಗೆಜೆಟಿನಲ್ಲಿ ಪ್ರಕಟಿಸಿದ್ದುದರಿಂದ ಅದಕ್ಕೆ ಬದಲಾಗಿ ಆ ಜನೋತ್ಸವ ನಿಮಿತ್ತ ಜೂನ್ ತಾ ೨೫ನೆ ಶುಕ್ರವಾರ ಈ ಸಂಸ್ಥಾನದ ಎಲ್ಲಾ ಕೋರ್ಟು ಕಚೇರಿಗಳೂ ಸ್ಕೂಲುಗಳೂ ಮುಚ್ಚಲ್ಪಡತಕ್ಕದ್ದು

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುವ ಅಸಿಸ್ಟೆಂಟ್ ಸರ್ಜನ್ ಮೆ ಸಿ ಎಸ್ ರಾಮಚಂದ್ರ ಐಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಡೆಪ್ಯುಟಿ ಕಮಿಷನರ್ ಮೆ ಪಿ ಪಟ್ಟಯವರು ಉಪಯೋಗಿಸಿಕೊಳ್ಳದೆ ಇರುವ ಪ್ರಿವಿಲೆಜ್ ರಜವನ್ನು ರದ್ದು ಮಾಡಿದೆ

ಕೋಲಾರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ ಸಿ ಶ್ರೀಕಂಠೇಶ್ವರ ಐಯರವರಿಗೆ ಜೂನ್ ತಾ ೧೪ ರಿಂದ ಹನ್ನೆರಡು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಸೀನಿಯರ್ ಅ ಕಮಿಷನರ್ ಮೆ ಬಿ ... ಯವರು ಡಿಸ್ಟ್ರಿಕ್ಟಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು

ಚಾಮರಾಜಪೇಟೆ ಸಬ್ ಡಿವಿಜನ್ ಆಫೀಸರ್ ಮೆ ಬಿ ವೆಂಕೋಬರಾಯರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು ಅ ಕಮಿಷನರ್ ಮೆ ಟಿ ರಾಯಲುಶೆಟ್ಟಿಯವರು ಸಬ್ ಡಿವಿಜನ್ ಛಾರ್ಜನ್ನು ವಹಿಸಿದ್ದರು

ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿ ಮೆ ... ಎಸ್ ಬಾಲಸುಂದರಂ ಐಯರವರು ಗವರ್ನ್‌ಮೆಂಟ್ ಸೆಕ್ರೆಟರಿಯಾಗಿ ಬದಲಿ ಸೇವಿಸಲ್ಪಟ್ಟಿದ್ದಾರೆ

ಸಾಗರದ ಆಕ್ಟಿಂಗ್ ಮುನ್ಸಿಫ್ ಮೆ ಕೆ ಎನ್ ... ಐಯಂಗಾರರಿಗೆ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ

ಅ ಕಮಿಷನರ್ ಮೆ ಆರ್ ನಾರಾಯಣಸ್ವಾಮಿ ರಾಯರನ್ನು ಮಾರ್ಚಿ ತಾ ೩೧ ರಿಂದ ೪ನೇ ಕ್ಲಾಸಿಗೆ ಬಡ್ತಿಮಾಡಿದೆ

ದೊಡ್ಡಬಳ್ಳಾಪುರದ ಮುಜರಾಯಿ ದೇವಸ್ಥಾನಗಳ ಕಾರುಬಾರುಗಳನ್ನು ನೋಡಿಕೊಳ್ಳುವುದಕ್ಕೆ ಮೆ| ಬೀಚಹಳ್ಳಿ ವೆಂಕಟಕೃಷ್ಣಯ್ಯನವರನ್ನು ಧರ್ಮದರ್ಶಿಯಾಗಿ ನೇಮಕಮಾಡಿದೆ

ಮೈಸೂರ್ ಡಿವಿಜನ್ ಅ ಇಂಜಿನಿಯರ್ ಮೆ ವಿ ಗುಂಡಾಚಾರ್ಯರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

JUST RECEIVED! JUST RECEIVED!!

Stead's Books for the Bairns

(Illustrated) New Numbers [5 2]

STEAD'S PENNY POPULAR TALES—Sixty four es in a coloured Picture Cover Each number contains ory of thrilling interest 24 numbers

CALENDARS FOR 1909.

—The Manager, C. L. S. Book Depot, Mysore City

ಕೋಡಿರಿ ಪ್ರೋತ್ಸಾಹ ಕೊಡಿರಿ ತರಿಸಿರಿ. 98 11

ಈಗ ತಾನೇ ಶೀಮೆಯಿಂದ ಬಂದಿದೆ.

ಬಹಳ ಶ್ರೇಯಸ್ಕರವಾದ ಈಗ ಬಹಳ ಕಡಿಮೆ ದರದಲ್ಲಿ ಮಾರುತ್ತೇವೆ ... ಸಿರಿ, ನಮ್ಮಲ್ಲಿಯ ಉಲ್ ದಾರದಂತಹ ಉಲ್ ದಾರ ಎಲ್ಲಿಯೂ ದೊರೆ ... ೫,೦೦೦ ಹಾಸನ ಟೋಪಿಹೊಲಿಯುವ ಸೂಪೀರಿಯರ್ ಉಲ್ ದಾರ

೧೦ ಟೋಪಿಯಾಗುವ ಸೂಪೀರಿಯರ್ ಉಲ್ ಬಂಡಲ್ ಗಳ್ಳಿ ೩ ೭ ೦

೧೨ ಲಡಿಗಳಿರುವ ಸೂಪರ್ ಫೈನ್ ಉಲ್ ಬಂಡಲ್ ಗಳ್ಳಿ ೩-೯ ೦

೮ ಲಡಿಗಳಿರುವ ಮಿಶ್ರ ಸೂಪೀರಿಯರ್ ಉಲ್ ಬಂಡಲ್ ಗಳ್ಳಿ ೩ ೪ ೦

ದಪ್ಪನ ಉಲ್ ದಾರಗಳು

೮ ಲಡಿಗಳಿರುವ ಬಂಡಲ್ ಗಳ್ಳಿ ೩ ೭ ೦ ೩ ೧೩ ೦ ಮತ್ತು ೪ ೮ ೦

೩೦ ಇಂಚಿನ ಕಾರ್ಡ್ ಬೋರ್ಡ್ ಗಳ್ಳಿ ೦ ೮ ೦

ಉಲ್ ೩೬ ಇಂಚಿನದಕ್ಕೆ ೨ ೫ ೦

... ಕೈವಸ್ತ್ರ ಗಳ್ಳಿ ೦ ೩ ೦ ಪರಿಮಳ ದ್ರವ್ಯದ ಶೀಶೆ ಗಳ್ಳಿ ೦-೩-೦ ... ರಾತ್ರಿ ... ಇರುವ ... ಮತ್ತು ಪ್ಯಾಕೆಟ್ ಗಳ್ಳಿ ೦ ೩ ೦ ... ಮಂತ್ರ ... ಗಳ್ಳಿ ೦ ೧ ೬ ಬೋರ್ಡಿನಾಸಿಕ ಸಾಬೂ ... ಗಳ್ಳಿ ೦ ೮ ೦ ಕೂಸುಗಳ ಟೋಪಿ, ಪೂರ್ತಿ ಮೇಜೋಡು ಬೇಕಾದ ಕ್ರಯದ ಪಟ್ಟಿ ತರಿಸಿ

ಎಸ್ — ವಾಲ್ಟನ್ ಮಾರ್ಕೆಟ್, ೬೪ ಎ ಮಂಗಳೂರು

ನಿನಗೆ ಮೈ ಸ್ವಸ್ಥವಿಲ್ಲವೋ?

ನನಗೆ ಮೈ ಸ್ವಸ್ಥವಿಲ್ಲವೆಂದು ಕೇಳಿದರೋ—ಎಂದರೆ, ನನಗೆ ಯಾವ ರೋಗವೋ ತಿಳಿಯದು—' ನನಗೆ ದಿನಕ್ಕೆ ಒಂದು ಸಲವಾದರೂ ಶಾಲಪ್ರವೃತ್ತಿಯಾಗುತ್ತದೆಯೇ?' ಎಂದು ನಿನ್ನನ್ನು ನೀನೇ ಕೇಳಿಕೋ.

(೧೨ ಅನೆ ಬುಡ್ಡಿ ಸಣ್ಣದು)

ಹಾಗೆ ಆಗದಿದ್ದರೆ ಡೋನ್ಸ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ನಾಳೆ ದಿನ ಬೆಳಗ್ಗೆ ಸುಖವಾಗಿ ಶಾಲಪ್ರವೃತ್ತಿಯಾಗಿ ನನಗೆ ಮೈ ಹಗುರವಾಗುವುದು ಮಲಬಂಧದೋಷದಿಂದ ಅಥವಾ ಬೇರೆ ಯಾವುದಾದರೊಂದು ಕಾರಣದಿಂದ ಹೊಟ್ಟೆ ಹುಳಿಯಾಗುವುದು ... ಮಲಬದ್ಧತೆಯಿಂದ ಉಂಟಾಗುವ ರೋಗಗಳಿಗೆ ... ಪಿತ್ತಕೋಶ ರೋಗ ... ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ ... ಹೊಟ್ಟೆಯುಬ್ಬರ ... ಹೊಟ್ಟೆ ... ಆರೋಗ್ಯವೇ ... ಪಿತ್ತವನ್ನು ಬಲವಡಿಸಿ, ಪಿತ್ತದ ... ಆರೋಗ್ಯವನ್ನುಂಟುಮಾಡುವುದು [69 43]

ಬೆಲೆ ೮ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೩೦ ಮಾತ್ರೆ ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು ಔಷಧಿಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು ಅಥವಾ, ಡೋನ್ಸ್ ಬಾಕ್ಸ್ ... ಬೊಂಬಾಯಿ —ಇವರಲ್ಲಿ ದೊರೆಯುವುದು

ಮಕ್ಕಳ ಹಿತಕಾರಿ

೬ ೨ ದು

SCOTT'S EMULSION 6-25

(ಸ್ಕಾಟ್ಸ ಇಮಲ್ಷನ್)

ಎಂದೇ ... ಕೊಡಲು ... ತಂದೆತಾಯಿಗಳು ಹುರುಪ್ಪಿ ಯಾಕಂದರೆ ಇದು ಮಕ್ಕಳ ಆರೋಗ ... ವೃದ್ಧಿಪಡಿಸಿ, ದೇಹವನ್ನು ... ಯಾಗಿ ಬೆಳೆಸುತ್ತದೆ

ಇದು ... ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವಿಸುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ ಮಾಡುವುದು ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಮೀನುಮನುಷ್ಯ ಇರುವ ...

ಕ್ರಯೋಸೋಟ ತಯಾರಾದದ್ದು

ಎಲ್ಲಾ ಔಷಧದ ಸಾಮಗ್ರಿ ರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

CHAMBERLAIN'S COLIC CHOLERA

AND DIARRHOEA REMEDY

ಚೇಂಬರ್ಲಿನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

4 25



ಈ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ರೋಗಗಳು—ಈ ರೋಗಗಳನ್ನೆಲ್ಲಾ ನಾಶಮಾಡುತ್ತದೆ ಈ ಪರಮಶ್ರೇಯಸ್ಕರವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವಸ್ತುತಃಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸ್ವದೇಶೀ ಬಟ್ಟೆಗಳು! ಸ್ವದೇಶೀ ಬಟ್ಟೆಗಳು!! 2 11

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೌಕ ಬಟ್ಟೆಗಳು ಸಾಜಾಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಒಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ದೊರೆಯುತ್ತವೆ ಶಾಲುಗಳು ... ಟೋಪಿಗಳು ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ವೃತ್ತಾಂತ ಪತ್ರಿಕೆ

ಸಕ್ ೧೯೦೯ ನೇ ಇಸವಿ ಜೂನ್ ತಾ ೨೪ ನೇ ಗುರುವಾರ

ಕಠಿಣವಾದ ಶಿಸ್ತು

ಮೈಸೂರು ಗವರ್ನ್ಮೆಂಟಿನವರು ಕಳೆದ ಮೇ ತಾರೀಖು ೧೭ ರಲ್ಲಿ ಒಂದು ಉತ್ತರವಾದ ಹುಕುಮನ್ನು ಪ್ರಕಟಿಸಿದಾರೆ ಹೊಳೆನರಸೀಪುರದ ತಾಲ್ಲೂಕು ಚಿಕ್ಕಹಜ್ಜೆ ಗ್ರಾಮದಲ್ಲಿ ರಾಜಾ ದೊಡ್ಡ ಸುಬ್ಬಶೆಟ್ಟರಿಗೆ ಸೇರಿದ ಕಾಲ್ತ್ರ ಜಮೀನುಗಳನ್ನು ಕಂದಾಯದ ಬಾಕಿಗಾಗಿ ಹರಾಜು ಹಾಕಿದರು ಈ ಹರಾಜನ್ನು ರದ್ದು ಮಾಡುವುದಿಲ್ಲವೆಂದು ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ತಿರಸ್ಕಾರ ಮಾಡಿದರು ಆದರ ಮೇಲೆ ಶೆಟ್ಟರು ಗವರ ಮೆಂಟಿನಲ್ಲಿ ಅಪೀಲ್ ಮಾಡಿಕೊಂಡರು ಗವರ್ನ್ಮೆಂಟಿನವರು ಈ ಮೊಕದ್ದಮೆಯನ್ನು ವಿಮರ್ಶೆ ಮಾಡಿ ಮೇಲ್ಕಂಡ ಹುಕುಮನ್ನು ದಯಪಾಲಿಸಿರುತ್ತಾರೆ

ಈ ಮೊಕದ್ದಮೆಯ ವಿದ್ಯಮಾನಗಳೇನೆಂದರೆ—ಒಂದು ಶೆಟ್ಟಿಯನೆಂಬುವನಿಗೆ ಕೆಲವು ಜಮೀನುಗಳಿದ್ದವು ಆತನು ೧೯೦೫-೦೬ ನೇ ಸಾಲಿನ ಆ ಜಮೀನುಗಳ ಬಾಬತು ೫೯ ರೂಪಾಯಿ ಕಂದಾಯವನ್ನು ಪಾವತಿ ಮಾಡದ ತಪ್ಪಿಬಿಟ್ಟನು ಆತನ ಮೇಲೆ ಕಂದಾಯದ ನೋಟೀಸ್ ಜಾರಿ ಆಯಿತು ಆತನು ಆಗಲೂ ಕಂದಾಯವನ್ನು ಕಟ್ಟಲಿಲ್ಲವಾದಕಾರಣ ಆತನ ಜಮೀನುಗಳನ್ನು ಸರ್ಕಾರದವರು ಜಪ್ತಿ ಮಾಡಿದರು ಈ ಸಂದರ್ಭದಲ್ಲಿ ಶ್ರೀಮನ್ಮಹಾರಾಜಾ ಸರ್ಕಾರದ ನೌಕರರು ಎರಡು ಅಕೃತ್ಯಗಳನ್ನು ನಡಿಸಿದರು ಜಮೀನಿನ ಅಂದಾಜಾ ಮೊಬಲಗು ಇಷ್ಟೆಂದು ಗೊತ್ತು ಮಾಡಲಿಲ್ಲ, ಮತ್ತು ಆದರ ಹರಾಜು ಕ್ರಮ ಜರುಗಿಸುವುದನ್ನು ಶೀಘ್ರವಾಗಿ ಮಾಡಿದರು ಆ ಪೈಕಿ ಒಂದು ಜಮೀನು ೩೦೦ ರೂಪಾಯಿ ಬಾಳುವುದಾಗಿದ್ದದ್ದರಿಂದ ಆ ನೌಕರರಿಗೆ ಅದನ್ನು ಹರಾಜು ಮಾಡಿಸುವುದಕ್ಕೆ ಅಧಿಕಾರವೇ ಇರಲಿಲ್ಲ ಸರ್ಕಾರಿ ನೌಕರರು ಮಾಡಿದ ಎರಡನೆಯ ತಪ್ಪೇನೆಂದರೆ ಆ ಜಮೀನು ಇನ್ನೊಬ್ಬನಿಗೆ ಆಧಾರವಾಗಿತ್ತು ಈ ಸಂಗತಿಯನ್ನು ಆಧಾರದಾರನು ೧೯೦೬ ನೇ ಜುಲೈ ತಿಂಗಳಲ್ಲಿ ತಿಳಿಸಿ ತಾಲ್ಲೂಕಿನ ಸ್ಪೆಷಲ್ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ದಾಖಲ್ ಮಾಡಿಸಿಕೊಂಡಿದ್ದನಾದರೂ ಮೇಲ್ಕಂಡ ಹರಾಜು ನೋಟೀಸನ್ನು ಆ ಆಧಾರದಾರನಿಗೆ ಕಳುಹಿಸಲಿಲ್ಲ ೩೦೦ ರೂಪಾಯಿ ಬಾಳು ... ರೂಪಾಯಿಗೆ ಹರಾಜು ಮಾಡಿಬಿಟ್ಟರು ಈ ಹರಾಜನ್ನು ಕಾಲಕ್ರಮದಲ್ಲಿ ಆ ಕಮಿಷನರವರು ... ಮಾಡಿದ್ದೂ ಆಯಿತು

ಮೇಲ್ಕಂಡ ಆಧಾರದಾರನು ೧೯೦೭ ನೇ ಆಗಸ್ಟ್ ತಾ ೨೩ ರಲ್ಲಿ ತನ್ನ ಮುಂತೆ ನೋಟೀಸು ಇಲ್ಲದೇ ಜಮೀನು ಹರಾಜು ಮಾಡಿದ್ದರಿಂದ ಅಕ್ರಮವಾಗಿ ನಡೆದಿರುವ ಆ ಹರಾಜನ್ನು ರದ್ದು ಮಾಡಬೇಕೆಂದು ಅರ್ಜಿ ಹಾಕಿಕೊಂಡನು ಅದರ ವಿಚಾರಣೆಯನ್ನು ಡಿಸ್ಟ್ರಿಕ್ಟ್ ಕಮಿಷನರವರು ರಿಪೋರ್ಟನ್ನು ಕೇಳಿದರು ಅಮಲ್ದಾರರು ಕೆಳಗಿನ ... ರೀತಿ ... ಸಮಾ ... ಹೇಳಿದರು ಈ ಸಮಾಧಾನವು ಆ ಕಮಿಷನರರಿಗೆ ತೃಪ್ತಿಕರವಾಗಿ ಕಂಡುಬರಲಿಲ್ಲ ... ೧೯೦೮ ನೇ ... ತಾ ... ರಲ್ಲಿ ಅಂದರೆ ... ನಾಲ್ಕು ಮಾಸದ ಎರಡು ವರುಷಗಳ ತರುವಾಯ ... ಕಮಿಷನರರು ... ಕಳುಹಿಕೊಟ್ಟರು ... ಈ ... ಕಾಗದ ಪತ್ರಗಳನ್ನು ನೋಡಿ ... ಕಮಿಷನರವರ ... ಡೆಪ್ಯುಟಿ ರೂಪಾಯಿ ೧೯೦೯ ನೇ ಆಗಸ್ಟ್ ತಾ ೬ ರಲ್ಲಿ ... ಕಮಿಷನರವರು ಆ ಕಾಗದಗಳನ್ನು ತರಿಸಿಕೊಂಡು ಹರಾಜು ... ಅಕ್ರಮವಾಗಿಯೇ ನಡೆದಿದೆ ಎಂದು ಒಪ್ಪಿಕೊಳ್ಳಬೇಕಾಯಿತು. ಅದನ್ನು ತಿದ್ದುವುದರಲ್ಲಿ ತಮಗೆ ಎಷ್ಟು ಮಟ್ಟಿಗೆ ಅಧಿಕಾರವಿರುತ್ತದೋ ಅದುವರನ್ನು ಬರಿಯದೆ ಆ ಕ್ರಮವನ್ನು ರದ್ದು ಮಾಡಿಸುವುದಕ್ಕೆ ಪ್ರಯತ್ನಪಟ್ಟರು ... ಜಮೀನಿನ ... ೧೦೦ ರೂಪಾಯಿಗೆ ಕೊಂಡುಕೊಂಡ ಮನುಷ್ಯನು ಪ್ರತಿಫಲವಿಲ್ಲದೆ ಸುಮ್ಮನೆ ಬಿಟ್ಟುಕೊಡುತ್ತಾನೆಯೇ? ಈ ಶೆಟ್ಟರು ರಾಜೀ ಮಾಡಿಕೊಳ್ಳಲಿಲ್ಲವೆಂದು ಗೊತ್ತಾದ ಡೆಪ್ಯುಟಿ ಕಮಿಷನರವರು ೧೯೦೮ ನೇ ಜುಲೈ ತಾ ೭ ರಲ್ಲಿ ಅಂದರೆ ಸುಮಾರು ಹನ್ನೆರಡು ತಿಂಗಳು ಕಳೆದುಹೋದ ತರುವಾಯ ಹರಾಜಿನ ನಡವಳಿಕೆಯನ್ನು ರದ್ದು ಮಾಡುವುದಿಲ್ಲವೆಂದು ಹುಕುಂಕೊಟ್ಟರು

ಆದರ ಮೇಲೆ ಶೆಟ್ಟರು ಯಾವಾಗ ಅಪೀಲ್ ಮಾಡಿದರೋ ನಮ್ಮ ಮುಂದಿರುವ ಸರ್ಕಾರಿ ಹುಕುಮಿನಲ್ಲಿ ಕಾಣಿಸಲಿಲ್ಲ ಈ ಅಪೀಲು ೧೯೦೯ ನೇ ಮೇ ತಾ ೭ ರಲ್ಲಿ ವಿಚಾರಣೆ ಮಾಡಲ್ಪಟ್ಟಿತು ಅಂದರೆ, ಅಲ್ಲಿಗ ಶೆಟ್ಟರು ಅರ್ಜಿಕೊಟ್ಟ ತಾರೀಖಿನಿಂದ ಹತ್ತು ದೀರ್ಘ ವರುಷಗಳು ಗತಿಸಿಹೋದವು! ಗವರ್ನ್ಮೆಂಟಿನವರು ತಾಮಸ ಮಾಡದೇನೂ ಇರುವುದನ್ನು ಮನಸ್ಸಿಗೆ ತಂದುಕೊಂಡು ದನೂ ಮಾಡಿದ ಹುಕುಮನ್ನು ನಡೆದದ್ದು ಸರಿಯಲ್ಲವೆಂದು ಬಿಡ ನಮೇ ರದ್ದುಮಾಡಿ, ಶೆಟ್ಟರು ೧೦೦ ರೂಪಾಯನ್ನು ಒಂದು ತಿಂಗಳೊಳಗಾಗಿ ಅಮಲ್ದಾರರಲ್ಲಿ ಕಟ್ಟಬೇಕೆಂದು ಹುಕುಂ ಕೊಟ್ಟರು

ಇಷ್ಟು ದೊಡ್ಡ ಅನ್ಯಾಯ ನಡೆದ ಮೇಲೆ ಈ ಅಕ್ರಮ ನಡವಳಿಕೆಗೂ ಕಾರಣಕರ್ತರಾದ ಯಾರಾದರೂ ಶಿಕ್ಷಿಸಲ್ಪಡುವರೇನೋ ಎಂದು ನಿರೀಕ್ಷಿಸಿದ್ದೆವು, ಆದರೆ ಆ ಶಿಕ್ಷಾಪ್ರಕರಣವೆಲ್ಲಾ ಮುಂದಿನ ಮಾತಿನಲ್ಲೇ ಮುಕ್ತಾಯವಾಗಿದೆ ಏನೆಂದರೆ— ಈ ಮೊಕದ್ದಮೆಯು ಇತ್ಯರ್ಥವಾಗುವುದಕ್ಕೆ ಹತ್ತು ವರುಷ ಕಾಲ ಹಿಡಿಯಿತಲ್ಲಾ ಎಂತಲೂ, ತಾಲ್ಲೂಕ್ ಮತ್ತು ಡಿಸ್ಟ್ರಿಕ್ಟ್ ಆಫೀಸುಗಳಲ್ಲಿ ಇಷ್ಟು ವಿಶೇಷ ತಿರಸ್ಕಾರದಿಂದ ಕೆಲಸಗಳು ನಡೆಯುವವಲ್ಲಾ ಎಂತಲೂ" ಗವರ್ನ್ಮೆಂಟಿನ ...

"ವಿಶೇಷ ತಿರಸ್ಕಾರ" ವಿರುವ ಕಡೆಯಲ್ಲಿ ಸಾಮಾನ್ಯವಾಗಿಯೂ, ಗವರ್ನಮೆಂಟಿನ ಘನತೆಗೆ ಕುಂದಕವುಂಟಾಗುವ ಸಂದರ್ಭದಲ್ಲಿ ವಿಶೇಷವಾಗಿಯೂ ಶಿಕ್ಷೆಯಾಗಬೇಕಾದದ್ದು ಸಹಜವಾಗಿದೆ ಸಾಮಾನ್ಯವಾಗಿ ಸಾಹುಕಾರಿಯಾದ ಕಾರ್ಖಾನೆ, ಅಂಗಡಿ ಮುಂತಾದ ಕಡೆಗಳಲ್ಲಿ ಇಷ್ಟು ಮಟ್ಟಿನ ಅಶ್ರದ್ಧೆಯನ್ನೂ ತಿರಸ್ಕಾರಭಾವವನ್ನೂ ಕಂಡಕೂಡಲೇ ಯಜಮಾನರು ಅಂಥ ನೌಕರರನ್ನು ಕೆಲಸದಿಂದ ವಜಾಮಾಡಿಬಿಡುತ್ತಾರೆ ಆದರೆ ಅಲಕ್ಷ್ಯದಿಂದ ಕೆಲಸ ಮಾಡುವ ಅಯೋಗ್ಯರಾದ ಸರ್ಕಾರಿ ನೌಕರನಾಮಧಾರಿಗಳು ಕೋರ್ಟು ಕಚೇರಿಗಳಲ್ಲಿ ಸುಖದಿಂದ ಇದ್ದುಕೊಂಡೇ ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರ ಗವರ್ನಮೆಂಟಿನ ಯಶಸ್ಸನ್ನು ಇನ್ನೂ ಹೆಚ್ಚಾಗಿ ಕೆಡಿಸಿ ಅಪಮಾನವನ್ನುಂಟುಮಾಡಲಿ ಎಂದು ಸಹಿಸಿಕೊಂಡು ಬರುತ್ತಿದ್ದಾರೆ ಇದು ಇತರ ಸಂಸ್ಥಾನಗಳಿಗೆ ಮೇಲ್ಪಂಙ್ತಿಯನ್ನು ಹಾಕಿಕೊಡುವ ಸಂಸ್ಥಾನವೋ?"

ಮುಕ್ತಿ

ನಿಜವಾದ ಆನಂದಕ್ಕೆ ದೇವರೇ ಕಾರಣನಾಗಿರುತ್ತಾನೆಂಬುದನ್ನು ಮನುಷ್ಯನ ಆತ್ಮವು ಕೊಂಚಕಾಲ ಮರೆತು ಇಹಕ್ಕೆ ಸಂಬಂಧಪಟ್ಟ ಭೋಗಗಳಲ್ಲಿ ಕೆಲವು ದಿನಗಳು ಸುಖವನ್ನು ... ಆದರೆ ಮನುಷ್ಯನಿಗೆ ಐಹಿಕ ಸುಖಭೋಗಗಳಲ್ಲಿ ಸಂತೋಷವಿಲ್ಲವೆಂತಲೂ ಅವುಗಳಿಂದ ತನ್ನಾತ್ಮಕ್ಕೆ ನಿಜಾನಂದ ಆನಂದ ಸಮಾಧಾನಗಳು ಲಭಿಸುವದಿಲ್ಲವೆಂತಲೂ ಅವನು ತಿಳಿದುಕೊಳ್ಳುವ ಕಾಲವು ಬಂದೇ ಬರುವುದೆನ್ನುವುದರಲ್ಲಿ ಸಂದೇಹವೇನೂ ಇಲ್ಲ ಆಗ್ಗೆ ಅವನು ಎಲ್ಲವೂ ವ್ಯರ್ಥವಾಗಿದೆನುವನು ... ಆ ಕಾಲಕ್ಕೆ ಬೇಡೋಣದ ಸುಖಸಂಪತ್ತುಗಳೆಲ್ಲವೂ ಅಸ್ಥಿರವಾದುವುಗಳೆಂದು ಕಂಡುಬಂದರೂ ಅವರು ದೇವರನ್ನು ಹುಡುಕಿ ಆತನಿಂದ ತಮ್ಮ ತೃಷೆಗಳು ಬಯಸುವ ಆನಂದ ಶಾಂತಿಯನ್ನು ಪಡೆದುಕೊಳ್ಳಲು ಪ್ರಯತ್ನಿಸುವರಲ್ಲ

ದೇವರನ್ನು ಹುಡುಕಿ ಆತನನ್ನು ಕಾಣಬೇಕೆಂಬ ಅವಲಂಬಿಕೆಯು ಜಾಕ ... ಏರ್ಪಡಿಸಿಕೊಂಡಿರುವುದು ... ಆತನು ದೇವರ ಸಂಗಡ ಐಕ್ಯನಾಗಿರುತ್ತಾನೆಂಬುದನ್ನು ವ್ಯಕ್ತಪಡಿಸುತ್ತದೆಂದು ಉಪನಿಷತ್ತುಗಳಲ್ಲಿ ಓದುಬಹುದು ಆದರೆ ಮನುಷ್ಯನ ಗ್ರಹಿಕೆಗೆ ಸಿಕ್ಕದಿರುವಂಥ ಆನಂದವು ಆನಂದವೇ ಅಲ್ಲವೆಂದು ಮನುಷ್ಯನು ಭಾವಿಸುವನು ಅದು ಅವನಿಗೆ ಅನಾಗತವಾಗಿದೆ ಮನುಷ್ಯನು ದೇವರೊಡನೆ ಏಕವಾಗತಕ್ಕ ಆನಂದವನ್ನು ಅನುಭವಿಸಬೇಕಾದರೆ ಅವನಲ್ಲಿ ... ಆದುದರಿಂದ ... ರಾಮಕೃಷ್ಣ ಪರಮಹಂಸರೂ ... ಹಿಂದಿನ ಪ್ರಾಚೀನ ಋಷಿಗಳೂ ... ನಗರ್, ಬ್ರೌನಿಂಗ್, ತುಳಸೀದಾಸ್ ಮೊದಲಾದವರು ದೇವರ ದರ್ಶನವನ್ನು ಹೊಂದಿ ಆತನ ... ಕಂಡು ... ಅವರು ... ತೊರೆಗಳನ್ನು ... ಬಯಸುವರೂ ... ನನ್ನ ಪ್ರಾಣವು ನಿನ್ನನ್ನು ಬಯಸುತ್ತದೆ, ದೇವರೇ ... ದೇವರಿಗೋಸ್ಕರ ನನ್ನ ಪ್ರಾಣವು ದಾಹಗೊಳ್ಳುತ್ತದೆ ... ಬಂದು ದೇವರ ಮುಂದೆ ಕಾಣಿಸಿಕೊಳ್ಳುವೆನು ಎಂದು ಹೇಳಿದ ... ಪ್ರವಾದಿಯಂತೆ ಇದ್ದರು ... ತನ್ನಾತ್ಮವು ಕೊರತೆಯನ್ನು ತಿಳಿದುಕೊಂಡಿದ್ದರೆ ಅವನು ದೇವರನ್ನು ... ಹೀಗೆ ದೇವರನ್ನು ತಿಳಿದು ಆತನಲ್ಲಿ ಐಕ್ಯವಾಗುವುದೇ ಮುಕ್ತಿಯೆಂದು ಹಿಂದೂ ಜನರು ಅಭಿಪ್ರಾಯ ಪಡುವರು

... ಕ್ರಿಸ್ತ ಮತಕ್ಕೆ ಸ್ವಲ್ಪ ಭೇದವಿರುವುದು ಅದೇನೆಂದರೆ ದೇವರು ಮನುಷ್ಯನನ್ನು ಹುಡುಕುವುದು ಹೇಗೆ ದೇವರು ಮನುಷ್ಯನನ್ನು ಅಂಗೀಕರಿಸಿ ಅವನಿಗೆ ಮುಕ್ತಿಯನ್ನು ದಯಪಾಲಿಸುವುದಕ್ಕೆ ಇಷ್ಟಪಡುತ್ತಾನೋ ಈ ವಿಚಾರಗಳಿಗೆ ತಕ್ಕ ಉತ್ತರವನ್ನು ನಾನಾ ಮತಗಳಲ್ಲಿ ಹುಡುಕಿದರೂ ಒಂದು ಮತದಲ್ಲಿ ಮಾತ್ರವೇ ನಮಗೆ ಸರಿಯಾದ ಉತ್ತರವು ದೊರಕುವುದು ಆ ಮತದ ಬೋಧಕನು ದೇವರು ಮನುಷ್ಯನನ್ನು ನಿಜವಾಗಿಯೂ ಹುಡುಕಿ ಅವನ ಭಕ್ತಿಯನ್ನು ಪ್ರೀತಿಯನ್ನೂ ಬಯಸುತ್ತಾನೆಂದು ತಿಳಿಸುತ್ತಾನೆ

ಉಪನಿಷತ್ತುಗಳಲ್ಲಿಯೂ ಷಡ್ದರ್ಶನಗಳಲ್ಲಿಯೂ ಕಂಡು ಬರುವ ತತ್ವಗಳು ಮುಕ್ತಿಯ ವಿಷಯ ಬಹಳವಾಗಿ ತಿಳಿಸುತ್ತವೆ ಆದರೆ ಅನೇಕ ಸಂದರ್ಭಗಳಲ್ಲಿ ಅವು ದೇವರ ... ಮನುಷ್ಯನು ಗ್ರಹಿಸದಂತೆಯೂ ... ಅವತಾರದ ರೀತಿಯಿಂದಲೂ ಬೋಧಿಸುತ್ತವೆ ಅಲ್ಲದೆ ದೇವರು ಪರಮಾತ್ಮನಾಗಿದ್ದುಕೊಂಡು ಮನುಷ್ಯನ ಸಂಪರ್ಕವಿಲ್ಲದವನೆಂದೂ ಆತನು ನಿರ್ಗುಣನೆಂತಲೂ ಮನುಷ್ಯನಾದವನು ... ಮಾಡುವನೆಂತಲೂ ಬೋಧಿಸುತ್ತವೆ ಮನುಷ್ಯನು ಮುಕ್ತಿಯನ್ನು ಹೊಂದಬೇಕೆಂದು ಅಪೇಕ್ಷಿಸಿದರೆ ಅವನು ಸಾಧಾರಣವಾದ ಮನುಷ್ಯನಂತಿರಕೂಡದಂತೆ ಅವನು ... ಸಹಸ್ರಾಬ್ದವನ್ನು ... ಸನ್ಯಾಸತ್ವವನ್ನು ಧರಿಸಬೇಕೆಂಬುದೇ ಇರುವುದು ಭೂಲೋಕದವರೆಲ್ಲರೂ ಈ ರೀತಿ ಮಾಡಿದರೆ ಭೂಲೋಕವೇ ಇರದು ಮೇಲ್ಕಂಡ ತತ್ವದ ಮೂಲಕ ಸಾಧಾರಣವಾದ ಮನುಷ್ಯನು ದೇವರೊಂದಿಗೆ ಐಕ್ಯವನ್ನು ಪಡೆಯುವುದಕ್ಕೆ ಅಸಾಧ್ಯನಾಗುವನು

ಮಹಮದೀಯರ ಅಭಿಪ್ರಾಯದಂತೆ ದೇವರೊಂದಿಗೆ ಅನ್ಯೋನ್ಯವಾಗುವುದು ಅಸಾಧ್ಯವು ಆತನು ಸರ್ವ ರಕ್ಷನಾಗಿರುವುದರಿಂದ ತನ್ನಿಷ್ಟದ ಪ್ರಕಾರ ಮನುಷ್ಯನನ್ನು ಆಶೀರ್ವದಿಸಲೂ ಬಹುದು ನಾಶ ಮಾಡಲೂ ಬಹುದು ಮನುಷ್ಯನು ಯಾವ ಮಾತಿಲ್ಲದೆ ವಿಧೇಯನಾಗಬೇಕೆಂದು ಮಹಮದೀಯ ಮತವು ಬೋಧಿಸುವುದು ಹೀಗಿರುವದರಿಂದ ದೇವರಿಗೂ ಮನುಷ್ಯರಿಗೂ ಅನ್ಯೋನ್ಯವಾಗುವುದು ಹೇಗೆ?

ಆದರೆ ದೇವರು ಮನುಷ್ಯನನ್ನು ನಿಜವಾಗಿಯೂ ಪ್ರೀತಿಸಿ ಅವನನ್ನು ತನ್ನ ಬಳಿಗೆ ಕರೆಯುತ್ತಾನೆ ಮಹಾ ಬೋಧಕನಾದ ಯೇಸುಕ್ರಿಸ್ತನು ಇದನ್ನು ಸ್ಪಷ್ಟವಾಗಿ ತಿಳಿಸಿರುತ್ತಾನೆ ಆತನು ದೇವರ ಬಳಿಯಿಂದ ಬಂದು ದೇವರು ಮನುಷ್ಯನನ್ನು ತಂದೆಯೋಪಾದಿಯಲ್ಲಿ ಪ್ರೀತಿಸಿ ಅವನನ್ನು ಕಾಪಾಡುತ್ತಾ ಬರುತ್ತಿರುವನೆಂದು ತಿಳಿಸಿರುತ್ತಾನೆ ಯೇಸುಕ್ರಿಸ್ತನು ನರಾವತಾರವೆತ್ತಿ ಮನುಷ್ಯನಾಗಿ ಬಂದದ್ದರಿಂದ ಅವನು ನರಕುಲವನ್ನು ಪ್ರೀತಿಸಿ ಅವರ ತಿರಸ್ಕಾರ ಬಡತನವನ್ನೂ ಹಿಂಸೆಗಳನ್ನೂ ಅವಮಾನವನ್ನೂ ಕಡೆಯಲ್ಲಿ ಮರಣವನ್ನೂ ಅನುಭವಿಸಿದನು ಆತನ ಜೀವಮಾನದಿಂದಲೂ ಆತನ ಮರಣದಿಂದಲೂ ದೇವರು ಮನುಷ್ಯನನ್ನು ಪ್ರೀತಿ ಮಾಡುತ್ತಾನೆಂಬ ಸಂಗತಿಯು ವ್ಯಕ್ತಪಡುತ್ತದೆ ದೇವರು ಮನುಷ್ಯನನ್ನು, ಅವನು ಯಾವ ಸ್ಥಿತಿಯಲ್ಲಿದ್ದರೂ ಕರೆಯುತ್ತಾನೆ ಅವನ ಕರೆಯುವಿಕೆಗೆ ಮನುಷ್ಯನು ಮನೆ, ಮಠ, ಹೆಂಡತಿ, ಮಕ್ಕಳು ಇವರನ್ನು ಬಿಟ್ಟು ಯೋಗಿಯಾಗಿ ಹೋಗಬೇಕಾದುದಿಲ್ಲ ನಾವು ಇರುವ ಸ್ಥಿತಿಯಲ್ಲಿಯೇ ಯೇಸುಕ್ರಿಸ್ತನ ಬಳಿಗೆ ಹೋಗಬಹುದು ಆತನು ನಮ್ಮಿಂದ ಕೇಳುವ ಕಾಣಿಕೆಯು ಯಾವುದೆಂದರೆ ನಮ್ಮ ಪ್ರೀತಿಯೇ ಈ ಪ್ರೀತಿಯ ಭಕ್ತಿಯನ್ನೇ ದೇವರು ಕೋರುತ್ತಾನೆ

ನಮ್ಮಲ್ಲಿ ನಿಜವಾದ ಭಕ್ತಿ ಇರುವುದಾದರೆ ದೇವರು ನಮ್ಮನ್ನು ಸಕ್ಕೆ ಮಾರ್ಗದರ್ಶಿಸುವನು ನಾವು ದೇವರ ಕಟ್ಟಳೆಗಳನ್ನು ಮೀರುವುದು ಬಹು ಭಯಂಕರವಾದ ಪಾಪವೆಂದು ತಿಳಿದುಕೊಳ್ಳುವೆವು ನಮ್ಮಲ್ಲಿ ಭಕ್ತಿ ಇದ್ದರೆ ಸುಳ್ಳು, ಮೋಸ, ಕಳ್ಳತನ, ಹಾದರ ಇವೇ ಮೊದಲಾದ ಹೇಯವಾದ ಪಾಪಕೃತ್ಯಗಳಿಗೆ ದೂರನಾಗಿರುವೆವು ನಾವು ದೇವರನ್ನು ಕಂಡು ಆತನನ್ನು ಪ್ರೀತಿಸುವೆವು ಈ ಮೂಲಕ ನಾವು ದೇವರೊಡನೆ ಐಕ್ಯವನ್ನು ಪಡೆದುಕೊಳ್ಳುವೆವು ಯೇಸುಕ್ರಿಸ್ತನೇ ಎಲ್ಲರಿಗೆ ಉಚಿತಾರ್ಥವಾಗಿ ಮುಕ್ತಿಯನ್ನು ದಯಪಾಲಿಸುವ ಗುರುವಾಗಿದ್ದಾನೆ

ಒಳದೇಶದ ವೃತ್ತಾಂತಗಳು

ಮಾಜಿ ದಿವಾನ್ ಮೆ|| ವಿ ಪಿ ಮಾಧವರಾಯರು ಈ ತಿಂಗಳ ಕಡೆಯವರೆಗೆ ನೀಲಗಿರಿ ಬೆಟ್ಟದ ಮೇಲಿದ್ದು ಬಳಿಕ ದಕ್ಷಿಣ ದೇಶಕ್ಕೆ ಸೇರಿದ ಕೋಟ್ಟಾಲಂ ಎಂಬ ಊರಿಗೆ ಹೋಗಿಬರುವವರಾಗಿದ್ದಾರೆ

⁂

ಪಾವಗಡದ ತಾಲೂಕು ಹೊಸಕೋಟೆಯಲ್ಲಿ ಕರ್ನಾಟಕ ನೈದ ಶಾಲೆಯನ್ನು ಮುಂದಿನ ಜುಲೈ ತಿಂಗಳಿಂದ ಇಟ್ಟು ನಡಿಸಬೇಕೆಂದು ತುಂಕೂರು ಡಿಸ್ಟ್ರಿಕ್ಟ್ ಬೋರ್ಡಿನವರು ಗೊತ್ತುಮಾಡಿ ಸರ್ಕಾರಕ್ಕೆ ಬರೆದಿದ್ದಾರೆ

⁂

ಬೆಂಗಳೂರು ದಂಡಿನಲ್ಲಿ ೧೦೭ ವರುಷ ವಯಸ್ಸಿನ ಮೆ|| ಸೆಂಟ್ ... ಎಂಬ ರೋಮನ್ ಕೆಥೊಲಿಕ್ ಕ್ರಿಸ್ತನು ಕಾಲವಾದನೆಂದೂ, ಈತನು ... ವರುಷಗಳ ಕೆಳಗೆ ... ಪ್ರಜೆಯಾಗಿದ್ದನೆಂದೂ ಪ್ರಕಟವಾಗಿದೆ

⁂

ರಾಜಧಾನಿಯ ಮ್ಯುನಿಸಿಪಲ್ ಹಟ್ಟಿಗಳು ಮತ್ತು ಬಜಾರು ಬಾಬುಗಳನ್ನು ಸರಿಯಾಗಿ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಸರ್ಕಾರದವರು ಇನ್ಸ್‌ಪೆಕ್ಟರೊಳಗೆ ಪ್ರತ್ಯೇಕವಾದ ಒಬ್ಬ ಅಧಿಕಾರಿಯನ್ನು ನೇಮಕ ಮಾಡುವವರಾಗಿದ್ದಾರೆಂದು ಕೇಳುತ್ತೇವೆ

⁂

ಮೈಸೂರಿನಿಂದ ... ಮೋಟರ್ ... ಮಡಿಕೇರಿಯಿಂದ ತಲಚೇರಿ ... ಎಂಬ ... ಬಿಡುವಂತೆ ಏರ್ಪಾಡು ಮಾಡುವುದರಲ್ಲಿ ಇದು ಈ ವರುಷದ ಆಗಸ್ಟ್ ಗಡಲ್ಲಿ ಸಿದ್ಧವಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ

⁂

... ಪಡೆದಿರುವವರು ... ಮೊದಲಾದ ಹತ್ತಿರುಗಳ ಸಮೀಪ ... ಪ್ರಯಾಣ ಮಾಡಕೂಡದೆಂದು ... ಕೊಟ್ಟಿರಬೇಕೆಂತಲೂ ಸರ್ಕಾರದವರು ವಿಧಿಸಿರುತ್ತಾರೆ

⁂

ಶೃಂಗೇರಿ ಮಠದ ಜಗದ್ಗುರು ಸ್ವಾಮಿಗಳು ಕಳೆದ ಎರಡು ತಿಂಗಳುಗಳಿಂದಲೂ ಪಾಲಘಾಟ್ ಜಿಲ್ಲೆಯಲ್ಲಿ ಸಂಚಾರವಾಡುತ್ತಿದ್ದು, ಈಗ ... ಎಂಬ ಜಲಪಾತದ ಬಳಿ ಇರುತ್ತಾರೆ ಇವರು ವಾಪಸು ಬರಲು ಇನ್ನೂ ೩ ೪ ತಿಂಗಳುಗಳಾಗಬಹುದೆಂದು ಕೇಳುತ್ತೇವೆ

⁂

ಇನ್ನು ಮುಂದೆ ಚೀಫ್ ಕೋರ್ಟಿನ ಚೀಫ್ ಜಡ್ಜಿಗೂ ಕೌನ್ಸಿಲ್ ಮೆಂಬರುಗಳಿಗೂ ಮಾತ್ರವೇ ಪೂರ್ಣ ಸರ್ವೀಸ್ ಆದ ಮೇಲೆ ತಿಂಗಳಿಗೆ ೫೦೦ ರೂಪಾಯಿ ಪೆನ್‌ಷನ್ ಕೊಡಲಾಗುವುದೆಂತಲೂ ಇತರ ಅಧಿಕಾರಿಗಳಿಗೆ ಅಷ್ಟು ದೊರಕಲಾರದೆಂತಲೂ ಸರ್ಕಾರದವರು ತೀರ್ಮಾನಿಸಿರುತ್ತಾರೆ

⁂

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು ಜುಲೈ ತಾ ೧೨ ನೇ ಸೋಮವಾರ ಬೆಳಗ್ಗೆ ಪ್ರಾರಂಭವಾಗಿ ತಾ ೧೫ ನೇ ಗುರುವಾರದ ಒಳಗಿನ ವರಿಗೂ ನಡೆಯುವುದೆಂತಲೂ, ವೈಸ್ ಪ್ರೆಸಿಡೆಂಟ್ ಮೆ|| ಎಂ ಜಿ ಕೃಷ್ಣಸ್ವಾಮಿರಾಯರು ಚುನಾವಣೆಯ ಕಾಲದಲ್ಲಿ ಹಾಜರಾಗಿರುವರೆಂತಲೂ ಪ್ರಕಟವಾಗಿದೆ

⁂

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಮಾರಿಕುಪ್ಪದ ಹತ್ತಿರ ಒಂದು ಗ್ರಾಮಕ್ಕೆ ಕಳೆದ ಶನಿವಾರ ರಾತ್ರಿ ೬೦ ಮಂದಿ ದಂಜುಕಳ್ಳರು ನುಗ್ಗಿ ... ಭೋಗರ ಮನೆಯನ್ನು ಲೂಟಿಮಾಡಿ ಸುಮಾರು ಒಂದು ಸಾವಿರ ರೂಪಾಯಿನ ಸ್ವತ್ತನ್ನು ಅಪಹರಿಸಿಕೊಂಡು ಹೋದರು ಇದುವರೆಗೂ ಅವರ ಸುಳಿಯೇ ಗೊತ್ತಾಗಲಿಲ್ಲ

⁂

ರಾಜಧಾನಿಯಲ್ಲಿರುವ ಸಾಹುಕಾರ್ ಮೆ|| ಪುರುಷೋತ್ತಮದಾಸಂದಗಿರಿ ಗೋಸಾಯಿಯವರ ಮೇಲೆ ಒಂದು ಕ್ರಿಮಿನಲ್ ಮೊಕದ್ದಮೆ ಬಂದು, ಪೊಲೀಸಿನವರು ಅವರನ್ನು ... ಹಿಡಿದಿದ್ದರು ಮರುದಿನ ಅವರ ಕಡೆಯವರು ಮಾಜಿಸ್ಟ್ರೇಟರಲ್ಲಿ ಅರ್ಜಿ ಕೊಟ್ಟು ಮೆ|| ಗೋಸಾಯಿಯವರನ್ನು ಜಾಮೀನಿನ ಮೇಲೆ ಬಿಡಿಸಿರುತ್ತಾರೆ

⁂

ಮಡಿಕೇರಿಗೆ ಸೇರಿದ ಸೋಮವಾರಪೇಟೆಯಲ್ಲಿ ಸಾಹುಕಾರ್ ಮೆ|| ವೆಂಕಟರಾಮಶೆಟ್ಟರು ಕಾಡಿನಲ್ಲಿ ... ಮಾರ್ಗವಾಗಿ ಬರುತ್ತಿದ್ದ ಅಂಚೆ ಜವಾನನಿಗೆ ಗುಂಡಿನೇಟು ತಗಲಿ ಮೃತಪಟ್ಟನು ಕೂಡಲೇ ಈ ಸಂಗತಿಯನ್ನು ಕಟ್ಟಿ ರೆ... ಹೋಗಿ ಪೊಲೀಸಿಗೆ ತಿಳಿಸಿದರು ಅವರು ಅಕಸ್ಮಾತ್ತು ಸಂಭವಿಸಿದ ಮರಣವೆಂದು ತೀರ್ಮಾನಮಾಡಿದರು

⁂

ರಾಜಧಾನಿಯ ಹಳೆ ಅಗ್ರಹಾರದಲ್ಲಿರುವ ಪಸಾರಿ ಅಂಗಡಿ ವರ್ತಕ ಮೆ|| ಸಿದ್ದಪ್ಪನವರು ಕಳೆದ ೧೦ ನೇ ತಾ ಗುರುವಾರ ಏಕಕಾಲದಲ್ಲಿ ಐದು ಮದುವೆಗಳನ್ನು ಸ್ವಂತಖರ್ಚಿನಿಂದ ಮಾಡಿಸಿರುತ್ತಾರೆ. ಗಂಡುಹೆಣ್ಣುಗಳಿಗೆ ತಕ್ಕಷ್ಟು ಉಡಿಗೆತೊಡಿಗೆಗಳನ್ನು ಮಾಡಿಸಿಕೊಟ್ಟರು ಇವಕ್ಕೆಲ್ಲಾ ಅವರಿಗೆ ಸುಮಾರು ೭೦೦ ೮೦೦ ರೂಪಾಯಿ ಖರ್ಚಾಗಿರಬಹುದೆಂದು ಕೇಳುತ್ತೇವೆ

⁂

ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ಸಣ್ಣ ರೈಲನ್ನು ಹಾಕಬಹುದೆಂದು ಇಂಡಿಯಾ ಗವರನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ ಈ ರೈಲ್ವೆ ರಸ್ತೆಯು ೩೮ ಮೈಲಿ ದೂರ ಹಾಕಲ್ಪಡುವುದು ಇದಕ್ಕಾಗಿ ಒಂದು ಸಾಹುಕಾರಿ ಫಂಡು ಏರ್ಪಾಡಾಗಿ ಅನೇಕರು ಷೇರುಗಳನ್ನು ಕೊಂಡುಕೊಂಡಿರುವುದು ವಾಚಕರಿಗೆ ತಿಳಿದೇ ಇದೆ ಅದರ ಕಾಮಗಾರಿಯನ್ನು ಕಂಪನಿಯವರು ಬೇಗನೆ ಮಾಡಿಸಿ ಪೂರೈಸುವರೆಂದು ನಿರೀಕ್ಷಿಸಲ್ಪಟ್ಟಿದೆ

⁂

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಘಾಟಹಳ್ಳಿ ಎಂಬ ಗ್ರಾಮದಲ್ಲಿ ಒಬ್ಬ ಹೆಂಗಸಿಗೆ ಒಂದು ಪಾತ್ರೆಯ ತುಂಬಾ ಪೂರ್ವಕಾಲದ ಚಿನ್ನದ ನಾಣ್ಯಗಳು ದೊರೆತವು ಅವಳು ಒಂದೊಂದಾಗಿ ೨ ೩ ರೂಪಾಯಿಗೆ ಬಿಕರಿ ಮಾಡುತ್ತಿದ್ದಳು ಆ ನಾಣ್ಯಗಳೆಲ್ಲಾ ಸುಮಾರು ೫,೦೦೦ ರೂಪಾಯಿ ಬೆಲೆಯಾಗಬಹುದು ಪೊಲೀಸಿನವರು ಪತ್ತೆಮಾಡಿ ಅವಳ ಬಳಿ ಇದ್ದ ನಾಣ್ಯಗಳನ್ನೆಲ್ಲಾ ಸರ್ಕಾರಕ್ಕೆ ವಶಕೊಂಡು ತನಿಖೆಮಾಡುತ್ತಿದ್ದಾರೆ

⁂

ಕಳೆದ ವಾರವೆಲ್ಲಾ ರಾಜಧಾನಿಯಲ್ಲಿ ಪೋಲೋ ಪಂದ್ಯಗಳೂ, ಕುದುರೆಗಳ ಓಟವೂ ನಡೆದವು ರಾಜವರ್ಗದವರೂ ಯೂರೋಪಿಯನ್ ಸರ್ದಾರರೂ ಪಟ್ಟಣದ ಪ್ರಜೆಗಳೂ ಮೈದಾನದಲ್ಲಿ ಸೇರಿ ಆ ವಿನೋದಗಳನ್ನು ನೋಡಿದರು ಪೋಲೋ ಪಂದ್ಯದಲ್ಲಿ ಮೈಸೂರು ... ಚೆನ್ನಾಗಿ ಆಡಿದ ... ಹೋದರು ಕುದುರೆಗಳ ಪಂದ್ಯದಲ್ಲೂ ಮೈಸೂರಿನ ಕುದುರೆಗಳು ... ಗೆಲ್ಲಲಿಲ್ಲ ಯೂರೋಪಿಯನ್ ಅತಿಥಿಗಳಿಗೆ ಕಳೆದ ಬುಧವಾರ ರಾತ್ರಿ ಗವರ್ನ್‌ಮೆಂಟ್ ಹೌಸ್ ಬಂಗಲೆಯಲ್ಲಿ ಶ್ರೀಮನ್ಮಹಾರಾಜರವರು ಡಿನ್ನರ್ ... ವನ್ನು ಮಾಡಿಸಿದರು ಸುಮಾರು ೧೦೦ ಮಂದಿ ಸರ್ದಾರರೂ ದೊರೆಗಳೂ ಕುಳಿತು ಭೋಜನ ಮಾಡಿದರು ಬಳಿಕ ಅವರೆಲ್ಲಾ ಜಗನ್ಮೋಹನ ಬಂಗಲೆಗೆ ಹೋಗಿ ಬಯಸ್ಕೋಪ್ ಎಂಬ ನೋಟವನ್ನು ನೋಡಿದರು ... ಅವರೆಲ್ಲಾ ಅರಮನೆಗೆ ಬಂದಿದ್ದರು ಅಲ್ಲಿ ಅರಮನೆಯ ... ತೋರಿಸಲಾಯಿತು ಅಂಬಾವಿಲಾಸ ಮಹಡಿ ತೊಟ್ಟಿ, ಸಂಗೀತದ ಕೊಠಡಿಗಳಲ್ಲಿ ಜಲತರಂಗು, ಪಡಕೋಲಾಟ, ಪಿಯಾನೋ, ಸಂಗೀತ ಮೊದಲಾದವು ನಡೆಸಲ್ಪಟ್ಟವು ಸೋಮವಾರ ರಾತ್ರಿ ಅರಮನೆಯಲ್ಲಿದ್ದ ಡಿನ್ನರಿನ ಭಾರೀ ರಾಗವಾದ ಸಂಗೀತವಾಯಿತು ... ಕೆ ಮರಿಗಳ ... ಜೊತೆಗೂಡಿದವರಿಗೆ ವೀಳ್ಯ, ಬಟ್ಟೆ, ದ್ರವ್ಯ ಮೊದಲಾದ ಬಹುಮಾನಗಳನ್ನು ಕೊಡುವವರಾಗಿದ್ದರು ಯೂರೋಪಿಯನ್ ಅತಿಥಿಗಳು ಈ ವಾರದಲ್ಲಿ ತಮ್ಮ ತಮ್ಮ ಸ್ಥಳಗಳಿಗೆ ಹಿಂತಿರುಗಿ ಹೋಗುವವರಾಗಿದ್ದಾರೆ

ಮೈಸೂರು ಗೆಜೆಟ್ ಸಂಗ್ರಹ

ಬೆಂಗಳೂರು ಸಿಟಿಯ ಮ್ಯುನಿಸಿಪಲ್ ಕೌನ್ಸಿಲ್ಲಿನಲ್ಲಿ ಈಗಿರುವ ಮೆಂಬರುಗಳ ಅವಧಿಯನ್ನು ಮುಂದಿನ ಸೆಪ್ಟೆಂಬರ್ ಆಖೈರ್ ವರೆಗೆ ಹೆಚ್ಚುಮಾಡಿದೆ

ಹಿಂದೂಸ್ಥಾನದ ಚಕ್ರವರ್ತಿ ಸಾರ್ವಭೌಮರವರ ಜನ್ಮ ದಿನವನ್ನು ಜೂನ್ ತಾ ೨೬ ರಲ್ಲಿ ಆಚರಿಸಬೇಕೆಂದು ಸರ್ಕಾರಿ ಕ್ಯಾಲೆಂಡರಿನಲ್ಲಿ ಪ್ರಕಟವಾಗಿದೆಯಷ್ಟೆ ಅದಕ್ಕೆ ಬದಲಾಗಿ ಆ ಜನ್ಮೋತ್ಸವದ ನಿಮಿತ್ತ ಜೂನ್ ತಾ ೨೫ ನೇ ಶುಕ್ರವಾರ ಈ ಸಂಸ್ಥಾನದ ಎಲ್ಲಾ ಕೋರ್ಟು ಕಚೇರಿಗಳೂ ಸ್ಕೂಲುಗಳೂ ಮುಚ್ಚಲ್ಪಡತಕ್ಕದ್ದು

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುವ ೩ ನೇ ಸಬ್ ಅ|| ಸರ್ಜನ್ ಮೆ|| ಪಿ ಎಸ್ ರಾಮಚಂದ್ರ ಐಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಡೆಪ್ಯುಟಿ ಸಾನಿಟರಿ ಕಮಿಷನರ್ ಮೆ|| ಪಿ ಪಲ್ಪು ಯವರು ಉಪಯೋಗಿಸಿಕೊಳ್ಳದೆ ಇರುವ ಪ್ರಿವಿಲೆಜ್ ರಜವನ್ನು ರದ್ದುಮಾಡಿದೆ

ಕೋಲಾರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ಸಿ ಶ್ರೀಕಂಠೇಶ್ವರ ಐಯರವರಿಗೆ ಜೂನ್ ತಾ ೧೪ ರಿಂದ ಹನ್ನೆರಡು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಸೀನಿಯರ್ ಅ|| ಕಮಿಷನರ್ ಮೆ|| ಎವರ್ ... ಯವರು ಡಿಸ್ಟ್ರಿಕ್ಟಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು

ಕುಣಿಗಲ್‌ಪೇಟೆ ಸಬ್ ಡಿವಿಜನ್ ಆಫೀಸರ್ ಮೆ|| ಬಿ ವೆಂಕೋಬರಾಯರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು ಅ|| ಕಮಿಷನರ್ ಮೆ|| ... ಟಿ ರಾಯಲುಚೆಟ್ಟಿಯವರು ಸಬ್ ಡಿವಿಜನ್ ಛಾರ್ಜನ್ನು ವಹಿಸಿದ್ದರು

ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿ ಮೆ|| ಸಿ ಎಸ್ ಬಾಲಸುಂದರಂ ಐಯರವರು ಗವರ್ನ್‌ಮೆಂಟಿನ ಸೆಕ್ರೆಟರಿಯಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಸಾಗರದ ಅಕ್ಟಿಂಗ್ ಮುನ್‌ಸಿಫ್ ಮೆ|| ಕೆ ಎನ್ ... ಐಯಂಗಾರ್ಯರಿಗೆ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ

ಅ|| ಕಮಿಷನರ್ ಮೆ|| ಆರ್ ನಾರಾಯಣ ರಾಯರನ್ನು ಮಾರ್ಚಿ ತಾ ೩೧ ರಿಂದ ೪ನೇ ಕ್ಲಾಸಿಗೆ ಬಡ್ತಿಮಾಡಿದೆ

ದೊಡ್ಡಬಳ್ಳಾಪುರದ ಮುಜರಾಯಿ ದೇವಸ್ಥಾನಗಳ ಕಾರುಬಾರುಗಳನು ನೋಡಿಕೊಳ್ಳುವುದಕ್ಕೆ ಮೆ|| ಬೀಚಹಳ್ಳಿ ವೆಂಕಟಕೃಷ್ಣಯ್ಯನವರನ್ನು ಧರ್ಮದರ್ಶಿಯಾಗಿ ನೇಮಕಮಾಡಿದೆ

ಮೈಸೂರ್ ಡಿವಿಜನ್ ಎ ಇಂಜನಿಯರ್ ಮೆ|| ಬಿ ಗಂಗಾಧರಯ್ಯರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1900 ನೇ ಜೂನ್ ತಾ 12 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು ರೂ	ಧರ್ಮಾಸ ಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು		
ಬೆಂಗಳೂರು	198	130	12	338	87
ಕೋಲಾರ	1,161	519	85	3,174	571
ತುಂಕೂರು	908	488	105	2,235	149
ಮೈಸೂರು	0	20		20	38
ಹಾಸನ	271	317	45	211	
ಶಿವಮೊಗ್ಗ	88	51		111	5
ಕಡೂರು	38	9		16	
ಚಿತ್ರದುರ್ಗ	577	548	37	1,527	55
ಮಾರಿಕಣಿವೆ ಸ್ಟಾನಟಿ	152	257	4	511	
ಒಟ್ಟು	3,425	2,333	288	8,230	905

ವ್ಯವಸಾಯ ಸಂಬಂಧವಾದ ವಿಚಾರಗಳು.

ದನಗಳನ್ನು ಸಾಕುವಿಕೆ ಮತ್ತು ಬೆಣ್ಣೆಯ ತಯಾರಿ

ಹೋದ ಸಂಚಿಕೆಯಲ್ಲಿ ದನಗಳನ್ನು ಸಾಕುವವರ ವಿಚಾರವನ್ನು ಕೆಲವು ಸಂಗತಿಗಳು ತಿಳಿದಿದ್ದಾಯಿತು. ಕ್ವೀರ್ ಗೃಹಗಳಲ್ಲಿ ಬೆಣ್ಣೆ ತೆಗೆಯುವ ಮುಖ್ಯವಾದ ಕೆಲಸವನ್ನು ಯಾವ ರೀತಿ ನಡಿಸುತ್ತಾರೆ ಎಂಬದನ್ನು ಇಲ್ಲಿ ಸಂಕ್ಷೇಪವಾಗಿ ತಿಳಿಸುತ್ತೇವೆ.

ಬೆಣ್ಣೆ ಮಾಡುವ ಕ್ರಮ —ಹಾಲು ಕರೆದ ಒಡನೆ ಅದು ೯೦ ರಿಂದ ೯೫ ಡಿಗ್ರಿಯ ಉಷ್ಣವನ್ನು ಹೊಂದಿರುತ್ತದೆ. ಆದದ್ದರಿಂದ ಕೆನೆಯನ್ನು ಹಾಲಿನಿಂದ ಪ್ರತ್ಯೇಕಿಸಲು ಸಾಕಾದಷ್ಟು ಬಿಸಿ ಇರುತ್ತೆ. ೬೫ ಡಿಗ್ರಿ ಉಷ್ಣಕ್ಕಿಂತ ಕಡಮೆಯಾಗಿದ್ದರೆ ಕೆನೆಯು ಹಕ್ಕೆಯಾಗಿ ಏರುವುದಿಲ್ಲ. ಕೆನೆಯನ್ನು ತೆಗೆಯುವ ಯಂತ್ರಗಳು ಅನೇಕ ಇರುತ್ತವೆ.

ಹೀಗೆ ತೆಗೆದ ಕೆನೆಯನ್ನು ಕೆಲವು ಕಾಲ ಹಾಗೆಯೇ ಇಟ್ಟು ಕಡೆಯಬೇಕು. ಇದರಿಂದ ಬೆಣ್ಣೆ ಒಂದು ಸ್ವಾದು ವಾಸನೆಯುಳ್ಳದ್ದಾಗುತ್ತದೆ. ಇದಕ್ಕಾಗಿ ಹಾಲನ್ನು ಒಂದು ಪಾತ್ರೆಯಲ್ಲಿಟ್ಟು ಶುದ್ಧವಾದ ಬಟ್ಟೆಯಿಂದ ಮುಚ್ಚಿ ಕಟ್ಟಿ, ನೊಣ, ಧೂಳು, ಹುಳ ಮುಂತಾದವುಗಳು ಇಲ್ಲದ ೬೦ ಡಿಗ್ರಿ ಉಷ್ಣವಿರುವ ಮತ್ತು ಸ್ವಚ್ಛವಾದ ಗಾಳಿ ಆಡುವ ಸ್ಥಳದಲ್ಲಿ ೨೪ ಗಂಟೆಯ ಕಾಲ ಇಟ್ಟು ಕಡೆಯಬೇಕು. ಸರಿಯಾಗಿ ಪಕ್ವವಾದ ಕೆನೆಯನ್ನು ಕಡೆದರೆ ಬೆಣ್ಣೆಯು ಜಾಗ್ರತೆಯಾಗಿ ಬರುವುದಲ್ಲದೆ ಸ್ವಲ್ಪವೂ ವ್ಯರ್ಥವಾಗುವದಿಲ್ಲ. ಕೆನೆಯನ್ನು ಕಡೆಯುವಾಗ ನಾಲ್ಕು ವಿಚಾರಗಳಿಗೆ ಗಮನಕೊಡಬೇಕಾಗಿದೆ—ಉಷ್ಣ, ಹುಳಿ, ಕೆನೆಯ ಮಂದ, ಕಡೆಯುವಿಕೆ. ಕಡೆಯುವಾಗ ಕೆನೆಗೆ ಎಂದು ಬಿಲ್ಲೆಯನ್ನು ಕೊಡುತ್ತಾರೆ. ಕಡೆಗೋಲನ್ನು ನಿಮಿಷಕ್ಕೆ ೪೦ ರಿಂದ ೫೦ ಸುತ್ತು ಸುತ್ತಿಸಿ ಕಡೆಯಬೇಕು. ಹವಾಕಾಲ ಮುಂತಾದ ಕಾಲಗಳಲ್ಲಿ ಕಟ್ಟಿಗೆಯಲ್ಲದ್ದು ಹೋಗುತ್ತದೆ. ಅನಂತರ ಪುನಃ ಕಡೆದರೆ ಎಳ್ಳಿನಷ್ಟು ಹರಳುಗಳಾಗಿ ಏರುತ್ತದೆ. ಕಡೆಯುವ ಕೆಲಸ ಹಾಲನ್ನು ಪ್ರತ್ಯೇಕಿಸಿ, ನೀರಿನಲ್ಲಿ ಇವುಗಳನ್ನು ತೊಳೆಯಬೇಕು. ಇದರಿಂದ ಕೇಸಿನ್ ಎಂಬ ಪದಾರ್ಥವು ಪ್ರತ್ಯೇಕವಾಗುತ್ತದೆ. ನೀರಿನ ಬಿಸಿ ಹೆಚ್ಚಾದರೆ ಬೆಣ್ಣೆ ಮೃದುವಾಗಿಯೂ ಜಿಡ್ಡಾಗಿಯೂ ಆಗಿ ಕೆಲಸ ಕಷ್ಟವಾಗುತ್ತದೆ. ನೀರಿನ ಬಿಸಿಯು ಕಡಮೆಯಾದರೆ ಬೆಣ್ಣೆಯು ಗಟ್ಟಿಯಾಗಿ ಹೀಗಿರುವ ತನ್ನ ತನ್ನವಾಗುತ್ತದೆ. ಅನಂತರ ನೀರಿನ ಹಾಲನ್ನು ಪುನಃ ಬಸಿದು ಬೆಣ್ಣೆಗೆ ಉಪ್ಪನ್ನು ಹಾಕಬೇಕು. ಅನಂತರ ೫ ೬ ಪಟ್ಟು ಕಡೆದು ನೀರು ನೋಡಿದ ಬೆಣ್ಣೆಯನ್ನು ಒಂದು ಪಾತ್ರೆಯಲ್ಲಿ ಕೊಟ್ಟು ಅದರಲ್ಲಿರತಕ್ಕ ಹೆಚ್ಚು ನೀರನ್ನು ಹೊರಡಿಸುತ್ತಾರೆ. ಆ ಮೇಲೆ ಇದಕ್ಕೆ ಉಪ್ಪನ್ನು ಸೇರಿಸುವದರಿಂದ ಒಂದು ಸುವಾಸನೆಯು ಮತ್ತು ಎಣ್ಣವು ಉಂಟಾಗುವುದಲ್ಲದೆ ಬೆಣ್ಣೆಯೂ ಸಹ ಕೆಡುವುದಿಲ್ಲ.

ಕೆಲಸಲಗಳಲ್ಲಿ ಕಬ್ಬಿಣದ ನೇಗಿಲುಗಳ ಉಪಯೋಗ.

ಹತ್ತಿ ಬೆಳೆಯುವ ಕರಿ ನೆಲದ ಜಾರೀ ಎಲ್ಲ ಜಿಲ್ಲೆಗಳನ್ನು ಆಳವಾಗಿ ಉಳಿ, ಸಾಲ್ಸ್‌ಟಾನ್ ಕುಂಟೆ ಮತ್ತು ಕೂರಿಗೆಗಳಲ್ಲಿ ಮೇಲೆ ಮೇಲೆ ಕೆರೆಯುವುದರಿಂದ ಭೂಮಿಯು ಹುಲುಸು ಅನೇಕ ವಿಧಗಳಲ್ಲಿ ಭಡಮೆಯಾಗುತ್ತದೆ. ನಾಡು ನೇಗಿಲುಗಳ ಪ ಉಳುವುದು ಒಂದಕ್ಕಿಂತಲೂ ಉತ್ತಮವಾಗಿದ್ದಾಗ್ಯೂ ಇದರಿಂದಲೂ ಕೆಲಸವು ಅಷ್ಟು ಸಮರ್ಪಕವಾಗುವದಿಲ್ಲ. ಮೇಲೆ ಮೇಲೆ ಉಳಿ ಮಾಡುವುದರಲ್ಲಿ ಮುಖ್ಯವಾದ ಅನಾನುಕೂಲಗಳು ಯಾವುವೆಂದರೆ— ಮೇಲೆ ಬಿದ್ದ ಮಳೆನೀರು ಭೂಮಿಯಲ್ಲಿ ಚೆನ್ನಾಗಿ ಊರುವದಿಲ್ಲ. ಕರಿ ನೆಲವು ತನುವನ್ನು ಬಹಳ ಕಾಲ ಉಳಿಸಿಕೊಳ್ಳುತ್ತಲೆಯಾದದ್ದರಿಂದ ಒಳ್ಳೆ ಒಂದು ನೆನೆಯಲ ಬಂದದ್ದಿ ಸಡಿಲಿರುವ ಮೇಲ್ಭಾಗದಲ್ಲಿ ನೀರು ಚೆನ್ನಾಗಿ ಊರುತ್ತದೆ, ಅಂದರೆ, ಕುಂಟೆ ಕೂರಿಗೆ ಉಪಯೋಗಿಸಿದಾಗ ಎರಡು ಅಂಗುಲ ಆಳವೂ, ನೇಗಿಲು ಉಪಯೋಗಿಸಿದಾಗ ೪ ಅಂಗುಲ ಆಳವೂ ನೀರು ಇಳಿಯುತ್ತದೆ. ಸಡಿಲಿರುವ ಮೇಲ್ಭಾಗದ ಕೆಳಗಿನ ಭೂಮಿಯು ಗಟ್ಟಿಯಾಗಿರುವ ಕಾರಣ ಇದರಲ್ಲಿ ನೀರು ಊರುವುದು ಸಾವಕಾಶ. ಆದಕಾರಣ ಒಂದು ಮಳೆಯಾದ ಮೇಲೆ ಎರಡನೇ ಮಳೆ ಬಂದಲ್ಲಿ ನೀರು ಭೂಮಿಯಲ್ಲಿ ವಿಶೇಷ ಇಳಿಯದೆ ಎಲ್ಲಾ ಹರಿದ ಹೋಗುತ್ತದೆ. ಇದರಿಂದ ಎರಡು ವಿಧವಾಗಿ ನಷ್ಟವಾಗುವುದು —(೧) ಸಾಮಾನ್ಯವಾಗಿ ಸಾಕು ಸಾಲದಷ್ಟು ಮಳೆ ಬರುವ ಪ್ರಾಂತ್ಯದಲ್ಲಿಯೇ ಕರಿನೆಲ ಇರುತ್ತದೆ. ಒಟ್ಟು ಮಳೆ ಸಾಕಾದಷ್ಟು ಬಂದಾಗ್ಯೂ ಮಳೆಗಳು ಅಕಾಲವಾಗಿಯೂ ಜೋರಾಗಿಯೂ ಬಂದು ಜಮೀನಿನ ಮೇಲೆ ಹೊರಹೊರಟು ಹೋಗಿ ಭೂಮಿಯಲ್ಲಿ ಪೈರಿಗೆ ಸಾಕಾದಷ್ಟು ತನುವು ನಿಲ್ಲುವದಿಲ್ಲ. (೨) ಜಾಗಾವಿನ ಮೇಲೆ ನಿಲ್ಲದ ನೀರು ಹೊರಹೋಗುವುದರಿಂದ ಇದರಲ್ಲಿರುವ ಪುಷ್ಟಿಕಾರವು ಕೊಚ್ಚಿ ಹೋಗಿ ಬಹಳ ಲಕ್ಷ್ಯವಾಗುತ್ತದೆ. ಜಮೀನನ್ನು ಆಳವಾಗಿ ಉಳುವುದರಿಂದ ಮೇಲ್ಭಾಗವನ್ನು ೧೦ ಅಂಗುಲ ಸಡಲಿಸಬಹುದು. ಇದರಿಂದ ಮಳೆನೀರು ಜಾಗ್ರತೆಯಾಗಿಯೂ ಚೆನ್ನಾಗಿಯೂ ಭೂಮಿಯಲ್ಲಿ ಊರುವುದಕ್ಕೆ ಅನುಕೂಲಿಸುತ್ತದೆ.

ಆಳವಾಗಿ ಉಳುವುದರಿಂದ ಮತ್ತೊಂದು ಅನುಕೂಲವುಂಟು. ಈ ಕರಿ ನೆಲಗಳಲ್ಲಿ ಆಳವಾಗಿ ಬೇರೂರುವ ಹುಲ್ಲುಗಳು ಬೆಳೆಯುವುದು ಹೆಚ್ಚು. ಇವು ಪೈರಿಗೆ ಒದಗುವ ಸಸ್ಯಾಹಾರವನ್ನೂ ತನುವನ್ನೂ ಅಪಹರಿಸಿ, ಬಹಳ ನಷ್ಟವನ್ನುಂಟುಮಾಡುತ್ತವೆ. ಈ ಕರಿನೆಲಗಳು ಎಷ್ಟು ಫಲವತ್ತಾಗಿದ್ದಾಗ್ಯೂ ಇವು ಗಳಲ್ಲಿ ಗಂಟೆಗೆಡ್ಡೆ, ಕುಂದಾರ ನಟ್ಟು ಮುಂತಾದ ಹುಲ್ಲುಗಳು ಹೆಚ್ಚಾಗಿ ಬೆಳೆದು ಇಟ್ಟ ಪೈರು ಲುಕ್ಸಾನಾಗಿರುವುದು ಅಥವಾ ಸಡಬಿಕೊಂಡು ಸೊರಗಿರುವುದು ಸಾಮಾನ್ಯವಾಗಿ ನೋಡಿರಬಹುದು. ಆದದ್ದರಿಂದ ಈ ಹುಲ್ಲುಗಳನ್ನು ನಾಶವಾಡುವುದು ಕೇವಲ ಮುಖ್ಯವಷ್ಟೆ. ಈ ಹುಲ್ಲುಗಳ ಬೇರುಗಳಿಗೆ ಬೇಸಿಗೆಯಲ್ಲಿ ಬಿಸಲು ಬಡಿಯುವ ಹಾಗೆ ಮಾಡುವುದು ಇದಕ್ಕೆ ಒಂದು ಸುಲಭೋಪಾಯ. ಆಳವಾಗಿ ಉಳುವುದರಿಂದ ಮೂರು ಅನುಕೂಲಗಳುಂಟೆಂದು ಸಂಕ್ಷೇಪವಾಗಿ ಹೇಳಬಹುದು —(೧) ಪೈರಿಗೆ ಬೇಕಾದಷ್ಟು ತನುವು ಭೂಮಿಯಲ್ಲಿ ಉಳಿಯುತ್ತದೆ. (೨) ಸಸ್ಯಾಹಾರ ಪದಾರ್ಥಗಳು ಭೂಮಿಯಿಂದ ಕೊಚ್ಚಿ ಹೋಗುವುದಿಲ್ಲ. (೩) ಆಳವಾಗಿ ಬೇರೂರುವ ಹುಲ್ಲುಗಳು ನಾಶವಾಗುತ್ತವೆ.

ಕೆಲವು ಪ್ರಾಂತ್ಯಗಳಲ್ಲಿ ಭಾರಿ ನೇಗಿಲುಗಳನ್ನು ಗುದ್ದಲಿಗಳಿಂದ ಆನೆ ಯುತ್ತಾರೆ. ಇದರಿಂದ ಆಳವಾಗಿ ಉಳುವುದರ ಅನುಕೂಲವಾದುದನ್ನು ಅವರು ತಿಳಿದಿರುವರೆಂದು ವ್ಯಕ್ತಪಡುತ್ತದೆ. ಹೀಗೆ ಮಾಡುವುದರಿಂದ ಕೆಲಸವು ಸಮರ್ಪಕವಾಗಿ ನಡೆದರೂ ಆಗಿನವರು ಮಿತಾಚಿಯಾಗುವುದು. ಅಂದರೆ, ಎಕರೆಗೆ ೧೦ ರೂಪಾಯಿಗೆ ಕಡಮೆ ಆಗುವುದಿಲ್ಲ. ಪೂರ್ವದಲ್ಲಿ ನೆಲ ಮಡಕೆ ಎಂಬ ಅಗಾಧ ವ ದ ಮಣ್ಣ ನೇಗಿಲನ್ನು ಆದು ಜೊತೆ ಎತ್ತುಗಳನ್ನು ಕಟ್ಟಿ ಉಪಯೋಗಿಸುತ್ತಿದ್ದರು. ಇದರಿಂದ ನಿಸ ಒಡೆಕ್ಕೆ ಅರ್ಧ ಎಕರೆ ಉಳುವುದಾಗಿತ್ತು ಮತ್ತು ಪುನಃ ಇನ್ನೊಂದು ಸಾಲು ಉಳಿದ ಇದರ ಜಮೀನು ಹಸನಾಗುತ್ತಿರಲಿಲ್ಲ. ಇದನ್ನು ಉಪಯೋಗಿಸುತ್ತಿರುವದೇ ಆಳವಾಗಿ ಉಳುವುದರ ಅವರ ಕತೆಯನ್ನು ಸ್ಪಷ್ಟಪಡಿಸುತ್ತದೆ. ಈಚೀಚೆ ಈ ಕೆಲಸಕ್ಕೆ ಕಬ್ಬಿಣದ ನೇಗಿಲುಗಳನ್ನು ಉಪಯೋಗಿಸುತ್ತಾರೆ. ಇದಕ್ಕೆ ಬಲವುಳ್ಳ ೨ ೩ ಜೊತೆ ಎತ್ತು ಸಾಕು. ಇದು ಒಡೆಯ ಎಷ್ಟು ಕೆಲ, ದಿನ ೬ ಎಕರೆ ಮುಕ್ಕಾಲು ಎಕರೆ ಪ್ರತಿನ ಏಳುವುದು. ಇನ್ನೊಂದು ಸಾಲು ಉಳಿಯಬೇಕಾದ ಅವಶ್ಯಕತೆ ಇರುವುದಿಲ್ಲ. ಜಮೀನು ಹಸನಾಗುತ್ತದೆ. ಆಗಿನವು ಎಕರೆಗೆ ೫ ರೂಪಾಯಿಗೆ ಹೆಚ್ಚು ಆಗಲಿಲ್ಲ. ಕೀರ್ತಿ ಇಂಗ್ಲೆಂಡಿನಲ್ಲಿ ಉಪಯೋಗಿಸಲ್ಪಡುವ ಕಬ್ಬಿಣದ ನೇಗಿಲುಗಳು ಚೆನ್ನಾಗಿ ಕೆಲಸ ಮಾಡುತ್ತವೆ. ಈ ನೇಗಿಲುಗಳಿಂದ ಬೀಸಗಳುಳ್ಳ ಜಮೀನನ್ನು ಉತ್ತು ನೋಡಿ ದೊಡ್ಡ ಜ ಎಗಳನ್ನು ಎಬ್ಬಿಸುತ್ತಾರೆ. ಇವು ಎಕರೆಯಲ್ಲಿ ಒಣಗಿ ನೀರು ಹೀರುವುದಕ್ಕೆ ಅನುಕೂಲವಾಗುವುದಲ್ಲದೆ ಹುಲ್ಲಿನ ಬೇರು ಎಕರೆಗೆ ಎಲ್ಲಾ ಒಣಗಿಹೋಗುತ್ತವೆ. ಈ ನೇಗಿಲುಗಳ ಉಪಯೋಗದಿಂದ ಎಲ್ಲಾ ರೀತಿಯಲ್ಲಿ ಜೋಳದ ಬೆಳೆಯಲ್ಲಿ ಎಕರೆ ೦೦ ಪೌಂಡು ಕಾಳು ಮತ್ತು ಹತ್ತಿಯಲ್ಲಿ ಎಕರೆಗೆ ೬೦ ಪೌಂಡು ಹತ್ತಿಯೂ ಹೆಚ್ಚು ಉತ್ಪತ್ತಿಯಾಗಿರುತ್ತದೆ. ಕೊಯಿಮುತ್ತೂರು ಫಾರಂನಲ್ಲಿ ಕಾಳು ಹೆಚ್ಚಿಲ್ಲ. ಎಕರೆಗೆ ೩೦೦ ಪೌಂಡು ಕಾಳು ಹೆಚ್ಚಿನ ಪರೀಕ್ಷೆಯಲ್ಲಿ ೫೦೦ ಪೌಂಡು ಸಪ್ಪೆಯೂ ಹೆಚ್ಚು ದಷ್ಟು ಉತ್ಪತ್ತಿಯಾಯಿತು. ಆಳವಾಗಿ ಉಳುವುದರಲ್ಲಿ ಒಂದಾವರನನ್ನು ಮತ್ತೆ ಗಮನಿಸಬೇಕು. ವಿಶೇಷ ಮಾಡುವುದರಿಂದ ಕಾಲು ಚೆನ್ನಾಗಿ ನೋಡಬೇಕು. ಇವ ಸ್ಥಳ ಆಳವಾಗಿ ಬಿತ್ತಬೇಕು. ಹಾಗೆಂದರೆ ಜಮೀನಿನ ಮೇಲ್ಭಾಗವು ಪಡಿಪಡಿಯಾಗಿ ಸಡಲಿರುವ ಕಾರಣ ಜಾಗ್ರತೆ ಒಣಗಲಾಗುತ್ತವೆ.

ಕೆಲವು ವಿಶೇಷ ವಿಷಯಗಳು

(೧) ಹರಳುಗಿಡದಲ್ಲಿ ಸಣ್ಣ ಬೀಜವು ದೊಡ್ಡ ಬೀಜವು ಎಂಬ ಎರಡು ವಿಧ ಇರುತ್ತವೆ. ದೊಡ್ಡ ಬೀಜದ ಗಿಡದ ರಸದಿಂದ ಶಿಂದಿಯ ಎಣ್ಣೆಯು ಸುಮಾರು ಉತ್ಪತ್ತಿಯಾಗುತ್ತದೆ. ಸಣ್ಣ ಬೀಜದ ರಸದಿಂದ ಔಷಧಿಗೆ ಉಪಯೋಗಿಸುವ ಎಣ್ಣೆಯು ಉತ್ಪತ್ತಿಯಾಗುತ್ತದೆ. ಬೀಜದಿಂದ ಸರಾಸರಿ ಶೇಕಡಾ ೪೦—೫೦ ರಷ್ಟು ಎಣ್ಣೆಯು ಇಳಿಯುತ್ತದೆ. ಶೇಕಡಾ ೬೦ ರಷ್ಟು ಎಣ್ಣೆ ಇಳಿಯುವುದೂ ಉಂಟು. ಔಷಧಿಗೆ ಉಪಯೋಗಿಸಡುವ ಎಣ್ಣೆಯು ಸ್ವಚ್ಛವಾಗಿ ಇಳಿಯುತ್ತದೆ. ಶಿಂದಿ ರಸದ ಎಣ್ಣೆಗಳು ಹಸುರು ಸೇರಿದ ಹಳದಿ ಬಣ್ಣವಾಗಿ ಇರುತ್ತವೆ. ಮಳೆ ಬಂದನಂತರ ಎರಡು ಸಲ ಜಮೀನನ್ನು ಉತ್ತು ಹರಳು ಬೀಜವನ್ನು ನೇಗಿಲ ಸಾಲಿನಲ್ಲಿ ಊರಿಸಿ, ಇನ್ನೊಂದು ನೇಗಿಲು ಸಾಲಿನಿಂದ ಮುಚ್ಚುತ್ತಾರೆ. ಒಂದು ತಿಂಗಳ ನಂತರ ಗಿಡಗಳು ಒಂದು ಅಡಿ ಎತ್ತರಕ್ಕೆ ಬೆಳೆದಾಗ ಎರಡು ಸಾಲು ನಡುವೆ ಪುನಃ ಉಳುತ್ತಾರೆ. ಸಲಗಳು ಒಂದು ಗಜದಷ್ಟು ದೂರವಾಗಿರುತ್ತವೆ. ಈ ಗಿಡಗಳಲ್ಲಿ ಕಾಯಿ ಗೊಂಚಲುಗೊಂಚಲಾಗಿ ಬಿಡುವವು. ಈ ಗೊಂಚಲುಗಳು ಒಣಗಿ ಬಿರಿದು ಕಾಳುಗಳು ಹೊರಕ್ಕೆ ಹೊರಡುವುದಕ್ಕೆ ಪೂರ್ವವಾಗುತ್ತಲೇ ಇವುಗಳನ್ನು ಕೊಯಿಸಬೇಕು.

(೨) ಕ್ಷಾಮಕಾಲಗಳಲ್ಲಿ ಜನರು ಆಹಾರಕ್ಕಾಗಿ ಉಪಯೋಗಿಸುವ ಗಡ್ಡೆಗೆಣಸುಗಳ ಪೈಕಿ ಬಿಂಬಿಗೆಡ್ಡೆ ಒಂದಾಗಿರುತ್ತದೆ. ಇದನ್ನು ಕೆಲ್ಲಿನಾಗಿರದ್ದೆ ಅಥವಾ ಗುತ್ತಿಗಿಡ್ಡ ಎಂತಲೂ ಕರೆಯುತ್ತಾರೆ. ಇದು ಕರೆಗಳ ಒಳಭಾಗದಲ್ಲಿ ಮತ್ತು ಕೆಸರು ಇರತಕ್ಕ ಸ್ಥಳಗಳಲ್ಲಿ ಬೆಳೆಯುತ್ತದೆ. ಇದರ ಎಲೆಗಳು ವಾಳಿನ ಎಲೆಯ ಹಾಗೆ ಇರುತ್ತವೆ. ಇದರ ದಂಟು ೫ ೬ ಅಡಿ ಎತ್ತರ ಬೆಳೆಯುತ್ತದೆ. ಪ್ರತಿ ದಂಟಿನ ತುದಿಯಲ್ಲಿಯೂ ನೀರಿನ ಮೇಲೆ ೩—೪ ಎಲೆಗಳು ತೇಲುತ್ತವೆ. ಇದರ ಹೂವು ಬೆಳ್ಳಗಿರುತ್ತದೆ. ಮುಖ್ಯವಾಗಿ ಇದರ ಗಡ್ಡೆಯೇ ಆಹಾರವಾಗಿ ಉಪಯೋಗಿಸಲ್ಪಡುವದು. ಇದು ನೆಲದಲ್ಲಿರುತ್ತದೆ. ಈ ಗಡ್ಡೆಗಳನ್ನು ಸಾಮಾನ್ಯವಾಗಿ ಮಾರ್ಚಿ, ಏಪ್ರಿಲ್ ತಿಂಗಳಲ್ಲಿ ಜನಾಯಿಸುತ್ತಾರೆ. ಈ ಗಡ್ಡೆಗಳನ್ನು ಚೆನ್ನಾಗಿ ಕೊಳೆದು ನೀರಿನಲ್ಲಿ ಬೇಯಿಸಿ ಮೇಲಿನ ಸಿಪ್ಪೆಯನ್ನು ಸುಲಿದು ಎಲ್ಲ ಸೇರಿಸಿ ತಿನ್ನುವುದುಂಟು, ಅಥವಾ, ಇದನ್ನು ಒಣಗಿಸಿ ಕುಟ್ಟಿ ಮಾಡಿ ರೊಟ್ಟಿಯ ಹಿಟ್ಟಿನ ಹಾಗೆ ಬೇಯಿಸಿ ತಿನ್ನುವುದೂ ಉಂಟು. ಸಾಮಾನ್ಯವಾಗಿ ಕ್ಷಾಮಗಾಲಗಳಲ್ಲಿಯೇ ಇದನ್ನು ಆಹಾರವಾಗಿ ಉಪಯೋಗಿಸುವುದು. ವೆ ಹ ಬುದ್ಧಿ ಇಲ್ಲದವರು ಈ ಗಡ್ಡೆಯನ್ನು ತಿಂದರೆ ಗಾದು ಒಡೆಯು ಜಾಗವಾಗಿ ಹೇಳುತ್ತಾರೆ.

(೩) ಜನ ಹೆಚ್ಚಾದ ಪ್ರಾಂತ್ಯಗಳಲ್ಲಿ ಹುಲ್ಲುಗಾವಲುಗಳು ಸ್ವಲ್ಪವೇ ಕಡಮೆಯಾಗುತ್ತಾ ಬಂದು, ಅಲ್ಲಿನ ದನಗಳಿಗೆ ಮೇವನ್ನು ಒದಗಿಸುವುದರಲ್ಲಿ ಪ್ರಯಾಸ ಕಂಡುಬರುತ್ತದೆ. ಇಂಥಾ ಸ್ಥಳಗಳಲ್ಲಿ ದನಗಳ ಮೇವಿಗಾಗಿಯೇ ಪ್ರತ್ಯೇಕವಾದ ಕೆಲವು ಪೈರುಗಳನ್ನು ಸಾಗುಮಾಡುವದು ಇವಶ್ಯ. ಸುಪ್ಪು ವರಿಸಿ ಇಂಥಾ ಪೈರುಗಳಲ್ಲಿ ಜೋಳವು ಒಂದು ಮುಖ್ಯವಾದದ್ದಾಗಿರುತ್ತದೆ. ಹೀಗೆ ಬೆಳೆಯುವುದರಲ್ಲಿ ಎಕರೆಗೆ ೧೨ ಸೇರು ಬಿತ್ತ ಬೇಕಾಗುವುದು. ಬಿತ್ತ ಹಾಕಿದ ನಂತರ ಪೀರೆ ನಾಗುವದೀ ಕೈಯಾಗಲಿಸೂ ಅವಶ್ಯಕವಿರುವುದಿಲ್ಲ. ನಾಲ್ಕೈದು ವಾರಗಳಲ್ಲಿ ಜೋಳದ ಪೈರು ಭೂಮಿಯ ಮೇಲೆ ಒತ್ತಾಗಿ ಎದ್ದು ಕಳೆಗಳು ಬೆಳೆಯುವುದಕ್ಕೆ ಅವಕಾಶಕೊಡುವುದಿಲ್ಲ. ಎಕರೆಗೆ ೨೦೦ ಹಂಡ ಮಣ (ಬಂಗಾಳ) ಹಸುರು ಮೇವು ಒದಗುತ್ತದೆ. ಅಂದರೆ, ಈ ಮೇವು ಒಂದು ರಾಸಿಗೆ ೩೦೦—೫೦೦ ದಿನಗಳಿಗೆ ಸಾಕಾಗುವುದು. ಬೀಜಹಾಕಿದ ಮೂರು ತಿಂಗಳವರನಂತರ ಮೇವಿಗೋಸ್ಕರ ಪೈರನ್ನು ಕತ್ತರಿಸಿ ಕೊಳ್ಳಬಹುದು. ತರುವಾಯ ಮೂರು ನಾಲ್ಕು ತಿಂಗಳು ಹಾಗೇ ಬಿಟ್ಟದ್ದು ಪುನಃ ಬೆಳೆದ ಪೈರನ್ನು ಕೊಯಲುಮಾಡಿ ಬಿಸಲಿನಲ್ಲಿ ಒಣಗಿಸಬಹುದು. ಒಣಗಿದ ದಂಟು ಮತ್ತು ಸಪ್ಪೆ ಒಳ್ಳೆ ಮೇವಾಗುತ್ತವೆ. ಹಸೀ ಮೇವನ್ನಾಗಲಿ, ಒಣಗಿದ ಮೇವನ್ನಾಗಲಿ ದನಗಳಿಗೆ ಹಾಕುವುದಕ್ಕೆ ಮುಂಚೆ ತುಂಡುತುಂಡಾಗಿ ಕತ್ತರಿಸಿ ಕೊಡುವುದು ಮೇಲು.

ಇಂಡಿಯಾ ದೇಶದ ವೃತ್ತಾಂತಗಳು

ಕಳೆದ ಸೋಮವಾರ ಬೆಳಗ್ಗೆ ಕಲ್ಕತ್ತಾ ಪಟ್ಟಣದ ಬಳಿ ಇರುವ ಅಲ್ಲಾ ಘಾಟ್ ಎಂಬ ಸ್ಥಳದಲ್ಲಿ ಗೋದಾಮಿಗೆ ಬೆಂಕಿ ಬಿದ್ದು ಒಂದು ಲಕ್ಷ ರೂಪಾಯಿನ ಸರಕುಗಳು ಸುಟ್ಟು ಹೋದವು.

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಸ್ಟೇರ್ಗರ ಸೀಮೆಯಲ್ಲಿ ಜೂನ್ ೧ ರ ಲ್ಲಿ ಪ್ಲೇಗ್ ಇದರಿಂದ ಒಕ್ಟೋಬರ್ ವರಿಗೆ ಸಟ್ಟು ವಿಶೇಷವಾಗುವುದಕ್ಕೆ ಬಹು ನಿಬಂಧನೆಗಳನ್ನು ಏರ್ಪಾಡುಗಳು ನಡೆಯುತ್ತವೆ.

ಕರ್ನಲ್ ಸ್ವರು ಎಂಬ ಸೆರೆಯಿದ್ದ ಮ್ಯಾಕ್ ಎಂಬವರು ಎಕ್ ಜನರ ಮುಂದೆ ಬರೆದು ಅದು ಹಾಕಿಸುತ್ತಾರೆ. ಈ ಕಾರ್ಯಕ್ಕೆ ಅವರಿಗೆ ಗವರ್ನಮೆಂಟಿನವರು ೩೦೦೦ ರೂಪಾಯನ್ನು ಸಹಾಯಾರ್ಥವಾಗಿ ಕೊಡಿಸಿರುವರು.

ಮೈಸೂರ್ ಮೆಂಟ್ ಪಟ್ಟಣದಲ್ಲಿ ಕಳೆದ ಬುಧವಾರ ವರ್ತಕ ಸಿಲ್ ಸರ್ದಾರ್ ಒಂದಿಗೆ ಏಟು ಒಡೆದರು. ಅವರ ತಂದೆಗೆ ಸ್ವತ್ತನ್ನು ಪತ್ತೆ ಮಾಡಿಕೊಳ್ಳುತ್ತಿದ್ದರು. ಆ ಒಂದ ಉತ್ತರದಲ್ಲಿ ಒಡೆದ ಗಾಯಕ್ಕೆ ಸಹಿತ ಹಾಕಲಾಯಿತು.

ಲಾಹೋರ್ ಪಟ್ಟಣದ ಗವರ್ನಮೆಂಟ್ ವಿದ್ಯಾಶಾಲೆಯಲ್ಲಿ ಇಬ್ಬರು ನೌಕರರ ಮಧ್ಯ ವಿವಾದಿಸಿ ಕತ್ತಿ ತಿವಿದುದರಿಂದ ಅವನನ್ನು ಕಾಲಾಧಿಕಾರಿಗಳು ಶಿಕ್ಷೆ ವಿಧಿಸಿ, ಅವರ ಮೇಲೆ ಆಲ್ಲಿ ೬೦ ಸಂಬಳದ ಹಣದಿಂದ ಸರಿಯಾದ ಏಟು ಜನಗಳ ಜೈಲಿಗೆ ಕಾಳಿಗೆ ಕಳುಹಿಸಿದರು.

ಬಂಗಾಳ ಅಧಿಪತ್ಯಕ್ಕೆ ಸೇರಿದ ಡಂಡಾ ಎಂಬ ಪಟ್ಟಣದಲ್ಲಿ ಸೂಪರಿಂಟೆಂಡೆಂಟ್, ಡೆಪ್ಯುಟಿ ಇನ್ಸ್ಪೆಕ್ಟರ್ ಮುಂತಾದ ಆಯುಧ ಕಳುವಾಗಿ ಸೂಪರಿಂಟೆಂಡ್ ಕೊಡುವ ಮುದ್ದನ್ನು ಅಪಹರಿಸಿಕೊಂಡು ಹೋದದ್ದರಿಂದ ಅವರಿಗೆ ತಲೆ ವರುಷದವರೆಗೆ ಕಠಿಣ ಜೈಲು ಶಿಕ್ಷೆಯನ್ನು ವಿಧಿಸುತ್ತಾರೆ.

ಮದರಾಸ್ ಪಟ್ಟಣದ ಕೋರ್ಟುಗಳಿಗೆ ಈಗ ಸಾಕಷ್ಟು ರಿಕಾರ್ಡುಗಳನ್ನು ಇಟ್ಟಿರುವ ಕಟ್ಟಡವನ್ನು ಎರಡು ಲಕ್ಷ ರೂಪಾಯಿ ಖರ್ಚು ಮಾಡಿ ಎರಡನೇ ಮಾಡುತ್ತಾರೆಂದೂ, ಈ ಹಳೇ ಕಟ್ಟಡವನ್ನು ಆ ಅಧಿಪತ್ಯದ ಮಂತ್ರಾಲೋಚನಾ ಸಭೆಗಳು ನಡೆಯುವುದಕ್ಕೆ ಉಪಯೋಗಿಸಡಿಸಿಕೊಳ್ಳುವರೆಂತಲೂ ತಿಳಿದು ಬಂದಿದೆ.

ಬಂಗಾಳ ಅಧಿಪತ್ಯದ ಕಲ್ಕತ್ತಾ ಹೈಕೋರ್ಟಿನಲ್ಲಿ ಜಸ್ಟಿಸ್ ಸೂಪರಿಂಟೆಂಡೆಂಟ್ ರಾಗಿದ್ದು ಕೆಲಸದಿಂದ ಬಿಡಿಸಲ್ಪಟ್ಟಿರುವ ಜೆ. ಎಸ್. ಬಿ. ಒಟ್ಸ್ ಎಂಬುವರ ಮೇಲೆ ಅವರು ೬೦ ಲಕ್ಷ ಹಣವನ್ನು ತಿಂದುಹಾಕಿದರೆಂದು ಕ್ರಿಮಿನಲ್ ಮೊಕದ್ದಮೆ ಎಂದಿಡ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ವಿಚಾರಣೆಮಾಡುತ್ತಾರೆ.

ಕಲ್ಕತ್ತಾ ಪಟ್ಟಣದ ರೈಲ್ವೆ ಮೈಯಿಲ್ ಸರ್ವಿಸಿನಲ್ಲಿ ನೌಕರನಾಗಿದ್ದ ರಾಮಸುಂದರ ಸಿಂಗ್ ಎಂಬುವನು ಒಂದು ರಿಜಿಸ್ಟರು ಲಕೋಟೆಯಲ್ಲಿದ್ದ ೧,೧೦೦ ರೂಪಾಯಿನ ಕರೆನ್ಸಿ ನೋಟುಗಳನ್ನು ಅಪಹರಿಸಿದ್ದು ರುಜುವಾತಾದದ್ದರಿಂದ ಹೌರಾ ಡಿಪ್ಟಿ ಮ್ಯಾಜಿಸ್ಟ್ರೇಟರು ಅವನಿಗೆ ನಾಲ್ಕು ವರುಷಗಳ ಕಠಿಣ ಸಜಾ ವಿಧಿಸಿರುತ್ತಾರೆ.

ಚಕ್ರವರ್ತಿಯವರ ಜನ್ಮೋತ್ಸವದ ದಿನ ಅಂದರೆ ೨೪ ನೇ ಮೇ ತಾರೀಖಿನಲ್ಲಿ (ನಾಳೆ) ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಉತ್ತರ ದೇಶದಲ್ಲಿ ಗಹಿವಾರು ಕಿತ್ತೆಯನ್ನು ಅನುಭವಿಸುತ್ತಿರುವ ಆರು ಮಂದಿ ದೇಶೀಯ ಜೊತೆ ಮನುಷ್ಯರನ್ನು ಬಿಡುಗಡೆಮಾಡಿ ಬಿಡುತ್ತಾರೆಂಬುದಾಗಿ ಕಲ್ಕತ್ತೆಯಲ್ಲಿ ಬಲವಾದ ವರ್ತಮಾನ ಹುಟ್ಟಿ ಹಬ್ಬುತ್ತಿದೆ.

ಕಳೆದ ವಾರ ಹಿಂದೂಸ್ಥಾನದಲ್ಲೆಲ್ಲಾ ಪ್ಲೇಗ್ ಉಪದ್ರವದಿಂದ ೯೦೭ ಮರಣಗಳಾಗಿರುವವು. ಈ ಪೈಕಿ ಪಂಜಾಬ್ ೫೫, ರಾಜಪುಟಾನಾ ೩೦, ಸಂಯುಕ್ತಾಧಿಪತ್ಯಗಳು ೭೦, ಬೊಂಬಾಯಿ ಅಧಿಪತ್ಯ ೮೫, ಬಂಗಾಳಾ ೩೪, ಬಿಹಾರ್ ೪೯, ಮದರಾಸ್ ಅಧಿಪತ್ಯ ೪, ಮಧ್ಯಪ್ರಾಂತ್ಯಗಳು ೩, ಮೈಸೂರು ಸಂಸ್ಥಾನ ೮, ಈ ರೀತಿ ಜನರು ಮೃತಪಟ್ಟಿದ್ದಾರೆ.

ಸಂಯುಕ್ತ ಅಧಿಪತ್ಯಗಳಿಗೆ ಸೇರಿದ ಡೆಹ್ರಾ ನದಿಯ ಸೇತುವೆ ಕೆಳಗೆ ಒಂದು ದೋಣಿಯು ಹೋಗುತ್ತಾ ಇರುವಲ್ಲಿ ಆ ಸೇತುವೆಯ ಒಂದು ಹೆಚ್ಚಿ

ಯು ತಸುಕೊಂಡು ದೋಣಿಯೊಳಕ್ಕೆ ಬಿದ್ದಿತು. ದೋಣಿಯು ಮಗುಚಿಕೊಂಡಿತು. ಅದರಲ್ಲಿ ಐದು ಮಂದಿ ಗಂಡಸರೂ ಇಬ್ಬರು ಹೆಂಗಸರೂ ಇದ್ದರು. ಈ ಪೈಕಿ ಆರು ಮಂದಿ ನೀರಿನಪಾಲಾದರು.

ಫರಿದ್‌ಕೋಟ್ ಸಂಸ್ಥಾನದ ಮಹಾರಾಜರವರ ಮಂತ್ರಾಲೋಚನಾ ಸಭೆಯ ಪ್ರೆಸಿಡೆಂಟ್ ಸರ್ದಾರ್ ಬಹದೂರ್ ರಿಸಾಲ್ದಾರ್ ಪ್ರತಾಪಸಿಂಗ್ ರವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟದ್ದರಿಂದ ಗವರ್ನ್‌ಮೆಂಟಿನವರು ಸ್ವಾರಾವರಿ ಜಿಲ್ಲೆಯ ಡೆಪ್ಯುಟಿ ಕಲೆಕ್ಟರಾಗಿದ್ದ ಸರ್ದಾರ್ ಬಹದೂರ್ ಗಯಾಸಿಂಗ್ ರವರನ್ನು ಅವರ ಸ್ಥಾನಕ್ಕೆ ನೇಮಿಸಿರುತ್ತಾರೆ.

ಉತ್ತರ ದೇಶದಲ್ಲಿ ಅಂದರೆ ಬಂಗಾಳಾ ಮತ್ತು ಸಂಯುಕ್ತ ಅಧಿಪತ್ಯಗಳಲ್ಲಿ ಕಳೆದ ವಾರ ೮,೦೦೦ ಜನರು ಸರ್ಕಾರಿ ರಿಲೀಫ್ ಕಾಮಗಾರಿಗಳನ್ನು ಬಿಟ್ಟು, ವ್ಯವಸಾಯ ಕಾರ್ಯಗಳನ್ನು ನಡೆಸುವುದಕ್ಕಾಗಿ ತಮ್ಮ ಗ್ರಾಮ ಭೂಮಿಗಳನ್ನು ಕುರಿತು ಹೊರಟುಹೋದರು. ಇನ್ನೂ ೬೦,೦೦೦ ಪ್ರಜೆಗಳು ಕ್ಷಾಮ ಪೀಡಿತರಾಗಿ ಗವರ್ನ್‌ಮೆಂಟಿನವರ ಪೋಷಣೆಯಲ್ಲಿ ಉಳಿದಿರುತ್ತಾರೆ.

ಗುಜರಾತ್ ಬರೋಡದಿಂದ ಒಂದು ಹಾಸಿಗೆಯ ಸುತ್ತನ್ನು ಯಾರೋ ಪೂನಾ ಪಟ್ಟಣದ ಸ್ಕೂಲಿನಲ್ಲಿ ಓದುವ ಒಬ್ಬ ವಿದ್ಯಾರ್ಥಿಯ ಹೆಸರಿಗೆ ರೈಲ್ ಮೂಲಕ ಕಳುಹಿಸಿದರು. ಪೂನಾ ಪಟ್ಟಣದ ಪೋಲೀಸಿನವರು ಆ ಹಾಸಿಗೆ ಸುತ್ತನ್ನು ಬಿಚ್ಚಿ ನೋಡಿದಾಗ ಅದರಲ್ಲಿ ಆರು ನಳಿಗೆಗಳ ಒಂದು ಪಿಸ್ತೂಲು ಇದ್ದಿತು. ಆ ವಿದ್ಯಾರ್ಥಿಯು ಅದು ತನ್ನದಲ್ಲವೆಂದು ಇನ್ಕಾರ ಮಾಡಿದನು. ಪೋಲೀಸಿನವರು ಅದರ ಪೂರ್ವೋತ್ತರವನ್ನು ತನಿಖೆ ಮಾಡುತ್ತಿದ್ದಾರೆ.

ರೋಹಿಲ್‌ಖಂಡ್—ಕುಮಾವುನ್ ರೈಲ್‌ರಸ್ತೆಯನ್ನು ಪಿಲಿಭಿತ್ ನಗರದಿಂದ ಬಾರಿಂದ ಶಹಜಹಾನ್‌ಪುರ್ ಎಂಬ ಸ್ಥಳದ ವರೆಗೆ ೫೮ ಮೈಲಿದೂರ ಬಡಾವಣೆ ಮಾಡಬೇಕೆಂತಲೂ, ಇದಕ್ಕೆ ೧೨ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದೆ ಎಂತಲೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಹುಕುಂ ಕೊಟ್ಟಿದ್ದಾರೆ. ಈ ರೈಲ್ ರಸ್ತೆಯು ಟಿಬೆಟ್ಟಿಗೆ ಹಿಂದೂಸ್ಥಾನದಿಂದ ವ್ಯಾಪಾರ ಸರಕುಗಳು ಆಮದು ರಫ್ತಾಗಲು ತುಂಬಾ ಸಹಾಯ ಮಾಡುವುದು.

ಲಾಲಾ ಲಜಪತ್ ರಾಯ್ ರವರು ಕಲ್ಕತ್ತೆಯಲ್ಲಿ ಪ್ರಕಟವಾಗುತ್ತಿರುವ 'ಇಂಗ್ಲಿಷ್‌ಮನ್' ಎಂಬ ವರ್ತಮಾನ ಪತ್ರಿಕೆಯ ಮೇಲೆ ೫೦,೦೦೦ ರೂಪಾಯಿಗೆ ಮಾನನಷ್ಟದ ಮೊಕದ್ದಮೆಯನ್ನು ದಾಖಲ್ ಮಾಡಿದ್ದಾರೆ. ಈ ಮೊಕದ್ದಮೆಯು ಕಲ್ಕತ್ತಾ ಹೈಕೋರ್ಟಿನಲ್ಲಿ ಮುಂದಿನ ನವೆಂಬರ್ ತಿಂಗಳಲ್ಲಿ ಪ್ರಾರಂಭವಾಗುವುದು. ಲಾಲಾ ಲಜಪತ್ ರಾಯರವರ ಕಡೆ ಮೂರು ಮಂದಿ ವಕೀಲರೂ, ಆ ಪತ್ರಿಕೆಯ ಕಡೆ ಇಬ್ಬರು ಲಾಯರುಗಳೂ ವಾದಿಸುವರು.

ಇಂಡಿಯಾ ಗವರ್ನ್‌ಮೆಂಟಿನವರು ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲೂ ಚಲಾವಣೆಯಾಗುವಂಥಾ ಐದು ರೂಪಾಯಿನ ಕರೆನ್ಸಿ ನೋಟುಗಳನ್ನು ಮಾಡಿಟ್ಟಿದ್ದಾರಷ್ಟೆ. ಇದೇ ರೀತಿ ಇತರ ಕೆಲವು ನೋಟುಗಳನ್ನೂ ಮಾಡಿ ಜಾರಿಗೆ ತರಬೇಕೆಂದಿರುತ್ತಾರೆ. ಇವುಗಳಲ್ಲಿ ರೂಪಾಯಿಗಳ ಸಂಖ್ಯೆಯನ್ನು ಬಹಳ ದೊಡ್ಡದಾಗಿ ಅಚ್ಚು ಹಾಕಿಸುವುದು ಉತ್ತಮವೆಂದು ಕೆಲವು ವ್ಯಾಪಾರಸಂಘಗಳವರು ತಮ್ಮ ಅಭಿಪ್ರಾಯವನ್ನು ಗವರ್ನ್‌ಮೆಂಟಿಗೆ ತಿಳಿಸಿರುವರು.

ನಮ್ಮ ವೈಸ್‌ರಾಯಿಯವರಾದ ಲಾರ್ಡ್ ಮಿಂಟೋ ಪ್ರಭುಗಳಿಗೆ ಕೆಲಸದ ಕಷ್ಟವು ಬಹಳವಾಗಿರೋಣದರಿಂದ ಅವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬಿಡುವವರಾಗಿದ್ದಾರೆಂದು ಕಳೆದ ವಾರ ವಿಲಾಯಿತಿಯ ಪಾರ್ಲಿಮೆಂಟಿನಲ್ಲಿ ವರ್ತಮಾನ ಹುಟ್ಟಿತು. ಆದರೆ ಸಿಮ್ಲಾ ಪಟ್ಟಣದ ವಾರ್ತಾದಾರರು—ವೈಸ್‌ರಾಯಿ ಯವರು ಆರೋಗ್ಯಭಾಗ್ಯವುಳ್ಳವರಾಗಿರುತ್ತಾರೆಂತಲೂ, ಅವರು ಕೆಲಸ ಬಿಟ್ಟು ಹೋಗುತ್ತಾರೆಂಬ ಸುದ್ದಿಯು ನಿರಾಧಾರವಾದದ್ದೆಂತಲೂ ತಿಳಿಸುತ್ತಾರೆ.

ದಕ್ಷಿಣ ದೇಶಕ್ಕೆ ಸೇರಿದ ಸೇತು ಎಂಬ ಊರಿನಲ್ಲಿ ಒಂದು ಭಾರೀ ನೂಲಿನ ಕಾರ್ಖಾನೆಯನ್ನು ದೇಶೀಯ ಜನರೇ ಸೇರಿ ಸ್ಥಾಪಿಸುವವರಾಗಿದ್ದಾರೆ. ಈ ಕಾರ್ಖಾನೆಗೆ ಬೇಕಾಗುವ ಯಂತ್ರ ಮುಂತಾದ ಪರಿಕರಗಳನ್ನು ಕಲ್ಕತ್ತಾ ಪಟ್ಟಣದಲ್ಲಿರುವ ಬರ್ನ್ ಕಂಪನಿಯವರಿಂದಲೇ ಮಾಡಿಸಿ ತರಿಸಬೇಕೆಂದು ಗೊತ್ತಾಗಿದೆ. ಸೇತು ಎಂಬ ಊರಿನ ಸುತ್ತುಮುತ್ತಲೂ ಹತ್ತಿ ಬೆಳೆಯುವ ಭೂಮಿಗಳು ವಿಶೇಷವಾಗಿರುವವು. ಇದಲ್ಲದೆ ಅಲ್ಲಿಗೆ ಸೌತ್ ಇಂಡಿಯಾ ರೈಲ್ವೆ ಸ್ಟೇಷನು ಹತ್ತಿರವಾಗಿದೆ.

ಸಿಲೋನ್ ದ್ವೀಪಕ್ಕೆ ಸೇರಿದ ಕೊಲಂಬೋ ಪಟ್ಟಣದಲ್ಲಿ ಒಬ್ಬ ಹೆಂಗಸು ಐದು ಮಂದಿಯ ಸಹಾಯವನ್ನು ಪಡೆದು ತನ್ನ ಗಂಡನನ್ನು ಕೊಂದುಹಾಕಿದಳೆಂದು ಮೊಕದ್ದಮೆ ಆಗಿ ಸೆಷನ್ಸ್ ಕೋರ್ಟಿನಲ್ಲಿ ನಿರ್ಣಯವಾಯಿತು. ಜಡ್ಜರು ಆ ಆರು ಜನರಿಗೂ ಮರಣದಂಡನೆಯನ್ನು ವಿಧಿಸಿದರು. ಕ್ರಮ ಪ್ರಕಾರ ಜಡ್ಜ್‌ಮೆಂಟಿನ ನಕಲು ಸಿಲೋನ್ ಗವರ್ನರವರ ಬಳಿಗೆ ರವಾನೆಯಾಯಿತು. ಗವರ್ನರವರು ಈ ಮೊಕದ್ದಮೆಯ ವಿವರಗಳನ್ನು ಪರಾಂಬರಿಸಿ, ಮೊಕದ್ದಮೆಯು ರುಜುವಾತಾಗಲಿಲ್ಲವೆಂದು ಹೇಳಿ ಆ ಆರು ಮಂದಿಯನ್ನೂ ಬಂಧನದಿಂದ ಬಿಡಿಸಿಬಿಟ್ಟಿದ್ದಾರೆ.

ಪ್ರಿನ್ಸ್ ಆಫ್ ವೇಲ್ಸ್‌ರವರು ಹೈದರಾಬಾದಿಗೆ ದಯಮಾಡಿದ್ದ ಸಂದರ್ಭದಲ್ಲಿ ನೈಜಾಮರವರ ಒಬ್ಬ ಹಿರಿಯ ಕುಮಾರನು ಬಾಲಕನಾಗಿ ಅವರಿಗೆ ಸ್ವಾಗತವಿತ್ತನಷ್ಟೆ. ಕಳೆದ ವಾರ ಆ ಕುಮಾರನ ತಾಯಿಯಾದ ಚಾಂದ್ನಿ ಬೇಗಂ ಸಾಹಿಬಾಯವರು ಹೈದರಾಬಾದಿನಲ್ಲಿ ಕಾಲವಾದರು. ಇದರ ದೆಸೆಯಿಂದ ನೈಜಾಮರವರೂ ಅವರ ಪ್ರಜೆಗಳೂ ವ್ಯಸನಾಕ್ರಾಂತರಾಗಿರುತ್ತಾರೆ. ಶವವನ್ನು ಮಂತ್ರಿ ಕೇಷ್ಕರೀ ಮೊದಲಾದ ಮುಸಲ್ಮಾನರು ಕ್ರಮ ಪ್ರಕಾರ ಸಾಗಿಸಿ ಮಕ್ಕಾ ಮಸೀದಿಯಲ್ಲಿ ಪ್ರಾರ್ಥನಾದಿಗಳನ್ನು ನಡಿಸಿ ಪಟ್ಟಣದ ಹೊರಪಾರ್ಶ್ವದಲ್ಲಿ ದಫನ್ ಮಾಡಿಸಿದರು.

ತಿರುವಾಂಕೂರಿನಿಂದ ಕೊಟ್ಟಪಲ್ಲಿಯ ವರೆಗೆ ಉದ್ದಕ್ಕೂ ಸಮುದ್ರತೀರದಲ್ಲಿ ಮರಳು ಅಪಾರವಾಗಿರುವುದು. ಈ ಮರಳಿನಲ್ಲಿ ಒಂದು ತರಹಾ ಚಿನ್ನದ ಬಣ್ಣವುಳ್ಳ ಮರಳು ಬೆರಕೆಯಾಗಿದೆ. ಇದನ್ನು ಬಿಡಿಸಿ ಸೀಮೆಗೆ ಸಾಗಿಸಿಕೊಂಡು ಹೋಗುವುದಕ್ಕೆ ಶಾಂಬರ್ಗ್ ಎಂಬೊಬ್ಬ ಜರ್ಮನಿಯರು ಗವರ್ನ್‌ಮೆಂಟಿನಿಂದ ಅಪ್ಪಣೆಪಡೆದುಕೊಂಡಿದ್ದಾರೆ. ಈ ಮರಳನ್ನು ಸಾಧಾರಣವಾದ ಮರಳಿನಿಂದ ಪ್ರತ್ಯೇಕವಾಡುವುದಕ್ಕೆ ಟನ್ ೧ ಕ್ಕೆ ಎರಡು ಸಾವಿರ ರೂಪಾಯಿ ತಗಲುವುದು. ಈ ಮರಳು ಏನಾವುದಕ್ಕಾಗಿ ಉಪಯೋಗಿಸುವರೋ ಗೊತ್ತಾಗಲಿಲ್ಲ. ಈ ಸಂಗತಿಯನ್ನು ಅವರು ಗುಟ್ಟಿನಲ್ಲಿ ಇಟ್ಟುಕೊಂಡಿದ್ದಾರೆ.

ಕಲ್ಕತ್ತಾ ಪಟ್ಟಣದಲ್ಲಿ ಹರಿಸಾದ ಚಟರ್ಜಿ, ದೇವೇಂದ್ರನಾಥ ಭಟ್ಟಾಚಾರ್ಯ, ಅವಿನಾಶ ಚಂದ್ರ ಎಂಬ ಮೂರು ಮಂದಿಯ ಮೇಲೂ ಅವರು "ರಣಜಿತರ ಜೀವನ ಯಜ್ಞ" ಎಂಬ ರಾಜದ್ರೋಹಕರವಾದ ನಾಟಕವನ್ನು ಬರೆದು ಪ್ರಕಟಿಸಿದರೆಂದು ಮೊಕದ್ದಮೆ ಆಯಿತು. ಅವರು ಮಾಜಿಸ್ಟ್ರೇಟರ ಮುಂದೆ ತಮ್ಮ ಅಪರಾಧವನ್ನು ಒಪ್ಪಿಕೊಂಡು ಕ್ಷಮಾಪಣೆಯನ್ನು ಬೇಡಿಕೊಂಡದ್ದಲ್ಲದೆ ಅಚ್ಚುಹಾಕಿಸಿರುವ ಪ್ರತಿಗಳನ್ನೆಲ್ಲಾ ಸರ್ಕಾರಕ್ಕೆ ತಂದೊಪ್ಪಿಸುವುದಾಗಿ ವಾಗ್ದಾನ ಮಾಡಿದ್ದರಿಂದ ಮ್ಯಾಜಿಸ್ಟ್ರೇಟರು ಅವರಿಗೆಲ್ಲಾ ತಲಾ ೧೦ ರೂಪಾಯಿನಂತೆ ಜುಲ್ಮಾನೆ ಮಾತ್ರ ವಿಧಿಸಿ ಬಿಟ್ಟುಬಿಟ್ಟರು.

ಬೊಂಬಾಯಿ ಪಟ್ಟಣದಲ್ಲಿ ಕಳೆದ ವಾರ ಒಂದು ವಿಧವಾ ವಿವಾಹವು ನೆರವೇರಿತು. ೧೯ ವರುಷ ವಯಸ್ಸಿನ ಮೇ। ಕೆ. ರಂಗಸ್ವಾಮಿ ಐಯಂಗಾರ್ ಎಂಬಾತನು ೧೭ ವರುಷದ ಕಮಲಮ್ಮನೆಂಬ ವಿಧವೆಯನ್ನು ವರಿಸಿ ವೇದೋಕ್ತವಾಗಿ ಮದುವೆ ಮಾಡಿಕೊಂಡನು. ಪತಿಪತ್ನಿಯರಿಬ್ಬರೂ ಶ್ರೀವೈಷ್ಣವ ಬ್ರಾಹ್ಮಣರು. ವಿವಾಹ ಕಾಲದಲ್ಲಿ ಬೊಂಬಾಯಿನ ಕೆಲವು ಹಿಂದೂ ದೊಡ್ಡ ಮನುಷ್ಯರೂ, ಮದರಾಸಿನಿಂದ ಹೋಗಿದ್ದ ಕೆಲವು ಹಿಂದುಗಳೂ ಇದ್ದು ಮದುವೆಯನ್ನು ಆಗ ಮಾಡಿಸಿದರು. ಮದುವೆಯಾದ ನಂತರ ಮೆ। ಜಸ್ಟಿಸ್ ಚಂದಾವರ್ಕರವರು ವಿಧವಾ ವಿವಾಹವನ್ನು ಕುರಿತು ಬಹು ಸಾರಸ್ಯವಾದ ಉಪನ್ಯಾಸವನ್ನು ಮಾಡಿದರು.

ಹಿಂದೂಸ್ಥಾನಕ್ಕೆ ಬೇಕಾದ ಕಡ್ಡಿಗಳನ್ನು ಸುಮಾರು ೬೦-೭೦ ಲಕ್ಷ ರೂಪಾಯಿನಷ್ಟು ಪ್ರತಿ ವರುಷವೂ ಅನ್ಯದೇಶಗಳಿಂದ ತರಿಸಿ ಉಪಯೋಗಿಸುತ್ತಾರೆ. ಅಪಾರವಾದಷ್ಟು ಬೇಕಾದ ಕಡ್ಡಿಗಳನ್ನು ಹಿಂದೂಸ್ಥಾನದಲ್ಲೇ ತಯಾರುಮಾಡುವುದಕ್ಕೆ ಭಾರೀ ಕಾರ್ಖಾನೆಗಳು ಇನ್ನೂ ಏರ್ಪಾಡಾಗಿಲ್ಲ. ಇಂಡಿಯಾ ಗವರ್ನ್‌ಮೆಂಟಿನವರು ಈ ದೇಶದ ಕಾಡುಗಳಲ್ಲಿರುವ ೩೫ ಜಾತಿ ಮರಗಳನ್ನು ಯೂರೋಪ್ ಖಂಡಕ್ಕೆ ಕಳುಹಿಸಿ, ಈ ೩೫ ಜಾತಿಯ ಮರಗಳಿಂದ ಬೇಕಾದ ಕಡ್ಡಿಗಳನ್ನು ಮಾಡಬಹುದೆಂದು ಗೊತ್ತು ಮಾಡಿಸುತ್ತಿದ್ದಾರೆ. ತೀವ್ರದಲ್ಲೇ ಗವರ್ನ್‌ಮೆಂಟಿನವರು ಪ್ರಕಟ ಮಾಡುವರು. ಅಂತು ಈ ದೇಶದಲ್ಲಿ ದೊಡ್ಡದಾದ ಕಾರ್ಖಾನೆಯನ್ನು ಸ್ಥಾಪಿಸಿ ಬೇಕಾದ ಕಡ್ಡಿಗಳನ್ನು ತಯಾರು ಮಾಡಿದರೆ ತುಂಬಾ ಆದಾಯವಾಗುತ್ತದೆನ್ನುವದಕ್ಕೆ ಸಂಶಯ ಕಾಣುವುದಿಲ್ಲ.

ಮದರಾಸ್ ಪಟ್ಟಣಕ್ಕೆ ಹೋಗುವವರೆಲ್ಲಾ ಪ್ಲೇಗ್ ಪ್ಯಾಸ್‌ಪೋರ್ಟು ಗಳನ್ನು ಪಡೆದು ಅಲ್ಲಿರುವ ಸ್ಥಳ ಅಂದರೆ ಹತ್ತು ದಿನಗಳ ವರೆಗೆ ಆಲಿಸ ಡಾಕ್ಟರುಗಳಿಂದ ರುಜು ಹಾಕಿಸಿಕೊಳ್ಳಬೇಕಾಗಿದೆಯಷ್ಟೆ. ಈ ನಿಬಂಧನೆಯು ಅನೇಕರಿಗೆ ತುಂಬಾ ಅನಾನುಕೂಲವಾಗಿದೆ ಎಂದು ಹೇಳಬೇಕಾದದ್ದಿಲ್ಲ. ಈಚೆಗೆ ಪ್ಲೇಗ್ ಉಪದ್ರವು ಪಟ್ಟಣದಿಂದ ಜನರಿಗೆ ಅಷ್ಟು ಬಾಧಕವಾಗಿ ಹಾನಿಯನ್ನುಂಟುಮಾಡಿಲ್ಲವೆಂದೂ, ಇಲಿ ಹೆಗ್ಗಣಗಳ ಮೂಲಕ ಬರುತ್ತದೆಂದೂ ಸಿದ್ಧಾಂತವಾಗಿರುವುದನ್ನು ನೋಡಿ ಮದರಾಸ್ ಪಟ್ಟಣದ ಮ್ಯುನಿಸಿಪಲ್ ಕೌನ್ಸಲರುಗಳು ಈ ಪ್ಯಾಸ್‌ಪೋರ್ಟಿನ ಏರ್ಪಾಡನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ತೀರ್ಮಾನಿಸಿ, ಮದರಾಸ್ ಗವರ್ನ್‌ಮೆಂಟಿಗೆ ಅರಿಕೆಮಾಡಿಕೊಂಡಿದ್ದಾರೆ. ಗವರ್ನ್‌ಮೆಂಟಿನವರು ಯಾವ ರೀತಿ ಇತ್ಯರ್ಥಪಡಿಸುವರೋ ಮುಂದೆ ನೋಡಬೇಕಾಗಿದೆ.

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಹಿಂದುವಿನ ಇಬ್ಬರು ಹೆಂಡರು ತಮ್ಮಿಬ್ಬರ ಪೈಕಿ ಯಾರಿಗೆ ತಮ್ಮ ಗಂಡನ ಮೇಲೆ ಹೆಚ್ಚಾದ ಪ್ರೀತಿ ಇರುವುದು ಎಂಬುದಾಗಿ ವಾಗ್ವಾದ ಮಾಡುತ್ತಿದ್ದರು. ಇದನ್ನು ಹರಿಸುವುದಕ್ಕೆ ಗಂಡನು ಮಧ್ಯಸ್ಥಗಾರನಾಗಿ ನಿಂತುಕೊಂಡನು. ಆ ಇಬ್ಬರು ಹೆಂಡರೂ ವಾಗ್ವಾದದಿಂದ ಜಗಳಕ್ಕೆ ಹೊರಟು ಗುದ್ದಾಡುತ್ತಾ, ಇಬ್ಬರೂ ಗಂಡನ ಜುಟ್ಟನ್ನು ಸ್ವಲ್ಪ ಸ್ವಲ್ಪ ಹಿಡಿದು ಎಳೆಯುವುದಕ್ಕಾರಂಭಿಸಿದರು. ಆಗ ಮೂವರುಮಂದಿಗೂ ಹೊಡೆದಾಟವಾಯಿತು. ಪೋಲೀಸಿನವರು ಹೋಗಿ ಅವರ ಜಗಳವನ್ನು ನೋಡಿ, ಅವರನ್ನೆಲ್ಲಾ ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಗಂಡನು ನಾಚಿಕೊಂಡು ನಡೆದ ಸಂಗತಿಗಳನ್ನು ಕೈಫಿಯತ್ತು ಬರೆಸಿದನು. ಮ್ಯಾಜಿಸ್ಟ್ರೇಟರು ಆ ಮೂವರುಮಂದಿಯನ್ನೂ ತಕ್ಕ ಬುದ್ಧಿಮಾತುಗಳಿಂದ ಎಚ್ಚರಿಸಿ ಕಳುಹಿಸಿಬಿಟ್ಟರು.

ಬರ್ಮಾ ಅಧಿಪತ್ಯದ ಗವರ್ನ್‌ಮೆಂಟ್ ಬಂದೀಖಾನೆಗಳಲ್ಲಿ ಖೈದಿಗಳಿಗೆ ಸದ್ಗುಣ ಸಚ್ಚರಿತ್ರಗಳನ್ನು ಕುರಿತು ಬೋಧಿಸಬಹುದೆಂತ ಸರ್ಕಾರದವರು ಮೂರು ಮಂದಿ ಬೌದ್ಧ ಸನ್ಯಾಸಿಗಳಿಗೆ ಅವಕಾಶ ಕೊಟ್ಟಿದ್ದಾರೆ. ಇವರು ಪ್ರತಿ ಭಾನುವಾರವೂ ಜೈಲುಗಳಿಗೆ ಹೋಗಿ ಮತಸಂಬಂಧವಾದ ವಿಷಯಗಳನ್ನು ಕುರಿತು ಬಂದೀವಾನರಿಗೆ ಉಪನ್ಯಾಸಗಳನ್ನು ಮಾಡುವರು. ಜೈಲ್‌ಖಾನೆಗಳ ಸೂಪರಿಂಟೆಂಡೆಂಟರು ತಮ್ಮ ವಾರ್ಷಿಕ ರಿಪೋರ್ಟಿನಲ್ಲಿ ಈ ವಿಚಾರವನ್ನು ಕಾಣಿಸಿ, ಈ ಉಪನ್ಯಾಸಗಳನ್ನು ಬಂದೀವಾನರು ಕೇಳಿ ಮನಸ್ಸಿಟ್ಟು ಕೇಳುತ್ತಾ ಬಂದಿದ್ದಾರಾದರೂ ಅವರಿಗೆ ಅದರಿಂದ ವಿಶೇಷ ಪ್ರಯೋಜನವಾದಂತೆ ಕಾಣುವುದಿಲ್ಲ. ಆದಾಗ್ಯೂ ಈ ಪದ್ಧತಿಯನ್ನು ಇನ್ನೂ ಇಟ್ಟು ನಡಿಸುತ್ತಾ ಬಂದಲ್ಲಿ ಕಾಲಕ್ರಮೇಣ ಇದರಿಂದ ಖೈದಿಗಳು ಉತ್ತಮಸ್ಥಿತಿಗೆ ಬಂದಾರೆಂದು ತೋರುತ್ತದೆ ಎಂಬುದಾಗಿ ಬರೆದಿದ್ದಾರೆ.

ತಿರುವಾಂಕೂರು (ಅನಂತಶಯನ) ರಾಜಧಾನಿಯಲ್ಲಿ ವರ್ತಕರಿಗೂ ಪೋಲೀಸಿನವರಿಗೂ ಮನಸ್ತಾಪಗಳಿದ್ದದ್ದರಿಂದ ವರ್ತಕರು ದಂಗೆ ಮಾಡಿ ಪೋಲೀಸ್ ಸ್ಟೇಷನ್ನನ್ನು ಸುಟ್ಟು ಹಾಕಿದರೆಂದೂ, ಇತರ ದಂಗೆಕೃತ್ಯಗಳನ್ನು ನಡಿಸಿದರೆಂದೂ ಪ್ರಕಟವಾಯಿತಷ್ಟೆ. ಪೋಲೀಸಿನವರು ವರ್ತಕರ ಮುಖಂಡರನ್ನು ಹಿಡಿದು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದಾಗ ಸೆಷನ್ಸ್ ಜಡ್ಜರಾದ ಮೆ। ಕೆ. ನಾರಾಯಣ-ಮೇನನ್‌ರವರು ಮೊಕದ್ದಮೆಯನ್ನು ತನಿಖೆಮಾಡಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಿದರು. ಅದರ ಮೇಲೆ ಅವರು ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡರು. ಅಲ್ಲಿ ಜಡ್ಜಿಗಳು ಈ ಮೊಕದ್ದಮೆಯ ಕಟ್ಟನ್ನು ಪರಾಂಬರಿಸಿ, ಅಪರಾಧಿಗಳ ಮೇಲೆ ರುಜುವಾತು ಬರುವುದಿಲ್ಲವೆಂದು ಹೇಳಿ ಅವರನ್ನು ಖುಲಾಸ್ ಮಾಡಿಸಿದ್ದಲ್ಲದೆ ಸೆಷನ್ಸ್ ಜಡ್ಜರು ಸರಿಯಾಗಿ ದರ್ಯಾಫ್ತು ಮಾಡದೆ ತಪ್ಪಿರುತ್ತಾರೆಂದು ಬರೆದಿಟ್ಟರು. ಗವರ್ನ್‌ಮೆಂಟಿನವರು ಆ ಸೆಷನ್ಸ್ ಜಡ್ಜರಾದ ಮೆ। ಮೇನನ್‌ರವರನ್ನು ಸಸ್ಪೆಂಡ್ ಮಾಡಿ ಅವರ ವಾಜಿಬ್ಬುಲವನ್ನು ಕೇಳಿದ್ದಾರೆ. ಮೆ। ಮೇನನ್‌ರವರು ೧೪ ವರುಷಗಳಿಂದ ಜಡ್ಜರಾಗಿರುತ್ತಾರೆ. ಈಗ ೫ ವರುಷಗಳ ಕೆಳಗೆ ಅವರಿಗೆ ಈಗಿದ್ದ ಸೀನಿಯರ್ ಸೆಷನ್ಸ್ ಜಡ್ಜರ ಕೆಲಸವಾಗಿ ಆ ಕೆಲಸದಲ್ಲಿದ್ದರು. ಇಂಥಾ ಅನುಭವದಾರರಾದ ಜಡ್ಜರನ್ನು ಸರ್ಕಾರದವರು ಸಸ್ಪೆಂಡ್ ಮಾಡಿರುವುದು ಅನೇಕರಲ್ಲಿ ಆಶ್ಚರ್ಯವನ್ನುಂಟುಮಾಡಿದೆ.

ಕಳೆದ ಗುರುವಾರ ಬೆಳಿಗ್ಗೆ ಕಲ್ಕತ್ತೆಯಿಂದ ಬೊಂಬಾಯಿನ ಕಡೆ ಕಲ್ಯಾಣಿ ಎಂಬ ಸ್ಟೇಷನ್ನಿಗೆ ಮೆಯಿಲ್ ಗಾಡಿಯು ಬಂದು ನಿಂತಿತು. ಅಲ್ಲಿ ಪ್ರಯಾಣಿಕರ ಟಿಕೆಟ್ಟುಗಳನ್ನು ತೆಗೆದುಕೊಳ್ಳುವಾಗ್ಗೆ ವಿಷ್ಣು ಆಥವಲೆ ಎಂಬ ಸುಮಾರು ೨೫ ವರುಷದ ಯೌವನಸ್ಥನು ಟಿಕೆಟ್ ಇಲ್ಲದೆ ಪ್ರಯಾಣ ಮಾಡಿಕೊಂಡು ಬಂದನೆಂದು ತಿಳಿಯಿತು. ಅವನನ್ನೂ ಅವನ ಪೆಟ್ಟಿಗೆಯನ್ನೂ ರೈಲಿನವರು ಹಿಡಿದು ಕೊಠಡಿಯೊಳಕ್ಕೆ ಕರೆದುಕೊಂಡು ಹೋಗಿ ಅವನಿಂದ ದುಬಾರಿ ಚಾರ್ಜನ್ನು ವಸೂಲ್ಮಾಡಿದರು. ಆ ಸಂದರ್ಭದಲ್ಲಿ ಅವನು ಹಣ ಕೊಡುವುದಕ್ಕಾಗಿ ತನ್ನ ಪೆಟ್ಟಿಗೆಯ ಬಾಗಲನ್ನು ತೆರೆದನು. ಸಮೀಪದಲ್ಲಿದ್ದ ಪೋಲೀಸಿನವನು ಪೆಟ್ಟಿಗೆಯೊಳಗೇನಿದೆ ಎಂದು ಕೇಳಿದನು. ಅವನು ತನ್ನ ಬಟ್ಟೆಬರೆಗಳಿವೆ ಎಂದು ಹೇಳಿದಾಗ ಪೆಟ್ಟಿಗೆಯನ್ನೆಲ್ಲಾ ಶೋಧನೆ ಮಾಡಿದರು. ಅದರಲ್ಲಿ ಕೆಲವು ಆಯುಧಗಳೂ ಸಿಡಿಮದ್ದಿನ ಗುಂಡುಗಳ ತಯಾರಿಗೆ ಉಪಯುಕ್ತವಾದ ಕೆಲವು ದ್ರಾವಕಗಳೂ ಸಿಕ್ಕಿದವು. ಕೂಡಲೇ ಆ ಸಮಯ ಅವನನ್ನು ದಸ್ತಗಿರಿ ಮಾಡಿದರು. ಅವನನ್ನು ಕೇಳಿದರೆ ಆ ಪೆಟ್ಟಿಗೆಯನ್ನು ಯಾರೋ ತನಗೆ ಕೊಟ್ಟರೆಂದು ಹೇಳಿದನಲ್ಲದೆ ಇಂಥವನು ಕೊಟ್ಟನೆಂಬುವುದನ್ನು ಖಂಡಿತವಾಗಿ ಹೇಳದೆ ಇರುತ್ತಾನೆ. ಈಗ ಪೋಲೀಸಿನವರು ಪತ್ತೆ ತರದೂದನ್ನು ನಡಿಸುತ್ತಿದ್ದಾರೆ.

ಇಂಡಿಯಾ ಗವರ್ನ್‌ಮೆಂಟಿನವರು ಹಿಂದೂಸ್ಥಾನದ ಎಲ್ಲಾ ಸರ್ಕಾರಿ ಇಲಾಖೆಗಳಲ್ಲೂ ಖಾಯಂ ನೌಕರರಾಗಿರುವ ಉದ್ಯೋಗಸ್ಥರಿಗೂ ಅವರು ಪೆನ್ಷನ್ ಪಡೆದು ಕೆಲಸ ಬಿಡುವಾಗ್ಗೆ ಸಹಾಯ ದೊರೆಯುವಂತೆ ಒಂದು ಫಂಡನ್ನು ಏರ್ಪಾಡು ಮಾಡಿದ್ದಾರೆ. ಈ ಫಂಡು ಮುಂದಿನ ಆಗಸ್ಟ್ ತಾ ೧ ರ ಲಾಗಾಯಿತು ಪ್ರಾರಂಭವಾಗುವುದು. ಇದಕ್ಕೆ ಪ್ರತಿ ಒಬ್ಬ ನೌಕರನೂ ತನ್ನ ಸಂಬಳದಲ್ಲಿ ರೂಪಾಯಿ ಒಂದಕ್ಕೆ ಒಂದಾಣೆಗೆ ಕಡಮೆ ಇಲ್ಲದೆಯೂ ಎರಡಾಣೆಗೆ ಹೆಚ್ಚಿಲ್ಲದೆಯೂ ಸರ್ಕಾರಕ್ಕೆ ಪಾವತಿ ಮಾಡಬೇಕು. ಈ ಚಂದಾವನ್ನು ಸರ್ಕಾರದವರೇ ಪ್ರತಿ ತಿಂಗಳಲ್ಲೂ ನೌಕರರ ಸಂಬಳಗಳಲ್ಲಿ ಮುರಾಯಿಸಿಕೊಳ್ಳುತ್ತಾರೆ. ಹೀಗೆ ವಸೂಲಾಗುವ ಹಣಕ್ಕೆ ಶೇಕಡಾ ವರುಷಕ್ಕೆ ನಾಲ್ಕು ರೂಪಾಯಿನಂತೆ ಚಕ್ರಬಡ್ಡಿ ಸೇರಿಸಿಕೊಡುವರು. ನೌಕರರು ಪೆನ್ಷನ್ ಪಡೆಯುವಾಗ್ಗೆ ಈ ಹಣವನ್ನೂ ಅವರಿಗೆ ಪಾವತಿ ಮಾಡುವರು, ಇಲ್ಲವೇ ಅದಕ್ಕೆ ಮುಂಚೆಯೇ ಅವರು ಕಾಲವಾದರೆ ಆ ಹಣವನ್ನು ಅವರ ವಾರಸುದಾರರಿಗೆ ಪಾವತಿಮಾಡುತ್ತಾರೆ. ಇದಲ್ಲದೆ ನೌಕರರು ಗೃಹಕೃತ್ಯದಲ್ಲಿ ಅವಶ್ಯವಾದ ಹೆಚ್ಚು ವೆಚ್ಚ ಮಾಡಬೇಕಾಗಿ ಬಂದ ಪಕ್ಷದಲ್ಲಿ ಅವರಿಗೆ ಈ ಫಂಡಿನಿಂದ ಸ್ವಲ್ಪ ಹಣವನ್ನು ಸಾಲವಾಗಿ ಕೊಟ್ಟು, ಅವರ ಸಂಬಳದಿಂದ ಪ್ರತಿ ತಿಂಗಳಲ್ಲೂ ಕಂತಿನ ಪ್ರಕಾರ ಹಿಡಿದುಕೊಳ್ಳುತ್ತಾರೆ. ಸರ್ಕಾರದವರು ಪ್ರತಿ ಒಬ್ಬ ನೌಕರನ ಹೆಸರಿನಲ್ಲೂ ಶೇಖರವಾಗುವ ಹಣವನ್ನು ವರ್ಷಕ್ಕೊಂದಾವರ್ತಿ ಬರಹಮೂಲಕ ಆಯಾ ನೌಕರನಿಗೆ ತಿಳಿಯಪಡಿಸುವರು.

ಮದರಾಸ್ ರೈಲ್ವೇ ಕಂಪನಿಯಲ್ಲಿ ರೈಲ್ ಗಾಡಿಗಳನ್ನು ನಡಿಸುವ ಡ್ರೈವರುಗಳು ತಮಗೆ ಕಂಪನಿಯವರಿಂದ ಉಂಟಾಗುತ್ತಿರುವ ಕಷ್ಟನಷ್ಟ ಅನಾನುಕೂಲಗಳನ್ನು ಸರಿಪಡಿಸಿಕೊಡುವ ತನಕ ತಾವು ಕೆಲಸಕ್ಕೆ ಬರುವುದಿಲ್ಲವೆಂದು ಹಟಹಿಡಿದು ನಿಂತುಬಿಟ್ಟಿದ್ದಾರಷ್ಟೆ. ಮೊದಲು ಒಂದೆರಡು ವಾರಗಳ ತನಕ ರೈಲ್ ಗಾಡಿಗಳನ್ನು ನಡಿಸುವುದಕ್ಕೆ ಜನರು ದೊರಕದೆ ಪ್ರಯಾಣಿಕರಿಗೂ ಆಮದು ರಫ್ತಿಗೂ ಬಹಳ ತೊಂದರೆಯಾಗಿತ್ತು. ಈಚೆಗೆ ಕಂಪನಿಯವರು ಬೇರೆ ರೈಲ್ವೇ ಕಂಪನಿಗಳಿಂದ ಗಾಡಿ ನಡಿಸುವವರನ್ನು ಕರೆಸಿಕೊಂಡು, ಮುಖ್ಯವಾದ ಕೆಲವು ರೈಲ್ ಗಾಡಿಗಳನ್ನು ನಡಿಸುತ್ತಿದ್ದಾರೆ. ಆದರೂ ಇನ್ನೂ ಮೊದಲಿನಂತೆ ರೈಲ್ ಗಾಡಿಗಳು ಹೋಗಿ ಬರುವಂತೆ ಆಗಿಲ್ಲ. ಹಟಹಿಡಿದಿದ್ದವರ ಪೈಕಿ ೧೫೦ ಮಂದಿ ಡ್ರೈವರುಗಳು ಬಂದು ಕೆಲಸದ ಮೇಲೆ ಹಾಜರಾದರು. ಉಳಿದವರು ಇನ್ನೂ ಹಾಗೆಯೇ ನಿಂತುಬಿಟ್ಟಿದ್ದಾರೆ. ಕಳೆದ ವಾರ ಮದರಾಸ್ ಪಟ್ಟಣದಲ್ಲಿ ಕೆಲವರು ಸಭೆ ಸೇರಿ ಈ ಡ್ರೈವರುಗಳಿಗೂ ಕಂಪನಿಯವರಿಗೂ ಉಂಟಾಗಿರುವ ಮನಸ್ತಾಪಗಳನ್ನು ಪರಿಹರಿಸುವುದಕ್ಕೂ, ಜನರ ಮತ್ತು ಸರಕುಗಳ ಆಮದು ರಫ್ತಿಗೆ ಪ್ರಾಪ್ತವಾಗಿರುವ ಅಡಚಣೆಯನ್ನು ತಪ್ಪಿಸುವುದಕ್ಕೂ ಪ್ರಯತ್ನಪಟ್ಟರು. ರೈಲ್ ಕಂಪನಿಯ ಏಜಂಟರು—ಈ ಡ್ರೈವರುಗಳು ತಮಗಿರುವ ಅನಾನುಕೂಲಗಳನ್ನು ಅಧಿಕಾರಿಗಳಿಗೆ ತಿಳಿಸದೇನೇ ಇಷ್ಟಕ್ಕಿದ್ದ ಹಾಗೇ ಕೆಲಸಕ್ಕೆ ಬಾರದೆ ಒಟ್ಟಾಗಿ ನಿಂತು ಬಿಟ್ಟಿರುವವರಾದಕಾರಣ ಅವರಿಗೆ ಯಾವ ರಿಯಾಯಿತಿಯನ್ನೂ ಈಗ ತೋರಿಸಲಾರೆವೆಂತಲೂ, ಅವರೆಲ್ಲಾ ಕೆಲಸದ ಮೇಲೆ ಹಾಜರಾಗಿ ತರುವಾಯ ತಮ್ಮ ಕಷ್ಟನಷ್ಟಗಳನ್ನು ಕ್ರಮವಾದ ರೀತಿಯಲ್ಲಿ ಹೇಳಿಕೊಂಡರೆ ತನಿಖೆಯಿಂದ ಸಾಧ್ಯವಾದಷ್ಟು ಪರಿಹಾರವನ್ನು ಮಾಡಿಕೊಡಬಹುದಾಗಿದೆ ಎಂತಲೂ ಮೇಲ್ಕಂಡ ಸಭೆಗೆ ಕಾಗದವನ್ನು ಬರೆದು ಇದ್ದರು. ಆ ಸಭೆಯಲ್ಲಿ ಸೇರಿದ್ದ ಪ್ರಜೆಗಳೂ ದೊಡ್ಡ ಮನುಷ್ಯರೂ ಕಡೆಯಲ್ಲಿ ಮದರಾಸ್ ಪಟ್ಟಣದ ಪುರಾಧ್ಯಕ್ಷರಾದ ಶೆರಿಫ್ ಎಂಬ ಅಧಿಕಾರಿಗೆ ತಿಳಿಸಿ ಅವರ ಮೂಲಕ ಪಟ್ಟಣದ ಮಹಾ ಜನರ ಸಭೆಯನ್ನು ನಡಿಸುವಂತೆಯೂ, ರೈಲ್ವೇ ಕಂಪನಿಯವರಿಗೂ, ಅವರ ಸೇವಕರಿಗೂ ಉಂಟಾಗಿರುವ ಮನಸ್ತಾಪಗಳನ್ನು ಪರಿಹರಿಸಿ ಕೊಡುವುದಕ್ಕೆ ಆ ಸಭೆಯಲ್ಲಿ ಮಾರ್ಗಗಳನ್ನು ಹುಡುಕಿ ಇತ್ಯರ್ಥಪಡಿಸುವಂತೆಯೂ ಆಗ ಬೇಕೆಂದು ತೀರ್ಮಾನ ಮಾಡಿರುತ್ತಾರೆ.

ತಾಲ್ಲೂಕು ವರ್ತಮಾನಗಳು.

ಮಂಡ್ಯ.—ಈಚೆಗೆ ಎರಡು ವಾರಗಳಿಂದ ಇಲ್ಲಿ ಮಳೆ ಎನ್ನುವದೇ ಇಲ್ಲ. ಬಿಸಲು ಅಧಿಕವಾಗಿದೆ. ರೈತರು ಹಾಕಿದ ಜೋಳದ ಪೈರುಗಳೆಲ್ಲ ಒಣಗುವ ಸ್ಥಿತಿಯಲ್ಲಿದೆ. ಯಾವಾಗಲೂ ಮಳೆಗಾಗಿ ಆಕಾಶವನ್ನೇ ದೃಷ್ಟಿಸುತ್ತಿದ್ದಾರೆ.— ಕಳೆದ ತಾ ೧೫ ನೇ ಮಂಗಳವಾರ ರಾತ್ರಿ ಸುಮಾರು ನಾಲ್ಕು ಘಂಟೆಗೆ ಬೆಂಗಳೂರಿಂದ ಇಲ್ಲಿಗೆ ಬರಬೇಕಾದ ರೈಲ್ ಪ್ಯಾಸಂಜರ್ ಗಾಡಿಯು ಬುಧವಾರ ಬೆಳಿ

ಗ್ಗೆ ೭ ಘಂಟೆಗೆ ಬಂತು. ಇಷ್ಟು ಸಾವಕಾಶವಾಗಿ ಗಾಡಿಯು ಬಂದದಕ್ಕೆ ಕಾರಣವೇನಂದರೆ, ಕಳೆದ ಮಂಗಳವಾರ ರಾತ್ರಿ ಒಂದು ಹೆಣ್ಣು ಮಗುವು ತಂದೆ ತಾಯಿಗಳೊಡನೆ ಬಂಗಳೂರಿಂದ ಮೈಸೂರಿಗೆ ಪ್ರಯಾಣಮಾಡುತ್ತಿರುವಾಗ ಬೆಂಗಳೂರಿಗೂ ಕೆಂಗೇರಿಗೂ ಮಧ್ಯೆ ೩ ಮೈಲಿ ದೂರದಲ್ಲಿ ಆಕಸ್ಮಾತ್ತಾಗಿ ಗಾಡಿಯಿಂದ ಬಿದ್ದು ಹೋದದ್ದು ತಾಯಿಗೆ ತಿಳಿಯದೆ ಕೆಂಗೇರಿಗೆ ಬಂದ ಮೇಲೆ ತಿಳಿದು ಗೋಳಾಡುತ್ತಿದ್ದಾಗ ಡ್ರೈವರು ಬಂದು ವಿಚಾರಿಸಿ ತಿರಿಗಿ ಒಂದು ಗಾಡಿಯನ್ನು ಎಂಜಿನ್ ಮಾತ್ರ ವಾಪಸ್ ಹೋಗಿ ಮಗುವನ್ನು ನಿಧಾನವಾಗಿ ಬಹಳ ಹೊತ್ತಿನ ವರಿಗೂ ಹುಡುಕಿದಾಗ್ಯೂ ಮಗುವು ಸಿಕ್ಕದೆ ನಿರಾಶೆಯಿಂದ ಮುಂದಕ್ಕೆ ಹೋದರು. ತಂದೆಯು ಮಾತ್ರ ಮಗುವನ್ನು ಹುಡುಕುವದಕ್ಕಾಗಿ ಆ ರಾತ್ರಿ ಕೆಂಗೇರಿಯಲ್ಲಿಯೇ ನಿಂತನು. ಅದಾಗ್ಯೂ ಮೈಸೂರಿಂದ ಅದೇ ರಾತ್ರಿ ಹೊರಡುವ ಗಾಡಿಯು ಈ ವ್ಯಸನಕರವಾದ ಸಂಗತಿಯನ್ನು ಕೇಳಿ ಬಹಳ ನಿಧಾನವಾಗಿ ಗಾಡಿಯನ್ನು ಕೆಂಗೇರಿಯಿಂದ ಆಚೆಗೆ ಹೋಗುವಾಗ ಮಗುವು ಒಂದು ಭೂತಾಳೆಯ ಸಂದಿನಲ್ಲಿ ಅಳುವದನ್ನು ಡ್ರೈವರು ಕೇಳಿ ತಕ್ಷಣವೇ ಗಾಡಿಯನ್ನು ನಿಲ್ಲಿಸಿ ಆ ಮಗುವನ್ನು ತನ್ನ ಕೈಯಲ್ಲಿ ಎತ್ತಿಕೊಂಡು ಸಮಾಧಾನ ಪಡಿಸಿ ಧೈರ್ಯಕೊಟ್ಟು ಗಾಡಿಯಲ್ಲಿ ಕೂರಿಸಿಕೊಂಡು ಬೆಂಗಳೂರಿನ ಸ್ಟೇಷನ್ ಮಾಸ್ತರ ವಶಕ್ಕೆ ಮಗುವನ್ನು ಒಪ್ಪಿಸಿದನು. ದೇವರ ದಯದಿಂದ ಮಗುವಿಗೆ ಯಾವ ವಿಧವಾದ ಗಾಯವೂ ಬಹಳವಾಗಿ ಆಗದೆ ಕೈ ಸ್ವಲ್ಪ ತರೆದು ಹೋಗಿತ್ತು. ಈ ಸಂಗತಿಯನ್ನು ತಂದೆಗೆ ತಂತೀಸಮಾಚಾರದ ಮೂಲಕ ತಿಳಿಸಿದರು. ತಂದೆಯು ಬಹಳ ಸಂತೋಷಪಟ್ಟನು.

ಹಾಸನ.—ಈಗ ಹಾಸನದ ಸುತ್ತುಮುತ್ತಲೂ ಇರುವ ಪೈರುಪಚ್ಚೆಗಳೆಲ್ಲಾ ಸಾಧಾರಣವಾಗಿ ಚೆನ್ನಾಗಿವೆ. ಧಾರಣೆವಾಸಿಗಳು ಮಾತ್ರ ಯಥಾಸ್ಥಿತಿಯಲ್ಲಿವೆ.—ಈಗ ಹಾಸನವನ್ನು ನೋಡಿದರೆ ದಿನದಿನಕ್ಕೆ ಹೀನಸ್ಥಿತಿಗೆ ಬರುತ್ತಿದೆಯೇ ಹೊರ್ತು ಅಭಿವೃದ್ಧಿ ಸ್ಥಿತಿಯನ್ನು ನಾವು ಬೇರೆ ಕಾಣುವದಿಲ್ಲ. ಈ ಹೀನಸ್ಥಿತಿಗೆ ಬರಲು ಕಾರಣವೇನಂದರೆ, ಈ ಊರ ಹೊರಭಾಗದ ಪಶ್ಚಿಮ ದಿಕ್ಕಿನಲ್ಲಿ ಹುಣಸೇಕೆರೆಗೆ ಹೋಗುವ ದಾರಿಯಲ್ಲಿ ಸ್ಮಶಾನ ಗುಂಡಿ ಇರುವುದರಿಂದ ಅಲ್ಲಿನ ದುರ್ಗಂಧವೆಲ್ಲಾ ಈ ಊರ ಮಧ್ಯಭಾಗಕ್ಕೇ ಬರುತ್ತದೆ. ಮತ್ತು ಮುನಿಸಿಪಲ್ ಗೊಬ್ಬರವನ್ನೆಲ್ಲಾ ಅಲ್ಲೇ ಹಾಕುವುದರಿಂದ ಅಲ್ಲಿ ಅದು ಕೊಳೆತು ಕರಸಿ ಅಲ್ಲಿನ ಹುಟ್ಟಿನ ದುರ್ನಾತವೂ ಸಹ ಊರಿನ ಮಧ್ಯಭಾಗಕ್ಕೇ ಬರುತ್ತದೆ. ಮತ್ತು ನಾಯಿ ನರಿ ಮೊದಲಾದ ಪ್ರಾಣಿಗಳು ಸತ್ತರೆ ಸಹ ಸಣ್ಣದ ಗುಂಡಿನ ಕೆಲಬಾಗದಲ್ಲೇ ಹಾಕುವುದರಿಂದ ಅದರ ದುರ್ನಾತವೆ ಸಹ ಆ ಸ್ಥಳದ ಗುಂಡಿನ ಪಕ್ಕದಲ್ಲಿ ... ಇದನ್ನು ಈ ಜಾಗದಿಂದ ತಪ್ಪಿಸಿ ಬೇರೆ ಜಾಗಕ್ಕೆ ಹಾಕುವುದರಿಂದ ಈ ಊರು ಆರೋಗ್ಯವಾದ ಪ್ಲೇಗ್ ಮೊದಲಾದ ಮಹಾ ಜಾಡ್ಯಗಳಿಂದ ನಿವೃತ್ತವಾಗಿ ಊರು ಬಹಳ ಉತ್ತಮ ಸ್ಥಿತಿಗೆ ಬಂದೀತು.—ಇಲ್ಲಿಗೆ ಮೈಸೂರಿಂದ ರೈಲ್ ಬರುತ್ತದೆ ಎಂಬ ಸಂಗತಿಯು ಇಲ್ಲಿನ ಜನಗಳಿಗೆ ತುಂಬಾ ಸಂತೋಷವನ್ನುಂಟುಮಾಡಿದೆ. ಆದರೆ ಈ ಕೆಲಸವನ್ನು ರೈಲ್ ಕೆ ... ವರು ಆಗ್ಗತ್ತಿನಲ್ಲಿ ಎರಡುಸಾರಿ ... ಎಂದು ವರ್ತಮಾನಗಳು ಬಂದಿವೆ.—ಮತ್ತು ಇಲ್ಲಿರುವ ಗೌ॥ ಕನ್ನಡ ಸ್ಕೂಲು ಬಹಳ ಪುರಾತನ ಕಟ್ಟಡವಾಗಿದೆ. ಆ ಸ್ಕೂಲಿನ ಗೋಡೆಗಳು ಈಗಲೋ ಆಗಲೋ ಬೀಳುವಹಾಗಿವೆ. ಇದು ಆಕಸ್ಮಾತ್ ಬಿದ್ದ ಪಕ್ಷದಲ್ಲಿ ಅನೇಕ ಪ್ರಾಣಹಾನಿ ಉಂಟಾಗುತ್ತದೆ. ಕೂಡಲೇ ಅಂದರೆ ಈ ತಕ್ಷಣದಲ್ಲೇ ಈ ಸ್ಕೂಲನ್ನು ಬದಲಾಯಿಸುವುದು ಸರಿ ಉತ್ತಮ. ಈ ಕೊರತೆಗಳನ್ನೆಲ್ಲಾ ಮಹಾಸ್ವಾಮಿಗಳಾದ ಸರ್ಕಾರದವರು ತಪ್ಪಿಸಬೇಕೆಂದು ಕೋರುತ್ತೇವೆ.

ಕುಣಿಗಲು.—ಸುಮಾರು ೨ ತಿಂಗಳಲ್ಲಿ ೧೭ ಏ ಹದ ಮಳೆ ಆಯಿತು. ಮಾವಿನ ಕೆರೆ, ರಂಗನಾಥನ ಕೆರೆ, ಇವುಗಳಿಗೆ ಸ್ವಲ್ಪ ನೀರು ಬಂದು ಇರುತ್ತದೆ. ಗದ್ದೆಗಳಿಗೆ ರೈತರು ಬಿತ್ತನೆ ಮಾಡಿ ಕೆಲವು ಕಡೆ ನೈದು ಕಳೆ ಬಂದು ಇರುತ್ತದೆ. ಕೆಲವು ಗದ್ದೆಗಳು ಏತ್ತಿ ಮಳೆ ಇಲ್ಲದೆ ರೈತರು ಆಕಾಶವನ್ನೇ ನೋಡುತ್ತಾ ಇರುತ್ತಾರೆ. ಎಳ್ಳು ಹೊಲ ಚೆನ್ನಾಗಿ ಬೆಳೆಯುತಾ ಇರುತ್ತದೆ. ಈಗಾಗ ಒಂದು ಹದ ಮಳೆ ಆದರೆ ಬೆಳೆ ಆಗುತ್ತದೆ ಎಂಬದಾಗಿ ಹೇಳುತ್ತಾರೆ.—ಹೋದ ತಿಂಗಳು ಈ ಜಿಲ್ಲಾ ಕಲೆಕ್ಟರು ಧೊರೆಯವರು ಸರ್ಕೀಟು ಬಂದು ೨ ೪ ದಿವಸ ಇದ್ದು ಜಮಾಬಂದಿ ನಡಾಯಿಸುವಾಗ ಡಿಸ್ಟ್ರಿಕ್ಟು ಬೋರ್ಡು ಮೆಂಬರು ಮ ಚನ್ನರಾಜ ಸೆಟ್ಟರವರು ಜುಬರ್ದಸ್ತನ ಒಂದು ರೋಡ ಚೆಕ್ಕಕ್ಕೆ ಕಲಾಪತ್ತನಲ್ಲಿ ತರಿಯಾದ ಕೆಲಸ ನಡಸಿ ಅವರಿಗೆ ಕೊಟ್ಟರು.—ಇಲ್ಲಿ ನಡೆಯುವ ಬೀದಿಯಲ್ಲಿ ಸುಮಾರು ೧೯ ೨೦ ವರ್ಷದಿಂದಲೂ ಒಂದು ಬೋರ್ಡು ಪಾಠಶಾಲೆಯು ಇರುತ್ತದೆ. ಈ ಬೀದಿಗೆ ಎಷ್ಟು ... ಸ್ಥಳದಲ್ಲಿ ಎಂಬುವನು ಪಾಠಶಾಲೆಗೆ ಮುನಿಸಿಪ್ಪಿನ ಸಂತುಕೊಂಡು ಜನಗಳಿಗೆ ಪ್ರೋತ್ಸಾಹಗೋಸ್ಕರ, ಬಡ ಹುಡುಗರುಗಳಿಗೆ ಸ್ಲೇಟು ಪುಸ್ತಕ ಉಚಿತವಾಗಿ ತೆಗೆದುಕೊಟ್ಟು ಪಾಠಶಾಲೆಯನ್ನು ಬಹಳ ಉತ್ತಮಸ್ಥಿತಿಯಲ್ಲಿ ನಡಿಸುತ್ತಾ ಇದ್ದು ಕೆಲವು ದಿವಸದಲ್ಲಿ ಸತ್ತುಹೋದನು. ಈವಾಗ ಪಾಠಶಾಲೆಗೆ ಹುಡುಗರುಗಳು ಸರಿಯಾಗಿ ಬರುವದಿಲ್ಲ. ಆದದ್ದರಿಂದ ಈಗ ಇರುವಂಥ ಕಡಿತು ಯಜಮಾನರುಗಳು ಈ ಪಾಠಶಾಲೆಯ ಮೇಲೆ ದಯವಿಟ್ಟು ಹುಡುಗರುಗಳು ಬರುವ ಹಾಗೆ ಮಾಡಿದರೆ ಮೊಲ್ಲಿಂದ ತಂಟ್ಯಿಯೇಗೆ ಉಂಟಾಗಿರುವ ದಾನ ಮಹಾರಾಜರು ಇವರಿಗೂ ಉಂಟಾಗುವದರಲ್ಲಿ ಯಾವ ಸಂದೇಹವೂ ಇಲ್ಲ. ಇಂಡಿಯಾ ದೇಶದಲ್ಲಿ ಕೆಲವು ಸಂಘದವರು ಪಂಚಮರನ್ನು ಮೇಲಾದ ಸ್ಥಿತಿಗೆ ತರಬೇಕೆಂದು ಪತ್ರಿಕೆಗಳಲ್ಲಿ ಕೆಲವು ಕಾಲದಿಂದ ಪ್ರಕಟಿಸುತ್ತಾ ಇರುತ್ತಾರೆ. ಅವರು ಮೇಲಿನ ಸ್ಥಿತಿಗೆ ಬರಬೇಕಾಗಿದ್ದರೆ ಯಾವ ಮಾರ್ಗದಲ್ಲಿ ಹೋಗಬೇಕು, ಯಾವದನ್ನು ಬಿಡಬೇಕು, ಯಾವದನ್ನು ಹಿಡಿಯಬೇಕು, ನಿಜವಾಗಿ ಯಾವ ಸಂಘದವರು ಇವರನ್ನು ಇತರ ಸುಖಗಳಿಗೆ ಬಾಧ್ಯರನ್ನಾಗಿ ಮಾಡುವ ಹಾಗೆ ಪ್ರಯಾಸಪಡುತ್ತಾ ಇರುತ್ತಾರೆ. ಈ ವಿಷಯಗಳನ್ನು ಸರಿಯಾದ ರೀತಿಯಲ್ಲಿ ತಪ್ಪದೆ ಪತ್ರಿಕೆಯ ಮೂಲಕ ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನೆಲಮಂಗಲ.—ಈ ತಿಂಗಳ ತಾ ೧೧ನೇ ಶುಕ್ರವಾರದ ದಿನ ಗೌ॥ ಹಿಂದೂಸ್ತಾನಿ ಸ್ಕೂಲಿನಲ್ಲಿ ಬಹುಮಾನ ಸಭೆಯು ನಡಿಸಲ್ಪಟ್ಟಿತು. ಆಗ ಸ್ಕೂಲ್ ಕಿಂಡರ್‌ಗಾರ್ಟನ್ ಸಾಮಾನುಗಳಿಂದಲೂ, ಧ್ವಜಗಳ ಮೊದಲಾದ ವೃಗಾದಿಗಳಿಂದಲೂ ಅಲಂಕರಿಸಲ್ಪಟ್ಟಿತು. ಸದರಿ ಸಭೆಗೆ ಅಮಲ್ದಾರರವರು ಎಲ್ಲಾ ಸರ್ಕಾರಿ ನೌಕರರೂ, ಸ್ಕೂಲ್ ವಾಸ್ತವ್ಯರುಗಳೂ ನಿಯಮಿತರು. ಅಮಲ್ದಾರರವರ ಅನುಮತಿಯಂತೆ ಪೋಲೀಸ್ ಸುಪೆರಿಂಡೆಂಟ್ ಹಜರತ್ ಅಬ್ದುಲ್ ಖಾದರ್ ಸಾಹೇಬರವರು ಅಗ್ರಾಸನವನ್ನು ವಹಿಸಿದರು. ಹಿಂದೂಸ್ತಾನಿ ಸ್ಕೂಲ್ ಹೆಡ್ ಮಾ॥ ಮ ಸೈಯದ್ ಅಬ್ದುಲ್ ಮಜೀದ್ ಸಾಹೇಬರು ಹಿಂದೂಸ್ತಾನಿ ಭಾಷೆಯಲ್ಲಿ ಸ್ಕೂಲ್ ರಿಪೋರ್ಟು ಓದಲ್ಪಟ್ಟಿತು. ಅದೇ ರಿಪೋರ್ಟನ್ನೇ ಕನ್ನಡದಲ್ಲಿ ಸ್ಕೂಲ್ ಮಾಸ್ಟರ್ ಮ॥ ನಂಜುಂಡ ಶಾಸ್ತ್ರಿಗಳು ಓದಿದರು. ಬಾಲಕರು ದೇವರ ಪ್ರಾರ್ಥನೆ ರೂಪವಾದ ಹಾಡನ್ನು ಹೇಳಿದರು. ಕಿಂಡರ್‌ಗಾರ್ಟನ್ ವಿಷಯವಾಗಿ ನಾರ್ಮಲ್ ಸ್ಕೂಲಿನಲ್ಲಿ ತಯಾರಾಗಿ ಬಂದಿರುವ ಈ ಸ್ಕೂಲ್ ಅ॥ ಮಾ॥ ಸೈಯದ್ ವಿರಾಸ್ ಬಾದಷಾ ಬಾಷ್ರಿಯವರು ಮನೋಹರವಾದ ಉಪನ್ಯಾಸ ಮಾಡಿದರು. ತರುವಾಯ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಛೇರ್ಮನ್‌ರವರು ಕೊಟ್ಟರು. ಅಲ್ಲದೆ ಮಕ್ಕಳಿಗೆ ಬುದ್ಧಿವಾದಗಳನ್ನು ಹೇಳಿದರು. ಬಾಲಕರು ಇಂಡಿಯಾ ಚಕ್ರವರ್ತಿ ಸಾರ್ವಭೌಮರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನಾರೂಪವಾದ ಹಾಡುಗಳನ್ನು ಹೇಳಿ ಮುಗಿಸಿದ ನಂತರ ಮಕ್ಕಳಿಗೆ ಖಿರಾಯಿ ಹಂಚಲ್ಪಟ್ಟಿತು. ಸಭಿಕರಿಗೆಲ್ಲಾ ಪುಷ್ಪ ತಾಂಬೂಲ ಹಂಚಿದ ನಂತರ ಸಭೆಯು ಬರಖಾಸ್ತಾಯಿತು. ಈ ಹಿಂದೂಸ್ತಾನಿ ಸ್ಕೂಲಿನಲ್ಲಿ ಕಿಂಡರ್‌ಗಾರ್ಟನ್ ಪಾಠ ಇದುವರಿಗೂ ಇರಲಿಲ್ಲ. ಮ್ಯಾ ಸೈಯದ್ ವಿರಾಸ್ ಬಾದಷಾ ಬಾಷ್ರಿಯವರಿಂದ ಪ್ರಯುಕ್ತಕ್ಕೆ ಬರುತ್ತಿದೆ.—ಈ ಊರಲ್ಲಿ ಆಸ್ಪತ್ರೆ ಸ್ಥಾಪಿತವಾಗಿ ಸುಮಾರು ೩೦ ವರುಷಗಳಾಗುತ್ತ ಬಂತು. ಆ ಲಾಗಾಯ್ತು ಇದುವರಿಗೆ ಈ ಆಸ್ಪತ್ರೆಗೆ ಬಂದ ಆಸ್ಪತ್ರೆ ಅಸಿಸ್ಟೆಂಟರುಗಳ ಕಾಲದಲ್ಲಿ ಈ ಆಸ್ಪತ್ರೆಯು ಈಗಿನಷ್ಟು ಪ್ರಖ್ಯಾತಕ್ಕೆ ಯಾವಾಗ್ಯೂ ಬಂದಿರಲಿಲ್ಲ. ಈಗ ಹೊಸದಾಗಿ ಬಂದಿರುವ ಡಾಕ್ಟರು ದೊಡ್ಡವರಿಗೂ ಚಿಕ್ಕವರಿಗೂ ಒಂದೇ ರೀತಿಯಾದ ಅಭಿಮಾನದಿಂದ ಚಿಕಿತ್ಸೆ ಔಷಧಿಗಳನ್ನು ಕೊಡುತ್ತಾ, ಜನಗಳ ರೋಗಾದಿಗಳನ್ನು ಗುಣಪಡಿಸುತ್ತಾ ಇರುವದರಿಂದ ಪ್ರತಿನಿತ್ಯವೂ ಆಸ್ಪತ್ರೆಯಲ್ಲಿ ಜನಗಳು ಪರಿಸಯೋಗಾದಿಯಲ್ಲಿ ಕೂಡಿ ಔಷಧಗಳನ್ನು ಪಡೆಯುತ್ತಾರೆ.

ಶಿವಮೊಗ್ಗೆಯಲ್ಲಿ ನಡೆದ ಮಹಾರಾಜರವರ ಜನ್ಮೋತ್ಸವವು.

ಈ ಸಲ ಶಿವಮೊಗ್ಗೆಯಲ್ಲಿ ಶ್ರೀಮನ್ಮಹಾರಾಜರವರ ಜನ್ಮೋತ್ಸವವನ್ನು ನಡೆಸಿದ ಸಂದರ್ಭದಲ್ಲಿ ಮ ಪ್ಲಮರ್ ಯವರು ಹೇಳಿದ ಕೆಲವು ಮಾತುಗಳು ಸಹಜವಾದವುಗಳಾಗಿ ರಲಿಲ್ಲವೆಂದು ಆಕ್ಷೇಪಣೆ ಹುಟ್ಟಿತು. ಅಲ್ಲಿನ ನಗರ ಸಭಾ ಮುಖಂಡರ ಮೆಂಬರುಗಳು ಅದಕ್ಕಾಗಿ ಒಂದು ವಿಶೇಷಸಭೆಯನ್ನು ಸೇರಿಸಿ, ಆ ಮೀಟಿಂಗಿನಲ್ಲಿ ಸಹಿಸದ ವಿಷಯಗಳನ್ನು ಸಾಂಗವಾಗಿ ಬರೆದು ಪ್ರಕಟಿಸಿದರು. ನಮ್ಮಲ್ಲಿಗೆ ಕಳುಹಿಸಿ ಕೊಟ್ಟಿದ್ದಾರೆ. ಸರ್ಕಾರಿ ನೌಕರರೂ ಪ್ರಜೆಗಳೂ ಯಾವ ಒಂದು ಕಾರ್ಯಕ್ಕಾಗಿ ಅಸಮಾಧಾನಪಟ್ಟರೋ ಹಾಗೆ ಸದರಿ ಉತ್ಸವದ ಸಭೆಗೆ ಪ್ರಜೆಗಳ ಮುಖಂಡರು ವಿಶೇಷವಾಗಿ ಹೋಗಲಿಲ್ಲವೆಂದು ತಿಳಿಯಿತು. ಇದನ್ನು ನೋಡಿ ಮ ಪ್ಲಮರ್ ಯವರು, ಸರ್ವಸಾಮಾನ್ಯವಾಗಿ ಆ ಉತ್ಸವವನ್ನು ಸರ್ಕಾರದ ನೌಕರರು ಮಾತ್ರವೇ ಅಲ್ಲ, ಸಕಲ ಪ್ರಜೆಗಳೂ ಸೇರಿ ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದರು. ಅಲ್ಲಿನ ಪ್ರಜೆಗಳು ಬಾರದೆ ಹೋದದಕ್ಕೆ ಕಾರಣವೇನೋ ಮ ಪ್ಲಮರ್ ಯವರಿಗೆ ಗೊತ್ತಾಗಲಿಲ್ಲ. ಮತ್ತು ಅವರು ಆಡಿದ ಮಾತುಗಳಲ್ಲಿ ಶಿವಮೊಗ್ಗೆಯ ಪ್ರಜೆಗಳು ರಾಜಭಕ್ತಿ ಪ್ರೀತಿಗಳನ್ನು ತೋರಲಿಲ್ಲವೆಂದು ಕಲ್ಪಿಸಿ ಮಾತನ್ನಾಡಿದ್ದರೆ ... ಹೇಳಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿರಲಿಲ್ಲ. ಮ ಪ್ಲಮರ್ ಯವರ ಸದರಿ ಆಡಿದ ಮಾತುಗಳು ಸಹಿಸಲಾರದ್ದಾಗಿ ಅಲ್ಲಿನ ಜನಗಳು ವ್ಯಸನಪಟ್ಟರೆಂದು ಭಾವಿಸಿದ ಪ್ರಜೆಗಳ ಮುಖಂಡರು ಮುಂದಾಗಿ ಅಧಿಕಾರಿಗಳೊಡನೆ ಕಲೆತು ಉತ್ಸವಗಳನ್ನು ಆಗಮಾಡಿದ್ದರೆ ವಿಶೇಷ ಸಂತೋಷಕರವಾಗಿತ್ತು. ಶಿವಮೊಗ್ಗೆಯ ಪ್ರಜೆಗಳಲ್ಲಿ ರಾಜಭಕ್ತಿ ಪ್ರೀತಿಗಳು ಇಲ್ಲವೆಂಬ ಆರೋಪಣೆಯಿಲ್ಲವೆಂತಲೂ ಶಿವಮೊಗ್ಗೆಯ ಪ್ರಜೆಗಳ ಮೇಲೆ ಅಂಥಾ ಆಪವಾದವನ್ನು ಹೊರಿಸಬೇಕೆಂಬ ಉದ್ದೇಶವಾಗಲಿ ಅಭಿಪ್ರಾಯವಾಗಲಿ ಮ॥ ಪ್ಲಮರ್ ಯವರಿಗೆ ಇದ್ದಿಲ್ಲವೆಂತಲೂ ನಾವು ತಿಳಿದಿರುತ್ತೇವೆ. ನಮ್ಮಲ್ಲಿಗೆ ಕಳುಹಿಸಲ್ಪಟ್ಟಿರುವ ಮೊಲ್ಕಂಡ ಪ್ರಜೆಗಳ ಮೀಟಿಂಗಿನ ವಿಚಾರಗಳನ್ನು ಪತ್ರಿಕೆಯ ಮೂಲಕ ಪ್ರಕಟಿಸುವುದರಲ್ಲಿ ಯಾವ ಪ್ರಯೋಜನವೂ ಆಗಲಾರದೆಂದು ಅಭಿಪ್ರಾಯಪಡುತ್ತೇವೆ. ಉಭಯ ಪಕ್ಷದವರಲ್ಲೂ ಪರಸ್ಪರ ಅವಮಾನ ಪಡಿಸಬೇಕೆಂಬ ಉದ್ದೇಶವು ಲೇಶಮಾತ್ರವೂ ಇರಲಿಲ್ಲವೆಂಬುದು ನಿಜವಾಗಿರೋದರಿಂದ ಮುಂದಿನ ಉತ್ಸವದ ದಿನ ಸಹಾ ವಿಷಯಗಳನ್ನು ಬಿಡಿಸಿ ಮಾನಸಿಕವಾಗಿ ಉತ್ಸವವು ಉತ್ತಮ.

ಬಾತ್ಮಿದಾರರಿಗೆ ನೋಟೀಸು.

ಬಾತ್ಮಿದಾರರು ಪಮದ ಅಭಿಪ್ರಾಯಗಳಿಗೆ ನಾವು ಹೊಣೆಗಾರರಲ್ಲವೆಂಬ ಅಂಶವನ್ನು ಕಳುಹಿಸತಕ್ಕವರು ತಿಳಿಯತಕ್ಕದ್ದು.—ಎಡಿಟರ್.

ಕರೆಸ್‌ಪಾಂಡೆನ್ಸ್.

ಗ್ರಾಮಪಂಚಾಯಿತಿಯೂ, ಕೆರೆಗಳ ಏರ್ಪಾಡೂ.

ಅಯ್ಯಾ,

ನಮ್ಮ ಮೈಸೂರು ದೇಶದಲ್ಲಿ ಬಹು ಕಾಲದ ಹಿಂದೆ ಕಟ್ಟಿದ್ದ, ಕೆಲವು ಕಟ್ಟದೆ ಮತ್ತು ಹೊಸದಾಗಿ ಕಟ್ಟುತ್ತಿರುವ ಅನೇಕ ಕೆರೆಗಳೂ ಆ ಕೆರೆಗಳ ಏರಿಗಳ ಕೆಳಗೆ ಅನೇಕ ಗ್ರಾಮಗಳು ಇರುತ್ತವೆ. ಆ ಗ್ರಾಮಸ್ಥರು ಪ್ರಾಯಶಃ ಪ್ರತಿ ಮನೆಗಳಿಂದಲೂ ಪ್ರಾಥಮಿಕ ... ಇರುತ್ತಾರೆ. ಈ ವಿಷಯದಲ್ಲಿ ಪ್ರಜೆಗಳಿಗೆ ಸೇರಿತ್ತ, ಗೌರ್ನಮೆಂಟಿಗೆ ಮತ್ತು ಆಸ್ತಿಯಾದ ಕೆರೆಗಳ ಸಂರಕ್ಷಣೆ, ಇವುಗಳ ವಿಷಯದಲ್ಲಿ ಗೌರ್ನಮೆಂಟಿನವರೂ ಪ್ರಜೆಗಳೂ ಸಹ ಕೂಡ್ಲೇ ತಕ್ಕ ಏರ್ಪಾಡು ಮಾಡತಕ್ಕದ್ದು ಅತ್ಯಾವಶ್ಯಕವಾದದ್ದಾಗಿಯೇ ಇದೆ. ಆದರೆ ಈ ಯೋಚನೆಯೇ ಮೊದಲೇ ನಮ್ಮ ಗೌರ್ನಮೆಂಟಿನವರಿಗೆ ಹುಟ್ಟಿಕ್ರಮ ಈ ಕೆಳಗಿನ ಕಾರಣಗಳಿಂದ ತೋರುತ್ತೆ.

ಹಿಂದೆ ನಮ್ಮ ದೇಶದಲ್ಲಿ ದಿವಾನರಾಗಿದ್ದ ಸರ್ ಶೇಷಾದ್ರಿ ಅಯ್ಯರವರು ಕೆರೆಗಳ ರಿಪೇರಿ ಅಥವಾ ಒಡಕುಗಳನ್ನು ಮುಚ್ಚತಕ್ಕದ್ದು ಈ ಕೆಲಸಗಳ ಕಂಟ್ರಾಕ್ಟು ಆ ಸರಹದ್ದಿನ ರೈತರಿಗೇ ಕೊಡಬೇಕೆಂದು ರೂಲು ಮಾಡಿ ಅದರ ಒಳ್ಳೇ ಫಲ ಸಿಗುತ್ತಿದ್ದಿತು. ಅದು ನಡವಳಿಕೆಯಲ್ಲಿ ಬೇರೆ ರೀತಿ ಪರಿಣಮಿಸಿ ಪ್ರಜೆಗಳಿಗೆ ಬೀಳ ಮತ್ತಷ್ಟು ಹೆಚ್ಚು ಮಾಡಿತು.

ಈಗಿನ ಪಂಚಾಯಿತಿ ನಿರ್ಬಂಧದಂತೆ ಅದಕ್ಕೆ ಪಟೇಲನು ಮುಖ್ಯಸ್ಥನಾಗಿರಬೇಕೆಂಬುದು ಪರಿಣಾಮದಲ್ಲಿ ಸರಿ. ಆದರೆ ಗೌರ್ನಮೆಂಟಿನವರು ಬೇಕಾದಷ್ಟು ಕಾನೂನುಗಳನ್ನು ಮಾಡಿ ಜಾರಿಗೆ ಕೊಡಬಹುದು. ಅವು ಸರಿಯಾಗಿ ಜಾರಿ ಆಗುತ್ತದೆಯೋ ಇಲ್ಲವೇ ಎಂಬ ವಿಷಯದಲ್ಲಿ ಗೌರ್ನಮೆಂಟಿನವರ ಏಂಡಿತವಾದ ದೃಷ್ಟಿ ಬೀಳದೆ ಹೋದರೆ ಗ್ರಾಮ್ಯ ಪಂಚಾಯಿತಿ ಏರ್ಪಾಡಿನ ಸಂಬಳ ದೇಶಕ್ಕೆ ಹೆಚ್ಚು ಆದಾಯವನ್ನುಂಟುಮಾಡೀತು. ಯಾಕಕ್ಕೆಂದರೆ ಕೆರೆಗಳ ಬಂದೋಬಸ್ತು, ಅವುಗಳ ಉಪಯೋಗ, ಇವು ಹೆಚ್ಚಾಗಿ ಒಕ್ಕಲಿಗರಿಗೇ ಅವಶ್ಯಕವಾದದ್ದು. ಇದರಿಂದರೋ ವಿದ್ಯವಿಲ್ಲ, ರೂಲು ಅಂದರೆ ಏನೆಂಬುದು ಅವರಲ್ಲಿ ಹೆಚ್ಚು ಭಾಗದ ಜನರಿಗೆ ಗೊತ್ತೇ ಇಲ್ಲ. ಯಾವದಕ್ಕೂ ಅವರ ಶ್ಯಾನುಭೋಗ ಅವರಿಗೆ ಮುಂದಾಳಾಗಿರಬೇಕು. ನಮ್ಮಲ್ಲಿ ವಿದ್ಯಾವಂತರಾದ ಅಲ್ಪಸಂಖ್ಯಾ ದೊಡ್ಡ ಮನುಷ್ಯರಾದರೋ ಒಬ್ಬರೋ ಇಬ್ಬರೋ ಪಂಚರ ಚರಿತ್ರೆ ಗಳೂ, ಅಲ್ಲಿನ ನಡವಳಿಕೆಗಳೂ ಓದಿ ರಾತ್ರಿ ಹಗಲೂ ಇದನ್ನೇ ಹೇಳುತ್ತಾ, ತಮ್ಮ ವಿಚಾರಕ್ಕೆ ಪ್ರತಿಫಲವು ಗೌರ್ನಮೆಂಟ್ ಸರ್ಕಾರದಿಂದ ಹೊಂದಬೇಕೆಂಬುವರೋ ಹೊರತು ಸಮರ್ಪಕವಾದ ಮತ್ತು ತಮ್ಮ ಸಹಾಯಕರೂ ಅಷ್ಟಾಗಿ ಅದ ರೈತರನ್ನು ತಮ್ಮಂತೆ ಮಾಡಿಕೊಳ್ಳಬೇಕೆಂಬ ಪ್ರಯತ್ನ ಪಡುವವರಿಲ್ಲ. ಸದ್ಯದ ಸ್ಥಿತಿಯಲ್ಲಿ ಅವರಿಗೆ ಗೌರ್ನಮೆಂಟಿನ ಸರ್ವೀಸ್ ಸಿಕ್ಕದಿದ್ದರೆ ಇಂಥದ್ದರಲ್ಲಿ ಸೇರಿಕೊಳ್ಳುತ್ತಾರೆ. ಅವರಿಗೆ ವಿದ್ಯೆಯ ಶಕ್ತಿ, ಮಾತುಗಾರಿಕೆ ಸಹ ಇದೆ. ಆದರೆ ಅವರ ಕೆಲಸ ಸರಸ್ವತೀ ಪ್ರಸನ್ನವಾಗುತ್ತದೆಯೋ ಹೊರತು ಕಾರ್ಯಕರ ಆದ ರೀತಿ ನಡೆದು ಇರುವುದಿಲ್ಲ. ಆದದ್ದರಿಂದ ಈ ವಿಷಯದಲ್ಲಿ ನನ್ನ ತಾತ್ಪರ್ಯ ಏನೆಂದರೆ.—

ಈಗ ಗೌರ್ನಮೆಂಟಿನವರು ಪ್ರಕಟ ಮಾಡಿದಂಥ ಗ್ರಾಮಪಂಚಾಯಿತಿಯನ್ನು ಏರ್ಪಡಿಸ ತಕ್ಕದ್ದು ಅತ್ಯಾವಶ್ಯಕವಾದದ್ದಾಗಿಯೇ ಇದೆ. ಆದರೆ ಈ ಸಂಘದಲ್ಲಿ ಹೊಣೆ ರೈತರಿಗೆ ಜವಾಬ್ದಾರಿ ಸೇರಿದ ಅವರಿಗೆ ಈ ಪಾಲಿನ ಉದ್ದೇಶ, ಸ್ಥಳದವರು ಮಾಡತಕ್ಕ ಕೆಲಸ, ಅದರ ಪ್ರಯೋಜನ ಇವುಗಳನ್ನು ಆ ಜನಗಳಿಗೆ ಚೆನ್ನಾಗಿ ಬೋಧಿಸಬೇಕು. ಮತ್ತು ಕೆರೆಗಳ ಒಡೆದು ಹೋದದ್ದು ಅಥವಾ ಏರಿಗಳ ಕಡಿಯನ್ನು ಮುಚ್ಚು ಮಾಡಬೇಕಾದರೆ ಆ ಕೆಲಸಗಳ ಈಗಿನ ಕಂಟ್ರಾಕ್ಟು ಪದ್ಧತಿ ಅನುಸರಿಸಿ ಇತರರಿಗೆ ವಹಿಸದಿದ್ದರೆ ಒಟ್ಟು ಒಬ್ಬನಿಗೆ ... ರೈತರ ಜವಾಬು ಮಾಡಿ ಸಂತಾ ಗೌರ್ನಮೆಂಟಿನ ಕಡೆಯಿಂದ ಆ ಕಾಮಗಾರಿ ಇಡುತ್ತ ಆ ಕೆಲಸಕ್ಕೆ ಹತ್ತು ಭಾಗ ರಿಪೇರಿ ... ಅವನಿಗೆ ಆ ಕೆಲಸದ ಒಕ್ಕಲಿಗರೂ ಅದರ ಪಾಲಿಗೆ ಸಹ ಪರಿಶಿಷ್ಟ ಅವರಿಗೆ ಮೇಲೆ ಕೆಲಸ ನಡಿಸಿ ಅದಕ್ಕಾಗಿ ಗೊತ್ತಾಗಿನಕ್ಕೆ ಹೋಗುವ ಅವರಿಗೇ ಕೊಡುತ್ತಾ ಒಂದರೆ ಕ್ರಮೇಣ ಅವರು ಅದರ ಜವಾಬ್ದಾರಿ ಕೆಲಸವನ್ನು ಸ್ವಂತವಾಗಿ ಮಾಡಿಕೊಳ್ಳಲು ಶಕ್ತರಾಗುತ್ತಾರೆ. ಗೌರ್ನಮೆಂಟಿನ ಉದ್ದೇಶವು ಚೆನ್ನಾಗಿ ನೆರವೇರುತ್ತದೆ. ಮುಂದೆ ಅದೇ ಗ್ರಾಮಗಳ ಸಹವಳಿಕೆಗಳು ಅವರವರೇ ನೋಡಿಕೊಳ್ಳುವಂತೆ ಏರ್ಪಾಡು ಮಾಡಬೇಕೆಂಬ ಗೌರ್ನಮೆಂಟಿನವರ ಇಷ್ಟವು ನೆರವೇರಿದಕ್ಕೆ ಅನುಕೂಲವು ಆಗುತ್ತೆ. ಮುಖ್ಯ ಕೆಲಸಗಳ ಮೇಲ್ ತನಿಖೆ ಮಾಡಲು ಸ್ಥಳ ಅಧಿಕಾರಿಗಳ ಬಿಟ್ಟು ಅಮಲ್ದಾರ ಮಾಡತಕ್ಕ ಸ್ಪಷ್ಟರು ಗಳಂತೆಯೂ ಇರಬೇಕಾಗಿದೆ. ಆದರೆ ಸದ್ಯದ ... ಸಂಗತಿಯಲ್ಲಿ ಹಣವೂ ಪಂಚಾಯಿತಿ ಮೇಲೆ ... ಅನುಭವವಾಗಿ ಕಾಣುತ್ತೆ. ಈಗಿನ ಕೆಲಸಕ್ಕೆ ಅವರವರ ಜವಾಬು.

ಒಬ್ಬ ಸೇವಕ ಚಾಕರ.

ಎರಡು ತಾಲ್ಲೂಕು ಉತ್ಸವದ ವಾಚಕಶಾಲೆಯು.

ಅಯ್ಯಾ,

ಈ ಗ್ರಾಮವು ಬೆಂಗಳೂರಿಂದ ವರ್ತಮಾನ ಕಳಿಸಿದ ಬಹುದಿನಗಳ ಹಿಂದೆ ಕ್ರೈಸ್ತರು, ಪೇಟೆಗಳಲ್ಲಿ ಸಡಿಯೂ ಪಿ ವಿದ್ಯಾಭ್ಯಾಸಗಳ ಪ್ರಾಪ್ತಿ ... ಅಭಿವೃದ್ಧಿಗನ್ನು ನಡೆ ... ಈ ಗ್ರಾಮದಲ್ಲಿ ಒಂದು ವಾಚಕಶಾಲೆ ಇಲ್ಲದೆ ಅಭಿಮಾನಿಗಳು ... ಆ ಪ್ರಯುಕ್ತ ... ಈ ಮಹಾ ... ಇಲ್ಲಿನ ಮುಖ್ಯಸ್ಥರುಗಳು ಸೇರಿ ಅಷ್ಟಕ್ಕಾಗಿಯೂ ಈ ಗ್ರಾಮದಲ್ಲಿ ಒಂದು ವಾಚಕಶಾಲೆಯನ್ನು ಸ್ಥಾಪಿಸಬೇಕೆಂದು ಆಲೋಚಿಸಿ ಅವರ ಇಷ್ಟ ಬಂದಷ್ಟು ದ್ರವ್ಯಸಹಾಯ ಮಾಡಿ ಈ ವಾಚಕಶಾಲೆಗೆ ನಮ್ಮನ್ನಾಳುವ ಶ್ರೀ ಕೃಷ್ಣರಾಜೇಂದ್ರ ಪ್ರಭುಗಳವರ ನಾಮಾಂಕಿತವನ್ನೇ ಇಟ್ಟು, ಸ್ಥಾಪಿಸಿ, ೭ ಕನ್ನಡ ಪೇಪರುಗಳನ್ನೂ ೧ ಮೈಸೂರ್ ಗೆಜೆಟ್ಟನ್ನೂ ಸಹಾ ... ಮೂಲಕ ಏರ್ಪಾಡಿ ತಾ ೧೯ನೇ ಜೂನ್ ನೇ ದಿವಸ ಈ ವಾಚಕಶಾಲೆಯು ಪ್ರಾರಂಭೋತ್ಸವ ಮಾಡಿರುತ್ತಾರೆ. ಇದಕ್ಕೆ ಟೌನ್ನಾಪಟ್ಟದ ಪಟೇಲ್ ಶ್ರೀ॥ ಚಿಕ್ಕ ಲಿಂಗೇಗೌಡರು ಅಧ್ಯಕ್ಷರಾಗಿಯೂ ಸ್ಕೂಲ್ ಹೆಡ್ ಮಾಸ್ಟರ್ ಮ ವೆಂಕಟರಾಮಯ್ಯನವರು ಕಾರ್ಯದರ್ಶಿಗಳಾಗಿಯೂ ಇರಬೇಕೆಂದು ನೇಮಿಸಿಕೊಂಡರು. ಅನುಮೋದಿಸಿರುತ್ತಾರೆ. ವಾಚಕಶಾಲೆ ಪ್ರಾರಂಭೋತ್ಸವದ ದಿವಸ ಸಬ್‌ಡಿವಿಷನ್ ಆಫೀಸರ್ ಮ॥ ವೆಂಕಟರಾಯರು ವಹಿಸಿ ವಾಚಕಶಾಲೆಯಿಂದುಂಟಾಗುವ ಪ್ರಯೋಜನವೇನೆಂಬುದರ ಮೇಲೆ ಪ್ರಾಸ ಪಾದ್ಯಕವು ಉಪ ಪದಗಳಿಂದ ಕೂಡಿದ ಭಾಷಣವನ್ನು ಮಾಡಿದರು. ಮ ಕೃಷ್ಣಪ್ಪನವರು ಈ ವಾಚಕರುಗಳಿಗೆ ತಿಳಿಸುತ್ತಾ ಇದ ವ ಪತ್ರಿಕೆಗಳಲ್ಲದೆ ಹಿತಬೋಧಕವಾಗಿಯೂ ಸಾರವರ್ಧಕ ಮಾರ್ಗದರ್ಶಿಯಾಗಿಯೂ ಇರುವ ಕೆಲವು ಮಾಸ ಪುಸ್ತಕಗಳನ್ನು ತರಿಸಬೇಕೆಂದು ಸೂಚಿಸಿದ್ದನ್ನು ಸಭಾಸದರೆಲ್ಲಾ ಒಪ್ಪಿದಾಗ್ಗಾನದ ವೃತ್ತವು ನಂದಿದ ನಂತರ ತರಿಸುವಂತೆ ತೀರ್ಮಾನಿಸಿರುತ್ತಾರೆ. ಶ್ರೀಮಾನ್ ಇಂಡಿಯಾ ಚಕ್ರವರ್ತಿಯವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆ ಮಾಡಿ ಸಭೆಯನ್ನು ಮುಕ್ತಾಯ ಮಾಡಿದರು. ಈ ವಾಚಕಶಾಲೆಯು ಸ್ಥಾಪನೆಗೋಸ್ಕರ ಈ ಗ್ರಾಮದ ಮುಖಂಡ ಜನಗಳೂ ಅತ್ಯಾನಂದದಿಂದ ಕೇವಲ ದ್ರವ್ಯವನ್ನು ವಹಿಸಿ ಸ್ಥಾಪಿಸಿರುವದು ಇತರ ದೊಡ್ಡ ಗ್ರಾಮಗಳ ಮತ್ತು ಹೋಬಳಿ ಕಸಬಾಗಳ ಜನಗಳಿಗೆ ಮಾರ್ಗದರ್ಶಕರಾಗಿರಾರೆಂಬುದನ್ನು ಸೂಚಿಸಲು ಸಂತೋಷಪಡುತ್ತೇನೆ.

ವಾಚಕ.

ದುಃಖಕರವಾದ ರೈಲ್ವೆ ಅನಾಹುತವು.

ಮದರಾಸಿಗೆ ೧೩ ಮೈಲಿ ದೂರದಲ್ಲಿ ನಡೆದದ್ದು.

ಸತ್ತವರು ೧೬ ಮಂದಿ, ಗಾಯಪಟ್ಟವರು ೧೪ ಮಂದಿ.

ಕಲ್ಕತ್ತಾ ಪಟ್ಟಣದಿಂದ ಹೊರಟ ರೈಲ್ವೆ ಮೆಯಿಲ್ ಗಾಡಿಯು ಕಳೆದ ೨೦, ೧೯ನೇ ಶನಿವಾರ ಬೆಳಿಗ್ಗೆ ೧೧-೧೬ ಗಂಟೆಗೆ ಮದರಾಸ್ ಪಟ್ಟಣವನ್ನು ತಲುಪಬೇಕಾಗಿತ್ತು. ಅದು ಮದರಾಸಿನಿಂದ ೧೩ ಮೈಲಿ ದೂರದಲ್ಲಿರುವ ಎನ್ನೂರು ಸ್ಟೇಷನ್‌ಗೆ ೧೦-೪೦ ಕ್ಕೆ ಬರಬೇಕಾದದ್ದಕ್ಕೆ ಪ್ರತಿಯಾಗಿ ೧೧ ಗಂಟೆಗೆ ಬರೀ ಇಂಜನ್ ಗಾಡಿಯೊಂದೇ ಎನ್ನೂರಿಗೆ ಬಂದಿತು. ಡ್ರೈವರು ಎನ್ನೂರಿನಿಂದ ಅತಿ ಸ್ವಲ್ಪ ದೂರದಲ್ಲಿ ರೈಲ್ ಗಾಡಿಗೆ ಅಪಾಯ ಸಂಭವಿಸಿತೆಂದು ತಿಳಿಸಿದ್ದಲ್ಲದೆ, ವೈದ್ಯರೇ ಮೊದಲಾದ ಸಹಾಯವನ್ನು ಕಳುಹಿಸಿಕೊಡುವಂತೆ ಅಲ್ಲಿಂದ ಮದರಾಸಿಗೆ ತಂತೀ ಸಮಾಚಾರವನ್ನು ಕೊಡಿಸಿ, ಸ್ಟೇಷನ್ ಮಾಸ್ಟರ ಸಮೇತ ಕೆಲವು ಸಲಕರಣಗಳನ್ನು ಒದಗಿಸಿಕೊಂಡು ಅಪಾಯ ಸಂಭವಿಸಿದ ಸ್ಥಳಕ್ಕೆ ಹಿಂತಿರುಗಿ ಹೋದನು. ಮಧ್ಯಾಹ್ನ ೩ ಗಂಟೆಗೆ ಅಲ್ಲಿಂದ ೧೩ ಮಂದಿ ಗಾಯಪಟ್ಟವರನ್ನು ಗಾಡಿಯ ಮೇಲೆ ಮದರಾಸಿಗೆ ಸಾಗಿಸಿಕೊಂಡು ಬಂದರು.

ವೈದ್ಯರು ಬೇಕಾದ ಸಲಕರಣಗಳನ್ನೂ ಕೂಲಿ ಜನರನ್ನೂ ಒದಗಿಸಿಕೊಂಡು ಮದರಾಸಿನಿಂದ ಹೊರಟು ಸುಮಾರು ೨ ಗಂಟೆಗೆ ಆ ಸ್ಥಳವನ್ನು ತಲುಪಿದರು. ರೈಲ್ವೆ ಅಧಿಕಾರಿಗಳು ಇನ್ನೊಂದು ಗಾಡಿಯಲ್ಲಿ ಅಲ್ಲಿಗೆ ಹೋಗಿ ಇಳಿದರು. ಅನಾಹುತ ನಡೆದ ಸ್ಥಳವು ನೋಡುವುದಕ್ಕೆ ಬಹು ದುಃಖಕರವಾದದ್ದಾಗಿತ್ತು. ಆ ಟ್ರೈನಿಗೆ ಇಂಜನ್ ಮತ್ತು ಗಾರ್ಡ್ ಗಾಡಿಗಳು ವಿನಾ ಹತ್ತು ಗಾಡಿಗಳನ್ನು ತಗಲಿಸಿದ್ದರು. ಮುಂದಿನ ಇಂಜನ್ ಗಾಡಿಯೂ ಕಡೆಯ ಗಾರ್ಡ್ ಗಾಡಿಯೂ ಮಾತ್ರ ಕಂಬಿಗಳ ಮೇಲೆ ನಿಂತಿದ್ದವು. ಮಧ್ಯೆ ತಗಲಿಸಿದ್ದ ಗಾಡಿಗಳ ಪೈಕಿ ಕೆಲವು ಕಂಬಿಗಳ ಎಡಗಡೆಗೂ ಕೆಲವು ಬಲಗಡೆಗೂ ಹೋಗಿ ಬಿದ್ದು ನುಚ್ಚುನೂರಾಗಿದ್ದವು. ಅಂಚೆ ಗಾಡಿಯೊಂದೂ, ೩ನೇ ತರಗತಿಯ ಮೂರು ಗಾಡಿಗಳೂ ಏಳಕ್ಕೆ ಬಿದ್ದು ನಾಶಹೊಂದಿದವು. ಅಲ್ಲಿ ಹಾಕಿದ್ದ ರೈಲ್ ಕಂಬಿಗಳೂ ರಸ್ತೆಯೂ ಹಾಳಾಗಿದ್ದವು. ಈ ರಸ್ತೆಯು ಹಳೆಯದಲ್ಲ. ಹೊಸದಾಗಿ ಕಂಬಿಗಳನ್ನು ಹಾಕಿ ತಯಾರು ಮಾಡಿದ್ದರು. ಹಳಕ್ಕೆ ಬಿದ್ದು ನಾಶವಾದ ಗಾಡಿಗಳಲ್ಲಿಯೇ ಪ್ರಯಾಣಿಕರಿಗೆ ತುಂಬಾ ಗಾಯಗಳಾದವು. ಅಲ್ಲಿದ್ದವರೇ ಮೃತಪಟ್ಟರು. ಉಳಿದ ಮುಂದುಗಡೆ ಗಾಡಿಗಳು ಮೂರೋ ನಾಲ್ಕೋ ಜನರ ಮೇಲೆ ಬಿದ್ದು ಹೋಯಿತೇ ಹೊರತು ಕೆಲವು ಸಾಮಾನುಗಳು ಹಾಳಾಗಲಿಲ್ಲ. ಎಲ್ಲಾ ಚೂರುಚೂರಾಗಿ ರಾಶಿಯಾಗಿ ಬಿದ್ದಿದೆ.

ಅಂಚೆ ಗಾಡಿಯಲ್ಲಿದ್ದವರೆಲ್ಲಾ ಮೃತಪಟ್ಟರೆಂದು ಗಾಬರಿಯುಂಟಾಗಿತ್ತು. ಆದರೆ ಮೂರು ಮಂದಿ ಸ್ವಲ್ಪ ಗಾಯಪಟ್ಟು ಪ್ರಾಣಸಹಿತ ತಪ್ಪಿಸಿಕೊಂಡಿದ್ದರು. ಒಬ್ಬ ಮುಸಲ್ಮಾನ್ ಇನ್‌ಸ್ಪೆಕ್ಟರು ಗಾಯಪಟ್ಟು ಎರಡು ದಿನ ನರಳಿ ಮೃತಪಟ್ಟನು. ಒಬ್ಬ ಪ್ರಯಾಣಿಕನ ಪತ್ತೆ ಇಲ್ಲ. ಇಬ್ಬರು ಆಸ್ಪತ್ರೆಯಲ್ಲಿದ್ದಾರೆ. ಇನ್ನೂ ಮೂರು ಗಾಡಿಗಳಲ್ಲಿ ಸಿಕ್ಕಿ ಸತ್ತಿರುವವರನ್ನು ಕೂಲಿಯವರು ಬಿಡಿಸುತ್ತಿದ್ದಾರೆ. ಮದರಾಸ್ ಗವರ್ನ್‌ಮೆಂಟಿನ ತೆಲುಗು ಭಾಷಾಂತರ ಮಾಡುವ ಅಧಿಕಾರಿಯಾಗಿದ್ದ ಮಿ. ಎಸ್. ರಂಗ್ಯೆಯ ಚೆಟ್ಟಿಯವರು ಅಲ್ಲಿ ಮೃತಪಟ್ಟರು. ಶನಿವಾರ ಸಾಯಂಕಾಲ ಆಸ್ಪತ್ರೆಗೆ ತರಲ್ಪಟ್ಟ ೧೪ ಮಂದಿಯ ಪೈಕಿ ಮೂವರು ಕಾಲವಾದರು. ಕೆಲವರ ಸಾಮಾನುಗಳು ಸಿಕ್ಕಿರುತ್ತವೆ. ಆದರೇನಾದರೋ ತಿಳಿಯಲಿಲ್ಲ. ಮುರಿದುಹೋದ ಗಾಡಿಗಳ ಅಡಿಯಲ್ಲಿ ಇನ್ನೂ ಕೆಲವು ಹೆಣಗಳು ಇರಬಹುದೆಂದು ಬಹು ಸಾಹಸಪಟ್ಟು ಶೋಧಿಸುತ್ತಿದ್ದಾರೆ. ರಾತ್ರಿ ಹೊತ್ತು ಕೆಲಸ ಮಾಡುತ್ತಿಲ್ಲ. ಪೋಲೀಸಿನವರು ಜಾಗರೂಕತೆಯಿಂದ ಕಾವಲು ಕೊಡುತ್ತಿರುವರು. ಸುಮಾರು ೨೦ ಮಂದಿ ಯೂರೋಪಿಯನ್ನರೂ ೬೦ ಜನ ದೇಶೀಯ ಜನರೂ ಆ ಸ್ಥಳವನ್ನು ಬಿಡಿಸಿ ಗಾಡಿಗಳ ಸಂಚಾರಕ್ಕೆ ಸಿದ್ಧಪಡಿಸುತ್ತಿದ್ದಾರೆ. ಸುಮಾರು ೩೦,೦೦೦ ರೂಪಾಯಿನ ಒಡವೆಗಳು ಸಿಕ್ಕಿರುತ್ತವೆ. ಇದು ಪೋಲೀಸಿನವರ ವಶದಲ್ಲಿದೆ. ಅಂಚೆ ಗಾಡಿಯ ಮೇಲ್ಭಾಗವನ್ನು ಎತ್ತಿ ನೋಡಿದಾಗ ಒಳಗೆ ಒಂದು ಹೆಣ ಸಿಕ್ಕಿತು.

ಈ ವರ್ತಮಾನವನ್ನು ಕೇಳಿ ಮದರಾಸಿನ ಪ್ರಜೆಗಳು ತಮ್ಮ ಬಂಧುಗಳ ಯೋಗಕ್ಷೇಮವನ್ನು ತಿಳಿಯುವುದಕ್ಕಾಗಿ ರೈಲ್ ಸ್ಟೇಷನ್‌ನಲ್ಲಿ ಆತುರಪಟ್ಟು ಕಾದಿದ್ದರು. ಗಾಯಪಟ್ಟವರ ಗಾಡಿಗಳು ಬಂದ ಒಡನೆಯೇ ಜನರು ರೋದನ ಮಾಡುತ್ತಾ ತಮ್ಮ ತಮ್ಮ ಸಂಬಂಧಿಗಳ ಸ್ಥಿತಿಗತಿಯನ್ನು ವಿಚಾರಿಸಿದರು. ಪೋಲೀಸಿನವರು ಅವರನ್ನು ತಡೆಯದೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದರು. ಈ ಅನಾಹುತಕ್ಕೆ ಕಾರಣವೇನೆಂಬುವುದು ಗೊತ್ತಾಗಲಿಲ್ಲ. ಗಾಡಿ ನಡೆಸುವವನು ಹಳಬನಾಗಿಯೂ ಅನುಭವಸ್ಥನಾಗಿಯೂ ಇದ್ದನು. ಇಂಜನ್ ಗಾಡಿಯಲ್ಲಿ ಯಾವ ಭಾಗವೂ ಕೆಟ್ಟಿರಲಿಲ್ಲ. ಅದೂ ಗಾರ್ಡಿನ ಗಾಡಿಯೂ ಕಂಬಿಗಳ ಮೇಲಿದ್ದು ಮಧ್ಯೆ ಇದ್ದ ಗಾಡಿಗಳು ಮಾತ್ರ ಪಲ್ಲಟವಾಗಿ ಅನಾಹುತ ಸಂಭವಿಸಲು ಏನು ಕಾರಣವೋ ತಿಳಿಯದೆ ಇದೆ. ಗಾಡಿ ನಡೆಸುವವನು ಅಜಾಗ್ರತೆಯಿಂದ ನಡೆಸಿದ್ದಾಗ್ಯೂ ಇಂಥಾ ಅಪಾಯ ಸಂಭವಿಸುತ್ತಿರಲಿಲ್ಲ.

ಈ ಅಪಾಯ ಸಂಭವಿಸಿದ್ದಕ್ಕೆ ಕಾರಣ ಮುಂತಾದದ್ದನ್ನು ತನಿಖೆ ಮಾಡುವುದಕ್ಕಾಗಿ ಕಳೆದ ಮಂಗಳವಾರ ಬೆಳಿಗ್ಗೆ ೧೦ ಗಂಟೆಗೆ ರೈಲ್ವೆ ಅಧಿಕಾರಿಗಳೆಲ್ಲಾ ಆ ಸ್ಥಳದಲ್ಲಿ ಸಭೆ ಸೇರಿದ್ದರು. ಈ ತನಿಖೆಯನ್ನು ನಡೆಸಲು ರೈಲ್ವೆ ಬೋರ್ಡಿನ ಪ್ರೆಸಿಡೆಂಟರಾದ ಸರ್ ಟಿ. ಆರ್. ವಿನ್‌ಯವರು ಸಿಂಲಾ ಪಟ್ಟಣದಿಂದ ಬಂದಿರುತ್ತಾರೆ. ತನಿಖೆ ಕಾಲದಲ್ಲಿ ಪೋಲೀಸ್ ಅಧಿಕಾರಿಗಳೂ ಮ್ಯಾಜಿಸ್ಟ್ರೇಟರೂ ರೈಲ್ವೆ ಇನ್‌ಸ್ಪೆಕ್ಟರೂ ಹಾಜರಾಗಿದ್ದರೆಂದು ತಿಳಿದು ಬಂದಿದೆ. ಈ ಅನಾಹುತದಲ್ಲಿ ಇನ್ನೂ ಎಷ್ಟು ಮಂದಿ ಮೃತಪಟ್ಟರೆಂಬುವುದೂ, ಅದಕ್ಕೆ ಕಾರಣವೇನೆಂಬುವುದೂ ಮುಂದೆ ಗೊತ್ತಾಗಬೇಕು.

ವಿಶೇಷ ವರ್ತಮಾನಗಳು.

ರಷ್ಯಾ ಚಕ್ರವರ್ತಿಯವರು ಇಷ್ಟರಲ್ಲೇ ಸ್ವೀಡನ್, ಫ್ರಾನ್ಸ್, ಇಂಗ್ಲಾಂಡ್ ರಾಜ್ಯಗಳಿಗೆ ದಯಮಾಡಿ, ಆಯಾ ದೊರೆಗಳ ಆತಿಥ್ಯವನ್ನು ಸ್ವೀಕರಿಸಿ, ಕೆಲವು ದಿನಗಳ ತನಕ ಆಯಾ ರಾಜ್ಯಗಳಲ್ಲಿದ್ದು ನೋಡಬೇಕಾದ ಭಾಗಗಳನ್ನು ಪರ್ಯಟನ ಮಾಡಿಕೊಂಡು ಹೋಗುವವರಾಗಿದಾರೆ.

ವಿಲಾಯಿತಿಗೆ ಸೇರಿದ ಮ್ಯಾಂಚೆಸ್ಟರ್ ಪಟ್ಟಣದಲ್ಲಿ ಅಮೇರಿಕದ ಹತ್ತಿಯನ್ನು ಕೊಂಡು ಬಟ್ಟೆಗಳನ್ನು ತಯಾರುಮಾಡುವ ಕಾರ್ಖಾನೆಗಳಲ್ಲಿ ಜೂಲೈ ತಾ|| ೧೦ ರಿಂದ ಸೆಪ್ಟೆಂಬರ್ ತಾ|| ೨೭ ರ ತನಕ ಪ್ರತಿ ಶನಿವಾರ ಸೋಮವಾರ [illegible]

ಪರ್ಷಿಯಾ ರಾಜ್ಯದಲ್ಲಿ ಪ್ರಜಾಸಮಸ್ಥಿತಿಯು ನೆಲೆಗೊಳ್ಳಲಿಲ್ಲವೆಂದು ಅಲ್ಲಿಂದ ಬರುತ್ತಿರುವ ತಂತೀ ವರ್ತಮಾನಗಳಿಂದ ಗೊತ್ತಾಗುತ್ತದೆ. ರಷ್ಯಾದವರು ಉರೂಮಿಯಾ ಎಂಬ ಊರಿನಲ್ಲಿ ಗಲಭೆಯನ್ನು ಶಮನಮಾಡುವುದಕ್ಕೆ ಕಳೆದ ವಾರ ೧೫೦ ಸೈನಿಕರನ್ನು ಎರಡು ಫಿರಂಗಿಗಳ ಸಮೇತ ಕಳುಹಿಸಿಕೊಟ್ಟಿದಾರೆ.

ಅಮೇರಿಕಕ್ಕೆ ಸೇರಿದ ಓಹಿಯೋ ಡಿಸ್ಟ್ರಿಕ್ಟಿನಲ್ಲಿ ಮೇರಿಯಾನ್ ಎಂಬ ಪಟ್ಟಣದೊಳಗೆ ಕೆಲವರು ಅಂತರಂಗವಾದ ಸಭೆಯನ್ನು ಮಾಡಿಕೊಂಡು, ಬಹು ಕಾಲದಿಂದ ಅಮೇರಿಕದಲ್ಲೂ ಇಟಲಿಯಲ್ಲೂ ಅನೇಕ ಕೊಲೆಗಳನ್ನು ನಡೆಸುತ್ತಾ ಇದ್ದರು. ಈ ಘಾತುಕರ ಗುಂಪನ್ನು ಪೋಲೀಸಿನವರು ಪತ್ತೆ ಮಾಡಿ, ಕೆಲವರನ್ನು ಹಿಡಿದಿರುತ್ತಾರೆ.

ಆಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲ್ ಅಧಿಪತ್ಯದ ಗವರ್ನರವರು ಈಗ ಲಂಡನ್ ಪಟ್ಟಣಕ್ಕೆ ಹೋಗಿರುತ್ತಾರೆ. ಹಿಂದುಸ್ಥಾನದಿಂದ ಭೂ ವ್ಯವಸಾಯ ಮಾಡುವಂಥಾ ಪ್ರಜೆಗಳನ್ನು ಯೂಗಾಂಡಾ ಸೀಮೆಗೆ ಕರೆದುಕೊಂಡು ಹೋಗುವ ವಿಷಯದಲ್ಲಿ ಗವರ್ನರವರು ಇಂಗ್ಲಿಷ್ ಗವರ್ನ್‌ಮೆಂಟಿನವರ ಕೂಡ ಗೊತ್ತುಮಾಡುವವರಾಗಿದಾರೆಂದು ತಿಳಿದು ಬಂದಿದೆ.

ತುರ್ಕಿಗೆ ದಕ್ಷಿಣಭಾಗದಲ್ಲಿದ್ದು ತುರ್ಕಿರಾಜ್ಯಕ್ಕೆ ಸೇರಿರುವ ಕ್ರೀಟ್ ಎಂಬ ದ್ವೀಪವನ್ನು ಅವರ ಸ್ವಾಧೀನದಿಂದ ತಪ್ಪಿಸಬೇಕೆಂದು ಪ್ರಯತ್ನ ನಡೆಯುತ್ತಿದೆ. ಇದನ್ನು ತುರ್ಕಿಯ ಮಂತ್ರಿಯವರು ತಿಳಿದು ಆ ದ್ವೀಪವನ್ನು ತಮ್ಮ ಕೈತಪ್ಪಿಸುವುದಾದರೆ ತಾವು ಅದಕ್ಕಾಗಿ ಯುದ್ಧ ಮಾಡಬೇಕಾಗುವುದು ಎಂದು ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಹೇಳಿದರು.

ಉತ್ತರ ಮತ್ತು ದಕ್ಷಿಣ ಅಮೇರಿಕಗಳ ನಡುವೆ ಇರುವ ಪನಾಮಾ ಎಂಬ ಭೂಶಿರವನ್ನು ಒಡೆದು ಜಹಜುಗಳು ಹೋಗಿ ಬರುವಂತೆ ಜಲಮಾರ್ಗವನ್ನು ತೆಗೆಸುತ್ತಿದಾರಷ್ಟೆ. ಈ ಮಾರ್ಗಕ್ಕೆ ಶತ್ರುಗಳ ಬಾಧೆಯುಂಟಾಗದಂತೆ ಅದನ್ನು ತಕ್ಕ ರೀತಿಯಲ್ಲಿ ಕಾಪಾಡಿಕೊಳ್ಳುವುದಕ್ಕೆ ಅಮೇರಿಕದ ಗವರ್ನ್‌ಮೆಂಟಿನವರು ೨೧ ಕೋಟಿ ರೂಪಾಯಿ ವೆಚ್ಚಮಾಡಿ ಕೋಟೆ ಕೊತ್ತಲಗಳನ್ನು ಕಟ್ಟಿ ಫಿರಂಗಿಗಳನ್ನು ಸೇರಿಸುವಂತೆ ಏರ್ಪಾಡು ಮಾಡುತ್ತಿದಾರೆ.

ಬರೋಡಾ ಸಂಸ್ಥಾನದ ಮಹಾರಾಜರವರು ಈಗ ವಿಲಾಯಿತಿಯಲ್ಲಿರುತ್ತಾರೆ. ಇವರು ಇಂಡಿಯಾ ಸ್ಟೇಟ್ ಸೆಕ್ರಿಟರಿಯವರಾದ ಲಾರ್ಡ್ ಮಾರ್ಲೀಯವರನ್ನು ಕಳೆದ ವಾರ ಕಂಡು ಅವರ ಕೂಡ ದೇಶೀಯ ಸಂಸ್ಥಾನಗಳ ವಿಚಾರವಾಗಿ ಸಂಭಾಷಣೆ ಮಾಡಿದರೆಂತಲೂ, ಹಿಂದುಸ್ಥಾನದಲ್ಲಿ ರಾಜಪ್ರಜೆಗಳ ಸ್ನೇಹವನ್ನು ಕಲ್ಪಿಸುವ ವಿಷಯದಲ್ಲಿ ಅವರು ಇನ್ನೊಂದು ವೇಳೆ ಲಾರ್ಡ್ ಮಾರ್ಲೀಯವರನ್ನು ಕಂಡು ಮಾತನಾಡುವವರಾಗಿದಾರೆ ಎಂತಲೂ ತಂತೀ ವರ್ತಮಾನ ಬಂದಿದೆ.

ಇಂಗ್ಲಂಡಿನಲ್ಲಿ ರೋಗಗಳನ್ನು ಸೂಚಿಸುವ ಕಳೆದ ೧೮೬೫ ನೇ ಇಸವಿಯಲ್ಲಿ ವೋಕಿಂಗ್ ಎಂಬ ನಗರದಲ್ಲಿ ಪ್ರಾರಂಭವಾಯಿತು. ಇದುವರೆಗೆ ವೋಕಿಂಗ್, ಗೋಲ್ಡರ್ಸ್ ಗ್ರೀನ್, ಮ್ಯಾಂಚೆಸ್ಟರ್ ಎಂಬೀ ಮೂರು ಸ್ಥಳಗಳಲ್ಲಿ ೭,೩೬೫ ಹೆಣಗಳನ್ನು ದಹನಮಾಡಿರುತ್ತಾರೆ. ಈ ಪೈಕಿ ಕಳೆದ ವರುಷ ೭೯೫ ಶವಗಳು ಸುಡಲ್ಪಟ್ಟವು. ಹೆಣಗಳನ್ನು ಸಮಾಧಿಮಾಡುವುದಕ್ಕಿಂತಲೂ ಸುಟ್ಟು ಹಾಕುವುದೇ ಶ್ರೇಯಸ್ಕರವಾದದ್ದೆಂಬ ಅಭಿಪ್ರಾಯವು ಆ ಜನರಲ್ಲಿ ದಿನೇದಿನೇ ಬಲಪಡುತ್ತಾ ಬಂದಿದೆ.

ಫ್ರಾನ್ಸ್ ಸಂಸ್ಥಾನದ ಕಾರ್ಖಾನೆಗಳಲ್ಲಿ ಕೆಲಸ ಮಾಡುವಂಥವರಿಗೆ ೬೫ ವರುಷ ವಯಸ್ಸಾದ ಮೇಲೆ ಸರ್ಕಾರದಿಂದ ತಿಂಗಳಿಗೆ ೫ ರೂಪಾಯಿನಂತೆ ಪೆನ್‌ಷನ್ ಕೊಡಬೇಕೆಂದು ಏರ್ಪಾಡಾಗುವುದರಲ್ಲಿದೆ. ಸರ್ಕಾರದವರು ಏರ್ಪಡಿಸುವ ಈ ಪೆನ್‌ಷನ್ ಜೊತೆಗೆ ಪ್ರತಿ ಒಬ್ಬ ಕೂಲಿಯವನೂ ವರುಷಕ್ಕೆ ೩ ರೂಪಾಯಿನಂತೆಯೂ, ಕಾರ್ಖಾನೆಯ ಯಜಮಾನನು ತನ್ನ ಬಳಿ ಕೆಲಸ ಮಾಡುವ ಪ್ರತಿ ಒಬ್ಬ ಕೂಲಿಯವನ ಹೆಸರಿನಲ್ಲಿ ವರುಷಕ್ಕೆ ೩ ರೂಪಾಯಿನಂತೆಯೂ ಜಮಾ ಮಾಡುತ್ತಾ ಬರಬೇಕೆಂದು ವಿಧಿಸುತ್ತಾರೆ.

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲಿನಲ್ಲಿ ಹಿಂದುಸ್ಥಾನದ ಜನರು ತಮಗೆ ಅಲ್ಲಿನ ಸರ್ಕಾರದವರಿಂದ ಉಂಟಾಗಿರುವ ಕಷ್ಟನಷ್ಟಗಳನ್ನು ಕುರಿತು ವಿಲಾಯಿತಿ ರಾಜ್ಯದ ಅಧಿಕಾರಿಗಳಿಗೆ ಅರಿಕೆಮಾಡಿಕೊಳ್ಳುವುದಕ್ಕೋಸ್ಕರ ಕೆಲವು ಪ್ರತಿನಿಧಿಗಳನ್ನು ಚುನಾಯಿಸಿದರು. ಇವರು ಅಲ್ಲಿಂದ ವಿಲಾಯಿತಿಗೆ ಪ್ರಯಾಣ ಮಾಡುವುದಕ್ಕೆ ಸಿದ್ಧಪಡಿಸಿಕೊಳ್ಳುತ್ತಿರುವಷ್ಟರಲ್ಲೇ ಅಲ್ಲಿನ ಸರ್ಕಾರದವರು ಪ್ರತಿನಿಧಿಗಳ ಪೈಕಿ ಮೂರು ಮಂದಿಯನ್ನು ಹಿಡಿದು ಇವರು ರೆಜಿಸ್ಟ್ರೇಷನ್ ಕಾನೂನಿಗೆ ಅನುಸಾರವಾಗಿ ನಡೆಯದೆ ತಪ್ಪಿರುತ್ತಾರೆಂದು ಹೇಳಿ ಅವರಿಗೆ ತಲಾ ಮೂರು ತಿಂಗಳ ಕಠಿಣಸಜಾ ವಿಧಿಸಿದರು.

ರಷ್ಯಾ ಚಕ್ರವರ್ತಿಯವರು ಪರಿವಾರ ಸಹಿತ ಕಳೆದ ವಾರ ಜರ್ಮನಿ ಚಕ್ರವರ್ತಿಯವರ ಆತಿಥ್ಯವನ್ನು ಸ್ವೀಕರಿಸಿದರು. ಜರ್ಮನಿ ಚಕ್ರವರ್ತಿಯವರು ಅವರಿಗೆ ದಿವ್ಯವಾದ ಔತಣವನ್ನು ಮಾಡಿಸಿದರು. ಭೋಜನಾನಂತರ ರಷ್ಯಾ ಚಕ್ರವರ್ತಿಯವರು ಜರ್ಮನಿ ಚಕ್ರವರ್ತಿಯವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿ, ಉಭಯ ರಾಜ್ಯಗಳಿಗೂ ಎಂದಿನಂತೆ ಪರಸ್ಪರವಾದ ಪ್ರೀತಿ ಸ್ನೇಹ ವಾತ್ಸಲ್ಯಗಳು ನೆಲಸಿ ಅಭಿವೃದ್ಧಿ ಹೊಂದುತ್ತವೆ ಎಂದು ತಿಳಿಸಿದರು. ತರುವಾಯ ಜರ್ಮನಿಯ ಮತ್ತು ರಷ್ಯಾದ ಮಂತ್ರಿಗಳು ಕಲೆತು ಪರಸ್ಪರ ಸ್ನೇಹ ಸೂಚಕವಾದ ಸಂಭಾಷಣೆಗಳನ್ನು ನಡಿಸಿದರು.

ರಷ್ಯಾ ರಾಜ್ಯದ ಡೂಮಾ ಪಾರ್ಲಿಮೆಂಟಿನ ಬಹು ಮಂದಿ ಮೆಂಬರುಗಳು ತಮ್ಮ ಪ್ರೆಸಿಡೆಂಟ್ ಎಂ. ಹೋಮಿಯಕಾಫ್‌ಯವರ ಸಮೇತ ಮೂರು ವಾರಗಳ ತನಕ ವಿಲಾಯಿತಿಯಲ್ಲಿದ್ದು ಬರಬೇಕೆಂದು ಪ್ರಯಾಣ ಮಾಡಿದಾರೆ. ವಿಲಾಯಿತಿಯ ಚಕ್ರವರ್ತಿ ಸಾರ್ವಭೌಮರವರು ಮುಂದಿನ ಶನಿವಾರ ಆ ಮೆಂಬರುಗಳಿಗೆ ಬಕಿಂಗ್‌ಹಾಂ ಎಂಬ ರಾಜಭವನದಲ್ಲಿ ಭೇಟಿಯನ್ನು ದಯಪಾಲಿಸುವರು. ಜೂಲೈ ೬ನೇ ತಾ. ಶುಕ್ರವಾರ ಲಂಡನ್ ಪಟ್ಟಣದ ಪುರಾಧ್ಯಕ್ಷರಾದ ಲಾರ್ಡ್ ಮೇಯರ್‌ಯವರು ಅವರಿಗೆಲ್ಲಾ ಮ್ಯಾನ್‌ಷನ್ ಹೌಸ್ ಎಂಬ ಭವನದಲ್ಲಿ ದಿವ್ಯವಾದ ಔತಣವನ್ನು ಮಾಡಿಸುವವರಾಗಿದಾರೆ.

ವಿಲಾಯಿತಿಗೆ ಸೇರಿದ ನ್ಯೂಕ್ಯಾಸಲ್ ಪಟ್ಟಣದಲ್ಲಿ ಭಾರೀ ವರ್ತಕನಾಗಿದ್ದು ಕಾಲವಾದ ಜೋಸೆಫ್ ಸಿಪ್ಲಿ ಎಂಬಾತನು ತನ್ನ ಆಸ್ತಿಯಲ್ಲಿ ತನ್ನ ಸ್ನೇಹಿತರಿಗೂ ಸೇವಕರಿಗೂ ೧,೫೦,೦೦೦ ರೂಪಾಯನ್ನೂ ೧೫ ಲಕ್ಷ ರೂಪಾಯನ್ನು ಧರ್ಮ [illegible]

ಅಮೇರಿಕಕ್ಕೆ ಸೇರಿದ ನ್ಯೂಯಾರ್ಕ್ ಪಟ್ಟಣದಲ್ಲಿ ಕಾಲವಾದ ಎಚ್. ರಾಜರ್ಸ್ ಎಂಬಾತನು ತನ್ನ ಆಸ್ತಿಯಲ್ಲಿ ಹೆಂಡತಿ ಮಕ್ಕಳಿಗೆ ಜೀವನಕ್ಕೆ ಬೇಕಾದಷ್ಟು ದ್ರವ್ಯವನ್ನು ಉಳಿಸಿಟ್ಟು, ಪಾಠಶಾಲೆಗಳಿಗೆ ೩ ಲಕ್ಷ ರೂಪಾಯನ್ನೂ ಇತರ ಧರ್ಮಕಾರ್ಯಗಳಿಗೆ ೧೫ ಲಕ್ಷ ರೂಪಾಯನ್ನೂ ದಾನಮಾಡಬೇಕೆಂದು ಮರಣಶಾಸನವನ್ನು ಬರೆದಿಟ್ಟಿದಾನೆ.

ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿದ ಕಡೆಯಿಂದ ಇತರ ಕಡೆಗಳಿಗೆ ಸಾಗಿಸಿಕೊಂಡು ಹೋಗಬೇಕಾದರೆ ಅದಕ್ಕಾಗಿ ತಂತಿಗಳನ್ನು ಹಾಕುವುದು ಈಗ ವಾಡಿಕೆಯಾಗಿದೆಯಷ್ಟೆ. ಅಮೇರಿಕದ ಒಂದು ರೈಲ್ ಕಂಪನಿಯ ಇಂಜನಿಯರು ಒಂದು ಉಪಾಯವನ್ನು ಕಂಡು ಹಿಡಿದಿದಾನೆಂತಲೂ, ಅದರ ಸಹಾಯದಿಂದ ತಂತಿಗಳಿಲ್ಲದೇನೇ ಊರಿಂದೂರಿಗೆ ವಿದ್ಯುಚ್ಛಕ್ತಿಯನ್ನು ಸಾಗಿಸಿಕೊಂಡು ಹೋಗಬಹುದೆಂತಲೂ ತಿಳಿದು ಬಂದಿದೆ. ಆ ಇಂಜನಿಯರು ಈ ಉಪಾಯದಿಂದ ನೆಬ್ರಾಸ್ಕಾದಲ್ಲಿರುವ ಓಮಾಹಾ ಪಟ್ಟಣದ ಟೌನ್ ಹಾಲ್ ಬಂಗಲೆಗಳಿಗೆ ೪,೦೦೦ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚಿಸಿ ತನ್ನ ಸಾಮರ್ಥ್ಯವನ್ನು ಪ್ರಕಾಶಪಡಿಸಿರುವಂತೆ ಪ್ರಕಟವಾಗಿದೆ. ಆತನ ಹೆಸರು ಡಾಕ್ಟರ್ ಮಿಲ್ನರ್ ಎಂಬುದು. ಆತನು ಕಂಡು ಹಿಡಿದಿರುವ ಉಪಾಯವನ್ನು ಯಾರಿಗೂ ತಿಳಿಸದೆ ಗುಟ್ಟಾಗಿ ಇಟ್ಟುಕೊಂಡಿದಾನೆಂದು ಹೇಳುವರು.

ಜಪಾನ್ ರಾಜ್ಯದ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ವಿದ್ಯಾಭ್ಯಾಸದ ಇಲಾಖೆಯವರು ಅಲ್ಲಿನ ವ್ಯಾಪಾರ ಕಲಾಶಾಲೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ಪ್ರಯತ್ನಪಟ್ಟರು. ಈ ಬದಲಾವಣೆಗಳು ಅಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಮ್ಮತವಾಗಲಿಲ್ಲ. ಆದಕಾರಣ ವಿದ್ಯಾರ್ಥಿಗಳೆಲ್ಲಾ (ಇವರು ೧೬ ರಿಂದ ೨೫ ವರುಷದವರು) ಒಂದು ಕಡೆ ಸಭೆ ಸೇರಿ ವಿದ್ಯಾಭ್ಯಾಸದ ಇಲಾಖೆಯವರು ಮಾಡಬೇಕೆಂದಿರುವ ಬದಲಾವಣೆಗಳನ್ನು ಪ್ರತಿಭಟಿಸಿದ್ದಲ್ಲದೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರನ್ನು ಆ ಕೆಲಸಕ್ಕೆ ರಾಜೀನಾಮೆ ಕೊಡುವಂತೆ ಮಾಡಿದರು. ಸುಮಾರು ೧,೫೦೦ ಮಂದಿ ಯೌವನಸ್ಥರು ಪಾಠಶಾಲೆಗೆ ಹೋಗದೆ ನಿಂತುಬಿಟ್ಟಿದಾರೆ. ಜಪಾನ್ ರಾಜ್ಯದಲ್ಲಿ ಕೂಡ ಈಗಿನ ಕಾಲದ ವಿದ್ಯಾರ್ಥಿಗಳು ಪ್ರಾಚೀನ ಕಾಲದ ಅಭಿಪ್ರಾಯ ಕೆಲಸಕಾರ್ಯಗಳನ್ನು ಕಣ್ಣುಮುಚ್ಚಿಕೊಂಡು ಒಪ್ಪದೆ ನವೀನ ನಾಗರಿಕತೆ ಬುದ್ಧಿಶಕ್ತಿಗಳಿಗೆ ಅನುಸಾರವಾಗಿ ನಡೆದುಕೊಳ್ಳಬೇಕೆಂದು ಪ್ರಯತ್ನಪಡುತ್ತಿದಾರೆ. ಅಲ್ಲಿನ ವಿದ್ಯಾಭ್ಯಾಸದ ಇಲಾಖೆಯವರಿಗೆ ಇದು ತೋರದ ಹೋದದ್ದರಿಂದ ಅವರಿಗೂ ವಿದ್ಯಾರ್ಥಿಗಳಿಗೂ ಈ ರೀತಿ ಮನಸ್ತಾಪಗಳು ಹುಟ್ಟಲು ಕಾರಣವಾಯಿತೆಂದು ತಿಳಿದುಬಂದಿದೆ.

ವಿಲಾಯಿತಿಯ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ಮಿ. ಮೆಕಾರ್ನೆಸ್ ಎಂಬೊಬ್ಬ ಮೆಂಬರು ಒಂದು ಕಾನೂನಿನ ಮಸೂದೆಯನ್ನು ತಯಾರುಮಾಡಿ ಅದರಂತೆ ಕಾನೂನು ಜಾರಿಗೆ ಬರಬೇಕೆಂದು ಅಪೇಕ್ಷಿಸಿರುತ್ತಾರೆ. ಈ ಮಸೂದೆಯಲ್ಲಿ ಕಾಣಿಸಿರುವ ವಿಚಾರವೇನೆಂದರೆ—ಇನ್ನು ಮುಂದೆ ಹಿಂದುಸ್ಥಾನದಲ್ಲಿ ಗವರ್ನ್‌ಮೆಂಟಿನವರು ಪ್ರಜೆಗಳ ಪೈಕಿ ಯಾರನ್ನಾದರೂ ಗಡೀಪಾರು ಮಾಡಬೇಕೆಂದು ಇಷ್ಟಪಟ್ಟರೆ ಅದಕ್ಕಾಗಿ ಕೊಡುವ ವಾರಂಟಿನಲ್ಲಿ ಅಂಥಾ ಪ್ರಜೆಯ ಮೇಲೆ ಆರೋಪಿಸಲ್ಪಟ್ಟಿರುವ ಅಪರಾಧವನ್ನೂ ಅದಕ್ಕೆ ಕಾರಣಗಳನ್ನೂ ಬರೆದು ಕೊಡಬೇಕು. ಮತ್ತು ವಾರಂಟು ಯಾವರು ಆ ತರುವಾಯ ಮೂರು ತಿಂಗಳೊಳಗಾಗಿ ಅಂಥಾ ಪ್ರಜೆಯನ್ನು ಗಡೀಪಾರು ಮಾಡಿರುವ ವಿಚಾರವನ್ನು ಪುನರಾಲೋಚನೆ ಮಾಡುತ್ತಿರಬೇಕು ಎಂಬುದೇ ಈ ಮಸೂದೆಯ ಮುಖ್ಯ ಉದ್ದೇಶವಾಗಿದೆ. ಆ ಮೆಂಬರು ಈ ಮಸೂದೆಯನ್ನು ಚರ್ಚೆಗಾಗಿ ಒಪ್ಪಿಸಿದ ಮೇಲೆ ಇಂಡಿಯಾ ಸ್ಟೇಟ್ ಸೆಕ್ರಿಟರಿಯವರು ಪಾರ್ಲಿಮೆಂಟಿನಲ್ಲಿ ಮೆಂಬರುಗಳನ್ನು ಕುರಿತು—ಈ ಮಸೂದೆಯನ್ನು ಈಗ ಸಭೆಯಲ್ಲಿ ಚರ್ಚೆಮಾಡಲಾರೆವು. ಇದನ್ನು ಕ್ರಮಪ್ರಕಾರ ಇಂಡಿಯಾ ಗವರ್ನ್‌ಮೆಂಟಿಗೆ ಕಳುಹಿಸಿಕೊಟ್ಟು, ಅದರ ವಿಷಯದಲ್ಲಿ ವೈಸ್‌ರಾಯ ಯವರ ಮತ್ತು ಅವರ ಮಂತ್ರಾಲೋಚನಾ ಸಭಿಕರ ಅಭಿಪ್ರಾಯಗಳನ್ನು ತರಿಸಿಕೊಳ್ಳುವೆವು ಎಂದು ತಿಳಿಸಿರುತ್ತಾರೆ.

ಪ್ರಕಟನೆ.

ಸಂಜೀವಿನೀ ಔಷಧಾಲಯ, ಮೈಸೂರು.

23 20

ಎಂ. ಎಸ್. ಕುಮಾರಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರೆವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಶೋಷ, ವಾಯುರೋಗಗಳೂ, ಹಳೇ ಜ್ವರ, ಕೈಕಾಲು, ಅಜೀರ್ಣ, ಕೆಮ್ಮು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ. ಕ್ರಯ ಸೀಸೆ ೧ಕ್ಕೆ ೨ ರೂಪಾಯಿ.

ಸಂಜೀವಿನೀ ಮಾತ್ರೆ:—ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ. ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ. ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ. ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ.

ಕಾಲಕೂಟ ವಟಿಕ:—ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ.

ಸುಖನೇತ್ರ ಬಿಂದು.—ಉರಿಗಣ್ಣು, ಕೆಂಗಣ್ಣು, ಮಾಚಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ. ಕ್ರಯ ಸೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ.

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ. ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು. ಅರ್ಜಿಗೆ ಲೇಬಲ್ ಅಂಟಿಸಿ ಬರೆಯಿರಿ.

ಬಿ. ಕೆ. ಸ್ವಾಮಿ,
[illegible]

ಸುಜ್ಞಾನ ಸೂರ್ಯೋದಯವು

ಅಮರಾವತಿ ಎಂಬ ಗ್ರಾಮದಲ್ಲಿ ಮಡಿವಾಳಯ್ಯ, ನಂಜುಂಡಯ್ಯನೆಂಬ ಹೆಸರುಳ್ಳ ಪ್ರಾಣಸ್ನೇಹಿತರಾದ ಇಬ್ಬರು ಜಂಗಮಯ್ಯಗಳಿದ್ದರು. ಅವರಿಬ್ಬರ ಪ್ರಾಯ ಸ್ಥಿತಿ ಉದ್ಯೋಗಗಳಲ್ಲಿ ವಿಶೇಷ ಭೇದಗಳಿಲ್ಲದಿದ್ದರೂ ಅವರಿಬ್ಬರ ಸ್ವಭಾವ ಗುಣಲಕ್ಷಣಗಳಲ್ಲಿ ಬಹಳ ಭೇದವಿತ್ತು. ಹ್ಯಾಗೆಂದರೆ ಮಡಿವಾಳಯ್ಯನು ಸಾಧುಭಾವ, ಚುರುಕು ಬುದ್ಧಿ, ಆಲೋಚನೆಪರನಾಗಿದ್ದನು. ನಂಜುಂಡಯ್ಯನು ಮಂದಬುದ್ಧಿ, ಮುಂಗೋಪಿ, ಹಠಗುಣವುಳ್ಳವನಾಗಿದ್ದನು. ಒಂದು ಸಾರಿ ಪಾದ್ರಿ ಧೊರೆಗಳು ಆ ಊರಿಗೆ ಬಂದು ಪರಮ ಗುರುವಾದ ಯೇಸು ಕ್ರಿಸ್ತನನ್ನು ಕುರಿತು ಪ್ರಸಂಗ ಮಾಡಿದುದಲ್ಲದೆ ಸತ್ಯಜ್ಞಾನವನ್ನು ಬೋಧಿಸುವಂಥ ಗ್ರಂಥಗಳನ್ನು ಸುಲಭ ಕ್ರಯಕ್ಕೆ ಮಾರಾಟ ಮಾಡಿದರು. ಮಡಿವಾಳಯ್ಯನು ಆ ಪಾದ್ರಿಗಳ ಪ್ರಸಂಗಕ್ಕೆ ಗಮನಕೊಟ್ಟುದಲ್ಲದೆ ಆ ಗ್ರಂಥಗಳಲ್ಲಿ ಕೆಲವನ್ನು ಕೊಂಡುಕೊಂಡು ಏಕಮನಾಗಿ ಅವುಗಳನ್ನೋದಿ ಧ್ಯಾನಿಸುತ್ತಿದ್ದನು. ಮತ್ತು ಆ ಗ್ರಂಥಗಳ ಅಭಿಪ್ರಾಯಗಳನ್ನು ಕುರಿತು ಆಗಾಗ್ಗೆ ತನ್ನ ಸ್ನೇಹಿತನಾದ ನಂಜುಂಡಯ್ಯನ ಸಂಗಡ ಸಂಭಾಷಣೆ ಮಾಡುತ್ತಿದ್ದನು. ಆದರೆ ನಂಜುಂಡಯ್ಯನು ಆ ಬೋಧಕರಿಗೆ ಮೆಚ್ಚದೆ ಮಡಿವಾಳಯ್ಯನನ್ನು ಗದರಿಸಿ, ನಿಮಗೇನು ಮರುಳೋ ಆ ಪಾದ್ರಿಗಳು ಹೊಲೆಯರು, ನಮ್ಮ ಕುಲ ಕೆಡಿಸುವದೇ ಅವರ ಛಲ. ನಾವು ಶಿವಕುಲದವರು. ಹೊಲೆ ಕುಲದ ಗೋಷ್ಟಿ ನಮಗ್ಯಾಕೆ? ಎಂದು ಹೇಳುತ್ತಿದ್ದನು. ಮಡಿವಾಳಯ್ಯನು ತನ್ನ ಸ್ನೇಹಿತನ ಮಾತಿಗೆ ಒಪ್ಪದೆ

ಊರಿಗೆ ದಾರಿಯನ್ನು ಯಾರು ತೋರಿದರೇನು?
ಸಾರಾಯದ ನಿಜವ ತೋರುವ ಗುರುಧಾಯ ಯಾರಾದರೇನು.

ಎಂಬ ಸರ್ವಜ್ಞನ ನೀತಿ ವಾಕ್ಯಕ್ಕನುಸಾರವಾಗಿ ಸತ್ಯವು ನಮಗೆ ಅಗತ್ಯವಾದದ್ದು. ಆಕಳುಗಳ ವರ್ಣದಲ್ಲಿ ನಾನಾ ಭೇದಗಳಿದ್ದಾಗ್ಯೂ ಅವುಗಳ ಹಾಲಿನಲ್ಲಿ ಭೇದ ಉಂಟೇ? ಕಬ್ಬು ಡೊಂಕಾಗಿದ್ದರೂ ಅದರಲ್ಲಿರುವಂಥ ರಸದಲ್ಲಿ ಡೊಂಕುಂಟೇ? ತಮ್ಮೊಪಾದಿ ಆ ಪಾದ್ರಿಗಳ ಆಕಾರ, ಆಚಾರ, ಊಟ, ಉಡುಗೆಗಳಲ್ಲಿ ಭೇದಗಳಿದ್ದಾಗ್ಯೂ ಅವರು ಹೇಳುವಂಥ ಬೋಧನೆಯೂ ಅವರು ಅನುಸರಿಸುವಂಥ ಮತವೂ ಸತ್ಯವಾದದ್ದಾಗಿದ್ದರೆ ನಾವು ಅದನ್ನು ಯಾಕೆ ಅವಲಂಬನೆ ಮಾಡಬಾರದು. ಹೀಗೆ ವಿಚಾರಾಲೋಚನೆ ಮಾಡಿ ಬಿಡದೆ ಆ ಗ್ರಂಥಗಳನ್ನೋದಿದ್ದಲ್ಲದೆ ಆ ಪಾದ್ರಿ ಧೊರೆಗಳ ಬಳಿಗೆ ಕೆಲವು ಸಾರಿ ಹೋಗಿ ಇನ್ನೂ ತನಗೆ ಮರೆಯಾಗಿದ್ದಂಥ ಸಂಗತಿಗಳನ್ನು ಅವರ ಹತ್ತಿರ ವಿಚಾರಿಸಿ ತಿಳಿದುಕೊಂಡು ಕಡೆಯಲ್ಲಿ ತನ್ನ ಕುಟುಂಬಸಹಿತವಾಗಿ ಆ ಪಾದ್ರಿ ಧೊರೆಗಳಿದ್ದ ಊರಿಗೆ ಹೋಗಿ ದೀಕ್ಷಾಸ್ನಾನದ ಮುಖಾಂತರ ಕ್ರೈಸ್ತ ಮತಾವಲಂಬನೆ ಮಾಡಿ ಕೆಲವು ಕಾಲಗಳ ವರೆಗೂ ಆ ಊರಲ್ಲಿದ್ದು ಇನ್ನೂ ಹೆಚ್ಚಾಗಿ ಆ ಮತಜ್ಞಾನವನ್ನು ಹೊಂದಿಕೊಂಡು ಅನಂತರದಲ್ಲಿ ಕುಟುಂಬ ಸಹಿತನಾಗಿ ಸ್ವಸ್ಥಳಕ್ಕೆ ತಿರಿಗಿ ಬಂದನು. ನಂಜುಂಡಯ್ಯನು ತನ್ನ ಸ್ನೇಹಿತನಾದ ಮಡಿವಾಳಯ್ಯನು ಮಾಡಿದಂಥ ಈ ಕಾರ್ಯವನ್ನರಿತು ಆತನ ಮೇಲೆ ಅತ್ಯಂತ ಸಿಟ್ಟಾಗಿ ಆತನ ಮನೆಗೆ ಹೋಗದೆ ದೂರದಲ್ಲಿಯೇ ಇದ್ದನು.

ಹೀಗಿರಲು ಒಂದು ದಿವಸ ಮಡಿವಾಳಯ್ಯನು ಮಧ್ಯಾಹ್ನದ ಊಟ ತೀರಿಸಿಕೊಂಡು ತನ್ನ ಮನೆಯ ಮುಂದಿರುವ ಕಟ್ಟೆ ಮೇಲೆ ವೀಳ್ಯ ಹಾಕಿಕೊಳ್ಳುತ್ತ ಕುಳಿತಿರುವಾಗ ದಾರಿಯಲ್ಲಿ ಹೋಗುತ್ತಿದ್ದ ನಂಜುಂಡಯ್ಯನನ್ನು ಕಂಡು ಪ್ರೀತಿಯಿಂದ ಕರೆದು ಸನ್ಮಾನದಿಂದ ಕೂರಿಸಿ ಕ್ಷೇಮಸಮಾಚಾರಗಳನ್ನು ವಿಚಾರಿಸಿದನು. ಹೀಗೆ ಪರಸ್ಪರ ಯೋಗಕ್ಷೇಮಗಳನ್ನು ಮಾತಾಡಿದ ನಂತರ ನಂಜುಂಡಯ್ಯನು ಭುಜಿಸಿಕೊಂಡು ದೀರ್ಘಶ್ವಾಸ ಬಿಟ್ಟು ತನ್ನ ಶಿರವನ್ನು ತೂಗಿ ಮಡಿವಾಳಯ್ಯನ ಮುಖವನ್ನು ನೋಡಿ ಏನು ಮಾಡಿದಿ ಕೂಡಾ ಅಂದನು.

ಅದಕ್ಕೆ ಮಡಿವಾಳಯ್ಯನು ನಗುನಗೆಯಿಂದ ನಾನೇನು ಮಾಡಿದೆ ನಂಜುಂಡಯ್ಯ, ಊಟಮಾಡಿ ವೀಳ್ಯ ಹಾಕುತ್ತಾ ಕೂತಿದ್ದೇನಲ್ಲ ಅಂದನು.

ನಂಜುಂಡಯ್ಯ—ಅಲ್ಲಯ್ಯಾ, ಅಲ್ಲ, ಶಿವಕುಲವನ್ನು ತ್ಯಜಿಸಿ ಹೊಲೆಕುಲವನ್ನು ಸೇರಿದಲ್ಲ. ನೀನು ಮಾಡಿದಂಥ ಭ್ರಷ್ಟತ್ವ ಏನೆಂದು ಹೇಳಲಿ ಅಂದನು.

ಮಡಿ—ಕುಲಾಚಾರ, ಶಿಲಾಪೂಜೆ, ನಾನಾ ಅನಾಚಾರಗಳುಳ್ಳ ಲಿಂಗಾಯತ ಮತವನ್ನು ವಿಸರ್ಜಿಸಿ ಏಕೋದೇವನಾದ ಪರಮಾತ್ಮನನ್ನು ಆರಾಧಿಸಿ ಮನಶ್ಶುದ್ಧಿಗೆ ಅನುಕೂಲವಾದಂಥ ಸದಾಚಾರವುಳ್ಳಂಥ ಕ್ರೈಸ್ತ ಮತಾವಲಂಬನೆಯನ್ನು ನಾನು ಮಾಡಿದ ಕಾರಣ ನನ್ನನ್ನು ಭ್ರಷ್ಟನೆಂದು ಹೇಳುತ್ತೀರೋ. ಚಿಂತಿಲ್ಲ. ನೀವು ಕೂಡ ನನ್ನಂತೆ ಈ ಎರಡು ಮತಗಳ ಸಾರಾಸಾರಗಳನ್ನು ಪರೀಕ್ಷಿಸಿ ಗ್ರಹಿಸಿಕೊಂಡದ್ದಾದರೆ ಕ್ರೈಸ್ತ ಮತಾವಲಂಬನೆ ಮಾಡದೆ ಇರಲಾರಿರಿ ಅಂದನು.

ನಂಜುಂ—ಸಿಟ್ಟಿನಿಂದ ತನ್ನ ನಾಲಿಗೆಯನ್ನು ಕಡಿದುಕೊಳ್ಳುತ್ತಾ ಸಾಕ್ಷಾತ್ ಪರಮೇಶ್ವರನ ಸ್ವರೂಪಗಳಾದಂಥ ಇಷ್ಟಲಿಂಗ, ಈಶ್ವರ, ವಿಶ್ವೇಶ್ವರ, ಬಸವಣ್ಣ ಮೊದಲಾದ ಮಹಾ ದೇವರುಗಳನ್ನು ಶಿಲೆಗಳೆಂದು ಹೇಳುತ್ತೀರೋ ನಿಮ್ಮಂಥ ಶಿವದ್ರೋಹಿಗಳ ಮುಖವನ್ನು ನೋಡಲೂ ನಿಮ್ಮ ಮಾತುಗಳನ್ನು ಕೇಳಲೂ ಬಾರದು ಅಂದನು.

ಮಡಿ—ಸಿಟ್ಟುಮಾಡಬೇಡಿರಿ ನಂಜುಂಡಯ್ಯನವರೇ, ಸಾವಧಾನದಿಂದ ಶೋಧಿಸಿ ನೋಡಿರಿ. ಪಂಚೇಂದ್ರಿಯಗಳಿಗೆ ಅಗೋಚರನಾಗಿರುವಂಥ ಪರಮಾತ್ಮನು ಆತ್ಮಸ್ವರೂಪಿಯಾಗಿದ್ದಾನೆಂದು ಸಕಲ ಧರ್ಮಶಾಸ್ತ್ರಗಳೂ ಹೇಳುತ್ತವೆ. ಹೀಗೆ ಆತ್ಮರೂಪಿಯಾದಂಥ ದೇವರು ನೀವು ಹೇಳಿದಂಥ ಈ ಜಡಮೂರ್ತಿಗಳ ಆಕಾರದಲ್ಲಿದ್ದಾನೆಂದು ಯಾವ ಆಧಾರದಿಂದ ನಂಬುತ್ತೀರಿ. ಇದಲ್ಲದೆ ನಿರಾಕಾರಿಯಾದಂಥ ದೇವರನ್ನು ಆಕಾರವಂತನನ್ನಾಗಿ ಮಾಡುವದು ಸಾಧ್ಯವೋ. ಅದು ಮಾತ್ರವಲ್ಲ, ಸರ್ವಸ್ವತಂತ್ರನಾಗಿರುವಂಥ ಆ ಮಹಾ ಸ್ವಾಮಿಯು ಸರ್ವಾಂತರ್ಯಾಮಿಯೂ ಅಮಿತಜ್ಞಾನಿಯೂ ಸರ್ವಶಕ್ತನೂ ಜಗದ್ರಕ್ಷಕನೂ ಆಗಿದ್ದಾನೆಂದು ಈ ಪ್ರಪಂಚದಲ್ಲಿರುವಂಥ ಆಯಾ ಸೃಷ್ಟಿಗಳಿಂದಲೂ ಅವುಗಳ ಪರಿಪಾಲನೆಯಿಂದಲೂ ನಮ್ಮ ಗ್ರಹಿಕೆಗೆ ಬರುತ್ತದೆ. ಇಂಥ ದೈವಲಕ್ಷಣಗಳಲ್ಲಿ ಒಂದಾದರೂ ಇಲ್ಲದಂಥ ಈ ನಿರ್ಜೀವ ಮೂರ್ತಿಗಳನ್ನು ಆ ಜಗತ್ಕರ್ತನಿಗೆ ಹೋಲಿಸುವದು ಯಾಕೆ ಅಂದನು.

ನಂಜುಂ—ಮಡಿವಾಳಯ್ಯಾ, ನಮ್ಮ ಭಕ್ತಿಯ ಮರ್ಮ ನಿಮಗೆ ಗೊತ್ತಿಲ್ಲ. ಶಿಲೆಗಳನ್ನು ಬಿಟ್ಟು ನಿಸ್ಸೀಮನನ್ನು ಸೇವಿಸಿದರೆ ಸ್ವಾಮಿಸಿಕ್ಕೀತೇ. ಈ ಮೂರ್ತಿಗಳೇ, ಆ ಪ್ರಭು ದೇವರೆಂದಲ್ಲ. ಆತನು ನಿರಾಕಾರಿಯಾಗಿರುವದರಿಂದ ಆತನ ಹೆಸರನ್ನು ಈ ಮೂರ್ತಿಗಳಿಗಿಟ್ಟು ಪೂಜಿಸುವದರಿಂದ ಆ ಪೂಜೆ ನಿರಾಕಾರಿಯಾಗಿರುವಂಥ ಆ ಪರಮೇಶನಿಗೆ ಸಲ್ಲುತ್ತದೆ ಅಂದನು.

ಮಡಿ—ನಂಜುಂಡಯ್ಯನವರೇ, ಈ ವಿಷಯದಲ್ಲಿ ನೀವೇ ತಿಳುಳನ್ನು ಬಿಟ್ಟು ಸಿಪ್ಪೆಯನ್ನು ಸೇವಿಸುವವರ ಹಾಗಿದ್ದೀರಿ. ಹ್ಯಾಗೆಂದರೆ ಗುಣ ಮುಖ್ಯವಾದದೇ? ಹೊರತು ಹೆಸರು ಮುಖ್ಯವಾದುದಲ್ಲ. ಗುಣವಿಲ್ಲದ ದೊಡ್ಡ ಹೆಸರು ಸ್ವಾದವಿಲ್ಲದ ಸಿಪ್ಪೆಯಷ್ಟೆ. ಗೌಳೀರ ತಿಮ್ಮನ ಹುಳಿ ಮಜ್ಜಿಗೆ ನೀರಿಗೆ ಕರಿ ಎಮ್ಮೆ ಕರೆದ ಕೆನೆ ಹಾಲೆಂದು ಹೆಸರಿಟ್ಟರೆ ಆ ಹೆಸರಿನಿಂದ ಹುಳಿ ಮಜ್ಜಿಗೆ ನೀರು ಕೆನೆ ಹಾಲಾದೀತೇ? ಹಾಲಿನ ರುಚಿ ಅದರಲ್ಲಿ ಸಿಕ್ಕೀತೇ? ಒಬ್ಬ ಭಕ್ತನು ನಿಮ್ಮನ್ನು ಬಿಟ್ಟು ನಿಮ್ಮ ಸೇವಕನಿಗೆ ನಿಮ್ಮ ಹೆಸರನಿಟ್ಟು ತನ್ನ ಮನೆಗೆ ಅವನನ್ನು ಕರೆದುಕೊಂಡು ಹೋಗಿ ನಿಮ್ಮ ಹೆಸರಿನಲ್ಲಿ ಅವನಿಗೆ ಮೃಷ್ಟಾನ್ನ ನೀಡಿದರೆ ಆ ಹೆಸರು ಮಾತ್ರದಿಂದ ನಿಮಗೆ ತೃಪ್ತಿ ಆದೀತೇ. ಅಂಥ ಭಕ್ತನಿಗೆ ನೀವು ಮೆಚ್ಚಿ ಆತ ಕೇಳಿದ ವರ ಕೊಡ ಬಹುದೋ? ಅಂಥಾ ಭಕ್ತರೇ ದೇಶದ ತುಂಬಾ ಇದ್ದರೆ ನಿಮ್ಮ ಗತಿ ಏನಾದೀತು? ಹಾಗಾದರೆ ಸರ್ವಶಕ್ತನಾದ ಪರಮಾತ್ಮನ ಹೆಸರನ್ನು ನಿರ್ಜೀವ ಮೂರ್ತಿಗಳಿಟ್ಟರೆ ಪ್ರಯೋಜನವೇನು?

ಭ್ರಷ್ಟ ದೈವಗಳಿಗೆ ಬಾಯಿ ಬಿಟ್ಟಲ್ಲಿ ಫಲವಿಲ್ಲ
ಸೃಷ್ಟಿ ಗೀಶನ ಭಜಿಸಿದರೆ ಮುಂದಕ್ಕೆ
ಇಷ್ಟಾರ್ಥವೀವ ಸರ್ವಜ್ಞ

ಇದಲ್ಲದೆ ಒಬ್ಬನ ಗುಣಾತಿಶಯಗಳನ್ನು ತಿಳಿಯದೆ ಅವನ ಹೆಸರನ್ನು ಮಾತ್ರ ಕೇಳುವವರಿಂದ ಅಂಥವನಲ್ಲಿ ಯಾರಿಗೂ ನಂಬಿಕೆಯೂ ಪ್ರೀತಿಯೂ ಹುಟ್ಟಲಾರದು. ಅದರಂತೆ ಪರಮಾತ್ಮನ ಸ್ವಭಾವ ಗುಣಲಕ್ಷಣಗಳನ್ನು ತಿಳಿದುಕೊಳ್ಳದೆ ಆತನ ಹೆಸರನ್ನು ಮಾತ್ರ ಈ ಮೂರ್ತಿಗಳಿಗೆ ಇಡುವದರಿಂದ ಆ ಪರಮಾತ್ಮನಲ್ಲಿ ನಮಗೆ ಭಕ್ತಿಯೂ ಪ್ರೀತಿಯೂ ಹುಟ್ಟಲಾರವು. ಅದು ಮಾತ್ರವಲ್ಲ ಈ ಮೂರ್ತಿಗಳ ವಿಷಯದಲ್ಲಿ ನಿಮ್ಮ ಮನೋಭಿಪ್ರಾಯಗಳೇ ಬೇರೆ ಉಂಟು. ಹ್ಯಾಗೆಂದರೆ ಬಸವಣ್ಣನು ಶಿವನ ವಾಹನವೆಂತಲೂ ವಿಶ್ವೇಶ್ವರನು ಶಿವನ ಮಗನೆಂತಲೂ ಶಿವನು ತ್ರಿಮೂರ್ತಿಗಳಲ್ಲಿ ಒಬ್ಬನೆಂತಲೂ ನಂಬುತ್ತೀರಿ. ಮತ್ತು ಅಂಥಾ ನಂಬಿಕೆಯಿಂದಲೇ ಆಯಾ ಮೂರ್ತಿಗೆ ಪ್ರತ್ಯೇಕವಾಗಿ ಪೂಜೆಮಾಡುತ್ತೀರಿ. ಹೊರತು ಪರಮಾತ್ಮನ ವಿಷಯದಲ್ಲಿ ಲೇಶಮಾತ್ರವೂ ಯೋಚಿಸುವದಿಲ್ಲ. ಪೂಜೆಮಾಡುವಾಗ ಮಾತ್ರ ಪರಮಾತ್ಮನ ಹೆಸರನ್ನು ಉಪಯೋಗಿಸುತ್ತೀರಷ್ಟೆ ಅಂದನು.

ನಂಜುಂ—ತನ್ನ ಮುಖವನ್ನು ನೆಲಕ್ಕೆತ್ತಿ ದೀರ್ಘಾಲೋಚನೆ ಮಾಡಿ ಹಾಗಲ್ಲ ಮಡಿವಾಳಯ್ಯಾ, ನಾವು ದೇವರ ಹೆಸರನ್ನು ಮಾತ್ರ ಈ ಮೂರ್ತಿಗಳಿಗಿಟ್ಟು ಪೂಜಿಸುವದಿಲ್ಲ. ಈ ಮೂರ್ತಿಯಲ್ಲಿ ಪರಮಾತ್ಮನಿದ್ದಾನೆಂದು ನಂಬಿ ಪೂಜಿಸುತ್ತೇವೆ. ಇಂಥ ನಂಬಿಕೆಗೆ ಪರಮಾತ್ಮನು ಮೆಚ್ಚಿ ವರಕೊಡುತ್ತಾನೆಂಬುವದಕ್ಕೆ ನಮ್ಮ ಹಿರಿಯರ ವಾಕ್ಯಗಳೂ ನಮೆಯಂಥ ಚರಿತ್ರೆಗಳೂ ದೃಷ್ಟಾಂತಗಳೂ ಇವೆ. ಹ್ಯಾಗೆಂದರೆ ನಾಮ ನಂಬಿದ ಮನವೇ ನಂಬಲಿಸದೆ ಹಲವನು ನಂಬಿಗೆಯೇ ಕಾರಣವು. ನಂಬನೋಲಿಯುವದಕ್ಕೆ ಹೀಗೆ ನಮ್ಮ ಗುರುಗಳು ಕವಿದೇಳಿದ್ದಾರಲ್ಲ. ಮತ್ತು ಕುರಿಹಿಕ್ಕೆಯನ್ನು ಒಬ್ಬ ಕುರುಬನು ಲಿಂಗವೆಂದು ನಂಬಿ ತನ್ನ ಮಂದೆಯ ಹಾಲನ್ನು ಅದಕ್ಕೆರದು ಪೂಜಿಸಿದ ಕಾರಣ ಹರನು ಆತನ ಭಕ್ತಿಗೊಲಿದು ಕೈಲಾಸ ಪದವಿಯನ್ನು ಆತನಿಗೆ ಕೊಟ್ಟನೆಂದು ಪ್ರಸಿದ್ಧವಾದ ಸಂಗತಿಯು. ಇದಕ್ಕೆ ನೀವೇನು ಹೇಳುತ್ತೀರಿ ಅಂದನು.

ಮಡಿ—ನಂಬಿಕೆ ಮುಖ್ಯವಾದದ್ದು ನಿಜ. ಆದರೆ ಯೋಗ್ಯವಾದದ್ದನ್ನು ನಂಬಬೇಕು. ಕಂಡ ಕಂಡದ್ದನ್ನೆಲ್ಲ ನಂಬಿದರೆ ಕೇಡು ತಪ್ಪದು. ಈ ಲೋಕದಲ್ಲಿ ಸತ್ಯಾಸತ್ಯಗಳು ಮಿಶ್ರವಾಗಿವೆ. ಎರಡರಲ್ಲಿ ಯಾವುದು ಪರೀಕ್ಷಿಸಿ ಯೋಗ್ಯವಾದುದೆಂದು ತಿಳಿದ ನಂತರ ನಂಬಬೇಕು. ಬೇವಿನ ಬೀಜವನ್ನು ಮಾವಿನ ಬೀಜವೆಂದು ನಂಬಿ ನಾಟಿ ನೀರು ಗೊಬ್ಬರ ಹಾಕಿ ಬೆಳೆಸಿದರೆ ಅಂಥ ನಂಬಿಕೆಯಿಂದ ಬೇವು ಹೋಗಿ ಮಾವು ಆದೀತೇ. ಮಾವಿನ ಹಣ್ಣು ಸಿಕ್ಕೀತೇ. ಉಪ್ಪನ್ನು ಸಕ್ಕರೆ ಎಂದು ನಂಬಿ ಹಾಲಲ್ಲಿ ಹಾಕಿಕೊಂಡರೆ ಮಾಧುರ್ಯವಾದೀತೇ. ಗೊಡ್ಡು ಕತ್ತೆಯನ್ನು ಕಾಮಧೇನು ಎಂದು ನಂಬಿದರೆ ಇಷ್ಟಾರ್ಥ ಸಿಕ್ಕೀತೇ. ನಿರ್ಜೀವವಾದ ಜಡಮೂರ್ತಿಯಲ್ಲಿ ದೇವರಿದ್ದಾನೆಂದು ನಂಬುವದು ಬುದ್ಧಿ ಜ್ಞಾನವುಳ್ಳಂಥ ಮಾನವರಿಗೆ ಯೋಗ್ಯವಾದುದಲ್ಲ. ಅಂಥಾ ಅಯೋಗ್ಯವಾದ ನಂಬಿಕೆಗೆ ದೇವರು ಎಷ್ಟು ಮಾತ್ರಕ್ಕೂ ಮೆಚ್ಚಲಾರನು. ಅಮಿತಜ್ಞಾನಿಯೂ ಸರ್ವಜ್ಞನೂ ಆಗಿರುವಂಥ ಪರಮಾತ್ಮನು ಮಾತ್ರ ನಮ್ಮ ನಂಬಿಕೆಗೆ ಯೋಗ್ಯನಾಗಿದ್ದಾನೆ. ಆತನಲ್ಲಿರುವಂಥ ನಂಬಿಕೆ ಮಾತ್ರ ನಿಷ್ಫಲವಾಗದು. ನಮ್ಮ ಹಿಂದೂಮತ ಗ್ರಂಥಗಳಿಗೆ ಹಲವು ಮುಖಗಳು ಇದ್ದ ಹಾಗೆ ಕಾಣುತ್ತದೆ. ಹ್ಯಾಗೆಂದರೆ ಒಬ್ಬ ಕುರುಬನು ಕುರಿಹಿಕ್ಕೆಯನ್ನು ಲಿಂಗವೆಂದು ನಂಬಿ ಪೂಜಿಸಿದ ಕಾರಣ ಹರನು ಆತನ ಭಕ್ತಿಗೊಲಿದು ಕೈಲಾಸಪದವಿ ಕೊಟ್ಟನೆಂದು ಈಗಲೇ ನೀವು ಹೇಳಿದಂತೆ ಒಂದು ಮುಖವು ಹೇಳುತ್ತದೆ. ಬಸವಣ್ಣನವರ ಕಾಲಜ್ಞಾನವೆಂಬ ಗ್ರಂಥದ ವಿಷ್ಣು ಮೋಹಿನಿಯಲ್ಲಿ ಇದಕ್ಕೆ ವಿರೋಧವಾಗಿ ಇನ್ನೊಂದು ಮುಖವು ಹೇಳುವದೇನಂದರೆ—

ಮುಕ್ಕೋಟಿ ನೀರುಗುಳಿದ ಗೊಲಿದಿರಿ
ಒಕ್ಕೋಟೆಳಿ ಹಾಲೆರದ ರೊಲಿದಿರಿ
ಮುಕ್ಕರ ನಾಸರದ ಕೋಯ್ದು ಕೋಯ್ದ್ರಿದ ರೊಲಿದಿರಿ

ಎಂದು ಬಸವಣ್ಣನವರು ಹರನನ್ನು ಕೇಳಲು ಹರನು ಬಸವಣ್ಣನವರಿಗೆ ಹೇಳಿದ್ದೇನಂದರೆ—

ಅಕ್ಕಟಕ್ಕಟ ಅವರಿಗೊಲಿಯುವರೆ
ಸೊಕ್ಕುನವೋರು ಅವರಗಬಲ್ಲರೆ
ಪುಕ್ಕಟ ಪುರಾಣ ಮಾತುಗಳು ಸಲ್ಲವು ಬಸವಕೇಳಂದ

ಎಂದು ಬರೆದದೆ. ಮತ್ತು ಇನ್ನೊಂದು ಸ್ಥಳದಲ್ಲಿ ಬಸವಣ್ಣನವರಿಗೆ ಹರನು ಹೇಳುವದೇನಂದರೆ—

ನಾಲ್ಕು ಯುಗದಲಿ ನಡೆದ ನಡೆಗುಣ
ಸಾಕು ಆಯಿತು ಇಷ್ಟ ಪೂಜಿತ
ಆಕಾರ ರೂಪಗಳೆಲ್ಲ ಅಂತು ಕಡೆಯಾಟ

ಇದಲ್ಲದೆ ಲಿಂಗಪೂಜಾಸಿಂಧನ ವಿಷಯದಲ್ಲಿ ಅಯೋಗ್ಯರ ವಚನಗಳು ಹೇಳುವಂಥವನ್ನು ನಮಗೆ ಗೊತ್ತುಂಟಲ್ಲ. ಅವುಗಳನ್ನು ಈಗ ಹೇಳುವದಕ್ಕೆ ಸಮಯವಿಲ್ಲ. ನೀವು ಹೇಳಿದಂಥ ಕುರುಬನ ಕಥೆಯನ್ನು ಯೋಚಿಸುವಾಗ ಉದರಪೋಷಣಾರ್ಥವಾಗಿ ನಾನಾ ಭ್ರಷ್ಟಗಳ ವೇಷ ಎಂಬ ಗಾದೆ ನೆನಪಾಗುತ್ತದೆ. ಸುಮ್ಮನಿದ್ದರೆ ಹೊಟ್ಟೆ ತುಂಬುವದಿಲ್ಲವೆಂದು ತಿಳಿದು ಇಂಥಾ ಕಥೆಗಳನ್ನು ಕಲ್ಪಿಸಿ ಮೂಢರನ್ನು ವಂಚಿಸಿ ತಾವು ಪೂಜಾರಿಗಳೂ ಪುರೋಹಿತರೂ ಆಗಿದ್ದು ಅಂಥವರು ತಂದುಕೊಡುವಂಥ ಕಾಣಿಕೆ ಕಪ್ಪಗಳಿಂದ ಜೀವಿಸಬೇಕೆಂದು ತೋರಿ ಬರೆದಿದ್ದಾರಷ್ಟೆ? ಹೇಳುವವರು ಹೆಡ್ಡರಾದಾಗ್ಯೂ ಕೇಳುವವರಿಗೆ ಮತಿಬೇಡವೇ.

(ಇನ್ನೂ ಇದೆ.)

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

೧—೬—೧೯೦೯ ರಿಂದ ೧೧—೬—೧೯೦೯ ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	2	0	0	0
ಬೆಂಗಳೂರು ಡಿಸ್ಟ್ರಿಕ್ಟು	1	1	19	16
ಮೈಸೂರು ,,	1	1	0	0
ಕೋಲಾರ್ ,,	*	*	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	0	0	6	2
ಚಿತ್ರದುರ್ಗ ,,	0	0	0	0
ಕಡೂರ್ ,,	3	3	0	0
ಶಿವಮೊಗ್ಗ ,,	0	0	2	1
* ಸಂಖ್ಯೆ ಕಾಣಿಸಿಲ್ಲ. ಜುಮ್ಲಾ	14	11	27	19

ಶಾಲಿವಾಹನ ಶಕ ವರುಷಂಗಳು ೧೮೩೧ನೇ ಸೌಮ್ಯನಾಮ ಸಂವತ್ಸರದ ಆಷಾಢ ಶುದ್ಧ ಷಷ್ಠಿ ಗುರುವಾರದಿಂದ ಆಷಾಢ ಶುದ್ಧ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಜೂನ್.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಿಂಗಳ ಮಿಥುನ ಮಾಸ
24	ಗುರು	ಷಷ್ಠಿ	4-4	ಪುಷ್ಯ	31-2	11
25	ಶುಕ್ರ	ಸಪ್ತಮಿ	9-19	ಪುಬ್ಬ	32-28	12
26	ಶನಿವಾ §	ಅಷ್ಟಮಿ	13-18	ಹಸ್ತ	43-58	13
27	ರವಿವಾ ‡	ನವಮಿ	18-18	ಚಿತ್ತ	50-16	14
28	ಚಂದ್ರ	ದಶಮಿ	23-2	ಸ್ವಾತಿ	55-48	15
29	ಕುಜ *	ಏಕಾದಶಿ	26-26	ವಿ	60-0	16
30	ಬುಧ †	ದ್ವಾದಶಿ	29-16	ವಿಶಾ	0-18	17

§ ಮಹಾ ತುರೀಯೋಗ ‡ ಪರ್ವಣಿತಿಥಿ
ಮರಣ ತಿಥಿ
* ಸರ್ವತ್ರ ಪ್ರಥಮ ಏಕಾದಶಿ, ಶಯನೈಕಾದಶಿ, ಗೋಪದ್ಮವ್ರತಾರಂಭ
† ಪಾರಣ ದ್ವಾದಶಿ

ಧಾನ್ಯ ಧಾರಣೆ

ವಿವರ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೫-೦-೦	೧೬-೮-೦
ಕೆಂಪೊಡೆ ಅಕ್ಕಿ ಅವಲ್		೧೬-೮-೦	೧೫-೦-೦
,, ಮಧ್ಯಮ		೧೫-೦-೦	೧೪-೮-೦
ಜಾಪ್ಪಾನ್ ಅಕ್ಕಿ		೧೬-೦-೦	೧೫-೮-೦
ಸಣ್ಣಕ್ಕಿ ಅವಲ್		೧೭-೦-೦	೧೮-೦-೦
,, ಮಧ್ಯಮ		೧೬-೦-೦	೧೭-೦-೦
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೬-೦-೦	೧೬-೦-೦
,, ಮಧ್ಯಮ		೧೫-೦-೦	೧೫-೦-೦
ಹೈದರಾಗಿ ಪಲ್ಲಾ ೧ಕ್ಕೆ		೯-೪-೦	೮-೧೨-೦
ಕಾರಾಗಿ		೮-೧೨-೦	೮-೮-೦
ಜೋಳ		೯-೦-೦	೯-೦-೦
ಹಲಸಂದೆ ಪಲ್ಲಾ ೧ಕ್ಕೆ		೧೩-೮-೦	೧೨-೮-೦
ಬೇಳೆ ಅವರೆ		೧೧-೦-೦	೧೨-೦-೦
ಹೆಸರು		೧೭-೦-೦	೧೭-೮-೦
ಉದ್ದು		೧೪-೮-೦	೧೩-೦-೦
ಕಡಲೆ		೧೩-೮-೦	೧೨-೪-೦
ಎಳ್ಳು ಸೇ ೧೨೭ ಕ್ಕೆ		೨೨-೮-೦	೧೯-೦-೦
ಹುರುಳಿ		೧೧-೧೨-೦	೧೧-೮-೦
ಹರಳು ೧೨೭ ಸೇರಿಗೆ		೧೧-೦-೦	೧೦-೦-೦
ಸೀಗೇಕಾಯಿ ಮಣ ೧ಕ್ಕೆ		೨-೮-೦	೨-೮-೦
ಮೆಣಸಿನಕಾಯಿ		೫-೮-೦	೪-೮-೦
,, ಮಧ್ಯಮ		೫-೦-೦	೪-೦-೦
ಬೆಲ್ಲ ದೊಡ್ಡ ಅಚ್ಚು		೬-೪-೦	ಮ ೨-೨-೦
ಒಳ್ಳೆಣ್ಣೆ ಮಣ ೧ಕ್ಕೆ		೫-೦-೦	೫-೪-೦
ಹರಳೆಣ್ಣೆ ,,		೪-೮-೦	೪-೪-೦
ಕೊತ್ತಂಬರಿ ಪಲ್ಲಾ ೧ಕ್ಕೆ		೯-೪-೦	೯-೬-೦
ಉಪ್ಪು ,,		೬-೪-೦	೪-೧೨-೦
ಹುಣಸೇ ಹಣ್ಣು		೧-೧೨-೦	೧-೧೨-೦
,, ಹಳೇದು		೧-೮-೦	೧-೮-೦
ತುಪ್ಪ ಮಣ ೧ಕ್ಕೆ		೧೫-೦-೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೭-೪-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ		೪-೮-೦	೪-೮-೦
ಅಡಕೇಕಾಯಿ ಮಣ ೧ಕ್ಕೆ		೦-೮-೦	೦-೧೨-೦
ಅರಿಶಿನದ ಕಾಯಿ ಮಣ ೧ಕ್ಕೆ		೧-೦-೦	೦-೧೨-೦
ಚಿನ್ನ (ಪೌನ್) ಒಂದು		೧೫-೬-೦	೧೫-೭-೦
,, ,, ಪವನು		೧೬-೦-೦	೧೫-೧೦-೦
,, ,, ಗಟ್ಟಿ ತೊಲ ೧ಕ್ಕೆ		೨೪-೮-೦	೨೪-೭-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭-೪-೦	೬೬-೦-೦

Printed and Published by the Rev H Gulliford, Proprietor and Manager, Wesleyan Mission Press, M[illegible]

REGISTERED
M. 30

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—೫ ೧೯೦೯ ನೇ ಇಸವಿ ಜೂಲೈ ತಾರೀಖು ೧ ನೇ ಗುರುವಾರ. ಸಂಚಿಕೆ ೫

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು 30 19

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಊದಲು ಗಂಟು, ಗಂಟಲು ನೋವು ಅರ್ಧಾಂಗವಾಯು, ಎದೆಶೀತ, ಗಾಯ, ಜಖಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೦ ೮ ೦

ಗಜಕರ್ಣದ ಮುಲಾಮು.

ಮೇಲೆ ಹಾಕಿದರೆ ತಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವು ಗಳು ವಾಸಿಯಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦ ೬ ೦ ೧೨ ಡಬ್ಬಿಗಳಿಗೆ ೪ ೦ ೦

ಅಸ್ಟ್ಯಾಮಿಸ್ತ್ರಾ	೨ ೦ ೦
ಚೇಳುಕಡತದ ಮದ್ದು	೦ ೪ ೦
ವಜ್ರಗುಟಕ—ಧಾತುಪುಷ್ಟಿ ರಕ್ತಶುದ್ಧಿ	೧ ೨ ೦
ಸುಂದರೀ ತೈಲ—ಮುಖ ಜಗಳಿಗೆ	೦ ೮ ೦
ಜುಲಾಬು ಮಾತ್ರೆ—ಜುಲಾಬಿಗೆ	೦ ೮ ೦
ನೇತ್ರಾಂಜನ—ಮಂದ ದೃಷ್ಟಿಗೆ	೦ ೪ ೦
ಬಜೆ ಮುಲಾಮು—ಮಕ್ಕಳ ಬಜ್ಜೆಗೆ	೦ ೩ ೦
ಕೇಶವರ್ಧಕ ತೈಲ—ತಲೆಯ ಕೂದಲಿಗೆ	೧ ೦ ೦
ಕಫನಾಶಕ ಚೂರ್ಣ—ಆಸ್ತಮಾ ರೋಗಕ್ಕೆ	೦ ೫ ೦

ದೊಡ್ಡ ಗಾಡಿ ಕಾಟಲಾಗಿಗೆ ಬರಿಯಿರಿ ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು — ಅಮೃತಾಂಜನ, ಮುಂಬಯಿ

THE PI ACE FOP HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

12

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರ ಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾ ರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಬಿಳಿ ಕೆಂಪು ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ

೧ ರೂ ೬ ಆ ೧ ರೂ ೪ ಆ

ಚಿಕ್ಕೆಯುಳ್ಳ ಟೋಪಿಗಳು ೩ ೧ ೮, ರೂ ೧ ೧೨

ಪಟ್ಟೆ ಚುಕ್ಕೆಯುಳ್ಳ ಟೋಪಿಗಳು ರೂ ೩

ಜರಿ ಟೋಪಿಗಳು ೧ ರೂ ೧೨ ಆ ೧ ರೂ ೮ ಆ, ೧ ರೂ ೬ ಆ

ಕುಶಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಹುಡುಗರ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಶಾಲು, ಇ ತ್ಯಾದಿ ವಸ್ತುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳಿದವರಿಗೆ ಕಳುಹಿ ಸಲಾಗುವುದು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರಖಾನೆ, ಹಾಸನ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು)	ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ	ರೂ ೧—೧೪—೦
" " " " "	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಬರುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 6

ತಲೆನೋವು, ವಾಯುನೋವು, ಸೆಳತ ಗಂಟಿನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿ ಹೇಳಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ನಾವಿಕಾರು ಜನರು ಪರೀಕ್ಷೆ ಮಾಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿದ್ದಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದ್ದರಿಂದಲೇ ಇದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದವರೆಲ್ಲಾ ಇದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ವಾಫೀಯಾಗುವುದು ಮಾ ಸಾಹುಕಾರರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲಿ ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್ ಪೀಟರ್ಸ್,

೩೩, ವೇದಮುದಲಿಯಾಳ್ ಬೀದಿ, ವೇಪೇರಿ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ತರಿಸಿ.

10 26

"ಬ್ರಹ್ಮಚರ್ಯ" ವೆಂಬ ಮರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ಹೊಂದಿಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪ್ರೈಸಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರ ವರಿಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನ ಯಾತ್ರಾ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಂಜಕವಾದದ್ದು ಇದರಲ್ಲಿ ಸೂಚಿಸುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟಿನ್ ದಿನ್ನಪಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಮನಸಾಂತರ ಪಾಪಮನ್ನಣೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ಕೈಟನ ಬೈಂಡು ಪ್ರತಿ ಒಂದಕ್ಕೆ	೦—೧೦—೦
ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ	೦—೧೪—೦

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ಶಾಸ್ತ್ರದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

20 20

೧. ರೋಗಾಮೃತುಹರ ಕಸ್ತೂರೀ ಮಾತ್ರೆ —ಈ ಮಾತ್ರೆಗಳನ್ನು ಕವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊರತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನಿಗಿಡಿ ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ. ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಹುಡುಗರ ಮಕ್ಕಳ ಎಳವು, ಜ್ವರ, ಸಣ್ಣ ಜ್ವರ, ಕ್ರಿಮಿಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನವಿಧ್ಯ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಶಾಸ್ತ್ರದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್.

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ.

18 22

ಇದು ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨೦ ಡಿಗ್ರಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧಿಯಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡಿಗ್ರಿಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿದರೆ ಉಪಕಾರವಾಗಿದೆ—ಎಂದೆ ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ ೧ ರೂ ೧—೮ ರೂ, ರೂ ೨—೧೨ ಆ, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ವಾಫಿ ಏಸಲಾಗುವದು

ಓಮಂಕಪೂರ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ ಕ್ಲೇಶಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆ ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ಬೆಲೆಯು "ಜ್ವರಹರಿ" ಎಂಬ ಔಷಧ ದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಮ್ಮಿಯ ಓಮಂಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಅಲ್ಲದೆ ಕೆಳಗಿನ ವಿಳಾಸದಲ್ಲಿಯೂ ಸಿಕ್ಕುವವು —

ಹನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

JUST RECEIVED! JUST RECEIVED!!

Stead's Books for the Bairns

(illustrated) New Numbers [5 26]

STEAD'S PENNY POPULAR TALES—Sixty four Pages in a coloured Picture Cover Each number contains a story of thrilling interest 24 numbers

CALENDARS FOR 1909.

Apply—The Manager, C.L.S. Book Depot, Mysore City.

ನೋಟೀಸ್.

52 1

ಅರಸೀಕೆರೆ ತಾಲ್ಲೂಕು ಕುಡಕೇನಹಳ್ಳಿ ಗ್ರಾಮ ಜಮೀನಿಗೆ ಸೇರಿದ ಕುಡಕೇನಹಳ್ಳಿ ಪಟೇಲ್ ಶಿವಬಸಪ್ಪನವರ ಲಿಂಗೇಗೌಡನು ಇದರಿಂದ ಸರ್ವರಿಗೂ ತಿಳಿಯಪಡಿಸುವುದೇನೆಂದರೆ—ನನ್ನ ಮಗನಾದ ೩೯ ವರ್ಷದ ಮರುಳಪ್ಪನೆಂಬುವವನು ಈಗ್ಗೆ ೨೨ ವರ್ಷಗಳಿಂದಲೂ ನನ್ನ ಮನೆ ಬಿಟ್ಟು ನನ್ನ ಹಕೂಜು ತಪ್ಪಿ ಮನಸ್ಸಿಗೆ ತೋರಿದಂತೆ ಮನಃಸ್ವೇಚ್ಛೆಯಾಗಿ ದೇಶಾಟನೆ ಮಾಡುತ್ತಾ ಅಲ್ಲಲ್ಲಿ ಕಂಡವರ ಬಳಿಯಲ್ಲೆಲ್ಲಾ ಅವಿವೇಕವಾಗಿ ಸಾಲ ಮಾಡುತ್ತಾ ಪೋಲಿಯಾಗಿ ತಿರುಗುತ್ತಿದ್ದಾನೆ ಇವನಿಗೆ ಎರಡು ವರ್ಷದ ಸಿದ್ಧಪ್ಪನೆಂಬ ಒಬ್ಬ ಗಂಡು ಮಗನಿದ್ದಾನೆ ನನಗೆ ಮರುಳಪ್ಪ ಹೊರತು ಬೇರೆ ಗಂಡುಮಕ್ಕಳಿರುವದಿಲ್ಲವು ನನ್ನ ಆಸ್ತಿ ಎಲ್ಲಾ ನನ್ನ ಮೊಮ್ಮಗನಾದ ಮೇಲ್ಕಂಡ ಸಿದ್ಧಪ್ಪನಿಗೆ ಮಾತ್ರ ಸಲ್ಲತಕ್ಕದ್ದಾಗಿದೆ ಆದದರಿಂದ ಮೇಲ್ಕಂಡ ನನ್ನ ಮಗ ಮರುಳಪ್ಪನಿಗೆ ಯಾರೇ ಆಗಲೀ ಸಾಲ ಕೊಡುವದಾಗಲಿ ಮತ್ತು ಈ ವರೆಗೂ ಯಾವವಿಧವಾಗಿಯಾಗಲೀ ಸಾಲ ವಗೈರೆ ಕೊಟ್ಟಿದ್ದರೆ ಅಂಥವರ ಸಾಲಗಳಿಗೆ ನಾನಾಗಲೀ ನನ್ನ ಸ್ವಯಾರ್ಜಿತ ಅಥವ ಪಿತ್ರಾರ್ಜಿತ ಆಸ್ತಿಗಳಲ್ಲಿ ಯಾವ ಭಾಗವಾಗಲೀ ಎಷ್ಟುಮಟ್ಟಿಗಾಗಲೀ ಒಳಪಡುವದಿಲ್ಲವು ಮತ್ತು ಹಾಗೇನಾದರು ಸಾಲ ಕೊಟ್ಟವರು ತಮ್ಮ ಹಣವನ್ನು ಕಳಿದುಕೊಳ್ಳುವರಲ್ಲದೆ ಅಂಥವರ ಪತ್ರಗಳಾಗಲೀ ವ್ಯಾಜ್ಯಗಳಾಗಲೀ ಕೋರ್ಟಿನಲ್ಲಿ ಎಂದಿಗೂ ಊರ್ಜಿತಪಡಲಾರವೆಂತ ಇದರಿಂದ ಖಂಡಿತವಾಗಿ ಸರ್ವರಿಗೂ ಎಚ್ಚರಿಕೆ ಕೊಟ್ಟದೇನೆ

ತಾ|| ೨೫-೬ ೧೯೦೯, ಕುಡಕೇನಹಳ್ಳಿ ಪಟೇಲ್ ಲಿಂಗೇಗೌಡನ

ಅರಸೀಕೆರೆ ಸ್ವಹಸ್ತದ ಬರಹದ ರು ೨

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು ನಿದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ಹಲ್ಲೆಸುವುದು, ತಲೆನೋವು, ಗಾಬರಿ, ಕೀಲು ನೋವು, ತಲೆ ತಿರುಗುವಿಕೆ, ಮೈನೋವು ಕೀಲುನೋವು ಮರವು; ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರೋದ್ರವ, ವಾಯು, ಮೈಬಾವು ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [69-44]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೧—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦, ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೨೦, ಪಿ ಓ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

ಔಷಧಿ ತೆಗೆದುಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 6-26

(ಸ್ಕಾಟ್ಸ್ ಇಮಲ್ಷನ್)

ಪುಷ್ಟಿ ಶರೀರವುಳ್ಳವರ್ಯಾರೂ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥತೆಯನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು

4 26

ಶೀತದ ಕೆಮ್ಮು, ಗಂಟಲು ಗೂರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲಿ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸಿರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತವೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಮಾಡುವುದಲ್ಲದೆ ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ಪರಿಷ್ಕಾರಕ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

ಅಗಸೂಲಿ ರಾಮಾಚಾರಿಯು ಕೊಟ್ಟಿರುವ ನೋಟೀಸು

53-1

ಮೈಸೂರು ಕೋಟೆಯೊಳಗೆ ದರ್ಬಾರ್ ಭಕ್ಷಿ ಮೆ|| ಲಿಂಗರಾಜೇ ಅರಸಿನವರ ಬೀದಿಯಲ್ಲಿ ಮ್ಯುನಿಸಿಪಲ್ ೫೪೩ ನೇ ನಂಬರುಳ್ಳ ಮನೆಯು ನನ್ನ ಸ್ವಯಾರ್ಜಿತವಾಗಿದೆ ನನ್ನ ಹೆಂಡತಿಯರೂ ಮಕ್ಕಳೂ ನನ್ನ ಸಮ್ಮತಿಯಿಲ್ಲದೆ ಇದುವರೆಗೆ ಮಾಡಿರುವ ಮತ್ತು ಮುಂದೆ ಮಾಡುವ ಸಾಲ ಮುಂತಾದ್ದಕ್ಕೆ ನಾನಾಗಲೀ ನನ್ನ ಮನೆಯಾಗಲೀ ಈಡಾಗುವುದಿಲ್ಲವೆಂದು ಈ ಮೂಲಕ ಸಮಸ್ತರಿಗೂ ಎಚ್ಚರಿಕೆ ಕೊಟ್ಟಿರುತ್ತೇನೆ ೨೫ ೬ ೦೯ ಅಗಸೂಲಿ ರಾಮಾಚಾರಿ ರುಜು

ವೃತ್ತಾಂತ ಪತ್ರಿಕೆ

೦

ಸನ್ ೧೯೦೯ ನೇ ಇಸವಿ ಜೂಲೈ ತಾ|| ೧ ನೇ ಗುರುವಾರ

ಹಿಂದೂಸ್ಥಾನದ ಕೌನ್ಸಿಲ್‌ಗಳ ಕಾನೂನು

ಹಿಂದೂಸ್ಥಾನದ ವೈಸ್‌ರಾಯಿಯವರ ಮತ್ತು ಬೇರೆ ಬೇರೆ ಆಧಿಪತ್ಯಗಳ ಕಾರ್ಯನಿರ್ವಾಹಕ (ಎಗ್ಜಿಕ್ಯುಟಿವ್) ಮತ್ತು ಮಂತ್ರಾಲೋಚಕ (ಲೆಜಿಸ್ಲೆಟಿವ್) ಕೌನ್ಸಿಲ್ಲುಗಳ ಏರ್ಪಾಟನ್ನು ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡುವುದಕ್ಕೋಸ್ಕರ ಇಂಗ್ಲಿಷ್ ಪಾರ್ಲಿಮೆಂಟ್ ಸಭೆಗಳಲ್ಲಿ ಒಂದು ಹೊಸ ಕಾನೂನು ಪಾಸಾಗಿದೆ ಎಂದು ತಿಳಿಸಿದೆವಷ್ಟೆ ಈ ಕಾನೂನಿನ ನಕಲು ಕಳೆದ ವಾರ ವಿಲಾಯತಿಯಿಂದ ಹಿಂದೂಸ್ಥಾನಕ್ಕೆ ಬಂದಿರುವದನ್ನು ನೋಡಿ, ಅದರ ಮುಖ್ಯಾಂಶಗಳನ್ನು ವಾಚಕರ ತಿಳುವಳಿಕೆಗಾಗಿ ಪ್ರಕಟಮಾಡಲಪೇಕ್ಷಿಸುತ್ತೇವೆ

ಬೇರೆ ಬೇರೆ ಮಂತ್ರಾಲೋಚನಾ ಸಭೆಗಳಲ್ಲಿ ಎಷ್ಟೆಷ್ಟು ಮಂದಿ ಮೆಂಬರುಗಳು ಇರಬೇಕೆಂಬುವುದನ್ನು ಈ ಕಾನೂನು ನಿರ್ಧಾರ ಮಾಡುತ್ತದೆ ಹ್ಯಾಗೆಂದರೆ—ಗವರ್ನರ್ ಜನರಲ್‌ರವರ ಮಂತ್ರಾಲೋಚನಾ ಸಭೆಯಲ್ಲಿ (ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ) ೬೦ ಮಂದಿ, ಮದರಾಸ್, ಬೊಂಬಾಯಿ, ಬಂಗಾಳಾ, ಸಂಯುಕ್ತ ಆಧಿಪತ್ಯಗಳು, ಪೂರ್ವ ಬಂಗಾಳಾ ಮತ್ತು ಅಸ್ಸಾಂ, ಈ ಪೈಕಿ ಪ್ರತಿ ಒಂದು ಆಧಿಪತ್ಯದಲ್ಲೂ ೫೦ ಮಂದಿ, ಪಂಜಾಬ್ ಮತ್ತು ಬರ್ಮಾ ಆಧಿಪತ್ಯಗಳಲ್ಲಿ ತಲಾ ೩೦ ಮಂದಿ, ಮತ್ತು ಇನ್ನು ಮುಂದೆ ಏರ್ಪಾಡಾಗುವಂಥ ಮಂತ್ರಾಲೋಚನಾ ಸಭೆಗಳಲ್ಲಿ ೫೦ ಮಂದಿ, ಈ ರೀತಿ ಮೆಂಬರುಗಳ ಸಂಖ್ಯೆಯನ್ನು ಗೊತ್ತು ಮಾಡಿದಾರೆ ಮೆಂಬರುಗಳು ಈ ಸಂಖ್ಯೆಗಳಿಗಿಂತ ಕಡಮೆಯಾಗಿದ್ದರೂ ಇರಬಹುದೇ ಶಿವಾಯಿ ಯಾವ ಸಂದರ್ಭದಲ್ಲೂ ಮೇಲ್ಕಂಡ ಸಂಖ್ಯೆಗಳಿಗಿಂತ ಹೆಚ್ಚಾಗ ಕೂಡದೆಂದು ವಿಧಿಸಲ್ಪಟ್ಟಿದೆ ಈ ಮೆಂಬರುಗಳ ಪೈಕಿ ಕೆಲವರನ್ನು ಆಯಾ ಆಧಿಪತ್ಯದ ಗವರ್ನ್‌ಮೆಂಟಿನವರೇ ನೇಮಕ ಮಾಡುವರು, ಇನ್ನು ಕೆಲವರನ್ನು ಪ್ರಜೆಗಳು ಸೇರಿ ಸಮ್ಮತಿ ಓಟ್ ಹಾಕಿ ಚುನಾಯಿಸಬೇಕಾಗಿದೆ ಈ ಚುನಾವಣೆಯ ಕ್ರಮಗಳು ಇನ್ನೂ ಇತ್ಯರ್ಥವಾಗಲಿಲ್ಲ. ನಿರ್ಧಾರವಾಗಿ ಸ್ಯಾಂಕ್ಷನ್ ಆದ ಬಳಿಕ ಆ ಕ್ರಮಗಳನ್ನು ಸರ್ಕಾರದವರು ಪ್ರಕಟ ಮಾಡುತ್ತಾರೆ ಈ ಕ್ರಮಗಳನ್ನು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಒಪ್ಪಿ, ಪಾರ್ಲಿಮೆಂಟಿನಲ್ಲಿ ಮೆಂಬರುಗಳಿಗೆ ಮೊದಲೇ ತಿಳಿಸಬೇಕಾಗಿದೆ ಆ ತರುವಾಯ ಅವುಗಳನ್ನು ಹಿಂದುಸ್ಥಾನದ ಮಂತ್ರಾಲೋಚನಾ ಸಭೆಗಳು ಬದಲಾವಣೆ ಮಾಡಲಾರವು ಈ ಸಭೆಗಳಲ್ಲಿ ಎಷ್ಟು ಮಂದಿಯನ್ನು ಸರ್ಕಾರದವರು ನೇಮಕ ಮಾಡುವರೋ, ಎಷ್ಟು ಮಂದಿ ಪ್ರಜೆಗಳಿಂದ ಚುನಾಯಿಸಲ್ಪಡಬೇಕೋ, ಚುನಾವಣೆಯು ಯಾವ ರೀತಿಯಲ್ಲಿ ನಡೆಯಬೇಕೋ, ಮಹಮ್ಮದೀಯ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಪ್ರತ್ಯೇಕವಾಗಿ ಚುನಾವಣೆ ಮಾಡತಕ್ಕ ವಿಧಾನವೇನೋ, ಈ ಮೊದಲಾದ ವಿಚಾರಗಳೆಲ್ಲಾ ಮೇಲ್ಕಂಡ ಕ್ರಮಗಳಲ್ಲಿ ನಮೂದಾಗುವವು ಆದಕಾರಣ ಈಗ ಪಾಸಾಗಿರುವ ಕಾನೂನಿನಂತೆ ಈ ಕ್ರಮಗಳೂ ಬಹು ಮುಖ್ಯವಾಗಿರುತ್ತವೆ

ಈ ರೀತಿ ನಿರ್ಮಾಣವಾಗುವ ಮಂತ್ರಾಲೋಚನಾ ಸಭೆಗಳಲ್ಲಿ ಮೆಂಬರುಗಳಿಗೆ ಆಯಾ ಆಧಿಪತ್ಯದ ಆದಾಯವ್ಯಯಗಳ (ಬಡ್ಜೆಟ್) ನ್ನು ಕುರಿತೂ, ಬಹು ಪ್ರಜೆಗೆ ಸಂಬಂಧ ಪಡುವ ಇತರ ವಿಚಾರಗಳನ್ನು ಕುರಿತೂ ಚರ್ಚೆ ಮಾಡುವುದಕ್ಕೂ, ಕೆಲವು ಬಾಬುಗಳನ್ನು ಕುರಿತು ಗವರ್ನ್‌ಮೆಂಟಿನವರನ್ನು ಪ್ರಶ್ನೆ ಮಾಡುವುದಕ್ಕೂ ಅಧಿಕಾರವನ್ನು ಕೊಟ್ಟಿದಾರೆ. ಆದರೆ ಹೀಗೆ ಪ್ರಶ್ನೆ ಮಾಡುವುದರಲ್ಲಿ ಕೆಲವು ನಿರ್ಬಂಧಗಳುಂಟು.

ಮದರಾಸ್ ಮತ್ತು ಬೊಂಬಾಯಿ ಆಧಿಪತ್ಯಗಳ ಕಾರ್ಯನಿರ್ವಾಹಕ (ಎಗ್ಜಿಕ್ಯುಟಿವ್) ಸಭೆಗಳಲ್ಲಿ ಗವರ್ನರುಗಳಲ್ಲದೆ ನಾಲ್ಕು ನಾಲ್ಕು ಮಂದಿ ಮೆಂಬರುಗಳು ನೇಮಕವಾಗುವರು ಈ ಮೆಂಬರುಗಳಿಗೆ ಒಂದೊಂದು ಓಟೂ, ಗವರ್ನರುಗಳಿಗೆ ಎರಡೆರಡು ಓಟುಗಳೂ ಉಂಟು ಆ ನಾಲ್ಕು ಮೆಂಬರುಗಳಲ್ಲಿ ಇಬ್ಬರು ಗವರ್ನ್‌ಮೆಂಟ್ ನೌಕರಿಯನ್ನು ಕನಿಷ್ಠಪಕ್ಷ ಹನ್ನೆರಡು ವರುಷಗಳ ವರೆಗಾದರೂ ನೋಡಿದವರಾಗಿರಬೇಕು. ಈ ರೀತಿ ಬದಲಾವಣೆ ಮಾಡಿರೋದರಿಂದ ಸರ್ಕಾರಿ ನೌಕರರಲ್ಲದ ದೊಡ್ಡ ಮನುಷ್ಯರೂ ಕೌನ್ಸಿಲ್ ಮೆಂಬರಾಗುವುದಕ್ಕೆ ಅವಕಾಶವುಂಟಾಗಿರುತ್ತದೆ

ಬಂಗಾಳಾ ಆಧಿಪತ್ಯಕ್ಕೂ ನಾಲ್ಕು ಮಂದಿ ಮೆಂಬರುಗಳಿಗೆ ಮೀರದಂಥಾ ಒಂದು ಎಗ್ಜಿಕ್ಯುಟಿವ್ ಕೌನ್ಸಿಲನ್ನು ನಿರ್ಮಾಣ ಮಾಡಬಹುದೆಂದು ಈ ಕಾನೂನು ಅಧಿಕಾರವನ್ನು ಕೊಡುತ್ತದೆ ಗವರ್ನರ್ ಜನರಲ್‌ರವರು ತಮ್ಮ ಕೌನ್ಸಿಲಿನಲ್ಲಿ ಆಲೋಚನೆ ಮಾಡಿ ಅದಕ್ಕೆ ಬೇಕಾಗುವ ಕ್ರಮಗಳನ್ನು ಗೊತ್ತುಮಾಡಬಹುದಾಗಿದೆ

ಹಿಂದುಸ್ಥಾನದ ಇತರ ಆಧಿಪತ್ಯಗಳಲ್ಲೂ ಅಂಥಾ ಕೌನ್ಸಿಲ್ಲುಗಳನ್ನು ನಿರ್ಮಾಣ ಮಾಡುವುದಕ್ಕೆ ಈ ಕಾನೂನು ಅವಕಾಶವನ್ನು ಕೊಟ್ಟಿದೆ ಆದರೆ ಹಾಗೆ ನಿರ್ಮಾಣಮಾಡಕೂಡದೆಂದು ಹೌಸ್ ಆಫ್ ಕಾಮನ್ಸ್ ಅಥವಾ ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆಯವರು ಚಕ್ರವರ್ತಿ ಸಾರ್ವಭೌಮರವರನ್ನು ಕೇಳಿಕೊಂಡ ಪಕ್ಷದಲ್ಲಿ ಕೌನ್ಸಿಲ್ಲು ಏರ್ಪಾಡಾಗುವುದಿಲ್ಲ ಹೀಗೆ ಚಿಂತಾಮಣಿ ವಿರೋಧಾಭಿಪ್ರಾಯ ಬಂದ ಮಾತ್ರಕ್ಕೇ ಕೌನ್ಸಿಲಿನ ಏರ್ಪಾಡನ್ನು ಬಿಟ್ಟುಬಿಡಬೇಕಾದದ್ದಿಲ್ಲವೆಂದೂ, ಮತ್ತೆ ಮತ್ತೆ ಪ್ರಯತ್ನ ಮಾಡಬಹುದೆಂದೂ ಈ ಕಾನೂನಿನಿಂದ ತಿಳಿದುಬರುತ್ತದೆ

ಈ ಕಾರ್ಯನಿರ್ವಾಹಕ (ಎಗ್ಜಿಕ್ಯುಟಿವ್) ಕೌನ್ಸಿಲ್ ಮೆಂಬರುಗಳನ್ನು ಗವರ್ನರ್ ಜನರಲ್‌ರವರೇ ಚಕ್ರವರ್ತಿ ಸಾರ್ವಭೌಮರವರ ಸ್ಯಾಂಕ್ಷನ್ ಪಡೆದು ನೇಮಕಮಾಡತಕ್ಕದ್ದೆಂದೂ, ಈ ಕೌನ್ಸಿಲಿನಲ್ಲಿ ಒಬ್ಬ ಮೆಂಬರು ವೈಸ್ ಪ್ರೆಸಿಡೆಂಟಾಗಿ ನೇಮಕಮಾಡಲ್ಪಟ್ಟು ಕೌನ್ಸಿಲಿನ ಸೀನಿಯರ್ ಮೆಂಬರಾಗಿ ಕೆಲಸ ನಡೆಸತಕ್ಕದ್ದೆಂದೂ ವಿಧಿಸಲ್ಪಟ್ಟಿದೆ

ಈ ಕಾನೂನಿನ ದೆಸೆಯಿಂದ ಹಿಂದುಸ್ಥಾನದ ರಾಜ್ಯಭಾರ ಕ್ರಮಗಳು ಬಹುಮಟ್ಟಿಗೆ ಬದಲಾವಣೆಯಾಗಲು ಅವಕಾಶವುಂಟಾಗಿರುತ್ತದೆ ಆದರೆ ಪ್ರಜೆಗಳಿಗೆ ಯಥಾರ್ಥವಾದ ಪ್ರಯೋಜನವಾಗಬೇಕಾದಲ್ಲಿ ಈ ಬದಲಾವಣೆಗಳು ಕ್ರಮವಾಗಿಯೂ ನಿದಾನವಾಗಿಯೂ ರೂಢಿಸಲ್ಪಡುವವು ಆಳ್ವಿಕೆಯ ಜವಾಬ್ದಾರಿಯನ್ನು ವಹಿಸುವುದಕ್ಕೆ ಸಹಜವಾದ ಯೋಗ್ಯತಾಸಿದ್ಧಿಯನ್ನು ಪಡೆದಿರುವಂಥಾ ದೊಡ್ಡ ಮನುಷ್ಯರನ್ನೇ ಚುನಾವಣೆ ಮಾಡುವಂತೆ ಪ್ರಜೆಗಳು ವಿವೇಕಸ್ಥರಾಗಬೇಕು, ಮತ್ತು ಮಂತ್ರಾಲೋಚನಾ ಸಭೆಗಳಿಗೆ ಚುನಾಯಿಸಲ್ಪಡುವ ಮೆಂಬರುಗಳು ಸ್ವಪ್ರತಿಷ್ಠೆ ಸ್ವಪ್ರಯೋಜನಾಪೇಕ್ಷೆಗಳಿಲ್ಲದೆ ಯಥಾರ್ಥವಾದ ದೇಶವತ್ಸಲರೂ ಪ್ರಜಾಹಿತಚಿಂತಕರೂ ಆಗಿರಬೇಕು

ಮೇಲ್ಕಂಡ ಹೊಸ ಕ್ರಮಗಳು ಸಿದ್ಧವಾಗಿ ರೂಢಿಗೆ ಬರುವುದಕ್ಕೂ, ಅದರಂತೆ ಕೌನ್ಸಿಲ್ಲುಗಳು ಏರ್ಪಾಡಾಗುವುದಕ್ಕೂ ಇನ್ನೂ ಕೆಲವುಕಾಲವಾದೀತು ಅದುವರೆಗೆ ಪ್ರಜೆಗಳು ಗವರ್ನ್‌ಮೆಂಟಿನಿಂದ ತಮಗೆ ವಹಿಸಲ್ಪಡುವ ಜವಾಬ್ದಾರಿಯನ್ನು ಮುಂದಟ್ಟುಮಾಡಿಕೊಂಡು, ಅದನ್ನು ನಿರ್ವಹಿಸುವುದಕ್ಕೆ ತಕ್ಕ ಯೋಗ್ಯತಾಸಿದ್ಧಿಯನ್ನು ಸಂಪಾದಿಸಿಕೊಳ್ಳುವ ಭಾಗದಲ್ಲಿ ಉತ್ಸಾಹಪೂರ್ವಕವಾದ ಪ್ರಯತ್ನಗಳನ್ನು ಮಾಡಿಯಾರೆಂದು ನಿರೀಕ್ಷಿಸುತ್ತೇವೆ

ಒಳದೇಶದ ವೃತ್ತಾಂತಗಳು

ಸಕಲೇಶಪುರದಲ್ಲಿ ಬಹಳ ಜಮೀನ್ದಾರರಾಗಿಯೂ ಉದಾರರಾಗಿಯೂ ಇದ್ದ ಮೊಬ್ಬೇನಹಳ್ಳಿ ಪಟೇಲ್ ಎಗೂರು ಮಲ್ಲೇಗೌಡರು ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ

ಲೇಟ್ ಮೆ|| ಶ್ರೀಕಂಠಯ್ಯನವರಿಗೆ ಸೇರಿದ ಸುಂಡೆಕೆರೆ ಎಂಬ ತೋಟವು ಸರ್ಕಾರದಿಂದ ಹರಾಜುಮಾಡಲ್ಪಟ್ಟದ್ದರಲ್ಲಿ ಅದು ೨೪,೦೦೦ ರೂಪಾಯಿಗೆ ವಿಕರಿ ಆಯಿತೆಂದು ತಿಳಿದುಬಂದಿದೆ

ರಾಜಪುಟಾನಾ ದೇಶೀಯ ಸಂಸ್ಥಾನಗಳಲ್ಲಿ ಒಂದಾದ ಅಲ್ವಾರ್ ಸಂಸ್ಥಾನದ ಮಹಾರಾಜರವರು ರಾಜಧಾನಿಗೆ ಈ ದಿನ ದಯಮಾಡಿ,

ಜಗನ್ಮೋಹನ ಬಂಗಲಿಯಲ್ಲಿ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುವರೆಂದು ಕೇಳುತ್ತೇವೆ

ಈ ಸಲ ನೊವೆಂಬರ್ ತಿಂಗಳಲ್ಲಿ ನಡೆಯುವ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಸರ್ಕಾರದವರು ಉಮೇದುವಾರರ ಪೈಕಿ ೨೫ ಮಂದಿ ವಿದ್ಯಾವಂತರನ್ನು ಚುನಾಯಿಸಿ ಇವರೆಲ್ಲಾ ವೈದ್ಯರ ಪರೀಕ್ಷೆಗೆ ಹಾಜರಾಗಬೇಕೆಂದು ಹುಕುಂ ಕೊಟ್ಟಿದಾರೆ

ಬೆಂಗಳೂರು ಮೆ|| ದೊಡ್ಡಣ್ಣನವರ ಪಾಠಶಾಲೆಯಲ್ಲಿ ಚಕ್ರವರ್ತಿಯವರ ಜನ್ಮೋತ್ಸವವನ್ನು ಬಹು ವಿಜೃಂಭಣೆಯಾಗಿ ನಡಿಸಿದರು ಮೆ|| ರಾಮಕೃಷ್ಣಯ್ಯನವರು ಆ ಪಾಠಶಾಲೆಯ ಬಡ ವಿದ್ಯಾರ್ಥಿಗಳಿಗೆ ಬಟ್ಟೆಗಳನ್ನು ಉಚಿತವಾಗಿ ಕೊಟ್ಟಿದರು.

ಕಳೆದ ಮೊಹರಂ ಹಬ್ಬದ ಕಡೇ ದಿನ ಸಂಗುಗೊಂಡನಲ್ಲಿ ಗಲಭೆ ಯನ್ನೆಬ್ಬಿಸಿದ ೧೭ ಮಂದಿ ಮಹಮದೀಯರನ್ನು ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡಿ, ಕಳೆದ ವಾರ ಮೂರು ಮಂದಿಯನ್ನು ಬಿಟ್ಟು ಬಿಟ್ಟರು, ಉಳಿದವರಿಗೆಲ್ಲಾ ಜುಲ್ಮಾನೆ ಶಿಕ್ಷೆಯನ್ನು ವಿಧಿಸಿದರು.

ಬೆಂಗಳೂರಿನಲ್ಲಿರುವ ಸರ್ಕಾರಿ ಫಾರಮಿನಲ್ಲಿ ಸಾಕಿ ಒಳ್ಳೇ ರಾಸುಗಳನ್ನು ಬೆಳೆಸುವುದಕ್ಕೋಸ್ಕರ ಆಸ್ಟ್ರೇಲಿಯಾ ದ್ವೀಪದಿಂದ ಇಪ್ಪತ್ತಾರು ಉತ್ತಮ ಜಾತಿಯ ಹಸುಗಳನ್ನು ಕೊಂಡು ಹಡಗಿನ ಮೇಲೆ ತರಿಸಿರುತ್ತಾರೆ ಇವು ಕಳೆದ ವಾರ ಮದರಾಸಿಗೆ ಒಂದು ಇಳಿದವು.

ಕಳೆದ ವಾರ ರಾಜಧಾನಿಯ ಮೂಲಕ ನೀಲಗಿರಿಗೆ ಹೋಗುತ್ತಿದ್ದ ಬರೋಡಾ ಮಹಾರಾಜರವರ ಮೋಟಾರ್ ಗಾಡಿಗೆ ಇಲ್ಲಿನ ದೊಡ್ಡ ಪೇಟೆಯಲ್ಲಿ ಒಬ್ಬ ಮುಸಲ್ಮಾನ ಹುಡುಗನು ಸಿಕ್ಕಿ ಗಾಯ ಪಟ್ಟನು. ಅದರ ಈಗ ಅವನಿಗೆ ವಾಸಿಯಾಗುತ್ತಿದೆ ಎಂದು ಕೇಳಿ ಸಂತೋಷಪಡುತ್ತೇವೆ

ಸೊರಬ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ|| ಜೆ ಮುರುಡಪ್ಪನವರಿಗೆ ಸರ್ಕಾರದವರು ಹದಿನೈದು ದಿನಗಳ ರಜಾ ಸ್ಯಾಂಕ್ಷನ್ ಮಾಡಿ, ಅವರ ಗೈರುಹಾಜರಿಯಲ್ಲಿ ಶಿಮೊಗ್ಗೆಯ ಡೆಪ್ಯುಟಿ ಅಮಲ್ದಾರ್ ಮೆ|| ಎ ರಾಜಾರಾಮಯ್ಯರು ಸೊರಬ ತಾಲ್ಲೂಕಿನ ಛಾರ್ಜನ್ನು ವಹಿಸಬೇಕೆಂದು ಹುಕುಂ ಕೊಟ್ಟಿದಾರೆ

ಒಬ್ಬ ವಾತ್ತಿದಾರರು ಬರೆಯುವುದು —ಸೊರಬ ತಾಲ್ಲೂಕು ಆನವಟ್ಟಿ ಹೋಬಳಿ ಹಂಚಿ ಗ್ರಾಮದಲ್ಲಿ ಕಳೆದ ತಿಂಗಳ ೨ನೇ ತಾ ಬುಧವಾರ ಸಿಡಿಲು ಬಿದ್ದು ಎರಡು ಜನರಿಗೂ ಒಂದು ಕುರಿಗೂ ಬಡಿಯಿತು, ಆ ಪೈಕಿ ಒಬ್ಬ ಮನುಷ್ಯನೂ ಕುರಿಯೂ ಮೃತಪಟ್ಟರು ಇನ್ನೊಬ್ಬನಿಗೆ ಇನ್ನೂ ವಾಸಿಯಾಗಲಿಲ್ಲ ಎಂಬುದೇ

ಚಕ್ರವರ್ತಿಯವರ ಜನ್ಮೋತ್ಸವದ ದಿನ ಈ ರಾಷ್ಟ್ರದ ಸರ್ಕಾರ ಮತ್ತು ಪ್ರಜೆಗಳ ಉಪಕಾರಿಗಳಾದ ದೊಡ್ಡ ಮನುಷ್ಯರಿಗೆ ಬಿರುದುಗಳು ಕೊಡಲ್ಪಟ್ಟವು ಈ ಪೈಕಿ ಬೆಂಗಳೂರು ದಿವಾನರಾದ ರಾವ್ ಬಹದೂರ್ ಮ|| ವ್ಯಗಂಡಪ್ಪನ ಮೊದಲಿಯಾರ್ರಿಗೆ ಕೈಸರ್ ಹಿಂದ್ ಎಂಬ ಮೆಡಲೂ, ಮ|| ಪೆರುಮಾಳ್ ಅಣ್ಣಾಸ್ವಾಮಿ ಮೊದಲಿಯಾರ್ರಿಗ ಮೊದಲು ಕೊಟ್ಟಿದ್ದ ಮೆಡಲಿಗೆ ಒಂದು ಪಟ್ಟಿಯೂ ದೊರಕಿರುತ್ತವೆ

ಸತ್ಯಮತವು ವಿದ್ವಾಂಸರಲ್ಲಿಯೂ ವ್ಯಾಪಿಸುತ್ತದೆ

ಉತ್ತರದೇಶದಲ್ಲಿ ಪ್ರಕಟಿಸಲ್ಪಡುವ ಒಂದು ಇಂಗ್ಲಿಷ್ ಪತ್ರಿಕೆಗೆ ಮೆ| ಎ ಎ ರಾಯ್ ಎಂಬುವರು "ಅಜ್ಞಾನಿಗಳೂ ಕೀಳುಜಾತಿಯವರೂ ಕ್ರೈಸ್ತಮತವನ್ನು ಸೇರುವರೇ ಹೊರತು ವಿದ್ಯಾವಂತರೂ ಕುಲೀನರೂ ಐಶ್ವರ್ಯವಂತರೂ ಎಂದಿಗೂ ಸ್ವಮತ ಪರಿತ್ಯಾಗಮಾಡಿ ಕ್ರೈಸ್ತಮತಕ್ಕೆ ಸೇರುವದಿಲ್ಲ" ವೆಂದು ಹೇಳಿ ಆಕ್ಷೇಪಣೆ ಮಾಡಿರುವರು ಅಜ್ಞಾನಿಗಳೂ ಕೀಳುಜಾತಿಯವರೂ ದಿಕ್ಕಿಲ್ಲದವರೂ ಆಗಿರುವವರನ್ನು ನೋಡಿ ಹಿಂದೂ ಮತವು ಗದಗದಿಸಿ ಸಕ್ಕ ವ್ಯಾಕ್ಯಾನ ಮಾಡಿ ಜರಿಯುವದೇ ಹೊರತು ಅವರ ಅಜ್ಞಾನವನ್ನು ಪರಿಹರಿಸಿ ವಿದ್ಯೆದ ಪ್ರಕಾಶವನ್ನು ಕೊಟ್ಟು ಅವರಿಗೆ ಕ್ಷೇಮ ಬರುವಂತೆ ಮಾಡುವದಿಲ್ಲ ಬಾಲ್ಯತನದಲ್ಲಿಯೂ ಯೌವನದಲ್ಲಿಯೂ ವೃದ್ಧಾಪ್ಯದಲ್ಲಿಯೂ ಕ್ಲೇಶಗಳಲ್ಲಿಯೂ ಹೀನವಾದ ಪಾಪಗಳಲ್ಲಿಯೂ ಬಿದ್ದು ತೊಳಲುತ್ತಿರುವವರನ್ನು ನಾಗರಿಕತೆ, ಗುಣಭೂಷಿತತೆ, ವಿದ್ಯೆಗಳಲ್ಲಿಯೂ ತಿದ್ದಿ ದೇಶಕ್ಕೆ ಕಂಟಕವಾದ ಕಳ್ಳತನ, ದರೋಡೆ, ಸುಲಿಗೆ ಮುಂತಾದ ದುಷ್ಕೃತ್ಯಗಳನ್ನು ಬಿಡಿಸಿ, ಸಮಾಧಾನದ ವೃತ್ತಿಯಿಂದ ಜೀವನ ಧರ್ಮರಾಗಿ ಬದುಕುವಂತೆ ಮಾಡುವದಕ್ಕೆ ಹಿಂದೂ ಮತವು ಯತ್ನಿಸಿದರೆ ನಾವು ಸಂತೋಷಪಡುವೆವು ಆದರೆ ಅಂಥಾ ಪರೋಪಕಾರದ ಕೆಲಸವನ್ನು ಹಿಂದೂ ಮತವು ಮಾಡಿ ಭ್ರಾತೃ ವಾತ್ಸಲ್ಯವನ್ನು ತೋರಿಸದೆ ಇರುವದರಿಂದ ಭ್ರಾತೃವಾತ್ಸಲ್ಯ, ವಿದ್ಯೆ, ನಾಗರಿಕತೆ, ಸ್ವರ್ಗ, ಪರಲೋಕ ಪದಗಳನ್ನು ನೀಡುವದೆ ತೋರಿಸುವ ಕ್ರೈಸ್ತಮತಕ್ಕೆ ಅಜ್ಞಾನಿಗಳೂ ಕೀಳುಜಾತಿಯವರೂ ಸೇರುವದು ಸಹಜವಾಗಿದೆ ಕ್ರೈಸ್ತಮತವು ಇಂಥ ಗತಿಗೆಟ್ಟವರನ್ನು ತಿರಸ್ಕರಿಸದೆ ಸೇರಿಸಿಕೊಂಡು ಅವರನ್ನು ಉತ್ತಮ ಸ್ಥಿತಿಗೆ ತರುತ್ತಿರುವದನ್ನು ಯಾರು ಕಾಣರು

ಆದರೆ ಕ್ರಿಸ್ತನ ಮತಕ್ಕೆ ವಿದ್ಯಾವಂತರೂ ಕುಲೀನರೂ ಸೇರುವದಿಲ್ಲವೇ? ...ದು ಕೇಳಿದರೆ, ಸತ್ಯವನ್ನು ಪೂರ್ಣಾಪೇಕ್ಷೆಯಿಂದ ಹುಡುಕುವವರೆಲ್ಲರೂ ...ಗೆ ಕ್ರೈಸ್ತ ಮತದಲ್ಲಿಯೇ ತೃಪ್ತಿಯನ್ನು ಹೊಂದುವರು ಇದಕ್ಕಾಗಿ ಅವರು ...ಪ್ರೀತಿಯುಳ್ಳ ಬಂಧುಮಿತ್ರರನ್ನೂ ಐಶ್ವರ್ಯ, ಪಿತ್ರಾರ್ಜಿತದ ಹಕ್ಕು, ...ಕಾರಗಳನ್ನೂ ಕೂಡ ಹೋಗಲಾಡಿಸಿಕೊಂಡರೂ ತಮಗೆ ಸತ್ಯವೆಂದು ತೋರಿ...ನ್ನು ತ್ಯಜಿಸಲಿಲ್ಲ ಕ್ರಿಸ್ತನ ಬೋಧನೆಯೂ ಸಾಪರಹಿತವಾದ ಆತನ ನಡತೆಯೂ ...ವಂತರೆಲು ರನು ಅತನ ಕಡೆಗೆ ಸ್ಪೇರಿಸುತ್ತಿರುವವು ಮನುಷ್ಯನು ದೇಹಕ್ಕೆ ಬೇಕಾದ ಆಹಾರ, ಪಾನ, ಐಶ್ವರ್ಯ, ಅಧಿಕಾರಗಳನ್ನು ಹೊಂದಿದರೂ ಅವನ ಆತ್ಮವು ಇವುಗಳಲ್ಲಿ ತೃಪ್ತಿಯನ್ನು ಹೊಂದದು. ಆತ್ಮಕ್ಕೆ ನಿತ್ಯಜೀವವನ್ನು ಕೊಡುವಂಥಾ ಆಹಾರವೂ ಪಾನವೂ ಬೇಕು. ಇವುಗಳು ಕ್ರಿಸ್ತನಿಂದ ಎಲ್ಲರಿಗೂ ದೊರಕುತ್ತವೆ ಆತನು—"ನಾನೇ ನಿತ್ಯಜೀವವನ್ನು ಕೊಡುವ ಆಹಾರವೂ ಪಾನವೂ ಆಗಿದ್ದೇನೆ ನಾನೇ ಪರಲೋಕದ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ" ಎಂದು ಹೇಳಿದ್ದಾನೆ ಈ ಪಾರಮಾರ್ಥಿಕ ತೃಪ್ತಿಯನ್ನು ಬಯಸುವವರೆಲ್ಲರೂ ಕ್ರಿಸ್ತನ ಕಡೆಗೆ ಬರುತ್ತಿರುವರು

ಬಿ ಎ, ಬಿ ಎಲ್ ಪರೀಕ್ಷೆಗಳಲ್ಲಿಯೂ ಎಂ. ಎ ಪರೀಕ್ಷೆಯಲ್ಲಿಯೂ ಉತ್ತೀರ್ಣರಾಗಿ ಹೈಕೋರ್ಟು ವಕೀಲರಾಗಿಯೂ ಜಡ್ಜಿಗಳಾಗಿಯೂ ಐಶ್ವರ್ಯವಂತರಾಗಿಯೂ ಇದ್ದ ವರದೇಶರು ಕ್ರಿಸ್ತನ ಶಿಷ್ಯರಾಗಿ ಆತ್ಮೀಯ ತೃಪ್ತಿಯನ್ನು ಹೊಂದಿ ಅನಂತರ ತಾವೇ ಪರೋಪಕಾರವನ್ನು ಮಾಡುವದರಲ್ಲಿ ತಮ್ಮ ಕಾಲ, ದ್ರವ್ಯ, ವಿದ್ಯೆಗಳನ್ನು ವ್ಯಯಮಾಡುತ್ತಿರುವ ಅನೇಕರನ್ನು ನಾವು ಬಲ್ಲೆವು. ಕ್ರಿಸ್ತನ ಶಿಷ್ಯರಾದ್ದರಿಂದ ಅವರು ತಮ್ಮ ಕ್ಲೇಶಗಳು, ಆಸ್ತಿ, ಪದವಿಗಳನ್ನು ಕಳಕೊಂಡರೂ, ಕ್ರಿಸ್ತನು ಕೊಡುವ ಪರಮ ಭಾಗ್ಯದಲ್ಲಿ ಅವರು ತೃಪ್ತರಾಗಿ ಅವುಗಳನ್ನು ತ್ಯಜಿಸಿದರು ಅವರ ಹೆಸರುಗಳನ್ನು ಸೂಚಿಸುವದಕ್ಕೆ ಇಲ್ಲಿ ಸ್ಥಳವಿಲ್ಲ ಆದರೆ ಕಳೆದ ವರುಷ ಕ್ರಿಸ್ತನ ಶಿಷ್ಯರಾದ ಒಬ್ಬರನ್ನು ಕುರಿತು ಮಾತ್ರ ಇಲ್ಲಿ ಸಂಕ್ಷೇಪವಾಗಿ ವಿವರಿಸುತ್ತೇವೆ

ಕಳೆದ ವರುಷದ ಮೇ ತಿಂಗಳಲ್ಲಿ ಮೆ|| ಆರ್ ಪದ್ಮನಾಭಾಚಾರ್, ಬಿ ಎ, ಬಿ ಎಲ್ ಯವರು ದೀಕ್ಷಾಸ್ನಾನವನ್ನು ಸ್ವೀಕರಿಸಿ ಕ್ರಿಸ್ತನ ಶಿಷ್ಯರಾದರು ಇವರು ದೊಡ್ಡ ಮನೆತನಕ್ಕೆ ಸೇರಿದವರು ಬ್ರಾಹ್ಮಣಜಾತಿಯವರು, ಇವರ ಪಿತಾಮಹರು ತಿರುವಾಂಕೂರು ಸೀಮೆಯ ಮುಖ್ಯ ಮಂತ್ರಿಗಳಾಗಿದ್ದರು, ಇವರ ತಂದೆಗಳು ಮದರಾಸಿನ ಹೈಕೋರ್ಟಿನಲ್ಲಿ ಖ್ಯಾತಿಯನ್ನು ಪಡೆದ ವಕೀಲರಾಗಿದ್ದರು ಮದರಾಸಿನ ಹೈಕೋರ್ಟ್ ಜಡ್ಜರಾಗಿ ಕೀರ್ತಿಶಾಲಿಯಾದ ಸರ್ ವಿ ಭಾಷ್ಯಂ ಅಯ್ಯಂಗಾರ್ ಯವರು ಇವರಿಗೆ ಮಾವಂದಿರಾಗಬೇಕು ಮೆ|| ಪದ್ಮನಾಭಾಚಾರ್ ಯವರು ಕ್ರೈಸ್ತರಾದ್ದರಿಂದ ೫೦,೦೦೦ ರೂಪಾಯಿಗಳ ಆಸ್ತಿಯನ್ನೂ ಉತ್ತಮಪದವಿಯನ್ನೂ ಕಳೆದುಕೊಂಡರು ಈ ಸ್ಥಿತಿಯು ಲೋಕದಲ್ಲಿ ಅವರಿಗೆ ಪುನಹ ಲಭಿಸುವದೆಂಬ ನಿರೀಕ್ಷೆಯೇ ಇಲ್ಲ ಇಂಗ್ಲಿಷ್ ಭಾಷಾಭ್ಯಾಸಕ್ಕಾಗಿ ಕಾವ್ಯಗಳನ್ನೂ ಇತರ ಗ್ರಂಥಗಳನ್ನೂ ಓದುವಾಗ ಬೈಬಲೆಂಬ ಸತ್ಯವೇದವನ್ನು ಸಹ ಓದಬೇಕಾಗಿ ಬಂತು ಇದರಿಂದ ಆ ಗ್ರಂಥದ ವಿಷಯದಲ್ಲಿ ಅವರಿಗೆ ಕಳ್ಕಮಟ್ಟಿಗೆ ಪರಿಚಯವುಂಟಾಯಿತು ಇದಲ್ಲದೆ ಇವರ ಕಾಲಂದಿರಾದ ಮಂತ್ರಿವರ್ಯರು ಸತ್ಯವೇದವನ್ನು ದಿವ್ಯ ಗ್ರಂಥವೆಂದು ಭಾವಿಸಿ, ಓದಿ ಧ್ಯಾನಿಸುತ್ತಿದ್ದದ್ದು ಇವರ ಮನಸಿಗೆ ಬಂದಿತು ಅನಂತರ ಇವರೂ ಅದನ್ನು ಓದಿ ಪರೀಕ್ಷಿಸಿದ ಮೇಲೆ ಅದರ ಸರ್ವೋತ್ಕೃಷ್ಟವಾದ ಬೋಧನಾಮೃತವನ್ನು ಸವಿದು ಸ್ವೀಕರಿಸಿದರು ಇದರಿಂದ ಅವರಿಗೆ ಬಹಳ ಹಿಂಸೆಗಳು ಬಂದರೂ ಸ್ಥಿರವಾಗಿ ನಿಂತರು ಕ್ರಿಸ್ತನು ಇವರಿಗೆ ಕೊಟ್ಟಿರುವ ಆತ್ಮಸಮಾಧಾನ ಪಾಪಪರಿಹಾರ ಪವಿತ್ರತೆಗಳು ಅವರ ಆಸ್ತಿ ಅಧಿಕಾರ ಕೀರ್ತಿಗಳಿಗಿಂತ ಉತ್ತಮೋತ್ತಮ ಭಾಗ್ಯಗಳಾಗಿರುವದರಿಂದ ಅವರು ಇಹಲೋಕದ ಸಕಲ ಭಾಗ್ಯವನ್ನೂ ತ್ಯಜಿಸುವದು ಸಾಧ್ಯವಾಯಿತು

ವಾತ್ತಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ವಾತ್ತಿಗಳಿಗೆ ನಾವು ಸಿಗಾ ಕೊಡಲಾರೆವು ಆದಕಾರಣ ವಾತ್ತಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಒಕ್ಕಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು

ವಾತ್ತಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್‍ಪಾಂಡೆನ್ಸ್

ಮೊಖ್ತ್ಯಾರರುಗಳ ವಿಚಾರವು

ಅಯ್ಯಾ,

ನಮ್ಮ ಮೈಸೂರು ಸೀಮೆ ಚೀಫ್ ಕೋರ್ಟಿನಿಂದ ೧೯೦೯ನೇ ಇಸವಿ ಜನವರಿ ೨೫ ನೇ ತಾರೀಖಿನ ೧೭೭ ನೇ ನಂಬರ್ ಸರ್ಕ್ಯುಲರನ್ನು ನೋಡಲಾಗಿ ಬಡಜನರೆಲ್ಲ ಮುದಿತರಾದರು ಯಾಕೆಂದರೆ ಇದುವರೆಗೂ ತಾಲ್ಲೂಕುಗಳಲ್ಲಿ ಕೇಸುಬಂದರೆ ೫ ರೂಪಾಯಿ ಫೀಜು ಕೊಟ್ಟರೆ ತಾಲ್ಲೂಕುಗಳಲ್ಲಿರತಕ್ಕ ೨೫ ೩೦ ವರುಷದ ಲಾಗಾಯಿತು ಅಮಲ್ದಾರರ ಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡುತ್ತಿರುವ ಮೊಖ್ತ್ಯಾರರು ಕೇಸುಗಳನ್ನು ಶ್ರದ್ಧೆಯಿಂದ ನಡಿಸುತ್ತಾ ಕಕ್ಷಿಗಾರರಿಗೆ ಬಹಳ ಅನುಕೂಲಮಾಡುತ್ತಾ ಕೆಲವು ಮೊಖ್ತ್ಯಾರರುಗಳಿದ್ದರು ಮೇಲ್ಕಂಡ ಸರ್ಕ್ಯುಲರನ್ನು ಕೆಲವು ಅಮಲ್ದಾರರು ನೋಡಿ ಡಿಟೋ ಮೊಖ್ತ್ಯಾರರುಗಳನ್ನು ಬರಕೂಡದೆಂದು ಅಡ್ಡಿಪಡಿಸುತ್ತಾರೆ ಕೆಲವು ಅಮಲ್ದಾರರುಗಳು ಸರ್ಕ್ಯುಲರ್ ಅನುಸರಿಸಿ ಫಿರ್ಯಾದಿ ಕಡೆ ಆಪಾದಿ ಕಡೆ ಅವಕಾಶಕೊಡುತ್ತಾ ಬರುತ್ತಾರೆಂದು ಕೇಳುತ್ತೇವೆ ಮೈಸೂರು ಡಿಸ್ಟ್ರಿಕ್ಟ್ ಟಿ ನರಸೀಪುರದ ತಾಲ್ಲೂಕು ಅಮಲ್ದಾರರು ಒಬ್ಬ ವರದಾಚಾರ್ಯರೆಂಬವರಿಗೆ ಅವಕಾಶ ಕೊಟ್ಟು ಸರ್ಕ್ಯುಲರ್ ಸಂದರ್ಭವನ್ನು ನಮೂದಿಸಿ ಚೀಫ್ ಕೋರ್ಟಿಗೆ ರಿಪೋರ್ಟು ಬರೆದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರ ಮೂಲಕ ರವಾನಿಸಿದ್ದಕ್ಕೆ ವರದಾಚಾರ್ಯರ ವಿಷಯವಾಗಿ ಯಾವ ಹುಕುಮು ಕೊಡಲೂ ಆಗುವದಿಲ್ಲವೆಂದು ಅಪ್ಪಣೆ ಮಾಡಿರವದಾಗಿ ಕೇಳುತ್ತೇವೆ ನಮ್ಮ ಮೈಸೂರು ಸೀಮೆಯಲ್ಲಿ ಅನೇಕ ತಾಲ್ಲೂಕುಗಳಲ್ಲಿ ಅಮಲ್ದಾರರಿಗೆ ೩ನೇ ಕ್ಲಾಸ್ ಅಧಿಕಾರ ಹೊರತು ೨ನೇ ಕ್ಲಾಸ್ ಅಧಿಕಾರ ಇರುವದು ಅಪರೂಪ ಮುನ್ಸೀಫ್ ಕೋರ್ಟುಗಳು ಇರುವ ಸ್ಥಳ ಹೊರತಾಯಿ ಬಾಕಿ ತಾಲ್ಲೂಕುಗಳಲ್ಲಿ ಪ್ಲೀಡರ್ ವಕೀಲರುಗಳು ಇರುವದೇ ಇಲ್ಲ ಮುನ್ಸೀಫ್ ಕೋರ್ಟು ಇರುವ ಸ್ಥಳಕ್ಕೂ ಮತ್ತೊಂದು ತಾಲ್ಲೂಕಿಗೂ ೧೫—೨೦ ಮೈಲು ಫಾಸಲೆ ಇದೆ ಸಮಯ ಬಿದ್ದು ಕಕ್ಷಿಗಾರರು ಹೋಗಿ ಕರೆದರೆ ಕಮ್ಮಿಯಾಗಿ ಒಂದು ದಿನಕ್ಕೆ ೧೦ ರೂಪಾಯಿ ಫೀಜು, ಗಾಡಿ ಬಾಡಿಗೆ ಕೊಟ್ಟರೆ ಬರುತ್ತೇವೆ, ಇಲ್ಲವಾದರೆ ಬರುವದಿಲ್ಲವೆಂದು ಹೇಳುತ್ತಾರೆ. ಬೆಂಗಳೂರು ಡಿಸ್ಟ್ರಿಕ್ಟ್ ಹೊಸಕೋಟೆ ತಾಲ್ಲೂಕಿನ ಕೇಸುಗಳಿಗೆಲ್ಲಾ ಬೆಂಗಳೂರಿಗೆ ಹೋಗಿ ಲಾಯರನ್ನು ಕರಬೇಕಾದರೆ ಕಮ್ಮಿ ಫೀಜು, ಬಾಡಿಗೆ ಸಹಿತ ೩೦ ರೂಪಾಯಿ ಕೊಡಬೇಕೆಂದು ಕೇಳುತ್ತಾರೆ ೨—೩ ಹಿಯರಿಂಗು ಆದರೆ ಕೈಕರಿಗೆ ೫೦ ರೂ ಕೊಂಡರೆಯಾಗುತ್ತೆ, ಆದಕಾರಣ ಮೊಖ್ತ್ಯಾರರುಗಳನ್ನು ಹಿಂದಿನಂತೆ ಕೇಸ್ ನೋಡುವ ಹಾಗೆ ಮಾಡಿದರೆ ತುಂಬಾ ಉಪಕಾರವಾಗಿ ಇರುತ್ತದೆಂದು ಕೈಕರು ಹೇಳಿಕೊಳ್ಳುತ್ತಾರೆ.

ಒಬ್ಬ ಕೈಕರ ಹಿತಚಿಂತಕ.

ಶಿರಾಳಕೊಪ್ಪದ ವಿಚಾರಗಳು

ಅಯ್ಯಾ,

ಶಿಕಾರಿಪುರ ತಾಲ್ಲೂಕು ಪೈಕಿ ಶಿರಾಳಕೊಪ್ಪ ಎಂಬ ಗ್ರಾಮವು ಕೆಲವು ವರ್ಷಗಳು ಮುನಿಸಿಪಾಲಿಟಿಯಾಗಿದ್ದು ನಂತರ ಶ್ರೀಗಳಿಂದ ಹಿಂದಕ್ಕೆ ಬಂದು ಯೂನಿಯನ್ ಆಗಿ ಸುಮಾರು ಆರು ವರ್ಷಗಳಾಯ್ತು ಬಂದು ಈ ಗ್ರಾಮವು ಯೂನಿಯನ್ ಆದಾಗ್ಯೂ ಕೂಡ ಮುನಿಸಿಪಾಲಿಟಿಯಾಗಿದ್ದಾಗ ವಸೂಲಾಗುತ್ತಿದ್ದ ಮನೆ ಕಂದಾಯ, ಮನೆ ಕಂದಾಯ, ವ್ಯಾಪಾರ ಮಾಡತಕ್ಕ ಮನೆಗೆ ಕಂದಾಯ, ಗಾಡಿ ಕಂದಾಯ, ಈ ರೀತಿ ನಾಲ್ಕು ತರವಾಗಿ ಕಂದಾಯ ವನ್ನು ಸಾಲಿಯಾನ ವಸೂಲಾಗುತ್ತಾ ಬಂದಿದಾರೆ ಕಂದಾಯ ಕೊಡದೆ ಇಂಥ ಜನಕ್ಕೆ ಬಡ್ಡಿ ಸಹಿತ ವಸೂಲಾಗುತ್ತಾ ಬಂದಿದಾರೆ

ಸುಮಾರು ಎರಡು ಮೂರು ತಿಂಗಳ ಕೆಳಗೆ ಈ ಯೂನಿಯನ್ ವಿಚಾರಿಗೆ ತಾಲ್ಲೂಕ್ ಅಮಲ್ದಾರರು ಬಂದ ಕಾಲದಲ್ಲಿ ಈ ಗ್ರಾಮದ ಎಲ್ಲಾ ವರ್ತಕರೂ ಹೋಮೆಗಪ್ಪರನ್ನು ಮೇಲ್ಕಂಡ ತರದ ಕಂದಾಯವನ್ನು ವಸೂಲಾಗುವದು ಯೂನಿಯನ್ ರೂಲ್ಸಿನಲ್ಲಿ ಅದೆಯೋ ಇಲ್ಲವೋ ತಿಳಿಸಬೇಕೆಂದು ಅರ್ಜಿಕೊಟ್ಟು ಕೇಳಿಕೊಂಡರು ಅದಕ್ಕೆ ಹೇಮೆಗಪ್ಪರವರು—ಬಹು ದಿವಸದ ಲಾಗಾಯಿತು ಮಾಮೂಲು ಪ್ರಕಾರ ವಸೂಲಾಗುತ್ತಾ ಬಂದಿದೆ ನಿಮಗೆ ರೂಲ್ಸು ತಿಳಿದು ಕೊಳ್ಳುವ ಅಪೇಕ್ಷೆ ಇದ್ದರೆ ರೂಲ್ಸು ಬುಕ್ಕು ತರಿಸಿ ನೋಡಿ ಎಂಬದಾಗಿ ಹೇಳಿದರು ಇದೇ ರೀತಿ ಅರ್ಜಿಗೆ ಇಂದಾಯದ ಆಗದೇಕಾಗಿ ಕೇಳಿಕೊಂಡವು ಹೋಮೆಗಪ್ಪರವರು—ಈಗಲೇ ಇಂದಾರಪು ಕೊಡುವದಕ್ಕೆ ಆಗುವದಿಲ್ಲ ತಾಲ್ಲೂಕ್ ಜಮಾಬಂದಿ ಕಾಲದಲ್ಲಿ ತಿಳಿಸುತ್ತೇವೆ ಎಂಬದಾಗಿ ಹೇಳಿದರು ಕಂದಾಯದ ಹಣಕ್ಕೆ ಗೌಡ ಶ್ಯಾನುಭೋಗರು ತಗಾದೆ ಮಾಡುತ್ತಾರೆ ಎಂದು ಕೇಳಿಕೊಂಡದ್ದಕ್ಕೆ, ಸದ್ಯ ಮಾಮೂಲು ಮೇರಿಗೆ ಹಣಕೊಟ್ಟು ರಸೀದಿ ಪಡೆಯಿರಿ ನಾವು ವಸೂಲ್ಮಾಡಿರುವದು ತಪ್ಪಾಗಿದ್ದರೆ ಸರ್ಕಾರದವರ ಮೇಲೆ ದಾವಾ ಹಾಕಿ ಆ ಲಾಗಾಯಿತು ಈ ವರಿವಿಗೆ ಬರತಕ್ಕ ಹಣವನ್ನು ವಸೂಲ್ಮಾಡಿಕೊಳ್ಳಿ ಎಂಬದಾಗಿ ತಿಳಿಸಿದರೇ ಹೊರತು ರೂಲ್ಸು ಸಂಗತಿ ಈ ವರೆವಿಗೂ ತಿಳಿಸಲಿಲ್ಲ

ಈ ಗ್ರಾಮವು ಯೂನಿಯನ್ ಆದ ಲಾಗಾಯಿತು ಈ ಯೂನಿಯನ್ನಿಗೆ ಲಿಂಗಾಯತ ವರ್ತಕರ ಪೈಕಿ ಒಬ್ಬ ಮೆಂಬರೂ ಇರುವದಿಲ್ಲ ಈ ಗ್ರಾಮದಲ್ಲಿ ಲಿಂಗಾಯತ ವರ್ತಕರು ನಾಲ್ಕರಲ್ಲಿ ಮೂರು ಪಾಲು ಹೆಚ್ಚು ಇದ್ದು, ಬಾಕಿಯವರಲ್ಲಿ ಒಂದು ಪಾಲು ಇರುತ್ತಾರೆ ಆದ್ದರಿಂದ ಲಿಂಗಾಯತರ ಪೈಕಿ ಪ್ರಜೆಗಳ ಸಮ್ಮತಿ ಪ್ರಕಾರ ನಾಲ್ಕು ಜನ ಮೆಂಬರನ್ನು ಚುನಾಯಿಸಿಕೊಳ್ಳಬೇಕೆಂದು ಐದು ವರ್ಷಗಳಿಂದಲೂ ಅಮಲ್ದಾರರಿಗೂ, ಸಬ್ ಡಿವಿಜನ್ ಸಾಹೇಬರವರಿಗೂ, ಡೆಪ್ಯುಟಿ ಕಮೀಷನರ್ ಸಾಹೇಬರವರಿಗೂ ಅನೇಕ ಅರ್ಜಿಗಳನ್ನು ಬರೆದುಕೊಂಡಾಗ್ಯೂ ಈ ವರಿವಿಗೂ ಇತ್ಯರ್ಥಪಡಿಸಲಿಲ್ಲ

೧೯೦೭ನೇ ಸಾಲಿನಲ್ಲಿ ತಾಲ್ಲೂಕ್ ಬೋರ್ಡು ಮೆಂಬರುಗಳ ಚುನಾವಣೆ ನಡೆಸುವದಕ್ಕೋಸ್ಕರ ಲಿಂಗಾಯತರ ಪೈಕಿ ಮೃತಪಟ್ಟ ಕುಬಸದ ಸಿದ್ಧರಾಮಪ್ಪ ಎಂಬವರಿಗೂ, ಒಬ್ಬ ತಿಳುವಳಿಕೆ ಇದ್ದವರಿಗೂ ಎರಡು ಜನ ಏನೂ ತಿಳುವಳಿಕೆ ಇಲ್ಲದವರಿಗೂ, ಈ ರೀತಿ ನಾಲ್ಕು ಜನರಿಗೆ ನೋಟೀಸು ಮೂಲಕ ತಿಳಿಸಿದ್ದರು ತಿಳುವಳಿಕೆ ಇದ್ದ ದೊಡ್ಡ ದೊಡ್ಡ ವರ್ತಕರಿಗೆ ಮಾತ್ರ ತಿಳಿಸಲಿಲ್ಲ ಆದರೂ ಕೂಡ ಈ ಸಂಗತಿಯು ೫—೬ ಜನಗಳಿಗೆ ಮಾತ್ರ ಗೊತ್ತಾಗಿ ತಾವುಗಳೂ ಓಟು ಹಾಕುವ ಸ್ಥಳಕ್ಕೆ ಹೋದರು ಆಗ ರಾತ್ರಿ ೮ ೯ ಘಂಟೆ ಯಾಗಿತ್ತು ಅಲ್ಲಿ ಬ್ರಾಹ್ಮಣರು, ವೈಶ್ಯರು, ಇತರೇ ಗ್ರಾಮಗಳ ಕೆಲವು ಜನರು ಸೇರಿದ್ದರು ಆ ಕಾಲದಲ್ಲಿ ಓಟು ಹಾಕಲ್ಪಟ್ಟಿತು ಎರಡು ಜನಗಳಿಗೆ ಎಂದರೆ ಬ್ರಾಹ್ಮಣರ ಪೈಕಿ ಒಬ್ಬರಿಗೂ, ಲಿಂಗಾಯತರ ಪೈಕಿ ಒಬ್ಬರಿಗೂ, ಈ ರೀತಿ ಓಟುಗಳು ಬಂದವು ಓಟುಗಳು ಬಂದ ಬ್ರಾಹ್ಮಣರ ಪೈಕಿ ಬಿ ಧಾರಿ ಸ್ವಾಮಿರಾಯರೆಂಬುವವರನ್ನು ನೇಮಿಸಿಕೊಂಡು, ಲಿಂಗಾಯತರ ಪೈಕಿ ಓಟುಗಳು ಬಂದ ಸುರಹೊನ್ನೆ ಹಾಲಪ್ಪ ಎಂಬುವವರನ್ನು ಬಿಟ್ಟು, ಒಂದೂ ಓಟು ಬಾರದ ಇದ್ದ ವೈಶ್ಯರ ಪೈಕಿ ಆಗಡಿ ಭದ್ರಪ್ಪ ಎಂಬುವವರನ್ನೂ, ಮುಸಲ್ಮಾನರ ಪೈಕಿ ಸೈಯದ್ ಖಾದರ್ ಸಾಬರನ್ನೂ ನೇಮಿಸಿಕೊಂಡು ಇದಾರೆ ಸದರಿ ಹಾಲಪ್ಪನವರು ಒಂದು ವರ್ಷಕ್ಕೆ ಲಕ್ಷ ರೂಪಾಯಿಗೆ ಮೇಲ್ಪಟ್ಟು ವ್ಯಾಪಾರ ಮಾಡುತ್ತಾರೆ ಇದಲ್ಲದೆ ಸುಮಾರು ಹದಿನೈದು ರೂಪಾಯಿ ವರೆಗೆ ಮೊಹತರ್ಫಾ ಕೊಡತಕ್ಕವರಾಗಿದಾರೆ ಇಂಥವರನ್ನು ಓಟುಗಳು ಬಂದೂ ಕೂಡ ಬಿಟ್ಟಿದಾರೆ ಏನು ಕಾರಣವೋ ಗೊತ್ತಾಗುವದಿಲ್ಲ

ಈ ಗ್ರಾಮದಲ್ಲಿ ಲಿಂಗಾಯತರ ವರ್ತಕರ ಮನೆಗಳು ೧೫೦ಕ್ಕೆ ಮೇಲ್ಪಟ್ಟು ಇವೆ ವೈಶ್ಯರ ಮನೆಗಳು ೧೦ ೧೫ ಇವೆ ಬ್ರಾಹ್ಮಣರ ಮನೆಗಳು ೫೬ ಇವೆ ಲಿಂಗಾಯತ ವರ್ತಕರು ೫ ರೂಪಾಯಿಗೆ ಮೇಲ್ಪಟ್ಟು ೩೦ ರೂಪಾಯಿ ವರೆಗೆ ಮೊಹತರ್ಫಾ, ಐವತ್ತು ರೂಪಾಯಿಗೆ ಮೇಲ್ಪಟ್ಟು ಮುನ್ನೂರು ರೂಪಾಯಿ ವರೆಗೆ ಜಮಾನು ಕಂದಾಯ ಸಹಾ ಕೊಡತಕ್ಕವರಾಗಿದಾರೆ ಹೀಗಿದ್ದೂ ಕೂಡ ಲಿಂಗಾಯತ ವರ್ತಕರ ಪೈಕಿ ಒಬ್ಬ ಮೆಂಬರಾದರೂ ಇರುವದಿಲ್ಲ

ಈ ಗ್ರಾಮಕ್ಕೆ ಬ್ರಾಹ್ಮಣರಲ್ಲಿ ೩ ಜನರೂ, ವೈಶ್ಯರಲ್ಲಿ ಒಬ್ಬರೂ ಮುನಿಸಿಪಾಲಿಟಿ ಇದ್ದ ಲಾಗಾಯಿತು ಈ ವರಿವಿಗೂ ಇವರೇ ಮೆಂಬರಾಗಿ ಇರುತ್ತಾರೆ ಇವರು ಈ ವರೆಗೂ ಬದಲಾವಣೆಯಾಗದೇ ಇರುತ್ತಾರೆ ಪ್ರಜೆಗಳನ್ನು ಸೇರಿಸಿ ಓಟು ಹಾಕುವ ರೂಲ್ಸನ್ನು ಜಾರಿಗೆ ತಂದಿದ್ದರೆ ಇವರುಗಳ ಬದಲಾವಣೆಯು ಆಗುವದಕ್ಕೆ ಏನೂ ಸಂದೇಹವಿರುತ್ತಿರಲಿಲ್ಲ

ಸುಮಾರು ಮೂರು ತಿಂಗಳ ಈಚೆಗೆ ಲಿಂಗಾಯತ ವರ್ತಕರ ಪೈಕಿ ಒಬ್ಬರನ್ನೂ, ವೈಶ್ಯರ ಪೈಕಿ ಒಬ್ಬರನ್ನೂ ಪ್ರಜೆಗಳ ಅಭಿಪ್ರಾಯಕ್ಕೆ ತಿಳಿಸದೆ ಹೀಗಿಂದ್ಯೋಗೇ ಮೆಂಬರುಗಳನ್ನಾಗಿ ನೇಮಿಸಿಕೊಂಡಿರುತ್ತಾರೆ ಈ ಗ್ರಾಮದಲ್ಲಿ ಪ್ರಜೆಗಳ ಸಮ್ಮತಿ ಪ್ರಕಾರ ಮೆಂಬರುಗಳ ಚುನಾವಣೆಯು ಆಗದೇ ಇರುವದರಿಂದ ಪ್ರಜೆಗಳಿಗೆ ತುಂಬಾ ತೊಂದರೆಯುಂಟಾಗಿದೆ ಇನ್ನಾದರೂ ಸರ್ಕಾರದವರು ಗ್ರಾಮಸ್ಥರ ಸಮ್ಮತಿಯ ಪ್ರಕಾರ ಮೆಂಬರುಗಳನ್ನು ಚುನಾಯಿಸಿಕೊಟ್ಟು ನಮಗೆ ಉಂಟಾಗಿರುವ ತೊಂದರೆಗಳನ್ನು ಹೋಗಲಾಡಿಸಿ ನಮ್ಮನ್ನು ಕಾಪಾಡುವವರೆಂದು ನಂಬಿದೇವೆ

ಕೆಟ್ಟಿ ಆಡಿವಪ್ಪ, ಕುಪ್ಪಲ್ಲು ರಬಕಪ್ಪ, ಅವಲಕ್ಕಿ ಮುಪ್ಪಪ್ಪ, ಸುರುಳಿ ಶಿವಲಿಂಗಪ್ಪ, ಸುರಹೊನ್ನೆ ಹಾಲಪ್ಪ ವಗೈರೆದು

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಜೂನ್ ತಾ 19 ಕ್ಕೆ ಅಖೈರಾದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು	ಧರ್ಮಾರ್ಥ ಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು	ರೂ	
ಬೆಂಗಳೂರು	215	159	12	2 031	156
ಕೋಲಾರ	940	422	74	2,668	368
ತುಂಕೂರು	1,063	541	13	2,183	21
ಮೈಸೂರು	10	22		25	
ಹಾಸನ	802	1,479	154	1584	
ಶಿವಮೊಗ್ಗ	49	40		123	5
ಕಡೂರು	62	101		156	
ಚಿತ್ರದುರ್ಗ	588	605	58	1,715	27
ಮಾಂಕಣಿವಿ ಸ್ಟ್ಯಾನಿಟಿ	197	270	7	613	
ಒಟ್ಟು	3,926	3,631	313	11 428	577

ಎನ್ನೂರಿನ ರೈಲ್ವೆ ಅನಾಹುತವು

ಕಳೆದ ವಾರದ ವೃತ್ತಾಂತ

ಮದರಾಸಿನಿಂದ ೧೩ ಮೈಲಿ ಆಚೆ ಇರುವ ಎನ್ನೂರು ಸ್ಟೇಷನ್ ಬಳಿ ರೈಲಿನ ಅನಾಹುತ ಸಂಭವಿಸಿ ೧೨ ಮಂದಿ ಪ್ರಯಾಣಿಕರು ಕಾಲವಾದರೆಂದೂ ಕೆಲವರು ಗಾಯಪಟ್ಟು ಮದರಾಸ್ ಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆಯೊಂದುತ್ತಿದಾರೆಂದೂ ತಿಳಿಸಿದೆವಷ್ಟೆ. ಈ ಗಾಯಪಟ್ಟವರಲ್ಲಿ ಇನ್ನಿಬ್ಬರು ಕಳೆದ ವಾರ ತೀರಿಕೊಂಡರು. ರೈಲ್ವೆ ಅಧಿಕಾರಿಗಳು ಆ ಸ್ಥಳಕ್ಕೆ ಹೋಗಿ ಅನಾಹುತ ಸಂಭವಿಸಿದ್ದಕ್ಕೆ ಕಾರಣ ಮುಂತಾದದನ್ನು ಕುರಿತು ಅಂದಿನಿಂದ ತನಿಖೆ ಮಾಡುತ್ತಿದ್ದಾರೆ. ರೈಲ್ವೆ ಇಲಾಖಾ ಪ್ರೆಸಿಡೆಂಟ್ ಮೆ॥ ಏಪ್ ರವರು ಕಳೆದ ಶನಿವಾರ ಬೆಳಗ್ಗೆ ಕಲ್ಕತ್ತೆಯಿಂದ ಬಂದು ಎನ್ನೂರಿನಲ್ಲಿ ರೈಲ್ವೆ ಅಧಿಕಾರಿಗಳನ್ನು ಕಂಡು, ಅನಾಹುತ ನಡೆದ ಸ್ಥಳವನ್ನು ಪರೀಕ್ಷಿಸಿದರು.

ರಾಜಧಾನಿಯ ಮ್ಯುನಿಸಿಪಲ್ ವಿಷಯಗಳು

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಿಯ ವಿಷಯಗಳನ್ನು ನಡಿಸಿದರು. ಕಳೆದ ಮೇ ತಿಂಗಳ ಜಮಾ ಖರ್ಚು ಮುಂತಾದ ಲೆಕ್ಕಗಳನ್ನು ಓದಿ ಪಾಸ್ ಮಾಡಿದರು. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ರೂ ೧೯,೦೦೫-೨-೯ ಪೈ ಉತ್ಪತ್ತಿಯೂ, ರೂ ೧೨,೬೫೧-೮-೫ ಪೈ ಖರ್ಚೂ ಆಯಿತು. ಮತ್ತು ಜನನ ೯೩ ಮರಣ—ಪ್ಲೇಗ್ ೪ ಸಿಡುಬು ೬೫, ಜ್ವರ ೨೧ ಇತರ ಕಾರಣಗಳು ೧೨೬. ಅಂತು ೨೧೬ ಮರಣಗಳಾದವೆಂದು ತಿಳಿಯಿತು.

ರಾಜಧಾನಿಗೆ ನೀರಿನ ಸರಬರಾಯಿ ಆಗುವ ಬೆಳಗುಳದ ನೀರಿನ ಕಾರ್ಖಾನೆ ಖರ್ಚಿನ ವಿಚಾರವು ಚರ್ಚೆಯಾಯಿತು. ಈ ನೀರಿನ ಕಾರ್ಖಾನೆಯನ್ನು ನಡಿಸುವುದನ್ನೂ ನೀರನ್ನು ರಾಜಧಾನಿಯಲ್ಲಿ ಹಂಚಿಕೆ ಮಾಡುವುದನ್ನೂ ಮ್ಯುನಿಸಿಪಾಲಿಟಿಯವರು ಸರ್ಕಾರದವರ ಅಪೇಕ್ಷೆಯ ಪ್ರಕಾರ ಇಂಜನಿಯರ್ ಇಲಾಖೆಗೆ ವಹಿಸಿ, ಅದಕ್ಕಾಗಿ ವರುಷಕ್ಕೆ ೧೬,೦೦೦ ರೂಪಾಯಿನಂತೆ ಕೊಡಲು ಒಪ್ಪಿಕೊಂಡು ಎರಡು ವರುಷದ ಮೇಲಾಯಿತು. ಇಂಜನಿಯರ್ ಇಲಾಖೆಯವರು ಅಪ್ಪರದ್ದೀ ಆ ನೀರಿನ ಸರಬರಾಯಿಯನ್ನು ನಡಿಸದೆ ವರುಷಕ್ಕೆ ೩೦ ೩೫ ಸಾವಿರ ರೂಪಾಯಿನಂತೆ ಖರ್ಚು ಮಾಡುತ್ತಾ ಬಂದು, ಈ ಹಣವನ್ನು ಮ್ಯುನಿಸಿಪಲ್ ಉತ್ಪತ್ತಿಗೆ ಖರ್ಚು ಹಾಕಬೇಕೆಂದು ಕೇಳುತ್ತಾ ಬಂದಿರುವರು. ಸರ್ಕಾರದವರು ಮ್ಯುನಿಸಿಪಲ್ ಕೌನ್ಸಿಲರುಗಳ ಅಭಿಮತವನ್ನು ಕೇಳದೆ ಮ್ಯುನಿಸಿಪಲ್ ಫಂಡಿನಲ್ಲಿ ಉಳಿದ್ದ ಶಿಲ್ಕು ಹಣವನ್ನು ಆ ಖರ್ಚಿಗೆ ಉಪಯೋಗಿಸಿಕೊಂಡರು. ಸಾಲದ್ದಕ್ಕೆ ಈಚೆಗೆ ಆ ಇಲಾಖೆಯವರು ಮಾಡಿರುವ ಸುಮಾರು ೨೫,೦೦೦ ರೂಪಾಯಿ ಖರ್ಚನ್ನು ಸರ್ಕಾರದವರು ಮ್ಯುನಿಸಿಪಾಲಿಟಿಗೆ ಖರ್ಚು ಹಾಕಿ, ಮ್ಯುನಿಸಿಪಾಲಿಟಿಯಲ್ಲಿ ಶಿಲ್ಕೇನೂ ಇಲ್ಲದಿರೋಣದರಿಂದ ಆ ಹಣವನ್ನು ಶೇಕಡಾ ೪ ರೂಪಾಯಿನ ಬಡ್ಡಿ ಮೇರೆ ಸಾಲ ಕೊಟ್ಟರು. ಮತ್ತು ಇಂಜನಿಯರ್ ಇಲಾಖೆಯವರು ಈ ನೀರಿನ ಸರಬರಾಯಿಗೆ ಇನ್ನೂ ೧೫,೦೦೦ ರೂಪಾಯಿ ಖರ್ಚಾಗಿರೋಣದರಿಂದ ಈ ಹಣವನ್ನೂ ಮ್ಯುನಿಸಿಪಾಲಿಟಿಯಿಂದ ಕೊಡಿಸಿ ಕೊಡಬೇಕೆಂದು ಗವರ್ನಮೆಂಟಿಗೆ ಬರೆದರು. ಈ ವಿಚಾರವನ್ನೆಲ್ಲಾ ಕುರಿತು ಮ್ಯುನಿಸಿಪಲ್ ಕೌನ್ಸಿಲರುಗಳು ಚರ್ಚೆ ಮಾಡಿದರು. ಈ ನೀರಿನ ಇಲಾಖೆಯನ್ನು ಸರ್ಕಾರದವರು ಮ್ಯುನಿಸಿಪಾಲಿಟಿಯಿಂದ ತೆಗೆದು ಇಂಜನಿಯರ್ ಇಲಾಖೆಗೆ ವಹಿಸಿದ್ದಾಗ್ಗೆ ಮ್ಯುನಿಸಿಪಾಲಿಟಿಯವರು ವರುಷಕ್ಕೆ ೧೬ ಸಾವಿರ ರೂಪಾಯಿ ಕೊಟ್ಟರೆ ಸಾಕೆಂದು ಒಪ್ಪಿಕೊಂಡರು. ಈಚೆಗೆ ಖರ್ಚು ಹೆಚ್ಚಾದದ್ದನ್ನು ನೋಡಿ ಮ್ಯುನಿಸಿಪಾಲಿಟಿಯವರು ನೀರಿನ ಸರಬರಾಯನ್ನು ಮತ್ತೆ ತಮಗೇ ವಹಿಸಬೇಕೆಂದು ಕೇಳಿಕೊಂಡರೂ ಸರ್ಕಾರದವರು ಅದಕ್ಕೆ ಒಪ್ಪಲಿಲ್ಲ. ಈ ನೀರಿನ ಇಲಾಖೆಯ ಖರ್ಚು ಅಪಾರವಾಗಿ ಮ್ಯುನಿಸಿಪಾಲಿಟಿಯ ಶಿಲ್ಕನ್ನೆಲ್ಲಾ ಮುಗಿಸಿ ಬಿಟ್ಟು, ಸಾಲ ಮಾಡುವಂತಾಗಿದೆ. ಖರ್ಚಿಗೆ ಹಣವಿಲ್ಲವೆಂದು ತಿಳಿಸಿದರೆ ಮ್ಯುನಿಸಿಪಲ್ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಕೌನ್ಸಿಲರುಗಳು ಹೊಸ ತೆರಿಗೆಗಳನ್ನು ಹಾಕಬೇಕೆಂದು ಸರ್ಕಾರದವರು ಹುಕುಂ ಕೊಡುವರು. ಈ ನೀರಿನ ಏರ್ಪಾಡು ಧರ್ಮಾರ್ಥವಾದದ್ದೆಂದೂ ಅದಕ್ಕೆ ಪ್ರಜೆಗಳಿಂದ ತೆರಿಗೆಯನ್ನು ವಸೂಲ್ಮಾಡ ಬೇಕಾದದ್ದಿಲ್ಲವೆಂದೂ ಲೇಟ್ ಮಹಾರಾಜರವರು ಅಪ್ಪಣೆ ಕೊಡಿಸಿದ್ದಾಗ್ಯೂ ಈಗ ನೀರಿನ ತೆರಿಗೆ ಹಾಕಿ ವಸೂಲ್ಮಾಡಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದಾರೆ. ಮನೆಗಳ ತೆರಿಗೆಯ ಮೇಲೆ ಶೇಕಡಾ ಮೂರು ರೂಪಾಯಿನಂತೆ ನೀರಿನ ತೆರಿಗೆ ಹಾಕಬೇಕೆಂದು ತೀರ್ಮಾನವಾಗಿದ್ದರೂ ಈ ರೀತಿ ವಸೂಲಾಗುವ ಹಣ ೧೩ ೧೪ ಸಾವಿರ ರೂಪಾಯಿಗಿಂತ ಹೆಚ್ಚಾಗುವುದಿಲ್ಲ. ನೀರಿನ ಖರ್ಚು ವರುಷಕ್ಕೆ ೩೦ —೫ ಮತ್ತು ೩೦ ಸಾವಿರ ರೂಪಾಯಿನ ತನಕ ಆಗುತ್ತಿದೆ. ಆದಕಾರಣ ಸರ್ಕಾರದವರು ಈ ಜಾಸ್ತಿ ಖರ್ಚನ್ನು ಮ್ಯುನಿಸಿಪಾಲಿಟಿಗೆ ವಹಿಸುವುದು ತರವಲ್ಲವೆಂದೂ, ಹೀಗೆ ಕೇಳುವುದು ಮ್ಯುನಿಸಿಪಲ್ ಕಾನೂನಿಗೂ ಅನುಸಾರವಾಗಿಲ್ಲವೆಂದೂ, ಈ ರೀತಿಯಾದ ಹೆಚ್ಚು ಖರ್ಚುಗಳನ್ನೆಲ್ಲಾ ಸರ್ಕಾರದವರೇ ವಹಿಸಿಕೊಂಡು ಕೊಡಬೇಕೆಂದೂ ಗವರ್ನಮೆಂಟಿಗೆ ಅರಿಕೆ ಮಾಡಿಕೊಳ್ಳಬೇಕು ಎಂಬದಾಗಿ ಮೆ॥ ರಂಗಯ್ಯಂಗಾರ್ಯ ಸೂಚಿಸಿದ್ದನ್ನು ಇತರ ಕೌನ್ಸಿಲರುಗಳು ಸಮ್ಮತಿಸಿದರು.

ಹೊಸ ಮನೆಗಳನ್ನು ಕಟ್ಟುವುದಕ್ಕೂ ಹಳೆ ಮನೆಗಳನ್ನು ದುರಸ್ತು ಮಾಡುವುದಕ್ಕೂ ಲೈಸೆನ್ಸನ್ನು ಕೊಡುವುದಕ್ಕೆ ಮುಂಚೆ ಹೆಲ್ತ್ ಆಫೀಸರವರು ಮೊದಲು ಆಯಾ ಮೊಹಲ್ಲೆಯ ಮ್ಯುನಿಸಿಪಲ್ ಕೌನ್ಸಿಲರುಗಳಿಗೆ ತಿಳಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ಕೌನ್ಸಿಲರುಗಳು ಸೂಚಿಸಿದರು. ಅದರಂತೆ ತೀರ್ಮಾನವಾಯಿತು.

ಮೈಸೂರು ಸರ್ಕಾರಿ ಯುನಾನಿ ಆಸ್ಪತ್ರೆಯ ಹಕೀಮರಿಗೆ ಮಾಹೆಯಾನಾ ೨೦ ರೂಪಾಯಿನಂತೆ ಅಲೋಯೆನ್ಸು ಕೊಡಬೇಕೆಂದು ಕೌನ್ಸಿಲರುಗಳು ತೀರ್ಮಾನ ಮಾಡಿದ್ದರು. ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲದಿರುವಾಗ ಈ ಅಲೋಯೆನ್ಸು ಕೊಡುವುದು ಹ್ಯಾಗೆ ಎಂದು ಸರ್ಕಾರದವರು ಪ್ರಶ್ನೆ ಮಾಡಿದರು. ಈ ವಿಷಯದಲ್ಲಿ ಹಣವನ್ನು ವೈಸ್ ಪ್ರೆಸಿಡೆಂಟರು ಇತರ ಬಾಬುಗಳಿಂದ ತೆಗೆದುಕೊಡಬೇಕೆಂದು ಕೌನ್ಸಿಲರುಗಳು ತೀರ್ಮಾನ ಮಾಡಿರುತ್ತಾರೆ.

ಪಟ್ಟಣದ ಕಚರಾವನ್ನು ಸಾಗಿಸುವುದಕ್ಕೆ ಏರ್ಪಾಡಾಗಿರುವ ಕನ್ಸರ್ವೆನ್ಸಿ ಗಾಡಿಗಳ ಮಾಲೀಕರು ತಮಗೆ ಗಾಡಿ ಒಂದಕ್ಕೆ ಮಾಹೆಯಾನಾ ಸಲ್ಲುತ್ತಿರುವ ೧೫ ರೂಪಾಯಿ ಸಾಲದೆಂದೂ ಅದನ್ನು ೧೮ ರೂಪಾಯಿ ಮಾಡಿಕೊಡಬೇಕೆಂದೂ ಕೇಳಿಕೊಂಡರು. ಈ ಗಾಡಿಗಳ ಎತ್ತುಗಳು ಒಳ್ಳೇ ಸ್ಥಿತಿಯಲ್ಲಿಲ್ಲದಿರೋಣದರಿಂದ ಬಡ್ತಿಯನ್ನು ಕೊಡಬೇಕಾದದ್ದಿಲ್ಲವೆಂದೂ, ಇನ್ನು ಮುಂದೆ ಕಚರಾ ಸಾಗಿಸುವಂಥಾ ಗಾಡಿಗಳನ್ನು ಟೆಂಡರು ಮೂಲಕ ಕಂಟ್ರಾಕ್ಟು ಕೊಟ್ಟು ನೇಮಕ ಮಾಡಬೇಕೆಂದೂ ಕೌನ್ಸಿಲರುಗಳು ಒಪ್ಪಿಕೊಂಡಿದಾರೆ.

ಟೋಲ್ ಗೇಟುಗಳ ಕಂಟ್ರಾಕ್ಟುಗಳ ಹರಾಜನ್ನು ಒಪ್ಪಿಕೊಂಡರು. ಮುಂದಿನ ಸಾಲಿನಲ್ಲಿ ಪ್ರತಿ ತಿಂಗಳಲ್ಲೂ ಈ ಬಾಬಿನಿಂದ ಮ್ಯುನಿಸಿಪಾಲಿಟಿಗೆ ೩ ೦೫೨ ರೂಪಾಯಿನಂತೆ ಹುಟ್ಟುವಳಿ ಆಗುವುದೆಂದು ಅಂದರೆ ಹಿಂದಿನ ಸಾಲಿಗಿಂತ ೩,೮೫೯ ರೂಪಾಯಿ ಜಾಸ್ತಿಯಾಗುವುದೆಂದು ಗೊತ್ತಾಯಿತು.

ನೀರನ್ನು ಪಟ್ಟಣದಲ್ಲಿ ಹಂಚಿಕೊಡುವ ವಿಷಯದಲ್ಲೂ, ಅದನ್ನು ಪ್ರಜೆಗಳು ಉಪಯೋಗಿಸುವ ವಿಷಯದಲ್ಲೂ ಮಾಡಿದ್ದ ಕೆಲವು ರೂಲಸುಗಳನ್ನು ಕೌನ್ಸಿಲರುಗಳು ಒಪ್ಪಿಕೊಂಡರು. ಈ ಜೂನ್ ಲಾಗಾಯಿತು ಪ್ರಜೆಗಳಿಂದ ಅವರ ಮನೆ ತೆರಿಗೆಯ ಮೇಲೆ ಶೇಕಡಾ ೩ ರೂಪಾಯಿನಂತೆ ನೀರಿನ ತೆರಿಗೆಯನ್ನು ವಸೂಲ್ಮಾಡತಕ್ಕದ್ದೆಂದೂ, ಮದುವೆ ಮುಂತಾದ ಕಾಲಗಳಲ್ಲಿ ಹೆಚ್ಚು ನೀರು ಉಪಯೋಗಿಸಿಕೊಳ್ಳುವ ಮನೆಗಳ ಮಾಲೀಕರು ಪ್ರತಿ ೧ ೦೦೦ ಗ್ಯಾಲನ್ ಗಳಿಗೂ ೧೨ ಆಣೆಯಂತೆ ಜಾಸ್ತಿ ಕೊಡತಕ್ಕದ್ದೆಂದೂ ವಿಧಿಸಲ್ಪಟ್ಟಿದೆ.

ಹೆಲ್ತ್ ಆಫೀಸರವರ ಕೈಕೆಳಗಿರುವ ಕನ್ಸರ್ವೆನ್ಸಿ ಮೊದಲಾದ ಇಲಾಖೆಗಳ ಖರ್ಚಿಗೆ ಮ್ಯುನಿಸಿಪಾಲಿಟಿಯವರು ತೆಗೆದಿಟ್ಟ ಹಣದ ಜವಾಬ್ದಾರಿಯನ್ನೆಲ್ಲಾ ಹೆಲ್ತ್ ಆಫೀಸರಿಗೆ ವಹಿಸಿಕೊಡಬೇಕೆಂದು ತೀರ್ಮಾನವಾಯಿತು.

ಪಟ್ಟಣದಲ್ಲಿ ಇನ್ನೂ ೩,೮೪೦ ಮನೆಗಳಲ್ಲಿ ಜನರು ಪಾಯಿಖಾನೆ ಗುಂಡಿಗಳನ್ನು ಇಟ್ಟುಕೊಂಡಿದಾರೆಂದೂ, ದಿನವೂ ಗೊಬ್ಬರವನ್ನು ಸಾಗಿಸುವುದಕ್ಕೆ ಅನೇಕ ಕಡೆಗಳಲ್ಲಿ ಅವಕಾಶವಿಲ್ಲವೆಂದೂ ತಿಳಿದು ಬಂದದ್ದರಿಂದ ಅಂಥಾ ಅನಾನುಕೂಲಗಳು ಇರುವ ಸ್ಥಳಗಳನ್ನೆಲ್ಲಾ ಹೆಲ್ತ್ ಆಫೀಸರವರು ಬರೆದು ಬೋರ್ಡಿಗೆ ತಿಳಿಸಬೇಕೆಂದು ಕೌನ್ಸಿಲರುಗಳು ಇತ್ಯರ್ಥ ಮಾಡಿದರು.

ಪ್ಲೇಗ್ ಸಿಡುಬನ್ನು ರಾಜಧಾನಿಯಲ್ಲಿ ಪ್ರಜೆಗಳಿಗೆ ಬಲಾತ್ಕರಿಸಿ ಹಾಕಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿರುತ್ತಾರಷ್ಟೆ. ಈ ವಿಷಯದಲ್ಲಿ ಹೆಲ್ತ್ ಆಫೀಸರವರು ಕೆಲವು ನಿಬಂಧನೆಗಳನ್ನು ಮಾಡಿ ತಂದಿದ್ದರು. ಮ್ಯುನಿಸಿಪಾಲಿಟಿಯವರು ಏರ್ಪಡಿಸಿರುವ ಕಡೆಗಳಿಗೆ ಜನರು ಹೋಗಿ ಸಿಡುಬು ಹಾಕಿಸಿಕೊಳ್ಳದೆ ಸಿಡುಬು ಹಾಕತಕ್ಕವರನ್ನು ತಮ್ಮ ಮನೆಗೇನೇ ಕರೆಸಿಕೊಂಡಲ್ಲಿ ಒಂದೊಂದು ರೂಪಾಯಿನಂತೆ ರುಸುಂ ಕೊಡಬೇಕೆಂದು ರೂಲಸಿನಲ್ಲಿ ಕಾಣಿಸಿದ್ದರು. ಈ ಭಾಗವನ್ನು ವಜಾ ಮಾಡಬೇಕೆಂದು ಕೌನ್ಸಿಲರುಗಳು ಅಭಿಪ್ರಾಯಪಟ್ಟಿದಾರೆ.

ಹೋಟೆಲು ತಿಂಡಿಅಂಗಡಿ, ಮಿಠಾಯಿಅಂಗಡಿ, ರೊಟ್ಟಿಗಡಂಗು, ಸೋಡಾ ತಯಾರಾಗುವ ಅಂಗಡಿ ಮೊದಲಾದ ಕಡೆಗಳಲ್ಲಿ ಆರೋಗ್ಯ ನಿಯಮಗಳಿಗೆ ಅನುಸಾರವಾಗಿ ಏರ್ಪಾಡು ಇರಬೇಕೆಂದೂ, ಆಯಾ ಅಂಗಡಿಗಳವರು ಕಂದಾಯವನ್ನು ಕೊಡಬೇಕೆಂದೂ ಕೆಲವು ರೂಲಸನ್ನು ಮಾಡಿದ್ದರು. ಈ ರೂಲಸನ್ನು ಹೆಲ್ತ್ ಕಮಿಟಿಯವರು ಪುನರಾಲೋಚನೆ ಮಾಡತಕ್ಕದ್ದೆಂದು ಕೌನ್ಸಿಲರುಗಳು ತೀರ್ಮಾನಿಸಿದರು.

ಇಂಡಿಯಾ ದೇಶದ ವೃತ್ತಾಂತಗಳು

ಪೂನಾ ಪಟ್ಟಣದಲ್ಲಿ ಮಳೆಯ ದೆಸೆಯಿಂದ ಒಂದು ಮನೆಯು ಕುಸಿಬಿದ್ದು ಒಬ್ಬನು ಮೃತಪಟ್ಟನು. ಇಬ್ಬರಿಗೆ ಜಖಂ ಆಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು.

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಔರಂಗಾಬಾದಿನ ಭಾರೀ ನೆಯ್ಗೆ ಕಾರ್ಖಾನೆಯಲ್ಲಿ ಕಬ್ಬಿಣದ ಪೆಟ್ಟಿಗೆಯೊಳಗಿದ್ದ ೨೫,೦೦೦ ರೂಪಾಯಿ ಕಳುವಾಗಿರುತ್ತದೆ.

ನಾಯಿ ನರಿ ಕಡಿದವರಿಗೆ ಚಿಕಿತ್ಸೆ ಮಾಡುವ ಕೂನೂರಿನ ಆಸ್ಪತ್ರೆಯ ಖರ್ಚಿಗೆ ಪಾಲಘಾಟಿನ ಮ್ಯುನಿಸಿಪಾಲಿಟಿಯಿಂದ ೫೦ ರೂಪಾಯಿನ ವರುಷಾಸನವನ್ನು ಕೊಡುವಂತೆ ಒಪ್ಪಿದಾರೆ.

ಸಿಲೋನ್ ದ್ವೀಪದಲ್ಲಿ ಐದು ಸೆಂಟ್ ಎಂಬ ನಾಣ್ಯಕ್ಕೆ ಪ್ರತಿಯಾಗಿ ನಿಕ್ಕಲ್ ಲೋಹದ ಹೊಸನಾಣ್ಯವನ್ನು ಮಾಡಿ ಚಲಾವಣೆಗೆ ತರಬೇಕೆಂದು ಅಲ್ಲಿನ ಸರ್ಕಾರದವರು ಪ್ರಯತ್ನಪಡುತ್ತಿದಾರೆ.

ಲಕ್ನೋ ಪಟ್ಟಣದಲ್ಲಿ ಪ್ಲೇಗಿನ ಉಪದ್ರವ ಪ್ರಾರಂಭವಾಗಿ ಕಳೆದ ಮೂರು ವಾರಗಳಿಂದೀಚೆಗೆ ಸುಮಾರು ೧೩೦ ಜನರು ಕಾಲವಾದರೆಂದೂ, ಇನ್ನೂ ಉಪದ್ರವ ಕಡಿಮೆ ಆಗಿಲ್ಲವೆಂದೂ ಅಲ್ಲಿನ ಪತ್ರಿಕೆಯು ತಿಳಿಸುವುದು.

ಕಲ್ಕತ್ತಾ ಪಟ್ಟಣದಲ್ಲಿ ಕಳೆದ ಭಾನುವಾರ ಸಾಯಂಕಾಲ ಬಹು ಭಯಂಕರವಾದ ಬಿರುಗಾಳಿಯು ಬೀಸಿ, ಅಲ್ಲಿನ ಉದ್ಯಾನವನದಲ್ಲಿದ್ದ ಅನೇಕ ಗಿಡಮರಗಳನ್ನು ಕೆಡವಿ, ವನದ ಸೌಂದರ್ಯವನ್ನು ಬಹಳ ಮಟ್ಟಿಗೆ ಕೆಡಿಸಿಬಿಟ್ಟಿದೆ.

ಆಫ್ಘಾನಿಸ್ಥಾನದ ಅಮೀರರವರಿಗೆ ಕಾಯಿಲೆಯು ಬಹಳ ಜಾಸ್ತಿಯಾಗಿರೋಣದರಿಂದ ಅವರಿಗೆ ಚಿಕಿತ್ಸೆಮಾಡುವುದಕ್ಕಾಗಿ ಅಲ್ಲಿಗೆ ಪ್ರಯಾಣವಾಗಿದ್ದ ಮೇಜರ್ ಮೆಲ್ವಿಲ್ ಎಂಬ ಇಂಗ್ಲಿಷ್ ಡಾಕ್ಟರು ಕಳೆದ ವಾರ ವಾಪಸು ಲಾಹೋರ್ ಪಟ್ಟಣಕ್ಕೆ ಬಂದುಬಿಟ್ಟರು.

ಹೈದರಾಬಾದಿನಲ್ಲಿರುವ ೧೯೦೭ನೇ ಚಂದರ ಮೈಲಿ ಕಾಡಿನಲ್ಲಿ ಕಳೆದ ವರುಷ ೭,೯೪,೩೪೫ ರೂಪಾಯಿ ಹುಟ್ಟುವಳಿಯೂ, ೧,೮೪,೮೭೫ ರೂಪಾಯಿ ಖರ್ಚೂ ಆಗಿದೆ. ಈ ಫಾರೆಸ್ಟು ಇಲಾಖೆಯಿಂದ ಸಂಸ್ಥಾನಕ್ಕೆ ೬,೦೪,೪೭೦ ರೂಪಾಯಿ ನಿವ್ವಳ ಆದಾಯವಾಗಿರುವುದು.

ಬಳ್ಳಾರಿಯಲ್ಲಿ ಮೆ॥ ಎ ಬಸಪ್ಪನವರ ಸ್ವಾಧೀನದಲ್ಲಿ ಡೈಂಟ್ ಕಂಪನಿಯವರು ತಮ್ಮ ಬಾಬತು ಹತ್ತಿಯನ್ನು ಕೊಡಿಟ್ಟಿದ್ದರು. ಅದಕ್ಕೆ ಕಳೆದ ವಾರ ಬೆಂಕಿ ಬಿದ್ದು ಉರಿದುಹೋಯಿತು. ಸುಮಾರು ೫ ಸಾವಿರ ರೂಪಾಯಿನ ಸರಕು ನಷ್ಟವಾದಂತೆ ತಿಳಿದುಬಂದಿದೆ.

ಅಂಡಮಾನ್ ದ್ವೀಪಗಳಲ್ಲಿ ಜಂಕೋಲ್ ಸಜಾ ಅನುಭವಿಸುತ್ತಿರುವ ಖೈದಿಗಳ ಪೈಕಿ ಐದು ಮಂದಿ ತಮ್ಮ ಮೇಲೆ ಪಹರೇ ಇದ್ದ ಇಬ್ಬರು ಜವಾನರನ್ನು ಮುಷ್ಕಿಕಟ್ಟಿ ಕೆಡವಿ ದೋಣಿಗಳಲ್ಲಿ ಕುಳಿತು ತಪ್ಪಿಸಿಕೊಂಡು ಹೋದರು. ಸರ್ಕಾರದವರು ಅವರನ್ನು ಪತ್ತೆಮಾಡುತ್ತಿದಾರೆ.

ಸಂಡೂರ್ ಸಂಸ್ಥಾನದೊಳಗೆ ಮ್ಯಾಂಗನೀಸ್ ಗಣಿಗಳತನಕ ಅಂದರೆ ೯ ಮೈಲಿ ದೂರ ಹೊಸದಾಗಿ ರೈಲ್ ರಸ್ತೆಯನ್ನು ತಯಾರ್ಮಾಡಬೇಕೆಂದು ರೈಲ್ವೆ ಬೋರ್ಡಿನವರು ಸ್ಯಾಂಕ್ಷನ್ ಮಾಡಿದರು. ಈ ರಸ್ತೆಯನ್ನು ದಕ್ಷಿಣ ಮರಾಠಾ ರೈಲ್ವೆ ಕಂಪನಿಯವರೇ ಕಾಮಗಾರಿ ನಡಿಸಿ ನಡೆಸುವಂತೆ ಗೊತ್ತಾಗಿರುತ್ತದೆ.

ಉತ್ತರದೇಶಕ್ಕೆ ಸೇರಿದ ಪಂಜಾಬ್, ಪೂರ್ವ ಮತ್ತು ಪಶ್ಚಿಮ ಬಂಗಾಳಾ, ಮಧ್ಯಪ್ರಾಂತ್ಯಗಳು ರಾಜಪುಟಾನಾ ಪ್ರಾಂತ್ಯಗಳಲ್ಲಿ ಆಹಾರ ದಿನಸುಗಳ ಧಾರಣೆಯು ಕಳೆದ ವಾರ ಇನ್ನೂ ಸ್ವಲ್ಪಮಟ್ಟಿಗೆ ಇಳಿದಿರುತ್ತದೆ. ಗವರ್ನಮೆಂಟಿನವರ ರಿಲೀಫ್ ಕಾಮಗಾರಿಗಳಲ್ಲಿ ಕೆಲಸಮಾಡಿ ಜೀವನಮಾಡುತ್ತಿದ್ದ ಕ್ಷಾಮಪೀಡಿತರ ಸಂಖ್ಯೆಯು ಕಳೆದ ವಾರದಲ್ಲಿ ಕಡಿಮೆ ಇರುತ್ತದೆ.

ಮದರಾಸ್ ಗವರ್ನಮೆಂಟಿನ ಎಗ್ಸಿಕ್ಯುಟಿವ್ ಕೌನ್ಸಿಲಿಗೆ ಮೆ ಸೂರು ಸಂಸ್ಥಾನದ ದಿವಾನರಾಗಿದ್ದು ಈಗ ಕೆಲಸ ಬಿಟ್ಟಿರುವ ಮೆ ವಿ ಪಿ ಮಾಧವರಾಯರನ್ನೋ, ಇಲ್ಲವೇ ತಿರುವಾಂಕೂರಿನಲ್ಲಿ ಈಗ ದಿವಾನರಾಗಿರುವ ಮೆ ದಿವಾನ್ ಬಹದೂರ್ ಪಿ ರಾಜಗೋಪಾಲಾಚಾರ್ಯರನ್ನೋ ಒಬ್ಬ ಮೆಂಬರಾಗಿ ಗವರ್ನಮೆಂಟಿನವರು ನೇಮಿಸಬಹುದೆಂದು ವರ್ತಮಾನ ಹುಟ್ಟಿದೆ.

ಹಿಂದೂಸ್ಥಾನದ ನ್ಯಾಷನಲ್ ಕಾಂಗ್ರೆಸ್ (ರಾಷ್ಟ್ರೀಯ ಮಹಾಸಭೆ)ಯು ಉತ್ತರ ದೇಶಕ್ಕೆ ಸೇರಿದ ಲಾಹೋರ್ ಪಟ್ಟಣದಲ್ಲಿ ಡಿಸೆಂಬರ್ ಕಡೆಯ ವಾರದಲ್ಲಿ ಜರುಗುವುದು. ಅದರ ರಿಸೆಪ್ಷನ್ ಕಮಿಟಿಯವರು ಕಳೆದ ವಾರ ಅಲ್ಲಿ ಸಭೆಸೇರಿ ಮೆ॥ ಗಳಾದ ಹರಿಕಿಷನ್ ಲಾಲ್ ಸಂಗಮ್ ಲಾಲ್, ಸಿವಿ, ಧನಪತ್ ರಾಯಿ ಎಂಬೀ ದೊಡ್ಡ ಮನುಷ್ಯರನ್ನು ಆ ಸಭೆಯ ಮುಂದಾಳುಗಳನ್ನಾಗಿ ಗೊತ್ತುಮಾಡಿದರು.

ಈ ತಿಂಗಳ ಪ್ರಾರಂಭದಲ್ಲಿ ಪಾಟ್ನಾ ಪಟ್ಟಣದೊಳಗೆ ಆರ್ಯಸಮಾಜದ ಮೆಂಬರುಗಳು ವಾರ್ಷಿಕ ಉತ್ಸವವನ್ನು ನಡಿಸಿದರು. ಸುಮಾರು ೬,೦೦೦ ಮಹಮ್ಮದೀಯರೂ ೬,೦೦೦ ಹಿಂದೂಗಳೂ ಸಭೆಯಲ್ಲಿ ಹಾಜರಾಗಿದ್ದು, ಪರಸ್ಪರ ಸ್ನೇಹವಾತ್ಸಲ್ಯಗಳನ್ನು ಪ್ರದರ್ಶಿಸಿದರು. ಪಂಡಿತ ರಾಮಭಜದತ್ತ ಚೌಧರಿಯವರು ಸಭಾನಾಯಕರಾಗಿದ್ದರು. ಬೆಳಗಿನ ೭ ಗಂಟೆಯಿಂದ ಸಾಯಂಕಾಲ ೭ ಗಂಟೆಯ ತನಕ ಈ ಸಭೆಯು ಜರುಗಿತೆಂದು ಪ್ರಕಟವಾಗಿದೆ.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಶ್ರೀರಾಮಪುರದ ಹತ್ತಿರ ಮಹೇಶ ಎಂಬ ಊರಿನಲ್ಲಿ ರಥೋತ್ಸವವಾಯಿತು. ಆ ದಿನ ಮಳೆ ಬಂದು ತೇರು ಕೆಸರಿನಲ್ಲಿ ಸಿಕ್ಕಿಕೊಂಡು ಎಳೆಯುವುದು ಬಹಳ ಕಷ್ಟಸಾಧ್ಯವಾಯಿತು. ಭಕ್ತಾದಿಗಳು ಬಲವಂತವಾಗಿ ಅದನ್ನು ಎಳೆದದ್ದರಿಂದ ಅದು ಕೆಸರಿನಿಂದ ಹೊರಕ್ಕೆ ಬಂದ ಒಡನೆ ಅದರ ಚಕ್ರದ ಕೆಳಗೆ ಒಬ್ಬನು ಸಿಕ್ಕಿ ಮೃತಪಟ್ಟನು. ಐದು ಮಂದಿಗೆ ಪೂರಾ ಗಾಯವಾಯಿತು. ಈ ಪೈಕಿ ನಾಲ್ವರು ಬದುಕುವಹಾಗಿಲ್ಲ.

ಪೂನಾ ಜಿಲ್ಲೆಗೆ ಸೇರಿದ ಇಂದಾಪುರದ ಮ್ಯುನಿಸಿಪಾಲಿಟಿಯಲ್ಲಿ ಸೆಕ್ರೆಟರಿ ಆಗಿದ್ದ ರಾಮಚಂದ್ರ ಸದಾಶಿವ ದೇಶಪಾಂಡೆ ಎಂಬಾತನು ಮ್ಯುನಿಸಿಪಲ್ ಹಣವನ್ನು ದುರುಪಯೋಗಪಡಿಸಿದನೆಂದು ಮೊಕದ್ದಮೆ ಆಯಿತು. ವಿಚಾರಣೆಯಾದ ತರುವಾಯ ಜೂರಿ ಪಂಚಾಯಿತರು ಐವರಲ್ಲಿ ನಾಲ್ಕುಮಂದಿ ಅಪರಾಧ ರುಜುವಾತಾಗಲಿಲ್ಲವೆಂದು ಹೇಳಿದರು. ಆದರೆ ಮ್ಯಾಜಿಸ್ಟ್ರೇಟ್ ಮೆ ಕೆನಡಿಯವರು ಆ ರೀತಿ ಒಪ್ಪದೆ ಮೊಕದ್ದಮೆಯನ್ನು ಫೈಸಲಾತಿಗಾಗಿ ಬೊಂಬಾಯಿ ಹೈಕೋರ್ಟಿಗೆ ಒಪ್ಪಿಸಿರುತ್ತಾರೆ.

ಪೂನಾ ಪಟ್ಟಣದಲ್ಲಿ ಹಿಂದೂ ವಿಧವೆಯರಿಗೆ ವಿದ್ಯೆ ಕಲಿಸಿ, ಕಸಬುಗಳನ್ನು ಹೇಳಿಕೊಡುವುದಕ್ಕೂ ಗೃಹಕೃತ್ಯಾಚಾರಗಳಲ್ಲಿ ತರಬೇತು ಮಾಡುವುದಕ್ಕೂ ಒಂದು ಸೇವಾಸದನವನ್ನು ಇಟ್ಟು ನಡಿಸುತ್ತಾ ಬಂದಿದಾರೆ. ಈ ಸದನದ ಮೂಲಧನಕ್ಕೆ ಬಿಕಾನೀರ್ ಸಂಸ್ಥಾನದ ಮಹಾರಾಜರವರು ೧೦ ೦೦೦ ರೂಪಾಯಿಯನ್ನೂ, ಕೊಲ್ಹಾಪುರದ ಮಹಾರಾಜರವರು ೮,೨೦೦ ರೂಪಾಯಿಯನ್ನೂ, ದುಂಗರ್‌ಪುರದ ಮಹಾರಾಜರವರೂ ಹಿಂಕ್ ಸನ್ಗ್ರಾ ದ ನವಾಬ್ ಸಾಹೇಬ್ ರವರೂ ೨,೦೦೦ ರೂಪಾಯಿಯನ್ನೂ ಉಚಿತವಾಗಿ ಕೊಟ್ಟಿರುತ್ತಾರೆ.

ಕೊಯಮುತ್ತೂರು ಜಿಲ್ಲೆಯಲ್ಲಿ ಅಮರಾವತಿ ನದಿಯ ದಡದ ಮೇಲೆ ೫೦ ಮೈಲಿ ದೂರದಲ್ಲಿರುವ ಕೊಡುವಾಯಿ ಎಂಬ ಗ್ರಾಮದಲ್ಲಿ ಭಾರೀ ಜಮೀನ್ದಾರನಾದ ಮೆ ವೆಂಕಟಕೃಷ್ಣ ಐಯರ್ ಎಂಬಾತನು ೨೦ ಕುದುರೆ ಬಲವುಳ್ಳ ಒಂದು ಇಂಜನ್ನನ್ನು ಕಳೆದ ವಾರ ಪ್ರತಿಷ್ಠೆ ಮಾಡಿದನು. ಅದರಿಂದ

೯ಯ ಎಕ್ರೆ ೧೦೦ ಎಕರೆ ಜಮೀನಿಗೆ ಹಾಯಿಸಿ ತರೀ ಫಸಲು ಬೆಳೆಯುವವರಾಗಿ ಖನೆ ಈ ಇಂಜನ್ನಿಗೆ ಒಟ್ಟು ೭,೦೦೦ ರೂಪಾಯಿ ಖರ್ಚಾಯಿತು ಈ ಹಣವು ೧೪ ವರುಷಗಳೊಳಗಾಗಿ ಅವನಿಗೆ ಉತ್ಪತ್ತಿಯಾದೀತೆಂದು ಊಹಿಸಲ್ಪಟ್ಟಿದೆ

ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರದ ದೆಸೆಯಿಂದ ಕಳೆದ ವಾರ ಒಟ್ಟು ೩೬ ಮರಣಗಳು ಆಗಿರುತ್ತವೆ ಅನೇಕ ಭಾಗಗಳಲ್ಲಿ ಈ ಉಪದ್ರವು ನಿಂತು ಹೋದಂತೆ ಕಾಣುವುದು ಆ ಮರಣ ಸಂಖ್ಯೆಯ ಪೈಕಿ ಪಂಜಾಬಿನಲ್ಲಿ ೨೧೬, ರಾಜಪುಟಾನಾ ೧೧೧, ಬೊಂಬಾಯಿ ಅಧಿಪತ್ಯ ೬೬, ಬನಾರ್ ೭೫, ಬಂಗಾಳಾ ೭೧, ಸಂಯುಕ್ತ ಅಧಿಪತ್ಯಗಳು ೩೦, ಮದರಾಸ್ ಅಧಿಪತ್ಯ ೧೭, ಮೈಸೂರು ಸಂಸ್ಥಾನ ೨೮, ಮಧ್ಯಪ್ರಾಂತ್ಯಗಳು ಮತ್ತು ಬೀರಾರ್ ೯. ಈ ರೀತಿ ಹಂಚಿಕೆ ಯಾಗಿರುತ್ತವೆ

ಮಚಲೀಬಂದರಿನಲ್ಲಿ ದೇಶೀಯ ದೊಡ್ಡ ಮನುಷ್ಯರು ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಿ ಅದರ ಖರ್ಚಿಗೆ ಚಂದಾ ಮೂಲಕ ಹಣವನ್ನು ಎತ್ತುತ್ತಿ ದ್ದಾರೆ ಸ್ಕೂಲಿನ ಸೆಕ್ರೆಟರಿಯಾದ ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯನವರು ಆ ಊರಿನಲ್ಲಿರುವ ಹಿಂದೂಗಳ ಮನೆಗಳಲ್ಲೆಲ್ಲಾ ಒಂದೊಂದು ಕುಳ್ಳೆಯನ್ನಿಟ್ಟು, ಅಯಾ ಮನೆಯವರು ಅಕ್ಕಿಯನ್ನು ಆ ಕುಳ್ಳೆಗಳಿಗೆ ತಿಂಗಳ ತನಕ ಹಾಕುತ್ತಾ ಬರುವಂತೆ ಮಾಡಿದಾರೆ ಧರ್ಮದ ಅಕ್ಕಿಯನ್ನು ತಿಂಗಳಿಗೊಂದಾವರ್ತಿ ಕೂಡಿಸಿ ಚಿಲರಿಮಾಡಿ ಉತ್ಪತ್ತಿಯಾಗುವ ಹಣವನ್ನು ಆ ಸ್ಕೂಲಿನ ಖರ್ಚಿಗೆ ವಿನಿಯೋಗಿಸಿಕೊಳ್ಳುವರು

ಉತ್ತರ ಮಲಬಾರ್ ಜಿಲ್ಲೆಯಲ್ಲಿ ಕೆಲವು ವಾರಗಳ ಹಿಂದೆ ಅಕಸ್ಮಾತ್ತಾಗಿ ಸುಂಟರಗಾಳಿ ಮಳೆ ಪ್ರಾಪ್ತವಾದದ್ದರಿಂದ ತಲಚೇರಿ, ಕಣ್ಣಾನೂರು, ಬಡಗಾರ ಕಳ್ಳಾಯಿ, ಮಾಹಿ, ಅಜಕಲ್, ಈ ಸ್ಥಳಗಳಲ್ಲಿ ದೇಶೀಯ ವರ್ತಕರ ೫೦ ಹಡಗುಗಳೂ ದೋಣಿಗಳೂ ನಾಶವಾದವು ಅವುಗಳ ಬೆಲೆ ೯೭,೬೪೦ ರೂಪಾಯಿ ಇದಲ್ಲದೆ ವ್ಯಾಪಾರದ ಸರಕುಗಳು ೩೭,೪೯೮ ರೂಪಾಯಿಯಷ್ಟು ಹಾಳಾಗಿರುತ್ತವೆ ತಲಚೇರಿಯ ರೇವಿನ ಅಪಘಾತಿಯ ಕಸ್ಟಕ್ಕೆ ಸಿಕ್ಕಿದ ೭೦ ಮಂದಿ ನಾವಿಕರನ್ನು ಬದುಕಿಸಿ ಕಾಪಾಡಿ ಅವರ ಮನೆಗಳಿಗೆ ಕಳುಹಿಸಿಕೊಟ್ಟರು ಎಂಬ ಬಾಗಿ ಸರ್ಕಾರದವರು ತಿಳಿಸುತ್ತಾರೆ

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಮಹೇಶಪುರದಲ್ಲಿ ಒಬ್ಬ ಸಾಹುಕಾರನ ಮನೆಯಲ್ಲಿ ನಡೆಯುವ ಘಟನ ಪ್ರಸ್ತದ ಮರವಣಿಗೆಯುತ್ಸವ ಒಬ್ಬ ಕಾರಿಗಾರನು ಕೆಲವು ಮದ್ದಿನ ಗುಂಡುಗಳಿಗೆ ಮೊದಲಾದ ಬಾಣಬಿರುಸನ್ನು ತಯಾರುಮಾಡುತ್ತಿದ್ದನು ಆ ಪೈಕಿ ಒಂದು ಗುಂಡು ಮಹಾ ಬಲ ಜೋರಿನ ಹಾರಿತು ಈ ಬಲವು ಅಲ್ಲಿಂದ ನಾಲ್ಕು ಮೈಲಿ ದೂರಕ್ಕೆ ಕೇಳಿತು ಆ ಕಾರಿಗಾರನು ಹಾರಿಸಲ್ಪಟ್ಟು ಸತ್ತುಹೋದನು ಅವನ ಹಿರಿ ಮಗನಿಗೆ ಬಹಳ ಗಾಯವಾಗಿ ಆಸ್ಪತ್ರೆಯಲ್ಲಿ ಬಿದ್ದಿದಾನೆ ಅವನ ಮನೆಯ ಮೇಲ್ಛಾವಣಿಯು ಹಾರಿಹೋದದ್ದಲ್ಲದೆ ನೆಲವೆಲ್ಲಾ ಗುದ್ದಲಿಯಿಂದ ಅಗೆದಂತೆ ಆಯಿತು

ಮದರಾಸ್ ಪಟ್ಟಣದ ಕೃಷ್ಣಂಪೇಟೆಯ ರೈತ ಮಹಾ ಜನರು ಸಭೆ ಸೇರಿ ಕಳೆದ ವಾರ ಒಂದು ರೈತ ಸಂಘವನ್ನು ಸ್ಥಾಪಿಸಿಕೊಂಡಿದಾರೆ ಈ ಸಂಘದವರು ಮಾಡುವುದಾಗಿ ಒಪ್ಪಿಕೊಂಡಿರುವ ಕಾರ್ಯಗಳೇನೆಂದರೆ—(೧) ಈ ಮೊಹಲ್ಲೆಯ ಸಾನಿಟೇರ್, ಪ್ರಜೆಗಳ ಆರೋಗ್ಯ ಕ್ಷೇಮಾಭಿವೃದ್ಧಿಯನ್ನು ಕಾಪಾಡುವುದು (೨) ಮ್ಯುನಿಸಿಪಾಲಿಟಿಯವರು ಪ್ರಜೆಗಳ ಸೌಕರ್ಯಕ್ಕೆ ಅನುಕೂಲವಾದ ಕಾರ್ಯಗಳನ್ನು ಮಾಡುವರೋ ಇಲ್ಲವೋ ಎಂಬುವುದನ್ನು ನೋಡಿಕೊಳ್ಳುವುದು (೩) ಅವರ ಕಾರ್ಯಗಳಲ್ಲಿ ಲೋಪದೋಷಗಳನ್ನೂ, ಪ್ರಜೆಗಳ ಕೊರತೆಗಳನ್ನೂ ಗೊತ್ತುಮಾಡಿ ಮುನಿಸಿಪಾಲಿಟಿಯವರಿಗೆ ತಿಳಿಸಿ ಸರಿಪಡಿಸುವುದು ಎಂಬುದೇ

ಮುಜಫರ್‌ಪುರದಲ್ಲಿ ಎಡುಲಾಲ್ ನೆಂಬುವನ ಮೇಲೆ ಕ್ರಿಮಿನಲ್ ಮೊಕದ್ದಮೆ ಬಂದು, ಹೀರಾಲಾಲ್ ಮಹಾ ಎಂಬಾತನು ೫೦ ಸಾವಿರ ರೂಪಾಯಿಗೆ ಜಾಮೀನ್ ಕೊಟ್ಟು ಅವನನ್ನು ಬಿಡಿಸಿಕೊಂಡಿದ್ದನು ಆದರೆ ಅಪರಾಧಿಯು ಜಡ್ಜಮೆಂಟ್ ಆಗುವುದರೊಳಗಾಗಿ ತಪ್ಪಿಸಿಕೊಂಡು ಹೋಗಿಬಿಟ್ಟನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟನು ಜಾಮೀನ್‌ದಾರನಿಂದ ೫೦,೦೦೦ ರೂಪಾಯಿ ಸರ್ಕಾರಕ್ಕೆ ಪಾವತಿ ತೆಗೆದುಕೊಂಡನು ಈಚೆಗೆ ಆ ಅಪರಾಧಿಯು ತಾನಾಗಿ ಹೋಗಿ ಪೋಲೀಸಿನವರಿಗೆ ಒಪ್ಪಿಸಿಕೊಂಡು, ಮ್ಯಾಜಿಸ್ಟ್ರೇಟಿಂದ ವಿಧಿಸಲ್ಪಟ್ಟ ಶಿಕ್ಷೆಯನ್ನು ಅನುಭವಿಸುತ್ತಿದಾನೆ ಈಗ ಮೇಲ್ಕಂಡ ಜಾಮೀನ್‌ದಾರನು ತನ್ನ ೫೦,೦೦೦ ರೂಪಾಯನ್ನು ತನಗೆ ವಾಪಸು ಕೊಡಿಸಬೇಕೆಂದು ಕಲ್ಕತ್ತಾ ಹೈಕೋರ್ಟಿನಲ್ಲಿ ಅರ್ಜಿ ಹಾಕಿಕೊಂಡಿದಾನೆ

ಕಾನ್‌ಪುರದ ರೈತ ಸಂಪದವರು ಅಲ್ಲಿನ ಒಂದು ಕ್ರೈಸ್ತ ವಿದ್ಯಾಶಾಲೆಯಲ್ಲಿ ಸಭೆ ಸೇರಿ ಪುರ ಜನರ ಕ್ಷೇಮಾಭ್ಯುದಯಕ್ಕೆ ಸಹಕಾರಿಗಳಾದ ಏರ್ಪಾಡುಗಳನ್ನು ಕುರಿತು ಚರ್ಚೆ ಮಾಡಿದರು ಆಬಿದ್ ಹುಸೇನ್ ಎಂಬೊಬ್ಬ ಪೋಲೀಸ್ ಇನ್ಸ್‌ಪೆಕ್ಟರು ಆ ಮೀಟಿಂಗಿನಲ್ಲಿ ಹಾಜರಾಗಿ ಅಲ್ಲಿ ಮೆಂಬರುಗಳು ಆಡಿದ ಮಾತುಗಳನ್ನು ಬರೆದುಕೊಳ್ಳುವುದಕ್ಕೆ ಪ್ರಯತ್ನಪಟ್ಟನು ಸಭಾನಾಯಕರಾದ ಮಿ॥ ವೆಸ್ಕಾಟ್ ಯವರು ಆ ಪೋಲೀಸ್ ಇನ್ಸ್‌ಪೆಕ್ಟರನ್ನು ಹೊರಗೆ ಹೋಗುವಂತೆ ಎಷ್ಟು ಹೇಳಿದರೂ ಅವನು ಹೋಗದೆ, ಮೀಟಿಂಗಿನಲ್ಲಿ ನಡೆಯುವುದನ್ನೆಲ್ಲಾ ಬರೆದುಕೊಂಡು ಬರುವಂತೆ ಮ್ಯಾಜಿಸ್ಟ್ರೇಟರು ತನಗೆ ಹುಕುಂ ಕೊಟ್ಟಿದಾರೆಂದು ಹೇಳಿದನು ಸಭಿಕರು ಆಗ ಮೀಟಿಂಗ್ ನಡಿಸದೆ, ಆ ಪೋಲೀಸಿನವನ ಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟಿಗೆ ಅರ್ಜಿ ಕೊಟ್ಟರು ಮ್ಯಾಜಿಸ್ಟ್ರೇಟರೂ ಪೋಲೀಸ್ ಸೂಪರಿಂಟೆಂಡೆಂಟರೂ ಪ್ರಸನ್ನಪಟ್ಟು, ಆ ಪೋಲೀಸ್ ಇನ್ಸ್‌ಪೆಕ್ಟರ ನಡವಳಿಕೆಯನ್ನು ತಕ್ಕದಾಗಿ ಗಮನಕ್ಕೆ ತಂದುಕೊಂಡು ಸರಿಪಡಿಸುತ್ತೇವೆಂದು ಆ ಮೆಂಬರುಗಳಿಗೆ ತಿಳಿಸಿರುತ್ತಾರೆ

ಅನಂತಪುರದ ಜಿಲ್ಲಾ ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗ್ ನಡೆದಾಗ, ಮೆಂಬರುಗಳು ಪ್ರೆಸಿಡೆಂಟಿಗೆ ಅಂತಿ ಹಾಸಲು ಕೊಡದೆ (ನೆಟ್‌ವೈಡು) ಕಾಗದಗಳನ್ನು ಒಲೆಯಬಹುದೆಂದೂ, ಅಂಥಾ ಕಾಗದಗಳಿಗೆ ಮೆಂಬರು ಟಪ್ಪಾಲ್ ಖರ್ಚನ್ನು ಕೊಟ್ಟು ಪ್ರೆಸಿಡೆಂಟರು ತೆಗೆದುಕೊಳ್ಳಬೇಕೆಂದೂ ತೀರ್ಮಾನ ಮಾಡಿದರು ಪ್ರೆಸಿಡೆಂಟರು ಈ ತೀರ್ಮಾನವನ್ನು ಸ್ಯಾಂಕ್ಷನ್ ಬಗ್ಗೆ ಗವರ್ನಮೆಂಟಿಗೆ ಕಳುಹಿಸಿ, ಮೆಂಬರುಗಳಿಂದ ಬಂದ ಕಾಗದಗಳಿಗೆ ಸರ್ಕಾರದ ಹಣದಿಂದ ಅಂಚೆವೆಚ್ಚ ಕೊಟ್ಟು ತೆಗೆದುಕೊಳ್ಳುತ್ತಿದ್ದರು ಕಾಲಕ್ರಮದಲ್ಲಿ ಗವರ್ನಮೆಂಟಿನವರು ಮೇಲ್ಕಂಡ ತೀರ್ಮಾನದಂತೆ ಸ್ಯಾಂಕ್ಷನ್ ಮಾಡಲಾರೆವೆಂದು ಹುಕುಂ ಕೊಟ್ಟರು ಪ್ರೆಸಿಡೆಂಟರು ಈ ಹುಕುಂ ಅನುಸರಿಸಿ, ಮೆಂಬರುಗಳಿಂದ ಅಂಚೆವೆಚ್ಚ ಕೊಡದೆ ಬಂದ ಕಾಗದಗಳನ್ನು ಮೊದಲಿನಂತೆ ತೆಗೆದುಕೊಳ್ಳದೆ ತಿರಸ್ಕರಿಸಿದರು ಆ ಡಿಸ್ಟ್ರಿಕ್ಟ್ ಬೋರ್ಡಿನ ಒಬ್ಬ ಮೆಂಬರು ಅವರ ಮೇಲೆ ತನ್ನ ಮೂರು ಕಾಗದಗಳನ್ನು ಪ್ರೆಸಿಡೆಂಟರು ತೆಗೆದುಕೊಳ್ಳದೆ ನಿರಾಕರಿಸಿರುತ್ತಾರೆಂತಲೂ, ಆ ಮೂರು ಕಾಗದಗಳ ಟಪ್ಪಾಲ್ ಖರ್ಚು ೯ ಆಣೆಯನ್ನು ಕೋರ್ಟು ಖರ್ಚನ್ನೂ ಅವರಿಂದ ಕೊಡಿಸಿಕೊಡಬೇಕೆಂತಲೂ, ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ತೀರ್ಮಾನವಾಗಿರುವ ಪ್ರಕಾರ ಅವರು ಹಣವನ್ನು ಕೊಟ್ಟು ಕಾಗದಗಳನ್ನು ತೆಗೆದುಕೊಳ್ಳಬೇಕೆಂದು ವಿಧಿಸಬೇಕೆಂತಲೂ ಪ್ರೆಸಿಡೆಂಟರ ಮೇಲೆ ಸಬುಕೋರ್ಟಿನ ಮುನ್‌ಸೀಫ್ ಕೋರ್ಟಿನಲ್ಲಿ ದಾವಾ ಮಾಡಿದಾರೆ

ಮೂಡುಬಿದರೆಗೆ ಸೇರಿದ ಕೆಲ್ಲಂಜೆ ಗ್ರಾಮದ ಶಾನುಭೋಗರಾಗಿರುವ ಮಾರ್ಟಿನ್ ರೊಡ್ರಿಗಸ್ ಎಂಬುವರು ಪೆರಾರ ಗ್ರಾಮದಲ್ಲಿರುವ ತಮ್ಮ ಹೊಸಾ ಗದ್ದೆ ತೋಟ ಸ್ಥಳದಲ್ಲಿ ಐದಾಳು ಆಳವಾದ ಒಂದು ಬಾವಿಯನ್ನು ಕಳೆದ ವರ್ಷ ತೋಡಿಸಿದ್ದರು ಈಗ ಸುಮಾರು ಮೂರು ಆಳು ನೀರಿದೆ ೧೧ ನೇ ತಾರೀಖಿಗೆ ಆ ಬಾವಿಯೊಳಗೆ ಗುರುಗುರು ಗರ್ಜನೆ ಕೇಳುತ್ತಿತ್ತು ಅದನ್ನು ಮಧ್ಯಾಹ್ನದ ವರೆಗೆ ಯಾರೂ ಗಣಿಸಲಿಲ್ಲ, ಆಗ ಬಾವಿಗೆ ಏನೋ ಒಂದು ಮೃಗವು ಬಿದ್ದು ಈಜಾಡುತ್ತಾ ಇದೆ ಎಂಬ ವರ್ತಮಾನವು ಪ್ರಸಿದ್ಧವಾದಾಗ ಹುಡುಗರು ಮುಂತಾದವರು ಹೋಗಿ ನೋಡುವಾಗ್ಗೆ ಒಂದು ಹುಲಿಯು ನೀರಲ್ಲಿ ಈಜಾಡುತ್ತಾ ಇತ್ತು ವರ್ತಮಾನವು ಕ್ಷಣಮಾತ್ರದಲ್ಲಿ ಹಬ್ಬಿಕೊಂಡು ಅನೇಕ ಜನರು ನೆರೆದರು ಈಜಾಡಿ ದಣಿದಿರುವ ಪ್ರಾಣಿಯ ಮೇಲೆ ಕಸಿಕರ ಪಟ್ಟಿ ದೊಡ್ಡದೊಂದು ಕಲ್ಲಿನ ಚಪ್ಪಡಿ, ಅದು ಅದರ ಶಿಕ್ಕೆನ ಮೇಲೆ ಬಿದ್ದು ಸ್ವಲ್ಪ ತಪ್ಪಿತು, ದುರ್ಭಾಗದಿಂದ ತಲೆಕೆಳಗಾಗಿ ಕೀಲಾಡುತ್ತಾ ಸ್ವಲ್ಪ ಸಮಯದಲ್ಲೇ ಮಾಡಿ ಉದ್ಧರಿಸಿ ತೀರಿಸಿಯುತ್ತಾ ಬರುವ ಹಾಗೆ ತೋರಿತು ಆದರೆ ತಲೆ ಎತ್ತಲಾರದೆ ಇದ್ದುದರಿಂದ, ನೀರನ್ನು ಉಚ್ಛ್ವಾಸಿಸಿ ರಕ್ತಸ್ರಾವವಾಗಲಿ ಗಾಯಗಳಾಗಲಿ ಇಲ್ಲದೆ ಮೃತಿಯನ್ನೈದಿತು ನೆತ್ತಿಯಿಂದ ಬಾಲದ ಕೊನೆ ತನಕ ಉದ್ದ ಸುಮಾರು ೮ ಅಡಿ, ಎತ್ತರ ಸುಮಾರು ೩ ಅಡಿ ಬಾಯಲ್ಲಿ ಮೂರು ಹಲ್ಲುಗಳು ಉದುರಿಹೋಗಿರಲಿಲ್ಲ ಸುಮಾರು ಒಂದು ವರ್ಷ ಪ್ರಾಯವಾಗಿ ಬಹುದೆಂದು ಊಹಿಸುತ್ತಾರೆ ಕಿವಿಗಳಲ್ಲೂ ಮೈಯಲ್ಲೂ ನಾನಾ ತರದ ಉಣ್ಣೆಗಳು ಇದ್ದವು ಅದು ಗಂಡು ಹುಲಿ ಮರಿಯನ್ನು ಶಾಲೆಯ ಮಕ್ಕಳೆಲ್ಲಾ ಚೆನ್ನಾಗಿ ನೋಡಿದರು ಶವವನ್ನು ಬಾವಿ ತೋಡಿದವರು ಒಯಿದರು ಚರ್ಮವು ಮುದುಕನಲ್ಲಿನಲ್ಲಿ ತೋಡಲ್ಪಟ್ಟದ್ದಾಗಿ ಅದನ್ನಿಸಿಕೊಳ್ಳಲಿಕ್ಕೆ ಸುಕಾಲವಾದದ್ದೇನೂ ಇಲ್ಲದ ಇದ್ದದ್ದರಿಂದ, ಮೂರಕಲ್ಲನ್ನೇ ಪರತಿ ಪರತಿ ಅದರ ಎಲ್ಲಾ ಉಗುರುಗಳು ಸವೆದು ಮಾಂಸ ತೋರುತ್ತಿತ್ತು ಕೋರೆಹಲ್ಲುಗಳ ನಡುವೆ ಇರುವ ಮುಂಭಾಗದ ಹಲ್ಲುಗಳು ಸಣ್ಣವೆ ಕಾಣುತ್ತವೆ ದೊಡ್ಡವಾಗಿದ್ದವು ಈ ಹಲ್ಲುಗಳು ಪೂರ್ಣ ವಿಕಾಸ ಹುಲಿಗೆ ಸಹ ನಾಯಿಯ ಹಲ್ಲುಗಳಷ್ಟು ದೊಡ್ಡವಾಗಿರುವುದಿಲ್ಲ ನರಿ ಗಾದರೋ ಈ ಹಲ್ಲುಗಳು ಬಹಳ ಉದ್ದವಾಗಿಯೂ ಕೊರಾಗಿಯೂ ಇವೆ

ವಿದೇಶ ವರ್ತಮಾನಗಳು

ತುರ್ಕಿ ರಾಜ್ಯದ ಸುಲ್ತಾನರವರು ಇಷ್ಟರಲ್ಲೇ ದೇಶಸಂಚಾರ ಹೊರಟು ಯೂರೊಪ್ಪಿನ ಮುಖ್ಯ ರಾಜಧಾನಿಗಳಿಗೆ ಹೋಗಿಬರುವವರಾಗಿದಾರೆಂದೂ, ಡಿಸೆಂಬರ್ ತಿಂಗಳಲ್ಲಿ ವಿಲಾಯತಿಗೆ ಹೋಗುವರೆಂದೂ ಪ್ರಕಟವಾಗಿದೆ

ದಕ್ಷಿಣ ಆಫ್ರಿಕಕ್ಕೆ ಸೇರಿದ ಪ್ರಿಟೋರಿಯಾ ಪಟ್ಟಣದಲ್ಲಿ ರೆಜಿಸ್ಟ್ರೇಷನ್ ಸರ್ಟಿಫಿಕೇಟುಗಳನ್ನು ಸುಟ್ಟು ಹಾಕಿದಂಥಾ ೬೦ ಮಂದಿ ಏಷ್ಯಾ ಪ್ರಜೆಗಳಿಗೆ ಅಲ್ಲಿನ ಸರ್ಕಾರದವರು ತಲಾ ೬೦ ರೂಪಾಯಿ ಜುಲ್ಮಾನೆಯನ್ನು ವಿಧಿಸಿದಾರೆ.

ಅಮೇರಿಕಕ್ಕೆ ಸೇರಿದ ಫಿಲಡೆಲ್ಫಿಯಾ ನಗರದಲ್ಲಿ ಟ್ರಾಂ ಗಾಡಿಗಳ ಕಂಪನಿ ಸೇವಕರು ಕೆಲಸಕ್ಕೆ ಹೋಗದೆ ನಿಂತುಬಿಟ್ಟದ್ದಲ್ಲದೆ ದಂಗೆ ಮಾಡಿ ಇಪ್ಪತ್ತು ಭಾರಿ ಟ್ರಾಂ ಗಾಡಿಗಳನ್ನು ಒಡೆದು ಸುಟ್ಟುಬಿಟ್ಟರು ಪೋಲೀಸಿನವರಿಗೂ ಅವರಿಗೂ ದೊಂಬಿ ಜಗಳವಾಗಿ ೭೦೦ ಜನರು ಗಾಯಪಟ್ಟಿದಾರೆ

ತುರ್ಕಿ ಗವರ್ನಮೆಂಟಿನವರು ಸಾಲೋನಿಕಾ, ಬಸ್ರಾ, ಸ್ಮರ್ನಾ, ಬೈರೂತ್, ಬಾಗ್ದಾದ್, ಎರ್ಜರೂಂ ಎಂಬೀ ಅಧಿಪತ್ಯಗಳಲ್ಲಿರುವ ಜೆಂಡಾರ್ಮರಿ ಎಂಬ ಸೈನ್ಯಗಳನ್ನು ಬದಲಾವಣೆ ಮಾಡಿ ಉತ್ತಮ ಸ್ಥಿತಿಗೆ ತಂದಿಡುವುದಕ್ಕೋಸ್ಕರ ಕೆಲವು ಸೈನ್ಯದ ಹುದ್ದೇದಾರರನ್ನು ಆ ಪ್ರಾಂತ್ಯಗಳಿಗೆ ಕಳುಹಿಸಿದಾರೆ

ಸಯಾಂ ರಾಜ್ಯದ ರಾಣಿಯವರಿಗಾಗಿ ವಿಲಾಯತಿಯ ಜವಾಹಿರಿ ವರ್ತಕರು ಒಂದೂವರೆ ಲಕ್ಷ ರೂಪಾಯಿನ ನಗಗಳನ್ನು ಸಯಾಂ ರಾಜಧಾನಿಯಾದ ಬ್ಯಾಂಕಾಕ್ ಪಟ್ಟಣಕ್ಕೆ ಕಳುಹಿಸಿಕೊಟ್ಟರು ಈ ಜವಾಹಿರಿ ಪೆಟ್ಟಿಗೆಯು ದಾರಿಯಲ್ಲೇ ಗ್ರೀಸ್ ಲಿಯಾಗಿ ಯಾರೋ ಅಪಹರಿಸಿರುತ್ತಾರೆಂದು ಪ್ರಕಟವಾಗಿದೆ

ಫ್ರಾನ್ಸಿನ ಪ್ರಾಚೀನಕಾಲದ ರಾಜರ ಕಿರೀಟದಲ್ಲಿದ್ದ ಪ್ರಸಿದ್ಧವಾದ ಒಂದು ವಜ್ರವು ಕಳೆದ ವಾರ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲಿ ೫೫ ಲಕ್ಷ ರೂಪಾಯಿಗೆ ಕ್ರಯವಾಯಿತು ಇದು ೪೪ ಕ್ಯಾರೆಟ್ ತೂಕವುಳ್ಳದ್ದು ಈಗ ಕೊಟ್ಟ ಕ್ರಯವು ಅದರ ಯೋಗ್ಯತೆಗೆ ಕಡಮೆಯಾಗಿರುತ್ತದೆಂದು ತಿಳಿಯುವುದು

ಬೆಲ್ಜಿಯಂ ರಾಜ್ಯದಲ್ಲಿರುವ ವಿಲ್ಲಿಬ್ರೋಕ್ ಎಂಬ ಭಾರೀ ನಾಲೆಯು ಪ್ರವಾಹದ ದೆಸೆಯಿಂದ ಒಡೆದುಹೋಯಿತು ಅಪಾರವಾದ ನೀರು ಎರಡು ಕಡೆಗಳಲ್ಲೂ ಇರುವ ಮನೆ ಮಠಗಳಿಗೂ ಕಾರ್ಖಾನೆಗಳಿಗೂ ನುಗ್ಗಿ ಹಾಳುಮಾಡಿ ನಷ್ಟಪಡಿಸುತ್ತದೆ ನಾನಾರು ಜನರು ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ಜೀವನಕ್ಕೆ ಕಷ್ಟಪಡುತ್ತಿದಾರೆ

ತುರ್ಕಿ ರಾಜ್ಯದ ಮಾಜಿ ಸುಲ್ತಾನ್ ಅಬ್ದುಲ್ ಹಮೀದ್ ಯವರ ಬಾಬತು ಬಹು ಅಮೂಲ್ಯವಾದ ಅನೇಕ ವಸ್ತುಗಳನ್ನು ಹರಾಜು ಮೂಲಕ ವಿಕ್ರಯ ಮಾಡುವರು ಇವುಗಳನ್ನು ಪೇರಿಸ್ ರಿ ಶಿಲ್ಪಿಗಳ ಪ್ರಸಿದ್ಧ ಚಿತ್ರಗಾರರು ಬರೆದಿರುತ್ತಾರಾದ್ದರಿಂದ ಅವುಗಳಿಗೆ ಬಹಳ ಹೆಚ್ಚಾದ ಬೆಲೆ ದೊರಕೀತೆಂದು ಹೇಳುತ್ತಾರೆ

ಆಸ್ಟ್ರೇಲಿಯಾ ದ್ವೀಪದ ಇಂಗ್ಲಿಷ್ ಸೈನ್ಯಗಳನ್ನು ಉತ್ತಮಸ್ಥಿತಿಗೆ ತಂದಿಡಬೇಕೆಂದೂ, ಇದಕ್ಕೆ ಹಿಂದುಸ್ಥಾನದ ಸರ್ವ ಸೇನಾಪತಿಯಾದ ಲಾರ್ಡ್ ಕಿಚ್ನರ್ ಯವರನ್ನು ಕೆಲವು ಕಾಲದ ಮಟ್ಟಿಗೆ ಅಲ್ಲಿಗೆ ಕಳುಹಿಸಿಕೊಡಬೇಕೆಂದೂ ಆ ದ್ವೀಪದ ಗವರ್ನಮೆಂಟಿನವರು ಇಂಗ್ಲಿಷ್ ಗವರ್ನಮೆಂಟಿನವರನ್ನು ಬರೆದು ಕೇಳಿಕೊಂಡಿದಾರೆ

ಸ್ಪೆಯಿನ್ ರಾಜ್ಯದ ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ಒಂದು ದೇವಾಲಯದೊಳಗೆ ಸಾವಿರಾರು ಜನರು ದೇವಾರಾಧನೆಗಾಗಿ ಸೇರಿದ್ದರು ಎರಡನೆಯ ಅಂತಸ್ತಿನಲ್ಲಿದ್ದ ೨೦೦ ಮಂದಿ ಗಾಯಕರು ಆ ಅಂತಸ್ತು ಕುಸಿದ ಕೆಳಗೆ ಬಿದ್ದುಬಿಟ್ಟರು ಅದರ ದೆಸೆಯಿಂದ ಹತ್ತಾರು ಜನರು ಮೃತಪಟ್ಟದ್ದಲ್ಲದೆ ೮೦-೯೦ ಜನರಿಗೆ ಜಖಂ ಆಗಿರುತ್ತದೆ

ತುರ್ಕಿ ರಾಜ್ಯದ ಮಾಜಿ ಸುಲ್ತಾನ್ ಅಬ್ದುಲ್ ಹಮೀದ್‌ಯವರ ಸ್ವಂತ ಖಜಾನೆಯಿಂದ ಇದ್ದ ಹಣ ಹಿಂಪಾಯವರು ಜರ್ಮನಿ ನ ಸಿಮ್ಮ ಬ್ಯಾಂಕ್ನಲ್ಲಿ ೨೮ ಲಕ್ಷ ರೂಪಾಯಿ ಕೊಟ್ಟು ಒಂದು ಸ್ಥಿರ ಸ್ವತ್ತನ್ನು ತೆಗೆದುಕೊಂಡಿದಾರೆ. ಈ ಹಣವು ಅಭಿವೃದ್ಧಿಗೆ ಬಂದರೆ ಕೆಡುಕುಂಟಾಗುವುದೆಂದು ತುರ್ಕಿ ರಾಜ್ಯದ ನವೀನ ಸಂಘದವರಿಗೆ ಸಂಶಯ ಹುಟ್ಟಿದೆ

ಬನಾರ್ ಅಧಿಪತ್ಯದ ದೇಶೀಯ ದೊಡ್ಡ ಮನುಷ್ಯನಾದ ಮಿಸ್ಟರ್ ಓಷನ್ ಥೈನ್ ಎಂಬಾತನು ತನ್ನ ಹೆಂಡತಿ ಮಕ್ಕಳು ಪುತ್ರಿಯರೊಡನೆ ವಿಲಾಯತಿಗೆ ಹೋಗಿರುತ್ತಾನೆ ಇವನಿಗೆ ಚಕ್ರವರ್ತಿ ಸಾರ್ವಭೌಮರವರು ಕಳೆದ ಗುರುವಾರ ರಾಜಭವನದಲ್ಲಿ ಭೇಟಿ ದಯಪಾಲಿಸಿದರು ಚಕ್ರವರ್ತಿಯವರು ಬನಾರ್ ಸ್ತ್ರೀಯರಿಗೆ ಇದುವರೆಗೆ ಭೇಟಿಯನ್ನು ಕೊಟ್ಟಿರಲಿಲ್ಲ

ಇಟಲಿ ರಾಜ್ಯದ ರಾಣಿಯವರ ದೇಹಸ್ಥಿತಿಯು ಬಹು ಸೂಕ್ಷ್ಮವಾದದ್ದು ಆಳೆಯವರು ಕೆಲವು ಕಾಲಕ್ಕೆ ಮುಂಚಿ ಮೋಟಾರ್ ಗಾಡಿಯಲ್ಲಿ ಕೇಳಿತು ಸಂಚಾರ ಮಾಡಿಕೆಂದು ಬಂದರು ಅದು ದೇಹದಲ್ಲಿ ಏನೋ ಒಂದು ವಿಧವಾದ ಬಾಧೆಯನ್ನುಂಟುಮಾಡಿರುತ್ತದೆ ಅವರಿಗೆ ರೋಗದ ಬಾಧೆ ಏನೂ ಇಲ್ಲವಾದರೂ ದಿನೇ ದಿನೇ ದುರ್ಬಲವು ಹೆಚ್ಚುತ್ತಾ ಕ್ಷೀಣರಾಗಿಯಾಗುತ್ತಿದಾರೆ

ಲಂಡನ್ ಪಟ್ಟಣದಲ್ಲಿ ಲೇವಾದೇವಿ ಮಾಡುತ್ತಿದ್ದ ಭಾರೀ ವರ್ತಕನಾದ ಮೈಕಲ್ ಸಿ ಹಾರಿಸನ್ ಎಂಬುವನು ಕಾಲವಾದದ್ದರಿಂದ ಅವನ ವಾರಸುದಾರರು ಅವನ ಆಸ್ತಿಯ ಮೇಲೆ ಒಂದೂವರೆ ಕೋಟಿ ರೂಪಾಯಿ ತೆರಿಗೆ ಸಲ್ಲಿಸಬೇಕಾಗಿದೆ ಆತನು ತನ್ನ ಕೈಕೆಳಗೆ ಕೆಲಸ ಮಾಡುತ್ತಿದ್ದವರಿಗೂ, ಧರ್ಮಕಾರ್ಯ ಗಳಿಗೂ ೧೫,೦೦೦ ರೂಪಾಯನ್ನು ಉದಾರವಾಗಿ ಹಂಚಿಕೊಡಬೇಕೆಂದು ಉಯಿಲು ಬರೆದಿರುತ್ತಾನೆ

ವಿಲಾಯತಿಗೆ ಸೇರಿದ ಮ್ಯಾಂಚೆಸ್ಟರ್ ಪಟ್ಟಣದಲ್ಲಿ ವರ್ತಕ ಮಂಡಲಿಯ ಪ್ರೆಸಿಡೆಂಟರಾದ ಮಿ॥ ಅಪ್‌ವರ್ತ್‌ಯವರು ಕಳೆದ ವಾರ ಒಂದು ಸಭೆಯಲ್ಲಿ ಹಿಂದುಸ್ಥಾನದಲ್ಲಿ ಹಿಂದುಸ್ಥಾನದ ಸ್ವದೇಶೀ ಏರ್ಪಾಡು ತುಂಬಾ ಸಂತೋಷವನ್ನುಂಟುಮಾಡಿರುತ್ತದೆ ಈಗ ಅದು ದಿನೇ ದಿನೇ ಹರಡಿಕೊಂಡು ಅಭಿವೃದ್ಧಿಯಾಗುತ್ತಿರುವ ವಿಷಯದಲ್ಲಿ ಮ್ಯಾಂಚೆಸ್ಟರ್ ಕಾರ್ಖಾನೆಗಳ ಯಜಮಾನರುಗಳಿಗೆ ಸ್ವಲ್ಪವೂ ಅಸೂಯೆ ಇರುವುದಿಲ್ಲ ಎಂಬುದೇ

ತುರ್ಕಿ ರಾಜ್ಯದ ಹೊಸ ಮಂತ್ರಿಯವರಾದ ಪವೆಟ್ ಪಾಷಾರವರು ಟರ್ಕಿಯಲ್ಲಿರುವ ಗ್ರೀಕ್ ಜನರು ಅಂತರಂಗದಲ್ಲೇ ರಾಜದ್ರೋಹ ಕೃತ್ಯಗಳನ್ನು ನಡೆಸುವುದಕ್ಕಾಗಿ ಆಯುಧ ಮದ್ದು ಗುಂಡುಗಳನ್ನು ಸಂಗ್ರಹಮಾಡುತ್ತಿರುವುದನ್ನು ನೋಡಿ, ಅವರಿಗೆಲ್ಲಾ ಬುದ್ಧಿವಾದ ಸಹಿತವಾದ ಎಚ್ಚರಿಕೆಯ ಮಾತನ್ನು ಹೇಳಿದರು ಐವಾಲಿಕ್ ಎಂಬ ಪ್ರಾಂತ್ಯದಲ್ಲಿ ಗ್ರೀಕರ ಬಳಿ ಇದ್ದ ನಾಲ್ಕು ಸಾವಿರ ಎಂಡೆಕೊಳಗಳನ್ನು ಕಿತ್ತುಕೊಂಡರು

ಇಟಲಿ ರಾಜ್ಯದ ದಕ್ಷಿಣಭಾಗದಲ್ಲಿರುವ ಮೆಸ್ಸೀನಾದಲ್ಲಿ ಭೂಕಂಪ ಸಂಭವಿಸಿ ಅನಾಹುತವಾದ ಸಂದರ್ಭದಲ್ಲಿ ರಷ್ಯಾ ರಾಜ್ಯದ ಹಡಗಿನ ಸೈನಿಕರು ಅನೇಕ ಸಹಾಯ ಸಂಪತ್ತುಗಳನ್ನು ಮಾಡಿದರು ಈ ಸಹಾಯವನ್ನು ಪಡೆದ ಪ್ರಜೆಗಳು ಸೇರಿ ರಷ್ಯಾ ಚಕ್ರವರ್ತಿಯವರು ಅಲ್ಲಿಗೆ ಬಂದಾಗ್ಗೆ ಅವರಿಗೆ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸುವುದಕ್ಕಾಗಿ ಚಕ್ರವರ್ತಿಯವರಿಗೆ ಒಂದು ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಬೇಕೆಂದು ಸಿದ್ಧಮಾಡಿಕೊಂಡಿದಾರೆ

ರಷ್ಯಾ ರಾಜ್ಯದ ಡ್ಯೂಮಾ ಪಾರ್ಲಿಮೆಂಟಿನ ಮೆಂಬರುಗಳೂ ಕೆಲವು ಅಧಿಕಾರಿಗಳೂ ಈಗ ವಿಲಾಯತಿಯಲ್ಲಿರುತ್ತಾರಷ್ಟೆ ಅವರಿಗೆ ಕಳೆದ ಗುರುವಾರ ಚಕ್ರವರ್ತಿ ಸಾರ್ವಭೌಮರವರು ಬಕಿಂಗ್ಹಾಂ ಎಂಬ ರಾಜಭವನದಲ್ಲಿ ಭೇಟಿಯನ್ನು ದಯಪಾಲಿಸಿದ್ದಲ್ಲದೆ ಅವರನ್ನು ಕುರಿತು—ನಿಮ್ಮ ಡ್ಯೂಮಾ ಪಾರ್ಲಿಮೆಂಟಿನ ಕಾರ್ಯಾಚರಣೆಗಳನ್ನು ಬಹು ಕುತೂಹಲದಿಂದ ತಿಳಿದುಕೊಳ್ಳುತ್ತಿದ್ದೇವೆಂತಲೂ, ಮತ್ತೊಂದಾವರ್ತಿ ರಷ್ಯಾಗೆ ಬರುವವರಾಗಿದ್ದೇವೆಂತಲೂ ಅಪ್ಪಣೆ ಕೊಡಿಸಿದರು.

ರಷ್ಯಾ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ವಾಂತಿಭೇದಿ ಉಪದ್ರವು ಹೆಚ್ಚುತ್ತಾ ಇದೆ ಎಂದೂ, ೫೦ ಜನರಿಗೆ ಆ ಉಪದ್ರ ಕಾಣಿಸಿಕೊಂಡು, ೧೦ ಮರಣಗಳಾದವೆಂದೂ ತಂತಿ ವರ್ತಮಾನ ಬಂದಿತ್ತು ಈಚೆಗೆ ವಾಂತಿಭೇದಿ ಉಪದ್ರ ತಗಲಿದ ೩೫೦ ಮಂದಿ ರೋಗಿಗಳನ್ನು ಸರ್ಕಾರದವರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮಾಡುತ್ತಿದಾರೆ ಇದನ್ನು ನೋಡಿ ಗವರ್ನಮೆಂಟಿನವರು ರಾಜಧಾನಿಯ ಆರೋಗ್ಯ ವಿಚಾರದಲ್ಲಿ ಕೆಲವು ಹೊಸ ಏರ್ಪಾಡುಗಳನ್ನು ಮಾಡಬೇಕೋಸುಗ ೧೫ ಕೋಟಿ ರೂಪಾಯಿ ಸಾಲ ಮಾಡಿ ಖರ್ಚುಮಾಡುವವರಾಗಿದಾರೆ

ಪರ್ಷಿಯಾ ರಾಜ್ಯದ ಸುಲ್ತಾನರವರು ಪಾರ್ಲಿಮೆಂಟನ್ನು ಪುನಃ ಸ್ಥಾಪಿಸುವುದಾಗಿ ಮಾತುಕೊಟ್ಟು ಮೆಂಬರುಗಳಾಗತಕ್ಕವರ ಯೋಗ್ಯತೆಯ ವಿಷಯದಲ್ಲಿ ಕೆಲವು ಹೊಸ ನಿಬಂಧನೆಗಳನ್ನು ಮಾಡಿರುತ್ತಾರೆ ಮೆಂಬರುಗಳ ಸಂಖ್ಯೆಯನ್ನು

೧೩೩ ರಿಂದ ೧೨೦ ಕ್ಕೆ ಇಳಿಸಿದಾರೆ. ಆಸ್ತಿಯಾಗಲಿ, ಖಂಡಿತವಾದ ವರಮಾನವಾಗಲಿ ಇಲ್ಲದಿದ್ದರೂ ವಿದ್ಯಾವಂತರಾಗಿದ್ದ ಮಾತ್ರಕ್ಕೇನೇ ಯಾರು ಬೇಕಾದರೂ ಚುನಾವಣೆಯ ಹಕ್ಕನ್ನು ಪಡೆಯಬಹುದಾಯಿತು ಯೆಹೂದ್ಯರೂ, ಪಾರಸಿ ಜನರೂ, ಕ್ರೈಸ್ತರೂ ತಮ್ಮಲ್ಲೇ ಒಬ್ಬೊಬ್ಬ ಮೆಂಬರನ್ನು ಚುನಾಯಿಸಬಹುದೆಂದು ರಿಯಾಯಿತಿಯನ್ನು ತೋರಿಸಿದಾರೆ

ಯೂರೋಪ್ಪಿಗೂ ಹಿಂದುಸ್ಥಾನಕ್ಕೂ ಹಡಗುಗಳು ಹೋಗಿ ಬರಬೇಕಾದರೆ ಕೆಂಪುಕಡಲಿನ ಬಳಿ ಇರುವ ಸೂಯಸ್ ಕಾಲುವೆಯನ್ನು ದಾಟಬೇಕು ಈ ಕಾಲುವೆಯನ್ನು ನಿರ್ಮಾಣಮಾಡಿ, ಅದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕೆ ಒಂದು ಕಂಪನಿಯು ಏರ್ಪಾಡಾಗಿದೆ ಈ ಕಂಪನಿಯವರು ಈಜಿಪ್ಟ್ ರಾಜ್ಯದಿಂದ ಆ ಕಾಲುವೆಯನ್ನು ಕೆಲವು ವರುಷಗಳಿಗೆ ಆಧಾರಮಾಡಿಕೊಂಡಿದಾರೆ. ಈ ಆಧಾರದ ಅವಧಿಯು ಪೂರೈಸುತ್ತಾ ಬಂದಿರುವುದರಿಂದ ಕಂಪನಿಯವರು ಅದನ್ನು ಇನ್ನೂ ದೀರ್ಘಕಾಲ ತಮ್ಮ ಅನುಭವದಲ್ಲಿಟ್ಟುಕೊಂಡಿರುವಂತೆ ಪ್ರಯತ್ನಪಟ್ಟಿದಾರೆ ಇದಲ್ಲದೆ ಈ ಸೂಯಸ್ ಕಾಲುವೆಯ ಪಕ್ಕದಲ್ಲಿ ಇನ್ನೊಂದು ಕಾಲುವೆಯನ್ನು ತೋಡಿ ಹಡಗುಗಳ ಸಂಚಾರಕ್ಕೆ ಅನುಕೂಲಮಾಡಬೇಕೆಂದು ಅದೇ ಕಂಪನಿಯವರು ಆಲೋಚನೆ ಮಾಡುತ್ತಿದಾರೆ

ಚಕ್ರವರ್ತಿ ಸಾರ್ವಭೌಮರವರ ಜನ್ಮೋತ್ಸವವು.

ತಾಲ್ಲೂಕುಗಳಲ್ಲಿ ನಡಿಸಲ್ಪಟ್ಟ ವಿಭವಗಳು.

ಅರಸೀಕೆರೆ.

ಕಳೆದ ೨೫ ನೇ ಶುಕ್ರವಾರ ಶ್ರೀಮನ್ ಇಂಡ್ಯಾ ಚಕ್ರವರ್ತಿಯವರ ಜನ್ಮದಿನವಾದ ಪ್ರಯುಕ್ತ ಅರಸೀಕೆರೆ ಮುಖಂಡರೂ ತಾಲ್ಲೂಕು ಅಧಿಕಾರಿಗಳೂ ಅಮಲ್ದಾರರವರು ಶ್ರೀಕೃಷ್ಣರಾಜ ರೀಡಿಂಗ್ ರೂಂನಲ್ಲಿ ಸಭೆ ಸೇರಿ, ಇಂಗ್ಲಿಷ್ ಪ್ರಭುತ್ವದಿಂದ ನಮಗೂ ಇಂಡ್ಯಾದೇಶಕ್ಕೂ ಉಂಟಾಗಿರುವ ಸೌಖ್ಯಗಳನ್ನು ಕುರಿತು ವಿವರಿಸಿ ಶ್ರೀಮನ್ ಎಡ್ವರ್ಡ್ ಪ್ರಭುಗಳಿಗೂ ಅವರ ಕುಟುಂಬಕ್ಕೂ ಭಗವಂತನು ಸಕಲ ಸೌಭಾಗ್ಯ ಸುಖಗಳನ್ನು ದಯಪಾಲಿಸುವಂತೆ ಪ್ರಾರ್ಥನೆ ಮಾಡಲಾಯಿತು ...

ಮೈಸೂರು

ಕಳೆದ ಜೂನ್ ೨೫ ನೇ ಶನಿವಾರ ಸಾಯಂಕಾಲ ೬ ಗಂಟೆಗೆ ಇಲ್ಲಿಯ ...

ಹುಣಸೂರು.

ಇಂಗ್ಲೆಂಡ್ ದೇಶದ ರಾಜರೂ ಇಂಡ್ಯಾ ಚಕ್ರವರ್ತಿಯವರೂ ಆದ ೭ ನೇ ಎಡ್ವರ್ಡ್ ಸಾರ್ವಭೌಮರವರ ಜನ್ಮೋತ್ಸವದ ನಿಮಿತ್ತ ಕಳೆದ ತಿಂಗಳ ೨೫ ನೇ ಶುಕ್ರವಾರ ಮಧ್ಯಾಹ್ನ ... ಗಂಟೆ ...

ತಾಲ್ಲೂಕು ವರ್ತಮಾನಗಳು.

ದೇವನಹಳ್ಳಿ.—ಈ ಊರಿನ ಅಕ್ಕಪಕ್ಕದ ಹಳ್ಳಿಗಳ ರೈತರು ಎಲ್ಲಾ ಹೊಲಗಳನ್ನು ಉತ್ತು ಬಿತ್ತನೆಗೆ ತಯಾರುಮಾಡಿ ಬೀಜ ಬಿತ್ತಲು ಮಳೆ ಬರುವುದನ್ನು ಹಾರೈಸುತ್ತಾ ಇದಾರೆ ...

ದರೂ ಮಾಡೋಣವೆಂದರೆ ಕಾಲ ಕೆಟ್ಟದ್ದು. ತಿನ್ನುವದಕ್ಕೆ ಮೊದಲೇ ಇಲ್ಲ. ಕೂಲಿಗೆ ಕರೆಯುವವರು ಯಾರೂ ಇಲ್ಲ. ತಮ್ಮ ತಮ್ಮ ಹೊಟ್ಟೆಗೆ ಸಂಪಾದಿಸಿ ಕೊಳ್ಳುವುದೇ ಕಷ್ಟ. ಅಲ್ಪಸ್ವಲ್ಪ ಇಟ್ಟಿರುವ ಬೆಳೆಗೆ ನೀರಿಲ್ಲದೆ ಹೋದರೆ ಪಕ್ಕದ ತೋಟದ ಭಾವಿಗಳಲ್ಲಿ ರಾತ್ರಿ ಹೊತ್ತು ಕಳ್ಳತನವಾಗಿ ಎತ್ತಿಕೊಳ್ಳುತ್ತಾರೆ. ಈ ರೀತಿಯಾಗಿ ಇವರು ಬೆಳೆ ಬೆಳೆಯುತ್ತಿದ್ದರೆ ಎಷ್ಟು ಮಾತ್ರ ಕಂದಾಯ ಕೊಟ್ಟಾರು ? ಪಟೇಲ್, ಶ್ಯಾನುಭೋಗರ ತಗಾದೆ ಜಾಸ್ತಿಯಾದರೆ ಮನೆಯಲ್ಲಿರುವ ಒಡವೆಗಳನ್ನಾಗಲಿ, ಮತ್ಯಾವದಾದರಾಗಲಿ ಮಾರಿ ಕಂದಾಯ ಕೊಡಬೇಕಾಗಿದೆ. ಬೆಳೆ ಸರಿಯಾಗಿ ಬೆಳೆಯುತ್ತಿದ್ದರೆ ಕಂದಾಯದ ವಸೂಲಿಗೆ ಇಷ್ಟು ಸಾವಕಾಶವೇ ? ಈ ವರ್ಷ ನಮ್ಮ ಸರ್ಕಾರದವರು ತರಿ ಜಮೀನುಗಳಿಗೆ ಕಂದಾಯವನ್ನು ಅರ್ಧ ರಿಮಿಷನ್ ಮಾಡಿ ಬಡವರನ್ನು ಕಾಪಾಡಿದರಷ್ಟೆ. ಅದರಂತೆ ಬಾಗಾಯ್ತು ಜಮೀನಿಗೂ ಅರ್ಧ ರಿಮಿಷನ್ ಆಗಿದ್ದರೆ ಬಡವರಿಗೆ ಉಪಕಾರವಾಗಿದ್ದಿತು. ಈಗಲೂ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ತಮ್ಮ ಘನವಾದ ಚಿತ್ತಕ್ಕೆ ತಂದು ಬಾಗಾಯ್ತಿನ ಅರ್ಧ ಕಂದಾಯವನ್ನು ರಿಮಿಷನ್ ಮಾಡಿಸಿ ಬಡವರನ್ನು ಕಾಪಾಡಬೇಕೆಂದು ಬೇಡುತ್ತೇವೆ —ಇಲ್ಲಿ ನೀರಿಗೆ ಬಹಳ ತೊಂದರೆಯಾಗಿದೆ. ಕಂದವರದ ಕೆರೆ ಕೆಳಗೆ ಇರುವ ಕಿನ್ನರಿ ಗುರಪ್ಪನ ಭಾವಿ ಇನ್ನೂ ತಯಾರಾಗಲಿಲ್ಲ. ಇದು ಜಾಗ್ರತೆ ಆದಲ್ಲಿ ನೀರಿನ ಕಷ್ಟ ತಪ್ಪುವದು.— ಈ ಊರಿಗೆ ರೈಲು ಹಾಕಲು ಇಂಡಿಯಾ ಗವರ್ನಮೆಂಟಿನವರ ಅಪ್ಪಣೆ ಆದಂತೆಯೂ, ಮಿಷನ್ ಆಸ್ಪತ್ರೆಗೆ ಜಾಗಾ ವಗೈರೆ ಸ್ಯಾಂಕ್ಷನ್ ಆಗಿ ಬಂದಿರುವಂತೆಯೂ ವರ್ತಮಾನ ಕೇಳುತ್ತೇವೆ. ಜಾಗ್ರತೆ ರೈಲು ಆದಲ್ಲಿ ಜಟ್ಕಾಗಾಡಿ ಕುದುರೆಗಳ ಕಷ್ಟವೂ, ಪ್ರಯಾಣಿಕರ ತೊಂದರೆಯೂ ತಪ್ಪುವದು —ಈ ಊರಿಗೆ ಎಲ್ಲಾ ಅನುಕೂಲಗಳೂ ಸರಿಹೋಗುತ್ತಾ ಬಂತು. ಆದರೆ ಸಮಸ್ತರಿಗೂ ಬೇಕಾಗಿರುವ ನೀರಿನ ಆಸರೆಯು ಕಡಮೆ. ಇದರ ವಿಷಯದಲ್ಲಿ ಸರ್ಕಾರದವರು ತೊಂದರೆ ಇಲ್ಲದಂತೆ ಮಾಡಿದಲ್ಲಿ ತುಂಬಾ ಉಪಕಾರವೇ ಸರಿ.

ಫ್ರೇಜರ್‌ಟೌನ್.—ಅಂತಿಥವಾಸದ ಗಾಳಿಯು ಜೋರಾಗಿ ಬೀಸುತ್ತಾ ಸೋನೆ ಮಳೆಯು ಬೀಳುತ್ತಾ ಇರುವದರಿಂದ ಥಳ ಚಳಿಯಾಗಿದೆ. ಗಾಳಿಯು ದೆಸೆಯಿಂದ ವ್ಯಾಪಿಸಿಕೊಂಡ ಕಸದಲ್ಲಿ ಗಾಢವಾಗಿ ಜನರಿಗೆ ಬಹಳ ತೊಂದರೆಯನ್ನು ಕೊಡುತ್ತದೆ —ಈ ಊರಿನ ಮುನಿಸಿಪಾಲಿಟಿ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವವರು ಊರಿನ ಶಾಕೀಜನ ವಿಷಯಕ್ಕೆ ತಕ್ಕ ಗಮನ ಕೊಡುತ್ತಿರುವಂತೆ ಕಾಣುವದಿಲ್ಲ. ದೊಡ್ಡ ರಸ್ತೆಗಳನ್ನು ಈಗ ಬೀಸುತ್ತಿರುವ ಬಿರುಗಾಳಿಯು ಶುಚಿ ಮಾಡುತ್ತಿದ್ದಾಗ್ಯೂ ಸಂದುಗೊಂದುಗಳಲ್ಲಿರುವ ಕಸವು ಬಚ್ಚಲುಗಳ ರೊಚ್ಚು ಯಾವ ಅಡಚಣೆಯಿಲ್ಲದೆ ವಿಶ್ರಾಂತಿಯನ್ನು ಅನುಭವಿಸುತ್ತವೆ. ಕೆರೆಯಲ್ಲಿ ಬಟ್ಟೆ ಒಗೆಯುವದರಿಂದ ನಮ್ಮ ಪೋಲೀಸ್ ಸೂಪರಿಂಟೆಂಡರ ರಿಪೋರ್ಟಿನ ಮೇರೆ ನಮ್ಮ ಡೆಪ್ಯುಟಿ ಅಮಲ್ದಾರರು ಒಬ್ಬ ಗಾಣಿಗರ ಹೆಂಗಸಿಗೆ ನಾಲ್ಕಾಣೆ ಜುಲ್ಮಾನೆ ವಿಧಿಸಿದಂತೆಯೂ, ಈಗ ಒಬ್ಬಿಬ್ಬರು ಬ್ರಾಹ್ಮಣ ಹೆಂಗಸರ ಮೇಲೆ ಮೊಕದ್ದಮೆ ಮಾಡಿರುವಂತೆಯೂ ವರ್ತಮಾನವಿದೆ. ಜನಗಳ ಸೌಲಭ್ಯಕ್ಕಾಗಿ ಸ್ನಾನಘಟ್ಟ ಮುಂತಾದದ್ದನ್ನು ಏರ್ಪಡಿಸದೆ ಮಾಮೂಲಿನ ಪ್ರಕಾರ ಬಟ್ಟೆ ವಗೈರೆಗಳನ್ನು ಶುಚಿ ಮಾಡಿಕೊಳ್ಳುವ ಮಾನವುಳ್ಳ ಹೆಂಗಸರನ್ನು ಕೋರ್ಟು ಕಟಕಟೆಗಳಿಗೆ ಎಳೆಯುವದು ತುಂಬಾ ವಿಷಾದಕರವಾಗಿದೆ. ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರು ತಕ್ಕ ಬಂದೋಬಸ್ತು ಮಾಡುವರೆಂದು ನಿರೀಕ್ಷಿಸುತ್ತೇವೆ —ಈ ಊರಿನ ರೈಲ್ವೆ ಸ್ಟೇಷನ್‌ನಲ್ಲಿ ವರ್ತಕರಿಗೆ ಬಂದ ಪಾರ್ಸೆಲ್ಲುಗಳಲ್ಲಿದ್ದ ಸಾಮಾನುಗಳಲ್ಲಿ ಕೆಲವು ಕಳುವಾಗಿ ಸದರಿ ಸ್ಟೇಷನ್‌ನಲ್ಲಿದ್ದ ರಾಮನಾಥನೆಂಬ ಪೋರ್ಟರನ ಸುಪರ್ದಿನಲ್ಲಿ ಕೆಲವು ಮಾಲುಗಳು ಸಿಕ್ಕಿದವೆಂದೂ, ಆತನನ್ನು ಲಾಕಪ್ಪಿನಲ್ಲಿ ಹಾಕಿರುವಂತೆಯೂ. ಸದರಿ ಮೊಕದ್ದಮೆಯು ತಾ. ೩೦ ರಲ್ಲಿ ಫ್ರೇಜರ್‌ಟೌನ್ ಸಬ್ ಡಿವಿಜನ್ ಸಾಹೇಬರ ಕೋರ್ಟಿನಲ್ಲಿ ನಡೆಯುವದಾಗಿಯೂ ಕೇಳುತ್ತೇವೆ.—ಈ ಊರಿಗೆ ಸುಮಾರು ನಾಲ್ಕು ಮೈಲಿ ದೂರದಲ್ಲಿರುವ ಕಾಡುಕಪ್ಪೆ (?) ಗ್ರಾಮದಲ್ಲಿ ಇಬ್ಬರು ಶ್ರೀರಂಗಪಟ್ಟಣದ ಬಿಯ್ಯ ಓದುವವರಲ್ಲಿ ಅವರಲ್ಲಿ ಒಬ್ಬನು ತನ್ನ ಜೊತೆಯಲ್ಲಿದ್ದ ಒಬ್ಬ ಮುಸಲ್ಮಾನನ ಹತ್ತಿರವಿದ್ದ ಹಣದ ಗಂಟನ್ನು ಕಿತ್ತುಕೊಂಡು ಓಡಿಹೋದನು, ವಿಚಾರಿಸಲಾಗಿ ಅವನು ಸದರಿ ಮುಸಲ್ಮಾನನ್ನಾಗಲಿ ಆತನ ಯಾವ ಹಣವನ್ನಾಗಲಿ ಕಾಣೆನೆಂದು ಹೇಳಿದ ಹಾಗೂ ವರ್ತಮಾನವಿದೆ.—ಈ ಊರಿನ ಜನಗಳು ಕಾವೇರಿ ಕಾಲಿನ ನೀರಿನ ಆಶ್ರಯದಿಂದ ಭತ್ತ, ಗನ್ನಾ, ಫಲಗಳು ಮುಂತಾದದ್ದನ್ನು ಮಾಡಿಕೊಂಡು ನೆಮ್ಮದಿಯಾಗಿದ್ದಾಗ್ಯೂ ಆಗಾಗ್ಗೆ ಕಳವು ಮುಂತಾದ ನೀಚವೃತ್ತಿಗೆ ತಮ್ಮ ಮನಸ್ಸನ್ನು ಕೊಟ್ಟಿರುವದು ನೋಡಿದರೆ ತುಂಬಾ ಹೇಯವಾಗಿದೆ. ಈ ದೊಡ್ಡ ಗ್ರಾಮದಲ್ಲಿ ಒಂದು ಪೋಲೀಸ್ ಸ್ಟೇಷನ್ ಇರುವದು ಅವಶ್ಯವೇ ಸರಿ.

ತುಂಕೂರು.—ಇಲ್ಲಿನ ಮಿಷನ್ ಹೆಣ್ಣು ಮಕ್ಕಳ ಸ್ಕೂಲ್ ಬಾಲಿಕೆಯರಿಗೂ ಈ ಪಾಠಶಾಲೆಯ ಮೂಲಕ ಲೋಯರ್ ಸೆಕೆಂಡರೀ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿನಿಯರಿಗೂ ಯೋಗ್ಯತಾನುಸಾರ ಪ್ರೈಜುಗಳೂ ಸೀರೆಗಳೂ ತಕ್ಕಡಿಗಳೂ ಮುಂತಾದ ಬಹುಮಾನಗಳು ಕಳೆದ ಮಾಹೆ ತಾ ೨೧ನೇ ಸೋಮವಾರ ಸಾಯಂಕಾಲ ಪಾಠಶಾಲೆಯಲ್ಲಿ ಮಿಸೆಸ್ ಬಾಲ್ ದೊರೆಸಾನಿಯವರಿಂದ ಹಂಚಲ್ಪಟ್ಟವು. ರೆವ್. ಎ. ಎಸ್. ಎಡ್ವರ್ಡ್ಸ್ ದೊರೆಯವರು ಅಗ್ರಾಸನಾಧಿಪತಿಗಳಾಗಿದ್ದರು. ಡಾಕ್ಟರ್ ಅಪ್ಪಾದೊರೆ ಮೊದಲಿಯಾರ್, ರಿಟೈರ್ಡ್ ಜನರಲ್ ಅ|| ಕ|| ಸಿ ಕೇಶಾದ್ರಿ ಅಯ್ಯಂಗಾರ್ ಮುಂತಾದ ದೊಡ್ಡ ಮನುಷ್ಯರೂ, ಇಂಗ್ಲಿಷ್ ಲೇಡಿಗಳೂ, ದೊಡ್ಡ ದೊಡ್ಡ ವರ್ತಕರೂ ಸಭೆಯನ್ನಲಂಕರಿಸಿದ್ದರು. ದೇವರ ಪ್ರಾರ್ಥನೆ ಮುಂತಾದವು ನಡೆದವು. ಚಿಕ್ಕ ವಯಸ್ಸಿನ ಬಾಲಿಕೆಯರು ದೊಡ್ಡವರಾದ ಮೇಲೆ ಮಾಡತಕ್ಕ ಕಾರ್ಯಗಳ ವಿಷಯವಾಗಿ ಒಂದು ಆಕ್ಷನ್ ಹಾಡನ್ನು ಹಾಡಿಯೂ, ಆಕ್ಷನ್‌ಗಳನ್ನು ಮಾಡಿಯೂ ತೋರಿಸಿದರು. ಸಭಿಕರು ಈ ಚಿಕ್ಕ ಬಾಲಿಕೆಯರ ಚಾತುರ್ಯವನ್ನು ನೋಡಿ ತುಂಬಾ ಸಂತೋಷಪಟ್ಟರು. ಸ್ಕೂಲ್ ಹೆಡ್ ಮಾಸ್ಟರ್ ಮ|| ಟಿ. ಗುರುಚನ್ನ ಬಸವಯ್ಯನವರು ಸ್ಕೂಲ್ ರಿಪೋರ್ಟನ್ನು ಓದಿದ ರಲ್ಲಿನ ಮುಖ್ಯಾಂಶಗಳೇನೆಂದರೆ, ಈ ಸ್ಕೂಲು ಪೂರ್ವತನ ವಾದದ್ದೆಂದೂ, ಪ್ರಸಿದ್ಧಿಹೊಂದಿದ ರೆವ್. ಜೆ. ಹಡ್ಸನ್ ಸಾಹೇಬ ದೊರೆಸಾನಿಯವರ ಉದಾರವಾದ ಹಣದಿಂದ ಪ್ರೋತ್ಸಾಹಿಸಲ್ಪಡುತ್ತಿದ್ದೆಂದೂ, ಈ ಸ್ಕೂಲ್ ಲೇಡಿ ಸೂಪರಿಂಟೆಂಡೆಂಟರಾದ ಮಿಸ್ ಮಿಲರ್‌ಯವರ ಮತ್ತು ಸ್ಕೂಲ್ ರೆವ್. ಎಡ್ವರ್ಡ್ಸ್ ದೊರೆಯವರ ಪ್ರೋತ್ಸಾಹ ಮತ್ತು ಮೇಲ್ವಿಚಾರಣೆಯಿಂದ ದಿನೇ ದಿನೇ ಅಭಿವೃದ್ಧಿಯನ್ನೈದುತ್ತಿದೆ ಎಂದೂ, ಲೋಯರ್ ಸೆಕೆಂಡರೀ ಪರೀಕ್ಷೆಯ ವಿದ್ಯಾರ್ಥಿನಿಯರು ತೇರ್ಗಡೆ ಹೊಂದುತ್ತಾ ಬರುತ್ತಾರೆಂದೂ. ಇನ್ನೂ ಅನೇಕ ಸಂಗತಿಗಳನ್ನು ಕ್ರೋಢೀಕರಿಸಿ ಒಂದು ಚಿಕ್ಕ ರಿಪೋರ್ಟನ್ನು ಓದಿದರು. ಅನಂತರ ಅಗ್ರಾಸನಾಸೀನರು ಸ್ತ್ರೀ ವಿದ್ಯಾಭ್ಯಾಸದಿಂದುಂಟಾಗುವ ಪ್ರಯೋಜನಗಳನ್ನು ಕುರಿತು ಬಹು ಘನವಾದ ಉಪನ್ಯಾಸವನ್ನು ಮಾಡಿದರು. ಮ|| ಸಿ. ಕೇಶಾದ್ರಿ ಅಯ್ಯಂಗಾರ್‌ರವರು ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ಈ ಅಧಿಕಾರಿಗಳು ವಹಿಸುತ್ತಿರುವ ಶ್ರಮಕ್ಕೋಸ್ಕರ ಅವರಿಗೆ ಸಭಿಕರ ವಂದನೆಯನ್ನು ಅರ್ಪಿಸಿದರು. ಬಳಿಕ ಲೇ|| ಸೂ|| ಮಿಸ್ ಮಿಲರ್‌ಯವರು ಹೇಳಿದ್ದೇನೆಂದರೆ, ನಾನು ಇಲ್ಲಿಗೆ ಬಂದು ಎರಡುವರೆ ವರ್ಷಗಳಾದವು. ಆಗಿನಿಂದ ನಾನು ನೋಡುವುದರಲ್ಲಿ ಹೆ|| ಮಾಸ್ಟರವರೂ ಅವರ ಸಹಾಯಕರೂ ಬಹಳ ಪ್ರಮಪಟ್ಟು ಕೆಲಸ ಮಾಡುತ್ತಾ ಬಂದಿರುತ್ತಾರೆ. ಹೆ|| ಮಾಸ್ಟರವರು ತಮ್ಮ ಪೂರ್ಣ ಶಕ್ತಿಯನ್ನು ಉಪಯೋಗಿಸುತ್ತಾ ಸ್ಕೂಲಿನ ಅಭಿವೃದ್ಧಿಯನ್ನು ಬಹಳ ಆಸಕ್ತರಾಗಿ ಯಾವಾಗಲೂ ಹಾರೈಸುತ್ತಾ ಬಂದಿರುತ್ತಾರೆಂದು ತಿಳಿಸಲು ತುಂಬಾ ಸಂತೋಷಪಡುತ್ತೇನೆ. ಈ ಸ್ಕೂಲಿನ ಅಭಿವೃದ್ಧಿಯನ್ನೇ ಮುಂದಿಟ್ಟುಕೊಂಡು ಕೆಲಸ ಮಾಡುತ್ತಾ ಬಂದಿರುವ ಉಪಾಧ್ಯಾಯರ ಮತ್ತು ಉಪಾಧ್ಯಾಯಿನಿಯರ ವಿಷಯದಲ್ಲಿ ನಾನು ಬಹಳ ಸಂತೋಷಪಡುತ್ತೇನೆ ಎಂದು ಇಂಗ್ಲೀಷಿನಲ್ಲಿ ಉಪನ್ಯಾಸ ಮಾಡಿದರು. ಇದನ್ನು ರೆವ್. ಸಾಮ್ಯುವೇಲ್ ಲೇಸರ್ (?) ಅಯ್ಯನವರು ಕನ್ನಡಕ್ಕೆ ಭಾಷಾಂತರಿಸಿ ಹೇಳಿದರು. ತರುವಾಯ ಹೂವಿನ ಹಾರಗಳು ಸಭಿಕರಿಗೆ ಹಂಚಲ್ಪಟ್ಟವು. ಶ್ರೀಮನ್ ಮಹಾರಾಜರವರ ಮತ್ತು ಇಂಡಿಯಾ ಚಕ್ರವರ್ತಿಯವರ ಕ್ಷೇಮಃ ಪ್ರಾರ್ಥನೆಗಳು ಕನ್ನಡದಲ್ಲೂ ಇಂಗ್ಲೀಷಿನಲ್ಲೂ ನಡೆದವು. ಬಳಿಕ ಸಭೆಯು ಮುಕ್ತಾಯವಾಯಿತು.

ಚಿಂತಾಮಣಿ.—ಈ ಪ್ರಾಂತ್ಯಕ್ಕೆ ಈ ವರೆಗೆ ಬೇಕಾದಷ್ಟು ಮಳೆಯಾಗಲಿಲ್ಲ. ಎಲ್ಲೋ ಅಲ್ಪಸ್ವಲ್ಪ ಮಳೆ ಬಿದ್ದಿತೇ ವಿನಹ ಕೆರೆಗಳಿಗೆ ಬೇಕಾದಷ್ಟು ನೀರು ಬರಲಿಲ್ಲ. ತರಿ ಜಮೀನು ಯಥಾಸ್ಥಿತಿಯಲ್ಲಿದೆ. ಖುಷ್ಕಿ ಜಮೀನುಗಳಲ್ಲಿ ರೈತರು ಬೀಜ ಹಾಕಬೇಕೆಂದು ಆಕಾಶವನ್ನೇ ನೋಡುತ್ತಿದ್ದಾರೆ. ಪ್ರತಿನಿತ್ಯವೂ ಬಿರುಗಾಳಿಯೂ, ನಿಷ್ಪ್ರಯೋಜನವಾದ ಮೋಡಗಳೂ ಉಂಟೇ ವಿನಹ ತಂಗಾಳಿಯೂ ಮಳೆ ಬರತಕ್ಕ ಮೋಡಗಳೂ ಕಾಣಲೇ ಇಲ್ಲ. ಪ್ರಜೆಗಳು ಪ್ರಾಣಭೀತರಾಗಿರುವರು. ಹಿಂದಿನಿಂದಲೂ ರೈತರೇ ಮುಂತಾದವರ ಬೆಳ್ಳಿ, ಬಂಗಾರದ ಆಭರಣಗಳು ಸಾಹುಕಾರರಲ್ಲಿ ಒತ್ತೆ ಬಿದ್ದು ಹೋದವು. ಅನೇಕರ ಭೂಮಿ ಮುಂತಾದ ಸ್ಥಿರ ಆಸ್ತಿಗಳು ಪರಾಧೀನಕ್ಕೆ ಸೇರಿದವು. ಸುಮಾರು ಮೂರು ತಿಂಗಳ ಕೆಳಗೆ ಈ ಪ್ರಾಂತವೆಲ್ಲಾ ಕಷ್ಟಾಕ್ರಾಂತವಾಗಿ ಕೆಟ್ಟದ್ದಾಗಿರುವುದಾಗಿ ವಿಚಾರವನ್ನು ವಾಚಕರು ಓದಿದ್ದು ಜ್ಞಾಪಕವಿದ್ದೀತೆಂದು ನಂಬುತ್ತೇವೆ. ಅಷ್ಟರಲ್ಲಿಯೇ ಹುಣಿಸೇ ಹಣ್ಣಿನ ಕಾಲ ಬಂದು ಈ ಊರಿನ ಸಾಹುಕಾರರಾದ ಮೆ|| ಕೆ ಕೃಷ್ಣಯ್ಯಶೆಟ್ಟಿ, ಬೊಗ್ಗರವು ವೆಂಕಟೇಶಯ್ಯಶೆಟ್ಟಿ, ಚಿಕ್ಕ ಕೃಷ್ಣಯ್ಯಶೆಟ್ಟಿ, ಬೊಗ್ಗರವು ವೆಂಕಟರಮಣಯ್ಯಶೆಟ್ಟಿ, ಇನ್ನು ಕೆಲವು ಸಾಹುಕಾರರು ಸದರಿ ಹಣ್ಣಿನ ವ್ಯಾಪಾರವನ್ನು ಮಾಡಿದ್ದರಿಂದ ಸುಮಾರು ೪೦೦ ಬಡಜನಗಳಿಗೆ ಕೂಲೀ ಕೆಲಸ ತೋರಿಸಿ ಈ ವರೆಗೆ ಜೀವನ ನಡಿಸಿದರು. ಅಲ್ಲದೆ ದಯಾಳು ಗೌರ್ನಮೆಂಟಿನವರು ಅಲ್ಲಲ್ಲಿ ರಿಲೀಫ್ ಕೆಲಸ ಶುರು ಮಾಡಿಸಿ, ಅಲ್ಲಲ್ಲಿದ್ದ ಬಡಬಗ್ಗರಿಗೆ ಜೀವನಕ್ಕೆ ಮಾರ್ಗ ತೋರಿಸಿದರು. ಈಗಲಾದರೋ ಹುಣಿಸೇ ಹಣ್ಣಿನ ಕೆಲಸವೂ, ರಿಲೀಫ್ ಕೆಲಸಗಳ ಕೆಲಸವೂ ಪೂರೈಸಿದವು. ಮತ್ತೆ ಬಡಜನಗಳು ಕಷ್ಟಾಕ್ರಾಂತರಾಗಲಿಕ್ಕೆ ಪ್ರಾರಂಭಿಸಿರುವರಲ್ಲಾ ಎಂದು ಮಹಾ ವ್ಯಸನದಿಂದಲೂ ಕಣ್ಣೀರಿನಿಂದಲೂ ತಿಳಿಸಬೇಕಾಗಿ ಬಂತು. ದೈವಾನುಗ್ರಹದಿಂದ ಇಷ್ಟರಲ್ಲಿಯೇ ಮಳೆ ಬಿದ್ದರೆ ಸರಿ, ಅದಿಲ್ಲವಾದರೆ ದೀರ್ಘಕಾಲ ಬಂದೀತೆನ್ನುವದಕ್ಕೆ ಸಂದೇಹವಿಲ್ಲ. ಥರ ಕೆಟ್ಟಕಾಲಗಳು ಐದಿದವು, ಬಿಕ್ಷುಕರು ಹೇರಳವಾದರು.—ಈಗ ಕಳ್ಳತನಗಳು ಹೆಚ್ಚಾದವು. ತಾ ೧೯, ೨೦, ೨೩ ರಲ್ಲಿ ಮೂರು ನಾಲ್ಕು ಮನೆ ಅಂಗಡಿಗಳಿಗೆ ಕಳ್ಳರು ಬಿದ್ದರೆಂದು ತಿಳಿಯಲಾಯಿತು. ಮುಖ್ಯವಾಗಿ ಚೌಕದಲ್ಲಿ ಒಂದು ಅಂಗಡಿಯ ಮೇಲ್ಛಾವಣಿ ತೆಗೆದು ಒಳಗೆ ಇಳಿದಿದ್ದರು. ಕಟ್ಟೆಯ ಬಾಲ್ ಕಿರಾಯಿಗರ ಮನೆಗೆ ಕಳ್ಳರು ಬಿದ್ದು, ಒಂದೆರಡು ಸೇರು ಅಕ್ಕಿ ತೆಗೆದುಕೊಂಡು ಮಿಕ್ಕ ಸಾಮಾನು ಬೈಲಿನಲ್ಲಿ ಚೆಲ್ಲಿದ್ದರೆಂದು ತಿಳಿಯಲಾಯಿತು. ಈ ಊರಿಗೆ ಪೋಲೀಸ್ ಉಸ್ತುವಾರಿಯು ಸಾಲದು. ಮೂರು ನಾಲ್ಕು ಪೋಲೀಸ್ ಕಾನ್‌ಸ್ಟೇಬಲುಗಳು ಏನು ತಾನೇ ಮಾಡಬಹುದು? ಆದ್ದರಿಂದ ದಯಾಳು ಗೌರ್ನಮೆಂಟಿನವರು ಈ ಊರಿಗೆ ಹೆಚ್ಚು ಪೋಲೀಸ್ ಏರ್ಪಾಡು ಮಾಡುವ ಹಾಗೆ ಕೆಳ್ಳರ ಪುಂಡು ಅಡಗಲಾರದು. ಈ ವಿಷಯಕ್ಕೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಗಮನ ಕೊಡುವರೆಂದು ನಂಬುತ್ತೇವೆ —ಮಿಸೆಸ್ ಬೆಸೆಂಟಮ್ಮನವರ ಕಡೆಯಿಂದ ಸ್ಥಾಪಿತವಾದ ಥಿಯೋಸಾಫಿಕಲ್ ಸಭೆಗೆ ಈ ಊರಿನಲ್ಲಿ ಮೂವತ್ತು ಮಂದಿ ಮೆಂಬರುಗಳು ಸೇರಿರುತ್ತಾರೆ. ಈ ಮೆಂಬರುಗಳೆಲ್ಲರೂ ಸೇರಿ ಕೃಷ್ಣರಾಜ ಪೇಟೆಯಲ್ಲಿ ಸುಂದರವಾದ ಒಂದು ಮಂದಿರವನ್ನು ಕಟ್ಟಿಸುತ್ತಿದ್ದಾರೆ. ಸನ್ಸ್ ಆಫ್ ಇಂಡಿಯಾ ಸಂಘಕ್ಕೆ ೩೭ ಮಂದಿ ಮೆಂಬರುಗಳು ಸೇರಿರುತ್ತಾರೆ. ಈ ಸಂಘದವರು ಕೀಳು ಜಾತಿಯವರಲ್ಲಿ ವಿದ್ಯಾಭ್ಯಾಸ ಮಾಡಿಸಬೇಕೆಂದು ಪ್ರಯತ್ನ ಮಾಡಿ ಅವರಿಗಾಗಿ ಒಂದು ಸ್ಕೂಲ್ ಕಟ್ಟಡವನ್ನು ತಯಾರ್ಮಾಡುವದರಲ್ಲಿ ಉದ್ಯುಕ್ತರಾಗಿರುವರು. ಮತ್ತು ಕುಂಟರಿಗೂ, ಕುರುಡರಿಗೂ, ಅನಾಥ ಮಕ್ಕಳಿಗೂ ವಾರವಾರವೂ ಧಾನ್ಯರೂಪವಾಗಿಯೂ ವಸ್ತ್ರರೂಪವಾಗಿಯೂ ಪರೋಪಕಾರ ಮಾಡುತ್ತಿದ್ದಾರೆ. ಈ ಎರಡು ಕಾರ್ಯಗಳೂ ಸ್ತೋತ್ರಾರ್ಹವಾಗಿರುತ್ತವೆ.

ಬೌರಿಂಗ್‌ಪೇಟೆ ತಾ|| ಬೇತಮಂಗಲ.—ಕಳೆದ ೧೭ನೇ ತಾ ನಲ್ಲಿ ಈ ಗ್ರಾಮಕ್ಕೆ ೧ ಮೈಲಿ ಫಾಸಲೆಯಲ್ಲಿರುವ ಅಂಕತಟ್ಟಿ (?) ಗ್ರಾಮದ ಅಗ್ರಹಾರದ ವೆಂಗಟಪ್ಪನ ಮಗನು ಕೆರೆಯಲ್ಲಿ ಎಮ್ಮೆಯನ್ನು ಓಡಿಸಿಕೊಂಡು ಬರಲು ಹೋಗಿ ನೀರಿನಲ್ಲಿ ಮುಣುಗಿ ಪ್ರಾಣ ಕಳೆದುಕೊಂಡನೆಂಬ ಸಂಗತಿ ಪೋಲೀಸಿಗೆ ರಿಪೋರ್ಟು ಆಯಿತು. ಆಗ ಪೋಲೀಸರು ಹೋಗಿ ಆಜಮಾಯಿಷಿಯಿಂದ ಮಹಜರು ಮಾಡಿಸಿದಾಗ ಅವರ ಪ್ರಶ್ನೆಗಳಿಗೆ ಸರಿಯಾದ ಉತ್ತರವು ಸಿಕ್ಕದೆಹೋದದ್ದರಿಂದ ಇವರು ಶವವನ್ನು ಬೌರಿಂಗ್‌ಪೇಟೆಯ ಡಾಕ್ಟರ ಬಳಿಗೆ ರವಾನಿಸಿದರು. ಅವರು ಆಜಮಾಯಿಷಿಮಾಡಿ ಅನುಮಾನಾಸ್ಪದವಾಗಿದ್ದರಿಂದ ದಫನ್ ಗೆ ಅಪ್ಪಣೆ ಮಾಡಿದರು —ಕಳೆದ ೧೯ನೇ ತಾ. ರಾತ್ರಿ ಬೇತಮಂಗಲಕ್ಕೆ ಸುಮಾರು ೩ ಮೈಲು ಫಾಸಲೆಯಲ್ಲಿರುವ ದೇವೇನಹಳ್ಳಿ ಗ್ರಾಮದಲ್ಲಿ ಪೈವರ್ (?) ಸಾಬರ ಮನೆಯಲ್ಲಿ ಐವರು ಜನರು ಮಲಗಿರುವಾಗ ಒಂದು ಗೋಡೆಯ ರಂಧ್ರದಲ್ಲಿ ವಾಸವಾಗಿದ್ದ ಒಂದು ನಾಗ ಸರ್ಪವು ಆತನ ಎರಡನೇ ಹೆಂಡತಿಯ ೭ ವರುಷದ ಹುಡುಗನ ಕಾಲನ್ನು ಕಚ್ಚಿತು. ಆಗ ಅವನು ವಿಗ್ನನೆ ಎದ್ದು ತಾಯಿಯನ್ನು ಕೂಗಿಕೊಂಡನು. ಆಗ ತಾಯಿಯು ಗಾಬರಿಯಿಂದ ತನ್ನ ಮಗನನ್ನು ಎತ್ತಿಕೊಳ್ಳುವದಕ್ಕೆ ಹೋದಳು. ಆ ಕೂಡಲೆ ಅದೇ ಸರ್ಪವು ಆ ಅಮ್ಮನ ಕೈ ಬೆರಳನ್ನು ಕಚ್ಚಿಬಿಟ್ಟಿತು. ಅಷ್ಟರೊಳಗೆ ಮನೆಯಲ್ಲಿ ದೊಡ್ಡ ಗುಲ್ಲು ಉಂಟಾದದ್ದರಿಂದ ನೆರೆಮನೆಯವರು ಬಂದು ಅದನ್ನು, ಆ ವಿಷ ಸರ್ಪವನ್ನು ಕೊಂದುಹಾಕಿದರು. ಆದರೆ ಮಾರನೇ ದಿವಸ ಆ ಹುಡುಗನು ಸತ್ತುಹೋದನು. ಅವನ ತಾಯಿಗೆ ಸ್ವಲ್ಪ ಉಪಶಮನವಾಗಿದೆ. ಮತ್ತು ಕಳೆದ ತಿಂಗಳಲ್ಲಿ ಇದೇ ಬೇತಮಂಗಲದ ವಾಸಸ್ಥನಾದ ಚೆನ್ನಪ್ಪ ಎಂಬವನು ಹೀಗೆಯೇ ರಾತ್ರಿ ಮಲಗಿರುವ ವೇಳೆ ಹಾವು ಕಚ್ಚಿ ಮಾರನೆ ದಿನ ಸತ್ತುಹೋದನು. ಈಗ ಈತನ ಹೆಂಡತಿ ಮಕ್ಕಳು ಜೀವನಕ್ಕೆ ಮಾರ್ಗವಿಲ್ಲದೆ ಯಾತನೆಪಡುತ್ತಾ ಇದಾರೆ. ಇದನ್ನು ಈ ಊರಿನ ಅನೇಕರು ನೋಡಿ ತಮ್ಮಿಂದಾದಮಟ್ಟಿಗೂ ಸಹಾಯ ಮಾಡಿರುವದು ಸ್ತೋತ್ರಾರ್ಹವಾಗಿದೆ —ಕಳೆದ ೧೯ನೇ ತಾ. ರಾತ್ರಿ ಬೇತಮಂಗಲದ ಪಂಪಿಂಗ್ ಸ್ಟೇಷನ್‌ನಲ್ಲಿ ಇಂಜಿನ್ ಡ್ರೈವರ್ ಕೆಲಸ ಮಾಡುತ್ತಾ ಇದ್ದು ಈಗ ತನ್ನ ವ್ಯಾಧಿಯ ಕಾಯಿಲೆ ಬಗ್ಗೆ ಬೆಂಗಳೂರಿಗೆ ಹೋಗಿ ಆಸ್‌ಪತ್ರೆಯಲ್ಲಿ ಬಿಟ್ಟು ಚಿಕ್ಕ ಚಾಟಾವಾರದಲ್ಲಿ ಕೆಲಸ ಮಾಡುತ್ತಾ ಇರುವ ಮ|| ರಂಗಪ್ಪನವರ ಮನೆಯಲ್ಲಿ ಬಾಗಿಲ ಬೀಗ ಮುರಿದು ಹಲವು ಸಾಮಾನುಗಳನ್ನು ಕದ್ದುಕೊಂಡು ಹೋಗಿರುವ ಸಂಗತಿಯು ಅದೇ ರಾತ್ರಿ ಮ|| ರೇಂಜ್ ಸಾಹೇಬರವರಿಗೆ ತಿಳಿದು ಅವರು ಪೋಲೀಸಿಗೆ ರಿಪೋರ್ಟು ಮಾಡಿದರು. ಇದನ್ನು ತನಿಖೆ ಮಾಡುವ ಬಗ್ಗೆ ಪೋಲೀಸಿನವರು ಬಂದು ಸಮಸ್ತ ಸಂಗತಿಗಳನ್ನೂ ತಿಳಿದುಕೊಂಡು ಹೋಗಿ ಪತ್ತೆ ಮಾಡುತ್ತಾ ಇದಾರೆ. ಇದು ತುಂಬಾ ಆಶ್ಚರ್ಯವಾದ ಕಳ್ಳತನ. ಹ್ಯಾಗೆಂದರೆ, ಇಲ್ಲಿನ ಎಲ್ಲಾ ಒಳಗಿನ ಕೆಲಸದವರು ಸರದಿಯ ಪ್ರಕಾರ ಕೆಲಸ ಮಾಡುತ್ತಾರೆ. ಇವರು ಕೆಲಸಕ್ಕೆ ಹೋಗಿರುವ ವೇಳೆ ಇವರ ಮನೆಗಳನ್ನು ಉಸ್ತುವಾರಿ ಮಾಡುವದಕ್ಕೂ, ಇದಕ್ಕೆ ಸಂಬಂಧಪಟ್ಟಿರುವ ವಿಶಿಷ್ಟ ಸಾಮಾನುಗಳನ್ನೂ ಕಾಯುವದಕ್ಕೂ ವಾಚ್‌ಮೇನುಗಳನ್ನು ನೇಮಿಸಿದಾರೆ. ಅದೇ ಪ್ರಕಾರ ವಾಚ್‌ಮೇನುಗಳು ರಾತ್ರಿಯೆಲ್ಲಾ ದೀಪಗಳನ್ನು ಹಿಡಿದು ಪಹರೆ ತಿರುಗುತ್ತಾ ಇದ್ದ ಇಂಥಾ ಸ್ಥಳದಲ್ಲಿ ಆಗಾಗ್ಗೆ ಕಳ್ಳತನವಾಗುತ್ತಾ ಇರುವ ಸಂಗತಿ ಕಾರಣವೇನೋ ಪೋಲೀಸ್ ಆಫೀಸರಿಗೇ ಗೊತ್ತಾಗಬೇಕೇ ಹೊರತು ಬೇರೆಯವರಿಗೆ ಗೊತ್ತಾಗಲ್ಲರದು.—ಕಳೆದ ೨೧ನೇ ತಾ. ಮಧ್ಯಾಹ್ನ ಬೇತಮಂಗಲದ ಕೆಳಗಿನ ಪೇಟೆಯಲ್ಲಿ ವಾಸವಾಗಿರುವ ಕುಂಬಾರ ಈರಮ್ಮನ ಮನೆಯಲ್ಲಿ ಯಾವನೋ ಊರಿನಿಂದ ಬಂದಿದ್ದ ಒಬ್ಬ ಮುಸಾಫರನು ಹಟವಾಗಿ ನಂಬಿಕೆಯಾಗಿ ಊಟ ಮಾಡಿಕೊಳ್ಳುತ್ತಾ ಇದ್ದು, ಆ ಅಮ್ಮನು ನಡೆಗೆ ನೀರು ತರುವದಕ್ಕಾಗಿ ಹೋದ ಸಮಯದಲ್ಲಿ ಈ ದುಷ್ಟ ಮನುಷ್ಯನು ಆಕೆಯು ಮಡಿಯಲ್ಲಿ ಬಚ್ಚಿಟ್ಟುಕೊಂಡಿದ್ದ ೧೮ ರೂಪಾಯಿಯನ್ನೂ ಒಂದು ಬೆಳ್ಳಿಯ ದಬ್ಬೆಯನ್ನೂ ಕದ್ದುಕೊಂಡು ಇದೇ ಪೇಟೆಯಲ್ಲಿರುವ ಮುನಿಸ್ವಾಮಪ್ಪನಿಗೆ ಬಿಕರಿ ಮಾಡಬೇಕೆಂದು ಪ್ರಯತ್ನಪಟ್ಟು ಆತನು ಒಂದು ರೂಪಾಯಿಗೆ ಕೇಳಿದಾಗ ಕೊಡುವದಿಲ್ಲವೆಂದು ಹೇಳಿ ಪರಾರಿಯಾದನು. ಈ ಊರಿನಲ್ಲಿ ನಡೆಯುತ್ತಾ ಇರುವ ಇಂಥಾ ಕಳ್ಳತನಗಳನ್ನು ತನಿಖೆ ಮಾಡುವದಕ್ಕಾಗಿ ಪೋ|| ಸೂಪರಿಂಟೆಂಡೆಂಟರು ಇನ್ಸ್‌ಪೆಕ್ಟರು ಬಂದು ಸಮಸ್ತವನ್ನೂ ವೈದೇವಾಡಿಕೊಂಡು ಹೋಗಿದಾರೆ.

ಪ್ರಕಟನೆಗಳು.

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 25

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ಸ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ. ಬಣ್ಣವು ಹೋಗುವದಿಲ್ಲ. ಹಿಂದಿಗಿಂತ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ಕೊಂಡು ನೋಡಿ. ಅಗ್ಗ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು. ಗಜ ಒಂದಕ್ಕೆ ೫ ಆಣೆಯಿಂದ ೭|| ಆಣೆ ವರಿವಿಗೂ ಬೆಲೆಯಾಗಿ ಆಗುತ್ತೆ. ಒಟ್ಟಿಗೆ ಆಗಲೇ ಮಾರಲ್ಪಡುತ್ತವೆ. ಕಾಲಾಂಗಳು, ಹಾಸಿಗೆ, ಹೊದಿಕೆಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಸಂಜೀವಿನೀ ಔಷಧಾಲಯ, ಮೈಸೂರು.

28 2

ಎಂ. ಎಸ್. ಕುಮಾರ್‌ಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು:—ಮರವೆ, ನಿರುತ್ಸಾಹ, ನಿದ್ರಾಭಂಗ, ವಿಕೃತಿ, ರಕ್ತದೋಷ, ಚರ್ಮವ್ಯಾಧಿ, ಜ್ವರ, ವಾಯುರೋಗಗಳು, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮರೋಗ ಇವುಗಳನ್ನು ಗುಣಪಡಿಸಿ ದೇಹದಲ್ಲಿ ಜೀವನಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿ ಪಡಿಸುವದರಲ್ಲಿ ಇದು ಸಿದ್ಧೌಷಧ. ಕ್ರಯ ಸೀಸೆ ೧ಕ್ಕೆ ೩ ರೂಪಾಯಿ.

ಸಂಜೀವಿನೀ ಮಾತ್ರೆ.—ನಾನಾ ಬಗೆ ಜ್ವರಗಳೂ, ಪ್ಲೇಗು, ಉಷ್ಣವಾತ ಪ್ರಕೋಪ, ಇವುಗಳಿಗೆ ಖಾತರಾದ ಔಷಧ. ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ. ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ. ಕ್ರಯ ಪೆಟ್ಟಿ ೧ಕ್ಕೆ ೧ ರೂಪಾಯಿ.

ಕಾಲಕಂಟಕ ವಟಿಕ:—ಪ್ಲೇಗ್ ಗೆಡ್ಡೆ ಮೊದಲಾಗಿ ಎಲ್ಲಾ ತರದ ಗೆಡ್ಡೆಗಳೂ ಮೇಲೆ ಹಚ್ಚುವ ಔಷಧ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ.

ಸುಖನೇತ್ರ ಬಿಂದು.—ಉರಿಗಣ್ಣು, ಕೆಂಗಣ್ಣು, ಪೊರೆಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ. ಕ್ರಯ ಸೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ.

ಇನ್ನೂ ಅನೇಕ ಔಷಧಗಳೂ, ತರುಣಾವರ ಅತ್ತರುಗಳೂ, ಗಂಧದಬತ್ತಿ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ. ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರ್ಸುಗಳಲ್ಲಿ ಏಜಂಟುಗಳೂ ಬೇಕು. ಅರ್ಜಿಗಳ ಜೊತೆ ಇಡಬ್ಬು ಬರೆಯಿರಿ.

ಡಿ. ಕೆ. ಸ್ವಾಮಿ,

ಪ್ರೊಪ್ರೈಟರ್.

ಸುಜ್ಞಾನ ಸೂರ್ಯೋದಯ.

[ಕಳೆದ ವಾರದ ಶೇಷ.]

ನಂಜುಂ—ಮಡಿವಾಳ್ಯಯ್ಯಾ, ನೀವು ಪಾದ್ರಿ ಮತಕ್ಕೆ ಸೇರಿದ ಮಾತ್ರಕ್ಕೆ ಪಂಡಿತರಾದಿರೋ? ಪೂರ್ವಕಾಲದಲ್ಲಿದ್ದಂಥ ಮಹಾ ಮಹಾ ಪಂಡಿತರೆಲ್ಲರೂ ಈ ಮೂರ್ತಿಗಳನ್ನೇ ಪೂಜಿಸಲಿಲ್ಲವೋ? ನಿಮಗಿರುವಂಥ ಬುದ್ಧಿ ಅವರಿಗಿರಲಿಲ್ಲವೇ? ಅಂದನು.

ಮಡಿ—ಪೂರ್ವದವರೆಲ್ಲರೂ ಅಜ್ಞಾನಿಗಳೂ ಅವರಿಗಿಂತ ನನ್ನ ಬುದ್ಧಿ ವಿಶೇಷವಾದದ್ದೂ ಎಂದು ಕನಸಿನಲ್ಲಿ ಕೂಡ ನಾನು ನೆನಸುವದಿಲ್ಲ. ಆದರೆ ಒಬ್ಬನು ಎಷ್ಟು ಬುದ್ಧಿಶಾಲಿಯೂ ಬಲಿಷ್ಠನೂ ಆಗಿದ್ದರೂ ಅವನು ಕತ್ತಲಲ್ಲಿ ಸಂಚರಿಸುವವನಾಗಿದ್ದರೆ ದಾರಿತಪ್ಪಿ ಕಾಡುಸೇರಬಹುದು. ಇನ್ನೊಬ್ಬನಿಗೆ ವಿಶೇಷ ಬುದ್ಧಿಬಲವಿಲ್ಲದಿದ್ದರೂ ಹಗಲಿನಲ್ಲಿ ಸಂಚಾರಮಾಡುವವನಾಗಿದ್ದರೆ ಸುರಕ್ಷಿತವಾಗಿ ತಾನು ಕೋರುವಂಥ ಊರು ಸೇರಬಹುದಲ್ಲ. ಪೂರ್ವಕಾಲವು ಅಂಧಕಾರಯುಗವೆಂದು ಹೇಳಿದರೆ ದೋಷವಾಗದು. ಯಾಕಂದರೆ ಆ ಕಾಲದಲ್ಲಿದ್ದವರಿಗೆ ಸತ್ಯದೇವರು ಯಾರು? ಆತನು ಎಂಥಾವನು? ಆತನನ್ನು ಆರಾಧಿಸುವದು ಹ್ಯಾಗೆ? ಎಂಬ ಈ ಶ್ರೇಷ್ಠ ಸಂಗತಿಗಳನ್ನು ಪ್ರಕಟಮಾಡುವಂಥ ಸತ್ಯಶಾಸ್ತ್ರವು ನಮ್ಮ ದೇಶದ ಪೂರ್ವಿಕರಿಗೆ ಸಿಕ್ಕದಕಾರಣ ಉದರಪೋಷಣಕ್ಕಾಗಿ ಮೋಸಗಾರರು ಕಲ್ಪಿಸಿದಂಥ ನಾನಾ ದುಃಕುಮಾರ್ಗಗಳಲ್ಲಿ ಸೇರಿ ವಿಕ್ಕಾಬಿಡೆ ಹೋದರು. ಆದರೆ ಈ ಕಾಲದಲ್ಲಿ ಸತ್ಯಶಾಸ್ತ್ರವೆಂಬ ಸೂರ್ಯನನ್ನು ಪಾದ್ರಿಗಳ ಮುಖಾಂತ್ರವಾಗಿ ನಮ್ಮ ಪರಮತಂದೆಯಾದ ದೇವರು ಈ ದೇಶದಲ್ಲಿಯೂ ಬೇರೆ ಎಲ್ಲಾ ದೇಶಗಳಲ್ಲಿಯೂ ಪ್ರಕಟಮಾಡುತ್ತಾ ಬರುತ್ತಾನೆ. ಈ ವೇದದ ಮುಖಾಂತ್ರವಾಗಿ ಯಾರು ದೈವಜ್ಞಾನವನ್ನು ಪಡೆದುಕೊಳ್ಳುತ್ತಾರೋ? ಅಂಥವರು ವಿಶೇಷ ಬುದ್ಧಿಶಾಲಿಗಳೂ ಬಲಿಷ್ಠರೂ ಆಗದಿದ್ದರೂ ತಮ್ಮ ಆತ್ಮದಲ್ಲಿ ದಿವ್ಯ ತೇಜಸ್ಸನ್ನು ಹೊಂದಿ ತಾವು ಕೋರುವಂಥ ಪರಮಪದವಿಗೆ ಸೇರಬಹುದು. ಆದರೆ ನಮ್ಮ ಪೂರ್ವಿಕರಲ್ಲಿ ಕೆಲವರು ಮೂರ್ತಿಗಳ ಪೂಜೆಯಲ್ಲಿ ತೃಪ್ತಿಪಡದೆ ತಮ್ಮ ಸ್ವಂತ ಬುದ್ಧಿಯೆಂಬ ದೀಪದ ಬೆಳಕಿನಿಂದ ಸತ್ಯದೇವರನ್ನು ಎಷ್ಟೋ ಆಶೆಯಿಂದ ಹುಡುಕುತ್ತಿದ್ದರೆಂಬುವದಕ್ಕೆ ಅವರು ಬರೆದಂಥ ವಚನಗಳು ತಕ್ಕ ಸಾಕ್ಷಿಗಳಾಗಿವೆ. ಅಂಥವರಲ್ಲಿ ಒಬ್ಬಾತನು ಬರೆದಿರುವದೇನಂದರೆ,

ಒಗೆಯುವ ದಿನೇಶನಂ ಹರಿಯುವ ಸಿಂಧುವ ನೂದುವ ಗಾಳಿಯಂ,
ಧಗಂ ಧಗಿಸುವ ಕಿಚ್ಚನುಗುಳ್ವ ನೆಲನಂ ಕರೆವಾಕಳ ನಿಪ್ಪಸದ್ಮಮಂ॥
ಸೊಗಯಿಸಿನಿಂ ಪೆರ್ಮರವನುಂಬಗಳಂ ಬಿಸಗ್ನಿವತಮ್ಮನುಂ।
ಟ್ಟುಗಳನೆ ದೈವವೆಂದೆರಗುವಾತನೆ ದೈವದ ಮೂಢನಲ್ಲವೇ?॥

ನಂಜುಂ—ಪಾದ್ರಿಗಳ ಶಿಕ್ಷಣದಿಂದ ಸತ್ಯದೇವರು ನಿಮಗೆ ಗೊತ್ತಾಗಿದ್ದರೆ ನಿಮ್ಮ ಕುಲದಲ್ಲಿದ್ದುಕೊಂಡು ಆ ದೇವರನ್ನು ಆರಾಧಿಸಬಾರದೋ? ಕುಲಕೆಟ್ಟು ಮದ್ಯಮಾಂಸಾಹಾರಗಳನ್ನು ಸೇವಿಸಿ ಯಾಕೆ ಭ್ರಷ್ಟರಾಗಬೇಕು ಅಂದನು.

ಮಡಿ—ಕ್ರೈಸ್ತಮತಸ್ಥರೆಲ್ಲರೂ ಮದ್ಯಮಾಂಸಾಹಾರಿಗಳಾಗಿದ್ದರೆಂಬುವದು ಶುದ್ಧ ಅಬದ್ಧ. ಮದ್ಯಪಾನ ಮಾಡಬಾರದೆಂದು ಕ್ರೈಸ್ತರ ವೇದವು ಖಂಡಿತವಾಗಿ ಬೋಧಿಸುತ್ತದೆ. ಆ ಮತಸ್ಥರಲ್ಲಿ ಯಾರಾದರೂ ಮದ್ಯಪಾನ ಮಾಡಿದರೆ ಆ ತಪ್ಪು ಅವರದೇ ಹೊರತು ಆ ಮತಕ್ಕೆ ಹೊಂದಿಸಬಾರದು. ಮಾಂಸಾಹಾರದ ವಿಷಯವಾಗಿ ಕ್ರೈಸ್ತ ವೇದದಲ್ಲಿ ನಿಷೇಧವಿಲ್ಲದಿದ್ದರೂ ಮಾಂಸಾಹಾರ ಮಾಡಬೇಕೆಂದು ಅದು ಬೋಧಿಸುವದಿಲ್ಲ. ಊಟ ಉಡಿಗೆ ತೊಡಿಗೆ ಈ ಮೊದಲಾದವುಗಳಲ್ಲಿ ಅವರೆಲ್ಲರಿಗೂ ಸ್ವತಂತ್ರವುಂಟು. ಆ ಮತಸ್ಥರಲ್ಲಿ ಅನೇಕರು ಮಾಂಸಾಹಾರ ಮಾಡುತ್ತಾರೆಂಬುವದು ನಿಜವಾದ ಸಂಗತಿ. ಯಾಕೆಂದರೆ ಅಂಥವರೆಲ್ಲರೂ ಆ ಮತಾವಲಂಬನೆ ಮಾಡುವದಕ್ಕಿಂತ ಮುಂಚೆಯೇ ಮಾಂಸಾಹಾರಿಗಳಾಗಿದ್ದರು. ಇಂಗ್ಲಿಷ್ ಜನರೆಲ್ಲರೂ ಮಾಂಸಾಹಾರಿಗಳಾಗಿದ್ದಾರೆ. ಆದರೆ ಅವರು ಕ್ರೈಸ್ತಮತಸ್ಥರಾದ ಮೇಲೆ ಮಾಂಸಾಹಾರಮಾಡುವದನ್ನು ಅಭ್ಯಾಸಮಾಡಲಿಲ್ಲ. ಕ್ರೈಸ್ತರಾಗುವದಕ್ಕಿಂತ ಮುಂಚೆಯೇ ಮಾಂಸ ಭೋಜನಮಾಡುತ್ತಿದ್ದರು. ಯಾಕಂದರೆ ಆ ದೇಶಸ್ಥರೆಲ್ಲರಿಗೂ ಮಾಂಸವು ಮುಖ್ಯವಾದ ಆಹಾರವಾಗಿದೆ. ನಮ್ಮ ದೇಶದಲ್ಲಿ ಮೇಲ್‌ಜಾತಿಯವರೆಂದು ಹೇಳಿಸಿಕೊಳ್ಳುವವರಲ್ಲಿ ಅನೇಕರಿಗೆ ಮಾಂಸವನ್ನು ಊಟಮಾಡುವ ಅಭ್ಯಾಸವಿಲ್ಲ. ಅಂಥವರು ಕ್ರೈಸ್ತಮತಾವಲಂಬನೆ ಮಾಡಿದರೆ ಅವರಿಗೆ ಮಾಂಸ ಭೋಜನಮಾಡಬೇಕೆಂದು ಯಾರೂ ಬಲಾತ್ಕಾರಮಾಡುವದಿಲ್ಲ. ಇಂಥವರಲ್ಲಿ ಅನೇಕರು ಕ್ರೈಸ್ತರಾಗಿದ್ದಾರೆ. ಅವರಲ್ಲಿ ಅನೇಕರು ಮಾಂಸಭೋಜನವನ್ನು ಮಾಡುವದಿಲ್ಲ. ಇದರ ವಿಷಯವಾಗಿ ಕ್ರೈಸ್ತರ ವೇದದಲ್ಲಿ ಹೇಳಿರುವದೇನಂದರೆ, ಮಾಂಸವನ್ನು ಊಟಮಾಡದಂಥವನು ಊಟಮಾಡುವವನನ್ನು ಹೀನೈಸಬಾರದು. ಮಾಂಸವನ್ನು ಊಟಮಾಡುವವನು ಊಟಮಾಡದವನನ್ನು ದೋಷಿ ಎಂದು ಎಣಿಸಬಾರದು ಎಂಬುದು. ಮಾಂಸಾಹಾರದ ವಿಷಯವಾಗಿ ನನಗೆ ತೋರುವದೇನಂದರೆ, ಮಾಂಸಾಹಾರವು ದೇಶಪದ್ಧತಿಯಾಗಿರುವಂತೆ ಕಾಣಬರುತ್ತದೆ. ಹ್ಯಾಗಂದರೆ ಕೆಲವು ದೇಶಗಳಲ್ಲಿ ನಾನಾತರದ ಧಾನ್ಯಗಳೂ ಕಾಯಿಗಡ್ಡೆಗಳೂ ಫಲಾಹಾರಗಳೂ ವಿಶೇಷವಾಗಿ ಬೆಳೆಯುತ್ತವೆ. ಅಂಥ ದೇಶಗಳಲ್ಲಿ ನಮ್ಮ ದೇಶವು ಒಂದಾಗಿದೆ. ಆದಕಾರಣ ನಮ್ಮ ದೇಶಸ್ಥರಲ್ಲಿ ಕೆಲವರು ಮಾಂಸ ಭೋಜನಮಾಡುವದನ್ನು ಬಿಟ್ಟುಬಿಟ್ಟರು. ಏಕೆಂದರೆ ಹಾಗೆ ಮಾಡುವದಕ್ಕೆ ನಿಮಿತ್ತವಿಲ್ಲ. ಅವರ ಆಹಾರಕ್ಕೆ ಬೇರೆ ಬೇರೆ ದಿನಸುಗಳು ಯಥೇಷ್ಟವಾಗಿ ಉಂಟು. ಆದರೆ ಇನ್ನು ಬೇರೆ ಬೇರೆ ದೇಶಗಳಲ್ಲಿ ಧಾನ್ಯಗಳೂ ಕಾಯಿಗಡ್ಡೆಗಳೂ ಫಲಾಹಾರಗಳೂ ವಿಶೇಷವಾಗಿ ಬೆಳೆಯುವದಿಲ್ಲ. ಅಂಥಾ ದೇಶವಾಸಿಗಳು ಮಾಂಸಾಹಾರವನ್ನು ಬಿಟ್ಟರೆ ಬೇರೆ ಆಹಾರವಿಲ್ಲದೆ ಸಾಯಬೇಕಷ್ಟೆ. ಆದದರಿಂದ ಅಂಥಾ ದೇಶಗಳಲ್ಲಿ ಮಾಂಸಾಹಾರವು ಪೂರ್ವದಿಂದಲೇ ವಾಡಿಕೆಯಾಗಿ ಬಂದಿದೆ. ಆದರೆ ಮಾಂಸಾಹಾರ ಮಾಡುವವರೆಲ್ಲರೂ ಕನಿಷ್ಠಕುಲದವರು. ಮಾಂಸಾಹಾರಮಾಡದವರೆಲ್ಲರೂ ಶ್ರೇಷ್ಠಕುಲದವರು ಎಂದು ಹೇಳುವದಕ್ಕಾಗುವದಿಲ್ಲ. ಯಾಕಂದರೆ ಮಾನವಕುಲಕ್ಕೆ ಏನೇನು ಗುರುತಯ್ಯಾ, ಜ್ಞಾನಾಜ್ಞಾನ ಎರಡುಂಟು ಲೋಕಕ್ಕೆ ಅನ್ನಪಾನ ಈ ಎರಡೇ ಆದಿ ಎಂದು ಹಿರಿಯರ ವಾಕ್ಯ ಉಂಟಲ್ಲ. ಶ್ರೇಷ್ಠಕುಲದವರಿಗೂ ಕನಿಷ್ಠಕುಲದವರಿಗೂ ಅನ್ನಪಾನಗಳು ಬೇಕೇ ಬೇಕು. ಇವುಗಳಿಲ್ಲದೆ ಯಾರೂ ಬದುಕುವದಾಗಿಲ್ಲ. ಆದರೆ ಅನ್ನಪಾನವೇ ಮಾನವಕುಲಕ್ಕೆ ಗುರುತಲ್ಲ, ಜ್ಞಾನಾಜ್ಞಾನಗಳು ಇವೇ ಮನುಷ್ಯಕುಲಕ್ಕೆ ಗುರುತು. ದೈವಜ್ಞಾನಿ ಯಾರೋ ಅವನೇ ಶ್ರೇಷ್ಠಕುಲದವನು. ದೈವಜ್ಞಾನ ಹೀನನು ಯಾರೋ ಅವನೇ ಅಧಮಕುಲದವನು.

ನಂಜುಂ—ಊಟ ನೀಚ ಶುಚಿ ಅಶುಚಿ ಇಲ್ಲವೇ? ಅಧಮಕುಲದವರ ಊಟ ಉಡಿಗೆ ವಾಸಸ್ಥಳಗಳೂ ಉತ್ತಮಕುಲದವರ ಊಟ ಉಡಿಗೆ ವಾಸಸ್ಥಳಗಳೂ ಒಂದೇನೋ? ಅಂಥ ನೀಚನರ ಸಂಗಡ ಊಟ ಉಪಚಾರ ಕೊಡೋಣಕೊಂಬೋಣಗಳನ್ನು ಆಚರಿಸುವದು ನಿಮ್ಮಂಥವರಿಗೆ ಸಾಧ್ಯವಾದೀತಲ್ಲದೆ ನಮ್ಮಂಥವರಿಗೆ ಎಂದಿಗೂ ಸಾಧ್ಯವಾಗಲಾರದು ಅಂದನು.

ಮಡಿ—ಈ ರೀತಿಯಾದ ತನ್ನ ಸ್ನೇಹಿತನ ಮಾತುಗಳನ್ನು ಕೇಳಿ ಪಕ್ಕನೆ ನಕ್ಕು ಅಂಥಾ ಅಶುಚಿ ಜನರಲ್ಲಿ ನನ್ನನ್ನು ಸೇರಿಸುತ್ತೀರೋ ಚಿಂತಿಲ್ಲ. ನಾನು ಅವಲಂಬಿಸಿರುವಂಥ ಕ್ರೈಸ್ತಮತವು ಅಂಥಾ ಅಶುಚಿ ಜನರ ಸಂಗಡ ಊಟ ಉಪಚಾರಗಳನ್ನೂ ಕೊಡೋಣ ಕೊಂಬೋಣಗಳನ್ನೂ ಆಚರಿಸಬೇಕೆಂದು ವಿಧಿಸುವದಿಲ್ಲ. ಈ ವಿಷಯಗಳಲ್ಲಿ ಆ ಮತಸ್ಥರಿಗೆ ಪೂರ್ಣಸ್ವತಂತ್ರವುಂಟೆಂದು ಮೊದಲೇ ನಿಮಗೆ ಹೇಳಿದ್ದೇನೆ. ನೀವು ನನ್ನನ್ನು ಅಂಥಾ ಅಶುಚಿ ಜನರಲ್ಲಿ ಸೇರಿಸಿದ್ದಕ್ಕಾಗಿ ನಾನು ವ್ಯಸನಪಡುವದಕ್ಕೆ ಕಾರಣವಿಲ್ಲ. ಯಾಕಂದರೆ ನೀವು ನೆನಸುವ ಪ್ರಕಾರ ಅಂಥಾ ಅಶುಚಿ ಜನರ ಸಹವಾಸಕ್ಕೆ ನಾನೊಬ್ಬನೇ ಸೇರಿದವನಲ್ಲ. ನಿಮ್ಮ ಕರಣಲೀಲಾಮೃತವೆಂಬ ಗ್ರಂಥದ ಒನೇ ಸಂಧಿಯಲ್ಲಿ ಲಿಂಗಾಯತ ಮತೋದ್ಧಾರಕರಾದ ಬಸವಣ್ಣನವರು ಅಧಮಕುಲದವನಾದ ಹರಳ್ಯಯ್ಯನನ್ನು ನೋಡಿ ಆನಂದಪಟ್ಟು ಬಿಗಿದಪ್ಪಿಕೊಂಡು ಮುದ್ದಾಡಿ ಕೊಂಡಾಡಲು ಹರಳ್ಯಯ್ಯನು ಬಸವಣ್ಣನವರಿಗೆ.

(ಜಂಪೆ) ಮುಟ್ಟದಿರು ನಮ್ಮಯ್ಯ ಕಟ್ಟಹೊಲೆಯನು ನಾನು
ಕೆತ್ತಜನದಡಿಸಾರ ಸ್ವಷ್ಟಿಗಡಿದೂರ

ಎಂದು ಹೇಳಲು ಬಸವಣ್ಣನವರು ಹರಳ್ಯಯ್ಯನಿಗೆ ಹೇಳಿದ್ದೇನಂದರೆ

ಹೊಲೆಯಲ್ಲಲ್ಲದೆ ಲೋಕ ನೆಲೆಯಲ್ಲಿ ಪುಟ್ಟುವದೇ?।
ಹೊಲೆಯನೆನಿಸಲು ಮುಂದೆ ಕುಲವುಂಟೇ ಜಗದಿ॥
ಕುಲವೇನು ಛಲವೇನು ಹಲವುಮಾತುಗಳೇನು।
ಮಲಹರನ ಶರಣಗೆ ಕುಲವುಂಟೇ ಜಗದಿ॥

ಎಂದು ಹೇಳಿದೆಯಲ್ಲ ಮತ್ತು ಅದೇ ಗ್ರಂಥದ ೮ನೇ ಸಂಧಿಯಲ್ಲಿ ಮಧುವರಸನೆಂಬ ಉತ್ತಮಕುಲದವನು ಹರಳ್ಯಯ್ಯನೆಂಬ ಅಧಮಕುಲದವನ ಸಂಗಡ ನೆಂಟತನ ಮಾಡಿದ ಸಂಗತಿಯನ್ನು ಬಿಜ್ಜಳರಸನು ಕೇಳಿ ಅವರಿಬ್ಬರಮೇಲೆ ಅತಿಕೋಪತಾಳಿ ಚನ್ನಬಸವೈಯ್ಯನವರನ್ನು ಕರೆಸಿ ವಿಚಾರಿಸುವಾಗ ಚನ್ನಬಸವೈಯ್ಯನವರು ಬಿಜ್ಜಳರಸನಿಗೆ ಹೇಳಿದ್ದೇನಂದರೆ

(ಅಟತಾಳ) ಕೇಳುಬಿಜ್ಜಳ ಕೇಳು ಮನುಜರ ಜಾಳುಮಾತು ಕೇಳದಿರಿ
ಬಾಳಲೋಚನ ಭಕ್ತರನು ಕುಲಕೇಳಬಹುದೇ?
ಕುಲವಕೇಳುವೆ ಹೊಲಬನರಿಯದಲೆ
ಕುಲವದುಂಟೇ? ದ್ವಿಜರೊಳು ಕುಲವನೆಣಿಸಲು?
ಪೂರ್ವಋಷಿಗಳ ಕುಲವಕೇಳು॥
ಕಶ್ಯಪನು, ಶಾಂಡಿಲ್ಯ, ಗಾರ್ಗ್ಯ, ದೂರ್ವಾಸ, ಮುಖ್ಯಾಸುತನು
ವ್ಯಾಸ, ಕುಶ, ಮಾಂಡವ್ಯ, ವಾಲ್ಮೀಕಿ ಹೇಸುಕುಲವೇ?

(ಕಂದಪದ್ಯ) ಅಂತರ ಲಿಂಗಿ ದ್ವಿಜರ ನಡತೆಯು
ಸಂತತಶಿವನಮುಂದೊಂದುಕುಲವಿಲ್ಲೆಂದಾ
ಮುಂತುಸುರುವೆಕ್ಕತಿ ವಾಕ್ಯವ,
ಇಂತಿದನೀಕೇಳಿ ಮನದಿ ತಿಳಿಯಲಿ ಭೂಪ॥

(ಜಂಪೆ) ಹಲವು ಜಲಧಿಯು ಬಂದು ಕಲಿಯೆ ಮಹಾಸಾಗರವು
ಕುಲಗೆಟ್ಟ ಜಂಬರ ನೆಲೆಗಾಣದರಸ
ಬೇಧ ವಚನದಿಂದೆ ಕೇಡಹುದು ಇದರಿಂದ
ಆದಿ ಸಾರಿದೆ ನಾನು ನೋಡಿಕೋ ನೃಪತಿ।

ಹೀಗೆ ಶಿವಾಚಾರಕುಲದವರಿಗೆ ಪ್ರಸಿದ್ಧರಾದಂಥ ಬಸವಣ್ಣ ಚನ್ನಬಸವಣ್ಣ ಇವರು ಕುಲಾಚಾರವನ್ನು ಅನುಸರಿಸುವದು ಶಿವಾಚಾರದವರಿಗೆ ಸಲ್ಲದೆಂದು ಖಂಡನೆ ಮಾಡಿರುವಾಗ ಈಗಿನ ಶಿವಾಚಾರದ ಕುಲದವರು ಕುಲಾಚಾರವು ಮುಖ್ಯವಾದದ್ದೆಂದು ಭಾವಿಸುವದು ಯಾವ ನ್ಯಾಯವೋ ತಿಳಿಯದು. ಆದರೆ ಮನಸ್ಸಿಗೆ ಅಸಹ್ಯವಾದದ್ದನ್ನು ಉಂಡು ಕುಡಿಯಬೇಕೆಂದು ಯಾರೂ ಹೇಳಲಾರರು.

ತಿನಸು ತನ್ನದೆ ಊಟವು ತನ್ನ ಮನದಿಚ್ಛೆ ತ್ರಿಭುವನ ನೀತಿಯು ಕೇಳು ಭುವನಾಧಿನಾಥ ಹೀಗೆ ಚನ್ನಬಸವಣ್ಣನವರೇ ಹೇಳಿದ್ದಾರಲ್ಲ. ಊಟ, ಪಾನ ಮುಖ್ಯವಾದವುಗಳಲ್ಲ ಮನಸ್ಸು ಮುಖ್ಯವಾದದ್ದು. ಸ್ವಜನರಲ್ಲಿ ಒಬ್ಬನಾದರೂ ಅಲಕ್ಷ್ಯಮಾಡಬೇಡಿರಿ ಎಂದು ಕ್ರೈಸ್ತರ ವೇದದಲ್ಲಿ ಹೇಳಿದೆ. ಸ್ವಜನಕುಲದವನೆಂದು ಯಾರನ್ನಾದರೂ ಅಲಕ್ಷ್ಯಮಾಡುವದಾದರೆ ಅವನನ್ನು ಮಾತ್ರವಲ್ಲ, ಅವನ ಸೃಷ್ಟಿಕರ್ತನನ್ನೂ ನನ್ನ ಸೃಷ್ಟಿಕರ್ತನನ್ನೂ ಸಹ ಅಲಕ್ಷ್ಯಮಾಡಿದಂಥ ಮಹಾ ಪಾಪವೇ ಆಗಿರುವದು. ಯಾಕಂದರೆ ಅವನ ಸೃಷ್ಟಿಕರ್ತನೂ ನನ್ನ ಸೃಷ್ಟಿಕರ್ತನೂ ಒಬ್ಬನೇ ಅಲ್ಲವೋ? ಹಾಗಾದರೆ ನಾವೆಲ್ಲರೂ ಅಣ್ಣತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಮಾಡಿ ಒಬ್ಬರಿಗೊಬ್ಬರು ಸಹಾಯಕರಾಗಿರಬೇಕು. ಇಂಥಾ ಶ್ರೇಷ್ಠಗುಣವೇ ನಮ್ಮ ಪರಮತಂದೆ ಮೆಚ್ಚುವಂಥ ಮಹಾ ಪುಣ್ಯಕಾರ್ಯವಾಗಿದೆ. ಇಂಥಾ ಉತ್ತಮಗುಣವುಳ್ಳವರೇ ಉತ್ತಮಕುಲದವರು.

ಯಾತರ ಹೂವಾದರು ನಾತರದು ಸಾಲದೆ
ಜಾತವಿಜಾತ ನೆನಬೇಡ ದೇವರೊಲಿ
ದಾತನೇಜಾತ ಸರ್ವಜ್ಞ।

ಅಷ್ಟರಲ್ಲಿ ಮಡಿವಾಳ್ಯಯ್ಯನವರ ಪ್ರಿಯಪತ್ನಿಯಾದ ಗುರುಪ್ರೇಮಮ್ಮನು ಕಸೂದಿ ಸಾಮಾನುಗಳನ್ನು ತೆಗೆದುಕೊಂಡು ಹೊರಗೆ ಬರಲು ತಮ್ಮ ಕಟ್ಟೆಮೇಲೆ ಕೂತುಕೊಂಡು ಮಾತಾಡುತ್ತಿದ್ದ ನಂಜುಂಡಯ್ಯನನ್ನು ಕಂಡು ಬೇಗನೆ ತನ್ನ ಎರಡು ಕರಗಳನ್ನು ಜೋಡಿಸಿ ಶರಣುಮಾಡಿ, ಏನು ಅಣ್ಣನವರೇ, ಪರುಷನ ಅಪರೂಪವಾಯಿತು ಅಂದಳು.

ನಂಜುಂಡಯ್ಯನು ತನ್ನ ಮುಖವನ್ನೆತ್ತಿ ಗುರುಪ್ರೇಮಮ್ಮನ ಕಡೆಗೆ ನೋಡಿ ಏನಮ್ಮಾ ವಿಭೂತಿ ಇಲ್ಲದೆ ನಿಮ್ಮ ಹಾಳುಮುಖವು ಜ್ಯೋತಿ ಇಲ್ಲದ ಮನೆಯಂತೆ ಕತ್ತಲೆಯಾಯಿತಲ್ಲ ಅಕಟಾ ಅಂದನು.

ಅವಳು ಗುರುಪ್ರೇಮಮ್ಮನು ಮುಗುಳುನಗೆಯಿಂದ ಮುಖಭೂಷಣಕ್ಕಿಂಥ ಮನೋಭೂಷಣವು ಮುಖ್ಯವಾದದ್ದಲ್ಲೇನಣ್ಣಾ ಮುಖಕ್ಕೆ ಭೂಷಣವಾದ ವಿಭೂತಿಯನ್ನು ಧರಿಸಿಕೊಳ್ಳದಿದ್ದರೂ ಮನಸ್ಸಿಗೆ ಭೂಷಣವಾದಂಥ ಪರಮಗುರುವಿನ ಭಕ್ತಿಯನ್ನು ಧರಿಸಿಕೊಂಡಿದ್ದೇನೆ. ಅದನ್ನು ತಿಳಿದು ಆನಂದಪಡಿರಿ ಅಣ್ಣನವರೇ ಅಂದಳು.

ಮಡಿವಾಳ್ಯಯ್ಯನು ತನ್ನ ಪ್ರಿಯಪತ್ನಿ ಹೇಳಿದಂಥ ಈ ಜ್ಞಾನವಾಕ್ಯವನ್ನು ಕೇಳಿ ತನ್ನಲ್ಲಿಯೇ ತಾನು ಹಿಗ್ಗಿ ಕಿರುನಗೆಯನ್ನು ಬೀರಿ ನಮ್ಮ ಅಣ್ಣನವರಿಗೆ ನಿಮ್ಮ ಭಕ್ತಿ ನೋಡುವಂಥ ಮನೋನೇತ್ರಗಳು ಮಂದವಾಗಿ ನಿಮ್ಮ ಮುಖನೋಡುವಂಥ ಮಾಂಸದ ನೇತ್ರಗಳು ಬಹು ತೀಕ್ಷ್ಣವಾಗಿವೆ ಅಂದನು.

[ಸಶೇಷ]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೧೧—೬—೧೯೦೯ ರಿಂದ ೧೮—೬—೧೯೦೯ ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	1	0	2	1
ಮೈಸೂರು ,,	13	7	0	0
ಬೆಂಗಳೂರು ಡಿಸ್ಟ್ರಿಕ್ಟು	0	0	4	3
ಮೈಸೂರು ,,	10	9	0	0
ಕೋಲಾರ್ ,,	0	0	2	2
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	9	9
ಹಾಸನ ,,	0	0	10	9
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿಮೊಗಾ ,,	0	0	2	2
* ಸಂಖ್ಯೆ ಬಂದಿಲ್ಲ. ಜುಮ್ಲಾ	24	16	20	17

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಆಷಾಢ ಶುದ್ಧ ತ್ರಯೋದಶಿ ಗುರುವಾರದಿಂದ ಆಷಾಢ ಬಹುಳ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೯ ನೇ ಜೂಲೈ.

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ.	ಸೌರಿ ಮಿಥುನ ಮಾಸ
1	ಗುರು ‡	ತ್ರಯೋದಶಿ	30-0	ಅ	3-50	18
2	ಶುಕ್ರ	ಚತುರ್ದಶಿ	29-50	ಜ್ಯೆ	5-58	19
3	ಶನಿವಾ §	ಪೌರ್ಣಮಿ	28-10	ಮೂ	6-52	20
4	ರವಿವಾ	ಪಾಡ್ಯಮಿ	25-50	ಪೂಷಾ	6-38	21
5	ಚಂದ್ರ ,,	ಬಿದಿಗೆ	22-12	ಉತ್ತಷಾ	5-11	22
6	ಕುಜ *	ತದಿಗೆ	18-2	ಶ್ರ	2-52	23
7	ಬುಧ †	ಚೌತಿ	12-16	ಧ	56-12	24

‡ ಪ್ರದೋಷ § ವ್ಯಾಸಪೂರ್ಣಿಮಾ, ಚಾಮರಾಜೇಶ್ವರ ರಥ.
. ತಿಥಿದ್ವಯಂ, ಮೃತ್ಯುಯೋಗ
* ಚತುರ್ಥಿ ತಿಥಿ, ಸಂಕಷ್ಟಚತುರ್ಥಿ
† ಪಂಚಮಿ ತಿಥಿ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ ಕ್ಕೆ ರೂ	೧೫-೦-೦	೧೫-೧೨-೦
ಕೆಂಪುತಿ ಅಕ್ಕಿ ಅವಲ್	೧೬-೮-೦	೧೫-೦-೦
,, ದುಯಂ	೧೬-೦-೦	೧೪-೮-೦
ಬಾಪಾನೆ ಅಕ್ಕಿ .	೧೪-೦-೦	೧೫-೮-೦
ಸಣ್ಣಕ್ಕಿ ಅವಲ್	೧೭-೦-೦	೧೮-೦-೦
,, ದುಯಂ .. .	೧೬-೦-೦	೧೬-೮-೦
ತೊಗರಿ ಬೇಳೆ ಪಲ್ಲಾ ೧ಕ್ಕೆ . .	೧೬-೦-೦	೧೬-೮-೦
,, ದುಯಂ .	೧೫-೦-೦	೧೬-೦-೦
ಹುರುಳಿ ಪಲ್ಲಾ ೧ಕ್ಕೆ	೯-೪-೦	೮-೧೨-೦
ರಾಗಿ	೮-೧೨-೦	೮-೪-೦
ಜೋಳ	೯-೦-೦	೮-೧೨-೦
ಹಲಸಂದೆ ಪಲ್ಲಾ ೧ಕ್ಕೆ	೧೩-೮-೦	೧೨-೪-೦
ಬೇಳೆ ಅವರೆ	೧೧-೦-೦	೧೪-೦-೦
ಹೆಸರು	೧೬-೦-೦	೧೨-೦-೦
ಉದ್ದು	೧೪-೮-೦	೧೨-೪-೦
ಕಡಲೆ	೧೩-೮-೦	೧೧-೮-೦
ಎಳ್ಳು ಸೇ. ೧೨೭ ಕ್ಕೆ	೨೨-೮-೦	೧೮-೮-೦
ಹುರುಳಿ	೧೧-೧೨-೦	೧೦-೮-೦
ಹರಳು ೧೨೭ ಸೇರಿಗೆ . ..	೧೧-೦-೦	೯-೮-೦
ಸೀಗೇಕಾಯಿ ಮಣ ೧ಕ್ಕೆ .. .	೨-೧೫-೦	೨-೬-೦
ಮೆಣಸಿನಕಾಯಿ	೫-೮-೦	೪-೮-೦
,, ದುಯಂ .	೫-೦-೦	೪-೪-೦
ಬೆಲ್ಲ ದೊಡ್ಡ ಅಚ್ಚು ..	೬-೪-೦	ಮ ೨-೨-೦
ಒಳ್ಳೆಣ್ಣೆ ಮಣ ೧ಕ್ಕೆ .	೫-೦-೦	೫-೪-೦
ಹರಳೆಣ್ಣೆ ,, . ..	೪-೮-೦	೪-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ .	೯-೪-೦	೯-೦-೦
ಉಪ್ಪು ,, ...	೬-೪-೦	೫-೮-೦
ಹುಣಿಸೇ ಹಣ್ಣು	೧-೧೨-೦	೧-೧೦-೦
,, ಹಳೇದು . ..	೧-೮-೦	೧-೬-೦
ತುಪ್ಪ ಮಣ ೧ಕ್ಕೆ .. .	೧೫-೦-೦	೧೩-೮-೦
ಸೀಮೆಎಣ್ಣೆ ಪೆಟ್ಟಿ ೧ಕ್ಕೆ	೫-೪-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ .. .	೪-೮-೦	೪-೪-೦
ಅಡಿಕೇಕಾಯಿ ಮಣ ೧ಕ್ಕೆ	೦-೮-೦	೦-೧೨-೦
ಅಂಟುವಳದ ಕಾಯಿ ಮಣ ೧ಕ್ಕೆ .	೧-೦-೦	೦-೧೩-೦
ಚಿನ್ನ (ಪೌಂ) ಕೆಂಪು ...	೧೫-೬-೦	೧೫-೧೦-೦
,, ,, ಹಸಿರು	೧೬-೦-೦	೧೫-೧೪-೦
,, ,, ಗಟ್ಟಿ ತೊಲ ೧ಕ್ಕೆ ..	೨೪-೮-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೬೭-೪-೦	೬೬-೦-೦

Printed and Published by the Rev H GULLIFORD, Proprietor and Manager, Wesleyan Mission Press, Mysore. 1/7/1909.

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೩ ಮೈಸೂರು—ಸನ್ ೧೯೦೯ ನೇ ಇಸವಿ ಜೂಲೈ ತಾರೀಖು ೮ ನೇ ಗುರುವಾರ. ಸಂಚಿಕೆ ೬

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

98 21

೧ ಲೋಕಾಮಂಟುಸ್ ಕಸ್ತೂರೀ ಮಾತ್ರೆ.—ಈ ಮಾತ್ರೆಗಳನ್ನು ಅವಲದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಶೋಷ (ಭಾರ), ಮೈ ನಡುಕ, ಶೀತವಾತಗಳ ಬಂಧ, ಅಜೀರ್ಣ, ಅಗ್ನಿಮಾಂದ್ಯ, ತಲ್ಲನೋವು, ಕೆಮ್ಮಲು, ನರಗಳ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನಾನಾ ಹವಾಗಳ ಬದಲಾವಣೆಯನ್ನು ಸಹಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಕುತುಶೂಲೆ, ಮಕ್ಕಳ ಎಳವು, ಜ್ವರ, ಹಲ್ಲುಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತವೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೩೦ ಮಾತ್ರೆಯುಳ್ಳ ಕುಪ್ಪಿಗೆ ೮ ಆಣೆ ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್ ಆರ್

ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಜ್ವರಹರಿ

16 23

ಇದು ಸಾಧಾರಣ ಜ್ವರ ಚಳೀಜ್ವರ, ಮೂರೇಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ, ಬಳೆಹಿಡಿಯುವ ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೩೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲಿ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೩೦ ಡೋಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ಕ್ಕೆ ೮ ಆಣೆ, ೧ ರೂ ೧—೮ ರೂ ರೂ ೩—೧೨ ೮ ೧೧ ರೂ ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಓಮಂ ಕರ್ಪೂರ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ರಕ್ತಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು "ಜ್ವರಹರಿ" ಎಂಬ ಔಷಧದಂತೆಯೇ ಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಪುಸ್ತಕ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇಲ್ಲದೆ ಕೆಳಗಿನ ವಿಳಾಸದಲ್ಲಿ ವಿಚಾರಿಸಿ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್ ಮದರಾಸ್

WILLIAM & Co, FORT, BOMBAY

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30 20]

ತಲೆನೋವು, ಗಂಟು ಉಬ್ಬುವದು, ವಾತ ಸಂಧಿವಾತ, ಉಳುಕು, ಅಬಲು ಗಂಟು, ಗಂಟ್ಲು ನೋವು ಅರ್ಧಾಂಗವಾಯು, ಎದೆಶೀತ, ಘಾಯ, ಚಳುಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೦ ೮ ೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಪ್ಪಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಆಸ್ಮಾಮಿಶ್ರಣ	೨ ೦ ೦
ಚೇಳುಕಡತದ ಮದ್ದು	೦ ೮ ೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧ ೦ ೦
ಸುಂದರೀ ತೈಲ—ಮುದ್ದಿ ಣಗಳಿಗೆ	೦ ೮ ೦
ಜುಲಾಬು ಮಾತ್ರೆ—ಜುಲಾಬಿಗೆ	೦ ೮ ೦
ನೇತ್ರಾಂಜನ—ಮಂದ ದೃಷ್ಟಿಗೆ	೦ ೪ ೦
ಬಿಚ್ಚ ಮುಲಾಮು—ಮಕ್ಕಳ ಹುಣ್ಣಿಗೆ	೦ ೩-೦
ಕೇಶವರ್ಧಿನೀ ತೈಲ—ತಲೆಯ ಮೆದುಳಿಗೆ	೧ ೦ ೦
ಕಫನಾಶಕ ಚೂರ್ಣ —ಆಸ್ಮಾ ರೋಗಕ್ಕೆ	೦ ೮ ೦

ದಯವಿಟ್ಟು ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1 26

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೆಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದೂ ನೇರವಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ೪, ೧ ರೂ ೬ ೮ ೧ ರೂ ೪ ೮

ಚುಕ್ಕೆಯುಳ್ಳ ಟೋಪಿಗಳು ರೂ ೧ ೮ ರೂ ೧ ೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ೪, ೧ ರೂ ೮ ೪, ೧ ರೂ ೬ ೪

ಉಣ್ಣೆಯ ಟೋಪಿಗಳು ೧ ರೂ ೮ ೮, ೧ ರೂ ೬ ೪,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕೈಚೀಲ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ	೧—೦—
ನೇರವಾಗಿ ಕಡವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟ್ ಸೇರಿ	ರೂ	೧—೧೪—
" " ೬ " "	"	೦—೧೫—

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ ಚಂದಾ ಕಟ್ಟುವಾಗಲೂ ತಮಗೆ ಬಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಂ.. ಗತಿ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು

47 7

ತಲೆನೋವು, ವಾಯುನೋವು, ಸೆಳತ, ಗಂಟ್ಲುನೋವು, ಪಕ್ಷವಾಯು ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು ಚೇಳು ಕಡಿದ ನೋವು ಹಲ್ಲುನೋವು,—ಇವುಗಳೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತಿಗನುಸಾರವಾಗಿ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಡಾಕ್ಟರು ಪರೀಕ್ಷಿಸಿ ನೋಡಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆ ಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟುಕೊಳ್ಳಬೇಕೆಂದು ಹೇಳುವರು ಈ ಅನೋನ್ಯವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಶೀಸೆ ೧ಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್ ಕ್ಲೆಮೆಂಟ್ಸ್,

೩೩, ವೇದವಲ್ಲಿಪಿಳ್ಳೆ ಬೀದಿ ವೇಪೇರಿ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ಪಠಿಸಿರಿ.

10 27

"ಬ್ರಹ್ಮಚರ್ಯ" ವೆಂಬ ಮರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬೇಗನೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ನಪ್ರಯಾಸಫಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯಾಸಫಲದೀಪಿಕೆ"ಯನ್ನು ಒಂದು ಮುಖ್ಯವಾದ ಪರೀಕ್ಷೆಗೆ ಪ್ರೋಗ್ರಾಂ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರವರೆಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಂಜಕವಾಗಿದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟೀನ್ ಚಿನ್ನಪ್ಪಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಪಶ್ಚಾತ್ತಾಪ, ಪಾಪಮನ್ನಣೆ, ಪವಿತ್ರತ್ವ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ಕೈಲಿಕ ಬೈಂಡು ಪ್ರತಿ ಒಂದಕ್ಕೆ ೦—೧೦—

ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—

ವಿಳಾಸ —ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು.

JUST RECEIVED! JUST RECEIVED!!

Stead's Books for the Bairns

(Illustrated) New Numbers [5 27]

STEAD'S PENNY POPULAR TALES—Sixty-four Pages in a coloured Picture Cover Each number contains a story of thrilling interest 24 numbers

CALENDARS FOR 1909.

Apply—The Manager, C.L.S. Book Depot, Mysore City.

ಸ್ವದೇಶೀ ಬಟ್ಟೆಗಳು ? ಸ್ವದೇಶೀ ಬಟ್ಟೆಗಳು !!

2 26

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು. ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬ ಆಣೆ ವರಿವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಜಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ನಿನಗೆ ಸ್ವಸ್ಥವಿಲ್ಲವೋ ?

ನಿನಗೆ ಸ್ವಸ್ಥವಿಲ್ಲವೆಂದು ತೋರಿದಾ – ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—" ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಸ್ವಸ್ಥನಾಗುವುದು.

(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ, ಪರಿಣಮಿಸುವುದು, ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ ; ಅಗ್ನಿಮಾಂದ್ಯ ; ಗಾಬರಿ, ಅಶಕ್ತಿ ; ಎದೆಯು ತಲ್ಲಣಿಸುವದು, ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಕುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು ; ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಕುಶಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [69-45]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು. ಅಥವಾ, ಡೋನ್ಸ್. ಪಿ. ಒ. ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುದು.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿವಾರೆಂದು ಕಂಡ ಕೂಡಲೇ

SCOTT'S EMULSION. 6-27

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ, ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸತೋರುವದು.

ಅದು ಸಂತೋಷವೂ ಆನಂದವೂ ಪಡುವ ಹಾಗೆ ಆಹಾರದ ರುಚಿ ಹೊಂದಿ ಸುಖಚಿಹ್ನೆ ತೋರಿಸುವದು.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

CHAMBERLAIN'S PAIN BALM.

ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧವು

4 27

ಬೆನ್ನಿಲುಬಿನ ನೋವು, ಪಕ್ಕಗಳಲಿ ಆಗುವ ನೋವು, ಕೀಲುಗಳಲ್ಲಿ ಹುಟ್ಟುವ ನೋವು, ತಲೆನೋವು, ಬಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಕೀಲುಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸೋಲ್ ಏಜೆಂಟರು.

5 1 1

ಗ್ರಾಮಫೋನ್ ರೂ 29-8-0 ಮೊದಲುಗೊಂಡು ರೂ 1,800 ವರಿವಿಗೆ

ಕಲ್ಕತ್ತಾ ಗ್ರಾಮಫೋನ್ ಟೈಪರೈಟರ ಕಂಪನಿಗೋಸ್ಕರ ತಯಾರಿಸಿದ್ದು ನಾಯಿನಾರ್ಕ್ ಉಳ್ಳದ್ದು ಪ್ರಪಂಚದಲ್ಲೆಲ್ಲಾ ಅತ್ಯುತ್ತಮವಾದದ್ದು ಇದಕ್ಕೆ ಉಪಯೋಗಿಸುವ ಇಂಗ್ಲಿಷ್, ಕನ್ನಡ, ಹಿಂದುಸ್ಥಾನಿ, ಮರಾಠಿ ರಿಕಾರ್ಡುಗಳು ಯಾವ ಸ್ಟೈಲಿನಲ್ಲಿದರೂ 1 ರೂ. ಮೊದಲುಗೊಂಡು ರೂ. 1-12-0 ವರಿವಿಗೂ ನಮ್ಮಲ್ಲಿ ದೊರೆಯುವವು. 95 ರಿಂದ ರೂ. 280 ರ ವರಿವಿಗೂ ಕ್ರಯಬಾಳುವ ಇಂಗ್ಲಿಷ್ ತಯಾರಿಯಾದ ಬೈಸಿಕಲ್‌ಗಳು ನಮ್ಮಲ್ಲಿ ದೊರೆಯುವವು. ನಮ್ಮ ಗ್ರಾಮಫೋನ್ ಮತ್ತು ಬೈಸಿಕಲ್ಲುಗಳ ವಿಷಯವಾಗಿ ಹೆಚ್ಚು ಹೊಗಳಲಾರೆವು ಒಂದು ದಫ ತರಿಸಿಕೊಂಡು ನೋಡಿದರೆ ಗೊತ್ತಾಗುವದು ನಮ್ಮ ವಿಳಾಸ –

ಇಂಗ್ಲಿಷ್ ಟ್ರೇಡಿಂಗ್ ಕಂಪನಿ, ಬೆಂಗಳೂರು

ಗೃಹಕೃತ್ಯದ ನೋಟೀಸು.

55-1

ಈ ಕೆಳಗೆ ರುಜುಮಾಡಿ ಇರುವ ನಾನು ಇದರಿಂದ ಸರ್ವರಿಗೂ ತಿಳಿಸುವದೇನಂದರೆ —ಆನೇಕಲ್ ತಾಲ್ಲೂಕು ಸರ್ಜಾಪುರದ ಹೋಬಳಿ ರಾಯಸಂದ್ರದಲ್ಲಿರುವ ಕುರಿ ಪೋಬಳ್ಳಿಯವನ ಮಗ ಪೋಬಳ್ಳಿಯನಿಗೆ ನಾನು ಹಿಂದೂ ಧರ್ಮಶಾಸ್ತ್ರ ಪ್ರಕಾರ ದ್ವ್ಯಾಮುಷ್ಯಾಯಣ ಪುತ್ರನಾಗಿಹೆನೆ. ನನ್ನ ಜನಕತಾಯಿ ನಾನು ಹುಟ್ಟಿದ ಮೂರು ತಿಂಗಳಲ್ಲಿಯೂ, ತಂದೆ ದೊಡ್ಡಮುನಿಯಪ್ಪನು ಮೂರನೆ ವರುಷದಲ್ಲಿಯೂ ಮೃತರಾದರು ನಮ್ಮ ತಂದೆ ವಾಗ್ದಾನಪ್ರಕಾರ ನಮ್ಮ ಚಿಕ್ಕತಂದೆ ಮೇಲ್ಕಂಡ ಪೋಬಳ್ಳಿಯನು ನನ್ನನ್ನು ಸಂರಕ್ಷಣೆ ಮಾಡಿಕೊಂಡು ಇದುವರಿಗೂ ಏಕೀಭವಿಸಿಕೊಂಡೇ ಇರುತ್ತಾನೆ ಈಚೆಗೆ ಈತನಿಗೆ ಹೆಣ್ಣುಸಂತತಿ ಒಬ್ಬ ಮಗಳು ಮಾತ್ರ ಇದಾಳೆ. ಈಗ ಡಿಟೋ ಪೋಬಳ್ಳಿಯನು ಕೆಲವರ ಬೋಧನೆಗೆ ಒಳಪಟ್ಟು ಕೇವಲ ವಯಸ್ಸಾದವನಾಗಿ ಮನಸ್ಸು ಜಿತವಿಲ್ಲದೆ ಹೇಳಿಕೆ ಮಾತು ಕೇಳಿ ನನಗೆ ವಿರೋಧವಾಗಿ ಆಸ್ತಿಗಳು ಖಿಲಲ್‌ಮಾಡುವ ಪ್ರಯತ್ನ ಪಡುತ್ತಾನೆಂತ ತಿಳಿಯಬರುತ್ತೆ. ಯಾರೇ ಆಗಲಿ ಆಸ್ತಿಗಳನ್ನು ಡಿಟೋ ಪೋಬಳ್ಳಿಯನಿಂದ ಯಾವ ತರಹೇಯಿಂದಲೇ ಆಗಲಿ ಪಡೆದುಕೊಂಡವರು ನನ್ನ ವ್ಯವಹಾರಣೆಗೆ ಒಳಪಟ್ಟು ನಷ್ಟಪಡುವರೆಂದು ತಿಳಿಸಿರುತ್ತೇನೆ

ರುಜು ಮುನಿಯಪ್ಪ ಉರುಫ್ ಪಿಲ್ಲಯ್ಯ.

ಸಂಜೀವಿನೀ ಔಷಧಾಲಯ, ಮೈಸೂರು.

23-22

ಎಂ. ಎಸ್. ಕುಮಾರ್‌ಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು —ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜ್ವರ, ವಾಯುನೋವುಗಳೂ, ಹಳೇಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೆತ್ತಿಯುರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ಕ್ಕೆ ೨ ರೂಪಾಯಿ.

ಸಂಜೀವಿನೀ ಮಾತ್ರೆ —ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ.

ಕಾಲಕೂಟವಟಿಕ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ಕ್ಕೆ ೧೨ ಆಣೆ

ಸುಖನೇತ್ರ ಬಿಂದು.—ಉರಿಗಣ್ಣು, ಕೆಂಗಣ್ಣು, ಮಾಚಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಾವರಿ ಅತ್ತರುಗಳೂ, ಗಂಧದಬಿಲ್ಲೆ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ. ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜೆಂಟರುಗಳೂ ಬೇಕು. ಅರ್ಜಿಗಳ ಲೇಬಲ್ ಇಟ್ಟು ಬರೆಯಿರಿ

ಡಿ. ಕೆ. ಸ್ವಾಮಿ,

ಪ್ರೊಪ್ರೈಟರ್.

ನೋಟೀಸ್.

56-1

ದೊಡ್ಡಬಳ್ಳಾಪುರದ ಕಸಬಾದಲ್ಲಿರುವ ದೇವಾಂಗದ ಡಿ ಚಿಕ್ಕ ಆದೆಪ್ಪನವರ ರಾಮಪ್ಪನವರಿಗೆ ಗಂಡುಮಕ್ಕಳಿಲ್ಲ ಅವರ ಹೆಂಡತಿ ಲಕ್ಷ್ಮಮ್ಮ ಮಾತ್ರ ಇದ್ದಾಳೆ. ಅವರ ಬಾಬತು ಚರಸ್ಥಿರ ವಗೈರೆ ಆಸ್ತಿ ಇರುತ್ತೆ ಸ್ಥಿರಸ್ವತ್ತು ದೊಡ್ಡಬಳ್ಳಾಪುರದ ಕಸಬ ದೇವಾಂಗದ ಪೇಟೆಯಲ್ಲಿರುವ ಮನೆ ಪಡುವಕ್ಕೆ ಪೂರ್ವಕ್ಕೆ ಗದ್ರೆ ವೆಂಕಟಪ್ಪನ ಮನೆ, ಪಶ್ಚಿಮಕ್ಕೆ ಹಿಸ್ಸೆದಾರ ಗೋವಿಂದಪ್ಪನ ಬಾಬತು ಕೆಂಪಣ್ಣನ ಅನುಭವದ ಮನೆ ಮತ್ತು ಚೌರಿ ರಸ್ತೆ ಸಹ, ಉತ್ತರಕ್ಕೆ ಪುಳ್ಳಿ ಕಂಡಕ ದಾಸರ ವೆಂಕಟರಮಣಪ್ಪನ ಮನೆ, ದಕ್ಷಿಣಕ್ಕೆ ದಾಸಣ್ಣನವರ ಹನುಮಯ್ಯನವರ ಮನೆ ಈ ಮಧ್ಯೆ ಇರುವ ಜಮೀನು ಇದರಲ್ಲಿ ಕಟ್ಟಿದ ಮಾಳಿಗೆ ಅಂಕಣ ಇಪ್ಪತ್ತೇಳು ಅಂಗಳ ಹಿತ್ತಲು ಖಾಲಿ ಜಮೀನು ಭಾವಿ ಸಹಿತವಾಗಿ ಸ್ವತ್ತು ಕೆಳಗಿನ ದುರ್ಕ್ಷೇದನೆಯಮೇಲೆ ಕಾಯಿಲೆ ಇರುವ ಮೇಲ್ಕಂಡ ಲಕ್ಷ್ಮಮ್ಮನಿಂದ ಪರಭಾರೆ ಮಾಡುವುದಾಗಿ ವರ್ತಮಾನ ಕೇಳುತ್ತೇನೆ ಈ ಸ್ವತ್ತಿಗೆ ಡಿಟೋ ರಾಮಪ್ಪನವರ ದಾಸಾ ಅಣ್ಣಗೋವಿಂದಪ್ಪನವರ ಮಗ ಆದೆಪ್ಪ ಉರುಫ್ ಜೂಲಪ್ಪ ಮತ್ತು ನಾನ್ನು ಹಕ್ಕುದಾರರು ಇರುತ್ತಾರೆ. ಇವರುಗಳ ಅನುಮತಿ ವಿನಹ ಯಾರುನ್ನೂ ಡಿಟೋ ಮೇಲ್ಕಂಡ ಸ್ವತ್ತು ಆಧಾರ ಭೋಗ್ಯ ವಗೈರೆ ಯಾವ ವಿಧವಾಗಿಯಾದರೂ ಮಾಡಿಕೊಂಡು ಮೊಬಲಗು ಕೊಡಕೂಡದೆಂದುನ್ನೂ ಮಾಡಿಕೊಂಡವರಿಗೆ ಡಿಟೋ ಸ್ವತ್ತಿನ ಮೇಲೆ ಹಕ್ಕು ಉಂಟಾಗಲಾರದೆಂದುನ್ನೂ ಎಲ್ಲಾ ಜನರ ತಿಳುವಳಿಕೆ ಬಗ್ಗೆ ಈ ಮೂಲಕ ಪ್ರಸಿದ್ಧಪಡಿಸಿದೆ.

ತಾ ೨-೭-೦೯ ಆದಿಯಪ್ಪ ಉರುಫ್ ಜೂಲಪ್ಪನ ರುಜು

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೫-೦-೦	೧೫ ೧೨-೦
ಕೆಂಬೂತ ಅಕ್ಕಿ ಅವಲ್ ...	..	೧೪ ೮ ೦	೧೫-೦-೦
,, ದುಯಂ ..	...	೧೪-೦-೦	೧೪-೮-೦
ಬಾಸ್ಮತಿ ಅಕ್ಕಿ ..	..	೧೪-೦ ೦	೧೫-೮-೦
ಸಣ್ಣಕ್ಕಿ ಅವಲ್ ..	...	೧೭-೮-೦	೧೮-೦-೦
,, ದುಯಂ ...	...	೧೬-೦-೦	೧೬-೮-೦
ತೊಗರೀ ಬೇಳೆ ಪಲ್ಲಾ ೧ಕ್ಕೆ ..	...	೧೬-೦-೦	೧೬-೮-೦
,, ದುಯಂ .	...	೧೫-೦-೦	೧೬-೦-೦
ಹೈಕ್ ರಾಗಿ ಪಲ್ಲಾ ೧ಕ್ಕೆ .	...	೯-೪-೦	೮-೧೨-೦
ಕಾರ್ರಾಗಿ ..	...	೮-೧೨-೦	೮-೪-೦
ಜೋಳ	...	೯-೦-೦	೮-೧೨-೦
ಹಲಸಂದೆ ಪಲ್ಲಾ ೧ಕ್ಕೆ ...	...	೧೩-೮-೦	೧೨ ೪-೦
ಬಿಳೀ ಅವರೆ	...	೧೧-೦-೦	೧೪-೦-೦
ಹೆಸರು	..	೧೫-೦-೦	೧೨-೦-೦
ಉದ್ದು	...	೧೪-೮-೦	೧೨-೪-೦
ಕಡಲೆ	...	೧೩-೮-೦	೧೧-೮-೦
ಎಳ್ಳು ಸೇ. ೧೨೭ ಕ್ಕೆ ..	...	೨೨-೮-೦	೧೮-೮-೦
ಹುರುಳಿ	...	೧೧-೧೨-೦	೧೧-೮-೦
ಹರಳು ೧೨೭ ಸೇರಿಗೆ ...	.	೧೦-೦-೦	೯-೮-೦
ಸೀಗೇಕಾಯಿ ಮಣ ೧ಕ್ಕೆ .	...	೨-೮-೦	೨-೬-೦
ಮೆಣಸಿನಕಾಯಿ	..	೫-೮-೦	೪-೮-೦
,, ದುಯಂ ..	..	೫-೦-೦	೪-೪-೦
ಬೆಲ್ಲ ದೊಡ್ಡ ಅಚ್ಚು ..	..	೬-೪-೦	ಮ ೨-೨-೦
ಒಳ್ಳೆಣ್ಣೆ ಮಣ ೧ಕ್ಕೆ ...	...	೫-೦-೦	೫-೪-೦
ಹರಳೆಣ್ಣೆ ,, ...	...	೫-೦ ೦	೪-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ ..	...	೯-೪ ೦	೯-೦-೦
ಉಪ್ಪು ,, . .	..	೬-೪-೦	೫ ೮-೦
ಹುಣಸೇ ಹಣ್ಣು ..	.	೨ ೦-೦	೧-೧೦-೦
,, ಹಳೇದು .	.	೧-೮-೦	೧-೬-೦
ತುಪ್ಪ ಮಣ ೧ಕ್ಕೆ ..	..	೧೫-೮-೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ .	..	೫-೪-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ .	...	೪-೮-೦	೪-೪-೦
ಅಳಲೇಕಾಯಿ ಮಣ ೧ಕ್ಕೆ ..	..	೦-೮-೦	೦ ೧೨-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೧-೨-೦	೦-೧೩-೦
ಚಿನ್ನ (ಪೌನ್) ಕೆಂಪು .	..	೧೫-೬-೦	೧೫-೧೦-೦
,, ,, ಪಸಿಮೆ ...	.	೧೬-೦-೦	೧೫-೧೪-೦
,, ,, ಗಟ್ಟಿ ತೊಲ ೧ಕ್ಕೆ	..	೨೪-೮-೦	೨೪-೬-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	.	೬೭-೪-೦	೬೬-೦-೦

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

18—6—1909 ರಿಂದ 25—6—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	20	18	0	0
ಬೆಂಗಳೂರು ಡಿಸ್ಟ್ರಿಕ್ಟು	10	5	8	8
ಮೈಸೂರು ,,	34	23	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	19	7	6	6
ಚಿತ್ರದುರ್ಗ ,,	0	0	0	0
ಕಡೂರ್ ,,	5	5	0	0
ಶಿವಮೊಗ್ಗ ,,	0	0	2	2
* ಸಂಖ್ಯೆ ಕಾಣಿಸಿಲ್ಲ. ಜುಮ್ಲಾ	68	58	16	16

ಕ್ಷಾಮನಿವಾರಣೆಯ ಕಾರ್ಯಗಳು.

ಸನ್ 1909 ನೇ ಜೂನ್ ತಾ. 26 ಕ್ಕೆ ಆಖೈರಾದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು.	ರಿಲೀಫ್ ಕೆಲಸ ಮಾಡುವವರ ಸಂಖ್ಯೆ. ಗಂಡಾಳು	ಹೆಣ್ಣಾಳು.	ಮಕ್ಕಳು.	ಕೂಲಿ ಕೊಟ್ಟದ್ದು. ರೂ.	ಧರ್ಮಸಹಾಯ ಪಡೆದ ಜನರು
ಬೆಂಗಳೂರು	196	128	9	295	192
ಕೋಲಾರ	1,035	662	85	2,156	316
ತುಂಕೂರು	975	417	51	1,782	13
ಮೈಸೂರು	10	25	...	23	...
ಹಾಸನ	651	1,289	139	2,260	..
ಶಿವಮೊಗ್ಗ	9	9	...	18	4
ಕಡೂರು	69	33	.	137	.
ಚಿತ್ರದುರ್ಗ	195	411	57	1,399	16
ವನಾಂಕಣಿವೆ	201	309	.	505	...
ಸ್ಯಾನಿಟರಿ	...	...	...	...	...
ಒಟ್ಟು	3,522	3,193	332	8,585	561

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಆಷಾಢ ಬಹುಳ ಪಂಚಮಿ ಗುರುವಾರದಿಂದ ಆಷಾಢ ಬಹುಳ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೯ ನೇ ಜುಲೈ.

ತಾ	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ಶೇದಿ ನಿಧನ ಮಾಸ
8	ಗುರು ‡	ಪಂಚಮಿ	7 2	ಪೂಭಾ	52-14	25
9	ಶುಕ್ರ	ಷಷ್ಠಿ	1-12	ಉಭಾ	53-50	26
10	ಶನಿವಾ §	ಅಷ್ಟಮಿ	48-10	ರೇ	43-58	27
11	ರವಿವಾ	ನವಮಿ	42-48	ಅ	40-8	28
12	ಚಂದ್ರ ;;	ದಶಮಿ	37-27	ಭ	36-38	29
13	ಕುಜ *	ಏಕಾದಶಿ	32-32	ಕೃ	33-53	30
14	ಬುಧ †	ದ್ವಾದಶಿ	28-38	ರೋ	31-58	31

‡ ಶಂಕರಾಚಾರ್ಯರ ಪುಣ್ಯದಿನ. ಶ್ರೀ ಚಾಮುಂಡೇಶ್ವರಿ ಜನ್ಮೋತ್ಸವ, ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ ಉತ್ಸವ. § ಲಿಂಗಾಬುಧೀಶ್ವರ ರಥ. ;; ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ ರಥ. * ಸರ್ವತ್ರ ಏಕಾದಶಿ. † ಪ್ರದೋಷ.

ಸುಜ್ಞಾನ ಸೂರ್ಯೋದಯ.

(ಕಳೆದ ವಾರದ ಶೇಷ.)

ನಂಜುಂ—ತನ್ನ ಆತುರಸ್ವಭಾವದ ಪ್ರಕಾರ ಏನು ನಾನು ಹೇಳಿದ್ದು ಸುಳ್ಳೋ? ತಂಗಿಯವರ ಮೊದಲಿನ ಮುಖಲಕ್ಷಣಕ್ಕೂ ಈಗಿರುವ ಮುಖಲಕ್ಷಣಕ್ಕೂ ಭೇದವಿಲ್ಲವೋ? ವಿಭೂತಿಯ ಮಹತ್ವವು ಇದರಲ್ಲೇ ಪ್ರತ್ಯಕ್ಷವಾಗಿ ಕಾಣುತ್ತದಲ್ಲ. ಇದಕ್ಕೆ ಒಪ್ಪದಿದ್ದರೆ ನೀವು ಹೇಳುವಂಥ ಮಾತುಗಳಲ್ಲಿ ಒಂದೂ ನಿಜವಲ್ಲವೆಂದು ಸ್ವಲ್ಪ ಬಿರುಸಾಗಿ ಹೇಳಿದನು.

ಮಡಿ—ಅಷ್ಟೊಂದು ಆತುರವೇಕೆ? ನಂಜುಂಡಯ್ಯಾ ಸ್ವಲ್ಪ ಸಾವಧಾನ ಮಾಡಿರಿ. ಇವರು ವಿಭೂತಿ ಧರಿಸುವದನ್ನು ಬಿಟ್ಟನಂತರ ನೀವು ಇವರನ್ನು ನೋಡಿದ್ದು ಇದೇ ಮೊದಲನೇ ಸಾರಿ ಯಲ್ಲವೋ? ಆದಕಾರಣ ಇವರ ಮುಖವು ನಿಮಗೆ ವಿಲಕ್ಷಣವಾಗಿ ಕಾಣುತ್ತದೆ. ಕಾರಣವೇನಂದರೆ, ಮೊದಲು ಇವರು ಯಾವಾಗಲೂ ವಿಭೂತಿ ಧರಿಸಿಕೊಳ್ಳುತ್ತಿದ್ದಾಗ ನೀವು ಇವರನ್ನು ಪದೆ ಪದೆ ನೋಡುತ್ತಿದ್ದಿರಲ್ಲ? ಆ ನೆನಪು ಈಗಲೇ ನಿಮ್ಮ ಮನೋದೃಷ್ಟಿಯ ಮುಂದೆ ಇರುತ್ತದೆ ಮತ್ತು ವಿಭೂತಿ ಇಲ್ಲದ ಈಗಿನ ಮುಖವು ಈಗಲೇ ನಿಮ್ಮ ಕಣ್ಣುಗಳ ದೃಷ್ಟಿಯ ಮುಂದೆ ಇರುತ್ತದೆ. ಹೀಗೆ ಅವರ ಮುಖಲಕ್ಷಣದ ವಿಷಯವು ನಿಮ್ಮ ಮನೋದೃಷ್ಟಿಗೂ ನಿಮ್ಮ ಕಣ್ಣುಗಳ ದೃಷ್ಟಿಗೂ ಭೇದ ಇರುವಕಾರಣ ನಿಮಗೆ ವಿಲಕ್ಷಣವಾಗಿ ಕಾಣುತ್ತದೆ ಈ ವಿಲಕ್ಷಣಕ್ಕೆ ನಿಮ್ಮ ದೃಷ್ಟಿಗಳು ಕಾರಣವೇ ಹೊರತು ವಿಭೂತಿ ಕಾರಣವಲ್ಲ. ಇನ್ನುಮೇಲೆ ನೀವು ಆಗಾಗ್ಗೆ ವಿಭೂತಿ ಇಲ್ಲದ ಇವರ ಮುಖವನ್ನು ನೋಡಿದ್ದಾದರೆ ವಿಲಕ್ಷಣವು ನಾಶವಾಗಿ ಸುಲಕ್ಷಣವು ಕಾಣಬರುವದು. ಇಷ್ಟೇ ಅಲ್ಲವೇ ನಿಮ್ಮ ವಿಭೂತಿಯ ಮಹತ್ವವು ಅಂದನು

ನಂಜುಂ—ವಿಭೂತಿಯ ಮಹತ್ವವು ಇಷ್ಟೇ ಎಂದು ಹೇಳಿ ಪರಿಹಾಸ್ಯವಾಡುತ್ತೀರೋ ಅದರ ನಿಜಮಹತ್ವವು ನಿಮಗೆ ಗೊತ್ತಿದ್ದರೆ ಹೀಗೆ ಹಾಸ್ಯಮಾಡಲಾರಿರಿ. ವಿಭೂತಿಯನ್ನು ಯಾರು ನಿತ್ಯವೂ ಧರಿಸಿಕೊಳ್ಳುತ್ತಾರೋ ಅಂಥವರಿಗೆ ದುರಿತವು ದೂರವಾಗಿ ಬಂದಂಥ ಕಂಟಕಗಳು ಪರಿಹಾರವಾಗುತ್ತವೆ ಇದು ಶಾಸ್ತ್ರಸಿದ್ಧಾಂತವಾದ ಸಂಗತಿ ಮಾತ್ರವಲ್ಲದೆ ಸಕಲ ಶಿವಗಣಂಗಳ ಅನುಭವಸಿದ್ಧಾಂತವಾದ ಸಂಗತಿಯಾಗಿದೆ ಅಂದನು.

ಮಡಿ—ವಿಭೂತಿ ವಿಷಯದಲ್ಲಿ ನಾನು ಪರಿಹಾಸ್ಯ ಮಾಡುತ್ತೇನೆಂದು ನನ್ನ ಮೇಲೆ ಅಪವಾದ ಹೊರಿಸುತ್ತೀರಿ. ಆದರೆ ವಿಭೂತಿಯ ವಿಷಯದಲ್ಲಿ ನೀವು ಹೇಳಿದ್ದನ್ನು ಯೋಚನೆಮಾಡಿದರೆ ನೀವೇ ವಿಭೂತಿಯನ್ನು ಪರಿಹಾಸ್ಯಮಾಡುವಂತೆ ಕಾಣುತ್ತದೆ. ಹ್ಯಾಗಂದರೆ, ವಿಭೂತಿಯನ್ನು ನಿತ್ಯಧಾರಣೆ ಮಾಡಿಕೊಳ್ಳುವಂಥವರಿಗೆ ದುರಿತವು ದೂರವಾಗಿ ಸಕಲ ಕಂಟಕಗಳು ಪರಿಹಾರವಾಗುತ್ತವೆ ಎಂದು ಹೇಳಿದಿರಲ್ಲ. ಈ ಸಂಗತಿ ನೀವು ಹೇಳಿದಂತೆ ಶಾಸ್ತ್ರಸಿದ್ಧಾಂತವಾಗಿದ್ದರೂ ಇರಬಹುದು. ಯಾಕಂದರೆ ಶಾಸ್ತ್ರದಲ್ಲಿ ಬರೆದಿರುವಂಥ ಬಡಿವಾರವು ಯಾತಕ್ಕೂ ಬರುವದಿಲ್ಲ ಆದರೆ ಆ ಸಂಗತಿ ಸಕಲ ಶಿವಗಣಂಗಳ ಅನುಭವಸಿದ್ಧವಾದ ಸಂಗತಿಯಾಗಿದೆ ಎಂಬ ಮಾತು ಪರಿಹಾಸ್ಯದ ಮಾತಷ್ಟೆ. ನಾನು ಸಹ ಶಿವಗಣಂಗಳಿಗೆ ಸೇರಿದವನಾಗಿದ್ದು ನನ್ನ ಬಾಲ್ಯದಾರಭ್ಯ ನಿತ್ಯವೂ ವಿಭೂತಿ ಧರಿಸಿಕೊಳ್ಳುತ್ತಿದ್ದೆನಲ್ಲ. ಆದರಿಂದ ನೀವು ಹೇಳಿದಂಥ ಆ ದೊಡ್ಡ ಸಂಗತಿ ನನ್ನ ಅನುಭವಕ್ಕೆ ಬರಲೇ ಇಲ್ಲ ಅಂಥ ಅನುಭವವು ವಿಭೂತಿಯಿಂದ ನನಗೆ ಉಂಟಾಗಿದ್ದರೆ ಅದನ್ನು ವಿಸರ್ಜಿಸಿ ಈ ಕ್ರೈಸ್ತಮತವನ್ನು ಅವಲಂಬಿಸುವದಕ್ಕೆ ಕಾರಣವೇನಿತ್ತು ಅಂದನು

ನಂಜುಂ—ನಿಮ್ಮ ಅನುಭವ ಯಾತಕ್ಕೆ ಬರುತ್ತದೆ? ಊರಿಗೆ ತಕ್ಕಹಾಗೆ ಹಾಡಬೇಕಲ್ಲ. ನೀವು ನಿಮ್ಮ ಶಿವಾಚಾರವನ್ನು ಬಿಟ್ಟು ಭ್ರಷ್ಟರಾಗಿರುವದರಿಂದ ಎಲ್ಲರೂ ನಿಮ್ಮಂತೆ ಆಗಬೇಕೆಂದು ಕೋರುತ್ತೀರಷ್ಟೆ. ಅದು ಹ್ಯಾಗಾದೀತು? ವಿಭೂತಿಯಲ್ಲಿ ಅಂಥಾ ಮಹತ್ವವು ಇಲ್ಲದಿದ್ದರೆ ಪೂರ್ವಕಾಲದಿಂದ ನಮ್ಮ ಮತಸ್ಥರಲ್ಲಿ ಈ ಆಚಾರವು ಇಷ್ಟು ಪ್ರಬಲವಾಗಿರುವದಕ್ಕೆ ಕಾರಣವೇನು? ಅಂದನು.

ಮಡಿ—ಪ್ರಪಂಚದ ಕಾರ್ಯಗಳಲ್ಲಿ ನಮ್ಮ ದೇಶಸ್ಥರು ಜಾಣರೂ ವಿಚಾರಪರರೂ ಆಗಿದ್ದರೂ ಆತ್ಮಸಂಬಂಧವಾದ ಕಾರ್ಯಗಳಲ್ಲಿ ಏನೊಂದು ವಿಚಾರವಿಲ್ಲದೆ ಕುರಿ ಹಿಂದೆ ಮರಿ ಓಡುವಂತೆ ಅಪ್ಪನ ಮಾರ್ಗ ತಪ್ಪಬಾರದೆಂಬ ಅವಿಚಾರಸ್ಥರಾಗಿರುವದರಿಂದ ಆಯಾ ಅನಾಚಾರಗಳೂ ದುರಾಚಾರಗಳೂ ಇವರಲ್ಲಿ ಇಷ್ಟು ಪ್ರಬಲವಾಗಿವೆಯಷ್ಟೆ ಇದಲ್ಲದೆ ಹಳೆ ಹುಣ್ಣಿಗೆ ಮುಲಾಮು ಇಲ್ಲ ಎಂಬ ಗಾದೆಯಂತೆ ಒಬ್ಬನಿಗೆ ರೋಗ ಎಷ್ಟು ಹಳೆದಾಗುತ್ತದೋ ಆ ರೋಗದ ಸ್ಥಿತಿ ಅವನಿಗೆ ಅಷ್ಟು ಅಭ್ಯಾಸವಾಗುತ್ತದೆ ಹೀಗೆ ಅಭ್ಯಾಸವಾದ ನಂತರ ಆ ರೋಗದ ಬಾಧೆ ಅವನಿಗೆ ಅಷ್ಟಾಗಿ ಕಾಣುವದಿಲ್ಲ ಇಷ್ಟು ಮಾತ್ರವಲ್ಲ ಆ ರೋಗದ ಪರಿಹಾರಕ್ಕಾಗಿ ಅವನು ಅಷ್ಟು ಪ್ರಯಾಸ ತೆಗೆದುಕೊಳ್ಳುವದಿಲ್ಲ ಅದರಂತೆ ಒಬ್ಬನು ಪಾಪದಲ್ಲಿ ಎಷ್ಟಾಗಿ ಹಳೆಯವನಾಗುತ್ತಾನೋ ಅಷ್ಟಾಗಿ ಪಾಪವು ಅವನಿಗೆ ಅಭ್ಯಾಸವಾಗುತ್ತದೆ. ಆ ಮೇಲೆ ಅವನು ಪಾಪಕ್ಕೆ ಅಷ್ಟು ಚಿಂತೆಪಡದೆ ಅದರ ಪರಿಹಾರಕ್ಕಾಗಿ ಅಷ್ಟು ಪ್ರಯಾಸಪಡದೆ ನಿಶ್ಚಿಂತೆಯ ಸ್ಥಿತಿಗೆ ಮುಟ್ಟುತ್ತಾನೆ. ನಮ್ಮ ದೇಶಸ್ಥರಲ್ಲಿ ಅನೇಕರು ಪಾಪದ ವಿಷಯವಾಗಿ ಇಂಥಾ ನಿಶ್ಚಿಂತೆಯ ಸ್ಥಿತಿಯಲ್ಲಿದ್ದಾರೆಂದು ನನಗೆ ಕಾಣುತ್ತದೆ ಪಾಪವೆಂದರೇನು? ಪಾಪದ ಫಲಗಳು ಎಂಥವುಗಳು? ಪಾಪಪರಿಹಾರಕ್ಕಾಗಿ ಮಾಡತಕ್ಕ ಯತ್ನಗಳೇನು? ಎಂಬ ಈ ಪ್ರಾಮುಖ್ಯವಾದ ವಿಷಯಗಳಲ್ಲಿ ನಿಶ್ಚಿಂತೆಯುಳ್ಳವರಾಗಿರುವದರಿಂದ ಇಂಥಾ ಅನಾಚಾರಗಳಲ್ಲಿ ಸಂತೃಪ್ತರಾಗಿದ್ದಾರೆ ಅಂದನು

ನಂಜುಂ—ನಮ್ಮ ದೇಶಸ್ಥರೆಲ್ಲರೂ ಪಾಪದ ವಿಷಯದಲ್ಲಿ ನಿಶ್ಚಿಂತೆಯುಳ್ಳವರಾಗಿದ್ದಾರೆಂದು ನೆನಸುತ್ತೀರೋ? ಹಾಗಾದರೆ ದಾನ, ಧರ್ಮ, ತೀರ್ಥಯಾತ್ರೆ, ಜಪ, ತಪ, ಮೊದಲಾದ ಸಾಧನಗಳನ್ನು ಯಾಕೆ ಏರ್ಪಡಿಸಿಕೊಂಡಿದ್ದಾರೆ? ಇಂಥಾ ಸಾಧನಗಳು ಪಾಪದ ವಿಷಯದಲ್ಲಿ ನಿಶ್ಚಿಂತೆಯುಳ್ಳವರ ಲಕ್ಷಣಗಳೋ? ಅಂದನು

ಮಡಿ—ನಮ್ಮ ದೇಶಸ್ಥರೆಲ್ಲರೂ ಪಾಪದ ವಿಷಯದಲ್ಲಿ ನಿಶ್ಚಿಂತೆಯುಳ್ಳವರಾಗಿದ್ದಾರೆಂದು ನಾನು ಹೇಳಲಿಲ್ಲ ಕೆಲವರಿಗೆ ಅಂಥಾ ಚಿಂತೆ ಇರಬಹುದು ಮಾಡಿದ ಪಾಪಕ್ಕೆ ಮನವೇ ಸಾಕ್ಷಿ ತೋಡಿದ ಭಾವಿಗೆ ಜಲವೇ ಸಾಕ್ಷಿ ಎಂಬಂತೆ ಮುಖ್ಯವಾಗಿ ನಮ್ಮ ದೇಶದ ಪೂರ್ವಿಕರಲ್ಲಿ ಕೆಲವರು ಪಾಪವನ್ನೂ ಅದರಿಂದಾಗುವಂಥಾ ದುಷ್ಫಲಗಳನ್ನೂ ತಮ್ಮ ಸ್ವಾನುಭವದಿಂದ ಗ್ರಹಿಸಿಕೊಂಡು ಅದರ ಪರಿಹಾರಕ್ಕಾಗಿ ನೀವು ಹೇಳಿದಂಥ ಜಪ, ತಪ, ದಾನ, ಧರ್ಮ, ತೀರ್ಥಯಾತ್ರೆ ಮೊದಲಾದ ಸಾಧನಗಳನ್ನು ಏರ್ಪಡಿಸಿಕೊಂಡಿದ್ದಾರೆ ಸರಿ. ಆದರೆ ಹಾವು ಕಚ್ಚಿತೆಂದು ನೀರ ಹಳೆ ಬಟ್ಟೆಯಿಂದ ಒರಸಿಕೊಂಡರೆ ವಿಷಯೋದೀತೇ? ಗಧಾರಿ ನುಂಗಿ ಸೊಂಟಕ್ಕೆ ಸಾಯಮಾಡಿಕೊಂಡು ಕುಡಿದರೆ ಜೀರ್ಣವಾಗಬಹುದೇ?

> ಪಿಡಿಯೊಳ್ಳುಂಬಿರೆ ಪಂಕ ಮೇಲ್
> ತ್ರೋಣಿಯಲ್ಲಾತ್ತು ಶುದ್ಧಮೇ? ಪ್ರಮತ್ತ!
> ಕಡುನಾವಂಗಳ ನಿಂದೆಯುಲಿತಾ ಶುಚಿಯೋ॥
> ಕಾಕಾದಿಗಳ್ಗೀಯುವೇ? ಗುಡಪಾನಂಗಳ ಮೆಲ್ಲಗೆ
> ಪೂರ್ಲದು ತಾಪಸ್ಸಾಮರ್ಥ್ಯವೇ? ಬಾಹ್ಯಪೋಷಣೆಯೀ।
> ನಿರ್ಮಲಚಿತ್ತವ್ಯೇ? ಹರಹರಾ ಶ್ರೀಚನ್ನಸೋಮೇಶ್ವರಾ॥

ಮನಸ್ಸಿನಲ್ಲಿರುವಂಥ ಪಾಪಕ್ಕೂ ಹೊರಗಿನ ಸಾಧನಗಳಿಗೂ ಸಂಬಂಧವೇನು? ಇದು ಮಾತ್ರವಲ್ಲ. ಒಬ್ಬ ರೋಗಿಷ್ಠನು ತನ್ನ ರೋಗಕ್ಕೆ ತಕ್ಕ ಔಷಧವನ್ನು ಉಪಯೋಗಿಸದೆ ಕಂಡಕಂಡದ್ದನ್ನೆಲ್ಲಾ ಉಪಯೋಗಿಸಿದ್ದಾದರೆ ಅದರಿಂದ ಅವನ ರೋಗ ಮತ್ತಷ್ಟು ಹೆಚ್ಚಾದೀತಲ್ಲದೆ ಪರಿಹಾರವಾಗಲಾರದು ಅದರಂತೆ ಮನುಷ್ಯರು ತಮ್ಮ ಪಾಪಪರಿಹಾರಕ್ಕಾಗಿ ಏರ್ಪಡಿಸಿಕೊಂಡಿರುವಂಥ ಆ ಸಾಧನೆಗಳಿಂದ ಪಾಪ ವೃದ್ಧಿಯಾದೀತಲ್ಲದೆ ಪರಿಹಾರವಾಗಲಾರದು. ಇದಕ್ಕೆ ಒಂದು ದೃಷ್ಟಾಂತ ಹೇಳುತ್ತೇನೆ ಪ್ರತಿ ವರುಷ ಚೈತ್ರಶುದ್ಧ ಪೌರ್ಣಮಿಯದಿನ ಹಂಪೆಕ್ಷೇತ್ರದಲ್ಲಿ ರಥೋತ್ಸವವಾಗುತ್ತದಲ್ಲ. ಈ ಉತ್ಸವಕ್ಕೆ ಬೇರೆ ಬೇರೆ ಕಡೆಯಿಂದ ಎಲ್ಲಾ ತರದ ಸ್ತ್ರೀಪುರುಷರು ಕೂಡಿ ಬರುವದಲ್ಲದೆ ಅಲ್ಲಿ ಹೆಸರುವಾಸಿಯಾಗಿರುವಂಥ ಲೋಕಪಾವನವೆಂಬ ಹೊಂಡದಲ್ಲಿ ತಮ್ಮ ಪಾಪಪರಿಹಾರಕ್ಕಾಗಿ ಒಬ್ಬರಮೇಲೊಬ್ಬರು ಬಿದ್ದು ಮುಳುಗುತ್ತಾರಲ್ಲ ಇದರಿಂದ ಅವರ ಪಾಪಪರಿಹಾರವಾಗುತ್ತದೋ? ಅಥವ ವೃದ್ಧಿಯಾಗುತ್ತದೋ? ಆ ಬೇರೆ ಬೇರೆ ಸ್ತ್ರೀಪುರುಷರು ಒಬ್ಬರ ಅಂಗಗಳನ್ನು ಒಬ್ಬರು ನೋಡುವದರಿಂದಲೂ ಸಂಧಿಸಿ ಮಾತಾಡುವದಕ್ಕೆ ಸಂದರ್ಭ ಸಿಕ್ಕುವದರಿಂದಲೂ ಆ ಕ್ಷೇತ್ರದ ಗುಡಿ ಗೋಪುರಗಳಮೇಲೆ ಇರುವಂಥ ಅಸಹ್ಯವಾದ ಬೊಂಬೆಗಳನ್ನು ದೃಷ್ಟಿಸುವದರಿಂದಲೂ ಆ ಸ್ತ್ರೀಪುರುಷರಲ್ಲಿರುವಂಥ ದುರಿಚ್ಛೆಗಳಿಗೆ ಒಳ್ಳೇ ಪೋಷಣೆಯಾಗುತ್ತದಲ್ಲದೆ ಅವರಲ್ಲಿರುವಂಥ ಪಾಪಕ್ಷಯವಾಗಲಾರದು. ಎಲ್ಲಾ ತೀರ್ಥಯಾತ್ರೆಗಳ ಫಲವೂ ಇದರಂತೆಯೇ ಆದಕಾರಣ ಕಾಶಿಗೆ ಹೋದರೆ ಗಾಶಿ ಮನೆಯಲ್ಲಿದ್ದರೆ ವಾಸಿ ಎಂಬ ಗಾದೆಯು ನಾಡಿಕೆಯಾಗಿದೆ

> ಕಾಶಿಕೆ ಬೋಯಿನ ಲಂಡ ಗರತಿಗಾದು ತಿರಮಲಕು।
> ಬೋಯಿನ ಕುರುಕ ದಾಸರಿ ಗಾಮಿಕುಕ್ಕ ಸಿಂಹಮಗುನೆ।
> ಗೋದವರಿಕಿ ಬೋಯಿನ ವಿಸ್ವದಾಭಿರಾಮ ವಿಸರವೇಮ॥

ದೇವರು ಪಾಪಪರಿಹಾರದ ಮಾರ್ಗವನ್ನು ಏರ್ಪಡಿಸದಿದ್ದರೆ ಪಾಪಿಗಳಾದ ಮನುಷ್ಯರು ಪಾಪಪರಿಹಾರದ ಮಾರ್ಗವನ್ನು ಏರ್ಪಡಿಸಿಕೊಳ್ಳಲಾರರು. ದೇವರು ಪಾಪಪರಿಹಾರದ ಮಾರ್ಗವನ್ನು ಏರ್ಪಡಿಸಿದ್ದಾನೆ ಆ ಮಾರ್ಗದ ವಿಷಯದಲ್ಲಿ ಇನ್ನೊಂದು ಸಾರಿ ನಿಮ್ಮ ಸಂಗಡ ಮಾತಾಡುವೆನು ಆ ಸತ್ಯಮಾರ್ಗವು ನಮ್ಮ ದೇಶಸ್ಥರಿಗೆ ಗೊತ್ತಿಲ್ಲದಕಾರಣ ಇಂಥಾ ಅನಾಚಾರಗಳಲ್ಲಿಯೂ ದುರಾಚಾರಗಳಲ್ಲಿಯೂ ಮಗ್ನರಾಗಿದ್ದಾರೆ.

ಹೀಗೆ ಮಡಿವಾಳಯ್ಯನು ಮಾತಾಡುತ್ತಿರುವಾಗ ಅವರ ದ್ವಿತೀಯ ಪುತ್ರನಾದ ಪ್ರಭಾನಂದನು ತನ್ನ ಸ್ಕೂಲು ಬುಕ್ಕುಗಳನ್ನು ತೆಗೆದುಕೊಂಡು ಅಳುತ್ತಾ ಬಂದದ್ದನ್ನು ಆತನ ತಂದೆ ಕಂಡು ಗಾಬರಿಪಟ್ಟು ವಿಚಾರಿಸಿದರು. ಆದರೆ ಹೆತ್ತವರನ್ನು ಕಂಡಾಕ್ಷಣವೇ ಮಗನ ದುಃಖ ಅಧಿಕವಾಗಿ ಮಾತಾಡುವದಕ್ಕೆ ಆಗದೆ ಹೋದಾಗ್ಯೂ ಕಿವಿಗಳೆರಡೂ ರಕ್ತವರ್ಣವಾಗಿರುವದನ್ನೂ ದೇಹದ ಮೇಲಿರುವಂಥ ಬಾಸುಂಡೆಗಳನ್ನೂ ನೋಡಿ ಇದು ಉಪಾಧ್ಯಾಯರಾದ ಶರಭಯ್ಯನವರ ಕಾರ್ಯವೇ ಹೊರತು ಬೇರೇನಲ್ಲವೆಂದು ಗ್ರಹಿಸಿಕೊಂಡು ಮನೆಯೊಳಗೆ ಕರೆದುಕೊಂಡು ಹೋಗಿ ಸಮಾಧಾನಪಡಿಸಬೇಕೆಂದು ಗುರುಪ್ರೇಮಮ್ಮನಿಗೆ ಹೇಳಿ ಮಡಿವಾಳಯ್ಯನು ತಿರುಗಿ ಕುಳಿತುಕೊಂಡನು. ಅಷ್ಟರಲ್ಲಿ ನಂಜುಂಡಯ್ಯನು ನಸ್ಯದ ಡಬ್ಬಿಯಿಂದ ಎರಡು ಚಿಟಿಕೆಯನ್ನು ಮೂಗಿಗೆ ಏರಿಸಿಕೊಂಡು ತಿರಿಗಿ ಮಾತಾಡುವದಕ್ಕೆ ಆರಂಭಮಾಡಿದನು. ಹೇಗಂದರೆ—

ನಂಜುಂ—ಮಡಿವಾಳಯ್ಯಾ ನಿಮ್ಮ ಮಗನನ್ನು ಶರಭಯ್ಯನ ಶಾಲೆಗೆ ಕಳುಹಿಸಬಹುದೇ? ಅಂದನು.

ಮಡಿ—ನಾಳೆ ಕಳುಹಿಸಕೂಡದು ಎಂದು ಕೇಳಿದನು.

ನಂಜುಂ—ಶರಭಯ್ಯ ಸಾಮಾನ್ಯವಾದ ಘಟವೇ? ಸಕಲಗುಣಸಂಪನ್ನ, ಅವಗುಣ ಪರಿಪೂರ್ಣನೆಂದು ಆತನಿಗೆ ಮಾತ್ರ ಹೇಳಬೇಕು ಅಂದನು.

ಮಡಿ—ಶರಭಯ್ಯನನ್ನು ಆತನ ಬಾಲ್ಯದಾರಭ್ಯ ನಾನು ಚನ್ನಾಗಿ ಬಲ್ಲೆನು. ನನ್ನ ಶಾಲೆಯಲ್ಲಿ ಆತನು ಓದುತ್ತಿದ್ದಾಗ ಸಾಧುಹುಡುಗನಾಗಿದ್ದನು ಅಂದನು.

ನಂಜುಂ—ನಿಮ್ಮ ಸ್ವಭಾವವನ್ನು ಮೊದಲಿಂದ ನಾನು ಬಲ್ಲೆನು ಬೆಳ್ಳಗಿರುವದೆಲ್ಲಾ ಹಾಲೇ ಎಂದು ಭಾವಿಸುತ್ತೀರಿ. ಹುಡುಗನಾಗಿದ್ದಾಗ ಇದ್ದಂಥ ಸ್ವಭಾವವು ಪ್ರಾಯಕ್ಕೆ ಬಂದಮೇಲೆ, ಲಿಂಗವಿಲ್ಲದ ಭವಿಗಳ ಸಂಗಮಾಡಿ ಆಯಾ ದುರಭ್ಯಾಸಗಳನ್ನು ಕಲಿತುಕೊಂಡು ನಮ್ಮ ಗಣಂಗಳಿಗೆ ಕುಂದು ತರುವಂಥ ಜಂಗಮರು ಈ ಕೆಟ್ಟಕಾಲದಲ್ಲಿ ಕಡಮೆಯೇ? ಅಂಥವರಲ್ಲಿ ಈ ಶರಭಯ್ಯನು ಒಬ್ಬನಾಗಿದ್ದಾನೆಂದು ಜನರು ಆಡಿಕೊಳ್ಳುತ್ತಾರೆ ಅಂದನು.

ಮಡಿ—ನಂಜುಂಡಯ್ಯನವರೇ ಜನರ ಮಾತನ್ನು ನಾವು ನಂಬಬಾರದು. ಜನರು ಬೊಂತೆಯನ್ನು ಕಂತೆಮಾಡುತ್ತಾರೆ ಕಂತೆಯನ್ನು ಬೊಂತೆಮಾಡುತ್ತಾರೆ. ಶರಭಯ್ಯ ಪ್ರಾಯಸ್ಥನು. ಅಂಥವರು ಹಿಂದು ಮುಂದು ಯೋಚಿಸದೆ ಪ್ರವರ್ತಿಸುವದರಿಂದ ಇಂಥಾ ನಿಂದೆಗಳಿಗೆ ಗುರಿಯಾಗಬಹುದು ಆತನ ವಿಷಯದಲ್ಲಿ ಇಂಥಾ ಸುದ್ದಿ ಕೇಳಿ ಬಹಳ ವ್ಯಸನವಾಗುತ್ತದೆ. ಸಂದರ್ಭಸಿಕ್ಕಿದಾಗ ಆತನನ್ನು ಎಚ್ಚರಿಸುತ್ತೇನೆ.

ಅಷ್ಟರಲ್ಲಿ ಗುರುಪ್ರೇಮಮ್ಮನು ಮಗನ ಮುಖವನ್ನು ತೊಳೆದು ಮುದ್ದಾಡಿ ತಿನ್ನುವದಕ್ಕೆ ತಿಂಡಿಯನ್ನುಕೊಟ್ಟು ಸೆರಗಿನ ಮರೆಯಲ್ಲಿ ಕರೆತಂದು ತಂದೆಯ ಹತ್ತಿರ ಬಿಟ್ಟಳು. ಮಡಿವಾಳಯ್ಯನು ಹಸನ್ಮುಖದಿಂದ ಮಗನ ಕರಹಿಡಿದು ಕರೆದು ತೊಡೆಯಮೇಲೆ ಕುಳ್ಳಿರಿಸಿಕೊಂಡು ಮಗನೇ ನಾಲೆಬಿಟ್ಟು ಅತ್ತುಕೊಂಡು ಬಂದದಕ್ಕೆ ಕಾರಣವೇನು? ಎಂದು ಕೇಳಿದನು. ಮಗನು—ಅಪ್ಪಾ ಈ ದಿವಸ ಹುಡುಗರೆಲ್ಲರೂ ಅಯ್ಯನವರ ಪಾದಪೂಜೆ ಮಾಡುವಾಗ ನಾನು ಸಹ ಮಾಡಬೇಕೆಂದು ಹೇಳಿದರು ಅದಕ್ಕೆ ನಾನು—ನಮ್ಮ ತಂದೆಯವರ ಅಪ್ಪಣೆ ಕೇಳಿ ಮಾಡುತ್ತೇನೆಂದು ಹೇಳಿದೆನು. ಅಷ್ಟಕ್ಕೇನೇ ಅಯ್ಯನವರು ಅತ್ಯಂತ ಸಿಟ್ಟಾಗಿ ನನ್ನ ಎರಡು ಕಿವಿಗಳನ್ನು ಹಿಡಿದು ತಿರುಚುತ್ತಾ ಆಮೇಲೆ ನಾಗಬೆತ್ತದಿಂದ ಚೆನ್ನಾಗಿ ಹೊಡೆದು ಶಾಲೆಬಿಟ್ಟು ಹೋಗೆಂದು ದೊಬ್ಬಿಬಿಟ್ಟರು ಅಂದನು. ಈ ಸಂಗತಿಯನ್ನು ಕೇಳಿ ಮಡಿವಾಳಯ್ಯನಿಗೆ ಬಹಳ ವ್ಯಸನವಾದಾಗ್ಯೂ ಅದನ್ನು ತನ್ನಲ್ಲಿಯೇ ಅಡಗಿಸಿಕೊಂಡು ಜೊತೆಯಲ್ಲಿ ಈ ದಿವಸ ಅಕ್ಷರಸಂಗಡ ಸ್ವಲ್ಪಹೊತ್ತು ಆಡಿ ಆಮೇಲೆ ನನ್ನ ಪಾಠಗಳನ್ನು ಕಲಿ ಎಂದು ಮಗನಿಗೆ ಅಪ್ಪಣೆಕೊಟ್ಟು ತನ್ನ ಮುಖವನ್ನು ನಂಜುಂಡಯ್ಯನವರ ಕಡೆಗೆ ತಿರುಗಿಸಿದನು

[ಸಶೇಷ.]

ರಾಜಧಾನಿಯ ಮ್ಯುನಿಸಿಪಾಲಿಟಿ.

ಹೊಸ ಕೌನ್ಸಲರುಗಳ ಚುನಾವಣೆಯು.

ರಾಜಧಾನಿಯ ಪ್ರಜೆಗಳಿಂದ ಬೇರೆ ಬೇರೆ ಮೊಹಲ್ಲಿಗಳಿಗೆ ಹೊಸ ಮ್ಯುನಿಸಿಪಲ್ ಕೌನ್ಸಲರುಗಳು ಮುಂದಿನ ಸೋಮವಾರದ ಲಾಗಾಯಿತು ಚುನಾಯಿಸಲ್ಪಡಬೇಕಾಗಿದೆ. ಕೌನ್ಸಲರಾಗಬೇಕೆಂದು ಅರ್ಜಿಕೊಟ್ಟಿರುವ ದೊಡ್ಡ ಮನುಷ್ಯರು ಯಾರೆಂದರೆ :—

(೧) ಲಷ್ಕರ್ ಮೊಹಲ್ಲಿಗೆ ಮೆ॥ ಗಳಾದ ರಹಮತ್ ಉಲ್ಲಾ ಅಹಮದ್ ಸೇಟರು, ಸೆಟ್ಟಾಜಿರಾಯರು, ಎಂ ಅನಂತರಾಜೈಯನವರು—ಪ್ರಜೆಗಳು ಸೆಂಟ್ರಲ್ ಪೊಲೀಸ್ ಸ್ಟೇಷನ್ನಲ್ಲಿ ತಾ ೧೨ ನೇ ಸೋಮವಾರ ಬೆಳಿಗ್ಗೆ ಇಬ್ಬರನ್ನು ಚುನಾಯಿಸಬೇಕು (೨) ಮಂಡಿ ಮೊಹಲ್ಲಿಗೆ ಮೆ॥ ಮಾದಪ್ಪನವರು—ಇವರ ಚುನಾವಣೆಯೂ ಅದೇ ಸ್ಥಳದಲ್ಲಿ ಆ ದಿನ ಮೂರನೇ ಝಾಮದಲ್ಲಿ ನಡೆಯುವುದು. (೩) ದೇವರಾಜ ಮೊಹಲ್ಲಿಗೆ ಮೆ॥ ಗಳಾದ ರಾಮೇಶ್ವರೈಯನವರು, ಎಚ್ ರಂಗೈಯಂಗಾರ್ರು, ಎ. ಸುಬ್ಬಣ್ಣನವರು, ಟಿ. ಆದಿನಾರಾಯಣ ಶೆಟ್ಟರು, ಡಿ. ನರಸಿಂಗರಾಯರು, ಎಂ. ಸಿ ರಂಗೈಯಂಗಾರ್ರು—ಈ ಪೈಕಿ ಇಬ್ಬರ ಚುನಾವಣೆಯು ತಾ. ೧೩ ನೇ ಮಂಗಳವಾರ ಬೆಳಿಗ್ಗೆ ಬೊಮ್ಮಯ್ಯನವರ ಚತ್ರದಲ್ಲಿ ನಡೆಯುವುದು. (೪) ಕೃಷ್ಣರಾಜ ಮೊಹಲ್ಲಿಗೆ ಮೆ॥ ಎಚ್. ಶ್ರೀಕಂಠೈಯನವರು, ಮೆ॥ ಎಂ. ಡಿ ತಿಂಗ್ರಾಚಾರ್ಯರು— ಈ ಪೈಕಿ ಒಬ್ಬರ ಚುನಾವಣೆಯು ಅದೇ ಚತ್ರದಲ್ಲಿ ಆ ದಿನ ಮಧ್ಯಾಹ್ನದ ಮೇಲೆ ನಡೆಯುತ್ತದೆ. (೫) ಚಾಮರಾಜ ಮೊಹಲ್ಲಿಗೆ ಮೆ॥ ಎಂ. ವೆಂಕಟಕೃಷ್ಣಯ್ಯನವರು—ಇವರ ಚುನಾವಣೆಯು ತಾ. ೧೪ ನೇ ಬುಧವಾರ ಬೆಳಿಗ್ಗೆ ಮರಿಮಲ್ಲಪ್ಪನವರ ಸ್ಕೂಲಿನಲ್ಲಿ ನಡೆಯುತ್ತದೆ. (೬) ನಜರಬಾದ್ ಮೊಹಲ್ಲಿಗೆ ಮೆ॥ ಪಿ ತಿರುವೆಂಗಡ ಮೊದಲಿಯಾರ್ರು, ಮೆ॥ ಸಯ್ಯದ್ ಮೊಹದೀನ್ ಸಾಬರು—ಈ ಪೈಕಿ ಒಬ್ಬರ ಚುನಾವಣೆಯು ಆ ದಿನ ಮಧ್ಯಾಹ್ನದ ಮೇಲೆ ನಜರಬಾದ್ ಪೊಲೀಸ್ ಸ್ಟೇಷನ್ನಲ್ಲಿ ನಡೆಯುವುದು. ಕೋಟೆ ಮೊಹಲ್ಲಿಗೆ ಮೆ॥ ಗಳಾದ ಎಂ. ನರಸಿಂಹಸ್ವಾಮಿಯವರು, ಜಹಗೀರ್ದಾರ್ ಮಾದಪ್ಪನವರು, ಕೃಷ್ಣಪ್ಪಾಜಿ ಅರಸಿನವರು—ಈ ಪೈಕಿ ಇಬ್ಬರ ಚುನಾವಣೆಯು ತಾ. ೧೫ ನೇ ಗುರುವಾರ ಬೆಳಿಗ್ಗೆ ಟೌನ್ ಹಾಲ್ ಬಂಗಲೆಯಲ್ಲಿ ನಡೆಯುವುದು.

ಮೇಲ್ಕಂಡ ಚುನಾವಣೆಗಳು ನಡೆಯುವ ಕಾಲಗಳಲ್ಲಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮೆ॥ ಎಂ ಜಿ ಕೃಷ್ಣಸ್ವಾಮಿರಾಯರವರು ಆಯಾ ಸ್ಥಳಗಳಲ್ಲಿ ಹಾಜರಾಗಿದ್ದು ಓಟುಗಳ ಟಿಕೆಟುಗಳನ್ನು ಕೂಡಿಸಿ, ಸ್ಪೆಷಲ್ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಓಟುಗಳ ಸಂಖ್ಯೆಗಳನ್ನು ಎಣಿಸಿದ ಬಳಿಕ, ಚುನಾವಣೆಯ ಫಲಿತಾಂಶವನ್ನು ಆ ತರುವಾಯ ಪ್ರಕಟಮಾಡುವವರಾಗಿದ್ದಾರೆಂದು ತಿಳಿದು ಬಂದಿದೆ.

ವೃತ್ತಾಂತ ಪತ್ರಿಕೆ.

:o:

ಸನ್ ೧೯೦೯ ನೇ ಇಸವಿ ಜೂಲೈ ತಾ|| ೮ ನೇ ಗುರುವಾರ.

ರಾಜಧಾನಿಯ ಮ್ಯುನಿಸಿಪಲ್ ಚುನಾವಣೆಯು.

ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು ಇದೇ ಜೂಲೈ ತಾ. ೧೨ ನೇ ಸೋಮವಾರದಿಂದ ಪ್ರಾರಂಭವಾಗತಕ್ಕದ್ದೆಂದು ಗವರ್ನಮೆಂಟಿನವರು ಗೊತ್ತುಮಾಡಿರುತ್ತಾರೆ. ಮೈಸೂರಿನ ಪ್ರಜೆಗಳು ಪಟ್ಟಣದ ಕ್ಷೇಮಾಭ್ಯುದಯಗಳಲ್ಲಿ ತಮಗಿರುವ ಕುತೂಹಲವನ್ನು ಪ್ರಕಾಶಪಡಿಸಿ, ಮೊಹಲ್ಲೆಗಳ ಸ್ಥಿತಿಗತಿಗಳನ್ನು ಚನ್ನಾಗಿ ನೋಡಿಬಲ್ಲವರಾಗಿಯೂ ಪ್ರಜೆಗಳ ಹಿತವನ್ನು ಬಯಸಿ ಮಾಡುವುದರಲ್ಲಿ ಆಸಕ್ತಿಯುಳ್ಳವರಾಗಿಯೂ ಇರುವಂಥಾ ದೊಡ್ಡ ಮನುಷ್ಯರಿಗೇ ತಮ್ಮ ಓಟುಗಳನ್ನು ಕೊಟ್ಟು ಚುನಾವಣೆ ಮಾಡಿಕೊಳ್ಳಬೇಕೆಂದು ಕೃತಪಡಿಸುತ್ತೇವೆ.

ಮ್ಯುನಿಸಿಪಲ್ ಕೌನ್ಸಿಲರುಗಳು ಮಾಡಬೇಕಾಗಿರುವ ಕಾರ್ಯಗಳು ಅನೇಕವಾಗಿರುತ್ತವೆ. ಪಟ್ಟಣದ ಮ್ಯುನಿಸಿಪಲ್ ಕೆಲಸ ಕಾರ್ಯಗಳು ನಡೆಯುವ ವಿಷಯದಲ್ಲಿ ಗವರ್ನಮೆಂಟಿನವರು ಮಾಡಿಟ್ಟಿರುವ ಮ್ಯುನಿಸಿಪಲ್ ಕಾನೂನನ್ನು ಓದಿಕೊಂಡು ಚನ್ನಾಗಿ ತಿಳಿದುಕೊಳ್ಳುವುದಕ್ಕೆ ತಕ್ಕ ಯೋಗ್ಯತೆಯು ಮ್ಯುನಿಸಿಪಲ್ ಕೌನ್ಸಿಲರುಗಳಿಗೆ ಇರಬೇಕು. ಆ ಕಾನೂನು ನಾನಾ ವಿಚಾರಗಳನ್ನೊಳಗೊಂಡದ್ದಾಗಿಯೂ ದೊಡ್ಡದಾಗಿಯೂ ಇರುವ ಕಾರಣ ಅದನ್ನು ಬಹಳ ಚನ್ನಾಗಿಯೂ ದೀರ್ಘವಾಗಿಯೂ ಓದಿ ಮನದಟ್ಟುಮಾಡಿಕೊಳ್ಳಬೇಕಾಗಿರುವುದು. ಈ ಕಾನೂನಿನ ಪ್ರತಿ ಒಂದು ನಿಬಂಧನೆಯನ್ನೂ ಪರಿಷ್ಕಾರವಾಗಿ ತಿಳಿದುಕೊಳ್ಳದೆ ಇದ್ದರೆ ಅದರ ವ್ಯವಹರಣೆಯೇ ಕೌನ್ಸಿಲರಿಗೆ ಗೊತ್ತಾಗುವುದಿಲ್ಲ.

ಕೌನ್ಸಿಲರಿಗೆ ತನ್ನ ಮೊಹಲೆಯೂ, ಅಲ್ಲಿ ವಾಸಮಾಡತಕ್ಕ ಪ್ರಜೆಗಳೂ ಬಹಳ ಚನ್ನಾಗಿ ಪರಿಚಯವಿರಬೇಕು. ಯಾಕೆಂದರೆ ಆತನು ಆ ಮೊಹಲ್ಲೆಯ ರಸ್ತೆ, ಗಲ್ಲಿ, ಚರಂಡಿ, ದೀಪ, ಕಚರಾ ಸಾಗುವುದು, ಮಕ್ಕಳ ವಿದ್ಯಾಭ್ಯಾಸ, ಈ ಮೊದಲಾದ ವಿಚಾರಗಳನ್ನು ವ್ಯವಹರಿಸಬೇಕಾಗುತ್ತದೆ. ಇದಲ್ಲದೆ ಆತನಿಗೆ ಭೂತದಯೆ ಪಶ್ಚಾತ್ತಾಪಗಳಿರಬೇಕು; ಸ್ವಪ್ರಯೋಜನವಾಗಲಿ, ಸ್ವಸಂಸಾರ ಕ್ಷೇಮಚಿಂತನೆಯಾಗಲಿ, ಸ್ವಜನಾಭಿಮಾನವಾಗಲಿ ಆತನಿಗೆ ಇರಕೂಡದು. ಆತನು ಜಾತಿಮತಗಳ ಪಕ್ಷಪಾತವಿಲ್ಲದೆ ಸಕಲ ಪ್ರಜೆಗಳನ್ನೂ ಏಕ ರೀತಿಯಾದ ಪ್ರೀತಿ ವಿಶ್ವಾಸಗಳಿಂದ ನೋಡತಕ್ಕವನಾಗಿರಬೇಕು. ಯಾಕೆಂದರೆ ಆತನು ಯಾವ ಒಂದು ಪಂಗಡಕ್ಕೂ ಪ್ರತಿನಿಧಿಯಲ್ಲ; ಆ ಮೊಹಲ್ಲೆಯಲ್ಲಿರುವ ಸಕಲ ಪ್ರಜೆಗಳಿಗೂ ಅಂದರೆ ಐಶ್ವರ್ಯವಂತರಿಗೂ ಬಡವರಿಗೂ, ವಿದ್ಯಾವಂತರಿಗೂ ವಿದ್ಯಾಹೀನರಿಗೂ, ಹಿಂದೂ ಮಹಮದೀಯ ಕ್ರೈಸ್ತರೇ ಮೊದಲಾದ ಸಕಲ ಪಂಗಡಗಳಿಗೂ ತಾನು ಪ್ರತಿನಿಧಿಯಾಗಿ ನಿಂತಿರುತ್ತೇನೆಂದು ತಿಳಿದುಕೊಳ್ಳಬೇಕು. ಇದಲ್ಲದೆ ಮ್ಯುನಿಸಿಪಲ್ ಕಾನೂನಿನಲ್ಲಿ ಹೇಳಿರುವ ವಿಷಯಗಳೆಲ್ಲಾ ಪ್ರಜೆಗಳ ಕ್ಷೇಮಾಭ್ಯುದಯಗಳಿಗಾಗಿ ಮಾಡಲ್ಪಟ್ಟವೆ ಎಂಬುವದನ್ನು ತನ್ನ ಮೊಹಲ್ಲೆಯ ನಿವಾಸಿಗಳಿಗೆ ವಿವರಿಸಿ ಹೇಳತಕ್ಕವನಾಗಿಯೂ, ಆ ಕಾನೂನಿನಲ್ಲಿ ಕಂಡ ವಿಧಿಗಳ ದೆಸೆಯಿಂದ ಪ್ರಜೆಗಳಿಗೆ ವೃಥಾ ಹಿಂಸೆ ಮನೋವ್ಯಥೆಗಳು ಪ್ರಾಪ್ತವಾಗದಂತೆ ನೋಡಿಕೊಳ್ಳತಕ್ಕವನಾಗಿಯೂ ಇರಬೇಕಾಗಿದೆ.

ಮ್ಯುನಿಸಿಪಲ್ ಕೌನ್ಸಿಲರಿಗೆ ತನ್ನ ಪಟ್ಟಣದ ಮೇಲೆ ನೈಜವಾದ ಪ್ರೀತಿ ಇರಬೇಕು; ತಾನಿರುವ ಪಟ್ಟಣವು ಹಿಂದುಸ್ಥಾನದಲ್ಲಿರುವ ಸಮಸ್ತ ಪಟ್ಟಣಗಳಿಗಿಂತಲೂ ನೈರ್ಮಲ್ಯ, ಅಚ್ಚುಕಟ್ಟು, ಆರೋಗ್ಯಭಾಗ್ಯ, ಈ ಮೊದಲಾದ ವಿಚಾರಗಳಲ್ಲಿ ಉತ್ತಮೋತ್ತಮವಾದದ್ದಾಗಿರುವಂತೆ ಆಗಬೇಕೆಂಬ ಉತ್ಸಾಹವೂ ಕಾರ್ಯಸಾಧನೆಯೂ ಉಳ್ಳವನಾಗಿರಬೇಕು. ಇಂಥಾ ಕೌನ್ಸಿಲರು ಪಟ್ಟಣವನ್ನು ಅಭಿವೃದ್ಧಿಗೆ ತರುವ ಸಕಲ ಕಾರ್ಯಗಳನ್ನೂ ಕುತೂಹಲದಿಂದ ಮಾಡಗೊಡಿಸುವನು; ತನ್ನ ಮೊಹಲ್ಲೆಯ ಸಮಸ್ತ ನಿವಾಸಿಗಳೂ ನೆಮ್ಮದಿ ಸುಖ ಸಂತೋಷಗಳೊಡನೆ ಕೂಡಿ ಬಾಳುವಂತೆ ಮಾಡತಕ್ಕವನಾಗುತ್ತಾನೆ.

ಇಷ್ಟೇ ಅಲ್ಲ. ಕೌನ್ಸಿಲರಾಗತಕ್ಕವನು ಪುರಜನರ ಹಿತಕ್ಕಾಗಿ ತನ್ನ ವಿಶೇಷವಾದ ಸಮಯವನ್ನೂ, ಐಶ್ವರ್ಯವಂತನಾಗಿದ್ದರೆ ಅನೇಕ ಸಂದರ್ಭಗಳಲ್ಲಿ ತನ್ನ ದ್ರವ್ಯವನ್ನೂ ಧಾರಾಳವಾಗಿ ವಿನಿಯೋಗ ಮಾಡುವುದಕ್ಕೆ ಸಿದ್ಧನಾಗಿರಬೇಕು. ಮ್ಯುನಿಸಿಪಲ್ ಕೆಲಸಗಳನ್ನು ಚಲಾಯಿಸುವುದಕ್ಕೆ ನೌಕರಮಾನೆಯರೇನೋ ನೇಮಕವಾಗಿದಾರೆ. ಕೌನ್ಸಿಲರುಗಳು ಪರ್ಯಾಲೋಚನೆಮಾಡಿ ಪ್ರಜೆಗಳ ಹಿತಾರ್ಥವಾಗಿ ಸೂಚಿಸುವಂಥಾ ಏರ್ಪಾಡುಗಳನ್ನು ನೌಕರಮಾನೆಯರು ಚಲಾಯಿಸುವರು. ಆದಕಾರಣ ಕೌನ್ಸಿಲರುಗಳು ಪಟ್ಟಣದ ಆರೋಗ್ಯಾಭಿವೃದ್ಧಿಗೂ ಪ್ರಜೆಗಳ ನೆಮ್ಮದಿಗೂ ಸಹಕಾರಿಗಳಾದಂಥಾ ರೂಲುಸುಗಳನ್ನು ಮಾಡಿ, ಅವುಗಳನ್ನು ತಾಳ್ಮೆಯಿಂದಲೂ ಪ್ರೀತಿಪೂರ್ವಕವಾಗಿಯೂ ನೌಕರಮಾನೆಯರು ಚಲಾಯಿಸುವಂತೆ ನೋಡಿಕೊಳ್ಳುತ್ತಾ ಬರುವಂಥವರಾಗಬೇಕು.

ಬೇರೆ ಬೇರೆ ಮೊಹಲ್ಲೆಗಳಿಗೆ ಮ್ಯುನಿಸಿಪಲ್ ಕೌನ್ಸಿಲರಾಗಬೇಕೆಂದು ಅಭಿಲಾಷೆಪಟ್ಟು ಚುನಾವಣೆಗೆ ನಿಂತಿರುವ ದೊಡ್ಡ ಮನುಷ್ಯರ ಹೆಸರುಗಳನ್ನು ಈ ಪತ್ರಿಕೆಯ ಮೂರನೇ ಪುಟದಲ್ಲಿ ಪ್ರಕಟಿಸಿರುತ್ತೇವೆ. ಪ್ರಜೆಗಳು ತಮ್ಮ ಬುದ್ಧಿ ವಿವೇಕಗಳನ್ನು ಪ್ರಯೋಗಿಸಿ ಆ ವ್ಯಕ್ತಿ ಮೇಲ್ಕಂಡಂತೆ ಯೋಗ್ಯತಾಸಿದ್ಧಿಯನ್ನು ಪಡೆದಿರುವಂಥಾ ದೊಡ್ಡ ಮನುಷ್ಯರನ್ನೇ ಚುನಾಯಿಸಿಕೊಂಡಾರೆಂದು ನಂಬಿ ಹಾರೈಸುತ್ತೇವೆ.

ಪುರಾಭಿವೃದ್ಧಿಯ ವಿಷಯದಲ್ಲಿ ಬಹುಮಂದಿ ಓಟರುಗಳಿಗೆ ವಿಶೇಷವಾದ ಶ್ರದ್ಧೆಯೂ ಕುತೂಹಲವೂ ಇರುವಂತೆ ಕಾಣುವುದಿಲ್ಲ. ಆದಕಾರಣ ಪ್ರತಿ ಮೊಹಲ್ಲೆಯ ಚುನಾವಣೆಯ ಸ್ಥಳಕ್ಕೂ ಓಟರುಗಳು ವಿಶೇಷವಾಗಿ ಬಂದು, ಓಟುಗಳನ್ನು ಹಾಕುವುದರ ಮೂಲಕ ಪಟ್ಟಣದ ಅಭಿವೃದ್ಧಿಯ ಮೇಲೆ ತಮಗೆ ಇರುವಂಥಾ ಪ್ರೀತಿ ಉತ್ಸಾಹಗಳನ್ನು ಪ್ರಕಾಶಪಡಿಸುವರೆಂದು ನಿರೀಕ್ಷಿಸುವೆವು.

ಹೊಸ ವರ್ತಮಾನಗಳು.

ಮದರಾಸ್ ಹೈ ಕೋರ್ಟಿನ ಜಡ್ಜರಾದ ಮೆ|| ಸಿ. ಶಂಕರನಾಯರ್ ಯವರು ಶೀಮೆಗೆ ಹೋಗಿದ್ದು ಕಳೆದ ಶನಿವಾರ ಮದರಾಸಿಗೆ ವಾಪಸು ಬಂದರು.

ವಿಲಾಯತಿ ರಾಜ್ಯಕ್ಕೆ ಸೇರಿದ ವೇಲ್ಸ್ ಎಂಬ ವಿಭಾಗದಲ್ಲಿ ನ್ಯೂಪೋರ್ಟ್ ಎಂಬ ಪಟ್ಟಣದಲ್ಲಿ ಜಹಜಿನ ಸಾಮಾನುಗಳನ್ನು ಇಳಿಸುವುದಕ್ಕಾಗಿ ಒಂದು ಕಟ್ಟಡ ತಯಾರಾಗುತ್ತಿದೆ. ಅದರ ಅಸ್ತಿಭಾರಕ್ಕೆ ಹದಿಯನ್ನು ತೋಡಿದ್ದದ್ದು ಎರಡು ಪಕ್ಕಗಳ ಮಣ್ಣೂ ಕಳಚಿಕೊಂಡು ಹದಿಯೊಳಕ್ಕೆ ಬಿದ್ದುಬಿಟ್ಟಿತು. ಅದರಲ್ಲಿ ಕೆಲಸ ಮಾಡುತ್ತಿದ್ದ ಐವತ್ತು ಮಂದಿ ಸಿಕ್ಕಿಹೋದರು. ಈ ಪೈಕಿ ೩೦ ಜನರನ್ನು ಹೊರಕ್ಕೆ ತೆಗೆದಿರುವಂತೆಯೂ, ಉಳಿದ ೨೦ ಜನರೂ ಅದರೊಳಗೇ ಹತರಾದರೆಂತಲೂ ತಿಳಿದುಬಂದಿದೆ

ಮದರಾಸ್ ಮತ್ತು ದಕ್ಷಿಣ ಮರಾಟಾ ರೈಲ್ವೆ ಕಂಪನಿಯ ರೈಲ್ ಗಾಡಿಗಳನ್ನು ನಡಿಸತಕ್ಕ ನೌಕರರು ಮುಷ್ಕರಹಿಡಿದು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದ್ದರಷ್ಟೆ. ರೈಲ್ ಕಂಪನಿಯ ಏಜಂಟರವರು ಅವರಿಗೆ ಮತ್ತೆ ಕೆಲಸ ಕೊಡುವುದಾಗಿ ತಿಳಿಸಿದ್ದರಿಂದ ೫೬೯ ಜನ ನೌಕರರು ಕಳೆದ ವಾರ ಹೋಗಿ ಅರ್ಜಿ ಹಾಕಿಕೊಂಡರು. ಏಜಂಟರು ಆ ಪೈಕಿ ಕೆಲವರನ್ನು ತಿರಸ್ಕರಿಸಿ, ಕೆಲವರಿಗೆ ಖಾಲಿ ಇದ್ದ ಕೆಲಸಗಳನ್ನು ಕೊಟ್ಟು, ಇನ್ನು ಕೆಲವರಿಗೆ ಖಾಲಿಯಿದ್ದಾಗ ಕೆಲಸಕ್ಕೆ ಸೇರಿಸಿಕೊಳ್ಳುವುದಾಗಿ ಮಾತುಕೊಟ್ಟದಾರೆ. ರೈಲ್ವೆ ಅಧಿಕಾರಿಗಳಿಗೂ ನೌಕರಮಾನೆಯರಿಗೂ ಉಂಟಾಗಿದ್ದ ಮನಸ್ತಾಪಗಳು ನಿವಾರಣೆಹೊಂದಿ, ಅನುಮರಫ್ತಿಗೆ ಇದ್ದ ಅಡಚಣೆಯು ತಪ್ಪಿದ್ದಕ್ಕಾಗಿ ಸಂತೋಷಪಡುತ್ತೇವೆ.

ಇಂಡಿಯಾ ಗವರ್ನಮೆಂಟಿನವರು ಹಿಂದುಸ್ಥಾನದ ಬೇರೆ ಬೇರೆ ಅಧಿಕಾರಸ್ಥಗಳಲ್ಲಿ ದೊಡ್ಡ ಮನುಷ್ಯರನ್ನು ಸೇರಿಸಿ ಒಂದೊಂದು ಕಮಿಟಿಯನ್ನು ನಿರ್ಮಾಣಿಸಬೇಕೆಂದು ಗೊತ್ತುಮಾಡಿದಾರೆ. ಆ ಕಮಿಟಿಯವರು ಮಾಡಬೇಕಾಗಿರುವ ಕಾರ್ಯವೇನೆಂದರೆ—ಆಯಾ ಅಧಿಪತ್ಯದಿಂದ ವಿದ್ಯಾಭ್ಯಾಸಕ್ಕಾಗಿ ವಿಲಾಯತಿಗೆ ಹೋಗಬೇಕೆಂದು ಅಪೇಕ್ಷಿಸುವಂಥಾ ಯೌವನಸ್ಥರ ಪೂರ್ವೋತ್ತರವನ್ನೂ ಅವರ ವಂಶ ಅವರ ಗುಣ ನಡತೆಗಳನ್ನೂ ವಿಚಾರಣೆಮಾಡಿ, ಯೋಗ್ಯರೂ ಸಭ್ಯರೂ ಆದ ಯೌವನಸ್ಥರ ವಿಷಯದಲ್ಲಿ ಗವರ್ನಮೆಂಟಿಗೆ ಶಿಫಾರಸು ಮಾಡಬೇಕು. ಹಾಗೆ ಹೋಗುವಂಥಾ ಯೌವನಸ್ಥರಿಗೆ ವಿಲಾಯತಿಯಲ್ಲಿರುವ ವಿದ್ಯಾಶಾಲೆಗಳು ಮತ್ತು ಭೋಜನ ಮಂದಿರಗಳನ್ನು ತಿಳಿಸಿ, ಅವರಿಗೂ ಅವರ ತಂದೆತಾಯಿಗಳಿಗೂ ಅವಶ್ಯವಾದ ಸಂಗತಿಗಳನ್ನೆಲ್ಲಾ ಹೇಳಿಕೊಡಬೇಕು. ಈ ಕಮಿಟಿಯವರು ವಿಲಾಯತಿಯಲ್ಲಿರುವ ವಿದ್ಯಾಶಾಲೆಗಳ ಮುಖ್ಯಾಧಿಕಾರಿಗಳ ಕೂಡ ಅಲ್ಲಿನ ಸೌಕರ್ಯಗಳ ವಿಷಯದಲ್ಲಿ ಕಾಗದಪತ್ರಗಳನ್ನು ನಡಿಸತಕ್ಕದ್ದು. ಈ ಕಮಿಟಿಗಳಿಗೆ ಒಬ್ಬೊಬ್ಬ ಸೆಕ್ರೆಟರಿಯನ್ನು ೨೦೦ ರೂಪಾಯಿ ತಲಬಿನ ಮೇಲೆ ಸರ್ಕಾರದವರು ನೇಮಕಮಾಡಿಕೊಡುತ್ತಾರೆ.

ಮತ ವಿಚಾರ.

ಯಾರಾದರೂ ಸರಿ ಸತ್ಯವನ್ನಪೇಕ್ಷಿಸಿ ಅದನ್ನು ಕಂಡುಕೊಳ್ಳಬೇಕಾದರೆ ನಾನಾ ಮತತತ್ವಗಳನ್ನು ಚೆನ್ನಾಗಿ ಪರಿಶೋಧಿಸಬೇಕಾಗುವುದು. ಹೀಗೆ ಪರಿಶೀಲನೆ ಮಾಡಿ ಸತ್ಯವನ್ನು ಹುಡುಕುವುದು ಸುಲಭಸಾಧ್ಯವಲ್ಲ. ಆಯಾ ಮತತತ್ವಗಳನ್ನು ಪರಿಶೀಲನೆ ಮಾಡಿ ಅವುಗಳಲ್ಲಿ ತಮಗೆ ತೋರಿಬರುವ ಕುಂದು ಕೊರತೆಗಳನ್ನು ಹೊರಪಡಿಸಿದರೆ ಕೆಲವರು ಒಪ್ಪುವದಿಲ್ಲ. ಜನರು ಅಂಥವರನ್ನು ಮತದೂಷಕರೆಂದು ಕರೆಯುವರು. ಇಷ್ಟಲ್ಲದೆ ಅವರನ್ನು ವಾಚಾಮಗೋಚರವಾಗಿ ಬೈಯ್ಯುವುದೂ ಉಂಟು. ಅಂಥವರ ಮಾತಿಗೆ ಜನರು ಕಿವಿಗೊಡರು. ಅವರೇನಾದರೂ ತಮ್ಮಭಿಪ್ರಾಯವನ್ನು ಪತ್ರಿಕೆಯ ಮುಖೇನ ತಿಳಿಸುವವಾದರೆ ಅಂಥ ಪತ್ರಿಕೆಯನ್ನೇ ಬಹಿಷ್ಕಾರ ಹಾಕುವಂತೆ ಜನರು ಯೋಚಿಸುವುದು ಅಪರೂಪವಲ್ಲ. ದಾವಣಗೆರೆಯಲ್ಲಿ ಕೆಲವರು ನಮ್ಮ ವಿಷಯ ಈ ರೀತಿಯಲ್ಲಿ ಆಡಿಕೊಳ್ಳುತ್ತಿರುವರಂತೆ.

ನಾವಾದರೋ ಸತ್ಯವಲ್ಲದುದನ್ನು ಪ್ರಕಟಿಸುವ ವಿಷಯದಲ್ಲಿ ಬಹು ಎಚ್ಚರಿಕೆಯಿಂದಿರುವೆವು. ಸತ್ಯವಾದುದನ್ನು ಸಂಗ್ರಹಿಸಿ ಅದನ್ನು ಪ್ರಕಟ ಮಾಡುವುದೇ ನಮ್ಮ ಮುಖ್ಯೋದ್ದೇಶವಾಗಿರುತ್ತದೆ. ನಮ್ಮ ವಾಚಕ ಮಹಾಶಯರಿಗೆ ಈ ದೇಶದ ಮತ್ತು ಭೂಮಂಡಲದ ನಾನಾ ಕಡೆಗಳಲ್ಲಿ ನಡೆಯುತ್ತಿರುವ ಸಮಾಚಾರಗಳನ್ನು ಸಂಗ್ರಹಿಸಿ ಅವುಗಳ ಸತ್ಯಾಸತ್ಯಗಳನ್ನು ಚೆನ್ನಾಗಿ ಪರಿಶೀಲನೆ ಮಾಡಿ ಜನಸಮುದಾಯಕ್ಕೆ ಉಪಯುಕ್ತವಾದುವುಗಳನ್ನೇ ಪ್ರಕಟಿಸುವೆವು. ಕಲ್ಪನಾ ಸಮಾಚಾರಗಳನ್ನಾಗಲೀ ಇಲ್ಲವೇ ಅನುಪಯೋಗವಾದ ಸಮಾಚಾರಗಳನ್ನಾಗಲೀ ಪ್ರಕಟಿಸುವುದು ನಮ್ಮಿಂದಾಗುವದಿಲ್ಲ. ಈ ರೀತಿಯಾಗಿ ನಮ್ಮ ವರ್ತಮಾನಪತ್ರಿಕೆಯನ್ನು ನಡಿಸುತ್ತಿರುವೆವು. ಲೌಕಿಕ ಸಂಬಂಧವಾದ ಸಮಾಚಾರಗಳನ್ನು ಬರೆಯುತ್ತಿರುವುದಲ್ಲದೆ ಆತ್ಮಿಯಸಂಬಂಧವಾದ ಸಂಗತಿಗಳನ್ನು ಕುರಿತು ಸಹ ಬರೆಯುವೆವು. "ಸತ್ಯಂಜಯತಿ" ಎಂಬುದು ನಿಜವಾಗಿರುವಲ್ಲಿ ನಾವು ಅಂಥ ಸತ್ಯವನ್ನೇ ಹುಡುಕುತ್ತಿರುವೆವು. ವಾಚಕರಲ್ಲಿ ಯಾರಾದರೂ ನಾವು ಸತ್ಯಕ್ಕೆ ವಿರುದ್ಧವಾದುದನ್ನು ಬರೆದಿದ್ದೇವೆಂಬುದಾಗಿ ಯೋಚಿಸುವುದಾದರೆ ಅಂಥವರು ನಮಗೆ ಬರವಣಿಗೆಯ ಮೂಲಕ ತಿಳಿಸಿದರೆ ಬಹು ಕೃತಜ್ಞರಾಗಿರುವೆವು.

ಮತಸಂಬಂಧವಾದ ತರ್ಕಗಳನ್ನು ನಡಿಸುತ್ತಿರುವಾಗ್ಗೆ ಜನರು ಶಾಂತರಾಗಿದ್ದುಕೊಂಡು ಎಲ್ಲವನ್ನೂ ಪರಿಶೋಧಿಸಿ ತಿಳಿಯುವುದು ಅಪರೂಪ. ಕೆಲವರು ಕೋಪಿಸಿಕೊಂಡು ನಾನಾ ತರವಾಗಿ ಬಯ್ಯುವದುಂಟು. ಆದರೆ ಸತ್ಯವನ್ನು ಈ ರೀತಿಯಲ್ಲಿ ಹುಡುಕುವುದು ಅಸಾಧ್ಯವೇ ಸರಿ. ಸತ್ಯಾಸತ್ಯಗಳನ್ನು ಪರಿಶೀಲನೆ ಮಾಡಿ ತಿಳಿದುಕೊಳ್ಳುವ ಪ್ರಯತ್ನದಲ್ಲಿ ಯಾವನು ಕೋಪಗೊಂಡು ಅಸಮಾಧಾನಗೊಳ್ಳುತ್ತಾನೋ ಅಂಥವನು ಸತ್ಯವನ್ನು ತಿಳಿದುಕೊಳ್ಳುವುದಕ್ಕೆ ಇಷ್ಟಪಡುವವನಿಲ್ಲವೆಂದು ಪರಿಷ್ಕಾರವಾಗಿ ಕಂಡು ಬರುವುದು. ಯಾವನು ಸತ್ಯಕ್ಕೆ ಹೆದರಿಕೊಳ್ಳುವನು. ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಸಮಾಚಾರಗಳು ಸರಿಯೆಂದು ಕಂಡುಬರುವಲ್ಲಿ ಬರೀ ಹಟದಿಂದ ಅವುಗಳನ್ನು ಒಪ್ಪದಿರುವುದು ಹುಚ್ಚುತನವೇ ಹೊರತು ಮತ್ತೇನೂ ಅಲ್ಲ. ಎಷ್ಟು ಅಡ್ಡಿಗಳು ಪ್ರಾಪ್ತವಾದರೂ ಸತ್ಯವಂತೂ ಜಯಹೊಂದುವದು. ಸತ್ಯವು ಬೆಳಕುಕೊಡುತ್ತಿರುವ ಒಂದು ದೀವಟಿಗೆಯಂತಿರುವುದು. ಅದನ್ನು ಹೆಚ್ಚಾಗಿ ಉಜ್ಜ್ವಲಿಸಿದಷ್ಟೂ ಅದು ಹೆಚ್ಚಾಗಿಯೇ ಬೆಳಕುಕೊಡುವುದು. ಪ್ರಕಟವಾಗಿರುವ ಸಂಗತಿಗಳು ನಿಜವಲ್ಲದ ಪಕ್ಷದಲ್ಲಿ ಅವು ನಿಜವಲ್ಲವೆಂದು ಸ್ಥಾಪಿಸುವುದೂ ನಿಜವಾದುವನ್ನು ತಿಳಿಸುವುದೂ ಆಕ್ಷೇಪಕರ ಕರ್ತವ್ಯವಾಗಿರುತ್ತದೆ. ನಾವು ಈ ರೀತಿ ಮಾಡುವುದಾದರೆ ವಿರೋಧಿಗಳು ಅಸಮಾಧಾನ ಪಡಲವಕಾಶವಿಲ್ಲ. ಪ್ರತಿಯೊಬ್ಬರೂ ಸತ್ಯಾಪೇಕ್ಷಿಗಳಾಗಿದ್ದರೆ ಸತ್ಯವು ಯಾವ ಕಡೆಯಿಂದ ಬಂದರೂ, ಒಬ್ಬ ಶತ್ರುವಿನ ಕಡೆಯಿಂದ ಬಂದರೂ ಕೂಡ ಅದನ್ನು ಅವರ ಪೂರ್ವಕವಾಗಿ ಅಂಗೀಕರಿಸುವರು.

ಮತಸಂಬಂಧವಾದ ಕಾರ್ಯಗಳನ್ನು ತಿಳಿದುಕೊಳ್ಳುವುದು ಬಹು ಪ್ರಾಧಾನ್ಯವಾದುದು. ದೇವರು ನಮ್ಮೆಲ್ಲರ ತಂದೆಯಾಗಿರುತ್ತಾನೆಂತಲೂ ನಾವೆಲ್ಲರೂ ಒಬ್ಬರಿಗೊಬ್ಬರು ಸಹೋದರರಾಗಿರುತ್ತೇವೆಂತಲೂ ಭಾವಿಸುತ್ತೇವಷ್ಟೆ. ಈ ರೀತಿಯಾದ ಭಾವನೆಯೇ ಸತ್ಯಮತದ ಸಾರಾಂಶವಾಗಿದೆಯೆಂದು ಜನರು ತಿಳಿದುಕೊಂಡಿರುವರು. ಇಂಥ ಉತ್ಕೃಷ್ಟವಾದ ಬೋಧನೆಯು ಯಾವ ಮತದಲ್ಲಿ ಅಡಗಿದೆಯೋ ಅಂಥ ಮತವನ್ನು ಹುಡುಕುವುದು ನಮ್ಮ ಕರ್ತವ್ಯವಾಗಿರಬೇಕು. ಹೀಗೆ ಸತ್ಯಮಾರ್ಗವನ್ನು ಹುಡುಕುವಾಗ್ಗೆ ನಮಗೆ ಅಲ್ಲಲ್ಲಿ ದೋಷಗಳು ಕಂಡುಬಂದರೆ ಅವುಗಳನ್ನು ಮುಚ್ಚಿ ಬಿಡುವುದು ಯೋಗ್ಯವಾದುದಲ್ಲ. ಒಬ್ಬ ಮನುಷ್ಯನಿಗೆ ಪ್ರಾಣಾಪಾಯವಾಗುವುದೆಂಬ ಸಂಗತಿಯು ನಮಗೆ ಕಂಡುಬಂದರೆ ಅವನನ್ನು ಎಚ್ಚರಿಸುವುದು ನಮ್ಮ ಕರ್ತವ್ಯ... ಆದರೆ ಆತ್ಮಕ್ಕೆ ಸಂಭವಿಸುವ ಅಪಾಯಕ್ಕಿಂತ ಆತ್ಮಕ್ಕೆ ಸಂಭವಿಸುವ ಅಪಾಯವು ಭೀಕರವಾದುದು. ಇದಕ್ಕೇನೂ ಸಂಶಯವಿಲ್ಲ. ಆತ್ಮದ ಅಪಾಯಕ್ಕೆ ಗುರಿಯಾಗಿರುವವರನ್ನು ಎಚ್ಚರಿಸುವುದು ನಮ್ಮ ಕರ್ತವ್ಯವೆಂದು ಭಾವಿಸುವೆವು. ಈ ಗುರಿಯಿಂದಲೇ ನಾವು ನಮ್ಮ ಪತ್ರಿಕೆಯಲ್ಲಿ ಮತಸಂಬಂಧವಾದ ಲೇಖನಗಳನ್ನು ಬರೆಯುತ್ತಿದ್ದೆವು, ಈಗಲೂ ಬರೆಯುತ್ತಿದ್ದೇವೆ, ಮುಂದೆಯೂ ಬರೆಯುವೆವು. ಈ ನಮ್ಮ ಪ್ರಯತ್ನದಲ್ಲಿ ಎಲ್ಲಾ ವಿಧವಾದ ಆಬದ್ಧವನ್ನು ದೂರ ಮಾಡಿ ಸತ್ಯವನ್ನೇ ಹುಡುಕುವುದು ನಮ್ಮ ಮುಖ್ಯೋದ್ದೇಶವಾಗಿರುವದು. ನಮ್ಮ ವಾಚಕರಲ್ಲಿ ಪ್ರತಿಯೊಬ್ಬರೂ ಈ ಉದ್ದೇಶವನ್ನು ಅನುಸರಿಸುವಂತೆ ಪ್ರಾರ್ಥಿಸುತ್ತೇವೆ.

ಬಹುದೇಶದ ವೃತ್ತಾಂತಗಳು.

ದಿವಾನರಾದ ಮೆ|| ವಿ. ಪಿ. ಮಾಧವರಾಯರವರು ಎರಡು ವಾರಗಳಿಂದ ರಾಜಧಾನಿಯಲ್ಲಿದ್ದು ಮೊನ್ನೆ ಭಾನುವಾರ ಮೋಟಾರ್‌ಗಾಡಿಯಲ್ಲಿ ವಾಪಸು ಬೆಂಗಳೂರಿಗೆ ದಯಮಾಡಿದರು.

∴

ಕಳೆದ ೧೯೦೩ ನೇ ಇಸವಿಯಿಂದ ಈ ಸಂಸ್ಥಾನದಲ್ಲಿ ಚೀಫ್ ಇಂಜನಿಯರಾಗಿದ್ದ ಮ್ಯಾ. ಡಬ್ಲ್ಯು. ಮೆಕ್‌ಹಚಿನ್ ಯವರು ಕಳೆದ ತಿಂಗಳ ಆಖೈರಿನಲ್ಲಿ ಪೆನ್‌ಷನ್ ಪಡೆದು ಕೆಲಸ ಬಿಟ್ಟು, ಪತ್ನಿ ಸಹಿತ ಶೀಮೆಗೆ ಪ್ರಯಾಣವಾದರು. ಇವರು ಚಿರಕಾಲ ಶೀಮೆಯಲ್ಲಿ ವಿಶ್ರಾಂತಿ ಸುಖವನ್ನನುಭವಿಸಲೆಂದು ಹಾರೈಸುತ್ತೇವೆ.

∴

ಕಳೆದ ಗುರುವಾರ ಬೆಳಿಗ್ಗೆ ಶ್ರೀಮನ್ ಯುವರಾಜರವರು ಮೋಟಾರ್ ಗಾಡಿಯಲ್ಲಿ ಬೆಂಗಳೂರಿಗೆ ತೆರಳಿದರು. ಅವರ ಕೂಡ ಡಾಕ್ಟರ್ ಕೃಷ್ಣಸ್ವಾಮಿ ಅಯ್ಯರವರೂ, ಮೆ|| ಬನ್ನೇಸಿಂಗರವರೂ ಹೋಗಿರುತ್ತಾರೆ. ಯುವರಾಜರವರು ಪೂನಾ ಪಟ್ಟಣದಲ್ಲಿ ನಡೆಯುವ ಪೋಲೋ ಪಂದ್ಯಕ್ಕಾಗಿ ದಯಮಾಡುವರೆಂದು ಕೇಳುತ್ತೇವೆ.

∴

ರಾಜಧಾನಿಯಲ್ಲಿ ಇನ್ನೂ ಶೀತವಾದ ನಿವಾರಣೆಯಾಗಲಿಲ್ಲ. ಶೀತವಾದ ಬಿರುಗಾಳಿ ಬೀಸುತ್ತಿದೆ. ಮೋಡಕವಿದು ಆಗಾಗ್ಗೆ ಸೋನೆ ಮಳೆ ಸುರಿಯುವುದು. ಅಲ್ಲಲ್ಲಿ ಒಂದೊಂದು ಪ್ಲೇಗ್ ಕಾಯಿಲೆ ಸಂಭವಿಸುತ್ತಿದೆ. ಜ್ವರಾದಿ ಶೀತರೋಗಗಳು ಸ್ವಲ್ಪ ಹೆಚ್ಚಾಗಿರುವವು. ಆಹಾರ ದಿನಸಿಗಳ ಧಾರಣೆಗಳು ಇನ್ನೂ ಸ್ವಲ್ಪವಾದರೂ ಇಳಿಯಲಿಲ್ಲ.

∴

ಹಿಂದುಸ್ಥಾನದ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳವರು ಪತ್ನಿ ಪರಿವಾರ ಸಹಿತ ಮುಂದಿನ ನವಂಬರ್ ತಾ. ೨೫ ಕ್ಕೆ ರಾಜಧಾನಿಗೆ ದಯಮಾಡುವರೆಂದೂ, ಇಲ್ಲಿ ಐದು ದಿನಗಳ ತನಕ ಇದ್ದು ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುವರೆಂದೂ, ಅವರ ಸಂತೋಷಾರ್ಥವಾಗಿ ಆನೆಗಳ ಖೆಡ್ಡಾ ಏರ್ಪಾಡು ನಡೆಯುವುದೆಂದೂ ಕೇಳುತ್ತೇವೆ.

∴

ಕೋದಗಿಗೆ ಸೇರಿದ ಪೊಲ್ಲಿಬೆಟ್ಟದಿಂದ ಒಬ್ಬ ಕೂಲಿಯವನು ಒಂದು ಕೇರೀ ನಾಯಿಯನ್ನು ತನ್ನ ಜೊತೆಯಲ್ಲಿ ಚಿಕ್ಕಮಗಳೂರಿಗೆ ಕರೆದುಕೊಂಡು ಹೋಗಿ, ಎರಡು ವಾರಗಳ ತನಕ ಕಟ್ಟಿಹಾಕಿಕೊಂಡಿದ್ದನು. ೬೨ ದಿನಗಳು ಕಳೆದ ಮೇಲೆ ಆ ನಾಯಿ ಚಿಕ್ಕಮಗಳೂರಿನಿಂದ ಹಿಂತಿರುಗಿ ೪೨ ದಿನಗಳ ತನಕ ಅಲೆದು ಕಡೆಗೆ ಪೊಲ್ಲಿಬೆಟ್ಟವನ್ನು ಸೇರಿತೆಂದು ಅಲ್ಲಿನ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

∴

ಕಳೆದ ಬುಧವಾರ ಮಧ್ಯಾಹ್ನ (ಸಿರವ ಹಬ್ಬದ ದಿನ) ರಾಜಧಾನಿಯ ಕೋಟೆಯಲ್ಲಿ ಒಬ್ಬ ಆರ್ಮನರ್ ಮನೆಯೊಳಗೆ ಒಬ್ಬ ಹುಡುಗನು ಬಿಸಲುಮ ಹಿಡಿದು ಮೇಲೆ ಹರವನ್ನು ಹಾರಿಸುತ್ತಿದ್ದು ಮನೆಯ ಸಪ್ಪೆ ಮೇಲಿನಿಂದ ತೊಟ್ಟಿಯೊಳಕ್ಕೆ ಬಿದ್ದು ಪೂರಾ ಜಖಂ ಆಯಿತು. ಅವನನ್ನು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡುತ್ತಿದಾರೆ. ೩—೪ ದಿನ ಅವನಿಗೆ ಜ್ಞಾನವೇ ಇಲ್ಲದೆ ಬದುಕುವುದು ಕಷ್ಟವೆನ್ನುವ ಹಾಗಿತ್ತು. ಈಚೆಗೆ ವಾಸಿಯಾದೀತೆಂಬ ಭರವಸೆ ಕಾಣುತ್ತಿದೆ.

∴

ರಾಜಧಾನಿಯಲ್ಲಿ ಜೀವನ್ನಾರಾಯನ ಪೇಟೆಯ ಹಿಂಭಾಗದಲ್ಲಿ ಪ್ರತಿ ಶುಕ್ರವಾರವೂ ನಡೆಯುವ ದನಗಳ ಸಂತೆಯಲ್ಲಿ ಹಳ್ಳಿಗಾಡಿನಿಂದ ರೈತರು ನಮ್ಮ

ರಾಸುಗಳನ್ನು ಬಿಕರಿ ಮಾಡುವುದಕ್ಕೆ ತರುವುದುಂಟು ಅಲ್ಲಿ ಕೆಲವು ಜನರು ಆ ರೈತರನ್ನು ಮೋಸಪಡಿಸಿ, ಅಡಿವಷ್ಟು ಕ್ರಯ ಕೊಡದೆ ರಾಸುಗಳನ್ನು ಹಿಡಿದುಕೊಂಡು ಹೋಗುತ್ತಾರೆಂದು ಕೇಳುತ್ತೇವೆ ಪೋಲೀಸ್ ಇನ್ಸ್‌ಪೆಕ್ಟರವರು ಈ ಸಂತೆ ನಡೆಯುವ ಸ್ಥಳದಲ್ಲಿ ಸತ್ಯವಂತನೂ ರೈತರ ಪಕ್ಷಪಾತಿಯೂ ಆದ ಪೋಲೀಸಿನವನನ್ನು ನೇಮಿಸಿ, ರೈತರಿಗೆ ಯಾವ ಕಷ್ಟನಷ್ಟಗಳೂ ಉಂಟಾಗದಂತೆ ಏರ್ಪಾಡು ಮಾಡಬೇಕೆಂದು ಸೂಚಿಸುತ್ತೇವೆ.

ಚನ್ನಪಟ್ಟಣದ ಎ. ವಿ. ಸ್ಕೂಲಿನ ಹೆಡ್ ಮಾಸ್ಟರಾಗಿದ್ದು ಈಗ ತಾವೇ ರಿಟೈರಾದ ಮೆ|| ದಾವುದ್ ಖಾನ್ ಸಾಹೇಬರಿಗೆ ಅಲ್ಲಿನ ಪ್ರಜೆಗಳು ಕಳೆದ ಭಾನುವಾರ ಸಾಯಂಕಾಲ ಒಂದು ಸಭೆಯನ್ನು ನಡಿಸಿ ತಮ್ಮ ಕೃತಜ್ಞತೆ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು ಈ ಸಭೆಯಲ್ಲಿ ಪೋಲೀಸ್ ಪೇಟೆ ಸಬ್ ಡಿವಿಜನ್ ಆಫೀಸರ್ ಮೆ|| ಬಿ. ವೆಂಕೋಬರಾಯರೂ, ಎಕ್ಸೈಸ್ ಇಲಾಖಾ ಅ|| ಕಮಿಷನರ್ ಮೆ|| ತಾಜ್ ಪೀರಾನ್ ರವರೂ ಹಾಜರಾಗಿದ್ದರು ಸ್ಕೂಲಿನ ಸಹಾಯೋಪಾಧ್ಯಾಯರೂ ಮಹಮ್ಮದೀಯ ಪ್ರಜೆಗಳೂ ಮೆ|| ದಾವುದ್ ಖಾನ್ ಸಾಹೇಬರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿ, ತಮ್ಮ ಜ್ಞಾಪಕಾರ್ಥವಾಗಿ ಅವರಿಗೆ ಒಂದು ಚಿನ್ನದ ಪದಕವನ್ನು ಕೊಟ್ಟರು

ಕೋಲಾರ್ ಚಿನ್ನದಗಣಿಗಳಿಗೆ ಸೇರಿದ ರಾಬರ್ಟ್‌ಸನ್ ಪೇಟೆಯಲ್ಲಿ ಎಕ್ಸೈಸ್ ಇನ್ಸ್‌ಪೆಕ್ಟರ್ ಮೆ|| ಜಗನ್ನಾಥನಾಯ್ಡು ಯವರ ೯|| ವರುಷದ ಹುಡುಗನು ಒಬ್ಬ ಜವಾನನ ಸಂಗಡ ಕಳೆದ ಗುರುವಾರ ಸಂತೆಗೆ ಹೋಗಿದ್ದಾಗ ಗುಂಪಿನಲ್ಲಿ ತಪ್ಪಿಸಿಕೊಂಡನು. ಅವನ ಶವವು ಒಂದು ಗಣಿಯ ಬಳಿಯಲ್ಲಿ ಸಿಕ್ಕಿತು ಅವನ ಕಾಲಿನಲ್ಲಿದ್ದ ಬೆಳ್ಳಿ ಕಡಗವನ್ನು ಯಾರೋ ಕಳಚಿಕೊಂಡು ಅವನನ್ನು ಕೊಂದುಹಾಕಿದ್ದರು ಪೋಲೀಸಿನವರು ಪತ್ತೇ ತರದೂದು ನಡೆಸಿದ್ದರಲ್ಲಿ ಒಬ್ಬ ಮಾರ್ವಾಡಿ ವರ್ತಕನ ಬಳಿ ಆ ಕಡಗಗಳು ಸಿಕ್ಕಿದವು ಅವನು ಒಬ್ಬ ಹೆಂಗಸು ಅವನ್ನು ತಂದು ತನ್ನಲ್ಲಿ ಅಡವಿಟ್ಟಳೆಂದು ಹೇಳಿ ಆ ಹೆಂಗಸನ್ನು ತೋರಿಸಿದನು ಆ ಹೆಂಗಸನ್ನು ಹಿಡಿದು ಕೇಳಿದಾಗ ಅವಳು ತನಗೆ ಇನ್ನೊಬ್ಬ ಹೆಂಗಸು ತಂದುಕೊಟ್ಟಳೆಂದು ಹೇಳಿದಳು ಈ ಎರಡನೆ ಹೆಂಗಸನ್ನು ಪತ್ತೆಮಾಡುವಲ್ಲಿ ಅವಳು ಎಲ್ಲಿಗೋ ತಪ್ಪಿಸಿಕೊಂಡು ಹೋದಳೆಂದು ಗೊತ್ತಾಯಿತು

ಸರ್ಕಾರದ ಹುಕುಮುಗಳು —ಚಾಮರಾಜನಗರದ ತಾಲ್ಲೂಕಿಗೆ ಸೇರಿದ ಬಡಗಲಪುರ, ಹರದನಹಳ್ಳಿಗಳಲ್ಲೂ, ಹಾಸನದ ಟೌನಿನಲ್ಲೂ ಪ್ಲೇಗ್ ಇಲ್ಲವೆಂದು ಪ್ರಕಟಿಸಲಾಗಿದೆ ಗುಂಡ್ಲುಪೇಟೆ ತಾಲ್ಲೂಕು ಹೊಸೂರಿನಲ್ಲೂ, ಹಾಸನದ ತಾಲ್ಲೂಕು ಚೌಡವಳ್ಳಿ ದಾಖಲೆ ದೊಡ್ಡಕೊಪ್ಪಲಿನಲ್ಲೂ, ಚಾಮರಾಜನಗರದ ತಾಲ್ಲೂಕು ಮಲ್ಲಯ್ಯನಪುರ ಚಂದ್ರವಾಡಿಯಲ್ಲೂ ಪ್ಲೇಗ್ ಉಪದ್ರವಿರುತ್ತೆಂದು ತಿಳಿಯಬಂದಿದೆ ನಂಜನಗೂಡಿನಲ್ಲಿ ಗಿರಿಜಾಕಲ್ಯಾಣೋತ್ಸವಕಾಲದಲ್ಲಿ ಪ್ಲೇಗ್ ಉಂಟಾಗಬಹುದೆಂಬ ಭೀತಿ ಇರೋದರಿಂದ ಜೂಲೈ ತಾ. ೮ ರಿಂದ ತಾ. ೧೨ ರ ವರೆಗೆ ಪ್ಲೇಗ್ ಇರುವಂಥಾ ಕಡೆಗಳಿಂದ ಅಲ್ಲಿಗೆ ಯಾರೂ ಹೋಗಕೂಡದು. ಹಾಗೆ ಹೋಗುವವರನ್ನು ವಾಪಸು ಕಳುಹಿಸಲಾಗುವುದು. ಮಧುರೆಯಲ್ಲಿ ನಡೆಯುವ ರಾಮೇಶ್ವರ ಉತ್ಸವಕ್ಕೆ ಮೈಸೂರಿನಿಂದ ಯಾತ್ರೆ ಹೋಗುವವರನ್ನು ಸರ್ಕಾರದವರು ಪ್ಲೇಗ್ ಉಪದ್ರದ ಭೀತಿಗಾಗಿ ಅಲ್ಲಿಗೆ ಬಿಡದೆ ವಾಪಸು ಕಳುಹಿಸಿಬಿಡುವರು

ಕಳೆದ ಭಾನುವಾರ ಮತ್ತು ಸೋಮವಾರ ಎರಡು ಕಳುವುಗಳು ಈ ಊರಿನ ಮಧ್ಯಭಾಗದಲ್ಲೇ ನಡೆದಿರುವುದೆಂದು ತಿಳಿದುಬರುವುದು ಭಾನುವಾರ ಸಾಯಂಕಾಲ ಸುಮಾರು ೭ ಗಂಟೆ ಸಮಯದಲ್ಲಿ ಫೋರ್ಟ್ ಫ್ರೀನ್ ಕ್ವಾರ್ಟರ್ಸ್‌ದವರ ಮನೆಯಲ್ಲಿ ಹೆಂಗಸರು ಇಲ್ಲದ್ದನ್ನು ನೋಡಿಕೊಂಡು ಯಾರೋ ದುಷ್ಟರು ಬೀಗವನ್ನು ಒಡೆದು ಮನೆಗೆ ನುಗ್ಗಿ ೭೦೦ ರೂ. ಬೆಲೆ ಬಾಳುವ ಸಾಮಾನುಗಳನ್ನು ಪಲಾಯನ ಮಾಡಿದರು. ಪೋಲೀಸಿನವರು ಕಳ್ಳರನ್ನು ಹಿಡಿಯಲು ಪ್ರಯತ್ನಪಡುತ್ತಲಿರುವರು. ಕಳೆದ ಸೋಮವಾರ ಸಂತೇಪೇಟೆಯಲ್ಲಿ ರಾತ್ರಿ ೧೨ ಗಂಟೆ ಸಮಯದಲ್ಲಿ ಅದಕ್ಕಿಂತಲೂ ಅತಿಶಯವಾದ ಮತ್ತೊಂದು ಕಳುವು ನಡೆದಿರುವುದು ಸಾಮಾನು ತುಂಬಿದ್ದ ಒಬ್ಬ ವೈಶ್ಯರ ಅಂಗಡಿಗೆ ಅದೇ ಜಾತಿಯವನೊಬ್ಬನು ನುಗ್ಗಿ, ಬಹಳ ಧೈರ್ಯದಿಂದ ೪ ಬಾಡಿಗೆ ಬಂಡಿಗಳಿಗೆ ಮೂಟೆಯನ್ನು ತುಂಬುತ್ತಿದ್ದುದನ್ನು ಕೇಳಿ, ನೆರೆಹೊರೆಯವರು ಇಷ್ಟು ಹೊತ್ತಿನಲ್ಲಿ ಮೂಟೆಯನ್ನು ತುಂಬಲು ಕಾರಣವೇನೆಂದು ಕೇಳಲು, ತನ್ನ ಯಜಮಾನನು ಸಾಮಾನನ್ನು ಬೇಗ ಎಲ್ಲಿಗೋ ಕಳುಹಿಸಬೇಕಾಗಿರುವುದರಿಂದ ಮೂಟೆಯನ್ನು ತರಲು ತನ್ನನ್ನು ಕಳುಹಿಸಿರುವನೆಂದು ಹೇಳಿ ಬಂಡಿಗಳನ್ನು ಹೊಡೆಯಿಸಿಕೊಂಡು ಹೋದನು. ಪೋಲೀಸ್ ಇನ್ಸ್‌ಪೆಕ್ಟರು ಕೇಳುವಲ್ಲಿ ಇದೇ ಉತ್ತರವನ್ನು ಅವರಿಗೂ ಹೇಳಲು, ಅವರು ಸುಮ್ಮನೆ ಹೊರಟು ಹೋದರು ಗುರುವಾರ ಬೆಳಿಗ್ಗೆ ಮಾಲೀಕರು ಅಂಗಡಿಗೆ ಹೋಗಿ ನೋಡಲು, ಬಾಗಿಲಿನಲ್ಲಿ ಧಾನ್ಯವು ಸುರಿದಿರುವುದನ್ನು ನೋಡಿ ವಿಚಾರಿಸಲು, ಎಲ್ಲ ವಿಷಯವೂ ಗೊತ್ತಾಗಲು, ತತ್‌ಕ್ಷಣವೇ ಪೋಲೀಸರಿಗೆ ತಿಳಿಸಲು, ಕೆಲವು ಪೋಲೀಸಿನವರ ಸಹಾಯದಿಂದ, ಮೂಟೆಯು ಒಡೆದು ಹೋಗಿದ್ದುದರಿಂದ ಧಾನ್ಯವು ಸುರಿದಿದ್ದ ದಾರಿಯನ್ನೇ ಹಿಡಿದು ಹೋಗಿ, ಶ್ರೀರಂಗಪಟ್ಟಣದ ದಾರಿಯಲ್ಲಿ ಕಿರಂಗೂರೆಂಬ ಹಳ್ಳಿಯ ಬಳಿಯಲ್ಲಿ ಬಂಡಿಗಳನ್ನು ಹಿಡಿದು ಮೈಸೂರಿಗೆ ತಂದರು ವಿಚಾರಣೆಯು ನಡೆಯುತ್ತಲಿರುವುದು.

ಅಲ್ವಾರ್ ಸಂಸ್ಥಾನದ ಮಹಾರಾಜರವರು ಮೈಸೂರು ಮಹಾರಾಜರವರ ಅತಿಥ್ಯವನ್ನು ಸ್ವೀಕರಿಸಿದ್ದು

ಸಂಸ್ಥಾನದ ಪೂರ್ವ ಚರಿತ್ರೆಯು.

ರಜಪುತ್ರರ ವಂಶವು ಬಹು ಪುರಾತನವಾದದ್ದು, ಅವರ ಪರಾಕ್ರಮವು ಸುಪ್ರಸಿದ್ಧವಾಗಿರುವುದು ಇವರಿಂದ ಆಳಲ್ಪಡುವ ಸಂಸ್ಥಾನಗಳು ರಾಜಪುಟಾನಾದಲ್ಲಿ ಅನೇಕವಾಗಿರುತ್ತವೆ ಅಲ್ವಾರ್ ಸಂಸ್ಥಾನವು ಆ ಪೈಕಿ ಒಂದಾಗಿರುವುದು ಅದರ ಉತ್ತರ ಭಾಗದಲ್ಲಿ ಪಂಜಾಬ್ ಅಧಿಪತ್ಯವೂ, ಪೂರ್ವ ದಕ್ಷಿಣ ಪಶ್ಚಿಮ ದಿಕ್ಕುಗಳಲ್ಲಿ ಭರತಪುರ, ಜಯಪುರ ಸಂಸ್ಥಾನಗಳೂ ಸುತ್ತಿಕೊಂಡಿವೆ ಆ ಸಂಸ್ಥಾನವು ಸುಮಾರು ೩,೦೦೦ ಚದರ ಮೈಲಿ ವಿಸ್ತೀರ್ಣವುಳ್ಳದ್ದಾಗಿ ಅಂದರೆ ಬೆಂಗಳೂರು ಡಿಸ್ಟ್ರಿಕ್ಟಿಗಿಂತಲೂ ಸ್ವಲ್ಪ ದೊಡ್ಡದಾಗಿರುತ್ತವೆ

ಅಲ್ವಾರಿನ ಪ್ರಜಾಸಂಖ್ಯೆಯು ಸುಮಾರು ಎಂಟು ಲಕ್ಷ, ಹಿಂದೂ ಮಹಮ್ಮದೀಯರೇ ವಿಶೇಷವಾಗಿದ್ದಾರೆ ಸಂಸ್ಥಾನವು ಹದಿನಾಲ್ಕು ತಾಲ್ಲೂಕುಗಳಾಗಿ ವಿಂಗಡಿಸಲ್ಪಟ್ಟು, ಸಂವತ್ಸರಕ್ಕೆ ಮೂವತ್ತು ಲಕ್ಷ ರೂಪಾಯಿಗಿಂತ ಸ್ವಲ್ಪ ಹೆಚ್ಚು ವರಮಾನವನ್ನು ಕೊಡುವಂಥಾದ್ದಾಗಿರುತ್ತದೆ

ಪ್ರಥಮದಲ್ಲಿ ಈ ಸಂಸ್ಥಾನವು ಜಯಪುರ ಭರತಪುರಗಳಿಗೆ ಅಧೀನವಾದದ್ದಾಗಿತ್ತು, ನಾರೂಕಾ ಎಂಬ ರಜಪುತ್ರ ಪಂಗಡಕ್ಕೆ ಸೇರಿದ ಪ್ರತಾಪ ಸಿಂಗರವರು ಈಗಿನ ರಾಜ ಮನೆತನದ ಮೂಲ ಪುರುಷರಾಗಿದ್ದರು. ಮರಾಟಿಯವರ ಯುದ್ಧಗಳು ನಡೆದಾಗ್ಗೆ ಅಲ್ವಾರ್ ಸಂಸ್ಥಾನವು ಬಹಳ ಕಷ್ಟ ನಷ್ಟಗಳಿಗೆ ಗುರಿಯಾಗಿ, ಕಡೆಗೆ ೧೮೦೩ ನೇ ಇಸವಿಯಲ್ಲಿ ಅದರ ಅರಸರು ಬ್ರಿಟಿಷ್ ಗವರ್ನ್‌ಮೆಂಟಿನವರ ಆಶ್ರಯವನ್ನು ಸಂಪಾದಿಸಿಕೊಂಡರು. ಈ ಸಂಸ್ಥಾನದ ಪೂರ್ವ ಚರಿತ್ರೆಯು ಅಷ್ಟೇನೂ ತೃಪ್ತಿ ಸಮಾಧಾನದಿಂದ ಕೂಡಿದ್ದಾಗಿಲ್ಲ. ಕಳೆದ ೧೮೭೪ ನೇ ಇಸವಿಯಲ್ಲಿ ಮಹಾರಾಜರವರು ಅಪುತ್ರವಂತರಾಗಿ ಕಾಲವಾದರು. ಆಗ ಥಾನ್ಹಾ ಎಂಬ ವಂಶದ ಠಾಕೂರ್ ಮಂಗಳ ಸಿಂಗರೆಂಬುವರನ್ನು ಕರೆದುತಂದು ಪಟ್ಟಕಟ್ಟಿದರು. ಇವರು ೧೮೯೨ ನೇ ಇಸವಿಯ ತನಕ ಸಂಸ್ಥಾನವನ್ನಾಳಿ ಕಾಲವಾದರು ಆಗ ಇವರ ಕುಮಾರರಾದ ಹತ್ತು ವರುಷದ ಮಹಾರಾಜಾ ಸವಾಯಿ ಜಯಸಿಂಗ್ ಬಹದೂರ್ ಯವರಿಗೆ ರಾಜ್ಯಾಭಿಷೇಕವಾಗಿ, ಇವರೇ ಅಂದಿನಿಂದ ಸಂಸ್ಥಾನವನ್ನು ಆಳುತ್ತಾ ಬಂದಿದ್ದಾರೆ

ಈ ಮಹಾರಾಜರವರಿಗೆ ೧೫ ತೋಪುಗಳ ಸನ್ಮಾನವುಂಟು. ಇವರು ಇಂಪೀರಿಯಲ್ ಸರ್ವಿಸ್ ಸೈನ್ಯಗಳನ್ನು ತರಪೇತು ಮಾಡಿಟ್ಟುಕೊಂಡಿದ್ದಾರೆ. ಅದರಲ್ಲಿ ೬೦೦ ಸವಾರರೂ, ೮೫೦ ಶಿಪಾಯಿಗಳೂ ಇರುತ್ತಾರೆ ಹಿಂದೆ ೧೯೦೦ ನೇ ಇಸವಿಯಲ್ಲಿ ಚೀನಾ ರಾಜ್ಯದ ರಾಜಧಾನಿಯಾದ ಪೀಕಿಂಗ್ ನಗರದಲ್ಲಿ ಯುದ್ಧ ಕಾರ್ಯಗಳು ನಡೆದಾಗ್ಗೆ ಮೇಲ್ಕಂಡ ಶಿಪಾಯಿಗಳು ಅಲ್ಲಿಗೆ ಹೋಗಿ ತಮ್ಮ ಪರಾಕ್ರಮವನ್ನು ಪ್ರಕಾಶಪಡಿಸಿದರು.

ಜಯಸಿಂಗ್ ಮಹಾರಾಜರವರು ಈಚೆಗೆ ವಿಲಾಯತಿಗೆ ದಯಮಾಡಿದ್ದರೆಂದೂ ಯೂರೋಪಿಯನ್ ಜನರಂತೆ ಇರುವುದೂ ಇವರಿಗೆ ಅಭ್ಯಾಸವಾಗಿದೆ ಎಂದೂ ಕೇಳಿರುವೆವು ಇವರಿಗೆ ಪೋಲೋ ಎಂಬ ಕುದುರೆ ಚೆಂಡಿನಾಟದಲ್ಲೂ ಶಿಕಾರಿ ಮಾಡುವುದರಲ್ಲೂ ಅಭಿಲಾಷೆ ಹೆಚ್ಚು, ಮೋಟಾರ್ ಗಾಡಿಗಳಲ್ಲಿ ಸಂಚಾರ ಮಾಡುವುದೂ ಅವರಿಗೆ ಇಷ್ಟವೆಂದು ಕಾಣುತ್ತದೆ ಇವರು ಕಳೆದ ಗುರುವಾರ ಬೆಳಿಗ್ಗೆ ಮೋಟಾರ್ ಗಾಡಿಯಲ್ಲಿ ಕುಳಿತು ನೀಲಗಿರಿಯಿಂದ ಮೈಸೂರು ಪಟ್ಟಣಕ್ಕೆ ದಯಮಾಡಿದರು.

ರಾಜಧಾನಿಯಲ್ಲಿ ನಡೆದ ಸತ್ಕಾರಗಳು.

ನಮ್ಮ ಮಹಾರಾಜರವರು ಮಧುವನದ ಬಳಿ ಅವರನ್ನು ಎದುರುಗೊಂಡು ಸಾರೋಟಿನಲ್ಲಿ ತಮ್ಮ ಸಂಗಡ ಕೂಡಿಸಿಕೊಂಡು, ನೇತ್ರಾನಂದಕರವಾಗಿ ಚಪ್ಪರ ತೋರಣ ಬಾವುಟಾದಿಗಳಿಂದ ಅಲಂಕರಿಸಲ್ಪಟ್ಟಿದ್ದ ರಾಜಬೀದಿಗಳಲ್ಲಿ ಮೆರವಣಿಗೆಯಾಗಿ ಕರೆದುಕೊಂಡು ಬಂದು ಜಗನ್ಮೋಹನ ಬಂಗಲೆಯಲ್ಲಿ ಇಳಿಸಿದರು ಟೌನ್ ಹಾಲ್ ಬಳಿ ಹಾಕಿಸಿದ್ದ ಮಂಟಪದಲ್ಲಿ ಪುರಾಧ್ಯಕ್ಷರೂ ರಾಜಬಂಧುಗಳವರೂ ಪ್ರಜೆಗಳ ಮುಖಂಡರೂ ಅಧಿಕಾರಿಗಳೂ ಕಾದಿದ್ದು ಅತಿಥಿಯವರಿಗೆ ಹಾರಾತುರಾಯಿಗಳನ್ನೊಪ್ಪಿಸಿ ಸುಸ್ವಾಗತವನ್ನು ಬಯಸಿದರು ಅಲ್ಲೇ ರಸ್ತೆಯ ಉಭಯಪಾರ್ಶ್ವಗಳಲ್ಲೂ ಗ್ಯಾಲರಿಗಳ ಮೇಲೆ ಸಾಲುಕಟ್ಟಿ ಕುಳಿತಿದ್ದ ಸ್ಕೂಲ್ ಬಾಲಕ ಬಾಲಕಿಯರು ಜಯಘೋಷಗಳನ್ನು ಮಾಡಿದರು

ಅಲ್ವಾರ್ ಮಹಾರಾಜರವರು ತರುವಾಯ ಮೂರು ದಿನಗಳ ತನಕ ರಾಜಧಾನಿಯಲ್ಲಿದ್ದು, ನಮ್ಮ ಮಹಾರಾಜರವರೊಡನೆ ದಯಮಾಡಿ ಇಲ್ಲಿ ನೋಡತಕ್ಕ ಭಾಗಗಳನ್ನೆಲ್ಲಾ ಅಂದರೆ, ಹೊಸ ಅರಮನೆ, ಖಾಸ್ ಬಂಗಲೆ, ತಬೇಲಿ, ಪಟ್ಟಣದ ಬಡಾವಣೆಗಳು, ಕೈಗಾರಿಕೆಯ ಪಾಠಶಾಲೆ, ಕೋರ್ಟು ಕಚೇರಿಗಳು, ಚಾಮುಂಡಿ ಬೆಟ್ಟ ಮೊದಲಾದವುಗಳನ್ನು ಪರಾಂಬರಿಸಿದರು ಶುಕ್ರವಾರದ ದಿನ ಮಧ್ಯಾಹ್ನದಮೇಲೆ ಅವರು ಶ್ರೀರಂಗಪಟ್ಟಣವನ್ನು ಹೋಗಿ ನೋಡಿಕೊಂಡು ವಾಪಸು ಬಂದು ರಾತ್ರಿ ಟೌನ್ ಹಾಲಿನಲ್ಲಿ ನಡೆದ ಸಂತೋಷಸೋತ್ಸವಕ್ಕೆ ಅವರು ದಯಮಾಡಿ, ನಮ್ಮ ಮಹಾರಾಜರವರ ಕೂಡೆ ಪ್ರೀಸ್ಥಾನದಲ್ಲಿ ಕುಳಿತು ಸಂಗೀತ, ಜಲತರಂಗು, ಹಾಡುಗಾರಿಕೆ, ನಾಟಕಗಳನ್ನು ಕೇಳಿ ನೋಡಿ ಸಂತೋಷಪಟ್ಟರು ಶನಿವಾರ ಮಧ್ಯಾಹ್ನ ಅರಮನೆಯ ಅಂಬಾವಿಲಾಸ ತೊಟ್ಟಿಯಲ್ಲಿ ದರ್ಬಾರು ನಡೆದು, ಅಲ್ವಾರ್ ಮಹಾರಾಜರವರಿಗೂ ಅವರ ಕಡೆಯ ಸರ್ದಾರರುಗಳಿಗೂ ಖಿಲ್ಲತ್ತುಗಳು ಕೊಡಲ್ಪಟ್ಟವು. ಭಾನುವಾರ ಬೆಳಿಗ್ಗೆ ೧೧ ಗಂಟೆಗೆ ಅತಿಥಿಮಹಾರಾಜರವರು ನಮ್ಮ ಮಹಾರಾಜರವರಿಂದ ಬೀಳ್ಕೊಂಡು ಮೋಟಾರ್ ಗಾಡಿಯಲ್ಲಿ ಶಿವಸಮುದ್ರದ ಕಡೆ ತೆರಳಿದರು.

ಇದೇ ರೀತಿ ಹಿಂದುಸ್ಥಾನದ ರಾಜರುಗಳು ಆಗಿಂದಾಗ್ಗೆ ಪರಸ್ಪರ ಕಲೆಯುವುದೂ ಸ್ನೇಹವಾತ್ಸಲ್ಯಗಳನ್ನು ಬೆಳೆಸುವುದೂ ಹಿತವಾಗಿರುತ್ತದೆ. ನಮ್ಮ ಮಹಾರಾಜರವರೂ ಅವರ ಪ್ರಜೆಗಳೂ ಅಲ್ವಾರ್ ಮಹಾರಾಜರವರಿಗೆ ಸತ್ಕಾರ ಮಾಡಿ ತುಂಬಾ ಸಂತೋಷಪಟ್ಟರೆನ್ನುವುದಕ್ಕೆ ಸಂಶಯವಿಲ್ಲ

ಭಯಂಕರವಾದ ಕ್ರೂರ ಕೃತ್ಯವು.

ಹಿಂದುಸ್ಥಾನದ ವಿದ್ಯಾರ್ಥಿಯು ಲಂಡನ್ ಪಟ್ಟಣದಲ್ಲಿ ಕೊಲೆಮಾಡಿದ್ದು.

ಮಾದರ್ ಲಾಲ್ ಧಿನ್‌ಗ್ರಾ ಎಂಬ ೨೨ ವರುಷದ ಹಿಂದು ವಿದ್ಯಾರ್ಥಿಯು ಲಂಡನ್ ಪಟ್ಟಣದ ಯೂನಿವರ್ಸಿಟಿ ಕಾಲೇಜಿನಲ್ಲಿ ಇಂಜನಿಯರ್ ವಿದ್ಯೆಯನ್ನು ಅಭ್ಯಾಸಮಾಡುತ್ತಿದ್ದು, ಇಂಡಿಯಾ ಸ್ಟೇಟ್ ಸೆಕ್ರೆಟರಿ ಲಾರ್ಡ್ ಮಾರ್ಲೀಯವರ ಕೈಕೆಳಗೆ ಏಡಿಕಾಂಗರಾಗಿದ್ದ ಸುಮಾರು ೬೦ ವರುಷದ ಸರ್ ವಿಲ್ಲಿಯಂ ಕರ್ಜನ್ ವೈಲಿ ಎಂಬುವರನ್ನೂ ಡಾಕ್ಟರ್ ಲಾಲ್‌ಕಾಕಾ ಎಂಬೊಬ್ಬ ಪಾರ್ಸಿ ಡಾಕ್ಟರನ್ನೂ ಪಿಸ್ತೂಲಿನಿಂದ ಹೊಡೆದು ಕೊಂದು ಹಾಕಿದನೆಂಬ ಭಯಂಕರವಾದ ಸುದ್ದಿಯು ಕಳೆದ ಶುಕ್ರವಾರದ ದಿನ ಲಂಡನ್ ಪಟ್ಟಣದಿಂದ ತಂತಿಯ ಮೂಲಕ ತಿಳಿದುಬಂದಿದೆ ಈ ಘಾತುಕಕೃತ್ಯವು ಹ್ಯಾಗೆ ನಡೆಯಿತೆಂದರೆ:—

ಕೊಲೆಗೀಡಿಯಾದ ಮಾದರ್ ಲಾಲನು ಅಮೃತಸರದಲ್ಲಿರುವ ಐಶ್ವರ್ಯವಂತನಾದ ಒಬ್ಬ ಡಾಕ್ಟರನ ಕುಮಾರನಾಗಿಯೂ, ಲಾಹೊರಿನಲ್ಲಿರುವ ಒಬ್ಬ ಬ್ಯಾರಿಸ್ಟರಿನ ಸಹೋದರನಾಗಿಯೂ ಇರುತ್ತಾನೆ ಮಾದರ್ ಲಾಲನು ಲಂಡನ್ ಪಟ್ಟಣದಲ್ಲಿ ದುಷ್ಟ ಜನರ ಸಹವಾಸದಲ್ಲಿರುತ್ತಾನೆಂದು ಕೇಳಿ, ಅವನನ್ನು ಒಳ್ಳೇ ಮಾರ್ಗಕ್ಕೆ ತರಬೇಕೆಂದು ಸರ್ ವಿಲ್ಲಿಯಂ ಕರ್ಜನ್ ವೈಲಿಯವರಿಗೆ ಅವನ ಸಹೋದರರು ಕಾಗದ ಬರದು ಕೇಳಿಕೊಂಡರು. ಈ ವಿಚಾರವು ಮಾದರ್ ಲಾಲನಿಗೆ ತಿಳಿದು ಆಕ್ರೋಶವುಂಟಾಯಿತು. ಸರ್ ವಿಲ್ಲಿಯಂ ಕರ್ಜನ್ ವೈಲಿಯವರು ಮಿಸ್ ಬೆಕ್ ಎಂಬಾಕೆಯ ಮೂಲಕ ಮಾದರ್ ಲಾಲನಿಗೆ ತಮ್ಮನ್ನು ಬಂದು ನೋಡುವಂತೆ ಹೇಳಿ ಕಳುಹಿಸಿದ್ದರು ಇವರು ಸಿವಾಯ್ ಹೋಟೇಲಿನಲ್ಲಿ ಭೋಜನಮಾಡಿಕೊಂಡು, ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಎಂಬ ಬಂಗಲೆಯಲ್ಲಿ ಇಂಡಿಯಾ ಸಂಘದವರು ಏರ್ಪಡಿಸಿದ್ದ ಸಂಗೀತದ ಕೂಟಕ್ಕೆ ಪತ್ನಿಸಹಿತ ದಯಮಾಡಿದ್ದರು. ಸಂಗೀತವು ಮುಗಿದ ತರುವಾಯ ಅವರು ಆ ಕಟ್ಟಡದಿಂದ ಹೊರಟು ಮೆಟ್ಲು ಇಳಿದು, ಡಾಕ್ಟರ್ ಲಾಲ್‌ಕಾಕಾ, ಸರ್ ಲೆಸ್ಲಿ ಪ್ರೋಬಿನ್, ಡಾಕ್ಟರ್ ಬುಕನನ್ ಎಂಬುವರ ಕೂಡ ಮಾತನಾಡಿಕೊಂಡು ಬರುತ್ತಿರುವಲ್ಲಿ ಮಾದರ್ ಲಾಲನೆಂಬ ಘಾತುಕನು ಯೂರೋಪಿಯನ್ ದಿರಸಿನಲ್ಲಿ ಕಣ್ಣಿಗೆ ಬಣ್ಣದ ಕನ್ನಡಕವನ್ನು ಹಾಕಿಕೊಂಡು ಮೆಟ್ಲ ಮೇಲೆ ಕಾದಿದ್ದು ಸರ್ ವಿಲ್ಲಿಯಂ ಕರ್ಜನ್ ವೈಲಿಯವರನ್ನು ಕಾಣಿಸಿಕೊಂಡು ಅವರ ಕೂಡ ಸುಮಾರು ಹತ್ತು ನಿಮಿಷಗಳ ತನಕ ಮಾತನಾಡುತ್ತಿದ್ದು, ಅಕಸ್ಮಾತ್ತಾಗಿ ತನ್ನ ಜೇಬಿನಿಂದ ರಿವಾಲ್ವರ್ ಎಂಬ ಪಿಸ್ತೂಲನ್ನು ಹಿರಿದು ನಾಲ್ಕೈದಾವರ್ತಿ ಅವರ ತಲೆಗೆ ಗುರಿಯಿಟ್ಟು ಗುಂಡು ಹೊಡೆದನು. ಅವರಿಗೆ ಅವು ತಗಲಿದರೂ ಐದನೇ ಸಲ ಹೊಡೆದ ಗುಂಡು ಅವರ ಮುಖಕ್ಕೆ ಬಡಿದು ಬಹು ಭಯಂಕರವಾದ ರಕ್ತ ಪ್ರವಾಹ ಹರಿಯಿತು. ಅವರು ಬಿದ್ದು ಪ್ರಾಣಕಳೆದುಕೊಂಡರು. ಅವರನ್ನು ಪಾರುಮಾಡಬೇಕೆಂದು ಮಧ್ಯೆ ನುಗ್ಗಿದ ಡಾಕ್ಟರ್ ಲಾಲ್‌ಕಾಕಾ ಎಂಬ ಪಾರ್ಸಿ ದೊಡ್ಡ ಮನುಷ್ಯನಿಗೆ ಒಂದು ಗೋಲಿ ತಗಲಿ ಆತನೂ ಆಸ್ಪತ್ರೆಯಲ್ಲಿ ಕಾಲವಾದನು. ಈ ಘಾತುಕನನ್ನು ಹಿಡಿದು ಕೊಡುವ ಕೆಲಸದಿಂದ ಸರ್ ಲೆಸ್ಲಿ ಪ್ರೋಬಿನ್ ಯವರಿಗೆ ಮುಖದಲ್ಲಿ ಗಾಯವಾಗಿದೆ, ಮತ್ತು ಎದೆಯ ಎರಡು ಮೂಳೆಗಳು ಮುರಿದು ಹೋಗಿವೆ. ಆ ಕೂಡಲೇ ಕೊಲೆಗೇಡಿಯು ಅದೇ ಪಿಸ್ತೂಲನ್ನು ತನ್ನ ಕಡೆಗೆ ತಿರುಗಿಸಿಕೊಂಡು ಆತ್ಮಹತ್ಯಮಾಡಿಕೊಳ್ಳಬೇಕೆಂದು ಪಿಸ್ತೂಲಿನ ಕುದುರೆಯನ್ನು ಹಾರಿಸಿದನು ಅದು ಬರಿದಾಗಿದ್ದದ್ದರಿಂದ ಅವನ ಪ್ರಯತ್ನವು ನಿಷ್ಫಲವಾಗಿ, ಸಿಕ್ಕಿ ಬಿದ್ದನು ಅವನ ಮೈಯನ್ನು ಶೋಧನೆ ಮಾಡಿದಾಗ ಎರಡು ಪಿಸ್ತೂಲುಗಳೂ, ಒಂದು ಭರ್ಜಿಯೂ, ಒಂದು ಚಾಕುವೂ, ರಾಜದ್ರೋಹಕರವಾದ ಸಂಗತಿಗಳು ಬರೆದಿದ್ದ ಕೆಲವು ಕಾಗದಗಳೂ ಸಿಕ್ಕಿರುತ್ತವೆ

ಈ ಕ್ರೂರಕೃತ್ಯವು ವಿಲಾಯತಿಯಲ್ಲೂ ಹಿಂದುಸ್ಥಾನದಲ್ಲೂ ಆಶ್ಚರ್ಯವನ್ನೂ ಅಸಹ್ಯವನ್ನೂ ಹುಟ್ಟಿಸಿದೆ ಸರ್ ವಿಲ್ಲಿಯಂ ಕರ್ಜನ್ ವೈಲಿಯವರ ಪತ್ನಿಯವರ ದುಃಖವು ಅಪಾರವಾಗಿರುವುದು ಚಕ್ರವರ್ತಿ ಸಾರ್ವಭೌಮರವರು ಆಕೆಯವರ ವಿಷಯದಲ್ಲಿ ತುಂಬಾ ಸಂತಾಪಪಟ್ಟರು ಅವರ ಪ್ರಾಣವನ್ನು ಉಳಿಸುವುದಕ್ಕೆ ಹೋಗಿ ತನ್ನ ಪ್ರಾಣವನ್ನು ಕಳೆದುಕೊಂಡ ಆ ಪಾರ್ಸಿ ಡಾಕ್ಟರನ್ನು ಎಲ್ಲರೂ ಕೊಂಡಾಡುತ್ತಾರೆ ಈ ಅರಾಜಕ ಕೃತ್ಯಗಳನ್ನು ವಿಲಾಯತಿಯಲ್ಲಿ ನಿರ್ಮೂಲವಾಗಬೇಕೆಂದು ಅಲ್ಲಿನ ಪತ್ರಿಕೆಗಳು ಸರ್ಕಾರದವರನ್ನು ಕೇಳುತ್ತಿರುವವು ಹಿಂದುಸ್ಥಾನದಿಂದ ವಿದ್ಯಾಭ್ಯಾಸಕ್ಕೆಂದು ಹೋಗುವ ವಿದ್ಯಾರ್ಥಿಗಳು ಅಲ್ಲಿ ಅರಾಜಕ ಮನಸ್ಸುಳ್ಳವರನ್ನೂ ಫಿತೂರಿಗಳನ್ನೂ ಮಾಡತಕ್ಕ ದುಷ್ಟರ ಸಹವಾಸಕ್ಕೆ ಬಿದ್ದು ಕೆಟ್ಟುಹೋಗದಂತೆ ಅವರನ್ನೆಲ್ಲಾ ಸರಿಯಾಗಿ ಮೇಲುಸ್ತುವಾರಿ ನೋಡಿಕೊಳ್ಳುತ್ತಾ ಬರುವುದಕ್ಕಾಗಿ ಮೊನ್ನೆ ತಾನೇ ಅಲ್ಲಿ ಒಂದು ಸಂಘವು ಸ್ಟೇಟ್ ಸೆಕ್ರೆಟರಿಯವರಿಂದ ಏರ್ಪಾಡಾಯಿತು. ಈ ಸಂಘದಲ್ಲಿ ಸರ್ ವಿಲ್ಲಿಯಂ ಕರ್ಜನ್ ವೈಲಿಯವರೂ ಮೆಂಬರಾಗಿದ್ದು, ಹಿಂದುಸ್ಥಾನದ ವಿದ್ಯಾರ್ಥಿಗಳ ವಿಷಯದಲ್ಲಿ ತುಂಬಾ ಮುತುವರ್ಜಿ ವಹಿಸಿ ಅವರನ್ನು ನೋಡಿಕೊಳ್ಳುತ್ತಿದ್ದರು. ಇಷ್ಟು ಒಳ್ಳೆಯ ಅಭಿಪ್ರಾಯವನ್ನು ಪಡೆದಿದ್ದ ಈ ಅಧಿಕಾರಿಗೆ ಇಂಥಾ ಕ್ರೂರ ತರವಾದ ಮರಣವು ಪ್ರಾಪ್ತವಾಯಿತಲ್ಲಾ ಎಂದು ಸಕಲರೂ ಚಿಂತಿಸುತ್ತಿದ್ದಾರೆ

ಈಚೆಗೆ ಬಂದಿರುವ ತಂತಿ ವರ್ತಮಾನ.

ಹಿಂದುಸ್ಥಾನದಿಂದ ವಿಲಾಯತಿಗೆ ಹೋಗಿ ಓದುತ್ತಿರುವ ವಿದ್ಯಾರ್ಥಿಗಳನ್ನೂ ಹಿಂದುಸ್ಥಾನದ ಪಕ್ಷವನ್ನು ಹಿಡಿದು ಹುಸಿದಾಡುತ್ತಿರುವ ಪಾರ್ಲಿಮೆಂಟ್ ಮೆಂಬರುಗಳನ್ನೂ ವಿಚಾರಿಸಿನೋಡುವಲ್ಲಿ ಇಂಥಾ ಅರಾಜಕ ಕೃತ್ಯಗಳನ್ನು ನಡಿಸಬೇಕೆಂಬ ಉದ್ದೇಶವುಳ್ಳ ಗುಂಪು ಲಂಡನ್ ಪಟ್ಟಣದಲ್ಲಿ ಇರುವುದಿಲ್ಲವೆಂದೂ, ಈ ಕ್ರೂರಕೃತ್ಯವನ್ನು ಅವನೊಬ್ಬನಿಂದಲೇ ನಡೆದದ್ದಾಗಿದೆಯೇ ಹೊರ್ತು ಅವನಿಗೆ ಯಾರೂ ಸಹಾಯಕರಾಗಿಲ್ಲವೆಂದೂ ತಿಳಿದುಬಂದಿದೆ ಆ ಕೊಲೆಗೇಡಿಯ ಸಹೋದರನು ಈಗ ಲಂಡನ್ ಪಟ್ಟಣದಲ್ಲೇ ಇರುತ್ತಾನೆ. ಇವನನ್ನು ತನಿಖೆಮಾಡಿದಾಗ ತಾನಾಗಲಿ ತನ್ನ ಮನೆಯವರಾಗಲಿ ತನ್ನ ತಮ್ಮನ ಕೃತ್ಯಗಳಲ್ಲಿ ಭಾಗಿಗಳಲ್ಲವೆಂದೂ, ಅವನು ಬಹು ನೀಚಕೃತ್ಯವನ್ನು ಮಾಡಿರುತ್ತಾನೆಂದೂ ಹೇಳಿದನು.

ವಿಲಾಯತಿಯಲ್ಲಿರುವ ಹಿಂದೂ ದೇಶದ ವಿದ್ಯಾರ್ಥಿಗಳೆಲ್ಲಾ ಸಭೆಗಳನ್ನು ಮಾಡಿ, ಮಾದರ್ ಲಾಲನು ಮಾಡಿದ ಕೃತ್ಯವು ಹೇಯವಾದದ್ದೆಂದೂ, ತಾವು ಅದರಲ್ಲಿ ಎಷ್ಟುಮಾತ್ರಕ್ಕೂ ಭಾಗಿಗಳಲ್ಲವೆಂದೂ ತೀರ್ಮಾನಮಾಡಿರುತ್ತಾರೆ

ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿ ಯವರಾದ ಲಾರ್ಡ್ ಮಾರ್ಲೀಯವರಿಗಾಗಲಿ, ಇಂಡಿಯಾ ಆಫೀಸಿನ ನೌಕರಮಾನೇಜುಗಳಿಗಾಗಲೀ ಅಂಥಾ ಘಾತಕರಿಂದ ಯಾವದೊಂದು ಅಪಾಯವೂ ಸಂಭವಿಸದಂತೆ ಸರ್ಕಾರದವರು ಉಸ್ತುವಾರಿಯನ್ನು ಇಡಿಸಿರುತ್ತಾರೆ.

ಮೃತಿಹೊಂದಿದ ಪಾರ್ಸಿ ಡಾಕ್ಟರ್ ಲಾಲ್‌ಕಾ ಯವರು ಬೊಂಬಾಯಿನವರು ಅವರು ಚೀನಾರಾಜ್ಯಕ್ಕೆ ಸೇರಿದ ಷಾಂಘಾಯಿ ಪಟ್ಟಣದಲ್ಲಿ ಬಹುಕಾಲದಿಂದ ವೈದ್ಯಮಾಡುತ್ತಾ ಇದ್ದು, ಈ ವರುಷ ಅಲ್ಲಿಂದ ಬೊಂಬಾಯಿ ವಾಪಸು ಬಂದು, ಸರ್ ಕವಾಸ್‌ಜಿ ಜಹಂಗೀರ್ ಯವರ ಕೂಡ ಲಂಡನ್ ಪಟ್ಟಣಕ್ಕೆ ಹೋಗಿದ್ದರೆಂದೂ, ಅವರು ಬುದ್ಧಿವಂತರಾಗಿಯೂ ವಿದ್ಯಾವಂತರಾಗಿಯೂ ಇದ್ದರೆಂದೂ ತಿಳಿದುಬಂದಿದೆ.

ಹಿಂದುಸ್ಥಾನದ ವೈಸ್‌ರಾಯಿ ಪ್ರಭುಗಳೂ, ಬೇರೆ ಬೇರೆ ಅಧಿಪತ್ಯ ಮುಖ್ಯಾಧಿಕಾರಿಗಳೂ, ಪ್ರಜಾಸಂಘಗಳ ಮುಖಂಡರೂ ಈ ಘೋರಕೃತ್ಯವನ್ನು ಕೇಳಿ ವಿಷಾದಪಟ್ಟು, ತಮ್ಮ ದುಃಖವನ್ನು ಲೇಡಿ ವಿಲ್ಲಿಯಂ ಕರ್ಜನ್ ವೈಲಿಯವರಿಗೆ ತಿಳಿಯಪಡಿಸಿರುತ್ತಾರೆ ದೇಶೀಯ ವರ್ತಮಾನ ಪತ್ರಿಕೆಗಳಲ್ಲೂ ಈ ಕೊಲೆಯನ್ನು ಬಹು ನೀಚಕೃತ್ಯವೆಂದು ಅಲ್ಲಗಳೆದು ವ್ಯಸನಸೂಚಕವಾದ ಬರಹಗಳು ಪ್ರಕಟಿಸಲ್ಪಟ್ಟವೆ

ನಮ್ಮ ದೇಶೀಯರಲ್ಲಿ ಒಬ್ಬನು ಇಂಥಾ ನೀಚವೂ, ಘಾತುಕತೆಯೂ ಬುದ್ಧಿಹೀನತೆಯೂ ಆದ ಕೊಲೆಯನ್ನು ನಡಿಸಿದನೆಂದು ತಿಳಿಸಲು ನಮಗೆ ನಾಚಿಕೆಯುಂಟಾಗಿದೆ ಇಂಥಾ ಘೋರವಾದ ಕೊಲೆಯು ಸಂಭವಿಸಿದ್ದನ್ನು ಕೇಳಿ ತುಂಬಾ ವ್ಯಸನ ಪಡುವೆವು ಲೇಡಿ ವೈಲಿಯವರ ವಿಷಯದಲ್ಲಿ ನಮ್ಮ ಸಂತಾಪವನ್ನು ಸೂಚಿಸುತ್ತೇವೆ. ಸರ್ಕಾರದವರು ಈ ಅರಾಜಕ ಕೃತ್ಯಗಳನ್ನು ವಿಲಾಯತಿಯಿಂದ ನಿರ್ಮೂಲ ಮಾಡುವುದಕ್ಕೆ ಪ್ರಯತ್ನ ಪಡುತ್ತಿರುವುದು ಸಾರ್ಥಕವಾಗಿ ಪರಿಣಮಿಸಬೇಕೆಂದು ನಂಬಿ ಹಾರೈಸುವೆವು.

ಇಂಡಿಯಾ ದೇಶದ ವೃತ್ತಾಂತಗಳು.

ಕೊಪ್ಪಳದಿಂದ ಸಿಂಗನಾಳಿಗೆ ರೈಲ್ ರಸ್ತೆಯನ್ನು ಹಾಕುವುದಕ್ಕೆ ೩೬,೯೮,೫೧೮ ರೂಪಾಯಿ ಸ್ಯಾಂಕ್ಷನ್ ಆಗಿದೆ.

ಪೆಶಾವರ ಸರಹದ್ದಿನ ಮೇಲೆ ಉಪದ್ರವು ಹೆಚ್ಚಾಗಿ ಬಹಳ ಕಾಯಿದೆಯಾಗಿದೆಯೆಂದು ತಂತಿ ವರ್ತಮಾನ ಬಂದಿದೆ.

ನಾಗಪುರದಿಂದ ಚಂದ್ರಾ ಸ್ಟೇಷನ್ ವರೆಗೆ ಸುಮಾರು ೧೧೦ ಮೈಲಿ ದೂರ ಹೊಸದಾಗಿ ರೈಲ್ ರಸ್ತೆಯನ್ನು ಹಾಕುವುದಕ್ಕಾಗಿ ೬೩,೬೪,೩೫೮ ರೂಪಾಯಿ ಸ್ಯಾಂಕ್ಷನ್ ಮಾಡಲಾಗಿದೆ.

ಪೂರ್ವ ಬಂಗಾಲಕ್ಕೆ ಸೇರಿದ ಮಾಣಿಕ್ಯಗಂಜ್ ಪ್ರಾಂತ್ಯದಲ್ಲಿ ಅಪಾರವಾದ ಮಳೆ ಸುರಿದು ನದಿ ಹೊಳೆಗಳಲ್ಲಿ ಪ್ರವಾಹ ಬಂದು ಬೆಳೆಗಳು ನಾಶವಾಗಿರುತ್ತವೆಂದು ತಂತಿ ವರ್ತಮಾನ ಬಂದಿದೆ.

[illegible]

ರಲ್ಲಿ ಎಷ್ಟುಸಾರಿ ಹೇಳಿಕೊಂಡರೂ ಅವರು ಅದರ ವಿಷಯ ಗಮನಕೊಟ್ಟಿಲ್ಲ ತಾಲ್ಲೂಕು ಅಮಲ್ದಾರರ ಅಪ್ಪಣೆಯಂತೆ ಕೂಡಲೆ ಇಷ್ಟವರು ತಿರುಗಿ ನೋಡಿಕೊಂಡರೆ ಸರ್ಕಾರದ ಅಪ್ಪಣೆ ಏನಾಯ್ತು ? ಈ ವಿಚಾರಣಾಗಿ ಶೇಕದಾರರೂ ಪಟೇಲ್ ಶ್ಯಾನುಭೋಗರೂ ಈ ರೀತಿ ತಮ್ಮ ಹುಕುಂ ಉಲ್ಲಂಘಿಸಿದ್ದಾರೆಂದು ರಿಪೋರ್ಟುಮಾಡದಿರುವುದಕ್ಕೆ ಕಾರಣವೇನು ? ಇದರಿಂದ ಏನು ತಿಳಿದುಕೊಳ್ಳಬೇಕು ? ಸರ್ಕಾರದ ದರ್ಪ ಸಡಿಲವಾಗುವುದಿಲ್ಲವೇ ? ಒಬ್ಬಿಬ್ಬರಿಗೆ ಬಿಗಿ ಮಾಡಿದರೆ ಮುಂದೆ ಅನೇಕರಿಗೆ ಬುದ್ಧಿ ಬಂದೀತು.

ತೀರ್ಥಹಳ್ಳಿ —ಕಳೆದ ತಿಂಗಳು ೨೫ ನೇ ತಾ ತೀರ್ಥಹಳ್ಳಿ ತಾಲ್ಲೂಕು ಕಸಬ ಲಕ್ಷ್ಮಿಂವದ ಸ್ಕೂಲಿನಲ್ಲಿ ಚಕ್ರವರ್ತಿ ಸಾರ್ವಭೌಮರವರ ವರ್ಧಂತಿ ಉತ್ಸವವನ್ನು ಬಹು ಸಂತೋಷದಿಂದ ನಡಿಸಲಾಯಿತು —ಈ ಊರಿನ ಮುನಿಸಿಪಾಲಿಟಿ ಸರಹದ್ದಿನಲ್ಲಿ ಕುಶಾವತೀ ನದಿಯ ಸೇತುವೆ ಇದೆ ಇದು ಮರದ ಸೇತುವೆಯಾದದ್ದರಿಂದ ಇದರ ಮೇಲೆ ಹಾಕಿರುವ ಮರದ ಸರಗಳು ಮಳೆ, ಬಿಸಿಲುಗಳ ದೆಸೆಯಿಂದ ನೆನೆದು, ಒಣಗಿ ಬೆಂಡಾಗಿ, ಆಗಾಗ್ಗೆ ಸೇತುವೆಯ ಮೇಲೆ ಬೇರೆ ಬೇರೆ ಕಡೆಗಳಲ್ಲಿ ಕಂಡಿ ಬೀಳುತ್ತಿದೆ ಇದು ತುಂಬಾ ಅಪಾಯಕರವಾದದ್ದು ಇದರ ಮೇಲೆ ಗಾಡಿಗಳೂ ಜನರೂ ದನಕರುಗಳೂ ವಿಶೇಷವಾಗಿ ತಿರುಗುವವು ಅನಾನುಕೂಲವಾಗಿ ಇಲ್ಲವೇ ರಾತ್ರಿಯಲ್ಲಿ ಗಾಡಿ ಎತ್ತುಗಳಾದರೂ, ಕುದುರೆ ಮನುಷ್ಯರಾದರೂ, ಹಗಲಿನಲ್ಲಿ ದನಕರುಗಳಾದರೂ ಕಾಣದೆ ಕಾಲಿಟ್ಟರೆ ತುಂಬಾ ಅಪಾಯವಾಗುವುದರಲ್ಲಿ ಸಂದೇಹವಿಲ್ಲ ಹೋದ ಕಡೆಗೆ ಇಲ್ಲಿನ ಇಂಜನಿಯರ್ ಇಲಾಖೆಯವರು ಆಗಿಂದಾಗ್ಗೆ ಒಂದೊಂದು ಪಟ್ಟಿಯನ್ನು ಹೊಡೆದು ಮುಚ್ಚಿಸುತ್ತಿದ್ದರೂ, ಮತ್ತೊಂದು ಕಡೆಯಲ್ಲಿ ತೂತು ಬೀಳುವುದು ಅಂಥಾ ತೂತುಗಳಲ್ಲಿ ಮನುಷ್ಯನು ಕಾಣದೆ ಬಿದ್ದು ಸಾಯುವುದಕ್ಕೂ ಆಸ್ಪದವಾಗಿದೆ ಆದಕಾರಣ ಇಂಜನಿಯರ್ ಇಲಾಖೆಯವರು ಇದರ ವಿಷಯವಾಗಿ ನಿಗಾಕೊಟ್ಟು ಭದ್ರಪಡಿಸದೆ ಹೋದರೆ ಅಪಾಯವಾಗುವುದರಲ್ಲಿ ಸಂದೇಹವಿಲ್ಲ

ಬೌರಿಂಗ್‌ಪೇಟೆ ತಾ|| ಬೇತಮಂಗಲ —ಈ ಊರಿನಲ್ಲಿ ಮಳೆ ಇಲ್ಲ ಕೆಲವರು ತಮ್ಮಲ್ಲಿದ್ದ ಬೀಜದ ಸೆಲ್ಲನ್ನು ಗದ್ದೆಗಳಲ್ಲಿ ಬಿತ್ತಿ ಕೆರೆಗಳಲ್ಲಿ ನೀರು ಬತ್ತಿ ಹೋಗುತ್ತಾ ಇರುವದರಿಂದ ಬಹಳ ವ್ಯಸನಾಕ್ರಾಂತರಾಗಿ ಆಕಾಶದ ಮೋಡಗಳನ್ನೇ ನೋಡುತ್ತಾ ಇದಾರೆ ಈ ಊರಿನಲ್ಲಿ ದೊಡ್ಡ ಕೆರೆಯು ಇರುವದರಿಂದ ಮನುಷ್ಯರಿಗೂ ದನಗಳಿಗೂ ಕುಡಿಯಲಿಕ್ಕೆ ಏನೂ ತೊಂದರೆಯಿಲ್ಲದೆ ಇರುವದರಿಂದ ಅನೇಕರು ಸಂತೋಷ ಪಡುತ್ತಾರೆ —ಆದರೆ ಕೆಲವರು ಹೊಟ್ಟೆಗೆ ಅನ್ನವಿಲ್ಲದೆ ತುಂಬಾ ತೊಂದರೆ ಪಡುತ್ತಾ ಇದಾರೆ ಇದುವರೆಗೂ ನಮ್ಮ ತಾಲ್ಲೂಕ್ ಅಮಲ್ದಾರರು ಇಡಿಸಿದ್ದ ರಿಲೀಫ್ ಕಾಮಗಾರಿ ಕೆಲಸವು ಪೂರೈಸುತ್ತಾ ಬಂದಿದೆ ಇಷ್ಟರಲ್ಲಿ ಮಳೆ ಬಾರದೆಹೋದರೆ ಜೀವನಕ್ಕೆ ತುಂಬಾ ತೊಂದರೆಯಾಗುವುದು ಈಗಲೇ ಈ ಊರಿನ ೩ ಕುಟುಂಬಗಳವರು ಕತ್ತಾಳೆ ಗಡ್ಡೆಗಳನ್ನು ತಿನ್ನುತ್ತಾ ಇದಾರೆ —ಕಳೆದ ತಿಂಗಳು ೨೫ ನೇ ತಾ|| ಶುಕ್ರವಾರ ಮಧ್ಯಾಹ್ನ ಈ ಊರಿನ ಮೇಲಿನ ಪೇಟೆಯಲ್ಲಿ ವಾಸವಾಗಿರುವ ವಡಗೂರು ಮುನಿಯಪ್ಪನ ೫ ವರುಷದ ಮಗನನ್ನು ಯಾವನೋ ಒಬ್ಬ ಘಾತುಕನು ರಬ್ಬರ್ ಚೆಂಡು ಕೈಗೆ ಕೊಟ್ಟು ಸಂತೆಯಿಂದ ೨ ಫರ್ಲಾಂಗ್ ದೂರದಲ್ಲಿರುವ ಗೋಶನ್ ಕೆರೆ ಕಟ್ಟೆ ಕೆಳಕ್ಕೆ ಕರೆದುಕೊಂಡು ಹೋಗಿ ಕಾಲುಗಳಲ್ಲಿದ್ದ ಗೆಜ್ಜೆಗಳನ್ನು ಮಾತ್ರ ಕತ್ತರಿಸಿಕೊಂಡು ಪರಾರಿಯಾದನು ಆಗ ಮಗುವು ಅಳುತ್ತಾ ಹಿಂದಕ್ಕೆ ಬಂದನು —ಇದೇ ತಿಂಗಳು ೨ ನೇ ತಾ|| ಮಧ್ಯಾಹ್ನ ಸುಮಾರು ೨ ಗಂಟೆ ಸಮಯದಲ್ಲಿ ಮುಳಬಾಗಲ್, ಜವಾಲ್ ಸಾಹೇಬರ ೭ ವರುಷದ ಹುಡುಗನನ್ನು ಯಾವನೋ ಒಬ್ಬ ದುಷ್ಟ ಮನುಷ್ಯನು ಆ ಹುಡುಗನಿಗೆ “ನಿಮ್ಮ ತಂದೆ ಆ ಹೊಲದಲ್ಲಿರುತ್ತಾನೆ ಅಲ್ಲಿ ಒಂದು ವಿನೋದವಾದ ಲಾಂದ್ರ ಉಂಟು ಅದನ್ನು ನಿನಗೆ ಕೊಡುತ್ತೇನೆ, ಬಾ” ಎಂದು ಕರೆದುಕೊಂಡು ಹೋಗಿ ಕೈಯಲ್ಲಿದ್ದ ಬೆಳ್ಳಿಯ ಗಟ್ಟಿ ಬಳೆಗಳನ್ನು ಕಳಚಿಕೊಂಡು ಪರಾರಿಯಾಗಿರುತ್ತಾನೆ ಇಲ್ಲಿನ ಸಂತೆಯು ಪ್ರತಿ ಶುಕ್ರವಾರವೂ ನಡೆಯುತ್ತಾ ಇದೆ ಮತ್ತು ಕೆಲವು ದಿವಸಗಳಿಂದ ಈ ಸಂತೆಯು ಬಹು ಇಕ್ಕಟ್ಟಾಗಿದ್ದುದರಿಂದ ಕಳೆದ ೨೫ ನೇ ತಾ|| ನಲ್ಲಿಯೂ ಮತ್ತು ೨ ನೇ ತಾ|| ನಲ್ಲಿಯೂ ಈ ಸಂತೆಯನ್ನು ಕ್ರಮಪಡಿಸುವದಕ್ಕೆ ಪೋಲೀಸ್ ಸ್ಟೇಷನ್ ಆಫೀಸರೂ ಪೋಲೀಸಿನವರೂ ಬಂದು ಕೆಲಸ ನಡೆಸುತ್ತಾ ಇದ್ದ ವೇಳೆ ಈ ಸಂತೆಗೆ ದೂರಸ್ಥಾನದಲ್ಲಿ ನಡೆದ ಸಂಗತಿ ಕೂಡಲೆ ತಿಳಿದುಬರಲಿಲ್ಲ ಇಂಥಾ ವಿಚಿತ್ರ ಕಳ್ಳತನಗಳನ್ನು ಮಾಡಿದ ದುಷ್ಟ ಮನುಷ್ಯರನ್ನು ಪೋಲೀಸಿನವರು ಬೇಗ ಪತ್ತೆ ಮಾಡುವರೆಂದು ನಂಬುತ್ತೇನೆ —ಈ ಊರಿಗೆ ೩|| ಮೈಲಿ ದೂರದಲ್ಲಿರುವ ತಿಮ್ಮಸಂದ್ರದಲ್ಲಿ ಒಂದು ಬೇವಾರಸಾದ ಹೆಣವು ಹೂಳಲ್ಪಟ್ಟದ್ದು ಪೋಲೀಸಿಗೆ ರಿಪೋರ್ಟು ಆಗಿ, ವಾರಸುದಾರರು ಪತ್ತೆ ಇಲ್ಲದ್ದರಿಂದ ಖೂನಿ ಮಾಡಲ್ಪಟ್ಟಿರಬಹುದೆಂದು ಅನೇಕರು ಭಾವಿಸುತ್ತಾ ಇದಾರೆ ಇದರ ನಿಜತ್ವವು ಮುಂದೆ ಗೊತ್ತಾಗಬೇಕು

ಮೈಸೂರು ಗೆಜೆಟ್ ಸಂಗ್ರಹ

ಅಸಿಸ್ಟೆಂಟ್ ಸರ್ಜನ್ ಮೆ|| ಪಿ ಎಸ್ ರಾಮಚಂದ್ರ ಐಯರವರಿಗೆ ಕೊಟ್ಟಿರುವ ಪ್ರಿವಿಲೇಜ್ ರಜವನ್ನು ಇನ್ನು ಐದು ದಿನಗಳು ಜಾಸ್ತಿ ಮಾಡಿದೆ

ಕಂಟ್ರೋಲರವರ ಅಸಿಸ್ಟೆಂಟರಾದ ಮೆ|| ಎಂ ಎ ಶ್ರೀನಿವಾಸಾಚಾರ್ರಿಗೆ ಜೂನ್ ತಾ ೨೬ ರಿಂದ ಇಪ್ಪತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಕೋಲಾರ್ ಡೆಪ್ಟಿ ಕಮಿಷನರ್ ಮೆ|| ಸಿ ಶ್ರೀಕಂಠೇಶ್ವರ ಐಯರವರಿಗೆ ಕೊಟ್ಟಿರುವ ಪ್ರಿವಿಲೇಜ್ ರಜವನ್ನು ಇನ್ನೊಂದು ದಿನ ಜಾಸ್ತಿ ಮಾಡಿದೆ

ಫಾರೆಸ್ಟ್ ಡೆಪ್ಟಿ ಕನ್ಸರ್ವೇಟರ್ ಮೆ|| ಎಂ ಜಿ ರಾಮರಾಯರು ಮೇ ತಾ ೧೦ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಮೆ ಎಂ ಚಂಗೈಯ ಚೆಟ್ಟಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಹತ್ತೊಂಬತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಗುಬ್ಬಿ ಸಬ್ ಡಿವಿಜನ್ ಸೀನಿಯರ್ ಅ|| ಕಮಿಷನರ್ ಮೆ|| ಕೆ ಶ್ರೀನಿವಾಸರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಕೊಪ್ಪ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ|| ಮಹಮದ್ ಸೈಯದ್ ಹುಸೇನ್‌ಯವರಿಗೆ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ಹಿಡಿದು ದರ್ಯಾಫ್ತಿ ಮಾಡುವ ಅಧಿಕಾರ ವಹಿಸಲ್ಪಟ್ಟಿದೆ

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ವೈಸ್ ಪ್ರೆಸಿಡೆಂಟ್ ಮೆ ನಾಡಿಗ ಸುಬ್ಬರಾಯರನ್ನು ಮೇ ತಾ ೨೩ ರಿಂದ ೨ ನೇ ಕ್ಲಾಸ್ ಅ| ಕಮಿಷನರ ದರ್ಜೆಗೆ ಬಡ್ತಿ ಮಾಡಿದೆ

ಗಣಿಗಳ ಡೆಪ್ಟಿ ಇನ್‌ಸ್ಪೆಕ್ಟರ್ ಮೆ ಎಚ್ ಎಚ್ ಚೆಕ್ಸಿತ್ ಯವರಿಗೆ ಜೂಲೈ ತಾ ೨೯ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಟಿ ಎಂ ನಂಜುಂಡಯ್ಯ, ಬಸವಾಪುರ, ಬೆಂಗಳೂರು —ಪರಿಚಯವಿಲ್ಲದ ಹೊಸ ಜನರನ್ನು ನಂಬುವುದರಿಂದ ಅವರ ಮೋಸದ ಬಲೆಗೆ ಸಿಕ್ಕಿ ನಷ್ಟಪಡಬೇಕಾಗುವುದು ನಿಮ್ಮ ಬಾತ್ಮಿಯನ್ನು ಪ್ರಕಟಿಸುವುದರಲ್ಲಿ ಅಷ್ಟೇನೂ ಪ್ರಯೋಜನ ಕಾಣುವುದಿಲ್ಲ

ಪ್ರತ್ಯಕ್ಷದರ್ಶಿ, ಚಿಕ್ಕಮಗಳೂರು —ನಿಮ್ಮ ಆಕ್ಷೇಪಣೆಗಳನ್ನೆಲ್ಲಾ ಕಾಣಿಸಿ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ತಿಳಿಯಪಡಿಸಿದಲ್ಲಿ ಅವರು ತನಿಖೆ ಮಾಡುವರೆಂದು ನಂಬುತ್ತೇವೆ

ವಿದ್ಯಾಭಿಮಾನಿ, ಯಾಚಘಟ್ಟ, ಕುಣಿಗಲ್ ತಾಲ್ಲೂಕು —ಗ್ರಾಮಸ್ಥರೆಲ್ಲಾ ಒಂದಾಗಿ ಸ್ಕೂಲ್ ಇನ್‌ಸ್ಪೆಕ್ಟರಿಗೂ, ಇನ್‌ಸ್ಪೆಕ್ಟರ್ ಜನರಲ್‌ರವರಿಗೂ ಅರ್ಜಿ ಬರೆದುಕೊಂಡಲ್ಲಿ ಅವರು ವಿಚಾರಣೆಯಿಂದ ಪಾಠಶಾಲೆಯನ್ನು ಸ್ಥಾಪಿಸಿಕೊಟ್ಟಾರೆಂದು ನಿರೀಕ್ಷಿಸುವೆವು

—ಎಡಿಟರ್]

ಕರೆಸ್ಪಾಂಡೆನ್ಸ್

ಹೋಬಳಿ ಮಾಸ್ಟರುಗಳ ಸಂಬಳ

ಅಯ್ಯಾ,

ಹೋಬಳಿ ಸ್ಕೂಲ್ ಮಾಸ್ಟರುಗಳ ಸಂಬಳ ಆಯಾ ತಿಂಗಳ ತಾರೀಖು ೧೦ ರೊಳಗಾಗಿ ಪಾವತಿಯಾಗುತ್ತೆಂದು ಹಜರತ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ಹುಕುಂ ಇದೆಯೇ ಹೊರತು ಅದರಂತೆ ಆಚರಣೆಗೆ ಬರಲಿಲ್ಲ ತಾಲ್ಲೋಕಿನವರಂತೂ ಈ ವಿಷಯಕ್ಕೆ ನಿಗಾಕೊಡುವುದಿಲ್ಲ ನನಗೆ ಮೇ ತಿಂಗಳ ಸಂಬಳ ಈ ದಿನದವರಿಗೂ ಪಾವತಿ ಆಗಿಲ್ಲ ಕಾಲಸ್ಥಿತಿ ಬಹಳ ನಾಜೂಕು ಸಂಬಳ ಬಂದರೂ ಜೀವನ ಸಾಗುವುದೇ ಮಸ್ತರ ಸಂಬಳಕ್ಕೇ ಕೊಡಿಸದೆ ಬಂದುಮಾಡಿದರೆ ಈ ಬಡವನ ಗತಿ ಹ್ಯಾಗಾಗಬೇಕು ? ಹೊಟ್ಟೆತುಂಬಿದವರಿಗೆ ಹೊಟ್ಟೆ ಹಸಿವಿನ ಕಷ್ಟ ಹ್ಯಾಗೆ ತಿಳಿದೀತು ? ಒಂದು ದಿನ ಕೂಲಿ ತಪ್ಪುವುದು ಕಷ್ಟ ಹೊಟ್ಟೆಗೆ ಕೊಡದೆ ಸರ್ಕಾರದ ಚಾಕರಿ ಮಾಡೆಂದರೆ ಈ ಬಡನೌಕರನು ನಿಭಾಯಿಸುವ ಬಗೆ ಹ್ಯಾಗೆ ?

ಎಚ್ ಕೃಷ್ಣಪ್ಪ,

ತಾ ೨೬ ೬ ೧೯೦೯ ಹಪ್ಪಿಗೆರೆ, ಮಂಡ್ಯ ತಾಲ್ಲೂಕು

[ಈ ಬಾತ್ಮಿದಾರರು ಇನ್ನೊಂದು ವಿಚಾರವನ್ನು ಕುರಿತು ಆಕ್ಷೇಪಣೆಯನ್ನು ಬರೆದಿದಾರೆ ಅವರು ಅದನ್ನು ಕುರಿತು ಮೊದಲು ತಾಲ್ಲೂಕು ಅಮಲ್ದಾರರಿಗೂ, ಸ್ಕೂಲುಗಳ ಇನ್‌ಸ್ಪೆಕ್ಟರಿಗೂ ಅರ್ಜಿಯ ಮೂಲಕ ತಿಳಿಯಪಡಿಸಬೇಕು ಅದು ಅವರಿಂದ ಇತ್ಯರ್ಥವಾಗದಿದ್ದರೆ ಆಗ ನಾವು ಈ ವಿಚಾರವನ್ನು ಪ್ರಕಟಿಸಬಹುದು —ಎಡಿ]

ಮೆ|| ಎಂ. ಚಂಗೈಯ ಚೆಟ್ಟಿಯವರು.

ಅಯ್ಯಾ,

ನಮ್ಮ ಡೆಪ್ಟಿ ಕಮಿಷನರ್ ಮೆ| ಎಂ ಚಂಗಯ್ಯಚೆಟ್ಟಿ ಸಾಹೇಬರವರು ಕಾಯಿಲೆ ಸಲುವಾಗಿ ಮೂರು ತಿಂಗಳ ರಜಾ ಪಡೆದು ಮದರಾಸು ಪ್ರಾಂತ್ಯದಿಯ ಮಾಡಿಸಿದರು ಅವರ ಬದ್ಲಿಯಾಗಿ ಮೆ|| ಕೆ ಶ್ರೀನಿವಾಸರಾಯರವರು ಬಂದವರಾಗಿದಾರೆ

ಮೆ|| ಎಂ ಚಂಗಯ್ಯ ಚೆಟ್ಟಿಯವರು ಈ ಡಿಸ್ಟ್ರಿಕ್ಟಿಗೆ ದಯಮಾಡಿಸಿ ೨ ವರುಷ ೧೦ ತಿಂಗಳಾಯಿತು ಈ ಕಾಲದಲ್ಲಿ ಇವರು ನಡಿಸಿದ ಅಧಿಕಾರದಿಂದ ನಿಷ್ಪಕ್ಷಪಾತಿಗಳು ಯೋಚಿಸಿದರೆ ಇವರಿಗೆ ಜಾತಿ ಪಕ್ಷಪಾತ ಅಹಂಕಾರಗಳು ಸ್ವಲ್ಪವೂ ಇಲ್ಲ ಇವರಲ್ಲಿ ಪಬ್ಲಿಕ್ ಸರ್ವೆಂಟ್ ಎಂಬ ಪದವು ಅದರ ನಿಜವಾದ ಗುಣ ಬಹಳ ಚನ್ನಾಗಿ ತನ್ನ ಕೆಲಸವನ್ನು ಮಾಡುತ್ತಿತ್ತು ಅಂದರೆ ಅಧಿಕಾರ ಸ್ಥಾನದಲ್ಲಿದ್ದಾಗ್ಗೆ ದರ್ಪವೂ, ಬಾಕೀ ಕಾಲಗಳಲ್ಲಿ ಪ್ರಜೆಗಳಿಗೆ ಮಿತ್ರರೂ, ಅವರ ಸುಖದುಃಖಗಳಿಗೆ ಭಾಗಿಗಳೂ ಆಗಿದ್ದರು ಆದರಲ್ಲೂ ಈ ಕ್ಷಾಮಕಾಲದಲ್ಲಿ ಪ್ರಜೆಗಳಿಗೆ ಇವರಿಂದ ಉಂಟಾದ ಅನುಕೂಲಗಳೂ, ಅದಕ್ಕಾಗಿ ಇವರು ತೆಗೆದುಕೊಂಡ ಶ್ರಮಾದಿಗಳು ಈ ಡಿಸ್ಟ್ರಿಕ್ಟಿನ ಪ್ರಜೆಗಳ ಹೃದಯದಲ್ಲೂ ನಿಂತಿರುತ್ತವೆ ಅವರ ರಜಾದ ಈ ಅಲ್ಪಕಾಲದಲ್ಲಿ ಅವರನ್ನು ಅಗಲಿರುವುದಕ್ಕೆ ಬಹು ಪ್ರಜೆಗಳು ಸಂಕಟಪಡುತ್ತಾರೆ ಭಗವಂತನು ನಮ್ಮ ಡೆಪ್ಟಿ ಕಮಿಷನರ್ ಮೆ ಎಂ ಚಂಗಯ್ಯಚೆಟ್ಟಿಯವರಿಗೆ ಜಾಗ್ರತೆಯಾಗಿ ಆರೋಗ್ಯವನ್ನು ದಯಪಾಲಿಸಲಿ ಎಂದು ಈ ಡಿಸ್ಟ್ರಿಕ್ಟಿನ ಪ್ರಜೆಗಳು ಪ್ರಾರ್ಥಿಸುತ್ತಾರೆ

ಚಿತ್ರದುರ್ಗ ಪ್ರತ್ಯಕ್ಷದರ್ಶಿ

ಆಯುಧಗಳ ಲೈಸೆನ್ಸು ವಿಚಾರ

ಅಯ್ಯಾ,

ಮೈಸೂರು ಸರ್ಕಾರದವರು ಪ್ರಜೆಗಳ ನಾನಾ ಬಗೆಯ ಉಪಯೋಗಕ್ಕಾಗಿ ಆಯುಧಪಾಣಿಗಳಿಗೆ ಲೈಸೆನ್ಸು ಇರಬೇಕೆಂದು ಗೊತ್ತು ಮಾಡಿರುವರು ಇದು ಬಹು ಉತ್ತಮವಾದ ಏರ್ಪಾಡೇ ಸರಿ ಮತ್ತು ಲೈಸೆನ್ಸಿಗೆ ಒಬ್ಬಾತನು ಬರೆದುಕೊಂಡರೆ ಆತನ ವಿಷಯದಲ್ಲಿ ಆಯಾ ಗ್ರಾಮದ ಪಟೇಲ್ ಶ್ಯಾನುಭೋಗರಿಂದಲೂ ಆ ಗ್ರಾಮದ ಮುಖ್ಯದ ರೈತರಿಂದಲೂ ಅರ್ಜಿದಾರನ ಚಾಲ್‌ಚಲನ್ ಸ್ಥಿತಿಗತಿ ವಿಷಯ ತಿಳಿದು ಅನಂತರ ಸರ್ಕಾರದವರು ಲೈಸೆನ್ಸು ಕೊಡುವರು ಇದರಿಂದ ಆಯುಧಪಾಣಿಗಳಾಗುವದಕ್ಕೆ ಅರ್ಹರೂ ಅನರ್ಹರೂ ಯಾರೆಂಬುವದು ಬಹು ಪರಿಷ್ಕಾರವಾಗಿ ಗೊತ್ತಾಗುತ್ತದೆ ಒಬ್ಬ ಜಮೀನ್ದಾರನು ಲೈಸೆನ್ಸಿಗೆ ಅರ್ಜಿ ಕೊಟ್ಟನೆಂದೂ ಪಟೇಲ್ ಶ್ಯಾನುಭೋಗರೂ ಗ್ರಾಮದ ಮುಖ್ಯ ರೈತರೂ ಅವನ ಸ್ಥಿತಿಗತಿ ವಿಷಯದಲ್ಲಿ ತೃಪ್ತಿಕರವಾದ ಮಹಜರು ಮಾಡಿಕೊಟ್ಟರೆಂದೂ ಇಟ್ಟುಕೊಳ್ಳೋಣ ಅಂಥವನು ಅನೇಕ ಬಡವರಿಗೆ ಆಧಾರಿಯಾಗಿಯೂ, ಲೇವಾದೇವಿ ಮಾಡುವವನಾಗಿಯೂ ಇರುವನು ಈತನ ಹೆಸರಿಗೆ ಖಾತೆ ಮಾತ್ರ ಇಲ್ಲ ಕೆಲವು ಸಂದರ್ಭಗಳಲ್ಲಿ ಆತನ ಹೆಂಡತಿ ಹೆಸರಿಗೆ ಖಾತೆ ಇರುವದು ವ್ಯವಸಾಯ ಮಾಡುವವನೂ, ಸಂಪಾದಿಸುವವನೂ, ಆಕೆಯ ಖಾತೆ ಕಂದಾಯವನ್ನು ಸರ್ಕಾರಕ್ಕೆ ಕೊಡುವವನೂ ಇವನೇ ಆಗಿದ್ದರೆ ಇಂಥವನಿಗೆ ಲೈಸೆನ್ಸು ಆಗದಿರಲು ಕಾರಣವಿದೆಯೋ ? ಖಾತೇದಾರನು ಸರ್ಕಾರಕ್ಕೆ ಕಂದಾಯ ಕೊಡುವಂತೆಯೇ ಸಿಕ್ಮೀದಾರನು ಸಹ ಕೊಡುವದಿಲ್ಲವೋ ? ಸಿಕ್ಮೀದಾರನಿಗೆ ಲೈಸೆನ್ಸು ಇಲ್ಲವೆನ್ನುವ ಪಕ್ಷಕ್ಕೆ ಸರ್ಕಾರದವರು ಸಿಕ್ಮಿ ಎಂಬುವದನ್ನು ವಜಾ ಮಾಡಿಸಿ ಪೂರಾ ಖಾತೆಯನ್ನು ಪ್ರತಿಯೊಬ್ಬರಿಗೂ ಇರುವಂತೆ ಮಾಡುವದು ನ್ಯಾಯವಲ್ಲವೇ ? ಖಾತೇದಾರನಿಗೆ ಆಸ್ತಿ ಪ್ರಾಣ, ಮಾನಗಳು ಇರುವಂತೆ ಇವನಿಗೆ ಇಲ್ಲವೋ ?

ಕೆ ಶಕ್ರಾಲ್

ಅಬೋಯರ್ನಸ್ ಮತ್ತು ಕಂದಾಯದ ರಿಮಿಷನ್

ಅಯ್ಯಾ,

ಕಳೆದ ತಿಂಗಳು ತಾ ೧೦ ನೇ ಗುರುವಾರದ ಪತ್ರಿಕೆಯಲ್ಲಿ ಅರ್ಧ ಕಂದಾಯ ರಿಮಿಷನ್ ಮಾಡಿರುತ್ತಾರೆಂತ ಪ್ರಕಟಿಸಿರುವುದನ್ನು ನೋಡಿ ಬಹು ಸಂತೋಷವಾಯಿತು ಗೌರ್ನಮೆಂಟಿನವರು ಮಾಡಿರುವುದು ಸ್ತೋತ್ರಾರ್ಹವಾಗಿಯೇ ಇದೆ ಇದಲ್ಲದೆ ನವಂಬರ್ ಲಾಗಾಯತು ಮೇ ಆಖೈರುವರೆಗೆ ಕ್ಷಾಮದ ಅಬೋರ್ಯನ್ಸು ಸಹ ಕೊಡಿಸಿದರೂ ಇನ್ನೂ ಸುಮುಖವಾದ ಕಾಲ ಬಂದು ದಿನಸಿಗಳು ಅಗ್ಗವಾಗಿಲ್ಲ ಇನ್ನು ಸಂಪೂರ್ಣವಾದ ಮಳೆ ಆಗುವ ವರೆಗೂ ಈ ಏರ್ಪಾಡು ನಡಿಸುತ್ತಾ ಬಂದರೆ ಗೌರ್ನಮೆಂಟಿಗೆ ತುಂಬಾ ಯಶಸ್ಸು ಬರುವುದಲ್ಲದೆ ಬಡನೌಕರರನ್ನು ಕಾಪಾಡಿದ ಕೀರ್ತಿಯು ಆಚಂದ್ರಾರ್ಕಸ್ಥಾಯಿಯಾಗಿ ನಿಲ್ಲುವುದು

ಹಾಲಿ ರಿಮಿಷನ್ ಆಗಿರತಕ್ಕ ಕಂದಾಯವು ಬಡರೈತರ ಕೈಸೇರಿ ಬರುವ ಯೋಚನೆ ಈಗಲೇ ನಿರ್ಧರಿಸಬೇಕು ಹಾಗಿಲ್ಲದಿದ್ದರೆ ಶ್ಯಾನುಭೋಗರು, ಶೇಕ್ದಾರರು, ತಾಲ್ಲೂಕು ಗುಮಾಸ್ತರು, ಇವರುಗಳ ಪಾಲಾಗಿ ರೈತರ ಕಷ್ಟ ತಪ್ಪುವುದಿಲ್ಲ ಸರ್ಕಾರದ ಹಣವೆಲ್ಲಾ ದುರ್ವಿನಿಯೋಗಕ್ಕೆ ಆಸ್ಪದವಾಗದ ರೀತಿ ಜನರಿಗೆ ಇಷ್ಟೇ ಸಲ್ಲಬೇಕೆಂಬ ಲೆಕ್ಕದ ಪಟ್ಟಿಯನ್ನು ಶ್ಯಾನುಭೋಗರ ಕಡೆಯಿಂದ ತಯಾರುಮಾಡಿ, ಅಮಲ್ದಾರರ ಮುಖಾಂತ್ರವಾಗಲೀ ಅಥವಾ ಸತ್ಯವಂತರಾದ ಅಧಿಕಾರಿಗಳ ಮೂಲಕವಾಗಲೀ ರೈತರಿಗೆ ಕೊಡಿಸಿದರೆ ಉತ್ತಮ ಹೀಗಾಗು ಗೊತ್ತುಮಾಡಿ ಗ್ರಾಮಾಂತ್ರದ ಜನರನ್ನು ಕರೆಸಿ ತಾಲ್ಲೋಕು ಕಚೇರಿಯಲ್ಲಿಯೇ ಕೊಡಿಸಿದರೆ ಉತ್ತಮ ಮಂಡ್ಯದ ಅಮಲ್ದಾರ್ ಮೆ|| ಜಿ ನಾರಾಯಣರಾಯರು ಪಕ್ಷಪಾತವಿಲ್ಲದೆ ಲಂಚಕೋರರಲ್ಲದೆ ಸತ್ಯಸಂಧರಾಗಿರುತ್ತಾರೆ ಯಾವ ವಿವರಲ್ಲವರೂ ರೈತರಿಗೆ ರಿಮಿಷನ್ ಕಂದಾಯ ಕೈಸೇರಿ ಬರತಕ್ಕ ರೀತಿ ಜರೂರು ನಡಿಸಬೇಕು ಮೇ ತಿಂಗಳು ೫ ೬ ರಲ್ಲಿ ಸ್ವಲ್ಪ ಮಳೆ ಆಗಿ ಕೆರೆಗೆ ಕೊಂಚ ನೀರು ಬಂದಿತ್ತು ಈವರೆಗೆ ಮಳೆ ಇಲ್ಲ ಕಷ್ಟ ತಪ್ಪಲಿಲ್ಲ

ಬಂಡಾದಾರ

ನಿರ್ಭೀತಿಯಾದ ಕಳ್ಳತನವು.

ಅಯ್ಯಾ,

ತೀರ್ಥಹಳ್ಳಿ ತಾಲ್ಲೂಕಿಗೆ ೭ ೮ ಮೈಲಿ ಫಾಸಲೆಯಲ್ಲಿರುವ ಸಾಲೂರು ಗ್ರಾಮದ ಮಜರೆ ಹೊಸೂರಲ್ಲಿ ವಾಸವಾಗಿರುವ ವಾಟಿಮನೆ ಮಂಜಣ್ಣ ಎಂಬವನ ಮನೆಯವರು ಜೂನ್ ತಾ ೨೧ ನೇ ಸೋಮವಾರ ಸಾಯಂಕಾಲ ೩ ೪ ಗಂಟೆ ಸುಮಾರಿನಲ್ಲಿ ವ್ಯವಸಾಯಕ್ಕೆ ಹೋದ ಕಾಲದಲ್ಲಿ ಯಾರೂ ಮನೆಯಲ್ಲಿಲ್ಲದ ಸಂದರ್ಭವನ್ನು ತಿಳಿದು ಬಾಗಿಲನ್ನು ತೆರೆದು ಮುಂದುಗಡೆ ಜಗಲಿಯಲ್ಲಿ ಇಟ್ಟಿದ್ದ ಮರದ ಪೋಣೆಯ ಬೀಗವನ್ನು ಮುರಿದು ಅದರಲ್ಲಿ ಯಾವ ಅಮೂಲ್ಯ ಪದಾರ್ಥಗಳೂ ಇಲ್ಲದಿರುವುದನ್ನು ನೋಡಿ, ಒಳಗೆ ಪ್ರವೇಶಮಾಡಿ ಅಟ್ಟವನ್ನೇರಿ ಅಲ್ಲಿ ಆತನ ತಾಯಿ ಇಟ್ಟಿದ್ದ ಚಿತ್ರದ ಪೆಟ್ಟಿಗೆಯನ್ನು ತೆಗೆದುಕೊಂಡು ಅಟ್ಟದಿಂದ ದುಮುಕಿ ಕಾಲಿಗೆ ಬುದ್ಧಿಹೇಳಿದರು ಸಾಯಂಕಾಲ ಆತನ ಮನೆಯವರು ಮನೆಗೆ ಬಂದು ನೋಡಿದರು ಪೋಣೆಯ ಬೀಗವು ಮುರಿದಿತ್ತು ಎಲ್ಲವನ್ನೂ ಸಂಶೋಧಿಸಲು ಪೆಟ್ಟಿಗೆಯು ಇಲ್ಲದಿರುವುದನ್ನು ತಿಳಿದುಕೊಂಡು ವಿಷಾದಿಸಿದರು ಆ ದಿನ ಸಾಯಂಕಾಲವಾಯಿತು ಬೇಗ ಆ ಗ್ರಾಮದ ಪಟೇಲರಿಗೆ ತಿಳಿಸಿದರು ಅವರು ಸ್ಟೇಷನ್ನಿಗೆ ರಿಪೋರ್ಟುಮಾಡಿದ ಕೂಡಲೆ ಹೆಡ್ ಸ್ಟೇಷನ್ ಜವಾಬ್ದಾರರು ಬಂದು ತನಿಖೆ ಮಾಡಿದ್ದರಲ್ಲಿ ಫಿರ್ಯಾದಿ ಮಂಜಣ್ಣನ ಮನೆಯ ಹಿಂಭಾಗಕ್ಕೆ ಇರುವ ದನಗಳ ಹಾಡ್ಯಕ್ಕೆ ಹೋಗುವ ದಾರಿಯ ಪಕ್ಕದಲ್ಲಿ ಮೇಲ್ಕಂಡ ಪೆಟ್ಟಿಗೆ ಸಿಕ್ಕಿತು ಅದರ ಅಡಿ ಭಾಗವನ್ನು ಕತ್ತರಿಸಿ ಅದರೊಳಗೆ ಇದ್ದ ೧೦೦ ರೂಪಾಯಿ ಚೀಲ ಒಂದು, ೫೦ ರೂಪಾಯಿ ಹಾಕಿದ ಸತ್ತುವಿನ ಡಬ್ಬಿ ಒಂದು ಈ ಎರಡನ್ನೂ ತೆಗೆದುಕೊಂಡು ಹೋಗಿರುವುದಾಗಿ ತಿಳಿಯಿತು ಸದರಿ ಪೆಟ್ಟಿಗೆಯಲ್ಲಿ ಇದ್ದ ಸಾಮಾನು ಪೆಟ್ಟಿಗೆ ಸಹ ಬಿಸಾಟು ಹೋಗಿದ್ದರು ಜವಾಬ್ದಾರರು ಫಿರ್ಯಾದಿಯ ಬಾಜು ಮನೆಯವರನ್ನು ವಿಚಾರಣೆಮಾಡಿ, ಫಿರ್ಯಾದಿಯು ಗುಮಾನಿಪಟ್ಟಿದ್ದರ ಮೇಲೆ ನೆರೆಮನೆಯ ಮಂಜಣ್ಣ ಎಂಬುವವನನ್ನು ಹಿಡಿದುಕೊಂಡು ಹೋಗಿರುವುದಾಗಿಯೂ, ಸದರಿಯವನನ್ನು ಜಾಮೀನು ಮೇಲೆ ಬಿಟ್ಟಿರುವುದಾಗಿಯೂ ಕೇಳುತ್ತೇನೆ

ಪ್ರಜಾ ಹಿತಚಿಂತಕ

Printed and Published by the Rev H Gulliford,
Proprietor and Manager, Wesleyan Mission Press,
Mysore 8/7/1909

REGISTERED
M 29

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೩ — ಮೈಸೂರು—ಸ್ಕ ೧೯೦೯ ನೇ ಇಸವಿ ಜೂಲೈ ತಾರೀಖು ೧೫ ನೇ ಗುರುವಾರ. — ಸಂಚಿಕೆ ೭

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಟಪಾಲ್ ಸೇರಿ ರೂ ೧—೧೪—೦

" " ೬ " " , ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ಅವರಿಗೆ ಸಾಪ್ತಹಿಕ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು ನಮ್ಮ ವಿಳಾಸ— ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಕ್ಲೆಮೆಂಟರ ಮ್ಯಾಜಿಕ್ ಓಯಿಂ ತ್ಮೈಲವು

47 8

ತಲೆನೋವು, ವಾಯುನೋವು, ಸಳಕ ಗಂಟಲುನೋವು, ಪಾರ್ಶ್ವವಾಯು, ನಾನಾ ವಿಧ ವಾಯುರೋಗಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಯುಕ್ತವಾದ ನಿಶ್ಚಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದೂಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಉಪಯೋಗಿಸಿ ನಿಶ್ಚಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿ ಹೇಳಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆ ಮಾಡುವದರಲ್ಲಿ ಈ ಔಷಧದ ಶಕ್ತಿಯು ಅಮೋಘವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟಿರಬೇಕೆಂದು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲಸ್ಥಾನವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸ ಒಂದಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವದು ವ್ಯಾಪಾರಸ್ಥರಿಗೆ ಮತ್ತು ದಾಕ್ತರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ವ್ಯಾಪಾರಿಗಳೂ, ವೈದ್ಯರೂ ಬಿಕರಿ ಮಾಡುತ್ತಾರೆ ಮುಖ್ಯ ಏಜಂಟರ ವಿಳಾಸ—

ಎಸ್. ಪೀಟರ್ಸ್,

೩೩, ವೇದನಾಯಕಪಿಳ್ಳೆ ಬೀದಿ, ವೇಪೇರಿ, ಮದರಾಸ್

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ಪರಾಂಬರಿಸಿ.

10 28

"ಬ್ರಹ್ಮಚರ್ಯ" ವೆಂಬ ಮನುಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯುವನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ. ವಿ ಪಿ ಪಿ ಮೂಲಕ, ಐದಾಣೆ

"ಸ್ವಪ್ರಯತ್ನಸಫಲದೀಪಿಕೆ" ಎಂಬ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಿಗೆ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶೀಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ರಯತ್ನಸಫಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಸ್ಪೆಷಲಾಗಿ ನಿಯಮಿಸಿರುತ್ತಾರೆ ಇದನ್ನು ಎಲ್ಲರೂ ಕೊಂಡುಕೊಂಡು ದೊಡ್ಡವರವರೆಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸಕ್ಯೋದ್ಧಾರಣಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟಿದ್ದು ಮತ್ತು ಬಹು ರಸವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು

ಕ್ರಯ, ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟಿನ್ ದಿನ್ನಸೇ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಸಂತರ, ಪಾಪವುಳ್ಳನ, ಪವಿತ್ರತೆ ಈ ಮೊದಲಾದ ಸದ್ಗುಣಗಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು

ಇದರ ಬೆಲೆ —ರೈಟಿನ ಬೈಂಡು ಪ್ರತಿ ಒಂದಕ್ಕೆ ೦—೧೦—೦

ಒಟ್ಟಿಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ. ಎಲ್ ಎಸ್. ಬುಕ್ ಡಿಪೋ ಮೈಸೂರು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

2a 22

೧ ಗೋರೋಚನಾದಿ ಕಸ್ತೂರೀ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ

ಚಳಿಜ್ವರ ಜ್ವರ ಹೊಟ್ಟೆಶೂಲೆ, ಸಂದುಗಳ ನೋವು ಮೈ ಕೈಕಾಲು ಸೆಳತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ಸಿಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ನಿಶ್ಚಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕ್ರಿಶಸ್ಯಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೩೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ —ಪಾಳ್ಯದ ವೆಂಕಟಾಚಲ ಪಂಡಿತ, ಎಸ್. ಎಸ್ ಅರ್ ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು

ಜ್ವರಹರಿ.

16 21



ಇದು ಸಾಧಾರಣ ಜ್ವರ, ಚಳಿಜ್ವರ ಮರೋಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿಹಿಡಿಯುವದು ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೬ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದೆ ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ ರೂ ೨—೧೨ ಆ , ೧೧ ರೂ , ಮತ್ತು ಆರು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

ಜಿ ಮಂ ಕ ಪೂರ ರ.

Zhem Capzu

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಹಿಂದಾಮರ್ತಿ ಹೊರಗೆ ಆಗುವಾಗ್ಗೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವರವು "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ದೆಸ್ರಿಯ ಜಿಮಂಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೇ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಬೀಚ್ ಲೈನ್, ಮದರಾಸ್.

WILLIAM & Co, FORT, BOMBAY.

ಅಮೃತಾಂಜನ.

ಹಿಂದುಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟಿದ್ದು

ಬಾಹ್ಯ ಉಪಯೋಗಕ್ಕೋಸ್ಕರವೇ ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು [30-21]

ತಲೆನೋವು, ಗಂಟು ಉಬ್ಬುವದು, ವಾತ, ಸಂಧಿವಾತ, ಉಳುಕು, ಅಬಲು ಗಂಟು, ಗಂಟಲು ನೋವು, ಅರ್ಧಾಂಗವಾಯು, ಎದೆಶೀತ, ಘಾಯ, ಚಳುಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲಿ ಒಂದರ ಕಿಮ್ಮತ್ತು ೦-೮-೦

ಗಜಕರ್ಣದ ಮುಲಾಮು.

ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಆಸ್ಮಾಮಿಶ್ರಣ	೨-೦-೦
ಚೇಳುಕಡತದ ಮದ್ದು	೦-೮-೦
ವಜ್ರಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರೀ ತೈಲ—ಮುದ್ದಿಗಳಿಗೆ	೦-೮-೦
ಜುಲಾಬು ಮಾತ್ರೆ—ಜುಲಾಬಿಗೆ	೦-೮-೦
ನೇತ್ರಾಂಜನ—ಮಂದ ದೃಷ್ಟಿಗೆ	೦-೪-೦
ಜಿಜ್ಜಿ ಮುಲಾಮು—ಮಕ್ಕಳ ಜಿಜ್ಜಿಗೆ	೦-೩-೦
ಕೇಶವರ್ಧಿನೀ ತೈಲ—ತಲೆಯ ಮದುಳಿಗೆ	೧-೦-೦
ಕಫನಾಶಕ ಚೂರ್ಣ—ಆಸ್ಮಾ ರೋಗಕ್ಕೆ	೦-೨-೦

ದಯಮಾಡಿ ಕ್ಯಾಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪನಿ, ಫೋರ್ಟ್, ಮುಂಬಯಿ

ಟೆಲಿಗ್ರಾಫ್ ಅಡ್ರೆಸ್ಸು —"ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS HASSAN

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1-27

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ನೇರಳೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ , ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧ ೮ , ರೂ ೧ ೧೨

ನಸ್ಟೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಉಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ ,

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕೈಚೀಲ ಮುಂತಾದ್ದು, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

ಸೋಲ್ ಏಜೆಂಟರು

54 2

ಗ್ರಾಮಫೋನ್ ರೂ 29 8 0 ಮೊದಲುಗೊಂಡು ರೂ 1,00 ವರೆವಿಗೆ

ಕಲ್ಕತ್ತಾ ಗ್ರಾಮಫೋನ್ ಟೈಪರೈಟರ ಕಂಪನಿಯೋಣ್ಕರ ತಯಾರಿಸಿದ್ದು ನಾಯಿಮಾರ್ಕ್ ಉಳ್ಳದ್ದು ಪ್ರಪಂಚದಲ್ಲೆಲ್ಲಾ ಅತ್ಯುತ್ತಮವಾದದ್ದು ಇದಕ್ಕೆ ಉಪಯೋಗಿಸುವ ಇಂಗ್ಲಿಷ್, ಕನ್ನಡ, ಹಿಂದುಸ್ಥಾನಿ, ಮರಾಠಿ ರಿಕಾರ್ಡುಗಳು ಯಾವ ಸೈಜಿನವಾದರೂ 1 ರೂ ಮೊದಲುಗೊಂಡು ರೂ 1 12 0 ವರೆವಿಗೂ ನಮ್ಮಲ್ಲಿ ದೊರೆಯುವವು ೪೦ ರಿಂದ ರೂ 280 ರ ವರೆವಿಗೂ ಕ್ರಯಬಾಳುವ ಇಂಗ್ಲಿಷ್ ತಯಾರಿಯಾದ ಬೈಸಿಕಲ್‌ಗಳು ನಮ್ಮಲ್ಲಿ ದೊರೆಯುವವು ನಮ್ಮ ಗ್ರಾಮಫೋನ್ ಮತ್ತು ಬೈಸಿಕಲ್ಲುಗಳ ವಿಷಯವಾಗಿ ಹೆಚ್ಚು ಹೊಗಳಲಾರೆವು ಒಂದು ದಫ ತರಿಸಿಕೊಂಡು ನೋಡಿದರೆ ಗೊತ್ತಾಗುವದು ನಮ್ಮ ವಿಳಾಸ —

ಇಂಗ್ಲಿಷ್ ಟ್ರೇಡಿಂಗ್ ಕಂಪನಿ, ಬೀರೂರು

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 27

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚಕ್ಕ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ ಖರೀದಿ ಬಹಳ ಕಡಮೆ ಈ ಬಟ್ಟೆಗಳು ಕೈಮಗ್ಗದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೬ ಆಣೆ ವರೆವಿಗೂ ಚಿಲ್ಲರೆಯಾಗಿ ಆಗಲೀ ಒಟ್ಟಾಗಿ ಆಗಲೀ ಮಾರಲ್ಪಡುತ್ತದೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ

ವಿಳಾಸ—ಮ್ಯಾನೇಜರ್,

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು.

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೆಂದರೆ —ಬೆನ್ನಲ್ಲಿ ಛಳುಕು ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ ಬಳಲಿಕೆ ಎದೆ ತಲ್ಲಣಿಸುವುದು ತಲೆನೋವು, ಗಾಬರಿ ಕಣ್ಣು ಮೊಬ್ಬು ತಲೆ ತಿರುಗುವಿಕೆ, ಮೈನೋವು ಕೀಲುನೋವು ಮರವು ನಿತ್ರಾಣ ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರೋತ್ಪನ್ನವಾದ ವಾಯು ಮೈಬಾವು, ಉದುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ ರಕ್ತಾದಿ ದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [69 46]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦ ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೨೦ ಪಿ ೬ ಬಾಕ್ಸ್ ಬೊಂಬಾಯಿ —ಇವರಲ್ಲಿ ದೊರೆಯುವುದು

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು !

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 6-28

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಈ ಔಷಧವು ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ವ ರಾಟಗಾರರಲ್ಲೂ ದೊರಕುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

CHAMBERLAIN'S COLIC CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



4 28

ಕಳ ಹೊಟ್ಟೆಯ ನೋವು ಬರೀ ಭೇದಿಯಾಗುವುದು, ಅನುಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಅನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತವೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

JUST RECEIVED! JUST RECEIVED!!

Stead's Books for the Bairns

(Illustrated) New Numbers 5 7½

STEAD'S PENNY POPULAR TALES—Sixty four Pages in a coloured Picture Cover Each number contains a story of thrilling interest 24 numbers

CALENDARS FOR 1909

Apply—The Manager C L S Book Depot, Mysore City

ಸಂಜೀವಿನೀ ಔಷದಾಲಯ, ಮೈಸೂರು.

23 23

ಎಂ ಎಸ್ ಕುಮಾರ್‌ಯವರ ದಿವ್ಯೌಷಧಗಳು

ಸಂಜೀವಿನೀ ಬಿಂದು —ಮರವೆ ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ ಚರ್ಮವ್ಯಾಧಿ ಜೋಮು, ವಾಯುರೋಗಗಳೂ, ಹಳೇ ಜ್ವರ, ಕೃಶತ್ವ, ಅಜೀರ್ಣ ತಲೆನೋವು, ನೆತ್ತಿಯುರಿ, ಶಿರೋಭಾರ ಮಲಬಂಧ, ಬುದ್ಧಿಭ್ರಮಣೆ, ಮಂಕುತನ ಉರಿಮೂತ್ರ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತವೃದ್ಧಿಗಳನ್ನು ಹೆಚ್ಚಿಸಿ, ಮಾಂಸಖಂಡ, ಬಲ, ಧೈರ್ಯ, ಕಾಂತಿ ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವುದರಲ್ಲಿ ಇದು ಸಿದ್ಧೌಷಧ ಕ್ರಯ ಶೀಸೆ ೧ ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ —ನಾನಾ ಬಗೇ ಜ್ವರಗಳೂ ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨ ೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ ಕ್ಕೆ ೧ ರೂಪಾಯಿ

ಕಾಲಕೂಟವಟಿಕೆ —ಪ್ಲೇಗ್ ಗಡ್ಡೆ ಮೊದಲಾಗಿ ಎಲ್ಲಾ ತರದ ಗಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ

ಸುಮಿನೇತ್ರ ಬಿಂದು —ಉರಿಗಣ್ಣು, ಕೆಂಗಣ್ಣು, ಮಾಚಗಣ್ಣು, ತಲೆನೋವು, ಶಿರೋಭಾರ ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮಿದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮಿದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬಿಲ್ಲೆ ಊದಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೋಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು ಅರ್ಧಾಣೆ ಲೇಬಲ್ ಇಟ್ಟು ಬರೆಯಿರಿ

ಡಿ ಕೆ ಸ್ವಾಮಿ,
ಪ್ರೊಪ್ರೈಟರ್

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಜುಲೈ ತಾ 3 ಕ್ಕೆ ಅಖೈರಾದ ಒಂದು ವಾರದ ರಿಪೋರ್ಟು

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯೆ			ಕೂಲಿ ಕೊಟ್ಟದ್ದು ರೂ	ಧರ್ಮಸಹಾಯ ಪಡೆದ ಜನರು
	ಗಂಡಾಳು	ಹೆಣ್ಣಾಳು	ಮಕ್ಕಳು		
ಬೆಂಗಳೂರು	1[illegible]	174		[illegible]16	
ಕೋಲಾರ	1 243	527	108	18,991	
ತುಂಕೂರು	1 131	[illegible]90	89	2 8[illegible]3	
ಮೈಸೂರು				1,749	
ಹಾಸನ	458	946	157	3,047	
ಶಿವಮೊಗ್ಗ	84	82		346	
ಕಡೂರು	33	23		127	
ಚಿತ್ರದುರ್ಗ	241	303	20	4,941	
ಮಾರಿಕಣಿವೆ	220	304	7	601	
ಸ್ಯಾನಿಟರಿ					
ಒಟ್ಟು	4,570	2,949	391	33,139	

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಆಷಾಢ ಬಹುಳ ತ್ರಯೋದಶಿ ಗುರುವಾರದಿಂದ ಅಧಿಕ ಶ್ರಾವಣ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೯ ನೇ ಜುಲೈ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೌರಿ ಮಿಥುನ ಮಾಸ
15	ಗುರು ‡	ತ್ರಯೋದಶಿ	20 [illegible]4	ಮೃ	30 06	32
16	ಶುಕ್ರ	ಚತುರ್ದಶಿ	23 [illegible]0	ಆರ್ದ್ರ	30 58	1
17	ಶನಿವಾ §	ಅಮಾವಾಸ್ಯೆ	[illegible]3 2	ಪು	32 18	2
18	ರವಿವಾ *	ಪಾಡ್ಯಮಿ	23 34	ಪು	34 28	3
19	ಚಂದ್ರ	ಬಿದಿಗೆ	[illegible]0 20	ಶ್ಲೇ	34 40	4
20	ಕುಜ	ತದಿಗೆ	27 58	ಮಖ	19 29	5
21	ಬುಧ	ಚೌತಿ	32 28	ಪು	19 12	6

‡ ವ್ಯತೀಪಾತಯೋಗ ದಕ್ಷಿಣಾಯನಪುಣ್ಯಕಾಲ ಆದಿಶುಕ್ರವಾರ ಜ್ಯೋತಿರ್ಮಹೇಶ್ವರ ಪೂಜ

§ ಬೀಮೇಶ್ವರವ್ರತ ಸರ್ವತ್ರ ಅಮಾವಾಸ್ಯೆ, ಕಟಕೆ ತ್ರಿಗ್ರಹ ರ ಚಂ, ಶು

* ಅಧಿಕಮಾಸಾರಂಭ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ ಕ್ಕೆ	ರೂ	೧೫ ೦ ೦	೧೫ ೮ ೦
ಕೆಂಬೂತಿ ಅಕ್ಕಿ ಅವಲ್		೧೪ ೮ ೦	೧೫ ೪ ೦
,, ದುಯಂ		೧೪ ೦ ೦	೧೪ ೧೨ ೦
ಜಾಪ್ಯಾಣಿ ಅಕ್ಕಿ		೧೪ ೦ ೦	೧೬ ೦-೦
ಸಣ್ಣಕ್ಕಿ ಅವಲ್		೧೭ ೨ ೦	೧೭ ೮ ೦
,, ದುಯಂ		೧೬ ೦ ೦	೧೭ ೦ ೦
ತೊಗರೀ ಬೇಳೆ ಪಲ್ಲ ೧ಕ್ಕೆ		೧೬ ೦ ೦	೧೬ ೮ ೦
,, ದುಯಂ		೧೫ ೦ ೦	೧೬ ೦ ೦
ಹೈಕ್ ರಾಗಿ ಪಲ್ಲ ೧ಕ್ಕೆ		೯ ೪-೦	೯-೦ ೦
ಕಾರ್ರಾಗಿ		೮ ೧೨ ೦	೮ ೮ ೦
ಜೋಳ		೯ ೦ ೦	೯ ೦ ೦
ಹಲಸಂದೆ ಪಲ್ಲ ೧ಕ್ಕೆ		೧೩ ೮ ೦	೧೨ ೪ ೦
ಬೇಳೆ ಅವರೆ		೧೧ ೦ ೦	೧೪ ೦ ೦
ಹೆಸರು		೧೫ ೦-೦	೧೭ ೨ ೦
ಉದ್ದು		೧೪ ೮ ೦	೧೩ ೦ ೦
ಕಡಲೆ		೧೩ ೮-೦	೧೨-೦ ೦
ಎಳ್ಳು ಸೇ ೧೭೭ ಕ್ಕೆ		೨೨ ೮-೦	೧೮-೮ ೦
ಹುರುಳಿ		೧೧ ೧೨ ೦	೧೧ ೮ ೦
ಹರಳು ೧೨೭ ಸೇರಿಗೆ		೧೧ ೦ ೦	೧೦ ೦ ೦
ಸೀಗೇಕಾಯಿ ಮಣ ೧ಕ್ಕೆ		೨ ೮-೦	೨ ೦-೦
ಮೆಣಸಿನಕಾಯಿ		೫-೮ ೦	೪ ೮ ೦
,, ದುಯಂ		೫ ೦ ೦	೪ ೬ ೦
ಬೆಲ್ಲ ದೊಡ್ಡ ಅಚ್ಚು		೬ ೪ ೦	ಮ ೨ ೨-೦
ಒಳ್ಳೆಣ್ಣೆ ಮಣ ೧ಕ್ಕೆ		೫ ೦ ೦	೫ ೪ ೦
ಹರಳೆಣ್ಣೆ ,,		೫ ೦ ೦	೪ ೪-೦
ಕೊತ್ತುಂಬರಿ ಪಲ್ಲ ೧ಕ್ಕೆ		೯ ೪ ೦	೯ ೦-೦
ಉಪ್ಪು ,,		೬ ೪ ೦	೫-೮ ೦
ಹುಣಸೇ ಹಣ್ಣು		೩ ೦ ೦	೧ ೧೦ ೦
,, ಹಳೇದು		೧ ೮-೦	೧ ೮ ೦
ತುಪ್ಪ ಮಣ ೧ಕ್ಕೆ		೧೫ ೨ ೦	೧೩ ೮ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೪ ೦	೬ ೨ ೦
ತೆಂಗಿನಕಾಯಿ ೧೦೦ ಕ್ಕೆ		೪ ೮-೦	೪ ೪-೦
ಅಳಲೇಕಾಯಿ ಮಣ ೧ಕ್ಕೆ		೦ ೮-೦	೦ ೧೨ ೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೧ ೦ ೦	೦ ೧೩ ೦
ಚಿನ್ನ (ಪೌನ್) ಕೆಂಪು		೧೫ ೬-೦	೧೫ ೯ ೦
,, ,, ಪಸಿಮೆ		೧೬ ೦ ೦	೧೫ ೧೩-೦
,, ,, ಗಟ್ಟಿ ತೊಲ ೧ಕ್ಕೆ		೨೪-೮ ೦	೨೪ ೮-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೬೭ ೪-೦	೬೪-೮-೦

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

18—6—1909 ರಿಂದ 26—6—1909 ರ ವರೆಗೆ

ಸ್ಥಳ.		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರ ತಗಲಿದ್ದು	ಕಾಲರ ಸತ್ತದ್ದು
ಬೆಂಗಳೂರು ಪಟ್ಟಣ		0	0	0	0
ಮೈಸೂರು	,,	20	18	0	0
ಬೆಂಗಳೂರು ಡಿಸ್ಟ್ರಿಕ್ಟು		10	5	8	8
ಮೈಸೂರು	,,	31	23	0	0
ಕೋಲಾರ್	,,	0	0	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು ಡಿಸ್ಟ್ರಿಕ್ಟು		0	0	0	0
ಹಾಸನ	,,	19	7	6	6
ಚಿತ್ರದುರ್ಗ	,,	0	0	0	0
ಕಡೂರ್	,,	5	5	0	0
ಶಿವಮೊಗ್ಗ	,,	0	0	2	2
* ಸಂಖ್ಯೆ ಕಾಣಿಸಿಲ್ಲ	ಜುಮ್ಲಾ	88	58	16	16

ಸುಜ್ಞಾನ ಸೂರ್ಯೋದಯ.

[ಕಳೆದ ವಾರದ ಶೇಷ]

ನಂಜುಂ—ಮಡಿವಾಳಯ್ಯಾ, ನಮ್ಮ ಕುಟುಂಬದ ನಡತೆ ನೋಡಿ ನನಗೆ ಬಹು ಚೋದ್ಯವಾಗುತ್ತದೆ ಅಂದನು.

ಮಡಿ—ನಿಮ್ಮ ಚೋದ್ಯಕ್ಕೆ ಕಾರಣವೇನೆಂದು ಕೇಳಿದನು.

ನಂಜುಂ—ಅಯ್ಯನವರ ಪಾದಪೂಜೆಗೆ ಅಪ್ಪನ ಅಪ್ಪಣೆ ಬೇಕೋ? ಅಂದನು

ಮಡಿ—ಇದರಲ್ಲಿ ಚೋದ್ಯವೇನಿದೆ? ನಮ್ಮ ಹುಡುಗನಿಗೆ ಈ ವಿಷಯದಲ್ಲಿ ಮೊದಲೇ ಹೇಳಿದ್ದೆನು ಮತ್ತು ಶರಭಯ್ಯನವರಿಗೂ ಕೂಡ ನಮ್ಮ ಮಗನ ಕೈಯಿಂದ ಅಂಥಾ ಕಾರ್ಯಗಳನ್ನು ಮಾಡಿಸಬೇಡಿರೆಂದು ತಿಳಿಸಿದ್ದೆನು. ಆದರೆ ಅವರು ನನ್ನ ಮಾತನ್ನು ಲಕ್ಷ್ಯಮಾಡದೆ ಹೀಗೆ ಮಾಡಿದ್ದಾರೆ ಅಂದನು

ನಂಜುಂ—ಚೆನ್ನಾಗಿ ಮಾಡುತ್ತೀರಿ ಮಕ್ಕಳಿಗೆ ಚಿಕ್ಕತನದಲ್ಲಿಯೇ ಇಂಥಾ ಪಾಷಂಡಬುದ್ಧಿಯನ್ನು ಬೋಧಿಸಿದರೆ ಲೋಕದಲ್ಲಿ ಭಕ್ತಿಯು ಹೇಗೆ ವೃದ್ಧಿಯಾದೀತು? ಅಂದನು

ಮಡಿ—ಜಂಗಮರ ಪಾದಪೂಜೆ ಮಾಡದವರೆಲ್ಲರೂ ಪಾಷಂಡಮತಸ್ಥರೋ? ಜಂಗಮರು ನಮ್ಮ ಭಕ್ತಿಗೆ ಯೋಗ್ಯರಾಗಿದ್ದಾರೋ? ಜಂಗಮರಲ್ಲಿ ದಿವಂಥ ಭಕ್ತಿ ಮಾತ್ರ ಮುಖ್ಯವಾದದ್ದೋ?

ನಂಜುಂ—ಜಂಗಮನು ಜಗದ್ಧಿತ ಜಂಗಮವೇ ಈ ಲೋಕಕ್ಕೆ ಪ್ರತ್ಯಕ್ಷ ದೇವಾ ಎಂಬ ಶಾಸ್ತ್ರಸಿದ್ಧಾಂತವು ನಿಮಗೆ ಗೊತ್ತಿಲ್ಲವೋ? ಅಂದನು.

ಮಡಿ—ಏನು? ಸ್ವಾಮಿಗಳೇ, ತಮ್ಮ ವಾಕ್ಯಗಳನ್ನು ಕೇಳಿ ನನಗೆ ಅತಿ ಚೋದ್ಯವಾಗುತ್ತದೆ ಯಾಕೆಂದರೆ ಈಗಲೇ ಸ್ವಲ್ಪ ಹೊತ್ತಿನ ಮುಂಚೆ ಜಂಗಮನಾದ ಶರಭಯ್ಯನ ವಿಷಯದಲ್ಲಿ ಏನನ್ನೋ ಹೇಳಿದಿರಿ ಇಷ್ಟರಲ್ಲಿಯೇ ಅಂಥ ಜಂಗಮವೇ ಪ್ರತ್ಯಕ್ಷದೇವಾ ಜಂಗಮವೇ ಜಗದ್ಧಿತವೆಂದು ಜಂಗಮರನ್ನು ಕೊಂಡಾಡುತ್ತೀರಿ ಕಾವಿ ಧರಿಸಿದವರೆಲ್ಲರೂ ಯೋಗ್ಯರೆಂದು ಹೇಳಿದರೆ ವ್ಯಸನಪಡುತ್ತೀರೇನೋ ಅಂದನು

ನಂಜುಂ—ಶರಭಯ್ಯನಂಥ ಅಯೋಗ್ಯ ಜಂಗಮರನ್ನು ನಾನು ಹೊಗಳುವದಿಲ್ಲ. ಯೋಗ್ಯರಾದಂಥ ಜಂಗಮರ ವಿಷಯದಲ್ಲಿ ನಾನು ಹೇಳುತ್ತೇನಷ್ಟೆ ಅಂದನು.

ಮಡಿ—ಜಂಗಮರಲ್ಲಿ ಯೋಗ್ಯ ಅಯೋಗ್ಯ ಎಂಬ ಎರಡು ತರಗತಿಗಳುಂಟೋ ಈ ಎರಡು ತರಗತಿಯವರು ಬೇರೆ ಜನರಲ್ಲಿ ಇಲ್ಲವೋ? ಹಾಗೆ ಇದ್ದದ್ದಾದರೆ ಜಂಗಮರ ವಿಶೇಷತ್ವವೇನು - ಅದು ಮಾತ್ರವಲ್ಲ ಮನುಷ್ಯರಲ್ಲಿ ಎಷ್ಟು ಯೋಗ್ಯರಾಗಿದ್ದಾಗ್ಯೂ ದೋಷರಹಿತರು ಯಾರೂ ಇಲ್ಲ. ಅದರಂತೆ ಜಂಗಮರಲ್ಲಿ ಕೆಲವರು ಯೋಗ್ಯರಿರಬಹುದು. ಆದಾಗ್ಯೂ ಅಂಥವರಲ್ಲೂ ಕೂಡ ದೋಷ ಉಂಟೇ ಉಂಟು ಅಂದನು

ನಂಜುಂ—ಜಂಗಮರ ದೋಷವನ್ನು ನೆನಸಿ ಅವರನ್ನು ದೂಷಿಸಬಾರದು. ಅದೇ ಗುರುದ್ರೋಹ. ನಿಮ್ಮಂಥ ಪಂಡಿತಮತಸ್ಥರ ಮಾತನ್ನು ಕೇಳಿ ಅನೇಕರು ಜಂಗಮರ ಭಕ್ತಿಯನ್ನು ಬಿಟ್ಟಕಾರಣ ಲೋಕದಲ್ಲಿ ಮಳೆ ಬೆಳೆ ಕಡಿಮೆಯಾದವು ಅಂದನು.

ಮಡಿ—ಜಂಗಮರನ್ನು ಮಾತ್ರವಲ್ಲ, ಯಾರನ್ನೂ ದೂಷಿಸಬಾರದು ದೂಷಣೆ ಮಾಡುವವನಿಗೆ ದೋಷತಪ್ಪದು. ಆದರೆ ನಮ್ಮಂತೆ ದೋಷವುಳ್ಳಂಥ ಜಂಗಮರನ್ನಾಗಲಿ ಬೇರೆ ಯಾರನ್ನಾಗಲಿ ಗುರುವುಗಳೆಂದು ಭಾವಿಸಿ ಭಕ್ತಿ ಇಡಬಾರದು. ಹಾಗೆ ಮಾಡಿದರೆ ಅದೇ ಗುರುದ್ರೋಹ ಯಾಕೆಂದರೆ ನಿರ್ದೋಷಿಯೂ ನಿತ್ಯನೂ ಆದಂಥ ಪರಮಗುರು ಒಬ್ಬಾತನಿದ್ದಾನೆ ನಮ್ಮೆಲ್ಲರ ಭಕ್ತಿಗೆ ಆತನೇ ಯೋಗ್ಯನು. ಆತನಿಗೇನೇ ನಮ್ಮ ಹಿರಿಯರಲ್ಲಿ ಕೆಲವರು ಜಂಗಮವೆಂದು ಹೆಸರಿಟ್ಟು ಆತನನ್ನು ಭಕ್ತಿಪೂರ್ವಕವಾಗಿ ಆರಾಧಿಸಬೇಕೆಂದು ಹೇಳಿದ್ದಾರೆ, ಹ್ಯಾಗಂದರೆ—

(ಷಟ್‌ಸ್ಥಳ ವಚನಗಳು)

(1) ಜಂಗಮವು ಇಲ್ಲ ಜಗದೊಳಗೆ |
ಜಂಗಮನಲ್ಲಿ ಮೂರು ಲೋಕ ಅಡಗಿಹುದು || ಪಲ್ಲವಿ |
ಸತ್ತಲ್ಲಿಗೆ ಹೋಗಿ ಅತ್ತಾತ ಜಂಗಮವೇ? |
ಸತ್ತ ಹೆಣವನು ಮುಟ್ಟಿ ಹೊತ್ತಾತ ಜಂಗಮವೇ?
ಸುತ್ತಿದ ಬಟ್ಟೆಗಳ ತೆಗೆದುಕೊಂಬಾತ ಜಂಗಮವೇ? |
ಮತ್ತೆ ಹಸಿವು ತೃಷೆಗಳಿಗೆ ತಿರುಗುವಾತ ಜಂಗಮವೇ? |
ತುತ್ತು ಬುತ್ತಿಗೆ ಬಂದ ತೊತ್ತಿನಂಥವರು ಜಂಗಮವೇ? |
|| ಜಂಗಮವು ಇಲ್ಲ ಜಗದೊಳಗೆ ||

(2) ಜಂಗಮವಾದಮೇಲೆ ಲಿಂಗದ ಹಂಗ್ಯಾತಕಯ್ಯಾ |
ಜಗತ್ರಯಕ್ಕೆ ಜಂಗಮವೇ ಘನಲಿಂಗ |
ಈ ಜಂಗಮಕ್ಕೆ ಪಾಷಾಣವೇ ಲಿಂಗವೆಂಬ |
ಕಂಗುರುಡರ ಮಾತು ಕೇಳಬಾರದು ನೋಡಬಾರದು |
ಎಲೆಕೊಡಲಿ ಚೆನ್ನಸಂಗಮದೇವಾ ||

(3) ಮರ್ತ್ಯದೊಳಗಿನಉತ್ತಮನಹಾತ್ಮರುಗಳಾ-ನೀವುಕೇಳಿರೈಯ್ಯಾ ||
ಜಂಗಮದ ಮಹತ್ತು ಎಂತಿಪ್ಪುದೈಯ್ಯಾ |
ಜಂಗಮಲಿಂಗ ಜಗಭರಿತ ಆ ಜಂಗಮ
ಲಿಂಗ ಕಂಗಳ ಬೆಂಬಿಯಾಗಿಥಿಪ್ಪೋರೈಯ್ಯಾ
ಅಂಗನನ್ನೆಲ್ಲಾ ವಿಕಾರ ಮಾಡಿಕೊಂಡು ಒಬ್ಬರನ್ನು
ಕಾಡಿಬೇಡಿ ತಿಂಬುವ ಡೊಂಬರಿಗೆ ಜಂಗಮವೆಂತನ್ನಬೇಕಯ್ಯಾ
ಯುಕ್ತಿಯನ್ನು ಕೊಡಿಚಬನ್ನಸಂಗಮದೇವಾ |

ಆ ಶ್ರೇಷ್ಠಪರಮಗುರುವಿನ ವಿಷಯ ಮಾತಾಡುವದು ನನಗೆ ಪರಮಸಂತೋಷ ಆದರೆ ಈಗ ಹೊತ್ತಾಯಿತು. ಬಹಳ ದಿವಸಗಳಿಗೆ ತಮ್ಮ ಭೇಟಿಯಾದದರಿಂದಲೂ ಈ ಉತ್ತಮ ಸಂಗತಿಗಳ ವಿಷಯವಾಗಿ ತಮ್ಮ ಸಂಗಡ ಈ ಪರಿಯೂ ಮಾತಾಡಿದದರಿಂದಲೂ ನನಗೆ ಅಮೃತಬಂದಷ್ಟು ಆನಂದವಾಯಿತು ಈಗ ಹೋಗಿ ಬನ್ನಿರೆಂದು ಹೇಳಿ ಮಡಿವಾಳೈಯ್ಯನು ತಮ್ಮ ಎರಡು ಕರಗಳನ್ನು ಜೋಡಿಸಿ ಶರಣುಮಾಡಲು ನಂಜುಂಡೈಯ್ಯನು ಶರಣಿಗೆ ಪ್ರತಿಶರಣು ಮಾಡಿ ಎದ್ದು ತಮ್ಮ ಸ್ವಸ್ಥಳಕ್ಕೆ ತೆರಳಿದನು

II ಕೆಲವರ ಸಂಗಡ ಮಡಿವಾಳೈಯ್ಯನು ಮಾಡಿದ ಸಂಭಾಷಣೆ.

ಪರಮಗುರುವನ್ನು ಕುರಿತು.

ಮಡಿವಾಳೈಯ್ಯನ ನೂತನವಾದ ತಾತ್ಪರ್ಯಗಳಿಗೆ ನಂಜುಂಡೈಯ್ಯನು ಒಪ್ಪಿಕೊಳ್ಳದಿದ್ದರೂ ಮಡಿವಾಳೈಯ್ಯನ ವಿಷಯವಾಗಿ ಆತನಿಗಿದ್ದ ಅಭಿಪ್ರಾಯವು ಬದಲಾಯಿತು. ಹ್ಯಾಗಂದರೆ—ಮಡಿವಾಳೈಯ್ಯನ ಮೇಲಿದ್ದ ತನ್ನ ಅತ್ಯಂತ ಸಿಟ್ಟನ್ನು ಬಿಟ್ಟು ತಿರಿಗಿ ಆತನ ಸ್ನೇಹವನ್ನು ಬಯಸಿದನು ಮತ್ತು ಮಡಿವಾಳೈಯ್ಯನ ವಿಷಯದಲ್ಲಿ ಜನರು ಹೇಳುತ್ತಿದ್ದಂಥ ಸುದ್ದಿಗಳು ಬರೇ ಸುಳ್ಳೇ ನೊರ್ತು ಆತನ ಯೋಗ್ಯವಾದ ಪುರುಷನೇ ಎಂದು ಗ್ರಹಿಸಿಕೊಂಡನು ಇದಲ್ಲದೆ ಆತನಿಗೆ ಏನೋ ಒಂದು ಮುಖ್ಯವಾದ ಗುರಿ ಇದ್ದ ಹಾಗೆ ಕಾಣುತ್ತದೆ. ಅದನ್ನು ತಾನು ತಿಳಿದುಕೊಳ್ಳುವದಕ್ಕೆ ಅಪೇಕ್ಷಿಸಿದನು ಆದರೆ ನಾನು ಪದೇಪದೇ ಆತನ ಮನೆಗೆ ಹೋದರೆ ಜನರು ಏನಂದಾರು? ಎಂದು ನೆನಸಿ ಕೆಲವು ದಿವಸಗಳ ವರಿಗೂ ಹೋಗಲಿಲ್ಲ. ಆದರೆ ಒಂದು ದಿನ ಮಧ್ಯಾಹ್ನ ಗ್ರಾಮದ ಚಾವಡಿಯಲ್ಲಿ ಆ ಊರ ವೀರಭದ್ರಗೌಡನೂ ಸಾಹುಕಾರ ರುದ್ರಪ್ಪನೂ ಗಾಣಿಗರ ಮುದ್ದಪ್ಪನೂ ಇನ್ನೂ ಕೆಲವು ದೊಡ್ಡ ಮನುಷ್ಯರೂ ಕೂತಿರುವದನ್ನು ಕಂಡು ನಂಜುಂಡೈಯ್ಯನು ಅವರ ಬಳಿಗೆ ಹೋಗಿ ಮಡಿವಾಳೈಯ್ಯನ ಪ್ರಸ್ತಾಪವನ್ನು ಎತ್ತಿದನು. ಅದಕ್ಕೆ ಸಾಹುಕಾರ ರುದ್ರಪ್ಪ ಕೆಟ್ಟವರ ಹೊಟ್ಟೆ ನೋಡು ಎಂಬಂತೆ ಆತನ ಪ್ರಸ್ತಾಪ ನಮಗ್ಯಾತಕ್ಕೆ ಅಂದನು. ನಂಜುಂಡೈಯ್ಯನು ಮೊದಲು ನಾನು ಸಹ ಹೀಗೆಯೇ ನೆನಸಿದ್ದೆನು. ಆದರೆ ಕೆಲವು ದಿವಸಗಳ ಹಿಂದೆ ನಾನು ಆತನನ್ನು ಸಂಧಿಸಿ ಬಹಳ ಹೊತ್ತು ಆತನ ಸಂಗಡ ಮಾತಾಡಿದದರಿಂದ ಆತನ ವಿಷಯದಲ್ಲಿ ನನಗೆ ಬಹಳ ಆಶ್ಚರ್ಯವಾಯಿತು. ಈಗ ನಾವೆಲ್ಲರೂ ಆತನ ಮನೆಗೆ ಹೋಗಿ ಸ್ವಲ್ಪ ಹೊತ್ತು ಮಾತಾಡಿದರೆ ಆತನ ವಿಷಯ ಇನ್ನೂ ಹೆಚ್ಚಾಗಿ ತಿಳಿದುಕೊಳ್ಳಬಹುದು ಅಂದನು.

ವೀರಭದ್ರಗೌಡನು—ನಾನು ಸಹ ಆತನ ವಿಷಯದಲ್ಲಿ ಏನೇನೋ ಸುದ್ದಿಗಳನ್ನು ಕೇಳಿದ್ದೇನೆ ಈಗ ತಕ್ಕ ಸಮಯವಾಗಿದೆ ನಾವೆಲ್ಲರೂ ಆತನ ಮನೆಗೆ ಹೋಗೋಣ ಬನ್ನಿರೆಂದು ಎದ್ದು ಹೊರಟಕಾರಣ ಅಲ್ಲಿದ್ದವರೆಲ್ಲರೂ ಆ ಗೌಡನ ಹಿಂದೆ ಹೊರಟರು ಆ ದಿವಸ ಭಾನುವಾರವಾಗಿದ್ದದರಿಂದ ಮಡಿವಾಳೈಯ್ಯನು ತನ್ನ ಕುಟುಂಬರ ಸಂಗಡ ದೇವಾರಾಧನೆ ಮಾಡಿ ಊಟ ತೀರಿಸಿಕೊಂಡು ತಮ್ಮ ಪಡಸಾಲೆಯಲ್ಲಿ ಕುಟುಂಬಸಹಿತವಾಗಿ ಕೂತುಕೊಂಡಿರುವಾಗ ಅವರ ಜ್ಯೇಷ್ಠ ಪುತ್ರಿಯಾದ ಕಲ್ಯಾಣಮ್ಮನು ಸಂತೋಷಕ್ಕಾಗಿ ಜ್ಞಾನಕೀರ್ತನೆಯನ್ನು ಹಾಡುತ್ತಿದ್ದಳು ತಂದೆ ತಾಯಿಗಳಿಬ್ಬರೂ ಮಗಳ ಇಂಪಾದ ಸ್ವರಕ್ಕೆ ಆನಂದಪಟ್ಟು ಆಲಿಸುತ್ತಾ ಕೂತಿರುವಾಗ ನಂಜುಂಡೈಯ್ಯನೂ ವೀರಭದ್ರಗೌಡನೂ ಆ ಮೊದಲಾದವರೆಲ್ಲರೂ ಬಂದದ್ದನ್ನು ಕಂಡು ಹಾಡುವದನ್ನು ನಿಲ್ಲಿಸಿದಳು ಮಡಿವಾಳೈಯ್ಯನು ಅವರೆಲ್ಲರನ್ನೂ ತಕ್ಕ ಮರ್ಯಾದೆಯಿಂದ ಕೂಡ್ರಿಸಿ ಕುಶಲವಾಕ್ಯಗಳಿಂದ ಕ್ಷೇಮಲಾಭಗಳನ್ನು ವಿಚಾರಿಸಿದನಂತರ ವೀರಭದ್ರಗೌಡನು ನಿಮ್ಮ ಮಗಳಿಗೆ ಓದು ಬರುತ್ತದೋ ಎಂದು ಕೇಳಿದ್ದಕ್ಕೆ ಮಡಿವಾಳೈಯ್ಯನು ಹೌದು ಫಸ್ಟುಫಾರಂ ಪಾಸ್ ಮಾಡಿದ್ದಾಳೆ ಅಂದನು ಬಹಳ ಸಂತೋಷ ಆ ಕೀರ್ತನೆಯನ್ನು ತಿರಿಗಿ ಹಾಡಿದರೆ ಮಹಾ ಉಪಕಾರವೆಂದು ವೀರಭದ್ರಗೌಡ ಕೇಳಿದಾಗ ಮಡಿವಾಳೈಯ್ಯನು ಅಪ್ಪಣೆಮಾಡಲು ಕಲ್ಯಾಣಮ್ಮನೂ ಆಕೆಯ ತಮ್ಮನೂ ಆ ಕೀರ್ತನೆಯನ್ನು ಹಾಡುವದಕ್ಕೆ ಆರಂಭಮಾಡಿದರು. ಆ ಕೀರ್ತನೆ ಯಾವದೆಂದರೆ—

ರಾಗ ಆನಂದಭೈರವಿ.]   [ಅಟ್ಟತಾಳ

ಗುರುಯೇಸು ಕ್ರಿಸ್ತನ ನೋಡು—ನಂಬಿ ನೋಡು—ಅವನ |
ಚರಣಕ್ಕೆರಗಿ ಪಾಪ ಮನ್ನಣೆ ಬೇಡು | || ಪಲ್ಲವಿ ||

(1) ಸರುವ ಸೃಷ್ಟಿಗೆನು ತಾನೇ—ಕರ್ತ ತಾನೇ—ನಿತ್ಯ
ಪರಿಪಾಲಿಸುವ ಮಹಾ ದೇವರು ತಾನೇ |

(2) ಧರೆಯಲ್ಲಿ ನರನಾಗಿ ಜನಿಸಿ—ಕ್ಷೇಮ ತರಿಸಿ—ದಿವ್ಯ
ವರಗಳ ನೀಡಿದ ನೆಲ್ಲರ ಹರಸಿ

(3) ದುರುಳ ರಕ್ಕಸರಿಗಳ ಪಟ್ಟ—ಘಾಯಪಟ್ಟ—ಘೋರ
ನರಕ ತಪ್ಪಿಸೆ ತನ್ನ ಪ್ರಾಣವ ಕೊಟ್ಟ ||

(4) ಪರಿಶುದ್ಧನಾಗಿರ್ಪ ಸ್ವಾಮಿ—ಪುಣ್ಯಕಾಮಿ—ಎಲ್ಲಾ
ದುರಿತವ ಕೆಡಿಸುವರಲ್ಲಿ ಸುಪ್ರೇಮಿ |

(5) ಚಿರಕಾಲ ಬಾಳುವ ಸ್ವಪ್ರಭುವು—ಸತ್ಯ ವಿಭುವು—ಆತ |
ನಿರುತ ಬೇಸಾದರೂ ಕೆದಲದ ಪ್ರಭುವು ||

(6) ನರರಲ್ಲಿ ಗುರುವಿಲ್ಲ ನಿನಗೆ—ಸಾಕಿ ನಿನಗೆ—ಇವನ |
ಹೊರತು ರಕ್ಷಕರಿಲ್ಲ ವೆಲ್ಲಿಯೂ ಇಳೆಗೆ ||

(7) ತ್ವರೆಯಾಗಿ ಹಿಡಿಗುರು ಪದವಾ—ಹೊಂದು ಮುದವಾ—ಪೂರ್ಣ |
ಹರುಷದಿಂ ದೀವನು ಮುಕ್ತಿಯ ಪದವಾ ||

(8) ಸ್ಥಿರಸಮಾಧಾನವ ಕೊಡುವ—ಕೋಪ ಬಿಡುವ—ಮುಂದೆ |
ಪರಲೋಕ ರಾಜ್ಯದ ವಾಸದೊಳಿಡುವ ||

ವೀರಭದ್ರಗೌಡ—ಈ ಕೀರ್ತನೆಯಲ್ಲಿ ವರ್ಣಿಸಲ್ಪಟ್ಟಿರುವಂಥ ಯೇಸುಕ್ರಿಸ್ತನು ಯಾರು? ಎಂದು ಕೇಳಿದನು

ಮಡಿ—ಯೇಸುಕ್ರಿಸ್ತನು ಸರ್ವಸೃಷ್ಟಿಗಳ ಕರ್ತನೂ ಅವುಗಳ ಪರಿಪಾಲಕನೂ ಆಗಿರುವಂಥ ಮಹಾದೇವರು ತಾನೇ ಆಗಿದ್ದಾಗ್ಯೂ ದುರಿತಭರಿತರಾದ ಮಾನವರನ್ನು ರಕ್ಷಿಸುವದಕ್ಕೂ ಉದ್ಧಾರ ಮಾಡುವದಕ್ಕೂ ೧೯೦೯ ವರುಷಗಳ ಹಿಂದೆ ನಮ್ಮ ವಿಷ್ಯ ಖಂಡಕ್ಕೆ ಸೇರಿದ ಪಾಲಸ್ತೀನ್ ಎಂಬ ದೇಶದಲ್ಲಿ ಮನುಷ್ಯಾವತಾರ ತಾಳಿ ಬಂದನು. ಆತನಿಗೆ ಕ್ರೈಸ್ತರ ವೇದದಲ್ಲಿ ಹಲವು ಉಪಮಾನಗಳ ಹೆಸರುಗಳಿದ್ದಾಗ್ಯೂ ಅವುಗಳಲ್ಲಿ ಯೇಸುಕ್ರಿಸ್ತನೆಂಬ ಹೆಸರು ಮುಖ್ಯವಾದದ್ದು ಸುಮಾರು ಮೂವತ್ತುಮೂರು ವರುಷಗಳ ವರಿಗೂ ಆತನು ಈ ಲೋಕದಲ್ಲಿದ್ದು ಆ ದೇಶವನ್ನೆಲ್ಲಾ ಸಂಚರಿಸಿ ಬಡವರೂ, ಬಲ್ಲಿದರೂ, ಊಚರೂ, ನೀಚರೂ, ಎಂಬ ಪಕ್ಷಪಾತವಿಲ್ಲದೆ ಸಕಲರಿಗೂ ಸುಬೋಧಾಮೃತವನ್ನು ಸಾರಿದ್ದಲ್ಲದೆ ಅನೇಕ ರೋಗಿಷ್ಠರನ್ನೂ ಅಂಗಹೀನರನ್ನೂ, ತನ್ನ ವಾಕ್‌ಶಕ್ತಿಯಿಂದಲೇ ಸ್ವಸ್ಥ ಮಾಡಿದನು. ಕಡೆಯಲ್ಲಿ ನರರ ಪಾಪಪರಿಹಾರಾರ್ಥವಾಗಿ ಯಜ್ಞಮರಣವನ್ನು ತಾಳಿ ತಿರಿಗಿ ಮೂರು ದಿವಸಗಳಮೇಲೆ ಸಮಾಧಿಯಿಂದ ಮೃತ್ಯುಂಜಯನಾಗಿ ಎದ್ದು ಇಂದು ಸುಮಾರು ನಾಲ್ವತ್ತು ದಿವಸಗಳ ವರಿಗೂ ಈ ಲೋಕದಲ್ಲಿದ್ದು ತನ್ನ ಶಿಷ್ಯರಿಗೆ ನೀವು ಚತುರ್ದಿಕ್ಕುಗಳಿಗೂ ಹೋಗಿ ಸಕಲ ಮನುಷ್ಯರಿಗೂ ಈ ನನ್ನ ಶುಭವರ್ತಮಾನವನ್ನು ಸಾರಿ ಎಂದು ಅಪ್ಪಣೆಕೊಟ್ಟು ಸ್ವರ್ಗಕ್ಕೆ ಏರಿ ಹೋದನು.

ವೀರಭದ್ರಗೌಡ—ನೀವು ಆತನಿಗೆ ಯೇಸುಕ್ರಿಸ್ತನೆಂದು ಹೇಳುತ್ತೀರಿ. ನಾವು ಅಂಥಾತನಿಗೆ ಗುರುವು ಎಂದು ಹೇಳುತ್ತೇವೆ. ಭಂಗಾರಕ್ಕೆ ಕೆಲವರು ಚಿನ್ನವೆಂದೂ ಇನ್ನೂ ಕೆಲವರು ಅಪರಂಜಿಯೆಂದೂ ಹೇಳಬಹುದಷ್ಟೆ ಹೀಗೆ ಭಂಗಾರಕ್ಕೆ ಎರಡು ಹೆಸರುಗಳಿದ್ದಾಗ್ಯೂ ವಸ್ತು ಒಂದೇ ಅಲ್ಲವೇ ಅಂದನು.

ಮಡಿ—ಭಂಗಾರಕ್ಕೆ ಎರಡು ಹೆಸರುಗಳನ್ನು ಮಾತ್ರವಲ್ಲ ಹಲವು ಹೆಸರುಗಳನ್ನು ಹೇಳಬಹುದು ಆದರೆ ಭಂಗಾರದ ಅಕ್ಷರಗಳಿಲ್ಲದಂಥ ಹಿತ್ತಾಳೆಗೆ ಭಂಗಾರಕ್ಕಿರುವಂಥ ಹೆಸರುಗಳಲ್ಲಿ ಒಂದು ಹೆಸರನ್ನು ಅದಕ್ಕಿಟ್ಟರೆ ಆ ಹೆಸರು ಮಾತ್ರದಿಂದ ಹಿತ್ತಾಳೆ ಹೋಗಿ ಭಂಗಾರವಾಗಲಾರದು. ಅದರಂತೆ ಗುರುಲಕ್ಷಣಗಳಿಲ್ಲದಂಥ ಮಾನವರಲ್ಲಿ ಯಾರಿಗಾದರೂ ಗುರುವೆಂದು ಹೆಸರಿಟ್ಟು ಸನ್ಮಾನ ಮಾಡಿದರೆ ಆ ಹೆಸರು ಮಾತ್ರದಿಂದ ನರನು ಗುರುವಾಗಲಾರನು

ಪರಮಪಾವನನ ಗುರುವೆಂದು ಅರಿಯದೆ |
ನರರುಗಳ ಪಾದ ಹಿಡಿದ ಕಾರಣದಿಂದ
ಬರಿದೇ ಬಹು ರೋಗಕೆಂಡಾನು
ಗುರುರಾಯ, ಚನ್ನಬಸವಣ್ಣಾ, ಎಂದು ಮೌನಪ್ಪಯ್ಯನ ವಚನ ಉಂಟಲ್ಲ ||

[ಸಶೇಷ]

ಬೀರೂರಿನ ಅನಾಥಾಲಯವು.

ಇದೇ ತಿಂಗಳು ೪ ನೇ ಭಾನುವಾರ ಬೀರೂರು ಎ. ವಿ. ಸ್ಕೂಲು ಕಟ್ಟಡದಲ್ಲಿ ಒಂದು ಸಭೆಯು ಜರುಗಿತು. ಕಡೂರು ಅಮಲ್ದಾರ್ ಮ|| ರಾಮಚಂದ್ರರಾಯರೂ, ಕಡೂರು ತಾಲ್ಲೂಕು ಕಚೇರಿಯವರೂ, ಇಲ್ಲಿಯ ಮುನಿಸಿಪಲ್ ಮೆಂಬರುಗಳೂ, ಮುಂತಾಗಿ ವೈದಿಕ, ಲೌಕಿಕ ಮಹನೀಯರು ದಯಮಾಡಿಸಿದ್ದರು ಅಮಲ್ದಾರರೇ ಮುಂತಾಗಿ ಸರ್ವರೂ ಮಧ್ಯಾಹ್ನ ೩|| ಗಂಟೆಗೆ ಅನಾಥಾಲಯಕ್ಕೆ ದಯಮಾಡಿ, ಅನಾಥ ಬಾಲಕರಿರುವ ಸ್ಥಿತಿಯನ್ನು ನೋಡಿ ಸಂತುಷ್ಟರಾಗಿ, ಆಲಯದ ಮತ್ತು ಉಪಾಸನಾಸಮಾಜದ ಲೆಕ್ಕಗಳನ್ನು ಪರಾಂಬರಿಸಿ, ಪ್ರೆಸಿಡೆಂಟರೇ ಮುಂತಾಗಿ ಎಲ್ಲಾ ಮೆಂಬರುಗಳು ಕಷ್ಟಪಟ್ಟು ಈ ಕೆಲಸದಲ್ಲಿ ಹೆಚ್ಚು ಮುತುವರ್ಜಿ ವಹಿಸಿರುವುದನ್ನು ನೋಡಿ ತಮ್ಮ ಆನಂದವನ್ನು ಪ್ರದರ್ಶಿಸಿದರು. ಅನಂತರ ಬಂದಿದ್ದವರೆಲ್ಲರಿಗೂ ಫಲಾಹಾರಗಳು ಹಂಚಲ್ಪಟ್ಟವು ಸಾಯಂಕಾಲ ೪ ಗಂಟೆಗೆ ಎ. ವಿ. ಸ್ಕೂಲು ಕಟ್ಟಡದಲ್ಲಿ ಸಭೆಯು ಸೇರಿಸಲ್ಪಟ್ಟಿತು ಸಭಿಕರ ಅಪೇಕ್ಷೆಯಂತೆ ಅಮಲ್ದಾರರವರು ಅಗ್ರಾಸನವನ್ನಲಂಕರಿಸಿದರು

ಗರಲ್ಸ್ ಸ್ಕೂಲ್ ಹೆಡ್ಮಾಸ್ಟರ್ ಮ|| ವಲ್ಲಭ ಐಯ್ಯಂಗಾರ್ಯರು ಪಾಠಶಾಲೆಯ ಮತ್ತು ಉಪಾಸನಾಸಮಾಜದ ರಿಪೋರ್ಟನ್ನು ಓದಿ ಅನಾಥಾಲಯದ ವಿಷಯದಲ್ಲಿ ಹೇಳಿದ್ದೇನೆಂದರೆ—"ವೈಶ್ಯಸಭಾಕಾರ್ಯಕ್ಕಾಗಿ ರಾಜಧಾನಿಗೆ ಈ ಊರಿನಿಂದ ಹೋಗಿದ್ದವರಲ್ಲೊಬ್ಬರಾದ ಮ|| ಪರೀದಿ ನಾಗಶೆಟ್ಟರು ಕೆಲವು ದಿನಗಳಿಂದಲೂ ಧರ್ಮಕಾರ್ಯಪ್ರವರ್ತಕರಾಗಬೇಕೆಂಬ ಆಕಾಂಕ್ಷೆಯನ್ನು ಎದುರು ನೋಡುತ್ತಿದ್ದರು. ಇವರು ಅನಾಥಾಲಯವನ್ನು ಸ್ಥಾಪಿಸಿ ಲಭ್ಯವಾಗ ಬಹುದಾದ ಅನಾಥ ಬಾಲಕರ ಸಂಗ್ರಹದಿಂದ ಉದ್ದೇಶ್ಯ ಕಾರ್ಯ ಪೂರ್ಣವಾಗಬೇಕೆಂದು ನಿರ್ಧರಮಾಡಿಕೊಂಡು ಇದನ್ನು ವೈಶಾಖಶುದ್ಧ ೧೩ (೩-೫-೦೯) ರಲ್ಲಿ ಸ್ಥಾಪಿಸಿದರು. ಈ ಆಲಯವು ಸ್ಥಾಪನಾಕಾಲ ೩ ಬಾಲಕರಿಂದ ಅಲಂಕೃತವಾಗಿದ್ದು, ಈವರೆಗೆ ೯ ಬಾಲಕರ ವರೆಗೆ ಅಭಿವೃದ್ಧಿಯನ್ನು ಹೊಂದಿ, ಕಾರಣಾಂತರಗಳಿಂದ ತಪ್ಪಿಹೋದ ೨ ಬಾಲಕರು ವಿನಹ ೭ ಬಾಲಕರು ಪ್ರಕೃತ ಪೋಷಣೆಯಲ್ಲಿ ವಿದ್ಯಾಕಾಲಕ್ಷೇಪವನ್ನು ಮಾಡುತ್ತಿದಾರೆ. ಈ ಪೈಕಿ ೬ ಬಾಲಕರು ಕ್ರಮವಾಗಿ ತಾಯಿತಂದೆಯುಳ್ಳವರಾಗಿಯೂ, ಒಬ್ಬ ಬಾಲಕನು ದಾಯಿಲಾಗತಕ್ಕವನಾಗಿಯೂ ಇರುತ್ತಾನೆ ಈ ಅನಾಥಾಲಯ ಸ್ಥಾಪನಾ ಉದ್ದೇಶ್ಯಕಾಲ ಉಪೇಕ್ಷಿಸಿದ್ದ ಕಟ್ಟಡವು ಕಾರಣಾಂತರದಿಂದ ತಪ್ಪಿ ಹೋಗುತ್ತಿಂಟ ಅಂದ ಸ್ಥಾಪನಾಕಾಲ ತಿಳಿಯಬಂದು ಈ ಆಲಯದ ಅಧ್ಯಕ್ಷರಾದ ಮ|| ತಂಗಿ ನಲ್ಲಾಯ್ಯಂಗಾರ್ಯರು ನೂತನ ಕಟ್ಟಡ ಕಟ್ಟುವ ಪರಿಯಂತ ಈ ಕಟ್ಟಡದಲ್ಲಿಯೇ ಉದ್ದೇಶ್ಯ ಕಾರ್ಯವನ್ನು ನೆರವೇರಿಸಿಕೊಂಡು ಬರಬಹುದೆಂದು ಉದಾರಚಿತ್ತದೊಡನೆ ಆಶ್ರಯ ಕೊಟ್ಟರು ಹೀಗಿರುವಲ್ಲಿ ಈಗ್ಗೆ ಕೆಲವು ದಿವಸಗಳ ಮುಂಚೆ ಈ ಡಿಸ್ಟ್ರಿಕ್ಟು ಡೆ|| ಕ. ಸಾಹೇಬರವರ ಸವಾರಿಯು ಈ ಆಲಯವನ್ನಲಂಕರಿಸಿತ್ತು. ಆ ಸಮಯದಲ್ಲಿ ಈ ಕಟ್ಟಡದ ವಿಷಯ ವಿಜ್ಞಾಪಿಸಲಾಗಿ ಅಪೇಕ್ಷಿತ ಸ್ಥಳವನ್ನು ವಿಚಾರ ಮಾಡಿ ನ ಅನುಕೂಲಪಡಿಸಿಕೊಡುವುದಾಗಿ ಅಪ್ಪಣೆ ದಯಪಾಲಿಸಿದರು. ಸ್ಕೂಲುಗಳ ಡೆ|| ಇನ್ಸ್ಪೆಕ್ಟರ್ ಮ|| ವೆಂಕಟರಮಣಯ್ಯನವರೂ, ಈ ಸರ್ಕಲ್ ಇನ್|| ಮ|| ಶ್ರೀನಿವಾಸರಾಯರೂ ಈ ಆಲಯಕ್ಕೆ ದಯಮಾಡಿ ತಮ್ಮ ಅಭಿಪ್ರಾಯವನ್ನು ಅಪ್ಪಣೆ ಕೊಡಿಸಿದಾರೆ. ಈ ಊರು ಈ ತಾಲ್ಲೂಕಿಗೆ ಸಂಬಂಧಪಟ್ಟ ದ್ರಾದ್ರಿಂದ ಶಾಲೆ ಕಟ್ಟಡವನ್ನು ಕಟ್ಟಲು ಬೇಕಾಗಿರುವ ಜಾಗದ ವಿಚಾರವನ್ನು ಪ್ರಕೃತ ದಯಮಾಡಿಸಿರುವ ಅಮಲ್ದಾರರವರು ಘನವಾದ ಚಿತ್ತಕ್ಕೆ ತಂದು ಅದಷ್ಟು ಬೇಗನೆ ಸಾಧ್ಯಪಡಿಸದೆ ಇರಲಾರರೆಂಬುವದು ಮೆಂಬರುಗಳ ಪ್ರಾರ್ಥನೆಯಾಗಿದೆ"

ಅನಂತರ ಅಗ್ರಾಸನಾಧಿಪತಿಗಳು ಪ್ರಕೃತೋಚಿತ ವಾಕ್ಯಗಳನ್ನು ಅಪ್ಪಣೆ ಕೊಡಿಸಿದರು. ಗಾಯನ ಶಿರೋಮಣಿಗಳು ಬರಮಾಡಲ್ಪಟ್ಟಿದ್ದು ಸಭಾಜನರನ್ನು ಆನಂದಗೊಳಿಸಿದರು. ಬಳಿಕ ಸರ್ವರಿಗೂ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟು ಸಭೆಯು ೭ ಗಂಟೆಗೆ ಬರಖಾಸ್ತಾಯಿತು,

ಪ್ರತ್ಯಕ್ಷದರ್ಶಿ.

ವೃತ್ತಾಂತ ಪತ್ರಿಕೆ.

ಸನ್ ೧೯೦೯ ನೇ ಇಸವಿ ಜೂಲೈ ತಾ, ೧೫ ನೇ ಗುರುವಾರ

ಮುಸಲ್ಮಾನ ದೇಶಗಳ ರಾಜ್ಯಭಾರ ಕ್ರಮವು

ಪ್ರಪಂಚದ ಎಲ್ಲಾ ಭಾಗಗಳೂ ಅಭಿವೃದ್ಧಿಗೆ ಬರಬೇಕೆಂದು ಕುತೂಹಲಪಡುತ್ತಿರುವವರು ತುರ್ಕಿಯಲ್ಲೂ ಪರ್ಷಿಯಾದಲ್ಲೂ ನಡೆಯುತ್ತಿರುವ ಉದ್ಯಮಗಳನ್ನು ನೋಡಿ ಅವುಗಳ ಫಲಪರಿಣಾಮವು ಹೇಗಾಗುವುದೋ ಎಂದು ಬಹು ಆತುರದಿಂದಲೂ ಚಕಿತಚಿತ್ತರಾಗಿಯೂ ಇರುತ್ತಾರೆ. ಎರಡೂ ಮಹಮ್ಮದೀಯರ ರಾಜ್ಯಗಳಾಗಿವೆ, ಎರಡರಲ್ಲೂ ಬಹು ವಿಶೇಷವಾದ ರಾಜಕೀಯ ಬದಲಾವಣೆಗಳು ನಡೆಯುತ್ತಿರುವವು.

ಮೊದಲನೆಯದಾಗಿ, ತುರ್ಕಿ ರಾಜ್ಯದೊಳಗೆ ಸುಲ್ತಾನರೂ ರಾಜ್ಯಭಾರ ಕ್ರಮಗಳೂ ರೂಪಾಂತರ ಮಾಡಲ್ಪಟ್ಟವು. ಇದಕ್ಕಾಗಿ ವಿಶೇಷವಾದ ಜಗಳ ಕದನಗಳಾಗಲಿ ರಕ್ತಪ್ರವಾಹವಾಗಲಿ ಸಂಭವಿಸಲಿಲ್ಲ. ಸುಲ್ತಾನ್ ಅಬ್ದುಲ್ ಹಮೀದ್ ಯವರನ್ನು ಸಿಂಹಾಸನದಿಂದ ಇಳಿಸಿ, ಅವರ ಸಹೋದರಗೆ ಪಟ್ಟ ಕಟ್ಟಿರುತ್ತಾರೆ. ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಪಾರ್ಲಿಮೆಂಟ್ ಸಭೆಯನ್ನು ಮಾಡಿಕೊಂಡು ಕಾನೂನುಗಳನ್ನು ಮಾಡಿ ರೂಢಿಸಬೇಕೆಂದು ಸಾಹಸಪಡುತ್ತಿದ್ದಾರೆ. ಅಂತು ತುರ್ಕಿಯಲ್ಲಿ ಈಗ ಹೊಸ ರೂಪದ ಗವರ್ನ್‌ಮೆಂಟು ಏರ್ಪಾಡಾಗಿ ಆಳ್ವಿಕೆಯ ಕಾರುಬಾರುಗಳು ನಡೆಯುತ್ತಿರುವವು. ಲಂಚಕೋರರೂ ಪ್ರಜಾಕಂಟಕರೂ ಆಗಿದ್ದ ಅನೇಕಾನೇಕ ಅಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಿದರು, ಕೆಲವರನ್ನು ಹಿಡಿದು ದಸ್ತಾಮಾಡಿ ಶಿಕ್ಷೆ ವಿಧಿಸಿದರು, ಇನ್ನು ಕೆಲವರನ್ನು ಗಲ್ಲಿಗೆ ಹಾಕಿ ಕೊಲ್ಲಿಸಿಬಿಟ್ಟರು.

ಇಷ್ಟೆಲ್ಲಾ ನಡೆದಿದ್ದಾದರೂ ತುರ್ಕಿ ರಾಜ್ಯದಲ್ಲಿ ಇನ್ನೂ ನೆಮ್ಮದಿಯಾಗಲಿ ಕ್ಷೇಮಾಭಿವೃದ್ಧಿಯಾಗಲಿ ನೆಲೆಗೊಂಡಿಲ್ಲ. ಇದಕ್ಕೆ ಇನ್ನೂ ಬಹಳ ಸಾಹಸಪೂರ್ವಕವಾದ ಅನೇಕ ಕಾರ್ಯಗಳು ನಡೆಯಬೇಕಾಗಿರುತ್ತವೆ. ಮೊದಲಿದ್ದ ಗವರ್ನ್‌ಮೆಂಟಿನವರ ದೆಸೆಯಿಂದ ಮುಸಲ್ಮಾನರಿಗೂ ಕ್ರೈಸ್ತರಿಗೂ ದ್ವೇಷ ಹಗೆತನಗಳು ಹೆಚ್ಚುತ್ತಾ ಬಂದವು. ಏಷ್ಯಾಮೈನರ್ ಎಂಬ ಅಧಿಸತ್ಯದೊಳಗೆ ಅನೇಕಾನೇಕ ಆರ್ಮೀನಿಯಾ ಪ್ರಜೆಗಳು ಕಷ್ಟ ನಷ್ಟ ಕ್ರೂರಹಿಂಸೆಗಳಿಗೆ ಗುರಿಮಾಡಲ್ಪಟ್ಟಿದ್ದಾರೆ. ಅದಾನಾ ಮೊದಲಾದ ಭಾಗಗಳಲ್ಲಿ ದಂಗೆಗಳು ಹುಟ್ಟಿ ಮುಸಲ್ಮಾನರು ಕ್ರೈಸ್ತ ಪ್ರಜೆಗಳ ಮೇಲೆ ಬಿದ್ದು ಅನೇಕರನ್ನು ಗುಂಡು ಹೊಡೆದು ಕೊಂದುಹಾಕಿದರು, ಅವರು ತಲೆತಪ್ಪಿಸಿಕೊಂಡು ಹೋಗಿ ದೇವಾಲಯಗಳೊಳಗೆ ಸೇರಿಕೊಂಡಾಗ ಕಟ್ಟಡಗಳಿಗೆ ಬೆಂಕಿಹಾಕಿ ಒಳಗಿದ್ದವರನ್ನು ದೇವಸಹಿತ ಸುಟ್ಟುಬಿಟ್ಟರು. ಈ ಪ್ರಕಾರ ಸಾವಿರಾರು ಕ್ರೈಸ್ತ ಪ್ರಜೆಗಳು ಹತರಾದರು. ಇವರಲ್ಲಿ ಅನ್ಯೋನ್ಯರದಿಂದ ಒಂದ ವಿಷನರಿಗಳಿಬ್ಬರೂ ಕೊಲ್ಲಲ್ಪಟ್ಟರು. ಇಂಥಾ ಕೃತ್ಯಗಳನ್ನು ಮತಭ್ರಾಂತರೂ ಕ್ರೂರಿಗಳೂ ಆದ ಮುಸಲ್ಮಾನರು ಮಾಡಿರಬೇಕಲ್ಲದೆ ಅನ್ಯಥಾ ಸಾಧ್ಯವಲ್ಲ, ಆದರೆ ಮೊದಲಿದ್ದ ಸುಲ್ತಾನರವರು ಇಂಥಾ ಕ್ರೂರ ಕೃತ್ಯಗಳನ್ನು ಪ್ರೋತ್ಸಾಹ ಮಾಡುವವರಾಗಿದ್ದರೆಂದು ಹೇಳಬಹುದಾಗಿದೆ. ಈಗ ಸ್ಥಾಪಿಸಲ್ಪಟ್ಟಿರುವ ಗವರ್ನ್‌ಮೆಂಟಿನವರಾದರೋ ಮುಸಲ್ಮಾನ್, ಕ್ರೈಸ್ತ, ಮತ್ತು ಯೆಹೂದ್ಯ ಪ್ರಜೆಗಳನ್ನು ಒಂದುಮಾಡಬೇಕೆಂದೂ, ರಾಜ್ಯದಲ್ಲೆಲ್ಲಾ ಸಕಲ ಪ್ರಜೆಗಳೂ ನೆಮ್ಮದಿಯಾಗಿದ್ದುಕೊಂಡು ಅಭಿವೃದ್ಧಿ ಹೊಂದುವಂತೆ ಮಾಡಬೇಕೆಂದೂ ಸಾಹಸಪಡುತ್ತಿದ್ದಾರೆ. ಇವರು ಈಗ ನಡೆದ ಭಯಂಕರವಾದ ಕೊಲೆ ಮೊದಲಾದ ಕೃತ್ಯಗಳ ಕಾರಣವನ್ನು ತನಿಖೆಮಾಡುತ್ತಲೂ, ಮಾರಿಕರರಾಗಿದ್ದವರನ್ನು ನಾನಾಪ್ರಕಾರವಾಗಿ ಶಿಕ್ಷಿಸುತ್ತಲೂ ಬಂದಿರುವರು. ಹ್ಯಾಗೂ ಇನ್ನು ಮುಂದೆ ಮುಸಲ್ಮಾನರು ಕ್ರೈಸ್ತರನ್ನು ಹಿಂಸೆಪಡಿಸದಂತೆ ಕೆಲವರಿಗೆ ಪೂರಾ ಶಿಕ್ಷೆಯಾಗಬೇಕಾದದ್ದೇನೋ ಅವಶ್ಯವಾಗಿರುತ್ತದೆ. ಮೊದಲಿದ್ದ ಸುಲ್ತಾನರು ಯಾರೊಬ್ಬರನ್ನೂ ಕೇಳದೆ ಸರ್ವಸ್ವತಂತ್ರರಾಗಿ ಪ್ರಜೆಗಳನ್ನು ಹಿಂಸೆ ಕಷ್ಟನಷ್ಟಗಳಿಗೆ ಗುರಿಮಾಡಿ ಸ್ವೇಚ್ಛೆಯಿಂದ ಆಳುತ್ತಿದ್ದರು. ಇಂಥಾ ದುಷ್ಟವಾದ ರಾಜ್ಯಭಾರವು ಕೊನೆಗಂಡು, ದೇಶದಲ್ಲಿ ಕ್ರಮವೂ ನೆಮ್ಮದಿಯೂ ನೆಲೆಗೊಳ್ಳುವುದನ್ನು ಸಮಸ್ತರೂ ಕೋರಿ ನಿರೀಕ್ಷಿಸುತ್ತಿದ್ದಾರೆ. ಇದರಲ್ಲಿ ತುರ್ಕಿಯವರಿಗೆ ನಾನಾ ವಿಧವಾದ ಕಷ್ಟಗಳುಂಟು. ಆದರೂ ಕಾಲಕ್ರಮದಲ್ಲಿ ಆ ಕಷ್ಟಗಳೆಲ್ಲಾ ಪರಿಹಾರವಾಗಿ, ಸಕಲ ಪ್ರಜೆಗಳಲ್ಲೂ ಪರಸ್ಪರ ಸ್ನೇಹ ವಾತ್ಸಲ್ಯಾದಿಗಳು ಬೆಳೆದು ನೆಮ್ಮದಿಯೂ ಅಭಿವೃದ್ಧಿಯೂ ಶಾಶ್ವತವಾಗಿ ನೆಲೆಗೊಳ್ಳುವವೆಂದು ನಂಬಿ ನಿರೀಕ್ಷಿಸುತ್ತೇವೆ.

ಎರಡನೆಯದಾಗಿ, ಪರ್ಷಿಯಾ ರಾಜ್ಯದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಅಷ್ಟೇನೂ ಸಂತೋಷಪ್ರದವಾಗಿರುವಂತೆ ಕಾಣುವದಿಲ್ಲ. ಈ ರಾಜ್ಯದಲ್ಲಿ ಪ್ರಜೆಗಳು ಪಾರ್ಲಿಮೆಂಟು ಸಭೆಯು ಏರ್ಪಾಡಾಗಬೇಕೆಂದು ಹಟಹಿಡಿದು ಕೇಳುತ್ತಿದ್ದಾರೆ, ಷಾಸುಲ್ತಾನರವರಾದರೋ ಅಂಥಾ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ಕೊಡುವುದರಲ್ಲಿ ಇಷ್ಟಪಡುವವರಾಗಿಲ್ಲವೆಂದು ತೋರುತ್ತಿದೆ. ಇದನ್ನು ತಿಳಿದು ಪರ್ಷಿಯಾ ರಾಜ್ಯದ ಅನೇಕ ಸ್ಥಳಗಳಲ್ಲಿ ಪ್ರಜೆಗಳು ಸುಲ್ತಾನರವರಿಗೆ ಎದುರು ಪಕ್ಷಿಗಳಾಗಿ ನಿಂತಿರುತ್ತಾರೆ. ಇವರಿಗೂ ಸುಲ್ತಾನರ ಪಕ್ಷದವರಿಗೂ ಜಗಳ ಕಡಿದಾಟಗಳು ಅನೇಕವಾಗಿ ನಡೆದವು; ಇನ್ನೂ ನಡೆಯುವಂತೆ ಕಾಣುತ್ತಿದೆ. ಒಂದು ಸ್ಥಳದಲ್ಲಿ ಪ್ರಜಾನೆಮ್ಮದಿಯನ್ನು ಕಾಪಾಡುವುದಕ್ಕಾಗಿ ರಷ್ಯಾದವರು ತಮ್ಮ ಸೈನ್ಯಗಳನ್ನು ತಂದಿಟ್ಟರು. ರಾಜಪಕ್ಷದವರಾಗಲಿ ಪ್ರಜಾಪಕ್ಷದವರಾಗಲಿ ತಮ್ಮ ತಮ್ಮ ಮುಷ್ಕರವನ್ನು ಬಿಡುವಂತೆ ಕಾಣುವುದಿಲ್ಲ. ಇದರಿಂದ ರಾಜ್ಯದಲ್ಲಿ ಯುದ್ಧಗಳು ಹುಟ್ಟಿ ರಾಜ್ಯವೇ ಹಾಳಾಗುವುದಲ್ಲದೆ ಮತ್ತೇನೂ ಇಲ್ಲ. ಮುಸಲ್ಮಾನರ ದವಲತ್ತು ಸರ್ವಸಾಮಾನ್ಯವಾಗಿ ಸ್ವೇಚ್ಛಾಪ್ರವರ್ತಕವು ಆದದ್ದು, ಆದರೆ ಈಗೀಗ ಮಹಮದೀಯ ದೊಡ್ಡಮನುಷ್ಯರು ಪ್ರಜೆಗಳಿಂದ ಚುನಾವಣೆಯಾದ ಪ್ರತಿನಿಧಿಗಳನ್ನು ಇಟ್ಟುಕೊಂಡು ಅವರ ಅಭಿಪ್ರಾಯದಂತೆ ಸುಲ್ತಾನರವರು ದವಲತ್ತು ಮಾಡುವುದೇನೂ ಅಸಾಧ್ಯವಲ್ಲವೆಂದು ಹೇಳುತ್ತಾರೆ. ಪರ್ಷಿಯಾ ರಾಜ್ಯದಲ್ಲಿ ಆಳ್ವಿಕೆಯ ಭಾರವನ್ನು ವಹಿಸಿರುವವರು ಈಗಿನ ಸಮಯ ಸಂದರ್ಭಗಳನ್ನು ಪರಿಗಣಿಸಿ, ರಾಜ್ಯದಲ್ಲಿ ನೆಮ್ಮದಿಯು ನ್ಯಾಯ ನೆಲೆಗೊಳ್ಳುವಂಥ ಕಾರ್ಯಗಳನ್ನು ನಡಿಸಿಯಾರೆಂದು ನಿರೀಕ್ಷಿಸುತ್ತೇವೆ. ಸುಲ್ತಾನರವರೂ, ಪಾರ್ಲಿಮೆಂಟ್ ಮೆಂಬರುಗಳೂ, ಪ್ರಜೆಗಳೂ ಏಕೀಭವಿಸಿ ದೇಶವು ಸುರಕ್ಷಿತವಾಗಿರುವಂತೆಯೂ ಅಭಿವೃದ್ಧಿಗೆ ಬರುವಂತೆಯೂ ಮಾಡಬೇಕೆಂಬುವುದೇ ನಮ್ಮ ಆಶೆಯಾಗಿದೆ. ಪರ್ಷಿಯಾ ರಾಜ್ಯದ ವಿಸ್ತಾರವಾದ ಪ್ರದೇಶಗಳಲ್ಲಿ ಗಲಿಬಿಲಿಯೂ, ಪ್ರಜಾಕಂಟಕವಾದ ಆಳ್ವಿಕೆಯೂ ನೆಲೆಗೊಂಡಿರುವುದು ನಿರ್ಮೂಲವಾಗಬೇಕಾದರೆ ಆಳ್ವಿಕೆಯ ವರ್ಗವು ಬಹಳ ಕಠಿಣವಾದ ದುಡಿಯಬೇಕು. ಇದು ಸಾಧ್ಯವಾದ ಪಕ್ಷದಲ್ಲಿ ಪರ್ಷಿಯಾ ರಾಜ್ಯವು ಪೂರ್ವಕಾಲದಲ್ಲಿ ಹ್ಯಾಗೆ ಪ್ರಖ್ಯಾತವಾದದ್ದಾಗಿತ್ತೋ ಮುಂದೆಯೂ ಅದೇ ರೀತಿ ಯಶಸ್ಸನ್ನು ಪಡೆಯ ಬಹುದಾಗಿದೆ.

ಸತ್ಯವಾದ ಮತ

ಮೆ॥ ಕೃಷ್ಣಭಟ್ಟರು ನಾವು ಕಳೆದ ತಿಂಗಳ ೧೭ ನೇ ತಾರೀಖಿನ ಸಂಚಿಕೆಯಲ್ಲಿ ಮೋಕ್ಷದ ವಿಷಯವಾಗಿ ಬರೆದ ಲೇಖನವನ್ನು ಓದಿ ಅದರ ಮೇಲೆ ನಾನಾ ವಿಧಗಳಾದ ಆಕ್ಷೇಪಣೆಗಳನ್ನು ಎತ್ತಿ ಬರೆದಿರುವರು. ಇವರ ಲೇಖನವು ದೀರ್ಘವಾಗಿ ಲಂಬಿಸಲ್ಪಟ್ಟಿದ್ದಾಗ್ಯೂ ಅದರಲ್ಲಿ ಎರಡೇ ಮುಖ್ಯವಾದ ಆಕ್ಷೇಪಣೆಗಳಿರುವವು. ಯಾವವೆಂದರೆ (೧) ದೇವರನ್ನು ಮನುಷ್ಯನು ತನ್ನ ಪೂರ್ಣ ಮನಸ್ಸು ಬುದ್ಧಿ ಶಕ್ತಿಗಳಿಂದ ಆರಾಧಿಸಬೇಕೆಂದು ನಾವು ಬರೆದದಕ್ಕೆ ಅವರು—ನಾವು ದೇವರನ್ನು ಆರಾಧಿಸಬೇಕೇ? ಅಂಥಾ ಆರಾಧನೆಯನ್ನು ಅಪೇಕ್ಷಿಸುವವನು ದೇವರೆನ್ನಿಸಿಕೊಳ್ಳುವನೇ? ಎಂದು ಕೇಳುತ್ತಾರೆ. (೨) ಎಲ್ಲಾ ಮನುಷ್ಯರನ್ನೂ ಅಂದರೆ ಪುಣ್ಯವಂತರನ್ನೂ ಕುಲೀನರನ್ನೂ ನೀತಿವಂತರನ್ನೂ ಮಾತ್ರವಲ್ಲ, ಪಾಪಿಷ್ಠರನ್ನೂ ಹೀನಕುಲದವರನ್ನೂ ಸಹ ಜಾತಿಭೇದವಿಲ್ಲದೆ ಪ್ರೀತಿಸಬೇಕೆಂದು ನಾವು ಹೇಳಿದ್ದನ್ನು ಇವರು ಆಕ್ಷೇಪಿಸಿ—ದುಷ್ಟರನ್ನೂ ಶಿಷ್ಟರಂತೆ ಪ್ರೀತಿಸಿದರೆ ಧರ್ಮಾಧರ್ಮಗಳಿಗೂ ಪಾಪಪುಣ್ಯಗಳಿಗೂ ವ್ಯತ್ಯಾಸವೇ ಇಲ್ಲದೆ ಹೋಗುವದು, ಲೋಕದಲ್ಲಿ ದುಷ್ಟಶಿಕ್ಷಣ ಶಿಷ್ಟಪರಿಪಾಲನೆಗಳು ಅತ್ಯವಶ್ಯಕವಾಗಿವೆ. ಆದದರಿಂದ ಯಾವ ಮತವಾದರೂ ದುಷ್ಟನಿಗ್ರಹವನ್ನೂ ಶಿಷ್ಟಪರಿಪಾಲನೆಯನ್ನೂ ಬೋಧಿಸಬೇಕಾಗಿದೆ ಎಂದು ಹೇಳುತ್ತಾರೆ.

(೧) ದೇವರನ್ನು ಮನುಷ್ಯನು ತನ್ನ ಪೂರ್ಣ ಬುದ್ಧಿ ಶಕ್ತಿಗಳಿಂದ ಆರಾಧಿಸಬೇಕೇ? ಅಂಥಾ ಆರಾಧನೆಯನ್ನು ಅಪೇಕ್ಷಿಸುವವನು ದೇವರೇ? ಎಂದು ಇವರು ಕೇಳುವದು ನಮಗೆ ಸ್ವಲ್ಪ ಆಶ್ಚರ್ಯವನ್ನುಂಟುಮಾಡುತ್ತದೆ. ದೇವರನ್ನು ಆರಾಧಿಸಬೇಕೇ ಎಂಬ ಪ್ರಶ್ನೆಗೆ ಸರಿ ಉತ್ತರವನ್ನು ತಿಳಿಯಬೇಕಾದರೆ ದೇವರು ಯಾರು? ಆತನ ಗುಣಲಕ್ಷಣಗಳೇನು? ಮನುಷ್ಯನಿಗೂ ಆತನಿಗೂ ಯಾವ ಸಂಬಂಧವಿದೆ? ಎಂಬ ಪ್ರಶ್ನೆಗಳಿಗೆ ಮೊದಲು ಉತ್ತರ ಹೇಳಬೇಕು. ಈ ಆಕ್ಷೇಪಕರಿಗೆ ದೇವರ ವಿಷಯವಾಗಿ ಯಾವ ಭಾವನೆ ಇದೆಯೋ ಎಂದು ನಾವು ಸಂದೇಹಪಡುತ್ತೇವೆ. ದೇವರು ನಿರ್ಗುಣನಾಗಿಯೂ ಯಾರ ಸಂಬಂಧವೂ ಇಲ್ಲದವನಾಗಿಯೂ ಯಾರ ಗೋಜಿಗೂ ಬಾರದವನಾಗಿಯೂ ಇದ್ದಾನೆಂದು ಭಾವಿಸಿದರೆ ಅಂಥಾ ದೇವರಿಗೆ ಆರಾಧನೆಯು ಬೇಕಿಲ್ಲ. ಆತನು ನಿರ್ಗುಣನು ಅಷ್ಟೇ. ಅವನು ಯಾರನ್ನೂ ಪ್ರೀತಿಸುವದೂ ಇಲ್ಲ. ಅವನನ್ನು ಯಾರಾದರೂ ಪ್ರೀತಿಸಿ, ಸೇವಿಸಿ, ವಿಧೇಯರಾಗಿರುವದೂ ಅಗತ್ಯವಿಲ್ಲ. ಲೋಕಕ್ಕೂ ಲೋಕದಲ್ಲಿರುವ ಇತರ ಪ್ರಾಣಿಗಳಿಗೂ ಮನುಷ್ಯನಿಗೂ ಆತನಿಗೂ ಯಾವ ವಿಧವಾದ ಸಂಬಂಧವೂ ಇಲ್ಲ. ಮನುಷ್ಯನು ತನ್ನ ಕರ್ಮಾನುಸಾರವಾಗಿಯೋ ಅದೃಷ್ಟಾನುಸಾರನಾಗಿಯೋ ಜನ್ಮಾಂತರಗತನಾಗಿ ಮಾಯಾಪಾಶದಿಂದ ತನ್ನನ್ನು ತಾನೇ ಬಿಡಿಸಿಕೊಳ್ಳುವದಕ್ಕೆ ಪ್ರಯತ್ನಿಸಿ ಜನ್ಮಗಳನ್ನು ಎತ್ತುತ್ತಿರಬೇಕು.

ಇದು ಹ್ಯಾಗಾದರೂ ಇರಲಿ. ದೇವರ ವಿಷಯವಾಗಿ ಕ್ರಿಸ್ತನು ಹೇಳಿರುವ ಬೋಧನೆಯಂತೂ ಪಂಡಿತ ಪಾಮರರಿಗೂ ಸ್ತ್ರೀಯರಿಗೂ ಬಾಲಕರಿಗೂ ತಿಳಿಯುವಷ್ಟು ಸ್ಪಷ್ಟವಾಗಿದೆ. ಅದೇನೆಂದರೆ ದೇವರು ನಮ್ಮ ಪರಮತಂದೆಯಾಗಿದ್ದಾನೆ. ಆತನು ನಿರ್ಗುಣನಲ್ಲವೇ ಅಲ್ಲ. ಆತನು ಪರಿಶುದ್ಧನು, ಸತ್ಯವಂತನು, ನೀತಿವಂತನು, ಮತ್ತು ಸಮಸ್ತ ಮನುಷ್ಯರನ್ನೂ ತನ್ನ ಮಕ್ಕಳೆಂದು ಭಾವಿಸಿ ಅವರನ್ನು ನಿಷ್ಪಕ್ಷಪಾತವಾಗಿ ಪ್ರೀತಿಸಿ ಸಲಹುತ್ತಾ ಬರುತ್ತಾನೆ. ಇತ್ತಲಾಗಿ ಮನುಷ್ಯನಾದವರೋ ಆತನನ್ನು ತಂದೆಯೆಂಬದಾಗಿ ಭಾವಿಸಿ ಆತನ ಚಿತ್ತವೇನೆಂದು ತಿಳಿದು ಆ ಪ್ರಕಾರ ನಡೆದುಕೊಂಡರೆ ದೇವರು ಅವನನ್ನು ಮೆಚ್ಚುತ್ತಾನೆ. ದೇವರು ಎಲ್ಲಿಯೋ ಒಂದು ಕಡೆ ಇದ್ದು—ಮನುಷ್ಯರು ತಮ್ಮ ತಮ್ಮ ಇಷ್ಟಾನುಸಾರ ನಡೆಯಲಿ. ಅವರ ಗೋಜು ನನಗ್ಯಾಕೆ? ಎಂದು ಅವರನ್ನು ಬಿಟ್ಟಿಲ್ಲ. ಅವರ ಅಂತರ್ಯದಲ್ಲಿ ಅವರ ಮನಸ್ಸಾಕ್ಷಿಯ ಮೂಲಕ ಅವರ ಸಂಗಡ ಮಾತನಾಡುತ್ತಾ, ಅವರ ತಪ್ಪುನೆಪ್ಪುಗಳನ್ನು ಅವರಿಗೆ ತೋರಿಸುತ್ತಾ, ತಪ್ಪಿನಿಂದ ಬಹಿರಂಗವಾಗಿ ಪ್ರಾಪ್ತವಾಗ ಬಹುದಾದ ಶಿಕ್ಷೆಯಿಂದ ಮಾತ್ರವಲ್ಲ, ಮನಸ್ಸಿನಲ್ಲಿ ತಾನಾಗಿ ಉಂಟಾಗುವ ಕ್ಲೇಶ ವ್ಯಥೆಗಳಿಂದಲೂ ಪಾಪಿಗಳನ್ನು ಖಂಡಿಸುತ್ತಲಿದ್ದಾನೆ. ನೀತಿವಂತನಾಗಿ ಸತ್ಯಾಚರಣೆಯಲ್ಲಿಯೂ ಪರೋಪಕಾರದಲ್ಲಿಯೂ ಬದುಕುತ್ತಿರುವವನನ್ನು ನೋಡಿ ಅದೇ ಮನಸ್ಸಾಕ್ಷಿಯ ಮುಖಾಂತರವೇ ಸಮಾಧಾನವನ್ನೂ ಸಂತೋಷವನ್ನೂ ಹುಟ್ಟಿಸಿ ತತ್ಪರನಾಗಿರುವದಕ್ಕೆ ಇನ್ನೂ ಹೆಚ್ಚಾಗಿ ಪ್ರೇರಣೆ ಮಾಡುತ್ತಿದ್ದಾನೆ. ಹೀಗೆ ಆತನನ್ನು ಹೃದಯದಲ್ಲಿ ಪ್ರೀತಿಸಿ, ಆತನ ಆಜ್ಞಾನುಸಾರವಾಗಿ ನಡೆಯುವದೇ ಆತನಿಗೆ ಪ್ರತಿಯೊಬ್ಬನೂ ಸಲ್ಲಿಸಬೇಕಾದ ಆರಾಧನೆ. ಇಂಥ ಆರಾಧನೆಯನ್ನು ಮಾಡಬೇಡವೆಂದು ಯಾರು ತಾನೇ ತಿರಸ್ಕರಿಸುವರು?

(೨) ದುಷ್ಟರನ್ನೂ ಅಧರ್ಮಿಗಳನ್ನೂ ಹೀನಕುಲದವರನ್ನೂ ಶಿಷ್ಟರಂತೆ ಪ್ರೀತಿಸಿದರೆ ಲೋಕದಲ್ಲಿ ಧರ್ಮಾಧರ್ಮಗಳ ತಾರತಮ್ಯವೇ ಇಲ್ಲವಾಗುತ್ತದೆ. ದುಷ್ಟನಿಗ್ರಹಕ್ಕಾಗಿಯೂ ಶಿಷ್ಟಪಾಲನೆಗಾಗಿಯೂ ಸರಕಾರವೂ ಪೋಲೀಸೂ ಬಂದೀಖಾನೆಯೂ ಸ್ಥಾಪಿತವಾಗಿವೆ ಎಂಬುವದು ಇವರ ಎರಡನೇ ಆಕ್ಷೇಪಣೆ. ಧರ್ಮಾಧರ್ಮಗಳ ತಾರತಮ್ಯವೂ ದುಷ್ಟನಿಗ್ರಹವೂ ಶಿಷ್ಟಪಾಲನೆಯೂ ಲೋಕದಲ್ಲಿ ಸ್ಥಿರವಾಗಿರಬೇಕೆಂದು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ದುಷ್ಟನಿಗ್ರಹಕ್ಕಿಂತ ದುಷ್ಟರನ್ನು ಶಿಷ್ಟರನ್ನಾಗಿ ಮಾರ್ಪಡಿಸುವದು ಉತ್ತಮವಲ್ಲವೋ? ಸರಕಾರ, ಪೋಲೀಸು, ಕಾರಾಗೃಹಗಳು, ಇವು ದುಷ್ಟನಿಗ್ರಹಕ್ಕಲ್ಲ, ದುಷ್ಟರಲ್ಲಿರುವ ದುಷ್ಟತ್ವವನ್ನೂ ನಿಗ್ರಹಮಾಡುವದಕ್ಕೆ ನಿರ್ಮಿಸಿದ ಏರ್ಪಾಡುಗಳಲ್ಲವೇ? ಕಳ್ಳಕೊರಮರು ಕಳ್ಳತನವನ್ನೂ ಒಡ್ಡರೂ ಹೊಲೆಯ ಮಾದಿಗರೂ ತಮ್ಮ ಪಾಪ ದುಷ್ಕೃತ್ಯಗಳನ್ನು ಬಿಟ್ಟರೆ ದೇವರು ಅವರನ್ನು ಸ್ವೀಕರಿಸುವದಿಲ್ಲವೇ? ಅವರು ತಮ್ಮ ಒರಟುತನವನ್ನೂ ಕ್ರೂರಕೃತ್ಯಗಳನ್ನೂ ಅಸಹ್ಯವಾದ ಇತರ ನಡತೆಗಳನ್ನೂ ಬಿಟ್ಟು, ಸದಾಚಾರ ಸಂಪನ್ನರೂ ಯೋಗ್ಯರೂ ಆಗುವದು ಸಾಧ್ಯವಾಗಿದೆ. ಆದದರಿಂದ ಇಂಥವರ ದುಷ್ಕೃತ್ಯಗಳನ್ನು ಪತ್ತೆಮಾಡಿ, ಅವರನ್ನು ಆ ಕೃತ್ಯಗಳಿಗಾಗಿ ಶಿಕ್ಷಿಸುವದು ಆವಶ್ಯಕವಾಗಿದ್ದರೂ ಅವರು ನಮ್ಮಂತೆ ದೇವರ ಸೃಷ್ಟಿಗಳಾಗಿಯೂ ಆತನಿಂದ ಕಾಪಾಡಲ್ಪಡತಕ್ಕವರಾಗಿಯೂ ಇರುವದರಿಂದ ಅವರನ್ನು ನಾವು ಸನ್ಮಾರ್ಗಪ್ರವರ್ತನೆಗೆ ತಿರುಗಿಸಲಿಕ್ಕೆ ಸತತವೂ ಪ್ರಯತ್ನಿಸುತ್ತಿರಬೇಕು. ಈ ವಿಧವಾಗಿ ದುಷ್ಟರನ್ನೂ ಅಧರ್ಮಿಗಳನ್ನೂ ಪ್ರೀತಿಸುವದು ಅವರಿಗೂ ನಮಗೂ ತಂದೆಯಾದ ದೇವರಿಗೆ ಪ್ರೀತ್ಯರ್ಥವಾದುದಲ್ಲವೇ?

ಬಹುದೇಶದ ವೃತ್ತಾಂತಗಳು.

ಇಲ್ಲಿ ಕಾಲೇಜಿನ ಏರ್ ಸ್ಪೆಸ್ಟರ್ ಹಾಗೂ ಬೆಂಗಳೂರಿನ ಮಿ॥ ಟಾಮ್ಲಿನ್‌ಸನ್ ಯವರು ಕಳೆದ ವಾರ ಕಡಕೋಳದ ಬಳಿ ಒಂದು ಚಿರತೆಯನ್ನು ಶಿಕಾರಿ ಮಾಡಿಕೊಂದು ಹಾಕಿದರು.

* * *

ಬರೋಡಾ ಮಹಾರಾಜರವರ ಮಿಲಿಟರಿ ಸೆಕ್ರಟರಿಯವರು ಸಂಬಾಳ್ಕರ್ ಯವರು ಕಳೆದ ವಾರ ರಾಜಧಾನಿಗೆ ಬಂದಿದ್ದು ಶ್ರೀಮನ್ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ವಾಪಸು ಪ್ರಯಾಣ ಮಾಡಿದರು. ಮೋತೀಖಾನೆಯ ಮೆ॥ ರಾಮರಾಯರು ಅವರ ಸಂಗಡ ಇದ್ದು ನಗರದ ವಿಶೇಷ ಭಾಗಗಳನ್ನು ತೋರಿಸಿದರು.

* * *

ಮೊನ್ನೆ ಸೋಮವಾರ ಬೆಳಿಗ್ಗೆ ರಾಜಧಾನಿಯ ಸುಣ್ಣದಕೇರಿಯಲ್ಲಿ ಮ್ಯುನಿಸಿಪಲ್ ರಸ್ತೆಯ ಮೇಲೆ ಎಲ್ಲಿಯವಂಥಾ ಗುಂಡುಕಲ್ಲನ್ನು ಗಾಡಿಯ ಹಿಂದೆ ಕಟ್ಟಿ ಸಾಗಿಸಿಕೊಂಡು ಬರುತ್ತಿದ್ದಾಗ್ಗೆ ಒಬ್ಬ ಮುಸಲ್ಮಾನರ ಬಾಲಕನು ಅದರ ಕೆಳಗೆ ಸಿಕ್ಕಿ ಮೃತಪಟ್ಟನು. ಆ ಗಾಡಿಯವನನ್ನು ಪೋಲೀಸಿನವರು ಹಿಡಿದು ವಿಚಾರಣೆ ಮಾಡುತ್ತಿದ್ದಾರೆ.

* * *

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ರಾಬರ್ಟ್‌ಸನ್‌ಪೇಟೆಯಲ್ಲಿ ಎಕ್ಸೈಜ್ ಇನ್‌ಸ್ಪೆಕ್ಟರ ಮಗನನ್ನು ೧೨, ೧೩, ೧೪ ವಯಸ್ಸಿನ ಮೂವರು ಹುಡುಗರು ಕರೆದುಕೊಂಡುಹೋಗಿ ಕೊಂದುಹಾಕಿ ಕಾಲಿನಲ್ಲಿದ್ದ ಬೆಳ್ಳಿ ಕಡಗವನ್ನು ತೆಗೆದುಕೊಂಡು ಮಾರ್ವಾಡಿಯ ಬಳಿ ಅಡವಿಟ್ಟರೆಂದು ಆ ಮೈಕೆ ಒಬ್ಬ ಹುಡುಗನು ಹೇಳಿದ್ದರಿಂದ ಪೋಲೀಸಿನವರು ಅವರನ್ನು ದಸ್ತಗಿರಿಮಾಡಿ ತನಿಖೆ ನಡಿಸುತ್ತಿದ್ದಾರೆ.

* * *

ಸಂಸ್ಥಾನದ ವ್ಯವಸಾಯಕಾರ್ಯಗಳಿಗೆ ಬೇಕಾದ ಮಳೆಗಳು ಇನ್ನೂ ಸರಿಯಾಗಿ ಬಂದಿಲ್ಲವೆಂದೂ, ಕ್ಷಾಮದ ಭೀತಿಯು ಸಂಪೂರ್ಣವಾಗಿ ನಿವಾರಣೆಯಾದಂತೆ ಕಾಣುವದಿಲ್ಲವೆಂದೂ ರೆವಿನ್ಯೂ ಕಮಿಷನರ್‌ರವರು ಅಭಿಪ್ರಾಯಪಡುತ್ತಾರೆ. ಸುಮಾರಾಗಿ ಎಲ್ಲಾ ಕಡೆಗಳಲ್ಲೂ ಮೋಡಗಳು ಕವಿಯುತ್ತಿದ್ದರೂ ತುಂತುರು ಮಳೆಯಲ್ಲದೆ ದೊಡ್ಡ ಮಳೆಗಳು ಇನ್ನೂ ಬಂದಿಲ್ಲವೆಂದು ನಮ್ಮ ಬಾತ್ಮಿದಾರರುಗಳ ಬರವಣಿಗೆಗಳಿಂದ ಗೊತ್ತಾಗುತ್ತದೆ.

* * *

ಕಳೆದ ಶುಕ್ರವಾರ ಬೆಳಿಗ್ಗೆ ಸುಮಾರು ೭ ಗಂಟೆಗೆ ಶ್ರೀಮನ್ ಮಹಾರಾಜರವರು ಮೋಟಾರ್ ಗಾಡಿಯಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿದರು. ಅವರ ಸಂಗಡ ಪ್ರೈವೆಟ್ ಸೆಕ್ರೆಟರಿ ಮಿ॥ ಕ್ಯಾಂಪಿಲ್ ಯವರೂ, ಹುಜೂರ್ ಸೆಕ್ರೆಟರಿ ಮೆ॥ ರಾಘವೇಂದ್ರರಾಯರೂ, ಅಕೌಂಟೆಂಟ್ ಜನರಲ್ ಮೆ॥ ಆಗಾ ನಿಜಾಮ್ ಯವರೂ ಹೋಗಿರುತ್ತಾರೆ. ಮಹಾರಾಜರವರು ಈ ದಿನ ವಾಪಸು ರಾಜಧಾನಿಗೆ ದಯಮಾಡುವರೆಂದು ಕೇಳುತ್ತೇವೆ.

* * *

ನಮ್ಮ ಮಹಾರಾಜರವರ ಏಡಿಕಾಂಗರಾಗಿರುವ ಮೆ॥ ಆಗಾ ಜಾನ್‌ರವರಿಗೆ ಬೆಂಗಳೂರಿನಲ್ಲಿ ತುಂಬಾ ಕಾಯಿಲೆಯಾಗಿತ್ತು. ಕಳೆದ ವಾರ ಮಹಾರಾಜರವರು ಅವರ ಬಂಗಲೆಗೆ ದಯಮಾಡಿ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬಂದರೆಂದೂ ಅವರಿಗೆ ಈಗ ವಾಸಿಯಾಗುತ್ತಿದೆ ಎಂದೂ ಕೇಳುತ್ತೇವೆ. ಮೆ॥ ಆಗಾ ಜಾನ್‌ರವರು ಲೇಟ್ ಮಹಾರಾಜರವರ ಬಳಿಯಲ್ಲೂ, ಅವರ ತರುವಾಯ ಮಹಾರಾಣಿ ರೀಜೆಂಟರವರಲ್ಲೂ ಏಡಿಕಾಂಗರಾಗಿದ್ದು, ಈಗಲೂ ಮಹಾರಾಜರವರಲ್ಲಿ ಅದೇ ಕೆಲಸದಲ್ಲಿರುತ್ತಾರೆ.

* * *

ರಾಜಧಾನಿಯ ಕ್ರೈಸ್ತ ಮಂಡಲಿಗೆ ಸಂಬಂಧಪಟ್ಟ ವೆಸ್ಲಿ ಸಮಾಜದ ಮೆಂಬರುಗಳು ಕಳೆದ ಗುರುವಾರ ಅಧ್ಯಕ್ಷರಾದ ಪಾದ್ರಿ ಲೂಕಿಯ್ಯನವರೊಂದಿಗೂ ಧನಸಾಡ ಬೋಧಕರೊಂದಿಗೂ ಶ್ರೀರಂಗಪಟ್ಟಣಕ್ಕೆ ವನಭೋಜನಾರ್ಥವಾಗಿ ಹೋಗಿ ಅಲ್ಲಿ ನೋಡತಕ್ಕ ಚರಿತ್ರಾರ್ಹವಾದ ಸ್ಥಳಗಳನ್ನೆಲ್ಲಾ ನೋಡಿಕೊಂಡು ಬಂದರು. ಅದೇ ದಿನ ಬೊಂಬಾಯಿನಿಂದ ಬಂದಿದ್ದ ಪಾರಸಿ ಮತಸ್ಥರ ಗುರುಗಳನ್ನು ಇಲ್ಲಿನ ಪಾರಸಿ ದೊಡ್ಡ ಮನುಷ್ಯರು ಶ್ರೀರಂಗಪಟ್ಟಣಕ್ಕೆ ವಿನೋದಾರ್ಥವಾಗಿ ಕರೆದುಕೊಂಡು ಹೋಗಿದ್ದರು.

* * *

ಉತ್ತರ ಹಿಂದುಸ್ಥಾನಕ್ಕೆ ಸೇರಿದ ಬನಾರಸ್ ಎಂಬ ದೇಶೀಯ ಸಂಸ್ಥಾನದ ರಾಜರಾದ ರಾಜಾ ರಂಜೀತ್ ಸಿಂಗ್ ಬಹದೂರ್ ಯವರು ಪರಿವಾರ ಸಹಿತ ನೆನ್ನೆ ಮಧ್ಯಾಹ್ನ ರಾಜಧಾನಿಗೆ ದಯಮಾಡುವವರಾಗಿದ್ದರು. ಇವರಿಗಾಗಿ ಜಗನ್ಮೋಹನ ಬಂಗಲೆಯನ್ನು ಬಿಟ್ಟುಕೊಟ್ಟಿದ್ದಾರೆ. ಅವರು ಬೆಂಗಳೂರಿನಿಂದ ಶಿವಸಮುದ್ರಕ್ಕೆ ಹೋಗಿ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನೂ, ಅಲ್ಲಿಂದ ಶ್ರೀರಂಗಪಟ್ಟಣಕ್ಕೆ ಬಂದು ಅಲ್ಲಿನ ಚರಿತ್ರಾರ್ಹವಾದ ಭಾಗಗಳನ್ನೂ ನೋಡಿಕೊಂಡು ರಾಜಧಾನಿಗೆ ದಯಮಾಡಿ, ೨ ೩ ದಿನ ಇದ್ದು ವಾಪಸು ಪ್ರಯಾಣ ಮಾಡುತ್ತಾರೆಂದು ಕೇಳುತ್ತೇವೆ.

* * *

ಕೋಲಾರದಲ್ಲಿ ಕಳೆದ ೩ ನೇ ತಾ ಶನಿವಾರ ಒಂದು ಪರೋಪಕಾರ ಕಾರ್ಯವು ನಡೆಯಿತು. ಮಿಷನ್ ಸಂಘದವರು ಸುಮಾರು ೪೦,೦೦೦ ರೂಪಾಯಿ ಖರ್ಚಾಗುವಂಥಾ ಒಂದು ಆಸ್ಪತ್ರೆಯನ್ನು ಕಟ್ಟುವದಕ್ಕೆ ಅಸ್ತಿಭಾರವನ್ನು ಹಾಕಿದರು. ಅ॥ ಕಮಿಷನರುಗಳಾದ ಮೆ॥ ವೇದಾಂತ ದೇಶಿಗಂ ಐಯಂಗಾರ್ರೂ, ಮೆ॥ ಮೀರ್ ಹಂಜಾ ಹುಸೇನ್ ಯವರೂ, ಬಹು ಮಂದಿ ದೇಶೀಯ ಪ್ರಜೆಗಳೂ, ಮಿಷನ್ ಸಂಘದ ಸರದಾರರೂ, ದೊರೆಸಾನಿಗಳೂ ಆ ದಿನ ಹಾಜರಾಗಿದ್ದು, ಈ ಸಂತೋಷಕರವಾದ ಶುಭಕೆಲಸದ ಪುರೋತ್ತರವನ್ನು ವಿವರಿಸಿದರು. ದೇಶೀಯ ದೊಡ್ಡ ಮನುಷ್ಯರು ಅನ್ಯದೇಶಗಳ ಧರ್ಮಿಷ್ಠರ ಸಹಾಯದಿಂದ ಇಲ್ಲಿನ ಪ್ರಜೆಗಳ ಕಷ್ಟನಿವಾರಣೆಗೆ ಮಾಡುತ್ತಿರುವ ಇಂಥಾ ಕಾರ್ಯಗಳನ್ನು ಕೃತಜ್ಞತೆಯೊಡನೆ ಕೊಂಡಾಡಿದರು.

* * *

ಅರಂಕೆರೆ ತಾಲ್ಲೂಕು ಹೊಡ್ಡಹೊಟ್ಟೆ ಹುಕ್ಕೆ ಶ್ಯಾನುಭೋಗ ಮತ್ತು ಭಾರಿ ಜಮೀನ್‌ದಾರರಾದ ಮೆ॥ ನಾರಣಪ್ಪನವರು ಕಳೆದ ೩೦ ನೇ ತಾ ಬುಧವಾರ ಕಾಲವಾದರು. ಇವರಿಗೆ ಮರಣಕಾಲದಲ್ಲಿ ೮೦ ವರುಷ ವಯಸ್ಸು. ಛತ್ರ, ತೋಪು, ದೇವಸ್ಥಾನ, ಬಾವಿ ಮುಂತಾದ ಧರ್ಮಕೆಲಸಗಳನ್ನು ಮಾಡಿಸಿದ್ದಾರೆ. ಕಾಯಿಲೆ ಏನೂ ಇರಲಿಲ್ಲವಂತೆ. ಇವರು ತಮ್ಮ ಮೊಮ್ಮಗನ ಮಗನ ನಾಮಕರಣವನ್ನು ತೀರಿಸಿಕೊಂಡು ಆ ರಾತ್ರಿಯೇ ಕೊಂಚ ಕಸಿವಿಸಿಯೆಂದು ಮಲಗಿ ಮಾರನೇ ಬೆಳಗ್ಗೆ ಸ್ನಾನಕ್ಕೆ ಬಂದು ಸರ್ವರಿಗೂ ಬುದ್ಧಿವಾದ ಹೇಳಿ ಮಾತನಾಡುತ್ತಿದ್ದ ಹಾಗೆಯೇ ಪ್ರಾಣವನ್ನು ಬಿಟ್ಟರು. ಇಂಥಾ ದೊಡ್ಡ ಮನುಷ್ಯರು ಕಾಲವಾದದ್ದಕ್ಕೆ ನಾವುಗಳೆಲ್ಲರೂ ಬಹಳ ವಿಷಾದಿಸುತ್ತೇವೆ ಎಂಬದಾಗಿ ಒಬ್ಬ ಬಾತ್ಮಿದಾರರು ಬರೆದಿರುತ್ತಾರೆ.

ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು

ರಾಜಧಾನಿಯ ಮ್ಯುನಿಸಿಪಾಲಿಟಿಗೆ ಹೊಸ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಯು ಜೂನ್ ೧೨ ನೇ ತಾರೀಖು ಸೋಮವಾರದಿಂದ ಪ್ರಾರಂಭವಾಗಿ ಬೆಳಿಗ್ಗೆ ಮಧ್ಯಾಹ್ನ ನಡೆಯುತ್ತಾ ಇದೆ. ವೈಸ್ ಪ್ರೆಸಿಡೆಂಟ್ ಮ ಕೃಷ್ಣಸ್ವಾಮಿ ರಾಯರ ಸಂತು ಆ ... ಚುನಾವಣೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿರುವರು. ಈ ಸಲ ಓಟರುಗಳು ಚುನಾವಣೆಯಲ್ಲಿ ತುಂಬಾ ಉತ್ಸಾಹವನ್ನೂ ಶ್ರದ್ಧೆಯನ್ನೂ ಪ್ರಕಾಶಪಡಿಸಿರುತ್ತಾರೆಂದು ತಿಳಿದು ಸಂತೋಷಪಡುತ್ತೇವೆ. ಆಯಾ ಮೊಹಲ್ಲೆಯ ಮುಖಂಡರುಗಳು ತಮತಮಗೆ ಬೇಕಾದವರಿಗೇ ಓಟುಗಳನ್ನು ಹಾಕಿಸಬೇಕೆಂದು ಒಂದು ವಾರದಿಂದ ಓಟರುಗಳ ಮನೆಗಳಿಗೆ ಹೋಗಿ ಅವರಿಗೆ ... ಸಮ್ಮತಿಯನ್ನು ಪಡೆಯುತ್ತಿದ್ದರು. ಒಂದು ಓಟರುಗಳು ಕೌನ್ಸಿಲರಾಗಬೇಕೆಂದು ನಿಂತಿರುವವರ ಯೋಗ್ಯತಾ ಪಕ್ಷಗಳನ್ನು ಅವರ ಶಕ್ತಿಗಳ ಮೂಲಕ ತಿಳಿದು ಪರ್ಯಾಲೋಚನೆಮಾಡಿ ತಮಗೆ ಸೂಕ್ತತೋರಿದವರಿಗೆ ತಮ್ಮ ಓಟುಗಳನ್ನು ಹಾಕಿ ಬಂದರು. ಕೌನ್ಸಿಲರಾಗಬೇಕೆಂದು ಪ್ರಯತ್ನ ಪಟ್ಟವರು ಆಯಾ ಮೊಹಲ್ಲೆಯ ಓಟರುಗಳನ್ನು ಗಾಡಿಗಳಲ್ಲಿ ಕರೆದುಕೊಂಡು ಬಂದು ಓಟು ಹಾಕಿಸಿದರು. ಈ ಗಾಡಿಗಳ ಓಡಾಟವು ಮೂರು ದಿನಗಳಿಂದ ಸ್ಟ್ರೀಟುಗಳಲ್ಲಿ ತುಂಬಾ ಗಲಿಬಿಲಿಯನ್ನುಂಟುಮಾಡಿದೆ. ಈ ದಿನವೂ ಎರಡು ಮೊಹಲ್ಲೆಗಳ ಚುನಾವಣೆ ನಡೆಯುವುದು.

ವೈಸ್ ಪ್ರೆಸಿಡೆಂಟರು ಪ್ರತಿ ಮೊಹಲ್ಲೆಯ ಚುನಾವಣೆಯನ್ನೂ ನಡೆಸಿ, ಓಟರುಗಳು ಬರೆದುಕೊಟ್ಟ ಚೀಟುಗಳನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿಸಿ, ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದಾರೆ. ನಾಳೆ ಬೆಳಿಗ್ಗೆ ೭½ ಗಂಟೆಗೆ ಟೌನ್ ಹಾಲ್ ಬಂಗಲೆಯಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳ ಒಂದು ಸ್ಪೆಷಲ್ ಮೀಟಿಂಗು ನಡೆಯುತ್ತದೆ. ಆಗ ಮೊಹರು ಮಾಡಿದ ಪೆಟ್ಟಿಗೆಯನ್ನು ತೆರೆದು ಅದರಲ್ಲಿರುವ ಓಟ್ ಚೀಟುಗಳನ್ನು ಮೊಹಲ್ಲೆವಾರು ಎಣಿಸಿ, ಆಯಾ ಮೊಹಲ್ಲೆಯ ಓಟರುಗಳು ಯಾರ್ಯಾರಿಗೆ ಎಷ್ಟೆಷ್ಟು ಓಟುಗಳನ್ನು ಹಾಕಿರುತ್ತಾರೋ ಅದನ್ನೆಲ್ಲಾ ಲೆಕ್ಕ ಮಾಡಿ, ಇಂಥಿಂಥವರಿಗೆ ಕೌನ್ಸಿಲರಾಗಲು ಓಟುಗಳು ಹೆಚ್ಚಾಗಿ ಬಂದಿವೆ ಎಂಬ ಅಂಶವನ್ನು ಗೊತ್ತುಮಾಡುವರು. ಪ್ರಜೆಗಳು ಈಗ ತಾವು ಹಾಕಿರುವ ಓಟುಗಳಿಂದ ಯಾರಿಗೆ ಕೌನ್ಸಿಲ್ ಮೆಂಬರ ಕೆಲಸ ದೊರಕುತ್ತದೋ ತಿಳಿಯಬೇಕೆಂದು ಕಳವಳದಿಂದ ಎದುರು ನೋಡುತ್ತಾ, ಈ ವಿಷಯವನ್ನು ಕುರಿತು ಮಾತನಾಡಿಕೊಳ್ಳುತ್ತಾ ಇದ್ದಾರೆ.

ವಿಲಾಯತಿಯಲ್ಲಿ ನಡೆದ ಕ್ರೂರ ಕೊಲೆಯು

ಲಂಡನ್ ಪಟ್ಟಣದ ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಎಂಬ ಬಂಗಲೆಯಲ್ಲಿ ಸರ್ ವಿಲ್ಯಂ ಕರ್ಸನ್ ವೈಲಿಯವರನ್ನು ಹಿಂದೂಸ್ಥಾನದ ಮದನಲಾಲ ನೆಂಬ ವಿದ್ಯಾರ್ಥಿಯು ಗುಂಡಿನಿಂದ ಹೊಡೆದು ಕೊಂದುಹಾಕಿದನಷ್ಟೆ. ಇವನನ್ನು ಅಲ್ಲಿನ ಪೋಲೀಸಿನವರು ಹಿಡಿದು ತನಿಖೆ ಮಾಡುತ್ತಿದ್ದಾರೆ. ತನಿಖೆಯ ಕಾಲದಲ್ಲಿ ಮದನಲಾಲನು ಹೇಳಿದ್ದೇನೆಂದರೆ—ನಾನು ಸ್ವದೇಶೀ ವತ್ಸಲನಾಗಿರುತ್ತೇನೆ. ನನ್ನ ಮಾತೃಭೂಮಿಯನ್ನು ಅನ್ಯದೇಶೀಯರ ಕೈಯಿಂದ ಬಿಡಿಸಿಕೊಳ್ಳುವದಕ್ಕಾಗಿ ಸಾಹಸಪಡತಕ್ಕವನು. ನಾನು ನಡಿಸಿದ ಕೃತ್ಯವನ್ನು ಕೊಲೆ ಎಂದು ಕರೆಯುವುದು ನ್ಯಾಯವಲ್ಲ. ಅದು ನ್ಯಾಯವಾದ ಕೃತ್ಯವಾಗಿರುತ್ತದೆ. ಜರ್ಮನಿಯವರು ಇಂಗ್ಲೆಂಡನ್ನು ಆಕ್ರಮಿಸಿಕೊಂಡಿದ್ದರೆ ಇಂಗ್ಲಿಷರೂ ನನ್ನ ಹಾಗೇ ಜರ್ಮನಿಯವರನ್ನು ಕೊಲ್ಲುತ್ತಿದ್ದರು. ನನ್ನ ಈ ಕಾರ್ಯವು ನನ್ನ ರಾಷ್ಟ್ರಕ್ಕೆ ಹಿತವಾಗಿರುತ್ತದೆ ಎಂಬ ರೀತಿಯಾಗಿ ಹೇಳಿದನು.

ಮದನಲಾಲ್ ಧಿಂಗ್ರನ ತಂದೆ ಡಾಕ್ಟರ್ ದಿತ್ತ ಧಿಂಗ್ರ ಎಂಬುವರು ತಾವಾಗಲಿ ತಮ್ಮ ಸಂಸಾರಕ್ಕೆ ಸೇರಿದ ಇತರರ್‍ಯಾರೇ ಆಗಲಿ ಈ ಕ್ರೂರತರವಾದ ಕೊಲೆಯಲ್ಲಿ ಲೇಶಮಾತ್ರವೂ ಭಾಗಿಗಳಲ್ಲವೆಂದೂ, ಸರ್ ವಿಲ್ಲಿಯಂ ಕರ್ಸನ್ ವೈಲಿಯವರು ತನಗೂ ತಮ್ಮ ಸಂಸಾರ ಮಕ್ಕಳಿಗೂ ತುಂಬಾ ಉಪಕಾರಗಳನ್ನು ಮಾಡಿರುತ್ತಾರೆಂದೂ, ಆ ಉಪಕಾರವನ್ನು ತಾವು ಚಿರಕಾಲ ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇವೆಂದೂ, ನಮ್ಮಲ್ಲಿ ರಾಜಭಕ್ತಿ ಸಹೋದರ ವಾತ್ಸಲ್ಯಾದಿಗಳು ಪರಿಪೂರ್ಣವಾಗಿವೆ ಎಂದೂ, ಈ ಕ್ರೂರಕೃತ್ಯವನ್ನು ತಮ್ಮ ಮಗನು ನಡಿಸಿದ್ದರಿಂದ ಸರ್ಕಾರದವರು ತಮ್ಮ ಮೇಲೆ ಯಾವ ವಿಧವಾದ ಅನುಮಾನವನ್ನೂ ಇಟ್ಟುಕೊಳ್ಳಕೂಡದೆಂದೂ ಬಹಳ ವ್ಯಸನಪಟ್ಟು ಕಾಗದಗಳನ್ನು ಬರೆದು ಪ್ರಕಟಿಸಿದ್ದಾರೆ. ಮದನಲಾಲನ ಸಹೋದರರಾದ ಡಾಕ್ಟರ್ ಮೊಹನಲಾಲ್, ಡಾಕ್ಟರ್ ಬಿಹಾರಿಲಾಲ್ ಎಂಬಿಬ್ಬರೂ ಸಿಮ್ಲಾ ಪಟ್ಟಣದಲ್ಲಿದ್ದುಕೊಂಡು, ಅಲ್ಲಿಂದ ಪಂಜಾಬಿನ ಲೆಫ್ಟಿನೆಂಟ್ ಗವರ್ನರವರಿಗೆ ಒಂದು ವಿಜ್ಞಾಪನಾಪತ್ರಿಕೆಯನ್ನು ಬರೆದುಕೊಂಡಿದ್ದಾರೆ. ಅದರ ಮುಖ್ಯಾಭಿಪ್ರಾಯವೇನೆಂದರೆ—ನಮ್ಮ ಸಹೋದರನು ಲಂಡನ್ ಪಟ್ಟಣದಲ್ಲಿ ನಡಿಸಿರುವ ಕೃತ್ಯವು ಬಹು ತುಚ್ಛವೂ ನೀಚವೂ ಆದದಾಗಿದೆ. ಇದರಿಂದ ಅವನು ನಮ್ಮ ಸಂಸಾರಕ್ಕೆ ಕೆಟ್ಟ ಹೆಸರು ತಂದಿರುತ್ತಾನೆ. ನಮ್ಮ ಹಿತಕ್ಕಾಗಿ ಅನೇಕ ಉಪಕಾರಗಳನ್ನು ಮಾಡಿದಂಥಾ ಸರ್ ವೈಲಿಯವರನ್ನು ಅವನು ಕೊಂದು ಬಿಟ್ಟದ್ದು ನಮಗೆಲ್ಲಾ ಮಹಾ ದುಃಖವನ್ನುಂಟುಮಾಡುತ್ತದೆ. ನಮ್ಮ ತಂದೆಯು ತಮ್ಮನ್ನು ಕಾಣಲೊಪ್ಪಕ್ಕೆ ಕೂಡದಷ್ಟು ವ್ಯಸನದಲ್ಲಿ ಮುಳುಗಿರುತ್ತಾರೆ. ಅವರ ಅಪ್ಪಣೆಯ ಪ್ರಕಾರ ನಾವು ಅವರ ಮತ್ತು ಅವರ ಸಂಸಾರಕ್ಕೆ ಸೇರಿದವರ ಅಭಿಪ್ರಾಯವನ್ನೂ ವ್ಯಸನವನ್ನೂ ತಮಗೆ ಅರಿಕೆ ಮಾಡುತ್ತೇವೆ. ಈ ಕ್ರೂರಕೃತ್ಯವನ್ನು ನಡಿಸಿದ ನಮ್ಮ ತಮ್ಮನು ಚಿಕ್ಕಂದಿನಿಂದಲೂ ಹುಟ್ಟು ಹುಡುಗನೆನ್ನಿಸಿಕೊಂಡಿದ್ದನು. ಅವನ ಓದಿಯೂ ಚನ್ನಾಗಿರಲಿಲ್ಲ. ಆಗಾಗ್ಗೆ ಹುಡುಗರನ್ನೂ ಮಕ್ಕಳನ್ನೂ ಹಿಡಿದು ಹಿಂಸೆ ಮಾಡುತ್ತಿದ್ದನು. ಹಿರಿಯರನ್ನು ಕಂಡರೆ ಓಡಿ ಹೋಗಿ ಏಕಾಂಗಿಯಾಗಿ ಮನೋವಿಕಾರಗಳನ್ನು ಪ್ರಕಾಶಪಡಿಸುತ್ತಿದ್ದನು. ಈ ದುಃಸ್ಥಿತಿಯನ್ನು ತಪ್ಪಿಸಬೇಕೆಂದು ಅವನಿಗೆ ಎರಡು ಸಲ ನೌಕರಿಗಳನ್ನು ಮಾಡಿಸಿದ್ದಾಯಿತು. ಆದರೂ ಅವನಿಗೆ ಮನಸ್ಸು ನಿಮಿತವಾಗಲಿಲ್ಲ. ವಿಲಾಯತಿಗೆ ಹೋಗಿ ವಿದ್ಯೆ ಕಲಿತು ಬರಬೇಕೆಂದು ಕುತೂಹಲ ಪಡುತ್ತಿದ್ದನು. ವಿಲಾಯತಿಯ ಹವಾದಿಂದ ಅವನಿಗೆ ಅನುಕೂಲವಾದೀತೇನೋ ಎಂದು ಊಹಿಸಿ ನಮ್ಮ ತಂದೆಯು ಅವನನ್ನು ಅಲ್ಲಿಗೆ ಕಳುಹಿಸಿಕೊಟ್ಟರು. ಅವನ ಕೂಡ ಅವನ ತಮ್ಮನೂ ಹೋಗಿದ್ದರೂ ಇವರಿಬ್ಬರೂ ಅಲ್ಲಿ ಒಂದು ಕಡೆ ನಿಲ್ಲಲಿಲ್ಲ. ಮದನಲಾಲನು ಲಂಡನ್ ಪಟ್ಟಣದ ಇಂಡಿಯಾ ಹೌಸ್ ಎಂಬ ಭೋಜನಶಾಲೆಯಲ್ಲಿದ್ದುಕೊಂಡು, ಅಲ್ಲಿನ ದುಷ್ಟ ಸಹವಾಸದಲ್ಲಿ ಬಿದ್ದು ಮತ್ತಷ್ಟು ಕೆಟ್ಟು ಹೋದನು. ಇವನಿಗೆ ಬುದ್ಧಿ ಸ್ಥಿಮಿತವಿಲ್ಲದ್ದನ್ನು ಕಂಡು ಅಲ್ಲಿನ ಅರಾಜಕ ಗುಂಪಿನವರು ಇವನಿಗೆ ಚಿತಾವಣೆ ಮಾಡಿ ಇವನಿಂದ ಆ ಕ್ರೂರಕೃತ್ಯವನ್ನು ನಡಿಸಿರುತ್ತಾರೆ. ಇವನೇ ಆ ಕೃತ್ಯಕ್ಕೆ ಕಾರಣನಲ್ಲವೆಂಬುದನ್ನು ಸರ್ಕಾರದವರಿಗೆ ಅರಿಕೆ ಮಾಡಿಕೊಳ್ಳುತ್ತೇವೆ ಎಂಬುವದೇ.

ವಿಲಾಯತಿ ಪಾರ್ಲಿಮೆಂಟಿನ ಮುಖ್ಯಾಧಿಕಾರಿಯು ಇನ್ನು ಮುಂದೆ ಹಿಂದುಸ್ಥಾನದ ಜನರನ್ನು ಪಾರ್ಲಿಮೆಂಟ್ ಮೆಂಬರ ಶಿಫಾರಸು ಇಲ್ಲದೆ ಸಭೆಯನ್ನೊಳಕ್ಕೆ ಬಿಡಕೂಡದೆಂದು ಹುಕುಂ ಕೊಟ್ಟಿದ್ದಾರೆ. ವಿಲಾಯತಿಗೆ ಹೋಗಿರುವ ಹಿಂದುಸ್ಥಾನದ ರಾಜರುಗಳೂ ದೇಶೀಯ ದೊಡ್ಡ ಮನುಷ್ಯರೂ, ವಿದ್ಯಾರ್ಥಿಗಳೂ ಸಭೆಗಳನ್ನು ನಡಿಸಿ, ಈ ಕೊಲೆಯು ಬಹು ನೀಚವಾದದ್ದೆಂದೂ ಅದರ ವಿಷಯದಲ್ಲಿ ತಾವೆಲ್ಲಾ ತುಂಬಾ ವ್ಯಸನಪಡುತ್ತೇವೆಂಬದೂ ತೀರ್ಮಾನಗಳನ್ನು ಮಾಡಿದ್ದಾರೆ. ಹಿಂದೂಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ಪ್ರಜಾಪಾಲಕರೂ ಪ್ರಜೆಗಳು ಮುಖಂಡರೂ ಸಭೆಗಳನ್ನು ಮಾಡಿ, ಆ ಕೃತ್ಯಕ್ಕೆ ಹಿಂದುಸ್ಥಾನದವರ್‍ಯಾರೂ ಭಾಗಿಗಳಲ್ಲವೆಂದೂ, ಅಂಥಾ ಪರೋಪಕಾರಿಗಳಾಗಿದ್ದ ಅಧಿಕಾರಿಯನ್ನು ಕೊಂದುಹಾಕಿದ್ದು ಬಹು ನೀಚವೂ ವ್ಯಸನಕರವೂ ಆಗಿದೆ ಎಂದೂ ತೀರ್ಮಾನ ಮಾಡಿರುತ್ತಾರೆ. ಇನ್ನೂ ಹಲವು ಕಡೆಗಳಲ್ಲಿ ಇಂಥಾ ಸಭೆಗಳು ನಡೆಯುತ್ತಲೇ ಇವೆ.

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಾವಕಾಶ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವದಿಲ್ಲ ಎಂಬ ಅಂಶವನ್ನು ಎಲ್ಲರೂ ತಿಳಿಯತಕ್ಕದ್ದು. —ಎಡಿಟರ್

"ವಿಧವೆಯರ ಸ್ಥಿತಿ" ಎಂಬೀ ವಿಚಾರದಲ್ಲಿ ಬಾಯಿ ಮಾತೂ, ಬರವಣಿಗೆಯೂ ಬೇಕಾದಷ್ಟು ಆಗಿವೆ. ಪ್ರಜೆಗಳಿಗೆ ಇದರ ಪೂರ್ವೋತ್ತರವೆಲ್ಲಾ ಚನ್ನಾಗಿ ಗೊತ್ತಾಗಿದೆ ಎನ್ನುವುದಕ್ಕೆ ಸಂಶಯವಿಲ್ಲ. ಆದಕಾರಣ ವಿಧವೆಯರ ದುಃಸ್ಥಿತಿಯನ್ನು ನಿವಾರಣೆ ಮಾಡಬೇಕೆಂದು ಅವರ ವಿಷಯದಲ್ಲಿ ಕನಿಕರಪಡುವವರು ತಮ್ಮ ಕನಿಕರವನ್ನು ಕಾರ್ಯದಲ್ಲಿ ತೋರಿಸಬೇಕಾಗಿದೆ. ಅಂದರೆ, ಅವರಿಗೆ ಪುನರ್ವಿವಾಹವನ್ನು ಮಾಡಲಿ, ಅವಶ್ಯವಾದ ವಿದ್ಯೆ ಬುದ್ಧಿ ಕಸಬು ಮುಂತಾದದ್ದನ್ನು ಕಲಿಸಲಿ. ವಿಧವೆಯರ ಪೋಷಕರಿಗೆ ವಿವೇಕವನ್ನು ಹೇಳಿಕೊಟ್ಟು ಪ್ರೋತ್ಸಾಹಪಡಿಸಲಿ.
—ಎಡಿಟರ್]

ಕರೆಸ್‌ಪಾಂಡೆನ್ಸ್.

ಹುಡುಗನು ತಪ್ಪಿಸಿಕೊಂಡು ಹೋಗಿರುವುದು

ಅಯ್ಯಾ,

ಬೆಂಗಳೂರು ಸಿಟಿ ಚೌಡೇಶ್ವರಿ ದೇವಸ್ಥಾನದ ರಾಮ್ಸೆಯನ ಪೇಟೆ ೧೪ ನೇ ನಂಬರು ಕಿರಾತಾರ ದೇವಾಂಗದ ಮುನಸ್ವಾಮಿಶೆಟ್ಟಿಯವರ ಮನೆಯಲ್ಲಿ ವಾಸವಾಗಿರುವ ಚಿಂತಾಮಣಿ ವಾಸಸ್ಥಾನದ ನಗರದ ನಾಮಧಾರಿ ವೈಶ್ಯರ ಪಟ್ಟಾಭಿರಾಮಯ್ಯನಾದ ನಾನು ತಿಳಿಯಪಡಿಸುವದೇನೆಂದರೆ —ನಾನು ಒಂದು ತಿಂಗಳಿಂದ ಬನ್ನೇರುಘಟ್ಟ ಮುಂತಾದ ಸ್ಥಳಗಳಲ್ಲಿ ಸಂಚಾರಮಾಡಿಕೊಂಡು ಈ ಊರಿಗೆ ಬಂದು ಸಂಸಾರಸಹಿತ ವಾಸಮಾಡಿಕೊಂಡಿದೇನೆ. ಈಗ ೧೪ ದಿವಸದ ಕೆಳಗೆ ನನ್ನ ಜೊತೆಯಲ್ಲಿ ನಮ್ಮ ಅಣ್ಣನ ಮಗ ಸಂಗಂಗಿ ರಾಮನೆಂಬ ಹುಡುಗನನ್ನು ಕರೆದುಕೊಂಡು ಬಂದಿದ್ದೆನು. ಆ ಹುಡುಗನಿಗೆ ೨೨ ವರುಷ ವಯಸ್ಸು. ಆತನಿಗೆ ಜ್ಞಾನಸರಿಯಾಗಿರಲಿಲ್ಲ. ಬುದ್ಧಿ ಮಂದವಾಗಿತ್ತು. ಈತನು ಮನೆಯಿಂದ ಹೊರಗೆ ಬಂದು ದಾರಿತಪ್ಪಿಸಿಕೊಂಡು ಎಲ್ಲೋ ಹೊರಟುಹೋಗಿರುತ್ತಾನೆ. ಅದರಿಂದ ಮನೆ ಮಕ್ಕಳೆಲ್ಲಾ ನಿದ್ರೆ ಆಹಾರವನ್ನು ಬಿಟ್ಟು ವ್ಯಸನಪಡುತ್ತಿದೇವೆ. ಈ ವಿಷಯವನ್ನು ಪೋಲೀಸಿಗೂ ತಿಳಿಸಿರುತ್ತೇನೆ. ದಯಾಳುಗಳು ಯಾರ ದೃಷ್ಟಿಗಾದರೂ ಅವನು ಬಿದ್ದರೆ ನನಗೆ ವರ್ತಮಾನವನ್ನು ಕೊಟ್ಟರೂ ಸರಿ, ಇಲ್ಲದಿದ್ದರೆ ಕರೆದುಕೊಂಡು ಬಂದು ಬಿಟ್ಟಾಗ್ಯೂ ಅವರಿಗೆ ಹತ್ತು ರೂಪಾಯಿ ಬಹುಮಾನವನ್ನೂ ಅವರ ಖರ್ಚನ್ನೂ ಕೊಡುತ್ತೇನೆ. ಅಲ್ಲದೆ ಅವರಿಗೆ ಬಹಳ ಪುಣ್ಯ ಬರುತ್ತದೆ.

ಪಟ್ಟಾಭಿ ರಾಮಯ್ಯದಾಸ್

ಬಂದೂಕಿನ ಲೈಸೆನ್ಸು

ಅಯ್ಯಾ,

ಈ ಮಂಜರಾಬಾದು ತಾಲ್ಲೋಕು ಗ್ರಾಮಗಳಲ್ಲಿ ಅನೇಕ ಜನಗಳು ಬಂದೂಕುಗಳನ್ನು ಇಟ್ಟುಕೊಂಡು ತಮ್ಮ ಆತ್ಮಸಂರಕ್ಷಣೆ ಫಸಲು ಉಸ್ತುವಾರಿಗಳನ್ನು ವಹಿಸಿಕೊಂಡಿದ್ದಾರೆ. ಆದರೆ ಮೈಸೂರು ಗೌವರ್ನಮೆಂಟಿನವರ ಅಪ್ಪಣೆ ಪ್ರಕಾರ ಕಳೆದ ಇಸವಿ ಡಿಸೆಂಬರು ಆಖೈರು ಒಳಗಾಗಿ ಆಯಾಯ ಡಿಸ್ಟ್ರಿಕ್ಟು ಕಮಿಷನರವರ ಪರವಾನಗಿ ಬಗ್ಗೆ ಆಯುಧಗಳ ಲೈಸೆನ್ಸುಗಳನ್ನು ರೈತಾಬಿಗಳು ಹಾಜರುಮಾಡಿ ಇರುತ್ತಾರೆ. ಈಗ ನಡೆಯುವ ೧೯೦೯ನೇ ಇಸವಿ ಜೂನ್ ತಾರೀಖು ಆಖೈರು ಆದಾಗ್ಯೂ ಬಂದೂಕುಗಳ ಲೈಸೆನ್ಸುಗಳನ್ನು ಗೌವರ್ನಮೆಂಟಿನವರು ರೈತಾಬಿ ಜನಗಳಿಗೆ ವಾಪಸ್ಸು ಮಾಡದೆ ಇದ್ದಾರೆ. ಇದನ್ನು ನೋಡಿದರೆ ಸರ್ಕಾರದವರಿಗೆ ನಿದ್ದೆ ಬಂದಿರುವ ಹಾಗೆ ತಿಳಿಯಬಹುದು. ಅಥವಾ, ಲೈಸೆನ್ಸನ್ನು ವಾಪಸ್ಸು ಮಾಡಿಸಿ ರೈತರನ್ನು ಉದ್ಧಾರ ಮಾಡ್ತಾರೆಂದು ನಂಬಿ ಇದ್ದೇವೆ. ರೈತರಾದ ನಾವುಗಳು ಬಂದೂಕವನ್ನು ಹಿಡಿದುಕೊಂಡು ತಿರುಗುವುದು ಹ್ಯಾಗೆ? ಹಾಗೆ ನಾವು ಜಮೀನುಗಳನ್ನು ನೋಡಿಕೊಂಡು ಬರುವಾಗ್ಗೆ ದಾರಿಯಲ್ಲಿ ಪೋಲೀಸ್ ಸ್ಟೇಷನ್ ದಾರ್ರುಗಳು ಸಿಕ್ಕಿ—ಲೈಸೆನ್ಸು ತೋರಿಸು. ಇಲ್ಲದೆ ಹ್ಯಾಗೆ ಹಿಡುಕೊಂಡು ಹೊರಗೆ ಸಂಚಾರ ಮಾಡುತ್ತೀಯೆ. ಬಂದೂಕು ಇಲ್ಲಿ ತಾರೆಲೋ. ಪೋಲೀಸಿಗೆ ಹೋಗೋಣ, ನಡಿಯೋ" ಎಂಬ ರೀತಿ ಹೇಳಿ ಬೆದರಿಕೆ ಹುಟ್ಟಿಸುವರು. ಅವರ ಅವಾಂತ್ರ ತಡೆಯಲಾಗದು. ಆ ಮೇಲೆ ಲೈಸೆನ್ಸು ದಾರ್ರು ಶಿರಸ್ತೆಗೆ ಹೋಗಿ ಲೈಸೆನ್ಸು ಕೇಳುವಲಿ "ಹುಜೂರಿನಿಂದ ಬಂದು ಇಲ್ಲ, ಹೋಗೋ" ಎಂಬದಾಗಿ ನಾವು ಎಷ್ಟಾವರ್ತಿ ಕೇಳಿದಾಗ್ಯೂ ಲೈಸೆನ್ಸು ಬಂದೇ ಇಲ್ಲವೆಂಬದಾಗಿ ಹೇಳುತ್ತಾರೆ. ಗೌರ್ನಮೆಂಟಿನವರಿಗೆ ನಾವು ಡಿಸೆಂಬರು ಆಖೈರು ಒಳಗಾಗಿ ಪರವಾನಗಿ ಬಗ್ಗೆ ಲೈಸೆನ್ಸು ಹಾಜರುಮಾಡದೆ ತಾತ್ಸಾರವಾದರೆ ಅವರು ಎಷ್ಟರ ಮಟ್ಟಿಗೆ ಜಾಗರೂಕರಾಗಿ ಇರುತ್ತಾರೋ ಹಾಗೆಯೇ ರೈತರುಗಳಿಗೆ ಲೈಸೆನ್ಸು ವಾಪಸ್ಸು ಮಾಡುವಾಗಲೂ ಸರ್ಕಾರದವರು ಯಾಕೆ ಜಾಗ್ರತೆಯಾಗಿ ಇರಬಾರದು? ಈ ಮೇಲಾದರು ಲೈಸೆನ್ಸು ವಾಪಸ್ಸು ಮಾಡ್ತಾರೆಂದು ನಂಬಿ ಇರುತ್ತೇವೆ. ಅಥವಾ ಲೈಸೆನ್ಸು ತಾತ್ಸಾರ ಮಾಡುವದನ್ನು ಪತ್ರಿಕೆ ಮುಖೇನ ತಿಳಿಸುವರೆಂದು ನಂಬಿಕೊಂಡಿರುತ್ತೇವೆ.

ಒಬ್ಬ ರೈತ

ಇಂಡಿಯಾ ದೇಶದ ವೃತ್ತಾಂತಗಳು

ಕಳೆದ ವಾರ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳಿಗೆ ಸಿಂಲಾ ಪಟ್ಟಣದಲ್ಲಿ ಸ್ವಲ್ಪ ಆರೋಗ್ಯ ತಪ್ಪಿ ೪-೬ ದಿನ ತಮ್ಮ ಭವನದಲ್ಲೇ ಇದ್ದರು. ಈಗೀಗ ಸೌಖ್ಯವಾಗುತ್ತಿದ್ದಾರೆಂದು ತಿಳಿದು ಬಂದಿದೆ.

* *

ದಕ್ಷಿಣದೇಶದಲ್ಲಿರುವ ಮ ಏ ಕೇಶವ ಮೆನನ್ ಎಂಬ ವಿದ್ಯಾರ್ಥಿಗೆ ಇಂಡಿಯಾ ಗವರ್ನಮೆಂಟಿನವರು ವಿಲಾಯತಿಗೆ ಹೋಗಿ ರಸಾಯನಶಾಸ್ತ್ರ, ಗಾಜಿನ ಕೆಲಸ, ದೇಶೀಯ ಎಣ್ಣೆಗಳ ಉಪಯೋಗ ಮುಂತಾದ ಕಸಬುದಾರಿ ವಿದ್ಯೆಯನ್ನು ಕಲಿತು ಬರುವುದಕ್ಕೋಸ್ಕರ ವೇತನವನ್ನು ಸ್ಯಾಂಕ್ಷನ್ ಮಾಡಿದ್ದಾರೆ.

ಕಳೆದ ಗುರುವಾರ ಬೆಳಗಿನ ಝಾಮದಲ್ಲಿ ಸಿಂಲಾ, ಲಾಹೋರ್, ಕಾಶ್ಮೀರ ಇವೇ ಮೊದಲಾದ ಪ್ರಾಂತ್ಯಗಳಲ್ಲಿ ಭೂಕಂಪವಾಯಿತು. ಅಬ್ಬೊಟಾಬಾದಿನಲ್ಲಿ ಕೆಲವು ಗೋಡೆಗಳು ಬಿರುಕು ಬಿಟ್ಟವು. ಮನೆ ಮಾಳಿಗೆಗಳು ಕಳಚಿ ಕೊಂಡವು. ಶ್ರೀನಗರದಲ್ಲಿ ಪ್ರಜೆಗಳು ತುಂಬಾ ಗಾಬರಿಯಿಂದ ಮನೆಮಠಗಳನ್ನು ಬಿಟ್ಟು ಮೈದಾನಿಗೆ ಓಡಿಹೋದರು.

* * *

ಎಡಿಟರುಗಳ ಸಭೆಗೋಸ್ಕರವಾಗಿ ಬಂಗಾಳದಿಂದ ವಿಲಾಯತಿಗೆ ಹೋಗಿರುವ ಬಾಬು ಸುರೇಂದ್ರನಾಥ ಬಾನರ್ಜಿಯವರಿಗೆ ವಿಲಾಯತಿಯ ಚಕ್ರವರ್ತಿ ಸಾರ್ವಭೌಮರವರೂ ಮಹಾರಾಜ್ಞೀರವರೂ ಭೇಟಿಯನ್ನು ದಯಪಾಲಿಸಿದರೆಂದೂ, ಮಿ॥ ಬ್ಯಾನರ್ಜಿಯವರು ಲಾರ್ಡ್ ಕರ್ಸನ್‌ರವರನ್ನು ಕಂಡು ಅವರ ಕೂಡ ಸಂಭಾಷಣೆ ಮಾಡಿದರೆಂದೂ ಪ್ರಕಟವಾಗಿದೆ.

* * *

ಕಳೆದ ವಾರ ಹಿಂದುಸ್ಥಾನದಲ್ಲಿ ೫೭೮ ಜನರು ಪ್ಲೇಗ್ ಉಪದ್ರವದಿಂದ ಮೃತಪಟ್ಟರು. ಈ ಪೈಕಿ ಪಂಜಾಬ್ ೬೧, ಬೊಂಬಾಯಿ ಅಧಿಪತ್ಯ ೭೯, ಬಂಗಾಳಾ ೬೦, ಮದರಾಸ್ ಅಧಿಪತ್ಯ ೪೧, ಸಂಯುಕ್ತ ಅಧಿಪತ್ಯಗಳು ೦೦, ಬರ್ಮ ೬೬, ಮೈಸೂರ್ ಸಂಸ್ಥಾನ ೯೦, ರಾಜಪುಟಾನಾ ೧. ಈ ರೀತಿ ಮರಣಗಳು ವಾರವಾರಕ್ಕೆ ಕಡಮೆಯಾಗುತ್ತಾ ಬಂದಿದೆ.

* * *

ದಕ್ಷಿಣ ಆಫ್ರಿಕದಿಂದ ಮ ಗಂಧಿಯವರು ಕಳೆದ ವಾರ ಲಂಡನ್ ಪಟ್ಟಣಕ್ಕೆ ಹೋಗಿ ಇಳಿದರು. ಇಲ್ಲಿಗೆ ಬಂದದ್ದಕ್ಕೆ ಕಾರಣವೇನೆಂದು ಕೇಳಿದಾಗ ಅವರು—ದಕ್ಷಿಣ ಆಫ್ರಿಕದಲ್ಲಿ ಹಿಂದೂಸ್ಥಾನದವರಿಗಿರುವ ಕಿರುಕುಳ ಅನನುಕೂಲಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಮೆ ಮಾಡಬೇಕೆಂಬ ಉದ್ದೇಶದಿಂದ ಇಲ್ಲಿ ಪ್ರಯತ್ನಪಡಲು ಬಂದಿರುತ್ತೇನೆ ಎಂದು ಹೇಳಿದರು.

* * *

ಮ ಲಾಲಾ ಜಪತ್ ರಾಯರವರು ಕಲ್ಕತ್ತೆಯಲ್ಲಿ ಪ್ರಕಟವಾಗುವ "ಇಂಗ್ಲಿಷ್‌ಮನ್" ಎಂಬ ಪತ್ರಿಕೆಯ ಮೇಲೆ ಮಾನನಷ್ಟದ ಮೊಕದ್ದಮೆಯನ್ನು ತಂದಿದ್ದರಷ್ಟೆ. ಜಡ್ಜಿಯವರು ಆ ಪತ್ರಿಕೆಯ ಮಾಲೀಕರಿಂದ ೧೫,೦೦೦ ರೂಪಾಯಿ ದಾವಿಯನ್ನೂ ಕೋರ್ಟು ಖರ್ಚನ್ನೂ ಫಿರ್ಯಾದಿಗೆ ಕೊಡಿಸಿದರು. ಈಗ ಆ ಪತ್ರಿಕೆಯ ಮಾಲೀಕರು ಕಲ್ಕತ್ತಾ ಹೈಕೋರ್ಟಿನಲ್ಲಿ ಅಪೀಲ್ ಮಾಡಿರುತ್ತಾರೆ.

* * *

ಕಳೆದ ಭಾನುವಾರ ಬೆಳಿಗ್ಗೆ ಮದರಾಸ್ ಪಟ್ಟಣದ ಸಮುದ್ರ ತೀರದಲ್ಲಿ ಭಾರವನ್ನು ಎತ್ತುವ ಕ್ರೇನ್ ಎಂಬ ಯಂತ್ರವು ಭಾರೀ ಕಟಗಳನ್ನು ಎತ್ತುವಾಗ್ಗೆ ಕಳಚಿ ಬಿದ್ದುಕೊಂಡಿತು. ಅದರ ಮೇಲೆ ಕೆಲಸಮಾಡುತ್ತಿದ್ದ ಮೂರು ಆಳುಗಳೂ ಒಬ್ಬ ಹುಡುಗನೂ ಗಾಯಪಟ್ಟು ಸಮುದ್ರದೊಳಗೆ ಬಿದ್ದುಬಿಟ್ಟರು. ಕೂಡಲೇ ಅವರನ್ನು ನೀರಿನಿಂದ ಎತ್ತಿ ನೋಡುವಲ್ಲಿ ದೊಡ್ಡವರಿಬ್ಬರಿಗೆ ಬಹಳ ಗಾಯಗಳಾಗಿರಲಿಲ್ಲ. ಉಳಿದ ಇಬ್ಬರನ್ನು ಆಸ್ಪತ್ರೆಯಲ್ಲಿಟ್ಟಿದ್ದರು. ಈ ಪೈಕಿ ಒಬ್ಬ ಹುಡುಗನು ಭಾನುವಾರದ ದಿನ ಕಾಲವಾಗಿರುತ್ತಾನೆ.

* * *

ರಾಜಕೋಟೆಯಲ್ಲಿ ಮೂರನೇ ಗುಜರಾತಿ ಸಾಹಿತ್ಯ ಪರಿಷತ್ತು ಇಷ್ಟರಲ್ಲೇ ನಡೆಯುವುದಾಗಿದೆ. ಗೋಂಡಾಲ್ ಸಂಸ್ಥಾನದ ರಾಣೀಸಾಹೇಬರವರು ರಿಸೆಪ್ಷನ್ ಕಮಿಟಿಯ ಪ್ರೆಸಿಡೆಂಟರಾಗಿರುವುದಕ್ಕೆ ಒಪ್ಪಿಕೊಂಡಿದ್ದಾರೆ. ಇವರು ಸ್ತ್ರೀವಿದ್ಯಾ ಪ್ರೋತ್ಸಾಹದಲ್ಲಿ ಬಹಳ ಮುಂದಾಳುಗಳಾಗಿ ಆ ಪ್ರಾಂತ್ಯದ ಪ್ರಜೆಗಳಿಂದ ಹೊಗಳಿಸಿಕೊಳ್ಳುತ್ತಿರುವರು. ದಿವಾನ್ ಬಹದೂರ್ ಅಂಬಾಲಾಲ್ ಸಕ್ರಲಾಲ್ ದೇಸಾಯಿಯವರು ಮ ಬಂದ ಪರಿಷತ್ತಿನ ಅಗ್ರಸ್ಥಾನವನ್ನು ವಹಿಸಿ ಸಭೆಯನ್ನು ನಡಿಸುವರು.

* * *

ಬೊಂಬಾಯಿ ಪಟ್ಟಣದಲ್ಲಿ ಕಳೆದ ಗುರುವಾರ ದೇಶೀಯ ವರ್ತಕರು ಸೇರಿ ಒಂದು ಹೊಸ ಬ್ಯಾಂಕನ್ನು ಸ್ಥಾಪನೆ ಮಾಡಿದರು. ಹಿಂದು, ಪಾರ್ಸಿ, ಮಹಮದೀಯ ವರ್ತಕರೇ ಈ ಬ್ಯಾಂಕಿನ ಡೈರೆಕ್ಟರುಗಳಾಗಿದ್ದಾರೆ. ಈ ಬ್ಯಾಂಕಿನ ಮೂಲಧನವು ಒಂದು ಕೋಟಿ ರೂಪಾಯಿ. ಈ ಪೈಕಿ ಹತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಮೊದಲು ಷೇರುಗಳ ಮೂಲಕ ಕೂಡಿಸುವುದಾಗಿ ಬೆಳಿಗ್ಗೆ ೧೧ ಘಂಟೆಗೆ ಪ್ರಕಟಮಾಡಿದರು. ಸಾಯಂಕಾಲ ೪ ಘಂಟೆಯೊಳಗಾಗಿ ಆರು ಕೋಟಿ ರೂಪಾಯಿ ತನಕ ಹಣ ಕೊಡಲು ಸಿದ್ಧರಾಗಿದೇವೆಂದು ವರ್ತಕರು ಅರ್ಜಿ ಬರೆದುಕೊಂಡರು. ಇದರಿಂದ ಅಲ್ಲಿನ ವರ್ತಕರ ಉತ್ಸಾಹವೂ ಐಶ್ವರ್ಯವೂ ಎಷ್ಟೆಂಬುವುದು ಗೊತ್ತಾಗುತ್ತದೆ.

* * *

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಕಟಕ್ ಪಟ್ಟಣದ ರೈಲ್ವೆ ಸ್ಟೇಷನ್ನಲ್ಲಿ ಸುಮಾರು ೧೭ ವರುಷ ವಯಸ್ಸಿನ ಒಬ್ಬ ಹುಡುಗನು ರೈಲ್ವೇ ಪ್ರಯಾಣಸ್ಥರಿಗೆ ಕೆಲವು ಕರೆನ್ಸಿ ನೋಟುಗಳನ್ನು ಬಿಕರಿ ಮಾಡುತ್ತಿದ್ದನು. ಇದು ಪ್ರಕಟವಾಗಿ ಪೋಲೀಸಿನವರು ಅವನನ್ನು ಹಿಡಿದು ಅವನ ಮೈಯನ್ನು ಶೋಧನೆ ಮಾಡಿದರು. ಸಾವಿರ ರೂಪಾಯಿನ ಒಂದು ನೋಟೂ, ಒಂದು ಸಾವಿರ ರೂಪಾಯಿನಷ್ಟು ಚಿಲ್ಲರೆ ನೋಟುಗಳೂ ಅವನ ಬಳಿ ಸಿಕ್ಕಿದವು. ಇಷ್ಟು ಕರೆನ್ಸಿ ನೋಟುಗಳು ಹ್ಯಾಗೆ ಸಿಕ್ಕಿದವೆಂದು ಕೇಳಿದಾಗ ಆ ಹುಡುಗನು ಜವಾಬಾಗಿ ದಾರಿಯಲ್ಲಿ ಒಂದು ಗಂಟು ಬಿದ್ದಿತ್ತೆಂತಲೂ, ಅದರಲ್ಲಿ ತನಗೆ ಆ ನೋಟುಗಳು ದೊರಕಿದವೆಂತಲೂ ಹೇಳಿದನು. ಪೋಲೀಸಿನವರು ಇನ್ನೂ ವಿಚಾರಿಸುವಲ್ಲಿ ಆ ಹುಡುಗನು ಕೆಲವು ವರುಷಗಳಿಂದ ಕಲ್ಕತ್ತಾ ಪಟ್ಟಣದಲ್ಲಿ ಇದ್ದವನೆಂದು ತಿಳಿದು ಬಂದ ಕಾರಣ ಈಗ ಅವನನ್ನು ಕಲ್ಕತ್ತೆಗೆ ಕರೆದುಕೊಂಡು ಹೋಗಿ ಲಾಕಪ್ಪಿನಲ್ಲಿಟ್ಟುಕೊಂಡು ಪತ್ತೆ ತರಹೆಯನ್ನು ನಡಿಸುತ್ತಿದ್ದಾರೆ.

* * *

ಹಿಂದುಸ್ಥಾನದ ಸರ್ವ ಸೇನಾಪತಿಯಾದ ಲಾರ್ಡ್ ಕಿಚ್ನರ್ ಯವರನ್ನು ಆಸ್ಟ್ರೇಲಿಯಕ್ಕೆ ಕರೆಸಿಕೊಂಡು ಅವರ ಮೂಲಕ ಅಲ್ಲಿನ ಸೈನ್ಯವನ್ನು ತರಪೇತು ಮಾಡಿಸಿಕೊಳ್ಳಬೇಕೆಂದು ಆಸ್ಟ್ರೇಲಿಯದವರು ಅಪೇಕ್ಷಿಸಿ ಕಳೆದ ವಾರ ಲಾರ್ಡ್ ಕಿಚ್ನರ್ ಯವರಿಗೆ ಕಾಗದವನ್ನು ಬರೆದು ಕೇಳಿದರು. ಇದಕ್ಕೆ ಲಾರ್ಡ್ ಕಿಚ್ನರ್ ಯವರು—ನಿಮ್ಮ ಆಹ್ವಾನವನ್ನು ಬಹು ಸಂತೋಷದಿಂದ ಅಂಗೀಕರಿಸಿರುತ್ತೇನೆ. ದಕ್ಷಿಣ ಆಫ್ರಿಕದಲ್ಲಿ ನನ್ನ ಕೈಕೆಳಗಿದ್ದ ಸೇನಾನಾಯಕರನ್ನು ಕಾಣಲು ನಾನು ಕುತೂಹಲಪಡುವೆನು. ನಾನು ಬಂದು ಸೈನ್ಯವನ್ನು ಅಭಿವೃದ್ಧಿಗೆ ತರುವುದಕ್ಕೆ ನನಗೆ ತೋರುವ ಉಪಾಯವನ್ನು ನಿಮಗೆ ಹೇಳಿಕೊಡುವುದಕ್ಕೆ ಸಿದ್ಧನಾಗಿರುತ್ತೇನೆ ಎಂಬದಾಗಿ ಜವಾಬು ಕೊಟ್ಟಿದ್ದಾರೆ. ಇವರು ಮುಂದಿನ ಅಕ್ಟೋಬರ್ ನವೆಂಬರ್ ತಿಂಗಳಲ್ಲಿ ಜಪಾನಿಗೆ ಹೋಗಿ ಅಲ್ಲಿ ನಡೆಯುವ ಸೈನ್ಯಗಳ ಕಸರತ್ತು ಕವಾತುಗಳನ್ನು ನೋಡಿಕೊಂಡು, ಮುಂದಿನ ವರುಷ ಜನವರಿಯಲ್ಲಿ ಆಸ್ಟ್ರೇಲಿಯಕ್ಕೆ ಹೋಗಬಹುದೆಂದೂ, ಅಲ್ಲಿಂದ ಮುಂದೆ ನ್ಯೂ ಜೀಲಾಂಡ್, ಅಮೇರಿಕ, ಕ್ಯಾನಡಾ ಪ್ರಾಂತ್ಯಗಳಲ್ಲಿ ಸಂಚಾರ ಮಾಡಿಕೊಂಡು ವಿಲಾಯತಿಯನ್ನು ಸೇರುವರಾಗಿದ್ದಾರೆಂದೂ ಪ್ರಕಟವಾಗಿದೆ.

ಲಾರ್ಡ್ ರಿಪನ್‌ರವರ ಮರಣವು

ಕಳೆದ ೧೮೮೦ ರಿಂದ ೧೮೮೪ನೇ ಇಸವಿಯ ತನಕ ಹಿಂದುಸ್ಥಾನದ ವೈಸ್‌ರಾಯಿ ಮತ್ತು ಗವರ್ನರ್ ಜನರಲ್ ಪದವಿಯಲ್ಲಿದ್ದು ವಿಲಾಯತಿಗೆ ಪ್ರಯಾಣ ಮಾಡಿದ ಲಾರ್ಡ್ ರಿಪನ್‌ರವರು ೮೨ನೇ ವಯಸ್ಸಿನಲ್ಲಿ ಕಾಲವಾದರೆಂದು ಕಳೆದ ಶನಿವಾರ ಸೀಮೆಯಿಂದ ಬಂದಿರುವ ವರ್ತಮಾನವನ್ನು ತಿಳಿಸಲು ವಿಷಾದಿಸುತ್ತೇವೆ. ಈ ಮರಣವಾರ್ತೆಯು ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ ವಿಶೇಷವಾದ ಸಂತಾಪವನ್ನುಂಟುಮಾಡುತ್ತದೆ ಎನ್ನುವುದಕ್ಕೆ ಸಂಶಯವಿಲ್ಲ. ಲಾರ್ಡ್ ರಿಪನ್‌ರವರು ವೈಸ್‌ರಾಯಿ ಪದವಿಯಲ್ಲಿದ್ದಾಗ್ಗೆ ಈ ರಾಷ್ಟ್ರದ ಹಿತವನ್ನು ಬಯಸಿ ಅನೇಕ ಪ್ರಜಾ ರಂಜಕ ಕಾರ್ಯಗಳನ್ನು ನಡೆಸಿರುತ್ತಾರೆ. ಇವರ ಹಿಂದೆ ವೈಸ್‌ರಾಯರಾಗಿದ್ದ ಲಾರ್ಡ್ ಲಿಟನ್‌ರವರು ಒಂದು ಕಾನೂನು ಮಾಡಿ ಜಾರಿಗೆ ತಂದು ದೇಶಭಾಷೆಯ ವರ್ತಮಾನ ಪತ್ರಿಕೆಗಳ ವಾಗ್ಬಂಧನವನ್ನು ಕಲ್ಪಿಸಿದ್ದರು. ಲಾರ್ಡ್ ರಿಪನ್ ಪ್ರಭುಗಳು ಈ ಕಾನೂನನ್ನು ರದ್ದು ಮಾಡಿದರು. ಇವರು ೧೮೮೨ನೇ ಇಸವಿಯಲ್ಲಿ ಮ್ಯುನಿಸಿಪಲ್ ಮತ್ತು ಲೋಕಲ್ ಫಂಡ್ ಬೋರ್ಡುಗಳನ್ನು ಸ್ಥಾಪನೆ ಮಾಡಿ ಕೊಟ್ಟು, ಪ್ರಜೆಗಳಿಗೆ ಕೆಲವು ಸ್ವತಂತ್ರಾಧಿಕಾರಗಳನ್ನು ವಹಿಸಿದರು. ಇದರಿಂದ ಆಯಾ ಸ್ಥಳದ ದೇಶೀಯ ದೊಡ್ಡ ಮನುಷ್ಯರು ತಮ್ಮ ಸುತ್ತುಮುತ್ತಿನಲ್ಲಿ ಆಜೂಬಾಜೂವಿನಲ್ಲಿ ಪ್ರಜೆಗಳ ಹಿತವನ್ನು ಬಯಸಿ ತಾವೇ ಹಲವು ಕಾರ್ಯಗಳನ್ನು ಮಾಡಿಕೊಳ್ಳಲು ಸಹಾಯವಾಯಿತು. ಕಳೆದ ೧೮೮೧ನೇ ಇಸವಿಯಲ್ಲಿ ಪ್ರಾಪ್ತ ವಯಸ್ಕರೂ ಸಮರ್ಥರೂ ಆದ ಚಾಮರಾಜೇಂದ್ರ ಒಡೆಯರವರಿಗೆ ಮೈಸೂರು ಸಂಸ್ಥಾನದ ಆಳ್ವಿಕೆಯನ್ನು ಲಾರ್ಡ್ ರಿಪನ್‌ರವರು ವಹಿಸಿದರು. ಅದುವರೆಗೆ ಅಂದರೆ ೫೦ ಸಂವತ್ಸರಗಳ ತನಕ ಈ ಸಂಸ್ಥಾನವು ಇಂಗ್ಲಿಷರ ಸ್ವತಂತ್ರವಾದ ಆಳ್ವಿಕೆಯಲ್ಲಿತ್ತು. ಲಾರ್ಡ್ ರಿಪನ್‌ರವರ ಆಳ್ವಿಕೆಯು ಈ ರಾಷ್ಟ್ರದಲ್ಲಿ ಚಿರಸ್ಥಾಯಿಯಾಗಿರುವಂತೆ ಅವರು ಅನೇಕ ಪ್ರಜಾಹಿತ ಕಾರ್ಯಗಳನ್ನು ನಡೆಸಿರುತ್ತಾರೆ. ಅವರ ಕಾಲದಲ್ಲಿ ಹಿಂದುಸ್ಥಾನದೊಳಗಾಗಲಿ ಅದರ ಎಲ್ಲೆಕಟ್ಟಿನಲ್ಲಾಗಲಿ ಯಾವ ಗಲಭೆಯೂ ಇಲ್ಲದೆ ಎಲ್ಲಾ ನೆಮ್ಮದಿಯಾಗಿತ್ತು. ಈ ರಾಷ್ಟ್ರವು ಸುಭಿಕ್ಷವಾಗಿತ್ತು. ಪ್ರಜೆಗಳು ನೆಮ್ಮದಿ ಸುಖ ಸಂತೋಷಗಳಲ್ಲಿ ಅಭಿವೃದ್ಧಿ ಹೊಂದಿದರು. ರಾಜಾದಾಯವೂ ಹೆಚ್ಚಾಯಿತು. ರೈಲ್ ಮಾರ್ಗಗಳು ಬಹಳವಾಗಿ ಬಲಾವಣೆಯಾದವು. ಉಪ್ಪಿನ ಮೇಲಿನ ತೆರಿಗೆಯನ್ನು ಕಡಮೆಮಾಡಿದರು. ವ್ಯಾಪಾರಾಭಿವೃದ್ಧಿಗೆ ಅವರು ಅನೇಕ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು. ಕಠಿಣವಾಗಿದ್ದ ಕೆಲವು ತೆರಿಗೆಗಳನ್ನು ವಜಾ ಮಾಡಿದರು, ಕೆಲವನ್ನು ಕಡಮೆಮಾಡಿದರು. ಪ್ರೈಮರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸವು ಲಾರ್ಡ್ ರಿಪನ್‌ರವರ ಆಳ್ವಿಕೆಯಲ್ಲಿ ತುಂಬಾ ಪ್ರೋತ್ಸಾಹ ಹೊಂದಿ ವಿಶೇಷವಾಗಿ ಹರಡಿಕೊಂಡಿತು. ಮುಖ್ಯವಾಗಿ ಆ ಪ್ರಭುಗಳಲ್ಲಿ ಈ ರಾಷ್ಟ್ರದ ಪ್ರಜೆಗಳಿಗೆ ಉಪಕಾರವಾಗಬೇಕೆಂಬ ಉತ್ಸಾಹವೇ ವಿಶೇಷವಾಗಿತ್ತೆಂದು ಹೇಳುವುದೇನೂ ಅತಿಶಯೋಕ್ತಿಯಲ್ಲ. ಆದರೆ ಇವರು ಒಂದು ಕಾನೂನನ್ನು ಜಾರಿಗೆ ತರಬೇಕೆಂದು ಪ್ರಯತ್ನಪಟ್ಟಾಗ ಇವರ ಮೇಲೆ ತುಂಬಾ ಆಕ್ಷೇಪಣೆಯುಂಟಾಯಿತು. ಯೂರೋಪ್ಪಿಯನ್ ಜನರು ಅಪರಾಧ ಮಾಡಿದರೆ ಅವರನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಸೆಷನ್ಸ್ ಜಡ್ಜರೂ ವಿಚಾರಣೆ ಮಾಡಬಹುದೆಂದು ಕಾನೂನ್ ಮಾಡಲಪೇಕ್ಷಿಸಿದರು. ಇದು ಹಿಂದುಸ್ಥಾನದಲ್ಲಿದ್ದ ಯೂರೋಪ್ಪಿಯನ್ ಜನರಿಗೆ ಸಮ್ಮತವಾಗದೆಹೋಯಿತು. ಅವರು ಕಲ್ಕತ್ತಾ ಮೊದಲಾದ ಪಟ್ಟಣಗಳಲ್ಲಿ ಸಭೆಗಳನ್ನು ನಡಿಸಿ ತಮ್ಮ ಅಸಮಾಧಾನವನ್ನು ತಿಳಿಯಪಡಿಸಿದರು. ವಿಲಾಯತಿಯಲ್ಲೂ ಈ ವಿಚಾರವಾಗಿ ಒಂದು ಸಭೆ ನಡೆದು ವೈಸ್‌ರಾಯಿ ಲಾರ್ಡ್ ರಿಪನ್‌ರವರು ಮಾಡತಕ್ಕ ಕಾರ್ಯಗಳು ಸಹಜವಾದವುಗಳೆಂದು ಒಪ್ಪಿಕೊಳ್ಳಲಾಯಿತು. ಕಡೆಗೆ ದೇಶೀಯ ಮ್ಯಾಜಿಸ್ಟ್ರೇಟರು ಯೂರೋಪ್ಪಿಯನ್ ಅಪರಾಧಿಗಳನ್ನು ಇವರು ಇಷ್ಟಪಡದಿದ್ದರೆ ತಮ್ಮ ಕೋರ್ಟುಗಳಲ್ಲಿ ದರ್ಯಾಪ್ತಿ ಮಾಡಬೇಕಾದದ್ದಿಲ್ಲವೆಂದೂ, ಯೂರೋಪ್ಪಿಯನ್ ಮ್ಯಾಜಿಸ್ಟ್ರೇಟರು ಜೂರಿ ಪಂಚಾಯಿತರನ್ನಿಟ್ಟುಕೊಂಡು ದರ್ಯಾಪ್ತಿ ಮಾಡಬೇಕೆಂತಲೂ ಕಾನೂನಾಯಿತು. ಲಾರ್ಡ್ ರಿಪನ್‌ರವರು ದೇಶೀಯ ಜನರನ್ನು ಸರ್ಕಾರದ ಅಧಿಕಾರಗಳಿಗೆ ನೇಮಕ ಮಾಡಿ, ಅವರಿಗೆ ಸರ್ಕಾರದಲ್ಲಿ ಹೆಚ್ಚು ಭಾಗವನ್ನು ವಹಿಸಿಕೊಟ್ಟರು. ೧೮೮೪ನೇ ಇಸವಿಯಲ್ಲಿ ಅವರು ಕೆಲಸಕ್ಕೆ ರಾಜೀನಾಮೆ ಕೊಟ್ಟು ಸೀಮೆಗೆ ಪ್ರಯಾಣ ಮಾಡಿದಾಗ್ಗೆ ಈ ರಾಷ್ಟ್ರದ ಪ್ರಜೆಗಳು ಬಹಳ ವ್ಯಸನಪಟ್ಟರು. ಅವರಲ್ಲಿ ತಮಗಿದ್ದ ಭಕ್ತಿ ಪ್ರೀತಿ ಕೃತಜ್ಞತೆಗಳನ್ನು ಪ್ರಕಾಶಪಡಿಸುವುದಕ್ಕೆ ಕಲ್ಕತ್ತೆಯಿಂದ ಬೊಂಬಾಯಿ ಪಟ್ಟಣದ ತನಕ ಅವರಿಗೆ ಉದ್ದಕ್ಕೂ ಚಪ್ಪರ ತೋರಣಗಳನ್ನು ಕಟ್ಟಿ ವಿಜ್ಞಾಪನಾ ಪತ್ರಿಕೆಗಳನ್ನು ಒಪ್ಪಿಸಿರುತ್ತಾರೆ. ಲಾರ್ಡ್ ರಿಪನ್‌ರವರು ವಿಲಾಯತಿಗೆ ಹೋದ ಮೇಲೂ ಅವರು ಕಾಲವಾಗುವ ತನಕ ಹಿಂದುಸ್ಥಾನದ ಮೇಲೆ ತುಂಬಾ ವಿಶ್ವಾಸವನ್ನಿಟ್ಟುಕೊಂಡಿದ್ದರಲ್ಲದೆ, ಈ ರಾಷ್ಟ್ರಕ್ಕೆ ಸಂಬಂಧಪಟ್ಟ ವಿಚಾರಗಳು ಸೀಮೆಯಲ್ಲಿ ಚರ್ಚೆಗೆ ಬಂದಾಗಲೆಲ್ಲಾ ಅವರು ಹಿಂದುಸ್ಥಾನದ ಪಕ್ಷವನ್ನೇ ವಹಿಸಿ ಹೊಡೆದಾಡುತ್ತಿದ್ದರು. ಇಂಥಾ ಸತ್ಪುರುಷರು ಕಾಲವಾದ ವಿಷಯದಲ್ಲಿ ಸಕಲ ಪ್ರಜೆಗಳ ಕೂಡ ನಾವೂ ಬಹಳವಾಗಿ ಸಂತಾಪಪಡುತ್ತೇವೆ.

ಪ್ಲೇಗ್ ಇನಾಕ್ಯುಲೇಷನ್ ವಿಷಯವು

ತರೀಕೆರೆ ಟವುನ್ನಿನ ಅನುಭವ

ಪ್ಲೇಗ್ ವ್ಯಾಧಿಯು ಪ್ರಾಪ್ತವಾಗದೆ ಇರುವದಕ್ಕೆ ಇದುವರೆಗೆ ಕಂಡುಹಿಡಿದಿರುವ ಉಪಾಯಗಳಲ್ಲಿ ಪ್ಲೇಗ್ ಇನಾಕ್ಯುಲೇಷನ್ ಮಾಡಿಸಿಕೊಳ್ಳುವದೇ ಮುಖ್ಯವು. ಇದಕ್ಕೆ ಆಧಾರವಾಗಿ ಕೆಲವು ದೃಷ್ಟಾಂತಗಳನ್ನು ತಿಳಿಸುವೆವು. ಈ ವಿಷಯದಲ್ಲಿ ಕೆಲವು ಸಂಗತಿಗಳು ಮೈಸೂರು ಸರ್ಕಾರಿ ಗೆಜೆಟ್ಟಿನಲ್ಲಿ ಕಂಡುಬರುವವು. ಅವು ಯಾವವೆಂದರೆ —ಮೊದಲನೇದು, ಒಬ್ಬ ದರ್ಜಿಯ ಕುಟುಂಬದಲ್ಲಿ ಆರು ಜನಗಳಿದ್ದರು. ಅವರಲ್ಲಿ ಮೂವರಿಗೆ ಇನಾಕ್ಯುಲೇಷನ್ ಆಗಿತ್ತು. ಇನಾಕ್ಯುಲೇಷನ್ ಆಗದೇ ಇದ್ದವರಲ್ಲಿ ಒಬ್ಬನಿಗೆ ಪ್ಲೇಗ್ ತಗಲಿ ಮೃತಪಟ್ಟನು. ಎರಡನೇದಾಗಿ, ಒಬ್ಬ ಮುಸಲ್ಮಾನರ ಕುಟುಂಬದಲ್ಲಿ ೧೧ ಜನಗಳಿದ್ದರು. ಆ ಪೈಕಿ ೫ ಜನರು ಇನಾಕ್ಯುಲೇಷನ್ ಹಾಕಿಸಿಕೊಂಡಿದ್ದರು. ಇನಾಕ್ಯುಲೇಷನ್ ಹಾಕಿಸಿಕೊಳ್ಳದೇ ಇದ್ದವರಲ್ಲಿ ಇಬ್ಬರು ಪ್ಲೇಗ್ ತಗಲಿ ಸತ್ತರು. ಮೂರನೇದಾಗಿ, ಒಬ್ಬ ಕುರುಬರವನ ಕುಟುಂಬದಲ್ಲಿ ೬ ಜನವಿದ್ದರು. ಅವರಲ್ಲಿ ೫ ಜನರು ಇನಾಕ್ಯುಲೇಷನ್ ಹಾಕಿಸಿಕೊಂಡಿದ್ದರು. ಇನಾಕ್ಯುಲೇಷನ್ ಹಾಕಿಸಿಕೊಳ್ಳದೇ ಇದ್ದ ಒಬ್ಬನಿಗೆ ಪ್ಲೇಗ್ ಆಗಿ ಸತ್ತನು. ನಾಲ್ಕನೇದಾಗಿ ವೈಶ್ಯರ ಒಂದು ಸಂಸಾರದಲ್ಲಿ ೮ ಜನರಿದ್ದರು. ಇವರಲ್ಲಿ ೬ ಜನರು ಇನಾಕ್ಯುಲೇಷನ್ ಹಾಕಿಸಿಕೊಂಡಿದ್ದರು. ಒಬ್ಬನು ಹಿಂದಿನ ವರ್ಷ ಪ್ಲೇಗ್ ಜಾಡ್ಯವನ್ನು ಅನುಭವಿಸಿದವನು. ಉಳಿದ ಇನ್ನೊಬ್ಬನಿಗೆ ಪ್ಲೇಗ್ ತಗಲಿ ಸತ್ತನು. ಅಲ್ಲದೆ ಇನಾಕ್ಯುಲೇಷನ್ ಫಲಿತಾಂಶವು ಕೆಳಗಿನ ಪಟ್ಟಿಯಿಂದ ಕಂಡುಬರುವುದು.

ತರೀಕೆರೆ ಟೌನ್ ಜನಸಂಖ್ಯೆ—೧೦,೧೬೪ (೧೯೦೧ ನೇ ಸೆನ್ಸಸ್ ಪ್ರಕಾರ)

	ಸಂಖ್ಯೆ	ಪ್ಲೇಗ್ ತಗಲಿದ್ದು	ಸತ್ತದ್ದು
ಇನಾಕ್ಯುಲೇಷನ್ ಆದವರು	೬೧೯	೪	೨
ಇನಾಕ್ಯುಲೇಷನ್ ಆಗದವರು	೯,೫೪೫	೧೨೮	೯೧

ಮೇಲಿನ ವ್ಯತ್ಯಾಸಗಳನ್ನು ಪರಿಶೀಲಿಸಿ ನೋಡಿದರೆ ಇನಾಕ್ಯುಲೇಷನ್ ಮಾಡಿಸಿಕೊಳ್ಳುವದರಿಂದ ಪ್ಲೇಗ್ ಕಾಯಿಲೆಯು ಬಹುತರ ಪ್ರಾಪ್ತವಾಗುವದಿಲ್ಲವೆಂಬುವದು ಸಿದ್ಧಾಂತವಾಗುತ್ತದೆ. ಗ್ರಾಮಾಂತರಗಳಲ್ಲಿ ಇನಾಕ್ಯುಲೇಷನ್ ಹಾಕಿಸಿಕೊಳ್ಳುವದರಿಂದ ದೇಹದ ಆರೋಗ್ಯವು ಕಡಮೆಯಾಗುವದೆಂಬದಾಗಿ ಹೇಳುವರು. ಇದು ನಿರಾಧಾರವಾದ ಮಾತು. ಲಕ್ಷಾಂತರ ಜನರು ಇನಾಕ್ಯುಲೇಷನ್ ಹಾಕಿಸಿಕೊಂಡು ಯಾವ ಕುಂದುಕೊರತೆಗಳೂ ಇಲ್ಲದೆ ಸುಖವಾಗಿರುತ್ತಾರೆ.

ಪ್ಲೇಗ್ ಜಾಡ್ಯವು ಪ್ರತಿ ವರ್ಷವೂ ಗ್ರಾಮಾಂತರಗಳಲ್ಲಿ ಕಾಲನಿಯಮವಿಲ್ಲದೆ ಮಳೆಗಾಲದಲ್ಲಿ ಪ್ರಾಪ್ತವಾಗುತ್ತ ಇದೆ. ಹೀಗೆ ಬಂದಾಗಲೆಲ್ಲಾ ಗ್ರಾಮಗಳನ್ನು ಬಿಟ್ಟು ಷೆಡ್ಡುಗಳಲ್ಲಿ ವಾಸಮಾಡುವದು ಜನರಿಗೆ ಬಹಳ ತೊಂದರೆಯೂ ದ್ರವ್ಯ ನಷ್ಟವೂ ಅಲ್ಲದೆ ಇವರು ಷೆಡ್ಡುಗಳನ್ನು ಸಿದ್ಧಮಾಡುವುದರೊಳಗಾಗಿ ಬಹಳ ಮರಣಗಳು ಸಂಭವಿಸುವವು. ದಯಾಳುಗಳಾದ ಮೈಸೂರು ಸರ್ಕಾರದವರು ಇನಾಕ್ಯುಲೇಷನ್ ಮಾಡಿಸಿಕೊಳ್ಳಲು ಇಷ್ಟವಿರುವ ಜನರಿಗೆ ಕೂಡಲೇ ಇನಾಕ್ಯುಲೇಷನ್ ಮಾಡುವದಕ್ಕೆ ತಕ್ಕ ಏರ್ಪಾಡನ್ನು ಮಾಡಿರುವರು. ಯಾವ ಪ್ರಾಂತ್ಯದಲ್ಲಿ ಪ್ಲೇಗ್ ಜಾಡ್ಯವು ಪ್ರಾಪ್ತವಾಗುತ್ತದೋ ಆ ಭಾಗದ ಜನರು ಇನಾಕ್ಯುಲೇಷನ್ ಮಾಡಿಸಿಕೊಂಡು ಪ್ರಯೋಜನವನ್ನು ಹೊಂದಬೇಕೆಂಬುವದೇ ನಮ್ಮ ಮುಖ್ಯ ಕೋರಿಕೆಯಾಗಿದೆ. ಒಂದು ಗ್ರಾಮದಲ್ಲಿ ಪ್ಲೇಗ್ ವ್ಯಾಧಿಯು ಮೊದಲು ಇಲಿಗಳಿಗೆ ಪ್ರಾಪ್ತವಾಗಿ ಕೆಲವು ದಿವಸಗಳ ಮೇಲೆ ಮನುಷ್ಯರಿಗೆ ಪ್ರಾಪ್ತವಾಗುವದು. ಇಲಿಯು ಸತ್ತು ಬೀಳುವದು ಕೆಲವು ದಿವಸಗಳ ಮೇಲೆ ಮನುಷ್ಯರಲ್ಲಿ ಪ್ಲೇಗ್ ವ್ಯಾಧಿಯು ಪ್ರಾಪ್ತವಾಗುತ್ತದೆ. ಇಲಿಗಳು ಸಾಯುವದಕ್ಕೆ ಪ್ರಾರಂಭವಾದನಂತರ ಈ ವ್ಯಾಧಿಯು ಮನುಷ್ಯರಲ್ಲಿ ಕಾಣಿಸಿಕೊಳ್ಳುವದಕ್ಕೆ ಸಾಧಾರಣವಾಗಿ ೧೫ ದಿವಸಗಳಿಂದ ಒಂದು ತಿಂಗಳವರೆಗೂ ಆಗಬಹುದು. ಇನಾಕ್ಯುಲೇಷನ್ನಿನ ಶಕ್ತಿಯು ಮನುಷ್ಯರಲ್ಲಿ ವ್ಯಾಪಿಸಬೇಕಾದರೆ ಕನಿಷ್ಠ ಪಕ್ಷ ೧೦, ೧೫ ದಿವಸಗಳಾದರೂ ಬೇಕು. ಆದದ್ದರಿಂದ ಒಂದು ಗ್ರಾಮದಲ್ಲಿ ಇಲಿಗಳು ಸಾಯುವದಕ್ಕೆ ಪ್ರಾರಂಭವಾದ ಕೂಡಲೆ ಗ್ರಾಮದ ಜನರೆಲ್ಲರೂ ಇನಾಕ್ಯುಲೇಷನ್ ಮಾಡಿಸಿಕೊಳ್ಳುವದು ಸರ್ವೋತ್ತಮವಾದದ್ದು.

ಈಗ ತರೀಕೆರೆ ತಾಲ್ಲೋಕು ನಂದೀ ಗ್ರಾಮದಲ್ಲಿ ಪ್ಲೇಗ್ ಶುರುವಾಗಿರುತ್ತದೆ. ಈ ಗ್ರಾಮಸ್ಥರು ಇನಾಕ್ಯುಲೇಷನ್ ಹಾಕಿಸಿಕೊಳ್ಳುವದಕ್ಕೆ ಸಂಶಯಪಟ್ಟದ್ದರಿಂದ ಇದರ ಸಮೀಪದ ಹೊಸಹಳ್ಳಿ ಎಂಬ ಗ್ರಾಮದ ಪಟೇಲರಾದ ಮ॥ ಲಿಂಗೇಗೌಡರು ತಾವು ಇನಾಕ್ಯುಲೇಷನ್ ಹಾಕಿಸಿಕೊಂಡದ್ದಲ್ಲದೆ ತಮ್ಮ ಮಕ್ಕಳಿಗೂ ಸಹ ಹಾಕಿಸಿದರು. ಈ ಧೈರ್ಯದಿಂದ ಇದುವರೆಗೆ ಈ ಗ್ರಾಮದಲ್ಲಿ ಸುಮಾರು ೨೦೦ ಜನರು ಇನಾಕ್ಯುಲೇಷನ್ ಹಾಕಿಸಿಕೊಂಡು ಸುಖವಾಗಿರುತ್ತಾರೆ. ಇದಲ್ಲದೆ ಈ ಪಟೇಲರು ಕೂಲಿಯಿಂದ ಜೀವನ ಮಾಡುವ ಜನರಿಗೆ ದ್ರವ್ಯ ಸಹಾಯವನ್ನೂ ಸಹ ಮಾಡಿ ಇನಾಕ್ಯುಲೇಷನ್ ಮಾಡಿಸುತ್ತ ಬರುವರು. ಇದು ಶ್ಲಾಘನೀಯವಾದ ಕೆಲಸವಾಗಿದೆ ನಮ್ಮ ಹೀಗೆಯೇ ವ್ಯಾಧಿಯು ತಲೆದೋರುವ ಕಾಲದಲ್ಲಿ ಪ್ರತಿಯೊಂದು ಗ್ರಾಮದ ಪಟೇಲರೂ ಮತ್ತು ಮುಖ್ಯಸ್ಥರೂ ಮುತುವರ್ಜಿಯನ್ನು ವಹಿಸಿ ಇನಾಕ್ಯುಲೇಷನ್ ಮಾಡಿಸಿದರೆ ಬಹಳಮಟ್ಟಿಗೆ ಪ್ಲೇಗಿನ ಹಾವಳಿಯು ಕಡಮೆಯಾಗುವದೆಂಬುವದರಲ್ಲಿ ಸಂದೇಹವಿಲ್ಲ.

ಪ್ರಜಾ ಹಿತಚಿಂತಕ

ಭತ್ತವನ್ನು ನಾಟಿ ಹಾಕಿ ಸಾಗುವಳಿ ಮಾಡುವುದರ ಅನುಕೂಲತೆಗಳು

ಸಾಮಾನ್ಯವಾಗಿ ರೂಢಿಯಲ್ಲಿ ಎರಡು ವಿಧದಲ್ಲಿ ಭತ್ತದ ಸಾಗುವಳಿ ನಡಿಸುತ್ತಾರೆ —(೧) ಬಿತ್ತವನ್ನು ಗದ್ದೆಯಲ್ಲಿ ಚೆಲ್ಲುವುದು. (೨) ಮೊದಲು ಅಗೆಗಳಲ್ಲಿ ಬಿತ್ತವನ್ನು ಚೆಲ್ಲಿ ಅನಂತರ ಸಸಿಯನ್ನು ಗದ್ದೆಗಳಲ್ಲಿ ನಾಟಿ ಹಾಕುವುದು. ಭತ್ತವನ್ನು ನಾಟಿ ಹಾಕುವುದರಲ್ಲಿ ಅನೇಕ ಅನುಕೂಲತೆಗಳು ಇರುವವು. ಇವುಗಳನ್ನು ಕೆಳಗೆ ಸಂಕ್ಷೇಪವಾಗಿ ವಿವರಿಸುತ್ತೇವೆ.

ನಾಟಿ ಹಾಕುವ ವಿಧಾನವನ್ನೇ ಎಲ್ಲಾ ಕಡೆಯಲ್ಲಿಯೂ ರೂಢಿಗೆ ತಂದರೆ ಒಳ್ಳೇದು. ನಾಟಿ ವಿಧಾನದಲ್ಲಿ ಮುಖ್ಯವಾಗಿ ಬಿತ್ತದ ಖರ್ಚು ಕಡಮೆ. ಕನಿಷ್ಠಪಕ್ಷ ಎಕರೆಗೆ ೧೦—೧೫ ಸೇರು (ಅಂದರೆ, ಒಂದು ರೂಪಾಯಿನ) ಬಿತ್ತ ಉಳಿತಾಯವಾಗುತ್ತೆಂದು ಹೇಳಬಹುದು. ಇದೂ ಅಲ್ಲದೆ, ಒಂದೊಂದೇ ಸಸಿಯನ್ನು ನಾಟುವ ವಿಧಾನವನ್ನು ಅನುಸರಿಸಿದ್ದೇ ಆದರೆ ಮೇಲೆ ಹೇಳಿದುದಕ್ಕೆ ಎರಡರಷ್ಟು ಉಳಿತಾಯವಾಗುವುದು. ಒಂದು ಎಕರೆಗೆ ಎಷ್ಟು ಸೇರು ಬಿತ್ತವನ್ನು ಉಪಯೋಗಿಸಬೇಕೆಂಬುವುದನ್ನು ಭೂಗುಣ, ಬೆಳೆಯ ತಳಿ ಅನುಸರಿಸಿ ನಿರ್ಧರಿಸಬೇಕು. ಹೆಚ್ಚು ಕಾಲ ಬೇಕಾಗುವ ತಳಿಗಳನ್ನು ಜಾಗ್ರತೆ ಬೆಳೆಯುವ ತಳಿಗಳಿಗಿಂತಲೂ ದೂರದೂರವಾಗಿ ನೆಡಬೇಕಾದೀತು. ಸಸಿಗಳನ್ನು ಕೈಯಿಂದ ನೆಡುವುದರಲ್ಲಿ ಪ್ರತಿ ಸಸಿಗೂ ಒಂದೇ ವಿಧವಾಗಿ ಸಸ್ಯಾಹಾರ, ಗಾಳಿ ನೀರು ದೊರೆತು, ಪೈರು ಒಂದೇ ಸಮನಾಗಿ ಬೆಳೆದು ಏಕಕಾಲದಲ್ಲಿ ಕಟಾವಿಗೆ ಬರುತ್ತದೆ. ಚೆಲ್ಲಿ ಬೆಳೆದ ಪೈರಿನಲ್ಲಿ ಈ ಅನುಕೂಲಗಳು ಸಾಧ್ಯವಲ್ಲ. ಹೇಗೆಂದರೆ ಬಿತ್ತವು ಒಂದೊಂದು ಕಡೆಗಳಲ್ಲಿ ಒತ್ತಾಗಿ ಬಿದ್ದು, ಪೈರಿನ ಬೆಳವಣಿಗೆಯಲ್ಲೂ ವ್ಯತ್ಯಾಸ ಬರುತ್ತೆ. ಇಷ್ಟೇ ಅಲ್ಲದೆ ಅಗೆಯಿಂದ ಸಸಿಯನ್ನು ಕೀಳುವಾಗ ನರಳಿ ಹೋದ ಅಥವಾ ರೋಗ ತಗಲಿದ ಸಸಿಗಳನ್ನು ಬಿಟ್ಟು ಒಳ್ಳೇ ಸಸಿಗಳನ್ನೇ ನಾಟಬಹುದು. ಸಸಿಗಳನ್ನು ನಾಟಿ ಹಾಕಿದ ನಂತರ ಪೈರಿನ ಬೆಳವಣಿಗೆಯ ಕಾಲದಲ್ಲಿ ಕೂಡ ಅನೇಕ ಅನುಕೂಲಗಳು ಕಂಡುಬರುತ್ತವೆ. ಸಸಿಗಳನ್ನು ಸಾಲುಸಾಲಾಗಿ ನೆಟ್ಟಲ್ಲಿ ಕಳೆ ಕೀಳುವ ಕೆಲಸವು ಸುಲಭವಾಗುವುದಲ್ಲದೆ, ನಾಟಿ ಹಾಕುವುದಕ್ಕೆ ಕೆಸರುಗದ್ದೆ ಮಾಡುವುದರಿಂದ ಬುಡ ಸಹಿತ ಎದ್ದಿರುವ ಕಳೆಗಳು ನಾಶವಾಗಿ ಕೊಳೆಯುತ್ತವೆ. ನಾಟಿ ಮಾಡಿದ ಒಂದು ತಿಂಗಳನಂತರ ಒಂದು ಸಥಾ ಕಳೆ ತೆಗೆದರೆ ಸಾಕು. ಅಷ್ಟರಲ್ಲಿಯೇ ಸಸಿಗಳು ಚೆನ್ನಾಗಿ ಬೇರೂರಿ ತಕ್ಕಷ್ಟು ಒತ್ತಾಗಿ ಬೆಳೆದು ಕಳೆ ಏಳುವುದಕ್ಕೆ ಅಸ್ಪದಕೊಡುವುದಿಲ್ಲ. ಚೆಲ್ಲಿ ಬೆಳೆಯುವುದರಲ್ಲಾದರೋ ಎರಡು ದಫಾ ಕೈಯಿಂದ ಕಳೆ ತೆಗೆಯಬೇಕಲ್ಲದೆ ಒತ್ತಾಗಿ ಬೆಳೆದ ಕಡೆ ವಿರಳಪಡಿಸಿ ಹಾಳುಬಿದ್ದ ಕಡೆ ಹೊಸದಾಗಿ ಸಸಿಗಳನ್ನು ನಡಬೇಕಾದೀತು. ಕೆಲವು ಕಡೆಗಳಲ್ಲಿ ಚೆಲ್ಲಿದ ಒಂದು ತಿಂಗಳ ಮೇಲೆ ಕಳೆ ತೆಗೆಯುವುದಕ್ಕೂ ಸಸಿಗಳನ್ನು ವಿರಳಮಾಡುವುದಕ್ಕೂ ಪೈರಿನ ನಡುವೆ ಉಳುವ ವಾಡಿಕೆ ಉಂಟು. ಇದರಿಂದ ಬೇರು ಕಡಿದ ಬಹಳ ಸಸಿಗಳು ಚೆನ್ನಾಗಿ ಬೆಳೆಯುತ್ತವೆ. ಆದದ್ದರಿಂದ ಈ ವಿಧಾನದಲ್ಲಿ ಎತ್ತಿನ ಖರ್ಚು ಹೆಚ್ಚಾಗುವುದು ಸ್ಪಷ್ಟಪಡುತ್ತದೆ.

ನಾಟಿ ಸಾಗುವಳಿಯಲ್ಲಿ ಕಾಳಿನ ಉತ್ಪತ್ತಿಯು ಹೆಚ್ಚೆಂಬುವುದು ಎಲ್ಲರಿಗೂ ತಿಳಿದಿದೆ. ಎರಡು ವಿಧಾನದಲ್ಲಿಯೂ ಹುಲ್ಲು ಒಂದೇ ಸಮನಾಗಿ ಒದಗುತ್ತದೆ.

ನಾಟಿ ವಿಧಾನವನ್ನು ಹೊಸದಾಗಿ ರೂಢಿಗೆ ತರುವುದರಲ್ಲಿ ಆಗುವದು ದುಬಾರಿಯಾಗುವುದಾಗಿ ಹೇಳುವುದುಂಟು. ನೀರು ಹೆಚ್ಚಾಗಿದ್ದು ಭೂಮಿಯು ಉತ್ಕೃಷ್ಟವಾಗಿದ್ದಲ್ಲಿ ನಾಟಿ ಸಾಗುವಳಿಮಾಡುವದು ಅನುಕೂಲವೆಂದು ತಿಳಿದಿರುತ್ತಾರೆ. ನೀರು ವಸತಿ ಕಡಮೆಯಾಗಿರುವ ಭೂಮಿಗಳಲ್ಲಿ ಈ ಸಾಗುವಳಿಯು ಅನುಕೂಲವಲ್ಲವಂತೆ. ಆದರೆ ಇದು ತಪ್ಪು ಭಾವನೆಯು. ಹೇಗಂದರೆ ಎರಡು ವಿಧಾನದಲ್ಲಿಯೂ ಖರ್ಚಿನಲ್ಲೇನೂ ವ್ಯತ್ಯಾಸವಿರುತ್ತಿಲ್ಲ. ಸಸಿಗಳನ್ನು ಕಿತ್ತು ಹೊಲಕ್ಕೆ ಸಾಗಿಸಿ ಕೈಯಿಂದ ನಾಟುವ ಖರ್ಚು ಒಂದರಲ್ಲಿರುವುದು. ಇದಕ್ಕೆ ಸಮನಾಗಿ ಮತ್ತೊಂದರಲ್ಲಿ ಒಂದು ದಫಾ ಹೆಚ್ಚಾಗಿ ಕಳೆ ಕೀಳುವುದು, ಸಸಿಗಳನ್ನು ವಿರಳಪಡಿಸುವುದು ಅಥವಾ ಪಾಳು ಬಿದ್ದ ಕಡೆ ನೆಡುವುದರ ಖರ್ಚು ತಗಲುತ್ತದೆ. ನೀರಿನ ವಸತಿ ಕಡಮೆಯಾಗಿರುವ ಸಂದರ್ಭದಲ್ಲಿ ನಾಟಿ ವಿಧಾನದಲ್ಲಿಯೇ ಅನುಕೂಲತೆಗಳು ಹೆಚ್ಚು. ಕೋಲಾರದ ಸಾಗುವಳಿ ಮಾಡತಕ್ಕ ವಿಸ್ತೀರ್ಣದ ಪೈಕಿ ೨೦ ಅಥವಾ ೨೫ ರಲ್ಲಿ ಒಂದು ಭಾಗವನ್ನು ಅಗೆ ಹಾಕುವುದಕ್ಕೆ ಉಪಯೋಗಿಸುತ್ತಾರೆ, ಅಂದರೆ, ಒಂದು ತಿಂಗಳು ಸಾಮಾನ್ಯವಾಗಿ ಪೈರಿಗೆ ಬೇಕಾಗುವ ನೀರಿನಲ್ಲಿ ೨೦—೨೫ ರಲ್ಲಿ ಒಂದು ಭಾಗ ನೀರು ಅಗೆಗೆ ಬಿಟ್ಟರೆ ಸಾಕು. ಜಲಾಧಾರಕ್ಕೆ ಪೂರಾ ನೀರು ಸರಬರಾಜು ಆಗುವುದಕ್ಕೆ ೨—೪ ವಾರಗಳ ಮುಂಚೆಯೇ ಮಳೆ ಅಥವಾ ಭಾವಿ ಅಥವಾ ಏತಗಳಿಂದ ಅಗೆಗಳಲ್ಲಿ ಬಿತ್ತವನ್ನು ಹಾಕಬಹುದು. ಪೈರಿಗೆ ಬೇಕಾಗುವ ಒಟ್ಟು ನೀರು ಈ ರೀತಿ ಕಡಮೆಯಾಗುವುದಾದಕಾರಣ ಮಳೆ ಕಡಮೆಯಾದ ವರ್ಷದಲ್ಲಿ ಕೆರೆ ಕಟ್ಟೆಗಳ ನೀರು ಪೈರು ಕೈಗೆ ಬರುವ ಸಂಭವವು ಹೆಚ್ಚುತ್ತದೆ. ಅಗೆ ಹಾಕುವುದರಲ್ಲಿ ಕಾಲವು ಕೂಡಿಬರುತ್ತದೆಯಾಗಿ ರೈತನು ಹೆಚ್ಚು ಕಾಲ ಬೇಕಾಗುವ ಒಳ್ಳೇ ತಳಿ ಭತ್ತವನ್ನು ಬೆಳೆಯಲು ಸಾಧ್ಯವಾಗುತ್ತದೆ. ಅಥವಾ ವರ್ಷಕ್ಕೆ ಒಂದೇ ಪೈರನ್ನು ಬೆಳೆಯುವ ಕಡೆ ಎರಡು ಪೈರುಗಳನ್ನು ಬೆಳೆಯಬಹುದು. ಇಲ್ಲವಾದರೆ ಮೊದಲು ಮಳೆ ಬಂದನಂತರ ಕೆರೆ ಅಥವಾ ನಾಲಾ ತುಂಬುವದಕ್ಕೆ ಮುಂಚೆ ಗದ್ದೆಯನ್ನು ಉತ್ತು ಯಾವುದಾದರೂ ಒಂದು ಹಸಿರು ಪೈರನ್ನು ಗೊಬ್ಬರಕ್ಕಾಗಿ ಬೆಳೆಯಬಹುದು. ಈ ಕಾಲದಲ್ಲಿ ಅಗೆಯನ್ನೂ ಸಿದ್ಧಪಡಿಸಿ ಮಾಡಿಕೊಳ್ಳಬಹುದು. ಗದ್ದೆಯಲ್ಲಿ ಸಸಿಗಳನ್ನು ನಾಟುವುದಕ್ಕೆ ಕೆಲವು ದಿನಗಳ ಮುಂಚೆ ಈ ಹಸರುಪೈರನ್ನು ಗದ್ದೆಯಲ್ಲಿ ಉತ್ತು ಬಿಡುವುದರಿಂದ ಗದ್ದೆಗೆ ಹಸುರಿನ ಗೊಬ್ಬರಕ್ಕಾಗಿ ತಗಲುವ ಖರ್ಚು ಕೂಡಿಬರುತ್ತದೆ.

ಮೈಸೂರು ಸರ್ಕಾರಿ ಹುಕುಮುಗಳು

ಲಾಕಪ್ ರೂಲಿನಲ್ಲಿ ಒಂದು ಬದಲಾವಣೆಯು.

ಸಂಸ್ಥಾನದ ಲಾಕಪ್ಪುಗಳಲ್ಲಿರುವಂಥಾ ಖೈದಿಗಳ ಪೈಕಿ ಯಾರಾದರೂ ಅಪೀಲ್‌ಮಾಡಿಕೊಳ್ಳುವದಕ್ಕೆ ಇಷ್ಟಪಟ್ಟು ಅಪೀಲು ನಾವೆಗೆ ರುಜು ಹಾಕಬೇಕಾದಲ್ಲಿ ಲಾಕಪ್ ಆಫೀಸರವರು ಖುದ್ದಾಗಿ ನಿಂತು ತಮ್ಮ ರೂಬರೂಬು ರುಜುಹಾಕಿಸಬೇಕೆಂದೂ, ಆ ವಕಾಲತ್‌ನಾಮೆಯ ಕೆಳಗೆ ತಾವೂ - ನನ್ನ ಸಮಕ್ಷಮ ರುಜುಮಾಡಿರುತ್ತಾನೆ ಎಂಬದಾಗಿ ಬರೆದು ತಮ್ಮ ರುಜುಹಾಕಿಕೊಡಬೇಕೆಂದೂ ಲಾಕಪ್ ರೂಲನ್ನು ತಿದ್ದಬೇಕಾಗಿ ಎಂದು ಇನ್‌ಸ್ಪೆಕ್ಟರ್ ಜನರಲ್‌ರವರು ಸೂಚಿಸಿದರು. ಅದರಂತೆಯೇ ಗವರ್ನ್‌ಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ.

ನಗರ ತಾಲ್ಲೂಕಿನ ರೈತರಿಗೆ ರಿಯಾಯತಿ

ಸರ್ಕಾರಿ ಫಾರೆಸ್ಟುಗಳಲ್ಲಿ ಇಲುಖೆಯವರು ವಿತರಣೆಮಾಡುವ ಹೂಸ್ನೆಗಿಡಗಳ ರೆಂಬೆಗಳನ್ನು ರೈತರಿಗೆ ವ್ಯವಸಾಯ ಮುಟ್ಟುಗಳನ್ನು ಮಾಡಿಕೊಳ್ಳುವುದಕ್ಕಾಗಿ ಸೊರಬ, ಸಾಗರ, ಶಿಕಾರಿಪುರ ತಾಲ್ಲೂಕುಗಳಲ್ಲಿ ಕ್ರಯವಿಲ್ಲದೆ ಮುಫತ್ತಾಗಿ ಕೊಡತಕ್ಕದ್ದೆಂದು ಸರ್ಕಾರದವರು ರಿಯಾಯತಿಯನ್ನು ತೋರಿಸಿರುತ್ತಾರೆ. ಈ ರಿಯಾಯತಿಯನ್ನು ಶಿವಮೊಗ್ಗಾ ಡಿಸ್ಟ್ರಿಕ್ಟ್ ನಗರ ತಾಲ್ಲೂಕಿನ ರೈತರಿಗೂ ತೋರಿಸುವುದು ಅವಶ್ಯವೆಂದು ಡೆಪ್ಯುಟಿ ಕಮಿಷನರವರೂ ಫಾರೆಸ್ಟ್ ಕನ್ಸರ್ವೇಟರವರೂ ಶಿಫಾರಸು ಮಾಡಿದ್ದರಿಂದ ಗವರ್ನ್‌ಮೆಂಟಿನವರು ಅದರಂತೆ ಒಪ್ಪಿ ಸ್ಯಾಂಕ್ಷನ್ ಕೊಟ್ಟಿರುತ್ತಾರೆ.

ಕೊಳೆ ರೋಗಕ್ಕೆ ಪರಿಹಾರ ಕಾರ್ಯಗಳು

ಫಸಲಿಗೆ ಹಿಡಿಯುವ ರೋಗಗಳನ್ನು ಪರಿಹಾರಮಾಡಿಕೊಡುವುದಕ್ಕಾಗಿ ಸರ್ಕಾರದವರು ಒಬ್ಬ ಅಧಿಕಾರಿಯನ್ನು ನೇಮಕಮಾಡಿ ಕೊಟ್ಟಿರುತ್ತಾರಷ್ಟೆ. ಈ ಅಧಿಕಾರಿಯು ಅಡಿಕೆ ತೆನೆಗಳಿಗೆ ಹಿಡಿಯುವಂಥಾ ಕೊಳೆ ಜಾಡ್ಯವನ್ನು ಪರೀಕ್ಷೆ ಮಾಡುವುದಕ್ಕೂ ಅದಕ್ಕೆ ತಕ್ಕ ಪರಿಹಾರಗಳನ್ನು ಕಂಡುಹಿಡಿಯುವುದಕ್ಕೂ ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಸರ್ಕಾರಿ ತೋಟಗಳನ್ನು ಗುತ್ತಿಗೆಗೆ ತಗೆದುಕೊಂಡು ಪರೀಕ್ಷೆಗಳನ್ನು ನಡಿಸುತ್ತಿದ್ದಾರೆ. ಅದರ ಖರ್ಚಿಗೆ ಹಣಬೇಕೆಂದು ಅವರು ಗವರ್ನ್‌ಮೆಂಟಿನವರನ್ನು ಕೇಳಿಕೊಂಡರು. ಗವರ್ನ್‌ಮೆಂಟಿನವರು ಅದಕ್ಕಾಗಿ ಗತಸಾಲಿಗೆ ೮೦೦ ರೂಪಾಯಿಯನ್ನೂ, ಚಾಲ್ತಿಸಾಲಿಗೆ ೧,೬೦೦ ರೂಪಾಯಿಯನ್ನೂ ಸ್ಯಾಂಕ್ಷನ್ ಮಾಡಿ ಹುಕುಂ ಕೊಟ್ಟಿರುವುದೇನೆಂದರೆ — ಸುಪಾರಿ ಹಾಸಲತ್ತನ್ನು ವಸೂಲು ಮಾಡಿ, ಕೊಳೆ ರೋಗ ನಿವಾರಣೆಯ ಪ್ರಯತ್ನಕ್ಕಾಗಿ ರೂಪಾಯಿಗೆ ಒಂದು ಆಣೆಯಂತೆ ಸೆಸ್ಸನ್ನು ವಸೂಲುಮಾಡಬೇಕೆಂದು ಏರ್ಪಾಡು ಮಾಡಿದೆಯಷ್ಟೆ. ಈ ಸೆಸ್ಸಿನ ಫಂಡನ್ನು ಪ್ರತ್ಯೇಕವಾಗಿ ಇಟ್ಟಿರೋಣವಾದದರಿಂದ ಮೇಲ್ಕಂಡ ಖರ್ಚನ್ನೆಲ್ಲಾ ಈ ಫಂಡಿಗೇ ಹಾಕಬೇಕು. ಇದರಿಂದ ಕಡೆಯಲ್ಲಿ ಈ ರೋಗ ಪರಿಹಾರದ ಕಾರ್ಯಗಳಿಗೆ ಎಷ್ಟು ಹಣವು ಖರ್ಚಾಯಿತೆಂಬುವುದನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಈ ಹಣವನ್ನು ಇನ್ನಾವ ಇತರ ಬಾಬುಗಳ ಖರ್ಚಿಗೂ ಹಾಕಕೂಡದು ಎಂಬುವುದೇ.

ದುರ್ಭಿಕ್ಷನಿವಾರಣಾರ್ಥವಾದ ಏರ್ಪಾಡುಗಳು

ರೈಲ್ ಛಾರ್ಜಿನ ರಿಯಾಯತಿ

ದುರ್ಭಿಕ್ಷನಿವಾರಣೆಯಾಗುವತನಕ ಬೆಜ್ವಾಡ, ಗುಂಟೂರು, ತೆನಾಲಿ ಸ್ಟೇಷನ್‌ಗಳಿಂದ ರೈಲಿನ ಮೇಲೆ ಅಕ್ಕಿಯನ್ನು ತರಿಸಿಕೊಂಡರೆ ಅದರ ಛಾರ್ಜ

ನಲ್ಲಿ ರಿಯಾಯಿತಿ ಕೊಡಿಸಬೇಕೆಂದು ಮದರಾಸ್ ಮತ್ತು ದಕ್ಷಿಣ ಮರಾಟಾ ರೈಲ್ವೆ ಕಂಪನಿಯ ಜನರಲ್ ಟ್ರಾಫಿಕ್ ಮ್ಯಾನೇಜರವರು ಹೇಳಿ ಒಪ್ಪಿಕೊಂಡಿದ್ದಾರೆ. ಈಚೆಗೆ ರೆವಿನ್ಯೂ ಕಮಿಷನರವರು ಆ ರೈಲ್ವೆ ಅಧಿಕಾರಿಗೆ ಕಾಗದಗಳನ್ನು ಬರೆದು, ಆ ರೈಲ್ವೆ ಲೈನಿನ ಎಲ್ಲ ಸ್ಟೇಷನ್ನುಗಳಿಂದ ತರಿಸತಕ್ಕ ಹುಲ್ಲಿಗೂ ರೈಲ್ ಛಾರ್ಜನ್ನು ಕಡಮೆ ಮಾಡುವ ವಿಷಯದಲ್ಲಿ ಅವರ ಸಮ್ಮತಿಯನ್ನು ಪಡೆದುಕೊಂಡರು ಗವರ್ನಮೆಂಟಿನವರು ಈ ಕಾಗದ ಪತ್ರಗಳನ್ನು ಪರಾಂಬರಿಸಿ ತೃಪ್ತಿಪಟ್ಟು ರಿಕಾರ್ಡು ಮಾಡಿಕೊಂಡಿದ್ದಾರೆ

ಒಂದರ ಹಣವನ್ನು ಇನ್ನೊಂದಕ್ಕೆ ವಿನಿಯೋಗಿಸುವುದು.

ದುರ್ಭಿಕ್ಷ ಪ್ರಾಪ್ತವಾದದ್ದರಿಂದ ಗೋಕಾಯಿಗಳಿಗೆ ಮೇವಿನ ಹುಲ್ಲು ಕಡ್ಡಿಯನ್ನು ತರಿಸಿ ಒದಗಿಸಲಿಕ್ಕೆ ಮ ಸರ್ಕಾರದವರು ೧೧,೦೦೦ ರೂಪಾಯನ್ನು ಸ್ಯಾಂಕ್ಷನ್ ಮಾಡಿದರು ಈ ಹಣದ ಪೈಕಿ ಸ್ವಲ್ಪ ಭಾಗ ಖರ್ಚಾಗಿದೆ ಎಂದೂ, ಆದರ ಪೈಕಿ ಉಳಿದಿರುವ ಹಣದಲ್ಲಿ ದುರ್ಭಿಕ್ಷ ಪ್ರಾಪ್ತವಾಗಿರುವ ಕಡೆಗಳಲ್ಲಿ ನಿರ್ಗತಿಕರಾದಂಥಾ ಬಡಜನಗಳ ಜೀವನವನ್ನು ನಡಿಸುವುದಕ್ಕೆ ೫,೦೦೦ ರೂಪಾಯಿಗಳನ್ನು ವಿನಿಯೋಗಿಸಬೇಕಾಗಿರುವುದೆಂದೂ ರೆವಿನ್ಯೂ ಕಮಿಷನರವರು ಗವರ್ನಮೆಂಟಿನವರನ್ನು ಕೇಳಿದರು ಇವರ ಮೇಲೆ ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ —ಬಡವರಿಗೆ ಧರ್ಮಾರ್ಥವಾಗಿ ಜೀವನ ನಡಿಸುವುದಕ್ಕೆ ಸರ್ಕಾರದವರು ರೆವಿನ್ಯೂ ಕಮಿಷನರವರ ವಶಕ್ಕೆ ೩೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಈ ಹಣದಲ್ಲಿ ಇನ್ನೂ ೯,೮೭೪ ರೂಪಾಯಿ ಉಳಿದಿದೆ ಎಂದು ಸರ್ಕಾರಿ ಲೆಕ್ಕದ ಪ್ರಕಾರ ಗೊತ್ತಾಗುತ್ತದೆ ಆದದ್ದರಿಂದ ಈ ಬಾಬಿಗೆ ಸರ್ಕಾರದವರು ಮತ್ತೆ ೫,೦೦೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಬೇಕಾದ ಅಗತ್ಯವೇನೂ ಕಂಡು ಬರುವುದಿಲ್ಲ ಇದಲ್ಲದೆ ಈ ಬಾಬಿಗೆ ಇದುವರೆಗೆ ಆಗಿರುವಷ್ಟು ಖರ್ಚು ಇನ್ನು ಮುಂದೆ ಆಗಬೇಕೆಂದು ಕಂಡು ಬರುವುದಿಲ್ಲ ಆದಕಾರಣ ಮೇವಿನ ಹುಲ್ಲಿಗಾಗಿ ಗವರ್ನಮೆಂಟಿನಿಂದ ಸ್ಯಾಂಕ್ಷನ್ ಆಗಿರುವ ೧೧,೦೦೦ ರೂಪಾಯಿನಲ್ಲಿ ರೆವಿನ್ಯೂ ಕಮಿಷನರವರು ೫,೦೦೦ ರೂಪಾಯನ್ನು ವಾಪಸ್ಸು ಕೊಟ್ಟುಬಿಡಬೇಕು ಬಾಕಿ ಉಳಿದ ಹಣದಲ್ಲಿ ಸಾಹುಕಾರ ಜನರು ಹುಲ್ಲನ್ನು ರೈಲಿನ ಮೇಲೆ ಹುಲ್ಲುಕೊಟ್ಟು ತರಿಸುವುದಕ್ಕೆ ರೈಲ್ ಛಾರ್ಜಿನಲ್ಲಿ ಒಂದು ಭಾಗವು ಗವರ್ನಮೆಂಟಿನಿಂದ ಸಂದಾಯ ಆಗಬೇಕಾಗಿರೋದರಿಂದ ಅದರ ಖರ್ಚಿಗಾಗಿ ಉಳಿಸಿರತಕ್ಕದ್ದು ಮತ್ತು ಧರ್ಮಾರ್ಥವಾಗಿ ಬಡವರಿಗೆ ಜೀವನ ನಡಿಸುವ ಬಾಬನ್ನು ರೆವಿನ್ಯೂ ಕಮಿಷನರವರು ಸಾಧ್ಯವಾಗುವಷ್ಟು ಜೋಗನೆ ನಿಲ್ಲಿಸಿಬಿಡಬೇಕಾಗಿದೆ ಎಂಬುವುದೇ

ಹೊಗೆಸೊಪ್ಪು (೨).

[ಜೂನ್ 17 ನೇ ತಾ ಪತ್ರಿಕೆಯಲ್ಲಿ ಮೊದಲನೇ ಭಾಗ ಪ್ರಕಟವಾಗಿದೆ]

ಹೊಗೆಸೊಪ್ಪು ಹಾಕಬೇಕಾದ ಜಮೀನನ್ನು ಆಳವಾಗಿ ಉತ್ತು ಬಹಳ ಹೆಂಟೆ ವಗೈರೆ ಇಲ್ಲದೆ ನಯವಾಗಿ ಭೂಮಿಯನ್ನು ಹುಡಿಮಾಡಿ ಭೂಮಿಗೆ ಚೆನ್ನಾಗಿ ಕಳಿತ ಗೊಬ್ಬರವನ್ನೂ ಬೂದಿಯನ್ನೂ ಬೆರಸಿ ಹಾಕಿ ಹಲುಬೆಯಿಂದ ಹೊಡೆದು ಹಳ್ಳ ತಿಟ್ಟುಗಳಿಲ್ಲದೆ ಸಮನಾಗಿ ಮಾಡಿ ನೂರು ಅಂಗುಲ ಎತ್ತರವಾಗಿರುವ (ಅಂದರೆ, 3-4 ಎಲೆಗಳು ಹಾಕಿರುವ) ಸೊಸಿಗಳನ್ನು ನೆಡಬೇಕು ಈ ಸೊಸಿಗಳು ಈ ಸ್ಥಿತಿಗೆ ಬರಬೇಕಾದರೆ ಆರ ವಾರಗಳು ಬೇಕಾಗುತ್ತವೆ ನೀರು ಹಾಯಿಸುವ ಹೊಗೆಸೊಪ್ಪಿನ ಸಸಿಗಳನ್ನು ಭಾದ್ರಪದ ಮಾಸದ ಲಾಗಾಯ್ತು ಆಶ್ವೀಜ ಮಾಸದವರೆಗೂ ನೆಡುವುದಕ್ಕೆ ಸಕಾಲವಾಗಿರುತ್ತದೆ. ಆಷಾಢ ಶ್ರಾವಣ ಮಾಸಗಳಲ್ಲಿ ಹೊಗೆಸೊಪ್ಪು ನೆಡಲಿಕ್ಕೆ ಜಮೀನನ್ನು ಸಿದ್ಧಪಡಿಸಬೇಕು ಸೊಸಿಗಳನ್ನು ಒಂದಕ್ಕೊಂದು ಮೂರು ಅಡಿ ಅಂದರ ಒಂದು ಗಜದ ದೂರದಲ್ಲಿ ನೆಡುವುದು ಅತ್ಯಾವಶ್ಯಕ ಸಣ್ಣ ಜಾತಿಯ ಹೊಗೆಸೊಪ್ಪನ್ನು ಎರಡು ಅಡಿ ದೂರದಲ್ಲಿ ನೆಡಬಹುದು ನೆಟ್ಟ ಸೊಸಿಗಳು ಬೇರು ಬಿಟ್ಟು ಬೆಳವಣಿಗೆಗೆ ಬರುವವರೆವಿಗೂ ಆಗಾಗ್ಗೆ ದಿನಬಿಟ್ಟು ದಿನ ನೀರು ಹಾಕುತ್ತಿರಬೇಕು ತರುವಾಯ ಕಾಲಾನುಸಾರವಾಗಿ ೧೦ರ ಲಾಗಾಯಿತು ೨೦ ದಿನಗಳಿಗೆ ಒಂದು ಸಲ ನೀರು ಹಾಯಿಸಬಹುದು ಮತ್ತು ಸೊಸಿಗಳು ಸ್ವಲ್ಪ ವೃದ್ಧಿಯಾದ ಮೇಲೆ ಮಣ್ಣನ್ನು ಬುಡಗಳಿಗೆ ಏರು ಹಾಕುವುದು ಇದಕ್ಕಾಗಿ ಚಿಕ್ಕ ಕೊಡವೇ ನೇಗಿಲಿನಿಂದ ಉತ್ತರೆ ಮಣ್ಣು ತವರುಗಳಾಗಿ ಏರು ಹಾಕಿದಂತೆ ಆಗುವುದು. ಅವಶ್ಯಕವಿದ್ದರೆ ಗುದ್ದಲಿಯಿಂದಲೂ ಏರು ಹಾಕಬಹುದು ಹೂವು ಬಿಡುವವರೆವಿಗೂ ಈ ರೀತಿ ಎಲೆಗಳಿಗೆ ತೊಂದರೆ ಇಲ್ಲದೆ ಮಾಡುವುದು ಹೊಗೆಸೊಪ್ಪಿನ ಹೊಲದಲ್ಲಿ ಒಂದು ಕಳೆಯೂ ಕೂಡ ಇಲ್ಲದಂತೆ ಚೊಕ್ಕಟವಾಗಿ ಆಗಾಗ್ಗೆ ಕಳೆಯನ್ನು ಕಿತ್ತುಹಾಕಬೇಕು.

ಹೊಗೆಸೊಪ್ಪಿನ ಗಿಡಗಳಲ್ಲಿ ಹೂವು ಬಿಡುವುದಕ್ಕೆ ಮುಂಚಿತವಾಗಿ ಕೊನೆಗಳನ್ನೂ ಬುಡದಲ್ಲಿ ಹಳದಾಗಿರುವ ಎಲೆಗಳನ್ನೂ ಚಿಗಟಹಾಕಬೇಕು ಪ್ರತಿ ಒಂದು ಗಿಡದಲ್ಲೂ ೮-೧೦ ಎಲೆಗಳಿಗಿಂತ ಹೆಚ್ಚಾಗಿ ಬಿಡಕೂಡದು. ಈ ರೀತಿ ಕುಡಿಗಳು ಚಿಗಟದ ಮೇಲೆ ಉಳಿದ ಎಲೆಗಳ ಬುಡದಲ್ಲಿ ಪುನಹಾ ಚಿಗುರುತ್ತದೆ ಆ ಚಿಗುರನ್ನೂ ಬಿಡದೆ ಚಿಗಟಹಾಕಬೇಕು ಬಿತ್ತನೆಗೆ ಬಿಡುವ ಗಿಡಗಳನ್ನು ಈ ರೀತಿ ಚಿಗಟಬಾರದು ಹೊಗೆಸೊಪ್ಪಿನ ಗಿಡಗಳಿಗೆ ಒಂದೇ ಸಲ ಗೊಬ್ಬರವನ್ನು ಹಾಕುವುದಕ್ಕಿಂತ ಹೂವು ಬಿಡುವುದಕ್ಕೆ ಮುಂಚಿತವಾಗಿ ಆಗಾಗ್ಗೆ ಬುಡದಲ್ಲಿ ಸ್ವಲ್ಪ ಸ್ವಲ್ಪ ಗೊಬ್ಬರಹಾಕಿ ಮಣ್ಣು ಮುಚ್ಚಿ ನೀರು ಹಾಕುವುದು ಉತ್ತಮ. ನಮ್ಮ ದೇಶದಲ್ಲಿ ಕುರಿಯ ಗೊಬ್ಬರವು ಹೊಗೆಸೊಪ್ಪಿನ ಗಿಡಗಳಿಗೆ ಬಹಳ ಒಳ್ಳೇದೆಂದು ಹೇಳುತ್ತಾರೆ, ಮತ್ತು ಬೂದಿ, ಸೋರುಪ್ಪು, ಇವುಗಳೆಲ್ಲಾ ಅತ್ಯಾವಶ್ಯಕವಾದ ಗೊಬ್ಬರಗಳೆಂದು ತಿಳಿಯಬಂದು ಇದೆ

ಎಲೆಗಳು ದಪ್ಪವಾಗಿಯೂ, ಮುಟ್ಟಿದರೆ ಅಂಟಾಗಿಯೂ ಮತ್ತು ಹೊಂಬಣ್ಣವಾಗಿಯೂ ಎಲೆಗಳ ಮೇಲೆ ಅಲ್ಲಲ್ಲಿ ಚುಕ್ಕೆಗಳು ತೋರಿದಾಗ ಹೊಗೆಸೊಪ್ಪು ಕುಯ್ಯುವುದಕ್ಕೆ ಅಥವಾ ಎಲೆ ಬಿಡಿಸುವುದಕ್ಕೆ ಸಕಾಲವೆಂದು ತಿಳಿಯಬೇಕು. ಈ ಫಸಲಿಗೆ ಬಾಣೆ ಬಲಿಯುವುದಕ್ಕೆ ಅವಕಾಶ ಕೊಡಕೂಡದು ಎಲ್ಲಾ ಗಿಡಗಳನ್ನೂ ಒಂದೇ ಸಲ ಕುಯ್ಯುವುದಕ್ಕಿಂತ ತಯಾರಾದ ಗಿಡಗಳನ್ನು ಮಾತ್ರ ಆರಿಸಿ ಕುಯ್ಯುವುದು ಒಳ್ಳೇದೆಂದು ವ್ಯವಸಾಯ ಬಲ್ಲವರು ಹೇಳುತ್ತಾರೆ. ಈ ಗಿಡಗಳನ್ನು ಬೆಳಗಿನ ಹೊತ್ತಿನಲ್ಲಿ ಮಂಜು ಆರಿದ ಮೇಲೆ ಕುಯ್ಯಬೇಕು. ಅವುಗಳನ್ನು ಕುಯ್ದ ತರುವಾಯ ೩-೪ ಘಂಟೆಗಳ ಹೊತ್ತು ಬಿಸಲಿನಲ್ಲಿ ಬಿಟ್ಟಿದ್ದರೆ ಚೆನ್ನಾಗಿ ಬಾಡಿ ಮೆತ್ತಗಾಗುತ್ತೆ. ಆಗ್ಗೆ ಸೊಪ್ಪು ತಯಾರುಮಾಡುವ ಸ್ಥಳಕ್ಕೆ ತೆಗೆದುಕೊಂಡು ಹೋಗಬಹುದು. ಈ ರೀತಿಯಾಗಿ ಬಾಡಿಸುವುದರಿಂದ ಎಲೆಗಳು ಹೊಲದಿಂದ ಬೇರೇ ಜಾಗಕ್ಕೆ ಸಾಗಿಸುವುದರಲ್ಲಿ ಮುರಿಯುವುದಿಲ್ಲ ಗಿಡಗಳು ಕುಯ್ಲಿಗೆ ಬಂದಾಗ ಮಳೆ ಬಂದಿದ್ದರೆ ಎಲೆಗಳ ಮೇಲಿನ ಅಂಟೆಲ್ಲಾ ಹೋಗುವುದರಿಂದ ತಿರಿಗಿ ಅಂಟು ಸೇರುವವರೆವಿಗೂ (ಅಂದರೆ, ೩-೪ ದಿನಗಳು) ಸಾವಕಾಶವಾಗಿ ಕುಯ್ಯಬೇಕು. ಈ ಅಂಟಿನಿಂದ ಹೊಗೆಸೊಪ್ಪು ಜೋರಾಗುತ್ತೆ ಹೊಗೆಸೊಪ್ಪಿನ ಫಸಲು ರೆಡಿ ಆದ ಮೇಲೆ ಅದನ್ನು ನೆರಳಿನಲ್ಲಿ ಅನೇಕ ಬಗೆಗಳಲ್ಲಿ ತಯಾರುಮಾಡುತ್ತಾರೆ. ಒಂದೊಂದು ದೇಶದಲ್ಲಿ, ಬೇರೆ ಬೇರೆ ಡಿಸ್ಟ್ರಿಕ್ಟಿನಲ್ಲಿ, ಬೇರೆ ಬೇರೆ ತಾಲ್ಲೂಕಿನಲ್ಲಿ, ಬೇರೆ ಬೇರೆ ಗ್ರಾಮಗಳಲ್ಲಿ ತಯಾರುಮಾಡುವ ರೀತಿಯಲ್ಲಿ ಬದಲಾವಣೆಗಳು ಇರುವುದರಿಂದ ತಯಾರುಮಾಡುವ ಅಂಶವು ಹೀಗೇ ಎಂದು ನಾವು ಇಲ್ಲಿ ಬರೆಯುವುದು ಪ್ರಕೃತವಲ್ಲ.

ಅಲ್ಲದೆ ಹೊಗೆಸೊಪ್ಪು ೩—೪ ವಿಧಗಳಲ್ಲಿ (ಅಂದರೆ ನಸ್ಯಕ್ಕಾಗಿ, ಗುಡಿಗುಡಿಗಾಗಿ, ಚುಟ್ಟಗಳಾಗಿ ಮತ್ತು ಎಲೆ ಅಡಿಕೆ ಜೊತೆಯಲ್ಲಿ ಅಗಿಯುವುದಕ್ಕಾಗಿ ಮೊದಲಾದ ಕೆಲಸಗಳಿಗೆ) ಉಪಯೋಗಿಸುವುದರಿಂದ ಆಯಾಯ ಪ್ರಯೋಜನವನ್ನು ಅನುಸರಿಸಿ ಹೊಗೆಸೊಪ್ಪನ್ನು ತಯಾರುಮಾಡಬೇಕಾಗಿದೆ

ಇದಲ್ಲದೆ ಮೈಸೂರು ಸೀಮೆಯ ಚಿಟ್ಟಬಪುರ ಪ್ರಾಂತ್ಯದಲ್ಲಿ ಬಹಳ ಶ್ಲಾಘ್ಯವಾದ ನಸ್ಯದ ಹೊಗೆಸೊಪ್ಪನ್ನು ಬೆಳೆಯುತ್ತಾರೆ. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲೂ ತುಮಕೂರು ಡಿಸ್ಟ್ರಿಕ್ಟಿನ ಅನೇಕ ಪ್ರಾಂತ್ಯಗಳಲ್ಲೂ, ಇತರ ಕೆಲವು ತಾಲ್ಲೂಕುಗಳಲ್ಲೂ ಒಂದು ಜಾತಿಯ ಹೊಗೆಸೊಪ್ಪನ್ನು ಮುಖ್ಯ ಫಸಲಾಗಿ ಬೆಳೆಯುತ್ತಾರೆ. ಆದರೆ ಹೊಗೆಸೊಪ್ಪನ್ನು ಮುಖ್ಯ ಫಸಲಾಗಿ ಬೆಳೆದರೂ, ತರೀ ಫಸಲಾಗಿ ಬೆಳೆದರೂ ಭೂಮಿ, ಉಳುಮೆ, ಗೊಬ್ಬರ, ಸಸಿ ನಾಟುವುದು, ಗಿಡಗಳು ದೊಡ್ಡದಾದ ಮೇಲೆ ಕಾಡಿ ಚಿಗಟುವುದು, ಮತ್ತು ಹೊಗೆಸೊಪ್ಪನ್ನು ತಯಾರುಮಾಡುವುದು, ಇವುಗಳೆಲ್ಲಾ ಸಮಾನವಾದ ವಿಷಯಗಳೆಂದು ತಿಳಿಯಬೇಕು. ಹೊಗೆಸೊಪ್ಪಿನ ತಯಾರಿಯು ಅನೇಕ ರೈತರುಗಳಿಗೆ ತಿಳಿಯದೆ ಇರುವುದರಿಂದ ಸೊಪ್ಪು ಬೆಳಸಿದ ಮೇಲೆ ಹೊಗೆಸೊಪ್ಪನ್ನು ತಯಾರುಮಾಡುವುದನ್ನು ತಿಳಿದ ವರ್ತಕರು ಒಟ್ಟು ಹೊಲದ ಫಸಲನ್ನೇ ಖರೀದಿಗೆ ತೆಗೆದುಕೊಳ್ಳುತ್ತಾರೆ

ನನಗೆ ತಿಳಿದ ಮಟ್ಟಿಗೂ ಸರ್ವಸಾಮಾನ್ಯವಾಗಿ ಚೆನ್ನಾಗಿ ಫಸಲಾಗಿರುವ ಹೊಲವನ್ನು ಎಕರೆ ಒಂದಕ್ಕೆ ೧೦೦ ರೂಪಾಯಿಗಳ ಲಾಗಾಯಿತು ೨೫೦ ರೂಪಾಯಿಗಳ ವರಿಗೂ ಖರೀದಿಗೆ ಮಾರುವುದನ್ನು ತಿಳಿದಿದೇನೆ.

ಹೊಗೆಸೊಪ್ಪು ಫಸಲು ಮಾಡುವ ಜಮೀನಿನ ಶಕ್ತಿಯು ಒಂದು ಫಸಲಾದ ಕೂಡಲೆ ಬಹಳವಾಗಿ ಕಡಮೆ ಆಗುತ್ತೆ ಆದದ್ದರಿಂದ ಅದೇ ಜಮೀನಿನಲ್ಲಿ ಎರಡನೇ ಸಲ ಹೊಗೆಸೊಪ್ಪನ್ನು ಹಾಕಬೇಕಾದರೆ ವಿಶೇಷವಾಗಿ ಗೊಬ್ಬರ ಮತ್ತು ಉಳುಮೆ ಆಗಬೇಕಾಗುತ್ತೆ. ಒಂದು ಜಮೀನಿನಲ್ಲಿ ಎಡೆಬಿಡದೆ ೨—೩ ಫಸಲು ಮಾಡಿದರೆ ತರುವಾಯ ಹೊಗೆಸೊಪ್ಪಿನ ಫಸಲಿಗೆ ರೋಗಗಳು ತಗಲುತ್ತವೆ. ಈ ಫಸಲಿಗೆ ಅನೇಕ ರೋಗಗಳುಂಟು; ಮತ್ತು ಹಲವು ಬಗೆ ಹುಳುಗಳು ಗಿಡಗಳ ಎಲೆಯನ್ನು ರಾತ್ರಿ ಹೊತ್ತಿನಲ್ಲಿ ತಿಂದು ಹಗಲು ಹೊತ್ತಿನಲ್ಲಿ ಭೂಮಿಯಲ್ಲಿ ಸೇರಿಕೊಳ್ಳುತ್ತವೆ. ಇದು ಬಹಳ ದೊಡ್ಡ ವಿಷಯವಾದದ್ದರಿಂದ ಈ ರೋಗಗಳೂ ಮತ್ತು ಇವಕ್ಕೆ ತಕ್ಕ ಚಿಕಿತ್ಸೆಗಳೂ ಪ್ರತ್ಯೇಕವಾಗಿ ಬರೆಯಬೇಕಾಗಿದೆ ಈ ವಿಷಯವೂ ಮತ್ತು ಹೊಗೆಸೊಪ್ಪನ್ನು ತಯಾರುಮಾಡುವ ವಿಷಯವೂ ಬೇರ ಓದಿ ಅನುಭವದಿಂದ ತಿಳಿದುಕೊಳ್ಳತಕ್ಕದ್ದು ಅತ್ಯಾವಶ್ಯಕ

ವಿ. ರಾಘವಾಚಾರ್,

ಅಡ್ವೊಕೇಟ್ ಮೈಸೂರು

ಮೈಸೂರು ಗೆಜೆಟ್ ಸಂಗ್ರಹ.

ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೆ ಸೇರಿದ ಯಕೋರು ಮತ್ತು ತರೀಹಟ್ಟಿಗಳಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು

ಮುಂದೆ ಹೇಳುವ ಸ್ಥಳಗಳಲ್ಲಿ ಪ್ಲೇಗ್ ಉಪದ್ರವು ನಿವಾರಣೆಯಾಗಿರುತ್ತದೆ —ಗುಂಡ್ಲುಪೇಟೆ ತಾಲ್ಲೂಕು ಕುಮರನಕಟ್ಟೆ ಹುಂಡಿ ಮತ್ತು ಕುಕ್ಕನೂರು, ಯಡತೊರೆ ತಾಲ್ಲೂಕು ಮಾರಗೌಡನ ಹಳ್ಳಿ, ಲಾಲಮದೇವನ ಹಳ್ಳಿ ಮತ್ತು ಕನಗನ ಹಳ್ಳಿ; ಕೃಷ್ಣರಾಜಪೇಟೆ ತಾಲ್ಲೂಕು ಬಂಕಿನ ಕೆರೆ, ತಿರುಮಕೂಡ್ಲು ನರಸೀಪುರ ತಾಲ್ಲೂಕು ಕುಂಬಾರು, ಹುಣಸೂರು ತಾಲ್ಲೂಕು ಮಲ್ಲರಾಜಪಟ್ಣ ಮತ್ತು ಹನಸೆ, ಯಳಂದೂರು ತಾಲ್ಲೂಕು ಹೊನ್ನೂರು, ಅಳಕೆರೆ ಅಗ್ರಹಾರ, ಮಾರಂಬಳ್ಳಿ ಮತ್ತು ಬೀಚನ ಹಳ್ಳಿ, ನಂಜನಗೂಡು ತಾಲ್ಲೂಕು ತಗಡೂರು

ಮೆ॥ ಬಸಶೆಟ್ಟರನ್ನೂ ಮೆ ವೆಂಕಟಸುಬ್ಬಯ್ಯನವರನ್ನೂ ಸಿದ್ಧಘಟ್ಟ ತಾಲ್ಲೂಕು ಜಂಗಮಕೋಟೆಯ ಯೂನಿಯನ್ ಮೆಂಬರುಗಳಾಗಿ ನೇಮಕ ಮಾಡಿದೆ.

ಮೆ॥ ಸುಬ್ಬರಾಯರನ್ನು ಚಳ್ಳಕೆರೆ ಟೌನ್ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ನೇಮಿಸಿದೆ.

ಶೃಂಗೇರಿ ಜಹಗೀರಿಯ ಮೆ॥ ಸಿ. ಕೃಷ್ಣಶಾಸ್ತ್ರಿಗಳನ್ನೂ ಡೆಪ್ಯುಟಿ ಅಮಲ್ದಾರ್ ಮೆ ಶ್ರೀಕಂಠಯ್ಯನವರನ್ನೂ ಕಿಗ್ಗದಲ್ಲಿರುವ ಶ್ರೀಋಷ್ಯಶೃಂಗೇಶ್ವರ ಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳಾಗಿ ನೇಮಕ ಮಾಡಿದೆ.

ಮುಳಬಾಗಲ್ ತಾಲ್ಲೂಕಿಗೆ ಸೇರಿದ ತಾಯಲೂರು, ಅಗರ, ನಂಗ್ಲಿ ಎಂಬೀ ಯೂನಿಯನ್ ಪಂಚಾಯತಿಗಳಿಗೆ ಮುಂದೆ ಹೇಳುವವರನ್ನು ಮೆಂಬರುಗಳಾಗಿ ನೇಮಿಸಿದೆ.—ತಾಯಲೂರ್ ಯೂನಿಯನ್‌ಗೆ—ಮುಳಬಾಗಲ್ ಅಮಲ್ದಾರರು, ಶೇಕ್ದಾರರು, ಸ್ಕೂಲ್ ಮಾಸ್ಟರು, ಮೆ॥ ಗಳಾದ ಚಲಮಯ್ಯನವರು, ರಾಮರಾಯರು, ದೊಡ್ಡ ಬಕ್ಷುಮಿಯಾ ಸಾಬರು, ಚದಂ ವೆಂಕಟಪ್ಪಯ್ಯನವರು, ಅಗರದ ಯೂನಿಯನ್‌ಗೆ—ಮುಳಬಾಗಲ್ ಅಮಲ್ದಾರರು, ಶೇಕ್ದಾರರು, ಮೆ ಗಳಾದ ಬಾಪುರಾಯರು, ಚಿದಂಬರಾಯರು, ಜೋಗು ನಂಜುಂಡಯ್ಯನವರು, ಕುದರೆ ರಾಮಣ್ಣನವರು, ಉಸ್ಮಾನ್ ಖಾನ್‌ರು, ನಂಗ್ಲಿ ಯೂನಿಯನ್‌ಗೆ—ಮುಳಬಾಗಲ್ ಅಮಲ್ದಾರು, ಶೇಕ್ದಾರರು, ಮೆ॥ ಗಳಾದ ವಿಟ್ಠಲರಾಯರು, ವೆಂಕೋಬರಾಯರು, ಷೇಕ್ ಅಲ್ಲಿಸಾಬರು, ದೇವನ ಲಕ್ಷ್ಮಯ್ಯನವರು, ಎ ಮುನಿಸ್ವಾಮಯ್ಯನವರು

ಆ ಕಮೀಷನರ್ ಮೆ॥ ಬಿ ವೆಂಕೋಬರಾಯರಿಗೆ ಕೊಟ್ಟಿದ್ದ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ರದ್ದು ಮಾಡಿದೆ

ಡೆಪ್ಯುಟಿ ಕಮಿಷನರ್ ಮೆ॥ ಸಿ ಶ್ರೀಕಂಠೇಶ್ವರ ಐಯರವರು ರಜದಿಂದ ವಾಪಸು ಬಂದು ಜೂನ್ ತಾ. ೨೮ ರಲ್ಲಿ ಕೋಲಾರ್ ಡಿಸ್ಟ್ರಿಕ್ಟಿನ ಛಾರ್ಜನ್ನು ವಹಿಸಿಕೊಂಡಿರುತ್ತಾರೆ

ತಿಪ್ಟೂರು ತಾಲ್ಲೂಕು ಅಮಲ್ದಾರ್ ಮೆ॥ ಸಿ ಮಾಚಯ್ಯನವರು ತಮ್ಮ ಕೆಲಸಗಳೊಂದಿಗೆ ಮಾರ್ಚಿ ತಾ ೩ ರಿಂದ ಏಪ್ರೈಲ್ ತಾ ೪ ರ ವರೆಗೆ (ಉಭಯ ದಿನಗಳ ಸಹಿತ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಛಾರ್ಜನ್ನೂ ವಹಿಸಿದ್ದರು

ಸೀನಿಯರ್ ಅ॥ ಕಮಿಷನರ್ ಮೆ॥ ವಿ. ಆರ್. ತ್ಯಾಗರಾಜ ಐಯರವರನ್ನು ಜುಲೈ ತಾ ೧ ರಿಂದ ಬೆಂಗಳೂರು ಸಬ್ ಡಿವಿಜನ್ ಛಾರ್ಜಿಗೆ ನೇಮಕವಾಗಿದೆ

ಸಬ್ ಅ॥ ಸರ್ಜನ್ ಮೆ॥ ಸಿ. ಕುಪ್ಪುಸ್ವಾಮಿ ಪಿಳ್ಳೆಯವರನ್ನು ಮಾರ್ಚಿ ತಾ ೯ ರ ಲಾಗಾಯಿತು ೩ ರಿಂದ ೨ ನೇ ಕ್ಲಾಸಿಗೆ ಬಡ್ತಿ ಮಾಡಲಾಗಿದೆ.

ಶ್ರೀಮನ್ ಮಹಾರಾಜರವರು ಮೆ॥ ಮಿರ್ಜಾ ಮಹಮದ್ ಮೆಹದಿ ಯವರನ್ನು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ೪ ನೇ ಗ್ರೇಡ್ ಜಮೇದಾರಿಗೆ ನೇಮಕ ಮಾಡಿರುತ್ತಾರೆ

ಮೈಸೂರು ಗವರ್ನಮೆಂಟಿನ ಲೆಜಿಸ್ಲೆಟಿವ್ (ನ್ಯಾಯವಿಧಾಯಕ) ಕೌನ್ಸಿಲ್ಲಿಗೆ ಮುಂದೆ ಹೇಳುವವರನ್ನು ಅಡಿಷನಲ್ (ವಿಶೇಷ) ಮೆಂಬರುಗಳಾಗಿ ನೇಮಕ ಮಾಡಿರುತ್ತಾರೆ —ರೆವಿನ್ಯೂ ಕಮಿಷನರ್ ರಾಜಕಾರ್ಯಪ್ರವೀಣ ಮೆ॥ ಎ ರಂಗಸ್ವಾಮಿ ಐಯಂಗಾರ್, ರೆವಿನ್ಯೂ ಸರ್ವೇ ಸೂಪರಿಂಟೆಂಡೆಂಟ್ ಮೆ॥ ಡಿ. ಶಾಮರಾಯರು, ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಮೆ॥ ಡಿ. ದೇವರಾಜೇ ಅರಸಿನವರು, ಗವರ್ನಮೆಂಟ್ ಅಡ್ವೊಕೇಟ್ ಮೆ॥ ಎಸ್. ನಾರಾಯಣರಾಯರು, ರಾಜಮಂತ್ರಪ್ರವೀಣ ಮೆ॥ ಸಿ ಶ್ರೀನಿವಾಸಯ್ಯಂಗಾರ್ರು, ಮೆ॥ ಎಂ. ಸಿ. ರಂಗಯ್ಯಂಗಾರ್ರು, ಬ್ಯಾರಿಸ್ಟರ್ ಮೆ॥ ಬಿ ನಾಗಪ್ಪನವರು (ಇವರೆಲ್ಲಾ ಜೂನ್ ತಾ. ೨೧ ರ ಲಾಗಾಯಿತು), ಫಾರೆಸ್ಟ್ ಕನ್ಸರ್ವೇಟರ್ ಮೆ॥ ಎಂ. ಮುತ್ತಣ್ಣನವರು, ಫಸ್ಟ್ ಡಿಸ್ಟ್ರಿಕ್ ಮತ್ತು ಸೆಷನ್ಸ್ ಜಡ್ಜ್ ಮೆ॥ ಬಿ. ತಿರುಮಲಾಚಾರ್ರು, ಫಸ್ಟ್ ಸೀನಿಯರ್ ಅ॥ ಕಮಿಷನರ್ ಮೆ॥ ಸುಮ್ಮದ್ ಅಬ್ಬಾಸ್ ಖಾನ್‌ರವರು (ಇವರೆಲ್ಲಾ ಜುಲೈ ತಾ ೯ ರ ಲಾಗಾಯಿತು)

ಆ ಜಿಲ ಲಜಿಸ್ಟ್ ಮೆ॥ ಪಿ. ಸಂಪತ್ತಯ್ಯಂಗಾರ್ರಿಗೆ ಜೂನ್ ತಾ. ೨೨ ರಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೆ॥ ಡಬ್ಲ್ಯು. ಮೆಕ್‌ಚೆನ್ ಯವರು ಜೂನ್ ತಾ. ೩೦ ರಿಂದ ಪೆನ್‌ಷನ್ ಪಡೆದು ಕೆಲಸ ಬಿಟ್ಟದ್ದರಿಂದ ಡೆಪ್ಯುಟಿ ಚೀಫ್ ಇಂಜನಿಯರ್ ಮತ್ತು ಅಂಡರ್ ಸೆಕ್ರೆಟರಿ ಕ್ಯಾಪ್ಟನ್ ಎನ್. ಬಿ ಇ. ಡಾಸ್ ಯವರನ್ನು ಸಂಸ್ಥಾನದ ಚೀಫ್ ಇಂಜನಿಯರಾಗಿಯೂ ಮರಹಮತ್ ಮತ್ತು ರೈಲ್ವೆ ಇಲಾಖೆಗಳಲ್ಲಿ ಗವರ್ನಮೆಂಟ್ ಸೆಕ್ರೆಟರಿಯಾಗಿಯೂ ಜುಲೈ ತಾ. ೧ ರಿಂದ ಕೆಲಸ ನೋಡುವಂತೆ ನೇಮಕ ಮಾಡಿದೆ.

ಕ್ಯಾಪ್ಟನ್ ಎನ್. ಬಿ. ಇ. ಡಾಸ್ ಯವರು ಜೂನ್ ತಾ ೩೦ನೇ ಮಧ್ಯಾಹ್ನಾತ್ತರ ಸಂಸ್ಥಾನದ ಚೀಫ್ ಇಂಜನಿಯರ್ ಕೆಲಸದ ಛಾರ್ಜನ್ನು ವಹಿಸಿಕೊಂಡಿರುತ್ತಾರೆ.

ಶಿವಸಮುದ್ರಂ ಚೀಫ್ ಆಪರೇಟರ್ ಮೆ॥ ಎ ಸಿ. ಹಾಬಲ್ ಯವರಿಗೆ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಪಶ್ಚಿಮ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರ್ ಮೆ॥ ಡಿ. ಸೀತಾರಾಮರಾಯರು ರಜದಿಂದ ಬಂದು ಜೂನ್ ತಾ. ೨೧ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಚಿಕ್ಕಮಗಳೂರು ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ॥ ಎಸ್ ಚಕ್ರಪಾಣಿ ಐಯಂಗಾರ್ರಿಗೆ ಜೂನ್ ತಾ. ೧೬ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಇವರ ಗೈರುಹಾಜರಿಯಲ್ಲಿ ಶಿರಸ್ತೆದಾರ್ ಎಸ್. ಸುಬ್ಬರಾಯರು ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ದಾವಣಗೆರೆ ತಾಲ್ಲೂಕ್ ಅಮಲ್ದಾರ್ ಮೆ. ಟಿ ವೆಂಕಟರಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹರಿಹರದ ಡೆಪ್ಯುಟಿ ಅಮಲ್ದಾರ್ರವರು ದಾವಣಗೆರೆ ತಾಲ್ಲೂಕಿನ ಛಾರ್ಜನ್ನೂ ವಹಿಸಿರತಕ್ಕದ್ದು.

ತಾಲ್ಲೂಕು ವರ್ತಮಾನಗಳು.

ನೆಲಮಂಗಲ.—ಈ ಊರಿನಲ್ಲಿ ಎರಡು ತಿಂಗಳಿಂದಲೂ ಸುತರಾಂ ಮಳೆ ಇಲ್ಲದೆ ಬಿತ್ತಿದ ಗದ್ದೆಗಳೆಲ್ಲಾ ಒಣಗಿಹೋಯಿತು. ರೈತರು ಮುಗಿಲು ನೋಡುತ್ತಿದ್ದಾರೆ ಕಳೆದ ವರುಷ ಬೆಳೆ ಇಲ್ಲದೆ ಜನರು ಸಂಕಟ ಕಷ್ಟನಷ್ಟಗಳನ್ನು ಅನುಭವಿಸುತ್ತಾ ಬಂದರು. ಇದುವರೆವಿಗೂ ರಾಗಿ ಬಿತ್ತನೆಗೆ ಮಳೆ ಇಲ್ಲದಂತಾಗಿದೆ.- ಈ ಊರು ಪೋಸ್ಟಾಫೀಸಿನಲ್ಲಿ ಹಿಂದೆ ಹಣವು ಕಳವಾಯಿತೆಂದೂ ಇಬ್ಬರು ಪೋಸ್ಟ್‌ಮಾಸ್ಟರನ್ನು ದಸ್ತಗಿರಿ ಮಾಡಿದ್ದರೆಂದೂ ತಿಳಿಸಿದ್ದೆವಷ್ಟೆ. ಈಗ ಪೋಸ್ಟ್‌ಮಾಸ್ಟರ್ ಸಂಜೀವಯ್ಯ, ಬಸಪ್ಪ ಎಂಬುವರಿಬ್ಬರೂ ತಪ್ಪಿತಸ್ಥರಲ್ಲವೆಂದು ತೀರ್ಮಾನಿಸಿ, ಅವರಿಗೆ ಪೋಸ್ಟ್ ಆಫೀಸಿನಲ್ಲಿ ಮಾಮೂಲಿನಂತೆ ಕೆಲಸ ಕೊಟ್ಟಿರುತ್ತಾರೆ.

ಚಿಕ್ಕಮಗಳೂರು.—ಜೂನ್ ತಿಂಗಳಿನಿಂದಲೂ ಮಳೆ ಸಾಧಾರಣವಾಗಿ ನಡೆಯುತ್ತಲೇ ಇದೆ. ಜೂಲಾಯಿ ಪ್ರಾರಂಭದಿಂದ ಸೂರ್ಯನ ದರ್ಶನವು ಅಪರೂಪವಾಯಿತು. ೩—೪ ವಾರಗಳಿಂದ ೧—೨ ಮರಣಗಳು ಅಲ್ಲಲ್ಲಿ ತಲೆದೋರುತ್ತಲೇ ಬಂದವು ಸರಿಯಾದ ಕಾರಣ ವೈದ್ಯರುಗಳ ಗಮನಕ್ಕೆ ಬರಲಿಲ್ಲವೆಂದು ಕಾಣುತ್ತದೆ ಪೇಟೆಯಲ್ಲಿ ವಾಸ ಮಾಡುವ ಸಬ್ ಅ॥ ಸರ್ಜನ್ ಮೆ॥ ರಾಜಗೋಪಾಲ ನೊಡ್ಡಿಯಾರರ ಮನೆಯಲ್ಲಿ ಮೊನ್ನೆ ಇಲಿ ಸತ್ತು ಬಿದ್ದದ್ದರಿಂದ ಅವರು ಕೂಡಲೆ ಮನೆಯನ್ನು ಬಿಟ್ಟು ಬೇರೆ ಮನೆಗೆ ಹೋದರು. ಇವರು ಹೋದನಂತರ ಸ್ವಲ್ಪ ಅನುಮಾನ ಹೆಚ್ಚಿತು. ಅದೇ ದಿನ ಸದರಿ ಬೀದಿಯಲ್ಲಿ ಪ್ಲೇಗ್ ರೋಗಿಗಳಿಬ್ಬರು ಪ್ರತ್ಯಕ್ಷಕ್ಕೆ ಬಂದರು ಅದಕ್ಕಿಂತ ಮೊದಲೇ ಮರಣವಾದವರು ಅದೇ ರೋಗದಿಂದ ಸತ್ತರೆಂದು ಹೇಳುವದು ಅನಾವಶ್ಯಕ. ಮುಂದೆಯಾದರೂ ಈ ರೋಗ ಹರಡಿಕೊಳ್ಳದಂತೆ ಇಲ್ಲಿನ ವೈದ್ಯಮಂಡಲಿಯವರು ಮುತುವರ್ಜಿಯಿಂದ ಮಾಡುವ ಏರ್ಪಾಡುಗಳಿಗೆ ಪ್ರಜೆಗಳು ಗಮನ ಕೊಟ್ಟರೆ ಬಹಳ ಕ್ಷೇಮಕರವಾಗಿದೆ. ಈ ದಿನ ಇಲ್ಲಿನ ಹೈಸ್ಕೂಲಿನಲ್ಲಿ ಡಾಕ್ಟರುಗಳು ಡೆಪ್ಯುಟಿ ಕಮಿಷನರೇ ಮೊದಲಾದವರು ಸೇರಿದ್ದ ಸಭೆಯಲ್ಲಿ ಇನಾಕ್ಯುಲೇಷನ್ ಮಾಡಿಸಿಕೊಳ್ಳುವದರ ಉಪಯೋಗವನ್ನು ವಿವರಿಸಿ, ಡಾಕ್ಟರವರುಗಳು ತಾವೇ ಮೇಲು ಪಂಕ್ತಿಗಾಗಿ ಒಬ್ಬರಿಗೊಬ್ಬರು ಸಿಡುಬನ್ನು ಹಾಕಿಸಿಕೊಂಡರು ಅನಂತರ ಸರ್ಕಾರಿ ನೌಕರರಲ್ಲಿ ಕೆಲವರು ಹಾಕಿಸಿಕೊಂಡರು. ಸಭೆಯಲ್ಲಿ ಹಾಜರಾಗಿದ್ದ ವರ್ತಕರೇ ಮೊದಲಾದವರು ನಾನಾ ರೀತಿ ಮಾತಾಡಿಕೊಳ್ಳುತ್ತಿದ್ದರು ಇನ್ನೂ ಪ್ರಜೆಗಳಲ್ಲಿ ಈ ಸಿಡುಬಿನ ವಿಷಯ ಸೌಖ್ಯಭಾವದಲ್ಲಿರುವದು ವ್ಯಸನಕರವಾದದ್ದೇ

ಲಾರ್ಡ್ ರಿಪ್ಪನ್ನರವರ ಮರಣವು.

ಕಳೆದ ೧೮೮೦ ರಿಂದ ೧೮೮೪ನೇ ಇಸವಿಯ ತನಕ ಹಿಂದುಸ್ಥಾನದ ವೈಸ್‌ರಾಯಿ ಮತ್ತು ಗವರ್ನರ್ ಜನರಲ್ ಪದವಿಯಲ್ಲಿದ್ದು ವಿಲಾಯತಿಗೆ ತೆರಳಿದ್ದ ಲಾರ್ಡ್ ರಿಪ್ಪನ್ನರವರು ೮೨ನೇ ವಯಸ್ಸಿನಲ್ಲಿ ಕಾಲವಾದರೆಂದು ಕಳೆದ ಶನಿವಾರ ತಂತಿಯಿಂದ ಬಂದಿರುವ ವರ್ತಮಾನವನ್ನು ತಿಳಿಸಲು ವಿಷಾದಿಸುತ್ತೇವೆ. ಈ ಮರಣವಾರ್ತೆಯು ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ ವಿಶೇಷವಾದ ಸಂತಾಪವನ್ನುಂಟುಮಾಡುತ್ತದೆ ಎನ್ನುವುದಕ್ಕೆ ಸಂಶಯವಿಲ್ಲ. ಲಾರ್ಡ್ ರಿಪ್ಪನ್ನರವರು ವೈಸ್‌ರಾಯಿ ಪದವಿಯಲ್ಲಿದ್ದಾಗ್ಗೆ ಈ ರಾಷ್ಟ್ರದ ಹಿತವನ್ನು ಬಯಸಿ ಅನೇಕ ಪ್ರಜಾ ರಂಜಕಕಾರ್ಯಗಳನ್ನು ನಡೆಸಿರುತ್ತಾರೆ. ಇವರ ಹಿಂದೆ ವೈಸ್‌ರಾಯಿರಾಗಿದ್ದ ಲಾರ್ಡ್ ಲಿಟನ್ನರವರು ಒಂದು ಕಾನೂನು ಮಾಡಿ ಜಾರಿಗೆ ತಂದು ದೇಶಭಾಷೆಯ ವರ್ತಮಾನ ಪತ್ರಿಕೆಗಳ ವಾಗ್ಬಂಧನವನ್ನು ಕಲ್ಪಿಸಿದ್ದರು. ಲಾರ್ಡ್ ರಿಪ್ಪನ್ ಪ್ರಭುಗಳು ಈ ಕಾನೂನನ್ನು ರದ್ದು ಮಾಡಿದರು. ಇವರು ೧೮೮೩ನೇ ಇಸವಿಯಲ್ಲಿ ಮ್ಯುನಿಸಿಪಲ್ ಮತ್ತು ಲೋಕಲ್ ಫಂಡ್ ಬೋರ್ಡುಗಳನ್ನು ಸ್ಥಾಪನೆ ಮಾಡಿ ಕೊಟ್ಟು, ಪ್ರಜೆಗಳಿಗೆ ಕೆಲವು ಸ್ವತಂತ್ರಾಧಿಕಾರಗಳನ್ನು ವಹಿಸಿದರು. ಇದರಿಂದ ಆಯಾ ಸ್ಥಳದ ದೇಶೀಯ ದೊಡ್ಡ ಮನುಷ್ಯರು ತಮ್ಮ ಸುತ್ತುಮುತ್ತಿನಲ್ಲೂ ಆಜೂಬಾಜೂವಿನಲ್ಲೂ ಪ್ರಜೆಗಳ ಹಿತವನ್ನು ಬಯಸಿ ತಾವೇ ಹಲವು ಕಾರ್ಯಗಳನ್ನು ಮಾಡಿಕೊಳ್ಳಲು ಸಹಾಯವಾಯಿತು. ಕಳೆದ ೧೮೮೧ನೇ ಇಸವಿಯಲ್ಲಿ ಪ್ರಾಪ್ತ ವಯಸ್ಕರೂ ಸಮರ್ಥರೂ ಆದ ಚಾಮರಾಜೇಂದ್ರ ಒಡೆಯರವರಿಗೆ ಮೈಸೂರು ಸಂಸ್ಥಾನದ ಆಳ್ವಿಕೆಯನ್ನು ಲಾರ್ಡ್ ರಿಪ್ಪನ್ನರವರು ವಹಿಸಿದರು. ಅದುವರೆಗೆ ಅಂದರೆ ೫೦ ಸಂವತ್ಸರಗಳ ತನಕ ಈ ಸಂಸ್ಥಾನವು ಇಂಗ್ಲಿಷರ ಸ್ವತಂತ್ರವಾದ ಆಳ್ವಿಕೆಯಲ್ಲಿತ್ತು. ಲಾರ್ಡ್ ರಿಪ್ಪನ್ನರವರ ಆಳ್ವಿಕೆಯು ಈ ರಾಷ್ಟ್ರದಲ್ಲಿ ಚಿರಸ್ಥಾಯಿಯಾಗಿರುವಂತೆ ಅವರು ಅನೇಕ ಪ್ರಜಾಹಿತ ಕಾರ್ಯಗಳನ್ನು ನಡೆಸಿರುತ್ತಾರೆ. ಅವರ ಕಾಲದಲ್ಲಿ ಹಿಂದುಸ್ಥಾನದೊಳಗಾಗಲಿ, ಅದರ ಎಲ್ಲೆ ಕಟ್ಟಿನಲ್ಲಾಗಲಿ ಯಾವ ಗಲಭೆಯೂ ಇಲ್ಲದೆ ಎಲ್ಲಾ ನೆಮ್ಮದಿಯಾಗಿತ್ತು. ಈ ರಾಷ್ಟ್ರವು ಸುಭಿಕ್ಷವಾಗಿತ್ತು. ಪ್ರಜೆಗಳು ಸಮೃದ್ಧಿ ಸುಖ ಸಂತೋಷಗಳಲ್ಲಿ ಅಭಿವೃದ್ಧಿ ಹೊಂದಿದರು. ರಾಜಾದಾಯವೂ ಹೆಚ್ಚಾಯಿತು. ರೈಲ್ ಮಾರ್ಗಗಳು ಬಹಳವಾಗಿ ಬಡಾವಣೆಯಾದವು. ಉಪ್ಪಿನ ಮೇಲಿನ ತೆರಿಗೆಯನ್ನು ಕಡಮೆಮಾಡಿದರು. ವ್ಯಾಪಾರಾಭಿವೃದ್ಧಿಗೆ ಅವರು ಅನೇಕ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು. ಕಠಿಣವಾಗಿದ್ದ ಕೆಲವು ತೆರಿಗೆಗಳನ್ನು ವಜಾ ಮಾಡಿದರು, ಕೆಲವನ್ನು ಕಡಮೆಮಾಡಿದರು. ಪ್ರೈಮರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸವು ಲಾರ್ಡ್ ರಿಪ್ಪನ್ನರವರ ಆಳ್ವಿಕೆಯಲ್ಲಿ ತುಂಬಾ ಪ್ರೋತ್ಸಾಹ ಹೊಂದಿ ವಿಶೇಷವಾಗಿ ಹರಡಿಕೊಂಡಿತು. ಮುಖ್ಯವಾಗಿ ಆ ಪ್ರಭುಗಳಲ್ಲಿ ಈ ರಾಷ್ಟ್ರದ ಪ್ರಜೆಗಳಿಗೆ ಉಪಕಾರವಾಗಬೇಕೆಂಬ ಉತ್ಸಾಹವೇ ವಿಶೇಷವಾಗಿತ್ತೆಂದು ಹೇಳುವುದೇನೂ ಅತಿಶಯೋಕ್ತಿಯಲ್ಲ. ಆದರೆ ಇವರು ಒಂದು ಕಾನೂನನ್ನು ಜಾರಿಗೆ ತರಬೇಕೆಂದು ಪ್ರಯತ್ನಪಟ್ಟಾಗ ಇವರ ಮೇಲೆ ತುಂಬಾ ಆಕ್ಷೇಪಣೆಯುಂಟಾಯಿತು. ಯೂರೋಪ್ಪಿಯನ್ ಜನರು ಅಪರಾಧ ಮಾಡಿದರೆ ಅವರನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಸೆಷನ್ಸ್ ಜಡ್ಜರೂ ದರ್ಯಾಫ್ತು ಮಾಡಬಹುದೆಂದು ಕಾನೂನ್ ಮಾಡಲಪೇಕ್ಷಿಸಿದರು. ಇದು ಹಿಂದುಸ್ಥಾನದಲ್ಲಿದ್ದ ಯೂರೋಪ್ಪಿಯನ್ ಜನರಿಗೆ ಸಮ್ಮತವಾಗದೆಹೋಯಿತು. ಅವರು ಕಲ್ಕತ್ತಾ ಮೊದಲಾದ ಪಟ್ಟಣಗಳಲ್ಲಿ ಸಭೆಗಳನ್ನು ನಡೆಸಿ ತಮ್ಮ ಅಸಮಾಧಾನವನ್ನು ತಿಳಿಯಪಡಿಸಿದರು. ವಿಲಾಯತಿಯಲ್ಲೂ ಈ ವಿಚಾರವಾಗಿ ಒಂದು ಸಭೆ ನಡೆದು ವೈಸ್‌ರಾಯಿ ಲಾರ್ಡ್ ರಿಪ್ಪನ್ನರವರು ಮಾಡತಕ್ಕ ಕಾರ್ಯಗಳು ಸಹಜವಾದವುಗಳೆಂದು ಒಪ್ಪಿಕೊಳ್ಳಲಾಯಿತು. ಕಡೆಗೆ ದೇಶೀಯ ಮ್ಯಾಜಿಸ್ಟ್ರೇಟರು ಯೂರೋಪ್ಪಿಯನ್ ಅಪರಾಧಿಗಳನ್ನು ಇವರು ಇಷ್ಟಪಡದಿದ್ದರೆ ತಮ್ಮ ಕೋರ್ಟುಗಳಲ್ಲಿ ದರ್ಯಾಫ್ತು ಮಾಡಬೇಕಾದದ್ದಿಲ್ಲವೆಂದೂ, ಯೂರೋಪ್ಪಿಯನ್ ಮ್ಯಾಜಿಸ್ಟ್ರೇಟರು ಜೂರಿ ಸಹಾಯವನ್ನಿಟ್ಟುಕೊಂಡು ದರ್ಯಾಫ್ತು ಮಾಡಬೇಕೆಂತಲೂ ಕಾನೂನಾಯಿತು. ಲಾರ್ಡ್ ರಿಪ್ಪನ್ನರವರು ದೇಶೀಯ ಜನರನ್ನು ಸರ್ಕಾರದ ಅಧಿಕಾರಗಳಿಗೆ ನೇಮಕ ಮಾಡಿ, ಅವರಿಗೆ ಸರ್ಕಾರದಲ್ಲಿ ಹೆಚ್ಚು ಭಾಗವನ್ನು ವಹಿಸಿಕೊಟ್ಟರು. ೧೮೮೪ನೇ ಇಸವಿಯಲ್ಲಿ ಅವರು ಕೆಲಸಕ್ಕೆ ರಾಜೀನಾಮೆ ಕೊಟ್ಟು ಸೀಮೆಗೆ ಪ್ರಯಾಣ ಮಾಡಿದಾಗ್ಗೆ ಈ ರಾಷ್ಟ್ರದ ಪ್ರಜೆಗಳು ಬಹಳ ವ್ಯಸನಪಟ್ಟರು. ಅವರಲ್ಲಿ ತಮಗಿದ್ದ ಭಕ್ತಿ ಪ್ರೀತಿ ಕೃತಜ್ಞತೆಗಳನ್ನು ಪ್ರಕಾಶಪಡಿಸುವುದಕ್ಕೆ ಕಲ್ಕತ್ತೆಯಿಂದ ಬೊಂಬಾಯಿ ಪಟ್ಟಣದ ತನಕ ಅವರಿಗೆ ಉದ್ದಕ್ಕೂ ಚಪ್ಪರ ತೋರಣಗಳನ್ನು ಕಟ್ಟಿ ವಿಜ್ಞಾಪನಾ ಪತ್ರಿಕೆಗಳನ್ನು ಒಪ್ಪಿಸಿರುತ್ತಾರೆ. ಲಾರ್ಡ್ ರಿಪ್ಪನ್ನರವರು ವಿಲಾಯತಿಗೆ ಹೋದ ಮೇಲೂ ಅವರು ಕಾಲವಾಗುವ ತನಕ ಹಿಂದುಸ್ಥಾನದ ಮೇಲೆ ತುಂಬಾ ವಿಶ್ವಾಸವನ್ನಿಟ್ಟುಕೊಂಡಿದ್ದರಲ್ಲದೆ, ಈ ರಾಷ್ಟ್ರಕ್ಕೆ ಸಂಬಂಧಪಟ್ಟ ವಿಚಾರಗಳು ಸೀಮೆಯಲ್ಲಿ ಚರ್ಚೆಗೆ ಬಂದಾಗಲೆಲ್ಲಾ ಅವರು ಹಿಂದುಸ್ಥಾನದ ಪಕ್ಷವನ್ನೇ ವಹಿಸಿ ಹೋರಾಡುತ್ತಿದ್ದರು. ಇಂಥಾ ಸತ್ಪುರುಷರು ಕಾಲವಾದ ವಿಷಯದಲ್ಲಿ ಸಕಲ ಪ್ರಜೆಗಳ ಕೂಡ ನಾವೂ ಬಹಳವಾಗಿ ಸಂತಾಪಪಡುತ್ತೇವೆ.

ಪ್ಲೇಗ್ ಇನಾಕ್ಯುಲೇಷನ್ ವಿಷಯವು

ತರೀಕೆರೆ ಟವುನ್ನಿನ ಅನುಭವ.

ಪ್ಲೇಗ್ ವ್ಯಾಧಿಯು ಪ್ರಾಪ್ತವಾಗದೆ ಇರುವದಕ್ಕೆ ಇದುವರೆಗೆ ಕಂಡು ಹಿಡಿದಿರುವ ಉಪಾಯಗಳಲ್ಲಿ ಪ್ಲೇಗ್ ಇನಾಕ್ಯುಲೇಷನ್ ಮಾಡಿಸಿಕೊಳ್ಳುವದೇ ಮುಖ್ಯವು. ಇದಕ್ಕೆ ಆಧಾರವಾಗಿ ಕೆಲವು ದೃಷ್ಟಾಂತಗಳನ್ನು ತಿಳಿಸುವೆವು. ಈ ವಿಷಯದಲ್ಲಿ ಕೆಲವು ಸಂಗತಿಗಳು ಮೈಸೂರು ಸರ್ಕಾರಿ ಗೆಜೆಟ್ಟಿನಲ್ಲಿ ಕಂಡು ಬರುವವು. ಅವು ಯಾವುವೆಂದರೆ.—ಮೊದಲನೇದು, ಒಬ್ಬ ದರ್ಜಿಯ ಕುಟುಂಬದಲ್ಲಿ ಆರು ಜನಗಳಿದ್ದರು. ಅವರಲ್ಲಿ ಮೂವರಿಗೆ ಇನಾಕ್ಯುಲೇಷನ್ ಆಗಿತ್ತು. ಇನಾಕ್ಯುಲೇಷನ್ ಆಗದೇ ಇದ್ದವರಲ್ಲಿ ಒಬ್ಬನಿಗೆ ಪ್ಲೇಗ್ ತಗಲಿ ಮೃತಪಟ್ಟನು. ಎರಡನೇದಾಗಿ, ಒಬ್ಬ ಮುಸಲ್ಮಾನನ ಕುಟುಂಬದಲ್ಲಿ ೧೧ ಜನಗಳಿದ್ದರು. ಆ ಪೈಕಿ ೫ ಜನರು ಇನಾಕ್ಯುಲೇಷನ್ ಹಾಕಿಸಿಕೊಂಡಿದ್ದರು. ಇನಾಕ್ಯುಲೇಷನ್ ಹಾಕಿಸಿಕೊಳ್ಳದೇ ಇದ್ದವರಲ್ಲಿ ಇಬ್ಬರು ಪ್ಲೇಗ್ ತಗಲಿ ಸತ್ತರು. ಮೂರನೇದಾಗಿ, ಒಬ್ಬ ಕುರುಬರವನ ಕುಟುಂಬದಲ್ಲಿ ೬ ಜನರಿದ್ದರು. ಅವರಲ್ಲಿ ೫ ಜನರು ಇನಾಕ್ಯುಲೇಷನ್ ಹಾಕಿಸಿಕೊಂಡಿದ್ದರು. ಇನಾಕ್ಯುಲೇಷನ್ ಹಾಕಿಸಿಕೊಳ್ಳದೇ ಇದ್ದ ಒಬ್ಬನಿಗೆ ಪ್ಲೇಗ್ ಆಗಿ ಸತ್ತನು. ನಾಲ್ಕನೇದಾಗಿ, ವೈಶ್ಯರ ಒಂದು ಸಂಸಾರದಲ್ಲಿ ೮ ಜನರಿದ್ದರು. ಇವರಲ್ಲಿ ೬ ಜನರು ಇನಾಕ್ಯುಲೇಷನ್ ಹಾಕಿಸಿಕೊಂಡಿದ್ದರು. ಒಬ್ಬನು ಹಿಂದಿನ ವರ್ಷ ಪ್ಲೇಗ್ ಬಾಧ್ಯವನ್ನು ಅನುಭವಿಸಿದವನು. ಉಳಿದ ಒಬ್ಬನಿಗೆ ಪ್ಲೇಗ್ ತಗಲಿ ಸತ್ತನು. ಅಲ್ಲದೆ ಇನಾಕ್ಯುಲೇಷನ್ ಫಲಿತಾಂಶವು ಕೆಳಗಿನ ತಖ್ತೆಯಿಂದ ಕಂಡು ಬರುವುದು —

ತರೀಕೆರೆ ಟವನ್ ಜನಸಂಖ್ಯೆ—೧೦,೧೬೪ (೧೯೦೧ ನೇ ಸೆನ್ಸಸ್ ಪ್ರಕಾರ).

	ಸಂಖ್ಯೆ	ಪ್ಲೇಗ್ ತಗಲಿದ್ದು	ಸತ್ತದ್ದು
ಇನಾಕ್ಯುಲೇಷನ್ ಆದವರು	೬೦೯	೪	೨
ಇನಾಕ್ಯುಲೇಷನ್ ಆಗದವರು	೯,೫೫೫	೧೩೮	೯೧

ಮೇಲಿನ ಪಟ್ಟಿಯನ್ನು ಪರಿಶೀಲಿಸಿ ನೋಡಿದರೆ ಇನಾಕ್ಯುಲೇಷನ್ ಮಾಡಿಸಿಕೊಳ್ಳುವದರಿಂದ ಪ್ಲೇಗ್ ಕಾಯಿಲೆಯು ಬಹುತರ ಪ್ರಾಪ್ತವಾಗುವದಿಲ್ಲವೆಂಬುವದು ಸಿದ್ಧಾಂತವಾಗುತ್ತದೆ. ಗ್ರಾಮಾಂತರಗಳಲ್ಲಿ ಇನಾಕ್ಯುಲೇಷನ್ ಹಾಕಿಸಿಕೊಳ್ಳುವದರಿಂದ ದೇಹದ ಆರೋಗ್ಯವು ಕಡಮೆಯಾಗುವದೆಂಬದಾಗಿ ಹೇಳುವರು. ಇದು ನಿರಾಧಾರವಾದ ಮಾತು. ಲಕ್ಷಾಂತರ ಜನರು ಇನಾಕ್ಯುಲೇಷನ್ ಹಾಕಿಸಿಕೊಂಡು ಯಾವ ಕುಂದುಕೊರತೆಗಳೂ ಇಲ್ಲದೆ ಸುಖವಾಗಿರುತ್ತಾರೆ.

ಪ್ಲೇಗ್ ಬಾಧ್ಯವು ಪ್ರತಿ ವರ್ಷವೂ ಗ್ರಾಮಾಂತರಗಳಲ್ಲಿ ಕಾಲವರ್ಜೆಯವಿಲ್ಲದೆ ಮಳೆಗಾಲದಲ್ಲಿ ಪ್ರಾಪ್ತವಾಗುತ್ತಿದೆ. ಹೀಗೆ ಬಂದಾಗಲೆಲ್ಲಾ ಗ್ರಾಮಗಳನ್ನು ಬಿಟ್ಟು ಷೆಡ್ಡುಗಳಲ್ಲಿ ವಾಸಮಾಡುವದು ಜನರಿಗೆ ಬಹಳ ತೊಂದರೆಯೂ ದ್ರವ್ಯ ನಷ್ಟವೂ ಅಲ್ಲದೆ ಇವರು ಷೆಡ್ಡುಗಳನ್ನು ಸಿದ್ಧಮಾಡುವುದರೊಳಗಾಗಿ ಬಹಳ ಮರಣಗಳು ಸಂಭವಿಸುವವು. ದಯಾಳುಗಳಾದ ಮೈಸೂರು ಸರ್ಕಾರದವರು ಇನಾಕ್ಯುಲೇಷನ್ ಮಾಡಿಸಿಕೊಳ್ಳಲು ಇಷ್ಟವಿರುವ ಜನರಿಗೆ ಕೂಡಲೇ ಇನಾಕ್ಯುಲೇಷನ್ ಮಾಡುವದಕ್ಕೆ ತಕ್ಕ ಏರ್ಪಾಡನ್ನು ಮಾಡಿರುವರು. ಯಾವ ಪ್ರಾಂತ್ಯದಲ್ಲಿ ಪ್ಲೇಗ್ ಬಾಧ್ಯವು ಪ್ರಾಪ್ತವಾಗುತ್ತದೋ ಆ ಭಾಗದ ಜನರು ಇನಾಕ್ಯುಲೇಷನ್ ಮಾಡಿಸಿಕೊಂಡು ಪ್ರಯೋಜನವನ್ನು ಹೊಂದಬೇಕೆಂಬುವದೇ ನಮ್ಮ ಮುಖ್ಯ ಕೋರಿಕೆಯಾಗಿದೆ. ಒಂದು ಗ್ರಾಮದಲ್ಲಿ ಪ್ಲೇಗ್ ವ್ಯಾಧಿಯು ಮೊದಲು ಇಲಿಗಳಿಗೆ ಪ್ರಾಪ್ತವಾಗಿ, ಕೆಲವು ದಿವಸಗಳ ಮೇಲೆ ಮನುಷ್ಯರಿಗೆ ಪ್ರಾಪ್ತವಾಗುವದು. ಇಲಿಯು ಸತ್ತು ಬೀಳುವುದು, ಕೆಲವು ದಿವಸಗಳ ಮೇಲೆ ಮನುಷ್ಯರಲ್ಲಿ ಪ್ಲೇಗ್ ವ್ಯಾಧಿಯು ಪ್ರಾಪ್ತವಾಗುತ್ತದೆ. ಇಲಿಗಳು ಸಾಯುವದಕ್ಕೆ ಪ್ರಾರಂಭವಾದನಂತರ ಈ ವ್ಯಾಧಿಯು ಮನುಷ್ಯರಲ್ಲಿ ಕಾಣಿಸಿಕೊಳ್ಳುವದಕ್ಕೆ ಸಾಧಾರಣವಾಗಿ ೧೫ ದಿವಸಗಳಿಂದ ಒಂದು ತಿಂಗಳವರೆಗೂ ಆಗಬಹುದು. ಇನಾಕ್ಯುಲೇಷನ್ನಿನ ಶಕ್ತಿಯು ಮನುಷ್ಯರಲ್ಲಿ ವ್ಯಾಪಿಸಬೇಕಾದರೆ ಕನಿಷ್ಠಪಕ್ಷ ೧೦—೧೫ ದಿವಸಗಳಾದರೂ ಬೇಕು. ಆದದ್ದರಿಂದ ಒಂದು ಗ್ರಾಮದಲ್ಲಿ ಇಲಿಗಳು ಸಾಯುವದಕ್ಕೆ ಪ್ರಾರಂಭವಾದ ಕೂಡಲೆ ಗ್ರಾಮದ ಜನರೆಲ್ಲರೂ ಇನಾಕ್ಯುಲೇಷನ್ ಮಾಡಿಸಿಕೊಳ್ಳುವದು ಸರ್ವೋತ್ತಮವಾದದ್ದು.

ಈಗ ತರೀಕೆರೆ ತಾಲ್ಲೋಕು ನಂದಿ ಗ್ರಾಮದಲ್ಲಿ ಪ್ಲೇಗ್ ಶುರುವಾಗಿರುತ್ತದೆ. ಈ ಗ್ರಾಮಸ್ಥರು ಇನಾಕ್ಯುಲೇಷನ್ ಹಾಕಿಸಿಕೊಳ್ಳುವದಕ್ಕೆ ಸಂಶಯಪಟ್ಟದ್ದರಿಂದ ಇದರ ಸಮೀಪದ ಹೊಸಹಳ್ಳಿ ಎಂಬ ಗ್ರಾಮದ ಪಟೇಲರಾದ ಮೆ|| ಲಿಂಗೇಗೌಡರು ತಾವು ಇನಾಕ್ಯುಲೇಷನ್ ಹಾಕಿಸಿಕೊಂಡದ್ದಲ್ಲದೆ ತಮ್ಮ ಮಕ್ಕಳಿಗೂ ಸಹ ಹಾಕಿಸಿದರು. ಈ ಧೈರ್ಯದಿಂದ ಇದುವರೆಗೆ ಈ ಗ್ರಾಮದಲ್ಲಿ ಸುಮಾರು ೨೦೦ ಜನರು ಇನಾಕ್ಯುಲೇಷನ್ ಹಾಕಿಸಿಕೊಂಡು ಸುಖವಾಗಿರುತ್ತಾರೆ. ಇದಲ್ಲದೆ ಈ ಪಟೇಲರು ಕೂಲಿಯಿಂದ ಜೀವನ ಮಾಡುವ ಜನರಿಗೆ ದ್ರವ್ಯ ಸಹಾಯವನ್ನೂ ಸಹ ಮಾಡಿ, ಇನಾಕ್ಯುಲೇಷನ್ ಮಾಡಿಸುತ್ತಾ ಬರುವರು. ಇದು ಶ್ಲಾಘನೀಯವಾದ ಕೆಲಸವಾಗಿರುವದು. ಹೀಗೆಯೇ ವ್ಯಾಧಿಯು ತಲೆದೋರುವ ಕಾಲದಲ್ಲಿ ಪ್ರತಿಯೊಂದು ಗ್ರಾಮದ ಪಟೇಲರೂ ಮತ್ತು ಮುಖ್ಯಸ್ಥರೂ ಮುತುವರ್ಜಿಯನ್ನು ವಹಿಸಿ ಇನಾಕ್ಯುಲೇಷನ್ ಮಾಡಿಸಿದರೆ ಬಹಳಮಟ್ಟಿಗೆ ಪ್ಲೇಗಿನ ಹಾವಳಿಯು ಕಡಮೆಯಾಗುವದೆಂಬುವದರಲ್ಲಿ ಸಂದೇಹವಿಲ್ಲ.

ಪ್ರಜಾ ಹಿತಚಿಂತಕ.

ಭತ್ತವನ್ನು ನಾಟಿ ಹಾಕಿ ಸಾಗುವಳಿ ಮಾಡುವುದರ ಅನುಕೂಲತೆಗಳು.

ಸಾಮಾನ್ಯವಾಗಿ ರೂಢಿಯಲ್ಲಿ ಎರಡು ವಿಧದಲ್ಲಿ ಭತ್ತದ ಸಾಗುವಳಿ ನಡೆಸುತ್ತಾರೆ —(೧) ಬಿತ್ತವನ್ನು ಗದ್ದೆಯಲ್ಲಿ ಚೆಲ್ಲುವುದು. (೨) ಮೊದಲು ಅಗೆಗಳಲ್ಲಿ ಬಿತ್ತವನ್ನು ಚೆಲ್ಲಿ ಅನಂತರ ಸಸಿಯನ್ನು ಗದ್ದೆಗಳಲ್ಲಿ ನಾಟಿ ಹಾಕುವುದು. ಭತ್ತವನ್ನು ನಾಟಿ ಹಾಕುವುದರಲ್ಲಿ ಅನೇಕ ಅನುಕೂಲತೆಗಳು ಇರುವವು. ಇವುಗಳನ್ನು ಕೆಳಗೆ ಸಂಕ್ಷೇಪವಾಗಿ ವಿವರಿಸುತ್ತೇವೆ.

ನಾಟಿ ಹಾಕುವ ವಿಧಾನವನ್ನೇ ಎಲ್ಲಾ ಕಡೆಯಲ್ಲಿಯೂ ರೂಢಿಗೆ ತಂದರೆ ಒಳ್ಳೇದು. ನಾಟಿ ವಿಧಾನದಲ್ಲಿ ಮುಖ್ಯವಾಗಿ ಬಿತ್ತದ ಖರ್ಚು ಕಡಮೆ, ಕನಿಷ್ಠಪಕ್ಷ ಎಕರೆಗೆ ೧೦—೧೫ ಸೇರು (ಅಂದರೆ, ಒಂದು ರೂಪಾಯಿನ) ಬಿತ್ತ ಉಳಿತಾಯವಾಗುತ್ತೆಂದು ಹೇಳಬಹುದು. ಇದೂ ಅಲ್ಲದೆ, ಒಂದೊಂದೇ ಸಸಿಯನ್ನು ನಾಟುವ ವಿಧಾನವನ್ನು ಅನುಸರಿಸಿದ್ದೇ ಆದರೆ ಮೇಲೆ ಹೇಳಿದುದಕ್ಕೆ ಎರಡರಷ್ಟು ಉಳಿತಾಯವಾಗುವುದು. ಒಂದು ಎಕರೆಗೆ ಎಷ್ಟು ಸೇರು ಬಿತ್ತವನ್ನು ಉಪಯೋಗಿಸಬೇಕೆಂಬುವುದನ್ನು ಭೂಗುಣ, ಬೆಳೆಯ ರಕಂ ಅನುಸರಿಸಿ ನಿರ್ಧರಿಸಬೇಕು. ಹೆಚ್ಚು ಕಾಲ ಬೇಕಾಗುವ ರಕಂಗಳನ್ನು ಜಾಗ್ರತೆ ಬೆಳೆಯುವ ರಕಂಗಳಿಗಿಂತಲೂ ದೂರದೂರವಾಗಿ ನೆಡಬೇಕಾದೀತು. ಸಸಿಗಳನ್ನು ಕೈಯಿಂದ ನೆಡುವುದರಲ್ಲಿ ಪ್ರತಿ ಸಸಿಗೂ ಒಂದೇ ವಿಧವಾಗಿ ಸಸ್ಯಾಹಾರ, ಗಾಳಿ, ನೀರು ದೊರೆತು, ಪೈರು ಒಂದೇ ಸಮನಾಗಿ ಬೆಳೆದು ಏಕಕಾಲದಲ್ಲಿ ಕಟಾವಿಗೆ ಬರುತ್ತದೆ. ಚೆಲ್ಲಿ ಬೆಳೆದ ಪೈರಿನಲ್ಲಿ ಈ ಅನುಕೂಲಗಳು ಸಾಧ್ಯವಲ್ಲ. ಹೇಗೆಂದರೆ ಬಿತ್ತವು ಒಂದೊಂದು ಕಡೆಗಳಲ್ಲಿ ಒತ್ತಾಗಿ ಬಿದ್ದು, ಪೈರಿನ ಬೆಳವಣಿಗೆಯಲ್ಲೂ ವ್ಯತ್ಯಾಸ ಬರುತ್ತೆ. ಇಷ್ಟೇ ಅಲ್ಲದೆ ಅಗೆಯಿಂದ ಸಸಿಯನ್ನು ಕೀಳುವಾಗ ಸೊರಗಿಹೋದ ಅಥವಾ ರೋಗ ತಗಲಿದ ಸಸಿಗಳನ್ನು ಬಿಟ್ಟು ಒಳ್ಳೇ ಸಸಿಗಳನ್ನೇ ನಾಟಬಹುದು. ಸಸಿಗಳನ್ನು ನಾಟಿ ಹಾಕಿದ ನಂತರ ಪೈರಿನ ಬೆಳವಣಿಗೆಯ ಕಾಲದಲ್ಲಿ ಕೂಡ ಅನೇಕ ಅನುಕೂಲಗಳು ಕಂಡುಬರುತ್ತವೆ. ಸಸಿಗಳನ್ನು ಸಾಲುಸಾಲಾಗಿ ನೆಟ್ಟಲ್ಲಿ ಕಳೆ ಕೀಳುವ ಕೆಲಸವು ಸುಲಭವಾಗುವುದಲ್ಲದೆ, ನಾಟಿ ಹಾಕುವುದಕ್ಕೆ ಕೆಸರುಗದ್ದೆ ಮಾಡುವುದರಿಂದ ಬುಡ ಸಹಿತ ಎದ್ದಿರುವ ಕಳೆಗಳು ನಾಶವಾಗಿ ಕೊಳೆಯುತ್ತವೆ. ನಾಟಿ ಮಾಡಿದ ಒಂದು ತಿಂಗಳನಂತರ ಒಂದು ದಫಾ ಕಳೆ ತೆಗೆದರೆ ಸಾಕು. ಅಷ್ಟರಲ್ಲಿಯೇ ಸಸಿಗಳು ಚೆನ್ನಾಗಿ ಬೇರೂರಿ ತಕ್ಕಷ್ಟು ಒತ್ತಾಗಿ ಬೆಳೆದು ಕಳೆ ಏಳುವುದಕ್ಕೆ ಅವಕಾಶಕೊಡುವುದಿಲ್ಲ. ಚೆಲ್ಲಿ ಬೆಳೆಯುವುದರಲ್ಲಾದರೋ ಎರಡು ದಫಾ ಕೈಯಿಂದ ಕಳೆ ತೆಗೆಯಬೇಕಲ್ಲದೆ ಒತ್ತಾಗಿ ಬೆಳೆದ ಕಡೆ ವಿರಳಪಡಿಸಿ ಹಾಳುಬಿದ್ದ ಕಡೆ ಹೊಸದಾಗಿ ಸಸಿಗಳನ್ನು ನೆಡಬೇಕಾದೀತು. ಕೆಲವು ಕಡೆಗಳಲ್ಲಿ ಚೆಲ್ಲಿದ ಒಂದು ತಿಂಗಳ ಮೇಲೆ ಕಳೆ ತೆಗೆಯುವುದಕ್ಕೂ, ಸಸಿಗಳನ್ನು ವಿರಳಮಾಡುವುದಕ್ಕೂ ಪೈರಿನ ನಡುವೆ ಉಳುವ ವಾಡಿಕೆ ಉಂಟು. ಇದರಿಂದ ಬೇರು [illegible] ಸಸಿಗಳೇನೋ ಚೆನ್ನಾಗಿ ಬೆಳೆಯುತ್ತವೆ. ಆದದ್ದರಿಂದ ಈ ವಿಧಾನದಲ್ಲಿ ಎತ್ತಿನ ಖರ್ಚು ಹೆಚ್ಚಾಗುವುದು ಸ್ಪಷ್ಟವಾಗುತ್ತದೆ.

ನಾಟಿ ಸಾಗುವಳಿಯಲ್ಲಿ ಕಾಳಿನ ಉತ್ಪತ್ತಿಯು ಹೆಚ್ಚೆಂಬುವುದು ಎಲ್ಲರಿಗೂ ತಿಳಿದಿದೆ. ಎರಡು ವಿಧಾನದಲ್ಲಿಯೂ ಖರ್ಚೂ ಒಂದೇ ಸಮನಾಗಿ ಒದಗುತ್ತದೆ.

ನಾಟಿ ವಿಧಾನವನ್ನು ಹೊಸದಾಗಿ ರೂಢಿಗೆ ತರುವುದರಲ್ಲಿ ಆಗುವದು ದುಬಾರಿಯಾಗುವುದಾಗಿ ಹೇಳುವುದುಂಟು. [illegible] ಭೂಮಿಯು ಉತ್ಕೃಷ್ಟವಾಗಿದ್ದಲ್ಲಿ ನಾಟಿ ಸಾಗುವಳಿಯಾದಾಗ್ಯೂ ಅನುಕೂಲವೆಂದು ತಿಳಿದಿರುತ್ತಾರೆ. ನೀರು ವಸತಿ ಕಡಮೆಯಾಗಿರುವ [illegible] ಭೂಮಿಗಳಲ್ಲಿ ಈ ಸಾಗುವಳಿಯು ಅನುಕೂಲವಲ್ಲವಂತೆ, ಆದರೆ ಇದು [illegible]. ಹೇಗೆಂದರೆ ಎರಡು ವಿಧಾನದಲ್ಲಿಯೂ ಖರ್ಚಿನಲ್ಲೇನೂ ವ್ಯತ್ಯಾಸವಿರುವುದಿಲ್ಲ. ಸಸಿಗಳನ್ನು ಕಿತ್ತು ಹೊಲಕ್ಕೆ ಸಾಗಿಸಿ ಕೈಯಿಂದ ನಾಟುವ ಖರ್ಚು ಒಂದರಲ್ಲಿರುವುದು. ಇದಕ್ಕೆ ಸಮನಾಗಿ ಮತ್ತೊಂದರಲ್ಲಿ ಒಂದು ದಫಾ ಹೆಚ್ಚಾಗಿ ಕಳೆ ಕೀಳುವುದು, ಸಸಿಗಳನ್ನು ವಿರಳಪಡಿಸುವುದು ಅಥವಾ ಹಾಳು ಬಿದ್ದ ಕಡೆ ನೆಡುವುದರ ಖರ್ಚು ತಗಲುತ್ತದೆ. ನೀರಿನ ವಸತಿ ಕಡಮೆಯಾಗಿರುವ ಸಂದರ್ಭದಲ್ಲಿ ನಾಟಿ ವಿಧಾನದಲ್ಲಿಯೇ ಅನುಕೂಲತೆಗಳು ಹೆಚ್ಚು. [illegible] ಸಾಗುವಳಿ ಮಾಡತಕ್ಕ ವಿಸ್ತೀರ್ಣದ ಪೈಕಿ ೨೦ ಅಥವಾ ೨೫ ರಲ್ಲಿ ಒಂದು ಭಾಗವನ್ನು ಅಗೆ ಹಾಕುವುದಕ್ಕೆ ಉಪಯೋಗಿಸುತ್ತಾರೆ, ಅಂದರೆ, ಒಂದು ತಿಂಗಳ್ಕಾಲ ಸಾಮಾನ್ಯವಾಗಿ ಪೈರಿಗೆ ಬೇಕಾಗುವ ನೀರಿನಲ್ಲಿ ೨೦—೨೫ ರಲ್ಲಿ ಒಂದು ಭಾಗ ನೀರು ಅಗೆಗೆ ಬಿಟ್ಟರೆ ಸಾಕು. ಜಲಾಧಾರಕ್ಕೆ ಪೂರಾ ನೀರು [illegible] ಆಗುವುದಕ್ಕೆ ೨—೪ ವಾರಗಳ ಮುಂಚೆಯೇ ಮಳೆ ಅಥವಾ ಭಾವಿ [illegible] ಅಗೆಗಳಲ್ಲಿ ಬಿತ್ತವನ್ನು ಹಾಕಬಹುದು. ಪೈರಿಗೆ ಬೇಕಾಗುವ ಒಟ್ಟು ನೀರು ಈ ರೀತಿ ಕಡಮೆಯಾಗುವುದಾದಕಾರಣ ಮಳೆ ಕಡಮೆಯಾದ ವರ್ಷದಲ್ಲಿ ಕೆರೆಕೆಳಗಿನ ಫಸಲು ಕೈಗೆ ಬರುವ ಸಂಭವವು ಹೆಚ್ಚುತ್ತದೆ. ಅಗೆ ಹಾಕುವುದರಲ್ಲಿ ಕಾಲವು ಕೂಡಿಬರುತ್ತದೆಯಾಗಿ ರೈತನು ಹೆಚ್ಚು ಕಾಲ ಬೇಕಾಗುವ ಒಳ್ಳೇ ರಕಂ ಭತ್ತವನ್ನು ಬೆಳೆಯಲು ಸಾಧ್ಯವಾಗುತ್ತದೆ, ಅಥವಾ ವರ್ಷಕ್ಕೆ ಒಂದೇ ಪೈರನ್ನು ಬೆಳೆಯುವ ಕಡೆ ಎರಡು ಪೈರುಗಳನ್ನು ಬೆಳೆಯಬಹುದು. ಇಲ್ಲವಾದರೆ ಮೊದಲು ಮಳೆ ಬಂದನಂತರ ಕೆರೆ ಅಥವಾ ನಾಲಾ ತುಂಬುವುದಕ್ಕೆ ಮುಂಚೆ ಗದ್ದೆಯನ್ನು ಉತ್ತು ಯಾವುದಾದರೂ ಒಂದು ಹಸರು ಪೈರನ್ನು ಗೊಬ್ಬರಕ್ಕಾಗಿ ಬೆಳೆಯಬಹುದು. ಈ ಕಾಲದಲ್ಲಿ ಅಗೆಯನ್ನೂ ಸಿದ್ಧಮಾಡಿಕೊಳ್ಳಬಹುದು. ಗದ್ದೆಯಲ್ಲಿ ಸಸಿಗಳನ್ನು ನಾಟುವುದಕ್ಕೆ ಕೆಲವು ದಿನಗಳ ಮುಂಚೆ ಈ ಹಸರುಪೈರನ್ನು ಗದ್ದೆಯಲ್ಲಿ ಉತ್ತುಬಿಡುವುದರಿಂದ ಗದ್ದೆಗೆ ಸೊಪ್ಪಿನ ಗೊಬ್ಬರಕ್ಕಾಗಿ ತಗಲುವ ಖರ್ಚು ಕೂಡಿಬರುತ್ತದೆ.

ಮೈಸೂರು ಸರ್ಕಾರಿ ಹುಕುಮುಗಳು

ಲಾಕಪ್ ರೂಲಿನಲ್ಲಿ ಒಂದು ಬದಲಾವಣೆಯು.

ಸಂಸ್ಥಾನದ ಲಾಕಪ್ಪುಗಳಲ್ಲಿರುವಂಥ ಖೈದಿಗಳ ಪೈಕಿ ಯಾರಾದರೂ ಅಪೀಲ್ ಮಾಡಿಕೊಳ್ಳುವುದಕ್ಕೆ ಇಷ್ಟಪಟ್ಟು, ವಕಾಲತ್ ನಾಮೆಗೆ ರುಜು ಹಾಕಿಕೊಡಬೇಕಾದಲ್ಲಿ ಲಾಕಪ್ ಆಫೀಸರವರು ಖುದ್ದಾಗಿ ನಿಂತು ತಮ್ಮ ರೂಬರೂ ರುಜು ಹಾಕಿಸಬೇಕೆಂದೂ, ಆ ವಕಾಲತ್ ನಾಮೆಯ ಕೆಳಗೆ ತಾವೂ "ನನ್ನ ಸಮಕ್ಷಮ ರುಜುಮಾಡಿರುತ್ತಾನೆ" ಎಂಬದಾಗಿ ಬರೆದು ತಮ್ಮ ರುಜುಹಾಕಿಕೊಡಬೇಕೆಂದೂ ಲಾಕಪ್ ರೂಲನ್ನು ತಿದ್ದಬೇಕಾಗಿದೆ ಎಂದು ಇನ್ಸ್‌ಪೆಕ್ಟರ್ ಜನರಲ್‌ರವರು ಸೂಚಿಸಿದರು. ಅದರಂತೆಯೇ ಗವರ್ನಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ.

ನಗರ್ ತಾಲ್ಲೂಕಿನ ರೈತರಿಗೆ ರಿಯಾಯತಿ.

ಸರ್ಕಾರಿ ಫಾರೆಸ್ಟುಗಳಲ್ಲಿ [illegible] ಹೊನ್ನೆ ಗಿಡಗಳ ರೆಂಬೆಗಳನ್ನು ರೈತರಿಗೆ ವ್ಯವಸಾಯ ಮುಟ್ಟುಗಳನ್ನು ಮಾಡಿಕೊಳ್ಳುವುದಕ್ಕಾಗಿ ಸೊರಬ, ಸಾಗರ, ಶಿಕಾರಿಪುರ ತಾಲ್ಲೂಕುಗಳಲ್ಲಿ ಕ್ರಯವಿಲ್ಲದೆ ಮುಫತ್ತಾಗಿ ಕೊಡತಕ್ಕದ್ದೆಂದು ಸರ್ಕಾರದವರು ರಿಯಾಯತಿಯನ್ನು ತೋರಿಸಿರುತ್ತಾರೆ. ಈ ರಿಯಾಯತಿಯನ್ನು ಶಿವಮೊಗ್ಗ ಡಿಸ್ಟ್ರಿಕ್ಟಿನ ನಗರ್ ತಾಲ್ಲೂಕಿನ ರೈತರಿಗೂ ತೋರಿಸುವುದು ಅವಶ್ಯವೆಂದು ಡೆಪ್ಯುಟಿ ಕಮಿಷನರವರೂ ಫಾರೆಸ್ಟ್ ಕನ್ಸರ್ವೇಟರವರೂ ಶಿಫಾರಸು ಮಾಡಿದ್ದರಿಂದ ಗವರ್ನಮೆಂಟಿನವರು ಅದರಂತೆ ಒಪ್ಪಿ ಸ್ಯಾಂಕ್ಷನ್ ಕೊಟ್ಟಿರುತ್ತಾರೆ.

ಕೊಳೆ ರೋಗಕ್ಕೆ ಪರಿಹಾರ ಕಾರ್ಯಗಳು

ಫಸಲಿಗೆ ಹಿಡಿಯುವ ರೋಗಗಳನ್ನು ಪರಿಹಾರಮಾಡಿಕೊಡುವುದಕ್ಕಾಗಿ ಸರ್ಕಾರದವರು ಒಬ್ಬ ಅಧಿಕಾರಿಯನ್ನು ನೇಮಕಮಾಡಿ ಕೊಟ್ಟಿರುತ್ತಾರಷ್ಟೆ. ಈ ಅಧಿಕಾರಿಯು ಅಡಿಕೆ ತನೆಗಳಿಗೆ ಹಿಡಿಯುವಂಥಾ ಕೊಳೆ ಬಾಧ್ಯವನ್ನು ಪರೀಕ್ಷೆ ಮಾಡುವುದಕ್ಕೂ ಅದಕ್ಕೆ ತಕ್ಕ ಪರಿಹಾರಗಳನ್ನು ಕಂಡುಹಿಡಿಯುವುದಕ್ಕೂ ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಸರ್ಕಾರಿ ತೋಟಗಳನ್ನು ಗುತ್ತಿಗೆಗೆ ತೆಗೆದುಕೊಂಡು ಪರೀಕ್ಷೆಗಳನ್ನು ನಡೆಸುತ್ತಿದ್ದಾರೆ. ಅದರ ಖರ್ಚಿಗೆ ಹಣಬೇಕೆಂದು ಅವರು ಗವರ್ನಮೆಂಟಿನವರನ್ನು ಕೇಳಿಕೊಂಡರು. ಗವರ್ನಮೆಂಟಿನವರು ಅದಕ್ಕಾಗಿ ಗತಸಾಲಿಗೆ ೮೦೦ ರೂಪಾಯನ್ನೂ, ಚಾಲ್ತಿಸಾಲಿಗೆ ೧,೬೦೦ ರೂಪಾಯನ್ನೂ ಸ್ಯಾಂಕ್ಷನ್ ಮಾಡಿ ಹುಕುಂ ಕೊಟ್ಟಿರುವುದೇನೆಂದರೆ — ಸುಪಾರಿ ಹಾಲತ್ತನ್ನು ವಜಾ ಮಾಡಿ, ಕೊಳೆರೋಗ ನಿವಾರಣೆಯ ಪ್ರಯತ್ನಕ್ಕಾಗಿ ರೂಪಾಯಿಗೆ ಒಂದು ಆಣೆಯಂತೆ ಸೆಸ್ಸನ್ನು ವಸೂಲು ಮಾಡಬೇಕೆಂದು ಏರ್ಪಾಡು ಮಾಡಿದೆಯಷ್ಟೆ. ಈ ಸೆಸ್ಸಿನ ಫಂಡನ್ನು ಪ್ರತ್ಯೇಕವಾಗಿ ಇಟ್ಟಿರೋಣದರಿಂದ ಮೇಲ್ಕಂಡ ಖರ್ಚನ್ನೆಲ್ಲಾ ಈ ಫಂಡಿಗೇ ಹಾಕಬೇಕು. ಇದರಿಂದ ಕಡೆಯಲ್ಲಿ ಈ ರೋಗ ಪರಿಹಾರದ ಕಾರ್ಯಗಳಿಗೆ ಎಷ್ಟು ಹಣ ಖರ್ಚಾಯಿತೆಂಬುವುದನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಈ ಹಣವನ್ನು ಇನ್ಯಾವ ಇತರ ಬಾಬುಗಳ ಖರ್ಚಿಗೂ ಹಾಕಕೂಡದು ಎಂಬುವುದೇ.

ದುರ್ಭಿಕ್ಷನಿವಾರಣಾರ್ಥವಾದ ಏರ್ಪಾಡುಗಳು.

ರೈಲ್ ಛಾರ್ಜಿನ ರಿಯಾಯತಿ

ದುರ್ಭಿಕ್ಷನಿವಾರಣೆಯಾಗುವತನಕ ಬೆಜ್ವಾಡ, ಗುಂಟೂರು, ತೆನಾಲಿ ಸ್ಟೇಷನ್ನುಗಳಿಂದ ರೈಲಿನ ಮೇಲೆ ಅಕ್ಕಿಯನ್ನು ತರಿಸಿಕೊಂಡರೆ ಅದರ ಛಾರ್ಜ

ನಲ್ಲಿ ರಿಯಾಯತಿ ಪಡೆಯಬಹುದೆಂದು ಮದರಾಸ್ ಮತ್ತು ದಕ್ಷಿಣ ಮರಾಟಾ ರೈಲ್ವೆ ಕಂಪನಿಯ ಜನರಲ್ ಟ್ರಾಫಿಕ್ ಮ್ಯಾನೇಜರವರು ಹೇಳಿ ಒಪ್ಪಿಕೊಂಡಿದಾರೆ ಈಗ ರೆವಿನ್ಯೂ ಕಮೀಷನರವರು ಆ ರೈಲ್ವೆ ಅಧಿಕಾರಿಗೆ ಕಾಗದಗಳನ್ನು ಬರೆದು, ಆ ರೈಲ್ವೆ ಲೈನಿನ ಎಲ್ಲಾ ಸ್ಟೇಷನ್ನುಗಳಿಂದ ಚರಿಸತಕ್ಕ ಅಕ್ಕಿಯ ರೈಲ್ ಛಾರ್ಜನ್ನು ಕಡಮೆ ಮಾಡುವ ವಿಷಯದಲ್ಲಿ ಅವರ ಸಮ್ಮತಿಯನ್ನು ಪಡೆದುಕೊಂಡರು ಗವರ್ನಮೆಂಟಿನವರು ಈ ಕಾಗದ ಪತ್ರಗಳನ್ನು ಪರಾಂಬರಿಸಿ ತೃಪ್ತಿಪಟ್ಟು ರಿಕಾರ್ಡು ಮಾಡಿಕೊಂಡಿರುವರೆ

ಒಂದರ ಹಣವನ್ನು ಇನ್ನೊಂದಕ್ಕೆ ವಿನಿಯೋಗಿಸುವುದು

ದುರ್ಭಿಕ್ಷ ಪ್ರಾಪ್ತವಾದದ್ದರಿಂದ ಗೋಶಾಲೆಗಳಿಗೆ ಮೇವಿನ ಹುಲ್ಲು ಕಡ್ಡಿಯನ್ನು ತರಿಸಿ ಒದಗಿಸಿ ಕೊಡುವ ಸಲುವಾಗಿ ಸರ್ಕಾರದವರು ೧೦,೦೦೦ ರೂಪಾಯನ್ನು ಸ್ಯಾಂಕ್ಷನ್ ಮಾಡಿದರು ಈ ಹಣದ ಪೈಕಿ ಸ್ವಲ್ಪ ಭಾಗ ಖರ್ಚಾಗಿದೆ ಎಂದೂ, ಅದರ ಪೈಕಿ ಉಳಿದಿರುವ ಹಣದಲ್ಲಿ ದುರ್ಭಿಕ್ಷ ಪ್ರಾಪ್ತವಾಗಿರುವ ಕಡೆಗಳಲ್ಲಿ ನಿರ್ಗತಿಕರಾದಂಥಾ ಒಕ್ಕಲಿಗರ ಜೀವನವನ್ನು ನಡಿಸುವುದಕ್ಕೆ ೫,೦೦೦ ರೂಪಾಯಿಗಳನ್ನು ವಿನಿಯೋಗಿಸಬಹುದೇ ಎಂದೂ ರೆವಿನ್ಯೂ ಕಮೀಷನರವರು ಗವರ್ನಮೆಂಟಿನವರನ್ನು ಕೇಳಿದರು ಇದರ ಮೇಲೆ ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ —ಬಡವರಿಗೆ ಧರ್ಮಾರ್ಥವಾಗಿ ಜೀವನ ನಡಿಸುವುದಕ್ಕೆ ಸರ್ಕಾರದವರು ರೆವಿನ್ಯೂ ಕಮೀಷನರವರ ವಶಕ್ಕೆ ೩೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ ಈ ಹಣದಲ್ಲಿ ಇನ್ನೂ ೯,೮೭೪ ರೂಪಾಯಿ ಉಳಿದಿದೆ ಎಂದು ಸರ್ಕಾರಿ ಲೆಖ್ಖದ ಪ್ರಕಾರ ಗೊತ್ತಾಗುತ್ತದೆ ಆದದ್ದರಿಂದ ಈ ಬಾಬಿಗೆ ಸರ್ಕಾರದವರು ಮತ್ತೆ ೫,೦೦೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಬೇಕಾದ ಅಗತ್ಯವೇನೂ ಕಂಡು ಬರುವುದಿಲ್ಲ ಇದಲ್ಲದೆ ಈ ಬಾಬಿಗೆ ಇದುವರೆಗೆ ಆಗಿರುವಷ್ಟು ಖರ್ಚು ಇನ್ನು ಮುಂದೆ ಆಗಬೇಕೆಂದು ಕಂಡು ಬರುವುದಿಲ್ಲ ಆದಕಾರಣ ಮೇವಿನ ಹುಲ್ಲಿಗಾಗಿ ಗವರ್ನಮೆಂಟಿನಿಂದ ಸ್ಯಾಂಕ್ಷನ್ ಆಗಿರುವ ೧೦,೦೦೦ ರೂಪಾಯಿಯಲ್ಲಿ ರೆವಿನ್ಯೂ ಕಮೀಷನರವರು ೫,೦೦೦ ರೂಪಾಯನ್ನು ವಾಪಸ್ಸು ಕೊಟ್ಟುಬಿಡಬೇಕು ಬಾಕಿ ಉಳಿದ ಹಣದಲ್ಲಿ ಸಾಹುಕಾರಿ ಜನರು ಹುಲ್ಲನ್ನು ರೈಲಿನ ಮೇಲೆ ಹುಲ್ಲು ಕೊಪ್ಪ ತರಿಸತಕ್ಕ ರೈಲ್ ಛಾರ್ಜಿನಲ್ಲಿ ಒಂದು ಭಾಗವು ಗವರ್ನಮೆಂಟಿನಿಂದ ಸಹಾಯ ಆಗುವ ಸಂಗತಿಯಿಂದ ಅದರ ಖರ್ಚಿಗಾಗಿ ಉಳಿಸತಕ್ಕದ್ದು ಮತ್ತು ಧರ್ಮಾರ್ಥವಾಗಿ ಬಡವರಿಗೆ ಜೀವನ ನಡಿಸುವ ಬಾಬನ್ನು ರೆವಿನ್ಯೂ ಕಮೀಷನರವರು ಸಾಧ್ಯವಾಗುವಷ್ಟು ಬೇಗನೆ ನಿಲ್ಲಿಸಿಬಿಡಬೇಕಾಗಿದೆ ಎಂಬುವುದೇ

ಹೊಗೆಸೊಪ್ಪು (೨)

[ಜೂನ್ 17 ನೇ ತಾ ಪತ್ರಿಕೆಯಲ್ಲಿ ಮೊದಲನೇ ಭಾಗ ಪ್ರಕಟವಾಗಿದೆ]

ಹೊಗೆಸೊಪ್ಪು ಹಾಕಬೇಕಾದ ಜಮೀನನ್ನು ಆಳವಾಗಿ ಉತ್ತು ಒಣಗಿ ಹೆಂಟೆ ವಗೈರೆ ಇಲ್ಲದೆ ನಯವಾಗಿ ಭೂಮಿಯನ್ನು ಹುಡಿಮಾಡಿ ಭೂಮಿಗೆ ಚನ್ನಾಗಿ ಕಳಿತ ಗೊಬ್ಬರವನ್ನೂ ಬೂದಿಯನ್ನೂ ಬೆರಸಿ ಹಾಕಿ ಹಲುಬೆಯಿಂದ ಹೊಡೆದು ಹಳ್ಳ ತಿಟ್ಟುಗಳಿಲ್ಲದೆ ಸಮನಾಗಿ ಮಾಡಿ ಮೂರು ಅಂಗುಲ ಎತ್ತರವಾಗಿರುವ (ಅಂದರೆ, ೩-೪ ಎಲೆಗಳು ಹಾಕಿರುವ) ಸಸಿಗಳನ್ನು ನೆಡಬೇಕು ಈ ಸಸಿಗಳು ಈ ಸ್ಥಿತಿಗೆ ಬರಬೇಕಾದರೆ ಆರು ವಾರಗಳು ಬೇಕಾಗುತ್ತವೆ ನೀರು ಹಾಯಿಸುವ ಹೊಗೆಸೊಪ್ಪಿನ ಸಸಿಗಳನ್ನು ಭಾದ್ರಪದ ಮಾಸದ ಲಾಗಾಯ್ತು ಆಶ್ವೀಜ ಮಾಸದವರೆಗೂ ನೆಡುವುದಕ್ಕೆ ಸಕಾಲವಾಗಿರುತ್ತದೆ ಆಷಾಢ ಶ್ರಾವಣ ಮಾಸಗಳಲ್ಲಿ ಹೊಗೆಸೊಪ್ಪು ನೆಡಲಿಕ್ಕೆ ಜಮೀನನ್ನು ಸಿದ್ಧಪಡಿಸಬೇಕು ಸಸಿಗಳನ್ನು ಒಂದಕ್ಕೊಂದು ಮೂರು ಅಡಿ ಅಂದರೆ ಒಂದು ಗಜದ ದೂರದಲ್ಲಿ ನೆಡುವುದು ಅತ್ಯಾವಶ್ಯಕ ಸಣ್ಣ ಜಾತಿಯ ಹೊಗೆಸೊಪ್ಪನ್ನು ಎರಡು ಅಡಿ ದೂರದಲ್ಲಿ ನೆಡಬಹುದು ನೆಟ್ಟ ಸಸಿಗಳಿಗೆ ನೀರು ಬಿಟ್ಟು ಬೇರುಗಳಿಗೆ ಬರುವವರೆವಿಗೂ ಆಗಾಗ್ಗೆ ದಿನಬಿಟ್ಟು ದಿನ ನೀರು ಹಾಕುತ್ತಿರಬೇಕು ತರುವಾಯ ಕಾಲಾನುಸಾರವಾಗಿ ೧೦ರ ಲಾಗಾಯಿತು ೨೦ ದಿನಗಳಿಗೆ ಒಂದು ಸಲ ನೀರು ಹಾಯಿಸಬಹುದು ಮತ್ತು ಸಸಿಗಳು ಸ್ವಲ್ಪ ವೃದ್ಧಿಯಾದ ಮೇಲೆ ಮಣ್ಣನ್ನು ಬುಡಗಳಿಗೆ ಏರು ಹಾಕುವುದು ಇದಕ್ಕಾಗಿ ಚಿಕ್ಕ ಕೋಡಿನ ನೇಗಿಲಿನಿಂದ ಉತ್ತರೆ ಮಣ್ಣು ಬುಡಗಳಿಗೆ ಏರು ಹಾಕಿದಂತೆ ಆಗುವುದು ಅವಶ್ಯಕವಿದ್ದರೆ ಗುದ್ದಲಿಯಿಂದಲೂ ಏರು ಹಾಕಬಹುದು ಹೂವು ಬಿಡುವವರೆವಿಗೂ ಈ ರೀತಿ ಎಲೆಗಳಿಗೆ ತೊಂದರೆ ಇಲ್ಲದೆ ನೋಡುವುದು ಹೊಗೆಸೊಪ್ಪಿನ ಹೊಲದಲ್ಲಿ ಒಂದು ಕಳೆಯೂ ಕೂಡ ಇಲ್ಲದಂತೆ ಚೊಕ್ಕಟವಾಗಿ ಆಗಾಗ್ಗೆ ಕಳೆಯನ್ನು ಕಿತ್ತುಹಾಕಬೇಕು

ಹೊಗೆಸೊಪ್ಪಿನ ಗಿಡಗಳು ಹೂವು ಬಿಡುವುದಕ್ಕೆ ಮುಂಚಿತವಾಗಿ ಕೆಳಗಿನ ಎಲೆಗಳನ್ನು ಬುಡದಲ್ಲಿ ಹುಟ್ಟಿರುವ ಎಲೆಗಳನ್ನೂ ಜಿಗುಟಿಹಾಕಬೇಕು ಪ್ರತಿ ಒಂದು ಗಿಡದಲ್ಲೂ ೮ ೧೦ ಎಲೆಗಳಿಗಿಂತ ಹೆಚ್ಚಾಗಿ ಬಿಡಕೂಡದು ಈ ರೀತಿ ಕುಡಿಗಳು ಜಿಗುಟಿದ ಮೇಲೆ ಉಳಿದ ಎಲೆಗಳ ಬುಡದಲ್ಲಿ ಪುನಹಾ ಚಿಗುರುತ್ತವೆ ಆ ಚಿಗುರನ್ನೂ ಬಿಡದೆ ಜಿಗುಟಿಹಾಕಬೇಕು ಬತ್ತನೆಗೆ ಬಿಡುವ ಗಿಡಗಳನ್ನು ಈ ರೀತಿ ಜಿಗುಟಿಹಾಕಿದರು ಹೊಗೆಸೊಪ್ಪಿನ ಗಿಡಗಳಿಗೆ ಒಂದೇ ಸಲ ಗೊಬ್ಬರವನ್ನು ಹಾಕುವುದಕ್ಕಿಂತ ಹೂವು ಬಿಡುವುದಕ್ಕೆ ಮುಂಚಿತವಾಗಿ ಆಗಾಗ್ಗೆ ಬುಡದಲ್ಲಿ ಸ್ವಲ್ಪ ಸ್ವಲ್ಪ ಗೊಬ್ಬರಹಾಕಿ ಮಣ್ಣು ಮುಚ್ಚಿ ನೀರು ಹಾಕುವುದು ಉತ್ತಮ ನಮ್ಮ ದೇಶದಲ್ಲಿ ಕುರಿಯ ಗೊಬ್ಬರವು ಹೊಗೆಸೊಪ್ಪಿನ ಗಿಡಗಳಿಗೆ ಬಹಳ ಒಳ್ಳೆದೆಂದು ಹೇಳುತ್ತಾರೆ, ಮತ್ತು ಬೂದಿ, ಸೋರುಪ್ಪು, ಇವುಗಳೆಲ್ಲಾ ಅತ್ಯಾವಶ್ಯಕವಾದ ಗೊಬ್ಬರಗಳೆಂದು ತಿಳಿಯಬಂದು ಇದೆ

ಎಲೆಗಳು ದಪ್ಪವಾಗಿಯೂ, ಮುಟ್ಟಿದರೆ ಅಂಟಾಗಿಯೂ ಮತ್ತು ಹೊಂಬಣ್ಣವಾಗಿಯೂ ಎಲೆಗಳ ಮೇಲೆ ಅಲ್ಲಲ್ಲಿ ಚುಕ್ಕೆಗಳು ಕಾಣಿಸಿದಾಗ ಹೊಗೆಸೊಪ್ಪು ಕುಯ್ಯುವುದಕ್ಕೆ ಅಥವಾ ಎಲೆ ಬಿಡಿಸುವುದಕ್ಕೆ ಸಕಾಲವೆಂದು ತಿಳಿಯಬೇಕು ಈ ಫಸಲಿಗೆ ಕಾಡಿ ಬಲಿಯುವುದಕ್ಕೆ ಅವಕಾಶ ಕೊಡಕೂಡದು ಎಲ್ಲಾ ಗಿಡಗಳನ್ನು ಒಂದೇ ಸಲ ಕುಯ್ಯುವುದಕ್ಕಿಂತ ತಯಾರಾದ ಗಿಡಗಳನ್ನು ಮಾತ್ರ ಆರಿಸಿ ಕುಯ್ಯುವುದು ಒಳ್ಳೆದೆಂದು ವ್ಯವಸಾಯ ಬಲ್ಲವರು ಹೇಳುತ್ತಾರೆ ಈ ಗಿಡಗಳನ್ನು ಬೆಳಗಿನ ಹೊತ್ತಿನಲ್ಲಿ ಮಂಜು ಆರಿದ ಮೇಲೆ ಕುಯ್ಯಬೇಕು ಅವುಗಳನ್ನು ಕುಯ್ದು ತರುವಾಯ ೩-೪ ಘಂಟೆಗಳ ಹೊತ್ತು ಬಿಸಿಲಿನಲ್ಲಿ ಬಿಟ್ಟದ್ದರೆ ಚನ್ನಾಗಿ ಬಾಡಿ ಮೆತ್ತಾಗುತ್ತೆ ಅಗ್ಗಿ ಸೊಪ್ಪು ತಯಾರಾಗುವ ಸ್ಥಳಕ್ಕೆ ತೆಗೆದುಕೊಂಡು ಹೋಗಬಹುದು ಈ ರೀತಿಯಾಗಿ ಬಾಡಿಸುವುದರಿಂದ ಎಲೆಗಳು ಹೊಲದಿಂದ ಬೇರೇ ಜಾಗಕ್ಕೆ ಸಾಗಿಸುವುದರಲ್ಲಿ ಮುರಿಯುವುದಿಲ್ಲ ಗಿಡಗಳು ಕುಯ್ಯುವುದಕ್ಕೆ ಬಂದಾಗ ಮಳೆ ಬಂದಿದ್ದರೆ ಎಲೆಗಳ ಮೇಲಿನ ಅಂಟೆಲ್ಲಾ ಹೋಗುವುದರಿಂದ ತಿರಗಿ ಅಂಟು ಸೇರುವವರೆವಿಗೂ (ಅಂದರೆ, ೩ ೪ ದಿನಗಳು) ಸಾವಕಾಶವಾಡಿ ಕುಯ್ಯಬೇಕು ಈ ಅಂಟಿನಿಂದ ಹೊಗೆಸೊಪ್ಪು ಚೆನ್ನಾಗಿ ಹೆಚ್ಚಿ ಹೊಗೆಸೊಪ್ಪಿನ ಪಸಲು ರೇಟ ಆದ ಮೇಲೆ ಅದನ್ನು ನೆರಳಿನಲ್ಲಿ ಅನೇಕ ಬಗೆಗಳಲ್ಲಿ ತಯಾರುಮಾಡುತ್ತಾರೆ ಒಂದೊಂದು ದೇಶದಲ್ಲಿ, ಬೇರೆ ಬೇರೆ ಡಿಸ್ಟ್ರಿಕ್ಟಿನಲ್ಲಿ, ಬೇರೆ ಬೇರೆ ತಾಲ್ಲೂಕಿನಲ್ಲಿ, ಬೇರೆ ಬೇರೆ ಗ್ರಾಮಗಳಲ್ಲಿ ತಯಾರುಮಾಡುವ ರೀತಿಯಲ್ಲಿ ಬದಲಾವಣೆಗಳು ಇರುವುದರಿಂದ ತಯಾರುಮಾಡುವ ಅಂಶವು ಹೀಗೇ ಎಂದು ಸಾವು ಇಲ್ಲಿ ಬರೆಯುವುದು ಪ್ರಕೃತವಲ್ಲ

ಅಲ್ಲದೆ ಹೊಗೆಸೊಪ್ಪು ೨-೪ ವಿಧಗಳಲ್ಲಿ (ಅಂದರೆ ನಶ್ಯಕ್ಕಾಗಿ, ಗುಡುಗುಡಿಗಾಗಿ, ಚುಟ್ಟಗಳಿಗಾಗಿ ಮತ್ತು ಎಲೆ ಅಡಿಕೆ ಜೊತೆಯಲ್ಲಿ ಅಗಿಯುವುದಕ್ಕಾಗಿ ಮೊದಲಾದ ಕೆಲಸಗಳಿಗೆ) ಉಪಯೋಗಿಸುವುದರಿಂದ ಆಯಾಯ ಪ್ರಯೋಜನವನ್ನು ಅನುಸರಿಸಿ ಹೊಗೆಸೊಪ್ಪನ್ನು ತಯಾರುಮಾಡಬೇಕಾಗಿದೆ

ಇದಲ್ಲದೆ ಮೈಸೂರು ಸೀಮೆಯ ಚಿಟ್ಟದುರ್ಗ ಪ್ರಾಂತ್ಯದಲ್ಲಿ ಬಹಳ ಶ್ರೇಷ್ಠವಾದ ನಶ್ಯದ ಹೊಗೆಸೊಪ್ಪನ್ನು ಬೆಳೆಯುತ್ತಾರೆ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ತುಮಕೂರು ಡಿಸ್ಟ್ರಿಕ್ಟಿನ ಅನೇಕ ಪ್ರಾಂತ್ಯಗಳಲ್ಲೂ, ಇತರ ಕೆಲವು ತಾಲ್ಲೂಕುಗಳಲ್ಲೂ ಒಂದು ಜಾತಿಯ ಹೊಗೆಸೊಪ್ಪನ್ನು ಮುಖ್ಯ ಫಸಲಾಗಿ ಬೆಳೆಯುತ್ತಾರೆ ಆದರೆ ಹೊಗೆಸೊಪ್ಪನ್ನು ಮುಖ್ಯ ಫಸಲಾಗಿ ಬೆಳೆದರೂ, ತರೀ ಫಸಲಾಗಿ ಬೆಳೆದರೂ ಭೂಮಿ, ಉಳುಮೆ, ಗೊಬ್ಬರ, ಸಸಿ ನಾಟುವುದು, ಗಿಡಗಳು ದೊಡ್ಡದಾದ ಮೇಲೆ ಕುಡಿ ಜಿಗಟುವುದು, ಮತ್ತು ಹೊಗೆಸೊಪ್ಪನ್ನು ತಯಾರುಮಾಡುವುದು, ಇತ್ಯಾದಿಗಳೆಲ್ಲಾ ಸಮಾನವಾದ ವಿಷಯಗಳೆಂದು ತಿಳಿಯಬೇಕು ಹೊಗೆಸೊಪ್ಪಿನ ತಯಾರಿಯು ಅನೇಕ ರೈತರುಗಳಿಗೆ ತಿಳಿಯದೆ ಇರುವುದರಿಂದ ಸೊಪ್ಪು ಬೆಳೆಸಿದ ಮೇಲೆ ಹೊಗೆಸೊಪ್ಪನ್ನು ತಯಾರುಮಾಡುವುದನ್ನು ತಿಳಿದ ವರ್ತಕರು ಒಟ್ಟು ಹೊಲದ ಫಸಲನ್ನೇ ಒಂದಿಗೆ ತೆಗೆದುಕೊಳ್ಳುತ್ತಾರೆ

ನನಗೆ ತಿಳಿದ ಮಟ್ಟಿಗೂ ಸರ್ವಸಾಮಾನ್ಯವಾಗಿ ಚನ್ನಾಗಿ ಫಸಲಾಗಿರುವ ಹೊಲವನ್ನು ಎಕರೆ ಒಂದಕ್ಕೆ ೧೧೦ ರೂಪಾಯಿಗಳ ಲಾಗಾಯಿತು ೭೫೦ ರೂಪಾಯಿಗಳ ವರಿಗೂ ಒಂದಿಗೆ ಮಾರುವುದನ್ನು ತಿಳಿದಿದ್ದೇನೆ

ಹೊಗೆಸೊಪ್ಪು ಫಸಲು ಮಾಡುವ ಜಮೀನಿನ ಸತ್ವವು ಒಂದು ಫಸಲಾದ ಕೂಡಲೆ ಬಹಳವಾಗಿ ಕಡಮೆ ಆಗುತ್ತೆ ಆದದ್ದರಿಂದ ಅದೇ ಜಮೀನಿನಲ್ಲಿ ಎರಡನೇ ಸಲ ಹೊಗೆಸೊಪ್ಪನ್ನು ಹಾಕಬೇಕಾದರೆ ವಿಶೇಷವಾಗಿ ಗೊಬ್ಬರ ಮತ್ತು ಉಳುಮೆ ಆಗಬೇಕಾಗುತ್ತೆ ಒಂದು ಜಮೀನಿನಲ್ಲಿ ಎಡೆಬಿಡದೆ ೨-೩ ಫಸಲು ಮಾಡಿದರೆ ತರುವಾಯ ಹೊಗೆಸೊಪ್ಪಿನ ಫಸಲಿಗೆ ರೋಗಗಳು ತಗಲುತ್ತವೆ. ಈ ಫಸಲಿಗೆ ಅನೇಕ ರೋಗಗಳುಂಟು, ಮತ್ತು ಹಲವು ಬಗೆ ಹುಳುಗಳು ಗಿಡಗಳ ಎಲೆಯನ್ನು ರಾತ್ರಿ ಹೊತ್ತಿನಲ್ಲಿ ತಿಂದು ಹಗಲು ಹೊತ್ತಿನಲ್ಲಿ ಭೂಮಿಯಲ್ಲಿ ಸೇರಿಕೊಳ್ಳುತ್ತವೆ ಇದು ಬಹಳ ದೊಡ್ಡ ವಿಷಯವಾದದ್ದರಿಂದ ಈ ರೋಗಗಳೂ ಮತ್ತು ಇವಕ್ಕೆ ತಕ್ಕ ಚಿಕಿತ್ಸೆಗಳೂ ಪ್ರತ್ಯೇಕವಾಗಿ ಬರೆಯಬೇಕಾಗಿದೆ ಈ ವಿಷಯವೂ ಮತ್ತು ಹೊಗೆಸೊಪ್ಪನ್ನು ತಯಾರುಮಾಡುವ ವಿಷಯವೂ ಬೇರೆ ಓದಿ ಅನುಭವದಿಂದ ತಿಳಿದುಕೊಳ್ಳತಕ್ಕದ್ದು ಅತ್ಯಾವಶ್ಯಕ

ವಿ ರಾಘವಾಚಾರ್,
ಅಡ್ವೊಕೇಟ್, ಮೈಸೂರು

ಮೈಸೂರು ಗೆಜೆಟ್ ಸಂಗ್ರಹ

ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೆ ಸೇರಿದ ಕುಕ್ಕೂರು ಮತ್ತು ಕರೋಹಟ್ಟಿಗಳಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು

ಮುಂದೆ ಹೇಳುವ ಸ್ಥಳಗಳಲ್ಲಿ ಪ್ಲೇಗ್ ಉಪದ್ರವವು ನಿವಾರಣೆಯಾಗಿರುತ್ತದೆ —ಗುಂಡ್ಲುಪೇಟೆ ತಾಲ್ಲೂಕು ಶಿವಪುರಕಟ್ಟೆ ಹುಂಡಿ ಮತ್ತು ಕುಕ್ಕನೂರು ಯಡತೊರೆ ತಾಲ್ಲೂಕು ಮಾರಗೊಂಡನ ಹಳ್ಳಿ, ಲಾಲನಮೇಡನ ಹಳ್ಳಿ ಮತ್ತು ಕನಗನ ಹಳ್ಳಿ, ಕೃಷ್ಣರಾಜಪೇಟೆ ತಾಲ್ಲೂಕು ಬಂಕಿನ ಕೆರೆ, ತಿರುಮಕೂಡ್ಲು ನರಸೀಪುರ ತಾಲ್ಲೂಕು ಕುಂಬೇರು, ಹುಣಸೂರು ತಾಲ್ಲೂಕು ಮಲ್ಲರಾಜಪಟ್ಟ ಮತ್ತು ಹವನೆ ಯಳಂದೂರು ತಾಲ್ಲೂಕು ಹೊನ್ನೂರು, ಅಳಕೆರೆ ಅಗ್ರಹಾರ, ಮಾರಂಬಳ್ಳಿ ಮತ್ತು ಬೀಚನ ಹಳ್ಳಿ, ನಂಜನಗೂಡು ತಾಲ್ಲೂಕು ತಗಡೂರು

ಮೆ॥ ಬಸಕಟ್ಟೆರನ್ನೂ ಮೆ ವೆಂಕಟಸುಬ್ಬಯ್ಯನವರನ್ನೂ ಶಿಡ್ಲಘಟ್ಟ ತಾಲ್ಲೂಕು ಜಂಗಮಕೋಟೆಯ ಯೂನಿಯನ್ ಮೆಂಬರುಗಳಾಗಿ ನೇಮಕ ಮಾಡಿದೆ

ಮೆ॥ ಸಬ್ಬರಾಯರನ್ನು ಚಳ್ಳಕೆರೆ ಟೌನ್ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ನೇಮಿಸಿದೆ

ಶೃಂಗೇರಿ ಜಹಗೀರಿಯ ಮೆ॥ ಸಿ ಕೃಷ್ಣಶಾಸ್ತ್ರಿಗಳನ್ನೂ ಡೆಪ್ಯುಟಿ ಅಮಲ್ದಾರ್ ಮೆ ಶ್ರೀಕಂಠಯ್ಯನವರನ್ನೂ ಕಿಗ್ಗದಲ್ಲಿರುವ ಶ್ರೀಋಷ್ಯಶೃಂಗೇಶ್ವರ ಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳಾಗಿ ನೇಮಕ ಮಾಡಿದೆ

ಮುಳಬಾಗಲ್ ತಾಲ್ಲೂಕಿಗೆ ಸೇರಿದ ಹಾಯಲೂರು, ಅಗರ, ನಂಗ್ಲಿ ಎಂಬೀ ಯೂನಿಯನ್ ಪಂಚಾಯಿತಿಗಳಿಗೆ ಮುಂದೆ ಹೇಳುವವರನ್ನು ಮೆಂಬರುಗಳಾಗಿ ನೇಮಿಸಿದೆ —ಹಾಯಲೂರ್ ಯೂನಿಯನ್ಗೆ—ಮುಳಬಾಗಲ್ ಅಮಲ್ದಾರರು, ಶೇಕ್ದಾರರು, ಸ್ಕೂಲ್ ಮಾಸ್ಟರು, ಮೆ॥ ಗಣಾದ ಚಲುವಯ್ಯನವರು, ರಾಮರಾಯರು, ದೊಡ್ಡ ಬಳ್ಳಾಪುರದ ಸಾಹುಕಾರು, ಟದಂ ವೆಂಕಟ್ರಾಯಪ್ಪನವರು, ಅಗರದ ಯೂನಿಯನ್ಗೆ—ಮುಳಬಾಗಲ್ ಅಮಲ್ದಾರರು, ಶೇಕ್ದಾರರು, ಮೆ ಗಣಾದ ಬಾಪುರಾಯರು, ಚಿದಂಬರಾಯರು, ಚೇಗು ನಂಜುಂಡ್ಯಯನವರು, ಕುದರೆ ರಾಮಣ್ಣನವರು, ಉಸ್ತ್ಮಾನ್ ಖಾನರು ನಂಗ್ಲಿ ಯೂನಿಯನ್ಗೆ—ಮುಳಬಾಗಲ್ ಅಮಲ್ದಾರು, ಶೇಕ್ದಾರರು, ಮೆ॥ ಗಣಾದ ವಿಟ್ಠಲರಾಯರು, ವೆಂಕೋಬರಾಯರು, ಸೇಕ್ ಅಲ್ಲಿಸಾಬರು, ದೇವನಂ ಲಕ್ಷ್ಮಯ್ಯನವರು, ಎ ಮುನಿಸ್ವಾಮೈಯನವರು

ಆ ಕಮೀಷನರ್ ಮೆ॥ ಬಿ ವೆಂಕೋಬರಾಯರಿಗೆ ಕೊಟ್ಟಿದ್ದ ಹದಿನೈದು ದಿವಸಗಳ ಪ್ರಿವಿಲೆಜ್ ರಜವನ್ನು ರದ್ದು ಮಾಡಿದೆ

ಡೆಪ್ಯುಟಿ ಕಮೀಷನರ್ ಮೆ॥ ಸಿ ಶ್ರೀಕಂಠೇಶ್ವರ ಅಯ್ಯರವರು ರಜದಿಂದ ವಾಪಸು ಬಂದು ಜೂನ್ ತಾ ೨೮ರಲ್ಲಿ ಕೋಲಾರ್ ಡಿಸ್ಟ್ರಿಕ್ಟಿನ ಛಾರ್ಜನ್ನು ವಹಿಸಿಕೊಂಡಿರುತ್ತಾರೆ

ತಿಪ್ಟೂರು ತಾಲ್ಲೂಕು ಅಮಲ್ದಾರ್ ಮೆ॥ ಸಿ ಮಾಚಯ್ಯನವರು ತಮ್ಮ ಕೆಲಸಗಳಿಂದಿಗೆ ಮಾರ್ಚಿ ತಾ ೩ರಿಂದ ಏಪ್ರಿಲ್ ತಾ ೪ರ ವರೆಗೆ (ಉಭಯ ದಿನಗಳ ಸಹಿತ), ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಛಾರ್ಜನ್ನೂ ವಹಿಸಿದ್ದರು

ಸೀನಿಯರ್ ಅ॥ ಕಮಿಷನರ್ ಮೆ॥ ಎ ಆರ್ ತ್ಯಾಗರಾಜ ಅಯ್ಯರವರನ್ನು ಜುಲೈ ತಾ ೧ರಿಂದ ಬೆಂಗಳೂರು ಸಬ್ ಡಿವಿಜನ್ ಛಾರ್ಜಿಗೆ ನೇಮಕ ಮಾಡಿದೆ

ಸಬ್ ಅ॥ ಸರ್ಜನ್ ಮೆ॥ ಸಿ ಕುಪ್ಪುಸ್ವಾಮಿ ಪಿಳ್ಳೆಯವರನ್ನು ಮೆಟ್ರಿಕ್ ತಾ ೯ರ ಲಾಗಾಯಿತು ೩ರಿಂದ ೭ನೇ ಕ್ಲಾಸಿಗೆ ಬಡ್ತಿಮಾಡಲಾಗಿದೆ

ಶ್ರೀಮನ್ಮಹಾರಾಜರವರ ಮೆ॥ ಮಿರ್ಜಾ ಮಹಮುದ್ ಮಹದಿ ಯವರನ್ನು ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ ೪ನೇ ಗ್ರೇಡ್ ಜಮೆದಾರಿಗೆ ನೇಮಕ ಮಾಡಿರುತ್ತಾರೆ

ಮೈಸೂರು ಗವರ್ನಮೆಂಟಿನ ಲೆಜಿಸ್ಲೇಟಿವ್ (ನ್ಯಾಯಾಧಿಕಾರಿಕ) ಕೌನ್ಸಿಲ್ಲಿಗೆ ಮುಂದೆ ಹೇಳುವವರನ್ನು ಅಡಿಷನಲ್ (ಅಧಿಕ) ಮೆಂಬರುಗಳಾಗಿ ನೇಮಕ ಮಾಡಿರುತ್ತಾರೆ —ರೆವಿನ್ಯೂ ಕಮೀಷನರ್ ರಾಜಕಾರ್ಯಪ್ರವೀಣ ಮೆ॥ ಎ ರಂಗಸ್ವಾಮಿ ಅಯ್ಯಂಗಾರ್, ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ್ ಮೆ॥ ಡಿ ಶಾಮರಾಯರು, ಪೊಲೀಸ್ ಇನ್ಸ್ಪೆಕ್ಟರ್ ಜನರಲ್ ಮೆ॥ ಡಿ ದೇವರಾಜ ಅರಸಿನವರು, ಗವರ್ನಮೆಂಟ್ ಅಡ್ವೊಕೇಟ್ ಮೆ॥ ಎಸ್ ನಾರಾಯಣರಾಯರು, ರಾಜಮಂತ್ರ ಪ್ರವೀಣ ಮೆ॥ ಸಿ ಶ್ರೀನಿವಾಸಯ್ಯಂಗಾರ್ರು, ಮೆ॥ ಎಂ ಸಿ ರಂಗೈಯಂಗಾರ್ರು, ಬ್ಯಾರಿಸ್ಟರ್ ಮೆ॥ ಬಿ ನಾಗಪ್ಪನವರು (ಇವರೆಲ್ಲಾ ಜೂನ್ ತಾ ೨೧ರ ಲಾಗಾಯಿತು), ಫಾರೆಸ್ಟ್ ಕನ್ಸರ್ವೇಟರ್ ಮೆ॥ ಎಂ ಮುತ್ತಣ್ಣನವರು, ಪೆನ್ಷನ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್ ಮೆ॥ ಬಿ ತಿರುಮಲಾಚಾರ್ರು, ಪೆನ್ಷನ್ ಸೀನಿಯರ್ ಅ॥ ಕಮಿಷನರ್ ಮೆ॥ ಸಯ್ಯದ್ ಅಬಿಸರ್ ಹುಸೇನರವರು (ಇವರೆಲ್ಲಾ ಜುಲೈ ತಾ ೯ರ ಲಾಗಾಯಿತು)

ಅ ಜಿಲ ಜಜ್ಸ್ ಮೆ ಪಿ ಸಂಪತ್ತೈಯಂಗಾರ್ರಿಗೆ ಜೂನ್ ತಾ ೨೨ರಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೆ॥ ಡಬ್ಲ್ಯು ಮೆಕ್‌ಚೆಸ್ ಯವರು ಜೂನ್ ತಾ ೩೦ರಿಂದ ಪೆನ್ಷನ್ ಪಡೆದು ಕೆಲಸ ಬಿಟ್ಟದ್ದರಿಂದ ಡೆಪ್ಯುಟಿ ಚೀಫ್ ಇಂಜನಿಯರ್ ಮತ್ತು ಅಂಡರ್ ಸೆಕ್ರೆಟರಿ ಕ್ಯಾಪ್ಟನ್ ಎಫ್ ಬಿ ಇ ಡಾಸ್ ಯವರನ್ನು ಸಂಸ್ಥಾನದ ಚೀಫ್ ಇಂಜನಿಯರಾಗಿಯೂ ಪಿಡಬ್ಲ್ಯುಡಿ ಮತ್ತು ರೈಲ್ವೆ ಇಲಾಖೆಗಳಲ್ಲಿ ಗವರ್ನಮೆಂಟ್ ಸೆಕ್ರೆಟರಿಯಾಗಿಯೂ ಜುಲೈ ತಾ ೧ರಿಂದ ಕೆಲಸ ನೋಡುವಂತೆ ನೇಮಕ ಮಾಡಿದೆ

ಕ್ಯಾಪ್ಟನ್ ಎಫ್ ಬಿ ಇ ಡಾಸ್ ಯವರು ಜೂನ್ ತಾ ೩೦ನೇ ಮಧ್ಯಾಹ್ನಾತ್ಪರ ಸಂಸ್ಥಾನದ ಚೀಫ್ ಇಂಜನಿಯರ್ ಕೆಲಸದ ಛಾರ್ಜನ್ನು ವಹಿಸಿಕೊಂಡಿರುತ್ತಾರೆ

ಶಿವನಸಮುದ್ರಂ ಚೀಫ್ ಆಪರೇಟರ್ ಮೆ ಎ ಸಿ ಹಾಬಲ್ ಯವರಿಗೆ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಪಶ್ಚಿಮ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರ್ ಮೆ॥ ಡಿ ಸೀತಾರಾಮರಾಯರು ರಜದಿಂದ ಬಂದು ಜೂನ್ ತಾ ೨೧ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಚಿಕ್ಕಮಗಳೂರು ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ॥ ಎಸ್ ಚಿಕ್ಕಣ್ಣ ಅಯ್ಯಂಗಾರ್ರಿಗೆ ಜೂನ್ ತಾ ೧೬ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಇವರ ಗೈರುಹಾಜರಿಯಲ್ಲಿ ಶಿರಸ್ತೆದಾರ್ ಎಸ್ ಸುಬ್ಬರಾಯರು ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು

ದಾವಣಗೆರೆ ತಾಲ್ಲೂಕ್ ಅಮಲ್ದಾರ್ ಮೆ ಟಿ ವೆಂಕಟ್ರಾಮೈಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹರಿಹರದ ಡೆಪ್ಯುಟಿ ಅಮಲ್ದಾರರವರು ದಾವಣಗೆರೆ ತಾಲ್ಲೂಕಿನ ಛಾರ್ಜನ್ನೂ ವಹಿಸತಕ್ಕದ್ದು

ತಾಲ್ಲೋಕು ವರ್ತಮಾನಗಳು

ನೆಲಮಂಗಲ—ಈ ಊರಲ್ಲಿ ಎರಡು ತಿಂಗಳಿಂದಲೂ ಸುತರಾಂ ಮಳೆ ಇಲ್ಲದೆ ಬಿತ್ತಿದ ಗದ್ದೆಗಳೆಲ್ಲಾ ಒಣಗಿಹೋಯಿತು ರೈತರು ಮುಗಿಲು ನೋಡುತ್ತಿದಾರೆ ಕಳೆದ ವರುಷ ಬೆಳೆ ಇಲ್ಲದೆ ಜನರು ಸಂಕಟ ಕಷ್ಟನಷ್ಟಗಳನ್ನು ಅನುಭವಿಸುತ್ತಾ ಇಂದರು ಇದುವರಿವಿಗೂ ರಾಗಿ ಬಿತ್ತನೆಗೆ ಮಳೆ ಇಲ್ಲದಂತಾಗಿದೆ. ಈ ಊರು ಪೋಸ್ಟಾಫೀಸಿನಲ್ಲಿ ಹಿಂದೆ ಹಣವು ಕಳವಾಯಿತೆಂದೂ ಇಬ್ಬರು ಪೋಸ್ಟ್ ಮಾಸ್ಟರನ್ನು ದಸ್ತಗಿರಿ ಮಾಡಿದ್ದರೆಂದೂ ತಿಳಿಸಿದ್ದೆವಷ್ಟೆ ಈಗ ಪೋಸ್ಟ್ ಮ್ಯಾನ್ ಸಂಜೀವೈಯ, ಬಸಪ್ಪ ಎಂಬುವರಿಬ್ಬರೂ ತಪ್ಪಿತಸ್ಥರಲ್ಲವೆಂದು ತೀರ್ಮಾನಿಸಿ, ಅವರಿಗೆ ಪೋಸ್ಟ್ ಆಫೀಸಿನಲ್ಲಿ ಮಾಮೂಲಿನಂತೆ ಕೆಲಸ ಕೊಟ್ಟಿರುತ್ತಾರೆ

ಚಿಕ್ಕಮಗಳೂರು—ಜೂನ್ ತಿಂಗಳಿನಿಂದಲೂ ಮಳೆ ಸಾಧಾರಣವಾಗಿ ನಡೆಯುತ್ತಲೇ ಇದೆ ಜೂಲಾಯಿ ಪ್ರಾರಂಭದಿಂದ ಸೂರ್ಯನ ದರ್ಶನವು ಅಪರೂಪವಾಯಿತು ೩-೪ ವಾರಗಳಿಂದ ೧-೨ ಮರಣಗಳು ಅಲ್ಲಲ್ಲಿ ಕಂಡುಬರುತ್ತಲೇ ಬಂದವು ಸರಿಯಾದ ಕಾರಣ ವೈದ್ಯರುಗಳ ಗಮನಕ್ಕೆ ಬರಲಿಲ್ಲವೆಂದು ಕಾಣುತ್ತದೆ ಪೇಟೆಯಲ್ಲಿ ವಾಸ ಮಾಡುವ ಸಬ್ ಅ॥ ಸರ್ಜನ್ ರಾಜಗೋಪಾಲ ನೊಡ್ಡಿಯಾರರ ಮನೆಯಲ್ಲಿ ಮೊನ್ನೆ ಇಲಿ ಸತ್ತು ಬಿದ್ದದ್ದರಿಂದ ಅವರು ಕೂಡಲೆ ಮನೆಯನ್ನು ಬಿಟ್ಟು ಬೇರೆ ಮನೆಗೆ ಹೋದರು ಇನ್ನು ಹೋದನಂತರ ಸ್ವಲ್ಪ ಅನುಮಾನ ಹೆಚ್ಚಿತು ಅದೇ ದಿನ ಸದರಿ ಬೀದಿಯಲ್ಲಿ ಪ್ಲೇಗ್ ರೋಗಿಗಳಿಬ್ಬರು ಸರ್ಕಾರಕ್ಕೆ ಬಂದರು ಅದಕ್ಕಿಂತ ಮೊದಲೇ ಮರಣವಾದವರು ಅದೇ ರೋಗದಿಂದ ಸತ್ತರೆಂದು ಹೇಳುವುದು ಅನಾವಶ್ಯಕ ಮುಂದೆ ಯಾದರೂ ಈ ರೋಗ ಹರಡಿಕೊಳ್ಳದಂತೆ ಇಲ್ಲಿನ ವೈದ್ಯಮಂಡಲಿಯವರು ಮುತುವರ್ಜಿಯಿಂದ ಮಾಡುವ ಏರ್ಪಾಡುಗಳಿಗೆ ಪ್ರಜೆಗಳು ಗಮನ ಕೊಟ್ಟರೆ ಬಹಳ ಕ್ಷೇಮಕರವಾಗಿದೆ ಈ ದಿನ ಇಲ್ಲಿನ ಹೈಸ್ಕೂಲಿನಲ್ಲಿ ಡಾಕ್ಟರವರು ಡೆಪ್ಯುಟಿ ಕಮೀಷನರೇ ಮೊದಲಾದವರು ಸೇರಿದ್ದ ಸಭೆಯಲ್ಲಿ ಇನಾಕ್ಯುಲೇಷನ್ ಮಾಡಿಸಿಕೊಳ್ಳುವದರ ಉಪಯೋಗವನ್ನು ವಿವರಿಸಿ, ಡಾಕ್ಟರವರುಗಳು ತಾವೇ ಮೇಲು ಪಂಕ್ತಿಗಾಗಿ ಒಬ್ಬರಿಗೊಬ್ಬರು ಚುಚ್ಚಿಸಿಯನ್ನು ಹಾಕಿಸಿಕೊಂಡರು ಅನಂತರ ಸರ್ಕಾರಿ ನೌಕರರಲ್ಲಿ ಕೆಲವರು ಹಾಕಿಸಿಕೊಂಡರು ಸಭೆಯಲ್ಲಿ ಹಾಜರಾಗಿದ್ದ ವರ್ತಕರೇ ಮೊದಲಾದವರು ನಾನಾ ರೀತಿ ಮಾತಾಡಿಕೊಳ್ಳುತ್ತಿದ್ದರು ಇನ್ನೂ ಪ್ರಜೆಗಳಲ್ಲಿ ಈ ಚುಚ್ಚುವಿಕೆಯ ವಿಷಯ ಮೌಢ್ಯಭಾವದಲ್ಲಿರುವುದು ವ್ಯಸನಕರವಾದದ್ದೇ

ಸರಿ ಇಷ್ಟು ಮುಂದೆಯಾದ ೫ ವರ್ಷವಾಗ ಇದು ವರ್ತಕರೇ ಮೊದಲಾದ ಎಲ್ಲಾ ಕೂಲಿಯವರೂ ಚೆನ್ನಾಗಿ ಯೋಚನೆ ಮಾಡಿ ಸಾಧ್ಯವಾದ ಮಟ್ಟಿಗೆ ಗ್ರಾಮ ದಲ್ಲಿ ರೋಗ ತಲೆಹಾಕದ ಹಾಗೆ ಜಾಗರೂಕತೆಯುಳ್ಳವರಾಗಿರಬೇಕಲ್ಲದೆ ವೈದ್ಯರು ಹಾಕುವ ಪ್ಲೇಗ್ ಇನಾಕ್ಯುಲೇಷನ್ ಪ್ರತಿ ಒಬ್ಬರೂ ಮಾಡಿಸಿಕೊಳ್ಳುವದೇ ಮೊದಲನೇ ಉಪಾಯ —ಇಲ್ಲಿನ ಪೇಟೆ (ಅಂದರೆ ದನಕರುಗಳ ಬಂದೀಖಾನೆ) ಯಲ್ಲಿ ಪ್ರತಿ ೧ ದೊಡ್ಡ ರಾಸಿಗೂ ೮ ಆಣೆ ಸಣ್ಣ ರಾಸಿಗೆ ೪ ಆಣೆಯಂತೆ ವಸೂಲ್ಮಾಡುವ ಕ್ರಮವಿದೆ ಈ ಕ್ಷಾಮಕಾಲದಲ್ಲಿ ಬಡರೈತರ ಜೀವನೋಪಾಯ ನಡೆಯುವುದೇ ಬಹಳ ಕಷ್ಟ ದನಕರುಗಳ ದುರವಸ್ಥೆಯನ್ನು ಬರೆಯಲು ಅಸಾಧ್ಯ ಮೇಲ್ವಿಚಾರಕರು ಪರ್ಯಾಲೋಚಿಸಿ ಈಗಿನ ದರಗಳನ್ನು ಕಡಮೆ ಮಾಡಿ ಬಡರೈತರ ಮೇಲೆ ಕರುಣೆಯನ್ನು ತೋರಿಸಿ ಕೀರ್ತಿ ಪಡೆಯುವರೆಂದು ಹಾರೈಸುತ್ತೇವೆ

ಚೌಲಿಂಗಾಪೇಟೆ ತಾ॥ ಬೇತಮಂಗಲ —ಈ ಊರಿನಲ್ಲಿ ೩ ದಿನಗಳಿಂದ ತುಂಬಾ ಮೋಡ ಕವಿದುಕೊಂಡಿದೆ ಮತ್ತು ಆಗಾಗ್ಗೆ ತುಸರು ಮಳೆ ಬೀಳುವದು ಇಲ್ಲಿನ ಪ್ರಜೆಗಳಲ್ಲಿ ಕೆಲವರು ಗದ್ದೆಗಳನ್ನು ಬೇಯಿಸುವವರ ಸಂಖೆ ಹೋದ ವಾರಕ್ಕಿಂತಲೂ ಈ ವಾರ ಜಾಸ್ತಿಯಿರುವದನ್ನು ನೋಡಿ ತುಂಬಾ ಸಂತೋಷಿಸುತ್ತೇವೆ ಮತ್ತು ಇದುವರೆವಿಗೂ ರೂಪಾಯಿಗೆ ೮ ಸೇರು ಅಕ್ಕಿ ೧೧ ಸೇರು ರಾಗಿ ಮಾರುತ್ತಿದ್ದದ್ದು ಈಗ ಅಕ್ಕಿ ೭ ಸೇರು, ರಾಗಿ ೧೦ ಸೇರು ಮಾರುತ್ತದೆ ಮತ್ತು ಇದೇ ಕಾಲಕ್ಕೆ ಸರಿಯಾಗಿ ನಮ್ಮ ಊರಿನವರಿಗೆ ಸಲ್ಲುತ್ತಿದ್ದ ಅಕೋಯಸ್ ಸು ನಿಂತು ಹೋಗಿದೆ ಆದರೆ ಈಗ ವರ್ತಕರು ತಮ್ಮ ಉದಾರತ್ವವನ್ನು ಪ್ರಕಾಶಪಡಿಸಿ ಧಾರಣೆಗಳನ್ನು ಸ್ವಲ್ಪ ಮಟ್ಟಿಗೆ ಇಳಿಸಿದರೆ ಪುಣ್ಯಬಂದೀತು —ಈ ಊರಿನ ದೊಡ್ಡ ಕೆರೆಯ ಮೇಲೆ ಬಹು ದಿವಸಗಳಿಂದ ಇದ್ದ ಒಂದು ದೇವತೆಯನ್ನು ಯಾರೋ ಅಗೆದು ಕೆಳಕ್ಕೆ ಕೆಡವಿಬಿಟ್ಟಿರುವದನ್ನು ಅನೇಕರು ನೋಡಿ ಅವರಿಗೆ ಧನವಿದ್ದಿರಬಹುದೆಂದೂ, ಅದಕ್ಕಾಗಿ ಈ ರೀತಿ ಅಗೆದಿದ್ದಾರೆಂದೂ ಹೇಳುತ್ತಾರೆ

ಹೆಗ್ಗಡದೇವನಕೋಟೆ ತಾ॥ ಸರಗೂರು.—ಈಗ್ಗೆ ೫ ೬ ದಿನಗಳಿಂದಲೂ ಮಳೆ ಹಿಡಿದು ಪೈರುಗಳು ನೋಡುವುದಕ್ಕೆ ಮನೋಹರವಾಗಿವೆ ಇದೇ ರೀತಿಯಲ್ಲಿ ದೇವರು ಕರುಣಿಸಿದರೆ ಕ್ಷಾಮದ ಬಾಧೆ ಇರುವುದಿಲ್ಲ ಲಾಂದ್ರಗಳ ವಿಷಯದಲ್ಲಿ ಎಷ್ಟೋ ಸಾರಿ ತಿಳಿಸಿದಾಗ್ಯೂ ಇದುವರೆವಿಗೂ ಅಮಲ್ದಾರ್ರವರೇ ಆಗಲಿ ಮೆಂಬರುಗಳಾಗಲಿ ತಮ್ಮ ಚಿತ್ತಕ್ಕೆ ತಂದುಕೊಳ್ಳಲಿಲ್ಲ ಹಿಡಿದ ಮಳೆಯು ಬಿಡದೆ ಸುರಿಯುತ್ತಾ ಇದೆ ಇಂಥಾ ಕಾಲದಲ್ಲಿ ಲಾಂದ್ರಗಳನ್ನು ರಿಪೇರಿಮಾಡಿಸಲು ಲಾಂದ್ರವಿಲ್ಲದ್ದರಿಂದ ದೀಪವನ್ನು ಹಚ್ಚುವದೇ ಇಲ್ಲ ಬೀದಿಗಳಲ್ಲೆಲ್ಲಾ ಚರಂಡಿಗಳನ್ನು ತೋಡಿಸಿ ಅದೇ ಮಣ್ಣನ್ನು ರಸ್ತೆಯಲ್ಲಿ ಸುರಿಸಿ ಅದರ ಮೇಲೆ ಕಲ್ಲಿಲ್ಲದ ನುಣುವು ಮಣ್ಣನ್ನು ಹಾಕಿಸಿರುವುದರಿಂದ ಬಹಳ ಕೆಸರುಂಟಾಗಿ ತಿರುಗಲಿಕ್ಕೆ ಅಸಹ್ಯವಾಗಿರುತ್ತೆ ಈ ಊರಿಗೆ ದಕ್ಷಿಣ, ಪೂರ್ವ ದಿಕ್ಕುಗಳಲ್ಲಿ ನುಗುಹೊಳೆಯೂ ಪಶ್ಚಿಮ, ಉತ್ತರ ದಿಕ್ಕುಗಳಲ್ಲಿ ಕಪಿಲಾ ನದಿಯೂ ಪ್ರವಾಹದಿಂದ ಹರಿಯುತ್ತಿರುವವು ಇದರಿಂದ ಯಾರೂ ಈ ಕಡೆ ಸಂಚರಿಸುವದಿಲ್ಲ ನಮ್ಮ ಅಮಲ್ದಾರ್ರವರೂ ಮ್ಯುನಿಸಿಪಲ್ ಮೆಂಬರುಗಳೂ ಇಲ್ಲಿನ ಬಡ ಪ್ರಜೆಗಳ ಮೇಲೆ ಅಂತಃಕರುಣವಿಟ್ಟು ಈ ಊರಿನ ತೊಂದರೆಗಳನ್ನು ನಿವಾರಿಸಿ ಕೀರ್ತಿ ಸಂಪಾದಿಸುವರೆಂದು ನಂಬಿದ್ದೇವೆ

ದಾವಣಗೆರೆ.—ಒಬ್ಬ ಬಾತ್ಮೀದಾರನು ಬರೆಯುವದೇನಂದರೆ, ಈ ಊರಿನ ವೀರಶೈವ ಮತದವರು “ವೃತ್ತಾಂತ ಪತ್ರಿಕೆ” ಯನ್ನು ಓದಿದ ಮಾತ್ರದಿಂದ ಜಾತಿ ಧರ್ಮಕ್ಕೆ ಕುಂದಕ ಉಂಟಾಗುತ್ತದೆಂದು ಈಗಾಗ ತಿಳಿದವರಾಗಿ “ವೃತ್ತಾಂತ ಪತ್ರಿಕೆ”ಯನ್ನು ತ್ಯಜಿಸಿ ಬಿಡಬೇಕೆಂದು “ಧನುರ್ಧಾರಿ” ಪತ್ರಿಕೆಯ ಎಡಿಟರು ಈ ತಿಂಗಳಿನ ೧ನೇ ತಾರೀಖಿನ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ ಕೆಲವು ವೀರಶೈವ ಮಹನೀಯರುಗಳು ಈ ಪತ್ರಿಕೆಯನ್ನು ತೆಗೆದುಕೊಳ್ಳುವದಕ್ಕೆ ಅಂಜಿ ಹಿಂಜರಿದಿದ್ದಾರೆ ಈ ಪತ್ರಿಕೆಯಲ್ಲಿ ಒಳದೇಶ ಹೊರದೇಶದ ಮತ್ತು ಸರ್ಕಾರಿ ಹುಕುಂಗಳು ತಿಂಗಳಿಕ ವರ್ತಮಾನಗಳು ಮತಸಂಬಂಧವಾದ ವರ್ತಮಾನಗಳನ್ನು ಪ್ರಕಟ ಮಾಡುತ್ತಾರೆಂಬುವುದು ಸರ್ವರಿಗೂ ವೇದ್ಯವೇ ಇರುತ್ತೆ ಆದರೆ ಈಗ ಮೈಸೂರು ದೇಶದಲ್ಲಿ ೭ ೮ ಸಾವಿರ ಜನಗಳು ಈ “ವೃತ್ತಾಂತ ಪತ್ರಿಕೆ” ಯನ್ನು ಓದುತ್ತಿಲ್ಲವೇ? ಅವರುಗಳ ಪೈಕಿ ಇದನ್ನು ಓದಿದ ಮಾತ್ರಕ್ಕೇ ತಮ್ಮ ಜಾತಿಯ ಧರ್ಮವು ಕೆಡುತ್ತದೆಂದು ಭಾವಿಸಲಿಲ್ಲವು ಆದರೆ “ಧನುರ್ಧಾರಿ” ಪತ್ರಿಕೆಯವರು ಜನಗಳಲ್ಲಿ ದುರಭಿಪ್ರಾಯವನ್ನು ಹುಟ್ಟಿಸುವದು ತುಂಬಾ ಶೋಚನೀಯವಾಗಿದೆ ದಾವಣಗೆರೆ ನಿವಾಸಿಗಳು ಈ ವಿಷಯದಲ್ಲಿ ತುಂಬಾ ಯೋಚನೆಮಾಡಿ ಒಬ್ಬ ಸಾಧಾರಣವಾದಂಥವರ ಮಾತುಗಳಿಗೆ ಮರುಳಾಗಿ ಹಿಂಜರಿಯಲಾರರೆಂದು ನಂಬಿದ್ದೇವೆ ಇದೂ ಅಲ್ಲದೆ ಈ “ವೃತ್ತಾಂತ ಪತ್ರಿಕೆ” ಯು ಸುಮಾರು ೩೫ ವರ್ಷಗಳಿಂದಲೂ ಪ್ರಕಟವಾಗಿ ಬರುತ್ತಾ ಇದೆ ಈ ಪತ್ರಿಕೆಯು ಸತ್ಯವಾದದ್ದನ್ನೇ ಪ್ರಕಟಿಸುತ್ತಾ ಇದೆಯೇ ಹೊರತು “ಧನುರ್ಧಾರಿ” ಹೇಳುವ ದುರಭಿಪ್ರಾಯದಂತೆ ಪ್ರಕಟವಾಗುವುದಿಲ್ಲವು ಇನ್ನು ಮುಂದೆಯಾದರೂ “ಧನುರ್ಧಾರಿ” ಯು ಜನಗಳಿಗೆ ಇಂಥ ದುರ್ಬೋಧನೆಯನ್ನು ಪ್ರಕಟಿಸಲಾರರೆಂದು ನಂಬಿದ್ದೇವೆ

ಯಳಂದೂರು —ಈ ತಾಲ್ಲೂಕಿನಲ್ಲಿ ಜೋಳದ ಬೆಳೆಯು ಬಹಳ ಚೆನ್ನಾಗಿ ತೊಡೆ ಬಂದಿರುತ್ತದೆ ಈಗ ಒಂದು ಹದ ಮಳೆ ಆದರೆ ಪೂರಾ ಬೆಳೆ ಆಗುತ್ತದೆ ಮಳೆ ಇಲ್ಲದೆ ಬೆಳೆ ಒಣಗುತ್ತಲಿರುವದರಿಂದ ರೈತರು ಪಶ್ಚಾತ್ತಾಪಪಡುತ್ತಿದ್ದಾರೆ ಇಲ್ಲಿಗೆ ಸಮೀಪವಾಗಿರುವ ಮರಹಳ್ಳಿ ಸಂತೆಯಲ್ಲಿ ಧಾರಣೆಗಳು ಭಿದಾವಾಗುತ್ತಲಿವೆ — ಈ ಕಸಬಾ ಪಾಕಿಟಾವು ಪ್ರತಿ ಕ್ಷಣವೂ ಕ್ರಮವಾಗಿ ಜರಗುತ್ತಲಿಕ ದೀಪಗಳನ್ನು ಸಕಾಲದಲ್ಲಿ ಹಚ್ಚುತ್ತಲಿದ್ದಾರೆ ಇನ್ನು ಕೆಲವು ಬೀದಿಗಳಲ್ಲಿ ದೀಪಗಳ ಕಂಭಗಳು ಹೆಚ್ಚಾಗಿ ಬೇಕಾಗಿವೆ ಇದಕ್ಕೆ ಸರ್ಕಾರದವರು ಗಮನ ಕೊಡಬೇಕಾಗಿ ಪ್ರಾರ್ಥಿಸುತ್ತೇವೆ —ಈ ತಾಲೂಕು ಶ್ರೀ ಬಿಳಿಗಿರಿರಂಗ ಸ್ವಾಮಿಯವರ ಜಂಗಲ್ ಹೊಸ ಬಾಳೇಹಣ್ಣು ಆದಾಯಕ್ಕೆ ವಗೈರೆ ಕಂಟ್ರಾಕ್ಟು ಕಳೆದ ವರ್ಷಕ್ಕಿಂತ ಈ ದಫಾ ಉತ್ಪತ್ತಿ ಜಾಸ್ತಿಯಾಗಿರುತ್ತದೆ ಇದಕ್ಕಾಗಿ ಇಲ್ಲಿ ಅಮಲ್ದಾರ್ರು ಹೊಸ ಕಂಟ್ರಾಕ್ಟರನ್ನು ಹೊಂದಿಸಿದ್ದೇ ಕಾರಣವಾಗಿದೆ —ಬೆಟ್ಟದಲ್ಲಿ ಎರಡು ಹೊಸ ಆನೆಗಳು ಖೆಡ್ಡಲಿಗೆ ಬಿದ್ದಿರುವವೆಂದು ತಿಳಿಸಲು ಸಂತೋಷಪಡುತ್ತೇವೆ ತಾಲ್ಲೂಕು ಅಧಿಕಾರಿಗಳು ಹೊಸ ಆನೆಗಳನ್ನು ಮೇಲಕ್ಕೆ ತರಲು ಪ್ರಯತ್ನಮಾಡುತ್ತಿದ್ದಾರೆ —ನಮ್ಮ ಅಮಲ್ದಾರ್ ಮ॥ ಮಹಮುದ್ ಷರೀಫ್‌ಯವರು ಸರ್ಕಾರಿ ಕೆಲಸವನ್ನು ತುಂಬಾ ವಿಚಕ್ಷಣೆಯಿಂದ ಮಾಡುತ್ತಾರೆಂಬುವದಕ್ಕೆ ಅವರು ಇಲ್ಲಿ ನಡೆಸುತ್ತಿರುವ ಪ್ರತಿಭಾಶಾಲಿ ಕೆಲಸಗಳಿಂದಲೂ ಗೊತ್ತಾಗುತ್ತದೆ ಇವರು ಇಲ್ಲಿಗೆ ಬಂದಲಾಗಾಯಿತು ೫೦ ಒಳೆ ಗ್ರಾಮದ ಕೆರೆ ಮತ್ತು ರೋಡುಗಳು, ಅಗರದ ಗ್ರಾಮದ ಕೆರೆ, ಒದ್ದ್ಯಲ್ಲಿ ಕೆಲವು ರಸ್ತೆಯಲ್ಲಿ ಅಭಿವೃದ್ಧಿಪಡಿಸಿದ್ದ ಮೊಹರಿಗಳು ಇವುಗಳ ಇದಾಗಾಲ ಕೆಲಸಗಳನ್ನು ಬಹಳ ಶ್ರಮ ವಹಿಸಿ ಜರುಗಿಸಿರುತ್ತಾರೆ ಇದರಿಂದ ರೈತರ ಮತ್ತು ಸಾಗುವಳಿಗೆ ತುಂಬಾ ಅನುಕೂಲ ಉಂಟಾಗಿರುತ್ತದೆ —ಈ ಕಸಬಾ ದ ರಾ ದೊರೆ ಪಬ್ಲಿಕ್ ರೀಡಿಂಗ್ ರೂಂ ಎಂಬ ಹೆಸರಿನಿಂದ ಒಂದು ವಾಚಕಶಾಲಾ ಸ್ಥಾಪಿಸಿ ಎರಡು ತಿಂಗಳಾಯಿತು ಇದಕ್ಕೆ ಇಲ್ಲಿನ ಅಮಲ್ದಾರ್ ಮ॥ ಮಹಮದ್ ಷರೀಫ್ ಸಾಹೇಬರು ಪ್ರೆಸಿಡೆಂಟರಾಗಿಯೂ, ಡಾಕ್ಟರ್ ಕೃಷ್ಣಸ್ವಾಮಿರಾಯರು ಸೆಕ್ರೆಟರಿಗಳಾಗಿಯೂ ಮ॥ ಲಾಯರ್ ವೈ ಶ್ರೀನಿವಾಸಯ್ಯಂಗಾರ್ರು ಜಾಯಿಂಟ್ ಸೆಕ್ರೆಟರಿಗಳಾಗಿಯೂ, ತಾಲ್ಲೂಕು ದೊಡ್ಡಮನುಷ್ಯರು ಕೆಲವರು ಕಮಿಟಿ ಮೆಂಬರುಗಳಾಗಿಯೂ ಏರ್ಪಟ್ಟಿದ್ದಾರೆ ಮದ್ರಾಸ್ ಮೇಲ್ ಪತ್ರಿಕೆಯೇ ಮೊದಲಾದ ಕೆಲವು ಇಂಗ್ಲೀಷ್ ಮತ್ತು ಕನ್ನಡ ಹಿಂದೂಸ್ಥಾನಿ ವಗೈರೆ ಪೇಪರುಗಳು ಬರುತ್ತವೆ ಇದಕ್ಕೆ ಶ್ರೀಮಂತರಾದ ಜಹಗೀರ್ದಾರ್ರವರು ಪ್ರೋತ್ಸಾಹ ಕೊಟ್ಟು ಸಹಾಯ ಮಾಡುತ್ತಾರೆಂದು ನಂಬಿದೇವೆ

ದೊಡ್ಡಬಳ್ಳಾಪುರ.—ಇಲ್ಲಿ ಮಳೆ ಇಲ್ಲದೆ ಜನರು ಕಷ್ಟಪಡುತ್ತಿದ್ದಾರೆ ಮೋಡವಾಗುವದೂ, ಗಾಳಿ ಬಲವಾಗಿ ಬೀಸುವದೂ ಉಂಟು ಕೆರೆ ಕುಂಟೆಗಳಿಗೆ ಬಂದಿದ್ದ ಸ್ವಲ್ಪ ನೀರೂ ಮುಗಿಯಿತು ಭಾವಿಗಳಲ್ಲಿ ಜಲವಿಲ್ಲ ಸುಮಾರು ೩೦೦ ರೂಪಾಯಿ ಖರ್ಚುಬಿಟ್ಟು ಕೇಶವನ್ನನ ಭಾವಿಯನ್ನು ರಿಪೇರಿ ಮಾಡಿಸಿದರೂ ಜಲವಿಲ್ಲ ಇಲ್ಲಿಗೆ ನಲ್ಲಿ ನೀರು ಬರುವಂತೆ ಜಾಗ್ರತೆ ಏರ್ಪಾಡು ಮಾಡುವರೆಂದು ಜನರು ಆಶೆ ಪಡುತ್ತಿದ್ದಾರೆ ದವಸಗಳ ಧಾರಣೆ ಹೆಚ್ಚಾಗಿದೆ ರೂಪಾಯಿಗೆ ೧೦॥ ೧೧ ಸೇರು ರಾಗಿ, ೬ ೭ ಸೇರು ಅಕ್ಕಿ ಇವೆ ಬಡಜನರಿಗಾಗಿ ರಿಲೀಫ್ ಕೆಲಸಗಳನ್ನು ಮಾಡಿಸಿದರೆ ಉತ್ತಮ ಟೌನ್‌ನಲ್ಲಿ ಉಪ್ಪೆ ಚೀಲ ಮೊದಲಾದ ಕಚರಾ ಗಿಡಗಳನ್ನು ಕತ್ತರಿಸಿ ಹಾಕು ಮಾಡುವಂತೆ ಮುನಿಸಿಪಾಲಿಟಿಯವರು ೨೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರಂತೆ ಈ ಕೆಲಸವನ್ನು ಮುನಿಸಿಪಾಲಿಟಿ ಮೆಂಬರುಗಳು ಮುತುವರ್ಜಿಯಿಂದಲೂ ಜಾಗ್ರತೆಯಾಗಿಯೂ ಮಾಡಿಸಿದರೆ ಒಳ್ಳೇದು —ಪರದೆ ಹಬ್ಬದ ದಿನ ಇಲ್ಲಿ ಭಾರಿಯಾದ ೨ ಆಳು ಪ್ರಮಾಣದಲ್ಲಿ ೩ ಪಟಗಳನ್ನು ಬಿಟ್ಟು ಚೆನ್ನಾಗಿ ಹಾರಿಸಿದರು ಬಹು ತಮಾಷೆಯಾಗಿತ್ತು —ನಾಸಲು ಗುಮ್ಮನಹಳ್ಳಿಯಲ್ಲಿ ಬೇಡರ ಜಾತಿಯ ತಾಯಿಮಗಳು ಸೇರಿ ಶಂಡೆಗೆ ಗೋಟಗೆಡ್ಡೆಯಲ್ಲಿ ವಿಷಹಾಕಿದರು ತಂದೆ ಸತ್ತು ಹೋದನು ಕಾರಣವೇನಂದರೆ, ತಂದೆಯು ಮಗಳನ್ನು ಗಂಡನ ಮನೆಗೆ ಕಳುಹಿಸಬೇಕು ಇಲ್ಲದೆ ಇದ್ದರೆ ಇಲ್ಲಿ ಕೆಟ್ಟು ಹೋಗುತ್ತಾಳೆಂದು ಹೆಂಡತಿಗೆ ಸದಾ ತಿಳಿಸಿದನಂತೆ ಇದಕ್ಕಾಗಿ ತಾಯಿಮಗಳು ವಿಷ ಹಾಕಿದರು ಇವರನ್ನು ಇಲ್ಲಿ ಪೊಲೀಸಿನಲ್ಲಿ ಇಟ್ಟು ವಿಚಾರಿಸುತ್ತಾ ಇದ್ದಾರೆ —ಹೊನ್ನಾವರದಲ್ಲಿ ಒಬ್ಬ ಗಾಣಿಗರವನು ಸೂಳೆಯನ್ನು ಇಟ್ಟುಕೊಂಡಿದ್ದನಂತೆ ಇದು ಅವನ ಹೆಂಡತಿಗೆ ಸರಿ ಬೀಳದೆ ಗಂಡನಿಗೆ ಬುದ್ಧಿ ಹೇಳಿದರೂ ಈಕೆಯ ಒಡವೆಗಳು ಹಾಳಾಗುತ್ತಾ ಬಂದವಂತೆ ಹೆಂಡತಿ ತಂಟೆ ಮಾಡಿದ್ದರಿಂದ ಅವನು ಅವಳನ್ನು ಚನ್ನಾಗಿ ಹೊಡೆದನಂತೆ ಇದರಿಂದ ಅವಳು ಭಾವಿಯಲ್ಲಿ ಬಿದ್ದಳಂತೆ ಈ ಹೆಣವನ್ನು ದಫನ್ ಮಾಡಿದ್ದರು ನಮ್ಮ ಅಮಲ್ದಾರರಿಗೆ ಯಾರೋ ಅರ್ಜಿ ಬರೆದಿದ್ದ ಕಾರಣ ನಮ್ಮ ಡಾಕ್ಟರವರು ಕೂಡ ಹೋಗಿ ಹೆಣವನ್ನು ಕೀಳಿಸಿ ಪರೀಕ್ಷೆ ಮಾಡಿದಾಗ ಹಿಂಸೆಯಿಂದ ಭಾವಿಯಲ್ಲಿ ಬಿದ್ದದೆಂದು ಗೊತ್ತಾಯಿತಂತೆ —೯ ನೇ ತಾ ನಲ್ಲಿ ನಾಗಸಂದ್ರದಲ್ಲಿ ಒಬ್ಬ ಲಾಳ್ ಗೊಂಡರ ಹೆಂಗಸು ಗಲ್ಲಿಗೆ ಹಾಕಿಕೊಂಡು ಸತ್ತಳು ಈಕೆ ಗಂಡನಿಗೆ ೩ ನೇ ಹೆಂಡತಿ ೨—೩ ಮಕ್ಕಳು ಇದ್ದವು ಯಾವ ಕಾರಣದಿಂದ ನೇಣು ಹಾಕಿಕೊಂಡಳೋ ತಿಳಿಯಲಿಲ್ಲ ಆಕೆಯ ಅಜಮಾಯಿಷಿ ಬಗ್ಗೆ ಶವವನ್ನು ಆಸ್ಪತ್ರೆಗೆ ತಂದು ಕೊಯಿದರು —ಇಲ್ಲಿ ಹುಚ್ಚುನಾಯಿ ಕಡಿದವರ ಪೈಕಿ ೩ ಜನರು ಸತ್ತು ಹೋದರು

ನಂಜನಗೂಡು —ಇಲ್ಲಿ ಕೆಲವು ದಿನಗಳಿಂದ ಆಗಿಂದಾಗ್ಗೆ ಸಣ್ಣ ಸೋನೆ ಮಳೆ ಬೀಳುತ್ತಾ ಇದೆ ಘಟ್ಟಿಯಾದ ಮಳೆಯು ಇಲ್ಲ ಹವಾ ಶೀತವಾಗಿ ತಂಗಾಳಿ ಬೀಸುತ್ತಾ ಇದೆ ಊರಿನಲ್ಲಿ ರೋಗಾದಿಗಳೇನೂ ವಿಶೇಷವಾಗಿಲ್ಲ ಜನರು ಆರೋಗ್ಯವಾಗಿರುತ್ತಾರೆ ಧಾರಣೆಗಳು ಇನ್ನೂ ಇಳಿತರವಾಗಿಲ್ಲ ಇನ್ನೂ ಪ್ರಿಯವಾಗಿಯೇ ವ್ಯಾಪಾರವಾಗುತ್ತಾ ಇವೆ —೭ ನೇ ತಾ ನಿಂದ ೪-೫ ದಿನಗಳ ವರೆವಿಗೂ ಗಿರಿಜಾ ಕಲ್ಯಾಣವು ನಡೆಯುತ್ತಿದೆ ಅನೇಕ ಕಡೆಗಳಿಂದ ಜನರು ಬಂದಿದ್ದರು ಆದರೆ ಊರಲ್ಲಿ ಗಲಭೆಗಳೂ ರೋಗಗಳೂ ಇಲ್ಲದ್ದು ಸಂತೋಷಪ್ರದವಾದದ್ದು ಈ ಉತ್ಸವಕ್ಕಾಗಿ ಮಲೆ ಎಂಬ ಗ್ರಾಮದ ಒಬ್ಬ ಸಾಹುಕಾರನು ಪರಸ್ಥಳದಿಂದ ಬರುವ ಜನಗಳ ತಿಂಡಿತೀರ್ಥಕ್ಕಾಗಿ ಒಂದು ಸಹಸ್ರ ರೂಪಾಯಿಯನ್ನು ಪ್ರತಿ ವರುಷವೂ ಮುಜರಾಯಿ ಇಲಾಖೆಗೆ ಕೊಡುವದು ಪದ್ಧತಿ ಅದೇ ರೀತಿ ಈ ಸಂವತ್ಸರವೂ ಆತ ಕೊಟ್ಟಹಾಗೂ, ಆದರೆ ತಿಂಡಿಯ ವಿಷಯ ತಕ್ಕ ನಿಗಾ ನೋಡಿಕೊಳ್ಳದ್ದರಿಂದ ಅನ್ನವು ಚನ್ನಾಗಿರಲಿಲ್ಲವೆಂದು ಹೇಳುತ್ತಾ ಅನೇಕರು ಗೊಣಗಾಡಿಕೊಳ್ಳುತ್ತಾ ಮಾತನಾಡಿಕೊಳ್ಳುತ್ತಲಿದ್ದರು ಮುಂದಿನ ವರುಷಗಳಲ್ಲಿ ಹೀಗೆ ಮಾಡುವದಕ್ಕೆ ಅವಕಾಶವಿಲ್ಲದಂತೆ ಆದರ ಅಧಿಕಾರಿಗಳು ತಕ್ಕ ಏರ್ಪಾಡು ಮಾಡುವರೆಂದು ನಿರೀಕ್ಷಿಸುತ್ತಾರೆ —೩ ನೇ ತಾ ಶನಿವಾರ ಈ ಊರಲ್ಲಿರುವ ವೆಸ್ಲಿಯನ್ ಮಿಷನ್ ಇಂಗ್ಲಿಷ್ ಸ್ಕೂಲ್ ಬಾಲಕರು ತಾವು ಏರ್ಪಡಿಸಿಕೊಂಡು ನಡಿಯಿಸುತ್ತಾ ಇರುವ ಡಿಬೆಟಿಂಗ್ ಸೊಸೈಟಿಯ ವಾರ್ಷಿಕ ಕೂಟವನ್ನು ನಡಿಸಿದರು ಅದಕ್ಕಾಗಿ ಹೆಡ್ ಮಾಸ್ಟರ್ ಮ॥ ಎ ರಾಮರಾಯರೂ ಮಾಸ್ತರುಗಳೂ ಉತ್ಸಾಹಿತರಾಗಿ ಊರಿನ ಪ್ರಮುಖರಿಗೆಲ್ಲಾ ಆಹ್ವಾನ ಪತ್ರಿಕೆಗಳನ್ನು ಕೊಟ್ಟು, ಸಾಯಂಕಾಲ ೪ ಗಂಟೆಯೊಂದು ಗೊತ್ತುಮಾಡಿ ಸ್ಕೂಲನ್ನು ಅಲಂಕರಿಸಿ ತೋರಣಗಳನ್ನು ಕಟ್ಟಿ, ಮಹಾರಾಜರ ಮತ್ತು ಸ್ಕೂಲ್ ಸೂಪರಿಂಟೆಂಡೆಂಟರಾದ ಘನ ಗುಡೇದೊರೆಯವರ ಭಾವ ಚಿತ್ರಗಳನ್ನೂ, ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿನಿಂದ ಬಂದಿದ್ದ ಎರಡು ಪಟಗಳನ್ನು ಕೋಟುಗಳನ್ನು ಎತ್ತಿ ಕಟ್ಟಿಸಿದರು ಕಲಿಯೂರು ವೆಂಕಟಸುಬ್ಬಯ್ಯನವರ ಕುಮಾರರಾದ ಅಡ್ವೊಕೇಟ್ ಮ॥ ಕೆ ವೆಂಕಟಸ್ವಾಮಯ್ಯನವರು ಅಗ್ರಾಸನವನ್ನು ಅಲಂಕರಿಸಿ ಎದ್ದು ಕೊಟ್ಟ ಪ್ರಾರಂಭದಲ್ಲೇ—ಈ ಊರಿನ ನಮ್ಮ ಬಾಲಕರ ಉಪಯೋಗಕ್ಕಾಗಿ ಈ ಸ್ಕೂಲ್ ಸ್ಥಾಪಿತವಾಗಿರೋಣದರ ಬಗ್ಗೆ ನಾವುಗಳೆಲ್ಲರೂ ಪ್ರೋತ್ಸಾಹಕೊಡುವ ಹಂಗುಳ್ಳವರಾಗಿರುತ್ತೇವೆ ನಾನು ಕೆಲವು ಸಂವತ್ಸರಗಳ ಹಿಂದೆ ಇದೇ ಸ್ಕೂಲಿನ ಒಬ್ಬ ವಿದ್ಯಾರ್ಥಿಯಾಗಿದ್ದದ್ದರಿಂದ ನಾನೂ ಇದಕ್ಕೆ ಪ್ರೋತ್ಸಾಹ ಕೊಡುವವನಾಗಿರುತ್ತೇನೆ ಎಂಬೀ ಮೊದಲಾದ ಮಾತುಗಳನ್ನು ಹೇಳಿ ಕುಳಿತರು ಆಗ್ಗೆ ಒಬ್ಬ ವಿದ್ಯಾರ್ಥಿಯು ತಮ್ಮ ಸೊಸೈಟಿಯ ರಿಪೋರ್ಟನ್ನೂ, ಇನ್ನೊಬ್ಬನು ವಿದ್ಯಾಭ್ಯಾಸದ ಶ್ರೇಷ್ಠತೆಯನ್ನು ಕುರಿತ ಉಪನ್ಯಾಸವನ್ನೂ ಓದಿದರು ಇನ್ನೊಬ್ಬರು ಕಿಂಗ್ ಆಫ್ ಮಿಲ್ಲರ್‌ಯವರ ದಯಾಳುತನವನ್ನು ಸಂವಾದಿಸಿದರು ಕಡೆಯಲ್ಲಿ ಘನ ಚೆಯರ್‌ಮನ್‌ಯವರು ಎದ್ದು—ಈ ಕೂಟಕ್ಕೆ ಡಿಬೆಟಿಂಗ್ ಸೊಸೈಟಿ ಎಂಬ ಅಭಿಧಾನವನ್ನು ದಪ್ಪಿಸಿ ಸ್ಟೂಡೆಂಟ್ಸ್ ಯೂನಿಯನ್ ... ಕರೆದ ... ಇಂಗ್ಲೀಷಿನಲ್ಲಿ ಮಾತ್ರವಲ್ಲ ನಮ್ಮ ಕರ್ನಾಟಕ ಭಾಷೆಯಲ್ಲಿಯೂ ಉಪನ್ಯಾಸಗಳನ್ನು ಬರೆದು ಓದಬೇಕು ಅಭ್ಯಾಸ ಮಾಡಬೇಕೆಂದೂ ... ಅನ್ನು ಪ್ರತ್ಯೇಕ ಮಾಡುವದು ತರವಲ್ಲ ಎಂದೇ ರೀತಿ ಬಾಲಕರಿಗೂ, ಮಾಸ್ತರುಗಳಿಗೂ ಪ್ರೋತ್ಸಾಹಕರವಾದ ವಚನಗಳನ್ನು ಹೇಳಿದರು ಕಡೆಯಲ್ಲಿ ಬಂದಿದ್ದವ ಮಹನೀಯರುಗಳಿಗೆ ವಂದನೆಗಳನ್ನು ... ಹಂಚಿ ... ಎಲ್ಲರೂ ಸ್ವಗೃಹಗಳನ್ನು ಕುರಿತು ತೆರಳಿದರು —೧೦ ನೇ ತಾ ಶನಿವಾರ ಗವರ್ನ್ಮೆಂಟ್ ಸ್ಕೂಲ್ ಬಾಲಕಿಯರಿಗೆ ೪ ಗಂಟೆಯಲ್ಲಿ ಬಹುಮಾನ ಸಭೆಯನ್ನು ನಡಿಸಿದರು ಗರ್ಲ್ಸ್ ಸ್ಕೂಲ್ ಕಮಿಟಿಯ ಪ್ರೆಸಿಡೆಂಟರಾದ ಮ॥ ರಾ॥ ಕೆ ರಾಮರಾಯರು ಪತ್ರಿಕೆಗಳನ್ನು ಕಳುಹಿಸಿ ಏರ್ಪಾಡಿಸಿಕೊಂಡಿದ್ದರು ಮ॥ ಸುಂದರರಾಜಯ್ಯಂಗಾರ್ರು ಆಗ್ಗೆ ಅಗ್ರಾಸನರಾಗಿ ನೇಮಕವಾಗಿದ್ದರು ಎಲ್ಲಾ ಸರ್ಕಾರಿ ಹುದ್ದೇದಾರರೂ ಬಂದಿದ್ದರು ಎಲ್ಲಾ ಒಟ್ಟು ೧೫೦ ಇಲ್ಲವೇ ೧೫೦ ಜನರು ಸಭೆ ಸೇರಿದ್ದರು ಇಷ್ಟು ದೊಡ್ಡ ಸಭೆ ಸೇರುವದು ನಂಜನಗೂಡಿನಲ್ಲಿ ಅಪೂರ್ವವೆಂದು ಕಾಣುತ್ತೆ ಕಮಿಟಿ ಸೆಕ್ರೆಟರಿಯಾದ ಹುಡುಗರ ಸ್ಕೂಲ್ ಹೆಡ್ ಮಾಸ್ಟರಿಂದ ಸ್ತ್ರೀ ವಿದ್ಯಾಭ್ಯಾಸದ ಆವಶ್ಯಕತೆಯ ವಿಷಯವಾದ ಉಪನ್ಯಾಸವೂ, ಸ್ಕೂಲ್ ರಿಪೋರ್ಟೂ ಓದಲಾದವು ಹೆಣ್ಣು ಮಕ್ಕಳು ಆರೋಗ್ಯ, ಚರಿತ್ರೆ, ಭೂಗೋಳ, ಮೈಸೂರು ಶೀಮೆ, ಈ ವಿಷಯದಲ್ಲಿ ಇಬ್ಬಿಬ್ಬರು ಲಲಿತವಾದ ಭಾಷೆಯಲ್ಲಿ ಸಂವಾದಗಳನ್ನು ಮಾಡಿದರು ಸಣ್ಣ ಮಕ್ಕಳು ಮಣೆಯಲ್ಲೂ ಮರದ ತುಂಡುಗಳಲ್ಲೂ ಕಿಂಡರ್‌ಗಾರ್ಟನ್ ಆಟವಾಡಿದರು ಹಾಡಿನಲ್ಲಿ ದೇವರ ಸ್ತುತಿಯನ್ನೂ, ಚಕ್ರವರ್ತಿಗಳ, ಮಹಾರಾಜರ ಶ್ರೇಯಃ ಪ್ರಾರ್ಥನೆಗಳನ್ನೂ ಕುರಿತು ಹಾಡಿದರು ಅನಂತರ ಅಗ್ರಾಸನರು ಮಕ್ಕಳ ಯೋಗ್ಯತೆಯನ್ನನುಸರಿಸಿ ಪೆಟ್ಟಿಗೆ, ಪುಸ್ತಕ, ಬೊಂಬೆ, ಗಡಿಯಾರ, ಕಟ್ಟು, ಬಟ್ಟೆ, ಸಟಿ ಫಿಕೇಟು ಮೊದಲಾದವುಗಳನ್ನು ಬಹುಮಾನವಾಗಿ ದಯಪಾಲಿಸಿದರು ಪ್ಲೀಡರ್ ಮ॥ ಗುರುರಾಜರು ತಮ್ಮ ಸ್ವಂತ ಖರ್ಚಿನಿಂದ ವಿದ್ಯಾರ್ಥಿನಿಯರಿಗೆಲ್ಲಾ ಮಿಠಾಯಿ ತಿಂಡಿಯನ್ನು ಕೊಡಿಸಿದರು ಕಡೆಯಲ್ಲಿ ಅಗ್ರಾಸನರಾದ ಮ॥ ಸುಂದರರಾಜಯ್ಯಂಗಾರ್ರವರು- ಈ ಸ್ಕೂಲ್ ಸ್ಥಾಪನೆಯಾದ ಇಪ್ಪತ್ತು ಸಂವತ್ಸರಗಳಿಂದ ಸ್ಕೂಲ್ ವೃದ್ಧಿಯಾಗುತ್ತಲೇ ಬಂದಿರುವದನ್ನು ತಿಳಿದು ಸಂತೋಷಪಡತಕ್ಕದ್ದಾಗಿದೆ ಇನ್ನು ಮುಂದೆಯೂ ಈ ಸ್ಕೂಲ್ ಕಮಿಟಿಯವರ ಮತ್ತು ಉಪಾಧ್ಯಾಯರುಗಳ ಪ್ರಯಾಸಗಳಿಂದ ಅಭಿವೃದ್ಧಿಯಾಗಲೆಂದು ಹಾರೈಸುವವರಾಗಿರುತ್ತೇವೆಂದು ಪ್ರೋತ್ಸಾಹಕರವಾದ ಮಾತುಗಳನ್ನು ಹೇಳಿದರು ಸ್ಕೂಲು ಬಾಲಕ, ಬಾಲಕಿಯರಿಂದ ತುಂಬಿತ್ತು ಅನೇಕ ಚಿತ್ರಪಟಗಳಿಂದ ಅಲಂಕೃತವಾಗಿತ್ತು ಕಡೆಯಲ್ಲಿ ಬಂದಿದ್ದವರಿಗೆಲ್ಲಾ ಹೂವು ಗಂಧ ತಾಂಬೂಲಗಳನ್ನು ಹಂಚಿದ ತರುವಾಯ ಜಯಘೋಷದೊಡನೆ ಸಭೆಯು ೭ ಗಂಟೆಗೆ ಮುಕ್ತಾಯವಾಯಿತು

ವಿದೇಶ ವರ್ತಮಾನಗಳು

ಜರ್ಮನಿ ರಾಜ್ಯಕ್ಕೆ ಅನ್ಯದೇಶಗಳಿಂದ ರಫ್ತಾಗಿ ಹೋಗುವ ಟೀ ಎಲೆ ಮತ್ತು ಕಾಫೀ ಬೀಜಗಳ ಮೇಲೆ ಅಲ್ಲಿನವರು ಸುಂಕವನ್ನು ಹಾಕಿದಾರೆ ಇದು ಮುಂದಿನ ತಿಂಗಳ ಜಾರಿಗೆ ಬರುವದು

ಫ್ರಾನ್ಸ್ ಸಂಸ್ಥಾನದ ದಕ್ಷಿಣ ಪ್ರಾಂತಗಳಲ್ಲಿ ಕಳೆದ ಶನಿವಾರ ಸಾಯಂಕಾಲ ಕೆಲವು ದಫಾ ಭೂಮಿಯು ಕಂಪಿಸಿತು ಮಾರ್ಸೇಲ್ಸ್, ಟೌಲನ್ ಎಂಬ ಭಾರೀ ಪಟ್ಟಣಗಳ ಪ್ರಜೆಗಳು ಬಹಳ ಗಾಬರಿ ಪಡು ತಲ್ಲಣಿಸಿದರು ಆದರೆ ವಿಶೇಷ ನಷ್ಟವೇನೂ ಆಗಲಿಲ್ಲ

ಜಪಾನ್ ರಾಜದಲ್ಲಿ ಒಂದು ಭಾರೀ ಸಕ್ಕರೆ ಕಂಪನಿಯವರ ವಿಷಯದಲ್ಲಿ ಕೆಲವು ಅಧಿಕಾರಿಗಳು ಪಕ್ಷಪಾತಮಾಡಿರುತ್ತಾರೆಂದು ತಿಳಿದು ಬಂದಿದೆ ಸರ್ಕಾರದವರು ಆ ಅಧಿಕಾರಿಗಳನ್ನು ದಸ್ತಗಿರಿಮಾಡಿ ವಿಚಾರಣೆ ನಡಿಸುತ್ತಿದ್ದಾರೆ ಆ ಕಂಪನಿಯ ಪ್ರೆಸಿಡೆಂಟರಾಗಿದ್ದ ಸಕಾಮೋ ಎಂಬಾತನಿಗೆ ಈ ವಿಚಾರವಾಗಿ ಶಿಕ್ಷೆಯಾಗಿತ್ತು ಈತನು ಕಳೆದ ವಾರ ಗುಂಡು ಹಾರಿಸಿ ಆತ್ಮಹತ್ಯಮಾಡಿಕೊಂಡನೆಂದು ತಂತೀ ವರ್ತಮಾನ ಬಂದಿದೆ

ಈಜಿಪ್ಟ್ ದೇಶದಿಂದ ಹೋಗುವ ತುರ್ಕಿ ದೇಶದ ಮಾಜಿ ಸುಲ್ತಾನ್ ಅಬ್ದುಲ್ ಹಾಮಿದ್‌ಯವರ ಪಕ್ಷವನ್ನು ವಹಿಸಿ ನಡೆಸುತ್ತಿದ್ದ ಯಾವ ವರ್ತಮಾನ ಪತ್ರಿಕೆಗಳನ್ನೂ ತುರ್ಕಿ ನಗರಕ್ಕೆ ಹೋಗದಂತೆ ತಡೆಯುತ್ತಾರೆ ಲಂಡನ್ ಪಟ್ಟಣದಿಂದ ಪಕ್ಷನ್ ಎಂಬ ವರ್ತಮಾನ ಪತ್ರಿಕೆಯ ಒಂದೆ ಒಂದು ಪ್ರತಿಯನ್ನು ಮಾತ್ರ ಆ ಪಟ್ಟಣಕ್ಕೆ ಬಿಟ್ಟುಕೊಳ್ಳುವರು ಉಳಿದ ಪ್ರತಿಗಳನ್ನೆಲ್ಲಾ ವಿಲಾಸದಾರರಿಗೆ ಕೊಡದೆ ತಡೆಯುತ್ತಿರುವರು

ಪರ್ಷಿಯಾ ರಾಜದ ರಾಜಧಾನಿಯಾದ ಟೆಹರಾನ್ ಪಟ್ಟಣದಿಂದ ೧೫ ಮೈಲಿ ದೂರದಲ್ಲಿ ರಾಜಪಕ್ಷದವರು ಪ್ರಜಾಪಕ್ಷದವರ ರಾಣವನ್ನು ಮುತ್ತಿಗೆ ಹಾಕಿಕೊಂಡು ಅವರನ್ನು ಅಲ್ಲಿಂದ ಓಡಿಸಬೇಕೆಂದು ಗುಂಡು ಹೊಡೆದರು ಅವರು ಎರಡು ಗಂಟೆಯ ಹೊತ್ತು ಯುದ್ಧಮಾಡಿ ಕಡೆಗೆ ತಮ್ಮ ಉದ್ದೇಶವು ನೆರವೇರದೆ ವಾಪಸು ಹೋದರು ಅತ್ತಲಾಗಿ ಜನರಲ್ ಮ್ಯಾಕ್ಸ್ವೆಲ್ ಎಂಬ ಸೇನಾಧಿಪತಿಯು ೩೦೦೦ ರಷ್ಯನ್ ಸಹಿತ ಕಾಜ್ವಿನ್ ಎಂಬ ಪಟ್ಟಣಕ್ಕೆ ಬಂದಿರುತ್ತಾರೆ

ಇಂಗ್ಲಾಂಡಿನ ಕಲ್ಲಿದ್ದಲ ಗಣಿಗಳಲ್ಲಿ ಕೂಲಿಯವರಿಂದ ದಿನಕ್ಕೆ ಎಂಟು ಗಂಟೆಗಳ ಹೊತ್ತು ಕೆಲಸ ಮಾಡಿಸಬೇಕೆಂದು ಪಾರ್ಲಿಮೆಂಟಿನವರು ಗೊತ್ತುಮಾಡಿ ಜಾರಿಗೆ ತಂದರು ಇದು ಕೂಲಿಕಾರರಿಗೆ ತುಂಬಾ ಅಸಮಾಧಾನವನ್ನುಂಟು ಮಾಡಿದೆ ೩೦,೦೦೦ ಜನರು ಕೆಲಸಕ್ಕೆ ಹೋಗದೆ ನಿಂತು ಬಿಟ್ಟಿದ್ದಾರೆ ಇವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವುದು ಅನೇಕ ಕಲ್ಲಿದ್ದಲ ಗಣಿಗಳಲ್ಲಿ ಕೆಲಸ ನಿಂತಿತು ಕಬ್ಬಿಣದ ಕಾರ್ಖಾನೆಗಳೂ ಮಣ್ಣಿನ ಪಾತ್ರೆಗಳು ತಯಾರಾಗುತ್ತಿದ್ದ ಕಾರ್ಖಾನೆಗಳೂ ಕಲ್ಲಿದ್ದಲ ಕ್ಷಾಮದಿಂದ ನಷ್ಟಪಡುತ್ತಿರುವವು

Printed and Published by the Rev H Gulliford, Proprietor and Manager, Wesleyan Mission Press, Mysore 15/7/1909

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವವು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೧೯ ನೇ ಇಸವಿ ಜೂಲೈ ತಾರೀಖು ೨೪ ನೇ ಗುರುವಾರ. ಸಂಚಿಕೆ ೮

WILLIAM & Co, FORT, BOMBAY

ಅಮೃತಾಂಜನ.
ಹಿಂದುಸ್ಥಾನದ ವನಸ್ಪತಿಗಳಿಂದ
ತಯಾರಿಸಲ್ಪಟ್ಟಿದ್ದು.

ಬಾಹ್ಯ ಉಪಯೋಗಕ್ಕೋಸ್ಕರವೇ. ಮತ್ತು ಕೆಳಗೆ ನಮೂದಿಸಿರುವ ರೋಗಗಳಿಗೆ ತಕ್ಕದಾದ ಗುಣಕಾರಿಯು 130 22

ತಲೆನೋವು, ಗಂಟಲು ಉಬ್ಬುವಿಕೆ, ವಾತ, ಜ್ಞಿಪ್ಪಿದ್ದ, ಉಳುಕು, ಅಂಟು ಗಂಟು, ಗಂಟು ನೋವು, ಅಧಾಶೀಸವಾಯು, ನೆಗಡಿ, ಕೆಮ್ಮು, ಜಖಮು, ಇತ್ಯಾದಿ

ಇದರ ವಿಷಯವಾಗಿ ಸರ್ವೇಜನರು ಕೊಂಡಾಡುತ್ತಾರೆ ಬಾಟ್ಲು ಒಂದರ ಕಿಮ್ಮತ್ತು ೦-೮-೦

ಗಜಕರ್ಣಾದಿ ಮುಲಾಮು.

ಮೂರು ನಾಲ್ಕು ಸಾರಿ ಹಚ್ಚುವದರೊಳಗೆ ಗಜಕರ್ಣ, ತುರಿ, ಕಜ್ಜಿ ಮುಂತಾದವುಗಳು ನಾಶವಾಗುವವು ಇದರಿಂದ ಉರಿಯು ಬರುವದಿಲ್ಲ ಬಟ್ಟೆಗೆ ಕಲೆಯಾಗುವದಿಲ್ಲ ಡಬ್ಬಿ ಒಂದರ ಕಿಮ್ಮತ್ತು ೦-೬-೦ ೧೨ ಡಬ್ಬಿಗಳಿಗೆ ೪-೦-೦

ಅಶ್ವ ಮಿಶ್ರಣ	೨-೦-೦
ಗೋರೋಚನಾದಿ ಮದ್ದು	೦-೮-೦
ಪಪ್ಪುಗುಟಿಕ—ಧಾತುಪುಷ್ಟಿ ರಕ್ತಶುದ್ಧಿ	೧-೦-೦
ಸುಂದರಿ ತೈಲ—ಸುವಾಸನೆಗೆ	೦-೮-೦
ಬಾಲಾಮೃತ—ಬಾಲರಿಗೆ	೦-೮-೦
ನೇತ್ರಾಂಜನ—ಮಂದದೃಷ್ಟಿಗೆ	೦-೪-೦
ಪಿಂಪಲ್ ಮುಲಾಮು—ಮೊಡವೆ ನಿಜಗೆ	೦-೩-೦
ಕೇಶವರ್ಧನ ತೈಲ—ತಲೆಯ ಕೂದಲಿಗೆ	೧-೦-೦
ಕಫನಾಶಕ ಚೂರ್ಣ—ಶ್ವಾಸ ರೋಗಕ್ಕೆ	೦-೮-೦

ದಯವಿಟ್ಟು ಕೆಟಲಾಗಿಗೆ ಬರೆಯಿರಿ ವಿಳಾಸ —

ವಿಲಿಯಂ ಮತ್ತು ಕಂಪೆನಿ, ಫೋರ್ಟ್, ಮುಂಬಯಿ.

ಟೆಲಿಗ್ರಾಫ್ ಅಡ್ರೆಸ್ಸು—"ಅಮೃತಾಂಜನ," ಮುಂಬಯಿ.

THE PLACE FOR HASSAN CAPS IS
HASSAN.

ನಿಮ್ಮ ತಲೆಯ ಮೇಲಿರುವದೇನು?
ಹಾಸನದ ಟೋಪಿ ಅಲ್ಲವೋ?
ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

1-28

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ತಯಾರಿಸಲ್ಪಡುತ್ತಿರುವ ಟೋಪಿಗಳ ದಾರವೆಲ್ಲಾ ಬೇರೆಯದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನಾವೇ ಸ್ವಂತ ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆ ಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ, ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ. ೬ ಆ, ೧ ರೂ. ೪ ಆ
ಚುಕ್ಕಿಯುಳ್ಳ ಟೋಪಿಗಳು ರೂ. ೧-೮, ರೂ ೧-೧೨
ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ. ೨
ಜಾತದ ಟೋಪಿಗಳು ೧ ರೂ. ೧೨ ಆ, ೧ ರೂ. ೮ ಆ ; ೧ ರೂ ೬ ಆ
ಉಣ್ಣೆಯ ಟೋಪಿಗಳು ೧ ರೂ ೮ ಆ, ೧ ರೂ ೬ ಆ ;

ಕೂಸುಗಳ ಟೋಪಿ, ಪೂರ್ಥಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕಳುಹಿಸುವೆವು ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ, ಕಾರ್ಖಾನೆ, ಹಾಸನ.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸಹ	ರೂ. ೧—೧೪—೦
" " ೬ " "	" ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ವಾಪಸು ಆಗುವ ಪತ್ರಿಕೆಯ ವಿಳಾಸದಲ್ಲಿ ಎಡಗಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕ್ಲೆಮೆಂಟರ ಮ್ಯಾಜಿಕ್ ಬಾಂ ತೈಲವು.

47 9

ತಲೆನೋವು, ವಾಯುನೋವು, ಸೆಳೆ, ಗಂಟಲುನೋವು, ವಾತವಾಯು, ನಾನಾ ವಿಧವಾದ ಉರಿಊತಗಳು, ಶೀತರೋಗಗಳು, ಬೆನ್ನುನೋವು, ಕೀಲುಗಳ ಸಂದುಕಟ್ಟುಗಳ ನೋವು, ಚೇಳು ಕಡಿದ ನೋವು, ಹಲ್ಲುನೋವು,—ಇವುಗಳಿಗೆಲ್ಲಾ ಈ ತೈಲವನ್ನು ಹಚ್ಚಿದರೆ ಒತ್ತಿ ಬೆಸನಾಡಿದಂತೆ ಖಂಡಿತವಾಗಿ ವಾಸಿಯಾಗುತ್ತದೆ ಈ ಔಷಧವನ್ನು ಹಿಂದುಸ್ಥಾನದ ಎಲ್ಲಾ ಭಾಗಗಳ ಸಾವಿರಾರು ಜನರು ಪರೀಕ್ಷಿಸಿ, ಖಂಡಿತವಾಗಿಯೂ ಬೇಗನೆ ಗುಣಕೊಡುತ್ತದೆಂದು ಒಪ್ಪಿಕೊಂಡಿರುತ್ತಾರೆ ಮೇಲ್ಕಂಡ ಎಲ್ಲಾ ಬಾಧೆಗಳನ್ನೂ ನಿವಾರಣೆಮಾಡುವದರಲ್ಲಿ ಈ ಔಷಧದ ಶಕ್ತಿಯು ಅದ್ಭುತವಾದದ್ದು ಆದದ್ದರಿಂದಲೇ ಅದನ್ನು ಅಷ್ಟು ಹೆಚ್ಚಾಗಿಯೂ ವಿಶೇಷ ಪ್ರೀತಿಯಿಂದಲೂ ಎಲ್ಲರೂ ಹೊಗಳುವರು ಈ ಔಷಧವನ್ನು ಒಂದಾವರ್ತಿ ತರಿಸಿ ಪರೀಕ್ಷಿಸಿದವರೆಲ್ಲಾ ಅದನ್ನು ಯಾವಾಗಲೂ ಹತ್ತಿರ ಇಟ್ಟುಕೊಂಡು ಹೇಳುವರು ಈ ಅಮೋಘವಾದ ತೈಲವು ನೋವಿನ ಮೂಲವನ್ನು ಹಿಡಿದು ಅದರ ಹುಟ್ಟನ್ನೇ ಹಾಳುಮಾಡುತ್ತದೆ

ಕ್ರಯ ಸೀಸೆ ಒಂದಕ್ಕೆ ೧೨ ಆಣೆ ಪ್ಯಾಕಿಂಗ್ ೪ ಆಣೆ ಆದರೆ ೩ ಅಥವಾ ಹೆಚ್ಚು ಬಾಟ್ಲು ಒಂದೇ ಸಲ ತರಿಸಿಕೊಳ್ಳುವವರಿಗೆ ಪ್ಯಾಕಿಂಗ್ ಚಾರ್ಜು ಮಾಫಿಯಾಗುವುದು ವ್ಯಾಪಾರಸ್ಥರಿಗೆ ಮತ್ತು ಡಾಕ್ಟರುಗಳಿಗೆ ೧೨ ಬಾಟ್ಲು ಒಂದೇ ಸಲ ತರಿಸಿಕೊಳ್ಳುವುದಾದರೆ ಡಿಸ್ಕೌಂಟು ಉಂಟು ಈ ತೈಲವನ್ನು ಎಲ್ಲಾ ಔಷಧಾಲಯಗಳೂ ವೈದ್ಯರೂ ಬಳಸುವ ದುಕಾನುಗಳು ಮುಖ್ಯ ಏಜಂಟರ ವಿಳಾಸ—

ಎಸ್ ಪೀಟರ್ಸ್,
೩೩, ಪೇದನಾಯಕನಪಾಳ್ಯ ಬೀದಿ, ಪೇಟೆ, ಮದರಾಸ್.

ಪ್ರಸಿದ್ಧವಾದ ನಾಲ್ಕು ಪುಸ್ತಕಗಳನ್ನು ಪರಾಂಬರಿಸಿ.

10-29

• "ಬ್ರಹ್ಮಚರ್ಯ" ವೆಂಬ ಮರ್ಮಶಾಸ್ತ್ರ ಇದು ಲೋಕಪ್ರಸಿದ್ಧವಾದ ಪುಸ್ತಕ ಇದರಲ್ಲಿರುವ ಮರ್ಮ ಸೂತ್ರಗಳನ್ನು ಪ್ರತಿಯೊಬ್ಬ ಹುಡುಗನೂ ಯೌವನಸ್ಥನೂ ಬಿಡದೆ ಓದಿ ತಿಳಿದುಕೊಳ್ಳಬೇಕು ಕ್ರಯ ಮೂರಾಣೆ. ವಿ ಪಿ ಪಿ ಮೂಲಕ. ಐದಾಣೆ

"ಸ್ವಪ್ನಯಾತ್ರಪಲದೀಪಿಕೆ" ಇದೇ ಪುಸ್ತಕವನ್ನು ಅನೇಕ ದೇಶಸ್ಥರು ತಮ್ಮ ತಮ್ಮ ಸ್ವಭಾಷೆಗಳಲ್ಲಿ ತರ್ಜುಮೆ ಮಾಡಿರುತ್ತಾರೆ ಜಪಾನ್ ದೇಶಿಯರು ಈ ಪುಸ್ತಕವನ್ನು ಓದಿ ತಮ್ಮ ದೇಶಕ್ಕೆ ಬಹಳ ಪ್ರಯೋಜನವನ್ನು ತಂದುಕೊಂಡರು ಈ ವರುಷ ಮದರಾಸ್ ಯೂನಿವರ್ಸಿಟಿ ಸಂಘದವರು "ಸ್ವಪ್ನಯಾತ್ರಪಲದೀಪಿಕೆಯನ್ನು" ಒಂದು ಮುಖ್ಯವಾದ ಪರೀಕ್ಷೆಗೆ ಪಠ್ಯವಾಗಿ ನಿಯಮಿಸಿರುತ್ತಾರೆ ಇದನ್ನು ಬಾಲಕರು ಮೊದಲುಗೊಂಡು ದೊಡ್ಡವರವರೆಗೂ ಓದತಕ್ಕದ್ದು ಕ್ರಯ ನಾಲ್ಕಾಣೆ ವಿ ಪಿ ಪಿ ಮೂಲಕ ಆರಾಣೆ

"ವ್ಯಾಸ್ಕೋಡಿಗಾಮನಯಾನದ ಚರಿತ್ರೆ" ಇದು ನೂತನವಾಗಿ ರಚಿಸಲ್ಪಟ್ಟದ್ದು ಮತ್ತು ಬಹು ರಸಿಕವಾದದ್ದು ಇದರಲ್ಲಿ ಸೂಚಿಸಿರುವ ಸಂಗತಿಗಳು ಎಂಥಾ ಹೇಡಿಯನ್ನಾದರೂ ಧೈರ್ಯವಂತನನ್ನಾಗಿ ಮಾಡುವುದು ಇದರಲ್ಲಿ ನಮ್ಮ ಹಿಂದೂ ದೇಶದ ಪೂರ್ವ ಚರಿತ್ರೆಯು ಬಹು ರಸಿಕವಾಗಿರುತ್ತದೆ ಇದನ್ನು ಎಲ್ಲರೂ ತರಿಸಿ ಓದಬೇಕು.

ಕ್ರಯ. ಒಂದಾಣೆ ವಿ ಪಿ ಪಿ ಮೂಲಕ ಮೂರಾಣೆ

"ಅಗಸ್ಟೀನ್ ದಿನ್ನಪಂ" ಇದು ಲೋಕಪ್ರಸಿದ್ಧವಾದ ಪುಸ್ತಕವು ಕ್ರೈಸ್ತ ಮತದಲ್ಲಿ ತಿಳಿಸುವ ಮಾನಸಾಂತರ, ಪಾಪಮನ್ನಣೆ, ಪವಿತ್ರತ್ವ ಈ ಮೊದಲಾದ ಸದ್ಗುಣಗಳನ್ನು ಅನುಭವಿಸಿದ ಮಹಾತ್ಮನ ಜೀವಚರಿತ್ರೆಯಾಗಿರುತ್ತದೆ ಇದನ್ನು ಎಲ್ಲರೂ ಓದಬೇಕು.

ಇದರ ಬೆಲೆ —ರೈಟಿನ ಬೈಂಡು ಪ್ರತಿ ಒಂದಕ್ಕೆ ೦—೧೦—೦
ಬಟ್ಟೆಯ ಬೈಂಡು ಪ್ರತಿ ಒಂದಕ್ಕೆ ೦—೧೪—೦

ವಿಳಾಸ —ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ ಮೈಸೂರು

ಪಾಳ್ಯದ ವೆಂಕಟಾಚಲ ಪಂಡಿತರ ದಿವ್ಯೌಷಧಗಳು.

28-29

೧ ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ.



ಚಳಿಜ್ವರ, ಜ್ವರ, ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕೈಕಾಲು ಕೊರತ (ಭಾರ) ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ

ತಾಂಬೂಲದೊಡನೆ ಅಥವಾ ಹಾಗೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯನ್ನೀಯುತ್ತಾ, ಎಂಥಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ, ನೀರು ಹವಾಗಳ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಸೂತಕಶೂಲೆ. ಮಕ್ಕಳ ಎಳವು, ಜ್ವರ, ಹೆಚ್ಚುಜ್ವರ, ಕೃಶತ್ವಗಳನ್ನು ಬಹು ಬೇಗನೆ ಗುಣಪಡಿಸುತ್ತದೆ

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ.

ಅನುಪಾನಪತ್ರ ಔಷಧದ ಸಂಗಡಲೇ ಇರುತ್ತದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ

ವಿಳಾಸ.—ಪಾಳ್ಯದ ವೆಂಕಟಾಚಲ ಪಂಡಿತ, ಎಸ್ ಎಸ್. ಆರ್.
ವೈದ್ಯಶಾಲಾ, ಲಕ್ಷ್ಮೀವಿಲಾಸ ರೋಡ್, ಮೈಸೂರು.

ಜ್ವರಹರಿ 18-25

ಇದು ಸಾಧಾರಣ ಜ್ವರ, ಚಳಿಜ್ವರ, ಮೊರೆಜ್ವರ, ಪಿತ್ತಜ್ವರ. ಶೀತಜ್ವರ, ವಾತಜ್ವರ, ಚಳಿಬಿಡುವುದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜಾವುತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪ್ಪ ಅಯ್ಯರವರು—ನೀವು ಕೆಲವು ತಿಂಗಳ ಹಿಂದೆ ಕಳುಹಿಸಿ ಕೊಟ್ಟ ೨ ಡಜನ ಸೀಸೆಯ ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨ ಡಜನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ ೨—೧೨ ಆ ; ೧೧ ರೂ ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿಯಾಗುವದು

ಬಿಮಂಕಶ್ರೀಕಾರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ಕ್ಲೇಶಗಳ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವಿವರ "ಜ್ವರಹರಿ" ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಸಹೋದ್ಯೋಗರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀಸಾರಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

- ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಪೇಟೆಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದಿದ್ದರೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದರಾಸ್.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿತೋ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಾರಿಯಾದರೂ ಕಾಲಪ್ರವೃತ್ತಿಯಾಗುತ್ತದೆಯೇ ?" ಎಂದು ನನ್ನನ್ನು ನೀನೇ ಕೇಳಿಕೋ,

(೧೨ ಆಣೆ ಬುಡ್ಡಿ ಪರಿಮಾಣ.)

ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು, ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು, ವಿಷವಾಗಿ, ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲ ಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶ ರೋಗ, ಪಿತ್ತ ; ಪಿತ್ತಜ್ವರ ; ಅಜೀರ್ಣ ; ಅಗ್ನಿಮಾಂದ್ಯ ; ಗಾಬರಿ ; ಅಶಕ್ತಿ ; ಎದೆಯು ಕಲ್ಲಣಿಸುವುದು ; ತಲೆತಿರುಗುವುದು, ತಲೆನೋವು ; ಹೊಟ್ಟೆಯುಬ್ಬರ ; ಹುಳಿತೇಗಿನ ಹೊಟ್ಟೆನೋವು ; ಹೆಂಗಸರ ವ್ಯಾಧಿಗಳು ; ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು, ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಷವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟು ಮಾಡುವುವು [69-47]

ಬೆಲೆ ೪ ಆಣೆ, ೮ ಆಣೆ ಮತ್ತು ೧೭ ಆಣೆ, ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ, ಡೋನ್ ಪಿ. ಒ. ಬಾಕ್ಸ್ ೨೦, ಬೊಂಬಾಯಿ —ಇವರಲ್ಲಿ ದೊರೆಯುವುದು

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು.

4-26

ಶೀತದ ಕೆಮ್ಮು, ಗಂಟಲು ಗೊರೆಸುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಬಂದುಹವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಟ್ಟನ್ನು ಸಡಿಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು　　ಸಣ್ಣ ಶೀಸೆಗೆ ೧ ರೂಪಾಯಿ　　ದೊಡ್ಡ ಶೀಸೆಗೆ ೨ ರೂಪಾಯಿ

JUST RECEIVED! JUST RECEIVED!!

Stead's Books for the Bairns

(illustrated) New Numbers 5 29

STEAD'S PENNY POPULAR TALES—Sixty-four Pages in a coloured Picture Cover. Each number contains a story of thrilling interest 24 numbers

CALENDARS FOR 1909.

Apply—The Manager, C.L.S. Book Depot, Mysore City.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

25—6—1909 ರಿಂದ 2—7—1909 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	11	5	0	0
ಬೆಂಗಳೂರು ಡಿಸ್ಟ್ರಿಕ್ಟು	0	1	4	3
ಮೈಸೂರು ,,	31	15	5	1
ಕೋಲಾರ್ ,,	9	[illegible]	5	1
ಕೋಲಾರ್ ಚಿನ್ನದ ಗಣಿಗಳು	0	0	[illegible]	0
ತುಂಕೂರು ಡಿಸ್ಟ್ರಿಕ್ಟು	2	0	[illegible]	0
ಹಾಸನ ,,	11	12	0	[illegible]
ಚಿತ್ರದುರ್ಗ ,,	0	[illegible]	0	0
ಕಡೂರ್ ,,	4	1		0
ಶಿವಮೊಗ್ಗಾ ,,	3	1	[illegible]	6
* ಸಂಖ್ಯೆ ಕಾಣಿಸಿಲ್ಲ ಜುಮ್ಲಾ	71	36	1[illegible]	11

ಕ್ಷಾಮನಿವಾರಣೆಯ ಕಾರ್ಯಗಳು

ಸನ್ 1909 ನೇ ಜೂಲೈ ತಾ 10 ಕ್ಕೆ ಮುಗಿದ ಒಂದು ವಾರದ ರಿಪೋರ್ಟು.

ಡಿಸ್ಟ್ರಿಕ್ಟು	ರಿಲೀಫ್ ಕೆಲಸ ಮಾಡುವವರ ಸಂಖ್ಯ ಗಂಡಾಳು	ಹೆಣ್ಣಾಳು	ಮಕ್ಕಳು	ಕೂಲಿ ಕೊಟ್ಟದ್ದು ರೂ	ಧರ್ಮಸಹಾಯ ಪಡೆದ ಜನರು
ಬೆಂಗಳೂರು	12[illegible]	102	2	2[illegible]1	
ಕೋಲಾರ	[illegible]	192	41	[illegible]	
ತುಂಕೂರು	26[illegible]	137	47	[illegible]	
ಮೈಸೂರು					
ಹಾಸನ	150	287	40	2[illegible]7	
ಶಿವಮೊಗ್ಗ					
ಕಡೂರು	43	43		42[illegible]	
ಚಿತ್ರದುರ್ಗ	217	317	15	[illegible]	
ಮಾಗಡಿ	302	335	14	741	.
ಸ್ಯಾನಿಟರಿ	...	..	.		.
ಒಟ್ಟು	1,41[illegible]	1,[illegible]	159	19,00[illegible]	

ನಿಮಗೆ ಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಆದರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಆವಶ್ಯಕ

SCOTT'S EMULSION 6 29

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷದ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಮೀನುಮನುಷ್ಯ ಇರುವ ಈ ಔಷಧದ ಗುರುತು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಸ್ವದೇಶೀ ಬಟ್ಟೆಗಳು ! ಸ್ವದೇಶೀ ಬಟ್ಟೆಗಳು !!

2 28

ನಮ್ಮಲ್ಲಿ ಈಗ ಮಾರಾಟಕ್ಕೆ ಸಿದ್ಧವಾಗಿರುವ ಚೆಕ್ ಬಟ್ಟೆಗಳು ನಾಜೂಕಾಗಿ ತಯಾರಿಸಲ್ಪಟ್ಟು ಬಹಳ ಬಾಳಿಕೆ ಬರುವಂತವುಗಳಾಗಿವೆ ಬಣ್ಣವು ಹೋಗುವದಿಲ್ಲ. ಖರೀದಿ ಬಹಳ ಕಡಮೆ. ಈ ಬಟ್ಟೆಗಳು ಕೋಲಾರದಲ್ಲಿ ತಯಾರಾದವುಗಳು ಆದದರಿಂದ ಸ್ವದೇಶೀ ಪ್ರಿಯರೇ, ಈ ಬಟ್ಟೆಗಳನ್ನು ತರಿಸಿ ನೋಡಿ ಆಗ್ಗೆ ಈ ಬಟ್ಟೆಗಳ ಪ್ರಯೋಜನವು ನಿಮಗೆ ಗೊತ್ತಾಗುವುದು ಗಜ ಒಂದಕ್ಕೆ ೫ ಆಣೆಯಿಂದ ೭॥ ಆಣೆ ವರಿವಿಗೂ ಬೆಲೆಯಾಗಿ ಅಗಲೀ ಒಟ್ಟಾಗಿ ಅಗಲೀ ಮಾರಲ್ಪಡುತ್ತವೆ ಶಾಲುಗಳು, ಹಾಸನದ ಟೋಪಿಗಳು, ಮುಸುಕಿನ ಟೋಪಿಗಳು, ಕೂಸುಗಳ ಟೋಪಿ, ಇವೆಲ್ಲವೂ ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ಸಿಕ್ಕುತ್ತವೆ.

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಪೇಟೇ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ ಕ್ಕೆ	ರೂ	೧೫-೦-೦	೧೫-೮-೦
ಕೆಂಬೂತಿ ಅಕ್ಕಿ ಅವಲ್	...	೧೭-೮-೦	೧೫-೪-೦
,, ದುಯಂ	...	೧೪-೦-೦	೧೪-೧೨-೦
ಜಾವ್ರಾಣಿ ಅಕ್ಕಿ	...	೧೪-೦-೦	೧೬-೦-೦
ಸಣ್ಣಕ್ಕಿ ಅವಲ್	...	೧೭-೦-೦	೧೭-೮-೦
,, ದುಯಂ	...	೧೬-೦-೦	೧೭-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	...	೧೬-೦-೦	೧೬-೮-೦
,, ದುಯಂ	...	೧೫-೦-೦	೧೬-೦-೦
ಪ್ಯರ್ ರಾಗಿ ಪಲ್ಲಾ ೧ಕ್ಕೆ	...	೯-೮-೦	೯-೦-೦
ಕಾರ್‍ರಾಗಿ	...	೯-೦-೦	೮-೮-೦
ಜೋಳ	...	೯-೪-೦	೯-೦-೦
ಹುಲಸಂದೆ ಪಲ್ಲಾ ೧ಕ್ಕೆ	...	೧೩-೦-೦	೧೨-೪-೦
ಬಿಳೀ ಅವರೆ	...	೧೨-೮-೦	೧೪-೦-೦
ಹೆಸರು	...	೧೫-೦-೦	೧೨-೨-೦
ಉದ್ದು	...	೧೪-೮-೦	೧೩-೨-೦
ಕಡಲೆ	...	೧೪-೨-೦	೧೨-೨-೦
ಎಳ್ಳು ಸೇ ೧೨೭ ಕ್ಕೆ	...	೨೨-೮-೦	೧೮-೮-೦
ಹುರುಳಿ	...	೧೨-೦-೦	೧೧-೮-೦
ಹರಳು ೧೨೭ ಸೇರಿಗೆ	...	೧೩-೮-೦	೧೦-೦-೦
ಸೀಗೇಕಾಯಿ ಮಣ ೧ಕ್ಕೆ	...	೨-೮-೦	೨-೦-೦
ಮೆಣಸಿನಕಾಯಿ	...	೫-೮-೦	೪-೮-೦
,, ದುಯಂ	...	೫-೦-೦	೪-೦-೦
ಬೆಲ್ಲ ದೊಡ್ಡ ಅಚ್ಚು	...	೬-೪-೦	ಮ ೨-೨-೦
ಒಳ್ಳೆಣ್ಣೆ ಮಣ ೧ಕ್ಕೆ	...	೫-೦-೦	೫-೪-೦
ಹರಳೆಣ್ಣೆ ,,	...	೫-೦-೦	೪-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ	...	೯-೮-೦	೯-೦-೦
ಉಪ್ಪು ,,	...	೬-೪-೦	೫-೮-೦
ಹುಣಸೇ ಹಣ್ಣು	...	೨-೦-೦	೧-೧೦-೦
,, ಹಳೇದು	...	೧-೮-೦	೧-೮-೦
ತುಪ್ಪ ಮಣ ೧ಕ್ಕೆ	...	೧೬-೦-೦	೧೩-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	...	೫-೪-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ	...	೪-೮-೦	೪-೪-೦
ಅಳಲೇಕಾಯಿ ಮಣ ೧ಕ್ಕೆ	...	೦-೮-೦	೦-೧೨-೦
ಅಂಟುವಾಳದ ಕಾಯಿ ಮಣ ೧ಕ್ಕೆ	...	೧-೦-೦	೦-೧೩-೦
ಚಿನ್ನ (ಪ್ಲೇನ್) ಕೆಂಪು	...	೧೫-೬-೦	೧೫-೯-೦
,, ,, ಪಸಿಮೆ	...	೧೬-೦-೦	೧೫-೧೩-೦
,, ,, ಗಟ್ಟಿ ತೊಲ ೧ಕ್ಕೆ	...	೨೪-೮-೦	೨೪-೮-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	...	೬೭-೪-೦	೬೪-೮-೦

ಸಂಜೀವಿನೀ ಔಷಧಾಲಯ, ಮೈಸೂರು.

23-24

ಎಂ. ಎಸ್. ಕುಮಾರ್‌ಯವರ ದಿವ್ಯೌಷಧಗಳು.

ಸಂಜೀವಿನೀ ಬಿಂದು—ಮರವೆ, ನಿರುತ್ಸಾಹ, ನಿದ್ರಾಭಂಗ, ನಿಶ್ಶಕ್ತಿ, ರಕ್ತದೋಷ, ಚರ್ಮವ್ಯಾಧಿ, ಜೋಮು, ವಾಯುನೋವುಗಳೂ, ಹಳೇ ಜ್ವರ, ಕೃಶತ್ವ, ಅಜೀರ್ಣ, ತಲೆನೋವು, ನೇತ್ರಉರಿ, ತಲೆಭಾರ, ಮಲಬಂಧ, ಬುದ್ಧಿಭ್ರಮಣೆ, ಮಂಕುತನ, ಉನ್ಮಾದ, ಸೋಮಾರಿತನ ಇವುಗಳನ್ನು ಗುಣಪಡಿಸಿ, ದೇಹದಲ್ಲಿ ಜೀವಸತ್ವವನ್ನು ತುಂಬಿ, ನರಗಳ ಪುಷ್ಟಿ, ರಕ್ತಪುಷ್ಟಿಗಳನ್ನು ಹೆಚ್ಚಿಸಿ ಮಾಂಸಖಂಡ, ಬಲ, ಧೈರ್ಯ, ಕಾಂತಿ, ಉತ್ಸಾಹ, ಜ್ಞಾಪಕಶಕ್ತಿ, ಇಂದ್ರಿಯ ಪಾಟವಗಳನ್ನು ವೃದ್ಧಿಪಡಿಸುವದರಲ್ಲಿ ಇದು ಸಿದ್ಧೌಷಧ. ಕ್ರಯ ಶೀಸೆ ೧ಕ್ಕೆ ೨ ರೂಪಾಯಿ

ಸಂಜೀವಿನೀ ಮಾತ್ರೆ—ನಾನಾ ಬಗೇ ಜ್ವರಗಳೂ, ಪ್ಲೇಗು, ಉಷ್ಣವಾಯು ಪ್ರಕೋಪ, ಇವುಗಳಿಗೆ ಖಾತರಾದ ಔಷಧ. ಸಾವಿರಾರು ಮಂದಿ ಪ್ಲೇಗಿನಿಂದ ಗುಣಹೊಂದಿದಾರೆ ೨-೩ ದಿನಕ್ಕೊಂದಾವರ್ತಿ ಸೇವಿಸುತ್ತಿದ್ದರೆ ಪ್ಲೇಗ್ ತಗಲುವದಿಲ್ಲ ಕ್ರಯ ಪೊಟ್ಟಣ ೧ಕ್ಕೆ ೧ ರೂಪಾಯಿ

ಕಾಲಕೂಟ ವಟಿಕ—ಪ್ಲೇಗ್ ಗೆಡ್ಡೆ ಮೊದಲಾಗಿ ಎಲ್ಲಾ ತರದ ಗೆಡ್ಡೆಗಳಿಗೂ ಮೇಲೆ ಹಚ್ಚುವ ಔಷಧಿ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ.

ಸುಖನೇತ್ರ ಬಿಂದು.—ಉರಿಗಣ್ಣು, ಕೆಂಗಣ್ಣು, ಮಾಚಗಣ್ಣು, ತಲೆನೋವು, ತಲೆಭಾರ, ನಿದ್ರಾಭಂಗ ಇವುಗಳನ್ನು ಗುಣಪಡಿಸಿ ಕಣ್ಣಿಗೂ ಮೆದುಳಿಗೂ ತಂಪನ್ನುಂಟುಮಾಡಿ ದೃಷ್ಟಿಪಾಟವವನ್ನೂ ಮೆದುಳಿನ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ ಕ್ರಯ ಶೀಸೆ ೧ಕ್ಕೆ ೫ ಆಣೆ ಮತ್ತು ೮ ಆಣೆ

ಇನ್ನೂ ಅನೇಕ ಔಷಧಗಳೂ, ತರಹಾವರಿ ಅತ್ತರುಗಳೂ, ಗಂಧದಬತ್ತಿ ಊದುಬತ್ತಿಗಳೂ ನಮ್ಮಲ್ಲಿ ಸಿಕ್ಕುತ್ತವೆ. ಪ್ರತಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಏಜಂಟರುಗಳೂ ಬೇಕು. ಅರ್ಜಿಗೆ ಲೇಬಲ್ ಇಟ್ಟು ಬರೆಯಿರಿ.

ಡಿ. ಕೆ. ಸ್ವಾಮಿ,
ಪ್ರೊಪ್ರೈಟರ್.

ಶಾಲಿವಾಹನ ಶಕ ವರುಷಂಗಳು ೧೮೩೧ ನೇ ಸೌಮ್ಯನಾಮ ಸಂವತ್ಸರದ ಅಧಿಕ ಶ್ರಾವಣ ಪಂಚಮಿ ಗುರುವಾರದಿಂದ ಅಧಿಕ ಶ್ರಾವಣ ಏಕಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೯ ನೇ ಜೂಲೈ

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ	ಶೋಧಿಕ ಚಟಕ ಮಾಸ
22	ಗುರು	ಪಂಚಮಿ	37-7	ಪೂ	55.28	7
23	ಶುಕ್ರ	ಷಷ್ಠಿ	42-8	ಉ	60-0	8
24	ಶನಿವಾ §	ಸಪ್ತಮಿ	47-1	ಹ	2-10	9
25	ರವಿವಾ *	ಅಷ್ಟಮಿ	51-16	ಚಿ	8-16	10
26	ಚಂದ್ರ	ನವಮಿ	55-42	ಸ್ವಾ	14-2	11
27	ಕುಜ ‡	ದಶಮಿ	57-22	ವಿ	18-38	12
28	ಬುಧ †	ಏಕಾದಶಿ	58-28	ಅ	22-20	13

: ಆಡಿಶುಕ್ರವಾರ
§ ವ್ಯಾಗಸ್ತಂಬ
* ಸಿಂಹಾಯನಗತೋರಾ
‡ ಮಹಾವ್ಯಪ್ರ.
† ಸ್ಮಾರ್ತ ಏಕಾದಶಿ.

ಸುಜ್ಞಾನ ಸೂರ್ಯೋದಯ.

[ಕಳೆದ ವಾರದ ಶೇಷ]

ಸಾವುಕಾರ ರುದ್ರಪ್ಪ—ನಮ್ಮ ಮುರಿಗೇಂದ್ರ ಸ್ವಾಮಿಗಳಿಗೆ ಗುರುಲಕ್ಷಣಗಳಿಲ್ಲವೋ ? ಅವರಂಥ ಮಹಾತ್ಮರು ಬೇರೆ ಯಾರಿದ್ದಾರೆ ? ಅಂದನು

ಮಡಿ—ರುದ್ರಪ್ಪನವರೇ, ಮುರುಗೇಂದ್ರಸ್ವಾಮಿಗಳು ಮಹಾ ಯೋಗ್ಯ ಪುರುಷರೇ ಆಗಿರಬಹುದು, ಅವರ ವಿಷಯದಲ್ಲಿ ನಾನೇನೂ ಹೇಳಲಾರೆನು ಆದರೆ ಅವರಿಗೆ ಗುರುಲಕ್ಷಣಗಳುಂಟೋ ಎಂದು ಪರೀಕ್ಷೆ ಮಾಡತಕ್ಕವರು ಯಾರು ? ಅವರ ಶಿಷ್ಯರಾದ ನೀವೇ ಅಲ್ಲವೋ ? ಹಾಗಾದರೆ ಪರೀಕ್ಷೆ ಮಾಡಿದ್ದೀರೋ ? ಗುರುಲಕ್ಷಣಗಳು ಅವರಿಗುಂಟೋ ? ದಯಮಾಡಿ ಹೇಳಿರಿ ಅಂದನು

ರುದ್ರಪ್ಪ—ಪರೀಕ್ಷೆಯಿಲ್ಲದೆ ನಾವ್ಯಾಕೆ ಗುರುಗಳೆಂದು ನಂಬಿ ಪೂಜೆ ಮಾಡೇವು ? ಕ್ಷೌರ, ಕಮಂಡಲ, ಕಪ್ಪರ, ಕಿರೀಟ, ದಂಡ, ಈ ಮಂತ ಗುರು ಲಕ್ಷಣಗಳಿಂದ ಯಾವಾಗಲೂ ಮೆರೆಯುತ್ತಾರೆ ಅಂದನು

ಮಡಿ—ರುದ್ರಪ್ಪನವರೇ, ಗುರುಲಕ್ಷಣಗಳು ಆತನ ಸ್ವಭಾವಸಿದ್ಧವಾದ ಗುಣಲಕ್ಷಣಗಳೇ ಆಗಿರಬೇಕು ಆದರೆ ನೀವು ಹೇಳಿದಂಥ ಮುರಿಗೇಂದ್ರಸ್ವಾಮಿಗಳಿಗಿರುವಂಥ ಲಕ್ಷಣಗಳು ಗುರುವಿಗಿರತಕ್ಕ ಲಕ್ಷಣಗಳಲ್ಲ ಅವು ಹೊರಗಿನ ಲಾಂಛನಗಳಷ್ಟೆ ಹಿತ್ತಾಳೆಗೆ ಭಂಗಾರದ ಗಿಲೀಟ್ ಮಾಡಿದರೆ ಅದೂ ಸಹ ಭಂಗಾರದಂತೆ ಕಾಣಿಸಬಹುದು ಆದರೆ ಅದನ್ನು ಬೆಂಕಿಯಲ್ಲಿ ಹಾಕಿದ್ದಾದರೆ ಅದರ ನಿಜಲಕ್ಷಣವು ಪ್ರಕಟವಾಗುವದು ಅದರಂತೆ ಹೊರಗಿನ ಲಾಂಛನಗಳನ್ನು ನೋಡಿ ಒಬ್ಬಾತನಿಗೆ ಗುರುವೆಂದು ಹೆಸರಿಟ್ಟಾಗ್ಯೂ ಆತನಿಗೆ ಒಳಗೆ ಎರಡ ಸ್ವಭಾವವಿರಬಹುದಲ್ಲ ಷಟ್‌ಸ್ಥಳ ವಚನವೇನಂದರೆ

ಮುರಿಡಿಯು ಮಡಿದ್ರೆ ಲಾಂಛನವ ಹೊತ್ತು
ಪರೆಯುವೋಲಿ ತಿರುಗುವ ಅಜ್ಞಗಳಿರಾ ಕೇಳಿರಯ್ಯಾ
ಗುರುಸ್ಥಳದ ಕಿರೀಟವೆಂತೂ ದಂಡವೆಂತೂ ಕಮಂಡಲವೆಂತೂ
ಕಪ್ಪರವೆಂತೂ
ಹರಿಹರರಿಗಳವಲ್ಲದ ರೂಪದರೆಯ ಮೇಲೆ ಮೆರೆಯುವದೆಂತೂ
ಅರುಹು ಇಲ್ಲದ ನರರ ಸರಿಗೀಸರಿ
ಕುರಿಯ ಕಂಬಳಿ ಗುರುವಿನ ಗದ್ದಿಗೆಯೇ ? ಯುರಿದುರಿಯುವ ಕಟ್ಟಿಗೆ
ದಂಡಾಗ್ರನೇ ?
ಪರವಸ್ತುವಿನ ಕಪ್ಪರವು ಮಣ್ಣು ಮಡಿಕೆಯೇ ?
ದುರಿತ ಸ್ತ್ರೀಯಲ್ಲಿ ಗುರುಪಾಪೆಂದಲ್ಲಿ ಅರಹು ಕೆಟ್ಟಿತು ಕಾಣಾ
ಕೂಡಲಚೆನ್ನ ಸಂಗಮದೇವಾ—

ಗೌಡ್ರ—ನಮ್ಮ ಗುರಿ ವಾದ ಯೇಸುಕ್ರಿಸ್ತಗೆ ಗುರುಲಕ್ಷಣಗಳಿವೆಯೋ ? ಎಂದು ಕೇಳಿದನು

ಮಡಿ—ನಮ್ಮ ಗುರುವು ನಿಮ್ಮ ಗುರುವು ಎಂದು ಹೇಳುವದಕ್ಕೆ ಅನೇಕ ಗುರುಗಳಿಲ್ಲ ಎಲ್ಲರ ಮೇಲೆ ಕವಿದುಕೊಳ್ಳುವಂಥ ಅಂಧಕಾರವನ್ನು ಪರಿಹರಿಸುವದಕ್ಕೆ ಒಬ್ಬ ಸೂರ್ಯನೇ ಇರುವಂತೆ ಎಲ್ಲರ ಪಾಪಾಂಧಕಾರವನ್ನು ಪರಿಹರಿಸುವದಕ್ಕೆ ಏಕ ಗುರುರಾಯನೇ ಇದ್ದಾನೆ ಪ್ರಕಾಶವು ಸೂರ್ಯನ ಸ್ವಭಾವವಾದ ಗುಣಲಕ್ಷಣವಾಗಿರುವಂತೆ ಗುರುಲಕ್ಷಣಗಳು ಯೇಸುಕ್ರಿಸ್ತನ ಆತನ ಸ್ವಭಾವಸಿದ್ಧವಾದ ಗುಣಲಕ್ಷಣಗಳಾಗಿರುವವರಿಂದ ಆತನೇ ಏಕ ಜನರಿಗೆಲ್ಲಾ ಗುರುವಾಗಿದ್ದಾನೆ ಆತನಲ್ಲಿರುವ ಗುರುಲಕ್ಷಣಗಳೇನಂದರೆ—ಅಧಿಕಾರವುಳ್ಳಾತನು, ಸ್ವಾರ್ಥರಹಿತನು, ತನ್ನ ಪಾತ್ರತೆ ಕಲಹ ಮಾಡಕ ಶಾಸ್ತ್ರಕಾರ ಬೋಧಕನು, ಅದ್ವೈತ, ನರ ಈ ಎರಡು ಸ್ವಭಾವವುಳ್ಳವನು ಈ ಪಂಚಲಕ್ಷಣಗಳೇ ಗುರುಲಕ್ಷಣಗಳು

ಇದ ಮುದ್ದ—ಇ ಕ್ಷ ಲಕ್ಷಣಗಳು ಯೇಸುಕ್ರಿಸ್ತನ ಹೊರತು ಬೇರೆ ಯಲ್ಲಿ ಇಲ್ಲವೋ ಪೂರ್ವಕಾಲದಲ್ಲಿ ಮಹಾ ಋಷಿಶ್ವರರೂ ಕವಿಗಳೂ ರಾಜರುಗಳೂ ದೇವರಲ್ಲಿ ಇಲ್ಲದಿದ್ದರೇ ಅವರಲ್ಲೂ ಕೂಡ ಇಂಥಾ ಗುರುಲಕ್ಷಣಗಳು ಇರಲಿಲ್ಲವೋ ಎಂದು ಕೇಳಿದನು

ಮಡಿ—ಪೂರ್ವದಲ್ಲಿ ಕೆಲವರು ಋಷಿಶ್ವರರೂ ಕವೀಶ್ವರರೂ ಇದ್ದರೆಂದು ಅವರು ಜೀವಿತ ಧ ಗ್ರಂಥಗಳೂ ಪುರಾಣಗಳಿಂದ ಮತಗಳೂ ಗ್ರಂಥಗಳೂ ತಕ್ಕ ಜನಗಳಿಗೆ ಸರ ಆದರೆ ಪೂರಿಸಿದ ಗುರುಲಕ್ಷಣವು ಅವರಲ್ಲಿ ಯಾರಿಗೂ ಇರಲಿಲ್ಲವೆ ಮುಖದಲ್ಲಿ ಅವರು ತೋರಿಸಿದಂಥ ರೀತಿಯೂ ಅವರು ಏರ್ಪಡಿಸಿರುವ ಧರ್ಮ ಮತಗಳೂ ತಕ್ಷಣ ತಕ್ಕ ದೃಷ್ಟಾಂತಗಳಾಗಿವೆ ಹ್ಯಾಗಂದರೆ ಸತ್ಯವನ್ನು ಕಂಡುಕೊಳ್ಳುವದಕ್ಕೆ ಅವರು ಬಹಳ ಪ್ರಯಾಸಪಟ್ಟರಲ್ಲದೆ ಸತ್ಯವನ್ನು ಕುರಿತು ಜನರಿಗೆ ಬಾಹ್ಯ ರೀತಿಗಳಿಂದ ತೋರಿಸಿದ್ದಾರೆ ಆದರೆ ನಾನೇ ಸತ್ಯ ಸತ್ಯ ಬಿಟ್ಟರೆ ಬೇರೆ ಸತ್ಯವಿಲ್ಲವೆ ಮ ಅವರಲ್ಲಿ ಯಾರೂ ಬೋಧಿಸಲಿಲ್ಲ ಇದಲ್ಲದೆ ಮಾನುಷ್ಯರಿಗೆ ಸಂಭವಿಸುವಂಥ ನಾನಾ ಕಷ್ಟಗಳಿಗೆ ಕಾರಣಗಳೇನು ? ಎಂದು ತಿಳಿದುಕೊಳ್ಳುವದಕ್ಕೆ ಅವರು ಬಹಳ ಪ್ರಯತ್ನಗಳನ್ನು ಮಾಡಿದ್ದಲ್ಲದೆ ಮನುಷ್ಯರ ಬುದ್ಧಿಯಿಂದ ಆಯಾ ಕಾರಣಗಳನ್ನು ಕಲ್ಪನೆ ಮಾಡಿ ಬರೆದಿದ್ದಾರೆ ಆದರೆ ಆ ಕಷ್ಟಗಳನ್ನು ನಾನೇ ಹೊತ್ತುಕೊಳ್ಳುವದಕ್ಕೆ ಒಪ್ಪಿದ್ದೇನೆಂದು ಅವರಲ್ಲಿ ಯಾರೂ ಹೇಳಲಿಲ್ಲ ಅದು ಸಾಧ್ಯವಲ್ಲ ಅವರು ಮೋಕ್ಷ ಹೊಂದುವದಕ್ಕೆ ಹಲವು ಮಾರ್ಗಗಳನ್ನು ಜನರಿಗೆ ಏರ್ಪಡಿಸಿಕೊಟ್ಟದ್ದಾರೆ ಆದರೆ ಮೋಕ್ಷಕ್ಕೆ ನಾನೇ ಮಾರ್ಗ ನನ್ನ ಬಿಟ್ಟರೆ ಬೇರೆ ಮಾರ್ಗವಿಲ್ಲವೆಂದು ಅವರಲ್ಲಿ ಯಾರೂ ಬೋಧಿಸಲಿಲ್ಲ ಯಾಕೆಂದರೆ ಆ ಥ ಅಧಿಕಾರವು ಅವರಲ್ಲಿ ಯಾರಿಗೂ ಇರಲಿಲ್ಲ ಆದಕಾರಣ ತಮ್ಮ ಅಧಿಕಾರವನ್ನು ತಮ್ಮ ಬೋಧನೆಗಳಲ್ಲಿಯೂ ಕೆಲಸಗಳಲ್ಲಿಯೂ ತೋರಿಸಲಿಲ್ಲ ಯೇಸುಕ್ರಿಸ್ತನು ಮಾತ್ರ ಅಂಥಾ ಅಧಿಕಾರವು ತನಗುಂಟೆಂದು ತನ್ನ ಬೋಧನೆಯಿಂದಲೂ ಕಾರ್ಯಗಳಿಂದಲೂ ಸ್ಪಷ್ಟವಾಗಿ ತೋರಿಸಿಕೊಟ್ಟನು ಹ್ಯಾಗಂದರೆ ಸತ್ಯವನ್ನು ಕುರಿತು ಆತನು ಜನರಿಗೆ ಬೋಧಿಸಿದ್ದಲ್ಲದೆ ನಾನೇ ಸತ್ಯವೆಂದು ಅಧಿಕಾರದಿಂದ ಬೋಧಿಸಿದ್ದಾನೆ ಮನುಷ್ಯರಿಗೆ ಸಂಭವಿಸುವಂಥ ಆಯಾ ಕಷ್ಟಗಳಿಗೆ ತಕ್ಕ ಕಾರಣಗಳನ್ನು ಕುರಿತು ಆತನು ಸ್ಪಷ್ಟವಾಗಿ ಬೋಧಿಸಿದ್ದಲ್ಲದೆ ಆ ಕಷ್ಟಗಳನ್ನು ನಾನೇ ಹೊತ್ತುಕೊಳ್ಳುವದಕ್ಕೆ ಬಂದಿದ್ದೇನೆ ಎಲ್ಲ ಕಷ್ಟಪಡುವವರೇ ಭಾರಗಳನ್ನು ಹೊತ್ತಿರುವವರೇ ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿ ಕೊಡುತ್ತೇನೆಂದು ಅಧಿಕಾರದಿಂದ ಸಾರಿದ್ದಾನೆ ಇದಲ್ಲದೆ ಮೋಕ್ಷಕ್ಕೆ ಹೋಗುವಂಥ ಮಾರ್ಗವನ್ನು ಕುರಿತು ಆತನು ಜನರಿಗೆ ಬೋಧಿಸಿದ್ದಲ್ಲದೆ ನಾನೇ ಮಾರ್ಗ, ನನ್ನ ಮುಖಾಂತ್ರವಲ್ಲದೆ ಯಾರೂ ಮೋಕ್ಷ ಹೊಂದಲಾರರೆಂದು ತನ್ನ ಗುರುತ್ವದ ಅಧಿಕಾರದಿಂದ ಬೋಧಿಸಿರುವದಲ್ಲದೆ ಅಸಾಧ್ಯ ಜಾಡ್ಯಗಳಿಗೂ ಮರಣಾತ್ಮಕಗಳಿಗೂ ಪ್ರಚಂಡವಾದ ಗಾಳಿಗೂ ಉಕ್ಕೇರಿದಂಥ ಸಮುದ್ರಕ್ಕೂ ಅಧಿಕಾರದಿಂದ ಆತನು ಅವುಗಳಿಗೆ ಅಪ್ಪಣೆ ಕೊಡಲು ಅವುಗಳು ಆತನಿಗೆ ವಿಧೇಯವಾದವು ಇದು ಯೇಸುಕ್ರಿಸ್ತನಿಗಿದ್ದಂಥ ಮೊದಲನೇ ಗುರುಲಕ್ಷಣವು ಇಂಥಾ ಅಧಿಕಾರವುಳ್ಳ ಗುರುವೇ ನಮಗೆ ಅವಶ್ಯವಾಗಿದ್ದಾನೆ

ಬಿಟ್ಟಕರ್ಪೂರ ಉರಿದು ಬೊಟ್ಟಿಡಲು ಬೂದಿಲ್ಲ
ನೆಟ್ಟನೆ ಗುರುವಿನುಪದೇಶದಿಂ ಕರ್ಮ
ಮುಟ್ಟುದು ನೋಡ ಸರ್ವಜ್ಞ

ಸಾವುಕಾರ ರುದ್ರಪ್ಪ—ನಮ್ಮ ಶಿವಾಚಾರ ಮತಸ್ಥರಿಗೆ—ಉಜ್ಜನಿ, ಬಾಳೆಹಳ್ಳಿ, ಪರುವತ, ಕೊಲ್ಲಿಪಾಕಿ, ಸೌರಾಷ್ಟ್ರ ಎಂಬ ಪಂಚಸಿಂಹಾಸನಗಳುಂಟು ಈ ಸಿಂಹಾಸನಾಧಿಪತಿಗಳಾದ ಗುರುವುಗಳಿಗೆ ಆದಿಯಿಂದ ಅಧಿಕಾರ ಇರುತ್ತದೆ ನಮ್ಮ ಮತಸ್ಥರಲ್ಲಿ ಯಾರಾದರೂ ಅವರಿಗೆ ಕಾಣಿಕೆಕೊಡದಿದ್ದರೆ ತಕ್ಷಣ ಅಂಥವರಿಗೆ ಭಹಿಷ್ಕಾರ ಕೊಡುತ್ತಾರೆ ಗುರು ಅಧಿಕಾರವು ಅವರಿಗಿಲ್ಲದಿದ್ದರೆ ಕಾಣಿಕೆಗಳನ್ನು ತೆಗೆದುಕೊಳ್ಳುವದಕ್ಕೂ ಭಹಿಷ್ಕಾರವನ್ನು ಕೊಡುವದಕ್ಕೂ ಆದೀತೇ ? ಅಂದನು

ಮಡಿ—ಕಾಣಿಕೆಗಳನ್ನು ತೆಗೆದುಕೊಳ್ಳುವದಕ್ಕೂ ಭಹಿಷ್ಕಾರವನ್ನು ಕೊಡುವದಕ್ಕೂ ಆ ಗುರುವುಗಳಿಗೆ ಅಧಿಕಾರವಿರಬಹುದು ಯಾಕೆಂದರೆ ಆ ಮತಸ್ಥರೇ ಅಂಥಾ ಅಧಿಕಾರವನ್ನು ಆ ಗುರುಗಳಿಗೆ ಕೊಟ್ಟಿದ್ದಾರಷ್ಟೆ ಆದರೆ ಇಂಥಾ ಅಧಿಕಾರದಿಂದ ಯಾರಿಗೆ ಲಾಭ ? ಗುರುಗಳಿಗೋ ? ಶಿಷ್ಯರಿಗೋ ? ಶಿಷ್ಯರ ಪಾಪಕಲ್ಮಷವನ್ನು ತೊಳೆಯುವದಕ್ಕೂ ಸಂಸಬಂಧನದಿಂದ ಅವರನ್ನು ಬಿಡಿಸುವದಕ್ಕೂ ಗುರುವಿಗೆ ಅಧಿಕಾರವಿರಬೇಕು ಯೇಸುಕ್ರಿಸ್ತನಿಗೆ ಮಾತ್ರ ಇಂಥಾ ಅಧಿಕಾರವುಂಟು ಆತನು ಪಾಪಿಷ್ಟರನ್ನು ಹುಡುಕುವದಕ್ಕೂ ರಕ್ಷಿಸುವದಕ್ಕೂ ಬಂದಿದ್ದೇನೆಂದು ತಾನೇ ಹೇಳಿದ್ದಾನೆ

ಯೇಸುಕ್ರಿಸ್ತನಿಗಿರುವಂಥ ಎರಡನೇ ಗುರುಲಕ್ಷಣವೇನಂದರೆ—ಸ್ವಾರ್ಥರಹಿತನಾಗಿದ್ದನು ಕುರುಡನು—ಕುರುಡನಿಗೆ ದಾರಿತೋರಿಸಲಾರನು ಹ್ಯಾಗೋ ಹಾಗೆ ಯೇ ಪಾಪಿಷ್ಟನಾದ ಗುರುವು ಪಾಪಿಷ್ಟನಾದ ಶಿಷ್ಯನನ್ನು ರಕ್ಷಿಸಲಾರನು ಮಹಾತ್ಮರೆನ್ನಿಸಿಕೊಳ್ಳುವವರು ಈ ಲೋಕದಲ್ಲಿ ಅನೇಕರಿದ್ದಾಗ್ಯೂ ಪಾಪರಹಿತರು ಅವರಲ್ಲಿ ಯಾರೂ ಇಲ್ಲ ಯಾಕೆಂದರೆ ಪಾಪಪರಿಹಾರಕ್ಕಾಗಿ ಅವರು ನಾನಾ ಸಾಧನೆಗಳನ್ನು ಏರ್ಪಡಿಸಿರುವದಲ್ಲದೆ ತಾವೇ ಅಂಥ ಸಾಧನೆಗಳನ್ನು ಕೈಕೊಂಡಿದ್ದಾರೆ ಅವರು ಪಾಪಿಗಳಾಗಿದ್ದರೆಂಬುವದಕ್ಕೆ ಅವರು ಅನುಸರಿಸಿದಂಥ ಸಾಧನೆಗಳೇ ಸಾಕ್ಷಿಗಳಾಗಿವೆ ಯೇಸುಕ್ರಿಸ್ತನು ಮಾತ್ರ ಪಾಪರಹಿತನಾಗಿದ್ದನು

ಆತನು ಈ ಲೋಕದಲ್ಲಿದ್ದಾಗ ಪಾಪವನ್ನು ಎಷ್ಟೋ ಹೆಚ್ಚಾಗಿ ದ್ವೇಷಿಸಿದ್ದಲ್ಲದೆ ಪಾಪದಿಂದುಂಟಾಗುವಂಥ ಅದರ ದುಷ್ಫಲಗಳನ್ನು ಕುರಿತು ಜನರಿಗೆ ಬಹು ಆಸಕ್ತಿಯಿಂದ ಬೋಧಿಸಿದನು ಆತನನ್ನು ಪಾಪವನ್ನು ಹಗೆವಾಡಿದವರೂ ಅವರಿಂದಾಗುವಂಥ ಮಹ ಒವನ್ನು ಕುರಿತು ದುಃಖಪಟ್ಟವರೂ ಈ ಲೋಕಕ್ಕೆ ಯಾರೂ ಈ ವರೆಗೂ ಬಂದಿಲ್ಲ ಆದರೆ ಆ ಸುತನ್ನ ಸ್ವಂತ ಪಾಪಕ್ಕಾಗಿ ಎಂದೂ ಪಶ್ಚಾತ್ತಾಪ ಪಡಲೂ ತನ್ನ ಸ್ವಂತ ಪಾಪಪರಿಹಾರಕ್ಕಾಗಿ ಯಾವದೊಂದು ಸಾಧನೆ ಮಾಡಲೂ ಇಲ್ಲ ಯಾಕಂದರೆ ಆತನು ಪಾಪರಹಿತನಾಗಿದ್ದನು ಆತನು ಪವಿತ್ರನಾಗಿದ್ದ ಕಾರಣ ಅನೇಕ ಸಾಧಿಸ್ಸರು ಆತನ ಮೇಲೆ ಅಸೂಯೆ ಪಟ್ಟು ಆತನಲ್ಲಿ ಪಾಪವನ್ನು ಕಂಡು ಹಿಡಿಯಬೇಕೆಂದು ಎಷ್ಟೋ ಪ್ರಯತ್ನ ಮಾಡಿದರು ಆದರೆ ಒಂದು ದೋಷವನ್ನಾದರೂ ಆತನಲ್ಲಿ ಕಂಡುಕೊಳ್ಳಲಿಲ್ಲ ಯಾಕಂದರೆ ಆತನು ಮನೋವಾಕ್ಕಾಯಗಳಲ್ಲಿ ನಿರ್ಮಲನಾಗಿದ್ದನು

ಯೇಸುಕ್ರಿಸ್ತನಿಗಿರುವ ಮೂರನೇ ಗುರುಲಕ್ಷಣವೇನಂದರೆ—ಮಹಾತ್ಮರ ಕಾಲಜ್ಞಾನ ವಾಕ್ಯಗಳ ಪ್ರಕಾರ ಬಂದಾತನು ಸೂರ್ಯೋದಯಕ್ಕಿಂತ ಮುಂಚೆ ಶುಕ್ರ ನಕ್ಷತ್ರವು ಆಕಾಶದಲ್ಲಿ ಉದಯವಾಗುವದನ್ನು ಸೂಚಿಸುವಂತೆ ಸುಜ್ಞಾನ ಸೂರ್ಯನಾದ ಯೇಸುಕ್ರಿಸ್ತನು ಈ ಲೋಕದಲ್ಲಿ ಅವತಾರ ಎತ್ತುವದಕ್ಕಿಂತ ಮುಂಚೆ ದೇವಾತ್ಮವನ್ನು ಹೊಂದಿದಂಥ ಮಹಾತ್ಮರು ಆತನ ಜನನದ ಸ್ಥಳವನ್ನೂ ರೀತಿಯನ್ನೂ ಆತನ ಉದ್ಯೋಗವನ್ನೂ ಅವರಿಂದಾಗುವಂಥ ಫಲಗಳನ್ನೂ ಆತನು ಅನುಭವಿಸುವ ದುಃಖ ಮರಣಗಳನ್ನೂ ಕುರಿತು ಕ್ರಿಸ್ತನ ಜನನದ ಹಳೇ ಒಡಂಬಡಿಕೆ ಎಂಬ ಭಾಗದಲ್ಲಿ ಬರೆದಿದ್ದಾರೆ ಹೊಸ ಒಡಂಬಡಿಕೆ ಎಂಬ ಯೇಸುಕ್ರಿಸ್ತನ ಚರಿತ್ರೆಯಲ್ಲಿ ಆ ಮಹಾತ್ಮರು ಬರೆದಂಥ ಆತನ ವಿಷಯವಾದ ಕಾಲಜ್ಞಾನ ವಾಕ್ಯಗಳು ಒಂದೂ ತಪ್ಪದೆ ಆತನ ಚರಿತ್ರೆಯಲ್ಲಿ ಈಡೇರಿರುತ್ತವೆ ಕ್ರಿಸ್ತ ವೇದದಲ್ಲಿ ಮಾತ್ರವಲ್ಲ ಪೂರ್ವಕಾಲದ ಎಲ್ಲಾ ದೇಶಸ್ಥರೂ ಒಬ್ಬ ದೈವ ಗುರುವು ಈ ಲೋಕಕ್ಕೆ ಅಸತ್ಯವನ್ನು ಬಯಲುಮಾಡುವದಕ್ಕೂ ಸತ್ಯವನ್ನು ಸ್ಥಾಪಿಸುವದಕ್ಕೂ ಅವತಾರ ಪುರುಷನಾಗಿ ಎದ್ದು ಬರುತ್ತಾನೆಂದು ಆತನ ಬರುವಿಕೆಯನ್ನು ಅತಿ ಕಾಂಕ್ಷೆಯಿಂದ ಕಾದುಕೊಂಡಿದ್ದರೆಂದೂ ಅವರು ತಮ್ಮ ಗ್ರಂಥಗಳಲ್ಲಿ ಬರೆದಿರುವಂಥ ಕಾಲಜ್ಞಾನ ವಾಕ್ಯಗಳು ತಕ್ಕ ಸಾಕ್ಷಿಗಳಾಗಿವೆ ಅಂಥಾ ಕಾಲಜ್ಞಾನ ವಾಕ್ಯಗಳಲ್ಲಿ ನಮ್ಮ ಮತಸ್ಥರಿಗೆ ಕೂಡ ಇಷ್ಟರೊಳಗಿನ ನಮ್ಮ ಪರಿಚಯ ಬರೆದಿರುವಂಥ ಕಾಲಜ್ಞಾನ ವಚನಗಳಲ್ಲಿ ಒಂದೆರಡನ್ನು ಮಾತ್ರ ಈಗ ಉದಹರಣೆಗಾಗಿ ಹೇಳುತ್ತೇನೆ

1 ಜಾತಿ ವಿಜಾತಿಯ ನಡುವೆ ಗುರು
ಜಾತ ತಾ ಒಂದಾನು ಜಾತಿ ಆ
ಜಾತಿಪಿತಗೂಡಿ ಜಾತಿ ಅಜಾತನೊಡಗೂಡಿ ಪ್ರಭುರಾಯ
ಜಾತಿ ಒಂದಾನು ಮತ್ತೆ ಕೇಳ್

2 ಗೊಲ್ಲರಮನೆಯೊಳಗಿನ ಬೇಡಿ ಉಲ್ಲಂಘಿಸಿ ಉದಿಸುವಂತೆ
ಕೊಲ್ಲಿಪದ ಜಗದುಕುಮಾರರುಗಳುಯುವದಕ್ಕ
ಕೊಡದ ಗೋಪಗುರುಗಳು ಜಾಯುವದಕ್ಕೆ ಪ್ರಭುರಾಯ
ಅಲ್ಲ ಪರಿ ಬಂದ ಒಗ ಬೇರೆ

3 ಪಾಲುಗ್ರಂಥ ನೋಡುವ ಗೆಸ್ಟ್ರೋಲಕ್ಷ್ಣವ ಧ
ಪಾಲಗಳ ಅಮೃತವಾಕ್ಯದಲಿ ಪ್ರಭುರಾಯ
ಪಾಪ ವನು ಅಮರತ್ವ ಆಗುವುದು
ಹಾಗಿಗೆ ಪಪ್ಪ ಕೆಟ್ಟ ತೆ

ನರಗುರುಗಳ ಪದ್ಯ ... ಇತಿಹಾಸ ಮೊದಲಾದ ಅನೇಕ ಗ್ರಂಥಗಳನ್ನು ಬಯಲುಮಾಡಿ ಸತ್ಯವನ್ನು ಸ್ಥಾಪನೆಮಾಡುವದಕ್ಕೆ ಗುರು ದೇವರು ಕಾಲಜ್ಞಾನ ತಿಳಿದವರಾಗಿ ಸ್ಥೂಲ ಸೂಕ್ಷ್ಮವನ್ನು ಧರಿಸಿಕೊಂಡು ದೈವತ್ವವನ್ನು ಮನುಷ್ಯತ್ವವನ್ನು ಧರಿಸಿಕೊಂಡು ಈ ಲೋಕಕ್ಕೆ ಬರುತ್ತಾನೆಂಬುವದು ಈ ವಚನಗಳ ಮುಖ್ಯ ತಾತ್ಪರ್ಯವಾಗಿದೆಯಲ್ಲ ಈ ವಚನಗಳು ಪ್ರಕಾರ ಆ ಗುರು ಅನೇಕ ಕಾರ್ಯಗಳನ್ನು ನಡೆಸಿದಾತನು ಯಾರು ಹೀಗೆ ಸಮಸ್ತ ಮತಗಳಲ್ಲಿ ಒಬ್ಬಾತನು ಈ ವರೆಗೂ ಯಾರೂ ಬಂದಿಲ್ಲ ಮತ್ತು ಇಂಥಾತನು ಮುಂದೆ ಬರುವನಾಗಿ ಕಾಣುವದಿಲ್ಲ ಯಾಕಂದರೆ ಯೇಸುಕ್ರಿಸ್ತನು ಬಂದು ಆ ಕರಣ ಕಾಲಜ್ಞಾನ ವಾಕ್ಯಗಳನ್ನೆಲ್ಲಾ ಈಡೇರಿಸಿದ್ದಾನೆ. ಹಾಗಾದರೆ ಈ ಯೇಸುಕ್ರಿಸ್ತನು ಯಾರು ? ಎಲ್ಲಾ ದೇಶಸ್ಥರೂ ಮತ್ತು ನಮ್ಮ ಶರಣರೂ ಅತಿ ಕಾಂಕ್ಷೆಯಿಂದ ಆತನ ಬರುವಿಕೆಯನ್ನು ಎದುರು ನೋಡುತ್ತಿದ್ದಂಥ ಪರಗುರುವು ಈತನೇ ಈತನಿಗೇನೇ ನಮ್ಮ ಶರಣರು ಪ್ರಭುರಾಯನೆಂದು ಹೆಸರಿಟ್ಟುಕೊಂಡು ಆತನ ಬರುವಿಕೆಯನ್ನು ಎದುರು ನೋಡುತ್ತಾ ಇದ್ದರು ಅವರ ಕಾಲದಲ್ಲಿ ಈ ಕ್ರಿಸ್ತಮತವು ಪ್ರಕಟಕ್ಕೆ ಬಂದಿದ್ದರೆ ಅವರು ಇದನ್ನು ಅವಲಂಬಿಸದೆ ಇರುತ್ತಿದ್ದಿಲ್ಲವೆಂದು ನೆನಸುತ್ತೇನೆ ಅಂದನು

[ಶೇಷ]

ಮೈಸೂರು ಗೆಜೆಟ್ ಸಂಗ್ರಹ

ಹಾಸನ್ ತಾಲ್ಲೂಕು ಕೆಂಚಿಕ ಗ್ರಾಮದಲ್ಲೂ, ತಿರುಮಕೂಡ್ಲು ನರಸೀಪುರದ ತಾಲ್ಲೂಕು ಕೇತಹಳ್ಳಿಯಲ್ಲೂ, ನಂಜನಗೂಡು ತಾಲ್ಲೂಕು ಕಳಲೆಯಲ್ಲೂ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು

ಮೆ॥ ಹಯಾತ್ ಸಾಬರನ್ನು ತರೀಕೆರೆ ತಾಲ್ಲೂಕ್ ಬೋರ್ಡ್ ಮೆಂಬರಾಗಿ ಚುನಾಯಿಸಿರುವುದನ್ನು ಮಂಜೂರ್ ಮಾಡಿದೆ

ಪ್ಲೀಡರ್ ಮೆ॥ ನಾಗೇಶ್ವರ ಐಯರವರನ್ನು ಕೋಲಾರದ ತಾಲ್ಲೂಕ್ ಬೋರ್ಡ್ ಮೆಂಬರಾಗಿ ಮತ್ತೆ ನೇಮಕಮಾಡಿದೆ

ರೆವ್ ಡಿ ಎ ರೀಸ್ ಯವರನ್ನು ಮೈಸೂರು ಲೋಕಲ್ ಪರೀಕ್ಷೆಗಳ ಬೋರ್ಡ್ ಮೆಂಬರಾಗಿ ನೇಮಕ ಮಾಡಿದೆ

ತುಂಕೂರು ಮ್ಯುನಿಸಿಪಾಲಿಟಿಗೆ ಕೌನ್ಸಲರಾಗಿ ಪ್ರಜೆಗಳಿಂದ ಚುನಾಯಿಸಲ್ಪಟ್ಟವರು—ಮೆ॥ ಗಳಾದ ಪ್ಲೀಡರ್ ಸಿ ಎನ್ ವೆಂಕಟರಾಯರು, ವರ್ತಕ ಯಜಮಾನ್ ಗುಬ್ಬಿ ಹುಚ್ಚಯ್ಯನವರು, ವರ್ತಕ ಕೋದಂಡರಾಮಶೆಟ್ಟರು, ವರ್ತಕ ತಿಪ್ಪಯ್ಯನವರು, ಸಾಹುಕಾರ್ ಮೈಲಾರಪ್ಪನವರು, ಪೆನ್ಷನ್ ಅ॥ ಕಮಿಷನರ್ ಸಿ ಶೇಷಾದ್ರಿ ಐಯಂಗಾರ್ರು, ಸರ್ಕಾರದವರಿಂದ ನೇಮಿಸಲ್ಪಟ್ಟವರು—ಮೆ॥ ಗಳಾದ ಜಮೀನ್‌ದಾರ್ ಮತ್ತು ಇನಾಂದಾರ್ ಕರಡಿ ಮಲ್ಲಪ್ಪನವರು, ಪ್ಲೀಡರ್ ವೈ ರಾಮರಾಯರು, ಗ॥ ಹೈ ಸ್ಕೂಲ್ ಹೆಡ್ ಮಾಸ್ಟರ್ ಎ ಸುಬ್ರಹ್ಮಣ್ಯ ಐಯರವರು, ರೆವ್ ಇ ಎಸ್ ಎಡ್ವರ್ಡ್ಸ್ ರವರು, ಪೆನ್ಷನ್ ಅ ಕಮಿಷನರ್ ಹೆಚ್ ಹನುಮಂತೈಯನವರು, ಹಕೀಂ ಗುಲಾಂ ಮಹಮ್ಮದ್ ಸಾಹೇಬರು, ವರ್ತಕ ಬಿ ಲಿಂಗಪ್ಪನವರು ಇವರೆಲ್ಲಾ ಮೂರು ವರುಷದ ವರೆಗೆ ಕೌನ್ಸಲರಾಗಿರತಕ್ಕದ್ದು

ಸಬ್ ಅ॥ ಸರ್ಜನ್ ಮೆ॥ ಎಚ್ ಎಸ್ ನಂಜುಂಡೈಯನವರಿಗೆ ಜೂಲೈ ತಾ ೨೮ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ರೆವಿನ್ಯೂ ಕಮಿಷನರ್ ರಾಜಕಾರ್ಯ ಪ್ರವೀಣ ಮೆ॥ ಎ ರಂಗಸ್ವಾಮಿ ಐಯಂಗಾರ್‌ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ರೆವಿನ್ಯೂ ಕಮಿಷನರವರ ಅಸಿಸ್ಟೆಂಟರಾದ ಮೆ॥ ಬಿ ರಾಮಸ್ವಾಮೈಯನವರು ರೆವಿನ್ಯೂ ಕಮಿಷನರವರ ಆಫೀಸಿನ ಚಾಲ್ತಿ ಕೆಲಸಗಳ ಭಾರ್ಜನ್ನು ವಹಿಸತಕ್ಕದ್ದು

ನಾನಾರದ ಸಬ್ ಡಿವಿಜನ್ ಅ ಕಮಿಷನರ್ ಮೆ॥ ಎಂ ಶ್ರೀನಿವಾಸಯ್ಯಂಗಾರ್‌ರವರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೈದು ದಿನ ಜಾಸ್ತಿ ಮಾಡಿದೆ

ಆ ಕಮಿಷನರ್ ಮೆ ಆರ್ ನಾರಾಯಣರಾಯರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳು ಜಾಸ್ತಿ ಮಾಡಿದೆ

ತುಂಕೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರ್ ರವರ ಕೈಕೆಳಗೆ ಸ್ಪೆಷಲ್ ಡ್ಯೂಟಿಯ ಜೂನಿಯರ್ ಮೆ ಕೆ ವಿ ದೇಶಿಕಾಚಾರ್ಯರಿಗೆ ಜೂಲೈ ತಾ ೨ ರಿಂದ ಒಂದು ತಿಂಗಳ ಪ್ರಿವಿಲೆಜ್ ರಜ ಕೊಟ್ಟಿದೆ

ಹಾಸನದ ಹೈ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ಎಂ ಬಿ ಶ್ರೀನಿವಾಸೈಯಂಗಾರ್‌ರವರನ್ನು ಚಿಕ್ಕಮಗಳೂರಿಗೆ ಹೈ ಸ್ಕೂಲ್ ಹೆಡ್ ಮಾಸ್ಟರಾಗಿ ವರ್ಗ ಮಾಡಿದೆ

ಮೆ ಕೆ ಎಸ್ ಚಂದ್ರಶೇಖರ ಐಯರವರು ಜೂಲೈ ತಾ ೧೨ ರಲ್ಲಿ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ ಆಫೀಸಿನ ಛಾರ್ಜನ್ನು ಮೆ॥ ಎಸ್ ಬಾಲಸುಬ್ರಹ್ಮಣ್ಯ ಐಯರವರಿಂದ ವಹಿಸಿಕೊಂಡರು

ಮೆ ಜಸ್ಟಿಸ್ ಎಸ್ ಇಸ್ಟ್ಯರವರು ಜೂಲೈ ತಾ ೧೨ ರಲ್ಲಿ ಚೀಫ್ ಕೋರ್ಟಿನ ಚೀಫ್ ಜಡ್ಜ್ ಕೆಲಸದ ಛಾರ್ಜನ್ನು ವಹಿಸಿಕೊಂಡರು

ತುಂಕೂರು ಸಬ್ ಡಿವಿಜನ್ ಛಾರ್ಜನ್ನು ವಹಿಸಿರುವ ಅ ಕಮಿಷನರ್ ಮೆ ಸಿ ವಿ ಕಟರಾಯರು ಗುಬ್ಬಿ ಸಬ್ ಡಿವಿಜನ್ ಛಾರ್ಜನ್ನೂ ವಹಿಸಿರತಕ್ಕದ್ದು

ಅ ಜೂನಿಯರ್ ಮೆ॥ ಪಿ ಸಿ ಶ್ರೀನಿವಾಸ ಐಯಂಗಾರ್ರನ್ನು ಶಿವಮೊಗ್ಗ ಡಿವಿಜನ್ನಿಂದ ಕೋಲಾರ್ ಡಿವಿಜನ್‌ಗೆ ವರ್ಗಮಾಡಿದೆ

ಮುಂದೆ ಹೇಳುವ ಸಬ್ ರಿಜಿಸ್ಟ್ರಾರುಗಳ ವರ್ಗಾವರ್ಗಿಯನ್ನು ಹುಕುಂ ಮಾಡಿದೆ —ಪಿ ಶ್ರೀನಿವಾಸಾಚಾರ್ಯರು ಯಡತೊರೆಯಿಂದ ಗೋಣಿಬೀಡು ನಾಗರಿಗೆ, ಕೆ ದೊರೆಸ್ವಾಮಯ್ಯಂಗಾರ್ರು ಗೋಣಿಬೀಡಿನಿಂದ ಯಡತೊರೆಗೆ, ಎಂ ನಂಜುಂಡೈಯನವರು ಮಳವಳ್ಳಿಯಿಂದ ಪಾಲ್ಗಿರಿಗೆ, ಜಿ ರಂಗಾಚಾರ್ರು ಪಾಲ್ಗಿರಿಯಿಂದ ತೀರ್ಥಹಳ್ಳಿಗೆ ಎಂ ನಾರಾಯಣರಾಯರು ತೀರ್ಥಹಳ್ಳಿಯಿಂದ ಮಂಡ್ಯಕ್ಕೆ ಎಂ ಚಕ್ರಪಾಣಿರಾಯರು ಮಂಡ್ಯದಿಂದ ಹಾಸನಕ್ಕೆ, ಎಚ್ ನಾರಾಯಣರಾಯರು ಹಾಸನದಿಂದ ಅರಸೀಕೆರೆಗೆ ಒ ಎ ರ ಗೆ ಐಸಾನ್ ಮುವರು ಅರಸೀಕೆರೆಯಿಂದ ದೇವನಹಳ್ಳಿಗೆ ಬಿ ಎ ನಾರಸ್ಯಯ್ಯಂಗಾರ್ರು ದೇವನಹಳ್ಳಿಯಿಂದ ತಿಪ್ಪೂರಿಗೆ ಎಚ್ ಲಕ್ಷ್ಮೀಕಾಂತಯ್ಯಂಗಾರ್ರು ತಿಪ್ಪೂರಿನಿಂದ ಮಳವಳ್ಳಿಗೆ ಬಿ ಟಿ ರಾಮಸ್ವಾಮೈಯಂಗಾರ್ರು ಚನ್ನರಾಯಪಟ್ಟಣದಿಂದ ದೊಡ್ಡಬಳ್ಳಾಪುರಕ್ಕೆ ಎಂ ಟಿ ಸಂಪತ್ಕುಮಾರಾಚಾರ್ರು ದೊಡ್ಡಬಳ್ಳಾಪುರದಿಂದ ಚನ್ನರಾಯಪಟ್ಟಣಕ್ಕೆ ಸಿ ಜಯರಾಯರು ಮಂಜರಾಬಾದಿನಿಂದ ದಾವಣಗೆರೆಗೆ ಎಂ ವೆಂಗ್ರಮಶೆಟ್ಟರು ದಾವಣಗೆರೆಯಿಂದ ಚಿಕ್ಕಮಗಳೂರಿಗೆ, ಎಂ ಎಸ್ ರಾಮದಾಸಪ್ಪನವರು ಚಿಕ್ಕಮಗಳೂರಿನಿಂದ ಮಂಜರಾಬಾದಿಗೆ, ಜಿ ಎಸ್ ಚನ್ನಮಲ್ಲಪ್ಪ ಶೆಟ್ಟರು ನೆಲಮಂಗಲದಿಂದ ಪಗಡೆಗೆ ಸಿ ಶ್ರೀನಿವಾಸಯರು ಪಾವಗಡದಿಂದ ಕೋಲಾರಕ್ಕೆ, ಎ ನರಸಿಂಗರಾಯರು ಕೋಲಾರದಿಂದ ನೆಲಮಂಗಲಕ್ಕೆ

ವೃತ್ತಾಂತ ಪತ್ರಿಕೆ.

ಸನ್ ೧೯೦೯ ನೇ ಇಸವಿ ಜೂಲೈ ತಾ|| ೨೨ ನೇ ಗುರುವಾರ

ಪರ್ಷಿಯಾ ರಾಜ್ಯದಲ್ಲಿ ಕಷ್ಟಗಳು.

ಈಗ ಪರ್ಷಿಯಾ ರಾಜ್ಯದಲ್ಲಿ ಬಹಳ ಕಷ್ಟಗಳುಂಟಾಗಿ ಪ್ರಜಾ ನೆಮ್ಮದಿಯು ತಪ್ಪಿಹೋಗಿದೆ ಎಂದೂ, ಷಾ ಸುಲ್ತಾನರವರು ಪ್ರಜೆಗಳ ಅಪೇಕ್ಷೆಯ ಪ್ರಕಾರ ಪಾರ್ಲಿಮೆಂಟ್ ಸಭೆಗಳನ್ನು ಏರ್ಪಡಿಸದೆ ಅವಿವೇಕವಾದ ಕಾರ್ಯಗಳನ್ನು ನಡಿಸುತ್ತಿದಾರೆಂದೂ ಕಳೆದ ವಾರ ತಿಳಿಸಿದೆವಷ್ಟೆ. ಷಾ ಸುಲ್ತಾನರವರು ತಾವಾಗಿಯೇ ಇದಕ್ಕೆ ಅಡಚಣೆಯನ್ನು ಕಲ್ಪಿಸಿರುತ್ತಾರೋ, ಅವರ ಒಳಸುಣ ಅಧಿಕಾರಿಗಳೂ ಐಸ್ವಾನೀಕರೂ ಅವರಿಗೆ ಆ ರೀತಿ ಪ್ರೇರೇಪಿಸಿರುತ್ತಾರೋ ನಮಗೆ ತಿಳಿಯದು. ಹ್ಯಾಗೂ ಪರ್ಷಿಯಾ ರಾಜ್ಯದ ಎಲ್ಲಾ ಭಾಗಗಳಲ್ಲೂ ಗಲಭೆಗಳುಂಟಾಗಿರುತ್ತವೆ, ಪ್ರಜಾ ನೆಮ್ಮದಿಗೂ ವ್ಯಾಪಾರಾಭಿವೃದ್ಧಿಗೂ ಕಂಟಕವಾಗಿರುವುದು.

ತುರ್ಕಿ ರಾಜ್ಯದಲ್ಲಿ ಹ್ಯಾಗೋ ಹಾಗೆಯೇ ಪರ್ಷಿಯಾದಲ್ಲೂ ಪ್ರಜೆಗಳು ಪಾರ್ಲಿಮೆಂಟನ್ನು ಏರ್ಪಾಡುಮಾಡಿ ರಾಜ್ಯಭಾರ ಕಾರ್ಯಗಳನ್ನು ನಡಿಸಬೇಕೆಂಬ ಕುತೂಹಲವುಳ್ಳವರಾಗಿದಾರೆಂದು ಕಾಣುತ್ತದೆ. ಈ ಬಗ್ಗೆ ಷಾ ಸುಲ್ತಾನರವರು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ಆ ಸಭೆಯ ಸಹಾಯವನ್ನು ಪಡೆದು ಆ ಪ್ರಕಾರ ನಡೆಯಬೇಕೆಂದು ಪ್ರಯತ್ನಪಡುತ್ತಿದಾರೆ. ಈ ಉದ್ದೇಶವು ಸುಲಭವಾಗಿ ನೆರವೇರದ ಹೋದದ್ದರಿಂದ ಪ್ರಜೆಗಳು ಸಿಟ್ಟುಗೊಂಡು ದಂಗೆಯೆದ್ದು ಹಲವು ಪಟ್ಟಣಗಳನ್ನೂ ಗ್ರಾಮಗಳನ್ನೂ ಸ್ವಾಧೀನಪಡಿಸಿಕೊಂಡರು. ಪ್ರಜೆಗಳು ನಡಿಸುತ್ತಿರುವ ಕಾರುಬಾರುಗಳಲ್ಲಿ ಅಷ್ಟೇನೂ ಐಕಮತ್ಯವಿರುವಂತೆ ತೋರುವುದಿಲ್ಲ. ಮತ್ತು ಈ ಕಾರುಬಾರುಗಳು ಎಷ್ಟು ಮಟ್ಟಿನವೋ, ಯಾವ ರೀತಿ ನಡೆಯುತ್ತಿರುವವೋ ಅಲ್ಲಿಂದ ಬರುವ ಸಂಕ್ಷೇಪವಾದ ತಂತಿ ವರ್ತಮಾನಗಳಿಂದ ಗೊತ್ತಾಗುವುದಿಲ್ಲ.

ಷಾ ಸುಲ್ತಾನರವರಿಗೆ ಪ್ರತಿಕೂಲರಾಗಿ ನಿಂತಿರುವವರಲ್ಲಿ ಬಹಳ ಐಕಮತ್ಯವೂ ಸ್ವಾರ್ಥಪರರೂ ಸೇರಿಕೊಂಡಿರುವುದು ಪರ್ಷಿಯಾದ ಮುಖ್ಯವಾದ ಪಟ್ಟಣಗಳು ತಂಟಾ ಕರಿತಾಪಕರ ವಾಗುತ್ತವ ಪ್ರಜೆಗಳಲ್ಲಿ ಪ್ರಾಣಹಾನಿಯೂ, ಲೂಟಿಯು ಗಾಯವೂ ಉಂಟಾಗಿ, ಊರಿಂದೂರಿಗೆ ಸಂಚಾರಮಾಡುವುದು ಕಂಟಕವಾಗಿ, ಅನೇಕ ಸ್ಥಳಗಳಲ್ಲಿ ವ್ಯಾಪಾರವು ಕ್ಷೀಣವಾಗುತ್ತಿದೆ, ಆದರೆ ಈ ಕಷ್ಟಗಳೆಲ್ಲಾ ಬೇಗನೆ ನಿವಾರಣೆಯಾಗುವವೆಂಬ ಭರವಸೆಯು ನಮಗೆ ಕಾಣುವುದಿಲ್ಲ.

ಈಚೆಗೆ ಬಂದಿರುವ ವರ್ತಮಾನದಿಂದ ಪ್ರಜಾಪಕ್ಷದವರು ದಂಡುಕಟ್ಟಿ ರಾಜಧಾನಿಯಾದ ಟೆಹೆರಾನ್ ನಗರವನ್ನು ಪ್ರವೇಶ ಮಾಡಿ ಬಹಳ ಕದನಗಳು ನಡೆದಿರುವುದಾಗಿಯೂ, ಷಾ ಸುಲ್ತಾನರವರು ಅರಮನೆಯಿಂದ ತಪ್ಪಿಸಿಕೊಂಡು ಹೋಗಿ ರಷ್ಯಾ ರಾಯಭಾರಿಯ ಆಶ್ರಯವನ್ನು ಸೇರಿಕೊಂಡಿದಾರೆಂದೂ, ತನ್ನ ಬಾಲ್ಯವಯಸ್ಸಿನ ಹಿರಿ ಕುಮಾರನಿಗೆ ಪಟ್ಟಕಟ್ಟಿದ್ದೂ ಆಯಿತೆಂದೂ ತಿಳಿದು ಬರುತ್ತದೆ. ಪ್ರಜಾ ಪಕ್ಷದವರು ಆಹ್ಮದ್ ಕುಮಾರನನ್ನು ಬಿರುದುಗಳ ಸಹಿತ ಸುಲ್ತಾನತಾಬಾದ್ ಎಂಬ ಅರಮನೆಗೆ ಕರೆದುಕೊಂಡು ಹೋಗಿ ಪಟ್ಟಕಟ್ಟಿದರು. ಆ ಹುಡುಗನಿಗೆ ಇನ್ನೂ ಹದಿನೈದು ವರುಷ ವಯಸ್ಸಾದದ್ದರಿಂದ ಒಬ್ಬ ರೀಜೆಂಟರನ್ನು ನೇಮಕಮಾಡುವರೆಂದು ತಿಳಿದು ಬಂದಿದೆ. ಷಾ ಸುಲ್ತಾನರವರು ಇನ್ನು ಮುಂದೆ ಸುಮ್ಮನಾಗುತ್ತಾರೋ, ಇಲ್ಲವೇ ಶಕ್ತಿಯನ್ನು ಪುನಃ ಸಂಪಾದಿಸಿಕೊಳ್ಳುವ ವಿಷಯದಲ್ಲಿ ಸಾಹಸಪಡುತ್ತಾರೋ ಈಗಲೇ ಗೊತ್ತಾಗಿ ಹೇಳಲಾಗದು. ಹ್ಯಾಗೂ ಪರ್ಷಿಯಾ ರಾಜ್ಯದ ಸ್ಥಿತಿಯು ಸದ್ಯ ಸಂತೋಷಪ್ರದವಾಗಿಲ್ಲ.

ಪರ್ಷಿಯಾ ರಾಜ್ಯದ ಎಲ್ಲೆಕಟ್ಟುಗಳಲ್ಲಿ ರಷ್ಯಾದವರು ತಮ್ಮ ಸೈನ್ಯಗಳನ್ನು ತಂದಿಟ್ಟುಕೊಂಡಿದಾರೆ. ಮತ್ತು ಈ ಪೈಕಿ ಕೆಲವು ಸೈನ್ಯಗಳು ಪರ್ಷಿಯಾ ರಾಜ್ಯದೊಳಕ್ಕೂ ಪ್ರವೇಶಮಾಡಿ, ರಷ್ಯಾದವರ ಆಸ್ತಿಪಾಸ್ತಿಗಳನ್ನೂ ಪ್ರಜೆಗಳನ್ನೂ ಸಂರಕ್ಷಣೆಮಾಡಿಕೊಳ್ಳುತ್ತಿರುವವು. ಸದ್ಯದಲ್ಲಿ ಇಂಗ್ಲೀಷಿನವರೂ ರಷ್ಯಾದವರೂ ಪರ್ಷಿಯಾ ದೇಶದಲ್ಲಿ ಸ್ನೇಹದಿಂದ ಏಕೀಭವಿಸಿ ಕಾರ್ಯಗಳನ್ನು ನಡಿಸುತ್ತಾ ಬಂದಿದಾರೆ. ಇವೆರಡು ರಾಜ್ಯಗಳವರೂ ಪರ್ಷಿಯಾದಲ್ಲಿ ಪ್ರಜಾಪ್ರತಿನಿಧಿಗಳಿಗೆ ಸಮ್ಮತವಾದಂಥಾ ರಾಜ್ಯಭಾರವು ಏರ್ಪಾಡಾಗಬೇಕೆಂಬ ಕುತೂಹಲವುಳ್ಳವರಾಗಿ, ರಾಜ್ಯದಲ್ಲಿ ನೆಮ್ಮದಿಯನ್ನುಂಟುಮಾಡುವ ಭಾಗದಲ್ಲೂ ಪ್ರಜೆಗಳ ಅಭಿಲಾಷೆಯು ವ್ಯರ್ಥವಾಗದಂತೆಯೂ ಕೂಡಿದಮಟ್ಟಿಗೂ ಸಹಾಯಮಾಡತಕ್ಕವರಾಗಿದಾರೆ.

ಪರ್ಷಿಯಾ ದೇಶವು ಬಹು ಪುರಾತನ ಕಾಲದ್ದಾಗಿದೆ, ಮತ್ತು ಇದು ಒಂದಾನೊಂದು ಕಾಲದಲ್ಲಿ ಮಹಾ ಪ್ರಖ್ಯಾತವಾದ ರಾಜ್ಯವಾಗಿತ್ತು. ಈ ರಾಜ್ಯದಲ್ಲಿ ಪರಾಕ್ರಮಶಾಲಿಗಳೂ ಯಶೋವಂತರೂ ಅನೇಕರಿದ್ದರು. ಇದನ್ನೆಲ್ಲಾ ನೋಡಿದರೆ ಈ ರಾಜ್ಯವು ಮತ್ತೆ ಅಭಿವೃದ್ಧಿ ಹೊಂದಿ ವಿಶೇಷವಾದ ಪ್ರಾಶಸ್ತ್ಯಕ್ಕೆ ಬಂದರೂ ಬರಬಹುದು. ಆದರೆ ಆ ಪೂರ್ವಕಾಲದ ನಡವಳಿಕೆಗಳನ್ನೇ ರೂಢಿಸಿದ ಪಕ್ಷದಲ್ಲಿ ಅದು ಪ್ರಖ್ಯಾತಿಗೆ ಬರಲಾರದು. ಈಗಿನ ಕಾಲಕ್ಕೆ ತಕ್ಕ ಹಾಗೆ ರಾಜ್ಯಭಾರದ ಕ್ರಮಗಳನ್ನು ಬದಲಾವಣೆ ಮಾಡಿಕೊಳ್ಳಬೇಕಾಗಿದೆ. ಷಾ ಸುಲ್ತಾನರವರು ಪ್ರಜೆಗಳನ್ನು ಸಂಪೂರ್ಣವಾಗಿ ಪ್ರೀತಿಸತಕ್ಕವರಾಗಿಯೂ, ರಾಜ್ಯವನ್ನು ಶ್ರೇಯೋಭಿವೃದ್ಧಿಗೆ ತರತಕ್ಕವರಾಗಿಯೂ ಆಗಬೇಕು. ಅಂತು ಈಗ ಪ್ರಾಪ್ತವಾಗಿರುವ ಗಲಭೆಯೂ ಅನಾಯಕತ್ವವೂ ಬೇಗನೆ ಪರಿಹಾರವಾಗಿ ಪರ್ಷಿಯಾ ರಾಜ್ಯದಲ್ಲಿ ನೆಮ್ಮದಿ ಸುಖ ಸಂತೋಷಾದಿಗಳು ನೆಲೆಗೊಂಡು ಅಭಿವೃದ್ಧಿಗೆ ಬಂದೀತೆಂದು ನಂಬಿ ಹಾರೈಸುತ್ತೇವೆ.

ತತ್ವಜ್ಞಾನಿಯೂ ರೈತನೂ.

ಒಬ್ಬ ತತ್ವಜ್ಞಾನಿಯು ದೇಶಸಂಚಾರ ಮಾಡಬೇಕೆಂದು ಹಡಗನ್ನು ಹತ್ತಿ ಪ್ರಯಾಣ ಮಾಡುತ್ತಿರಲು ಆ ಹಡಗಿಗೆ ಹೇಗೋ ಅಪಾಯ ಸಂಭವಿಸಿ ಅದು ಒಂದು ನಡುಗಡ್ಡೆಗೆ ಸಮೀಪವಾಗಿ ಒಡೆದು ಹೋಯಿತು. ಆತನು ಹ್ಯಾಗಾದರೂ ಪ್ರಾಣಾಪತ್ತಿನಿಂದ ಬಿಡುಗಡೆ ಹೊಂದಬೇಕೆಂದು ಹಲಗೆಯ ತುಂಡನ್ನು ಹಿಡಿದು ದಡವನ್ನು ಸೇರಿದನು. ಅಲ್ಲಿ ಜೀವನೋಪಾಯಕ್ಕೆ ಯಾವ ಮಾರ್ಗವನ್ನು ಕಾಣದೆ ಆ ಊರಿನ ಒಬ್ಬ ಬಡ ರೈತನ ಬಳಿಗೆ ಹೋಗಿ ಆತನಿಗೆ— ನನಗೆ ನಿನ್ನ ಸೇವಕನಾಗಿರಲಿಕ್ಕೆ ಮನಸ್ಸುಂಟು, ಸಂಬಳ ನಿಗದಿ ಮಾಡಿ ನನ್ನನ್ನು ಸೇರಿಸಿಕೊ ಎಂದು ಹೇಳಲು ರೈತನು ಆತನನ್ನು ಸೇರಿಸಿಕೊಂಡನು. ಇದಾದ ಕೆಲವು ದಿನಗಳ ಮೇಲೆ ಆ ರೈತನು ಕೇವಲ ಕ್ರೂರಿಯೂ ದುರ್ಮಾರ್ಗನೂ ಆಳುಕಾಳುಗಳನ್ನು ಹಿಂಸಿಸುವವನೂ ಸಂಬಳವನ್ನು ಸರಿಯಾಗಿ ಕೊಡದ ಲೋಭಿಯೂ ಎಂದು ತತ್ವಜ್ಞಾನಿಗೆ ತಿಳಿಯಬಂದಿತು. ಆತನು ಈ ಮೂರ್ಖನ ದುರ್ಬುದ್ಧಿಯನ್ನು ಹೋಗಲಾಡಿಸುವ ಉಪಾಯವನ್ನು ಹುಡುಕುತ್ತಿರಲು ರೈತನು ಒಂದು ದಿನ ಆತನನ್ನು ಕರೆದು— ಎಲಾ, ನೀನು ಈ ಗೋಧಿ ತೆಗೆದುಕೊಂಡು ಹೋಗಿ ಹೊಳೆ ದಡದ ಬಳಿ ಇರುವ ನನ್ನ ಹೊಲಕ್ಕೆ ಬಿತ್ತಿ ಬಿಟ್ಟು ಬಾ ಎಂದು ಹೇಳಲು, ತತ್ವಜ್ಞಾನಿಯು ಆ ಗೋಧಿಯನ್ನು ತೆಗೆದುಕೊಂಡು ಹೋಗಿ ಒಂದು ಕಡೆ ಇಟ್ಟು ಭತ್ತವನ್ನು ತೆಗೆದುಕೊಂಡು ಹೋಗಿ ಆ ಹೊಲಕ್ಕೆ ಚೆಲ್ಲಿದನು. ರೈತನು ಕೆಲವು ದಿನಗಳನ್ನು ಬಿಟ್ಟುಕೊಂಡು ಹೊಸದಾಗಿ ಬಿತ್ತಿದ ಹೊಲದಲ್ಲಿ ಪೈರನ್ನು ನೋಡಲಿಕ್ಕೆಂತ ಹೋಗಿ ಅದರಲ್ಲಿ ಭತ್ತದ ಪೈರನ್ನು ಮಾತ್ರ ಕಂಡು ಸಿಡಿ ಮಿಡಿಗೊಂಡು ತತ್ವಜ್ಞಾನಿಯನ್ನು ನೋಡಿ— ಗೋಧಿಯನ್ನು ಬಿತ್ತಬೇಕೆಂತ ನಾನು ನಿನಗೆ ಹೇಳಲಿಲ್ಲವೆ? ಇದೇನು? ಇದರಲ್ಲಿ ಒಂದು ಭತ್ತದ ಪೈರೇ ಹೊರತು ಗೋಧಿ ಕಾಣಲಿಲ್ಲವೆಂದು ಕೇಳಿದನು. ತತ್ವಜ್ಞಾನಿಯು ಹೀಗೆ ಹೇಳಿದನು— ಲೋಕದಲ್ಲಿ ಐಶ್ವರ್ಯವಂತರು ಬಡವರನ್ನು ಧಿಕ್ಕರಿಸಿ ಹಿಂಸಿಸುವುದೂ ತಮ್ಮನ್ನು ಮಾತ್ರ ಅದಕ್ಕೆ ಪ್ರತಿಯಾಗಿ ಯಾರೂ ಧಿಕ್ಕರಿಸದೆ ಹಿಂಸಿಸದೆ ಎಲ್ಲರೂ ಮನ್ನಿಸಬೇಕೆಂದು ಕೋರುವುದೂ ಸರ್ವಸಾಧಾರಣವಾಗಿದೆ. ಧಣಿಗಳು ಆಳುಕಾಳುಗಳಿಂದ ದುಡಿಸಿಕೊಂಡು ಅವರನ್ನು ಕ್ರೂರವಾಗಿ ದಂಡಿಸುವುದೂ ಸಂಬಳ ಸರಿಯಾಗಿ ಕೊಡದೆ ಕೊರತೆಪಡಿಸುವುದೂ ಉಂಟು. ಹೀಗೆ ಪರರಿಗೆ ಕೇಡನ್ನು ಬಗೆದು ತಮಗೆ ಸರ್ವತ್ರ ಒಳ್ಳೇದೇ ಸಂಭವಿಸಬೇಕೆಂದು ಇಚ್ಛಿಸುತ್ತಾರೆ. ನಾನೂ ಹಾಗೆಯೇ ಭತ್ತ ಬಿತ್ತಿದರೆ ಗೋಧಿ ಬೆಳೆದೀತೆಂದು ಭಾವಿಸಿ ಹೀಗೆ ಮಾಡಿದೆನು ಅಂದನು. ಈ ಮಾತುಗಳಿಂದ ಆ ದಡ್ಡನಿಗೆ ಜ್ಞಾನೋದಯವಾಗಿ ನೀತಿವಂತನೂ ಸತ್ಯವಂತನೂ ಪರೋಪಕಾರಿಯೂ ಆಗಿರುವುದಕ್ಕೆ ಪ್ರಯತ್ನಿಸಿದನು.

ಈಗಲೂ ಸಾಧಾರಣವಾಗಿ ಜನಗಳ ಬಾಳ್ವೆ ಹೀಗೆಯೇ ಇದೆ. ತಾವು ಇತರರಿಗೆ ಅನ್ಯಾಯವನ್ನು ಮಾಡಿ ನಿಷ್ಠುರರುಗಳಾಗಿ ಅವರಿಗೆ ನ್ಯಾಯವಾಗಿ ಸಲ್ಲತಕ್ಕದ್ದನ್ನು ಸಲ್ಲಿಸದಿದ್ದರೂ ತಮಗೆ ಮಾತ್ರ ಸಕಲರೂ ಒಳ್ಳೇದನ್ನೇ ಮಾಡುತ್ತಿರಬೇಕೆಂಬುವದು ಸಾಧಾರಣವಾಗಿ ನರಜನ್ಮದ ಸ್ವಭಾವವಾಗಿದೆ. ನಾವು ಎಷ್ಟು ಎಚ್ಚರಿಕೆಯಾಗಿದ್ದರೂ ಸ್ವಹಿತವನ್ನು ಬಯಸುವವರೂ ಪರಹಿತವನ್ನು ತ್ಯಜಿಸುವವರಾಗಿಯೂ ಇರುವುದಕ್ಕೆ ನಮ್ಮ ಮನಸ್ಸುಗಳು ಬಹು ಬೇಗ ಒಡಂಬಡುತ್ತವೆ. ಆದ್ದರಿಂದ ಮಹಾತ್ಮರೆಲ್ಲರೂ ತಮ್ಮ ಶಿಷ್ಯರಿಗೆ ಈ ವಿಷಯವಾದ ಸದ್ಬೋಧೆಯನ್ನು ಮಾಡಿದ್ದಾರೆ. ಕ್ರಿಸ್ತನು ಈ ವಿಷಯದಲ್ಲಿ ತನ್ನ ಬೋಧಕೋದ್ಯೋಗದ ಆರಂಭದಲ್ಲಿ ತನ್ನ ಶಿಷ್ಯರಿಗೆ ಖಂಡಿತವಾದ ಉಪದೇಶವನ್ನು ಬೋಧಿಸಿದನು. ಆತನು ಹೇಳಿದ ಉಪದೇಶವು ಎಲ್ಲಾ ಕ್ರೋಡೀಕರಿಸಲ್ಪಟ್ಟು ಒಂದು ಚಿಕ್ಕ ವಾಕ್ಯದಲ್ಲಿ ಅಡಕವಾಗಿದೆ. ಅದೇನಂದರೆ, "ಜನರಿಂದ ನಿಮಗೆ ಏನೇನು ಆಗಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ" ಇದೇ ಧರ್ಮಶಾಸ್ತ್ರದ ಮುಖ್ಯ ತಾತ್ಪರ್ಯ. ಇದರ ಅರ್ಥವೇನಂದರೆ, ಜನಗಳು ನಮ್ಮನ್ನು ಹಾಗೆ ಭಾವಿಸಬೇಕೆಂದು ನಾವು ಇಚ್ಛಿಸುತ್ತೇವೋ ಹಾಗೆಯೇ ನಾವು ಅವರಿಗೆ ಮಾಡುತ್ತಿರಬೇಕು. ನಾವು ಒಬ್ಬ ಯಜಮಾನನ ಬಳಿಯಲ್ಲಿ ಬಡವರಾದ ಸೇವಕರಾಗಿದ್ದರೆ ಆ ಯಜಮಾನನು ನಮ್ಮನ್ನು ಕ್ರೂರವಾಗಿ ಬೈದು ದಂಡಿಸಿ ಸಂಬಳ ಕೊಡದೆ ಇರುವದು ನಮಗೆ ಸಂತೋಷಕರವಾಗಿರುವದೋ ಇಲ್ಲವಷ್ಟೆ. ಹಾಗೆಯೇ ನಾವೂ ನಮ್ಮ ಸೇವಕರಿಗೆ ಯಾವಾಗಲೂ ಒಳ್ಳೇದನ್ನೇ ಮಾಡುತ್ತ ಅವರ ಕಡೆಗೆ ದಯೆಯೂ ನೀತಿಯೂ ಉಳ್ಳವರಾಗಿ ನಡೆದರೆ ನಮ್ಮ ಸದ್ವರ್ತನೆಯು ಒಳ್ಳೇ ಬೀಜವನ್ನು ಬಿತ್ತಿದವನಿಗೆ ಒಳ್ಳೇ ಫಲವೇ ಆಗುವ ಪ್ರಕಾರ ನಮಗೂ ಆಗುವದು. ಮುಖ್ಯವಾಗಿ ನಮ್ಮ ಸದ್ವರ್ತನೆಯ ಫಲವು ಈ ಲೋಕದಲ್ಲಿ ನಮಗೆ ಲಭಿಸಲಿ ಅಥವಾ ಲಭಿಸದೆ ಹೋಗಲಿ ನಮ್ಮ ಮನಸ್ಸಾಕ್ಷಿಯು ನಮಗೆ ಸಮಾಧಾನವನ್ನೂ ತೃಪ್ತಿಯನ್ನೂ ಹುಟ್ಟಿಸುವುದು ಮತ್ತು ದೇವರೂ ಇದನ್ನು ಮೆಚ್ಚಿ ನಮ್ಮನ್ನು ತನ್ನ ಮಕ್ಕಳೆಂತ ಭಾವಿಸುವನು. ಇದಕ್ಕಿಂತ ಉತ್ತಮವಾದ ಪ್ರತಿಫಲವು ಇನ್ನಾವದಿದೆ?

ಒಳದೇಶದ ವೃತ್ತಾಂತಗಳು

ದಿವಾನ್ ಮೆ|| ಟಿ ಆನಂದರಾಯರವರು ಪರಿವಾರ ಸಹಿತ ನೆನ್ನೆ ಮಧ್ಯಾಹ್ನ ಮೆಯಿಲ್ ಗಾಡಿಯಲ್ಲಿ ಬೆಂಗಳೂರಿಂದ ರಾಜಧಾನಿಗೆ ದಯಮಾಡುವವರಾಗಿದ್ದರು.

∴

ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರುಗಳ ಸಮಾಜವು ಈ ವರುಷ ಡಿಸೆಂಬರ್ ತಿಂಗಳಲ್ಲಿ ಕಲ್ಕತ್ತಾ ಪಟ್ಟಣದಲ್ಲಿ ಜರುಗುವುದು. ಈ ಸಭೆಗೆ ನಮ್ಮ ಸಂಸ್ಥಾನದಿಂದ ಎಂ. ಡಿ. ರಾ|| ಮೆ|| ಎಂ ರಾಮರಾಯರು ಹೋಗಿ ಬರುವರೆಂದು ಕೇಳುತ್ತೇವೆ.

∴

ಹಿಂದುಸ್ತಾನದ ಸರ್ವಸೇನಾಪತಿಯಾದ ಲಾರ್ಡ್ ಕಿಚ್ನರ್ ಯವರ ಮಿಲಿಟರಿ ಸೆಕ್ರೆಟರಿಯಾದ ಕರ್ನಲ್ ಬರ್ಡ್‌ವುಡ್ ಯವರು ಬೆಂಗಳೂರಿನಲ್ಲಿರುವ ಇಂಗ್ಲಿಷ್ ಸೈನ್ಯಕ್ಕೆ ಮುಖ್ಯಾಧಿಕಾರಿಯಾಗಿ ನೇಮಕಮಾಡಲ್ಪಟ್ಟಿದಾರೆ.

∴

ಮೈಸೂರು ಡಿಪ್ಟಿ ಕಮಿಷನರ್ ಮೆ|| ಎಂ. ಕಾಂತರಾಜೇ ಅರಸಿನವರು ಚಾಮರಾಜನಗರ, ಹೆಗ್ಗಡದೇವನಕೋಟೆ, ಅಂತರಸಂತೆ, ಮೊದಲಾದ ಕಡೆಗಳಲ್ಲಿ ಸಂಚಾರಮಾಡುತ್ತಿದಾರೆ. ಅವರು ವಾಪಸು ಬರಲು ಇನ್ನೂ ಒಂದು ವಾರ ಹಾದೀತೆಂದು ಕಾಣುತ್ತದೆ.

∴

ಮೆ|| ರಾಮರಾಯರು ಬೆಂಗಳೂರಿನಲ್ಲೂ ಮೆ|| ಕೃಷ್ಣಯ್ಯಂಗಾರ್ರು ಮೈಸೂರಿನಲ್ಲೂ ಈ ವರುಷದ ಆಖೈರು ತನಕ ಪಬ್ಲಿಕ್ ಪ್ರಾಸಿಕ್ಯೂಟರಾಗಿ ಕೆಲಸ ಮಾಡತಕ್ಕದ್ದೆಂದು ಸರ್ಕಾರದವರು ಹುಕುಂ ಕೊಟ್ಟು ಅವರ ಉದ್ಯೋಗದ ಅವಧಿಯನ್ನು ಹೆಚ್ಚಿಸಿರುತ್ತಾರೆ.

∴

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಸಹಾಯೋಪಾಧ್ಯಾಯರಾಗಿರುವ ಮೆ|| ಬಿ. ವೆಂಕಟರಮಣಯ್ಯನವರಿಗೆ ಮೈಸೂರು ಡಿಸ್ಟ್ರಿಕ್ಟಿನ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರ್ ಕೆಲಸವಾಗುವುದೆಂದೂ, ಮೆ|| ಎಂ ರಾಮಸ್ವಾಮಯ್ಯನವರಿಗೆ ಬೆಂಗಳೂರಿಗೆ ವರ್ಗವಾಗುವುದೆಂದೂ ವರ್ತಮಾನವಿದೆ.

∴

ಮೈಸೂರು ಸಂಸ್ಥಾನದಲ್ಲಿ ಕೆಲವು ಕಾಲಕ್ಕೆ ಮುಂಚೆ ಹತ್ತು ವರುಷದ ತನಕ ವ್ಯವಸಾಯ ಶಾಸ್ತ್ರ ಪರಿಶೋಧಕರಾಗಿದ್ದ ಡಾ|| ಎ. ಲೆಮನ್ ಯವರಿಗೆ ಕಾನ್‌ಪುರದ ಬಳಿ ಇಂಗ್ಲಿಷ್ ಸಾಮ್ರಾಜ್ಯದಲ್ಲಿ ಒಂದು ವಿದ್ಯಾಲಯದೊಳಗೆ ರಸಾಯನ ಶಾಸ್ತ್ರ ಬೋಧಕೋದ್ಯೋಗವು ದೊರಕಿತೆಂದು ತಿಳಿದುಬಂದಿದೆ.

∴

ರಾಜಧಾನಿಯಲ್ಲಿರುವ ಗವರ್ನ್‌ಮೆಂಟ್ ಇಂಡಸ್ಟ್ರಿಯಲ್ ಸ್ಕೂಲ್ ಸೂಪರಿಂಟೆಂಡೆಂಟ್ ಮೆ|| ಕೃಷ್ಣಸ್ವಾಮಿ ಪಂಡಿತರು ಕಳೆದ ವಾರ ಇಲ್ಲಿ ಸ್ಕೂಲಿನ ಮುಂದುಗಡೆ ತಮ್ಮ ಸ್ವಂತ ಖರ್ಚಿನಿಂದ ವಿನೋದವನ್ನು ಏರ್ಪಡಿಸಿ, ಅಲ್ಲಿನ ಬಹು ಮಂದಿ ದೊಡ್ಡ ಮನುಷ್ಯರು ವಿನೋದ ಮೇಳವನ್ನು ಅಲಂಕರಿಸಿದರು.

∴

ರಾಜಧಾನಿಯ ಮಹಾರಾಜವರ ಕಾಲೇಜಿನಲ್ಲಿ ರಸಾಯನ ಶಾಸ್ತ್ರ ಬೋಧಕರಾದ ಮೆ|| ಬಿ. ವೆಂಕಟನಾರಣಪ್ಪನವರು ಸರ್ಕಾರದ ಅಪ್ಪಣೆ ಪ್ರಕಾರ ಅವರು ಇಷ್ಟರಲ್ಲೇ ಫರ್ಲೋ ಪಡೆದು ಸೀಮೆಗೆ ತೆರಳುವವರಾಗಿದಾರೆಂದೂ ಸರ್ಕಾರದವರು ಈ ವಿದ್ಯಾಶಾಲೆಗೆ ಸೀಮೆಯಿಂದ ಇನ್ನೊಬ್ಬ ಇಂಗ್ಲಿಷ್ ಉಪಾಧ್ಯಾಯರನ್ನು ಕರೆಸುವವರಾಗಿದಾರೆಂದೂ ಕೇಳುತ್ತೇವೆ.

∴

ಸುಮಾರು ಎರಡು ವಾರಗಳ ಹಿಂದೆ ರಾಜಧಾನಿಯಲ್ಲಿರುವ ಮೆ|| ಧಿಯೋಬಾಲ್ಡ್ ಯವರ ಇಬ್ಬರು ಕುಮಾರರು ಮೈಸೂರಿನಿಂದ ಸುಮಾರು ೯ ೧೦ ಮೈಲಿ ದೂರದಲ್ಲಿರುವ ಕಾಡುಗುತ್ತಿಗಳಲ್ಲಿ ಎರಡು ಚಿರತೆಗಳನ್ನು ಕೊಂದು ಹಾಕಿದರೆಂದೂ, ಇನ್ನೊಂದು ಚಿರತೆಗೆ ಗುಂಡಿನೇಟು ಬಿದ್ದು ತಪ್ಪಿಸಿಕೊಂಡು ಹೋಗಿದೆ ಎಂದೂ ತಿಳಿದುಬಂದಿದೆ.

∴

ನೆನ್ನೆ ಸಾಯಂಕಾಲ ಇಲ್ಲಿನ ಮಿಷನ್ ಹೈ ಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನ ಕೊಡುವುದಕ್ಕಾಗಿ ಒಂದು ಸಭೆಯು ನಡೆಯುವುದಾಗಿತ್ತು. ಶ್ರೀಮನ್ ಮಹಾರಾಜವರ ಪ್ರೈವೇಟ್ ಸೆಕ್ರೆಟರಿಯವರಾದ ಮೆ|| ಆರ್ ಎಚ್ ಕ್ಯಾಂಬೆಲ್‌ಯವರು ಈ ಬಹುಮಾನ ಸಭೆಯ ಅಗ್ರಾಸನವನ್ನು ವಹಿಸಿ, ಬಾಲಕರಿಗೆ ಹಿತೋಕ್ತಿಗಳನ್ನು ತಿಳಿಸುವುದಕ್ಕೆ ಒಪ್ಪಿಕೊಂಡಿದ್ದರು.

∴

ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರಾದ ಮೆ|| ದಾಸಪ್ಪಾಜಿ ಅರಸಿನವರು ೧೬ ನೇ ತಾರೀಖಿನಲ್ಲಿ ಬೆಂಗಳೂರು ಹೈಗ್ರೌಂಡಿನಲ್ಲಿರುವ ತಮ್ಮ ಬಂಗಲೆಗೆ ಶ್ರೀಮನ್ ಯುವರಾಜರು, ದಿವಾನ್‌ರು, ಕೌನ್ಸಿಲರುಗಳು, ಚೀಫ್ ಕೋರ್ಟ್ ಜಡ್ಜಿಗಳು, ಇನ್ನು ಕೆಲವರು ಹಿಂದೂ ದೊಡ್ಡ ಮನುಷ್ಯರು, ಇವರೆಲ್ಲರನ್ನೂ ಕರೆಸಿಕೊಂಡು, ವಿನೋದಗಳನ್ನು ಕಲ್ಪಿಸಿ ಸತ್ಕರಿಸಿದರು.

∴

ಬೆಂಗಳೂರಿನಲ್ಲಿರುವ ಬ್ರಹ್ಮಸಮಾಜದ ಸ್ವಾಮಿ ಬ್ರಹ್ಮಾನಂದರವರು ಕಳೆದ ವಾರ ಗೊಟ್ಟಿಗೆರೆಗೆ ಹೋಗಿ ಮೂರು ದಿನಗಳ ತನಕ ಇದ್ದು ಪ್ರಜೆಗಳ ಆತಿಥ್ಯವನ್ನು ಸ್ವೀಕರಿಸಿ, ಪರಮಾರ್ಥ, ನೀತಿತತ್ವ, ಮಾನವಧರ್ಮ, ಸ್ತ್ರೀಧರ್ಮ ಮುಂತಾದ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿದರೆಂತಲೂ, ಬಹು ಜನರು ಸೇರಿ ಕೇಳಿ ಸಂತೋಷಪಟ್ಟರೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

∴

ಮೈಸೂರು ದೇಶದ ವೆಸ್ಲಿಯನ್ ಮಿಷನ್ ಕ್ರೈಸ್ತ ಪ್ರಸಂಗಿಗಳ ವಾರ್ಷಿಕ ಸಮ್ಮೇಳನವು ಈ ದಿನ ತುಮಕೂರಿನಲ್ಲಿ ಪ್ರಾರಂಭವಾಗುತ್ತದೆ. ಸದರಿ ಸಮ್ಮೇಳನಕ್ಕೆ ಅನೇಕ ಯುರೋಪಿಯನ್ ಮತ್ತು ದೇಶೀಯ ಬೋಧಕರೂ ಉಪದೇಶಿಗಳೂ ಮೈಸೂರು ದೇಶದ ಎಂಟು ಡಿಸ್ಟ್ರಿಕ್ಟುಗಳಿಂದ ಹೋಗಿ ಸೇರಿ ಕ್ರೈಸ್ತ ಮತತತ್ವಗಳನ್ನು ಕುರಿತು ಉಪನ್ಯಾಸಗಳನ್ನು ಮಾಡುವರು, ಇಲ್ಲವೇ ಕೇಳುವರು.

∴

ಶಿವಮೊಗ್ಗ ರೈಲ್ವೆ ಪೋಲೀಸಿನ ಇನ್ಸ್‌ಪೆಕ್ಟರ್ ಎಂಬುವನು ಕಳೆದ ವಾರ ಒಂದು ದಿನ ಬೆಳಗ್ಗೆ ಭದ್ರಾನದಿಯಲ್ಲಿ ಮುಖ ತೊಳೆಯುತ್ತಿದ್ದಾಗ ಕಾಲು ಜಾರಿ ಪ್ರವಾಹದಲ್ಲಿ ಬಿದ್ದು ಸುಮಾರು ೧|| ಫರ್ಲಾಂಗಿನಷ್ಟು ದೂರ ಕೊಚ್ಚಿಕೊಂಡು ಹೋಗುತ್ತಿದ್ದನೆಂತಲೂ, ಮೋಸ್ಟ್ ಹಯಾತ್‌ಖಾನ್ ಮತ್ತು ಒಬ್ಬ ಮೋಚಿ ನೋಡಿ ನೀರಿನಲ್ಲಿ ಬಿದ್ದು ಅವನನ್ನು ಎಳೆದುತಂದು ದಡಕ್ಕೆ ಹಾಕಿ ಬದುಕಿಸಿದರೆಂತಲೂ ಕೇಳುತ್ತೇವೆ.

∴

ಬೆಂಗಳೂರು ತಾಲ್ಲೂಕಿಗೆ ಸೇರಿದ ಆವಲಹಳ್ಳಿ ಎಂಬ ಗ್ರಾಮದ ಮಾರಿಯಮ್ಮನ ದೇವಸ್ಥಾನಕ್ಕೆ ೧೩ನೇ ತಾರೀಖಿನಲ್ಲಿ ಕಳ್ಳರುಬಿದ್ದು, ದೇವರ ಮೈ ಮೇಲಿದ್ದ ೫೦೦ ರೂಪಾಯಿಗಳ ನಗಗಳನ್ನು ಅಪಹರಿಸಿರುತ್ತಾರೆ. ಪೋಲೀಸಿನವರು ತನಿಖೆಯಿಂದ ಅದೇ ಗ್ರಾಮದ ಒಬ್ಬ ಪಂಚಮನನ್ನು ದಸ್ತಗಿರಿ ಮಾಡಿ

ರುವರು. ಅವರ ಧಿಯ ಬಳಿ ದೇವಸ್ಥಾನಕ್ಕೆ ಸೇರಿದ ಒಂದು ಹಾರವು ಸಿಕ್ಕಿರುವುದಾಗಿ ಕೇಳುತ್ತೇವೆ

* * *

ಒಬ್ಬ ಬಾತ್ಮೀದಾರರು ಬರೆಯುವುದೇನೆಂದರೆ —ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ ಕೋಣಂದೂರು, ಆಕ್ನಾಪುರ, ಆಗರ, ಈ ಮೊದಲಾದ ಕೆಲವು ಗ್ರಾಮಗಳಲ್ಲಿ ಸುಮಾರು ದಿವಸಗಳಿಂದ ಮದ್ದು ಹಾಕುವುದಕ್ಕೆ ಕೆಲವು ಹೆಂಗಸರು ಏರ್ಪಾಡು ಮಾಡಿಕೊಂಡಿರುತ್ತಾರೆ ಈ ವರ್ಷದಲ್ಲಿ ಸುಮಾರು ೫—೬ ಜನಗಳಿಗೆ ಹಾಕಿದಾಗ ಸರ್ಕಾರದವರು ಇಂಥಾ ದುಷ್ಟರನ್ನು ಹಿಡಿದು ತಕ್ಕ ಹಾಗೆ ಶಿಕ್ಷಿಸಬೇಕೆಂದು ಪ್ರಾರ್ಥಿಸುತ್ತೇವೆ ಎಂಬುದೇ

* * *

ಮೈಸೂರು ಗವರ್ನ್‌ಮೆಂಟಿನವರು ಈ ಸಂಸ್ಥಾನದ ಚೀಫ್ ಇಂಜನಿಯರ್ ಕೆಲಸಕ್ಕೆ ಮೆ|| ವಿಶ್ವೇಶ್ವರೈಯನವರನ್ನು ನೇಮಕಮಾಡಿಕೊಂಡಿದ್ದಾರೆಂದೂ, ಅವರು ಮುಂದಿನ ನವಂಬರ್ ತಿಂಗಳಿಂದ ಕೆಲಸದ ಮೇಲೆ ಹಾಜರಾಗುತ್ತಾರೆಂದೂ ಪ್ರಕಟವಾಗಿದೆ ಇವರು ಈಗ ಸಿಂಧು ದೇಶಕ್ಕೆ ಸೇರಿದ ಹೈದರಾಬಾದಿನಲ್ಲಿ ಚೀಫ್ ಇಂಜನಿಯರಾಗಿರುತ್ತಾರೆ ಮತ್ತು ಇಂಡಿಯಾ ಗವರ್ನ್‌ಮೆಂಟಿನವರು ಇವರ ಸಾಮರ್ಥ್ಯವನ್ನು ಕೊಂಡಾಡಿರುವರು ಇವರು ಮೈಸೂರು ದೇಶದಲ್ಲೇ ಹುಟ್ಟಿ ಬೆಳೆದವರು

* * *

ಮೈಸೂರು ಗವರ್ನ್‌ಮೆಂಟಿನ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರಾಗಿ ಕಳೆದ ಸುಮಾರು ಹದಿನೆಂಟು ವರುಷಗಳಿಂದ ಇದ್ದು, ಆ ಇಲಾಖೆಯಲ್ಲಿ ಅನೇಕ ಏರ್ಪಾಡುಗಳನ್ನು ಮಾಡಿ ಬಹಳ ಸಮರ್ಥರೆನಿಸಿಕೊಂಡಿರುವ ಮೆ|| ಎಚ್ ಜೆ ಭಾಭಾಯವರು ಇಷ್ಟರಲ್ಲೇ ಪೆನ್ಷನ್ ಪಡೆದು ಕೆಲಸ ಬಿಡುತ್ತಾರೆಂದೂ ಅವರ ಕೆಲಸಕ್ಕೆ ಗವರ್ನ್‌ಮೆಂಟಿನವರು ಮೈಸೂರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಲ್‌ರಾದ ಮೆ|| ಜೆ ವಿಯರ್ ಸಾಹೇಬರನ್ನು ನೇಮಕ ಮಾಡುವವರಾಗಿದ್ದಾರೆಂದೂ ತಿಳಿದು ಬಂದಿದೆ

* * *

ನಾಡಿದ್ದು ತಾ ೨೪ ನೇ ಶನಿವಾರ ಬೆಳಿಗ್ಗೆ ಸುಮಾರು ೬ ಗಂಟೆಗೆ ಶ್ರೀಮನ್ಮಹಾರಾಜರವರು ರಾಜಧಾನಿಯಿಂದ ಮೋಟಾರ್ ಗಾಡಿಯಲ್ಲಿ ಹೊರಟು ನಂಜನಗೂಡು ಚಾಮರಾಜನಗರ ಮಾರ್ಗವಾಗಿ ಕೊಳ್ಳೇಗಾಲಕ್ಕೆ ದಯಮಾಡುವರಾಗಿದ್ದಾರೆ ಅವರ ಸಂಗಡ ಪ್ರೈವೇಟ್ ಸೆಕ್ರೆಟರಿ ಮೆ|| ಆರ್ ಎಚ್ ಕ್ಯಾಂಪ್‌ಬೆಲ್ ರವರೂ, ಹುಜೂರ್ ಸೆಕ್ರೆಟರಿ ಮೆ|| ಪಿ ರಾಘವೇಂದ್ರರಾಯರೂ ಪ್ರಯಾಣ ಮಾಡುವರು ಶ್ರೀಮನ್ಮಹಾರಾಜರವರು ಕೊಳ್ಳೇಗಾಲದಲ್ಲಿ ಸುಮಾರು ಆರು ವಾರಗಳ ತನಕ ಇದ್ದು ವಾಪಸು ರಾಜಧಾನಿಗೆ ಚಿತ್ತೈಸುವರೆಂದು ಕೇಳುತ್ತೇವೆ

* * *

ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಪ್ರಜೆಗಳು ಮೂರು ವರುಷಕ್ಕೊಂದಾವರ್ತಿ ಪ್ರತಿನಿಧಿಗಳನ್ನು ಚುನಾಯಿಸಬೇಕಾಗಿದೆ ಈ ಸಲ ಪ್ರತಿನಿಧಿ ಸಭೆಗೆ ಹೊಸ ಮೆಂಬರುಗಳು ಚುನಾಯಿಸಲ್ಪಡಬೇಕಾಗಿರುವುದರಿಂದ ಸರ್ಕಾರದವರು ಆಯಾ ಡಿಸ್ಟ್ರಿಕ್ಟಿನಲ್ಲಿ ಮೆಂಬರಾಗುವುದಕ್ಕೂ ಮತ್ತು ಓಟ್ ಹಾಕತಕ್ಕ ಯೋಗ್ಯತೆಯನ್ನು ಪಡೆದಿರುವಂಥಾ ಪ್ರಜೆಗಳ ಹೆಸರುಗಳನ್ನು ಎರಡು ವಾರಗಳಿಂದ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸುತ್ತಾ ಬಂದಿದ್ದಾರೆ ಆಯಾ ಸ್ಥಾನಗಳಿಗೆ ಅರ್ಹರಾಗಿದ್ದು ತಮ್ಮ ಹೆಸರು ಪ್ರಕಟವಾಗದಿದ್ದರೆ ಅಂಥವರು ಸ್ಥಳಾಧಿಕಾರಿಗಳಿಗೆ ತಿಳಿಸಿದಲ್ಲಿ ಅವರು ದಾಖಲ್ ಮಾಡಿಕೊಳ್ಳುವರು

* * *

ಮೈಸೂರು ಮರಿಮಲ್ಲಪ್ಪನವರ ಹೈಸ್ಕೂಲಿನ ಕನ್ನಡ ಪಂಡಿತರಾದ ಮೆ|| ಬಿ ಎಂ ಸಿದ್ಧಲಿಂಗಶಾಸ್ತ್ರಿಗಳು ಹೈಸ್ಕೂಲ್ ವಿದ್ಯಾರ್ಥಿಗಳ ಬೋಧನೆಗೆ ಉಪಯುಕ್ತವಾದಂಥಾ "ಧರ್ಮೋಪದೇಶ" ವೆಂಬ ಪುಸ್ತಕವನ್ನು ರಚಿಸಿ ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿ ಕೊಟ್ಟಿದ್ದಾರೆ ಪುಸ್ತಕವು ಸಣ್ಣದಾಗಿದ್ದರೂ ಸರ್ವ ಮತಸಾಮಾನ್ಯವಾದ ಪದ್ಯಗಳನ್ನು ವಿಶೇಷ ಶ್ರದ್ಧೆಯಿಂದ ಆರಿಸಿ ಇದರಲ್ಲಿ ಸಂಗ್ರಹ ಮಾಡಿರುತ್ತಾರೆ ಮೈಸೂರು ಗವರ್ನ್‌ಮೆಂಟಿನವರು ವಿದ್ಯಾಶಾಲೆಗಳಲ್ಲಿ ಮಕ್ಕಳಿಗೆ ಸದ್ಭಕ್ತಿ ಸದ್ಗುಣಗಳನ್ನು ಬೋಧಿಸಬೇಕೆಂದು ಹುಕುಂ ಕೊಟ್ಟಿರುತ್ತಾರಷ್ಟೆ ಈ ಸಣ್ಣ ಪುಸ್ತಕವು ಈ ಉದ್ದೇಶಕ್ಕೆ ಅನುಕೂಲವಾದದ್ದಾಗಿದೆ ಎಂದು ನಮಗೆ ತೋರುತ್ತದೆ

* * *

ಮೈಸೂರು ಪಟ್ಟಣದಲ್ಲಿದ್ದ ಪಾರ್ಸಿ ವರ್ತಕರಾದ ಮೆ|| ಫ್ರಾಂಜಿ ಕವಾಸ್ಜಿಯವರು ಕಳೆದ ಬುಧವಾರ ಸ್ವಗೃಹದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರಿಗೆ ೮೦ ನೇ ವರುಷ ನಡೆಯುತ್ತಿತ್ತು ಸುಮಾರು ೪೫ ವರುಷಗಳ ಹಿಂದೆ ಲೇಟ್ ಶ್ರೀಕೃಷ್ಣರಾಜ ಒಡೆಯರವರ ದಿವಾನ್ಗಿರಿಯಲ್ಲಿ ಮೆ|| ಫ್ರಾಂಜಿಯವರು ಬೊಂಬಾಯಿನಿಂದ ಮೈಸೂರಿಗೆ ಬಂದು ನಿಂತು, ವರ್ತಕತನದಲ್ಲಿ ಪ್ರವರ್ತಿಸಿದ್ದಲ್ಲದೆ ಕಂಟ್ರಾಕ್ಟನ್ನೂ ಮಾಡುತ್ತಾ ತುಂಬಾ ಪುಣ್ಯವಂತರಾದರು ಪ್ರಜೆಗಳಲ್ಲಿ ಇವರು ಅಷ್ಟೇನೂ ಮುಂದಾಳುಗಳಾಗಿಲ್ಲದಿದ್ದರೂ ಅಧಿಕಾರಿಗಳೂ ಸಾಮಾನ್ಯ ಪ್ರಜೆಗಳೂ ಅವರನ್ನು ಗೌರವದಿಂದ ಕಾಣುತ್ತಿದ್ದರು ಇವರಿಗೆ ಒಬ್ಬ ಕುಮಾರನೂ, ಇಬ್ಬರು ಕುಮಾರಿಯರೂ ಬಹುಮಂದಿ ಮೊಮ್ಮಕ್ಕಳು ಮರಿಮಕ್ಕಳೂ ಇರುತ್ತಾ ದೊಡ್ಡ ಕುಟುಂಬಿಗಳಾಗಿದ್ದರು

* * *

ಮಧ್ಯ ಹಿಂದೂಸ್ಥಾನದಲ್ಲಿರುವ ಬರ್ವಾನಿ ಎಂಬ ದೇಶೀಯ ಸಂಸ್ಥಾನದ ರಾಜರಾದ ರಂಜಿತ್‌ಸಿಂಗ್ ಬಹದೂರ್ ಯವರು ಪರಿವಾರ ಸಹಿತ ಕಳೆದ ಬುಧವಾರ ಮಧ್ಯಾಹ್ನ ಮೆಯಿಲ್ ಟ್ರೇನಿನಲ್ಲಿ ರಾಜಧಾನಿಗೆ ಬಂದರು ಅರಮನೆಯ ಆಫೀಸರೇ ಮೊದಲಾದವರು ಸ್ಟೇಷನ್ನಿನಲ್ಲಿ ಕಾದಿದ್ದು ರಾಜರನ್ನು ಎದುರುಗೊಂಡು ಸಾರೋಟಿನಲ್ಲಿ ಕರೆದುಕೊಂಡು ಜಗನ್ಮೋಹನ ಬಂಗಲೆಯಲ್ಲಿ ಇಳಿಸಿದರು ಆ ರಾಜರು ಹೊಸ ಅರಮನೆ, ಪಾಠಶಾಲೆ, ಪಟ್ಟಣದ ಬಡಾವಣೆಗಳು ಮೊದಲಾದ ಭಾಗಗಳನ್ನು ನೋಡಿಕೊಂಡು ಬಂದು, ಗುರುವಾರ ಬೆಳಿಗ್ಗೆ ಶ್ರೀರಂಗಪಟ್ಟಣಕ್ಕೆ ಹೋಗಿ ಅಲ್ಲಿನ ಚರಿತ್ರಾರ್ಹವಾದ ಕಟ್ಟಡ ಸ್ಥಳ ಮುಂತಾದವುಗಳನ್ನು ಪರಾಂಬರಿಸಿ ಬಂದರು ಮರುದಿನ ಬೆಳಿಗ್ಗೆ ಮೆಯಿಲ್ ಟ್ರೇನಿನಲ್ಲಿ ಬೆಂಗಳೂರಿಗೆ ಪ್ರಯಾಣಮಾಡಿದರು ಬೆಂಗಳೂರಿಗೆ ದಯಮಾಡಿದ್ದ ನಮ್ಮ ಮಹಾರಾಜರವರು ಗುರುವಾರ ಸಾಯಂಕಾಲ ಮೋಟಾರ್ ಗಾಡಿಯಲ್ಲಿ ವಾಪಸು ರಾಜಧಾನಿಗೆ ಚಿತ್ತೈಸಿ, ರಾಜರನ್ನು ಕಂಡು ಅವರ ಕೂಡ ಕುಶಲ ಪ್ರಶ್ನೆಗಳನ್ನು ಬೆಳಸಿದರು ಈ ರಾಜರ ಕೂಡ ಅವರ ಉಪಾಧ್ಯಾಯರೂ ೭೮ ಜನ ಪರಿವಾರದವರೂ ಬಂದಿದ್ದರು ಅವರು ರಾಜಧಾನಿಗೆ ಬಂದಾಗಲೂ, ಇಲ್ಲಿಂದ ಪ್ರಯಾಣಮಾಡಿದಾಗಲೂ ಗೌರವಾರ್ಥವಾದ ೯ ತೋಪುಗಳು ಹಾರಿಸಲ್ಪಟ್ಟವು.

ಕೈಗಾರಿಕೆಗಳು

ಕಾಶ್ಮೀರದ ರೇಷ್ಮೆ ವ್ಯವಸಾಯ.

ಹತ್ತು ವರ್ಷದಿಂದೀಚೆಗೆ ಕಾಶ್ಮೀರದಲ್ಲಿ ರೇಷ್ಮೆ ವ್ಯವಸಾಯವು ಅಭಿವೃದ್ಧಿಸ್ಥಿತಿಯಲ್ಲಿರುತ್ತದೆ ಅಲ್ಲಿ ಈಗ ಹಿಪ್ಪುನೇರಳೆ ಮರವನ್ನು ಕ್ರಮವಾಗಿ ಬೆಳೆಯುತ್ತಿದ್ದಾರೆ ರೇಷ್ಮೆ ಹುಳುಗಳನ್ನು ಸಾಕುವವರಲ್ಲಿ ಹೆಂಗಸರು ಮಕ್ಕಳು ಒಟ್ಟು ೬೦ ೭೦ ಸಾವಿರ ಜನ ಕೆಲಸಮಾಡುತ್ತಿದ್ದಾರೆ ೧೫೭೪೪ ಮನೆಯವರಿಗೆ ಬೀಜವನ್ನು ಹಂಚಿತ್ತು ರೇಷ್ಮೆ ಗೂಡುಗಳನ್ನು ಶ್ರೀನಗರದಲ್ಲಿರುವ ಸೆಂಟ್ರಲ್ ಫ್ಯಾಕ್ಟರಿಗೆ ಒಂದು ಕ್ಲುಪ್ತ ದರಕ್ಕೆ ಮಾರುತ್ತಾರೆ ಈ ಕಾರ್ಖಾನೆಯಲ್ಲಿ ಗಂಡಸರು, ಹೆಂಗಸರು, ಮಕ್ಕಳು ಸೇರಿ ಒಟ್ಟು ೬ ಸಾವಿರ ಜನ ರೇಷ್ಮೆಯನ್ನು ರಾಟೆಯಾಡುವ ಕೆಲಸ ಮಾಡುತ್ತಾರೆ ಕಾಶ್ಮೀರ್ ಸಂಸ್ಥಾನಕ್ಕೆ ಈ ಕೈಗಾರಿಕೆಯಿಂದ ಪ್ರತಿ ವರ್ಷವೂ ಲಾಭವು ಹೆಚ್ಚುತ್ತಿದೆ ೧೯೦೦ ನೇ ಇಸವಿಯಲ್ಲಿ ೫೭,೯೦೧ ಪೌಂಡು ತೂಕ ಕಚ್ಚಾ ರೇಷ್ಮೆ ಉತ್ಪತ್ತಿಯಾಗಿ ೧೯೦೬ ನೆ ಇಸವಿಯಲ್ಲಿ ೧,೯೦,೭೯೬ ಪೌಂಡು ತೂಕದಷ್ಟು ರೇಷ್ಮೆಯು ಉತ್ಪತ್ತಿಯಾಯಿತು ಕಚ್ಚಾ ರೇಷ್ಮೆಗೂ ಮತ್ತು ಕಾರ್ಖಾನೆಯಲ್ಲಿ ನಂತ ಕಸರಿಗೂ ಸಹ ಫ್ರಾನ್ಸ್ ಮತ್ತು ಇಟಲಿ ದೇಶಗಳಲ್ಲಿ ಒಳ್ಳೇ ಗಿರಾಕಿ ಇರುತ್ತದೆ

ಜಪಾನ್ ದೇಶದ ಚಾಪೆ ಕೈಗಾರಿಕೆ.

ಜಪಾನ್ ದೇಶದಲ್ಲಿ ಜನರು ಕೈಗಾರಿಕೆ ವಿಷಯಗಳಲ್ಲಿ ತೋರಿಸುತ್ತಿರುವ ಅಭಿವೃದ್ಧಿಯನ್ನು ತಿಳಿದುಕೊಂಡಿದ್ದರೆ ಈ ದೇಶದ ಜನರು ಇದರಿಂದ ಅನೇಕ ಸಂಗತಿಗಳನ್ನು ಕಲಿಯಬಹುದು ಈಚೆಗೆ ಕೆಲವು ವರ್ಷಗಳಿಂದ ಜಪಾನ್ ದೇಶದಲ್ಲಿ ಚಾಪೆಗಳನ್ನು ಹೆಣೆಯುವ ಒಂದು ಕೈಗಾರಿಕೆಯು ಅಭಿವೃದ್ಧಿ ಸ್ಥಿತಿಗೆ ಬರುತ್ತಿದೆ ೧೮೮೮ ನೇ ಇಸವಿ ಆರಂಭವಾಯಿತು ೧೯೦೭ ನೇ ಇಸವಿ ವರೆಗೆ ಚಾಪೆಗಳ ರಫ್ತು ವ್ಯಾಪಾರವು ೨೨,೦೦೦ ಪೌನ್‌ನಿಂದ ೫,೮೪,೦೦೦ ಪೌನ್ ವರೆಗೆ ಹೆಚ್ಚಿರುತ್ತದೆ ಈ ಚಾಪೆಗಳನ್ನು ಒಂದು ವಿಧವಾದ ಜೊಂಡಿನಿಂದ ಮಾಡುತ್ತಾರೆ ಬತ್ತದ ಗದ್ದೆಗಳಲ್ಲಿ ಬತ್ತದ ಸಾಗುವಳಿಗೆ ಕುಂದಕವಾಗದ ರೀತಿ ಈ ಜೊಂಡನ್ನು ಬೆಳೆಯುತ್ತಾರೆ ಇದಕ್ಕೆ ಕ್ರಮವಾಗಿ ಗೊಬ್ಬರ ಹಾಕುವದುಂಟು ಕತ್ತರಿಸಿದ ನಂತರ ಕೆಲವು ದಿನ ಬಿಸಿಲಿನಲ್ಲಿ ಒಣಗಿಸುತ್ತಾರೆ ಬಳಿಕ ಅದನ್ನೆಲ್ಲಾ ಕೂಡಿಸಿ ಉದ್ದದ ಪ್ರಕಾರ ವಿಂಗಡಿಸಿ ಅವಶ್ಯಕವಿದ್ದರೆ ಬಣ್ಣ ಹಾಕುತ್ತಾರೆ ಈ ಚಾಪೆ ವ್ಯಾಪಾರವನ್ನು ಜಪಾನ್ ದೇಶದಲ್ಲಿ ಎರಡು ತರವಾಗಿ ನಡಿಸುವದುಂಟು (೧) ಕೊಂಡುಕೊಳ್ಳುವವರು ಕೇಳುವ ಮಾದರಿಗಳನ್ನು ಅನುಸರಿಸಿ ತಯಾರ್ ಮಾಡುವದು, (೨) ಹಿಂದಿನ ಅನುಭವವನ್ನು ನೋಡಿಕೊಂಡು ಹೆಚ್ಚಾಗಿ ಬಿಕರಿಯಾಗುವ ಚಾಪೆ ಮಾದರಿಗಳನ್ನೇ ತಯಾರ್ ಮಾಡಿ ಕೊಡುವದು ಪಟ್ಟೆಗಳು ಬಂದಿರುವ ೪೦ ಗಜಉದ್ದದ ಚಾಪೆಯು ಸುರುಳಿ ಜಪಾನ್‌ನಲ್ಲಿ ೬ ರೂಪಾಯಿ ಬೆಲೆ ಆಗುತ್ತ ಈಚೆಗೆ ಈ ಚಾಪೆ ಕೈಗಾರಿಕೆಯನ್ನು ಮೇಲ್ ತನಿಖೆ ಮಾಡುವದಕ್ಕಾಗಿ ಒಂದು ಇನ್‌ಸ್ಪೆಕ್ಷನ್ ಆಫೀಸ್ ಏರ್ಪಡಿಸಿರುತ್ತಾರೆ ತಾಟುಪೋಟು ಕೆಲಸಕ್ಕೆ ಆಸ್ಪದಕೊಡದೆ ಉತ್ತಮ ತರಹ ಚಾಪೆಗಳೇ ತಯಾರಾಗುವಂತೆ ಮಾಡುವದೂ, ಈ ಸಂಬಂಧವಾದ ವ್ಯಾಪಾರವನ್ನು ಭದ್ರಪಡಿಸುವದೂ ಅದರ ಮುಖ್ಯೋದ್ದೇಶಗಳಾಗಿರುತ್ತವೆ ಈ ಆಫೀಸಿನಲ್ಲಿ ಚಾಪೆಗಳನ್ನು ಅಳೆಯುವುದು, ಅವುಗಳಿಗೆ ಬಣ್ಣ ಕೊಡುವದು ಮತ್ತು ಅವುಗಳನ್ನು ಇನ್ನೂ ಉತ್ತಮ ಸ್ಥಿತಿಗೆ ತರುವ ವಿಚಾರಗಳಲ್ಲಿಯೂ ಸಹ ಅಜಮಾಯಿಷಿಗಳನ್ನು ನಡಿಸುತ್ತಾರೆ ಇದೂ ಅಲ್ಲದೆ ಚಾಪೆಯನ್ನು ಹೆಣೆಯುವ ಅನೇಕ ತರಹ ಮಗ್ಗಗಳನ್ನು ಪ್ರಯೋಗಿಸಿ ಕೆಲಸ ಮಾಡಿ ತೋರಿಸುತ್ತಾರೆ ಈ ದೇಶದಲ್ಲಿ ಕೂಲಿ ದರಗಳು ಜಪಾನ್‌ನಲ್ಲಿರುವಂತೆಯೇ ಅನುಕೂಲವಾಗಿರುವ ಕಾರಣ ಇಲ್ಲಿಯೂ ಇಂಥಾ ಕಸಬುಗಳನ್ನು ಅಭಿವೃದ್ಧಿಗೆ ತಂದರೆ ಉತ್ತಮ

ಇಂಡಿಯಾ ದೇಶದ ವೃತ್ತಾಂತಗಳು

ಬರ್ಮಾ ಆದಿಪತ್ಯಕ್ಕೆ ಸೇರಿದ ಪ್ರೋಂ, ಟಂಗೂ ಎಂಬೀ ಪಟ್ಟಣಗಳಲ್ಲಿ ಕಳೆದ ವಾರ ಬಹಳ ಮಳೆ ಸುರಿದು ರೈಲ್ ರಸ್ತೆಗಳು ಒಂದು ಮೈಲಿ ದೂರ ಕೊಚ್ಚಿ ಹೋದವು

* * *

ಸಿಂಧು ದೇಶಕ್ಕೆ ಸೇರಿದ ಹೈದರಾಬಾದ್ ಪಟ್ಟಣದಲ್ಲಿ ಕಳೆದ ವಾರ ಒಬ್ಬ ಭಾರೀ ಸಾಹುಕಾರನ ಮನೆಗೆ ಬೆಂಕಿ ಬಿದ್ದು ಸುಮಾರು ೧೦,೦೦೦ ರೂಪಾಯಿನ ಆಸ್ತಿ ಸುಟ್ಟುಹೋಯಿತು

* * *

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ಪರಿವಾರ ಸಹಿತ ನೀಲಗಿರಿಯಿಂದ ಹೊರಟು ಸುಮಾರು ಎರಡು ವಾರಗಳಿಂದ ತಂಜಾವೂರು, ತಿರುಚನಾಪಲ್ಲಿ, ಮಧುರೆ, ಈ ಮೊದಲಾದ ದಕ್ಷಿಣ ಪ್ರಾಂತ್ಯಗಳಲ್ಲಿ ಸಂಚಾರ ಮಾಡುತ್ತಿದ್ದಾರೆ

* * *

ಸಂಯುಕ್ತ ಆಧಿಪತ್ಯಗಳು, ಬಂಗಾಳಾ, ಮತ್ತು ಬೊಂಬಾಯಿ ಆಧಿಪತ್ಯಗಳಲ್ಲಿ ಇನ್ನೂ ಕೆಲವು ಕಡೆ ಕ್ಷಾಮನಿವಾರಣೆಯ ಕಾರ್ಯಗಳು ನಡೆಯುತ್ತಲಿವೆ ಸುಮಾರು ೧೨,೦೦೦ ಪ್ರಜೆಗಳು ಸರ್ಕಾರದವರ ರಿಲೀಫ್ ಕಾಮಗಾರಿಗಳಲ್ಲಿ ಉಳುಕೊಂಡಿದ್ದಾರೆ

* * *

ಬೊಂಬಾಯಿನ ಯೂನಿವರ್ಸಿಟಿ ಎಂಬ ಸರ್ವಕಲಾಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಿಮಾನಗಳನ್ನು ತಯಾರ್ ಮಾಡುವ ವಿದ್ಯೆಯನ್ನೂ ಕಲಿಸಿಕೊಡುವುದಕ್ಕೆ ಏರ್ಪಾಡುಮಾಡಬೇಕೆಂದೂ, ಅದಕ್ಕಾಗಿ ಸೀಮೆಯಿಂದ ಒಬ್ಬ ಬೋಧಕನನ್ನು ಕರೆಸಿ ನೇಮಿಸಬೇಕೆಂದೂ ಆಲೋಚನೆಮಾಡುತ್ತಿದ್ದಾರೆ

* * *

ತಿರುನಲ್ವೇಲಿಯಲ್ಲಿರುವ ಹತ್ತಿ ಬಟ್ಟೆಗಳ ಕಾರ್ಖಾನೆಯವರು ಕ್ವಿಲಾನ್ ಪಟ್ಟಣದ ನೂಲಿನ ಕಾರ್ಖಾನೆಯನ್ನೂ ಕೊಂಡುಕೊಂಡಿದ್ದಾರೆ ಈ ಕಾರ್ಖಾನೆಗಳಲ್ಲಿ ಹತ್ತಿ ಬಟ್ಟೆಗಳು ಬಹಳ ಶೀಘ್ರವಾಗಿಯೂ ತುಂಬಾ ನಾಜೂಕಾಗಿಯೂ ತಯಾರಾಗುವವೆಂದೂ, ವ್ಯಾಪಾರವು ದಿನೇ ದಿನೇ ಹೆಚ್ಚುತ್ತಿದೆ ಎಂದೂ ಪ್ರಕಟವಾಗಿದೆ

* * *

ಡಾಕ್ಟರ್ ಲಾಲ್‌ಕಾಕಾ ಎಂಬೊಬ್ಬ ಪಾರ್ಸಿ ವೈದ್ಯನು ಮದನಲಾಲನಿಂದ ಲಂಡನ್ ಪಟ್ಟಣದಲ್ಲಿ ಕೊಲ್ಲಲ್ಪಟ್ಟನಷ್ಟೆ ಈತನ ಹೆಸರನ್ನು ಶಾಶ್ವತಪಡಿಸಬೇಕೆಂದು ಬೊಂಬಾಯಿ ಪ್ರಾಂತ್ಯದವರು ನಿಶ್ಚಯ ಮಾಡಿ ಚಂದಾ ಕೂಡಿಸುತ್ತಿದ್ದಾರೆ ಈ ಫಂಡಿಗೆ ಇದುವರೆಗೆ ೩,೦೦೦ ರೂಪಾಯಿ ವಸೂಲಾಗಿರುವುದು

* * *

ಡಾರ್ಜಿಲಿಂಗ್ ಪಟ್ಟಣದಲ್ಲಿ ಕಳೆದ ಬುಧವಾರ ರಾತ್ರಿ ಕೆಲವು ಕ್ಷಣಕಾಲ ಭೂಮಿಯು ಕಂಪಿಸಿತು ಆದರೆ ಕಷ್ಟನಷ್ಟಗಳೇನೂ ಸಂಭವಿಸಲಿಲ್ಲ

* * *

ಕಳೆದ ಬುಧವಾರ ಬೆಳಗಿನ ಝಾಮದಲ್ಲಿ ಅಜ್ಮೀರ್ ಪಟ್ಟಣದ ರೈಲ್ ಗಾಡಿಗಳ ಕಾರ್ಖಾನೆಗೆ ಬೆಂಕಿ ಬಿದ್ದು ಸುಮಾರು ಒಂದು ಲಕ್ಷ ರೂಪಾಯಿನ ಬೆಲೆ ಬಾಳುವ ಗಾಡಿಗಳೂ ಸಾಮಾನುಗಳೂ ಸುಟ್ಟುಹೋದವು.

* * *

ಹಿಂದೂಸ್ಥಾನದ ರೈಲ್ವೆ ಬೋರ್ಡಿನವರು ಈಸ್ಟ್ ಇಂಡಿಯಾ ರೈಲ್ವೆ ಕಂಪನಿಗೆ ೩೦೦ ಸಾಮಾನು ಬಂಡಿ, ೧೨ ನೇ ಕ್ಲಾಸ್ ಗಾಡಿ ಮೊದಲಾದವುಗಳನ್ನು ತರಿಸುವುದಕ್ಕೆ ೧೧,೧೩,೬೮೬ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ

* * *

ಕಳೆದ ವಾರ ರಂಗೂನ್ ಪಟ್ಟಣದ ಅಂಚೆ ಜವಾನರು ಏಕವಾಗಿ ಕೆಲಸಕ್ಕೆ ಹೋಗದೆ ನಿಂತುಬಿಟ್ಟರು ಸರ್ಕಾರದವರು ಆ ಪೈಕಿ ಮುಖಂಡರಾಗಿದ್ದ ೧೧ ಮಂದಿಯನ್ನು ಹಿಡಿದು ಅವರಿಗೆ ಸಜಾ ಹಾಕಿಸಿದರು ಉಳಿದವರೆಲ್ಲಾ ಈಗ ಕೆಲಸದ ಮೇಲೆ ಹಾಜರಾಗಿರುತ್ತಾರೆ

* * *

ಅನಂತಶಯನ ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಇನ್ನು ಮುಂದೆ ಮಹಾರಾಜರವರ ವರ್ಧಂತಿ ಉತ್ಸವದ ಕಾಲದಲ್ಲಿ ನಡಿಸಬೇಕೆಂದು ತೀರ್ಮಾನ ಮಾಡಿದ್ದಾರೆ ಈ ವರುಷದ ಸಭೆಯ ಖರ್ಚಿಗೆ ಮಹಾರಾಜರವರು ೫ ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿರುವರು

* * *

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಅಸ್ಸಾಂನಲ್ಲಿ ಕಾಡಾನೆಗಳ ಕಾಟ ಹೆಚ್ಚಾಗಿದೆ ಅವು ರೈಲ್ ಗಾಡಿಗಳ ಸಂಚಾರಕ್ಕೆ ಅಡ್ಡಿ ಮಾಡುತ್ತಿರುವವು ಅಲ್ಲಿ ಕೆಡ್ಡಾ ಏರ್ಪಾಡು ಮಾಡಿ ಈ ದುಷ್ಟ ಮೃಗಗಳ ಹಾವಳಿಯನ್ನು ತಪ್ಪಿಸಬೇಕೆಂದು ರೈಲ್ವೆ ಇಲಾಖೆಯವರು ಗವರ್ನ್‌ಮೆಂಟಿಗೆ ತಿಳಿಸಿರುತ್ತಾರೆ

* * *

ನಾಸಿಕ್ ಪಟ್ಟಣದಲ್ಲಿ ವಕೀಲರಾಗಿರುವ ಮೆ|| ವಾಮನ ಸಖಾರಾಂ ಖಾರೆ ಎಂಬುವರು ರಾಜದ್ರೋಹಕರವಾದ ಉಪನ್ಯಾಸಗಳನ್ನು ಮಾಡಿ ಪ್ರಜೆಗಳ ಮನಸ್ಸನ್ನು ಕೆಡಿಸಿದರೆಂದು ಮೊಕದ್ದಮೆ ಆಗಿ ಬೊಂಬಾಯಿ ಹೈಕೋರ್ಟಿನವರು ಆತನಿಗೆ ಒಂದು ವರುಷ ವಕೀಲಿ ನಡಿಸಕೂಡದೆಂಬ ಶಿಕ್ಷೆಯನ್ನು ವಿಧಿಸಿರುವರು

* * *

ಕಲ್ಕತ್ತಾ ಪಟ್ಟಣದಲ್ಲಿ ವಾಲಂಟಿಯರ್ ಸೈನಿಕನಾದ ಅಲೆಕ್ಸಾಂಡರ್ ಎಂಬುವನು ಪಿಸ್ತೂಲುಗಳನ್ನು ತರಿಸಿ ಅಲ್ಲಿನ ಜನರಿಗೆ ಬಿಕರಿಮಾಡಿ ಲಾಭಪಡೆಯುತ್ತಿದ್ದನೆಂದು ಆತನ ಮೇಲೆ ಮೊಕದ್ದಮೆ ಆಯಿತು ಮ್ಯಾಜಿಸ್ಟ್ರೇಟರು ಆತನಿಗೆ ೩೦೦ ರೂಪಾಯಿ ಜುಲ್ಮಾನೆ ವಿಧಿಸಿದರು ಈಗ ಆತನು ಅಪೀಲ್ ಮಾಡಿಕೊಂಡಿರುತ್ತಾನೆ

* * *

ಈಚೆಗೆ ಅಂಡಮಾನ್ ದ್ವೀಪದಲ್ಲಿ ಖೈದಿಗಳಾಗಿದ್ದ ಐದು ಮಂದಿ ಬಂದೀವಾನರು ದೋಣಿಗಳಲ್ಲಿ ಕುಳಿತು ತಪ್ಪಿಸಿಕೊಂಡು ಹೋಗಿದ್ದರಷ್ಟೆ ಪೋಲೀಸಿನವರು ಕಳೆದ ವಾರ ಅವರಲ್ಲಿ ಇಬ್ಬರನ್ನು ಕೊಂದುಹಾಕಿ ಅವರ ಬಳಿ ಇದ್ದ ಪಿಸ್ತೂಲುಗಳನ್ನು ತೆಗೆದುಕೊಂಡು, ಉಳಿದ ಮೂವರನ್ನು ದಸ್ತಗಿರಿ ಮಾಡಿ ರಂಗೂನ್ ಪಟ್ಟಣಕ್ಕೆ ಕರೆದು ತಂದಿದ್ದಾರೆ

* * *

ಮದರಾಸ್ ಪಟ್ಟಣದ ಸಾಹುಕಾರಪೇಟೆಯಲ್ಲಿ ಟಾಕರ್ ಕಂಪನಿಯವರು ಮೋಟಾರ್ ಶಕ್ತಿಯಿಂದ ಉಳುವಂಥಾ ನೇಗಿಲನ್ನು ತರಿಸಿ ಪ್ರದರ್ಶನ ಮಾಡಿದರು ಅನೇಕ ಜಮೀನ್ದಾರರೂ ರೈತರೂ ಸರ್ಕಾರಿ ಅಧಿಕಾರಿಗಳೂ ಆ ನೇಗಿಲು ಉಳುವುದನ್ನು ನೋಡಿ ತುಂಬಾ ಸಂತೋಷಪಟ್ಟರು ವಿಸ್ತಾರವಾದ ಜಮೀನುಗಳನ್ನು ಪಡೆದಿರುವವರು ಈ ತರದ ಮೋಟಾರ್ ನೇಗಿಲುಗಳನ್ನು ತರಿಸಿ ವ್ಯವಸಾಯ ಮಾಡಬಹುದಾಗಿದೆ

* * *

ಹಿಂದೂಸ್ಥಾನದಲ್ಲೆಲ್ಲಾ ಕಳೆದ ವಾರ ೪೬೨ ಮಂದಿ ಪ್ಲೇಗ್ ಉಪದ್ರದಲ್ಲಿ ತೀರಿಹೋದರು ಈ ಮರಣಗಳ ಪೈಕಿ ಸಂಯುಕ್ತ ಆಧಿಪತ್ಯಗಳು ೯೪, ಬೊಂಬಾಯಿ ಆಧಿಪತ್ಯ ೯೨, ಬರ್ಮಾ ೮೪, ಮೈಸೂರು ಸಂಸ್ಥಾನ ೮೦, ಮದರಾಸ್ ಆಧಿಪತ್ಯ ೪೭, ಬಂಗಾಳಾ ೩೨, ಪಂಜಾಬ್ ೨೭, ಮಧ್ಯಪ್ರಾಂತ್ಯಗಳು ಮತ್ತು ಬೀರಾರ ೨, ಈ ರೀತಿ ಸಂಖ್ಯೆಯಾಗಿರುತ್ತವೆ ಈ ಉಪದ್ರವು ಈಚೆಗೆ ಎಲ್ಲಾ ಕಡೆಗಳಲ್ಲೂ ಕಡಮೆಯಾಗುತ್ತಾ ಬಂದಿದೆ

* * *

ಬಳ್ಳಾರಿ ಜಿಲ್ಲೆಗೆ ಸೇರಿದ ಗುತ್ತಿ ನಗರದ ಬಳಿ ಪಾಮಿಡಿ ಗ್ರಾಮದಲ್ಲಿ ಕಳೆದ ಮೊಹರಂ ಹಬ್ಬದ ದಿನ ಹಿಂದು ಬೋಯರಿಗೂ ಮಹಮ್ಮದೀಯರಿಗೂ ಜಗಳವಾಯಿತು ಪೋಲೀಸಿನವರು ಐವತ್ತು ಮಂದಿಯನ್ನು ದಸ್ತಗಿರಿ ಮಾಡಿ ಮೊಕದ್ದಮೆ ತಂದರು ಗುತ್ತಿಯ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ೩೦ ಮಂದಿ ಬೋಯರಿಗೂ, ೨೦ ಮಂದಿ ಮಹಮ್ಮದೀಯರಿಗೂ ತಲಾ ೧೫ ತಿಂಗಳ ಕಠಿಣ ಸಜವನ್ನೂ ೫೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸುತ್ತಾರೆ ಇವರೆಲ್ಲಾ ಸೆಷನ್ಸ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದಾರೆ

* * *

ಜೋಯಿಸತಿ ಎಂಬೊಬ್ಬ ೩೩ ವರುಷದ ಹೆಂಗಸೂ, ಕೃಷ್ಣನೆಂಬೊಬ್ಬ ಯೌವನಸ್ಥನೂ ಕಟಕ್ ಪಟ್ಟಣದಿಂದ ಶ್ರೀರಂಗಕ್ಕೆ ಯಾತ್ರಾರ್ಥವಾಗಿ ಪ್ರಯಾಣ ಮಾಡುತ್ತಿದ್ದರು ಆ ಹೆಂಗಸು ಕಳೆದ ಗುರುವಾರ ರಾತ್ರಿ ತಂಜಾವೂರು ಸ್ಟೇಷನ್ನಿಂದ ಆಚೆ ಪವನ ತಪ್ಪಿ ಗಾಡಿಯೊಳಗಿಂದ ಹೊರಕ್ಕೆ ಬಿದ್ದುಬಿಟ್ಟಳು ಅವಳ ಬಳಿ ಕುಳಿತಿದ್ದ ಕೃಷ್ಣನು ಕೂಡಲೇ ಧುಮುಕಿ ಆಕೆಯನ್ನು ಎತ್ತಿಕೊಂಡನು ಇಷ್ಟರಲ್ಲಿ ರೈಲಿನವರು ಗಾಡಿಯನ್ನು ನಿಲ್ಲಿಸಿ ಅವರಿಬ್ಬರನ್ನು ಎತ್ತಿ ಗಾಡಿಯೊಳಗೆ ಮಲಗಿಸಿದರು ವೈದ್ಯರು ಪರೀಕ್ಷೆ ಮಾಡಿದಾಗ ಅವರಿಬ್ಬರಿಗೂ ವಿಶೇಷ ಗಾಯವಾಗಿರಲಿಲ್ಲವೆಂದು ಗೊತ್ತಾಯಿತು ಅವರನ್ನು ಮುಂದಕ್ಕೆ ಕಳುಹಿಸಿಕೊಟ್ಟರು

ಹೊಗೆಸೊಪ್ಪು—(೩)

ಹೊಗೆಸೊಪ್ಪಿನ ಸೊಸಿ ಬೆಳೆಸತಕ್ಕ ಕ್ರಮ.

ಚನ್ನಾಗಿ ಉತ್ತು ಹಾಕಾಗಿರುವ ಎತ್ತರವಾದ ಪ್ರದೇಶದಲ್ಲಿ ಶೀರೇಮಡಿಗಳಂತೆ ಚಿಕ್ಕ ಚಿಕ್ಕದಾಗಿ ಮಡಿಗಳನ್ನು ಮಾಡಿ, ಹೊಗೆಸೊಪ್ಪಿನ ಬೀಜ ೧ ತೃಷಂ ರಷ್ಟು ನಯವಾದ ಮರಳನ್ನು ಬೆರಸಿ, ಮಡಿಗಳಿಗೆ ತಕ್ಕಷ್ಟು ಕುರಿಯ ಗೊಬ್ಬರ ಅಥವಾ ಒಳ್ಳೇ ಹಣ್ಣಾದ ದನದ ಗೊಬ್ಬರವನ್ನು ಹಾಕಿ, ಅದರ ಮೇಲೆ ಬಿತ್ತನವನ್ನು ಬಿತ್ತಬೇಕು ಅನಂತರ ಮರಳನ್ನು ಹಲಗೆಯಿಂದ ಅಥವಾ ಕೈಯಿಂದ ಮೃದುವಾಗಿ ದಮ್ಮಸು ಮಾಡಬೇಕು ತರುವಾಯ ಮರಳು ಮಿಶ್ರವಾದ ಸೊಸಿಯನ್ನು ದಿನವೂ ಬೆಳಿಗ್ಗೆ ಸಾಯಂಕಾಲ ಎರಡು ವೇಳೆಯೂ ಒಗ್ಗಿನ ಮೇಲೆ ನೀರನ್ನು ಸುಮಾರಾಗಿ ತೇವವುಂಟಾಗುವ ಹಾಗೆ ಚಿಮುಕಿಸಬೇಕು. ಮಳೆ ಆದ ದಿವಸ ನೀರು ಅವಶ್ಯಕವಿಲ್ಲ. ಈ ರೀತಿ ಮಾಡಿದರೆ ಹತ್ತು ದಿವಸಕ್ಕೆ ಮೊಳೆ ಬರುವದು. ಸೊಸಿ ಮೇಲಕ್ಕೆ ಬಂದ ಮೇಲೆ ಬೆರಳುದ್ದ ಬರುವವರೆಗೆ ಇದೇ ರೀತಿ ಮಾಡಬೇಕು ಆಗಾಗ್ಗೆ ಕಳೆಯನ್ನು ಸೊಸಿಗಳು ನೋಯದಂತೆ ಜಾಗರೂಕತೆಯಿಂದ ತೆಗೆದುಹಾಕುವದು. ಒಗ್ಗಿನ ಪೈರು ಬಹಳ ಒತ್ತಾದರೆ ಅಲ್ಲಲ್ಲಿ ಒಂದೊಂದನ್ನು ಕಿತ್ತುಹಾಕಿ ವಿರಳಮಾಡಬಹುದು ಈ ಸ್ಥಿತಿಯಲ್ಲಿ ಎರಡು ದಿವಸಕ್ಕೆ ಒಂದುವೇಳೆ ಸೊಸಿಗೆ ನೀರು ಹಾಕುವದು ಆಗೆಯನ್ನು ಆರಿದ್ರೆ ಮಳೆಯಲ್ಲಿ ಹಾಕುವರು ಮಾಘದ ಮಳೆಯಲ್ಲಿ ಸೊಸಿಯನ್ನು ಬೆಳಗಿನ ಹೊತ್ತಿನಲ್ಲಿ ಅಥವಾ ಸಂಜೆ ಹೊತ್ತಿನಲ್ಲಿ ಮಡಿಗಳಿಗೆ ನೀರು ಹಾಕಿ ನೆನೆಸಿ ಸೊಸಿಯನ್ನು ಕಿತ್ತು ನೆರಳಿನಲ್ಲಿಟ್ಟುಕೊಂಡು ತಯಾರಾಗಿರುವ ಜಮೀನಿನಲ್ಲಿ ಒಂದು ಗದಕ್ಕೆ ಒಂದು ಗುಳಿಯಂತೆ ಮಾಡಿ ಗುಳಿ ೧ ಕ್ಕೆ ಒಂದು ಬೊಗಸೆ ಗೊಬ್ಬರವನ್ನು ಹಾಕಿ ಚನ್ನಾಗಿ ಮಣ್ಣಿನೊಡನೆ ಬೆರಸಿ ಗುಳಿ ೧ ಕ್ಕೆ ಎರಡು ಸೊಸಿಯಂತೆ ನೆಟ್ಟು ಕೂಡಲೆ ಗುಳಿಗೆ ಸ್ವಲ್ಪ ನೀರು ಬಿಡುವದು ಮಾರನೇ ದಿವಸ ಯಾವದಾದರೂ ಒಂದು ಕಾಡು ಸೊಪ್ಪನ್ನು (ಅಂದರೆ, ಕಕ್ಕೆ ಹೊಂಗೆ ಮೊದಲಾದ ಎಲೆಯನ್ನು) ಮುಚ್ಚಿ ಸೊಸಿಗಳಿಗೆ ನೆರಳು ಕೊಡಬೇಕು ಮೋಡವಾಗಿದ್ದರೆ ಅವಶ್ಯಕವಿಲ್ಲ ೪-೫ ದಿವಸಗಳ ತನಕ ನೆರಳು ಕೊಟ್ಟು ಸೊಸಿಗಳು ಬೇರುಬಿಟ್ಟು ಕಣ್ಣುಬಿಟ್ಟ ಮೇಲೆ ಮಳೆಯಿಲ್ಲದಿದ್ದರೆ ಆಗಾಗ್ಗೆ ಅಳತೆ ಅರ್ಧ ಸೇರಿನಷ್ಟು ನೀರು ಹಾಕಬೇಕು. ನೆಟ್ಟ ಸೊಸಿಗಳ ಪೈಕಿ ಯಾವದರಲ್ಲಾದರೂ ಹುಳು ಕಂಡಲ್ಲಿ ಆ ಸೊಸಿಯನ್ನು ತೆಗೆದುಹಾಕಿ ಹುಳುವಿಲ್ಲದ ಸ್ವಚ್ಛವಾದ ಹೊರುವಾದ ಸೊಸಿಯನ್ನು ನೆಡಬೇಕು. ಸೊಸಿಗಳು ಹೊಸ ಸುಳಿ ಕಿತ್ತ ಮೇಲೆ ಸೊಸಿಗಳಿಗೆ ಆಗಾಗ್ಗೆ ಕುಂಟೆಯಿಂದ ಹರತೆ ಹೊಡೆಯುತ್ತಾರೆ ೮-೧೦ ದಿವಸಗಳಿಗೆ ಒಂದುಸಲ ಈ ರೀತಿ ಹರತೆ ಮಾಡಿ ತರುವಾಯ ಪ್ರತಿ ಗುಳಿಯ ಎರಡು ಸೊಸಿಗಳಲ್ಲಿ ಒಳ್ಳೇದನ್ನು ಬಿಟ್ಟು ದುರ್ಬಲವಾದ ಸೊಸಿಯನ್ನು ಕಿತ್ತುಹಾಕಬೇಕು ಬುಡಗಳಿಗೆ ಬಹಳ ಮಣ್ಣನ್ನು ಏರುಹಾಕುತ್ತಾರೆ ಮೇಲ್ಕಂಡಂತೆ ಸೊಸಿಗಳನ್ನು ಸ್ಥಾಪಿಸಬೇಕು ತರುವಾಯ ಮಾಡಬೇಕಾದ ವ್ಯವಸಾಯವನ್ನು ಇದಕ್ಕೆ ಮುಂಚಿನ (ಅಂದರೆ, ಜೂನ್ ೧೭ ನೇ ಮತ್ತು ಜುಲೈ ೧೫ ನೇ ತಾರೀಖುಗಳ) ಪತ್ರಿಕೆಗಳಲ್ಲಿ ಬರೆದು ಇದೇವೆ

ವಿ ರಾಘವಾಚಾರ್ಯರು,
ಅಡ್ವೊಕೇಟ್, ಮೈಸೂರು

ಕೊಯಮುತ್ತೂರು ವ್ಯವಸಾಯ ವಿದ್ಯಾಶಾಲೆಯು.

ಮದರಾಸ್ ಗವರ್ನರವರು ಪ್ರತಿಷ್ಠೆಮಾಡಿದ್ದು

ವ್ಯವಸಾಯವು ಹಿಂದುಸ್ಥಾನದ ಮುಖ್ಯ ಕಸಬಾಗಿದ್ದರೂ ಅದನ್ನು ಶಾಸ್ತ್ರವತ್ತಾಗಿಯೂ ಕ್ರಮವಾಗಿಯೂ ಕಲಿಸಿಕೊಡುವುದಕ್ಕೆ ಅನುಕೂಲವಾದ ವಿದ್ಯಾಶಾಲೆಯು ಮದರಾಸ್ ಅಧಿಸತ್ತದಲ್ಲಿ ಇರಲಿಲ್ಲ ಆದರೆ ಮದರಾಸ್ ಪಟ್ಟಣದಲ್ಲೇ ಸೈದಾಪೇಟೆ ಎಂಬ ವಿಭಾಗದಲ್ಲಿ ಒಂದು ವ್ಯವಸಾಯ ಶಾಸ್ತ್ರ ಬೋಧನಾ ಶಾಲೆಯು ಬಹುಕಾಲದಿಂದ ಇತ್ತೆಂದು ಕೆಲವರು ಹೇಳಬಹುದು ಅದು ಅಷ್ಟು ತೃಪ್ತಿಕರವಾದ ಸ್ಥಿತಿಯಲ್ಲಿರಲಿಲ್ಲವೆಂಬುವುದೂ, ಅದರಿಂದ ಅಷ್ಟೇನೂ ಪ್ರಯೋಜನವಾಗಲಿಲ್ಲವೆಂಬುವುದೂ ಮದರಾಸ್ ಗವರ್ನ್ಮೆಂಟಿನವರಿಗೆ ಗೊತ್ತಾದ ಕಾರಣ ಸುಮಾರು ಎರಡು ವರುಷಗಳ ಹಿಂದೆ ಆ ವಿದ್ಯಾಶಾಲೆಯನ್ನು ವಜಾಮಾಡಿ ಈಗಿನ ಕಾಲಕ್ಕೆ ತಕ್ಕಂಥಾ ಸಲಕರಣೆಗಳನ್ನೆಲ್ಲಾ ಪಡೆದಿರುವಂಥಾ ವಿದ್ಯಾಶಾಲೆಯನ್ನು ಹೊಸದಾಗಿ ಕಟ್ಟಿ, ವ್ಯವಸಾಯವನ್ನು ಶಾಸ್ತ್ರವತ್ತಾಗಿಯೂ ಸಾಕ್ಷಾತ್ತಾಗಿಯೂ ವಿದ್ಯಾರ್ಥಿಗಳಿಗೆ ಕಲಿಸುವುದಕ್ಕೆ ಏರ್ಪಾಡು ಮಾಡಬೇಕೆಂಬು ನಿಶ್ಚಯಿಸಿಕೊಂಡರು ಕೊಯಮುತ್ತೂರು ಟೌನ್ ಬಳಿಯಲ್ಲಿ ಈ ಪಾಠಶಾಲೆಯನ್ನು ಕಟ್ಟುವುದೇ ಎಲ್ಲಾ ಭಾಗಗಳಲ್ಲೂ ಅನುಕೂಲವಾಗಿದೆ ಎಂದು ತಿಳಿದವರು ಸಲಹೆ ಕೊಟ್ಟಿದ್ದರಿಂದ ಮದರಾಸ್ ಸರಕಾರದವರು ಅದರಂತೆ ಸಾಂಕ್ಷನ್ ಮಾಡಿದರು ಕಳೆದ ೧೯೦೬ ನೇ ಇಸವಿ ಸೆಪ್ಟಂಬರ್ ೨೪ ನೇ ತಾರೀಖಿನ ದಿನ ಮದರಾಸ್ ಗವರ್ನರವರಾದ ಸರ್ ಆರ್ಥರ್ ಲಾಲಿ ಯವರು ಆ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿದರು ಈಗ ಈ ಕಟ್ಟಡವು ಪೂರೈಸಿದ್ದರಿಂದ ಗವರ್ನರವರು ಅದನ್ನು ಕಳೆದ ೧೪ ನೇ ತಾರೀಖು ಬುಧವಾರ ನೀಲಗಿರಿಯಿಂದ ದಯಮಾಡಿ ಪ್ರತಿಷ್ಠೆಮಾಡಿರುತ್ತಾರೆ ಅದರಲ್ಲಿ ವ್ಯವಸಾಯ ಶಾಸ್ತ್ರವನ್ನು ವಿದ್ಯಾರ್ಥಿಗಳಿಗೆ ಪುಸ್ತಕ ಪಾಠವಾಗಿ ಹೇಳಿಕೊಡುವುದಕ್ಕೂ, ವ್ಯವಸಾಯ ಅಭಿವೃದ್ಧಿಗೆ ಅವಶ್ಯವಾದ ಪರಿಶೋಧನೆಗಳನ್ನು ಕಾರ್ಯತಃ ಮಾಡಿ ತೋರಿಸುವುದಕ್ಕೂ ಅವಕಾಶವನ್ನೂ ಸಲಕರಣೆಗಳನ್ನೂ ಕಲ್ಪಿಸಿರುತ್ತಾರೆ. ಇದಲ್ಲದೆ ವಿದ್ಯಾಶಾಲೆಯ ಸಮೀಪದಲ್ಲೇ ತರಿ ಮುಸ್ಕಿ ಬಾಗಾಯತು ಫಸಲುಗಳನ್ನು ಇಟ್ಟು ಸುಲಭವಾಗಿ ಬೆಳೆಮಾಡುವ ವಿಧಾನಗಳನ್ನು ಕಾರ್ಯತಃ ಮಾಡಿ ತೋರಿಸುವುದಕ್ಕೂ ಕಲಿತುಕೊಳ್ಳುವುದಕ್ಕೂ ಅನುಕೂಲಿಸುವಂಥಾ ೪೦೭॥ ಎಕರೆ ವಿಸ್ತಾರವುಳ್ಳ ಜಮೀನನ್ನು ಬಿಟ್ಟುಕೊಟ್ಟಿದಾರೆ ಮೇಲ್ಕಂಡ ವಿದ್ಯಾಶಾಲೆಯನ್ನು ಕಟ್ಟುವುದಕ್ಕೆ ಗವರ್ನ್ಮೆಂಟಿಗೆ ೨ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಖರ್ಚಾಗಿರುತ್ತದೆ ವ್ಯವಸಾಯ ಶಾಸ್ತ್ರ ಬೋಧಕರೂ ಪರೀಕ್ಷಕರಾದ ಪಂಡಿತರೂ ವಾಸಮಾಡುವುದಕ್ಕೆ ಅದರ ಸಮೀಪದಲ್ಲೇ ಹಲವು ಬಂಗಲೆಗಳನ್ನು ಕಟ್ಟಿಸಿರುವರು ಇದಲ್ಲದೆ ಏಕಕಾಲದಲ್ಲಿ ಅರವತ್ತು ಮಂದಿ ವಿದ್ಯಾರ್ಥಿಗಳು ಅಲ್ಲೇ ಇದ್ದುಕೊಂಡು ಪಾಠ ಪ್ರವಚನಗಳನ್ನು ನಡಿಸಿಕೊಳ್ಳುವದಕ್ಕೆ ವಿದ್ಯಾರ್ಥಿ ನಿಲಯಗಳನ್ನು ಕಟ್ಟಿಸಿದಾರೆ ಒಂದೊಂದು ಮನೆಯಲ್ಲಿ ಆರಾರು ಮಂದಿ ವಿದ್ಯಾರ್ಥಿಗಳು ಮಾತ್ರ ಇರುವಂತೆ ಇಪ್ಪತ್ತು ಮನೆಗಳು ಪ್ರತ್ಯೇಕ ಪ್ರತ್ಯೇಕವಾಗಿ ಇರೋಣದರಿಂದ ಜಾತಿ ಸಂಕರವಾದೀತೆಂಬ ಅನುಮಾನಕ್ಕೆ ಅವಕಾಶವಿಲ್ಲದಂತೆ ಮಾಡಿದಾರೆ.

ಈ ವಿದ್ಯಾಶಾಲೆಗೆ ಪ್ರತಿ ವರುಷವೂ ಇಪ್ಪತ್ತು ಮಂದಿ ವಿದ್ಯಾರ್ಥಿಗಳನ್ನು ಮಾತ್ರವೇ ಸೇರಿಸಿಕೊಳ್ಳುವರು ಇವರು ಮೂರು ವರುಷ ಕಾಲ ವ್ಯಾಸಂಗಮಾಡಿ ಅಲ್ಲಿನ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದರೆ ವ್ಯವಸಾಯ ಶಾಸ್ತ್ರವನ್ನು ತಿಳಿದವನೆಂಬ ಸರ್ಟಿಫಿಕೇಟನ್ನು ಕೊಡುವರು ಈ ವಿದ್ಯಾಶಾಲೆಯಲ್ಲಿ ಓದುವುದಕ್ಕೆ ಫೀಜೇನೂ ಕೊಡಬೇಕಾದದ್ದಿಲ್ಲ. ವಿದ್ಯಾರ್ಥಿನಿಲಯದಲ್ಲಿ ಇರುವುದಕ್ಕೂ ಬಾಡಿಗೆ ಕೊಡಬೇಕಾಗಿಲ್ಲ ವಿದ್ಯಾರ್ಥಿಯು ಊಟದ ಖರ್ಚನ್ನು ಮಾತ್ರ ಒದಗಿಸಿಕೊಂಡರೆ ಸಾಕಾಗಿದೆ. ಅವನಿಗೆ ಇಂಗ್ಲಿಷಿನಲ್ಲಿ ಕಡೇಪಕ್ಷ ಮೆಟ್ರಿಕ್ಯುಲೇಷನ್ ಪರೀಕ್ಷೆಯಾದರೂ ಆಗಿರಬೇಕು ವ್ಯವಸಾಯ ವಿದ್ಯೆಯನ್ನು ಕಲಿತು ಬೇರೇ ಜೀವನೋಪಾಯವನ್ನು ಹುಡುಕಿಕೊಳ್ಳುವಂಥವರನ್ನು ಈ ವಿದ್ಯಾಶಾಲೆಗೆ ಸೇರಿಸಿಕೊಳ್ಳುವುದಿಲ್ಲ. ಇಲ್ಲಿ ತೇರ್ಗಡೆ ಹೊಂದುವವರಿಗೆ ಸರ್ಕಾರದವರು ನೌಕರಿಕೊಡುತ್ತೇವೆಂದು ಭರವಸೆ ಹೇಳುವುದಿಲ್ಲ. ಅವರು ವ್ಯವಸಾಯ ಮಾಡುವವರಾಗಿಯೇ ಇರಬೇಕು. ರೈತ ಪ್ರಜೆಗಳ ಮಕ್ಕಳೇ ಬರುವುದಾದರೆ ಅವರ ವಿಷಯದಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಾಗಿರಲೇ ಬೇಕೆಂಬ ವಿಧಿಯನ್ನು ಗಣನೆಗೆ ತರುವುದಿಲ್ಲ ಈ ವಿದ್ಯಾಶಾಲೆಯಲ್ಲಿ ಒಂದು ವರುಷದಿಂದಲೂ ಪಾಠ ಪ್ರವಚನಗಳು ನಡೆಯುತ್ತಲಿವೆ ಎರಡನೇ ವರುಷದ ಪಾಠಗಳೂ ಹೇಳುತ್ತಿರೋಣದರಿಂದ ಈಗ ನಾಲ್ವತ್ತು ಮಂದಿ ವಿದ್ಯಾರ್ಥಿಗಳು ವಿದ್ಯೆಕಲಿಯುತ್ತಿದಾರೆ

ಕಳೆದ ಬುಧವಾರ ಮದರಾಸ್ ಗವರ್ನರವರು ಈ ವಿದ್ಯಾಶಾಲೆಯನ್ನು ಪ್ರತಿಷ್ಠೆ ಮಾಡಿದಾಗ್ಗೆ ಬಹು ಶ್ರೇಷ್ಠವಾದ ಉಪನ್ಯಾಸವನ್ನು ಮಾಡಿದರು. ಅದರಲ್ಲಿ ಅವರು ಹಿಂದುಸ್ಥಾನದ ಪೂರ್ವ ರಾಜರುಗಳ ಕಾಲದಲ್ಲಿ ಒಬ್ಬರ ಮೇಲೊಬ್ಬರು ಬಿದ್ದು ಕಡಿದಾಡುತ್ತಿದ್ದುದನ್ನೂ, ದೇಶಕ್ಕೆ ನೆಮ್ಮದಿ ಸುಖ ಸಂತೋಷಗಳಿಲ್ಲದಿದ್ದುದರಿಂದ ಈ ರಾಷ್ಟ್ರದ ಮುಖ್ಯ ಕಸಬಾದ ವ್ಯವಸಾಯವು ಬಹಳ ಕ್ಷೀಣಗತಿಗೆ ಬಂದದ್ದನ್ನೂ, ಈಚೀಚೆಗೆ ಬ್ರಿಟಿಷ್ ಆಳ್ವಿಕೆಯು ನೆಲೆಗೊಂಡು ಎಲ್ಲಾ ಕಡೆಗಳಿಗೂ ಹಬ್ಬಿದ್ದರಿಂದ ದಿನಕ್ರಮೇಣ ನೆಮ್ಮದಿ ಸುಖಾದಿಗಳು ಹುಟ್ಟಿ ಅಭಿವೃದ್ಧಿ ಹೊಂದಿದ್ದನ್ನೂ, ರೈತನ ಹಿತವನ್ನು ಬಯಸಿ ಬ್ರಿಟಿಷ್ ಪ್ರಭುಗಳು ಕೋಟ್ಯಂತರ ದ್ರವ್ಯವನ್ನು ಖರ್ಚು ಮಾಡಿ ರಸ್ತೆ, ಸೇತುವೆ, ರೈಲ್ ಮಾರ್ಗ, ನಾಲೆ ಕಾಲುವೆಗಳನ್ನು ಕಲ್ಪಿಸಿ ಕೊಟ್ಟಿರುವುದನ್ನೂ, ಅವನ ಮಾನ ಧನ ಪ್ರಾಣಗಳಿಗೆ ಚ್ಯುತಿಯುಂಟಾಗದಂತೆ ಕಾನೂನುಗಳನ್ನು ಮಾಡಿರುವುದನ್ನೂ, ಸಾಧ್ಯವಾದಮಟ್ಟಿಗೂ ನ್ಯಾಯವಿಮರ್ಶೆ ಮಾಡುವುದಕ್ಕೆ ನ್ಯಾಯಸ್ಥಾನಗಳನ್ನು ಕಲ್ಪಿಸಿರುವುದನ್ನೂ ವಿವರಿಸಿದರು ತರುವಾಯ ವ್ಯವಸಾಯವನ್ನು ಅಭಿವೃದ್ಧಿಗೆ ತಂದುಕೊಳ್ಳುವ ವಿಷಯದಲ್ಲಿ ರೈತನಿಗೆ ಸರಿಯಾದ ಮತ್ತು ದೃಷ್ಟಾಂತ ಪೂರ್ವಕವಾದ ವಿವೇಕವನ್ನು ಉಂಟುಮಾಡುವುದಕ್ಕಾಗಿ ಈ ವಿದ್ಯಾಶಾಲೆಯನ್ನೂ ಅದಕ್ಕೆ ಸೇರಿದ ಜಮೀನನ್ನೂ ಏರ್ಪಾಡು ಮಾಡಿದೆ ಎಂದು ತಿಳಿಸಿದರು ಗವರ್ನರವರು ವ್ಯವಸಾಯ ಶಾಸ್ತ್ರವನ್ನು ಬೋಧಿಸತಕ್ಕಂಥಾ ಉಪಾಧ್ಯಾಯರುಗಳಿಗೆ ಕೆಲವು ಶ್ರೇಷ್ಠವಾದ ಹಿತೋಕ್ತಿಗಳನ್ನು ಸೂಚಿಸಿ, ವಿದ್ಯಾರ್ಥಿಗಳನ್ನು ಕುರಿತು ಅಪ್ಪಣೆ ಕೊಡಿಸಿದ್ದೇನೆಂದರೆ—"ಇಲ್ಲಿಗೆ ಬರತಕ್ಕ ವಿದ್ಯಾರ್ಥಿಗಳೆಲ್ಲಾ ಉತ್ತರೋತ್ತರ ವ್ಯವಸಾಯವನ್ನೇ ತಮ್ಮ ಮುಖ್ಯ ಕಸಬನ್ನಾಗಿ ನಡಿಸತಕ್ಕವರಾಗಿರಬೇಕು ಇಲ್ಲವಾದರೆ ನೀವು ಇಲ್ಲಿಗೆ ಬಂದದ್ದು ವ್ಯರ್ಥವೇ ಸರಿ ಮತ್ತು ನೀವು ದೊಡ್ಡ ಅಪರಾಧಿಗಳಾಗುತ್ತೀರಿ ಯಾಕೆಂದರೆ ನಿಮ್ಮಿಂದ ಅಂಥಾ ಉದ್ದೇಶವುಳ್ಳವರು ಬಂದು ಪ್ರಯೋಜನ ಹೊಂದದಂತೆ ಅಡ್ಡಿಯಾಗುವುದು ಗವರ್ನ್ಮೆಂಟಿನವರು ಸ್ಥಾಪಿಸುವ ಪರೀಕ್ಷಾರ್ಥವಾದ ಫಾರಂಗಳಲ್ಲಿ ನೀವು ಇಲ್ಲಿ ಕಲಿತದ್ದನ್ನು ಮಾಡಿ ತೋರಿಸಬೇಕು ಇಲ್ಲಿ ಕಲಿತ ಇನ್ನು ಕೆಲವರಿಗೆ ಅವರವರ ಜಮೀನುಗಳಲ್ಲಿ ಹೊಸ ರೀತಿಯಾಗಿ ವ್ಯವಸಾಯ ಮಾಡುವ ಕಾರ್ಯಭಾರವುಂಟು ಬೇರೆ ಕೆಲವರು ಬಂಜರಾಗಿರುವ ಜಮೀನುಗಳಲ್ಲಿ ತಮ್ಮ ಬುದ್ಧಿ ಕುಶಲತೆಯನ್ನು ಪ್ರಯೋಗಿಸಿ ತಾವೂ ಪ್ರಯೋಜನ ಹೊಂದಿ ನೆರೆಹೊರೆ ರೈತರಿಗೂ ಒಳ್ಳೇ ಮೇಲ್ಪಂಕ್ತಿಯನ್ನು ಹಾಕಿ ಕೊಡಬಹುದು ಈ ಭಾಗದಲ್ಲಿ ಹಿಂದುಸ್ಥಾನದಲ್ಲೆಲ್ಲಾ ಸುಪ್ರಸಿದ್ಧರಾಗಿರುವ ದಿವಾನ್ ಬಹದೂರ್ ಆರ್ ರಘುನಾಥರಾಯರು ಎರಡು ದಿನಗಳ ಹಿಂದೆ ನನಗೆ ಬರೆದಿರುವ ಕಾಗದದಲ್ಲಿ ಈ ಸಂಗತಿಯನ್ನು ಜ್ಞಾಪಿಸುತ್ತಾರೆ ಏನೆಂದರೆ—ಅನೇಕ ಜಮೀನ್ದಾರರಿಗೆ ವ್ಯವಸಾಯ ಮಾಡತಕ್ಕವರೂ ಗಿಡ ಮರಗಳನ್ನು ಬೆಳೆಯತಕ್ಕವರೂ, ಫಲ ವೃಕ್ಷಗಳನ್ನು ಸಾಕತಕ್ಕವರೂ ಇನಾಂ ನಡಿಸುವವರೂ, ಒಳ್ಳೆಯ ಮಾನೇಜರುಗಳೂ, ಕಾರಿಂದಾರರೂ ಬೇಕಾಗಿವೆ. ಈ ಕೆಲಸಗಳಿಗೆ ವಿದ್ಯಾರ್ಥಿಯರನ್ನು ಆರಿಸುವುದು ಅವರ ಸಕಲವಾಗಿದೆ ಅನೇಕಾನೇಕ ಜಮೀನ್ದಾರರು ತಮ್ಮ ಜಮೀನುಗಳಲ್ಲಿ ಫಲಗಳನ್ನು ಬೆಳೆ ಮಾಡುವುದಕ್ಕೆ ಯೋಗ್ಯರಾದ ವ್ಯವಸಾಯಗಾರರು ಸಿಕ್ಕದೆ ಚಿಂತೆಪಡುತ್ತಿದಾರೆ ಇಲ್ಲಿ ಬೆಳೆಯಬಹುದಾದ ಫಲಗಳನ್ನು ಅನ್ಯದೇಶಗಳಿಂದ ತರಿಸಿಕೊಳ್ಳುವುದು ನಾಚಿಕೆಯಾಗಿದೆ ಎಂಬೀ ರೀತಿಯಾಗಿ ಬರೆದು, ಈ ದೇಶದ ಪ್ರಜೆಗಳ ಮೇಲೆ ಬಹು ಕಠಿಣವಾಗಿ ಆಕ್ಷೇಪಣೆ ಮಾಡಿರುತ್ತಾರೆ ಆದಕಾರಣ ಈಗ ಏರ್ಪಾಡಾಗಿರುವ ಈ ವಿದ್ಯಾಶಾಲೆಯ ಮೂಲಕ ದಕ್ಷಿಣ ದೇಶದಲ್ಲಿ ಸಮಸ್ತ ವಿಧವಾದ ದವಸಧಾನ್ಯಗಳೂ ಹಣ್ಣು ಹಂಪಲುಗಳೂ ಶಾಸ್ತ್ರವತ್ತಾಗಿ ಬೆಳೆಯುವುದಕ್ಕೂ ವ್ಯವಸಾಯವು ಅಭಿವೃದ್ಧಿಗೆ ಬರುವುದಕ್ಕೂ ಸಹಾಯವಾಗುತ್ತದೆಂದು ನಾನು ಬಹು ಕುತೂಹಲಪೂರ್ವಕವಾಗಿ ನಿರೀಕ್ಷಿಸುತ್ತೇನೆ ಈಗ ವಿದ್ಯಾರ್ಥಿಗಳಾಗಿರತಕ್ಕ ನಿಮ್ಮಿಂದ ಇನ್ನು ಮುಂದೆ ವಿಶೇಷ ಅಭಿವೃದ್ಧಿ ಕಾರ್ಯಗಳು ನಡೆಯಬೇಕಾಗಿರುವವು ಎಂಬುದೇ"

ಗವರ್ನರವರು ಈ ರೀತಿಯಾಗಿ ಉಪನ್ಯಾಸ ಮಾಡಿ ಕಟ್ಟಡವನ್ನು ಪ್ರತಿಷ್ಠೆ ಮಾಡಿದರು

ರಾಜಧಾನಿಯ ಮ್ಯುನಿಸಿಪಾಲಿಟಿ

ಹೊಸ ಕೌನ್ಸಿಲರುಗಳ ಚುನಾವಣೆಯ ವೃತ್ತಾಂತವು.

ಕಳೆದ ೧೨ ನೇ ತಾ ಸೋಮವಾರದಿಂದ ೧೫ ನೇ ತಾ ಗುರುವಾರದ ತನಕ ರಾಜಧಾನಿಯ ಆರು ಮೊಹಲ್ಲಾಗಳಲ್ಲೂ ಮುನಿಸಿಪಲ್ ಕೌನ್ಸಿಲರುಗಳ ಚುನಾವಣೆಗಳು ನಡೆದವು ಕೌನ್ಸಿಲರುಗಳಾಗಬೇಕೆಂದು ಅರ್ಜಿಕೊಟ್ಟು ಉಮೇದುವಾರರಾಗಿದ್ದ ದೊಡ್ಡ ಮನುಷ್ಯರಿಗೆ ಆಯಾ ಮೊಹಲ್ಲಾಯ ಓಟರುಗಳು ಸಮ್ಮತಿಗಳನ್ನು ಹಾಕಿದರು ಸುಮಾರು ೧೦-೧೨ ದಿನಗಳಿಂದ ಆಯಾ ಉಮೇದುವಾರರ ಪಕ್ಷವನ್ನು ವಹಿಸಿ ಕೆಲವು ದೊಡ್ಡ ಮನುಷ್ಯರು ಮೊಹಲ್ಲಾಗಳ ಮೇಲೆ ಹೊರಟು ಓಟರುಗಳ ಕೂಡ ಸಂಭಾಷಣೆಮಾಡಿ ಉಮೇದುವಾರರ ಯೋಗ್ಯತಾಪಕ್ಷಗಳನ್ನು ವಿವರಿಸಿ ಇಂಥಿಂಥವರಿಗೆ ಓಟುಕೊಡಬೇಕೆಂದು ಶಿಫಾರಸು ಮಾಡುತ್ತಾ ಬಂದದ್ದು, ಓಟರುಗಳು ತಮ್ಮತಮ್ಮಲ್ಲೇ ಈ ವಿಷಯವನ್ನು ಕುರಿತು ಮಾತನಾಡಿಕೊಳ್ಳುತ್ತಾ ಇದ್ದದ್ದು, ಆಯಾ ಮೊಹಲ್ಲಾಯಲ್ಲಿ ಚುನಾವಣೆ ನಡೆದ ಕಾಲಕ್ಕೆ ಉಮೇದುವಾರರ ಪಕ್ಷದವರು ಓಟರುಗಳಿಗೆ ಕುದುರೆ ಗಾಡಿಗಳನ್ನು ಕೊಟ್ಟು ಚುನಾವಣೆಯ ಸ್ಥಳಕ್ಕೆ ಕರೆದುಕೊಂಡು ಹೋಗಿ ಅವರಿಂದ ತಮ್ಮ ಪಕ್ಷದವರಿಗೆ ಓಟುಗಳನ್ನು ಹಾಕಿಸಿದ್ದು, ಇವೆಲ್ಲಾ ಕಳೆದ ವಾರ ರಾಜಧಾನಿಯಲ್ಲಿ ತುಂಬಾ ಉತ್ಸಾಹಕರಗಳಾಗಿದ್ದವು. ವೈಸ್ ಪ್ರೆಸಿಡೆಂಟರು ಆಯಾ ಮೊಹಲ್ಲಾಯಲ್ಲಿ ಚುನಾವಣೆ ನಡೆದ ಸ್ಥಳದಲ್ಲಿ ಹಾಜರಾಗಿದ್ದು, ಓಟರುಗಳಿಂದ ಬರೆದು ಕೊಡಲ್ಪಟ್ಟ ಓಟ್ ಚೀಟಿಗಳನ್ನು ಅವರಿಂದಲೇ ಒಂದು ಪೆಟ್ಟಿಗೆಯೊಳಕ್ಕೆ ಹಾಕಿಸಿಕೊಂಡರು ಈ ಪೆಟ್ಟಿಗೆಗೆ ಬೀಗ ಮೊಹರುಗಳನ್ನು ಮಾಡಿ, ಮೇಲ್ಗಡೆಯಲ್ಲಿ ಒಂದು ಚೀಟಿ ತೂರಿಸುವಷ್ಟು ಸಣ್ಣ ರಂಧ್ರವನ್ನು ಮಾಡಿದ್ದರು. ಈ ಪೆಟ್ಟಿಗೆಗೆ ಯಾರೂ ಕೈಹಾಕದಂತೆ ಅದನ್ನು ವೈಸ್ ಪ್ರೆಸಿಡೆಂಟರು ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡಿದ್ದು, ಎಲ್ಲಾ ಮೊಹಲ್ಲಾಗಳ ಚುನಾವಣೆಯೂ ಮುಗಿದು ಓಟ್ ಚೀಟಿಗಳೆಲ್ಲಾ ಶೇಖರವಾದ ಮೇಲೆ ವೈಸ್ ಪ್ರೆಸಿಡೆಂಟರು ಪೆಟ್ಟಿಗೆಗೆ ಬಟ್ಟೆಯನ್ನು ಸುತ್ತಿಸಿ ಮೊಹರು ಮಾಡಿಸಿ ತಮ್ಮ ಬಳಿಯಲ್ಲಿಟ್ಟುಕೊಂಡರು

ಸ್ಪೆಷಲ್ ಮ್ಯುನಿಸಿಪಲ್ ಮೀಟಿಂಗು.

ಚುನಾವಣೆಯ ಫಲಿತಾಂಶವು.

ಹೊಸ ಮ್ಯುನಿಸಿಪಲ್ ಕಾನೂನಿನಲ್ಲಿ ವಿಧಿಸಿರುವಂತೆ ವೈಸ್ ಪ್ರೆಸಿಡೆಂಟರು ಮೇಲ್ಕಂಡ ಪ್ರಕಾರ ಚುನಾವಣೆಯನ್ನು ನಡಿಸಿ, ಅದರ ಫಲಿತಾಂಶವನ್ನು ಗೊತ್ತುಮಾಡುವುದಕ್ಕಾಗಿ ಮ್ಯುನಿಸಿಪಲ್ ಕೌನ್ಸಿಲರುಗಳಿಗೆ ಮೊದಲೇ ತಿಳುವಳಿಕೆ ಕೊಟ್ಟು ಅವರನ್ನು ಕಳೆದ ಶುಕ್ರವಾರ ಬೆಳಿಗ್ಗೆ ೭॥ ಗಂಟೆಗೆ ಟೌನ್ ಹಾಲ್ ಬಂಗಲೆಗೆ ಬರಮಾಡಿಕೊಂಡು ಒಂದು ಸ್ಪೆಷಲ್ ಮೀಟಿಂಗ್ ನಡಿಸಿದರು ಓಟ್ ಚೀಟಿಗಳಿದ್ದ ಮೇಲ್ಕಂಡ ಮೊಹರಾದ ಪೆಟ್ಟಿಗೆಯನ್ನು ವೈಸ್ ಪ್ರೆಸಿಡೆಂಟರು ಕೌನ್ಸಿಲರುಗಳ ಮುಂದಿರಿಸಿ, ಅವರೆದುರಿಗೆ ಅದನ್ನು ಬಿಚ್ಚಿಸಿ ಪೆಟ್ಟಿಗೆಯೊಳಗಿದ್ದ ಓಟ್ ಚೀಟಿಗಳನ್ನೆಲ್ಲಾ ಹೊರಗೆ ತೆಗೆಸಿಕೊಂಡು, ಕೌನ್ಸಿಲರುಗಳ ಸಹಾಯವನ್ನು ಪಡೆದು, ಅವುಗಳನ್ನೆಲ್ಲಾ ಮೊದಲು ಮೊಹಲ್ಲಾವಾರು ವಿಂಗಡಿಸಿದರು. ಮೊದಲು ಬಹಳ ಸುಲಭವಾಗಿದ್ದ ಮಂಡಿ ಮತ್ತು ಚಾಮರಾಜ ಮೊಹಲ್ಲಾಗಳ ಓಟ್ ಚೀಟಿಗಳನ್ನು ಲೆಕ್ಕಮಾಡಿ ತೆಗೆದಿಟ್ಟರು ತರುವಾಯ ಉಳಿದ ಐದು ಮೊಹಲ್ಲಾಗಳ ಓಟ್ ಚೀಟಿಗಳನ್ನು ಮೊಹಲ್ಲಾವಾರು ತೆಗೆದುಕೊಂಡು, ಉಮೇದುವಾರರಾಗಿದ್ದ ದೊಡ್ಡ ಮನುಷ್ಯರ ಹೆಸರುಗಳನ್ನು ಬರೆದುಕೊಂಡು ಯಾರ್ಯಾರಿಗೆ ಎಷ್ಟೆಷ್ಟುಮಂದಿ ಓಟರುಗಳು ಸಮ್ಮತಿಯನ್ನು ಹಾಕಿದ್ದರೋ ಅದನ್ನೆಲ್ಲಾ ಗುರುತುಹಾಕಿಕೊಂಡು ಗೊತ್ತುಮಾಡಿದರು

ಈ ಚುನಾವಣೆಯಲ್ಲಿ ಒಂದೆರಡು ಮೊಹಲ್ಲಾಗಳಲ್ಲಿ ಕೆಲವು ಆಶ್ಚರ್ಯಗಳು ನಡೆದವೆಂದು ಗೊತ್ತಾಯಿತು ೩-೪ ಮಂದಿ ಓಟರುಗಳು ಓಟ್ ಚೀಟಿಗಳ ಮೇಲೆ ತಮ್ಮ ಓಟನ್ನು ಇಂಥಾ ಉಮೇದುವಾರರಿಗೆ ಕೊಟ್ಟದ್ದೇವೆಂಬುವುದನ್ನು ಸರಿಯಾಗಿ ತಿಳಿಸದೆ ಹೋದದ್ದರಿಂದ ಅಂಥಾ ಓಟ್ ಚೀಟಿಗಳನ್ನು ಕೌನ್ಸಿಲರುಗಳು ಲೆಕ್ಕಕ್ಕೆ ಸೇರಿಸಿಕೊಳ್ಳದೆ ವಜಾಮಾಡಬೇಕಾಯಿತು. ನಾಲ್ಕಾರು ಸಂದರ್ಭಗಳಲ್ಲಿ ಓಟರುಗಳು ತಮಗೆ ಓಟ್ ಹಾಕುವ ನೋಟೀಸು ಜಾರಿಯಾಗದಿದ್ದರೂ ಚುನಾವಣೆ ನಡೆದ ಸ್ಥಳಕ್ಕೆ ಹೋಗಿ ಓಟ್ಮಾಡಬೇಕೆಂದು ಪ್ರಯತ್ನಪಟ್ಟರು ಇವರಿಗೆ ಓಟ್ ಚೀಟಿಗಳನ್ನು ಕೊಡದೆ ವಾಪಸು ಕಳುಹಿಸಿಬಿಟ್ಟರು ವೈಸ್ ಪ್ರೆಸಿಡೆಂಟರು ವಿಚಾರಣೆಮಾಡಿದ್ದರಲ್ಲಿ ಅವರಿಗೆ ಓಟ್ ಮಾಡುವ ಅಧಿಕಾರವುಂಟೆಂದು ಗೊತ್ತಾದದ್ದರಿಂದ ಕೂಡಲೇ ಆ ಓಟರುಗಳಿಗೆ ಹೇಳಕಳುಹಿಸಿ ಅವರಿಂದ ಓಟ್ಮಾಡಿಸಿದರು ಹುಡುಕಿಸಿದರೂ ಒಬ್ಬ ಓಟರು ಸಿಕ್ಕದೆ ಹೋದದ್ದರಿಂದ ಅವರ ಓಟನ್ನು ಹಾಕಿಸುವುದಕ್ಕೆ ಆಗಲಿಲ್ಲ ಒಂದು ಮೊಹಲ್ಲಾಯಲ್ಲಿ ಓಟರು ಮೃತಪಟ್ಟು ಆರು ವರುಷಗಳಾಗಿ, ಅವರ ಹೆಸರೇ ಖಾತೆಯಲ್ಲಿ ಇದ್ದುಕೊಂಡು ಬಂದಿದೆ, ಅವರ ಮಗನು ಖಾತೆದಾರನಲ್ಲದಿದ್ದರೂ ಚುನಾವಣೆಯ ಸ್ಥಳಕ್ಕೆ ಹೋಗಿ ಓಟ್ ಚೀಟಿಯನ್ನು ಬರೆದುಕೊಟ್ಟು ಬಂದನೆಂದು ಗೊತ್ತಾಯಿತು ಇನ್ನೊಂದು ಸಂದರ್ಭದಲ್ಲಿ ಒಬ್ಬಾತನಿಗೆ ಓಟ್ ಚೀಟಿಯನ್ನು ಕೊಟ್ಟು ಆತನಿಂದ ಓಟ್ ಹಾಕಿಸಿದರು ಈತನು ಈ ಪಟ್ಟಿಯ ರೈತನೇ ಅಲ್ಲವೆಂಬೂ, ಈತನಿಂದ ಓಟ್ಮಾಡಿಸಿದ್ದು ಸರಿಯಲ್ಲವೆಂದೂ ಆಕ್ಷೇಪಣೆಯುಂಟಾಯಿತು

ಆಯಾ ಮೊಹಲ್ಲಾಗೆ ಕೌನ್ಸಿಲರಾಗಬೇಕೆಂದು ಉಮೇದುವಾರರಾಗಿ ನಿಂತಿದ್ದ ಮೆಂಬರುಗಳ ಹೆಸರುಗಳನ್ನೂ, ಅವರಿಗೆ ಓಟರುಗಳು ಹಾಕಿದ್ದ ಸಮ್ಮತಿಗಳ ಸಂಖ್ಯೆಗಳನ್ನೂ ಇಲ್ಲಿ ಪ್ರಕಟಿಸಿರುತ್ತೇವೆ —

ಮೊಹಲ್ಲಾ ಮತ್ತು ಉಮೇದುವಾರರ ಹೆಸರು	ಓಟು ಹಾಕಿದವರ ಒಟ್ಟು ಸಂಖ್ಯೆ	ಉಮೇದುವಾರರಿಗೆ ಎಷ್ಟು ಓಟುಗಳು ದೊರೆತವು
೧ ಮಂಡಿ ಮೊಹಲ್ಲಾ —		
ಮ. ರಾಮಪ್ಪನವರು	34	34
೨ ಚಾಮರಾಜ ಮೊಹಲ್ಲಾ —		
ಮ. ವೆಂಕಟಕೃಷ್ಣಯ್ಯನವರು	11	11
೩ ನಜರ್‌ಬಾದ್ ಮೊಹಲ್ಲಾ —		
(೧) ಮ. ಸೈಯದ್ ಮೂಸ ಬಿನ್ ಸಾಬರು	22	14
(೨) ಮ. ತಿರುವೆಂಗಡ ಮೊದಲಿಯಾರ್ರು		8
೪ ಕೃಷ್ಣರಾಜ ಮೊಹಲ್ಲಾ —		
(೧) ಮ. ಎನ್. ಶ್ರೀಕಂಠಯ್ಯನವರು	71	64
(೨) ಮ. ಎಂ. ಡಿ. ಸಿಂಗ್ರಾಚಾರ್ಯರು		7
೫ ಲಷ್ಕರ್ ಮೊಹಲ್ಲಾ —		
(೧) ಮ. ಎಂ. ಅನಂತರಾಜೈಯನವರು	71	56
(೨) ಮ. ರಹಮತ್ ಉಲ್ಲಾ ಅಹಮದ್ ಸೇಟರು		19
(೩) ಮ. ಸೆಟ್ಟಿ ಜಯರಾಯರು		21
೬ ಕೋಟೆ ಮೊಹಲ್ಲಾ —		
(೧) ಮ. ಎಂ. ನರಸಿಂಹಸ್ವಾಮಿಯವರು	37	12
(೨) ಮ. ಜಹಗೀರ್ದಾರ್ ಮಾದಪ್ಪನವರು		22
(೩) ಮ. ಕೃಷ್ಣಪ್ಪಾಜಿ ಅರಸಿನವರು		12

ಮೊಹಲ್ಲಾ ಮತ್ತು ಉಮೇದುವಾರರ ಹೆಸರು	ಓಟು ಹಾಕಿದವರ ಒಟ್ಟು ಸಂಖ್ಯೆ	ಉಮೇದುವಾರರಿಗೆ ಎಷ್ಟು ಓಟುಗಳು ದೊರೆತವು
೭ ದೇವರಾಜ ಮೊಹಲ್ಲಾ —		
(೧) ಮೆ॥ ಎ ಸುಬ್ಬಣ್ಣನವರು	88	61
(೨) ಮೆ॥ ಎ. ಸಿ ರಂಗೈಯಂಗಾರ್ಯ		49
(೩) ಮೆ॥ ಎಚ್ ರಂಗೈಯಂಗಾರ್ಯ		34
(೪) ಮೆ॥ ರಾಮೇಶ್ವರೈಯನವರು		19
(೫) ಮೆ॥ ಆದಿನಾರಾಯಣ ಶೆಟ್ಟರು		9
(೬) ಮೆ॥ ಡಿ ನರಸಿಂಗ ರಾಯರು		2

ಈ ಪ್ರಕಾರ ಓಟರುಗಳು ಉಮೇದುವಾರರಿಗೆ ತಮ್ಮ ಓಟುಗಳನ್ನು ಹಾಕಿದರು ಸರ್ಕಾರದವರು ವಿಧಿಸಿರುವ ಪ್ರಕಾರ ಹೆಚ್ಚು ಸಂಖ್ಯೆಯ ಓಟುಗಳನ್ನು ಪಡೆದವರಿಗೆ ಕೌನ್ಸಲರ್ ಪದವಿಯು ದೊರೆಯುವುದು, ಅಂದರೆ (೧) ಮಂಡಿ ಮೊಹಲ್ಲಿಗೆ ಮೆ॥ ಮಾದಪ್ಪನವರೂ, (೨) ಚಾಮರಾಜ ಮೊಹಲ್ಲಿಗೆ ಮೆ॥ ವೆಂಕಟಕೃಷ್ಣಯ್ಯನವರೂ, (೩) ನಜರಬಾದ್ ಮೊಹಲ್ಲಿಗೆ ಮೆ॥ ಸೈಯದ್ ಮೊಹಿದೀನ್ ಸಾಹೇಬರೂ, (೪) ಕೃಷ್ಣರಾಜ ಮೊಹಲ್ಲಿಗೆ ಮೆ॥ ಎನ್ ಶ್ರೀಕಂಠಯ್ಯನವರೂ, (೫) ಲಷ್ಕರ್ ಮೊಹಲ್ಲಿಗೆ ಮೆ॥ ಎಂ ಅನಂತರಾಜಯ್ಯನವರು, ಮೆ॥ ಮಹಮತ್ ಉಲ್ಲಾ ಅಹಮದ್ ಸೇಟರೂ, (೬) ಕೋಟೆ ಮೊಹಲ್ಲಿಗೆ ಮೆ॥ ಎಂ ನರಸಿಂಹಸ್ವಾಮಿಯವರು, ಮೆ॥ ಜಹಗೀರದಾರ್ ಮಾದಪ್ಪನವರೂ, (೭) ದೇವರಾಜ ಮೊಹಲ್ಲಿಗೆ ಮೆ॥ ಎ ಸುಬ್ಬಣ್ಣನವರು, ಮೆ॥ ಎ. ಸಿ ರಂಗೈಯಂಗಾರ್ಯ ಕೌನ್ಸಿಲರುಗಳಾಗಿರುತ್ತಾರೆ ಇದಲ್ಲದೆ ಸರ್ಕಾರದವರು ಲಷ್ಕರ್, ದೇವರಾಜ್ ಮತ್ತು ಕೋಟೆ ಮೊಹಲ್ಲಿಗಳ ವಿನಾ ಉಳಿದ ನಾಲ್ಕು ಮೊಹಲ್ಲಿಗಳಿಗೂ ಆಯಾ ಮೊಹಲ್ಲಾದಲ್ಲಿ ಗಣ್ಯರಾದ ಒಬ್ಬೊಬ್ಬ ಚೇರ್ಮನ್ (ಸರ್ಕಾರಿ ನೌಕರರಲ್ಲದ) ದೊಡ್ಡ ಮನುಷ್ಯರನ್ನು ಮ್ಯುನಿಸಿಪಲ್ ಪ್ರೆಸಿಡೆಂಟರವರ ಶಿಫಾರಸಿನ ಮೇರೆ ಕೌನ್ಸಿಲರಾಗಿ ನೇಮಕ ಮಾಡುವರು

ಬಾತ್ಮಿದಾರರಿಗೆ ನೋಟೀಸು

ಸರಿಯಾದ ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದ್ದರಿಂದ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊಬಾಬ್ದಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್

ಕರೆಸ್ಪಾಂಡೆನ್ಸ್

ಬಂಡಿಗಳನ್ನು ಹಿಡಿಯುವದು.

ಅಯ್ಯ

ಮೈಸೂರು ಗವರ್ನಮೆಂಟಿನಲ್ಲಿಯೂ ಬ್ರಿಟಿಷ್ ಗವರ್ನಮೆಂಟಿನಲ್ಲಿಯೂ ಪ್ರಯಾಣ ಮಾಡುವ ಉದ್ಯೋಗಸ್ಥರಿಗೋಸ್ಕರ ಬಂಡಿಗಳನ್ನು ಸರ್ಕಾರಿ ರೇಟಿನ ಪ್ರಕಾರ ಬಾಡಿಗೆ ಕೊಟ್ಟು ಹಿಡಿಯುವದು ಸಾಧಾರಣ ವಾಡಿಕೆಯಾಗಿರುತ್ತದೆ ಸರ್ಕಾರದವರು ಪ್ರಯಾಣ ಮಾಡುವಂಥ ಭರ್ತಿ ಗಾಡಿಯನ್ನು ಗಾಡಿಯವನ ಅನುಮತಿಯಿಲ್ಲದೆ ಬಲಾತ್ಕಾರವಾಗಿ ಗಾಡಿಯಲ್ಲಿರುವ ಸಾಮಾನು ಇಳಿಸಿ, ಪ್ರಯಾಣಸ್ಥರಾದ ಉದ್ಯೋಗಸ್ಥರಿಗೋಸ್ಕರ ಗಾಡಿಯನ್ನು ತರುವದಕ್ಕೆ ಪಟೇಲರಿಗೂ ಶೇಖದಾರರಿಗೂ ಅಧಿಕಾರ ಕೊಟ್ಟಿದಾರೋ ಇಲ್ಲವೆ ಇವರು ಸ್ವಂತ ಅಧಿಕಾರದಿಂದ ಗಾಡಿಗಳನ್ನು ಹಿಡಿಯುತ್ತಾರೋ ತಿಳಿಸಬೇಕೆಂದು ಕೋರುತ್ತೇನೆ ನಾನು ಒಂದು ಊರಿನಲ್ಲಿರುವಾಗ ಪ್ರಯಾಣಸ್ಥರ ಭರ್ತಿ ಗಾಡಿಯನ್ನು ಹಿಡಿದಿದ್ದು ನೋಡಿರುತ್ತೇನೆ ಗಾಡಿಯವನ ಸಮ್ಮತಿಯಿಲ್ಲದೆ ಪ್ರಯಾಣದಲ್ಲಿರುವ ಗಾಡಿಯನ್ನು ಅಂದರೆ ಉದಾಹರಣೆಯಾಗಿ ಒಂದು ಗಾಡಿ ಬೆಂಗಳೂರಿನಿಂದ ಕೋಲಾರಿಗೆ ಹೋಗುತ್ತದೆಂದು ನೆನಸೋಣ, ಹಾಗೆ ಹೋಗುವ ಗಾಡಿಯನ್ನು ಹೊಸಕೋಟೆಯವರು ಹಿಡಿದು ಸರ್ಕಾರಿ ರೇಟಿನ ಪ್ರಕಾರ ಬಾಡಿಗೆ ಕೊಡುತ್ತೇವೆಂದು ಬಲಾತ್ಕಾರದಿಂದ ಗಾಡಿಯಲ್ಲಿರುವ ಸಾಮಾನು ಇಳಿಸಿ ಇನ್ನೊಂದು ಊರಿಗೆ ಕಳುಹಿಸುವದಕ್ಕೆ ತಾಲ್ಲೂಕು ಅಧಿಕಾರಿಗಳಿಗೆ ಗವರ್ನಮೆಂಟಿನವರು ಅಧಿಕಾರ ಕೊಟ್ಟಿದ್ದಾರೆಯೆ ದಯಮಾಡಿ ತಿಳಿಸಬೇಕೆಂದು ಕೋರುತ್ತೇನೆ ಗವರ್ನಮೆಂಟಿನವರು ರೇಟಿನ ಪ್ರಕಾರ ಬಾಡಿಗೆ ಕೊಟ್ಟು ಬಂಡಿಗಳನ್ನು ಹಿಡಿಯುವದು ತಪ್ಪು ಎಂದು ನಾನು ಆಕ್ಷೇಪಣೆ ಮಾಡುವದಿಲ್ಲ ಅವಶ್ಯವಿದ್ದ ಕಾಲದಲ್ಲಿ ಗಾಡಿಯನ್ನು ಬಲಾತ್ಕಾರವಾಗಿ ಹಿಡಿಯುವದಕ್ಕೆ ಸರ್ಕಾರಿ ಉದ್ಯೋಗಸ್ಥರಿಗೆ ಅಧಿಕಾರ ಉಂಟೋ, ಇಲ್ಲವೋ, ತಿಳಿಕೊಳ್ಳುವದಕ್ಕಾಗಿ ಇದನ್ನು ಬರೆದಿರುತ್ತೇನೆ ದಯಮಾಡಿ ತಿಳಿಸಿ

ಬಿ ನ

ಕ್ಷಾಮ ತೀರಲಿಲ್ಲ

ಅಯ್ಯಾ,

ಈಚೆಗೆ ಕೆಲವು ಇಂಚ್ ಮಳೆಗಳು ಬಂದದ್ದರಿಂದ ದೇಶದಲ್ಲೆಲ್ಲಾ ಕ್ಷಾಮ ತೀರಿತೆಂಬ ಕೂಗು ಹುಟ್ಟಿ, ಕ್ಷಾಮದ ದೆಸೆಯಿಂದ ಗವರ್ನಮೆಂಟಿನಿಂದಲೂ, ಧರ್ಮಾತ್ಮರಿಂದಲೂ ಸಹಾಯ ಹೊಂದುತ್ತಿದ್ದ ಬಡಪಾಯಿಗಳ ಬಾಯಿಯಲ್ಲಿ ಮಣ್ಣು ಬಿದ್ದು ಅವರ ಈಗಿನ ಕಷ್ಟ ಮೊದಲಿಗಿಂತಲೂ ಜಾಸ್ತಿಯೇ ಆಯಿತು ಅದಕ್ಕೆ ಕಾರಣವೇನೆಂದರೆ,

ಕ್ಷಾಮವೆಂದು ಹೇಳಿಸಿಕೊಳ್ಳುತ್ತಿದ್ದ ಕಾಲದಲ್ಲಿ ಗೌರ್ನಮೆಂಟಿನವರು ಸ್ವಶಕ್ತಿಯಿಲ್ಲದವರಿಗೆ ಗೌರ್ನಮೆಂಟ್ ಖರ್ಚಿನಿಂದ ಜೀವನ ನಡಿಸತಕ್ಕದ್ದು, ಶಕ್ತಿವಂತರಿಗೆ ಮಜೂರಿ ಸಿಕ್ಕುವಂತೆ ಕಾಮಗಾರಿಗಳು ಮಾಡಿಸತಕ್ಕದ್ದು, ಹೀನಸ್ಥಿತಿಯಲ್ಲಿರತಕ್ಕ ಕಸಬುದಾರರಿಗೆ ಗೌರ್ನಮೆಂಟಿನಿಂದ ಸಹಾಯ ಕೊಡತಕ್ಕದ್ದು, ದ್ರವ್ಯವಂತರಿಗೆ ಪ್ರೋತ್ಸಾಹ ಸಹಾಯ ಸಹ ಕೊಟ್ಟು ಅವರ ಮೂಲಕ ಅಗ್ಗವಾಗಿರತಕ್ಕ ಪ್ರದೇಶಗಳಿಂದ ದನಸಿಗಳನ್ನು ತರಿಸಿ ಬಡವರಿಗೆ ಸುಲಭ ಕ್ರಯಕ್ಕೆ ಮಾರತಕ್ಕದ್ದು, ಈ ಮುಂತಾದ ಅನೇಕ ಸಹಾಯಗಳನ್ನು ಪ್ರಜೆಗಳಿಗೆ ಉಂಟು ಮಾಡುತ್ತಿದ್ದರು ಆಗ ಪ್ರಜೆಗಳಲ್ಲಿ ಸಮಾಧಾನವುಂಟಾಗಿತ್ತು

ಈಗ್ಗೆ ೨—೩ ತಿಂಗಳ ಕೆಳಗೆ ಅಕಸ್ಮಾತ್ ಎಲ್ಲಾ ಕಡೆಗೂ ಏಕ ಕಾಲದಲ್ಲಿ ೪-೫ ಇಂಚ್ ಮಳೆಗಳು ಬಂತು ಇದರಿಂದ ಸುಭಿಕ್ಷವೇ ಕಾಣಬಾರರೆಂದು ಭೀತಿಗೊಂಡಿದ್ದ ಜನರಿಗೆ ಮುಂದೆ ಒಳ್ಳೇ ಕಾಲ ಬಂದೀತೆಂಬ ನಂಬಿಕೆ ಹುಟ್ಟುವಂತೆ ಆಗಿ ಅದರಿಂದ ರೈತರು ಧಡಬಡೆಯಾಗಿ ಆ ಕಾಲದಲ್ಲಿ ಬಿತ್ತಲಿಕ್ಕೆ ಅರ್ಹವಾದ ಬೀಜಗಳನ್ನು ಬಿತ್ತಿಬಿಟ್ಟರು ಅಲ್ಲಿಂದೀಚೆಗೆ ಸುಮಾರು ೨ ತಿಂಗಳು ಶುದ್ಧಾಂಗವಾಗಿ ಮಳೆ ಬಾರದೆ ನಿಂತಿತು ಇಷ್ಟರಲ್ಲಿ ಹಿಂದಲ ಮಳೆಯಿಂದ ಬಾವಿಗಳಿಗೂ, ಕೆರೆಗಳಿಗೂ ಬಂದಿದ್ದ ನೀರು ಬತ್ತಿ ಹೋಯಿತು ಹಿಂದೆ ಬೀಜ ಬಿತ್ತಿದ್ದವರಿಗೂ ಮುಂದೆ ಬೀಜ ಬಿತ್ತತಕ್ಕವರಿಗೂ ವಿಶೇಷ ಭೀತಿ ಉಂಟುಮಾಡಿತು ಕ್ಷಾಮಸಂಬಂಧವಾಗಿ ಗೌರ್ನಮೆಂಟಿನವರು ಮಾಡುತ್ತಿದ್ದ ಸಹಾಯ ತಪ್ಪಿದ್ದರಿಂದ ಬಡವರು ನಿರ್ಗತಿಕರಾಗಿ ಸಂಕಟದಲ್ಲಿ ಸಿಕ್ಕಿದರು ಪ್ರಜೆಗಳಿಗೆ ನೀರು ಸಿಕ್ಕತಕ್ಕದ್ದು ಅಭಾವವಾಯಿತು ಇದರಿಂದ ಈಗಿನ ಕಷ್ಟವು ಮೊದಲಿಗಿಂತಲೂ ಜಾಸ್ತಿ ಆಯಿತು

ಈಚೆಗೆ ೨೦ ದಿವಸದಿಂದ ಸೂರ್ಯರಶ್ಮಿಯೇ ಇಲ್ಲ ರಾತ್ರಿ ಹಗಲೂ ಮೋಡ ಮುಚ್ಚಿಕೊಂಡು ತುಂತುರು ಮಳೆ ಬರತಕ್ಕದ್ದು, ಅಪಾರವಾದ ಶೀತಗಾಳಿಯು ಬೀಸತಕ್ಕದ್ದು, ಈ ದುರ್ಲಕ್ಷಣಗಳಿಗೆ ಆರಂಭವಾಗಿದೆ ಇದರಿಂದ ಪ್ರಜೆಗಳಿಗೆ ಕಾಯಿಲೆಗಳು ಜಾಸ್ತಿ ಆಯಿತೇ ಹೊರತು ರೈತರು ರಾಗಿ ವಗೈರೆ ಬೀಜ ಬಿತ್ತಲಿಕ್ಕೆ ಹದವಾಗಲಿಲ್ಲ ಬಾವಿಗಳಿಗೆ ನೀರು ಬರಲಿಲ್ಲ ಈ ೨೦ ದಿವಸದಿಂದ ಬಂದ ಮಳೆ ಒಟ್ಟುಮಾಡಿದರೆ ಪ್ರಾಯಶಃ ೨೫ ಇಂ ಸೆಂಟ್ ಆಗಿರಲಾರದೆಂದು ತೋರುತ್ತೆ ಈ ಹೀಂದ್ರಾವಾದ ಸೋನೆಯಿಂದ ಕೂಲಿಕಾರರಿಗೆ ಜೀವನವೇ ಸಿಕ್ಕದಂತೆ ಆಗಿದೆ ನೀರಿನ ಕಷ್ಟವಂತೂ ಹೇಳತಕ್ಕದ್ದಾಗಿಯೇ ಇಲ್ಲ ಕ್ಷಾಮವೆಂತ ಹೆಸರಿದ್ದ ಕಾಲದಲ್ಲಿ ರೂಪಾಯಿಗೆ ೧೨-೧೩ ಸೇರು ರಾಗಿ, ಜೋಳ ಸಿಕ್ಕುತ್ತಿತ್ತು ಈಗ ರೂಪಾಯಿಗೆ ೧೦½ ೧೧ ಸೇರು ಆಗಿದೆ

ಅಂತು ಈಗಿನ ಪ್ರಜೆಗಳ ಕಷ್ಟದ ಸ್ಥಿತಿಯನ್ನು ಗೌರ್ನಮೆಂಟಿನವರು ವಿಚಾರಿಸಿ, ತಕ್ಕ ಏರ್ಪಾಡು ಮಾಡತಕ್ಕದ್ದು ಅವಶ್ಯಕವೆಂದು ಕಾಣುತ್ತದೆ

ಚಿತ್ರದುರ್ಗ ಪೆನ್ಷನ್ ಆಫೀಸರ್.

ಒಂದು ವರ್ತಮಾನ ಹುಟ್ಟಿರುವದು

ಅಯ್ಯಾ,

ಇಂಗ್ಲೀಷ್ ಭಾಷೆ ಪ್ರಚಾರವಾಗುವವರೆಗೂ ನಮ್ಮ ದೇಶದಲ್ಲಿ ನಾನಾ ವಿಧವಾದ ಶಕುನ ದಿ ವಿಶ್ವಾಸಂಗಳು ನೆಲೆಗೊಂಡು ಇತ್ತು ಹ್ಯಾಗೆಂದರೆ, ಪ್ರತ್ಯಕ್ಷೋಕ್ತವಾದ ಒಂದು ವಿಷಯವನ್ನು ಸೂಚಿಸುವೆನು ಹಲ್ಲಿ, ರೆಕ್ಕೆಗಳಿಗೆ ಬಿಟ್ಟ ಹತ್ತದಿದ್ದರೆ ನಾನಾ ವಿಧವಾದ ಸುಳ್ಳು ವರ್ತಮಾನಂಗಳನ್ನು ಹುಟ್ಟಿಸುತ್ತಿದ್ದರು ಆದರೆ ಈಗ ೫೦ ವರ್ಷದಿಂದ ಈಚೆಗೆ ದಿನೇ ದಿನೇ ಈ ಮೂಢ ಭಕ್ತಿಯು ಕೊರತೆಯಾಗುತ್ತಾ ಇದ್ದಾಗ್ಯೂ ಇನ್ನೂ ಇದರ ಚೇಷ್ಟೆ ಸಂಪೂರ್ಣ ತಪ್ಪಿರುವದಿಲ್ಲ

ಈಗ್ಗೆ ೮ ದಿವಸದಿಂದ ಈಚೆಗೆ ಪತ್ರಿಕೆ ನೇರ್ ಬಳಿಯೂ, ಟ್ರೇನಿನ ಪ್ರತಿ ಕಂಪಾರ್ಟ್‍ಮೆಂಟಿನಲ್ಲಿಯೂ ಒಂದು ವರ್ತಮಾನವು ಹೊರಟಿದೆ ನಾನೇನೋ ಬಣ್ಣದ ಮಾತೆಂದೇ ಊಹಿಸಿರುವೆನು ಆದರೆ ಸಂಸ್ಥಾನದಲ್ಲಿ ಒಂದು ತ್ರೈಮಾಸಿಕ ಪತ್ರಿಕೆಗಳು ಈಗ ಸಿಂಕರುವದರಿಂದ ಹ್ಯಾಗಿರುವದೋ ಎಂಬ ಸಂಶಯವು ಹುಟ್ಟಿದೆ ಅದು ಏನೆಂದರೆ,—ಒಬ್ಬ ಬ್ರಾಹ್ಮಣನು ತನ್ನ ಸುಮಂಗಲಿ ಮಗಳನ್ನು ಒಬ್ಬ ಮುಸಲ್ಮಾನನಿಗೆ ಮಾರಿದನೆಂತಲೂ, ಅದಕ್ಕಾಗಿ ನಾಲ್ಕು ಸಾವಿರ ರೂಪಾಯಿ ಕ್ರಯದ ಮೊಬಲಗು ಪಡೆದು ತನ್ನ ಕುಮಾರಿಗೆ ತಿಳಿಯದಂತೆ ಅವನ ಮನೆಯಲ್ಲಿ ಬಿಟ್ಟು ಬಿಟ್ಟು ಈಶ್ವರ ಧ್ಯಾನ ಮಾಡಲು ಹೊರಟುಹೋದನೆಂತಲೂ, ಆ ಹುಡುಗಿಯು ತನ್ನ ೧೫ ವರ್ಷದ ವಯಸ್ಸಿನಲ್ಲಿಯೇ ಪುರಾಣ ಕಥಾಶ್ರವಣಮಾತ್ರದಿಂದ ಸಂಗ್ರಹಿಸಿದ ಬುದ್ಧಿಯಿಂ ವ್ಯಯವಾಡಿ ಮಲವಿಸರ್ಜನೆಗೆ ಹೋಗಬೇಕೆಂದು ಹೇಳಿ ಮ್ಲೇಚ್ಛ ಯವನನನ ರಾಹುತನು ಜೊತೆಯಲ್ಲಿ ಕರೆದುಕೊಂಡು ಹೋಗಿ ನದಿಯ ಕರೆಯಲ್ಲಿ ನಿರಾತ್ರಿಯಲ್ಲಿ ಅವನಿಗೆ ಚಳ್ಳರ್ ಕೊಟ್ಟು ಓಡಿಸೋಗಿ ಒಬ್ಬ ಕೇರಾಟಿಯು ತಾನು ಲೆಕ್ಕವನ್ನು ನೋಡುತ್ತಾ ಎಚ್ಚರವಾಗಿ ದೀಪವಿಟ್ಟುಕೊಂಡು ಬರೆಯುತ್ತಿರುವಲ್ಲಿ ಅವನನ್ನು ಪ್ರೋಷಿಸಬೇಕೆಂದು ಸಾಧಿಸಿಕೊಂಡು ಮಳಿಗೆಯಂ ಪ್ರವೇಶಿಸಿ ತಾನು ಇರುವ ಸ್ಥಿತಿ ತನ್ನ ಮ್ಲೇಚ್ಛಗಳಿಗೆ ತಿಳಿಯದಂತೆ ಕದನಂ ಧ್ವಸ್ತಪಡಿಸಬೇಕೆಂದು ಕೇಳಿಕೊಂಡಳೆಂತಲೂ, ಆ ವರ್ತಕನು ಅವಳ ಇರುವಿಕೆಯಂ ನೋಡಿ ಅವಳ ಪ್ರಾರ್ಥನೆಯಂತೆ ಸಹಾಯವಂ ಮಾಡಿ ಮರು ದಿವಸ ಅವಳ ಗಂಡನ ಬಳಿಗೆ ಕಳುಹಿಸಿದನೆಂದೂ, ಅನಂತರ ಗಂಡನು ತನ್ನ ಅರ್ಧಾಂಗನೆಯಿಂದ ಸಂಪೂರ್ಣವಾದ ವಿವರವಂ ತಿಳಿದು ಮೊದಲು ತುರುಕನ ಮನೆಯಂ ಪ್ರವೇಶಿಸಿ ಅಲ್ಲಿದ್ದ ಇವಳ ಬಾಬತು ಒಟ್ಟಿ ಗಂಟು ಪತ್ತೆ ಮಾಡಿ ವಸ್ತಗಿರಿ ಮಾಡಿದ್ದಾಗಿಯೂ ಕರುಮಂಯ ಪಂಗಳೂರಲ್ಲಿ ಜೀವನಾಂಶ ವಿಕ್ರಯ ಮಾಡಿದ ಅವಳ ತಂದೆ ಎಂಬುವನನ್ನು ದಸ್ತಗಿರಿ ಮಾಡಿಸಿ ಮೊಕದ್ದಮೆಯನ್ನೂ ಕೋರ್ಟಿಗೆ ಬರುವಹಾಗೆ ಮಾಡಿ ಈಗ ಸೆಷನ್ಸಿನಲ್ಲಿ ವಿಚಾರಣೆಗಿರುವದಾಗಿಯೂ ಒಂದು ವಾರ್ತೆ ಹುಟ್ಟಿರುವದು ಇಷ್ಟುಗಳು ಗೊತ್ತು ಹೇಳರು, ಆ ಹುಡುಗಿಯ ಗಂಡನ ಹೆಸರೇ ಆಗಲಿ ಕೃತ್ಯ ನಡೆದ ಸ್ಥಳವೇ ಆಗಲಿ ಹೇಳರು ಕೆಲವರು ಚನ್ನಪಟ್ಟಣವೆಂದೂ, ಕೆಲವರು ಕೋಲಾರ್‌ಪೇಟೆಯೆಂದೂ, ಕೆಲವರು ಬೆಂಗಳೂರೆಂದೂ, ಕೆಲವರು ಕ್ರಯಮಾಡಿದನಿಗೂ ಕ್ರಯಕ್ಕೆ ಕೊಟ್ಟವನಿಗೂ ಶಿಕ್ಷೆಯಾಯಿತೆಂದೂ, ಕೆಲವರು ಇನ್ನೂ ವಿಚಾರಣೆಯಾಗುತ್ತಿದೆಯೆಂದೂ ಹೇಳುವವರಿಂದ ನಮ್ಮ ಬಾತ್ಮಿದಾರರುಗಳಲ್ಲಿ ಯಾರಿಗಾದರೂ ಸಂಗತಿ ನಿಜವಾಗಿ ತಿಳಿದಿದ್ದರೆ ಪ್ರಜೆಗಳ ತಿಳುವಳಿಕೆ ಮತ್ತು ಬುದ್ಧಿವಾದಕ್ಕಾಗಿ ಇರುವ ಸ್ಥಿತಿಯನ್ನು ಬರೆಯುವರೆಂದು ನಂಬುತ್ತೇನೆ

ವಿಚಾರ ತಿಳಿಯುವ ಕುತೂಹಲಿ

ತಾಲ್ಲೋಕು ವರ್ತಮಾನಗಳು.

ಕುಲೀನ್‌ಪೇಟೆ ——ಕುಲೀನ್‌ಪೇಟೆ ತಾಲ್ಲೂಕು ಕೈಲಂಚದ ಹೋಬಳಿ ರೇವಣಸಿದ್ಧೇಶ್ವರಸ್ವಾಮಿ ಬೆಟ್ಟದ ತೇರು ಬೀದಿಯಲ್ಲಿ ಪಟ್ಟದ ಮುದ್ದು ಬಸವಲಿಂಗ ರಾಜಸ್ವಾಮಿಗಳು ಒಂದು ದಾಸೋಹ ಮಠವನ್ನು ಕಟ್ಟಿಸುತ್ತಿದಾರೆ ಅವರು ಅನೇಕ ಕಡೆ ಸಂಚಾರಮಾಡಿ ಈ ಕಾಮಗಾರಿಗೆ ದ್ರವ್ಯಸಹಾಯವನ್ನು ಪಡೆದುಕೊಂಡು ಬಂದಿರುವರು ಇದುವರೆಗೆ ಈ ಮಠಕ್ಕೆ ಸಾವಿರಾರು ರೂಪಾಯಿನ ಕಾಮಗಾರಿ ನಡೆದಿರುವದು ಇನ್ನು ಮುಂದಿನ ಕೆಲಸಗಳಿಗೆ ಬಹು ಜನರು ದ್ರವ್ಯವನ್ನೂ ಪದಾರ್ಥಗಳನ್ನೂ ಸಾಮಗ್ರಿಗಳನ್ನೂ ಒದಗಿಸಿಕೊಡುವಂತೆ ವಾಗ್ದಾನ ಮಾಡಿರುತ್ತಾರೆ

ಅಜ್ಜಂಪುರ ——ಇಲ್ಲಿ ೧೦-೧೫ ದಿವಸಗಳ ಲಾಗಾಯಿತು ಜಡಿ ಮಳೆಯು ಹಿಡಿದಿರುತ್ತದೆ ಇಲ್ಲಿನ ಪೈರುಗಳೆಲ್ಲಾ ಚೆನ್ನಾಗಿರುತ್ತವೆ ಇದೇ ರೀತಿಯಾಗಿ ಇನ್ನು ಕೆಲವು ದಿವಸಗಳು ಮಳೆ ಹಿಡಿದುಕೊಂಡರೆ ಪೈರುಗಳೆಲ್ಲಾ ಕೆಟ್ಟು ಹೋಗುತ್ತವೆ —ಈ ಊರಲ್ಲಿ ಇಷ್ಟು ಮಳೆ ಹಿಡಿದಾಗ್ಯೂ ದಿನಸಿಗಳು ಇನ್ನೂ ಪ್ರಿಯವಾಗಿರುತ್ತವೆ ಇದಲ್ಲದೆ ಇಲ್ಲಿನ ವರ್ತಕರು ಪೇಟೆಯಲ್ಲೂ, ಸಂತೆಯಲ್ಲೂ ಕಮ್ಮಿ ಸೇರುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಾರೆ ಈ ವಿಷಯವನ್ನು ಇಲ್ಲಿನ ಸರ್ಕಾರಿ ನೌಕರರು ಮನಸ್ಸಿಗೆ ತಂದುಕೊಳ್ಳದೆ ಇರಲು ಕಾರಣವೇನೋ ತಿಳಿಯದು —ಈ ಊರಿನ ಆಸ್‌ಪಾಸ್ ಸ್ಥಳಗಳಲ್ಲಿ ಪ್ಲೇಗ್ ಉಪದ್ರವ ಗಲಾಟೆಯು ಹರಡಿರುತ್ತದೆ ಈ ಗ್ರಾಮದಲ್ಲೂ ಕೂಡ ಅಲ್ಲಲ್ಲಿ ಇಲಿಗಳು ಬೀಳುತ್ತವೆಂಬ ವದಂತಿ ಇರುತ್ತವೆ ಬಡ ಜನರು ಇಂಥಾ ಧಾನ್ಯಗಳು ಪ್ರಿಯವಾದ ಕಾಲದಲ್ಲಿ ಕುಟುಂಬದಲಾದರೂ ಮನೆಯಲ್ಲಿ ರೋಗವೆಂದರೆ ಪ್ಲೇಗ್ ಗಲಾಟೆಯು ಬಂದು ನಮ್ಮಗಳಿಗೆ ದುಡ್ಡಿನ ಖರ್ಚನ್ನೂ, ಪ್ರಾಣಭಯವನ್ನೂ ಉಂಟು ಮಾಡುತ್ತದೆ - ಇದಲ್ಲದೆ ಶ್ರೀ ಸಿರಿಗೆರೆ ಮಠದ ವಕ್ಕಲತಂದವರ ಸ್ವಾಮಿಗಳು ಭಕ್ತರಿಂದ ಕಾಣಿಕೆಯನ್ನು ವಸೂಲು ಮಾಡಲು ಬಂದಿದ್ದವರು ಶನಿವಾರದ ದಿವಸ ಹೊರಟು ಹೋದರು

ಹೊಸಕೋಟೆ.——ಇಲ್ಲಿ ಟೌನು ಪಾಕೀಜಾ ಚನ್ನಾಗಿದೆ ಜನರ ಉಪಯೋಗಾರ್ಥವಾಗಿ ಮುನಿಸಿಪಾಲಿಟಿಯವರು ಲಾಂದ್ರಗಳನ್ನು ಇಟ್ಟಿರುವದು ಸರಿಯೆ ಹಗಲು ಹೊತ್ತಿನಲ್ಲಿ ನೋಡಿದರೆ ಲಾಂದ್ರಕಂಬಗಳು ಚನ್ನಾಗಿ ಕಾಣುತ್ತವೆ ರಾತ್ರಿಯಲ್ಲಿ ನೋಡಿದರೆ ಕಂಬಗಳಾದರೂ ಕಾಣುವುದಿಲ್ಲ ದೀಪಗಳು ಪ್ರಕಾಶವಿಲ್ಲದೆ ಉರಿಯುವುದಕ್ಕೆ ಕಾರಣವೇನೆಂದು ಮುನಿಸಿಪಾಲಿಟಿಯವರು ಎಂದಾದರೂ ನೋಡಿದ್ದರೆ ಇದರ ಕಾರಣ ಅವರಿಗೆ ತಿಳಿಯದೆ ಇರಲಾರದೆಂದು ನಂಬುತ್ತೇನೆ ಕೆಲವು ದಿವಸಗಳಿಂದ ಲಾಂದ್ರಗಳು ಹಚ್ಚುವುದೇ ಇಲ್ಲ ಈ ಊರಿನಲ್ಲಿ ಇದನ್ನು ವಿಚಾರಣೆ ಮಾಡುವವರೇ ಇಲ್ಲ ಇದನ್ನು ನಮ್ಮ ಅಮಲ್ದಾರ್ರವರು ಆಲೋಚನೆ ಮಾಡಿ ಬೇಗನೆ ದೀಪಗಳನ್ನು ಹಚ್ಚುವ ಹಾಗೆ ಏರ್ಪಾಟು ಮಾಡ್ಯಾರೆಂದು ನಂಬುತ್ತೇನೆ —ಇಲ್ಲಿ ಎರಡು ತಿಂಗಳಿಂದಲೂ ಮಳೆ ಬರಲಿಲ್ಲ ರೈತರು ಮಳೆಯನ್ನೇ ಎದುರುನೋಡುತ್ತಾರೆ ಕೆಲವರು ಬೀಜ ಬಿತ್ತಿದಾರೆ ಇನ್ನು ಕೆಲವರು ಬಿತ್ತುವದಕ್ಕೆ ಮಳೆಯನ್ನೇ ಎದುರು ನೋಡುತ್ತಾರೆ ಧಾರಣೆಯು ಅಕ್ಕಿ ೬ ಸೇರು, ರಾಗಿ ೧೦-೧೧ ಸೇರು ಮಾರುತ್ತಾರೆ ಕೆಲವರು ಸಂತೆಯಲ್ಲಿ ಕಮ್ಮಿ ಸೇರುಗಳನ್ನಿಟ್ಟು ಮಾರುತ್ತಾರೆಂದು ಕೇಳುತ್ತೇನೆ ಇದರ ವಿಷಯ ಪೋಲೀಸಿನವರು ಗಮನ ಇಟ್ಟರೆ ಉತ್ತಮ

ಕೊಪ್ಪ ತಾ॥ ಹಾಲುಮತ್ತೂರು ——ಇದೇ ತಿಂಗಳು ತಾ ೧೪ ನೆ ಬುಧವಾರ ರಾತ್ರಿ ಈ ಊರಿಗೆ ಸಮೀಪದಲ್ಲಿರುವ ಕೊಡಿಗೆ ಪುಟ್ಟಯ್ಯ ಎಂಬುವನ ಮನೆಗೆ ಬೆಂಕಿ ಬಿದ್ದು ಸುಟ್ಟು ಹೋಯಿತು. ಇಂಥಾ ಮಳೆಗಾಲದಲ್ಲಿ ಹೀಗೆ ಸುಟ್ಟು ಹೋದದ್ದು ಬಹಳ ಆಶ್ಚರ್ಯವಾಗಿದೆ ಹೇಗೆಂದರೆ, ಸದರಿ ಪುಟ್ಟಯ್ಯನು ಸಾಯಂಕಾಲ ತನ್ನ ಕಂಬಳಿ ಮತ್ತು ಪಂಚೆ ಒದ್ದೆಯಾಗಿದ್ದದ್ದರಿಂದ ಒಣಗುವುದಕ್ಕೋಸ್ಕರ ಮುರು ಬೇಯಿಸುವ ಒಲೆಯ ಮೇಲೆ ಒಣಗು ಹಾಕಿದನು ಮೇಲೆ ಹಾಳೆ ಹೊದೆಗಳನ್ನು ಕೂಡಿದನು ಅಕಸ್ಮಾತ್ ಕಂಬಳಿಗೆ ಕಿಡಿ ಹಾರಿ ಒಳಗೆ ಹೊರಗೆ ಹಿಡಿದುಕೊಂಡು ಹಿಂಭಾಗವೆಲ್ಲಾ ಸುಟ್ಟು ಮುಂಭಾಗ ಹತ್ತುವ ವರೆಗೂ ಮನೆಯವರಿಗೆ ಗೊತ್ತಾಗಲಿಲ್ಲ ಇಷ್ಟು ಹೊತ್ತಿಗೆ ಸಾಯಂಕಾಲ ೭ ಗಂಟೆ ಆಯಿತು ಈ ಸಮಯದಲ್ಲಿ ಉತ್ಕಟ ಮಳೆಯಾದದ್ದರಿಂದ ಮೇಲೆ ಹೊದಿಸಿದ ಹುಲ್ಲು ಉರಿಯಲಿಲ್ಲ ಮನೆಯ ಮುಂಭಾಗದಲ್ಲಿ ಬೆಂಕಿ ಕಂಡಕೂಡಲೆ ಮನೆಯವರು ಕೂಗಿಕೊಂಡರೂ ಆಸ್‌ಪಾಸ್ ಇದ್ದ ಜನಗಳಿಗೆ ಕೂಡಾ ಮಳೆಯ ದೆಸೆಯಿಂದ ಕೇಳಿಸಲಿಲ್ಲವಾದದ್ದರಿಂದ ಮನೆಯು ಸಂಪೂರ್ಣವಾಗಿ ಭಸ್ಮೀಭೂತವಾಯಿತು ಈತನು ಈ ಊರು ದೇವಸ್ಥಾನದ ಚಾಕರಿ ಮಾಡಿಕೊಂಡು ಜೀವನ ಮಾಡುತ್ತಿದ್ದನು ಮನೆಯಲ್ಲಿ ೫೦—೬೦ ಖಂಡುಗ ಭತ್ತವೂ ಸಾವ ನುಗಳೂ ಎಲ್ಲಾ ಸುಟ್ಟು ಹೋಯಿತು ದೊಡ್ಡ ಸಂಸಾರಿ, ಮಳೆಗಾಲದಲ್ಲಿ ನಿಲ್ಲುವುದಕ್ಕೆ ಕೂಡಾ ಸ್ಥಳವಿಲ್ಲ. ನೋಡಿದರೆ ಬಹಳ ವ್ಯಸನವಾಗುತ್ತೆ

ಮಂಡ್ಯ ——ಗಾಳಿಯ ಹೊಡೆತವು ಬಹಳವಾಗಿದೆ ಮಳೆ ಎನ್ನುವದರ ಹೆಸರೇ ಇಲ್ಲ ಅದರ ಆಸೆಯೆಲ್ಲಾ ನಿರಾಸೆಯಾಯಿತು ಜೋಳವಂತೂ ಒಣಗಿಯೇ ಹೋಯಿತು ಧಾರಣೆಯು ದಿನೇ ದಿನೇ ಕೆಟ್ಟುತ್ತಿದೆ - ಮೈಸೂರು ಡಿಸ್ಟ್ರಿಕ್ಟ್ ಮಿಷನ್ ಸೂಪರಿಂಟೆಂಡೆಂಟರು ಘನ ಸಾಡೇ ಸಾಹೇಬರವರು ಈ ತಿಂಗಳು ೧೩ ನೇ ತಾ ಮಂಗಳವಾರ ಇಲ್ಲಿಗೆ ದಯಮಾಡಿದ್ದರು ಗರಲ್ಸ್ ಸ್ಕೂಲ್, ಇಂಗ್ಲಿಷ್ ಸ್ಕೂಲ್ ಮತ್ತು ಪಂಚಮರ ಸ್ಕೂಲುಗಳು ಪರೀಕ್ಷಿಸಲ್ಪಟ್ಟವು ಅಲ್ಲದೆ ತಾ ೧೪ ರಲ್ಲಿ ಸಾಹೇಬರವರು ಗರಲ್ಸ್ ಸ್ಕೂಲಿನ ವಿದ್ಯಾರ್ಥಿನಿಯರಿಗೆ ವಿಶೇಷವಾಗಿ ಬಹುಮಾನಗಳನ್ನು ಕೊಟ್ಟರು ಅಗ್ಗ ಅನೇಕಾನೇಕ ವಿದ್ಯಾರ್ಥಿನಿಯರೂ ಅವರ ಪೋಷಕರೂ ಇನ್ನೂ ಅನೇಕ ದೊಡ್ಡ ಮನುಷ್ಯರೂ ಹಾಜರಾಗಿದ್ದರು ಅತ್ಯವಶ್ಯಕವಾದ ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಸಾಹೇಬರವರು ಕೊಡುತ್ತಿರುವ ಪ್ರೋತ್ಸಾಹವನ್ನು ಕಂಡು ಸಭೆಯು ಆನಂದಪಟ್ಟಿತು ಸ್ಕೂಲ್ ರಿಪೋರ್ಟು ಓದಲ್ಪಟ್ಟಿತು —ಮಂಡ್ಯದ ಶ್ರೀ ಚಂದ್ರಶೇಖರಸ್ವಾಮಿ ದೇವಸ್ಥಾನದಲ್ಲಿ ಗಿರಿಜಾಕಲ್ಯಾಣ ಮಹೋತ್ಸವವು ಕಳೆದ ತಾ ೧೦ ರಿಂದ ಒಂದು ವಾರದ ತನಕ ಅತ್ಯಂತ ವಿಜೃಂಭಣೆಯಿಂದ ನಡೆಯಿತು ಉತ್ಸವಗಳೂ ಮೆರವಣಿಗೆಗಳೂ ಸಂತರ್ಪಣೆಗಳೂ ಸಾಂಗವಾಗಿಯೂ ತೃಪ್ತಿಕರವಾಗಿಯೂ ಸಂತೋಷಕರವಾಗಿಯೂ ಜರುಗಿದವು ಸುತ್ತುಮುತ್ತಿನಿಂದ ಅನೇಕ ಜನರು ಇದಕ್ಕಾಗಿ ಬಂದಿದ್ದರು

ನೆಲಮಂಗಲದ ತಾ॥ ತ್ಯಾಮಗೊಂಡ್ಲು.——ಈ ಗ್ರಾಮದಲ್ಲಿ ಮಳೆಯಿಲ್ಲದೆ ಅಂದಿನಿಂದಲೂ ದನಕರುಗಳಿಗೂ ಮನುಷ್ಯರಿಗೂ ಉಂಟಾಗಿದ್ದ ತೊಂದರೆಯನ್ನು ವಿವರಿಸಲಶಕ್ಯವಾಗಿತ್ತು. ಈಗ ಸುಮಾರು ಎಂಟು ದಿವಸಗಳಿಂದಲೂ ಮಳೆಯು ಸುಮಾರಾಗಿ ಬೀಳುತ್ತಾ ಇದ್ದದ್ದರಿಂದ ನೀರಿನ ಅವಸ್ಥೆಯು ಸ್ವಲ್ಪ ಕಡಮೆಯಾಯಿತು ಅಲ್ಲದೆ ರೈತರೆಲ್ಲಾ ಬಿತ್ತನೆ ಕೆಲಸಕ್ಕೆ ಪ್ರಾರಂಭಿಸಿರುತ್ತಾರೆ ಅಲ್ಪಸ್ವಲ್ಪ ಮಳೆ ಬಿದ್ದಾಗ್ಯೂ ಧಾರಣೆವಾಸಿಗಳು ಪ್ರಿಯವಾಗಿಯೇ ಇವೆ ರಾಗಿ ೧೦½-೧೧ ಸೇರು, ಅಕ್ಕಿ ೭ ಸೇರು ಮಾರುತ್ತದೆ ಅನೇಕರು ಗೋಣಿ ಗೆಡ್ಡೆ, ಕತ್ತಾಳೆ ಗೆಡ್ಡೆಗಳಿಂದ ಜೀವಿಸುತ್ತಾರೆ. ಆದರೆ ಪ್ಲೇಗ್, ವಾಂತಿಭೇದಿ ಮುಂತಾದ ಸೋಂಕು ಜಾಡ್ಯಗಳ ಭಯವಿಲ್ಲ ಹೊಟ್ಟೆಗಿಲ್ಲದೆ ಬಹಳ

ಹೊಗೇಸೊಪ್ಪು—(೩)

ಹೊಗೆಸೊಪ್ಪಿನ ಸೊಸಿ ಬೆಳೆಸತಕ್ಕ ಕ್ರಮ.

ಚನ್ನಾಗಿ ಉತ್ತು ಪಾಳಾಗಿರುವ ಎತ್ತರವಾದ ಪ್ರದೇಶದಲ್ಲಿ ಕೇರೇಮಡಿಗಳಂತೆ ಚಿಕ್ಕ ಚಿಕ್ಕದಾಗಿ ಮಡಿಗಳನ್ನು ಮಾಡಿ, ಹೊಗೇಸೊಪ್ಪಿನ ಬೀಜ ೧ ಕ್ಕೆ ೫೦ ರಷ್ಟು ನಯವಾದ ಮರಳನ್ನು ಬೆರಸಿ, ಮಡಿಗಳಿಗೆ ತಕ್ಕಷ್ಟು ಕುರಿಯ ಗೊಬ್ಬರ ಅಥವಾ ಒಳ್ಳೇ ಹಸ್ನಾದ ದನವಿನ ಗೊಬ್ಬರವನ್ನು ಹಾಕಿ, ಅದರ ಮೇಲೆ ಬಿತ್ತನವನ್ನು ಬಿತ್ತಬೇಕು ಅನಂತರ ಮರಳನ್ನು ಹಲಗೆಯಿಂದ ಅಥವಾ ಕೈಯಿಂದ ಮಟ್ಟಸವಾಗಿ ಸಮ್ಮಸು ಮಾಡಬೇಕು ತರುವಾಯ ಮರಳು ಮಿಶ್ರವಾದ ಸೊಸಿಯನ್ನು ದಿನವೂ ಬೆಳಿಗ್ಗೆ ಸಾಯಂಕಾಲ ಎರಡು ವೇಳೆಯೂ ಒಗ್ಗಿನ ಮೇಲೆ ನೀರನ್ನು ಸುಮಾರಾಗಿ ಶೀವವುಂಟಾಗುವ ಹಾಗೆ ಚುಮುಕಿಸಬೇಕು ಮಳೆ ಆದ ದಿವಸ ನೀರು ಅವಶ್ಯಕವಿಲ್ಲ ಈ ರೀತಿ ಮಾಡಿದರೆ ಹತ್ತು ದಿವಸಕ್ಕೆ ಮೊಳಕೆ ಬರುವದು ಸೊಸಿ ಮೇಲಕ್ಕೆ ಬಂದ ಮೇಲೆ ಬೆರಳುದ್ದ ಬರುವವರೆಗೆ ಇದೇ ರೀತಿ ಮಾಡಬೇಕು ಆಗಾಗ್ಗೆ ಕಳೆಯನ್ನು ಸೊಸಿಗಳು ನೋಯದಂತೆ ಜಾಗರೂಕತೆಯಿಂದ ತೆಗೆದುಹಾಕುವದು ಒಗ್ಗಿನ ಪೈರು ಬಹಳ ಒತ್ತಾದರೆ ಅಲ್ಲಲ್ಲಿ ಒಂದೊಂದನ್ನು ಹಾಕಿ ವಿರಳವಾದಬಹುದು ಈ ಸ್ಥಿತಿಯಲ್ಲಿ ಎರಡು ದಿವಸಕ್ಕೆ ಒಂದುವೇಳೆ ಸೊಸಿಗೆ ನೀರು ಹಾಕುವದು ಅಗೆಯನ್ನು ಅರಿದ್ರೆ ಮಳೆಯಲ್ಲಿ ಹಾಕುವರು ಮಾಘದ ಮಳೆಯಲ್ಲಿ ಸೊಸಿಯನ್ನು ಬೆಳಗಿನ ಹೊತ್ತಿನಲ್ಲಿ ಅಥವಾ ಸಂಜೆ ಹೊತ್ತಿನಲ್ಲಿ ಪಟಗಳಿಗೆ ನೀರು ಹಾಕಿ ನೆನಸಿ ಸೊಸಿಯನ್ನು ಕಿತ್ತು ನೆರಳಿನಲ್ಲಿಟ್ಟುಕೊಂಡು ತಯಾರಾಗಿರುವ ಜಮೀನಿನಲ್ಲಿ ಒಂದು ಗಜಕ್ಕೆ ಒಂದು ಗುಳಿಯಂತೆ ಮಾಡಿ ಗುಳಿ ೧ ಕ್ಕೆ ಒಂದು ಬೊಗಸೆ ಗೊಬ್ಬರವನ್ನು ಹಾಕಿ ಚನ್ನಾಗಿ ಮಣ್ಣಿನೊಡನೆ ಬೆರಸಿ ಗುಳಿ ೧ ಕ್ಕೆ ಎರಡು ಸೊಸಿಯಂತೆ ನೆಟ್ಟು ಕೂಡಲೆ ಗುಳಿಗೆ ಸ್ವಲ್ಪ ನೀರು ಬಿಡುವದು ಮಾರನೇ ದಿವಸ ಯಾವದಾದರೂ ಒಂದು ಕಾಡು ಸೊಪ್ಪನ್ನು (ಅಂದರೆ, ಕಕ್ಕೆ ಹೊಂಗೆ ಮೊದಲಾದ ಎಲೆಯನ್ನು) ಮುಚ್ಚಿ ಸೊಸಿಗಳಿಗೆ ನೆರಳು ಕೊಡಬೇಕು ಮೋಡವಾಗಿದ್ದರೆ ಅವಶ್ಯಕವಿಲ್ಲ ೪ ೫ ದಿವಸಗಳ ತನಕ ನೆರಳು ಕೊಟ್ಟು ಸೊಸಿಗಳು ಬೇರುಬಿಟ್ಟು ಕಣ್ಣುಬಿಟ್ಟ ಮೇಲೆ ಮಳೆಯಿಲ್ಲದಿದ್ದರೆ ಆಗಾಗ್ಗೆ ಅಳತೆ ಅರ್ಧ ಸೇರಿನಷ್ಟು ನೀರು ಹಾಕಬೇಕು ನೆಟ್ಟ ಸೊಸಿಗಳ ಪೈಕಿ ಯಾವದರಲ್ಲಾದರೂ ಹುಳು ಕಂಡಲ್ಲಿ ಆ ಸೊಸಿಯನ್ನು ತೆಗೆದುಹಾಕಿ ಹುಳುವಿಲ್ಲದ ಸ್ವಚ್ಛವಾದ ಹೊರುವಾದ ಸೊಸಿಯನ್ನು ನೆಡಬೇಕು ಸೊಸಿಗಳು ಹೊಸ ಸುಳಿ ಕಿತ್ತ ಮೇಲೆ ಸೊಸಿಗಳಿಗೆ ಆಗಾಗ್ಗೆ ಕುಂಟೆಯಿಂದ ಹರತೆ ಹೊಡೆಯುತ್ತಾರೆ ೮-೧೦ ದಿವಸಗಳಿಗೆ ಒಂದುಸಲ ಈ ರೀತಿ ಹರತೆ ಮಾಡಿ ತರುವಾಯ ಪ್ರತಿ ಗುಳಿಯ ಎರಡು ಸೊಸಿಗಳಲ್ಲಿ ಒಳ್ಳೇದನ್ನು ಬಿಟ್ಟು ದುರ್ಬಲವಾದ ಸೊಸಿಯನ್ನು ಕಿತ್ತುಹಾಕಬೇಕು ಬುಡಗಳಿಗೆ ಬಾಚು ಮಣ್ಣನ್ನು ಏರುಹಾಕುತ್ತಾರೆ ಮೇಲ್ಕಂಡಂತೆ ಸೊಸಿಗಳನ್ನು ಸ್ಥಾಪಿಸಬೇಕು ತರುವಾಯ ಮಾಡಬೇಕಾದ ವ್ಯವಸಾಯವನ್ನು ಇದಕ್ಕೆ ಮುಂಚಿನ (ಅಂದರೆ, ಜೂನ್ ೧೭ ನೇ ಮತ್ತು ಜೂಲೈ ೧೫ ನೇ ತಾರೀಖುಗಳ) ಪತ್ರಿಕೆಗಳಲ್ಲಿ ಬರೆದು ಇದೇನೆ

ವಿ ರಂಘವಾಚಾರ್ಯರು

ಅಡ್ವೊಕೇಟ್, ಮೈಸೂರು

ಕೊಯಮುತ್ತೂರು ವ್ಯವಸಾಯ ವಿದ್ಯಾಶಾಲೆಯು

ಮದರಾಸ್ ಗವರ್ನರವರು ಪ್ರತಿಷ್ಠೆಮಾಡಿದ್ದು

ವ್ಯವಸಾಯವು ಹಿಂದುಸ್ಥಾನದ ಮುಖ್ಯ ಕಸಬಾಗಿದ್ದರೂ ಅದನ್ನು ಶಾಸ್ತ್ರವತ್ತಾಗಿಯೂ ಕ್ರಮವಾಗಿಯೂ ಕಲಿಸಿಕೊಡುವುದಕ್ಕೆ ಅನುಕೂಲವಾದ ವಿದ್ಯಾಶಾಲೆಯು ಮದರಾಸ್ ಆಧಿಪತ್ಯದಲ್ಲಿ ಇರಲಿಲ್ಲ ಅದರೆ ಮದರಾಸ್ ಪಟ್ಟಣದಲ್ಲೇ ಸೈದಾಪೇಟೆ ಎಂಬ ವಿಭಾಗದಲ್ಲಿ ಒಂದು ವ್ಯವಸಾಯ ಶಾಸ್ತ್ರ ಬೋಧನಾಶಾಲೆಯು ಬಹುಕಾಲದಿಂದ ಇತ್ತೆಂದು ಕೆಲವರು ಹೇಳಬಹುದು ಅದು ಅಷ್ಟು ತೃಪ್ತಿಕರವಾದ ಸ್ಥಿತಿಯಲ್ಲಿರಲಿಲ್ಲವೆಂಬುವುದೂ ಅದರಿಂದ ಅಷ್ಟೇನೂ ಪ್ರಯೋಜನವಾಗಲಿಲ್ಲವೆಂಬುವುದೂ ಮದರಾಸ್ ಗವರ್ನಮೆಂಟಿನವರಿಗೇ ಗೊತ್ತಾದ ಕಾರಣ ಸುಮಾರು ಎರಡು ವರುಷಗಳ ಹಿಂದೆ ಆ ವಿದ್ಯಾಶಾಲೆಯನ್ನು ವಜಾಮಾಡಿ ಈಗಿನ ಕಾಲಕ್ಕೆ ತಕ್ಕಂಥಾ ಸಲಕರಣೆಗಳನ್ನೆಲ್ಲಾ ಪಡೆದಿರುವಂಥಾ ವಿದ್ಯಾಶಾಲೆಯನ್ನು ಹೊಸದಾಗಿ ಕಟ್ಟಿ, ವ್ಯವಸಾಯವನ್ನು ಶಾಸ್ತ್ರವತ್ತಾಗಿಯೂ ಸಾಕ್ಷಾತ್ತಾಗಿಯೂ ವಿದ್ಯಾರ್ಥಿಗಳಿಗೆ ಕಲಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ನಿಶ್ಚಯಿಸಿಕೊಂಡರು ಕೊಯಮುತ್ತೂರು ಟೌನ್ ಬಳಿಯಲ್ಲಿ ಈ ಶಾಲೆಯನ್ನು ಕಟ್ಟುವುದೇ ಎಲ್ಲಾ ಬಾಬುಗಳಲ್ಲೂ ಅನುಕೂಲವಾಗಿವೆ ಎಂದು ತಿಳಿದವರು ಸಲಹೆ ಕೊಟ್ಟದ್ದರಿಂದ ಮದರಾಸ್ ಸರ್ಕಾರದವರು ಅದರಂತೆ ಸಂಕಲ್ಪ ಮಾಡಿದರು ಕಳೆದ ೧೯೦೬ ನೇ ಇಸವಿ ಸೆಪ್ಟಂಬರ್ ೨೪ ನೇ ತಾರೀಖು ದಿನ ಮದರಾಸ್ ಗವರ್ನರವರಾದ ಸರ್ ಆರ್ಥರ್ ಲಾಲಿ ಯವರು ಆ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿದರು ಈಗ ಈ ಕಟ್ಟಡವು ಪೂರ್ತಿಯಾದ್ದರಿಂದ ಗವರ್ನರವರು ಅದನ್ನು ಕಳೆದ ೧೪ ನೆ ತಾರೀಖು ಬುಧವಾರ ನೀಲಗಿರಿಯಿಂದ ಬಂದು ಮಾಡಿ ಪ್ರತಿಷ್ಠೆ ಮಾಡಿರುತ್ತಾರೆ ಅದರಲ್ಲಿ ವ್ಯವಸಾಯ ಶಾಸ್ತ್ರವನ್ನು ವಿದ್ಯಾರ್ಥಿಗಳಿಗೆ ಪುಸ್ತಕ ಮೂಲಕವಾಗಿ ಹೇಳಿಕೊಡುವುದಕ್ಕೂ, ವ್ಯವಸಾಯದ ಅಭಿವೃದ್ಧಿಗೆ ಅವಶ್ಯವಾದ ಪರಿಶೋಧನೆಗಳನ್ನು ಕಾರ್ಯತಃ ಮಾಡಿ ತೋರಿಸುವುದಕ್ಕೂ ಅವಕಾಶವನ್ನೂ ಸಲಕರಣೆಗಳನ್ನೂ ಕಲ್ಪಿಸಿರುತ್ತಾರೆ ಇದಲ್ಲದೆ ವಿದ್ಯಾಶಾಲೆಯ ಸಮೀಪದಲ್ಲೇ ತರಿ ಖುಷ್ಕಿ ಬಾಗಾಯತು ಫಸಲುಗಳನ್ನು ಇಟ್ಟು ಹುಲುಸಾಗಿ ಬೆಳೆಯತಕ್ಕ ವಿಧಾನಗಳನ್ನು ಕಾರ್ಯತಃ ಮಾಡಿ ತೋರಿಸುವುದಕ್ಕೂ ಕಲಿತುಕೊಳ್ಳುವುದಕ್ಕೂ ಅನುಕೂಲಿಸುವಂಥಾ ೩೦೦ ಎಕರೆ ವಿಸ್ತಾರವುಳ್ಳ ಜಮೀನನ್ನು ಬಿಟ್ಟುಕೊಟ್ಟಿದೆ ಮೇಲ್ಕಂಡ ವಿದ್ಯಾಶಾಲೆಯನ್ನು ಕಟ್ಟುವುದಕ್ಕೆ ಗವರ್ನಮೆಂಟಿಗೆ ೩ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಖರ್ಚಾಗಿರುತ್ತದೆ ವ್ಯವಸಾಯ ಶಾಸ್ತ್ರ ಬೋಧಕರೂ ಪರೀಕ್ಷಕರಾದ ಪಂಡಿತರೂ ವಾಸಮಾಡುವುದಕ್ಕೆ ಅದರ ಸಮೀಪದಲ್ಲೇ ಹಲವು ಬಂಗಲೆಗಳನ್ನು ಕಟ್ಟಿಸಿರುವರು ಇದಲ್ಲದೆ ಏಕಕಾಲದಲ್ಲಿ ಅರವತ್ತು ಮಂದಿ ವಿದ್ಯಾರ್ಥಿಗಳು ಅಲ್ಲೇ ಇದ್ದುಕೊಂಡು ಪಾಠ ಪ್ರವಚನಗಳನ್ನು ನಡಿಸಿಕೊಳ್ಳುವದಕ್ಕೆ ವಿದ್ಯಾರ್ಥಿ ನಿಲಯಗಳನ್ನು ಕಟ್ಟಿಸಿದಾರೆ ಒಂದೊಂದು ಮನೆಯಲ್ಲಿ ಆರಾರು ಮಂದಿ ವಿದ್ಯಾರ್ಥಿಗಳು ಮಾತ್ರ ಇರುವಂತೆ ಇಪ್ಪತ್ತು ಮನೆಗಳು ಪ್ರತ್ಯೇಕ ಪ್ರತ್ಯೇಕವಾಗಿ ಇರೋಣದರಿಂದ ಜಾತಿ ಸಂಕರವಾದೀತೆಂಬ ಅನುಮಾನಕ್ಕೆ ಅವಕಾಶವಿಲ್ಲದಂತೆ ಮಾಡಿದಾರೆ

ಈ ವಿದ್ಯಾಶಾಲೆಗೆ ಪ್ರತಿ ವರುಷವೂ ಇಪ್ಪತ್ತು ಮಂದಿ ವಿದ್ಯಾರ್ಥಿಗಳನ್ನು ಮಾತ್ರವೇ ಸೇರಿಸಿಕೊಳ್ಳುವರು ಇವರು ಮೂರು ವರುಷ ಕಾಲ ವ್ಯಾಸಂಗಮಾಡಿ ಅಲ್ಲಿನ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದರೆ ವ್ಯವಸಾಯ ಶಾಸ್ತ್ರವನ್ನು ತಿಳಿದವನೆಂಬ ಸರ್ಟಿಫಿಕೇಟನ್ನು ಕೊಡುವರು ಈ ವಿದ್ಯಾಶಾಲೆಯಲ್ಲಿ ಓದುವುದಕ್ಕೆ ಫೀಜೇನೂ ಕೊಡಬೇಕಾದದ್ದಿಲ್ಲ ವಿದ್ಯಾರ್ಥಿನಿಲಯದಲ್ಲಿ ಇರುವುದಕ್ಕೂ ಬಾಡಿಗೆ ಕೊಡಬೇಕಾಗಿಲ್ಲ ವಿದ್ಯಾರ್ಥಿಯು ಊಟದ ಖರ್ಚನ್ನು ಮಾತ್ರ ಒದಗಿಸಿಕೊಂಡರೆ ಸಾಕಾಗಿದೆ ಅವನಿಗೆ ಇಂಗ್ಲೀಷಿನಲ್ಲಿ ಕಡೇಪಕ್ಷ ಮೆಟ್ರಿಕ್ಯುಲೇಷನ್ ಪರೀಕ್ಷೆಯಾದರೂ ಆಗಿರಬೇಕು ವ್ಯವಸಾಯ ವಿದ್ಯೆಯನ್ನು ಕಲಿತು ಬೇರೇ ಜೀವನೋಪಾಯವನ್ನು ಹುಡುಕಿಕೊಳ್ಳುವಂಥವರನ್ನು ಈ ವಿದ್ಯಾಶಾಲೆಗೆ ಸೇರಿಸಿಕೊಳ್ಳುವುದಿಲ್ಲ ಇಲ್ಲಿ ತೇರ್ಗಡೆ ಹೊಂದುವವರಿಗೆ ಸರ್ಕಾರದವರು ನೌಕರಿಕೊಡುತ್ತೇವೆಂದು ಭರವಸೆ ಹೇಳುವುದಿಲ್ಲ ಅವರು ವ್ಯವಸಾಯ ಮಾಡುವವರಾಗಿಯೇ ಇರಬೇಕು ರೈತ ಪ್ರಜೆಗಳ ಮಕ್ಕಳೇ ಬರುವುದಾದರೆ ಅವರ ವಿಷಯದಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಾಗಿರಲೇ ಬೇಕೆಂಬ ವಿಧಿಯನ್ನು ಗಣನೆಗೆ ತರುವುದಿಲ್ಲ ಈ ವಿದ್ಯಾಶಾಲೆಯಲ್ಲಿ ಒಂದು ವರುಷದಿಂದಲೂ ಪಾಠ ಪ್ರವಚನಗಳು ನಡೆಯುತ್ತಲಿವೆ ಎರಡನೇ ವರುಷದ ಪಾಠಗಳೂ ಹೇಳುತ್ತಿರೋಣದರಿಂದ ಈಗ ನಾಲ್ವತ್ತು ಮಂದಿ ವಿದ್ಯಾರ್ಥಿಗಳು ವಿದ್ಯೆ ಕಲಿಯುತ್ತಿದಾರೆ

ಕಳೆದ ಬುಧವಾರ ಮದರಾಸ್ ಗವರ್ನರವರು ಈ ವಿದ್ಯಾಶಾಲೆಯನ್ನು ಪ್ರತಿಷ್ಠೆ ಮಾಡಿದಾಗ್ಗೆ ಬಹು ಶ್ರೇಷ್ಠವಾದ ಉಪನ್ಯಾಸವನ್ನು ಮಾಡಿದರು ಅದರಲ್ಲಿ ಅವರು ಹಿಂದುಸ್ಥಾನದ ಪೂರ್ವ ರಾಜರುಗಳ ಕಾಲದಲ್ಲಿ ಒಬ್ಬರ ಮೇಲೊಬ್ಬರು ಬಿದ್ದು ಕಾದಾಡುತ್ತಿದ್ದುದನ್ನೂ, ದೇಶಕ್ಕೆ ನೆಮ್ಮದಿ ಸುಖ ಸಂತೋಷಗಳಿಲ್ಲದಿದ್ದುದರಿಂದ ಈ ರಾಷ್ಟ್ರದ ಮುಖ್ಯ ಕಸಬಾದ ವ್ಯವಸಾಯವು ಬಹಳ ಕ್ಷೀಣಗತಿಗೆ ಬಂದದ್ದನ್ನೂ, ಈಚೀಚೆಗೆ ಬ್ರಿಟಿಷ್ ಆಳ್ವಿಕೆಯು ನೆಲೆಗೊಂಡು ಎಲ್ಲಾ ಕಡೆಗಳಿಗೂ ಹಬ್ಬಿದ್ದರಿಂದ ದಿನಕ್ರಮೇಣ ನೆಮ್ಮದಿ ಸುಖಾದಿಗಳು ಹುಟ್ಟಿ ಅಭಿವೃದ್ಧಿ ಹೊಂದಿದ್ದನ್ನೂ, ರೈತನ ಹಿತವನ್ನು ಬಯಸಿ ಬ್ರಿಟಿಷ್ ಪ್ರಭುಗಳು ಕೋಟ್ಯಂತರ ದ್ರವ್ಯವನ್ನು ಖರ್ಚು ಮಾಡಿ ರಸ್ತೆ, ಸೇತುವೆ, ರೈಲ್ ಮಾರ್ಗ, ನೀರಾವರಿ ಕಾಮಗಾರಿಗಳನ್ನು ಕಲ್ಪಿಸಿ ಕೊಟ್ಟಿರುವುದನ್ನೂ ಅವನ ಮಾನ ಧನ ಪ್ರಾಣಗಳಿಗೆ ಚ್ಯುತಿಯುಂಟಾಗದಂತೆ ಕಾನೂನುಗಳನ್ನು ಮಾಡಿರುವುದನ್ನೂ ಸಾಧ್ಯವಾದಮಟ್ಟಿಗೂ ನ್ಯಾಯವಿಮರ್ಶೆ ಮಾಡುವುದಕ್ಕೆ ನ್ಯಾಯಸ್ಥಾನಗಳನ್ನು ಕಲ್ಪಿಸಿರುವುದನ್ನೂ ವಿವರಿಸಿದರು ತರುವಾಯ ವ್ಯವಸಾಯವನ್ನು ಅಭಿವೃದ್ಧಿಗೆ ತಂದುಕೊಳ್ಳುವ ವಿಷಯದಲ್ಲಿ ರೈತರಿಗೆ ಸರಿಯಾದ ಮತ್ತು ವೃಷ್ಟಾಂತ ಪೂರ್ವಕವಾದ ವಿವೇಕವನ್ನು ಉಂಟುಮಾಡುವುದಕ್ಕಾಗಿ ಈ ವಿದ್ಯಾಶಾಲೆಯನ್ನೂ ಅದಕ್ಕೆ ಸೇರಿದ ಜಮೀನನ್ನೂ ಏರ್ಪಾಡು ಮಾಡಿದೆ ಎಂದು ತಿಳಿಸಿದರು ಗವರ್ನರವರು ವ್ಯವಸಾಯ ಶಾಸ್ತ್ರವನ್ನು ಬೋಧಿಸತಕ್ಕಂಥಾ ಉಪಾಧ್ಯಾಯರುಗಳಿಗೆ ಕೆಲವು ಶ್ರೇಷ್ಠವಾದ ಹಿತೋಕ್ತಿಗಳನ್ನು ಸೂಚಿಸಿ, ವಿದ್ಯಾರ್ಥಿಗಳನ್ನು ಕುರಿತು ಅಪ್ಪಣೆ ಕೊಡಿಸಿದ್ದೇನೆಂದರೆ— ಇಲ್ಲಿಗೆ ಬರತಕ್ಕ ವಿದ್ಯಾರ್ಥಿಗಳೆಲ್ಲಾ ಉತ್ತರೋತ್ತರ ವ್ಯವಸಾಯವನ್ನೇ ತಮ್ಮ ಮುಖ್ಯ ಕಸಬನ್ನಾಗಿ ನಡಿಸತಕ್ಕವರಾಗಿರಬೇಕು ಇಲ್ಲವಾದರೆ ನೀವು ಇಲ್ಲಿಗೆ ಬಂದದ್ದು ವ್ಯರ್ಥವೇ ಸರಿ ಮತ್ತು ನೀವು ದೊಡ್ಡ ಅಪರಾಧಿಗಳಾಗುತ್ತೀರಿ ಯಾಕೆಂದರೆ ನಿಮ್ಮಿಂದ ಅಂಥಾ ಉದ್ದೇಶವುಳ್ಳವರು ಬಂದು ಪ್ರಯೋಜನ ಹೊಂದದಂತೆ ಅಡ್ಡಿಯಾಗುವುದು ಗವರ್ನಮೆಂಟಿನವರು ಸ್ಥಾಪಿಸುವ ಪರೀಕ್ಷಾರ್ಥವಾದ ಫಾರಂಗಳಲ್ಲಿ ನೀವು ಕಲಿತದ್ದನ್ನು ಮಾಡಿ ತೋರಿಸಬೇಕು ಇಲ್ಲಿ ಕಲಿತ ಜನ್ನು ಕೆಲವರಿಗೆ ಅವರವರ ಜಮೀನುಗಳಲ್ಲಿ ಹೊಸ ರೀತಿಯಾಗಿ ವ್ಯವಸಾಯ ಮಾಡುವ ಕಾರ್ಯಭಾರವುಂಟು ಬೇರೆ ಕೆಲವರು ಬಂಜರಾಗಿರುವ ಜಮೀನುಗಳಲ್ಲಿ ತಮ್ಮ ಬುದ್ಧಿ ಕುಶಲತೆಯನ್ನು ಪ್ರಯೋಗಿಸಿ ತಾವೂ ಪ್ರಯೋಜನ ಹೊಂದಿ ನೆರೆಹೊರೆ ರೈತರಿಗೂ ಒಳ್ಳೇ ಮೇಲ್ಪಂಕ್ತಿಯನ್ನು ಹಾಕಿ ಕೊಡಬಹುದು ಈ ಭಾಗದಲ್ಲಿ ಹಿಂದುಸ್ಥಾನದಲ್ಲೆಲ್ಲಾ ಸುಪ್ರಸಿದ್ಧರಾಗಿರುವ ದಿವಾನ್ ಬಹದೂರ್ ಆರ್ ರಘುನಾಥರಾಯರು ಎರಡು ದಿನಗಳ ಹಿಂದೆ ನನಗೆ ಬರೆದಿರುವ ಕಾಗದದಲ್ಲಿ ಈ ಸಂಗತಿಯನ್ನು ಕಾಣಿಸಿರುತ್ತಾರೆ ಏನೆಂದರೆ—ಅನೇಕಾನೇಕ ಬಾರೀ ಜಮೀನ್ದಾರರಿಗೆ ವ್ಯವಸಾಯ ಮಾಡತಕ್ಕವರೂ ಗಿಡ ಮರಗಳನ್ನು ಬೆಳೆಯತಕ್ಕವರೂ ಫಲ ವೃಕ್ಷಗಳನ್ನು ಸಾಕತಕ್ಕವರೂ ಇಂಜನೀರ್ ನಡೆಸುವವರೂ ಒಳ್ಳೆಯ ಮಾನೇಜರೂ ಕಮ್ಮಿಯಾಗಿವೆ ಈ ಕೆಲಸಗಳಿಗೆ ಪದವೀಧರರನ್ನು ಆಪೇಕ್ಷಿಸುವುದು ಅಸಾಧ್ಯವಾಗಿದೆ ಅನೇಕಾನೇಕ ಜಮೀನ್ದಾರರು ತಮ್ಮ ಜಮೀನುಗಳಲ್ಲಿ ಸಾಗುವಳಿ ಮಾಡುವುದಕ್ಕೆ ಯೋಗ್ಯರಾದ ವ್ಯವಸಾಯಗಾರರು ಸಿಕ್ಕದೆ ಬೇಸರದಲ್ಲಿದ್ದಾರೆ ಇಲ್ಲಿ ಬೆಳೆಯಬಹುದಾದ ಫಲಗಳನ್ನು ಅನ್ಯದೇಶಗಳಿಂದ ತರಿಸಿಕೊಳ್ಳುವುದು ನಾಚಿಕೆಯಾಗಿದೆ ಎಂಬ ರೀತಿಯಾಗಿ ಬರೆದು ಈ ದೇಶದ ಪ್ರಜೆಗಳ ಮೇಲೆ ಬಹು ಕಠಿಣವಾಗಿ ಆಕ್ಷೇಪಣೆ ಮಾಡಿರುತ್ತಾರೆ ಆದಕಾರಣ ಈಗ ಏರ್ಪಾಡಾಗಿರುವ ಈ ವಿದ್ಯಾಶಾಲೆಯು ದೆಸೆಯಿಂದ ದಕ್ಷಿಣ ದೇಶದಲ್ಲಿ ಸಮಸ್ತ ವಿಧವಾದ ವ್ಯವಸಾಯ ಸಾಗುವಳಿ ಪದ್ಧತಿಗಳು ಅಭಿವೃದ್ಧಿಗೆ ಬರುವುದಕ್ಕೂ ನಮಗೆ ಬಹು ಕುತೂಹಲಪೂರ್ವಕವಾಗಿ ನಿರೀಕ್ಷಿಸುತ್ತೇನೆ ಈಗ ವಿದ್ಯಾರ್ಥಿಗಳಾಗಿರತಕ್ಕ ನೀವು ಇನ್ನು ಮುಂದೆ ವಿಶೇಷ ಅಭಿವೃದ್ಧಿ ಕಾರ್ಯಗಳು ನಡೆಯಬೇಕಾಗಿರುವಷ್ಟು ಎಂಬುದೇ

ಗವರ್ನರವರು ಈ ರೀತಿಯಾಗಿ ಉಪನ್ಯಾಸ ಮಾಡಿ ಕಟ್ಟಡವನ್ನು ಪ್ರತಿಷ್ಠೆ ಮಾಡಿದರು

ರಾಜಧಾನಿಯ ಮ್ಯುನಿಸಿಪಾಲಿಟಿ

ಹೊಸ ಕೌನ್ಸಿಲರುಗಳ ಚುನಾವಣೆಯ ವೃತ್ತಾಂತವು

ಕಳೆದ ೧೨ ನೇ ತಾ ಸೋಮವಾರದಿಂದ ೧೫ ನೇ ತಾ ಗುರುವಾರದ ತನಕ ರಾಜಧಾನಿಯ ಎಲ್ಲಾ ಮೊಹಲ್ಲಾಗಳಲ್ಲೂ ಮ್ಯುನಿಸಿಪಲ್ ಕೌನ್ಸಿಲರುಗಳ ಚುನಾವಣೆಗಳು ನಡೆದವು ಕೌನ್ಸಿಲರಾಗಬೇಕೆಂದು ಅರ್ಜಿಕೊಟ್ಟ ಉಮೇದುವಾರರಾಗಿದ್ದ ದೊಡ್ಡ ಮನುಷ್ಯರಿಗೆ ಆಯಾ ಮೊಹಲ್ಲೆಯ ಓಟರುಗಳು ಸಮ್ಮತಿಗಳನ್ನು ಹಾಕಿದರು ಸುಮಾರು ೧೦ ೧೨ ದಿನಗಳಿಂದ ಆಯಾ ಉಮೇದುವಾರರ ಪಕ್ಷದವರು ಮತ್ತು ಕೆಲವು ದೊಡ್ಡ ಮನುಷ್ಯರು ಮೊಹಲ್ಲೆಗಳ ಮೇಲೆ ಹೊರಟು ಓಟರುಗಳ ಕೂಡ ಸಂಭಾಷಣೆ ಮಾಡಿ ಉಮೇದುವಾರರ ಯೋಗ್ಯತಾಪತ್ರಗಳನ್ನು ವಿವರಿಸಿ ಇಂಥಿಂಥವರಿಗೇ ಓಟುಕೊಡಬೇಕೆಂದು ಶಿಫಾರಸು ಮಾಡುತ್ತಾ ಬಂದದ್ದು ಓಟರುಗಳು ತಮ್ಮತಮ್ಮಲ್ಲೇ ಈ ವಿಷಯವನ್ನು ಕುರಿತು ಮಾತನಾಡಿಕೊಳ್ಳುತ್ತಾ ಇದ್ದದ್ದು ಆಯಾ ಮೊಹಲ್ಲೆಯಲ್ಲಿ ಚುನಾವಣೆ ನಡೆವ ಕಾಲಕ್ಕೆ ಉಮೇದುವಾರರ ಪಕ್ಷದವರು ಓಟರುಗಳಿಗೆ ಕುದುರೇ ಗಾಡಿಗಳನ್ನು ಕೊಟ್ಟು ಚುನಾವಣೆಯ ಸ್ಥಳಕ್ಕೆ ಕರೆದುಕೊಂಡು ಹೋಗಿ ಅವರಿಂದ ತಮ್ಮ ಪಕ್ಷದವರಿಗೆ ಓಟುಗಳನ್ನು ಹಾಕಿಸಿದ್ದು, ಇವೆಲ್ಲಾ ಕಳೆದ ವಾರ ರಾಜಧಾನಿಯಲ್ಲಿ ತುಂಬಾ ಉತ್ಸಾಹಕರಗಳಾಗಿದ್ದವು ವೈಸ್ ಪ್ರೆಸಿಡೆಂಟರು ಆಯಾ ಮೊಹಲ್ಲೆಯಲ್ಲಿ ಚುನಾವಣೆ ನಡೆವ ಸ್ಥಳದಲ್ಲಿ ಹಾಜರಾಗಿದ್ದು, ಓಟರುಗಳಿಂದ ಬರೆದು ಕೊಡಲ್ಪಟ್ಟ ಓಟ್ ಚೀಟಿಗಳನ್ನು ಅವರಿಂದಲೇ ಒಂದು ಪೆಟ್ಟಿಗೆಯೊಳಕ್ಕೆ ಹಾಕಿಸಿಕೊಂಡರು ಈ ಪೆಟ್ಟಿಗೆಗೆ ಬೀಗ ಮೊಹರುಗಳನ್ನು ಮಾಡಿ, ಮೇಲ್ಭಾಗದಲ್ಲಿ ಲಕ್ಕೋಟೆ ತೂರಿಸುವಷ್ಟು ಸಣ್ಣ ರಂಧ್ರವನ್ನು ಮಾಡಿದ್ದರು ಈ ಪೆಟ್ಟಿಗೆಗೆ ಯಾರೂ ಕೈಹಾಕದಂತೆ ಅದನ್ನು ವೈಸ್ ಪ್ರೆಸಿಡೆಂಟರು ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡಿದ್ದು, ಎಲ್ಲಾ ಮೊಹಲ್ಲೆಗಳ ಚುನಾವಣೆಯೂ ಮುಗಿದು ಓಟ್ ಚೀಟಿಗಳೆಲ್ಲಾ ಕೇಖರವಾದ ಮೇಲೆ ವೈಸ್ ಪ್ರೆಸಿಡೆಂಟರು ಪೆಟ್ಟಿಗೆಗೆ ಬಟ್ಟೆಯನ್ನು ಸುತ್ತಿಸಿ ಮೊಹರು ಮಾಡಿಸಿ ತಮ್ಮ ಬಳಿಯಲ್ಲಿಟ್ಟುಕೊಂಡರು

ಸ್ಪೆಷಲ್ ಮ್ಯುನಿಸಿಪಲ್ ಮೀಟಿಂಗು

ಚುನಾವಣೆಯ ಫಲಿತಾಂಶವು

ಹೊಸ ಮ್ಯುನಿಸಿಪಲ್ ಕಾನೂನಿನಲ್ಲಿ ವಿಧಿಸಿರುವಂತೆ ವೈಸ್ ಪ್ರೆಸಿಡೆಂಟರು ಮೇಲ್ಕಂಡ ಪ್ರಕಾರ ಚುನಾವಣೆಯನ್ನು ನಡಿಸಿ, ಅದರ ಫಲಿತಾಂಶವನ್ನು ಗೊತ್ತುಮಾಡುವುದಕ್ಕಾಗಿ ಮ್ಯುನಿಸಿಪಲ್ ಕೌನ್ಸಿಲರುಗಳಿಗೆ ಮೊದಲೇ ತಿಳುವಳಿಕೆ ಕೊಟ್ಟು ಅವರನ್ನು ಕಳೆದ ಶುಕ್ರವಾರ ಬೆಳಿಗ್ಗೆ ೭|| ಗಂಟೆಗೆ ಟೌನ್ ಹಾಲ್ ಬಂಗಲೆಗೆ ಬರಮಾಡಿಕೊಂಡು ಒಂದು ಸ್ಪೆಷಲ್ ಮೀಟಿಂಗ್ ನಡಿಸಿದರು ಓಟ್ ಚೀಟಿಗಳಿದ್ದ ಮೇಲ್ಕಂಡ ಮೊಹರಾದ ಪೆಟ್ಟಿಗೆಯನ್ನು ವೈಸ್ ಪ್ರೆಸಿಡೆಂಟರು ಕೌನ್ಸಿಲರುಗಳ ಮುಂದಿಡಿಸಿ ಅವರೆದುರಿಗೆ ಅದನ್ನು ಬಿಚ್ಚಿಸಿ ಪೆಟ್ಟಿಗೆಯೊಳಗಿದ್ದ ಓಟ್ ಚೀಟಿಗಳನ್ನೆಲ್ಲಾ ಈಚೆಗೆ ತೆಗೆಸಿಕೊಂಡು, ಕೌನ್ಸಿಲರುಗಳ ಸಹಾಯವನ್ನು ಪಡೆದು, ಅವುಗಳನ್ನೆಲ್ಲಾ ಮೊದಲು ಮೊಹಲ್ಲಾವಾರು ವಿಂಗಡಿಸಿದರು ಮೊದಲು ಎಣಿಕೆ ಸುಲಭವಾಗಿದ್ದ ಮಂಡಿ ಮತ್ತು ಚಾಮರಾಜ ಮೊಹಲ್ಲೆಗಳ ಓಟ್ ಚೀಟಿಗಳನ್ನು ಲೆಕ್ಕಮಾಡಿ ತೆಗೆದಿಟ್ಟರು ತರುವಾಯ ಉಳಿದ ಐದು ಮೊಹಲ್ಲೆಗಳ ಓಟ್ ಚೀಟಿಗಳನ್ನು ಮೊಹಲ್ಲಾವಾರು ತೆಗೆದುಕೊಂಡು ಉಮೇದುವಾರರಾಗಿದ್ದ ದೊಡ್ಡ ಮನುಷ್ಯರ ಹೆಸರುಗಳನ್ನು ಬರೆದುಕೊಂಡು ಯಾರ್ಯಾರಿಗೆ ಎಷ್ಟೆಷ್ಟು ಮಂದಿ ಓಟರುಗಳು ಸಮ್ಮತಿಯನ್ನು ಹಾಕಿದ್ದರೋ ಅದನ್ನೆಲ್ಲಾ ಗುರುತುಮಾಡಿಕೊಂಡು ಗೊತ್ತುಮಾಡಿದರು

ಈ ಚುನಾವಣೆಯಲ್ಲಿ ಒಂದೆರಡು ಮೊಹಲ್ಲೆಗಳಲ್ಲಿ ಕೆಲವು ಅಚಾತುರ್ಯಗಳು ನಡೆದವೆಂದು ಗೊತ್ತಾಯಿತು ೩೬ ಮಂದಿ ಓಟರುಗಳು ಓಟ್ ಚೀಟಿಗಳ ಮೇಲೆ ತಮ್ಮ ಓಟನ್ನು ಇಂಥಾ ಉಮೇದುವಾರರಿಗೆ ಕೊಟ್ಟೆವೆಂಬುವುದನ್ನು ಸರಿಯಾಗಿ ತಿಳಿಸದೆ ಹೋದದ್ದರಿಂದ ಅಂಥಾ ಓಟ್ ಚೀಟಿಗಳನ್ನು ಕೌನ್ಸಿಲರುಗಳು ಲೆಕ್ಕಕ್ಕೆ ಸೇರಿಸಿಕೊಳ್ಳದೆ ವಜಾಮಾಡಬೇಕಾಯಿತು ನಾಲ್ಕಾರು ಸಂದರ್ಭಗಳಲ್ಲಿ ಓಟರುಗಳು ತಮಗೆ ಓಟ್ ಹಾಕುವ ನೋಟೀಸು ಜಾರಿಯಾಗದಿದ್ದರೂ ಚುನಾವಣೆ ನಡೆದ ಸ್ಥಳಕ್ಕೆ ಹೋಗಿ ಓಟ್‌ಮಾಡಬೇಕೆಂದು ಪ್ರಯತ್ನಪಟ್ಟರು ಇವರಿಗೆ ಓಟ್ ಚೀಟಿಗಳನ್ನು ಕೊಡದೆ ವಾಪಸು ಕಳುಹಿಸಿಬಿಟ್ಟರು ವೈಸ್ ಪ್ರೆಸಿಡೆಂಟರು ವಿಚಾರಣೆಮಾಡಿದ್ದರಲ್ಲಿ ಅವರಿಗೆ ಓಟ್ ಮಾಡುವ ಅಧಿಕಾರವುಂಟೆಂದು ಗೊತ್ತಾದದ್ದರಿಂದ ಕೂಡಲೇ ಆ ಓಟರುಗಳಿಗೆ ಹೇಳಿಕಳುಹಿಸಿ ಅವರಿಂದ ಓಟ್‌ಮಾಡಿಸಿದರು ಹುಡುಕಿದರೂ ಒಬ್ಬ ಓಟರು ಸಿಕ್ಕದೆ ಹೋದದ್ದರಿಂದ ಅವರು ಓಟನ್ನು ಹಾಕಿಸುವುದಕ್ಕೆ ಆಗಲಿಲ್ಲ ಒಂದು ಮೊಹಲ್ಲೆಯಲ್ಲಿ ಓಟರು ಮರಣಹೊಂದಿ ಅನೇಕ ವರುಷಗಳಾಗಿ ಅವರ ಹೆಸರೇ ಖಾತೆಯಲ್ಲಿ ಇದ್ದುಕೊಂಡು ಬಂದಿದೆ ಅವರ ಮಗನು ಖಾತೆದಾರನಲ್ಲದಿದ್ದರೂ ಚುನಾವಣೆ ಸ್ಥಳಕ್ಕೆ ಹೋಗಿ ಓಟ್ ಚೀಟಿಯನ್ನು ಬರೆದುಕೊಟ್ಟು ಬಂದನೆಂದು ಗೊತ್ತಾಯಿತು ಇನ್ನೊಂದು ಸಂದರ್ಭದಲ್ಲಿ ಒಬ್ಬನಿಗೆ ಓಟ್ ಚೀಟಿಯನ್ನು ಕೊಟ್ಟು ಅವನಿಂದ ಓಟ್ ಹಾಕಿಸಿದರು ಅವನು ಈ ಪಟ್ಟಣದವನೇ ಅಲ್ಲವೆಂದೂ ಅವನಿಂದ ಓಟ್‌ಮಾಡಿಸಿದ್ದು ಸರಿಯಲ್ಲವೆಂದೂ ಆಕ್ಷೇಪಣೆಯುಂಟಾಯಿತು

ಆಯಾ ಮೊಹಲ್ಲೆಗೆ ಕೌನ್ಸಿಲರಾಗಬೇಕೆಂದು ಉಮೇದುವಾರರಾಗಿ ನಿಂತಿದ್ದ ಮಹನೀಯರುಗಳ ಹೆಸರುಗಳನ್ನೂ ಅವರಿಗೆ ಓಟರುಗಳು ಹಾಕಿರುವ ಸಮ್ಮತಿಗಳ ಸಂಖ್ಯೆಗಳನ್ನೂ ಇಲ್ಲಿ ಪ್ರಕಟಿಸಿರುತ್ತೇವೆ —

ಮೊಹಲ್ಲಾ ಮತ್ತು ಉಮೇದುವಾರರ ಹೆಸರು	ಓಟು ಹಾಕಿದವರ ಒಟ್ಟು ಸಂಖ್ಯೆ	ಉಮೇದುವಾರರಿಗೆ ಎಷ್ಟು ಓಟುಗಳು ದೊರೆತವು
೧ ಮಂಡಿ ಮೊಹಲ್ಲಾ —		
ಮ॥ ವೀರಪ್ಪನವರು	31	31
೨ ಚಾಮರಾಜ ಮೊಹಲ್ಲಾ —		
ಮ॥ ವೆಂಕಟಕೃಷ್ಣಯ್ಯನವರು	11	11
೩ ನ್ಯೂ ಬ್ರಾಡ್ ಮೊಹಲ್ಲಾ —		
(೧) ಮ॥ ಕೆ ಬ್ರಾಡ್ ಮೊಹಿದೀನ್ ಸಾಹೇಬರು	22	14
(೨) ಮ॥ ಶಿವ ಮುದಲಿಯಾರು		8
೪ ಕೃಷ್ಣರಾಜ ಮೊಹಲ್ಲಾ —		
(೧) ಮ॥ ಎಸ್ ಶ್ರೀಕಂಠಯ್ಯನವರು	71	64
(೨) ಮ॥ ಎಂ ಡಿ ತಿಂಗಳಾಚಾರ್ಯರು		7
೫ ಲಷ್ಕರ್ ಮೊಹಲ್ಲಾ		
(೧) ಮ॥ ಎಂ ಅನಂತರಾಜೈಯನವರು	71	50
(೨) ಮ॥ ರಹಮತ್ ಉಲ್ಲಾ ಅಹಮದ್ ಶೇಟರು		19
(೩) ಮ॥ ಸೆಟ್ಟಿ ಜಿರಾಯರು		2
೬ ಕೋಟೆ ಮೊಹಲ್ಲಾ —		
(೧) ಮ॥ ಎಂ ನರಸಿಂಹಸ್ವಾಮಿಯವರು	37	32
(೨) ಮ॥ ಜಹಗೀರ್ದಾರ್ ವೆಂಕಟಪ್ಪನವರು		22
(೩) ಮ॥ ಕೃಷ್ಣಪ್ಪಾಜಿ ಅರಸಿನವರು		12

ಮೊಹಲ್ಲಾ ಮತ್ತು ಉಮೇದುವಾರರ ಹೆಸರು	ಓಟು ಹಾಕಿದವರ ಒಟ್ಟು ಸಂಖ್ಯೆ	ಉಮೇದುವಾರರಿಗೆ ಎಷ್ಟು ಓಟುಗಳು ದೊರೆತವು
೭ ದೇವರಾಜ ಮೊಹಲ್ಲಾ —		
(೧) ಮೆ॥ ಎ ಸುಬ್ಬಣ್ಣನವರು	88	61
(೨) ಮೆ॥ ಎಂ ಸಿ ರಂಗೈಯ ಗಾರ್ರು		49
(೩) ಮೆ॥ ಎಚ್ ರಂಗೈಯಂಗಾರ್ರು		34
(೪) ಮೆ॥ ರಾಮೇಶ್ವರೈಯನವರು		19
(೫) ಮೆ॥ ಆದಿನಾರಾಯಣ ಶೆಟ್ಟರು		9
(೬) ಮೆ॥ ಬಿ ನರಸಿಂಗರಾಯರು		2

ಈ ಪ್ರಕಾರ ಓಟರುಗಳು ಉಮೇದುವಾರರಿಗೆ ತಮ್ಮ ಓಟುಗಳನ್ನು ಹಾಕಿದರು ಸರ್ಕಾರದವರು ವಿಧಿಸಿರುವ ಪ್ರಕಾರ ಹೆಚ್ಚು ಸಂಖ್ಯೆಯ ಓಟುಗಳನ್ನು ಪಡೆದವರಿಗೆ ಕೌನ್ಸಿಲರ್ ಪದವಿಯು ದೊರೆಯುವದು, ಅಂದರೆ (೧) ಮಂಡಿ ಮೊಹಲ್ಲಿಗೆ ಮೆ॥ ಮಾದಪ್ಪನವರೂ, (೨) ಚಾಮರಾಜ ಮೊಹಲ್ಲಿಗೆ ಮೆ॥ ವೆಂಕಟಕೃಷ್ಣಯ್ಯನವರೂ, (೩) ನಜರಬಾದ್ ಮೊಹಲ್ಲಿಗೆ ಮೆ॥ ಸೈಯದ್ ಮೊಹಿದೀನ್ ಸಾಹೇಬರೂ, (೪) ಕೃಷ್ಣರಾಜ ಮೊಹಲ್ಲಿಗೆ ಮೆ॥ ಎನ್ ಶ್ರೀಕಂಠಯ್ಯನವರೂ, (೫) ಲಷ್ಕರ್ ಮೊಹಲ್ಲಿಗೆ ಮೆ॥ ಎಂ ಅನಂತರಾಜಯ್ಯನವರು, ಮೆ॥ ರಹಮತ್ ಉಲ್ಲಾ ಅಹಮದ್ ಸಾಹೇಬರೂ, (೬) ಕೋಟೆ ಮೊಹಲ್ಲಿಗೆ ಮೆ॥ ಎಂ ನರಸಿಂಹಸ್ವಾಮಿಯವರು, ಮೆ॥ ಜಹಗೀರ್ದಾರ್ ಮಾದಪ್ಪನವರೂ, (೭) ದೇವರಾಜ ಮೊಹಲ್ಲಿಗೆ ಮೆ॥ ಎ ಸುಬ್ಬಣ್ಣನವರು, ಮೆ॥ ಎಂ ಸಿ ರಂಗೈಯಂಗಾರ್ರೂ ಕೌನ್ಸಿಲರುಗಳಾಗಿರುತ್ತಾರೆ ಇದಲ್ಲದೆ ಸರ್ಕಾರದವರು ಲಷ್ಕರ್, ದೇವರಾಜ್ ಮತ್ತು ಕೋಟೆ ಮೊಹಲ್ಲೆಗಳ ಹಿನಾ ಉಳಿದ ನಾಲ್ಕು ಮೊಹಲ್ಲೆಗಳಿಗೂ ಅದೇ ಮೊಹಲ್ಲಾದಲ್ಲಿ ಗ್ಯಾರಂಟಿದ ಒಬ್ಬೊಬ್ಬ ಬೇರೆ ಉದ್ಯೋಗಾರ (ಸರ್ಕಾರಿ ನೌಕರರಲ್ಲದ) ಮೊದ್ದ ಮನುಷ್ಯರನ್ನು ಮ್ಯುನಿಸಿಪಲ್ ಪ್ರೆಸಿಡೆಂಟರವರ ಶಿಫಾರಸಿನ ಮೇರೆ ಕೌನ್ಸಿಲರಾಗಿ ನೇಮಕವ ಮಾಡುವರು

ಬಾತ್ಮಿದಾರರಿಗೆ ನೋಟೀಸು

ನಮಗೆ ಬಿಲಾಸಗಳಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು ಆದರೆ ಆ ವಾರ್ತೆದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವದಿಲ್ಲ ಎಂಬ ಈ ಶರತ್ತನ್ನು ಸಕಲರೂ ತಿಳಿಯತಕ್ಕದ್ದು —ಎಡಿಟರ್.

ಕರೆಸ್ಪಾಂಡೆನ್ಸ್

ಬಂಡಿಗಳನ್ನು ಹಿಡಿಯುವದು.

ಅಯ್ಯಾ,

ಮೈಸೂರು ಗವರ್ನಮೆಂಟಿನಲ್ಲಿಯೂ ಬ್ರಿಟಿಷ್ ಗವರ್ನಮೆಂಟಿನಲ್ಲಿಯೂ ಪ್ರಯಾಣ ಮಾಡುವಂಥ ಉದ್ಯೋಗಸ್ಥರಿಗೋಸ್ಕರ ಬಂಡಿಗಳನ್ನು ಸರ್ಕಾರಿ ರೇಟಿನ ಪ್ರಕಾರ ಬಾಡಿಗೆ ಕೊಟ್ಟು ಹಿಡಿಯುವದು ಸಾಧಾರಣ ವಾಡಿಕೆಯಾಗಿರುತ್ತದೆ ಸರ್ಕಾರದವರು ಪ್ರಯಾಣ ಮಾಡುವಂಥ ಧರ್ಮ ಗಾಡಿಯನ್ನು ಗಾಡಿಯವನ ಅನುಮತಿಯಿಲ್ಲದೆ ಬಲಾತ್ಕಾರವಾಗಿ ಗಾಡಿಯಲ್ಲಿರುವ ಸಾಮಾನು ಇಳಿಸಿ, ಪ್ರಯಾಣದಲ್ಲಿರುವ ಉದ್ಯೋಗಸ್ಥರಿಗೋಸ್ಕರ ಗಾಡಿಯನ್ನು ತರುವದಕ್ಕೆ ಪಟೇಲರಿಗೂ ಕೊತ್ವಾಲರಿಗೂ ಅಧಿಕಾರ ಕೊಟ್ಟಿದಾರೋ? ಇಲ್ಲದೆ ಇವರು ಸ್ವಂತ ಅಧಿಕಾರದಿಂದ ಗಾಡಿಗಳನ್ನು ಹಿಡಿಯುತ್ತಾರೋ? ತಿಳಿಸಬೇಕೆಂದು ಕೋರುತ್ತೇನೆ ನಾನು ಒಂದು ಊರಿನಲ್ಲಿರುವಾಗ ಪ್ರಯಾಣಸ್ಥರ ಧರ್ಮ ಗಾಡಿಯನ್ನು ಹಿಡಿದಿದ್ದು ನೋಡಿರುತ್ತೇನೆ ಗಾಡಿಯವನ ಸಮ್ಮತಿಯಿಲ್ಲದೆ ಪ್ರಯಾಣದಲ್ಲಿರುವ ಗಾಡಿಯನ್ನು ಅಂದರೆ ಉದಾಹರಣೆಯಾಗಿ ಒಂದು ಗಾಡಿ ಬೆಂಗಳೂರಿನಿಂದ ಕೋಲಾರಕ್ಕೆ ಹೋಗುತ್ತದೆಂದು ನೆನೆಸೋಣ, ಹಾಗೆ ಹೋಗುವ ಗಾಡಿಯನ್ನು ಹೊಸಕೋಟೆಯವರು ಹಿಡಿದು ಸರ್ಕಾರಿ ರೇಟಿನ ಪ್ರಕಾರ ಬಾಡಿಗೆ ಕೊಡುತ್ತೇವೆಂದು ಬಲಾತ್ಕಾರದಿಂದ ಗಾಡಿಯಲ್ಲಿರುವ ಸಾಮಾನು ಇಳಿಸಿ ಇನ್ನೊಂದು ಊರಿಗೆ ಕಳುಹಿಸುವದಕ್ಕೆ ತಾಲ್ಲೂಕು ಅಧಿಕಾರಿಗಳಿಗೆ ಗವರ್ನಮೆಂಟಿನವರು ಅಧಿಕಾರ ಕೊಟ್ಟಿದಾರೋ? ದಯಮಾಡಿ ತಿಳಿಸಬೇಕೆಂದು ಕೋರುತ್ತೇನೆ ಗವರ್ನಮೆಂಟಿನವರು ರೇಟಿನ ಪ್ರಕಾರ ಬಾಡಿಗೆ ಕೊಟ್ಟು ಬಂಡಿಗಳನ್ನು ಹಿಡಿಯುವದು ತಪ್ಪು ಎಂದು ನಾನು ಆಕ್ಷೇಪಣೆ ಮಾಡುವದಿಲ್ಲ ಅವಶ್ಯವಿದ್ದ ಕಾಲದಲ್ಲಿ ಗಾಡಿಯನ್ನು ಬಲಾತ್ಕಾರವಾಗಿ ಹಿಡಿಯುವದಕ್ಕೆ ಸರ್ಕಾರಿ ಉದ್ಯೋಗಸ್ಥರಿಗೆ ಅಧಿಕಾರ ಉಂಟೋ, ಇಲ್ಲವೋ, ತಿಳಿಕೊಳ್ಳುವದಕ್ಕಾಗಿ ಇದನ್ನು ಬರೆದಿರುತ್ತೇನೆ ದಯಮಾಡಿ ತಿಳಿಸಿ

ಬಿ ನ

ಕ್ಷಾಮ ತೀರಲಿಲ್ಲ

ಅಯ್ಯಾ,

ಈಚೆಗೆ ಕೆಲವು ಇಂಚ್ ಮಳೆಗಳು ಬಂದದ್ದರಿಂದ ದೇಶದಲ್ಲೆಲ್ಲಾ ಕ್ಷಾಮ ತೀರಿತೆಂಬ ಕೂಗು ಹುಟ್ಟಿ, ಕ್ಷಾಮದ ದೆಸೆಯಿಂದ ಗೌರ್ನಮೆಂಟಿನಿಂದಲೂ, ಧರ್ಮಿಷ್ಠರಿಂದಲೂ ಸಹಾಯ ಹೊಂದುತ್ತಿದ್ದ ಬಡವಾಯಿಗಳ ಬಾಯಿಯಲ್ಲಿ ಮಣ್ಣು ಬಿದ್ದು ಅವರ ಈಗಿನ ಕಷ್ಟ ಮೊದಲಿಗಿಂತಲೂ ಜಾಸ್ತಿಯೇ ಆಯಿತು ಏತಕ್ಕೆ ಕಾಣಬೇಕೆಂದರೆ,

ಕ್ಷಾಮವೆಂದು ಹೇಳಿಸಿಕೊಳ್ಳುತ್ತಿದ್ದ ಕಾಲದಲ್ಲಿ ಗೌರ್ನಮೆಂಟಿನವರು ಸ್ವಶಕ್ತಿಯಿಲ್ಲದವರಿಗೆ ಗೌರ್ನಮೆಂಟ್ ಖರ್ಚಿನಿಂದ ಜೀವನ ನಡೆಸತಕ್ಕದ್ದು, ಶಕ್ತಿವಂತರಿಗೆ ಮಜೂರಿ ಸಿಕ್ಕುವಂತೆ ಕಾಮಗಾರಿಗಳು ಮಾಡಿಸತಕ್ಕದ್ದು, ಹೀನಸ್ಥಿತಿಯಲ್ಲಿರತಕ್ಕ ಕಸಬುದಾರರಿಗೆ ಗೌರ್ನಮೆಂಟಿನಿಂದ ಸಹಾಯ ಕೊಡತಕ್ಕದ್ದು, ದ್ರವ್ಯವಂತರಿಗೆ ಪ್ರೋತ್ಸಾಹ ಸಹಾಯ ಸಹ ಕೊಟ್ಟು ಅವರ ಮೂಲಕ ಅಗತ್ಯವಾಗಿರತಕ್ಕ ಪ್ರದೇಶಗಳಿಂದ ಜನಸುಗಳನ್ನು ತರಿಸಿ ಬಡವರಿಗೆ ಸುಲಭ ಕ್ರಯಕ್ಕೆ ಮಾರತಕ್ಕದ್ದು, ಈ ಮುಂತಾದ ಅನೇಕ ಸಹಾಯಗಳನ್ನು ಪ್ರಜೆಗಳಿಗೆ ಉಂಟು ಮಾಡುತ್ತಿದ್ದರು ಆಗ ಪ್ರಜೆಗಳಲ್ಲಿ ಸಮಾಧಾನವುಂಟಾಗಿತ್ತು

ಈಗ್ಗೆ ೨—೩ ತಿಂಗಳ ಕೆಳಗೆ ಅಕಸ್ಮಾತ್ ಎಲ್ಲಾ ಕಡೆಗೂ ಏಕ ಕಾಲದಲ್ಲಿ ೪-೮ ಇಂಚ್ ಮಳೆಗಳು ಬಂತು ಇದರಿಂದ ಸುಭಿಕ್ಷವೇ ಕಾಣಬಾರದೆಂದು ಭೀತಿಗೊಂಡಿದ್ದ ಜನರಿಗೆ ಮುಂದೆ ಒಳ್ಳೇ ಕಾಲ ಬಂದೀತೆಂಬ ನಂಬಿಕೆ ಹುಟ್ಟುವಂತೆ ಆಗಿ ಅದರಿಂದ ರೈತರು ಧಣಬಡೆಯಾಗಿ ಆ ಕಾಲದಲ್ಲಿ ಎತ್ತಲಿಕ್ಕೆ ಅರ್ಹವಾದ ಬೀಜಗಳನ್ನು ಬಿತ್ತಿಬಿಟ್ಟರು ಅಲ್ಲಿಂದೀಚೆಗೆ ಸುಮಾರು ೨ ತಿಂಗಳು ಶುದ್ಧಾಂಗನಾಗಿ ಮಳೆ ಬಾರದೆ ನಿಂತಿತು ಇಷ್ಟರಲ್ಲಿ ಹಿಂದಲ ಮಳೆಯಿಂದ ಭಾವಿಗಳಿಗೂ, ಕೆರೆಗಳಿಗೂ ಬಂದಿದ್ದ ನೀರು ಬತ್ತಿ ಹೋಯಿತು ಹಿಂದೆ ಬೀಜ ಬಿತ್ತಿದ್ದವರಿಗೂ ಮುಂದೆ ಬೀಜ ಬಿತ್ತತಕ್ಕವರಿಗೂ ವಿಶೇಷ ಭೀತಿ ಉಂಟುಮಾಡಿತು ಕ್ಷಾಮಸಂಬಂಧವಾಗಿ ಗೌರ್ನಮೆಂಟಿನವರು ಮಾಡುತ್ತಿದ್ದ ಸಹಾಯ ತಪ್ಪಿದ್ದರಿಂದ ಬಡವರು ನಿರ್ಗತಿಕರಾಗಿ ಸಂಕಟಗಳಲ್ಲಿ ಸಿಕ್ಕಿದರು ಪ್ರಜೆಗಳಿಗೆ ನೀರು ಸಿಕ್ಕತಕ್ಕದ್ದು ಅಭಾವವಾಯಿತು ಇದರಿಂದ ಈಗಿನ ಕಷ್ಟವು ಮೊದಲಿಗಿಂತಲೂ ಜಾಸ್ತಿ ಆಯಿತು

ಈಚೆಗೆ ೨೦ ದಿವಸದಿಂದ ಸೂರ್ಯರಶ್ಮಿಯೇ ಇಲ್ಲ. ರಾತ್ರಿ ಹಗಲೂ ಮೋಡ ಮುಚ್ಚಿಕೊಂಡು ತುಂತುರು ಮಳೆ ಬರತಕ್ಕದ್ದು, ಅಪಾರವಾದ ಶೀತಗಾಳಿಯು ಬೀಸತಕ್ಕದ್ದು, ಈ ಮುಲಕ್ಕ ಜನಗಳಿಗೆ ಆರಂಭವಾಗಿದೆ ಇದರಿಂದ ಪ್ರಜೆಗಳಿಗೆ ಕಾಯಿಲೆಗಳು ಜಾಸ್ತಿ ಆಯಿತೇ ಹೊರತು ರೈತರು ರಾಗಿ ವಗೈರೆ ಬೀಜ ಬಿತ್ತಲಿಕ್ಕೆ ಹದವಾಗಲಿಲ್ಲ ಭಾವಿಗಳಿಗೆ ನೀರು ಬರಲಿಲ್ಲ ಈ ೨೦ ದಿವಸದಿಂದ ಬಂದ ಮಳೆ ಒಟ್ಟುಮಾಡಿದರೆ ಪ್ರಾಯಶಃ ೨೫-೩೦ ಸೆಂಟ್ ಆಗಿರಬಹುದೆಂದು ತೋರುತ್ತೆ ಈ ಹೇಂದ್ರವಾದ ಸೋನೆಯಿಂದ ಕೂಲಿಕಾರರಿಗೆ ಜೀವನವೇ ಸಿಕ್ಕದಂತೆ ಆಗಿದೆ ನೀರಿನ ಕಷ್ಟವಂತೂ ಹೇಳತಕ್ಕದ್ದಾಗಿಯೇ ಇಲ್ಲ ಕ್ಷಾಮವೆಂತ ಹೆಸರಿದ್ದ ಕಾಲದಲ್ಲಿ ರೂಪಾಯಿಗೆ ೧೨-೧೩ ಸೇರು ರಾಗಿ, ಜೋಳ ಸಿಕ್ಕುತ್ತಿತ್ತು ಈಗ ರೂಪಾಯಿಗೆ ೧೧॥ ೧೧ ಸೇರು ಆಗಿದೆ

ಅಂತು ಈಗಿನ ಪ್ರಜೆಗಳ ಕಷ್ಟದ ಸ್ಥಿತಿಯನ್ನು ಗೌರ್ನಮೆಂಟಿನವರು ವಿಚಾರಿಸಿ, ತಕ್ಕ ಏರ್ಪಾಡು ಮಾಡತಕ್ಕದ್ದು ಅವಶ್ಯಕವೆಂದು ಕಾಣುತ್ತದೆ

ಚಿತ್ರದುರ್ಗ ಕೆಲ್ಯಾಣ ಆಸೇವರ್.

ಒಂದು ವರ್ತಮಾನ ಹುಟ್ಟಿರುವದು

ಅಯ್ಯಾ,

ಇಂಗ್ಲೀಷ್ ಭಾಷೆ ಪ್ರಚಾರವಾಗುವವರೆಗೂ ನಮ್ಮ ದೇಶದಲ್ಲಿ ನಾನಾವಿಧವಾದ ಶಕುನ ಬಿ ವಿಶ್ವಾಸಗಳು ನೆಲೆಗೊಂಡು ಇತ್ತು ಹ್ಯಾಗೆಂದರೆ, ಪ್ರತ್ಯಕ್ಷವಾದ ಒಂದು ವಿಷಯವನ್ನು ಕಾಣಿಸುವೆನು ನೂಲು, ರೇಷ್ಮೆಗಳ ಬಗ್ಗ ಹತ್ತದಿದ್ದರೆ ನಾನಾ ವಿಧವಾದ ಸುಳ್ಳು ವರ್ತಮಾನಗಳನ್ನು ಹುಟ್ಟಿಸುತ್ತಿದ್ದರು ಆದರೆ ಈಗ ೫೦ ವರ್ಷದಿಂದ ಈಚೆಗೆ ದಿನೇ ದಿನೇ ಈ ಮೂಢ ಭಕ್ತಿಯು ಕಡಿಮೆಯಾಗುತ್ತಾ ಇದ್ದಾಗ್ಯೂ ಇನ್ನೂ ಇದರ ಬೀಜ ಸಂಪೂರ್ಣ ತಪ್ಪಿರುವದಿಲ್ಲ

ಈಗ್ಗೆ ೮ ದಿವಸದಿಂದ ಈಚೆಗೆ ಪತ್ರಿಕೆಲ್ ಸ್ಟೇಷನ್ ಬಳಿಯೂ, ಟ್ರಿಕ್ ನ ಪತ್ರಿ ಕಂಪಾರ್ಟ್‌ಮೆಂಟಿನಲ್ಲಿಯೂ ಒಂದು ವರ್ತಮಾನವು ಹೊರಟಿದೆ ನಾನೇನೋ ಬಲ್ಲದ ವಾಕ್ಯೆಂದೇ ಊಹಿಸಿರುವೆನು ಆದರೆ ನಂಸ್ಥಾನದಲ್ಲಿ ಬರುತ್ತಿದ್ದ ಪತ್ರಿಕೆಗಳು ಈಗ ನಿಂತಿರುವದರಿಂದ ಹ್ಯಾಗಿರುವದೋ ಎಂಬ ಸಂಶಯವು ಹುಟ್ಟಿದೆ ಅದು ಏನೆಂದರೆ,—ಒಬ್ಬ ಬ್ರಾಹ್ಮಣನು ತನ್ನ ಕುಟುಂಬದ ಮಗಳನ್ನು ಒಬ್ಬ ಮುಸಲ್ಮಾನನಿಗೆ ವಾರಿದನೆಂತಲೂ, ಅದಕ್ಕಾಗಿ ನಾಲ್ಕು ಸಾವಿರ ರೂಪಾಯಿ ಕ್ರಯದ ಮೊಬಲಗು ಪಡೆದು ತನ್ನ ಕುಮಾರ್ತೆಗೆ ತಿಳಿಯದಂತೆ ಅವನ ಮನೆಯಲ್ಲಿ ಬಿಟ್ಟು ಬಿಟ್ಟು ಹಣವ ಭದ್ರಮಾಡಲು ಹೊರಟುಹೋದನೆಂತಲೂ, ಆ ಹುಡುಗಿಯು ತನ್ನ ೧೫ ವರ್ಷದ ವಯಸ್ಸಿನಲ್ಲಿಯೇ ಸ್ವಾಭಾವಿಕ ಧಾರ್ಮಿಕವಾತ್ರದಿಂದ ಸಂಗತಿಯ ಬುದ್ಧಿಯುಳ್ಳವಳಾಗಿ ಮುಸಲ್ಮಾನನ ಮನೆಗೆ ಹೋಗಬೇಕೆಂದು ಹೇಳಿದ್ದರಿಂದ ಯಜಮಾನನ ರಾಹುತನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಸವಿಯ ಕರೆಯಲ್ಲಿ ನೀರಾತ್ರಿಯಲ್ಲಿ ಅವನಿಗೆ ಚಕ್ಕರ್ ಕೊಟ್ಟು ಓಡಿಹೋಗಿ ಒಬ್ಬ ಗೋವಿಂದಯ್ಯ ಕಾನು ದೇಶ್ಯನನ್ನು ನೋಡುತ್ತಾ ಎಚ್ಚರವಾಗಿ ದೀಪವಿಟ್ಟುಕೊಂಡು ಬರೆಯುತ್ತಿರುವಲ್ಲಿ ಅವನನ್ನು ಪೋಷಿಸಬೇಕೆಂದು ಪ್ರಾರ್ಥಿಸಿಕೊಂಡು ಮನೆಗೆ ಪ್ರವೇಶಿಸಿ ತಾನು ಇರುವ ಸ್ಥಿತಿ ತನ್ನ ಮೈಗಳಿಗೆ ತಿಳಿಯುವಂತೆ ತಿಳಿಸಿ ಧೈರ್ಯಪಡಿಸಬೇಕೆಂದು ಕೇಳಿಕೊಂಡಳು, ಆ ವರ್ತಕನು ಅವಳ ನಾಲ್ವರಿಯನ್ನು ನೋಡಿ ಅವಳ ಪ್ರಾರ್ಥನೆಯಂತೆ ಸಹಾಯವಾದ ನಂತರ ಮರು ದಿವಸ ಅವಳ ಗಂಡನ ಬಳಿಗೆ ತಲುಪಿಸಿದನೆಂದೂ, ಅನಂತರ ಗಂಡನು ತನ್ನ ಅರ್ಧಾಂಗಿಯೆಂದ ಸಂಪೂರ್ಣವಾದ ವಿವರವ ತಿಳಿದು ಮಾಡಲು ತುರುಕರ ಮನೆಯು ಪ್ರವೇಶಿಸಿ ಅಲ್ಲಿದ್ದ ಇವಳ ಬಾಬತು ಒಟ್ಟು ಗಟ್ಟು ಜಪ್ತಿ ಮಾಡಿ ದಸ್ತಗಿರಿ ಮಾಡಿಸಿದ್ದಾಗಿಯೂ ಬೆಂಗಳೂರಲ್ಲಿ ಜೀವವನ್ನು ವಿಕ್ರಯ ಮಾಡಿದ ಅವರ ತಂದೆ ಎಂಬುವವನನ್ನು ದಸ್ತಗಿರಿ ಮಾಡಿಸಿ ದುಡ್ಡನ್ನೂ ಕೋರ್ಟಿಗೆ ಬರುವಹಾಗೆ ಮಾಡಿ ಈಗ ಸೆಷನ್ಸ್‌ನಲ್ಲಿ ವಿಚಾರಣೆಗಿರುವದಾಗಿಯೂ ಒಂದು ವಾರ್ತೆ ಹುಟ್ಟಿರುವದು ಇದು ಜನಗಳಿಗೆ ಗೊತ್ತು ಹೇಳಿರು ಆ ಹುಡುಗಿಯ ಗಂಡನ ಹೆಸರೇ ಆಗಲಿ ಕ್ಕ್ಕ ಜಾತಿ ಸ್ಥಳವೇ ಆಗಲಿ ಹೇಳರು ಕೆಲವರು ಚನ್ನಪಟ್ಟಣದೆಂದೂ, ಕೆಲವರು ಕ್ಲೋಸ್‌ಪೇಟೆಯೆಂದೂ, ಕೆಲವರು ಬೆಂಗಳೂರೆಂದೂ, ಕೆಲವರು ಕ್ರಯವಾರನಿಗೂ ಕ್ರಯಕ್ಕೆ ಕೊಟ್ಟವನಿಗೂ ಶಿಕ್ಷೆಯಾಯಿತೆಂದೂ, ಕೆಲವರು ಇನ್ನೂ ವಿಚಾರಣೆಯಾಗುತ್ತಿದೆಯೆಂದೂ ಹೇಳುವದರಿಂದ ನಮ್ಮ ಬಾತ್ಮಿದಾರರುಗಳಲ್ಲಿ ಯಾರಿಗಾದರೂ ಸಂಗತಿ ನಿಜವಾಗಿ ತಿಳಿದಿದ್ದರೆ ಪ್ರಜೆಗಳು ತಿಳಿಯಲಿಕ್ಕೆ ಮತ್ತು ಬುದ್ಧಿ ಬರಲಿಕ್ಕಾಗಿ ಇರುವ ಸ್ಥಿತಿಯನ್ನು ಬರೆಯುವರೆಂದು ನಂಬುತ್ತೇನೆ

ವಿಚಾರ ತಿಳಿಯುವ ಕುತೂಹಲಿ

ತಾಲ್ಲೋಕು ವರ್ತಮಾನಗಳು.

ಕುಲೀಸ್‌ಪೇಟೆ —ಕುಲೀಸ್‌ಪೇಟೆ ತಾಲ್ಲೂಕು ಕೈವಲಂದ ಹೋಬಳಿ ರೇವಣ ಸಿದ್ಧೇಶ್ವರಸ್ವಾಮಿ ಬೆಟ್ಟದ ಕೆಳಗೆ ಬೀದಿಯಲ್ಲಿ ಪಟ್ಟದ ಮುದ್ದು ಬಸವಲಿಂಗ ರಾಜಸ್ವಾಮಿಗಳು ಒಂದು ದಾಸೋಹ ಮಠವನ್ನು ಕಟ್ಟಿಸುತ್ತಿದ್ದಾರೆ ಇವರು ಅನೇಕ ಕಡೆ ಸಂಚಾರಮಾಡಿ ಈ ಕಾಮಗಾರಿಗೆ ದ್ರವ್ಯಸಹಾಯವನ್ನು ಪಡೆದುಕೊಂಡು ಬಂದಿರುವರು ಇದು ವರೆಗೆ ಈ ಮಠಕ್ಕೆ ಸಾವಿರಾರು ರೂಪಾಯಿ ಕಾಮಗಾರಿ ನಡೆದಿರುವದು ಇನ್ನು ಮುಂದಿನ ಕೆಲಸಗಳಿಗೆ ಬಹು ಜನರು ದ್ರವ್ಯವನ್ನೂ ಪದಾರ್ಥಗಳನ್ನೂ ಸಾಮಾನುಗಳನ್ನೂ ಒದಗಿಸಿಕೊಡುವಂತೆ ಪ್ರಾರ್ಥನೆ ಮಾಡಿರುತ್ತಾರೆ

ಅಜ್ಜಂಪುರ —ಇಲ್ಲಿ ೧೦-೧೫ ದಿವಸಗಳ ಲಾಗಾಯಿತು ಜಡಿ ಮಳೆಯು ಹಿಡಿದಿರುತ್ತದೆ ಇಲ್ಲಿನ ಪೈರುಗಳೆಲ್ಲಾ ಚೆನ್ನಾಗಿರುತ್ತವೆ ಇದೇ ರೀತಿಯಾಗಿ ಇನ್ನು ಕೆಲವು ದಿವಸಗಳು ಮಳೆ ಹಿಡಿದುಕೊಂಡರೆ ಪೈರುಗಳೆಲ್ಲಾ ಕೆಟ್ಟು ಹೋಗುತ್ತವೆ —ಈ ಊರಲ್ಲಿ ಇಷ್ಟು ಮಳೆ ಹಿಡಿದಾಗ್ಯೂ ದಿನಸಿಗಳು ಇನ್ನೂ ಪ್ರಿಯವಾಗಿರುತ್ತವೆ ಇದಲ್ಲದೆ ಇಲ್ಲಿನ ವರ್ತಕರು ಪೇಟೆಯಲ್ಲೂ, ಸಂತೆಯಲ್ಲೂ ಕಡಿಮೆ ಸೇರುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಾರೆ ಈ ವಿಷಯವನ್ನು ಇಲ್ಲಿನ ಸರ್ಕಾರಿ ನೌಕರರು ಮನಸ್ಸಿಗೆ ತಂದುಕೊಳ್ಳದೆ ಇರಲು ಕಾರಣವೇನೋ ತಿಳಿಯದು —ಈ ಊರಿನ ಆಸ್‌ಪಾಸ್ ಸ್ಥಳಗಳಲ್ಲಿ ಪ್ಲೇಗ್ ಉಪದ್ರವಗಳಾದೆಯು ಹರಡಿರುತ್ತದೆ ಈ ಗ್ರಾಮದಲ್ಲೂ ಕೂಡ ಅಲ್ಲಲ್ಲಿ ಇಲಿಗಳು ಬೀಳುತ್ತವೆಂಬ ವದಂತಿ ಇರುತ್ತದೆ. ಬಡ ಜನರು ಇಂಥಾ ಧಾನ್ಯಗಳು ಪ್ರಿಯವಾದ ಕಾಲದಲ್ಲಿ ಹುಡಿದಿಂದಾದರೂ ಮನೆಯಲ್ಲಿರೋಣವೆಂದರೆ ಪ್ಲೇಗ್ ಗಲಾಟೆಯು ಬಂದು ಸಮ್ಮಗಳಿಗೆ ಇಮ್ಮಡಿ ಖರ್ಚನ್ನೂ, ಪ್ರಾಣಭಯವನ್ನೂ ಉಂಟುಮಾಡುತ್ತದೆ. -ಇದಲ್ಲದೆ ಶ್ರೀ ಸಿರಿಗೆರೆ ಮಠದ ಪಕ್ಕಲತಂದವರ ಸ್ವಾಮಿಗಳು ಭಕ್ತರಿಂದ ಕಾಣಿಕೆಯನ್ನು ವಸೂಲು ಮಾಡಲು ಬಂದಿದ್ದವರು ಶನಿವಾರದ ದಿವಸ ಹೊರಟು ಹೋದರು

ಹೊಸಕೋಟೆ.—ಇಲ್ಲಿ ಟೌನು ಪಾಕೀಜಾ ಚನ್ನಾಗಿದೆ ಜನರ ಉಪಯೋಗಾರ್ಥವಾಗಿ ಮುನಿಸಿಪಾಲಿಟಿಯವರು ಲಾಂದ್ರಗಳನ್ನು ಇಟ್ಟಿರುವದು ಸರಿಯೆ ಹಗಲು ಹೊತ್ತಿನಲ್ಲಿ ನೋಡಿದರೆ ಲಾಂದ್ರಕಂಬಗಳು ಚನ್ನಾಗಿ ಕಾಣುತ್ತವೆ ರಾತ್ರಿಯಲ್ಲಿ ನೋಡಿದರೆ ಕಂಬಗಳಾದರೂ ಕಾಣುವುದಿಲ್ಲ ದೀಪಗಳು ಪ್ರಕಾಶವಿಲ್ಲದೆ ಉರಿಯುವುದಕ್ಕೆ ಕಾರಣವೇನೆಂದು ಮುನಿಸಿಪಾಲಿಟಿಯವರು ಎಂದಾದರೂ ನೋಡಿದ್ದರೆ ಇದರ ಕಾರಣ ಅವರಿಗೆ ತಿಳಿಯದೆ ಇರಲಾರದೆಂದು ನಂಬುತ್ತೇನೆ. ಕೆಲವು ದಿವಸಗಳಿಂದ ಲಾಂದ್ರಗಳು ಹಚ್ಚುವುದೇ ಇಲ್ಲ ಈ ಊರಿನಲ್ಲಿ ಇದನ್ನು ವಿಚಾರಣೆ ಮಾಡುವವರೇ ಇಲ್ಲ ಇದನ್ನು ನಮ್ಮ ಅಮಲ್ದಾರರವರು ಆಲೋಚನೆ ಮಾಡಿ ಬೇಗನೆ ದೀಪಗಳನ್ನು ಹಚ್ಚುವ ಹಾಗೆ ಏರ್ಪಾಟು ಮಾಡ್ಕಾರೆಂದು ನಂಬುತ್ತೇನೆ - ಇಲ್ಲಿ ಎರಡು ತಿಂಗಳಿಂದಲೂ ಮಳೆ ಬರಲಿಲ್ಲ ರೈತರು ಮಳೆಯನ್ನೇ ಎದುರುನೋಡುತ್ತಾರೆ ಕೆಲವರು ಬೀಜ ಬಿತ್ತಿದಾರೆ ಇನ್ನು ಕೆಲವರು ಬಿತ್ತುವದಕ್ಕೆ ಮಳೆಯನ್ನೇ ಎದುರು ನೋಡುತ್ತಿದಾರೆ ಧಾನ್ಯಗಳು ಅತ್ಯಂತ ಪ್ರಿಯ, ರಾಗಿ ೧೦-೧೧ ಸೇರು ಮಾರುತ್ತಾರೆ ಕೆಲವರು ಸಂತೆಯಲ್ಲಿ ಕಮ್ಮಿ ಸೇರುಗಳನ್ನಿಟ್ಟು ಮಾರುತ್ತಾರೆಂದು ಕೇಳುತ್ತೇನೆ ಇದರ ವಿಷಯ ಪೋಲೀಸಿನವರು ಗಮನ ಇಟ್ಟರೆ ಉತ್ತಮ

ಕೊಪ್ಪ ತಾ॥ ಕಾಳ್ಳಮಸ್ಕಿದ್ದಾರು.—ಇದೇ ತಿಂಗಳು ತಾ ೧೪ ನೆ ಬುಧವಾರ ರಾತ್ರಿ ಈ ಊರಿನ ಸಮೀಪದಲ್ಲಿರುವ ಕೊಡಿಗೆ ಪುಟ್ಟಯ್ಯ ಎಂಬುವನ ಮನೆಗೆ ಬೆಂಕಿ ಬಿದ್ದು ಸುಟ್ಟು ಹೋಯಿತು ಇಂಥಾ ಮಳೆಗಾಲದಲ್ಲಿ ಬೆಂಕಿ ಹತ್ತಿ ಸುಟ್ಟು ಹೋಗಿದ್ದು ಬಹಳ ಆಶ್ಚರ್ಯವಾಗಿದೆ ಹೇಗೆಂದರೆ, ಸದರಿ ಪುಟ್ಟಯ್ಯನು ಸಾಯಂಕಾಲ ತನ್ನ ಕಂಬಳಿ ಮತ್ತು ಸಂಚಿ ಒಬ್ಬನಿಗೆ ಕೊಟ್ಟಿದ್ದರಿಂದ ಒದ್ದೆಯಾದ್ದಕ್ಕೋಸ್ಕರ ಮುದುರು ಬೀಯಿಸುವ ಒಲೆಯ ಮೇಲೆ ಒಣಗಹಾಕಿದನು ಮೇಲೆ ಹಾಕಿ ಹೊರಗೆ ಹೋದನು ಅಕಸ್ಮಾತ್ ಕಂಬಳಿಗೆ ಕಿಡಿ ಹಾರಿ ಕಾಳಿ ಹೊರಗೆ ಹಿಡಿದುಕೊಂಡು ಹಿಂಭಾಗವೆಲ್ಲಾ ಸುಟ್ಟು ಮುಂಭಾಗ ಹತ್ತುವ ವರೆಗೂ ಮನೆಯವರಿಗೆ ಗೊತ್ತಾಗಲಿಲ್ಲ ಇಷ್ಟು ಹೊತ್ತಿಗೆ ಸಾಯಂಕಾಲ ೭ ಗಂಟೆ ಆಯಿತು ಈ ಸಮಯದಲ್ಲಿ ಅಕಸ್ಮಾತ್ ನಾಳೆಯೇ ಹಬ್ಬದಿಂದ ಮೇಲೆ ಹೊದಿಸಿದ ಹುಲ್ಲು ಉರಿಯಲಿಲ್ಲ ಮನೆಯ ಮುಂಭಾಗದಲ್ಲಿ ಬೆಂಕಿ ಕಂಡಕೂಡಲೆ ಮನೆಯವರು ಕೂಗಿಕೊಂಡರೂ ಆಸ್‌ಪಾಸ್ ಇದ್ದ ಜನಗಳಿಗೆ ಕೂಡಾ ಮಳೆಯ ದೆಸೆಯಿಂದ ಕೇಳಿಸಲಿಲ್ಲವಾದ್ದರಿಂದ ಮನೆಯು ಸಂಪೂರ್ಣವಾಗಿ ಭಸ್ಮೀಭೂತವಾಯಿತು ಆತನು ಈ ಊರು ದೇವಸ್ಥಾನದ ಚಾಕರಿ ಮಾಡಿಕೊಂಡು ಜೀವನ ಮಾಡುತ್ತಿದ್ದನು ಮನೆಯಲ್ಲಿ ೨೦—೨೫ ಖಂಡುಗ ಭತ್ತವು ಸಾವ ನುಗಳು ಎಲ್ಲಾ ಸುಟ್ಟು ಹೋಯಿತು ದೊಡ್ಡ ಸಂಸಾರಿ, ಮಳೆಗಾಲದಲ್ಲಿ ನಿಲ್ಲುವುದಕ್ಕೆ ಕೂಡಾ ಸ್ಥಳವಿಲ್ಲ, ನೋಡಿದರೆ ಬಹಳ ವ್ಯಸನವಾಗುತ್ತೆ

ಮಂಡ್ಯ —ಗಾಳಿಯ ಹೊಡೆತವು ಬಹಳವಾಗಿದೆ ಮಳೆ ಎನ್ನುವದರ ಹೆಸರೇ ಇಲ್ಲ ಅದರ ಆಸೆಯಿತ್ತಾ ನಿರಾಶೆಯಾಯಿತು ಜೋಳವಂತೂ ಹಾಗೆಯೇ ಹೋಯಿತು ದಾರಣೆಯು ದಿನೇ ದಿನೇ ಹೆಚ್ಚುತ್ತಿದೆ ಮೈಸೂರು ಡಿಸ್ಟ್ರಿಕ್ಟ್ ಮಿಡಲ್ ಸೂಪರಿಂಟೆಂಡೆಂಟರು ಘನ ಸಾಯಿ ಸಾಹೇಬರವರು ಈ ತಿಂಗಳು ೧೨ ನೇ ತಾ ಮಂಗಳವಾರ ಇಲ್ಲಿಗೆ ದಯಮಾಡಿದ್ದರು ಗರಲ್ಸ್ ಸ್ಕೂಲ್, ಇಂಗ್ಲಿಷ್ ಸ್ಕೂಲ್ ಮತ್ತು ಪಂಚಮರ ಸ್ಕೂಲುಗಳು ಪರೀಕ್ಷಿಸಲ್ಪಟ್ಟವು ಅಲ್ಲದೆ ತಾ ೧೪ ರಲ್ಲಿ ಸಾಹೇಬರವರು ಗರಲ್ಸ್ ಸ್ಕೂಲಿನ ವಿದ್ಯಾರ್ಥಿನಿಯರಿಗೆ ವಿಶೇಷವಾಗಿ ಬಹುಮಾನಗಳನ್ನು ಕೊಟ್ಟರು ಅಲ್ಲಿಗೆ ಅನೇಕಾನೇಕ ವಿದ್ಯಾರ್ಥಿನಿಯರೂ ಅವರ ಪೋಷಕರೂ ಇನ್ನೂ ಅನೇಕ ದೊಡ್ಡ ಮನುಷ್ಯರೂ ಕೂಡಿದ್ದರು ಅತ್ಯವಶ್ಯಕವಾದ ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಸಾಹೇಬರವರು ಕೊಡುತ್ತಿರುವ ಪ್ರೋತ್ಸಾಹವನ್ನು ಕಂಡು ಸಭೆಯು ಅತ್ಯಾನಂದಪಟ್ಟಿತು ಸ್ಕೂಲ್ ರಿಪೋರ್ಟು ಓದಲ್ಪಟ್ಟಿತು. —ಮಂಡ್ಯದ ಶ್ರೀ ಕಲಶೇಶ್ವರಸ್ವಾಮಿ ದೇವಸ್ಥಾನದಲ್ಲಿ ಗಿರಿಜಾಕಲ್ಯಾಣ ಮಹೋತ್ಸವವು ಕಳೆದ ತಾ ೧೦ ರಿಂದ ಒಂದು ವಾರದ ವರೆಗೆ ಅತ್ಯಂತ ವಿಜೃಂಭಣೆಯಿಂದ ನಡೆಯಿತು ಉತ್ಸವಗಳು ನೆರವೇರಿದುವು ಸಂತರ್ಪಣೆಗಳೂ ಸಾಂಗವಾಗಿಯೂ ತೃಪ್ತಿಕರವಾಗಿಯೂ ಸಂತೋಷಕರವಾಗಿಯೂ ಜರುಗಿದವು ಸುತ್ತುಮುತ್ತಿನಿಂದ ಅನೇಕ ಜನರು ಇದಕ್ಕಾಗಿ ಬಂದಿದ್ದರು

ನೆಲಮಂಗಲದ ತಾ॥ ತ್ಯಾಮಗೊಂಡ್ಲು.—ಈ ಗ್ರಾಮದಲ್ಲಿ ಮಳೆ ಇಲ್ಲದೆ ಅಂದಿನಿಂದಲೂ ದನಕರುಗಳಿಗೂ ಮನುಷ್ಯರಿಗೂ ಉಂಟಾಗಿದ್ದ ತೊಂದರೆಯನ್ನು ವಿವರಿಸಲಶಕ್ಯವಾಗಿತ್ತು. ಈಗ ಸುಮಾರು ಎಂಟು ದಿವಸಗಳಿಂದಲು ಮಳೆಯು ಸುಮಾರಾಗಿ ಬೀಳುತ್ತಾ ಇದ್ದದ್ದರಿಂದ ನೀರಿನ ಅವಸ್ಥೆಯು ಸ್ವಲ್ಪ ಕಡಮೆಯಾಯಿತು. ಅಲ್ಲದೆ ರೈತರೆಲ್ಲಾ ಬಿತ್ತನೆ ಕೆಲಸಕ್ಕೆ ಪ್ರಾರಂಭಿಸಿದ್ದಾರೆ ಅಲ್ಪಸ್ವಲ್ಪ ಮಳೆ ಬಿದ್ದಾಗ್ಯೂ ಧಾನ್ಯಗಳು ಪ್ರಿಯವಾಗಿಯೇ ಇವೆ ರಾಗಿ ೧೧॥ ೧೧ ಸೇರು, ಅಕ್ಕಿ ೭ ಸೇರು ಮಾರುತ್ತಿವೆ ಆನೇಕಲ್ ಗೋಟಗೆರೆ, ಕಲ್ಲಾಳು ಗ್ರಾಮಗಳಲ್ಲಿ ಪ್ಲೇಗು ಬೀಳುತ್ತಾರೆ ಆದರೆ ಪ್ಲೇಗ್, ಮಾಂಭಿಣಿ ಮುಂತಾದ ಸೋಂಕು ಜಾಡ್ಯಗಳ ಭಯವಿಲ್ಲ ಹುಟ್ಟಿಲ್ಲವೆ ಬಹ

Vol ...
Jan. 1909
to May 191[illegible]

CONTINUED ON REEL NO-9

VRITTANTAPATRIKE

(IN KANNADA)

REEL NO

8

END

EXPOSURES

730